ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪ್ರಕಟಣೆ - ೭೫
ವಿಚಾರ ಸಾಹಿತ್ಯಮಾಲೆ - ೮

# ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ
# ಸಮಗ್ರ ಬರೆಹಗಳು

ಮತ್ತು

# ಭಾಷಣಗಳು

ಸಂಪುಟ ೨

## ಸಂಪಾದನ ಸಮಿತಿ

| | |
|---|---|
| **ಅಧ್ಯಕ್ಷರು,** ಕುವೆಂಪು ಭಾಷಾ ಭಾರತಿ ಪ್ರಾಧಿಕಾರ | ಅಧ್ಯಕ್ಷರು |
| **ಡಾ. ಸಿದ್ಧಲಿಂಗಯ್ಯ** | ಸದಸ್ಯರು |
| **ಡಾ. ದೇವನೂರ ಮಹದೇವ** | ಸದಸ್ಯರು |
| **ನಿರ್ದೇಶಕರು,** ಕನ್ನಡ ಮತ್ತು ಸಂಸ್ಕೃತಿ ಇಲಾಖೆ | ಸದಸ್ಯ ಕಾರ್ಯದರ್ಶಿಗಳು |

# ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ

# ಸಮಗ್ರ ಬರೆಹಗಳು

ಮತ್ತು

# ಭಾಷಣಗಳು

(ಸಂಪುಟ ೨)


**ಕನ್ನಡ ಮತ್ತು ಸಂಸ್ಕೃತಿ ಇಲಾಖೆ**

ಮತ್ತು

**ಕುವೆಂಪು ಭಾಷಾ ಭಾರತಿ ಪ್ರಾಧಿಕಾರ**

ಕಲಾಗ್ರಾಮ, ಜ್ಞಾನಭಾರತಿ
ಬೆಂಗಳೂರು ವಿಶ್ವವಿದ್ಯಾಲಯ ಆವರಣದ ಹಿಂಭಾಗ, ಮಲ್ಲತ್ತಹಳ್ಳಿ
ಬೆಂಗಳೂರು – ೫೬೦ ೦೫೬

**Dr. Baba Saheb Ambedkar Avara Samagra Barehagalu Mattu Bhashanagalu: Samputa 3** –– Kannada translation of Collected Works of Baba Saheb Ambedkar; Published by **Kannada Mattu Samskruti Ilakhe**; **Kuvempu Bhasha Bharati Pradhikara**, Kalagrama, Jnanabharathi, Behind Bangalore University Campus, Mallattahalli, Bangalore - 560 056 ; Third Edition : 2015; Pp. xxiv + 820; Price: Rs. 50/-.

© : ಹಕ್ಕುಗಳನ್ನು ಕಾದಿರಿಸಿದೆ

ಮೂರನೇ ಮುದ್ರಣ : ೨೦೧೫
ಪುಟಗಳು : xxiv + ೮೨೦
ಬೆಲೆ : ರೂ. ೫೦/-
ಪ್ರತಿಗಳು : ೫೦೦೦

ಪ್ರಕಾಶಕರು :
**ಕನ್ನಡ ಮತ್ತು ಸಂಸ್ಕೃತಿ ಇಲಾಖೆ**
ಮತ್ತು
**ಕುವೆಂಪು ಭಾಷಾ ಭಾರತಿ ಪ್ರಾಧಿಕಾರ**
ಕಲಾಗ್ರಾಮ, ಜ್ಞಾನಭಾರತಿ
ಬೆಂಗಳೂರು ವಿಶ್ವವಿದ್ಯಾಲಯ ಆವರಣದ ಹಿಂಭಾಗ
ಮಲ್ಲತ್ತಹಳ್ಳಿ, ಬೆಂಗಳೂರು - ೫೬೦ ೦೫೬
ದೂ. : ೨೩೧೮೩೩೧೧, ೨೩೧೮೩೩೧೨

ಮುಖಪುಟ ವಿನ್ಯಾಸ: **ಮೆ॥ ರಾಜಾ ಪ್ರಿಂಟರ್ಸ್**

**ISBN : 978-81-906513-5-6**

ಮುದ್ರಕರು :
**ಮೆ॥ ರಾಜಾ ಪ್ರಿಂಟರ್ಸ್**
ನಂ. ೫೯, ೪ನೇ ಕ್ರಾಸ್, ಲಾಲ್‌ಬಾಗ್ ರಸ್ತೆ
ಕೆ.ಎಸ್. ಗಾರ್ಡನ್, ಗಂಗಾಧರಪ್ಪ ಬ್ಲಾಕ್
ಬೆಂಗಳೂರು - ೫೬೦ ೦೨೭
ದೂ: ೦೮೦-೨೨೨೩೪೦೬೬, ೦೮೦-೨೨೨೧೯೯೬೫

ಕರ್ನಾಟಕ ಸರ್ಕಾರ

**ಸಿದ್ದರಾಮಯ್ಯ**
ಮುಖ್ಯಮಂತ್ರಿಗಳು

ವಿಧಾನಸೌಧ
ಬೆಂಗಳೂರು – ೫೬೦ ೦೦೧

ಸಿಎಂ/ಪಿಎಸ್/೧೫೦/೨೦೧೫

ದಿನಾಂಕ : ೦೫.೦೬.೨೦೧೫

## ಸಂದೇಶ

ಆಧುನಿಕ ಕನ್ನಡ ಸಾಹಿತ್ಯದ ಅತ್ಯುನ್ನತ ಸಾಹಿತ್ಯಕ ಸಾಧನೆಯ ಪ್ರತೀಕವಾಗಿರುವ ರಾಷ್ಟ್ರಕವಿ ಡಾ. ಕುಪ್ಪಳಿ ವೆಂಕಟಪ್ಪ ಪುಟ್ಟಪ್ಪ ಅವರ ಹೆಸರಿನಲ್ಲಿ ಸ್ಥಾಪಿತವಾಗಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ಸಾಹಿತ್ಯಕ, ಸಾಂಸ್ಕೃತಿಕ, ವೈಜ್ಞಾನಿಕ ಮತ್ತು ತಾಂತ್ರಿಕ ಮಹತ್ವದ ಗ್ರಂಥಗಳನ್ನು ಹೊರತರುವ ದಿಕ್ಕಿನಲ್ಲಿ ಹೊಸ ದಾಖಲೆಯನ್ನು ಸ್ಥಾಪಿಸುತ್ತ ಮುನ್ನಡೆಯುತ್ತಿರುವುದು ಅತ್ಯಂತ ಸಂತಸದ ಸಂಗತಿಯಾಗಿದೆ.

ವಿವಿಧ ವಿದೇಶಿ ಮತ್ತು ಭಾರತೀಯ ಭಾಷೆ–ಸಾಹಿತ್ಯಗಳ ಅತ್ಯುತ್ತಮ ಕೃತಿಗಳನ್ನು ಕನ್ನಡ ಭಾಷೆಯಲ್ಲಿ ಹಾಗೂ ಕನ್ನಡದ ಶ್ರೇಷ್ಠ ಕೃತಿಗಳನ್ನು ಇತರ ಭಾಷೆಗಳಲ್ಲಿ ಹೊರತರುತ್ತಿರುವ ನಮ್ಮ ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ರಾಷ್ಟ್ರ ಪ್ರಶಸ್ತಿ ಪುರಸ್ಕೃತ ಲೇಖಕರ ಹಾಗೂ ಕನ್ನಡದ ಇತರ ಪ್ರತಿಷ್ಠಿತ ಲೇಖಕರ ಅತ್ಯುತ್ತಮ ಪ್ರಾತಿನಿಧಿಕ ರಚನೆಗಳ ಸಂಚಯಗಳನ್ನು ಹೊರತರುತ್ತಿರುವುದು ಅಭಿನಂದನೀಯ ಮತ್ತು ಅನುಕರಣ ಯೋಗ್ಯ. ಕುವೆಂಪು, ಪು. ತಿ. ನರಸಿಂಹಾಚಾರ್ ಮತ್ತು ಜಿ. ಎಸ್. ಶಿವರುದ್ರಪ್ಪ ಅವರ ಸಂಚಯಗಳನ್ನು ಈಗಾಗಲೇ ಪ್ರಕಟಿಸಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ಇನ್ನಿತರ ಜ್ಞಾನಪೀಠ ಪ್ರಶಸ್ತಿ ಹಾಗೂ ಸರಸ್ವತಿ ಸಮ್ಮಾನ್ ಪ್ರಶಸ್ತಿ ಪುರಸ್ಕೃತರ ಸಂಚಯಗಳನ್ನೂ ಸಿದ್ಧಪಡಿಸುತ್ತಿರುವುದು ನನ್ನಲ್ಲಿ ಅಭಿಮಾನ ಮತ್ತು ಹೆಮ್ಮೆ ಮೂಡಿಸಿದೆ.

ಇವುಗಳೆಲ್ಲದರ ಹಿಂದಿ ಮತ್ತು ಇಂಗ್ಲಿಷ್ ಆವೃತ್ತಿಗಳು ಪ್ರಕಟವಾದಾಗ ಕನ್ನಡದ ಹಿರಿಮೆ ಮತ್ತು ಗರಿಮೆ ಸಾರಸ್ವತ ಲೋಕದಲ್ಲಿ ಮತ್ತಷ್ಟು ಪ್ರಜ್ವಲಿಸಲಿದೆ. ಜ್ಞಾನ, ವಿಜ್ಞಾನ ಹಾಗೂ ತಂತ್ರಜ್ಞಾನ ಕ್ಷೇತ್ರಗಳಿಗೂ ಕೊಡುಗೆಯಾಗಬಲ್ಲ ಮಹತ್ವದ ಮೌಲಿಕ ಕೃತಿಗಳನ್ನು ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ಮತ್ತಷ್ಟು ಹೊರತರಲಿ ಎಂಬುದೇ ನಮ್ಮ ಸರ್ಕಾರದ ಸದಾಶಯ.

**ಭಾರತದ ಸಂವಿಧಾನ ಶಿಲ್ಪಿ** ಭಾರತರತ್ನ ಡಾ. ಬಿ. ಆರ್. ಅಂಬೇಡ್ಕರ್ ಅವರ ಎಲ್ಲಾ ಬರೆಹಗಳು ಮತ್ತು ಭಾಷಣಗಳನ್ನು ಕನ್ನಡ ಭಾಷೆಗೆ ಅನುವಾದಿಸಿ ಪ್ರಕಟಿಸುವ ಯೋಜನೆಯನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಿದ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಹಾಗೂ ಭಾಷಾಂತರದ ಹೊಣೆ ಹೊತ್ತು ಅನುವಾದದ ಕಾರ್ಯವನ್ನು ಅಚ್ಚುಕಟ್ಟಾಗಿ ನಿರ್ವಹಿಸಿದ ಎಲ್ಲಾ ಸದಸ್ಯರಿಗೂ ನನ್ನ ಅಕ್ಕರೆಯ ಅಭಿನಂದನೆಗಳು ಹಾಗೂ ಆತ್ಮೀಯ ವಂದನೆಗಳು.

(ಸಿದ್ದರಾಮಯ್ಯ)

ಕರ್ನಾಟಕ ಸರ್ಕಾರ

**ಹೆಚ್. ಆಂಜನೇಯ**
ಸಮಾಜ ಕಲ್ಯಾಣ ಮತ್ತು
ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು
ಹಾಗೂ
ಚಿತ್ರದುರ್ಗ ಜಿಲ್ಲಾ ಉಸ್ತುವಾರಿ ಸಚಿವರು

ದೂ.ಸಂ. ೦೮೦ ೨೨೩೫ ೩೧೦೪
೨೨೦೩ ೯೮೮
ಕೊಠಡಿ ಸಂಖ್ಯೆ: ೩೪೦/೩೪೦ಎ,
೩ನೇ ಮಹಡಿ, ವಿಧಾನ ಸೌಧ,
ಬೆಂಗಳೂರು – ೫೬೦ ೦೦೧
ದಿನಾಂಕ: ೧೨.೧.೨೦೧೬

## ಸಂದೇಶ

ನಮ್ಮ ಸುತ್ತಣ ಸಮಾಜದಲ್ಲಿ ಇರುವ ಅಸಮಾನತೆಗಳಿಗೆ ಕಾರಣಗಳೇನೇ ಇರಲಿ, ಆ ಅಸಮಾನತೆಯು ಬೆಳೆಯುವ ಮಕ್ಕಳ ದೈಹಿಕ ಮತ್ತು ಮಾನಸಿಕ ವಿಕಾಸಕ್ಕೆ ಅಡ್ಡಿಗಳನ್ನು ಉಂಟು ಮಾಡಬಾರದು. ಇಂತಹ ಅಡ್ಡಿಗಳು ಇರದಂತೆ ನೋಡಿಕೊಳ್ಳಲು ಸರ್ಕಾರಗಳು ತಕ್ಕ ಯೋಜನೆಗಳನ್ನು ರೂಪಿಸಿಕೊಂಡು ಜಾರಿಗೆ ಕೊಡುತ್ತಿವೆ. ಕರ್ನಾಟಕ ಸರಕಾರವೂ ಕೂಡ ತನ್ನ ಸಮಾಜ ಕಲ್ಯಾಣ ಇಲಾಖೆಯ ಮೂಲಕ ಈ ನಿಟ್ಟಿನಲ್ಲಿ ಹಲವು ಯೋಜನೆಗಳನ್ನು ಅನುಷ್ಠಾನಗೊಳಿಸಿದೆ. ನಾಡಿನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮಕ್ಕಳು ಓದನ್ನು ಮುಂದುವರಿಸಲು ಅನುಕೂಲವಾಗುವಂತೆ ವಿದ್ಯಾರ್ಥಿನಿಲಯಗಳನ್ನು ನಡೆಸುತ್ತಿದೆ. ಲಕ್ಷಾಂತರ ಮಕ್ಕಳು ಈ ವಿದ್ಯಾರ್ಥಿನಿಲಯ ಗಳಲ್ಲಿದ್ದುಕೊಂಡು ತಮ್ಮ ಶಿಕ್ಷಣವನ್ನು ಮುಂದುವರೆಸುತ್ತಿದ್ದಾರೆ. ಅವರ ಭೌತಿಕ ಅಗತ್ಯಗಳಿಗೆ ಬೇಕಾದ ಎಲ್ಲ ಸೌಲಭ್ಯಗಳು ಅಲ್ಲಿ ದೊರಕುವಂತೆ ನೋಡಿಕೊಳ್ಳಲಾಗಿದೆ.

ಇವೆಲ್ಲದರ ಜೊತೆಗೆ ಆ ವಿದ್ಯಾರ್ಥಿಗಳಿಗೆ ಬೌದ್ಧಿಕ ಬೆಳವಣಿಗೆಗೆ ಬೇಕಾದ ಅವಕಾಶಗಳನ್ನು ಕಲ್ಪಿಸುವುದು ಕೂಡ ಇಲಾಖೆಯ ಹೊಣೆಯಾಗಿದೆ. ಈ ನಿಟ್ಟಿನಲ್ಲಿ ಇಪ್ಪತ್ತನೆಯ ಶತಮಾನದ ಧೀಮಂತ ಚಿಂತಕರಾಗಿ ಎಲ್ಲ ಬಗೆಯ ಅಸಮಾನತೆಗಳ ವಿರುದ್ಧ ನಿರಂತರ ಹೋರಾಟ ಮಾಡಿದ ಬಾಬಾಸಾಹೇಬ್ ಡಾ. ಬಿ. ಆರ್. ಅಂಬೇಡ್ಕರ್ ಅವರ ವಿಚಾರಗಳ ಪರಿಚಯ ಮಾಡಿಕೊಡುವುದು ಅಗತ್ಯವೆನಿಸಿ ಇಲಾಖೆ ಒಂದು ಯೋಜನೆಯನ್ನು ರೂಪಿಸಿತು. ಅಂಬೇಡ್ಕರ್ ಅವರ ಎಲ್ಲ ಬರೆಹಗಳು ಮತ್ತು ಭಾಷಣಗಳ ಕನ್ನಡ ಅನುವಾದದ ಸಂಪುಟಗಳನ್ನು ಈ ವಿದ್ಯಾರ್ಥಿನಿಲಯಗಳಿಗೆ ಒದಗಿಸುವುದೇ ಈ ಯೋಜನೆ. ರಾಜ್ಯದ ಮಾನ್ಯ ಮುಖ್ಯಮಂತ್ರಿಗಳು ೨೦೧೫-೧೬ನೇ ಸಾಲಿನ ವರ್ಷದ ತಮ್ಮ ಆಯವ್ಯಯವನ್ನು ಮಂಡನೆ ಮಾಡುವಾಗ ಈ ಯೋಜನೆಯನ್ನು ಘೋಷಿಸಿದರು. ಅದರಂತೆ ಈ ಸಂಪುಟಗಳನ್ನು ಅಚ್ಚುಮಾಡಿ ವಿದ್ಯಾರ್ಥಿನಿಲಯಗಳಿಗೆ ಒದಗಿಸುವ ಹೊಣೆಯನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ವಹಿಸಲಾಯಿತು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಈ ಸಂಪುಟಗಳನ್ನು ಅನುವಾದಿಸಿ ಪ್ರಕಟಿಸುವ ಕೆಲಸವನ್ನು ಕುವೆಂಪು ಭಾಷಾ ಭಾರತಿ ಪ್ರಾಧಿಕಾರಕ್ಕೆ ವಹಿಸಿತು. ಈಗ ಈ ಸಂಪುಟಗಳನ್ನು ಸಿದ್ಧಗೊಳಿಸಿ ಪ್ರಾಧಿಕಾರವು ತನ್ನ ಹೊಣೆಯನ್ನು ಯಶಸ್ವಿಯಾಗಿ ಪೂರೈಸಿದೆ.

ಈ ಯೋಜನೆಗೆ ಚಾಲನೆಯನ್ನು ನೀಡಿದ ರಾಜ್ಯದ ಸನ್ಮಾನ್ಯ ಮುಖ್ಯಮಂತ್ರಿಗಳಿಗೆ, ಕಾರ್ಯರೂಪಕ್ಕೆ ತಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಾನ್ಯ ಸಚಿವರಿಗೆ ಮತ್ತು ಕುವೆಂಪು ಭಾಷಾ ಭಾರತಿ ಪ್ರಾಧಿಕಾರಕ್ಕೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

(ಹೆಚ್.ಆಂಜನೇಯ)

ಕರ್ನಾಟಕ ಸರ್ಕಾರ

**ಉಮಾಶ್ರೀ**

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ
ವಿಕಲಚೇತನರ ಮತ್ತು ಹಿರಿಯ ನಾಗರಿಕರ
ಸಬಲೀಕರಣ, ಕನ್ನಡ ಮತ್ತು ಸಂಸ್ಕೃತಿ ಸಚಿವರು

ದೂರವಾಣಿ: ಕಛೇರಿ : ೨೨೨೫೫೨೮೨
೨೨೦೩೩೪೯೯
ಕೊಠಡಿ ಸಂಖ್ಯೆ: ೨೫೨, ೨ನೇ ಮಹಡಿ
ವಿಧಾನ ಸೌಧ, ಬೆಂಗಳೂರು

ಸಂ: ಮ.ಮ.ಅ.ಕ.ಸಂ.ಸ/೨೪೮/೨೦೧೫ ದಿನಾಂಕ: ೦೪.೬.೨೦೧೫

## ಸಂದೇಶ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಕರ್ನಾಟಕ ಸರ್ಕಾರ ಸ್ಥಾಪಿಸಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ವಿಜ್ಞಾನ – ತಂತ್ರಜ್ಞಾನ ಮತ್ತು ಸಾಹಿತ್ಯ ವಿಷಯಗಳಿಗೆ ಸಂಬಂಧಿಸಿದಂತೆ ನೂರಾರು ಮಹತ್ವದ ಮೌಲಿಕ ಹಾಗೂ ಅನುವಾದಿತ ಗ್ರಂಥಗಳನ್ನು ಹೊರತಂದಿರುವುದು ತುಂಬ ಶ್ಲಾಘನೀಯ ವಿಚಾರವಾಗಿದೆ. ಕನ್ನಡಿಗರಿಗೆ ಭಾರತೀಯ ಸಾಹಿತ್ಯದ ಮತ್ತು ವಿಶ್ವಸಾಹಿತ್ಯದ ಮಹತ್ವದ ಕೃತಿಗಳನ್ನು ಪರಿಚಯಿಸಿಕೊಡುವ ಕಾರ್ಯಗಳ ಜೊತೆಗೆ ರಾಷ್ಟ್ರೀಯ ಪ್ರಶಸ್ತಿ–ಪುರಸ್ಕಾರಗಳನ್ನು ಗಳಿಸಿರುವ ನಮ್ಮ ಲೇಖಕರ ಪ್ರಾತಿನಿಧಿಕ ಸಂಕಲನಗಳನ್ನು ಹೊರತಂದು ಅವುಗಳನ್ನು ಬೇರೆ ಭಾಷೆಗಳಲ್ಲಿ ಪ್ರಕಟಿಸುತ್ತಿರುವುದು ತುಂಬ ಮಹತ್ವದ ಕಾರ್ಯವಾಗಿದೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಹತ್ವಾಕಾಂಕ್ಷೆಯ ಯೋಜನೆಗಳಲ್ಲಿ ಭಾರತರತ್ನ ಬಾಬಾ ಸಾಹೇಬ್ ಡಾ. ಬಿ. ಆರ್. ಅಂಬೇಡ್ಕರ್ ಅವರ ಬರೆಹ ಮತ್ತು ಭಾಷಣಗಳನ್ನು ಕನ್ನಡದಲ್ಲಿ ಅನುವಾದಿಸಿ ಪ್ರಕಟಿಸುವುದು ಒಂದಾಗಿದೆ. ಈ ಯೋಜನೆಯನ್ನು ನಿರ್ವಹಿಸಲು ಸಲಹಾ ಸಮಿತಿಯೊಂದನ್ನು ರೂಪಿಸಲಾಗಿದೆ. ಈ ಸಮಿತಿಯ ನೇತೃತ್ವದಲ್ಲಿ ಅನುವಾದಿತ ಕೃತಿಗಳನ್ನು ಹೊರತಂದಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರವನ್ನು ಇಲಾಖೆಯ ಪರವಾಗಿ ಅಭಿನಂದಿಸುತ್ತೇನೆ. ಪ್ರಕಟವಾದ ಎಲ್ಲ ಸಂಪುಟಗಳು ಜನಮನ್ನಣೆ ಗಳಿಸಿವೆ. ಅವುಗಳನ್ನು ಮರುಮುದ್ರಿಸಿ ಓದುಗರಿಗೆ ಒದಗಿಸಲು ನಮ್ಮ ಇಲಾಖೆಯು ಮುಂದಾಗಿದೆ ಮತ್ತು ಈ ಹೊಣೆಯನ್ನು ಕುವೆಂಪು ಭಾಷಾ ಭಾರತಿ ಪ್ರಾಧಿಕಾರಕ್ಕೆ ನೀಡಿದೆ. ಪ್ರಾಧಿಕಾರವು ಈಗ ಈ ಸಂಪುಟಗಳನ್ನು ಓದುಗರ ಮುಂದೆ ಇರಿಸಿದೆ. ಇದಕ್ಕಾಗಿ ಸಂಬಂಧಿಸಿದ ಎಲ್ಲರನ್ನೂ ಇಲಾಖೆಯ ಪರವಾಗಿ ಅಭಿನಂದಿಸುತ್ತೇನೆ.

(ಉಮಾಶ್ರೀ)

ಕರ್ನಾಟಕ ಸರ್ಕಾರ

**ಡಾ. ಎನ್.ಎಸ್. ಚನ್ನಪ್ಪಗೌಡ,** ಭಾ.ಆ.ಸೇ.,
ಸರ್ಕಾರದ ಕಾರ್ಯದರ್ಶಿಗಳು
ಕನ್ನಡ, ಸಂಸ್ಕೃತಿ ಮತ್ತು ವಾರ್ತಾ ಇಲಾಖೆ

ಕೊಠಡಿ ಸಂಖ್ಯೆ: ೩, ನೆಲಮಹಡಿ
ವಿಕಾಸಸೌಧ
ಬೆಂಗಳೂರು – ೫೬೦ ೦೦೧
ಮೊ.: +೯೧ ೮೦ ೨೨೦೩೪೦೦೨
ಫ್ಯಾಕ್ಸ್: +೯೧ ೮೦ ೨೨೩೫೩೧೦೫

# ಹಾರೈಕೆ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಸ್ಥಾಪಿತವಾಗಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಕುವೆಂಪು ಅವರ ಆಶಯದಂತೆ ಸಾಹಿತ್ಯ, ಸಂಸ್ಕೃತಿ ಮತ್ತು ಜ್ಞಾನ–ವಿಜ್ಞಾನ ಕ್ಷೇತ್ರಗಳಿಗೆ ಮಹತ್ವದ ಕೊಡುಗೆಯಾಗಬಲ್ಲಂಥ ಗ್ರಂಥಗಳನ್ನು ಹೊರತರುತ್ತಿರುವುದು ತುಂಬ ಮಹತ್ವದ ಸಂಗತಿಯೇ ಆಗಿದೆ. ಇತರ ಯಾವ ಭಾಷೆಗಳಲ್ಲೂ ಇನ್ನೂ ಹೊರಬರದೇ ಇರುವ ವಿಲ್ ಡ್ಯೂರಾಂಟ್ ಅವರ **'ನಾಗರಿಕತೆಯ ಕಥೆ'**, ಜೆ. ಡಿ. ಬರ್ನಾಲ್ ಅವರ **'ಇತಿಹಾಸದಲ್ಲಿ ವಿಜ್ಞಾನ'**ದಂಥ ಮಹತ್ವದ ಸಂಪುಟಗಳನ್ನೂ, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರ ಮಹತ್ವದ ರಚನೆಗಳನ್ನು ಒಳಗೊಂಡ ಸಂಚಯಗಳನ್ನೂ ಹೊರತರುತ್ತಿರುವುದೂ, ನಾಡಿನ ಇತರ ಪ್ರತಿಷ್ಠಿತ ಸಂಸ್ಥೆಗಳೊಂದಿಗೆ ಸಂಬಂಧವನ್ನು ಏರ್ಪಡಿಸಿಕೊಂಡು ಮಹತ್ವದ ಕೃತಿಗಳನ್ನು ಬೆಳಕಿಗೆ ತರುತ್ತಿರುವುದೂ ಕರ್ನಾಟಕ ಸರ್ಕಾರಕ್ಕೆ ಮಾತ್ರವಲ್ಲದೆ, ಕನ್ನಡ ಜನತೆಗೆ ಹೆಮ್ಮೆಯನ್ನು ತರುವಂಥ ಸಂಗತಿಯಾಗಿರುತ್ತದೆ.

ಇದುವರೆಗೆ ಪ್ರಕಟವಾಗಿರುವ ಡಾ. ಬಿ. ಆರ್. ಅಂಬೇಡ್ಕರ್ ಅವರ ಬರೆಹ ಮತ್ತು ಭಾಷಣಗಳನ್ನು ಕನ್ನಡಕ್ಕೆ ಅನುವಾದಿಸುವ ಯೋಜನೆಯನ್ನು ಕೈಗೊಂಡು, ಅವುಗಳನ್ನು ಹೊರತರುತ್ತಿರುವುದು ಹಾಗೂ ಇದುವರೆಗೆ ಪ್ರಕಟವಾಗದಿರುವ ಅಂಬೇಡ್ಕರ್ ಅವರ ಚಿಂತನೆಗಳನ್ನೊಳಗೊಂಡ ಇತರ ಸಂಪುಟಗಳನ್ನು ಹೊರತರುವ ಕಾರ್ಯವನ್ನು ಹಮ್ಮಿಕೊಂಡಿರುವುದು ವಿಶೇಷವಾಗಿ ಸ್ತುತ್ಯರ್ಹವಾದ ಕಾರ್ಯವಾಗಿದೆ. ಇಪ್ಪತ್ತೆರಡು ಸಂಪುಟಗಳಲ್ಲಿ ಹಲವು ಈಗಾಗಲೇ ಹೊರಬಂದಿದ್ದು ಕನ್ನಡ ಓದುಗರ ಮೆಚ್ಚುಗೆಗೆ ಪಾತ್ರವಾಗಿವೆ. ಕರ್ನಾಟಕ ಸರ್ಕಾರವು ಈ ಸಂಪುಟಗಳನ್ನು ಮರು ಮುದ್ರಿಸುವ ಯೋಜನೆಗೆ ಅಗತ್ಯವಾದ ಅನುದಾನವನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮೂಲಕ ಕುವೆಂಪು ಭಾಷಾ ಭಾರತಿ ಪ್ರಾಧಿಕಾರಕ್ಕೆ ಒದಗಿಸಿದೆ. ಈಗ ಈ ಎಲ್ಲ ಸಂಪುಟಗಳು ಹೊಸ ಮೆರುಗಿನೊಂದಿಗೆ ಪ್ರಕಟಗೊಳ್ಳುತ್ತಿರುವುದು ಸಂತಸದ ಸಂಗತಿಯಾಗಿದೆ.

ಒಟ್ಟಿನಲ್ಲಿ ಸಾಹಿತ್ಯ–ಸಂಸ್ಕೃತಿ–ವಿಜ್ಞಾನ ತಂತ್ರಜ್ಞಾನಗಳ ಬೆಳವಣಿಗೆಯೊಂದಿಗೆ ಆದರ್ಶ ರೀತಿಯಲ್ಲಿ ಪ್ರಾಧಿಕಾರ ಹೆಜ್ಜೆ ಹಾಕುತ್ತಾ ಮುನ್ನಡೆಯಲೆಂದೂ, ಹೊಸ–ಹೊಸ ವಿಕ್ರಮಗಳನ್ನು ಸ್ಥಾಪಿಸಲೆಂದೂ ಹಾರೈಸುತ್ತೇನೆ.

**(ಡಾ. ಎನ್.ಎಸ್. ಚನ್ನಪ್ಪಗೌಡ)**

ಕರ್ನಾಟಕ ಸರ್ಕಾರ

**ಶ್ರೀ ಕೆ. ಎ. ದಯಾನಂದ**
ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕನ್ನಡ ಭವನ, ಜೆ.ಸಿ. ರಸ್ತೆ,
ಬೆಂಗಳೂರು – ೫೬೦ ೦೦೨
ದಿನಾಂಕ : ೧೦.೬.೨೦೧೫

## ಸಂದೇಶ

ಕರ್ನಾಟಕ ಸರ್ಕಾರ ಕುವೆಂಪು ಭಾಷಾ ಭಾರತಿ ಪ್ರಾಧಿಕಾರವನ್ನು ಸ್ಥಾಪಿಸಿ ಸಾಹಿತ್ಯಕ–ಸಾಂಸ್ಕೃತಿಕ ಚಟುವಟಿಕೆಗಳಿಗೆ ಹೊಸ ಆಯಾಮಗಳನ್ನು ನೀಡಿದೆ. ಕನ್ನಡದೊಡನೆ ಭಾರತೀಯ ಹಾಗೂ ವಿದೇಶೀಯ ಭಾಷೆಗಳ ನಡುವಣ ಸಂಬಂಧಗಳನ್ನು ಬೆಳೆಸಿಕೊಂಡು ಬರುವುದು; ಆ ಭಾಷೆಗಳ ಶ್ರೇಷ್ಠ ಕೃತಿಗಳನ್ನು ಕನ್ನಡಕ್ಕೆ ತರುವುದರ ಮೂಲಕ ಕನ್ನಡ ಸಾಹಿತ್ಯವನ್ನು ಸಂವೃದ್ಧಿಗೊಳಿಸುವುದು; ಕನ್ನಡ ಸಾಹಿತ್ಯದ ಶ್ರೇಷ್ಠ ಕೃತಿಗಳನ್ನು ಇತರ ಭಾಷೆಗಳಿಗೆ ಕೊಂಡೊಯ್ಯುವುದು; ಮಾನವಿಕ, ವೈಜ್ಞಾನಿಕ ಮತ್ತು ತಾಂತ್ರಿಕ ಕ್ಷೇತ್ರಗಳಲ್ಲಿ ಕನ್ನಡದ ಬಳಕೆಗೆ ಪ್ರೋತ್ಸಾಹ ನೀಡುವಂಥ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು ಮತ್ತು ಸೂಕ್ತ ಪ್ರಕಟಣೆಗಳನ್ನು ಹೊರತರುವುದು ಈ ಪ್ರಾಧಿಕಾರದ ಮುಖ್ಯ ಧ್ಯೇಯೋದ್ದೇಶವಾಗಿರುತ್ತದೆ. ಇದಕ್ಕೆ ಪೂರಕವಾಗಿ ಮತ್ತು ಪೋಷಕವಾಗಿ ರಾಷ್ಟ್ರೀಯ ಪ್ರಾದೇಶಿಕ ವಿಚಾರಗೋಷ್ಠಿಗಳನ್ನು ಏರ್ಪಡಿಸುವುದು ಈ ಧ್ಯೇಯಗಳ ಅಂಗವೇ ಆಗಿದೆ. ಇಂತಹ ಕಾರ್ಯಕ್ರಮಗಳನ್ನು ಯೋಜಿಸುತ್ತಿರುವ ಹಾಗೂ ವಿಶ್ವವಿದ್ಯಾಲಯಗಳ ಮಾನ್ಯತೆಯನ್ನು ಪಡೆದುಕೊಂಡು ಈ ಶೈಕ್ಷಣಿಕ ಕಾರ್ಯಕ್ರಮಗಳನ್ನು ಮುಂದುವರಿಸಿಕೊಂಡು ಹೋಗುತ್ತಿರುವ ವಿಚಾರ ನನಗೆ ವೈಯಕ್ತಿಕವಾಗಿಯೂ ತುಂಬ ಸಂತೋಷವನ್ನುಂಟುಮಾಡಿದೆ.

ಈ ಕೆಲವೇ ವರ್ಷಗಳಲ್ಲಿ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಹೊರತಂದಿರುವ ಪ್ರಕಟಣೆಗಳು ತುಂಬ ಮಹತ್ವದವೇ ಆಗಿವೆ. ವಿಲ್ ಡ್ಯೂರಾಂಟ್ ಅವರ 'ನಾಗರಿಕತೆಯ ಇತಿಹಾಸ', ಜೆ.ಡಿ.ಬರ್ನಾಲ್ ಅವರ 'ವಿಜ್ಞಾನದ ಇತಿಹಾಸ' ಸಂಪುಟಗಳು ಯಾವುದೇ ಭಾಷೆಗೆ ಗೌರವಪ್ರಾಯವಾದ ಕೃತಿಗಳೇ ಆಗುತ್ತವೆ. ಅಂಥ ಸಾಹಸವನ್ನು ಭಾರತೀಯ ಭಾಷೆಗಳಲ್ಲಿ ಮೊದಲ ಬಾರಿಗೆ ಆಗುಮಾಡುತ್ತಿರುವುದು ವಿಶೇಷವಾಗಿ ಅಭಿನಂದನೀಯವಾದ ಕಾರ್ಯವಾಗಿದೆ. ಭಾರತರತ್ನ ಡಾ. ಬಿ. ಆರ್. ಅಂಬೇಡ್ಕರ್ ಅವರ ಅನುವಾದಿತ ಕೃತಿಗಳ ಪರಿಷ್ಕರಣ ಯೋಜನೆ ಮತ್ತು ಅವರ ಇತರ ಸಂಪುಟಗಳ ಹೊಸ ಅನುವಾದದ ಪ್ರಕಟಣೆ ಯೋಜನೆ, ಕೃಷ್ಣಾ ಐತೀರ್ಪಿನ ಕನ್ನಡ ಅನುವಾದ ಯೋಜನೆ ಮುಂತಾದವು – ಹೊಸ ವಿಕ್ರಮವನ್ನು ಸ್ಥಾಪಿಸಲಿವೆ.

ಪ್ರಾಧಿಕಾರವು ಪ್ರಕಟಿಸಿದ್ದ 'ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಬರೆಹಗಳು ಮತ್ತು ಭಾಷಣಗಳು' ಮಾಲಿಕೆಯ ಹಲವು ಸಂಪುಟಗಳು ಈಗ ಮರಳಿ ಮುದ್ರಿತವಾಗುತ್ತಿವೆ. ಈ ಸಂಪುಟಗಳು ಓದುಗರಿಗೆ ಸದಾಕಾಲವು ದೊರೆಯುತ್ತಿರಬೇಕೆಂಬುದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಗುರಿಯಾಗಿದೆ. ಅದಕ್ಕಾಗಿ ಅಗತ್ಯವಾದ ಅನುದಾನವನ್ನು ಇಲಾಖೆಯು ಪ್ರಾಧಿಕಾರಕ್ಕೆ ನೀಡಿದೆ. ಈ ಸಂಪುಟಗಳನ್ನು ಸಿದ್ಧಪಡಿಸಲು ನೆರವಾದ ಸಲಹಾ ಸಮಿತಿಯ ಸದಸ್ಯರಿಗೆ, ಅನುವಾದಕರಿಗೆ ಮತ್ತು ಪ್ರಾಧಿಕಾರಕ್ಕೆ ನನ್ನ ಅಭಿನಂದನೆಗಳು ಸಲ್ಲುತ್ತವೆ.

ಮುಂದೆಯೂ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಇಂಥ ವಿಶಿಷ್ಟ ಕಾರ್ಯಕ್ರಮಗಳನ್ನು, ಮಹತ್ವದ ಪ್ರಕಟಣೆಗಳನ್ನು ಹೊರತರುವ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಿಕೊಂಡು ಬರಲಿ, ಕನ್ನಡ ನಾಡಿನ ಮೆಚ್ಚಿನ ಸಾಹಿತ್ಯಕ–ಸಾಂಸ್ಕೃತಿಕ ಸಂಸ್ಥೆಯಾಗಿ ಬೆಳೆಯಲಿ ಎಂದು ಹಾರೈಸುತ್ತೇನೆ.

(ಕೆ. ಎ. ದಯಾನಂದ)

## ಪರಿಷ್ಕೃತ ಮುದ್ರಣಕ್ಕೆ ಮುನ್ನುಡಿ

ಡಾ. ಬಾಬಾ ಸಾಹೇಬ್ ಅಂಬೇಡ್ಕರ್ (೧೮೯೧ ರಿಂದ ೧೯೫೬) ತಮ್ಮ ಕಾಲಮಾನವನ್ನು ಮೆಟ್ಟಿನಿಂತು ಗೋಪುರೋಪಮವಾಗಿ ಬೆಳೆದುನಿಂತ ಮಹಾಮಾನವರಲ್ಲಿ ಒಬ್ಬರು. ರಾಷ್ಟ್ರೀಯತಾವಾದಿಯಾಗಿ, ಕಾನೂನು ತಜ್ಞರಾಗಿ, ರಾಜಕೀಯ ನೇತಾರರಾಗಿ, ಕ್ರಿಯಾಶೀಲ ಸಾಮಾಜಿಕ ಕಾರ್ಯಕರ್ತರಾಗಿ, ಶ್ರೇಷ್ಠ ಇತಿಹಾಸಕಾರರಾಗಿ, ಮಹಾ ದಾರ್ಶನಿಕರಾಗಿ, ಅಪ್ರತಿಮ ಚಿಂತಕರಾಗಿ, ಮಾನವಶಾಸ್ತ್ರಜ್ಞರಾಗಿ, ಖ್ಯಾತ ಅರ್ಥಶಾಸ್ತ್ರಜ್ಞರಾಗಿ, ಸಮೃದ್ಧ ಬರೆಹಗಾರರಾಗಿ, ಕ್ರಾಂತಿಕಾರಿಯಾಗಿ, ಅಸಾಮಾನ್ಯ ವಾಕ್ಪಟುವಾಗಿ, ಬೌದ್ಧ ಧರ್ಮದ ಪುನರುಜ್ಜೀವಕರಾಗಿ, ಭಾರತೀಯ ಸಂವಿಧಾನದ ಪ್ರಮುಖ ಶಿಲ್ಪಿಯಾಗಿ ಅವರು ಮಾಡಿರುವ ಮಹತ್ತರ ಸಾಧನೆಗಳನ್ನು ಗಮನಿಸಿದರೆ, ಒಬ್ಬ ವ್ಯಕ್ತಿ ಒಂದು ಜೀವಮಾನದಲ್ಲಿ ಇಷ್ಟೆಲ್ಲ ಸಾಧನೆಗಳನ್ನು ಮಾಡಲು ಸಾಧ್ಯವೇ ಎಂದು ಬೆರಗಾಗಿ ನಿಲ್ಲುವಂತೆ ಆಗುತ್ತದೆ. ಆಧುನಿಕ ಅರ್ಥದಲ್ಲಿ ಅವರನ್ನು 'ಪವಾಡ ಪುರುಷ'ರೆಂದೇ ಹೆಸರಿಸಬೇಕಾಗುತ್ತದೆ.

ಸಾಮಾಜಿಕ ಭೇದಭಾವಕ್ಕೊಳಗಾಗಿ ನರಳುತ್ತಿದ್ದ ಬಡ ಕುಟುಂಬದಲ್ಲಿ ಹುಟ್ಟಿದ ಅವರು ತಮ್ಮ ಇಡಿ ಜೀವಮಾನವನ್ನು ಈ ಸಾಮಾಜಿಕ ಭೇದಭಾವಕ್ಕೆ, ಸಮಾಜದ ಎಲ್ಲ ಪಿಡುಗುಗಳಿಗೂ ಕಾರಣವಾಗಿರುವ ಜಾತಿಪದ್ಧತಿಯ ವಿರುದ್ಧವಾಗಿ ಹೋರಾಡುವುದಕ್ಕೆ ಮೀಸಲಾಗಿ ಇಡಬೇಕಾಯಿತು. ತಮ್ಮ ಈ ಅವಿರತ ಹೋರಾಟದಿಂದ, ಈ ಹಿಂದಿನ ಸಮಾಜ ಸುಧಾರಕರು ಯಾರೂ ಸಾಧಿಸದಿದ್ದಂಥ ಮಹಾಕ್ರಾಂತಿಯನ್ನು ಎಸಗಿ ಹೊಸ ಇತಿಹಾಸವನ್ನೇ ಸೃಷ್ಟಿಸಿದರು. ಸಾಮಾಜಿಕ–ಆರ್ಥಿಕ ಸಂಕಷ್ಟಗಳನ್ನು ಮೀರಿ ನಿಂತು ಅನೇಕ ಪ್ರಥಮಗಳನ್ನೂ ಅವರು ಸಾಧಿಸಿದರು. ಕಾಲೇಜು ಶಿಕ್ಷಣವನ್ನು ಪಡೆದ ದಲಿತರಲ್ಲಿಯೂ ಮೊದಲಿಗರಾಗಿದ್ದವರಲ್ಲಿ ಅವರು ಪ್ರಮುಖರಾದರು. ನ್ಯಾಯಶಾಸ್ತ್ರ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ ಸಂಬಂಧವಾದ ತಮ್ಮ ಅಧ್ಯಯನ ಮತ್ತು ಸಂಶೋಧನೆಗಳಿಂದಾಗಿ ಕೊಲಂಬಿಯಾದಂಥ ವಿಶ್ವವಿದ್ಯಾನಿಲಯದಿಂದ, ಲಂಡನ್ನಿನ ಅರ್ಥಶಾಸ್ತ್ರ ಶಾಲೆಯಿಂದ ಡಾಕ್ಟೊರೇಟ್ ಪದವಿಗಳನ್ನು ಪಡೆದ ಮಹಾಮೇಧಾವಿಗಳಲ್ಲೂ ಅವರೊಬ್ಬರಾದರು. ಹೀಗೆ ಶ್ರೇಷ್ಠ ವಿದ್ವಾಂಸರಾಗಿ ಭಾರತಕ್ಕೆ ಹಿಂದಿರುಗಿ ಬಂದ ಅವರು ಸಮಾಜದ ಕೆಳವರ್ಗಗಳ ಸಾಮಾಜಿಕ ಸ್ವಾತಂತ್ರ್ಯಕ್ಕಾಗಿ, ರಾಜಕೀಯ ಹಕ್ಕುಗಳಿಗಾಗಿ ಅಹರ್ನಿಶಿ ದುಡಿದರು. ಬರೆಹಗಳ–ಭಾಷಣಗಳ ಮೂಲಕ, ವೈಚಾರಿಕ ಚರ್ಚೆ–ಸಂವಾದಗಳ ಮೂಲಕ ಸಾಮಾಜಿಕ–ರಾಜಕೀಯ ಜಾಗೃತಿಯನ್ನೇ ಮೂಡಿಸಿದರು; 'ಆಧುನಿಕ ಬೋಧಿಸತ್ವ'ರೆಂಬ ಕೀರ್ತಿಗೂ ಪಾತ್ರರಾದರು. ಸಮಾಜದ ಎಲ್ಲ ವರ್ಗಗಳಲ್ಲಿ, ವಿವಿಧ ಧರ್ಮಗಳಲ್ಲಿ ಪ್ರತ್ಯಕ್ಷವಾಗಿ, ಪ್ರಚ್ಛನ್ನವಾಗಿ ಬೇರುಬಿಟ್ಟಿದ್ದ ಸಾಮಾಜಿಕ ಕೆಡಕುಗಳ ವಿರುದ್ಧ ದನಿಯೆತ್ತಿದ ಹಿರಿಮೆಯೂ ಅವರದಾಗಿದೆ. ಅಂತಿಮವಾಗಿ ದೇಶ ವಿಭಜನೆಯ ಅನಿವಾರ್ಯತೆಯನ್ನು ಒಪ್ಪಿದರಾದರೂ, ಅದರ ಭಯಾನಕ ಪರಿಣಾಮಗಳ ವಿರುದ್ಧ ಎಚ್ಚರಿಕೆಯ ಗಂಟೆಯನ್ನೂ ಅವರು ಮೊದಲೇ ಮೊಳಗಿಸಿದ್ದರೆಂಬುದು ಗಮನಾರ್ಹವಾದ ಸಂಗತಿ.

ಬುದ್ಧ, ಕಬೀರ್, ಏಸು, ಅಶೋಕ, ಶಿವಾಜಿ, ಜಾರ್ಜ್ ವಾಷಿಂಗ್‌ಟನ್, ಥಾಮಸ್ ಪೇನ್, ಅಬ್ರಹಾಂ ಲಿಂಕನ್, ಎಡ್ಮಂಡ್ ಬರ್ಕ್, ಮಾರ್ಟಿನ್ ಲೂಥರ್, ಶಾಹೂ ಮಹಾರಾಜ್, ಮಹಾರಾಜ ಸಯ್ಯಾಜಿರಾವ್ ಗಾಯಕ್‌ವಾಡ್–III ಮುಂತಾದವರ ಚಿಂತನೆಗಳಿಂದ ಪ್ರಭಾವಿತರಾಗಿದ್ದ ಅಂಬೇಡ್ಕರ್ ಅವರು ಈಚಿನ ತಲೆಮಾರಿನ ಶ್ರೀ ಎ.ಎಚ್. ಸಾಳುಂಕೆ ಅವರಿಂದ ಹಿಡಿದು ಕು. ಮಾಯಾವತಿಯವರ ವರೆಗೆ ಅನೇಕ ಸಮಾಜ ಚಿಂತಕರು ಮತ್ತು ರಾಜಕೀಯ ನೇತಾರರ ಮೇಲೆ ಅಚ್ಚಳಿಯದ ಪ್ರಭಾವವನ್ನು ಬೀರಿದ್ದಾರೆ. ಅವರ ಅಸಾಮಾನ್ಯ

ಜೀವಿತ–ಸಾಧನೆಗಳನ್ನು ಕುರಿತಂತೆ ವಿವಿಧ ಭಾಷೆಗಳಲ್ಲಿನ ಹಿರಿಯ–ಕಿರಿಯ ಲೇಖಕರುಗಳು ಹತ್ತಾರು ಜೀವನ–ಚರಿತ್ರೆಗಳನ್ನು ರಚಿಸಿರುವುದು ಆಶ್ಚರ್ಯದ ಸಂಗತಿಯೇನೂ ಅಲ್ಲ. ದೆಹಲಿಯೂ ಸೇರಿದಂತೆ ನಾಡಿನ ಅನೇಕ ಕಡೆಗಳಲ್ಲಿ ಅವರ ಸ್ಮಾರಕಗಳು ನಿರ್ಮಾಣಗೊಂಡಿವೆ. ಹೈದರಾಬಾದಿನಲ್ಲಿ 'ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಮುಕ್ತ ವಿಶ್ವವಿದ್ಯಾನಿಲಯ', ಮುಜಫ್ಫರ್‌ಪುರದಲ್ಲಿ 'ಬಿ.ಆರ್. ಅಂಬೇಡ್ಕರ್ ಬಿಹಾರ್ ವಿಶ್ವವಿದ್ಯಾನಿಲಯ'ಗಳು ಸ್ಥಾಪನೆಗೊಂಡಿರುವುದಲ್ಲದೆ, ನಾಗಪುರದಲ್ಲಿನ ಅಂತರ–ರಾಷ್ಟ್ರೀಯ ವಿಮಾನ ನಿಲ್ದಾಣಕ್ಕೂ ಅಂಬೇಡ್ಕರ್ ಅವರ ಹೆಸರನ್ನಿಡಲಾಗಿದೆ. ಸಂಸತ್ ಭವನದಲ್ಲಿಯೂ ಅವರ ಭಾವಚಿತ್ರವನ್ನು ಅನಾವರಣಗೊಳಿಸಲಾಗಿದೆ. ಅವರ ಹುಟ್ಟುಹಬ್ಬವನ್ನು (ಏಪ್ರಿಲ್ ೧೪) ಮತ್ತು ಪರಿನಿರ್ವಾಣ ದಿನವನ್ನು (ಡಿಸೆಂಬರ್ ೬) ನಾಡಿನಾದ್ಯಂತ ಆಚರಿಸಲಾಗುತ್ತಿದೆ. ಅವರ ಬಹುಮುಖೀ ಸಾಧನೆಯನ್ನು ಗುರುತಿಸಿ, ಮರಣೋತ್ತರವಾಗಿ ೧೯೯೦ರಲ್ಲಿ ಅವರಿಗೆ 'ಭಾರತ ರತ್ನ' ಪ್ರಶಸ್ತಿಯನ್ನೂ ನೀಡಲಾಗಿದೆ. ಅಂಬೇಡ್ಕರ್ ಅವರು "ಶಿಕ್ಷಣ ! ಸಂಘಟನೆ !! ಹೋರಾಟ !!! (Educate ! Organize !! Agitate !!!) ಎಂಬ ತತ್ವಗಳನ್ನು ತಮ್ಮ ಅನುಯಾಯಿಗಳಿಗೆ ಹಾಗೂ ನಾಡಿಗೆ ನೀಡಿದ್ದಾರೆ.

ಮಹಾಮಾನವರೇ ಆಗಿದ್ದ ಅಂಬೇಡ್ಕರ್ ಸಮೃದ್ಧವಾಗಿ ಬರೆವಣಿಗೆಯನ್ನೂ ಮಾಡಿದ್ದಾರೆ–ಸಂಸತ್ತಿನ ಒಳಗೆ, ಹೊರಗೆ ಹಾಗೂ ಪತ್ರಿಕೋದ್ಯಮದ ಮೂಲಕ. ಇವೆಲ್ಲ ಐತಿಹಾಸಿಕ ಪ್ರಾಮುಖ್ಯದ ಬರೆವಣಿಗೆಗಳೇ ಆಗಿವೆ. ಇವುಗಳ ಐತಿಹಾಸಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಮಹತ್ವವನ್ನು ಗುರುತಿಸಿದ ಮುಂಬಯಿ ಸರ್ಕಾರ ಡಾ. ಅಂಬೇಡ್ಕರ್ ಅವರ ಸಮಗ್ರ ಬರೆಹಗಳು ಮತ್ತು ಭಾಷಣಗಳನ್ನು ಇಪ್ಪತ್ತೊಂದು ಸಂಪುಟಗಳಲ್ಲಿ ಹೊರತಂದಿದೆ. ಈ ಸಂಪುಟಗಳನ್ನು ಕನ್ನಡದಲ್ಲಿಯೂ ಹೊರತರಬೇಕೆಂದು, ಆ ಮೂಲಕ ಡಾ. ಅಂಬೇಡ್ಕರ್ ಅವರ ವಿಚಾರಧಾರೆಯನ್ನು ಕನ್ನಡಿಗರಿಗೂ ಅವರದೇ ಭಾಷೆಯಲ್ಲಿ ಮುಟ್ಟಿಸಬೇಕೆಂದು ಸಂಕಲ್ಪಿಸಿದ ಕರ್ನಾಟಕ ಸರ್ಕಾರ, ಕರ್ನಾಟಕ ವಿಶ್ವ ವಿದ್ಯಾನಿಲಯದ ರಾಜ್ಯಶಾಸ್ತ್ರ ಪ್ರಾಧ್ಯಾಪಕರಾಗಿದ್ದ ಡಾ. ಎ.ಎಂ. ರಾಜಶೇಖರಯ್ಯನವರ ಅಧ್ಯಕ್ಷತೆಯಲ್ಲಿ ಅನುವಾದ ಸಂಪಾದನ ಸಮಿತಿಯೊಂದನ್ನು ನೇಮಿಸಿ, ೧೪ ಸಂಪುಟಗಳ ಕನ್ನಡ ಆವೃತ್ತಿಯನ್ನು ಹೊರತಂದಿತು. ಡಾ. ಅಂಬೇಡ್ಕರ್ ಅವರ ವಿಚಾರಧಾರೆಯನ್ನು ಕನ್ನಡಕ್ಕೆ ಅಳವಡಿಸುವ ಮಹಾ ಸಾಹಸದ ಕಾರ್ಯವನ್ನು ಆ ಸಮಿತಿ ನಿರ್ವಹಿಸಿತು. ನಾಡಿನ ಹಲವಾರು ಗಣ್ಯ ವಿದ್ವಾಂಸರು ಆ ಮಹಾ ಕಾರ್ಯದಲ್ಲಿ ಸಹಕರಿಸಿದರು. ಅಂಬೇಡ್ಕರ್ ಅವರ ಇಂಗ್ಲಿಷ್ ಅತ್ಯಂತ ವಿದ್ವತ್‌ಪೂರ್ಣವೂ, ವಿಶಿಷ್ಟವೂ ಆಗಿದ್ದು, ಅನೇಕ ಬಗೆಯ ಸವಾಲುಗಳನ್ನು ಒಡ್ಡುವಂಥದಾಗಿದ್ದುದರಿಂದ, ಕನ್ನಡ ಅನುವಾದದಲ್ಲಿ ಕೆಲವೊಂದು ಅರೆಕೊರೆಗಳು ಉಳಿದುಕೊಂಡುಬಿಟ್ಟಿದ್ದು ಸಹಜವೇ ಆಗಿತ್ತು. ತಜ್ಞ ವಿದ್ವಾಂಸರು ಇಂಥ ಅರೆಕೊರೆಗಳತ್ತ ಬೆಟ್ಟುಮಾಡಿ ತೋರಿಸಿದ್ದೂ ಉಂಟು. ಈ ಆವೃತ್ತಿಯ ಪ್ರತಿಗಳೂ ಮುಗಿದುಹೋಗಿ, ಅಂಬೇಡ್ಕರ್ ಅವರ ಕೃತಿಗಳಿಗೆ ಇದ್ದ ಬೇಡಿಕೆಯನ್ನು ಗಮನಿಸಿ, ಇದರ ಪರಿಷ್ಕೃತ ಆವೃತ್ತಿಯೊಂದನ್ನು ಹೊರತರುವ ಯೋಜನೆಯನ್ನು ಕರ್ನಾಟಕ ಸರ್ಕಾರ ಹಮ್ಮಿಕೊಂಡಿತು. ಈ ಹೊತ್ತಿಗೆ 'ಕುವೆಂಪು ಭಾಷಾ ಭಾರತಿ'ಯ ಅಂಗವಾಗಿ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ ಅಸ್ತಿತ್ವಕ್ಕೆ ಬಂದಿದ್ದುದರಿಂದ, ಈ ಹೊಣೆಯನ್ನು ಸದರಿ ಅಕಾಡೆಮಿಗೆ ವಹಿಸಬೇಕೆಂದು ತೀರ್ಮಾನಿಸಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಈ ಸಂಬಂಧವಾಗಿ ಮಂಜೂರು ಮಾಡಲಾಗಿದ್ದ ೯೫ ಲಕ್ಷ ರೂಪಾಯಿಗಳ ಸಹಾಯಧನವನ್ನೂ, ಕಾರ್ಯನಿರ್ವಹಣೆಯ ಹೊಣೆಯನ್ನೂ ಅನುವಾದ ಸಾಹಿತ್ಯ ಅಕಾಡೆಮಿಗೆ ವರ್ಗಾಯಿಸಲಾಯಿತು. ಈ ಸಂಬಂಧವಾಗಿ ಅನುವಾದ ಸಂಪಾದನ ಸಮಿತಿಯನ್ನು ನೇಮಿಸಲಾಯಿತು. ಅನುವಾದ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿದ್ದ ಡಾ. ಪ್ರಧಾನ್ ಗುರುದತ್ತ ಅವರ ಅಧ್ಯಕ್ಷತೆಯಲ್ಲಿ ರಚಿಸಲಾದ ಈ ಸಮಿತಿಯಲ್ಲಿ ಈ ಕೆಳಕಂಡ ಮಹನೀಯರನ್ನು ಸದಸ್ಯರಾಗಿ ನಾಮಕರಣ ಮಾಡಲಾಯಿತು (ಆದೇಶ ಸಂಖ್ಯೆ: ಸಂ ವಾ ಪ್ರ ೨೮ ಕರಹ ೨೦೦೮ ದಿನಾಂಕ ೨೪–೩–೨೦೦೮)

೧. ಡಾ. ಸಿದ್ಧಲಿಂಗಯ್ಯ ಅಧ್ಯಕ್ಷರು, ಕನ್ನಡ ಅಭಿವೃದ್ಧಿ ಪ್ರಾಧಿಕಾರ; ೧೨–೬–೨೦೦೮ ರಿಂದ ಈಚೆಗೆ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರು

೨. ಶ್ರೀ ದೇವನೂರ ಮಹದೇವ, ಖ್ಯಾತ ಸಾಹಿತಿಗಳು

೩. ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಅನುವಾದ ಅಕಾಡೆಮಿಯನ್ನು ವಿಧ್ಯುಕ್ತವಾಗಿ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದಲ್ಲಿ ವಿಲೀನಗೊಳಿಸಿದ್ದರಿಂದ ಹಾಗೂ ಡಾ. ಪ್ರಧಾನ್ ಗುರುದತ್ತ ಅವರನ್ನೇ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಅಧ್ಯಕ್ಷರನ್ನಾಗಿ ನೇಮಿಸಿದ್ದರಿಂದ ಇದೇ ಸಂಪಾದನ ಸಮಿತಿ ಡಾ. ಅಂಬೇಡ್ಕರ್ ಅವರ ಸಮಗ್ರ ಕೃತಿಗಳ ಸಂಪಾದನೆ ಮತ್ತು ಪ್ರಕಟಣೆಯ ಕಾರ್ಯಗಳನ್ನು ಮುಂದುವರಿಸಿಕೊಂಡು ಬರುತ್ತಿದೆ.

ಸಂಪುಟಗಳ ಪರಿಷ್ಕರಣ ಕಾರ್ಯದ ಸ್ವರೂಪದ ಬಗ್ಗೆಯೂ ವ್ಯಾಪಕವಾದ ಚರ್ಚೆಯನ್ನು ನಡೆಸಲಾಯಿತು. ಖ್ಯಾತ ವಿದ್ವಾಂಸರುಗಳೇ ಈ ಅನುವಾದ ಕಾರ್ಯದಲ್ಲಿ ಭಾಗಿಯಾಗಿರುವುದನ್ನು ಗಮನಿಸಿ, ಎದ್ದು ಕಾಣುವಂಥ ಲೋಪದೋಷಗಳು ಇರುವಲ್ಲಿ ಮಾತ್ರವೇ ಅವುಗಳನ್ನು ಸರಿಪಡಿಸುವ, ಓರೆಕೋರೆಗಳನ್ನು ತಿದ್ದುವ ಕೆಲಸಮಾಡಬೇಕೆಂದೂ ನಿರ್ಧರಿಸಲಾಯಿತು ಅದರಂತೆ, ಮೊದಲ ಪರಿಷ್ಕೃತ ಸಂಪುಟವನ್ನು ೧೯–೮–೨೦೦೯ರಂದು ಹೊರತರಲಾಯಿತು. ಈ ಕಾರ್ಯವನ್ನು ಮುಂದುವರಿಸಿ ೨, ೩ ಮತ್ತು ೪ನೇ ಸಂಪುಟಗಳ ಪರಿಷ್ಕತ ಆವೃತ್ತಿಯನ್ನು ೬.೧೨.೨೦೧೦ ರಂದು ಬಿಡುಗಡೆ ಮಾಡಲಾಯಿತು. ಈ ಕಾರ್ಯದಲ್ಲಿ ಈ ಕೆಳಕಂಡ ವಿದ್ವಾಂಸರು ಸಹಕರಿಸಿದ್ದರು.

೧. ಶ್ರೀ ವಿ. ಕೃಷ್ಣ, ಬೆಂಗಳೂರು (೨ನೆಯ ಸಂಪುಟ)

೨. ಶ್ರೀ ಕೇಶವ ಮಳಗಿ, ಬೆಂಗಳೂರು (೩ನೆಯ ಸಂಪುಟ)

೩. ಶ್ರೀ ಜೆ. ಎನ್. ಶಾಮರಾವ್, ಬೆಂಗಳೂರು (೪ನೆಯ ಸಂಪುಟ)

ಈ ವಿದ್ವಾಂಸರು ಈ ಸಂಪುಟಗಳನ್ನು ಸಾಧ್ಯವಿದ್ದಷ್ಟು ಮಟ್ಟಿಗೆ ಪರಿಷ್ಕರಿಸಿದ್ದಾರೆ. ಅವರ ಈ ಸಹಾಯ–ಸಹಕಾರಕ್ಕಾಗಿ ನಾವು ಕೃತಜ್ಞರಾಗಿದ್ದೇವೆ. ಹೀಗೆ ಪರಿಷ್ಕೃತವಾದ ಪಠ್ಯದ ಪ್ರಕಟಣೆಗೆ ಅನುವಾದ ಸಂಪಾದನ ಸಮಿತಿಯ ಒಪ್ಪಿಗೆಯನ್ನೂ ಪಡೆದುಕೊಳ್ಳಲಾಗಿದೆ.

ಹೊಸ ಆಕಾರದಲ್ಲಿ ಹಾಗೂ ಸ್ವರೂಪದಲ್ಲಿ ಹೊರತರಲಾದ ಮೊದಲನೆಯ ಸಂಪುಟ ಸಾರ್ವತ್ರಿಕ ಮೆಚ್ಚುಗೆಯನ್ನು ಗಳಿಸಿದ್ದರಿಂದ, ಅದೇ ವಿನ್ಯಾಸವನ್ನು ಇತರ ಸಂಪುಟಗಳಿಗೂ ಅಳವಡಿಸಿಕೊಳ್ಳಲಾಗಿದೆ.

ಈ ದಿಕ್ಕಿನಲ್ಲಿ ನಮಗೆ ಎಲ್ಲ ಸಹಾಯ ಸಹಕಾರ ಮಾರ್ಗದರ್ಶನಗಳನ್ನು ಇತ್ತಿರುವ ಕನ್ನಡ ಮತ್ತು ಸಂಸ್ಕೃತಿ, ಹಾಗೂ ವಾರ್ತಾ ಇಲಾಖೆಯ ಸನ್ಮಾನ್ಯ ಕಾರ್ಯದರ್ಶಿಗಳಾದ ಶ್ರೀ ರಮೇಶ್ ಬಿ. ಝಳಕಿ ಅವರಿಗೆ ನಮ್ಮ ಕೃತಜ್ಞತೆಗಳು.

ವಿಳಂಬಗೊಂಡಿದ್ದ ಈ ಯೋಜನೆ ಸ್ಫೂರ್ತಿಯುತವಾಗಿ ಹಾಗೂ ಶೀಘ್ರಾತಿಶೀಘ್ರವಾಗಿ ಮುನ್ನಡೆಯುವುದಕ್ಕೆ ಕಾರಣರಾಗಿರುವವರು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸನ್ಮಾನ್ಯ ನಿರ್ದೇಶಕರಾದ ಶ್ರೀ ಮನು ಬಳಿಗಾರ್ ಅವರು. ಅವರಿಗೆ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ.

ಅಂಬೇಡ್ಕರ್ ಅವರ ಬರೆಹಗಳು ಮತ್ತು ಭಾಷಣಗಳ ಮೂಲ ಪ್ರತಿಗಳು ಹಾಗೂ ಅನುವಾದದ ಎಲ್ಲ ಸಂಪುಟಗಳು ನಮ್ಮಲ್ಲಿಯಾಗಲೀ, ಹೊರಗಾಗಲೀ ಲಭ್ಯವಿಲ್ಲದೆ ಇದ್ದುದರಿಂದ, ಅನಿವಾರ್ಯವಾದ ವಿಳಂಬಕ್ಕೆ ಎಡೆದೊರೆಯಿತು. ಅಂಬೇಡ್ಕರ್ ಸಾಹಿತ್ಯಾಸಕ್ತ ಕೆಲವು ಮಿತ್ರರ ಖಾಸಗಿ ಗ್ರಂಥ ಸಂಗ್ರಹಗಳಿಂದ ಕೆಲವು ಸಂಪುಟಗಳನ್ನು ಸಂಗ್ರಹಿಸಲಾಯಿತು. ಸಂಪಾದನ ಸಮಿತಿಯ ಮಾನ್ಯ ಸದಸ್ಯರುಗಳು ತಮ್ಮ ಮಿತ್ರರುಗಳ ಖಾಸಗಿ ಸಂಗ್ರಹಗಳಿಂದಲೂ

ಕೆಲವು ಸಂಪುಟಗಳನ್ನು ಒದಗಿಸಿಕೊಡುವ ಕೃಪೆಯನ್ನು ತೋರಿದರು. ಅವರ ಈ ಕೃಪೆಗಾಗಿ ಹಾಗೂ ಸಂಪಾದನ ಕಾರ್ಯದಲ್ಲಿ ಅವರು ನೀಡುತ್ತಿರುವ ಆತ್ಮೀಯ ಸಹಕಾರಕ್ಕಾಗಿ ವಂದನೆಗಳನ್ನು ಸಲ್ಲಿಸಬಯಸುತ್ತೇನೆ.

ಕರಡು ಪರಿಶೀಲನೆಯಲ್ಲಿ ನಮಗೆ ನೆರವಾಗಿರುವ ಡಾ. ಎಚ್.ಎಂ. ನಾಗರಾಜರಾವ್ ಮತ್ತು ಶ್ರೀಮತಿ ಆರತಿ ನಾಗೇಶ್ ಅವರಿಗೆ ನಮ್ಮ ವಂದನೆಗಳು ಸಲ್ಲುತ್ತವೆ.

ಪ್ರಾಧಿಕಾರದ ಕೆಲಸ-ಕಾರ್ಯಗಳಲ್ಲಿ ಹಾಗೂ ಪ್ರಕಟಣೆಯ ವಿಚಾರದಲ್ಲಿ ಹೃತ್ಪೂರ್ವಕವಾಗಿ ತಮ್ಮನ್ನು ತೊಡಗಿಸಿಕೊಂಡಿರುವ ಪ್ರಾಧಿಕಾರದ ರಿಜಿಸ್ಟ್ರಾರ್ ಪಿ. ನಾರಾಯಣಸ್ವಾಮಿ ಮತ್ತು ಇತರ ಸಿಬ್ಬಂದಿ ವರ್ಗದವರಿಗೂ ಹಾಗೂ ಸುಂದರವಾಗಿ ಮುದ್ರಿಸುವಲ್ಲಿ ಸಹಕರಿಸಿರುವ ಮೆ॥ ಮಯೂರ ಪ್ರಿಂಟ್ ಆಡ್ಸ್‌ನ ಶ್ರೀ ಬಿ.ಎಲ್. ಶ್ರೀನಿವಾಸ ಮತ್ತು ಅವರ ಸಿಬ್ಬಂದಿ ವರ್ಗದವರಿಗೂ ನಮ್ಮ ವಂದನೆಗಳು.

**ಪ್ರಧಾನ್ ಗುರುದತ್ತ**
ಅಧ್ಯಕ್ಷ
ಸಂಪಾದನ ಸಮಿತಿ

## ಎರಡನೇ ಮುದ್ರಣಕ್ಕೆ ಮುನ್ನುಡಿ

'ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಸಮಗ್ರ ಬರೆಹಗಳು ಮತ್ತು ಭಾಷಣಗಳು' ಮಾಲೆಯ ಹಲವು ಹೊತ್ತಗೆಗಳು ಅಚ್ಚಾಗಿ ಕನ್ನಡ ಓದುಗರ ಕೈಸೇರಿವೆ. ಪ್ರತಿಗಳು ಮುಗಿದಿರುವ ಹಿನ್ನೆಲೆಯಲ್ಲಿ ಮರುಮುದ್ರಣ ಕೈಗೊಳ್ಳುವ ಯೋಜನೆಗೆ ಕರ್ನಾಟಕ ಸರ್ಕಾರ ಅನುದಾನ ಮತ್ತು ಅನುಮತಿ ನೀಡಿದೆ. ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ಈ ಹೊಸ ಆವೃತ್ತಿಯಲ್ಲಿ ಸಂಪುಟಗಳ ಅಳವಡಿಕೆ ಮತ್ತು ಹೊದಿಕೆಯ ವಿನ್ಯಾಸದಲ್ಲಿ ಕೊಂಚ ಬದಲಾವಣೆ ಮಾಡಿದೆ. ಈ ಸಂಪುಟಗಳು ಓದುಗರಿಗೆ ಆಪ್ತವಾಗುತ್ತವೆಂಬ ನಂಬಿಕೆ ನಮ್ಮದು. ಈ ಕಾರ್ಯದಲ್ಲಿ ನೆರವಾದ ಎಲ್ಲರಿಗೂ ಪ್ರಾಧಿಕಾರದ ಪರವಾಗಿ ವಂದನೆಗಳನ್ನು ಸಲ್ಲಿಸುತ್ತೇವೆ.

**ಕೆ.ವಿ. ನಾರಾಯಣ**
ಅಧ್ಯಕ್ಷ
ಸಂಪಾದನ ಸಮಿತಿ

# ಮೂರನೇ ಮುದ್ರಣಕ್ಕೆ ಮುನ್ನುಡಿ

ಕರ್ನಾಟಕ ಸರ್ಕಾರವು ಭಾರತರತ್ನ ಬಾಬಾ ಸಾಹೇಬ್ ಡಾ. ಬಿ. ಆರ್. ಅಂಬೇಡ್ಕರ್ ಅವರ ಸಮಗ್ರ ಬರೆಹಗಳು ಮತ್ತು ಭಾಷಣಗಳನ್ನು ಕನ್ನಡದಲ್ಲಿ ಪ್ರಕಟಿಸಲು ಯೋಜಿಸಿ ಅದನ್ನು ಯಶಸ್ವಿಯಾಗಿ ಪೂರೈಸಿದೆ. ಹಲವು ಸಂಪುಟಗಳಲ್ಲಿ ಪ್ರಕಟಗೊಂಡಿರುವ ಅಂಬೇಡ್ಕರ್ ಅವರ ಬರೆಹಗಳ ಕನ್ನಡ ಅನುವಾದ ಪರಿಷ್ಕರಣಗೊಂಡು ಮತ್ತೆ ಮತ್ತೆ ಅಚ್ಚಾಗುತ್ತಿದೆ. ಇದೀಗ ಎಲ್ಲ ಸಂಪುಟಗಳು ಒಮ್ಮೆಗೆ ಮತ್ತೊಮ್ಮೆ ಅಚ್ಚಾಗಿ ಪ್ರಕಟಗೊಳ್ಳುತ್ತಿವೆ. ಈವರೆಗೆ ಕನ್ನಡದಲ್ಲಿ ದೊರಕದೇ ಇದ್ದ ಅಂಬೇಡ್ಕರ್ ಅವರ ಮರಾಠಿ ಬರೆಹಗಳು ಮತ್ತು ಭಾಷಣಗಳು ಈಗ ಮೊದಲ ಬಾರಿಗೆ ಅಚ್ಚಾಗುತ್ತಿವೆ. ಒಟ್ಟು ಇಪ್ಪತ್ತೆರಡು ಸಂಪುಟಗಳನ್ನು ಈಗ ವಿಷಯಸೂಚಿಯೊಂದಿಗೆ ಪ್ರಕಟಿಸಲಾಗುತ್ತಿದೆ. ಹಿಂದಿನ ಮುದ್ರಣಗಳಲ್ಲಿ ವಿಷಯಸೂಚಿಗಳು ಇಲ್ಲದಿದ್ದುದರಿಂದ ಸಂಪುಟಗಳನ್ನು ಓದುವವರಿಗೆ ಅಗತ್ಯ ವಿಷಯಗಳನ್ನು ಗುರುತಿಸಲು ಕಷ್ಟವಾಗುತ್ತಿದ್ದುದನ್ನು ಗಮನಿಸಿ ಈ ಕ್ರಮ ಕೈಗೊಳ್ಳಲಾಗಿದೆ. ಅಲ್ಲದೆ ಎಲ್ಲ ಸಂಪುಟಗಳ ವಿಷಯಸೂಚಿಗಳ ಸಂಕಲನವೂ ಈಗ ಹೊರಬಂದಿದೆ. ಇದರಿಂದ ಯಾವ ಸಂಪುಟದಲ್ಲಿ ಯಾವ ವಿಷಯದ ಬಗೆಗೆ ಮಾಹಿತಿ ಇದೆ ಎಂಬುದನ್ನು ಗುರುತಿಸಿಕೊಳ್ಳುವುದು ಓದುಗರಿಗೆ ಸುಲಭವಾಗಲಿದೆ. ಹಿಂದೆ ಪ್ರಕಟಗೊಂಡಿದ್ದ ಸಂಪುಟಗಳಲ್ಲಿ ಅಲ್ಲಲ್ಲಿ ಉಳಿದಿದ್ದ ಅಚ್ಚಿನ ತಪ್ಪುಗಳನ್ನು ತಿದ್ದಿ ಸರಿಪಡಿಸಲು ಕ್ರಮ ವಹಿಸಲಾಗಿದೆ.

ಈ ಸಂಪುಟಗಳನ್ನು ಅಚ್ಚು ಮಾಡಲು ಕರ್ನಾಟಕ ಸರ್ಕಾರವು ವಿಶೇಷ ಅನುದಾನವನ್ನು ಒದಗಿಸಿದೆ. ಅಚ್ಚಾದ ಸಂಪುಟಗಳು ರಾಜ್ಯದ ಎಲ್ಲೆಡೆ ಇರುವ ಸಮಾಜ ಕಲ್ಯಾಣ ಇಲಾಖೆಯ ವ್ಯಾಪ್ತಿಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಜನಾಂಗಗಳ ವಿದ್ಯಾರ್ಥಿನಿಲಯಗಳಿಗೆ ಉಚಿತವಾಗಿ ದೊರಕಬೇಕೆಂಬುದು ಸರ್ಕಾರದ ಸದಾಶಯ. ಇದರಿಂದ ಡಾ. ಅಂಬೇಡ್ಕರ್ ಅವರ ಚಿಂತನೆಗಳು ಮುಂದಿನ ತಲೆಮಾರಿಗೂ ಹರಿಯುವ ಅವಕಾಶ ಸೃಷ್ಟಿಯಾಗಿದೆ. ಕುವೆಂಪು ಭಾಷಾ ಭಾರತಿಗೆ ಇಂತಹ ಅಪೂರ್ವ ಹೊಣೆಯನ್ನು ನೀಡಿದ ಕರ್ನಾಟಕ ಸರ್ಕಾರಕ್ಕೆ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ. ಈ ಸಂಪುಟಗಳ ಸಿದ್ಧತೆಗೆ ನಿಯುಕ್ತಿಗೊಂಡಿರುವ ಸಂಪಾದಕ ಮಂಡಲಿಯ ಸದಸ್ಯರಾದ ಡಾ. ದೇವನೂರ ಮಹಾದೇವ, ಡಾ. ಸಿದ್ಧಲಿಂಗಯ್ಯ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಶ್ರೀ ಕೆ. ಎ. ದಯಾನಂದ ಅವರು ತಮ್ಮ ಸಕಾಲಿಕ ಸೂಕ್ತ ಸಲಹೆಗಳ ಮೂಲಕ ನಮ್ಮ ಕೆಲಸ ಹೆಚ್ಚು ಪರಿಪೂರ್ಣವಾಗುವಂತೆ ಮಾಡಿದ್ದಾರೆ.

**ಕೆ. ವಿ. ನಾರಾಯಣ**
ಅಧ್ಯಕ್ಷ
ಸಂಪಾದನ ಸಮಿತಿ

# ಸಂಪಾದಕೀಯ

ಸ್ವಾತಂತ್ರ್ಯಪೂರ್ವ ಭಾರತದ ರಾಜಕೀಯ ಕ್ಷಿತಿಜದಲ್ಲಿ ಅನೇಕ ಉದ್ದಾಮ ವ್ಯಕ್ತಿಗಳು, ಪ್ರತಿಭಾನ್ವಿತ ಮುಖಂಡರು, ರಾಜಕಾರಣಿಗಳು, ಮುತ್ಸದ್ದಿಗಳು ಮತ್ತು ದೇಶಪ್ರೇಮಿಗಳು ಕಾಣಿಸಿಕೊಂಡು ದೇಶದ ವಿಮೋಚನೆಗಾಗಿ ತಮ್ಮ ಸರ್ವಸ್ವವನ್ನೂ ತ್ಯಾಗಮಾಡಿ ಚಿರಸ್ಮರಣೀಯರಾಗಿದ್ದಾರೆ. ಡಾ. ಭೀಮರಾವ್ ರಾಮ್‌ಜಿ ಅಂಬೇಡ್ಕರರು ದೇಶದ ಇಂತಹ ನಾಯಕರಲ್ಲಿ ಒಬ್ಬರಾಗಿದ್ದರು. ಅವರು ಭಾರತದ ದೀನ ದಲಿತರ ವಿಮೋಚನೆಗಾಗಿ ತಾವು ನಡೆಸಿದ ಹೋರಾಟವನ್ನು ದೇಶದ ಸ್ವಾತಂತ್ರ್ಯ ಹೋರಾಟದ ಅಂಗವಾಗಿಯೇ ಸಂಘಟಿಸಿ ಅಸ್ಪೃಶ್ಯತಾ ನಿವಾರಣೆ ಮತ್ತು ಎಲ್ಲಾ ದುರ್ಬಲ ವರ್ಗಗಳ ವಿಮೋಚನೆಯಾಗದ ಹೊರತು ದೇಶದ ಸ್ವಾತಂತ್ರ್ಯ ಅರ್ಥರಹಿತ ಎಂಬ ಮೂಲ ತತ್ವವನ್ನು ಪ್ರತಿಪಾದಿಸಿದ ಏಕೈಕ ನಾಯಕರಾಗಿದ್ದರು. ಅವರು ಕೇವಲ ಅಸ್ಪೃಶ್ಯರ ನಾಯಕರಾಗಿರದೆ ಇಡಿ ಮಾನವ ಕುಲದ ಹಕ್ಕುಗಳು, ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವದ ಸ್ಥಾಪನೆಗಾಗಿ ಹೋರಾಡಿದ ಮಹಾನುಭಾವರಾಗಿದ್ದರು. ಅವರು ತಮ್ಮ ಇಡಿ ಜೀವನವನ್ನು ಈ ಗುರಿಸಾಧನೆಗಾಗಿ ಮುಡಿಪಾಗಿಟ್ಟರು.

ಡಾ. ಅಂಬೇಡ್ಕರ್‌ರವರು ಜಾತ್ಯಾತೀತ, ಸಮಾಜವಾದಿ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅಚಲ ವಿಶ್ವಾಸ ಹೊಂದಿದ್ದರು. ಅವರು ಮಾನವೀಯತೆಯ ಸಾಕಾರಮೂರ್ತಿಗಳಾಗಿದ್ದು, ದೀನ ದಲಿತರ ನೋವಿಗೆ ಸದಾ ಸ್ಪಂದಿಸುತ್ತಿದ್ದ ಮಹಾಪುರುಷರಾಗಿದ್ದರು.

ಅವರು ಕೇವಲ ರಾಜಕೀಯ ಮುಖಂಡರಾಗಿರದೇ, ಆಧುನಿಕ ಭಾರತದ ನಿರ್ಮಾಪಕರಲ್ಲಿ ಒಬ್ಬರಾಗಿದ್ದರೆಂದರೆ ಅತಿಶಯೋಕ್ತಿಯಾಗಲಾರದು. ಅವರು ಘನ ವಿದ್ವಾಂಸರೂ, ಮಹಾನ್ ವಿಚಾರವೇತ್ತರೂ, ಪ್ರೌಢ ಲೇಖಕರೂ, ಉದ್ದಾಮ ಕಾನೂನು ಪಂಡಿತರೂ ಹಾಗೂ ಅನುಪಮ ಸಂವಿಧಾನ ತಜ್ಞರೂ ಆಗಿದ್ದರಲ್ಲದೆ, ಗಣ್ಯ ಸಮಾಜಶಾಸ್ತ್ರಜ್ಞರೂ, ಖ್ಯಾತ ಸಂಶೋಧಕರೂ ಆಗಿದ್ದರು. ಜಾತಿಪದ್ಧತಿ, ಅಸ್ಪೃಶ್ಯತೆ, ಬಡತನ ಮುಂತಾದ ಸಾಮಾಜಿಕ–ಆರ್ಥಿಕ ಸಮಸ್ಯೆಗಳ ಆಳವಾದ ಅಧ್ಯಯನ ಮಾಡಿ ಇವುಗಳ ಉಗಮ, ಬೆಳವಣಿಗೆ ಮತ್ತು ವಸ್ತುಸ್ಥಿತಿಯ ಬಗ್ಗೆ ವಿಶಿಷ್ಟ ಸಿದ್ಧಾಂತಗಳನ್ನು ತಮ್ಮದೇ ಆದ ರೀತಿಯಲ್ಲಿ ಪ್ರಸ್ತುತಪಡಿಸಿದರಲ್ಲದೆ ಇವುಗಳ ನಿವಾರಣೆಯ ವಿಧಾನಗಳನ್ನು ನಿರೂಪಿಸಿದರು. ಅದೃಷ್ಟವಶಾತ್ ಅವರು ತಮ್ಮ ಅಮೂಲ್ಯವಾದ ವಿಚಾರಗಳನ್ನು ತಮ್ಮ ಅನೇಕ ಸಂಶೋಧನಾತ್ಮಕ ಗ್ರಂಥಗಳು, ಲೇಖನಗಳು ಮತ್ತು ವಿದ್ವತ್ಪೂರ್ಣ ಭಾಷಣಗಳಲ್ಲಿ ವ್ಯಕ್ತಪಡಿಸಿದ್ದಾರೆ. ಅವರ ಜೀವಿತ ಕಾಲದಲ್ಲಿ ಸುಮಾರು ಹದಿಮೂರು ಗ್ರಂಥಗಳು ಇಂಗ್ಲಿಷಿನಲ್ಲಿ ಪ್ರಕಟವಾಗಿದ್ದು ಇವುಗಳಲ್ಲಿ 'ಜಾತಿ ನಿರ್ಮೂಲನೆ', 'ಶೂದ್ರರು ಯಾರು?', 'ರೂಪಾಯಿಯ ಸಮಸ್ಯೆ', 'ಪಾಕಿಸ್ತಾನ ಅಥವಾ ಭಾರತದ ವಿಭಜನೆ' ಇವು ಪ್ರಮುಖವಾಗಿವೆ. 'ಬುದ್ಧ ಮತ್ತು ಅವರ ಧರ್ಮ' ಅವರ ಮರಣೋತ್ತರ ಪ್ರಕಟಣೆ. ಇವುಗಳೂ ಅಲ್ಲದೇ, ಅವರ ಅಪ್ರಕಟಿತ ಬರೆಹಗಳು ಅಸಂಖ್ಯಾತ. ಅವರ ಮರಣಾನಂತರ ಇವು ಆಸ್ತಿ ವಿವಾದದಲ್ಲಿ ಸಿಲುಕಿಕೊಂಡಿದ್ದರಿಂದ ಇತ್ತೀಚಿನವರೆಗೆ ಅವುಗಳ ಪ್ರಕಟಣೆ ಸಾಧ್ಯವಾಗಿರಲಿಲ್ಲ. ಅವುಗಳ ಅಧ್ಯಯನವೂ ಅಸಾಧ್ಯವಾಗಿತ್ತು. ಆದರೆ ಮಹಾರಾಷ್ಟ್ರ ಸರ್ಕಾರದ ಸತತ ಪ್ರಯತ್ನ, ಪರಿಶ್ರಮದಿಂದಾಗಿ ಮತ್ತು ಡಾ. ಅಂಬೇಡ್ಕರರ ಕುಟುಂಬದ ಸದಸ್ಯರ ಸಹಕಾರ ಮತ್ತು ಸಮ್ಮತಿಯಿಂದಾಗಿ ಈಗ ಇವುಗಳ ಪ್ರಕಟಣೆ ಸಾಧ್ಯವಾಗಿದೆ.

ಡಾ. ಬಿ. ಆರ್. ಅಂಬೇಡ್ಕರರು ಹೆಚ್ಚಾಗಿ ಇಂಗ್ಲಿಷ್ ಭಾಷೆಯಲ್ಲಿಯೇ ಬರೆದಿದ್ದಾರೆ. ಅವರ ಬರವಣಿಗೆಯ ಕೆಲ ಭಾಗಗಳು, ಅದರಲ್ಲಿಯೂ ಅವರು ತಾವೇ ಆರಂಭಿಸಿ, ನಡೆಸಿಕೊಂಡು ಬಂದ ಪಾಕ್ಷಿಕಗಳಾದ 'ಸಮತಾ',

'ಜನತಾ' ಮತ್ತು 'ಬಹಿಷ್ಕೃತ ಭಾರತ' ಇವು ಮರಾಠಿ ಭಾಷೆಯಲ್ಲಿದ್ದು ಅಗ್ರಲೇಖನಗಳನ್ನು ಅವರು ಮರಾಠಿಯಲ್ಲಿಯೇ ಬರೆದರು. ಅವರು ಮಾಡಿದ ಸಾರ್ವಜನಿಕ ಭಾಷಣಗಳಲ್ಲಿ ಹಲವಾರು ಮರಾಠಿಯಲ್ಲಿವೆ.

ಡಾ. ಅಂಬೇಡ್ಕರ್‌ರವರು ತಮ್ಮ ಕೆಲವು ಸಂಶೋಧನಾತ್ಮಕ ಪ್ರಬಂಧಗಳನ್ನು ಅಮೆರಿಕೆಯಲ್ಲಿ ವಿದ್ಯಾರ್ಥಿಯಾದಾಗಿನಿಂದಲೇ ಸಿದ್ಧಪಡಿಸಿ ಪ್ರಕಟಿಸತೊಡಗಿದರು. ಇವುಗಳಲ್ಲಿ ೧೯೧೮ರಲ್ಲಿ ಅವರು ಜಾತಿಯ ಬಗ್ಗೆ ಸಿದ್ಧಪಡಿಸಿ ಪ್ರಕಟಿಸಿದ ಪ್ರಬಂಧ ಮೊದಲನೆಯದು. ನಂತರ ೧೯೨೧ರಿಂದ ೧೯೫೬ರವರೆಗೆ ಅವರ ಇತರ ಗ್ರಂಥಗಳು ಪ್ರಕಟವಾದವು. ಇವೂ ಅಲ್ಲದೇ, ತಮ್ಮ ಸಾರ್ವಜನಿಕ ಜೀವನದ ಸುಮಾರು ಮೂರು ದಶಕಗಳ ಅವಧಿಯಲ್ಲಿ ಅವರು ಅನೇಕ ಸಮಿತಿಗಳು, ಆಯೋಗಗಳು ಮತ್ತು ದುಂಡು ಮೇಜಿನ ಪರಿಷತ್ತುಗಳಿಗೆ ಸಲ್ಲಿಸಿದ ಮನವಿಗಳು, ವಿಜ್ಞಾಪನಾ ಪತ್ರಗಳು, ಮಾಡಿದ ಭಾಷಣಗಳು ಮುಂತಾದವು, ವ್ಯಕ್ತವಾಗಿರುವ ಅವರ ರಾಜಕೀಯ ಮತ್ತು ಸಂವಿಧಾನಾತ್ಮಕ ವಿಚಾರಗಳು ಮಹತ್ವದವುಗಳಾಗಿವೆ. ಇವೂ ಅಲ್ಲದೆ, ಅವರು ಅಂದಿನ ಮುಂಬಯಿ ಪ್ರಾಂತ್ಯ ಮತ್ತು ಕೇಂದ್ರ ಶಾಸನ ಸಭೆಗಳಲ್ಲಿ, ನಂತರ ಸಂವಿಧಾನ ಸಭೆಯ (ಕಾನ್‌ಸ್ಟಿಟ್ಯೂಯಂಟ್ ಅಸೆಂಬ್ಲಿ) ಸದಸ್ಯರಾಗಿ, ಕರಡು ಸಮಿತಿಯ ಅಧ್ಯಕ್ಷರಾಗಿ ಸಿದ್ಧಪಡಿಸಿ, ಮಂಡಿಸಿದ ಕರಡು ಸಂವಿಧಾನ ಮತ್ತು ಅದರ ಮೇಲೆ ನಡೆದ ಚರ್ಚೆಗೆ ಅವರು ನೀಡಿದ ಉತ್ತರ, ಸಮಾಧಾನ, ವಿವರಣೆಗಳು ಮತ್ತು ಸ್ವತಂತ್ರ ಭಾರತದ ಪ್ರಥಮ ಕಾನೂನು ಮಂತ್ರಿಯಾಗಿ ಅವರು ವ್ಯಕ್ತಪಡಿಸಿದ ವಿಚಾರಗಳು, ಮಂಡಿಸಿದ ಮಸೂದೆಗಳು ಮುಂತಾದವು ಒಬ್ಬ ಮೇಧಾವಿ ಹಾಗೂ ಮುತ್ಸದ್ದಿ ವ್ಯಕ್ತಪಡಿಸಿದ ಅಮೂಲ್ಯ ವಿಚಾರಗಳಾಗಿದ್ದು ಇಂದಿಗೂ ಸಂವಿಧಾನದ ಪ್ರಸ್ತಾಪ ಬಂದಾಗಲೆಲ್ಲಾ ಅವರು ಅಂದು ನೀಡಿದ ವಿವರಣೆಗಳೇ ಕೊನೆಯ ಮಾತೆಂದು ಪರಿಗಣಿಸಲಾಗಿದೆ. ಆದ್ದರಿಂದ ಡಾ. ಅಂಬೇಡ್ಕರರ ವಿಚಾರಗಳು ಅಂದೂ ಅಲ್ಲದೆ ಇಂದೂ ಪ್ರಸ್ತುತವಾಗಿದ್ದು ಅವುಗಳ ಅಧ್ಯಯನ ಮತ್ತು ಪರಿಚಯ ಅನಿವಾರ್ಯ ಮತ್ತು ಅತ್ಯಂತ ಉಪಯುಕ್ತ.

ಆದರೆ ಬಹುದಿನಗಳಿಂದ ಅವರ ಪ್ರಕಟಿತ ಕೃತಿಗಳು ಲಭ್ಯವಾಗುತ್ತಿಲ್ಲ. ಅವೆಲ್ಲವೂ ಅಲಭ್ಯವಿರುವುದರಿಂದ ಅವುಗಳು ಸಂಪೂರ್ಣವಾಗಿ ಮರೆತು ಹೋಗುವ ಪರಿಸ್ಥಿತಿಯಲ್ಲಿ, ಮಹಾರಾಷ್ಟ್ರ ಸರ್ಕಾರದವರು ಇಂಗ್ಲಿಷಿನಲ್ಲಿರುವ ಅವರ ಎಲ್ಲಾ ಪ್ರಕಟಿತ ಕೃತಿಗಳನ್ನು ಮತ್ತು ಅಪ್ರಕಟಿತ ಕೃತಿಗಳನ್ನು ಸಂಗ್ರಹಿಸಿ, ಮುದ್ರಿಸಿ, ಪ್ರಕಟಿಸುವ ಅತ್ಯಂತ ಅವಶ್ಯ ಮತ್ತು ಉಪಯುಕ್ತ ಯೋಜನೆಯನ್ನು ಹಾಕಿಕೊಂಡಿದ್ದು, ಈ ಯೋಜನೆಯ ರೂಪುರೇಷಗಳನ್ನು ಸಿದ್ಧಪಡಿಸಿ ಕಾರ್ಯಗತಗೊಳಿಸಲು ಆ ರಾಜ್ಯದ ಶಿಕ್ಷಣ ಸಚಿವರ ಅಧ್ಯಕ್ಷತೆಯಲ್ಲಿ ಡಾ. ಅಂಬೇಡ್ಕರ್‌ರವರ ಒಡನಾಡಿಗಳು, ತಜ್ಞರು ಮತ್ತು ಮುಖಂಡರುಗಳಿಂದ ಕೂಡಿದ ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ ಮೂಲ ಬರೆಹಗಳ ಪ್ರಕಟಣೆ ಸಮಿತಿಯನ್ನು ರಚಿಸಿ ಕಾರ್ಯತತ್ಪರವಾಯಿತು. ಈ ಸಮಿತಿಯನ್ನು ೧೯೭೬ರಲ್ಲಿ ಅಂದಿನ ಮುಖ್ಯ ಮಂತ್ರಿ ಶ್ರೀ ಶರದ್ ಪವಾರ್ ಅವರ ನೇತೃತ್ವದಲ್ಲಿ ರಚಿಸಲಾಯಿತು. ಈ ಸಮಿತಿಯ ಯಶಸ್ಸಿಗೆ ಇದರ ವಿಶೇಷ ಅಧಿಕಾರಿ ಶ್ರೀ ವಸಂತ್ ಮೂನ್‌ರವರ ಅವಿರತ ಪರಿಶ್ರಮ ಮುಖ್ಯ ಕಾರಣ. ಈ ಸಮಿತಿಯು ಡಾ. ಅಂಬೇಡ್ಕರ್‌ರವರ ಎಲ್ಲಾ ಬರೆಹಗಳನ್ನೂ ಸಂಗ್ರಹಿಸಿ ಒಟ್ಟು ಹದಿಮೂರು ಬೃಹತ್ ಸಂಪುಟಗಳಲ್ಲಿ "ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಬರೆಹಗಳು ಮತ್ತು ಭಾಷಣಗಳು" ಎಂಬ ಶೀರ್ಷಿಕೆಯಲ್ಲಿ ಪ್ರಕಟಿಸುವ ಯೋಜನೆ ಹಾಕಿಕೊಂಡು ಇದುವರೆಗೆ ಹತ್ತು ಸಂಪುಟಗಳನ್ನು ಪ್ರಕಟಿಸಿದೆ. ಇನ್ನೂ ಮೂರು ಸಂಪುಟಗಳು ಬರಬೇಕಾಗಿವೆ.

ಇದುವರೆಗೆ ಪ್ರಕಟಿತವಾದ ಹತ್ತು ಸಂಪುಟಗಳಲ್ಲಿ ಬಹಳಷ್ಟು ಪ್ರಕಟಿತ ಮತ್ತು ಅಪ್ರಕಟಿತ ಬರೆಹಗಳು ಸೇರಿವೆ. ೧೯೭೯ರಲ್ಲಿ ಬಿಡುಗಡೆಯಾದ ಒಂದನೆಯ ಸಂಪುಟದಲ್ಲಿ 'ಜಾತಿ ನಿರ್ಮೂಲನೆ', 'ಭಾಷಾವಾರು ಪ್ರಾಂತ್ಯಗಳು', 'ರಾನಡೆ, ಗಾಂಧಿ, ಜಿನ್ನಾ', 'ರಾಜ್ಯಗಳು ಮತ್ತು ಅಲ್ಪಸಂಖ್ಯಾತರು', 'ಸಂಯುಕ್ತ ರಾಜ್ಯವೇ ಅಥವಾ ಸ್ವಾತಂತ್ರ್ಯವೇ' ಮುಂತಾದ ಪರಿಚಿತ, ಅಪರಿಚಿತ ಮತ್ತು ಪ್ರಕಟಿತ ಕೃತಿಗಳು ಸೇರಿವೆ. ಎರಡನೆಯ ಸಂಪುಟ

(೧೯೮೨)ದಲ್ಲಿ ಮುಂಬಯಿ ಶಾಸಕಾಂಗ ಮತ್ತು ದುಂಡು ಮೇಜಿನ ಪರಿಷತ್ತುಗಳಲ್ಲಿ ಅವರು ಮಾಡಿದ ಭಾಷಣಗಳೂ ಅಲ್ಲದೆ, ಸೈಮನ್ ಆಯೋಗಕ್ಕೆ ನೀಡಿದ ಅವರ ಹೇಳಿಕೆಗಳೂ, ಮನವಿಗಳೂ ಸೇರಿವೆ. ಮೂರನೆಯ ಸಂಪುಟ (೧೯೮೭)ದಲ್ಲಿ ಅವರ ಅಪ್ರಕಟಿತ ಕೃತಿಗಳಾದ 'ಹಿಂದೂ ಧರ್ಮಸಿದ್ಧಾಂತ', 'ಪ್ರಾಚೀನ ಭಾರತದಲ್ಲಿ ಕ್ರಾಂತಿ ಮತ್ತು ಪ್ರತಿ ಕ್ರಾಂತಿ', 'ಭಾರತ ಮತ್ತು ಸಮತಾವಾದದ ಪೂರ್ವಭಾವಿ ಅವಶ್ಯಕತೆಗಳು', 'ಬುದ್ಧ ಅಥವಾ ಕಾರ್ಲ್ ಮಾರ್ಕ್ಸ್' ಮುಂತಾದವು ಸೇರಿವೆ. ೧೯೮೭ರಲ್ಲಿಯೇ ಪ್ರಕಟವಾದ ನಾಲ್ಕನೆಯ ಸಂಪುಟ ಮಹಾರಾಷ್ಟ್ರದಲ್ಲಿ ವಿವಾದದ ಅಲೆಯನ್ನೇ ಎಬ್ಬಿಸಿತು. ಇದರಲ್ಲಿ ಅವರ ಇನ್ನೊಂದು ಅಪ್ರಕಟಿತ ಬರೆಹ ಮಾಲೆ 'ಹಿಂದೂ ಧರ್ಮದ ಸಂದಿಗ್ಧಗಳು' ಪ್ರಕಟವಾಗಿದ್ದೇ ಇದಕ್ಕೆ ಕಾರಣವಾಯಿತು. ೧೯೮೯ರಲ್ಲಿ ಪ್ರಕಟವಾದ ಐದನೆಯ ಸಂಪುಟ ಸಂಪೂರ್ಣವಾಗಿ ಅಪ್ರಕಟಿತ ಬರೆಹಗಳಿಂದ ಕೂಡಿದ್ದು ಇದರಲ್ಲಿ ಅಸ್ಪೃಶ್ಯರು ಮತ್ತು ಅಸ್ಪೃಶ್ಯತೆಯ ಬಗ್ಗೆ ಅವರ ಸಾಮಾಜಿಕ, ರಾಜಕೀಯ, ಧಾರ್ಮಿಕ ವಿಶ್ಲೇಷಣೆಯಿಂದ ಕೂಡಿದ ಲೇಖನಗಳಿವೆ. ಅದೇ ವರ್ಷ ಪ್ರಕಟವಾದ ಆರನೆಯ ಸಂಪುಟದಲ್ಲಿ ಸೇರಿರುವ ಎಲ್ಲಾ ಬರೆಹಗಳು ಅರ್ಥಶಾಸ್ತ್ರ ಸಂಬಂಧವಾದವುಗಳಾಗಿದ್ದು 'ರೂಪಾಯಿಯ ಸಮಸ್ಯೆ' ಇದರಲ್ಲಿ ಸೇರಿದೆ. ೧೯೯೦ರಲ್ಲಿ ಪ್ರಕಟವಾದ ಏಳನೆಯ ಸಂಪುಟದಲ್ಲಿ 'ಶೂದ್ರರು ಯಾರು?' ಮತ್ತು 'ಅಸ್ಪೃಶ್ಯರು ಯಾರು? ಅವರು ಹೇಗೆ ಮತ್ತು ಏಕೆ ಅಸ್ಪೃಶ್ಯರಾದರು?' ಎಂಬ ಅವರ ಈ ಎರಡು ಸಂಶೋಧನಾತ್ಮಕ ಮತ್ತು ಅತಿ ಮಹತ್ವದ ಗ್ರಂಥಗಳನ್ನು ಪುನರ್ ಮುದ್ರಿಸಲಾಗಿದೆ. ಅದೇ ವರ್ಷ ಪ್ರಕಟಿತವಾದ ಎಂಟನೆಯ ಸಂಪುಟದಲ್ಲಿ ಡಾ. ಅಂಬೇಡ್ಕರ್‌ರವರ ಅತ್ಯಂತ ವಿವಾದಾತ್ಮಕ, ಆದರೆ ಅಷ್ಟೇ ವಿದ್ವತ್‌ಪೂರ್ಣ ಹಾಗೂ ವಾಸ್ತವಿಕತೆಯಿಂದ ಕೂಡಿದ ಅವರ ಗ್ರಂಥ 'ಪಾಕಿಸ್ತಾನ ಅಥವಾ ಭಾರತದ ವಿಭಜನೆ'ಯ ಪುನರ್ಮುದ್ರಣವಾಗಿದೆ. ಇದು ಅವರ ಪ್ರಕಟಿತ ಕೃತಿಗಳಾದ 'ಅಸ್ಪೃಶ್ಯರಿಗಾಗಿ ಕಾಂಗ್ರೆಸ್ ಮತ್ತು ಗಾಂಧಿ ಮಾಡಿರುವುದೇನು?', ಮತ್ತು 'ಮಿಸ್ಟರ್ ಗಾಂಧಿ ಮತ್ತು ಅಸ್ಪೃಶ್ಯರ ವಿಮೋಚನೆ' ಎಂಬ ಎರಡು ಕೃತಿಗಳು ಪುನಃ ಪ್ರಕಟಣೆಗೊಂಡಿವೆ. ೧೯೯೧ರಲ್ಲಿ ಪ್ರಕಟವಾಗಿರುವ ಹತ್ತನೆಯ ಸಂಪುಟವು ಗಾತ್ರದಲ್ಲಿ ಬೃಹತ್ತಾಗಿದ್ದು ಸುಮಾರು ೧೦೮೦ ಪುಟಗಳಷ್ಟಿದೆ. ವಿಷಯದ ದೃಷ್ಟಿಯಿಂದಲೂ ಇದು ಇನ್ನೊಂದು ಮಹತ್ವದ ಸಂಪುಟವಾಗಿದೆ. ಏಕೆಂದರೆ ಇದರಲ್ಲಿ, ಅವರು ೧೯೪೨ರಿಂದ ೧೯೪೬ರವರೆಗೆ ಭಾರತದ ಗವರ್ನರ್ ಜನರಲ್‌ರವರ ಕಾರ್ಯಕಾರಿ ಪರಿಷತ್ತಿನಲ್ಲಿ ಕಾರ್ಮಿಕ ಸಚಿವರಾಗಿ ಕಾರ್ಯನಿರ್ವಹಿಸಿದ ಸಂದರ್ಭದಲ್ಲಿ ಅವರು ಕೇಂದ್ರ ವಿಧಾನ ಪರಿಷತ್ತಿನಲ್ಲಿ ಮಾಡಿದ ಭಾಷಣಗಳು, ನೀಡಿದ ಹೇಳಿಕೆಗಳು ಮತ್ತು ಪ್ರಶ್ನೆಗಳಿಗೆ ಕೊಟ್ಟ ಉತ್ತರಗಳು ಸೇರಿವೆ. ಭಾರತದ ಅಸಂಖ್ಯಾತ ಕಾರ್ಮಿಕರ ಸಮಸ್ಯೆಗಳನ್ನು ಅರಿತಿದ್ದ ಡಾ॥ ಅಂಬೇಡ್ಕರರು ತಮ್ಮ ಅಧಿಕಾರದ ಅವಧಿಯಲ್ಲಿ ಈ ದೇಶದ ಕಾರ್ಮಿಕ ನೀತಿಗೆ ಒಂದು ಹೊಸ ಆಯಾಮವನ್ನು ನೀಡಿದರೆಂದರೆ ತಪ್ಪಾಗಲಾರದು. ಆದ್ದರಿಂದ ಈ ಸಂಪುಟದಲ್ಲಿ ಪ್ರಕಟಿತವಾಗಿರುವ ಅಮೂಲ್ಯ ವಿಚಾರಗಳನ್ನು ತಿಳಿದುಕೊಳ್ಳಲು ಅತ್ಯಂತ ಸಹಕಾರಿಯಾಗಿವೆ. ಮುಂದೆ ಬರಲಿರುವ ಸಂಪುಟಗಳಲ್ಲಿ ಭಾರತ ಸಂವಿಧಾನ ಸಭೆಯಲ್ಲಿ ಸಂವಿಧಾನದ ಕುರಿತು ಅವರು ಮಾಡಿದ ಭಾಷಣಗಳು ಮುಂತಾದವುಗಳ ವಿಪುಲ ದಾಖಲೆಗಳು ಪ್ರಕಟವಾಗಲಿವೆ.

ಇಂತಹ ಒಂದು ಬೃಹತ್ ಯೋಜನೆ ಮತ್ತು ಸ್ತುತ್ಯ ಉಪಕ್ರಮಕ್ಕಾಗಿ ಮಹಾರಾಷ್ಟ್ರ ಸರ್ಕಾರ ಅಭಿನಂದನಾರ್ಹವಾಗಿದೆ. ಅಲ್ಲದೇ ಪ್ರತಿ ಸಂಪುಟ ಸರಾಸರಿ ಐದು ನೂರು ಪುಟಗಳಿಷ್ಟಿದ್ದರೂ, ಪ್ರತಿಯೊಂದು ಸಂಪುಟದ ಬೆಲೆ ಕೇವಲ ನಲವತ್ತು ರೂಪಾಯಿಗಳಷ್ಟಿರುವುದು ಅತ್ಯಂತ ಸ್ವಾಗತಾರ್ಹ ಸಂಗತಿಯಾಗಿದೆ. ಡಾ॥ ಅಂಬೇಡ್ಕರ್‌ರವರ ಈ ಅಮೂಲ್ಯ, ಸಮಗ್ರ, ವೈಚಾರಿಕ ಸಾಹಿತ್ಯವನ್ನು ಒಂದೆಡೆ ಸಂಗ್ರಹಿಸಿ ಓದುಗರಿಗೆ ಕಡಿಮೆ ಬೆಲೆಯಲ್ಲಿ ದೊರಕುವಂತೆ ಮಾಡುವ ಮೂಲಕ ಮಹಾರಾಷ್ಟ್ರ ಸರ್ಕಾರವು ವೈಚಾರಿಕ ಸಾಹಿತ್ಯಲೋಕಕ್ಕೆ

ಹಾಗೂ ಡಾ॥ ಅಂಬೇಡ್ಕರರ ವಿಚಾರಗಳನ್ನು ಇಂದಿನ ಹಾಗೂ ಮುಂದಿನ ಪೀಳಿಗೆಗೆ ನೀಡುವ ಮೂಲಕ ಮಹತ್ತರ ಸೇವೆ ಸಲ್ಲಿಸಿದೆ.

ಡಾ॥ ಅಂಬೇಡ್ಕರರ ಸಮಗ್ರ ಸಾಹಿತ್ಯ ಇಂಗ್ಲಿಷಿನಲ್ಲಿ ಪ್ರಕಟವಾಗಿರುವುದರಿಂದ ಈ ಭಾಷೆಯನ್ನು ಚೆನ್ನಾಗಿ ಬಲ್ಲವರು ಮಾತ್ರ ಇದರ ಉಪಯೋಗ ಪಡೆಯಬಹುದಾಗಿದೆ. ಈ ಭಾಷೆಯ ಪರಿಚಯವಿಲ್ಲದ ಇತರ ಭಾಷಿಕರಿಗೆ ಡಾ॥ ಅಂಬೇಡ್ಕರರ ಅಮೂಲ್ಯ ಕ್ರಾಂತಿಕಾರಿ ಹಾಗೂ ಉಪಯುಕ್ತ ಸಾಮಾಜಿಕ, ಆರ್ಥಿಕ, ರಾಜಕೀಯ ವಿಚಾರಗಳು ಲಭ್ಯವಿಲ್ಲ. ಇದು ಒಂದು ದೊಡ್ಡ ಕೊರತೆ. ಇದನ್ನು ನಿವಾರಿಸುವ ಏಕೈಕ ಮಾರ್ಗವೆಂದರೆ ಅವರ ಎಲ್ಲ ಬರೆಹಗಳನ್ನು ಭಾರತದ ವಿವಿಧ ಪ್ರಾದೇಶಿಕ ಭಾಷೆಗಳಿಗೆ ಅನುವಾದಿಸಿ ಪ್ರಕಟಿಸುವುದು. ಈ ಕೆಲಸ ತುರ್ತಾಗಿ ಆಗಬೇಕಾಗಿದೆ.

ಈ ಅವಶ್ಯಕತೆಯನ್ನು ಇಡಿ ದೇಶದಲ್ಲಿಯೇ ಪ್ರಪ್ರಥಮವಾಗಿ ಮನಗಂಡ ಕರ್ನಾಟಕ ರಾಜ್ಯ ಸರ್ಕಾರ ೧೯೮೮ರ ಜೂನ್ ತಿಂಗಳಲ್ಲಿ ಡಾ. ಅಂಬೇಡ್ಕರರ ಕೃತಿಗಳನ್ನು ಕನ್ನಡಕ್ಕೆ ಅನುವಾದಿಸುವ ಮಹತ್ವದ ನಿರ್ಣಯ ತೆಗೆದುಕೊಂಡು ಈ ಕೆಳಕಂಡವರನ್ನೊಳಗೊಂಡ ಸಂಪಾದಕ ಸಮಿತಿಯನ್ನು ನೇಮಿಸಿ ಆದೇಶ ಹೊರಡಿಸಿತು.

ಡಾ॥ ಎ. ಎಂ. ರಾಜಶೇಖರಯ್ಯ – ಸಂಪಾದಕ

ಡಾ॥ ಸಿದ್ದಲಿಂಗಯ್ಯ – ಸದಸ್ಯ

ಶ್ರೀ ದೇವನೂರ ಮಹದೇವ – ಸದಸ್ಯ

ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ – ಸದಸ್ಯ ಕಾರ್ಯದರ್ಶಿ

ಈ ಸಮಿತಿಯ ಮೊದಲನೆಯ ಸಭೆ ೩೦–೮–೧೯೮೮ ರಂದು ಬೆಂಗಳೂರಿನಲ್ಲಿ ಸೇರಿ ಡಾ. ಅಂಬೇಡ್ಕರ್‌ರರ ಪ್ರಕಟಿತ ಮತ್ತು ಸುಪರಿಚಿತವಾದ ಹದಿಮೂರು ಕೃತಿಗಳನ್ನು ಮಾತ್ರ ಅನುವಾದ ಮಾಡದೆ, ಮಹಾರಾಷ್ಟ್ರ ಸರ್ಕಾರದ ಯೋಜನೆಯಂತೆ ಪ್ರಕಟವಾಗುತ್ತಿರುವ ಮತ್ತು ಇಂಗ್ಲಿಷಿನಲ್ಲಿರುವ ಎಲ್ಲಾ ಸಂಪುಟಗಳನ್ನು ಮಹಾರಾಷ್ಟ್ರ ಸರ್ಕಾರದ ಅನುಮತಿ ಪಡೆದುಕೊಂಡು ಕನ್ನಡಕ್ಕೆ ಭಾಷಾಂತರಿಸಬೇಕೆಂಬ ನಿರ್ಣಯ ತೆಗೆದುಕೊಂಡಿತು. ಈ ಪ್ರಕಾರ ಅನುಮತಿ ಕೋರಿ ಪತ್ರ ಬರೆದಾಗ ಮಹಾರಾಷ್ಟ್ರ ಸರ್ಕಾರದವರು ದಿನಾಂಕ ೨.೫.೧೯೮೯ರ ಪತ್ರದಲ್ಲಿ ಅನುಮತಿ ನೀಡಿ ಕರ್ನಾಟಕ ಸರ್ಕಾರಕ್ಕೆ ತಿಳಿಸಿದರು. ಅನಂತರ ಭಾಷಾಂತರ ಕಾರ್ಯವನ್ನು ವ್ಯವಸ್ಥಿತವಾಗಿ ಕೈಗೊಳ್ಳಲಾಯಿತು.

ನಮ್ಮ ಸಂಪಾದಕ ಸಮಿತಿಯು ಭಾಷಾಂತರ ಕಾರ್ಯಕ್ಕಾಗಿ ನಾಡಿನ ಗಣ್ಯ ವಿದ್ವಾಂಸರನ್ನು ಗುರುತಿಸಿ, ಅವರ ಸಮ್ಮತಿ, ಸಹಕಾರ ಕೋರಿತು. ಅವರ ಒಪ್ಪಿಗೆ ಪಡೆದ ನಂತರ ಪ್ರತಿಯೊಬ್ಬರಿಗೂ ಮೂಲ ಸಂಪುಟಗಳಿಂದ ಸುಮಾರು ಒಂದು ನೂರು ಪುಟಗಳನ್ನು ವಹಿಸಿಕೊಡಲಾಯಿತು. ಡಾ॥ ಅಂಬೇಡ್ಕರರ ಭಾಷೆ ಮತ್ತು ವಿಚಾರಗಳು ಅತ್ಯಂತ ಕ್ಲಿಷ್ಟ ಹಾಗೂ ಗಹನವಾದವುಗಳಾಗಿರುವುದರಿಂದ ಅವುಗಳ ಭಾಷಾಂತರ ಸುಲಭಸಾಧ್ಯವಲ್ಲ. ಭಾಷಾಂತರ ಮಾಡುವ ಮೊದಲು ಆಳವಾದ ಅಧ್ಯಯನ ಮತ್ತು ಮನನ ಅವಶ್ಯವಾಗಿತ್ತು. ಆದ್ದರಿಂದ ಭಾಷಾಂತರಕಾರರು ಹೆಚ್ಚು ಅವಧಿ ತೆಗೆದುಕೊಳ್ಳುವುದು ಅನಿವಾರ್ಯವೆನಿಸಿತು.

ಕೆಲವರು ಭಾಷಾಂತರ ಮಾಡಿ ಕಳುಹಿಸಿದ ಭಾಗಗಳನ್ನು ಪರಿಶೀಲಿಸಿದಾಗ ಭಾಷೆ, ಶೈಲಿ, ಪಾರಿಭಾಷಿಕ ಪದಗಳು ಮುಂತಾದವುಗಳ ಪರಿಷ್ಕರಣ ಅಗತ್ಯವೆನಿಸಿತು. ಈ ಕಾರ್ಯದಲ್ಲಿ ಭಾಷಾತಜ್ಞರ ನೆರವು ಪಡೆಯಬೇಕೆಂದು ತೀರ್ಮಾನಿಸಿ ಡಾ॥ ಆರ್. ಸಿ. ಹಿರೇಮಠ, ಮಾಜಿ ಕುಲಪತಿಗಳು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ಡಾ॥ ದೇ. ಜವರೇಗೌಡ, ಮಾಜಿ ಕುಲಪತಿಗಳು, ಮೈಸೂರು ವಿಶ್ವವಿದ್ಯಾಲಯ, ಮೈಸೂರು ಮತ್ತು ರಾಜ ಭಾಷಾ ಆಯೋಗದ ಅಂದಿನ ಅಧ್ಯಕ್ಷರಾದ ಶ್ರೀ ವೈ. ಎಂ. ಸಿ. ಶರ್ಮ, (ಈಗ ಇವರ ಸ್ಥಾನದಲ್ಲಿರುವ ಶ್ರೀ ಕಂಠೀರಾವ್) ಇವರುಗಳನ್ನು ಆಹ್ವಾನಿಸಿತು. ರಾಜ್ಯದ ವಿವಿಧ ಪ್ರದೇಶಗಳ ಅನುವಾದಕರು ತಮ್ಮ ತಮ್ಮ ಪ್ರಾದೇಶಿಕತೆಗನುಗುಣವಾಗಿ ಭಾಷೆ ಮತ್ತು ಶೈಲಿಯನ್ನನುಸರಿಸುವುದು ಸಹಜ. ಆದಷ್ಟು ಈ ಪ್ರಾದೇಶಿಕತೆಯ

ವೈವಿಧ್ಯತೆಯನ್ನು ಉಳಿಸಿಕೊಂಡು ಬರಲಾಗಿದೆ. ಹಿರಿಯ ತಜ್ಞರು ತಮ್ಮ ಅಮೂಲ್ಯ ಸಮಯವನ್ನು ಈ ಕಾರ್ಯಕ್ಕಾಗಿ ವಿನಿಯೋಗಿಸಿ ಹೆಚ್ಚು ಶ್ರಮವಹಿಸಿ ಭಾಷಾಂತರದ ಮಟ್ಟವನ್ನು ಸುಧಾರಿಸುವ ಪ್ರಯತ್ನ ಮಾಡಿದ್ದಾರೆ. ಇವರ ಸಹಕಾರವಿಲ್ಲದೆ ಈ ಕಾರ್ಯ ಸುಗಮವಾಗುತ್ತಿರಲಿಲ್ಲ. ಮೈಸೂರು ಮತ್ತು ಬೆಂಗಳೂರಿನಲ್ಲಿ ಏರ್ಪಡಿಸಿದ್ದ ಭಾಷಾಂತರಕಾರರ ಕಮ್ಮಟಗಳಲ್ಲಿಯೂ ಇವರು ಭಾಗವಹಿಸಿ ಮಾರ್ಗದರ್ಶನ ಮಾಡಿದ್ದಾರೆ. ಈ ತಜ್ಞರಿಗೆ ಸಂಪಾದಕ ಸಮಿತಿ ಋಣಿಯಾಗಿದೆ.

ಈಗಾಗಲೇ ಇಂಗ್ಲಿಷಿನಲ್ಲಿ ಹೊರಬಂದಿರುವ ಹತ್ತು ಮೂಲ ಸಂಪುಟಗಳ ಭಾಷಾಂತರ ಕಾರ್ಯವು ಮುಗಿಯುವ ಹಂತದಲ್ಲಿದ್ದು ಇವುಗಳಲ್ಲಿ ಮೊದಲನೆಯ ಎರಡು ಸಂಪುಟಗಳು ಈಗಾಗಲೇ ಪ್ರಕಟವಾಗಿದ್ದು ಈಗ ಈ ಮೂರನೆಯ ಸಂಪುಟ ಪ್ರಕಟವಾಗುತ್ತಲಿದೆ. ಈ ಸಂಪುಟದಲ್ಲಿ ಡಾ. ಅಂಬೇಡ್ಕರ್‌ರವರ ಅಪ್ರಕಟಿತ ಕೃತಿಗಳು ಮೊದಲ ಬಾರಿಗೆ ಪ್ರಕಟವಾಗಿವೆ. ಇವುಗಳಲ್ಲಿ ಹಿಂದೂ ಧರ್ಮ, ತತ್ವಜ್ಞಾನ, ಭಾರತ ಮತ್ತು ಸಮತಾವಾದದ ಪೂರ್ವಾವಶ್ಯಕತೆಗಳು, ಪ್ರಾಚೀನ ಭಾರತದಲ್ಲಿ ಕ್ರಾಂತಿ ಮತ್ತು ಪ್ರತಿಕಾಂತಿ, ಬುದ್ಧ ಅಥವಾ ಕಾರ್ಲ್‌ಮಾರ್ಕ್ಸ್ ಮುಂತಾದವು ಸೇರಿವೆ. ಈ ಸಂಪುಟವು ಅನೇಕ ರೀತಿಯಲ್ಲಿ ವಿಶಿಷ್ಟವಾಗಿದ್ದು ಮಹತ್ವದ್ದಾಗಿದೆ. ಈ ಬರೆಹಗಳು ಡಾ. ಅಂಬೇಡ್ಕರರ ಮರಣಾನಂತರ ಆಸ್ತಿ ವಿವಾದದಲ್ಲಿ ಸಿಲುಕಿದ್ದು ಮಹಾರಾಷ್ಟ್ರ ಸರಕಾರದ ಮಹಾ ಆಸ್ತಿ ನಿರ್ವಾಹಕರ ರಕ್ಷೆಯಲ್ಲಿದ್ದವು.

ಇದರ ಮಹತ್ತಿಗೆ ಇನ್ನೂ ಒಂದು ಕಾರಣವೆಂದರೆ ಡಾ. ಅಂಬೇಡ್ಕರ್‌ರವರು ಈ ಬರೆಹಗಳಲ್ಲಿ ನೀಡಿರುವ ಹಿಂದೂ ಧರ್ಮ ಸಿದ್ಧಾಂತದ ಐತಿಹಾಸಿಕ ವಿಶ್ಲೇಷಣೆ, ಹಿಂದೂ ಧರ್ಮವನ್ನು ಕುರಿತಾದ ಅವರ ವ್ಯಾಖ್ಯೆ ಅವರ ವಿಚಾರಗಳ ಮೇಲೆ ಹೊಸ ಬೆಳಕನ್ನು ಚೆಲ್ಲಿದೆ. ಇದು ಅವರು ನೀಡಿರುವ ಅಲ್ಲದೆ ಹಿಂದೂ ಧರ್ಮ ಸಿದ್ಧಾಂತದ ವಿಶ್ಲೇಷಣೆ ಕೇವಲ ಬೌದ್ಧಿಕ ಉಪಕ್ರಮವಾಗಿರದೆ ಹಿಂದೂ ಸಮಾಜವನ್ನು ಮಾನವೀಯ ಮೌಲ್ಯಗಳಾದ ಸಮಾನತೆ, ಸ್ವಾತಂತ್ರ್ಯ ಮತ್ತು ಭ್ರಾತೃತ್ವದ ಆಧಾರಗಳ ಮೇಲೆ ಸದೃಢಗೊಳಿಸುವ ಪ್ರಯತ್ನವಾಗಿದೆ. ಅವರ ವಿಶ್ಲೇಷಣೆ ದೀನ ದಲಿತರ ಮತ್ತು ತುಳಿತಕ್ಕೊಳಗಾದವರನ್ನು ಮೇಲೆತ್ತಿ ಅವರನ್ನು ರಾಷ್ಟ್ರದ ಮೂಲ ಪ್ರವಾಹದಲ್ಲಿ ಸೇರಿಸುವ ಆವಶ್ಯಕತೆಯನ್ನು ಎತ್ತಿ ತೋರಿಸುತ್ತದೆ.

ಈ ಬರೆಹಗಳನ್ನು ಸರ್ಕಾರದ ಮಹಾ ಆಸ್ತಿನಿರ್ವಾಹಕರಿಂದ ಪ್ರಕಟಣೆಗಾಗಿ ಪಡೆದುಕೊಂಡ ಬಗ್ಗೆ ಎರಡು ಮಾತುಗಳನ್ನು ಹೇಳುವುದು ಇಲ್ಲಿ ಅಪ್ರಸ್ತುತವೆನಿಸಲಾರದು. ತಮ್ಮ ಜೀವಿತ ಕಾಲದಲ್ಲಿ ಡಾ. ಅಂಬೇಡ್ಕರರು ಅನೇಕ ಕೃತಿಗಳನ್ನು ಪ್ರಕಟಿಸಿದ್ದರಲ್ಲದೆ ಇನ್ನೂ ಅನೇಕ ಕೃತಿಗಳನ್ನು ಬರೆಯುವ ಯೋಜನೆ ಹಾಕಿಕೊಂಡಿದ್ದರು. ಅವರು ತಮ್ಮ ಚರಿತ್ರೆ, ಮಹಾತ್ಮಾ ಫುಲೆಯವರ ಜೀವನ ಮತ್ತು ಭಾರತೀಯ ಸೇನೆಯ ಇತಿಹಾಸವನ್ನು ಕುರಿತು ಬರೆಯುವ ಇಚ್ಛೆಯನ್ನೂ ಹೊಂದಿದ್ದರು. ಆದರೆ ಈ ವಿಷಯಗಳ ಮೇಲೆ ಅವರು ಮಾಡಿದ ಸಂಶೋಧನೆಯ ಬಗ್ಗೆ ಯಾವ ದಾಖಲೆಗಳೂ ಇಲ್ಲ. ೧೯೫೬ರಲ್ಲಿ ಅವರ ಮರಣಾನಂತರ ಅಪ್ರಕಟಿತ ಕೃತಿಗಳೂ ಸೇರಿದಂತೆ ಅವರ ಎಲ್ಲಾ ಕಾಗದ ಪತ್ರಗಳನ್ನು ದೆಹಲಿಯ ಉಚ್ಚ ನ್ಯಾಯಾಲಯದ ರಕ್ಷಕರು ತಮ್ಮ ವಶಕ್ಕೆ ತೆಗೆದುಕೊಂಡರು. ನಂತರ ಇವೆಲ್ಲವನ್ನೂ ಮಹಾರಾಷ್ಟ್ರ ಸರ್ಕಾರದ ಆಸ್ತಿಪಾಲಕರಿಗೆ ವರ್ಗಾಯಿಸಲಾಯಿತು. ನಂತರ ನಾಗಪುರದ ನ್ಯಾಯವಾದಿ ಶ್ರೀ ಜೆ.ಬಿ. ಬಾನ್ಫೋಡ್ ಎಂಬುವರು ಈ ಎಲ್ಲಾ ಅಪ್ರಕಟಿತ ಕೃತಿಗಳನ್ನು ಪ್ರಕಟಿಸಲು ತಮಗೆ ಅನುಮತಿ ನೀಡಬೇಕು ಇಲ್ಲವೇ ಇವುಗಳನ್ನು ಪ್ರಕಟಿಸುವಂತೆ ಸರ್ಕಾರಕ್ಕೆ ಆದೇಶ ನೀಡಬೇಕೆಂದು ಕೋರಿ ಮುಂಬಯಿ ಉಚ್ಚ ನ್ಯಾಯಾಲಯದ ನಾಗಪುರ ಪೀಠದ ಮುಂದೆ ಅರ್ಜಿ ಸಲ್ಲಿಸಿದರು.

ಮಹಾರಾಷ್ಟ್ರ ಸರ್ಕಾರ ಡಾ. ಅಂಬೇಡ್ಕರರ ಕೃತಿಗಳನ್ನು ಸಂಗ್ರಹಿಸಿ ಪ್ರಕಟಿಸುವುದಕ್ಕಾಗಿ ೧೯೭೮ರಲ್ಲಿ ಸಮಿತಿಯನ್ನು ರಚಿಸಿತು ಮತ್ತು ೧೯೭೮ರಲ್ಲಿ ಶ್ರೀ ವಸಂತ ಡಬ್ಲ್ಯು. ಮೂನ್‌ರವರನ್ನು ಇದಕ್ಕಾಗಿ ವಿಶೇಷ

ಅಧಿಕಾರಿಯಾಗಿ ನೇಮಿಸಿದ ನಂತರ ಈ ಅಪ್ರಕಟಿತ ಕೃತಿಗಳನ್ನು ಪಡೆದುಕೊಳ್ಳುವ ಪ್ರಯತ್ನ ಆರಂಭವಾಯಿತು. ಶ್ರೀ ಮೂನ್‌ರವರು ಸಂಬಂಧಪಟ್ಟ ಅಧಿಕಾರಿಗಳನ್ನೂ, ಡಾ. ಅಂಬೇಡ್ಕರರ ಕುಟುಂಬದವರನ್ನೂ ಮತ್ತು ನ್ಯಾಯವಾದಿ ಶ್ರೀ ಬಾರ್ನ್ಲೋಡ್‌ರವರನ್ನೂ ಸಂಪರ್ಕಿಸಿ ಇವರೆಲ್ಲರ ಸಮ್ಮತಿಯನ್ನು ಪಡೆದುಕೊಂಡ ನಂತರ ಸರ್ಕಾರದ ಮಹಾ ಆಸ್ತಿಪಾಲಕರು ೧೮–೯–೧೯೮೧ರಂದು ಈ ಬರೆಹಗಳಿಂದ ತುಂಬಿದ ಐದು ಕಬ್ಬಿಣದ ಪೆಟ್ಟಿಗೆಗಳನ್ನು ಸಮಿತಿಗೆ ಹಸ್ತಾಂತರಿಸಿದರು. ಡಾ. ಅಂಬೇಡ್ಕರರ ನಿಕಟವರ್ತಿಗಳೂ ಮತ್ತು ಆಗ ಸಂಪಾದಕ ಸಮಿತಿಯ ಅಧ್ಯಕ್ಷರೂ ಆಗಿದ್ದ ಡಾ. ಎಂ. ಬಿ. ಚಟ್ನಿಸ್‌ರವರು ಈ ಎಲ್ಲಾ ಬರಹಗಳನ್ನು ವ್ಯವಸ್ಥಿತವಾಗಿ ಒಂದುಗೂಡಿಸಿ ಅವುಗಳಿಗೆ ಸಂಬಂಧಿಸಿದ ಇತರ ಕಾಗದ ಪತ್ರಗಳನ್ನು ಸಂಗ್ರಹಿಸಿ ಮೂರನೆಯ ಸಂಪುಟದಲ್ಲಿ ಸೇರಿಸಬೇಕಾದ ಬರೆಹಗಳನ್ನು ಆಯ್ಕೆ ಮಾಡಿ ಪ್ರಕಟಣೆ ಸಿದ್ಧಗೊಳಿಸಿದರು. ಆದರೆ ಇದು ಅತ್ಯಂತ ಕಷ್ಟದ ಕೆಲಸವಾಗಿದ್ದು ಸಾಕಷ್ಟು ಸಮಯ ಹಿಡಿಯಿತು. ಈ ಎಲ್ಲಾ ಕಾಗದ ಪತ್ರಗಳನ್ನು ಸುಮಾರು ಮೂವತ್ತು ವರ್ಷಗಳಷ್ಟು ದೀರ್ಘ ಕಾಲ ಪೆಟ್ಟಿಗೆಗಳಲ್ಲಿ ಕ್ರಿಮಿನಾಶಕಗಳನ್ನು ಹಾಕಿ ಮುಚ್ಚಿಟ್ಟಿದ್ದರಿಂದ ಅವನ್ನು ತೆರೆದಾಗ ಒಂದು ರೀತಿಯ ಅತ್ಯಂತ ವಿಷಪೂರಿತ ಅನಿಲ ಉತ್ಪನ್ನವಾಗಿ ದುರ್ಗಂಧ ಉಂಟಾಗಿತ್ತು. ಪೆಟ್ಟಿಗೆಗಳನ್ನು ತೆರೆದು ಕಾಗದ ಪತ್ರಗಳನ್ನು ಹೊರತೆಗೆದವರ ಚರ್ಮ ಮತ್ತು ಕಣ್ಣುಗಳಿಗೆ ವಿಷಪೂರಿತ ಅನಿಲದ ಸೋಂಕುಂಟಾಗಿ ಅವರೆಲ್ಲರಿಗೂ ವೈದ್ಯಕೀಯ ಚಿಕಿತ್ಸೆ ನೀಡಬೇಕಾಯಿತು. ಅಂತೂ ಕೊನೆಗೊಮ್ಮೆ ಈ ಅಪ್ರಕಟಿತ ಕೃತಿಗಳನ್ನು ಪ್ರಕಟಿಸಲು ೨೩–೯–೧೯೮೬ ರಂದು ಸಂಪಾದಕ ಸಮಿತಿ ನಿರ್ಣಯಿಸಿದ ಪ್ರಕಾರ ೧೯೮೭ರಲ್ಲಿ ಮೂರನೆಯ ಸಂಪುಟ ಇಂಗ್ಲಿಷಿನಲ್ಲಿ ಪ್ರಕಟವಾಯಿತು.

ಈಗ ಪ್ರಕಟವಾಗುತ್ತಿರುವ ಈ ಮೂರನೆಯ ಸಂಪುಟದ ಕನ್ನಡ ಅನುವಾದವು ಅತ್ಯಂತ ಮಹತ್ವಪೂರ್ಣವಾಗಿದೆ ಎಂಬುದನ್ನು ಇದನ್ನು ಓದಿದವರೆಲ್ಲರೂ ಒಪ್ಪುತ್ತಾರೆಂದು ನಮ್ಮ ನಂಬುಗೆ. ಇಂತಹ ಮಹತ್ವಪೂರ್ಣ ಸಂಪುಟವನ್ನು ಕನ್ನಡದಲ್ಲಿ ಹೊರತರುವ ಕಾರ್ಯದಲ್ಲಿ ಸಹಕಾರ ನೀಡಿರುವ ಎಲ್ಲಾ ಭಾಷಾಂತರಕಾರರಿಗೂ, ಪರಿಷ್ಕಾರ ಮಾಡಿದ ಡಾ. ದೇ. ಜವರೇಗೌಡರವರಿಗೂ, ಮುದ್ರಕರಿಗೂ ಮತ್ತು ಸಿಬ್ಬಂದಿ ವರ್ಗದವರಿಗೂ ಸಂಪಾದಕ ಸಮಿತಿ ಚಿರಋಣಿಯಾಗಿದೆ.

**ಡಾ. ಎ.ಎಂ. ರಾಜಶೇಖರಯ್ಯ**

ಸಂಪಾದಕ ಸಮಿತಿಯ ಪರವಾಗಿ

# ಪರಿವಿಡಿ


ಸಂದೇಶಗಳು v

ಪರಿಷ್ಕೃತ ಮುದ್ರಣಕ್ಕೆ ಮುನ್ನುಡಿ x

ಎರಡನೇ ಮುದ್ರಣಕ್ಕೆ ಮುನ್ನುಡಿ xiii

ಮೂರನೇ ಮುದ್ರಣಕ್ಕೆ ಮುನ್ನುಡಿ xiv

ಸಂಪಾದಕೀಯ xv

**ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ**
**ಸಮಗ್ರ ಬರೆಹಗಳು ಮತ್ತು ಭಾಷಣಗಳು**

**ಭಾಗ – ಒಂದು**
**ಹಿಂದೂ ಧರ್ಮದ ತತ್ವಜ್ಞಾನ**

ಅಧ್ಯಾಯ ೧ ಹಿಂದೂ ಧರ್ಮದ ತತ್ವಜ್ಞಾನ ೩

**ಭಾಗ – ಎರಡು**
**ಭಾರತ ಮತ್ತು ಸಮತಾವಾದದ ಪೂರ್ವಭಾವಿ ಆವಶ್ಯಕತೆಗಳು**

ಅಧ್ಯಾಯ ೨ ಹಿಂದೂ ಸಮಾಜ ವ್ಯವಸ್ಥೆ: ಅದರ ಮೂಲ ತತ್ವಗಳು ೧೦೧

ಅಧ್ಯಾಯ ೩ ಹಿಂದೂ ಸಮಾಜ ವ್ಯವಸ್ಥೆ: ಅದರ ವಿಶಿಷ್ಟ ಲಕ್ಷಣಗಳು ೧೨೫

ಅಧ್ಯಾಯ ೪ ಹಿಂದೂ ಧರ್ಮದ ಸಂಕೇತಗಳು ೧೪೧

**ಭಾಗ – ಮೂರು**
**ಪ್ರಾಚೀನ ಭಾರತದಲ್ಲಿ ಕ್ರಾಂತಿ ಮತ್ತು ಪ್ರತಿಕ್ರಾಂತಿ**

ಅಧ್ಯಾಯ ೫ ಪ್ರಾಚೀನ ಭಾರತದ ಉತ್ಖನನ ೧೬೫

ಅಧ್ಯಾಯ ೬ ಪ್ರಾಚೀನ ರಾಜ್ಯ ವ್ಯವಸ್ಥೆ : ಆರ್ಯ ಸಮಾಜದ ಸ್ಥಿತಿ ೧೬೭

ಅಧ್ಯಾಯ ೭ ಪತಿತ ಪೌರೋಹಿತ್ಯ ೧೭೩

ಅಧ್ಯಾಯ ೮ ಸುಧಾರಕರು ಮತ್ತು ಅವರಿಗಾದ ಗತಿ ೧೮೧

ಅಧ್ಯಾಯ ೯ ಬೌದ್ಧ ಧರ್ಮದ ಅವಸಾನ ಮತ್ತು ಪತನ ೨೫೦
ಅಧ್ಯಾಯ ೧೦ ಬ್ರಾಹ್ಮಣ ಸಾಹಿತ್ಯ ೨೬೧
ಅಧ್ಯಾಯ ೧೧ ಬ್ರಾಹ್ಮಣ ಧರ್ಮದ ದಿಗ್ವಿಜಯ : ರಾಜಹತ್ಯೆ ಅಥವಾ ಪ್ರತಿಕ್ರಾಂತಿಯ ಹುಟ್ಟು ೨೮೭
ಅಧ್ಯಾಯ ೧೨ ಗೃಹದ ನೀತಿನಿಯಮಗಳು ೩೫೦
ಅಧ್ಯಾಯ ೧೩ ಭಗವದ್ಗೀತೆ ಮೇಲೆ ಪ್ರಬಂಧಗಳು : ಪ್ರತಿಕ್ರಾಂತಿಯ ತಾತ್ವಿಕ ಸಮರ್ಥನೆ :
ಕೃಷ್ಣ ಮತ್ತು ಅವನ ಗೀತೆ ೩೭೬
ಅಧ್ಯಾಯ ೧೪ ವಿರಾಟ ಪರ್ವ ಮತ್ತು ಉದ್ಯೋಗಪರ್ವಗಳ ವಿಶ್ಲೇಷಣಾತ್ಮಕ ಟಿಪ್ಪಣಿಗಳು ೪೦೦
ಅಧ್ಯಾಯ ೧೫ ಬ್ರಾಹ್ಮಣರು ಮತ್ತು ಕ್ಷತ್ರಿಯರು ೪೧೨
ಅಧ್ಯಾಯ ೧೬ ಶೂದ್ರರು ಮತ್ತು ಪ್ರತಿಕ್ರಾಂತಿ ೪೩೭
ಅಧ್ಯಾಯ ೧೭ ಸ್ತ್ರೀ ಮತ್ತು ಪ್ರತಿಕ್ರಾಂತಿ ೪೫೧

**ಭಾಗ – ನಾಲ್ಕು**

**ಬುದ್ಧ ಅಥವಾ ಕಾರ್ಲ್‌ಮಾರ್ಕ್ಸ್**

ಅಧ್ಯಾಯ ೧೮ ಬುದ್ಧ ಅಥವಾ ಕಾರ್ಲ್‌ಮಾರ್ಕ್ಸ್ ೪೬೩

**ಭಾಗ – ಐದು**

**ಧಾರ್ಮಿಕ**

ಒಗಟು ೧ ಒಬ್ಬ ವ್ಯಕ್ತಿ ಏಕೆ ಹಿಂದೂ ಆಗಿದ್ದಾನೆ ಎಂಬುದನ್ನು ತಿಳಿದುಕೊಳ್ಳುವ ಸಮಸ್ಯೆ ೪೮೯
ಒಗಟು ೨ ವೇದಗಳ ಹುಟ್ಟು–ಬ್ರಾಹ್ಮಣರ ಸ್ಪಷ್ಟೀಕರಣ ಅಥವಾ ಲಂಬೋಕ್ತಿ ಕಲೆಯ ಕಸರತ್ತು ೪೯೩
ಒಗಟು ೩ ವೇದಗಳ ಮೂಲದ ಬಗ್ಗೆ ಉಳಿದ ಶಾಸ್ತ್ರಗಳ ಪ್ರಮಾಣ ೪೯೬
ಒಗಟು ೪ ಬ್ರಾಹ್ಮಣರು ಏಕಾಏಕಿ ವೇದಗಳು ದೋಷರಹಿತವೆಂದೂ,
ಪ್ರಶ್ನಾತೀತವೆಂದೂ ಏಕೆ ಘೋಷಿಸಿದರು? ೫೦೩
ಒಗಟು ೫ ಬ್ರಾಹ್ಮಣರು ಇನ್ನೂ ಮುಂದೆ ಹೋಗಿ, ವೇದಗಳನ್ನು ಮಾನವರಾಗಲಿ
ದೇವರಾಗಲಿ ರಚಿಸಲಿಲ್ಲವೆಂದು ಏಕೆ ಘೋಷಿಸಿದರು? ೫೦೬
ಒಗಟು ೬ ವೇದಗಳ ವಿಷಯಗಳು : ಅವುಗಳಿಗೆ ನೈತಿಕ
ಅಥವಾ ಆಧ್ಯಾತ್ಮಿಕ ಮೌಲ್ಯವಿದೆಯೇ? ೫೧೬
ಒಗಟು ೭ ಉಬ್ಬರವಿಳಿತ ಅಥವಾ ಬ್ರಾಹ್ಮಣರು ವೇದಗಳನ್ನು ಹೇಗೆ ನಿಕೃಷ್ಟ
ಶಾಸ್ತ್ರಗಳಲ್ಲಿ ಅತ್ಯಂತ ನಿಕೃಷ್ಟವೆಂದು ಸಾರಿದರು? ೫೩೫
ಒಗಟು ೮ ಉಪನಿಷತ್ತುಗಳು ವೇದಗಳ ಮೇಲೇಕೆ ಯುದ್ಧ ಸಾರಿದವು? ೫೪೪

| | | |
|---|---|---|
| ಒಗಟು ೯ | ಉಪನಿಷತ್ತುಗಳನ್ನು ವೇದಗಳಿಗೆ ಹೇಗೆ ಅಧೀನವನ್ನಾಗಿ ಮಾಡಲಾಯಿತು? | ೫೫೦ |
| ಒಗಟು ೧೦ | ಬ್ರಾಹ್ಮಣರು ಹಿಂದೂ ದೈವಗಳನ್ನು ಪರಸ್ಪರ ಕಾದಾಡುವಂತೆ ಏಕೆ ಮಾಡಿದರು? | ೫೫೪ |
| ಒಗಟು ೧೧ | ಬ್ರಾಹ್ಮಣರು ಹಿಂದೂ ದೈವಗಳು ಏಳುಬೀಳುಗಳನ್ನು ಅನುಭವಿಸುವಂತೆ ಏಕೆ ಮಾಡಿದರು? | ೫೬೪ |
| ಒಗಟು ೧೨ | ಬ್ರಾಹ್ಮಣರು ದೇವರುಗಳನ್ನು ಪದಚ್ಯುತಿಗೊಳಿಸಿ ದೇವಿಯರನ್ನೇಕೆ ಮೇಲೇರಿಸಿದರು? | ೫೮೫ |
| ಒಗಟು ೧೩ | ಅಹಿಂಸೆಯ ಒಗಟು | ೫೯೫ |
| ಒಗಟು ೧೪ | ಅಹಿಂಸೆಯಿಂದ ಹಿಂಸೆಗೆ | ೬೦೦ |
| ಒಗಟು ೧೫ | ಅಹಿಂಸೆಯ ದೇವರಿಗೆ ರಕ್ತಪಿಪಾಸು ದೇವತೆಯನ್ನು ಮದುವೆ ಮಾಡಿದ ಕಥೆ | ೬೦೩ |
| ಅನುಬಂಧ I | ವೇದಗಳ ಒಗಟು | ೬೧೧ |
| ಅನುಬಂಧ II | ವೇದಾಂತದ ಒಗಟು | ೬೩೧ |
| ಅನುಬಂಧ III | ತ್ರಿಮೂರ್ತಿಗಳ ಒಗಟು | ೬೪೦ |
| ಅನುಬಂಧ IV | II ಸ್ಮಾರ್ತ ಧರ್ಮ | ೬೫೩ |
| ಅನುಬಂಧ V | ವೇದಗಳ ಸತ್ಯಸ್ವರೂಪ | ೬೫೮ |


**ಭಾಗ – ಆರು**

**ಸಾಮಾಜಿಕ**


| | | |
|---|---|---|
| ಒಗಟು ೧೬ | ಚಾತುರ್ವರ್ಣಗಳ ಹುಟ್ಟು ಮತ್ತು ಬ್ರಾಹ್ಮಣರು | ೬೬೩ |
| ಒಗಟು ೧೭ | ಆಶ್ರಮಧರ್ಮದ ಹಿನ್ನೆಲೆ | ೬೭೬ |
| ಒಗಟು ೧೮ | ಮನುವಿನ ಹುಚ್ಚುತನ ಅಥವಾ ಮಿಶ್ರಜಾತಿಗಳ ಉಗಮದ ಬಗ್ಗೆ ಬ್ರಾಹ್ಮಣರ ವಿವರಣೆ | ೬೮೪ |
| ಒಗಟು ೧೯ | ಪಿತೃತ್ವದಿಂದ ಮಾತೃತ್ವಕ್ಕೆ ಬದಲಾವಣೆ– ಇದರಿಂದ ಬ್ರಾಹ್ಮಣರು ಗಳಿಸಲು ಬಯಸಿದ್ದೇನು? | ೬೯೮ |
| ಒಗಟು ೨೦ | ಕಲಿವರ್ಜ್ಯ ಅಥವಾ ಪಾಪವನ್ನು ಪಾಪವೆಂದು ಕರೆಯದೆ ಅದರ ಕಾರ್ಯಾಚರಣೆಯನ್ನು ತಡೆಹಿಡಿಯುವ ಬ್ರಾಹ್ಮಣೀಯ ಕೌಶಲ್ಯ | ೭೦೬ |
| ಅನುಬಂಧ I | ವರ್ಣಾಶ್ರಮ ಧರ್ಮದ ಒಗಟು | ೭೧೦ |
| ಅನುಬಂಧ II | ಬಲಾತ್ಕಾರದ ವಿವಾಹ | ೭೩೭ |

**ಭಾಗ – ಏಳು**

**ರಾಜಕೀಯ**


| | | |
|---|---|---|
| ಒಗಟು ೨೧ | ಮನ್ವಂತರದ ಸಿದ್ಧಾಂತ | ೭೪೯ |
| ಒಗಟು ೨೨ | ಬ್ರಹ್ಮ ಧರ್ಮವಲ್ಲ ಹಾಗಾದರೆ ಬ್ರಹ್ಮದಿಂದ ಪ್ರಯೋಜನವೇನು? | ೭೫೫ |
| ಒಗಟು ೨೩ | ಕಲಿಯುಗ – ಬ್ರಾಹ್ಮಣರು ಏತಕ್ಕಾಗಿ ಇದನ್ನು ಅನಂತವಾಗಿಸಿದ್ದಾರೆ? | ೭೬೨ |
| ಒಗಟು ೨೪ | ಕಲಿಯುಗದ ಒಗಟು | ೭೮೨ |
| ಅನುಬಂಧ I | ರಾಮ ಮತ್ತು ಕೃಷ್ಣರ ಒಗಟು | ೭೯೯ |

**ವಿಷಯಸೂಚಿ** ೮೨೧

## ಭಾಗ – ಒಂದು

# ಹಿಂದೂ ಧರ್ಮದ ತತ್ವಜ್ಞಾನ

*ಹಿಂದೂ ಧರ್ಮದ ತತ್ವಜ್ಞಾನದ ಹಸ್ತಪ್ರತಿ ಅಚ್ಚುಕಟ್ಟಾಗಿ ಬೈಂಡು ಮಾಡಿದ ರೂಪದಲ್ಲಿ ದೊರಕಿದೆಯಾದ್ದರಿಂದ ಇದು ಪೂರ್ಣ ರೂಪದಲ್ಲಿದೆ ಎಂದು ನಮಗನಿಸುತ್ತದೆ. ಈ ಇಡಿ ಹಸ್ತಪ್ರತಿಯು ದೊಡ್ಡ ಯೋಜನೆಯೊಂದರ ಒಂದು ಅಧ್ಯಾಯವಾಗಿದೆಯೆಂದು ತೋರುತ್ತದೆ. ಇದರಲ್ಲಿ ಬೆರಳಚ್ಚು ಮಾಡಿದ ಪೂಲ್‌ಸ್ಕೇಪ್ ಆಕಾರದ ೧೬೯ ಕಡತಗಳಿವೆ.*

– ಮೂಲ ಸಂಪುಟದ ಸಂಪಾದಕರು

## ಅಧ್ಯಾಯ ೧

# ಹಿಂದೂ ಧರ್ಮದ ತತ್ವಜ್ಞಾನ

## I

ಹಿಂದೂ ಧರ್ಮದ ತತ್ವಜ್ಞಾನವೆಂದರೇನು? ತರ್ಕದ ಕ್ರಮವನ್ನನುಸರಿಸಿಯೇ ಈ ಪ್ರಶ್ನೆ ಹುಟ್ಟುತ್ತದೆ. ತರ್ಕದ ಕ್ರಮವನ್ನು ಬಿಟ್ಟರೂ ಅದರ ಪ್ರಾಮುಖ್ಯ ಎಷ್ಟಿದೆಯೆಂದರೆ, ಅದನ್ನು ಪರಿಗಣಿಸದೆ ಬಿಟ್ಟುಬಿಡುವಂತಿಲ್ಲ. ಅದರ ಹೊರತು ಹಿಂದೂ ಧರ್ಮದ ಗುರಿ ಮತ್ತು ಆದರ್ಶಗಳನ್ನು ಯಾರೂ ಅರ್ಥ ಮಾಡಿಕೊಳ್ಳುವಂತೆಯೂ ಇಲ್ಲ. ಆದರೆ ಈ ಬಗೆಯ ಜಿಜ್ಞಾಸೆಗೆ ಪೂರ್ವಭಾವಿಯಾಗಿ ಭೂಮಿಕೆಯನ್ನು ಚೆನ್ನಾಗಿ ಸಿದ್ಧಪಡಿಸಬೇಕು. ಸಂಬಂಧಪಟ್ಟ ಪರಿಭಾಷೆಯನ್ನು ಖಚಿತಪಡಿಸಿಕೊಳ್ಳಬೇಕು.

ಪರ್ಯಾಲೋಚಿಸಲಿರುವ ಶೀರ್ಷಿಕೆಯಿಂದ ಏನನ್ನು ಗ್ರಹಿಸಬಹುದೆಂಬುದನ್ನು ಮೊದಲು ತಿಳಿದುಕೊಳ್ಳಬಹುದಾಗಿದೆ. ಧರ್ಮ ಸಂಬಂಧಿಯಾದ ತತ್ವಜ್ಞಾನ ಮತ್ತು ಹಿಂದೂ ಧರ್ಮದ ತತ್ವಜ್ಞಾನ ಇವೆರಡೂ ಒಂದೇ ಸ್ವರೂಪದ ವಿಚಾರಗಳೇ? ಈ ವಿಚಾರದಲ್ಲಿ ಒಂದಲ್ಲ ಒಂದು ರೀತಿ ಬದ್ಧನಾಗಬೇಕೆಂದು ನಾನು ಬಯಸುತ್ತೇನೆ. ದಿಟವಾಗಿಯೂ ನನಗೆ ಅದು ಸಾಧ್ಯವಾಗುತ್ತಿಲ್ಲ. ಈ ವಿಷಯವಾಗಿ ನಾನು ಸಾಕಷ್ಟು ಅಧ್ಯಯನ ಮಾಡಿದ್ದೇನೆ. ಆದರೂ ಧರ್ಮವನ್ನು ಕುರಿತು ತತ್ವಜ್ಞಾನವೆಂದರೇನು? ಎಂಬ ಪರಿಕಲ್ಪನೆಯ ಬಗೆಗೆ ಸ್ಪಷ್ಟ ಜ್ಞಾನವಿಲ್ಲವೆಂಬುದನ್ನು ಒಪ್ಪಿಕೊಳ್ಳಬೇಕಾಗಿದೆ. ಬಹುಶಃ ಎರಡು ಕಾರಣಗಳಿಂದ ಹೀಗಾಗಿದೆ. ಮೊದಲನೆಯದಾಗಿ, ಧರ್ಮವೆಂಬುದು ಖಚಿತವಾದುದಾದರೆ ತತ್ವಶಾಸ್ತ್ರದ ಪರಿಭಾಷೆಯ ಚೌಕಟ್ಟಿನಲ್ಲಿ ಯಾವುದನ್ನು ಸೇರಿಸಬಹುದೆಂಬುದನ್ನು ಕರಾರುವಾಕ್ಕಾಗಿ ಹೇಳಲು ಬರುವುದಿಲ್ಲ.[೧] ಎರಡನೆಯದಾಗಿ, ಧರ್ಮ ಮತ್ತು ತತ್ವಶಾಸ್ತ್ರಗಳು ಪರಸ್ಪರ ಪ್ರತಿವಾದಿಗಳು. ತತ್ವಜ್ಞಾನಿ ಮತ್ತು ಧರ್ಮಪಂಡಿತರಿಗೆ ಸಂಬಂಧಿಸಿದಂತೆ ಪ್ರಚಾರದಲ್ಲಿರುವ ಒಂದು ಕತೆಯಲ್ಲಿ ಈ ವಿಚಾರ ಚೆನ್ನಾಗಿ ನಿರೂಪಿತವಾಗಿದೆ. ಈ ಕತೆಯ ಪ್ರಕಾರ ಇವರಿಬ್ಬರೂ ವಾಗ್ವಾದ ನಿರತರಾಗಿದ್ದರಂತೆ. ಧರ್ಮಶಾಸ್ತ್ರ ಪಂಡಿತನು ಆರೋಪಿಸಿದ "ತತ್ವಜ್ಞಾನಿಯು ಕತ್ತಲೆಯ ಕೋಣೆಯಲ್ಲಿ ಇಲ್ಲದ ಕರಿಯ ಬೆಕ್ಕಿಗಾಗಿ ಹುಡುಕುವ ಕುರುಡನಂತಿದ್ದಾನೆಂದು." ಧರ್ಮಶಾಸ್ತ್ರ ಪಂಡಿತನ ಮೇಲೆ ಪ್ರತಿ ದಾಳಿ ಮಾಡಿದ ತತ್ವಜ್ಞಾನಿಯ ಪ್ರಕಾರ ಈ ಪಂಡಿತನು "ಕತ್ತಲೆಯ ಕೋಣೆಯಲ್ಲಿ ಇಲ್ಲದ ಕರಿಯ ಬೆಕ್ಕಿಗಾಗಿ ಹುಡುಕುತ್ತಿರುವ ಕುರುಡನಂತಿದ್ದೂ, ಅದನ್ನು ತಾನು ಕಂಡಿರುವುದಾಗಿ ಆಣೆಯಿಟ್ಟು ಹೇಳುತ್ತಿದ್ದಾನೆ." "ಧರ್ಮ ಸಂಬಂಧಿಯಾದ ತತ್ವಜ್ಞಾನ"ವೆಂಬ ದುರದೃಷ್ಟದ ಶೀರ್ಷಿಕೆಯೇ ಈ ಎಲ್ಲ ಗೊಂದಲದ ಜವಾಬ್ದಾರಿ ಹೊರಬೇಕಾಗಿದೆ. ಧರ್ಮ ಸಂಬಂಧಿಯಾದ ತತ್ವಜ್ಞಾನದ ವಸ್ತು ವಿಚಾರವನ್ನು ಕುರಿತು ಬುದ್ಧಿಗ್ರಾಹ್ಯವಾದ ಒಂದು ಒಳ್ಳೆಯ ಮಾರ್ಗವನ್ನು ನಾನು ಪ್ರೊ. ಪ್ರಿಂಗಲ್–ಪ್ಯಾಟಿಸನ್‌ರವರಲ್ಲಿ ಕಂಡುಕೊಂಡಿದ್ದೇನೆ. ಅವರ ಅಭಿಪ್ರಾಯದ ಪ್ರಕಾರ[೨] :

---

೧. ನೋಡಿ 'ಫಿಲಾಸಫಿ' ಎಂಬ ಲೇಖನ, ಮನ್ರೋರವರ *ಎನ್‌ಸೈಕ್ಲೋಪೀಡಿಯಾ ಆಫ್ ಎಜ್ಯುಕೇಷನ್.*

೨. *'ದಿ ಫಿಲಾಸಫಿ ಆಫ್ ರಿಲಿಜನ್',* ಆಕ್ಸ್‌ಫರ್ಡ್, ಪು. ೧–೨.

ಧರ್ಮ ಸಂಬಂಧಿಯಾದ ತತ್ವಜ್ಞಾನದ ಅರ್ಥವೇನು? ಎಂಬುದರ ಬಗೆಗೆ ಸಾಮಾನ್ಯ ಸೂಚನೆಯಾಗಿ ಕೆಲವು ಮಾತುಗಳನ್ನು ಮೊದಲೇ ಹೇಳಿಬಿಡುವುದು ಉತ್ತಮ. ಪ್ಲೇಟೋ ಹೇಳುವಂತೆ, ವಸ್ತು ವಿಚಾರಗಳ ಸಾರಾಂಶವೇ ತತ್ವಜ್ಞಾನ. ಅಂದರೆ, ವಸ್ತು ವಿಚಾರಗಳನ್ನು ಒಟ್ಟಾಗಿ ನೋಡುವುದು, ಜಗತ್ತಿನ ಎಲ್ಲ ಪ್ರಮುಖ ವೈಶಿಷ್ಟ್ಯಗಳನ್ನು ಗುರುತಿಸುವುದು ಮತ್ತು ಅವುಗಳ ಪರಸ್ಪರ ಸಂಬಂಧವನ್ನು ಒಂದೇ ಜಗತ್ತಿನ ವಿವಿಧ ಭಾಗಗಳಂತೆ ಗ್ರಹಿಸುವುದು. ವಿಶ್ವಗತಿ ಮತ್ತು ವಿಶ್ವಾಧಾರಕ್ಕೆ ಸಂಬಂಧಿಸಿದ ವೈಲಕ್ಷಣಗಳನ್ನು ಯುಕ್ತವಾಗಿ ಅಂದಾಜುಮಾಡಿ ಯಾವುದೇ ಬಗೆಯ ವಿಶಿಷ್ಟ ಸಂಗತಿಗಳ ಮಹತ್ವವನ್ನು ಪರಿಗಣಿಸಿ ನಮ್ಮ ಅಂತಿಮ ತೀರ್ಮಾನಗಳಿಗೆ ಬರಲು ಆಗ ಮಾತ್ರ ಸಾಧ್ಯವಾಗುತ್ತದೆ. ಆದ ಕಾರಣ ಯಾವುದೇ ವಿಶಿಷ್ಟ ವಿಭಾಗದ ಅನುಭವಕ್ಕೆ ಸಂಬಂಧಿಸಿದ ತತ್ವಜ್ಞಾನದ (ಧಾರ್ಮಿಕ ತತ್ವಜ್ಞಾನ, ಕಲಾ ತತ್ವಜ್ಞಾನ, ಕಾನೂನಿನ ತತ್ವಜ್ಞಾನ, ಇತ್ಯಾದಿ) ಅರ್ಥವೇನೆಂಬುದನ್ನು ಗ್ರಹಿಸಬೇಕಾದರೆ, ಮನುಷ್ಯ ಮತ್ತು ಅವನು ಜೀವಿಸುತ್ತಿರುವ ಜಗತ್ತಿನ ಸಂಬಂಧದಲ್ಲಿ ನಮ್ಮ ಅಭಿಪ್ರಾಯ ಮತ್ತು ತೀರ್ಮಾನಗಳು ಅದರ ವಿಶ್ಲೇಷಣೆ ಮತ್ತು ವ್ಯಾಖ್ಯಾನಗಳನ್ನೇ ಅವಲಂಬಿಸಿರುತ್ತದೆ ಎಂಬುದನ್ನು ಮನಗಾಣಬೇಕು. ನಾವು ಗಮನವಿಟ್ಟು ನೋಡುವ ಸಂಗತಿಗಳು ಎಷ್ಟು ಸರ್ವವ್ಯಾಪಿಯಾಗಿವೆ ಮತ್ತು ಅವುಗಳ ಸ್ವರೂಪ ಎಷ್ಟು ಅಸಾಧಾರಣವಾಗಿದೆಯೆಂಬುದನ್ನು ಧರ್ಮದ ಚರಿತ್ರೆ ಸ್ಪಷ್ಟಪಡಿಸುತ್ತಿದೆ. ಈ ಚಾರಿತ್ರಿಕ ಸಂಗತಿಗಳನ್ನು ಮತ್ತು ಮನುಷ್ಯನ ಧಾರ್ಮಿಕ ಅನುಭವಗಳ ತತ್ವಜ್ಞಾನವನ್ನು, ನಮ್ಮ ಸಾಮಾನ್ಯ ತಾತ್ವಿಕ ತೀರ್ಮಾನಗಳಲ್ಲಿ ಪರಿಗಣಿಸದೆ ಇರುವಂತಿಲ್ಲ. ವಾಸ್ತವವಾಗಿ ಈ ವಿಚಾರವನ್ನು ಚರ್ಚಿಸುವ ಬಹುಪಾಲು ಲೇಖಕರು ಸಾಮಾನ್ಯವಾಗಿ ಏಕಾಭಿಪ್ರಾಯವನ್ನು ಹೊಂದಿದ್ದಾರೆ.

ಧಾರ್ಮಿಕ ಇತಿಹಾಸದ ಮೂಲಕವೇ ಧರ್ಮಸಂಬಂಧಿಯಾದ ತತ್ವಜ್ಞಾನವು ವಿಚಾರಿಸುವ ಸತ್ಯಾಂಶಗಳು ಅದರ ವ್ಯಾಪಕವಾದ ಅರ್ಥದಲ್ಲಿ ಗೋಚರವಾಗುತ್ತವೆ. ತೈಲೆಯವರು ಹೇಳುವಂತೆ "ನಾಗರಿಕ ಮತ್ತು ಅನಾಗರಿಕ ಜಗತ್ತಿನ ಎಲ್ಲ ಜೀವಂತ ಹಾಗೂ ಮೃತ ಧರ್ಮಗಳು ಮನೋವೈಜ್ಞಾನಿಕ ಹಿನ್ನೆಲೆಯಿರುವ ಐತಿಹಾಸಿಕ ಘಟನೆಗಳಾಗಿ ಮೈದೋರಿವೆ." ಧರ್ಮ ಸಂಬಂಧಿಯಾದ ತತ್ವಜ್ಞಾನಕ್ಕೆ ಆಧಾರವಾಗಿ ಈ ಸಂಗತಿಗಳನ್ನು ಪರಿಗಣಿಸಬೇಕೆಂಬುದನ್ನು ಮರೆಯಬಾರದು. ಅವುಗಳು ತಮ್ಮಷ್ಟಕ್ಕೆ ತಾವೇ ತತ್ವಜ್ಞಾನಕ್ಕೆ ಸಂಬಂಧಿಸುವುದಿಲ್ಲ. ಅಥವಾ ತೈಲೆಯವರ ಮಾತಿನಲ್ಲಿಯೆ ಹೇಳುವುದಾದರೆ ಧಾರ್ಮಿಕ ವಿಜ್ಞಾನವೆನಿಸುವುದಿಲ್ಲ. ಅವರು ಹೇಳುವಂತೆ "ಅಸ್ತಿತ್ವದಲ್ಲಿರುವ ಎಲ್ಲ ಧರ್ಮಗಳನ್ನೂ ನಾನು ಕೂಲಂಕಷವಾಗಿ ವಿವರಿಸಿದ್ದರೆ, ಅವುಗಳ ಸಿದ್ಧಾಂತಗಳು, ಪುರಾಣ ಮತ್ತು ಆಚರಣೆಗಳು, ಅನುಸರಿಸುವ ಪದ್ಧತಿಗಳು, ಮತ್ತು ಅವುಗಳನ್ನು ಆಶ್ರಯಿಸಿರುವ ಸಂಸ್ಥೆಗಳು ಇವೆಲ್ಲವನ್ನೂ – ವಿವಿಧ ಧರ್ಮಗಳ ಮೂಲ, ವಿಕಾಸ ಮತ್ತು ಅವನತಿಯನ್ನು – ಗುರುತಿಸಿದ್ದರೆ, ಅವುಗಳು ಧಾರ್ಮಿಕ ವಿಜ್ಞಾನವು ನಿರ್ವಹಿಸುವ ಅಂಗಾಂಶಗಳು ಮಾತ್ರ ಎಂದು ತಿಳಿಯಬೇಕು. ಎಷ್ಟೇ ಪರಿಪೂರ್ಣವಾಗಿದ್ದರೂ ಚಾರಿತ್ರಿಕ ದಾಖಲೆಗಳು ಸಾಕಾಗುವುದಿಲ್ಲ. ಧರ್ಮ ಸಂಬಂಧಿಯಾದ ತತ್ವಜ್ಞಾನವನ್ನು ನಾವು ಸಾಧಿಸಬೇಕಾದರೆ, ವಿವಿಧ ದಾಖಲೆಗಳನ್ನು ಆಧರಿಸಿದ ಒಂದು ಸಾಮಾನ್ಯ ತತ್ವವನ್ನು ನಾವು ಕಂಡುಹಿಡಿಯಬೇಕಾಗುತ್ತದೆ. ಮಾನವನ ಸ್ವಭಾವದ ಮೂಲ ಬೇರುಗಳು, ಕೆಳಗಿನಿಂದ ಮೇಲಿನವರೆಗೆ ಅದರ ವಿಕಾಸದ ಹಂತಗಳು ಮತ್ತು ಅದರ ಅಂತರ್ ಸಂಬಂಧಗಳನ್ನು

ಸ್ಪಷ್ಟವಾಗಿ ತಿಳಿಸಬೇಕಾಗುತ್ತದೆ. ಮಾನವನ ನಾಗರಿಕತೆಗೆ ಸಂಬಂಧಿಸಿದ ಉಳಿದ ಅಂಶಗಳೂ ಅದರಲ್ಲಿ ಸೇರಿರುತ್ತವೆ."

ಇದನ್ನು ಧರ್ಮ ಸಂಬಂಧಿಯಾದ ತತ್ವಜ್ಞಾನವೆನ್ನುವುದಾದರೆ ತೌಲನಿಕ ಧರ್ಮಶಾಸ್ತ್ರವೆಂದು ಕರೆಯಲಾಗುವ ಅಧ್ಯಯನ ವಿಭಾಗವೇ ಹೊರತು ಬೇರೆ ಅಲ್ಲವೆನ್ನಬೇಕಾಗುತ್ತದೆ. ವಿವಿಧ ಧರ್ಮಗಳು ಕಾಣಿಸಿಕೊಂಡಿರುವ ಹಿನ್ನೆಲೆಯಲ್ಲಿರುವ ಸಾಮಾನ್ಯಾಂಶಗಳನ್ನು ಗುರುತಿಸುವುದೂ ಅದರ ಮತ್ತೊಂದು ಉದ್ದೇಶವಾಗಿದೆ. ಈ ಬಗೆಯ ಅಧ್ಯಯನದ ವ್ಯಾಪ್ತಿ ಮತ್ತು ಮೌಲ್ಯಗಳೇನೇ ಇರಲಿ ಧರ್ಮಸಂಬಂಧಿಯಾದ ತತ್ವಜ್ಞಾನವೆಂಬುದನ್ನು ನಾನು ಈ ಅರ್ಥದಲ್ಲಿ ವ್ಯಾಖ್ಯಾನಿಸುತ್ತಿಲ್ಲ. ಪ್ರೊ. ಪ್ರಿಂಗಲ್ ಪ್ಯಾಟಿಸನ್‌ರವರು ಈ ವಿಚಾರದಲ್ಲಿ ಕೊಟ್ಟಿರುವ ವ್ಯಾಖ್ಯಾನಕ್ಕಿಂತ ನನ್ನ ನಿಲುವು ಭಿನ್ನವಾಗಿದೆ. ತತ್ವಜ್ಞಾನವೆಂಬ ಶಬ್ದವನ್ನು ಇಡಿಯಾಗಿ ಅದರ ಮೂಲಾರ್ಥದಲ್ಲಿ ನಾನು ಬಳಸುತ್ತೇನೆ. ಸಾಕ್ರೆಟಿಸ್ ಅಥವಾ ಪ್ಲೆಟೋವಿನ ತತ್ವಜ್ಞಾನದ ಬೋಧನೆಯನ್ನು ಕುರಿತು ಜನಗಳು ಮಾತನಾಡುವ ಅರ್ಥದಲ್ಲಿ ನಾನು ಬಳಸುತ್ತೇನೆ. ವಸ್ತು ಮತ್ತು ಸಂಗತಿಗಳನ್ನು ಕುರಿತು ತೀರ್ಮಾನಿಸುವಾಗ ಅನುಸರಿಸುವ ವಿವೇಕವೆಂದು ಬೇಕಾದರೆ ಇದನ್ನು ಕರೆಯಬಹುದು. ಈ ನೆಲೆಯಿಂದ ಮುಂದುವರೆದಲ್ಲಿ ಧರ್ಮಸಂಬಂಧಿಯಾದ ತತ್ವಜ್ಞಾನವು ನನ್ನ ಪಾಲಿಗೆ ಕೇವಲ ವರ್ಣನಾತ್ಮಕ ವಿಜ್ಞಾನವಾಗುವುದಿಲ್ಲ. ಅದು ಏಕಕಾಲದಲ್ಲಿ ಪ್ರಮಾಣಬದ್ಧವಾಗಿಯೂ ವರ್ಣನಾತ್ಮಕವಾಗಿಯೂ ಇರಬಲ್ಲುದೆಂದು ನಾನು ಭಾವಿಸುತ್ತೇನೆ. ಧರ್ಮಬೋಧನೆಗೆ ಸಂಬಂಧಿಸಿದಂತೆ ಧಾರ್ಮಿಕ ತತ್ವಜ್ಞಾನವು ವರ್ಣನಾತ್ಮಕ ವಿವೇಕವನ್ನನುಸರಿಸಿದರೆ ಧಾರ್ಮಿಕ ತತ್ವಜ್ಞಾನವು ಒಂದು ಕ್ಲುಪ್ತ ಪ್ರಮಾಣ ಸಂಬಂಧವಾದ ವಿಜ್ಞಾನವಾಗುತ್ತದೆ, ಹಿಂದೂ ಧರ್ಮದ ತತ್ವಜ್ಞಾನವನ್ನು ಕುರಿತಂತೆ ಈ ಅಧ್ಯಯನದಲ್ಲಿ ನನ್ನ ಆಸಕ್ತಿ ಯಾವ ಬಗೆಯದೆಂಬುದು ಇದರಿಂದ ಸ್ಪಷ್ಟವಾಗುತ್ತದೆ. ಮುಚ್ಚುಮರೆಯಿಲ್ಲದೆ ಹೇಳಬೇಕೆಂದರೆ ಒಂದು ಜೀವನ ವಿಧಾನವಾಗಿ ಹಿಂದೂ ಧರ್ಮದ ಮೌಲ್ಯವನ್ನು ನಾನು ವಿಚಾರಣೆಗೆ ಗುರಿಪಡಿಸುತ್ತೇನೆ.

ಈಗ ಒಂದು ಭಾಗದ ನೆಲೆಯನ್ನು ಸ್ಫುಟಪಡಿಸಿದಂತಾಯಿತು. ಇನ್ನೂ ಒಂದು ಭಾಗವನ್ನು ಸ್ಫುಟಗೊಳಿಸಬೇಕಿದೆ. ವಿಷಯಗಳನ್ನು ಗೊತ್ತುಪಡಿಸುವುದು ಮತ್ತು ನಾನು ಬಳಸುವ ಶಬ್ದಗಳ ಲಕ್ಷಣ ನಿರೂಪಣೆಯನ್ನು ನಿಷ್ಕರ್ಷಿಸುವುದು ಮುಂದಿನ ವಿಚಾರವಾಗಿದೆ.

ಧಾರ್ಮಿಕ ತತ್ವಜ್ಞಾನದ ಅಧ್ಯಯನವೊಂದು ನನ್ನ ಪ್ರಕಾರ ಮೂರು ಆಯಾಮಗಳನ್ನೊಳಗೊಂಡಿರುತ್ತದೆ. ಉತ್ಪಾದಿತ ವಸ್ತುವೊಂದರ ಮೊತ್ತದಲ್ಲಿ ಮರೆಯಾಗಿ ಅಡಗಿರುವ ಅಂಶಗಳಂತಿರುವುದರಿಂದ ಅವುಗಳನ್ನು ನಾನು ಆಯಾಮಗಳೆಂದು ಗುರುತಿಸಿದ್ದೇನೆ. ಧಾರ್ಮಿಕ ತತ್ವಜ್ಞಾನದ ಅರ್ಥಪೂರ್ಣ ಲಕ್ಷಣ ನಿರೂಪಣೆಯನ್ನು ಸಾಧಿಸಬೇಕಾದವನಿಗೆ ಈ ಆಯಾಮಗಳ ಸಂಪೂರ್ಣ ಅರಿವಿರಬೇಕಾಗುತ್ತದೆ. ಧರ್ಮವು ಈ ಮೂರು ಆಯಾಮಗಳಲ್ಲಿ ಮೊತ್ತ ಮೊದಲನೆಯದು. ವಿವಿಧೋದ್ದೇಶಗಳ ದಿಕ್ಕಿನಲ್ಲಿ ವಾದವಿವಾದಗಳು ಹರಿಯದಿರಬೇಕಾದರೆ ಧರ್ಮವೆಂಬುದರ ಅರ್ಥವೇನು? ಎಂಬುದನ್ನು ಮೊದಲು ಸಂಬಂಧಪಟ್ಟವರು ಸ್ಪಷ್ಟಪಡಿಸಬೇಕಾಗುತ್ತದೆ. ಧರ್ಮದ ವಿಚಾರದಲ್ಲಂತೂ ಇದು ಬಹಳ ಮುಖ್ಯವಾಗುತ್ತದೆ. ಏಕೆಂದರೆ ಅದರ ಲಕ್ಷಣ ನಿರೂಪಣೆಯ ಬಗೆಗೆ ಯಾವುದೇ ಒಮ್ಮತವಿಲ್ಲ. ವಿಸ್ತಾರವಾದ ವಿವರಣೆಗೆ ಇದು ಸೂಕ್ತ ಸ್ಥಳವಾದುದರಿಂದ, ನನ್ನ ಪ್ರಕಾರ ಈ ಶಬ್ದಕ್ಕೆ ಕೊಡುವ ಅರ್ಥವನ್ನು ಮಾತ್ರ ಚರ್ಚಿಸಿ ತೃಪ್ತಿ ಪಟ್ಟುಕೊಳ್ಳಬಹುದಾಗಿದೆ.

ಮತಧರ್ಮಶಾಸ್ತ್ರವೆಂಬ ಅರ್ಥದಲ್ಲಿ ಧರ್ಮವೆನ್ನುವ ಶಬ್ದವನ್ನು ನಾನು ಬಳಸುತ್ತೇನೆ. ಬಹುಶಃ ಲಕ್ಷಣ ನಿರೂಪಣೆಯ ದೃಷ್ಟಿಯಿಂದ ಇದು ಅಸಮರ್ಪಕವಿರಬಹುದು. ಅನೇಕ ಧರ್ಮಶಾಸ್ತ್ರಗಳಿರುವುದರಿಂದ

ಯಾವುದನ್ನು ನಾನು ದೃಷ್ಟಿಯಲ್ಲಿರಿಸಿಕೊಂಡಿರುವೆನೆಂಬುದನ್ನು ಪ್ರತ್ಯೇಕಿಸಿ ಹೇಳಬೇಕಾಗುತ್ತದೆ. ಐತಿಹಾಸಿಕವಾಗಿ ಹೇಳುವುದಾದರೆ ಪ್ರಾಚೀನ ಕಾಲದಿಂದಲೂ ಪುರಾಣ ಧರ್ಮಶಾಸ್ತ್ರ ಮತ್ತು ನಾಗರಿಕ ಧರ್ಮಶಾಸ್ತ್ರ ಎಂಬ ಎರಡು ಧರ್ಮಶಾಸ್ತ್ರಗಳ ಬಗೆಗೆ ಪ್ರಸ್ತಾಪವಿದೆ. ಅವುಗಳ ವ್ಯತ್ಯಾಸವನ್ನು ಗುರುತಿಸಿದ ಗ್ರೀಕರು ಒಂದೊಂದರ ಬಗೆಗೂ ಸ್ಪಷ್ಟ ಅಭಿಪ್ರಾಯವನ್ನು ನೀಡಿದ್ದಾರೆ. ಅವರ ಪ್ರಕಾರ ಪುರಾಣ ಧರ್ಮಶಾಸ್ತ್ರವೆಂದರೆ ದೇವಾನುದೇವತೆಗಳ ಕಥೆಗಳು ಮತ್ತು ಕಾವ್ಯಗಳು. ಎಲ್ಲ ಕಾಲದಲ್ಲಿಯೂ ಪ್ರಚಾರದಲ್ಲಿರುವ ಸಾಹಿತ್ಯವು ಈ ಕಥೆಗಳನ್ನೊಳಗೊಂಡಿರುತ್ತದೆ, ನಾಗರಿಕ ಧರ್ಮಶಾಸ್ತ್ರವು ಅವರ ಪ್ರಕಾರ ಪ್ರಭುತ್ವದ ಸಮೃದ್ಧಿ – ಅರಕೆಗಳನ್ನು, ಕಾರ್ಯಕ್ರಮಗಳು ಮತ್ತು ಅದಕ್ಕನುಸಾರವಾದ ಆಚರಣೆಗಳನ್ನು ಒಳಗೊಂಡಿರುತ್ತದೆ. ಧರ್ಮಶಾಸ್ತ್ರವನ್ನು ನಾನು ಈ ಎರಡು ಅರ್ಥದಲ್ಲಿ ಬಳಸುತ್ತಿಲ್ಲ. ನಿಸರ್ಗ ಧರ್ಮಶಾಸ್ತ್ರ[೧]ವೆಂಬ ಅರ್ಥದಲ್ಲಿ ನಾನು ಧರ್ಮಶಾಸ್ತ್ರವನ್ನು ಪರಿಭಾವಿಸುತ್ತೇನೆ. ಅದು ದೈವ ಮತ್ತು ದೈವಿಕತೆಯ ಬಗೆಗಿನ ತತ್ವವಾಗಿದ್ದು ನಿಸರ್ಗ ಸಿದ್ಧಾಂತದ ಅಭಿನ್ನ ಅಂಗವಾಗಿದೆ. ಪರಂಪರಾಗತವಾಗಿ ತಿಳಿದು ಬಂದಿರುವಂತೆ ನಿಸರ್ಗ ಧರ್ಮಶಾಸ್ತ್ರವು ಮುಂದಿಡುವ ಮೂರು ಸಿದ್ಧಾಂತಗಳಿವೆ. (೧) ದೇವರಿದ್ದಾನೆ ಮತ್ತು ನಾವು ಯಾವುದನ್ನು ನಿಸರ್ಗ ಅಥವಾ ವಿಶ್ವವೆನ್ನುತ್ತೇವೆಯೋ ಅದಕ್ಕೆ ಅವನೇ ಕರ್ತೃವಾಗಿದ್ದಾನೆ. (೨) ದೇವರು ನಿಸರ್ಗ ಸಮಸ್ತವನ್ನೂ ನಿಯಂತ್ರಿಸುತ್ತಾನೆ ಮತ್ತು (೩) ಮಾನವಕೋಟಿಯ ಮೇಲೆ ದೇವರ ಪ್ರಭುತ್ವವಿದೆ. ಆತನ ನ್ಯಾಯ ನೀತಿಯೇ ಉತ್ತಮಮೋತ್ತಮವಾದುದು.

ಅಂತಃಪ್ರೇರಣೆಯನ್ನನುಸರಿಸಿದ ಮತ್ತೊಂದು ಧರ್ಮಶಾಸ್ತ್ರವಿದೆ ಎಂಬುದನ್ನು ನಾನು ಬಲ್ಲೆ. ದೈವಿಕ ಅಸ್ತಿತ್ವವನ್ನು ಆತ್ಮ ಪ್ರಕಾಶದಲ್ಲಿ ಸ್ವಯಂ ಕಂಡುಕೊಳ್ಳುವುದರಿಂದ ಅದು ನಿಸರ್ಗ ಧರ್ಮಶಾಸ್ತ್ರದಿಂದ ಭಿನ್ನವಾಗುತ್ತದೆ, ಆದರೆ ಈ ವ್ಯತ್ಯಾಸ ಅಷ್ಟು ಮುಖ್ಯವಾಗುವುದಿಲ್ಲ. ಈಗಾಗಲೇ ಚರ್ಚಿತವಾಗಿರುವಂತೆ[೨] ಸ್ವಯಂಪ್ರಕಾಶವೆನ್ನುವುದು ಎರಡು ರೀತಿಯಲ್ಲಿರುತ್ತವೆ. "ನಿಸರ್ಗ ಧರ್ಮಶಾಸ್ತ್ರದ ಫಲಿತಾಂಶಗಳನ್ನು ಯಾವುದೇ ವ್ಯತ್ಯಾಸವಿಲ್ಲದೆ ಸಮರ್ಥಿಸಲು ಬಿಟ್ಟುಬಿಡುವುದು; ಮನುಷ್ಯ ಪ್ರಯತ್ನದ ನೆರವಿಲ್ಲದೆ ಮುಂದಿನ ಜ್ಞಾನಕ್ಕಾಗಿ ಅಲ್ಪ ಸ್ವಲ್ಪ ಸೇರ್ಪಡೆಯಾಗಬಹುದು" ಅಥವಾ "ನಿಸರ್ಗ ಧರ್ಮಶಾಸ್ತ್ರದ ಅರ್ಥವು ಅತಿಶಯವಾಗಿ ಗಾಢವಾಗಿ ಮನದಟ್ಟಾಗಬಹುದು." ಶುದ್ಧ ಧರ್ಮಶಾಸ್ತ್ರ ಮತ್ತು ಶುದ್ಧ ಸ್ವಯಂಪ್ರಕಾಶದ ಧರ್ಮಶಾಸ್ತ್ರಗಳೆರಡೂ ಪರಸ್ಪರ ವಿರುದ್ಧವಾದ ನೆಲೆಗೆ ಬರಬಹುದೆಂಬ ಅಭಿಪ್ರಾಯವನ್ನು ಇಲ್ಲಿ ಒಪ್ಪಬೇಕಾಗಿಲ್ಲ.

ಧರ್ಮಶಾಸ್ತ್ರದ ಮೂರು ಸಿದ್ಧಾಂತಗಳನ್ನು ತೆಗೆದುಕೊಳ್ಳುವುದಾದರೆ, (೧) ದೇವರ ಅಸ್ತಿತ್ವ (೨) ಜಗತ್ತಿನ ಮೇಲೆ ದೈವಿಕ ಪ್ರಭುತ್ವ (೩) ಮಾನವ ಕೋಟಿಯ ಮೇಲೆ ದೇವರ ನೈತಿಕ ಪ್ರಭುತ್ವ. ಒಂದು ಆದರ್ಶ ದೈವಿಕ ಆಡಳಿತವನ್ನು ಮುಂದಿಡುವ ವ್ಯವಸ್ಥೆಯಾಗಿ ನಾನು ಧರ್ಮವನ್ನು ಅರ್ಥಮಾಡಿಕೊಂಡಿದ್ದೇನೆ. ಮನುಷ್ಯರು ಬದುಕಿರುವ ಸಾಮಾಜಿಕ ವ್ಯವಸ್ಥೆಯು ಒಂದು ನೈತಿಕ ಕಟ್ಟುಪಾಡಿನಲ್ಲಿರುವಂತೆ ನೋಡಿಕೊಳ್ಳುವ ಗುರಿ ಈ ಬಗೆಯ ಆಡಳಿತಕ್ಕಿರಬೇಕಾಗುತ್ತದೆ. ಹೀಗೆ ನಾನು ಧರ್ಮವನ್ನು ಅರ್ಥಮಾಡಿಕೊಂಡಿದ್ದೇನೆ ಮತ್ತು ಧರ್ಮ ಎಂಬ ಶಬ್ದವನ್ನು ಮುಂದಿನ ನನ್ನ ಚರ್ಚೆಯಲ್ಲಿ ಈ ಅರ್ಥದಲ್ಲಿ ಬಳಸುತ್ತೇನೆ.

ಧರ್ಮವು ಪ್ರತಿನಿಧಿಸುವ ಉದಾತ್ತ ವ್ಯವಸ್ಥೆಯನ್ನು ಎರಡನೆಯ ಆಯಾಮದಲ್ಲಿ ತಿಳಿದುಕೊಳ್ಳಬೇಕಾಗಿದೆ. ನಿರ್ದಿಷ್ಟ ಸಮಾಜದ ಒಂದು ಧರ್ಮದಲ್ಲಿ ಸ್ಥಿರವೂ ಶಾಶ್ವತವೂ ಮಿಗಿಲಾದುದೂ ಯಾವುದೆಂಬುದನ್ನು

---

೧. ನಿಸರ್ಗ ಧರ್ಮಶಾಸ್ತ್ರವು ಒಂದು ಪ್ರತ್ಯೇಕ ಅಧ್ಯಯನ ಶಾಖೆಯಾಗಿ ಹುಟ್ಟಲು ಪ್ಲೆಟೊ ಕಾರಣ – ನೋಡಿ 'ಟಾಸ್'.

೨. ಎ. ಈ. ಟೇಲರ್: *'ದಿ ಫೇತ್ ಆಫ್ ಎ ಟಂರಲಿಸ್ಟ್'.* ಪುಟ. ೧೯.

ನಿಷ್ಕರ್ಷಿಸುವುದು ಮತ್ತು ಅದರ ಸಾರಭೂತವಾದ ವೈಲಕ್ಷಣ್ಯಗಳನ್ನು ಸಾಧಾರಣವಾದುದರಿಂದ ಬೇರ್ಪಡಿಸುವುದು ತುಂಬಾ ಕಷ್ಟದ ಕೆಲಸ. ಇದಕ್ಕೆ ಕಾರಣವನ್ನೂ ಪ್ರೊ. ರಾಬರ್ಟ್‌ಸನ್ ಸ್ಮಿತ್‌ರವರು ತುಂಬಾ ಸ್ಪಷ್ಟವಾಗಿ ಗುರುತಿಸಿದ್ದಾರೆ.[೧] ಅವರು ಹೇಳುವಂತೆ:

> "ಧರ್ಮದ ಪರಂಪರಾಗತ ಪದ್ಧತಿಯು ಕ್ರಮೇಣ ಅನೇಕ ಶತಮಾನಗಳಲ್ಲಿ ಬೆಳೆದು ಬಂದಿದೆ. ಮನುಷ್ಯನ ಆಲೋಚನೆಯ ರೀತಿಗಳಲ್ಲಿ ಬೌದ್ಧಿಕ ಮತ್ತು ನೈತಿಕ ಬೆಳವಣಿಗೆಯ ವಿವಿಧ ಹಂತಗಳ ವೈಲಕ್ಷಣ್ಯಗಳಲ್ಲಿ ಇದು ಪ್ರತಿಫಲನಗೊಂಡಿದೆ. ಅನಾಗರಿಕ ಸಂಸ್ಕೃತಿಯ ಆದಿಮ ಸ್ಥಿತಿಯಿಂದ ಆರಂಭಿಸಿ ಕ್ಷುದ್ರ ದೇವತಾರಾಧನೆಯಲ್ಲಿ ಮುಂದುವರಿದು ಕ್ರಮವಾಗಿ ಪೂರ್ವಿಕರಿಂದ ಅನುವಂಶಿಕವಾಗಿ ಬೆಳೆದು ಬಂದಿರುವ ಸಂಕೀರ್ಣ ಬಗೆಯ ಆಚರಣೆಗಳು ಆರಾಧನೆಗಳೆಲ್ಲದರ ವಿಚಾರ ಸರಣಿಯನ್ನು ಮತ್ತು ದೇವರುಗಳ ಸ್ವರೂಪವನ್ನು ಯಾವ ತತ್ವವೂ ಖಚಿತವಾಗಿ ವಿವರಿಸಲು ಸಾಧ್ಯವಾಗುವುದಿಲ್ಲ. ಧಾರ್ಮಿಕ ಸಂಸ್ಥೆಗಳು ಗರ್ಭೀಕರಿಸಿ ಕೊಂಡಿರುವ ಮಾನವ ಕೋಟಿಯ ಧರ್ಮ ಸಂಬಂಧಿಯಾದ ವಿಚಾರಗಳ ಸ್ವರೂಪವು ಭೂಗರ್ಭ ಇತಿಹಾಸದ ದಾಖಲೆಗಳನ್ನು ಹೋಲುವಂತಿದ್ದು, ಭೂಮಿಯ ಮೇಲುಪದರದೊಳಗೆ ಪಕ್ಕಪಕ್ಕದಲ್ಲಿ ಅಥವಾ ಪದರು ಪದರುಗಳಲ್ಲಿ ಹುದುಗಿರುವ ಈ ದಾಖಲೆಗಳಂತೆ ಧರ್ಮದ ಹಳೆಯ ಮತ್ತು ಹೊಸ ಸಂಗತಿಗಳು ಮಾನವನ ವಿಚಾರಗಳಲ್ಲಿ ಸೇರಿ ಹೋಗಿವೆ."

ಇಂಡಿಯಾ ದೇಶಕ್ಕೂ ಈ ಮಾತು ಅನ್ವಯವಾಗುತ್ತದೆ. ನಮ್ಮ ದೇಶದ ಧರ್ಮದ ಬೆಳವಣಿಗೆಯನ್ನು ಕುರಿತು ಪ್ರೊ. ಮ್ಯಾಕ್ಸ್‌ಮುಲ್ಲರ್ ಹೇಳುತ್ತಾರೆ: "ಹಂತಹಂತವಾಗಿ ಮೇಲೇರುತ್ತಾ ಹೋಗಿರುವ ಒಂದು ಧರ್ಮವನ್ನು ನಾವು ಕಂಡಿದ್ದೇವೆ. ಸರಳವಾದ ಮಕ್ಕಳ ಸ್ತೋತ್ರ ಪಾಠಗಳಿಂದ ಗಹನವಾದ ಅನುಭಾವಿಕ ಅಮೂರ್ತಗಳವರೆಗೆ ಅದು ಬೆಳೆದಿದೆ. ವೇದಗಳ ಬಹುಪಾಲು ಸ್ತೋತ್ರ ಗೀತೆಗಳಲ್ಲಿ ಬಾಲ್ಯದ ಘಟ್ಟವನ್ನು ಗುರುತಿಸಬಹುದು. ಬ್ರಾಹ್ಮಣಗಳು ಮತ್ತು ಅಲ್ಲಿನ ಯಜ್ಞ ಯಾಗಾದಿಗಳ ನೀತಿಬದ್ಧ ಸಂಸ್ಕಾರ ವಿಧಿಗಳಲ್ಲಿ ಉದ್ಯೋಗನಿರತ ಗೃಹಸ್ಥನನ್ನು ಕಾಣುತ್ತೇವೆ. ವೈದಿಕ ಧರ್ಮದ ವೃದ್ಧಾಪ್ಯದ ಅನುಭವಿ ಸ್ಥಿತಿಯನ್ನು ಉಪನಿಷತ್ತುಗಳು ಪ್ರತಿನಿಧಿಸುತ್ತವೆ. ಭಾರತೀಯ ಮನಸ್ಸು ಬೆಳೆದಿರುವ ಚರಿತ್ರೆಯನ್ನು ನಾವು ಚೆನ್ನಾಗಿ ಅರ್ಥವಿಸುವುದಾದರೆ ಅಲ್ಲಿ ನಮಗೆ ಗೋಚರಿಸುವ ಅಂಶವಿದು. ಬ್ರಾಹ್ಮಣಗಳ ಬಲಿತ ಅವಸ್ಥೆಗೆ ತಲುಪಿದ ಕೂಡಲೆ ಭಾರತೀಯರು ವೇದಗಳ ಶುದ್ಧ ಬಾಲ ಸಹಜ ಸ್ತೋತ್ರ ಗೀತೆಗಳನ್ನು ಬಿಟ್ಟುಕೊಟ್ಟರು. ಯಜ್ಞಯಾಗಾದಿಗಳ ಹುಸಿತನವನ್ನೂ ಹಳೆಯ ದೇವತೆಗಳ ನಿಜ ಸ್ವರೂಪವನ್ನೂ ಅರಿತೊಡನೆಯೇ ಉಪನಿಷತ್ ಧರ್ಮದ ಅತೀವ ಪರವಶತೆಗೆ ಅವರು ಮೇಲೇರಬಹುದಿತ್ತು. ಆದರೆ ಅದು ಸಂಭವಿಸಲಿಲ್ಲ. ಭಾರತದಲ್ಲಿ ಒಮ್ಮೆ ಅಭಿವ್ಯಕ್ತಿ ಪಡೆದ ಎಲ್ಲ ಧಾರ್ಮಿಕ ವಿಚಾರಗಳನ್ನು ವಂಶಪಾರಂಪರ್ಯವಾಗಿ ಪಡೆಯುವ ಚರಾಸ್ತಿಯಂತೆ ಸಂರಕ್ಷಿಸಲಾಗಿದೆ. ಭಾರತೀಯ ಚರಿತ್ರೆಯ ಮೂರು ವೈಚಾರಿಕ ಘಟ್ಟಗಳಾದ ಬಾಲ್ಯ, ಯೌವ್ವನ ಮತ್ತು ವೃದ್ಧಾಪ್ಯದ ಅನುಭವಗಳನ್ನು ಪ್ರತಿಯೊಬ್ಬ ಭಾರತೀಯನ ವೈಯಕ್ತಿಕ ಜೀವನದಲ್ಲಿಯೂ ಪುನರಾವರ್ತನೆಗೊಂಡು ಶಾಶ್ವತವಾಗಿ ಉಳಿಯುವಂತೆ ಮಾಡಲಾಗಿರುವ ಧರ್ಮ ವಿಚಾರಗಳ ವಿವಿಧ ಘಟ್ಟಗಳನ್ನು ಮತ್ತು ಒಂದಕ್ಕೊಂದು ವಿರುದ್ಧ ದಿಕ್ಕಿನಲ್ಲಿರುವ ಸಿದ್ಧಾಂತಗಳನ್ನು ನಾವು ಏಕ ಕಾಲಕ್ಕೆ ಗ್ರಹಿಸಿ ಅರ್ಥೈಸಲು ಸಾಧ್ಯವಾಗಿರುವುದಕ್ಕೆ ಕಾರಣ ಅಲ್ಲಿದೆ." ಆದರೆ ವಿಧಿವಿಹಿತವಾದ ಧರ್ಮಗಳಲ್ಲಿ ಇದು

---

೧. *'ದಿ ರಿಲಿಜನ್ ಆಫ್ ದಿ ಸೆಮೈಟ್ಸ್'* (೧೯೨೭).

ಅಂತಹ ದೊಡ್ಡ ಪ್ರತಿಬಂಧಕವಾಗುವುದಿಲ್ಲ. ವಿಧಿವಿಹಿತ ಧರ್ಮಗಳ ಮೂಲ ಲಕ್ಷಣಗಳೆಂದರೆ ಅವು ಆದಿಮ ಧರ್ಮಗಳಂತೆ ರೂಪುಗೊಂಡಿಲ್ಲ. ಆದಿಮ ಧರ್ಮಗಳಲ್ಲಿ ಅಪ್ರಜ್ಞಾಶಕ್ತಿಗಳು ಮೊನಚಾಗಿ ಯುಗ ಯುಗಗಳಲ್ಲಿ ಪ್ರಭಾವ ಬೀರುತ್ತಾ ತಮ್ಮ ಮೂಲವನ್ನು ಅಪೌರುಷೇಯವಾದ ದೈವಿಕ ಶಕ್ತಿಯುಳ್ಳ ಮಹಾನ್ ಧಾರ್ಮಿಕ ಪುರುಷರ ಬೋಧನೆಗಳಲ್ಲಿ ಗುರುತಿಸಿಕೊಳ್ಳುತ್ತದೆ. ವಿಧಿವಿಹಿತ ಧರ್ಮಗಳಾದರೆ ಪ್ರಜ್ಞಾಪೂರ್ವಕವಾದ ಸೂತ್ರಾಚರಣೆಗಳನ್ನೊಳಗೊಂಡಿರುವುದರಿಂದ ಅವುಗಳನ್ನು ಗುರುತಿಸುವುದು ವ್ಯಾಖ್ಯಾನಿಸುವುದು ಸುಲಭ. ಯಹೂದಿ, ಕ್ರೈಸ್ತ ಮತ್ತು ಇಸ್ಲಾಂ ಧರ್ಮಗಳಂತೆ ಹಿಂದೂ ಧರ್ಮವೂ ಒಂದು ಮುಖ್ಯ ವಿಧಿವಿಹಿತ ಧರ್ಮವಾಗಿದೆ. ಅದು ಅಲಿಖಿತ ಸಂವಿಧಾನವೊಂದರಂತಿಲ್ಲ. ಹಿಂದೂ ವ್ಯವಸ್ಥೆಯಲ್ಲಿ ದೈವಿಕ ಪ್ರಭುತ್ವದ ಲಿಖಿತ ಸಂವಿಧಾನವನ್ನು ಕಾಪಾಡಿಕೊಂಡು ಬರಲಾಗಿದೆ. ಆಸಕ್ತಿಯಿರುವ ಯಾರು ಬೇಕಾದರೂ ಮನುಧರ್ಮ ಶಾಸ್ತ್ರವೆಂಬ ಪವಿತ್ರ ಗ್ರಂಥದಲ್ಲಿ ಇದನ್ನು ಸ್ಪಷ್ಟವಾಗಿ ಬಿಡಿಸಿಟ್ಟಿರುವುದನ್ನು ಕಾಣಬಹುದು. ಕ್ರೋಡೀಕರಿಸಿದ ದೈವಿಕ ನ್ಯಾಯ ಸೂತ್ರಗಳನ್ನು ಇಲ್ಲಿ ಬಿತ್ತರಿಸಲಾಗಿದೆ. ಹಿಂದೂ ಧರ್ಮದ ಸಾಮಾಜಿಕ ಸ್ವರೂಪ, ಆಚರಣಾ ವಿಧಾನ, ಮುಂತಾದವನ್ನು ಸವಿವರವಾಗಿ ದಾಖಲು ಮಾಡಲಾಗಿದೆ. ಹಿಂದೂ ಧರ್ಮದ ತತ್ವಶಾಸ್ತ್ರವೆಂದು ಕರೆಯಬಹುದಾದ ಈ ಗ್ರಂಥವು ಹಿಂದೂಗಳಿಗೆ ಬೈಬಲ್ಲಿನಂತಿದೆ.

ಧಾರ್ಮಿಕ ತತ್ವಶಾಸ್ತ್ರದ ಮೂರನೆಯ ಆಯಾಮವನ್ನು ಈಗ ಪರಿಶೀಲಿಸಬಹುದು. ಒಂದು ಧರ್ಮವು ಪ್ರತಿನಿಧಿಸುವ ಆದರ್ಶ ವ್ಯವಸ್ಥೆ ಮತ್ತು ದೈವಿಕ ಪ್ರಭುತ್ವದ ಮೌಲ್ಯವನ್ನು ನಿರ್ಣಯಿಸಲು ಯಾವ ಬಗೆಯ ಮಾನದಂಡಗಳನ್ನು[೧] ಅನ್ವಯಿಸಬೇಕೆಂಬುದನ್ನು ಇಲ್ಲಿ ವಿಚಾರಿಸಬೇಕಾಗುತ್ತದೆ. ಧರ್ಮವನ್ನಿಲ್ಲಿ ವಿಚಾರಣೆಗೆ ಗುರಿಪಡಿಸಬೇಕಾಗುತ್ತದೆ. ಯಾವ ಮಾನದಂಡಗಳ ಆಧಾರದ ಮೇಲೆ ಇದನ್ನು ನಿರ್ಣಯಿಸಬೇಕು? ಮಾದರಿಗಳ ಲಕ್ಷಣ ನಿರೂಪಣೆಗೆ ಇದು ದಾರಿ ಮಾಡಿಕೊಡುತ್ತದೆ. ಮೂರನೆಯ ಆಯಾಮಗಳನ್ನು ಗೊತ್ತುಪಡಿಸಿ, ಲಕ್ಷಣ ನಿರೂಪಿಸುವುದು ಉಳಿದೆರಡಕ್ಕಿಂತ ಕಷ್ಟಕರವಾದ ಕೆಲಸವಾಗಿದೆ. ಧಾರ್ಮಿಕ ತತ್ವಶಾಸ್ತ್ರದ ಬಗೆಗೆ ಸಾಕಷ್ಟು ಬರೆವಣಿಗೆಗಳು ಬಂದಿವೆಯಾದರು ಈ ಸಮಸ್ಯೆಯನ್ನು ಬಿಡಿಸಲು ದುರದೃಷ್ಟವಶಾತ್ ಅಂತಹ ಪ್ರಯತ್ನಗಳು ನಡೆದಿಲ್ಲವೆಂದೇ ಹೇಳಬಹುದಾಗಿದೆ. ತೃಪ್ತಿಕರವಾಗಿ ಈ ಸಮಸ್ಯೆಯನ್ನು ತಾತ್ವಿಕ ಸ್ವರೂಪವನ್ನು ಅರ್ಥಮಾಡಿಕೊಳ್ಳಲು ಆಯಾ ಚಳುವಳಿ ಅಥವಾ ಸಂಸ್ಥೆಯು ಎದುರಿಸಿದ ಸಂಘರ್ಷಗಳು ಮತ್ತು ಕ್ರಾಂತಿಗಳನ್ನು ಅಧ್ಯಯನ ಮಾಡಬೇಕೆಂಬುದು ನನ್ನ ಸ್ಪಷ್ಟ ಅಭಿಪ್ರಾಯವಾಗಿದೆ. ಕ್ರಾಂತಿಯು ತತ್ವಜ್ಞಾನದ ಜನನಿ; ಅಥವಾ ತತ್ವಜ್ಞಾನದ ಪ್ರಕಾಶವನ್ನು ಹರಡುವ ಜ್ಯೋತಿ. ಧರ್ಮವೂ ಇದಕ್ಕೆ ಹೊರತಾಗಿಲ್ಲ. ಆದುದರಿಂದ ಒಂದು ಧರ್ಮದ ತಾತ್ವಿಕತೆಯನ್ನು ಪರೀಕ್ಷಿಸಿ ನಿರ್ಣಯಿಸಲು ಅದು ಹಾಯ್ದು ಬಂದ ಕ್ರಾಂತಿಗಳನ್ನು ಪರಿಗಣಿಸಲೇಬೇಕೆಂಬುದು ನನ್ನ ಪ್ರಕಾರ ಬಹು ಮುಖ್ಯವಾದ ಸಂಗತಿಯಾಗಿದೆ. ಇದೇ ವಿಧಾನವನ್ನು ಮುಂದೆ ನಾನು ಅನುಸರಿಸುತ್ತೇನೆ.

ಚರಿತ್ರೆಯ ಅಭ್ಯಾಸಿಗಳಿಗೆ ಒಂದು ಧಾರ್ಮಿಕ ಕ್ರಾಂತಿಯ ಪರಿಚಯವಿದೆ. ಧರ್ಮದ ವ್ಯಾಪ್ತಿ ಮತ್ತು ಅದರ ಅಧಿಕಾರ ಶಕ್ತಿಗೆ ಸಂಬಂಧಿಸಿದಂತೆ ಈ ಕ್ರಾಂತಿ ನಡೆಯಿತು. ಒಂದಾನೊಂದು ಕಾಲದಲ್ಲಿ ಮನುಷ್ಯನ

---

೧. ಧಾರ್ಮಿಕ ತತ್ವಶಾಸ್ತ್ರದ ಮೊದಲನೆಯ ಎರಡು ಆಯಾಮಗಳ ಅಧ್ಯಯನವೇ ಸಾಕೆಂದು ಈ ಶಾಸ್ತ್ರದ ಕೆಲವು ವಿದ್ಯಾರ್ಥಿಗಳು ತಿಳಿದಂತಿದೆ. ಧಾರ್ಮಿಕ ತತ್ವಶಾಸ್ತ್ರದ ಮೂರನೆಯ ಆಯಾಮದ ಅಧ್ಯಯನವೂ ಅವಶ್ಯವೆಂಬುದನ್ನು ಅವರು ಪರಿಗಣಿಸಿದಂತಿಲ್ಲ. ಈ ಅಭಿಪ್ರಾಯದ ಪುಷ್ಟಿಗಾಗಿ ಧರ್ಮಶಾಸ್ತ್ರ ಕುರಿತು ಡಿ.ಎಸ್.ಆ್ಯಡಂಸ್‌ರವರ ಲೇಖನ; ಹೇಸ್ಟಿಂಗ್ಸ್ 'ಎನ್‌ಸೈಕ್ಲೊಪೀಡಿಯಾ ಆಫ್ ರಿಲಿಜನ್ ಅಂಡ್ ಎಥಿಕ್ಸ್'. ಸಂ.XII, ಪು. ೩೯೩ ನೋಡಿ.

ಜ್ಞಾನದ ಸರ್ವವನ್ನೂ ಧರ್ಮವು ತನ್ನ ವ್ಯಾಪ್ತಿಗೆ ಸೇರಿಸಿಕೊಂಡಿತ್ತು. ತನ್ನ ಉಪದೇಶಗಳು ಅಂತಿಮ ವಿಚಾರಗಳೆಂದೂ, ಅಲ್ಲಿ ತಪ್ಪಿಗೆ ಅವಕಾಶವೇ ಇಲ್ಲವೆಂದೂ ತಿಳಿದಿತ್ತು. ಖಗೋಳ ವಿಜ್ಞಾನವನ್ನು ತನ್ನ ವ್ಯಾಪ್ತಿಗೆ ಸೇರಿಸಿಕೊಂಡು, ತನ್ನದೇ ಆದ ವಿಶ್ವ ಸಿದ್ಧಾಂತವೊಂದನ್ನು ಧರ್ಮವು ಪ್ರತಿಪಾದಿಸಿತು. ಅದರ ಸುತ್ತ ಸೂರ್ಯ–ಚಂದ್ರ–ನಕ್ಷತ್ರಾದಿ ಗ್ರಹಗಳು ತಮ್ಮ ತಮ್ಮ ಕಕ್ಷೆಯಲ್ಲಿ ಸುತ್ತುತ್ತಿವೆಯೆಂದು ಹೇಳಲಾಯಿತು. ಜೀವನಶಾಸ್ತ್ರ ಮತ್ತು ಭೂಗರ್ಭಶಾಸ್ತ್ರಗಳನ್ನೂ ತನ್ನ ವ್ಯಾಪ್ತಿಗೆ ಸೇರಿಸಿಕೊಂಡು ಒಂದು ಸಿದ್ಧಾಂತವನ್ನು ಮುಂದಿಟ್ಟು ಭೂಮಿ ಮತ್ತು ಸಕಲ ಜೀವರಾಶಿಗಳನ್ನೂ ಒಂದೇ ಬಾರಿಗೆ ಸೃಷ್ಟಿಸಿ ಕಾಲ ಕಾಲಕ್ಕೆ ಸಂರಕ್ಷಿಸಿಕೊಂಡು ಬರಲಾಯಿತೆಂದು ಹೇಳಿದರು. ಅತಿ ಮಾನುಷ ಜೀವಿಗಳಿಗೂ, ಪ್ರಾಣಿ–ಸಸ್ಯ ಸಮಸ್ತವೆಲ್ಲದರ ಅಸ್ತಿತ್ವಕ್ಕೂ ಇದೇ ವಿವರಣೆಯನ್ನು ಅನ್ವಯಿಸಿದರು. ವೈದ್ಯಶಾಸ್ತ್ರವನ್ನು ತನ್ನ ವ್ಯಾಪ್ತಿಗೆ ಸೇರಿಸಿಕೊಂಡು ರೋಗಗಳಿಗೆ ಕಾರಣ ಮನುಷ್ಯನ ಪಾಪವೆಂದೂ, ಅದಕ್ಕೆ ಶಿಕ್ಷೆಯಾಗಿ ರೋಗ ಬರುತ್ತದೆ ಅಥವಾ ಭೂತಗಳ ಉಪದ್ರವವೆಂದು ಭಾವಿಸಿದರು. ರೋಗವನ್ನು ಗುಣಪಡಿಸಲು ಸಾಧುಸಂತರು ಆಗಮಿಸಿ ಅಥವಾ ಅವರ ಪವಿತ್ರ ಸಂಕೇತಗಳನ್ನು ಕಳಿಸಿ ಪ್ರಯತ್ನಿಸಬೇಕು. ಪ್ರಾರ್ಥನೆ, ಪೂಜೆ, ಪುಣ್ಯ ಕ್ಷೇತ್ರಗಳಿಗೆ ಯಾತ್ರೆ ಹೋಗಬೇಕು. ಭೂಗತ ಉಪದ್ರವವಾಗಿದ್ದರೆ ಮಾಟದ ಆಚರಣೆಗಳ ಮೂಲಕ ಭೂಗತಗಳಿಗೆ ಅಸಹ್ಯ ಹುಟ್ಟಿಸಬೇಕು. ಇದನ್ನು ರೋಗಗಳ ವಿಚಾರದಲ್ಲಿಯೂ ಅನುಸರಿಸಬಹುದು. ದೇಹಶಾಸ್ತ್ರ ಮತ್ತು ಮನೋವಿಜ್ಞಾನವನ್ನು ಧರ್ಮವು ತನ್ನ ವ್ಯಾಪ್ತಿಗೆ ಸೇರಿಸಿಕೊಂಡು, ದೇಹ ಮತ್ತು ಆತ್ಮಗಳನ್ನು ಎರಡು ಪ್ರತ್ಯೇಕ ಉಪಾಧಿಗಳೆಂದು ತಿಳಿಯಲಾಯಿತು.

ಧರ್ಮವು ಕಟ್ಟಿದ್ದ ಈ ಬೃಹತ್ ಸಾಮ್ರಾಜ್ಯವನ್ನು ವಿಜ್ಞಾನಿಗಳು ಸ್ವಲ್ಪ ಸ್ವಲ್ಪವಾಗಿ ನಾಶಮಾಡಿದರು. ಕೊಪರ್‌ನಿಕಸ್‌ನ ಕ್ರಾಂತಿಯಿಂದಾಗಿ ಖಗೋಳ ವಿಜ್ಞಾನವು ಧರ್ಮದ ಕಟ್ಟುಪಾಡಿನಿಂದ ಬಿಡುಗಡೆಯಾಯಿತು. ಡಾರ್ವಿನ್ನನ ಕ್ರಾಂತಿಯಿಂದಾಗಿ ಜೀವಶಾಸ್ತ್ರ ಮತ್ತು ಭೂಗರ್ಭಶಾಸ್ತ್ರಗಳು ಬಿಡುಗಡೆಯಾದವು. ವೈದ್ಯಶಾಸ್ತ್ರದ ಮಟ್ಟಿಗೆ ಧರ್ಮದ ಹಿಡಿತವಿನ್ನೂ ಸಂಪೂರ್ಣವಾಗಿ ಸಡಿಲವಾಗಿಲ್ಲ. ವೈದ್ಯಕೀಯ ವಿಚಾರಗಳಲ್ಲಿ ಧರ್ಮವು ಇಂದಿಗೂ ತಲೆ ಹಾಕುತ್ತಿದೆ. ಜನನ ನಿಯಂತ್ರಣ, ಗರ್ಭಪಾತ, ರೋಗಗ್ರಸ್ತ ಭ್ರೂಣಗಳ ಹತ್ಯೆ ಮುಂತಾದ ವಿಚಾರಗಳಿಗೆ ಸಂಬಂಧಿಸಿದಂತೆ ಧರ್ಮದ ನಿಯಮಗಳು ಅಡ್ಡಿಪಡಿಸುತ್ತಿವೆ. ಮನಶ್ಶಾಸ್ತ್ರವೂ ಅದರ ಸಂಕೋಲೆಯಿಂದ ಪೂರ್ತಿ ಮುಕ್ತವಾಗಿಲ್ಲ. ಆದರೂ ಡಾರ್ವಿನ್ನನ ವಾದದ ಹೊಡೆತ ಎಷ್ಟು ಪ್ರಬಲವಾಗಿತ್ತೆಂದರೆ, ಅಲ್ಲಿಂದ ಮುಂದೆ ತತ್ತರಿಸಿಹೋದ ಧರ್ಮದ ಸಾಮ್ರಾಜ್ಯವು ಮತ್ತೆ ಚೇತರಿಸಿಕೊಳ್ಳಲಿಲ್ಲ.

ಧರ್ಮದ ಸಾಮ್ರಾಜ್ಯವು ಹಾಗೆ ಅಲ್ಲೋಲಕಲ್ಲೋಲವಾದ ಘಟನೆ ನಿಜಕ್ಕೂ ಒಂದು ಮಹಾಕ್ರಾಂತಿ ಎಂದೇ ಹೇಳಬಹುದು. ಸತತವಾಗಿ ನಾಲ್ಕುನೂರು ವರ್ಷಗಳ ಕಾಲ ವಿಜ್ಞಾನವು ಧರ್ಮದ ವಿರುದ್ಧ ಸಮರ ಹೂಡಿ ಹೋರಾಡಿದ್ದರ ಫಲವಾದ ಈ ಕ್ರಾಂತಿಯ ಉತ್ತೇಜನ ಉಲ್ಲೇಖನೀಯವಾದುದು. ಈ ಕ್ರಾಂತಿಯು ಬೆಳಗಿದ ಪ್ರಖರತೆಯನ್ನು ಯಾರೂ ಮರೆಯುವಂತಿಲ್ಲ. ಧರ್ಮದ ಕ್ಷೇತ್ರದಲ್ಲಾದ ಈ ಕ್ರಾಂತಿ ಒಂದು ವರವಾಗಿ ಪರಿಣಮಿಸಿತು. ಮುಕ್ತವಾದ ಚಿಂತನೆಯನ್ನು ಅದು ಸ್ಥಿರಗೊಳಿಸಿತು. ಇದರಿಂದ ಸಮಾಜಕ್ಕೆ "ತನ್ನ ನಿಯಂತ್ರಣದ ಸೂತ್ರಗಳನ್ನು ತಾನೆ ಹಿಡಿಯುವಂತಾಯಿತು. ಒಂದು ಕಾಲದಲ್ಲಿ ಮೂಢನಂಬಿಕೆಗಳಿಂದ ತುಂಬಿದ್ದ ಪರಿಸರವನ್ನು ತನ್ನದನ್ನಾಗಿ ಪರಿವರ್ತಿಸಿತು. ಹಿಂದಿನ ಭಯಗಳನ್ನು ಧೈರ್ಯವಾಗಿ ಎದುರಿಸಿ, ಗೂಢವಾದ ಆಚರಣೆಗಳಿಂದ ತುಂಬಿದ್ದ ಸಾಮ್ರಾಜ್ಯದಿಂದಲೇ ಒಂದು ಹೊಸ ಪರಿಸರವನ್ನು ಸೃಷ್ಟಿಸಲು ಸಾಧ್ಯವಾಯಿತು. ಮುಕ್ತವಾದ ಚಿಂತನೆ ಮತ್ತು ಅಡೆತಡೆಗಳಿಲ್ಲದ ಕಾರ್ಯೋನ್ಮುಖತೆಗೆ ಅವಕಾಶವಾಯಿತು." ಸಂಸ್ಕೃತಿ ಮತ್ತು ನಾಗರಿಕತೆಗಳ ನಡುವಿನ ವ್ಯತ್ಯಾಸವನ್ನು ಸ್ಪಷ್ಟಪಡಿಸಿ ನಾಗರಿಕತೆಯನ್ನು ಧರ್ಮ ನಿರಪೇಕ್ಷಗೊಳಿಸುವ ಪ್ರಕ್ರಿಯೆಗಳನ್ನು ವಿಜ್ಞಾನಿಗಳು ಸ್ವಾಗತಿಸಿದರು. ಧಾರ್ಮಿಕ ಪುರುಷರು ಮತ್ತು ಸ್ತ್ರೀಯರು

ಸಹ ಇಲ್ಲಿಯವರೆಗಿನ ಧರ್ಮಬೋಧನೆಯಲ್ಲಿ ಬಹುಪಾಲು ಅನಗತ್ಯವೆಂದರು. ಧಾರ್ಮಿಕ ಜೀವನಕ್ಕೂ ಅದು ಆತಂಕಕಾರಿಯೆನಿಸುವಂತೆ ಹಬ್ಬಿದ್ದ ವ್ಯರ್ಥ ಬೆಳವಣಿಗೆಯನ್ನು ಕತ್ತರಿಸಿ ಹದಗೊಳಿಸುವ ಪ್ರಕ್ರಿಯೆಯನ್ನು ಸ್ವಾಗತಿಸಿದರು.

ಧಾರ್ಮಿಕ ತತ್ವಜ್ಞಾನದ ಮೌಲ್ಯವನ್ನು ಗೊತ್ತುಪಡಿಸಲು ತಕ್ಕ ಪ್ರಮಾಣಗಳನ್ನು ಸಿದ್ಧಪಡಿಸಬೇಕಾದರೆ ಧರ್ಮವು ಹಾಯ್ದುಹೋದ ಮತ್ತೊಂದು ಕ್ರಾಂತಿಯತ್ತ ನಾವು ದೃಷ್ಟಿಹರಿಸಬೇಕಾಗುತ್ತದೆ. ಈ ಕ್ರಾಂತಿಯು ದೇವರು ಮತ್ತು ಮನುಷ್ಯ, ಸಮಾಜ ಮತ್ತು ಮನುಷ್ಯ ಹಾಗೂ ಮನುಷ್ಯ–ಮನುಷ್ಯ ಸಂಬಂಧಗಳನ್ನು ನಿರ್ಣಯಿಸುವ ಅಂತರ್ಗತ ಧರ್ಮವನ್ನು ಮುಟ್ಟುತ್ತದೆ. ಈ ಕ್ರಾಂತಿಯ ಮಹತ್ವವೇನೆಂಬುದನ್ನು ತಿಳಿಯ ಬೇಕಾದರೆ ಬರ್ಬರ ಸಮಾಜದಿಂದ ನಾಗರಿಕ ಸಮಾಜವನ್ನು ಬೇರ್ಪಡಿಸುವ ವ್ಯತ್ಯಾಸಗಳನ್ನು ಅರಿಯಬೇಕಾಗುತ್ತದೆ. ಆಶ್ಚರ್ಯದ ವಿಚಾರವೆಂದರೆ ಇಲ್ಲಿಯವರೆಗೂ ಈ ಕ್ರಾಂತಿಯ ಬಗೆಗೆ ಒಂದು ವ್ಯವಸ್ಥಿತ ಅಭ್ಯಾಸ ನಡೆದಿಲ್ಲವೆನ್ನುವುದು. ಆದರೂ ಈ ಕ್ರಾಂತಿಯು ಅತ್ಯಂತ ಪ್ರಮುಖವಾದುದು. ಧರ್ಮವನ್ನು ಬರ್ಬರ ಸಮಾಜ ಮತ್ತು ನಾಗರಿಕ ಸಮಾಜವು ಸ್ವೀಕರಿಸುವ ರೀತಿಯಲ್ಲಿ ಒಂದು ಸಂಪೂರ್ಣ ಪರಿವರ್ತನೆಯೇ ಇದರಿಂದ ಸಾಧ್ಯವಾಯಿತು.

ನಾಗರಿಕ ಸಮಾಜ ಮತ್ತು ಬರ್ಬರ ಸಮಾಜಗಳ ನಡುವಿನ ವ್ಯತ್ಯಾಸವನ್ನೇ ಮೊದಲು ನೋಡಬಹುದಾಗಿದೆ.

ಅನಾಗರಿಕ ಸಮಾಜದ ಧರ್ಮದಲ್ಲಿ ಎದ್ದು ಕಾಣುವ ಎರಡು ವಿಚಾರಗಳಿವೆ. ಮೊದಲನೆಯದು ಆಚರಣೆ ಮತ್ತು ಆರಾಧನೆಗಳ ವಿಧ್ಯುಕ್ತ ಕ್ರಿಯೆಗಳು, ಮಾಟ ಅಥವಾ ನಿಷೇಧಗಳ ಬಳಕೆ, ಮೂಲದೈವ ಹಾಗೂ ಪವಿತ್ರ ಗದ್ದುಗೆಗಳ ಪೂಜೆ. ಎರಡನೆಯ ವಿಚಾರವೆಂದರೆ ಆಚರಣೆ, ಆರಾಧನೆ, ಮಾಟ, ನಿಷೇಧ, ಮೂಲದೈವ ಹಾಗೂ ಗದ್ದುಗೆಗಳ ಆರಾಧನೆಯೆಲ್ಲ ವಿಶಿಷ್ಟ ಸಂದರ್ಭಗಳೊಂದಿಗೆ ಸಂಬಂಧಿಸಿರುವುದು. ಈ ಸನ್ನಿವೇಶಗಳೆಲ್ಲ ಮಾನವ ಜೀವನದ ಮುಖ್ಯ ಸಂಧಿಕಾಲಗಳಾಗಿವೆ. ಜನನ, ಅದರಲ್ಲೂ ಪ್ರಥಮ ಶಿಶುವಿನ ಜನನ, ಯೌವ್ವನಕ್ಕೆ ಕಾಲಿಡುವುದು, ಮೈನೆರೆಯುವುದು, ಮದುವೆ, ರೋಗಪೀಡಿತರಾಗುವುದು, ಸಾವು ಮತ್ತು ಯುದ್ಧಗಳಂತಹ ಘಟನೆಗಳೇ ವಿಶೇಷ ಸನ್ನಿವೇಶಗಳಾಗಿದ್ದು ಆರಾಧನೆ, ಆಚರಣೆ, ಮಾಟ ಮತ್ತು ಮೂಲ ದೈವಾರಾಧನೆಗೆ ಪ್ರೇರಣೆ ಕೊಡುತ್ತವೆ.

ಧರ್ಮದ ಉಗಮವನ್ನು ಕುರಿತು ಅಭ್ಯಾಸಿಗಳು ಉಗಮ ಮತ್ತು ಲಕ್ಷಣಗಳನ್ನು ಮಾಟ, ನಿಷೇಧ, ಮೂಲ ದೈವಾರಾಧನೆಗೆ ಸಂಬಂಧಿಸಿದ ಆರಾಧನೆ ಆಚರಣೆಗಳ ಮೂಲಕ ವಿವರಿಸಲು ಪ್ರಯತ್ನಿಸುತ್ತಾ ನೇರವಾಗಿ ಸಂಬಂಧಿಸಿದ ವಿಚಾರಗಳನ್ನು ಪರಿಗಣಿಸುವುದೇ ಇಲ್ಲ. ಪರಿಣಾಮವಾಗಿ ಧರ್ಮದ ಹುಟ್ಟನ್ನು ಮಾಟ–ಮಂತ್ರಗಳಲ್ಲಿ ಹುಡುಕುವ ಸಿದ್ಧಾಂತಗಳು ಪ್ರಚಾರದಲ್ಲಿವೆ. ಇದಕ್ಕಿಂತ ದೊಡ್ಡ ತಪ್ಪು ಇನ್ನೊಂದಿಲ್ಲ. ಅನಾಗರಿಕ ಸಮಾಜಗಳಲ್ಲಿ ಮಾಟ ಮಂತ್ರ ನಿಷೇಧಗಳ ಬಗೆಗೆ ನಂಬಿಕೆ ಇದೆ; ಮೂಲ ದೈವಾರಾಧನೆಯನ್ನು ನಡೆಸುತ್ತಾರೆಂಬುದು ನಿಜವಾದರೂ, ಅದು ಧರ್ಮದ ಉಗಮಕ್ಕೆ ಕಾರಣವಾಗುತ್ತದೆಯೆಂದೂ ಧರ್ಮದ ಲಕ್ಷಣವನ್ನು ಅವುಗಳಿಂದ ಹೇಳಬಹುದೆಂದೂ ಭಾವಿಸುವುದು ಸರಿಯಲ್ಲ. ಇದರಿಂದಾಗಿ ಗೌಣ ಸಂಗತಿಯನ್ನೇ ಪ್ರಧಾನವೆಂದು ತಿಳಿದಂತಾಗುತ್ತದೆ. ಅನಾಗರಿಕ ಸಮಾಜದ ಮುಖ್ಯ ಸಂಗತಿಗಳೆಂದರೆ ಮನುಷ್ಯನ ಅಸ್ತಿತ್ವಕ್ಕೆ ಸಂಬಂಧಿಸಿದ ಪ್ರಾಥಮಿಕ ವಿಚಾರಗಳಾದ ಬದುಕು ಸಾವು, ಹುಟ್ಟು, ಮದುವೆ, ಇತ್ಯಾದಿಗಳು. ಮಾಟ, ಮಂತ್ರ, ನಿಷೇಧ ಮತ್ತು ಮೂಲ ದೈವಾರಾಧನೆಗಳು ಪ್ರಾಸಂಗಿಕವಾದವು. ಅವು ಕೇವಲ ಸಾಧನಗಳೇ ಹೊರತು ಗುರಿಯಲ್ಲ. ಬದುಕು ಮತ್ತು ಬದುಕನ್ನು ಕಾಪಾಡಿಕೊಂಡು ಬರುವುದೇ ಗುರಿ. ಮಾಟ, ಮಂತ್ರ

ನಿಷೇಧ ಇತ್ಯಾದಿಗಳನ್ನು ಅನಾಗರಿಕ ಸಮಾಜಗಳು ಅನುಸರಿಸುವುದು ಬದುಕನ್ನು ಕಾಪಾಡಲು ಮತ್ತು ದುಷ್ಟ ಶಕ್ತಿಗಳಿಂದ ಕೆಡುಕಾಗದಂತೆ ಜೀವನವನ್ನು ರಕ್ಷಿಸುವ ಸಲುವಾಗಿ. ಈ ರೀತಿ ಅರ್ಥ ಮಾಡಿಕೊಂಡಾಗ ಅನಾಗರಿಕ ಸಮಾಜಗಳ ಧರ್ಮದ ಕಾಳಜಿ ಬದುಕಿನ ಬಗೆಗೆ ಮತ್ತು ಬದುಕನ್ನು ಕಾಪಾಡುವುದರ ಬಗೆಗೆ ಎಂಬುದು ಸ್ಪಷ್ಟವಾಗುತ್ತದೆ. ಬದುಕಿಗೆ ಸಂಬಂಧಿಸಿದ ಈ ಪ್ರಕ್ರಿಯೆಗಳೇ ಅನಾಗರಿಕ ಸಮಾಜದ ಧರ್ಮದ ಮೂಲಾಧಾರವಾಗಿವೆ.. ಬದುಕು ಮತ್ತು ಅದನ್ನು ಕಾಪಾಡಿಕೊಂಡು ಬರುವ ಬಗೆಗೆ ಅವರಿಗಿರುವ ಕಾಳಜಿ ಅಗಾಧವಾದುದು. ಆದುದರಿಂದಲೇ ಅದು ಅವರ ಧರ್ಮದ ಬುನಾದಿ. ಬದುಕಿಗೆ ಸಂಬಂಧಿಸಿದ ವಿಚಾರಗಳೆಲ್ಲ ಅವರ ಧರ್ಮದ ಚೌಕಟ್ಟಿನಲ್ಲಿ ಸೇರುವುದರಿಂದ ಬದುಕೇ ಅವರ ಧರ್ಮದ ಕೇಂದ್ರವೆನ್ನಬಹುದು. ಆದುದರಿಂದ ಅನಾಗರಿಕ ಸಮಾಜದ ಆರಾಧನೆ ಆಚರಣೆಗಳು ಜನನ, ಮರಣ, ಯೌವ್ವನ, ಮದುವೆ ಮತ್ತು ಯುದ್ಧಗಳಿಗೆ ಮಾತ್ರವಲ್ಲದೆ ಆಹಾರಕ್ಕೂ ಸಂಬಂಧಿಸಿವೆ. ಗೋವಳ ಸಂಸ್ಕೃತಿಯ ಜನಗಳಲ್ಲಿ ಹಿಂಡುಗಳು ಮತ್ತು ಮಂದೆಗಳೂ ಪವಿತ್ರವಾದ ವಿಚಾರಗಳು. ಕೃಷಿ ಪ್ರಧಾನ ಸಮುದಾಯಗಳಲ್ಲಿ ಬಿತ್ತನೆ ಮತ್ತು ಸುಗ್ಗಿಯ ಕಾಲದಲ್ಲಿ ನಿರ್ದಿಷ್ಟ ಆರಾಧನೆ ಆಚರಣೆಗಳಿದ್ದು ಪೈರಿನ ಸಮೃದ್ಧಿ ಮತ್ತು ರಕ್ಷಣೆಯನ್ನು ಕುರಿತ ಕಾತರ ಅಲ್ಲಿರುತ್ತದೆ. ಅದರಂತೆ ವೈಚಿತ್ರ್ಯಗಳಿಗೆ ತಕ್ಕ ಆರಾಧನೆ ಆಚರಣೆಗಳಿವೆ. ಸುಗ್ಗಿ ಮತ್ತು ಕ್ಷಾಮ ಸಂದರ್ಭದಲ್ಲಿ ಆರಾಧನೆಗಳು ಏಕಿರಬೇಕು? ಮಾಟ, ಮಂತ್ರ, ನಿಷೇಧ ಮತ್ತು ಮೂಲ ದೈವಗಳು ಅನಾಗರಿಕರಲ್ಲಿ ಪ್ರಾಮುಖ್ಯತೆಯನ್ನು ಏಕೆ ಪಡೆದಿವೆ.? ಅವುಗಳೆಲ್ಲ ಬದುಕನ್ನು ಕಾಪಾಡಲು ಅಡ್ಡಿಯಾಗಿವೆ ಎಂಬುದೊಂದೇ ಅದಕ್ಕೆ ಸಿಗುವ ಉತ್ತರವಾಗಿದೆ. ಜೀವನದ ಮುಂದುವರಿಕೆ ಮತ್ತು ಕಾಪಾಡುವಿಕೆಯೇ ಅಲ್ಲಿನ ಮುಖ್ಯ ಉದ್ದೇಶ. ಬದುಕು ಮತ್ತು ಅದನ್ನು ಕಾಪಾಡಿಕೊಳ್ಳುವುದೇ ಅನಾಗರಿಕ ಧರ್ಮದ ಕೇಂದ್ರ ಮತ್ತು ತಿರುಳಾಗಿದೆಯೆನ್ನಬಹುದು. ಪ್ರೊ. ಕ್ರಾಲೆಯವರು ಹೇಳಿರುವಂತೆ ಅನಾಗರಿಕನ ಧರ್ಮದ ಆರಂಭ ಮತ್ತು ಕೊನೆ ಬದುಕನ್ನು ಉಳಿಸಿಕೊಳ್ಳುವುದು ಮತ್ತು ಸ್ಥಿರಗೊಳಿಸುವುದೇ ಆಗಿದೆ.

ಅನಾಗರಿಕ ಧರ್ಮದ ಅಸ್ತಿತ್ವವೇ ಬದುಕು ಮತ್ತು ಅದರ ರಕ್ಷಣೆ. ಈ ವಿಚಾರವು ಎಲ್ಲ ಧರ್ಮಗಳ ಬಗೆಗೂ ಸತ್ಯವೇ ಆಗಿದೆ, ತೀರ ಸರಳ ಕಾರಣದಿಂದಲೇ ಅದು ಎಲ್ಲ ಧರ್ಮಗಳ ತಿರುಳೂ ಆಗಿದೆ. ಧರ್ಮಶಾಸ್ತ್ರಗಳ ನಾಜೂಕಿನ ವ್ಯಾಖ್ಯಾನದಿಂದಾಗಿ ಸಮಕಾಲೀನ ಸಮಾಜದಲ್ಲಿ ಅದನ್ನು ಮರೆತುಬಿಡಲಾಗಿದೆ ಅಥವಾ ಮುಚ್ಚಿಹೋಗಿದೆ. ಆದರೆ ಬದುಕು ಮತ್ತು ಅದರ ರಕ್ಷಣೆಯೇ ಪ್ರಶ್ನಾತೀತವಾದುದು. ಪ್ರೊ. ಕಾಲ್ರೆಯವರು ಇದನ್ನು ತುಂಬಾ ಚೆನ್ನಾಗಿ ವಿವರಿಸಿದ್ದಾರೆ. ಸಮಕಾಲೀನ ಸಮಾಜದ ಮನುಷ್ಯನ ಧಾರ್ಮಿಕ ಜೀವನವನ್ನು ಕುರಿತಂತೆ ಅವರು ಹೀಗೆ ಹೇಳಿದ್ದಾರೆ:

> "ಒಬ್ಬ ಮನುಷ್ಯನ ಧರ್ಮದಲ್ಲಿ ಅವನ ವೃತ್ತಿ ಅಥವಾ ಸಾಮಾಜಿಕ ಕ್ಷಣಗಳಲ್ಲಿ, ಅವನ ವೈಜ್ಞಾನಿಕ ಅಥವಾ ಕಲಾತ್ಮಕ ಗಳಿಗೆಗಳಲ್ಲಿ ಉಳಿದ ಪ್ರಾಪಂಚಿಕ ವ್ಯವಹಾರಗಳಿಗೆ ಬಿಡುವು ಕೊಡಲಾಗಿದೆ. ವಾಸ್ತವವಾಗಿ ಅವನ ಬದುಕು ಇಬ್ಬಗೆಯಾದುದು. ಆದರೆ ಧರ್ಮಕ್ಕೆ ಸಂಬಂಧಿಸಿದ ಅರೆಪಾಲು ಪ್ರಾಥಮಿಕವಾದುದು. ಜೀವನ ಮತ್ತು ಮರಣಗಳಿಗೆ ಸಂಬಂಧಿಸಿದ ಗಂಭೀರವಾದ ಪ್ರಶ್ನೆಯ ವಿಚಾರವೇ ಸ್ಥೂಲವಾಗಿ ಅವನ ಸಬ್ಬತ್ ದಿನದ ತಿರುಳು. ಇದಕ್ಕೆ ಸೇರಿದಂತೆ ಪ್ರಾರ್ಥನೆಗಳು, ಭೋಜನದ ವೇಳೆಯಲ್ಲಿ ವಂದನೆ ಸಲ್ಲಿಸುವುದು, ಜನನ ಮತ್ತು ಮರಣವನ್ನು, ಮದುವೆ ಮತ್ತು ಬದುಕಿನ ಮುಂದುವರಿಕೆಯನ್ನು ಧರ್ಮದ ವಿಧಿಗನುಸಾರವಾಗಿ ನಡೆಸುವುದು ಇದೆ. ಸುಖ ಸಂತೋಷ ಮತ್ತು ದೈನಂದಿನ ವ್ಯಾಪಾರಗಳನ್ನು ನಿವೇದಿಸುವುದಾದರೆ, ಅದು ಅಲಂಕಾರಿಕವಾಗಿ ಮತ್ತು ಧಾರ್ಮಿಕ ಭಾವನೆಗಳು ಉಕ್ಕಿ ಹರಿದಾಗ ಮಾತ್ರವೆನ್ನಬಹುದು."

ಸಮಕಾಲೀನ ಸಮಾಜದ ಮಾನವನ ಧಾರ್ಮಿಕ ಕಾಳಜಿಗಳ ಬಗೆಗೆ ವ್ಯಕ್ತಪಡಿಸಿರುವ ಮೇಲಿನ ವಿವರಣೆಯನ್ನು ಅನಾಗರಿಕ ಸಮಾಜದೊಂದಿಗೆ ಹೋಲಿಸುವುದಾದರೆ, ಮೂಲಭೂತವಾಗಿ ಧರ್ಮವು ಬದಲಾಗಿಲ್ಲವೆಂದು ಗೊತ್ತಾಗುತ್ತದೆ. ಸೈದ್ಧಾಂತಿಕವಾಗಿ ಮತ್ತು ರೂಢಿಯಲ್ಲಿರುವ ನಡಾವಳಿಗಳಲ್ಲಿ – ಅದು ಸಮಕಾಲೀನವಾಗಿರಲಿ ಅನಾಗರಿಕವಾಗಿರಲಿ ಧರ್ಮವು ಒಂದೇ ರೀತಿಯಲ್ಲಿದೆ ಎಂಬುದನ್ನು ಯಾರೂ ನಿರಾಕರಿಸಲಾರರು.

ಆದುದರಿಂದ ಒಂದು ವಿಚಾರದಲ್ಲಿ ನಾಗರಿಕ ಮತ್ತು ಅನಾಗರಿಕ ಸಮಾಜಗಳೆರಡಕ್ಕೂ ಒಮ್ಮತವಿದೆ. ಜನಾಂಗದ ಸ್ಥಿರತೆ ಮತ್ತು ವ್ಯಕ್ತಿಗಳ ಹಿತವನ್ನು ಕಾಪಾಡುವುದಕ್ಕೆ ಸಂಬಂಧಿಸಿದ ಜೀವನ ಪ್ರಕ್ರಿಯೆಗಳೇ ಎರಡೂ ಸಮಾಜಗಳ ಧರ್ಮಕ್ಕೆ ಕೇಂದ್ರ ಆಸಕ್ತಿಯಾಗಿದೆ. ಈ ವಿಚಾರಗಳಲ್ಲಿ ಎರಡಕ್ಕೂ ಅಂತಹ ವ್ಯತ್ಯಾಸವೇನೂ ಇಲ್ಲ. ಆದರೆ ಬೇರೆ ಇನ್ನೆರಡು ಮುಖ್ಯ ಅಂಶಗಳಲ್ಲಿ ಅವುಗಳ ನಡುವೆ ವ್ಯತ್ಯಾಸವಿದೆ.

ಮೊದಲನೆಯದಾಗಿ ಅನಾಗರಿಕ ಸಮಾಜದ ಧರ್ಮದಲ್ಲಿ ದೇವರ ಕಲ್ಪನೆಯ ಬಗೆಗೆ ಯಾವ ಕುರುಹುಗಳೂ ಕಾಣುವುದಿಲ್ಲ. ಎರಡನೆಯದಾಗಿ ಅನಾಗರಿಕ ಸಮಾಜದ ಧರ್ಮಕ್ಕೂ ನೈತಿಕತೆಗೂ ಯಾವುದೇ ಸಂಬಂಧವಿಲ್ಲ. ಅನಾಗರಿಕ ಸಮಾಜದಲ್ಲಿ ದೇವರಿಲ್ಲದ ಧರ್ಮವಿದೆ; ನೀತಿಯು ಧರ್ಮದಿಂದ ಸ್ವತಂತ್ರವಾಗಿದೆ.

ದೇವರ ಕಲ್ಪನೆಯು ಧರ್ಮದಲ್ಲಿ ಯಾವಾಗ? ಏಕೆ? ಒಂದುಗೂಡಿತೆಂದು ಹೇಳುವುದಕ್ಕಾಗುವುದಿಲ್ಲ. ಸಮಾಜದಲ್ಲಿದ್ದ ಮಹಾಪುರುಷರ ಆರಾಧನೆಯಿಂದ ದೇವರ ಕಲ್ಪನೆ ಹುಟ್ಟಿರಬಹುದು. ಈ ಬಗೆಯ ಅತಿಮಾನುಷ ಪುರುಷನ ಆರಾಧನೆಯಿಂದ ಏಕದೇವೋಪಾಸನೆಯ ನಂಬಿಕೆ ಹುಟ್ಟಿರಬಹುದು. ಭೂಮಿಯ ಮೇಲೆ ಮೊತ್ತಮೊದಲು ಜೀವನವನ್ನು ಸೃಷ್ಟಿಸಿದವರಾರು? ಎಂಬುದನ್ನು ಕುರಿತ ಅನುಭಾವಿಕ ಊಹೆಗಳ ಪರಿಣಾಮವಾಗಿ ದೇವರ ಪರಿಕಲ್ಪನೆಗೆ ದಾರಿಯಾಗಿರಬಹುದು. ದೇವರ ಬಗೆಗೆ ಸಹಜ ನಂಬಿಕೆ ಹುಟ್ಟಿ ಅದರೊಂದಿಗೆ ಜಗತ್ತಿನ ಸೃಷ್ಟಿಕರ್ತ ದೇವರು ಎಂಬ ನಂಬಿಕೆ ಪ್ರಚಾರಕ್ಕೆ ಬಂದಿರಬಹುದು. ಅದೇನಿದ್ದರೂ ದೇವರ ಕಲ್ಪನೆ ಧರ್ಮಕ್ಕೆ ಪೂರಕವಾಗಿಯೇ ಇದ್ದಿತೆಂದು ಹೇಳಲು ಬರುವಂತಿಲ್ಲ.[೧] ಧರ್ಮ ಮತ್ತು ದೇವರ ಕಲ್ಪನೆಗಳು ಹೇಗೆ ಒಂದುಗೂಡಿ ಬೆಸೆದುಕೊಂಡುವೆಂಬುದನ್ನು ಹೇಳುವುದು ಕಷ್ಟ. ಧರ್ಮ ನೀತಿಯ ಸಂಬಂಧಗಳ ಬಗೆಗೆ ಮಾತ್ರ ಸುಲಭವಾಗಿ ಇಷ್ಟು ವಿಚಾರವನ್ನು ಹೇಳಬಹುದಾಗಿದೆ. ಧರ್ಮ ಮತ್ತು ದೇವರ ಸಂಬಂಧ ಅಖಂಡವಾಗಿಲ್ಲವಾದರೂ ಧರ್ಮ ಮತ್ತು ನೀತಿಯ ಸಂಬಂಧ ಅಖಂಡವಾದುದು. ಧರ್ಮ ಮತ್ತು ನೀತಿಗಳೆರಡೂ ಮಾನವನ ಅಸ್ತಿತ್ವದ ಮೂಲಾಂಶಗಳಾದ – ಬದುಕು, ಸಾವು, ಹುಟ್ಟು ಮತ್ತು ಮದುವೆಯೊಂದಿಗೆ ಅವಿಭಾಜ್ಯ ಸಂಬಂಧ ಪಡೆದಿವೆ. ಧರ್ಮವು ಬದುಕಿನ ಪ್ರಕ್ರಿಯೆಗಳನ್ನು ಪರಿಶುದ್ಧಗೊಳಿಸಿದರೆ, ನೀತಿ ನಿಯಮಗಳು ಅದರ ರಕ್ಷಣೆಗೆ ಕಾನೂನನ್ನು ಒದಗಿಸುತ್ತವೆ. ಜೀವನದ ಮೂಲ ಸಂಗತಿಗಳನ್ನು ಧರ್ಮವು ಪರಿಶುದ್ಧಗೊಳಿಸಿದರೆ, ನೀತಿ ನಿಯಮಗಳು ಅದರ ರಕ್ಷಣೆಗೆ ಕಾನೂನನ್ನು ಒದಗಿಸುತ್ತವೆ. ಜೀವನದ ಮೂಲಸಂಗತಿಗಳನ್ನು ಧರ್ಮವು ಪರಿಶುದ್ಧಗೊಳಿಸುವುದರಿಂದ ಅವುಗಳ ರಕ್ಷಣೆಗಾಗಿ ಸಮಾಜವು ವಿಧಿಸಿರುವ ಕಟ್ಟುಕಟ್ಟಳೆಗಳಿಗೂ ಪಾವಿತ್ರ್ಯ ಬರುತ್ತದೆ. ಈ ನೆಲೆಯಿಂದ ನೋಡಿದಾಗ ಧರ್ಮ ಮತ್ತು ನೀತಿಯ ನಡುವೆ ಪವಿತ್ರ ಬಂಧವು ಏಕೆ ಹುಟ್ಟಿತೆಂಬುದು ಗೊತ್ತಾಗುತ್ತದೆ. ದೇವರು ಮತ್ತು ಧರ್ಮದ ನಡುವಿನ ಬಂಧನಕ್ಕಿಂತ ಇದು ಹೆಚ್ಚು ಸಹಜವೂ ಅನ್ಯೋನ್ಯವೂ ಆಗಿದೆ. ಆದರೆ ಧರ್ಮ ಮತ್ತು ನೀತಿಗಳೆರಡೂ ಸ್ಪಷ್ಟವಾಗಿ ಯಾವಾಗ ಏಕೀಭವಿಸಿದವೆಂಬುದನ್ನು ಹೇಳುವುದು ಸುಲಭವಲ್ಲ.

---

೧. ದೇವರ ಕಲ್ಪನೆ ಎರಡೂ ನಿಟ್ಟಿನಿಂದ ವಿಕಸಿತವಾಗಿದೆ ಎಂಬುದನ್ನು ಹಿಂದೂ ಧರ್ಮ ಚೆನ್ನಾಗಿ ತೋರಿಸುತ್ತದೆ. ಇಂದ್ರ ದೇವರೆಂಬ ಕಲ್ಪನೆ ಮತ್ತು ಬ್ರಹ್ಮ ದೇವರೆಂಬ ಕಲ್ಪನೆಗಳನ್ನೂ ಹೋಲಿಸಿ ನೋಡಿ.

ಅದೇನಿದ್ದರೂ ನಾಗರಿಕ ಸಮಾಜದ ಧರ್ಮ ಮತ್ತು ಅನಾಗರಿಕ ಸಮಾಜದ ಧರ್ಮಗಳ ನಡುವೆ ಎರಡು ಮುಖ್ಯ ವೈಶಿಷ್ಟ್ಯಗಳು ಕಂಡುಬರುತ್ತಿವೆಯೆಂಬ ವಿಚಾರವಂತೂ ಸ್ಥಿರವಾಗಿಯೇ ಉಳಿಯುತ್ತದೆ. ನಾಗರಿಕ ಸಮಾಜದಲ್ಲಿ ಧರ್ಮದ ರಚನೆಯಲ್ಲಿಯೇ ದೇವರೂ ಬರುತ್ತಾನೆ: ಅಲ್ಲಿ ನೀತಿಯು ಧರ್ಮದ ಮೂಲಕ ಸಂಸ್ಕರಿಸಲ್ಪಡುತ್ತದೆ.

ನಾನು ಮಾತನಾಡುತ್ತಿರುವ ಧಾರ್ಮಿಕ ಕ್ರಾಂತಿಯ ಮೊದಲ ಘಟ್ಟವಿದು. ಮೇಲಿನ ಎರಡು ವೈಶಿಷ್ಟ್ಯಗಳು ತಲೆದೋರುವುದರೊಂದಿಗೆ ಈ ಧಾರ್ಮಿಕ ಕ್ರಾಂತಿಯು ಕೊನೆಗೊಂಡಿತೆಂದು ಯಾರೂ ತಿಳಿಯಬೇಕಿಲ್ಲ. ಈ ಎರಡೂ ಕಲ್ಪನೆಗಳು ನಾಗರಿಕ ಸಮಾಜದ ಧರ್ಮ – ಸಂವಿಧಾನದಲ್ಲಿ ಒಂದುಗೂಡಿದ ಬಳಿಕವೂ ಅನೇಕ ಬದಲಾವಣೆಗಳಿಗೆ ಅವಕಾಶವಿರುತ್ತದೆ.

ಈ ಬದಲಾವಣೆಗಳು, ಅವುಗಳ ಅರ್ಥ ಮತ್ತು ನೈತಿಕ ಮಹತ್ವವನ್ನೇ ಕ್ರಾಂತಿಕಾರಕವಾಗಿ ಮಾರ್ಪಡಿಸಿವೆ. ಧಾರ್ಮಿಕ ಕ್ರಾಂತಿಯ ಎರಡನೆಯ ಘಟ್ಟ ತೀವ್ರಗಾಮಿ ಪರಿವರ್ತನೆಗೆ ಹೆಸರಾಗಿದೆ. ಈ ಹೋಲಿಕೆ ಎಷ್ಟು ಅಗಾಧವಾಗಿತ್ತೆಂದರೆ ನಾಗರಿಕ ಸಮಾಜವು ಪುರಾತನ ಸಮಾಜ ಮತ್ತು ಆಧುನಿಕ ಸಮಾಜವೆಂದು ಎರಡು ಹೋಳಾಯಿತು. ಆದುದರಿಂದ ನಾಗರಿಕ ಸಮಾಜದ ಧರ್ಮವನ್ನು ಕುರಿತು ಚರ್ಚಿಸುವಾಗ ಪುರಾತನ ಸಮಾಜದ ಧರ್ಮಕ್ಕೆ ವಿರುದ್ಧವಾದ ಆಧುನಿಕ ಸಮಾಜದ ಧರ್ಮವನ್ನು ವಿವರಿಸಬೇಕಾಗುತ್ತದೆ.

ಪುರಾತನ ಸಮಾಜವನ್ನು ಆಧುನಿಕ ಸಮಾಜದಿಂದ ಬೇರ್ಪಡಿಸಿದ ಧಾರ್ಮಿಕ ಕ್ರಾಂತಿಯು ಅದಕ್ಕಿಂತಲೂ ಹಿಂದೆ ನಾಗರಿಕ ಮತ್ತು ಅನಾಗರಿಕ ಸಮಾಜವನ್ನು ಇಬ್ಭಾಗ ಮಾಡಿದ ಕ್ರಾಂತಿಗಿಂತ ಮಹತ್ತರವಾದುದು. ದೇವರು, ಸಮಾಜ ಮತ್ತು ಮನುಷ್ಯನ ಮಧ್ಯೆ ಸಂಬಂಧಗಳ ಪರಿಕಲ್ಪನೆಯ ಸ್ತರದಲ್ಲಿಯೇ ಆದ ಬದಲಾವಣೆಗಳ ಹಿನ್ನೆಲೆಯಲ್ಲಿ ಈ ಕ್ರಾಂತಿಯ ವಿಸ್ತಾರದ ಅರಿವು ನಮಗೆ ಸ್ಪಷ್ಟವಾಗಿ ಗೋಚರಿಸುತ್ತದೆ.

ಸಮಾಜದ ರಚನೆಗೆ ಸಂಬಂಧಿಸಿದ ವ್ಯತ್ಯಾಸವನ್ನೇ ಅಲ್ಲಿ ಮೊದಲು ಪರಿಗಣಿಸಬೇಕಾಗುತ್ತದೆ. ಪ್ರತಿಯೊಬ್ಬ ಮನುಷ್ಯನಿಗೂ ಹುಟ್ಟಿನಲ್ಲಿ ಮತ್ತು ಬೆಳವಣಿಗೆಯಲ್ಲಿ ಯಾವುದೇ ಆಯ್ಕೆಗೆ ಅವಕಾಶವಿರುವುದಿಲ್ಲ. ಕೇವಲ ಹುಟ್ಟು ಮತ್ತು ಬೆಳೆದ ಪರಿಸರದ ಹಿನ್ನೆಲೆಯಲ್ಲಿಯೇ ಆತ ಒಂದೊಂದು ನಿರ್ದಿಷ್ಟ ಪ್ರಾಕೃತಿಕ ಸಮಾಜದ ಸದಸ್ಯನಾಗಿಬಿಡುತ್ತಾನೆ; ನಿರ್ದಿಷ್ಟ ಕುಟುಂಬ ಮತ್ತು ನಿರ್ದಿಷ್ಟವಾದ ಒಂದು ರಾಜ್ಯಕ್ಕೆ ಸೇರಿರುತ್ತಾನೆ. ಈ ಸದಸ್ಯನಿಗೆ ಕೆಲವು ಕರ್ತವ್ಯಗಳು ಕರಾರುಗಳನ್ನು ನೆರವೇರಿಸಲೇಬೇಕಾಗುತ್ತದೆ. ಅವುಗಳನ್ನು ಮೀರಿದರೆ ತಪ್ಪುದಂಡಗಳು ನಿಷೇಧಗಳೂ ಇರುವಂತೆ, ವಿಧಿಬದ್ಧವಾಗಿದ್ದರೆ ಕೆಲವು ಅನುಕೂಲತೆಗಳೂ, ಸಾಮಾಜಿಕ ಹಕ್ಕುಗಳೂ ಲಭ್ಯವಾಗುತ್ತವೆ. ಈ ನಿಟ್ಟಿನಲ್ಲಿ ಪುರಾತನ ಹಾಗೂ ಆಧುನಿಕ ಜಗತ್ತುಗಳೆರಡೂ ಒಂದೇ ರೀತಿಯಲ್ಲಿವೆ. ಪ್ರೊ. ಸ್ಮಿತ್‌ರವರ ಮಾತಿನಲ್ಲಿಯೇ ಹೇಳುವುದಾದರೆ[೧]:

> "ಪ್ರಾಚೀನ ಜಗತ್ತಿನ ಬುಡಕಟ್ಟಿನ ಅಥವಾ ರಾಷ್ಟ್ರೀಯ ಸಮಾಜಗಳು ಆಧುನಿಕ ಅರ್ಥದಲ್ಲಿ ಸ್ಪಷ್ಟವಾಗಿ ಪ್ರಾಕೃತಿಕವಾಗಿರುವುದಿಲ್ಲವೆಂಬುದು ಮುಖ್ಯವಾಗಿ ಗಮನಿಸಬೇಕಾದ ವ್ಯತ್ಯಾಸವಾಗಿದೆ. ದೇವರುಗಳು ಮನುಷ್ಯರೊಡನೆ ಸಮಸಮವಾಗಿ ಪುರಾತನ ಸಮಾಜದಲ್ಲಿ ಭಾಗಿಗಳಾಗಿರುತ್ತಾರೆ. ಒಬ್ಬ ವ್ಯಕ್ತಿಯು ಹುಟ್ಟುವ ಪರಿಸರವೆಂದರೆ ಕೇವಲ ನೆಂಟರಿಷ್ಟರ ಮತ್ತು ಸಹ ಪ್ರಜೆಗಳ ಗುಂಪಾಗಿರದೆ ಅದರಲ್ಲಿ ಕೆಲವು ದೇವತೆಗಳು ಮತ್ತು ದೇವಾನುದೇವತೆಗಳು ಹಾಗೂ ರಾಷ್ಟ್ರದ ಕುಟುಂಬಗಳೂ ಸೇರುತ್ತವೆ. ಪ್ರಾಚೀನ ಮನುಷ್ಯರ ನಂಬಿಕೆಗಳ ಪ್ರಕಾರ

೧. ಸ್ಮಿತ್, ಅದೇ ಕೃತಿ.

ದೇವ–ದೇವತೆಗಳೂ ಮನುಷ್ಯ ಸಮಾಜದ ಅವಿಚ್ಛಿನ್ನ ಭಾಗಗಳಾಗಿದ್ದು ಸಾಮಾಜಿಕ ಪರಿಸರದಲ್ಲಿ ಬೆರೆತು ಹೋಗಿದ್ದಾರೆ. ಪುರಾತನ ಕಾಲದ ದೇವ–ದೇವತೆಗಳು ಮತ್ತು ಅವರ ಆರಾಧಕರ ಸಂಬಂಧ ಅಭಿವ್ಯಕ್ತಗೊಂಡಿರುವುದು ಮಾನವೀಯ ನೆಲೆಯಲ್ಲಿ; ಅಲಂಕಾರಿಕ ಅರ್ಥಗಳಿಗೆ ಶರಣಾಗದೆ ಸಹಜವಾದ ಸರಳ ಭಾಷೆಯಲ್ಲಿ ಅವುಗಳನ್ನು ವಾಚ್ಯವಾಗಿ ಹೇಳಲಾಗಿದೆ. ಒಬ್ಬ ದೇವರು ಆರಾಧಕರ ತಂದೆಯೆಂದರೆ ಅದರ ಅರ್ಥ ನೇರವಾಗಿ ಆತನ ವಂಶಕ್ಕೆ ಸೇರಿದವರು ಎಂದಾಗುತ್ತದೆ. ಅವರಿಬ್ಬರೂ ಪ್ರಾಕೃತಿಕ ಸಮಾಜವೊಂದಕ್ಕೆ ಸೇರಿದ್ದು ಅವರ ಕೌಟುಂಬಿಕ ಸಂಬಂಧ ಪರಸ್ಪರ ಪೂರಕವಾಗಿರುತ್ತದೆ ಅಥವಾ ದೇವರನ್ನು ಒಬ್ಬ ರಾಜನೆಂದೂ ಅವನ ಆರಾಧಕರು ಅವನ ಸೇವಕರೆಂದೂ ಕರೆದರೆ ರಾಜ್ಯದ ಸಂಪೂರ್ಣ ಮಾರ್ಗದರ್ಶನ ದೇವರಿಗೆ ಸೇರಿರುತ್ತದೆ. ಅದರಂತೆ ರಾಜ್ಯ ವ್ಯವಸ್ಥೆಗೆ ಸಂಬಂಧಿಸಿದ ಮಹತ್ವದ ಯಾವುದೇ ವಿಚಾರಗಳನ್ನು ಅವನ ಅಪ್ಪಣೆ ಮತ್ತು ಮಾರ್ಗದರ್ಶನವಿಲ್ಲದೆ ನಡೆಸದಂತಿರಲು ಕಟ್ಟುಪಾಡುಗಳಿರುತ್ತವೆ ಮತ್ತು ರಾಜನೊಬ್ಬನಿಗೆ ಸಲ್ಲಬೇಕಾದ ಸೂಕ್ತ ಮರ್ಯಾದೆ ಮತ್ತು ಗೌರವಗಳು ದೇವರಿಗೆ ಸಲ್ಲುತ್ತವೆ. ಹೀಗೆ ಒಬ್ಬ ಮನುಷ್ಯನು ಹುಟ್ಟುತ್ತಲೇ ಕೆಲವು ಸಹ–ಪ್ರಜೆಗಳೊಂದಿಗೆ ಸ್ಥಿರ ಸಂಬಂಧ ಪಡೆಯುವಂತೆಯೇ ಕೆಲವು ದೇವರುಗಳೊಂದಿಗೂ ಪಡೆಯುತ್ತಾನೆ. ದೇವರುಗಳೊಡನೆ ಇರುವ ಸಂಬಂಧಕ್ಕನುಸಾರವಾಗಿ ಅವನ ಧರ್ಮವೂ ನಿಯಂತ್ರಣಕ್ಕೊಳಪಡುತ್ತದೆ. ಸಮಾಜವೊಂದರ ಸದಸ್ಯನಾಗಿ ಅವನಿಗಿರುವ ಸ್ಥಾನದ ಸಾಮಾನ್ಯ ನಿಯಾಮಾನುಸಾರವಾಗಿಯೇ ಇದು ನಿರ್ಧಾರವಾಗುತ್ತದೆ. ದೈನಂದಿನ ಬದುಕಿಗೂ ಧಾರ್ಮಿಕ ವಲಯಕ್ಕೂ ಇಲ್ಲಿ ಯಾವುದೇ ವ್ಯತ್ಯಾಸವಿರುವುದಿಲ್ಲ. ಪ್ರತಿಯೊಂದು ಸಾಮಾಜಿಕ ಕ್ರಿಯೆಯೂ ದೇವರಿಗೆ ಸಂಬಂಧಿಸಿರುತ್ತದೆ. ಇದರಿಂದ ಸಮಾಜದ ಅಂಗಗಳು ಕೇವಲ ಮನುಷ್ಯರಿಂದ ಕೂಡಿರದೆ ದೇವರು ಮತ್ತು ಮನುಷ್ಯರಿಬ್ಬರಿಗೂ ಸೇರಿರುತ್ತವೆ.''

ಹೀಗೆ ಪ್ರಾಚೀನ ಸಮಾಜದಲ್ಲಿ ಮನುಷ್ಯರು ಮತ್ತು ದೇವರುಗಳು ಸಾಮಾಜಿಕ, ರಾಜಕೀಯ ಮತ್ತು ಧಾರ್ಮಿಕವಾಗಿ ಅಖಂಡವಾಗಿ ಒಟ್ಟುಗೂಡಿರುತ್ತಾರೆ. ದೇವರು ಮತ್ತು ಅವರ ಆರಾಧಕರ ಬಾಂಧವ್ಯದ ಮೇಲೆ ಧರ್ಮವನ್ನು ಸ್ಥಾಪಿಸಲಾಯಿತು. ಆಧುನಿಕ ಸಮಾಜದ ರಚನೆಯಲ್ಲಿ ಧರ್ಮವನ್ನು ಕೈಬಿಡಲಾಗಿದೆ. ಕೇವಲ ಮನುಷ್ಯರನ್ನು ಮಾತ್ರ ಅದು ಒಳಗೊಳ್ಳುತ್ತದೆ. ದೇವರು ಮತ್ತು ಸಮಾಜದ ಸಂಬಂಧವನ್ನು ಕುರಿತಂತೆ ಪ್ರಾಚೀನ ಮತ್ತು ಆಧುನಿಕ ಸಮಾಜಗಳ ನಡುವೆ ಇರುವ ವ್ಯತ್ಯಾಸಕ್ಕೆ ಸಂಬಂಧಿಸಿದ ಎರಡನೆಯ ಅಂಶವೊಂದಿದೆ. ಪುರಾತನ ಪ್ರಪಂಚದಲ್ಲಿ ವಿವಿಧ ಮತಗಳು, ''ಅನೇಕ ದೇವತೆಗಳ ಅಸ್ತಿತ್ವದಲ್ಲಿ ನಂಬಿಕೆಯನ್ನಿರಿಸಿಕೊಂಡಿದ್ದವು. ವೈರಿಗಳ ದೇವರು ಮತ್ತು ತಮ್ಮ ದೇವತೆಗಳೆರಡನ್ನೂ ನಿಜವೆಂದು ಒಪ್ಪಿದ್ದರು. ಅಪರಿಚಿತ ದೇವರುಗಳನ್ನು ಅವರು ಆರಾಧಿಸುತ್ತಿರಲಿಲ್ಲ. ಅವರಿಂದ ಯಾವುದೇ ಫಲಗಳನ್ನು ನಿರೀಕ್ಷಿಸುತ್ತಿರಲಿಲ್ಲವಾಗಿ ಅವರಿಗೆ ಅರ್ಪಿಸುವ ನೈವೇದ್ಯಗಳು ಮತ್ತು ಕೊಡುಗೆಗಳನ್ನು ವ್ಯರ್ಥವೆಂದು ತಿಳಿಯಲಾಗುತ್ತಿತ್ತು. ಒಂದೊಂದು ಗುಂಪಿಗೂ ತಮ್ಮದೇ ಆದ ಒಬ್ಬ ದೇವರು ಅಥವಾ ಒಬ್ಬ ದೇವರು ಮತ್ತು ಒಬ್ಬ ದೇವಿಯಿರುತ್ತಿದ್ದು, ಉಳಿದ ದೇವರೊಂದಿಗೆ ಅವರಿಗೆ ಯಾವುದೇ ಸಂಬಂಧಗಳಿರುತ್ತಿರಲಿಲ್ಲ'' (ಸ್ಮಿತ್, ಅದೇ). ಪುರಾತನ ಸಮಾಜದ ದೇವರಿಗೆ ಪ್ರತ್ಯೇಕವಾದ ಅಸ್ತಿತ್ವವಿತ್ತು. ದೇವರು ಒಂದೇ ಒಂದು ಮತದ ಸ್ವಾಮ್ಯ ಮತ್ತು ಬದ್ಧತೆಗೆ ಒಳಪಟ್ಟಿತ್ತು. ಇದಕ್ಕೆ ಆಧಾರವನ್ನು ನಾವು ಕಾಣುವುದು 'ಆರಾಧಕರ ಯುದ್ಧ ಮತ್ತು ಒಳಜಗಳಗಳಲ್ಲಿ ಅವರವರ ದೇವರುಗಳು ಪಾಲುಗೊಳ್ಳುವುದರಲ್ಲಿ.' ಒಂದು ದೇವರ

ವೈರಿಗಳು ಮತ್ತು ಅವನ ಭಕ್ತನ ವೈರಿಗಳು ಒಂದೇ ಆಗಿರುತ್ತಿದ್ದರು. ಬೈಬಲ್ಲಿನ ಹಳೆಯ ಒಡಂಬಡಿಕೆಯಲ್ಲಿ ಜಿಹೋವಾನ ವೈರಿಗಳೆಂದರೆ ಇಸ್ರೆಲ್‌ನ ವೈರಿಗಳಲ್ಲದೆ ಬೇರೆ ಯಾರೂ ಅಲ್ಲ. ಯುದ್ಧಗಳಲ್ಲಿ ಒಬ್ಬೊಬ್ಬ ದೇವರೂ ತಮ್ಮ ತಮ್ಮ ಜನಗಳಿಗಾಗಿ ಕಾದಾಡುತ್ತಿದ್ದರು. ದೈವಕ್ಕೆ ಸಹಾಯಕನಾಗಿದ್ದವನಿಗೆ ಯಶಸ್ಸು ಸಿಗುತ್ತಿತ್ತು. ಮೋಬಕ್ಕೆ ಕೆಮೊಶ್ ಜಯ ತಂದುಕೊಟ್ಟರೆ, ಅಸಿರಿಯಾಕ್ಕೆ ಅಶಿರ ಜಯ ತಂದುಕೊಟ್ಟಿದೆ. ಕೆಲವೇ ದೈವಿಕ ಸಂಕೇತಗಳು ಅಥವಾ ದೇವರ ಮೂರ್ತಿಗಳು ನಾಯಕನೊಂದಿಗೆ ಯುದ್ಧ ಭೂಮಿಗೆ ತೆರಳುತ್ತಿದ್ದವು. ಇಸ್ರೆಲ್‌ನ ಯುದ್ಧ ಶಿಬಿರಕ್ಕೆ ಯಹೂದ್ಯರ ಧರ್ಮಶಾಸ್ತ್ರದ ಪೆಟ್ಟಿಗೆಯನ್ನು ತಂದಾಗ ಪ್ಯಾಲಸ್ತೀನಿನವರು ಹೀಗೆ ಹೇಳಿದರಂತೆ: "ದೇವರುಗಳು ಯುದ್ಧ ಶಿಬಿರಕ್ಕೆ ದಯಾಮಾಡಿಸಿದ್ದಾರೆ. ಅವರ ನಡವಳಿಕೆಗಳಿಂದಲೇ ನಮಗೆ ವಿಮೋಚನೆ ಸಿಗುತ್ತದೆ." ಮಿಥ್ಯಾ ದೈವಸ್ಥಾನಗಳನ್ನು ಡೇವಿಡ್ ಸೋಲಿಸಿದಾಗ ಅವನಿಗೆ ಸಿಕ್ಕಿದ ಕೊಳ್ಳೆಯ ಒಂದು ಭಾಗ ಯುದ್ಧ ಭೂಮಿಗೆ ತಂದಿದ್ದ ದೈವ ವಿಗ್ರಹಗಳು. ಮೆಸಿಡೋನಿಯಾದ ಫಿಲಿಪ್‌ನೊಂದಿಗೆ ಕಾರ್ತೇಜಿನವರು ಒಪ್ಪಂದ ಮಾಡಿಕೊಂಡಾಗ "ಯುದ್ಧದಲ್ಲಿ ಭಾಗವಹಿಸಿದ ದೇವತೆಗಳ" ಬಗೆಗೆ ಉಲ್ಲೇಖವಿದೆ. ದಳಪತಿಯ ಶಿಬಿರಕ್ಕೆ ಹೊಂದಿಕೊಂಡಂತೆಯೇ ಒಂದು ಪವಿತ್ರ ಬಿಡಾರದೊಳಗಡೆಯಿದ್ದ ದೇವತೆಗಳು ಮತ್ತು ಅಲ್ಲಿ ಜಯದ ಬಳಿಕ ನಡೆಯುತ್ತಿದ್ದ ಯುದ್ಧ ಕೈದಿಗಳ ನಿತ್ಯ ಬಲಿಗಳ ಬಗೆಗೆ ನಿಸ್ಸಂದೇಹವಾಗಿ ಹೇಳಿದ್ದಾರೆ. ಒಬ್ಬ ಅರೇಬಿಕ್ ಕವಿ ಹೇಳುತ್ತಾನೆ: "ಮೊರಾದ್‌ಗೆ ವಿರುದ್ಧವಾಗಿ ನಮ್ಮೊಂದಿಗೆ ಯಗೂತ್ ಹೋಗಿದ್ದ. ಅದರರ್ಥ ಯಗೂತ್ ದೇವರ ವಿಗ್ರಹವನ್ನು ಯುದ್ಧ ಭೂಮಿಗೆ ಕೊಂಡೊಯ್ದಿದ್ದನೆಂದಾಗುತ್ತದೆ. ಈ ಅಂಶ ದೇವರೊಡನೆ ಸಮಾಜದ ಸಂಬಂಧವನ್ನು ಗಾಢವಾಗಿ ಬೆಸೆಯಿತು. "ದೇವರು ಮತ್ತು ಆರಾಧಕರ ನಡುವೆಯಿರುವ ಗಾಢವಾದ ಸಂಬಂಧದ ಫಲವಾಗಿ ರಾಜಕೀಯ ಸಮಾಜದ ವಿಶಿಷ್ಟ ಲಕ್ಷಣವಾದ ಪಕ್ಷ ನಿಷ್ಠೆಯು ಧಾರ್ಮಿಕ ಕ್ಷೇತ್ರದಲ್ಲಿ ಕಾಣಿಸಿಕೊಳ್ಳುವುದಿಲ್ಲ. ಒಂದು ಬುಡಕಟ್ಟಿನ ಅಥವಾ ಪಟ್ಟಣದ ಅಧಿದೈವಕ್ಕೆ ತನ್ನ ಜನಗಳ ಭಕ್ತಿ ಮತ್ತು ಸೇವೆಯ ಮೇಲೆ ಎಂತಹ ನಿರ್ವಿವಾದಿತವಾದ ಹಕ್ಕು ಇರುತ್ತವೆಯೋ, ಹಾಗೆಯೇ ಈ ದೈವವು ತನ್ನ ಜನಗಳ ವೈರಿಗೂ ವೈರಿಯಾಗಿರುತ್ತದೆ ಮತ್ತು ಪರಕೀಯರೆಂದು ಅವರು ನಂಬಿರುವವರನ್ನು ಪರಕೀಯರೆಂದು ಪರಿಗಣಿಸುತ್ತದೆ."[೧] ಒಂದು ಮತಕ್ಕೆ ದೇವರು ಸೇರಿದಂತೆ ಮತವೂ ದೇವರಿಗೆ ಸೇರಿಹೋಗುತ್ತದೆ. ದೇವರು ಒಂದು ಮತದ ದೇವರಾಗಿರುವಂತೆ ಮತವೂ ದೇವರಿಂದ ಆಯ್ಕೆಗೊಂಡ ಒಂದು ವಿಶಿಷ್ಟ ಗುಂಪಾಗುತ್ತದೆ.

ಈ ದೃಷ್ಟಿಯ ಪರಿಣಾಮವಾಗಿರುವ ಎರಡು ವಿಚಾರಗಳಿವೆ: ಪುರಾತನ ಸಮಾಜವು ದೇವರನ್ನು ಒಂದು ವಿಶ್ವ ತತ್ವವಾಗಿ ಎಲ್ಲರಿಗೂ ಸೇರಿದ ನಂಬಿಕೆಯಾಗಿ ಗ್ರಹಿಸಲಿಲ್ಲ. ಸರ್ವ ಸಾಮಾನ್ಯವಾದ ಒಂದು ಮಾನವ ಲೋಕವೆಂಬುದೊಂದಿದೆ ಎಂಬುದನ್ನು ಪುರಾತನ ಸಮಾಜವು ಗ್ರಹಿಸಲೇ ಇಲ್ಲ.

ಪುರಾತನ ಸಮಾಜಕ್ಕೂ ಆಧುನಿಕ ಸಮಾಜಕ್ಕೂ ಇರುವ ವ್ಯತ್ಯಾಸಕ್ಕೆ ಸಂಬಂಧಿಸಿದ ಮೂರನೆಯ ಅಂಶವೆಂದರೆ ದೇವರು ಎಲ್ಲರ ತಂದೆಯೆಂದು ಭಾವಿಸಲಾಗಿರುವ ವಿಚಾರ. ಪುರಾತನ ಸಮಾಜದಲ್ಲಿ ದೇವರು ಕೇವಲ ಅವರ ಸಮಾಜಕ್ಕೆ ತಂದೆ. ಈ ಪಿತೃತ್ವವೂ ಸಹ ಜೈವಿಕವಾದುದೆಂದೇ ತಿಳಿಯಲಾಗುತ್ತದೆ.

> "ಅನಾಗರಿಕ ಧರ್ಮಗಳ ಪ್ರಕಾರ ದೇವರ ಪಿತೃತ್ವವೆಂಬುದು ಭೌತಿಕ ಪಿತೃತ್ವ. ಗ್ರೀಕರ ನಂಬಿಕೆಯ ಉದಾಹರಣೆಯನ್ನೇ ತೆಗೆದುಕೊಳ್ಳುವುದಾದರೆ ದೇವರು ಮನುಷ್ಯರನ್ನು ಜೇಡಿಮಣ್ಣಿನಿಂದ–ಕುಂಬಾರನು ಮಡಿಕೆ ಮಾಡುವಂತೆ–ಮಾಡಿದನೆಂಬುದು ಸ್ವಲ್ಪ

೧. ಸ್ಮಿತ್, ಅದೇ.

ಆಧುನಿಕವಾದುದು. ಪ್ರಾಚೀನ ಪರಿಕಲ್ಪನೆಯಂತೆ ಮಾನವ ಜನಾಂಗಗಳಿಗೆ ದೇವರುಗಳು ಪೂರ್ವಿಕರಾಗಿದ್ದಾರೆ ಅಥವಾ ಭೂಮಿಯ ಮಕ್ಕಳಾಗಿದ್ದಾರೆ. ಭೂಮಿಯು ದೇವರು ಮತ್ತು ಮನುಷ್ಯರಿಬ್ಬರಿಗೂ ಒಬ್ಬಳೇ ತಾಯಿ. ಅಂದರೆ ಮನುಷ್ಯರೆಲ್ಲಾ ದೇವರ ಬಂಧುಗಳು ಅಥವಾ ವಂಶದವರಾಗುತ್ತಾರೆ. ಬೈಬಲ್‌ನಲ್ಲಿ ಕಾಣುವಂತೆ ಇದೇ ತತ್ವವು ಪ್ರಾಚೀನ ಯಹೂದ್ಯರಲ್ಲಿಯೂ ಪ್ರಚಾರದಲ್ಲಿದ್ದಂತೆ ತೋರುತ್ತದೆ. ವಿಗ್ರಹ ಪೂಜಕರು ದೇವರ ಮಕ್ಕಳೆಂದು ಹೇಳುವುದನ್ನು ವಿವರಿಸುವ ಒಬ್ಬ ಪ್ರವಾದಿ ಹೀಗೆ ಹೇಳಿದ್ದಾನೆ: "ನೀನು ನನ್ನ ತಂದೆ; ಒಂದು ಕಲ್ಲಿಗೂ ತಂದೆ; ನೀನೇ ಈ ಲೋಕಕ್ಕೆ ನನ್ನನ್ನು ಕರೆತಂದೆ." ಪ್ರಾಚೀನ ಗೀತೆ (ನಮ್ xxl-29) ಯಲ್ಲಿ ಮೊಆಬರನ್ನು ಷೆಮೊಷನ ಮಕ್ಕಳೆಂದು ಕರೆಯಲಾಗಿದೆ. ಸ್ವಲ್ಪ ಈಚಿನ ಪ್ರವಾದಿಯಾದ ಮಲಾಷಿಯು ಅನಾಗರಿಕ ಹೆಂಗಸರನ್ನು ಪರಕೀಯ ದೇವರ ಹೆಣ್ಣುಮಕ್ಕಳೆಂದು ಕರೆಯುತ್ತಾನೆ. ಇಸ್ರೇಲಿನ ವಿಧರ್ಮಿ ನೆರೆನಾಡಿನವರು ತಮ್ಮ ಬಗೆಗೆ ಬಳಸಿದ ಭಾಷೆಯನ್ನೇ ಈ ನುಡಿಗಟ್ಟಿಗೆ ಹೊಂದಿಸಿಕೊಳ್ಳಲಾಗಿದೆ. ಸಿರಿಯಾ ಮತ್ತು ಪ್ಯಾಲಸ್ತೀನಿನಲ್ಲಿ ಪ್ರತಿ ಬುಡಕಟ್ಟು ಅಥವಾ ಸಂಕೀರ್ಣವಾದ ಹಲವು ಚಿಕ್ಕ ಚಿಕ್ಕ ಸ್ವತಂತ್ರ ಬುಡಕಟ್ಟುಗಳು ತಮ್ಮ ಮೂಲವನ್ನು ಒಬ್ಬ ಆದಿಮ ಪಿತೃವಿನಲ್ಲಿ ಕಂಡುಕೊಳ್ಳುತ್ತವೆ. ಗ್ರೀಸಿನಂತೆಯೇ ಇಲ್ಲಿಯೂ ಅವರು ಸೂಚಿಸುವಂತೆ ಈ ಪಿತೃವೇ ಅವರ ಜನಾಂಗದ ಮೂಲ ಪುರುಷ. ಆಧುನಿಕ ಸಂಶೋಧಕರ ತೀರ್ಮಾನಗಳನ್ನೇ ಎತ್ತಿ ಹಿಡಿಯುವಂತೆ ವಂಶಾನ್ವೇಷಣೆಯ ಗ್ರಂಥಗಳಲ್ಲಿ ರಾಷ್ಟ್ರಗಳ ವಾಂಶಿಕ ವಿವರಣೆಗಳಲ್ಲಿ ಅನೇಕ ದೇವತೆಗಳ ಹೆಸರುಗಳು ಕಂಡುಬರುತ್ತವೆ. ಉದಾಹರಣೆಗೆ, ಎಡೊಮೆಯಿಟ್ಟರ ಮೂಲಪುರುಷ ಏಡಮನನ್ನು ಹಿಬ್ರೂಗಳು ಸಾವಿನ ಸೋದರ ಜಾಕಬ್‌ನೊಂದಿಗೆ ಗುರುತಿಸುತ್ತಾರೆ. ಅನಾಗರಿಕನಾದರೂ ಆತ ದೇವರು. ತೆಪೊರಸನ ಸ್ವಂತ ಹೆಸರಾದ 'ಒಬೆದೊಮ್' ಎಂಬುದು ಅದನ್ನು ಸೂಚಿಸುತ್ತದೆ. 'ಏಡಮನ ಆರಾಧಕ' ಎಂದು ಪ್ರಚಾರದಲ್ಲಿರುವ ಫೊನಿಷಿಯನ್ ಮತ್ತು ಬೆಬಿಲಾನಿಯದ ವಿಶ್ವ ಸೃಷ್ಟಿವಾದದ ಕೆಲವು ಮಾಹಿತಿಗಳಿವೆ. ಈ ಮಾಹಿತಿಗಳ ಕಾಲವು ಆದಿಮ ಧರ್ಮ ಮತ್ತು ಏಕದೇವತೆಗಳ ಸಂಬಂಧವು ವಿಶಿಷ್ಟ ಬಳಗದೊಂದಿಗೆ ಇದ್ದ ಪರಿಸ್ಥಿತಿ ಹಿನ್ನೆಲೆಗೆ ಸೇರಿದ ಕಾಲಕ್ಕೆ ಸರಿಹೊಂದುತ್ತದೆ. ಒಂದು ಸಾಮಾನ್ಯ ನಂಬಿಕೆಯಾಗಿ ಮನುಷ್ಯರೆಲ್ಲ ದೇವರ ಮಕ್ಕಳು ಎಂಬ ತತ್ವ ಆಗಲೂ ಸ್ಥಿರವಾಗಿಯೇ ಉಳಿದಿತ್ತು. ಫಿಲೋಬೆಬಿಲೇಸ್‌ನ ಫೊನಿಷಿಯನ್ ವಿಶ್ವ ಸೃಷ್ಟಿವಾದವೂ ಗೊಂದಲಕರವಾಗಿಯಾದರೂ ಇದನ್ನೇ ಹೇಳುತ್ತದೆ. ಗ್ರಂಥಕಾರನ ಅಸ್ಪಷ್ಟ ಭಾಷಾ ಪ್ರಯೋಗದಿಂದಾಗಿ ಗೊಂದಲವಾದರೂ ದೇವತೆಗಳೆಲ್ಲ ತಮ್ಮ ಬುಡಕಟ್ಟುಗಳಿಗಾಗಿ ಹೋರಾಡಿ ಮಡಿದ–ಮುಂದೆ ದೈವೀಕರಣಗೊಂಡ–ಸಾಮಾನ್ಯ ಮನುಷ್ಯರು. ಬೆರೊಸಸನಿಂದ ಕಾಪಾಡಲಾಗಿರುವ ಚಾಲ್ಡಾನ್ ಐತಿಹ್ಯಗಳಲ್ಲಿ ಮನುಷ್ಯರು ದೇವರ ರಕ್ತದಿಂದಾದವರು ಎಂಬ ನಂಬಿಕೆಯನ್ನು ತುಂಬಾ ಒರಟಾಗಿ ಹೇಳಿದ್ದರೂ ಪ್ರಾಚೀನವೇನೋ ಅಲ್ಲ. ಶಿರಚ್ಛೇದನಗೊಂಡ ದೇವತೆಯ ರಕ್ತದೊಂದಿಗೆ ಜೇಡಿಮಣ್ಣನ್ನು ಸೇರಿಸಿ ಮನುಷ್ಯರನ್ನು ಮತ್ತು ಪ್ರಾಣಿಗಳನ್ನು ರೂಪಿಸಲಾಯಿತೆಂದು ಹೇಳಲಾಗಿದೆ."[೧]

---

೧. ಸ್ಮಿತ್, ಅದೇ.

ಮನುಷ್ಯ ಮತ್ತು ದೇವರ ರಕ್ತಸಂಬಂಧದ ಕಲ್ಪನೆಯಿಂದ ಒಂದು ಮುಖ್ಯ ಪರಿಣಾಮವಾಯಿತು. ಪುರಾತನ ಜಗತ್ತಿನ ದೇವರು ಒಬ್ಬ ಸಾಮಾನ್ಯ ಮನುಷ್ಯನಾದುದರಿಂದ ವಿಶೇಷ ಸದ್ಗುಣವಾಗಲೀ ಪರಿಪೂರ್ಣವೆಂಬಂತಹ ಒಳ್ಳೆಯತನವಾಗಲೀ ಅವನಿಗೆ ಸಾಧ್ಯವಿಲ್ಲ. ದೇವರು ಮನುಷ್ಯನ ಭೌತಿಕ ಗುಣವನ್ನು ಹಂಚಿಕೊಂಡುದರಿಂದ ಮನುಷ್ಯ ಸಹಜವಾದ ಭಾವನೆಗಳು, ಅರಕೆಗಳು, ದುರ್ಗುಣಗಳಿಂದ ಕ್ಲೇಶಪಡಬೇಕಾಯಿತು. ಪರಾತನ ಜಗತ್ತಿನ ದೇವರಿಗೆ ಮನುಷ್ಯನ ಎಲ್ಲ ಅಗತ್ಯಗಳೂ ಹಸಿವೆಗಳೂ ಇದ್ದವು. ಆದುದರಿಂದ ಅವನು ಆಗಾಗ ದುರ್ಗುಣಗಳಿಗೆ ತುತ್ತಾಗಿ ವಿಲಾಸ ಅಮೋದ ಪ್ರಮೋದಗಳಲ್ಲಿ ತಲ್ಲೀನನಾಗುತ್ತಿದ್ದ. ತಮ್ಮನ್ನು ಮೋಹದ ಆಕರ್ಷಣೆಗೆ ಒಳಗುಮಾಡಬಾರದಾಗಿ ಆರಾಧಕರು ದೇವರನ್ನು ಬೇಡಬೇಕಾಗುತ್ತಿತ್ತು.

ಆಧುನಿಕ ಸಮಾಜದಲ್ಲಿ ದೈವಿಕ ಪಿತೃತ್ವದ ಕಲ್ಪನೆ ಜೈವಿಕವಾದ ಸಹಜ ಪಿತೃತ್ವದಿಂದ ಬೇರ್ಪಟ್ಟಿದೆ. ದೇವರ ಪ್ರತೀಕವಾಗಿ ಮನುಷ್ಯನು ಸೃಷ್ಟಿಗೊಂಡಿದ್ದಾನೆಂಬ ಗ್ರಹಿಕೆ ಚಾಲ್ತಿಯಲ್ಲಿದೆ. ದೇವರಿಂದಲೇ ಹುಟ್ಟಿದನೆಂಬ ನಂಬಿಕೆ ಇಲ್ಲವಾಗಿದೆ. ದೇವರ ಪಿತೃತ್ವದ ಕಲ್ಪನೆಯ ಬಗೆಗೆ ಆದ ಈ ಬದಲಾವಣೆ ವಿಶ್ವ ನಿಯತಿಯ ಸೂತ್ರಧಾರನೆಂಬ ದೇವರ ಸ್ವರೂಪದ ಬಗೆಗೆ ನೈತಿಕ ನೆಲೆಯಿಂದ ಅತೀವ ವ್ಯತ್ಯಾಸವನ್ನು ತಂದಿತು. ಭೌತಿಕ ಅಸ್ತಿತ್ವದ ದೇವರಿಗೆ ಸಂಪೂರ್ಣ ಸದ್ಗುಣಗಳಾಗಲೀ ಶ್ರೇಷ್ಠತೆಯಾಗಲೀ ಸಾಧ್ಯವೇ ಇಲ್ಲ. ಸಜ್ಜನಿಕೆಯ ಅಭಾವವಿರುವ ದೇವರಿಂದ ವಿಶ್ವವು ಅತ್ಯುನ್ನತ ಸದ್ಗುಣವನ್ನು ನಿರಾಕರಿಸಲಾಗದ ತತ್ವವಾಗಿ ಕೇಳುವಂತಿರಲಿಲ್ಲ. ಭೌತಿಕ ದೇಹದ ಸಂಪರ್ಕದಿಂದ ದೇವರನ್ನು ಪ್ರತ್ಯೇಕಿಸಿದ್ದರಿಂದ ಪರಿಪೂರ್ಣ ಮಟ್ಟದ ಒಳ್ಳೆಯದಕ್ಕೆ ಮತ್ತು ಅತ್ಯುನ್ನತ ಸದ್ಗುಣಗಳಿಗೆ ಪ್ರತೀಕವಾಗಿ ದೇವರನ್ನು ಪರಿಭಾವಿಸಲು ಸಾಧ್ಯವಾಯಿತು.

ರಾಷ್ಟ್ರೀಯತೆಯು ಬದಲಾದಾಗ ಧರ್ಮವು ವಹಿಸುವ ಪಾತ್ರವೇನು? ಎಂಬುದು ವ್ಯತ್ಯಾಸಗಳಲ್ಲಿ ನಾಲ್ಕನೆಯ ಅಂಶವಾಗಿದೆ.

ಪುರಾತನ ಜಗತ್ತಿನಲ್ಲಿ ಧಾರ್ಮಿಕ ಪರಿವರ್ತನೆಯಿಲ್ಲದೆ ರಾಷ್ಟ್ರೀಯತೆಯು ಬದಲಾಗುವುದು ಸಾಧ್ಯವೇ ಇರಲಿಲ್ಲ. ಪುರಾತನದ ಜಗತ್ತಿನಲ್ಲಿ "ಒಬ್ಬ ವ್ಯಕ್ತಿಯು ತನ್ನ ಧರ್ಮವನ್ನು ಬದಲಾಯಿಸದೆ ರಾಷ್ಟ್ರೀಯತೆ" ಯನ್ನು ಬದಲಾಯಿಸುವುದು ಸಾಧ್ಯವೇ ಇರಲಿಲ್ಲ. ಸಂಪೂರ್ಣವಾಗಿ ಬೇರೆಯಾದ ರಾಷ್ಟ್ರದೊಂದಿಗೆ ಅಥವಾ ಸಮೂಹದೊಂದಿಗೆ ಇಡಿ ಸಮಾಜವು ಐಕ್ಯವಾಗದ ಹೊರತು ಧರ್ಮಗಳ ಬದಲಾವಣೆ ಸಮುದಾಯಗಳಿಗೂ ಸಾಧ್ಯವಿರಲಿಲ್ಲ. ರಾಜಕೀಯ ಕಟ್ಟುಪಾಡುಗಳು ಮತ್ತು ಧಾರ್ಮಿಕ ವಿಚಾರಗಳು ಒಟ್ಟಿಗೆ ವಂಶಪಾರಂಪರ್ಯವಾಗಿ ತಂದೆಯಿಂದ ಮಗನಿಗೆ ವರ್ಗಾಯಿಸಲ್ಪಡುತ್ತದೆ. ತನ್ನ ಇಷ್ಟಬಂದಂತೆ ಒಬ್ಬ ವ್ಯಕ್ತಿ ಹೊಸ ದೇವರನ್ನು ಆಯ್ಕೆಮಾಡಿಕೊಳ್ಳಲು ಬರುವುದಿಲ್ಲ. ಅವನ ತಂದೆಯ ದೇವತೆಗಳನ್ನೇ ಆತ ಆಶ್ರಯಿಸಬೇಕು; ನಂಬಬೇಕು, ಗೌರವಿಸಬೇಕು. ತನ್ನ ಬಳಗದಿಂದಲೇ ಬಹಿಷ್ಕರಿಸಲ್ಪಟ್ಟು ಹೊಸ ನಾಗರಿಕ ವಲಯಕ್ಕೆ ಧಾರ್ಮಿಕ ಬದುಕಿಗೆ ಸೇರಿ ಹೋದಾಗ ಮಾತ್ರ ವ್ಯತ್ಯಾಸವಾಗುತ್ತದೆ."

ಸಾಮಾಜಿಕ ಐಕ್ಯತೆಗೆ ಪೂರ್ವಭಾವಿ ನಿಬಂಧನೆಯಾಗಿ ಧರ್ಮದ ಬದಲಾವಣೆಯನ್ನು ಪರಿಗಣಿಸಲಾಗುತ್ತಿತ್ತು ಎಂಬುದಕ್ಕೆ ಹಳೆಯ ಒಡಂಬಡಿಕೆಯಲ್ಲಿರುವ ನಾಮಿ ಮತ್ತು ರುತ್‌ರ ಸಂಭಾಷಣೆ ದೃಷ್ಟಾಂತವಾಗಿದೆ.

"ನಿನ್ನ ತಂಗಿ ತನ್ನ ಜನಗಳು ಮತ್ತು ದೇವರನ್ನು ಬಿಟ್ಟು ಹಿಂದಿರುಗಿದ್ದಾಳೆ" ಎಂದು ನಾಮಿ ರುತ್‌ನಿಗೆ ಹೇಳುತ್ತಾನೆ.

ಆಗ ರುತ್ ಉತ್ತರಿಸುತ್ತಾನೆ: "ನಿನ್ನ ಜನಗಳೇ ನನ್ನವರು: ನಿನ್ನ ದೇವರೇ ನನ್ನ ದೇವರು."

ಪ್ರಾಚೀನ ಜಗತ್ತಿನಲ್ಲಿ ರಾಷ್ಟ್ರೀಯತೆಯ ಬದಲಾವಣೆ ಎಂದರೆ ಮತ ಪರಿವರ್ತನೆಯ ಮೂಲಕವೇ ಆಗಬೇಕಿತ್ತೆಂಬುದು ಇಲ್ಲಿ ಸ್ಪಷ್ಟವಾಗಿದೆ. ಸಾಮಾಜಿಕ ಬೆಸುಗೆಯೆಂದರೆ ಮತೀಯ ಬೆಸುಗೆ ಎಂದೇ ತಿಳಿಯಬೇಕು.

ಆಧುನಿಕ ಸಮಾಜದಲ್ಲಿ ಸಾಮಾಜಿಕವಾಗಿ ಒಂದುಗೂಡಲು ಮತವನ್ನು ಬಿಡುವುದು ಅಥವಾ ಮತ್ತೊಂದು ಮತವನ್ನು ಒಪ್ಪಿಕೊಳ್ಳುವುದು ಅಗತ್ಯವೇನಲ್ಲ. ಪೌರತ್ವಕ್ಕೆ ಸಂಬಂಧಿಸಿದ ಆಧುನಿಕ ನಿಯಮಾವಳಿಗಳಲ್ಲಿ ಇದಕ್ಕೆ ಉತ್ತಮ ಉದಾಹರಣೆಗಳಿವೆ. ಒಂದು ದೇಶದ ಪ್ರಜೆ ತನ್ನ ಪೌರತ್ವವನ್ನು ತ್ಯಜಿಸಿ ಇನ್ನೊಂದು ದೇಶದ ಪೌರತ್ವವನ್ನು ಅಂಗೀಕರಿಸಬಹುದು. ಈ ಪ್ರಕ್ರಿಯೆಯಲ್ಲಿ ಅನ್ಯ ಧರ್ಮ ಸ್ವೀಕಾರಕ್ಕೆ ಅವಕಾಶವೇ ಇಲ್ಲ. ಸಾಮಾಜಿಕವಾಗಿ ಒಂದುಗೂಡುವುದಕ್ಕೆ ಧಾರ್ಮಿಕವಾಗಿಯೂ ಒಂದಾಗಬೇಕಿಲ್ಲ.

ಪುರಾತನ ಸಮಾಜ ಮತ್ತು ಆಧುನಿಕ ಸಮಾಜದ ವ್ಯತ್ಯಾಸವನ್ನು ಗುರುತಿಸಲು ಆಧುನಿಕ ಸಮಾಜದಲ್ಲಿ ಕೇವಲ ಮನುಷ್ಯರಿದ್ದಾರೆ ಎಂದು ಹೇಳಿದರೆ ಸಾಲದು. ಅಲ್ಲಿ ಮನುಷ್ಯರಿದ್ದಾರೆ ಮತ್ತು ಅವರು ವಿವಿಧ ದೈವಾರಾಧಕರೂ ಆಗಿದ್ದರೆಂಬುದನ್ನು ಅಲ್ಲಿಗೆ ಸೇರಿಸಬೇಕು.

ಧರ್ಮದ ಅಂಗವಾಗಿ ದೇವರ ಸ್ವರೂಪವೆಂತಹುದೆಂಬುದನ್ನು ತಿಳಿದುಕೊಳ್ಳುವುದು ಐದನೆಯ ವ್ಯತ್ಯಾಸಕ್ಕೆ ಸಂಬಂಧಿಸಿದ ವಿಷಯವಾಗಿದೆ.

> "ಪುರಾತನ ದೃಷ್ಟಿಯಲ್ಲಿ ದೇವರುಗಳ ಸ್ವರೂಪವೆಂತಹದು? ಎಂಬ ವಿಚಾರ ಮತೀಯವಾಗಿರದೆ ಕೇವಲ ಊಹಾತ್ಮಕವಾಗಿರುತ್ತದೆ. ಧರ್ಮಸಂಬಂಧಿಯಾದ ನಿಯಮಾವಳಿಗಳ ಪರಿಚಯವೇ ಅಲ್ಲಿ ಪ್ರಧಾನ. ದೈವವು ಯಾವ ನಿಯಮಾನುಸಾರವಾಗಿ ವರ್ತಿಸುತ್ತದೆ ಮತ್ತು ಭಕ್ತರು ತಮ್ಮ ನಡೆವಳಿಕೆಗಳನ್ನು ಯಾವ ನಿಯಮಾನುಸಾರ ರೂಪಿಸಿಕೊಳ್ಳಬೇಕೆಂದು ಅಪೇಕ್ಷಿಸುತ್ತಾರೆ? ಎಂಬುದೇ ಅಲ್ಲಿ ಮುಖ್ಯ. '೨ ಕಿಂಗ್ಸ್ XVII–೨೬' ಎಂಬುದರಲ್ಲಿ ಹೇಳಿರುವುದು ರಾಜ್ಯದ ದೇವರ 'ವಿಧಾನ' ಮತ್ತು ರೂಢಿಬದ್ಧ ಕಾನೂನುಗಳೇ ಆಗಿವೆ. ಪ್ರವಾದಿಗಳು ಇಸ್ರೇಲ್ ರಾಜ್ಯಭಾರದ ಅವನ ಕಾನೂನು ಮತ್ತು ನಿಯಮಗಳ ಬಗೆಗೆ ತಿಳುವಳಿಕೆ ಪಡೆದಿದ್ದೇವೆಂದು ಹೇಳುವುದೂ ಅದನ್ನೇ; ಸಂಪೂರ್ಣ ಧರ್ಮಕ್ಕೆ ಮತ್ತು 'ಜಿವೊಹಾನ ತಿಳುವಳಿಕೆ ಮತ್ತು ಭಯ'ಕ್ಕೆ ಶರಣಾಗುವುದು; ಅಂದರೆ ಜಿವೊಹಾನ ನಿಯಮಗಳನ್ನು ಅರ್ಥಮಾಡಿಕೊಳ್ಳುವುದು ಮತ್ತು ವಿಧೇಯರಾಗಿರುವುದು. ಧರ್ಮಕ್ಕೆ ಸಂಬಂಧಿಸಿದ ಎಲ್ಲಾ ಊಹಾಪೋಹಗಳನ್ನು ಸಂದೇಹಿಸುವುದನ್ನೇ ಹಳೆಯ ಒಡಂಬಡಿಕೆಯಲ್ಲಿ ಸಮರ್ಥಿಸಲಾಗಿದೆ. ಸರಳ ನಿಯಮವಾದ 'ದೇವರಿಗೆ ಭಯಪಡು ಮತ್ತು ಅವನ ಆದೇಶಗಳನ್ನು ಅನುಸರಿಸು' ಎಂಬುದೇ ಸರಿಯಾದ ದೃಷ್ಟಿ. ತರ್ಕ ವಾದ–ವಿವಾದಗಳು ಮನುಷ್ಯನನ್ನು ದಿಕ್ಕುಗೆಡಿಸುತ್ತವೆ; ಕರುಣೆಯತ್ತ ತಿರುಗಿಸುವುದಿಲ್ಲ. ಈ ಬುದ್ಧಿವಾದವನ್ನೇ ಗ್ರಂಥಕರ್ತ ಸಾಲೊಮನ್‌ನ ಮೂಲಕ ಹೇಳಿಸಿದ್ದಾನೆ. ಅದು ನ್ಯಾಯವಾಗಿಯೇ ಮತ ಸಂಬಂಧಿಯಾದ ಹಳೆಯ ನಂಬಿಕೆಯನ್ನು ತಾತ್ಪರ್ಯರೂಪದಲ್ಲಿ ಹೇಳುತ್ತದೆ. ದುರದೃಷ್ಟವಶಾತ್ ಆಧುನಿಕ ಕಾಲದಲ್ಲಿ ಇದರ ಮಹತ್ವವನ್ನು ಕಡೆಗಣಿಸಲಾಗಿದೆ."

ಧರ್ಮದಲ್ಲಿ ನಂಬಿಕೆಗಿರುವ ಸ್ಥಾನವನ್ನು ಕುರಿತಂತಹ ಚರ್ಚೆ ವ್ಯತ್ಯಾಸಗಳು ಆರನೆಯ ಅಂಶವಾಗಿದೆ.

> "ವಿಧ್ಯುಕ್ತ ಆಚರಣೆಗಳು ಮತ್ತು ಪ್ರಾಯೋಗಿಕ ಬಳಕೆಗಳೇ ಪ್ರಾಚೀನ ಧರ್ಮದ ಸಾರ ಸರ್ವಸ್ವವೆಂದು ಸ್ಪಷ್ಟವಾಗಿ ಹೇಳಬಹುದು. ಪ್ರಾಚೀನ ಕಾಲದ ಧರ್ಮವು ಪ್ರಾಯೋಗಿಕವಾಗಿ ಅನ್ವಯಿಸಬಹುದಾದ ಕೆಲವು ನಂಬಿಕೆಗಳ ವ್ಯವಸ್ಥೆಯಲ್ಲಿ ಸ್ಥಿರವಾದ ಪರಂಪರಾಗತವಾದ

ಕೆಲವು ರೂಢಿಗಳೇ ಅದರ ಪ್ರಧಾನ ಅಂಗಗಳು. ಸಮಾಜದ ಎಲ್ಲ ಸದಸ್ಯರೂ ಅವುಗಳಿಗೆ ಬದ್ಧರಾಗಿರಬೇಕಾದುದು ಅಭಿಮಾನದ ವಿಚಾರವಾಗಿತ್ತು ತಮ್ಮ ಕಾರ್ಯದ ಹಿಂದೆ ಸೂಕ್ತ ಕಾರಣವಿಲ್ಲದೆ ಪ್ರವರ್ತಿಸಲು ಒಪ್ಪುವ ಮನುಷ್ಯರು ನಿಜವಾದ ಮನುಷ್ಯರೇ ಅಲ್ಲ. ಆದರೆ ಪ್ರಾಚೀನ ಕಾಲದಲ್ಲಿ ಅದು ತದ್ವಿರುದ್ಧವಾಗಿತ್ತು. ಕಾರಣವನ್ನು ಮೊದಲು ಸಿದ್ಧಾಂತ ಮಾಡಿ ಆಮೇಲೆ ಕಾರ್ಯಕ್ಕೆ ತೊಡಗದೆ, ಕಾರ್ಯದಿಂದಲೇ ಮೊದಲಾಗಿ ಬಳಿಕ ಅದನ್ನು ಸಮರ್ಥಿಸುವ ಕಾರಣಕ್ಕೆ ಬರುವುದು ಅಂದಿನ ಪದ್ಧತಿಯಾಗಿತ್ತು. ನಡೆವಳಿಕೆಗಳನ್ನು ಕುರಿತ ಸಾಮಾನ್ಯ ನಿಯಮಗಳನ್ನು ಮೊದಲು ರೂಪಿಸಿದ ಬಳಿಕ ಶಬ್ದಗಳಲ್ಲಿ ಅವುಗಳಿಗೆ ಅಭಿವ್ಯಕ್ತಿ ಕೊಡಲಾಗುತ್ತಿತ್ತು. ರಾಜಕೀಯ ಸಂಸ್ಥೆಗಳು, ರಾಜಕೀಯ ಸಿದ್ಧಾಂತಗಳಿಗಿಂತ ಹಳೆಯವು; ಅದರಂತೆ ಧಾರ್ಮಿಕ ಸಂಸ್ಥೆಗಳು ಧಾರ್ಮಿಕ ಸಿದ್ಧಾಂತಗಳಿಗಿಂತ ಹಿಂದಿನವು. ಹೋಲಿಕೆಗಾಗಿ ಹೋಲಿಕೆ ಎಂಬಂತೆ ಇದನ್ನು ಸೂಚಿಸುತ್ತಿಲ್ಲ. ಧಾರ್ಮಿಕ ಮತ್ತು ರಾಜಕೀಯ ವ್ಯವಸ್ಥೆಗಳು ಪ್ರಾಚೀನ ಕಾಲದಲ್ಲಿ ಸಂಪೂರ್ಣ ಸಮಾನಾಂತರವಾಗಿಯೇ ಪ್ರವಹಿಸುತ್ತಿದ್ದವು. ಎಲ್ಲ ಕ್ಷೇತ್ರಗಳಲ್ಲಿಯೂ ಆಕೃತಿ ಮತ್ತು ಪೂರ್ವನಿದರ್ಶನಗಳಿಗೆ ಮಹತ್ವ ಕೊಡಲಾಗುತ್ತಿತ್ತು. ಏಕೆ ಒಂದು ನಿರ್ದಿಷ್ಟ ಪೂರ್ವ ನಿದರ್ಶನವೆಂಬುದಕ್ಕೆ ಅದು ಮೊದಲು ಸ್ಥಿರಗೊಳ್ಳಲು ಕಾರಣವಾದ ಐತಿಹ್ಯವನ್ನು ಹೇಳಲಾಗುತ್ತಿತ್ತು. ನಿದರ್ಶನವೊಂದು ಸ್ಥಿರವಾಗಿ ನೆಲೆ ನಿಂತ ಮೇಲೆ ಅದರ ಆಧಿಪತ್ಯವನ್ನು ಪುಷ್ಟೀಕರಿಸಲು ಯಾವ ಆಧಾರಗಳನ್ನೂ ಕೊಡಬೇಕಿರಲಿಲ್ಲ. ಪೂರ್ವ ನಿದರ್ಶನಗಳ ತಳಹದಿಯ ಮೇಲೆ ಸಮಾಜದ ಕಾನೂನು ಕಟ್ಟಳೆಗಳಿದ್ದವು. ಸಮಾಜವು ನಿರಂತರವಾಗಿ ಅಸ್ತಿತ್ವದಲ್ಲಿರುವುದೇ ಒಮ್ಮೆ ಹಾಕಿಕೊಟ್ಟ ಮೇಲ್ಪಂಕ್ತಿ ಮುಂದುವರಿಯಬೇಕೆಂಬುದಕ್ಕೆ ಸೂಕ್ತ ಕಾರಣವಾಗಿತ್ತು."

ಧರ್ಮದಲ್ಲಿ ವ್ಯಕ್ತಿಗತ ಶ್ರದ್ಧೆಗೆ ಇರುವ ಸ್ಥಾನವೇನು? ಎಂಬುದೇ ಏಳನೆಯ ವ್ಯತ್ಯಾಸಕ್ಕೆ ಸಂಬಂಧಿಸಿದ ಅಂಶವಾಗಿದೆ.

"ವ್ಯವಸ್ಥಿತಗೊಂಡ ಸಾಮಾಜಿಕ ಜೀವನದ ಅಂಗವೇ ಆದ ಧರ್ಮವೊಂದರಲ್ಲಿ ಮನುಷ್ಯ ಹುಟ್ಟುತ್ತಾನೆ. ತಾನು ಬದುಕಿರುವ ಸಮಾಜದ ರೂಢಿಬದ್ಧ ನಡವಳಿಕೆಗಳನ್ನು ಅಪ್ರಜ್ಞಾಪೂರ್ವಕವಾಗಿಯೇ ಅನುಸರಿಸುವಂತೆ ಧರ್ಮವನ್ನು ಒಪ್ಪಿಕೊಳ್ಳುತ್ತಾನೆ. ರಾಜ್ಯಾಧಿಕಾರದ ಬೇರೆ ಸಂಗತಿಗಳನ್ನು ಹೇಗೆ ಸಹಜವಾಗಿ ಸ್ವೀಕರಿಸಲಾಗುತ್ತದೆಯೋ ಅದೇ ರೀತಿಯಲ್ಲಿ ಮನುಷ್ಯರು ದೇವರನ್ನು ಮತ್ತು ಅವನ ಆರಾಧನೆಯನ್ನು ಒಪ್ಪಿದ್ದಾರೆ. ಒಮ್ಮೊಮ್ಮೆ ತರ್ಕ ಮತ್ತು ಊಹೆಗಳಿಗೆ ತೊಡಗಿದರೂ ಪರಂಪರಾಗತ ವಿಚಾರಗಳು ಸ್ಥಿರವಾದುವೆಂಬುದರ ಪೂರ್ವ ತಿಳಿವಳಿಕೆಗೆ ಬದ್ಧವಾಗಿರುತ್ತಾರೆ. ಈ ಸ್ಥಿರ ಸಂಗತಿಗಳನ್ನು ಮೀರಿ ವಿವೇಕ ಮತ್ತು ತರ್ಕಗಳು ಹೋಗಲಾರವೆಂಬುದೂ, ಅವನ್ನು ಬದಲಾಯಿಸಲಾಗದೆಂಬುದೂ ಅವರ ನಂಬಿಕೆಯಾಗಿರುತ್ತದೆ. ಆಧುನಿಕರಾದ ನಮಗೆ ಧರ್ಮವೆಂಬುದು ಎಲ್ಲಕ್ಕಿಂತ ಮಿಗಿಲಾಗಿ ಬುದ್ಧಿಪೂರ್ವಕ ನಂಬಿಕೆ ಮತ್ತು ವ್ಯಕ್ತಿಗತ ಶ್ರದ್ಧೆಗೆ ಸಂಬಂಧಿಸಿದ ಸಂಗತಿ. ಪ್ರಾಚೀನರಿಗೆ ಅದು ನಾಗರಿಕನ ಸಾರ್ವಜನಿಕ ಜೀವನದ ಅವಿಭಾಜ್ಯ ಅಂಗವಾಗಿದ್ದು, ಸ್ಥಿರವಾದ ಮಾದರಿಯಾಗಿತ್ತು. ಅವನ್ನು ಅರ್ಥಮಾಡಿಕೊಳ್ಳಬೇಕೆಂಬ ಕಡ್ಡಾಯವೇನೂ ಇರಲಿಲ್ಲವಾದರೂ ಅದನ್ನು ಟೀಕೆ ಮಾಡಲು ಅಥವಾ ಕನಿಷ್ಠವೆಂದು ಪರಿಗಣಿಸಲು ಅವನಿಗೆ ಸ್ವಾತಂತ್ರ್ಯವಿರಲಿಲ್ಲ. ಧಾರ್ಮಿಕ ಅಶ್ರದ್ಧೆ ಎಂಬುದು ರಾಜ್ಯಾಧಿಕಾರದ ವಿರುದ್ಧವಾದ ಅಪರಾಧವಾಗುತ್ತಿತ್ತು. ಪವಿತ್ರ

ಸಂಪ್ರದಾಯಗಳನ್ನು ತಿಳಿದು ಸಮಾಜದ ನೆಲೆಗಟ್ಟನ್ನು ಹಾಳುಗೆಡವಿದರೆ ದೇವರುಗಳ ಅವಕೃಪೆಗೆ ಗುರಿಯಾಗಬೇಕಾಗುತ್ತಿತ್ತು. ಆದರೆ ಎಲ್ಲಿಯವರೆಗೆ ವಿಧ್ಯುಕ್ತ ಮಾದರಿಗಳನ್ನು ಅನುಸರಿಸಲಾಗುತ್ತಿತ್ತೋ ಅಲ್ಲಿಯವರೆಗೆ ಮನುಷ್ಯನನ್ನು ಸಜ್ಜನನೆಂದೇ ತಿಳಿಯಲಾಗುತ್ತಿತ್ತು. ಧರ್ಮವು ಅವನ ಹೃದಯದಲ್ಲಿ ನೆಲೆಯೂರಿದೆಯೋ ಅಥವಾ ಬೌದ್ಧಿಕವಾಗಿ ಮಾತ್ರ ಅವನು ಪ್ರಭಾವಿತನಾಗಿರುವನೋ ಎಂಬುದನ್ನು ಯಾರೂ ಕೇಳುವ ಗೊಡವೆಗೆ ಹೋಗುತ್ತಿರಲಿಲ್ಲ. ಧರ್ಮವೂ ರಾಜ್ಯಾಧಿಕಾರದ ಒಂದು ಅಂಗವೇ ಆಗಿದ್ದಂತೆ ರಾಜಕೀಯದಲ್ಲಾಗಲೀ ಧರ್ಮದಲ್ಲಾಗಲೀ ಬಹಿರಂಗ ನಡೆವಳಿಕೆಗಳು ಮತ್ತು ಕೆಲವು ಸ್ಥಿರವಾದ ಕಟ್ಟಳೆಗಳನ್ನು ಅನುಸರಿಸುವುದೇ ಮುಖ್ಯವೆಂದು ತಿಳಿಯಲಾಗುತ್ತಿತ್ತು."

ದೈವಾನುಗ್ರಹಕ್ಕೆ ಸಂಬಂಧಿಸಿದಂತೆ ದೇವರು, ಸಮಾಜ ಮತ್ತು ಮನುಷ್ಯನ ಪರಸ್ಪರ ಸಂಬಂಧವನ್ನು ಎಂಟನೆಯ ವ್ಯತ್ಯಾಸದ ಅಂಶವಾಗಿ ಚರ್ಚಿಸಬಹುದು.

ಮೊದಲನೆಯದಾಗಿ, ಸಮಾಜ ಮತ್ತು ದೇವರ ಸಂಬಂಧವನ್ನು ತೆಗೆದುಕೊಂಡರೆ, ಇಲ್ಲಿ ಮೂರು ಮುಖ್ಯವಾದ ವಿಚಾರಗಳನ್ನು ಗಮನಿಸಬೇಕಾಗುತ್ತದೆ.

ಪುರಾತನ ಜಗತ್ತಿನ ನಂಬಿಕೆ–ಶ್ರದ್ಧೆಗಳು "ಬೇಡುವುದು ಭೌತಿಕ ನೆಲೆಯ ನೆಮ್ಮದಿಗಿಂತ ಹೆಚ್ಚಿನದಲ್ಲ. ದೇವರ ಕೃಪೆಯನ್ನು ಅವರು ಬೇಡುವುದು ಲೌಕಿಕ ಸುಖ ಸಮೃದ್ಧಿಗಾಗಿ. ಆಧ್ಯಾತ್ಮಿಕವಲ್ಲದ ಸುಖಾಪೇಕ್ಷೆಗಳು."

ಪುರಾತನ ಸಮಾಜಗಳು ದೇವರಿಂದ ಏನನ್ನು ಬೇಡಿ ಪಡೆಯಬಯಸಿದವು ಮತ್ತು ಯಾವುದರಲ್ಲಿ ಅವರಿಗೆ ನಂಬಿಕೆಯಿತ್ತು ಎಂಬುದನ್ನು ಕೆಳಗಿನ ವಿವರಗಳಲ್ಲಿ ಕಾಣಬಹುದು:

"ಅಪಾರ ಸಮೃದ್ಧಿಯ ಮಳೆ–ಬೆಳೆ, ತಮ್ಮ ವೈರಿಗಳನ್ನು ನಾಶಮಾಡಲು ಸಹಾಯ, ನಿಸರ್ಗದ ಪ್ರಕೋಪಗಳಿಗೆ ಪರಿಹಾರ ಮಾರ್ಗವಾಗಿ ಪವಿತ್ರ ಸ್ಥಳಗಳಿಂದ ಮತ್ತು ಜ್ಯೋತಿಷಿಗಳಿಂದ ಮಾರ್ಗದರ್ಶನ."

ಪುರಾತನ ಜಗತ್ತಿನಲ್ಲಿ "ಧರ್ಮವೆಂಬುದು ವ್ಯಕ್ತಿಗೆ ಸಂಬಂಧಿಸಿದ ವಿಚಾರವಾಗಿರದೆ ಸಮಾಜಕ್ಕೆ ಸಂಬಂಧಿಸಿರುತ್ತದೆ. ದೈವದ ಅಭಯಹಸ್ತದ ನೆರವಿನಲ್ಲಿ ಸದಾ ಶಾಶ್ವತ ನಂಬಿಕೆ ಇರಿಸಿಕೊಂಡಿರುವುದು ಸಮಾಜವೇ ಹೊರತು ವ್ಯಕ್ತಿಯಲ್ಲ."

ಮನುಷ್ಯ ಮತ್ತು ದೇವರ ಸಂಬಂಧವನ್ನು ಕುರಿತ ವ್ಯತ್ಯಾಸಕ್ಕೆ ಇನ್ನು ಬರೋಣ:

"ಪ್ರತಿಯೊಬ್ಬ ವ್ಯಕ್ತಿಯ ಯೋಗಕ್ಷೇಮದ ಬಗೆಗೂ ನಿರಂತರವಾಗಿ ಕೃಪಾದೃಷ್ಟಿಯನ್ನು ಹರಿಸಿ ವಿಚಾರಿಸಿಕೊಳ್ಳಬೇಕೆಂಬ ಕರ್ತವ್ಯದ ಹೊಣೆ ಅನಾಗರಿಕ ಜಗತ್ತಿನ ದೇವರ ಮೇಲೆ ಇರಲಿಲ್ಲ. ವ್ಯಕ್ತಿಗತ ಕೃಪೆ ಮತ್ತು ಆಶೀರ್ವಾದಗಳನ್ನು ಬಯಸಿ ಪ್ರತಿಯೊಬ್ಬರೂ ತಮ್ಮ ಖಾಸಗಿ ವಿಚಾರಗಳನ್ನು ದೇವರಲ್ಲಿ ನಿವೇದಿಸುತ್ತಿದ್ದರೆಂಬುದೂ ಉಂಟು. ಆದರೆ ಅವರು ಹೀಗೆ ಬೇಡುತ್ತಿದ್ದುದು ರಾಜನೊಬ್ಬನಿಂದ ಪ್ರಜೆಯು ಖಾಸಗಿಯಾಗಿ ಬೇಡುವ ದಾನದಂತೆ ಅಥವಾ ತಂದೆಯಿಂದ ಮಗ ಕೇಳುವ ಕೊಡುಗೆಯಂತೆ. ಕೇಳಿದ್ದನ್ನೆಲ್ಲಾ ಕೊಡುತ್ತಾರೆಂಬ ನಿರೀಕ್ಷೆಯಿಲ್ಲದೆ ಕೇಳುವುದು. ದೇವರುಗಳೂ ಇಂತಹ ವಿಚಾರದಲ್ಲಿ ವ್ಯಕ್ತಿಗತವಾಗಿ ಕೃಪೆ ತೋರಿಸಬಹುದಾದರೂ, ಒಂದು ಧರ್ಮದ ಮುಖ್ಯಸ್ಥನಾಗಿ ನಿರ್ವಹಿಸಬೇಕಾದ ಕರ್ತವ್ಯಗಳ ಭಾಗಗಳಾಗಿ ಇದನ್ನು ಮಾಡುವ ಅಗತ್ಯವಿಲ್ಲ."

"ದೇವರುಗಳು ಒಬ್ಬ ವ್ಯಕ್ತಿಯ ನಾಗರಿಕ ಜೀವನವನ್ನು ಗಮನವಿಟ್ಟು ನೋಡುತ್ತಾರೆ.

> ಸಾರ್ವಜನಿಕ ಅನುಕೂಲತೆಗಳಲ್ಲಿ ವ್ಯಕ್ತಿಯ ಪಾಲನ್ನು ಅವನಿಗೆ ಕೊಡುತ್ತಾರೆ. ಪ್ರತಿ ವರ್ಷದ ಸುಗ್ಗಿಯ ಸಮೃದ್ಧಿಯಲ್ಲಿ ಆಮೋದಗಳಲ್ಲಿ ಅವನಿಗೆ ಪಾಲಿದೆ. ವೈರಿಗಳ ಮೇಲೆ ಜಯ ಮತ್ತು ರಾಷ್ಟ್ರೀಯ ಶಾಂತಿ ಸಮೃದ್ಧಿ ಮುಂತಾದುವಕ್ಕೆ ದೈವದ ಹೊಣೆಯಿದೆ. ಆದರೆ ವೈಯಕ್ತಿಕ ಅಗತ್ಯಗಳಿಗೆ ದೈವದ ನೆರವಿನ ನಂಬಿಕೆಯಿಲ್ಲ. ಅದರಲ್ಲೂ ಒಟ್ಟಾರೆ ಬುಡಕಟ್ಟಿನ ಹಿತಾಸಕ್ತಿಗೆ ವಿರುದ್ಧವಾದ ಸಂಗತಿಗಳಲ್ಲಿ ವ್ಯಕ್ತಿಗೆ ಅವರು ಎಂದೂ ನೆರವಾಗುವುದಿಲ್ಲ. ಆದುದರಿಂದ ಧರ್ಮವು ಈಡೇರಿಸಬಹುದಾದ, ಒಪ್ಪಬಹುದಾದ, ಈಡೇರಿಸಲಾಗದ ಅಥವಾ ಒಪ್ಪಲಾರದ ಆಶೆ ನಿರೀಕ್ಷೆಗಳ ಒಂದು ವಿಸ್ತಾರವಾದ ಕ್ಷೇತ್ರವೇ ಇದೆ.''

ದೇವರು ಮತ್ತು ಸಮಾಜವು ಮನುಷ್ಯನ ಬಗೆಗೆ ತಾಳಿರುವ ನಿಲುವಿನ ವ್ಯತ್ಯಾಸವನ್ನು ಮುಂದೆ ಚರ್ಚಿಸೋಣ.

ಪುರಾತನ ಜಗತ್ತಿನಲ್ಲಿ ಸಮಾಜವು ವೈಯಕ್ತಿಕ ಯೋಗಕ್ಷೇಮದ ವಿಚಾರದಲ್ಲಿ ನಿರಾಸಕ್ತಿ ಹೊಂದಿತ್ತು. ದೈವವೂ ಸಮಾಜಕ್ಕೆ ಬದ್ಧವಾಗಿತ್ತೆಂಬುದಲ್ಲಿ ಸಂದೇಹವಿಲ್ಲ. ''ಆದರೆ ದೇವರು ಮತ್ತು ಆರಾಧಕರ ನಡುವಿನ ಒಗ್ಗೂಡುವಿಕೆಯ ಒಪ್ಪಂದದಂತೆ ದೈವವು ಸಮಾಜದ ಪ್ರತಿಯೊಬ್ಬನ ಹಿತಾಸಕ್ತಿಗಳನ್ನೂ ತನ್ನದೆಂದು ಭಾವಿಸುವ ಅಗತ್ಯವಿರಲಿಲ್ಲ.''

> ''ದೇವರಿಂದ ನಿರೀಕ್ಷಿಸುತ್ತಿದ್ದ ಫಲಗಳು ಒಟ್ಟಾರೆ ಸಮೂಹಕ್ಕೆ ಸಂಬಂಧಿಸಿದ ಸಾರ್ವತ್ರಿಕ ಲಕ್ಷಣಗಳನ್ನು ಒಳಗೊಂಡಿದ್ದವು. ಫಲಕಾರಿಯಾದ ಋತುಮಾನಗಳು, ತುರು ಮಂದೆಗಳ ಅಭಿವೃದ್ಧಿ ಮತ್ತು ಕದನಗಳಲ್ಲಿ ಜಯವನ್ನು ನಿರೀಕ್ಷಿಸುತ್ತಿದ್ದರು. ಎಲ್ಲಿಯವರೆಗೆ ಒಟ್ಟು ಸಮೂಹ ಸುಭಿಕ್ಷವಾಗಿರುತ್ತದೆಯೋ ಅಲ್ಲಿಯವರೆಗೆ ಯಾರೋ ಒಬ್ಬ ವ್ಯಕ್ತಿಯ ಕ್ಲೇಶಗಳಿಂದ ದೈವಾನುಗ್ರಹದ ಭರವಸೆಗೆ ಅಪಕೀರ್ತಿ ಬರುತ್ತಿರಲಿಲ್ಲ.''

ಅದಕ್ಕೆ ಪ್ರತಿಯಾಗಿ ವ್ಯಕ್ತಿಯೊಬ್ಬನ ಕಷ್ಟನಷ್ಟಗಳನ್ನು ಪುರಾತನ ಸಮಾಜವು ತಿಳಿಯುತ್ತಿದ್ದ ರೀತಿಯೇ ಬೇರೆಯಾಗಿತ್ತು.

> ''ದುಃಖಗಳಿಗೆ ಈಡಾದ ವ್ಯಕ್ತಿ ದುಷ್ಟನಾಗಿದ್ದ ಕಾರಣಗಳಿಂದ, ನ್ಯಾಯವಾಗಿಯೇ ದೈವದ ಹಗೆಗೆ ತುತ್ತಾಗಿದ್ದ. ಅಂತಹ ಮನುಷ್ಯನಿಗೆ ಸುಖ ಸಮೃದ್ಧವಾದ ಗುಂಪಿನಲ್ಲಿ ಸ್ಥಾನವಿರಲಿಲ್ಲ; ಬಲಿಪೀಠದ ಮುಂದೆ ಮತ ಸಂಬಂಧಿಯಾದ ಉತ್ಸವಾಚರಣೆಗಳ ದಿನಗಳಲ್ಲಿ ಆತನು ಭಾಗವಹಿಸುವಂತಿರಲಿಲ್ಲ.''

ಈ ದೃಷ್ಟಿಗನುಗುಣವಾಗಿಯೇ ಕುಷ್ಠರೋಗ ಪೀಡಿತರನ್ನು ಅಥವಾ ಸಾವಿನ ಶೋಕಾಚರಣೆಗಳಲ್ಲಿ ಮುಳುಗಿರುವವರನ್ನು ಧಾರ್ಮಿಕಾಚರಣೆಗಳಿಂದ ದೂರವಿಡಲಾಗುತ್ತಿತ್ತು. ಸಾಮಾಜಿಕ ಜೀವನದ ಹಕ್ಕುಗಳನ್ನು ಅವರಿಂದ ಕಸಿದುಕೊಂಡು ದೇವಾಲಯದೊಳಗಡೆ ಅವರ ನೈವೇದ್ಯವನ್ನು ತರಗೊಡುತ್ತಿರಲಿಲ್ಲ.

ವ್ಯಕ್ತಿ ವ್ಯಕ್ತಿಗಳ ನಡುವಿನ ಕಾದಾಟಗಳಲ್ಲಿ ಅಥವಾ ವ್ಯಕ್ತಿ ಮತ್ತು ಸಮಾಜದ ಘರ್ಷಣೆಗಳಲ್ಲಿ ದೈವಕ್ಕೆ ಸಂಬಂಧವಿರಲಿಲ್ಲ. ಪುರಾತನ ಜಗತ್ತಿನಲ್ಲಿ ''ಮನುಷ್ಯನ ವ್ಯವಹಾರಗಳನ್ನು ದೇವರು ಯಾವಾಗಲೂ ಏರ್ಪಡಿಸುವುದರಲ್ಲಿಯೇ ತಲ್ಲೀನನಾಗಿರಬೇಕಿಲ್ಲ. ಸಾಮಾನ್ಯ ವಿಚಾರಗಳಲ್ಲಿ ಮನುಷ್ಯರು ತಮಗೆ ತಾವೇ ನೆರವಾಗಬೇಕಿತ್ತು. ತಮ್ಮ ಬಳಗದ ಹಿತಾಸಕ್ತಿಗಳನ್ನೂ ನೋಡಿಕೊಳ್ಳಬೇಕಾಗಿತ್ತು. ದೇವರಿದ್ದಾನೆ, ಕಷ್ಟಕಾಲದಲ್ಲಿ ಅಗತ್ಯ ಬಿದ್ದರೆ ಅವನನ್ನು ಬೇಡಬಹುದು ಎಂಬ ನಿರೀಕ್ಷೆ ಇತ್ತು. ಆದರೂ ಸಮಾಜದ ವ್ಯವಸ್ಥೆಯನ್ನು ನ್ಯಾಯಬದ್ಧವಾಗಿರುವಂತೆ ಕಾಪಾಡಿಕೊಂಡು ಬರುವ ಒಂದು ನೈತಿಕ ಶಕ್ತಿಯಾಗಿಯೇ ದೇವರು ಅಸ್ತಿತ್ವ

ಪಡೆದಿದ್ದ. ಈ ನೈತಿಕ ಶಕ್ತಿಯ ಸತ್ವವೂ ಒಮ್ಮೊಮ್ಮೆ ಸಂದೇಹಾಸ್ಪದವಾಗುತ್ತಿತ್ತು. ದುಷ್ಟನೊಬ್ಬ ತನ್ನ ಉತ್ತಮ ಕೆಲಸಕಾರ್ಯಗಳನ್ನು ಪ್ರಶಂಸೆಮಾಡಿಸಿಕೊಂಡು ತನ್ನ ಅಪರಾಧವನ್ನು ಮರೆತುಬಿಡಲು ಕೇಳುವ ಸಾಧ್ಯತೆಯೂ ಇತ್ತು.

ಪುರಾತನ ಜಗತ್ತಿನಲ್ಲಿ ಮನುಷ್ಯನು ತನಗೊಬ್ಬನಿಗೇ ನ್ಯಾಯ ದೊರಕಿಸಿಕೊಡಲು ಕೇಳುತ್ತಿರಲಿಲ್ಲ. "ಪವಿತ್ರ ಅಥವಾ ವ್ಯಾವಹಾರಿಕ ವಿಚಾರಗಳೇನೇ ಇರಲಿ, ಹಳೆಯ ಜಗತ್ತಿನ ವಾಡಿಕೆಯಲ್ಲಿ ಹೆಚ್ಚಾಗಿ, ಒಟ್ಟು ಸಮೂಹದ ಬಗ್ಗೆಯೇ ಆಲೋಚಿಸುವುದು; ತೀರಾ ಕಡಿಮೆ ಪ್ರಮಾಣದಲ್ಲಿ ಸ್ವಂತ ವಿಚಾರಗಳತ್ತ ಯೋಚಿಸುತ್ತಿದ್ದರು. ತನಗೇ ಇದರಿಂದ ಅನ್ಯಾಯವಾದರೂ ಯಾರೂ ಈ ವಾಡಿಕೆಯನ್ನು ತಪ್ಪೆಂದು ಭಾವಿಸುತ್ತಿರಲಿಲ್ಲ. ದೇವರು ಇಡೀ ರಾಜ್ಯದ ಅಥವ ಬುಡಕಟ್ಟಿನ ದೇವರಾದುದರಿಂದ ವ್ಯಕ್ತಿ ಹಿತಾಸಕ್ತಿಯನ್ನು ಒಟ್ಟಾರೆ ಸಮೂಹದ ಸದಸ್ಯನಾಗಿರುವುದರಿಂದ ಒಟ್ಟಾರೆಯಾಗಿಯೇ ಕಾಪಾಡುತ್ತಿದ್ದ"

ಸ್ವಂತ ಜೀವನದ ದುರದೃಷ್ಟಗಳನ್ನು ಮನುಷ್ಯನು ಪುರಾತನ ಜಗತ್ತಿನಲ್ಲಿ ಪರಿಗಣಿಸುತ್ತಿದ್ದ ರೀತಿಯನ್ನು ಈ ಹಿನ್ನೆಲೆಯಲ್ಲಿಯೇ ಅರ್ಥೈಸಬೇಕು. ದೇವರ ಮುಂದೆ ಹರ್ಷ ವ್ಯಕ್ತಪಡಿಸಲು ಮನುಷ್ಯ ಬರುತ್ತಿದ್ದ. "ಈ ಹರ್ಷದೊಡನೆ ಅವನ ಬಳಗವಿರುತ್ತಿತ್ತು. ಬಳಗದ ಯೋಗಕ್ಷೇಮವಿರುತ್ತಿತ್ತು. ಆತನ ನೆರೆಹೊರೆಯವರೂ ಅಲ್ಲಿ ಸೇರುತ್ತಿದ್ದರು. ಒಟ್ಟು ರಾಜ್ಯಕ್ಕಾಗಿಯೇ ಆರಾಧನೆ ನಡೆದು ದೇವರೊಂದಿಗೆ ಅವನ ಸಂಬಂಧವು ಭದ್ರವಾಗಿ ಬೆಸೆದುಕೊಳ್ಳಲು ಈ ವಿಧ್ಯುಕ್ತ ಮತಾಚರಣೆಗಳು ನೆರವಾಗುತ್ತಿದ್ದವು. ಈ ಮೂಲಕ ವ್ಯಕ್ತಿಯು ತನ್ನ ಕುಟುಂಬದೊಂದಿಗೆ ಸಂಬಂಧವನ್ನು ಭದ್ರಪಡಿಸಿಕೊಳ್ಳುವುದರ ಜೊತೆಗೆ ತನ್ನ ಸಮಾಜ ಮತ್ತು ರಾಷ್ಟ್ರಕ್ಕೆ ಸಂಬಂಧಿಸಿದ ಕರ್ತವ್ಯಗಳನ್ನೂ ನೆರವೇರಿಸುತ್ತಿದ್ದ."

ಪುರಾತನ ಜಗತ್ತಿನ ಮನುಷ್ಯನು ಸೃಷ್ಟಿಕರ್ತನಲ್ಲಿ ತನಗಾಗಿ ನ್ಯಾಯವನ್ನು ಕೇಳುತ್ತಿರಲಿಲ್ಲ.

ಧರ್ಮದ ಮತ್ತೊಂದು ಕ್ರಾಂತಿ ಹೀಗಿತ್ತು.

ಹೀಗೆ ಒಟ್ಟು ಎರಡು ಧಾರ್ಮಿಕ ಕ್ರಾಂತಿಗಳಿವೆ. ಒಂದು ಬಾಹ್ಯ ಕ್ರಾಂತಿಯಾದರೆ, ಮತ್ತೊಂದು ಆಂತರಿಕ ಕ್ರಾಂತಿ. ಬಾಹ್ಯ ಕ್ರಾಂತಿಯ ಪರಿಣಾಮವು ಧರ್ಮದ ಅಧಿಪತ್ಯವು ಉಳಿಯಬೇಕಾದ ಕ್ಷೇತ್ರಕ್ಕೆ ಸಂಬಂಧಿಸಿದೆ. ಮನುಷ್ಯ ಸಮಾಜದ ಪರಿವರ್ತನೆಗೆ ದೈವಿಕ ಪ್ರಭುತ್ವವು ನಿಯೋಜಿಸುವ ತಂತ್ರಗಳಿಗೆ ಆಂತರಿಕ ಕ್ರಾಂತಿ ಸಂಬಂಧಿಸಿದೆ. ಬಾಹ್ಯ ಕ್ರಾಂತಿಯು ವಾಸ್ತವವಾಗಿ ಧಾರ್ಮಿಕ ಕ್ರಾಂತಿಯೇ ಅಲ್ಲ. ತನಗೆ ಸಂಬಂಧಿಸದ ಕ್ಷೇತ್ರದಲ್ಲಿ ಧರ್ಮವು ನಡೆಸುತ್ತಿದ್ದ ಆಧಿಪತ್ಯದ ವಿರುದ್ಧ ವಿಜ್ಞಾನವು ಬಂಡೆದ್ದ ವಿಚಾರವದು. ಆಂತರಿಕ ಕ್ರಾಂತಿಯು ನಿಜವಾದ ಕ್ರಾಂತಿಯಾಗಿದ್ದು ಅದನ್ನು ಯಾವುದೇ ಕ್ರಾಂತಿಗಳೊಂದಿಗೆ ಹೋಲಿಸಬಹುದಾಗಿದೆ. ಮೂಲಭೂತ ಬದಲಾವಣೆಗಳು ಅದರಲ್ಲಿ ಅಡಕವಾಗಿರುತ್ತಿದ್ದವು. ಇದರಿಂದ ದೈವಿಕ ಪ್ರಭುತ್ವದ ನಿಯೋಜನೆಗಳು ಬದಲಾಗಬೇಕಾಯಿತು, ತಿದ್ದುಪಾಡಾಗಬೇಕಾಯಿತು ಮತ್ತು ಪುನರ್ರಚನೆ ಹೊಂದಬೇಕಾಯಿತು.

ದೈವಿಕ ಪ್ರಭುತ್ವದ ನಿಯೋಜನೆಯ ಪುರಾತನ ತಂತ್ರಗಳಲ್ಲಿ ಆಂತರಿಕ ಕ್ರಾಂತಿಯು ತಂದ ಪರಿವರ್ತನೆಗಳು ಎಷ್ಟು ಮಹತ್ವದವೆಂಬುದನ್ನು ಬಹು ಸುಲಭವಾಗಿ ಕಾಣಬಹುದಾಗಿದೆ. ಈ ಕ್ರಾಂತಿಯಿಂದಾಗಿ ದೇವರು ಒಂದು ಮತದ ಅಂಗವಾಗಿರುವುದು ನಿಂತುಹೋಯಿತು. ಇದರಿಂದಾಗಿ ಆತ ನಿಷ್ಪಕ್ಷಪಾತಿಯಾದ. ಜೈವಿಕ ಅರ್ಥದಲ್ಲಿ ದೇವರು ಇನ್ನು ಮುಂದೆ ಮನುಷ್ಯನ ತಂದೆಯಾಗಿರುವುದು ನಿಂತುಹೋಯಿತು. ಆತ ವಿಶ್ವದ ಸೃಷ್ಟಿಕರ್ತನಾದ. ಈ ರಕ್ತಸಂಬಂಧವನ್ನು ಕಡಿದುಹಾಕಿದ್ದರಿಂದ ದೇವರು ಶುಭದಾಯಕನೆಂದು ತಿಳಿಯಲು ಸಾಧ್ಯವಾಯಿತು. ಈ ಕ್ರಾಂತಿಯಿಂದಾಗಿ ಮನುಷ್ಯನು ದೇವರ ಅಪ್ಪಣೆಗಳನ್ನೆಲ್ಲಾ ಚಾಚೂ ತಪ್ಪದೆ ಪಾಲಿಸುವ

ಕುರುಡು ಆರಾಧಕನಾಗಿರುವುದು ತಪ್ಪಿಹೋಯಿತು. ಇದರಿಂದ ಮನುಷ್ಯನು ದೇವರ ಆದೇಶಗಳನ್ನು ನ್ಯಾಯೋಚಿತವಾಗಿ ತನ್ನ ಶ್ರದ್ಧಾಭಕ್ತಿಗಳ ಮೂಲಕ ವಿಮರ್ಶಿಸುವಂತಾಯಿತು. ಈ ಕ್ರಾಂತಿಯಿಂದಗಿ ದೇವರು ವ್ಯವಸ್ಥೆಯ ಕೇಂದ್ರ ಮಾತ್ರದಲ್ಲಿ ಸಮಾಜದ ಒಳಿತನ್ನು ಬಯಸುವವನು ಎಂಬ ಸ್ಥಿತಿಯೂ ಇಲ್ಲವಾಯಿತು. ಈ ದೈವಿಕ ವ್ಯವಸ್ಥೆಯಲ್ಲಿ ಸಮಾಜ ಮತ್ತು ಮನುಷ್ಯ ತಮ್ಮ ತಮ್ಮ ಸ್ಥಾನಗಳನ್ನು ಬದಲಾಯಿಸಿಕೊಂಡರು. ಮನುಷ್ಯನೇ ಇದರ ಕೇಂದ್ರವಾಗಿಬಿಟ್ಟ.

ಈ ಎಲ್ಲ ಕ್ರಾಂತಿಗಳ ವಿಶ್ಲೇಷಣೆಯ ಉದ್ದೇಶ, ದೈವಿಕ ಪ್ರಭುತ್ವದ ಮಾರ್ಗದರ್ಶಕ ಸೂತ್ರಗಳ ಮೂಲಕ ಒಂದು ಧರ್ಮದ ತಾತ್ವಿಕತೆಯನ್ನು ಅಳೆಯುವುದಕ್ಕೆ ಮಾನದಂಡವನ್ನು ಕಂಡುಕೊಳ್ಳುವುದೇ ಆಗಿದೆ. ತಾಳ್ಮೆಗೆಟ್ಟ ಓದುಗ ಆ ಮಾನದಂಡಗಳೆಲ್ಲಿವೆ? ಅವುಗಳೇನು/ ಎಂದು ಕೇಳಲಾರ. ಈಗ ಮಾಡಿರುವ ಚರ್ಚೆಯಲ್ಲಿ ನಿರ್ದಿಷ್ಟವಾಗಿ ಹೆಸರಿಸಿದ ಮಾನದಂಡಗಳನ್ನು ಓದುಗ ಗುರುತಿಸಿಲ್ಲದಿರಬಹುದು. ಆದರೆ ಯಾವುದು ಸರಿ? ಮತ್ತು ಯಾವುದು ತಪ್ಪು? ಎಂಬುದನ್ನು ತೀರ್ಮಾನಿಸುವುದರ ಸುತ್ತಮುತ್ತಲೇ ಎಲ್ಲ ಧಾರ್ಮಿಕ ಕ್ರಾಂತಿಗಳೂ ಉತ್ಕರ್ಷಗೊಂಡಿರುವುದನ್ನು ಓದುಗನು ಗುರುತಿಸುವಲ್ಲಿ ವಿಫಲನಾಗಲಾರ. ಹಾಗಿದ್ದಲ್ಲಿ, ಈ ಎಲ್ಲ ಚರ್ಚೆಯಲ್ಲಿ ಇಂಗಿತವಾಗಿಯೇ ಇದ್ದ ವಿಚಾರಗಳನ್ನು ನಾನು ವಾಚ್ಯವಾಗಿ ಹೇಳಬಯಸುತ್ತೇನೆ. ನಾವು ನಮ್ಮ ಚರ್ಚೆಯನ್ನು ಪುರಾತನ ಸಮಾಜ ಮತ್ತು ಆಧುನಿಕ ಸಮಾಜದ ವ್ಯತ್ಯಾಸಗಳನ್ನು ಗುರುತಿಸುವ ಮೂಲಕ ಆರಂಭಿಸಿದೆವು. ಧಾರ್ಮಿಕ ಆದರ್ಶದ ಗುರಿಯಾಗಿ ಒಟ್ಟು ಸಮಾಜವೇ ಇರುವುದನ್ನು ಕಂಡುಕೊಂಡಿದ್ದೇವೆ. ಕ್ರಾಂತಿಯ ಮತ್ತೊಂದು ಕಡೆ ಆಧುನಿಕ ಸಮಾಜದ ಆದರ್ಶದ ಗುರಿಯಾಗಿ ವ್ಯಕ್ತಿಯೇ ಇರುವುದನ್ನು ಗಮನಿಸಿದ್ದೇವೆ. ಪ್ರಮಾಣದ ಲೆಕ್ಕಾಚಾರದಲ್ಲಿ ಇದನ್ನು ಹೇಳುವುದಾದರೆ ನಿರ್ಣಾಯಕವಾದ ಕೆಲವು ವಿಚಾರಗಳನ್ನು ಹೇಳಬಹುದು. ಪುರಾತನ ಸಮಾಜದಲ್ಲಿ ಯಾವುದು ಸರಿ? ಯಾವುದು ತಪ್ಪು? ಎಂದು ಹೇಳುವುದಕ್ಕೆ ಉಪಯುಕ್ತತೆಯೇ ಒರೆಗಲ್ಲಾಗಿದ್ದರೆ, ಆಧುನಿಕ ಸಮಾಜದಲ್ಲಿ ನ್ಯಾಯ ಅಥವಾ ಋಜುತ್ವವೇ ಒರೆಗಲ್ಲು. ಹೀಗೆ ಧಾರ್ಮಿಕ ವ್ಯವಸ್ಥೆಗೆ ಸಂಬಂಧಿಸಿ ಸಮಾಜದ ಕೇಂದ್ರ ಬಿಂದುವಾಗಿ ಸಮಾಜವನ್ನು ಪಲ್ಲಟಿಸಿ 'ವ್ಯಕ್ತಿ'ಯನ್ನು ಸ್ಥಾಪಿಸುವುದಾಗಿರದೆ ಪ್ರಮಾಣ ನಿಷ್ಠವುಳ್ಳದ್ದಾಗಿ ಮಾನದಂಡಗಳ ಸಂಬಂಧವಾಗಿ ಈ ಧಾರ್ಮಿಕ ಕ್ರಾಂತಿ ನಡೆದಿದೆ.

ನಾನು ಸೂಚಿಸಿರುವ ಮಾನದಂಡಗಳನ್ನು ಕುರಿತು ಕೆಲವರು ಆಕ್ಷೇಪಣೆ ಎತ್ತಬಹುದು. ಬಹುಶಃ ಅವುಗಳನ್ನು ಮುಟ್ಟುವುದಕ್ಕೆ ಇದೊಂದು ನೂತನ ಮಾರ್ಗವಾಗಬಹುದು. ಧರ್ಮದ ತಾತ್ವಿಕತೆಯನ್ನು ನಿರ್ಣಯಿಸುವುದಕ್ಕೆ ಅವು ಸ್ಪಷ್ಟವಾದ ಮಾನದಂಡಗಳೆಂಬುದರ ಬಗೆಗೆ ನನಗೆ ಸ್ವಲ್ಪವೂ ಅನುಮಾನವಿಲ್ಲ. ಮೊತ್ತಮೊದಲನೆಯದಾಗಿ, ಒಂದು ಮಾನದಂಡದ ಮೂಲಕ ವ್ಯಕ್ತಿಗಳ ಗುಣಮಟ್ಟದಲ್ಲಿ ಸರಿತಪ್ಪುಗಳನ್ನು ಮನುಷ್ಯರು ನಿರ್ಣಯಿಸಲು ಸಾಧ್ಯವಾಗಬೇಕು. ಎರಡನೆಯದಾಗಿ, ಚಾಲ್ತಿಯಲ್ಲಿರುವ ತಿಳಿವಳಿಕೆಯಂತೆ ನೈತಿಕವಾಗಿ ಒಳ್ಳೆಯದೆಂದರೇನು? ಎನ್ನುವುದನ್ನು ನಿರ್ಧರಿಸಲು ಮಾನದಂಡವು ನೆರವಾಗಬೇಕು. ಈ ಎರಡೂ ನಿಟ್ಟಿನಿಂದ ಅವು ನಿಜವಾದ ಮಾನದಂಡಗಳೆಂದು ಕಂಡುಬರುತ್ತಿವೆ. ಯಾವುದು ಸರಿ? ಯಾವುದು ತಪ್ಪು? ಎಂಬುದನ್ನು ನಾವು ನಿರ್ಣಯಿಸಲು ಅವು ನೆರವಾಗುತ್ತದೆ. ಅವುಗಳನ್ನು ಅನುಸರಿಸುವ ಸಮಾಜಕ್ಕೆ ಅವು ತಕ್ಕಂತೆ ಹೊಂದಿಕೊಳ್ಳುತ್ತವೆ. ಒಂದು ಮಾನದಂಡವಾಗಿ ಉಪಯುಕ್ತತೆ ಎಂಬುದು ಪುರಾತನ ಸಮಾಜಕ್ಕೆ ಹೊಂದಿಕೆಯಾಗಿತ್ತು. ಅಲ್ಲಿ ಸಮಾಜವೇ ಕೊಟ್ಟ ಕೊನೆಯ ಗುರಿ. ನೈತಿಕತೆ ಎಂಬುದು ಸಮಾಜದ ಒಳಿತಿಗಾಗಿ ಎಂಬ ಅಭಿಪ್ರಾಯವನ್ನೇ ಅಂಗೀಕರಿಸಲಾಗಿತ್ತು. 'ನ್ಯಾಯ' ಎಂಬುದಕ್ಕೆ ಒಂದು ಮಾನದಂಡವಾಗಿ ಆಧುನಿಕ ಸಮಾಜಕ್ಕೆ ಉಚಿತವಾಗಿರಲು ಕಾರಣ ಅಲ್ಲಿ ವ್ಯಕ್ತಿಯೇ ಪ್ರಧಾನ. ನೈತಿಕತೆ

ಎಂಬುದು ವ್ಯಕ್ತಿಯ ಹಿತವನ್ನು ಕಾಪಾಡುತ್ತದೆ ಎಂಬುದಕ್ಕಾಗಿ ಅದಕ್ಕೆ ಮಹತ್ವ ದೊರೆಯಿತು. ನೈತಿಕವಾಗಿ ಈ ಮಾನದಂಡಗಳಲ್ಲಿ ಯಾವುದು ಶ್ರೇಷ್ಠ? ಎಂಬುದರ ಬಗೆಗೆ ಭಿನ್ನಾಭಿಪ್ರಾಯವಿರಬಹುದು. ಆದರೆ ಇವು ಉಚಿತ ಮಾನದಂಡಗಳೇ ಎಂಬುದರ ಬಗೆಗೆ ಭಿನ್ನಾಭಿಪ್ರಾಯಗಳಿವೆ ಎಂದು ನನಗನಿಸುವುದಿಲ್ಲ. ಈ ಮಾನದಂಡಗಳು ಸಾಕಷ್ಟು ಪಾರಮಾರ್ಥಿಕವಲ್ಲವೆಂದು ಹೇಳುವುದಾದರೆ, ನನ್ನ ಉತ್ತರವಿದು; ಒಂದು ಧರ್ಮದ ತಾತ್ವಿಕತೆಯನ್ನು ನಿರ್ಣಯಿಸುವ ಮಾನದಂಡವು ಪಾರಮಾರ್ಥಿಕವಾಗಿರುವುದಾದರೆ ಅದು ಪ್ರಾಪಂಚಿಕವಾಗಿಯೂ ಇರಬೇಕಾಗುತ್ತದೆ, ಅದೇನಿದ್ದರೂ ಹಿಂದೂ ಧರ್ಮದ ತಾತ್ವಿಕತೆಯನ್ನು ನಿರ್ಣಯಿಸಲು ನಾನು ಅಂಗೀಕರಿಸಿರುವುದು ಈ ಮಾನದಂಡಗಳೇ ಎಂದು ಒಪ್ಪಿಕೊಳ್ಳುತ್ತೇನೆ.

## II

ಇದೊಂದು ಬಳಸು ದಾರಿಯ ಪಯಣ. ಆದರೆ ಮುಖ್ಯ ಪ್ರಶ್ನೆಗೆ ಸಂಬಂಧಿಸಿದ ಪೀಠಿಕೆಯಾಗಿ ಯಾವುದೇ ಚರ್ಚೆಗೆ ಇದರ ಅಗತ್ಯವಿದೆ. ಆದರೂ ಅನ್ವೇಷಣೆಗೆ ಆರಂಭಿಸಿದಾಗ ಆರಂಭದ ತೊಡಕುಗಳೂ ಎದುರಾಗುತ್ತವೆ. ಯಾವುದೇ ವಿಚಾರಣೆಗೆ 'ಹಿಂದೂ' ಸಿದ್ಧವಿಲ್ಲ. ಆತ 'ಧರ್ಮಕ್ಕೆ ಯಾವುದೇ ಪ್ರಾಮುಖ್ಯವಿಲ್ಲ'ವೆನ್ನುತ್ತಾನೆ ಅಥವಾ ತೌಲನಿಕ ಧರ್ಮಶಾಸ್ತ್ರದ ಅಧ್ಯಯನದ ಆಶ್ರಯ ಪಡೆಯುತ್ತಾನೆ. ಇವೆರಡೂ ನಿಲುವುಗಳು ತಪ್ಪು ಕಲ್ಪನೆಯಿಂದಾಗಿವೆ ಮತ್ತು ವಿಶ್ವಾಸಾರ್ಹವಲ್ಲದಂತಿವೆ. ಒಂದು ಸಾಮಾಜಿಕ ಶಕ್ತಿಯಾಗಿ ಧರ್ಮವನ್ನು ಗೌಣವೆಂದು ತಿಳಿಯುವಂತಿಲ್ಲ. ಹರ್ಬರ್ಟ್ ಸ್ಪೆನ್ಸರ್ ಬಹಳ ಚೆನ್ನಾಗಿ ವಿವರಿಸಿರುವಂತೆ 'ಧರ್ಮವು ಚರಿತ್ರೆಯಲ್ಲಿ ಹಾಸು ಹೊಕ್ಕಾಗಿರುವ ಒಂದು ನೇಯ್ಗೆ.' ಎಲ್ಲ ಸಮಾಜಕ್ಕೂ ಈ ಹೇಳಿಕೆ ಅನ್ವಯಿಸುತ್ತದೆ. ಭಾರತೀಯ ಚರಿತ್ರೆಯ ಎಲ್ಲ ನೆಲೆಯಲ್ಲಿಯೂ ಧರ್ಮವು ಹೆಣೆದುಕೊಂಡಿದೆ ಮಾತ್ರವಲ್ಲ ಹಿಂದುವಿನ ಮನಸ್ಸಿನ ಉದ್ದಗಲದಲ್ಲಿ ಇದು ತೀವ್ರವಾಗಿ ಬೇರೂರಿದೆ. ಹಿಂದೂವಿನ ಬದುಕಿನ ಪ್ರತಿಯೊಂದು ಘಟನೆಗಳೂ ಧರ್ಮದಿಂದ ನಿಯಂತ್ರಿತವಾಗುತ್ತವೆ. ಬದುಕಿರುವಾಗ ಹೇಗೆ ಜೀವಿಸಬೇಕು? ಸತ್ತ ಬಳಿಕ ಅವನ ದೇಹವನ್ನು ಹೇಗೆ ವಿಸರ್ಜಿಸಬೇಕು? ಎಂಬುದನ್ನೆಲ್ಲಾ ಧರ್ಮವೇ ಅಲ್ಲಿ ಆದೇಶಿಸುತ್ತದೆ. ಲೈಂಗಿಕಾಪೇಕ್ಷೆಗಳಲ್ಲಿಯೂ ಆತ ಹೇಗೆ? ಎಲ್ಲಿ? ತೊಡಗಬೇಕೆಂಬುದನ್ನು ಅದು ಹೇಳುತ್ತದೆ. ಒಂದು ಮಗು ಹುಟ್ಟಿದಾಗ ಯಾವ ಯಾವ ಆಚರಣೆಗಳನ್ನು ನಡೆಸಬೇಕು? ನಾಮಕರಣ ಹೇಗಿರಬೇಕು? ಕೇಶಮುಂಡನ ಹೇಗಾಗಬೇಕು? ಮೊದಲ ತುತ್ತನ್ನು ಮಗುವಿನ ಬಾಯಿಗೆ ಹೇಗೆ ಇಡಬೇಕು? ಮುಂತಾದವನ್ನೆಲ್ಲಾ ಧರ್ಮವೇ ಸ್ಪಷ್ಟವಾಗಿ ಅವನಿಗೆ ಹೇಳುತ್ತದೆ. ಅವನು ಯಾವ ಕಸುಬನ್ನು ಅವಲಂಬಿಸಬೇಕು? ಯಾವ ಹೆಣ್ಣನ್ನು ಮದುವೆಯಾಬೇಕು? ಎಂಬುದನ್ನು ಧರ್ಮವೇ ತಿಳಿಸಿಕೊಡುತ್ತದೆ. ಆತ ಯಾರೊಡನೆ ಭೋಜನ ಮಾಡಬಹುದು? ಯಾವ ಬಗೆಯ ತಿನಿಸುಗಳನ್ನು ಆತ ತಿನ್ನಬಹುದು? ತರಕಾರಿಯಲ್ಲಿಯೂ ಯಾವುದು ಪ್ರಶಸ್ತ? ಯಾವುದು ನಿಷಿದ್ಧ? ಎಂಬುದನ್ನು ಧರ್ಮವೇ ತಿಳಿಸಿಕೊಡುತ್ತದೆ. ದಿನದ ವೇಳೆಯನ್ನು ಆತ ಹೇಗೆ ಕಳೆಯಬೇಕು? ಎಷ್ಟು ಬಾರಿ ಊಟ ಮಾಡಬೇಕು? ಎಷ್ಟು ಬಾರಿ ಪೂಜೆ ಪುನಸ್ಕಾರಗಳಲ್ಲಿ ಆತ ತೊಡಗಬೇಕು ಎಂಬುದನ್ನು ಅದು ನಿರೂಪಿಸಿದೆ. ಧರ್ಮವು ಒಳಗೊಳ್ಳದ ವಿಧಿವತ್ತಾಗಿ ಕಟ್ಟಳೆ ಹಾಕದ ಯಾವ ಕೆಲಸವನ್ನೂ ಹಿಂದೂ ಮಾಡಬಾರದು. ಹೀಗಿದ್ದೂ ವಿದ್ಯಾವಂತ ಹಿಂದೂಗಳು ಅವುಗಳನ್ನು ಉಪೇಕ್ಷಿಸಬಹುದಾದ ವಿಚಾರವೆಂದು ತಿಳಿದಿರುವುದು ನನಗೆ ಆಶ್ಚರ್ಯ ತರಿಸುವ ಸಂಗತಿಯಾಗಿದೆ.

ಅದಲ್ಲದೆ, ಧರ್ಮವೆಂಬುದೊಂದು ಸಾಮಾಜಿಕ ಶಕ್ತಿ. ಈಗಾಗಲೇ ನಾನು ಎತ್ತಿ ತೋರಿಸಿರುವಂತೆ ದೈವಿಕ ಪ್ರಭುತ್ವದ ಯೋಜನೆಯಲ್ಲಿ ಧರ್ಮವೇ ಪ್ರಮುಖವಾಗಿರುತ್ತದೆ. ಸಮಾಜವು ಅನುಸರಿಸಲು ಈ

ಯೋಜನೆಯು ಆದರ್ಶಪ್ರಾಯವಾಗಿರುತ್ತದೆ. ನಿರ್ದಿಷ್ಟವಾಗಿ ರೂಪಿಸಿದ್ದು ಎಂಬ ಅರ್ಥದಲ್ಲಿ ಈ ಆದರ್ಶಕ್ಕೆ ಅಸ್ತಿತ್ವವಿಲ್ಲದಿರಬಹುದು. ಅಸ್ತಿತ್ವವಿಲ್ಲದಿದ್ದರೂ ಅದು ವಾಸ್ತವವಾದದ್ದು. ಒಂದು ಆದರ್ಶದಲ್ಲಿ ಮೂಲಭೂತವಾದುದು ಏನಿದೆಯೋ ಅದು ಇಲ್ಲಿ ಸಂಪೂರ್ಣವಾಗಿ ಪರಿಣಾಮಕಾರಿಯಾಗಿದೆ. ಧರ್ಮದ ಪ್ರಾಮುಖ್ಯವನ್ನು ನಿರಾಕರಿಸುವವರು ಇದನ್ನು ಮರೆಯುತ್ತಾರೆ. ಶುದ್ಧ ಜಾತ್ಯತೀತವಾಗಿ ಸಂಯುಕ್ತಗೊಂಡ ಧಾರ್ಮಿಕ ಆದರ್ಶಕ್ಕಿರುವ ಶಕ್ತಿ ಮತ್ತು ಪ್ರಭಾವಗಳನ್ನು ತಿಳಿಯುವಲ್ಲಿ ಅವರು ಸೋತುಹೋಗುತ್ತಾರೆ. ಆದರ್ಶವು ಧಾರ್ಮಿಕವಿರಲಿ, ಜಾತ್ಯಾತೀತವಿರಲಿ, ಒಂದು ಆದರ್ಶಕ್ಕೂ ವಾಸ್ತವಕ್ಕೂ ಇರುವ ಅಂತರದಿಂದಾಗಿ ಬಹುಶಃ ಹೀಗಾಗುತ್ತದೆ. ಇವೆರಡೂ ಆದರ್ಶಗಳ ಶಕ್ತಿಯ ತಾರತಮ್ಯದ ಅರಿವನ್ನು ಪಡೆಯಬೇಕಾದರೆ ಮತ್ತೊಂದು ಪರೀಕ್ಷೆಯಿಂದ ಅಳೆಯಬೇಕು. ಮನುಷ್ಯನ ಪ್ರಾಪಂಚಿಕ ಪ್ರವೃತ್ತಿಯನ್ನು ಗೆಲ್ಲುವ ಶಕ್ತಿ ಯಾವುದಕ್ಕಿದೆ ಎಂಬುದರ ಆಧಾರದ ಮೇಲೆ ಪರೀಕ್ಷಿಸಬಹುದು.

ಆದರ್ಶವೆಂಬುದು ದೂರಗಾಮಿಯಾದುದರ ಬಗೆಗೆ ಸಂಬಂಧಿಸಿದ್ದು. ಮನುಷ್ಯನ ಪ್ರಾಪಂಚಿಕ ಪ್ರವೃತ್ತಿಗಳಾದರೋ ತತ್‌ಕ್ಷಣದ ವರ್ತಮಾನಕ್ಕೆ ಸಂಬಂಧಿಸಿವೆ. ಈಗ ಮನುಷ್ಯನ ಪ್ರಾಪಂಚಿಕ ಪ್ರವೃತ್ತಿಗಳ ಎದುರು ಈ ಎರಡೂ ಆದರ್ಶಗಳನ್ನೂ ಒಡ್ಡಿ ಪರೀಕ್ಷಿಸಿದರೆ ಸಂದೇಹಕ್ಕೆಡೆಯಿಲ್ಲದಂತೆ ಅವುಗಳ ವ್ಯತ್ಯಾಸ ಹೊರಬರುತ್ತದೆ. ಧರ್ಮದ ನಿಯತಿಗೂ ಮನುಷ್ಯನ ಪ್ರಾಪಂಚಿಕ ಪ್ರವೃತ್ತಿಗಳಿಗೂ–ಅವೆಷ್ಟೇ ಪರಸ್ಪರ ವಿರುದ್ಧವಾಗಿದ್ದರೂ–ಧರ್ಮಕ್ಕೆ ಅಧೀನವಾಗಿಯೇ ಎಲ್ಲವೂ ನಡೆಯಬೇಕಾಗುತ್ತದೆ. ಜಾತ್ಯಾತೀತ ಆದರ್ಶಗಳಿಗೂ ಪ್ರಾಪಂಚಿಕ ಪ್ರವೃತ್ತಿಗಳಿಗೂ ಘರ್ಷಣೆಯಾದಾಗ ಪ್ರಾಪಂಚಿಕ ಪ್ರವೃತ್ತಿಗಳೇ ಗೆಲ್ಲುತ್ತವೆ. ಪ್ರಾಪಂಚಿಕ ಲಾಭವೇನೇ ಇರಲಿ, ಧಾರ್ಮಿಕ ಆದರ್ಶವೇ ಮಾನವಕೋಟಿಯ ಮೇಲೆ ಹಿಡಿತವಿರಿಸಿಕೊಂಡಿದೆ ಎಂದೇ ನಾವು ತಿಳಿಯಬೇಕಾಗಿದೆ, ಶುದ್ಧವಾದ ಜಾತ್ಯತೀತ ಆದರ್ಶದ ಬಗೆಗೆ ಹೀಗೆ ಹೇಳಲು ಬರುವುದಿಲ್ಲ. ಸುಖೋಪಭೋಗಗಳ ಅನುಕೂಲಗಳನ್ನು ಅದು ಎಷ್ಟು ತಂದುಕೊಡಬಲ್ಲದು ಎಂಬುದರ ಮೇಲೆ ಅದರ ಶಕ್ತಿ ನಿಂತಿದೆ. ಮನುಷ್ಯನ ಮನಸ್ಸಿನ ಮೇಲೆ ಇವೆರಡೂ ಆದರ್ಶಗಳ ಪ್ರಭಾವ ಮತ್ತು ಪ್ರಭುತ್ವಗಳ ವ್ಯತ್ಯಾಸವೆಂತಹುದು ಎಂಬುದು ಇದರಿಂದ ಸ್ಪಷ್ಟವಾಗುತ್ತದೆ. ಎಲ್ಲಿಯವರೆಗೆ ಒಂದು ಆದರ್ಶದ ಮೇಲೆ ನಂಬಿಕೆಯಿರುತ್ತದೆಯೋ ಅಲ್ಲಿಯವರೆಗೆ ಧಾರ್ಮಿಕ ಆದರ್ಶವು ಮೋಸಮಾಡುವುದಿಲ್ಲ. ಧರ್ಮವನ್ನು ಉಪೇಕ್ಷಿಸುವುದೆಂದರೆ ವಿದ್ಯುತ್ ಪ್ರವಹಿಸುತ್ತಿರುವ ತಂತಿಯನ್ನು ಉಪೇಕ್ಷಿಸಿದಂತೆ.

ಎಲ್ಲ ಧರ್ಮಗಳೂ ಸತ್ಯವಾಗಿದೆ ಮತ್ತು ಒಳ್ಳೆಯದನ್ನೇ ಮಾಡುತ್ತಿವೆ ಎಂಬ ನಂಬಿಕೆಗೆ ಬದ್ಧವಾಗಿರುವುದೂ ತಪ್ಪು! ಇದನ್ನು ಸ್ಪಷ್ಟವಾಗಿ ಸಿದ್ಧಮಾಡಿ ತೋರಿಸಬಹುದು. ಧರ್ಮಗಳ ತೌಲನಿಕ ಅಧ್ಯಯನದ ಫಲವಾಗಿ ಈ ನಂಬಿಕೆ ಬೆಳೆದಿದೆ ಎಂದು ಹೇಳಲು ವಿಷಾದಪಡಬೇಕಾಗಿದೆ. ಧರ್ಮಗಳ ತೌಲನಿಕ ಅಧ್ಯಯನವು ಮಾನವಕೋಟಿಗೆ ಒಂದು ದೊಡ್ಡ ಸೇವೆಯನ್ನು ಮಾಡಿದೆ. ವಿವಿಧ ಧರ್ಮಗಳು ಕೊಚ್ಚಿಕೊಳ್ಳುತ್ತಿದ್ದ–ತಮ್ಮ ತಮ್ಮ ಧರ್ಮಗಳೇ ಸತ್ಯವಾದವು, ಉತ್ತಮವಾದವು ಎಂಬ–ಅಹಂಕಾರವನ್ನು ಅದು ಸಂಪೂರ್ಣವಾಗಿ ತೊಡೆದುಹಾಕಿದೆ. ಪೂರ್ವನಿರ್ಧಾರಿತ ಅಸಂಗತ ಆಧಾರಗಳ ಮೇಲೆ ನಿಜ ಧರ್ಮಗಳು ಮತ್ತು ಹುಸಿ ಧರ್ಮಗಳ ನಡುವಿನ ಸ್ಪಷ್ಟವ್ಯತ್ಯಾಸಗಳನ್ನು ತೌಲನಿಕ ಅಧ್ಯಯನ ಕಿತ್ತು ಹಾಕಿದೆಯೆಂಬುದು ನಿಜವಾದರೂ ಇದರ ಜೊತೆಯಲ್ಲಿ ಧರ್ಮವನ್ನು ಕುರಿತು ಕೆಲವು ತಪ್ಪು ತಿಳಿವಳಿಕೆಗಳನ್ನೂ ಅದು ತಂದುಹಾಕಿದೆ. ಅತ್ಯಂತ ಅಪಾಯಕಾರಿಯಾದ ಒಂದು ತಪ್ಪು ತಿಳಿವಳಿಕೆಯೆಂದರೆ ಈಗಾಗಲೇ ನಾನು ಪ್ರಸ್ತಾಪಿಸಿರುವಂತೆ "ಎಲ್ಲ ಧರ್ಮಗಳೂ ಒಂದೇ ರೀತಿಯಲ್ಲಿ ಶ್ರೇಷ್ಠವಾಗಿವೆ, ಅವುಗಳ ನಡುವೆ ವ್ಯತ್ಯಾಸವೇನೂ ಇಲ್ಲ" ಎಂಬುದು. ಇದಕ್ಕಿಂತ ದೊಡ್ಡ ತಪ್ಪು ಇನ್ನೊಂದಿಲ್ಲ. ಧರ್ಮವೆಂಬುದು ಒಂದು ಸಂಸ್ಥೆ ಅಥವಾ ಒಂದು ಪ್ರಭಾವ. ಎಲ್ಲ ಸಾಮಾಜಿಕ ಸಂಸ್ಥೆ ಹಾಗೂ ಪ್ರಭಾವಗಳಂತೆ ಅದರೆ ಹಿಡಿತದಲ್ಲಿರುವವರೆಗೆ ಅದು ನೆರವಾಗಬಹುದು

ಅಥವಾ ಅನ್ಯಾಯವೆಸಗಬಹುದು. ಪ್ರೊ. ತೈಲೆಯವರು ಹೇಳಿರುವಂತೆ "ಧರ್ಮವೆಂಬುದು ಮಾನವ ಕೋಟಿಗೆ ಒಂದು ಮಹಾನ್ ಚಾಲಕಶಕ್ತಿ. ರಾಷ್ಟ್ರಗಳು ಹುಟ್ಟುವುದಕ್ಕೆ, ಇಬ್ಭಾಗವಾಗಿ ಹೋಳಾಗುವುದಕ್ಕೆ ಸಾಮ್ರಾಜ್ಯಗಳು ಒಂದುಗೂಡುವುದಕ್ಕೆ, ಹರಿದು ಹಂಚಿಹೋಗುವುದಕ್ಕೆ ಅದು ಕಾರಣವಾಗಿದೆ. ಅತ್ಯಂತ ಬರ್ಬರವಾದ ಅನಾಗರಿಕ ಕೃತ್ಯಗಳನ್ನು ಅದು ಬೆಂಬಲಿಸಿದೆ. ಅತ್ಯಂತ ಲಂಪಟತನದ ಧಾರ್ಮಿಕ ಆಚರಣೆಗಳಿಂದ ಸ್ಫೂರ್ತಿ ಹೊಂದಿ ಮಹಾನ್ ಕಾರ್ಯಗಳು ನಡೆದಿವೆ. ಪೌರುಷ, ತ್ಯಾಗ, ಭಕ್ತಿಯ ಕಾರಣವಾಗಿ ಮಹಾ ಯುದ್ಧಗಳು ಬಂಡಾಯಗಳು ಹಿಂಸೆಗಳೂ ನಡೆದಿವೆ. ಪರಿಣಾಮವಾಗಿ, ಸ್ವಾತಂತ್ರ್ಯ, ಸುಖ, ಶಾಂತಿಯನ್ನು ರಾಷ್ಟ್ರಗಳು ಪಡೆದಿವೆ. ಒಂದು ಕಾಲದಲ್ಲಿ ಮಹಾ ದಬ್ಬಾಳಿಕೆಯಾದರೆ ಮತ್ತೊಮ್ಮೆ ಬಂಡಾಯ; ಮಗುದೊಮ್ಮೆ ಶ್ರೇಷ್ಠ ನಾಗರಿಕತೆಯ ಸಮೃದ್ಧಿ; ಬಳಿಕ ಮಹಾವೈರಿಯಾದ ವಿಜ್ಞಾನ ಮತ್ತು ಕಲೆಗಳ ಪ್ರಗತಿ."

ಈ ಬಗೆಯ ವಿಚಿತ್ರವಾದ ಹೋಲಿಕೆಗಳನ್ನು ಕಾಣಿಸಬಲ್ಲ ಒಂದು ಶಕ್ತಿಯನ್ನು ಅದು ಯಾವ ರೂಪದಲ್ಲೇ ಇರಲಿ, ಯಾವ ಆದರ್ಶಗಳಿಗೇ ಅದು ಪೂರಕವಾಗಿರಲಿ, ಪರೀಕ್ಷಿಸದೆ ಅದು ಶ್ರೇಷ್ಠವಾದುದೆಂದು ಒಪ್ಪಿಕೊಳ್ಳಬೇಕಾಗುತ್ತದೆ, ನಿರ್ದಿಷ್ಟ ಧರ್ಮವೊಂದು ಯಾವ ಬಗೆಯ ಸಾಮಾಜಿಕ ಆದರ್ಶಗಳನ್ನು ದೈವಿಕ ಪ್ರಭುತ್ವದ ಯೋಜನೆಯಾಗಿ ಮುಂದಿಡುತ್ತದೆ ಎಂಬುದರ ಮೇಲೆ ಇದು ಅವಲಂಬಿಸಿದೆ. ತೌಲನಿಕ ಧಾರ್ಮಿಕ ಅಧ್ಯಯನದ ಕೊನೆಗೆ ಅದು ಆರಂಭವಾಗುತ್ತದೆ. ಎಷ್ಟು 'ಧರ್ಮಗಳಿದ್ದರೂ ಅವೆಲ್ಲ ಸಮಾನವಾಗಿ ಒಳ್ಳೆಯವಾಗಿವೆ', ಎಂದು ಹೇಳುವ ಮೂಲಕ, ವಾಸ್ತವತೆಯಿಂದ ಹಿಂದೂಗಳು ತಪ್ಪಿಸಿಕೊಂಡಂತಾಗುತ್ತದೆ. ವಸ್ತುಸ್ಥಿತಿ ಅವರು ತಿಳಿದುಕೊಂಡಿರುವಂತಿಲ್ಲ. ವಿಚಾರಣೆಯಿಂದ ತಪ್ಪಿಸಿಕೊಂಡು ಅಡಗಿಕೊಳ್ಳಲು ಹಿಂದೂವು ಎಷ್ಟೇ ಪ್ರಯತ್ನಿಸಿದರೂ ಪಾರಾಗಲೂ ದಾರಿಯೇ ಇಲ್ಲ. ಅವನು ಅದನ್ನು ಎದುರಿಸಲೇಬೇಕು.

## III

ಇದೀಗ, ವಿಷಯವನ್ನು ಪ್ರಸ್ತಾಪಿಸಬಹುದು. ಹಿಂದೂ ಧರ್ಮದ ತಾತ್ವಿಕತೆಯನ್ನು ನಿರ್ಣಯಿಸಲು 'ನ್ಯಾಯ'ದ ಪರೀಕ್ಷೆ ಮತ್ತು 'ಉಪಯುಕ್ತತೆ' ಯ ಪರೀಕ್ಷೆ ಎಂಬ ಎರಡೂ ಪರೀಕ್ಷೆಗಳನ್ನು ಅಳವಡಿಸಲು ನಾನು ಇಷ್ಟಪಡುತ್ತೇನೆ. ಮೊದಲು ನ್ಯಾಯದ ಪರೀಕ್ಷೆಯನ್ನು ಅನ್ವಯಿಸಬಹುದಾಗಿದೆ. ಹಾಗೆ ಮಾಡುವುದಕ್ಕಿಂತ ಮುಂಚೆ ನನ್ನ ಅಭಿಪ್ರಾಯದಲ್ಲಿ ನ್ಯಾಯದ ನಿಯಮಗಳಾವುವು ಎಂಬುದನ್ನು ನಾನು ವಿವರಿಸಬೇಕಾಗಿದೆ, ಪ್ರೊ. ಬರ್ಗ್‌ಮನ್‌ರವರಿಗಿಂತ ಚೆನ್ನಾಗಿ ಈ ವಿಚಾರವನ್ನು ಮತ್ತಾರೂ ವಿವರಿಸಿಲ್ಲ.[೧] ಅವರ ವಿವರಣೆ ನೈತಿಕ ವ್ಯವಸ್ಥೆಯೊಂದರ ಅಡಿಪಾಯದಂತಿರುವ ಎಲ್ಲ ನಿಯಮಗಳ ಸಾರಸಂಗ್ರಹದಂತಿದೆ. ಸಮಾನತೆ ಮತ್ತು ಸುಸಂಗತ ಪರಿಹಾರದ ತತ್ವವನ್ನು ನ್ಯಾಯಪರತೆ ಎತ್ತಿ ಹಿಡಿಯುತ್ತದೆ. ಕಾನೂನು ಮತ್ತು ನಿಯಮಗಳು, ಸರಿಯಾದುವು ಮತ್ತು ಋಜುಮಾರ್ಗಗಳು ಸಮಾನತೆಯ ಮೌಲ್ಯಕ್ಕೆ ಸಂಬಂಧಪಡುತ್ತವೆ. ಎಲ್ಲ ಮನುಷ್ಯರೂ ಸಮಾನರೆನ್ನುವುದಾದರೆ, ಎಲ್ಲರೂ ಒಂದೇ ಮೂಲಕ್ಕೆ ಸೇರುತ್ತಾರೆ ಮತ್ತು ಸಾರಸಂಗ್ರಹದಲ್ಲಿ ಒಂದೇ ಆಗಿದ್ದಾರೆ. ಆದುದರಿಂದ ಮೂಲಭೂತ ಹಕ್ಕುಗಳು ಸಮಾನ ಸಮಾನ ಸ್ವಾತಂತ್ರ್ಯಗಳಿಗೆ ಎಲ್ಲರೂ ಬಾಧ್ಯವಾಗಿರುತ್ತಾರೆ. ಸಂಗ್ರಹವಾಗಿ ಹೇಳುವುದಾದರೆ ಸ್ವಾತಂತ್ರ್ಯ, ಸಮಾನತೆ ಮತ್ತು ಸಹೋದರತೆಗೆ 'ನ್ಯಾಯ'ವೆಂಬುದು ಮತ್ತೊಂದು ಹೆಸರಾಗಿದೆ. 'ನ್ಯಾಯ'ವೆಂಬುದನ್ನು ನಾನು ಈ ಅರ್ಥದಲ್ಲಿ ಹಿಂದೂ ಧರ್ಮವನ್ನು ಅಳೆಯುವುದಕ್ಕೆ ಬಳಸುತ್ತಿದ್ದೇನೆ[೨].

---

೧. ಟೂಮೊರ್‍ಯಾಲಿಟೀಸ್.

೨. 'ನ್ಯಾಯ'ದ ಮತ್ತೊಂದು ವ್ಯಾಖ್ಯಾನಕ್ಕೆ – ನೋಡಿ, ಜೆ.ಎಸ್.ಮಿಲ್, 'ಯುಟಿಲಿಟೇರಿಯಾನಿಸಂ'.

ಹಿಂದೂ ಧರ್ಮ ಈ ಸೂತ್ರಗಳಲ್ಲಿ ಯಾವುದನ್ನು ಅಂಗೀಕರಿಸುತ್ತದೆ? ಈ ಪ್ರಶ್ನೆಯನ್ನು ನಾವು ಒಂದೊಂದಾಗಿ ಎತ್ತಿಕೊಳ್ಳೋಣ:

೧. ಹಿಂದೂ ಧರ್ಮವು ಸಮಾನತೆಯನ್ನು ಒಪ್ಪುತ್ತದೆಯೇ?

ಈ ಪ್ರಶ್ನೆಯನ್ನು ಎತ್ತಿದೊಡನೇ ನಮ್ಮ ಮನಸ್ಸಿನಲ್ಲಿ ಜಾತಿ ವ್ಯವಸ್ಥೆಯ ವಿಚಾರ ಬರುತ್ತದೆ. ವಿವಿಧ ಜಾತಿಗಳೆಲ್ಲ ಸಮಾನಾಂತರವಾಗಿ ಏಕ ನೆಲೆಯಲ್ಲಿ ನಿಂತಿಲ್ಲದಿರುವುದು, ವಿವಿಧ ಜಾತಿಗಳು ಶ್ರೇಣೀಕೃತವಾಗಿ ಒಂದರ ಮೇಲೊಂದರಂತೆ ಇರುವುದು ಜಾತಿ ವ್ಯವಸ್ಥೆಯ ಒಂದು ವಿಶಿಷ್ಟ ಲಕ್ಷಣವಾಗಿದೆ. ಜಾತಿಗಳ ನಿರ್ಮಾಣಕ್ಕೆ ಮನು ಕಾರಣನಲ್ಲದಿರಬಹುದು. ವರ್ಣ ಪರಿಶುದ್ಧತೆಯನ್ನು ಮನು ಉಪದೇಶಿಸಿದ. ನಾನೀಗಾಗಲೇ ತೋರಿಸಿರುವಂತೆ ವರ್ಣವೇ ಜಾತಿಯ ಮೂಲ. ಈ ಅರ್ಥದಲ್ಲಿ ಮನು ಜಾತಿ ವ್ಯವಸ್ಥೆಯನ್ನು ಹುಟ್ಟು ಹಾಕದಿದ್ದರೂ, ಅದರ ಸಮರ್ಥ ಪ್ರವರ್ತಕನಾಗಿದ್ದನೆಂದು ಆರೋಪಿಸಬಹುದಾಗಿದೆ. ಜಾತಿ ವ್ಯವಸ್ಥೆಯ ಬಗೆಗೆ ಮನುವಿನ ಅಪರಾಧವೇನೇ ಇರಲಿ, ಅವುಗಳ ಹಂತಗಳನ್ನು, ಮೇಲು–ಕೀಳುಗಳನ್ನು ಎತ್ತಿಹಿಡಿಯುವುದಕ್ಕೆ ಮನುವೇ ಹೊಣೆಗಾರನೆಂಬುದರ ಬಗೆಗೆ ಸಂದೇಹಕ್ಕೆ ಅವಕಾಶವೇ ಇಲ್ಲ.

ಮನುವಿನ ಯೋಜನೆಯಲ್ಲಿ ಬ್ರಾಹ್ಮಣನು ಪ್ರಥಮ ಹಂತದಲ್ಲಿ ಬರುತ್ತಾನೆ. ಅದರ ಕೆಳಗೆ ಕ್ಷತ್ರಿಯ. ಕ್ಷತ್ರಿಯನ ಕೆಳಗೆ ವೈಶ್ಯ. ಇನ್ನೂ ಕೆಳಗೆ ಶೂದ್ರ ಮತ್ತೂ ಕೆಳಗೆ ಅತಿ ಶೂದ್ರ, ಅಂದರೆ ಅಸ್ಪೃಶ್ಯ. ಈ ರೀತಿಯ ಹಂತಗಳ ನಿರ್ಮಾಣ ಮತ್ತು ಮೇಲು ಕೀಳಿನ ಅಂತರಗಳನ್ನು ಅಂಗೀಕರಿಸುವುದೆಂದರೆ ಅಸಮಾನತೆಯನ್ನು ಸ್ಥಿರಗೊಳಿಸುವ ಮತ್ತೊಂದು ವಿಧಾನವೆನ್ನಬಹುದು. ಈ ಅರ್ಥದಲ್ಲಿ ಹಿಂದೂ ಧರ್ಮವು ನಿಜವಾಗಿಯೂ ಸಮಾನತೆಯನ್ನು ಒಪ್ಪುವುದಿಲ್ಲ. ಈ ಅಸಮಾನತೆ ಎಂಬುದು ರಾಜನ ಆಸ್ಥಾನಗಳ ಸಮಾರಂಭಗಳಲ್ಲಿ ಯಾರಿಗೆ ಮೊದಲು ಆದ್ಯತೆ ದೊರೆಯಬೇಕೆಂಬಂತಹ ವಿಚಾರಗಳಿಗೆ ಮಾತ್ರ ಸೀಮಿತವಾಗಿರಲಿಲ್ಲ. ಎಲ್ಲ ವರ್ಗಗಳೂ ಅನುಸರಿಸಬೇಕಾದ ಒಂದು ಶಾಶ್ವತ ಸಾಮಾಜಿಕ ಸಂಬಂಧವಿದು. ಎಲ್ಲ ಕಾಲಗಳಲ್ಲಿ ಎಲ್ಲ ಸ್ಥಳಗಳಲ್ಲಿ ಯಾವುದೇ ಉದ್ದೇಶಗಳಿಗೆ ಸಂಬಂಧಪಟ್ಟಂತೆ ಈ ನಡೆವಳಿಕೆ ಜಾರಿಯಲ್ಲಿರಬೇಕಾಗಿತ್ತು. ಬದುಕಿನ ಎಲ್ಲ ಹಂತಗಳಲ್ಲಿಯೂ ಅಸಮಾನತೆಯನ್ನು ಒಂದು ಜೀವಂತ ಪ್ರಭಾವವಾಗಿ ಮನು ಹೇಗೆ ಜಾರಿಗೊಳಿಸಿದನೆಂಬುದನ್ನು ತೋರಿಸಬೇಕಾದರೆ ಸಾಕಷ್ಟು ದೀರ್ಘವಾಗಿಯೇ ಚರ್ಚಿಸಬೇಕಾಗುತ್ತದೆ. ಆದರೆ ನಾನು ಕೆಲವು ಉದಾಹರಣೆಗಳೊಂದಿಗೆ ಅದನ್ನು ತೋರಿಸುತ್ತೇನೆ. ಗುಲಾಮ ಪದ್ಧತಿ, ವಿವಾಹ ಸಂಬಂಧಗಳು ಮತ್ತು ಕಾನೂನು ಕಟ್ಟಳೆಗಳ ಉದಾಹರಣೆಗಳನ್ನು ಇಲ್ಲಿ ಕೊಡಬಹುದಾಗಿದೆ.

ಮನು ಗುಲಾಮ ಪದ್ಧತಿಯನ್ನು ಒಪ್ಪಿಕೊಂಡಿದ್ದಾನೆ. ಮನು ಇದರಲ್ಲಿ ಏಳು ಬಗೆಗಳನ್ನು ಗುರುತಿಸಿದ್ದಾನೆ (VIII–೪೧೫). ನಾರದನು ಹದಿನೈದು ಬಗೆಗಳನ್ನು ಗುರುತಿಸಿದ್ದಾನೆ (V–೨೫). ಆದರೆ ಅದನ್ನು ಶೂದ್ರರಿಗೆ ಮಾತ್ರ ಸೀಮಿತಗೊಳಿಸಲಾಗಿದೆ. ಮೇಲಿನ ಮೂರು ವರ್ಣಗಳವರು ಶೂದ್ರರನ್ನು ಮಾತ್ರ ಗುಲಾಮರನ್ನಾಗಿ ಮಾಡಿಕೊಳ್ಳಲು ಅವಕಾಶವಿತ್ತು. ಆದರೆ ಮೇಲಿನ ವರ್ಣದವರು ಶೂದ್ರರಿಗೆ ಗುಲಾಮರಾಗುವಂತಿರಲಿಲ್ಲ. ಆದರೂ ಕಾನೂನಿಗೆ ವ್ಯತಿರಿಕ್ತವಾಗಿ ಆಚರಣೆಯಿತ್ತು. ಮನು ವಿಧಿಸಿದಂತೆ ಶೂದ್ರರು ಗುಲಾಮರಾಗಿದ್ದರು ಮಾತ್ರವಲ್ಲ, ಉಳಿದ ಮೂರು ವರ್ಣಗಳವರೂ ಗುಲಾಮರಾಗಿದ್ದ ಉದಾಹರಣೆಗಳಿವೆ. ಈ ಆಚರಣೆ ಬೆಳಕಿಗೆ ಬಂದಾಗ ಮನುವಿನ ಬಳಿಕ ಬಂದ ನಾರದನೆಂಬ ಶಾಸ್ತ್ರಕಾರನು ಕೆಲವು ಹೊಸ ಕಾನೂನುಗಳನ್ನು ವಿಧಿಸಿ ಜಾರಿಗೆ ತಂದನು. ಈ ಹೊಸ ನಾರದ–ಸೂತ್ರ ಹೀಗಿದೆ:

V-೩೯ "ನಾಲ್ಕು ವರ್ಣಗಳಲ್ಲಿ ವಿಲೋಮ ರೀತಿಯಲ್ಲಿ ಗುಲಾಮಗಿರಿಯನ್ನು ವಿಧಿಸಿಲ್ಲ. ಅವನ ಜಾತಿಗೆ ವಿಶಿಷ್ಟವಾದ ಕರ್ತವ್ಯಗಳನ್ನು ಒಬ್ಬ ಮನುಷ್ಯ ಉಲ್ಲಂಘಿಸಿದಂತಹ ಸಂದರ್ಭವನ್ನು ಹೊರತುಪಡಿಸಿ ನಾಲ್ಕು ವರ್ಣಗಳಲ್ಲಿ ವಿಲೋಮ ಪದ್ಧತಿಯಲ್ಲಿ ಗುಲಾಮಗಿರಿಯನ್ನು

ವಿಧಿಸಲಾಗಿಲ್ಲ. ಅಂತಹ ವಿಶೇಷ ಸಂದರ್ಭದಲ್ಲಿ ಅವನ ಸ್ಥಿತಿ ಹೆಂಡತಿಯೊಬ್ಬಳಿಗೆ ಅನ್ವಯಿಸುವ ಕಟ್ಟಳೆಗಳಂತಿರುತ್ತದೆ."

ಗುಲಾಮ ಪದ್ಧತಿಯನ್ನು ಅಂಗೀಕರಿಸಿದ್ದೇ ಒಂದು ಕೆಟ್ಟ ವಿಚಾರ. ಕೊನೆಯ ಪಕ್ಷ ಗುಲಾಮ ಪದ್ಧತಿಗೆ ಸಂಬಂಧಿಸಿದ ನಿಯಮಾವಳಿಗಳು ತಮ್ಮದೇ ಆದ ದಾರಿಯನ್ನು ಕಂಡುಕೊಳ್ಳಲು ಬಿಟ್ಟಿದ್ದರೆ, ಅದರಿಂದ ಒಂದು ಪ್ರಯೋಜನಕಾರಿಯಾದ ಪರಿಣಾಮವಾದರೂ ಆಗುತ್ತಿತ್ತು. ತಗ್ಗು ದಿಣ್ಣೆಗಳನ್ನು ಸಮತಲಗೊಳಿಸುವ ಶಕ್ತಿಯಾದರೂ ಆಗಿ ಉಳಿಯುತ್ತಿತ್ತು. ಜಾತಿ ವ್ಯವಸ್ಥೆಯ ಅಡಿಪಾಯವೇ ನಾಶವಾಗುವ ಸಾಧ್ಯತೆಯಿತ್ತು. ಆಗ ಒಬ್ಬ ಬ್ರಾಹ್ಮಣನೂ ಅಸ್ಪೃಶ್ಯನೊಬ್ಬನ ಗುಲಾಮನಾಗುವುದಕ್ಕೆ ಮತ್ತು ಅಸ್ಪೃಶ್ಯನೊಬ್ಬನು ಬ್ರಾಹ್ಮಣನ ಯಜಮಾನನಾಗುವುದಕ್ಕೆ ಅವಕಾಶ ಸಿಗುತ್ತಿತ್ತು. ಅನಿರ್ಬಂಧಿತ ಗುಲಾಮಗಿರಿಯೆಂಬುದು ಸಮಾನತಾ ಸೂತ್ರವಾಗಿ ಬಿಡಬಹುದೆಂಬುದು ಗೋಚರಿಸಿದ ಕೂಡಲೇ, ಅದನ್ನು ನಿಷ್ಕ್ರಿಯಗೊಳಿಸಲಾಯಿತು. ಆದುದರಿಂದ ಮನು ಮತ್ತು ಅವನ ವಾರಸುದಾರರು ಗುಲಾಮಗಿರಿಯನ್ನೇ ಒಪ್ಪಿಕೊಳ್ಳುತ್ತಾ ಅದರ ಅನುಸರಣೆಯು ವರ್ಣ ಪದ್ಧತಿಯಲ್ಲಿ ವಿಲೋಮವಾಗಿರುವುದಿಲ್ಲವೆಂದು ಸ್ಪಷ್ಟಪಡಿಸಿದರು. ಅಂದರೆ ಒಬ್ಬ ಬ್ರಾಹ್ಮಣನು ಇನ್ನೊಬ್ಬ ಬ್ರಾಹ್ಮಣನಿಗೆ ಗುಲಾಮನಾಗಬಹುದು, ಆದರೆ ಅವನು ಇನ್ನೊಂದು ವರ್ಣದ ಅಂದರೆ ಕ್ಷತ್ರಿಯ, ವೈಶ್ಯ, ಶೂದ್ರ ಮತ್ತು ಅತಿಶೂದ್ರರ ಗುಲಾಮನಾಗುವುದಿಲ್ಲ. ಪ್ರತಿಯಾಗಿ, ಬ್ರಾಹ್ಮಣನು ಉಳಿದ ಯಾವುದೇ ನಾಲ್ಕು ವರ್ಣದವರನ್ನು ಗುಲಾಮರನ್ನಾಗಿ ಮಾಡಿಕೊಳ್ಳಬಹುದು. ಒಬ್ಬ ಕ್ಷತ್ರಿಯನು ಮತ್ತೊಬ್ಬ ಕ್ಷತ್ರಿಯನನ್ನು, ವೈಶ್ಯ, ಶೂದ್ರ ಮತ್ತು ಅತಿಶೂದ್ರನನ್ನು ಗುಲಾಮರನ್ನಾಗಿಸಿಕೊಳ್ಳಬಹುದು. ಆದರೆ ಬ್ರಾಹ್ಮಣ ಗುಲಾಮನನ್ನು ಕ್ಷತ್ರಿಯನು ಪಡೆಯುವಂತಿಲ್ಲ. ಒಬ್ಬ ವೈಶ್ಯನು ವೈಶ್ಯನನ್ನು, ಶೂದ್ರ ಮತ್ತು ಅತಿಶೂದ್ರನನ್ನು ಗುಲಾಮರನ್ನಾಗಿಸಬಹುದು. ಆದರೆ ಕ್ಷತ್ರಿಯ ಅಥವಾ ಬ್ರಾಹ್ಮಣ ಗುಲಾಮರನ್ನು ವೈಶ್ಯನು ಹೊಂದುವಂತಿಲ್ಲ. ಶೂದ್ರನೊಬ್ಬನು ಶೂದ್ರ ಮತ್ತು ಅತಿಶೂದ್ರನನ್ನು ಗುಲಾಮರನ್ನಾಗಿ ಹೊಂದಬಹುದು. ಆದರೆ ವೈಶ್ಯ, ಕ್ಷತ್ರಿಯ, ಬ್ರಾಹ್ಮಣ ಗುಲಾಮರನ್ನು ಪಡೆಯುವಂತಿಲ್ಲ.

ಮದುವೆಯನ್ನು ಕುರಿತಂತೆ ಮನುವನ್ನು ಗಮನಿಸಿ: ವಿವಿಧ ವರ್ಣಗಳ ಅಂತರ್ – ವಿವಾಹ ಕುರಿತಂತೆ ಅವನು ವಿಧಿಸಲಾದ ನಿಯಮಗಳು ಹೀಗಿವೆ:

ಮನು ಹೇಳುತ್ತಾನೆ:

III ೧೨ "ದ್ವಿಜರ ಪ್ರಥಮ ವಿವಾಹಕ್ಕೆ ಸಂಬಂಧಿಸಿದಂತೆ ಅದೇ ವರ್ಣದ ಹೆಣ್ಣನ್ನು ಶಿಫಾರಸು ಮಾಡಲಾಗುತ್ತದೆ. ಮತ್ತೆ ಮದುವೆಯಾಗುವ ಆಸಕ್ತಿ ಇರುವವರು ನಿರ್ದೇಶಿತ ವರ್ಣಗಳಿಂದಲೇ ಆರಿಸಿಕೊಳ್ಳಬೇಕು."

III ೧೨ "ಒಬ್ಬ ಶೂದ್ರನಿಗೆ ಶೂದ್ರ ಹೆಂಗಸೇ ಹೆಂಡತಿಯಾಗಬೇಕು, ವೈಶ್ಯನೊಬ್ಬನು ವೈಶ್ಯ ಹೆಣ್ಣನ್ನೂ, ಶೂದ್ರಳನ್ನೂ, ಕ್ಷತ್ರಿಯನು ಕ್ಷತ್ರಿಯಳಲ್ಲದೆ, ವೈಶ್ಯ ಶೂದ್ರರುಗಳನ್ನು, ಬ್ರಾಹ್ಮಣನು ಬ್ರಾಹ್ಮಣಿಯಲ್ಲದೆ, ಕ್ಷತ್ರಿಯ, ವೈಶ್ಯ, ಶೂದ್ರ ಹೆಂಗಸರನ್ನೂ ಹೆಂಡತಿಯಾಗಿ ಹೊಂದಬಹುದು."

ವಾಸ್ತವವಾಗಿ ಮನು ಅಂತರ್–ಜಾತಿ ವಿವಾಹಗಳನ್ನು ವಿರೋಧಿಸುತ್ತಾನೆ. ಪ್ರತಿಯೊಂದು ವರ್ಣವೂ ಅವರಲ್ಲಿಯೇ ವಿವಾಹವಾಗಬೇಕೆಂಬುದು ಅವನ ಕಟ್ಟಳೆ. ನಿರ್ದಿಷ್ಟವಾದ ವರ್ಣಗಳ ಹೊರಗೂ ಆಗುವ ಮದುವೆಯನ್ನೂ ಆತ ಅಂಗೀಕರಿಸಿದ್ದಾನೆ. ಇಲ್ಲಿಯೂ ಆತ ವಿಶಿಷ್ಟವಾದ ರೀತಿಯಲ್ಲಿ ಎಚ್ಚರವಹಿಸಿದ್ದಾನೆ. ವರ್ಣಗಳ ನಡುವೆ ಅಸಮಾನತೆ ಇರುವಂತಹ ತನ್ನ ತತ್ವಕ್ಕೆ ವಿರುದ್ಧವಾದವುಗಳನ್ನು ಅವನು ಒಪ್ಪುವುದಿಲ್ಲ. ಗುಲಾಮ ಪದ್ಧತಿಯಲ್ಲಿ ವಿಲೋಮ ರೀತಿಯಲ್ಲಿ ಅಂತರ್‌ವಿವಾಹಗಳನ್ನು ಆತ ಆದೇಶಿಸುವುದಿಲ್ಲ. ಒಬ್ಬ ಬ್ರಾಹ್ಮಣನು ತನ್ನ ವರ್ಣದಿಂದ ಹೊರಗೆ ಮದುವೆಯಾಗಬಹುದು. ಒಬ್ಬ ಕ್ಷತ್ರಿಯನೂ ಅವನಿಗಿಂತ

ಕೆಳಗಿರುವ ಎರಡು ವರ್ಣಗಳಲ್ಲಿ ಅಂದರೆ ವೈಶ್ಯ ಮತ್ತು ಶೂದ್ರರಲ್ಲಿ ಮದುವೆಯಾಗಲು ಸ್ವತಂತ್ರ. ಆದರೆ ಅವನು ತನಗಿಂತ ಮೇಲಿರುವ ಬ್ರಾಹ್ಮಣ ವರ್ಣದ ಹೆಂಗಸನ್ನು ಮದುವೆಯಾಗುವಂತಿಲ್ಲ. ಒಬ್ಬ ವೈಶ್ಯನಾದರೋ ಅವನಿಗಿಂತ ಕೆಳಗಿನ ಶೂದ್ರ ವರ್ಣದಲ್ಲಿ ಮದುವೆಯಾಗಲು ಸ್ವತಂತ್ರ. ಆದರೆ ಬ್ರಾಹ್ಮಣ ಮತ್ತು ಕ್ಷತ್ರಿಯ ಹೆಣ್ಣುಗಳನ್ನು ಆತ ಮದುವೆಯಾಗುವಂತಿಲ್ಲ.

ಈ ಅಂತರವೇಕೆ? ಇದಕ್ಕೆ ಒಂದೇ ಉತ್ತರ; ಮನುವಿಗೆ ಅಸಮಾನತೆಯನ್ನು ಪ್ರತಿಪಾದಿಸುವ ತನ್ನ ಕಟ್ಟಳೆಗಳನ್ನು ಕಾಪಾಡಬೇಕಾದ ಅಗತ್ಯವಿತ್ತು.

ಕಾನೂನಿಗೆ ಸಂಬಂಧಿಸಿದ ಕಟ್ಟಳೆಗಳನ್ನೇ ತೆಗೆದುಕೊಳ್ಳಿ. ಕಾನೂನಿಗೆ ಸಂಬಂಧಿಸಿದ ನಿಯಮಗಳೆಂದರೆ ಸಾಮಾನ್ಯವಾಗಿ ತಿಳಿಯುವುದು ಕಾನೂನಿನ ಎದುರು ಎಲ್ಲರೂ ಸಮಾನರೆಂದು. ಈ ವಿಚಾರದಲ್ಲಿ ಮನು ಏನು ಹೇಳಿದ್ದಾನೆಂದು ಯಾರಿಗಾದರೂ ಆಸಕ್ತಿ ಇದ್ದರೆ ಆತನ 'ಧರ್ಮಶಾಸ್ತ್ರ'ದಿಂದ ಆಯ್ದ ಕೆಳಗಿನ ಉದ್ಧೃತಿಗಳನ್ನು ಗಮನಿಸಬಹುದಾಗಿದೆ. ಸರಳವಾಗಿ ಅರ್ಥವಾಗಲೆಂಬ ಉದ್ದೇಶದಿಂದ ನಾನು ಅವುಗಳನ್ನು ಪ್ರತ್ಯೇಕ ಶೀರ್ಷಿಕೆಗಳ ಕೆಳಗೆ ತೋರಿಸಿದ್ದೇನೆ.

ಸಾಕ್ಷಿಗಳಿಗೆ ಸಂಬಂಧಿಸಿದಂತೆ – ಮನುವಿನ ಪ್ರಕಾರ ಅವರು ಕೆಳಗಿನಂತೆ ಪ್ರಮಾಣ ಮಾಡಬೇಕು:

VIII ೮೭ "ಪರಿಶುದ್ಧವಾದ ಬಳಿಕ ನ್ಯಾಯಾಧೀಶರು ಪೂರ್ವಾಹ್ನದಲ್ಲಿ ಪರಿಶುದ್ಧನಾಗಿರುವ ದ್ವಿಜನನ್ನು ಹಲವು ಬಾರಿ ಕೂಗಿ ಕರೆಯಲಿ; ದೈವದ ಸಂಕೇತವಾದ ಯಾವುದಾದರೊಂದು ವಿಗ್ರಹದ ಎದುರಿನಲ್ಲಿ ಬ್ರಾಹ್ಮಣರ ಸಮ್ಮುಖದಲ್ಲಿ ಸತ್ಯವನ್ನೇ ಹೇಳಲು ಆತನನ್ನು ಕೇಳಲಿ; ಸಾಕ್ಷಿಗಳು ಉತ್ತರಾಭಿಮುಖವಾಗಿ ಅಥವಾ ಪೂರ್ವಭಿಮುಖವಾಗಿ ತಮ್ಮ ಮುಖವನ್ನು ತಿರುಗಿಸಿಕೊಂಡಿರುವಾಗ ಇದು ನಡೆಯಲಿ."

VII ೮೮ "ಬ್ರಾಹ್ಮಣನಿಗೆ ಹೀಗೆಂದು ಹೇಳಲು ಮೊದಲುಮಾಡಬೇಕು: 'ದೃಢವಾಗಿ ಹೇಳು', ಎಂದು ಕೇಳಬೇಕು. ಕ್ಷತ್ರಿಯನಿಗಾದರೆ 'ಸತ್ಯವನ್ನೇ ಹೇಳು' ಎಂದು ಕೇಳಬೇಕು. ವೈಶ್ಯನಿಗಾದರೆ ಸುಳ್ಳು ಪ್ರಮಾಣ ಮಾಡಿದರೆ ಗೋವು, ಧಾನ್ಯ ಮತ್ತು ಹೊನ್ನಿನ ಕಳವು ಮಾಡಿದ ಪಾತಕದಂತೆ ಎಂದು ಹೇಳಿ ಪ್ರಮಾಣ ಮಾಡಿಸಲಿ. ಶೂದ್ರನಿಗಾದರೆ ಸುಳ್ಳು ಪ್ರಮಾಣ ಮಾಡಿದರೆ ಮನುಷ್ಯನು ಮಾಡಬಹುದಾದ ಎಲ್ಲ ಅಪರಾಧಗಳ ಹೆಸರನ್ನೂ ಅಥವಾ ಯಾವುದಾದರೂ ಕೆಲವು ಹೆಸರುಗಳನ್ನು ಹೇಳಿ ಅಂತಹ ಪಾತಕವೆಸಗಿದಂತೆ ಎಂದು ಹೇಳಿ ಪ್ರಮಾಣ ಮಾಡಿಸಲಿ."

VIII ೧೧೩ "ನ್ಯಾಯಾಧೀಶನು ಪುರೋಹಿತನಿಗಾದರೆ ಸತ್ಯದ ಮೇಲೆ ಆಣೆ ಇಡುವಂತೆ ಹೇಳಲಿ; ಸೈನಿಕನಿಗೆ ಅವನ ಕುದುರೆ ಅಥವಾ ಆನೆ ಅಥವಾ ಶಸ್ತ್ರದ ಮೇಲೆ; ವೈಶ್ಯನಿಗೆ ಅವನ ಗೋಧನ, ಧಾನ್ಯ, ಚಿನ್ನದ ಮೇಲೆ ಆಣೆ ಇಡುವಂತೆ ಮಾಡಲಿ. ಶೂದ್ರನಿಗಾದರೋ ತನ್ನ ತಲೆಯ ಮೇಲೆ ಆಣೆ ಇಡುವಂತೆ ಮಾಡಲಿ; ಅವನು ಸುಳ್ಳು ಹೇಳಿದರೆ ಎಲ್ಲ ಪಾತಕಗಳ ಶಾಪವೂ ತನ್ನ ಮೇಲೆರಗಲಿ ಎಂದು ಆಣೆ ಇಡುವಂತೆ ಮಾಡಲಿ."

ಸುಳ್ಳು ಸಾಕ್ಷ್ಯ ಕೊಡುವವರು ಮತ್ತು ಪ್ರಮಾಣ ಮಾಡುವವರ ಬಗೆಗೂ ಮನು ಆಲೋಚಿಸಿದ್ದಾನೆ. ಮನುವಿನ ಪ್ರಕಾರ ಸುಳ್ಳು ಆಧಾರಗಳನ್ನು ಕೊಡುವುದು ಒಂದು ಅಪರಾಧ. ಅವನ ಪ್ರಕಾರ:

VII ೧೨೨ "ಜ್ಞಾನಿಗಳು ಈ ಅಪರಾಧಗಳಿಗೆ ಶಿಕ್ಷೆಯನ್ನು ನಿರ್ದಿಷ್ಟಪಡಿಸಿದ್ದಾರೆ. ವಿವೇಕಿಗಳಾದ ಶಾಸಕರು ಅವನ್ನು ತಪ್ಪಿತಸ್ಥ ಸಾಕ್ಷಿಗಳ ಸಲುವಾಗಿ ಅಂಗೀಕರಿಸಿದ್ದಾರೆ. ಅನ್ಯಾಯ ಅಕ್ರಮಗಳನ್ನು ತಡೆಯುವ ದೃಷ್ಟಿಯಿಂದ ಇವುಗಳಣ್ನು ಅನುಸರಿಸಬೇಕು."

VII ೧೨೩ "ಸುಳ್ಳು ಸಾಕ್ಷಿ ಹೇಳಿದ ಕೆಳಗಿನ ಮೂರು ವರ್ಣದವರನ್ನು ಮೊದಲು ತಪ್ಪು ದಂಡ ಹಾಕಿ ಬಳಿಕ ಬಹಿಷ್ಕರಿಸಲಿ; ಬ್ರಾಹ್ಮಣನಿಗಾದರೋ ಕೇವಲ ಬಹಿಷ್ಕಾರ ಹಾಕಿದರೆ ಸಾಕು"

ಆದರೆ ಮನು ಒಂದು ವಿನಾಯಿತಿ ತೋರಿಸಿದ್ದಾನೆ.

"ಹೆಣ್ಣಿನೊಂದಿಗೆ ಚಕ್ಕಂದವಾಡುವಾಗ ಅಥವಾ ಮದುವೆಯ ಪ್ರಸ್ತಾಪಮಾಡುವಾಗ, ಹಣ್ಣು ಅಥವಾ ಹುಲ್ಲನ್ನು ತಿಂದ ಹಸುವಿನ ವಿಚಾರದಲ್ಲಿ, ಯಜ್ಞ ವಿಧಿಗಾಗಿ ತೆಗೆದುಕೊಂಡು ಹೋದ ಸೌದೆಯ ವಿಷಯದಲ್ಲಿ ಅಥವಾ ಬ್ರಾಹ್ಮಣನೊಬ್ಬನ ರಕ್ಷಣೆಗಾಗಿ ಕೊಟ್ಟ ಮಾತಿನ ವಿಚಾರದಲ್ಲಿ ಹಗುರವಾಗಿ ಆಣೆಯಿಡುವುದು ಕ್ರೂರವಾದ ಪಾಪವಾಗುತ್ತದೆ."

ವಿಚಾರಣೆಗೆ ಸಂಬಂಧಿಸಿದ ಪಕ್ಷಗಳ ವಿಚಾರದಲ್ಲಿ ಅವನ ಸ್ಥಾನವೇನು? ಎಂಬುದರ ಬಗೆಗೆ ಮುಖ್ಯವಾದ ಕೆಲವ ಪಾತಕಗಳನ್ನು ಮನು ಹೇಗೆ ಪರಿಗಣಿಸಿದ್ದಾನೆಂಬುದನ್ನು ಕುರಿತು ಆತನ ಸಂಹಿತೆಗಳನ್ನು ಎತ್ತಿ ತೋರಿಸಬಹುದಾಗಿದೆ.

ಮಾನಹಾನಿ ಅಪರಾಧವನ್ನೇ ತೆಗೆದುಕೊಳ್ಳೋಣ: ಮನು ಈ ಸಂಬಂಧವಾಗಿ ಹೀಗೆ ಹೇಳಿದ್ದಾನೆ:

VIII ೨೬೭ "ಪುರೋಹಿತನನ್ನು ಅವಮಾನಗೊಳಿಸಿದವನು ಒಬ್ಬ ಸೈನಿಕನಾದರೆ ನೂರು ಪಣಗಳ ದಂಡ. ಅವಮಾನಗೊಳಿಸಿದವನು ಒಬ್ಬ ವ್ಯಾಪಾರಿಯಾದರೆ ನೂರೈವತ್ತು ಅಥವಾ ಇನ್ನೂರು ಪಣಗಳ ದಂಡ. ಆದರೆ ಈ ಅಪರಾಧವೆಸಗಿದವನು ಒಬ್ಬ ಕಾರ್ಮಿಕನೋ ಸೇವಕನೋ ಆಗಿದ್ದರೆ ಉಗ್ರ ಶಿಕ್ಷೆ ವಿಧಿಸಬಹುದು."

III ೨೬೮ "ಪುರೋಹಿತನು ಸೈನಿಕನೊಬ್ಬನನ್ನು ಬೈದರೆ ಐವತ್ತು ಪಣ ದಂಡ; ಅವನು ಬೈದದ್ದು ವ್ಯಾಪಾರಿಯನ್ನಾದರೆ ಇಪ್ಪತ್ತೈದು, ಕಾವಲಿನ ವರ್ಗದವನಾದರೆ ಹನ್ನೆರಡು ಪಣವನ್ನು ದಂಡವಾಗಿ ಕೊಡಬೇಕು."

ತುಚ್ಛವಾಗಿ ನಿಂದಿಸಿದ ಅಪರಾಧಕ್ಕೆ ಮನು ಹೇಳುತ್ತಾನೆ:

VIII ೨೭೦ "ಒಂದೇ ಬಾರಿ ಹುಟ್ಟಿದ ಮನುಷ್ಯನು ದ್ವಿಜವನ್ನು ಅವಮಾನಿಸಿ ತುಚ್ಛವಾಗಿ ನಿಂದಿಸಿದರೆ ಅವನ ನಾಲಗೆಯನ್ನೇ ಕತ್ತರಿಸಬೇಕು; ಏಕೆಂದರೆ ಅವನು ಬ್ರಹ್ಮನ ಕೆಳಭಾಗದಿಂದ ಹುಟ್ಟಿದವನು."

VIII "ದ್ವಿಜರ ಹೆಸರನ್ನು ಮತ್ತು ವರ್ಣವನ್ನು ತಿರಸ್ಕಾರದಿಂದ ಉಲ್ಲೇಖಿಸಿ 'ಬ್ರಾಹ್ಮಣರ ಕಳಂಕವಾದ ಓ ದೇವದತ್ತ' ಎಂಬ ರೀತಿಯಲ್ಲಿ ಹೇಳಿದರೆ, ಹತ್ತು ಬೆರಳುಗಳ ಉದ್ದದ ಕಬ್ಬಿಣದ ಸರಳನ್ನು ಕಾಯಿಸಿ ಅವನ ಬಾಯಿಯಲ್ಲಿ ತುರುಕಬೇಕು."

VIII ೨೭೨ "ಯಾವನಾದರೂ ಅಹಂಕಾರದಿಂದ ಪುರೋಹಿತರಿಗೆ ಅವರ ಕರ್ತವ್ಯಗಳ ಬಗೆಗೆ ಸೂಚನೆ ನೀಡಿದರೆ, ಅವನ ಬಾಯಿ ಮತ್ತು ಕಿವಿಗಳಲ್ಲಿ ಕಾಯಿಸಿದ ಎಣ್ಣೆಯನ್ನು ಸುರಿಯಲು ರಾಜನು ಅಪ್ಪಣೆ ಮಾಡಬೇಕು."

ಪರಸ್ಪರ ಬೈದಾಡುವ ಅಪರಾಧಕ್ಕೆ ಮನು ವಿಧಿಸಿರುವ ಶಿಕ್ಷೆ:

VIII ೨೭೬ "ಪುರೋಹಿತ ಮತ್ತು ಸೈನಿಕ ಪರಸ್ಪರ ಬೈದಾಡಿದರೆ ಜ್ಞಾನಿಯಾದ ರಾಜನೇ ಅವರಿಗೆ ದಂಡ ವಿಧಿಸಬೇಕು. ಪುರೋಹಿತನಿಗೆ ಅತಿ ಕಡಿಮೆ ದಂಡ; ಸೈನಿಕನಿಗೆ ಮಧ್ಯಮ ಅಥವಾ ಗರಿಷ್ಠ ಪ್ರಮಾಣದ ದಂಡ ಹಾಕಬಹುದು."

VIII ೨೭೭ "ಹಿಂದೆ ಹೇಳಿರುವಂತೆ ನಿರ್ದಿಷ್ಟವಾಗಿ ವ್ಯಾಪಾರಿ ಮತ್ತು ಅವನ ಸೇವಕ ವರ್ಗದವರ ನಡುವೆ ಅಥವಾ ಉಳಿದ ವರ್ಣಗಳಲ್ಲಿ ತಪ್ಪುಗಳು ಘಟಿಸಿದರೆ, ನಾಲಿಗೆ ಕತ್ತರಿಸುವುದರ ಹೊರತು ಉಳಿದೆಲ್ಲ ದಂಡವನ್ನು ವಿಧಿಸಬಹುದು."

ಮೇಲೆ ಬಿದ್ದು ಹಲ್ಲೆ ಮಾಡುವುದಕ್ಕೆ ಮನು ವಿಧಿಸಿರುವ ಶಿಕ್ಷೆ:

VIII ೨೭೯ "ಕೈ ಅಥವಾ ಕಾಲು, ಹೀಗೆ ಯಾವ ಅಂಗದಿಂದ ಕೆಳ ವರ್ಣದಲ್ಲಿ ಹುಟ್ಟಿದ ವ್ಯಕ್ತಿ ಮೇಲು ವರ್ಣದವರ ಮೇಲೆ ಹಲ್ಲೆ ನಡೆಸುತ್ತಾನೆಯೋ ಅವನ ಅಂಗವನ್ನೇ ಸೀಳಬೇಕು ಅಥವಾ ಕತ್ತರಿಸಿಹಾಕಬೇಕು. ಯಾವ ಪ್ರಮಾಣದಲ್ಲಿ ಅವನು ಗಾಯಗೊಳಿಸಿರಬಹುದೋ ಅದೇ ಪ್ರಮಾಣದಲ್ಲಿ ಅವನ ಅಂಗಾಂಗಗಳನ್ನು ಊನಗೊಳಿಸಬೇಕೆಂಬುದು ಮನುವಿನ ಕಟ್ಟಳೆಯಾಗಿದೆ."

VIII ೨೮೦ "ಯಾರು ತನ್ನ ಕೈಯ್ಯನ್ನು ಅಥವಾ ದೊಣ್ಣೆಯನ್ನು ಬೇರೆಯವರ ಮೇಲೆ ಎತ್ತುತ್ತಾನೆಯೋ ಅವನ ಕೈಯನ್ನೇ ಕತ್ತರಿಸಿಹಾಕಬೇಕು. ಕೋಪದಿಂದ ಯಾರನ್ನಾದರೂ ಒಬ್ಬ ಕಾಲಿನಿಂದ ಒದ್ದರೆ, ಅವನ ಕಾಲಿನಲ್ಲಿ ಆಳವಾದ ತೂತು ಕೊರೆಯಬೇಕು."

ದುರಹಂಕಾರದ ಅಪರಾಧಕ್ಕೆ ಮನುವಿನ ಪ್ರಕಾರ ಶಿಕ್ಷೆ:

VIII ೨೮೧ "ಕೆಳವರ್ಣದ ಯಾವನಾದರೊಬ್ಬ ದುರಹಂಕಾರದಿಂದ ಮೇಲಿನವರ ಸರಿ ಸಮಾನವಾದ ಜಾಗದಲ್ಲಿ ಕುಳಿತುಕೊಂಡರೆ, ಅವನ ಹಿಂಭಾಗದಲ್ಲಿ ಗುರುತು ಮಾಡಿ ಗಡಿಪಾರು ಮಾಡಬೇಕು ಅಥವಾ ರಾಜನು ಅವನ ಕುಂಡೆಗಳ ಮೇಲೆ ಬರೆ ಹಾಕಿಸಬೇಕು."

VIII ೨೮೨ "ಮತ್ತೊಬ್ಬರಿಂದ ಕೂಲಿ ಪಡೆದು ಯಾರ ಮೇಲಾದರೂ ಉಗುಳಿದರೆ ರಾಜನು ಅವನ ಎರಡೂ ತುಟಿಗಳನ್ನು ಕೊಯ್ದುಹಾಕಲು ಅಪ್ಪಣೆ ಕೊಡಬೇಕು. ಮೈಮೇಲೆ ಮೂತ್ರ ವಿಸರ್ಜಿಸಿದರೆ, ಅವನ ವಿಸರ್ಜನಾಂಗವನ್ನೇ ಕತ್ತರಿಸಿಹಾಕಬೇಕು. ಪಕ್ಕೆಯಿಂದ ತಿವಿದಿರೆ ಅವನ ಗುದದ್ವಾರವನ್ನು ಕೊಯ್ಯಬೇಕು."

VIII ೨೮೩ "ಯಾವನಾದರೂ ಒಬ್ಬ ಬ್ರಾಹ್ಮಣನ ಜುಟ್ಟು ಹಿಡಿದು ಜಗ್ಗಿದರೆ, ಕಾಲೆಳೆದರೆ, ಗಡ್ಡವನ್ನು ಎಳೆದರೆ, ಕುತ್ತಿಗೆ ಹಿಡಿದು ತಳ್ಳಿದರೆ, ಅಥವಾ ಅವನ ಮರ್ಮಾಂಗಕ್ಕೆ ಕೈ ಹಾಕಿದರೆ, ಸ್ವಲ್ಪವೂ ಹಿಂಜರಿಯದೆ ಅಂಥವನ ಕೈಗಳನ್ನು ತೂತು ಕೊರೆಸುವುದು ರಾಜನ ಕರ್ತವ್ಯವಾಗಿದೆ."

ವ್ಯಭಿಚಾರದ ಅಪರಾಧಕ್ಕೆ ಮನುವಿನ ಶಿಕ್ಷೆ ಹೀಗಿದೆ:

VIII ೩೬೯ "ಕೆಳವರ್ಣದ ಒಬ್ಬ ಮನುಷ್ಯ ಮೇಲು ಜಾತಿಯ ಹುಡುಗಿಯನ್ನು ಪ್ರೀತಿಸಿದಾಗ ಅವನಿಗೆ ಕಠಿಣ ಶಿಕ್ಷೆ ವಿಧಿಸಬೇಕು. ತನಗೆ ಸರಿಸಮಾನ ವರ್ಣದ ಹುಡುಗಿಯಾದರೆ ಸೂಕ್ತ ವಧುದಕ್ಷಿಣೆಯಿಂದ ಅವಳ ತಂದೆಯನ್ನು ಒಪ್ಪಿಸಿ ಮದುವೆಯಾಗಬಹುದು."

VIII ೩೭೪ "ಒಬ್ಬ ಕಾರ್ಮಿಕ ಅಥವಾ ಸೇವಕ ವರ್ಗಕ್ಕೆ ಸೇರಿದವನು ಬ್ರಾಹ್ಮಣ ಹೆಣ್ಣಿನೊಂದಿಗೆ ಅನೈತಿಕ ಸಂಬಂಧವಿರಿಸಿಕೊಂಡಿದ್ದರೆ, ಮನೆಯಲ್ಲಿ ಆಕೆಗೆ ರಕ್ಷಣೆಯಿರಲಿ, ಇಲ್ಲದಿರಲಿ, ಅವನಿಗೆ ವಿಧಿಸಬೇಕಾದ ಶಿಕ್ಷೆ ಹೀಗಿದೆ: ಆಕೆಗೆ ರಕ್ಷಣೆ ಇಲ್ಲದಿದ್ದರೆ ಅನೈತಿಕ ಕೃತ್ಯವೆಸಗಿದ ಅವನು ನಿರ್ದಿಷ್ಟ ಅಂಗವನ್ನು ಅಥವಾ ಎಲ್ಲವನ್ನೂ ಕಳೆದುಕೊಳ್ಳುತ್ತಾನೆ. ರಕ್ಷಿತಳಾಗಿದ್ದು ಆಕೆ ಪೂಜಾರಿಣಿಯಾಗಿದ್ದರೆ, ಅವನು ಜೀವವನ್ನು ಸೇರಿದಂತೆ ಎಲ್ಲವನ್ನೂ ಕಳೆದು ಕೊಳ್ಳುತ್ತಾನೆ."

VIII ೩೭೫ "ರಕ್ಷಿತ ಪೂಜಾರಿಣಿಯೊಬ್ಬಳೊಂದಿಗೆ ಒಬ್ಬ ವ್ಯಾಪಾರಿ ವ್ಯಭಿಚಾರಕ್ಕಿಳಿದರೆ ಅವನು ತನ್ನ ಐಶ್ವರ್ಯವನ್ನೆಲ್ಲಾ ಕಳೆದುಕೊಳ್ಳುತ್ತಾನೆ; ಜೊತೆಗೆ ಒಂದು ವರ್ಷ ಸೆರೆವಾಸ. ಸೈನಿಕನಾಗಿದ್ದರೆ ಒಂದು ಸಾವಿರ ಪಣಗಳ ದಂಡ; ಮತ್ತು ಕತ್ತೆಯ ಮೂತ್ರದಿಂದ ಸವರಿ ಅವನ ತಲೆ ಬೋಳಿಸತಕ್ಕದ್ದು."

VIII ೩೭೬ "ಒಬ್ಬ ವ್ಯಾಪಾರಿ ಅಥವಾ ಸೈನಿಕ ಪವಿತ್ರ ವರ್ಣದ ಹೆಣ್ಣೊಬ್ಬಳೊಂದಿಗೆ, ಅವಳ ಗಂಡನಿಂದ ರಕ್ಷಣೆಯಿಲ್ಲದಿದ್ದಾಗ, ವ್ಯಭಿಚಾರಕ್ಕಿಳಿದರೆ ಸೇವಕ ವರ್ಗದವರಂತೆಯೇ ಅವರನ್ನು ಶಿಕ್ಷಿಸಬೇಕು. ಒಣಹುಲ್ಲು ಮತ್ತು ಸೌದೆಗಳನ್ನು ಒಟ್ಟು ಹಾಕಿ ಅವರನ್ನು ಜೀವಂತವಾಗಿ ಸುಟ್ಟುಹಾಕಬೇಕು."

VIII ೩೮೨ "ಒಬ್ಬ ವ್ಯಾಪಾರಿಯು ಸೈನಿಕ ವರ್ಗದ ರಕ್ಷಿತ ಸ್ತ್ರೀಯೊಂದಿಗೆ ಅಕ್ರಮ ವ್ಯವಹಾರವಿಟ್ಟುಕೊಂಡಿದ್ದರೆ ಅಥವಾ ಸೈನಿಕನೊಬ್ಬನು ರಕ್ಷಿತ ವೈಶ್ಯ ಸ್ತ್ರೀಯೊಂದಿಗೆ ಇಂತಹ ಸಂಬಂಧವಿರಿಸಿಕೊಂಡಾಗಲೂ ಅವರಿಬ್ಬರನ್ನೂ ಜೀವಂತ ಸುಟ್ಟುಹಾಕಬೇಕು."

VIII ೩೮೩ "ಆದರೆ ಒಬ್ಬ ಬ್ರಾಹ್ಮಣನು ಸೈನಿಕ ಮತ್ತು ವ್ಯಾಪಾರಿ ವರ್ಗದ ರಕ್ಷಿತ ಸ್ತ್ರೀಯೊಂದಿಗೆ ವ್ಯಭಿಚಾರ ಮಾಡಿದರೆ ಒಂದು ಸಾವಿರ ಪಣವನ್ನು ದಂಡ ಹಾಕಬಹುದು. ಸೇವಕ ವರ್ಗದ ರಕ್ಷಿತ ಸ್ತ್ರೀ ಒಬ್ಬಳ ಜೀವಹಾನಿಗೆ ಕಾರಣವಾದ ಸೈನಿಕ ಅಥವಾ ವ್ಯಾಪಾರಿಗೂ ಸಾವಿರ ಪಣಗಳ ದಂಡ ಹಾಕಬಹುದಾಗಿರುತ್ತದೆ."

VIII ೩೮೪ "ಸೈನಿಕ ವರ್ಗದ ರಕ್ಷಿತ ಸ್ತ್ರೀಯೊಂದಿಗೆ ಒಬ್ಬ ವ್ಯಾಪಾರಿಯೂ ವ್ಯಭಿಚಾರಕ್ಕಿಳಿದರೆ ಐನೂರು ಪಣ ದಂಡ ಕಟ್ಟಬೇಕು. ಅದೇ ವಿರುದ್ಧ ಕ್ರಮದಲ್ಲಿ ಸೈನಿಕನಾದರೆ ಮೂತ್ರದಿಂದ ಅವನ ತಲೆ ಬೋಳಿಸಬೇಕು ಅಥವಾ ಅವನು ಅಷ್ಟೇ ದಂಡ ಕಟ್ಟಬೇಕು."

VIII ೩೮೫ "ಒಬ್ಬ ಪೂಜಾರಿಯು ವ್ಯಾಪಾರಿ, ಸೈನಿಕ ಅಥವಾ ಸೇವಕ ವರ್ಗದ ಒಬ್ಬ ಅರಕ್ಷಿತ ಸ್ತ್ರೀಯೊಂದಿಗೆ ಸಂಬಂಧ ಹೊಂದಿದರೆ ಐನೂರು ಪಣ ದಂಡ ಕೊಡಬೇಕು. ದುಷ್ಟಳೂ ಮಿಶ್ರ ವರ್ಣಕ್ಕೆ ಸೇರಿದವಳೂ ಆದವಳೊಂದಿಗೆ ಸಂಬಂಧವಿರಿಸಿಕೊಂಡಿದ್ದರೆ ಒಂದು ಸಾವಿರ ಪಣದವರೆಗೆ ದಂಡ ಕೊಡಬೇಕು."

ಅಪರಾಧಗಳಿಗೆ ಶಿಕ್ಷೆ ವಿಧಿಸುವ ಮನುವಿನ ಯೋಜನೆಗಳ ವ್ಯವಸ್ಥೆಯತ್ತ ಗಮನಹರಿಸಿದರೆ ಈ ವಿಷಯದ ಮೇಲೆ ಅಚ್ಚರಿಯ ಬೆಳಕು ಬೀಳುತ್ತದೆ. ಕೆಳಗಿನ ವಿಧಿಗಳನ್ನು ಗಮನಿಸಿ:

VIII ೩೭೯ "ಪುರೋಹಿತ ವರ್ಗದ ವ್ಯಭಿಚಾರಿಗೆ ಮರಣಾಂತಿಕ ಶಿಕ್ಷೆ ವಿಧಿಸದೆ ಅವಹೇಳನ ಮಾಡಿ ತಲೆ ಬೋಳಿಸುವ ಶಿಕ್ಷೆ ವಿಧಿಸಬಹುದು. ಉಳಿದ ವರ್ಗದವರಿಗೆ ಜೀವಹತ್ಯೆಯವರೆಗೂ ಶಿಕ್ಷೆಯುಂಟು."

VIII ೩೮೦ "ಎಂತಹ ಅಪರಾದ ಮಾಡಿದ್ದರೂ ಒಬ್ಬ ಬ್ರಾಹ್ಮಣನನ್ನು ರಾಜನು ಎಂದೂ ವಧಿಸಕೂಡದು. ಬೇಕಾದರೆ ತನ್ನ ರಾಜ್ಯದಿಂದ ಗಡಿಪಾರು ಮಾಡಬಹುದು. ಅವನ ದೇಹಕ್ಕೆ ಯಾವ ನೋವನ್ನೂ ಉಂಟುಮಾಡದೆ, ಆಸ್ತಿಪಾಸ್ತಿಗಳನ್ನು ಕಿತ್ತುಕೊಳ್ಳದೇ ಗಡಿಪಾರು ಮಾಡಬಹುದು."

XI ೧೨೭ "ಸೈನಿಕ ವರ್ಗದ ಒಬ್ಬ ಸಜ್ಜನನನ್ನು ಉದ್ದೇಶಪೂರ್ವಕವಾಗಿ ಯಾರಾದರೂ ಕೊಲೆ ಮಾಡಿದರೆ ಅದಕ್ಕೆ ಶಿಕ್ಷೆಯುಂಟು. ಬ್ರಾಹ್ಮಣನೊಬ್ಬನನ್ನು ಕೊಲೆ ಮಾಡಿದರೆ ಅದಕ್ಕೆ

ಶಿಕ್ಷೆಯುಂಟು. ಬ್ರಾಹ್ಮಣನೊಬ್ಬನನ್ನು ಕೊಲೆ ಮಾಡಿದರೆ ವಿಧಿಸುವ ಶಿಕ್ಷೆಗಿಂತ ನಾಲ್ಕನೇ ಒಂದು ಪಾಲು ಕಡಿಮೆ ಶಿಕ್ಷೆಯನ್ನು ಕೊಲೆ ಮಾಡಿದವನಿಗೆ ವಿಧಿಸಬಹುದು. ವೈಶ್ಯನನ್ನು ಕೊಂದರೆ ಎಂಟನೇ ಒಂದು ಭಾಗ. ಕರ್ತವ್ಯನಿರತ ಶೂದ್ರನನ್ನು ಕೊಂದರೆ ಹದಿನಾರನೇ ಒಂದು ಭಾಗ ಕಡಿಮೆ ಶಿಕ್ಷೆ ವಿಧಿಸಬಹುದು."

XI ೧೨೮ "ಕ್ಷತ್ರಿಯನೊಬ್ಬನನ್ನು ಒಬ್ಬ ಬ್ರಾಹ್ಮಣನು ದುರುದ್ದೇಶವಿಲ್ಲದೆ ಕೊಂದರೆ ಸೂಕ್ತ ಧರ್ಮವಿಧಿಗಳನ್ನು ಆಚರಿಸಿದ ಬಳಿಕ ಪುರೋಹಿತರಿಗೆ ಒಂದು ಗೂಳಿಯ ಸಹಿತ ಸಾವಿರ ಗೋವುಗಳನ್ನು ದಾನ ಮಾಡಬೇಕು."

XI ೧೨೯ "ಅಥವಾ ಅವನು ಬ್ರಾಹ್ಮಣನನ್ನೇ ಕೊಂದಿದ್ದರೆ, ಇಂದ್ರಿಯಗಳನ್ನು ನಿಗ್ರಹಿಸಿ ಮೂರು ವರ್ಷಗಳ ಕಾಲ ತಪಸ್ಸಿನಲ್ಲಿ ನಿರತನಾಗಬೇಕು. ಪಟ್ಟಣದಿಂದ ದೂರವಿದ್ದು, ಕೂದಲನ್ನು ದೀರ್ಘವಾಗಿ ಬೆಳೆಸಿ ಪರ್ಣಕುಟಿಯಲ್ಲಿ ವಾಸಿಸುತ್ತಾ ತಪಸ್ಸನ್ನಾಚರಿಸಬೇಕು."

XI ೧೩೦ "ಅವನು ದುರುದ್ದೇಶವಿಲ್ಲದೆ, ಉತ್ತಮ ಗುಣಶೀಲಗಳಿದ್ದ ಒಬ್ಬ ವೈಶ್ಯನನ್ನು ಕೊಂದರೆ, ಮೇಲೆ ಹೇಳಿದ ರೀತಿಯಲ್ಲಿ ಒಂದು ವರ್ಷ ತಪ್ಪಸ್ಸನ್ನಾಚರಿಸಬೇಕು ಅಥವಾ ಪುರೋಹಿತರಿಗೆ ನೂರು ಹಸುಗಳು ಮತ್ತು ಒಂದು ಗೂಳಿಯನ್ನು ದಾನಮಾಡಬೇಕು."

XI ೧೩೧ "ಇದೇ ಬಗೆಯಲ್ಲಿ ಶೂದ್ರನನ್ನು ಕೊಂದಿದ್ದರೆ ಆರು ತಿಂಗಳ ಕಾಲ ತಪಸ್ಸನ್ನಾಚರಿಸಬೇಕು; ಅಥವಾ ಹತ್ತು ಬಿಳಿ ಹಸುಗಳನ್ನು ಮತ್ತು ಒಂದು ಗೂಳಿಯನ್ನು ಪುರೋಹಿತರಿಗೆ ದಾನ ಮಾಡಬೇಕು."

VIII ೩೮೧ "ಬ್ರಾಹ್ಮಣರ ಹತ್ಯೆಗಿಂತ ಮಹಾಪರಾಧ ಭೂಮಿಯ ಮೇಲೆ ಇನ್ನೊಂದಿಲ್ಲ. ಆದುದರಿಂದ ರಾಜನಾದರೂ ಅಕಸ್ಮಾತ್ ಮನಸ್ಸಿನಲ್ಲಿಯೂ ಪುರೋಹಿತನನ್ನು ಕೊಲ್ಲುವ ಯೋಚನೆ ಮಾಡಬಾರದು."

VIII ೧೨೬ "ಒಂದೇ ಬಗೆಯ ಅಪರಾಧಗಳು ಆಗಾಗ ಸಂಭವಿಸುವುದನ್ನು ಗಮನಿಸಿ, ರಾಜನು ಕಾಲ ಮತ್ತು ಸ್ಥಳಗಳನ್ನು ಗೊತ್ತುಮಾಡಿಕೊಂಡು, ಅಪರಾಧಿಗಳನ್ನು ಪತ್ತೆಮಾಡಿ ಅಪರಾಧದ ಸ್ವರೂಪ, ಅಪರಾಧಿಯು ಕೊಡಲು ಸಾಧ್ಯವಾಗಬಹುದಾದ ದಂಡ ಅಥವಾ ಅನುಭವಿಸಲು ಸಾಧ್ಯವಿರುವ ಶಿಕ್ಷೆ ಇವೆಲ್ಲವನ್ನೂ ಪರಿಶೀಲಿಸಿ ಶಿಕ್ಷೆಯನ್ನು ವಿಧಿಸಲಿ: ಯಾರಿಗೆ ನ್ಯಾಯವಾಗಿ ಶಿಕ್ಷೆಯಾಗಬೇಕೋ, ಅವರಿಗೆ ಅದು ಸಿಗಲಿ."

VIII ೧೨೪ "ಸ್ವಯಂಭೂವಿನ ಮಗನಾದ ಮನು, ಅಪರಾಧಿಗೆ ಶಿಕ್ಷಿಸಬೇಕಾದ ಹತ್ತು ಸ್ಥಾನಗಳನ್ನು ಹೆಸರಿಸಿದ್ದಾನೆ. ಕೆಳಗಿನ ಮೂರು ವರ್ಣಗಳಿಗೆ ಮಾತ್ರ ಈ ಶಿಕ್ಷೆಗಳು ತಕ್ಕವು. ಬ್ರಾಹ್ಮಣನಿಗೆ ಮಾತ್ರ ಈ ಯಾವ ಸ್ಥಾನಗಳಲ್ಲಿಯೂ ಹಿಂಸೆಯಾಗದಂತೆ ಬಿಟ್ಟುಬಿಡಬೇಕು."

VIII ೧೨೫ "ಜನನೇಂದ್ರಿಯ, ಹೊಟ್ಟೆ, ನಾಲಿಗೆ, ಎರಡೂ ಕೈಗಳು, ಎರಡೂ ಪಾದಗಳು, ಕಣ್ಣು, ಮೂಗು, ಎರಡೂ ಕಿವಿಗಳು, ಆಸ್ತಿಪಾಸ್ತಿ, ಉಗ್ರವಾದ ಸಂದರ್ಭವಾದರೆ ಇಡೀ ದೇಹ ಶಿಕ್ಷಾರ್ಹವಾಗಿರುತ್ತದೆ."

ಹಿಂದೂ ಮತ್ತು ಹಿಂದೂಗಳಲ್ಲದವರ ಅಪರಾಧ ನ್ಯಾಯಶಾಸ್ತ್ರಗಳ ನಡುವೆ ಎಂತಹ ಹೋಲಿಕೆಯಿದೆ? ಹಿಂದೂಗಳ ಅಪರಾಧ ನ್ಯಾಯಶಾಸ್ತ್ರದಲ್ಲಿ ಅಸಮಾನತೆಯನ್ನೇ ವಿಸ್ತಾರವಾಗಿ ಬರೆಯಲಾಗಿದೆಯಲ್ಲವೇ? ನ್ಯಾಯಪರವಾದ ಗುರಿಯಿರುವ ಅಪರಾಧ ಕಾನೂನಿನಲ್ಲಿ ನಾವು ಎರಡು ವಿಚಾರಗಳನ್ನು ಕಾಣುತ್ತೇವೆ:

ಒಂದು ಭಾಗದಲ್ಲಿ ಅಪರಾಧದ ಸ್ವರೂಪ ನಿರ್ಣಯವಿರುತ್ತದೆ. ಮತ್ತೊಂದು ಭಾಗದಲ್ಲಿ ಕಾನೂನು ಉಲ್ಲಂಘಿಸಿದವರಿಗೆ ತಕ್ಕ ಶಿಕ್ಷೆಯನ್ನು ವಿವೇಚನೆಯಿಂದ ನಿರ್ಧರಿಸಲಾಗುತ್ತದೆ. ಎಲ್ಲ ಅಪರಾಧಿಗಳೂ ಆಯಾ ಅಪರಾಧಗಳಿಗೆ ತಕ್ಕಂತೆ ಸಮಾನ ರೀತಿಯ ಶಿಕ್ಷೆ ಪಡೆಯುತ್ತಾರೆ. ಆದರೆ ಮನುವಿನಲ್ಲಿ ನಾವು ಕಾಣುವುದೇನು? ಮೊದಲನೆಯದಾಗಿ, ಅತಾರ್ಕಿಕವಾದ ಶಿಕ್ಷೆಗಳು. ಅಪರಾಧವೆಸಗಿದ ಅಂಗಗಳಿಗೆ–ಹೊಟ್ಟೆ, ನಾಲಗೆ, ಮೂಗು, ಕಣ್ಣು, ಕಿವಿ, ಜನನಾಂಗಗಳು ಇತ್ಯಾದಿಗಳಿಗೆ–ಅಪರಾಧಕ್ಕೆ ಶಿಕ್ಷೆ ನೀಡುವುದು, ಅಪರಾಧವೆಸಗಿದ ಅಂಗ ಮನುಷ್ಯನಿಂದ ಪ್ರತ್ಯೇಕವಾದ ಸ್ವತಂತ್ರ ಅಸ್ತಿತ್ವ ಪಡೆದು ತಾನೆ ಪ್ರವೃತ್ತವಾಯಿತು ಎಂಬಂತಿದೆ. ಈ ಕ್ರಮದ ಮನುವಿನ ಶಿಕ್ಷಾ ನಿಯಮಗಳ ಮತ್ತೊಂದು ಅವಿವೇಕವೆಂದರೆ ಅಪರಾಧದ ಸ್ವರೂಪಕ್ಕೂ ಶಿಕ್ಷೆಗೂ ಒಂದು ಸುಸಂಬದ್ಧ ಸಂಬಂಧವಿಲ್ಲದೆ ಅಮಾನವೀಯವಾಗಿರುವುದು. ಮನುವಿನ ಶಿಕ್ಷಾ ಕ್ರಮದಲ್ಲಿ ಎಲ್ಲಕ್ಕಿಂತ ಮಿಗಿಲಾಗಿ ಎದ್ದು ಕಾಣುವ ನಾಚಿಕೆಗೆಟ್ಟ ಲಕ್ಷಣವೆಂದರೆ ಒಂದೇ ಅಪರಾಧಕ್ಕೆ ಶಿಕ್ಷೆಗಳಲ್ಲಿರುವ ತಾರತಮ್ಯಗಳು. ನ್ಯಾಯಾಲಯಕ್ಕೆ ಬರುವ ಅಪರಾಧಿಯ ಗೌರವವನ್ನು ಕಾಪಾಡುವುದರಲ್ಲಿ ಎಲ್ಲಕ್ಕೂ ಮೂಲವಾಗಿರುವ ಸೂಕ್ಷ್ಮವಾದ ಸಾಮಾಜಿಕ ಅಸಮಾನತೆಯನ್ನು ರಕ್ಷಿಸಿ ಕಾಪಾಡುವುದರಲ್ಲಿ ಅದಕ್ಕಿರುವ ಕಾಳಜಿ ಗಮನಾರ್ಹವಾಗಿದೆ.

ಸಾಮಾಜಿಕ ಅಸಮಾನತೆಗಳನ್ನು ಮನು ಹೇಗೆ ಅಂಗೀಕರಿಸಿ ವಿಧಿಸಿದ್ದಾನೆಂಬುದನ್ನು ತೋರಿಸಲು ಇಲ್ಲಿಯವರೆಗೆ ಅಂತಹ ಅನೇಕ ಸಂಗತಿಗಳನ್ನು ಉದಾಹರಣೆಯಾಗಿ ಉಲ್ಲೇಖಿಸಿದ್ದೇನೆ. ಧಾರ್ಮಿಕ ಅಸಮಾನತೆಯನ್ನು ಮನುವೇ ಹುಟ್ಟುಹಾಕಿದನೆಂಬುದನ್ನು ತೋರಿಸಲು ಕೆಲವು ಸಂಗತಿಗಳನ್ನು ಈಗ ನಾನು ಉದಾಹರಿಸುತ್ತೇನೆ. ಇವೆಲ್ಲ ಪವಿತ್ರ ಕರ್ಮಗಳು ಮತ್ತು ಆಶ್ರಮಗಳಿಗೆ ಸಂಬಂಧಿಸಿದ ವಿಚಾರಗಳು.

ಕ್ರೈಸ್ತರಂತೆ ಹಿಂದೂಗಳಿಗೆ ಪವಿತ್ರ ಕರ್ಮಗಳಲ್ಲಿ ನಂಬಿಕೆಯಿದೆ. ಒಂದೇ ವ್ಯತ್ಯಾಸವೆಂದರೆ ಇವುಗಳ ಸಂಖ್ಯೆ ಹಿಂದೂಗಳಲ್ಲಿ ಜಾಸ್ತಿ. ರೋಮನ್ ಕೆಥೊಲಿಕ್ ಕ್ರೈಸ್ತರೂ ಹಿಂದೂಗಳ ಈ ಬಹುಸಂಖ್ಯೆಯ ಪವಿತ್ರ ಕರ್ಮಗಳ ಬಗೆಗೆ ಆಶ್ಚರ್ಯಪಡಬಹುದಾಗಿದೆ. ಮೂಲತಃ ಇವುಗಳ ಸಂಖ್ಯೆ ನಲವತ್ತು. ಮನುಷ್ಯ ಜೀವನದ ಅತ್ಯಂತ ಸಾಮಾನ್ಯ ಘಟನೆಯಿಂದ ಬಹು ಮಹತ್ವದ ಘಟನೆಯವರೆಗೆ ಎಲ್ಲ ಅಂಶಗಳನ್ನು ಇವು ಒಳಗೊಂಡಿದ್ದವು. ಮುಂದೆ ಇವುಗಳನ್ನು ಇಪ್ಪತ್ತಕ್ಕೆ ಇಳಿಸಲಾಯಿತು. ಬಳಿಕ ಅವುಗಳನ್ನು ಹದಿನಾರಕ್ಕೆ ಮಿತಿಗೊಳಿಸಲಾಯಿತು. ಹಿಂದೂ ಕರ್ಮಗಳಿಗೆ ಮುಂದೆ ಶಾಶ್ವತವಾಗಿ ಈ ಸಂಖ್ಯೆಯೇ ಉಳಿಯಿತು. ಈ ಪವಿತ್ರ ಕರ್ಮಗಳನ್ನು ವಿವರಿಸುವುದಕ್ಕೆ ಮುಂಚೆ ಈ ವಿಧಿ ವಿಧಾನಗಳ ಮೂಲದಲ್ಲಿಯೇ ಎಂತಹ ಅಸಮಾನತೆಯಿದೆ ಎಂಬುದನ್ನು ತಿಳಿದುಕೊಂಡ ಬಳಿಕವೇ ಓದುಗರು ಈ ಕರ್ಮಗಳಿಗೆ ಸಂಬಂಧಿಸಿದ ವಿಚಾರಗಳನ್ನು ತಿಳಿದುಕೊಳ್ಳಲು ಸಾಧ್ಯ. ಆದರೆ ಅವುಗಳೆಲ್ಲವನ್ನೂ ಚರ್ಚಿಸುವುದು ಅಸಾಧ್ಯ. ಅವುಗಳಲ್ಲಿ ಕೆಲವನ್ನು ಚರ್ಚಿಸಿದರೆ ಸಾಕು. ಅವುಗಳಲ್ಲಿ ಮೂರನ್ನು ಮಾತ್ರ ನಾನು ತೆಗೆದುಕೊಳ್ಳುತ್ತೇನೆ.

ದೀಕ್ಷೆ, ಗಾಯತ್ರಿ ಮಂತ್ರ ಮತ್ತು ದೈನಂದಿನ ಪೂಜೆ ಪುನಸ್ಕಾರಗಳು:

ಮೊದಲನೆಯದು ದೀಕ್ಷೆ: ಒಬ್ಬ ವ್ಯಕ್ತಿ ಸೂಕ್ತ ಕಾಲದಲ್ಲಿ ದೀಕ್ಷೆಗೆ ಅಧಿಕಾರ ಪಡೆಯುತ್ತಾನೆ. ಅವನ ಕೊರಳಿಗೆ ಪವಿತ್ರ ದಾರವನ್ನು ಹಾಕುವ ಮೂಲಕ ದೀಕ್ಷೆ ಕೊಡಲಾಗುತ್ತದೆ. ದೀಕ್ಷಾವಿಧಿಯ ಅಧಿಕಾರಕ್ಕೆ ಸಂಬಂಧಿಸಿದಂತೆ ಮನುವಿನ ಕಟ್ಟಳೆಗಳು ಕೆಳಗಿನಂತಿವೆ:

II ೩೬ "ಬ್ರಾಹ್ಮಣನಿಗೆ ಎಂಟು ವರ್ಷವಾದಾಗ, ಕ್ಷತ್ರಿಯ ಹನ್ನೊಂದು ವರ್ಷವಾದಾಗ, ವೈಶ್ಯನಿಗೆ ಹನ್ನೆರಡು ವರ್ಷವಾದಾಗ ಅವನ ತಂದೆಯು ತನ್ನ ವರ್ಣದ ಚಿಹ್ನೆಯನ್ನು ಮಗನಿಗೆ ಕೊಡಲಿ."

II ೩೭ "ಒಬ್ಬ ಬ್ರಾಹ್ಮಣ ಅಥವಾ ಅವನ ತಂದೆಯು ಪವಿತ್ರ ಜ್ಞಾನವನ್ನು ಇನ್ನೂ ಮುಂಚೆಯೇ

ನೀಡಲೆಂದು ಬಯಸಿದರೆ; ಒಬ್ಬ ಕ್ಷತ್ರಿಯನು ತನ್ನ ಶಕ್ತಿಯನ್ನು ವರ್ಗಾಯಿಸಲು ಅಥವಾ ವೈಶ್ಯನು ವ್ಯಾಪಾರವನ್ನು ಆರಂಭಿಸಲು ಸಂಬಂಧಿಸಿದ ಅಧಿಕಾರವನ್ನು ಐದು, ಆರು ಅಥವಾ ಎಂಟನೇ ವರ್ಷದಲ್ಲಿ ಕೊಡಬಹುದು."

II ೩೮ "ಗಾಯತ್ರಿ ಉಪದೇಶದೊಡನೆ ದೀಕ್ಷಾ ವಿಧಿಯ ಅಧಿಕಾರ ಕೊಡುವುದನ್ನು ಬ್ರಾಹ್ಮಣನಿಗೆ ಹದಿನಾರನೆಯ ವಯಸ್ಸಿಗಿಂತ ತಡವಾಗಬಾರದು; ಕ್ಷತ್ರಿಯನಿಗೆ ಇಪ್ಪತ್ತೆರಡು; ವೈಶ್ಯನಿಗೆ ಇಪ್ಪತ್ನಾಲ್ಕನೆಯ ವರ್ಷಕ್ಕಿಂತ ತಡವಾಗಬಾರದು."

II ೩೯ "ವಯಸ್ಸು ಮೀರಿದ, ಸೂಕ್ತ ಕಾಲದಲ್ಲಿ ಅಧಿಕಾರ ಪಡೆಯದ ಯುವಕರು ಬಳಿಕ ವ್ರಾತ್ಯರೆಂದು ಕರೆಸಿಕೊಳ್ಳುತ್ತಾರೆ. ಜಾತಿ ಭ್ರಷ್ಟರಾಗಿ ಗಾಯತ್ರಿಯಿಂದ ವಂಚಿತರಾಗಿ ಸದ್ಗೃಹಸ್ಥರಿಂದ ನಿಂದೆಗೊಳಗಾಗುತ್ತಾರೆ."

II ೧೪೭ "ಒಬ್ಬ ಮನುಷ್ಯನು ಕೇವಲ ಹುಟ್ಟುವುದು ಸಾಮಾನ್ಯ ವಿಚಾರ. ಅವನ ತಂದೆ ತಾಯಿಗಳ ಪರಸ್ಪರ ಇಂದ್ರಿಯಾಸಕ್ತಿಯ ಫಲವಾಗಿ ತಾಯಿಯ ಗರ್ಭವನ್ನು ಅವನು ಪ್ರವೇಶಿಸಿದ."

II ೧೪೮ "ಆದರೆ ಮುಖ್ಯ ಆಚಾರ್ಯನು ವೇದಾಧ್ಯಯನದಲ್ಲಿ ಪಾರಂಗತನಾದವನು ಪವಿತ್ರ ಮಾತೃದೇವತೆಯಾದ ಗಾಯತ್ರಿಯ ಮೂಲಕ ಕೊಡುವ ಜನ್ಮವೇ ನಿಜವಾದ ಜನ್ಮ. ವಯಸ್ಸು ಮತ್ತು ಸಾವಿನಿಂದ ವಿನಾಯಿತಿ ಪಡೆದ ಜನ್ಮವದು."

II ೧೬೯ "ಮೊದಲ ಜನ್ಮ ಸಹಜ ತಾಯಿಯಿಂದ, ಎರಡನೆಯ ಜನ್ಮ ಉಡಿದಾರ ಕಟ್ಟಿದಾಗ, ಮೂರನೆಯ ಜನ್ಮ ಸೂಕ್ತ ವಿಧಿ ಮತ್ತು ಸಂಸ್ಕಾರಗಳಿಂದ. ವೇದ ಪಾಠಗಳಲ್ಲಿ ಉಕ್ತವಾಗಿರುವಂತೆ ದ್ವಿಜನೆಂದು ಕರೆಯಲಾಗುವವನ ಜನ್ಮಗಳು ಹೀಗೆ ಇರುತ್ತವೆ."

II ೧೭೦ "ಅವರಲ್ಲಿ ಪವಿತ್ರ ಹುಟ್ಟು ಹೀಗಿದೆ; ಸೊಂಟಕ್ಕೆ ಉಡಿದಾರ ಮತ್ತು ಕೊರಳಿಗೆ ಪವಿತ್ರ ಜನಿವಾರ ಹಾಕುವುದರಿಂದ ವಿಶಿಷ್ಟವಾಗುತ್ತದೆ. ಈ ಹುಟ್ಟಿನಲ್ಲಿ ಗಾಯತ್ರಿಯೇ ಅವನ ತಾಯಿ. ಆಚಾರ್ಯನೇ ತಂದೆ."

ಇನ್ನು ನಾನು ಗಾಯತ್ರಿ ವಿಚಾರಕ್ಕೆ ಬರುತ್ತೇನೆ. ಅದೊಂದು ಮಂತ್ರ ಅಥವಾ ದೈವಿಕ ಶಕ್ತಿಯನ್ನು ಉದ್ದೀಪಿಸುವ ಪ್ರಾರ್ಥನೆ. ಅದರ ವಿವರಣೆಯನ್ನು ಮನು ಹೀಗೆ ಕೊಟ್ಟಿದ್ದಾನೆ:

II ೭೬ "ಬ್ರಹ್ಮನ ಮುಖದಿಂದ ಮೂರು ವೇದಗಳು ಹುಟ್ಟಿದವಂತೆ; ಮೂರು ಅಕ್ಷರಗಳು ಘೋಷಿಸಲ್ಪಟ್ಟವು; ಅ, ಉ, ಮ–ಇವು ಸೇರಿ ಏಕೋಚ್ಚಾರದಲ್ಲಿ ಸ್ವರ ಕಂಪನದಿಂದ ಒಟ್ಟಾದವು; ಇದರೊಡನೆ ಭೂರ್, ಭುವ, ಸ್ವರ್–ಅಂದರೆ ಭೂಮಿ, ಆಕಾಶ, ಸ್ವರ್ಗವೆಂಬ ಮೂರು ಶಬ್ದಗಳೂ ಸೇರಿದವು.

II ೭೭ "ಅಸಂವೇದ್ಯನಾದ, ಪ್ರಾಣಿ ಸಮಸ್ತ ಜಗದ್ರಕ್ಷಕನು ಮೂರು ವೇದಗಳಿಂದ ಸ್ತುತಿಸಲ್ಪಟ್ಟವನಾಗಿ ಒಂದಾದ ಮೇಲೆ ಒಂದರಂತೆ ಮೂರು ಪ್ರಮಾಣಗಳನ್ನು ಅನಿರ್ವಚನೀಯ ಪಾಠದಿಂದ ಹಾಲಿನಂತೆ ಕರೆದ 'ತದ್' ಎಂಬ ಶಬ್ದದಿಂದ ಆರಂಭವಾಯಿತು ಮತ್ತು ಸಾವಿತ್ರಿ ಅಥವಾ ಗಾಯತ್ರಿಗೆ ಅರ್ಹವಾಯಿತು.

II ೭೮ "ವೇದವನ್ನು ಬಲ್ಲ ಪುರೋಹಿತ ಬೆಳಗಿನಲ್ಲಿ ಮತ್ತು ಸಂಜೆಯಲ್ಲಿ ಮೂರು ಶಬ್ದಗಳನ್ನು ಮೊದಲು, ಬಳಿಕ ಏಕೋಚ್ಚಾರದ ಪವಿತ್ರ ಪಾಠವನ್ನು ತನ್ನಲ್ಲಿಯೇ ಹೇಳಿಕೊಳ್ಳುತ್ತಾನೆ. ವೇದಗಳು ಅವನಿಗೆ ಕೊಡುವ ಪಾವಿತ್ರ್ಯವನ್ನು ಅವನು ಅದರಿಂದ ಪಡೆಯುತ್ತಾನೆ."

II ೭೯ "ಒಬ್ಬ ದ್ವಿಜನು ಹಲವನ್ನು ಬಿಟ್ಟು ಕೇವಲ ಮೂರನ್ನು (ಅಥವಾ ಓಂ, ವ್ಯಾಹರ್ತಿಗಳು ಮತ್ತು ಗಾಯತ್ರಿ) ಒಂದು ಸಾವಿರ ಬಾರಿ ಉಚ್ಚರಿಸಿದರೆ, ಒಂದು ತಿಂಗಳಿನಲ್ಲಿ ಪೊರೆಗಳಚಿದ ಹಾವಿನಂತೆ ಎಂತಹ ಪಾಪದಿಂದಲೂ ಮುಕ್ತನಾಗುತ್ತಾನೆ."

II ೮೦ "ಪುರೋಹಿತ, ಸೈನಿಕ ಮತ್ತು ವಣಿಜ – ಈ ಮೂವರು ರಹಸ್ಯವಾದ ಈ ಉಪದೇಶವನ್ನು ಕಡೆಗಣಿಸಿ ಸೂಕ್ತ ಋತುಮಾನಗಳಲ್ಲಿ ತಕ್ಕ ಆಚರಣೆಗಳನ್ನು ಮಾಡದಿದ್ದರೆ, ಸದ್ಗೃಹಸ್ಥರ ತಿರಸ್ಕಾರಕ್ಕೆ ಗುರಿಯಾಗುತ್ತಾರೆ."

II ೮೧ "ಏಕೋಚ್ಚಾರದಿಂದ ಆರಂಭವಾಗಿ ಮೂರು ಪ್ರಮಾಣದ ಗಾಯತ್ರಿಯಲ್ಲಿ ಮುಂದುವರಿದು ಸ್ಥಿರವಾದ ಮಹಾನ್ ಶಬ್ದಗಳನ್ನು ವೇದದ ಬಾಯಿ ಅಥವಾ ಮುಖ್ಯ ಅಂಗವೆಂದು ತಿಳಿಯಲಾಗಿದೆ."

II ೮೨ "ಚ್ಯುತಿಯಿಲ್ಲದೆ ಮೂರು ವರ್ಷಗಳ ಕಾಲ ಪ್ರತಿ ದಿನವೂ ಯಾರು ಪವಿತ್ರ ಮಂತ್ರಗಳನ್ನು ಪಠಿಸುತ್ತಾನೆಯೋ ಅವನು ದಿವ್ಯಜ್ಞಾನವನ್ನು ಸಮೀಪಿಸುತ್ತಾನೆ. ಸೂಕ್ಷ್ಮ ಶರೀರ ಹೊಂದಿ ಗಾಳಿಯಂತೆ ತೇಲುತ್ತಾನೆ."

II ೮೩ "ಈ ಪವಿತ್ರ ಉಚ್ಚಾರಣೆಯು ಉನ್ನತವಾದುದರ ಸಂಕೇತ. ಉಸಿರನ್ನು ಬಿಗಿ ಹಿಡಿದು ದೇವರಲ್ಲಿ ಮನಸ್ಸನ್ನು ಏಕಾಗ್ರಗೊಳಿಸಿರುವುದು ಮಹಾನ್ ಭಕ್ತಿ. ಆದರೆ ಗಾಯತ್ರಿಗಿಂತ ಹಿರಿದಾದುದು ಮತ್ತೊಂದಿಲ್ಲ. ಮೌನಕ್ಕಿಂತ ಸತ್ಯವನ್ನು ಘೋಷಿಸುವುದೇ ಶ್ರೇಷ್ಠ."

II ೮೪ "ವೇದದಲ್ಲಿ ವಿಧಿಸಲಾಗಿರುವ ಎಲ್ಲ ಹಕ್ಕುಗಳು, ಅಗ್ನಿಗೆ ಕೊಡುವ ಆಹುತಿ ಮತ್ತು ಪವಿತ್ರಾಹುತಿಗಳೆಲ್ಲಾ ಕಳೆದುಹೋಗುತ್ತವೆ. ಕಳೆದುಹೋಗದ ವಿಚಾರವೆಂದು ಘೋಷಿಸಲಾಗುವುದೆಂದರೆ 'ಓಂ' ಎಂಬ ಅಕ್ಷರ. ಆದುದರಿಂದಲೇ ಅದನ್ನು ಅಕ್ಷರವೆಂದು ಕರೆಯಲಾಗಿದೆ. ಏಕೆಂದರೆ ಜೀವ ಸಮಸ್ತಕ್ಕೆ ಒಡೆಯನಾದ ದೇವರ ಸಂಕೇತವದು."

II ೮೫ "ಗಟ್ಟಿಯಾಗಿ ಹತ್ತು ಸಲ ಪವಿತ್ರ ನಾಮಸ್ಮರಣೆ ಮಾಡುವುದು ಪವಿತ್ರಾಹುತಿಗಿಂತ ಒಳ್ಳೆಯದು. ಸಾವಿರ ಬಾರಿ ಶುದ್ಧ ಮನಸ್ಸಿನಿಂದ ಸ್ಮರಿಸುವುದು ಅತ್ಯುತ್ತಮ."

II ೮೬ "ನಾಲ್ಕು ಗೃಹಕೃತ್ಯ ಆಚರಣೆಗಳನ್ನು ವಿಧ್ಯುಕ್ತ ಆಹುತಿಯೊಡನೆ ನೆರವೇರಿಸಿದರೆ ಸಿಗುವ ಪುಣ್ಯಕ್ಕಿಂತ ಹದಿನಾರು ಪಟ್ಟು ಪುಣ್ಯವನ್ನು ಗಾಯತ್ರಿಯನ್ನು ಒಂದು ಬಾರಿ ಜಪಿಸುವುದರಿಂದ ಪಡೆಯಬಹುದು."

ಈಗ ನಿತ್ಯಪೂಜೆ, ಹೋಮಗಳಿಗೆ ಬರೋಣ:

"ಈಗಾಗಲೇ ಕೆಲವು ಬಾರಿ ಕ್ರಮವಾಗಿ ವಿವರಿಸಿರುವಂತೆ, ಗೊತ್ತಿಲ್ಲದೆ ಮಾಡುವ ಅಪರಾಧಗಳಿಗೆ ಪ್ರಾಯಶ್ಚಿತ್ತವಾಗಿ, ಗೃಹಸ್ಥಿರತೆಗಾಗಿ ಐದು ಮಹಾ ಹೋಮಗಳನ್ನು ದಿನನಿತ್ಯವೂ ಜರುಗಿಸುವಂತೆ ಋಷಿಗಳು ವಿಧಿಸಿದ್ದಾರೆ."

III ೧೭೦ "ಶಾಸ್ತ್ರಾಧ್ಯಯನ ಮತ್ತು ಬೋಧನೆಗಳು ವೇದಗಳಿಗೆ ಮಾಡುವ ಅರ್ಚನೆ; ದೋಸೆ ಮತ್ತು ನೀರನ್ನು ನೈವೇದ್ಯವಾಗಿ ಮನಸ್ ಗೆ, ಆಹುತಿ, ದೇವತೆಗಳಿಗೆ ನೈವೇದ್ಯ ಬದುಕಿರುವ ಪ್ರಾಣಿಗಳಿಗೆ ಅನ್ನಾಹುತಿ ಕೊಡುವ ಮೂಲಕ ಪ್ರೇತಾಚರಣೆ; ಅತಿಥಿಗಳನ್ನು ಗೌರವದಿಂದ ಬರಮಾಡಿಕೊಳ್ಳುವುದು ಪುರುಷನಿಗೆ ಕೊಡುವ ಆಹುತಿ."

III ೧೭೧ "ಈ ಐದು ಮಹಾ ಆಹುತಿಗಳನ್ನು ಬಿಡದೆ ಯಾರು ನಡೆಸುತ್ತಾರೋ ಯಾರಿಗೆ ಅವುಗಳನ್ನು ನಡೆಸುವ ಸಾಮರ್ಥ್ಯವಿದೆಯೋ ಅವರು ಯಾವಾಗಲೂ ಮನೆಯಲ್ಲಿದ್ದರೂ ಸಹ ಐದು ವಧ ಸ್ಥಾನಗಳ ಮಕ್ಕಳಿಂದ ಕಳಂಕ ಹೊಂದುವುದಿಲ್ಲ."

ಆಶ್ರಮದ ವಿಚಾರಕ್ಕೆ ಬರೋಣ:

ಹಿಂದೂ ತತ್ವಶಾಸ್ತ್ರದ ಒಂದು ವಿಚಿತ್ರ ಸಿದ್ಧಾಂತವೆಂದರೆ ಆಶ್ರಮದ ಕಲ್ಪನೆ. ಯಾವುದೇ ಇತರ ಧರ್ಮಗಳ ಉಪದೇಶಗಳಲ್ಲಿ ಈ ಕಲ್ಪನೆ ಇದ್ದಂತಿಲ್ಲ. ಆಶ್ರಮ ಸಿದ್ಧಾಂತದಂತೆ ಬದುಕನ್ನು ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥ ಮತ್ತು ಸನ್ಯಾಸವೆಂದು ನಾಲ್ಕು ಘಟ್ಟಗಳಾಗಿ ವಿಂಗಡಿಸಬಹುದಾಗಿದೆ: ಬ್ರಹ್ಮಚಾರಿ ಘಟ್ಟದಲ್ಲಿ ಮನುಷ್ಯನು ಅವಿವಾಹಿತನಾಗಿದ್ದು ತನ್ನ ಸಮಯವನ್ನೆಲ್ಲಾ ಅಧ್ಯಯನ ಅಭ್ಯಾಸಗಳಿಗೆ ಮೀಸಲಿಡುತ್ತಾನೆ. ಅದರ ಬಳಿಕ ಗೃಹಸ್ಥಾಶ್ರಮದ ಘಟ್ಟವನ್ನು ಮುಟ್ಟಿ ಮದುವೆಯಾಗಿ, ಮಕ್ಕಳನ್ನು ಪಡೆದು, ಬೆಳೆಸಿ, ಗೃಹಕೃತ್ಯವೇ ಮುಂತಾದ ಲೌಕಿಕ ವಿಚಾರಗಳಲ್ಲಿ ತೊಡಗಿಸುತ್ತಾನೆ. ಮುಂದೆ ಮೂರನೇ ಘಟ್ಟವನ್ನು ಪ್ರವೇಶಿಸುತ್ತಾನೆ. ವಾನಪ್ರಸ್ಥವೆಂದು ಅದನ್ನು ಕರೆಯಲಾಗಿದೆ. ವಾನಪ್ರಸ್ಥಿಯಾಗಿ ಅರಣ್ಯದಲ್ಲಿ ಗುಡಿಸಲಿನಲ್ಲಿ ವಾಸವಾಗಿರುತ್ತಾನೆ. ಆದರೆ ಕುಟುಂಬದೊಂದಿಗೆ ತನ್ನ ಕಟ್ಟನ್ನು ಬಿಚ್ಚಿಕೊಂಡಿರುವುದಿಲ್ಲ. ಲೌಕಿಕ ಹಕ್ಕುಗಳನ್ನೂ ತ್ಯಾಗ ಮಾಡಿರುವುದಿಲ್ಲ. ಕೊನೆಯ ಮತ್ತು ನಾಲ್ಕನೆಯ ಘಟ್ಟವೇ ಸನ್ಯಾಸ. ಸನ್ಯಾಸದ ಅರ್ಥವೆಂದರೆ ದೇವರನ್ನು ಹುಡುಕುತ್ತಾ ಸಮಸ್ತವನ್ನೂ ತ್ಯಾಗಮಾಡಿ ಲೋಕ ವಿಚಾರಗಳಿಂದ ನಿವೃತ್ತನಾಗುವುದು. ಕೊನೆಯ ಎರಡು ಘಟ್ಟಗಳು ಅನುಸರಣೀಯ ಆದರ್ಶಗಳೇ ಹೊರತು ಕಡ್ಡಾಯವೇನಲ್ಲ. ಮನು ಹೀಗೆ ಹೇಳಿದ್ದಾನೆ:

II ೮೪ "ದ್ವಿಜನೊಬ್ಬನು ಗೃಹಕೃತ್ಯ ನಿಯಮಾನುಸಾರವಾಗಿ ಹೀಗೆ ಜೀವಿಸಿದ ಬಳಿಕ ಪ್ರತಿಜ್ಞೆಯನ್ನು ಮಾಡಿ ಇಂದ್ರಿಯಗಳನ್ನು ನಿಗ್ರಹಿಸಿ ಅಡವಿಯಲ್ಲಿ ಪರ್ಣಕುಟಿಯಲ್ಲಿ ಕೆಳಗಿನ ನಿಯಮಾನುಸಾರವಾಗಿ ಬದುಕುತ್ತಾನೆ."

II ೮೪ "ಒಬ್ಬ ಗೃಹಸ್ಥನು ತನ್ನ ಚರ್ಮ ಸುಕ್ಕುಗಟ್ಟಿದ್ದನ್ನು, ಕೂದಲು ಬೆಳ್ಳಗಾದದ್ದನ್ನು ಮತ್ತು ಮಕ್ಕಳ ಮಕ್ಕಳನ್ನು ಕಂಡರೆ ಅವನು ವಾನಪ್ರಸ್ಥಾಶ್ರಮಕ್ಕೆ ಅರ್ಹನಾಗಿದ್ದು ಕಾಡಿಗೆ ತೆರಳಬಹುದು."

II ೮೪ "ಕೃಷಿಯಿಂದ ಬೆಳೆದ ಎಲ್ಲ ಆಹಾರವನ್ನೂ ತ್ಯಜಿಸಿ, ತನ್ನೆಲ್ಲ ಭೋಗೋಪವಸ್ತುಗಳನ್ನು ಬಿಟ್ಟುಕೊಟ್ಟು, ತನ್ನ ಹೆಂಡತಿಯನ್ನು ಮಕ್ಕಳ ಆರೈಕೆಗೆ ಒಪ್ಪಿಸಿ ಅಥವಾ ಅವಳನ್ನೂ ಕರೆದುಕೊಂಡು ಅವನು ಅರಣ್ಯಕ್ಕೆ ಹೋಗಬಹುದು."

II ೮೪ "ಮನುಷ್ಯ ಪ್ರಾಕೃತಿಕ ಸ್ಥಿತಿಯಾದ ಜೀವನದ ಮೂರನೆಯ ಘಟ್ಟವನ್ನು ಅರಣ್ಯದಲ್ಲಿ ಕಳೆದು ದಾಟಿದ ಬಳಿಕ ಎಲ್ಲ ಮೋಹಗಳನ್ನೂ ಲೌಕಿಕ ವಿಚಾರಗಳನ್ನು ತ್ಯಾಗಮಾಡಿ ನಾಲ್ಕನೆಯ ಘಟ್ಟವಾದ ಸನ್ಯಾಸವನ್ನು ಸ್ವೀಕರಿಸಬಹುದು."

ಈ ನಿಯಾಮವಳಿಗಳು ವಾಸ್ತವವಾಗಿವೆಯಾದರೂ ಎದ್ದುಕಾಣುವ ಅಸಮಾನತೆಗಳಿಂದ ಕೂಡಿವೆ. ಈ ಎಲ್ಲ ಆಶ್ರಮಗಳೂ ಆಚರಣೆಗಳೆಲ್ಲ ಕೇವಲ ಬ್ರಾಹ್ಮಣರಿಗೆ ಮೀಸಲಾಗಿವೆಯೆಂಬುದನ್ನು ಗಮನಿಸಿ. ಶೂದ್ರರನ್ನು ಮತ್ತು ಹೆಂಗಸರನ್ನು ಈ ಪ್ರಯೋಜನಗಳಿಂದ ಹೊರಗಿಡಲಾಗಿದೆ, ಈ ಆಚರಣೆಗಳ ಮಾದರಿಗಳನ್ನು ಅವರು ಅನುಸರಿಸುವುದಕ್ಕೆ ಮನುವಿನ ಅಭ್ಯಂತರವೇನೂ ಇಲ್ಲ. ಆದರೆ ಅವರು ಆಚರಣೆಗಳನ್ನು ನಡೆಸುವಾಗ ಪವಿತ್ರ ಮಂತ್ರಗಳನ್ನು ಪಠಿಸುವುದನ್ನು ಅವನು ನಿಷೇಧಿಸಿದ್ದಾನೆ, ಈ ಬಗೆಗೆ ಮನು ಹೀಗೆ ಹೇಳುತ್ತಾನೆ: "ಶೂದ್ರನಲ್ಲಿ ತಮ್ಮ ಕರ್ತವ್ಯಾಚರಣೆಯಲ್ಲಿ ಆಸಕ್ತರಾಗಿರುವವರು ಯಾವ ಕರ್ತವ್ಯಗಳನ್ನು ಮಾಡಬೇಕೆಂದು ಗೊತ್ತಿರುವವರು, ಸಜ್ಜನರನ್ನು ಗೃಹಕೃತ್ಯಾಚಾರಗಳಲ್ಲಿ ಅನುಸರಿಸಬಹುದು. ಆದರೆ ಮಂತ್ರೋಚ್ಚಾರಣೆ ಇರಕೂಡದು. ಸ್ತುತಿ ಗೀತೆಗಳನ್ನು ಹೊರತು ಮಾಡಿದ ಆಚರಣೆಯಿಂದ ಪಾಪವಿಲ್ಲವಾದುದರಿಂದ ಅವರು ಪ್ರಶಂಸೆಗೆ ಪಾತ್ರರಾಗುತ್ತಾರೆ."

ಹೆಂಗಸರ ಬಗೆಗೆ ಮನುವಿನ ಕೆಳಗಿನ ವಾಕ್ಯಗಳನ್ನು ನೋಡಿ:

"ಅದೇ ಆಚರಣೆಗಳನ್ನು, ಅದೇ ವಯಸ್ಸಿನಲ್ಲಿ ಪವಿತ್ರ ಜನಿವಾರವೊಂದನ್ನು ಬಿಟ್ಟು ಉಳಿದ ಶುದ್ಧೀಕರಣ ಕ್ರಿಯೆಗಳನ್ನು ಹೆಂಗಸರಿಗೂ ಮಾಡಬಹುದು, ವೇದ ಮಂತ್ರೋಚ್ಚಾರ ವಿಲ್ಲದೆ ಅವರ ದೇಹವನ್ನು ಶುದ್ಧೀಕರಿಸಬಹುದು."

ಪವಿತ್ರಾಚರಣೆಗಳಿಂದ ಶೂದ್ರರನ್ನು ಮನು ಏಕೆ ಹೊರಗಿಟ್ಟ? ಶೂದ್ರರು ಸನ್ಯಾಸಿಗಳಾಗುವುದನ್ನು ಅವನು ನಿಷೇಧಿಸಿರುವುದಂತೂ ಒಂದು ಒಗಟಿನಂತಿದೆ. ಸನ್ಯಾಸವೆಂದರೆ ಲೌಕಿಕ ವಿಚಾರಗಳ ಬದುಕನ್ನು ತ್ಯಜಿಸುವುದು. ಕಾನೂನಿನ ಭಾಷೆಯಲ್ಲಿ ಹೇಳುವುದಾದರೆ ಸನ್ಯಾಸವೆಂದರೆ ನಾಗರಿಕ ಹಕ್ಕುಗಳನ್ನೆಲ್ಲಾ ಬಿಟ್ಟುಬಿಡುವುದು. ಅಂದರೆ ಪ್ರಜೆಯಾಗಿ ಅವನು ಸತ್ತಂತೆ. ಆದುದರಿಂದ ಒಬ್ಬ ಮನುಷ್ಯನು ಸನ್ಯಾಸಿಯಾದ ಕೂಡಲೆ ಅವನು ಸತ್ತನೆಂಬಂತೆ. ತತ್‌ಕ್ಷಣದಿಂದ ಅವನ ವಾರಸುದಾರರನು ಆಸ್ತಿ ಸಮಸ್ತವನ್ನೂ ವಹಿಸಿಕೊಳ್ಳುತ್ತಾನೆ. ಶೂದ್ರನು ಸನ್ಯಾಸಿಯಾದರೂ ಆಗುವುದು ಇದೇ ಕ್ರಮದಲ್ಲಿ. ಇದರಿಂದ ಶೂದ್ರನಿಗೆ ಹೊರತು ಬೇರಾರ ಹಿತಕ್ಕೂ ಧಕ್ಕೆ ಬರುವುದಿಲ್ಲ. ಆದರೂ ಏಕೆ ಈ ತಡೆ? ಈ ವಿಚಾರ ಮುಖ್ಯವಾದುದರಿಂದ ಇದರ ಮಹತ್ವವನ್ನು ವಿವರಿಸಲು ನಾನು ಮನುವಿನ ಮಾತುಗಳನ್ನೇ ಉಲ್ಲೇಖಿಸಬೇಕಾಗಿದೆ. ಕರ್ಮಾಚರಣೆ ಮತ್ತು ಸನ್ಯಾಸದ ಪ್ರಾಮುಖ್ಯ ಮತ್ತು ಮಹತ್ವವನ್ನು ಮನು ವಿವರಿಸಿದ್ದಾನೆ. ಸಂಬಂಧಿಸಿದ ಮುಂದಿನ ಅವನ ವಾಕ್ಯಗಳನ್ನು ಕುರಿತು ನಾವೆಲ್ಲ ಆಲೋಚಿಸಬಹುದಾಗಿದೆ.

II ೨೬ "ವೇದೋಕ್ತವಾದ ರೀತಿಯಲ್ಲಿ ವಿಧ್ಯುಕ್ತ ಆಚರಣೆಗಳ ಸಹಿತ ಜನನವೇ ಮುಂತಾದ ಆರಾಧನೆಗಳನ್ನು ಕರ್ಮಾಚರಣೆಗಳನ್ನು ದ್ವಿಜರಿಗೆ ನಡೆಸಲಿ. ಅದು ದೇಹವನ್ನು ಸಂಸ್ಕರಿಸಿ ಪಾಪವನ್ನು ಮುಕ್ತಗೊಳಿಸಿ ಈ ಜನ್ಮದಲ್ಲಿ ಮತ್ತು ಸತ್ತ ಬಳಿಕ ಸದ್ಗತಿ ಉಂಟುಮಾಡುತ್ತದೆ."

II ೨೮ "ವೇದಾಧ್ಯಯನದಿಂದ, ತಪಸ್ಸಿನಿಂದ, ಆಜ್ಯಾಹುತಿಗಳಿಂದ, ಪವಿತ್ರ ಗ್ರಂಥ ಪಠಣದಿಂದ, ಮೂರು ವೇದಗಳನ್ನು ವಶಪಡಿಸಿಕೊಳ್ಳುವುದರಿಂದ, ಮಕ್ಕಳನ್ನು ಪಡೆಯುವುದರಿಂದ, ಮಹಾ ಆಹುತಿಗಳಿಂದ, ಶ್ರೋತ್ರಿಯ ಆಚರಣೆಗಳಿಂದ ಈ ಮನುಷ್ಯ ದೇಹವು ಬ್ರಹ್ಮನಲ್ಲಿ ಐಕ್ಯವಾಗಲು ಅರ್ಹವಾಗುತ್ತದೆ."

ಇದು ಸಂಸ್ಕಾರಗಳ ಉದ್ದೇಶ ಮತ್ತು ಗುರಿ. ಸನ್ಯಾಸದ ಉದ್ದೇಶ ಮತ್ತು ಗುರಿಗಳನ್ನು ಮನು ವಿವರಿಸಿದ್ದಾನೆ:

II ೮೧ "ಅವನು (ಸನ್ಯಾಸಿ) ಈ ಬಗೆಯಲ್ಲಿ ಎಲ್ಲ ಮೋಹಕಗಳನ್ನೂ ಕ್ರಮೇಣ ತ್ಯಜಿಸಿದವನಾಗಿ ಎಲ್ಲ ದ್ವಂದ್ವಗಳಿಂದಲೂ ಬಿಡಲ್ಪಟ್ಟವನಾಗಿ ಮುಕ್ತನಾಗಿ ಏಕಾಂಗಿಯಾಗಿ ಬ್ರಹ್ಮನಲ್ಲಿ ಒಂದಾಗುತ್ತಾನೆ."

II ೮೫ "ಮೇಲೆ ಹೇಳಿದ ಕ್ರಿಯೆಗಳನ್ನು ಕ್ರಮವಾಗಿ ನೆರವೇರಿಸಿದ ದ್ವಿಜನು ಸನ್ಯಾಸಿಯಾದಾಗ ಈ ಲೋಕದ ತನ್ನ ಪಾಪಗಳನ್ನು ಕಳೆದುಕೊಂಡು ಮೇಲಿನ ಬ್ರಹ್ಮನನ್ನು ಮುಟ್ಟುತ್ತಾನೆ."

ಈ ಮೇಲೆ ಉಲ್ಲೇಖಿಸಿರುವ ಅಧಿಕೃತ ಹೇಳಿಕೆಗಳಿಂದ ಮನುವಿನ ಅಭಿಪ್ರಾಯ ಸ್ಪಷ್ಟವಾಗುತ್ತದೆ. ಕರ್ಮಾಚರಣೆಗಳ ಗುರಿ ಮತ್ತು ಉದ್ದೇಶ ದೇಹವನ್ನು ಸಂಸ್ಕರಿಸಿ ಪಾಪ ಮುಕ್ತವನ್ನಾಗಿ ಮಾಡುವುದು: ಈ ಜನ್ಮದಲ್ಲಿ ಪರಿಶುದ್ಧವಾಗುವುದು ಮತ್ತು ಮುಂದೆ ದೇವರೊಂದಿಗೆ ಐಕ್ಯವಾಗಲು ಅರ್ಹಗೊಳಿಸುವುದು. ಆದುದರಿಂದ ಮನುವಿನ ಪ್ರಕಾರ ಸನ್ಯಾಸದ ಗುರಿ ದೇವರನ್ನು ಸೇರಿ ಐಕ್ಯವಾಗುವುದು. ಆದರೂ ಮನು ಹೇಳುವಂತೆ ಕರ್ಮಾಚರಣೆಗಳು ಮತ್ತು ಸನ್ಯಾಸಕ್ಕೆ ಅಧಿಕಾರಿಗಳು ಕೇವಲ ಮೇಲು ವರ್ಣದವರು.

ಮೇಲು ವರ್ಣದವರ ವಿಶೇಷ ಹಕ್ಕಿಗೆ ಸಂಬಂಧಿಸಿದ ಇದನ್ನು ಪಡೆಯಲು ಶೂದ್ರರು ಅರ್ಹರಲ್ಲ, ಏಕೆ? ಶೂದ್ರನಿಗೆ ತನ್ನ ದೇಹ ಮತ್ತು ಆತ್ಮವನ್ನು ಸಂಸ್ಕರಿಸಿಕೊಳ್ಳುವ, ಶುದ್ಧೀಕರಿಸಿಕೊಳ್ಳುವ ಅಗತ್ಯವಿಲ್ಲವೇ? ದೇವರನ್ನು ಸೇರಬೇಕೆಂಬ ಹಂಬಲ ಶೂದ್ರನಿಗಿರಬೇಡವೇ? ಈ ಪ್ರಶ್ನೆಗಳಿಗೆ ಪರವಾಗಿಯೇ ಬಹುಶಃ ಮನು ಉತ್ತರ ಕೊಡುತ್ತಿದ್ದ. ಆದರೂ ಆತ ಏಕೆ ಈ ಬಗೆಯ ಕಟ್ಟಳೆಗಳನ್ನು ವಿಧಿಸಿದ? ಇದಕ್ಕೆ ಉತ್ತರ ಹೀಗಿದೆ: ಸಾಮಾಜಿಕ ಅಸಮಾನತೆಯನ್ನು ಆತ ದೃಢವಾಗಿ ನಂಬುತ್ತಿದ್ದ ಮತ್ತು ಧಾರ್ಮಿಕ ಸಮಾನತೆಯನ್ನು ಒಪ್ಪಿಕೊಳ್ಳುವುದರ ಅಪಾಯವೇನೆಂಬುದನ್ನು ಅವನು ಚೆನ್ನಾಗಿ ತಿಳಿದಿದ್ದ. ದೇವರ ಎದುರಿನಲ್ಲಿ ನಾನು ಸಮಾನನಾದರೆ ಭೂಮಿಯ ಮೇಲೆ ಏಕೆ ಸಮಾನನಲ್ಲ? ಈ ಪ್ರಶ್ನೆಯು ಭಯಾನಕತೆಯಿಂದ ಮನು ತತ್ತರಿಸಿಹೋಗಿದ್ದ. ಧಾರ್ಮಿಕ ಸಮಾನತೆಗೆ ಪ್ರವೇಶಕೊಟ್ಟು, ಪರಿಣಾಮವಾಗಿ ಸಾಮಾಜಿಕ ಅಸಮಾನತೆಯ ಬಗೆಗೆ ಸಮಸ್ಯೆ ಹುಟ್ಟು ಹಾಕುವುದಕ್ಕಿಂತ ಧಾರ್ಮಿಕ ಸಮಾನತೆಯನ್ನು ನಿರಾಕರಿಸುವುದೇ ಉತ್ತಮ ಮಾರ್ಗವೆಂದು ಅವನು ಭಾವಿಸಿದ.

ಹೀಗೆ ಹಿಂದೂ ಧರ್ಮದಲ್ಲಿ ಸಾಮಾಜಿಕ ಅಸಮಾನತೆ ಮತ್ತು ಧಾರ್ಮಿಕ ಅಸಮಾನತೆಗಳೆರಡನ್ನೂ ತಾತ್ವಿಕವಾಗಿ ಬೆಸೆಯಲಾಗಿದೆ.

ಮನುಷ್ಯ ಶುದ್ಧನಾಗುವುದನ್ನು ತಡೆಯುವುದು! ದೇವರ ಸಮೀಪ ಹೋಗಬಯಸುವ ಮನುಷ್ಯನು ನಿಷೇಧಿಸುವುದು! ಯಾವನೇ ವಿವೇಕಿಗೆ ಈ ನಿಯಮಗಳು ಎಷ್ಟು ಕ್ರೂರವೆಂಬುದನ್ನು ಪ್ರತ್ಯೇಕವಾಗಿ ವಿವರಿಸಿ ಹೇಳಬೇಕಿಲ್ಲ. ಹಿಂದೂ ಧರ್ಮವು ಎಷ್ಟು ಸ್ಪಷ್ಟವಾಗಿ ಬಹಿರಂಗವಾಗಿ ಸಮಾನತೆಯನ್ನು ನಿರಾಕರಿಸುತ್ತದೆ ಮತ್ತು ಮನುಷ್ಯನ ಪವಿತ್ರ ಸ್ವರೂಪವನ್ನು ಒಪ್ಪುವುದಿಲ್ಲವೆಂಬುದು ಇಲ್ಲಿ ಗೊತ್ತಾಗುತ್ತದೆ.

ಇಷ್ಟೇ ಅಲ್ಲ. ಮನುಷ್ಯತ್ವವನ್ನೇ ಮನುಷ್ಯನಿಗೆ ನಿರಾಕರಿಸುವಷ್ಟಕ್ಕೇ ಮನು ನಿಲ್ಲುವುದಿಲ್ಲ. ಮನುಷ್ಯನ ವ್ಯಕ್ತಿತ್ವವನ್ನೇ ಉದ್ದೇಶಪೂರ್ವಕವಾಗಿ ಹೀನಾಯಗೊಳಿಸುವುದನ್ನು ಅವನು ಸಮರ್ಥಿಸುತ್ತಾನೆ. ಹಿಂದೂ ಧರ್ಮ ತತ್ವಶಾಸ್ತ್ರಕ್ಕೆ ಸಂಬಂಧಿಸಿದ ಎರಡು ನಿದರ್ಶನಗಳನ್ನು ಈ ವಿಚಾರವಾಗಿ ನಾನು ಎತ್ತಿಕೊಳ್ಳುತ್ತೇನೆ.

ಜಾತಿ ವ್ಯವಸ್ಥೆಯನ್ನು ಅಧ್ಯಯನ ಮಾಡುವವರೆಲ್ಲ ಸಹಜವಾಗಿಯೇ ಅದರ ಮೂಲದ ಬಗ್ಗೆ ವಿಚಾರಿಸತೊಡಗುತ್ತಾರೆ. ಜಾತಿಗಳ ಪ್ರತಿಪಾದಕನಾದ ಮನು ವಿವಿಧ ಜಾತಿಗಳ ಉಗಮಕ್ಕೆ ವಿವರಣೆ ನೀಡಿದ್ದಾನೆ. ಮನು ಕೊಟ್ಟಿರುವ ವಿವರಣೆ ಏನು? ಅದು ಅತ್ಯಂತ ಸರಳವಾಗಿದೆ. ನಾಲ್ಕು ಮೂಲ ವರ್ಗಗಳನ್ನು ಪಕ್ಕಕ್ಕಿಟ್ಟರೆ ಉಳಿದವರೆಲ್ಲಾ ನೀಚ ಮೂಲದವರು. ಅವರೆಲ್ಲಾ ನಾಲ್ಕು ಮೂಲ ವರ್ಣಗಳ ಹೆಣ್ಣು ಗಂಡಿನ ನಡುವೆ ಆದ ವ್ಯಭಿಚಾರದಿಂದ ಹುಟ್ಟಿದವರು. ಅಂದರೆ ನಾಲ್ಕು ಮೂಲ ವರ್ಣಗಳ ಜನರ ಸಡಿಲತೆ ಮತ್ತು ಅನೈತಿಕ ಜೀವನ ಮಿತಿ ಮೀರಿರಬೇಕು. ಏಕೆಂದರೆ ಅಸಂಖ್ಯಾತ ಜಾತಿಗಳ ಅಗಣಿತ ಹುಟ್ಟುಗಳಿಗೆ ವಿವರಣೆ ಹೇಗೆ ಸಾಧ್ಯ? ಮನು ಈ ಕ್ರೂರ ಆಪಾದನೆ ಮಾಡುವಾಗ ಒಂದು ಕ್ಷಣ ನಿಂತು ಯೋಚಿಸಲಿಲ್ಲ. ನಾಲ್ಕು ಮೂಲ ವರ್ಣಗಳ ಹೆಣ್ಣು ಗಂಡುಗಳ ಗುಣ ಶೀಲಗಳ ಬಗೆಗೆ ಎಂತಹ ಸಂಶಯವನ್ನು ತಾನು ಆರೋಪಿಸಿದೆನೆಂಬುದನ್ನು ಆತ ಯೋಚಿಸಿದಂತಿಲ್ಲ. ಚಂಡಾಲರು–ಅಸ್ಪೃಶ್ಯರ ಮೊದಲು ಹೆಸರು – ಬ್ರಾಹ್ಮಣ ಹೆಣ್ಣು ಮತ್ತು ಶೂದ್ರ ಗಂಡಸಿನ ಸಂತತಿಯೆನ್ನುವುದಾದರೆ ಇಷ್ಟೊಂದು ಬಹು ಸಂಖ್ಯಾತ ಚಂಡಾಲರ ಹುಟ್ಟನ್ನು ವಿವರಿಸಲು ಒಂದೇ ದಾರಿ ಉಳಿದಿದೆ; ಪ್ರತಿಯೊಬ್ಬ ಬ್ರಾಹ್ಮಣ ಹೆಂಗಸೂ ಹಾದರಗಿತ್ತಿ ಅಥವಾ ಸೂಳೆಯಾಗಿರಬೇಕು; ಪ್ರತಿಯೊಬ್ಬ ಶೂದ್ರ ಗಂಡಸೂ ಸಂಪೂರ್ಣವಾಗಿ ವ್ಯಭಿಚಾರದ ಜೀವನ ನಡೆಸುತ್ತಿದ್ದಿರಬೇಕು. ವಿವಿಧ ಜಾತಿಗಳ ಹುಟ್ಟನ್ನು ನೀಚಗೊಳಿಸುವ ಆತುರದ ಹುಚ್ಚಿಗೆ ಬಲಿಯಾಗಿದ್ದ ಮನು ಬುದ್ಧಿಪೂರ್ವಕವಾಗಿಯೇ ಚಾರಿತ್ರಿಕ ಸಂಗತಿಗಳನ್ನು ವಿಕೃತಗೊಳಿಸಿದ್ದಾನೆ. ನಾನು ಎರಡೇ

ನಿದರ್ಶನಗಳನ್ನು ಕೊಡುತ್ತೇನೆ. ಮಗಧ ಮತ್ತು ವೈದೇಹಿಕರ ಹುಟ್ಟಿನ ಬಗೆಗೆ ಮನು ಕೊಡುವ ವಿವರಣೆಯನ್ನು ಅದೇ ಜಾತಿಗಳ ಉಗಮದ ಬಗೆಗೆ ಮಹಾ ವ್ಯಾಕರಣಕಾರ ಪಾಣಿನಿ ಕೊಡುವ ವಿವರಣೆಯೊಂದಿಗೆ ಹೋಲಿಸಬಹುದಾಗಿದೆ. ಮನುವಿನ ಪ್ರಕಾರ ಮಗಧ ಎನ್ನುವ ಜಾತಿ ಹುಟ್ಟಿದ್ದು ವೈಶ್ಯ ಗಂಡಸು ಮತ್ತು ಕ್ಷತ್ರಿಯ ಹೆಣ್ಣಿನ ಸಂಭೋಗದ ಫಲವಾಗಿ. ವೈದೇಹಿಕರ ಉಗಮ, ಮನುವಿನ ಪ್ರಕಾರ ವೈಶ್ಯ ಗಂಡು ಮತ್ತು ಬ್ರಾಹನ ಹೆಂಗಸಿನ ಸಂಭೋಗದ ಫಲ. ನಾವೀಗ ಪಾಣಿನಿಯತ್ತ ಗಮನ ಕೊಡೋಣ. ಪಾಣಿನಿಯ ಪ್ರಕಾರ ಮಗಧನೆಂದರೆ ಮಗಧವೆಂಬ ದೇಶದ ನಿವಾಸಿಯಾಗಿರುವ ವ್ಯಕ್ತಿ ಎಂದು ಅರ್ಥ. ವೈದೇಹಿಕನೆಂದರೆ ಅವನ ಪ್ರಕಾರ ವಿದೇಹವೆಂಬ ದೇಶದಲ್ಲಿ ವಾಸಿಸುವ ವ್ಯಕ್ತಿ. ಎಂತಹ ಹೋಲಿಕೆ! ಎಷ್ಟು ಕ್ರೂರವಾಗಿದೆ! ಏಕೆಂದರೆ ಪಾಣಿನಿ ಜೀವಿಸಿದ್ದು ಕಿ.ಪೂ. ಮುನ್ನೂರು ವರ್ಷಗಳಿಗಿಂತ ಈಚೆಗಂತೂ ಅಲ್ಲ. ಮನುವಿನ ಕಾಲವಾದರೋ ಕ್ರಿ.ಶ. ಇನ್ನೂರು. ಪಾಣಿನಿಯ ಕಾಲದಲ್ಲಿ ಯಾವುದೇ ಕಲಂಕವಿಲ್ಲದ ಜನ, ಮನುವಿನ ಕೈಯಿಂದ ಹೇಗೆ ಇಂತಹ ಕಲಂಕಕ್ಕೆ ಗುರಿಯಾದರು? ಮನು ಉದ್ದೇಶಪೂರ್ವಕವಾಗಿ ಅವರನ್ನು ಹೀನಾಯಗೊಳಿಸಿದನೆಂಬುದೇ ಅದಕ್ಕೆ ಸಿಗುವ ಉತ್ತರ. ಮನುವಾದರೂ ಏಕೆ ಉದ್ದೇಶಪೂರ್ವಕವಾಗಿ ಈ ಜನಗಳನ್ನು ಹೀನಾಯಗೊಳಿಸಲು ಹೊರಟನೆಂಬುದಕ್ಕೆ ಉತ್ತರ ಹೇಳಬೇಕಾಗಿದೆ. ಇದಕ್ಕೆ ಮುನ್ನವೇ ಒಂದು ವಿಚಿತ್ರ ಹೋಲಿಕೆಯತ್ತ ನೋಡಬೇಕು. ಜಗತ್ತಿನ ಎಲ್ಲೆಡೆ ಧರ್ಮವು ಮನುಷ್ಯನನ್ನು ಮೇಲೆತ್ತುವ ಉದ್ಧರಿಸುವ ಕಾರ್ಯದಲ್ಲಿ ನಿರತವಾಗಿದ್ದಾಗ ಹಿಂದೂ ಧರ್ಮವು ಮನುಷ್ಯರನ್ನು ಹೀನಾಯಗೊಳಿಸಿ ಕೆಳಕ್ಕೆ ತಳ್ಳುವುದರಲ್ಲಿ ನಿರತವಾಗಿತ್ತು.

ಹೀಗೆ ಹೀನಾಯಗೊಳಿಸುವ ಪ್ರವೃತ್ತಿ ಹಿಂದೂ ಧರ್ಮದ ಆಂತರ್ಯದಲ್ಲಿಯೇ ಹೇಗೆ ಅಡಕವಾಗಿತ್ತೆಂಬುದಕ್ಕೆ ನಾನು ಕೊಡುವ ನಿದರ್ಶನ ಮನು ಹೇಳಿರುವ ನಾಮಕರಣಕ್ಕೆ ಸಂಬಂಧಿಸಿದ ನಿಯಮಾವಳಿಗಳು: ಹಿಂದೂಗಳ ಹೆಸರುಗಳು ನಾಲ್ಕು ರೀತಿಯಲ್ಲಿವೆ. ಅವುಗಳು ಇಲ್ಲವೇ (೧) ಮನೆ ದೈವಕ್ಕೆ ಸಂಬಂಧಿಸಿವೆ, (೨) ಮಗು ಹುಟ್ಟಿದ ನಕ್ಷತ್ರಕ್ಕನುಸಾರವಾಗಿವೆ, (೩) ಅಥವಾ ಮಗು ಹುಟ್ಟಿದ ತಿಂಗಳಿಗನುಸಾರವಾಗಿವೆ, (೪) ಹಾಗೂ ಶುದ್ಧ ಐಹಿಕ ಸ್ವರೂಪದಲ್ಲಿವೆ; ಅಂದರೆ ವ್ಯಾಪಾರ, ವಹಿವಾಟಿಗೆ ಸಂಬಂಧಿಸಿವೆ. ಮನುವಿನ ಪ್ರಕಾರ ವ್ಯವಹಾರ ನಾಮವು ಎರಡು ಭಾಗದಲ್ಲಿದ್ದು ಅದರ ಮೊದಲ ಭಾಗವೇನು? ಎರಡನೆಯ ಭಾಗವೇನು? ಎಂಬುದನ್ನು ವಿವರಿಸಿದ್ದಾನೆ. ಬ್ರಾಹ್ಮಣನ ಹೆಸರಿನ ಎರಡನೆಯ ಭಾಗ ಸುಖವನ್ನು ಸೂಚಿಸುವಂತಿರಬೇಕು. ಕ್ಷತ್ರಿಯನದು ರಕ್ಷಣೆಯನ್ನು ಸೂಚಿಸುವಂತಿರಬೇಕು. ವೈಶ್ಯನದು ಸಮೃದ್ಧಿ ಸೂಚಕವಾಗಿರಬೇಕು. ಶೂದ್ರನದು ಸೇವಾಸೂಚಕವಾಗಿರಬೇಕು. ಅದರಂತೆ ಬ್ರಾಹ್ಮಣರಲ್ಲಿ ಶರ್ಮ (ಸಂತೋಷ) ಅಥವಾ ದೇವ (ದೈವ); ಕ್ಷತ್ರಿಯರಲ್ಲಿ ರಾಜ (ಅಧಿಕಾರ) ಅಥವಾ ವರ್ಮ (ಆಯುಧ); ವೈಶ್ಯರಲ್ಲಿ ಗುಪ್ತ (ಉಡುಗೊರೆ) ಅಥವಾ ದತ್ತ (ಕೊಡುವವನು); ಮತ್ತು ಶೂದ್ರರಲ್ಲಿ ದಾಸ(ಸೇವೆ) ಎಂಬುದನ್ನು ಹೆಸರಿನ ದ್ವಿತೀಯಾರ್ಧದಲ್ಲಿ ಕಾಣುತ್ತೇವೆ. ಪ್ರಥಮಾರ್ಧದ ಹೆಸರಿನ ಬಗೆಗೆ ಮನು ಹೇಳುವಂತೆ ಬ್ರಾಹ್ಮಣರಲ್ಲಿ ಅದು ಮಂಗಳಕರವಾದುದನ್ನು ಸೂಚಿಸಬೇಕು; ಕ್ಷತ್ರಿಯರಲ್ಲಿ ಅಧಿಕಾರ ಸಂಬಂಧಿಯಾಗಿರಬೇಕು; ವೈಶ್ಯರಲ್ಲಿ ಐಶ್ವರ್ಯಕ್ಕೆ ಸಂಬಂಧಿಸಿರಬೇಕು; ಶೂದ್ರರಲ್ಲಿ ಮಾತ್ರ ಮನು ಹೇಳುವಂತೆ ಅದು ಏನಾದರೂ ಅಪಮಾನಕಾರಿ ಅರ್ಥ ಸೂಚಕವಾಗಿರಬೇಕು. ಈ ಬಗೆಯ ತತ್ವವೂ ನಂಬಲಸಾಧ್ಯವಾದುದೆಂದು ಯಾರಾದರೂ ತಿಳಿಯುವುದಾದರೆ ಅವರನ್ನು ಸಮಾಧಾನಪಡಿಸಲು ನಾನು ಮನುವಿನ ಮಾತುಗಳನ್ನೇ ಉಲ್ಲೇಖಿಸುತ್ತೇನೆ. ನಾಮಕರಣ ಸಮಾರಂಭದ ಬಗೆಗೆ ಮನು ಹೇಳುತ್ತಾನೆ:

II ೩೦ "ಮಗುವಿಗೆ ಹೆಸರಿಡುವ ನಾಮಕರಣ ಸಮಾರಂಭವನ್ನು ಹುಟ್ಟಿದ ಹತ್ತು ಅಥವಾ

ಹನ್ನೆರಡನೆಯ ದಿನದಂದು ಶುಭ ಮುಹೂರ್ತದಲ್ಲಿ ಅದೃಷ್ಟದಾಯಕ ದಿನದಂದು ತಂದೆಯು ನೆರವೇರಿಸಲಿ."

II ೩೧ "ಬ್ರಾಹ್ಮಣನ (ಮೊದಲ ಭಾಗ) ಹೆಸರು ಮಂಗಳಕರವಾಗಲಿ, ಕ್ಷತ್ರಿಯನದು ಅಧಿಕಾರ ಸಂಬಂಧಿ, ವೈಶ್ಯನದು ಐಶ್ವರ್ಯ ಸಂಬಂಧಿಯಾದರೆ, ಶೂದ್ರನದು (ಏನಾದರೂ ಒಂದು ರೀತಿಯಲ್ಲಿ) ಅಪಮಾನ ಸೂಚಕವಾಗಿರಲಿ."

II ೩೨ "ಬ್ರಾಹ್ಮಣನ ಹೆಸರಿನ ಎರಡನೆ ಭಾಗದಲ್ಲಿ ಸಂತೋಷದಾಯಕವಾದ ಮಾತಿರಲಿ, ಕ್ಷತ್ರಿಯನಲ್ಲಿ ರಕ್ಷಣೆ, ವೈಶ್ಯನಲ್ಲಿ ಸಮೃದ್ಧಿ, ಶೂದ್ರನಲ್ಲಿ ಸೇವಕ ಭಾವವನ್ನು ಸೂಚಿಸುವಂತಿರಲಿ."

ಶೂದ್ರನು ಉನ್ನತವಾದ ಅರ್ಥವಿರುವ ಹೆಸರನ್ನು ಹೊಂದುವ ಸಮಾಧಾನ ಪಡೆಯಲು ಮನು ಒಪ್ಪುವುದಿಲ್ಲ. ವಸ್ತುಸ್ಥಿತಿಯಲ್ಲಿ ಮತ್ತು ಹೆಸರಿನಲ್ಲಿ ಅವನು ಅಪಮಾನವನ್ನು ಹೊತ್ತು ನಡೆಯಬೇಕು.

ಸಾಮಾಜಿಕವಾಗಿ ಧಾರ್ಮಿಕವಾಗಿ, ಎರಡೂ ನೆಲೆಗಳಲ್ಲಿ ಹಿಂದೂ ಧರ್ಮವು ಸಮಾನತೆಯನ್ನು ಹೇಗೆ ನಿರಾಕರಿಸಿದೆ ಎಂಬುದರ ಬಗೆಗೆ ಸಾಕಷ್ಟು ಚರ್ಚಿಸಲಾಗಿದೆ. ಮನುಷ್ಯನ ವ್ಯಕ್ತಿತ್ವವನ್ನೇ ಅದು ಅಲ್ಲಗಳೆದಿರುವುದನ್ನು ತೋರಿಸಲಾಗಿದೆ.

ಹಿಂದೂ ಧರ್ಮವು ಸ್ವಾತಂತ್ರ್ಯವನ್ನು ಅಂಗೀಕರಿಸಿದೆಯೇ? ನಿಜವಾದ ಸ್ವಾತಂತ್ರ್ಯದೊಡನೆ ಕೆಲವು ಸಾಮಾಜಿಕ ಸ್ಥಿತಿಗಳಿರುತ್ತವೆ..

ಮೊತ್ತ ಮೊದಲನೆಯದಾಗಿ, ಅಲ್ಲಿ ಸಾಮಾಜಿಕ ಸಮಾನತೆ ಇರಬೇಕು.

"ವಿಶೇಷ ಹಕ್ಕುಗಳು ಅದನ್ನು ಹೊಂದಿರುವವರ ಪರವಾಗಿ ಸಾಮಾಜಿಕ ಕ್ರಿಯೆಗಳ ಸಮತೂಕವನ್ನು ವಾಲಿಸಿಬಿಡುತ್ತವೆ. ಪ್ರಜೆಗಳ ಸಾಮಾಜಿಕ ಹಕ್ಕು ಸಮಾನವಾಗಿದ್ದಷ್ಟೂ ಅವರು ತಮ್ಮ ಸ್ವಾತಂತ್ರ್ಯವನ್ನು ಬಳಸಲು ಹೆಚ್ಚು ಶಕ್ತರಾಗುತ್ತಾರೆ. ಸ್ವಾತಂತ್ರ್ಯವು ನಿರ್ಧಾರಿತ ಗುರಿಯತ್ತ ಸಾಗಬೇಕಾದರೆ ಸಮಾನತೆಯಿರಬೇಕಾದುದು ಬಹಳ ಮುಖ್ಯವಾಗುತ್ತದೆ."

ಎರಡನೆಯದಾಗಿ, ಅಲ್ಲಿ ಆರ್ಥಿಕ ಭದ್ರತೆಯಿರಬೇಕು.

"ಒಬ್ಬ ಮನುಷ್ಯನು ಯಾವುದೇ ಉದ್ಯೋಗವನ್ನು ಆಯ್ದುಕೊಂಡು ಮುಂದುವರಿಯಲು ಸ್ವತಂತ್ರನಿರಬಹುದು.... ಆದರೂ ಅವನಿಗೆ ಉದ್ಯೋಗದಲ್ಲಿ ಭದ್ರತೆಯಿಲ್ಲದಂತೆ ಮಾಡಿದರೆ ದೈಹಿಕ ಮತ್ತು ಮಾನಸಿಕ ಗುಲಾಮಗಿರಿಗೆ ಬಲಿಯಾಗುತ್ತಾನೆ. ಸ್ವಾತಂತ್ರ್ಯದ ತಿರುಳನ್ನೇ ಅರ್ಥಮಾಡಿಕೊಳ್ಳಲು ಅವನು ಅಸಮರ್ಥನಾಗುತ್ತಾನೆ. ನಾಳಿನ ಬಗೆಗೆ ನಿರಂತರ ಕಳವಳ, ಬರಲಿರುವ ಆಪತ್ತಿನ ಬಗೆಗೆ ಭೀತಿ, ತುಂಬಿದ ಉದ್ವೇಗ, ಸುಖ ಸಂತೋಷಗಳಿಗಾಗಿ ನಿರಂತರ ಹುಡುಕಾಟವಿದ್ದರೂ ಅದು ತಪ್ಪಿಸಿಕೊಳ್ಳುವುದು; ಇದೆಲ್ಲ ಏನನ್ನು ಸೂಚಿಸುತ್ತಿದೆ ಎಂದರೆ – ಆರ್ಥಿಕ ಭದ್ರತೆಯಿಲ್ಲದ ಸ್ವಾತಂತ್ರ್ಯಕ್ಕೆ ಯಾವುದೇ ಬೆಲೆಯಿಲ್ಲ. ಮನುಷ್ಯರು ಸ್ವತಂತ್ರರಿರಬಹುದು; ಆದರೂ ಅವರು ಸ್ವಾತಂತ್ರ್ಯದ ಗುರಿ ಸಾಧಿಸಲು ಅಶಕ್ತರಾಗಿಯೇ ಉಳಿದುಬಿಡಬಹುದು."

ಮೂರನೆಯದು, ಜ್ಞಾನವು ಎಲ್ಲರಿಗೂ ಸಿಗುವಂತಿರಬೇಕು. ಸಂಕೀರ್ಣವಾದ ಜಗತ್ತಿನಲ್ಲಿ ಅಪಾಯದೊಂದಿಗೇ ಮನುಷ್ಯ ಬದುಕುತ್ತಿದ್ದಾನೆ. ಸ್ವಾತಂತ್ರ್ಯವನ್ನು ಕಳೆದುಕೊಳ್ಳದೆ ಅವನು ದಾರಿಯನ್ನು ಕಂಡುಕೊಳ್ಳಬೇಕಿದೆ.

"ಇಂತಹ ಪರಿಸ್ಥಿತಿಯಲ್ಲಿ ಹೇಳಿಕೊಳ್ಳುವಂತಹ ಯಾವುದೇ ಸ್ವಾತಂತ್ರ್ಯವಿರಬೇಕಾದರೆ ಅದನ್ನು ಬಳಸಿಕೊಳ್ಳಲು ತಕ್ಕ ಪರಿಣತಿಯನ್ನು ಮನಸ್ಸಿಗೆ ಕಲಿಸಿಕೊಡಬೇಕಾಗುತ್ತದೆ. ಹೀಗಿರುವಾಗ

ಮನುಷ್ಯನ ಶಿಕ್ಷಣದ ಹಕ್ಕು ಅವನ ಸ್ವಾತಂತ್ರ್ಯಕ್ಕೆ ಮೂಲಭೂತ ವಿಚಾರವಾಗುತ್ತದೆ. ಜ್ಞಾನದಿಂದ ಒಬ್ಬ ಮನುಷ್ಯನನ್ನು ವಂಚಿಸಿದರೆ, ಖಂಡಿತವಾಗಿಯೂ ಅವನಿಗಿಂತ ಅದೃಷ್ಟವಂತರಿಗೆ ಅವನು ಅಧಿಕಾರವನ್ನು ನಿರಾಕರಿಸಿದಂತಾಗಿ, ದೊಡ್ಡ ಉದ್ದೇಶಗಳಿಗಾಗಿ ಸ್ವಾತಂತ್ರ್ಯವನ್ನು ಬಳಸಿ ಸುಖದ ಭದ್ರತೆಯನ್ನು ಖಾತ್ರಿಪಡಿಸಿಕೊಳ್ಳಲು ಸಾಧ್ಯವಾಗುವುದಿಲ್ಲ."

ಹಿಂದೂ ಧರ್ಮವು ಇಂತಹ ಯಾವ ಪರಿಸ್ಥಿತಿಗಳಿಗೆ ಸಮಾಧಾನವನ್ನು ನೀಡುತ್ತದೆ? ಹಿಂದೂ ಧರ್ಮವು ಹೇಗೆ ಸಮಾನತೆಯನ್ನು ನಿರಾಕರಿಸುತ್ತದೆ ಎಂಬುದನ್ನು ಈಗಾಗಲೇ ಸ್ಪಷ್ಟಪಡಿಸಲಾಗಿದೆ. ಅಸಮಾನತೆ ಮತ್ತು ವಿಶೇಷ ಹಕ್ಕುಗಳನ್ನು ಅದು ಎತ್ತಿ ಹಿಡಿಯುತ್ತದೆ. ಹೀಗೆ ಹಿಂದೂ ಧರ್ಮದಲ್ಲಿ ಸ್ವಾತಂತ್ರ್ಯದ ಮೊದಲ ನಿಯಮವೇ ಗೈರುಹಾಜರಾಗಿರುವುದು ಎದ್ದು ಕಾಣುವಂತಹ ವಿಚಾರವಾಗಿದೆ. ಆರ್ಥಿಕ ಭದ್ರತೆಯ ವಿಚಾರದಲ್ಲಿ ಹಿಂದೂ ಧರ್ಮದಲ್ಲಿ ಮೂರು ಸಂಗತಿಗಳು ನಿಚ್ಚಳವಾಗಿ ಗೋಚರಿಸುತ್ತವೆ. ಮೊದಲನೆಯದಾಗಿ, ಉದ್ಯೋಗದ ಸ್ವಾತಂತ್ರ್ಯವನ್ನು ಹಿಂದೂ ಧರ್ಮ ನಿರಾಕರಿಸುತ್ತದೆ. ಮನುವಿನ ಹಂಚಿಕೆಯಂತೆ ಪ್ರತಿಯೊಬ್ಬನಿಗೂ ಅವನು ಹುಟ್ಟುವುದಕ್ಕೆ ಮುಂಚೆಯೇ ಅವನ ಉದ್ಯೋಗ ಪೂರ್ವ ನಿರ್ಧಾರಿತವಾಗಿರುತ್ತದೆ. ಯಾವುದೇ ಆಯ್ಕೆಗೆ ಹಿಂದೂ ಧರ್ಮದಲ್ಲಿ ಅವಕಾಶವಿಲ್ಲ. ಉದ್ಯೋಗವು ಪೂರ್ವ ನಿರ್ಧಾರಿತವೆಂದರೆ ಮೇಲೆ ವ್ಯಕ್ತಿಯ ಸಾಮರ್ಥ್ಯಕ್ಕೂ ಅಪೇಕ್ಷೆಗೂ ಅವನ ಉದ್ಯೋಗಕ್ಕೂ ಸಂಬಂಧವಿರುವುದಿಲ್ಲ.

ಎರಡನೆಯದಾಗಿ, ಬೇರೆಯವರಿಂದ ಆಯ್ಕೆಯಾದ ಉದ್ದೇಶ ಸಾಧನೆಗಾಗಿ ಮನುಷ್ಯರು ಸೇವೆ ಮಾಡಲು ಹಿಂದೂ ಧರ್ಮವು ಒತ್ತಾಯಿಸುತ್ತದೆ. ಶೂದ್ರನಿಗೆ ಮನು ಹೇಳುತ್ತಾನೆ, 'ಅವನು ಹುಟ್ಟಿರುವುದೇ ಉತ್ತಮ ವರ್ಣದವರ ಸೇವೆಗಾಗಿ.' ಇದು ಅವನ ಆದರ್ಶವಾಗಬೇಕೆಂದು ಅವನನ್ನು ಪ್ರೋತ್ಸಾಹಿಸುತ್ತಾನೆ. ಮನುವಿನಿಂದ ನಿರ್ಧಾರಿತವಾಗಿರುವ ಕೆಳಗಿನ ನಿಯಮಗಳನ್ನು ಪರಿಶೀಲಿಸಿ.

X ೧೨೧ "ಬ್ರಾಹ್ಮಣ ಸೇವೆಯಿಂದ ಜೀವಿಸಲು ಸಾಧ್ಯವಾಗದಿದ್ದಾಗ, ಶೂದ್ರನು ಉದ್ಯೋಗಕ್ಕಾಗಿ ಹುಡುಕುವುದಾದರೆ, ಆತನು ಕ್ಷತ್ರಿಯನಲ್ಲಿ ಸೇವೆ ಮಾಡಬಹುದು. ಅಥವಾ ಒಬ್ಬ ಶ್ರೀಮಂತ ವೈಶ್ಯನಲ್ಲಿ ಸೇವಾವೃತ್ತಿ ಮಾಡಿಯೂ ಆತ ಜೀವನ ಮಾಡಬಹುದು."

X ೧೨೨ "ಆದರೆ ಒಬ್ಬ ಶೂದ್ರನು ಬ್ರಾಹ್ಮಣನಲ್ಲೇ ಸೇವಾವೃತ್ತಿ ಕೈಗೊಳ್ಳಲಿ....."

ಶೂದ್ರನು ತನ್ನ ಅಪೇಕ್ಷೆಯಂತೆ ನಡೆದುಕೊಳ್ಳಲು ಮನು ಅವಕಾಶ ಕೊಡುವುದಿಲ್ಲ. ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಶೂದ್ರನು ತನಗೆ ವಹಿಸಲಾದ ಕೆಲಸವನ್ನು ತಪ್ಪಿಸಿಕೊಳ್ಳುವಂತಿಲ್ಲವೆಂದು ಸ್ಪಷ್ಟಪಡಿಸುತ್ತಾನೆ. ರಾಜನಿಗೆ ಮನು ವಹಿಸಿರುವ ಕರ್ತವ್ಯಗಳಲ್ಲಿ ಒಂದು ಕರ್ತವ್ಯವೆಂದರೆ, ಶೂದ್ರನೂ ಸೇರಿದಂತೆ, ಎಲ್ಲ ಜಾತಿಗಳೂ ತಮ್ಮ ತಮ್ಮ ಪಾಲಿಗೆ ಬಂದ ಕೆಲಸಗಳನ್ನೂ ನಿರ್ವಹಿಸುವಂತೆ ನೋಡಿಕೊಳ್ಳುವುದು.

VIII ೪೧೦ "ಪ್ರತಿಯೊಬ್ಬ ವ್ಯಾಪಾರಿ ವರ್ಗದವನು ವ್ಯಾಪಾರದಲ್ಲಿ ನಿರತನಾಗಿರಲು ಅಥವಾ ಸಾಲ ಕೊಡುವ ವ್ಯವಹಾರದಲ್ಲಿ ತೊಡಗಿರಲು ಅಥವಾ ಕೃಷಿ, ಪಶುಪಾಲನೆ ಮಾಡಲು ರಾಜನು ಕಟ್ಟಪ್ಪಣೆ ಮಾಡಬೇಕು. ಅದರಂತೆ ಪ್ರತಿಯೊಬ್ಬ ಸೇವಾ ವರ್ಗದವನೂ ಬ್ರಾಹ್ಮಣರ ಸೇವೆಯಲ್ಲಿ ನಿರತನಾಗಿರುವಂತೆ ಅಪ್ಪಣೆ ಮಾಡಬೇಕು."

VIII ೪೧೮ "ರಾಜನು ಕಟ್ಟೆಚ್ಚರದಿಂದ ವ್ಯಾಪಾರಿಗಳನ್ನು ತಾಂತ್ರಿಕ ಕೆಲಸಗಾರರನ್ನು ತಮ್ಮ ತಮ್ಮ ಉದ್ಯೋಗಗಳಲ್ಲೇ ನಿರತರಾಗಿರುವಂತೆ ನೋಡಿಕೊಳ್ಳಬೇಕು. ಏಕೆಂದರೆ ಇಂತಹ ಜನಗಳ ಕರ್ತವ್ಯದಲ್ಲಿ ಚ್ಯುತಿ ಉಂಟಾದರೆ ಇಡಿ ಜಗತ್ತೇ ಅಲ್ಲೋಲಕಲ್ಲೋಲವಾಗುತ್ತದೆ."

ವ್ಯವಸ್ಥೆ ತಪ್ಪಿದರೆ ಅದೊಂದು ಅಪರಾಧವಾಗುವಂತಿದ್ದು ರಾಜನು ಕಾನೂನು ಪ್ರಕಾರ ಅವರನ್ನು ಶಿಕ್ಷಿಸಲು ಅವಕಾಶವಿತ್ತು.

VIII ೩೩೫ "ತಂದೆಯಾಗಿರಲಿ, ಉಪದೇಶಕನಾಗಿರಲಿ, ಗೆಳೆಯನಾಗಿರಲಿ, ತಾಯಿ–ಹೆಂಡತಿ–ಮಗನೇ ಆಗಿರಲಿ, ಸ್ವಂತ ಗೃಹ ಪುರೋಹಿತನಾಗಿದ್ದರೂ, ಅವರವರ ಕರ್ತವ್ಯಕ್ಕೆ ಬದ್ಧರಾಗಿರದಿದ್ದರೆ ರಾಜನು ಅವರನ್ನು ಶಿಕ್ಷಿಸದೆ ಬಿಡುವಂತಿಲ್ಲ."

VIII ೩೩೬ "ಕೆಳಗಿನ ಜಾತಿಯಲ್ಲಿ ಹುಟ್ಟಿದ ಬೇರೊಬ್ಬನು ಶಿಕ್ಷೆಯಾಗಿ ಒಂದು ಪಣವನ್ನು ಕೊಡುವಲ್ಲಿ ರಾಜನು ಅದೇ ಅಪರಾಧಕ್ಕೆ ಶಿಕ್ಷೆಯಾಗಿ ಸಾವಿರ ಪಣವನ್ನು ಕೊಡಬೇಕು. ಪುರೋಹಿತರಿಗೆ ಕೊಡಬಹುದು ಅಥವಾ ನದಿಗೆ ಅದನ್ನು ಎಸೆಯಬಹುದು; ಇದು ಮಾತ್ರ ಪವಿತ್ರ ಕಟ್ಟಳೆ."

ಈ ನಿಯಮಗಳಿಗೆ ದ್ವಿಮುಖ ಮಹತ್ವವಿದೆ; ಆಧ್ಯಾತ್ಮಿಕವಾಗಿ ಮತ್ತು ಆರ್ಥಿಕವಾಗಿ ಆಧ್ಯಾತ್ಮಿಕ ಅರ್ಥದಲ್ಲಿ ಗುಲಾಮಗಿರಿಯನ್ನು ಅವು ಎತ್ತಿಹಿಡಿಯುತ್ತವೆ. ಗುಲಾಮಗಿರಿಯ ಕಾನೂನಿನ ಬಾಹ್ಯವಾದ ಅರ್ಥವನ್ನು ಮಾತ್ರ ತಿಳಿದುಕೊಂಡು ಅದರ ಅಂತರಾರ್ಥವನ್ನು ತಿಳಿಯದಿರುವವರಿಗೆ ಇದು ಸಂಪೂರ್ಣ ಅರಿವಾಗುವುದಿಲ್ಲ. ಅದರ ಅಂತರಾರ್ಥ ತಿಳಿಯಲು ಗುಲಾಮಗಿರಿ ಕುರಿತ ಪ್ಲೇಟೋನ ಸೂತ್ರವನ್ನು ತಿಳಿಯಬೇಕಾಗುತ್ತದೆ. ತನ್ನ ಗುಣ ಶೀಲಗಳ ಉದ್ದೇಶ ಮತ್ತು ಗುರಿಯನ್ನು ಇನ್ನೊಬ್ಬನಿಂದ ನಿರ್ಧರಿಸಲ್ಪಡುವ ವ್ಯಕ್ತಿ ಗುಲಾಮನಾಗುತ್ತಾನೆಂದು ಪ್ಲೇಟೊ ಹೇಳುತ್ತಾನೆ. ಈ ಅರ್ಥದಲ್ಲಿ ಒಬ್ಬ ಗುಲಾಮನಿಗೆ ತನ್ನದೇ ಆದ ಒಂದು ಗುರಿಯಿರುವುದಿಲ್ಲ. ಬೇರೆಯವರಿಂದ ಅಪೇಕ್ಷಿತವಾದ ಗುರಿಯನ್ನು ಸಾಧಿಸಲು ಗುಲಾಮನು ಕೇವಲ ಒಂದು ಸಾಧನವಾಗುತ್ತಾನೆ. ಈ ರೀತಿ ಅರ್ಥವಿಸಿದರೆ ಶೂದ್ರನೂ ಒಬ್ಬ ಗುಲಾಮ. ಆರ್ಥಿಕ ಕೋನದಿಂದ ನೋಡಿದರೆ ಈ ನಿಯಮಗಳು ಶೂದ್ರನ ಆರ್ಥಿಕ ಸ್ವಾತಂತ್ರ್ಯಕ್ಕೆ ಧಕ್ಕೆ ತರುವಂತಿವೆ. ಶೂದ್ರನು ಸೇವೆ ಮಾಡಬೇಕು. ಅದರಲ್ಲಿ ಆಕ್ಷೇಪಿಸುವಂತಹುದೇನು ಇಲ್ಲದಿರಬಹುದು. ಅವನು ಬೇರೆಯವರ ಸೇವೆಯನ್ನೇ ಮಾಡಬೇಕು ಎಂಬುದರಲ್ಲಿಯೇ ತಪ್ಪು ಕಂಡುಬರುವುದು, ಅವನು ತನಗೆ ಸೇವೆ ಮಾಡಿಕೊಳ್ಳುವಂತಿಲ್ಲವಾದುದರಿಂದ ಆರ್ಥಿಕ ಸ್ವಾತಂತ್ರ್ಯಕ್ಕಾಗಿ ಅವನು ಹೋರಾಡುವಂತಿಲ್ಲ. ಆರ್ಥಿಕವಾಗಿ ಅವನು ಎಂದೆಂದಿಗೂ ಅನ್ಯರನ್ನು ಅವಲಂಬಿಸಿರಬೇಕು.

ಏಕೆಂದರೆ ಮನು ಹೇಳುವಂತೆ:

"ದೇವರು ಶೂದ್ರನಿಗೆ ವಹಿಸಿರುವ ಒಂದೇ ವೃತ್ತಿ ಎಂದರೆ ವಿನಯಪೂರ್ವಕವಾಗಿ ಉಳಿದ ಮೂರು ವರ್ಣದವರ ಸೇವೆ ಮಾಡುವುದು."

ಮೂರನೆಯದಾಗಿ, ಹಿಂದೂ ಧರ್ಮವು ಶೂದ್ರನಿಗೆ ಐಶ್ವರ್ಯ ಸಂಗ್ರಹಣೆ ಮಾಡಲು ಅವಕಾಶವನ್ನೇ ಕೊಟ್ಟಿಲ್ಲ. ಉಳಿದ ಮೂರು ವರ್ಣಗಳು ಶೂದ್ರನ ಸೇವೆಯನ್ನು ಪಡೆದಾಗ ಕೊಡಬೇಕಾದ ಕೂಲಿಯ ಬಗೆಗೆ ಮನುವಿನ ನಿಯಮಗಳು ಸ್ಪಷ್ಟವಾಗಿ ಸೂಚನೆ ಕೊಡುತ್ತವೆ. ಮನು ಹೇಳುತ್ತಾನೆ:

X ೧೨೪ "ಅವನ ಶಕ್ತಿ, ಸಾಮರ್ಥ್ಯ ಮತ್ತು ಕರ್ತವ್ಯ ನಿಷ್ಠೆಗನುಸಾರವಾಗಿ ಮತ್ತು ಅವನ ಮೇಲೆ ಅವಲಂಬಿಸಿರುವ ಸಂಖ್ಯೆಯನ್ನು ಲೆಕ್ಕದಲ್ಲಿರಿಸಿಕೊಂಡು ಶೂದ್ರನಿಗೆ ಯಜಮಾನರು ತಮ್ಮ ಆಸ್ತಿಯಲ್ಲಿ ಸ್ವಲ್ಪ ಭಾಗವನ್ನು ಗೊತ್ತುಮಾಡಿ ಕೊಡಬಹುದು."

X ೧೨೫ "ಅವರು ತಿಂದು ಬಿಟ್ಟಿದ್ದನ್ನು ಅವನಿಗೆ ಕೊಡಬೇಕು. ಅವರ ಹಳೆಯ ಬಟ್ಟೆಗಳನ್ನು ಕೊಡಬೇಕು. ದವಸಧಾನ್ಯಗಳ ವರ್ಜ್ಯ ಭಾಗವನ್ನು ಮತ್ತು ಗೃಹೋಪಯೋಗಿಯಾದ ಹಳೆಯ ಮರಮುಟ್ಟುಗಳನ್ನು ಕೊಡಬೇಕು."

ಕೂಲಿಗೆ ಸಂಬಂಧಿಸಿದಂತೆ ಮನುವಿನ ಕಟ್ಟಳೆಯಿದೆ. ಅದು ಕನಿಷ್ಠ ಕೂಲಿ ನಿಯಮವಲ್ಲ; ಗರಿಷ್ಠ ಕೂಲಿ ನಿಯಮ. ಎಷ್ಟೊಂದು ಬಿಗಿಯಾಗಿ ಕಡಿಮೆ ಮಟ್ಟದಲ್ಲಿ ಕೂಲಿಯನ್ನು ನಿರ್ಧರಿಸಲಾಗಿದೆಯೆಂದರೆ

ಶೂದ್ರನು ಐಶ್ವರ್ಯವನ್ನು ಗಳಿಸುವುದಿರಲಿ, ಅವನಿಗೆ ಆರ್ಥಿಕ ಭದ್ರತೆಯೂ ಸಿಗುವಂತಿಲ್ಲ. ಆದರೆ ಮನು ಇಲ್ಲಿಗೇ ನಿಲ್ಲುವುದಿಲ್ಲ, ಮುಂದುವರಿದು ಶೂದ್ರನು ಆಸ್ತಿಗೆ ಒಡೆಯನಾಗುವುದನ್ನು ನಿಷೇಧಿಸುತ್ತಾನೆ. ಅವನು ಕಡ್ಡಾಯವಾಗಿ ಹೇಳುತ್ತಾನೆ:

X ೧೨೪ "ಅವನಿಗೆ ಸಾಧ್ಯವಿದ್ದರೂ, ಶೂದ್ರನು ಸಂಪತ್ತನ್ನು ಸಂಗ್ರಹಿಸಬಾರದು. ಏಕೆಂದರೆ ಐಶ್ವರ್ಯವನ್ನು ಕೂಡಿಟ್ಟ ಶೂದ್ರನು ಬ್ರಾಹ್ಮಣರ ದುಃಖಕ್ಕೆ ಕಾರಣನಾಗುತ್ತಾನೆ."

ಹೀಗೆ ಹಿಂದೂ ಧರ್ಮದಲ್ಲಿ ಯಾವುದೇ ಅನ್ಯಾಕರ್ಷಣೆಗೆ ಅಥವಾ ಆಯ್ಕೆಗೆ ಅವಕಾಶವೇ ಇಲ್ಲ. ಆರ್ಥಿಕ ಸ್ವಾತಂತ್ರ್ಯವಾಗಲೀ ಭದ್ರತೆಯಾಗಲೀ ಇಲ್ಲ. ಶೂದ್ರನ ಸ್ಥಿತಿಯನ್ನು ಆರ್ಥಿಕ ಕೋನದಿಂದ ನೋಡುವುದಾದರೆ ಅದು ಕಳವಳಕಾರಿಯಾಗಿದೆ.

ಜ್ಞಾನಪ್ರಸಾರದ ವಿಚಾರದಲ್ಲಿ ಎರಡು ಗೊತ್ತುಪಾಡುಗಳು ಮೊದಲು ಅಗತ್ಯವಾಗಿರುತ್ತವೆ. ಸಾಂಪ್ರದಾಯಿಕ ವಿದ್ಯಾಭ್ಯಾಸವಿರಬೇಕು ಮತ್ತು ಅಕ್ಷರ ಕಲಿಯುವಿಕೆಗೆ ಅವಕಾಶವಿರಬೇಕು. ಇವೆರಡೂ ಇಲ್ಲದೆ ಜ್ಞಾನಪ್ರಸಾರ ಸಾಧ್ಯವಿಲ್ಲ.

ಸಾಂಪ್ರದಾಯಿಕ ಶಿಕ್ಷಣವಿಲ್ಲದಿದ್ದರೆ ಸಂಕೀರ್ಣ ಸಮಾಜದ ಎಲ್ಲ ಸಂಪನ್ಮೂಲಗಳನ್ನು, ಸಾಧನಗಳನ್ನು ವರ್ಗಾಯಿಸುವುದು ಸಾಧ್ಯವೇ ಇಲ್ಲ. ಸಾಂಪ್ರದಾಯಿಕ ಶಿಕ್ಷಣವಿಲ್ಲದಿದ್ದರೆ ತಲತಲಾಂತರದಿಂದ ನಿರ್ದಿಷ್ಟ ವಿಷಯಗಳಿಗೆ ಸಂಬಂಧಿಸಿದ ಎಲ್ಲಾ ಅನುಭವ ಮತ್ತು ಜ್ಞಾನವನ್ನು ಚಿಕ್ಕವರಿಗೆ ತಲುಪಿಸಲು ಸಾಧ್ಯವೇ ಇಲ್ಲ. ಬೇರೆಯವರೊಡನೆ ಸಂಪರ್ಕ ಪಡೆದು ಕಲಿಯುವಂತಹ ಅಸಾಂಪ್ರದಾಯಿಕ ಕಲಿಕೆಯ ಮೂಲಕ ತಿಳಿದುಕೊಳ್ಳಲು ಅವರಿಗೆ ಬಿಟ್ಟರೆ ಅದು ಅವರಿಗೆ ಎಂದಿಗೂ ದಕ್ಕುವುದಿಲ್ಲ. ಸಾಂಪ್ರದಾಯಿಕ ಶಿಕ್ಷಣವಿಲ್ಲದೆ ಹೊಸ ಹೊಸ ಗ್ರಹಿಕೆಗಳನ್ನು ಅವನು ಪಡೆಯುವುದಿಲ್ಲ. ಅವನ ದಿಗಂತವು ವಿಸ್ತಾರಗೊಳ್ಳದೆ ಹೋಗುವುದರಿಂದ ದೈನಂದಿನ ಕೆಲಸಗಳ ಮೂರ್ಖ ಸೇವಕನಾಗಿಯೇ ಅವನು ಉಳಿಯುತ್ತಾನೆ. ಆದರೆ ಸಾಂಪ್ರದಾಯಿಕ ಶಿಕ್ಷಣ ವ್ಯವಸ್ಥೆಗೆ ಅಗತ್ಯವಾದ ಕೆಲವು ಸಂಗತಿಗಳಿವೆ. ಶಾಲೆಗಳು, ಪಠ್ಯಪುಸ್ತಕಗಳು, ಯೋಜಿತ ಸಹಾಯಕ ಸಾಮಗ್ರಿಗಳು ಇತ್ಯಾದಿ. ಸಾಂಪ್ರದಾಯಿಕ ಶಿಕ್ಷಣದ ವಿಶೇಷ ಸವಲತ್ತುಗಳನ್ನು ಅವನು ಪಡೆಯಲು ಅವನಿಗೆ ಅಕ್ಷರ ಜ್ಞಾನವಿಲ್ಲದಿದ್ದರೆ ಹೇಗೆ ತಾನೆ ಸಾಧ್ಯ? ಓದು ಬರೆಹಗಳನ್ನು ಕಲಿಸುವ ಕಲೆಯ ಪ್ರಕಾರ ಮತ್ತು ಸಾಂಪ್ರದಾಯಿಕ ಶಿಕ್ಷಣಗಳೆರಡೂ ಜೊತೆಗೂಡಿ ಮುನ್ನಡೆಯಬೇಕು. ಎರಡೂ ಅಸ್ತಿತ್ವದಲ್ಲಿಲ್ಲದಿದ್ದರೆ ಜ್ಞಾನಪ್ರಸಾರ ಸಾಧ್ಯವೇ ಇಲ್ಲ.

ಈ ವಿಚಾರದಲ್ಲಿ ಹಿಂದೂ ಧರ್ಮದ ನೆಲೆಯೇನು? ಹಿಂದೂ ಧರ್ಮದಲ್ಲಿ ಸಾಂಪ್ರದಾಯಿಕ ಶಿಕ್ಷಣದ ಪರಿಕಲ್ಪನೆಯೆಂಬುದು ತೀರಾ ಸೀಮಿತ ಅರ್ಥದಲ್ಲಿದೆ. ಕೇವಲ ವೇದಾಧ್ಯಯನಕ್ಕೆ ಸಾಂಪ್ರದಾಯಿಕ ಶಿಕ್ಷಣವನ್ನು ಪರಿಮಿತಗೊಳಿಸಲಾಗಿದೆ. ಇದು ಸಹಜವೇ ಆಗಿದೆ. ವೇದಗಳ ಹೊರಗೆ ಜ್ಞಾನವೆಂಬುದೇ ಇಲ್ಲವೆಂಬುದು ಹಿಂದೂಗಳ ನಂಬಿಕೆ. ಆದುದರಿಂದ ಸಾಂಪ್ರದಾಯಿಕ ಶಿಕ್ಷಣವನ್ನು ವೇದಾಧ್ಯಯನಕ್ಕೆ ಮಾತ್ರ ಸೀಮಿತಗೊಳಿಸಲಾಗಿದೆ, ಇದರ ಮತ್ತೊಂದು ಪರಿಣಾಮವೆಂದರೆ ವೇದಾಧ್ಯಯನಕ್ಕೆ ಸ್ಥಾಪಿಸಿದ ಶಾಲೆಗಳಲ್ಲಿಯೇ ಕಲಿಯಬೇಕೆನ್ನುವ ಕಡ್ಡಾಯ ಹಿಂದೂ ಧರ್ಮದಲ್ಲಿದೆ. ಈ ಶಾಲೆಗಳ ಪ್ರಯೋಜನ ಕೇವಲ ಬ್ರಾಹ್ಮಣರಿಗೆ ಮಾತ್ರ. ವರ್ತಕರು ಮತ್ತು ಕುಶಲಕರ್ಮಿಗಳ ತರಬೇತಿಗಾಗಿ, ವಿಜ್ಞಾನ ಮತ್ತು ಕಲೆಗಳನ್ನು ಅಧ್ಯಯನ ಮಾಡುವುದಕ್ಕಾಗಿ ಶಾಲೆಗಳನ್ನು ತೆರೆಯಬೇಕಾದ್ದು ತನ್ನ ಹೊಣೆಗಾರಿಕೆ ಎಂದು ರಾಜ್ಯವು ಭಾವಿಸಲಿಲ್ಲ. ರಾಜ್ಯಾಧಿಕಾರವು ಅವರನ್ನು ಕಡೆಗಣಿಸಿದ್ದರಿಂದ ತಮ್ಮ ಪಾಡನ್ನು ತಾವು ನೋಡಿಕೊಳ್ಳುವುದು ಅವರಿಗೆ ಅನಿವಾರ್ಯವಾಯಿತು.

ಪ್ರತಿಯೊಂದು ವರ್ಣದವರೂ ತಮ್ಮ ತಮ್ಮ ಸಾಂಪ್ರದಾಯಿಕ ವಿಚಾರಗಳನ್ನು ಅವರದೇ ಆದ ರೀತಿಯಲ್ಲಿ ಮುಂದಿನ ತಲೆಮಾರಿಗೆ ವರ್ಗಾಯಿಸುವಲ್ಲಿ ಯಶಸ್ವಿಯಾದರು. ವೈಶ್ಯರ ಕರ್ತವ್ಯಗಳೇನೆಂಬುದನ್ನು ವೈಶ್ಯ ಬಾಲಕರು ತಿಳಿಯಲು ತಕ್ಕ ವ್ಯವಸ್ಥೆ ಇತ್ತು. ವ್ಯಾಪಾರೋದ್ಯಮದ ಭೌಗೋಳಿಕ ವಿವರಗಳು, ಲೆಕ್ಕಾಚಾರಗಳು, ಕೆಲವು ಭಾಷೆಗಳು ಮತ್ತು ವ್ಯಾಪಾರಕ್ಕೆ ಸಂಬಂಧಿಸಿದ ಕೆಲವು ಪ್ರಾಯೋಗಿಕ ವಿವರಗಳನ್ನು ವ್ಯಾಪಾರದ ಮೂಲಕವೇ ಅವರು ತಮ್ಮ ತಂದೆಯಂದಿರ ಮೂಲಕ ಕಲಿಯುತ್ತಿದ್ದರು. ಕುಶಲ ಕರ್ಮಿಗಳಾಗಲಿ ನೇಯ್ಗೆಯವರಾಗಲಿ ಶೂದ್ರ ವರ್ಗದವರಾಗಿದ್ದು ಅವರೂ ತಮ್ಮ ತಮ್ಮ ಕುಶಲ ಕರ್ಮವನ್ನು, ನೇಯ್ಗೆಯನ್ನು ತಮ್ಮ ಮಕ್ಕಳಿಗೆ ಅದೇ ರೀತಿಯಲ್ಲಿ ಕಲಿಸುತ್ತಿದ್ದರು. ಶಿಕ್ಷಣವೆಂಬುದು ಕೌಟುಂಬಿಕವಾಗಿತ್ತು; ಶಿಕ್ಷಣವೆಂಬುದು ವ್ಯಾವಹಾರಿಕವಾಗಿತ್ತು. ನಿರ್ದಿಷ್ಟ ಕೆಲಸವೊಂದನ್ನು ಮಾಡುವ ಪರಿಣತಿಯನ್ನು ಮಾತ್ರ ಅದು ಹೆಚ್ಚಿಸುತ್ತಿತ್ತು. ಹೊಸ ಹೊಸ ಗ್ರಹಣಶಕ್ತಿಯನ್ನು ಅದು ಬೆಳೆಸುತ್ತಿರಲಿಲ್ಲ. ಹೊಸ ದಿಗಂತಗಳನ್ನು ತೆರೆಯಲಿಲ್ಲ. ಅದರ ಪರಿಣಾಮವಾಗಿ ವ್ಯಾವಹಾರಿಕ ಶಿಕ್ಷಣವೆಂಬುದು ಅವನನ್ನು ಪ್ರತ್ಯೇಕಿಸಿ ಏಕಮುಖ ನಡೆವಳಿಕೆಯನ್ನು ಕಲಿಸಿತು. ಬದಲಾಗುತ್ತಿರುವ ವಾತಾವರಣದಲ್ಲಿ ಅವನ ಪರಿಣತಿಯೆಂಬುದು ತಾತ್ಪರ್ಯದಲ್ಲಿ ಅಸಂಗತ ವಾಯಿತು. ಹಿಂದೂ ಧರ್ಮದ ಪ್ರಕ್ರಿಯೆಯ ಒಂದು ಭಾಗವಾಗಿ ಅನಕ್ಷರತೆ ಎಂಬುದು ಉಳಿದುಹೋಯಿತು. ಈ ಪ್ರಕ್ರಿಯೆಯನ್ನು ಅರ್ಥಮಾಡಿಕೊಳ್ಳಬೇಕಾದರೆ ವೇದಾಧ್ಯಯನವನ್ನು ಮಾಡಲು ಮತ್ತು ಬೋಧಿಸಲು ಇರುವ ಹಕ್ಕುಗಳನ್ನು ಕುರಿತು ಮನು ಏನನ್ನು ಹೇಳುತ್ತಿದ್ದಾನೆಂಬುದನ್ನು ತಿಳಿಯುವ ಅಗತ್ಯವಿದೆ.

I. ೮೮ "ಬ್ರಾಹ್ಮಣರಿಗೆ ಅವನು (ದೇವರು) ವೇದವನ್ನು ಬೋಧಿಸುವ ಮತ್ತು ಕಲಿಯುವ ಕೆಲಸವನ್ನು ವಹಿಸಿದನು."

II. ೮೯ "ಕ್ಷತ್ರಿಯರಿಗೆ ಅವನು (ದೇವರು) ವೇದವನ್ನು ಕಲಿಯುವ ಅಪ್ಪಣೆ ಮಾಡಿದನು."

I. ೯೦ "ವೈಶ್ಯರಿಗೆ ವೇದವನ್ನು ಕಲಿಯಲು ಅವನು (ದೇವರು) ಅಪ್ಪಣೆ ಮಾಡಿದನು."

II. ೧೧೬ "ಸೃಷ್ಟಿಕರ್ತನ ಒಪ್ಪಿಗೆಯಿಲ್ಲದೆ ಯಾವನು ವೇದದ ಜ್ಞಾನವನ್ನು ಸಂಪಾದಿಸಲು ಹೋಗುತ್ತಾನೆಯೋ ಅವನು ಪವಿತ್ರ ಗ್ರಂಥಗಳನ್ನು ಕದ್ದ ಪಾಪಕ್ಕೆ ಗುರಿಯಾಗುತ್ತಾನೆ ಮತ್ತು ನರಕ ಯಾತನೆಯಲ್ಲಿ ಮುಳುಗಿ ಹೋಗುತ್ತಾನೆ."

IV. ೯೯ "ಬ್ರಾಹ್ಮಣನು ಎಂದೂ ಶೂದ್ರನೆದುರು ವೇದವನ್ನು ಓದಿ ಹೇಳಬಾರದು."

IX. ೧೮ "ವೇದದ ಪಾಠ ವಿಚಾರಕ್ಕೂ ಸ್ತ್ರೀಯರಿಗೂ ಏನೇನೂ ಸಂಬಂಧವಿಲ್ಲ."

XX. ೧೯೯ "ಬ್ರಾಹ್ಮಣನೊಬ್ಬನು ಅಕ್ರಮವಾಗಿ ಶೂದ್ರರಿಗೆ, ಸ್ತ್ರೀಯರಿಗೆ ವೇದವನ್ನು ಕಲಿಸಿದರೆ ಅವನು ಪಾಪ ಮಾಡಿದಂತೆ. ಒಂದು ವರ್ಷಕಾಲ ಕೇವಲ ಬಾರ್ಲಿ ಗಂಜಿಯನ್ನೇ ಊಟ ಮಾಡುತ್ತಾ ಪ್ರಾಯಶ್ಚಿತ್ತ ಮಾಡಿಕೊಂಡರೆ ಪಾಪ ಪರಿಹಾರವಾಗುತ್ತದೆ."

ಈ ಉಲ್ಲೇಖಗಳಲ್ಲಿ ಮೂರು ವಿಚಾರಗಳು ಪ್ರಕಟವಾಗುತ್ತವೆ. ಬ್ರಾಹ್ಮಣ, ಕ್ಷತ್ರಿಯ, ವೈಶ್ಯರು ವೇದಾಧ್ಯಯನವನ್ನು ಮಾಡಬಹುದು. ಅವರುಗಳಲ್ಲಿ ಬ್ರಾಹ್ಮಣರಿಗೆ ಮಾತ್ರ ವೇದವನ್ನು ಕಲಿಸುವ ಹಕ್ಕು ದೊರೆತಿದೆ. ಶೂದ್ರನು ವೇದಾಧ್ಯಯನವನ್ನು ಮಾಡುವಂತೆಯೂ ಇಲ್ಲ. ಅದನ್ನು ಕೇಳುವುದಕ್ಕೂ ಅವನಿಗೆ ಅವಕಾಶವಿಲ್ಲ.

ಮನುವಿನ ವಾರಸುದಾರರು ವೇದಾಧ್ಯಯನಕ್ಕಿರುವ ಶೂದ್ರನ ಅನರ್ಹತೆಯನ್ನು ಅಪರಾಧವೆಂದು ಪರಿಗಣಿಸಿ ಈ ಕಟ್ಟುಪಾಡುಗಳನ್ನು ಮೀರಿದಂಥವರಿಗೆ ಉಗ್ರ ಶಿಕ್ಷೆಗಳನ್ನು ವಿಧಿಸಿದರು.

ಉದಾಹರಣೆಗೆ ಗೌತಮನು ಹೇಳುತ್ತಾನೆ:

XII ೪ "ಒಬ್ಬ ಶೂದ್ರನು ಉದ್ದೇಶಪೂರ್ವಕವಾಗಿ–ಅದನ್ನು ಬಳಿಕ ನೆನಪಿಸಿಕೊಳ್ಳುವ ಸಲುವಾಗಿ–

ವೇದವನ್ನು ಕೇಳಿಸಿಕೊಂಡರೆ, ಅವನ ಕಿವಿಯಲ್ಲಿ ಕಾದ ಸೀಸವನ್ನು ಮತ್ತು ಅರಗನ್ನು ತುಂಬಬೇಕು; ವೇದವನ್ನೇನಾದರೂ ಅವನು ಉಚ್ಚರಿಸಿದರೆ ನಾಲಗೆಯನ್ನು ಕತ್ತರಿಸಬೇಕು; ಅವನು ವೇದದಲ್ಲಿ ಪರಿಣತಿಯನ್ನು ಸಂಪಾದಿಸಿದರೆ ಅವನ ದೇಹವನ್ನೇ ತುಂಡುತುಂಡಾಗಿ ಕತ್ತರಿಸಿ ಹಾಕಬೇಕು."

ಕಾತ್ಯಾಯನನೂ ಇದೇ ಅರ್ಥ ಬರುವ ಮಾತುಗಳನ್ನು ಹೇಳಿದ್ದಾನೆ.

ಸಮೂಹ ಶಿಕ್ಷಣದ ಜವಾಬ್ದಾರಿಯಿಂದ ಹೀಗೆ ಪುರಾತನ ಪ್ರಪಂಚವು ನುಣುಚಿಕೊಂಡಿದೆಯೆಂದು ದೋಷಾರೋಪ ಮಾಡಬಹುದಾಗಿದೆ. ಆದರೆ ಯಾವುದೇ ಸಮಾಜವು ತನ್ನ ಜನಗಳನ್ನು ಜ್ಞಾನ ಸಂಪಾದನೆ ಮಾಡದಂತೆ ಸಾಮೂಹಿಕವಾಗಿ ತಡೆದಿರುವ ಪಾಪಕೃತ್ಯವನ್ನು ಮಾಡಿಲ್ಲ. ಸಾಮಾನ್ಯ ಮನುಷ್ಯನು ಜ್ಞಾನ ಸಂಪಾದಿಸುವುದನ್ನು ಅಪರಾಧವೆಂದು ಪರಿಗಣಿಸಿ ಶಿಕ್ಷಿಸುವುದನ್ನು ಯಾವ ಸಮಾಜವು ಮಾಡಿಲ್ಲ. ದೈವಿಕ ಕಾನೂನು ಕಟ್ಟಳೆಗಳನ್ನು ನೀಡಿದ ಮನುವೊಬ್ಬನೇ ಹೀಗೆ ಜಗತ್ತಿನಲ್ಲಿ ಸಾಮಾನ್ಯ ಮನುಷ್ಯನಿಗೆ ಜ್ಞಾನದ ಹಕ್ಕನ್ನು ನಿರಾಕರಿಸಿದ ಏಕೈಕ ವ್ಯಕ್ತಿ.

ಆದರೆ ನಾನು ಈ ಬಗೆಗೆ ದೋಷಾರೋಷಣೆ ಮಾಡಲು ಆಸಕ್ತನಾಗಿಲ್ಲ. ನನ್ನ ತತ್‌ಕ್ಷಣದ ಆಸಕ್ತಿಯಿರುವುದು ವೇದಾಧ್ಯಯನವನ್ನು ಸಾಮೂಹಿಕವಾಗಿ ನಿಷೇಧಿಸಿದ್ದರಿಂದ ಜನತೆಯಲ್ಲಿ ಅನಕ್ಷರತೆ ಹೆಚ್ಚಿ ಜಾತ್ಯಾತೀತ ಸಮಾಜದ ಬಗೆಗೆ ಅಜ್ಞಾನ ಬೆಳೆಯಿತೆಂಬುದರ ಕಡೆಗೆ ಗಮನ ಸೆಳೆಯುವುದು. ಇದಕ್ಕೆ ಉತ್ತರ ಸುಲಭವಾಗಿದೆ. ಓದು ಬರೆಹಕ್ಕೂ ಹಾಗೂ ವೇದಾಧ್ಯಯನ ಮತ್ತು ಕಲಿಸುವುದಕ್ಕೂ ಅಂತಃಸಂಬಂಧವಿದೆ ಎಂಬುದನ್ನು ಇಲ್ಲಿ ಮರೆಯಬಾರದು. ವೇದಾಧ್ಯಯನದ ಸವಲತ್ತುಗಳಿದ್ದ ಕೆಲವೇ ಅದೃಷ್ಟವಂತರಿಗೆ ಓದು ಬರೆಹ ದಕ್ಕುತ್ತಿತ್ತು. ಅದನ್ನು ಕಲಿಯಲು ಸಾಧ್ಯವಿಲ್ಲದವರಿಗೆ ಓದು ಬರೆಹದ ಅಗತ್ಯವೂ ಇರಲಿಲ್ಲ. ಹೀಗೆ ಓದು ಬರೆಹಗಳು ವೇದಾಧ್ಯಯನಕ್ಕೆ ಅನುಷಂಗಿಕವಾದವು. ಪರಿಣಾಮವಾಗಿ ವೇದಾಧ್ಯಯನ ಮತ್ತು ಬೋಧನೆಯನ್ನು ಕುರಿತು ಮನು ವಿಧಿಸಿದ ನಿಷೇಧಗಳು ಮತ್ತು ನಿಯಮಗಳು ಓದು ಬರೆಹವನ್ನು ಕಲಿಯಲು ಸಾಧ್ಯವಾಯಿತು. ವೇದಾಧ್ಯಯನದ ಹಕ್ಕಿಲ್ಲದವರಿಗೆ ಓದು ಬರೆಹ ಕಲಿಯುವ ಹಕ್ಕನ್ನು ನಿರಾಕರಿಸಲಾಯಿತು. ಹೀಗೆ ಓದು ಬರೆಹದ ಹಕ್ಕು 'ಮನು ಧರ್ಮಶಾಸ್ತ್ರ'ದ ಪ್ರಕಾರ ಮೇಲುವರ್ಗದ ಕೆಲವರ ಸೊತ್ತಾಯಿತು. ಅನಕ್ಷರತೆ ಬಹುಸಂಖ್ಯಾತ ಕೆಳವರ್ಗದವರ ಹಣೆಬರೆಹವಾಯಿತು.

ಸಾಕ್ಷರತೆಯನ್ನು ನಿರಾಕರಿಸುವ ಮೂಲಕ ಸಮೂಹವು ಮೌಢ್ಯದಲ್ಲಿ ಮುಳುಗಿಹೋದ ಸ್ಥಿತಿಗೆ ಮನು ಹೇಗೆ ಜವಾಬ್ದಾರನೆಂಬುದನ್ನು ತೋರಿಸಲು ಈ ಪ್ರಕ್ರಿಯೆಯ ಒಂದು ಹಂತವೇ ಸಾಕಾಗುತ್ತದೆ. ಹೀಗೆ ಹಿಂದೂ ಧರ್ಮವು ಜ್ಞಾನಪ್ರಸಾರವನ್ನು ಪ್ರೋತ್ಸಾಹಿಸುವುದಿರಲಿ, ಅಜ್ಞಾನ ಮತ್ತು ಅಂಧಕಾರದ ಪ್ರವಾದಿಯಂತೆ ಕಂಡುಬರುತ್ತದೆ. ಈ ಸಂಗತಿಗಳನ್ನು ಗಮನಕ್ಕೆ ತೆಗೆದುಕೊಂಡರೆ ಸ್ವಾತಂತ್ರ್ಯ ಮತ್ತು ಪ್ರಗತಿ ಹೊಂದಲು ಹಿಂದೂ ಧರ್ಮವು ವಿರೋಧವಾಗಿದೆ ಎಂಬುದು ಸ್ಪಷ್ಟವಾಗುತ್ತದೆ. ಆದುದರಿಂದ ಅದು ಸ್ವಾತಂತ್ರ್ಯ ನಿರಾಕರಣೆಯಾಗಿದೆ.

## IV

ಹಿಂದೂ ಧರ್ಮವು ಭ್ರಾತೃಭಾವವನ್ನು ಒಪ್ಪುತ್ತದೆಯೇ?

ಎರಡು ಶಕ್ತಿಗಳು ಸಮಾಜದಲ್ಲಿರುತ್ತವೆ. ವ್ಯಕ್ತಿ ವಿಶಿಷ್ಟತೆ ಮತ್ತು ಭ್ರಾತೃಭಾವ. ವ್ಯಕ್ತಿ ವಿಶಿಷ್ಟತೆ ಯಾವಾಗಲೂ ಇರುತ್ತದೆ. ಪ್ರತಿಯೊಬ್ಬ ವ್ಯಕ್ತಿಯೂ ಸದಾ ಕೇಳುತ್ತಿರುತ್ತಾನೆ.

"ನಾನು ಮತ್ತು ನಮ್ಮ ನೆರೆಹೊರೆಯವರು ಸಹೋದರರೇ? ನಾವೇನಾದರೂ ದೂರದ ದಾಯಾದಿಗಳೇ? ನಾನೇನು ಅವರ ಪೋಷಕನೇ? ಅವರಿಗೆ ನಾನೇಕೆ ಒಳ್ಳೆಯದು ಮಾಡಬೇಕು? ಮತ್ತು ಅವನವೇ ಆದ ವಿಶಿಷ್ಟ ಒತ್ತಡಗಳಿಗನುಸಾರವಾಗಿ ತಾನೇ ಎಲ್ಲದರ ಅಂತಿಮ ಗುರಿ ಎಂಬಂತೆ ಅಸಾಮಾಜಿಕ ದೃಷ್ಟಿಯನ್ನು ಬೆಳೆಸಿಕೊಂಡು ಕೆಲವೊಮ್ಮೆ ಸಮಾಜ ಘಾತಕನಾಗಿಯೂ ನಡೆದುಕೊಳ್ಳಬಹುದು. ಇದಕ್ಕೆ ತದ್ವಿರುದ್ಧ ಗುಣವಿರುವುದು ಭ್ರಾತೃಭಾವದ ಶಕ್ತಿಯಲ್ಲಿ. ಸಹಭಾಗಿತ್ವಕ್ಕೆ ಭ್ರಾತೃಭಾವವೆಂಬುದು ಮತ್ತೊಂದು ಹೆಸರು. ಒಬ್ಬ ವ್ಯಕ್ತಿಯು ಬೇರೆಯವರ ಒಳಿತಿನೊಂದಿಗೆ ತನ್ನನ್ನು ಗುರುತಿಸಿಕೊಳ್ಳುವ ಭಾವನೆಯನ್ನು ಅದು ಉದ್ದೀಪಿಸುತ್ತವೆ. ಆಗ "ಅನ್ಯರಿಗೆ ಒಳಿತು ಬಯಸುವುದು ಅವನಿಗೆ ಅಗತ್ಯವೂ ಸಹಜವೂ ಆಗುತ್ತದೆ. ತನ್ನ ದೇಹ ಸುಖಗಳಿಗೆ ಮತ್ತು ಅಸ್ತಿತ್ವಕ್ಕೆ ಗಮನಕೊಟ್ಟಂತೆ ಇತರರನ್ನೂ ಭಾವಿಸುತ್ತಾನೆ." ಈ ಸೋದರ ಭಾವನೆಯಿರುವುದರಿಂದಲೇ ಒಬ್ಬ ವ್ಯಕ್ತಿಯು "ತನ್ನ ಸಹ ಜೀವಿಗಳನ್ನು ತನ್ನೊಂದಿಗೆ ಘರ್ಷಣೆಗೆ ತೊಡಗಿರುವ ವೈರಿಗಳೆಂದು ಭಾವಿಸುವುದಿಲ್ಲ. ಅವನು ಯಶಸ್ವಿಯಾಗಬೇಕಾದರೆ ಅವರನ್ನು ಸೋಲಿಸಲೇಬೇಕೆಂದು ಸಂಕಲ್ಪ ಮಾಡುವುದಿಲ್ಲ." ವ್ಯಕ್ತಿ ವಿಶಿಷ್ಟತಾವಾದವು ಅರಾಜಕತೆಯನ್ನು ಸೃಷ್ಟಿಸುತ್ತದೆ. ಭ್ರಾತೃಭಾವ ಅರಾಜಕತೆಯನ್ನು ತಡೆದು ಮನುಷ್ಯರಲ್ಲಿ ನೈತಿಕ ಕಟ್ಟುಪಾಡುಗಳು ಉಳಿದುಕೊಂಡು ಬರಲು ಚೈತನ್ಯವನ್ನು ತುಂಬುತ್ತದೆ. ಈ ವಿಚಾರದಲ್ಲಿ ಸಂದೇಹಕ್ಕೆ ಅವಕಾಶವೇ ಇಲ್ಲ."

ಈ ಭ್ರಾತೃಭಾವದ ಸೃಷ್ಟಿ ಹೇಗೆ ಹುಟ್ಟುತ್ತದೆ? ಜೆ.ಎಸ್.ಮಿಲ್ ಹೇಳುವಂತೆ ಈ ದೃಷ್ಟಿ ಸಹಜವಾದ ಮನೋಭಾವನೆಯಾಗಿದೆ: "ಸಾಮಾಜಿಕ ಸ್ಥಿತಿಯೆಂಬುದು ತತ್ಕಾಲದಲ್ಲಿ ಅತ್ಯಂತ ಸಹಜವೂ ಅತ್ಯಂತ ಅಗತ್ಯವೂ ಆಗಿದೆ. ವಿಶೇಷ ಪರಿಸ್ಥಿತಿಗಳಲ್ಲಿ ಆತ್ಮಸಂತೋಷಕ್ಕಾಗಿ ಅಮೂರ್ತ ವಿಚಾರಗಳಲ್ಲಿ ತೊಡಗಿದುದನ್ನು ಹೊರತುಪಡಿಸಿದರೆ ಮನುಷ್ಯನಿಗೆ ಭ್ರಾತೃಭಾವವು ಸ್ವಾಭಾವಿಕವಾಗಿದೆ. ಒಂದು ಗುಂಪಿನ ಸದಸ್ಯನಲ್ಲದಂತೆ ತನ್ನನ್ನು ಮನುಷ್ಯ ಎಂದೂ ಕಲ್ಪಿಸಿಕೊಳ್ಳಲಾರ. ಆದಿಮ ಸ್ವಾತಂತ್ರ್ಯದ ಸ್ಥಿತಿಯಿಂದ ಬಿಡುಗಡೆ ಹೊಂದಿ ಮಾನವತೆ ಮುಂದುವರೆದಂತೆ ಈ ಸಹಭಾಗಿತ್ವವು ಬಿಗಿಗೊಳ್ಳುತ್ತಾ ಹೋಗುತ್ತದೆ. ಆದುದರಿಂದ ಒಂದು ಸಮಾಜದ ಇರುವಿಗೆ ಅತ್ಯಗತ್ಯವಾದ ವಿಚಾರವಿದು. ವ್ಯಕ್ತಿಗೆ ತಾನು ಹುಟ್ಟಿರುವ ಜನಪದದ ಪರಿಕಲ್ಪನೆಯ ಅವಿಭಾಜ್ಯ ಅಂಗವಾಗಿ ಭ್ರಾತೃಭಾವವಿರುತ್ತದೆ, ಅದು ಅವನ ಧ್ಯೇಯವೂ ಆಗಿರುತ್ತದೆ. ಸ್ವಾಮಿ – ಸೇವಕ ಸಂಬಂಧವನ್ನು ಹೊರತುಪಡಿಸಿ, ಮನುಷ್ಯ–ಮನುಷ್ಯರ ನಡುವಿನ ಸಮಾಜದ ಬಗೆಗೆ ಯೋಚಿಸುವುದಾದರೆ ಎಲ್ಲರ ಹಿತವನ್ನು ಕಾಪಾಡುವ ನೆಲೆಯನ್ನು ಬಿಟ್ಟು ಇನ್ನಾವುದೂ ಸ್ಪಷ್ಟವಾಗಿ ಗೋಚರಿಸುವುದಿಲ್ಲ. ಸಮಾನರ ನಡುವೆ ಸಮಾಜವಿರುವುದು, ಎಲ್ಲರ ಹಿತಾಸಕ್ತಿಗಳೂ ಸಮಾನವೆಂದು ತಿಳಿದಾಗ ಮಾತ್ರ. ಆದುದರಿಂದ ನಿರಂಕುಶ ಪ್ರಭುತ್ವವನ್ನು ಬಿಟ್ಟರೆ ನಾಗರಿಕತೆಯ ಎಲ್ಲ ಹಂತಗಳಲ್ಲಿಯೂ ಎಲ್ಲರೂ ಸಮಾನರಾಗಿದ್ದಾರೆ. ಪ್ರತಿಯೊಬ್ಬನೂ ಈ ನಿಯಮಾನುಸಾರವಾಗಿಯೇ ಮತ್ತೊಬ್ಬನೊಡನೆ ಜೀವಿಸುವುದು ಅನಿವಾರ್ಯವಾಗಿದೆ. ಬೇರೆ ರೀತಿಯ ನಿಯಮವನ್ನನುಸರಿಸಿ ಇತರರೊಡನೆ ಬಾಳಲು ಸಾಧ್ಯವೇ ಇಲ್ಲವೆಂಬಂತೆ ಎಲ್ಲ ಕಾಲದಲ್ಲಿ ಪ್ರಗತಿಯನ್ನು ಸಾಧಿಸಲಾಗಿದೆ, ಮತ್ತೊಬ್ಬರ ಬಗೆಗೆ ಸಂಪೂರ್ಣ ನಿರಾಸಕ್ತಿ ಬೆಳೆಸಿಕೊಳ್ಳುವಂತೆ ಮನುಷ್ಯರು ಬದುಕಲು ಸಾಧ್ಯವೇ ಇಲ್ಲವೆಂಬ ಸ್ಥಿತಿ ಹೀಗೆ ಏರ್ಪಟ್ಟಿದೆ."

ಈ ಸಹಭಾಗಿತ್ವದ ಭಾವನೆಗೆ ಹಿಂದೂ ಧರ್ಮದಲ್ಲಿ ಜಾಗವಿದೆಯೇ? ಕೆಳಗಿನ ಸಂಗತಿಗಳು ಈ ಪ್ರಶ್ನೆಗೆ ಸಂಬಂಧಿಸಿದಂತೆ ನಿಚ್ಚಳವಾಗಿ ಬೆಳಕು ಚೆಲ್ಲುತ್ತವೆ:

ಮೊತ್ತಮೊದಲು ನಮಗೆ ಗೋಚರಿಸುವುದು ಜಾತಿಗಳ ಸಂಖ್ಯೆ. ಯಾರೂ ಕರಾರುವಕ್ಕಾಗಿ ಇವುಗಳ ಲೆಕ್ಕವೊಂದನ್ನು ಮಾಡಿರುವಂತಿಲ್ಲ. ಅಂದಾಜು ಎರಡು ಸಾವಿರಕ್ಕಿಂತ ಕಡಿಮೆ ಇಲ್ಲವೆಂದು ಹೇಳಲಾಗುತ್ತಿದೆ. ಮೂರು ಸಾವಿರವಿದ್ದರೂ ಇರಬಹುದು. ಇದೊಂದೇ ವಿಷಾದಕರ ಭಾಗವಲ್ಲ. ಇನ್ನೂ ಹಲವು ವಿಚಾರಗಳಿವೆ. ಜಾತಿಗಳನ್ನು ಉಪಜಾತಿಗಳನ್ನಾಗಿ ವಿಂಗಡಿಸಲಾಗಿದೆ. ಅವುಗಳ ಸಂಖ್ಯೆಯಂತೂ ಅಗಣಿತವಾಗಿದೆ. ಒಟ್ಟು ಬ್ರಾಹ್ಮಣರ ಜನಸಂಖ್ಯೆ ಒಂದೂವರೆ ಕೋಟಿ ಇರಬಹುದು. ಆದರೆ ಸಾವಿರದ ಎಂಟುನೂರು ಎಂಬತ್ತಾರು ಉಪಜಾತಿಗಳು ಬ್ರಾಹ್ಮಣರಲ್ಲಿವೆ. ಪಂಜಾಬ್ ಪ್ರಾಂತವೊಂದರಲ್ಲಿಯೇ ಸಾರಸ್ವತ ಬ್ರಾಹ್ಮಣರ ನಾನೂರ ಅರವತ್ತೊಂಬತ್ತು ಪ್ರಭೇದಗಳಿವೆ. ಪಂಜಾಬಿನ ಕಾಯಸ್ಥರನ್ನು ಐನೂರ ತೊಂಬತ್ತು ಉಪಜಾತಿಗಳಲ್ಲಿ ವಿಂಗಡಿಸಲಾಗಿದೆ. ಸಾಮಾಜಿಕ ಜೀವನವನ್ನು ಚಿಕ್ಕ ಚಿಕ್ಕ ತುಂಡುಗಳಾಗಿ ವಿಭಾಗಿಸಿರುವ ಈ ಅಗಣಿತ ಪ್ರಕ್ರಿಯೆಯ ಹಲವಾರು ಪ್ರಭೇದಗಳನ್ನು ಬೇಕಾದರೆ ಕೂಡುತ್ತಾ ಹೋಗಬಹುದು.

ಈ ತುಂಡರಿಸುವ ಪ್ರಕ್ರಿಯೆಯ ಮೂರನೆಯ ಆಯಾಮವೆಂದರೆ ಜಾತಿಗಳನ್ನು ಅಸಂಖ್ಯಾತ ಚೂರುಗಳನ್ನಾಗಿ ಒಡೆದಿರುವುದು. ಬನಿಯಾಗಳ ಕೆಲವು ಉಪ ಜಾತಿಗಳಲ್ಲಿ ಒಂದು ನೂರು ಕುಟುಂಬಗಳಿಗಿಂತ ಹೆಚ್ಚಿಲ್ಲ. ಅವರು ಎಷ್ಟು ಒಳ ಸಂಬಂಧಗಳಲ್ಲಿ ತೊಡರಿಕೊಂಡಿದ್ದಾರೆಂಬುದು ಗೋತ್ರ ಸಂಬಂಧಿ ನಿಯಮಗಳನ್ನು ಉಲ್ಲಂಘಿಸದೆ ಅವರ ಜಾತಿಗಳಲ್ಲಿ ಮದುವೆಯಾಗುವುದೇ ಬಹು ಕಷ್ಟದ ಸಂಗತಿಯಾಗಿದೆ.

ಹೀಗೆ ತುಂಡುರಿಸುವುದಕ್ಕೆ ಎಷ್ಟು ಸಣ್ಣ ಸಂಗತಿಗಳು ಕಾರಣವಾಗಬಹುದೆಂಬುದು ಉಲ್ಲೇಖಾರ್ಹವಾಗಿದೆ.

ಈ ಜಾತಿ ವ್ಯವಸ್ಥೆಯ ಶ್ರೇಣೀಕರಣವೂ ಉಲ್ಲೇಖಿಸಬೇಕಾದ ಮತ್ತೊಂದು ವಿಚಾರವಾಗಿದೆ. ಜಾತಿಗಳೆಲ್ಲ ಸೇರಿ ಒಂದು ಶ್ರೇಣಿಯಾಗಿ, ಒಂದರ ಮೇಲೊಂದು ಎಂಬಂತೆ ರೂಪು ಹೊಂದಿ, ಅದರಲ್ಲಿ ಒಂದು ಜಾತಿಯು ಎಲ್ಲಕ್ಕಿಂತ ಮೇಲೆ ಹಾಗೂ ಮತ್ತೊಂದು ಎಲ್ಲಕ್ಕಿಂತ ಕೆಳಗೆ, ಉಳಿದೆಲ್ಲವೂ ನಡುವೆ ಸೇರುತ್ತವೆ. ಜಾತಿ ವ್ಯವಸ್ಥೆಯ ಶ್ರೇಣೀಕರಣದಲ್ಲಿ – ಶ್ರೇಷ್ಠ ಮತ್ತು ಕನಿಷ್ಠ ಜಾತಿಗಳನ್ನು ಹೊರತುಪಡಿಸಿ. ಎಲ್ಲ ಜಾತಿಗಳಿಗೂ ತಮಗಿಂತ ಮೇಲೆ ಮತ್ತು ಕೆಳಗೆ ಜಾತಿಗಳಿರುತ್ತವೆ.

ಈ ಶ್ರೇಷ್ಠತೆಯನ್ನು ಅಥವಾ ಅಗ್ರತೆಯನ್ನು ನಿರ್ಧರಿಸುವುದಾದರೂ ಹೇಗೆ? ಈ ಮೇಲುಕೀಳಿನ ವ್ಯವಸ್ಥೆಯನ್ನು ಅಥವಾ ತಾರತಮ್ಯಗಳನ್ನು ನಿಯಾಮಾನುಸಾರ ನಿರ್ಧರಿಸಲಾಗುತ್ತದೆ. (೧) ಧಾರ್ಮಿಕ ಆಚರಣೆಗೆ ಸಂಬಂಧಿಸಿದವು (೨) ಸಹಪಂಕ್ತಿ ಭೋಜನಕ್ಕೆ ಸಂಬಂಧಿಸಿದವು.

ಪ್ರಾಮುಖ್ಯದ ನಿಯಮಗಳ ತಳಹದಿಯ ಮೇಲೆ ಧರ್ಮವು ಮೂರು ರೀತಿಯಲ್ಲಿ ಗೋಚರವಾಗುತ್ತದೆ. ಮೊದಲು ಧಾರ್ಮಿಕ ಆಚರಣೆಗಳ ಮೂಲಕ; ಎರಡನೆಯದು ಧಾರ್ಮಿಕಾಚರಣೆಗಳ ಮಂತ್ರಾಭಿಚಾರ ಸಂಬಂಧಿಯಾಗಿ; ಮೂರನೆಯದಾಗಿ ಪುರೋಹಿತನ ಸ್ಥಾನಮಾನಗಳ ಮೂಲಕ.

ಪ್ರಾಮುಖ್ಯವನ್ನು ನಿರ್ಧರಿಸುವ ಮೂಲ ನಿಯಮಗಳಲ್ಲಿ ಧಾರ್ಮಿಕ ಆಚರಣೆಗಳಿಂದ ಮೊದಲು ಮಾಡಬಹುದು. ಹಿಂದೂ ಧರ್ಮದಲ್ಲಿ ಹದಿನಾರು ಧಾರ್ಮಿಕಾಚರಣೆಗಳನ್ನು ವಿಧಿಸಲಾಗಿದೆ ಎಂಬುದನ್ನು ಇಲ್ಲಿ ಗಮನಿಸಬೇಕಾಗಿದೆ. ಇವೆಲ್ಲವೂ ಹಿಂದಿನ ಆಚರಣೆಗಳೇ ಆಗಿದ್ದರೂ, ಎಲ್ಲ ಹಿಂದೂ ಧರ್ಮದವರೂ ಎಲ್ಲ ಹದಿನಾರು ಆಚರಣೆಗಳನ್ನು ನಡೆಸಲು ಹಕ್ಕನ್ನು ಹೊಂದಿಲ್ಲ. ಕೆಲವರು ಈ ಎಲ್ಲ ಆಚರಣೆಗಳ ಮೇಲೆ ಹಕ್ಕನ್ನು ಚಲಾಯಿಸಬಲ್ಲರು. ಕೆಲವು ಆಚರಣೆಗಳನ್ನು ನಡೆಸಲು ಕೆಲವರಿಗೆ ಅವಕಾಶವಿದೆ. ಅವುಗಳಲ್ಲಿ ಕೆಲವು ಆಚರಣೆಗಳನ್ನು ನಡೆಸಲು ಕೆಲವರಿಗೆ ನಿಷೇಧವಿದೆ. ನಿದರ್ಶನಕ್ಕೆ ಪವಿತ್ರ ಜನಿವಾರ ಹಾಕುವ ಉಪನಯನ ವಿಧಿಯನ್ನೇ ತೆಗೆದುಕೊಳ್ಳಿ. ಕೆಲವರಿಗೆ ಇಲ್ಲಿ ಅವಕಾಶವಿಲ್ಲ. ಆಚರಣಾ ವಿಧಿ ಪ್ರಾಮುಖ್ಯದ

ನಿಯಮಾನುಸಾರ ನಡೆಯುತ್ತದೆ. ಎಲ್ಲ ಆಚರಣೆಗಳನ್ನು ನಡೆಸುವ ಅಧಿಕಾರ ಹೊಂದಿದ ಜಾತಿಯು ಕಡಿಮೆ ಸಂಖ್ಯೆಯ ಆಚರಣೆಗಳ ಮೇಲೆ ಅಧಿಕಾರ ಹೊಂದಿದ ಜಾತಿಗಿಂತ ಶ್ರೇಷ್ಠವಾಗುತ್ತದೆ.

ಮಂತ್ರಗಳತ್ತ ತಿರುಗಿದರೆ ಪ್ರಾಮುಖ್ಯದ ನಿಯಮಗಳಿಗೆ ಇದೂ ಒಂದು ಮೂಲವಾಗುತ್ತದೆ. ಹಿಂದೂ ಧರ್ಮದ ಪ್ರಕಾರ ಒಂದೇ ಆಚರಣೆಗಳನ್ನು ಎರಡು ಬಗೆಯಲ್ಲಿ ನಡೆಸಲು ಸಾಧ್ಯವಿದೆ. (೧) ವೇದೋಕ್ತ ಮತ್ತು (೨) ಪುರಾಣೋಕ್ತ. ವೇದೋಕ್ತ ಆಚರಣೆಗಳಲ್ಲಿ ವೇದಮಂತ್ರ ಪಠನಗಳ ಮೂಲಕ ವಿಧಿಯನ್ನು ಆಚರಿಸಲಾಗುತ್ತದೆ. ಪುರಾಣೋಕ್ತ ಆಚರಣೆಗಳಲ್ಲಿ ಪುರಾಣಮಂತ್ರ ಪಠನದೊಂದಿಗೆ ವಿಧಿಯನ್ನು ನೆರವೇರಿಸಲಾಗುತ್ತದೆ. ಹಿಂದೂ ಧಾರ್ಮಿಕ ಪವಿತ್ರ ಗ್ರಂಥಗಳನ್ನು ಎರಡು ಭಾಗವಾಗಿ ವಿಂಗಡಿಸಲಾಗಿದೆ. (೧) ನಾಲ್ಕು ವೇದಗಳು (೨) ಹದಿನೆಂಟು ಪುರಾಣಗಳು. ಎಲ್ಲವುಗಳನ್ನೂ ಪವಿತ್ರ ಗ್ರಂಥಗಳೆಂದು ಗೌರವಿಸಲಾಗುತ್ತದೆಯಾದರೂ ಎಲ್ಲಕ್ಕೂ ಸಮಾನ ಪೂಜ್ಯತೆಯಿಲ್ಲ. ವೇದಗಳಿಗೆ ಅತಿ ಹೆಚ್ಚಿನ ಪೂಜ್ಯತೆಯೂ, ಪುರಾಣಗಳಿಗೆ ಕಡಿಮೆ ಪೂಜ್ಯತೆಯೂ ಪ್ರಾಪ್ತವಾಗುತ್ತದೆ. ಸಾಮಾಜಿಕ ಪ್ರಾಮುಖ್ಯಕ್ಕೆ ಮಂತ್ರಗಳು ಎಷ್ಟು ಮುಖ್ಯವೆಂಬುದನ್ನು ತಿಳಿಯಬೇಕಾದರೆ ಒಂದು ವಿಚಾರವನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ವೇದೋಕ್ತ ವಿಧಿಯಲ್ಲಿ ಆಚರಣೆಗಳನ್ನು ನಡೆಸಲು ಎಲ್ಲ ಜಾತಿಗಳಿಗೂ ಅಧಿಕಾರವಿಲ್ಲ. ಮೂರು ವರ್ಣಗಳೂ ಯಾವುದಾದರೊಂದು ಪುರಾಣಗಳ ಮಾರ್ಗದಲ್ಲಿ ಆಚರಣೆ ನಡೆಸಬಹುದು. ಆದರೆ ಅವುಗಳಲ್ಲಿ ಒಂದು ಮಾತ್ರ ವೇದೋಕ್ತ ಮಾದರಿಯಲ್ಲಿ ಆಚರಣೆ ನಡೆಸಲು, ಮತ್ತೊಂದು ಪುರಾಣೋಕ್ತ ಮಾದರಿಯಲ್ಲಿ ನಡೆಸಲು ಅಧಿಕಾರ ಪಡೆದಿರುತ್ತವೆ. ಧಾರ್ಮಿಕ ಆಚರಣೆಗಳ ಆರಾಧನಾ ವಿಧಿಯಲ್ಲಿ ಬಳಸುವ ಮಂತ್ರಗಳ ಆಧಾರದ ಮೇಲೆ ಜಾತಿಯ ಪ್ರಾಮುಖ್ಯ ನಿರ್ಧಾರವಾಗುತ್ತದೆ. ವೇದಮಂತ್ರ ಪಠನೆಗೆ ಅಧಿಕಾರ ಹೊಂದಿರುವ ಜಾತಿಯು ಪುರಾಣಮಂತ್ರಗಳನ್ನು ಪಠಿಸುವ ಜಾತಿಗಳಿಂತ ಶ್ರೇಷ್ಠವೆಂದು ಪರಿಗಣಿಸಲಾಗುತ್ತದೆ.

ಪ್ರಾಮುಖ್ಯಕ್ಕೆ ಸಂಬಂಧಿಸಿದಂತೆ ಪುರೋಹಿತನ ವಿಚಾರವನ್ನು ತೆಗೆದುಕೊಳ್ಳಬಹುದು. ಹಿಂದೂ ಧರ್ಮದಲ್ಲಿ ಒಂದು ಧಾರ್ಮಿಕ ಆಚರಣೆಯ ಎಲ್ಲ ಫಲವನ್ನೂ ಪಡೆಯಬೇಕಾದರೆ ಪುರೋಹಿತನೊಬ್ಬನು ಸಾಧನವಾಗಿ ನೇತೃತ್ವ ವಹಿಸಲೇ ಬೇಕಾಗುತ್ತದೆ. ಶಾಸ್ತ್ರಗಳು ವಿಧಿಸಿರುವ ಪುರೋಹಿತನೆಂದರೆ ಬ್ರಾಹ್ಮಣ. ಆದುದರಿಂದ ಬ್ರಾಹ್ಮಣನು ಅಪರಿಹಾರ್ಯ. ಆದರೆ ಬ್ರಾಹ್ಮಣನು ಎಲ್ಲ ಆಚರಣೆಯ ನೇತೃತ್ವ ವಹಿಸುವ ಆಹ್ವಾನವನ್ನು, ಅವರ ಕುಲ ಜಾತಿಗಳನ್ನು ನೋಡದೆ ಒಪ್ಪಿಕೊಳ್ಳಲೇಬೇಕೆಂಬ ಕಡ್ಡಾಯವನ್ನು ಶಾಸ್ತ್ರಗಳು ವಿಧಿಸಿಲ್ಲ. ಯಾವ ಜಾತಿಯ ಆಹ್ವಾನವನ್ನು ಅವನು ಒಪ್ಪಿಕೊಳ್ಳುತ್ತಾನೆ, ಯಾವುದನ್ನು ತಿರಸ್ಕರಿಸುತ್ತಾನೆಂಬುದು ಬ್ರಾಹ್ಮಣನ ಇಷ್ಟಕ್ಕೆ ಸಂಬಂಧಿಸಿದ ವಿಚಾರ. ದೀರ್ಘಕಾಲದ ಬಳಿಕ, ಸಾಕಷ್ಟು ರೂಢಿಗತವಾದ ಮೇಲೆ ಯಾವ ಜಾತಿಗೆ ಪುರಸ್ಕಾರ, ಮತ್ತಾವ ಜಾತಿಗೆ ತಿರಸ್ಕಾರವೆಂಬುದು ಈಗ ನಿರ್ಧಾರವಾಗಿ ಹೋಗಿದೆ. ಈ ಸಂಗತಿಯು ಜಾತಿಗಳ ಪ್ರಾಮುಖ್ಯದ ವಿಚಾರದಲ್ಲಿ ಆಧಾರವಾಗುತ್ತದೆ. ಬ್ರಾಹ್ಮಣನು ನೇತೃತ್ವ ವಹಿಸುವ ಜಾತಿಯು ಬ್ರಾಹ್ಮಣನು ನೇತೃತ್ವ ವಹಿಸದ ಜಾತಿಗಿಂತ ಶ್ರೇಷ್ಠವೆಂದು ಪರಿಗಣಿಸಲಾಗುತ್ತದೆ.

ಸಹಪಂಕ್ತಿ ಭೋಜನವು ಪ್ರಾಮುಖ್ಯದ ನಿಯಮಗಳ ಮೂಲಕ್ಕೆ ಸಂಬಂಧಿಸಿದ ಎರಡನೆಯ ಅಂಶವಾಗಿದೆ. ಮದುವೆಗೆ ಸಂಬಂಧಿಸಿದ ನಿಯಮಗಳಿಗಿಂತ ಸಹಪಂಕ್ತಿ ಭೋಜನದ ನಿಯಮಗಳಿಗೆ ಈ ವಿಚಾರದಲ್ಲಿ ಪ್ರಾಮುಖ್ಯ ಸಿಕ್ಕಿದೆ ಎಂಬುದು ಇಲ್ಲಿ ಗಮನಿಸಬೇಕಾದ ಮತ್ತೊಂದು ವಿಚಾರ. ಅಂತರ ಭೋಜನ ಮತ್ತು ಅಂತರ್‌ವಿವಾಹಗಳನ್ನು ನಿಷೇಧಿಸುವ ನಿಯಮಗಳಲ್ಲಿ ಇರುವ ವ್ಯತ್ಯಾಸದಲ್ಲಿ ಇದಕ್ಕೆ ಕಾರಣವಿದೆ. ವ್ಯತ್ಯಾಸವಂತೂ ಸ್ಪಷ್ಟವಾಗಿದೆ. ಅಂತರ್–ಜಾತಿಯ ವಿವಾಹಗಳಿಗೆ ನಿಷೇಧವಿದ್ದು, ಈ ಬಗೆಯ ವಿವಾಹವನ್ನು ಗೌರವಿಸಲಾಗುವುದಿಲ್ಲ ಮತ್ತು ನಿಷೇಧವನ್ನು ನಿಶ್ಚಿತವಾಗಿಯೂ ಜಾರಿಗೊಳಿಸಬಹುದಾಗಿದೆ.

ಆದರೆ ಅಂತರ್–ಜಾತಿ ಸಹಪಂಕ್ತಿ ಭೋಜನವು ಭಾರಿ ಕಷ್ಟಗಳನ್ನು ತಂದೊಡ್ಡುತ್ತದೆ. ಅದನ್ನು ಎಲ್ಲ ಸ್ಥಳಗಳಲ್ಲಿಯೂ ಎಲ್ಲ ಸಂದರ್ಭಗಳಲ್ಲಿಯೂ ನಿಶ್ಚಿತವಾಗಿ ಜಾರಿಗೊಳಿಸಲಾಗುವುದಿಲ್ಲ. ಮನುಷ್ಯನು ವಲಸೆ ಹೋಗುತ್ತಾನೆ. ಸ್ಥಳದಿಂದ ಸ್ಥಳಕ್ಕೆ ವಲಸೆ ಹೋಗಲೇಬೇಕಾಗುತ್ತದೆ. ಆತನು ಹೋದ ಸ್ಥಳಗಳಲ್ಲೆಲ್ಲಾ ಅವನ ಜಾತಿಯವರೇ ಸಿಗುತ್ತಾರೆಂದು ಹೇಳುವಂತಿಲ್ಲ. ಅಪರಿಚಿತರ ನಡುವೆ ಅವನು ಉಳಿಯಬೇಕಾಗಿ ಬರಬಹುದು. ಮದುವೆಯೆನ್ನುವುದು ತತ್ ಕ್ಷಣದ ವಿಚಾರವಲ್ಲವಾದರೆ ಆಹಾರವು ದೈನಂದಿನ ಅಗತ್ಯಕ್ಕೆ ಸಂಬಂಧಿಸಿದ್ದು. ತನ್ನ ಜಾತಿಯವರಿರುವ ಸಮಾಜಕ್ಕೆ ಹಿಂದಿರುಗಿ ಬರುವವರೆಗೆ ಮದುವೆಯಾಗದೆ ಅವನು ಕಾಯಬಹುದು. ಆದರೆ ಅವನು ಊಟ ಮಾಡದೆ ಇರುವಂತಿಲ್ಲ. ಅದನ್ನು ಅವನು ಎಲ್ಲಾದರೂ ಹೇಗಾದರೂ ಹೊಂದಿಸಿಕೊಳ್ಳಲೇಬೇಕು. ಅವನು ಸ್ವೀಕರಿಸುವುದೇ ಆದರೆ ಯಾರಿಂದ ಭೋಜನ ಪಡೆಯಬಹುದು ಎಂಬುದೇ ಇಲ್ಲಿರುವ ಪ್ರಶ್ನೆ. ನಿಯಮಾನುಸಾರವಾಗಿ ಅವನು ತನಗಿಂತ ಮೇಲು ಜಾತಿಯವರಿಂದ ಭೋಜನ ಸ್ವೀಕರಿಸಬಹುದೇ ಹೊರತು ಕೆಳಜಾತಿಯವರಿಂದ ಪಡೆಯುವಂತಿಲ್ಲ. ಒಂದು ಜಾತಿಯಿಂದ ಭೋಜನ ಪಡೆಯಬಹುದು, ಮತ್ತೊಂದರಿಂದ ಪಡೆಯಬಾರದು ಎಂಬ ನಿಯಮ ಹಿಂದೂಗಳಿಗೆ ಏಕೆ ಬಂದಿತು ಎಂಬುದನ್ನು ನಿರ್ಧರಿಸಿ ಹೇಳಲು ಮಾರ್ಗವಿಲ್ಲ. ಬ್ರಾಹ್ಮಣರ ಪದ್ಧತಿಗನುಸಾರವಾಗಿ ಈ ನಿಯಮ ನಿರ್ಧಾರವಾಗಿರುವಂತಿದೆ. ಈ ವಿಚಾರದಲ್ಲಿ ಬ್ರಾಹ್ಮಣನು ಅನುಸರಿಸಲು ವಿಸ್ತಾರವಾದ ನಿಯಮಾವಳಿಗಳೇ ಇವೆ. (೧) ಅವನು ಕೆಲವರಿಂದ ನೀರನ್ನು ಮಾತ್ರ ತೆಗೆದುಕೊಳ್ಳಬಹುದು; ಮತ್ತೆ ಕೆಲವರಿಂದ ಅದನ್ನೂ ತೆಗೆದುಕೊಳ್ಳಬಾರದು. (೨) ನೀರಿನಿಂದ ಬೇಯಿಸಿದ ಅಡುಗೆಯನ್ನು ಬ್ರಾಹ್ಮಣನು ಯಾವ ಜಾತಿಯಿಂದಲೂ ತೆಗೆದುಕೊಳ್ಳಬಾರದು. (೩) ಕೇವಲ ಎಣ್ಣೆಯಿಂದ ಕರಿದ ಆಹಾರವನ್ನು ಅವನು ಕೆಲವು ಜಾತಿಗಳಿಂದ ಪಡೆಯಬಹುದು. ಅದಲ್ಲದೆ ಅವನು ಆಹಾರ ಪಾನೀಯಗಳನ್ನು ಸ್ವೀಕರಿಸುವ ಪಾತ್ರೆಗಳ ವಿಚಾರದಲ್ಲಿಯೂ ಕೆಲವು ನಿಯಮಾವಳಿಗಳೇ ಉಂಟು. ಕೆಲವು ಜಾತಿಗಳಿಂದ ಕೇವಲ ಮಡಕೆಯಲ್ಲಿಯೂ, ಮತ್ತೆ ಕೆಲವರಿಂದ ಲೋಹದ ಪಾತ್ರೆಗಳಿಂದಲೂ ಅವನು ಆಹಾರವನ್ನು ಮತ್ತು ನೀರನ್ನು ನಿಯಮಾನುಸಾರ ಪಡೆಯಬೇಕಾಗಿದೆ. ಜಾತಿಗಳ ದರ್ಜೆಯನ್ನು ಇದು ನಿರ್ಣಯಿಸುತ್ತದೆ. ಎಣ್ಣೆಯಲ್ಲಿಯೇ ಕರಿದ ಆಹಾರವನ್ನು ಅವನು ಯಾರಿಂದಲಾದರೂ ಸ್ವೀಕರಿಸಿದರೆ, ಅವರ ದರ್ಜೆ ಅದನ್ನು ಕೊಡಲಾಗದವರಿಗಿಂತ ಶ್ರೇಷ್ಠವೆಂದು ತಿಳಿಯಲಾಗುತ್ತದೆ. ಲೋಹದ ಪಾತ್ರೆಯಿಂದ ನೀರನ್ನು ಒಂದು ಜಾತಿಯಿಂದ ಪಡೆದರೆ, ಮಡಕೆಯಲ್ಲಿ ಕೊಡುವವರಿಗಿಂತ ಅದು ಶ್ರೇಷ್ಠವಾಗುತ್ತದೆ. ಗಾಜು ಕೊಳೆಯುಂಟಾಗದ ನಿರ್ಲೇಪ ವಸ್ತುವಾದ್ದರಿಂದ ಬ್ರಾಹ್ಮಣನು ಕೆಳ ಜಾತಿಯವರಿಂದಲು ಅದರಲ್ಲಿ ನೀರನ್ನು ಪಡೆಯಬಹುದು. ಆದರೆ ಬೇರೆ ಲೋಹಗಳಲ್ಲಿ ಕೊಳೆ ಅಂಟಿಕೊಂಡಿರುತ್ತದೆಯಲ್ಲವೇ? ಕೊಳೆಯ ಲಕ್ಷಣವೂ ಅವಲಂಬಿತವಾಗುವುದು ಅದನ್ನು ಯಾರು ಬಳಸುತ್ತಾರೆಂಬ ವಿಚಾರದ ಮೇಲೆ. ಬ್ರಾಹ್ಮಣರು ಲೋಹದ ಪಾತ್ರೆಗಳನ್ನು ಒಪ್ಪಿಕೊಳ್ಳುವುದರ ಮೇಲೆ ಈ ಶ್ರೇಷ್ಠತ್ವ ನಿರ್ಣಯವಾಗುತ್ತದೆ.

ಹಿಂದೂ ಧರ್ಮದ ಶ್ರೇಣಿಯಲ್ಲಿ ವಿವಿಧ ಜಾತಿಗಳ ಸ್ಥಾನ ಹಾಗೂ ಶ್ರೇಷ್ಠತೆಯನ್ನು ನಿರ್ಧರಿಸುವ ಕೆಲವು ಅಂಶಗಳನ್ನು ಮೇಲೆ ನೋಡಿದ್ದೇವೆ.

ಜಾತಿ ವ್ಯವಸ್ಥೆಯ ಶ್ರೇಣೀಕೃತ ವಿಂಗಡಣೆಯು ಮನಶ್ಶಾಸ್ತ್ರೀಯ ಸಾಮಾಜಿಕ ಪರಿಸ್ಥಿತಿಯೊಂದನ್ನು ನಿರ್ಮಿಸುತ್ತದೆಯೆಂಬುದು ಗಮನಾರ್ಹವಾದ ಸಂಗತಿಯಾಗಿದೆ. ಮೊದಲನೆಯದಾಗಿ ಅದು ವಿವಿಧ ಜಾತಿಗಳ ನಡುವೆ ಗೌರವಕ್ಕಾಗಿ ಸ್ಪರ್ಧೆ ಏರ್ಪಡಿಸಿ ವೈರವನ್ನು ಬೆಳೆಸುತ್ತದೆ. ಎರಡನೆಯದಾಗಿ ದ್ವೇಷಕ್ಕೆ ಕಾರಣವಾಗುವ ಒಂದು ಮೇಲು ಅಂತಸ್ತನ್ನು ಮತ್ತು ತಿರಸ್ಕಾರಕ್ಕೆಡೆಯಾಗುವ ಕೆಳದರ್ಜೆಯನ್ನು ಅದು ನಿರ್ಮಿಸುತ್ತದೆ.

ಪರಸ್ಪರ ದ್ವೇಷ ಮತ್ತು ತಿರಸ್ಕಾರಗಳು ಈ ಜಾತಿಗಳ ನಡುವೆ ಎಂತಹ ಪ್ರಮಾಣದಲ್ಲಿವೆ ಎಂಬುದನ್ನು

ಮತ್ತು ಅದರ ಸಮಾಜೋ–ಮಾನಸಿಕ ಆಯಾಮವನ್ನು ಇಂಡಿಯಾ ದೇಶದ ಉದ್ದಗಲಕ್ಕೂ ಪ್ರಚಾರದಲ್ಲಿರುವ ಗಾದೆಗಳು ಬಹಳ ಚೆನ್ನಾಗಿ ಪ್ರತಿಬಿಂಬಿಸುತ್ತಿವೆ. ನಿದರ್ಶನ ಪೂರ್ವಕವಾಗಿ ನಾನು ಕೆಲಸವನ್ನು ಉಲ್ಲೇಖಿಸುತ್ತೇನೆ. ದ್ವೇಷ ಮತ್ತು ತಿರಸ್ಕಾರಗಳ ಭಾವನೆಗಳು ಗಾದೆಗಳಲ್ಲಿ ಅವಕಾಶ ಪಡೆದಿವೆ ಮಾತ್ರವಲ್ಲ, ಹಿಂದೂ ಸಾಹಿತ್ಯದಲ್ಲಿಯೂ ಅವುಗಳಿಗೆ ಎಡೆ ದೊರೆತಿದೆ. 'ಸಹ್ಯಾದ್ರಿ ಖಂಡ' ಎಂಬ ಒಂದು ಪವಿತ್ರ ಗ್ರಂಥವನ್ನು ನಾನು ಇಲ್ಲಿ ಪ್ರಸ್ತಾಪಿಸ ಬಯಸುತ್ತೇನೆ. ಅದು ಹಿಂದೂ ಧಾರ್ಮಿಕ ಸಾಹಿತ್ಯದಲ್ಲಿ ಒಂದಾದ ಪುರಾಣಗಳಲ್ಲಿ ಸೇರುತ್ತದೆ. ಆದರೆ ಬೇರೆ ಪುರಾಣಗಳ ವಸ್ತುವಿಗೂ ಇದಕ್ಕೂ ಸಂಪೂರ್ಣ ಭಿನ್ನತೆಯಿದೆ. ವಿವಿಧ ಜಾತಿಗಳ ಉಗಮವನ್ನು ಅಲ್ಲಿ ವಿವರಿಸಲಾಗಿದೆ. ಹೀಗೆ ಮಾಡುವಾಗ ಬೇರೆ ಕೆಲವು ಜಾತಿಗಳಿಗೆ ಗೌರವಾರ್ಹ ಉಗಮವನ್ನು ಹೇಳುತ್ತಾ, ಬ್ರಾಹ್ಮಣ ಜಾತಿಗೆ ಅತ್ಯಂತ ಹೊಲಸು ಮೂಲವನ್ನು ಹೇಳಿದೆ. ಈ ಪ್ರತಿಕ್ರಿಯೆ ಮನುವಿನ ಬಗೆಗೆ ತೆಗೆದುಕೊಂಡ ಪ್ರತೀಕಾರದಂತಿದೆ. ಬ್ರಾಹ್ಮಣ ಜಾತಿಯ ಬಗೆಗೆ ಅದೊಂದು ಕೆಟ್ಟ ಅಣಕದಂತಿದೆ. ಸಹಜವಾಗಿಯೇ ಪೇಶ್ವೆಗಳು ಅದನ್ನು ನಿರ್ಮೂಲನ ಮಾಡಲು ಆದೇಶ ಹೊರಡಿಸಿದರು. ಆದರೂ ಸಾಮಾಜಿಕ ನಾಶವನ್ನು ತಪ್ಪಿಸಿಕೊಂಡು ಕೆಲವು ಪ್ರತಿಗಳು ಉಳಿದಿವೆ.

ಪ್ರಶ್ನೆಯನ್ನು ಎತ್ತುವುದಕ್ಕಿಂತ ಮುಂಚೆ ನಾನು ಇನ್ನೊಂದು ಸಂಗತಿಯನ್ನು ಉಲ್ಲೇಖಿಸಬಯಸುತ್ತೇನೆ.

ಸಮಕಾಲೀನ ಹಿಂದೂಗಳು ಬಹುಶಃ ಮಾರ್ಕ್ಸ್‌ವಾದದ ಬಹು ದೊಡ್ಡ ವಿರೋಧಿಗಳು. ಅದರ ವರ್ಗ ಹೋರಾಟದ ಸಿದ್ಧಾಂತದಿಂದ ಅವರು ಭಯಗೊಂಡಿದ್ದಾರೆ. ಆದರೆ ಇಂಡಿಯಾ ದೇಶವು ವರ್ಗ ಹೋರಾಟ ಮಾತ್ರವಲ್ಲ, ವರ್ಗ ಸಮರಗಳ ತವರೂರು ಎಂಬುದನ್ನು ಅವರು ಮರೆತಿದ್ದಾರೆ.

ಕ್ಷತ್ರಿಯರು ಮತ್ತು ಬ್ರಾಹ್ಮಣರ ನಡುವೆ ತೀವ್ರವಾದ ವರ್ಗ ಸಮರ ನಡೆಯಿತು. ಹಿಂದೂ ಧರ್ಮದ ಪ್ರೌಢ ಸಾಹಿತ್ಯ ಪರಂಪರೆಯ ತುಂಬ ಇವೆರಡು ವರ್ಗಗಳ ನಡುವಣ ಸಮರಗಳ ಕಥೆಗಳೇ ತುಂಬಿ ತುಳುಕುತ್ತಿವೆ.

ಈ ಸಂಬಂಧದಲ್ಲಿ ಪ್ರಾಚೀನ ಉಲ್ಲೇಖವೆಂದರೆ ವೇಣನೆಂಬ ರಾಜನಿಗೂ ಬ್ರಾಹ್ಮಣರಿಗೂ ನಡೆದ ಸಂಘರ್ಷ. ಅತ್ರಿವಂಶದ ಅಂಗರಾಜನಿಗೂ ಯಮನ ಮಗಳಾದ ಸುನೀತೆಗೂ ಮಗನಾಗಿ ಹುಟ್ಟಿದವನೇ ವೇಣ. ಮೃತ್ಯುವಿನ ಮಗಳ ಮಗನಾದ ಇವನು ತಾಯಿಯ ತಂದೆಯಿಂದ ಪಡೆದ ಕಳಂಕವೆಂಬಂತೆ ತನ್ನ ಕರ್ತವ್ಯಗಳನ್ನೆಲ್ಲಾ ಹಿಂದೆ ಸರಿಸಿ, ಆಸೆಗಳ ಅಡಿಯಾಳಾಗಿ ಭೋಗಜೀವನವನ್ನು ನಡೆಸುತ್ತಿದ್ದ. ಅಧಾರ್ಮಿಕವಾದ ಒಂದು ವ್ಯವಸ್ಥೆಯನ್ನು ಈ ರಾಜನು ಜಾರಿಗೆ ತಂದಿದ್ದ. ವೇದವಿಧಿಗಳನ್ನು ಉಲ್ಲಂಘಿಸಿ, ನಿಯಮರಾಹಿತ್ಯವಾಗಿ ಬದುಕುತ್ತಿದ್ದ. ಆತನ ಆಳ್ವಿಕೆಯಲ್ಲಿ ಜನಗಳು ಪವಿತ್ರ ಗ್ರಂಥಗಳನ್ನು ಓದುತ್ತಿರಲಿಲ್ಲ. ದೇವರಿಗೆ ಕುಡಿಯಲು ಸೋಮದ ಆಹುತಿಗಳಿರಲಿಲ್ಲ. 'ನಾನೇ ಗುರಿ' ಎಂದೂ ಅವನು ಘೋಷಿಸಿದ. "ಆಹುತಿಯೂ ನಾನೇ, ಆಹುತಿಯ ಯಜಮಾನನೂ ನಾನೇ; ಆದುದರಿಂದ ನನಗೇ ಬಲಿಸಮರ್ಪಣೆಯಾಗಬೇಕು; ಸೋಮಪಾನದಿಂದ ನನ್ನನ್ನೇ ತೃಪ್ತಿಪಡಿಸಬೇಕು" ಎಂದು ಅವನು ಘೋಷಿಸಿದ. ಆತನಿಗೆ ಸೇರಬೇಕಾದುದಲ್ಲದಕ್ಕೆ ಕೈಚಾಚುತ್ತಿರುವ ಹಾಗೂ ಕರ್ತವ್ಯ ಮತ್ತು ನಿಯಮಗಳನ್ನು ಉಲ್ಲಂಘಿಸುತ್ತಿರುವ, ಈ ಅಹಂಕಾರಿಯನ್ನು ಉದ್ದೇಶಿಸಿ ಋಷಿಗಳು ಮರೀಚಿಯ ನೇತೃತ್ವದಲ್ಲಿ ಹೀಗೆ ಹೇಳಿದರು: "ಅನೇಕ ವರ್ಷಗಳ ಕಾಲ ನಡೆಯಬಹುದಾದ ಒಂದು ಆರಾಧನೆಗೆ ನಮ್ಮನ್ನೆಲ್ಲಾ ನಾವು ಅರ್ಪಿಸಿಕೊಳ್ಳಲಿದ್ದೇವೆ; ಓ ವೇಣ, ದುಷ್ಟನಾಗಿ ನಡೆದುಕೊಳ್ಳಬೇಡ. ಕರ್ತವ್ಯಕ್ಕೆ ಸಂಬಂಧಿಸಿದ ಚಿರ ನಿಯಮವಿದಲ್ಲ. ಎಲ್ಲ ಕೃತಿಯಿಂದಲೂ ನೀನು ಅತ್ರಿವಂಶಕ್ಕೆ ಸೇರಿದ ಪ್ರಜಾಪತಿ. ನಿನ್ನ ಪ್ರಜೆಗಳನ್ನು ರಕ್ಷಿಸಲು ನೀನು ತೊಡಗಬೇಕು." ಮೂರ್ಖ ವೇಣನಾದರೋ ಯಾವುದು ಸರಿ, ಯಾವುದು ತಪ್ಪು ಎಂಬುದು ಗೊತ್ತಿಲ್ಲದವನಾಗಿ, ಅವನನ್ನು ಉದ್ದೇಶಿಸಿ ಮಾತನಾಡಿದ ಋಷಿಗಳಿಗೆ

ನಗೆಚಾಟಿಕೆಯ ಉತ್ತರ ನೀಡಿದ. "ಕರ್ತವ್ಯಗಳನ್ನು ವಿಧಿಸುವವನು ನಾನಲ್ಲದೆ ಮತ್ತಾರು? ಅಥವಾ ನಾನು ಯಾರಿಗೆ ವಿಧೇಯನಾಗಿರಬೇಕು? ಪವಿತ್ರ ಜ್ಞಾನದಲ್ಲಿ ನನಗೆ ಭೂಮಿಯ ಮೇಲೆ ಸಮಾನರು ಯಾರಿದ್ದಾರೆ? ಶಕ್ತಿಯಲ್ಲಿ, ಸತ್ವದಲ್ಲಿ, ಒಳ್ಳೆಯ ಕಳಕಳಿಯಲ್ಲಿ ಯಾರು ನನ್ನನ್ನು ಸರಿಗಟ್ಟಲು ಸಾಧ್ಯ? ನಾನು ಎಲ್ಲ ಕರ್ತವ್ಯಗಳ ಮತ್ತು ಇರುವಿಕೆಯ ಮೂಲವೆಂಬುದು ಹುಚ್ಚರೂ, ಅವಿವೇಕಿಗಳೂ ಆದ ನಿಮಗೆ ಗೊತ್ತಿಲ್ಲ. ಇದನ್ನು ನಂಬಲು ಹಿಂಜರಿಯಬೇಡಿ. ನಾನು ಮನಸ್ಸು ಮಾಡಿದರೆ ಭೂಮಂಡಲವನ್ನೇ ಸುಟ್ಟುರುಹಬಲ್ಲೆ. ಪ್ರವಾಹವನ್ನು ಹರಿಸಿ ಮುಳುಗಿಸಬಲ್ಲೆ, ಸ್ವರ್ಗ ಭೂಮಿಗಳೆರಡನ್ನೂ ಮುಚ್ಚಿ ಮುಳುಗಿಸಬಲ್ಲೆ." ಅವನ ಅಹಂಕಾರ ಮತ್ತು ಹುಚ್ಚಿನಿಂದಾಗಿ ವೇಣನನ್ನು ನಿಭಾಯಿಸುವುದು ಸಾಧ್ಯವಿಲ್ಲವೆಂದು ಗೊತ್ತಾದಾಗ ಸಮರ್ಥರಾದ ಋಷಿಗಳಿಗೆ ಕೋಪ ಬಂದು ವೇಣನನ್ನು ಬಂಧಿಸಿದರು. ಬಿಡಿಸಿಕೊಳ್ಳಲು ಹೆಣಗುತ್ತಿದ್ದ ಶಕ್ತಿವಂತ ರಾಜನ ಎಡತೊಡೆಗೆ ಗಾಯ ಮಾಡಿದರು. ಗಾಯಗೊಂಡ ಈ ತೊಡೆಯಿಂದ ಕುಳ್ಳನೂ ಕರಿಯನೂ ಆದ ಒಬ್ಬ ಮನುಷ್ಯ ಹುಟ್ಟಿ ಬಂದನು. ಹೆದರಿ ಕೈಜೋಡಿಸಿ ನಿಂತನು. ಅವನು ಹೆದರಿದ್ದಾನೆಂಬುದನ್ನು ಕಂಡ ಅತ್ರಿಯು ಅವನಿಗೆ 'ಆಸೀನನಾಗು' (ನಿಷಾಧ) ಎಂದನು. ಅವನೇ ನಿಷಾಧ ಜನಾಂಗದ ಮೂಲ ಪುರುಷನಾದ. ಈತನೇ ದೀವರರನ್ನು (ಮೀನುಗಾರರು) ಹುಟ್ಟಿಸಿದವನು. ಇವರೆಲ್ಲಾ ವೇಣನ ಅವ್ಯವಹಾರದಿಂದ ಹುಟ್ಟಿದವರು. ಅವನಿಂದ ಹುಟ್ಟಿದ ಇವರಿಬ್ಬರಿಂದ ವಿಂಧ್ಯಾಚಲದ ತುಕ್ಕರು, ತುಂಬುರರು ಹುಟ್ಟಿದರು. ಅವರೆಲ್ಲ ನ್ಯಾಯಬಾಹಿರ ಪ್ರವೃತ್ತಿಯುಳ್ಳವರು. ಪ್ರಬಲರಾದ ಋಷಿಗಳು ಇದರಿಂದ ಕೆರಳಿ ಸಿಟ್ಟಿಗೆದ್ದು, ಮತ್ತೊಮ್ಮೆ ವೇಣನ ಬಲಗೈ ಘಾಸಿಗೊಳಿಸಿದರು. ಅರಳಿ ಮರವನ್ನು ಉಜ್ಜುವಂತೆ ಉಜ್ಜಿದರು. ಇದಕ್ಕೆ ಪ್ರತಿಕ್ರಿಯೆಯಾಗಿ ಅಗ್ನಿಯಂತೆ ಪ್ರಜ್ವಲಿಸುತ್ತ ವೇಣನ ದೇಹದಿಂದ ಪೃಥಾ ಹುಟ್ಟಿದನು. ವೇಣನ ಮಗನು (ಪೃಥಾ) ಕೈಜೋಡಿಸಿ ಮಹಾ ಋಷಿಗಳನ್ನುದ್ದೇಶಿಸಿ ಹೀಗೆ ಹೇಳಿದನು: "ಕರ್ತವ್ಯ ನಿಯಮಗಳನ್ನು ಸೂಕ್ಷ್ಮವಾಗಿ ಗ್ರಹಿಸುವ ಶಕ್ತಿ ನನಗೆ ನಿಸರ್ಗ ಸಹಜವಾಗಿ ದತ್ತವಾಗಿದೆ; ಅದನ್ನು ನಾನು ಹೇಗೆ ಬಳಸಲಿ, ದಯಮಾಡಿ ತಿಳಿಸಿ. ತಾವು ಘೋಷಿಸಬಹುದಾದ ಯಾವುದನ್ನಾದರೂ ನನ್ನ ಕರ್ತವ್ಯ ಮತ್ತು ಗುರಿ ಎಂದು ತಿಳಿದು ನಾನು ಮಾಡುವುದರ ಬಗೆಗೆ ನಿಮಗೆ ಸಂದೇಹ ಬೇಡ." ಆಗ ದೇವಾನುದೇವತೆಗಳು ಮತ್ತು ಮಹಾ ಋಷಿಗಳು ಅವನಿಗೆ ತಿಳಿಸಿದರು: "ನಿನಗೆ ವಹಿಸಿರುವ ಯಾವುದೇ ಕರ್ತವ್ಯವನ್ನು ಹಿಂಜರಿಕೆಯಿಲ್ಲದೆ, ಅದು ನಿನಗೆ ಸಹ್ಯವೇ ಅಸ್ಯಹವೇ ಎಂಬುದನ್ನು ಲೆಕ್ಕಿಸದೆ ಮಾಡು. ಎಲ್ಲ ಪ್ರಾಣಿಗಳನ್ನು ಸಮಾನ ದೃಷ್ಟಿಯಿಂದ ನೋಡು. ಕಾಮ, ಕ್ರೋಧ, ಅಹಂಕಾರಗಳಿಂದ ದೂರವಿರು. ಕರ್ತವ್ಯದ ಬಗೆಗೆ ಸದಾ ಗಮನವಿರಲಿ. ನಿನ್ನ ಮಾತು, ಕ್ರಿಯೆ, ಆಲೋಚನೆಗಳಲ್ಲಿ ಸದಾ ಎಚ್ಚರವಾಗಿದ್ದು ಭೂಮಿಯ ಮೇಲೆ ವಾಸಿಸುವ ಬ್ರಹ್ಮ(ಬ್ರಾಹ್ಮಣ)ನನ್ನು ರಕ್ಷಿಸುವುದನ್ನು ಮತ್ತೆ ಮತ್ತೆ ನೆನಪಿನಲ್ಲಿಡು. ಬ್ರಾಹ್ಮಣರಿಗೆ ಶಿಕ್ಷೆಯಿಂದ ವಿನಾಯಿತಿ ಕೊಡುವುದಾಗಿಯೂ ಸಮಾಜದಲ್ಲಿ ಜಾತಿಭ್ರಷ್ಟತೆ ಉಂಟಾಗದಂತೆ ರಕ್ಷಿಸುವುದಾಗಿಯೂ ವಚನ ಕೊಡು." ವೇಣನ ಮಗನು ಋಷಿಗಳ ನಾಯಕತ್ವದಲ್ಲಿ ಒಂದಾಗಿದ್ದ ದೇವರುಗಳಿಗೆ ಹೀಗೆ ಉತ್ತರ ಕೊಟ್ಟನು: "ಮಾನವ ಶ್ರೇಷ್ಠರೂ ಹಿರಿಯರೂ ಆದ ಬ್ರಾಹ್ಮಣರನ್ನು ನಾನು ಗೌರವಿಸುತ್ತೇನೆ." 'ಅದು ಹೀಗಾಗಲಿ' ಎಂದು ವೇದಗಳು ಸಮ್ಮತಿ ಸೂಚಿಸಿದವು. ದೈವಜ್ಞಾನದ ನಿಧಿಯಾದ ಶುಕ್ರಾಚಾರ್ಯನು ಅವನ ಪುರೋಹಿತನಾದನು. ವಾಲಖಿಲ್ಯರು ಮತ್ತು ಸಾರಸ್ವತರು ಅವನ ಮಂತ್ರಿಗಳಾದರು. ಮಹಾ ಋಷಿಯೂ ಗೌರವಾರ್ಹನೂ ಆದ ಗಾರ್ಗನೂ ಅವನ ರಾಜಜ್ಯೋತಿಷಿಯಾದನು.

ಉಲ್ಲೇಖಿತವಾಗಿರುವ ಎರಡನೆಯ ಘರ್ಷಣೆ–ಬ್ರಾಹ್ಮಣರು ಮತ್ತು ಕ್ಷತ್ರಿಯ ರಾಜ ಪುರೂರವಸ್‌ನ ನಡುವೆ ಆಯಿತು. 'ಮಹಾಭಾರತ'ದ ಆದಿಪರ್ವದಲ್ಲಿ ಸಂಕ್ಷೇಪವಾಗಿ ಅದನ್ನು ಉಲ್ಲೇಖಿಸಲಾಗಿದೆ. "ಇಳಾದೇವಿಯಲ್ಲಿ ಜನಿಸಿದ ಪುರೂರವಸ್‌ನು ಸಮುದ್ರದಿಂದ ಸುತ್ತುವರಿಯಲಾದ ಹದಿಮೂರು ದ್ವೀಪಗಳನ್ನು

ಆಳುತ್ತಿದ್ದನು. ಅತಿಮಾನುಷರನೇಕರ ಬೆಂಬಲವಿದ್ದ ಆತನು ಸ್ವತಃ ಮಹಾ ಸತ್ವಯುತನಾಗಿದ್ದನು. ತನ್ನ ಶಕ್ತಿ ಸಾಮರ್ಥ್ಯಗಳಿಂದ ಬೀಗಿದ ಅವನು ಬ್ರಾಹ್ಮಣರೊಡನೆ ಘರ್ಷಣೆಗೆ ತೊಡಗಿದನು. ಅವರ ಪ್ರತಿರೋಧವನ್ನು ಲೆಕ್ಕಿಸದೆ ಅವರ ಆಭರಣಗಳನ್ನೆಲ್ಲಾ ದೋಚಿಕೊಂಡನು. ಬ್ರಹ್ಮಲೋಕದಿಂದ ಬಂದ ಸನತ್ಕುಮಾರನು ಅವನನ್ನು ಉದ್ದೇಶಿಸಿ ಬೈದು ಬುದ್ಧಿವಾದ ಹೇಳಿದನಾದರೂ ಅವನು ಅದಕ್ಕೆ ದಕ್ಕಲಿಲ್ಲ. ಸಿಟ್ಟಿಗೆದ್ದ ಋಷಿಗಳಿಂದ ಶಪಿತನಾದ ದುರಾಗ್ರಹಿಯಾದ ಈ ರಾಜನು ನಾಶವಾದನು. ತನ್ನ ಶಕ್ತಿ ಸಾಹಸಿಗಳಿಂದ ಮದಿಸಿ ವಿವೇಚನೆಯನ್ನು ಕಳೆದುಕೊಂಡು ಈ ಮಹಾನ್ ಸತ್ವವು (ವಿರಾಟ್) ಊರ್ವಶಿಯೊಡಗೂಡಿ ಪವಿತ್ರ ಯಜ್ಞವಿಧಿಗಾಗಿ ಗಂಧರ್ವಲೋಕದಿಂದ ಅಗ್ನಿಯನ್ನು ತಂದನು. ಅದನ್ನು ನ್ಯಾಯಬದ್ಧವಾಗಿ ಮೂರು ಭಾಗವಾಗಿ ಹಂಚಿದರು."

ನಹುಷ ರಾಜನಿಗೂ ಬ್ರಾಹ್ಮಣರಿಗೂ ನಡೆದ ಘರ್ಷಣೆ ಉಲ್ಲೇಖಿತವಾಗಿರುವ ಮೂರನೆಯ ಘರ್ಷಣೆ. 'ಮಹಾಭಾರತ'ದ ಉದ್ಯೋಗ ಪರ್ವದಲ್ಲಿ ಇದನ್ನು ವಿಸ್ತಾರವಾಗಿ ಕಥಿಸಲಾಗಿದೆ. ಅಲ್ಲಿ ಅದು ಉಲ್ಲೇಖಗೊಂಡಿದೆ.

"ವೃತ್ರಾಸುರನನ್ನು ಸಂಹರಿಸಿದ ಬಳಿಕ ಬ್ರಹ್ಮಹತ್ಯೆ ಮಾಡಿದ ಕಾರಣ (ವೃತ್ರಾಸುರನು ಬ್ರಾಹ್ಮಣನೆಂಬ ಪ್ರತೀತಿಯಿತ್ತು) ಭಯಗೊಂಡ ಇಂದ್ರನು ನೀರಿನಲ್ಲಿ ಮುಳುಗಿ ಬಚ್ಚಿಟ್ಟುಕೊಂಡನು. ದೇವರಾಜನು ಅದೃಶ್ಯನಾದ ಪರಿಣಾಮವಾಗಿ ದೇವಲೋಕದಲ್ಲಿ ಎಲ್ಲ ವ್ಯವಹಾರಗಳೂ – ದೈವಿಕ ಮತ್ತು ಸಾಮಾನ್ಯ – ದಿಕ್ಕಾಪಾಲಾದವು. ಋಷಿಗಳು ಮತ್ತು ದೇವತೆಗಳು ನಹುಷನನ್ನು ರಾಜನಾಗಿರಲು ಬೇಡಿಕೊಂಡರು. ಅಧಿಕಾರವಹಿಸಿಕೊಳ್ಳಬೇಕೆಂಬ ಬೇಡಿಕೆಯನ್ನು ಮೊದಲು ಮನ್ನಿಸದಿದ್ದರೂ ದೀರ್ಘಕಾಲದ ಒತ್ತಾಯಕ್ಕೆ ಮಣಿದು ಉನ್ನತಾಧಿಕಾರವನ್ನು ನಹುಷನು ಒಪ್ಪಿಕೊಂಡನು. ಅಧಿಕಾರ ಸ್ವೀಕರಿಸುವವರೆಗೆ ಆತ ಸನ್ಮಾರ್ಗದಲ್ಲಿ ಬಾಳಿ ಬದುಕಿದ್ದ. ಆದರೆ ಈಗ ಮನರಂಜನೆ ಮುಂತಾದ ಸುಖೋಪಭೋಗಗಳಿಗೆ ವಶನಾದನು. ಇನ್ನೂ ಮುಂದುವರಿದು ತನ್ನೆದುರಿಗಿದ್ದ ಇಂದ್ರಾಣಿಯನ್ನು ಸೇರಲು ತವಕಿಸಿದನು. ಇಂದ್ರಾಣಿಯು ದೇವರುಗಳ ರಕ್ಷಕರಾಗಿದ್ದ ಅಂಗೀರಸ ಮತ್ತು ಬೃಹಸ್ಪತಿಗಳ ಮೊರೆ ಹೊಕ್ಕಳು. ಇದನ್ನು ಕೇಳಿದ ನಹುಷ ಸಿಟ್ಟಿಗೆದ್ದನು. ದೇವರುಗಳು ಅವನನ್ನು ಸಮಾಧಾನಪಡಿಸಿ, ಪರಸ್ತ್ರೀಯರನ್ನು ಅಪೇಕ್ಷಿಸುವುದರಲ್ಲಿರುವ ಅನೈತಿಕತೆಯನ್ನು ಅವನ ಗಮನಕ್ಕೆ ತಂದರು. ಆದರೆ ಯಾವುದೇ ಬುದ್ಧಿಮಾತುಗಳನ್ನು ಲೆಕ್ಕಿಸದೆ ನಹುಷನು ತನ್ನ ಕಾಮುಕತೆಯಲ್ಲಿ ಇಂದ್ರನಿಗೆ ತಾನೇನೂ ಕಡಿಮೆಯಲ್ಲವೆಂದು ವಾದಿಸಿದನು. "ಪ್ರಸಿದ್ಧ ಅಹಲ್ಯೆಯು ಋಷಿಪತ್ನಿಯಾಗಿದ್ದರೂ ಇಂದ್ರನು ಅವಳನ್ನು ಕೆಡಿಸಿದ. ಅವಳ ಗಂಡನ ಜೀವಿತ ಕಾಲದಲ್ಲಿಯೇ ಈ ಹೀನ ಕೃತ್ಯ ನಡೆಯಿತು. ಆಗ ನೀವೇಕೆ ಅವನನ್ನು ತಡೆಯಲಿಲ್ಲ? ಅನೇಕ ಬರ್ಬರ ಕೃತ್ಯಗಳು, ದುಷ್ಟ ಕೆಲಸಗಳು, ಮೋಸ, ವಂಚನೆಗಳನ್ನು ಹಿಂದಿನ ಇಂದ್ರನು ಕೈಗೊಂಡ. ನೀವೇಕೆ ಅವನನ್ನು ತಡೆಯಲಿಲ್ಲ?" ನಹುಷನ ಒತ್ತಾಯಕ್ಕೆ ಮಣಿದ ದೇವತೆಗಳು ಬಳಿಕ ಇಂದ್ರಾಣಿಯನ್ನು ಕರೆತರಲು ಹೋದರು. ಬೃಹಸ್ಪತಿಯು ಅವಳನ್ನು ಬಿಟ್ಟುಕೊಡಲು ಒಪ್ಪಲಿಲ್ಲ. ಅವನ ಶಿಫಾರಸಿನಂತೆ ಇಂದ್ರಾಣಿಯು ನಹುಷನಿಂದ ಸ್ವಲ್ಪ ಸಮಯ ಬೇಡಿದಳು. ತನ್ನ ಗಂಡನಾದ ಇಂದ್ರನಿಗೇನಾಗಿದೆಯೆಂದು ತಿಳಿಯುವವರೆಗೆ ಸಮಯ ಪಡೆದಳು. ಮುಂದೆ ದೇವತೆಗಳು ಇಂದ್ರನ ಪರವಾಗಿ ವಿಷ್ಣುವಿನ ಮೊರೆಹೊಕ್ಕರು. ಇಂದ್ರನು ತನ್ನನ್ನು ಅರ್ಚಿಸಿ ಬಲಿಯಿಂದ ತೃಪ್ತಿಪಡಿಸುವುದಾದರೆ, ಅವನನ್ನು ಪಾಪಮುಕ್ತಗೊಳಿಸಿ

ಮತ್ತೆ ದೇವಲೋಕವನ್ನು ಪಡೆಯಲು ಸಹಾಯಮಾಡುವುದಾಗಿಯೂ, ನಹುಷನನ್ನು ನಾಸ ಮಾಡುವುದಾಗಿಯೂ ವಿಷ್ಣುವು ಭರವಸೆ ನೀಡಿದನು. ಇಂದ್ರ ಅದರಂತೆ ಯಜ್ಞಾಹುತಿಗಳಿಂದ ವಿಷ್ಣುವನ್ನು ಮೆಚ್ಚಿಸಿದನು. ಪರಿಣಾಮವಾಗಿ ಹೀಗೆ ಹೇಳಲಾಯಿತು: "ಬ್ರಾಹ್ಮಣ ಹತ್ಯೆಯ ಪಾಪವನ್ನು ಮರಗಳು, ನದಿಗಳು, ಪರ್ವತಗಳು, ಭೂಮಿ, ಹೆಂಗಸರು ಮತ್ತು ಪಂಚಭೂತಗಳ ನಡುವೆ ಹಂಚಿಬಿಟ್ಟಿರುವುದರಿಂದ ದೇವತೆಗಳ ರಾಜನಾದ ವಾಸವ (ಇಂದ್ರ)ನು ಪಾಪದಿಂದ ಮುಕ್ತನಾಗಿದ್ದಾನೆ ಮತ್ತು ಸ್ವತಂತ್ರನಾಗಿದ್ದಾನೆ." ಇದರಿಂದ ನಹುಷನಿಗೆ ಆಸನ ಕಂಪನವಾಯಿತು. ಆದರೆ ಬಹುಬೇಗ ಚೇತರಿಸಿಕೊಂಡ ಅವನು ಇಂದ್ರನ ಮೇಲೆ ಮತ್ತೊಮ್ಮೆ ದಾಳಿ ಮಾಡಿ ಓಡಿಸಿದನು. ಕಣ್ಮರೆಯಾದ ಇಂದ್ರನನ್ನು ಹುಡುಕಿಕೊಂಡು ಇಂದ್ರಾಣಿಯು ಹೊರಟುಹೋದಳು. ಅವಳಿಗೆ ಉಪಶೃತಿಯ (ರಾತ್ರಿಯ ದೇವತೆ ಮತ್ತು ರಹಸ್ಯಗಳನ್ನು ಭೇದಿಸುವವಳು) ನೆರವು ಸಿಕ್ಕಿತು. ಹಿಮಾಲಯದ ಉತ್ತರದಲ್ಲಿ ಸಮುದ್ರದ ಮಧ್ಯೆ ಇರುವ ದ್ವೀಪವೊಂದರಲ್ಲಿನ ಕೊಳದಲ್ಲಿ ಬೆಳೆಯುತ್ತಿರುವ ಕಮಲದ ದಂಟಿನಲ್ಲಿ ಸೂಕ್ಷ್ಮಶರೀರಿಯಾಗಿ ಅವಿತುಕೊಂಡಿರುವ ಇಂದ್ರನನ್ನು ಅವರು ಕಂಡರು. ನಹುಷನ ದುಷ್ಟ ಉದ್ದೇಶಗಳನ್ನು ಅವನಿಗೆ ಮನವರಿಕೆ ಮಾಡಿಕೊಟ್ಟ ಇಂದ್ರಾಣಿಯು ಅವನು ತನ್ನ ಶಕ್ತಿಸಾಮರ್ಥ್ಯದಿಂದ ತನ್ನನ್ನು ಕಾಪಾಡಬೇಕೆಂದು ಮತ್ತೆ ಕಳೆದುಹೋದ ಸಾಮ್ರಾಜ್ಯವನ್ನು ಮರಳಿ ಸಂಪಾದಿಸಬೇಕೆಂದು ಬೇಡಿಕೊಂಡಳು. ನಹುಷನು ತುಂಬಾ ಬಲಶಾಲಿಯಾಗಿರುವುದರಿಂದ ಕೂಡಲೆ ಅದು ಸಾಧ್ಯವಾಗುವುದಿಲ್ಲವೆಂದು ಇಂದ್ರನು ಹೇಳಿದನು. ಆದರೆ ಒಂದು ಉಪಾಯದ ಮೂಲಕ ಆಕ್ರಮಣಕಾರನನ್ನು ಪದಚ್ಯುತಿಗೊಳಿಸಬಹುದೆಂದು ಹೆಂಡತಿಗೆ ಹೇಳಿದನು. ಆಕೆ ನಹುಷನನ್ನು ನಂಬಿಸಿ ಹೇಳಬೇಕು: "ಋಷಿಗಳು ಹೊತ್ತ ಪಲ್ಲಕ್ಕಿಯ ಮೇಲೆ ಕುಳಿತು ಅವಳಲ್ಲಿಗೆ ಬರುವುದಾದರೆ ತಾನು ವಶವರ್ತಿಯಾಗುವೆನೆಂದು." ಅವಳ ಈ ಹೇಳಿಕೆಯು ದೇವದೂತರ ಮೂಲಕ ನಹುಷನಿಗೆ ತಲುಪಿ ಅವನು ಸಂತೋಷದಿಂದ ಆಕೆಯನ್ನು ಬರಮಾಡಿಕೊಂಡನು. ಬಳಿಕ ಆಕೆಯು ತನ್ನ ಆಸೆಯನ್ನೂ ಅವನ ಮುಂದಿಟ್ಟಳು. "ದೇವತೆಗಳ ರಾಜನಾದ ನಿನಗೆ ಇಲ್ಲಿಯವರೆಗೆ ಯಾರೂ – ವಿಷ್ಣು, ರುದ್ರ ಅಥವಾ ಅಸುರ ರಾಕ್ಷಸರಾರೂ–ಹೊಂದಿರದಂತಹ ರಥವನ್ನು ನಾನು ಬಯಸುತ್ತೇನೆ. ಎಲ್ಲ ಮಹಾಋಷಿಗಳೂ ಒಟ್ಟಾಗಿ ಆ ರಥವನ್ನು ಎಳೆದು ತಂದರೆ ನನಗೆ ಸಂತೋಷವಾಗುತ್ತದೆ." ನಹುಷನ ಗರ್ವಕ್ಕೆ ಈ ಬೇಡಿಕೆ ತುಂಬಾ ಹರ್ಷವುಂಟುಮಾಡಿತು. ಸ್ವಪ್ರಶಂಸೆ ಮಾಡಿಕೊಳ್ಳುತ್ತಾ ಅವನು ಉತ್ತರಿಸಿದ, "ಯಾವನು ಋಷಿಗಳಿಂದ ರಥವನ್ನು ಎಳೆಸಿಕೊಂಡು ಸವಾರಿ ಮಾಡಬಲ್ಲನೋ ಅವನ ಪೌರುಷಕ್ಕೆ ಎಣೆಯಿಲ್ಲ. ಭೂತ, ಭವಿಷ್ಯತ್, ವರ್ತಮಾನಗಳ ಮಹಾಶಕ್ತಿ ಆರಾಧಕ ನಾನು. ನನಗೆ ಕೋಪ ಬಂದರೆ ಜಗತ್ತು ಉಳಿಯುವುದಿಲ್ಲ. ಎಲ್ಲವೂ ನನ್ನನ್ನು ಅವಲಂಬಿಸಿದೆ.... ಆದುದರಿಂದ ಹೇ ದೇವಿ, ಯಾವ ಸಂದೇಹವೂ ಬೇಡ. ನಿನ್ನ ಬಯಕೆಯನ್ನು ನಾನು ಈಡೇರಿಸುತ್ತೇನೆ. ಸಪ್ತರ್ಷಿಗಳೂ ಸೇರಿದಂತೆ ಎಲ್ಲ ಬ್ರಹ್ಮಋಷಿಗಳೂ ನನ್ನನ್ನು ಹೊತ್ತು ತರುತ್ತಾರೆ. ನನ್ನ ವೈಭವದ ತೇಜಸ್ಸಿನ ದೇವಿಯೇ, ರಾಣಿಯೇ, ಅಗೋ ನೋಡು.....!" ಹೀಗೆ ಕಥೆ ಮುಂದುವರಿಯುತ್ತದೆ. ಅಧಾರ್ಮಿಕನೂ ಕ್ರೂರಿಯೂ ಮೋಸ ವಂಚನೆಗಳಿಂದ ಮದಿಸಿದವನೂ ಚಂಚಲಚಿತ್ತನೂ ಆದ ಈ ದುಷ್ಟನು ಅದರಂತೆ ಋಷಿಗಳನ್ನು ತನ್ನ ರಥಕ್ಕೆ ಹೂಡಿದನು. ಅದನ್ನು ಎಳೆಯುವಂತೆ ಒತ್ತಾಯಿಸಿದ

ಅವನ ಅಪ್ಪಣೆಯನ್ನು ಅವರೂ ಒಪ್ಪಿದರು. ಇಂದ್ರಾಣಿಯು ಬೃಹಸ್ಪತಿಯ ಸಲಹೆ ಕೇಳಿದಳು "ಅಹಂಕಾರಿಯಾದ ನಹುಷನ ಮೇಲೆ ಪ್ರತೀಕಾರವು ಎರಗುವುದೆಂದು ಅವನು ಅವಳಿಗೆ ಭರವಸೆ ನೀಡಿದನು. ಅಲ್ಲದೆ ತಾನೂ ಒಂದು ಯಜ್ಞ ಮಾಡುವುದಾಗಿ ಹೇಳಿದನು. ಅದರ ಗುರಿ ನಹುಷನ ವಿನಾಶ ಮತ್ತು ಇಂದ್ರನು ಅವಿತಿಟ್ಟುಕೊಂಡಿರುವ ಸ್ಥಳವನ್ನು ಪತ್ತೆ ಮಾಡುವುದು. ಇಂದ್ರನನ್ನು ಪತ್ತೆ ಹಚ್ಚಿ ಬೃಹಸ್ಪತಿಯಲ್ಲಿಗೆ ಕರೆತರಲು ಅಗ್ನಿಯನ್ನು ಕಳಿಸಿದರು. ಇಂದ್ರನು ಬಂದ ಮೇಲೆ ಇಲ್ಲಿಯವರೆಗೆ ಆಗಿರುವುದನ್ನೆಲ್ಲಾ ಸವಿಸ್ತಾರವಾಗಿ ತಿಳಿಸಿದರು. ಆಗ ಇಂದ್ರನು ಕುಬೇರ, ಯಮ, ಸೋಮ ಮತ್ತು ವರುಣರೊಂದಿಗೆ ಕೂಡಿಕೊಂಡು ನಹುಷನನ್ನು ಸೋಲಿಸಲು ಉಪಾಯವನ್ನು ಸಮಾಲೋಚಿಸುತ್ತಿದ್ದಾಗ ಅಗಸ್ತ್ಯ ಋಷಿಯು ಅಲ್ಲಿಗೆ ಬಂದನು. "ನಿನ್ನ ವೈರಿಯು ನಾಶವಾದುದಕ್ಕೆ ಶುಭಾಶಯಗಳು" ಎಂದು ಹೇಳಿದನು ಮತ್ತು ಅದು ಹೇಗಾಯಿತೆಂಬುದನ್ನು ವಿವರಿಸಿದನು. "ಪಾಪಿ ನಹುಷನ ರಥವನ್ನು ಎಳೆದು ಸುಸ್ತಾಗಿದ್ದ ಮಹಾ ಋಷಿಗಳು ಮತ್ತು ಬ್ರಹ್ಮರ್ಷಿಗಳು ದೇವರಾಜ ನಹುಷನನ್ನು ಅವರ ಒಂದು ಕಷ್ಟವನ್ನು ಬಗೆಹರಿಸಲು ಬೇಡಿದರು. 'ಮಹಾ ಪರಾಕ್ರಮಿಯಾದ ನಹುಷನೇ, ರಾಜನು ಯಜ್ಞಾಹುತಿ ಕೊಡುವಾಗ ಪಠಿಸುವ ಬ್ರಾಹ್ಮಣ ಸೂಕ್ತಗಳ ಸತ್ವವನ್ನು ನೀನು ನಂಬುತ್ತೀಯಾ?' ಎಂದು ಕೇಳಿದರು. ಅಂಧಕಾರದಲ್ಲಿ ಮುಳುಗಿದ್ದ ನಹುಷನು 'ಇಲ್ಲ'ವೆಂದು ಹೇಳಿದನು. ಇದಕ್ಕೆ ಋಷಿಗಳು ಪ್ರತಿಯಾಗಿ 'ದುಷ್ಟ ಕಾರ್ಯದಲ್ಲಿ ಮಹಾ ಋಷಿಗಳಿಂದ ಪಠಿಸಲ್ಪಟ್ಟ ಈ ಸೂಕ್ತಗಳ ಅಧಿಕಾರವನ್ನು ನಾವು ಒಪ್ಪುತ್ತೇವೆ' ಎಂದರು. ಮುಂದುವರಿದು ಅಗಸ್ತ್ಯನು ಹೇಳಿದನು: "ಋಷಿಗಳೊಡನೆ ವಾಗ್ವಾದ ಮಾಡುತ್ತಿದ್ದ ನಹುಷನು ದುಷ್ಟತನಕ್ಕೆ ಸಹಜವಾಗಿ ಕಾಲಿನಿಂದ ನನ್ನ ತಲೆಯನ್ನು ಮುಟ್ಟಿದನು. ಇದರ ಪರಿಣಾಮವಾಗಿ ರಾಜನ ವೈಭವವು ಮಣ್ಣು ಮುಕ್ಕಿತು; ಸುಯೋಗವು ಅವನನ್ನು ಬಿಟ್ಟು ಹೋಯಿತು; ಕೂಡಲೆ ಅವನು ಗಾಬರಿಯಾಗಿ ತೊಳಲುತ್ತಾ ಹೆದರಿಕೆಯಿಂದ ಖಿನ್ನನಾದನು. ಆಗ ನಾನು ಹೇಳಿದೆ: "ಎಲವೋ ಮೂಢ! ಪ್ರಾಚೀನ ಋಷಿಗಳಿಂದ ರಚಿಸಲ್ಪಟ್ಟು ಸದಾಕಾಲವು ಪೂಜೆಗೊಳಗಾಗುತ್ತಿದ್ದ ಪವಿತ್ರ ಗ್ರಂಥಗಳನ್ನು ನೀನು ಹಳಿಯುತ್ತಿರುವೆ; ಮತ್ತು ನಿನ್ನ ಕಾಲಿನಿಂದ ನನ್ನ ತಲೆಯನ್ನು ಮುಟ್ಟಿರುವೆ; ಬ್ರಹ್ಮ-ಋಷಿಗಳಂತಹವರನ್ನು ನಿನ್ನ ರಥಕ್ಕೆ ಹೂಡುವ ಮೂಲಕ ಸಾಕ್ಷಾತ್ ಬ್ರಹ್ಮನನ್ನೇ ಅವಮಾನಿಸಿರುವೆ; ಆದುದರಿಂದ ನಿನ್ನ ತೇಜಸ್ಸೆಲ್ಲಾ ನಾಶವಾಗಲಿ, ಪಾಪಿಯಾದ ನೀನು ಸ್ವರ್ಗಚ್ಯುತನಾಗಿ ಭೂಮಿಗೆ ಇಳಿಯುತ್ತೀಯೆ, ಒಂದು ದೊಡ್ಡ ಸರ್ಪವಾಗಿ ಸಾವಿರ ವರ್ಷಗಳ ಕಾಲ ತೆವಳುತ್ತಾ ಇದ್ದು, ಅವಧಿ ಮುಗಿದ ಮೇಲೆ ಮತ್ತೆ ಸ್ವರ್ಗಕ್ಕೆ ಬರುವೆ." ಹೀಗೆ ಆ ದುಷ್ಟನು ದೇವಲೋಕದ ರಾಜವೈಭವದಿಂದ ಚ್ಯುತನಾಗಿ ಅಧೋಗತಿ ಹೊಂದಿದನು."

ಮುಂದೆ ನಿಮಿ ಎಂಬ ರಾಜನಿಗೂ ಬ್ರಾಹ್ಮಣರಿಗೂ ನಡೆದ ಘರ್ಷಣೆಯ ಉಲ್ಲೇಖ 'ವಿಷ್ಣುಪುರಾಣ'ದಲ್ಲಿದೆ:

"ಒಂದು ಸಾವಿರ ವರ್ಷಗಳ ಕಾಲ ನಡೆಯಲಿರುವ ಯಜ್ಞವೊಂದರ ಪುರೋಹಿತನಾಗಿರಲು ಬ್ರಹ್ಮರ್ಷಿ ವಸಿಷ್ಠನನ್ನು ನಿಮಿ ಬೇಡಿಕೊಂಡನು. ಈಗಾಗಲೇ ಐದುನೂರು ವರ್ಷಗಳಿಗೆ ಇಂದ್ರನಿಗೆ ಮಾತುಕೊಟ್ಟಿರುವುದಾಗಿ ಹೇಳಿದ ವಸಿಷ್ಠನು, ಈ ಅವಧಿ ಕಳೆದ ಬಳಿಕ ಹಿಂದಿರುಗುವುದಾಗಿ ಆಶ್ವಾಸನೆ ಕೊಟ್ಟನು. ರಾಜನು ಉತ್ತರಿಸಲಿಲ್ಲ. ವಸಿಷ್ಠನಾದರೋ ರಾಜನು ತನ್ನ ಮಾತಿಗೆ ಒಪ್ಪಿರುವನೆಂದು ಭಾವಿಸಿ ಹೊರಟುಹೋದನು. ಐದುನೂರು ವರ್ಷಗಳ ಬಳಿಕ ಹಿಂದಿರುವಾಗ ವಸಿಷ್ಠನಿಗೆ ಆಶ್ಚರ್ಯವಾಯಿತು. ನಿಮಿಯು

ಬ್ರಹ್ಮರ್ಷಿ ಗೌತಮನ ನೇತೃತ್ವದಲ್ಲಿ ಹಲವು ಋಷಿಗಳ ಸಹಿತ ಯಜ್ಞನಿರತನಾಗಿರುವುದು ಗೊತ್ತಾಯಿತು. ತನಗೆ ತಿಳಿಸದೆ ಈ ಕೆಲಸ ಮಾಡಿದ್ದಕ್ಕೆ ಕೋಪಗೊಂಡ ಋಷಿಯು ನಿದ್ರಿಸುತ್ತಿದ್ದ ರಾಜನನ್ನು, 'ಮನುಷ್ಯ ದೇಹ ಕಳೆದು ಹೋಗಲಿ' ಎಂದು ಶಪಿಸಿದನು. ನಿಮಿಗೆ ಎಚ್ಚರವಾದಾಗ ವಿಚಾರ ತಿಳಿದು ಮುನ್ನೆಚ್ಚರಿಕೆ ಕೊಡದೆ ತನ್ನನ್ನು ಶಪಿಸಿದುದಕ್ಕೆ ಪ್ರತಿಯಾಗಿ ಅದೇ ಶಾಪವನ್ನು ವಸಿಷ್ಠನಿಗೂ ಕೊಟ್ಟು ಸತ್ತುಹೋದನು. ಈ ಶಾಪದ ಪರಿಣಾಮವಾಗಿ ಚೈತನ್ಯವುಡುಗಿದ ವಸಿಷ್ಠನಿಗೆ ಹೇಗೋ ಮತ್ತೊಂದು ದೇಹವು ದೊರಕುವಂತೆ ಋಷಿಗಳು ವ್ಯವಸ್ಥೆ ಮಾಡಿದರು. ನಿಮಿಯ ದೇಹವನ್ನು ಸುರಕ್ಷಿತವಾಗಿ ಇಡಲಾಯಿತು. ಯಾಗದ ಕೊನೆಯಲ್ಲಿ ಋಷಿಗಳ ಒತ್ತಾಯದಂತೆ ದೇವತೆಗಳು ಅವನಿಗೆ ದೇಹವನ್ನು ಮತ್ತೆ ಕರುಣಿಸಲು ಸಿದ್ಧವಾಗಿದ್ದರು. ಆದರೆ ಅವನು ಒಪ್ಪಲಿಲ್ಲ. ದೇವತೆಗಳು ಅವನ ಅಪೇಕ್ಷೆಯಂತೆ ಎಲ್ಲ ಜೀವಿಗಳ ಕಣ್ಣಿನಲ್ಲಿ ಅವನನ್ನು ಇರಿಸಿದರು. ಅದರ ಪರಿಣಾಮವಾಗಿ ರೆಪ್ಪೆ ತೆರೆದು ಮುಚ್ಚಿಕೊಳ್ಳುತ್ತಿರುತ್ತದೆ." (ನಿಮಿಷವೆಂದರೆ 'ಕಣ್ಣಿನ ಹೊಳಪು')

ಬ್ರಾಹ್ಮಣರಿಗೂ ಸುಮುಖನೆಂಬ ಒಬ್ಬ ರಾಜನಿಗೂ ನಡೆದ ಘರ್ಷಣೆಯನ್ನು ಕುರಿತು ಮನು ಹೇಳುತ್ತಾನೆ. ಆದರೆ ವಿವರಗಳು ತಿಳಿದಿಲ್ಲ. ಬ್ರಾಹ್ಮಣರು ಮತ್ತು ಕ್ಷತ್ರಿಯ ರಾಜರ ನಡುವೆ ಆದ ಘರ್ಷಣೆಗಳ ನಿದರ್ಶನಗಳಿವು. ಬ್ರಾಹ್ಮಣರು ಮತ್ತು ಕ್ಷತ್ರಿಯ ವರ್ಗಗಳ ನಡುವೆಯೂ ಘರ್ಷಣೆಗಳಾಗಲಿಲ್ಲವೆಂದೇನೂ ಇಲ್ಲ. ರಾಜರೇ ಅಲ್ಲದೆ ಈ ಎರಡೂ ವರ್ಗಗಳ ನಡುವೆಯೂ ಘರ್ಷಣೆಗಳಾಗಿವೆ. ಈ ಸಂಗತಿಗಳಿಗೆ ಐತಿಹಾಸಿಕ ಮಹತ್ವವೂ ಉಂಟೆಂಬುದರಲ್ಲಿ ಸಂದೇಹವಿಲ್ಲ. ಮೂರು ಘಟನೆಗಳನ್ನು ಮಾತ್ರ ನಿದರ್ಶನಪೂರ್ವಕವಾಗಿ ಹೇಳಬಹುದು.

ಮೊದಲ ಸ್ಪರ್ಧೆ ಇಬ್ಬರು ವ್ಯಕ್ತಿಗಳಿಗೆ ಸಂಬಂಧಿಸಿದ್ದು; ಕ್ಷತ್ರಿಯ ವಿಶ್ವಾಮಿತ್ರ ಮತ್ತು ಬ್ರಾಹ್ಮಣ ವಸಿಷ್ಠರಿಗೆ ಸಂಬಂಧಿಸಿದ್ದು ಕ್ಷತ್ರಿಯನು ಬ್ರಾಹ್ಮಣತ್ವವನ್ನು ಪಡೆಯಬಹುದೇ? ಎಂಬುದೇ ಇವರಿಬ್ಬರ ನಡುವಿನ ವಾದ.

ರಾಮಾಯಣದಲ್ಲಿ ಬರುವ ಈ ಕಥೆ ಹೀಗಿದೆ:

"ಬಹು ಹಿಂದೆ ಪ್ರಜಾಪತಿಯ ಮಗ ಕುಶನೆಂಬ ಒಬ್ಬ ರಾಜನಿದ್ದ. ಅವನ ಮಗ ಕುಶನಾಭ. ಅವನ ಮಗ ಗಾಧಿಯು ವಿಶ್ವಾಮಿತ್ರನ ತಂದೆ. ಅವನು ಭೂಮಂಡಲವನ್ನು ಹಲವು ಸಾವಿರ ವರ್ಷಗಳ ಕಾಲ ಆಳಿದ. ಒಮ್ಮೆ ಭೂಮಂಡಲವನ್ನು ಸುತ್ತುತ್ತಾ ಅವನು ವಸಿಷ್ಠನ ಆಶ್ರಮದ ಹತ್ತಿರ ಬಂದ. ಅನೇಕಾನೇಕ ಋಷಿಪುಂಗವರು, ಭಕ್ತರಿಂದ ತುಂಬಿದ್ದ ಆಶ್ರಮದ ಪರಿಸರವು ಮಂಗಳಕರವಾಗಿತ್ತು. ಅವರ ಆದರೋಪಚಾರಗಳನ್ನು ಹಿಂಜರಿಯುತ್ತಲೇ ವಿಶ್ವಾಮಿತ್ರನು ಒಪ್ಪಿಕೊಂಡ. ಆದರೆ ಅವನು ದುರಾಸೆಗೆ ಬಲಿಯಾದ. ಅವನ ಪರಿವಾರದವರಿಗೆಲ್ಲ ತೃಪ್ತಿಯಾಗುವಂತೆ ಭಕ್ಷ್ಯ ಭೋಜ್ಯಗಳನ್ನು ನೀಡಿದ ಹಸುವಿನ ಮೇಲೆ ಅವನ ಮನಸ್ಸಾಯಿತು. ನೂರು ಸಾಮಾನ್ಯ ಹಸುಗಳಿಗೆ ಪ್ರತಿಯಾಗಿ ವಸಿಷ್ಠರು ಈ ಹಸುವನ್ನು ಕೊಡಬೇಕೆಂದು ಕೇಳಿದ: "ಆಕೆ ಒಂದು ಅನರ್ಘ್ಯ ರತ್ನ. ಬೆಲೆ ಬಾಳುವ ಒಡವೆಗಳೆಲ್ಲ ರಾಜನ ಆಸ್ತಿಯಾದುದರಿಂದ ಆಕೆ ನನಗೆ ಸೇರಬೇಕಾದುದು ನನ್ನ ಹಕ್ಕು"–ಎಂದು ವಾದಿಸಿದ. ನೂರು ಹಸುಗಳ ಬೆಲೆಯನ್ನು ನಿರಾಕರಿಸಿದಾಗ ಅದನ್ನು ಇನ್ನೂ ಹೆಚ್ಚಿಸಿದ. ಎಷ್ಟು ಬೆಲೆ ಕೊಟ್ಟರೂ ವಸಿಷ್ಠನು ಹಸುವನ್ನು ಬಿಟ್ಟುಕೊಡಲು ಒಪ್ಪಲಿಲ್ಲ. ಆಗ ವಿಶ್ವಾಮಿತ್ರನು ವಿಶ್ವಾಸದ್ರೋಹಿಯಂತೆ, ಸರ್ವಾಧಿಕಾರಿಯಂತೆ

ಬಲಾತ್ಕಾರದಿಂದ ಹಸುವನ್ನು ಹಿಡಿದೊಯ್ಯಲು ಮುಂದಾದ. ಆದರೆ ಆಕೆಯು ವಿಶ್ವಾಮಿತ್ರನ ಸೇವಕರ ಬಂಧನವನ್ನು ಕಿತ್ತು ಕಳಚಿ ವಸಿಷ್ಠರಲ್ಲಿಗೆ ಹಿಂದಿರುಗಿ ತನ್ನನ್ನು ತ್ಯಜಿಸಬಾರದೆಂದು ಬೇಡಿಕೊಂಡಳು. ಆಗ ವಸಿಷ್ಠನು ತಾನು ತ್ಯಜಿಸುತ್ತಿಲ್ಲವೆಂದೂ, ಆದರೆ ರಾಜನು ಬಲಿಷ್ಠನಾಗಿರುವಾಗ ತಾನು ಅಸಹಾಯಕನಾಗಿರುವುದಾಗಿಯೂ ಉತ್ತರಿಸಿದ. ಆಗ ಆಕೆ ಹೇಳಿದಳು: "ಕ್ಷತ್ರಿಯರೇ ಪ್ರಬಲರೆಂದು ಮನುಷ್ಯರು ತಿಳಿದಿಲ್ಲ. ಬ್ರಾಹ್ಮಣರು ಇನ್ನೂ ಶಕ್ತಿಶಾಲಿಗಳು. ಬ್ರಾಹ್ಮಣರದು ದೈವಿಕ ಶಕ್ತಿಯಾದುದರಿಂದ ಕ್ಷತ್ರಿಯರಿಗಿಂತ ಶ್ರೇಷ್ಠವಾದುದು. ನಿನ್ನ ಶಕ್ತಿಯನ್ನು ಅಳೆಯಲಾಗುವುದಿಲ್ಲ. ವಿಶ್ವಾಮಿತ್ರನು ಬಲಿಷ್ಠನಾಗಿದ್ದರೂ ನಿನ್ನಷ್ಟು ಶಕ್ತಿಶಾಲಿಯಲ್ಲ. ನಿನ್ನ ಚೈತನ್ಯವನ್ನು ಯಾರೂ ಎದುರಿಸಲಾರರು. ನನಗೆ ಅಪ್ಪಣೆ ಕೊಡು, ಬ್ರಾಹ್ಮಣ ಸತ್ವ ನನ್ನಲ್ಲಿ ತುಂಬಿದೆ. ಅಹಂಕಾರದಿಂದ ಮದಿಸಿ ಬಲಾತ್ಕರಿಸುತ್ತಿರುವ ಈ ದುಷ್ಟ ರಾಜನನ್ನು ನಾನು ನಾಶಮಾಡುತ್ತೇನೆ." ಹೀಗೆ ಆಕೆಯು ಹೂಂಕರಿಸಿದಾಗ ನೂರಾರು ಪಹಲವರು ಹುಟ್ಟಿ ಬಂದು ವಿಶ್ವಾಮಿತ್ರನ ಸೈನ್ಯವನ್ನು ಕೊಂದರು. ವಿಶ್ವಾಮಿತ್ರನೂ ಅವರನ್ನೆಲ್ಲಾ ಸಂಹರಿಸಿದನು. ಮಹಾಬಲಶಾಲಿಗಳಾದ ಶಕರು ಮತ್ತು ಯವನರು ಆಯುಧಸಹಿತ ಬಳಿಕ ಹುಟ್ಟಿ ಬಂದರು. ವಿಶ್ವಾಮಿತ್ರನ ಸೈನ್ಯವನ್ನು ಧೂಳಿ ಪಟಮಾಡಿದರು. ಅವರನ್ನೂ ವಿಶ್ವಾಮಿತ್ರನು ನಾಶಗೊಳಿಸಿದನು. ಹಸುವು ಮತ್ತೊಮ್ಮೆ ಅರಚಿ ತನ್ನ ದೇಹವನ್ನು ಕೊಡವಿದಾಗ ವಿವಿಧ ಬುಡಕಟ್ಟಿನ ಅಸಂಖ್ಯಾತ ಯೋಧರು ಹುಟ್ಟಿಬಂದು ವಿಶ್ವಾಮಿತ್ರನ ಸೈನ್ಯದ ಮೇಲೇರಗಿದರು. ಪದಾತಿ, ಅಶ್ವಾರೋಹಿ, ಗಜಸೇನೆ, ರಥಿಕರೇ ಮುಂತಾದ ಎಲ್ಲ ಸೈನ್ಯವನ್ನೂ ಕೊಂದರು. ಚಕ್ರವರ್ತಿಯ ನೂರು ಜನ ಮಕ್ಕಳು ಬಗೆ ಬಗೆಯ ಆಯುಧ ಹಿಡಿದು ವಸಿಷ್ಠನ ಮೇಲೆ ಕ್ರೋಧಾವಿಷ್ಟರಾಗಿ ಮುನ್ನುಗ್ಗಿದರು. ಋಷಿಯ ಮುಖದಿಂದ ಬಂದ ಒಂದು ಹೂಂಕೃತಿಯಿಂದಾಗಿ ಅವರೆಲ್ಲ ಸುಟ್ಟು ಭಸ್ಮವಾದರು. ವಿಶ್ವಾಮಿತ್ರನು ಹೀಗೆ ಸಂಪೂರ್ಣವಾಗಿ ಸೋತು ಹಣ್ಣಾಗಿ, ತನ್ನ ಮಗನೊಬ್ಬನಿಗೆ ರಾಜ್ಯಭಾರವನ್ನು ವಹಿಸಿಕೊಟ್ಟು ಹಿಮಾಲಯದತ್ತ ನಡೆದನು. ಅಲ್ಲಿ ತಪಸ್ಸು ಮಾಡಿ ಮಹಾದೇವನನ್ನು ಒಲಿಸಿಕೊಂಡನು. ಅವನ ಭಕ್ತಿಗೆ ಮೆಚ್ಚಿದ ಮಹಾದೇವನು ಅನೇಕ ದಿವ್ಯಾಸ್ತ್ರಗಳನ್ನು ಕರುಣಿಸಿದನು. ಈ ದಿವ್ಯಾಸ್ತ್ರಗಳ ಬೆಂಬಲದಿಂದ ವಸಿಷ್ಠನ ಆಶ್ರಮವನ್ನು ಮಗದೊಮ್ಮೆ ಆಕ್ರಮಿಸಿ ವಿಶ್ವಾಮಿತ್ರನು ಆಶ್ರಮವಾಸಿಗಳನ್ನೆಲ್ಲಾ ಕಂಗೆಡಿಸಿ ಓಡಿಸಿದನು. ವಸಿಷ್ಠನು ನಿರ್ವಾಹವಿಲ್ಲದೆ ವಿಶ್ವಾಮಿತ್ರನನ್ನು ಹೆದರಿಸುವುದಕ್ಕಾಗಿ ತನ್ನ ಬ್ರಹ್ಮದಂಡವನ್ನು ಎತ್ತಿ ಹಿಡಿದನು. ವಿಶ್ವಾಮಿತ್ರನೂ ತನ್ನ ಮಹಾ ಅಸ್ತ್ರವನ್ನು ಎತ್ತಿ ಹಿಡಿದು ಅದನ್ನು ತಡೆದುಕೊಳ್ಳುವಂತೆ ವಸಿಷ್ಠನಿಗೆ ಸವಾಲೆಸೆದನು. ವಿಶ್ವಾಮಿತ್ರನ ಪರಾಕ್ರಮವು ತನ್ನ ಮುಂದೆ ನಡೆಯುವುದಿಲ್ಲವೆಂದು ಜಂಬ ಕೊಚ್ಚಿದ ವಸಿಷ್ಠನು ಹೀಗೆ ಹೇಳಿದನು: "ಬ್ರಾಹ್ಮಣನೊಬ್ಬನ ಮಹಾಸತ್ವದೆದುರು ಕ್ಷತ್ರಿಯನ ಪರಾಕ್ರಮಕ್ಕೆ ಹೋಲಿಕೆಯಿದೆಯೇ? ನನ್ನ ಬ್ರಹ್ಮಶಕ್ತಿಯನ್ನು ಸೈರಿಸಿಕೊ, ನೀಚ ಕ್ಷತ್ರಿಯನೇ?' ಗಾಧಿಯ ಪುತ್ರನಿಂದ ಬಿಡಲ್ಪಟ್ಟ ಮಹಾಸ್ತ್ರವು ಬೆಂಕಿಯನ್ನುಗುಳುತ್ತಾ ವಸಿಷ್ಠನತ್ತ ಧಾವಿಸಿತು. ಪ್ರತಿಯಾಗಿ ಅವನು ಒಡ್ಡಿದ ಬ್ರಹ್ಮದಂಡದಲ್ಲಿ ಐಕ್ಯವಾಗಿ, ನೀರಿನಿಂದ ನಂದುವ ಬೆಂಕಿಯಂತೆ ತಣ್ಣಗಾಯಿತು. ಬ್ರಹ್ಮ, ಕಾಳ, ವರುಣ, ವಿಷ್ಣುಚಕ್ರ, ಶಿವನ ತ್ರಿಶೂಲವೇ ಮುಂತಾದ ಅನೇಕ ದಿವ್ಯಾಸ್ತ್ರಗಳು ಯಮಪಾಶದಂತೆ ವಿಶ್ವಾಮಿತ್ರನಿಂದ ವೈರಿಯತ್ತ ಬಿಡಲ್ಪಟ್ಟವು. ಬ್ರಹ್ಮನ ಮಗನಾದ ವಸಿಷ್ಠನು ಅವೆಲ್ಲವನ್ನೂ ತನ್ನ ಬ್ರಹ್ಮದಂಡದ ಮೂಲಕ ನುಂಗಿ ನೊಣೆದನು.

ಕೊಟ್ಟ ಕೊನೆಗೆ ದೇವತೆಗಳೆಲ್ಲಾ ತಲ್ಲಣಿಸುವಂತೆ ಬ್ರಹ್ಮಾಸ್ತ್ರವನ್ನು ಪ್ರಯೋಗಿಸಿಬಿಟ್ಟನು. ಬ್ರಹ್ಮಯೋಗಿಯ ಮುಂದೆ ಅದೂ ನಿಷ್ಪ್ರಯೋಜಕವಾಯಿತು. ಆಗ ವಸಿಷ್ಠನು ಭಯಂಕರಾಕಾರವನ್ನು ತಾಳಿದನು. ಅವನ ದೇಹದ ರಂಧ್ರಗಳಿಂದ ಹೊಗೆ ತುಂಬಿದ ಬೆಂಕಿಯ ಉಂಡೆಗಳು ಚಿಮ್ಮತೊಡಗಿದವು. ಅವನ ಕೈಯಲ್ಲಿ ಹಿಡಿದಿದ್ದ ಬ್ರಹ್ಮದಂಡವು ಹೊಗೆಯಿಲ್ಲದ ಐಹಿಕ ದಳ್ಳುರಿಯಂತೆ ಅಥವಾ ಎರಡನೆಯ ಯಮಪಾಶದಂತೆ ಪ್ರಜ್ವಲಿಸುತ್ತಿತ್ತು. ಆದರೂ ಮುನಿಗಳ ಸ್ತುತಿಯಿಂದ ಸಂಪ್ರೀತನಾದ ವಸಿಷ್ಠನು ತನ್ನ ಕ್ರೋಧವನ್ನು ನುಂಗಿಕೊಂಡನು. ಅವರೆಲ್ಲ ಏಕಕಂಠದಿಂದ ವಸಿಷ್ಠನ ಶ್ರೇಷ್ಠತ್ವವನ್ನು ಘೋಷಿಸಿದರು. ವಿಶ್ವಾಮಿತ್ರನು ಸಂಕಟದಿಂದ ನರಳಿದನು. "ಕ್ಷತ್ರಿಯ ಪರಾಕ್ರಮಕ್ಕೆ ಧಿಕ್ಕಾರವಿರಲಿ! ಬ್ರಾಹ್ಮಣ ಸತ್ವವೊಂದೇ ನಿಜವಾದ ಶಕ್ತಿ. ಕೇವಲ ಒಂದು ಬ್ರಹ್ಮದಂಡದಿಂದ ನನ್ನ ಎಲ್ಲಾ ದಿವ್ಯಾಸ್ತ್ರಗಳೂ ನಾಶವಾದವು." ಅಪಮಾನಗೊಂಡ ರಾಜನಿಗೆ ಬೇರೆ ದಾರಿಯೇ ಇರಲಿಲ್ಲ. ಅಸಹಾಯಕನಾಗಿ ತನ್ನ ಕೀಳರಿಮೆಯನ್ನು ಒಪ್ಪಿಕೊಳ್ಳಬೇಕು ಅಥವಾ ಬ್ರಾಹ್ಮಣತ್ವವನ್ನು ಸಂಪಾದಿಸಲು ಶ್ರಮಿಸಬೇಕು. ಎರಡನೆಯ ಪರ್ಯಾಯವನ್ನೇ ಆತ ಅಂಗೀಕರಿಸಿದ. "ಈ ಸೋಲನ್ನು ಆಳವಾಗಿ ವಿಚಾರಿಸಿ, ನನ್ನನ್ನು ನಾನು ಸುಧಾರಿಸಿಕೊಳ್ಳುತ್ತೇನೆ. ಮನಸ್ಸನ್ನು ಏಕಾಗ್ರತೆಗೊಳಿಸಿ, ಇಂದ್ರಿಯಗಳನ್ನು ನಿಗ್ರಹಿಸಿ ಉಗ್ರ ತಪಸ್ಸಿನಲ್ಲಿ ನಿರತವಾಗಿ ಬ್ರಾಹ್ಮಣತ್ವವನ್ನು ಪಡೆಯುತ್ತೇನೆ."

ತೀವ್ರವಾದ ಕ್ಷೋಭೆ ಮತ್ತು ತೇಜೋವಧೆಗೆ ಗುರಿಯಾಗಿ, ತನ್ನ ವೈರಿಯ ಮೇಲೆ ತೀವ್ರ ದ್ವೇಷವನ್ನು ತುಂಬಿಕೊಂಡು ತನ್ನ ರಾಣಿಯೊಡಗೂಡಿ ದಕ್ಷಿಣದತ್ತ ಪ್ರಯಾಣ ಮಾಡಿ ತನ್ನ ಪ್ರತಿಜ್ಞೆಯನ್ನು ಈಡೇರಿಸಿಕೊಂಡನಂತೆ. ಹವಿಷ್ಯಾನಂದ, ಮಧುಷ್ಯಾನಂದ ಮತ್ತು ದೃಢನೇತ್ರರೆಂಬ ಮೂವರು ಮಕ್ಕಳು ಅವನಿಗೆ ಹುಟ್ಟಿದರೆಂಬ ಉಲ್ಲೇಖವನ್ನು ಮೊದಲು ನಾವು ಕೇಳುತ್ತೇವೆ. ಒಂದು ಸಾವಿರ ವರ್ಷ ತಪಸ್ಸಿನ ಬಳಿಕ ಬ್ರಹ್ಮನು ಪ್ರತ್ಯಕ್ಷನಾಗಿ ರಾಜರ್ಷಿಗಳ ಸ್ವರ್ಗಕ್ಕೆ ಅವನು ಅರ್ಹನಾಗಿದ್ದಾನೆಂದು ಘೋಷಿಸಿದನಂತೆ. ಉಗ್ರ ತಪಸ್ಸಿನ ಪರಿಣಾಮವಾಗಿ ಆತ ರಾಜರ್ಷಿ ಎಂದು ಪರಿಗಣಿಸಲ್ಪಟ್ಟನಾದರೂ, ವಿಶ್ವಾಮಿತ್ರನಿಗೆ ಅದರಿಂದ ದುಃಖ, ಅವಮಾನ, ಕೋಪಗಳುಂಟಾದವು. ತನಗೆ ಸಿಕ್ಕಿದ ಪ್ರತಿಫಲ ಸಾಲದೆಂದು ವಿಶ್ವಾಮಿತ್ರ ಉದ್ಗರಿಸಿದ: "ನಾನು ಉಗ್ರನಿಷ್ಠೆಯಿಂದ ತಪಸ್ಸು ಮಾಡಿದೆ. ಆದರೆ ದೇವರು ಮತ್ತು ಋಷಿಗಳು ನನ್ನನ್ನು ರಾಜರ್ಷಿ ಎಂದರು. ಬ್ರಾಹ್ಮಣನೆನ್ನಲಿಲ್ಲ" ಈ ಘಟನೆ ಒಬ್ಬ ವ್ಯಕ್ತಿಗೆ ಸಂಬಂಧಿಸಿದ್ದೇ ಅಥವಾ ಒಂದೇ ಹೆಸರಿನ ಬೇರೆ ಇಬ್ಬರಿಗೆ ಸಂಬಂಧಿಸಿದ್ದೇ ಎನ್ನುವ ವಿಚಾರದಲ್ಲಿ ಭಿನ್ನಾಭಿಪ್ರಾಯವಿದೆ.

ಇಕ್ಷ್ವಾಕು ವಂಶದ ತ್ರಿಶಂಕುವೆಂಬ ರಾಜನು ಒಂದು ಯಾಗ ಮಾಡಿ ದೇಹಸಹಿತ ಸ್ವರ್ಗಾರೋಹಣ ಮಾಡುವ ಯೋಜನೆ ಹಾಕಿದ. ವಸಿಷ್ಠನನ್ನು ಈ ವಿಚಾರದಲ್ಲಿ ಕೇಳಿದಾಗ ಅವನು ತಿರಸ್ಕರಿಸಿ ಇದು ಅಶಕ್ಯವೆಂದ. ತ್ರಿಶಂಕುವು ದಕ್ಷಿಣಕ್ಕೆ ಪ್ರಯಾಣ ಬೆಳೆಸಿ, ವಸಿಷ್ಠ ಋಷಿಯ ನೂರು ಜನ ಮಕ್ಕಳು ತಪಸ್ಸು ಮಾಡುತ್ತಿದ್ದಲ್ಲಿಗೆ ಬಂದು ಅವರ ತಂದೆಯು ನಿರಾಕರಿಸಿದ್ದನ್ನು ಅವರು ಕೈಗೊಳ್ಳಬೇಕೆಂದು ಪ್ರಾರ್ಥಿಸಿದ. ಅತ್ಯಂತ ಭಕ್ತಿ ವಿನಯಗಳಿಂದ ಅವರನ್ನು ಕುರಿತು ಹೀಗೆ ಹೇಳಿದ: "ಇಕ್ಷ್ವಾಕು ವಂಶದವರು ತಮ್ಮ ಕುಲಪುರೋಹಿತರನ್ನು ತುಂಬಾ ಗೌರವಿಸುತ್ತಾರೆ. ಕಷ್ಟಕಾಲದಲ್ಲಿ ಅವರತ್ತ ತಿರುಗುತ್ತಾರೆ. ಈಗ ತಂದೆಯು ನಿರಾಕರಿಸಿರುವುದರಿಂದ ನೀವೇ ಅವನಿಗೆ ಕುಲದೇವರಿದ್ದಂತೆ" ಎಂದು ಪರಿಪರಿಯಾಗಿ ಬೇಡಿದನಾದರೂ ಅವರು ದುರಹಂಕಾರದಿಂದ ಅವನ ಉದ್ಧಟತನಕ್ಕೆ ಬೈದು ಭಂಗಿಸಿದರು. "ಅಶಕ್ಯ! ಮೂರ್ಖ, ಸತ್ಯವಾದಿಯಾದ ನಿನ್ನ ಆಚಾರ್ಯನಿಂದ ನೀನು ತಿರಸ್ಕೃತನಾಗಿರುವೆ. ಅವನ ಅಧಿಕಾರವನ್ನು ನಿರ್ಲಕ್ಷಿಸಿ ಬೇರೆ ಶಾಖೆಗೆ

ನೀನು ಹೇಗೆ ಬಂದೆ? ಇಕ್ಷ್ವಾಕು ವಂಶದವರಿಗೆ ಕುಲ ಪುರೋಹಿತರು ಶ್ರೇಷ್ಠ ದೈವವಾಣಿಯಿದ್ದಂತೆ. ಅಂತಹ ಮಹಾತ್ಮರ ಆದೇಶವನ್ನು ಮೀರುವಂತಿಲ್ಲ. ದೇವ ಋಷಿಯಾದ ವಸಿಷ್ಠರು 'ಇದನ್ನು ಮಾಡಲಾಗುವುದಿಲ್ಲ' ಎಂದಿದ್ದಾರೆ ಎಂದ ಮೇಲೆ, ನಾವು ಹೇಗೆ ತಾನೆ ನಿನ್ನ ಯಜ್ಞವನ್ನು ಕೈಗೊಳ್ಳಲು ಸಾಧ್ಯ? ನೀನೊಬ್ಬ ಮೂರ್ಖ ದೊರೆ. ರಾಜಧಾನಿಗೆ ಹಿಂದಿರುಗು. ದೇವ ಋಷಿಯ ಮೂರು ಲೋಕಗಳಿಗೂ ಪುರೋಹಿತನಾಗುವ ಅರ್ಹತೆ ಹೊಂದಿದ್ದಾನೆ. ನಾವು ಅವನನ್ನು ಅಗೌರವಿಸಲಾದೀತೆ?" ತ್ರಿಶಂಕು ಬಳಿಕ ನಿರ್ವಾಹವಿಲ್ಲದೆ "ನನ್ನ ಕುಲಗುರುಗಳು ಮತ್ತವನ ಮಕ್ಕಳು ನನ್ನ ಪ್ರಾರ್ಥನೆಯನ್ನು ಒಪ್ಪದಿರುವುದರಿಂದ ನಾನು ಬೇರೊಬ್ಬರಲ್ಲಿಗೆ ಹೋಗುವುದು ಅನಿವಾರ್ಯ" ವೆಂಬಂತೆ ಮಾತನಾಡಿದನಂತೆ. ಅವನ ಉದ್ಧಟತನದ ಆಸೆಯನ್ನು ಕೇಳಿ ಕೆರಳಿದ ವಸಿಷ್ಠಪುತ್ರರು ಅವನಿಗೆ 'ಚಂಡಾಲನಾಗು' ಎಂದು ಶಪಿಸಿದರು. ಅದರ ಪರಿಣಾಮವಾಗಿ ದುರ್ದೈವದ ರಾಜನ ರೂಪವು ಕ್ರಮೇಣ ಅಸ್ಪೃಶ್ಯನಂತೆ ಬದಲಾಯಿತು. ಆಗ ಅವನು ವಿಶ್ವಾಮಿತ್ರನ ಆಶ್ರಯವನ್ನು ಬೇಡಿ ಅವರ ಆಶ್ರಮಕ್ಕೆ ಹೋದನಂತೆ (ನಾವು ಈಗಾಗಲೇ ತಿಳಿದಿರುವಂತೆ ವಿಶ್ವಾಮಿತ್ರನು ಆ ಕಾಲದಲ್ಲಿ ದಕ್ಷಿಣದಲ್ಲಿ ವಾಸಿಸುತ್ತಾ ತಪಸ್ಸು ಮಾಡುತ್ತಿದ್ದ). ವಿಶ್ವಾಮಿತ್ರನ ಸದ್ಗುಣ ಮತ್ತು ದಯಾಪರತೆಯನ್ನು ಹೊಗಳಿ ತನ್ನ ದುರದೃಷ್ಟವನ್ನು ಕುರಿತು ಗೋಳಿಟ್ಟು ಆಶ್ರಯ ಬೇಡಿದ. ವಿಶ್ವಾಮಿತ್ರನೂ ಅವನ ಸ್ಥಿತಿಗೆ ಮರುಗಿ, ಅವನ ಯಜ್ಞದ ನೇತೃತ್ವ ವಹಿಸುವ ಭರವಸೆ ಕೊಟ್ಟ, ಮಾತ್ರವಲ್ಲ, ಅವನ ಕುಲಗುರು ಶಪಿಸಿರುವ ಚಂಡಾಲ ಶರೀರದಲ್ಲಿಯೇ ಅವನನ್ನು ಸ್ವರ್ಗಾರೋಹಣ ಮಾಡಿಸುವುದಾಗಿ ಶಪಥ ಮಾಡಿದ. "ಕುಶಿಕ ಪುತ್ರನ ಆಶ್ರಯಕ್ಕೆ ನೀನು ಬಂದಿರುವುದರಿಂದ ಸ್ವರ್ಗ ನಿನ್ನ ಕೈವಶವಾಯಿತೆಂದೇ ತಿಳಿ" ಎಂದು ಹೇಳಿ ಯಜ್ಞದ ಸಿದ್ಧತೆಗೆ ನಿರ್ದೇಶನ ಮಾಡಿದ. ವಸಿಷ್ಠನ ಕುಟುಂಬ ಸಹಿತ ಎಲ್ಲಾ ಋಷಿಗಳಿಗೂ ಆಹ್ವಾನ ಕಳಿಸಿದ. ಆಹ್ವಾನವನ್ನು ತೆಗೆದುಕೊಂಡು ಹೋಗಿದ್ದ ವಿಶ್ವಾಮಿತ್ರನ ಶಿಷ್ಯರು ಅವನ ಸಂದೇಶವನ್ನು ಮುಟ್ಟಿಸಿ, ಹಿಂದಿರುಗಿ ಅದರ ಫಲವನ್ನು ತಮ್ಮ ಗುರುವಿನಲ್ಲಿ ಹೀಗೆ ನಿವೇದಿಸಿದರು: "ತಮ್ಮ ಸಂದೇಶವನ್ನು ಕೇಳಿದ ಮೇಲೆ ಎಲ್ಲ ದೇಶದ ಎಲ್ಲ ಬ್ರಾಹ್ಮಣರು ಒಟ್ಟಾಗಿ ಇತ್ತ ಕಡೆ ಬರುತ್ತಿದ್ದಾರೆ. ಮಹೋದಯ (ವಸಿಷ್ಠ) ಮಾತ್ರ ಬರಲಿಲ್ಲ. ವಸಿಷ್ಠನ ನೂರು ಜನ ಮಕ್ಕಳು ಕೋಪದಿಂದ ಕಂಪಿಸುವ ಕಂಠದಲ್ಲಿ ಹೇಳಿದ ಮಾತುಗಳನ್ನು ಕೇಳು: "ಹೇಗೆ ತಾನೆ ದೇವತೆಗಳು ಮತ್ತು ಋಷಿಗಳು ಚಂಡಾಲನ ಯಜ್ಞಾಹುತಿಯನ್ನು ಸ್ವೀಕರಿಸುತ್ತಾರೆ? ಮತ್ತು ಅವನಿಗೆ ಒಬ್ಬ ಕ್ಷತ್ರಿಯನು ಪುರೋಹಿತನಾಗಿದ್ದಾನೆ ತಾನೆ! ಘನತೆವೆತ್ತ ಬ್ರಾಹ್ಮಣರು ವಿಶ್ವಾಮಿತ್ರನ ನೇತೃತ್ವದಲ್ಲಿ ಚಂಡಾಲನ ಮನೆಯ ಅನ್ನ ತಿಂದು ಸ್ವರ್ಗಕ್ಕೆ ಹೋಗುವುದಾದರೂ ಸಾಧ್ಯವೇ? ತಮ್ಮ ಕಣ್ಣಿನಿಂದ ಕಿಡಿ ಕಾರುತ್ತಾ ವಸಿಷ್ಠಪುತ್ರರು ವಸಿಷ್ಠನೆದುರಿಗೇ ಈ ಮಾತುಗಳನ್ನು ಆಡಿದರು" ಎಂದು ತಿಳಿಸಿದರು. ಇದನ್ನು ಕೇಳಿದ ವಿಶ್ವಾಮಿತ್ರ ಕ್ರೋಧಾವಿಷ್ಟನಾದ. "ವಸಿಷ್ಠನ ಮಕ್ಕಳೆಲ್ಲಾ ಸುಟ್ಟು ಬೂದಿಯಾಗಲಿ; ಏಳುನೂರು ಜನ್ಮ ಪುನರ್ ಹುಟ್ಟಿ ಮೃತ್ತಪರೆಂಬ ಅಸ್ಪೃಶ್ಯರಾಗಿ ಜೀವಿಸಲಿ; ವಸಿಷ್ಠನೂ ನಿಷಾಧನಾಗಲಿ" ಎಂದು ಶಾಪ ಕೊಟ್ಟುಬಿಟ್ಟ. ತನ್ನ ಶಾಪವು ಫಲಿಸಿದ್ದನ್ನು ತಿಳಿದುಕೊಂಡ ಮೇಲೆ, ವಿಶ್ವಾಮಿತ್ರನು ತ್ರಿಶಂಕುವನ್ನು ಹೊಗಳಿ ನೆರೆದಿದ್ದ ಋಷಿಗಳಿಗೆ ಯಾಗಾರಂಭ ಮಾಡಲು ಸೂಚಿಸಿದ. ಅದಕ್ಕೆ ಅವರೆಲ್ಲ ಒಪ್ಪಿದರು. ಅವರಿಗೆಲ್ಲಾ ಭಯಂಕರ ತಪಸ್ವಿಯ ಹೆದರಿಕೆಯಿತ್ತು. ವಿಶ್ವಾಮಿತ್ರನೇ ಯಾಜಕನಾಗಿ ಯಜ್ಞದ ನೇತೃತ್ವವಹಿಸಿದ. ಉಳಿದ ಋಷಿಗಳು ಋತ್ವಿಜರಾಗಿ ಎಲ್ಲ ಆಚರಣೆಗಳನ್ನೂ ಸಾಂಗವಾಗಿ ನೆರವೇರಿಸಿದರು. ಮುಂದೆ ವಿಶ್ವಾಮಿತ್ರನು ದೇವತೆಗಳನ್ನು ಆಹುತಿ ಸ್ವೀಕರಿಸಲು ಆಹ್ವಾನಿಸಿದ. ಆದರೆ ಯಾವ ದೇವತೆಗಳೂ ತಮ್ಮ ಭಾಗದ ಹವಿಸ್ಸನ್ನು ಸ್ವೀಕರಿಸಲು ಬರಲಿಲ್ಲವೆಂಬುದನ್ನು ಕಂಡು ವಿಶ್ವಾಮಿತ್ರನಿಗೆ ರೋಷ ಉಕ್ಕಿಬಂದಿತು. ಯಜ್ಞಾಹುತಿಯ ಸೌಟನ್ನು ಎತ್ತಿ ಹಿಡಿದು ತ್ರಿಶಂಕುವನ್ನುದ್ದೇಶಿಸಿ ಎತ್ತರಿಸಿದ ಕಂಠದಲ್ಲಿ ಘೋಷಿಸಿದ: "ಹಿಂದೆಗೆಯದಿರು, ಓ

ರಾಜನೇ! ನನ್ನ ತಪಸ್ಸಿನ ಶಕ್ತಿಯನ್ನೆಲ್ಲಾ ಧಾರೆಯೆರೆದು, ನಾನೇ ಸ್ವಶಕ್ತಿಯಿಂದ ನಿನ್ನನ್ನು ಸ್ವರ್ಗದತ್ತ ಮುನ್ನಡೆಸುತ್ತೇನೆ. ಭೌತಿಕ ದೇಹದೊಡನೆ ಪಡೆಯುವ ಸ್ವರ್ಗದ ಪದವಿಯತ್ತ ನೀನು ಏರುವಂಥವನಾಗು." ತ್ರಿಶಂಕು ಕೂಡಲೆ ಮುನಿಗಳ ಸಮ್ಮುಖದಲ್ಲಿ ಸ್ವರ್ಗದತ್ತ ಏರತೊಡಗಿದ. ಇಂದ್ರನು ಅವನನ್ನು ತಡೆದ. ದೈವಿಕನಾದ ಕುಲಗುರುವಿನಿಂದ ತಿರಸ್ಕೃತನಾದ ನೀನು ಸ್ವರ್ಗಕ್ಕೆ ಬರಲು ಅನರ್ಹ ಎಂದು ತಳ್ಳಿದ. ತಲೆಕೆಳಗಾಗಿ ಸ್ವರ್ಗದಿಂದ ಕೆಳಗೆ ಬೀಳುತ್ತಿರುವ ತ್ರಿಶಂಕು ವಿಶ್ವಾಮಿತ್ರನನ್ನು ಕೂಗಿ ರಕ್ಷಿಸುವಂತೆ ಬೇಡಿಕೊಂಡ. ವಿಶ್ವಾಮಿತ್ರನಾದರೋ ಕೋಪದಿಂದ ಕನಲಿ ಅವನನ್ನು ಅರ್ಧದಲ್ಲಿಯೇ ನಿಲ್ಲುವಂತೆ ಅಪ್ಪಣೆ ಮಾಡಿದ. ಬಳಿಕ ತನ್ನ ದೈವ ಜ್ಞಾನದಿಂದ ಮತ್ತು ತಪಸ್ಸಿನ ಶಕ್ತಿಯಿಂದ ಮತ್ತೊಬ್ಬ ಪ್ರಜಾಪತಿಯಂತೆ ಸೃಷ್ಟಿಗೆ ತೊಡಗಿದ. ಏಳು ಜನ ಸಪ್ತರ್ಷಿಗಳು (ನಕ್ಷತ್ರಪುಂಜವೊಂದನ್ನೂ ಹೀಗೆ ಕರೆಯುತ್ತಾರೆ) ದಕ್ಷಿಣ ಭಾಗದ ಆಕಾಶದಲ್ಲಿ ಕಾಣಿಸಿಕೊಂಡರು. ಹೊಸ ಸ್ವರ್ಗ ಲೋಕವೊಂದನ್ನು ಸೃಷ್ಟಿಸಹೊರಟ ಋಷಿಯು ಸಪ್ತರ್ಷಿಮಂಡಲದ ಸಮೀಪದಲ್ಲಿ ಹಲವು ನಕ್ಷತ್ರಗಳ ಮಾಲೆಯನ್ನು ಸೃಷ್ಟಿಸಿದ. ಕೋಪಾತಿರೇಕದಿಂದ ಕೂಗಿ "ನಾನು ಇನ್ನೊಬ್ಬ ಇಂದ್ರನನ್ನೇ ಸೃಷ್ಟಿಸುತ್ತೇನೆ ಅಥವಾ ಲೋಕದಲ್ಲಿ ಇಂದ್ರರಿಲ್ಲದಂತೆ ಮಾಡುತ್ತೇನೆ" ಎಂದು ಘೋಷಿಸಿದ. ದೇವತೆಗಳನ್ನೂ ಸೃಷ್ಟಿಸತೊಡಗಿದ. ಋಷಿಗಳು, ದೇವತೆಗಳು, ಅಸುರರು ಈಗ ಬಹಳ ಗಾಬರಿಯಾಗಿ ವಿಶ್ವಾಮಿತ್ರನೊಡನೆ ಸಂಧಾನದ ಮಾತುಗಳನ್ನು ಆರಂಭಿಸಿದರು. "ತ್ರಿಶಂಕುವನ್ನು ಅವನ ಕುಲಗುರುವು ಶಪಿಸಿದ್ದರಿಂದ ಅವನಿಗೆ ಶುದ್ಧಿ ಸಂಸ್ಕಾರವಾಗದೆ ದೇಹಸಹಿತ ಸ್ವರ್ಗವನ್ನು ಸೇರುವಂತಿಲ್ಲ," ಎಂದು ಹೇಳಿದರು. ಆಗ ಋಷಿಯು ತಾನು ತನ್ನ ಶಿಷ್ಯನಿಗೆ ವಚನ ಕೊಟ್ಟಿರುವುದರಿಂದ ತ್ರಿಶಂಕುವು ದೇಹಸಹಿತ ಸ್ವರ್ಗದಲ್ಲಿ ಉಳಿಯಲೆಂದು ಹಠ ಹಿಡಿದ. ಹೊಸದಾಗಿ ಸೃಷ್ಟಿಸಲಾದ ನಕ್ಷತ್ರಗಳೂ ತಮ್ಮ ತಮ್ಮ ಜಾಗದಲ್ಲಿ ಸ್ವತಂತ್ರವಾಗಿ ಉಳಿಯಲೆಂದು ಬಯಸಿದ. ದೇವತೆಗಳು ಒಪ್ಪಿದರು. "ಈ ಅಸಂಖ್ಯಾತ ನಕ್ಷತ್ರಗಳು ಉಳಿಯಲಿ. ಆದರೆ ಸೂರ್ಯ ಪಥಕ್ಕೆ ಆಚೆ ಇರಲಿ. ತ್ರಿಶಂಕುವೂ ಚಿರಂಜೀವಿಯಾಗಿ ನಕ್ಷತ್ರಗಳಿಂದ ಸೇವಿತನಾಗಿ ತಲೆಕೆಳಗಾಗಿಯೇ ಅವರ ನಡುವೆ ಪ್ರಕಾಶಮಾನವಾಗಿ ಬೆಳಗುತ್ತಿರಲಿ. ಇದರಿಂದ ಅವನ ಗುರಿಯೂ ಸಾಧಿತವಾಯಿತು. ಅವನ ಕೀರ್ತಿಯೂ ಉಳಿಯಿತು. ಸ್ವರ್ಗವಾಸಿಯಂತೆಯೇ ಅವನು ಇರಬಹುದು" ಎಂದು ಹೇಳಿದರು. ಹೀಗೆ ಈ ಮಹಾ ವಿವಾದವನ್ನು ಸಂಧಾನದ ಮೂಲಕ ಬಗೆಹರಿಸಲಾಯಿತು. ವಿಶ್ವಾಮಿತ್ರನೂ ಒಪ್ಪಿಕೊಂಡ. ಇದು ವಿಶ್ವಾಮಿತ್ರನ ಕಥೆ. ಮೇಲೆ ಉಲ್ಲೇಖಿಸಿರುವುದಕ್ಕೂ 'ಹರಿವಂಶ'ದಲ್ಲಿ ಬರುವುದಕ್ಕೂ ಸ್ವಲ್ಪ ವ್ಯತ್ಯಾಸವಿದೆಯೆಂಬುದನ್ನು ಗಮನಿಸಬಹುದಾದರೂ ವಸಿಷ್ಠ–ವಿಶ್ವಾಮಿತ್ರರ ಹೋರಾಟವನ್ನು ಇದು ಹೆಚ್ಚು ವಿವರವಾಗಿ ಬಣ್ಣಿಸುತ್ತದೆ.

ಯಾಗದ ಕೊನೆಯಲ್ಲಿ ಎಲ್ಲ ಋಷಿಗಳೂ ದೇವತೆಗಳೂ ಬೀಳ್ಕೊಂಡು ಹೊರಟುಹೋದ ಮೇಲೆ ವಿಶ್ವಾಮಿತ್ರನು ತನ್ನ ಅನುಯಾಯಿಗಳಿಗೆ ಹೀಗೆ ಹೇಳಿದ: "ನಮ್ಮ ತಪಸ್ಸಿಗೆ ದಕ್ಷಿಣಾ ಪಥದಲ್ಲಿ ಇದೊಂದು ದೊಡ್ಡ ಅಡ್ಡಿಯಾಯಿತು. ಆದುದರಿಂದ ನಾವು ಬೇರೆ ದಿಕ್ಕಿನಲ್ಲಿ ನಡೆದು ನಮ್ಮ ಪ್ರಾಯಶ್ಚಿತ್ತ ವಿಧಿಗಳನ್ನು ಕೈಗೊಳ್ಳಬೇಕು." ಅದರಂತೆ ಪಶ್ಚಿಮದ ಅರಣ್ಯದತ್ತ ನಡೆದು ಹೊಸದಾಗಿ ಮತ್ತೆ ತಪಸ್ಸಿಗೆ ಆರಂಭಿಸಿದ. ಇಲ್ಲಿ ಮತ್ತೊಂದು ಕಥೆಯು ಒಂದು ಕಥನ ಪ್ರವಾಹಕ್ಕೆ ತಡೆಯಾಗುತ್ತದೆ. ಈ ಕಥೆ ಅಂಬರೀಶನದು. 'ರಾಮಾಯಣ'ದ ಪ್ರಕಾರ ಅಂಬರೀಶ ರಾಜನು ಇಕ್ಷ್ವಾಕು ವಂಶದಲ್ಲಿ ಇಪ್ಪತ್ತೆಂಟನೆಯವನು. ತ್ರಿಶಂಕುವಿನ ಬಳಿಕ ಇಪ್ಪತ್ತೆರಡನೆಯವನು. ವಿಶ್ವಾಮಿತ್ರನು ಮಾತ್ರ ಎರಡೂ ರಾಜರ ಕಾಲದಲ್ಲಿ ಬದುಕಿದ್ದಂತೆ ಚಿತ್ರಣಗೊಂಡಿದೆ. ಈ ಕಥೆಯು ರಾಜ ಅಂಬರೀಶನು ನಡೆಸುತ್ತಿದ್ದ ಯಾಗದಲ್ಲಿ ಇಂದ್ರನು ಬಲಿಯನ್ನು ಎತ್ತಿಕೊಂಡು ಮಾಯವಾದ ಪ್ರಸಂಗಕ್ಕೆ ಸಂಬಂಧಿಸಿದೆ. ಈ ಬಗೆಯ ಅಪಶಕುನದ ಘಟನೆ ನಡೆಯಲು ರಾಜನ

ದುರಾಡಳಿತವೇ ಕಾರಣವೆಂದು ಪುರೋಹಿತನು ಹೇಳಿದ. ಒಂದು ನರಬಲಿಯನ್ನು ಕೊಡಬೇಕಾದ ಪ್ರಾಯಶ್ಚಿತ್ತ ವಿಧಿಯನ್ನು ಈಗ ಮಾಡಬೇಕಾಗಿದೆ ಎಂದು ಸೂಚಿಸಿದ. ರಾಜಋಷಿ ಅಂಬರೀಶನು ಸಾಕಷ್ಟು ಹುಡುಕಿ, ಕೊನೆಗೆ ಭೃಗು ವಂಶದ ಋಚಿಕನ ಹತ್ತಿರ ಬಂದ. ಒಂದು ನೂರು ಸಾವಿರ ಹಸುಗಳ ಬೆಲೆ ಪಡೆದು ಋಚಿಕನ ಮಕ್ಕಳಲ್ಲಿ ಒಬ್ಬನನ್ನು ಬಲಿಗಾಗಿ ಕೊಡುವಂತೆ ಬೇಡಿದ. ಋಚಿಕನು ತಾನು ತನ್ನ ಹಿರಿಯ ಮಗನನ್ನು ಕೊಡಲಾಗುವುದಿಲ್ಲವೆಂದ. ಅವನ ಹೆಂಡತಿ ತಮ್ಮ ಕಿರಿಯ ಮಗನನ್ನು ಕೊಡಲಾಗುವುದಿಲ್ಲವೆಂದಳು. "ಹಿರಿಯ ಮಕ್ಕಳು ಸಾಮಾನ್ಯವಾಗಿ ತಂದೆಗೆ ಪ್ರಿಯರು. ಕಿರಿಯ ಮಕ್ಕಳು ತಾಯಿಗೆ ಪ್ರೀತಿಪಾತ್ರರು" ಎಂದು ಆಕೆ ಹೇಳಿದಳು. ಎರಡನೆಯ ಮಗನಾದ ಶುನಶ್ಶೇಫನು ಹಾಗಾದರೆ ತಾನು ಮಾರಲು ಯೋಗ್ಯನೆಂದು ಹೇಳಿದನು. ತನ್ನನ್ನು ರಾಜನು ಕರೆದೊಯ್ಯಬಹುದೆಂದು ಹೇಳಿದನು. ಒಂದು ನೂರು ಸಾವಿರ ಹಸುಗಳು, ಒಂದು ಕೋಟಿ ಚಿನ್ನದ ನಾಣ್ಯಗಳು, ರಾಶಿಗಟ್ಟಲೆ ಆಭರಣಗಳನ್ನು ಸುರಿದು ಶುನಶ್ಶೇಫನನ್ನು ಕರೆದೊಯ್ಯಲಾಯಿತು. ಮಾರ್ಗಮಧ್ಯಮದಲ್ಲಿ ಪುಷ್ಕರದ ಹತ್ತಿರಕ್ಕೆ ಬಂದಾಗ ಶುನಶ್ಶೇಫನು ತನ್ನ ಸೋದರಮಾವನಾದ ತಪೋನಿರತ ವಿಶ್ವಾಮಿತ್ರನನ್ನು ಕಂಡು ಅಪ್ಪಿಕೊಂಡು ಅವನ ಸಹಾಯವನ್ನು ಬೇಡಿದನು. ಅನಾಥನೂ, ಗೆಳೆಯರಿಲ್ಲದವನೂ, ಆಶ್ರಯವಿಹೀನನೂ ಆದ ತನ್ನನ್ನು ಋಷಿಯು ತನ್ನ ಮಡಿಲಿಗೆ ಹಾಕಿಕೊಂಡು ರಕ್ಷಿಸಬೇಕೆಂದನು. ವಿಶ್ವಾಮಿತ್ರನು ಅವನನ್ನು ಸಮಾಧಾನಪಡಿಸಿ, ತನ್ನ ಮಕ್ಕಳೇ ಶುನಶ್ಶೇಫನ ಜಾಗದಲ್ಲಿ ಬಲಿಹೋಗಬೇಕೆಂದು ಅಪ್ಪಣೆ ಮಾಡಿದನು. ಈ ಮಾತನ್ನು ಮಧೂಸೂದನನೇ ಮುಂತಾದ ರಾಜವಂಶದ ವಿಶ್ವಾಮಿತ್ರಪುತ್ರರು ಉದ್ಧಟನತದಿಂದ ನಿರಾಕರಿಸಿ ಅಣಕಮಾಡಿದರು. "ಹೇಗೆ ತಾನೆ ನೀನು ನಿನ್ನ ಮಕ್ಕಳನ್ನು ಬಲಿಕೊಟ್ಟು ಅನ್ಯರ ಮಕ್ಕಳನ್ನು ರಕ್ಷಿಸುತ್ತಿಯೆ?, ಇದು ತಪ್ಪೆಂದು ನಮ್ಮ ಅಭಿಪ್ರಾಯ. ತನ್ನ ಮಾಂಸವನ್ನೇ ಕಿತ್ತು ತಿನ್ನುವ ಕೃತ್ಯವಿದು" ಎಂದು ಹೇಳಿದರು. ಇದರಿಂದ ಕೆರಳಿದ ವಿಶ್ವಾಮಿತ್ರನು ತನ್ನ ಮಕ್ಕಳಿಗೆ, "ವಸಿಷ್ಠನ ಮಕ್ಕಳಿಗಾದ ಗತಿಯೇ ನಿಮಗೂ ಒದಗಲಿ. ಅತಿ ಕೀಳು ಜಾತಿಗಳಲ್ಲಿ ಹುಟ್ಟಿ ನಾಯಿ ಮಾಂಸವನ್ನು ತಿನ್ನುತ್ತ ಸಾವಿರ ವರ್ಷಗಳ ಕಾಲ ಅಲೆಯಿರಿ" ಎಂದು ಶಪಿಸಿಬಿಟ್ಟನು. ಆಮೇಲೆ ಶುನಶ್ಶೇಫನತ್ತ ತಿರುಗಿ "ನಿನ್ನನ್ನು ಹಗ್ಗಗಳಿಂದ ಬಂಧಿಸಿ, ಕೆಂಪು ಹೂವಿನ ಹಾರವನ್ನು ಕೊರಳಿಗೆ ಹಾಕಿ, ಮೈಗೆ ಲೇಪಗಳನ್ನು ಹಚ್ಚಿ, ವಿಷ್ಣುವಿನ ಬಲಿಗಂಬಕ್ಕೆ ಕಟ್ಟಿದಾಗ, ನೀನು ಅಗ್ನಿಯನ್ನು ಬೇಡು; ನಾನು ಉಪದೇಶಿಸುವ ಈ ಎರಡೂ ದೇವಗಾಥೆಗಳನ್ನು ಅಂಬರೀಶನ ಯಾಗವಿಧಿಯಲ್ಲಿ ಹಾಡು; ನಿನ್ನ ಆಸೆ ಕೈಗೂಡುತ್ತದೆ." ಎರಡು ಗಾಥೆಗಳನ್ನು ಪಡೆದ ಶುನಶ್ಶೇಫನು ಕೂಡಲೆ ತಮ್ಮ ಗುರಿಯತ್ತ ಹೊರಟಬಹುದೆಂದು ರಾಜ ಅಂಬರೀಶನಿಗೆ ಹೇಳಿದನು. ಆಹುತಿಗೆ ಸಿದ್ಧನಾಗಿ ಕೆಂಪು ವಸ್ತ್ರಗಳನ್ನು ಧರಿಸಿ, "ಇಂದ್ರ ಮತ್ತು ಅವನ ತಮ್ಮನಾದ ವಿಷ್ಣುವನ್ನು ಸೊಗಸಾದ ಹಾಡುಗಳಿಂದ ಹೊಗಳಿ ಅರ್ಚಿಸಿದನು. ಸಾವಿರ ಕಣ್ಣುಗಳ ಇಂದ್ರನು ಈ ಪವಿತ್ರ ಗೀತೆಗಳಿಂದ ಸಂತಸ ಹೊಂದಿ ಶುನಶ್ಶೇಫನಿಗೆ ದೀರ್ಘಕಾಲ ಬಾಳೆಂದು ಹರಸಿದನು." ರಾಜ ಅಂಬರೀಶನೂ ಈ ಯಾಗದಿಂದ ಅನೇಕಾನೇಕ ಫಲಗಳನ್ನು ಪಡೆದನು. ವಿಶ್ವಾಮಿತ್ರನು ಒಂದು ಸಾವಿರ ವರ್ಷಗಳ ತನ್ನ ತಪಸ್ಸನ್ನು ಮುಂದುವರಿಸಿದನು. ತಪಸ್ಸಿನ ಕೊನೆಗೆ ಅದರ ಫಲವನ್ನು ನೀಡಲು ದೇವತೆಗಳು ಬಂದರು. ಅವನಿಗೆ ಋಷಿ ಪದವಿ ದೊರೆಯಿತೆಂದು ಬ್ರಹ್ಮನು ಘೋಷಿಸಿದನು. ಅಂದರೆ ಇನ್ನೊಂದು ಹೆಜ್ಜೆ ಮುಂದೆ ಹೋದಂತೆ. ಇದರಿಂದ ಋಷಿಗೆ ತೃಪ್ತಿಯಾಗದೆ ಮತ್ತೆ ತಪಸ್ಸಿಗೆ ತೊಡಗಿದನು. ಬಹಳ ಕಾಲವಾದ ಮೇಲೆ ಮೇನಕೆ ಎಂಬ ಅಪ್ಸರೆಯಲ್ಲಿ ಆತ ಮೋಹಗೊಂಡನು. ಅಲ್ಲಿದ್ದ ಪುಷ್ಕರಣಿಯಲ್ಲಿ ಸ್ನಾನಮಾಡಲು ಬಂದಿದ್ದ ಆಕೆ ವಿಶ್ವಾಮಿತ್ರನ ಮುಂದೆ ಸುಳಿದಳು. ಮೋಡದ ನಡುವಿನ ಮಿಂಚಿನಂತೆ ಅವಳ ಸೌಂದರ್ಯವು ಅವನ ಕಣ್ಣನ್ನು ಕೋರೈಸಿತು. ಅವಳ ಮೋಹಪಾಶದಲ್ಲಿ ಬಂಧಿತನಾಗಿ ತನ್ನ ಆಶ್ರಯಕ್ಕೆ ಅವಳನ್ನು

ಕರೆತಂದು ಹತ್ತು ವರ್ಷಗಳ ಕಾಲ ಸಂಗಾತಿಯನ್ನಾಗಿ ಇರಿಸಿಕೊಂಡನು. ಅವನ ತಪ್ಪಸ್ಸನ್ನು ಕೆಡಿಸಿದ ಮಾಟಗಾತಿಯಂತೆ ಅವನನ್ನು ಆಕೆ ವಶಮಾಡಿಕೊಂಡಳು. ಬಹಳ ಕಾಲ ಕಳೆದ ಮೇಲೆ ತನ್ನ ಕಳಂಕಿತ ಜೀವನವನ್ನು ಕಂಡು ಅವಮಾನದಿಂದ ದುಃಖಿತನಾದನು. ತನ್ನ ತಪಸ್ಸನ್ನು ಕೆಡಿಸಲು ದೇವತೆಗಳು ಹಾಕಿದ ಹಂಚಿಕೆ ಇದೆಂಬುದನ್ನು ಗುರುತಿಸಿದನು. ಅಪ್ಸರೆಯನ್ನು ಉಪಾಯವಾಗಿ ನಿವಾರಿಸಿ ಉತ್ತರಾಭಿಮುಖದ ಪರ್ವತಗಳತ್ತ ಪ್ರಯಾಣ ಮಾಡಿದನು. ಕೌಶಿಕ ನದಿಯ ದಂಡೆಯಲ್ಲಿ ಒಂದು ಸಾವಿರ ವರ್ಷಗಳ ಉಗ್ರ ತಪಸ್ಸನ್ನು ಆಚರಿಸಿದನು. ಅವನ ತಪಸ್ಸಿನ ಪ್ರಗತಿಯನ್ನು ಕಂಡ ದೇವತೆಗಳು ಕಳವಳಗೊಂಡು ಮಹರ್ಷಿ ಪದವಿಯನ್ನು ನೀಡಬೇಕೆಂದು ತೀರ್ಮಾನಿಸಿದರು. ಬ್ರಹ್ಮನು ಎಲ್ಲ ದೇವತೆಗಳ ಅಭಿಪ್ರಾಯವನ್ನು ಅನುಮೋದಿಸಿ ವಿಶ್ವಾಮಿತ್ರನು ಮಹರ್ಷಿಯಾದನೆಂದು ಘೋಷಿಸಿದನು. ತಲೆಬಾಗಿ ಕೈ ಜೋಡಿಸಿ ವಿಶ್ವಾಮಿತ್ರನು ಉತ್ತರಿಸಿದನು: ತನ್ನ ಇಂದ್ರಿಯಗಳನ್ನು ಸಂಪೂರ್ಣ ನಿಗ್ರಹಿಸಿ ತಪಸ್ಸನ್ನಾಚರಿಸಿರುವುದೇ ಆಗಿದ್ದಲ್ಲಿ ಅಸದೃಶವಾದ ಬ್ರಹ್ಮ ಋಷಿ ಪದವಿಯನ್ನು ತನಗೆ ನೀಡಬೇಕೆಂದು ಕೇಳಿದನು. ಆಗ ಬ್ರಹ್ಮನು ಉತ್ತರಿಸಿ ವಿಶ್ವಾಮಿತ್ರನು ಸಂಪೂರ್ಣ ಇಂದ್ರಿಯ ನಿಗ್ರಹಿಸುವ ಸಾಮರ್ಥ್ಯ ಪಡೆದಿಲ್ಲವೆಂದೂ, ಈ ನಿಟ್ಟಿನಲ್ಲಿ ಇನ್ನೂ ಹೆಚ್ಚಿನ ಪ್ರಯತ್ನ ಮಾಡಬೇಕಾಗಿದೆ ಎಂದೂ ಹೇಳಿದನು. ಬಳಿಕ ಋಷಿಯು ಅತ್ಯಂತ ಘೋರವಾದ ತಪಸ್ಸಿನಲ್ಲಿ ನಿರತನಾದನು. ಕೈಗಳನ್ನು ಮೇಲೆತ್ತಿ ಆಧಾರವಿಲ್ಲದೆ ನಿಂತು ತಪಸ್ಸುಮಾಡುವುದು. ಗಾಳಿಯನ್ನೇ ಆಹಾರವಾಗಿ ಸೇವಿಸುತ್ತಾ ಬೇಸಿಗೆಯಲ್ಲಿ ಪಂಚಾಗ್ನಿಗಳ ನಡುವೆ ನಿಂತು ತಪಸ್ಸು (ಅಂದರೆ ನಾಲ್ಕು ಕಡೆ ಬೆಂಕಿ, ಮೇಲೆ ಸೂರ್ಯನ ಬಿಸಿಲು) ಮಾಡುವುದು, ಮಳೆಗಾಲದಲ್ಲಿ ಬಯಲಿನಲ್ಲಿ ನಿಂತು, ಚಳಿಗಾಲದಲ್ಲಿ ಅಹೋ ರಾತ್ರಿ ನೀರಿನ ಕಾಲುವೆಗಳಲ್ಲಿ– ಹೀಗೆ ಒಂದು ಸಾವಿರ ವರ್ಷ ಉಗ್ರ ತಪಸ್ಸು ಮಾಡಿದನು. ವಿಶ್ವಾಮಿತ್ರನು ಸಂಗ್ರಹಿಸುತ್ತಿರುವ ಅರ್ಹತೆಯಿಂದ ಮತ್ತು ಅದರ ಪರಿಣಾಮವಾಗಿ ಲಭ್ಯವಾಗುತ್ತಿರುವ ಶಕ್ತಿ ಸಾಮರ್ಥ್ಯಗಳಿಂದ ಇಂದ್ರ ಮತ್ತು ಇತರ ದೇವತೆಗಳು ದುಃಖಿತರಾದರು. ಸ್ವರ್ಗಾಧಿಪತಿಯು ರಂಭೆಯನ್ನು ಕರೆದು ತನ್ನ ಸೌಂದರ್ಯದಿಂದ ಮುನಿಯ ತಪಸ್ಸನ್ನು ಭಂಗಗೊಳಿಸಲು ಹೇಳಿದನು. ದುಸ್ಸಾಧ್ಯವಾದ ಮುನಿಯ ಕೋಪಕ್ಕೆ ಅಂಜಿ ರಂಭೆಯು ಮೊದಲು ಹಿಂಜರಿದಳು. ಆದರೆ ಇಂದ್ರನು ಅವಳನ್ನು ಒತ್ತಾಯಿಸಿ, ತಾನೂ, ಮನ್ಮಥನೂ ಅವಳ ನೆರವಿಗೆ ಮರೆಯಲ್ಲಿ ನಿಂತು ಋಷಿಯ ತಪಸ್ಸನ್ನು ಕೆಡಿಸಲು ಅವಳಿಗೆ ಸಹಾಯ ಮಾಡುವುದಾಗಿ ಭರವಸೆ ಕೊಟ್ಟಾಗ ಆಕೆ ಒಪ್ಪಿಕೊಂಡಳು. ವಿಶ್ವಾಮಿತ್ರನು ಈ ಪ್ರಯತ್ನದಿಂದ ಸ್ವಲ್ಪ ವಿಚಲಿತನಾದರೂ ಕೂಡಲೆ ದೇವತೆಗಳ ಹಂಚಿಕೆಯನ್ನು ತಿಳಿದು ರಂಭೆಗೆ ಒಂದು ಸಾವಿರ ವರ್ಷಗಳ ಕಾಲ ಶಿಲೆಯಾಗಿ ಬಿದ್ದಿರುವಂತೆ ಶಪಿಸಿದನು. ರಂಭೆಯು ಕಲ್ಲಾಗುತ್ತಿದ್ದಂತೆಯೇ ಮನ್ಮಥ ಮತ್ತು ಇಂದ್ರರು ಮೆಲ್ಲಗೆ ಹಿಂದೆ ಸರಿದರು. ಹೀಗೆ ವಿಷಯಾಪೇಕ್ಷೆಯನ್ನು ವಿಶ್ವಾಮಿತ್ರನು ಗೆದ್ದನಾದರೂ, ಕೋಪದ ವಶಕ್ಕೆ ಸಿಕ್ಕಿದನಾದುದರಿಂದ ತಪಸ್ಸಿನ ಸಂಪೂರ್ಣ ಫಲವನ್ನು ಪಡೆಯಲಿಲ್ಲ. ಮತ್ತೆ ತಪಸ್ಸಿಗೆ ಆರಂಭಿಸಿದ. ತನ್ನ ಅದಮ್ಯ ಸ್ವಭಾವವನ್ನು ನಿಯಂತ್ರಿಸತೊಡಗಿದ. ಮೌನವಾಗಿರುತ್ತ ನೂರು ವರ್ಷಗಳ ಕಾಲ ಉಸಿರಾಟವನ್ನೂ ನಿಯಂತ್ರಿಸಿ ದೇಹವನ್ನು ಬತ್ತಿಸಿದ. ಬ್ರಾಹ್ಮಣತ್ವವನ್ನು ಪಡೆಯುವವರೆಗೆ ಅನ್ನಾಹಾರಗಳನ್ನೂ ಉಸಿರಾಟವನ್ನೂ ನಿಲ್ಲಿಸಲು ನಿರ್ಧರಿಸಿದ. ಹಿಮಾಲಯುವನ್ನು ಬಿಟ್ಟು ಪೂರ್ವಾಭಿಮುಖವಾಗಿ ಪಯಣ ಬೆಳೆಸಿ, ಅಲ್ಲಿ ಇತಿಹಾಸದಲ್ಲಿ ಕಂಡರಿಯದ ಉಗ್ರಯೋಗದಲ್ಲಿ ನಿರತನಾದ. ಒಂದು ಸಾವಿರ ವರ್ಷಗಳ ಕಾಲ ಮೌನ ದೀಕ್ಷೆವಹಿಸಿದ. ಅನೇಕ ಆತಂಕಗಳನ್ನು ಗೆದ್ದು ಕೊನೆಗೆ ಪರಿಪೂರ್ಣತೆಯನ್ನು ಸಾಧಿಸಿದ. ಈ ಮಾರ್ಗದಲ್ಲಿ ತಪಸ್ಸು ಮುಗಿಯಲು, ಸೇವಿಸಲು ಸ್ವಲ್ಪ ಆಹಾರವನ್ನು ಸಿದ್ಧಪಡಿಸಿದ. ಆಗ ಬ್ರಾಹ್ಮಣ ವೇಷದ ಇಂದ್ರನು ಅಲ್ಲಿಗೆ ಬಂದು ಅದನ್ನು ಬೇಡಿದಾಗ ಅದನ್ನು ಕೊಟ್ಟುಬಿಟ್ಟನು. ಆಹಾರವನ್ನು ತನಗಾಗಿ ಸಿದ್ಧಪಡಿಸಿದ್ದರೂ ಮೌನದೀಕ್ಷೆಯಲ್ಲಿದ್ದರಿಂದ ಏನನ್ನೂ ಹೇಳಲಿಲ್ಲ. ಉಪವಾಸವನ್ನು

ಮುಂದುವರಿಸಿದನು. ಉಸಿರಾಟವನ್ನು ನಿಲ್ಲಿಸಿ ತಪಸ್ಸು ಮಾಡುತ್ತಿದ್ದರಿಂದ ಅವನ ನೆತ್ತಿಯಿಂದ ಹೊಗೆಯಾಡತೊಡಗಿತು. ಮೂರು ಲೋಕಗಳೂ ತಲ್ಲಣಿಸಿದವು. ದೇವತೆಗಳು, ಋಷಿಗಳು ಮುಂತಾದವರು ಬ್ರಹ್ಮನಲ್ಲಿ ಮೊರೆಯಿಟ್ಟರು. "ವಿಶ್ವಾಮಿತ್ರ ಮಹಾಮುನಿಯು ಎಲ್ಲ ಆಕರ್ಷಣೆಗಳನ್ನೂ ಗೆದ್ದು ತನ್ನ ತಪಸ್ಸನ್ನು ಮುಂದುವರಿಸುತ್ತಿದ್ದಾನೆ. ಅವನ ಅಭೀಷ್ಟೆ ಈಡೇರದಿದ್ದರೆ ತಪಸ್ಸಿನ ಶಕ್ತಿಯಿಂದ ಮೂರು ಲೋಕಗಳೂ ನಾಶವಾಗುತ್ತವೆ. ಜಗತ್ತಿನೆಲ್ಲೆಡೆಯಲ್ಲೂ ಅಂಧಕಾರ ಕವಿಯುತ್ತಿದೆ. ಸಮುದ್ರಗಳೆಲ್ಲ ಉಕ್ಕೇರುತ್ತಿವೆ. ಪರ್ವತಗಳು ಕುಸಿಯುತ್ತಿವೆ. ಬಿರುಗಾಳಿ ಎದ್ದಿದೆ. ಭೂಕಂಪನವಾಗುತ್ತಿದೆ. ಓ, ಬ್ರಹ್ಮನೇ ನಾವು ಸಹಿಸಲಾರೆವು. ಮಾನವ ಕೋಟಿಯು ದೈವದಲ್ಲಿ ನಂಬಿಕೆ ಕಳೆದುಕೊಳ್ಳದಂತೆ ಭರವಸೆ ನೀಡು.... ತೇಜಸ್ವಿಯಾದ ಮಹಾಮುನಿಯ ಯೋಗಶಕ್ತಿಯು ಎಲ್ಲವನ್ನು ನಾಶಗೊಳಿಸುವ ಮೊದಲು ಅವನನ್ನು ಪ್ರಸನ್ನಗೊಳಿಸು". ಆಗ ದೇವತೆಗಳು ಬ್ರಹ್ಮನ ನೇತೃತ್ವದಲ್ಲಿ ವಿಶ್ವಾಮಿತ್ರನನ್ನು ಮಾತನಾಡಿಸಿದರು. "ಬ್ರಾಹ್ಮಣ ಋಷಿಗೆ ಜಯವಾಗಲಿ. ನಿನ್ನ ತಪಸ್ಸಿಗೆ ನಾವು ಮೆಚ್ಚಿದ್ದೇವೆ. ಓ ಕೌಶಿಕನೇ ನಿನ್ನ ತೀವ್ರವಾದ ಅಭೀಪ್ಸೆಯಂತೆ ಬ್ರಾಹ್ಮಣತ್ವವನ್ನು ಗಳಿಸಿರುವೆ. ಮರುತರೊಡಗೂಡಿ ಬಂದಿರುವ ಬ್ರಹ್ಮನಾದ ನಾನು ನಿನಗೆ ದೀರ್ಘಾಯುಷ್ಯವನ್ನು ಕರುಣಿಸಿದ್ದೇವೆ. ಎಲ್ಲ ಶ್ರೇಯಸ್ಸುಗಳೂ ನಿನಗೆ ಸಾಧಿತವಾಗಲಿ. ನಿನಗೆ ಇಷ್ಟ ಬಂದ ಕಡೆ ನೀನು ಪ್ರಯಾಣ ಬೆಳೆಸು." ವಿಶ್ವಾಮಿತ್ರ ಋಷಿಗೆ ಪರಮಾನಂದವಾಯಿತು. ದೇವತೆಗಳಿಗೆ ವಂದಿಸಿ ಹೇಳಿದ: "ನಾನು ಬ್ರಾಹ್ಮಣತ್ವವನ್ನು ಮತ್ತು ದೀರ್ಘಾಯುಷ್ಯವನ್ನು ಪಡೆದಿರುವುದೇ ಆದರೆ ಅನುಭಾವಿ ಏಕೋಚ್ಚಾರದ 'ಓಂಕಾರ' ಮತ್ತು ಯಜ್ಞಾಹುತಿಯ ತತ್ವವಾದ 'ವಶತ್ಕಾರ'ವು ಮತ್ತು ವೇದಗಳು ನನ್ನ ಅಧಿಕಾರವನ್ನು ಮನ್ನಿಸಲಿ. ಬ್ರಾಹ್ಮಣಪುತ್ರನೂ ಕ್ಷತ್ರವೇದ ಮತ್ತು ಬ್ರಹ್ಮವೇದಗಳಲ್ಲಿ ನಿಷ್ಣಾತನೂ ಆದ ವಸಿಷ್ಠನು ನನ್ನನ್ನು ಹಾಗೆ ಕರೆಯಲಿ...." ಆಗ ವಸಿಷ್ಠನನ್ನು ದೇವತೆಗಳು ಸಂಪ್ರೀತಗೊಳಿಸಿದಾಗ ಆತನೂ ಒಪ್ಪಿ ವಿಶ್ವಾಮಿತ್ರನನ್ನು ಅಂಗೀಕರಿಸಲು ಬ್ರಹ್ಮರ್ಷಿಯ ಎಲ್ಲ ವಿಶೇಷ ಹಕ್ಕುಗಳನ್ನೂ ಅವನು ಪಡೆದನು. ಬ್ರಹ್ಮರ್ಷಿತ್ವವನ್ನು ಪಡೆದ ವಿಶ್ವಾಮಿತ್ರನೂ ವಸಿಷ್ಠನನ್ನು ಯಥೋಚಿತವಾಗಿ ಗೌರವಿಸಿದನು.

ಎರಡನೆಯ ಘಟನೆಯು ಕ್ಷತ್ರಿಯರಿಂದ ನಡೆದ ಬ್ರಾಹ್ಮಣರ ವಧೆಗೆ ಸಂಬಂಧಿಸಿದ ಉಲ್ಲೇಖ. 'ಮಹಾಭಾರತ'ದ ಆದಿಪರ್ವದಿಂದ ಈ ವಿವರವನ್ನು ತೆಗೆದುಕೊಳ್ಳಲಾಗಿದೆ.

> "ಕೃತವೀರ್ಯನೆಂಬ ಹೆಸರಿನ ಒಬ್ಬ ರಾಜನಿದ್ದ. ಅವನ ಉದಾರತೆಯಿಂದ ಭೃಗುಗಳು ವೇದಗಳನ್ನು ಕಲಿತರು, ಅವನ ಪುರೋಹಿತರಾಗಿ ಕೆಲಸ ಮಾಡಿದರು ಮತ್ತು ಧನಧಾನ್ಯಗಳಿಂದ ಸಮೃದ್ಧಿಹೊಂದಿದರು. ಅವನು ಸ್ವರ್ಗಸ್ಥನಾದ ಬಳಿಕ ಅವನ ವಂಶದವರಿಗೆ ಧನದ ಅಗತ್ಯವಾಯಿತು. ಭೃಗುಗಳ ಹತ್ತಿರ ಐಶ್ವರ್ಯವಿರುವ ವಿಚಾರ ತಿಳಿದ ಕೃತವೀರ್ಯನ ವಂಶದವರು ಅವರಲ್ಲಿ ಬಂದು ಬೇಡಿದರು. ಭೃಗುಗಳಲ್ಲಿ ಕೆಲವರು ತಮ್ಮಲ್ಲಿದ್ದ ಹಣವನ್ನು ಹೂತಿಟ್ಟಿದ್ದರು, ಮತ್ತೆ ಕೆಲವರು ಬ್ರಾಹ್ಮಣರಿಗಾಗಿ ವಿನಿಯೋಗಿಸಿದ್ದರು. ಕ್ಷತ್ರಿಯರಿಗೆ ಹೆದರಿದ ಕೆಲವರು ಅವರು ಕೇಳಿದುದನ್ನು ಕೊಟ್ಟುಬಿಟ್ಟರು. ಒಮ್ಮೆ ಕ್ಷತ್ರಿಯನೊಬ್ಬನು ಭೂಮಿಯನ್ನು ಅಗೆಯುತ್ತಿರುವಾಗ ಭೃಗುವಿನ ಮನೆಯಲ್ಲಿ ಹೂತಿಟ್ಟ ನಿಧಿ ದೊರೆಯಿತು. ಅಲ್ಲಿ ಸೇರಿದ್ದ ಕ್ಷತ್ರಿಯರೆಲ್ಲರನ್ನೂ ಮಾತೃ ಗರ್ಭದಲ್ಲಿದ್ದ ಮಕ್ಕಳನ್ನೂ ಸೇರಿದಂತೆ ಕೊಂದುಹಾಕಿದರು. ವಿಧವೆಯರೆಲ್ಲ ಹೇಗೋ ತಪ್ಪಿಸಿಕೊಂಡು ಹಿಮಾಲಯದತ್ತ ಓಡಿ ಹೋದರು. ಅವರಲ್ಲಿ ಒಬ್ಬಳು ಇನ್ನೂ ಹುಟ್ಟದಿದ್ದ ಮಗುವನ್ನು ತನ್ನ ತೊಡೆಯಲ್ಲಿ ಬಚ್ಚಿಟ್ಟಿದ್ದಳು. ಬ್ರಾಹ್ಮಣ ಗೂಢಚಾರಿಣಿಯೊಬ್ಬಳಿಂದ ಈ ವಿಚಾರ ತಿಳಿದ ಕ್ಷತ್ರಿಯರು ಅದನ್ನು ಕೊಲ್ಲಲು ಹುಡುಕಿದರು.

ತಾಯ ತೊಡೆಯಿಂದ ಕೆಳಗೆ ಬಿದ್ದ ಮಗುವಿನ ತೇಜಸ್ಸಿನಿಂದ ಕೋರೈಸಿದ ಬೆಳಕಿನಿಂದಾಗಿ ಕೊಲೆಗಾರರು ಕುರುಡಾದರು. ಪರ್ವತದ ದಾರಿಗಳಲ್ಲಿ ತಬ್ಬಿಬ್ಬಾಗಿ ಕೆಲವು ಕಾಲ ಅಲೆದ ಮೇಲೆ, ಅವರು ತಮ್ಮ ದೃಷ್ಟಿಯನ್ನು ಮರಳಿ ನೀಡುವಂತೆ ತಾಯಿ ಮಗುವಿಬ್ಬರನ್ನೂ ಬೇಡಿಕೊಂಡರು. ಆಕೆಯು ತನ್ನ ಅದ್ಭುತ ಶಿಶುವಾದ ಅರುವನಲ್ಲಿಗೆ ಅವರನ್ನು ಕಳಿಸಿದಳು. ಅರುವನಲ್ಲಿ ಎಲ್ಲ ವೇದಗಳೂ ಆರು ವೇದಾಂಗಗಳು ಸಾಕಾರಗೊಂಡು ನೆಲೆಯಾಗಿದ್ದವು. ತನ್ನ ಬಂಧುಗಳ ಕೊಲೆಗೆ ಪ್ರತಿಯಾಗಿ ಅವನೇ ಕ್ಷತ್ರಿಯರ ಕಣ್ಣುಗಳನ್ನು ನಂದಿಸಿದ್ದನಾದುದರಿಂದ ಅವನೇ ಮರಳಿ ದೃಷ್ಟಿಯನ್ನು ಕೊಡಬಹುದಿತ್ತು. ಅದರಂತೆ ಅವರು ಬೇಡಿದುದರಿಂದ ದೃಷ್ಟಿ ಮರಳಿ ಬಂದಿತು. ಅರುವನಾದರೋ ಎಲ್ಲ ಜೀವಿಗಳ ನಾಶವನ್ನು ಧ್ಯಾನಿಸಿ, ಭೃಗುಗಳ ಕೊಲೆಗೆ ಪ್ರತೀಕಾರವಾಗಿ ಉಗ್ರ ತಪಸ್ಸಿಗೆ ತೊಡಗಿದನು. ಇದರಿಂದ ದೇವಾಸುರ ಮಾನವರೆಲ್ಲ ತತ್ತರಿಸಿಹೋದರು. ಅವನ ವಂಶಸ್ಥರೇ (ಪಿತೃದೇವತೆಗಳು) ಪ್ರತ್ಯಕ್ಷವಾಗಿ, ಅವನ ಗುರಿಯಿಂದ ವಿಮುಖಗೊಳಿಸಲು ತಮಗೆ ಕ್ಷತ್ರಿಯರ ಮೇಲೆ ಯಾವುದೇ ಪ್ರತೀಕಾರ ಬೇಕಿಲ್ಲವೆಂದು ಹೇಳಿದರು. ಕೊಲೆಗಾರ ಕ್ಷತ್ರಿಯರಿಂದ ವಧೆಯಾಗಲು ಕಾರಣ, ನಮ್ಮ ಬಲಹೀನತೆಯಲ್ಲ, ವೃದ್ಧಾಪ್ಯದಿಂದ ದುಃಖಿತರಾಗಿದ್ದ ನಾವೇ ಅವರಿಂದ ಕೊಲೆಯಾಗಬಯಸಿದೆವು. ಒಬ್ಬ ಭೃಗುವಿನ ಮನೆಯಲ್ಲಿ ಹೂತಿಟ್ಟಿದ್ದ ನಿಧಿಯೂ ಉದ್ದೇಶಪೂರ್ವಕವಾಗಿಯೇ ಅವರನ್ನು ಕೆರಳಿಸಲು ಅದರಲ್ಲಿ ಆಸಕ್ತಿಯಿದ್ದವರೇ ಮಾಡಿದ ಕೈವಾಡವಾಗಿತ್ತೆಂದೂ ಹೇಳಿದರು. ಸ್ವರ್ಗಾಪೇಕ್ಷೆಯಲ್ಲಿದ್ದ ನಮಗೆ ಹಣದಿಂದ ಏನಾಗಬೇಕು? ಈ ಮಾರ್ಗವನ್ನು ಏಕೆ ಹುಡುಕಿದೆವೆಂದರೆ ಆತ್ಮಹತ್ಯೆಯ ಪಾಪಕ್ಕೆ ಪಕ್ಕಾಗಲು ತಮಗೆ ಇಷ್ಟವಿರಲಿಲ್ಲವೆಂದೂ ಅವರು ಹೇಳಿದರು. ಆದುದರಿಂದ ಅರುವನು ತನ್ನ ಕ್ರೋಧವನ್ನು ಬಿಟ್ಟು ಪ್ರತೀಕಾರವನ್ನು ಧ್ಯಾನಿಸಬಾರದಾಗಿ ಹೇಳಿದರು. "ಕ್ಷತ್ರಿಯರನ್ನು ನಾಶಮಾಡಬೇಡ ಮಗನೇ! ಅಥವಾ ಏಳುಲೋಕವನ್ನು ನಾಶಮಾಡಲೂ ಹವಣಿಸಬೇಡ. ಪ್ರಜ್ವಲಿಸಿರುವ ನಿನ್ನ ಕ್ರೋಧವನ್ನು ನಿಯಂತ್ರಿಸು; ಅದು ತಪಸ್ಸಿನ ಶಕ್ತಿಯನ್ನು ಕುಂದಿಸುತ್ತದೆ." ಅರುವನಾದರೋ ತನ್ನ ಬೆದರಿಕೆಯನ್ನು ಕಾರ್ಯಗತಗೊಳಿಸದೆ ಬಿಡುವುದಿಲ್ಲವೆಂದು ಹಠಹಿಡಿದನು. ಅವನ ಕೋಪವನ್ನು ಯಾವುದಾದರೊಂದು ಗುರಿಯ ಮೇಲೆ ತಿರುಗಲು ಬಿಡದಿದ್ದರೆ ತನ್ನನ್ನೇ ಆಹುತಿ ತೆಗೆದುಕೊಂಡೀತೆಂದು ಹೇಳಿದನು. ನ್ಯಾಯ, ಕರ್ತವ್ಯ ಮತ್ತು ಪರಿಹಾರಗಳ ಆಧಾರದ ಮೇಲೆ ವಾದಿಸಿ ತನ್ನ ವಂಶದವರು ಪ್ರತಿಪಾದಿಸಿದಂತೆ ಕ್ಷಮಿಸಲು ಒಪ್ಪಲಿಲ್ಲ. ಆಗ ಅವನ ಪಿತೃಗಳು ಅವನ ಕ್ರೋಧವನ್ನು ಸಮುದ್ರದಲ್ಲಿ ಎಸೆದುಬಿಡಲು ಹೇಳಿದರು. ಜಲಾಂಶಗಳಲ್ಲಿ ಅದು ತನ್ನ ಆಹುತಿಗಳನ್ನು ಕಂಡುಕೊಳ್ಳಲಿ. ಅದರ ಮೂಲಕ ಅವನ ಬೆದರಿಕೆಯೂ ಪೂರ್ಣಗೊಂಡಂತಾಗುತ್ತದೆ" ಎಂದರು.

ಮೂರನೆಯ ಘಟನೆಯು ಬ್ರಾಹ್ಮಣರಿಂದ ವಧೆಗೀಡಾದ ಕ್ಷತ್ರಿಯರಿಗೆ ಸಂಬಂಧಿಸಿದೆ. ಈ ಕಥೆಯನ್ನು 'ಮಹಾಭಾರತ'ದಲ್ಲಿ ಹಲವೆಡೆ ಹೇಳಲಾಗಿದೆ.

ಮಾಹಿಷ್ಮತಿಯ ರಾಜನಾದ ಮಹಾಪರಾಕ್ರಮಶಾಲಿ ಸಾವಿರ ತೋಳುಗಳನ್ನುಳ್ಳ ಕಾರ್ತವೀರ್ಯನು ಜಗತ್ತಿಗೇ ಒಡೆಯನಾಗಿದ್ದನು. ಜಯಿಸಲಸಾಧ್ಯನಾದ ಪರಾಕ್ರಮಶಾಲಿಯಾದ ಈ ಹೈಹಯನು ಸಮುದ್ರದಿಂದ ಸುತ್ತುವರಿಯಲ್ಪಟ್ಟ ಭೂಮಂಡಲವನ್ನು ಮತ್ತು ಎಲ್ಲ

ಖಂಡಗಳನ್ನು ತನ್ನ ಆಳ್ವಿಕೆಗೆ ಒಳಪಡಿಸಿದ್ದನು. ಮುನಿ ದತ್ತಾತ್ರೇಯನಿಂದ ಅವನಿಗೆ ವರವಿತ್ತು. ಯುದ್ಧಕ್ಕೆ ಹೋದಾಗಲೆಲ್ಲ ಸಾವಿರ ತೋಳುಗಳು ಅವನಿಗೆ ಮೂಡುತ್ತಿದ್ದವು. ಇದರಿಂದ ಇಡಿ ಭೂಮಂಡಲವನ್ನೇ ಗೆದ್ದು ಆಳುವ ಸಾಮರ್ಥ್ಯ ಅವನಿಗಿತ್ತು. ನ್ಯಾಯಬದ್ಧ ಆಳ್ವಿಕೆಯನ್ನು ನಡೆಸುವಲ್ಲಿ ಸಂದೇಹ ತಲೆದೋರಿದರೆ ಪೂಜ್ಯರ ಮಾರ್ಗದರ್ಶನ ಪಡೆಯುವ ಭರವಸೆಯನ್ನೂ ಆತ ಕೊಟ್ಟಿದ್ದನು. ಸೂರ್ಯನಂತೆ ಪ್ರಜ್ವಲಿಸುತ್ತಾ ಕೀರ್ತಿಶಾಲಿಯಾದ ಅವನು ರಥವನ್ನು ಹತ್ತಿ ಪರಾಕ್ರಮದಿಂದ ಮದಿಸಿ ಹೀಗೆ ಘೋಷಿಸಿದನು: "ತನ್ನಂತೆ ಅಜೇಯನೂ, ಪರಾಕ್ರಮಿಯೂ ಧೈರ್ಯಶಾಲಿಯೂ, ಕೀರ್ತಿ ಸಾಹಸ ಮತ್ತು ವೈಭವಶಾಲಿಯೂ ಯಾರಿದ್ದಾರೆ?" ಆಗ ಆಕಾಶದಿಂದ ಅಶರೀರವಾಣಿ ಮೊಳಗಿತು. "ಮೂರ್ಖ! ನಿನಗೆ ಗೊತ್ತಿಲ್ಲವೇ? ಬ್ರಾಹ್ಮಣನೇ ಕ್ಷತ್ರಿಯನಿಗಿಂತ ಶ್ರೇಷ್ಠನೆಂಬುದು? ಕ್ಷತ್ರಿಯ ರಾಜ್ಯವನ್ನಾಳುವುದು ಬ್ರಾಹ್ಮಣರ ನೆರವಿನಿಂದಲ್ಲವೇ?" ಕಾರ್ತವೀರ್ಯಾರ್ಜುನನು ಉತ್ತರಿಸಿದ: "ನಾನು ಮನಸ್ಸು ಮಾಡಿದರೆ ಜೀವಿಗಳನ್ನು ಸೃಷ್ಟಿಸಬಲ್ಲೆ. ಕೋಪ ಬಂದರೆ ನಾಶಮಾಡಬಲ್ಲೆ. ಆಲೋಚನೆ, ಮಾತು ಮತ್ತು ಕ್ರಿಯೆಗಳಲ್ಲಿ ನನಗಿಂತ ಶ್ರೇಷ್ಠನಾದ ಯಾವ ಬ್ರಾಹ್ಮಣನೂ ಇಲ್ಲ. ಮೊದಲ ಸೂಚನೆಯಂತೆ ಕ್ಷತ್ರಿಯರೂ ಶ್ರೇಷ್ಠರೆಂದು ನೀನೇ ಹೇಳಿರುವೆ. ಅವರವರ ಸ್ಥಾನಗಳ ಆಧಾರದ ಮೇಲೆ ನೀನು ಹೇಳುತ್ತಿರುವೆ. ಆದರೆ ಶಕ್ತಿಯ ಆಧಾರದ ಮೇಲೆ ಹೇಳುವುದಾದರೆ ಅವರಿಬ್ಬರ ನಡುವೆ ವ್ಯತ್ಯಾಸವಿದೆ. ಬ್ರಾಹ್ಮಣರು ಕ್ಷತ್ರಿಯರ ಮೇಲೆ ಅವಲಂಬಿಸಿರುವರೇ ಹೊರತು ಬ್ರಾಹ್ಮಣರನ್ನು ಕ್ಷತ್ರಿಯರು ಅವಲಂಬಿಸಿಲ್ಲ. ವೇದಗಳ ನೆಪದಲ್ಲಿ ಬ್ರಾಹ್ಮಣರು ಕ್ಷತ್ರಿಯರ ಅಪ್ಪಣೆಯನ್ನೇ ಕಾಯುತ್ತಿರುತ್ತಾರೆ. ಜನಸಾಮಾನ್ಯರನ್ನು ರಕ್ಷಿಸುವ ನ್ಯಾಯದ ಹೊಣೆ ಕ್ಷತ್ರಿಯರ ಮೇಲಿದೆ. ಬ್ರಾಹ್ಮಣರ ಜೀವನ ಸಾಗುವುದೇ ಕ್ಷತ್ರಿಯರ ನೆರವಿನಿಂದ. ಹೀಗಿರುವಾಗ ಬ್ರಾಹ್ಮಣರನ್ನು ನಾನು ಯಾವಾಗಲೂ ನನ್ನ ಕೈಕೆಳಗೆ ಇರಿಸಿಕೊಂಡಿದ್ದೇನೆ. ತಮ್ಮ ಬಗೆಗೆ ಮಹಾ ದುರಭಿಪ್ರಾಯಗಳನ್ನು ಇರಿಸಿಕೊಂಡಿರುವ ಈ ಬ್ರಾಹ್ಮಣರು ಭಿಕ್ಷೆ ಬೇಡಿ ಹೊಟ್ಟೆಹೊರೆಯುತ್ತಾರೆ. ಸತ್ಯ ಹೇಳಿರುವವಳು ಆಕಾಶದಲ್ಲಿರುವ ಹೆಣ್ಣಾದ ಗಾಯತ್ರಿ. ಬ್ರಾಹ್ಮಣರ ಕೈ ಮೇಲಾಗಿರುವ ಈ ಜಗತ್ತನ್ನು ಬದಲಾಯಿಸಿ ಕ್ಷತ್ರಿಯರ ಕೈ ಮೇಲಾಗುವಂತೆ ನಾನು ಮಾಡಲೇನು? ಯುದ್ಧದಲ್ಲಿ ನನ್ನನ್ನು ಯಾರು ಎದುರಿಸಲಾರರು." ಅರ್ಜುನನ ಈ ಮಾತುಗಳನ್ನು ಕೇಳಿ ರಾತ್ರಿಯ ಅಂಧಕಾರದಲ್ಲಿ ಹೆಣ್ಣಿನ ಕೂಗು ಅಪಾಯಕಾರಿಯಾಗಿ ಕೇಳಿಸಿತು. ವಾಯುವು ಆಕಾಶದಲ್ಲಿ ನಿಡುಸುಯ್ಯುತ್ತಾ ಅರ್ಜುನನಿಗೆ ಹೇಳಿದನು: "ಈ ಪಾಪದ ಆಲೋಚನೆಯನ್ನು ತ್ಯಜಿಸು. ಬ್ರಾಹ್ಮಣರಿಗೆ ವಿಧೇಯನಾಗಿರು. ನೀನೇನಾದರೂ ಅವರಿಗೆ ತಪ್ಪಿ ನಡೆದುಕೊಂಡರೆ ನಿನ್ನ ಸಾಮ್ರಾಜ್ಯವು ಮುಳುಗಿಹೋಗುತ್ತದೆ. ನಿನ್ನನ್ನು ಅವರು ಸೋಲಿಸುತ್ತಾರೆ. ಶಕ್ತಿಶಾಲಿಗಳಾದ ಅವರು ನಿನ್ನನ್ನು ದೀನಗೊಳಿಸಿ ರಾಜ್ಯದಿಂದ ಓಡಿಸಿಬಿಡುತ್ತಾರೆ." ನೀನಾರು ಎಂದು ರಾಜ ಕೇಳಿದ. "ನಾನು ವಾಯು; ದೇವ ಸಂದೇಶವನ್ನು ಬಿತ್ತರಿಸುವವನು; ನಿನಗೆ ಶ್ರೇಯಸ್ಸಾಗುವಂತಹುದನ್ನು ಹೇಳಿದ್ದೇನೆ" ಎಂದು ವಾಯು ಉತ್ತರಿಸಿದ. ಅರ್ಜುನನು ಉತ್ತರವಾಗಿ "ನೀನು ಈ ದಿನ ಬ್ರಾಹ್ಮಣರ ಬಗೆಗೆ ಮಹಾ ಅಭಿಮಾನವನ್ನು ವ್ಯಕ್ತಪಡಿಸುತ್ತಿರುವೆ. ಆದರೆ ಬ್ರಾಹ್ಮಣರೂ ಇತರ ಭೂಲೋಕದ ಸಾಮಾನ್ಯ ಪ್ರಾಣಿಗಳಂತೆ ತಾನೆ?"

ಈ ರಾಜನೆ ಜಮದಗ್ನಿ ಋಷಿಯ ಮಗನಾದ ಪರುಶರಾಮನೊಂದಿಗೆ ಹೋರಾಡಿದವನು. ಈ ಹೋರಾಟದ ಇತಿಹಾಸ ಹೀಗಿದೆ:

"ಗಾಧಿ ಎಂದು ಕರೆಯಲಾಗುತ್ತಿದ್ದ ಕನ್ಯಾಕುಬ್ಜದ ಒಬ್ಬ ರಾಜನಿದ್ದ. ಅವನಿಗೆ ಸತ್ಯವತಿ ಎಂಬ ಮಗಳಿದ್ದಳು. ಈ ರಾಜಕುಮಾರಿಯನ್ನು ಋಚಿಕನೆಂಬ ತಪಸ್ವಿಗೆ ಕೊಟ್ಟು ವಿವಾಹ ಮಾಡಿದರು. ಅವರಿಗೆ ಜಮದಗ್ನಿ ಹುಟ್ಟಿದನು. ಮತ್ತೆ ಈ ಕಥೆ ಅದೇ ರೀತಿ ಪುನರಾವರ್ತನೆಗೊಳ್ಳುತ್ತದೆ. ಜಮದಗ್ನಿ ಸತ್ಯವತಿಯರಿಗೆ ಐದು ಜನ ಗಂಡು ಮಕ್ಕಳಿದ್ದರು. ಕೊನೆಯವನೇ ಮಹಾ ಪರಾಕ್ರಮಿ ಪರಶುರಾಮ. ತನ್ನ ತಂದೆಯ ಅಪ್ಪಣೆಯಂತೆ ತಾಯಿಯನ್ನು ಕೊಂದವನು. ಅಶುದ್ಧ ಆಲೋಚನೆಯಿಂದ ಪಾವಿತ್ರ್ಯ ಕಳೆದುಕೊಂಡ ಆಕೆಯನ್ನು ಕೊಲ್ಲಲು ಜಮದಗ್ನಿ ತನ್ನ ಮೊದಲ ನಾಲ್ಕು ಮಕ್ಕಳಿಗೆ ಹೇಳಿದಾಗ ಅವರು ಒಪ್ಪಲಿಲ್ಲವಾದುದರಿಂದ ತಂದೆಯ ಶಾಪಕ್ಕೆ ಬಲಿಯಾದರು. ಪಿತೃವಾಕ್ಯ ಪರಿಪಾಲನೆ ಮಾಡಿದ ಪರಶುರಾಮನ ಪ್ರಾರ್ಥನೆಯಂತೆ ಜಮದಗ್ನಿಯು ಅವನ ತಾಯಿಯನ್ನು ಬದುಕಿಸಿ ಅವನ ಅಣ್ಣಂದಿರಿಗೆ ವಿಶಾಪವನ್ನಿತ್ತು ವಿವೇಕ ಹುಟ್ಟಿಸಿದ. ಮಾತೃಹತ್ಯೆಯ ಪಾಪದಿಂದಲೂ ಅವನಿಗೆ ಮುಕ್ತಿ ದೊರೆತು ಅಜೇಯಶಕ್ತಿಯನ್ನು ದೀರ್ಘಾಯುಷ್ಯವನ್ನು ತಂದೆಯ ಆಶೀರ್ವಾದದಿಂದ ಪಡೆದ. ಕಾರ್ತವೀರ್ಯಾರ್ಜುನನ ಕಥೆಯೊಂದಿಗೆ ಪರಶುರಾಮನ ಚರಿತ್ರೆ ಇಲ್ಲಿ ಪ್ರಾರಂಭವಾಗುತ್ತದೆ. ಜಮದಗ್ನಿಯ ಆಶ್ರಮಕ್ಕೆ ಒಮ್ಮೆ ಬಂದಿದ್ದ ಕಾರ್ತವೀರ್ಯನನ್ನು ಋಷಿಪತ್ನಿಯು ಆದರದಿಂದ ಸತ್ಕರಿಸಿದಳು. ಈ ಅತಿಥಿ ಸತ್ಕಾರಕ್ಕೆ ಪ್ರತಿಯಾಗಿ ಕಾರ್ತವೀರ್ಯನು ಜಮದಗ್ನಿಯ ಯಜ್ಞಪಶುವಿನ ಕರುವನ್ನು ಹೊತ್ತುಕೊಂಡು ಹೋಗಿದ್ದಲ್ಲದೆ ಆಶ್ರಮದ ಗಿಡಮರಗಳನ್ನೆಲ್ಲಾ ಹಾಳುಗೆಡವಿದ. ಇದನ್ನು ಕೇಳಿದ ಪರಶುರಾಮನಿಗೆ ರೋಷವು ಉಕ್ಕೇರಿ ಕಾರ್ತವೀರ್ಯನ ಮೇಲೆ ಧಾಳಿ ಮಾಡಿ, ಸಾವಿರ ತೋಳುಗಳನ್ನು ಕತ್ತರಿಸಿ ಅವನನ್ನು ಸಂಹರಿಸಿದ. ಇದಕ್ಕೆ ಪ್ರತೀಕಾರವಾಗಿ ಕಾರ್ತವೀರ್ಯನ ಮಕ್ಕಳು ಪರಶುರಾಮನಿಲ್ಲದಿದ್ದ ವೇಳೆಯನ್ನು ನೋಡಿ ಜಮದಗ್ನಿಯನ್ನು ಕೊಂದುಹಾಕಿದರು.

ಹಿಂದಿರುಗಿದ ಮೇಲೆ ಸುದ್ದಿ ತಿಳಿದ ಪರಶುರಾಮನು ಜಮದಗ್ನಿಯ ಶವ ಸಂಸ್ಕಾರ ವಿಧಿಯನ್ನು ಪೂರೈಸಿದ. ಕ್ಷತ್ರಿಯ ಕುಲವನ್ನೇ ಸಂಪೂರ್ಣವಾಗಿ ನಾಶಮಾಡುವುದಾಗಿ ಶಪಥ ಮಾಡಿದ. ಅರ್ಜುನನ ಎಲ್ಲ ಮಕ್ಕಳನ್ನೂ ಅವರ ಹಿಂಬಾಲಕರನ್ನೂ ಕೊಂದು ತನ್ನ ಬೆದರಿಕೆಯನ್ನು ಮೊದಲು ಕಾರ್ಯಗತಗೊಳಿಸಿದ. ಇಪ್ಪತ್ತೊಂದು ಸಾರಿ ಭೂ ಪ್ರದಕ್ಷಿಣೆಮಾಡಿ ಕ್ಷತ್ರಿಯರನ್ನೆಲ್ಲಾ ಭೂಮಿಯ ಮೇಲಿನಿಂದ ಗುಡಿಸಿಹಾಕಿದ ಪರಶುರಾಮನು, ಅವರ ರಕ್ತದಿಂದ ಸಮಂತಪಂಚಕವೆಂಬ ಐದು ಸರೋವರಗಳನ್ನು ನಿರ್ಮಿಸಿದ. ಅದರ ಪ್ರಪಾತದ ನೊರೆಯಲ್ಲಿ ತನ್ನ ಕತ್ತಿಯನ್ನು ತೊಳೆದು ತೃಪ್ತಿಪಟ್ಟ. ತನ್ನ ಪಿತಾಮಹನಾದ ಋಚಿಕನನ್ನು ಮುಖಾಮುಖಿಯಾಗಿ ಕಂಡು ಮಾತನಾಡಿಸಿದ ಪರಶುರಾಮನು ಇಂದ್ರನನ್ನು ಯಾಗದ ಮೂಲಕ ತೃಪ್ತಿಪಡಿಸಿ ತಾನು ಗೆದ್ದಿದ್ದ ಭೂಮಂಡಲವನ್ನು ಯಾಗಪುರೋಹಿತರಾಗಿದ್ದ ಬ್ರಾಹ್ಮಣರಿಗೆ ದಾನ ಮಾಡಿದ. ಮಹಾಮುನಿ ಕಶ್ಯಪನಿಗೆ ಒಂದು ಚಿನ್ನದ ಬಲಿಪೀಠವನ್ನು ಅರ್ಪಿಸಿದ. ಹತ್ತು ಆಳುಗಳಷ್ಟು ಉದ್ದ ಮತ್ತು ಒಂಬತ್ತು ಆಳುಗಳಷ್ಟು ಎತ್ತರವಿದ್ದ ಅದನ್ನು ಕಶ್ಯಪನ ಅಪ್ಪಣೆ ಪಡೆದು ಬ್ರಾಹ್ಮಣರು ತಮ್ಮಲ್ಲಿಯೇ ಹಂಚಿಕೊಂಡರು. ಇದರಿಂದ ಅವರಿಗೆ ಖಂಡವಾಮನರೆಂದು ಹೆಸರಾಯಿತು. ಭೂಮಂಡಲವನ್ನು ಕಶ್ಯಪನಿಗೆ ದಾನಮಾಡಿದ ಪರಶುರಾಮ ಮಹೇಂದ್ರ ಪರ್ವತದ ಮೇಲೆ ವಾಸಮಾಡತೊಡಗಿದ. ಹೀಗೆ ಪರಶುರಾಮನಿಗೂ

ಕ್ಷತ್ರಿಯರಿಗೂ ಹೋರಾಟವಾಗಿ ಎಣೆಯಿಲ್ಲದ ಸಾಹಸಿಯಾದ ಅವನು ಭೂಮಂಡಲವನ್ನೆಲ್ಲಾ ಗೆದ್ದುಕೊಂಡ."

ಬ್ರಾಹ್ಮಣರಿಂದ ಕ್ಷತ್ರಿಯರು ನಿರ್ನಾಮಗೊಂಡ ಕಥೆಯ ಅಂಗವಾಗಿಯೇ ಮತ್ತೆ–ಕ್ಷತ್ರಿಯ ಕುಲವು ಚೇತರಿಸಿಕೊಂಡ ಬಗೆಯನ್ನೂ ಹೇಳಲಾಗಿದೆ. ಅದು ಹೀಗಿದೆ:

> "ಇಪ್ಪತ್ತೊಂದು ಬಾರಿ ಭೂಪ್ರದಕ್ಷಿಣೆ ಮಾಡಿ ಕ್ಷತ್ರಿಯರನ್ನು ನಿರ್ಮೂಲಗೊಳಿಸಿದ ಬಳಿಕ ಜಮದಗ್ನಿಪುತ್ರನು ಪರ್ವತಗಳಲ್ಲೆಲ್ಲಾ ಶ್ರೇಷ್ಠವಾದ ಮಹೇಂದ್ರ ಪರ್ವತದ ಮೇಲೆ ತಪಸ್ಸಿನಲ್ಲಿ ನಿರತನಾದನು. ಭೂಮಿಯಿಂದ ಕ್ಷತ್ರಿಯರನ್ನು ಅವನು ಮೂಲೋತ್ಪಾಟನೆ ಮಾಡಿದ ಮೇಲೆ ಅವರ ವಿಧವೆಯರು ಬ್ರಾಹ್ಮಣರಲ್ಲಿಗೆ ಬಂದು ಮಕ್ಕಳಿಗಾಗಿ ಬೇಡಿದರು. ಕಾಮುಕ ಭಾವನೆಗಳಿಂದ ಮುಕ್ತರಾಗಿದ್ದ ಈ ಧರ್ಮನಿರತ ಬ್ರಾಹ್ಮಣರು ಸೂಕ್ತ ಋತುಮಾನಗಳಲ್ಲಿ ಈ ಹೆಂಗಸರನ್ನು ಕೂಡಿದ ಪರಿಣಾಮವಾಗಿ ಗರ್ಭಿಣಿಯರಾದ ಅವರು ವೀರ ಕ್ಷತ್ರಿಯ ಬಾಲಕ ಬಾಲಕಿಯರಿಗೆ ಜನ್ಮವಿತ್ತರು. ಕ್ಷತ್ರಿಯ ಕುಲವು ಹೀಗೆ ಬೆಳೆಯಿತು. ಹೀಗೆ ಕ್ಷತ್ರಿಯ ಹೆಂಗಸರಲ್ಲಿ ಬ್ರಾಹ್ಮಣ ಗಂಡಸರೇ ಹುಟ್ಟಿಸಿದ ಸಂತಾನದ ಮೂಲಕ ಸಮೃದ್ಧಿಯಾಗಿ ಕ್ಷತ್ರಿಯ ಕುಲವು ಬೆಳೆದು ಚಿರಕಾಲ ಬಾಳಿತು. ಬಳಿಕ ಬ್ರಾಹ್ಮಣರಿಗೆ ಕೀಳೆನಿಸಿದ ನಾಲ್ಕು ಜಾತಿಗಳು ಹುಟ್ಟಿಕೊಂಡವು."

ಹಿಂದೂಸ್ಥಾನದಂತಹ ಭೀಕರ ವರ್ಗ ಕಲಹಗಳ ಉಲ್ಲೇಖಗಳು ಬಹುಶಃ ಜಗತ್ತಿನ ಯಾವ ದೇಶದಲ್ಲಿಯೂ ಸಿಗುವುದಿಲ್ಲ. ಜಂಬ ಮತ್ತು ಗರ್ವದಿಂದ ಹೇಳಿಕೊಳ್ಳುವ ಪರಶುರಾಮನೇ ಇಪ್ಪತ್ತೊಂದು ಬಾರಿ ಭೂಪ್ರದಕ್ಷಿಣೆ ಮಾಡಿ ಕ್ಷತ್ರಿಯರನ್ನು ಕೊಂದವನು. ಮತ್ತು ಬ್ರಾಹ್ಮಣರೇ ಕ್ಷತ್ರಿಯ ಹೆಂಗಸರೊಡನೆ ಸಂಭೋಗಿಸಿ ಕ್ಷತ್ರಿಯ ಕುಲವನ್ನು ಬೆಳೆಸಿದವರು.

ಈ ವರ್ಗ ಕಲಹವು ಇಂಡಿಯಾದ ಪ್ರಾಚೀನ ಚರಿತ್ರೆಗೆ ಮಾತ್ರ ಸಂಬಂಧಿಸಿದೆಯೆಂದು ಯಾರೂ ತಿಳಿಯಬೇಕಿಲ್ಲ. ಎಲ್ಲ ಕಾಲದಲ್ಲಿಯೂ ಅದು ಗೋಚರಿಸುತ್ತದೆ. ಮರಾಠರ ಆಳ್ವಿಕೆಯಲ್ಲಿ ಮಹಾರಾಷ್ಟ್ರದಲ್ಲಿ ಅದು ಅಸ್ತಿತ್ವದಲ್ಲಿತ್ತು. ಮರಾಠ ಸಾಮ್ರಾಜ್ಯವು ನಾಶವಾಗಲು ಅದು ಕಾರಣವಾಯಿತು. ವಿವಿಧ ರಾಜ್ಯಗಳ ಜನತೆಯನ್ನು ಒಡೆದು ಹಾಕುವಂತಹ ಆಳವಾದ ಶಾಶ್ವತ ಬಿರುಕುಗಳನ್ನು ಉಳಿಸದೆ ಆಗೀಗ ಬಂದು ಹೋಗುವ ಚಿಕ್ಕ ಪುಟ್ಟ ಕಲಹಗಳೆಂದು ಈ ವರ್ಗ ಹೋರಾಟವನ್ನು ಯಾರೂ ತಿಳಿಯಬಾರದು. ಅವು ತತ್ಕಾಲೀನ ವಿಚಾರಗಳಂತೂ ಆಗಿರಲಿಲ್ಲ. ವರ್ಗ ಹೋರಾಟವೆನ್ನುವುದು ಇಂಡಿಯಾದಲ್ಲಿ ಒಂದು ಶಾಶ್ವತ ಸಂಗತಿಯಾಗಿದ್ದು ತನ್ನ ಮಾರ್ಗವನ್ನು ಮೌನವಾಗಿ ಆದರೆ ದೃಢವಾಗಿ ಕಂಡುಕೊಂಡಿದೆ. ಅದು ಹಿಂದೂಗಳ ಜಾಯಮಾನವಾಗಿದೆ. ಅವರ ಬದುಕಿನ ತಿರುಳಾಗಿದೆ.

ಈ ಸಂಗತಿಗಳು ಲಕ್ಷಣ ಸೂಚಕವಾಗಿವೆಯೆಂಬುದನ್ನು ಯಾರೂ ಅಲ್ಲಗಳೆಯಬಾರದು. ಏಕೆಂದರೆ ಅವು ಆರೋಗ್ಯ ಮತ್ತು ಗುಣಶೀಲಗಳನ್ನೂ ಸೂಚಿಸುತ್ತವೆ. ಹಿಂದೂಗಳ ನಡುವೆ ಭ್ರಾತೃಭಾವನೆಯಿತ್ತೆಂದು ಅವು ಸೂಚಿಸುತ್ತವೆಯೇ? ಸತ್ಯಗಳ ಬೆಳಕಿನಲ್ಲಿ ಹಾಗೆಂದು ಹೇಳಲು ಸಾಧ್ಯವಿಲ್ಲವೆಂದು ನಾನು ದೃಢವಾಗಿ ನಂಬಿದ್ದೇನೆ.

ಹಿಂದೂಗಳ ನಡುವೆ ಈ ಭ್ರಾತೃಭಾವನೆಯು ಗೈರುಹಾಜರಾಗಿರುವ ಬಗೆಗಿನ ವಿವರಣೆ ಏನಿರಬಹುದು? ಹಿಂದೂ ಧರ್ಮ ಮತ್ತು ಅದರ ತಾತ್ವಿಕತೆಯೇ ಇದಕ್ಕೆ ಹೊಣೆಯಾಗಬೇಕಿದೆ. ಜೆ.ಎಸ್.ಮಿಲ್ ಹೇಳುವಂತೆ ಭ್ರಾತೃಭಾವನೆ ಎಂಬುದು ಸಹಜವೇ ಆಗಿದ್ದರೂ, ಈ ಗಿಡವು ಬೆಳೆಯಲು ಫಲವತ್ತಾದ ನೆಲ ಬೇಕು.

ಒಳ್ಳೆಯ ಪರಿಸರ ಬೇಕು. ನಾವೆಲ್ಲ ದೇವರ ಮಕ್ಕಳು ಎಂದು ಹೇಳುತ್ತಾ ಒಬ್ಬನ ಬದುಕು ಉಳಿದವರ ಮೇಲೆ ನಿಂತಿದೆ ಎಂದು ಉಪದೇಶಿಸುವುದರಿಂದ ಭ್ರಾತೃಭಾವನೆಯ ಮೂಲಭೂತ ವಾತಾವರಣವನ್ನು ಸೃಷ್ಟಿಸಲಾಗುವುದಿಲ್ಲ. ಅದು ಭಾವನೆಯ ಮಟ್ಟಕ್ಕೇರದಷ್ಟು ಬುದ್ಧಿಯುಕ್ತವಾಗಿದೆ. ಬದುಕಿನ ಮೂಲ ಸತ್ವಗಳನ್ನು ಹಂಚಿಕೊಳ್ಳುವ ಮೂಲಕ ಇಂತಹ ಭಾವನೆಯನ್ನು ಬೆಳೆಸುವ ವಾತಾವರಣವನ್ನು ಸೃಷ್ಟಿಸಬಹುದಾಗಿದೆ.

ಹುಟ್ಟು, ಸಾವು, ಮದುವೆ, ಆಹಾರದಂತಹ ಸುಖ ದುಃಖಗಳನ್ನು ಹಂಚಿಕೊಳ್ಳುವಲ್ಲಿ ಅದರ ಅಸ್ತಿತ್ವವಿದೆ. ಇದರಲ್ಲಿ ಭಾಗವಹಿಸುವವರನ್ನು ಅಣ್ಣ ತಮ್ಮಂದಿರೆಂದು ಭಾವಿಸುತ್ತಾರೆ. ಸಾಮೂಹಿಕ ಭಾವನೆಯನ್ನು ಬೆಳೆಸಲು ಸಹಪಂಕ್ತಿ ಭೋಜನವು ಒಂದು ಮುಖ್ಯ ಕಾರಣವಾಗುತ್ತದೆಯೆಂದು ದೃಢವಾಗಿ ಹೇಳಿರುವ ಪ್ರೊ. ಸ್ಮಿತ್‌ನ ಮಾತುಗಳು ಹೀಗಿವೆ:

> "ಬಲಿ ಸಂತರ್ಪಣೆಯ ಊಟವೆನ್ನುವುದು ಪ್ರಾಚೀನ ಧಾರ್ಮಿಕ ಜೀವನದ ಒಂದು ಸೊಗಸಾದ ಅಭಿವ್ಯಕ್ತಿ. ದೇವರು ಮತ್ತು ಅವನ ಆರಾಧಕರು ಒಟ್ಟಿಗೆ ಕೂಡ ಭೋಜನ ಮಾಡುತ್ತಾರೆಂಬ ಸಂಗತಿ, ಒಂದು ಕೇವಲ ಸಾಮಾಜಿಕ ಕ್ರಿಯೆ ಎಂದಲ್ಲ, ಈಗಾಗಲೇ ಹೇಳಿರುವಂತೆ, ಒಬ್ಬ ಮನುಷ್ಯನ ಜೊತೆಗೂಡಿ ಊಟ ಮಾಡುವುದೇ ಒಂದು ಸಂಕೇತ. ತಮ್ಮ ನಡುವಿರುವ ಸಾಮಾಜಿಕ ಹೊಣೆಗಾರಿಕೆ ಮತ್ತು ನಂಟನ್ನು ಅದು ದೃಢಪಡಿಸುತ್ತದೆ. ಬಲಿ ಸಂತರ್ಪಣೆಯಲ್ಲಿ ಸ್ಪಷ್ಟವಾಗುವ ಒಂದು ವಿಚಾರವೆಂದರೆ ದೇವರು ಮತ್ತು ಅವನ ಆರಾಧಕರು ಪರಸ್ಪರ ಸಹಭಾಗಿಗಳು. ಅದು ಅವರ ಎಲ್ಲ ಸಾಹಚರ್ಯಗಳಲ್ಲಿ ಸೇರಿಬಿಡುತ್ತದೆ. ಭೋಜನಕ್ಕೆ ಒಂದೇ ಪಂಕ್ತಿಯಲ್ಲಿ ಒಟ್ಟಿಗೆ ಕುಳಿತು ಊಟಮಾಡಲಾಗದವರು ಆಗಂತುಕರು. ಒಟ್ಟಿಗೆ ಕುಳಿತವರು ಎಲ್ಲ ಸಾಮಾಜಿಕ ವಿಚಾರಗಳಲ್ಲಿಯೂ ಒಂದಾಗುತ್ತಾರೆ. ಧಾರ್ಮಿಕ ಮತ್ತು ಸಾಮಾಜಿಕ ಕರ್ತವ್ಯಗಳಲ್ಲಿ ಅವರಿಗೆ ಪರಸ್ಪರ ಸಂಬಂಧವಿರುವುದಿಲ್ಲ."[೧]

ಬದುಕಿನ ಮೂಲಭೂತ ಸಂಗತಿಗಳಿಗೆ ಸಂಬಂಧಿಸಿದ ಸುಖ ದುಃಖಗಳಲ್ಲಿ ಹಿಂದೂಗಳ ನಡುವೆ ಹಂಚಿಕೆಯಿಲ್ಲ. ಎಲ್ಲವೂ ಪ್ರತ್ಯೇಕ ಮತ್ತು ವಿಶಿಷ್ಟ. ಜೀವನದುದ್ದಕ್ಕೂ ಹಿಂದೂ ಪ್ರತ್ಯೇಕವಾಗಿ ವಿಶಿಷ್ಟವಾಗಿ ಉಳಿಯುತ್ತಾನೆ. ಇಂಡಿಯಾಕ್ಕೆ ಬಂದ ವಿದೇಶಿ ವ್ಯಕ್ತಿಯೊಬ್ಬ 'ಹಿಂದೂ ಪಾನೀಯ' ಮತ್ತು 'ಮುಸ್ಲಿಂ ಪಾನೀಯ' ವೆಂದು ಕೂಗುವುದನ್ನು ಕೇಳುವುದಿಲ್ಲ. ಆದರೆ ಬ್ರಾಹ್ಮಣ ಕಾಫಿ ಗೃಹಗಳು, ಬ್ರಾಹ್ಮಣರ ಭೋಜನ ಶಾಲೆಗಳು ಅವನಿಗೆ ಕಾಣಿಸುತ್ತವೆ. ಅಲ್ಲಿಗೆ ಬ್ರಾಹ್ಮಣೇತರರು ಸುಳಿಯುವಂತಿಲ್ಲ. ಬ್ರಾಹ್ಮಣ ಹೆರಿಗೆ ಆಸ್ಪತ್ರೆಗಳು, ಮರಾಠಾ ಹೆರಿಗೆ ಆಸ್ಪತ್ರೆಗಳು ಮತ್ತು ಭಾಟಿಯಾ ಹೆರಿಗೆ ಆಸ್ಪತ್ರೆಗಳು – ಅವರೆಲ್ಲ ಹಿಂದೂಗಳೇ ಆಗಿದ್ದರೂ – ಪ್ರತ್ಯೇಕವಾಗಿ ಅವನಿಗೆ ಕಾಣಿಸುತ್ತವೆ. ಬ್ರಾಹ್ಮಣನ ಮನೆಯಲ್ಲಿ ಒಂದು ಮಗು ಹುಟ್ಟಿದರೆ ಯಾವನೇ ಬ್ರಾಹ್ಮಣೇತರನನ್ನು ಅಲ್ಲಿಗೆ ಕರೆಯುವುದಿಲ್ಲ. ಅವರಿಗೆ ಹೋಗಬೇಕೆಂದು ಅನ್ನಿಸುವುದೂ ಇಲ್ಲ. ಬ್ರಾಹ್ಮಣ ಕುಟುಂಬಗಳಲ್ಲಿ ಮದುವೆಯಾದರೆ ಬ್ರಾಹ್ಮಣೇತರರನ್ನು ಕರೆಯುವುದೂ ಇಲ್ಲ. ಅವರಿಗೆ ಹೋಗಬೇಕೆಂದೂ ಅನ್ನಿಸುವುದಿಲ್ಲ. ಅದರಂತೆ ಬ್ರಾಹ್ಮಣನೊಬ್ಬನು ಸತ್ತಾಗಲೂ ಬ್ರಾಹ್ಮಣೇತರನನ್ನು ಕರೆಯುವುದೂ ಇಲ್ಲ. ಹಾಗೆ ಕರೆಯಲಿಲ್ಲವೆಂದು ಬ್ರಾಹ್ಮಣೇತರನು ತಪ್ಪು ತಿಳಿದುಕೊಳ್ಳುವುದೂ ಇಲ್ಲ. ಒಂದು ಜಾತಿಯ ಸುಖ ದುಃಖಗಳು ಮತ್ತೊಂದು ಜಾತಿಗೆ ಸಂಬಂಧಿಸಿಲ್ಲ. ಒಂದು ಜಾತಿಯು ಮತ್ತೊಂದು ಜಾತಿಯ ಬಗೆಗೆ ಯಾವುದೇ ಆಸಕ್ತಿ ತೋರಿಸುವುದಿಲ್ಲ. ದಾನವೂ ಸಹ ಜಾತಿ ಬದ್ಧವಾಗಿ ಹೋಗಿದೆ. ಎಲ್ಲರಿಗೂ ಮುಕ್ತ ಅವಕಾಶವಿರುವ ಸಾರ್ವಜನಿಕ ದಾನದತ್ತಿಗಳಿಗೆ ಹಿಂದೂಗಳಲ್ಲಿ ಅವಕಾಶವೇ ಇಲ್ಲ.

೧. *ದಿ ರಿಲಿಜನ್ ಆಫ್ ಸೆಮೈಟ್ಸ್*, ಪುಟ ೨೬೯

ಬ್ರಾಹ್ಮಣರಿಗೆ ಬ್ರಾಹ್ಮಣ ದತ್ತಿಗಳಿವೆ. ಚಿತ್ಪಾವನ ಬ್ರಾಹ್ಮಣರಿಗೆ ಚಿತ್ಪಾವನ ದತ್ತಿಗಳೇ ಇವೆ. ದೇಶಸ್ಥ ಬ್ರಾಹ್ಮಣರಿಗೆ ದೇಶಸ್ಥ ದತ್ತಿಗಳು, ಕರ್ನಾಡ್ ಬ್ರಾಹ್ಮಣ ದತ್ತಿಗಳು ಕೇವಲ ಕರ್ನಾಡ್ ಬ್ರಾಹ್ಮಣರಿಗೆ ಮಾತ್ರ. ಸಾರಸ್ವತ ಬ್ರಾಹ್ಮಣ ದತ್ತಿಗಳೂ ಇವೆ. ಅದರೊಳಗೇ ಕೂಡಲ್ ದೇಶಿಕರ್ ಬ್ರಾಹ್ಮನ ದತ್ತಿಯೇ ಬೇರೆ ಇದೆ. ಈ ಬಗೆಯ ಅನೇಕಾನೇಕ ನಿದರ್ಶನಗಳನ್ನು ಕೊಡುತ್ತಾ ಹೋಗಬಹುದು. ಹಿಂದೂಗಳೊಳಗೆ ದಾನ ದತ್ತಿಗಳಿವೆಯೇ ಹೊರತು, ಹಿಂದೂಗಳಿಗೆ ಸಂಬಂಧಿಸಿದ ಯಾವ ದತ್ತಿಗಳೂ ಇಲ್ಲ. ಹೀಗೆ ಬದುಕಿರುವಾಗ ಒಬ್ಬ ಹಿಂದೂ ಮತ್ತೊಬ್ಬರೊಡನೆ ಏನನ್ನೂ ಹಂಚಿಕೊಳ್ಳುವುದಿಲ್ಲ. ಸತ್ತ ಮೇಲೆ ಅವರು ಬೇರೆ ಬೇರೆ ಪ್ರತ್ಯೇಕವಾಗಿ ಉಳಿಯುತ್ತಾರೆ. ಕೆಲವು ಹಿಂದೂಗಳು ಸತ್ತಾಗ ಹೂಳುತ್ತಾರೆ, ಮತ್ತು ಕೆಲವರು ದಹನ ಮಾಡುತ್ತಾರೆ. ಶ್ಮಶಾನಗಳೂ ಅವರಿಗೆ ಬೇರೆ ಬೇರೆ ಇರುತ್ತವೆ. ಹೂಳುವವರೂ ಒಂದೇ ಕಡೆ ಹೂಳುವುದಿಲ್ಲ. ಸುಡುವವರೂ ಒಂದೇ ಕಡೆ ಸುಡುವುದಿಲ್ಲ. ಅಕಸ್ಮಾತ್ ಒಂದೇ ಕಡೆ ಸುಡುವ ಅನಿವಾರ್ಯತೆಯಿದ್ದಾಗ ಪ್ರತಿ ಜಾತಿಗೂ ಪ್ರತ್ಯೇಕ ದಹನ ಪೀಠಗಳಿರುತ್ತವೆ.

ಭ್ರಾತೃಭಾವನೆಯು ಹಿಂದೂಗಳಿಗೆ ವಿದೇಶೀಯವೆಂಬುದರಲ್ಲಿ ಆಶ್ಚರ್ಯವೇನಾದರೂ ಇದೆಯೇ? ಸುಖ ದುಃಖಗಳನ್ನು ಹಂಚಿಕೊಳ್ಳಲು ಸಂಪೂರ್ಣ ನಿರಾಕರಿಸಿದಾಗ ಭ್ರಾತೃಭಾವನೆಯು ಬೇರು ಬಿಡುವುದಾದರೂ ಹೇಗೆ ತಾನೆ ಸಾಧ್ಯ?

ಎಲ್ಲ ಪ್ರಶ್ನೆಗಳಿಗೂ ಮೂಲ ಪ್ರಶ್ನೆಯೊಂದಿದೆ, ಜೀವನದ ಸುಖ ದುಃಖಗಳನ್ನು ಹಂಚಿಕೊಳ್ಳಲು ಎಲ್ಲ ಹಿಂದೂಗಳೂ ಒಪ್ಪುವುದಿಲ್ಲವೇಕೆ? ಇದಕ್ಕೆ ಉತ್ತರಿಸಲು ಯಾರೂ ಹುಡುಕಾಡಬೇಕಿಲ್ಲ. ಅವನ ಧರ್ಮದಲ್ಲಿ ಹೀಗೆ ಹಂಚಿಕೊಳ್ಳಬಾರದೆಂದಿರುವುದರಿಂದ ಅವರು ಹಂಚಿಕೊಳ್ಳಲು ಒಪ್ಪುವುದಿಲ್ಲ. ಈ ತೀರ್ಮಾನದಿಂದ ಆಶ್ಚರ್ಯಕ್ಕೆ ಕಾರಣವಿಲ್ಲ. ಹಾಗಾದರೆ ಹಿಂದೂ ಧರ್ಮವು ಬೋಧಿಸುವುದೇನನ್ನು? ಅದು ಬೋಧಿಸುವುದು ಬೇರೆ ಜಾತಿಗಳು ಒಟ್ಟಿಗೆ ಸೇರಿ ಊಟ ಮಾಡಬೇಡಿರೆಂದು, ಅಂತರ್‌ಜಾತಿ ವಿವಾಹ ಬೇಡವೆಂದು, ಪರಸ್ಪರ ಸಹಭಾಗಿತ್ವ ಬೇಡವೆಂದು. ಹಿಂದೂ ಧರ್ಮದ ಬೋಧನೆಯ ತಿರುಳಿನಲ್ಲಿ ಇದು ಇಲ್ಲದಿರಬಹುದು. ನಾನು ಈಗಾಗಲೇ ನಿದರ್ಶನ ಸಹಿತವಾಗಿ ಚರ್ಚಿಸಿರುವ ನಾಚಿಕೆಗೆಟ್ಟ ವಿಚಾರಗಳೆಲ್ಲವೂ ಹಿಂದೂಗಳ ಪ್ರತ್ಯೇಕ ವಿಶಿಷ್ಟತೆಯಾಗಿದ್ದು ಹಿಂದೂ ಧರ್ಮದ ತಾತ್ವಿಕತೆಯ ನೇರ ಪರಿಣಾಮಗಳೇ ಆಗಿವೆ. ಹಿಂದೂ ಧರ್ಮವು ತತ್ವಶಃ ಭ್ರಾತೃತ್ವವನ್ನು ನೇರವಾಗಿ ವಿರೋಧಿಸುತ್ತದೆ.

ನ್ಯಾಯ ವಿತರಣೆಯ ನಿಟ್ಟಿನಿಂದ ಮಾಡಿದ ಈ ಸಂಕ್ಷಿಪ್ತ ವಿಶ್ಲೇಷಣೆಯು ಹಿಂದೂ ಧರ್ಮವು ಹೇಗೆ ಸಮಾನತೆಗೆ ತಡೆಯಾಗಿದೆ, ಸ್ವಾತಂತ್ರ್ಯಕ್ಕೆ ಅಡ್ಡಿಪಡುತ್ತದೆ ಮತ್ತು ಭ್ರಾತೃತ್ವವನ್ನು ವಿರೋಧಿಸುತ್ತದೆ ಎಂಬುದನ್ನು ಸ್ಪಷ್ಟವಾಗಿ ಎತ್ತಿ ತೋರಿಸುತ್ತದೆ.

ಭ್ರಾತೃಭಾವ ಮತ್ತು ಸ್ವಾತಂತ್ರ್ಯವೆಂಬಿವು ವಾಸ್ತವವಾಗಿ ನಿಷ್ಪನ್ನ ವಿಚಾರಗಳು. ಮೂಲಭೂತ ಪರಿಕಲ್ಪನೆಗಳೆಂದರೆ ಸಮಾನತೆ ಮತ್ತು ಮನುಷ್ಯ ವ್ಯಕ್ತಿತ್ವದ ಬಗೆಗೆ ಗೌರವ. ಭ್ರಾತೃಭಾವ ಮತ್ತು ಸ್ವಾತಂತ್ರ್ಯಗಳು ಈ ಎರಡೂ ಪರಿಕಲ್ಪನೆಗಳ ಕ್ಷೇತ್ರದಲ್ಲಿ ಬೇರು ಬಿಡುತ್ತವೆ. ಇನ್ನೂ ಆಳಕ್ಕೆ ಹೋಗಿ ಹೇಳುವುದಾದರೆ ಸಮಾನತೆ ಎಂಬುದು ಮೂಲ ವಿಚಾರ. ಮನುಷ್ಯ ವ್ಯಕ್ತಿತ್ವದ ಬಗೆಗೆ ಗೌರವವೆಂಬುದು ಅದರ ಪ್ರತಿಫಲನ. ಹೀಗೆ ಎಲ್ಲಿ ಸಮಾನತೆಯನ್ನು ನಿರಾಕರಿಸಲಾಗುತ್ತದೆಯೋ ಅಲ್ಲಿ ಉಳಿದೆಲ್ಲವೂ ನಿರಾಕೃತ ವಾದಂತಾಗುತ್ತದೆಯೆಂದು ಹೇಳಬಹುದು. ಬೇರೆ ಮಾತಿನಲ್ಲಿ ಹೇಳಬೇಕೆಂದರೆ ಹಿಂದೂ ಧರ್ಮದಲ್ಲಿ ಸಮಾನತೆಯಿಲ್ಲವೆಂದು ನಾನು ತೋರಿಸಿದರೆ ಸಾಕಾಗುತ್ತದೆ. ಆದರೆ ಹಿಂದೂ ಧರ್ಮವನ್ನು ನನ್ನಂತೆ ವಿಶ್ಲೇಷಣೆಗೆ ಯಾರೂ ಇನ್ನೂ ಗುರಿಪಡಿಸಿಲ್ಲವಾದುದರಿಂದ ಹಿಂದೂ ಧರ್ಮವು ಭ್ರಾತೃಭಾವನೆ ಮತ್ತು

ಸ್ವಾತಂತ್ರ್ಯವನ್ನು ನಿರಾಕರಿಸಿದೆ ಎಂಬುದನ್ನು ಕೇವಲ ಊಹೆಗೆ ಬಿಡುವುದು ಉಚಿತವಲ್ಲವೆನಿಸಿತು. ಒಂದು ಕೊನೆಯ ವಿವರಣೆಯೊಂದಿಗೆ ನನ್ನ ಚರ್ಚೆಯನ್ನು ಮುಕ್ತಾಯಗೊಳಿಸುವಾಗ ಲಾರ್ಡ್ ಆಕ್ಟನ್‌ರವರು ಹೇಳುವಂತೆ ಅಸಮಾನತೆಯು ಬೆಳೆದದ್ದು ಚಾರಿತ್ರಿಕ ಸಂದರ್ಭಗಳಿಂದಾಗಿ. ಅದನ್ನೊಂದು ನಂಬಿಕೆಯನ್ನಾಗಿ ಎಂದೂ ಅಂಗೀಕರಿಸಲಿಲ್ಲವೆಂದು ಅವರ ಅಭಿಪ್ರಾಯವಾಗಿದೆ. ಹಿಂದೂ ಧರ್ಮವನ್ನು ಲೆಕ್ಕಕ್ಕೆ ತೆಗೆದುಕೊಳ್ಳದೆ ಲಾರ್ಡ್ ಆಕ್ಟನ್‌ರವರು ಈ ಅಭಿಪ್ರಾಯಕ್ಕೆ ಬಂದಿರುವಂತಿದೆ. ಏಕೆಂದರೆ ಹಿಂದೂ ಧರ್ಮದಲ್ಲಿ ಅಸಮಾನತೆಯನ್ನು ಒಂದು ಧಾರ್ಮಿಕ ಸಿದ್ಧಾಂತವನ್ನಾಗಿ ಅಂಗೀಕರಿಸಲಾಗಿದೆ ಮತ್ತು ಶ್ರದ್ಧಾಪೂರ್ವಕವಾಗಿ ಅದನ್ನೊಂದು ಪವಿತ್ರ ನಿಯಮವೆಂಬಂತೆ ಉಪದೇಶಿಸಲಾಗಿದೆ. ಅದೊಂದು ಅಧಿಕೃತ ಸಿದ್ಧಾಂತವಾಗಿದ್ದು ಅದನ್ನು ಪ್ರಚಾರ ಮಾಡಲು ಯಾರೂ ನಾಚಿಕೆಪಡುವುದಿಲ್ಲ. ಹಿಂದೂಗಳಿಗೆ ಅಸಮಾನತೆಯೆಂಬುದು ದೈವನಿಯಮಿತ ಜೀವನ ವಿಧಾನವಾಗಿ ಹಿಂದೂ ಸಮಾಜದ ಅಂತರಾಳವನ್ನೇ ಅದು ಪ್ರವೇಶಿಸಿದೆ. ಹಿಂದೂ ಧರ್ಮದ ಆಲೋಚನೆ ಕ್ರಿಯೆಗಳೆರಡನ್ನೂ ಅದು ಸಂಪೂರ್ಣವಾಗಿ ನಿಯಂತ್ರಿಸಿದೆ. ಅಸಮಾನತೆಯೇ ವಾಸ್ತವವಾಗಿ ಹಿಂದೂ ಧರ್ಮದ ಆತ್ಮವೆನ್ನಬಹುದು. ಉಪಯುಕ್ತತೆಯ ದೃಷ್ಟಿಯಿಂದ ಹಿಂದೂ ಧರ್ಮದ ತಾತ್ವಿಕತೆಯನ್ನು ಸ್ವಲ್ಪ ಪರಿಶೀಲಿಸಬಹುದಾಗಿದೆ.

ಹಿಂದೂ ಧರ್ಮವನ್ನು ಕುರಿತು ಈ ನಿಟ್ಟಿನಿಂದ ನಡೆಸುವ ಪರಿಶೀಲನೆಯು ವಿಸ್ತಾರವೂ, ವಿವರಣಾತ್ಮಕವೂ ಆಗಿರಬೇಕಿಲ್ಲ. ಏಕೆಂದರೆ ಮಿಲ್ ಹೇಳಿರುವಂತೆ ನ್ಯಾಯ ಮತ್ತು ಉಪಯುಕ್ತತೆ ಪರಸ್ಪರ ವಿರುದ್ಧವೇನಲ್ಲ. ಮತ್ತೊಂದು ರೀತಿಯಲ್ಲಿ ಹೇಳುವುದಾದರೆ ವ್ಯಕ್ತಿಗೆ ಅನ್ಯಾಯವಾಗಿರುವುದು ಸಮಾಜಕ್ಕೆ ಪ್ರಯೋಜನಕಾರಿಯಾಗಿರಲು ಸಾಧ್ಯವೇ ಇಲ್ಲ. ಇದಲ್ಲದೆ ಜಾತಿಗಳ ಪರಿಣಾಮವೂ ನಮ್ಮ ಮುಖಕ್ಕೇ ರಾಚುತ್ತಿದೆ.....

ಜಾತಿಯ ಆದರ್ಶವೆನ್ನುವುದು ಕೇವಲ ಆದರ್ಶವಲ್ಲ. ಈ ಆದರ್ಶವನ್ನು ಅನುಸರಣೆಯಲ್ಲಿ ನಡೆದು ತೋರಿಸಲಾಗಿದೆಯಾದುದರಿಂದ ಅದು ವಾಸ್ತವವಾಗಿದೆ. ಜರ್ಮನಿಯ ತತ್ವಜ್ಞಾನಿ ನೀಷೆ ಹೇಳುವ "ಆದರ್ಶವನ್ನು ಸಾಧಿಸಿ ಮತ್ತು ವಾಸ್ತವವನ್ನೇ ಆದರ್ಶಗೊಳಿಸಿ" ಎಂಬ ಮಾತನ್ನು ಚಾತುರ್ವರ್ಣ್ಯಕ್ಕೆ ಸಂಬಂಧಿಸಿದಂತೆ ಹಿಂದೂಗಳು ಚಾಚೂ ತಪ್ಪದೆ ಅನುಸರಿಸಿದ್ದಾರೆ. ಒಂದು ಆದರ್ಶದ ಮೌಲ್ಯವನ್ನು ಅದರ ಫಲಿತಾಂಶದಿಂದ ನಿರ್ಣಯಿಸಬೇಕಾಗುತ್ತದೆ. ಅನುಭವವೇ ಪ್ರಮಾಣವೆನ್ನುವುದಾದರೆ ಚಾತುರ್ವರ್ಣ್ಯದ ಆದರ್ಶವು ಮೂರು ರೀತಿಯ ಖಂಡನೆಗೆ ಗುರಿಯಾಗುತ್ತದೆ. ಉತ್ಪಾದಕರ ವ್ಯವಸ್ಥೆಯಾಗಿ ಅದು ಅವಹೇಳನ ಕಾರಿಯಾಗಿದೆ. ಒಂದು ಆದರ್ಶ ಹಂಚಿಕೆಯ ವಿಧಾನವಾಗಿ ಅದರ ಸೋಲು ದುರವಸ್ಥೆಯಾಗಿದೆ. ಅದು ಒಂದು ಆದರ್ಶಕರ ಸಂಘಟನೆ ಎನ್ನುವುದಾದರೆ ಒಂದು ಸಾರ್ವತ್ರಿಕ ರಂಗವೊಂದನ್ನು ನಿರ್ಮಾಣ ಮಾಡಲು ಏಕೆ ಸಾಧ್ಯವಾಗಲಿಲ್ಲ? ಅದು ಉತ್ಪಾದನೆಯ ದೃಷ್ಟಿಯಿಂದ ಆದರ್ಶ ಪರವಾಗಿದೆಯೆನ್ನುವುದಾದರೆ ಅದರ ಉತ್ಪಾದನಾ ತಂತ್ರಗಳು ಆದಿಮ ಕಾಲದಿಂದಲೂ ಏಕೆ ಪ್ರಗತಿಹೊಂದಿಲ್ಲ? ಹಂಚಿಕೆಯ ವಿಧಾನಗಳು ಆದರ್ಶಮಯವಾಗಿರುವುದಾದರೆ, ಗಾಬರಿ ತರಿಸುವಂತಹ ಸಂಪತ್ತಿನ ಅಸಮಾನತೆ, ಕಡು ಬಡತನದ ಪಕ್ಕದಲ್ಲಿಯೇ ಭಾರಿ ಶ್ರೀಮಂತಿಕೆಗಳಿಗೆ ಏಕೆ ಅವಕಾಶವಾಗಬೇಕು?

ಆದರೆ ನಾನು ಇದನ್ನು ಒಟ್ಟಾರೆಯಾಗಿ ತಿರಸ್ಕರಿಸಲು ಹೋಗುವುದಿಲ್ಲ. ಏಕೆಂದರೆ ಜಾತಿ ವ್ಯವಸ್ಥೆಯ ಉಪಯುಕ್ತತೆಯನ್ನು ಹಿಂದೂಗಳು ಪ್ರಶಂಸಿಸುತ್ತಾರೆ. ಅದನ್ನು ಯೋಚಿಸಿ ಅದಕ್ಕೊಂದು ದೈವಿಕ ಅನುಮೋದನೆಯನ್ನು ತಂದುಕೊಟ್ಟ ಮನುವಿನ ವಿವೇಕ ಮತ್ತು ಬುದ್ಧಿವಂತಿಕೆಯನ್ನು ಅವರು ಕೊಂಡಾಡುತ್ತಾರೆ. ಜಾತಿಯ ಬೇರೆ ಬೇರೆ ಆಯಾಮಗಳನ್ನು ಪ್ರತ್ಯೇಕವಾಗಿ ಪರಿಗಣಿಸುವುದರಿಂದ ಈ ದೃಷ್ಟಿ ಬೆಳೆದುಬಂದಿದೆ. ಅವುಗಳನ್ನು ಸಂಯುಕ್ತವಾಗಿಯೇ ತೆಗೆದುಕೊಳ್ಳಬೇಕು. ಜಾತಿಗಳ ಪರಿಣಾಮದಿಂದ ಸಾಮಾಜಿಕ ಉಪಯುಕ್ತತೆ

ಅಥವಾ ಅನುಪಯುಕ್ತತೆಗಳನ್ನು ಪರಿಶೀಲಿಸುವಾಗ ಜಾತಿಯ ವಿವಿಧ ಭಾಗಗಳನ್ನು ಒಟ್ಟಾಗಿ ತೆಗೆದುಕೊಂಡು ತೀರ್ಮಾನಿಸಬೇಕಾಗುತ್ತದೆ. ಈ ನೆಲೆಯಿಂದ ಸಮಸ್ಯೆಯನ್ನು ಬಿಡಿಸುವುದಾದರೆ ಕೆಳಗಿನ ತೀರ್ಮಾನಗಳಿಗೆ ಬರಬೇಕಾಗುತ್ತದೆ. (೧) ಜಾತಿಗಳು ದುಡಿಮೆಗಾರರನ್ನು ಪ್ರತ್ಯೇಕಿಸುತ್ತವೆ. (೨) ಆಸಕ್ತಿ ಮತ್ತು ದುಡಿಮೆಗಳನ್ನು ಜಾತಿಗಳು ಪರಸ್ಪರ ಹೊಂದಿಸುವುದಿಲ್ಲ. (೩) ಬುದ್ಧಿವಂತಿಕೆಗೂ ದೈಹಿಕ ಶ್ರಮಕ್ಕೂ ಇರುವ ಸಂಪರ್ಕವನ್ನು ಜಾತಿ ಕಡಿದುಹಾಕುತ್ತದೆ. (೪) ತನ್ನ ನಿಜವಾದ ಆಸಕ್ತಿಯನ್ನು ಬೆಳೆಸಿಕೊಳ್ಳುವುದನ್ನು ನಿರಾಕರಿಸುವುದರಿಂದ ಜಾತಿಯು ವ್ಯಕ್ತಿಯನ್ನು ನಿರ್ವೀರ್ಯಗೊಳಿಸುತ್ತದೆ. (೫) ಜಾತಿಯು ಚಲನೆಯನ್ನು ಸ್ಥಗಿತಗೊಳಿಸುತ್ತದೆ. ಜಾತಿ ವ್ಯವಸ್ಥೆಯು ಕೇವಲ ಕೆಲಸಗಳ ವಿಂಗಡಣೆಯಲ್ಲ. ಅದು ಕೆಲಸಗಾರರನ್ನೇ ವಿಭಾಗಿಸುತ್ತದೆ.

ನಾಗರಿಕ ಸಮಾಜಕ್ಕೆ ನಿಸ್ಸಂದೇಹವಾಗಿ ಕೆಲಸಗಳ ವಿಂಗಡಣೆ ಬೇಕಾಗಿದೆ. ಆದರೆ ಯಾವುದೇ ನಾಗರಿಕ ಸಮಾಜದಲ್ಲಿ ಕೆಲಸಗಳ ವಿಂಗಡಣೆಯ ಜೊತೆಗೆ ಕೆಲಸಗಾರರನ್ನು ಭದ್ರವಾಗಿ ವಿಭಾಗಿಸಿಡುವುದನ್ನು ಅನುಸರಿಸಲಾಗಿಲ್ಲ. ಜಾತಿ ವ್ಯವಸ್ಥೆಯು ಕೆಲಸಗಳ ವಿಂಗಡಣೆಯಿಂದಲೂ ಭಿನ್ನವಾದ ಕೇವಲ ಕೆಲಸಗಾರರ ವಿಭಾಗ ಮಾತ್ರವಲ್ಲ. ಅದು ಕೆಲಸಗಾರರನ್ನು ವಿಭಾಗಿಸಿ ಒಬ್ಬರ ಮೇಲೊಬ್ಬರಂತೆ ಅವರನ್ನು ಶ್ರೇಣೀಕೃತಗೊಳಿಸಿದೆ. ಬೇರೆ ಯಾವ ದೇಶದಲ್ಲಿಯೂ ಹೀಗೆ ಕೆಲಸಗಾರರನ್ನು ವಿಭಾಗಿಸಿ ಮೇಲು ಕೀಳಿನ ತಾರತಮ್ಯಗಳನ್ನು ಕಲ್ಪಿಸಿಲ್ಲ. ಜಾತಿ ವ್ಯವಸ್ಥೆಯ ಈ ದೃಷ್ಟಿಯನ್ನು ಕುರಿತು ಮೂರನೆಯ ಟೀಕೆಯ ಅಂಶವೂ ಒಂದಿದೆ. ಈ ವಿಭಾಗವು ಸ್ವಯಂಸ್ಫೂರ್ತಿ ಮತ್ತು ಸಹಜ ಅಭಿರುಚಿಯ ತಳಹದಿಯ ಮೇಲೆ ರೂಪುಗೊಂಡಿಲ್ಲ. ಒಬ್ಬ ವ್ಯಕ್ತಿಯು ತನ್ನ ದಕ್ಷತೆಗನುಗುಣವಾಗಿ ಉದ್ಯೋಗವನ್ನು ಆಯ್ಕೆ ಮಾಡಿಕೊಳ್ಳಲು ಸಾಧ್ಯವಾಗುವಂತಹ ಮುಕ್ತ ಪರಿಸರವನ್ನು ಸಮಾಜ ಸೃಷ್ಟಿಸಬೇಕು. ಜಾತಿ ವ್ಯವಸ್ಥೆಯಲ್ಲಿ ಈ ತತ್ವವನ್ನೇ ಉಲ್ಲಂಘಿಸಲಾಗಿದೆ. ಏಕೆಂದರೆ ವ್ಯಕ್ತಿಗಳಿಗೆ ಸೂಕ್ತ ಕೆಲಸಗಳನ್ನು ವಹಿಸುವಲ್ಲಿ ಅವರ ಸಾಮರ್ಥ್ಯ ಮತ್ತು ಪರಿಣತಿಗಳನ್ನು ಆಧಾರವಾಗಿಟ್ಟುಕೊಳ್ಳದೆ ಅವರ ತಂದೆತಾಯಿಗಳ ಸಾಮಾಜಿಕ ಮಟ್ಟವನ್ನು ಪರಿಗಣಿಸಲಾಗುತ್ತದೆ. ಜಾತಿ ವ್ಯವಸ್ಥೆಯಿಂದಾದ ಉದ್ಯೋಗಗಳ ಶ್ರೇಣೀಕರಣವನ್ನು ಇನ್ನೊಂದು ದೃಷ್ಟಿಯಿಂದ ನೋಡಿದರೆ ನಿಶ್ಚಯವಾಗಿಯೂ ಅದು ವಿನಾಶಕಾರಿಯಾಗಿದೆ ಎಂಬುದು ಮನವರಿಕೆಯಾಗುತ್ತದೆ. ಕೈಗಾರಿಕೆ ಎನ್ನುವುದು ಯಾವಾಗಲೂ ಸ್ಥಗಿತವಾಗಿರುವುದಿಲ್ಲ. ತೀವ್ರಗತಿಯಿಂದ ಹಲವು ಬದಲಾವಣೆಗಳಿಗೆ ಅದು ಒಳಗಾಗುತ್ತಿರುತ್ತದೆ. ಇಂತಹ ಪರಿವರ್ತನೆಗೆ ಹೊಂದಿಕೊಳ್ಳಲು ವ್ಯಕ್ತಿಗೆ ತನ್ನ ಉದ್ಯೋಗವನ್ನು ಬದಲಾಯಿಸಿಕೊಳ್ಳುವ ಸ್ವಾತಂತ್ರ್ಯವಿರಬೇಕಾಗುತ್ತದೆ. ಬದಲಾದ ಪರಿಸರಕ್ಕೆ ಅನುಗುಣವಾಗಿ ಹೊಂದಿಕೊಳ್ಳಬೇಕಾದ ಸ್ವಾತಂತ್ರ್ಯವು ವ್ಯಕ್ತಿಗೆ ಇಲ್ಲವಾದರೆ ಅವನು ಜೀವನಕ್ಕಾಗಿ ದುಡಿಯುವುದೇ ಕಷ್ಟವಾಗುತ್ತದೆ. ಜಾತಿ ವ್ಯವಸ್ಥೆಯಾದರೋ ಹಿಂದೂಗಳನ್ನು ಬೇಕಾದ ಕಡೆಯಲ್ಲಿ ಉದ್ಯೋಗಕ್ಕೆ ಸೇರಿಕೊಳ್ಳಲು ಅವಕಾಶ ಕೊಡುವುದಿಲ್ಲ. ಅಲ್ಲಿ ಉದ್ಯೋಗಗಳನ್ನು ಅನುವಂಶಿಕವಾಗಿ ಹಂಚಲಾಗುತ್ತದೆ. ತನ್ನ ಜಾತಿಯ ಕಸುಬನ್ನು ಬಿಟ್ಟು ಬೇರೆ ಉದ್ಯೋಗವನ್ನು ಹಿಡಿಯದೆ ಒಬ್ಬ ಹಿಂದೂ ಸಾಯುತ್ತಿರುವುದಾದರೆ ಅದಕ್ಕೆ ಕಾರಣವನ್ನು ಜಾತಿ ವ್ಯವಸ್ಥೆಯಲ್ಲಿಯೇ ಹುಡುಕಬೇಕು. ಉದ್ಯೋಗಗಳಲ್ಲಿ ಮರುಹೊಂದಾಣಿಕೆ ಮಾಡಿಕೊಳ್ಳಲು ಅನುಮತಿ ಕೊಡದಿರುವುದರಿಂದಲೇ ಹೆಚ್ಚಿನ ನಿರುದ್ಯೋಗವನ್ನು ನಾವು ಈ ದೇಶದಲ್ಲಿ ಕಾಣುತ್ತೇವೆ. ಇದಕ್ಕೆ ಕಾರಣವನ್ನು ಜಾತಿ ವ್ಯವಸ್ಥೆಯಲ್ಲಿಯೇ ಹುಡುಕಬೇಕಾಗಿದೆ. ಕೆಲಸಗಳ ವಿಂಗಡಣೆಯ ಒಂದು ಮಾದರಿಯಾಗಿಯೂ ಜಾತಿ ವ್ಯವಸ್ಥೆಯು ಮತ್ತೊಂದು ಗಂಭೀರ ದೋಷದಿಂದ ನರಳುತ್ತಿದೆ. ಜಾತಿ ವ್ಯವಸ್ಥೆಯಿಂದಾಗಿರುವ ಕೆಲಸಗಳ ವಿಂಗಡಣೆಯು ಆಯ್ಕೆ ಆಧಾರದ ಮೇಲೆ ರೂಪುಗೊಂಡಿಲ್ಲ. ವ್ಯಕ್ತಿಯ ಭಾವನೆಗಾಗಲೀ ಅಭಿಲಾಷೆಗಳಿಗಾಗಲೀ ಅಲ್ಲಿ ಅವಕಾಶವಿಲ್ಲ. ಪೂರ್ವ ನಿರ್ಧಾರಿತ ಗುರಿಯ ತತ್ವವನ್ನು ಅದು ಅವಲಂಬಿಸಿದೆ.

ಸಾಮಾಜಿಕ ದಕ್ಷತೆಯನ್ನು ಪರಿಗಣಿಸಿ ಮಾತನಾಡುವುದಾದರೆ, ಕೈಗಾರಿಕಾ ವ್ಯವಸ್ಥೆಯ ದೊಡ್ಡ ದೋಷವಿರುವುದು ಅದರಿಂದ ಉಂಟಾಗಬಹುದಾದ ಬಡತನ ಮತ್ತು ಸಂಕಟಗಳಿಂದ ಅಲ್ಲ. ಅನೇಕ ಜನಗಳ ಅಂತಃಪ್ರೇರಣೆಯ ಬೇಡಿಕೆಗಳು ಅಲ್ಲಿ ಕೆಲಸ ಮಾಡುತ್ತಿರುವವರನ್ನು ತಟ್ಟುವುದೇ ಇಲ್ಲ ಎಂಬುದೇ ಅಲ್ಲಿನ ದೊಡ್ಡ ದೋಷವೆಂಬುದನ್ನು ನಾವು ಒಪ್ಪಲೇಬೇಕಾಗಿದೆ. ಈ ಬೇಡಿಕೆಗಳು ಯಾವಾಗಲೂ ಜುಗುಪ್ಸೆಯನ್ನು ಕೆರಳಿಸುತ್ತವೆ. ತಪ್ಪು ಅಭಿಪ್ರಾಯಗಳನ್ನು ಹುಟ್ಟಿಸಿ, ತಪ್ಪಿಸಿಕೊಳ್ಳುವ ಆಸೆಗೆ ಕಾರಣವಾಗುತ್ತವೆ. ಇಂಡಿಯಾದಲ್ಲಿ ಈ ಬಗೆಯ ಅನೇಕ ಕಸುಬುಗಳಿದ್ದು, ಹಿಂದೂಗಳು ಅವುಗಳನ್ನು ಹೀನವೆಂದು ಪರಿಗಣಿಸುತ್ತಾರೆಂಬುದರಿಂದಲೇ ಅವುಗಳಲ್ಲಿ ನಿರತವಾಗಿರುವ ಜನಗಳಿಗೆ ಜುಗುಪ್ಸೆ ಬರುತ್ತದೆ. ಈ ಬಗೆಯ ಕಸುಬುಗಳನ್ನು ಬಿಟ್ಟುಬಿಡುವ ಅಥವಾ ತಪ್ಪಿಸಿಕೊಂಡು ಬಿಡುವ ಆಸೆ ಯಾವಾಗಲೂ ಪ್ರಬಲವಾಗಿರುತ್ತದೆ. ಹಿಂದೂ ಧರ್ಮವು ಜಾತಿಗೆ ಅಂಟಿಸಿರುವ ಕಳಂಕವಾಗಿ ಈ ಕಸುಬುಗಳು ಕಂಡುಬರುತ್ತಿರುವುದರಿಂದ ಅವುಗಳಲ್ಲಿ ನಿರತವಾದವರಿಗೆ ಅದೊಂದು ಉಪದ್ರವಕಾರಿಯಾದ ಪೀಡೆ ಎಂಬ ಭಾವನೆಯಿದೆ.

ಕೆಲಸಕ್ಕೂ ಬುದ್ಧಿವಂತಿಕೆಗೂ ಇರುವ ಸಂಬಂಧವನ್ನೂ ತೆಗೆದುಹಾಕಿರುವುದರಿಂದಾಗಿ ಕಸುಬಿನ ಬಗೆಗೆ ತಿರಸ್ಕಾರವುಂಟಾಗುವ ಮತ್ತೊಂದು ಕುಯುಕ್ತಿಯನ್ನು ಅಲ್ಲಿ ಕಾಣಬಹುದು. ಜಾತಿ ವ್ಯವಸ್ಥೆಯ ಸಿದ್ಧಾಂತದ ಪ್ರಕಾರ ತನ್ನ ಬೌದ್ಧಿಕತೆಯನ್ನು ಬೆಳೆಸಿಕೊಳ್ಳಲು ಅವಕಾಶ ಪಡೆದಿರುವ ಬ್ರಾಹ್ಮಣನು ದೈಹಿಕ ಶ್ರಮದಲ್ಲಿ ತೊಡಗಿರುವಂತಿಲ್ಲವಾದುದರಿಂದ ಅವನು ಅದನ್ನು ತಿರಸ್ಕಾರದಿಂದ ಕಾಣುವಂತೆ ಹೇಳಿಕೊಡಲಾಗಿದೆ. ದೈಹಿಕ ಪರಿಶ್ರಮಪಡಬೇಕಾದ ಶೂದ್ರನಿಗೆ ಬುದ್ಧಿವಂತಿಕೆಯನ್ನು ಬೆಳೆಸಿಕೊಳ್ಳಲು ಅನುಮತಿಯಿಲ್ಲ. ಇದರ ಪ್ರಕ್ಷುಬ್ಧಕಾರಿ ಪರಿಣಾಮಗಳನ್ನು ಶ್ರೀ ಆರ್.ಸಿ. ದತ್ ಚೆನ್ನಾಗಿ ವಿವರಿಸಿದ್ದಾರೆ.

"ಜಾತಿ ಮನುಷ್ಯನನ್ನು ನಿರ್ವೀರ್ಯಗೊಳಿಸುತ್ತದೆ. ಅನರ್ಹಗೊಳಿಸುವ ಪ್ರಕ್ರಿಯೆಯೂ ಆಗಿದೆ. ಸ್ವತಂತ್ರ ಹಾಗೂ ಪೂರ್ಣವಾದ ಮನುಷ್ಯತ್ವವನ್ನು ಒಬ್ಬ ವ್ಯಕ್ತಿ ಸಾಧಿಸಲು ಅವನಿಗೆ ಶಿಕ್ಷಣ, ಸಂಪತ್ತು ಮತ್ತು ದುಡಿಮೆ ಇವೆಲ್ಲವುಗಳ ಅಗತ್ಯವೂ ಇದೆ. ಐಶ್ವರ್ಯ ಮತ್ತು ಉದ್ಯೋಗ ತಂದುಕೊಡದ ಕೇವಲ ಶಿಕ್ಷಣದಿಂದಲೂ ಪ್ರಯೋಜನವಿಲ್ಲ. ಶಿಕ್ಷಣರಹಿತ ಐಶ್ವರ್ಯ ಪಶುಸಮಾನವಾದುದು. ಪ್ರತಿಯೊಂದೂ ಉಳಿದವುಗಳಿಗೆ ಅಗತ್ಯವಾಗಿದೆ. ಮಾನವನ ಪ್ರಗತಿಗೆ ಅವುಗಳ ಅಗತ್ಯವಿದೆ."

ಬ್ರಾಹ್ಮಣನು ಜ್ಞಾನಾರ್ಜನೆ ಮಾಡಬೇಕು. ಕ್ಷತ್ರಿಯನು ಆಯುಧ ಪರಿಣತಿ ಹೊಂದಬೇಕು. ವೈಶ್ಯನು ವ್ಯಾಪಾರಿಯಾಗಬೇಕು ಮತ್ತು ಶೂದ್ರನು ಸೇವೆ ಮಾಡಬೇಕು ಎಂಬುದನ್ನು ಒಂದು ಕುಟುಂಬದಲ್ಲಿ ಪರಸ್ಪರರನ್ನು ಅವಲಂಬಿಸಿರುವಂತೆ ಎಂಬುದಾಗಿ ವ್ಯಾಖ್ಯಾನಿಸಲಾಗುತ್ತದೆ. ಮೂರು ವರ್ಣಗಳೂ ಅವನನ್ನು ಸಾಕಿ ಸಲಹಲು ಸಿದ್ಧವಿರುವಾಗ ಶೂದ್ರನು ಐಶ್ವರ್ಯವನ್ನೇಕೆ ಸಂಪಾದಿಸಬೇಕು? ಎಂದು ಕೇಳುವುದುಂಟು. ಅಗತ್ಯವಿದ್ದಾಗ ಬ್ರಾಹ್ಮಣನಲ್ಲಿಗೆ ಹೋಗಿ ಓದು ಬರಹದ ಅನುಕೂಲಗಳನ್ನು ಪಡೆಯಲು ಸಾಧ್ಯವಿರುವಾಗ ಶೂದ್ರನೂ ಶಿಕ್ಷಣವನ್ನು ಪಡೆಯುವ ಕಷ್ಟವನ್ನು ಏಕೆ ವಹಿಸಬೇಕು? ಕ್ಷತ್ರಿಯನು ಕಾಪಾಡಲು ಸಿದ್ಧನಿರುವಾಗ ಶೂದ್ರನು ಆಯುಧಗಳನ್ನೇಕೆ ಹಿಡಿಯಬೇಕು? ಚಾತುರ್ವರ್ಣ್ಯ ತತ್ವವನ್ನು ಈ ರೀತಿ ಅರ್ಥಮಾಡಿಕೊಂಡರೆ ಶೂದ್ರನು ಅಪ್ರಾಪ್ತ ವಯಸ್ಸಿನ ಬಾಲಕನಂತೆಯೂ, ಉಳಿದ ಮೂರು ವರ್ಣಗಳು ಅವನ ಪಾಲಕರಂತೆಯೂ ಕಂಡುಬರುತ್ತವೆ. ಹೀಗೆ ವ್ಯಾಖ್ಯಾನಿಸಿದಾಗ ಅದು ತುಂಬಾ ಸರಳವೂ ಆಕರ್ಷಕವೂ ಆದ ಸಿದ್ಧಾಂತವಾಗುತ್ತದೆ. ಈ ವ್ಯಾಖ್ಯಾನದಂತೆ ಚಾತುರ್ವರ್ಣ್ಯದ ಆಳದಲ್ಲಿರುವ ತತ್ವವೂ ಇದೆಂಬುದನ್ನು ಅಂಗೀಕರಿಸಿದರೂ ಈ ವ್ಯವಸ್ಥೆಯಲ್ಲಿ ತಪ್ಪಿಗೆ ಮತ್ತು ವಂಚನೆಗೆ ಅವಕಾಶವಿಲ್ಲ ಎಂದು ನನಗೆ ತೋರುವುದಿಲ್ಲ. ಬ್ರಾಹ್ಮಣ, ಕ್ಷತ್ರಿಯ, ವೈಶ್ಯರು ತಮ್ಮ ತಮ್ಮ ಕರ್ತವ್ಯಗಳಾದ ಜ್ಞಾನಾರ್ಜನೆ, ಯುದ್ಧ ಪರಿಣತಿ, ವ್ಯಾಪಾರಗಳನ್ನು ಕಲಿಯುವುದನ್ನು

ಬಿಟ್ಟುಬಿಟ್ಟರೆ ಪರಿಣಾಮವೇನಾದೀತು? ನ್ಯಾಯವಾದ ನಿಬಂಧನೆಗಳ ಪ್ರಕಾರ ಶೂದ್ರನನ್ನು ಪೋಷಿಸುವುದನ್ನು ಅವರು ತಿರಸ್ಕರಿಸಿದರೆ ಅಥವಾ ಒಟ್ಟಾಗಿ ಅವನನ್ನು ತುಳಿದರೆ ಪರಿಣಾಮವೇನಾದೀತು? ಬ್ರಾಹ್ಮಣನು ಶೂದ್ರರು, ವೈಶ್ಯರು ಮತ್ತು ಕ್ಷತ್ರಿಯರ ಅಜ್ಞಾನವನ್ನು ತನ್ನ ಅನುಕೂಲಕ್ಕೆ ಬಳಸಿಕೊಂಡು ಅವರ ಹಿತಾಸಕ್ತಿಗಳನ್ನು ಕಾಪಾಡದಿದ್ದರೆ, ಅವರ ಹಿತಾಸಕ್ತಿಗಳನ್ನು ಯಾರು ನೋಡಿಕೊಳ್ಳುತ್ತಾರೆ? ಕ್ಷತ್ರಿಯನೇ ಶೂದ್ರ–ವೈಶ್ಯ–ಬ್ರಾಹ್ಮಣರನ್ನು ಕೊಳ್ಳೆಹೊಡೆಯಲು ಮೊದಲು ಮಾಡಿದರೆ ಅವರನ್ನು ಕಾಪಾಡುವವರು ಯಾರು? ವರ್ಗ ವರ್ಗಗಳೂ ಪರಸ್ಪರರನ್ನು ಅವಲಂಬಿಸುವುದು ಅನಿವಾರ್ಯ. ಒಂದು ವರ್ಗವು ಮತ್ತೊಂದು ವರ್ಗದ ಮೇಲೆ ಅವಲಂಬಿಸಿದ್ದಾರೆ ಅದನ್ನು ಒಪ್ಪಬಹುದು. ಆದರೆ ಮೂಲ ಅಗತ್ಯಗಳಿಗೆ ಸಂಬಂಧಿಸಿದಂತೆ ಒಬ್ಬ ವ್ಯಕ್ತಿ ಇನ್ನೊಬ್ಬನನ್ನು ಏಕೆ ಅವಲಂಬಿಸಬೇಕು? ಶಿಕ್ಷಣ ಎಲ್ಲರಿಗೂ ಬೇಕು. ರಕ್ಷಣಾ ಸಾಧನಗಳ ಅಗತ್ಯವೂ ಎಲ್ಲರಿಗೂ ಇದೆ. ಸ್ವರಕ್ಷಣೆ ಎಲ್ಲ ಮನುಷ್ಯರಿಗೂ ಬೇಕಾದ ಬಹು ಮುಖ್ಯವಾದ ಅಗತ್ಯ. ತನ್ನ ಪಕ್ಕದ ಮನೆಯವನು ವಿದ್ಯಾವಂತನಾಗಿದ್ದಾನೆ ಮತ್ತು ಆಯುಧ ಹೊಂದಿದ್ದಾನೆ ಎಂಬ ಸಂಗತಿಯಿಂದ ಮತ್ತೊಬ್ಬ ಅವಿದ್ಯಾವಂತ ಮತ್ತು ನಿರಾಯುಧನಿಗೆ ಯಾವ ರೀತಿಯಲ್ಲಿ ಸಹಾಯವಾಗುತ್ತದೆ? ಒಟ್ಟು ಸಿದ್ಧಾಂತವೇ ಅಸಂಬದ್ಧವಾಗಿದೆ. ಚಾತುರ್ವರ್ಣ್ಯವನ್ನು ಸಮರ್ಥಿಸಿಕೊಳ್ಳುತ್ತಿರುವವರನ್ನು ಈ ಪ್ರಶ್ನೆಗಳು ಕಾಡುತ್ತಿಲ್ಲ. ಆದರೆ ಇವು ಬಹುಮುಖ್ಯವಾದ ಪ್ರಶ್ನೆಗಳು. ಚಾತುರ್ವರ್ಣ್ಯ ತತ್ವದ ಆಳದಲ್ಲಿರುವ ಅಂಶಗಳು ಬೇರೆ ಬೇರೆ ವರ್ಣಗಳಿಗೆ ಸಂಬಂಧಪಟ್ಟಂತೆ ಪಾಲಕ ಮತ್ತು ಪಾಲಿತ (ಅಪ್ರಾಪ್ತ ವಯಸ್ಸಿನವ)ನ ಸಂಬಂಧವೆಂಬುದನ್ನು ನಿಜವಾದ ಸಿದ್ಧಾಂತವೆಂದೇ ಅಂಗೀಕರಿಸಿದರೂ ಪಾಲಕನು ದುಷ್ಟ ಕೆಲಸಗಳಿಗೆ ತೊಡಗಿದಾಗ ಅವನ ಪಾಲನೆಯಲ್ಲಿರುವವನ ಹಿತಾಸಕ್ತಿಗಳಿಗೆ ಯಾವ ರಕ್ಷಣೆಯ ಭರವಸೆಯೂ ಇಲ್ಲವೆಂಬುದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ತಾತ್ವಿಕವಾಗಿ ಚಾತುರ್ವರ್ಣ್ಯದ ತಳಹದಿಯಾಗಿ ಪಾಲಕ ಮತ್ತು ಪಾಲಿಸಲ್ಪಡುವವನ ಸಂಬಂಧಗಳು ಇರುವುದು ನಿಜವಾಗಿರಲಿ, ಇಲ್ಲದಿರಲಿ, ಅನುಸರಣೆಯಲ್ಲಿ ಮಾತ್ರ ಈ ಸಂಬಂಧವು ಯಜಮಾನ ಮತ್ತು ಸೇವಕನ ಸಂಬಂಧವಾಗಿರುತ್ತಿತ್ತು. ಬ್ರಾಹ್ಮಣ, ಕ್ಷತ್ರಿಯ, ವೈಶ್ಯರ ಪರಸ್ಪರ ಸಂಬಂಧ ತೃಪ್ತಿಕರವಾಗಿಲ್ಲದಿದ್ದರೂ ಹೇಗೋ ಒಂದು ಬಗೆಯ ಒಪ್ಪಂದಕ್ಕೆ ಬಂದು ಜೀವಿಸುತ್ತಾರೆ. ಕ್ಷತ್ರಿಯನನ್ನು ಬ್ರಾಹ್ಮಣ ಪ್ರಶಂಸಿಸುತ್ತಾನೆ. ಇಬ್ಬರೂ ವೈಶ್ಯನನ್ನು ಅವಲಂಬಿಸಿ ಬದುಕಬೇಕಿರುವುದರಿಂದ ಅವನನ್ನು ವೃದ್ಧಿಯಾಗಲು ಬಿಡುತ್ತಾರೆ. ಆದರೆ ಶೂದ್ರನನ್ನು ಚಚ್ಚಿಹಾಕುವುದಕ್ಕೆ ಮೂವರು ಒಂದಾಗುತ್ತಾರೆ. ಶೂದ್ರನು ಉಳಿದ ಮೂರು ವರ್ಣಗಳ ಮೇಲೆ ಅವಲಂಬಿಸಿರದೆ ಸ್ವತಂತ್ರವಾಗಿಬಿಡಬಹುದೆಂದು ಅವನಿಗೆ ಸಂಪತ್ತನ್ನು ಸಂಗ್ರಹಿಸಲು ಅವಕಾಶ ಕೊಡಲಿಲ್ಲ. ಆತನ ಹಿತಾಸಕ್ತಿಗಳಾವುದೆಂದು ತಿಳಿದು ಅವುಗಳ ಬಗೆಗೆ ಸದಾ ಗಮನವಿಡದಂತಿರಲಿ ಎಂದು ಅವನ ಜ್ಞಾನಾರ್ಜನೆಗೆ ಪ್ರತಿಬಂಧಕ ವಿಧಿಸಿದರು. ಅವರ ಅಧಿಕಾರದ ವಿರುದ್ಧ ದಂಗೆ ಏಳದಿರಲೆಂದು ಅವನಿಗೆ ಆಯುಧ ಹಿಡಿಯಲು ನಿಷೇಧಿಸಿದರು. 'ಮನುಧರ್ಮಶಾಸ್ತ್ರ'ದ ಪ್ರಕಾರ ಮೂರು ವರ್ಣದವರೂ ಶೂದ್ರನನ್ನು ನಡೆಸಿಕೊಂಡಿರುವ ರೀತಿ ಹೀಗಿದೆ. ಸಾಮಾಜಿಕ ಹಕ್ಕುಗಳ ಬಗೆಗೆ 'ಮನು ಧರ್ಮ ಸಂಹಿತೆ'ಯಂತಹ ದುಷ್ಟ ಕಾನೂನುಗಳು ಇನ್ನೆಲ್ಲಿಯೂ ಇಲ್ಲ. ಸಾಮಾಜಿಕ ಅನ್ಯಾಯದ ಯಾವುದೇ ದೇಶದ ಯಾವುದೇ ಉದಾಹರಣೆಗಳು ಇದರ ಮುಂದೆ ಸಪ್ಪೆಯಾಗಿ ಬಿಡುತ್ತದೆ. ಮನುಷ್ಯ ಸಮೂಹಗಳು ಈ ಸಾಮಾಜಿಕ ದೌರ್ಜನ್ಯವನ್ನು ಏಕೆ ಸಹಿಸಿ ಅವರನ್ನು ಹಿಂಬಾಲಿಸಿದವು? ಇಂಡಿಯಾದಲ್ಲಿ ಸಾಮಾಜಿಕ ಬಂಡಾಯಗಳು ಏಕೆ ನಡೆಯಲಿಲ್ಲವೆಂಬುದು ನನ್ನನ್ನು ಯಾವಾಗಲೂ ಕಾಡುತ್ತಿರುವ ಪ್ರಶ್ನೆಯಾಗಿದೆ. ಇದಕ್ಕೆ ನಾನು ಕೊಡಬಹುದಾದ ಉತ್ತರ ಒಂದೇ ಒಂದು. ಕೆಳವರ್ಗದ ಹಿಂದೂಗಳು ನೇರ ಕ್ರಮಕ್ಕೆ ತೊಡಗದಂತೆ ಅವರನ್ನು ಪ್ರತಿಬಂಧಿಸಿದ್ದು ಈ ಕೊಳಕು ಚಾತುರ್ವರ್ಣ್ಯ

ಪದ್ಧತಿ. ಅವರು ಆಯುಧಗಳನ್ನು ಹಿಡಿಯುವಂತಿಲ್ಲ. ಆಯುಧವಿಲ್ಲದೆ ಬಂಡೇಳುವಂತೆಯೂ ಇಲ್ಲ. ಅವರೆಲ್ಲ ಉಳುಮೆ ಮಾಡುವವರು ಅಥವಾ ಉಳುಮೆ ಮಾಡುವ ಶಿಕ್ಷೆಗೆ ಗುರಿಯಾದವರು. ಅವರ ನೇಗಿಲು ಕುಳಗಳನ್ನು ಕತ್ತಿಗಳನ್ನಾಗಿ ಮಾಡಿಕೊಳ್ಳಲು ಅವರಿಗೆ ಅನುಮತಿ ಇರಲಿಲ್ಲ. ಅವರ ಹತ್ತಿರ ಕೋವಿಯ ಮೊನೆಗಳಿರಲಿಲ್ಲವಾದುದರಿಂದ ಜಮೀನು ಉಳ್ಳವರೆಲ್ಲ ಅವರ ಮೇಲೆ ಸವಾರಿ ಮಾಡಿದರು. ಚಾತುರ್ವರ್ಣ್ಯದಿಂದಾಗಿ ಅವರಿಗೆ ಶಿಕ್ಷಣ ಸಿಗಲಿಲ್ಲ. ಅವರ ಬಿಡುಗಡೆಯ ದಾರಿಯನ್ನು ಯೋಚಿಸಲು ಅಥವಾ ತಿಳಿದುಕೊಳ್ಳಲು ಅವರಿಗೆ ಮಾರ್ಗವೇ ಇರಲಿಲ್ಲ. ಅಧೀನದಲ್ಲೇ ಇರುವ ಶಿಕ್ಷೆಗೆ ಗುರಿಯಾದವರಂತಿದ್ದ ಅವರಿಗೆ ಅಲ್ಲಿಂದ ಪಾರಾಗುವ ದಾರಿಯೂ ಗೊತ್ತಿರಲಿಲ್ಲ. ಪಾರಾಗುವ ಸಾಧನಗಳೂ ಅವರಲ್ಲಿರಲಿಲ್ಲ. ತಪ್ಪಿಸಿಕೊಳ್ಳಲಾರದ ದುರ್ದೈವದ ಶಾಶ್ವತ ಸೇವೆಗೆ ತಮ್ಮನ್ನು ಒಪ್ಪಿಸಿಕೊಂಡುಬಿಟ್ಟರು. ಯೂರೋಪಿನಲ್ಲಿಯೂ ಬಲಾಢ್ಯರು ಬಲಹೀನರನ್ನು ಶೋಷಿಸುವುದರಲ್ಲಿ ಮತ್ತು ಕೊಳ್ಳೆ ಹೊಡೆಯುವುದರಲ್ಲಿ ಹಿಂದೆ ಬಿದ್ದಿಲ್ಲವೆಂಬುದು ನಿಜವಾದರೂ, ಯೂರೋಪಿನಲ್ಲಿ ಬಲಹೀನರನ್ನು ಶೋಷಣೆಯ ವಿರುದ್ಧ ಸಂಪೂರ್ಣ ಅಸಹಾಯಕರನ್ನಾಗಿ ಮಾಡುವಲ್ಲಿ ಇಂಡಿಯಾದ ಹಿಂದೂಗಳಂತೆ ಒಳಸಂಚು ನಡೆಸಿಲ್ಲ. ಆದರೂ ಯೂರೋಪಿನಲ್ಲಿ ದೈಹಿಕ ಆಯುಧವಾಗಿ ಓಟಿನ ಹಕ್ಕು, ನೈತಿಕ ಆಯುಧವಾಗಿ ಶಿಕ್ಷಣಗಳು ಬಲಹೀನರ ಪಾಲಿಗಿದ್ದವು. ಬಲಹೀನರಿಗೆ ಈ ಎಲ್ಲ ಆಯುಧಗಳನ್ನು ಇಂಡಿಯಾದಲ್ಲಿ ಹಿಂದೂಗಳ ಚಾತುರ್ವರ್ಣ್ಯವು ನಿರಾಕರಿಸಿತು. ಚಾತುರ್ವರ್ಣ್ಯಕ್ಕಿಂತ ಹೀನಾಯವಾದ ವ್ಯವಸ್ಥೆ ಮತ್ತೊಂದಿರಲು ಸಾಧ್ಯವೇ ಇಲ್ಲ. ಮನುಷ್ಯರು ಪ್ರಯೋಜನಕಾರಿ ಚಟುವಟಿಕೆಗಳಲ್ಲಿ ತೊಡಗದಂತೆ ಅದು ಉಸಿರುಗಟ್ಟಿಸುತ್ತವೆ, ಸ್ಥಗಿತಗೊಳಿಸುತ್ತದೆ, ಊನವಾಗಿಸುತ್ತದೆ. ಇದರಲ್ಲಿ ಸ್ವಲ್ಪವೂ ಉತ್ಪ್ರೇಕ್ಷೆಯಿಲ್ಲ.

ಜಗತ್ತಿನ ಚರಿತ್ರೆಯಲ್ಲಿ ಅಸಂಖ್ಯಾತ ಉದಾಹರಣೆಗಳಿವೆ. ಇಂಡಿಯಾದ ಚರಿತ್ರೆಯಲ್ಲಿ ಒಂದೇ ಒಂದು ಯುಗದಲ್ಲಿ ಸ್ವಾತಂತ್ರ್ಯ, ಘನತೆ ಮತ್ತು ವೈಭವಗಳ ಯುಗವಿತ್ತು. ಮೌರ್ಯ ಸಾಮ್ರಾಜ್ಯದ ಕಾಲವದು. ಉಳಿದೆಲ್ಲ ಕಾಲದಲ್ಲಿ ದೇಶವು ಸೋಲು ಮತ್ತು ಅವನತಿಯನ್ನು ಕಂಡಿತು. ಚಾತುರ್ವರ್ಣ್ಯವನ್ನು ಸಂಪೂರ್ಣವಾಗಿ ತೊಡೆದುಹಾಕಿದ ಕಾಲವೆಂದರೆ ಮೌರ್ಯರ ಕಾಲ. ಸಮೂಹದ ಪ್ರತಿನಿಧಿಗಳಾದ ಶೂದ್ರರು ಸ್ವಶಕ್ತಿಯಿಂದ ದೇಶದ ಅಧಿಕಾರವನ್ನು ವಹಿಸಿಕೊಂಡ ಕಾಲವದು. ಚಾತುರ್ವರ್ಣ್ಯವನ್ನು ಮೆರೆದ ಕಾಲವೇ ಸೋಲು ಮತ್ತು ಅಂಧಕಾರದ ಕಾಲವಾಗಿತ್ತು. ದೇಶದ ಬಹುಜನ ಸಮಾಜವನ್ನು ಆಗ ನರಕಕ್ಕೆ ತಳ್ಳಲಾಗಿತ್ತು.

ಜಾತಿಯು ಒಗ್ಗೂಡುವಿಕೆಯನ್ನು ತಡೆಯುತ್ತದೆ. ಮಹಾ ವಿನಾಶದಿಂದ ತನ್ನನ್ನು ತಾನು ರಕ್ಷಿಸಿಕೊಳ್ಳಬೇಕಾದ ಸಮಾಜಕ್ಕೆ ಒಗ್ಗೂಡಲೇಬೇಕಾದ ಸಂದರ್ಭ ಉಂಟಾಗುತ್ತದೆ. ತನ್ನೆಲ್ಲಾ ಸಂಪನ್ಮೂಲಗಳನ್ನೂ ಒಂದು ಗುರಿಯತ್ತ ಒಗ್ಗೂಡಿಸಬೇಕಾಗುತ್ತದೆ. ಯುದ್ಧದಂತಹ ಆಪತ್ತಿನ ಕಾಲದಲ್ಲಿ ಉಳಿಯಬೇಕಾದರೆ ತನ್ನೆಲ್ಲ ಶಕ್ತಿ ಸಾಧನಗಳನ್ನೂ ಸಮಾಜ ಒಗ್ಗೂಡಿಸಬೇಕಾಗುತ್ತದೆ. ಎಲ್ಲರೂ ಯುದ್ಧಸನ್ನದ್ಧರಾಗಬೇಕು. ಎಲ್ಲರೂ ಸೈನಿಕರಾಗಬೇಕು. ಜಾತಿ ಸಿದ್ಧಾಂತದ ಪ್ರಕಾರ ಇದು ಸಾಧ್ಯವೆ? ಖಂಡಿತಾ ಸಾಧ್ಯವಿಲ್ಲ. ವಾಸ್ತವವಾಗಿ ಚರಿತ್ರೆಯುದ್ಧಕ್ಕೂ ಇಂಡಿಯಾದ ಸೋಲಿನ ದುರದೃಷ್ಟಗಳಿಗೆ ಕಾರಣ ಜಾತೀಯತೆ. ಸಮಗ್ರವಾಗಿ ಒಗ್ಗೂಡುವುದನ್ನು ಜಾತಿ ತಡೆಯಿತು ಅಥವಾ ಒಗ್ಗೂಡಿನ ಪ್ರಮಾಣವೂ ಸೀಮಿತ ಮಾದರಿಯದು. ಕೇವಲ ಕ್ಷತ್ರಿಯರು ಮಾತ್ರ ಹೋರಾಡಬೇಕಾದ ನಿರೀಕ್ಷೆಯಿತ್ತು. ಉಳಿದ ಬ್ರಾಹ್ಮಣ, ವೈಶ್ಯರು ಆಯುಧ ತರಬೇತಿ ಪಡೆದಿರಲಿಲ್ಲ. ದೇಶದ ಬಹುಸಂಖ್ಯಾತರಾಗಿದ್ದ ಶೂದ್ರರನ್ನು ನಿರಸ್ತ್ರಗೊಳಿಸಲಾಗಿತ್ತು. ಅದರ ಪರಿಣಾಮವೆಂದರೆ ಒಮ್ಮೆ ಕ್ಷತ್ರಿಯರ ಸಣ್ಣ ಗುಂಪನ್ನು ವಿದೇಶಿಯರು ಸೋಲಿಸಿದರೆ ಇಡಿ ದೇಶವೇ ಅವರ ಪದತಲದಲ್ಲಿ ಕುಸಿಯಬೇಕಾಗುತ್ತಿತ್ತು. ಯಾವುದೇ ಪ್ರತಿಭಟನೆಯನ್ನೂ ಅದು ನೀಡುವಂತಿರಲಿಲ್ಲ. ಪ್ರತಿಭಟನೆಯ ಸಾಮರ್ಥ್ಯವೂ ಇರಲಿಲ್ಲ. ಇಂಡಿಯಾದ ಬಹುಪಾಲು ಯುದ್ಧಗಳು ಏಕಾಕಿ ಯುದ್ಧಗಳು ಅಥವಾ ಏಕಾಕಿ ದಂಡಯಾತ್ರೆಗಳು.

ಇದಕ್ಕೆ ಕಾರಣವೇನೆಂದರೆ ಒಮ್ಮೆ ಕ್ಷತ್ರಿಯರು ಮಣ್ಣುಮುಕ್ಕಿದರೆಂದರೆ ಎಲ್ಲವೂ ನೆಲಕಚ್ಚಿದಂತೆ. ಏಕೆ? ಸಾರ್ವತ್ರಿಕ ಒಗ್ಗೂಡುವಿಕೆಯೇ ಇರಲಿಲ್ಲವಾದುದರಿಂದ ಮತ್ತು ಚಾತುರ್ವರ್ಣ್ಯ ಸಿದ್ಧಾಂತವು ಜನಮನದಲ್ಲಿ ಆಳವಾಗಿ ಬೇರೂರಿದ್ದರಿಂದ.

ಈಗ ನಾವು ಕಂಡುಕೊಂಡಿರುವ ತೀರ್ಮಾನಗಳು ಭದ್ರ ನೆಲೆಯಿಂದ ಬಂದಿರುವುದಾದರೆ, ಸಮಾಜವನ್ನು ಚೂರು ಚೂರಾಗಿ ಕತ್ತರಿಸುವ ತಾತ್ವಿಕತೆಯು ಉಪಯುಕ್ತವಾಗಿರುವುದಾದರೂ ಸಾಧ್ಯವೇ? ಆಸಕ್ತಿಯನ್ನು ದುಡಿಮೆಯಿಂದ, ಬುದ್ಧಿವಂತಿಕೆಯನ್ನು ಕೆಲಸದಿಂದ ಬೇರ್ಪಡಿಸುವ ತಾತ್ವಿಕತೆ, ಜೀವನದ ಮೂಲ ಸತ್ವಗಳಿಗೆ ಸಂಬಂಧಿಸಿದ ಮಾನವ ಹಕ್ಕುಗಳನ್ನು ಮೊಟಕುಗೊಳಿಸುವ, ಅಪಾಯದ ಕ್ಷಣಗಳಲ್ಲಿ ಸಮಾಜದ ಶಕ್ತಿ ಸಾಧನಗಳನ್ನು ಒಗ್ಗೂಡಿಸುವುದನ್ನು ತಡೆದ ತಾಂತ್ರಿಕತೆಯು ಉಪಯುಕ್ತವಾಗುವುದು ಹೇಗೆ ತಾನೇ ಸಾಧ್ಯ?

## V

ಹಿಂದೂ ಧರ್ಮದ ತತ್ವಜ್ಞಾನವು ಹೀಗೆ ಸಾಮಾಜಿಕ ಉಪಯುಕ್ತತೆಯ ಪರೀಕ್ಷೆಯಲ್ಲಾಗಲೀ ವ್ಯಕ್ತಿ–ನ್ಯಾಯದ ಪರೀಕ್ಷೆಯಲ್ಲಾಗಲೀ ತೃಪ್ತಿಕರವಾಗಿ ಉತ್ತೀರ್ಣವಾಗುವುದಿಲ್ಲ.

ನನ್ನ ವಿಶ್ಲೇಷಣೆಯ ಫಲಿತಾಂಶವು ಎಷ್ಟು ವಿಚಿತ್ರವಾಗಿದೆ ಎಂದರೆ ಹಲವರಿಗೆ ಅದು ಆಶ್ಚರ್ಯವನ್ನುಂಟು ಮಾಡಬಹುದು. ಹೀಗೆ ಆಶ್ಚರ್ಯಪಟ್ಟ ಕೆಲವರು ನನ್ನ ಫಲಿತಾಂಶವು ಇಷ್ಟೊಂದು ವಿಚಿತ್ರವಾಗಿರಬೇಕಾದರೆ ಹಿಂದೂ ಧರ್ಮದ ತಾತ್ವಿಕತೆಯನ್ನು ಕುರಿತ ನನ್ನ ವಿಶ್ಲೇಷಣೆಯಲ್ಲಿಯೇ ಏನೋ ತಪ್ಪಿರಬಹುದೆಂದು ವಾದಿಸಬಹುದು. ಈ ಆಕ್ಷೇಪಣೆಯನ್ನು ನಾನು ಎದುರಿಸಲೇಬೇಕು. ನನ್ನ ವಿಶ್ಲೇಷಣೆಯನ್ನು ಒಪ್ಪಲು ನಿರಾಕರಿಸುವವರಿಗೆ ನಾನು ಹೇಳುವುದಿಷ್ಟೇ. ಅವರು ನನ್ನ ವಿಶ್ಲೇಷಣೆಯು ವಿಚಿತ್ರವಾಗಿದೆಯೆಂದು ತಿಳಿದಿರುವುದೇಕೆಂದರೆ, ಹಿಂದೂ ಧರ್ಮದ ಕೇಂದ್ರ ತತ್ವದ ಬಗೆಗೆ ಅವರಿಗೆ ಸರಿಯಾದ ತಿಳುವಳಿಕೆಯಿಲ್ಲದಿರುವುದೇ ಆಗಿದೆ. ಅವರಿಗೆ ಗೊತ್ತಿದ್ದರೆ ನನ್ನ ತೀರ್ಮಾನಗಳ ಬಗೆಗೆ ಅವರಿಗೆ ಆಶ್ಚರ್ಯವಾಗುವುದಿಲ್ಲ. ಈ ಸಂಗತಿಯು ಎಷ್ಟು ಮುಖ್ಯವೆಂದರೆ ಸ್ವಲ್ಪ ತಡೆದು ನಾನಿದನ್ನು ವಿವರಿಸಬೇಕು. ಧಾರ್ಮಿಕ ಕ್ರಾಂತಿಯನ್ನು ಕುರಿತು ನನ್ನ ಪೂರ್ವಭಾವಿ ವಿಶ್ಲೇಷಣೆಯನ್ನು ಇಲ್ಲಿ ನೆನಪಿಸಬಯಸುತ್ತೇನೆ. ಮಾನವ ಸಮಾಜಕ್ಕೆ ದೈವಿಕ ಆಡಳಿತದ ಧಾರ್ಮಿಕ ಆದರ್ಶಗಳು ಎರಡು ರೀತಿಯಲ್ಲಿವೆ ಎಂಬುದನ್ನು ನಾನು ಅಲ್ಲಿ ತೋರಿಸಿದ್ದೇನೆ. ಒಂದರಲ್ಲಿ ಸಮಾಜವೇ ಕೇಂದ್ರವಾದರೆ, ಮತ್ತೊಂದರಲ್ಲಿ ವ್ಯಕ್ತಿಯೇ ಕೇಂದ್ರವಾಗುತ್ತಾನೆ. ಅದೇ ವಿಶ್ಲೇಷಣೆಯಲ್ಲಿ ಸಮಾಜಕ್ಕೆ ಯಾವುದು ಒಳ್ಳೆಯದು ಮತ್ತಾವುದು ಕೆಟ್ಟದ್ದು ಎಂದು ನಿರ್ಧರಿಸಲು ನೈತಿಕ ಶಿಸ್ತು ಉಪಯುಕ್ತವಾಗುತ್ತದೆ ಎಂದೂ, ವ್ಯಕ್ತಿಗೆ ಸಂಬಂಧಿಸಿದಂತೆ ನ್ಯಾಯದ ಪರೀಕ್ಷೆ ಮುಖ್ಯವಾಗುತ್ತದೆ ಎಂದು ತೋರಿಸಲಾಗಿದೆ. ಹಿಂದೂ ಧರ್ಮದ ತತ್ವಜ್ಞಾನವು ಉಪಯುಕ್ತತೆಯ ಪರೀಕ್ಷೆಯಲ್ಲಾಗಲೀ ನ್ಯಾಯದ ಪರೀಕ್ಷೆಯಲ್ಲಾಗಲೀ ಉತ್ತೀರ್ಣವಾಗದಿರುವುದಕ್ಕೆ ಕಾರಣವೇನೆಂದರೆ, ಮಾನವ ಸಮಾಜಕ್ಕೆ ದೈವಿಕ ಆಡಳಿತದ ಆದರ್ಶಗಳನ್ನು ನೀಡಿದ ಹಿಂದೂ ಧರ್ಮದ ಆದರ್ಶಗಳ ಕೇಂದ್ರ ವ್ಯಕ್ತಿಯೂ ಅಲ್ಲ, ಸಮಾಜವೂ ಅಲ್ಲ. ಅದೊಂದು ವರ್ಗ. ಬ್ರಾಹ್ಮಣರೆಂದು ಕರೆಯಲಾಗುವ ಅತಿಮಾನವ ವರ್ಗ. ಪ್ರಬಲವೂ, ವಿನಾಶಕಾರಿಯೂ ಆದ ಈ ಸಂಗತಿಯನ್ನು ಮನಸ್ಸಿಗೆ ತಂದುಕೊಂಡವರಿಗೆ ಇದು ಅರ್ಥವಾಗುತ್ತದೆ. ವ್ಯಕ್ತಿ–ನ್ಯಾಯ ಅಥವಾ ಸಾಮಾಜಿಕ ಉಪಯುಕ್ತತೆಯ ಆಧಾರದ ಮೇಲೆ, ಹಿಂದೂ ಧರ್ಮದ ತತ್ವಜ್ಞಾನವು ಸಂಪೂರ್ಣ ಭಿನ್ನ ನಿಯಮಗಳ ಆಧಾರದ ಮೇಲೆ ನಿಂತಿದೆ. ಯಾವುದು ಸರಿ? ಯಾವುದು ಒಳ್ಳೆಯದು?

ಎಂಬ ಪ್ರಶ್ನೆಗೆ ಹಿಂದೂ ಧರ್ಮದ ತತ್ವಜ್ಞಾನವು ನೀಡುವ ಉತ್ತರ ಅದ್ಭುತವಾಗಿದೆ. ಅದರ ಪ್ರಕಾರ ಯಾವುದು ಸರಿ? ಯಾವುದು ಒಳ್ಳೆಯದು? ಎಂಬುದನ್ನು ಬ್ರಾಹ್ಮಣರೆಂದು ಕರೆಯಲಾದ ಅತಿಮಾನವರ ಹಿತಾಸಕ್ತಿಯನ್ನು ಕಾಪಾಡಬೇಕೆಂಬ ಅಂಶದ ಮೇಲೆ ನಿರ್ಣಯಿಸಲಾಗುತ್ತದೆ. ಆಸ್ಕರ್ ವೈಲ್ಡ್‌ನ ಪ್ರಕಾರ ಬುದ್ಧಿಗ್ರಾಹ್ಯವಾಗುವಂತೆ ಹೇಳುವುದೆಂದರೆ ಪತ್ತೆಯಾಗಿಬಿಡುವುದು. ಮನುವಿಗೆ ಪತ್ತೆಯಾಗಿಬಿಡುವುದಕ್ಕೆ ಹೆದರಿಕೆಯಾಗಲೀ ನಾಚಿಕೆಯಾಗಲೀ ಇಲ್ಲ. ವಾಸ್ತವವಾಗಿ ಪತ್ತೆಯಾಗುವುದಕ್ಕೆ ಮನು ಏನನ್ನೂ ಬಿಡುವುದಿಲ್ಲ. ಅತ್ಯಂತ ಖಚಿತವಾದ ಮತ್ತು ಗಂಭೀರವಾದ ರೀತಿಯಲ್ಲಿ ತನ್ನ ಅಭಿಪ್ರಾಯಗಳನ್ನು ಅವನು ಬರೆದಿಟ್ಟಿದ್ದಾನೆ. ಯಾರು ಅತಿಮಾನವರು? ಈ ಅತಿಮಾನವರ ಹಿತಾಸಕ್ತಿಗೆ ಸಂಬಂಧಿಸಿದುದು ಏನಿದ್ದರೂ ಅದನ್ನು ಸರಿಯಾದುದು ಮತ್ತು ಒಳ್ಳೆಯದು ಎಂದು ಪರಿಗಣಿಸಲು ಅರ್ಹತೆ ಪಡೆಯುತ್ತದೆ ಎಂದೇ ಹೇಳಿದ್ದಾನೆ. ಮನುವನ್ನೇ ನಾನು ಉಲ್ಲೇಖಿಸುವೆ:

X ३ "ಆತನ ಉತ್ತಮೋತ್ತಮಿಕೆಯಿಂದ, ಆತನ ಹುಟ್ಟಿನ ಶ್ರೇಷ್ಠತೆಯಿಂದ, ಕಠಿಣ ನಿಯಮಗಳನ್ನು ಆತ ನಿರ್ದಿಷ್ಟವಾಗಿ ಪಾಲಿಸುವವನಾದ್ದರಿಂದ ಮತ್ತು ಅವನ ವಿಶಿಷ್ಟವಾದ ಪಾವಿತ್ರ್ಯತೆಯಿಂದ ಬ್ರಾಹ್ಮಣನು ಇತರ ಎಲ್ಲ ವರ್ಣಗಳ ಯಜಮಾನನಾಗಿದ್ದಾನೆ."

ಇದಕ್ಕೆ ಹಲವು ಕಾರಣಗಳನ್ನು ನೀಡುತ್ತಾ ಅವನು ಮುಂದುವರಿಸಿದ್ದಾನೆ. ತನ್ನ ವಿಶಿಷ್ಟ ಮಾದರಿಯಲ್ಲಿ ಹೀಗೆ ಹೇಳುತ್ತಾನೆ:

I ೯೩ "ಬ್ರಾಹ್ಮಣನು ಬಾಯಿಂದ (ಪ್ರಜಾಪತಿ, ಅಂದರೆ ದೇವರು) ಹುಟ್ಟಿದವನಾದುದರಿಂದ, ಮೊದಲು ಹುಟ್ಟಿದವನಾದುದರಿಂದ, ವೇದಗಳನ್ನು ಹೊಂದಿರುವವನಾದುದರಿಂದ, ಅಖಂಡ ಸೃಷ್ಟಿಗೆ ಅವನು ಹಕ್ಕುದಾರನಾಗಿದ್ದಾನೆ."

I ೯೪ "ಸ್ವಯಂ ಅಸ್ತಿತ್ವವುಳ್ಳವನು (ಸ್ವಯಂಭೂ, ಅಂದರೆ ದೇವರು) ಕಠಿಣ ವ್ರತ ನಿಯಮಗಳನ್ನು ಅನುಸರಿಸಿ, ಅವನ ಬಾಯಿಂದಲೇ ಇವನನ್ನು ಮೊದಲು ಸೃಷ್ಟಿಸಿದನು. ದೇವರುಗಳಿಗೆ ಮತ್ತು ಪಿತೃದೇವತೆಗಳಿಗೆ ಆಹುತಿಗಳನ್ನು ಇವನ ಮೂಲಕ ಕೊಟ್ಟು ಜಗತ್ತು ಉಳಿಯಲಿ ಎಂದು....."

I ೯೫ "ಯಾವನ ಬಾಯಿಯ ಮೂಲಕವಾಗಿ ದೇವರು ನಿರಂತರವಾಗಿ ಬಲಿ ಸಂತರ್ಪಣೆಯನ್ನು ಮತ್ತು ಸತ್ತವರಿಗೆ ಕೊಡುವ ನೈವೇದ್ಯವನ್ನು ಪಿತೃದೇವತೆಗಳು ಸ್ವೀಕರಿಸುತ್ತಾರೆಯೋ ಅವನನ್ನು ಸೃಷ್ಟಿಯಲ್ಲಿ ಮೀರಿಸುವವರೇ ಇಲ್ಲ."

I ೯೬ "ಸೃಷ್ಟಿ ಸಮಸ್ತದಲ್ಲಿ ಶ್ರೇಷ್ಠವಾದುದೆಂದು ಹೇಳುವುದು ಚೈತನ್ಯವಿರುವಂಥದಕ್ಕೆ; ಚೇತನವುಳ್ಳವುಗಳಲ್ಲಿ ಬುದ್ಧಿಯ ಬಲದ ಮೇಲೆ ಜೀವಿಸಿರುವುಗಳಿಗೆ. ಬುದ್ಧಿಯುಳ್ಳವುಗಳಲ್ಲಿ ಮಾನವ ಕೋಟಿ. ಮತ್ತು ಮನುಷ್ಯರಲ್ಲಿ ಬ್ರಾಹ್ಮಣರು.

ಅವರು ದೇವರ ಮುಖದಿಂದ ಹುಟ್ಟಿದವರೆಂಬುದರಿಂದ ಬ್ರಾಹ್ಮಣರು ಪ್ರಥಮ ವರ್ಗದವರೆಂಬುದಕ್ಕೆ ಕಾರಣವನ್ನು ಮನು ಕೊಡುತ್ತಾನೆ. ಪಿತೃದೇವತೆಗಳಿಗೆ ಮತ್ತು ದೇವರಿಗೆ ಆಹುತಿಯನ್ನು ಅವರ ಮೂಲಕ ಕೊಡಬೇಕೆನ್ನುವುದೂ ಇದೇ ಕಾರಣಕ್ಕೆ. ಬ್ರಾಹ್ಮಣರ ಶ್ರೇಷ್ಠತೆಗೆ ಮನು ಮತ್ತೊಂದು ಕಾರಣವನ್ನು ಕೊಟ್ಟಿದ್ದಾನೆ. ಅವನು ಹೇಳುತ್ತಾನೆ:

I ೯೮ "ಒಬ್ಬ ಬ್ರಾಹ್ಮಣನ ಹುಟ್ಟೇ ಪವಿತ್ರ ನಿಯಮಗಳ (ವೇದ) ನಿತ್ಯಾವತಾರವಾಗಿದೆ. ಏಕೆಂದರೆ ಅವನು ಹುಟ್ಟಿರುವುದೇ ಪವಿತ್ರ ನಿಯಮಗಳನ್ನು ಅನುಸರಿಸಲು ಮತ್ತು ಬ್ರಹ್ಮನೊಂದಿಗೆ ಒಂದಾಗಲು."

I ೯೯ "ಅಸ್ತಿತ್ವಕ್ಕೆ ಬರುತ್ತಿದ್ದಂತೆಯೇ ಒಬ್ಬ ಬ್ರಾಹ್ಮಣನು ಭೂಮಿಯ ಮೇಲೆ ಅತಿ ಶ್ರೇಷ್ಠನಾಗಿ ಹುಟ್ಟುತ್ತಾನೆ. ನಿಯಮಗಳ ಭಂಡಾರವನ್ನು ಕಾಪಾಡುವುದಕ್ಕಾಗಿ ಸೃಷ್ಟಿ ಸಮಸ್ತಕ್ಕೂ ಯಜಮಾನನಾಗುತ್ತಾನೆ."

ಈ ಮಾತುಗಳ ಮೂಲಕ ಮನು ಮುಕ್ತಾಯ ಹೇಳುತ್ತಾನೆ:

I ೧೦೧ "ಬ್ರಾಹ್ಮಣನು ತನ್ನ ಆಹಾರವನ್ನೇ ತಿನ್ನುತ್ತಾನೆ, ತನ್ನದೇ ವಸ್ತ್ರಗಳನ್ನು ಧರಿಸುತ್ತಾನೆ, ತನ್ನದೇ ಭಿಕ್ಷೆಯನ್ನು ಸ್ವೀಕರಿಸುತ್ತಾನೆ, ಉಳಿದ ಜೀವಿಗಳು ಬ್ರಾಹ್ಮಣನ ಕೃಪಾಶ್ರಯದ ಮೂಲಕ ಬದುಕುತ್ತವೆ."

ಏಕೆಂದರೆ ಮನುವಿನ ಪ್ರಕಾರ:

II ೧೦೦ "ಜಗತ್ತಿನಲ್ಲಿ ಅಸ್ತಿತ್ವದಲ್ಲಿರುವುದೆಲ್ಲಾ ಬ್ರಾಹ್ಮಣನ ಆಸ್ತಿ. ಅವನ ಹುಟ್ಟಿನ ಶ್ರೇಷ್ಠತೆಯಿಂದಾಗಿಯೇ ಇದೆಲ್ಲಕ್ಕೂ ಅವನು ಹಕ್ಕುದಾರ."

ಮನು ನಿರ್ದೇಶಿಸುತ್ತಾನೆ:

II ೩೬ "ರಾಜನು ಪ್ರಾತಃಕಾಲ ಎದ್ದ ಬಳಿಕ, ಮೂರು ಬಗೆಯ ಪವಿತ್ರ ಜ್ಞಾನದಲ್ಲಿ ಪಾಂಡಿತ್ಯ ಪಡೆದಿರುವ ಬ್ರಾಹ್ಮಣರನ್ನು ಪೂಜಿಸಲಿ. ರಾಜನೀತಿಯಲ್ಲಿ ಪರಿಣತರಾದ ಅವರ ಮಾರ್ಗದರ್ಶನವನ್ನು ಅನುಸರಿಸಲಿ."

VII ೩೮ "ವೇದವನ್ನು ಬಲ್ಲವರೂ ಪರಿಶುದ್ಧರೂ ಆದ ವೃದ್ಧ ಬ್ರಾಹ್ಮಣರನ್ನು ಅವನು ಪೂಜಿಸಲಿ.....

VII ೩೭ "ಮುಂಜಾನೆ ಎದ್ದ ಬಳಿಕ ರಾಜನು ಗೌರವ ಪೂರ್ವಕವಾಗಿ ಬ್ರಾಹ್ಮಣರ ಸೇವೆ ಮಾಡಲಿ. ಮೂರು ವೇದಗಳಲ್ಲಿ ಪಾರಂಗತರೂ ನೀತಿಶಾಸ್ತ್ರ ನಿಪುಣರೂ ಆದ ಅವರ ತೀರ್ಮಾನಗಳನ್ನು ಒಪ್ಪಿಕೊಂಡು ಅನುಸರಿಸಲಿ."

VII ೩೮ "ಯಾವಾಗಲೂ ಅವನು ವೃದ್ಧ ಬ್ರಾಹ್ಮಣರನ್ನು ಗೌರವಿಸಬೇಕು. ನಿಷ್ಠೆ ಮತ್ತು ವಯಸ್ಸುಗಳಿಂದ ಹಿರಿಯರೂ ಶಾಸ್ತ್ರಗಳನ್ನು ಬಲ್ಲವರೂ ಮನಸ್ಸು ದೇಹಗಳೆರಡರಲ್ಲಿಯೂ ಪರಿಶುದ್ಧರೂ ಆದ ಜನರನ್ನು ಯಾರು ಗೌರವಿಸುತ್ತಾರೆಯೋ ಅವರನ್ನು ಶಾಶ್ವತವಾಗಿ ಕ್ರೂರ ಭೂತಗಳೂ ಗೌರವಿಸುತ್ತವೆ."

IX ೩೧೩ "ಅವನು ಹಣದ ಅಭಾವದಿಂದ ಎಂತಹ ಭಾರಿ ದುಃಖಕ್ಕೀಡಾಗಿದ್ದರೂ ಬ್ರಾಹ್ಮಣರ ಸ್ವತ್ತನ್ನು ಕಿತ್ತುಕೊಂಡು ಅವರ ಕೋಪವನ್ನು ಕೆರಳಿಸದಿರಲಿ. ಏಕೆಂದರೆ ಒಮ್ಮೆ ಕೆರಳಿಸಿದರೆ ಕೂಡಲೇ ಧ್ಯಾನ ಮತ್ತು ಆಹುತಿಗಳ ಮೂಲಕ, ಆನೆ, ಕುದುರೆ, ರಥವೂ ಸೇರಿದಂತೆ ಅವನ ಸೈನ್ಯವನ್ನೆಲ್ಲಾ ಸಮಸ್ತವನ್ನೂ ನಾಶಮಾಡಿಬಿಡಬಲ್ಲರು."

ಕೊನೆಯದಾಗಿ ಮನು ಹೇಳುತ್ತಾನೆ:

XI ೩೫ "ಈ ಮೂಲಕ ಬ್ರಾಹ್ಮಣನನ್ನು ಪ್ರಪಂಚದ ಸೃಷ್ಟಿಕರ್ತನೆಂದು ಘೋಷಿಸಲಾಗಿದೆ. ದಂಡಿಸುವವನು ಉಪದೇಶಿಸುವವನೂ ಆಗಿರುವುದರಿಂದ (ಎಲ್ಲ ಸೃಷ್ಟಿಗೊಂಡ ಜೀವಿಗಳಿಗೆ) ಉಪಕಾರಿಯೂ ಆಗಿದ್ದಾನೆ. ಅವನನ್ನು ಅಪ್ರಸನ್ನಗೊಳಿಸುವಂತಹ ಮಾತುಗಳನ್ನು ಯಾವ ಮನುಷ್ಯನೂ ಹೇಳದಿರಲಿ. ಕಠಿಣ ಮಾತುಗಳನ್ನು ಬಳಸದಿರಲಿ."

ಅತಿಮಾನವ ಸಿದ್ಧಾಂತವನ್ನು ಮತ್ತು ಯಾವುದು ಸರಿ? ಯಾವುದು ಒಳ್ಳೆಯದು? ಎಂಬುದನ್ನು ಮುಕ್ತಾಯಗೊಳಿಸುವ ಮುನ್ನ ಮನುವಿನ ಕೆಳಗಿನ ಎರಡು ಉಲ್ಲೇಖಗಳನ್ನು ಸೇರಿಸಬಹುದಾಗಿದೆ.

X ೧೨೨ "ಆದರೆ ಒಬ್ಬ ಶೂದ್ರನು ಬ್ರಾಹ್ಮಣನ ಸೇವೆ ಮಾಡಲಿ. ಸ್ವರ್ಗದ ಸಲುವಾಗಿ ಅಥವಾ ಈ

ಜನ್ಮ ಮತ್ತು ಮುಂದಿನ ಜನ್ಮದ ಬದುಕಿನ ಸಲುವಾಗಿ. ಏಕೆಂದರೆ ಒಬ್ಬ ಬ್ರಾಹ್ಮಣನ ಸೇವಕನೆಂದು ಕರೆಯಲ್ಪಟ್ಟವನು ಎಲ್ಲ ಉದ್ದೇಶಗಳನ್ನೂ ಆ ಮೂಲಕ ಈಡೇರಿಸಿಕೊಳ್ಳುತ್ತಾನೆ."

X ೧೨೩ "ಬ್ರಾಹ್ಮಣ ಸೇವೆಯೊಂದೇ ಶೂದ್ರನಿಗೆ ಅತ್ಯುತ್ತಮ ಉದ್ಯೋಗವೆಂದು ಘೋಷಿಸಲಾಗಿದೆ. ಇದಲ್ಲದೆ ಬೇರೆ ಏನು ಮಾಡಿದರೂ ಅದರಿಂದ ಫಲವಿಲ್ಲ."

ಮತ್ತು ಮನು ಸೇರಿಸುತ್ತಾನೆ:

X ೧೨೯ "ಅವನಿಗೆ ಶಕ್ತಿಯಿದ್ದರೂ, ಯಾವ ಐಶ್ವರ್ಯ ಸಂಗ್ರಹಣೆಯಲ್ಲಿಯೂ ಶೂದ್ರನು ತೊಡಗಬಾರದು. ಏಕೆಂದರೆ ಐಶ್ವರ್ಯಗಳನ್ನು ಗಳಿಸಿದ ಶೂದ್ರನನ್ನು ನೋಡಿದರೆ ಬ್ರಾಹ್ಮಣನಿಗೆ ಸಂಕಟವುಂಟಾಗುತ್ತದೆ."

ಮನುವಿನ ಈ ಮೇಲಿನ ಪಾಠವು ಹಿಂದೂ ತತ್ವಜ್ಞಾನದ ತಿರುಳನ್ನು ಮತ್ತು ಹೃದಯವನ್ನು ತೆರೆದು ತೋರಿಸುತ್ತದೆ. ಹಿಂದೂ ಧರ್ಮವು ಅತಿಮಾನವನ ಸುವಾರ್ತೆಯಾಗಿದ್ದು, ಅತಿಮಾನವನಿಗೆ ಉಪಯುಕ್ತವಾದುದು ಯಾವುದಿದೆಯೋ ಅದನ್ನು ಮಾತ್ರವೇ ನೈತಿಕವಾಗಿ ಸರಿಯಾದುದು ಮತ್ತು ಒಳ್ಳೆಯದು ಎಂದು ಸಾರುತ್ತದೆ.

ಈ ತತ್ವಜ್ಞಾನಕ್ಕೆ ಸಮಾನಾಂತರವಾದುದು ಯಾವುದಾದರೂ ಇದೆಯೇ? ಅದನ್ನು ಸೂಚಿಸುವುದರಲ್ಲಿಯೇ ನನಗೆ ದ್ವೇಷವಿದೆ. ಆದರೆ ಅದು ಸುಸ್ಪಷ್ಟ. ಹಿಂದೂ ಧರ್ಮಕ್ಕೆ ಸಮಾನಾಂತರವಾಗಿರುವ ತತ್ವಜ್ಞಾನವು ನೀಷೆಯಲ್ಲಿ ಕಂಡುಬರುತ್ತದೆ. ಹೀಗೆ ಹೇಳಿದರೆ ಹಿಂದೂಗಳಿಗೆ ಕೋಪ ಬರುತ್ತದೆ. ಅದು ಸಹಜವೇ ಆಗಿದೆ. ಏಕೆಂದರೆ ನೀಷೆಯ ತತ್ವಜ್ಞಾನವು ಮತಾಂಧರ ಮಹಾಛಲವಾಗಿ ಉಳಿದಿದೆ. ಅದೆಂದೂ ಬೇರು ಬಿಡಲಿಲ್ಲ. ಅವನ ಮಾತಿನಲ್ಲಿಯೇ ಹೇಳುವುದಾದರೆ ಅವನನ್ನು "ಕೆಲವು ಭಾರಿ ಶ್ರೀಮಂತ ಮತ್ತು ಪಾಳೆಯಗಿರಿ ಪ್ರಭುತ್ವಶಾಹಿಯ ತತ್ವಜ್ಞಾನಿಯೆಂದು ಹೇಳುತ್ತಾರೆ. ಒಮ್ಮೊಮ್ಮೆ ಥೂ ಛೀಕರಿಸಲಾಗಿದೆ. ಕೆಲವೊಮ್ಮೆ ಕನಿಕರಿಸಿ, ಮಗದೊಮ್ಮೆ ಅಮಾನವೀಯ ವ್ಯಕ್ತಿಯೆಂದು ಅವನಿಗೆ ಬಹಿಷ್ಕಾರ ಹಾಕಲಾಗಿದೆ." ನೀಷೆಯ ತತ್ವಜ್ಞಾನವನ್ನು ಅಧಿಕಾರದ ಇಚ್ಛಾಶಕ್ತಿಯೊಂದಿಗೆ ಹಿಂಸೆ, ಅನುಭಾವಿ ಮೌಲ್ಯಗಳ ನಿರಾಕರಣೆ, ಅತಿಮಾನವ ಮತ್ತು ಬಲಿ, ಸೇವಕ ವೃತ್ತಿ ಮತ್ತು ಸಾಮಾನ್ಯ ಮನುಷ್ಯನ ಅಪಮಾನದೊಂದಿಗೆ ಗುರುತಿಸುತ್ತಾರೆ. ಇಂತಹ ಮಹಾ ಕಳಂಕಕಾರಿಯಾದ ಅವನ ತತ್ವಜ್ಞಾನವು ಅವನ ತಲೆಮಾರಿನ ಜನರ ಮನಸ್ಸಿನಲ್ಲಿ ತೀವ್ರ ಅಸಹ್ಯ ಮತ್ತು ಭಯವನ್ನು ಹುಟ್ಟಿಸಿದೆ, ಅವನನ್ನು ಸಂಪೂರ್ಣವಾಗಿ ದೂರವಿಡದಿದ್ದರೂ ಉದಾಸೀನದಿಂದ ಸುಮ್ಮನಿದ್ದುಬಿಟ್ಟರು. ಅವನೇ ತನ್ನನ್ನು 'ಮರಣಾನಂತರದ ವ್ಯಕ್ತಿ'ಗಳ ಸಾಲಿಗೆ ಸೇರಿಸಿಕೊಂಡಿದ್ದ. ಶತಮಾನಗಳ ಬಳಿಕ ಕೆಲವು ಪೌರರು ತನ್ನನ್ನು ಮೆಚ್ಚುತ್ತಾರೆಂದು ಭವಿಷ್ಯ ನುಡಿದಿದ್ದ. ಇಲ್ಲಿಯೂ ನೀಷೆಗೆ ದುರದೃಷ್ಟವೇ ಗತಿಯಾಯಿತು. ಅವನ ತತ್ವಜ್ಞಾನವನ್ನು ಮೆಚ್ಚುವುದಿರಲಿ – ಅವನ ಸಮಕಾಲೀನರಿಗೆ ಅವನ ಬಗ್ಗೆ ಇದ್ದ ಅಸಹ್ಯ ಮತ್ತು ಭಯಗಳು – ಕಾಲ ಸಂದಂತೆ ಜಾಸ್ತಿಯಾದವು. ಹೀಗಾಗಲು ಪ್ರಧಾನ ಕಾರಣವೆಂದರೆ, ನೀಷೆಯ ತತ್ವಜ್ಞಾನವು ನಾಝಿ ಸಿದ್ಧಾಂತವನ್ನು ಹುಟ್ಟುಹಾಕುವುದಕ್ಕೆ ಸಾಧ್ಯವಾಯಿತೆಂಬುದು ಗೋಚರಿಸಿದ್ದೇ ಆಗಿದೆ. ಈ ಬಗೆಯ ಅನ್ಯೋನ್ಯ ಸಂಬಂಧ ಕಲ್ಪಿಸುವುದನ್ನು ಅವನ ಸ್ನೇಹಿತರು ಉಗ್ರವಾಗಿ ವಿರೋಧಿಸುತ್ತಾರೆ.[೧] ಆದರೆ ಈ ತತ್ವಜ್ಞಾನವನ್ನು ಅತಿಮಾನವನಿಗೆ ಅನ್ವಯಿಸಿದಂತೆ ಸುಲಭವಾಗಿ ಮಹಾಪ್ರಭುತ್ವಕ್ಕೆ ಅನ್ವಯಿಸಬಹುದೆಂಬುದನ್ನು ತಿಳಿಯಲು ಅಷ್ಟೇನೂ ಕಷ್ಟಪಡಬೇಕಿಲ್ಲ. ನಾಝಿಗಳೂ ಮಾಡಿದ್ದು ಇದೇ

೧. ನೋಡಿ: ಎಂ.ಪಿ. ನಿಕೋಲಸ್: *'ಫ್ರಂ ಡೋ ಟು ಹಿಟ್ಲರ್'.*

ಕೆಲಸವನ್ನು. ಅದೇನೆ ಇರಲಿ, ನಾಝಿಗಳಂತೂ ತಮ್ಮ ವಂಶಾವಳಿಯನ್ನು ನೀಷೆಯಿಂದಲೇ ಗುರುತಿಸಿಕೊಳ್ಳುತ್ತಾರೆ ಮತ್ತು ಅವನನ್ನು ತಮ್ಮ ಆಧ್ಯಾತ್ಮಿಕ ಪಿತೃವೆಂದು ಅಂಗೀಕರಿಸಿದ್ದಾರೆ. ನೀಷೆಯ ವಿಗ್ರಹದ ಪಕ್ಕದಲ್ಲಿ ಸ್ವತಃ ಹಿಟ್ಲರನೇ ನಿಂತು ಫೋಟೋ ತೆಗೆಸಿಕೊಂಡಿದ್ದಾನೆ. ಗುರುವಿನ ಹಸ್ತಪ್ರತಿಗಳನ್ನು ತನ್ನ ಸ್ವಂತ ವಿಶೇಷ ರಕ್ಷಣೆಗೆ ತೆಗೆದುಕೊಂಡಿದ್ದಾನೆ. ನೀಷೆಯ ಬರೆಹಗಳಿಂದ ಆಯ್ದ ಭಾಗಗಳನ್ನು ನಾಝಿ ಸಮಾರಂಭಗಳಲ್ಲಿ ಗಟ್ಟಿಯಾಗಿ ಘೋಷಿಸಿ ಅವು ಆಧುನಿಕ ಜರ್ಮನಿಯ ನಂಬಿಕೆಗಳೆಂದು ಸಾರಲಾಗಿದೆ. ನೀಷೆಯನ್ನು ತಮ್ಮ ಆಧ್ಯಾತ್ಮಿಕ ಪಿತೃವೆಂದು ನಾಝಿಗಳು ಹೇಳಿಕೊಳ್ಳುವುದನ್ನು ಅವನ ಹತ್ತಿರದ ಸಂಬಂಧಿಗಳೂ ನಿರಾಕರಿಸಿಲ್ಲ. ನೀಷೆಯ ಸ್ವಂತ ಸೋದರ ಸಂಬಂಧಿಯಾದ ರಿಚರ್ಡ್ ಓಕ್ಲರ್ ನೀಷೆಯ ಆಲೋಚನೆಗಳು ಹಿಟ್ಲರನ ಕ್ರಿಯೆಗಳಲ್ಲಿ ರೂಪು ಪಡೆದವೆಂದು ಒಪ್ಪಿದ್ದಾನೆ. ನಾಝಿಗಳು ಅಧಿಕಾರ ಪಡೆಯುವುದರ ಮುಂಗಾಣ್ಕೆ ನೀಷೆಗಿತ್ತೆಂಬ ಅಭಿಪ್ರಾಯವನ್ನು ಆತ ವ್ಯಕ್ತಪಡಿಸಿದ್ದಾನೆ. ನೀಷೆಯ ಸ್ವಂತ ಸೋದರಿಯು ಸಾಯುವ ಕೆಲ ತಿಂಗಳುಗಳ ಹಿಂದೆ ತನ್ನ ಸೋದರನ ಮೇಲೆ ಹಿಟ್ಲರ್ ಪ್ರಭುವು ತೋರಿಸಿದ ಗೌರವಾದರಗಳಿಗೆ ವಂದಿಸುತ್ತಾಳೆ. ಜರತುಷ್ಟ್ರನು ಭವಿಷ್ಯವಾಣಿಯಾಗಿ ನುಡಿದ ಅತಿಮಾನವನ ಅವತಾರವೇ ಹಿಟ್ಲರನೆಂದು ಆಕೆ ಹೇಳುತ್ತಾಳೆ.

ಯಾರ ಹೆಸರು ಮತ್ತು ಯಾವ ತತ್ವಜ್ಞಾನವು ಅಷ್ಟೊಂದು ಹೇಸಿಗೆ ಮತ್ತು ಭಯವನ್ನು ಹುಟ್ಟಿಸುತ್ತದೆಯೋ, ಆ ನೀಷೆಯ ಹೆಸರಿನೊಂದಿಗೆ ಮನುವಿನ ಹೆಸರನ್ನು ಹೊಂದಿಸುವುದು ಖಂಡಿತವಾಗಿಯೂ ಹಿಂದೂಗಳ ಮನಸ್ಸಿನಲ್ಲಿ ಅಸಮಧಾನ ಮತ್ತು ಆಶ್ಚರ್ಯಗಳಿಗೆ ಕಾರಣವಾಗುತ್ತದೆ. ಆದರೆ ಸತ್ಯ ಏನಿದೆಯೋ ಅದರ ಬಗೆಗೆ ಸಂದೇಹಕ್ಕೆ ಅವಕಾಶವೇ ಇಲ್ಲ. ಸ್ವತಃ ನೀಷೆಯೇ ತಾನು 'ಮನು ಸಂಹಿತೆ'ಯನ್ನು ತನ್ನ ತತ್ವಜ್ಞಾನದಲ್ಲಿ ಅನುಸರಿಸುತ್ತಿದ್ದೇನೆಂದು ಬಹಿರಂಗವಾಗಿ ಘೋಷಿಸಿದ್ದಾನೆ. ತನ್ನ 'ಕ್ರಿಸ್ತ ವಿರೋಧಿ' ತೀರ್ಮಾನವನ್ನು ಕುರಿತಂತೆ ನೀಷೆ ಹೇಳಿರುವುದು ಹೀಗಿದೆ:

> "ಕಟ್ಟಕಡೆಗೆ ಯಾವ ಗುರಿಯಲ್ಲಿ ಸುಳ್ಳು ಆಚರಣೆಯಿದೆ ಎಂಬುದೇ ಪ್ರಶ್ನೆ. ಕ್ರೈಸ್ತ ಧರ್ಮದಲ್ಲಿ ಪವಿತ್ರ ಗುರಿಗಳೇ ಸಂಪೂರ್ಣವಾಗಿ ಇಲ್ಲದಿರುವುದರಿಂದ ನನ್ನ ಆಕ್ಷೇಪವಿರುವುದು ಅದು ಅಳವಡಿಸಿಕೊಂಡಿರುವ ಸಾಧನಗಳ ಬಗೆಗೆ. ಅದರ ಗುರಿಗಳೇನಿದ್ದರೂ ಕೆಡುಕಿನವು, ವಿಷವಿಟ್ಟು ಕೊಲ್ಲುವಂತಹವು, ಮಿಥ್ಯಾಪವಾದ, ಜೀವ ವಿರೋಧಿಯಾದವು. ದೇಹವನ್ನು ಕುರಿತು ತಿರಸ್ಕಾರ, ಪಾಪದ ಕಲ್ಪನೆಯ ಮೂಲಕ ಮನುಷ್ಯನನ್ನು ಭ್ರಷ್ಟಗೊಳಿಸಿ ಸ್ವಯಂ ಮಲಿನಗೊಳಿಸುವಿಕೆ ಇವೆಲ್ಲದರ ಪರಿಣಾಮವಾಗಿ ಸಾಧನಗಳೂ ದುಷ್ಟ ಸಾಧನಗಳೇ ಆಗಿವೆ. ನನ್ನ ಭಾವನೆಗಳು ತದ್ವಿರುದ್ಧವಾಗಿವೆ. ನಾನು 'ಮನು ಧರ್ಮಶಾಸ್ತ್ರ'ವನ್ನು ಓದಿದಾಗ ಬೌದ್ಧಿಕವಾಗಿ ಹೋಲಿಸಲಸಾಧ್ಯವೆನಿಸುವ ಶ್ರೇಷ್ಠ ಕೃತಿ ಎನಿಸಿತು. ಅದೇ ಉಸಿರಿನಲ್ಲಿ 'ಬೈಬಲ್ಲಿ'ನೊಂದಿಗೆ ಅದನ್ನು ಹೋಲಿಸುವುದು ಅದರ ನಿಜವಾದ ಆಶಯಕ್ಕೆ ಮಾಡಬಹುದಾದ ಅಪಚಾರವಾಗುತ್ತದೆ. ಏಕೆಂಬುದನ್ನು ನೀವು ಕೂಡಲೇ ಊಹಿಸಬಲ್ಲಿರಿ. 'ಮನು ಧರ್ಮಶಾಸ್ತ್ರ'ದ ಹಿನ್ನೆಲೆಗೆ ಒಂದು ನಿಜವಾದ ತತ್ವಜ್ಞಾನವಿದೆ. ಅದು ಕೊಳಕು ವಾಸನೆಯ ಯಹೂದಿ ತತ್ವಜ್ಞಾನ ಮತ್ತು ಮೂಢ ನಂಬಿಕೆಗಳ ಭಟ್ಟಿ ಸಾರಾಯಿಯಲ್ಲ. ಅತಿ ಸೂಕ್ಷ್ಮವಾದ ಮನಶ್ಶಾಸ್ತ್ರಜ್ಞನಿಗೂ ಜಗಿಯಲು ಸ್ವಲ್ಪ ವಸ್ತುವನ್ನು ಅದು ನೀಡುತ್ತದೆ. ಮರೆಯಬಾರದ ಬಹುಮುಖ್ಯ ಸಂಗತಿ ಎಂದರೆ ಎಲ್ಲ ಬಗೆಯ 'ಬೈಬಲ್'ಗಳಿಗಿಂತ ಮೂಲಭೂತವಾಗಿ ಅದು ಬೇರೆಯಾಗಿದೆ. ಅದರ ಮೂಲಕ ಉತ್ತಮ ವರ್ಗದವರು, ತತ್ವಜ್ಞಾನಿಗಳು ಮತ್ತು

ಶೂರ ಯೋಧರು ಸಮೂಹವನ್ನು ರಕ್ಷಿಸುತ್ತಾರೆ ಮತ್ತು ಮಾರ್ಗದರ್ಶನ ನೀಡುತ್ತಾರೆ. ಉತ್ತಮ ಮೌಲ್ಯಗಳಿಂದ ಅದು ತುಂಬಿತುಳುಕುತ್ತಿದೆ. ಪರಿಪೂರ್ಣತೆಯ ಭಾವನೆಗಳಿಂದ ತುಂಬಿಹೋಗಿದೆ. ಬದುಕನ್ನು ಸ್ವಾಗತಿಸುತ್ತದೆ. ತನಗೆ ಮತ್ತು ಬದುಕಿಗೆ ಪರಮೋತ್ಸಾಹದ ಅರಿವನ್ನುಂಟುಮಾಡುತ್ತದೆ. ಇಡಿ ಗ್ರಂಥದಲ್ಲಿ ಸೂರ್ಯನ ಬೆಳಕು ಚೆಲ್ಲುತ್ತಿದೆ. ಕ್ರೈಸ್ತಧರ್ಮವು ನಿರಾಧಾರವಾಗಿ ಅಸಭ್ಯವಾಗಿ ತುಳಿದುಹಾಕಿರುವುದನ್ನೆಲ್ಲಾ ಅದು ಗೌರವಿಸಿದೆ. ಸೃಷ್ಟಿಕ್ರಿಯೆ, ಹೆಣ್ಣು, ಮದುವೆಯಂತಹ ವಿಚಾರಗಳನ್ನು ಶ್ರದ್ಧೆಯಿಂದ ಗೌರವದಿಂದ ಪ್ರೀತಿ ಮತ್ತು ನಂಬಿಕೆಗಳ ಆಧಾರದ ಮೇಲೆ ವಿವರಿಸಿದೆ. ಆದರೆ ಕೆಳಗಿನ ಕೆಲವು ವಾಕ್ಯಗಳನ್ನು ನೋಡಿ. ಇಂತಹ ದುಷ್ಟ ಮಾತುಗಳಿರುವ ಒಂದು ಕೃತಿಯನ್ನು ಹೆಂಗಸರು ಮತ್ತು ಮಕ್ಕಳ ಕೈಯಲ್ಲಿ ಯಾರಾದರೂ ಕೊಡಲು ಸಾಧ್ಯವಿದೆಯೇ? “ವ್ಯಭಿಚಾರದಿಂದ ತಪ್ಪಿಸಿಕೊಳ್ಳುವ ಪ್ರತಿಯೊಬ್ಬ ಗಂಡಸೂ ತನಗೇ ಒಬ್ಬ ಹೆಂಡತಿಯನ್ನು ಸ್ವೀಕರಿಸಲಿ. ಪ್ರತಿಯೊಬ್ಬ ಹೆಂಗಸೂ ಸ್ವಂತ ಗಂಡನನ್ನು ಸ್ವೀಕರಿಸಲಿ..... ಬೇಯುವುದಕ್ಕಿಂತ ಮದುವೆಯಾಗುವುದು ಉತ್ತಮ.” ಮಾನವತೆಯ ಉಗಮವನ್ನೇ ಕ್ರೈಸ್ತಗೊಳಿಸುವವರೆಗೆ ಕ್ರೈಸ್ತನಾಗಿರುವುದು ಗೌರವಾರ್ಹವೇ? ಪರಿಶುದ್ಧ ಕಲ್ಪನೆಯ ಆದರ್ಶದಿಂದ ಮಲಿನ ಹೊಂದುವುದು ಎಂದೇ ಅರ್ಥ..... ‘ಮನು ಧರ್ಮಶಾಸ್ತ್ರ’ದಲ್ಲಿ ಹೆಣ್ಣಿನ ಬಗೆಗೆ ಎಷ್ಟೊಂದು ನವಿರಾದ ದಯಾಪೂರ್ಣ ಸಂಗತಿಗಳನ್ನು ಹೇಳಲಾಗಿದೆಯೆಂದರೆ ಈ ಬಗೆಯ ಮತ್ತೊಂದು ಕೃತಿ ನನಗೆ ಗೊತ್ತಿಲ್ಲ. ಬಿಳಿಗಡ್ಡದ ಈ ವೃದ್ಧ ಋಷಿಗಳಿಗೆ ಹೆಣ್ಣಿನ ಬಗೆಗೆ ಎಂತಹ ಘನತೆಯಿದೆ ಎಂದರೆ ಅದನ್ನು ಬಹುಶಃ ಯಾರೂ ಮೀರಿಸಲಾರರು. ಒಂದು ಕಡೆ ಮನು ಹೇಳುತ್ತಾನೆ: “ಒಬ್ಬ ಮಹಿಳೆಯ ವದನ, ಕುಮಾರಿಯ ವಕ್ಷಸ್ಥಲ, ಮಗುವಿನ ಪ್ರಾರ್ಥನೆ ಮತ್ತು ಯಜ್ಞದ ಧೂಮಗಳು ಯಾವಾಗಲೂ ಪರಿಶುದ್ಧವಾಗಿರುತ್ತವೆ.” ಮತ್ತೊಂದೆಡೆ ಹೇಳುತ್ತಾನೆ: “ಸೂರ್ಯನ ಬೆಳಕಿನಂತೆ, ಗೋಮಾತೆಯು ಹರಡುವ ನೆರಳಿನಂತೆ, ಇಬ್ಬನಿಯ ನೀರಿನಂತೆ, ಬೆಂಕಿಯಂತೆ ಮತ್ತು ಕುಮಾರಿಯ ಉಸಿರಿನಂತೆ ಪರಿಶುದ್ಧವಾದುದು ಜಗತ್ತಿನಲ್ಲಿ ಮತ್ತೊಂದಿಲ್ಲ.” ಕೊಟ್ಟ ಕೊನೆಯದಾಗಿ ಬಹುಶಃ ಇದೊಂದು ಪವಿತ್ರ ಸುಳ್ಳು “ದೇಹದಲ್ಲಿ ಹೊಕ್ಕುಳಿಗಿಂತ ಮೇಲಿರುವ ರಂಧ್ರಗಳೆಲ್ಲಾ ಪರಿಶುದ್ಧವಾದವು. ಹೊಕ್ಕಳ ಕೆಳಗಿರುವ ರಂಧ್ರಗಳೆಲ್ಲ ಅಶುದ್ಧವಾದವು.”

ಇದರಿಂದ ಜರತುಷ್ಟ್ರವೆಂಬುದು ಮನುವಿನ ಹೊಸ ಹೆಸರು ಎಂಬುದರ ಬಗೆಗೆ ಸಂದೇಹ ಉಳಿಯುವುದಿಲ್ಲ; ಮತ್ತು ‘ಜರತುಷ್ಟ್ರ ಉವಾಚ’ವೆಂಬುದು ‘ಮನುಸ್ಮೃತಿ’ಯ ಒಂದು ಹೊಸ ಆವೃತ್ತಿ.

ಮನುವಿಗೂ ನೀಷೆಗೂ ಎಲ್ಲಿಯಾದರೂ ವ್ಯತ್ಯಾಸವಿದ್ದರೆ ಅದು ಇಲ್ಲಿದೆ. ಈಗ ಅಸ್ತಿತ್ವದಲ್ಲಿರುವ ಮನುಷ್ಯ ಜನಾಂಗದೊಡನೆ ಹೋಲಿಸಿದಾಗ ಒಂದು ಹೊಸ ಅತಿ ಮಾನವ ಉತ್ತಮ ಜನಾಂಗವನ್ನು ಸೃಷ್ಟಿಸುವುದರಲ್ಲಿ ನೀಷೆಗೆ ಪ್ರಾಮಾಣಿಕವಾದ ಆಸಕ್ತಿಯಿತ್ತು. ಮನುವಾದರೋ ತಾವು ಅತಿಮಾನವರೆಂದು ಅಹಂಭಾವಿಸಿದ್ದ ಒಂದು ವರ್ಗದ ಹಿತಾಸಕ್ತಿಗಳನ್ನು ಸವಲತ್ತುಗಳನ್ನು ಕಾಪಾಡುವುದರಲ್ಲಿ ಆಸಕ್ತಿವಹಿಸಿದ್ದ. ನೀಷೆಯ ಅತಿಮಾನವರು ಅವರ ಶ್ರೇಷ್ಠತೆಯಿಂದಾಗಿ ಅತಿಮಾನವರಾಗಿದ್ದರು. ಆದರೆ ಮನುವಿನ ಅತಿ ಮಾನವರು ಹುಟ್ಟಿನಿಂದ ಅತಿ ಮಾನವರಾಗಿದ್ದರು. ನೀಷೆಯು ನಿರಾಸಕ್ತ ಪ್ರಾಮಾಣಿಕ ತತ್ವಜ್ಞಾನಿ. ಮನುವಾದರೋ ಇದಕ್ಕೆ ತದ್ವಿರುದ್ಧವಾಗಿ ಒಂದು ವರ್ಗದಲ್ಲಿ ಹುಟ್ಟಿದವರ ಹಿತಾಸಕ್ತಿಗಳಿಗೆ ಅನುಕೂಲವಾಗುವ ಸಿದ್ಧಾಂತವೊಂದನ್ನು ಪ್ರತಿಪಾದಿಸಲು ದುಡಿಯುತ್ತಿದ್ದವನು. ಈ ಗುಂಪು ಅತಿ ಮಾನವರೆಂದು ಕರೆಸಿಕೊಳ್ಳುವ ಅರ್ಹತೆ ಕಳೆದುಕೊಂಡಿದ್ದರೂ ಅವರ ಬಿರುದು ಬಾವಲಿಗಳನ್ನು ಉಳಿಸಿಕೊಡಲು ಅವನು ಹೆಣಗಾಡುತ್ತಿದ್ದನು.

ಮನು ಉಲ್ಲೇಖಿಸಿರುವ ಕೆಳಗಿನ ಪಠ್ಯಗಳನ್ನು ಹೋಲಿಸಿ;

X ೮೧ "ಆದರೂ ಒಬ್ಬ ಬ್ರಾಹ್ಮಣನು ಈಗ ಹೇಳಿರುವ ಕರ್ತವ್ಯಗಳ ಮೂಲಕ ಜೀವನ ನಡೆಸಲು ಸಾಧ್ಯವಾಗದಿದ್ದರೆ ಸೈನಿಕವಾಗಿ ಕೆಲಸಮಾಡಿ ಜೀವಿಸಬಹುದು. ಏಕೆಂದರೆ ಅದು ಎರಡನೆಯ ಮುಂದಿನ ಶ್ರೇಣಿ."

X ೮೨ "ಮೇಲಿನ ಎರಡೂ ಕಸುಬುಗಳಿಂದ ಜೀವನೋಪಾಯ ನಡೆಸಲು ಸಾಧ್ಯವಾಗದಿದ್ದರೆ, ಹೇಗೆ ಜೀವಿಸಬೇಕೆಂದು ಕೇಳುವುದಾದರೆ, ವ್ಯಾಪಾರ ಮಾಡಬಹುದೆಂದು ಉತ್ತರ ಕೊಡಬಹುದು. ಕೃಷಿ ಮತ್ತು ಪಶುಪಾಲನೆಯಲ್ಲಿ ತೊಡಗಬಹುದು."

ಮನು ಇದಕ್ಕೆ ಸೇರಿಸುತ್ತಾನೆ:

IX ३೧೭ "ಅಗ್ನಿಯನ್ನು ಯಜ್ಞಾಹುತಿಯ ಸಲುವಾಗಿ ತೆಗೆದುಕೊಂಡು ಹೋಗುತ್ತಿರಲಿ ಅಥವಾ ಇಲ್ಲದಿರಲಿ, ಅದು ಹೇಗೆ ಮಹಾನ್ ದೈವವೋ ಹಾಗೆಯೇ ಒಬ್ಬ ಬ್ರಾಹ್ಮಣನು ಅಜ್ಞಾನಿಯಾಗಿರಲಿ ಮಹಾ ವಿದ್ವಾಂಸನಾಗಿರಲಿ ಅವನೊಬ್ಬ ದೊಡ್ಡ ದೈವಜ್ಞನೆಂದೇ ತಿಳಿಯಬೇಕು."

ಆದುದರಿಂದ ನೀಷೆಯೊಂದಿಗೆ ಹೋಲಿಸಿದಾಗ ಮನುವಿನದು ಕೆಳ ದರ್ಜೆಯ ಮತ್ತು ಅವನತಿ ಹೊಂದಿದ ಅತಿ ಮಾನವ ತತ್ವಜ್ಞಾನವಾಗುತ್ತದೆ. ಆದುದರಿಂದ ಅದು ನೀಷೆಗಿಂತಲೂ ಅಸಹ್ಯ ಹುಟ್ಟಿಸುವ ಮತ್ತು ಜುಗುಪ್ಸೆ ತರಿಸುವ ತತ್ವಜ್ಞಾನವಾಗಿದೆ.

ನ್ಯಾಯದ ಪರೀಕ್ಷೆಯಲ್ಲಾಗಲೀ ಉಪಯುಕ್ತತೆಯ ಪರೀಕ್ಷೆಯಲ್ಲಾಗಲೀ ಹಿಂದೂ ಧರ್ಮ ತೃಪ್ತಿಕರವಾಗಿ ಉತ್ತೀರ್ಣವಾಗಲು ಸಾಧ್ಯವಾಗದಿರುವುದೇಕೆಂಬುದಕ್ಕೆ ವಿವರಣೆ ಇಲ್ಲಿದೆ. ಸಾಮಾನ್ಯ ಮನುಷ್ಯನ ಬಗೆಗೆ ಹಿಂದೂ ಧರ್ಮಕ್ಕೆ ಆಸಕ್ತಿಯಿಲ್ಲ. ಒಟ್ಟಾರೆಯಾಗಿ ಸಮಾಜದ ಬಗೆಗೂ ಹಿಂದೂ ಧರ್ಮಕ್ಕೆ ಆಸಕ್ತಿಯಿಲ್ಲ. ಅದರ ಆಸಕ್ತಿಯ ಕೇಂದ್ರದಲ್ಲಿ ಒಂದು ವರ್ಗವಿದೆ. ಆ ವರ್ಗದ ಹಕ್ಕುಗಳನ್ನು ಬೆಂಬಲಿಸುವುದರಲ್ಲಿ ಅದರ ತತ್ವಜ್ಞಾನಕ್ಕೆ ಆಸಕ್ತಿಯಿರುವುದು. ಆದುದರಿಂದಲೇ ಹಿಂದೂ ಧರ್ಮದ ತತ್ವಜ್ಞಾನದಲ್ಲಿ ಸಾಮಾನ್ಯ ಮನುಷ್ಯನಂತೆ ಒಟ್ಟಾರೆ ಸಮಾಜದ ಹಿತವನ್ನೂ ನಿರಾಕರಿಸಿ ತುಳಿದು ಅದನ್ನು ಬಲಿಗೊಟ್ಟು ಈ ಅತಿ ಮಾನವ ವರ್ಗದ ಹಿತಾಸಕ್ತಿಯನ್ನು ಕಾಪಾಡಲಾಗಿದೆ.

ಮನುಷ್ಯನ ಪಾಲಿಗೆ ಇಂತಹ ಧರ್ಮದ ಮೌಲ್ಯವೇನು?

ಶ್ರೀ ಬೆಲ್ ಪೂರ್‌ರವರು ಧರ್ಮ ಸಂಬಂಧಿಯಾದ ಪ್ರಮಾಣವಾದದ ಅರ್ಹತೆಯ ಬಗೆಗೆ ಮಾತನಾಡುತ್ತಾ ಪ್ರಮಾಣವಾದಿಗಳಿಗೆ ಹಾಕಿದ ಕೆಲವು ಪ್ರಶ್ನೆಗಳೂ ಇಲ್ಲಿ ಉಲ್ಲೇಖಾರ್ಹವಾಗಿದೆ. ಆತ ಸಂಗತವಾಗಿಯೇ ಕೇಳಿದಂತಿದೆ:

> ದೈನಂದಿನ ಅಗತ್ಯಗಳಿಗಾಗಿ ಮತ್ತು ಕಿರಿಕಿರಿಗಳಿಗಾಗಿ ಯಾವಾಗಲೂ ಹೋರಾಡುತ್ತಾ ಕಷ್ಟದಾಳದಲ್ಲಿ ಮುಳುಗಿಹೋಗಿರುವ ಅಗೋಚರ ಜನ ಸಮುದಾಯಕ್ಕೆ ಪ್ರಮಾಣವಾದದ ಸಮಾಧಾನವೇನು? 'ಮಾನವತೆ' ಎಂಬ ಮಹಾ ನಾಟಕದಲ್ಲಿ ಪಾತ್ರವಹಿಸಲು ಕರೆದಾಗ ತಮ್ಮ ಪಾತ್ರವೇನು? ಎಂಬುದನ್ನು ಯೋಚಿಸಲು ಬಿಡುವು ಅಥವಾ ಆಸಕ್ತಿಯಾಗಲೀ ಅವರಿಗಿಲ್ಲದಿರುವಾಗ ಅದರ ಮಹತ್ವವೇನು ಎಂದು ತಿಳಿಯುವಲ್ಲಿ ತಬ್ಬಿಬ್ಬಾಗದೇ ಇರಲು ಸಾಧ್ಯವೇ? ಸ್ವರ್ಗವನ್ನು ಸೃಷ್ಟಿಸಿದ ಭಗವಂತನ ಕಣ್ಣಿನಲ್ಲಿ ಯಾವ ಮನುಷ್ಯನೂ ಅಪಾರ ಬೆಲೆಯುಳ್ಳವನಾಗದಿದ್ದರೂ, ಅನಾಮಧೇಯ ನಿಕೃಷ್ಟನಲ್ಲವೆಂದು ಅವರು ಭರವಸೆ ನೀಡಬಲ್ಲರೇ?

ಅಥವಾ ಅತ್ಯಂತ ಬಲಹೀನನಾದರೂ ಅವನ ಕ್ರಿಯೆಗಳು ಈ ಭೌತಿಕ ವ್ಯವಸ್ಥೆಯು ಕುಸಿದುಬಿದ್ದು ಶೂನ್ಯದಲ್ಲಿ ಒಂದಾದಾಗ ಅವನ ಕ್ರಿಯೆಗಳಿಗೆ ಅದರ ಅನಂತ ಕ್ಷಣಗಳಲ್ಲಿ ಏನಾದರೂ ಮಹತ್ವವಿದೆಯೇ? ಸಾವಿನ ಸಂಕಟದಲ್ಲಿರುವವರಿಗೆ ಸಾಂತ್ವನವನ್ನೂ ಬಲಹೀನರಿಗೆ ಬಲವನ್ನೂ, ಪಾಪಿಗಳಿಗೆ ಕ್ಷಮೆಯನ್ನೂ, ಕೆಲಸದಿಂದ ದಣಿದು ಬಸವಳಿದವರಿಗೆ ವಿಶ್ರಾಂತಿಯನ್ನೂ ಅದು ನೀಡುತ್ತದೆಯೇ?

ಈ ಪ್ರಶ್ನೆಯನ್ನು ಮನುವಿಗೂ ಕೇಳಬಹುದು. ಈ ಎಲ್ಲ ಪ್ರಶ್ನೆಗಳಿಗೂ ಉತ್ತರವು ಸಮ್ಮತಿ ಸೂಚಕವಾಗಿರಬೇಕು.

ಸಂಕ್ಷಿಪ್ತವಾಗಿ ಹೇಳುವುದಾದರೆ, ಹಿಂದೂ ಧರ್ಮದ ತತ್ವಜ್ಞಾನವನ್ನು ಮಾನವತಾ ಧರ್ಮವೆಂದು ಕರೆಯಲು ಸಾಧ್ಯವೇ ಇಲ್ಲ. ಆದುದರಿಂದಲೇ, ಬೆಲ್ ಷೋರ್‌ರವರ ಮಾತಿನಲ್ಲಿಯೇ ಹೇಳುವುದಾಧರೆ, ಹಿಂದೂ ಧರ್ಮವು ಸಾಮಾನ್ಯ ಮಾನವಕೋಟಿಯನ್ನು ಒಳಹೊಕ್ಕು ಪಾರದರ್ಶಕವಾಗಿ ಕಾಣಿಸಲಾರದು. ಹಾಗೇನಾದರೂ ಕಾಣಿಸಿದರೆ ಅದನ್ನು ನಿಸ್ಸತ್ತ್ವಗೊಳಿಸುತ್ತದೆ. ಹಿಂದೂ ಧರ್ಮದಲ್ಲಿ ಸಾಮಾನ್ಯ ಮಾನವನ ಜೀವನಕ್ಕೆ ಯಾವುದೇ ಪುಷ್ಟಿಯಿಲ್ಲ. ಸಾಮಾನ್ಯನ ದುಃಖಕ್ಕೆ ಯಾವುದೇ ಸಾಂತ್ವನವಿಲ್ಲ. ಮನುಷ್ಯನ ಬಲಹೀನತೆಗೆ ಯಾವ ನೆರವೂ ಇಲ್ಲ. ಅದು ಮನುಷ್ಯನನ್ನು ಅಂಧಕಾರದಲ್ಲಿ ನಿಸರ್ಗದಲ್ಲಿ ಅಚಿಂತ್ಯ ಶಕ್ತಿಗಳಿಗೆ ಮುಖಾಮುಖಿಯಾಗಿ ನಿಲ್ಲಿಸುತ್ತದೆ. ನಿಷ್ಫಲವಾದ ಕೆಲವು ಹೋರಾಟಗಳ ಬಳಿಕ ಅವರು ಸೋತುಹೋಗುತ್ತಾರೆ. ಅತ್ಯಂತ ಬರ್ಬರ ಧರ್ಮಕ್ಕಿಂತ ಕಡಿಮೆಯಿಲ್ಲದ ಕ್ರೌರ್ಯದಿಂದ ದೇವರೊಂದಿಗೆ ಯಾವುದೇ ಸಂಸರ್ಗವಾಗದಂತೆ ಅದು ಮನುಷ್ಯರನ್ನು ವಿಚ್ಛೇದಗೊಳಿಸುತ್ತದೆ.

ಹೀಗಿದೆ, ಹಿಂದೂ ಧರ್ಮದ ತತ್ವಜ್ಞಾನ. ಅದು ಅತಿ ಮಾನವನಿಗೆ ಸ್ವರ್ಗವಾದರೆ, ಸಾಮಾನ್ಯ ಮನುಷ್ಯನಿಗೆ ನರಕವಾಗಿದೆ.

ಹಿಂದೂ ಧರ್ಮದ ತತ್ವಜ್ಞಾನದ ಬಗೆಗೆ ತನ್ನ ಅಭಿಪ್ರಾಯದ ಮೇಲೆ ನಾನಾ ನಿಟ್ಟಿನಿಂದ ಧಾಳಿಗಳೂ ನಡೆಯಬಹುದೆಂದು ನನಗೆ ಗೊತ್ತಿದೆ. ಪ್ರಚಲಿತ ದೃಷ್ಟಿಗೆ ಅದು ಎಷ್ಟೊಂದು ವಿರೋಧವಾಗಿದೆಯೆಂದರೆ ಧಾಳಿ ನಡೆಯುವುದು ಅನಿವಾರ್ಯವಾಗಿದೆ. ಈ ಆಕ್ರಮಣವು ವಿವಿಧ ದಿಕ್ಕಿನಿಂದ ಧಾವಿಸಬಹುದು.

'ಮನುಸ್ಮೃತಿ'ಯನ್ನು ಹಿಂದೂ ಧರ್ಮದ ನಿಜವಾದ ಸುವಾರ್ತೆ ಎಂದು ತೆಗೆದುಕೊಳ್ಳುವುದು ತಪ್ಪೆಂದು ಕೆಲವರು ವಾದಿಸಬಹುದು. 'ವೇದಗಳು' ಮತ್ತು 'ಭಗವದ್ಗೀತೆ'ಗಳೇ ಹಿಂದೂ ಧರ್ಮದ ನಿಜವಾದ ಸುವಾರ್ತೆಯನ್ನೊಳಗೊಂಡಿವೆ ಎಂದೂ ಅವರು ಹೇಳಬಹುದು.

ಆದರೆ ಸಂಪ್ರದಾಯವಾದಿ ಹಿಂದೂಗಳಲ್ಲಿ ಯಾರೂ 'ಮನುಸ್ಮೃತಿ'ಯನ್ನು ಹಿಂದೂ ಧರ್ಮದ ಅಧಿಕೃತ ಕೃತಿಯಲ್ಲವೆಂದು ಹೇಳುವಷ್ಟು ಧೈರ್ಯ ತಾಳಲಾರರೆಂಬ ವಿಚಾರದಲ್ಲಿ ನನಗೆ ದೃಢ ವಿಶ್ವಾಸವಿದೆ. ಆರ್ಯ ಸಮಾಜದಂತಹ ಕೆಲವು ಸುಧಾರಣಾವಾದಿ ಹಿಂದೂ ಶಾಖೆಗಳು ಬೇಕಾದರೆ ಅಂತಹ ಆಪಾದನೆ ಮಾಡಬಹುದು. ಆದರೆ ಈ ವಾದಕ್ಕೆ ಆಧಾರವಿಲ್ಲವೆಂಬುದರಲ್ಲಿ ಸಂದೇಹಕ್ಕೆ ಅವಕಾಶವೇ ಇಲ್ಲ. ಈ ಆಪಾದನೆಗಳಿಗೆ ಉತ್ತರಿಸಬೇಕಾದರೆ ಹಿಂದೂ ಧರ್ಮದಲ್ಲಿ ಸ್ಮೃತಿಗಳಿಗೆ ಅಧಿಕಾರಯುತ ಸ್ಥಾನ ಹೇಗೆ ಸಿಕ್ಕಿತೆಂಬುದನ್ನು ವಿವರಿಸಬೇಕಾದ ಅಗತ್ಯವಿದೆ.[೧]

---

೧. ನೋಡಿ ಪ್ರೊ. ಅಲ್ತೇಕರ್ ಅವರ ಕುತೂಹಲಕಾರಿ ಲೇಖನ 'ದಿ ಪೊಸಿಷನ್ ಆಫ್ ಸ್ಮೃತೀಸ್ ಆಸ್ ಎ ಸೋರ್ಸ್ ಆಫ್ ಧರ್ಮ' – **ಕಾಣೆ ಸ್ಮಾರಕ ಸಂಪುಟ**, ಪ. ೧೮–೨೫.

ಸ್ಮೃತಿಗಳು ಮೂಲತಃ ಸಾಮಾಜಿಕ ಸಂಪ್ರದಾಯ, ನಡವಳಿಕೆ ಮತ್ತು ಆಚಾರಗಳಿಗೆ ಸಂಂಧಿಸಿದಂತೆ ವೇದ ವಿದ್ವಾಂಸರು ಒಪ್ಪಿ ಶಿಫಾರಸು ಮಾಡಿದ ಕಾನೂನುಗಳ ಸಂಗ್ರಹವೆನ್ನಬಹುದು. ಬಹಳ ಕಾಲ ಈ ಕಾನೂನುಗಳು ವೇದ ವಿದ್ವಾಂಸರ ನೆನಪಿನಲ್ಲಿಯೇ ಉಳಿದವಾದ್ದರಿಂದ ಅವುಗಳನ್ನು ಸ್ಮೃತಿಗಳೆಂದು ಕರೆಯಲಾರಂಭಿಸಿದರು. ಅಂದರೆ ನೆನಪಿನಲ್ಲಿಟ್ಟುಕೊಂಡ ವಿಚಾರಗಳು ವೇದ ಅಥವಾ ಶೃತಿಗಳಾದರೋ ಕೇಳುವುದರ ಮೂಲಕ ಉಳಿದವೆಂಬುದನ್ನು ಇಲ್ಲಿ ಹೋಲಿಸಬಹುದು. ಆರಂಭದಲ್ಲಿ ಈ ಸ್ಮೃತಿಗಳನ್ನು ಕ್ರೋಢೀಕರಿಸುತ್ತಾ ಅವುಗಳನ್ನು ಕಾನೂನುಗಳಂತೆ ಪರಿಗಣಿಸಲು ತೊಡಗಿದಾಗಲೂ ವೇದಗಳಲ್ಲಿದ್ದ ನಿಯಮಗಳಿಗೆ ಹೋಲಿಸಿದಾಗ ಅವುಗಳನ್ನು ಕೀಳು ದರ್ಜೆಯವೆಂದೇ ಭಾವಿಸಲಾಗಿತ್ತು.

ಅಧಿಕಾರ ಮತ್ತು ನಿರ್ಬಂಧಕ ಶಕ್ತಿಗಳಲ್ಲಿ ಅವುಗಳೆರಡಕ್ಕೂ ಇದ್ದ ವ್ಯತ್ಯಾಸವೆಂದರೆ, ಕೇಳಿದ ವಿಚಾರಗಳು ಮತ್ತು ನೆನಪಿಸಿಕೊಂಡ ವಿಚಾರಗಳ ನಡುವೆ ಇರುವ ಸಹಜ ವ್ಯತ್ಯಾಸ ಮತ್ತು ವಿಶ್ವಾಸಾರ್ಹತೆಗಳೇ ಆಗಿವೆ. ಧರ್ಮಶಾಸ್ತ್ರ ಸಾಹಿತ್ಯದ ಎರಡು ಬಗೆಗಳಲ್ಲಿ ಇರುವ ವ್ಯತ್ಯಾಸವೂ ಇಲ್ಲಿ ಗಣಿಸಬೇಕಾದ ಮತ್ತೊಂದು ಅಂಶವಾಗಿದೆ. ಗ್ರಂಥಕರ್ತರ ಅಂತಸ್ತನ್ನು ಅವಲಂಬಿಸಿದ ವಿಚಾರವಿದು. 'ವೇದಗಳ' ಕರ್ತೃಗಳು ಋಷಿಗಳು. 'ಸ್ಮೃತಿ'ಗಳ ಕರ್ತೃಗಳು ಕೇವಲ ವಿದ್ವಾಂಸರು. ಋಷಿಗಳು ಅಂತಸ್ತು ಮತ್ತು ಪಾವಿತ್ರ್ಯದಲ್ಲಿ ವಿದ್ವಾಂಸರಿಗಿಂತ ಮೇಲಿನ ಅಂತಸ್ತಿನವರು. ಆದುದರಿಂದ 'ವೇದ'ಗಳನ್ನು 'ಸ್ಮೃತಿ'ಗಳಿಗಿಂತ ಹೆಚ್ಚು ಅಧಿಕೃತವೆಂದು ಪರಿಗಣಿಸಲಾಯಿತು.

ಹಿಂದೂ ಧರ್ಮಶಾಸ್ತ್ರದ ಸೂತ್ರಗಳಲ್ಲಿ ಇದರ ಪರಿಣಾಮವಾಗಿ ಉದ್ಭವಿಸಿದ ಸಮಸ್ಯೆಗಳನ್ನು ಕುರಿತು ಸ್ಪಷ್ಟವಾಗಿ ವಿವರಿಸಲಾಗಿದೆ. ಅದರ ಪ್ರಕಾರ ಯಾವುದಾದರೂ ಒಂದೇ ವಿಷಯದ ಬಗೆಗೆ ಎರಡು ವೇದಗಳ ನಿಯಮಗಳಲ್ಲಿ ಭಿನ್ನಾಭಿಪ್ರಾಯವಿರುವುದಾದರೆ 'ವೇದ'ಗಳ ನಿಯಮಗಳು ಅಲ್ಲಿಗೆ ಜಾರಿಯಾಗುವುದಿಲ್ಲವೆಂದು ಅರ್ಥವಲ್ಲ. ಆದರೆ 'ಶೃತಿ'ಯ ಒಂದು ನಿಯಮಕ್ಕೂ 'ಸ್ಮೃತಿ'ಯ ಮತ್ತೊಂದು ನಿಯಮಕ್ಕೂ ವಿರೋಧವುಂಟಾದರೆ ಮೇಲಿನ ಕಾರಣಗಳಿಂದಾಗಿ 'ಶೃತಿ'ಯ ನಿಯಮಗಳು ನಿಲ್ಲುತ್ತವೆ. ಏಕೆಂದರೆ 'ಶೃತಿ'ಯ ಅಧಿಕಾರವು 'ಸ್ಮೃತಿ'ಗಿಂತ ದೊಡ್ಡದು. ಪ್ರೊ. ಅಲ್ತೇಕರ್‌ರವರು ಹೇಳುವಂತೆ, ಮುಂದೆ ಕೆಲವು ಕಾಲಗಳ ಬಳಿಕ, 'ಸ್ಮೃತಿ'ಯ ಅಧಿಕಾರವೂ ಹೆಚ್ಚಿ 'ವೇದ'ಗಳಷ್ಟೇ ಮನ್ನಣೆ ಅವುಗಳಿಗೆ ದೊರೆಯಲಾರಂಭಿಸಿತು. ಈ ಉದ್ದೇಶವನ್ನು ಈಡೇರಿಸಿಕೊಳ್ಳಲು ವಿವಿಧ ಸಾಧನೋಪಾಯಗಳನ್ನು ಬಳಸಲಾಯಿತು. ಮೊದಲನೆಯದಾಗಿ, 'ಸ್ಮೃತಿ'ಗಳ ಕರ್ತೃಗಳ ಅಂತಸ್ತನ್ನು ಋಷಿಗಳ ಮಟ್ಟಕ್ಕೆ ಏರಿಸಿದರು. ಪ್ರಾಚೀನ ಧರ್ಮಶಾಸ್ತ್ರ ಕರ್ತೃಗಳಾದ ಗೌತಮ, ಬೌದ್ಧಾಯನರಂತಹವರಿಗೂ ಋಷಿಗಳ ಮಟ್ಟದ ಮನ್ನಣೆ ಸಿಕ್ಕಿರಲಿಲ್ಲ. ಆದರೆ ಮನು ಮತ್ತು ಯಾಜ್ಞವಲ್ಕ್ಯರನ್ನು ಋಷಿಗಳೆಂದು ಪರಿಗಣಿಸಿದರು. ಇದರಿಂದ 'ಸ್ಮೃತಿ'ಗಳ ಅಂತಸ್ತು, 'ಶೃತಿ'ಗಳ ಮಟ್ಟಕ್ಕೆ ಏರಿತು. ಈ ದಿಸೆಯಲ್ಲಿ ಅಳವಡಿಸಿಕೊಂಡ ಎರಡನೆ ಸಾಧನವೆಂಬಂತೆ ಸ್ಮೃತಿಗಳನ್ನು ನೆನಪಿನಲ್ಲಿ ಉಳಿದ ದಾಖಲೆಗಳು 'ಶೃತಿ'ಗಿಂತ ಭಿನ್ನವಾದವು ಎಂಬ ವಿಚಾರವು ಮರೆಯಾಗಿ, ಅದಕ್ಕೆ ಹತ್ತಿರವಾದುದು, ಅಭಿನ್ನವಾದುದು ಎಂಬ ನಂಬಿಕೆ ಬೆಳೆಯಿತು. ಇದರ ಪರಿಣಾಮವಾಗಿ ಅವುಗಳ ಅಧಿಕಾರಗಳ ಬಗೆಗೆ ಇದ್ದ ನಿಯಮಗಳು ಸಂಪೂರ್ಣ ವ್ಯತ್ಯಾಸಗೊಂಡವು. ಮೊದಲು 'ಸ್ಮೃತಿ' ಮತ್ತು 'ಶೃತಿ'ಗಳ ನಡುವೆ ಭಿನ್ನಾಭಿಪ್ರಾಯವಿದ್ದಾಗಲೆಲ್ಲ 'ಶೃತಿ'ಯೇ ಅಧಿಕೃತವಾಗಿ ಉಳಿಯುತ್ತಿತ್ತು. ಹೊಸ ನಿಯಮದಂತೆ ಭಿನ್ನಾಭಿಪ್ರಾಯವಿದ್ದಾಗ ಆಯ್ಕೆಗೆ ಅವಕಾಶವಿದ್ದುದರ ಅರ್ಥವೇನೆಂದರೆ, 'ಸ್ಮೃತಿ' ಮತ್ತು 'ಶೃತಿ'ಗಳೆರಡೂ– ಅನುಷ್ಠಾನಕ್ಕೆ ಸಂಬಂಧಿಸಿದಂತೆ – ಸಮಾನ ಅಧಿಕಾರ ಹೊಂದಿವೆ ಎಂದಂತಾಯಿತು. ಈ ನಿಯಮವನ್ನು ಬಹಳ ಸ್ಪಷ್ಟವಾಗಿ ಕುಮಾರಿಲನು ತನ್ನ 'ಪೂರ್ವಮೀಮಾಂಸೆ'ಯ ವ್ಯಾಖ್ಯಾನದಲ್ಲಿ ವಿವರಿಸಿದ್ದಾನೆ. ಅದರಿಂದಾಗಿ 'ಸ್ಮೃತಿ'ಗಳು 'ಶೃತಿ'ಗಳಷ್ಟೇ ಅಧಿಕಾರಯುತವೆಂದು ಒಪ್ಪಿದರು.

ಹಿಂದೂ ಸಮಾಜದಲ್ಲಿ ಮೂಲದಲ್ಲಿ ವೇದಗಳಿಗೆ ಬದ್ಧವಾಗಿದ್ದವರು ವೇದಗಳಿಗೆ ವಿರೋಧವಾಗಿದ್ದ ಯಾವುದೇ ನಿಯಮಗಳನ್ನು ಅನುಸರಿಸಲು ಸಾಧ್ಯವಿರಲಿಲ್ಲ. ಹೊಸ ನಿಯಮವು ಈ ಸ್ಥಿತಿಯನ್ನು ಬದಲಾಯಿಸಿ 'ಶೃತಿ' ಅಥವಾ 'ಸ್ಮೃತಿ'ಯನ್ನು ಅನುಸರಿಸುವ ಆಯ್ಕೆಯನ್ನು ಸಮಾಜಕ್ಕೇ ಬಿಟ್ಟುಕೊಟ್ಟಿತು. ಕೆಲವು ಕಾಲದ ಬಳಿಕ ಈ ಆಯ್ಕೆಯ ಸ್ವಾತಂತ್ರ್ಯವನ್ನು ಹಿಂದಕ್ಕೆ ತೆಗೆದುಕೊಂಡರೂ 'ಶೃತಿ'ಯಂತೆಯೇ 'ಸ್ಮೃತಿ'ಯನ್ನು ಅಧ್ಯಯನ ಮಾಡುವುದನ್ನು ಕಡ್ಡಾಯಗೊಳಿಸಿ ಇದನ್ನು ಸಾಧಿಸಿದರು.

ಇದನ್ನೆಲ್ಲಾ ಕ್ರಮೇಣವಾಗಿ ಸಾಧಿಸಲಾಯಿತು. 'ಶೃತಿ' ಮತ್ತು 'ಸ್ಮೃತಿ'ಗಳೆರಡೂ ಬ್ರಾಹ್ಮಣನ ಎರಡು ಕಣ್ಣುಗಳೆಂದೂ ಅವನಿಗೆ ಒಂದು ನಷ್ಟವಾದರೂ ಒಕ್ಕಣ್ಣನಾಗುತ್ತಾನೆಂದೂ ಮೊದಲು ಹೇಳಿದರು. ಬಳಿಕ ಬಂದ ಸಿದ್ಧಾಂತದ ಪ್ರಕಾರ 'ವೇದ' ಮತ್ತು 'ಸ್ಮೃತಿ'ಗಳೆರಡನ್ನೂ ಒಟ್ಟಾಗಿ ಅಧ್ಯಯನ ಮಾಡುವುದರಿಂದ ಮಾತ್ರ ಬ್ರಾಹ್ಮಣ್ಯವನ್ನು ಸಾಧಿಸಬಹುದೆಂದಾಯಿತು. ಕಟ್ಟಕೊನೆಗೆ 'ಸ್ಮೃತಿ'ಯನ್ನು ತಿರಸ್ಕರಿಸುವುದನ್ನು ಪಾಪವೆಂದು ಪರಿಗಣಿಸಿದರು. ಈ ಪಾಪವನ್ನು ಮಾಡಿದವರು ಇಪ್ಪತ್ತೊಂದು ಬಾರಿ ಪ್ರಾಣಿ ಜನ್ಮವೆತ್ತಬೇಕಾಗುವುದೆಯೆಂದು ಸಾರಿದರು.

ಈ ರೀತಿಯಲ್ಲಿ 'ಸ್ಮೃತಿ'ಗಳಿಗೆ ಹಿಂದೂ ಧರ್ಮದ ಮೂಲಾಧಾರವೆಂಬ ಮನ್ನಣೆ ಸಿಕ್ಕಿತೆಂಬುದರಲ್ಲಿ ಸಂದೇಹಕ್ಕೆ ಅವಕಾಶವೇ ಇಲ್ಲ. ಪ್ರೊ. ಅಲ್ತೇಕರ್‌ರವರನ್ನು ಉಲ್ಲೇಖಿಸುವುದಾದರೆ, 'ಸ್ಮೃತಿಗಳು ಆಧುನಿಕ ಹಿಂದೂ ಧರ್ಮವನ್ನು ರೂಪಿಸುವುದರಲ್ಲಿ ಬಹು ದೊಡ್ಡ ಪಾತ್ರವಹಿಸಿವೆ. ಅನೇಕ ಸಾಮಾಜಿಕ ಮತ್ತು ಸಮಾಜೋ–ಧಾರ್ಮಿಕ ಸಂಸ್ಥೆಗಳಿಗೆ, ಆಚಾರಗಳಿಗೆ ಆಕಾರಕೊಟ್ಟು ಆಧುನಿಕ ಹಿಂದೂ ಧರ್ಮವನ್ನೂ ಅವು ಬೆಳೆಸಿವೆ.'

ಆದುದರಿಂದ ಹಿಂದೂ ಧರ್ಮದ ತತ್ವಜ್ಞಾನವನ್ನು 'ಮನುಸ್ಮೃತಿ'ಯು ಒಳಗೊಂಡಿದೆ ಎಂದು ನಾನು ಸ್ವೀಕರಿಸುವುದನ್ನು ತಪ್ಪು ಎಂದು ಸಾಧಿಸಲು ಯಾರಿಗೂ ಸಾಧ್ಯವಾಗುವುದಿಲ್ಲ.

'ಸ್ಮೃತಿ'ಗಳನ್ನು 'ವೇದ'ಗಳ ಮಟ್ಟಕ್ಕೆ ಏರಿಸುವ ಈ ಕೆಲಸವನ್ನು ಬ್ರಾಹ್ಮಣರು ಕೈಗೊಂಡಿದ್ದರಲ್ಲಿ ಬಹು ದೊಡ್ಡ ಸ್ವಾರ್ಥವಿದೆ. ಜಾತಿ ವ್ಯವಸ್ಥೆಯ ಸಿದ್ಧಾಂತದ ಬೆಳವಣಿಗೆಯನ್ನೇ ಸ್ಮೃತಿಗಳು ಅತ್ಯಂತ ಸಮೃದ್ಧಗೊಳಿಸಿವೆ. ಬ್ರಾಹ್ಮಣರ ಶ್ರೇಷ್ಠತ್ವದ ಪ್ರತಿಪಾದನೆಯನ್ನು ಅವರ ಹಕ್ಕುಗಳು ಮತ್ತು ವಿಶೇಷ ಸವಲತ್ತುಗಳನ್ನು ಅವು ಒಳಗೊಂಡಿವೆ. ಕ್ಷತ್ರಿಯ ಮತ್ತು ವೈಶ್ಯರನ್ನು ಬ್ರಾಹ್ಮಣರಿಗೆ ಅಧೀನಗೊಳಿಸುವುದನ್ನು ಮತ್ತು ಶೂದ್ರರನ್ನು ಅವನತಿಗೊಳಿಸುವುದನ್ನೂ ಅಲ್ಲಿಯೇ ಕಾಣಬಹುದು. ವಸ್ತುಸ್ಥಿತಿ ಹೀಗಿರುವುದರಿಂದಲೇ ಬ್ರಾಹ್ಮಣರು ನೇರವಾಗಿ ಆಸಕ್ತಿ ವಹಿಸಿ 'ವೇದ'ಗಳಿಗಿದ್ದ ಅಧಿಕಾರವನ್ನೇ 'ಸ್ಮೃತಿ'ಗಳಿಗೂ ತಂದುಕೊಡಲು ಮುಂದಾದರು. ಪರಿಣಾಮವಾಗಿ ತಮ್ಮ ಹಿತವನ್ನೂ ಅವರು ಕಟ್ಟಕೊನೆಗೆ ಸಾಧಿಸಿಕೊಂಡರು. ಆದರೆ ಅಖಂಡ ದೇಶವನ್ನು ನಾಶಗೊಳಿಸಲು ಕಾರಣರಾದರು. ಮಡಿವಂತರೂ ಸಜ್ಜನರೂ ಆದ ಹಿಂದೂಗಳು ಹೇಳುವಂತೆ, ಹಿಂದೂ ಧರ್ಮದ ತತ್ವಜ್ಞಾನವು 'ಸ್ಮೃತಿ'ಗಳಲ್ಲಿ, 'ವೇದ'ಗಳು ಮತ್ತು 'ಭಗವದ್ಗೀತೆ'ಯಲ್ಲಿದೆ ಎಂಬುದನ್ನು ಒಪ್ಪಿಕೊಂಡರೂ, ಅದರ ಫಲವಾಗಿ ಏನು ವ್ಯತ್ಯಾಸವಾಗುತ್ತದೆ? ಎಂಬ ಪ್ರಶ್ನೆ ಉಳಿಯುತ್ತದೆ.

'ಸ್ಮೃತಿ', 'ವೇದ'ಗಳು ಅಥವಾ 'ಭಗವದ್ಗೀತೆ' ಇವುಗಳಲ್ಲಿ ಯಾವುದನ್ನು ಅಂಗೀಕರಿಸಿದರೂ ನನ್ನ ಪ್ರಕಾರ ಅಂತಹ ವ್ಯತ್ಯಾಸ ಏನೂ ಇಲ್ಲ. ಸ್ಮೃತಿಗಳಿಗೆ ಮೂಲಭೂತವಾಗಿ ಭಿನ್ನವಾದುದನ್ನು 'ವೇದ'ಗಳು ಬೋಧಿಸುತ್ತಿವೆಯೇ? 'ಸ್ಮೃತಿ'ಗಳ ಕಟ್ಟಳೆಗೆ ವಿರೋಧವಾಗಿ 'ಭಗವದ್ಗೀತೆ' ಹೇಳುತ್ತಿದೆಯೇ? ಕೆಲವು ಉದಾಹರಣೆಗಳು ಈ ಸಂಗತಿಗಳನ್ನು ಸ್ಪಷ್ಟಪಡಿಸುತ್ತವೆ.

ಪ್ರಸಿದ್ಧ 'ಪುರುಷಸೂಕ್ತ'ದಲ್ಲಿ ವೇದಗಳು ಚಾತುರ್ವರ್ಣ್ಯದ ಸಿದ್ಧಾಂತವನ್ನು ಮಂಡಿಸಿರುವುದರಲ್ಲಿ ಯಾವ ಭಿನ್ನಾಭಿಪ್ರಾಯವೂ ಇಲ್ಲ. 'ಪುರುಷಸೂಕ್ತ'ವೂ ಮೂಲಾಧಾರವೆಂಬಂತಹ ಎರಡು ನಿಯಮಗಳನ್ನು ಒಪ್ಪಿದೆ. ಸಮಾಜವನ್ನು ನಾಲ್ಕು ವಿಭಾಗಗಳನ್ನಾಗಿ ವಿಂಗಡಿಸುವುದನ್ನು ಒಂದು ಆದರ್ಶವಾಗಿ ಒಪ್ಪಿದೆ. ಈ ನಾಲ್ಕು ವಿಭಾಗಗಳ ನಡುವೆ ಆದರ್ಶ ಸಂಬಂಧವನ್ನಾಗಿ ಅಸಮಾನತೆಯನ್ನು ಅದು ಅಂಗೀಕರಿಸಿದೆ.

'ಭಗವದ್ಗೀತೆ' ಏನು ಬೋಧಿಸುತ್ತದೆ? ಎಂಬುದರ ಬಗೆಗೂ ಸಂದೇಹಕ್ಕೆ ಆಸ್ಪದವೇ ಇಲ್ಲ. 'ಭಗವದ್ಗೀತೆ'ಯಲ್ಲಿ ಕೃಷ್ಣನು ನೀಡಿರುವ ಕೆಳಗಿನ ನಾಲ್ಕು ಸ್ಪಷ್ಟ ನಿರ್ಧಾರಗಳ ಮೂಲಕ ಅದರ ಬೋಧನೆಯನ್ನು ಸಂಗ್ರಹಿಸಿಬಿಡಬಹುದಾಗಿದೆ.

೧. "ಚಾತುರ್ವರ್ಣ್ಯವೆಂದು ಹೆಸರಾಗಿರುವ ಗೊತ್ತುಪಾಡನ್ನು (ಅಂದರೆ ಸಮಾಜವನ್ನು ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರವೆಂದು ನಾಲ್ಕು ಭಾಗಗಳನಾಗಿ ವಿಂಗಡಿಸುವುದು) ನಾನೇ ಸೃಷ್ಟಿಸಿದವನು ಮತ್ತು ನಾನೇ ಅವರವರ ಜಾಯಮಾನಕ್ಕನುಗುಣವಾಗಿ ವಿವಿಧ ಕಸುಬುಗಳನ್ನು ಅವರಿಗೆ ವಹಿಸಿದವನು. ಈ ಚಾತುರ್ವರ್ಣ್ಯವನ್ನೂ ನಾನೇ ಸೃಷ್ಟಿಸಿದವನು." (*ಗೀತೆ* IV. 13)

೨. "ಬೇರೆ ವರ್ಣದವರ ಕಸುಬನ್ನು ಅನುಸರಿಸುವುದು ಸುಲಭವಾಗಿದ್ದರೂ ತನ್ನದೇ ವರ್ಣದ ಕಸುಬನ್ನು ಅನುಸರಿಸುವುದೇ ಜಾಣತನ. ಸಾಕಷ್ಟು ದಕ್ಷತೆಯಿಂದ ಅದನ್ನು ಒಬ್ಬನು ನಿರ್ವಹಿಸಲಾಗದಿದ್ದರೂ ತನ್ನ ವರ್ಣದ ಕಸುಬೇ ಶ್ರೇಯಸ್ಕರವಾದುದು. ಒಬ್ಬನು ತನ್ನ ವರ್ಣದ ಕಸುಬನ್ನು ಅನುಸರಿಸುವುದರಲ್ಲಿ ಆನಂದವಿದೆ. ಇದರ ಫಲವಾಗಿ ಅವನಿಗೆ ಸಾವು ಸಂಭವಿಸಿದರೂ ಚಿಂತೆಯಿಲ್ಲ. ಆದರೆ ಬೇರೆ ವರ್ಣದವರ ಕಸುಬನ್ನು ಅನುಸರಿಸುವುದು ಮಾತ್ರ ಅಪಾಯಕಾರಿ." (*ಗೀತೆ,* III.35)

೩. "ತಮ್ಮ ಕಸುಬುಗಳಿಗೆ ಚೆನ್ನಾಗಿ ಹೊಂದಿಕೊಂಡಿರುವ ಅವಿದ್ಯಾವಂತರ ನಂಬಿಕೆಗಳನ್ನು ವಿದ್ಯಾವಂತರು ಅಭದ್ರಗೊಳಿಸಬಾರದು. ಅವನ ವರ್ಣಕ್ಕನುಸಾರವಾದ ಕಸುಬಿನಲ್ಲಿ ಅವನೇ ಮೊದಲು ತೊಡಗಬೇಕು. ಬಳಿಕ ಇತರರೂ ಅವರವರ ವರ್ಣಾನುಸಾರವಾದ ಕಸುಬನ್ನು ಅಂಗೀಕರಿಸುವಂತೆ ಮಾಡಬೇಕು. ಒಬ್ಬ ವಿದ್ಯಾವಂತನು ತನ್ನ ಉದ್ಯೋಗಕ್ಕೆ ಅಂಟಿಕೊಳ್ಳದೆ ಇರಬಹುದು. ಆದರೆ ಅವಿದ್ಯಾವಂತರೂ ಮಂದಮತಿಗಳೂ ಆದವರು ತಮ್ಮ ಕಸುಬಿಗೆ ಅಂಟಿಕೊಂಡಿರುತ್ತಾರೆ. ವಿದ್ಯಾವಂತರು ಅವರನ್ನು ಕೆಡಿಸಬಾರದು. ಅವರ ಕಸುಬನ್ನು ತ್ಯಜಿಸಿ ಅಡ್ಡಹಾದಿ ಹಿಡಿಯುವಂತೆ ಅವರನ್ನು ಪ್ರೇರೇಪಿಸಬಾರದು." (*ಗೀತೆ.* III, 26, 29)

೪. "ಅಯ್ಯಾ, ಅರ್ಜುನ! ಕರ್ತವ್ಯ ಮತ್ತು ಉದ್ಯೋಗಗಳಿಗೆ ಸಂಬಂಧಿಸಿದ ಈ ಧರ್ಮ (ಅಂದರೆ ಚಾತುರ್ವರ್ಣ್ಯಾನುಸಾರಿಯಾದ ಧರ್ಮ) ಅವನತಿ ಹೊಂದಿದಾಗಲೆಲ್ಲಾ ನಾನೇ ಭೂಮಿಯಲ್ಲಿ ಅವತರಿಸಿ ಈ ಅವನತಿಗೆ ಕಾರಣರಾದವರನ್ನು ಶಿಕ್ಷಿಸಿ. ಮತ್ತೆ ಅದನ್ನು ಸುಸ್ಥಿಗೆ ತರುತ್ತೇನೆ." (*ಗೀತೆ.* IV. 8)

ಹೀಗಿದೆ, 'ಗೀತೆ'ಯ ನಿಲುವು. 'ಮನುಸ್ಮೃತಿ'ಗೂ ಇದಕ್ಕೂ ಯಾವ ವ್ಯತ್ಯಾಸವಿದೆ? ಮನುವನ್ನು ಅಡಕಗೊಳಿಸಿದ್ದೇ 'ಗೀತೆ'. 'ಮನುಸ್ಮೃತಿ'ಯಿಂದ ತಪ್ಪಿಸಿಕೊಂಡು ಹೋಗಿ 'ಗೀತೆ'ಯಲ್ಲಿ ಆಶ್ರಯ ಪಡೆಯಬಯಸುವವರಿಗೆ 'ಗೀತೆ' ಎಂದರೇನು? ಎಂಬುದು ತಿಳಿದಿಲ್ಲ ಅಥವಾ 'ಗೀತೆ'ಯ ಆತ್ಮವೇ 'ಮನುಸ್ಮೃತಿ'ಯೊಂದಿಗೆ ರಕ್ತಸಂಬಂಧ ಪಡೆದಿದೆಯೆಂಬುದನ್ನು ತಮ್ಮ ಪರಿಗಣನೆಯಿಂದ ಬಿಟ್ಟುಬರಲು ಸಿದ್ಧರಿಲ್ಲ.

ಹಿಂದೂ ಧರ್ಮದ ತತ್ವಜ್ಞಾನವನ್ನು ವಿವರಿಸಲು ಆಧಾರವಾಗಿ ನಾನು ತೆಗೆದುಕೊಂಡಿರುವ 'ಮನುಸ್ಮೃತಿ'ಯ ವಿಚಾರಗಳನ್ನು 'ವೇದ' ಮತ್ತು 'ಭಗವದ್ಗೀತೆ'ಯ ಉಪದೇಶಗಳೊಂದಿಗೆ ಹೋಲಿಸಿ

ನೋಡಿ. ಅಲ್ಲಿ ಕಂಡುಬರುವ ವ್ಯತ್ಯಾಸಗಳೇನು? ಅಲ್ಲಿ ಕಾಣುವ ವ್ಯತ್ಯಾಸವಿಷ್ಟೆ 'ವೇದ' ಮತ್ತು 'ಭಗವದ್ಗೀತೆ'ಗಳು ಸಾಮಾನ್ಯ ತತ್ವಗಳನ್ನು ನಿರೂಪಿಸುತ್ತವೆ. 'ಸ್ಮೃತಿ'ಗಳಲ್ಲಿ ಈ ತತ್ವಗಳ ನಿರ್ದಿಷ್ಟ ವಿವರಣೆಯಿದೆ ಮತ್ತು ಅವುಗಳನ್ನು ವಿಸ್ತರಿಸಲಾಗಿದೆ. ತಿರುಳಿಗೆ ಸಂಬಂಧಿಸಿದಂತೆ ಎಲ್ಲವೂ – 'ಸ್ಮೃತಿ'ಗಳು, 'ವೇದ'ಗಳು ಮತ್ತು 'ಭಗವದ್ಗೀತೆ' – ಒಂದೇ ನೇಯ್ಗೆಯಲ್ಲಿ ಒಂದೇ ಮಾದರಿಯಲ್ಲಿ ಸಿದ್ಧವಾಗಿವೆ. ಅವುಗಳೆಲ್ಲವುಗಳ ಮೂಲಕ ಹಾಯ್ದು ಹೋಗಿರುವ ಎಳೆ ಒಂದೇ ಆಗಿದ್ದು, ಸಿದ್ಧಪಡಿಸಿರುವ ವಸ್ತ್ರವೂ ಒಂದೇ ಆಗಿದೆ. ಇದರ ಕಾರಣವು ಸ್ಪಷ್ಟವಾಗಿಯೇ ಇದೆ. 'ಉಪನಿಷತ್ತು'ಗಳನ್ನು ಬಿಟ್ಟು ಉಳಿದೆಲ್ಲ ಹಿಂದೂ ಧಾರ್ಮಿಕ ಸಾಹಿತ್ಯದ ಕರ್ತೃಗಳು ಬ್ರಾಹ್ಮಣರೇ ಆಗಿದ್ದು, 'ಸ್ಮೃತಿ'ಗಳಲ್ಲಿ ಅವರು ಪ್ರತಿಪಾದಿಸಿದ ಸಿದ್ಧಾಂತಗಳು 'ವೇದ'ಗಳು ಮತ್ತು 'ಭಗವದ್ಗೀತೆ'ಯಲ್ಲಿಯೂ ಸೇರಿಕೊಳ್ಳುವಂತೆ ಚೆನ್ನಾಗಿ ಎಚ್ಚರವಹಿಸಿದ್ದಾರೆ. ಆದುದರಿಂದ ಅವುಗಳಲ್ಲಿ ಯಾವುದನ್ನೂ ಆಯ್ದುಕೊಳ್ಳುವ ಅಥವಾ ಬಿಡುವುದರಲ್ಲಿ ಅರ್ಥವಿಲ್ಲ. 'ಮನುಸ್ಮೃತಿ'ಯ ವಿವರಣೆ ಅಥವಾ 'ವೇದ' ಮತ್ತು 'ಭಗವದ್ಗೀತೆ'ಗಳ ಉಪದೇಶ, ಇವುಗಳಲ್ಲಿ ಯಾವುದನ್ನು ತೆಗೆದುಕೊಂಡರೂ ಹಿಂದೂ ಧರ್ಮದ ತತ್ವಜ್ಞಾನ ಏಕರೀತಿಯಲ್ಲಿರುತ್ತದೆ.

'ಮನುಸ್ಮೃತಿ'ಯು ಒಂದು ಕಾನೂನು ಗ್ರಂಥವೇ ಹೊರತು ನೀತಿಶಾಸ್ತ್ರವಲ್ಲವೆಂದು ಪೈಪೋಟಿಯಾಗಿ ಅವರು ವಾದಮಾಡಬಹುದು. ನಾನು ಯಾವುದನ್ನು ಹಿಂದೂ ತತ್ವಜ್ಞಾನವೆಂದು ಪ್ರತಿಪಾದಿಸುತ್ತಿದ್ದೇನೆಯೋ ಅದು ಕಾನೂನಿಗೆ ಸಂಬಂಧಿಸಿದ ತತ್ವಜ್ಞಾನವೇ ಹೊರತು ಹಿಂದೂ ಧರ್ಮದ ನೈತಿಕ ತತ್ವಜ್ಞಾನವಲ್ಲವೆಂದು ಅವರು ವಾದಿಸಬಹುದು.

ಅವರ ವಾದಕ್ಕೆ ನನ್ನ ಉತ್ತರ ಸರಳವಾಗಿದೆ. ಹಿಂದೂ ಧರ್ಮದಲ್ಲಿ ಕಾನೂನಿನ ತಾತ್ವಿಕತೆಗೂ ನೀತಿಯ ತಾತ್ವಿಕತೆಗೂ ಅಂತಹ ವ್ಯತ್ಯಾಸವೇನು ಇಲ್ಲ. ಏಕೆಂದರೆ ಹಿಂದೂ ಧರ್ಮದಲ್ಲಿ ಕಾನೂನು ಮತ್ತು ನೀತಿ ಕಲ್ಪನೆಗಳೆರಡೂ ಬೇರೆ ಬೇರೆ ಅಲ್ಲ. ಕಾನೂನೇ ಅಲ್ಲಿ ನೀತಿಯಾಗಿಬಿಟ್ಟಿದೆ.

ನನ್ನ ವಾದವನ್ನು ಪುಷ್ಟೀಕರಿಸಲು ಹೆಚ್ಚು ಪುರಾವೆಗಳೇನೂ ಬೇಕಿಲ್ಲ. 'ಋಗ್ವೇದ'ದಲ್ಲಿ ಧರ್ಮ ಎಂಬುದಕ್ಕೆ ಕೊಟ್ಟಿರುವ ಅರ್ಥವನ್ನೇ ತೆಗೆದುಕೊಳ್ಳಿ.:

[೧]'ಋಗ್ವೇದ'ದಲ್ಲಿ ಧರ್ಮ ಎಂಬ ಶಬ್ದವು ಐವತ್ತೆಂಟು ಬಾರಿ ಬಂದಿದೆ. ಆರು ವಿಧವಾದ ಅರ್ಥದಲ್ಲಿ ಅದನ್ನು ಅಲ್ಲಿ ಬಳಸಲಾಗಿದೆ. (೧) ಪ್ರಾಚೀನ ರೂಢಿ, (೨) ಕಾನೂನುಗಳು, (೩) ಸಮಾಜದಲ್ಲಿ ಕಾನೂನು ಮತ್ತು ವ್ಯವಸ್ಥೆಯನ್ನು ಕಾಪಾಡುವ ಯಾವುದೇ ಬಗೆಯ ಒಪಂದ, (೪) ನಿಸರ್ಗದ ಗತಿ, (೫) ಸಾರಾಂಶವಾಗಿರುವ ಗುಣ, (೬) ಒಳ್ಳೆಯವರ ಮತ್ತು ಕೆಟ್ಟವರ ಕರ್ತವ್ಯ. ಆರಂಭದಿಂದಲೂ ಧರ್ಮ ಎನ್ನುವ ಶಬ್ದಕ್ಕೆ ಹಿಂದೂ ಧರ್ಮದಲ್ಲಿ ಎರಡು ನೆಲೆಯಲ್ಲಿ ಅರ್ಥಗಳಿರುವುದು ಇಲ್ಲಿ ಗೋಚರಿಸುತ್ತದೆ. ಕಾನೂನು ಮತ್ತು ನೀತಿ ಎರಡೂ ಅರ್ಥಗಳು ಇಲ್ಲಿವೆ. ಹಿಂದೂ ಧರ್ಮದ ತತ್ವಜ್ಞಾನದಲ್ಲಿ ಕಾನೂನಿನ ತಾತ್ವಿಕತೆಗೂ ನೀತಿಯ ತಾತ್ವಿಕತೆಗೂ ಯಾವುದೇ ವ್ಯತ್ಯಾಸವಿಲ್ಲದಿರುವುದಕ್ಕೆ ಕಾರಣ ಇಲ್ಲಿದೆ. ಹಿಂದೂಗಳಿಗೆ ಯಾವುದೇ ನೀತಿ ನಿಯಮಗಳಿಲ್ಲವೆಂದು ಅರ್ಥವಲ್ಲ. ಖಂಡಿತ ನಿಯಮಗಳಿವೆ. ಹಿಂದೂ ನೀತಿ ನಿಯಾಮವಳಿಗಳ ಸ್ವರೂಪ ಲಕ್ಷಣಗಳೇನು? ಮತ್ತು ಅಲ್ಲಿ ಘೋಷಿಸುವ ನೀತಿ ತತ್ವಗಳಾವುವು? ಎಂಬುದನ್ನು ಕೇಳಿಕೊಳ್ಳುವುದು ಇಲ್ಲಿ ಸಮಂಜಸವಾಗುತ್ತದೆ.

---

೧. 'ಸ್ವಾಧ್ಯಾಯ' ಎಂಬ ಮರಾಠಿ ನಿಯತಕಾಲಿಕೆಯಲ್ಲಿ – ಸಂ.೭–೮, ಮೊದಲನೆಯ ವರ್ಷ ಪು. ೧೮–೨೧ರಲ್ಲಿ ಯಶವಂತ ರಾಮಕೃಷ್ಣ ದಾತೆಯವರು ಬರೆದಿರುವ ಲೇಖನವನ್ನು ಆಧರಿಸಿ ಮುಂದಿನ ವಿಚಾರಗಳನ್ನು ಹೇಳಲಾಗಿದೆ.

ಹಿಂದೂ ನಂಬಿಕೆಯ ಪ್ರಕಾರ ನೈತಿಕವಾದುದರ ಮಾರ್ಗದರ್ಶಕ ಲಕ್ಷಣವೇನು? ಎಂಬುದರ ಕಲ್ಪನೆ ಉಂಟಾಗಬೇಕಾದರೆ ಒಂದು ಅಂಶವನ್ನು ಮೊದಲು ಗುರುತಿಸಬೇಕು. ಮೂರು ನೆಲೆಯಲ್ಲಿರುವ ಈ ಮಾರ್ಗದರ್ಶನವನ್ನು ಪ್ರತ್ಯೇಕವಾಗಿಯೇ ಅಂಗೀಕರಿಸಬೇಕು. (೧) ಸಹಜ ಪ್ರವೃತ್ತಿ ಮತ್ತು ಮೂಲಭೂತ ಅಗತ್ಯಗಳಿಂದಾಗಿ ಹುಟ್ಟಿರುವ ಮಾರ್ಗದರ್ಶನ, (೨) ಸಮಾಜವು ನಿಯಂತ್ರಿಸುವ ಪ್ರಮಾಣಗಳಿಂದಾದ ಮಾರ್ಗದರ್ಶನ, (೩) ವ್ಯಕ್ತಿಯ ಮನಸ್ಸಾಕ್ಷಿಗನುಗುಣವಾದ ಮಾರ್ಗದರ್ಶನ. ಮೊದಲ ನೆಲೆಯ ಮಾರ್ಗದರ್ಶನವನ್ನು ನೈತಿಕ ಮಾರ್ಗದರ್ಶನವೆಂದು ನಾವು ಕರೆಯುವುದಿಲ್ಲ. ಅದು ಅನೈತಿಕವಾದುದೂ ಅಲ್ಲ, ಅದು ನೀತಿಗೆ ಸಂಬಂಧಿಸದೇ ಇರುವುದು ಎನ್ನಬಹುದು. ಉದ್ದೇಶಗಳಲ್ಲಿ ನೀತಿಯಲ್ಲದ ಶಕ್ತಿಗಳಿಂದ ಅದನ್ನು ನಿರ್ಣಯಿಸಲಾಗುತ್ತದೆಯಾದರೂ ಫಲಿತಾಂಶದಲ್ಲಿ ಅದು ಬೆಲೆಯುಳ್ಳದ್ದಾಗಿದೆ. ಈ ಶಕ್ತಿಗಳು ದೈಹಿಕವಾದವು ಅಥವಾ ಸಾಮಾಜಿಕ ಅಥವಾ ಮಾನಸಿಕವಾದವುಗಳಾಗಿರುತ್ತವೆ. ಇವುಗಳಿಗೆ ಉದ್ದೇಶವಿರುತ್ತದೆ. ಹಸಿವೆಯನ್ನು ತೃಪ್ತಿಪಡಿಸುವುದು ಅಥವಾ ವೈರಿಯೊಬ್ಬನ ವಿರುದ್ಧ ಆಯುಧವನ್ನು ಸೃಷ್ಟಿಸುವುದು. ನಮ್ಮ ಭೌತಿಕ ಅಥವಾ ಸಹಜ ಪ್ರವೃತ್ತಿಗಳಿಂದ ಅದು ಮುಕ್ತಾಯವಾಗುತ್ತದೆ. ಎಲ್ಲಿಯವರೆಗೆ ಇದನ್ನು ಅನಿವಾರ್ಯ ಮುಕ್ತಾಯವೆಂದು ಒಪ್ಪಿಕೊಳ್ಳುವುದಿಲ್ಲವೋ ಅಲ್ಲಿಯವರೆಗೆ ಅದನ್ನು ಸರಿಯಾದ ಅರ್ಥದಲ್ಲಿ ನೈತಿಕವೆನ್ನಲಾಗುವುದಿಲ್ಲ ಮತ್ತು ಉಳಿದವುಗಳೊಡನೆ ಇದನ್ನು ಹೋಲಿಸಲೂ ಬೇಕಾಗುತ್ತದೆ. ಎರಡನೆಯ ಮಾರ್ಗದರ್ಶನವೆಂಬುದು ನಿಸ್ಸಂದೇಹವಾಗಿ ಸಾಮಾಜಿಕವಾದುದು. ಎಲ್ಲೆಲ್ಲಿ ಮಾನವ ಸಮೂಹಗಳು ವಾಸಿಸುತ್ತವೆಯೋ ಅಲ್ಲೆಲ್ಲ ಸಮೂಹಕ್ಕೆ ಸಾಮಾನ್ಯವಾದ ಕೆಲವು ನಿರ್ದಿಷ್ಟ ಜನಪದ ಮಾರ್ಗಗಳು ಕ್ರಿಯಾತ್ಮಕವಾಗಿ ಉಳಿದಿರುತ್ತವೆ. ಒಂದು ಸಮೂಹಕ್ಕೆ ಸಾಮಾನ್ಯವಾಗಿ ಒಪ್ಪಿತವಾದ ಕೆಲವು ಆಚರಣೆಗಳಿದ್ದು, ತಲೆಮಾರಿನಿಂದ ತಲೆಮಾರಿಗೆ ಅವು ವರ್ಗಾಯಿಸಲ್ಪಡುತ್ತವೆ. ಹೀಗೆ ಒಪ್ಪಿತವಾದ ಆಚರಣೆ ಅಥವಾ ನಡವಳಿಕೆಗಳನ್ನು ಸಮೂಹದ ನೀತಿಗಳೆಂದು ಭಾವಿಸಲಾಗುತ್ತದೆ. ಸಮೂಹದ ತೀರ್ಮಾನಗಳು ಅಲ್ಲಿ ಧ್ವನಿತವಾಗುವುದರಿಂದ ಅವುಗಳನ್ನು ಅನುಸರಿಸಲಾಗುತ್ತದೆ. ಸಮೂಹದ ಒಳಿತು ಅವುಗಳಲ್ಲಿ ಹುದುಗಿದೆಯೆಂದು ಪರಿಗಣಿಸಲಾಗುತ್ತದೆ. ಅವುಗಳನ್ನು ಅನುಸರಿಸುವುದು ವ್ಯಕ್ತಿಯೊಬ್ಬನ ಕರ್ತವ್ಯವಾಗಿದ್ದು ಅದಕ್ಕೆ ವಿರುದ್ಧವಾಗಿ ಯಾರಾದರೂ ವರ್ತಿಸಿದರೆ ಗುಂಪಿನ ಅಸಮ್ಮತಿಯನ್ನು ಅವನಿಗೆ ಸ್ಪಷ್ಟವಾಗಿ ತಿಳಿಸುತ್ತಾರೆ. ಈ ಮಾರ್ಗದರ್ಶನವನ್ನು ನೈತಿಕವಾದುದೆಂದು ಸ್ಪಷ್ಟವಾಗಿ ನಾವು ಕರೆಯುವಂತಿಲ್ಲ. ಏಕೆಂದರೆ ಸಮಾಜವು ಒಳ್ಳೆಯದೆಂದು ವಿಧಿಸಿರುವ ಪ್ರಮಾಣವೇ ಅದರ ಗುರಿಯಾಗುತ್ತದೆ. ಸಮಾಜದ ನೈತಿಕತೆಗೆ ಅಥವಾ ಮುಖ್ಯವಾದುದಕ್ಕೆ ಅದು ಅನುಸಾರವಾಗಿದೆಯಾದುದರಿಂದಲೇ ಅದು ನೀತಿಯ ಮಾರ್ಗದರ್ಶನವನ್ನು ಸೂಚಿಸುತ್ತದೆ. ರೂಢಿಬದ್ಧವಾದ ನೀತಿ ಎಂದು ಅದನ್ನು ಕರೆಯಬಹುದು. ಮೂರನೆಯ ನೆಲೆಯ ಮಾರ್ಗದರ್ಶನವೇ ನಿಜವಾದ ಮತ್ತು ಸಂಪೂರ್ಣವಾದ ನೀತಿಯಾಗಿದೆ. ವ್ಯಕ್ತಿಯು ಸ್ವತಃ ಯಾವುದು ಸರಿ ಎಂಬುದನ್ನು ನಿರ್ಧರಿಸಿ ಆಯ್ಕೆಯನ್ನು ಮಾಡಿಕೊಳ್ಳುವುದು ಮತ್ತು ಅದನ್ನು ಈಡೇರಿಸಿಕೊಳ್ಳಲು ಮನಃಪೂರ್ವಕವಾಗಿ ಬದ್ಧನಾಗುವುದರಿಂದಲೇ ಅದನ್ನು ಹೀಗೆ ಅರ್ಥವಿಸಬಹುದು. ಕೇವಲ ಅನಿವಾರ್ಯವಾದುದೆಂದು ಅವನು ಅದನ್ನು ಒಪ್ಪಿಕೊಳ್ಳುವುದಿಲ್ಲ ಅಥವಾ ಸಮಾಜವು ಅಂಗೀಕರಿಸಿದೆಯೆಂದು ಅನುಸರಿಸುವುದಿಲ್ಲ. ಅವನು ಅದರ ಮೌಲ್ಯಮಾಪನ ಮಾಡಿ ಅದರ ಫಲಿತಾಂಶವನ್ನು ಆಯ್ಕೆ ಮಾಡಿಕೊಳ್ಳುತ್ತಾನೆ ಮತ್ತು ಅದಕ್ಕೆ ವೈಯಕ್ತಿಕವಾಗಿ ಜವಾಬ್ದಾರನಾಗುತ್ತಾನೆ. ಅವನದು ಆತ್ಮಾರ್ಥ ನೈತಿಕತೆಯಾಗಿದೆ.

ಹಿಂದೂ ನೀತಿ ಕಲ್ಪನೆಯು ಇದರಲ್ಲಿ ಯಾವ ನೆಲೆಯಲ್ಲಿ ನಿಲ್ಲುತ್ತದೆ? ಮೂರನೆಯ ನೆಲೆಯಲ್ಲಿಯಂತೂ ಖಂಡಿತಾ ಅಲ್ಲ. ಇದರ ಅರ್ಥ ಹಿಂದುವೊಬ್ಬ ಸಾಮಾಜಿಕ ವ್ಯಕ್ತಿಯೇ ಹೊರತು ಅದರ ನಿಜವಾದ ಅರ್ಥದಲ್ಲಿ ನೀತಿ ಪರನಲ್ಲ. ಅವನು ಅನುಸರಿಸುವ ತತ್ವಗಳ ಫಲಿತಾಂಶಗಳ ಹೊಣೆಗಾರಿಕೆಯನ್ನು ಅವನು

ಒಪ್ಪಿಕೊಳ್ಳುವುದಿಲ್ಲ. ಸಮಾಜದ ಒಂದು ಸಾಧನವಾಗಿರಲು ಅವನು ಸಂತೋಷದಿಂದ ಒಪ್ಪಿಕೊಂಡಿದ್ದಾನೆ. ಮತ್ತು ಅದನ್ನು ಅನುಸರಿಸುವಲ್ಲಿ ಅವನಿಗೆ ತೃಪ್ತಿಯಿಂದೆ. ಭಿನ್ನಾಭಿಪ್ರಾಯವನ್ನು ಹೆದರಿಕೆಯಿಲ್ಲದೆ ವ್ಯಕ್ತಪಡಿಸುವ ಸ್ವಾತಂತ್ರ್ಯ ಅವನಿಗಿಲ್ಲ. ಪಾಪವನ್ನು ಕುರಿತು ಅವನ ನಂಬಿಕೆಗಳು ನೀತಿಗೆ ಸಂಬಂಧಿಸದೇ ಇರುವ ಅವನ ಗುಣಕ್ಕೆ ಬಹಳ ಒಳ್ಳೆಯ ನಿದರ್ಶನಗಳಾಗಿವೆ. ವೈಷ್ಣವ ಸಂಘಗಳು ಪಾಪಗಳ ಒಂದು ಪಟ್ಟಿಯನ್ನೇ ಕೊಟ್ಟಿದ್ದು ಅವುಗಳನ್ನು ಒಂಬತ್ತು ವಿಧವಾಗಿ ವಿಂಗಡಿಸಲಾಗಿದೆ:

೧. "ಘೋರಪಾಪಗಳು ಅತಿಪಾತಕಗಳು: ತಂದೆ–ಮಗಳು, ತಾಯಿ–ಮಗ, ಸೋದರ–ಸೋದರಿಯರ ಲೈಂಗಿಕ ಸಂಪರ್ಕಕ್ಕೆ ಸಂಬಂಧಿಸಿದ ಕೆಲವು ನಿಷೇಧಗಳು. ಸಜೀವ ದಹನದಿಂದಲೇ ಇದಕ್ಕೆ ಪ್ರಾಯಶ್ಚಿತ್ತ."

೨. "ಮಹಾಪಾಪಗಳು–ಮಹಾಪಾತಕಗಳು, ಇವುಗಳು ಹೀಗಿವೆ: ಬ್ರಾಹ್ಮಣನೊಬ್ಬನ ಕೊಲೆ, ಮಾದಕ ಪಾನೀಯಗಳ ಸೇವನೆ, ಬ್ರಾಹ್ಮಣನ ಚಿನ್ನವನ್ನು ಕದಿಯುವುದು, ಗುರುಪತ್ನಿಯೊಂದಿಗೆ ಸಂಬಂಧ ವಿರಿಸಿಕೊಳ್ಳುವುದು ಮತ್ತು ಇಂತಹ ಪಾಪಿಗಳೊಂದಿಗೆ ಸಾಮಾಜಿಕ ಸಂಬಂಧವಿರಿಸಿಕೊಳ್ಳುವುದು."

೩. "ಇದೇ ಮಾದರಿಯ ಚಿಕ್ಕ ಪುಟ್ಟ ಪಾಪಗಳು–ಅನುಪಾತಕಗಳು: ಕೆಲವು ವರ್ಗದ ಜನಗಳನ್ನು ಕೊಲ್ಲುವುದು, ಸುಳ್ಳು ಸಾಕ್ಷಿ ಹೇಳುವುದು, ಗೆಳೆಯನ ಕೊಲೆ, ಬ್ರಾಹ್ಮಣನ ಸಂಪತ್ತು ಅಥವಾ ಭೂಮಿಯನ್ನು ಕದಿಯುವುದು, ಕೆಲವು ಬಗೆಯ ವ್ಯಭಿಚಾರ ಮತ್ತು ಅಗಮ್ಯಗಮನಗಳು."

೪. "ಸಣ್ಣ ಪಾಪಗಳು–ಉಪಪಾತಕಗಳು: ಸುಳ್ಳು ಹೇಳಿಕೆ ನೀಡುವುದು, ಕೆಲವು ಧಾರ್ಮಿಕ ಕರ್ತವ್ಯಲೋಪ, ವ್ಯಭಿಚಾರ, ಕಾನೂನಿಗೆ ವಿರೋಧವಾದ ಕಸುಬುಗಳಲ್ಲಿ ತೊಡಗಿರುವುದು, ಅಣ್ಣನಿಗಿಂತ ಮುಂಚೆ ಮದುವೆ ಮಾಡಿಕೊಳ್ಳುವ ಅಪರಾಧ, ದೇವರ ಋಣವನ್ನು ತೀರಿಸದಿರುವುದು, ದೇವರನ್ನು ನಂಬದಿರುವುದು, ಇತ್ಯಾದಿ."

೫. "ಜಾತಿಭ್ರಷ್ಟತೆಗೆ ಕಾರಣವಾಗುವ ಪಾಪಗಳು (ಜಾತಿಭ್ರಂಶತೆ): ಬ್ರಾಹ್ಮಣನೊಬ್ಬನಿಗೆ ದೈಹಿಕ ಹಿಂಸೆ ಕೊಡುವುದು, ಮೂಸಿ ನೋಡಬಾರದ ವಸ್ತುಗಳನ್ನು ಮೂಸುವುದು, ಅಪ್ರಾಮಾಣಿಕ ವ್ಯವಹಾರಗಳು, ಕೆಲವು ಅಸಹಜ ಅಪರಾಧಗಳು."

೬. "ಮಿಶ್ರ ಜಾತಿಗೆ ತಳ್ಳುವ ಪಾಪಗಳು–ಸಂಕರೀಕರಣ: ಸಾಕುಪ್ರಾಣಿಗಳು ಅಥವಾ ಕಾಡುಪ್ರಾಣಿಗಳನ್ನು ಕೊಲ್ಲುವುದು."

೭. "ಭಿಕ್ಷೆಗೆ ಅನರ್ಹಗೊಳಿಸುವ ಪಾಪಗಳು – ಅಪಾತ್ರೀಕರಣ: ಅಪವಿತ್ರರ ಕೈಯಿಂದ ಉಡುಗೊರೆಗಳನ್ನು ಭಿಕ್ಷೆಯನ್ನು ಸ್ವೀಕರಿಸುವುದು, ವ್ಯಾಪಾರ, ಸಾಲ ಕೊಡುವುದು, ಸುಳ್ಳು ಹೇಳುವುದು, ಶೂದ್ರನನ್ನು ಸೇವಿಸುವುದು."

೮. "ಅಶುದ್ಧಗೊಳಿಸುವ ಪಾಪಗಳು (ಮಲವಹಃ): ಪಕ್ಷಿಗಳನ್ನು, ಕಪ್ಪೆ, ಆಮೆಯಂತಹ ಜಲಚರಗಳನ್ನು ಹುಳುಹುಪ್ಪಟೆಗಳನ್ನು ಕೊಲ್ಲುವುದು, ಜಾಕಾಯಿ ಅಥವಾ ಮತ್ತು ಬರಿಸುವ ಪಾನೀಯಗಳ ಪರಿಣಾಮವುಂಟುಮಾಡುವ ಸಸ್ಯಗಳನ್ನು ತಿನ್ನುವುದು."

೯. "ಉಳಿದ ಪಾಪಗಳು – ಪ್ರಕೀರ್ಣಕ: ಹಿಂದೆ ಉಲ್ಲೇಖಿಸದಿರುವ ಪಾಪಗಳು."

ಈ ಪಟ್ಟಿ ಸಂಪೂರ್ಣವಲ್ಲವಾದರೂ ಹಿಂದೂ ಪಾಪ ಕಲ್ಪನೆಯ ಒಂದು ನೋಟವನ್ನು ಒದಗಿಸುವಷ್ಟು ನಿದರ್ಶನಪೂರ್ವಕವಾಗಿದೆ ಮತ್ತು ಸಾಕಷ್ಟು ದೀರ್ಘವಾಗಿದೆ. ಮೊದಲನೆಯದಾಗಿ, ಅದು ನಿಯಮಿತ ಮಾರ್ಗದರ್ಶಕ ಮಾದರಿಗಳಿಂದ ಪತನಗೊಳ್ಳುವ ಮನುಷ್ಯನ ವಿವರಣೆಗಳನ್ನು ನೀಡುತ್ತದೆ. ಎರಡನೆಯದಾಗಿ,

ಅಪವಿತ್ರಗೊಳಿಸುವುದರ ಮೂಲಕ ಕಳಂಕ ಹಚ್ಚಲು ಅದು ಬಯಸುತ್ತದೆ. 'ಪಾತಕ' ಎಂಬ ಶಬ್ದದ ಮೂಲಾರ್ಥ ಅದು. ಪತನವೆಂದರೆ 'ಕೆಳಗೆ ಬೀಳುವುದು' ಎಂದರ್ಥ. ಅಶುದ್ಧವಾದುದೆಂದು ಪರಿಗಣಿಸುವುದು 'ಅಸ್ವಚ್ಛ' ವೆಂಬುದರ ಅರ್ಥ. ಎರಡೂ ಸಂದರ್ಭಗಳಲ್ಲಿ ಹಿಂದೂ ಅಭಿಪ್ರಾಯದಂತೆ ಪಾಪವೆಂಬುದು ಆತ್ಮಕ್ಕಂಟದ ರೋಗ. ಮೊದಲನೆಯದಾಗಿ, ಕೇವಲ ಬಹಿರಂಗವಾದ ನಿಯಮಗಳ ಉಲ್ಲಂಘನೆ ಎಂದೇ ಅದರ ಅರ್ಥ. ಮತ್ತೊಂದು ಅರ್ಥದಲ್ಲಿ, ದೇಹದ ಅಪವಿತ್ರತೆಯೆಂದು ಪರಿಗಣಿಸಲಾಗಿದೆ. ಪ್ರಾಯಶ್ಚಿತ್ತ ರೂಪದ ವ್ರತಾಚರಣೆಗಳಿಂದ ಅಥವಾ ಪುಣ್ಯಕ್ಷೇತ್ರಗಳ ಸಂದರ್ಶನದಿಂದ ದೇಹವು ಶುದ್ಧಗೊಳ್ಳಬೇಕಾಗುತ್ತದೆ. ದುಷ್ಟ ಆಲೋಚನೆ ಮತ್ತು ಉದ್ದೇಶಗಳನ್ನು ಹೊಂದಿರುವ ಆಧ್ಯಾತ್ಮಿಕ ಅಪವಿತ್ರತೆಗೆ ಅದು ಎಂದೂ ಸಂಬಂಧಿಸಿಲ್ಲವೆಂಬುದು ಇಲ್ಲಿ ಗಮನಾರ್ಹವಾಗಿದೆ.

ಹಿಂದೂ ನೀತಿ ಕಲ್ಪನೆಯು ಶುದ್ಧವಾಗಿ ಸಾಮಾಜಿಕವೆಂಬುದನ್ನೇ ಇದು ಎತ್ತಿ ತೋರಿಸುತ್ತದೆ. ಅವನ ನೈತಿಕ ನೆಲೆಯು ಶುದ್ಧವಾಗಿ ಪರಂಪರಾಗತವಾದುದು ಮತ್ತು ರೂಢಿಗತವಾದುದೆಂದೇ ಇದರ ಅರ್ಥ. ರೂಢಿಬದ್ಧ ನೀತಿ ಕಲ್ಪನೆಯಲ್ಲಿ ಎರಡು ಕೆಡಕುಗಳಿವೆ. ಮೊದಲನೆಯದಾಗಿ, ಯಾವಾಗಲೂ ಪ್ರಾಮಾಣಿಕವಾದ ಮತ್ತು ಪರಿಶುದ್ಧವಾದ ಉದ್ದೇಶದಿಂದಲೇ ಇದನ್ನು ಜಾರಿಗೊಳಿಸಲಾಗುವುದೆಂಬ ನಿಶ್ಚಯವೇನೂ ಇಲ್ಲ. ವ್ಯಕ್ತಿಯ ಉದ್ದೇಶ ಮತ್ತು ಸಂವೇದನೆಯ ಆಳದಲ್ಲಿ ನೀತಿಪ್ರಜ್ಞೆಯು ಜಾಗೃತವಾಗಿದ್ದಾಗಲೇ ಅವನ ನಡವಳಿಕೆಯಲ್ಲಿ ಆಡಂಬರದ ಪ್ರದರ್ಶನಕ್ಕೆ ಅವಕಾಶವಾಗುವುದಿಲ್ಲ. ಎರಡನೆಯದಾಗಿ, ರೂಢಿಬದ್ಧ ನೀತಿಯೆನ್ನುವುದು ಜಾರುಬಂಡಿಗೆ ಹಾಕುವ ತಡೆಯಂತಿರುತ್ತದೆ. ಸಾಮಾನ್ಯ ಮನುಷ್ಯನನ್ನು ಅದು ಒತ್ತಾಯದಿಂದ ಹಿಡಿದಿರುತ್ತದೆ. ಮುನ್ನುಗ್ಗಲು ಹೋಗುವುದನ್ನು ಹಿಂದಕ್ಕೆ ತಳ್ಳುತ್ತದೆ. ರೂಢಿಬದ್ಧ ನೀತಿಯೆಂಬುದು ಜಡ ನೀತಿಯ ಮತ್ತೊಂದು ಹೆಸರು. ಕೇವಲ ರೂಢಿಯಾಗಿ ಬಿಟ್ಟಿರುವ ನೀತಿಯು ಎಲ್ಲೆಲ್ಲಿ ಇರುತ್ತದೆಯೋ ಅಲ್ಲಿಗೆಲ್ಲಾ ಇದು ಅನ್ವಯಿಸುತ್ತದೆ. ಆದರೆ ಹಿಂದೂಗಳ ರೂಢಿಬದ್ಧ ನೀತಿಗೆ ಒಂದು ದುಷ್ಟ ಲಕ್ಷಣವಿದ್ದು ಅದೊಂದು ವೈಚಿತ್ರ್ಯದಂತಿದೆ. ರೂಢಿಬದ್ಧ ನೀತಿ ಎಂಬುದನ್ನು ಅಲ್ಲಿ ಗುಣವೆಂದು ತಿಳಿಯಲಾಗುತ್ತದೆ. ಉತ್ತಮ ಗುಣವೆಂಬುದು ಸಾಮಾನ್ಯವಾಗಿ ಒಳ್ಳೆಯದೆಂದು ಸಾರ್ವತ್ರಿಕ ದೃಷ್ಟಿಯಿಂದ ಹೇಳಬಹುದು. ಆದರೆ ಹಿಂದೂ ಧರ್ಮದಲ್ಲಿ ಉತ್ತಮ ಗುಣವೆಂಬುದು ಸಮಾಜದ ಒಳಿತಿಗೆ ಸಂಬಂಧಿಸಿಲ್ಲ ಅಥವಾ ದೇವತಾರಾಧನೆಗೆ ಸಂಬಂಧಿಸಿಲ್ಲ. ಹಿಂದೂ ಧರ್ಮದಲ್ಲಿ ಉತ್ತಮ ಗುಣವೆಂಬುದನ್ನು ಬ್ರಾಹ್ಮಣರಿಗೆ ನೀಡುವ ಗೌರವ ಮತ್ತು ದಕ್ಷಿಣೆ ಎಂದು ತಿಳಿಯಲಾಗಿದೆ. ಹಿಂದೂ ನೀತಿಶಾಸ್ತ್ರವೆಂದರೆ ಶ್ರೇಷ್ಠ ವ್ಯಕ್ತಿಯ ಆರಾಧನೆ. ಹಿಂದೂ ಧರ್ಮದ ತತ್ವಜ್ಞಾನವನ್ನು ಊಹಿಸಲು ಆಧಾರವಾಗಿ ಹಿಂದೂ ನೀತಿಶಾಸ್ತ್ರವನ್ನು ನಾನು ತೆಗೆದುಕೊಂಡರೆ ವ್ಯತ್ಯಾಸವೇನಾಗುತ್ತಿತ್ತು? ಹಿಂದೂ ಧರ್ಮದಲ್ಲಿ ಕಾನೂನಿಗೂ ಧರ್ಮಕ್ಕೂ ಹೇಗೆ ವ್ಯತ್ಯಾಸವಿಲ್ಲವೋ ಹಾಗೆಯೆ ಕಾನೂನಿಗೂ ನೀತಿಶಾಸ್ತ್ರಕ್ಕೂ ವ್ಯತ್ಯಾಸವಿಲ್ಲವೆಂಬುದನ್ನು ಹಿಂದೂ ಧರ್ಮದ ಬಹುಪಾಲು ಅಭ್ಯಾಸಿಗಳು ಮರೆಯುತ್ತಾರೆ. ಮೇಲುಜಾತಿಗಳ ಹಿತಾಸಕ್ತಿಗನುಗುಣವಾಗಿ ಕೆಳಜಾತಿಗಳ ವರ್ತನೆಯನ್ನು ನಿಬಂಧಿಸುವುದೇ ಎರಡರ ಏಕಮೇವ ಗುರಿಯಾಗಿದೆ.

ಉಪನಿಷತ್ತುಗಳನ್ನು ನಾನು ಪರಿಗಣಿಸಿಲ್ಲವಾದುದರಿಂದ ಹಿಂದೂ ಧರ್ಮದ ಹುಸಿ ಚಿತ್ರವನ್ನು ನೀಡಿರುವೆನೆಂದು ನನ್ನ ಬಗೆಗೆ ಆಕ್ಷೇಪಿಸಬಹುದಾಗಿದೆ. ಉಪನಿಷತ್ತುಗಳು ಹಿಂದೂ ತತ್ವಜ್ಞಾನದ ಮೂಲ ಸೆಲೆಗಳಾಗಿವೆ ಎನ್ನಬಹುದು.

ಉಪನಿಷತ್ತುಗಳನ್ನು ಪರಿಗಣಿಸಿಲ್ಲವೆಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ನಾನು ಹೀಗೆ ಮಾಡಲು ಕಾರಣವಿದೆ ಮತ್ತು ಅದು ಬಲವತ್ತರವಾದ ಕಾರಣವೇ ಆಗಿದೆ. ಹಿಂದೂ ಧರ್ಮದ ತತ್ವಜ್ಞಾನವು ಹಿಂದೂ ಮತೀಯ ತಾತ್ವಿಕತೆಯ ಒಂದು ಅಂಗವೆಂಬುದರ ಬಗೆಗೆ ನಾನು ಆಸಕ್ತನಾಗಿದ್ದೇನೆ. ಕೇವಲ ಹಿಂದೂ

ತತ್ವಜ್ಞಾನದ ಬಗೆಗೆ ನನಗೆ ಆಸಕ್ತಿಯಿಲ್ಲ. ಹಾಗೇನಾದರೂ ಇದ್ದರೆ ನಾನು ಉಪನಿಷತ್ತುಗಳನ್ನು ಪರಿಶೀಲಿಸುವ ಅಗತ್ಯವಿತ್ತು. ಆದರೆ ನಾನು ಅದನ್ನೂ ಚರ್ಚಿಸಲು ಸಿದ್ಧನಿದ್ದೇನೆ. ಹಿಂದೂ ಧರ್ಮದ ತತ್ವಜ್ಞಾನವೆಂಬುದು ಉಪನಿಷತ್ತಿನ ತತ್ವಜ್ಞಾನದಿಂದ ಬೇರೆಯಲ್ಲವೆಂಬುದನ್ನು ನಿಸ್ಸಂದೇಹವಾಗಿ ತೋರಿಸಲು ನಾನು ಒಪ್ಪುತ್ತೇನೆ.

ಉಪನಿಷತ್ತಿನ ತತ್ವಜ್ಞಾನವನ್ನು ಕೆಲವೇ ಮಾತುಗಳಲ್ಲಿ ಸಂಗ್ರಹಿಸಲು ಸಾಧ್ಯವಿದೆ. ಉಪನಿಷತ್ತು ಅಂಗೀಕರಿಸಿರುವ ತಾತ್ವಿಕತೆಯನ್ನು ಹಕ್ಸಲೆಯವರು[೧] ಬಹಳ ಚೆನ್ನಾಗಿ ವಿವರಿಸಿದ್ದಾರೆ.

> "ಒಂದು ಶಾಶ್ವತವಾದ ಸತ್ಯದ ಅಸ್ತಿತ್ವವನ್ನು ಅಥವಾ ಇಂದ್ರಿಯಗೋಚರ ಲಕ್ಷಣಗಳ ಆಳದಲ್ಲಿರುವ ಒಂದು ಶಕ್ತಿಯ ಅಸ್ತಿತ್ವವನ್ನು ಪರಿಭಾವಿಸಬಹುದು. ಇದರಂತೆ ಸಮಗ್ರ ವಿಶ್ವದ ಆಧಾರವು 'ಬ್ರಹ್ಮ' ಮತ್ತು ವ್ಯಕ್ತಿಯ ಮೂಲವು ಆತ್ಮವೆಂದು ತಿಳಿಯಲಾಗುತ್ತದೆ. 'ಬ್ರಹ್ಮ'ದಿಂದ ಆತ್ಮವನ್ನು ಪ್ರತ್ಯೇಕಿಸಲಾಗಿದೆ. ಬದುಕಿನ ಭ್ರಾಂತಿಕಾರಕ ಸಂಗತಿಗಳಾದ ಭಾವನೆಗಳು, ಆಲೋಚನೆ, ಸುಖ ದುಃಖಗಳ ಸಂವೇದನೆಗಳನ್ನು ನಿಲ್ಲಿಸಿದಾಗ ಹೀಗೆ ಬೇರ್ಪಟ್ಟ ಸ್ಥಿತಿಯನ್ನು ಪರಿಭಾವಿಸಲು ಸಾಧ್ಯ. ಅಜ್ಞಾನಿಗಳು ಮಾಯಾ ಪ್ರಪಂಚವನ್ನೇ ಸತ್ಯವೆಂದು ಭ್ರಮಿಸುತ್ತಾರೆ. ಆದುದರಿಂದ ಅವರ ಆತ್ಮವು ಮೋಹಕಪಾಶದಿಂದ ಬಂಧಿಸಲ್ಪಡುತ್ತದೆ. ದುಃಖದ ಕೋಟಲೆಗಳಿಗೆ ತುತ್ತಾಗಿ ಆಸೆಯ ಸಂಕೋಲೆಗಳಿಂದ ಬಂಧಿತರಾಗುತ್ತಾರೆ."

ಉಪನಿಷತ್ತಿನ ಈ ತತ್ವಜ್ಞಾನದಿಂದ ಏನು ಪ್ರಯೋಜನವಿದೆ? ಉಪನಿಷತ್ತಿನ ತತ್ವಜ್ಞಾನವೆಂದರೆ ಅಸ್ತಿತ್ವಕ್ಕಾಗಿ ನಡೆಸುವ ಹೋರಾಟದಿಂದ ಹಿಂದೆಗೆಯುವುದು ಮತ್ತು ಆಸೆಗಳನ್ನೆಲ್ಲಾ ಗೆದ್ದು ಸನ್ಯಾಸ ತೆಗೆದುಕೊಂಡು ವ್ಯಕ್ತಿ ವಿನಾಶ ಮಾಡಿಕೊಳ್ಳುವುದಾಗಿದೆ. ಬದುಕಿನ ಒಂದು ವಿಧಾನವಾಗಿ ಹಕ್ಸಲೆಯವರು ಅದನ್ನು ತೀವ್ರವಾಗಿ ಖಂಡಿಸಿದ್ದಾರೆ.[೨] ಇಂಡಿಯಾ ದೇಶದ ವಿರಕ್ತ ಸನ್ಯಾಸದಂತೆ ಸಂಪೂರ್ಣ ದೇಹದಂಡನೆಯ ಪ್ರಯತ್ನ ಹಿಂದೆ ಎಂದೂ ಎಲ್ಲಿಯೂ ನಡೆದಿಲ್ಲ. ಮುಂದಿನ ಕಾಲದಲ್ಲಿಯೂ ಯಾವ ಮತೀಯ ಪದ್ಧತಿಗಳೂ ಮನುಷ್ಯರ ಮನಸ್ಸನ್ನು ಇಷ್ಟು ದಟ್ಟವಾಗಿ ಮಬ್ಬುಗೊಳಿಸಿರಲಿಲ್ಲ. ಪವಿತ್ರವೆಂಬಂತೆ ಅದನ್ನು ಒಪ್ಪಿಕೊಳ್ಳಲಾಗಿದೆ ಯಾದರೂ ದಿಗ್ಭ್ರಮೆ ಹಿಡಿಸುವ ತಿಳಿಗೇಡಿತನದಂತೆ ಕಾಣುವುದೂ ಉಂಟು.

ಆದರೆ ಲಾಲಾ ಹರದಯಾಲ್[೩]ರವರ ಉಪನಿಷತ್ ಬಗೆಗಿನ ಧಿಕ್ಕಾರದೊಡನೆ ಹೋಲಿಸಲು ಯಾವ ಖಂಡನೆಗಳೂ ಸಿಗುವುದಿಲ್ಲ.

"ಎಲ್ಲರಿಗೂ ಯಾವುದು ಗೊತ್ತಿರುವುದೋ ಅದರ ಮೂಲಕವೇ ಉಪನಿಷತ್ತುಗಳು ನಿರೂಪಿಸುತ್ತವೆಯೆಂದು ಹೇಳುತ್ತಾರೆ. ಈ ಪರಿಪೂರ್ಣತೆಯ ಹಂಬಲವೇ ಇಂಡಿಯಾ ದೇಶದ ಎಲ್ಲ ಬಗೆಯ ಸೋಗಿನ ಅನುಭಾವಗಳ ತಳಹದಿಯೆನ್ನಬಹುದು. ಎಲ್ಲ ವ್ಯಾಖ್ಯಾನಗಳೂ, ಅಸಂಬದ್ಧ ತೋರಿಕೆಗಳು, ಭ್ರಮೆಗಳು ಮತ್ತು ಗೊಂದಲಮಯ ಊಹೆಗಳಿಂದ ತುಂಬಿವೆ. ಅವುಗಳಿಗೆ ಬೆಲೆಯಿಲ್ಲವೆಂಬುದನ್ನು ನಾವಿನ್ನೂ ಕಲಿತಿಲ್ಲ. ಹಳೆಯ ರಾಡಿಯಲ್ಲೇ ನಾವು ಮುಂದುವರಿಯುತ್ತಿದ್ದೇವೆ. ಯೂರೋಪಿನ ಸಾಮಾಜಿಕ ಚಿಂತನೆಗಳನ್ನು ಹೇಳುವ ಮಹಾನ್ ಕೃತಿಗಳನ್ನು ಅನುವಾದಿಸುವುದನ್ನು ಬಿಟ್ಟು ನಮ್ಮ ಪ್ರಾಚೀನ ಗ್ರಂಥಗಳನ್ನು ಸಂಪಾದಿಸುವುದು ಮತ್ತು ಪುನರ್ ಸಂಪಾದಿಸುವ ಕೆಲಸವನ್ನೇ ಮಾಡುತ್ತಿದ್ದೇವೆ. ಫ್ರೆಡರಿಕ್ ಹ್ಯಾರಿಸನ್, ಬ್ರ್ಯುಯೆಕ್ಸ್ ಬೆಬೆಲ್,

---

೧. 'ಎವಲ್ಯೂಷನ್ ಅಂಡ್ ಎಥಿಕ್ಸ್', ಪುಟ ೬೩
೨. 'ಎವಲ್ಯೂಷನ್ ಅಂಡ್ ಎಥಿಕ್ಸ್' ಪು. ೬೪
೩. 'ಮಾಡರ್ನ್ ರಿವ್ಯೂ', ಜುಲೈ ೧೯೧೨.

ಅವಾತೊಲೆ ಫ್ರಾನ್ಸ್, ಹಾರ್ವೆ, ಹೆಗೆಲ್, ಗಿಡ್ಡಿಂಗ್ಸ್ ಮತ್ತು ಮಾರ್ಷೆಲ್‌ರಂತಹವರು ತಮ್ಮ ಸಮಯವನ್ನೆಲ್ಲಾ ಹಿಂದಿನವರ ವ್ಯಾಖ್ಯಾನಕ್ಕೆ ಮತ್ತು ಗುಣಾವಗುಣಗಳ ನಿಷ್ಕರ್ಷೆಗೆ ಮೀಸಲಿರಿಸಿದ್ದರೆ ಯೂರೋಪ್ ಗತಿ ಏನಾಗುತ್ತಿತ್ತು? ಜೀರ್ಣವಾದ ಪ್ರಾಚೀನ ವಿಚಾರಗಳಲ್ಲೇ ವಿದ್ವಾಂಸರಾಗ ಬಯಸುವ ಹುಚ್ಚು ಇಂಡಿಯಾ ದೇಶದ ಪಂಡಿತರಿಗೆ ತಗುಲಿಕೊಂಡುಬಿಟ್ಟಿದೆ. ಆದುದರಿಂದಲೇ ಪ್ರಗತಿಪರವಾದ ವ್ಯಕ್ತಿಗಳಿಂದ ಸ್ಥಾಪಿತವಾದ ಸಂಸ್ಥೆಯೂ ನಮ್ಮ ಯುವಕರನ್ನು ಸಂಸ್ಕೃತ ವ್ಯಾಕರಣವನ್ನು ಕಲಿಯಲು ಉತ್ತೇಜಿಸುತ್ತದೆ. ಸಂಸ್ಕೃತ ವ್ಯಾಕರಣದಿಂದ ವೇದಗಳಿಗೆ ಮತ್ತು ಅದರ ಮೂಲಕ ಷಡ್ದರ್ಶನಗಳಿಗೆ ಅವರ ಪಯಣ ಮುಂದುವರಿಯುತ್ತದೆ. ವಿವೇಕದತ್ತ ಎಂತಹ ಹುಸಿ ಮಾರ್ಗದರ್ಶನ! ಸಿಹಿ ನೀರನ್ನು ಹುಡುಕುತ್ತಾ ಮೃತ ಸಾಗರದ ದಂಡೆಗೆ ಮರುಳುಗಾಡಿನ ಮೂಲಕ ದೀರ್ಘ ಪ್ರಯಾಣ ಮಾಡಿದಂತಿದೆ ಈ ಪ್ರಯತ್ನ. ಭಾರತದ ಯುವಕರೇ, ಹಳಸಲು ಬೂಸಾದಂತಿರುವ ನಿಮ್ಮ ಅನುಭಾವಿ ವ್ಯಾಖ್ಯಾನಗಳಲ್ಲಿ ವಿವೇಕವನ್ನು ಹುಡುಕಬೇಡಿ. ಕೊನೆಯಿರುವ ಗೋಳಾಕಾರದ ಶಾಬ್ದಿಕ ಗೊಂದಲಗಳನ್ನು ಬಿಟ್ಟರೆ ಮತ್ತೇನೂ ಅಲ್ಲಿಲ್ಲ. ಜೀವನವನ್ನು ಮತ್ತದರ ಸಂಕೀರ್ಣ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳುವ ಆಸೆಯಿದ್ದರೆ ರೂಸೊ, ವಾಲ್ಟೇರ್, ಪ್ಲೇಟೊ ಮತ್ತು ಅರಿಸ್ಟಾಟಲ್, ಹ್ಯಾವೆಲ್ ಮತ್ತು ಸ್ಪೆನ್ಸರ್, ಮಾರ್ಕ್ಸ್ ಮತ್ತು ಟಾಲ್‌ಸ್ಟಾಯ್, ರಸ್ಕಿನ್ ಮತ್ತು ಕಾಂಟ್ ಮುಂತಾದ ಯೂರೋಪಿಯನ್ ಚಿಂತಕರ ಕೃತಿಗಳನ್ನು ಓದಿ."

ಈ ಧಿಕ್ಕಾರವನ್ನು ಒತ್ತಟ್ಟಿಗಿಟ್ಟು ಹಿಂದೂ ಧರ್ಮದ ಸಾಮಾಜಿಕ ರಾಜಕೀಯ ವ್ಯವಸ್ಥೆಯ ಮೇಲೆ ಉಪನಿಷತ್ತುಗಳು ಏನಾದರು ಪ್ರಭಾವ ಬೀರಿವೆಯೇ ಎಂಬುದನ್ನು ಕುರಿತು ಆಲೋಚಿಸಬಹುದು. ಹಿಂದೂಗಳ ನೈತಿಕ ಅಥವಾ ಸಾಮಾಜಿಕ ವ್ಯವಸ್ಥೆಯ ಮೇಲೆ ಕಿಂಚಿತ್ತೂ ಪರಿಣಾಮ ಬೀರದ ನಿಷ್ಕ್ರಿಯವಾದ ಅಪ್ರಯೋಜಕ ಊಹೆಗಳ ಒಂದು ಮೊತ್ತವೆಂದು ನಿಸ್ಸಂದೇಹವಾಗಿ ಉಪನಿಷತ್ತುಗಳನ್ನು ಕರೆಯಬಹುದು.

ದುರದೃಷ್ಟಕರವಾದ ಈ ಫಲಿತಾಂಶಕ್ಕೆ ಕಾರಣಗಳನ್ನು ಹುಡುಕುವುದು ಇಲ್ಲಿ ನಮಗೆ ಅಪ್ರಸ್ತುತವಾಗುವುದಿಲ್ಲ. ಉಪನಿಷತ್ತಿನ ತತ್ವಜ್ಞಾನವು ಪೂರ್ತಿಯಾಗದೆ ಉಳಿಯಿತಾದುದರಿಂದ ಅದರಿಂದ ಪಡೆಯಬಹುದಾಗಿದ್ದ ಫಲವನ್ನು ನೀಡಲಿಲ್ಲ. ಉಪನಿಷತ್ತಿನ ತಿರುಳು ಯಾವುದೆಂದು ಕೇಳಿದರೆ ಇದು ಸ್ಪಷ್ಟವಾಗುತ್ತದೆ. ಪ್ರೊ. ಮ್ಯಾಕ್ಸ್‌ಮುಲ್ಲರ್‌ರವರ ಮಾತಿನಲ್ಲಿಯೇ ಹೇಳುವುದಾದರೆ "ಉಪನಿಷತ್ತಿನ ಸಾರವತ್ತಾದ ಸಂದೇಶವೆಂದರೆ" "ನಿನ್ನನ್ನು ನೀನು ತಿಳಿಯುವುದು." ಅಂದರೆ, ನಿನ್ನ ನಿಜಸ್ವರೂಪವನ್ನು ತಿಳಿದುಕೊಳ್ಳುವುದು. ನಿನ್ನ ಅಹಂಕಾರದೊಳಗೆ ಹುದುಗಿರುವ ನಿಜದ ಸ್ವರೂಪವನ್ನು ತಿಳಿಯುವುದು ಮತ್ತು ಶ್ರೇಷ್ಠ ನೆಲೆಯಲ್ಲಿ ಅದನ್ನು ಶೋಧಿಸುವುದು. ಇಡಿ ವಿಶ್ವವನ್ನು ಆವರಿಸಿರುವ ಅದ್ವಿತೀಯವಾದುದನ್ನು ಕಂಡುಕೊಳ್ಳುವುದು."

ಆತ್ಮ ಮತ್ತು ಬ್ರಹ್ಮ ಎರಡೂ ಒಂದೇ ಎಂಬುದು ಸತ್ಯ. ಈ ಮಹಾ ಸತ್ಯವನ್ನು ತಾವೇ ಕಂಡುಹಿಡಿದಿರುವುದಾಗಿ ಉಪನಿಷತ್ತುಗಳು ಸಾರಿದವು. ಮನುಷ್ಯರು ಈ ಸತ್ಯವನ್ನು ಅರಿಯಬೇಕೆಂದು ಹೇಳಿದವು. ಉಪನಿಷತ್ತಿನ ತಾತ್ವಿಕತೆಯು ಪರಿಣಾಮಕಾರಿಯಾಗದೇ ಉಳಿಯಲು ಬಹಳ ಕಾರಣಗಳಿವೆ. ಬೇರೊಂದೆಡೆ ನಾನು ಅವುಗಳನ್ನು ಚರ್ಚಿಸುತ್ತೇನೆ. ಇಲ್ಲಿ ಒಂದೇ ಒಂದು ಕಾರಣವನ್ನು ಉಲ್ಲೇಖಿಸುತ್ತೇನೆ. ಸತ್ಯವನ್ನು ತಿಳಿದರೆ ಮಾತ್ರ ಸಾಲದು, ಸತ್ಯವನ್ನು ಪ್ರೀತಿಸುವುದನ್ನೂ ಕಲಿಯಬೇಕೆಂಬುದು ಉಪನಿಷತ್ತಿನ ತತ್ವಜ್ಞಾನಿಗಳಿಗೆ ಗೋಚರಿಸಲಿಲ್ಲ. ತತ್ವಜ್ಞಾನ ಮತ್ತು ಧರ್ಮದ ವ್ಯತ್ಯಾಸವನ್ನು ಎರಡು ಬಗೆಯಾಗಿ ಗುರುತಿಸಬಹುದು. ಸತ್ಯವನ್ನು ಅರಿಯುವುದು ತತ್ವಜ್ಞಾನದ ಉದ್ದೇಶವಾದರೆ, ಸತ್ಯವನ್ನು ಪ್ರೀತಿಸುವುದು ಧರ್ಮದ ಕೆಲಸ. ತತ್ವಜ್ಞಾನವು ಸ್ಥಿರವಾದುದು. ಧರ್ಮವು ಚಲನಶೀಲವಾದುದು. ತತ್ವಜ್ಞಾನವು ಸ್ಥಿರವೇಕೆಂದರೆ, ಸತ್ಯದ ಅರಿವನ್ನು ಕುರಿತು ಮಾತ್ರ ಅದಕ್ಕೆ ಆಸಕ್ತಿ. ಧರ್ಮವು ಚಲನಾತ್ಮಕವಾದುದೇಕೆಂದರೆ ಸತ್ಯವನ್ನು

ಪ್ರೀತಿಸುವುದರಲ್ಲಿ ಅದಕ್ಕೆ ಆಸಕ್ತಿ. ಈ ಬಗೆಗೆ ಮ್ಯಾಕ್ಸ್ ಪ್ಲೋಮನ್ ಬಹಳ ಚೆನ್ನಾಗಿ ಹೇಳಿದ್ದಾರೆ.[೧]

> "ಧರ್ಮವು ಚಲನಶೀಲವಾಗಿದ್ದು ನಮ್ಮಲ್ಲಿ ಪ್ರೇಮದ ಭಾವನೆಗಳನ್ನು ಹುಟ್ಟಿಸದಿದ್ದರೆ ಅಂತಹ ಧರ್ಮವು ಇಲ್ಲದಿರುವುದೇ ಮೇಲು. ಧರ್ಮವು ಸತ್ಯದ ಗ್ರಹಿಕೆಯಾಗಿದ್ದು ನಮ್ಮ ಸತ್ಯದ ಗ್ರಹಿಕೆಗೆ ಅದರ ಕುರಿತು ಪ್ರೀತಿಯಿಲ್ಲದಿದ್ದರೆ ಅದನ್ನು ಕಾಣುವುದೇ ಬೇಡ. ದ್ವೇಷಿಸುವುದಕ್ಕಾಗಿಯೇ ಸತ್ಯವನ್ನು ಕಾಣುವವನು ಸ್ವತಃ ಸೈತಾನನೇ ಇರಬೇಕು. ಟೆನಿಸನ್ ಹೇಳುತ್ತಾನೆ 'ಅತ್ಯಂತ ಶ್ರೇಷ್ಠವಾದುದನ್ನು ಕಂಡಾಗ ಅದನ್ನು ನಾವು ಪ್ರೀತಿಸಲೇಬೇಕು.' ಅದನ್ನು ಅನುಸರಿಸಬೇಕಿಲ್ಲ. ಶುದ್ಧವಾಗಿ ವಸ್ತುನಿಷ್ಠವಾಗಿ ನೋಡಿದರೆ ಶ್ರೇಷ್ಠವಾದುದು ಅದರ ದೂರದ ಅಂತರದಿಂದಾಗಿ ಅಂಗೀಕಾರಾರ್ಹವಾಗುವುದಿಲ್ಲ. ದೂರವಾದಷ್ಟೂ ಭಯ. ಯಾವುದಕ್ಕೆ ಭಯಪಡುತ್ತೇವೆಯೋ ಅದನ್ನು ದ್ವೇಷಿಸುತ್ತೇವೆ....."

ಅನುಭವಾತೀತ ತತ್ವಜ್ಞಾನವೆಲ್ಲವುಗಳ ಹಣೆಯ ಬರೆಹವೇ ಹೀಗೆ. ಬದುಕಿನ ರೀತಿನೀತಿಗಳ ಮೇಲೆ ಅವುಗಳ ಪ್ರಭಾವವಿಲ್ಲ. ಬ್ಲೇಕ್ ಹೇಳಿರುವಂತೆ "ಧರ್ಮವೆನ್ನುವುದು ರಾಜಕಾರಣ. ರಾಜಕಾರಣವೆನ್ನುವುದು ಭ್ರಾತೃತ್ವ. ತತ್ವಜ್ಞಾನವು ಧರ್ಮವಾಗಬೇಕು. ಅಂದರೆ ಕಾರ್ಯರೂಪಕ್ಕೆ ಅಳವಡಿಸಬಲ್ಲ ನೀತಿಯಾಗಬೇಕು. ಅದು ಕೇವಲ ಅನುಭವವಾಗಿ ಉಳಿಯಬಾರದು." ಶ್ರೀ ಪ್ರೋಮನ್ ಹೇಳಿರುವಂತೆ "ಧರ್ಮವು ಕೇವಲ ಅನುಭಾವವಾಗಿದ್ದರೆ ಸಾಮಾನ್ಯನಿಗೂ ದೀನದರಿದ್ರನಿಗೂ ಅದಕ್ಕೂ ಏನೂ ಸಂಬಂಧವಿಲ್ಲ." ಅದನ್ನು ಸಂಪೂರ್ಣ ಅನುಭಾವದ ಚೌಕಟ್ಟಿನಲ್ಲಿರಿಸುವುದೆಂದರೆ ಅರ್ಥಹೀನಗೊಳಿಸುವುದೆಂದೇ ಹೇಳಬಹುದು. ರಾಜಕಾರಣದ ಮೇಲೆ ಸತ್ವಪೂರ್ಣವಾದ ನೇರ ಪರಿಣಾಮ ಬೀರದ ಒಂದು ಆದರ್ಶವಾಗಿ ಧರ್ಮವನ್ನು ನಂಬುವುದೆಂದರೆ ಅಂತಿಮವಾಗಿ ಮೂರ್ಖತನದ ನಂಬಿಕೆಯೇ ಆದೀತು. ಏಕೆಂದರೆ ಪರಿಣಾಮಕಾರಿ ಅರ್ಥದಲ್ಲಿ ಅಂತಹ ನಂಬಿಕೆಗೆ ಯಾವ ತಾರತಮ್ಯವೂ ಇರುವುದಿಲ್ಲ. ಅಸ್ತಿತ್ವವೇ ಇಲ್ಲ. ಈ ಕಾರಣಗಳಿಂದಾಗಿಯೇ ಉಪನಿಷತ್ತಿನ ತತ್ವಜ್ಞಾನವು ಪರಿಣಾಮಕಾರಿಯಲ್ಲವೆಂದು ಸಿದ್ಧವಾಯಿತು.

ಆದುದರಿಂದ ಹಿಂದೂ ನೀತಿ ನಿಯಮಾವಳಿಗಳೇನಿದ್ದರೂ ಉಪನಿಷತ್ತುಗಳ ತತ್ವಜ್ಞಾನವೇನಿದ್ದರೂ, ಮನು ಪ್ರತಿಪಾದಿಸಿದ ಹಿಂದೂ ಧರ್ಮದ ತಾರತಮ್ಯವು ಕಿಂಚಿತ್ತೂ ಕಡಿಮೆಯಾಗಲಿಲ್ಲ. ಧರ್ಮದ ಹೆಸರಿನಲ್ಲಿ ಮನು ಉಪದೇಶಿಸಿದ ಅನ್ಯಾಯಗಳನ್ನು ಅಳಿಸಿಹಾಕುವಲ್ಲಿ ಅವು ಪರಿಣಾಮಕಾರಿಯಾಗದೆ ಶಕ್ತಿಹೀನವಾಗಿದೆ. ಅವುಗಳ ಅಸ್ತಿತ್ವವೇನಿದ್ದರೂ ಖಂಡಿತವಾಗಿ ಹೇಳಬಹುದಾದ ವಿಚಾರವಿದು: "ಹಿಂದೂ ಧರ್ಮವೇ! ನಿನ್ನ ಹೆಸರೇ ಅಸಮಾನತೆ."

## VI

ಅಸಮಾನತೆಯೇ ಹಿಂದೂ ಧರ್ಮದ ಆತ್ಮ. ಹಿಂದೂ ಧರ್ಮದ ನೈತಿಕತೆಯೆಂಬುದು ಕೇವಲ ಸಾಮಾಜಿಕವಾದುದು. ಅದು ನೀತಿ ಮತ್ತು ಮಾನವತೆಯ ವಿವಕ್ಷೆಯಿಂದ ಹೊರಗುಳಿದಿದೆ ಎಂದರೆ ತೀರಾ ಕಡಿಮೆ ಹೇಳಿದಂತಾದೀತು. ಇಂತಹುದು ಬಹು ಬೇಗ ಅನೀತಿಯುತವೂ, ಅಮಾನುಷವೂ, ಕಳಂಕಕಾರಿಯೂ ಆಗುತ್ತದೆ. ಹಿಂದೂ ಧರ್ಮಕ್ಕೆ ಒದಗಿರುವ ಗತಿ ಇದು. ಈ ಮಾತನ್ನು ಸಂದೇಹಿಸುವವರು ಅಥವಾ ನಿರಾಕರಿಸುವವರು ಹಿಂದೂ ಸಮಾಜದ ರಚನೆಯನ್ನು ಮತ್ತು ಅಲ್ಲಿನ ಕೆಲವು ಸ್ಥಿತಿಗಳನ್ನು ಪರೀಕ್ಷಿಸಬಹುದಾಗಿದೆ.

---

೧. 'ಹಿಬ್ಬರ್ಟ್ ಲೆಕ್ಚರ್ಸ್', ೧೮೭೮, ಪು. ೩೧೭.

ಕೆಳಗಿನ ನಿದರ್ಶನಗಳನ್ನೇ ತೆಗೆದುಕೊಳ್ಳೋಣ:

ಆದಿಮ ಬುಡಕಟ್ಟುಗಳಿಂದ ಮೊದಲಾಗಲಿ ಅವುಗಳ ನಾಗರಿಕತೆಯ ನೆಲೆ ಯಾವ ಮಟ್ಟದಲ್ಲಿದೆ? ಮಾನವ ಜನಾಂಗದ ಒಟ್ಟಾರೆ ನಾಗರಿಕತೆಯ ಕಿರಾತಾವಸ್ಥೆಯಿಂದ ಅನಾಗರಿಕತೆಗೆ ಮತ್ತು ಅನಾಗರಿಕತೆಯಿಂದ ನಾಗರಿಕತೆಗೆ ಪ್ರಗತಿ ಹೊಂದಿದ ಇತಿಹಾಸವಾಗಿದೆ. ಒಂದು ಸ್ಥಿತಿಯಿಂದ ಮತ್ತೊಂದು ಸ್ಥಿತಿಗೆ ಪರಿವರ್ತನೆ ಹೊಂದಿದ ಘಟ್ಟಗಳೆಲ್ಲಾ ಯಾವುದಾದರೊಂದು ಶ್ರೇಷ್ಠ ನಿರ್ಮಾಣದ ಅಥವಾ ಜ್ಞಾನದ ಯಾವುದಾದರೊಂದು ಶಾಖೆಯಲ್ಲಿ ನಡೆದ ಶೋಧನೆಗೆ ಹೆಸರಾಗಿವೆ. ಪರಿಣಾಮವಾಗಿ ಮಾನವನು ಪ್ರಗತಿಪಥದಲ್ಲಿ ಮುನ್ನಡೆದಿದ್ದಾನೆ.

ಮಾನವನ ಪ್ರಗತಿಯ ದೃಷ್ಟಿಯಿಂದ ವಿಚಾರಿಸಿದರೆ ಭಾಷೆಯನ್ನು ಅವನು ರೂಢಿಸಿದ ಘಟ್ಟವು ಒಂದು ಮುಖ್ಯವಾದ ಹಂತವಾಗುತ್ತದೆ. ಆಗ ಮೃಗದಿಂದ ಮನುಷ್ಯ ಬೇರ್ಪಟ್ಟ ಕಿರಾತಾವಸ್ಥೆಯ ಪ್ರಥಮ ಘಟ್ಟವೆಂದು ಅದನ್ನು ಗುರುತಿಸಬಹುದು. ಬೆಂಕಿಯ ಬಳಕೆ ಮತ್ತು ಉತ್ಪಾದನೆಯ ಜ್ಞಾನವನ್ನು ಪಡೆಯುವುದರೊಂದಿಗೆ ಕಿರಾತಾವಸ್ಥೆಯ ಮಧ್ಯಮ ಘಟ್ಟ ಆರಂಭವಾಗುತ್ತದೆ. ಅದ್ಭುತವಾದ ಈ ಸಂಶೋಧನೆಯಿಂದಾಗಿ ಮನುಷ್ಯನು ತನ್ನ ಅಭ್ಯಾಸಗಳನ್ನು ಅನಂತವಾಗಿ ವಿಸ್ತರಿಸಿಕೊಳ್ಳಲು ಸಾಧ್ಯವಾಯಿತು. ಅವನು ತನ್ನ ಅರಣ್ಯ ನಿವಾಸವನ್ನು ಬಿಟ್ಟು ಬೇರೆ ಬೇರೆ ಜಾಗಗಳಿಗೆ ಚಳಿ ಪ್ರದೇಶಗಳಿಗೆ ವಲಸೆ ಹೋಗಲು ಸಾಧ್ಯವಾಯಿತು. ಮೀನು ಮತ್ತು ಮಾಂಸಗಳನ್ನು ಸೇರಿಸಿಕೊಂಡು ಅವನ ಆಹಾರದ ಸರಬರಾಜನ್ನು ಹೆಚ್ಚಿಸಿಕೊಳ್ಳಲು ಸಾಧ್ಯವಾಯಿತು. ಮುಂದೆ ಅವನು ಕಂಡುಹಿಡಿದ ಸಂಗತಿಯೆಂದರೆ ಬಿಲ್ಲು ಮತ್ತು ಬಾಣ. ಆದಿಮಾನವನ ಮಹೋನ್ನತ ಸಾಧನೆಯಿದೆಂದು ಹೇಳಬಹುದು. ಕಿರಾತಾವಸ್ಥೆಯ ಶ್ರೇಷ್ಠಮಟ್ಟವಿದೆಂದು ಗುರುತಿಸಬಹುದು. ಅದೊಂದು ಅದ್ಭುತ ಆಯುಧ. ಈ ಆಯುಧವನ್ನು ಹೊಂದಿದ್ದವನು ಕ್ಷಿಪ್ರ ಗತಿಯಲ್ಲಿ ಪ್ರಾಣಿಗಳನ್ನು ಬೇಟೆಯಾಡಬಹುದಿತ್ತು ಮತ್ತು ಕ್ರೂರ ಮೃಗಗಳಿಂದ ತನ್ನನ್ನು ರಕ್ಷಿಸಿಕೊಳ್ಳಬಹುದಿತ್ತು.

ಕಿರಾತಾವಸ್ಥೆಯಿಂದ ಅನಾಗರಿಕ ಸ್ಥಿತಿಗೆ ಪರಿವರ್ತನೆಯಾಗುವ ಘಟ್ಟದಲ್ಲಿ ಮಡಕೆ ಮಾಡುವುದನ್ನು ಕಂಡುಹಿಡಿದ. ಬೆಂಕಿಯ ಶಕ್ತಿಯನ್ನು ಹಿಡಿದಿಡಬಲ್ಲ ಒಂದು ಪಾತ್ರೆ ಅಲ್ಲಿಯವರೆಗೆ ಮನುಷ್ಯನಿಗೆ ದಕ್ಕಿರಲಿಲ್ಲ. ಪಾತ್ರೆಗಳಿಲ್ಲದೆ ಮನುಷ್ಯನಿಗೆ ಸಂಗ್ರಹಣೆಯಾಗಲೀ ಆಹಾರವನ್ನು ಬೇಯಿಸುವುದಾಗಲೀ ಸಾಧ್ಯವಾಗುತ್ತಿರಲಿಲ್ಲ. ಕುಂಬಾರಿಕೆಯನ್ನು ನಿಸ್ಸಂದೇಹವಾಗಿ ನಾಗರಿಕತೆಯ ದೊಡ್ಡ ಪ್ರಭಾವವೆಂದು ಗುರುತಿಸಬಹುದು.

ಮನುಷ್ಯನು ಕಾಡುಪ್ರಾಣಿಗಳನ್ನು ಪಳಗಿಸುವುದರೊಂದಿಗೆ ಅನಾಗರಿಕತೆಯ ಮಾಧ್ಯಮಾವಸ್ಥೆಯು ಮೊದಲಾಯಿತು. ಕಟ್ಟಿಹಾಕಿದ ಪ್ರಾಣಿಗಳ ಸೇವೆಯ ಅನುಕೂಲವನ್ನು ಮನುಷ್ಯ ತಿಳಿದುಕೊಂಡ. ಈಗ ಮನುಷ್ಯ ಗೋವಳಿಗನಾದ. ಅಪಾಯಕಾರಿಯಾದ ರೀತಿಯಲ್ಲಿ ಆಹಾರಕ್ಕಾಗಿ ಕಾಡುಪ್ರಾಣಿಗಳನ್ನು ಬೆನ್ನಟ್ಟುವ ಆತಂಕವಿಲ್ಲದಂತಾಯಿತು. ಎಲ್ಲ ಋತುಗಳಲ್ಲಿಯೂ ದೊರೆಯುತ್ತಿದ್ದ ಹಾಲು, ಅವನ ಆಹಾರದ ವೈವಿಧ್ಯವನ್ನು ಹೆಚ್ಚಿಸಿತು. ಕುದುರೆ ಮತ್ತು ಒಂಟೆ ಸವಾರಿಗಳ ಮೂಲಕ ಇಲ್ಲಿಯವರೆಗೂ ಮುನ್ನುಗ್ಗಲಾರದೆ ಇದ್ದ ವಿಸ್ತಾರವಾದ ಪ್ರದೇಶಗಳಲ್ಲಿ ಸುತ್ತಿದ. ಪಳಗಿಸಿದ ಪ್ರಾಣಿಗಳು ವ್ಯಾಪಾರದ ಸಾಧನವಾದವು. ಇದರಿಂದ ವಸ್ತುಗಳ ವಿನಿಮಯವಾಯಿತು. ವಿಚಾರಗಳೂ ವಿನಿಮಯಗೊಂಡವು.

ಮುಂದೆ ಕಬ್ಬಿಣವನ್ನು ಕರಗಿಸುವುದನ್ನು ಕಂಡುಹಿಡಿಯಲಾಯಿತು. ಕಾಡು ಮನುಷ್ಯನ ಅತ್ಯುಚ್ಚ ಸಾಧನೆಯ ಹಂತವೆಂದು ಇದನ್ನು ಗುರುತಿಸಬಹುದು. ಈ ಸಂಶೋಧನೆಯೊಂದಿಗೆ ಮನುಷ್ಯನು ಹತಾರಗಳನ್ನು ಉತ್ಪಾದಿಸುವ ಪ್ರಾಣಿಯಾದ. ತನ್ನ ಹತಾರಗಳ ಮೂಲಕ ಮರಗಳನ್ನು ಕತ್ತರಿಸಿ ಆಕಾರ ಕೊಟ್ಟ. ಕಲ್ಲುಗಳನ್ನು ಒಡೆದು ಕಡೆದು ಮನೆಗಳನ್ನು ಕಟ್ಟಿದ. ಸೇತುವೆಗಳನ್ನು ನಿರ್ಮಿಸತೊಡಗಿದ.

ಕಾಡುಮನುಷ್ಯನ ಪ್ರಗತಿಯ ಅಂತಿಮ ಘಟ್ಟವಿದೆಂದು ಹೇಳಬಹುದು. 'ನಾಗರಿಕತೆ' ಎಂಬ ಪದದ ಪೂರ್ಣ ಅರ್ಥದಂತೆ ಕಾಡುಮನುಷ್ಯ ಮತ್ತು ನಾಗರಿಕನನ್ನು ನಿಖರವಾಗಿ ಬೇರ್ಪಡಿಸುವ ಗೆರೆ ಎಂದರೆ

ಭಾಷೆಗೆ ಲಿಪಿಯನ್ನು ಕಂಡುಹಿಡಿದ ಘಟ್ಟ. ಮನುಷ್ಯನು ಹಿಂದಿನ ಸಂಶೋಧನೆಗಳ ಫಲವಾಗಿ ದೂರವನ್ನು ಗೆದ್ದಂತೆ ಈಗ ಕಾಲವನ್ನು ಗೆದ್ದ. ಅವನ ಕಾರ್ಯಗಳನ್ನು ಮತ್ತು ಆಲೋಚನೆಗಳನ್ನು ಈಗ ಅವನು ದಾಖಲಿಸಬಲ್ಲವನಾಗಿದ್ದ. ತನ್ನು ಮುಂದೆ ಕಾವ್ಯಾತ್ಮಕ ಕನಸುಗಳನ್ನು ಮತ್ತು ನೀತಿಪರ ಆದರ್ಶಗಳನ್ನು ದಾಖಲಿಸಲು ಸಾಧ್ಯವಾಯಿತು. ಅವನ ಸಮಕಾಲೀನರು ಮತ್ತು ಮುಂದಿನ ಪೀಳಿಗೆಯವರೂ ಅವುಗಳನ್ನು ಓದಲು ತಕ್ಕಂತೆ ರಚಿಸಲು ಅವನಿಗೆ ಅನುಕೂಲ ದೊರೆಯಿತು. ಮನುಷ್ಯನಿಗೆ ಅವನ ಇತಿಹಾಸವೂ ನೆಮ್ಮದಿಯ ಮತ್ತು ಸುರಕ್ಷಿತ ವಿಚಾರವಾಯಿತು. ಇದು ಕಡಿದಾದ ಆರೋಹಣವಾಗಿದ್ದು ಅದನ್ನು ಅವನು ಯಶಸ್ವಿಯಾಗಿ ಏರಿ ನಿಂತ. ನಾಗರಿಕತೆಯ ಆರಂಭದ ಘಟ್ಟವಿದು.

ಈಗ ಸ್ವಲ್ಪ ತಡೆದು, ಆದಿಮ ಬುಡಕಟ್ಟುಗಳ ಸ್ಥಿತಿ ಹೇಗಿದೆ ಎಂಬುದನ್ನು ಸ್ವಲ್ಪ ವಿಚಾರಿಸೋಣ.

ಆದಿಮ ಬುಡಕಟ್ಟುಗಳು[೧] ಎಂಬ ಹೆಸರೇ ಹೀಗೆ ಕರೆಯಲಾಗುವ ಜನಗಳ ಇಂದಿನ ಸ್ಥಿತಿಗತಿಯನ್ನು ವಿವರಿಸುತ್ತದೆ. ಕಾಡಿನಲ್ಲಿ ಚೆದುರಿ ಹೋದಂತಿರುವ ಸಣ್ಣ ಸಣ್ಣ ಗುಡಿಸಲುಗಳಲ್ಲಿ ಇವರು ವಾಸಿಸುತ್ತಾರೆ. ಕಾಡಿನಲ್ಲಿ ಸಿಗುವ ಹಣ್ಣು ಹಂಪಲು, ಬೀಜಗಳು ಮತ್ತು ಗೆಡ್ಡೆಗೆಣಸುಗಳನ್ನು ತಿಂದು ಜೀವಿಸುತ್ತಾರೆ. ಆಹಾರ ಸಂಪಾದನೆಗಾಗಿ ಮೀನು ಹಿಡಿಯುವುದ ಮತ್ತು ಬೇಟೆಯಾಡುವುದೂ ಉಂಟು. ಅವರ ಆರ್ಥಿಕ ಮತ್ತು ಸಾಮಾಜಿಕ ಜೀವನದಲ್ಲಿ ಕೃಷಿಗೆ ತೀರಾ ಗೌಣವಾದ ಸ್ಥಾನವಿದೆ. ಆಹಾರದ ಸರಬರಾಜಿನ ಕೊರತೆ ತೀವ್ರವಾಗಿರುವುದರಿಂದ ಅರೆಹೊಟ್ಟೆಯ ಬದುಕಿನಿಂದ ಅವರು ತಪ್ಪಿಸಿಕೊಳ್ಳುವಂತಿಲ್ಲ. ಇನ್ನು ಬಟ್ಟೆಬರೆಯಂತೂ ಇದ್ದೂ ಇಲ್ಲದಂತಿರುತ್ತದೆ. ಬಹುಪಾಲು ಬೆತ್ತಲೆಯೇ ಇರುತ್ತಾರೆ. 'ಬೊಂದ ಪೊರಜರು' ಎಂಬ ಬುಡಕಟ್ಟು ಒಂದಿದೆ. ಅದರ ಅರ್ಥ ಬೆತ್ತಲೆ ಪೊರಜರು ಎಂದೇ ಆಗುತ್ತದೆ. ಅವರಲ್ಲಿ ಹೆಂಗಸರು ಅತಿ ಚಿಕ್ಕದಾದ ಉಡುಗೆಯನ್ನು ಮಾನ ಮುಚ್ಚುವ ಸಲುವಾಗಿ ಧರಿಸಿರುತ್ತಾರೆ. ಅಸ್ಸಾಮಿನ ಮಾಮ್ಜಾಕ್ ನಾಗಾಗಳಂತೆ ಎಡತೊಡೆಯ ಮೇಲುಭಾಗದಲ್ಲಿ ಗಂಟು ಹಾಕಿಕೊಂಡಿರುವ ಈ ಉಡುಗೆ ತೀರಾ ಚಿಕ್ಕದು. ಕಾಡು ಗಿಡಗಳ ನಾರಿನಿಂದ ಈ ಉಡುಪನ್ನು ನೇಯ್ದುಕೊಳ್ಳುತ್ತಾರೆ. ಹುಡುಗಿಯರು ತಾಳೆಮರದ ಎಲೆಗಳಿಂದ ಮಾಡಿಕೊಂಡ ಪಟ್ಟಿಯನ್ನು ಮತ್ತು ಮಣಿ ಸರವನ್ನು ಧರಿಸುತ್ತಾರೆ. ಕೊಮ್ಜಾಕ್ ಹೆಂಗಸರಂತೆಯೇ ಕೊರಳಿನ ಸುತ್ತ ಹೆಚ್ಚಿನ ಸಂಖ್ಯೆಯ ಮಣಿಸರಗಳನ್ನು ಹಾಕಿಕೊಳ್ಳುತ್ತಾರೆ. ಉಳಿದಂತೆ ಈ ಹೆಂಗಸರು ಏನನ್ನೂ ಧರಿಸಿರುವುದಿಲ್ಲ. ಹೆಂಗಸರು ತಮ್ಮ ತಲೆಯನ್ನು ಸಂಪೂರ್ಣವಾಗಿ ಬೋಳಿಸಿಕೊಂಡಿರುತ್ತಾರೆ.... ನಿಜಾಮ್ ಪ್ರಾಂತದ ಫರಾಬಾದ್ ಹತ್ತಿರ ವಾಸಿಸುತ್ತಿರುವ 'ಚೆಂಚು'ಗಳೆಂಬ ಬುಡಕಟ್ಟಿನವರಿದ್ದಾರೆ. ಅವರ ಚಿಕ್ಕ ಮನೆಗಳು ಶಂಖಾಕಾರದಲ್ಲಿರುತ್ತವೆ. ಬೊಂಬುಗಳು ಮತ್ತು ತೆಳುವಾದ ಗರಿಗಳಿಂದ ಹೊದಿಸಲಾದ ಚಾವಣಿಗಳಿರುತ್ತವೆ. ತೀರಾ ಕಡಿಮೆ ಪ್ರಮಾಣದ ನಿತ್ಯೋಪಯೋಗಿ ಸಾಮಾನು ಸರಂಜಾಮುಗಳನ್ನಿಟ್ಟುಕೊಂಡಿರುವ ಈ ಜನರ ಉಡುಪು ಕನಿಷ್ಠವಾಗಿರುತ್ತದೆ. ಗಂಡಸರು ಕೇವಲ ಲಂಗೋಟಿಯನ್ನು ಧರಿಸಿದರೆ ಹೆಂಗಸರು ಕಿರಿದಾದ ಸ್ತನಕಟ್ಟು ಮತ್ತು ಕೆಳ ಉಡುಪನ್ನು ಧರಿಸುತ್ತಾರೆ. ಆಹಾರ ಬೇಯಿಸಲು ಒಂದೆರಡು ಕುಡಿಕೆಗಳು ಧಾನ್ಯ ಸಂಗ್ರಹಿಸಲು ಒಂದೆರಡು ಮಡಕೆಗಳು ಬುಟ್ಟಿಗಳೇ ಅವರ ಆಸ್ತಿ. ದನ ಮತ್ತು ಕುರಿಗಳನ್ನು ಸಾಕುವ ಅವರು ಈ ಒಂದು ನಿರ್ದಿಷ್ಟ ಹಳ್ಳಿಯಲ್ಲಿ ಅಲ್ಪಸ್ವಲ್ಪ ಕೃಷಿಯನ್ನೂ ಮಾಡುತ್ತಾರೆ. ಉಳಿದ ಕಡೆ ಅರಣ್ಯದಲ್ಲಿ ಸಿಗುವ ಜೇನುತುಪ್ಪವೇ ಮುಂತಾದುವನ್ನು ಮಾರಿ ಜೀವಿಸುತ್ತಾರೆ. 'ಮೊರೆಯಾ' ಎಂಬ ಆದಿಮ ಬುಡಕಟ್ಟಿನಲ್ಲಿ ಗಂಡಸರು ಸೊಂಟದ ಸುತ್ತ ಚಿಕ್ಕ ಲುಂಗಿಯನ್ನು ಸುತ್ತಿ ಮಧ್ಯದಲ್ಲಿ ಕಸೆ ಬಿಟ್ಟಿರುತ್ತಾರೆ. ಮಣಿಸರವನ್ನು

೧. ಇದನ್ನು ಮತ್ತು ಉಳಿದ ಮಾಹಿತಿಗಳನ್ನು ತೆಗೆದುಕೊಂಡಿರುವುದು 'ಸೆನ್ಸಸ್ ಆಫ್ ಇಂಡಿಯಾ'. ೧೯೩೧, ಸಂ.೧.

ಧರಿಸಿರುವ ಅವರು ಕುಣಿತಗಳಲ್ಲಿ ತಮ್ಮ ಪೇಟಗಳಿಗೆ ನವಿಲುಗರಿಗಳನ್ನೂ ಹುಂಜದ ಪುಕ್ಕಗಳನ್ನೂ ಸಿಕ್ಕಿಸಿ ಕೊಂಡಿರುತ್ತಾರೆ. ಅನೇಕ ಹುಡುಗಿಯರು ಮುಖ, ಮೈ, ಕೈಕಾಲುಗಳ ಮೇಲೆಲ್ಲಾ ಹಚ್ಚೆ ಹಾಕಿಸಿಕೊಂಡಿರುತ್ತಾರೆ. ಅವರವರ ಅಭಿರುಚಿಗೆ ತಕ್ಕಂತೆ ಹಚ್ಚೆ ಹಾಕಿಸಿಕೊಳ್ಳುತ್ತಾರೆ. ಮುಳ್ಳುಗಳು ಮತ್ತು ಸೂಜಿಗಳಿಂದ ಹಚ್ಚೆ ಹಾಕುತ್ತಾರೆ. ತಮ್ಮ ತಲೆಗೂದಲುಗಳಲ್ಲಿ ಹಲವರು ಕಾಡುಹುಂಜಗಳ ಪುಕ್ಕಗಳನ್ನು ಸಿಕ್ಕಿಸಿಕೊಂಡಿರುತ್ತಾರೆ. ಮರ, ಕಂಚು ಮತ್ತು ತಗಡಿನ ಬಾಚಣಿಗೆಗಳನ್ನು ಸಿಕ್ಕಿಸಿಕೊಂಡಿರುವುದುಂಟು.

ಈ ಬುಡಕಟ್ಟಿನ ಜನರಿಗೆ ಏನನ್ನು ತಿನ್ನಲೂ ಹಿಂಜರಿಕೆಯಿಲ್ಲ. ಹುಳು ಹುಪ್ಪಟೆಗಳೂ ಅವರ ಆಹಾರಗಳಲ್ಲಿ ಸೇರಿವೆ. ಅವರು ತಿನ್ನದ ಮಾಂಸದ ಬಗೆ ಯಾವುದೂ ಇಲ್ಲ. ಪ್ರಾಣಿಯು ಸಹಜವಾಗಿ ಸತ್ತಿರಲಿ ಅಥವಾ ಹುಲಿಯಿಂದ ನಾಲ್ಕಾರು ದಿನಗಳ ಹಿಂದೆ ಕೊಲ್ಲಲ್ಪಟ್ಟಿರಲಿ ಅದರ ಮಾಂಸವನ್ನು ಅವರು ತಿನ್ನುತ್ತಾರೆ.

ನಾವು ಗಮನಿಸಬಹುದಾದ ಇತರ ಸಮೂಹವೆಂದರೆ ಅಪರಾಧ ಬುಡಕಟ್ಟುಗಳು. ಆದಿಮ ಬುಡಕಟ್ಟುಗಳಂತೆ ಅಪರಾಧಿ ಬುಡಕಟ್ಟಿನವರು ಅರಣ್ಯಗಳಲ್ಲಿ ವಾಸಿಸುವುದಿಲ್ಲ. ಊರುಗಳಿಗೆ ಹತ್ತಿರವಿರುವ ಬಯಲು ಪ್ರದೇಶಗಳಲ್ಲಿ ಒಮ್ಮೊಮ್ಮೆ ನಾಗರಿಕತೆಯ ಬದುಕಿನ ಮಧ್ಯದಲ್ಲಿಯೇ ವಾಸಿಸುತ್ತಾರೆ. "ಸಂಯುಕ್ತ ಸಂಸ್ಥಾನಗಳ ಅಪರಾಧಿ ಬುಡಕಟ್ಟುಗಳು" ಎಂಬ ತನ್ನ ಕೃತಿಯಲ್ಲಿ ಹೊಲಿಯಸ್ ವಿವರಗಳನ್ನು ಕೊಟ್ಟಿದ್ದಾನೆ. ಅಪರಾಧಗಳನ್ನು ಅವಲಂಬಿಸಿಯೇ ಅವರು ಜೀವಿಸುತ್ತಾರೆ. ಅವರ ದುಷ್ಟ ಚಟುವಟಿಕೆಗಳಲ್ಲಿ ಕಳ್ಳತನ, ದರೋಡೆ, ಹಿಂಸೆಗಳೇ ಇರುತ್ತವೆ. ಅಪರಾಧಕ್ಕಾಗಿಯೇ ಸಂಘಟಿತವಾಗಿರುವ ಈ ಜಾತಿಯಲ್ಲಿ ಅನುಚಿತವೆಂದು ಯಾವ ಕೃತ್ಯವನ್ನೂ ಪರಿಗಣಿಸುವುದಿಲ್ಲ. ಯಾವುದಾದರೊಂದು ನಿರ್ದಿಷ್ಟ ಪ್ರದೇಶದಲ್ಲಿ ಡಕಾಯಿತಿ ಮಾಡಲು ನಿರ್ಧರಿಸಿದ ಮೇಲೆ ಗೂಢಚಾರರನ್ನು ಕಳಿಸುತ್ತಾರೆ. ಸೂಕ್ತವಾದ ಶ್ರೀಮಂತ ಬಲಿಯನ್ನು ಹುಡುಕಿ, ಸುತ್ತಮುತ್ತಣ ಹಳ್ಳಿಗಳಲ್ಲಿ ವಾಸಮಾಡುವ ಪ್ರದೇಶಗಳ ವಿವರ, ಪರಿಣಾಮಕಾರಿ ನೆರವು ದೊರೆಯಬಹುದಾದ ಹತ್ತಿರದ ಜಾಗ, ಜನಸಂಖ್ಯೆ ಮತ್ತು ಬಂದೂಕಿನಂತಹ ಆಯುಧಗಳ ಮಾಹಿತಿಗಳನ್ನೆಲ್ಲಾ ಮೊದಲು ಸಂಗ್ರಹಿಸುತ್ತಾರೆ. ಮಧ್ಯರಾತ್ರಿಯಲ್ಲೇ ಸಾಮಾನ್ಯವಾಗಿ ಅವರು ಧಾಳಿ ಮಾಡುವುದು. ಗೂಢಚಾರರು ಕೊಟ್ಟ ಮಾಹಿತಿಯನ್ನನುಸರಿಸಿ ಹಳ್ಳಿಯ ಆಯಕಟ್ಟಿನ ಜಾಗಗಳಲ್ಲಿ ತಮ್ಮವರನ್ನು ನಿಲ್ಲಿಸಿದ ಮೇಲೆ ಮುಖ್ಯ ಪಡೆಗೆ ಗುಂಡುಹಾರಿಸಿ ಸೂಚನೆ ಕೊಡುತ್ತಾರೆ. ಬಳಿಕ ಮುಖ್ಯ ಪಡೆಯು ಮೊದಲೇ ಗೊತ್ತುಪಡಿಸಿದ್ದ ಮನೆ ಅಥವಾ ಮನೆಗಳ ಮೇಲೆ ಧಾಳಿ ಮಾಡುತ್ತದೆ. ಒಂದು ಪಡೆಯಲ್ಲಿ ಸಾಮಾನ್ಯವಾಗಿ ಮೂವತ್ತರಿಂದ ನಲವತ್ತು ಜನರಿರುತ್ತಾರೆ.

ಅಪರಾಧವು ಈ ಜನಗಳ ಬದುಕಿನಲ್ಲಿ ಸರ್ವವ್ಯಾಪ್ತಿಯಾಗಿರುವುದನ್ನು ಮುಖ್ಯವಾಗಿ ಗಮನಿಸಬಹುದಾಗಿದೆ. ಒಬ್ಬ ಹುಡುಗನು ಮಾತನಾಡಲು ನಡೆಯಲು ಕಲಿಯುತ್ತಿದ್ದಂತೆಯೇ ಅವನಿಗೆ ಅಪರಾಧಿ ಜೀವನ ದೀಕ್ಷೆ ಕೊಡಲಾಗುವುದು. ಇದರ ಉದ್ದೇಶ ವ್ಯಾವಹಾರಿಕವೂ ಹೌದು. ಚಿಕ್ಕಪುಟ್ಟ ಕಳ್ಳತನಗಳಲ್ಲಿ ಹುಡುಗನು ಸಿಕ್ಕಿಬಿದ್ದರೆ ಏಟು ಬೀಳಬಹುದು. ದೊಡ್ಡವರಾದರೆ ಕೂಡಲೆ ಬಂಧನಕ್ಕೆ ಒಳಗಾಗುತ್ತಾರೆ. ಇದರಲ್ಲಿ ಹೆಂಗಸರ ಪಾತ್ರವೂ ಮುಖ್ಯವಾಗಿರುತ್ತದೆ. ಧಾಳಿಗಳಲ್ಲಿ ಅವರು ಭಾಗವಹಿಸುವುದಿಲ್ಲವಾದರೂ ಇತರ ಗುರುತರ ಜವಾಬ್ದಾರಿಗಳು ಅವರಿಗಿರುತ್ತವೆ. ಕಳವು ಮಾಲುಗಳನ್ನು ಮಾರುವುದು ಅವರ ಕೆಲಸ. ಅದರೊಡನೆ ಅಂಗಡಿಗಳಲ್ಲಿ ಕದಿಯುವುದರಲ್ಲಿಯೂ ಈ ಹೆಂಗಸರು ನಿಸ್ಸೀಮರು.

ಒಂದು ಕಾಲದಲ್ಲಿ 'ಪಿಂಡಾರಿ'ಗಳು ಮತ್ತು 'ಥಗ್' ಎಂಬುವವರು ಸುಸಂಘಟಿತರಾಗಿದ್ದ ಅಪರಾಧಿ

ಜನಾಂಗಗಳಾಗಿದ್ದರು. ಪಿಂಡಾರಿಗಳು ಆಯುಧಗಳಿಂದ ಸುಸಜ್ಜಿತರಾದ ದರೋಡೆಕೋರರ ಗುಂಪುಗಳು. ಅವರ ಸಂಘಟನೆಯು ಮುಕ್ತ ಸೈನಿಕ ವ್ಯವಸ್ಥೆಯಾಗಿದ್ದು ಎರಡು ಸಾವಿರ ಅಥವಾ ಇನ್ನೂ ಹೆಚ್ಚಿನ ಕುದುರೆಗಳಿಂದ ಕೂಡಿದ ದರೋಡೆಕೋರರ ಗುಂಪುಗಳಿರುತ್ತಿದ್ದವು. ಒಂದೊಂದು ಗುಂಪಿಗೂ ಒಬ್ಬೊಬ್ಬ ದಳಪತಿ. 'ಚೀತು', ಒಬ್ಬ ಮಹಾ ಪ್ರಬಲ ದಳಪತಿ. ಅವನ ಕೈಕೆಳಗೆ ಹತ್ತು ಸಹಸ್ರ ಕುದುರೆಗಳು, ಐದು ಸಾವಿರ ಸುಸಜ್ಜಿತ ಅಶ್ವಸೇನೆ, ಬಂದೂಕುಧಾರಿಗಳಾದ ದೊಡ್ಡ ಕಾಲಾಳುಗಳ ಪಡೆಯಿತ್ತು. ಸ್ವೇಚ್ಛಾಚಾರಿಗಳಾದ ಅಕ್ರಮ ಪಡೆಗಳನ್ನು ಕೆಲಸಕ್ಕೆ ತೊಡಗಿಸಲು ಸ್ಪಷ್ಟವಾದ ಮಿಲಿಟರಿ ಯೋಜನೆಗಳು ಪಿಂಡಾರಿಗಳಿಗಿರಲಿಲ್ಲವಾದುದರಿಂದ ಅವರು ವೃತ್ತಿನಿರತ ದರೋಡೆಕೋರರಾಗಿ ಬೆಳೆದರು. ಪಿಂಡಾರಿಗಳಿಗೆ ಸಾಮ್ರಾಜ್ಯ ಕಟ್ಟುವ ಆಸೆಯಿರಲಿಲ್ಲ. ಹಣ ಮತ್ತು ಸಂಪತ್ತುಗಳನ್ನು ಲೂಟಿ ಹೊಡೆಯುವುದು ಮಾತ್ರ ಅವರ ಗುರಿ. ಸಾಮಾನ್ಯ ಸುಲಿಗೆ, ಲೂಟಿ, ಅಪಹರಣಗಳೇ ಅವರ ವೃತ್ತಿ. ಯಾವ ರಾಜರನ್ನೂ ಅವರು ಮನ್ನಿಸುತ್ತಿರಲಿಲ್ಲ. ಅವರು ಯಾರಿಗೂ ಪ್ರಜೆಗಳಲ್ಲ. ಯಾರಿಗೂ ವಿಧೇಯತೆ ತೋರಿಸುತ್ತಿರಲಿಲ್ಲ. ಯಾರನ್ನೂ ಗೌರವಿಸುತ್ತಿರಲಿಲ್ಲ. ಶ್ರೇಷ್ಠ–ಕನಿಷ್ಠ, ಶ್ರೀಮಂತ–ಬಡವ ಎಲ್ಲರನ್ನೂ ನಿಷ್ಕರುಣೆಯಿಂದ ನಿರ್ಭಯವಾಗಿ ಕೊಳ್ಳೆಹೊಡೆದು ಬದುಕುತ್ತಿದ್ದರು.

'ಥಗ್' ಬುಡಕಟ್ಟಿನವರು[೧] ಸುಸಂಘಟಿತರಾದ ವೃತ್ತಿನಿರತ ಕೊಲೆಗಡುಕರು. ಬೇರೆ ಬೇರೆ ವೇಷಗಳಲ್ಲಿ ಹತ್ತರಿಂದ ನೂರರವರೆಗೆ ಗುಂಪಾಗಿ ಭಾರತದಲ್ಲೆಲ್ಲಾ ಅವರು ಸಂಚರಿಸುತ್ತಿದ್ದರು. ಶ್ರೀಮಂತ ವರ್ಗದ ದಾರಿಹೋಕರ ನಂಬಿಕೆ ಸಂಪಾದಿಸಿ ಅವರೊಡನಿದ್ದು ಅವಕಾಶ ದೊರೆತೊಡನೆ ಅವರನ್ನು ನೇಣುಹಾಕಿ ಅಥವಾ ಬಾಯಿಗೆ ಬಟ್ಟೆ ತುರುಕಿ ಕೊಂದು ದೋಚುತ್ತಿದ್ದರು. ಬಳಿಕ ಸತ್ತ ಶ್ರೀಮಂತರ ಹೆಣವನ್ನು ಹೂಳಿಬಿಡುತ್ತಿದ್ದರು. ಇದೆಲ್ಲವನ್ನೂ ಪ್ರಾಚೀನವಾದ ಕೆಲವು ವಿಧಿಬದ್ಧ ಪದ್ಧತಿಗನುಸಾರವಾಗಿ ಮಾಡಲಾಗುತ್ತಿತ್ತು. ಧಾರ್ಮಿಕ ವಿಧಿಗಳು, ಪೂಜೆ, ಸಿಹಿ ನೈವೇದ್ಯಗಳಾದ ಮೇಲೆ ಕೊಳ್ಳೆಹೊಡೆದ ಒಂದು ಭಾಗವನ್ನು ಕಾಣಿಕೆಯಾಗಿ ಕೊಡಲಾಗುತ್ತಿತ್ತು. ಅವರು ಹಿಂದೂ ದೇವತೆಯಾದ ಕಾಳಿಯ ಪರಮ ಆರಾಧಕರಾಗಿದ್ದರು. ಆಕೆ ವಿನಾಶದ ಅಧಿದೇವತೆಯೂ ಹೌದು. ಲಾಭಕ್ಕಾಗಿ ಕೊಲೆ ಮಾಡುವುದು ಅವರಿಗೆ ಧರ್ಮಾನುಸಾರಿ ಕರ್ತವ್ಯವಾಗಿತ್ತು. ಕೆಟ್ಟ ಕೆಲಸವೆಂದರೇನು? ಎಂಬುದರ ತಿಳುವಳಿಕೆಯೇ ಇಲ್ಲದಿದ್ದ ಅವರಿಗೆ ನೀತಿಯ ಭಾವನೆಗಳು ಅಡ್ಡಬರುತ್ತಿರಲಿಲ್ಲ. ದೇವಿಯ ಇಚ್ಛೆಗಳು ಅವರಿಗೆ ಕೆಲವು ವಿಚಿತ್ರವಾದ ಶಕುನಗಳ ಮೂಲಕ ಗೊತ್ತಾಗುತ್ತಿತ್ತು. ಆಕೆಯ ಅಪ್ಪಣೆಯಂತೆ ದೇವಿಯ ಗೌರವಕ್ಕಾಗಿ ಈ ಕರೆಗಳಿಗನುಸಾರವಾಗಿ ಅವರು ನಡೆದುಕೊಳ್ಳುತ್ತಿದ್ದರು. ಈ ಬಗೆಯ ಸೂಚನೆಗಳಿಗೆ ವಿಧೇಯರಾಗಿ ಅವರು ಒಮ್ಮೊಮ್ಮೆ ನೂರಾರು ಮೈಲಿ ಪ್ರಯಾಣ ಬೆಳೆಸಬೇಕಾಗುತ್ತಿತ್ತು. ತಾವು ಕೊಲೆ ಮಾಡುತ್ತಿದ್ದ ವ್ಯಕ್ತಿಯ ಜೊತೆಯಲ್ಲಿ ಅಥವಾ ಅವನನ್ನು ಹಿಂಬಾಲಿಸಿ ಪ್ರಯಾಣಮಾಡಿ ಸೂಕ್ತ ಸಮಯದಲ್ಲಿ ತಮ್ಮ ಯೋಜನೆಯನ್ನು ಕಾರ್ಯಗತಗೊಳಿಸುತ್ತಿದ್ದರು. ಕಾರ್ಯ ಕೈಗೂಡಿದ ಮೇಲೆ ಕುಲದೇವತೆಯ ಪ್ರೀತ್ಯರ್ಥವಾಗಿ ಸೂಕ್ತ ಆರಾಧನೆಯಾಗುತ್ತಿತ್ತು. ಆಕೆಗಾಗಿ ಕೊಳ್ಳೆಯ ದೊಡ್ಡ ಭಾಗವನ್ನೇ ಒಂದೆಡೆ ಇಡಲಾಗುತ್ತಿತ್ತು. 'ಥಗ್' ಜನಾಂಗಕ್ಕೆ ತನ್ನದೇ ಆದ ವಿಶಿಷ್ಟ ಭಾಷೆಯಿತ್ತು ಮತ್ತು ಕೆಲವು ಸಂಜ್ಞೆಗಳಿದ್ದವು. ಇದರ ಮೂಲಕ ಇಂಡಿಯಾದ ಯಾವ ಭಾಗಗಲ್ಲಿದ್ದರೂ ಅವರು ಪರಸ್ಪರರನ್ನು ಗುರುತಿಸುತ್ತಿದ್ದರು. ಸ್ವತಃ ಕೊಲೆ ಸುಲಿಗೆಗಳಲ್ಲಿ ಭಾಗವಹಿಸಲಾಗದ ಮುದುಕರು ಬಲಹೀನರೂ ಸಹ ಬೇರೆ ಬಗೆಯಲ್ಲಿ ಸಹಾಯಕರಾಗಿರುತ್ತಿದ್ದರು. ಕಾವಲುಗಾರರಾಗಿ, ಗೂಢಚಾರರಾಗಿ,

---

೧. 'ಎನ್‌ಸೈಕ್ಲೋಪೀಡಿಯಾ ಬ್ರಿಟಾನಿಕಾ', ೧೧ನೆಯ ಆವೃತ್ತಿ, ಸಂ. XXVI, ಪು. ೮೯೬ .

ಅಥವಾ ಅಡುಗೆಯವರಾಗಿ ನೆರವು ನೀಡುತ್ತಿದ್ದರು. ಪೂರ್ಣಪ್ರಮಾಣದ ಸಂಘಟನೆಯಿಂದ ಗುಟ್ಟುಗಳನ್ನು ಚೆನ್ನಾಗಿ ಕಾಪಾಡುತ್ತಿದ್ದ ಕಾರಣದಿಂದ, ಒಳ್ಳೆಯ ದಕ್ಷ ರಕ್ಷಣಾ ಮುನ್ನೆಚ್ಚರಿಕೆಗಳಿಂದ, ಅದೆಲ್ಲಕ್ಕೂ ಮಿಗಿಲಾಗಿ ಧಾರ್ಮಿಕ ವೇಷ ಹೊತ್ತ ತೀವ್ರ ನಂಬಿಕೆಗಳಿಂದಾಗಿ ಶತಮಾನಗಳ ಕಾಲ ಅವರ ಈ ಚಟುವಟಿಕೆಗಳನ್ನು ಒಂದು ಕ್ರಮಬದ್ಧ ವೃತ್ತಿಯೆಂದೇ ಇಂಡಿಯಾದಲ್ಲಿ ರಾಜ್ಯಭಾರಮಾಡಿದ ಹಿಂದೂ ಮುಸ್ಲಿಂ ದೊರೆಗಳೆಲ್ಲ ಒಪ್ಪಿಕೊಂಡಿದ್ದರು. ಥಗ್ಗರು ನಿಯಮಿತವಾಗಿ ತೆರಿಗೆ ಕೊಡುತ್ತಿದ್ದರು. ರಾಜರೂ ಅವರಿಗೆ ಕಿರುಕುಳ ಕೊಡುತ್ತಿರಲಿಲ್ಲ.

ಬ್ರಿಟಿಷರು ದೇಶವನ್ನಾಳಲು ಪ್ರಾರಂಭಿಸುವವರೆಗೆ ಥಗ್ಗರನ್ನು ದಮನ ಮಾಡಲು ಯಾರೂ ಪ್ರಯತ್ನಿಸಿರಲಿಲ್ಲ. ೧೮೩೫ರ ಹೊತ್ತಿಗೆ ೩೮೨ ಥಗ್ಗರನ್ನು ನೇಣು ಹಾಕಲಾಯಿತು ಮತ್ತು ೯೮೬ ಜನರನ್ನು ಗಡಿಪಾರು ಮಾಡಿ ಜೀವಾವಧಿ ಶಿಕ್ಷೆ ಕೊಡಲಾಯಿತು. ೧೮೭೯ರಲ್ಲಿಯೂ ಅಧಿಕೃತವಾಗಿ ನೋಂದಣಿಯಾದ ಥಗ್ಗರ ಸಂಖ್ಯೆ ೩೪೪. ಥಗ್ಗರು ಮತ್ತು ಡಕಾಯಿತಿ ವಿಭಾಗವೊಂದು ೧೯೦೪ರವರೆಗೂ ಅಸ್ತಿತ್ವದಲ್ಲಿತ್ತು. ಮುಂದೆ ಅಪರಾಧ ಶೋಧನಾ ಕೇಂದ್ರ ವಿಭಾಗವು ರಚಿತವಾಯಿತು. ಬಳಿಕ ಅಪರಾಧಿ ಬುಡಕಟ್ಟುಗಳು ಸಂಘಟಿತ ಗುಂಪುಗಳಾಗಿ ಉಳಿಯುವುದು ಸಾಧ್ಯವಾಗಲಿಲ್ಲವಾದರೂ, ಅಪರಾಧದ ಮೂಲಕವೇ ಅವರು ಜೀವಿಸುವುದು ಅನಿವಾರ್ಯವಾಗಿತ್ತು. ಈ ಎರಡೂ ವರ್ಗಗಳಲ್ಲದೆ ಅಸ್ಪೃಶ್ಯರೆಂಬ ಮೂರನೆಯ ವರ್ಗದ ಜನಗಳೂ ಇದ್ದಾರೆ.

ಅಸ್ಪೃಶ್ಯರ ಕೆಳಗೆ, ಹತ್ತಿರ ಸೇರಿಸಲೂ ಬಾರದ ಮತ್ತೊಂದು ವರ್ಗವಿದೆ. ಮುಟ್ಟಿದರೆ ಮಾತ್ರ ಅಪವಿತ್ರಗೊಳಿಸುವವರು ಅಸ್ಪೃಶ್ಯರು. ಸಮೀಪ ಬಂದರೂ ಅಪವಿತ್ರಗೊಳಿಸುವವರು ಇನ್ನೂ ಕೆಳಗಿನವರು. 'ನಾಯಡಿ'ಗಳನ್ನು ಈ ವರ್ಗಕ್ಕೆ ಸೇರಿಸುತ್ತಾರೆ. ನಾಯಿಮಾಂಸ ಭಕ್ಷರಾದ ಇವರು ಹಿಂದೂ ಜಾತಿ ಶ್ರೇಣಿಯಲ್ಲಿ ಅತಿ ಕೀಳು ಸ್ಥಾನದಲ್ಲಿದ್ದಾರೆ. ಅವರು ಹಠಮಾರಿ ಭಿಕ್ಷುಕರು. ಭಿಕ್ಷೆಗಾಗಿ ಬೇಡುತ್ತಾ ಗೌರವಾರ್ಹ ದೂರದಲ್ಲಿಯೇ ಹಿಂಬಾಲಿಸುತ್ತಾ ಜನಗಳ ಹಿಂದೆ ಬರುತ್ತಾರೆ. ನಡೆದಾಡುವಾಗ, ಮೋಟರಿನಲ್ಲಿ ಪ್ರಯಾಣಿಸುವಾಗ, ದೋಣಿಗಳು ಮುಂದೆ ಸಾಗುತ್ತಿರುವಾಗ ಅದರ ಹಿಂದೆ ಹಿಂದೆ ಈ ಭಿಕ್ಷುಕರು ನಡೆಯುತ್ತಿರುತ್ತಾರೆ. ಅವರಿಗೆ ಏನಾದರೂ ಕೊಡಬೇಕಿದ್ದರೆ ಅದನ್ನು ನೆಲದ ಮೇಲೆ ಇಡಬೇಕು. ದಾನಿಯು ಸ್ವಲ್ಪ ಮುಂದೆ ಹೋದ ಬಳಿಕ ಭಿಕ್ಷುಕನು ದೈನ್ಯದಿಂದ ಬಂದು ಅದನ್ನೆತ್ತಿಕೊಂಡು ಹೋಗುತ್ತಾನೆ. ಈ ಜನಗಳ ಬಗೆ ಥರ್ಸ್ಟನ್ ಹೀಗೆಂದು ಹೇಳಿದ್ದಾರೆ: "ಈ ಪ್ರಜೆಗಳನ್ನು (ಅಂದರೆ ನಾಯಡಿಗಳು) ನಾನು ಪರೀಕ್ಷಿಸಿ ಲೆಕ್ಕ ಹಾಕಿದಾಗ 'ಶೋರಣ'ದಲ್ಲಿ ಮೂರು ಮೈಲಿಗಳಾಚೆ ವಾಸಿಸುತ್ತಿದ್ದರು. ಮಧ್ಯೆ ಒಂದು ದೊಡ್ಡ ಸೇತುವೆಯಿತ್ತು. ಅದರ ಮೇಲೆ ಓಡಾಡಿದರೆ ಅಪವಿತ್ರವಾಗುವುದೆಂದು ಅದನ್ನವರು ಬಳಸುತ್ತಿರಲಿಲ್ಲ. ಅನೇಕ ಮೈಲಿಗಳ ಬಳಸುದಾರಿಯನ್ನು ಹಿಡಿದು ಅವರು ಓಡಾಡುತ್ತಿದ್ದರು."

ಹತ್ತಿರ ಸೇರಿಸಲೂ ಬಾರದ ಜನಗಳಿಗಿಂತಲೂ ಕೆಳಗೆ ಕಣ್ಣಿಂದ ನೋಡಲೂ ಬಾರದವರಾಗಿದ್ದರು.

ಮದ್ರಾಸ್ ಪ್ರಾಂತದ ತಿನ್ನವೆಲ್ಲಿ ಜಿಲ್ಲೆಯಲ್ಲಿ 'ಪುರದ ವಣ್ಣಿಯರು' ಎಂಬ ಈ ವರ್ಗದ ಜನರಿದ್ದಾರೆ. ಅವರನ್ನು ನೋಡುವುದು ಪಾಪವೆಂದು ತಿಳಿಯಲಾಗಿದೆ. ಅವರ ಬಗೆಗೆ ಹೀಗೆ ಹೇಳಲಾಗಿದೆ: "ಅವರು ಹಗಲು ಹೊತ್ತು ಹೊರಗೆ ಬರುವಂತಿರಲಿಲ್ಲ. ಏಕೆಂದರೆ ಅವರನ್ನು ನೋಡಿದರೆ ಅಶುದ್ಧಿಯಾಗುತ್ತದೆ. ಈ ದುರ್ದೈವಿಗಳು ನಿಶಾಚರರಾಗಿದ್ದುಕೊಂಡು ಕತ್ತಲೆಯ ರಾತ್ರಿಗಳಲ್ಲಿ ಹೊರಬಂದು ಬೆಳಗಾಗುವ ಮುನ್ನವೇ ನಿಶಾಚರ ಪ್ರಾಣಿ ಪಕ್ಷಿಗಳಂತೆ ಗೂಡು ಸೇರಿಕೊಳ್ಳಬೇಕು."

ಇವರೆಲ್ಲರ ಒಟ್ಟು ಜನಸಂಖ್ಯೆಯನ್ನು ನೋಡಬಹುದು. ಆದಿಮ ಬುಡಕಟ್ಟುಗಳು ಇಪ್ಪತ್ತೈದು

ದಶಲಕ್ಷ ಜನರಿದ್ದಾರೆ. ಅಪರಾಧಿ ಬುಡಕಟ್ಟುಗಳು ನಾಲ್ಕೂವರೆ ದಶಲಕ್ಷ. ಅಸ್ಪೃಶ್ಯರು ಐವತ್ತು ದಶಲಕ್ಷ. ಒಟ್ಟಾರೆ ಎಪ್ಪತ್ತೊಂಬತ್ತೂವರೆ ದಶಲಕ್ಷ ಜನಗಳಾಗುತ್ತಾರೆ.

ಈಗ ನಾವು ನಮ್ಮನ್ನೇ ಪ್ರಶ್ನಿಸಿಕೊಳ್ಳಬಹುದು. ಇಂತಹ ನೈತಿಕ, ಭೌತಿಕ, ಸಾಮಾಜಿಕ ಮತ್ತು ಆಧ್ಯಾತ್ಮಿಕ ಅಧಃಪತನವು ಸುತ್ತುವರಿದಿರುವಾಗ, ಅದಕ್ಕೆ ಹಿಂದೂ ಧರ್ಮವೇ ಹೊಣೆಯಾಗಿರುವಾಗ ಅವರು ಹೇಗೆ ಉಳಿದಿರಬಹುದು? ತಮ್ಮ ನಾಗರಿಕತೆಯು ಜಗತ್ತಿನ ಉಳಿದೆಲ್ಲಕ್ಕಿಂತ ಪ್ರಾಚೀನವೆಂದು ಹಿಂದೂಗಳು ಹೇಳುತ್ತಾರೆ. ಹಿಂದೂ ಧರ್ಮವು ಉಳಿದೆಲ್ಲ ಧರ್ಮಗಳಿಗಿಂತ ಶ್ರೇಷ್ಠವೆಂದೂ ಹೇಳುತ್ತಾರೆ. ಹಾಗಾದರೆ ಈ ಜನಗಳನ್ನು ಮೇಲೆತ್ತಲು ಅವರಿಗೆ ಏಕೆ ಸಾಧ್ಯವಾಗಿಲ್ಲ. ಅವರನ್ನು ವಿವೇಕದತ್ತ ತಿರುಗಿಸಿ ಭರವಸೆಯನ್ನೇಕೆ ನೀಡಲಿಲ್ಲ? ಅವರನ್ನು ಸನ್ಮಾರ್ಗಕ್ಕೆ ತರಲು ಏಕೆ ಪ್ರಯತ್ನಿಸಲಿಲ್ಲ? ಕೋಟ್ಯಂತರ ಜನ ನಾಚಿಕೆಯಿಲ್ಲದೆ ಅಪರಾಧಿಗಳಾಗಿ ಜೀವಿಸುತ್ತಿರುವಾಗ ಹಿಂದೂ ಧರ್ಮವು ಏಕೆ ಕೈಕಟ್ಟಿಕೊಂಡು ನಿಂತುಬಿಟ್ಟಿತು? ಇದಕ್ಕೆಲ್ಲಾ ಉತ್ತರವೆಲ್ಲಿದೆ?

ಇರುವ ಒಂದೇ ಉತ್ತರವೆಂದರೆ, ಹಿಂದೂ ಧರ್ಮವು ಅಪವಿತ್ರಗೊಳ್ಳುವ ಒಂದು ಮಹಾಭಯದಿಂದ ತುಂಬಿ ಹೋಗಿದೆ. ಶುದ್ಧಗೊಳಿಸುವ ಶಕ್ತಿ ಅದಕ್ಕಿಲ್ಲ. ಪ್ರವೃತ್ತಿ ಅಲ್ಲಿಲ್ಲ. ಏಕೆಂದರೆ ಈ ಧರ್ಮವು ಸ್ವಭಾವದತ್ತವಾಗಿಯೇ ಅಮಾನವೀಯ ಮತ್ತು ನೀತಿ ವಿವಕ್ಷೆಯಿಲ್ಲದಂತಹುದು. ಅದನ್ನು ಧರ್ಮವೆಂದು ಕರೆಯುವುದೇ ಒಂದು ಅಪಪ್ರಯೋಗವೆನ್ನಬಹುದಾಗಿದೆ. ಧರ್ಮವು ಯಾವುದಕ್ಕೆ ಹೆಸರಾಗಿದೆಯೋ ಅದಕ್ಕೇ ಹಿಂದೂ ಧರ್ಮದ ತತ್ವಜ್ಞಾನವು ವಿರುದ್ಧವಾಗಿದೆ.

* * * *

ಭಾಗ – ಎರಡು

# ಭಾರತ ಮತ್ತು ಸಮತಾವಾದದ ಪೂರ್ವಭಾವಿ ಅವಶ್ಯಕತೆಗಳು

*ಇಲ್ಲಿ ನಾವು "ಹಿಂದೂ ಸಮಾಜ ವ್ಯವಸ್ಥೆ"ಯಿಂದ ಒಂದು ಮತ್ತು ಎರಡನೆಯ ಅಧ್ಯಾಯಗಳನ್ನು ಪುನಃ ಪ್ರಕಟಿಸುತ್ತಿದ್ದೇವೆ. ಈ ಅಧ್ಯಾಯವು "ಭಾರತ ಮತ್ತು ಸಮತಾವಾದ" ಎಂಬ ಪುಸ್ತಕದ ಒಂದು ಭಾಗವಾಗಿದೆ ಎಂದು ತೋರುತ್ತದೆ. ಬೆರಳಚ್ಚು ಪ್ರತಿಯ ಮೊದಲನೆಯ ಪುಟದಲ್ಲಿರುವ ಪರಿವಿಡಿಯಿಂದ ಡಾ. ಅಂಬೇಡ್ಕರರು 'ಭಾರತ ಮತ್ತು ಸಮತಾವಾದ' ಎಂಬ ಇಡಿ ಪುಸ್ತಕವನ್ನು ಮೂರು ಭಾಗಗಳಲ್ಲಿ ವಿಂಗಡಿಸಿದ್ದರೆಂದು ತಿಳಿಯುತ್ತದೆ. ಮೊದಲನೆಯ ಭಾಗಕ್ಕೆ 'ಸಮತಾವಾದದ ಪೂರ್ವಭಾವಿ ಅವಶ್ಯಕತೆಗಳು' ಎಂಬ ಶೀರ್ಷಿಕೆ ನೀಡಲಾಗಿದೆ. ಈ ಭಾಗದಲ್ಲಿ, ಮೂರು ಅಧ್ಯಾಯಗಳಿರಬೇಕಾಗಿತ್ತು. ಆದರೆ ಇವಾವೂ ಡಾ. ಅಂಬೇಡ್ಕರರ ಕಾಗದ ಪತ್ರಗಳಲ್ಲಿ ನಮಗೆ ದೊರಕಿಲ್ಲ. 'ಭಾರತ ಮತ್ತು ಸಮತಾವಾದದ ಪೂರ್ವಭಾವಿ ಅವಶ್ಯಕತೆಗಳು' ಎಂಬ ಎರಡನೆಯ ಭಾಗದ ಸಂಬಂಧದಲ್ಲಿ 'ಹಿಂದೂ ಸಮಾಜ ವ್ಯವಸ್ಥೆ' ಎಂಬ ಶೀರ್ಷಿಕೆಯುಳ್ಳ ನಾಲ್ಕನೆಯ ಅಧ್ಯಾಯ ಮಾತ್ರ ಸರಿಯಾಗಿ ಬೈಂಡು ಮಾಡಿದ ರೂಪದಲ್ಲಿ ದೊರಕಿದೆ. ಈ ಅಧ್ಯಾಯದಲ್ಲಿ ಕೆಳಕಾಣಿಸಲಾದ ಎರಡು ಉಪಶೀರ್ಷಿಕೆಗಳಿವೆ:*

*೧. ಹಿಂದೂ ಸಮಾಜ ವ್ಯವಸ್ಥೆ – ಅದರ ಮೂಲ ತತ್ವಗಳು ಮತ್ತು*

*೨. ಹಿಂದೂ ಸಮಾಜ ವ್ಯವಸ್ಥೆ – ಅದರ ವಿಶಿಷ್ಟ ಲಕ್ಷಣಗಳು.*

*ಈ ಗ್ರಂಥದ ಪರಿವಿಡಿಯಲ್ಲಿ ಮೇಲೆ ಹೇಳಿದ ವಿಷಯದ ಬಗ್ಗೆ ಇನ್ನಾವ ಅಧ್ಯಾಯಗಳೂ ದೊರೆತಿಲ್ಲ. ಎಲ್ಲಾ ಸೇರಿ ೬೩ ಫೂಲ್‌ಸ್ಕೇಪ್ ಕಾಗದದಲ್ಲಿ ಬೆರಳಚ್ಚು ಮಾಡಿದ ಪುಟಗಳಿವೆ.*

– ಮೂಲ ಸಂಪುಟದ ಸಂಪಾದಕರು.

## ಅಧ್ಯಾಯ ೨

# ಹಿಂದೂ ಸಮಾಜ ವ್ಯವಸ್ಥೆ: ಅದರ ಮೂಲತತ್ವಗಳು

ಹಿಂದೂ ಸಮಾಜ ವ್ಯವಸ್ಥೆಯ ಲಕ್ಷಣವೇನು? ಅದು ಮುಕ್ತ ಸಾಮಾಜಿಕ ವ್ಯವಸ್ಥೆಯೇ? ಈ ಪ್ರಶ್ನೆಗೆ ಉತ್ತರ ಕೊಡಬೇಕಾದರೆ ಮುಕ್ತ ಸಮಾಜ ವ್ಯವಸ್ಥೆ ಎಂದರೇನು ಎಂದು ಸ್ವಲ್ಪಮಟ್ಟಿಗೆ ತಿಳಿದುಕೊಳ್ಳುವುದು ಅಗತ್ಯವಾಗುತ್ತದೆ. ಅದೃಷ್ಟವಶಾತ್ ಈ ವಿಚಾರದಲ್ಲಿ ಭಿನ್ನಾಭಿಪ್ರಾಯವಿಲ್ಲ. ಫ್ರೆಂಚ್ ಮಹಾಕ್ರಾಂತಿಯಾದಾಗಿನಿಂದ ಮುಕ್ತ ಸಮಾಜ ವ್ಯವಸ್ಥೆಯ ಮೂಲಾಂಶಗಳ ಬಗೆಗೆ ಅಭಿಪ್ರಾಯ ಭೇದ ಉಳಿಯಲಿಲ್ಲ. ಈ ಮೂಲಾಂಶಗಳು ಹಲವಿರಬಹುದು. ಆದರೆ ಎರಡು ಅತ್ಯಂತ ಮೂಲಭೂತವಾದವು. ಸ್ಥೂಲವಾಗಿ ಹೇಳುವುದಾದರೆ ಅವು ಎರಡು. ಮೊದಲನೆಯದು: ಇಲ್ಲಿ ವ್ಯಕ್ತಿಯೇ ಅಂತಿಮ ಲಕ್ಷ್ಯ. ಸಮಾಜದ ಧ್ಯೇಯ ಏನಿದ್ದರೂ ವ್ಯಕ್ತಿಯ ಬೆಳವಣಿಗೆ ಮತ್ತು ಅವನ ವ್ಯಕ್ತಿತ್ವದ ವಿಕಾಸ. ಸಮಾಜವು ವ್ಯಕ್ತಿಗಿಂತ ಮೇಲಲ್ಲ. ಒಂದು ವೇಳೆ ವ್ಯಕ್ತಿಯು ಸಮಾಜದ ಅಧೀನನಾಗುವುದಾದರೆ ಅದು ಅಂತಹ ಅಧೀನತೆಯು ಅವನ ಒಳಿತಿಗಾಗಿ ಇದ್ದಾಗ ಮಾತ್ರ ಹಾಗೂ ತೀರಾ ಅಗತ್ಯವಾದ ಮಿತಿಯವರೆಗೆ ಮಟ್ಟಿಗೆ.

ಎರಡನೆಯ ಮೂಲಾಂಶ ಇದು: ಸಮಾಜದ ಸದಸ್ಯರ ನಡುವೆ ಹೊಂದಾಣಿಕೆಯ ಜೀವನವನ್ನು, ಸ್ವಾತಂತ್ರ್ಯ, ಸಮಾನತೆ ಮತ್ತು ಸೋದರತ್ವಗಳನ್ನು ಆಧರಿಸಿದ ಪರಿಗಣನೆಯಿಂದ ವಿಚಾರ ಮಾಡಬೇಕು.

ಮುಕ್ತ ಸಮಾಜ ವ್ಯವಸ್ಥೆಗೆ ಈ ಎರಡು ಮೂಲಾಂಶಗಳು ಏಕೆ ಮೂಲಭೂತವಾದವು?

ಸಾಮಾಜಿಕ ಉದ್ದೇಶಗಳಿಗಾಗಿ ವ್ಯಕ್ತಿಯು ಏಕೆ ಸಾಧನವಾಗದೆ ಲಕ್ಷ್ಯವಾಗಬೇಕು? ಈ ಪ್ರಶ್ನೆಗೆ ಉತ್ತರ ಪಡೆಯಬೇಕಾದರೆ ಮಾನವ ವ್ಯಕ್ತಿ ಎಂದು ಕರೆದಾಗ ನಮ್ಮ ಅರ್ಥ ಏನು ಎಂಬುದನ್ನು ಕರಾರುವಕ್ಕಾಗಿ ತಿಳಿದುಕೊಳ್ಳುವುದು ಅತ್ಯಗತ್ಯ.

ಮಾನವ ಹಕ್ಕುಗಳನ್ನು ರಕ್ಷಿಸುವ ಸಲುವಾಗಿ ನಮ್ಮ ಎಲ್ಲ ಅಮೂಲ್ಯ ಸಂಪತ್ತನ್ನು ಕೊನೆಗೆ ಜೀವಗಳನ್ನೂ ಏಕೆ ತ್ಯಾಗ ಮಾಡಬೇಕು? ಇದಕ್ಕೆ ಪ್ರೊ. ಜ್ಯಾಕ್ಸ್ ಮ್ಯಾರಿಟೆನ್ ಕೊಟ್ಟ ಉತ್ತರಕ್ಕಿಂತ ಉತ್ತಮವಾದುದು ಬೇರೆ ಯಾವುದೂ ದೊರಕಲಾರದು. 'ದಿ ಕಾಂಕ್ವೆಸ್ಟ್ ಆಫ್ ಫ್ರೀಡಮ್' ಎಂಬ ಪ್ರಬಂಧದಲ್ಲಿ ಆತ ಹೇಳುತ್ತಾನೆ:[೧]

> "ಮನುಷ್ಯ ವ್ಯಕ್ತಿ ಎಂದು ಮಾತಾಡುವಾಗ ಸರಿಯಾಗಿ ನಮ್ಮ ಅರ್ಥವೇನು? ಮನುಷ್ಯನು ಒಬ್ಬ ವ್ಯಕ್ತಿ ಎಂದರೆ ಅವನು ಒಬ್ಬ ವ್ಯಕ್ತಿ ಮಾತ್ರ ಎಂದರ್ಥವಲ್ಲ ಒಂದು ಪರಮಾಣು, ಒಂದು ಹುಲ್ಲಿನ ದಳ, ಒಂದು ನೊಣ ಅಥವಾ ಒಂದು ಆನೆ ಇವೂ ವ್ಯಕ್ತಿ ಎಂಬ ಅರ್ಥದಲ್ಲಲ್ಲ. ಮಾನವನು ತನ್ನ ಬುದ್ಧಿಶಕ್ತಿ ಹಾಗೂ ಇಚ್ಛಾಶಕ್ತಿಯನ್ನು ತನ್ನ ಕೈಯಲ್ಲಿ ಇಟ್ಟುಕೊಳ್ಳಬಲ್ಲ ವ್ಯಕ್ತಿ. ಅವನು ಕೇವಲ ಭೌತಿಕ ವಸ್ತುವಾಗಿ ಇರುವುದಿಲ್ಲ. ಜ್ಞಾನ–ಪ್ರೇಮಗಳ ಮೂಲಕವಾಗಿ ಒಂದು ಆಧ್ಯಾತ್ಮಿಕ ಅತೀತ ವ್ಯಕ್ತಿತ್ವವನ್ನೂ ಹೊಂದಿದ್ದಾನೆ. ಇದರಿಂದಾಗಿ, ಒಂದು ದೃಷ್ಟಿಯಲ್ಲಿ ಅವನು ತಾನೇ ವಿಶ್ವವಾಗಿದ್ದಾನೆ. ಪಿಂಡಾಂಡವಾಗಿದ್ದಾನೆ. ಬುದ್ಧಿಶಕ್ತಿಯಿಂದ

---

೧. 'ಫ್ರೀಡಮ್ – ಇಟ್ಸ್ ಮೀನಿಂಗ್: ರುತ್ ನಂದ ಕಿಷನ್, ಪು. ೨೧೪.

ಬ್ರಹ್ಮಾಂಡವನ್ನೇ ಅವನು ಒಳಗೊಳ್ಳಬಹುದು. ತನ್ನ ಪ್ರೇಮದಿಂದ ಅವನು ತಾನೆ ಆಗಿರುವ ಇತರರಿಗೆ ತನ್ನನ್ನು ನೀಡಬಲ್ಲನು. ಈ ಸಂಬಂಧಕ್ಕೆ ಸರಿಸಮನಾದುದು ಈ ಭೌತ ವಿಶ್ವದಲ್ಲಿ ಬೇರೆ ಯಾವುದೂ ಇಲ್ಲ. ಮಾನವನಲ್ಲಿ ಈ ಲಕ್ಷಣಗಳಿವೆ. ಗರ್ಭದಿಂದ ಗೋರಿಯವರೆಗೆ ಅವನ ನಾಶ ಹೊಂದುವ ಮಾಂಸ ಮೂಳೆಗಳ ರಾಶಿಯನ್ನು ಆತ್ಮವು ಚಾಲನೆಗೊಳಪಡಿಸುತ್ತದೆ, ಸಜೀವಗೊಳಿಸುತ್ತದೆ. ಎಂದೆಂದಿಗೂ ಪರಮವಾಗಿರುವ ಆತ್ಮವೇ ವ್ಯಕ್ತಿತ್ವದ ಬೇರು. ಆದ್ದರಿಂದ ವ್ಯಕ್ತಿತ್ವದ ಕಲ್ಪನೆಯು ಸಮಗ್ರತೆ ಹಾಗೂ ಸ್ವಾತಂತ್ರ್ಯಗಳ ಕಲ್ಪನೆಯನ್ನು ಒಳಗೊಳ್ಳುತ್ತದೆ. ಒಬ್ಬ ವ್ಯಕ್ತಿಯು ಎಷ್ಟೇ ಬಡವನಾಗಿರಲಿ, ಶೋಷಿತನಾಗಿರಲಿ, ಅವನ ವ್ಯಕ್ತಿತ್ವ ಸಮಗ್ರವಾದುದ್ದು, ಸ್ವತಂತ್ರ್ಯವಾದ ರೀತಿಯಲ್ಲಿ ಉಳಿದುಕೊಂಡಿರುವಂಥದು. ಮನುಷ್ಯನು ಒಬ್ಬ ವ್ಯಕ್ತಿ ಎಂದರೆ ಅದರ ಅರ್ಥ ಅಸ್ತಿತ್ವದ ಅಂತರಾಳದಲ್ಲಿ ಅವನು ಭಾಗಕ್ಕಿಂತ ಹೆಚ್ಚುಮಟ್ಟಿಗೆ ಪೂರ್ಣನಾಗಿದ್ದಾನೆ, ದಾಸನಾಗಿರುವುದಕ್ಕಿಂತ ಹೆಚ್ಚು ಮಟ್ಟಿಗೆ ಸ್ವತಂತ್ರ್ಯನಾಗಿದ್ದಾನೆ ಎಂದು. ಅವನು ಬ್ರಹ್ಮಾಂಡವಾಗಿರುವ ಮಹದ್ ವಸ್ತುವಿನ ಒಂದು ಸೂಕ್ಷ್ಮವಾದ ತುಣುಕು. ಅವನೇ ವಿಶ್ವವಾಗಿದ್ದಾನೆ. ಅಖಂಡ ಪರಿಪೂರ್ಣದಲ್ಲಿ ಭಾಗವಹಿಸುವ ಒಬ್ಬ ತಿರುಪೆಯವನು ಕೇವಲ ಬಾಹ್ಯ ಮೌಲ್ಯವುಳ್ಳ ಮಾಂಸದ ಮುದ್ದೆ. ಸ್ವರ್ಗವನ್ನು ಪ್ರವೇಶಿಸುವ ಒಂದು ಗರಿಕೆಯ ದಳ. ಮಾನವನು ಭಗವಂತನ ಪ್ರತಿರೂಪ ಎಂದು ಧಾರ್ಮಿಕ ಚಿಂತನೆಯು ಹೇಳುವುದು ಈ ತಾತ್ವಿಕ ಅಚ್ಚರಿಯನ್ನೇ. ವ್ಯಕ್ತಿಯ ಬೆಲೆ, ಅವನ ಗಾಂಭೀರ್ಯ, ಗೌರವಗಳು, ಹಕ್ಕುಗಳು ಇವೆಲ್ಲ ಸಹಜವಾಗಿಯೇ ಪವಿತ್ರ ಎಂದು ಹೇಳುವ ವರ್ಗಕ್ಕೆ ಸೇರಿದವು. ಸಕಲ ಜೀವಿಗಳ ತಂದೆಯಾದ ಭಗವಂತನ ಮುದ್ರೆಯನ್ನು ಹೊತ್ತಿರುವಂಥವು.

ಸಮಾನತೆ ಏಕೆ ಮೂಲಾಂಶವಾಗಿದೆ? ಈ ವಿಷಯವನ್ನು ಅತ್ಯುತ್ತಮ ರೀತಿಯಲ್ಲಿ ಪ್ರೊಫೆಸರ್ ಬಿಯರ್ಡ್ ಬಹಳ ಸೊಗಸಾಗಿ ನಿರೂಪಿಸಿದ್ದಾರೆ. 'ರಾಜಕೀಯ ಚಿಂತನೆಯಲ್ಲಿ ಸ್ವಾತಂತ್ರ್ಯ' (Freedom in Political Thought) ಎಂಬ ಪ್ರಬಂಧದಲ್ಲಿ ಆತನು ಹೇಳಿರುವ ಮಾತುಗಳಲ್ಲಿ ಸ್ವಲ್ಪ ಭಾಗವನ್ನು ಉದ್ಧರಿಸುವುದಷ್ಟೆ ನಾನು ಮಾಡಬೇಕಾಗಿರುವ ಕೆಲಸ. ಆತ ಹೇಳುತ್ತಾನೆ:[೧]

"ಸಮಾನತೆ ಎಂಬ ಪದವೇ ದುರದೃಷ್ಟಕರವಾದದ್ದು. ಆದರೆ ಅದಕ್ಕೆ ಬದಲಿಯಾಗಿ ಬೇರೆ ಪದವು ಸಿಕ್ಕುವುದಿಲ್ಲ. ಸಮಾನತೆ ಎಂದರೆ ಅಳತೆ, ಪ್ರಮಾಣ ಸಂಖ್ಯೆ, ಪರಿಮಾಣ, ಮೌಲ್ಯ ಅಥವಾ ಗುಣ ಇವುಗಳಲ್ಲಿ ಒಂದೇ ಆಗಿರುವುದು ಅಥವಾ ಅದಕ್ಕೆ ಎಣೆಯಾಗಿರುವುದು. ಭೌತ ವಿಜ್ಞಾನದಲ್ಲೋ, ಗಣಿತ ವಿಜ್ಞಾನದಲ್ಲೋ ಅದು ಸಾಕಷ್ಟು ಖಚಿತವಾಗಿದೆ. ಆದರೆ ಮಾನವ ಜೀವಿಗಳಿಗೆ ಅನ್ವಯಿಸಿದಾಗ ಮಾತ್ರ ಅದು ಕರಾರುವಾಕ್ಕಾಗುವುದಿಲ್ಲ. ಈ ವಿಷಯದಲ್ಲಿ ಬಹಳ ಆಳವಾಗಿ ಅಧ್ಯಯನ ಚಿಂತನೆ ನಡೆಸಿರುವ ಬರಹಗಾರರು ಕೊಡುವ ಅರ್ಥವೇನೆಂದರೆ, ಮಾನವ ಜೀವಿಗಳು ಪರಿಮಾಣದಲ್ಲಿ ಮತ್ತು ಪ್ರಕಾರದಲ್ಲಿ ಮಾನವ ಜನಾಂಗಕ್ಕೆ ಸಮಾನವಾಗಿ ಅನ್ವಯವಾಗುವ ಮೂಲಭೂತ ಲಕ್ಷಣಗಳನ್ನು ಹೊಂದಿದ್ದಾರೆ ಎಂದು. ಮಾನವತೆಯಿಂದ ಬಾಹ್ಯಲಕ್ಷಣಗಳನ್ನು ದೇಶಕಾಲ ಬದ್ಧವಾದ ಆಚಾರ, ವಿಚಾರಗಳನ್ನು ತೆಗೆದುಬಿಟ್ಟರೆ ಅದು ಇಡಿ ವಿಶ್ವವನ್ನೇ ಒಳಗೊಳ್ಳುವಂತಹ ವ್ಯಾಪಕತೆಯುಳ್ಳ ಮೂಲ ಲಕ್ಷಣಗಳನ್ನು ಪ್ರಕಟಿಸುತ್ತದೆ. ಇದನ್ನು ಆದಿ ಲಕ್ಷಣಗಳು ಎನ್ನುವುದೋ, ಜೈವಿಕ ಅಗತ್ಯಗಳು ಎನ್ನುವುದೋ, ಉಳಿಕೆಗಳು

---

೧. ಅದೇ, ಪುಟಗಳು ೧೧–೧೯

ಎನ್ನುವುದೋ ಅದು ಮುಖ್ಯವಲ್ಲ. ಅಂತಹ ಲಕ್ಷಣಗಳು ಇವೆ ಎಂಬುದನ್ನಂತೂ ಯಾರೂ ಸತ್ಯವಾಗಿ ನಿರಾಕರಿಸುವಂತಿಲ್ಲ. ದೇಹ ಬಲದಲ್ಲಿ, ಕಲಾ ಕೌಶಲದಲ್ಲಿ, ಭೌತಿಕ ಸಂಪತ್ತಿನಲ್ಲಿ ಅಥವಾ ಮಾನಸಿಕ ಸಾಮರ್ಥ್ಯದಲ್ಲಿ ಅಸಮಾನತೆಗಳನ್ನು ಗುರುತಿಸುವುದು ಸುಲಭ. ಆದರೆ ಅದೂ ಒತ್ತುಕೊಡುವ ವಿಚಾರವಷ್ಟೆ. ಅಂತಿಮವಾಗಿ ಉಳಿಯುವುದು ಕೆಲವು ಮೂಲ ಲಕ್ಷಣಗಳು ಎಲ್ಲ ಮಾನವ ಜೀವಿಗಳಲ್ಲೂ ಕಾಣಿಸುತ್ತವೆ ಎಂಬ ವಾಸ್ತವಾಂಶ. ಅವುಗಳ ಸ್ವಭಾವ ಮತ್ತು ಸ್ವರೂಪಗಳನ್ನು 'ನೈತಿಕ ಸಮಾನತೆ' ಎಂಬ ಒಂದು ಪದಗುಚ್ಛದಲ್ಲಿ ಅಡಕಗೊಳಿಸಬಹುದು.

'ನೈತಿಕ' ಎಂಬ ಪದದ ಮೇಲೆ ಒತ್ತುಕೊಡಬೇಕಾಗುತ್ತದೆ. ಅನಾದಿಕಾಲದಿಂದಲೂ ದೇಹ ಬಲ, ಕಲಾ ಕೌಶಲ, ಸಿರಿ ಸಂಪತ್ತು ಮುಂತಾದವುಗಳಲ್ಲಿ ಮಾನವ ಜೀವಿಗಳು ಸಮಾನರಾಗಿಲ್ಲ ಎಂದು ಹೇಳುವುದು ವಿಮರ್ಶಕರಿಗೆ ಅಭ್ಯಾಸವಾಗಿಬಿಟ್ಟಿದೆ. ಈ ಟೀಕೆ ನಿಷ್ಕಾರಣವಾದದ್ದು ಹಾಗು ಅಸಂಗತವಾದದ್ದು. ನೈತಿಕ ಸಮಾನತೆಯನ್ನು ಪ್ರತಿಪಾದಿಸುವ ಯಾವನೇ ವಿಚಾರವಂತನು, ನಿರಂಕುಶತೆಯಿಂದಾಗಲಿ, ಸಾಂಸ್ಥಿಕ ಶಾಸನಗಳಿಂದಾಗಲಿ ಉಂಟಾಗುವ ಅಸಮಾನತೆಯನ್ನು ಹೇಳುವಾಗ ಕೂಡ ಮಾನವ ಜೀವಿಗಳಲ್ಲಿ ಅಸಮಾನತೆಗಳಿವೆ ಎಂಬ ಮಾತನ್ನು ನಿರಾಕರಿಸುವುದಿಲ್ಲ. ಸ್ವಾತಂತ್ರ್ಯದ ಘೋಷಣೆ ಎಲ್ಲ ಮಾನವರೂ ಸಮಾನರು ಎಂದು ಸಮರ್ಥಿ ಬಿಡುವುದಿಲ್ಲ. ಎಲ್ಲರೂ ಸಮಾನವಾಗಿ ಸೃಷ್ಟಿಗೊಂಡಿದ್ದಾರೆ ಎಂದು ಘೋಷಿಸುತ್ತದೆ ಅಷ್ಟೆ.

ಸಾರಾಂಶ ಇಷ್ಟು. 'ನೈತಿಕ ಸಮಾನತೆ' ಎಂಬ ಪದಗುಚ್ಛವು ನೈತಿಕ ಮೌಲ್ಯವನ್ನು ಒತ್ತಿ ಹೇಳುತ್ತದೆ. ಪೋಷಿಸಿಕೊಳ್ಳಬೇಕಾದ ಒಂದು ನಂಬಿಕೆಯನ್ನು, ಗೌರವಿಸಬೇಕಾದ ಹಕ್ಕುಗಳನ್ನು ಗುರುತಿಸುವುದನ್ನು ಹೇಳುತ್ತದೆ. ಗಣಿತ ವಿಜ್ಞಾನದಲ್ಲಿ ಒಂದು ಸಮಸ್ಯೆಯನ್ನು ಪರಿಹರಿಸಿ ತೋರಿಸುವ ಹಾಗೆ ಅದರ ಸಿಂಧುತ್ವವನ್ನು ಪ್ರಯೋಗತಃ ತೋರಿಸಲು ಸಾಧ್ಯವಿಲ್ಲ. ದೇಹ ಬಲ, ಕೌಶಲಗಳು, ಉದ್ಯಮಶೀಲತೆ, ಸಂಪತ್ತು ಇವುಗಳಿಗೆ ಎದುರಾಗಿ ಅದನ್ನು ಸ್ಥಿರೀಕರಿಸಲಾಗುತ್ತದೆ. ಮೇಲ್ಮಟ್ಟದ ದೇಹ ಬಲವಿದ್ದರೆ, ಅದಿರುವ ಕಾರಣದಿಂದಲೇ ಮಾನವ ಜೀವಿಗಳನ್ನು ಕೊಲ್ಲುವ, ತಿನ್ನುವ, ದಮನ ಮಾಡುವ ನೈತಿಕ ಹಕ್ಕು ಬರುತ್ತದೆ ಎಂಬುದನ್ನು ಅದು ತಿರಸ್ಕರಿಸುತ್ತದೆ. ಹಾಗೆಯೇ ಕಲಾ ಕೌಶಲ ಮತ್ತು ಸಂಪತ್ತುಗಳ ವಿಷಯದಲ್ಲೂ ನೈತಿಕ ಸಮಾನತೆಯ ಆದರ್ಶವು ಹಕ್ಕನ್ನು ನಿರಾಕರಿಸುತ್ತದೆ. ಹಾಗೆ ನೋಡಿದರೆ ಎಲ್ಲೋ ಕೆಲವರು ತಮಗೆ ಅತ್ಯಧಿಕ ದೇಹಬಲ, ಕಲಾ ಕೌಶಲ ಮತ್ತು ಸಂಪತ್ತು ಇದೆಯೆಂದು ಕಲ್ಪಿಸಿಕೊಂಡು ತಮಗಿಂತ ಕೆಳಗಿನವರ ಎಲ್ಲ ನೈತಿಕ ಹಕ್ಕುಗಳನ್ನೂ ತಡೆಹಿಡಿಯುತ್ತಾರೆ. ಅಂತಹ ಪರಿಸ್ಥಿತಿಯಲ್ಲಿ ಸರಕಾರವೂ, ಸಂಪತ್ತೂ ಅಧಿಕ ಬಲಶಾಲಿಗೆ ಹೋಗುತ್ತದೆ. ಗುಣಗಳು, ಕೌಶಲಗಳು ಅವನಿಗೆ ಸೇವೆ ಸಲ್ಲಿಸುತ್ತವೆ. ಗುಣಶಾಲಿಗಳೂ, ಕುಶಲಿಗಳೂ ಆಗಿದ್ದ ಗ್ರೀಕ್ ಗುಲಾಮರು ರೋಮನ್ ಚಕ್ರವರ್ತಿಗಳ ಇಚ್ಛೆ, ಕಾಮನೆ, ಬಯಕೆಗಳಿಗೆ ತಕ್ಕಂತೆ ಸೇವೆ ಸಲ್ಲಿಸಿದ ಹಾಗೆ. ನೈತಿಕ ಸಮಾನತೆಯ ವಿರುದ್ಧವಾಗಿ ಕೊನೆಯದೊಂದು ಕಹಿ ಟೀಕೆಯ ಮಾತನ್ನು ಆಡಿದರೆ ಅದರಲ್ಲೂ ಎಲ್ಲರೂ ಒಪ್ಪಿಕೊಳ್ಳಬೇಕಾದ ಆಚರಣೆಯು ಎಂಥದೋ ಇರುತ್ತದೆ. ಮಾನವರ ವ್ಯಕ್ತಿತ್ವಕ್ಕೆ ಗೌರವ ತೋರಿಸದ ಯಾವುದೇ ಸಮಾಜವು ದರೋಡೆಗಾರರ ಒಂದು ತಂಡ ಅಷ್ಟೆ.

ಇನ್ನು ಸೋದರತ್ವ ಎನ್ನುವುದು ಏಕೆ ಮೂಲಾಂಶವಾಗುತ್ತದೆ?

ಜನರನ್ನು ಗೌರವದಿಂದ, ಪ್ರೇಮದಿಂದ ನೋಡುವುದು, ತನ್ನ ನೆರೆಯವರ ಜೊತೆಯಲ್ಲಿ ಒಂದಾಗಿ ಜೀವಿಸುವುದು – ಈ ವ್ಯವಸ್ಥೆಗೆ ಸೋದರತ್ವ ಎಂದು ಹೆಸರು. ಈ ಮಾತನ್ನು ಪಾಲ್ ಹೀಗೆ ಹೇಳಿದ್ದಾರೆ: "ಎಲ್ಲ ದೇಶಗಲ ಜನರೂ ಒಂದೇ ರಕ್ತಕ್ಕೆ ಸೇರಿದ್ದಾರೆ. ಗ್ರೀಕ್ ಎಂದಿಲ್ಲ, ಯೆಹೂದ್ಯ ಎಂದಿಲ್ಲ, ಗುಲಾಮ ಎಂದಿಲ್ಲ, ಸ್ವತಂತ್ರ ಎಂದಿಲ್ಲ, ಗಂಡೆಂದಿಲ್ಲ, ಹೆಣ್ಣೆಂದಿಲ್ಲ. ಯೇಸುಕ್ರಿಸ್ತನಿಗೆ ಎಲ್ಲರೂ ಒಂದೇ." ಪಿಲ್‌ಗ್ರಿಮ್ ಫಾದರರು ಪ್ಲಿಮತ್‌ನಲ್ಲಿ ಬಂದಿಳಿದಾಗ ಇದೇ ಅಭಿಪ್ರಾಯ ವ್ಯಕ್ತಪಡಿಸಿದರು. "ದೇವನ ಅತಿ ಪವಿತ್ರ ಆದೇಶದಂತೆ ನಾವೆಲ್ಲ ಒಂದೇ ದೇಹದ ಹಾಗೆ ಬೆಸೆದುಕೊಂಡಿದ್ದೇವೆ.... ಅದರಿಂದಾಗಿಯೇ ಒಬ್ಬರು ಇನ್ನೊಬ್ಬರ ಯೋಗಕ್ಷೇಮ ನೋಡಿಕೊಳ್ಳುತ್ತಾ ಒಟ್ಟಾಗಿ ಎಲ್ಲರ ಹಿತವನ್ನೂ ರಕ್ಷಿಸುತ್ತೇವೆ." ಈ ಭಾವನೆಗಳೆಲ್ಲ ಸೋದರತ್ವದ ತಿರುಳಾಗಿವೆ. ಸೋದರತ್ವವು ಸಾಮಾಜಿಕತೆಯನ್ನು ಬಲಪಡಿಸುತ್ತದೆ, ಪ್ರತಿಯೊಬ್ಬ ವ್ಯಕ್ತಿಗೂ ಇತರರ ಹಿತವನ್ನು ಕುರಿತು ಆಲೋಚನೆ ಮಾಡುವ ಬಲವಾದ ಆಸಕ್ತಿಯನ್ನು ಮೂಡಿಸುತ್ತದೆ. ತನ್ನ ಅನಿಸಿಕೆಗಳನ್ನು ಅವರ ಒಳಿತಿನೊಂದಿಗೆ ಸಮೀಕರಿಸುವ ಅಥವಾ ಕೊನೆಯ ಪಕ್ಷ ಅದಕ್ಕಾಗಿ ವಾಸ್ತವಿಕವಾಗಿ ಪ್ರಯತ್ನಿಸುವ ಅಪೇಕ್ಷೆಯನ್ನು ಉಂಟುಮಾಡುತ್ತದೆ. ಸೋದರತ್ವದ ವಿನ್ಯಾಸದಿಂದಾಗಿ ತಾನು ಇತರರ ಬಗೆಗೆ ಗೌರವ ಹೊಂದಿರುವವನು ಎಂದು ಅರ್ಥ ಮಾಡಿಕೊಳ್ಳುತ್ತಾನೆ. ಅವನಲ್ಲಿ ಇತರರ ಹಿತ ಎನ್ನುವುದು ಅತ್ಯಂತ ಸಹಜವಾಗಿ ಅತ್ಯಗತ್ಯವಾಗಿ ಪ್ರವರ್ತಿಸುತ್ತದೆ.

ನಮ್ಮ ಬದುಕಿನ ಬೇರೆ ಭೌತಕ ಪರಿಸ್ಥಿತಿಗಳ ಹಾಗೆಯೇ ಇದೂ ಸಹಜ ಪ್ರಕ್ರಿಯೆ ಆಗುತ್ತದೆ. ಎಲ್ಲಿ ಜನರು ಇತರರ ಬಗೆಗೆ ಸಂಪೂರ್ಣವಾಗಿ ಸಹಾನುಭೂತಿ ಹೊಂದಿರುವುದಿಲ್ಲವೋ ಅಂಥಲ್ಲಿ ಅವರ ನಡವಳಿಕೆಯ ಹೊಂದಾಣಿಕೆ ಸಾಮಾನ್ಯ ದಿಕ್ಕಿನಲ್ಲಿ ವ್ಯಕ್ತವಾಗುವುದಿಲ್ಲ. ಸಾಮಾಜಿಕ ಭಾವನೆಯು ಯಾರಲ್ಲಿ ವಿಕಾಸಗೊಂಡಿಲ್ಲವೊ, ಆ ವ್ಯಕ್ತಿಯು ತನ್ನ ಸಹಜೀವಿಗಳನ್ನು ವೈರಿಗಳಂತೆ ನೋಡುತ್ತಾನೆ. ತಾನು ಬದುಕಿನಲ್ಲಿ ಯಶಸ್ಸು ಪಡೆಯಬೇಕಾದರೆ, ಸಂತೋಷವಾಗಿರಬೇಕಾದರೆ ಅವರನ್ನು ಸೋಲಿಸಬೇಕು ಎಂದೇ ಭಾವಿಸುತ್ತಾನೆ.

ಸ್ವಾತಂತ್ರ್ಯ ಎಂದರೇನು? ಮುಕ್ತ ಸಮಾಜ ವ್ಯವಸ್ಥೆಗೆ ಅದು ಏಕೆ ಅಗತ್ಯ?

ಸ್ವಾತಂತ್ರ್ಯ ಎರಡು ಬಗೆಯಾಗುತ್ತದೆ; ಪೌರ ಸ್ವಾತಂತ್ರ್ಯ ಹಾಗೂ ರಾಜಕೀಯ ಸ್ವಾತಂತ್ರ್ಯ. ಪೌರ ಸ್ವಾತಂತ್ರ್ಯ ಈ ಅಂಶಗಳನ್ನು ಹೊಂದಿರುತ್ತದೆ. (೧) ಚಲವಲನ ಸ್ವಾತಂತ್ರ್ಯ – ಸೂಕ್ತ ನ್ಯಾಯಾಂಗ ಕ್ರಮವಿಲ್ಲದೆ ವ್ಯಕ್ತಿಯನ್ನು ಬಂಧಿಸುವಂತಿಲ್ಲದ್ದು, (೨) ವಾಕ್ ಸ್ವಾತಂತ್ರ್ಯ (ಆಲೋಚನೆ, ಓದು, ಬರಹ, ಚರ್ಚೆ ಇವುಗಳ ಸ್ವಾತಂತ್ರ್ಯ ಇದರಲ್ಲೇ ಸೇರುತ್ತದೆ), ಮತ್ತು (೩) ಕ್ರಿಯಾ ಸ್ವಾತಂತ್ರ್ಯ.

ಮೊದಲನೆಯ ಬಗೆಯ ಸ್ವಾತಂತ್ರ್ಯ ಮೂಲಭೂತವಾದದ್ದು. ಮೂಲ ಸ್ವರೂಪ ಮಾತ್ರದ್ದಲ್ಲ. ಅದು ಅತ್ಯಂತ ಅಗತ್ಯವಾದದ್ದೂ ಹೌದು. ಅದರ ಮೌಲ್ಯದ ಬಗ್ಗೆ ಯಾವುದೇ ಸಂದೇಹಕ್ಕೆ ಎಡೆಯಿಲ್ಲ. ಎರಡನೆಯ ಬಗೆಯ ಸ್ವಾತಂತ್ರ್ಯವನ್ನು ಅಭಿಪ್ರಾಯ ಸ್ವಾತಂತ್ರ್ಯ ಎಂದೂ ಹೇಳಬಹುದು. ಅದು ಅನೇಕ ಕಾರಣಗಳಿಂದ ಮಹತ್ವದ್ದಾಗುತ್ತದೆ. ಬೌದ್ಧಿಕ, ನೈತಿಕ, ರಾಜಕೀಯ ಮತ್ತು ಸಾಮಾಜಿಕ ಪ್ರಗತಿಗೆ ಅದು ಅತ್ಯಗತ್ಯ ಪರಿಸ್ಥಿತಿ. ಅದು ಇಲ್ಲದ ಕಡೆ ಪರಿಸ್ಥಿತಿ ಏಕತಾನದ್ದಾಗಿ, ಎಲ್ಲ ಬಗೆಯ ಚಲನಶೀಲತೆ ಕುಂದುತ್ತದೆ.

ಕ್ರಿಯಾ ಸ್ವಾತಂತ್ರ್ಯವೆಂದರೆ, ತನಗೆ ಇಷ್ಟ ಬಂದ ಕೆಲಸ ಮಾಡಲು ವ್ಯಕ್ತಿಗೆ ಅವಕಾಶವಿರುವುದು. ಅದು ಔಪಚಾರಿಕವಾಗಿದ್ದರೆ ಸಾಲದು. ವಾಸ್ತವಿಕವಾಗಿ ಕೂಡ ಜಾರಿಯಲ್ಲಿರಬೇಕು. ಅದು ನಿರ್ದಿಷ್ಟ ಕಾರ್ಯಗಳನ್ನು ಮಾಡಲು ಇರುವ ಪರಿಣಾಮಕಾರಿಯಾದ ಸಾಮರ್ಥ್ಯವಾಗಬೇಕು. ಈ ಪ್ರಯೋಜನವನ್ನು ಪಡೆಯಲು ಸಾಧ್ಯವಿಲ್ಲದ ಕಡೆ ಸ್ವತಂತ್ರ್ಯವೂ ಇರುವುದಿಲ್ಲ. ಶೋಷಣೆ ಎಲ್ಲಿ ಇಲ್ಲವಾಗಿದೆಯೋ ಒಂದು ವರ್ಗವು

ಇನ್ನೊಂದು ವರ್ಗವನ್ನು ತುಳಿಯುತ್ತಿಲ್ಲವೋ, ಎಲ್ಲಿ ನಿರುದ್ಯೋಗವಿಲ್ಲವೋ, ಬಡತನವಿಲ್ಲವೋ, ಎಲ್ಲಿ ತನ್ನ ಕೆಲಸದ ಫಲವಾಗಿ ತನ್ನ ಕೆಲಸ, ಮನೆ, ಆಹಾರಗಳನ್ನು ಕಳೆದುಕೊಂಡು ಬಿಡುವ ಭೀತಿ ವ್ಯಕ್ತಿಗೆ ಇರುವುದಿಲ್ಲವೋ ಅಲ್ಲಿ ನಿಜವಾದ ಕ್ರಿಯಾ ಸ್ವಾತಂತ್ರ್ಯ ಇದೆ ಎಂದು ಹೇಳಬಹುದು.

ರಾಜಕೀಯ ಸ್ವಾತಂತ್ರ್ಯ ಇರುವುದು ವ್ಯಕ್ತಿಗೆ ಶಾಸನಗಳನ್ನು ರಚಿಸುವುದರಲ್ಲಿ, ಸರಕಾರಗಳ ಸ್ಥಾಪನೆ, ವಿಸರ್ಜನೆಗಳಲ್ಲಿ ಪಾಲು ಇರುವ ಹಕ್ಕಿನಲ್ಲಿ. ಸರಕಾರ ಇರುವುದಾದರೂ ಜನರಿಗೆ ಜೀವನ, ಸ್ವಾತಂತ್ರ್ಯ, ಸಂತೋಷಾನ್ವೇಷಣೆಗಳನ್ನು ಒದಗಿಸಿ ಕೊಡುವ ಸಲುವಾಗಿ. ಆದ್ದರಿಂದ ಸರಕಾರವು ಯಾರನ್ನು ರಕ್ಷಿಸುವುದು ತನ್ನ ಕರ್ತವ್ಯವಾಗಿದೆಯೋ, ಆ ಜನರಿಂದಲೇ ತನ್ನ ಅಧಿಕಾರವನ್ನು ಬಲವನ್ನೂ ಪಡೆದುಕೊಳ್ಳಬೇಕಾಗುತ್ತದೆ. ಆಳಲ್ಪಡುವವರ ಸಮ್ಮತಿಯಿಂದಲೇ ಸರಕಾರದ ಅಸ್ತಿತ್ವ, ಅಧಿಕಾರ ಮತ್ತು ಶಕ್ತಿ ಎಂದು ಹೇಳಿದಾಗ ಇರುವ ಅರ್ಥ ಇದೇ. ವಾಸ್ತವವಾಗಿ, ರಾಜಕೀಯ ಸ್ವಾತಂತ್ರ್ಯ ಎನ್ನುವುದು ಮಾನವ ವ್ಯಕ್ತಿತ್ವ ಮತ್ತು ಸಮಾನತೆಗಳ ತತ್ವದಿಂದ ಅನುಗಮನ ಮಾಡಿದ ತತ್ವವೇ ಸರಿ. ಏಕೆಂದರೆ ರಾಜಕೀಯವಾದ ಸಮಸ್ತ ಅಧಿಕಾರವೂ ಜನತೆಯಿಂದ ಬರುತ್ತದೆ. ತಮ್ಮ ಸಾರ್ವಜನಿಕವಾದ ಹಾಗೂ ಖಾಸಗಿಯಾದ ಜೀವನವನ್ನು ನಿರ್ದೇಶಿಸುವ, ನಿಯಂತ್ರಿಸುವ ಸಾಮರ್ಥ್ಯವನ್ನು ಅವರು ತಾವೇ ಹೊಂದಿರುತ್ತಾರೆಯೇ ಹೊರತು ಬೇರೆ ಯಾರೂ ಅಲ್ಲ ಎಂದು ಇದರ ಅರ್ಥವಾಗುತ್ತದೆ.

ಮುಕ್ತ ಸಮಾಜ ವ್ಯವಸ್ಥೆಯ ಈ ಎರಡು ಮೂಲ ಸಿದ್ಧಾಂತಗಳೂ ಪರಸ್ಪರ ಸಂಬಂಧಿಸಿವೆ. ಅವುಗಳನ್ನು ಬೇರ್ಪಡಿಸುವುದು ಸಾಧ್ಯವಿಲ್ಲ. ಮೊದಲನೆಯ ಸಿದ್ಧಾಂತವನ್ನು ಒಪ್ಪಿಕೊಂಡೊಡನೆ ಎರಡನೆಯ ಸಿದ್ಧಾಂತವು ತನಗೆ ತಾನೇ ಅನುಸರಿಸಿ ಬರುತ್ತದೆ. ಮಾನವ ವ್ಯಕ್ತಿತ್ವದ ಪಾವಿತ್ರ್ಯವನ್ನು ಒಪ್ಪಿಕೊಂಡೊಡನೆ, ಸ್ವಾತಂತ್ರ್ಯ, ಸಮಾನತೆ ಮತ್ತು ಸೋದರತ್ವಗಳ ಅಗತ್ಯವನ್ನೂ, ವ್ಯಕ್ತಿತ್ವ ವಿಕಾಸಕ್ಕೆ ತಕ್ಕ ಪರಿಸ್ಥಿತಿ ಎಂದು ಒಪ್ಪಿಕೊಳ್ಳಲೇಬೇಕಾಗುತ್ತದೆ.

## II

ಹಿಂದೂ ಸಮಾಜ ವ್ಯವಸ್ಥೆಯು ಈ ಸಿದ್ಧಾಂತಗಳನ್ನು ಎಷ್ಟುಮಟ್ಟಿಗೆ ಗೌರವಿಸುತ್ತದೆ? ಈ ಪರಿಶೀಲನೆ ಅತ್ಯಂತ ಅವಶ್ಯಕ. ಈ ಸೂತ್ರಗಳನ್ನು ಎಷ್ಟು ಮಟ್ಟಿಗೆ ಅದು ಪರಿಗಣಿಸುತ್ತದೋ ಅಷ್ಟರಮಟ್ಟಿಗೆ ಅದು ಮುಕ್ತ ಸಾಮಾಜಿಕ ವ್ಯವಸ್ಥೆ ಎಂದು ಕರೆಯಿಸಿಕೊಳ್ಳಲು ಅರ್ಹವಾಗುತ್ತದೆ.

ಹಿಂದೂ ಸಮಾಜ ವ್ಯವಸ್ಥೆಯು ವ್ಯಕ್ತಿಯನ್ನು ಗುರುತಿಸುತ್ತದೆಯೇ? ಅವನ ವಿಶಿಷ್ಟತೆಯನ್ನೂ ನೈತಿಕ ಹೊಣೆಗಾರಿಕೆಯನ್ನೂ ಗುರುತಿಸುತ್ತದೆಯೆ? ಅವನು ತನ್ನಷ್ಟಕ್ಕೆ ತಾನೇ ಗುರಿಯೂ ಆಗಿದ್ದಾನೆ, ವಿಕಲತೆಗಳಿಗೆ ವಶನಾಗಿರುವುದು ಮಾತ್ರವಲ್ಲದೆ, ಹಕ್ಕುಗಳಿಗೂ, ಕೊನೆಗೆ ಸರಕಾರದ ವಿರುದ್ಧವಾದ ಹಕ್ಕುಗಳಿಗೂ ಬಾಧ್ಯನಾಗಿರುತ್ತಾನೆ ಎಂಬುದನ್ನು ಗಮನಿಸುತ್ತದೆಯೇ? ಚರ್ಚೆಯ ಪ್ರಾರಂಭಕ್ಕೆ 'ಹಳೆಯ ಒಡಂಬಡಿಕೆ'ಯಲ್ಲಿ ಜಿಹೋವನು ಇಜೆಕೀಲ್‌ನಿಗೆ ಹೇಳುವ ಮಾತುಗಳನ್ನು ತೆಗೆದುಕೊಳ್ಳಬಹುದು:

> "ಗಮನಿಸು, ಎಲ್ಲ ಆತ್ಮಗಳೂ ನನ್ನವು. ತಂದೆಯ ಆತ್ಮದಂತೆಯೇ ಮಗನ ಆತ್ಮವೂ ನನ್ನದು. ಪಾಪ ಮಾಡುವ ಆತ್ಮವು ಸಾಯುವುದು.... ತಂದೆಯ ಪಾಪ ಕೃತ್ಯಗಳನ್ನು ಮಗನು ಹೊತ್ತುಕೊಳ್ಳುವುದಿಲ್ಲ. ಹಾಗೆಯೇ ಮಗನ ಪಾಪ ಕೃತ್ಯಗಳನ್ನು ತಂದೆಯೂ ಹೊತ್ತುಕೊಳ್ಳುವುದಿಲ್ಲ. ಧಾರ್ಮಿಕನಾದವನಿಗೆ ಧರ್ಮ ಪರತೆಯ ಫಲವುಂಟು, ದುಷ್ಟನಾದವನಿಗೆ ದುಷ್ಟತನದ ಫಲವುಂಟು."

ಇಲ್ಲಿ ವ್ಯಕ್ತಿಯ ಪ್ರತ್ಯೇಕತೆಯನ್ನೂ ಅವನ ನೈತಿಕ ಹೊಣೆಗಾರಿಕೆಯನ್ನೂ ಒತ್ತಿಹೇಳಲಾಗಿದೆ. ಹಿಂದೂ ಸಾಮಾಜಿಕ ವ್ಯವಸ್ಥೆಯಾದರೋ ವ್ಯಕ್ತಿಯನ್ನು ಸಾಮಾಜಿಕ ಉದ್ದೇಶದ ಕೇಂದ್ರ ಬಿಂದುವಾಗಿ ಪರಿಗಣಿಸುವುದಿಲ್ಲ. ಏಕೆಂದರೆ ಹಿಂದೂ ಸಮಾಜ ವ್ಯವಸ್ಥೆಯು ಮೂಲಭೂತವಾಗಿ ವರ್ಣ ಅಥವಾ ವರ್ಗದ ಮೇಲೆ ನಿಂತಿದೆಯೇ ಹೊರತು ವ್ಯಕ್ತಿಯ ಮೇಲಲ್ಲ. ಮೊದಲಿಗೆ, ಹಿಂದೂ ಸಾಮಾಜಿಕ ವ್ಯವಸ್ಥೆಯು ಸಾಂಪ್ರದಾಯಿಕವಾಗಿ ನಾಲ್ಕು ವರ್ಗಗಳನ್ನು ವಿಂಗಡಿಸಿ ತೋರಿಸಿತು: (೧) ಬ್ರಾಹ್ಮಣರು, (೨) ಕ್ಷತ್ರಿಯರು, (೩) ವೈಶ್ಯರು ಮತ್ತು (೪) ಶೂದ್ರರು. ಇಂದು ಈ ವ್ಯವಸ್ಥೆಯಲ್ಲಿ ಐದು ವರ್ಗಗಳಿವೆ. ಐದನೆಯದನ್ನು ಪಂಚಮರು ಅಥವಾ ಅಸ್ಪೃಶ್ಯರು ಎಂದೂ ಕರೆಯುತ್ತಾರೆ. ಹಿಂದೂ ಸಮಾಜದ ಮೂಲ ಘಟಕ ಬಿಡಿಯಾಗಿ ಬ್ರಾಹ್ಮಣನಾಗಲಿ, ಕ್ಷತ್ರಿಯನಾಗಲಿ, ವೈಶ್ಯನಾಗಲಿ, ಶೂದ್ರನಾಗಲಿ ಅಥವಾ ಪಂಚಮನಾಗಲಿ ಅಲ್ಲ. ಮದುವೆ, ವಾರಸುದಾರಿಕೆಗಳ ವಿಷಯದಲ್ಲಿ ಹೊರತು ಮಿಕ್ಕಂತೆ ಕುಟುಂಬವೂ ಸಮಾಜದ ಮೂಲ ಘಟಕವಲ್ಲ. ಹಿಂದೂ ಸಮಾಜದ ಮೂಲ ಘಟಕ ವರ್ಗ ಅಥವಾ ಹಿಂದೂಗಳು ಬಳಸಿದ ಪರಿಭಾಷೆಯಲ್ಲೇ ಹೇಳುವುದಾದರೆ ಅದು ವರ್ಣ. ಈ ಸಮಾಜ ವ್ಯವಸ್ಥೆಯಲ್ಲಿ ವ್ಯಕ್ತಿಗತ ಗುಣಾರ್ಹತೆಗೆ ಅವಕಾಶವಿಲ್ಲ. ವ್ಯಕ್ತಿಗತ ನ್ಯಾಯದ ಪರಿಗಣನೆಯಿಲ್ಲ. ವ್ಯಕ್ತಿಗೆ ಏನಾದರೂ ಅಧಿಕಾರವಿದ್ದರೆ ಅದು ವೈಯಕ್ತಿಕವಾಗಿ ಅವನಿಗೆ ಸಲ್ಲಬೇಕಾದದ್ದು ಎಂಬುದರಿಂದ ಅಲ್ಲ. ಈ ಸೌಲಭ್ಯ ಆ ವರ್ಗಕ್ಕೆ ಸಲ್ಲುವಂಥದು. ಅವನು ಅದನ್ನು ಅನುಭವಿಸುತ್ತಿದ್ದರೆ ಅದಕ್ಕೆ ಕಾರಣ ಅವನು ಆ ವರ್ಗಕ್ಕೆ ಸೇರಿರುವುದು. ಇದಕ್ಕೆ ವಿರುದ್ಧವಾದದ್ದೂ ಹಾಗೆಯೇ. ಒಬ್ಬ ವ್ಯಕ್ತಿಯು ಒಂದು ಅನ್ಯಾಯವನ್ನು ಅನುಭವಿಸುತ್ತಿರುವುದಲ್ಲ. ಆ ಅನ್ಯಾಯವು ಆ ವರ್ಗದ ಮೇಲೆ ಸಮಷ್ಟಿಯಾಗಿ ಹೇರಿದ ಅನ್ಯಾಯ. ಅವನು ಅದನ್ನು ಅನುಭವಿಸುವುದರ ಕಾರಣ ಆ ವರ್ಗಕ್ಕೆ ಸೇರಿರುವುದು.

ಹಿಂದೂ ಸಮಾಜ ವ್ಯವಸ್ಥೆಯು ಸೋದರತ್ವವನ್ನು ಪರಿಗಣಿಸುತ್ತದೆಯೆ? ಕ್ರಿಶ್ಚಿಯನ್ನರಂತೆ ಅಥವಾ ಮುಸ್ಲಿಮರಂತೆ ಭಗವಂತನು ಮಾನವರನ್ನು ಸೃಷ್ಟಿಸಿದನು ಎಂದು ಹಿಂದೂಗಳು ನಂಬುತ್ತಾರೆ. ಆದರೆ ಕ್ರಿಶ್ಚಿಯನರು ಮತ್ತು ಮುಸ್ಲಿಮರು ಇದನ್ನು ಪೂರ್ಣ ಸತ್ಯವೆಂದು ನಂಬಿದರೆ, ಹಿಂದೂಗಳು ಇದನ್ನು ಭಾಗಶಃ ಸತ್ಯವೆಂದು ನಂಬುತ್ತಾರೆ. ಅವರ ಪ್ರಕಾರ ಈ ಸತ್ಯದಲ್ಲಿ ಎರಡು ಭಾಗಗಳಿವೆ. ಭಗವಂತನು ಮಾನವನ್ನು ಸೃಷ್ಟಿಸಿದನು ಎನ್ನುವುದು ಮೊದಲನೆಯ ಭಾಗ. ಎರಡನೆಯದು ಭಗವಂತನು ಬೇರೆ ಬೇರೆ ಜನರನ್ನು ತನ್ನ ದಿವ್ಯ ದೇಹದ ಬೇರೆ ಬೇರೆ ಭಾಗಗಳಿಂದ ಸೃಷ್ಟಿಸಿದನು ಎನ್ನುವುದು.... ಹಿಂದೂಗಳು ಈ ಎರಡನೆಯ ಭಾಗವನ್ನೇ ಹೆಚ್ಚು ಮುಖ್ಯವಾದದ್ದು ಹಾಗೂ ಮೂಲಭೂತವಾದದ್ದು ಎಂದು ಭಾವಿಸುತ್ತಾರೆ.

ಮಾನವರು ದೈವದ ಬೇರೆ ಬೇರೆ ಭಾಗಗಳಿಂದ ಜನಿಸಿದರು ಎಂಬ ಸಿದ್ಧಾಂತದ ಮೇಲೆ ಆಧಾರಗೊಂಡಿರುವ ಹಿಂದೂ ಸಮಾಜ ವ್ಯವಸ್ಥೆಯಲ್ಲಿ ಪಾಲ್ ಆಗಲಿ ಪಿಲ್‌ಗ್ರಿಮ್ ಫಾದರ್ಸ್ ಆಗಲಿ ವ್ಯಕ್ತಪಡಿಸಿದ ದೃಷ್ಟಿಕೋನಕ್ಕೆ ಸ್ಥಳವೇ ಇಲ್ಲ. ಬ್ರಾಹ್ಮಣನು ಕ್ಷತ್ರಿಯನಿಗೆ ಸೋದರನಾಗಲಾರ. ಏಕೆಂದರೆ ಬ್ರಾಹ್ಮಣನು ಬಾಯಿಂದಲೂ, ಕ್ಷತ್ರಿಯನು ಬಾಹುಗಳಿಂದಲೂ ಜನಿಸಿದ್ದಾನೆ. ಕ್ಷತ್ರಿಯನು, ವೈಶ್ಯನ ಸೋದರನಾಗಲು ಸಾಧ್ಯವಿಲ್ಲ. ಏಕೆಂದರೆ ಅವನು ತೋಳುಗಳಿಂದಲೂ, ವೈಶ್ಯನು ತೊಡೆಗಳಿಂದಲೂ ಹುಟ್ಟಿದ್ದಾನೆ. ಯಾರೊಬ್ಬನೂ ಇನ್ನೊಬ್ಬನ ಸೋದರನಲ್ಲವಾದ್ದರಿಂದ ರಕ್ಷಕನೂ ಆಗಲಾರ.

ಬೇರೆ ಬೇರೆ ವರ್ಗಗಳು ದಿವ್ಯ ದೇಹದ ಬೇರೆ ಬೇರೆ ಭಾಗಗಳಿಂದ ಸೃಷ್ಟಿಗೊಂಡಿವೆ ಎಂಬ ಸಿದ್ಧಾಂತದಿಂದಾಗಿ ಅವರು ಬೇರೆ ಬೇರೆಯಾಗಿಯೇ ವಿಶಿಷ್ಟವಾಗಿಯೇ ಉಳಿಯಬೇಕೆಂಬುದೇ ದೈವೀ ಸಂಕಲ್ಪ ಎಂಬ ನಂಬಿಕೆಗೆ ಎಡೆಗೊಟ್ಟಿದೆ. ಹಿಂದೂವಿನ ಮನಸ್ಸಿನಲ್ಲಿ ತಾನು ಪ್ರತ್ಯೇಕವಾಗಿರಬೇಕಾದವನು, ಇತರ ಹಿಂದೂಗಳಿಗಿಂತ ಬೇರೆಯಾದವನು ಎಂಬ ಹುಟ್ಟರಿವನ್ನು ಮೂಡಿಸಿರುವುದು ಇದೇ ನಂಬಿಕೆಯೇ.

ಪವಿತ್ರ ಸೂತ್ರವನ್ನು ಹಾಕುವುದರ ಮೂಲಕ ದೇಹಕ್ಕೆ ಗುಣಾತಿಶಯವನ್ನು ಆರೋಪಿಸುವ ಉಪನಯನ ಸಂಸ್ಕಾರವನ್ನು ಕುರಿತು 'ಮನುಸ್ಮೃತಿ'ಯು ವಿಧಿಸಿರುವ ಈ ನಿಯಮಗಳನ್ನು ಹೋಲಿಸಿ ನೋಡಿ:

II–೩೬ "ಗರ್ಭಧಾರಣೆಯಾದ ನಂತರ ಎಂಟನೆಯ ವರ್ಷದಲ್ಲಿ ಬ್ರಾಹ್ಮಣನಿಗೆ ಉಪನಯನ ಸಂಸ್ಕಾರವನ್ನು ನಡೆಸತಕ್ಕದ್ದು. ಗರ್ಭಧಾರಣೆಯಾದ ಅನಂತರದ ಹನ್ನೊಂದನೆಯ ವರ್ಷದಲ್ಲಿ ಕ್ಷತ್ರಿಯನಿಗೂ, ಹನ್ನೆರಡನೆಯ ವರ್ಷದಲ್ಲಿ ವೈಶ್ಯನಿಗೂ ನಡೆಸಬೇಕು."

II–೪೧ "ವಿದ್ಯಾರ್ಥಿಗಳು ತಮ್ಮ ಜಾತಿಯ ಅನುಕ್ರಮದಲ್ಲಿ ಮೇಲು ಹೊದಿಕೆಯಾಗಿ ಕೃಷ್ಣ ಮೃಗ, ಚುಕ್ಕೆ ಜಿಂಕೆ, ಟಗರುಗಳ ಚರ್ಮಗಳನ್ನು ಧರಿಸಲಿ. ಕೆಳ ಉಡುಗೆಗೆ ನಾರು ಅಥವಾ ಉಣ್ಣೆಯಿಂದ ತಯಾರಿಸಿದ ವಸ್ತ್ರ ಧರಿಸಲಿ."

II-೪೨ "ಬ್ರಾಹ್ಮಣನ ನಡುಪಟ್ಟಿಯಲ್ಲಿ ಮುಂಜ ಹುಲ್ಲಿನ ಮೂರು ಎಳೆಗಳಿರುತ್ತವೆ. ನಯವಾಗಿ ಮೃದುವಾಗಿರುತ್ತವೆ. ಕ್ಷತ್ರಿಯನದು ಬಿಲ್ಲು ಹುರಿಯಾದ ಪೂರ್ವ ನಾರಿನಿಂದ ಮಾಡಿದ್ದಾಗಿರುತ್ತದೆ. ವೈಶ್ಯನದು ಸೆಣಬುನಾರಿನಿಂದ ತಯಾರಿಸಿದ್ದಾಗಿರುತ್ತದೆ."

II-೪೩ "ಮುಂಜ ಹುಲ್ಲಾಗಲಿ (ಅಥವಾ ಇತರ ಬಗೆಯದಾಗಲಿ) ದೊರಕದೆ ಹೋದ ಪಕ್ಷದಲ್ಲಿ (ಉಡಿದಾರಗಳನ್ನು) ಕುಶ, ಅಶ್ಮಾಂತಕ ಮತ್ತು ಬಲ್ಬಗ ನಾರುಗಳಿಂದ ತಯಾರಿಸಬಹುದು. ಒಂದು ಮುಪ್ಪುರಿ ಗಂಟನ್ನೋ ಅಥವಾ ಮೂರು ಅಥವಾ ಐದು (ಕುಟುಂಬದ ರೂಢಿಗೇ ತಕ್ಕಂತೆ) ಗಂಟುಗಳನ್ನೊ ಹಾಕಬಹುದು."

II-೪೪ "ಬ್ರಾಹ್ಮಣನ ಉಪವೀತವು ಹತ್ತಿಯ ನೂಲಿನಿಂದ ಆಗಿರಬೇಕು. ಬಲಕ್ಕೆ ಹಾಕಿಕೊಂಡಿರಬೇಕು. ಮೂರು ಎಳೆಗಳಿಂದ ಕೂಡಿರಬೇಕು. ಕ್ಷತ್ರಿಯನ ಉಪವೀತವು ಸೆಣಬಿನ ದಾರದಿಂದಲೂ ವೈಶ್ಯನದು ಉಣ್ಣೆಯ ಎಳೆಗಳಿಂದಲೂ ತಯಾರಾಗಿರಬೇಕು."

II-೪೫ "ಧರ್ಮಶಾಸ್ತ್ರದ ಪ್ರಕಾರ ಬ್ರಾಹ್ಮಣನು ಕೈಯಲ್ಲಿ ಬಿಲ್ವ ಅಥವಾ ಪಲಾಶದ (ಮುತ್ತುಗ) ದಂಡವನ್ನು ಹಿಡಿಯಬೇಕು. ಕ್ಷತ್ರಿಯನು ವಟ ಅಥವಾ ಖದಿರ ದಂಡವನ್ನು, ವೈಶ್ಯನು ಪಿಲ್ಲು ಅಥವಾ ಉದುಂಬರ ದಂಡವನ್ನು ಹಿಡಿಯಬೇಕು."

II-೪೬ "ಬ್ರಾಹ್ಮಣನ ದಂಡವು ಅವನ ತಲೆಗೂದಲಿನ ತುದಿಯಷ್ಟು ಉದ್ದವಾಗಿರಬೇಕು. ಕ್ಷತ್ರಿಯನದು ಅವನ ಹಣೆಯನ್ನು ಮುಟ್ಟುವಷ್ಟು ಉದ್ದವಾಗಿರಬೇಕು. ವೈಶ್ಯನಾದರೋ ಅವನ ಮೂಗಿನ ತುದಿಯನ್ನು ಮುಟ್ಟುವಷ್ಟು ಎತ್ತರವಿರಬೇಕು."

II-೪೮ "ತಾನು ಹಿಡಿದುಕೊಳ್ಳಬೇಕಾದ ದಂಡವನ್ನು ಕೈಯಲ್ಲಿ ಹಿಡಿದುಕೊಂಡು ಸೂರ್ಯನನ್ನು ಪೂಜಿಸಿ, ಬಲಗೈಯನ್ನು ಅಗ್ನಿಯ ಕಡೆಗೆ ತಿರುಗಿಸಿಕೊಂಡು ಅಗ್ನಿ ಪ್ರದಕ್ಷಿಣೆ ಮಾಡಿ ಅನಂತರ ವಿಧಿಸಿರುವ ನಿಯಮಗಳ ಪ್ರಕಾರ ಭಿಕ್ಷಾಟನೆ ಮಾಡಬೇಕು."

II-೪೯ "ದೀಕ್ಷೆ ಪಡೆದ ಬ್ರಾಹ್ಮಣನು ಭವತಿ ಎಂಬ ಪದವು ಮೊದಲಿಗೆ ಬರುವಂತೆ ಯಾಚನೆಯ ಮಂತ್ರವನ್ನು ಹೇಳುತ್ತಾ ಭಿಕ್ಷೆ ಮಾಡಬೇಕು. ಕ್ಷತ್ರಿಯನು ಆ ಪದವು ನಡುವೆ ಬರುವ ಹಾಗೆ ಮತ್ತು ವೈಶ್ಯನು ಮಂತ್ರದ ಕೊನೆಗೆ ಬರುವ ಹಾಗೆ ಹೇಳಬೇಕು."

ಇದನ್ನು ಓದಿದವರು ಈ ಬಗೆಯ ಭೇದ ಏಕೆ ಎಂದು ಕೇಳಿಯಾರು. ಮೇಲಿನ ನಿಯಮಗಳು ವಿದ್ಯಾರ್ಥಿಗಳಿಗೆ ಅಥವಾ ವೇದಾಧ್ಯಯನ ಪ್ರಾರಂಭಿಸಲಿರುವ ಬ್ರಹ್ಮಚಾರಿಗಳೆನಿಸಿಕೊಳ್ಳುವವರಿಗೆ ಅನ್ವಯಿಸುತ್ತವೆ. ಈ ಭೇದಗಳು ಏಕೆ ಇರಬೇಕು? ಬ್ರಾಹ್ಮಣ ಬಾಲಕನಿಗೆ ಉಪನಯನ ಮಾಡಬೇಕಾದ ವಯಸ್ಸು ಕ್ಷತ್ರಿಯ

ಅಥವಾ ವೈಶ್ಯ ಬಾಲಕರಿಗಿಂತ ಬೇರೆಯಾಗಿರಬೇಕೇಕೆ? ಅವರು ಧರಿಸುವ ಉಡುಗೆಗಳು ಏಕೆ ಬೇರೆಯಾಗಿರಬೇಕು? ಕಟಿಬಂಧವನ್ನು ತಯಾರಿಸುವ ಸಾಮಗ್ರಿಯೂ, ಉಪವೀತದ ಎಳೆಯೂ ಬೇರೆ ಬೇರೆಯಾಗಿರುವುದೇಕೆ? ದಂಡಗಳ ಉದ್ದ ಏಕೆ ಬೇರೆ ಬೇರೆ? ಭಿಕ್ಷೆ ಯಾಚಿಸುವ ಮಂತ್ರದಲ್ಲಿ ಭವತಿ ಎಂಬ ಪದವನ್ನು ಬೇರೆ ಬೇರೆ ಸ್ಥಾನಗಳಲ್ಲಿರಿಸುವುದು ಏಕೆ? ಬೇಧಗಳು ಅಗತ್ಯವೂ ಅಲ್ಲ, ಅನುಕೂಲಕರವೂ ಅಲ್ಲ. ಈ ವ್ಯತ್ಯಾಸಗಳಿಗೆ ತೋರುವ ಒಂದೇ ಒಂದು ಕಾರಣ, ಹಿಂದುವಿಗೆ ತನ್ನ ಸೋದರರಿಗಿಂತ ತಾವು ಬೇರೆಯಾಗಿರಬೇಕೆಂಬ ಹುಟ್ಟರಿವು ಇರುವುದು. ಭಗವಂತನ ದೇಹದ ಬೇರೆ ಬೇರೆ ಭಾಗಗಳಿಂದ ಬೇರೆ ಬೇರೆ ಜನರು ಜನಿಸಿದರು ಎಂಬ ನಂಬಿಕೆಯೇ ಇದಕ್ಕೆ ಆಧಾರ.

ಎಲ್ಲಾದರೂ ಭಿನ್ನತೆ ಇದ್ದರೆ ಅದನ್ನು ಕಡೆಗಣಿಸದೆ ಇರುವುದು, ಬದಲಾಗಿ ಅದನ್ನು ಉಜ್ವಲಗೊಳಿಸಿ, ಮಾನ್ಯಮಾಡಿ, ಇನ್ನೂ ಪ್ರಖರವಾಗುವಂತೆ ಮಾಡುವುದು ಕೂಡ ಹಿಂದೂಗಳಿಗಿರುವ ಹುಟ್ಟರಿವು. ಜಾತಿ ಇದ್ದರೆ, ವಿಶಿಷ್ಟವಾಗಿ ಅದನ್ನು ತೋರಿಸುವ ತಲೆಯುಡುಗೆಯನ್ನೂ ವಿಶಿಷ್ಟ ಹೆಸರನ್ನೂ ಧರಿಸಿ ಪ್ರಕಟಿಸುವುದು. ಒಂದು ಪಂಗಡ ಇದ್ದರೆ ಅದಕ್ಕೊಂದು ನಿರ್ದಿಷ್ಟ ಕುರುಹು ಇರುವುದು. ಭಾರತದಲ್ಲಿ ೯೨ ಪಂಗಡಗಳಿವೆ. ಪ್ರತಿಯೊಂದೂ ಬೇರೆಯೇ ಆದ ಕುರುಹನ್ನು ಹೊಂದಿದೆ. ಪ್ರತಿಯೊಂದೂ ಇನ್ನೊಂದರಿಂದ ಬೇರೆಯಾಗಿರುವಂಥ ೯೨ ನಿರ್ದಿಷ್ಟ ಚಿಹ್ನೆಗಳನ್ನು ಕಂಡುಹಿಡಿದುದೇ ಅಗಾಧವಾದ ಸಾಧನೆಯೆನ್ನಬೇಕು. ಈ ದುಸ್ಸಾಧ್ಯವಾದ ಕೆಲಸ ಅತ್ಯಂತ ಪ್ರಚಂಡಮತಿಯಾದವನಿಗೂ ತನ್ನ ಪ್ರಯತ್ನವನ್ನು ಕೈಬಿಡುವಂತೆ ಮಾಡಿರಬೇಕು. ಆದರೂ ಹಿಂದೂಗಳು ಅದನ್ನು ಸಾಧಿಸಿದ್ದಾರೆ. "ಹಿಂದೂ ಪ್ಯಾಂಥಿಯಾನ್" ಎಂಬ ಕೃತಿಯಲ್ಲಿ ಮೂರ್ ಈ ಚಿಹ್ನೆಗಳ ಚಿತ್ರವನ್ನು ಕೊಟ್ಟಿದ್ದಾರೆ. ಅದನ್ನು ನೋಡಬಹುದು.

ಈ ಬೇರುಳಿಕೆ, ಈ ಪ್ರತ್ಯೇಕತೆಗಳ ಅತ್ಯಂತ ವ್ಯಾಪಕವೂ ಉಚ್ಛೃಂಖಲವೂ ಆದ ಅಭಿವ್ಯಕ್ತಿಯೇ ಜಾತಿ ವ್ಯವಸ್ಥೆ. ಜಾತಿ ಎಂಬುದು ಏಕವಚನವಾಗಿರಲು ಸಾಧ್ಯವಿಲ್ಲ. ಅದು ನಿತ್ಯ ಬಹುವಚನವೇ. ಹಲವು ಜಾತಿಗಳಿವೆ, ಒಂದು ಜಾತಿ ಎನ್ನುವಂಥದು ಇರುವುದಿಲ್ಲ. ತಾತ್ವಿಕವಾಗಿ ಜಾತಿಗಳು ಇರುತ್ತವೆಂದು ಒಪ್ಪಿಕೊಂಡ ಪಕ್ಷದಲ್ಲಿ ಮುಂದಿನ ಪ್ರಶ್ನೆ ಎಷ್ಟು ಜಾತಿಗಳು ಇರಬೇಕು ಎನ್ನುವುದು. ಮೊದಲಿಗೆ ನಾಲ್ಕು ಮಾತ್ರ ಇದ್ದವು. ಇಂದು ಎಷ್ಟಿವೆ? ಒಟ್ಟು ೨೦೦೦ಕ್ಕಿಂತ ಕಡಿಮೆಯಿಲ್ಲ ಎಂದು ಅಂದಾಜುಮಾಡಲಾಗಿದೆ. ಅದು ೩೦೦೦ವೂ ಇರಬಹುದು, ಈ ವಿಷಯದಲ್ಲಿ ನಮ್ಮನ್ನು ದಿಗ್ಭ್ರಮೆಗೊಳಿಸುವ ಅಂಶ ಇದೊಂದೇ ಅಲ್ಲ. ಬೇರೆಯವೂ ಇವೆ. ಜಾತಿಗಳು ಉಪಜಾತಿಗಳಾಗಿ ವಿಭಾಗಗೊಂಡಿವೆ. ಅವುಗಳ ಸಂಖ್ಯೆ ಅನಂತ. ಬ್ರಾಹ್ಮಣ ಜಾತಿಗಳಿಗೆ ಸೇರಿದ ಜನರ ಸಂಖ್ಯೆ ಸುಮಾರು ಒಂದೂವರೆ ಕೋಟಿ. ಆದರೆ ಬ್ರಾಹ್ಮಣ ಜಾತಿಯಲ್ಲೇ ೧೮೮೬ ಉಪಜಾತಿಗಳಿವೆ. ಪಂಜಾಬೊಂದರಲ್ಲೇ ಸಾರಸ್ವತ ಬ್ರಾಹ್ಮಣರು ೪೬೯ ಉಪ ಜಾತಿಗಳಿಗೆ ಸೇರಿದ್ದಾರೆ. ಪಂಜಾಬಿನ ಕಾಯಸ್ಥರಲ್ಲಿ ೮೯೦ ಉಪಜಾತಿಗಳಿವೆ. ಸಾಮಾಜಿಕ ಜೀವನವನ್ನು ಹೀಗೆ ತುಂಡು ತುಂಡಾಗಿ ಅಸಂಖ್ಯಾತವಾಗಿ ಒಡೆದಿರುವ ನಿದರ್ಶನಗಳನ್ನು ಎಷ್ಟು ಬೇಕಾದರೂ ಕೊಡಬಹುದು. ಈ ವಿಭಾಜಕ ಪ್ರಕ್ರಿಯೆ ಸಾಮಾಜಿಕ ಜೀವನ ಸಾಧ್ಯವೇ ಆಗದಂತೆ ಮಾಡಿಬಿಟ್ಟಿದೆ. ಈ ಪ್ರಕ್ರಿಯೆಯಿಂದಾಗಿ ಜಾತಿಗಳು ಎಷ್ಟು ಸರಾಸರಿ ತುಣುಕುಗಳಾಗಿ ಒಡೆದಿವೆಯೆಂದರೆ, ನಿಯಮಗಳ ಪ್ರಕಾರ ವೈವಾಹಿಕ ಸಂಬಂಧಗಳನ್ನು ನಿರ್ವಹಿಸುವುದೇ ಅಸಾಧ್ಯವಾಗಿ ಪರಿಣಮಿಸುತ್ತಲಿದೆ. ಬನಿಯಾ ಜಾತಿಯ ಕೆಲವು ಉಪಜಾತಿಗಳಲ್ಲಿ ೧೦೦ ಸಂಬಂಧ ಹೊಂದಿವೆಯೆಂದರೆ ಸಗೋತ್ರದ ನಿಯಮಗಳನ್ನು ಉಲ್ಲಂಘಿಸದೆ ಅವರ ಜಾತಿಗಳೊಳಗೆ ಮದುವೆ ನಡೆಸುವುದೇ ಶಕ್ಯವಿಲ್ಲ.

ಜಾತಿಗಳು ಉಪಜಾತಿಗಳಾಗಿ ಒಡೆಯಲು ಅತ್ಯಂತ ಸಣ್ಣ ನೆಪಗಳೇ ಸಾಕು ಎಂಬುದೀಗ ಗಮನಿಸಬೇಕಾದ

ಸಂಗತಿ. ಸ್ಥಳದ ಬದಲಾವಣೆ, ವೃತ್ತಿಯ ಬದಲಾವಣೆ, ಸಾಮಾಜಿಕ ಆಚರಣೆಗಳಲ್ಲಿ ಬದಲಾವಣೆ, ಮಾಲಿನ್ಯದ ಕಾರಣವಾಗಿ ಬದಲಾವಣೆ, ಅತಿಯಾಗಿ ಬೆಳೆದ ಸಂಪತ್ತು ಕಾರಣವಾಗಿ ಬದಲಾವಣೆ, ಜಗಳದಿಂದಾಗಿ ಬದಲಾವಣೆ, ಧರ್ಮದಲ್ಲಿ ಬದಲಾವಣೆಯಾಗುವಿಕೆ, ಇಂತಹ ಹಲವು ಕಾರಣಗಳಿಂದ ಜಾತಿಗಳು ಒಡೆದು ಉಪ ಜಾತಿಗಳಾಗುತ್ತವೆ. ಹಿಂದೂಗಳಲ್ಲಿ ಕಂಡುಬಂದಿರುವ ಈ ಪ್ರವೃತ್ತಿಯನ್ನು ನಿದರ್ಶಿಸಲು ಬ್ಲಂಟ್ ಅನೇಕ ಉದಾಹರಣೆಗಳನ್ನು ಕೊಟ್ಟಿದ್ದಾನೆ. ಅವೆಲ್ಲವನ್ನೂ ಪುನರುಕ್ತಿಸಲು ಇಲ್ಲಿ ಎಡೆಯಿಲ್ಲವಾದರೂ, ಒಂದು ಜಾತಿಯು ಹಲವು ಉಪಜಾತಿಗಳಾಗಿ ಒಡೆಯಲು ಸಾಮಾನ್ಯವಾಗಿ ಜಗಳವೇ ಹೇಗೆ ಕಾರಣವಾಗುತ್ತದೆ ಎಂಬುದರ ಒಂದು ನಿದರ್ಶನವನ್ನು ಇಲ್ಲಿ ಕೊಡುತ್ತೇವೆ. ಬ್ಲಂಟ್ ನಿರೂಪಿಸಿರುವುದು ಹೀಗೆ:[೧]

> "ಲಕ್ನೋದಲ್ಲಿ ಖಾತಿಕಾ ಎಂಬ ಒಂದು ಉಪಜಾತಿಯಿತ್ತು. ಅದರಲ್ಲಿ ಮೂರು ಘೋಲ್ ಅಥವಾ ಗುಂಪುಗಳಿದ್ದವು. ಅವು ಮಾಣಿಕ್‌ಪುರ್, ಜೈಸ್ವಾಲ್, ದಾಲ್ಮಾನ್. ಅವರು ಪರಸ್ಪರ ವಿವಾಹ ಬೆಳೆಸುತ್ತಿದ್ದರು. ಸಹಪಂಕ್ತಿ ಭೋಜನ ಮಾಡುತ್ತಿದ್ದರು. ತಮ್ಮ ಚೌಧುರಿಗಳು ಅಥವಾ ಮುಖ್ಯಸ್ಥರ ಅಧ್ಯಕ್ಷತೆಯಲ್ಲಿ ಒಂದೇ ಪಂಚಾಯಿತಿ ಆಗಿ ಸೇರುತ್ತಿದ್ದರು. ಇಪ್ಪತ್ತು ವರ್ಷಗಳ ಹಿಂದೆ ಪ್ರತಿಯೊಂದು ಗುಂಪಿಗೂ ಒಬ್ಬ ಚೌಧುರಿ ಇದ್ದನು. ಈಗ ಜೈಸ್ವಾಲ್ ಗುಂಪಿನಲ್ಲಿ ಮೂವರಿದ್ದಾರೆ. ಮಾಣಿಕ್‌ಪುರ ಗುಂಪಿನಲ್ಲಿ ಇಬ್ಬರಿದ್ದಾರೆ. ಜಗಳ ಸಂಭವಿಸಿದ್ದು ಹೀಗೆ: ಒಬ್ಬ ಹೆಂಗಸು (ಅವರು ಯಾವ ಘೋಲ್‌ಗೆ ಸೇರಿದವಳೆಂಬುದನ್ನು ಕೊಟ್ಟಿಲ್ಲ) ರಸ್ತೆಗಳಲ್ಲಿ ತಿರುಗುತ್ತಾ ಹಣ್ಣು ಮಾರುತ್ತಿದ್ದಳು. ಅವಳ ಸೋದರರು ಈ ಕೆಲಸವನ್ನೂ ಬಿಟ್ಟುಬಿಡಬೇಕೆಂದೂ, ಅದು ಜಾತಿಯ ಘನತೆಗೆ ಕುಂದಾಗುತ್ತದೆಂದೂ ಹೇಳಿದರು. ಹೆಂಗಸರು ಅಂಗಡಿಗಳಲ್ಲಿ ಕುಳಿತು ಮಾರಾಟ ಮಾಡಬಹುದು, ತಿರುಗು ಮಾರಾಟಗಾರ್ತಿಯರಾಗಬಾರದು ಎಂದರು. ಅವಳೂ ಅವಳ ಗಂಡನೂ ಅವಿಧೇಯರಾಗಿ ವರ್ತಿಸಿದಂತೆ ಅನಿಸಿತು. ಕೊನೆಗೆ ಅವರ ಘೋಲ್ (ಗುಂಪು) ತಾನೇ ಏಕಪಕ್ಷೀಯವಾಗಿ ನ್ಯಾಯ ಕೈಗೊಂಡು ಆ ಮನುಷ್ಯನನ್ನು ಜಾತಿಯಿಂದ ಹೊರಗೆ ಹಾಕಿತು. ಆದರೆ ದಾಲ್ಮಾನ್ ಗುಂಪು ಈ ಕ್ರಮವನ್ನು ಒಪ್ಪದೆ ಆ ವ್ಯಕ್ತಿಯನ್ನು ತಮ್ಮೊಳಗೆ ಸೇರಿಸಿಕೊಂಡಿತು. ಜಾತಿ ಭ್ರಷ್ಟತೆಯ ಕಳಂಕ ನಿವಾರಣೆಗಾಗಿ ೮೦ ರೂಪಾಯಿಗಳ ದಂಡವನ್ನು ಕಟ್ಟಿಸಿಕೊಂಡಿತು. ಇದು ಮೊದಲನೆಯ ಸಂದರ್ಭ, ಇನ್ನೊಂದು ಸಾರಿ ಒಂದು ಘೋಲ್ ತನ್ನ ಒಬ್ಬ ಸದಸ್ಯನನ್ನು ತಾವೇ ನಿರ್ಣಯ ತೆಗೆದುಕೊಂಡು ಜಾತಿಯಿಂದ ಹೊರಹಾಕಿತು. ಅವನ ವಿಚಾರಣೆ ನಡೆಯುತ್ತಿದ್ದಾಗಲೇ ಜೈಸ್ವಾಲ್ ಚೌಧರಿಯು ಅವನನ್ನು ಭೋಜನಕ್ಕೆ ಆಮಂತ್ರಿಸಿದನು. ಇದರಿಂದ ಮೂರು ಘೋಲ್‌ಗಳಿಗೆ ಸೇರಿದ ಎಲ್ಲರೂ ಕುಪಿತರಾಗಿ ಆ ಚೌಧುರಿಗೆ ೩೦ ರೂಪಾಯಿ ದಂಡ ವಿಧಿಸಿದರು. ಕೊನೆಯದಾಗಿ, ಅದುವರೆಗೆ ಸಾಕಷ್ಟು ಹಣವು ಸಂಗ್ರಹಗೊಂಡಿದ್ದರಿಂದ ಒಂದು ಕಥಾ ಕಾರ್ಯಕ್ರಮವನ್ನು ಇಟ್ಟುಕೊಳ್ಳಲು ಅವರೆಲ್ಲ ತೀರ್ಮಾನಿಸಿದರು. ದಾಲ್ಮಾನ್ ಚೌಧುರಿಯು ತನ್ನ ಪಾಲಿನ ಹಣವನ್ನು ಪಡೆದುಕೊಳ್ಳಲು ಇಚ್ಛಿಸಿದನು. ಆದರೆ ಮಾಣಿಕ್‌ಪುರ್ ಚೌಧುರಿಯು ಇದಕ್ಕೆ ಒಪ್ಪಲಿಲ್ಲ. ಕಥಾ ಪ್ರಸಂಗ ನಡೆಯುತ್ತದೆಂದೂ, ದಾಲ್ಮಾನ್ ಜನರು ಬೇಕಾದರೆ ಬರಬಹುದು, ಇಲ್ಲವಾದರೆ ಬಿಡಬಹುದು ಎಂದೂ ಹೇಳಿದನು. ಈ ಹಂತದಲ್ಲಿ ವಿವಾದವು ನ್ಯಾಯಾಲಯಕ್ಕೆ ಹೋಯಿತು.

---

೧. 'ದಿ ಕ್ಯಾಸ್ಟ್ ಸಿಸ್ಟಮ್ ಆಫ್ ನಾರ್ದರ್ನ್ ಇಂಡಿಯಾ', ಪುಟಗಳು – ೫೧–೫೬.

ಈ ಮಧ್ಯೆ ಮೂರು ಫೋಲ್‌ಗಳ ಸದಸ್ಯರು ಪರಸ್ಪರ ವಿವಾಹ ನಡೆಸುವುದನ್ನು ನಿಲ್ಲಿಸಿದರು. ಒಂದು ಸಗೋತ್ರ ಉಪಜಾತಿಯು ಮೂರು ಕಲಹಗಳಿಗೆ ಕಾರಣವಾಯಿತು. ಒಂದು ತಂಡವು ಇನ್ನೊಂದರ ವಿರುದ್ಧವಾಗಿ ನಿಂತಿತು.

ಯಾವುದೇ ಒಂದು ಜಾತಿಯಲ್ಲಿ ಒಂದು ಗುಂಪು ಯಾವುದೋ ಹೊಸದಾದ ಅಥವಾ ಅಸಾಧಾರಣವಾದ ಪೂಜೆ ಇತ್ಯಾದಿ ಕಾರ್ಯಕ್ರಮ ನಡೆಸಿದರೆ, ಇತರ ಸದಸ್ಯರು ಅದನ್ನು ಒಪ್ಪದೇ ಹೋದರೆ ನಿರೀಕ್ಷಿಸಬಹುದಾದಂತೆ, ಆ ತಂಡವು ಸಿಡಿದು ಹೋಗಿ ಬೇರೆ ಒಂದು ಸಗೋತ್ರ ಉಪಜಾತಿಯಾಗಿ ನಿಲ್ಲುತ್ತಿತ್ತು. ಅಂತಹ ಉಪಜಾತಿಗಳು ಹೆಚ್ಚಾಗಿ ಕಾಣುವುದಿಲ್ಲ ಎನ್ನುವುದು ಆತ ಯಾರೊಂದಿಗೆ ಊಟ ಮಾಡುತ್ತಾನೆ, ಯಾರೊಂದಿಗೆ ವಿವಾಹವಾಗುತ್ತನೆ ಎಂಬುದರ ಬಗ್ಗೆ ಸಹಿಷ್ಣುತೆ ಇದ್ದುದರ ಗುರುತು ಅಷ್ಟೆ. ತೇಲಿಗಳಲ್ಲಿ ಮಹಾಬೀರ ಮತ್ತು ಪಂಚಪ್ರಿಯ ಉಪಜಾತಿಗಳನ್ನು, ಬರ್‌ಹಾಯಿಗಳಲ್ಲಿ ಭಂಗಿ, ಕಥೇರಾಗಳಲ್ಲಿ ಕೋರಿ ಮತ್ತು ನಮಕ್ವಾಲಿಗಳನ್ನು ನಾವು ನೋಡುತ್ತೇವೆ."

ಈ ಜಾತಿಗಳು ಒಂದರೊಡನೆ ಇನ್ನೊಂದು ಹೇಗೆ ವರ್ತಿಸುತ್ತವೆ? ಅವರ ನಿರ್ದೇಶಕ ಸೂತ್ರ 'ಬೇರೆಯಾಗಿರು', 'ಅಂತರ್ಜಾತೀಯ ವಿವಾಹ ಬೇಡ', 'ಒಟ್ಟಿಗೆ ಕುಳಿತು ಊಟ ಮಾಡಬೇಡ', 'ಮುಟ್ಟಿಸಿಕೊಳ್ಳಬೇಡ', ಈ ಪರಿಸ್ಥಿತಿಯನ್ನು ಬ್ಲಂಟ್ ಚೆನ್ನಾಗಿಯೇ ವರ್ಣಿಸಿದ್ದಾನೆ:

"ಹಿಂದೂವು ಊಟಮಾಡಲು ಒಬ್ಬನೇ ಕುಳಿತುಕೊಳ್ಳುತ್ತಾನೆ ಅಥವಾ ತನ್ನ ಜಾತಿಗೆ ಸೇರಿದವರೊಂದಿಗೆ ಕುಳಿತುಕೊಳ್ಳುತ್ತಾನೆ. ಹೆಂಗಸರು ಗಂಡಸರೊಂದಿಗೆ ಕುಳಿತು ಊಟ ಮಾಡುವಂತಿಲ್ಲ. ಅವರ ಯಜಮಾನರು ಊಟಮಾಡಿ ಮುಗಿಸುವವರೆಗೂ ಅವರು ಕಾಯುತ್ತಾರೆ. ಊಟದಲ್ಲಿ ಕಚ್ಚಾ ಆಹಾರ ಸೇರಿದ್ದರೆ (ಸಾಮಾನ್ಯವಾಗಿ ಚಪಾತಿ ಇರುತ್ತದಾದ್ದರಿಂದ ಅದು ಸೇರಿಯೇ ಇರುತ್ತದೆ) ಅವನು ಒಂದು ಮಂತ್ರವಿಧಿಗೆ ತಕ್ಕ ಆಚರಣೆಗಳೊಂದಿಗೆ ಊಟ ಮಾಡಬೇಕಾಗುತ್ತದೆ. ನೆಲದ ಮೇಲೆ ಒಂದು ಚೌಕವನ್ನು ಗುರುತಿಸಿ ಅದರೊಳಗೆಯೇ ಚೂಲ್‌ಹಾ ಅಥವಾ ಒಲೆ ಇರುವ ಹಾಗೆ ವ್ಯವಸ್ಥೆ ಮಾಡಿರುತ್ತಾರೆ. ಆ ಚೌಕದೊಳಗೆ ಕುಳಿತು ಅವನು ಊಟ ಮಾಡುತ್ತಾನೆ. ಯಾರಾದರೂ ಅಪರಿಚಿತ ಹೊಸಬನ ನೆರಳು ಆ ಚೌಕದ ಮೇಲೆ ಬಿದ್ದಿತೆಂದರೆ ಅಲ್ಲಿ ತಯಾರಿಸಿದ ಅಡಿಗೆಯೆಲ್ಲವೂ ಮೈಲಿಗೆಯಾಗಿಬಿಡುತ್ತದೆ. ಅದೆಲ್ಲವನ್ನೂ ಎಸೆದುಬಿಡಬೇಕಾಗುತ್ತದೆ. ಶಿಬಿರಗಳಲ್ಲೂ ಅಷ್ಟೆ ಹಿಂದೂ ನೌಕರರಲ್ಲಿ ಒಬ್ಬೊಬ್ಬನೂ ಇತರರಿಂದ ಪ್ರತ್ಯೇಕವಾಗಿ ತನ್ನ ಚೌಕದೊಳಗೆ ತನ್ನದೇ ಮಣ್ಣಿನ ಒಲೆಯಲ್ಲಿ ಅಡಿಗೆ ಮಾಡಿಕೊಂಡು ತಾನೊಬ್ಬನೇ ತಿನ್ನುತ್ತಾನೆ......"

"ನೀರನ್ನು ಸ್ವೀಕರಿಸುವುದರ ಸಂಬಂಧವಾದ ನಿಯಮಗಳಿಗೆ ಭೋಜನ ಸ್ವೀಕಾರಕ್ಕೆ ಇರುವಂಥದೇ ಆಗಿದೆ. ಇಲ್ಲಿ ನಿಯಮಗಳ ಬಿಗಿಯು ತುಸು ಸಡಿಲುವುದರತ್ತ ಒಲವು ತೋರಿಸುತ್ತದೆ. ಈ ಸಂದರ್ಭದಲ್ಲಿ ನೀರಿನಲ್ಲಿ ತುಂಬಿಟ್ಟಿರುವ ಪಾತ್ರೆಯು ಮುಖ್ಯವಾಗುತ್ತದೆ. ಉತ್ತಮ ಜಾತಿಯ ವ್ಯಕ್ತಿಯು ತನಗಿಂತ ಕೆಳಜಾತಿಯವನು ತನ್ನ ಕುಡಿಯುವ ಪಾತ್ರೆಯಲ್ಲಿ ನೀರನ್ನು ತುಂಬಿಕೊಡಲು ಅವಕಾಶ ಕೊಡುತ್ತಾನೆ. ಆದರೆ ಆ ಕೆಳಜಾತಿಯವನ ಲೋಟದಿಂದ ನೀರನ್ನು ಕುಡಿಯುವುದಿಲ್ಲ. ಮೇಲುಜಾತಿಯವನು ಬೇರೆ ಯಾರಿಗೇ ಆದರೂ (ಅಸ್ಪೃಶ್ಯರ ಹೊರತು) ಅವರ ಬೊಗಸೆಗೆ ಮೇಲಿನಿಂದ ನೀರನ್ನು ಸುರಿದು ಕುಡಿಯಲು ಕೊಡಬಹುದು.

ರೈಲಿನಲ್ಲಿ ಪ್ರಯಾಣಮಾಡುವ ಪ್ರಯಾಣಿಕರಿಗೆ ನೀರನ್ನು ಕೊಡಲು ನಿಲ್ದಾಣಗಳಲ್ಲಿ ನೇಮಕಗೊಂಡಿರುವವರೆಲ್ಲರೂ ಬರ್‌ಹಾಯಿಗಳು, ಬಾರಿಗಳು, ಭರ್‌ಭುಂಜರು, ಹಲ್ವಾಯಿಗಳು, ಕಾಹರ್‌ಗಳು ಮತ್ತು ನಾಯ್‌ಗಳು ಮತ್ತು ಇನ್ನೂ ಮೇಲಿನ ಜಾತಿಗಳಿಂದ ಬಂದವರು."

"ಧೂಮಪಾನದ ವಿಷಯದಲ್ಲಿ ಇನ್ನೂ ಕಟ್ಟುನಿಟ್ಟಾದ ನಿಮಯಗಳಿವೆ. ಒಬ್ಬ ವ್ಯಕ್ತಿಯು ತನ್ನ ಜಾತಿಯವನಲ್ಲದ ಬೇರೊಬ್ಬನೊಂದಿಗೆ ಧೂಮ ಸೇವಿಸುವುದು ಅಸಂಭವ. ಕಾರಣ, ಧೂಮಪಾನವೆಂದರೆ ಇನ್ನೊಬ್ಬನ ಹೊಗೆ ಕೊಳವೆಯನ್ನು ಸೇದುವುದೆಂದಾಗುತ್ತದೆ. ಅವನು ತಯಾರಿಸಿದ ಆಹಾರವನ್ನು ತಿನ್ನುವುದಕ್ಕಿಂತಲೂ ಹತ್ತಿರದ ಸಂಪರ್ಕವನ್ನು ಇದರಿಂದ ಪಡೆದ ಹಾಗಾಗುತ್ತದೆ ಎಂಬುದೇ ಇದರ ಹಿಂದಿರುವ ವಾದವಾಗಿದೆ. ಈ ಕಟ್ಟಳೆ ಎಷ್ಟು ಬಿಗಿಯಾಗಿದೆ ಎಂದರೆ, ಜಾಟರು, ಆಹೀರರು ಮತ್ತು ಗೂರ್ಜರರು ಒಟ್ಟಿಗೆ ಧೂಮಪಾನ ಮಾಡುತ್ತಾರೆ ಎನ್ನುವುದು ಅವರು ನಿಕಟ ಸಂಬಂಧ ಹೊಂದಿದ್ದಾರೆಂಬುದಕ್ಕೆ ಒಂದು ಆಧಾರವೇ ಆಗಿದೆ. ಕೆಲವು ಜಾತಿಗಳಲ್ಲಿ, ನಿದರ್ಶನಕ್ಕೆ ಕಾಯಸ್ಥರು, ಹುಕ್ಕಾ (ನರಿಯಲ್) ವಿಧಾನದಿಂದ ಅಂದರೆ, ಹೊಗೆಕೊಳವೆಯ ತುದಿಯನ್ನು ಮುಷ್ಟಿಯಲ್ಲಿ ಇಟ್ಟುಕೊಂಡು ಕೊಳವೆಯನ್ನು ಬಾಯಿಗೆ ಸೋಕಿಸದೆ ಸೇದುವುದು ಬೇರೆ, ಮಾಮೂಲೂ ಪದ್ಧತಿಯಲ್ಲಿ ಸೇದುವುದು ಬೇರೆ. ಇನ್ನು ಪಾತ್ರೆಗಳ ವಿಷಯ ಹೇಳುವುದೇ ಬೇಡ. ಯಾವ ಬಗೆಯ ಪಾತ್ರೆಗಳನ್ನು ತಯಾರಿಸಬೇಕೆಂಬುದನ್ನು ಕುರಿತೇ ನಿಯಮಗಳಿವೆ. ಅವು ಸಾಮಾಜಿಕಕ್ಕಿಂತ ಹೆಚ್ಚಾಗಿ ಧಾರ್ಮಿಕ ಆಗಿವೆ. ಹಿಂದೂಗಳು ಹಿತ್ತಾಳೆಯನ್ನೋ, ಮಿಶ್ರಲೋಹವನ್ನೋ ಬಳಸಬೇಕು (ಮಿಶ್ರಲೋಹದ ಪಾತ್ರೆಗಳನ್ನು ಬಳಸುವುದಕ್ಕೆ ಸಂಬಂಧಿಸಿದಂತೆ ಅಸಂಖ್ಯಾತವಾದ ಸೂಕ್ಷ್ಮವಾದ ಕಟ್ಟುಕಟ್ಟಳೆಗಳಿವೆ. ಮಿಶ್ರಲೋಹದ ಪಾತ್ರೆಯೇನಾದರೂ ಅಶುದ್ಧವಾದರೆ, ಅದನ್ನು ಕರಗಿಸಿ ಬೇರೆ ಪಾತ್ರೆ ತಯಾರಿಸುವುದೊಂದೇ ಇರುವ ದಾರಿ). ಮೈಲಿಗೆಯಾಗಿ ಬಿಡುತ್ತದೆನ್ನುವ ಭೀತಿಯಿಂದಾಗಿ ಪ್ರತಿಯೊಬ್ಬನೂ ತನ್ನದೇ ಕೆಲವು ಪಾತ್ರೆಗಳನ್ನು ಇಟ್ಟುಕೊಂಡಿರುವುದು ಕಡ್ಡಾಯವಾಗಿದೆ. ಕನಿಷ್ಠವೆಂದರೆ, ಒಂದು ಲೋಟ, ಒಂದು ಬತ್ನ (ಬೇಯಿಸುವ ಪಾತ್ರೆ) ಮತ್ತು ಥಾಲಿ (ತಟ್ಟೆ). ಸ್ವಲ್ಪ ಸ್ಥಿತಿವಂತರಾದವರು ಇದಕ್ಕೆ ಒಂದು ಕಟೋರಾ (ಚಮಚ) ಮತ್ತು ಒಂದು ಗಾಗ್ರ (ನಿರು ತುಂಬಿರುವ ಪಾತ್ರೆ) ಸೇರಿಸುತ್ತಾರೆ. ಹಬ್ಬದ, ಔತಣದ ದಿನಗಳಿಗೆಂದು ಎಲ್ಲ ಬಗೆಯ ದೊಡ್ಡ ಗಾತ್ರದ ಪಾತ್ರೆಗಳನ್ನು ಇಟ್ಟಿರುತ್ತಾರೆ. ಅತಿಥೇಯನಿಗೆ ಅವುಗಳನ್ನು ಎರವಲು ಕೊಡುತ್ತಾರೆ. ಆಗಾಗ ದಂಡ ವಿಧಿಸುವುದರಿಂದ ಸಂಗ್ರಹಿತವಾದ ಹಣದಿಂದ ಇವುಗಳನ್ನು ಕೊಂಡು ಇಟ್ಟಿರುತ್ತಾರೆ. ಇವು ಎಲ್ಲರಿಗೂ ಸೇರಿದ ಆಸ್ತಿಯಾಗಿರುತ್ತವೆ."[೧]

ಇಂತಹ ಭಾವನೆಗಳ ಮೇಲೆ ಆಧಾರಿತವಾಗಿರುವ ಸಮಾಜ ವ್ಯವಸ್ಥೆಯಲ್ಲಿ ಸೋದರಿಕೆ ಎನ್ನುವುದು ಹೇಗೆ ತಾನೆ ಇರಲು ಸಾಧ್ಯ? ಜಾತಿಗಳ ನಡುವಣ ಸಂಬಂಧ ಸೋದರತ್ವದ ಭಾವನೆಯಿಂದ ನಡೆಯುವುದು ಬಹುದೂರವೇ ಉಳಿಯಿತು. ವಾಸ್ತವವಾಗಿ ಅದು ಭ್ರಾತೃಘಾತಕವಾಗಿದೆ. ವರ್ಗಪ್ರಜ್ಞೆ, ವರ್ಗಹೋರಾಟ ಹಾಗೂ ವರ್ಗಯುದ್ಧ ಇವು ಕಾರ್ಲ್ ಮಾರ್ಕ್ಸ್‌ನ ಬರೆಹಗಳಿಂದ ಪ್ರಚುರಗೊಂಡ ಭಾವನೆಗಳು ಎಂದು

೧. ಉತ್ತರ ಹಿಂದೂಸ್ತಾನದಲ್ಲಿ ಕಚ್ಚಾ ಆಹಾರದ ಸೇವನೆಗೆ ಮಾತ್ರ ಸಹಭೋಜನಕ್ಕೆ ನಿಷೇಧವಿದೆ. ದಕ್ಷಿಣ ಹಿಂದೂಸ್ತಾನದಲ್ಲಿ ಪಕ್ವ ಆಹಾರದ ಸಹಭೋಜನಕ್ಕೂ ನಿಷೇಧವಿದೆ. ನೀರಿನಲ್ಲಿ ಬೇಯಿಸಿದ ಆಹಾರವನ್ನು ಕಚ್ಚಾ ಆಹಾರವೆಂದೂ, ತುಪ್ಪದಲ್ಲಿ ಬೇಯಿಸಿದ ಆಹಾರವನ್ನು ಪಕ್ಕ ಆಹಾರವೆಂದೂ ಪರಿಗಣಿಸಲಾಗುತ್ತದೆ.

ಹೇಳುತ್ತಾರೆ. ಆದರೆ, ಅದು ಶುದ್ಧ ತಪ್ಪು. ವರ್ಗಪ್ರಜ್ಞೆ ಮತ್ತು ವರ್ಗಹೋರಾಟಗಳನ್ನು ಎಂದಿನಿಂದಲೂ ಅನುಭವಿಸುತ್ತ ಬಂದಿರುವ ದೇಶ ಭಾರತ. ಬ್ರಾಹ್ಮಣರಿಗೂ, ಕ್ಷತ್ರಿಯರಿಗೂ ನಡುವೆ ಅತ್ಯುಗ್ರವಾದ ವರ್ಗಹೋರಾಟ ಈ ದೇಶದಲ್ಲಿ ನಡೆಯಿತು.[೧] ಅದು ಅನೇಕ ಪೀಳಿಗೆಯವರೆಗೆ ನಡೆಯಿತು. ಎಷ್ಟು ತೀವ್ರವಾಗಿ ನಡೆಯಿತೆಂದರೆ, ಕುಲಗಳು ನಿರ್ನಾಮವಾಗಿ ಅಳಿಸಿ ಹೋಗಿಬಿಡಬಹುದಾದಷ್ಟು ಭಯಾನಕವಾಯಿತು.

ಭ್ರಾತೃಘಾತಕ ಭಾವನೆಯು ಹೋಗಿ ಈಗ ಸೌಭ್ರಾತೃತ್ವ ಭಾವನೆ ಬಂದಿದೆ ಎಂದೇನು ಭಾವಿಸಬೇಕಾಗಿಲ್ಲ. ಇಂದು ಕೂಡ ಪ್ರತ್ಯೇಕತೆಯೇ ಹಿಂದೂ ಸಮಾಜ ವ್ಯವಸ್ಥೆಯ ವೈಶಿಷ್ಟ್ಯವಾಗಿ ಉಳಿದಿದೆ ಎನ್ನುವುದನ್ನು ಈ ಕೆಳಗಿನ ಅಂಶದಿಂದ ನೋಡಬಹುದು.

ಪ್ರತಿಯೊಂದು ವರ್ಗವೂ ತನ್ನ ಮೂಲವನ್ನು ಅನನ್ಯವಾದುದು ವಿಶಿಷ್ಟವಾದುದು ಎಂದೇ ಹೇಳಿಕೊಳ್ಳುತ್ತದೆ. ಪ್ರತಿಯೊಬ್ಬರೂ ತಮಗೆ ಒಬ್ಬ ಋಷಿ ಮೂಲವನ್ನೋ ಅಸಾಧಾರಣ ವೀರನೊಬ್ಬನ ಮೂಲವನ್ನೋ ಹೇಳುತ್ತಾರೆ, ಆ ಋಷಿ ಅಥವಾ ಆ ವೀರ ಬೇರೆ ವರ್ಗಗಳ ಋಷಿಗಾಗಲೀ, ವೀರನಿಗಾಗಲಿ ಸಂಬಂಧಪಟ್ಟವನಲ್ಲ, ಅವನು ಬೇರೆಯೇ. ಒಂದು ಜಾತಿಯು ಇನ್ನೊಂದು ಜಾತಿಗಿಂತ ತಾನು ಶ್ರೇಷ್ಠ ಎಂದು ಸ್ಥಾಪಿಸಿಕೊಳ್ಳುವುದರಲ್ಲೇ ಸದಾ ತೊಡಗಿರುತ್ತದೆ. ಸಹಪಂಕ್ತಿ ಭೋಜನ ಮೊದಲಾದವುಗಳ ಬಗೆಗೆ ರೂಪಿಸಿರುವ ನಿಯಮಾವಳಿಗಳಿಂದ ಇದು ವೇದ್ಯವಾಗುತ್ತದೆ.

ಅಡಿಗೆ–ಊಟಗಳ ಸಂಬಂಧದ ನಿಷೇಧಗಳ ಬಗ್ಗೆ ಒಂದು ವಿಚಾರವನ್ನು ತಿಳಿದುಕೊಳ್ಳುವುದು ಅಗತ್ಯ. ಅಡಿಗೆಯನ್ನು ತಯಾರಿಸುವವನ ಜಾತಿಯು ಇಲ್ಲಿ ಮುಖ್ಯವಾಗುತ್ತದೆಯೇ ಹೊರತು ಆ ಔತಣವನ್ನು ನೀಡುತ್ತಿರುವ ವ್ಯಕ್ತಿಯ ಜಾತಿಯಲ್ಲ. ಆದ್ದರಿಂದ ಮೇಲು ಜಾತಿಗೆ ಸೇರಿದ ಹಿಂದೂವು ಯಾವ ಜಾತಿಯವನ–ಅವನೆಷ್ಟೇ ಕೆಳಗಿನ ಜಾತಿಯವನಾಗಿರಲಿ–ಮನೆಯಲ್ಲಿ ಊಟ ಮಾಡಬಹುದು. ಆದರೆ, ಅಲ್ಲಿ ಬಂದು ಅಡಿಗೆ ಮಾರುವವನು ಸೂಕ್ತವಾದ ಜಾತಿಗೆ ಸೇರಿದವರನಾಗಿರಬೇಕು. ಆದ್ದರಿಂದಲೇ ಬಹುತೇಕ ಅಡಿಗೆಯವರು ಬ್ರಾಹ್ಮಣರಾಗಿದ್ದಾರೆ. ಹಿಂದೂವಿನ ದೃಷ್ಟಿಯಲ್ಲಿ ನೀರಿನಿಂದ ಬೇಯಿಸಿದ ಕಚ್ಚಾ ಆಹಾರಕ್ಕೂ ತುಪ್ಪದಿಂದ ಬೇಯಿಸಿದ ಪಕ್ಕಾ ಆಹಾರಕ್ಕೂ ವ್ಯತ್ಯಾಸವಿದೆ. ಈ ವ್ಯತ್ಯಾಸಕ್ಕೆ ಆಧಾರವೆಂದರೆ, ತುಪ್ಪವು ಪವಿತ್ರ ಎಂಬುದು. ಗೋಮಾತೆ ನೀಡುವ ಇತರ ವಸ್ತುಗಳ ಹಾಗೆಯೇ ಎಲ್ಲ ಬಗೆಯ ಮಲಿನತೆ 'ಮೈಲಿ'ಗೆಗಳಿಂದ ರಕ್ಷಿಸುವ ಶಕ್ತಿ ಹೊಂದಿದೆ ಎನ್ನುವ ತತ್ವ. ಆಹಾರ ಸೇವನೆಯನ್ನು ಕುರಿತ ಎಲ್ಲ ನಿಷೇಧಗಳ ಮೂಲ ಆಶಯ ಈ ರಕ್ಷಣೆಯಾದ್ದರಿಂದ ಪಕ್ಕಾ ಆಹಾರದ ವಿಷಯದಲ್ಲಿ ಈ ಕಲ್ಪನೆಯ ಮೂಲಕ ಹಿಂದೂವು ನಿಯಮಗಳನ್ನು ಸ್ವಲ್ಪ ಸಡಿಲಗೊಳಿಸುವಂತಾಗಿದೆ.

ಸಮ ಅಥವಾ ಉತ್ತಮ ಜಾತಿಯ ವ್ಯಕ್ತಿಯೊಂದಿಗೆ ವಿವಾಹ ಮಾಡಿಕೊಳ್ಳುವ ಪದ್ಧತಿ ಬಗೆಗೆ ಬ್ಲಂಟ್ ಹೇಳುತ್ತಾನೆ:[೨]

> "ಅನೇಕ ಜಾತಿಗಳ ವಿವಾಹ ನಿಯಮಗಳಿಗೆ ಸಮ–ಉತ್ತಮ ಜಾತಿ ವಿವಾಹ ಪದ್ಧತಿಯು ಒಂದು ಬಹುಮುಖ್ಯ ಸುಧಾರಣೆಯನ್ನು ತಂದಿದೆ. ಅದು ಪ್ರಚಾರವಾಗಿರುವ ಕಡೆಗಳಲ್ಲಿ ಭಿನ್ನಗೋತ್ರ ವಿವಾಹ ಪದ್ಧತಿಯ ತಂಡಗಳನ್ನು ಅವರವರ ಸಾಮಾಜಿಕ ಸ್ಥಾನಕ್ಕನುಗುಣವಾಗಿ ವರ್ಗೀಕರಿಸಲಾಗುತ್ತದೆ. ಮೇಲಿನ ಜಾತಿಯವರು ಕೆಳಗಿನ ಜಾತಿಯವರ ಹೆಣ್ಣುಗಳನ್ನೂ

---

೧. ನನ್ನ ಪುಸ್ತಕ 'ಹೂ ವರ್ ದಿ ಶೂದ್ರಾಸ್' ನೋಡಿ.

೨. 'ದಿ ಕ್ಯಾಸ್ಟ್ ಸಿಸ್ಟಮ್ ಇನ್ ನಾರ್ದರ್ನ್ ಇಂಡಿಯಾ'. ಪುಟ ೪೯–೫೦

ತಂದುಕೊಳ್ಳುತ್ತಾರೆ. ಆದರೆ ತಮಗಿಂತ ಕೆಳಜಾತಿಯ ಗಂಡುಗಳಿಗೆ ತಮ್ಮ ಹೆಣ್ಣುಗಳನ್ನು ಕೊಡುವುದಿಲ್ಲ. ರಾಜಪುತ್ರರಲ್ಲಿ ಈ ಪದ್ಧತಿಯು ಪ್ರಬಲವಾಗಿ ಬೆಳೆದಂತೆ ಕಾಣುತ್ತದೆ. ಇತರ ಕೆಲವು ಜಾತಿಗಳು ಇದನ್ನು ಅನುಸರಿಸುತ್ತವೆ.... ವಾಸ್ತವವಾಗಿ ಹಿಂದೂಗಳೆಲ್ಲರಲ್ಲೂ ಸಮಜಾತಿ ವಿವಾಹದ ಕಡೆಗೆ ಒಲವು ಇರಬಹುದು."

ಈ ಉತ್ತಮ–ಸಹಪಂಕ್ತಿ ಭೋಜನ ಹಾಗೂ ಉತ್ತಮ ಜಾತಿವಿವಾಹಗಳ ವಿಷಯವಾಗಿರುವ ನಿಯಮಗಳ ಹಿಂದೆ ಇರುವುದಾದರೂ ಏನು? ಮೇಲು–ಕೀಳು ಎಂಬ ಭಾವನೆಯಲ್ಲದೆ ಬೇರೇನೂ ಅಲ್ಲ. ಈ ಭಾವನೆಯ ಸೋಂಕು ಎಲ್ಲ ಜಾತಿಗಳನ್ನೂ ವ್ಯಾಪಿಸಿದೆ. ಅದರಿಂದ ಮುಕ್ತವಾಗಿರುವ ಜಾತಿ ಯಾವುದೂ ಇಲ್ಲ. ಹಿಂದೂ ಸಮಾಜ ವ್ಯವಸ್ಥೆ ಹಲವಾರು ಜಾತಿಗಳ ಒಂದು ಏಣಿಯಿದ್ದ ಹಾಗೆ. ಜಾತಿಗಳನ್ನು ಒಂದರ ಮೇಲೊಂದು ಜೋಡಿಸಿಡಲಾಗಿದೆ. ಒಟ್ಟಾಗಿ ಅವು ದ್ವೇಷದ ಆರೋಹಣವನ್ನೂ, ತಿರಸ್ಕಾರದ ಅವರೋಹಣವನ್ನೂ ಪ್ರದರ್ಶಿಸುತ್ತಿವೆ.

ಒಂದು ಜಾತಿಯು ಇನ್ನೊಂದನ್ನು ಲೇವಡಿ ಮಾಡುವುದಕ್ಕಾಗಿಯೇ ರಚಿಸಿದ ಅನೇಕ ಗಾದೆಗಳಲ್ಲಿ ಈ ಭಾವನೆ ವ್ಯಕ್ತವಾಗಿದೆ. ಕೆಳ ಜಾತಿಗಳಿಗೆ ಸೇರಿದ ಬರಹಗಾರರು ಉತ್ತಮಜಾತಿ ಎಂದು ಹೇಳಿಕೊಳ್ಳುವವರ ಕೊಳಕು ಮೂಲವನ್ನು ಕುರಿತು ಸಾಹಿತ್ಯ ರಚನೆ ಮಾಡುವುದಕ್ಕೆ ಕೂಡ ಅವಕಾಶ ಮಾಡಿಕೊಟ್ಟಿದೆ. 'ಸಹ್ಯಾದ್ರಿ ಖಂಡ'ವು ಇದಕ್ಕೆ ಅತ್ಯುತ್ತಮ ಉದಾಹರಣೆ. ಹಿಂದೂ ಪವಿತ್ರ ವಾಙ್ಮಯದ ಒಂದು ಭಾಗವಾಗಿರುವ ಪುರಾಣಗಳ ಪೈಕಿ 'ಸಹ್ಯಾದ್ರಿ ಖಂಡ'ವೂ ಒಂದು. ಅದು ಇತರ ಸಾಂಪ್ರದಾಯಿಕ ಪುರಾಣಗಳಿಗಿಂತ ವಿಭಿನ್ನವೇ ಆಗಿರುವ ಒಂದು ಶೈಲಿಯಲ್ಲಿದೆ. ಅದು ವಿವಿಧ ಜಾತಿಗಳ ಉಗಮವನ್ನು ಕುರಿತು ಹೇಳುತ್ತದೆ. ಹಾಗೆ ಹೇಳುವಾಗ ಇತರ ಜಾತಿಗಳಿಗೆ ಉದಾತ್ತವಾದ ಮೂಲವನ್ನು ಹೇಳುತ್ತಾ, ಅದು ಬ್ರಾಹ್ಮಣ ಜಾತಿಗೆ ಅತ್ಯಂತ ಕೊಳಕಾದ ಮೂಲವನ್ನು ನಿರೂಪಿಸುತ್ತದೆ.

ಹಿಂದೂ ಸಮಾಜ ವ್ಯವಸ್ಥೆಯು ಸಮಾನತೆಯನ್ನು ಮಾನ್ಯ ಮಾಡುತ್ತದೆಯೆ? ಉತ್ತರ ನೇತ್ಯಾತ್ಮಕವಾಗೇ ಇರಬೇಕಾಗುತ್ತದೆ. ಮನುಷ್ಯರೆಲ್ಲರೂ ಸಮಾನವಾಗಿಯೇ ಜನಿಸುತ್ತಾರೆ ಎಂಬುದು ಹಿಂದೂ ಸಮಾಜ ವ್ಯವಸ್ಥೆಗೆ ಅಸಂಗತವಾದ ಸಿದ್ಧಾಂತ. ಆಧ್ಯಾತ್ಮಿಕ ಅರ್ಥದಲ್ಲಿ ಈ ಸಿದ್ಧಾಂತವನ್ನು ಮಿಥ್ಯೆ ಎಂದು ಅದು ಹೇಳುತ್ತದೆ. ಹಿಂದೂ ಸಮಾಜ ವ್ಯವಸ್ಥೆಯಲ್ಲಿ ಎಲ್ಲ ಮನುಷ್ಯರೂ ಈ ವಿಶ್ವದ ಸೃಷ್ಟಿಕರ್ತನಾದ ಪ್ರಜಾಪತಿಯ ಮಕ್ಕಳು ಎನ್ನುವುದು ನಿಜವಾದರೂ, ಆ ಕಾರಣದಿಂದ ಅವರೆಲ್ಲರೂ ಸಮಾನರಲ್ಲ. ಏಕೆಂದರೆ ಅವರು ಪ್ರಜಾಪತಿಯ ದೇಹದ ಬೇರೆ ಬೇರೆ ಭಾಗಗಳಿಂದ–ವೈಶ್ಯರು ಅವನ ತೊಡೆಗಳಿಂದ ಹಾಗೂ ಶೂದ್ರರು ಅವನ ಪಾದಗಳಿಂದ–ಹುಟ್ಟಿದರು. ಅವರು ಹುಟ್ಟಿದ ದೇಹ ಭಾಗಗಳ ಮೌಲ್ಯವು ಸಮಾನವಲ್ಲವಾದ್ದರಿಂದ ಅವುಗಳಿಂದ ಹುಟ್ಟಿದ ಮನುಷ್ಯರು ಎಲ್ಲರೂ ಸಮಾನರಲ್ಲ. ಜೀವಶಾಸ್ತ್ರೀಯ ದೃಷ್ಟಿಯಿಂದ ಈ ಸಿದ್ಧಾಂತವು ವಾಸ್ತವಾಂಶವೊಂದರ ಮೇಲೆ ನಿಂತಿದೆಯೆ, ಇಲ್ಲವೆ ಎಂದು ಪರೀಕ್ಷೆಮಾಡುವ ಕಾಳಜಿಯನ್ನೂ ಹಿಂದೂ ಸಮಾಜವು ತೋರಿಸುವುದಿಲ್ಲ. ಅದು ಸತ್ಯಾಂಶವಾಗಿರುವ ಪಕ್ಷದಲ್ಲಿ ಅದರೆ, ಎಲ್ಲ ಮನುಷ್ಯರೂ ಗುಣ ಸ್ವಭಾವ, ನೈಸರ್ಗಿಕವಾದ ಶಕ್ತಿ, ಕೌಶಲಗಳು, ಬುದ್ಧಿಶಕ್ತಿ ಇವುಗಳಲ್ಲಿ ಅವರು ಸಮಾನವಾಗಿರದಿದ್ದರೆ ಒಳ್ಳೆಯದೇ ಆಯಿತು. ಅದಕ್ಕೆ ಬದಲು ಅದು ಸತ್ಯಾಂಶವಾಗಿದ್ದರೆ, ಅಂದರೆ ಎಲ್ಲ ಮನುಷ್ಯರೂ ಸಾಮರ್ಥ್ಯದಲ್ಲಿ, ಶೀಲ ಸ್ವಭಾವಗಳಲ್ಲಿ ಸಮಾನವಾಗಿಬಿಟ್ಟಿದ್ದರೆ ಬಹಳ ಕಷ್ಟವೇ ಆಗುತ್ತಿತ್ತು. ಹಿಂದೂ ಸಮಾಜ ವ್ಯವಸ್ಥೆಯು ಆ ಸಿದ್ಧಾಂತವನ್ನು ವಾಸ್ತವಾಂಶವೆಂದು ಶುದ್ಧಾಂಗವಾಗಿ ಅಲಕ್ಷಿಸುತ್ತದೆ. ಒಂದು ನೈತಿಕ ತತ್ವವಾಗಿ ಕೂಡ ಅದರ ಬಗೆಗೆ ಅಲಕ್ಷ್ಯ ತೋರುತ್ತದೆ. ಮನುಷ್ಯರು ವೈಯಕ್ತಿಕವಾಗಿ ಸಾಮರ್ಥ್ಯದಲ್ಲಿ, ಗುಣ ಶೀಲಗಳಲ್ಲಿ, ಸ್ವಭಾವದಲ್ಲಿ ಅಗಾಧವಾದ ವ್ಯತ್ಯಾಸ ಹೊಂದಿದ್ದರೂ, ಸಮಾನವಾಗಿ ಗೌರವಕ್ಕೆ ಅರ್ಹರಾಗಿದ್ದಾರೆ. ಅವರ ಶಕ್ತಿ ಸಾಮರ್ಥ್ಯಗಳು

ಅಧಿಕವಾಗಿರಲಿ, ಅಲ್ಪವಾಗಿರಲಿ ಪ್ರತಿಯೊಬ್ಬರೂ ಗರಿಷ್ಠ ಪ್ರಮಾಣದಲ್ಲಿ ಅವುಗಳನ್ನು ಉಪಯೋಗಿಸಿಕೊಳ್ಳಲು ಸಮಾನ ಅವಕಾಶ ಕೊಡುವ ಸಮಾಜವು ಏಳಿಗೆ ಹೊಂದುತ್ತದೆ ಎಂಬ ವಾಸ್ತವಾಂಶವನ್ನು ಹಿಂದೂ ಸಮಾಜವು ಪರಿಗಣಿಸುವುದಿಲ್ಲ. ಅದು ಪರಿಸ್ಥಿತಿಗಳಲ್ಲಿ, ಸಂಸ್ಥೆ–ವ್ಯವಸ್ಥೆಗಳಲ್ಲಿ, ಜೀವನ ವಿಧಾನದಲ್ಲಿ ಸಮಾನತೆಯನ್ನು ತೋರಿಸುವುದಿಲ್ಲ. ಸಮಾನತಾ ಮನೋಧರ್ಮಕ್ಕೆ ಅದು ವಿರುದ್ಧವಾಗಿದೆ.

## III

ಹಿಂದೂ ಸಮಾಜ ವ್ಯವಸ್ಥೆಯು ಸಮಾನತೆ, ಸೋದರತ್ವಗಳ ಮೇಲೆ ನಿಂತಿಲ್ಲವಾದರೆ ಅದಕ್ಕೆ ಆಧಾರವಾಗಿರುವ ತತ್ವಗಳಾದರೂ ಯಾವುವು? ಈ ಪ್ರಶ್ನೆಗಿರುವುದು ಒಂದೇ ಒಂದು ಉತ್ತರ. ಅವು ಯಾವುವು ಎನ್ನುವುದನ್ನು ಅರ್ಥಮಾಡಿಕೊಳ್ಳುವವರು ಎಲ್ಲೋ ಕೆಲವರು ಮಾತ್ರವಾದರೂ ಅವುಗಳ ಸ್ವರೂಪ ಹಾಗೂ ಹಿಂದೂ ಸಮಾಜದ ಮೇಲೆ ಅವುಗಳ ಪರಿಣಾಮ ಎಂಥದು ಎಂಬುದರಲ್ಲಿ ಸಂದೇಹವೇನಿಲ್ಲ. ಹಿಂದೂ ಸಾಮಾಜಿಕ ವ್ಯವಸ್ಥೆಯನ್ನು ಮೂರು ತತ್ವಗಳು ಪೋಷಿಸುತ್ತಲಿವೆ. ಇವುಗಳಲ್ಲಿ ಮೊದಲನೆಯದು ಮತ್ತು ತುಂಬ ಮುಖ್ಯವಾದದ್ದು ವರ್ಗೀಕೃತ ಅಸಮಾನತೆಯ ತತ್ವ.

ಶ್ರೇಣೀಕೃತ ಅಸಮಾನತೆಯು ಮೂಲಭೂತವಾದ ತತ್ವ ಎಂಬ ವಿಷಯದಲ್ಲಿ ಯಾವುದೇ ಭಿನ್ನಾಭಿಪ್ರಾಯವಿಲ್ಲ. ನಾಲ್ಕು ವರ್ಣಗಳೂ ಬೇರೆ ಬೇರೆಯಾಗಿ ಸಮತಲ ಕ್ಷೇತ್ರದಲ್ಲಿ ಇಲ್ಲ, ಬದಲು ಲಂಬರೇಖೆಯಲ್ಲಿವೆ. ಅವು ಬೇರೆಯಾಗಿರುವುದು ಮಾತ್ರವಲ್ಲ, ಅಸಮಾನಸ್ಥಾನ ಹೊಂದಿವೆ, ಒಂದರ ಮೇಲೆ ಇನ್ನೊಂದು ನಿಂತಿದೆ. ಮನುವಿನ ಯೋಜನೆಯ ಪ್ರಕಾರ, ಬ್ರಾಹ್ಮಣನು ಈ ಶ್ರೇಣಿಯ ತುತ್ತ ತುದಿಯಲ್ಲಿದ್ದಾನೆ. ಅವನ ಕೆಳಗೆ ಕ್ಷತ್ರಿಯ, ಕ್ಷತ್ರಿಯನ ಕೆಳಗೆ ವೈಶ್ಯ, ವೈಶ್ಯನ ಕೆಳಗೆ ಶೂದ್ರ, ಶೂದ್ರನಿಗಿಂತ ಕೆಳಗೆ ಅತಿ ಶೂದ್ರ ಅಥವಾ ಅಸ್ಪೃಶ್ಯ. ವರ್ಗಗಳ ಈ ಅವರೋಹಣ ಕ್ರಮವು ಕೇವಲ ರೂಢಿಯಿಂದ ಬಂದದ್ದಲ್ಲ. ಅದು ಆಧ್ಯಾತ್ಮಿಕ, ನೈತಿಕ ಹಾಗೂ ಶಾಸನಬದ್ಧವಾಗಿದೆ. ಈ ಶ್ರೇಣೀಕೃತ ಅಸಮಾನತೆಯ ತತ್ವದ ನಿಯಂತ್ರಣಕ್ಕೆ ಒಳಪಡದಿರುವ ಯಾವುದೇ ಜೀವನ ಕ್ಷೇತ್ರ ಇಲ್ಲ.

ಇದಕ್ಕೆ ಆಧಾರವಾಗಿ 'ಮನುಸ್ಮೃತಿ'ಯಿಂದ ಅಸಂಖ್ಯಾತ ನಿದರ್ಶನಗಳನ್ನು ಕೊಡಬಹುದು. ಪ್ರಸ್ತುತ ವಿಚಾರವನ್ನು ಸಮರ್ಥಿಸಲು ನಾಲ್ಕು ನಿದರ್ಶನಗಳನ್ನು ತೆಗೆದುಕೊಳ್ಳುತ್ತೇನೆ. ಇವು ಗುಲಾಮಗಿರಿಯ ಶಾಸನ, ವಿವಾಹ ಶಾಸನ, ದಂಡ ಶಾಸನ ಮತ್ತು ಸಂಸ್ಕಾರಗಳ ಶಾಸನ ಹಾಗೂ ಸನ್ಯಾಸ ಶಾಸನ. ದಾಸ್ಯ ಅಥವಾ ಗುಲಾಮಗಿರಿಯನ್ನು ಶಾಸನಬದ್ಧ ವ್ಯವಸ್ಥೆಯೆಂದು ಹಿಂದೂ ಶಾಸನವು ಪರಿಗಣಿಸಿತು. 'ಮನುಸ್ಮೃತಿ'ಯು ಏಳು ಬಗೆಯ ದಾಸರನ್ನು ಗುರುತಿಸುತ್ತದೆ. 'ನಾರದ ಸ್ಮೃತಿ'ಯಾದರೋ ಹದಿನೈದು ಬಗೆಯ ದಾಸರನ್ನು ನಿರೂಪಿಸುತ್ತದೆ. ದಾಸರ ಸಂಖ್ಯೆಯ ಈ ವಿಭಿನ್ನತೆ, ಅವರ ವರ್ಗಗಳು ಮುಖ್ಯವಾದ ಸಂಗತಿಗಳಲ್ಲ. ಮುಖ್ಯವಾದದ್ದು ಯಾರೂ ಯಾರನ್ನು ದಾಸರನ್ನಾಗಿಸಿಕೊಳ್ಳಬಹುದು ಎನ್ನುವುದು. ಈ ಸಂದರ್ಭದಲ್ಲಿ 'ನಾರದಸ್ಮೃತಿ' ಮತ್ತು 'ಯಾಜ್ಞವಲ್ಕ್ಯನ ಸ್ಮೃತಿ'ಗಳಿಂದ ತೆಗೆದ ಈ ಉಕ್ತಿಗಳು ಬೆಳಕು ಚೆಲ್ಲುತ್ತವೆ:

*ನಾರದ ಸ್ಮೃತಿ:* V-39 " ನಾಲ್ಕು ಜಾತಿಗಳ ವಿಲೋಮ ಕ್ರಮದಲ್ಲಿ ವ್ಯಕ್ತಿಯು ತನ್ನ ಜಾತಿಗೆ ನಿಗದಿತವಾದ ಕರ್ತವ್ಯವನ್ನು ಮಾಡದೇ ಹೋದಾಗ ಹೊರತು ಬೇರೆಯಾಗಿ ದಾಸ್ಯವನ್ನು ವಿಧಿಸಿಲ್ಲ. ಈ ದೃಷ್ಟಿಯಿಂದ ದಾಸ್ಯವು ಪತ್ನಿಯ ಸ್ಥಿತಿಗತಿಗೆ ಸದೃಶವಾಗಿದೆ."

*ಯಾಜ್ಞವಲ್ಕ್ಯ ಸ್ಮೃತಿ:* XVI–೧೮೩(೨) "ದಾಸ್ಯವು ವರ್ಣಗಳು ವಿಲೋಮ ಕ್ರಮದಲ್ಲಿಯೇ ಹೊರತು ಪ್ರತಿಲೋಮ ಕ್ರಮದಲ್ಲಿ ಅಲ್ಲ."

ಗುಲಾಮ ಪದ್ಧತಿಯೇ ದುಷ್ಟ ಪದ್ಧತಿ. ಆದರೆ ನಾವು ದಾಸ್ಯ ಶಾಸನವು ತನಗೆ ತಾನೇ ಯಾವ ದಾರಿಯನ್ನು ಬೇಕಾದರೂ ಹಿಡಿಯಲಿ ಎಂದು ಸ್ವತಂತ್ರವಾಗಿ ಬಿಟ್ಟುಬಿಟ್ಟಿದ್ದರೆ ಒಂದು ಪ್ರಯೋಜನವಾದರೂ ಆಗುತ್ತಿತ್ತು. ಸಮತಟ್ಟು ಮಾಡುವ ಶಕ್ತಿ ಅದಕ್ಕೆ ಬರುತ್ತಿತ್ತು. ಜಾತಿಯ ತಳಪಾಯ ನಾಶವಾಗುತ್ತಿತ್ತು. ಏಕೆಂದರೆ ಅದರ ಪ್ರಕಾರ ಬ್ರಾಹ್ಮಣನು ಅಸ್ಪೃಶ್ಯರ ದಾಸನಾಗುತ್ತಿದ್ದನು. ಅಸ್ಪೃಶ್ಯರು ಬ್ರಾಹ್ಮಣನ ಒಡೆಯರಾಗುತ್ತಿದ್ದರು. ಅನಿರ್ಬಂಧಿತ ದಾಸ್ಯ ಪದ್ಧತಿಯು ಹೀಗೆ ಮಟ್ಟಸಗೊಳಿಸುವ ಶಕ್ತಿ ಹೊಂದಿರುವ ತತ್ವ ಎಂಬುದನ್ನು ಮನಗಂಡು ಅದನ್ನು ತಡೆಯಲಾಯಿತು. ಹಾಗಾಗಿ ದಾಸ್ಯ ಪದ್ಧತಿಯನ್ನು ಅಂಗೀಕರಿಸುವ ಮನು ಮತ್ತು ಅವನ ಅನುಯಾಯಿಗಳು ಅದನ್ನು ವರ್ಣ ವ್ಯವಸ್ಥೆಯ ಅವರೋಹಣ ಕ್ರಮದಲ್ಲಿ ಇರಬೇಕೆಂದು ಆದೇಶಿಸಿದರೇ ಹೊರತು ಆರೋಹಣ ಕ್ರಮದಲ್ಲಿ ಇರಲು ಬಿಡಲಿಲ್ಲ. ಇದರ ಅರ್ಥ ಒಬ್ಬ ಬ್ರಾಹ್ಮಣನು ಇನ್ನೊಬ್ಬ ಬ್ರಾಹ್ಮಣನ ದಾಸನಾಗಬಹುದು. ಆದರೆ, ಬೇರೊಂದು ವರ್ಣಕ್ಕೆ ಅಂದರೆ ಕ್ಷತ್ರಿಯ, ವೈಶ್ಯ, ಶೂದ್ರ ಮತ್ತು ಅತಿ ಶೂದ್ರ ವರ್ಣಗಳ ದಾಸನಾಗುವಂತಿಲ್ಲ. ಒಬ್ಬ ಬ್ರಾಹ್ಮಣನು ನಾಲ್ಕು ವರ್ಣಗಳಿಗೆ ಸೇರಿದ ಯಾರನ್ನು ಬೇಕಾದರೂ ದಾಸನನ್ನಾಗಿ ಮಾಡಿಕೊಳ್ಳಬಹುದು. ಒಬ್ಬ ಕ್ಷತ್ರಿಯನು ಇನ್ನೊಬ್ಬ ಕ್ಷತ್ರಿಯನನ್ನೋ, ವೈಶ್ಯ, ಶೂದ್ರ, ಅತಿ ಶೂದ್ರರಲ್ಲಿ ಯಾರೊಬ್ಬರನ್ನೋ ದಾಸರನ್ನಾಗಿ ಮಾಡಿಕೊಳ್ಳಬಹುದು, ಬ್ರಾಹ್ಮಣನಾಗಿರುವವನನ್ನಲ್ಲ. ಒಬ್ಬ ವೈಶ್ಯನು, ವೈಶ್ಯ, ಶೂದ್ರ, ಅತಿ ಶೂದ್ರ ವರ್ಣಗಳ ಯಾರೊಬ್ಬರನ್ನು ಬೇಕಾದರೂ ದಾಸನನ್ನಾಗಿ ಇಟ್ಟುಕೊಳ್ಳಬಹುದು, ಬ್ರಾಹ್ಮಣನನ್ನೋ, ಕ್ಷತ್ರಿಯನನ್ನೋ ಅಲ್ಲ. ಒಬ್ಬ ಶೂದ್ರನು ಇನ್ನೊಬ್ಬ ಶೂದ್ರನನ್ನೋ ಅತಿ ಶೂದ್ರನನ್ನೋ ಗುಲಾಮನನ್ನಾಗಿಸಿಕೊಳ್ಳಬಹುದೇ ಹೊರತು ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ವರ್ಣಗಳಿಗೆ ಸೇರಿದವನನ್ನಲ್ಲ.

ಶ್ರೇಣೀಕೃತ ಅಸಮಾನತೆಯ ಇನ್ನೊಂದು ನಿದರ್ಶನವನ್ನು ವಿವಾಹವನ್ನು ಕುರಿತ ಶಾಸನಗಳಲ್ಲಿ ನೋಡಬಹುದು. ಮನು ಹೇಳುತ್ತಾನೆ:

III–೧೨ "ದ್ವಿಜ ವರ್ಗಗಳಿಗೆ ಸೇರಿದವರು ಮೊದಲನೆಯ ಮದುವೆಯಲ್ಲಿ ಅದೇ ವರ್ಗದ ಕನ್ಯೆಯನ್ನು ವಿವಾಹವಾಗಬಹುದು. ಆದರೆ ಮತ್ತೊಂದು ಸಾರಿ ವಿವಾಹವಾಗುವ ಒಲವು ಹೊಂದಿರುವವರು ವರ್ಣಗಳ ನೇರ ಅನುಕ್ರಮದಲ್ಲಿನ ಹೆಣ್ಣುಗಳನ್ನು ಮದುವೆಯಾಗಬೇಕು."

III–೧೩ "ಶೂದ್ರ ಸ್ತ್ರೀ ಮಾತ್ರವೇ ಶೂದ್ರನ ಪತ್ನಿಯಾಗತಕ್ಕದ್ದು. ಅವಳು ಮತ್ತು ವೈಶ್ಯ ಸ್ತ್ರೀ ಒಬ್ಬ ವೈಶ್ಯನ ಪತ್ನಿಯಾಗಲು ಅರ್ಹರು. ಅವರಿಬ್ಬರು ಮತ್ತು ಕ್ಷತ್ರಿಯ ಸ್ತ್ರೀ ಒಬ್ಬ ಕ್ಷತ್ರಿಯನ ಪತ್ನಿಯರಾಗಬಹುದು. ಈ ಮೂವರು ಹಾಗೂ ಬ್ರಾಹ್ಮಣ ಸ್ತ್ರೀ ಒಬ್ಬ ಬ್ರಾಹ್ಮಣನ ಪತ್ನಿಯಾಗಲು ಅರ್ಹತೆ ಹೊಂದಿರುತ್ತಾರೆ."

ಮನುವು ಅಂತರ್ಜಾತೀಯ ವಿವಾಹವನ್ನು ವಿರೋಧಿಸುತ್ತಾನೆ. ಪ್ರತಿಯೊಂದು ವರ್ಣವೂ ತನ್ನ ವರ್ಣದಲ್ಲೇ ವಿವಾಹ ಸಂಬಂಧ ಬೆಳೆಸಬೇಕೆಂಬುದು ಅವನ ಆದೇಶ. ನಿರ್ದಿಷ್ಟ ವರ್ಗದಿಂದ ಹೊರಗಿನ ವಿವಾಹವನ್ನೂ ಅವನು ಗುರುತಿಸುತ್ತಾನೆ. ಆದರೆ, ಇಲ್ಲೂ ಅಂತರ್ಜಾತಿಯ ವಿವಾಹವು ವರ್ಣಗಳ ಅಸಮಾನತೆಯ ತತ್ವಕ್ಕೆ ಹಾನಿಯುಂಟುಮಾಡದ ಹಾಗೆ ಅವನು ಎಚ್ಚರ ವಹಿಸುತ್ತಾನೆ. ದಾಸ್ಯ ಪದ್ಧತಿಯ ಹಾಗೆಯೇ ಅಂತರ–ವಿವಾಹವನ್ನೂ ಅವನು ಅನುಮತಿಸಿದರೂ ಅದು ಆರೋಹಣ ಕ್ರಮದಲ್ಲಲ್ಲ. ತನ್ನ ವರ್ಗದಿಂದ ಹೊರಗೆ ವಿವಾಹ ಸಂಬಂಧ ಬೆಳೆಸುವ ಬ್ರಾಹ್ಮಣನು ತನಗಿಂತ ಕೆಳಗಿನ ಯಾವ ವರ್ಣದ ಹೆಣ್ಣನ್ನು ಬೇಕಾದರೂ ಮದುವೆಯಾಗಬಹುದು. ಕ್ಷತ್ರಿಯನು ತನ್ನ ವರ್ಣಕ್ಕಿಂತ ಕೆಳಗಿನ ಎರಡು ವರ್ಣಗಳ ಅಂದರೆ, ವೈಶ್ಯ ಮತ್ತು ಶೂದ್ರರ ಹೆಣ್ಣನ್ನು ಮದುವೆಯಾಗಬಹುದೇ ಹೊರತು ತನಗಿಂತ ಮೇಲುಮಟ್ಟದ

ಬ್ರಾಹ್ಮಣ ವರ್ಗದ ಹೆಣ್ಣನ್ನು ಮದುವೆಯಾಗುವಂತಿಲ್ಲ. ವೈಶ್ಯನು ತನ್ನ ವರ್ಗದಿಂದ ಕೆಳಗಿರುವ ಶೂದ್ರ ವರ್ಣದ ಹೆಣ್ಣನ್ನು ವಿವಾಹವಾಗಬಹುದೇ ಹೊರತು ತನಗಿಂತ ಮೇಲಿನ ಕ್ಷತ್ರಿಯ ಅಥವಾ ಬ್ರಾಹ್ಮಣ ವರ್ಗದ ಹೆಣ್ಣನ್ನಲ್ಲ.

ಮೂರನೆಯ ನಿದರ್ಶನವು ಮನುವು ಹೇಳಿರುವ ನ್ಯಾಯವನ್ನು ಕುರಿತ ನಿಯಮಗಳಲ್ಲಿದೆ. ಮೊದಲನೆಯದು ಸಾಕ್ಷಿಗಳನ್ನು ಕುರಿತು ಹೇಗೆ ವ್ಯವಹರಿಸಬೇಕೆನ್ನುವುದು. ಮನುವಿನ ಪ್ರಕಾರ ಸಾಕ್ಷಿಗಳು ಹೀಗೆ ಪ್ರಮಾಣ ಮಾಡಬೇಕು:

VIII–೮೭ "ಪೂರ್ವಾಹ್ನದಲ್ಲಿ ನ್ಯಾಯಾಧಿಪತಿಯು ಪರಿಶುದ್ಧನಾಗಿ ಶುದ್ಧನಾಗಿರುವ ದ್ವಿಜನನ್ನು ಒಂದು ವಿಗ್ರಹ ಅಥವಾ ದೇವತಾ ಸಂಕೇತದ ಸನ್ನಿಧಿಯಲ್ಲಿ ಬ್ರಾಹ್ಮಣರೆದುರಿಗೆ ಸತ್ಯವನ್ನು ಘೋಷಿಸಬೇಕೆಂದು ಹೇಳಬೇಕು. ಸಾಕ್ಷಿದಾರರು ತಮ್ಮ ಮುಖವನ್ನು ಉತ್ತರಕ್ಕೋ, ಪೂರ್ವಕ್ಕೋ ತಿರುಗಿಸಿಕೊಂಡಿರಬೇಕು."

VIII–೮೮ "ಬ್ರಾಹ್ಮಣನಿಗೆ ಆಜ್ಞೆ ಮಾಡುವಾಗ 'ಪ್ರಕಟಿಸು' ಎಂಬ ಮಾತಿನಿಂದ ತೊಡಗಬೇಕು. ಕ್ಷತ್ರಿಯನಿಗೆ 'ಸತ್ಯವನ್ನು ಹೇಳು' ಎಂಬ ಮಾತಿನಿಂದ ಪ್ರಾರಂಭ ಮಾಡಬೇಕು. ವೈಶ್ಯನಿಗೆ ಅವನ ಗೋವನ್ನೋ, ಧಾನ್ಯವನ್ನೋ, ಚಿನ್ನವನ್ನೋ ಉಲ್ಲೇಖಿಸಿ ವಾಗ್ದಂಡನೆ ನೀಡಬೇಕು. ಶೂದ್ರನ ಬಗೆಗೆ ಜಾತಿಯನ್ನು ಕಳೆದುಕೊಳ್ಳಬಹುದಾದ ಎಲ್ಲ ಬಗೆಯ ಅಪರಾಧ, ದೋಷಗಳನ್ನು ಹೇಳಿ ಹೆದರಿಸಬೇಕು."

ಅಪರಾಧಗಳಿಗೆ ಮನುವು ವಿಧಿಸುವ ದಂಡನೆಗಳನ್ನು ತೆಗೆದುಕೊಳ್ಳಿ. ಮೊದಲಿಗೆ ತೇಜೋವಧೆಯ ಅಪರಾಧಕ್ಕೆ ಶಿಕ್ಷೆ:

VIII–೨೬೭ "ಒಬ್ಬ ಯೋಧನು ಪುರೋಹಿತನೊಬ್ಬನ ಮಾನಹಾನಿ ಮಾಡಿದರೆ ಅವನಿಗೆ ಒಂದು ನೂರು ಪಣಗಳನ್ನು ದಂಡವಾಗಿ ವಿಧಿಸತಕ್ಕದ್ದು. ಹಾಗೆ ಅಪರಾಧ ಮಾಡುವ ವ್ಯಾಪಾರಿಗೆ ನೂರೈವತ್ತು ಅಥವಾ ಇನ್ನೂರು ಪಣಗಳನ್ನು ವಿಧಿಸತಕ್ಕದ್ದು. ಆದರೆ, ಅದೇ ಅಪರಾಧ ಮಾಡಿದ ಒಬ್ಬ ಕಾರ್ಮಿಕ ಅಥವಾ ದಾಸನಾದ ವ್ಯಕ್ತಿಗೆ ಕೊರಡೆ ಏಟು ಬಾರಿಸಬೇಕು."

VIII–೨೬೮ "ಬ್ರಾಹ್ಮಣನೊಬ್ಬನು ಯೋಧನ ಮೇಲೆ ಮಿಥ್ಯಾಪವಾದ ಹೊರಿಸಿ ಅಪರಾಧ ಮಾಡಿದರೆ, ಅವನಿಗೆ ಐವತ್ತು ಪಣ ದಂಡ ವಿಧಿಸಬೇಕು, ವರ್ತಕನ ಮೇಲೆ ಮಿಥ್ಯಾಪವಾದಗೈದರೆ, ಇಪ್ಪತ್ತೈದು ಪಣ, ಶೂದ್ರ ವರ್ಗದ ವ್ಯಕ್ತಿಯನ್ನು ಕುರಿತು ಈ ಅಪರಾಧಗೈದರೆ, ಹನ್ನೆರಡು ಪಣ ದಂಡ ವಿಧಿಸತಕ್ಕದ್ದು."

ಅಪಮಾನ ಮಾಡುವ ಅಪರಾಧವನ್ನು ತೆಗೆದುಕೊಳ್ಳಿ. ಮನು ಈ ಅಪರಾಧಕ್ಕೆ ವಿಧಿಸಿರುವ ಶಿಕ್ಷೆ ಹೀಗಿದೆ:

VIII–೨೭೦ "ದ್ವಿಜನನ್ನು ಕೀಳು ಮಾತುಗಳಿಂದ ನಿಂದಿಸುವ ಶೂದ್ರನ ನಾಲಗೆಯನ್ನು ಸೀಳತಕ್ಕದ್ದು. ಏಕೆಂದರೆ, ಅವನು ಬ್ರಹ್ಮನ ಅತ್ಯಂತ ಕೆಳಗಿನ ಅಂಗದಿಂದ ಜನಿಸಿದವನು."

VIII–೨೭೧ "ಅವನೇನಾದರೂ ದ್ವಿಜನ ಹೆಸರು, ಕುಲಗಳನ್ನು ಹೀನಾಯವಾಗಿ 'ಓಹ್, ದೇವದತ್ತ, ನೀನು ಬ್ರಹ್ಮನ ಎಂಜಲು' ಎಂಬಂತಹ ಮಾತುಗಳಲ್ಲಿ ಹಳಿದರೆ, ಹತ್ತು ಬೆರಳು ಉದ್ದದ ಕಬ್ಬಿಣದ ಸಲಾಕಿಯನ್ನು ಕೆಂಪಗೆ ಕಾಯಿಸಿ ಅವನ ಬಾಯೊಳಕ್ಕೆ ತುರುಕತಕ್ಕದ್ದು."

VIII–೨೭೨ "ಗರ್ವದಿಂದ ಅವನೇನಾದರೂ ದ್ವಿಜರಿಗೆ ಅವರ ಕರ್ತವ್ಯಗಳನ್ನು ಕುರಿತು ಸೂಚನೆಗಳನ್ನು ಕೊಟ್ಟ ಪಕ್ಷದಲ್ಲಿ, ರಾಜನು ಎಣ್ಣೆ ಕುದಿಸಿ ಅವನ ಬಾಯೊಳಕ್ಕೂ, ಕಿವಿಯೊಳಕ್ಕೂ ಸುರಿಯತಕ್ಕದ್ದು."

ಬೈಗುಳದ ಅಪರಾಧಕ್ಕೆ ಶಿಕ್ಷೆ ಹೀಗಿದೆ. ಮನು ಹೇಳುತ್ತಾನೆ:

VIII–೨೭೬ "ಬ್ರಾಹ್ಮಣ ಮತ್ತು ಕ್ಷತ್ರಿಯ ಪರಸ್ಪರ ಬೈದಾಡಿದರೆ ರಾಜನು ಅವರಿಗೆ ದಂಡ ವಿಧಿಸಬೇಕು. ಬ್ರಾಹ್ಮಣನಿಗೆ ಅತ್ಯಂತ ಕಡಿಮೆಯಾಗಿಯೂ, ಕ್ಷತ್ರಿಯನಿಗೆ ಮಧ್ಯವರ್ತಿಯಾಗಿಯೂ ದಂಡ ಹಾಕಬೇಕು."

VIII–೨೭೭ "ವೈಶ್ಯ ಮತ್ತು ಶೂದ್ರನಿಗೆ ಅವರವರ ಜಾತಿಗೆ ತಕ್ಕ ಹಾಗೆ ಶಿಕ್ಷೆ ವಿಧಿಸತಕ್ಕದ್ದು. ಶೂದ್ರನಿಗೆ ನಾಲಿಗೆಯನ್ನು ಸೀಳುವುದು ಮಾತ್ರ ಉಂಟೇ ಉಂಟು. ಇದು ನಿಷ್ಕರ್ಷೆಯಾಗಿರುವ ಶಿಕ್ಷಾ ವಿಧಾನ......"

ಹಲ್ಲೆ ಮಾಡಿದ ಅಪರಾಧಕ್ಕೆ ಮನುವು ಹೀಗೆ ಶಿಕ್ಷೆಯನ್ನು ವಿಧಿಸುತ್ತಾನೆ:

VIII–೨೭೯ "ಯಾವ ಅಂಗದಿಂದ ಶೂದ್ರನು ದ್ವಿಜನ ಮೇಲೆ ಹಲ್ಲೆ ಮಾಡುವವನೋ ಅಥವಾ ಆತನನ್ನು ಗಾಯಗೊಳಿಸುವನೋ ಆ ಅಂಗವನ್ನು ಕಡಿದುಹಾಕತಕ್ಕದ್ದು. ಇದು ಮನುವಿನ ಶಾಸನ."

ಉದ್ಧಟತನದ ಅಪರಾಧಕ್ಕೆ ಮನುವಿನ ಪ್ರಕಾರ ಶಿಕ್ಷೆ ಹೀಗಿದೆ:

VIII–೨೮೧ "ಉತ್ತಮ ಜಾತಿಗೆ ಸೇರಿದವನು ಕುಳಿತಿರುವ ಆಸನದಲ್ಲಿ ಅವನ ಜೊತೆಗೆ ಗರ್ವದಿಂದ ಒಬ್ಬ ಶೂದ್ರನು ಕುಳಿತುಕೊಂಡ ಪಕ್ಷದಲ್ಲಿ ಅವನ ಪೃಷ್ಠದ ಮೇಲೆ ಬರೆ ಹಾಕಬೇಕು ಅಥವಾ ರಾಜನು ಅವನ ಪೃಷ್ಠದ ಮೇಲೆ ಸೀಳು ಗಾಯವನ್ನು ಮಾಡಿಸಬೇಕು."

VIII–೨೮೨ "ಅವನು ಉತ್ತಮ ಜಾತಿಯವನ ಮೇಲೆ ಗರ್ವದಿಂದ ಉಗಿದರೆ, ರಾಜನು ಅವನ ಎರಡೂ ತುಟಿಗಳನ್ನು ಸೀಳಿಸತಕ್ಕದ್ದು. ಮೂತ್ರ ವಿಸರ್ಜನೆ ಮಾಡಿದರೆ, ಅವನ ಶಿಶ್ನವನ್ನು ಸೀಳಿಸಬೇಕು. ಹೂಸಿದರೆ ಅವನ ಗುದದ್ವಾರವನ್ನು ಸೀಳಿಸಬೇಕು."

VIII–೨೮೩ "ಅವನು ಬ್ರಾಹ್ಮಣನನ್ನು ತಲೆಗೂದಲು ಹಿಡಿದೋ, ಕಾಲುಗಳನ್ನು ಎಳೆದೋ, ಆಕ್ರಮಣ ಮಾಡಿದರೆ ಅಂತಹ ಶೂದ್ರನ ಕೈಗಳನ್ನೂ ಸ್ವಲ್ಪವೂ ಅನುಮಾನವಿಲ್ಲದೆ ಕತ್ತರಿಸಿ ಹಾಕಬೇಕು. ಗಡ್ಡವನ್ನೋ, ಗಂಟಲನ್ನೋ, ವೃಷಣಕೇಶವನ್ನೋ ಹಿಡಿದು ಹಲ್ಲೆ ಮಾಡಿದರೂ ಅಷ್ಟೆ. ಕೈಗಳನ್ನೂ ಕಡಿಯಬೇಕು."

ವ್ಯಭಿಚಾರಕ್ಕೆ ಮನುವು ಹೀಗೆ ಶಿಕ್ಷೆಯನ್ನು ವಿಧಿಸುತ್ತಾನೆ:

VIII–೩೫೯ "ಬ್ರಾಹ್ಮಣನಲ್ಲದ ಒಬ್ಬ ವ್ಯಕ್ತಿಯು ವ್ಯಭಿಚಾರ ಮಾಡಿದರೆ, ಅವನು ಮರಣದಂಡನೆಯನ್ನು ಅನುಭವಿಸತಕ್ಕದ್ದು. ಏಕೆಂದರೆ ಎಲ್ಲಾ ವರ್ಣಗಳ ಹೆಂಡಿರನ್ನು ಅತ್ಯಂತ ಜಾಗರೂಕತೆಯಿಂದ ರಕ್ಷಿಸತಕ್ಕದ್ದು."

VIII–೩೬೬ "ಉತ್ತಮ ಜಾತಿಯ ಒಬ್ಬ ಕನ್ಯೆಯನ್ನು ಒಬ್ಬ ಶೂದ್ರನು ಪ್ರೇಮಿಸಿದರೆ, ಅವನಿಗೆ ದೇಹದಂಡನೆಯನ್ನು ವಿಧಿಸತಕ್ಕದ್ದು. ಆದರೆ, ತನ್ನದೇ ದರ್ಜೆಯ ಅಥವಾ ಜಾತಿಯ ಕನ್ಯೆಯನ್ನು ಪ್ರೇಮಿಸಿದ ಪಕ್ಷದಲ್ಲಿ ಅವಳಿಗೆ ಶೋಭನದ ಉಡುಗೊರೆಯನ್ನು ಕೊಟ್ಟು ಮದುವೆ ಮಾಡಿಕೊಳ್ಳಬಹುದು. ಆ ಕನ್ಯೆಯ ತಂದೆ ಅಪೇಕ್ಷಿಸಬೇಕು ಅಷ್ಟೆ."

VIII–೩೭೪ "ದ್ವಿಜವರ್ಗಕ್ಕೆ ಸೇರಿದ ಹೆಣ್ಣಿನೊಂದಿಗೆ–ಅವಳು ಸುರಕ್ಷಿತೆಯಾಗಿರಲಿ, ಅಲ್ಲದಿರಲಿ– ಅಕ್ರಮ ಸಂಬಂಧ ನಡೆಸಿದ ಶೂದ್ರನಿಗೆ ಈ ರೀತಿ ಶಿಕ್ಷೆ ವಿಧಿಸತಕ್ಕದ್ದು. ಅವಳು ಸುರಕ್ಷಿತೆಯಾಗಿರದಿದ್ದರೆ, ದೋಷವೆಸಗಿದ ಅಂಗವನ್ನೂ ತನ್ನ ಆಸ್ತಿಯನ್ನೂ,

ಕಳೆದುಕೊಳ್ಳಬೇಕು. ರಕ್ಷಿತೆಯಾಗಿದ್ದರೆ ಅವನು ಎಲ್ಲವನ್ನೂ ಹಾಗೂ ಪ್ರಾಣವನ್ನೂ ಕಳೆದುಕೊಳ್ಳಬೇಕು."

VIII–೩೭೫ "ರಕ್ಷಿತೆಯಾದ ಹೆಂಗಸಿನೊಂದಿಗೆ ವ್ಯಭಿಚಾರ ಮಾಡಿದ ವೈಶ್ಯನು ತನ್ನೆಲ್ಲ ಸಂಪತ್ತನ್ನು ಕಳೆದುಕೊಂಡು ಒಂದು ವರ್ಷ ಕಾರಾಗೃಹವಾಸ ಅನುಭವಿಸಬೇಕು. ಕ್ಷತ್ರಿಯನಾದರೆ ಒಂದು ಸಾವಿರ ಪಣ ದಂಡವನ್ನು ಕಟ್ಟಬೇಕು ಮತ್ತು ಕತ್ತೆಯ ಮೂತ್ರ ಬಳಿದು ಅವನ ತಲೆಯನ್ನು ಬೋಳಿಸಬೇಕು."

VIII–೩೭೬ "ಆದರೆ ವೈಶ್ಯನಾಗಲಿ, ಕ್ಷತ್ರಿಯನಾಗಲಿ, ರಕ್ಷಿತೆಯಲ್ಲದ ಬ್ರಾಹ್ಮಣ ಹೆಣ್ಣಿನೊಂದಿಗೆ ಅನೈತಿಕ ಸಂಬಂಧ ನಡೆಸಿದರೆ ರಾಜನು ವೈಶ್ಯನಿಗೆ ಐದು ನೂರು ಪಣಗಳನ್ನೂ, ಕ್ಷತ್ರಿಯನಿಗೆ ಒಂದು ಸಾವಿರ ಪಣಗಳನ್ನು ಜುಲ್ಮಾನೆಯಾಗಿ ವಿಧಿಸಬೇಕು."

VIII–೩೭೭ "ಈ ಇಬ್ಬರೂ (ಕ್ಷತ್ರಿಯ ಮತ್ತು ವೈಶ್ಯ) ಒಬ್ಬ ರಕ್ಷಿತೆಯಾದ ಹಾಗೂ ಸಮರ್ಥನೂ ಪರಿಣತನೂ ಆದ ವ್ಯಕ್ತಿಯು ಪತ್ನಿಯಾದ ಬ್ರಾಹ್ಮಣಿಯೊಂದಿಗೆ ಅದೇ ಅಪರಾಧ ಮಾಡಿದರೆ, ಅವರನ್ನು ಶೂದ್ರನನ್ನು ಹೇಗೋ ಹಾಗೆ ಶಿಕ್ಷಿಸಬೇಕು ಅಥವಾ ಒಣಗಿದ ಹುಲ್ಲು ಅಥವಾ ಲಾಳದ ಕಡ್ಡಿಯನ್ನು ಒಟ್ಟಿ ಬೆಂಕಿ ಹಚ್ಚಿ ಅದರಲ್ಲಿ ಜೀವಂತವಾಗಿ ಸುಡಬೇಕು."

VIII–೩೮೨ "ವೈಶ್ಯನು ರಕ್ಷಿತ ಕ್ಷತ್ರಿಯ ಸ್ತ್ರೀಯನ್ನಾಗಲಿ, ಕ್ಷತ್ರಿಯನು ರಕ್ಷಿತ ವೈಶ್ಯ ಸ್ತ್ರೀಯನ್ನಾಗಲಿ, ಅನೈತಿಕವಾಗಿ ಕೂಡಿ ಅಪರಾಧ ಮಾಡಿದರೆ, ಅರಕ್ಷಿತ ಬ್ರಾಹ್ಮಣ ಸ್ತ್ರೀಯೊಂದಿಗೆ ನಡೆಸಿದ ಅಪರಾಧಕ್ಕೆ ಯಾವ ಶಿಕ್ಷೆಯೋ ಅದೇ ಶಿಕ್ಷೆಯನ್ನು ಅನುಭವಿಸಬೇಕು."

VIII–೩೮೩ "ಆದರೆ ಈ ಎರಡೂ ವರ್ಗಗಳ ರಕ್ಷಿತ ಸ್ತ್ರೀಯೊಂದಿಗೆ ವ್ಯಭಿಚಾರ ನಡೆಸುವ ಬ್ರಾಹ್ಮಣನಿಗೆ ಒಂದು ಸಾವಿರ ಪಣಗಳ ದಂಡವನ್ನು ವಿಧಿಸಬೇಕು. ಶೂದ್ರ ವರ್ಗದ ಹೆಣ್ಣಾಗಿದ್ದರೆ ವ್ಯಭಿಚಾರ ನಡೆಸಿದ ಕ್ಷತ್ರಿಯನಿಗೆ ಅಥವಾ ವೈಶ್ಯನಿಗೆ ಒಂದು ಸಾವಿರ ಪಣ ಜುಲ್ಮಾನೆ ವಿಧಿಸಬೇಕು."

VIII–೩೮೪ "ಕ್ಷತ್ರಿಯ ವರ್ಗದ ರಕ್ಷಿತೆಯಾದ ಸ್ತ್ರೀಯೊಂದಿಗೆ ವೈಶ್ಯನು ವ್ಯಭಿಚರಿಸಿದರೆ, ಜುಲ್ಮಾನೆಯು ಐದುನೂರು ಪಣ. ಆದರೆ ವೈಶ್ಯ ಸ್ತ್ರೀಯಲ್ಲಿ ವ್ಯಭಿಚರಿಸುವ ಕ್ಷತ್ರಿಯನಿಗೆ ಕತ್ತೆಯ ಮೂತ್ರದಿಂದ ತಲೆ ಬೋಳಿಸುವಿಕೆ ಅಥವಾ ಮೇಲೆ ಹೇಳಿದ ಜುಲ್ಮಾನೆ."

ಹಿಂದೂ ಮತ್ತು ಅಹಿಂದೂ ಅಪರಾಧ ನ್ಯಾಯಶಾಸ್ತ್ರ ಹೇಗಿದೆ! ಎಷ್ಟು ವಿಚಿತ್ರವಾಗಿದೆ! ಅಪರಾಧ ನ್ಯಾಯಶಾಸ್ತ್ರದಲ್ಲಿ ಸ್ಪಷ್ಟವಾಗಿ ಕಾಣುವಂತೆ ಹಿಂದೂ ಧರ್ಮದಲ್ಲಿನ ಅಸಮಾನತೆ ನಿಚ್ಚಳವಾಗಿ ನಿರೂಪಿತವಾಗಿದೆ. ನ್ಯಾಯಯುತವಾದ ದಂಡಸಂಹಿತೆಯಲ್ಲಿ ನಾವು ನೋಡಬೇಕಾದದ್ದು ಎರಡು ಅಂಶಗಳನ್ನು, ಅಪರಾಧವನ್ನು ನಿರೂಪಿಸುವ ವಿಭಾಗ ಹಾಗೂ ನಿಯಮವನ್ನು ಉಲ್ಲಂಘಿಸುವ ಅಪರಾಧಕ್ಕೆ ನ್ಯಾಯಯುತವಾಗಿ ಎಲ್ಲರಿಗೂ ಸಮಾನವಾಗಿ ಅನ್ವಯವಾಗುವ ಶಿಕ್ಷೆಗಳ ನಿರೂಪಣೆ ಹಾಗೂ ಆ ಶಿಕ್ಷೆಗಳು ಎಲ್ಲ ಅಪರಾಧಿಗಳಿಗೂ ಸಮಾನವಾಗಿ ಅನ್ವಯವಾಗಬೇಕೆಂಬ ವಿಧಿ. ಮನುವಿನಲ್ಲಿ ನಾವು ನೋಡುವುದಾದರೂ ಏನು? ಮೊದಲನೆಯದಾಗಿ, ಶಿಕ್ಷೆಯಲ್ಲಿ ಅವಿಚಾರ ಪೂರ್ವಕ ವ್ಯವಸ್ಥೆ. ಅಪರಾಧವು ಯಾವ ಮೂಲದಿಂದ ಆಯಿತೋ, ಆ ಅಂಗದ ಮೇಲೆ, ಅಂದರೆ ಹೊಟ್ಟೆ, ನಾಲಗೆ, ಮೂಗು, ಕಣ್ಣುಗಳು, ಕಿವಿಗಳು, ಜನನಾಂಗಗಳು ಇತ್ಯಾದಿಗಳ ಮೇಲೆ ಶಿಕ್ಷೆ ವಿಧಿಸಲಾಗಿದೆ. ಈ ಅಂಗಗಳು ತಮಗೆ ತಾವೇ ಸಂಕಲ್ಪಿಸಿಕೊಂಡು ಅಪರಾಧ ಮಾಡಿದುವು ಎಂಬ ರೀತಿಯಲ್ಲಿ ಪರಿಗಣಿಸಲಾಗಿದೆ. ಎರಡನೆಯದು, ಶಿಕ್ಷೆಗಳ ಅಮಾನವೀಯ ಸ್ವರೂಪ.

ಅಪರಾಧದ ಪ್ರಮಾಣಕ್ಕೆ ತೀವ್ರತೆಗೆ ತಕ್ಕ ಪರಿಮಾಣದಲ್ಲಿ ಶಿಕ್ಷೆ ನಿರೂಪಿತವಾಗಿಲ್ಲ. ಈ ಅಪರಾಧ ಸಂಹಿತೆಯಲ್ಲಿ ಕಣ್ಣಿಗೆ ಹೊಡೆದು ಕಾಣುವ ಒಂದು ಲಕ್ಷಣವಂತೂ ಇದೆ. ಅದು ಒಂದೇ ಅಪರಾಧಕ್ಕೆ ಬೇರೆ ಬೇರೆಯವರಿಗೆ ಸಲ್ಲುವ ಬೇರೆ ಬೇರೆ ಶಿಕ್ಷೆ. ಅಂದರೆ ಶಿಕ್ಷೆಯ ಅಸಮಾನತೆ. ಇದು ಅಪರಾಧಿಯನ್ನು ಶಿಕ್ಷಿಸುವುದಕ್ಕಷ್ಟೇ ಅಲ್ಲದೆ ನ್ಯಾಯಾರ್ಥಿಗಳಾಗಿ ನ್ಯಾಯಾಲಕ್ಕೆ ಬರುವ ವಿವಿಧ ವರ್ಗಗಳ ಜನರ ಗೌರವವನ್ನು ರಕ್ಷಿಸಿ ಸಾಮಾಜಿಕ ಅಸಮಾನತೆಯು ಏರುಪೇರಾಗದಂತೆ ಉಳಿಸುವ ಉದ್ದೇಶದಿಂದಲೇ ಹೀಗೆ ರೂಪಿಸಲಾಗಿದೆ.

ಶ್ರೇಣೀಕೃತ ಅಸಮಾನತೆಯ ತತ್ವವನ್ನು ಆರ್ಥಿಕ ರಂಗಕ್ಕೆ ಎಳೆತರಲಾಗಿದೆ. "ಪ್ರತಿಯೊಬ್ಬನಿಂದಲೂ ಅವನ ಸಾಮರ್ಥ್ಯಕ್ಕೆ ತಕ್ಕಷ್ಟು, ಪ್ರತಿಯೊಬ್ಬನಿಗೂ ಅವನ ಅಗತ್ಯಕ್ಕೆ ತಕ್ಕಷ್ಟು" ಎಂಬ ತತ್ವ ಇದು. "ಪ್ರತಿಯೊಬ್ಬನಿಂದಲೂ ಅವನ ಅಗತ್ಯಕ್ಕೆ ತಕ್ಕಂತೆ, ಪ್ರತಿಯೊಬ್ಬನಿಗೂ ಅವನ ಅಂತಸ್ತಿಗೆ ತಕ್ಕಂತೆ[೧] ಒಬ್ಬ ಅಧಿಕಾರಿಯು ಕ್ಷಾಮ ಪೀಡಿತ ಪ್ರದೇಶದಲ್ಲಿ ಅಕ್ಕಿಯನ್ನು ಹಂಚುತ್ತಿದ್ದಾನೆಂದಿಟ್ಟುಕೊಳ್ಳೋಣ. ಉತ್ತಮ ಕುಲದವರಿಗೆ ಹೆಚ್ಚು ಪ್ರಮಾಣವನ್ನೂ, ನೀಚ ಕುಲದವರಿಗೆ ಕಡಿಮೆ ಪ್ರಮಾಣವನ್ನೂ ಹಂಚಬೇಕು. ಅಧಿಕಾರಿಯು ತೆರಿಗೆ ವಿಧಿಸುತ್ತಿದ್ದಾನೆ ಎಂದಿಟ್ಟುಕೊಳ್ಳೋಣ. ಮೇಲುಜಾತಿಯವರಿಗೆ ಕಡಿಮೆ ದರದಲ್ಲಿ ತೆರಿಗೆ ವಿಧಿಸಬೇಕು, ಕೆಳಜಾತಿಯವರಿಗೆ ಹೆಚ್ಚು ತೆರಿಗೆ ವಿಧಿಸಬೇಕು. ಹಿಂದೂ ಸಮಾಜ ವ್ಯವಸ್ಥೆಯು ಸಮಾನ ಅಗತ್ಯ, ಸಮಾನ ಕೆಲಸ ಅಥವಾ ಸಮಾನ ಸಾಮರ್ಥ್ಯವನ್ನು ಶ್ರಮದ ಪ್ರತಿಫಲದ ಆಧಾರವಾಗಿ ಇಟ್ಟುಕೊಳ್ಳುವುದೇ ಇಲ್ಲ. ಅದರ ಧ್ಯೇಯವೆಂದರೆ, ಒಳ್ಳೆಯ ವಸ್ತುಗಳ ಹರಡಿಕೆಯಾಗುವಾಗ ಸಮಾಜದಲ್ಲಿ ಅತ್ಯುನ್ನತರು ಎನಿಸಿಕೊಂಡವರಿಗೆ ಅತ್ಯಂತ ಅಧಿಕ ಪ್ರಮಾಣದಲ್ಲಿ ಸಲ್ಲಬೇಕು. ಕೆಳಮಟ್ಟದವರೆನಿಸಿದವರಿಗೆ ಅತ್ಯಂತ ಕನಿಷ್ಠವೂ ಕಳಪೆಯೂ ಕಡಿಮೆ ಪ್ರಮಾಣದ್ದೂ ಸಲ್ಲಬೇಕು ಎಂಬುದಾಗಿದೆ.

ಹಿಂದೂ ಸಮಾಜ ವ್ಯವಸ್ಥೆಯು ಶ್ರೇಣೀಕೃತ ಅಸಮಾನತೆಯ ಮೇಲೆ ಆಧರಿಸಿದೆ ಎಂದು ತೋರಿಸಿಕೊಡಲು ಇದಕ್ಕಿಂತ ಹೆಚ್ಚಿಗೆ ಏನೂ ಬೇಕಾಗಿಲ್ಲ. ಅದು ಸಾಮಾಜಿಕ ಜೀವನದ ಎಲ್ಲ ಕ್ಷೇತ್ರಗಳಲ್ಲೂ ಹರಡಿಕೊಂಡಿದೆ. ಸಾಮಾಜಿಕ ಜೀವನದ ಎಲ್ಲ ಮುಖಗಳನ್ನೂ ಸಮಾನತೆಯ ಅಪಾಯ ತಟ್ಟದಂತೆ ಭದ್ರವಾಗಿ ಸಂರಕ್ಷಿಸಲಾಗಿದೆ.

ಹಿಂದೂ ಸಮಾಜ ವ್ಯವಸ್ಥೆಗೆ ಆಧಾರವಾಗಿರುವ ಎರಡನೆಯ ತತ್ವವೆಂದರೆ, ಪ್ರತಿಯೊಂದು ವರ್ಗಕ್ಕೂ ವೃತ್ತಿಗಳನ್ನು ನಿಗದಿಗೊಳಿಸಿ ಅವರು ವಂಶಪರಂಪರೆಯಾಗಿ ಅದೇ ವೃತ್ತಿಯನ್ನೇ ನಿರ್ವಹಿಸಿಕೊಂಡು ಹೋಗುತ್ತಿರಬೇಕೆಂದು ಕಡ್ಡಾಯಪಡಿಸಿರುವುದು.

ನಾಲ್ಕು ವರ್ಣಗಳ ವೃತ್ತಿಯನ್ನು ಕುರಿತು ಮನು ಹೇಳುವುದು ಹೀಗೆ:

I–೮೭ "ಈ ವಿಶ್ವವನ್ನು ಸಂರಕ್ಷಿಸುವ ಸಲುವಾಗಿ ದೇದೀಪ್ಯಮಾನನಾದ ಭಗವಂತನು ತನ್ನ ಮುಖ, ತೋಳು, ತೊಡೆ, ಪಾದಗಳಿಂದ ಜನಿಸಿದ ಜನರಿಗೆ ಬೇರೆ ಬೇರೆ (ಕರ್ತವ್ಯಗಳನ್ನೂ) ವೃತ್ತಿಗಳನ್ನು ವಿಧಿಸಿದನು."

I–೮೮ "ಬ್ರಾಹ್ಮಣರಿಗೆ (ವೇದಗಳ) ಅಧ್ಯಯನ ಮತ್ತು ಅಧ್ಯಾಪನಗಳನ್ನು ವಿಧಿಸಿದನು. ತಮಗಾಗಿ ಹಾಗೂ ಇತರರಿಗಾಗಿ ಯಜ್ಞಯಾಗಾದಿಗಳನ್ನು ನಡೆಸುವುದು, ದಾನ ಕೊಡುವುದು ಮತ್ತು ತೆಗೆದುಕೊಳ್ಳುವುದು ಕೂಡ ಅವರ ಕರ್ತವ್ಯವಾಯಿತು."

---

೧. ಮೇಲೆ ಕೊಟ್ಟಿರುವ ನಿದರ್ಶನಗಳು ಕಲ್ಪನೆಯವಲ್ಲ. ಅವು ಇತಿಹಾಸದ ವಾಸ್ತವ ಸಂಗತಿಗಳಾಗಿವೆ. ಪೇಷ್ವೆಗಳ ನಡುವೆ ಭಿನ್ನತೆ ತೋರಿಸುವುದನ್ನು ಶಾಸನ ಬದ್ಧಗೊಳಿಸಲಾಗಿತ್ತು. ದಾನ ಧರ್ಮ ಮಾಡುವಾಗ ಅನುಸರಿಸಲಾಗುತ್ತಿದ್ದ ಈ ಪಕ್ಷಪಾತ ಪದ್ಧತಿ ಈಗಲೂ ಮುಂಬಯಿ ಪ್ರೆಸಿಡೆನ್ಸಿಯಲ್ಲಿದೆ. ಒಬ್ಬ ಕಾಂಗ್ರೆಸ್ ಪಕ್ಷದ ಸಚಿವರು ಅದನ್ನು ಸಮರ್ಥಿಸಿಯೂ ಇದ್ದರು. (ಈ ಮಾತುಗಳು ಇಂದಿಗೆ ಅನ್ವಯಿಸುವುದಿಲ್ಲ – ಸಂಪಾದಕರು).

I–೮೯ "ಕ್ಷತ್ರಿಯರು ಜನರನ್ನು ರಕ್ಷಿಸಬೇಕೆಂದು ಅವನು ವಿಧಿಸಿದನು. ದಾನ ಕೊಡುವುದು, ಯಜ್ಞಯಾಗಾದಿಗಳಿಗೆ ಅವಕಾಶ ಮಾಡಿಕೊಡುವುದು, ವೇದಗಳನ್ನು ಅಧ್ಯಯನ ಮಾಡುವುದು, ಇಂದ್ರಿಯ ಸುಖಗಳಿಗೆ ಅಂಟಿಕೊಳ್ಳದೇ ಇರುವುದು ಅವರ ಕರ್ತವ್ಯ."

I–೯೯ "ವೈಶ್ಯನು ಗೋ ಪಾಲನೆ ಮಾಡತಕ್ಕದ್ದು. ದಾನ ಕೊಡುವುದು, ಯಾಗಾದಿಗಳನ್ನು ನಡೆಸುವುದು, ವೇದಾಧ್ಯಯನ ಮಾಡುವುದು, ಇಂದ್ರಿಯ ಭೋಗಗಳಿಗೆ ಅಂಟಿಕೊಳ್ಳದಿರುವುದು."

I–೯೧ "ಭಗವಂತನು ಶೂದ್ರನಿಗೆ ವಿಧಿಸಿದ ಒಂದೇ ಒಂದು ವೃತ್ತಿಯೆಂದರೆ ಮೇಲಿನ ಮೂರು ವರ್ಣಗಳವರಿಗೆ ನಮ್ರತೆಯಿಂದ ಸೇವೆ ಮಾಡುವುದು."

ವಿವಿಧ ಜಾತಿಗಳ ವೃತ್ತಿಗಳನ್ನು ಕುರಿತ ನಿಯಮಾವಳಿ 'ಮನುಸ್ಮೃತಿ'ಯ ಈ ಕೆಳಗಿನ ಉದ್ಧರಣಗಳಲ್ಲಿ ವಿಸ್ತೃತಗೊಂಡಿದೆ:

I–೮೮ "ಬ್ರಾಹ್ಮಣರಿಗೆ ಅವನು (ಸ್ವಯಂಭೂ) ವೇದಾಧ್ಯಯನ, ಅಧ್ಯಾಪನ, ಯಜ್ಞ ಮಾಡುವುದು ಇತರರು ನಡೆಸುವ ಯಜ್ಞದಲ್ಲಿ ನೆರವಾಗುವುದು. ಶ್ರೀಮಂತರಾಗಿದ್ದರೆ ದಾನ ಕೊಡುವುದು, ಬಡವರಾಗಿದ್ದರೆ ದಾನವನ್ನು ಸ್ವೀಕರಿಸುವುದು. ಈ ಕರ್ತವ್ಯಗಳನ್ನು ವಿಧಿಸಿದನು."

I–೮೯ "ಜನರನ್ನು ರಕ್ಷಿಸುವುದು, ದಾನಧರ್ಮ ನೀಡುವುದು, ಯಜ್ಞ ನಡೆಸುವುದು, ವೇದಾಧ್ಯಯನ, ಇಂದ್ರಿಯಗಳ ಆಕರ್ಷಣೆಗೆ ಬಲಿಯಾಗದಿರುವುದು ಇವು ಕೆಲವೇ ಮಾತುಗಳಲ್ಲಿ ಸಂಗ್ರಹಿಸಬೇಕಾದರೆ ಒಬ್ಬ ಕ್ಷತ್ರಿಯನ ಕರ್ತವ್ಯಗಳು."

I–೯೦ "ದನಕರುಗಳನ್ನು ಸಾಕುವುದು, ಉದಾರಿಯಾಗಿರುವುದು, ಯಾಗಾದಿಗಳನ್ನು ಮಾಡುವುದು, ಶಾಸ್ತ್ರಗಳನ್ನು ಓದುವುದು, ವ್ಯಾಪಾರ ನಡೆಸುವುದು, ಬಡ್ಡಿಯ ಮೇಲೆ ಹಣವನ್ನು ಸಾಲ ಕೊಡುವುದು, ಕೃಷಿ ಮಾಡುವುದು ಇವು ವೈಶ್ಯನಿಗೆ ವಿಧಿಸಿರುವ ಮತ್ತು ಅವನಿಗೆ ಅನುಮತಿ ಕೊಟ್ಟಿರುವ ಕರ್ತವ್ಯಗಳು."

I–೯೧ "ಶೂದ್ರನಿಗೆ ಸರ್ವಾಧಿಪತಿಯಾದ ಭಗವಂತನು ವಿಧಿಸಿರುವ ಒಂದೇ ಒಂದು ಮುಖ್ಯವಾದ ಕರ್ತವ್ಯವೆಂದರೆ ಮೇಲೆ ಹೇಳಿದ ಮೂರು ವರ್ಗಗಳಿಗೆ ಯಾವುದೇ ತಾರತಮ್ಯ ತೋರಿಸದೆ ಸೇವೆ ಮಾಡುವುದು."

X–೭೪ "ಮೋಕ್ಷವನ್ನು ಪಡೆಯಬೇಕೆಂದು ಬಯಸುವ ಬ್ರಾಹ್ಮಣರು ಈ ಕೆಳಗಿನ ಆರು ಕರ್ಮಗಳನ್ನು ಸಂಪೂರ್ಣವಾಗಿ ಸುಸ್ವರೂಪದಲ್ಲಿ ಆಚರಿಸಲಿ."

X–೭೫ "ವೇದಾಧ್ಯಯನ ಮಾಡುವುದು, ಇತರರಿಗೆ ವೇದಗಳನ್ನು ಓದಲು ಕಲಿಸುವುದು, ಯಜ್ಞ ಮಾಡುವುದು, ಇತರರು ಯಜ್ಞ ಮಾಡಲು ನೆರವಾಗುವುದು, ತಮಗೆ ಸಾಕಷ್ಟಿದ್ದರೆ, ಬಡವರಾದವರಿಗೆ ಕೊಡುವುದು, ತಾವು ಬಡವರಾಗಿದ್ದರೆ, ಜಯಶಾಲಿಗಳಾದವರಿಂದ ಸ್ವೀಕರಿಸುವುದು ಇವು ಪ್ರಥಮ ಜನ್ಯ ವರ್ಗದವರ ವಿಧ್ಯುಕ್ತ ಕರ್ತವ್ಯಗಳು."

X–೭೬ "ಆದರೆ ಒಬ್ಬ ಬ್ರಾಹ್ಮಣನ ಆರು ಕರ್ಮಗಳಲ್ಲಿ ಮೂರು ಅವನ ಜೀವನಕ್ಕೆ ದಾರಿಯಾದಂಥವು. ಯಜ್ಞಾದಿಗಳಿಗೆ ನೆರವು, ವೇದಾಧ್ಯಾಪನ ಹಾಗೂ ಶುದ್ಧಹಸ್ತನಾಗಿ ಕೊಡುವವನ ಕೈಯಿಂದ ದಾನ ಸ್ವೀಕಾರ."

X–೭೭ "ಈ ವೇದಾಧ್ಯಾಪನ, ಯಜ್ಞಾಧ್ಯಕ್ಷತೆ ಹಾಗೂ ದಾನ ಪ್ರತಿಗ್ರಹ ಎಂಬ ಮೂರು ಕರ್ತವ್ಯಗಳು ಬ್ರಾಹ್ಮಣನಿಗೇ ಕೊನೆಯಾಗುತ್ತದೆ. ಮುಂದಿನ ವರ್ಗದ ಕ್ಷತ್ರಿಯನಿಗೆ ಬರುವುದಿಲ್ಲ."

X–೭೮ "ಈ ಮೂರೂ ವೈಶ್ಯನಿಗೂ ನಿಷೇಧಿತವಾಗಿದೆ. ಸರ್ವ ಮಾನವರ ಪ್ರಭುವಾದ ಮನುವು ಇವುಗಳನ್ನು ಸೈನ್ಯ ಹಾಗೂ ವಣಿಕ ವರ್ಗಗಳೆರಡಕ್ಕೂ ವಿಧಿಸಿಲ್ಲವಾದ್ದರಿಂದ."

X–೭೯ "ಕ್ಷತ್ರಿಯನಿಗೆ ವಿಶಿಷ್ಟವಾದ ಜೀವಿಕೆಯ ಮಾರ್ಗಗಳು ಆಯುಧಗಳನ್ನು ಧರಿಸುವುದು, ಕೈಯಲ್ಲಿ ಹಿಡಿದು ಹೊಡೆಯುವುದು ಅಥವಾ ಉಡಾಯಿಸುವುದು. ವೈಶ್ಯನಿಗಾದರೆ ವ್ಯಾಪಾರ, ಪಶುಪಾಲನೆ ಮತ್ತು ಬೇಸಾಯ. ಮುಂದಿನ ಜನ್ಮದ ದೃಷ್ಟಿಯಿಂದಲಾದರೋ ಈ ಇಬ್ಬರ ಕರ್ತವ್ಯಗಳು ದಾನಧರ್ಮ ಕೊಡುವುದು, ಅಧ್ಯಯನ ಮತ್ತು ಯಜ್ಞಯಾಗಾದಿಗಳನ್ನು ನಡೆಸುವುದು."

ಪ್ರತಿಯೊಬ್ಬನೂ ತನ್ನ ವರ್ಗಕ್ಕೆ ವಿಧಿಸಲಾಗಿರುವ ವೃತ್ತಿಯನ್ನೇ ಅನುಸರಿಸತಕ್ಕದ್ದು. ವ್ಯಕ್ತಿಗತವಾದ ಆಯ್ಕೆಗಾಗಲಿ, ಒಲವಿಗಾಗಲಿ ಅಲ್ಲಿ ಅವಕಾಶವೇ ಇಲ್ಲ. ಹಿಂದೂ ಸಮಾಜ ವ್ಯವಸ್ಥೆಯಲ್ಲಿ ಒಬ್ಬ ವ್ಯಕ್ತಿಯು ತನ್ನ ಹಿರಿಯರು ನಡೆಸುತ್ತಿದ್ದ ವೃತ್ತಿಗೇ ಬದ್ಧನು. ಅದು ಅನುಲ್ಲಂಘನೀಯ ಶಾಸನ. ಅದರಿಂದ ಅವನು ತಪ್ಪಿಸಿಕೊಳ್ಳುವ ಹಾಗೆಯೇ ಇಲ್ಲ.

ಸಿದ್ಧಾಂತವು ವೃತ್ತಿಯನ್ನು ನಿಗದಿಗೊಳಿಸುವಷ್ಟಕ್ಕೆ ನಿಲ್ಲುವುದಿಲ್ಲ. ಗೌರವದ ದೃಷ್ಟಿಯಿಂದಲೂ ಅದು ವೃತ್ತಿಗಳನ್ನು ಶ್ರೇಣೀಕರಿಸುತ್ತದೆ. ಮನು ಹೇಳುವುದು ಹೀಗೆ:

X–೮೦ "ಜೀವಿಕೆಯಲ್ಲಿ ಗಳಿಸಲು ಇರುವ ಹಲವಾರು ವೃತ್ತಿಗಳಲ್ಲಿ ಬ್ರಾಹ್ಮಣ, ಕ್ಷತ್ರಿಯ ಮತ್ತು ವೈಶ್ಯನಿಗೆ ಕ್ರಮವಾಗಿ ವೇದವನ್ನು ಕಲಿಸುವುದು, ಜನತೆಯನ್ನು ರಕ್ಷಿಸುವುದು ಹಾಗೂ ವ್ಯಾಪಾರ ಗೌರವಾನ್ವಿತವಾದವುಗಳು."

ಹಿಂದೂ ಸಮಾಜ ವ್ಯವಸ್ಥೆಗೆ ಆಧಾರವಾಗಿರುವ ಮೂರನೆಯ ತತ್ವವು ವಿವಿಧ ವರ್ಗಗಳಲ್ಲಿ ಅವುಗಳಿಗೆ ಸೇರಿದ ಜನರನ್ನು ನಿಗದಿಗೊಳಿಸಿರುವುದು. ಹಿಂದೂ ಸಮಾಜ ವ್ಯವಸ್ಥೆಯು ವರ್ಗಗಳನ್ನು ಪರಿಗಣಿಸುತ್ತದೆ ಎಂಬ ವಾಸ್ತವಾಂಶದಲ್ಲಿ ಅಸಹಜವಾದದ್ದು ಏನೂ ಇಲ್ಲ. ಎಲ್ಲ ಕಡೆಯೂ ವರ್ಗಗಳಿವೆ. ಯಾವ ಸಮಾಜವೂ ಅವುಗಳಿಂದ ಹೊರತಾಗಿಲ್ಲ. ಕುಟುಂಬಗಳು, ಕೂಟಗಳು, ಸಂಘಗಳು, ರಾಜಕೀಯ ಪಕ್ಷಗಳು, ಸಮುದಾಯಗಳು, ಅಪರಾಧಗಳ ಸಂಚಿನಲ್ಲಿ ತೊಡಗಿದ ತಂಡಗಳು, ಜನರನ್ನು ಕಿತ್ತು ತಿನ್ನುವ ವ್ಯವಹಾರ ಸಂಸ್ಥೆಗಳು–ಇವೆಲ್ಲಾ ಜಗತ್ತಿನ ಎಲ್ಲ ಭಾಗಗಳ, ಎಲ್ಲ ಸಮಾಜಗಳಲ್ಲೂ ಕಾಣಸಿಕ್ಕುತ್ತವೆ. ಮುಕ್ತ ಸಮಾಜ ವ್ಯವಸ್ಥೆ ಎನಿಸಿಕೊಳ್ಳುವಂಥದೂ ಕೂಡ ವರ್ಗಗಳಿಂದ ಮುಕ್ತವಾಗಿಲ್ಲ. ವರ್ಗಗಳು ಯಾವ ಪ್ರತ್ಯೇಕತೆ ಮತ್ತು ವಿವಿಕ್ತತೆಯನ್ನು ಆದರ್ಶವೆಂದು ತಿಳಿದಿವೆಯೋ ಅವನ್ನು ತಡೆಗಟ್ಟುವುದೇ ಮುಕ್ತ ಸಾಮಾಜಿಕ ವ್ಯವಸ್ಥೆಯ ಗುರಿ. ಪ್ರತ್ಯೇಕತೆ ಮತ್ತು ವಿವಿಕ್ತತೆಯನ್ನು ಆಚರಿಸುವ ವರ್ಗಗಳು ಪರಸ್ಪರ ಸಂಬಂಧಗಳಲ್ಲಿ ಅಸಾಮಾಜಿಕವಾಗಿರುತ್ತವೆ.

ಪ್ರತ್ಯೇಕತೆ ಮತ್ತು ವಿಶಿಷ್ಟತೆಗಳು ಅವರನ್ನು ಸಮಾಜ ವಿರೋಧಿಗಳನ್ನಾಗಿ, ಪರಸ್ಪರ ವೈರಿಗಳನ್ನಾಗಿ ಮಾಡುತ್ತದೆ. ಪ್ರತ್ಯೇಕತೆಯು ವರ್ಗ ಪ್ರಜ್ಞೆಯು ಗಡುಸಾಗುವಂತೆ ಮಾಡಿ ಸಾಮಾಜಿಕ ಜೀವನವೇ ಒಂದು ವ್ಯವಸ್ಥೆಯಾಗುತ್ತದೆ. ವರ್ಗಗಳಲ್ಲಿಯೇ ಸ್ವಾರ್ಥಪೂರಿತ ವ್ಯವಹಾರಗಳು ಪ್ರಬಲವಾಗುತ್ತವೆ. ಪ್ರತ್ಯೇಕತೆಯಿಂದ ಜೀವನವು ಜಡವಾಗುತ್ತದೆ. ಉಳ್ಳವರು–ಇಲ್ಲದವರು, ಒಡೆಯರು–ಸೇವಕರು ಎಂಬ ವರ್ಗಗಳನ್ನು ಮುಂದುವರಿಸುತ್ತದೆ.

ಮುಕ್ತ ಸಮಾಜ ವ್ಯವಸ್ಥೆಗೆ ವರ್ಗಗಳಿರುವುದಕ್ಕಿಂತ ಹೆಚ್ಚಾಗಿ ಪ್ರತ್ಯೇಕತೆ, ಬೇರ್ಪಡಿಕೆಗಳ ಭಾವನೆ ಶತ್ರುವಾಗುವುದು ಹೆಚ್ಚು. ಸಾಮಾಜಿಕ ಅಂತರ್ವಾಹಿನಿಯು ಅನಿರ್ಬಂಧಿತವಾಗಿ ಹರಿಯುತ್ತಿರುವಂತೆ ಎಲ್ಲ

ಮಾರ್ಗಗಳನ್ನು ಕ್ರಮವಾಗಿರಿಸಿಕೊಳ್ಳುವುದೇ ಮುಕ್ತ ಸಮಾಜ ವ್ಯವಸ್ಥೆಯ ಪ್ರಯತ್ನವಾಗಿರುತ್ತದೆ. ಇದು ಸಾಧ್ಯವಾಗುವುದು ವರ್ಗಗಳು ಸಮಾನ ಆಸಕ್ತಿಗಳನ್ನು, ಉದ್ಯಮಗಳನ್ನು, ವೆಚ್ಚಗಳನ್ನು, ವ್ಯಾಪಕವಾಗಿ ಹೊಂದಿರುವುದರಿಂದ, ಸಮಾನವಾಗಿ ಮೌಲ್ಯಗಳನ್ನು ಪಾಲಿಸುವುದರಿಂದ. ಕೊಳ್ಳು ಕೊಡೆಗಳು ಧಾರಾಳವಾಗಿ ನಡೆಯುವುದರಿಂದ. ಇತರರಿಂದ ಪಡೆಯಲು ಸಮಾನ ಅವಕಾಶಗಳು ಎಲ್ಲರಿಗೂ ದೊರಕುವುದರಿಂದ. ಅಂತಹ ಸಾಮಾಜಿಕ ಸಂಪರ್ಕಗಳು ರೂಢಿಯನ್ನು ವಿಸರ್ಜಿಸಬೇಕು. ಮಾನಸಿಕ ಬದುಕನ್ನು ಜಾಗ್ರತವಾಗಿಯೂ, ವ್ಯಾಪಕವಾಗಿಯೂ ಮಾಡಬೇಕು. ಧೋರಣೆಗಳ ಪುನರ್ನಿರ್ಮಾಣವನ್ನು ಒತ್ತಾಯಿಸಬೇಕು. ಹಿಂದೂ ಸಮಾಜ ವ್ಯವಸ್ಥೆಯಲ್ಲಿ ಬೆರಗುಗೊಳಿಸುವ ಸಂಗತಿಯೆಂದರೆ, ಸಮಾಜದ ವಿವಿಧ ವರ್ಗಗಳ ನಡುವೆ ಅನಿರ್ಬಂಧಿತ ವಿನಿಮಯ, ಸಂಪರ್ಕಗಳನ್ನು ಕಡ್ಡಾಯವಾಗಿ ನಿಷೇಧಿಸಿರುವುದು. ಸಹಪಂಕ್ತಿ ಭೋಜನ ಹಾಗೂ ಅಂತರ್ಜಾತೀಯ ವಿವಾಹ ನಿಷಿದ್ಧ. ಸಾಮಾನ್ಯವಾದ ಸಾಮಾಜಿಕ ಅಂತರ್ ವ್ಯವಹಾರವನ್ನೂ ಮನುವು ನಿಷೇಧಿಸುತ್ತಾನೆ:

IV–೨೪೪ "ಉನ್ನತ ಸ್ಥಾನಮಾನವನ್ನು ಉಳಿಸಿಕೊಳ್ಳಬೇಕೆಂದು ಬಯಸುವವನು ಮೇಲುವರ್ಗದ ಅತ್ಯುತ್ತಮ ಕುಟುಂಬಗಳೊಂದಿಗೆ ನಿರಂತರ ಸಂಪರ್ಕವನ್ನು ಇರಿಸಿಕೊಳ್ಳಬೇಕು. ಕೆಳಮಟ್ಟದ ಕುಟುಂಬಗಳನ್ನು ನಿವಾರಿಸಬೇಕು."

IV–೨೪೫ "ಅತ್ಯುತ್ತಮವಾದ ಮೇಲು ಜಾತಿಯವರೊಂದಿಗೆ ಸಂಬಂಧವಿರಿಸಿಕೊಳ್ಳುವುದರಿಂದ ಪುರೋಹಿತನು ಉನ್ನತಿ ಪಡೆಯುತ್ತಾನೆ. ಅದಕ್ಕೆ ವಿರುದ್ಧವಾಗಿ ನಡೆದರೆ ದಾಸವರ್ಗಕ್ಕೆ ಇಳಿಯುತ್ತಾನೆ."

IV–೭೯ "ಮಹಾಪರಾಧ ಮಾಡಿ ಜಾತಿಯಿಂದ ಭ್ರಷ್ಟರಾದವರು, ಚಂಡಾಲರು, ರಕ್ಕಸರು, ನೀಚರು ಸಿರಿಗರ್ವಿಷ್ಟರು, ಅಗಸರು ಮತ್ತಿತರ ಕೀಳುದರ್ಜೆಯ ವ್ಯಕ್ತಿಗಳೊಂದಿಗೆ ಅಥವಾ ಅಂತೇವಾಸಿಗಳೊಂದಿಗೆ ಒಂದೇ ಮರದ ನೆರಳಲ್ಲಿ ನಿಂತುಕೊಳ್ಳುವುದು ಕೂಡ ತಕ್ಕದ್ದಲ್ಲ."

ಹಿಂದೂ ಸಮಾಜ ವ್ಯವಸ್ಥೆಯು ಸೋದರತ್ವಕ್ಕೆ ವಿರುದ್ಧವಾಗಿದೆ. ಅದು ಸಮಾನತೆಯ ತತ್ವವನ್ನು ಒಪ್ಪುವುದಿಲ್ಲ. ಸಮಾನತೆಯನ್ನು ಅಂಗೀಕರಿಸುವುದು ಮಾತ್ರವಲ್ಲ, ಅಸಮಾನತೆಯನ್ನು ತನ್ನ ಅಧಿಕೃತ ಸಿದ್ಧಾಂತವಾಗಿ ಮಾಡಿಕೊಂಡಿದೆ. ಸ್ವಾತಂತ್ರ್ಯದ ವಿಷಯ ಹೇಗೆ? ವೃತ್ತಿಯ ಆಯ್ಕೆಗೆ ಸಂಬಂಧಿಸಿದಂತೆ ಸ್ವಾತಂತ್ರ್ಯವೆಂಬುದು ಇಲ್ಲವೇ ಇಲ್ಲ. ಪ್ರತಿಯೊಬ್ಬನಿಗೂ ಈಗಾಗಲೇ ನಿರ್ಧಾರಿತವಾದ ವೃತ್ತಿಯಿದೆ. ಅವನು ಮಾಡಬೇಕಾಗಿರುವುದು ಅದನ್ನು ನಡೆಸಿಕೊಂಡು ಬರುವುದು ಅಷ್ಟೆ. ಇನ್ನು ವಾಕ್ ಸ್ವಾತಂತ್ರ್ಯವೋ ಎಂದರೆ, ಅದೇನೋ ಇದೆ. ಆದರೆ, ಅಲ್ಲೂ ಈ ಸಮಾಜ ವ್ಯವಸ್ಥೆಯ ಪರವಾಗಿ ಮಾತನಾಡುವವರಿಗೆ ಮಾತ್ರ ವಾಕ್ ಸ್ವಾತಂತ್ರ್ಯ ಇದೆ. ಇದು ವಾಲ್ಟೇರ್ ವ್ಯಕ್ತಪಡಿಸಿದ ಬಗೆಯ ಸ್ವಾತಂತ್ರ್ಯ ಅಲ್ಲ. ಅವನು ಹೇಳಿದ್ದು: "ನೀನು ಹೇಳುವುದನ್ನು ನಾನು ಸಂಪೂರ್ಣವಾಗಿ ವಿರೋಧಿಸುತ್ತೇನೆ. ಆದರೆ ಅದನ್ನು ಹೇಳಲು ನಿನಗಿರುವ ಸ್ವಾತಂತ್ರ್ಯವನ್ನು ರಕ್ಷಿಸುವುದಕ್ಕಾಗಿ ಸಾಯುವವರೆಗೂ ಹೋರಾಡುತ್ತೇನೆ." ಇದು ತರ್ಕಶಾಸ್ತ್ರ ಮತ್ತು ಜಿಜ್ಞಾಸೆಗಳ ಬಗೆಗೆ ಮನು ಹೇಳುವ ಈ ಮಾತುಗಳಿಂದ ಸ್ಪಷ್ಟವಾಗುತ್ತದೆ:

IV-29, 30 "ತನ್ನ ಸಾಮರ್ಥ್ಯಕ್ಕೆ ಅನುಗುಣವಾಗಿ ಆಸನ, ಆಹಾರ, ಶಯ್ಯೆ, ನೀರು, ಕಂದಮೂಲಗಳು ಮತ್ತು ಫಲಗಳಿಂದ ಸತ್ಕೃತನಾಗದೆ ಮನೆಯಲ್ಲಿ ಇರಕೂಡದು."

ಪಾಷಂಡಿಗಳನ್ನೂ ನಿಷೇಧಿತ ವೃತ್ತಿಗಳನ್ನು ಅನುಸರಿಸುತ್ತಿರುವವರನ್ನೂ ಬೆಕ್ಕುಗಳಂತೆ, ದುಷ್ಟರಂತೆ,

ತಾರ್ಕಿಕರಂತೆ (ವೇದದ ವಿರುದ್ಧವಾಗಿ ತರ್ಕ ಮಾಡುವವರು) ಮತ್ತು ನೀರುಹಕ್ಕಿಯಂತೆ ಜೀವನ ಮಾಡುವವರನ್ನೂ ಸ್ವಾಗತಿಸಕೂಡದು.

II–೧೦ "ಶ್ರುತಿ ಎಂದರೆ ವೇದಗಳು. ಸ್ಮೃತಿಯೆನ್ನುವುದು ಪವಿತ್ರವಾದ ಧರ್ಮಶಾಸ್ತ್ರಗಳು. ಇವುಗಳನ್ನು ಯಾವುದೇ ಸಂದರ್ಭದಲ್ಲೂ ಪ್ರಶ್ನಿಸಬಾರದು. ಏಕೆಂದರೆ ಅವೆರಡರಿಂದಲೇ ಪವಿತ್ರವಾದ ಧರ್ಮಶಾಸನವು ಮೂಡಿಬಂದಿದೆ."

II–೧೧ "ಯಾವನೇ ದ್ವಿಜನು ತರ್ಕದ ಸಿದ್ಧಾಂತಗಳನ್ನು ಅವಲಂಬಿಸಿ ಮೇಲೆ ಹೇಳಿದ ಶಾಸನದ ಎರಡು ಮೂಲಗಳನ್ನು ತಿರಸ್ಕಾರದಿಂದ ನೋಡುತ್ತಾನೋ, ಅವನನ್ನು ಆಸ್ತಿಕರು ವೇದ ನಿಂದಕವೆಂದೂ, ನಾಸ್ತಿಕನೆಂದೂ ಜಾತಿಯಿಂದ ಹೊರಹಾಕಬೇಕು."

II–೧೨ "ವೇದ, ಪವಿತ್ರ ಪರಂಪರೆ, ಸಜ್ಜನರ ಆಚಾರಗಳು ಮತ್ತು ತನ್ನದೇ ಇಚ್ಛೆ–ಇವು ಧರ್ಮಶಾಸನವನ್ನು ಸಂರಕ್ಷಿಸಲು ಇರುವ ನಾಲ್ಕು ದಾರಿಗಳು."

ಇದಕ್ಕೆ ಕಾರಣಗಳನ್ನು ಮನುವು ಹೀಗೆ ನಿರೂಪಿಸಿದ್ದಾನೆ:

II–೬ "ಸಮಸ್ತ ವೇದವೇ ಧರ್ಮಶಾಸನದ ಮೊದಲನೆಯ ಮೂಲ. ಮುಂದಿನದು ಸಂಪ್ರದಾಯ ಹಾಗೂ ವೇದಜ್ಞರ ಸತ್ಯಯುತ ನಡವಳಿಕೆ. ಆಮೇಲಿನದು ಸಾಧು ಸತ್ಪುರುಷರ ಆಚಾರಗಳು ಮತ್ತು ಕೊನೆಯದಾಗಿ ಆತ್ಮತೃಪ್ತಿ."

II–೭ "ಯಾವನೇ ವ್ಯಕ್ತಿಗೆ ಯಾವುದೇ ಶಾಸನವನ್ನು ಮನುವು ವಿಧಿಸಿದ್ದರೂ, ಅದು ಸಂಪೂರ್ಣವಾಗಿ ವೇದದಲ್ಲಿ ನಿರ್ಣೀತವಾಗಿದೆ. ಏಕೆಂದರೆ ಆ ಮುನಿಯು ಸರ್ವಜ್ಞನಾಗಿದ್ದನು."

ಈ ಸ್ವಾತಂತ್ರ್ಯದಲ್ಲಿ ತಾರ್ಕಿಕರಿಗೇ ಆಗಲಿ ವಾದ ಚತುರರಿಗೇ ಆಗಲಿ ಸಮಾಜ ವ್ಯವಸ್ಥೆಯನ್ನು ಕುರಿತು ಟೀಕೆ ಮಾಡಲು ಸ್ವಾತಂತ್ರ್ಯವಿಲ್ಲ. ಅಂದ ಮೇಲೆ ವಾಸ್ತವವಾಗಿ ಅದು ಸ್ವಾತಂತ್ರ್ಯವೇ ಅಲ್ಲ.

ಕ್ರಿಯಾ ಸ್ವಾತಂತ್ರ್ಯದ ಬಗೆಗೆ ಹೇಗೆ? ಪರಿಣಾಮಕಾರಿಯಾಗದ ಆಯ್ಕೆ ಎನ್ನುವ ಅರ್ಥದಲ್ಲಿ ಹಿಂದೂ ಸಮಾಜ ವ್ಯವಸ್ಥೆಯು ಅದಕ್ಕೆ ಅವಕಾಶ ಕೊಡುವುದಿಲ್ಲ. ಅಲ್ಲಿ ವ್ಯಕ್ತಿಗೆ ಆಯ್ಕೆಯ ಸ್ವಾತಂತ್ರ್ಯ ಇಲ್ಲ. ಅವನ ವೃತ್ತಿಯನ್ನು ವಿಧಿಸುತ್ತದೆ. ಅವನ ಸ್ಥಾನಮಾನಗಳನ್ನು ವಿಧಿಸುತ್ತದೆ. ಈ ನಿಯಾಮವಳಿಗಳಿಗೆ ಬದ್ಧನಾಗಿ ನಡೆದುಕೊಳ್ಳುವುದಷ್ಟೆ ವ್ಯಕ್ತಿಯು ಮಾಡಬೇಕಾದದ್ದು.

ರಾಜಕೀಯ ಸ್ವಾತಂತ್ರ್ಯದ ವಿಷಯದಲ್ಲೂ ಇದನ್ನೇ ಹೇಳಬೇಕು. ಜನರು ಆಯ್ಕೆ ಮಾಡಿದ ಪ್ರತಿನಿಧಿಗಳನ್ನುಳ್ಳ ಒಂದು ಪ್ರಾತಿನಿಧಿಕ ಸರಕಾರದ ಅಗತ್ಯವನ್ನು ಹಿಂದೂ ಸಮಾಜ ವ್ಯವಸ್ಥೆಯು ಪರಿಗಣಿಸುವುದಿಲ್ಲ. ಪ್ರಾತಿನಿಧಿಕ ಸರಕಾರ ನಿಲ್ಲುವುದು ಜನರನ್ನು ಶಾಸನಗಳು ಆಳಬೇಕು, ಶಾಸನಗಳನ್ನು ಜನತೆಯ ಪ್ರತಿನಿಧಿಗಳು ಮಾಡಬೇಕು ಎಂಬ ನಂಬಿಕೆಯ ಮೇಲೆ. ಹಿಂದೂ ಸಮಾಜ ವ್ಯವಸ್ಥೆಯಾದರೋ ಶಾಸನಗಳು ಜನರನ್ನು ಆಳಬೇಕು ಎಂಬ ಪೂರ್ವಾರ್ಧವನ್ನು ಮಾತ್ರ ಒಪ್ಪುತ್ತದೆ. ಈ ಶಾಸನಗಳನ್ನು ಜನತೆಯ ಪ್ರತಿನಿಧಿಗಳು ಮಾತ್ರವೇ ಮಾಡುತ್ತಾರೆ ಎಂಬ ಉತ್ತರಾರ್ಧವನ್ನು ಅದು ಒಪ್ಪುವುದಿಲ್ಲ.

ಹಿಂದೂ ಸಮಾಜ ವ್ಯವಸ್ಥೆಯ ಸಿದ್ಧಾಂತ ಇದು. ಜನರನ್ನು ಹೇಗೆ ಆಳಬೇಕು ಎಂಬ ವಿಷಯವೂ ಆಗಲೇ ನಿರ್ಧರಿತವಾಗಿದೆ, ವೇದಗಳಲ್ಲಿ ಅದು ನಿರೂಪಿತವಾಗಿದೆ. ಅದಕ್ಕೆ ಇನ್ನೇನನ್ನೇ ಕೂಡಿಸುವುದಕ್ಕಾಗಲಿ, ಅದರಿಂದ ಏನನ್ನಾದರೂ ಕಳೆಯುವುದಕ್ಕಾಗಲೀ ಯಾರಿಗೂ ಹಕ್ಕಿಲ್ಲ. ಹೀಗಿರುವುದರಿಂದ ಜನತೆಯ ಪ್ರತಿನಿಧಿ ಸಭೆಯೊಂದರ ಅವಶ್ಯಕತೆಯೇ ಇಲ್ಲ. ಶಾಸನಗಳನ್ನು ಮಾಡಲು, ಸರಕಾರವನ್ನು ರಚಿಸಲು

ಅಥವಾ ವಿಸರ್ಜಿಸಲು ಅಗತ್ಯವಾದ ರಾಜಕೀಯ ಸ್ವಾತಂತ್ರ್ಯ ಎನ್ನುವುದು, ಹಿಂದೂ ಸಮಾಜ ವ್ಯವಸ್ಥೆಯಲ್ಲಿ ಅದಕ್ಕೆ ಸ್ಥಳವಿಲ್ಲವಾದ್ದರಿಂದ ವ್ಯರ್ಥವಾಗುತ್ತದೆ.

ಒಟ್ಟಿನ ಮೇಲೆ ಹಿಂದೂ ಸಮಾಜ ವ್ಯವಸ್ಥೆಯು ವರ್ಗಗಳ ಮೇಲೆ ಆಧಾರಗೊಂಡಿದೆಯೇ ವಿನಾ ವ್ಯಕ್ತಿಯ ಮೇಲಲ್ಲ. ಅದು ವರ್ಗಗಳನ್ನು ಒಂದರ ಮೇಲೊಂದರಂತೆ ಜೋಡಿಸಿರುವ ವ್ಯವಸ್ಥೆ. ವರ್ಗಗಳ ಸ್ಥಾನಮಾನಗಳನ್ನೂ, ಕರ್ತವ್ಯಗಳನ್ನೂ ನಿರ್ಧರಿಸಿ ಕಡ್ಡಾಯಗೊಳಿಸಿರುವ ವ್ಯವಸ್ಥೆ. ಅದು ಅತಿ ನಿಷ್ಠುರವಾದ, ಕಠಿಣವಾದ ವ್ಯವಸ್ಥೆ. ಒಬ್ಬ ವ್ಯಕ್ತಿಯ ಸ್ಥಾನಮಾನದಲ್ಲಿ, ವರ್ಗದಲ್ಲಿ ಅವನ ನೆಲೆಗೆ ಸಂಬಂಧಿಸಿದಂತೆ ಏನೇ ವ್ಯತ್ಯಾಸ ಸಂಭವಿಸಲಿ, ಅದು ಇನ್ನೊಂದು ವರ್ಗದ ಇನ್ನೊಬ್ಬ ಸದಸ್ಯನ ಮೇಲೆ ಎಷ್ಟು ಮಾತ್ರಕ್ಕೂ ಪರಿಣಾಮ ಬೀರುವುದಿಲ್ಲ. ಮೊದಲಿನದು ಎಂದಿಗೂ ಕೊನೆಯದಾಗುವುದಿಲ್ಲ. ಕೊನೆಯದು ಎಂದೆಂದಿಗೂ ಮೊದಲನೆಯದಾಗುವುದು ಸಾಧ್ಯವೇ ಇಲ್ಲ.

* * * *

### ಅಧ್ಯಾಯ ೩

# ಹಿಂದೂ ಸಮಾಜ ವ್ಯವಸ್ಥೆ: ಅದರ ವಿಶಿಷ್ಟ ಲಕ್ಷಣಗಳು

ಇದುವರೆಗಿನ ಚರ್ಚೆ ಹಿಂದೂ ಸಮಾಜ ವ್ಯವಸ್ಥೆಯ ಮೂಲಾಂಶಗಳಿಗೆ ಮಾತ್ರವೇ ಸೀಮಿತಗೊಂಡಿತ್ತು. ಮೂಲಾಂಶಗಳಲ್ಲದೆ ಹಿಂದೂ ಸಮಾಜ ವ್ಯವಸ್ಥೆ ಕೆಲವು ವಿಶಿಷ್ಟ ಲಕ್ಷಣಗಳನ್ನೂ ಹೊಂದಿದೆ. ಇವು ಮೂಲಾಂಶಗಳಷ್ಟೇ ಮಹತ್ವಪೂರ್ಣವಾದವು. ಇವುಗಳ ಕಡೆಗೆ ಗಮನಕೊಡದೆ ಹಿಂದೂ ಸಮಾಜ ವ್ಯವಸ್ಥೆಯನ್ನು ಅಧ್ಯಯನ ಮಾಡುವುದು ಪೂರ್ಣವಾಗುವುದಿಲ್ಲ, ಅದು ನಿಖರವೂ ಆಗುವುದಿಲ್ಲ.

ಈ ವಿಶೇಷ ಲಕ್ಷಣಗಳು ಯಾವುವು? ಹಿಂದೂ ಸಮಾಜ ವ್ಯವಸ್ಥೆಯ ವಿಶೇಷ ಲಕ್ಷಣಗಳು ಮೂರು. ಈ ಮೂರರಲ್ಲಿ ಪ್ರಧಾನವಾಗಿ ಎದ್ದುಕಾಣುವ ಒಂದು ಲಕ್ಷಣವೆಂದರೆ ಅತಿಮಾನುಷ ವ್ಯಕ್ತಿಯ ಆರಾಧನೆ. ಈ ದೃಷ್ಟಿಯಿಂದ ಹಿಂದೂ ಸಮಾಜ ವ್ಯವಸ್ಥೆಯೆನ್ನುವುದು ಕೃತಿಗಿಳಿದ ನೀಷೇಯ ಗಾಸ್ಪೆಲ್ ಆಗಿದೆ. ತನ್ನ ಅತಿಮಾನುಷ ಸಿದ್ಧಾಂತದ ಕಲ್ಪನೆ ತನ್ನ ಸ್ವಂತದ್ದು ಎಂದು ನೀಷೆಯೇ ಹೇಳಿಕೊಳ್ಳಲಿಲ್ಲ. ತಾನು ಅದನ್ನು 'ಮನುಸ್ಮೃತಿ'ಯಿಂದ ಎರವಲು ಪಡೆದುದಾಗಿ ಒಪ್ಪಿಕೊಳ್ಳುತ್ತಾನೆ ಮತ್ತು ಪ್ರಮಾಣಿಸುತ್ತಾನೆ. ಕ್ರಿಸ್ತ–ವಿರೋಧಿ ಎಂಬ ನಿಬಂಧದಲ್ಲಿ ನೀಷೆ ಹೇಳುವುದು ಹೀಗೆ:

> "ಕೊನೆಗೆ ಪ್ರಶ್ನೆ ಇರುವುದು ಇದು: ಸುಳ್ಳುಗಳನ್ನು ನೇಯುವುದಾದರೂ ಯಾವ ಉದ್ದೇಶ ಸಾಧನೆಗಾಗಿ? ಕ್ರೈಸ್ತ ಧರ್ಮದಲ್ಲಿ 'ಪವಿತ್ರ' ಲಕ್ಷಣಗಳಾವುವೂ ಇಲ್ಲವಾದ್ದರಿಂದ ನನ್ನ ಆಕ್ಷೇಪಣೆ ಇರುವುದು ಅದು ಹಿಡಿದಿರುವ ದಾರಿಯನ್ನು ಕುರಿತು. ಅದರ ಧ್ಯೇಯಗಳು ಕೆಟ್ಟ ಧ್ಯೇಯಗಳಾಗಿವೆ. ವಿಷ ಹಾಕುವುದು, ಬದುಕನ್ನು ಅವಹೇಳನ ಮಾಡುವುದು, ತಿರಸ್ಕರಿಸುವುದು, ದೇಹದ ಬಗೆಗೆ ಜುಗುಪ್ಸೆ ತಳೆಯುವುದು, ಪಾಪದ ಬಗೆಗೆ ಮೊದಲೆಯಿರುವುದರಿಂದ ಮನುಷ್ಯನ ಅವಗತಿ ಹಾಗೂ ಸ್ವ–ಮಾಲಿನ್ಯ–ಪರಿಣಾಮವಾಗಿ ಈ ಲಕ್ಷ್ಯಗಳನ್ನು ಸಾಧಿಸಲು ಹಿಡಿಯುವ ದಾರಿ ಇವುಗಳಿಂದಾಗಿ ಅಷ್ಟೇ ಮಟ್ಟಿಗೆ ಕೆಟ್ಟವಾಗಿದೆ. ಮನುವಿನ ಧರ್ಮಶಾಸ್ತ್ರವನ್ನು ಓದಿದಾಗ ನನ್ನಲ್ಲಿ ಮೂಡಿದ ಭಾವನೆಗಳು ಇದಕ್ಕೆ ವಿರುದ್ಧವಾದಂಥವು. ಅದು ಹೋಲಿಕೆಯೇ ಇಲ್ಲದಷ್ಟು ಉನ್ನತವಾದ ಬೌದ್ಧಿಕವಾದ ಕೃತಿಯಾಗಿದೆ. 'ಬೈಬಲಿ'ನ ಹೆಸರನ್ನು ಆ ಅಮೋಘ ಕೃತಿಯ ಹೆಸರಿನೊಂದಿಗೆ ಉಚ್ಚರಿಸುವುದೇ ಪಾಪ. ಅದರ ಹಿಂದೆ ಯಾವ ಬಗೆಯ ಪ್ರಾಮಾಣಿಕ ದರ್ಶನವಿದೆ ಎಂಬುದನ್ನು ಸುಲಭವಾಗಿ ತಿಳಿದುಕೊಳ್ಳಬಹುದು. ಅದರಲ್ಲಿ ರಬ್ಬಿ ದೀಕ್ಷೆ ಹಾಗು ಮೂಢನಂಬಿಕೆಗಳನ್ನು ಬಿಲ್ಲಾಗಳು ಭಟ್ಟಿಯಿಳಿಸಿಕೊಂಡ ರೀತಿಯ ಕೆಟ್ಟ ವಾಸನೆಯಿಲ್ಲ. ಮೆಚ್ಚಿಸಲು ದುಸ್ಸಾಧ್ಯವೆನಿಸಿದ ಮನೋಶಾಸ್ತ್ರಜ್ಞನಿಗೂ ಮಥನಮಾಡಲು ಸಾಕಷ್ಟು ಸರಕನ್ನು ಅದು ಕೊಡುತ್ತದೆ. ಇದೆಲ್ಲಕ್ಕಿಂತಲೂ ಮುಖ್ಯವಾದ, ಮರೆಯಬಾರದ ವಿಚಾರವೆಂದರೆ, ಅದು ಮೂಲಭೂತವಾಗಿ 'ಬೈಬಲಿ'ಗಿಂತ ಬೇರೆಯೇ ಸ್ವರೂಪದ ಕೃತಿಯಾಗಿರುವುದು. ಅದರ ಆಧಾರದಿಂದ ರಾಜರು, ದಾರ್ಶನಿಕರು,

ಯೋಧರು ಜನಸಾಮಾನ್ಯರನ್ನು ಕಾಪಾಡುತ್ತಾರೆ. ಮಾರ್ಗದರ್ಶನಿಕರು, ಯೋಧರು ಜನಸಾಮಾನ್ಯರನ್ನು ಕಾಪಾಡುತ್ತಾರೆ. ಅವರಿಗೆ ಮಾರ್ಗದರ್ಶನ ಮಾಡುತ್ತಾರೆ. ಉದಾತ್ತ ಮೌಲ್ಯಗಳು ಅದರಲ್ಲಿ ಸಿಡಿದು ತುಂಬಿವೆ. ಜೀವನವನ್ನು ಅಂಗೀಕರಿಸುವ, ಕ್ಷೇಮಕರವಾದ ಸುಖೀಜೀವನದ ಭಾವನೆ ಅದರಲ್ಲಿ ಬೆಳಗಿದೆ. ಇಡಿ ಕೃತಿಯಲ್ಲಿ ಬೆಚ್ಚನೆಯ ಬೆಳಕು ಚೆಲ್ಲಿದೆ. ತಳವೇ ಇಲ್ಲದ ಅಸಭ್ಯತೆ, ಜನನ ಕ್ರಿಯೆ, ಸ್ತ್ರೀಯರು, ವಿವಾಹ ಮೊದಲಾದವುಗಳಿಂದ ಕ್ರೈಸ್ತ ಧರ್ಮವು ಯಾವುದನ್ನೆಲ್ಲಾ ಮುಳುಗಿಸಿಬಿಡುತ್ತದೋ, ಆ ಅಂಶಗಳನ್ನು ಈ ಕೃತಿಯಲ್ಲಿ ಪ್ರಾಮಾಣಿಕ ಕಾಳಜಿಯಿಂದ, ಗೌರವದಿಂದ, ಪ್ರೇಮದಿಂದ, ವಿಶ್ವಾಸದಿಂದ ನಿರೂಪಿಸಲಾಗಿದೆ. ವ್ಯಭಿಚಾರವನ್ನು ತಪ್ಪಿಸಬೇಕಾದರೆ ಪ್ರತಿಯೊಬ್ಬ ಪುರುಷನೂ ತನ್ನ ಹೆಂಡತಿಯನ್ನು ಹೊಂದಿರಬೇಕು, ಪ್ರತಿಯೊಬ್ಬ ಸ್ತ್ರೀಯೂ ತನ್ನ ಪತಿಯನ್ನು ಹೊಂದಿರಬೇಕು..... ಬೇಯುವುದಕ್ಕಿಂತ ಮದುವೆಯಾಗುವುದು ಮೇಲು ಎಂಬಂಥದ ಮಾತುಗಳಿರುವ ಪುಸ್ತಕವನ್ನು ಮಕ್ಕಳ ಮತ್ತು ಮಹಿಳೆಯರ ಕೈಯಲ್ಲಿಡುವುದು ಯೋಗ್ಯವಾಗುತ್ತದೆಯೇ? ಮಾನವನ ಮೂಲವೇ ಜ್ಞಾನಸ್ನಾನದಿಂದ ಕಳಂಕಿತವಾಗಿರುವಾಗ–ಅಂದರೆ ನಿಷ್ಕಳಂಕ ಗರ್ಭಧಾರಣೆಯ ಭಾವನೆಯಿಂದ ದೂಷಿತವಾಗಿರುವಾಗ–ಒಬ್ಬ ಕ್ರಿಶ್ಚಿಯನ್ ಆಗಿರುವುದು ಸಭ್ಯವಾಗಿರುತ್ತದೆಯೇ?"

ನೀಷೆಯ ಕೃತಿಯನ್ನು ಗೌರವದಿಂದ ಅಥವಾ ಗಂಭೀರವಾಗಿ ಅವನ ದೇಶದಲ್ಲೇ ವ್ಯಾಸಂಗ ಮಾಡಲಿಲ್ಲ. ಅವನ ಮಾತುಗಳಲ್ಲೇ ಹೇಳುವುದಾದರೆ, "ಕೆಲವು ಸಾರಿ ಅವನನ್ನು ಶ್ರೀಮಂತರ ಹಾಗೂ ಜಮೀನ್ದಾರರ ದಾರ್ಶನಿಕ ಎಂದು ಮೂದಲಿಸಿದ್ದರು; ಕೆಲವು ಸಾರಿ ಗುಲ್ಲೆಬ್ಬಿಸಿದ್ದರು; ಕೆಲವೊಮ್ಮೆ ಅಯ್ಯೋ ಪಾಪ ಅಂದಿದ್ದರು; ಮನುಷ್ಯನೇ ಅಲ್ಲವೆಂಬಂತೆ ಬಹಿಷ್ಕರಿಸಿದ್ದರು." ನೀಷೆಯ ಸಿದ್ಧಾಂತವು ಅಧಿಕಾರದ ಇಚ್ಛೆ, ಹಿಂಸೆಯ ಸಂಕಲ್ಪ, ಆಧ್ಯಾತ್ಮಿಕ ಮೌಲ್ಯಗಳ ನಿರಾಕರಣೆ, ತ್ಯಾಗ, ಅತಿಮಾನವನಿಗಾಗಿ ಸಾಮಾನ್ಯನು ದಾಸನಾಗುವುದು ಮತ್ತು ಅಪಮಾನಿತನಾಗುವುದು ಇವುಗಳೊಂದಿಗೆ ಸಂವಾದಗೊಂಡಿತು. ಈ ಮುಖ್ಯಾಂಶಗಳಿಂದಾಗಿ ಅವನ ಸಿದ್ಧಾಂತವು ಆ ಕಾಲದಲ್ಲೇ ತಿರಸ್ಕಾರ, ಜುಗುಪ್ಸೆಗಳನ್ನು ಉಂಟು ಮಾಡಿತು. ಅವನನ್ನು ದಮನ ಮಾಡದಿದ್ದರೂ, ಸಂಪೂರ್ಣವಾಗಿ ಅಲಕ್ಷಿಸಿದರು. ನೀಷೆಯು ತನ್ನನ್ನು ತಾನು 'ಮರಣೋತ್ತರ ಮನುಷ್ಯ'ರ ಪಂಕ್ತಿಗೆ ಸೇರಿಸಿಕೊಂಡು ಸಮಾಧಾನಪಟ್ಟುಕೊಂಡನು. ಎಲ್ಲೋ ದೂರದ ಭವಿಷ್ಯತ್ತಿನಲ್ಲಿ ಯಾವುದೋ ಮೂಲೆಯಲ್ಲಿ ತನ್ನ ತತ್ವ ಸಿದ್ಧಾಂತಗಳನ್ನು ಮೆಚ್ಚುವ ಜನರು ಬರುತ್ತಾರೆ ಎಂದು ಭಾವಿಸಿದನು. ಇಲ್ಲೂ ನೀಷೆಗೆ ನಿರಾಸೆಯೇ ಕಾದಿತ್ತು. ಅವನ ಸಿದ್ಧಾಂತಗಳನ್ನು ಮೆಚ್ಚುವುದಕ್ಕೆ ಬದಲಾಗಿ ಕಾಲ ಕಳೆದ ಹಾಗೆ ಅವನ ಕಾಲದಲ್ಲಿದ್ದ ಜನರು ಅವನ ತತ್ವಗಳಲ್ಲಿ ಯಾವ ಭಯಾನಕತೆ ಹಾಗೂ ಜುಗುಪ್ಸೆಗಳನ್ನು ಕಂಡಿದ್ದರೋ ಅದಕ್ಕಿಂತ ಹೆಚ್ಚಾಗಿ ಕಾಣುತ್ತಿದ್ದಾರೆ. ನೀಷೆಯ ಸಿದ್ಧಾಂತಗಳ ಅಸಹ್ಯ ಸ್ವರೂಪಕ್ಕೂ ಬೆಲೆ ಕೊಟ್ಟಿರುವ ಕೆಲವು ಜನರು ಹಿಂದೂ ಸಮಾಜ ವ್ಯವಸ್ಥೆಯೂ ಅತಿಮಾನವನ ಆರಾಧನೆಯ ಮೇಲೆ ಆಧಾರಗೊಂಡಿದೆ ಎಂಬುದನ್ನು ನಂಬಲಾರದವರಾಗಿದ್ದಾರೆ.

'ಮನುಸ್ಮೃತಿ'ಯೇ ಈ ವಿಚಾರವಾಗಿ ಹೇಳಲಿ. ಹಿಂದೂ ಸಮಾಜ ವ್ಯವಸ್ಥೆಯಲ್ಲಿ ಬ್ರಾಹ್ಮಣನಿಗಿರುವ ಸ್ಥಾನವನ್ನು ಕುರಿತು ಮನು ಹೇಳುವುದು ಇದು:

I–೯೩ "ಬ್ರಾಹ್ಮಣನು ಪ್ರಜಾಪತಿಯ (ಅಂದರೆ ಭಗವಂತನ) ಬಾಯಿಂದ ಹುಟ್ಟಿದವನಾಗಿದ್ದರಿಂದ ಅವನೇ ಮೊದಲ ಸಂತಾನ. ಅವನು ವೇದಗಳನ್ನು ಗ್ರಹಿಸಿರುವುದರಿಂದ ಇಡಿ ಸೃಷ್ಟಿಗೆ ಒಡೆತನದ ಹಕ್ಕು ಪಡೆದಿದ್ದಾನೆ."

I–೯೪ "ಸ್ವಯಂಭುವು, ಅಂದರೆ ಭಗವಂತನು ತಪಸ್ಸು ಮಾಡಿ ಮೊದಲು ಅವನನ್ನು ಬಾಯಿಂದ ಸೃಷ್ಟಿಸಿದನು. ದೇವತೆಗಳಿಗೂ ಪಿತೃಗಳಿಗೂ ಅವನು ನೈವೇದ್ಯ ಸಲ್ಲಿಸಲಿ, ಈ ವಿಶ್ವವನ್ನು ಸಂರಕ್ಷಿಸಲಿ ಎಂಬ ಉದ್ದೇಶದಿಂದ ಸೃಷ್ಟಿಸಿದನು."

I–೯೫ "ಯಾರ ಬಾಯಿಯ ಮೂಲಕವಾಗಿ ದೇವತೆಗಳು ಪವಿತ್ರ ಆಹಾರವನ್ನು ಮೃತಪಿತೃಗಳಿಗಾಗಿ ಅರ್ಪಿಸಿದ ಆಹಾರವನ್ನು ಸ್ವೀಕರಿಸುತ್ತಾರೋ, ಆ ಬ್ರಾಹ್ಮಣನನ್ನು ಸೃಷ್ಟಿಯ ಯಾವ ಜೀವಿ ತಾನೇ ಮೀರಿಸಲಾದೀತು?"

I–೯೬ "ಸೃಷ್ಟಿಯಾದ ವಸ್ತುಗಳಲ್ಲಿ ಅತ್ಯಂತ ಶ್ರೇಷ್ಠವಾದದ್ದೆಂದರೆ, ಚೈತನ್ಯವಿರುವಂಥದು. ಚೈತನ್ಯವಿರುವುಗಳಲ್ಲಿ ಶ್ರೇಷ್ಠವಾದವು ಬುದ್ಧಿಬಲದಿಂದ ಜೀವಿಸುವಂಥದು. ಬುದ್ಧಿಜೀವಿಗಳಾದ ಮನುಷ್ಯರಲ್ಲಿ ಅತ್ಯಂತ ಉತ್ತಮವಾದವರು ಬ್ರಾಹ್ಮಣರು."

ಮನುವು ಕೊಟ್ಟ ಕಾರಣದ ಜೊತೆಗೆ, ಬ್ರಾಹ್ಮಣನು ಶ್ರೇಣಿಯಲ್ಲಿ ಮೊದಲನೆಯ ಪಂಕ್ತಿಗೆ ಸೇರತಕ್ಕವನು. ಏಕೆಂದರೆ, ದೇವರು ಆತನನ್ನು ತನ್ನ ಮುಖದಿಂದ ಸೃಷ್ಟಿಸಿದನು. ದೇವತೆಗಳಿಗೂ, ಪಿತೃಗಳಿಗೂ ಅವನ ಮೂಲಕ ಆಹಾರವನ್ನು ಕಳುಹಿಸಿಕೊಡಬಹುದು ಎಂಬ ಕಾರಣಕ್ಕಾಗಿ ಮನು ಬ್ರಾಹ್ಮಣ ಪಾರಮ್ಯಕ್ಕೆ ಇನ್ನೂ ಒಂದು ಕಾರಣವನ್ನು ಕೊಡುತ್ತಾನೆ.

I–೯೮ "ಬ್ರಾಹ್ಮಣನ ಜನ್ಮವೆಂದರೇ ವೇದದ ಅವತಾರ. ಏಕೆಂದರೆ ಅವನು ಪವಿತ್ರ ಶಾಸನವನ್ನು ಈಡೇರಿಸಲು ಜನ್ಮ ತಳೆಯುತ್ತಾನೆ, ಭಗವಂತನಲ್ಲಿ ಲೀನವಾಗುತ್ತಾನೆ."

I–೯೯ "ಹುಟ್ಟಿ ಬಂದ ಬ್ರಾಹ್ಮಣನು ಭೂಮಿಯಲ್ಲಿ ಅತ್ಯುನ್ನತನಾಗಿ, ಸಕಲ ಜೀವಿಗಳ ಒಡೆಯನಾಗಿ, ಧರ್ಮಶಾಸನಗಳ ಭಂಡಾರದ ಸಂರಕ್ಷಕನಾಗಿ ಜೀವಿಸುತ್ತಾನೆ."

ಮನುವು ಈ ವಿಚಾರವನ್ನು ಹೀಗೆ ಮುಕ್ತಾಯ ಮಾಡುತ್ತಾನೆ.:

I–೧೦೧ "ಬ್ರಾಹ್ಮಣನು ತನ್ನ ಆಹಾರವನ್ನು ಮಾತ್ರ ತಿನ್ನುತ್ತಾನೆ, ತನ್ನ ಉಡಿಗೆಯನ್ನು ಮಾತ್ರ ಧರಿಸುತ್ತಾನೆ, ಇತರ ಮರ್ತ್ಯರು ಬ್ರಾಹ್ಮಣನ ಕೃಪೆಯಿಂದ ಜೀವಿಸುತ್ತಾರೆ."

ಏಕೆಂದರೆ ಮನುವಿನ ಪ್ರಕಾರ:

I–೧೦೦ "ಈ ಜಗತ್ತಿನಲ್ಲಿ ಏನೇನಿದೆಯೋ ಅದೆಲ್ಲ ಬ್ರಾಹ್ಮಣನ ಸ್ವತ್ತು. ತನ್ನ ಜನ್ಮದ ಅತ್ಯಂತ ಶ್ರೇಷ್ಠತೆಯಿಂದಾಗಿ ಬ್ರಾಹ್ಮಣನು ಅವೆಲ್ಲಕ್ಕೂ ಅರ್ಹನಾಗಿದ್ದಾನೆ."

ದೇವನಾದ್ದರಿಂದ ಬ್ರಾಹ್ಮಣನು ಶಾಸನವನ್ನು 'ಅಷ್ಟೇಕೆ ರಾಜನನ್ನೂ ಮೀರಿ' ಮೇಲಿನವನಾಗಿದ್ದಾನೆ. ಮನುವು ನಿರ್ದೇಶಿಸುವುದು:

VII–೩೭ "ರಾಜನು ಬೆಳಗ್ಗೆ ಬೇಗನೆ ಎದ್ದು, ಮೂರು ಶಾಸ್ತ್ರಗಳಲ್ಲಿ ಪರಿಣತರೂ ಹಾಗೂ ರಾಜ್ಯ ಶಾಸ್ತ್ರಗಳಲ್ಲಿ ಪಾರಂಗತರೂ ಆದ ಬ್ರಾಹ್ಮಣರನ್ನು ಪೂಜಿಸತಕ್ಕದ್ದು. ಅವರ ಬುದ್ಧಿವಾದಗಳನ್ನು ಅನುಸರಿಸತಕ್ಕದ್ದು."

VII–೩೮ "ವೇದಗಳಲ್ಲಿ ನಿಷ್ಣಾತರಾಗಿ ಪರಿಶುದ್ಧರಾಗಿರುವ ವೃದ್ಧ ಬ್ರಾಹ್ಮಣರನ್ನು ರಾಜನು ಪ್ರತಿದಿನವೂ ಪೂಜಿಸಲಿ."

ಅಂತಿಮವಾಗಿ ಮನು ಹೇಳುತ್ತಾನೆ:

XI–೩೫ "ಬ್ರಾಹ್ಮಣನು (ವಿಶ್ವದ) ಸೃಷ್ಟಿಕರ್ತ ಎಂದು ಈ ಮೂಲಕ ಘೋಷಿಸಲಾಗಿದೆ. ಅವನು ವಿಶ್ವದ ದಂಡಾಧಿಕಾರಿ ಹಾಗೂ ಶಿಕ್ಷಕ. ಆದ್ದರಿಂದ ಅವನು ಸಕಲ ಜೀವಿಗಳಿಗೂ

ಹಿತವನ್ನುಂಟುಮಾಡುವವನು. ಅವನನ್ನು ಕುರಿತು ಯಾವನೂ ಕೆಟ್ಟ ಮಾತಾಡದಿರಲಿ, ಕಟುವಾದ ಮಾತಾಡದಿರಲಿ."

ಮನುವು ಆದೇಶಿಸುವುದು:

X–೩ "ಜನನ ಕ್ರಮದಲ್ಲಿ ಪ್ರಥಮನಾದುದರಿಂದಲೂ, ಜನ್ಮ ಶ್ರೇಷ್ಠತೆಯಿಂದಲೂ, ವೇದಗಳ ಅತ್ಯಂತ ನಿಖರವಾದ ಜ್ಞಾನದಿಂದಲೂ, ಯಜ್ಞೋಪವೀತದ ವೈಶಿಷ್ಟ್ಯದಿಂದಲೂ ಬ್ರಾಹ್ಮಣನೇ ಎಲ್ಲ ವರ್ಗಗಳ ಒಡೆಯ."

ಬ್ರಾಹ್ಮಣ ಅಥವಾ ಹಿಂದೂ ಸಮಾಜ ವ್ಯವಸ್ಥೆಯ ಅತಿಮಾನವನಿಗೆ ಕೆಲವು ವಿಶೇಷ ಸವಲತ್ತುಗಳಿದ್ದುವು. ಮೊದಲನೆಯದಾಗಿ, ಅವನು ಕೊಲೆ ಮಾಡಿದ್ದರೂ ಕೂಡ ಅವನನ್ನು ನೇಣಿಗೆ ಹಾಕುವಂತಿರಲಿಲ್ಲ.[೧] ಮನು ಹೇಳುತ್ತಾನೆ:

VIII–೩೭೯ "ಕಲಬೆರಕೆ ಮಾಡಿದ ಅಪರಾಧಕ್ಕಾಗಿ ಇತರ ವರ್ಗಗಳವರಿಗೆ ಮರಣದಂಡನೆ ಶಿಕ್ಷೆಯಾಗಿರುವಾಗ ಆ ಅಪರಾಧಗೈದ ಬ್ರಾಹ್ಮಣನಿಗೆ ಅದಕ್ಕೆ ಬದಲಾಗಿ ತಲೆ ಬೋಳಿಸಿ ಅಪಮಾನ ಮಾಡಲಿ."

VIII–೩೮೦ "ಸಾಧ್ಯವಿರುವ ಎಲ್ಲ ಬಗೆಯ ಅಪರಾಧಗಳನ್ನು ಎಸಗಿದ್ದರೂ ಕೂಡ ಅಂತಹ ಬ್ರಾಹ್ಮಣನನ್ನು ರಾಜನು ವಧಿಸದಿರಲಿ. ಆ ಅಪರಾಧಿಯನ್ನು ತನ್ನ ರಾಜ್ಯದಿಂದ ಹೊರಗಟ್ಟಲಿ. ಆದರೆ ಅವನಿಗೆ ಸೇರಿದ ಯಾವುದೇ ಆಸ್ತಿಪಾಸ್ತಿಗೆ ಧಕ್ಕೆಯೊದಗದ ಹಾಗೆ ಅವನಿಗೆ ದೈಹಿಕವಾಗಿ ಯಾವುದೇ ನೋವಾಗದ ಹಾಗೆ ನೋಡಿಕೊಳ್ಳಲಿ."

XI–೧೨೭ "ಕ್ಷತ್ರಿಯ ವರ್ಗಕ್ಕೆ ಸೇರಿದ ಗುಣಶೀಲನಾದ ಒಬ್ಬ ವ್ಯಕ್ತಿಯನ್ನು ಉದ್ದೇಶಪೂರ್ವಕವಾಗಿ ಕೊಲೆ ಮಾಡಿದ ಬ್ರಾಹ್ಮಣನಿಗೆ ಒಬ್ಬ ಪುರೋಹಿತನನ್ನು ಕೊಂದಿದ್ದರೆ ಏನು ಶಿಕ್ಷೆ ವಿಧಿಸಲಾಗುತ್ತಿತ್ತೋ ಅದರ ನಾಲ್ಕನೆ ಒಂದರಷ್ಟು ಶಿಕ್ಷೆ ವಿಧಿಸತಕ್ಕದ್ದು. ವೈಶ್ಯನನ್ನು ಕೊಂದರೆ ಕೇವಲ ಎಂಟನೆ ಒಂದರಷ್ಟು, ತನ್ನ ಕರ್ತವ್ಯವನ್ನು ನಿರ್ವಹಿಸುತ್ತಿದ್ದ ಶೂದ್ರನನ್ನು ಕೊಂದರೆ ಹದಿನಾರನೆ ಒಂದರಷ್ಟು ಶಿಕ್ಷೆ ಮಾತ್ರ ವಿಧಿಸತಕ್ಕದ್ದು."

XI–೧೨೮ "ಆದರೆ ಯಾವುದೇ ದ್ವೇಷವಿಲ್ಲದೆ ಬ್ರಾಹ್ಮಣನು ಒಬ್ಬ ಕ್ಷತ್ರಿಯನನ್ನು ಕೊಂದ ಪಕ್ಷದಲ್ಲಿ ಧಾರ್ಮಿಕ ವಿಧಿಗಳನ್ನು ನಡೆಸಿ ಪುರೋಹಿತರಿಗೆ ಒಂದು ಸಾವಿರ ಗೋವುಗಳನ್ನೂ, ಒಂದು ಹೋರಿಯನ್ನೂ ದಾನವಾಗಿ ಕೊಡತಕ್ಕದ್ದು."

XI–೧೨೯ "ಅಥವಾ ಬ್ರಾಹ್ಮಣನನ್ನು ಕೊಂದ ಪಾಪಕ್ಕೆ ಪ್ರಾಯಶ್ಚಿತ್ತವಾಗಿ ಬ್ರಾಹ್ಮಣನು ತನ್ನ ಜ್ಞಾನೇಂದ್ರಿಯ ಕರ್ಮೇಂದ್ರಿಯಗಳನ್ನು ಸಂಯಮದಲ್ಲಿರಿಸಿಕೊಂಡು ತಲೆಗೂದಲನ್ನು ಬೆಳೆಯಲು ಬಿಟ್ಟು ನಗರದಿಂದ ದೂರಪ್ರದೇಶದಲ್ಲಿ ಮರದ ಪೊಟರೆಯಲ್ಲಿ ವಾಸಮಾಡುತ್ತಾ ಮೂರು ವರ್ಷಕಾಲ ತಪಸ್ಸು ಮಾಡಬೇಕು."

---

೧. ಈ ವಿನಾಯಿತಿಯ ಸವಲತ್ತನ್ನು ಬ್ರಿಟಿಷ್ ಸರ್ಕಾರವು ೧೮೩೭ರವರೆಗೆ ಮುಂದುವರಿಸಿಕೊಂಡು ಬಂದಿತ್ತು. ಈ ದಂಡ ಸಂಹಿತೆಗೆ ೧೮೩೭ರಲ್ಲಿ ತಿದ್ದುಪಡಿ ಮಾಡಿದುದರಿಂದ ಮೊದಲ ಬಾರಿಗೆ ಬ್ರಾಹ್ಮಣನಿಗೂ ಕೊಲೆ ಅಪರಾಧಕ್ಕೆ ಮರಣದಂಡನೆ ವಿಧಿಸುವಂತಾಯಿತು. ಆದರೆ ಈ ವಿನಾಯಿತಿ ದೇಶಿ ಸಂಸ್ಥಾನಗಳಲ್ಲಿ ಇನ್ನೂ ಅಸ್ತಿತ್ವದಲ್ಲಿದೆ. ಆಗ, ಬ್ರಾಹ್ಮಣನಾದ ತಿರುವಾಂಕೂರಿನ ದಿವಾನನು ಈ ಪದ್ಧತಿಯ ವಿರುದ್ಧ ಜನರ ಟೀಕೆಯನ್ನು ಎದುರಿಸಲು ಅತಿ ಬುದ್ಧಿವಂತಿಕೆಯ ವಿಧಾನವನ್ನು ರೂಪಿಸಿದನು. ಅವನು ಬ್ರಾಹ್ಮಣರನ್ನು ನೇಣಿಗೇರಿಸುವ ಬದಲು ಮರಣದಂಡನೆಯನ್ನೇ ಸಂಪೂರ್ಣವಾಗಿ ರದ್ದುಗೊಳಿಸಿದನು.

XI–೧೩೦ "ಯಾವುದೇ ದುರುದ್ದೇಶವಿಲ್ಲದೆ ಒಬ್ಬ ಸಚ್ಚಾರಿತ್ರ ಯುಕ್ತನಾದ ವೈಶ್ಯನನ್ನು ಕೊಲೆ ಮಾಡಿದ್ದರೆ ಅಂತಹ ಬ್ರಾಹ್ಮಣನು ಅದೇ ರೀತಿ ಒಂದು ವರ್ಷ ತಪಸ್ಸು ಮಾಡತಕ್ಕದ್ದು ಅಥವಾ ಪುರೋಹಿತರಿಗೆ ನೂರು ಗೋವುಗಳನ್ನೂ, ಒಂದು ಹೋರಿಯನ್ನೂ ದಾನವಾಗಿ ನೀಡತಕ್ಕದ್ದು."

XI–೧೩೧ "ಉದ್ದೇಶವಿಲ್ಲದೆ ಒಬ್ಬ ಶೂದ್ರನನ್ನು ಕೊಲೆ ಮಾಡಿದ್ದೇ ಆದರೆ ಬ್ರಾಹ್ಮಣನು ಈ ಬಗೆಯ ತಪಸ್ಸನ್ನು ಆರು ತಿಂಗಳು ಆಚರಿಸಬೇಕು ಅಥವಾ ಪುರೋಹಿತರಿಗೆ ಹತ್ತು ಬಿಳಿಯ ಹಸುಗಳನ್ನೂ, ಒಂದು ಹೋರಿಯನ್ನೂ ದಾನವಾಗಿ ಕೊಡತಕ್ಕದ್ದು."

XI–೩೮೧ "ಈ ಭೂಮಿಯ ಮೇಲೆ ಒಬ್ಬ ಬ್ರಾಹ್ಮಣನನ್ನು ಕೊಲ್ಲುವುದಕ್ಕಿಂತ ಹೆಚ್ಚು ದೊಡ್ಡದಾದ ಪಾಪಕಾರ್ಯವು ಬೇರೆ ಇಲ್ಲ. ಆದ್ದರಿಂದ ರಾಜನು ಪುರೋಹಿತನಿಗೆ ವಧೆ ಶಿಕ್ಷೆಯನ್ನು ವಿಧಿಸಬೇಕೆಂಬ ಆಲೋಚನೆಯನ್ನೂ ಮನಸ್ಸಿನಲ್ಲಿ ತಳೆಯಕೂಡದು."

VIII–೧೨೬ "ಅದೇ ಬಗೆಯ ಅಪರಾಧ ಮತ್ತೆ ಮತ್ತೆ ಆಗಿದೆಯೇ? ಅದರ ಸ್ಥಳ, ಕಾಲ, ಅಪರಾಧಿಯು ದಂಡವನ್ನು ತೆರಲು ಶಕ್ತನಾಗಿದ್ದಾನೆಯೇ, ಇಲ್ಲವೇ ಶಿಕ್ಷೆ ಅನುಭವಿಸಲು ಯೋಗ್ಯನಾಗಿದ್ದಾನೆಯೇ ಅಪರಾಧ ಎಂತಹುದು ಇತ್ಯಾದಿ ಅಂಶಗಳನ್ನು ಪರಿಶೀಲಿಸಿ, ಸ್ಥಿರಪಡಿಸಿಕೊಂಡು, ನಂತರ ಯಾರು ಶಿಕ್ಷೆಗೆ ಅರ್ಹರಾಗಿದ್ದಾರೋ ಅವರಿಗೆ ಮಾತ್ರವೇ ರಾಜನು ಶಿಕ್ಷೆ ವಿಧಿಸತಕ್ಕದ್ದು."

VIII–೧೨೪ "ಸ್ವಯಂಭು ಪುತ್ರ ಮನುವು ಶಿಕ್ಷೆಯ ಹತ್ತು ಸ್ಥಾನಗಳನ್ನು ಹೆಸರಿಸಿದ್ದಾನೆ. ಮೂರು ಕೆಳವರ್ಗಗಳಿಗೆ ಅನ್ವಯವಾಗುತ್ತದೆ. ಆ ಯಾವುದರಿಂದಲೂ ಬ್ರಾಹ್ಮಣನು ಮಾತ್ರ ಗಾಸಿಗೊಳ್ಳದೆ ಪಾರಾಗುತ್ತಾನೆ."

'ಮನುಸ್ಮೃತಿ'ಯು ಬ್ರಾಹ್ಮಣನಿಗೆ ಇತರ ಸವಲತ್ತುಗಳನ್ನೂ ಕೊಡುತ್ತದೆ. ಮದುವೆಯ ವಿಷಯಕ್ಕೆ ಬಂದರೆ ಬ್ರಾಹ್ಮಣನು ತನ್ನ ವರ್ಗದ ಹೆಣ್ಣನ್ನೂ ಮದುವೆಯಾಗುವುದರ ಜೊತೆಗೆ ತನ್ನದಕ್ಕಿಂತ ಯಾವುದೇ ಕೆಳವರ್ಗದ ಯಾವುದೇ ಹೆಣ್ಣಿನೊಂದಿಗೆ ದಾಂಪತ್ಯ ನಡೆಸಲು ಅರ್ಹನಾಗಿರುತ್ತಾನೆ.[೧] ಆಕೆಯೊಂದಿಗೆ ವಿವಾಹದ ಬಂಧನ ಹೊಂದಬೇಕಾಗಿಲ್ಲ ಹಾಗೂ ಆಕೆಯಲ್ಲಿ ಹುಟ್ಟಿದ ಮಕ್ಕಳಿಗೆ ಸ್ಥಾನಮಾನದ ಹಕ್ಕಾಗಲಿ ಆಸ್ತಿಪಾಸ್ತಿಯ ಹಕ್ಕಾಗಲಿ ಇರುವುದಿಲ್ಲ. ಬ್ರಾಹ್ಮಣನು ತನಗೆ ಯಾವುದಾದರೂ ಅಪಕಾರ ಮಾಡಿದ ವ್ಯಕ್ತಿಯನ್ನು ನ್ಯಾಯಾಲಯಕ್ಕೆ ಒಯ್ಯದೆ ತಾನೇ ಅವನಿಗೆ ಶಿಕ್ಷೆ ವಿಧಿಸುವ ಅಧಿಕಾರ ಪಡೆದಿದ್ದನು.[೨] ಅವನು ಶೂದ್ರನ ಆಸ್ತಿಯನ್ನು ಯಾವುದೇ ಪರಿಹಾರ ಕೊಡದೆ ಮುಟ್ಟುಗೋಲು ಹಾಕಿಕೊಳ್ಳಬಹುದಾಗಿತ್ತು. ತನ್ನ ಧಾರ್ಮಿಕ ಕರ್ತವ್ಯಗಳಿಗೆ ಅವಶ್ಯಕವಾಗಿದ್ದರೆ ಹಾಗೆ ವಶಪಡಿಸಿಕೊಳ್ಳಬಹುದಾಗಿತ್ತು.[೩] ನ್ಯಾಯಾಲಯಕ್ಕೆ ಆ ಬಗೆಗೆ ತಿಳಿಸುವ ಅಗತ್ಯವಿರಲಿಲ್ಲ. ಎಲ್ಲಾದರೂ ಗುಪ್ತನಿಧಿ ದೊರಕಿದರೆ ಅದನ್ನು ಸಂಪೂರ್ಣವಾಗಿ ತಾನೇ ಇಟ್ಟುಕೊಳ್ಳಬಹುದಾಗಿತ್ತು. ರಾಜನಿಗೆ ಸೂಕ್ತ ಭಾಗವನ್ನು ಕೊಡಬೇಕಾಗಿರಲಿಲ್ಲ. ಬೇರೆ ಜಾತಿಯವನು ನಿಧಿಯನ್ನು ಕಂಡುಹಿಡಿದಿದ್ದರೆ 'ಎಲ್ಲರಿಗೂ ಒಡೆಯನಾದ' ಅವನು ಅದರಲ್ಲಿ ಅರ್ಧವನ್ನು ಪಡೆಯುವ

---

೧. ಮನು, III ೧೨–೧೩, ಈ ಸವಲತ್ತುಗಳನ್ನು ಇಂಡಿಯಾದಲ್ಲಿ ನ್ಯಾಯಾಲಯಗಳೂ ಪರಿಗಣಿಸಿವೆ.
೨. ಮನು, XI–೩೧, ಈ ಸವಲತ್ತುಗಳನ್ನು ರದ್ದುಗೊಳಿಸಲಾಗಿದೆ.
೩. ಮನು, XI–೩೨, ಈ ಸವಲತ್ತು ಈಗ ಉಳಿದಿಲ್ಲ.
೪. ಮನು, VIII–೩೭.

ಹಕ್ಕು ಕೂಡ ಬ್ರಾಹ್ಮಣನಿಗಿತ್ತು.[೧] ಯಾವುದಾದರೂ ವಾಸಿಯಾಗದ ಕಾಯಿಲೆಯಿಂದ ರಾಜನು ಸತ್ತುಹೋಗಿದ್ದರೆ ಅವನು ಅಪರಾಧಗಳಿಗೆ ದಂಡವನ್ನು ವಿಧಿಸಿ ಸಂಗ್ರಹಿಸಿದ್ದ ಹಣವನ್ನು ಪೂರ್ತಿಯಾಗಿ ತೆಗೆದುಕೊಳ್ಳಲು ಅರ್ಹನಾಗಿದ್ದನು.[೨] ಅವನಿಗೆ ತೆರಿಗೆ ವಿನಾಯಿತಿಯಿತ್ತು.[೩] ತನಗೆ ದಿನನಿತ್ಯದ ಆಹಾರ ಕೊಡಬೇಕೆಂದೂ, ಹಸಿದಿರಲು ಬಿಡಬಾರದೆಂದೂ ಅವನು ರಾಜನನ್ನು ಒತ್ತಾಯ ಮಾಡಬಹುದಾಗಿದ್ದಿತು.[೪] ವಾರಸುದಾರರಿಲ್ಲದಿದ್ದರೆ ಆಸ್ತಿಯು ರಾಜನಿಗೆ ಸೇರಬೇಕೆಂಬ ಶಾಸನವು ಬ್ರಾಹ್ಮಣನಿಗೆ ಅನ್ವಯವಾಗುತ್ತಿರಲಿಲ್ಲ.[೫]

ಹಿಂದೂ ಸಮಾಜ ವ್ಯವಸ್ಥೆಯ ಈ ಅತಿಮಾನವನು ಸಂಕಟದಲ್ಲಿದ್ದ ಸಮಯದಲ್ಲಿ ವೃತ್ತಿ ಸಂಬಂಧವಾದ ಯಾವುದೇ ಕಟ್ಟುಪಾಡುಗಳಿಗೆ ಬದ್ಧನಾಗಿರಬೇಕಾಗಿರಲಿಲ್ಲ.

ಮನು ಹೇಳುತ್ತಾನೆ:

X–೮೧ "ಆದರೆ ಒಬ್ಬ ಬ್ರಾಹ್ಮಣನು ಈಗ ಅವನಿಗೆ ಸೂಚಿಸಿದ ಕರ್ತವ್ಯಗಳಿಂದ ಜೀವಿಸಲು ಸಾಧ್ಯವಾಗದೆ ಹೋದ ಪಕ್ಷದಲ್ಲಿ ಯೋಧನ ಕರ್ಮಗಳನ್ನು ಮಾಡುತ್ತಾ ಜೀವಿಸಬಹುದು. ಏಕೆಂದರೆ ಸರಣಿಯಲ್ಲಿ ಮುಂದಿನದು ಅದೇನೆ."

X–೮೨ "ಈ ಎರಡೂ ಬಗೆಯ ಜೀವಿಕೆಗಳಿಂದ ಜೀವಿಸಲು ಅವನಿಗೆ ಸಾಧ್ಯವಾಗದೆ ಹೋದಾಗ ಬ್ರಾಹ್ಮಣನು ಏನು ಮಾಡಬೇಕು ಎಂದು ಕೇಳುವುದಾದರೆ, ಅವನು ವರ್ತಕನಾಗಿ ಜೀವಿಸಲಿ, ಬೇಸಾಯ ಮಾಡುತ್ತಾ, ಪಶುಪಾಲನೆ ಮಾಡುತ್ತಾ ಜೀವಿಸಿರಲಿ."

X–೮೩ "ಒಬ್ಬ ಬ್ರಾಹ್ಮಣ ಮತ್ತು ಒಬ್ಬ ಕ್ಷತ್ರಿಯ ವೈಶ್ಯ ವೃತ್ತಿಯಿಂದಲೇ ಜೀವಿಸಬೇಕಾದ ಸಂದರ್ಭವಿದ್ದರೆ, ಪಶುಪಾಲನೆ, ಬೇಸಾಯ ಮೊದಲಾದ ವೃತ್ತಿಗಳನ್ನು ನಿರ್ವಹಿಸುತ್ತಾ ಇದ್ದಾಗಲೂ ಮೂಕಪ್ರಾಣಿಗಳಿಗೆ ಯಾವುದೇ ಹಿಂಸೆಯಾಗದಂತೆ ಎಚ್ಚರಿಕೆ ವಹಿಸತಕ್ಕದ್ದು."

X–೮೪ "ಕೃಷಿಯು ಅತ್ಯುತ್ತಮವಾದುದು ಎಂದು ಕೆಲವರೇನೋ ಅಭಿಪ್ರಾಯಪಡುತ್ತಾರೆ. ಆದರೆ ದಯಾಶೀಲರಾದವರು ಅದನ್ನು ನಿಂದಿಸುತ್ತಾರೆ. ಏಕೆಂದರೆ, ಕಬ್ಬಿಣದ ಬಾಯಿ ಇರುವ ಮರದ ನೇಗಿಲು ಭೂಮಿಯನ್ನು ಸೀಳಿ ಗಾಸಿಗೊಳಿಸುವುದು ಮಾತ್ರವಲ್ಲ, ಅದರೊಳಗಿರುವ ಜೀವಿಗಳನ್ನು ಗಾಯಗೊಳಿಸುತ್ತದೆ."

X–೮೫ "ಧರ್ಮಯುತವಾದ ಜೀವಿಕೆಯ ಅಭಾವದಿಂದಾಗಿ ಗೌರವಾನ್ವಿತ ವೃತ್ತಿಗಳನ್ನು ಅನುಸರಿಸಲಾಗದೇ ಹೋದ ಪಕ್ಷದಲ್ಲಿ ಸಾಮಾನ್ಯವಾಗಿ ವರ್ತಕರು ಮಾರಾಟಮಾಡುವ ವಸ್ತುಗಳನ್ನು ಮಾರಾಟಮಾಡುತ್ತಾ ವ್ಯಾಪಾರದಲ್ಲಿ ಪರಿಣತಿ ಪಡೆದುಕೊಳ್ಳಬಹುದು. ಆಗಲೂ ನಿವಾರಿಸಬೇಕಾದ್ದನ್ನು ಖಂಡಿತ ನಿವಾರಿಸಬೇಕು."

X–೧೦೨ "ಕಷ್ಟದಲ್ಲಿರುವ ಬ್ರಾಹ್ಮಣನು ಯಾವುದೇ ವ್ಯಕ್ತಿಯಿಂದ ದಾನವನ್ನು ಸ್ವೀಕರಿಸಬಹುದು. ಏಕೆಂದರೆ ಪರಿಪೂರ್ಣವಾದ ಪರಿಶುದ್ಧತೆಯನ್ನು ಯಾವುದೇ ರೀತಿಯಲ್ಲೂ ಮಲಿನಗೊಳಿಸಲು ಸಾಧ್ಯವಿಲ್ಲ."

X–೧೦೩ "ವೇದಗಳನ್ನು ವ್ಯಾಖ್ಯಾನಿಸುವುದರಿಂದ, ಯಜ್ಞಯಾಗಾದಿಗಳನ್ನು ನಿರ್ವಹಿಸುವುದರಿಂದ, ಸಾಮಾನ್ಯವಾಗಿ ಅಂಗೀಕರಿಸದಿರುವ ವಿಧಾನಗಳಲ್ಲಿ ದಾನಗಳನ್ನು ಸ್ವೀಕರಿಸುವುದರಿಂದ

---

೧. ಮನು, VIII-38
೨. ಮನು, IX-323
೩. ಮನು, VII 133
೪. ಮನು, VII 134
೫. ಮನು, IX 189

ಈ ಯಾವುದರಿಂದಲೇ ಆದರೂ ಆಪತ್ತಿನಲ್ಲಿರುವ ಪುರೋಹಿತನು ಪಾಪ ಮಾಡಿದಂತಾಗುವುದಿಲ್ಲ. ಏಕೆಂದರೆ ಅವನು ಬೆಂಕಿಯಂತೆ ಅಥವಾ ನೀರಿನಂತೆ ಪರಿಶುದ್ಧನಾಗಿರುತ್ತಾನೆ."

ಈ ಅತಿಮಾನವನ ವಿಶೇಷ ಸವಲತ್ತುಗಳಿಗೆ ಸಮತೋಲನವಾಗುವಂತೆ ಸಾಮಾನ್ಯ ಜನರ ಬಗೆಗೆ ಆತನಿಗಿರುವ ಬಾಧ್ಯತೆಗಳೇನೆಂಬುದನ್ನು ಹೇಳುವುದಿಲ್ಲ. ಅಂದರೆ ಸಮತೋಲನ ಮಾಡುವುದಿಲ್ಲ. ವಾಸ್ತವವಾಗಿ ಶ್ರೀಸಾಮಾನ್ಯನ ಬಗೆಗೆ ಈ ಅತಿಮಾನವನು ಕೊಡಬೇಕಾದದ್ದು ಏನೂ ಇಲ್ಲ.

ಸಾಮಾನ್ಯ ಜನರ ಉದ್ಧಾರಕ್ಕಾಗಿ ಅವನು ದಾನಧರ್ಮ ಮಾಡಬೇಕಾಗಿಲ್ಲ. ಅದಕ್ಕೆ ಬದಲು ದಾನಧರ್ಮ ಸ್ವೀಕರಿಸುವುದು ಅತಿಮಾನವನ ಏಕಸ್ವಾಮ್ಯವಾಗಿದೆ. ಬೇರೆ ಯಾವನೇ ವ್ಯಕ್ತಿಯು ದಾನ ಸ್ವೀಕಾರ ಮಾಡಿದರೆ ಅದು ಪಾಪವಾಗುತ್ತದೆ. ಸಾಮಾನ್ಯ ಮಾನವನು ಹುಟ್ಟಿರುವುದೇ ಅತಿಮಾನವನಿಗೆ ಸೇವೆ ಮಾಡುವ ಸಲುವಾಗಿ. ಅವನಿಗೆ ಹೊಟ್ಟೆ ತುಂಬ ಆಹಾರ, ಮೈಮುಚ್ಚಲು ಬಟ್ಟೆ, ಇರಲು ವಸತಿ ಕೊಟ್ಟು ಸಲಹಬೇಕಾದ ಬಾಧ್ಯತೆ ಈ ಅತಿಮಾನವನಿಗಿಲ್ಲ. ಅವನು ಒಳ್ಳೆಯ ಯಜಮಾನ ಆಗಬೇಕಾಗಿಲ್ಲ. ಈ ನಿಟ್ಟಿನಲ್ಲಿ ಅವನು ಹಾಕಿಕೊಟ್ಟಿರುವ ಕರ್ತವ್ಯಗಳು ಹೀಗಿವೆ:

X–೧೨೪ "ಅವನಿಗೆ(ಶೂದ್ರನಿಗೆ) ಅವರು ತಮ್ಮ ಕುಟುಂಬದ ಆಸ್ತಿಪಾಸ್ತಿಯಿಂದಲೇ ಸ್ವಲ್ಪ ಒದಗಿಸಬೇಕು. ಅದಕ್ಕೆ ಮೊದಲು ಅವನ ಕಾರ್ಯಸಾಮರ್ಥ್ಯ, ಅವನ ಶ್ರಮಶೀಲತೆ, ಎಷ್ಟು ಜನರನ್ನು ಅವನು ಸಾಕಬೇಕಾಗಿದೆ ಎಂಬ ವಿಚಾರ ಇವುಗಳನ್ನೂ ಪರಿಶೀಲಿಸಿರಬೇಕು."

X–೧೨೫ "ತಮ್ಮ ಆಹಾರದಲ್ಲಿ ಉಳಿದದ್ದು, ತಾವು ಧರಿಸಿ ಹಳೆಯದಾದ ಬಟ್ಟೆಬರೆಗಳು, ತಮಗೆ ಬೇಡದೆ ಉಳಿದ ಧಾನ್ಯ, ತಮ್ಮ ಮನೆಯ ಹಳೆಯ ಪೀಠೋಪಕರಣಗಳು ಇವನ್ನು ಅವನಿಗೆ ಕೊಡಬೇಕು."

ಸಾಮಾನ್ಯ ಮನುಷ್ಯನ ಉದ್ಧಾರವು ಅತಿಮಾನವನ ಪರಮ ಶ್ರೇಷ್ಠತೆಗೆ ವಿರೋಧಿಯಾದದ್ದು. ಅತಿಮಾನವನನ್ನು ತೃಪ್ತನನ್ನಾಗಿ, ಸಂತುಷ್ಟನನ್ನಾಗಿ ಸುರಕ್ಷಿತನನ್ನಾಗಿ ಇಡದೆ ಹಿಂದೂ ಸಮಾಜ ವ್ಯವಸ್ಥೆಯು ಸಾಮಾನ್ಯನನ್ನು ನಿರಂತರ ಅವನತಿಯಲ್ಲಿ ಇಡಲು ಎಲ್ಲ ಜಾಗರೂಕತೆಯನ್ನು ವಹಿಸಿದೆ.

ಶೂದ್ರನು ಸೇವೆಯಲ್ಲದೆ ಬೇರೆ ಏನನ್ನೂ ಮಾಡಕೂಡದು ಎಂದು ಮನು ಒತ್ತಿ ಹೇಳುತ್ತಾನೆ.

X–೧೨೨ "ಶೂದ್ರನು ಬ್ರಾಹ್ಮಣರಿಗೆ ಸೇವೆ ಮಾಡಲಿ."

X–೧೨೧ "ಶೂದ್ರನು ಬ್ರಾಹ್ಮಣರಿಗೆ ಸೇವೆ ಮಾಡಲು ಸಾಧ್ಯವಾಗದೆ ಹೋದ ಪಕ್ಷದಲ್ಲಿ ಕ್ಷತ್ರಿಯರಿಗೆ ಸೇವೆ ಮಾಡಲಿ ಅಥವಾ ಶ್ರೀಮಂತ ವೈಶ್ಯರಿಗೆ ಸೇವೆ ಮಾಡಿ ತನ್ನ ಬೇಡಿಕೆಯನ್ನು ಗಳಿಸಲಿ."

I–೯೧ "ದೇವರು ಶೂದ್ರನಿಗೆ ವಿಧಿಸಿದ ಒಂದೇ ಒಂದು ಕರ್ತವ್ಯವೆಂದರೆ ಅತ್ಯಂತ ವಿನಯದಿಂದ ಇತರ ಮೂರು ವರ್ಗಗಳಿಗೆ ಸೇವೆ ಮಾಡುವುದು."

ಏಕೆ? ಕಾರಣಗಳನ್ನು ಕೊಡಲು ಮನು ಹಿಂಜರಿಯುವುದಿಲ್ಲ. ಅವನು ಹೇಳುತ್ತಾನೆ:

X–೧೨೯ "ಶೂದ್ರನು ಅಗತ್ಯವಾದುದಕ್ಕಿಂತ ಹೆಚ್ಚು ಧನವನ್ನು ಸಂಗ್ರಹಿಸಬಾರದು. ಅವನಿಗೆ ಧನವನ್ನು ಸಂಪಾದಿಸಲು ಶಕ್ತಿಯಿದ್ದರೂ ಅದು ಸರಿಯಲ್ಲ. ಏಕೆಂದರೆ ದಾಸನಾದ್ದರಿಂದ ಅವನು ದನಕರುಗಳನ್ನು ಸಮೃದ್ಧನಾಗಿ ಸಂಗ್ರಹಿಸಿಕೊಂಡರೆ ಅದರಿಂದ ಅವನಿಗೆ ಗರ್ವವುಂಟಾಗುತ್ತದೆ. ಉದ್ಧಟತನದಿಂದ ಬ್ರಾಹ್ಮಣರನ್ನು ಅವನು ನೋಯಿಸುತ್ತಾನೆ."

ಸಾಮಾನ್ಯ ಮನುಷ್ಯನು ವಿದ್ಯೆಯನ್ನು ಆರ್ಜಿಸಬಾರದು. ಮನುವಿನ ಆದೇಶಗಳು ಇವು:

I–೮೮ "(ಸೃಷ್ಟಿಕರ್ತನು) ವೇದಾಧ್ಯಯನ ಮತ್ತು ಅಧ್ಯಾಪನಗಳನ್ನು ಬ್ರಾಹ್ಮಣರಿಗೆ ವಿಧಿಸಿದನು."

I–೮೯ "ಕ್ಷತ್ರಿಯನನ್ನು ವೇದಾಧ್ಯಯನ ಮಾಡಲು ಆದೇಶಿಸಿದನು."

II–೧೧೬ "ಗುರುವಿನ ಒಪ್ಪಿಗೆಯಿಲ್ಲದೆ ಶಾಸ್ತ್ರಜ್ಞಾನವನ್ನು ಗಳಿಸುವವನು ವೇದ ಚೌರ್ಯ ಮಾಡಿದ ಪಾಪಕ್ಕೆ ತುತ್ತಾಗಿ ನರಕಕ್ಕೆ ಬೀಳುತ್ತಾನೆ."

IV–೯೯ "ದ್ವಿಜನು ಶೂದ್ರರ ಎದುರಿಗೆ ವೇದವನ್ನು ಓದಕೂಡದು."

IV–೮೯ "ವೇದಪಾಠಗಳಿಗೂ ಸ್ತ್ರೀಯರಿಗೂ ಯಾವ ಸಂಬಂಧವೂ ಇಲ್ಲ."

IV–೧೯೯ "ದ್ವಿಜನು (ಶೂದ್ರರಿಗೂ, ಸ್ತ್ರೀಯರಿಗೂ) ವೇದವನ್ನು ಹೇಳಿಕೊಡುವ ನಿಷಿದ್ಧ ಕಾರ್ಯವನ್ನೇನಾದರೂ ಮಾಡಿದರೆ ಒಂದು ವರ್ಷ ಬಾರ್ಲಿಯನ್ನು ಸೇವಿಸಿ ಅದಕ್ಕೆ ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕು."

ಈ ಪಠ್ಯಭಾಗಗಳಲ್ಲಿ ಮೂರು ನಿರ್ದಿಷ್ಟ ಹೇಳಿಕೆಗಳಿವೆ. ಬ್ರಾಹ್ಮಣರು, ಕ್ಷತ್ರಿಯರು ಮತ್ತು ವೈಶ್ಯರು ವೇದಗಳನ್ನು ಅಧ್ಯಯನ ಮಾಡಬಹುದು. ಅವರಲ್ಲೂ ವೇದಗಳನ್ನು ಹೇಳಿಕೂಡುವ–ಅಂದರೆ ಅಧ್ಯಾಪನದ–ಹಕ್ಕು ಇರುವುದು ಬ್ರಾಹ್ಮಣನಿಗೆ ಮಾತ್ರ. ಶೂದ್ರನು ವೇದಗಳನ್ನು ಅಧ್ಯಯನ ಮಾಡಕೂಡದು ಮಾತ್ರವಲ್ಲ, ಬೇರೆಯವರು ಓದುವುದನ್ನು ಕೇಳಿಸಿಕೊಳ್ಳುವುದಕ್ಕೂ ಅವನಿಗೆ ಅವಕಾಶವಿರಬಾರದು.

ವೇದಾಧ್ಯಯನವನ್ನು ಕುರಿತು ಶೂದ್ರನಿಗಿದ್ದ ಅಸಾಮರ್ಥ್ಯವನ್ನು ಮನುವಿನ ಅನುಯಾಯಿಗಳಾದರೂ ತೀವ್ರ ದಂಡನೆಗೊಳಪಡುವ ಅಪರಾಧಕ್ಕಾಗಿ ಮಾರ್ಪಡಿಸಿದರು. ನಿದರ್ಶನಕ್ಕೆ ಗೌತಮ ಹೇಳುವುದು ಹೀಗೆ:

III–೪ "ವೇದವನ್ನು ನೆನಪಿನಲ್ಲಿಟ್ಟುಕೊಳ್ಳುವುದಕ್ಕಾಗಿ ಉದ್ದೇಶಪೂರ್ವಕವಾಗಿ ಶೂದ್ರನು ಕೇಳಿದ್ದೇ ಆದರೆ ಅವನ ಕಿವಿಗಳಿಗೆ ಸೀಸವನ್ನು ಅರಗನ್ನೂ ಕರಗಿಸಿ ಹೊಯ್ಯಬೇಕು. ಅವನು ವೇದವನ್ನು ಉಚ್ಚರಿಸಿದರೆ ಅವನ ನಾಲಗೆಯನ್ನು ಕತ್ತರಿಸಿಹಾಕಬೇಕು. ಅವನು ವೇದವನ್ನು ಕಲಿತುಕೊಂಡಿದ್ದರೆ ಅವನ ದೇಹವನ್ನು ಚೂರು ಚೂರಾಗಿ ಕತ್ತರಿಸಬೇಕು."

ಸಾಮಾನ್ಯ ಮನುಷ್ಯನಿಗೆ (ಶೂದ್ರನಿಗೆ) ಉಪನಯನ ಸಂಸ್ಕಾರದ ಅವಕಾಶವಿಲ್ಲ. ವ್ಯಕ್ತಿಯ ನೈತಿಕ ಹಾಗೂ ಪ್ರಾಪಂಚಿಕ ಪ್ರಗತಿಗೆ ನೆರವಾಗುವುದೇ ಈ ಸಂಸ್ಕಾರ ರೂಪವಾದ ಎರಡನೆಯ ಜನ್ಮ.

ಗೌರವಪೂರ್ವಕವಾದ ಒಂದು ಹೆಸರನ್ನು ಹೊಂದಿರುವ ಹಕ್ಕನ್ನು ಸಾಮಾನ್ಯ ಮನುಷ್ಯನಿಗೆ ಕೊಟ್ಟಿಲ್ಲ. ಮನುವು ಹೀಗೆ ಹೇಳುತ್ತಾನೆ:

II–೩೦ "ಹುಟ್ಟಿದ ಹತ್ತನೆಯ ಅಥವಾ ಹನ್ನೆರಡನೆಯ ದಿನ ಅಥವಾ ಶುಕ್ಲಪಕ್ಷದ ಒಂದು ಶುಭ ದಿನ ಶುಭ ಮುಹೂರ್ತದಲ್ಲಿ, ಶುಭ ನಕ್ಷತ್ರದಲ್ಲಿ ತಂದೆಯು ಮಗುವಿಗೆ ನಾಮಕರಣ ಮಾಡಬೇಕು ಅಥವಾ ಮಾಡಿಸಬೇಕು."

II–೩೧ "ಬ್ರಾಹ್ಮಣನ ಹೆಸರಿನ ಮೊದಲ ಭಾಗವು ಪವಿತ್ರವಾದ ಏನಾದರೂ ಒಂದಾಗಿರಲಿ. ಕ್ಷತ್ರಿಯನ ಹೆಸರು ಶಕ್ತಿ ಸಾಮರ್ಥ್ಯದೊಂದಿಗೆ ಸಂಬಂಧಪಟ್ಟಿರಲಿ. ವೈಶ್ಯನ ಹೆಸರು ಸಿರಿಸಂಪತ್ತಿನೊಂದಿಗೆ ಸಂಬಂಧಿಸಿರಲಿ. ಆದರೆ ಶೂದ್ರನ ಹೆಸರು ಕೆಳಮಟ್ಟದ ಯಾವುದಾದರೊಂದಾಗಿರಲಿ."

II–೩೨ "ಬ್ರಾಹ್ಮಣನ ಹೆಸರಿನ ಎರಡನೆಯ ಭಾಗವು ಸಂತೋಷವನ್ನು ಸೂಚಿಸುವುದಾಗಲಿ, ಕ್ಷತ್ರಿಯನ ಹೆಸರಿನ ಭಾಗವು ಸಂರಕ್ಷಣೆಯನ್ನು ಕುರಿತಿರಲಿ, ವೈಶ್ಯನದು ಅಭಿವೃದ್ಧಿಯನ್ನು

ಸೂಚಿಸಲಿ, ಶೂದ್ರನ ಹೆಸರಿನ ಎರಡನೆ ಭಾಗವು ಒಂದು ಸೇವೆಯನ್ನು ಹೇಳುವ ಉಕ್ತಿಯಾಗಿರಲಿ."

ಶೂದ್ರನು ಉದಾತ್ತವಾದ ಹೆಸರನ್ನು ಹೊಂದಿರುವ ತೃಪ್ತಿ ಪಡೆಯುವುದು ಅತಿಮಾನವ ಸಹಿಸುವುದಿಲ್ಲ. ಶೂದ್ರನು ವಾಸ್ತವವಾಗಿ ಹೇಗೆ ಅತಿ ನೀಚಸ್ಥಾನದಲ್ಲಿದ್ದಾನೋ ಅವನ ಹೆಸರು ಹಾಗೆ ತಿರಸ್ಕಾರಾರ್ಹವಾಗಿರಬೇಕು.

ಹಿಂದೂವಿನ ಆಯುರ್ಮಾನವನ್ನು ವಿವಿಧ ಅವಧಿಗಳಾಗಿ ವಿಭಾಗಿಸಲಾಗಿದೆ. ಮೊದಲನೆಯ ಅವಧಿಯನ್ನು ಬ್ರಹ್ಮಚರ್ಯ ಎನ್ನುತ್ತಾರೆ. ಇದು ವಿದ್ಯಾರ್ಜನೆಯ ಅವಧಿ. ಎರಡನೆಯದು ಗೃಹಸ್ಥಾಶ್ರಮ, ವಿವಾಹಿತ ಜೀವನದ ಹಂತ. ಮೂರನೆಯದು ವಾನಪ್ರಸ್ಥ, ಪ್ರಾಪಂಚಿಕತೆಯಿಂದ ಅಲಿಪ್ತನಾಗುವುದು. ನಾಲ್ಕನೆಯದು ಸನ್ಯಾಸ, ಪ್ರಾಪಂಚಿಕ ವ್ಯವಹಾರಗಳಿಂದ ಸಂಪೂರ್ಣವಾಗಿ ವಿಮುಖನಾಗುವುದು. ಒಂದು ರೀತಿಯಲ್ಲಿ ಲೌಕಿಕವಾಗಿ ಸತ್ತ ಹಾಗೆಯೇ. ಸಾಮಾನ್ಯ ವ್ಯಕ್ತಿಗೆ ಸನ್ಯಾಸಿಯಾಗಲು ಅಧಿಕಾರವಿಲ್ಲ. ಅದಕ್ಕೆ ಕಾರಣವನ್ನು ಹುಡುಕುವುದು ಕಷ್ಟ. ಅದು ಅತಿಮಾನವನ ಪ್ರಯೋಜನಕ್ಕಾಗಿ ಎಂಬುದು ಸ್ಪಷ್ಟವೇ ಆಗಿದೆ. ಶೂದ್ರನು ಸನ್ಯಾಸಿಯಾಗಿಬಿಟ್ಟರೆ ಅತಿಮಾನವನಿಗೆ ಸೇವೆ ಸಲ್ಲಿಸುವುದು ನಿಂತುಹೋಗುತ್ತದಲ್ಲ, ಅದಕ್ಕಾಗಿ, ಸನ್ಯಾಸಿಯಾಗಿ ಶೂದ್ರನು ಭಗವಂತನ ಅಥವಾ ಬ್ರಹ್ಮನ ಸಾಮೀಪ್ಯ ಪಡೆಯುತ್ತಾನೆ. ಇದು ಅತಿಮಾನವನ ವಿಶೇಷ ಹಕ್ಕುಗಳ ಮೇಲೆ ಲಗ್ಗೆ ಹಾಕಿದಂತಾಗುತ್ತದಷ್ಟೆ.

ಮನುವಿನಿಂದ ಆರಿಸಿಕೊಟ್ಟಿರುವ ಉದ್ಧರಣಗಳು ಈ ವಿಚಾರವನ್ನು ಸ್ಪಷ್ಟವಾಗಿ ಸಮರ್ಥಿಸುತ್ತವೆ. ಹಿಂದೂ ಸಮಾಜ ವ್ಯವಸ್ಥೆಯನ್ನು ಅತಿಮಾನವನ ಹಿತದ ದೃಷ್ಟಿಯಿಂದಲೇ ರೂಪಿಸಲಾಗಿದೆ. ಅದರ ಉದ್ದೇಶವೇ ಅವನ ಹಿತವಾಗಿದೆ. ಈ ವ್ಯವಸ್ಥೆಯಲ್ಲಿ ಪ್ರತಿಯೊಂದು ಅತಿಮಾನವನ ಸಲುವಾಗಿಯೇ ಇದೆ. ಅತಿಮಾನವನೇ ಬ್ರಾಹ್ಮಣ. ಸಾಮಾನ್ಯ ಮನುಷ್ಯನೇ ಶೂದ್ರ. ಅತಿಮಾನವನಿಗೆ ಹಕ್ಕುಗಳಿವೆ, ಕರ್ತವ್ಯಗಳಿಲ್ಲ. ಸಮಸ್ತವು ಅವನ ಅಂಕೆಯಲ್ಲಿದೆ. ಪ್ರತಿಯೊಂದನ್ನೂ ಅತಿಮಾನವನ ಹಿತದ ದೃಷ್ಟಿಯಿಂದಲೇ ನಿಗದಿಪಡಿಸುವುದಾಗುತ್ತದೆ. ಈ ಲಕ್ಷಣಕ್ಕೆ ಹೊಂದುವಂತೆಯೇ ಇದೆ. ಇನ್ನೊಂದು ಮುಖ ಸಾಮಾನ್ಯನನ್ನು ಕೀಳುಗೈಯುವ ಪ್ರವೃತ್ತಿ. ಅತಿಮಾನವನಿಗೆ ಎದುರಾಗಿ ಸಾಮಾನ್ಯನಿಗೆ ಜೀವನದ ಹಕ್ಕಿಲ್ಲ, ಸ್ವಾತಂತ್ರ್ಯ, ಸೊತ್ತು-ಸೇವೆಗಾಗಲಿ, ಸಂತೋಷಾನ್ವೇಷಣೆಗಾಗಲಿ ಹಕ್ಕಿಲ್ಲ. ಅತಿಮಾನವನ ಜೀವನಕ್ಕಾಗಿ, ಗೌರವಕ್ಕಾಗಿ, ಅವುಗಳನ್ನು ಉಳಿಸುವುದಕ್ಕಾಗಲಿ ಅವನು ಸಮಸ್ತವನ್ನು ಬಲಿಕೊಡಲು ಸಿದ್ಧನಾಗಿರಬೇಕು. ಅಂತಹ ಬಲಿದಾನವನ್ನು ಸಾಮಾನ್ಯನು ಸ್ವಸಂತೋಷದಿಂದ ಇಚ್ಛಾಪೂರ್ವಕವಾಗಿ ಮಾಡತಕ್ಕದ್ದು ಎಂದು ಹಿಂದೂ ಸಮಾಜ ವ್ಯವಸ್ಥೆಯು ವಿಧಿಸುತ್ತದೆ. ಹಾಗೆ ಅತಿಮಾನವನ ಹಿತಕ್ಕಾಗಿ ಬಲಿದಾನ ಮಾಡುವುದು ಸಾಮಾನ್ಯನ ಪರಮೋಚ್ಚ ಕರ್ತವ್ಯವಾಗಿರುತ್ತದೆ.

ಜರತುಷ್ಟ್ರ ಎಂಬುದು ಮನುವಿಗೆ ಕೊಟ್ಟ ಹೊಸ ಹೆಸರು ಎಂಬುದರಲ್ಲಾಗಲಿ, 'ಜರತುಷ್ಟ್ರ ಉವಾಚ' ಎಂಬುದು 'ಮನುಸ್ಮೃತಿ'ಯ ಹೊಸ ಆವೃತ್ತಿ ಎಂಬುದರಲ್ಲಾಗಲಿ ಏನಾದರೂ ಸಂದೇಹವಿರಲು ಸಾಧ್ಯವಿದೆಯೇ?

ಮನುವಿಗೂ ('ನೀಷೆ'ಗೂ Nietzsche) ಏನಾದರೂ ವ್ಯತ್ಯಾಸವಿದ್ದರೆ ಅದು ಹೀಗೆ. ಈಗ ಇರುವ ಮಾನವ ಜನಾಂಗಕ್ಕೆ ಹೋಲಿಸಿದರೆ ಅತಿಮಾನವರನ್ನೆಬಹುದಾದ ಒಂದು ಹೊಸ ಮಾನವ ಜನಾಂಗವನ್ನೇ ಸೃಷ್ಟಿಸುವುದರಲ್ಲಿ ನೀಷೆಗೆ ಪ್ರಾಮಾಣಿಕ ಆಸಕ್ತಿಯಿತ್ತು.

ಮನುವಾದರೋ ತನಗೆ ತಾನೆ ಅತಿಮಾನವತ್ವವನ್ನು ಆರೋಪಿಸಿಕೊಂಡ ಒಂದು ವರ್ಗದ ಪಾರಮ್ಯವನ್ನು ಉಳಿಸುವುದರಲ್ಲಿ ಆಸಕ್ತಿ ಹೊಂದಿದ್ದನು. ನೀಷೆಯ ಅತಿಮಾನವರು ತಮ್ಮ ಅಂತರ್ಗತ ಮೌಲ್ಯದಿಂದ ಅತಿಮಾನವರಾಗುವವರು. ಅವನು ಒಬ್ಬ ಅಲಿಪ್ತ ದಾರ್ಶನಿಕ. ಮನುವಾದರೋ ಹಣಕ್ಕಾಗಿ ದುಡಿದವನು.

ತಮ್ಮ ಮೌಲ್ಯಗಳು ಹಾಳಾದರು ತಮ್ಮ ಅತಿಮಾನವರೆಂಬ ಬಿರುದನ್ನು ಬಿಟ್ಟುಕೊಡಲು ಒಪ್ಪದ ಒಂದು ವರ್ಗದಲ್ಲಿ ಜನಿಸಿದವರ ಹಿತಗಳ ರಕ್ಷಣೆಗೋಸ್ಕರವಾಗಿ ಒಂದು ಧರ್ಮಶಾಸ್ತ್ರವನ್ನು ರಚಿಸಲು ಹೊರಟವನು. ಮನುವಿನ ಕೃತಿಯ ಈ ಉಕ್ತಿಯನ್ನು ಗಮನಿಸಿ:[೧]

X–೮೧ "ಆದರೆ ಒಬ್ಬ ಬ್ರಾಹ್ಮಣನು ಈಗಷ್ಟೇ ಹೇಳಿದ ಕರ್ತವ್ಯಗಳ ಪಾಲನೆಯಿಂದ ಹೊಟ್ಟೆ ಹೊರೆದುಕೊಳ್ಳಲು ಅಸಮರ್ಥನಾದ ಪಕ್ಷದಲ್ಲಿ ಅವನು ಒಬ್ಬ ಕ್ಷತ್ರಿಯ ಯೋಧನ ಕರ್ತವ್ಯಗಳನ್ನು ಮಾಡಿ ಜೀವಿಸಲಿ. ಏಕೆಂದರೆ ಶ್ರೇಣಿಯಲ್ಲಿ ಅದೇ ಮುಂದಿನ ನೆಲೆ."

X–೮೨ "ಈ ಯಾವುದೇ ವೃತ್ತಿಗಳಿಂದ ಜೀವಿಸಿರಲು ಸಾಧ್ಯವಾಗದೆ ಹೋದರೆ ಅವನು ಹೇಗೆ ಬದುಕಬೇಕು ಎಂದು ಕೇಳುವುದಾದರೆ ವೈಶ್ಯನಂತೆ ಜೀವಿಸಲಿ, ಉಳುಮೆ, ಪಶುಪಾಲನೆಗಳನ್ನು ನಡೆಸಲಿ."

ಮನುವು ಇದನ್ನು ಸೇರಿಸುತ್ತಾನೆ:

IX–೩೧೭ "ಅವನು ಅಜ್ಞಾನಿಯಾಗಿರಲಿ ಅಥವಾ ಪಂಡಿತನಾಗಿರಲಿ, ಬ್ರಾಹ್ಮಣನು ಸಾಕ್ಷಾತ್ ಭಗವತ್ ಸ್ವರೂಪ. ಅಗ್ನಿಯ ಹಾಗೆ ಯಜ್ಞಕ್ಕಾಗಿ ಕೊಂಡೊಯ್ದರೂ ಅಥವಾ ಬಿಟ್ಟರೂ ಅವನು ಶ್ರೇಷ್ಠತಮ ದೈವವಾಗಿರುತ್ತಾನೆ."

IX–೩೧೯ "ಹೀಗೆ, ಬ್ರಾಹ್ಮಣರು ಏನೆಲ್ಲ ಬಗೆಯ ಕೀಳುಮಟ್ಟದ ವೃತ್ತಿಗಳಲ್ಲಿ ತೊಡಗಿದ್ದರೂ, ಅವರನ್ನು ಸಾಧ್ಯವಿರುವ ಎಲ್ಲ ವಿಧಾನಗಳಿಂದಲೂ ಗೌರವಿಸಬೇಕು. ಏಕೆಂದರೆ ಅವರಲ್ಲಿ ಪ್ರತಿಯೊಬ್ಬನೂ ದೈವವೇ ಆಗಿರುತ್ತಾನೆ."

ನೀಷೆಯ ಹೊಗಳಿಕೆಗೆ 'ಮನುಸ್ಮೃತಿ' ಅರ್ಹವಾಗಿಲ್ಲ. ಅದರ ಪ್ರಕಾರ "ಉನ್ನತ ವರ್ಗಗಳ ಜನರು, ತತ್ವಜ್ಞಾನಿಗಳು ಮತ್ತು ಯೋಧರು ಸಾಮಾನ್ಯ ಜನರನ್ನು ಸಂರಕ್ಷಿಸುತ್ತಾರೆ ಹಾಗೂ ಅವರಿಗೆ ದಾರಿ ತೋರಿಸುತ್ತಾರೆ" ಎಂದು ನೀಷೆ ಹೇಳಿದ್ದಾನೆ. ಇಲ್ಲಿ ನೀಷೆ ಸತ್ಯಕ್ಕೆ ದೂರವಾದ ಹೇಳಿಕೆ ಕೊಡುತ್ತಿದ್ದಾನೆ ಅಥವಾ ಅವನು 'ಮನುಸ್ಮೃತಿ'ಯನ್ನು ಸರಿಯಾಗಿ ಓದಿಲ್ಲ ಎಂದು ನಾವು ಹೇಳಬೇಕಾಗುತ್ತದೆ. 'ಮನುಸ್ಮೃತಿ'ಯ ಪ್ರಕಾರ ಅತಿಮಾನವನು ಸಾಮಾನ್ಯನಿಗೆ ವಿರುದ್ಧವಾಗಿ ಬೇಕಾದ ಹಾಗೆ ಹಕ್ಕುಗಳನ್ನು ಹೊಂದಿದ್ದಾನೆಯೇ ಹೊರತು ಅವನ ಬಗೆಗೆ ಸಲ್ಲಿಸಬೇಕಾದ ಯಾವುದೇ ಕರ್ತವ್ಯವನ್ನೂ ಹೊಂದಿಲ್ಲ.

ಮನುವು ನಿರೂಪಿಸುವ ಕೆಳಮಟ್ಟದ ಹಾಗೂ ಕ್ಷುಲ್ಲಕವಾದ ಅತಿಮಾನವ ಸಿದ್ಧಾಂತವು ನೀಷೆಯ ಸಿದ್ಧಾಂತಕ್ಕಿಂತ ಹೆಚ್ಚು ಅಸಹ್ಯವೂ, ಹೇಯವೂ ಆಗಿದೆ. ಹಿಂದೂಗಳು ಅತ್ಯಮೂಲ್ಯವಾದದ್ದೆಂದು ಪರಿಗಣಿಸುವ ಸಮಾಜ ವ್ಯವಸ್ಥೆ ಇದು. ಗಾಂಧಿಯವರು ವಿಶ್ವಕ್ಕೆ ಹಿಂದೂಗಳ ಉಡುಗೊರೆ ಎಂದು ಬಣ್ಣಿಸಿ ಹೆಮ್ಮೆಪಟ್ಟ ಕೃತಿ ಇದು.

ಈ ಹಿಂದೂ ಸಮಾಜ ವ್ಯವಸ್ಥೆಯ ಇನ್ನೊಂದು ವಿಶೇಷಾಂಶವೆಂದರೆ ಅದನ್ನು ಸಂರಕ್ಷಿಸಲು ರೂಪಿಸಿರುವ ತಂತ್ರ ಅದು ಎರಡು ಮುಖವಾಗಿದೆ.

ಸಮಾಜ ವ್ಯವಸ್ಥೆಯನ್ನು ಎತ್ತಿಹಿಡಿಯುವ ಮತ್ತು ಸಂರಕ್ಷಿಸುವ ಹೊಣೆಗಾರಿಕೆಯನ್ನು ರಾಜನ

---

೧. ಬ್ರಾಹ್ಮಣನ ಸರಿಯಾದ ವರ್ಣನೆಯು ಅತ್ಯಂತ ಶ್ರೇಷ್ಠ ಅತಿಮಾನವ ಎಂದಾಗುತ್ತದೆ. ಏಕೆಂದರೆ ಅವನಿಂದ ಕೆಳಗೆ ಹಾಗೂ ಸಾಮಾನ್ಯ ಮನುಷ್ಯನಿಗಿಂತ ಮೇಲೆ ಕ್ಷತ್ರಿಯರು ಮತ್ತು ವೈಶ್ಯರು ಇರುತ್ತಾರೆ. ಕ್ಷತ್ರಿಯರಾಗಲೀ, ವೈಶ್ಯರಾಗಲೀ ಉತ್ತಮರೇ ಹೊರತು ಅತಿಮಾನವರಲ್ಲವಾದ್ದರಿಂದ ವರ್ಗನಾಮವನ್ನು ಬದಲಾಯಿಸುವ ಅವಶ್ಯಕತೆ ಇಲ್ಲ.

ಹೆಗಲಿನ ಮೇಲೆ ಹೊರಿಸಿರುವುದು ಮೊದಲನೆಯ ತಂತ್ರ. ಇದನ್ನು ಅತ್ಯಂತ ಸ್ಪಷ್ಟವಾದ ಮಾತುಗಳಲ್ಲಿ ಮನುವು ವಿಧಿಸಿದ್ದಾನೆ:

VIII–೪೧೦ "ವೈಶ್ಯ ವರ್ಗದ ಪ್ರತಿಯೊಬ್ಬನೂ ವ್ಯಾಪಾರ ಮಾಡಬೇಕು ಅಥವಾ ಲೇವಾದೇವಿಯಲ್ಲಿ ಅಥವಾ ಬೇಸಾಯದಲ್ಲಿ ತೊಡಗಬೇಕು ಅಥವಾ ಪಶುಪಾಲನೆ ಮಾಡಬೇಕು ಎಂದು ಆದೇಶಿಸತಕ್ಕದ್ದು. ಶೂದ್ರವರ್ಗದ ಪ್ರತಿಯೊಬ್ಬ ವ್ಯಕ್ತಿಯೂ ದ್ವಿಜನ ಸೇವೆಯಲ್ಲಿ ತೊಡಗಿರುವಂತೆ ನೋಡಿಕೊಳ್ಳತಕ್ಕದ್ದು."

VIII–೪೧೮ "ಬಹಳ ಜಾಗರೂಕತೆಯಿಂದ ರಾಜನು ವರ್ತಕರನ್ನೂ, ತಂತ್ರಜ್ಞರನ್ನೂ ಅವರವರ ಕರ್ತವ್ಯದಲ್ಲಿ ತೊಡಗಿರುವಂತೆ ನೋಡಿಕೊಳ್ಳಬೇಕು. ಅವರು ತಮ್ಮ ಕರ್ತವ್ಯದಿಂದ ವಿಮುಖರಾದರೆ ಜಗತ್ತು ಗೊಂದಲಮಯವಾಗಿಬಿಟ್ಟೀತು."

ಈ ನಿಟ್ಟಿನಲ್ಲಿ ರಾಜನ ಕರ್ತವ್ಯವೇನೆಂದು ನಿರೂಪಿಸುವಷ್ಟಕ್ಕೇ ಮನುವು ನಿಲ್ಲುವುದಿಲ್ಲ. ಸ್ಥಾಪಿತವಾಗಿರುವ ವ್ಯವಸ್ಥೆಯನ್ನು ನಡೆಸಲು, ಸಂರಕ್ಷಿಸಲು, ಸದಾಕಾಲವೂ ಬಹು ಎಚ್ಚರಿಕೆ ವಹಿಸುತ್ತಲೇ ಇರುವುದನ್ನು ಅವನು ಖಚಿತಪಡಿಸಿಕೊಳ್ಳಬೇಕಾಗಿದೆ. ಇದಕ್ಕಾಗಿ ಇನ್ನೂ ಎರಡು ಅವಕಾಶಗಳನ್ನು ಕಲ್ಪಿಸುತ್ತಾನೆ. ಒಂದು ಸ್ಥಾಪಿತ ವ್ಯವಸ್ಥೆಯನ್ನು ಉಳಿಸಿ ಬೆಳೆಸುವುದರಲ್ಲಿ ವಿಫಲವಾದ ರಾಜನನ್ನು ಅಪರಾಧಿಯೆಂದು ಪರಿಗಣಿಸಿ ಅವನಿಗೆ ಇತರ ಸಾಮಾನ್ಯ ಅಪರಾಧಿಗಳಂತೆಯೇ ಶಿಕ್ಷೆ ವಿಧಿಸಲು ಅವಕಾಶ ಕಲ್ಪಿಸಿರುವುದು. ಈ ಕೆಳಗಿನ ಉಕ್ತಿಗಳಿಂದ ಇದು ಸ್ಪಷ್ಟವಾಗುತ್ತದೆ:

VII–೩೩೫ "ತಂದೆಯಾಗಲಿ, ಗುರುವಾಗಲಿ, ಗೆಳೆಯನಾಗಲಿ, ತಾಯಿಯಾಗಲಿ, ಪತ್ನಿಯಾಗಲಿ, ಮಗನಾಗಲಿ, ಪುರೋಹಿತನಾಗಲಿ ತಮ್ಮ ತಮ್ಮ ಕರ್ತವ್ಯಗಳಿಗೆ ನಿಷ್ಠರಾಗಿ ನಡೆಯದೆ ಹೋದ ಪಕ್ಷದಲ್ಲಿ ರಾಜನು ಅವರನ್ನು ದಂಡಿಸದೆ ಬಿಡಕೂಡದು."

VIII–೩೩೬ "ಕೆಳಜಾತಿಯ ಒಬ್ಬ ವ್ಯಕ್ತಿಗೆ ಒಂದು ಪಣ ದಂಡ ವಿಧಿಸಿದರೆ, ರಾಜನಿಗೆ ಒಂದು ಸಾವಿರ ಪಣ ವಿಧಿಸಬೇಕು. ಅವನು ಆ ದಂಡವನ್ನು ಬ್ರಾಹ್ಮಣರಿಗೆ ಸಲ್ಲಿಸಬೇಕು ಅಥವಾ ನದಿಗೆ ಎಸೆಯಬೇಕು. ಇದು ಪವಿತ್ರ ಶಾಸನವಾಗಿರುತ್ತದೆ."

ಸ್ಥಾಪಿತ ವ್ಯವಸ್ಥೆಯನ್ನು ಕುರಿತು ಅಲಕ್ಷ್ಯ ಹೊಂದಿರುವ ಅಥವಾ ಅದನ್ನು ವಿರೋಧಿಸುವ ರಾಜನಿಗೆ ಎದುರಾಗಿ ಮನುವು ಹಾಕಿರುವ ಇನ್ನೊಂದು ಶಾಸನ ಇದು. ಬ್ರಾಹ್ಮಣ, ಕ್ಷತ್ರಿಯ ಮತ್ತು ವೈಶ್ಯ ಈ ಮೂರು ವರ್ಗದವರಿಗೆ ಅಂತಹ ರಾಜನ ವಿರುದ್ಧವಾಗಿ ಸಶಸ್ತ್ರ ದಂಗೆ ಏಳುವ ಹಕ್ಕನ್ನು ಅವರಿಗೆ ನೀಡಿರುವುದು.

VIII–೩೪೮ "ತನ್ನ ಕರ್ತವ್ಯಪಾಲನೆಗೆ ಬಲವದ್ವಿರೋಧ ಬಂದಾಗ ದ್ವಿಜನು ಶಸ್ತ್ರ ಗ್ರಹಣ ಮಾಡಬಹುದು. ಕೆಟ್ಟ ಕಾಲ ಬಂದು ಬ್ರಾಹ್ಮಣ ವರ್ಗಕ್ಕೆ ಆಪತ್ತು ಒದಗಿದಾಗ ಕೂಡ ಬ್ರಾಹ್ಮಣನು ಆಯುಧವನ್ನು ಹಿಡಿಯಬಹುದು."

ಹೀಗೆ ಆಯುಧ ಹಿಡಿದು ದಂಗೆಯೇಳುವ ಹಕ್ಕನ್ನು ಕೊಟ್ಟಿರುವುದು ಮೊದಲ ಮೂರು ವರ್ಗಗಳಿಗೆ ಮಾತ್ರ, ಶೂದ್ರನಿಗಲ್ಲ. ಇದು ಸಹಜವೇ ಆಗಿದೆ. ಏಕೆಂದರೆ ಈ ವ್ಯವಸ್ಥೆಯನ್ನು ಉಳಿಸುವುದರಿಂದ ಪ್ರಯೋಜನವಾಗುವುದು ಮೇಲಿನ ಮೂರು ವರ್ಗಗಳಿಗೆ ಮಾತ್ರವೇ. ಆದರೆ ಒಂದು ವೇಳೆ ವ್ಯವಸ್ಥೆಯನ್ನು ನಾಶಮಾಡಲು ರಾಜನೊಂದಿಗೆ ಕ್ಷತ್ರಿಯರೂ ಸೇರಿಕೊಂಡುಬಿಟ್ಟ ಸಂದರ್ಭದಲ್ಲಿ ಏನು ಮಾಡಬೇಕು? ಮನುವು ಬ್ರಾಹ್ಮಣರಿಗೆ ಅವರೆಲ್ಲರನ್ನೂ, ವಿಶೇಷವಾಗಿ ಕ್ಷತ್ರಿಯರನ್ನು, ಶಿಕ್ಷಿಸಲು ಅಧಿಕಾರವನ್ನು ಕೊಟ್ಟಿದ್ದಾನೆ.

IX–೩೧ "ಧರ್ಮಶಾಸ್ತ್ರವನ್ನು ಚೆನ್ನಾಗಿ ಬಲ್ಲ ಬ್ರಾಹ್ಮಣನು ತನಗೆ ಯಾವುದೋ ಭಾರಿ ಅನ್ಯಾಯವಾಗಿದೆಯೆಂದು ರಾಜನಿಗೆ ದೂರು ಕೊಡಬೇಕಾಗಿಲ್ಲ. ಏಕೆಂದರೆ ತನ್ನ ಸಾಮರ್ಥ್ಯದಿಂದಲೇ ತನಗೆ ಅನ್ಯಾಯ ಮಾಡುವವರನ್ನು ಅಡಗಿಸುವ ಹಕ್ಕು ಅವನಿಗಿದೆ."

XI–೩೨ "ಅವನ ಸಾಮರ್ಥ್ಯ – ತನ್ನ ಮೇಲೆಯೇ ಅವಲಂಬಿಸಿಕೊಂಡ ಸಾಮರ್ಥ್ಯ– ರಾಜಾಧಿಕಾರಕ್ಕಿಂತಲೂ ಬಲವತ್ತರವಾದದ್ದು. ಅದಾದರೆ ಅನೇಕ ಜನರನ್ನು ಅವಲಂಬಿಸಿರುತ್ತದೆ. ಆದ್ದರಿಂದ ಸ್ವಸಾಮರ್ಥ್ಯದಿಂದಲೇ ಬ್ರಾಹ್ಮಣನು ತನ್ನ ಶತ್ರುಗಳನ್ನು ಅಡಗಿಸಬಲ್ಲ."

XI–೩೩ "ಅಥರ್ವಣನು ದರ್ಶಿಸಿ, ಅಂಗೀರಸನಿಗೆ ಉಪದೇಶ ಮಾಡಿದ ಅತ್ಯಂತ ಬಲಶಾಲಿಗಳಾದ ಮಂತ್ರಗಳನ್ನು ಅವನು ಯಾವುದೇ ಸಂಕೋಚವಿಲ್ಲದೆ ಉಪಯೋಗಿಸಬಹುದು. ಏಕೆಂದರೆ ಮಾತೇ ಬ್ರಾಹ್ಮಣನು ಆಯುಧ. ಅದರಿಂದ ಅವನು ತನ್ನ ಮೇಲೆ ಆಕ್ರಮಣ ಮಾಡಿದವರನ್ನು ನಾಶಮಾಡಬಲ್ಲನು."

IX–೩೨೦ "ಬ್ರಾಹ್ಮಣವರ್ಗಕ್ಕೆ ವಿರುದ್ಧವಾಗಿ ಎಲ್ಲ ಸಂದರ್ಭಗಳಲ್ಲಿಯೂ ಆಯುಧವೆತ್ತುವ ಕ್ಷತ್ರಿಯರನ್ನು ಬ್ರಾಹ್ಮಣನು ದಮನ ಮಾಡತಕ್ಕದ್ದು. ಏಕೆಂದರೆ ಕ್ಷತ್ರಿಯನು ಮೂಲತಃ ಬ್ರಾಹ್ಮಣನಿಂದ ಜನಿಸಿದವನು."

ಆಯುಧವನ್ನು ಹಿಡಿದಂತೆ ಬ್ರಾಹ್ಮಣರು ಕ್ಷತ್ರಿಯರನ್ನು ಶಿಕ್ಷಿಸುವುದು ಹೇಗೆ ತಾನೆ ಸಾಧ್ಯ? ಇದು ಮನುವಿಗೆ ಗೊತ್ತು. ಆದ್ದರಿಂದ ಕ್ಷತ್ರಿಯರನ್ನು ಶಿಕ್ಷಿಸುವ ಸಲುವಾಗಿ ಬ್ರಾಹ್ಮಣರು ಆಯುಧಗಳನ್ನು ಧರಿಸಬಹುದು ಎಂದು ಅನುಮತಿ ನೀಡುತ್ತಾನೆ.

XII–೧೦೦ "ಸೈನ್ಯಗಳನ್ನು ನಡೆಸುವುದು, ರಾಜಾಧಿಕಾರ, ಶಿಕ್ಷೆ ನೀಡುವ ಸಾಮರ್ಥ್ಯ, ಎಲ್ಲ ರಾಷ್ಟ್ರಗಳ ಮೇಲಿನ ಪ್ರಭುತ್ವ – ಇವುಗಳೆಲ್ಲಕ್ಕೂ ಯಾವನು ವೇದಶಾಸ್ತ್ರಗಳನ್ನು ಅತ್ಯುತ್ತಮವಾಗಿ ಅರ್ಥಮಾಡಿಕೊಂಡಿದ್ದಾನೆಯೋ ಅವನೇ, ಅಂದರೆ ಬ್ರಾಹ್ಮಣನೇ ಅರ್ಹನು."

ಸ್ಥಾಪಿತ ಸಾಮಾಜಿಕ ವ್ಯವಸ್ಥೆಯನ್ನು ರಕ್ಷಿಸಲು ರೂಪಿಸಿರುವ ಎರಡನೆಯ ತಂತ್ರವಾದರೋ ಮೊದಲನೆಯದಕ್ಕಿಂತ ತೀರಾ ಭಿನ್ನವಾದದ್ದು. ನಿಜವಾಗಿ ಹೇಳಬೇಕೆಂದರೆ ಇದೇ ಹಿಂದೂ ಸಮಾಜ ವ್ಯವಸ್ಥೆಯ ವಿಶೇಷವಾದ ಲಕ್ಷಣಗಳಲ್ಲಿ ಒಂದಾಗಿದೆ.

ಸಮಾಜ ವ್ಯವಸ್ಥೆಯು ಉಗ್ರವಾದ ಪ್ರತಿಭಟನೆಯನ್ನು ಎದುರಿಸಿ ಉಳಿಯಬೇಕಾದ ಸಂದರ್ಭದಲ್ಲಿ ಮೂರು ವಿಚಾರಗಳನ್ನು ಪರಿಗಣಿಸುತ್ತದೆ: (೧) ಅನ್ಯಾಯದ ಅರಿವು ಇರುವುದು, (೨) ತಾನು ಅನ್ಯಾಯವನ್ನು ಅನುಭವಿಸುತ್ತಿದ್ದೇನೆ ಎಂದು ತಿಳಿದುಕೊಳ್ಳುವ ಸಾಮರ್ಥ್ಯ, (೩) ಶಸ್ತ್ರಾಸ್ತ್ರಗಳ ದೊರಕುವಿಕೆ. ಈ ಮೂರೂ ವಿಚಾರಗಳು ಅಂಥದೊಂದು ಕ್ರಾಂತಿಗೆ ಕಾರಣವಾಗುತ್ತವೆ ಎಂಬ ಅಂಶ ಮೊದಲನೆಯದು. ಎರಡನೆಯ ಪರಿಗಣನೆ ಒಂದು ದಂಗೆಯನ್ನು ಎರಡು ರೀತಿಯಲ್ಲಿ ನಿಭಾಯಿಸಬಹುದು ಎಂಬುದು. ದಂಗೆಯೇ ಸಂಭವಿಸದಂತೆ ನಿವಾರಿಸುವುದು ಮೊದಲನೆಯ ದಾರಿ. ಸಂಭವಿಸಿದ ಅನಂತರ ಅದನ್ನು ದಮನ ಮಾಡುವುದು ಎರಡನೆಯ ದಾರಿ. ಮೂರನೆಯ ಪರಿಗಣನೆ ದಂಗೆಯನ್ನು ನಿವಾರಿಸುವುದು ಸೂಕ್ತವೇ ಅಥವಾ ಅಡಗಿಸುವುದೊಂದೇ ಉಳಿದಿರುವ ದಾರಿಯೇ ಎನ್ನುವುದು. ಮೇಲೆ ಹೇಳಿದ ದಂಗೆಯು ಮೂರು ಪೂರ್ವಾಗತ್ಯಗಳನ್ನು ಅವಲಂಬಿಸಿದೆ ಎಂಬುದು.

ಯಾವಾಗ ಸಮಾಜ ವ್ಯವಸ್ಥೆಯು ಒಂದು ಜನ ವರ್ಗ ಮೇಲೆದ್ದು ನಿಲ್ಲಲು ಅವಕಾಶವನ್ನು ವಂಚಿಸುತ್ತದೆಯೋ, ವಿದ್ಯಾಭ್ಯಾಸದ ಹಕ್ಕನ್ನು ಅವರಿಗೆ ವಂಚಿಸುತ್ತದೆಯೋ, ಶಸ್ತ್ರಾಸ್ತ್ರಗಳನ್ನು ಬಳಸುವ

ಹಕ್ಕನ್ನು ವಂಚಿಸುತ್ತದೆಯೋ ಆಗ ಅದು ತನಗೆ ವಿರುದ್ಧವಾಗಿ ದಂಗೆ ಸಂಭವಿಸುವಿಕೆಯನ್ನು ನಿವಾರಿಸುವ ನೆಲೆಯಲ್ಲಿರುತ್ತದೆ. ಅದಕ್ಕೆ ಬದಲಾಗಿ ಶಿಕ್ಷಣದ ಹಕ್ಕು, ನೀತಿ, ಶಸ್ತ್ರಾಸ್ತ್ರ ಉಪಯೋಗಕ್ಕೆ ಅನುಮತಿ ನೀಡಿರುವ ಸಮಾಜ ವ್ಯವಸ್ಥೆಯ ಅನ್ಯಾಯವನ್ನು ಅನುಭವಿಸುತ್ತಿರುವವರ ದಂಗೆಯೇಳುವಿಕೆಯನ್ನು ನಿವಾರಿಸಲಾರದು. ಆಗ ಸಮಾಜ ವ್ಯವಸ್ಥೆಯನ್ನು ಉಳಿಸಿ ರಕ್ಷಿಸಲು ಅದಕ್ಕಿರುವ ಒಂದೇ ದಾರಿಯೆಂದರೆ ಬಲವನ್ನೂ ಹಿಂಸೆಯನ್ನೂ ಪ್ರಯೋಗಿಸಿ ದಂಗೆಯನ್ನು ದಮನಗೊಳಿಸುವುದು. ಹಿಂದೂ ಸಮಾಜ ವ್ಯವಸ್ಥೆಯು ಮೊದಲನೆಯ ವಿಧಾನವನ್ನು ಅನುಸರಿಸಿದೆ. ಕೆಳ ವರ್ಗಗಳ ಸಾಮಾಜಿಕ ಸ್ಥಾನಮಾನಗಳನ್ನು ಮುಂದಿನ ಎಲ್ಲ ಪೀಳಿಗೆಗಳಿಗೂ ಅನ್ವಯವಾಗುವಂತೆ ನಿಷ್ಕರ್ಷೆ ಮಾಡಿಬಿಟ್ಟಿವೆ. ಅವರ ಆರ್ಥಿಕ ನೆಲೆ ಬೆಲೆಯೂ ನಿಗದಿಯಾಗಿಬಿಟ್ಟಿದೆ. ಎರಡಕ್ಕೂ ನಡುವೆ ಅಂತರವೇನೂ ಇಲ್ಲವಾದ್ದರಿಂದ, ಅನ್ಯಾಯದ ಭಾವನೆ ಬೆಳೆಯಲು ಸಾಧ್ಯವೇ ಇಲ್ಲ. ಕೆಳ ವರ್ಗಗಳಿಗೆ ವಿದ್ಯಾಭ್ಯಾಸವನ್ನು ಅದು ವಂಚಿಸಿದೆ. ಇದರ ಫಲವಾಗಿ, ತನ್ನ ನೀಚ ಪರಿಸ್ಥಿತಿಯೇ ಅನ್ಯಾಯಕ್ಕೆ ಆಧಾರವಾಗಿದೆ ಎಂಬ ಅರಿವೇ ಯಾರಿಗೂ ಇಲ್ಲವಾಗಿದೆ. ಏನಾದರೂ ಅರಿವು ಇದ್ದರೆ, ತಮ್ಮ ನೀಚ ಪರಿಸ್ಥಿತಿಗೆ ಯಾರೊಬ್ಬರೂ ಹೊಣೆಗಾರರಲ್ಲ ಎಂಬ ಭಾವನೆಯದು. ಅದೇ ವಿಧಿ. ಒಂದು ವೇಳೆ ಅನ್ಯಾಯವಾಗಿದೆ ಎಂದು ಇಟ್ಟುಕೊಂಡರೂ, ಅನ್ಯಾಯದ ಅರಿವು ಇದೆ ಎಂದಿಟ್ಟುಕೊಂಡರೂ, ಕೆಳ ವರ್ಗಗಳು ಹಿಂದೂ ಸಮಾಜ ವ್ಯವಸ್ಥೆಗೆ ಎದುರಾಗಿ ದಂಗೆಯೇಳಲು ಅವಕಾಶವಿಲ್ಲ. ಏಕೆಂದರೆ ಜನಸಾಮಾನ್ಯರು ಆಯುಧಗಳನ್ನು ಹಿಡಿಯುವುದನ್ನು ಹಿಂದೂ ಸಮಾಜ ವ್ಯವಸ್ಥೆಯು ನಿಷೇಧಿಸುತ್ತದೆ. ಮುಸ್ಲಿಮ ಅಥವಾ ನಾಜಿಗಳಂತಹ ಬೇರೆ ಸಮಾಜ ವ್ಯವಸ್ಥೆಗಳು ಇದಕ್ಕೆ ವಿರುದ್ಧವಾದ ವಿಧಾನವನ್ನು ಅನುಸರಿಸುತ್ತವೆ. ಅವರು ಧರ್ಮದ ಸಮಸ್ತರಿಗೂ ಸಮಾನ ಅವಕಾಶಗಳನ್ನು ಕೊಡುತ್ತಾರೆ. ಜ್ಞಾನಾರ್ಜನೆಯ ಸ್ವಾತಂತ್ರ್ಯವನ್ನು ಎಲ್ಲರಿಗೂ ಕೊಡುತ್ತಾರೆ. ಶಸ್ತ್ರಧಾರಣ ಸ್ವಾತಂತ್ರ್ಯವನ್ನು ಕೊಡುತ್ತಾರೆ. ದಂಗೆಯನ್ನು ಬಲ ಪ್ರಯೋಗದಿಂದಲೂ ಹಿಂಸೆಯಿಂದಲೂ ದಮನಮಾಡುವ ನಿಷ್ಠುರ ಕರ್ತವ್ಯವನ್ನು ತಮಗೆ ಇಟ್ಟುಕೊಳ್ಳುತ್ತಾರೆ. ಅವಕಾಶಗಳ ಹಾಗೂ ಶಿಕ್ಷಣ ಸಂಪಾದನೆಯ ಸ್ವಾತಂತ್ರ್ಯವನ್ನು ವಂಚಿಸುವುದು, ಆಯುಧ ಧಾರಣೆಯ ಹಕ್ಕನ್ನು ಕೊಡದಿರುವುದು ಅತ್ಯಂತ ಹೇಯವಾದ ಅನ್ಯಾಯ. ಅದರ ಫಲಗಳನ್ನು ಮನುವು ಊನಗೊಳಿಸುತ್ತಾನೆ. ವ್ಯಕ್ತಿಯನ್ನು ನಿರ್ವೀರ್ಯಗೊಳಿಸುತ್ತಾನೆ. ಹೀಗೆ ಮಾಡುವುದಕ್ಕೆ ಹಿಂದೂ ಸಮಾಜ ವ್ಯವಸ್ಥೆಗೆ ಯಾವ ನಾಚಿಕೆಯೂ ಆಗುತ್ತಿಲ್ಲ. ಇದರಿಂದ ಎರಡು ಸಾಧನೆಗಳಂತೂ ಅದು ನೆರವೇರಿಸಿಕೊಂಡಿದೆ. ಮೊದಲನೆಯದಾಗಿ, ಸಿದ್ಧಗೊಂಡ ಸಮಾಜ ವ್ಯವಸ್ಥೆಯನ್ನು ಕಾಪಾಡಲು ಅತ್ಯಂತ ನಾಚಿಕೆಗೇಡಿನದಾದರೂ ಅತ್ಯಂತ ಪರಿಣಾಮಕಾರಿಯಾದ ವಿಧಾನವನ್ನು ಕಂಡುಕೊಂಡಿದೆ. ಎರಡನೆಯದಾಗಿ, ಪುರುಷತ್ವವನ್ನೇ ನಾಶಮಾಡುವ ಅಮಾನವೀಯ ವರ್ತನೆಯಲ್ಲಿ ತೊಡಗಿದ್ದರೂ ಹಿಂದೂಗಳಿಗೆ ಅತ್ಯಂತ ಮಾನವೀಯ ಭಾವನೆಗಳುಳ್ಳ ಜನರೆಂಬ ಕೀರ್ತಿಯನ್ನು ಸಂಪಾದಿಸಿಕೊಟ್ಟಿದೆ. ನಾಜಿಗಳು ಹಿಂದೂಗಳಿಂದ ಬೇಕಾದಷ್ಟಿತ್ತು. ಜನಸಾಮಾನ್ಯರನ್ನು ದಮನಮಾಡಲು ಹಿಂದೂಗಳು ರೂಪಿಸಿಕೊಂಡ ವಿಧಾನವನ್ನೇ ಅವರು ಅನುಸರಿಸಿದ್ದ ಪಕ್ಷದಲ್ಲಿ, ಬಹಿರಂಗವಾಗಿ ಹಿಂಸಾಪ್ರಯೋಗ ಮಾಡದೆಯೇ ಯಹೂದ್ಯರನ್ನು ನಾಶಮಾಡಿಬಿಡಬಹುದಾಗಿತ್ತು. ಅದೇ ಸಮಯದಲ್ಲಿ ಅತ್ಯಂತ ಮಾನವೀಯರಾದ ಒಡೆಯರೆಂದು ಜಗತ್ತಿಗೆ ಪ್ರದರ್ಶಿಸಿಕೊಳ್ಳಬಹುದಾಗಿತ್ತು.

ಹಿಂದೂ ಸಮಾಜ ವ್ಯವಸ್ಥೆಯ ಮೂರನೆಯ ವಿಶೇಷ ಲಕ್ಷಣವೆಂದರೆ ಅದು ಸಾಕ್ಷಾತ್ ಭಗವಂತನೇ ರೂಪಿಸಿಕೊಟ್ಟ ದೈವಿಕವಾದ ವ್ಯವಸ್ಥೆ ಎನ್ನುವುದು. ಆದ್ದರಿಂದ ಅದು ಪರಮ ಪವಿತ್ರವಾದದ್ದು. ಅದನ್ನು ಉಲ್ಲಂಘಿಸಕೂಡದು, ಯಾವುದೇ ತಿದ್ದುಪಡಿ ಮಾಡಕೂಡದು. ಕೊನೆಗೆ ವಿಮರ್ಶೆ ಮಾಡುವುದೂ ಸಲ್ಲದು. ಹಿಂದೂ ಸಮಾಜ ವ್ಯವಸ್ಥೆಯ ದೈವಿಕ ಲಕ್ಷಣದ ಬಗೆಗೆ ಯಾರದಾದರೂ ಮನಸ್ಸಿನಲ್ಲಿ ಸಂದೇಹವೇನಾದರೂ

ಇಣುಕುತ್ತಿದ್ದರೆ ಅದನ್ನು ಹೋಗಲಾಡಿಸುವ ಸಲುವಾಗಿ "'ಭಗವದ್ಗೀತೆ' ಮತ್ತು 'ಮನುಸ್ಮೃತಿ'ಗಳ ಈ ಕೆಳಗಿನ ಶ್ಲೋಕಗಳ ಕಡೆಗೆ ಗಮನ ಸೆಳೆಯಲಾಗುತ್ತದೆ, ಹಿಂದೂ ದೇವರುಗಳಲ್ಲಿ ಒಬ್ಬನಾದ ಶ್ರೀಕೃಷ್ಣನ ವಾಣಿಯೇ 'ಭಗವದ್ಗೀತೆ'.

IV–೧೩ "ಅವರವರ ಗುಣಗಳಲ್ಲಿ ಕರ್ಮಗಳಲ್ಲಿ ಇರುವ ವ್ಯತ್ಯಾಸಗಳನ್ನು ಆಧಾರವಾಗಿಟ್ಟುಕೊಂಡು ನಾಲ್ಕು ವರ್ಣಗಳಾಗಿ ನಾನು ವಿಭಾಗಮಾಡಿದ್ದೇನೆ. (ಬ್ರಾಹ್ಮಣರು, ಕ್ಷತ್ರಿಯರು, ವೈಶ್ಯರು ಮತ್ತು ಶೂದ್ರರು). ಈ ವಿಭಾಗ ಮಾಡಿರುವವನು ನಾನು."

XVII–೪೧–೪೪ "ಪರಂತಪ! ಬ್ರಾಹ್ಮಣರು, ಕ್ಷತ್ರಿಯರು, ವೈಶ್ಯರು ಮತ್ತು ಶೂದ್ರರ ಕರ್ಮಗಳನ್ನು ಅವರವರ ಆಂತರಿಕ ಪ್ರಕೃತಿಗಳಿಗನುಸಾರವಾಗಿ ಮಾಡುವ ಗುಣಗಳನ್ನು ಅನುಸರಿಸಿ ನಿಗದಿಗೊಳಿಸಿದ್ದೇನೆ. ಬ್ರಾಹ್ಮಣನ ಸಹಜ ಕರ್ತವ್ಯಗಳು ಶಾಂತಿ, ಸಮಯ, ಧಾರ್ಮಿಕ ಆಚರಣೆ, ಶುಚಿ, ಶಮ, ಸತ್ಯಸಂಧತೆ, ಜ್ಞಾನ (ಅಂದರೆ ಆಧ್ಯಾತ್ಮಿಕ ಜ್ಞಾನ), ವಿಜ್ಞಾನ (ಪ್ರಾಯೋಗಿಕವಾದ ವಿದ್ಯೆ) ಮತ್ತು ಆಸ್ತಿಕ ಬುದ್ಧಿ (ಮುಂದಿನ ಜನ್ಮದಲ್ಲಿ ನಂಬಿಕೆ). ಒಬ್ಬ ಕ್ಷತ್ರಿಯನ ಸಹಜ ಕರ್ತವ್ಯಗಳು ಧೈರ್ಯ, ಓಜಸ್ಸು, ಶೌರ್ಯ, ಯುದ್ಧದಿಂದ ಪರಾಙ್ಮುಖನಾಗದುದು, ಔದಾರ್ಯ, ಅಧಿಕಾರ ಚಲಾವಣೆ (ಪ್ರಜೆಗಳ ಮೇಲೆ). ಇನ್ನು ಗೋರಕ್ಷಣೆ ಮತ್ತು ವಾಣಿಜ್ಯಗಳು ವೈಶ್ಯನ ಸಹಜ ಕರ್ತವ್ಯ ಕರ್ಮಗಳು. ಅದೇ ರೀತಿಯಲ್ಲಿ ಶೂದ್ರನ ಅತ್ಯಂತ ಸಹಜವಾದ ಕರ್ತವ್ಯ ಕರ್ಮವು ಸೇವೆಯೇ ಆಗಿದೆ."

ಹಿಂದೂ ಸಮಾಜ ವ್ಯವಸ್ಥೆಯ ವಿರುದ್ಧವಾಗಿ ಪ್ರಚಾರ ಮಾಡುವುದನ್ನು ಕೃಷ್ಣನು ನಿಷೇಧಿಸುತ್ತಾನೆ. ಅವನು ಹೇಳುತ್ತಾನೆ:

III–೨೬ "ಅಜ್ಞಾನಿಯಾದವನು ಕರ್ಮಕ್ಕೆ ಅಂಟಿಕೊಂಡು ಪ್ರವರ್ತಿಸುತ್ತಾನೆ. ಜನರು ತಮ್ಮ ತಮ್ಮ ಕರ್ತವ್ಯಗಳನ್ನು ನಿರ್ವಹಿಸುತ್ತಿರಬೇಕೆಂದು ಬಯಸುವ ಜ್ಞಾನಿಯಾದವನು ಕೇವಲ ಕರ್ಮಕ್ಕೆ ಅಂಟಿಕೊಂಡ ಜನರ ನಂಬಿಕೆಗಳನ್ನು ಅಲುಗಾಡಿಸಕೂಡದು. ತಾನೇ ಶ್ರದ್ಧೆಯಿಂದ ಕರ್ಮದಲ್ಲಿ ತೊಡಗಿರುತ್ತಾ, ಅವರೆಲ್ಲರೂ ಕರ್ತವ್ಯ ನಿರತರಾಗಿರುವಂತೆ ಮಾಡಬೇಕು..... ಪರಿಪೂರ್ಣ ಜ್ಞಾನವುಳ್ಳ ವ್ಯಕ್ತಿಯು ಅಪರಿಪೂರ್ಣ ಜ್ಞಾನವುಳ್ಳ ಜನರ ನಂಬಿಕೆಗಳನ್ನು ಹಾಳುಮಾಡಕೂಡದು."

ಹಿಂದೂ ಸಮಾಜ ವ್ಯವಸ್ಥೆಯು ಶಿಥಿಲಗೊಳ್ಳುವ ಸಂದರ್ಭ ಬಂದರೆ, ಜನರು ಸುಧಾರಣೆಯ ಪ್ರಯತ್ನ ಮಾಡುವುದು ಕೃಷ್ಣನಿಗೆ ಇಷ್ಟವಿಲ್ಲ. ವಿಚಾರವನ್ನು ತನಗೇ ಬಿಟ್ಟುಬಿಡಬೇಕೆಂದು ಅವನು ಆದೇಶಿಸುತ್ತಾನೆ. 'ಭಗವದ್ಗೀತೆ' ಈ ಮಾತುಗಳಿಂದ ಈ ವಿಚಾರವು ಸುಸ್ಪಷ್ಟವಾಗುತ್ತದೆ.

IV–೭–೮ "ಎಲೈ ಭಾರತನೇ, ಯಾವಾಗ ಧರ್ಮವು ಅವನತಿಗೊಂಡು ಅಧರ್ಮವು ಬಲಗೊಳ್ಳುವುದೋ ಆಗೆಲ್ಲ ನಾನು ಅವತರಿಸುತ್ತೇನೆ. ಸಾಧುಗಳನ್ನು ಸಂರಕ್ಷಿಸುವ, ದುಷ್ಟರನ್ನು ಶಿಕ್ಷಿಸುವ ಸಲುವಾಗಿ, ಧರ್ಮವನ್ನು ಮತ್ತೆ ಸ್ಥಾಪಿಸುವ ಸಲುವಾಗಿ ಯುಗಯುಗಗಳಲ್ಲೂ ಹುಟ್ಟಿಬರುತ್ತೇನೆ."

ಇದು ಹಿಂದೂ ಸಮಾಜ ವ್ಯವಸ್ಥೆಯ ಒಂದು ಲಕ್ಷಣ ಮಾತ್ರವಲ್ಲ, ಅತ್ಯಂತ ಅಸಾಧಾರಣವಾದ ಲಕ್ಷಣವಾಗಿದೆ. ಸಂಶುದ್ಧಿಗೊಳಿಸುವಿಕೆಯನ್ನು ಪರಿಶೀಲಿಸಿದರೆ ಒಂದು ಅಂಶವು ಸ್ಪಷ್ಟವಾಗುತ್ತದೆ. ಸಮಾಜವು

ಜಡ ಅಥವಾ ನಿರ್ಜೀವ ವಸ್ತುಗಳನ್ನು ಸಂಶುದ್ಧಿಗೊಳಿಸಿ ಜನರ ಮನಸ್ಸಿನಲ್ಲಿ ಆ ವಸ್ತುಗಲು ಪವಿತ್ರವಾದುವು ಎಂಬ ಧಾರ್ಮಿಕ ನಂಬಿಕೆಯನ್ನು ಬೇರೂರಿಸಿರುವ ನಿದರ್ಶನಗಳಿವೆ. ಕಲ್ಲುಗಳು, ನದಿಗಳು, ಮರಗಳನ್ನು ದೇವದೇವತೆಗಳೆಂದು ಸಮಾಜವು ನಂಬಿಸಿರುವ ನಿದರ್ಶನಗಳಿವೆ. ಅಷ್ಟೇ ಅಲ್ಲ, ಜೀವಂತ ವಸ್ತುಗಳನ್ನೇ ಹಾಗೆ ಪವಿತ್ರಗೊಳಿಸಿ ಅವು ದೈವಿಕವಾದುವೆಂದು ನಂಬಿಸಿರುವ ಉದಾಹರಣೆಗಳೂ ಬೇಕಾದಷ್ಟಿವೆ. ಆದರೆ ಒಂದು ನಿರ್ದಿಷ್ಟ ಸಮಾಜ ವ್ಯವಸ್ಥೆಯನ್ನೇ ಧರ್ಮವು ಸಂಶುದ್ಧಿಗೊಳಿಸಿ ಅದನ್ನು ಪವಿತ್ರೀಕರಿಸಿರುವ ನಿದರ್ಶನ ಬೇರೆಲ್ಲೂ ಕಾಣುವುದಿಲ್ಲ. ಆದಿ ಮಾನವನ ಪ್ರಪಂಚದಲ್ಲೂ ಒಂದು ಕುವ್ಯವಸ್ಥೆ, ಒಂದು ಬುಡಕಟ್ಟು ವ್ಯವಸ್ಥೆ ಇದ್ದಿತು. ಆದರೆ ಅದು ಕೇವಲ ಒಂದು ಸಾಮಾಜಿಕ ವ್ಯವಸ್ಥೆಯಾಗಿದ್ದಿತೇ ಹೊರತು ಅದನ್ನು ಧರ್ಮವು ಪವಿತ್ರಗೊಳಿಸಿ ಅನುಲ್ಲಂಘನೀಯವೆಂದು ಕಟ್ಟಿ ಹಾಕಿರಲಿಲ್ಲ. ಈಜಿಪ್ಟ್, ಪರ್ಷಿಯಾ, ರೋಮ್, ಗ್ರೀಸ್ ಮೊದಲಾದ ಪ್ರಾಚೀನ ದೇಶಗಳೂ ತಮ್ಮದೇ ಸಾಮಾಜಿಕ ವ್ಯವಸ್ಥೆಯನ್ನು ಹೊಂದಿದ್ದವು. ಅದರಲ್ಲಿ ಕೆಲವರು ಸ್ವತಂತ್ರರಾಗಿದ್ದರು. ಇನ್ನು ಕೆಲವರು ಗುಲಾಮರಾಗಿದ್ದರು, ಕೆಲವರು ಪೌರರಾಗಿದ್ದರು, ಕೆಲವರು ಪರದೇಶಿಯರಾಗಿದ್ದರು; ಕೆಲವರು ಅದೇ ಜನಾಂಗದವರು, ಮತ್ತೆ ಕೆಲವರು ಅನ್ಯ ಜನಾಂಗಕ್ಕೆ ಸೇರಿದವರು. ಈ ಕುಲ ವ್ಯವಸ್ಥೆಯು ಕೇವಲ ಒಂದು ಸಾಮಾಜಿಕ ವ್ಯವಸ್ಥೆಯಾಗಿದ್ದಿತು. ಧರ್ಮವು ಅದನ್ನು ಸಂಶುದ್ಧಿಗೊಳಿಸಿ ಪವಿತ್ರೀಕರಿಸಿರಲಿಲ್ಲ, ಅನುಲ್ಲಂಘನೀಯವಾಗಿಸಿರಲಿಲ್ಲ. ಆಧುನಿಕ ಜಗತ್ತಿನಲ್ಲೂ ಒಂದು ವ್ಯವಸ್ಥೆಯಿದೆ. ಕೆಲವು ಕಡೆ ಅದು ಪ್ರಜಾಪ್ರಭುತ್ವ, ಕೆಲವಡೆ ನಿರಂಕುಶಾಧಿಕಾರ, ಕೆಲವಡೆ ನಾಜಿಸಂ, ಮತ್ತೆ ಕೆಲವೆಡೆ ಬೋಲ್ಷೆವಿಸಂ. ಇಲ್ಲೂ ಅಷ್ಟೇ ಇದು ಕೇವಲ ಸಾಮಾಜಿಕ ವ್ಯವಸ್ಥೆಯೇ ಹೊರತು ಧರ್ಮದಿಂದ ಪವಿತ್ರೀಕೃತವಾದುದೂ, ಅನುಲ್ಲಂಘನೀಯವಾದುದೂ ಅಲ್ಲ.

ಜಗತ್ತಿನ ಯಾವುದೇ ಭಾಗದಲ್ಲೂ ಸಮಾಜವು ವೃತ್ತಿಗಳನ್ನು ಪವಿತ್ರೀಕರಿಸಿಲ್ಲ. ವೃತ್ತಿ ಎಂದರೆ ಜೀವಿಕೆಯ ಸಂಪಾದನೆಯ ದಾರಿಗಳು. ಎಲ್ಲೆಲ್ಲೂ ಆರ್ಥಿಕ ಚಟುವಟಿಕೆಯು ಧರ್ಮದ ಪಾವಿತ್ರ್ಯ ಕ್ಷೇತ್ರದಿಂದ ಹೊರಗಾಗಿಯೇ ಉಳಿದುಬಂದಿದೆ. ಬೇಟೆಯಾಡುತ್ತಿದ್ದ ಸಮಾಜದಲ್ಲೂ ಒಂದು ಧರ್ಮವಿತ್ತು. ಆದರೆ ಒಂದು ವೃತ್ತಿಯಾಗಿ ಬೇಟೆಯನ್ನು ಪವಿತ್ರೀಕರಿಸಿರಲಿಲ್ಲ. ಪಶುಪಾಲಕ ಸಮಾಜದಲ್ಲೂ ಧರ್ಮವಿತ್ತು. ಆದರೆ ಪಶುಪಾಲನೆಯನ್ನು ಧರ್ಮವು ಸಂಶುದ್ಧಿಗೊಳಿಸಿರಲಿಲ್ಲ. ಪವಿತ್ರೀಕರಿಸಿರಲಿಲ್ಲ. ವೃತ್ತಿಯಾಗಿದ್ದ ಬೇಸಾಯವು ಧರ್ಮದಿಂದ ಪವಿತ್ರೀಕೃತವಾಗಿರಲಿಲ್ಲ. ಅನೇಕ ಶ್ರೇಣಿಗಳು, ಸ್ತರಗಳು, ಮಾಲೀಕರು, ಜೀತದವರು ತುಂಬಿದ್ದ ಊಳಿಗಮಾನ್ಯ ವ್ಯವಸ್ಥೆಯಲ್ಲಿಯೂ ಅದರ ಸ್ವರೂಪ ಶುದ್ಧಾಂಗವಾಗಿ ಸಾಮಾಜಿಕವಾಗಿತ್ತು. ಪವಿತ್ರತೆ ಎನ್ನುವಂಥದ್ದೇನೂ ಅದರಲ್ಲಿರಲಿಲ್ಲ.

ಮನುಷ್ಯ ಮನುಷ್ಯರ ನಡುವಣ ಸಂಬಂಧವನ್ನು ಧರ್ಮವು ಸಂಶುದ್ಧಿಗೊಳಿಸಿ ಪವಿತ್ರಗೊಳಿಸಿರುವ ಸಮಾಜ ವ್ಯವಸ್ಥೆ ಕಾಣುವುದು ಇಡಿ ಜಗತ್ತಿನಲ್ಲಿ ಹಿಂದೂಗಳಲ್ಲಿ ಮಾತ್ರವೇ. ಇಲ್ಲಿ ಆ ಪಾವಿತ್ರ್ಯವನ್ನು ಶಾಶ್ವತವಾಗಿ ಮಾಡಿದೆ. ಅನುಲ್ಲಂಘನೀಯವಾಗಿ ಮಾಡಿದೆ. ಒಬ್ಬ ಕೆಲಸಗಾರನಿಗೂ, ಇನ್ನೊಬ್ಬನಿಗೂ ಇರುವ ಸಂಬಂಧವನ್ನು ಆಧಾರವಾಗುಳ್ಳ ಆರ್ಥಿಕ ವ್ಯವಸ್ಥೆಯನ್ನು ಪವಿತ್ರಗೊಳಿಸಿ, ಶಾಶ್ವತವಾಗಿ ಅನುಲ್ಲಂಘನೀಯವಾಗಿ ಮಾಡಿಸುವ ಜನರು ಇಡಿ ಜಗತ್ತಿನಲ್ಲಿ ಹಿಂದೂಗಳು ಮಾತ್ರವೇ.

ಆದ್ದರಿಂದ ಹಿಂದೂಗಳು ಪವಿತ್ರ ಧರ್ಮಸೂತ್ರಗಳನ್ನು ಹೊಂದಿರುವ ಜನರು ಎಂದಷ್ಟೇ ಹೇಳಿದರೆ ಸಾಲದು. ಜೊರಾಸ್ಟ್ರಿಯನ್ನರು, ಇಸ್ರೇಲಿಗಳೂ, ಕ್ರಿಶ್ಚಿಯನ್ನರು, ಮುಸ್ಲಿಮರು ಎಲ್ಲರಲ್ಲೂ ಪವಿತ್ರವಾದ ಧರ್ಮಸೂತ್ರಗಳಿವೆ. ನಂಬಿಕೆಗಳನ್ನು ಆಚಾರಗಳನ್ನೂ ಸಂಶುದ್ಧಿಗೊಳಿಸಿ ಪವಿತ್ರೀಕರಿಸುತ್ತಾರೆ. ಆದರೆ ಅವರು ಯಾರೂ ಒಂದು ನಿರ್ದಿಷ್ಟ ಸಾಮಾಜಿಕ ವ್ಯವಸ್ಥೆಯನ್ನು ವಿಧಿಸುವುದಿಲ್ಲ ಅಥವಾ ಅದನ್ನು ಪವಿತ್ರೀಕರಿಸುವುದಿಲ್ಲ.

ಸಮಾಜ ವ್ಯವಸ್ಥೆಯೆಂದರೆ ವ್ಯಕ್ತಿಗಳ ನಡುವೆ ಇರುವ ಸಂಬಂಧ. ಅದನ್ನು ಹರಳುಗಟ್ಟಿದ ರೂಪದಲ್ಲಿ ಪವಿತ್ರಗೊಳಿಸುವುದಾಗಲೀ, ಯಾರೂ ಅದನ್ನು ಮೀರುವಂತಿಲ್ಲ ಎಂದು ವಿಧಿಸುವುದಾಗಲೀ ಅಲ್ಲೆಲ್ಲೂ ಕಂಡುಬರುವುದಿಲ್ಲ. ಈ ಅಂಶದಲ್ಲಿ ಹಿಂದೂಗಳದೇ ವೈಶಿಷ್ಟ್ಯ. ಹಿಂದೂ ಸಾಮಾಜಿಕ ವ್ಯವಸ್ಥೆಯು ಕಾಲದ ಧಾಳಿಯನ್ನು, ಆಕ್ರಮಣಗಳನ್ನು ಎದುರಿಸಿ ಗಟ್ಟಿಯಾಗಿ ನಿಲ್ಲಲು ಬೇಕಾದ ಶಕ್ತಿಯನ್ನು ಹೊಂದಿರುವುದು ಇದರಿಂದಲೇ.

ಸಂಪ್ರದಾಯವಂತ ಹಿಂದೂ ಇದನ್ನು ಹಿಂದೂ ಸಮಾಜ ವ್ಯವಸ್ಥೆಯ ಅತ್ಯಂತ ಕರಾರುವಕ್ಕಾದ ನಿರೂಪಣೆ ಎಂದು ಒಪ್ಪಿಕೊಳ್ಳುತ್ತಾನೆ. ಇಲ್ಲಿ ಗೊಣಗುವವ ಸುಧಾರಕ ಮಾತ್ರ.

ಬ್ರಿಟಿಷರು ಭಾರತಕ್ಕೆ ಬಂದ ಮೇಲೆ ಇದೆಲ್ಲ ಗತಕಾಲದ ಮಾತಾಗಿಹೋಯಿತು ಎಂದು ಅವನು ಹೇಳಬಹುದು. ಈ ದೃಷ್ಟಿಯಿಂದ ಯಾರೂ ಚಕಿತರಾಗಬೇಕಾಗಿಲ್ಲ. ಏಕೆಂದರೆ ಇದರಲ್ಲಿ ಒಂದು ಭ್ರಮೆಯಿದೆ. ಮತಗಳಾಗಿ ಸತ್ತು ಹೋದಂಥ ವ್ಯವಸ್ಥೆಗಳು ಹಲವು ಕಾಲ ಮುಂದುವರಿಯುತ್ತವೆ. ಅಭ್ಯಾಸವಾಗಿ, ರೂಢಿಯಾಗಿ ಉಳಿದುಕೊಂಡಿರುತ್ತವೆ ಎಂಬ ವಾಸ್ತವಾಂಶವನ್ನು ಈ ಭ್ರಮೆಯು ಗಮನಕ್ಕೆ ತಂದುಕೊಳ್ಳುವುದಿಲ್ಲ. ಹಿಂದೂ ಸಮಾಜ ವ್ಯವಸ್ಥೆಯು ಹಿಂದೂಗಳಲ್ಲಿ ರೂಢಿಯಾಗಿ ಉಳಿದು ಬಂದಿದೆ. ಪೂರ್ಣ ಶಕ್ತಿಯಿಂದ ಜೀವಂತವಾಗಿದೆ ಎಂಬುದನ್ನು ಯಾರೂ ಅಲ್ಲಗಳೆಯಲಾರರು.

* * * *

## ಅಧ್ಯಾಯ ೪

# ಹಿಂದೂ ಧರ್ಮದ ಸಂಕೇತಗಳು

*ಈ ಶೀರ್ಷಿಕೆಯಲ್ಲಿ ೩೭ ಪುಟಗಳಿವೆ. ಅಧ್ಯಾಯವು ಅಸಮಗ್ರವಾಗಿರುವಂತೆ ತೋರುತ್ತದೆ. ಮೂಲ ಯೋಜನೆಯ ೭ನೆಯ ಅಂಶಕ್ಕೆ ಇದು ಸಂಬಂಧಿಸಿದೆ. ಈ ಪುಟಗಳನ್ನೂ "ಇಂಡಿಯಾ ಮತ್ತು ಕಮ್ಯೂನಿಸಂ"ನ ಪುಟಗಳನ್ನೂ ಸೇರಿಸಿ ಒಂದು ಕಡತವಾಗಿ ಕಟ್ಟಿದೆ. ಈ ಬೆರಳಚ್ಚು ಪ್ರತಿಯ ಪಾಠವನ್ನು ನಾವು ಇಲ್ಲಿ ಕೊಡುತ್ತಿದ್ದೇವೆ. ಜೊತೆಗೆ ಡಾ. ಅಂಬೇಡ್ಕರ್ ಅವರೇ ಬರೆದ ವಿಷಯಾನುಕ್ರಮಣಿಕೆಯನ್ನೂ ಸೇರಿಸಿ 'ನಾನು ಹಿಂದೂ ಆಗಬಲ್ಲೆನೆ?' ಎಂಬ ಉದ್ದೇಶಿತ ಕೃತಿಯ ಕರಡು ಯೋಜನೆಯ ಒಂದು ಬೆರಳಚ್ಚು ಪ್ರತಿಯನ್ನೂ ಇಲ್ಲಿ ಕೊಟ್ಟಿದೆ. (ಮೂಲಪ್ರತಿಯನ್ನು ಅಲ್ಲಲ್ಲಿ ಹುಳುಗಳು ತಿಂದಿವೆ)*

– ಮೂಲ ಸಂಪಾದಕರು

ಹಿಂದೂಗಳ ಸಾಮಾಜಿಕ ಸಂಘಟನೆಯಲ್ಲಿ ವಿಚಿತ್ರವಾದದ್ದು ಏನಾದರು ಇದೆಯೆ? ವಿದ್ವಾಂಸರು ನಡೆಸಿದ ಸಂಶೋಧನೆಗಳನ್ನು ತಿಳಿಯದ ಸಾಮಾನ್ಯ ಹಿಂದೂವು ಹಿಂದೂ ಸಮಾಜವ್ಯವಸ್ಥೆಯಲ್ಲಿ ವಿಚಿತ್ರವಾದುದು, ಅಸಾಧಾರಣವಾದುದು, ಅನೈಸರ್ಗಿಕವಾದದ್ದು ಏನೂ ಇಲ್ಲ ಎನ್ನುತ್ತಾನೆ. ಅದು ಸಹಜವೇ. ಪ್ರತ್ಯೇಕವಾಗಿ ಬದುಕು ನಡೆಸುವ ಜನರಿಗೆ ತಮ್ಮ ಆಚಾರ, ವ್ಯವಹಾರಗಳಲ್ಲಿ ವಿಚಿತ್ರವಾದದ್ದು ಏನೂ ಅರಿವಿಗೆ ಬರುವುದಿಲ್ಲ. ತಮಗೆ ಒಂದು ಹೆಸರನ್ನು ಕೊಟ್ಟುಕೊಳ್ಳಲು ತುಸು ತಳುವದೆಯೇ ಜನರು ತಲೆಮಾರಿನಿಂದ ತಲೆಮಾರಿಗೆ ಸಾಗಿದ್ದಾರೆ. ಆದರೆ ಹಿಂದೂಗಳ ಈ ಸಾಮಾಜಿಕ ವ್ಯವಸ್ಥೆಯು ಹೊರಗಿನವರಿಗೆ, ಹಿಂದೂಗಳಲ್ಲದವರಿಗೆ ಹೇಗೆ ಕಾಣಿಸುತ್ತದೆ? ಹಿಂದೂಗಳಿಗೆ ಕಾಣಿಸುವಂತೆ ಅವರಿಗೂ ಅದು ಸಹಜವಾಗಿ, ಸಾಧಾರಣವಾಗಿ ಕಾಣಿಸುತ್ತದೆಯೆ?

ಗ್ರೀಕ್ ದೊರೆ ಸೆಲ್ಯುಕಸ್ ನಿಕಟರ್‌ನ ರಾಯಭಾರಿಯಾಗಿ ಮೆಗಾಸ್ಥನೀಸನು ಸುಮಾರು ಕ್ರಿ.ಪೂ. ೩೦೫ರಲ್ಲಿ ಚಂದ್ರಗುಪ್ತ ಮೌರ್ಯರ ಆಸ್ಥಾನಕ್ಕೆ ಬಂದನು. ಹಿಂದೂಗಳ ಸಮಾಜ ವ್ಯವಸ್ಥೆ ಬಹಳ ವಿಚಿತ್ರವಾಗಿದೆ ಎಂದು ಅವನಿಗೆ ಅನ್ನಿಸಿತು. ಇಲ್ಲವಾದರೆ ಹಿಂದೂ ಸಮಾಜ ವ್ಯವಸ್ಥೆಯನ್ನೂ, ಅದರ ವಿಚಿತ್ರ ಲಕ್ಷಣಗಳನ್ನೂ ವಿಶೇಷವಾಗಿ ವರ್ಣಿಸಲು ಕೈಹಾಕುತ್ತಿರಲಿಲ್ಲ. ಅವನು ಹೀಗೆ ದಾಖಲು ಮಾಡಿದ್ದಾನೆ:

> "ಭಾರತದ ಜನರನ್ನು ಏಳು ಭಾಗಗಳಾಗಿ ವಿಭಾಗಿಸಿದೆ. ದಾರ್ಶನಿಕರು ಸರಣಿಯಲ್ಲಿ ಮೊದಲು ಬರುತ್ತಾರೆ. ಆದರೆ ಸಂಖ್ಯೆಯ ದೃಷ್ಟಿಯಿಂದ ಇವರದು ಅತ್ಯಂತ ಚಿಕ್ಕ ವರ್ಗ.

ಯಜ್ಞಯಾಗಾದಿಗಳನ್ನೋ, ಇತರ ಧಾರ್ಮಿಕ ಕ್ರಿಯೆಗಳನ್ನೋ ಆಚರಿಸುವವರು ಅವರ ಸೇವೆಯನ್ನು ಬಳಸಿಕೊಳ್ಳುತ್ತಾರೆ. ಮಹಾ ಸಮ್ಮೇಳನದಲ್ಲಿ ಬಹಿರಂಗವಾಗಿಯೂ ರಾಜರು ಅವರ ಸೇವೆಯನ್ನು ಬಳಸುತ್ತಾರೆ. ಹೊಸ ವರ್ಷ ಪ್ರಾರಂಭವಾಗುವಾಗ ಸಮ್ಮೇಳನವು ಕೂಡುತ್ತದೆ. ಎಲ್ಲ ದಾರ್ಶನಿಕರೂ ರಾಜನ ಮನೆಯ ಮುಂದೆ ನೆರೆಯುತ್ತಾರೆ. ಯಾವುದೇ ಉಪಯುಕ್ತ ಸಲಹೆಯನ್ನೂ ಬರೆವಣಿಗೆಯಲ್ಲಿ ನಿರೂಪಿಸಿರುವವನು ಅಥವಾ ಬೆಳೆಯನ್ನೂ ದನಕರುಗಳನ್ನೂ ಇನ್ನೂ ಉತ್ತಮಪಡಿಸಲು ಏನಾದರೂ ದಾರಿಯನ್ನು ಕಂಡುಹಿಡಿದಿರುವವನು, ಅಥವಾ ಸಾರ್ವಜನಿಕ ಹಿತಾಸಕ್ತಿಯನ್ನು ವರ್ಧಿಸಲು ಯತ್ನಿಸುವವನು ಬಹಿರಂಗವಾಗಿ ತಾನು ಬರೆದಿರುವುದನ್ನು ಮಂಡಿಸುತ್ತಾನೆ. ಯಾವನೇ ಆದರೂ ಮೂರು ಸಾರಿ ತಪ್ಪು ಮಾಹಿತಿಯನ್ನು ಕೊಟ್ಟಿರುವುದು ಪತ್ತೆಯಾದರೆ, ಆಮೇಲೆ ಬದುಕಿರುವವರೆಗೂ ಅವನು ಮಾತನಾಡುವಂತಿಲ್ಲ ಎಂದು ಶಾಸನವು ವಿಧಿಸುತ್ತದೆ. ಆದರೆ ಒಳ್ಳೆಯ ಸಲಹೆಯನ್ನು ಕೊಡುವವನಿಗೆ ತೆರಿಗೆ ಕೊಡುವುದಕ್ಕಾಗಲೀ, ಕಾಣಿಕೆಗಳನ್ನು ಕೊಡುವುದಕ್ಕಾಗಲೀ ವಿನಾಯಿತಿ ಇರುತ್ತದೆ. ಎರಡನೆಯ ಜಾತಿಯಲ್ಲಿ ಬೇಸಾಯಗಾರರಿದ್ದರೆ, ಜನತೆಯ ಬಹುಭಾಗ ಇವರೇ ಆಗಿರುತ್ತಾರೆ, ಸ್ವಭಾವತಃ ಅತ್ಯಂತ ಮೃದುವಾದವರು. ಅವರಿಗೆ ಸೈನ್ಯ ಸೇವೆಯಿಂದ ವಿನಾಯಿತಿಯುಂಟು. ಯಾವುದೇ ಭೀತಿಯಿಲ್ಲದೇ ಅವರು ಕೃಷಿಕರ್ಮದಲ್ಲಿ ತೊಡಗುತ್ತಾರೆ. ಅವರು ಎಂದೂ ನಗರಕ್ಕೆ ಹೋಗುವುದಿಲ್ಲ. ಅಲ್ಲಿಯ ಗಲಭೆ, ಗೊಂದಲಗಳಲ್ಲಿ ಸೇರುವುದಿಲ್ಲ ಅಥವಾ ಬೇರೆ ಯಾವ ಉದ್ದೇಶದಿಂದಲೂ ಹೋಗುವುದಿಲ್ಲ. ಆದ್ದರಿಂದ ಒಂದು ಕಡೆ ಯುದ್ಧ ನಡೆಯುತ್ತಾ ಜನರು ಜೀವನದ ಹಂಗು ತೊರೆದು ಕಾದುತ್ತಿರುವಾಗ, ಅದೇ ಸಮಯದಲ್ಲಿ, ಅದೇ ಸ್ಥಳದ ಪಕ್ಕದಲ್ಲೇ ಸ್ವಲ್ಪವೂ ವಿಚಲಿತರಾಗದೇ ಶಾಂತಚಿತ್ತದಿಂದ ಸುರಕ್ಷತೆಯ ಭರವಸೆಯಿಂದ ಬೇರೆ ಜನರು ನೆಲವನ್ನು ಉಳುತ್ತಾ, ಅಗೆಯುತ್ತಾ ಇರುವುದನ್ನು ಕಾಣುವುದು ಸಾಮಾನ್ಯವಾಗಿರುತ್ತದೆ. ಇಡಿ ನೆಲವು ರಾಜನ ಆಸ್ತಿ. ರೈತರು ಉತ್ಪನ್ನದ ನಾಲ್ಕನೆ ಒಂದು ಭಾಗವನ್ನು ಪಡೆಯುವ ಷರತ್ತಿನ ಮೇಲೆ ಉತ್ತು ಕೃಷಿ ಮಾಡುತ್ತಾರೆ.

ಮೂರನೆಯ ಜಾತಿ ಗೋಪಾಲಕರು ಮತತು ಬೇಟೆಗಾರರದು. ಇವರಿಗೆ ಮಾತ್ರವೇ ಬೇಟೆಯಾಡುವ ಹಕ್ಕು ಇರುವುದು. ಇವರು ಗೋವುಗಳನ್ನು ಪಾಲಿಸಿ, ಬೆಳೆಸಿ, ಭಾರ ಎಳೆಯುವ ಪ್ರಾಣಿಗಳನ್ನು ಮಾರುವ ಅಥವಾ ಬಾಡಿಗೆಗೆ ಒದಗಿಸುವ ಹಕ್ಕು ಪಡೆದಿದ್ದಾರೆ. ಬೇಸಾಯದ ಜಮೀನಿನಲ್ಲಿ ಸೇರಿಕೊಂಡ ವನ್ಯ ಪ್ರಾಣಿಗಳನ್ನು ಅಥವಾ ರೈತರು ಬಿತ್ತಿದ ಬೀಜಗಳನ್ನು ನುಂಗಿ ಹಾಕಿದ ಹಕ್ಕಿಗಳನ್ನು ಅಟ್ಟಿ ಸಹಾಯ ಮಾಡುವುದಕ್ಕೆ ಪ್ರತಿಯಾಗಿ ಇವರಿಗೆ ರಾಜನು ಧಾನ್ಯದ ಒಂದು ಭತ್ಯೆಯನ್ನು ಕೊಡುತ್ತಾನೆ. ಅವರು ಅಲೆಮಾರಿ ಜೀವನ ನಡೆಸುತ್ತಾರೆ. ಗುಡಾರಗಳನ್ನು ಹಾಕಿಕೊಂಡು ವಾಸಮಾಡುತ್ತಾರೆ.

ನಾಲ್ಕನೆಯ ಜಾತಿ ವ್ಯಾಪಾರ ಮಾಡುವವರನ್ನು, ಪಾತ್ರೆ ಪಡಗಗಳನ್ನು ಇತರ ಉಪಕರಣಗಳನ್ನು ಹೊತ್ತು ಮಾರುವವರನ್ನು ಮತ್ತು ದೈಹಿಕ ಶ್ರಮಕ್ಕಾಗಿ ನೇಮಕಗೊಂಡಿರುವವರನ್ನು ಒಳಗೊಂಡಿರುತ್ತದೆ. ಇವರಲ್ಲಿ ಕೆಲವರು ಕಾಣಿಕೆ ಕೊಡುತ್ತಾರೆ, ದೇಶಕ್ಕೆ ಕೆಲವೊಂದು ನಿರ್ದಿಷ್ಟ ಸೇವೆಗಳನ್ನು ಸಲ್ಲಿಸುತ್ತಾರೆ. ಕವಚಗಳನ್ನು ತಯಾರಿಸುವವರು ಹಾಗೂ ಹಡಗು ಕಟ್ಟುವವರು ರಾಜನಿಗಾಗಿ ಮಾತ್ರವೇ ಕೆಲಸ ಮಾಡುತ್ತಾರೆ. ಇವರು

ರಾಜನಿಂದ ವೇತನವನ್ನೂ, ಆಹಾರ ಸರಬರಾಜನ್ನೂ ಪಡೆಯುತ್ತಾರೆ. ಸೈನ್ಯದ ದಂಡನಾಯಕನು ಯೋಧರಿಗೆ ಆಯುಧಗಳನ್ನು ಒದಗಿಸಿ ಸಜ್ಜುಗೊಳಿಸುತ್ತಾನೆ. ನೌಕಾಪಡೆಯ ಮುಖ್ಯ ಅಡ್ಮಿರಲನು ಪ್ರಯಾಣಿಕರನ್ನು, ಸಾಮಾನು ಸರಂಜಾಮುಗಳನ್ನು ಸಾಗಿಸಲು ಹಡಗುಗಳನ್ನು ಬಾಡಿಗೆಗೆ ಕೊಡುತ್ತಾನೆ.

ಐದನೆಯ ವರ್ಗವು ಯೋಧರಿಂದ ಕೂಡಿದೆ. ಯುದ್ಧವಿಲ್ಲದೆ ಹೋದ ಸಮಯದಲ್ಲಿ ಕುಡಿತ, ಆಲಸ್ಯಗಳಲ್ಲಿ ಅವರು ಕಾಲಹರಣ ಮಾಡುತ್ತಾರೆ. ಅವರನ್ನು ರಾಜನು ಸ್ವಂತ ಖರ್ಚಿನಿಂದ ಸಾಕುತ್ತಾನೆ. ಹಾಗಾಗಿ ಅವರು ಸದಾ ಕಾಲವೂ ಸನ್ನದ್ಧರಾಗಿದ್ದು ಕರೆ ಬಂದೊಡನೆ ಯುದ್ಧರಂಗಕ್ಕೆ ಧಾವಿಸಲು ಸಿದ್ಧರಾಗಿ ನಿಂತಿರುತ್ತಾರೆ. ತಮ್ಮದಾಗಿ ದೇಹವೊಂದರ ಹೊರತು ಬೇರೆ ಏನನ್ನು ಅವರು ಕೊಂಡೊಯ್ಯುವುದಿಲ್ಲ.

ಆರನೆಯ ವರ್ಗವು ಮೇಲ್ವಿಚಾರಕರನ್ನು ಒಳಗೊಂಡಿರುತ್ತದೆ. ನಡೆಯುತ್ತಿರುವ ಸಮಸ್ತ ಚಟುವಟಿಕೆಯನ್ನೂ ಜಾಗರೂಕತೆಯಿಂದ ಗಮನಿಸುತ್ತಿದ್ದು, ರಾಜನಿಗೆ ರಹಸ್ಯವಾಗಿ ವರದಿಮಾಡುವುದಷ್ಟೇ ಇವರ ಕರ್ತವ್ಯ. ಕೆಲವರಿಗೆ ಪಟ್ಟಣ ಪ್ರದೇಶದ ಪರಿವೀಕ್ಷಣೆಯನ್ನು ವಹಿಸಲಾಗಿರುತ್ತದೆ. ಮಿಕ್ಕವರಿಗೆ ಸೈನ್ಯದ ಪರಿಶೀಲನೆ. ಮೊದಲನೆಯ ವರ್ಗದವರು ನಗರದ ವೈಶ್ಯಾಂಗನೆಯರನ್ನೂ, ಎರಡನೆಯ ಗುಂಪಿನವರು ಸೈನ್ಯ ಶಿಬಿರದಲ್ಲಿರುವ ಸೂಳೆಯರನ್ನೂ ತಮ್ಮ ಸಹಾಯಕರನ್ನಾಗಿ ನೇಮಿಸಿಕೊಳ್ಳುತ್ತಾರೆ. ಅತ್ಯಂತ ಸಮರ್ಥರೂ ವಿಶ್ವಾಸಾರ್ಹರೂ ಆದಂತಹ ವ್ಯಕ್ತಿಗಳನ್ನು ಮಾತ್ರವೇ ಈ ಹುದ್ದೆಗಳಿಗೆ ನೇಮಿಸಲಾಗುತ್ತದೆ.

ಏಳನೆಯ ವರ್ಗದಲ್ಲಿ ಮಂತ್ರಾಲೋಚಕರೂ, ನ್ಯಾಯದರ್ಶಿಗಳೂ ಇರುತ್ತಾರೆ. ಸರಕಾರದ ಅತ್ಯುನ್ನತ ಪದವಿಗಳೆಲ್ಲವೂ ಇವರಿಗೆ ಮೀಸಲು. ಹಾಗೆಯೇ ನ್ಯಾಯ ಪಂಚಾಯಿತಿ, ಸಾರ್ವಜನಿಕ ವ್ಯವಹಾರಗಳ ಸಾಮಾನ್ಯಾಡಳಿತ–ಇವೂ ಇವರ ಹೊಣೆಗಳಾಗಿರುತ್ತವೆ.

ಯಾರಿಗೂ ತನ್ನ ಜಾತಿಯ ಹೊರಗಿನಿಂದ ಕೊಟ್ಟು – ತಂದು ಮದುವೆ ಮಾಡಿಕೊಳ್ಳುವ ಹಕ್ಕಿಲ್ಲ. ಒಂದು ವೃತ್ತಿಯನ್ನೋ, ವ್ಯಾಪಾರವನ್ನೋ ಇನ್ನೊಂದಕ್ಕೆ ಬದಲಾಯಿಸುವ ಅಧಿಕಾರವೂ ಇಲ್ಲ. ಒಂದಕ್ಕಿಂತ ಹೆಚ್ಚು ವ್ಯವಹಾರವನ್ನು ಮಾಡುವಂತೆಯೂ ಇಲ್ಲ. ದಾರ್ಶನಿಕನ ಮಟ್ಟಿಗೆ ಈ ವಿಚಾರದಲ್ಲಿ ವಿನಾಯಿತಿ ಉಂಟು. ತನ್ನ ಅಂತರ್ಗತ ಗುಣ ಸ್ವಭಾವದಿಂದಲೇ ಈ ಸೌಲಭ್ಯವನ್ನು ಅವನು ಪಡೆದಿರುತ್ತಾನೆ."

ಸುಮಾರು ಕ್ರಿಸ್ತ ಶಕ ೧೦೩೦ರಲ್ಲಿ ಭಾರತ ಪ್ರವಾಸಮಾಡಿದ ಅಲ್ಬೆರೂನಿಯು ಹಿಂದೂ ಸಮಾಜವ್ಯವಸ್ಥೆಯ ವಿಚಿತ್ರವನ್ನು ನೋಡಿ ಚಕಿತನಾಗಿರಬೇಕು. ಅವನು ತಾನು ಕಂಡ ಆ ವೈಚಿತ್ರ್ಯವನ್ನು ದಾಖಲು ಮಾಡಲು ಮರೆತಿಲ್ಲ. ಅವನು ಬರೆದಿದ್ದಾನೆ:

"ಹಿಂದೂಗಳು ತಮ್ಮ ಜಾತಿಗಳನ್ನು ವರ್ಣ ಎಂದರೆ, ಬಣ್ಣಗಳು ಎಂದು ಕರೆಯುತ್ತಾರೆ. ವಂಶದ ದೃಷ್ಟಿಯಿಂದ ಅವುಗಳನ್ನು ಜಾತಕ ಅಥವಾ ಜನ್ಮಗಳು ಎಂದು ಕರೆಯುತ್ತಾರೆ. ಆದಿಯಿಂದಲೂ ಈ ವರ್ಣಗಳು ನಾಲ್ಕೇ ಇವೆ:

(೧) ಅತ್ಯಂತ ಉನ್ನತವಾದ ಬ್ರಾಹ್ಮಣರು: ಇವರು ಬ್ರಹ್ಮನ ಮುಖದಿಂದ ಹುಟ್ಟಿದರೆಂದು ಹಿಂದೂ ಶಾಸ್ತ್ರ ಗ್ರಂಥಗಳು ಹೇಳುತ್ತವೆ. ಬ್ರಹ್ಮ ಎನ್ನುವುದು ಪ್ರಕೃತಿಯೆಂಬ ಶಕ್ತಿಗೆ ಕೊಟ್ಟ ಇನ್ನೊಂದು ಹೆಸರು. ಪ್ರಾಣಿಯ ದೇಹದಲ್ಲಿ ತಲೆಯು ಅತ್ಯಂತ ಎತ್ತರದ ಅಂಗ. ಇಡಿ ಜನಾಂಗದಲ್ಲಿ

ಬ್ರಾಹ್ಮಣರು ಆರಿಸಿದ ಉತ್ತಮ ಜನ. ಆದ್ದರಿಂದ ಇಡೀ ಮಾನವ ಜನಾಂಗದಲ್ಲೇ ತಾವು ಅತ್ಯುತ್ತಮರು ಎಂದು ಅವರು ಪರಿಗಣಿಸುತ್ತಾರೆ.

(೨) ಅಲ್ಲಿಂದ ಮುಂದಿನ ಜಾತಿ ಕ್ಷತ್ರಿಯರದು. ಅವರೇ ಹೇಳುವಂತೆ ಬ್ರಹ್ಮನ ತೋಳು ಮತ್ತು ಕೈಗಳಿಂದ ಇವರು ಜನಿಸಿದರು. ಅವರ ಮಟ್ಟವು ಬ್ರಾಹ್ಮಣನದಕ್ಕಿಂತ ತೀರಾ ಕೆಳಗಿನದೇನಲ್ಲ.

(೩) ಅನಂತರ ಬರುವವರು ವೈಶ್ಯರು. ಬ್ರಹ್ಮನ ತೊಡೆಯಿಂದ ಇವರು ಜನಿಸಿದರು.

(೪) ನಾಲ್ಕನೆಯ ಜಾತಿ ಶೂದ್ರರು. ಬ್ರಹ್ಮನ ಪಾದಗಳಿಂದ ಹುಟ್ಟಿದರು. ಕೊನೆಯ ಎರಡು ಜಾತಿಗಳ ನಡುವೆ ತುಂಬ ದೀರ್ಘವಾದ ಅಂತರವೇನಿಲ್ಲ.

ಈ ವರ್ಗದವರು ಒಬ್ಬರಿಂದೊಂಬ್ಬರು ಭಿನ್ನವಾದರೂ ಒಂದೇ ನಗರ ಅಥವಾ ಹಳ್ಳಿಗಳಲ್ಲಿ ಒಟ್ಟಿಗೆ ವಾಸಮಾಡುತ್ತಾರೆ. ಒಂದೇ ಸೂರಿನಡಿಯಲ್ಲಿ ಜೀವಿಸುತ್ತಾರೆ.

ಶೂದ್ರರಾದ ಮೇಲೆ ಬರುವವರು ಅಂತ್ಯಜರೆಂದು ಕರೆಯಲ್ಪಡುವ ಜನರು. ಇವರು ಮೇಲೆ ಹೇಳಿದ ಯಾವುದೇ ಜಾತಿಗೆ ಹೇಳಿರದ ರೀತಿಯ ವಿವಿಧ ಸೇವೆಗಳನ್ನು ಮಾಡುತ್ತಾರೆ. ಆದರೆ ಒಂದು ನಿರ್ದಿಷ್ಟ ಕಸುಬಿನ ರೂಪದಲ್ಲಿ ಅಂತರ್ ವಿವಾಹ ವ್ಯವಸ್ಥೆಯುಳ್ಳ ಇವರಲ್ಲಿಯೂ ಎಂಟು ವರ್ಗಗಳಿವೆ. ಅಗಸ, ಚಮ್ಮಾರ ಮತ್ತು ನೇಕಾರ. ಇವರು ಮಾತ್ರ ಈ ಅಂತರ್ವಿವಾಹ ವ್ಯವಸ್ಥೆಗೆ ಸೇರುವುದಿಲ್ಲ. ಈ ಎಂಟು ವರ್ಗಗಳೆಂದರೆ ಅಗಸ, ಚಮ್ಮಾರ, ಗಾರುಡಿಗ, ಮೇದಾರ, ದೋಣಿಗ, ಬೆಸ್ತ, ಬೇಟೆಗಾರ ಮತ್ತು ನೇಕಾರ. ಇವರೊಂದಿಗೆ ನಾಲ್ಕು ಜಾತಿಗಳ ಜನ ಒಟ್ಟಾಗಿ ಒಂದೇ ಸ್ಥಳದಲ್ಲಿ ವಾಸಮಾಡುವುದಿಲ್ಲ. ಇವರು ಹಳ್ಳಿ ಮತ್ತು ಪಟ್ಟಣಗಳ ಹೊರವಲಯದಲ್ಲಿ ವಾಸಮಾಡುತ್ತಾರೆ.

ಹಾಡಿ, ಡೋಮ(ದೊಂಬ), ಚಂಡಾಲ ಮತ್ತು ಬದಂತ ಎಂದು ಹೆಸರಿರುವ ಜನರನ್ನು ಈ ಎಂಟು ಕಸುಬು ವರ್ಗಗಳಲ್ಲಿ ಯಾವುದಕ್ಕೂ ಸೇರಿಸುವುದಿಲ್ಲ. ಅವರು ಕೊಳಕು ಕೆಲಸದಲ್ಲಿ ಅಂದರೆ ಗ್ರಾಮ ಸ್ವಚ್ಛತೆಯೇ ಮೊದಲಾದ ಕೆಲಸದಲ್ಲಿ ನಿರತರಾಗಿರುತ್ತಾರೆ. ಅವರನ್ನು ಒಂದೇ ವರ್ಗವೆಂದು ಪರಿಗಣಿಸಿ, ಅವರ ವೃತ್ತಿಯಿಂದಷ್ಟೇ ನಿರ್ದಿಷ್ಟವಾಗಿ ಅವರನ್ನು ಗುರುತಿಸಲಾಗುತ್ತದೆ. ವಾಸ್ತವವಾಗಿ ಕಾನೂನುಬಾಹಿರ ಮಕ್ಕಳನ್ನು ಹೇಗೋ ಹಾಗೆ ಅವರನ್ನು ನೋಡಲಾಗುತ್ತದೆ. ಏಕೆಂದರೆ ಇವರು ಶೂದ್ರ ತಂದೆ ಹಾಗೂ ಬ್ರಾಹ್ಮಣ ತಾಯಿಯರಿಗೆ ಅವಿವಾಹ ಸಂಭೋಗದಿಂದ ಹುಟ್ಟಿದ ಮಕ್ಕಳು ಎಂದು ರೂಢಿ ಹೇಳುತ್ತದೆ. ಆದ್ದರಿಂದ ಅವರು ಜಾತಿ ಭ್ರಷ್ಟರೆಂದು ಅಭಿಪ್ರಾಯ.

ನಾಲ್ಕು ಜಾತಿಗಳ ಪ್ರತಿಯೊಬ್ಬ ವ್ಯಕ್ತಿಗೂ ಹಿಂದೂಗಳು ಅವರವರ ವೃತ್ತಿ ಹಾಗೂ ಜೀವನ ವಿಧಾನವನ್ನವಲಂಬಿಸಿ ಲಕ್ಷಣಸೂಚಕವಾದ ಹೆಸರುಗಳನ್ನು ಕೊಡುತ್ತಾರೆ. ಮನೆಯಲ್ಲಿ ಇದ್ದು ತನ್ನ ಕರ್ತವ್ಯ ಕರ್ಮಗಳನ್ನು ಮಾಡುತ್ತಿರುವವರೆಗೆ ಅವನು ಬ್ರಾಹ್ಮಣನೆನಿಸುತ್ತಾನೆ. ಒಂದು ಅಗ್ನಿಯ ಸೇವೆ ಮಾಡುತ್ತಾ ವಿಶೇಷ ಕಾರ್ಯದಲ್ಲಿ ತೊಡಗಿರುವಾಗ ಆತನನ್ನು 'ಇಷ್ಟಿ' ಎನ್ನುತ್ತಾರೆ; ಮೂರು ಅಗ್ನಿಗಳನ್ನು ಇಟ್ಟುಕೊಂಡು ಆರಾಧಿಸುತ್ತಿದ್ದಾಗ 'ಅಗ್ನಿಹೋತ್ರಿ' ಎನ್ನುತ್ತಾರೆ. ಜೊತೆಗೆ ಅಗ್ನಿಗೆ ಹವಿಸ್ಸನ್ನು ಅರ್ಪಿಸಿದಾಗ ಅವನು 'ದೀಕ್ಷಿತ' ನೆನಿಸುತ್ತಾನೆ. ಇದು ಬ್ರಾಹ್ಮಣನಿಗೆ ಹೇಗೋ, ಇತರರಿಗೂ ಹಾಗೆಯೇ. ಈ ಎಲ್ಲ ವರ್ಗಗಳ ಕೆಳಗಿರುವ ಜನರಲ್ಲಿ ಹಾಡಿಗಳನ್ನು ಕುರಿತೇ ಹೆಚ್ಚಾಗಿ ಹೇಳಲಾಗುತ್ತದೆ. ಏಕೆಂದರೆ ಅಶುಚಿಯಾದ ಯಾವುದನ್ನೂ ಇವರು

ಹತ್ತಿರ ಇಟ್ಟುಕೊಳ್ಳುವುದಿಲ್ಲ. ಇವರ ಅನಂತರ ಬರುವವರು ಡೋಮರು, ಇವರು ಕೊಳಲು ಊದುತ್ತಾರೆ ಮತ್ತು ಹಾಡುತ್ತಾರೆ. ಇನ್ನೂ ಕೆಳ ವರ್ಗಗಳ ಜನರು ಪ್ರಾಣಿಗಳನ್ನು ಕಡಿಯುವ ಹಾಗೂ ನ್ಯಾಯಾಲಯವು ವಿಧಿಸುವ ಶಿಕ್ಷೆಗಳನ್ನು ಜಾರಿಗೊಳಿಸುವ ಕೆಲಸ ಮಾಡುತ್ತಾರೆ. ಈ ಎಲ್ಲರಿಗಿಂತ ಕೀಳೆನಿಸಿದವರ ಬಂದಂತರು. ಸತ್ತ ಪ್ರಾಣಿಗಳ ಮಾಂಸವನ್ನು ತಿನ್ನುತ್ತಾರಲ್ಲದೆ ಇವರು ನಾಯಿ ಮತ್ತಿತರ ಪ್ರಾಣಿಗಳನ್ನೂ ತಿಂದು ಜೀವಿಸುತ್ತಾರೆ.

ನಾಲ್ಕು ಜಾತಿಗಳ ಜನರಲ್ಲಿ ಒಂದು ಪದ್ಧತಿಯಿದೆ. ಒಂದೊಂದು ವರ್ಗದವರೂ ಒಟ್ಟಿಗೆ ಭೋಜನ ಮಾಡುವ ಸಂದರ್ಭದಲ್ಲಿ ತಮ್ಮ ತಮ್ಮವರದೇ ಒಂದೊಂದು ಗುಂಪು ಮಾಡಿಕೊಳ್ಳುತ್ತಾರೆ. ಒಂದು ತಂಡವು ಇನ್ನೊಂದರ ಒಬ್ಬರನ್ನೂ ಕೂಡ ಸೇರಿಸುವುದಿಲ್ಲ. ಬ್ರಾಹ್ಮಣರ ತಂಡದಲ್ಲಿ ಪರಸ್ಪರ ವೈರವಿರುವ ಇಬ್ಬರು ಊಟಕ್ಕೆ ಕುಳಿತಿದ್ದರೆ ಅವರಿಬ್ಬರ ನಡುವೆ ಒಂದು ಅಡ್ಡ ಪಟ್ಟಿಯನ್ನಿಟ್ಟು ಅಥವಾ ಒಂದು ಬಟ್ಟೆಯನ್ನು ಹರಡಿ ಬೇರ್ಪಡಿಸುತ್ತಾರೆ. ಕೊನೆಗೆ ಇಬ್ಬರ ಮಧ್ಯೆ ಒಂದು ಗೆರೆ ಎಳೆದರೂ ಸಾಕು ಅವರನ್ನು ಬೇರ್ಪಡಿಸಿದಂತಾಗುತ್ತದೆ. ಒಬ್ಬನು ಊಟ ಮಾಡಿದ ಅನಂತರ ಉಳಿಯುವ ಆಹಾರವನ್ನು ಇಟ್ಟುಕೊಳ್ಳುತ್ತಾನೆ. ಒಂದೇ ತಳಿಗೆಯಿಂದ ಒಬ್ಬನು ತಿಂದ ಅನಂತರ ಎರಡನೆಯವನೊಬ್ಬನು ತಿನ್ನಲು ಹೊರಟರೆ, ಅದು ನಿಷಿದ್ಧವಾಗಿರುತ್ತದೆ. ಹಾಗೆ ತಿನ್ನುವಂತಿಲ್ಲ.

ಹಿಂದೂ ಸಮಾಜ ವ್ಯವಸ್ಥೆಯಲ್ಲಿ ತನಗೆ ವಿಚಿತ್ರವೊಂದು ತೋರಿದಷ್ಟನ್ನು ದಾಖಲೆ ಮಾಡುವುದರಿಂದ ಅಲ್ಬೆರೂನಿ ತೃಪ್ತನಾಗಲಿಲ್ಲ. ಮುಂದುವರಿಸುತ್ತಾ ಅವನು ಹೇಳಿದನು:

"ಹಿಂದೂಗಳಲ್ಲಿ ಇಂತಹ ವ್ಯವಸ್ಥೆಗಳು ಹಲವಾರಿದೆ. ನಾವು ಮುಸ್ಲಿಮರು ಇದಕ್ಕೆ ತೀರಾ ವಿರುದ್ಧವಾದ ಚಿತ್ರವನ್ನು ಹೊಂದಿದ್ದೇವೆ. ಎಲ್ಲ ಮನುಷ್ಯರನ್ನೂ ಸಮಾನವಾಗಿ ಪರಿಗಣಿಸುತ್ತೇವೆ. ಧರ್ಮನಿಷ್ಠೆಯಲ್ಲೊಂದರ ಹೊರತು, ಹಿಂದುಗಳಿಗೂ, ಮುಸ್ಲಿಮರಿಗೂ ನಡುವೆ ಪರಸ್ಪರ ಅರಿವು ಮೂಡದಿರುವುದಕ್ಕೆ ಇರುವ ಬಹು ದೊಡ್ಡ ಅಡ್ಡಿ ಇದೇ."

ಭಾರತದಲ್ಲಿ ೧೫೦೦ ರಿಂದ ೧೫೭೧ ರವರೆಗೆ ಪೋರ್ಚುಗೀಸ್ ಸರಕಾರದ ಸೇವೆಯಲ್ಲಿದ್ದ ಒಬ್ಬ ಪೋರ್ಚುಗೀಸ್ ಅಧಿಕಾರಿ ಡುಅರ್ಟ್ ಬಾರ್ಬೋಸಾ ಹಿಂದೂ ಸಮಾಜವನ್ನು ಕುರಿತು ತನ್ನ ಅಭಿಪ್ರಾಯಗಳನ್ನು ದಾಖಲುಮಾಡಿಟ್ಟಿದ್ದಾನೆ. ಗುಜರಾತ್ ರಾಜ್ಯವನ್ನು ಕುರಿತು ಮಾತನಾಡುತ್ತಾ ಅವನು ಹೇಳುವುದು:

"ಇದಕ್ಕಿಂತ ಮೊದಲು ಗುಜರಾತ್ ರಾಜ್ಯವು ಮೂರರ ಕೈಗೆ ಬಿದ್ದಿತು. ಮೂರರು ರೆಸ್ಪುಟೋಸ್ (ರಾಜಪುತ್ರರು) ಎಂದು ಕರೆಯುವ ಅಸಂಸ್ಕೃತರು ಆಗ ಅಲ್ಲಿದ್ದರು. ಅವರೇ ಆಗ ವೀರಯೋಧರು ಮತ್ತು ನಾಡಿನ ರಕ್ಷಕರು. ಅಗತ್ಯ ಬಂದಾಗಲೆಲ್ಲಾ ಯುದ್ಧಕ್ಕೆ ಅವರು ಸಿದ್ಧರಾಗಿರುತ್ತಿದ್ದರು. ಇವರು ಕುರಿ, ಮೀನು ಮೊದಲಾದ ಪ್ರಾಣಿಗಳನ್ನು ಕೊಂದು ತಿನ್ನುತ್ತಾರೆ. ಸಿಕ್ಕಿದ ಆಹಾರವನ್ನು ಬಳಸುತ್ತಾರೆ. ಅವರಲ್ಲಿ ಅನೇಕ ಜನ ಪರ್ವತ ಪ್ರದೇಶಗಳಲ್ಲಿಯೂ ಇದ್ದಾರೆ. ಅಲ್ಲಿ ಅವರ ದೊಡ್ಡ ಹಳ್ಳಿಗಳಿರುತ್ತವೆ. ಗುಜರಾತಿನ ರಾಜನಿಗೆ ಅವರು ವಿಧೇಯರಾಗಿರುವುದಿಲ್ಲ. ಬದಲು ಅವನ ವಿರುದ್ಧವಾಗಿ ದಿನ ದಿನವೂ ಕಾಳಗ ಮಾಡುತ್ತಾರೆ. ಅವನು ಎಷ್ಟು ಕಷ್ಟಪಟ್ಟರೂ ಅವರನ್ನು ಹತೋಟಿಯಲ್ಲಿಡಲು ಸಮರ್ಥನಾಗಿರುವುದಿಲ್ಲ, ಆಗುವುದೂ ಇಲ್ಲ. ಏಕೆಂದರೆ ಅವರು ಉತ್ತಮ ಕುದುರೆ ಸವಾರರು, ಉತ್ತಮ ಬಿಲ್ಲುಗಾರರು, ಮೂರರ ಎದುರಾಗಿ ತಮ್ಮನ್ನು ರಕ್ಷಿಸಿಕೊಳ್ಳಲು ಬೇಕಾದಷ್ಟು ಬಗೆಯ ಆಯಧಗಳನ್ನೂ

ಅವರು ಹೊಂದಿರುತ್ತಾರೆ. ಕೊನೆಯೇ ಇಲ್ಲದೆ ಅವರೊಂದಿಗೆ ಯುದ್ಧ ಮಾಡುತ್ತಿರುತ್ತಾರೆ. ಅವರಿಗೆ ಒಬ್ಬ ರಾಜನಾಗಲಿ, ಒಡೆಯನಾಗಲಿ ಇಲ್ಲ. ಈ ರಾಜ್ಯದಲ್ಲಿ ಇನ್ನೊಂದು ಬಗೆಯ ವಿಧರ್ಮಿಗಳಿದ್ದಾರೆ. ಅವರನ್ನು ಬನಿಯನರು ಎಂದು ಕರೆಯುತ್ತಾರೆ. ಇವರು (ಬನಿಯರು), ವ್ಯಾಪಾರ ವಾಣಿಜ್ಯಗಳಲ್ಲಿ ತೊಡಗಿರುವ ವರ್ತಕರು. ಅವರು ಮೂರರೊಂದಿಗೇ ವಾಸಿಸುತ್ತಾ ತಮ್ಮ ವ್ಯವಹಾರಗಳನ್ನು ಅವರೊಂದಿಗೆ ನಡೆಸುತ್ತಾರೆ. ಈ ಜನರು ಮಾಂಸ ತಿನ್ನುವುದಿಲ್ಲ. ಮೀನನ್ನಾಗಲಿ ಇತರ ಯಾವುದೇ ಸಾಯುವ ಜೀವಿಯನ್ನಾಗಲಿ ತಿನ್ನುವುದಿಲ್ಲ. ಏನನ್ನೂ ಅವರು ಕೊಲ್ಲುವುದಿಲ್ಲ. ಅಷ್ಟೇ ಅಲ್ಲ, ಯಾವುದೇ ಪ್ರಾಣಿಯನ್ನು ಕಡಿಯುವ ದೃಶ್ಯವನ್ನೂ ನೋಡಲಾರರು. ಹೀಗೆ ಅವರು ಮಿತಿಮೀರಿದ ಭಕ್ತಿ, ಶ್ರದ್ಧೆಗಳನ್ನು ತೋರಿಸುತ್ತಾರೆ. ಭಯಂಕರವೆನಿಸುವಷ್ಟರಮಟ್ಟಿಗೆ ಅದು ಅತಿಯಾಗುವುದುಂಟು. ಕೆಲವೊಮ್ಮೆ ಮೂರರು ಇವರನ್ನು ತಮ್ಮೊಂದಿಗೆ ಕರೆದೊಯ್ದು ಸಣ್ಣ ಕೀಟಗಳನ್ನೋ, ಪಕ್ಷಿಗಳನ್ನೋ ಹಿಡಿದು ಕೊಲ್ಲುವ ಹಾಗೆ ನಟಿಸುವುದೂ, ಬನಿಯರು ಅವುಗಳನ್ನು ಕೊಲ್ಲಲು ಬಿಡದೆ ಹಣ ಕೊಟ್ಟು ಕೊಂಡುಕೊಳ್ಳುವುದೂ, ಆಮೇಲೆ ಅವುಗಳನ್ನು ಬಿಡುಗಡೆ ಮಾಡುವುದೂ ನಡೆಯುತ್ತದೆ. ಆ ಪ್ರಾಣಿ, ಪಕ್ಷಿಗಳ ನಿಜವಾದ ಬೆಲೆಗಿಂತ ಎಷ್ಟೋ ಪಟ್ಟು ಹೆಚ್ಚು ಹಣವನ್ನು ತೆರುತ್ತಾರೆ. ರಾಜ್ಯದ ರಾಜನೋ, ಗವರ್ನರನೋ ಯಾರಿಗಾದರೂ ಮರಣದಂಡನೆ ವಿಧಿಸಿದರೆ, ಹಣ ಕೊಟ್ಟು ಅಂತಹವನನ್ನು ಬಿಡಿಸಿಕೊಳ್ಳಲು ಅವಕಾಶವಿದ್ದರೆ ಬನಿಯನರು ಒಟ್ಟುಗೂಡಿ ಅವನನ್ನು ಕೊಳ್ಳುತ್ತಾರೆ. ಒಟ್ಟಿನಲ್ಲಿ ಅವನು ಸಾಯಬಾರದೆಂಬುದು ಅವರ ಆಕ್ಷೇಪ. ಬೇರೆ ಮೂರ್ ಬೈರಾಗಿಗಳು ಇವರುಗಳ ಎದುರಿಗೆ ದಪ್ಪ ಕಲ್ಲುಗಳನ್ನು ತೆಗೆದುಕೊಂಡು ತಮ್ಮ ಎದೆ, ಹೊಟ್ಟೆಗಳನ್ನು ಹೊಡೆದುಕೊಳ್ಳುತ್ತಾರೆ. ಇದನ್ನು ತಪ್ಪಿಸಲೆಂದು ಬನಿಯನರು ಅವರಿಗೆ ಹಣ ಕೊಡುತ್ತಾರೆ. ಇನ್ನು ಕೆಲವರು ದೊಡ್ಡ ಚಾಕುಗಳನ್ನು ಹಿಡಿದುಕೊಂಡು ತಮ್ಮ ತೋಳುಗಳನ್ನು, ಕಾಲುಗಳನ್ನು ತಿವಿದುಕೊಳ್ಳುತ್ತಾರೆ. ಇದನ್ನು ತಪ್ಪಿಸಬೇಕೆಂದು ಬನಿಯನರು ಅವರಿಗೆ ಹಣ ಕೊಡುತ್ತಾರೆ. ಮತ್ತೆ ಕೆಲವರು ಮನೆ ಮನೆಗೆ ಹೋಗಿ, ಇಲಿ ಹಾವುಗಳನ್ನು ಕೊಲ್ಲುತ್ತೇವೆ ಎಂದು ಹೇಳುತ್ತಾರೆ. ಅವರು ಹಾಗೆ ಮಾಡದಿರಲೆಂದು ಬನಿಯನರು ಬೇಕಾದಷ್ಟು ಹಣವನ್ನು ಕೊಡುತ್ತಾರೆ. ಹೀಗೆ ಮೂರರು ಅವರನ್ನು ಬಹಳ ಗೌರವದಿಂದ ಕಾಣುತ್ತಾರೆ. ರಸ್ತೆಯಲ್ಲಿ ನಡೆದು ಹೋಗುತ್ತಿರುವಾಗ ಬನಿಯನರು ಇರುವೆ ಗೂಡನ್ನು ನೋಡಿದರೆ ತಕ್ಷಣವೇ ಹೆಜ್ಜೆಯನ್ನು ಹಿಂದಿಟ್ಟು ಅವುಗಳನ್ನು ತುಳಿಯದಂತೆ ಬಹಳ ಜಾಗರೂಕತೆಯಿಂದ ಮುಂದಕ್ಕೆ ಹೋಗುತ್ತಾರೆ. ಮನೆಗಳಲ್ಲಿ ಸಂಜೆ ವೇಳೆ ಇನ್ನೂ ಹಗಲ ಬೆಳಕಿರುವಾಗಲೇ ರಾತ್ರಿಯೂಟವನ್ನೂ ಮುಗಿಸಿಬಿಡುತ್ತಾರೆ. ಏಕೆಂದರೆ ಹಗಲಲ್ಲಾಗಲಿ, ರಾತ್ರಿಯಲ್ಲಾಗಲಿ ಅವರು ದೀಪವನ್ನು ಹೊತ್ತಿಸುವುದಿಲ್ಲ. ಸಣ್ಣ ಚಿಟ್ಟೆಗಳಂತಹ ಕೀಟಗಳು ದೀಪಕ್ಕೆ ಜಾರಿ ಬಂದು ಸುಟ್ಟು ಹೋದಾವೆಂಬ ಭಯ ಅವರಿಗೆ. ಒಂದು ವೇಳೆ ದೀಪ ಇಡಲೇಬೇಕಾಗಿ ಬಂದರೆ, ಬಣ್ಣದ ಕಾಗದ ಅಥವಾ ಬಟ್ಟೆಯನ್ನು ಪೂರ್ತಿ ಸುತ್ತಿದ ಲಾಟೀನು ಬೆಳಗಿಸುತ್ತಾರೆ. ಅದರೊಳಕ್ಕೆ ಯಾವುದೇ ಹುಳು ಹುಪ್ಪಟೆ ಹೋಗಿ ದೀಪದ ಕುಡಿಗೆ ಸಿಕ್ಕಿ ಸಾಯಲು ಸಾಧ್ಯವಿಲ್ಲ. ಈ ಜನರ ತಲೆಗೆ ಹೇನು ಹತ್ತಿದರೆ ಅವರು ಅವುಗಳನ್ನು ಹೆಕ್ಕಿ ಕೊಲ್ಲುವುದಿಲ್ಲ. ಅವು ಅಲ್ಲೇ ಬೆಳೆಯಲು ಬಿಡುತ್ತಾರೆ. ತೊಂದರೆ ಸಹಿಸಲು ಆಗದಷ್ಟಾದಾಗ ಹೀದನರೇ ಆದ ಬೇರೆ ಕೆಲವು ಜನರಿಗೆ ಹೇಳಿ

ಕಳಿಸುತ್ತಾರೆ. ಅವರು ಸಾಧು ಸಂತರಂತೆ ಬದುಕುವ ಜನರು, ಇವರ ಮನೆಯಲ್ಲಿ ಇದ್ದುಕೊಂಡು ಇವರ ತಲೆಗಳಿಂದ ಎಷ್ಟು ಸಾಧ್ಯವೋ ಅಷ್ಟು ಹೇನುಗಳನ್ನು ಹೆಕ್ಕಿ ತೆಗೆದು ತಮ್ಮ ತಲೆಗೆ ಬಿಟ್ಟುಕೊಳ್ಳುತ್ತಾರೆ. ತಮ್ಮ ಮೈಯ ಮೇಲೆಯೇ ಅವು ಬೆಳೆಯಲಿ ಎಂದು ಬಿಡುತ್ತಾರೆ. ಹೀಗೆ ಮಾಡುವುದರಿಂದ ತಮ್ಮ ಭಗವಂತನ ಪೂಜೆ ಮಾಡಿದ ಹಾಗಾಗುತ್ತದೆ ಎಂದು ಹೇಳುತ್ತಾರೆ. ಹೀಗೆ ಅವರು ಅತ್ಯಂತ ಕಟ್ಟುನಿಟ್ಟಾಗಿ ಸಂಯಮದಿಂದ ಅಹಿಂಸಾ ವ್ರತವನ್ನು ಪಾಲಿಸುತ್ತಾರೆ. ಈ ಮುಖವು ಹೀಗಿದ್ದರೆ ಇನ್ನೊಂದು ಮುಖದಲ್ಲಿ ಇವರು ದುಬಾರಿ ಬಡ್ಡಿದಾರರು. ತೂಕ, ಅಳತೆಗಳಲ್ಲಿ ಮೋಸ ಮಾಡುವವರು; ಅನೇಕ ವಸ್ತುಗಳಲ್ಲೂ, ನಾಣ್ಯಗಳಲ್ಲೂ ಮೋಸ ಮಾಡುವುದಲ್ಲದೆ ಮಹಾ ಸುಳ್ಳುಕೋರರು. ಈ ಹೀದನರು ಕಂದು ಬಣ್ಣದ ಜನ. ಎತ್ತರವಾದ ನೋಡಲು ಸುಂದರವಾದ ಮೈಕಟ್ಟು, ಉಜ್ವಲವಾದ ಬಣ್ಣದ ಪೋಷಾಕು ಧರಿಸುತ್ತಾರೆ. ಸೌಮ್ಯವಾದ ಅಲ್ಪಾಹಾರ ಸೇವಿಸುತ್ತಾರೆ. ಹಾಲು, ಬೆಣ್ಣೆ, ಸಕ್ಕರೆ ಮತ್ತು ಅನ್ನ ಇವು ಇವರ ಆಹಾರ. ಅಲ್ಲದೆ ಬಗೆ ಬಗೆಯ ಮಿಠಾಯಿಗಳು, ಆಹಾರದಲ್ಲಿ ಹೆಚ್ಚು ಪ್ರಮಾಣದಲ್ಲಿ ಹಣ್ಣು ಮತ್ತು ತರಕಾರಿಗಳನ್ನು, ಉಪ್ಪೂರಿಸಿದ ಬೇರುಗಳನ್ನು ಸೇವಿಸುತ್ತಾರೆ. ಅವರು ವಾಸವಾಗಿರುವೆಡೆಗಳಲ್ಲೆಲ್ಲಾ ಹಣ್ಣಿನ ತೋಟಗಳಿರುತ್ತವೆ. ಅಲ್ಲಲ್ಲೇ ಕೊಳಗಳನ್ನು ನಿರ್ಮಿಸಿರುತ್ತಾರೆ. ಅಲ್ಲಿ ಗಂಡಸರು, ಹೆಂಗಸರು ದಿನಕ್ಕೆ ಎರಡು ಸಾರಿ ಮೀಯುತ್ತಾರೆ. ಸ್ನಾನ ಮಾಡಿದ್ದರಿಂದ ಆ ಗಳಿಗೆಯವರೆಗೂ ತಾವು ಮಾಡಿದ ಪಾಪಗಳು ಪರಿಹಾರವಾದುದು ಎಂದು ಹೇಳುತ್ತಾರೆ. ಈ ಬನಿಯನರು ತಮ್ಮ ಮಹಿಳೆಯರ ಹಾಗೆ ಉದ್ದವಾಗಿ ತಲೆಗೂದಲು ಬೆಳೆಸುತ್ತಾರೆ. ತಲೆಯ ಮೇಲೆ ಒಂದು ರುಮಾಲು ಧರಿಸುತ್ತಾರೆ. ಕೂದಲ ಗಂಟು ಬಿಚ್ಚಿ ಹೋಗದಂತೆ ರಕ್ಷಣೆಯೂ ಇದರಿಂದ ದೊರೆಯುತ್ತದೆ. ಅಲ್ಲದೆ ಹೂವು ಮುಡಿದುಕೊಳ್ಳುತ್ತಾರೆ. ಇತರ ಸುಗಂಧ ವಸ್ತುಗಳನ್ನೂ ಇಟ್ಟುಕೊಳ್ಳುತ್ತಾರೆ. ಬಿಳಿಯ ಶ್ರೀಗಂಧಕ್ಕೆ ಕೇಸರಿ ಮತ್ತು ಇತರ ಸುವಾಸನಾ ದ್ರವ್ಯಗಳನ್ನು ಸೇರಿಸಿ ಅವರು ಲೇಪಿಸಿಕೊಳ್ಳುತ್ತಾರೆ. ತುಂಬಾ ವಿಲಾಸಿಗಳಾದ ಜನರು ಉದ್ದವಾದ ಹತ್ತಿ ಅಥವಾ ರೇಷ್ಮೆ ಷರ್ಟುಗಳನ್ನು ತೊಟ್ಟುಕೊಳ್ಳುತ್ತಾರೆ. ಚೂಪು ಮೊನೆಯ ಬಹು ಬೆಲೆಬಾಳುವ ಬೂಟುಗಳನ್ನು ಧರಿಸುತ್ತಾರೆ. ಜರಿ ಕೆಲಸ ಮಾಡಿದ ರೇಷ್ಮೆಯ ಗಿಡ್ಡನಾದ ಕೋಟುಗಳನ್ನು ಧರಿಸುತ್ತಾರೆ. ಚಿನ್ನ, ಬೆಳ್ಳಿ ಕೆಲಸಮಾಡಿದ ಪುಟ್ಟ ಚೂರಿಗಳ ಹೊರತು ಬೇರೆ ಯಾವ ಆಯುಧವನ್ನೂ ಜೊತೆಯಲ್ಲಿ ಇಟ್ಟುಕೊಳ್ಳುವುದಿಲ್ಲ. ಚೂರಿಯೂ ಎರಡು ಕಾರಣಗಳಿಗಾಗಿ. ಒಂದು, ಆಯುಧಗಳನ್ನು ಅತಿ ಕಡಿಮೆ ಬಳಸುವ ಜನರಾದ್ದರಿಂದ ಎರಡನೆಯದಾಗಿ, ಅವರನ್ನು ಕಾಪಾಡಲು ಮೂರರು ಇದ್ದಾರೆಂಬ ಕಾರಣದಿಂದ.”

ಇನ್ನೊಂದು ಹೀದನರ ವರ್ಗವಿದೆ. ಅವರು ತಮ್ಮನ್ನು ಬ್ರಾಹ್ಮಣರು ಎಂದುಕೊಳ್ಳುತ್ತಾರೆ. ಅವರು ಪುರೋಹಿತರು. ದೇವಾಲಯಗಳ ವ್ಯವಹಾರವೆಲ್ಲ ಇವರದು. ಅಲ್ಲಿ ಭಾರೀ ಗಾತ್ರದ ದೇವತಾ ವಿಗ್ರಹಗಳಿರುತ್ತವೆ. ಅಲ್ಲಿ ಬರುವ ವರಮಾನವು ಅಧಿಕವಾದದ್ದು. ಇಂಥ ಹಲವು ದೇವಾಲಯಗಳು ಜನರು ನೀಡುವ ದಾನಧರ್ಮಗಳ ಆಧಾರದಿಂದಲೇ ನಡೆಯುತ್ತಿರುತ್ತವೆ. ಈ ಮಂದಿರಗಳಲ್ಲಿ ಅನೇಕ ಮರದ ಪ್ರತಿಮೆಗಳು, ಶಿಲೆ ಮತ್ತು ತಾಮ್ರ ವಿಗ್ರಹಗಳು ಇರುತ್ತವೆ. ಈ ವಿಗ್ರಹಗಳ ಪ್ರೀತ್ಯರ್ಥವಾಗಿ ಹಲವಾರು ದೊಡ್ಡ ಉತ್ಸವಗಳನ್ನು ನಡೆಸುತ್ತಾರೆ.

ದೀಪಗಳನ್ನು ಬೆಳಗುತ್ತಾರೆ. ಗಂಟೆಗಳನ್ನು ಬಾರಿಸುತ್ತಾರೆ. ಈ ಬ್ರಾಹ್ಮಣರಿಗು ಹೀದನರಿಗೂ ಪವಿತ್ರ ತ್ರಿಮೂರ್ತಿಗಳ ವಿಷಯದಲ್ಲಿ ಅನೇಕ ಹೋಲಿಕೆಗಳಿವೆ. ಮೂರು ಮುಖದ ಕರ್ತವ್ಯಗಳನ್ನು ತಳೆದಿರುವ ತ್ರಿಮೂರ್ತಿಯ ಬಗ್ಗೆ ಅವರಿಗೆ ತುಂಬ ಗೌರವ, ಭಕ್ತಿಗಳಿವೆ. ಅವನೇ ನಿಜವಾದ ಭಗವಂತ, ಸೃಷ್ಟಿಕರ್ತ ಮತ್ತು ಸಕಲ ವಸ್ತುಗಳ ನಿರ್ಮಾಪಕ. ಮೂರು ದೇವತೆಗಳ ಕೂಡಿ ಒಬ್ಬನೇ ಆಗಿರುವ ಭಗವಂತನನ್ನು ಅವರು ಪೂಜಿಸುತ್ತಾರೆ. ಆ ಒಬ್ಬ ದೇವರ ಕೈಕೆಳಗೆ ಅನೇಕ ದೇವರುಗಳು ಇದ್ದು ತಮ್ಮ ಆಡಳಿತ ಕಾರ್ಯವನ್ನು ನಿರ್ವಹಿಸುತ್ತಾರೆ. ಈ ಬ್ರಾಹ್ಮಣರು ಮತ್ತು ಹೀದನರು ಎಲ್ಲೆಲ್ಲಿ ನಮ್ಮ ಚರ್ಚುಗಳನ್ನು ಕಂಡರೂ ಒಳಗೆ ಹೋಗಿ ತಮ್ಮ ಧರ್ಮದ ವಿಗ್ರಹಗಳಿಗೆ ಪ್ರಾರ್ಥನೆ ಸಲ್ಲಿಸುತ್ತಾರೆ. ಸಂತಾ ಮೇರಿಯಾಳನ್ನೇ ಅವರು ಇಷ್ಟಪಡುತ್ತಾರೆ. ಅವರಲ್ಲಿ ಬುದ್ಧಿವಂತರಾದವರೂ ನಮ್ಮ ಹಾಗೆಯೇ ಚರ್ಚನ್ನು ಗೌರವಿಸುತ್ತಾರೆ. ತಮಗೂ ನಮಗೂ ವ್ಯತ್ಯಾಸವೇ ಇಲ್ಲ ಎನ್ನುತ್ತಾರೆ. ಈ ಜನರು ಮೃತ ಹೊಂದುವ ಯಾವುದನ್ನು ತಿನ್ನುವುದಿಲ್ಲ. ಯಾವ ಜೀವಿಯನ್ನೂ ಕೊಲ್ಲುವುದಿಲ್ಲ, ಸ್ನಾನ ಮಾಡುವುದು ಅವರಿಗೆ ಬಹಳ ದೊಡ್ಡ ಸಮಾರಂಭ. ಅದರಿಂದ ತಾವು ಉದ್ಧಾರವಾಗುವುದಾಗಿ ನಂಬುತ್ತಾರೆ."

ಕಲ್ಲೀಕೋಟೆಯ ರಾಜ್ಯವನ್ನು ಕುರಿತು ಬಾರ್ಬೊಸಾ ಹೇಳುವುದು:

"ಈ ಕಲ್ಲಿಕೋಟಿ ರಾಜ್ಯದಲ್ಲಿಯೂ ಬ್ರಾಹ್ಮಿನ್ ಎಂಬ ಜಾತಿಯ ಜನರು ಇದ್ದಾರೆ. ಅವರು ಪೂಜಾರಿಗಳು (ನಮ್ಮಲ್ಲಿಯ ಕ್ಲರ್ಜಿ ಇದ್ದ ಹಾಗೆ). ಇವರ ಬಗೆಗೆ ನಾನು ಹಿಂದೆಯೇ ಹೇಳಿದ್ದೇನೆ."

"ಇವರೆಲ್ಲ ಒಂದೇ ಭಾಷೆಯನ್ನು ಆಡುತ್ತಾರೆ. ಬ್ರಾಹ್ಮಣನ ಮಗನ ಹೊರತು ಬೇರೆ ಯಾರೂ ಬ್ರಾಹ್ಮಣ ಆಗಲು ಸಾಧ್ಯವಿಲ್ಲ. ಅವರಿಗೆ ಏಳು ವರ್ಷ ವಯಸ್ಸಾದಾಗ ಅವರ ಭುಜದ ಮೇಲೆ ಎರಡು ಬೆಟ್ಟಗಲದ ಒಂದು ವನ್ಯಮೃಗದ ಚರ್ಮವನ್ನು ಹಾಕುತ್ತಾರೆ. ಕ್ರಿವಮೆರ್ಗಮ್ ಎಂದು ಕರೆಯುವ ಒಂದು ಪ್ರಾಣಿಯ ಚರ್ಮ ಅದು. ಹದಗೊಳಿಸಿರದ ಅದರ ಮೇಲೆ ಕೂದಲಿರುತ್ತದೆ. ಈ ಪ್ರಾಣಿ ಸ್ವರೂಪದಲ್ಲಿ ಕಾಡುಕತ್ತೆಯನ್ನು ಹೋಲುತ್ತದೆ. ಅಲ್ಲಿಂದ ಏಳು ವರ್ಷಗಳ ಕಾಲ ಬಾಲಕನು ವೀಳೆಯದೆಲೆಯನ್ನು ತಿನ್ನುವಂತಿಲ್ಲ. ಆ ಅವಧಿ ಪೂರ್ತಿಯಾಗಿ ಚರ್ಮದ ಪಟ್ಟಿಯನ್ನು ಹೆಗಲ ಮೇಲೆ ಧರಿಸಿಯೇ ಇರುತ್ತಾನೆ. ಹದಿನಾಲ್ಕು ವರ್ಷವಾದಾಗ ಅವನನ್ನು ಬ್ರಾಹ್ಮಣನನ್ನಾಗಿ ಮಾಡುತ್ತಾರೆ. ಚರ್ಮದ ಪಟ್ಟಿಯನ್ನು ತೆಗೆದು ಮೂರು ಎಳೆ ಪವಿತ್ರವಾದ ದಾರವನ್ನು ಹಾಕಿ ದೀಕ್ಷೆ ಕೊಡುತ್ತಾರೆ. ಈ ದಾರವನ್ನು ಜೀವವಿರುವವರೆಗೂ ಅವನು ಧರಿಸಿಯೇ ಇರತಕ್ಕದ್ದು. ಅವನು ಬ್ರಾಹ್ಮಣ ಎಂಬುದಕ್ಕೆ ಅದೇ ಗುರುತು. ಅದನ್ನು ಅವನಿಗೆ ತೊಡಿಸುವ ಸಮಾರಂಭವು ಬಹಳ ವೈಭವದಿಂದ ಜರುಗುತ್ತದೆ. ನಮ್ಮಲ್ಲಿ ಪಾದ್ರಿಯು ಮೊದಲನೆಯ ದಿನ ಮಾಸ್ ಹಾಡುವ ಸಂದರ್ಭ ಹೇಗೋ ಹಾಗೆ. ಇದಾದ ಅನಂತರ ಅವನು ವೀಳೆಯದೆಲೆ ತಿನ್ನಬಹುದು. ಆದರೆ ಮಾಂಸವನ್ನಾಗಲಿ, ಮೀನನ್ನಾಗಲಿ ತಿನ್ನುವಂತಿಲ್ಲ. ಭಾರತೀಯರಲ್ಲಿ ಅವರ ಬಗೆಗೆ ತುಂಬ ಗೌರವವಿದೆ. ನಾನು ಆಗಲೇ ಹೇಳಿದಂತೆ ಅಂತಹ ಕಾರಣವೇನು ಇಲ್ಲದೆಯೇ ಅವರು ಮರಣದಂಡನೆ ಅನುಭವಿಸುತ್ತಾರೆ. ಅವರು ನಮ್ಮ ಹಾಗೆಯೇ ಒಂದು ಸಾರಿ ಮಾತ್ರ ಮದುವೆಯಾಗುತ್ತಾರೆ. ಹಿರಿಯ ಮಗನು ಮಾತ್ರ ಮದುವೆ ಮಾಡಿಕೊಳ್ಳುತ್ತಾನೆ."

"ಅನುಭೋಗ ಪರಂಪರೆಯ ಮುಖ್ಯಸ್ಥನೆಂಬಂತೆ ಅವನನ್ನು ಗೌರವಿಸಲಾಗುತ್ತದೆ. ಅವನ ತಮ್ಮಂದಿರೆಲ್ಲರೂ ಜೀವವಿರುವವರೆಗೆ ಮದುವೆಯಾಗದೇ ಉಳಿಯುತ್ತಾರೆ. ಈ ಬ್ರಾಹ್ಮಣರು ತಮ್ಮ ಪತ್ನಿಯರನ್ನು ಬಹು ಎಚ್ಚರಿಕೆಯಿಂದ ಕಾಯುತ್ತಾರೆ. ಅವರನ್ನು ಬಹುವಾಗಿ ಗೌರವಿಸುತ್ತಾರೆ. ಬೇರೆ ಯಾವ ಪುರುಷನೂ ಆಕೆಯೊಂದಿಗೆ ಮಲಗಲು ಅವಕಾಶವಿಲ್ಲದ ಹಾಗೆ ನೋಡಿಕೊಳ್ಳುತ್ತಾರೆ. ಪತ್ನಿ ಮೃತಳಾದರೆ ಅವರು ಮತ್ತೆ ವಿವಾಹ ಮಾಡಿಕೊಳ್ಳುವುದಿಲ್ಲ. ಆದರೆ ಆಕೆ ಗಂಡನಿಗೆ ವಂಚಿಸಿ ದ್ರೋಹವೆಸಗಿದರೆ, ವಿಷಕೊಟ್ಟು ಅವಳನ್ನು ಕೊಲ್ಲಲಾಗುತ್ತದೆ. ಬ್ರಹ್ಮಚಾರಿಗಳಾಗಿ ಉಳಿದ ಸಹೋದರರು ನಾಯಿರಿ ಹೆಂಗಸರೊಂದಿಗೆ ಮಲಗುತ್ತಾರೆ. ಆ ಹೆಂಗಸರು ಅದನ್ನು ಗೌರವವೆಂದು ಪರಿಗಣಿಸುತ್ತಾರೆ. ಅವರು ಬ್ರಾಹ್ಮಣರಾದ್ದರಿಂದ ಯಾವ ಹೆಂಗಸೂ ಅವರನ್ನು ಒಪ್ಪಿಕೊಳ್ಳಲು ನಿರಾಕರಿಸುವುದಿಲ್ಲ. ಆದರೆ ತಮಗಿಂತ ವಯಸ್ಸಿನಲ್ಲಿ ದೊಡ್ಡವರಾದ ಹೆಂಗಸರೊಂದಿಗೆ ಅವರು ಮಲಗುವುದಿಲ್ಲ. ಅವರು ತಮ್ಮ ನಗರಗಳಲ್ಲಿ ತಮ್ಮ ಮನೆಗಳಲ್ಲಿಯೇ ಸದಾ ಇರುತ್ತಾ ನಿಯತವಾದ ಸಮಯದಲ್ಲಿ ದೇವಮಂದಿರಗಳಲ್ಲಿ ಪೂಜೆ ಮಾಡುವ ಕೆಲಸವನ್ನು ಹಾಗೂ ಇತರ ಸಂಬಂಧಿತ ಕಾರ್ಯಗಳನ್ನು ಮಾಡುತ್ತಾರೆ."

"ಈ ಬ್ರಾಹ್ಮಣರಲ್ಲಿ ಕೆಲವರು ರಾಜರಿಗೆ ಶಸ್ತ್ರಾಸ್ತ್ರ ಹೊರತು ಬೇರೆ ಎಲ್ಲ ವಿಚಾರಗಳಲ್ಲೂ ಸೇವೆ ಸಲ್ಲಿಸುತ್ತಾರೆ. ರಾಜನಿಗೆ ಬ್ರಾಹ್ಮಣ ಅಥವಾ ಅವನ ಸಮೀಪ ಬಂಧುವಲ್ಲದೆ ಬೇರೆ ಯಾರೂ ಆಹಾರವನ್ನು ಸಿದ್ಧಪಡಿಸಿಕೊಡುವಂತಿಲ್ಲ. ಬೇರೆ ದೇಶಗಳಿಗೆ ಪತ್ರಗಳನ್ನೋ, ಹಣವನ್ನೋ, ಇತರ ವಸ್ತುಗಳನ್ನೋ ಕೊಂಡೊಯ್ಯುವ ಹರಿಕಾರರಾಗಿಯೂ ಇವರು ಸೇವೆ ಸಲ್ಲಿಸುವರು. ಎಲ್ಲಿ ಹೋದರೂ ಅವರಿಗೆ ತೊಂದರೆಯಾಗುವುದಿಲ್ಲ. ಯಾರೂ ಅವರಿಗೆ ಕೆಡುಕು ಮಾಡುವುದಿಲ್ಲ. ರಾಜರುಗಳು ಪರಸ್ಪರ ಯುದ್ಧ ಮಾಡುತ್ತಿದ್ದರೂ ಇವರು ಮಾತ್ರ ನಿರಾತಂಕವಾಗಿ ಓಡಾಡಬಹುದು. ಈ ಬ್ರಾಹ್ಮಣರು ವಿಗ್ರಹಾರಾಧನೆಯಲ್ಲಿ ತಜ್ಞರು. ಆ ಸಂಬಂಧವಾದ ಅನೇಕ ಗ್ರಂಥಗಳು ಅವರ ಬಳಿ ಇವೆ. ರಾಜನು ಅವರನ್ನು ತುಂಬ ಗೌರವದಿಂದ ಕಾಣುತ್ತಾನೆ."

ಅನೇಕ ಸಲ ನಾಯಕರ ವಿಚಾರವಾಗಿ ನಾನು ಹೇಳಿದ್ದೇನಷ್ಟೆ. ಆದರೆ ಇದುವರೆಗೂ ಅವರು ಎಂಥ ಮನುಷ್ಯರು ಎನ್ನುವುದನ್ನು ನಿಮಗೆ ನಾನು ಹೇಳಿಲ್ಲ. ಈ ಮಲಬಾರ್ ಪ್ರದೇಶದಲ್ಲಿ ನಾಯರ್ ಎಂಬ ಹೆಸರಿನ ಇನ್ನೊಂದು ಜಾತಿಯ ಜನರಿದ್ದಾರೆ. ಅವರಲ್ಲಿ ದೊಡ್ಡ ಮನೆತನದವರಿಗೆ ಯುದ್ಧದಲ್ಲಿ ಸೇವೆ ಸಲ್ಲಿಸುವುದರ ಹೊರತು ಬೇರೆ ಕರ್ತವ್ಯವೇ ಇಲ್ಲ. ಎಲ್ಲಿ ಹೋದರೂ ಅವರು ಆಯುಧಗಳನ್ನು ಇಟ್ಟುಕೊಂಡೇ ಹೋಗುತ್ತಾರೆ. ಕೆಲವರು ಕತ್ತಿ, ಗುರಾಣಿಗಳನ್ನೂ, ಇತರರು ಬಿಲ್ಲು ಬಾಣಗಳನ್ನೂ, ಇನ್ನು ಕೆಲವರು ಬರ್ಜಿಗಳನ್ನು ಒಯ್ಯುತ್ತಾರೆ. ಅವರೆಲ್ಲರೂ ರಾಜನ ಜೊತೆಯಲ್ಲಿ ಅಥವಾ ಇತರ ನಾಯಕರ ಜೊತೆಯಲ್ಲಿ ವಾಸಿಸುತ್ತಾರೆ. ರಾಜ ಅಥವಾ ಆ ನಾಯಕನು ಅವರಿಗೆ ವೇತನ ಕೊಡುತ್ತಾನೆ. ನಾಯರ್ ವಂಶಕ್ಕೆ ಸೇರಿದವನಲ್ಲದ ಬೇರೆ ಯಾವನೂ ನಾಯರ್ ಆಗುವಂತಿಲ್ಲ. ಅವರ ಚರಿತ್ರೆಯಲ್ಲಿ ಯಾವ ಕಳಂಕವೂ ಇರುವುದಿಲ್ಲ. ಕೆಳ ಜಾತಿಯ ಯಾರನ್ನೂ ಅವರು ಮುಟ್ಟಿಸಿಕೊಳ್ಳುವುದಿಲ್ಲ. ನಾಯರನ ಮನೆಯಲ್ಲಿ ಹೊರತು ಬೇರೆ ಎಲ್ಲೂ ತಿನ್ನುವುದಿಲ್ಲ ಅಥವಾ ಕುಡಿಯುವುದಿಲ್ಲ. ಈ ಜನರು ಮದುವೆ ಮಾಡಿಕೊಳ್ಳುವುದಿಲ್ಲ. ಸೋದರಳಿಯಂದಿರೇ (ತಂಗಿಯ ಮಕ್ಕಳೇ)

ಅವರ ವಾರಸುದಾರರಾಗಿರುತ್ತಾರೆ. ಒಳ್ಳೆಯ ಮನೆತನದ ನಾಯರ್ ಹೆಂಗಸರು ಸ್ವತಂತ್ರರಾಗಿರುತ್ತಾರೆ. ತಮ್ಮ ಇಷ್ಟದ ಪ್ರಕಾರ ಬ್ರಾಹ್ಮಣರು ಮತ್ತು ನಾಯರೊಂದಿಗೆ ಸಂಬಂಧ ಬೆಳೆಸುತ್ತಾರೆ. ಮರಣ ಸಂಕಟವಿದ್ದಾಗ ತಮ್ಮ ಜಾತಿಗಿಂತ ಕೆಳಗಿನ ಜಾತಿಯ ಪುರುಷನೊಂದಿಗೆ ಮಲಗುವುದಿಲ್ಲ. ಹನ್ನೆರಡು ವರ್ಷ ವಯಸ್ಸಾದಾಗ ತಾಯಂದಿರು ದೊಡ್ಡ ಸಮಾರಂಭವನ್ನು ಏರ್ಪಡಿಸುತ್ತಾರೆ. ತನ್ನ ಮಗಳು ಆ ವಯಸ್ಸನ್ನು ಮುಟ್ಟಿದಳು ಎಂಬುದು ಅರಿವಿಗೆ ಬಂದೊಡನೆ ತಾಯಿಯು ತನ್ನ ಬಂಧುಬಾಂಧವರಿಗೂ, ಮಿತ್ರರಿಗೂ ತನ್ನ ಮಗಳನ್ನು ಅಭಿನಂದಿಸಲು ವ್ಯವಸ್ಥೆ ಮಾಡಬೇಕೆಂದು ಹೇಳಿ ಕಳಿಸುತ್ತಾಳೆ. ತನ್ನ ಮಗಳನ್ನು ಮದುವೆಯಾಗಬೇಕೆಂದು ಯಾರಾದರೂ ಒಬ್ಬ ದೊಡ್ಡ ಮನುಷ್ಯನನ್ನು ಕೇಳುತ್ತಾಳೆ. ಅವನು ಸಂತೋಷವಾಗಿ ಇದಕ್ಕೆ ಒಪ್ಪುತ್ತಾನೆ. ಆಮೇಲೆ ಅರ್ಧ ಡುಕೆಟ್ ಚಿನ್ನದಿಂದ ಮಾಡಿದ, ರಿಬ್ಬನಿನಂತೆ ಉದ್ದವಾದ, ಮಧ್ಯೆ ಒಂದು ತೂತಿದ್ದು ಬಿಳಿಯ ರೇಷ್ಮೆದಾರವನ್ನು ಪೋಣಿಸಿದ ಒಂದು ಆಭರಣವನ್ನು ಮಾಡಿಸುತ್ತಾನೆ. ನಿಶ್ಚಿತ ದಿನದಂದು ತಾಯಿಯು ಮಗಳಿಗೆ ಬೇಕಾದಷ್ಟು ಆಭರಣಗಳಿಂದ ಅಲಂಕಾರ ಮಾಡಿ, ಜನರ ಸಭೆಯ ಮುಂದೆ ಕರೆದು ತರುತ್ತಾಳೆ. ಸಂಗೀತವೇ ಮೊದಲಾದ ಸಂಭ್ರಮದ ಮನರಂಜನೆಯಿರುತ್ತದೆ. ಅಲ್ಲಿಗೆ ಮದುವೆಯಾಗಲು ಸಮ್ಮತಿಸಿದ್ದ ಬಂಧು ಅಥವಾ ಗೆಳೆಯನು ಬರುತ್ತಾನೆ. ಆ ಆಭರಣವನ್ನು ತರುತ್ತಾನೆ. ಕೆಲವೊಂದು ವಿಧಿಗಳನ್ನು ಆಚರಿಸಿ ಅದನ್ನು ಆ ಹುಡುಗಿಯ ಕೊರಳಿಗೆ ಕಟ್ಟುತ್ತಾನೆ. ಅವಳು ಅಲ್ಲಿಂದ ಮುಂದಕ್ಕೆ ಜೀವವಿರುವವರೆಗೂ ಅದನ್ನು ಧರಿಸಿಯೇ ಇರುತ್ತಾಳೆ. ಈ ಸಮಾರಂಭದ ಅನಂತರ ಅವಳು ತನ್ನ ಇಚ್ಛೆ ಬಂದ ಹಾಗೆ ನಡೆದುಕೊಳ್ಳಬಹುದು. ಅವಳನ್ನು ಮದುವೆಯಾದವನೂ ಕೂಡ ಅವಳ ಜೊತೆ ಮಲಗದೆಯೇ ಹೊರಟುಹೋಗುತ್ತಾನೆ. ಅವಳ ಬಂಧುವಾಗಿ ಉಳಿಯುತ್ತಾನೆ. ಅವನು ಇಷ್ಟಪಟ್ಟರೆ ಅವಳೊಂದಿಗೆ ಮಲಗಬಹುದು. ಆದರೆ ಅವನು ಹಾಗೆ ಮಾಡುವುದಿಲ್ಲ. ಆಮೇಲೆ ತಾಯಿಯು ತರುಣರನ್ನು ಹುಡುಕುತ್ತಾ ತನ್ನ ಮಗಳ ಕನ್ಯಾತ್ವವನ್ನು ಹರಿಸಬೇಕೆಂದು ಕೇಳಿಕೊಳ್ಳುತ್ತಾ ತಿರುಗುತ್ತಾಳೆ. ಅವರು ನಾಯರುಗಳೇ ಆಗಿರಬೇಕು. ಅವರು ಒಬ್ಬ ಹೆಂಗಸಿನ ಕನ್ಯಾತ್ವಹರಣ ಮಾಡುವುದು ಪಾಪಕಾರ್ಯ ಹಾಗೂ ಅಪಮಾನಕರ ಎಂದು ಭಾವಿಸುತ್ತಾರೆ. ಅವಳೊಂದಿಗೆ ಯಾವನಾದರೂ ತನ್ನ ಮಗಳಿಗೆ ಜೀವನಾಧಾರವಾಗಿ ನಿಲ್ಲಲು ಸಿದ್ಧರಾಗಿದ್ದಾನೆಯೇ, ಅವಳನ್ನು ಪತ್ನಿಯನ್ನಾಗಿಸಿಕೊಳ್ಳಲು ಅಪೇಕ್ಷಿಸುತ್ತಾನೆಯೇ ಎಂದು ವಿಚಾರಿಸುತ್ತಾ ಹೊರಡುತ್ತಾಳೆ. ಮೂರೋ, ನಾಲ್ಕೋ ಜನ ನಾಯರುಗಳು ಇದಕ್ಕೆ ಮುಂದೆ ಬರುತ್ತಾರೆ. ಅವಳನ್ನು ಇಟ್ಟುಕೊಂಡು, ಅವಳೊಂದಿಗೆ ಮಲಗುತ್ತಾ, ದಿನಕ್ಕೆ ಇಷ್ಟೆಂದು ಅವಳಿಗೆ ಹಣ ಕೊಡುತ್ತಿರಲು ಒಪ್ಪಿಕೊಳ್ಳುತ್ತಾರೆ. ಇಂತಹ ಪ್ರೇಮಿಗಳು ಎಷ್ಟೆಷ್ಟು ಹೆಚ್ಚು ಜನರಿರುತ್ತಾರೋ ಅಷ್ಟಷ್ಟು ಅವಳ ಗೌರವ ಘನತೆ ಹೆಚ್ಚು. ಪ್ರತಿಯೊಬ್ಬನೂ ಒಂದು ಮಧ್ಯಾಹ್ನದಿಂದ ಮರುದಿನ ಮಧ್ಯಾಹ್ನದವರೆಗೆ ಒಂದು ದಿನವನ್ನೂ ಪೂರ್ತಿಯಾಗಿ ಯಾವುದೇ ಅಡ್ಡಿ, ಆತಂಕವಿಲ್ಲದೆ ಅವಳೊಂದಿಗೆ ಕಳೆಯುತ್ತಾನೆ. ಈ ವ್ಯವಸ್ಥೆಯಿಂದಾಗಿ ಪ್ರೇಮಿಗಳ ನಡುವೆ ಜಗಳಕ್ಕೆ ಆಸ್ಪದವಿಲ್ಲ. ಅವರಲ್ಲಿ ಯಾರಾದರೂ ಅವಳನ್ನು ಬಿಟ್ಟುಬಿಡಬೇಕೆಂದು ಇಚ್ಛಿಸಿದರೆ ಬಿಟ್ಟುಬಿಡಬಹುದು. ಬೇರೊಬ್ಬಳನ್ನು ಕಟ್ಟಿಕೊಳ್ಳಬಹುದು. ಆವಾಗ್ಯೂ ಅಷ್ಟೇ. ಅವಳಿಗೆ ಯಾವನಾದರೂ ಬೇಸರವೆನಿಸಿದರೆ ಅವನನ್ನು ಹೋಗಲು ಹೇಳಬಹುದು. ಅವನು ಹೋಗುತ್ತಾನೆ ಅಥವಾ ಅವಳೊಂದಿಗೆ ಒಪ್ಪಂದ

ಮಾಡಿಕೊಳ್ಳುತ್ತಾನೆ. ಅವಳಿಗೆ ಮಕ್ಕಳಾದರೆ ಅವು ತಾಯಿಯ ಬಳಿ ಬೆಳೆಯುತ್ತವೆ. ಅವನ್ನು ಯಾರೊಬ್ಬನ ಮಕ್ಕಳೆಂದು ಪರಿಗಣಿಸುವುದಿಲ್ಲ. ಅಂಥವನೊಬ್ಬನ ಸಾಮ್ಯವಿದ್ದರೂ ಅವರನ್ನು ತಮ್ಮ ಮಕ್ಕಳೆಂದು ವ್ಯವಹರಿಸುವುದಿಲ್ಲ. ಆ ಗಂಡಸರು ಸ್ವತ್ತುಗಳಿಗೆ ವಾರಸುದಾರರೂ ಆಗುವುದಿಲ್ಲ. ಏಕೆಂದರೆ ಮೊದಲೇ ಹೇಳಿದಂತೆ ಸೋದರಳಿಯಂದಿರು, ಸೋದರಿಯರ ಮಕ್ಕಳು ನಿಜವಾದ ವಾರಸುದಾರರಾಗುತ್ತಾರೆ. (ಈ ವ್ಯವಸ್ಥೆಯಲ್ಲಿ ಸಾಮಾನ್ಯರು ಮೇಲುನೋಟಕ್ಕೆ ಕಾಣುವುದಕ್ಕಿಂತಲೂ ಆಳವಾದ ಮತ್ತು ಗಹನವಾದ ತತ್ವವಿದೆ). ನಾಯರುಗಳು ತಮಗೆ ನಿಗದಿತವಾದ ಸೇವಾ ಕಾರ್ಯದಲ್ಲಿ ತೊಡಗಿರಬೇಕೇ ಹೊರತು ಮಕ್ಕಳು ಮರಿಗಳನ್ನು ಸಾಕಿ, ಸಲಹುವ ಜಂಜಾಟದಲ್ಲಿ ಸಿಲುಕಬಾರದು ಎಂಬ ಉದ್ದೇಶದಿಂದ ರಾಜರು ಮತ್ತು ನಾಯರರು ಕೂಡಿ ಈ ವ್ಯವಸ್ಥೆ ಮಾಡಿದ್ದಾರೆ ಎಂದು ಹೇಳಲಾಗುತ್ತದೆ.

"ಈ ಮಲಬಾರ್ ರಾಜ್ಯದಲ್ಲಿ ಇನ್ನೊಂದು ಜಾತಿಯ ಜನರೂ ಇದ್ದಾರೆ. ಅವರನ್ನು ಬಿಯಾಬರೆಗಳು (Biabares) ಎಂದು ಕರೆಯುತ್ತಾರೆ. ಇವರು ದೇಶೀಯ ವರ್ತಕರು. ಇವರು ರೇವು ಪಟ್ಟಣಗಳಲ್ಲಿ, ಒಳನಾಡಿನಲ್ಲೂ ಎಲ್ಲ ಬಗೆಯ ಸಾಮಗ್ರಿಗಳನ್ನೂ ವ್ಯಾಪಾರ ಮಾಡುತ್ತಾರೆ. ವ್ಯಾಪಾರ ಅವರಿಗೆ ತುಂಬ ಲಾಭದಾಯಕವಾಗಿದೆ. ನಾಯರರಿಂದ ಮತ್ತು ಇತರ ಕೃಷಿಕರಿಂದ ಎಲ್ಲ ಮೆಣಸು, ಶುಂಠಿಗಳನ್ನು ಅವರು ಕೊಳ್ಳುತ್ತಾರೆ. ಎಷ್ಟೋ ಸಮಯಗಳಲ್ಲಿ ಮುಂದಾಗಿಯೇ ಹತ್ತಿ ಬಟ್ಟೆಗೆ ಬದಲಾಗಿ ಈ ಬೆಳೆಗಳನ್ನು ಅವರು ಕೊಂಡುಬಿಡುತ್ತಾರೆ. ಬಂದರುಗಳಲ್ಲಿ ಇವುಗಳನ್ನು ಸಂಗ್ರಹಿಸಿಡುತ್ತಾರೆ. ಆಮೇಲೆ ಹೆಚ್ಚಿನ ಬೆಲೆಗೆ ಅವುಗಳನ್ನು ಮಾರುತ್ತಾರೆ. ಅವರಿಗಿರುವ ಸವಲತ್ತುಗಳು ಹೇಗಿವೆಯೆಂದರೆ, ಅವರ ವಾಸಮಾಡುತ್ತಿರುವ ದೇಶದ ರಾಜನು ಅವರ ಮೇಲೆ ಏನೂ ಕಾನೂನು ಕ್ರಮ ಜರುಗಿಸುವಂತಿಲ್ಲ."

"ಈ ನಾಡಿನಲ್ಲಿ ಇನ್ನೂ ಒಂದು ಬಗೆಯ ಜನರಿದ್ದಾರೆ. ಅವರನ್ನು ಕೈವಂ (Cuiavem) ಎಂದು ಕರೆಯುತ್ತಾರೆ. ಅವರು ನಾಯರರಿಗಿಂತ ಬೇರೆಯಲ್ಲ. ಏನೋ ಒಂದು ತಪ್ಪು ಮಾಡಿದ್ದಕ್ಕಾಗಿ ಅವರು ಬೇರೆಯಾಗಿ ಉಳಿದಿದ್ದಾರೆ. ರಾಜರ ಅರಮನೆಗಳಿಗೆ ಹಾಗೂ ದೇವಾಲಯಗಳಿಗೆ ಚಾವಣೆ ಹಾಕಲು ಇಟ್ಟಿಗೆಯನ್ನು ಮಡಕೆ-ಕುಡಿಕೆಗಳನ್ನು ತಯಾರಿಸುವುದು ಇವರ ವೃತ್ತಿ. ದೇವಾಲಯಗಳಿಗೆ ಹೆಂಚಿನ ಬದಲು ಇಟ್ಟಿಗೆಗಳನ್ನು ಹಾಕಲಾಗುತ್ತದೆ. ನಾನು ಆಗಲೇ ಹೇಳಿದಂತೆ ಇವುಗಳ ಹೊರತು ಮಿಕ್ಕ ಮನೆಗಳೆಲ್ಲ ಹುಲ್ಲು, ಕೊಂಬೆಗಳನ್ನು ಹೊದಿಸಿರುವಂಥವೇ ಆಗಿದೆ. ಅವರಿಗೆ ಬೇರೆಯೇ ಆದ ವಿಗ್ರಹಗಳಿವೆ. ಪೂಜಾ ವಿಧಾನಗಳಿವೆ."

"ಇನ್ನೊಂದು ಹೀದನ್ ಜಾತಿಯುಂಟು. ಮೈನಾಟೋ ಎಂಬುದು ಅದರ ಹೆಸರು. ಇವರ ಕೆಲಸ ರಾಜರು, ಬ್ರಾಹ್ಮಣರು ಮತ್ತು ನಾಯರರುಗಳ ಬಟ್ಟೆಗಳನ್ನು ತೊಳೆಯುವುದು, ಇದರಿಂದ ಅವರು ಜೀವಿಸುತ್ತಾರೆ. ಬೇರೆ ವೃತ್ತಿಯನ್ನು ಒಲ್ಲರು."

"ಇನ್ನೊಂದು ಕೆಳ ಜಾತಿಯಿದೆ. ಅವರನ್ನು ಕಾಲೇಟಿಗಳೆಂದು ಕರೆಯುತ್ತಾರೆ. ಇವರು ನೇಕಾರರು. ಹತ್ತಿ ಮತ್ತು ರೇಷ್ಮೆ ಬಟ್ಟೆಗಳನ್ನು ನೇಯುವುದರ ಹೊರತು ಇವರಿಗೆ ಬೇರೆ ಜೀವನೋಪಾಯವಿಲ್ಲ. ಆದರೆ ಇವರು ಕೆಳಜಾತಿಯ ಜನ. ಹಣ ಇಲ್ಲದವರು. ಇವರು ಬೇರೆಯಾಗೇ ಉಳಿಯುತ್ತಾರೆ. ತಮ್ಮದೇ ರೀತಿಯ ವಿಗ್ರಹ ಪೂಜೆಯನ್ನು ಹೊಂದಿದ್ದಾರೆ."

"ಮೇಲೆ ಹೇಳಿದ ಜಾತಿಗಳಲ್ಲದೆ, ಇನ್ನೂ ಕೆಳಗಿನ ಹನ್ನೊಂದು ವರ್ಗಗಳಿವೆ.

ಯಾರೊಂದಿಗೂ ಕೂಡಿಯಾಡುವುದಿಲ್ಲವೋ, ಪ್ರಾಣ ಹೋಗುವಂತಿದ್ದರೂ ಯಾರನ್ನೂ ಮುಟ್ಟುವುದಿಲ್ಲವೋ ಅವರಿಗಿಂತಲೂ ಕೆಳಗಿರುವ ವರ್ಗಗಳಿವು. ಇವುಗಳಲ್ಲಿ ಒಂದಕ್ಕೂ ಇನ್ನೊಂದಕ್ಕೂ ತುಂಬ ವ್ಯತ್ಯಾಸವಿದೆ. ಪರಸ್ಪರ ಬೆರೆಯುವುದನ್ನು ತಪ್ಪಿಸಿದೆ. ಇವರಲ್ಲಿ ಅತ್ಯಂತ ಪರಿಶುದ್ಧರೆನಿಸಿದ ಸರಳವಾದ ಜನರನ್ನು ಥೀಯರು ಎಂದು ಕರೆಯುತ್ತಾರೆ. ಇವರ ಕಸುಬು ಮುಖ್ಯವಾಗಿ ತೆಂಗಿನ ತೋಟಗಳನ್ನು ಬೆಳೆಸುವುದು, ಕಾಯಿಗಳನ್ನು ಸಂಗ್ರಹಿಸಿ ಕೂಲಿಗಾಗಿ ಬೆನ್ನ ಮೇಲೆ ಹೊತ್ತು ದೂರಕ್ಕೆ ಕೊಂಡೊಯ್ಯುವುದು. ಏಕೆಂದರೆ ಈ ನಾಡಿನಲ್ಲಿ ಭಾರ ಒಯ್ಯುವ ಪ್ರಾಣಿಗಳಿಲ್ಲ."

"ಇವರೆಲ್ಲರಿಗಿಂತಲೂ ಕೆಳಗಿನದಾದ ಇನ್ನೊಂದು ಜಾತಿಯೂ ಇದೆ. ಮನೇಸ್ ಎಂದು ಇವರನ್ನು ಕರೆಯುತ್ತಾರೆ. ಇತರರೊಂದಿಗೆ ಇವರು ಕೂಡುವುದಿಲ್ಲ. ಅವರನ್ನು ಮುಟ್ಟುವುದೂ ಇಲ್ಲ. ಯಾರಿಂದಲೂ ಮುಟ್ಟಿಸಿಕೊಳ್ಳುವುದೂ ಇಲ್ಲ. ಸಾಮಾನ್ಯರಿಗೆ ಬಟ್ಟೆ ಒಗೆದುಕೊಡುವ ಅಗಸರಾಗಿ ಕಾರ್ಯ ನಿರ್ವಹಿಸುತ್ತಾರೆ. ಅಲ್ಲದೆ ಚಾಪೆಗಳನ್ನು ಹೆಣೆಯುತ್ತಾರೆ. ಇದಲ್ಲದೆ ಬೇರೆ ಯಾವುದೇ ಕಸುಬು ಅವರಿಗೆ ನಿಷಿದ್ಧ. ಅವರ ಮಕ್ಕಳು ಬಲವಂತವಾಗಿಯಾದರೂ ಅದೇ ಕಸುಬನ್ನೇ ಮಾಡಬೇಕೇ ಹೊರತು ಬೇರೆ ಅವಕಾಶವಿಲ್ಲ. ಇವರಿಗೇ ಬೇರೆ ಮೂರ್ತಿ ಪೂಜೆಯ ವಿಧಾನವಿದೆ."

"ಇನ್ನೂ ಕೆಳಗಿನ ಕನಾಕ್ವಾಗಳೆಂಬ ಜಾತಿಯ ಜನರಿದ್ದಾರೆ. ಇವರು ಲೋಹದ ಕೊಕ್ಕೆಗಳನ್ನೂ, ಕೊಡೆಗಳನ್ನೂ ತಯಾರಿಸುತ್ತಾರೆ. ಇವರು ಓದು, ಬರಹ ಕಲಿತಿರುತ್ತಾರೆ. ಜ್ಯೋತಿಷ್ಯ ಬಲ್ಲರು. ಬರಲಿರುವುದನ್ನು ಕರಾರುವಕ್ಕಾಗಿ ಮುಂದಾಗಿ ಹೇಳುತ್ತಾರೆ. ಈ ಕಾರಣಕ್ಕಾಗಿಯೇ ಅನೇಕ ದೊಡ್ಡ ಮನುಷ್ಯರು ಇವರನ್ನು ಸಾಕಿಕೊಂಡಿರುತ್ತಾರೆ."

"ಇನ್ನೊಂದು ಜಾತಿಯಿದೆ. ಇವರು ಹೀದನರು. ಅಗೇರೆಗಳೆಂದು ಹೆಸರು. ಇವರಲ್ಲಿ ಗಾರೆ ಕೆಲಸದವರು, ಕಮ್ಮಾರರು, ಬಡಗಿಗಳು, ಲೋಹಕಾರರು ಇದ್ದಾರೆ. ಕೆಲವರು ಅಕ್ಕಸಾಲಿಗರೂ ಆಗಿದ್ದಾರೆ. ಇವರೆಲ್ಲ ಒಂದೇ ಮೂಲದಿಂದ ಬಂದವರು. ಪ್ರತ್ಯೇಕವಾದ ಜಾತಿಯಾಗಿ ಉಳಿದುಕೊಂಡಿರುವವರು. ತಮ್ಮದೇ ದೇವತಾಮೂರ್ತಿಗಳಣ್ನು, ಪೂಜಾ ವಿಧಾನವನ್ನೂ ಹೊಂದಿರುವರು. ಅವರು ಮದುವೆಯಾಗುತ್ತಾರೆ. ಅವರ ಮಕ್ಕಳು ಆಸ್ತಿಗೆ ವಾರಸುದಾರರಾಗುತ್ತಾರೆ."

"ಈ ದೇಶದಲ್ಲಿರುವ ಇನ್ನೊಂದು ಕೆಳಜಾತಿ ಮೊಗೇರೆ ಎನ್ನುವವರದು. ಇವರು ಹೆಚ್ಚು–ಕಡಿಮೆ ತೂಯರಿದ್ದ ಹಾಗೆಯೇ. ಆದರೆ ಒಬ್ಬರನ್ನೊಬ್ಬರು ಮುಟ್ಟಿಸಿಕೊಳ್ಳುವುದಿಲ್ಲ. ರಾಜ ಪರಿವಾರವೂ ಒಂದು ಸ್ಥಳದಿಂದ ಇನ್ನೊಂದಕ್ಕೆ ಹೊರಟಾಗ ಅವರಿಗೆ ಸೇರಿದ ಸಕಲ ಸಾಮಾನು, ಸರಂಜಾಮುಗಳನ್ನೂ ಹೊತ್ತೊಯ್ಯುತ್ತಾರೆ. ಆದರೆ ಈ ನಾಡಿನಲ್ಲಿ ಇವರ ಸಂಖ್ಯೆ ತೀರಾ ಕಡಿಮೆ. ಬೇರೆಯೇ ಜಾತಿಯ ಜನ. ಮದುವೆ ಕುರಿತ ಯಾವುದೇ ಶಾಸನ ಇವರಲ್ಲಿಲ್ಲ. ಅವರಲ್ಲಿ ಅನೇಕರು ಸಮುದ್ರದಿಂದ ಜೀವಿಸುತ್ತಾರೆ. ಒಳ್ಳೆಯ ನಾವಿಕರು, ಕೆಲವರು ಮೀನುಗಾರರು, ಬೇರೆ ವಿಗ್ರಹಗಳಾವುವೂ ಇವರಿಗಿಲ್ಲ. ಇವರು ನಾಯರರ ಸೇವಕರೂ ಆಗಿರುತ್ತಾರೆ."

"ಇವರಿಗಿಂತ ಕೆಳಮಟ್ಟದ ಮಾಂಕರ್ ಎಂಬ ಜಾತಿಯಿದೆ. ಇವರಿಗೆ ಮೀನು ಹಿಡಿಯುವುದೊಂದೇ ಕೆಲಸ. ಕೆಲವರು ಮೂರರ ಹಾಗೂ ಇತರ ಹೀದನರ ಹಡಗುಗಳಲ್ಲಿ

ಯಾನ ಮಾಡುತ್ತಾರೆ. ಪರಿಣಿತ ನಾವಿಕರವರು. ಬಹಳ ಒರಟರಾದ ಜನರು. ನಾಚಿಕೆಯಿಲ್ಲದ ಕಳ್ಳರೂ ಆಗಿರುತ್ತಾರೆ. ವಿವಾಹವುಂಟು, ಮಕ್ಕಳು ಅವರ ವಾರಸುದಾರರಾಗಿರುತ್ತಾರೆ. ಈ ಜಾತಿಯ ಹೆಂಗಸರು ಸಡಿಲವಾದ ಶೀಲವುಳ್ಳವರು. ಅವರು ಯಾರೊಂದಿಗೆ ಬೇಕಾದರೂ ಮಲಗುತ್ತಾರೆ. ಅದನ್ನು ದ್ರೋಹವೆಂದು ಯಾರೂ ಪರಿಗಣಿಸುವುದಿಲ್ಲ. ಇವರದೇ ಬೇರೆ ಮೂರ್ತಿ ಪೂಜಾ ಕ್ರಮವಿದೆ."

"ಈ ಮಲಬಾರ್ ಪ್ರಾಂತದಲ್ಲಿನ ಇನ್ನೊಂದು ಹೀದನ್ ಜಾತಿಯೆಂದರೆ ಬೆತೂನೆಗಳೆಂದು ಹೆಸರಿರುವ ಜನರದು. ಇವರ ಕಸುಬು ಉಪ್ಪು ತಯಾರಿಕೆ ಮತ್ತು ಭತ್ತ ಬೆಳೆಯುವುದು. ಬೇರೆ ಕಸುಬು ಇವರಿಗಿಲ್ಲ."

"ಅವರು ರಸ್ತೆಗಳಿಂದ ದೂರವಾಗಿ ಹೊಲ, ಗದ್ದೆಗಳ ನಡುವೆ ಸಭ್ಯ ಗೃಹಸ್ಥರು ನಡೆದಾಡುವ ಸ್ಥಳಗಳಲ್ಲಿ ಮನೆ ಮಾಡಿಕೊಂಡು ವಾಸಿಸುತ್ತಾರೆ. ಅವರದೇ ಬೇರೆ ಮೂರ್ತಿ ಪೂಜಾ ಕ್ರಮವಿದೆ. ರಾಜರು ಮತ್ತು ನಾಯರರ ಸೇವಕರಾಗಿದ್ದು ಬಡತನದಲ್ಲೇ ಜೀವನವನ್ನು ತಳ್ಳುತ್ತಾರೆ. ನಾಯರರು ಇವರನ್ನು ಸಮೀಪದಲ್ಲಿ ನಿಂತು ಮಾತನಾಡಗೊಡುವುದಿಲ್ಲ. ದೂರ ಸರಿದು ಹೋಗಿ, ಅಷ್ಟು ದೂರದಿಂದಲೇ ಮಾತನಾಡಬೇಕಾಗುತ್ತದೆ. ಬೇರೆ ಯಾವ ಜಾತಿಯ ಜನರೊಂದಿಗೂ ಇವರು ಬೆರೆಯುವುದಿಲ್ಲ. ಇವರಿಗಿಂತ ಕೆಳಗಿನ ಹಾಗೂ ಹೆಚ್ಚು ಒರಟಾದ ಇನ್ನೊಂದು ಜಾತಿಯ ಹೀದನರಿದ್ದಾರೆ. ಪನೀನರೆಂದು ಇವರನ್ನು ಕರೆಯುತ್ತಾರೆ, ಇವರು ಮಾಂತ್ರಿಕರು. ಮಾಟ ಮಂತ್ರಗಳನ್ನು ಮಾಡುತ್ತಾರೆ. ಅದೇ ಇವರ ಕಸುಬು."

"ರೆವೊಲೀನರೆಂಬ ಇನ್ನೊಂದು ಜಾತಿಯ ಜನ ತುಂಬ ಬಡವರು. ಕಟ್ಟಿಗೆ ಹುಲ್ಲು, ಹೊರೆ ಕಟ್ಟಿಕೊಂಡು ನಗರಗಳಿಗೆ ಹೊತ್ತೊಯ್ದು ಮಾರಿ ಜೀವಿಸುತ್ತಾರೆ. ಪ್ರಾಣ ಹೋದರೂ ಅವರು ಇನ್ನೊಬ್ಬರನ್ನು ಮುಟ್ಟುವುದಿಲ್ಲ. ಇನ್ನೊಬ್ಬರಿಂದ ಮುಟ್ಟಿಸಿಕೊಳ್ಳುವುದಿಲ್ಲ. ಚೂರುಪಾರು ಚಿಂದಿಬಟ್ಟೆಯಿಂದ ಗುಹ್ಯಾಂಗಗಳನ್ನು ಮುಚ್ಚಿಕೊಳ್ಳುವುದು ಬಿಟ್ಟರೆ ಮಿಕ್ಕಂತೆ ಬೆತ್ತಲಾಗಿಯೇ ಇರುತ್ತಾರೆ. ಕೆಲವು ಮರಗಳ ಎಲೆಗಳನ್ನು ಮೈಗೆ ಸುತ್ತಿಕೊಳ್ಳುವುದುಂಟು. ಹೆಂಗಸರು ಕಿವಿಗೆ ಅನೇಕ ಹಿತ್ತಾಳೆ ಬಳೆಗಳನ್ನು ತೊಟ್ಟುಕೊಳ್ಳುತ್ತಾರೆ. ಕುತ್ತಿಗೆ, ತೋಳು, ಕಾಲುಗಳಿಗೂ ಸರಗಳು ಮತ್ತು ಬಳೆಗಳನ್ನು ಧರಿಸುತ್ತಾರೆ."

"ಇವರಿಗಿಂತ ಕೆಳಮಟ್ಟದ ಇನ್ನೊಂದು ಹೀದನ್ ಜಾತಿಯಿದೆ. ಪೊಲೆಯರು ಎಂದು ಇವರನ್ನು ಕರೆಯುತ್ತಾರೆ. ಮಿಕ್ಕವರೆಲ್ಲರ ನಡುವೆ ಇವರನ್ನು ಜಾತಿ ಭ್ರಷ್ಟರಂತೆ ಪರಿಗಣಿಸುತ್ತಾರೆ. ಶಾಪ ಪಡೆದವರಂತೆ ನೋಡುತ್ತಾರೆ. ಅವರು ಉತ್ತಮ ಜಾತಿಯ ಯಾರೂ ಸುಳಿಯದ ಕಡೆ ಗುಪ್ತ ಸ್ಥಳದಲ್ಲಿ ವಾಸಿಸುತ್ತಾರೆ. ಬಹಳ ಕ್ಷುಲ್ಲಕ ಅವಸ್ಥೆಯ ಗುಡಿಸಲುಗಳಲ್ಲಿ ಇರುತ್ತಾರೆ. ಎತ್ತು, ಕೋಣಗಳನ್ನು ಕಟ್ಟಿಕೊಂಡು ಭತ್ತದ ಗದ್ದೆಗಳನ್ನು ಉಳುತ್ತಾರೆ. ದೂರದಲ್ಲಿ ನಿಂತು ನಾಯರುಗಳೊಂದಿಗೆ ಮಾತನಾಡುತ್ತಾರೆ. ರಸ್ತೆಗಳಲ್ಲಿ ಬರುವಾಗ ದೂರದಿಂದಲೇ ಜೋರಾಗಿ ಕಿರಿಚಿಕೊಂಡು ಬರುತ್ತಾರೆ. ಏಕೆಂದರೆ ತಾವು ಬರುತ್ತಿರುವುದು ಜನರಿಗೆ ಮುಂದಾಗಿ ತಿಳಿಯಲಿ, ತಾವು ಹೋಗುವವರೆಗೂ ಮರೆಯಾಗಿ ನಿಂತಿರಲಿ ಎಂಬುದಕ್ಕಾಗಿ. ಯಾರಾದರೂ–ಅದು ಹೆಂಗಸಾಗಲಿ, ಗಂಡಸಾಗಲಿ–ಇವರನ್ನು ಮುಟ್ಟಿಬಿಟ್ಟರೆ ಒಡನೆಯೆ ಅವರ ನೆಂಟರಿಷ್ಟರು ಅವರನ್ನು ಸಾಯಿಸಿಬಿಡುತ್ತಾರೆ. ಸೇಡು ತೀರಿಸುವ ಸಲುವಾಗಿ ಪೊಲೆಯರನ್ನು ಸಾಯಿಸುತ್ತಾರೆ.

"ಕೆಳಮಟ್ಟದ ಇನ್ನೊಂದು ಜಾತಿಯೆಂದರೆ ಪರೇನ್ ಎನ್ನುವವರದು. ಬೇರೆಲ್ಲ ಜಾತಿಗಳಿಂದ ದೂರವಾಗಿ ನಿರ್ಜನ ಸ್ಥಳಗಳಲ್ಲಿ ಇವರು ವಾಸ ಮಾಡುತ್ತಾರೆ. ಅವರು ಯಾರನ್ನೂ ಸಂಪರ್ಕಿಸುವುದಿಲ್ಲ. ಅವರನ್ನು ದೆವ್ವಗಳಿಗಿಂತಲೂ ಕೀಳು ಎಂದು ಭಾವಿಸಲಾಗುತ್ತದೆ. ತಿರಸ್ಕಾರಕ್ಕೆ ಮಾತ್ರವೇ ಅರ್ಹರು ಎಂಬಂತಾಗಿದೆ. ಅವರನ್ನು ಕಣ್ಣಿನಿಂದ ನೋಡುವುದು ಕೂಡ ಅಶುದ್ಧ, ಮೈಲಿಗೆ, ಜಾತಿಯಿಂದ ಹೊರಗಾದದ್ದು ಎಂದು ಭಾವಿಸಲಾಗುತ್ತದೆ. ಅವರು ಕಾಡುಗಿಡಗಳ ಗೆಡ್ಡೆ, ಗೆಣಸುಗಳನ್ನು ತಿಂದು ಬದುಕುತ್ತಾರೆ. ತಮ್ಮ ನಡುವಿಗೆ ಎಲೆಗಳನ್ನು ಕಟ್ಟಿಕೊಳ್ಳುತ್ತಾರೆ. ಕಾಡು ಪ್ರಾಣಿಗಳ ಮಾಂಸವನ್ನು ತಿನ್ನುತ್ತಾರೆ."

"ಇದರೊಂದಿಗೆ ಹೀದನರ ವಿವಿಧ ಜಾತಿಗಳ ನಿರೂಪಣೆ ಕೊನೆಗೊಳ್ಳುತ್ತದೆ. ಇವು ಒಟ್ಟು ಹದಿನೆಂಟು ಇವೆ. ಒಂದೊಂದು ಬೇರೆ ಬೇರೆ, ಇನ್ನೊಂದು ಜಾತಿಯವರನ್ನು ಮುಟ್ಟುವುದಿಲ್ಲ. ಅವರೊಂದಿಗೆ ಮದುವೆಯಾಗುವುದಿಲ್ಲ. ಮಲಬಾರಿನವರೇ ಆದ ಹೀದನರಾದ ಈ ಹದಿನೆಂಟು ಜಾತಿಗಳಲ್ಲದೆ ಬೇರೆ ದೇಶಕ್ಕೆ ಸೇರಿದ ವರ್ತಕರು ಈ ನಾಡಿನಲ್ಲಿ ವ್ಯಾಪಾರ ವಹಿವಾಟು ನಡೆಸಲು ಬಂದವರು ಇದ್ದಾರೆ. ಅವರು ಇಲ್ಲಿ ಮನೆಗಳನ್ನೂ, ತೋಟಗಳನ್ನೂ ಹೊಂದಿದ್ದಾರೆ. ದೇಶೀಯರಂತೆ ಬಾಳುತ್ತಿದ್ದರೂ ತಮ್ಮದೇ ಆದ ಆಚಾರಗಳನ್ನೂ ಹೊಂದಿದ್ದಾರೆ."

ಈ ವಿದೇಶೀಯರು ಜಾತಿಯ ಪೂರ್ಣ ಹಾಗೂ ವಿಸ್ತೃತ ಚಿತ್ರವನ್ನು ಕೊಡಲು ಸಮರ್ಥರಾಗಲಿಲ್ಲ. ಇದನ್ನು ಅರ್ಥಮಾಡಿಕೊಳ್ಳಬಹುದು. ಹಿಂದೂವಿನ ಖಾಸಗೀ ಜೀವನ ಯಾವನೇ ವಿದೇಶೀಯನ ಕಣ್ಣಿಗೆ ಕಾಣದಂತೆ ಮರೆಯಾಗಿಬಿಡುತ್ತದೆ. ಆ ತೆರೆಯನ್ನು ಭೇದಿಸಿ ನೋಡಲು ಅವನಿಗೆ ಸಾಧ್ಯವೇ ಆಗುವುದಿಲ್ಲ. ಭಾರವಾದ ಸಾಮಾಜಿಕ ರಚನೆಯ ಮೂಲಶಕ್ತಿಗಳು ನಿಯಂತ್ರಿತವಾಗುವುದು ಹೆಚ್ಚುಪಾಲು ಅಸಂಖ್ಯಾತ ರೂಢಿಗಳಿಂದ, ಪರಿಸರವನ್ನು ಹೊಂದಿಕೊಂಡು, ಬೆರಗುಗೊಳಿಸುವ ವೈವಿಧ್ಯವನ್ನು ಹೊಂದಿಕೊಂಡು, ಅಷ್ಟೇ ಹೊರತು, ಯಾವುದೇ ನ್ಯಾಯಶಾಸ್ತ್ರ ಗ್ರಂಥದಿಂದ ಆರಿಸಿಕೊಂಡ ಸೂತ್ರದಿಂದಲ್ಲ. ವಿದೇಶೀಯನ ಕಣ್ಣಿಗೆ ಜಾತಿ ಎನ್ನುವುದು ಅತ್ಯಂತ ವಿಚಿತ್ರವಾಗಿ ಕಾಣಿಸುವುದರಲ್ಲಿ ಸಂದೇಹವೇ ಇಲ್ಲ ಎಂದೇ ಅದು ಹಿಂದೂ ಸಮಾಜದ ವಿಶಿಷ್ಟ ಲಕ್ಷಣವಾಗಿದೆ. ಇಲ್ಲವಾದರೆ ಭಾರತಕ್ಕೆ ಬಂದಾಗ ತಾವು ಏನೇನನ್ನು ನೋಡಿದರೋ ಅವುಗಳ ದಾಖಲೆಯಲ್ಲಿ ಜಾತಿಯ ಅಸ್ತಿತ್ವವನ್ನು ಉಲ್ಲೇಖಿಸುತ್ತಿರಲಿಲ್ಲ.

ಆದ್ದರಿಂದ ಹಿಂದೂ ಸಮಾಜ ವ್ಯವಸ್ಥೆಗೆ ವಿಶೇಷವಾದದ್ದು ಈ ಜಾತಿ. ಇತರರಿಂದ ಹಿಂದೂಗಳನ್ನು ಬೇರೆಯಾಗಿ ಮಾಡಿರುವುದು ಅದು. ಜಾತಿ ಎನ್ನುವುದು ಬೆಳೆಯುತ್ತಿರುವ ಒಂದು ವ್ಯವಸ್ಥೆಯಾಗಿದೆ. ಅದು ಎಲ್ಲ ಕಾಲಗಳಲ್ಲೂ ಒಂದೇ ತೆರನಾಗಿರಲಿಲ್ಲ. ಮೆಗಾಸ್ಥನೀಸನು ಭಾರತದಲ್ಲಿದ್ದು ನೋಡಿ ಬರೆದಾಗ ಜಾತಿಯ ರಚನೆ ಸ್ವರೂಪ ಒಂದು ರೀತಿಯಲ್ಲಿತ್ತು.ಅದೇ ಅಲ್ಬೆರೂನಿ ಬಂದಾಗ ಬೇರೆಯೇ ಆದ ರೂಪ, ಆಕಾರಗಳಲ್ಲಿತ್ತು. ಪೋರ್ಚುಗೀಸನಿಗೆ ದೊರಕಿದ ಚಿತ್ರವಾದರೋ ಅಲ್ಬೆರೂನಿ ಕಂಡ ಚಿತ್ರಕ್ಕಿಂತ ಭಿನ್ನವಾಗಿತ್ತು. ಆದರೆ ಜಾತಿ ವ್ಯವಸ್ಥೆಯನ್ನು ಅರ್ಥ ಮಾಡಿಕೊಳ್ಳಬೇಕಾದರೆ ವಿದೇಶೀಯರು ಕೊಡುವುದಕ್ಕಿಂತ ಬೇರೆಯಾಗಿ ಅದರ ಸ್ವರೂಪವನ್ನು ಖಚಿತವಾಗಿ ತಿಳಿದುಕೊಳ್ಳುವುದು ಅಗತ್ಯವಾಗುತ್ತದೆ.

ಜಾತಿಯನ್ನು ಕುರಿತ ಚರ್ಚೆಯನ್ನು ಅನುಸರಿಸಿಕೊಂಡು ಹೋಗಬೇಕಾದರೆ ಹಿಂದೂ ಸಮಾಜ ವ್ಯವಸ್ಥೆಯಲ್ಲಿ ಅಂತರ್ಗತವಾಗಿರುವ ಕೆಲವು ಮೂಲಭೂತ ಕಲ್ಪನೆಗಳನ್ನು ಓದುಗನು ಪರಿಚಯ ಮಾಡಿಕೊಳ್ಳಬೇಕಾಗುತ್ತದೆ. ಹಿಂದೂ ಸಮಾಜವನ್ನು ವಿಭಾಗಿಸಿರುವ ನಾಲ್ಕು ವರ್ಗಗಳೂ ಅಥವಾ ವರ್ಣಗಳ ಉಗಮದೊಂದಿಗೆ ಈ ಮೂಲ ಕಲ್ಪನೆ ಆರಂಭವಾಗುತ್ತದೆ. ಈ ನಾಲ್ಕು ವರ್ಗಗಳನ್ನು (೧) ಬ್ರಾಹ್ಮಣರು–

ಪುರೋಹಿತ ಹಾಗೂ ವಿದ್ಯಾವಂತ ವರ್ಗ, (೨) ಕ್ಷತ್ರಿಯರು ಅಥವಾ ಯೋಧ ವರ್ಗ, (೩) ವೈಶ್ಯರು ಅಥವಾ ವಣಿಕ ವರ್ಗ ಹಾಗೂ (೪) ಶೂದ್ರರು ಅಥವಾ ದಾಸ ವರ್ಗ ಎಂದು ಕರೆದರು. ಕೆಲವು ಕಾಲ ಇವು ಕೇವಲ ವರ್ಗಗಳಾಗಿದ್ದವು. ಆಮೇಲೆ ಕೇವಲ ವರ್ಣಗಳಾಗಿದ್ದವು, ನಂತರ ಜಾತಿಗಳಾದುವು. ನಾಲ್ಕು ಜಾತಿಗಳು ನಾಲ್ಕು ಸಾವಿರ ಆದವು. ಹೀಗೆ ಆಧುನಿಕ ಜಾತಿ ವ್ಯವಸ್ಥೆಯು ಪ್ರಾಚೀನ ವರ್ಣ ವ್ಯವಸ್ಥೆಯಿಂದ ವಿಕಾಸಗೊಂಡಿದೆ.

ಜಾತಿ ಪದ್ಧತಿಯು ವರ್ಣ ವ್ಯವಸ್ಥೆಯ ವಿಕಸಿತ ರೂಪವೆಂಬುದೇನು ಸರಿಯೆ, ಆದರೆ ಕೇವಲ ವರ್ಣ ವ್ಯವಸ್ಥೆಯನ್ನು ಅಧ್ಯಯನ ಮಾಡುವಷ್ಟರಿಂದಲೇ ಜಾತಿ ಪದ್ಧತಿಯ ಸರಿಯಾದ ಚಿತ್ರ ಬರಲು ಸಾಧ್ಯವಿಲ್ಲ. ವರ್ಣದಿಂದ ಪ್ರತ್ಯೇಕವಾಗಿಯೇ ಅದನ್ನು ನೋಡಬೇಕಾಗುತ್ತದೆ.

## II

ಪ್ರಾಚೀನ ಅಜ್ಞೇಯತಾವಾದಿಯೊಬ್ಬನು ತನ್ನ ಸಿದ್ಧಾಂತವನ್ನೆಲ್ಲಾ ಈ ಮಾತುಗಳಲ್ಲಿ ಸಂಗ್ರಹಿಸಿ ಹೇಳಿದನಂತೆ:

"ನನಗೆ ಏನೂ ತಿಳಿದಿಲ್ಲ ಎನ್ನುವುದೇ ನನಗೆ ತಿಳಿದಿರುವ ವಿಷಯ. ಅದೂ ತಿಳಿದಿದೆ ಎಂದು ನನಗೆ ಭರವಸೆಯಿಲ್ಲ."

ಪಂಜಾಬಿನಲ್ಲಿದ್ದ ಜಾತಿ ವ್ಯವಸ್ಥೆಯನ್ನು ಕುರಿತು ಬರೆಯಲು ಹೊರಟ ಸರ್ ಡೆನ್ಸಿಲ್ ಇಬೆತ್‌ಸನ್, ಜಾತಿಯನ್ನು ಕುರಿತು ತನಗೆ ಅನ್ನಿಸಿದ್ದನೆಲ್ಲ ಈ ಅಜ್ಞೇಯತಾವಾದಿಯ ಮಾತುಗಳು ವ್ಯಕ್ತಪಡಿಸುತ್ತವೆ ಎಂದರು. ಸ್ಥಳೀಯ ಪರಿಸ್ಥಿತಿಗಳಿಂದಾಗಿ ಜಾತಿ ವಿಚಾರಗಳಲ್ಲಿ ವೈವಿಧ್ಯ ಕಂಡುಬರುವುದರಲ್ಲಿ ಸಂದೇಹವೇನಿಲ್ಲ. ಯಾವುದೇ ಒಂದು ಜಾತಿಯ ಬಗೆಗೆ ಯಾವುದೇ ಒಂದು ಹೇಳಿಕೆ ನೀಡುವುದಂತೂ ತುಂಬ ಕಷ್ಟ. ಒಂದು ಸ್ಥಳದ ಒಂದು ಜಾತಿಯ ಪರಿಸ್ಥಿತಿಯ ಬಗೆಗೆ ಹೇಳಬಹುದಾದುದನ್ನೇ ಇನ್ನೊಂದು ಸ್ಥಳದಲ್ಲಿನ ಅದೇ ಜಾತಿಯ ಬಗೆಗೂ ತಕ್ಕಮಟ್ಟಿಗೆ ಹೇಳಬಹುದು.

ಜಾತಿ ವ್ಯವಸ್ಥೆಯ ಮೇಲು ಮೇಲಿನ ಲಕ್ಷಣಗಳಿಂದ ಅತ್ಯಂತ ಮೂಲಭೂತವಾದ ಲಕ್ಷಣಗಳನ್ನು ಬೇರ್ಪಡಿಸಿ ನೋಡುವುದು ಕಷ್ಟದ ಕೆಲಸವೇನಲ್ಲ. ಒಬ್ಬ ವ್ಯಕ್ತಿಯನ್ನು ಯಾವ ಅಪರಾಧಕ್ಕಾಗಿ ಜಾತಿಯಿಂದ ಹೊರಹಾಕಬಹುದು ಎಂಬುದನ್ನು ಪರಿಶೀಲಿಸಿದರೆ ಇದನ್ನು ಸುಲಭವಾಗಿ ಅರ್ಥಮಾಡಿಕೊಳ್ಳಬಹುದು. ಜಾತಿಯಿಂದ ಹೊರಹಾಕುವುದಕ್ಕೆ ಈ ಕಾರಣಗಳಿರುತ್ತವೆಂದು ಭಟ್ಟಾಚಾರ್ಯ ಅವರು ಪಟ್ಟಿಮಾಡುತ್ತಾರೆ. (೧) ಕ್ರೈಸ್ತ ಮತ ಅಥವಾ ಇಸ್ಲಾಂ ಮತವನ್ನು ಅವಲಂಬಿಸುವುದು, (೨) ಯೂರೋಪ್ ಅಥವಾ ಅಮೆರಿಕಕ್ಕೆ ಹೋಗುವುದು, (೩) ವಿಧವೆಯನ್ನು ಮದುವೆ ಮಾಡಿಕೊಳ್ಳುವುದು, (೪) ಸಾರ್ವಜನಿಕವಾಗಿ ಎಲ್ಲರೆದುರಿಗೆ ಯಜ್ಞೋಪವೀತವನ್ನು ಕಿತ್ತೆಸೆಯುವುದು, (೫) ಗೋಮಾಂಸ, ಹಂದಿ ಮಾಂಸ ಅಥವಾ ಕೋಳಿ ಮಾಂಸಗಳನ್ನು ತಿನ್ನುವುದು, (೬) ಮಹಮ್ಮದೀಯ, ಕ್ರೈಸ್ತ ಅಥವಾ ಅತ್ಯಂತ ಕೆಳವರ್ಗದ ಶೂದ್ರ ತಯಾರಿಸಿದ ಕಚ್ಚಾ ಆಹಾರವನ್ನು ತಿನ್ನುವುದು, (೭) ಕೆಳಜಾತಿಯ ಶೂದ್ರನ ಮನೆಯಲ್ಲಿ ನಡೆಯುವ ಕಾರ್ಯಗಳಲ್ಲಿ ಭಾಗವಹಿಸುವುದು, (೮) ಅನೈತಿಕ ಕಾರಣಗಳಿಂದಾಗಿ ಮನೆಯನ್ನು ತೊರೆದುಹೋಗುವ ಹೆಂಗಸು, (೯) ವಿಧವೆಯು ಗರ್ಭವತಿಯಾಗುವುದು. ಈ ಪಟ್ಟಿ ಸಮಗ್ರವಾಗಿಲ್ಲ. ಜಾತಿಯಿಂದ ಹೊರಹಾಕಲು ಇರುವ ಅತ್ಯಂತ ಮುಖ್ಯವಾದ ಮೂರು ಮುಖ್ಯ ಕಾರಣಗಳನ್ನು ಇಲ್ಲಿ ಬಿಟ್ಟಿದೆ. ಅವುಗಳೆಂದರೆ,

(೧೦) ಬೇರೆ ಜಾತಿಯವರೊಂದಿಗೆ ಅಂತರ್ ವಿವಾಹ ಮಾಡಿಕೊಳ್ಳುವುದು, (೧೧) ಬೇರೆ ಜಾತಿಯ ವ್ಯಕ್ತಿಗಳೊಂದಿಗೆ ಸಹಪಂಕ್ತಿ ಭೋಜನ ಮಾಡುವುದು, (೧೨) ಕಸುಬನ್ನು ಬದಲಾಯಿಸುವುದು. ಭಟ್ಟಾಚಾರ್ಯ ಅವರ ಹೇಳಿಕೆಯಲ್ಲಿ ಕಂಡು ಬರುವ ಎರಡನೆಯ ದೋಷವೆಂದರೆ ಅವರು ಮೂಲಭೂತವಾದದ್ದು ಹಾಗೂ ಗೌಣವಾದದ್ದು ಎರಡಕ್ಕೂ ನಡುವೆ ಯಾವುದೇ ವ್ಯತ್ಯಾಸವನ್ನು ಗುರುತಿಸದೇ ಇರುವುದು.

ಒಬ್ಬ ವ್ಯಕ್ತಿಯನ್ನು ಜಾತಿಯಿಂದ ಹೊರಹಾಕಿದರೆ ವಿಧಿಸುವ ದಂಡ ಎಲ್ಲರಿಗೂ ಸಮಾನವಾದದ್ದು. ಅವನ ಗೆಳೆಯರು, ಬಂಧುಗಳು, ಸಹವರ್ತಿಗಳು ಎಲ್ಲರೂ ಅವನ ಆತಿಥ್ಯ ಸ್ವೀಕರಿಸಲು ನಿರಾಕರಿಸುತ್ತಾರೆ. ಅವರ ಮನೆಗಳಲ್ಲಿ ನಡೆಯುವ ಹಬ್ಬ, ಹರಿದಿನಗಳಿಗೆ, ಇತರ ಸಂದರ್ಭಗಳಿಗೆ ಅವನಿಗೆ ಆಹ್ವಾನವಿರುವುದಿಲ್ಲ. ಅವನ ಮಕ್ಕಳಿಗೆ ವರನಾಗಲಿ, ವಧುವಾಗಲಿ ಸಿಕ್ಕುವುದಿಲ್ಲ. ಮದುವೆಯಾಗಿರುವ ಹೆಣ್ಣು ಮಕ್ಕಳೂ ಕೂಡ ಜಾತಿಭ್ರಷ್ಟ ತಂದೆಯ ಮನೆಗೆ ಬರುವುದಿಲ್ಲ. ಹಾಗೆ ಬಂದರೆ ಅವರನ್ನು ಜಾತಿಯಿಂದ ಹೊರಹಾಕಲಾಗುತ್ತದೆ. ಪುರೋಹಿತ, ನಾಯಿಂದ, ಅಗಸ ಇವರಾರೂ ಅವನಿಗೆ ಸೇವೆ ಸಲ್ಲಿಸುವುದಿಲ್ಲ. ಅವನ ಜಾತಿಯ ಜನರು ಎಷ್ಟು ಮಟ್ಟಿಗೆ ಅವನೊಂದಿಗೆ ಸಂಬಂಧವನ್ನು ಕಡಿದುಕೊಳ್ಳುತ್ತಾರೆಂದರೆ, ಅವನ ಮನೆಯಲ್ಲಿ ಯಾರಾದರೂ ತೀರಿಕೊಂಡರೂ, ಅಂತ್ಯಸಂಸ್ಕಾರ ಸಮಯದಲ್ಲಿ ಯಾರೂ ಹೋಗುವುದಿಲ್ಲ. ಅವನಿಗೆ ನೆರವಾಗುವುದಿಲ್ಲ. ಕೆಲವು ಸಂದರ್ಭಗಳಲ್ಲಿ ಹಾಗೆ ಜಾತಿಭ್ರಷ್ಟನಾದ ವ್ಯಕ್ತಿಯು ಸಾರ್ವಜನಿಕ ಸ್ಥಳಗಳು, ದೇವಾಲಯಗಳು, ಸ್ಮಶಾನಗಳು, ರುದ್ರಭೂಮಿಗಳಿಗೆ ಕೂಡ ಪ್ರವೇಶಿಸುವಂತಿಲ್ಲ.

ಜಾತಿಭ್ರಷ್ಟತೆಯ ಶಿಕ್ಷೆಗೆ ಇರುವ ಕಾರಣಗಳು ಪರೋಕ್ಷವಾಗಿ ಜಾತಿಯ ನಿಯಮ, ನಿಬಂಧನೆಗಳನ್ನು ಹೇಳುತ್ತವೆ. ಆದರೆ ಎಲ್ಲ ನಿಯಮಗಳು ಸಮಾನ ಮಹತ್ವದಲ್ಲ. ಅತ್ಯಗತ್ಯವೆನಿಸದಂಥವೂ ಇವೆ. ಅವುಗಳಿಲ್ಲದೆಯೂ ಜಾತಿ ಇರಬಹುದು. ಇನ್ನೊಂದು ಪ್ರಶ್ನೆಯನ್ನು ಹಾಕಿಕೊಂಡು ಅಗತ್ಯ, ಅನಗತ್ಯಗಳ ನಡುವೆ ವ್ಯತ್ಯಾಸವನ್ನು ನಾವು ಮನಗಾಣಬಹುದು. ಒಮ್ಮೆ ಜಾತಿಯನ್ನು ಕಳೆದುಕೊಂಡ ಹಿಂದೂ ಮರಳಿ ಯಾವಾಗ ಅದನ್ನು ಪಡೆಯಬಹುದು? ಹಿಂದೂಗಳಲ್ಲಿ ಪ್ರಾಯಶ್ಚಿತ್ತ ವಿಧಿಗಳಿವೆ. ಜಾತಿಭ್ರಷ್ಟನಾದ ವ್ಯಕ್ತಿಯು ಮತ್ತೆ ಜಾತಿಯ ಒಳಕ್ಕೆ ಪ್ರವೇಶ ಪಡೆಯಬೇಕಾದರೆ ಆ ಪ್ರಾಯಶ್ಚಿತ್ತಗಳನ್ನು ಮಾಡಿಕೊಳ್ಳಲೇಬೇಕು. ಈ ಪ್ರಾಯಶ್ಚಿತ್ತಗಳ ಸಂಬಂಧವಾಗಿ ಕೆಲವು ಅಂಶಗಳನ್ನು ನೆನಪಿನಲ್ಲಿಡುವುದು ಅಗತ್ಯ. ಮೊದಲನೆಯದಾಗಿ, ಜಾತಿಗೆ ಸಂದ ಅಪರಾಧಗಳಿಗೆ ಪ್ರಾಯಶ್ಚಿತ್ತವಿಲ್ಲ. ಎರಡನೆಯದಾಗಿ, ಅಪರಾಧಕ್ಕೆ ತಕ್ಕಂತೆ ಪ್ರಾಯಶ್ಚಿತ್ತಗಳು ಬೇರೆ ಬೇರೆ ಆಗುತ್ತವೆ. ಕೆಲವು ಸಂದರ್ಭಗಳಲ್ಲಿ ಅತ್ಯಲ್ಪ ಪ್ರಮಾಣದ ಜುಲ್ಮಾನೆ ಸಾಕಾಗುತ್ತದೆ. ಮತ್ತೆ ಕೆಲವು ಸಂದರ್ಭಗಳಲ್ಲಿ ಅದು ಅತ್ಯಂತ ಉಗ್ರವಾಗಿರುತ್ತದೆ.

ಪ್ರಾಯಶ್ಚಿತ್ತ ಇರುವುದು, ಇಲ್ಲದುದು ಈ ಅಂಶವು ಬಹಳ ಮಹತ್ವದ್ದಾಗಿದೆ. ಅದನ್ನು ಸ್ಪಷ್ಟವಾಗಿ ನಾವು ತಿಳಿದುಕೊಳ್ಳಬೇಕು. ಪ್ರಾಯಶ್ಚಿತ್ತವಿಲ್ಲವೆಂದರೆ, ಯಾರು ಬೇಕಾದರೂ ಆ ಅಪರಾಧವನ್ನು ಮಾಡಿ ನಿಭಾಯಿಸಿಕೊಂಡು ಹೋಗಿಬಿಡಬಹುದು ಎಂದರ್ಥವಲ್ಲ. ಬದಲಿಗೆ, ಅಲ್ಲಿ ನಡೆದಿರುವ ಅಪರಾಧವು, ಎಣಿಕೆಗೆ ನಿಲುಕದಷ್ಟು ಬೃಹತ್‌ಪ್ರಮಾಣದ್ದು. ಅದಕ್ಕಾಗಿ ಜಾತಿಯಿಂದ ಹೊರಹಾಕಲ್ಪಟ್ಟ ವ್ಯಕ್ತಿಯು ಏನೇ ಆಗಲಿ, ಮರಳಿ ಜಾತಿಗೆ ಬರುವಂತಿಲ್ಲ ಎಂದು ಅದರ ಅರ್ಥ. ಪ್ರಾಯಶ್ಚಿತ್ತ ಇರುವುದು ಎಂದರೆ ಅಪರಾಧದ ದೋಷ ವಿಮೋಚನೆ ಮಾಡಿಕೊಳ್ಳಬಹುದಾಗಿದೆ ಎಂದರ್ಥ. ವಿಧಿಸಿದ ಪ್ರಾಯಶ್ಚಿತ್ತವನ್ನು ನೆರವೇರಿಸಿದ ಅನಂತರ ವ್ಯಕ್ತಿಯು ಮತ್ತೆ ಜಾತಿಗೆ ಪ್ರವೇಶಿಸಬಹುದು.

ಪ್ರಾಯಶ್ಚಿತ್ತವೇ ಇಲ್ಲದಂತಹ ಎರಡು ಅಪರಾಧಗಳಿವೆ. ಅವು: (೧) ಹಿಂದೂ ಧರ್ಮದಿಂದ ಬೇರೊಂದು ಧರ್ಮಕ್ಕೆ ಮತಾಂತರಗೊಳ್ಳುವುದು, (೨) ಬೇರೆ ಧರ್ಮದ ಬೇರೆ ಜಾತಿಯ ಒಬ್ಬ ವ್ಯಕ್ತಿಯೊಂದಿಗೆ

ಮದುವೆ ಮಾಡಿಕೊಳ್ಳುವುದು. ಈ ಅಪರಾಧಗಳಿಗಾಗಿ ಜಾತಿಯನ್ನು ಕಳೆದುಕೊಂಡ ವ್ಯಕ್ತಿ ಖಾಯಂ ಆಗಿಯೇ ಕಳೆದುಕೊಳ್ಳುತ್ತಾನೆ ಎಂಬುದು ಸ್ಪಷ್ಟವಾಗಿಯೇ ಇದೆ.

ಇತರ ಅಪರಾಧಗಳಿಗೆ ವಿಧಿಸಿರುವ ಪ್ರಾಯಶ್ಚಿತ್ತಗಳಲ್ಲಿ ತುಂಬ ಉಗ್ರ ರೀತಿಯವು ಎರಡಿವೆ: (೧) ಹಿಂದೂ ಅಲ್ಲದವನ ಅಥವಾ ಬೇರೆ ಜಾತಿಯವನ ಜೊತೆಗೆ ಕುಳಿತು ಸಹಪಂಕ್ತಿ ಭೋಜನ ಮಾಡುವುದು, (೨) ತನ್ನ ಜಾತಿಯ ಕಸುಬಲ್ಲದ ಬೇರೆ ಯಾವುದೇ ಕಸುಬನ್ನು ಹಿಡಿಯುವುದು. ಇತರ ಅಪರಾಧಗಳ ವಿಷಯದಲ್ಲಿ ಶಿಕ್ಷೆಯು ಹಗುರವಾದದ್ದು, ಹೆಚ್ಚು ಕಡಿಮೆ ನಾಮಕಾವಸ್ಥೆಯದು.

ಜಾತಿಯ ಮೂಲಭೂತ ನಿಯಮಗಳು ಯಾವುದು ಎಂಬುದನ್ನು, ಜಾತಿಯೆಂದರೇನೆಂಬುದನ್ನೂ ಕಂಡುಕೊಳ್ಳಬೇಕಾದರೆ, ಅತ್ಯಂತ ಖಚಿತವಾದ ಸೂಚನೆ ಇರುವ ಈ ಪ್ರಾಯಶ್ಚಿತ್ತಗಳ ಬಗೆಗೆ ಇರುವ ನಿಯಮಗಳನ್ನು ನೋಡಬೇಕು. ಯಾವ ನಿಯಮದ ಉಲ್ಲಂಘನೆಗೆ ಪ್ರಾಯಶ್ಚಿತ್ತ ಇಲ್ಲವೋ ಅವೇ ಜಾತಿಯ ಆತ್ಮ. ಉಗ್ರವಾದ ಪ್ರಾಯಶ್ಚಿತ್ತವಿರುವ ನಿಯಮಗಳು ಅದರ ದೇಹ. ಆದ್ದರಿಂದ ಜಾತಿಯನ್ನು ಕುರಿತು ನಾಲ್ಕು ಮೂಲಭೂತ ನಿಯಮಗಳಿವೆ ಎಂದು ಯಾವುದೇ ಸಂದೇಹವಿಲ್ಲದೆ ಹೇಳಬಹುದು. (ಎ) ಹಿಂದೂ ಧರ್ಮದಲ್ಲಿ ನಂಬಿಕೆ, (ಬಿ) ಮದುವೆ, (ಇ) ಆಹಾರ ಮತ್ತು (ಈ) ವೃತ್ತಿಗಳಿಗೆ ಸಂಬಂಧಿಸಿದ ನಿಯಮಾವಳಿಗೆ ಬದ್ಧತೆ ಇರುವ ಸಾಮಾಜಿಕ ತಂಡ ಎಂದು ಜಾತಿಯನ್ನು ವಿವರಿಸಬಹುದು. ಇದರ ಜೊತೆಗೆ ಇನ್ನೂ ಒಂದು ಲಕ್ಷಣವನ್ನು ಸೇರಿಸಬಹುದು. ಒಂದು ಸಮಾನ ಹೆಸರಿನಿಂದ ಗುರುತಿಸಿ ಕರೆಯಲ್ಪಡುವ ಸಾಮಾಜಿಕ ತಂಡ ಅದು.

ಮದುವೆಯ ವಿಷಯದಲ್ಲಿ ನಿಯಮಾವಳಿಯು ಜಾತಿಯಲ್ಲಿ ಸ್ವಜಾತಿ ವಿವಾಹ ಪದ್ಧತಿಯಿರತಕ್ಕದ್ದು ಎಂದು ಹೇಳುತ್ತದೆ. ಬೇರೆ ಬೇರೆ ಜಾತಿಯ ಸದಸ್ಯರಲ್ಲಿ ಅಂತರ್ ವಿವಾಹ ನಡೆಯಕೂಡದು. ಇಡಿ ಜಾತಿ ವ್ಯವಸ್ಥೆಯ ರಚನೆಗೆ ಅತ್ಯಂತ ಮೂಲಭೂತವಾಗಿರುವ ಹಾಗೂ ಮೊತ್ತಮೊದಲನೆಯ ಅಂಶ ಇದು.

ಆಹಾರದ ವಿಷಯದಲ್ಲೂ ಅಷ್ಟೆ. ತನ್ನ ಜಾತಿಗೆ ಸೇರದೆ ಇರುವ ಒಬ್ಬ ವ್ಯಕ್ತಿಯಿಂದ ಆಹಾರ ಪಡೆಯಕೂಡದು ಹಾಗೂ ಅವನೊಂದಿಗೆ ಭೋಜನ ಮಾಡುವುದು ನಿಷಿದ್ಧ. ಅಂದರೆ ಯಾರಿಗೆ ಒಳ ವಿವಾಹಕ್ಕೆ ಅವಕಾಶವಿರುತ್ತದೆಯೋ ಅವರಿಗೆ ಒಳ ಪಂಕ್ತಿಭೋಜನಕ್ಕೂ ಅವಕಾಶವಿರುತ್ತದೆ. ಯಾರಿಗೆ ಅದಕ್ಕೆ ಅವಕಾಶವಿಲ್ಲವೋ ಅವರಿಗೆ ಇದೂ ಇಲ್ಲ. ಬೇರೆ ಮಾತಿನಲ್ಲಿ ಹೇಳುವುದಾದರೆ ಜಾತಿ ಎನ್ನುವುದು ಒಂದು ಸ್ವಜಾತಿ ಘಟಕ ಮತ್ತು ಒಂದು ಮತೀಯ ಘಟಕ.

ವೃತ್ತಿಯ ವಿಷಯದಲ್ಲಿ ನಿಯಮವು ಏನು ಹೇಳುತ್ತದೆ? ವ್ಯಕ್ತಿಯು ತನ್ನ ಜಾತಿಗೆ ಪರಂಪರೆಯಿಂದ ಬಂದಿರುವ ಕಸುಬನ್ನು ಮಾಡತಕ್ಕದ್ದು. ಒಂದು ಜಾತಿಗೆ ಹಾಗೆ ಒಂದು ನಿರ್ದಿಷ್ಟ ವೃತ್ತಿಯಿಲ್ಲದ ಪಕ್ಷದಲ್ಲಿ ತನ್ನ ತಂದೆ ಏನು ಮಾಡುತ್ತಿದ್ದನೋ ಆ ಕೆಲಸವನ್ನು ಮಗನೂ ಮಾಡಬೇಕು.

ಇನ್ನೂ ಒಬ್ಬ ವ್ಯಕ್ತಿಯ ಸ್ಥಾನಮಾನದ ವಿಷಯದಲ್ಲಿ ಹೇಳುವುದಾದರೆ ಅದು ನಿರ್ಧಾರವಾಗಿಬಿಟ್ಟಿದೆ, ಹಾಗೂ ವಂಶಪಾರಂಪರ್ಯವಾಗಿ ಬಂದಿದೆ. ಪೂರ್ವ ನಿರ್ಧಾರಿತ ಎಂದು ಏಕೆ ಹೇಳುವುದೆಂದರೆ, ವ್ಯಕ್ತಿಯ ಸ್ಥಾನಮಾನವು ಅವನ ಜಾತಿಯ ಸ್ಥಾನಮಾನದಿಂದ ನಿರ್ಧಾರಿತವಾಗುತ್ತದೆ. ವಂಶಪರಂಪರೆಯಿಂದ ಎಂದು ಏಕೆ ಹೇಳುತ್ತೇವೆಂದರೆ, ವ್ಯಕ್ತಿಗೆ ಅವನ ತಂದೆ, ತಾಯಿ ಯಾವ ಜಾತಿಗೆ ಸೇರಿದ್ದಾರೋ, ಆ ಜಾತಿಯ ಮುದ್ರೆ ಒತ್ತಲ್ಪಡುತ್ತದೆ. ಒಬ್ಬ ಹಿಂದೂ ತನ್ನ ಜಾತಿಯನ್ನು ಬದಲಾಯಿಸಿಕೊಳ್ಳಲು ಸಾಧ್ಯವಿಲ್ಲವಾದ್ದರಿಂದ ಅವನ ಸ್ಥಾನಮಾನದಲ್ಲೂ ಬದಲಾವಣೆ ಬರಲು ಸಾಧ್ಯವಿಲ್ಲ. ಹಿಂದೂ ಒಂದು ಜಾತಿಯಲ್ಲಿ ಹುಟ್ಟುತ್ತಾನೆ. ತಾನು ಹುಟ್ಟಿದ ಜಾತಿಯ ಒಬ್ಬ ಸದಸ್ಯನಾಗಿಯೇ ಮೃತನಾಗುತ್ತಾನೆ. ಜಾತಿಯನ್ನು ಕಳೆದುಕೊಂಡರೆ,

ಹಿಂದೂವು ತನ್ನ ಸ್ಥಾನಮಾನವನ್ನೂ ಕಳೆದುಕೊಳ್ಳಬಹುದು. ಆದರೆ, ಹೊಸದಾದ ಅದಕ್ಕಿಂತ ಬೇರೆಯದಾದ, ಉತ್ತಮವಾದ ಸ್ಥಾನಮಾನವನ್ನಂತೂ ಪಡೆಯಲು ಸಾಧ್ಯವಿಲ್ಲ.

ಒಂದು ಜಾತಿಗೆ ಒಂದು ರೂಢನಾಮವಿರುವುದರ ಮಹತ್ವವೇನು? ತುಂಬ ಸುಸಂಗತವಾದ ಎರಡು ಪ್ರಶ್ನೆಗಳನ್ನು ನಾವು ಕೇಳಿಕೊಳ್ಳಬೇಕು. ಆಗ ಅದು ಸ್ಪಷ್ಟವಾಗುತ್ತದೆ. ಜಾತಿಯೆಂಬ ವ್ಯವಸ್ಥೆಯ ಒಂದು ಸಂಪೂರ್ಣ ಚಿತ್ರವನ್ನು ಪಡೆಯಬೇಕೆಂದರೆ ಈ ಪ್ರಶ್ನೆಗಳಿಗೆ ಸರಿಯಾದ ಉತ್ತರ ಕಂಡುಕೊಳ್ಳಬೇಕು. ಸಾಮಾಜಿಕ ಸಮುದಾಯಗಳು ವ್ಯವಸ್ಥಿತವಾಗಿರುತ್ತವೆ. ಇಲ್ಲವೆ, ಅವ್ಯವಸ್ಥಿತವಾಗಿರುತ್ತವೆ. ತಂಡದ ಸದಸ್ಯತ್ವ ಅದಕ್ಕೆ ಸೇರುವುದು ಅಥವಾ ಅದನ್ನು ತ್ಯಜಿಸುವುದು ಇವಕ್ಕೆ ಸಂಬಂಧಿಸಿದ ಪ್ರಕ್ರಿಯೆ, ನಿರ್ದಿಷ್ಟ ಸಾಮಾಜಿಕ ನಿಯಮಾವಳಿಗೆ ಅಧೀನಗೊಂಡಾಗ, ತಂಡದ ಇತರ ಸದಸ್ಯರ ಬಗೆಗೆ ಕೆಲವು ಕರ್ತವ್ಯಗಳನ್ನು, ಕೆಲವು ಹಕ್ಕುಗಳನ್ನೂ ಹೊಂದಿದ್ದಾಗ ಅದು ವ್ಯವಸ್ಥಿತ ತಂಡವೆನಿಸುತ್ತದೆ. ಇಂತಹ ತಂಡವು ಒಂದು ಸ್ವಯಂಪ್ರೇರಿತ ತಂಡವಾಗಿರುತ್ತದೆ. ಸದಸ್ಯರು ತಾವು ಏನು ಮಾಡುತ್ತಿದ್ದೇವೆ, ಸಂಘಟನೆಯ ಧ್ಯೇಯಗಳಾವುವು ಎಂಬ ಪೂರ್ಣ ಅರಿವನ್ನಿಟ್ಟುಕೊಂಡೇ ಅದನ್ನು ಪ್ರವೇಶಿಸುತ್ತಾರೆ. ಇದಕ್ಕೆ ವಿರುದ್ಧವಾಗಿ ಬೇರೆ ತಂಡಗಳಿರುತ್ತವೆ. ವ್ಯಕ್ತಿಯು ಯಾವುದೇ ಇಚ್ಛೆ ಅಥವಾ ಸಂಕಲ್ಪ ಇಲ್ಲದೇ ಇದಕ್ಕೆ ಸೇರುತ್ತಾನೆ. ಸಾಮಾಜಿಕ ಕಟ್ಟುಪಾಡುಗಳಿಗೆ, ಸಂಪ್ರದಾಯಗಳಿಗೆ ಅಧೀನನಾಗುತ್ತಾನೆ. ಅವುಗಳ ಮೇಲೆ ಅವನಿಗೆ ಯಾವುದೇ ಬಗೆಯ ನಿಯಂತ್ರಣ ಇರುವುದಿಲ್ಲ.

ಜಾತಿ ಎನ್ನುವುದು ಅತ್ಯಂತ ವ್ಯವಸ್ಥಿತವಾದ ಸಾಮಾಜಿಕ ತಂಡ ಎಂದು ಬೇರೆಯಾಗಿ ಹೇಳಬೇಕಾದ ಅಗತ್ಯವಿಲ್ಲ. ಅದು ಸಡಿಲವಾದ ಅಥವಾ ತೇಲಿಕೆಯ ವಸ್ತುವಲ್ಲ. ಅದು ಸ್ವಯಂಪ್ರೇರಿತವಲ್ಲದ ವ್ಯವಸ್ಥೆ ಎಂದೂ ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಹಿಂದೂ ಒಂದು ಜಾತಿಯಲ್ಲಿ ಹುಟ್ಟುತ್ತಾನೆ. ಆ ಜಾತಿಯ ಸದಸ್ಯನಾಗಿಯೇ ಸಾಯುತ್ತಾನೆ. ಜಾತಿಯಿಲ್ಲದ ಹಿಂದೂ ಇಲ್ಲವೇ ಇಲ್ಲ. ಅವನು ಜಾತಿಯ ಹಿಡಿತದಿಂದ ಎಂದಿಗೂ ತಪ್ಪಿಸಿಕೊಳ್ಳುವಂತಿಲ್ಲ. ಜನನದಿಂದ ಮರಣದವರೆಗೆ ಅದಕ್ಕೆ ಬದ್ಧನಾಗಿದ್ದಾನೆ. ತನಗೆ ಯಾವುದೇ ಬಗೆಯ ಹತೋಟಿಯಿಲ್ಲದ ಸಾಮಾಜಿಕ ನಿಯಮಾವಳಿಗಳು ಮತ್ತು ಕಟ್ಟುಪಾಡುಗಳಿಗೆ ಅಧೀನನಾಗಿದ್ದಾನೆ.

ಒಂದು ಜಾತಿಗೆ ಪ್ರತ್ಯೇಕವಾದ ಒಂದು ಹೆಸರು ಇರುವುದರ ಮಹತ್ವ ಇದರಲ್ಲಿದೆ. ಅದು ಜಾತಿಯನ್ನು ಒಂದು ವ್ಯವಸ್ಥಿತವಾದ, ಸ್ವಯಂಪ್ರೇರಿತವಲ್ಲದ ಸಮುದಾಯವನ್ನಾಗಿ ಮಾಡುತ್ತದೆ. ವಿಶಿಷ್ಟವಾದ ಬೇರೆ ಹೆಸರು ಅದಕ್ಕೆ ನಿರಂತರ ಅಸ್ತಿತ್ವವನ್ನೂ, ಪ್ರತ್ಯೇಕತೆಯ ಮುದ್ರೆಯನ್ನೂ ಒದಗಿಸುತ್ತದೆ. ಜಾತಿಯ ಬಗೆಗೆ ಬರೆದವರು ಬೇರೆ ಬೇರೆ ಜಾತಿಗಳಿಗೆ ಬೇರೆ ಬೇರೆ ಹೆಸರಿರುವುದರ ಪ್ರಾಮುಖ್ಯವನ್ನು ಸಾಕಷ್ಟು ಮಟ್ಟಿಗೆ ಅರ್ಥಮಾಡಿಕೊಂಡಿಲ್ಲ ಎಂದೇ ಹೇಳಬೇಕು. ಅದರಿಂದಾಗಿ ಅವರು ಜಾತಿ ವ್ಯವಸ್ಥೆಯ ಅತ್ಯಂತ ವಿಶಿಷ್ಟವಾದ ಒಂದು ಲಕ್ಷಣವನ್ನು ಕಾಣಲಾರದೆ ಹೋಗಿದ್ದಾರೆ. ಅನೇಕ ದೇಶಗಳಲ್ಲಿ ಸಾಮಾಜಿಕ ಸಮುದಾಯಗಳಿರುತ್ತವೆ. ಪ್ರತಿಯೊಂದು ಸಮಾಜದಲ್ಲೂ ಅವು ಇರಲೇಬೇಕು. ಅನೇಕ ದೇಶಗಳ ಅನೇಕ ಸಾಮಾಜಿಕ ತಂಡಗಳನ್ನು ಭಾರತದ ವಿವಿಧ ಜಾತಿಗಳೊಂದಿಗೆ ಸಮೀಕರಿಸಬಹುದು. ಅವುಗಳಿಗೆ ಸಮನಾದುವು ಎಂದು ಹೇಳಬಹುದು. ಸಾಮಾಜಿಕ ತಂಡಗಳಾಗಿ ಕುಂಬಾರರು, ಅಗಸರು, ಬುದ್ಧಿಜೀವಿಗಳು ಎಲ್ಲ ಕಡೆಯೂ ಇದ್ದಾರೆ. ಆದರೆ ಬೇರೆ ದೇಶಗಳಲ್ಲಿ ಅವರು ಅವ್ಯವಸ್ಥಿತರಾಗಿದ್ದಾರೆ, ಸ್ವಯಂಪ್ರೇರಿತ ಸಮುದಾಯವಾಗಿದ್ದಾರೆ. ಭಾರತದಲ್ಲಾದರೆ ಅವರು ವ್ಯವಸ್ಥಿತ ತಂಡಗಳಾಗಿದ್ದಾರೆ. ಅ–ಸ್ವಯಂಪ್ರೇರಿತರಾಗಿದ್ದಾರೆ. ಅಂದರೆ ಇಲ್ಲಿ ಅವರು ಪ್ರತ್ಯೇಕ ಜಾತಿಗಳಾಗಿದ್ದಾರೆ. ಬೇರೆ ದೇಶಗಳಲ್ಲಿ ಅವರಿಗೆ ಬೇರೆ ಹೆಸರಿಲ್ಲ. ಭಾರತದಲ್ಲಿ ಪ್ರತ್ಯೇಕ ಹೆಸರಿವೆ. ಜಾತಿಗೆ ನಿರ್ದಿಷ್ಟತೆ, ನಿರಂತರತೆ ಮತ್ತು ವಿಶಿಷ್ಟತೆಗಳನ್ನು ಹೆಸರು ಕೊಡುತ್ತದೆ. ಸದಸ್ಯರು ಯಾರು ಎಂಬುದನ್ನು

ಅದು ನಿರೂಪಿಸುತ್ತದೆ. ಅನೇಕ ಸಂದರ್ಭಗಳಲ್ಲಿ ಒಂದು ಜಾತಿಯಲ್ಲಿ ಹುಟ್ಟಿದ ವ್ಯಕ್ತಿಯು ತನ್ನ ಉಪನಾಮದ ಒಂದು ಭಾಗವಾಗಿ ಜಾತಿಯ ಹೆಸರನ್ನು ಇಟ್ಟುಕೊಂಡಿರುತ್ತಾನೆ. ನಿಯಮಗಳನ್ನು, ಕಟ್ಟುಪಾಡುಗಳನ್ನು ಜಾರಿಗೆ ತರಲು ಜಾತಿಗೆ ಸಹಾಯಕವಾಗುವುದೂ ಹೆಸರೇ. ಎರಡು ವಿಧಾನಗಳಿಂದ ಇದು ಸುಲಭವಾಗುತ್ತದೆ. ತಪ್ಪು ಮಾಡಿದವನು ಬೇರೊಂದು ಜಾತಿಯ ಹೆಸರಿನಿಂದ ತಪ್ಪಿಸಿಕೊಂಡು ಹೋಗುವುದನ್ನು ಇದು ತಡೆಯುತ್ತದೆ. ಜಾತಿ ನಿಬಂಧನೆಗಳ ಕ್ಷೇತ್ರದಿಂದ ಅವನು ಆಚೆ ಹೋಗಲು ಸಾಧ್ಯವಾಗುವುದಿಲ್ಲ. ಎರಡನೆಯದಾಗಿ, ಅಪರಾಧಿ ವ್ಯಕ್ತಿಯನ್ನು, ಅವನ ಜಾತಿಯನ್ನು ಗುರುತಿಸಲು ಇದರಿಂದ ಸಾಧ್ಯವಾಗುತ್ತದೆ. ಯಾರೇ ಆಗಲಿ ಅವನ ಜಾತಿಗೆ ಅವನನ್ನು ಒಪ್ಪಿಸಿ ಜಾತಿ ನಿಯಮಗಳನ್ನು ಉಲ್ಲಂಘಿಸಿದ ಅಪರಾಧಕ್ಕೆ ಶಿಕ್ಷೆ ಕೊಡಿಸುವುದು ಸುಲಭವಾಗುತ್ತದೆ.

ಜಾತಿಯೆಂದರೆ ಇದು. ಇನ್ನು ಜಾತಿ ವ್ಯವಸ್ಥೆಯ ಬಗೆಗೆ ನೋಡೋಣ. ಬೇರೆ ಬೇರೆ ಜಾತಿಗಳ ನಡುವೆ ಇರುವ ಪರಸ್ಪರ ಸಂಬಂಧಗಳ ಅಧ್ಯಯನವನ್ನು ಇದು ಒಳಗೊಳ್ಳುತ್ತದೆ. ಹಲವು ಜಾತಿಗಳ ಗುಚ್ಛವಾಗಿ ಜಾತಿ ವ್ಯವಸ್ಥೆಯು ಯಾರಿಗೇ ಆದರೂ ರಾಚುವಂತೆ ತನ್ನ ಲಕ್ಷಣಗಳನ್ನು ಪ್ರದರ್ಶಿಸುತ್ತದೆ. ಮೊದಲನೆಯದಾಗಿ, ಒಂದು ವ್ಯವಸ್ಥೆಯಾಗಿ ಪರಿಣಮಿಸಿರುವ ವಿವಿಧ ಜಾತಿಗಳ ನಡುವೆ ಅಂತರ ಸಂಬಂಧ ಯಾವುದೂ ಇಲ್ಲ. ಪ್ರತಿಯೊಂದು ಜಾತಿಯೂ ಬೇರೆ, ಹಾಗೂ ವಿಶಿಷ್ಟವಾದುದು. ತನ್ನ ಆಂತರಿಕ ವ್ಯವಹಾರಗಳನ್ನು ನಿರ್ವಹಿಸುವುದರಲ್ಲಿ ಹಾಗೂ ಜಾತಿ ನಿಬಂಧನೆಗಳನ್ನು ಜಾರಿಗೊಳಿಸುವುದರಲ್ಲಿ ಒಂದೊಂದೂ ಸ್ವತಂತ್ರ ಹಾಗು ಪರಮಾಧಿಕಾರ ಹೊಂದಿರುವಂಥದು. ಎರಡನೆಯ ಲಕ್ಷಣ, ಇತರ ಜಾತಿಗಳಿಗೆ ಸಂಬಂಧಿಸಿದಂತೆ ಒಂದು ಜಾತಿಯ ಸ್ಥಾನ. ಅದು ಲಂಬವಾಗಿದೆ, ಕ್ಷೇತ್ರೀಯವಾಗಿಲ್ಲ.

ಹೀಗಿದೆ, ಜಾತಿ ಮತ್ತು ಜಾತಿ ವ್ಯವಸ್ಥೆ. ಹಿಂದೂ ಸಾಮಾಜಿಕ ವ್ಯವಸ್ಥೆಯನ್ನು ತಿಳಿದುಕೊಳ್ಳಬೇಕಾದರೆ ಇದಿಷ್ಟು ತಿಳಿದರೆ ಸಾಕೇ ಎಂಬುದೂ ಪ್ರಶ್ನೆ. ಹಿಂದೂ ಸಮಾಜ ವ್ಯವಸ್ಥೆಯ ಸ್ಥಿರ ಚಿತ್ರವೊಂದನ್ನು ಪಡೆಯಲು ಜಾತಿ ಮತ್ತು ಜಾತಿ ವ್ಯವಸ್ಥೆಯನ್ನು ತಿಳಿದುಕೊಂಡರೆ ಸಾಕಾಗಬಹುದು. ಹಿಂದೂಗಳು ಜಾತಿಗಳಾಗಿ ವರ್ಗೀಕೃತರಾಗಿದ್ದಾರೆ. ಎಲ್ಲರೂ ಜಾತಿಗಳಾಗಿ ಪೋಣಿಸಿರುವ ಒಂದು ದಾರದಲ್ಲಿ ನೇತಾಡುತ್ತಿದ್ದಾರೆ. ಆ ಆಂತರಿಕ ಸೂತ್ರವಾದರೋ ಪ್ರತಿಯೊಂದು ಜಾತಿಯನ್ನೂ ಸುತ್ತುವರಿದು, ಬೇರ್ಪಡಿಸುತ್ತಾ ಇದ್ದರೂ ಅದೇ ಸಮಯದಲ್ಲಿ ಅವರನ್ನು ಒಟ್ಟಾಗಿ ಹಿಡಿದಿಟ್ಟಿದೆ. ಟೆನಿಸ್ ಚೆಂಡುಗಳನ್ನು ಒಂದರ ಮೇಲೆ ಒಂದನ್ನಿಟ್ಟು ಪೋಣಿಸಿದ ದಾರದ ಹಾಗೆ. ಆದರೆ ಒಂದು ಶಕ್ತಿ ಪೂರ್ಣ ಸ್ಥಿತಿಯಾಗಿ ಜಾತಿಯನ್ನು ಅರ್ಥಮಾಡಿಕೊಳ್ಳಲು ಇವಿಷ್ಟು ಸಾಕಾಗುವುದಿಲ್ಲ. ಜಾತಿಯ ಸಕ್ರಿಯ ಸ್ವರೂಪವನ್ನು, ಅದರ ಪ್ರಕ್ರಿಯೆಯನ್ನು ತಿಳಿಯಬೇಕಾದರೆ ಇನೊಂದು ಲಕ್ಷಣವನ್ನು, ಅಂದರೆ ವರ್ಗ–ಜಾತಿ ವ್ಯವಸ್ಥೆಯನ್ನು ತಿಳಿದುಕೊಳ್ಳಬೇಕು.

ಜಾತಿ ಮತ್ತು ವರ್ಗ ಭಾವನೆಗಳ ನಡುವಣ ಸಂಬಂಧವು ಉದ್ದಕ್ಕೂ ಬಿಸಿ ಚರ್ಚೆಯ ವಸ್ತುವಾಗಿ ಬಂದಿದೆ. ಕೆಲವರು ಜಾತಿಯು ವರ್ಗದೊಂದಿಗೆ ಸಮೀಕೃತವಾಗುತ್ತದೆ, ಎರಡಕ್ಕೂ ವ್ಯತ್ಯಾಸವಿಲ್ಲ ಎನ್ನುತ್ತಾರೆ. ಇತರರು ಮೂಲಭೂತವಾಗಿ ಜಾತಿಯ ಭಾವನೆ ವರ್ಗದ ಭಾವನೆಗೆ ವಿರುದ್ಧವಾದದ್ದು ಎಂದು ಹೇಳುತ್ತಾರೆ. ಜಾತಿ ವಿಷಮತವಾದ ಈ ಅಂಶದ ಬಗ್ಗೆ ಮುಂದೆ ಇನ್ನೂ ಹೆಚ್ಚು ಹೇಳಬೇಕಾಗಿದೆ. ಇದುವರೆಗೂ ಹೇಳದಿರುವ ಒಂದು ಲಕ್ಷಣವನ್ನು ಇಲ್ಲಿ ಪ್ರಸ್ತಾಪಮಾಡುವುದು ಅಗತ್ಯ. ಜಾತಿಯು ವರ್ಗದಿಂದ ಬೇರೆಯಾದುದು ಮತ್ತು ಅದಕ್ಕೆ ವಿರುದ್ಧವಾದುದು. ಆದರೂ ಜಾತಿ ವ್ಯವಸ್ಥೆಯು – ಜಾತಿಯಲ್ಲ – ಒಂದು ವರ್ಗ ವ್ಯವಸ್ಥೆಯನ್ನು ಅಂಗೀಕರಿಸುತ್ತದೆ. ಇದು ಮೇಲೆ ಉಲ್ಲೇಖಿಸಿದ ಸ್ತರೀಕೃತ ಸ್ಥಾನಮಾನಗಳಿರುವ ವ್ಯವಸ್ಥೆಗಿಂತ ಬೇರೆಯಾದದ್ದು. ಹಿಂದೂಗಳು ಹಲವಾರು ಜಾತಿಗಳಾಗಿ ವಿಭಜಿತರಾಗಿರುವಂತೆಯೇ ಜಾತಿಗಳು ವಿವಿಧ

ಜಾತಿ, ವರ್ಗಗಳಾಗಿ ವರ್ಗೀಕೃತವಾಗಿವೆ. ಹಿಂದೂ ಜಾತಿ ಪ್ರಜ್ಞೆಯುಳ್ಳವನು. ಅವನು ವರ್ಗ ಪ್ರಜ್ಞೆಯುಳ್ಳವನು ಆಗಿದ್ದಾನೆ. ಅವನು ಜಾತಿ ಪ್ರಜ್ಞೆಯುಳ್ಳವನೋ, ವರ್ಗ ಪ್ರಜ್ಞೆಯುಳ್ಳವನೋ ಎನ್ನುವುದು ಅವನು ಸಂಘರ್ಷಿಸಬೇಕಾಗಿ ಬರುವ ಜಾತಿಯನ್ನು ಅವಲಂಬಿಸಿದೆ. ತಾನು ಸಂಘರ್ಷಿಸುವ ಜಾತಿಯು ತನ್ನ ಜಾತಿಯ ವರ್ಗದ ತೆಕ್ಕೆಗೇ ಸೇರಿದ ಇನ್ನೊಂದು ಜಾತಿಯಾದ ಪಕ್ಷದಲ್ಲಿ ಅವನು ಜಾತಿ ಪ್ರಜ್ಞೆಯುಳ್ಳವನು. ತಾನು ಘರ್ಷಿಸುವ ಜಾತಿಯು ಅದೇ ವರ್ಗವಲ್ಲದೆ ಬೇರೆ ವರ್ಗಕ್ಕೆ ಸೇರಿದ ಜಾತಿಯಾಗಿದ್ದರೆ ಅವನು ವರ್ಗ ಪ್ರಜ್ಞೆಯುಳ್ಳವನು. ಈ ವಿಚಾರದಲ್ಲಿ ಆಧಾರ ಬೇಕಾದರೆ ಮದರಾಸು, ಮುಂಬಯಿ ಪ್ರಾಂತಗಳಲ್ಲಿ ನಡೆದ ಬ್ರಾಹ್ಮಣ–ವಿರೋಧಿ ಚಳುವಳಿಯನ್ನು ಕುರಿತು ಅಧ್ಯಯನ ಮಾಡಬೇಕು. ಅದರಿಂದ ಹಿಂದೂವಿಗೆ ಜಾತಿಯ ಪರಿಧಿ ವರ್ಗದ ಪರಧಿಯಷ್ಟೇ ಸತ್ಯವಾದದ್ದು. ಜಾತಿ ಪ್ರಜ್ಞೆ ವರ್ಗ ಪ್ರಜ್ಞೆಯಷ್ಟೇ ಸತ್ಯವಾದದ್ದು ಎನ್ನುವುದು ಮನವರಿಕೆಯಾಗುತ್ತದೆ.

ಜಾತಿಯು ವರ್ಣ ವ್ಯವಸ್ಥೆಯ ವಿಕಸಿತ ರೂಪ ಎಂದು ಹೇಳಲಾಗುತ್ತದೆ. ಇದು ಅರ್ಥವಿಲ್ಲದ ಮಾತು ಎಂಬುದನ್ನು ನಾನು ಆಮೇಲೆ ತೋರಿಸಿಕೊಡುತ್ತೇನೆ. ಜಾತಿಯು ವರ್ಣದ ವಿಕೃತರೂಪವಾಗಿದೆ. ಆದರೆ ವರ್ಣ ವ್ಯವಸ್ಥೆಯ ವಿಕೃತ ರೂಪವಾಗಿರುತ್ತಲೇ ಜಾತಿ ಪದ್ಧತಿಯು ವರ್ಣದಿಂದ ವರ್ಗ ವ್ಯವಸ್ಥೆಯನ್ನು ಎರವಲು ತಂದುಕೊಂಡಿದೆ. ವಾಸ್ತವವಾಗಿ ವರ್ಗ–ಜಾತಿ ಪದ್ಧತಿಯು ಬಹಳ ನಿಕಟವಾಗಿ ವರ್ಣ ವ್ಯವಸ್ಥೆಯ ಭೇದಗಳನ್ನು ಹೋಲುತ್ತದೆ.

ಈ ದೃಷ್ಟಿಯಿಂದ ನೋಡುವುದಾದರೆ, ಜಾತಿಗಳ ಈ ಪಿರಮಿಡ್ಡಿನ ಮೂಲಕ ಹಾಯುವ ವರ್ಗಭೇದ ಭಾವನೆಯು ಪಿರಮಿಡ್ಡನ್ನು ಜಾತಿಗಳ ಬೇರೆ ಬೇರೆ ತಾಕುಗಳಾಗಿ ಒಡೆದಿದೆ. ಮೊದಲನೆಯ ಭೇದಕ ಗೆರೆಯು ಪ್ರಾಚೀನ ಚಾತುರ್ವರ್ಣ್ಯ ವ್ಯವಸ್ಥೆಯಲ್ಲಿ ಗಮನಕ್ಕೆ ಬರುವಂತಹ ವಿಭಾಜಕ ರೇಖೆಯನ್ನು ಅನುಸರಿಸುತ್ತದೆ. ಹಳೆಯ ಚಾತುರ್ವರ್ಣ್ಯ ವ್ಯವಸ್ಥೆಯು ಮೊದಲ ಮೂರು ವರ್ಣಗಳಾದ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ವರ್ಗಗಳಿಗೂ ನಾಲ್ಕನೆಯ ವರ್ಣವಾದ ಶೂದ್ರ ವರ್ಗಕ್ಕೂ ಸ್ಪಷ್ಟವಾದ ಭೇದವನ್ನು ಮಾಡಿತು. ಮೊದಲ ಮೂರು ವರ್ಗಗಳು ಆತ್ಮೋದ್ಧಾರಕ ವರ್ಗಗಳಾಗಿದ್ದವು. ಶೂದ್ರ ವರ್ಗವನ್ನು ಆತ್ಮೋದ್ಧಾರಕವಲ್ಲದ ವರ್ಗ ಎಂದು ಪರಿಗಣಿಸಲಾಯಿತು. ಈ ಭೇದಕ್ಕೆ ಆಧಾರವಾದರೋ ಮೊದಲ ಮೂರು ವರ್ಗಗಳವರು ಪವಿತ್ರ ಯಜ್ಞೋಪವೀತವನ್ನು ಧರಿಸಲು, ವೇದಾಧ್ಯಯನ ಮಾಡಲು ಅರ್ಹತೆ ಪಡೆದಿದ್ದಾರೆ ಎಂಬ ಅಂಶ. ಶೂದ್ರನಿಗೆ ಎರಡು ಹಕ್ಕುಗಳೂ ಇಲ್ಲ. ಆದ್ದರಿಂದಲೇ ಶೂದ್ರನನ್ನು ಆತ್ಮೋದ್ಧಾರಕ ವರ್ಗಕ್ಕೆ ಸೇರಿದವನಲ್ಲ ಎಂದು ಪರಿಗಣಿಸಲಾಯಿತು. ಈ ಭೇದಕ ರೇಖೆ ಇಂದೂ ಅಸ್ತಿತ್ವದಲ್ಲಿದೆ ಮತ್ತು ಇಂದಿನ ವರ್ಗಭೇದಕ್ಕೆ ಆಧಾರವಾಗಿ ಪರಿಣಮಿಸಿದೆ. ಮೇಲು ವರ್ಗದ ಜಾತಿಗಳು ಮತ್ತು ಕೆಳವರ್ಗದ ಜಾತಿಗಳು ಎಂಬುವುಗಳ ಸಂಕ್ಷಿಪ್ತ ರೂಪಗಳಾಗಿರುವ ಮೇಲು ಜಾತಿಗಳು ಮತ್ತು ಕೀಳು ಜಾತಿಗಳು ಎಂಬ ಮಾತುಗಳಲ್ಲಿ ತನ್ನ ಅಸ್ತಿತ್ವವನ್ನು ಎತ್ತಿ ತೋರಿಸುತ್ತದೆ.

ಈ ಭೇದಕ ರೇಖೆಯ ಅನಂತರ ಪಿರಮಿಡ್ಡಿನೊಳಗಿನಿಂದ ಎರಡನೆಯ ಇನ್ನೊಂದು ವರ್ಗಭೇದಕ ರೇಖೆ ಹಾಯುತ್ತದೆ. ಅದು ಕೆಳವರ್ಗದ ಜಾತಿಗಳ ಕೆಳಗೆ ಹೋಗುತ್ತದೆ. ಇದು ನಾಲ್ಕು ವರ್ಣಗಳಿಂದ ಉತ್ಪನ್ನವಾದ ಎಲ್ಲ ಜಾತಿಗಳನ್ನೂ ಅಂದರೆ ಮೇಲು ಜಾತಿ, ಕೆಳ ಜಾತಿಗಳೆಲ್ಲವನ್ನೂ ಮಿಕ್ಕವುಗಳಿಗಿಂತ ಮೇಲುಮಟ್ಟದಲ್ಲಿ ಇರಿಸುತ್ತದೆ. ಆ ಮಿಕ್ಕವುಗಳನ್ನು ನಾನು 'ಉಳಿದವು' ಎಂದು ಮಾತ್ರ ಉಲ್ಲೇಖಿಸುತ್ತೇನೆ. ಈ ವರ್ಗಭೇದಕ ರೇಖೆಯೂ ವಾಸ್ತವವಾದುದ್ದು. ತುಂಬ ಖಚಿತವಾಗಿ ನಿರೂಪಿತವಾದದ್ದು. ಚಾತುರ್ವರ್ಣ್ಯ ವ್ಯವಸ್ಥೆಯ ಮೂಲಭೂತ ತತ್ವಗಳಲ್ಲಿ ಒಂದಾದದ್ದು. ಚಾತುರ್ವರ್ಣ್ಯ ಪದ್ಧತಿಯು ನಾಲ್ಕನೆಯದರ ಮೇಲುಮಟ್ಟದಲ್ಲಿ

ಮೂರನ್ನು ಇರಿಸಿ ಭೇದವನ್ನು ಕಲ್ಪಿಸಿತು. ಅಷ್ಟೇ ಅಲ್ಲ, ಚಾತುರ್ವರ್ಣ್ಯ ವ್ಯವಸ್ಥೆಯೊಳಗಿನವುಗಳಿಗೂ, ಆ ವ್ಯವಸ್ಥೆಗೊಳಪಡದ ಹೊರಗಿನವುಗಳಿಗೂ ನಡುವೆ ಭೇದವನ್ನು ಕಲ್ಪಿಸಿತು. ಈ ಭೇದವನ್ನು ಹೇಳಲು ಪರಿಭಾಷೆಯೂ ಇತ್ತು. ಮೇಲಾಗಲಿ, ಕೆಳಗಾಗಲಿ, ಚಾತುರ್ವರ್ಣ್ಯ ವ್ಯವಸ್ಥೆಯೊಳಗಿನ ಜಾತಿಗಳನ್ನು ಸವರ್ಣ ಅಂದರೆ ವರ್ಣದ ಮುದ್ರೆ ಹೊಂದಿರುವಂಥವು ಎಂದು ಕರೆದರು. ಚಾತುರ್ವರ್ಣ್ಯ ವ್ಯವಸ್ಥೆಯ ಹೊರಗಿನವುಗಳನ್ನು ಅವರ್ಣ ಅಂದರೆ ವರ್ಣದ ಮುದ್ರೆಯಿಲ್ಲದವು ಎಂದು ಕರೆದರು. ನಾಲ್ಕು ವರ್ಣಗಳಿಂದ ಮೂಡಿ ಬಂದ ಎಲ್ಲ ಜಾತಿಗಳನ್ನೂ ಸವರ್ಣ ಹಿಂದೂಗಳು ಎಂದರು. ಇಂಗ್ಲಿಷಿನಲ್ಲಿ 'ಕ್ಯಾಸ್ಟ್ ಹಿಂದೂಸ್' (Caste Hindus) ಎಂದರೆ ಇವರೇ. 'ಉಳಿದ' ಅವರ್ಣರನ್ನು ಯೂರೋಪಿಯನರು 'ನಾನ್–ಕ್ಯಾಸ್ಟ್ ಹಿಂದೂಸ್' (Non-caste Hindus) ಎಂದರು. ಮೂಲ ಜಾತಿ ಅಥವಾ ವರ್ಣಗಳ ಹೊರಗಿನವರು ಎಂದು ಇದರ ಅರ್ಥ.

ಜಾತಿ ವ್ಯವಸ್ಥೆಯನ್ನು ಕುರಿತು ಬರೆದಿರುವ ಬಹುಭಾಗ ಸವರ್ಣ ಹಿಂದೂಗಳಲ್ಲಿ ಕಂಡುಬರುವ ಜಾತಿ ವ್ಯವಸ್ಥೆಗೆ ಅನ್ವಯಿಸುವಂಥದು. ಅವರ್ಣ ಹಿಂದೂಗಳ ವಿಷಯವಾಗಿ ತಿಳಿಯುವುದು ಬಹಳ ಸ್ವಲ್ಪ. ಅವರ್ಣ ಹಿಂದೂಗಳು ಯಾರು, ಹಿಂದೂ ಸಮಾಜದಲ್ಲಿ ಅವರ ಸ್ಥಾನವೇನು, ಸವರ್ಣ ಹಿಂದೂಗಳೊಂದಿಗೆ ಅವರು ಎಂಥ ಸಂಬಂಧವನ್ನು ಹೊಂದಿದ್ದಾರೆ–ಈ ಕೆಲವು ಪ್ರಶ್ನೆಗಳಿಗೆ ಯಾರೂ ಇದುವರೆಗೂ ಗಮನ ನೀಡಿಲ್ಲ. ಈ ಪ್ರಶ್ನೆಗಳನ್ನು ಪರಿಗಣಿಸದೆ ಹಿಂದೂಗಳು ನಿರ್ಮಿಸಿರುವ ಸಾಮಾಜಿಕ ನಿರ್ಮಿತಿಯ ನಿಜವಾದ ಚಿತ್ರವನ್ನು ಪಡೆಯಲು ಯಾರಿಗೂ ಸಾಧ್ಯವಾಗುವುದಿಲ್ಲ. ಸವರ್ಣ ಹಿಂದೂಗಳಿಗೂ ಅವರ್ಣ ಹಿಂದೂಗಳಿಗೂ ಭೇದ ಕಲ್ಪಿಸುವ ವರ್ಗಭೇದಕ ರೇಖೆಯನ್ನು ಗಮನಿಸದೆ ಬಿಟ್ಟರೆ, ಅದು ಮಾಟಗಾತಿಯರು, ರಾಕ್ಷಸರು, ರಹಸ್ಯಗಳನ್ನು ಕೈಬಿಟ್ಟ ಗ್ರಿಮ್‌ನ ಕಿನ್ನರ ಕಥೆಯಂತಾಗುತ್ತದೆ.

* * * *

ಭಾಗ – ಮೂರು

# ಪ್ರಾಚೀನ ಭಾರತದಲ್ಲಿ ಕ್ರಾಂತಿ ಮತ್ತು ಪ್ರತಿ ಕ್ರಾಂತಿ

*ಡಾ. ಬಿ. ಆರ್. ಅಂಬೇಡ್ಕರರು 'ಪ್ರಾಚೀನ ಭಾರತದಲ್ಲಿ ಕ್ರಾಂತಿ ಮತ್ತು ಪ್ರತಿ ಕ್ರಾಂತಿ' ಎಂಬ ಉದ್ಗ್ರಂಥವನ್ನು ಬರೆಯಲು ಉದ್ದೇಶಿಸಿದ್ದರು. ಇದರ ಪರಿವಿಡಿಯನ್ನು ಕಾರ್ಯಯೋಜನೆಯ ಅಧ್ಯಾಯದಲ್ಲಿ ಮುದ್ರಿಸಲಾಗಿದೆ. ಈ ಸ್ಥೂಲ ಶೀರ್ಷಿಕೆಯ ಅಡಿಯಲ್ಲಿ ಅವರು ಏಳು ಗ್ರಂಥಗಳನ್ನು ಬರೆಯಲು ಯೋಜಿಸಿದ್ದರು. ನಮ್ಮ ಸಮಿತಿಗೆ ಅವರ ಸಂಗ್ರಹದಿಂದ ಕೆಲವು ಪುಟಗಳನ್ನು ಮತ್ತು ಕೆಲವು ಅಧ್ಯಾಯಗಳನ್ನು ಮಾತ್ರ ದೊರಕಿಸಲು ಶಕ್ಯವಾಯಿತು. ಹೀಗೆ ದೊರೆತ ಅಧ್ಯಾಯಗಳೂ ಕೂಡ ಅಪೂರ್ಣವಾಗಿವೆ. ಪರಿಶೀಲನೆಯ ಅನಂತರ 'ಪ್ರಾಚೀನ ಭಾರತದಲ್ಲಿ ಕ್ರಾಂತಿ ಮತ್ತು ಪ್ರತಿಕ್ರಾಂತಿ'ಯನ್ನು – ಅದು ಅಪೂರ್ಣವಾಗಿದ್ದರೂ, ಇತರ ಲಭ್ಯ ಸಾಮಗ್ರಿಯೊಡನೆ ಸಾದರಪಡಿಸಬೇಕೆಂದು ಸಮಿತಿ ನಿರ್ಧರಿಸಿತು. ಬೌದ್ಧಧರ್ಮದ ಉದಯವನ್ನು ಒಂದು ಕ್ರಾಂತಿಯೆಂದು ಡಾ. ಅಂಬೇಡ್ಕರ್ ಪರಿಗಣಿಸಿದ್ದರು. ಬ್ರಾಹ್ಮಣರಿಂದ ಪ್ರಾರಂಭವಾದ ಪ್ರತಿ ಕ್ರಾಂತಿಯು ಬೌದ್ಧಧರ್ಮದ ಅವನತಿ ಮತ್ತು ಪತನಕ್ಕೆ ಕಾರಣವಾಯಿತು.*

*ಈ ಶೀರ್ಷಿಕೆಯಲ್ಲಿ ಈ ಕೆಳಗಿನ ಅಧ್ಯಾಯಗಳನ್ನು ಸೇರಿಸಲಾಗಿದೆ:*

*೧. ಪ್ರಾಚೀನ ಭಾರತದ ಉತ್ಖನನ*

*೨. ಪ್ರಾಚೀನ ರಾಜ್ಯವ್ಯವಸ್ಥೆ: ಆರ್ಯ ಸಮಾಜದ ಸ್ಥಿತಿ*

*೩. ಪತಿತ ಪೌರೋಹಿತ್ಯ*

*೪. ಸುಧಾರಕರು ಮತ್ತು ಅವರಿಗಾದ ಗತಿ*

*೫. ಬೌದ್ಧಧರ್ಮದ ಅವನತಿ ಮತ್ತು ಪತನ*

*೬. ಬ್ರಾಹ್ಮಣ ಸಾಹಿತ್ಯ*

*೭. ಬ್ರಾಹ್ಮಣ ಧರ್ಮದ ದಿಗ್ವಿಜಯ: ರಾಜಹತ್ಯೆ ಅಥವಾ ಪ್ರತಿಕ್ರಾಂತಿಯ ಹುಟ್ಟು.*

*೮. ಗೃಹದ ನೀತಿನಿಯಮಗಳು.*

*೯. ಭಗವದ್ಗೀತೆ ಕುರಿತ ಪ್ರಬಂಧಗಳು ಪ್ರತಿಕ್ರಾಂತಿಯ ತಾತ್ವಿಕ ಸಮರ್ಥನೆ: ಕೃಷ್ಣ ಮತ್ತು ಅವನ ಗೀತೆ*

*೧೦. ವಿರಾಟಪರ್ವ ಮತ್ತು ಉದ್ಯೋಗಪರ್ವಗಳ ವಿಶ್ಲೇಷಣಾತ್ಮಕ ಟಿಪ್ಪಣಿಗಳು*

*೧೧. ಬ್ರಾಹ್ಮಣರ ವಿರುದ್ಧ ಮತ್ತು ಕ್ಷತ್ರಿಯರು*

*೧೨. ಶೂದ್ರರು ಮತ್ತು ಪ್ರತಿಕ್ರಾಂತಿ*

*೧೩. ಸ್ತ್ರೀಯರು ಮತ್ತು ಪ್ರತಿಕ್ರಾಂತಿ*

*ಈ ಅಧ್ಯಾಯಗಳನ್ನು ಕಾರ್ಯಯೋಜನೆಯ ಕೊನೆಯ ಅಧ್ಯಾಯಗಳಲ್ಲಿ ಸೂಚಿಸಿದ ಯೋಜನೆಯೊಡನೆ ಓದುಗರು ಹೋಲಿಸಿ ನೋಡಬಹುದು.*

– ಮೂಲ ಸಂಪುಟದ ಸಂಪಾದಕರು

## ಅಧ್ಯಾಯ ೫

# ಪ್ರಾಚೀನ ಭಾರತದ ಉತ್ಖನನ

*ಈ ಅಧ್ಯಾಯದ ಎರಡು ಬೆರಳಚ್ಚಿನ ಪ್ರತಿಗಳಿವೆ. ಅವೆರಡೂ ಡಾ.ಬಾಬಾಸಾಹೇಬ ಅಂಬೇಡ್ಕರರು ತಮ್ಮ ಕೈಬರಹದಲ್ಲಿ ಮಾಡಿದ ಸೇರ್ಪಡೆ ಮತ್ತು ತಿದ್ದುಪಡಿಗಳನ್ನು ಒಳಗೊಂಡಿವೆ. ಪರ್ಯಾಲೋಚನೆಯ ಅನಂತರ ಎರಡನೆಯ ಪಾಠಾಂತರವನ್ನು ಇಲ್ಲಿ ಸೇರಿಸಿಕೊಳ್ಳಬೇಕೆಂದು ನಿರ್ಧರಿಸಿದೆವು. ಕೇವಲ ಮೂರು ಪುಟಗಳ ಈ ಪ್ರಬಂಧ ಡಾ. ಅಂಬೇಡ್ಕರ್ ಅವರು ತಮ್ಮ ಮನಸ್ಸಿನಲ್ಲಿಟ್ಟುಕೊಂಡಿರಬಹುದಾದ ವಿಸ್ತೃತ ವಿಷಯವೊಂದರ ಪೀಠಿಕೆಯಂತೆ ಕಾಣುತ್ತದೆ.*

– ಸಂಪಾದಕರು

ಭಾರತದ ಪ್ರಾಚೀನ ಇತಿಹಾಸದ ಬಹುಭಾಗವು ಇತಿಹಾಸವೇ ಅಲ್ಲ. ಹೀಗೆಂದರೆ ಪ್ರಾಚೀನ ಭಾರತಕ್ಕೆ ಇತಿಹಾಸವಿಲ್ಲ ಎಂದು ಹೇಳಿದಂತಲ್ಲ. ಅದಕ್ಕೆ ವಿಪುಲವಾದ ಇತಿಹಾಸವುಂಟು. ಆದರೆ ಅದು ವಿರೂಪಗೊಂಡಿದೆ. ಅದು ಸ್ತ್ರೀಯರನ್ನೂ, ಮಕ್ಕಳನ್ನೂ ರಂಜಿಸಲೆಂದು ರಚಿಸಿದ ಪುರಾಣವಾಗಿಬಿಟ್ಟಿದೆ. ಬ್ರಾಹ್ಮಣ ಲೇಖಕರು ಬುದ್ಧಿಪೂರ್ವಕವಾಗಿ ಹೀಗೆ ಮಾಡಿರಬೇಕೆಂದು ಅನ್ನಿಸುತ್ತದೆ. ದೇವ ಎಂಬ ಪದವನ್ನೇ ತೆಗೆದುಕೊಳ್ಳೋಣ. ಅದರ ಅರ್ಥವೇನು? ಜನ–ವಿಶೇಷವೆಂಬ ಪದವು ಮಾನವ ಕುಟುಂಬದ ಸದಸ್ಯ ಎಂಬ ಅರ್ಥವನ್ನು ಮೂಡಿಸುತ್ತದೆಯೇ? ಅದು (ವೇದ ಎಂಬ ಪದವು) ಒಂದು ಅತಿಮಾನವ ವ್ಯವಸ್ಥೆಯನ್ನು ಪ್ರತಿನಿಧಿಸುವಂತೆ ಕಾಣುತ್ತದೆ. ಇದರಿಂದಾಗಿ ಆ ಪದದಲ್ಲಿ ಅಡಕವಾಗಿರುವ ಇತಿಹಾಸದ ತಿರುಳನ್ನೇ ಹಿಂಡಿ ಹೊರತೆಗೆಯಲಾಗಿದೆ.

ದೇವ ಪದದ ಜೊತೆಗೆ ಯಕ್ಷ, ಗಣ, ಗಂಧರ್ವ, ಕಿನ್ನರ ಈ ಹೆಸರುಗಳೂ ಕಂಡುಬರುತ್ತವೆ. ಅವರೆಲ್ಲ ಯಾರು? 'ಮಹಾಭಾರತ' ಮತ್ತು 'ರಾಮಾಯಣ'ಗಳನ್ನು ಓದಿದಾಗ ನಮಗೆ ಅವರು ಕ್ಷಿತಿಜವನ್ನೆಲ್ಲ ಆವರಿಸಿಕೊಂಡ, ಆದರೆ ನಿಜವಾಗಿ ಅಸ್ತಿತ್ವದಲ್ಲಿರದ, ಕಾಲ್ಪನಿಕ ಜೀವಿಗಳಿರಬೇಕೆಂಬ ಭಾವನೆ ಬರುತ್ತದೆ.

ಆದರೆ ಯಕ್ಷ, ಗಣ, ಗಂಧರ್ವ, ಕಿನ್ನರರು ನಿಜವಾಗಿ ಮಾನವಕುಲದ ಸದಸ್ಯರು. ಅವರೆಲ್ಲ ದೇವ ಎಂಬ ಜನರ ಊಳಿಗದಲ್ಲಿರುವವರು. ಯಕ್ಷರು ಅರಮನೆಗಳನ್ನು ಕಾಯುತ್ತಿದ್ದವರು. ಗಣ ಎಂಬುವರು ದೇವರ ಕಾವಲಿನವರು. ಗಂಧರ್ವರು ತಮ್ಮ ಸಂಗೀತ ಮತ್ತು ನೃತ್ಯದಿಂದ ದೇವರನ್ನು ರಂಜಿಸುತ್ತಿದ್ದರು. ಕಿನ್ನರರೂ ಕೂಡ ದೇವರ ಊಳಿಗದಲ್ಲಿದ್ದರು. ಈ ಕಿನ್ನರರ ವಂಶಜರು ಈಗಲೂ ಹಿಮಾಚಲ ಪ್ರದೇಶದಲ್ಲಿ ವಾಸವಾಗಿದ್ದಾರೆ.

ಅಸುರ ಎಂಬ ಹೆಸರನ್ನು ತೆಗೆದುಕೊಳ್ಳೋಣ. 'ಮಹಾಭಾರತ' ಮತ್ತು 'ರಾಮಾಯಣ'ಗಳಲ್ಲಿ ಕೊಟ್ಟಿರುವ ಅಸುರರ ವರ್ಣನೆಯನ್ನು ನೋಡಿದರೆ ಅವರು ಮಾನವೇತರ ಪ್ರಪಂಚಕ್ಕೆ ಸೇರಿದವರೆಂದು

ಭಾಸವಾಗುತ್ತದೆ. ಅಸುರರು ಹತ್ತು ಬಂಡಿ ಹೊರೆಯಷ್ಟು ಆಹಾರ ತಿನ್ನುತ್ತಿದ್ದರೆಂಬ ವರ್ಣನೆಯಿದೆ. ಅವರು ರಾಕ್ಷಸ ಗಾತ್ರದವರು. ಆರು ತಿಂಗಳಷ್ಟು ದೀರ್ಘಕಾಲ ನಿದ್ರಿಸುತ್ತಿದ್ದರು. ಅವರಿಗೆ ಹತ್ತು ಬಾಯಿಗಳು ಇದ್ದುವು. ಇನ್ನು ರಾಕ್ಷಸ ಎಂದರೆ ಯಾರು? ಅವರೂ ಕೂಡ ಮಾನವೇತರ ಜೀವಿಗಳಂತೆ ವರ್ಣಿತರಾಗಿದ್ದಾರೆ. ಅವರು ಗಾತ್ರದಲ್ಲಿ, ತಿನ್ನುಣ್ಣುವ ಸಾಮರ್ಥ್ಯದಲ್ಲಿ, ಜೀವನದ ರೂಢಿಗಳಲ್ಲಿ ಅಸುರರನ್ನೇ ಹೋಲುತ್ತಾರೆ.

ನಾಗಾಗಳ ಬಗೆಗೂ ವಿಪುಲವಾದ ಪ್ರಸ್ತಾಪ ಬಂದಿದೆ. ಆದರೆ ನಾಗಾ ಎಂದರೆ ಯಾರು? ನಾಗಾ ಎಂದರೆ ಒಂದು ಸರ್ಪ ಅಥವಾ ಹಾವು ಎಂಬಂತೆ ಹೇಳಲಾಗಿದೆ. ಇದು ಸತ್ಯವಾಗಲು ಸಾಧ್ಯವೆ? ಸತ್ಯವಿರಲಿ ಬಿಡಲಿ, ಹಿಂದೂಗಳು ಹಾಗೆಂದೇ ನಂಬಿದ್ದಾರೆ. ಪ್ರಾಚೀನ ಭಾರತದ ಇತಿಹಾಸವನನು (ಗೋರಿಯಿಂದ) ಹೊರಗೆಳೆಯಬೇಕಾಗಿದೆ. ಹಾಗೆ ಎತ್ತಿ ತೆಗೆಯದೆ ಹೋದರೆ ಪ್ರಾಚೀನ ಭಾರತಕ್ಕೆ ಇತಿಹಾಸವಿಲ್ಲದೇ ಹೋಗಬಹುದು. ಆದರೆ ಸುದೈವದಿಂದ ಬೌದ್ಧ ಸಾಹಿತ್ಯದ ಸಹಾಯವನ್ನು ಪಡೆದುಕೊಂಡು ನಾವು ಬ್ರಾಹ್ಮಣ ಲೇಖಕರು ಯಾವುದೇ ಬುದ್ಧಿಭ್ರಮಣೆಯ ಸ್ಥಿತಿಯಲ್ಲಿ ಒಡ್ಡಿದ ಈ ಭಗ್ನಾವಶೇಷಗಳ ರಾಶಿಯಿಂದ ಪ್ರಾಚೀನ ಭಾರತದ ಇತಿಹಾಸವನ್ನು ಹೊರತೆಗೆಯಲು ಸಾಧ್ಯವಿದೆ.

ಇಂಥ ಭಗ್ನಾವಶೇಷಗಳನ್ನು ತೆಗೆದುಹಾಕಿ, ಅವುಗಳ ಅಡಿಯಲ್ಲಿರುವ ತಥ್ಯವನ್ನು ಸ್ಫುಟವಾಗಿ ಮತ್ತು ಸ್ಪಷ್ಟವಾಗಿ ಕಾಣಲು ಬೌದ್ಧಸಾಹಿತ್ಯವು ಬಹಳಷ್ಟು ಸಹಾಯಮಾಡಬಲ್ಲದು.

ದೇವ ಎಂಬುವರು ಮಾನವ ಜೀವಿಗಳ ಒಂದು ಸಮುದಾಯ ಎಂಬುದನ್ನು ಬೌದ್ಧಸಾಹಿತ್ಯವು ತೋರಿಸುತ್ತದೆ. ಅನೇಕ ಜನ ದೇವರು ಬುದ್ಧನನ್ನು ಕಂಡು ತಮ್ಮ ಸಂಶಯಗಳನ್ನೂ ಸಂಕಷ್ಟಗಳನ್ನೂ ನಿವಾರಿಸಿಕೊಂಡಿದ್ದಾರೆ. ದೇವರು ಮನುಷ್ಯರಲ್ಲದೇ ಹೋಗಿದ್ದರೆ ಇದು ಹೇಗೆ ಸಾಧ್ಯ?

ಅದೇ ರೀತಿಯಾಗಿ ಇನ್ನೊಂದು ಗೂಢ ಪ್ರಶ್ನೆಯಾದ ನಾಗಾಗಳ ಬಗೆಗೂ ಬೌದ್ಧ ಧರ್ಮಶಾಸ್ತ್ರ ಸಾಹಿತ್ಯ ಹೆಚ್ಚಿನ ಬೆಳಕನ್ನು ಬೀರಬಲ್ಲುದು. ಅದು (ಮನುಷ್ಯ) ಗರ್ಭದಿಂದ ಹುಟ್ಟಿದ ನಾಗಾಗಳು ಮತ್ತು ಮೊಟ್ಟೆಯಿಂದ ಹುಟ್ಟಿದ ನಾಗಾಗಳು – ಇವೆರಡರ ನಡುವಿನ ವ್ಯತ್ಯಾಸವನ್ನು ಹೇಳಿ ನಾಗಾ ಎಂಬ ಪದಕ್ಕೆ ಇರುವ ಎರಡು ಅರ್ಥಗಳು ಸ್ಪಷ್ಟಪಡಿಸುತ್ತದೆ. ಮೂಲ ಅರ್ಥದಲ್ಲಿ ನಾಗಾ ಎಂಬುದು ಮನುಷ್ಯ ಸಮುದಾಯವೊಂದರ ಹೆಸರನ್ನು ಸೂಚಿಸುತ್ತದೆ.

ಮತ್ತೆ ಅಸುರರೂ ಕೂಡ ರಾಕ್ಷಸರಲ್ಲ. ಅವರೂ ಕೂಡ ಜನ–ವಿಶೇಷ ಎನಿಸುವ ಮನುಷ್ಯ ಜೀವಿಗಳು. ಅಸುರರು ಸೃಷ್ಟಿಕರ್ತನಾದ ಪ್ರಜಾಪತಿಯ ವಂಶಜರೆಂದು 'ಶತಪಥ ಬ್ರಾಹ್ಮಣ'ವು ಹೇಳುತ್ತದೆ. ಅಂಥವರು ಹೇಗೆ ದುಷ್ಟಶಕ್ತಿಗಳಾದರೋ ತಿಳಿಯದು. ಆದರೆ ಅವರು ದೇವರುಗಳ ವಿರುದ್ಧ ಭೂಮಿಯ ಒಡೆತನಕ್ಕಾಗಿ ಹೋರಾಡಿದರು. ದೇವರುಗಳಿಂದ ಪರಾಜಿತರಾದರು ಹಾಗೂ ಕೊನೆಗೆ ಅವರಿಗೆ ಬಲಿ ಬಿದ್ದರೆಂಬ ಸಂಗತಿಯೂ ನಮೂದಿತವಾಗಿದೆ. ಇದರಿಂದ ಸ್ಪಷ್ಟವಾಗುವ ವಿಷಯವೇನೆಂದರೆ ಅಸುರರು ಮಾನವಕುಲದ ಸದಸ್ಯರೇ ಹೊರತು, ರಾಕ್ಷಸರಲ್ಲ.

ಹೀಗೆ ಭಗ್ನಾವಶೇಷಗಳನ್ನು ಹೊರತೆಗೆಯುವುದರಿಂದ ನಾವು ಪ್ರಾಚೀನ ಭಾರತದ ಇತಿಹಾಸವನ್ನು ಹೊಸ ಬೆಳಕಿನಲ್ಲಿ ನೋಡುವುದು ಸಾಧ್ಯ.

* * * *

## ಅಧ್ಯಾಯ ೬

# ಪ್ರಾಚೀನ ರಾಜ್ಯ ವ್ಯವಸ್ಥೆ: ಆರ್ಯ ಸಮಾಜದ ಸ್ಥಿತಿ

*ಈ ಪ್ರಬಂಧವು ಬೆರಳಚ್ಚಿನ ೧೧ ಫೂಲ್‌ಸ್ಕೇಪ್ ಪುಟಗಳನ್ನು ಹೊಂದಿದ್ದು, ಅವನ್ನು ಒಂದು ಕಡತದಲ್ಲಿ ಜೋಡಿಸಲಾಗಿದೆ. ಕೊನೆಯ ವಾಕ್ಯವನ್ನು ನೋಡಿದರೆ ಈ ಅಧ್ಯಾಯವು ಅಪೂರ್ಣವೆಂದು ಭಾಸವಾಗುತ್ತದೆ.*

– ಸಂಪಾದಕರು

## I

ಬೌದ್ಧಧರ್ಮವು ಒಂದು ಕ್ರಾಂತಿಯಾಗಿತ್ತು. ಅದು ಫ್ರೆಂಚ್ ಮಹಾಕ್ರಾಂತಿಯಂತೆಯೇ ಇರುವ ಒಂದು ಮಹಾಕ್ರಾಂತಿ. ಮೊದಲಿಗೆ ಒಂದು ಧಾರ್ಮಿಕ ಕ್ರಾಂತಿಯ ರೀತಿಯಲ್ಲಿ ಪ್ರಾರಂಭವಾದರೂ, ಅದು ಧಾರ್ಮಿಕ ಕ್ರಾಂತಿಯನ್ನು ಮೀರಿ ಬೆಳೆಯಿತು. ಸಾಮಾಜಿಕ ಹಾಗೂ ರಾಜಕೀಯ ಕ್ರಾಂತಿಯಾಗಿ ಮಾರ್ಪಟ್ಟಿತು. ಇಂಥ ಕ್ರಾಂತಿಯ ಸ್ವರೂಪದ ಮಹತ್ವವನ್ನು ತಿಳಿಯಬೇಕಾದರೆ, ಕ್ರಾಂತಿ ಪ್ರಾರಂಭವಾಗುವ ಮೊದಲಿಗೆ ಇದ್ದ ಸಮಾಜದ ಸ್ಥಿತಿಯನ್ನು ತಿಳಿಯುವುದು ಅವಶ್ಯಕ. ಫ್ರೆಂಚ್ ಕ್ರಾಂತಿಯ ಭಾಷೆಯನ್ನೇ ಬಳಸುವುದಾದರೆ, ಭಾರತದ ಪ್ರಾಚೀನ ವ್ಯವಸ್ಥೆಯ ಒಂದು ಚಿತ್ರವನ್ನು ಮೊದಲು ಕಲ್ಪಿಸಿಕೊಳ್ಳುವುದು ಅವಶ್ಯಕ.

ತನ್ನ ಉಪದೇಶಗಳಿಂದ ಬುದ್ಧನು ತಂದ ಮಹಾ ಸುಧಾರಣೆಯನ್ನು ಅರ್ಥ ಮಾಡಿಕೊಳ್ಳಬೇಕಾದರೆ, ಅವನು ತನ್ನ ಉದ್ದಿಷ್ಟ ಕಾರ್ಯವನ್ನು ಪ್ರಾರಂಭಮಾಡುವ ಹೊತ್ತಿಗೆ ಆರ್ಯ ನಾಗರಿಕತೆಯು ಎಂಥ ಅವನತಿಯ ಸ್ಥಿತಿಯನ್ನು ತಲುಪಿತ್ತು ಎಂಬುದರ ಕಲ್ಪನೆ ಒಂದಿಷ್ಟಾದರೂ ನಮಗೆ ಇರಬೇಕು.

ಅವನ ಕಾಲದ ಆರ್ಯ ಸಮುದಾಯವು ಸಾಮಾಜಿಕವಾಗಿ, ಧಾರ್ಮಿಕವಾಗಿ ಮತ್ತು ಆಧ್ಯಾತ್ಮಿಕವಾಗಿ ಅತ್ಯಧಮ ರೀತಿಯ ವಿಷಯಲಂಪಟತೆಯಲ್ಲಿ ಮುಳುಗಿಹೋಗಿತ್ತು.

ಸಾಮಾಜಿಕ ಅನಿಷ್ಟಗಳಲ್ಲಿ ಕೆಲವೇ ಕೆಲವನ್ನು ಮಾತ್ರ ಹೆಸರಿಸುವುದಾದರೆ, ದ್ಯೂತವನ್ನು ಗಮನಿಸಬಹುದು. ಮದ್ಯಪಾನದಂತೆಯೇ ದ್ಯೂತವು ಆರ್ಯರಲ್ಲಿ ಬಹಳ ಪ್ರಚಲಿತವಾಗಿತ್ತು.

ಪ್ರತಿಯೊಬ್ಬ ರಾಜನ ಅರಮನೆಗೆ ಹೊಂದಿಕೊಂಡಂತೆ ಒಂದು ದ್ಯೂತ ಗೃಹವಿರುತ್ತಿತ್ತು. ಪ್ರತಿಯೊಬ್ಬ ರಾಜನೂ ತನ್ನ ಜೊತೆ ಆಡಲು ಒಬ್ಬ ನಿಷ್ಣಾತ ಜೂಜುಗಾರನನ್ನು ನಿಯಮಿಸಿಕೊಂಡಿರುತ್ತಿದ್ದನು. ರಾಜನಾದ ವಿರಾಟನು ತನ್ನ ಊಳಿಗದಲ್ಲಿ ಕಂಕ ಎಂಬ ನಿಷ್ಣಾತ ಜೂಜುಗಾರನನ್ನು ಇಟ್ಟುಕೊಂಡಿದ್ದನು. ರಾಜರುಗಳಿಗೆ ದ್ಯೂತವು ಕೇವಲ ವಿನೋದದ ವಿಷಯವಾಗಿರಲಿಲ್ಲ. ಅವರು ದೊಡ್ಡ ದೊಡ್ಡ ಪಣಗಳನ್ನು ಹಚ್ಚಿ ಆಡುತ್ತಿದ್ದರು. ತಮ್ಮ ರಾಜ್ಯಗಳನ್ನು, ಆಶ್ರಿತರನ್ನು, ಬಂಧುಗಳನ್ನು, ಗುಲಾಮರನ್ನು ಹಾಗೂ ಸೇವಕರನ್ನು

ಪಣಕ್ಕೆ ಒಡ್ಡುತ್ತಿದ್ದರು.[೧] ನಳ ಮಹಾರಾಜನು ಪುಷ್ಕರನೊಡನೆ ದ್ಯೂತವಾಡುವಾಗ ಎಲ್ಲವನ್ನೂ ಪಣಕ್ಕಿಟ್ಟು ಸೋತನು. ಅವನು ತನ್ನನ್ನು ಮತ್ತು ತನ್ನ ಹೆಂಡತಿ ದಮಯಂತಿಯನ್ನು ಮಾತ್ರ ಪಣಕ್ಕಿಡಲಿಲ್ಲ. ನಳನು ಅಡವಿಗೆ ಹೋಗಿ ಭಿಕ್ಷುಕನಂತೆ ಜೀವಿಸಬೇಕಾಯಿತು. ನಳನನ್ನು ಮೀರಿಸಿದ ರಾಜರೂ ಇದ್ದರು. ಪಾಂಡವರಲ್ಲಿ ಹಿರಿಯನಾದ ಧರ್ಮರಾಯನು ದ್ಯೂತದಲ್ಲಿ ಸರ್ವಸ್ವವನ್ನೂ, ತನ್ನ ಸಹೋದರರನ್ನೂ, ತನ್ನ ಮತ್ತು ಸಹೋದರರೆಲ್ಲರ ಪತ್ನಿಯಾದ ದ್ರೌಪದಿಯನ್ನೂ ಹೇಗೆ ಜೂಜಿಗೂಡ್ಡಿದನೆಂಬುದನ್ನು ಮಹಾಭಾರತವು ತಿಳಿಸುತ್ತದೆ.[೨] ಆರ್ಯರಿಗೆ ದ್ಯೂತವು ಒಂದು ಗೌರವದ ಪ್ರಶ್ನೆಯಾಗಿತ್ತು. ದ್ಯೂತಕ್ಕೆ ಅಮಂತ್ರಿಸುವುದು ಒಬ್ಬನ ಗೌರವ ಹಾಗೂ ಪ್ರತಿಷ್ಠೆಗೆ ಒಡ್ಡಿದ ಸವಾಲೆಂದು ತಿಳಿಯಲಾಗುತ್ತಿತ್ತು. ಜೂಜಿನ ಅನರ್ಥಕಾರಿ ಪರಿಣಾಮಗಳ ಬಗೆಗೆ ಮೊದಲೇ ಎಚ್ಚರಿಕೆ ಕೊಟ್ಟಿದ್ದರೂ ಧರ್ಮರಾಯನು ದ್ಯೂತವಾಡಿದನು. ಅವನು ಹೇಳಿದ ಸಮಾಧಾನವೆಂದರೆ ಅವನನ್ನು ದ್ಯೂತಕ್ಕೆ ಆಮಂತ್ರಿಸಲಾಗಿತ್ತು ಮತ್ತು ಹಾಗೆ ಆಮಂತ್ರಿಸಿದ ಮೇಲೆ ಗೌರವಸ್ಥನಾದ ತಾನು ಅಂಥ ಆಮಂತ್ರಣವನ್ನು ನಿರಾಕರಿಸುವುದು ಸಾಧ್ಯವಿರಲಿಲ್ಲ.

ದ್ಯೂತದ ಈ ದುಷ್ಟ ಚಟವು ರಾಜರಿಗೆ ಮಾತ್ರ ಸೀಮಿತವಾಗಿರಲಿಲ್ಲ. ಶ್ರೀಸಾಮಾನ್ಯರಿಗೂ ಈ ಸೋಂಕು ಬಡಿದಿತ್ತು. ದ್ಯೂತದಿಂದ ಹಾಳಾದ ಬಡ ಆರ್ಯನೊಬ್ಬನ ಪ್ರಲಾಪ 'ಋಗ್ವೇದ'ದಲ್ಲಿದೆ. ಕೌಟಿಲ್ಯನ ಕಾಲದಲ್ಲಿ ಜೂಜು ಎಷ್ಟೊಂದು ಸಾಮಾನ್ಯವಾಗಿತ್ತೆಂದರೆ ರಾಜನ ಪರವಾನಗಿ ಪಡೆದ ದ್ಯೂತಗೃಹಗಳು ಇರುತ್ತಿದ್ದವು ಮತ್ತು ಅವುಗಳಿಂದ ರಾಜನಿಗೆ ಸಾಕಷ್ಟು ಆದಾಯ ಬರುತ್ತಿತ್ತು.

ಆರ್ಯರಲ್ಲಿ ಬಹಳವಾಗಿ ಪ್ರಚಲಿತವಾಗಿದ್ದ ಇನ್ನೊಂದು ದುಷ್ಟ ಚಟವೆಂದರೆ ಮದ್ಯಪಾನ. ಮದ್ಯಗಳಲ್ಲಿ ಸೋಮ ಮತ್ತು ಸುರಾ ಎಂಬ ಎರಡು ಪ್ರಕಾರಗಳು. ಸೋಮವು ಯಜ್ಞಗಳಲ್ಲಿ ಬಳಸುವ ಮದ್ಯವಾಗಿತ್ತು. ಮೊದಲು ಬ್ರಾಹ್ಮಣರು, ಕ್ಷತ್ರಿಯರು ಮತ್ತು ವೈಶ್ಯರಿಗೆ ಮಾತ್ರ ಸೋಮಪಾನ ಮಾಡಲು ಅನುಮತಿ ನೀಡಲಾಗಿತ್ತು. ಅನಂತರ ಬ್ರಾಹ್ಮಣರು ಮತ್ತು ಕ್ಷತ್ರಿಯರಿಗೆ ಮಾತ್ರ ಒಪ್ಪಿಗೆ ನೀಡಲಾಯಿತು. ವೈಶ್ಯರನ್ನು ಸೋಮಪಾನದಿಂದ ಹೊರಗಿಡಲಾಯಿತು. ಶೂದ್ರರು ಎಂದೂ ಅದರ ರುಚಿ ನೋಡುವಂತಿರಲಿಲ್ಲ. ಸೋಮರಸವನ್ನು ತಯಾರಿಸುವ ರಹಸ್ಯ ಬ್ರಾಹ್ಮಣರಿಗೆ ಮಾತ್ರ ತಿಳಿದಿತ್ತು. ಆದರೆ ಸುರಾಪಾನ ಎಲ್ಲರಿಗೂ ಮುಕ್ತವಾಗಿತ್ತು, ಅಲ್ಲದೆ ಎಲ್ಲರೂ ಅದನ್ನು ಕುಡಿಯುತ್ತಿದ್ದರು. ಬ್ರಾಹ್ಮಣರೂ ಸುರಾಪಾನ ಮಾಡುತ್ತಿದ್ದರು. ಅಸುರರ ಗುರುವಾದ ಶುಕ್ರಚಾರ್ಯನು ಎಷ್ಟು ಅತಿಶಯವಾಗಿ ಕುಡಿದಿದ್ದನೆಂದರೆ ಅವನು ತನಗೊಬ್ಬನಿಗೆ ಮಾತ್ರ ತಿಳಿದಿದ್ದ ಹಾಗೂ ದೇವರಿಂದ ಹತರಾದ ಅಸುರರನ್ನು ಪುನಃ ಬದುಕಿಸುವ ಜೀವದಾನ ಶಕ್ತಿಯನ್ನು ಹೊಂದಿದ್ದ ಮಂತ್ರವನ್ನು ದೇವರುಗಳ ಗುರುವಾದ ಬೃಹಸ್ಪತಿಯ ಮಗ ಕಚನಿಗೆ ಸುರೆಯ ಅಮಲಿನಲ್ಲಿ ಕೊಟ್ಟುಬಿಟ್ಟನು. ಕೃಷ್ಣ ಮತ್ತು ಅರ್ಜುನರು ಒಂದು ಪ್ರಸಂಗದಲ್ಲಿ ಬಹಳಷ್ಟು ಮದ್ಯಪಾನ ಮಾಡಿ ಎಚ್ಚರ ತಪ್ಪಿದ್ದರೆಂದು 'ಮಹಾಭಾರತ'ದಲ್ಲಿ ಹೇಳಿದೆ. ಆರ್ಯರ ಸಮಾಜದಲ್ಲಿ ಉತ್ತಮರಲ್ಲಿ ಉತ್ತಮರೂ ಕೂಡ ಮದ್ಯಪಾನದಿಂದ ಮುಕ್ತರಾಗಿರಲಿಲ್ಲ ಎಂಬುದೂ, ಅವರು ವಿಪರೀತವಾಗಿ ಕುಡಿಯುತ್ತಿದ್ದರೆಂಬುದೂ ಇದರಿಂದ ತಿಳಿಯುತ್ತದೆ. ಆದರೆ ಇವೆಲ್ಲಕ್ಕಿಂತ ಲಜ್ಜಾಸ್ಪದವಾದ ವಿಷಯವೆಂದರೆ ಆರ್ಯ ಸ್ತ್ರೀಯರೂ ಕೂಡ ಮದ್ಯಪಾನ ವ್ಯಸನಿಗಳಾಗಿದ್ದರು. ಉದಾಹರಣೆಗೆ, ವಿರಾಟರಾಜನ ಹೆಂಡತಿ ಸುದೇಷ್ಣೆಯು[೩] ತಾನು ಸುರೆಕುಡಿಯದೆ ಹತಾಶಳಾಗಿರುವುದರಿಂದ ಕೀಚಕನ ಅರಮನೆಗೆ ಹೋಗಿ ಮದ್ಯವನ್ನು ತರಲು ತನ್ನ ಸೇವಕಿಯಾದ ಸೈರಂಧ್ರಿಗೆ ಹೇಳುತ್ತಾಳೆ. ಮದ್ಯಪಾನದ ಗೀಳು ಎಲ್ಲ ವರ್ಗದ ಸ್ತ್ರೀಯರಲ್ಲಿಯೂ ಪ್ರಚಲಿತವಾಗಿತ್ತು.

---

೧. 'ಮಹಾಭಾರತ', ವನಪರ್ವ.
೨. 'ಮಹಾಭಾರತ', ಸಭಾಪರ್ವ.
೩. ವನಪರ್ವ, ಅಧ್ಯಾಯ XV. ೧೦.

ಬ್ರಾಹ್ಮಣ ಸ್ತ್ರೀಯರೂ ಇದರಿಂದ ಮುಕ್ತರಾಗಿರಲಿಲ್ಲ. ಆರ್ಯ ಸ್ತ್ರೀಯರು ಮದ್ಯಪಾನ ಮತ್ತು ನೃತ್ಯಗಳಲ್ಲಿ ಆಸಕ್ತರಾಗಿದ್ದರೆಂಬುದನ್ನು 'ಕೌಷೀತಕೀ ಗೃಹ್ಯಸೂತ್ರ' ೧೧–೧೨ ರಲ್ಲಿ ಹೇಳಿದ ಈ ಮಾತಿನಿಂದ ಸ್ಪಷ್ಟವಾಗುತ್ತದೆ; "ವಿವಾಹ ಸಮಾರಂಭದ ಮುನ್ನಾ ರಾತ್ರಿ ವಿಧವೆಯರಲ್ಲದ ನಾಲ್ಕು ಅಥವಾ ಎಂಟು ಜನ ಸ್ತ್ರೀಯರು, ಮದ್ಯಪಾನ ಮತ್ತು ಸಮೀಚೀನ ಭೋಜನದ ಅನಂತರ ನಾಲ್ಕು ಸಲ ನೃತ್ಯಮಾಡುವರು."

ಕೆಳ ವರ್ಣದ ಸ್ತ್ರೀಯರ ಮಾತು ಹಾಗಿರಲಿ, ಬ್ರಾಹ್ಮಣ ಸ್ತ್ರೀಯರೂ ಕೂಡ ಆರ್ಯಾವರ್ತದ ಮಧ್ಯಭಾಗದಲ್ಲಿ ಕ್ರಿಸ್ತ ಶಕ ಏಳು ಮತ್ತು ಎಂಟನೆಯ ಶತಮಾನಗಳಷ್ಟು ಈಚಿನ ಕಾಲದಲ್ಲಿಯೂ ಮದ್ಯಪಾನ ವ್ಯಸನಿಗಳಾಗಿದ್ದರೆಂಬ ಮಾತನ್ನು ಕುಮಾರಿಲ ಭಟ್ಟನ 'ತಂತ್ರ–ವಾರ್ತಿಕ' (iii)–೪ ರಲ್ಲಿ ಹೇಳಿದ ಮಾತಿನಿಂದ ಸ್ಪಷ್ಟವಾಗುತ್ತದೆ: "ಆಧುನಿಕ ಕಾಲದ ಜನರಲ್ಲಿ ಅಹಿಚ್ಛತ್ರ ಮತ್ತು ಮಥುರಾ ದೇಶದ ಬ್ರಾಹ್ಮಣ ಸ್ತ್ರೀಯರು ಮದ್ಯಪಾನ ವ್ಯಸನಿಗಳಾಗಿರುವುದನ್ನು ನಾವು ಕಾಣುತ್ತೇವೆ." ಕುಮಾರಿಲನು ಬ್ರಾಹ್ಮಣರು ಮದ್ಯಪಾನ ಮಾಡುವುದನ್ನು ಖಂಡಿಸಿದ್ದಾನೆ. ಆದರೆ ಕ್ಷತ್ರಿಯ ಮತ್ತು ವೈಶ್ಯ ಸ್ತ್ರೀ ಪುರುಷರು ಧಾನ್ಯದಿಂದ ಮಾಡಿದ ಸುರೆಯ ಬದಲು ಫಲ ಪುಷ್ಪಗಳಿಂದ ತಯಾರಿಸಿದ (ಮಾಧವಿ) ಮತ್ತು ಕಾಕಂಬಿಯಿಂದ ತಯಾರಿಸಿದ (ಗೌಡಿ) ಮದ್ಯಗಳ ಸೇವನೆಯನ್ನು ಖಂಡಿಸುವುದಿಲ್ಲ.

ಆರ್ಯ ಸಮಾಜದ ಲೈಂಗಿಕ ಅನೈತಿಕತೆಯು ಈಗಿರುವ ಅವನ ವಂಶಜರಿಗೆ ಆಘಾತವನ್ನು ಉಂಟುಮಾಡುವಂತಿದೆ. ಬುದ್ಧಪೂರ್ವ ಕಾಲದ ಆರ್ಯರಿಗೆ ಈಗಿನವರೆಗೆ ಇರುವಂತೆ ಲೈಂಗಿಕ ಮತ್ತು ವೈವಾಹಿಕ ಸಂಬಂಧಗಳ ವಿಷಯದಲ್ಲಿ ನಿಷಿದ್ಧ ಬಾಂಧವ್ಯದ ನಿಯಮಗಳು ಇರಲಿಲ್ಲ.

ಆರ್ಯ ಪುರಾಣ ಸಾಹಿತ್ಯದ ಪ್ರಕಾರ, ಬ್ರಹ್ಮನು ಸೃಷ್ಟಿಕರ್ತ. ಬ್ರಹ್ಮನಿಗೆ ಮೂವರು ಗಂಡುಮಕ್ಕಳೂ ಒಬ್ಬ ಮಗಳೂ ಇದ್ದರು. ಗಂಡುಮಕ್ಕಳಲ್ಲಿ ಒಬ್ಬನಾದ ದಕ್ಷನು ತನ್ನ ಸಹೋದರಿಯನ್ನು ಮದುವೆಯಾಗಿದ್ದನು. ಈ ಸಹೋದರ–ಸಹೋದರಿಯರ ವಿವಾಹದಿಂದ ಹುಟ್ಟಿದ ಪುತ್ರಿಯರಲ್ಲಿ ಕೆಲವರು ಬ್ರಹ್ಮನ ಮಗನಾದ ಮರೀಚಿಯ ಮಗ ಕಾಶ್ಯಪನನ್ನು ಮದುವೆಯಾದರೆ, ಕೆಲವರು ಬ್ರಹ್ಮನ ಮೂರನೆಯ ಮಗನಾದ ಧರ್ಮನನ್ನು ಮದುವೆಯಾದನು.[೧]

'ಋಗ್ವೇದ'ದಲ್ಲಿ ಯಮ ಮತ್ತು ಯಮಿ ಎಂಬ ಸಹೋದರ ಸಹೋದರಿಯರಿಗೆ ಸಂಬಂಧಿಸಿದ ಒಂದು ಪ್ರಸಂಗವನ್ನು ಹೇಳಲಾಗಿದೆ. ಈ ಉಪಾಖ್ಯಾನದಂತೆ ಯಮಿಯು ತನ್ನ ಸಹೋದರ ಯಮನನ್ನು ತನ್ನೊಡನೆ ಸಮಾಗಮಿಸುವಂತೆ ಕೇಳಿಕೊಳ್ಳುತ್ತಾಳೆ ಮತ್ತು ಅವನು ಹಾಗೆ ಮಾಡಲು ನಿರಾಕರಿಸಿದಾಗ ಕೊಪೋದ್ರಿಕ್ತಳಾಗುತ್ತಾಳೆ.[೨]

ತಂದೆಯು ತನ್ನ ಮಗಳನ್ನು ವಿವಾಹವಾಗಬಹುದಾಗಿತ್ತು. ವಶಿಷ್ಠನು ತನ್ನ ಮಗಳಾದ ಶತ್ರಪಳು ಪ್ರಾಯ ಪ್ರಬುದ್ಧಳಾದೊಡನೆ ಅವಳನ್ನು ಮದುವೆಯಾದನು.[೩] ಮನುವು ತನ್ನ ಮಗಳಾದ ಇಳಾಳನ್ನು ಮದುವೆಯಾದನು.[೪] ಜಹ್ನುವು ತನ್ನ ಮಗಳಾದ ಜಾಹ್ನವಿಯನ್ನು ಮದುವೆಯಾದನು.[೫] ಸೂರ್ಯನು ತನ್ನ ಮಗಳಾದ ಉಷಾಳನ್ನು ವಿವಾಹವಾದನು.[೬]

---

೧. 'ಮಹಾಭಾರತ' ಆದಿಪರ್ವ, ಅಧ್ಯಾಯ ೬೬.
೨. 'ಋಗ್ವೇದ'.
೩. 'ಹರಿವಂಶ', ಅಧ್ಯಾಯ II
೪. ಅದೇ, ಅಧ್ಯಾಯ X.
೫. ಅದೇ, ಅಧ್ಯಾಯ XXVII.
೬. ಯಾಸ್ಕ: 'ನಿರುಕ್ತ' ಅಧ್ಯಾಯ V, ಖಂಡ VI.

ಅಸಾಮಾನ್ಯ ರೀತಿಯ ಬಹುಪತಿತ್ವವೂ ಆಚರಣೆಯಲ್ಲಿತ್ತು. ಆರ್ಯರಲ್ಲಿ ಪ್ರಚಲಿತವಿದ್ದ ಬಹುಪತಿತ್ವ ಪದ್ಧತಿಯಂತೆ ರಕ್ತಸಂಬಂಧಿಗಳು ಒಂದೇ ಹೆಣ್ಣಿನೊಡನೆ ಸಹವಾಸ ಮಾಡಬಹುದಿತ್ತು. ಧಾಹಪ್ರಚೇತನಿ ಮತ್ತು ಅವನ ಮಗ ಸೋಮ ಇವರಿಬ್ಬರೂ ಸೋಮನ ಮಗಳಾದ ಮರೀಷಳನ್ನು ಮದುವೆಯಾಗಿದ್ದರು.[೧]

ಅಜ್ಜನು ತನ್ನ ಮೊಮ್ಮಗಳನ್ನು ಮದುವೆಯಾಗುವ ಉದಾಹರಣೆಗಳೂ ಇದ್ದವು. ದಕ್ಷನು ತನ್ನ ಮಗಳನ್ನು ತನ್ನ ತಂದೆಯಾದ ಬ್ರಹ್ಮನಿಗೆ ಮದುವೆ ಮಾಡಿಕೊಟ್ಟನು[೨] ಮತ್ತು ಆ ಮದುವೆಯಿಂದ ಪ್ರಸಿದ್ಧನಾದ ನಾರದನು ಹುಟ್ಟಿದನು. ದೌಹಿತ್ರನು ತನ್ನ ಇಪ್ಪತ್ತೇಳು ಜನ ಪುತ್ರಿಯರನ್ನು ತನ್ನ ತಂದೆಯಾದ ಸೋಮನಿಗೆ ಸಮಾಗಮದ ಮತ್ತು ಸಂತಾನ ಪ್ರಾಪ್ತಿಗಾಗಿ ಕೊಟ್ಟನು.[೩]

ಆರ್ಯರಿಗೆ ಬಯಲಿನಲ್ಲಿ ಎಲ್ಲರೆದುರು ಸಮಾಗಮಿಸುವುದರಲ್ಲಿ ಸಂಕೋಚವಿರಲಿಲ್ಲ. ಋಷಿಗಳು ವಾಮದೇವ್ಯ ವ್ರತಗಳೆಂಬ ಕೆಲವು ಧಾರ್ಮಿಕ ಕ್ರಿಯಾವಿಧಿಗಳನ್ನು ನಡೆಸುತ್ತಿದ್ದರು. ಇವು ಯಜ್ಞಭೂಮಿಯಲ್ಲಿ ನಡೆಯುತ್ತಿದ್ದವು. ಅಲ್ಲಿಗೆ ಯಾವಳೇ ಸ್ತ್ರೀಯು ಬಂದು ಲೈಂಗಿಕ ಸಂಭೋಗವನ್ನು ಬಯಸಿದರೆ ಮತ್ತು ತನ್ನನ್ನು ತೃಪ್ತಿಗೊಳಿಸಲು ಋಷಿಯನ್ನು ಕರೆದರೆ, ಆಗ ಋಷಿಯು ಯಜ್ಞ ಭೂಮಿಯಲ್ಲಿ ಎಲ್ಲರೆದುರಿಗೆ ಅವಳ ಸಮಾಗಮ ಮಾಡುತ್ತಿದ್ದನು. ಇಂಥ ಅನೇಕ ಪ್ರಸಂಗಗಳನ್ನು ಹೇಳಬಹುದು. ಸತ್ಯವತಿಯೊಡನೆ ಹೀಗೆ ಸಂಭೋಗಮಾಡಿದ ಪರಾಶರ ಋಷಿಯ ಪ್ರಸಂಗವಿದೆ. ಹಾಗೆಯೇ ದೀರ್ಘತಪ ಪ್ರಸಂಗವೂ ಕೂಡ. ಅಂಥ ಪದ್ಧತಿಯು ಸರ್ವೇಸಾಧಾರಣವಾಗಿತ್ತೆಂಬುದನ್ನು ಅಯೋನಿಜ ಎಂಬ ಪದವು ಸೂಚಿಸುತ್ತದೆ. ಅಯೋನಿ ಎಂಬ ಪದಕ್ಕೆ ನಿಷ್ಕಳಂಕ (ಅಕ್ಷತಯೋನಿ) ಗರ್ಭಧಾರಣೆ ಎಂದು ಅರ್ಥ ಹಚ್ಚಲಾಗುತ್ತದೆ. ಆದರೆ ಆ ಪದದ ಮೂಲಾರ್ಥ ಹಾಗೆ ಇಲ್ಲ. ಯೋನಿ ಪದದ ಮೂಲಾರ್ಥವು ಮನೆ ಎಂದಿದೆ. ಅಯೋನಿಯೆಂದರೆ ಮನೆಯಿಂದ ಹೊರಗೆ ಅರ್ಥಾತ್ ಬಯಲಿನಲ್ಲಿ ಹುಟ್ಟಿದವರು ಎಂದಾಗುತ್ತದೆ. ಸೀತೆ ಮತ್ತು ದ್ರೌಪದಿ ಇವರಿಬ್ಬರೂ ಅಯೋನಿಜೆಯರು ಎಂದ ಮೇಲೆ ಹೀಗೆ ಹುಟ್ಟುವುದರಲ್ಲಿ ತಪ್ಪಿಲ್ಲ ಎಂದು ಭಾವಿಸುತ್ತಿದ್ದರು ಎಂದಾಯಿತು. ಈ ಪದ್ಧತಿ ಎಷ್ಟು ಸಾಮಾನ್ಯವಾದ ಸಂಗತಿಯಾಗಿತ್ತು ಎಂದರೆ ಅಂಥ ಆಚರಣೆಯ ವಿರುದ್ಧ ಧಾರ್ಮಿಕ ನಿಷೇಧಾಜ್ಞೆಗಳನ್ನು ಹೊರಡಿಸಬೇಕಾಯಿತು.[೪]

ಆರ್ಯರಲ್ಲಿ ತಮ್ಮ ಸ್ತ್ರೀಯರನ್ನು ಕೆಲಕಾಲದ ಮಟ್ಟಿಗೆ ಇತರರಿಗೆ ಅವರ ಉಪಯೋಗಕ್ಕಾಗಿ ಕೊಡುವ ಪದ್ಧತಿಯು ಪ್ರಚಾರದಲ್ಲಿತ್ತು. ಇದಕ್ಕೆ ಉದಾಹರಣೆಯೆಂದು ಮಾಧವಿಯ ಕಥೆಯನ್ನು ಹೇಳಬಹುದು.[೫] ಯಯಾತಿ ರಾಜನು ತನ್ನ ಮಗಳು ಮಾಧವಿಯನ್ನು ತನ್ನ ಗುರು ಗಾಲವನಿಗೆ ಕಾಣಿಕೆಯಾಗಿ ಕೊಟ್ಟನು. ಗಾಲವನು ಈ ಕನ್ಯೆ ಮಾಧವಿಯನ್ನು ಒಂದೊಂದು ಅವಧಿಗಾಗಿ ಮೂವರು ರಾಜರಿಗೆ ಎರವಲು ಕೊಟ್ಟನು. ಅನಂತರ ಅವನು ಅವಳನ್ನು ವಿಶ್ವಾಮಿತ್ರನಿಗೆ ಮದುವೆ ಮಾಡಿಕೊಟ್ಟನು. ಅವಳು ತನಗೆ ಒಂದು ಗಂಡುಮಗು ಹುಟ್ಟುವತನಕ ಅವನೊಡನೆ ಇದ್ದಳು. ತದನಂತರ ಗಾಲವನು ಆ ಹೆಣ್ಣನ್ನು ಮತ್ತೆ ಅವಳ ತಂದೆ ಯಯಾತಿಗೆ ಮರಳಿಸಿದನು.

---

೧. 'ಹರಿವಂಶ' ಅಧ್ಯಾಯ II
೨. ಅದೇ, ಅಧ್ಯಾಯ II
೩. ಅದೇ VI.
೪. 'ಮಹಾಭಾರತ', ಆದಿಪರ್ವ – ಅ. ೧೯೩.
೫. ಅದೇ, ಉದ್ಯೋಗಪರ್ವ – ಅ. ೧೦೬–೧೨೩.

ಹೀಗೆ ತಾತ್ಕಾಲಿಕವಾಗಿ ತಮ್ಮ ಸ್ತ್ರೀಯರನ್ನು ಇತರರಿಗೆ ಬಾಡಿಗೆಗೆ ಕೊಡುವ ಪದ್ಧತಿಯಲ್ಲದೆ ಆರ್ಯರಲ್ಲಿ ಇನ್ನೊಂದು ಪದ್ಧತಿಯೂ ಪ್ರಚಲಿತವಾಗಿತ್ತು. ಅದೇನೆಂದರೆ ಆರ್ಯರಲ್ಲಿ ಶ್ರೇಷ್ಠರೆನ್ನಿಸಿಕೊಳ್ಳುವ ಗಂಡಸರಿಂದ ಹೆಂಗಸು ಸಂತಾನ ಪಡೆಯಲು ಅನುಮತಿ ಕೊಡುವುದು. ಕುಟುಂಬವನ್ನು ಬೆಳೆಸುವುದೆಂದರೆ ಅವರು ದನಗಳ ತಳಿ ತಯಾರು ಮಾಡಿದಂತೆ ಅಥವಾ ಸಂತಾನವೃದ್ಧಿ ಮಾಡಿದಂತೆ ಎಂದು ತಿಳಿಯುತ್ತಿದ್ದರು. ಆರ್ಯರಲ್ಲಿ ದೇವ ಎಂಬ ಜನರ ವರ್ಗವಿತ್ತು. ಅವರು ಆರ್ಯರೇ ಆಗಿದ್ದರೂ, ಅವರ ಸ್ಥಾನ ಮತ್ತು ಶೌರ್ಯ ಹೆಚ್ಚಿನದೆಂದು ತಿಳಿಯಲಾಗುತ್ತಿತ್ತು. ಉತ್ತಮ ಸಂತಾನ ಪಡೆಯುವ ಉದ್ದೇಶದಿಂದ ಆರ್ಯರು ತಮ್ಮ ಸ್ತ್ರೀಯರು ದೇವ ವರ್ಗದ ಬೇಕಾದ ಗಂಡಸಿನೊಡನೆ ಸಂಭೋಗಿಸಲು ಅನುಮತಿ ಕೊಡುತ್ತಿದ್ದರು. ಈ ಪದ್ಧತಿ ಎಷ್ಟು ವ್ಯಾಪಕವಾಗಿ ಪ್ರಚಲಿತವಾಗಿತ್ತೆಂದರೆ ಆರ್ಯ ಸ್ತ್ರೀಯರ ಕನ್ಯಾತ್ವ ಹರಣವು ತಮಗಾಗಿಯೇ ಕಾಯ್ದಿರಿಸಿದ ಹಕ್ಕೆಂದು ದೇವ ವರ್ಗದವರು ತಿಳಿಯುತ್ತಿದ್ದರು. ಈ ಕನ್ಯಾತ್ವ ಹರಣದ ಹಕ್ಕನ್ನು ದೇವರು ಚಲಾಯಿಸದೇ ಹೋದರೆ ಹಾಗೂ ತಾಂತ್ರಿಕವಾಗಿ ಅವದಾನ ಎಂದು ಕರೆಯಿಸಿಕೊಳ್ಳುವ ಕಾಣಿಕೆಯನ್ನು ಅವರಿಗೆ ಕೊಟ್ಟು ದೇವಜನರ ನಿಯಂತ್ರಣದಿಂದ ಮುಕ್ತರಾಗದೇ ಹೋದರೆ ಯಾವ ಆರ್ಯ ಸ್ತ್ರೀಯೂ ಮದುವೆಯಾಗುವಂತಿರಲಿಲ್ಲ. ಎಲ್ಲ ಹಿಂದೂ ವಿವಾಹಗಳಲ್ಲಿ ಆಚರಿಸುವ ಮತ್ತು 'ಆಶ್ವಲಾಯನ ಗೃಹ್ಯಸೂತ್ರ'ದಲ್ಲಿ ವಿವರಗಳೊಡನೆ ವರ್ಣಿತವಾದ, ಲಾಜಾ ಹೋಮವು ಆರ್ಯ ಸ್ತ್ರೀಯರ ಕನ್ಯಾತ್ವ ಹರಣದ ವಿಷಯದಲ್ಲಿ ದೇವರಿಗಿರುವ ಹಕ್ಕನ್ನೂ, ದೇವರ ನಿಯಂತ್ರಣದಿಂದ ಮುಕ್ತವಾಗುವ ವಿಧಾನವನ್ನೂ ಸೂಚಿಸುವ ಒಂದು ಅವಶೇಷವೆಂದರೆ ತಪ್ಪಿಲ್ಲ. ಲಾಜಾ ಹೋಮದಲ್ಲಿರುವ ಅವದಾನ ಎಂಬುದು ಕನ್ಯೆಯ ಮೇಲೆ ದೇವರಿಗಿರುವ ಹಕ್ಕನ್ನು ಸಮಾಪ್ತಗೊಳಿಸಲು ಕೊಡುವ ಶುಲ್ಕವಲ್ಲದೆ ಬೇರೇನೂ ಅಲ್ಲ. ಎಲ್ಲ ಹಿಂದೂ ವಿವಾಹಗಳಲ್ಲಿ ತಪ್ಪದೇ ಆಚರಿಸಲಾಗುವ ಹಾಗೂ ವಿವಾಹದ ಅತಿ ಅವಶ್ಯಕವಾದ ಆಚರಣೆಯೆಂದು ತಿಳಿಯಲಾಗುವ ಸಪ್ತಪದಿ ಆಚರಣೆಗೆ ದೇವಜನರ ಕನ್ಯಾತ್ವ ಹರಣದ ಹಕ್ಕಿನೊಡನೆ ಅವಿಭಾಜ್ಯ ಸಂಬಂಧವುಂಟು. ಸಪ್ತಪದಿ ಎಂದರೆ ವಧುವಿನೊಡನೆ ವರನು ಏಳು ಹೆಜ್ಜೆಗಳನ್ನು ಹಾಕುವುದು. ಇದು ಅವಶ್ಯ ಎನ್ನುವುದು ಏಕೆ? ಇದಕ್ಕೆ ಉತ್ತರವೆಂದರೆ, ತಮಗೆ ಕೊಡುವ ಪರಿಹಾರದ ಬಗೆಗೆ ದೇವರಿಗೆ ತೃಪ್ತಿಯಿಲ್ಲದಿದ್ದರೆ ವಧುವು ಏಳನೇ ಹೆಜ್ಜೆ ಇಡುವ ಮೊದಲು ಅವರು ಅವಳನ್ನು ತಮ್ಮವಳನ್ನಾಗಿ ಇಟ್ಟುಕೊಳ್ಳಬಹುದಾಗಿತ್ತು. ಆದರೆ ಏಳನೇ ಹೆಜ್ಜೆಯಿಟ್ಟ ಅನಂತರ ದೇವರ ಹಕ್ಕು ಸಮಾಪ್ತಿಯಾಗುತ್ತಿತ್ತು. ವರನು ಇನ್ನು ಮುಂದೆ ವಧುವನ್ನು ಕೊಂಡೊಯ್ಯಬಹುದಾಗಿತ್ತು ಹಾಗೂ ದೇವರ ಅಡ್ಡಿ, ಆತಂಕ ಮತ್ತು ಪೀಡನೆಯ ಭಯವಿಲ್ಲದೆ ಅವರಿಬ್ಬರೂ ಸತಿ ಪತಿಗಳಾಗಿ ಬಾಳಬಹುದಾಗಿತ್ತು.

ಕನ್ಯೆಯರು ಕನ್ಯಾತ್ವವನ್ನು ಪಾಲಿಸಬೇಕೆಂಬ ನಿಯಮವಿರಲಿಲ್ಲ. ಅವಿವಾಹಿತಳಾಗಿರುವಾಗಲೇ ಹುಡುಗಿಯು ತನ್ನಿಷ್ಟ ಬಂದವರೊಡನೆ ಲೈಂಗಿಕ ಸಂಬಂಧ ಹೊಂದಬಹುದಿತ್ತು. ಹಾಗೆಯೇ ಸಂತಾನ ಪಡೆಯಬಹುದಿತ್ತು. ಈ ಮಾತು ಕನ್ಯಾ ಎಂಬ ಪದದ ಮೂಲಾರ್ಥದಿಂದ ಸ್ಪಷ್ಟವಾಗುತ್ತದೆ. ಕನ್ಯೆಯೆಂದರೆ ಹುಡುಗಿ. ಕನ್ಯಾ ಎಂಬ ಪದವು ಕಂ ಎಂಬ ಮೂಲದಿಂದ ಬಂದಿದ್ದು ಅದರ ಅರ್ಥ ಕನ್ಯೆಯು ಬೇಕಾದ ಗಂಡಸಿಗೆ ತನ್ನನ್ನು ಅರ್ಪಿಸಿಕೊಳ್ಳಲು ಸ್ವತಂತ್ರಳಿರುವಳು ಎಂದಾಗುತ್ತದೆ. ಕುಂತಿ ಮತ್ತು ಮತ್ಸ್ಯಗಂಧಿ ಇವರ ಪ್ರಸಂಗಗಳಿಂದ ಕನ್ಯೆಯರು ವಿಧಿಬದ್ಧವಾಗಿ ವಿವಾಹವಾಗದೇ ತಮಗೆ ಬೇಕಾದವರಿಗೆ ಅರ್ಪಿಸಿಕೊಳ್ಳಬಹುದಿತ್ತು ಮತ್ತು ಮಕ್ಕಳನ್ನು ಪಡೆಯಬಹುದಿತ್ತು ಎಂಬುದು ವಿಶದವಾಗುತ್ತದೆ. ಪಾಂಡುವನ್ನು ವಿವಾಹವಾಗುವ ಮೊದಲೇ ಕುಂತಿಯು ಬೇರೆ ಪುರುಷರಿಂದ ಮಕ್ಕಳನ್ನು ಪಡೆದಿದ್ದಳು. ಭೀಷ್ಮನ ತಂದೆಯಾದ

ಶಂತನುವನ್ನು ವಿವಾಹವಾಗುವ ಮೊದಲೇ ಮತ್ಸ್ಯಗಂಧಿಯು ಋಷಿ ಪರಾಶರನೊಡನೆ ಲೈಂಗಿಕ ಸಂಬಂಧ ಹೊಂದಿದ್ದಳು.

ಆರ್ಯರಲ್ಲಿ ಪಶುಗಮನವೂ ಕೂಡ ಪ್ರಚಲಿತವಾಗಿತ್ತು. ದಮ ಎಂಬ ಋಷಿಯು ಹೆಣ್ಣು ಜಿಂಕೆಯೊಡನೆ ಲೈಂಗಿಕ ಸಂಪರ್ಕ ಹೊಂದಿದ ಕಥೆ ಸುಪರಿಚಿತವಾಗಿದೆ. ಸೂರ್ಯನು ಹೆಣ್ಣು ಕುದುರೆಯೊಡನೆ ಸಂಪರ್ಕ ಹೊಂದಿದ ಇನ್ನೊಂದು ಉದಾಹರಣೆಯುಂಟು. ಆದರೆ ಅಶ್ವಮೇಧ ಯಜ್ಞದಲ್ಲಿ ಕುದುರೆಯೊಡನೆ ಸಂಭೋಗಿಸಿದ ಹೆಂಗಸಿನ ಉದಾಹರಣೆ ಇವೆಲ್ಲಕ್ಕಿಂತ ಅಸಹ್ಯಕರವಾದುದು.

(ಅಪೂರ್ಣ)

* * * *

## ಅಧ್ಯಾಯ ೭

# ಪತಿತ ಪೌರೋಹಿತ್ಯ

*'ಪ್ರಾಚೀನ ರಾಜ್ಯ ವ್ಯವಸ್ಥೆ'ಯ ಕಡತದಲ್ಲಿ ಈ ಪ್ರಬಂಧಕ್ಕೆ ಅಧ್ಯಾಯ ೧೧೧ ಎಂದು ಸಂಖ್ಯೆ ಕೊಡಲಾಗಿದೆ ಮತ್ತು ಅದರಲ್ಲಿ ೧೬ ಬೆರಳಚ್ಚಿನ ಪುಟಗಳಿವೆ. ಈ ಪ್ರಕರಣವೂ ಕೂಡ ಅಪೂರ್ಣವಾಗಿ ಉಳಿದಂತೆ ತೋರುತ್ತದೆ.*

– ಸಂಪಾದಕರು

ಪ್ರಾಚೀನ ಆರ್ಯ ಸಮಾಜದಲ್ಲಿ ಪೌರೋಹಿತ್ಯವು ಕೇವಲ ಬ್ರಾಹ್ಮಣರ ಗುತ್ತಿಗೆಯ ಸ್ವತ್ತಾಗಿತ್ತು. ಬ್ರಾಹ್ಮಣರನ್ನು ಬಿಟ್ಟು ಬೇರೆ ಯಾರೂ ಪುರೋಹಿತರಾಗುವಂತಿರಲಿಲ್ಲ. ಧರ್ಮರಕ್ಷಕರಾಗಿ ಬ್ರಾಹ್ಮಣರು ನೈತಿಕ ಮತ್ತು ಆಧ್ಯಾತ್ಮಿಕ ವಿಷಯದಲ್ಲಿ ಜನರಿಗೆ ಮಾರ್ಗದರ್ಶಕರಾಗಿದ್ದರು. ಜನರಿಗೆ ಅನುಸರಿಸಲು ಅವರು ಮಾದರಿಯನ್ನು ಹಾಕಿಕೊಡಬೇಕಾಗಿತ್ತು. ಬ್ರಾಹ್ಮಣರು ಮಾದರಿಯಾಗಿ ನಡೆದುಕೊಂಡರೇನು? ದುರ್ದೈವದ ಮಾತೆಂದರೆ, ನಮಗೆ ದೊರೆತ ಎಲ್ಲ ಪುರಾವೆಗಳೂ ಬ್ರಾಹ್ಮಣರು ಅತ್ಯಂತ ನೈತಿಕ ಅಧಃಪತನವನ್ನು ಹೊಂದಿದ್ದರೆಂದು ತಿಳಿಸುತ್ತವೆ.

ಶ್ರೋತ್ರೀಯ ಬ್ರಾಹ್ಮಣನು ಒಂದು ವಾರಕ್ಕಿಂತ ಹೆಚ್ಚು ಕಾಲಾವಧಿಗೆ ಬೇಕಾಗುವ ಪದಾರ್ಥಗಳನ್ನು ಸಂಗ್ರಹಿಸಿ ಇಟ್ಟುಕೊಳ್ಳಬಾರದೆಂಬುದು ಒಂದು ಸಾಮಾನ್ಯ ನಿಯಮವಾಗಿತ್ತು. ಆದರೆ ಅವರು ಈ ನಿಯಮವನ್ನು ವ್ಯವಸ್ಥಿತವಾಗಿ ಭಂಗಗೊಳಿಸಿದ್ದರು. ಆಹಾರ ಪದಾರ್ಥಗಳು, ಪಾನೀಯಗಳು, ಬಟ್ಟೆಗಳು, ಸಾಮಾನು ಸರಂಜಾಮುಗಳು, ಹಾಸಿಗೆಗಳು, ಸುಗಂಧ ದ್ರವ್ಯಗಳು ಮತ್ತು ವ್ಯಂಜನ ಪದಾರ್ಥಗಳು ಮುಂತಾದವುಗಳನ್ನು ಸಂಗ್ರಹಿಸಿಟ್ಟುಕೊಂಡು ಬಳಸುವುದು ಅವರ ರೂಢಿಯಾಗಿತ್ತು.

ಬ್ರಾಹ್ಮಣರು ಈ ಪ್ರದರ್ಶನಗಳನ್ನು ನೋಡಲಿಕ್ಕೆ ಹೋಗುವ ರೂಢಿಯುಳ್ಳವರಾಗಿದ್ದರು:

(೧) ಸೂಳೆಯರ ಕುಣಿತ (ನಕ್ಕಂ)

(೨) ಗೀತೆಗಳನ್ನು ಹಾಡುವುದು (ಗೀತಂ)

(೩) ವಾದ್ಯ ಸಂಗೀತ (ವಾದಿತಂ)

(೪) ಜಾತ್ರೆಗಳಲ್ಲಿಯ ಆಟಗಳು (ಪೇಖಂ)

(೫) ಲಾವಣಿಗಳನ್ನು ಹಾಡುವುದು (ಆಕ್ಖಾನಂ)

(೬) ಹಸ್ತವಾದ್ಯ (ಪಾಣಿಸರಂ)

(೭) ಚಾರಣರ ಹಾಡುಗಳು (ವೇತಾಳ)

(೮) ಗುಮ್ಮಡಿ ಬಾರಿಸುವುದು (ಕುಂಭಥೂಣಂ)

(೯) ಜಾತ್ರೆ ದೃಶ್ಯಗಳು (ಶೋಭನಗರ್ಕಂ)

(೧೦) ಚಂಡಾಲರ ದೊಂಬರಾಟ (ಚಂಡಾಲವಂಶಧೋಪನಂ)

(೧೧) ಆನೆ, ಕುದುರೆ, ಕೋಣ, ಎತ್ತು, ಆಡು, ಟಗರು, ಹುಂಜ, ಲಾವಕ್ಕಿ ಇವುಗಳ ಕಾಳಗ.

(೧೨) ದಂಡಯುದ್ಧ, ಮುಷ್ಟಿಯುದ್ಧ, ಮಲ್ಲಯುದ್ಧ.

(೧೩–೧೬) ಹುಸಿಕಾಳಗ, ಸೈನಿಕರ ಹಾಜರಿ ಸಾಲು, ವ್ಯೂಹರಚನೆ, ಸೈನ್ಯ ಪ್ರದರ್ಶನ

ಅವರು ಪಂದ್ಯಾಟ ಮತ್ತು ಮನೋರಂಜನೆಯ ವ್ಯಸನಗಳಿಗೆ ಒಳಗಾಗಿದ್ದರು. ಉದಾಹರಣೆಗೆ ಹೇಳುವುದಾದರೆ:

(೧) ಎಂಟು ಅಥವಾ ಹತ್ತು ಸಾಲು ಚೌಕಗಳನ್ನುಳ್ಳ ಹಲಗೆಗಳ ಮೇಲೆ ಆಟಗಳನ್ನು ಆಡುವುದು.

(೨) ಇಂತಹ ಹಲಗೆಗಳನ್ನು ಬಯಲಿನಲ್ಲಿ ಕಲ್ಪನೆ ಮಾಡಿಕೊಂಡು ಇವೇ ಆಟಗಳನ್ನು ಆಡುವುದು.

(೩) ಎಲ್ಲಿ ಹೋಗಬಾರದೋ ಅಲ್ಲಿಯೇ ಹೆಜ್ಜೆಯನ್ನು ಇಡಬೇಕಾಗುವಂತೆ ನೆಲದ ಮೇಲೆ ಚಿತ್ರಗಳನ್ನು ಬರೆಯುವುದು.

(೪) ಗುಂಪನ್ನು ಅಲ್ಲಾಡಿಸದಂತೆ, ಗುಂಪಿನಲ್ಲಿಯ ವಸ್ತುಗಳನ್ನು ಅಥವಾ ವ್ಯಕ್ತಿಗಳನ್ನು ಉಗುರಿನಿಂದ ದೂರ ಸರಿಸುವುದು ಅಥವಾ ವಸ್ತುಗಳನ್ನು ಅಥವಾ ವ್ಯಕ್ತಿಗಳನ್ನು ಅಲುಗಾಡದಂತೆ ಗುಂಪಾಗಿ ಸೇರಿಸುವುದು. ಇಲ್ಲಿ ಗುಂಪನ್ನು ಅಲ್ಲಾಡಿಸುವವರು ಸೋತಂತೆ ಆಗುವುದು.

(೫) ದಾಳಗಳನ್ನು ಒಗೆಯುವುದು.

(೬) ಉದ್ದವಾದ ದಂಡದಿಂದ ಚಿಕ್ಕ ದಾಂಡನ್ನು ಬಡಿಯುವುದು.

(೭) ಚಾಚಿದ ಬೆರಳುಗಳಿಂದ ಮುಂಗೈಯನ್ನು ಅರಗು, ಕೆಂಪುಬಣ್ಣ ಅಥವಾ ಹಿಟ್ಟಿನ ನೀರಿನಲ್ಲಿ ಅದ್ದುವುದು ಮತ್ತು ಹಸಿಯಾದ ಕೈಯನ್ನು ನೆಲದ ಮೇಲೆ ಅಥವಾ ಗೋಡೆಯ ಮೇಲೆ, ಇದೇನಾಗಬೇಕು? ಎನ್ನುತ್ತಾ ಬಡಿಯುವುದು ಮತ್ತು ಅಪೇಕ್ಷಿತ ಆನೆ ಕುದುರೆಗಳ ಆಕಾರಗಳನ್ನು ಮಾಡಿ ತೋರಿಸುವುದು.

(೮) ಚೆಂಡಿನ ಆಟಗಳನ್ನಾಡುವುದು.

(೯) ಎಲೆಗಳಿಂದ ಮಾಡಿದ ಆಟಿಕೆಯ ಪೀಪಿಗಳನ್ನು ಊದುವುದು.

(೧೦) ಆಟಿಕೆಯ ನೇಗಿಲಿನಿಂದ ಊಳುವುದು.

(೧೧) ಡೊಂಬರಲಾಗ ಹಾಕುವುದು.

(೧೨) ತಾಳೆಗರಿಗಳಿಂದ ಮಾಡಿದ ಆಟಿಕೆಯ ಗಾಳಿ ಯಂತ್ರಗಳಿಂದ ಆಡುವುದು.

(೧೩) ತಾಳೆಗರಿಗಳಿಂದ ಮಾಡಿದ ಆಟಿಕೆಯ ಅಳತೆ ಪಾತ್ರೆಗಳಿಂದ ಆಡುವುದು.

(೧೪–೧೫) ಆಟಿಕೆಯ ಚಕ್ಕಡಿಗಳು ಅಥವಾ ಬಿಲ್ಲುಗಳಿಂದ ಆಡುವುದು.

(೧೬) ಬಯಲಿನಲ್ಲಿ ಅಥವಾ ಜೊತೆಗಾರನ ಬೆನ್ನ ಹಿಂದೆ ತೋರಿಸುವ ಅಕ್ಷರಗಳನ್ನು ಊಹಿಸಿ ಹೇಳುವುದು.

(೧೭) ಜೊತೆಗಾರರ ಮನದ ಇಂಗಿತವನ್ನು ಊಹಿಸುವುದು.

(೧೮) (ಇನ್ನೊಬ್ಬರ) ದೋಷಗಳ ಅಣಕು ಮಾಡುವುದು.

ಅವರು ಸಣ್ಣ ಮತ್ತು ದೊಡ್ಡ ಸುಪ್ಪತ್ತಿಗೆ ಅಥವಾ ಹಾಸಿಗೆಗಳನ್ನು ಬಳಸುತ್ತಿದ್ದರು. ಉದಾಹರಣೆಗೆ ಹೇಳುವುದಾದರೆ:

(೧) ಎತ್ತರವಾದ ಮತ್ತು ಆರು ಅಡಿ ಉದ್ದವಾದ ಚರಪೀಠಗಳು (ಆಸಂದಿ)
(೨) ಕಾಲುಗಳ ಮೇಲೆ ಪ್ರಾಣಿಗಳ ಚಿತ್ರ ಕೆತ್ತಿರುವ ದಿವಾನಗಳು (ಪಲ್ಲಂಕೋ)
(೩) ಬಹಳ ಉದ್ದ ತುಪ್ಪಳವುಳ್ಳ ಆಡಿನ ಕೂದಲಿನ ಹೊದಿಕೆಗಳು (ಗೋನಕೋ)
(೪) ಬಣ್ಣ ಬಣ್ಣದ ತೇಪೆ ಕೆಲಸದ ಕೌದಿಗಳು (ಕಿಟ್ಟಕ)
(೫) ಬಿಳಿಯ ಹೊದಿಕೆಗಳು (ಪಾಟಿಕ)
(೬) ಹೂವಿನ ಕಸೂತಿ ಇರುವ ಉಣ್ಣೆಯ ಮೇಲು ಹೊದಿಕೆಗಳು (ಪಾಟಲಿಕಾ)
(೭) ಅರಳೆ ತುಂಬಿದ ರಜಾಯಿಗಳು (ತೂಲಿಕಾ)
(೮) ಸಿಂಹ, ಹುಲಿ ಮುಂತಾದ ಪ್ರಾಣಿಗಳ ಚಿತ್ರಗಳ ಕಸೂತಿ ಹಾಕಿದ ಹೊದಿಕೆಗಳು (ವಿಕಟಿಕಾ)
(೯) ಎರಡೂ ಬದಿಗೆ ನಯವಾದ ಕೂದಲುಳ್ಳ ರಗ್ಗುಗಳು (ಉದ್ದಲೋಮಿ)
(೧೦) ಒಂದೇ ಬದಿಗೆ ನಯವಾದ ಕೂದಲುಳ್ಳ ರಗ್ಗುಗಳು (ಏಕಾಂತಲೋಮಿ)
(೧೧) ರತ್ನಗಳ ಕಸೂತಿಯುಳ್ಳ ಹೊದಿಕೆಗಳು (ಕತ್ಥಿಸ್ಸಮ್)
(೧೨) ರೇಷ್ಮೆಯ ಚಾದರಗಳು (ಕೋಸೇಯ್ಯಂ)
(೧೩) ಹದಿನಾರು ನರ್ತಕರಿಗೆ ಸಾಲುವಷ್ಟು ದೊಡ್ಡ ಜಮಖಾನೆಗಳು (ಕುಟ್ಟಕಂ)
(೧೪–೧೬) ಆನೆ, ಕುದುರೆ ಮತ್ತು ರಥಗಳ ರಗ್ಗುಗಳು.
(೧೭) ಚಿಗರೆಗಳ ಚರ್ಮದಿಂದ ಮಾಡಿದ ರಗ್ಗುಗಳು.
(೧೮) ಚಿಗರೆಯ ಚರ್ಮವನ್ನು ಹೊಲಿದು ಮಾಡಿದ ರಗ್ಗುಗಳು (ಅಜಿನಪವೇನಿ)
(೧೯) ಮೇಲೆ ದಪ್ಪ ಮಿದು ಬಟ್ಟೆಗಳನ್ನು ಹೊಲಿದ ಜಮಾಖಾನೆಗಳು (ಸೌತ್ತರಕ್ಷದಂ)
(೨೦) ತಲೆ ಮತ್ತು ಪಾದಗಳಿಗೆ ಕೆಂಪು ದಿಂಬುಗಳುಳ್ಳ ಸೋಫಾಗಳು.

ಬ್ರಾಹ್ಮಣರು ಅಲಂಕಾರದ ಮತ್ತು ಸೌಂದರ್ಯದ ಸಾಧನಗಳನ್ನು ಉಪಯೋಗಿಸುತ್ತಿದ್ದರು. ಉದಾಹರಣೆಗೆ:

ಸುಗಂಧದ ಹುಡಿಯಿಂದ ತಮ್ಮ ಮೈಯನ್ನು ತಿಕ್ಕಿಕೊಳ್ಳುವುದು. ಅಂಗಮರ್ದನ ಮಾಡಿಕೊಳ್ಳುವುದು ಮತ್ತು ಸ್ನಾನಮಾಡುವುದು. ಗರಡಿಯಾಳುಗಳಂತೆ ಅವಯವಗಳನ್ನು ಗದೆ ಅಥವಾ ದಂಡದಿಂದ ತಟ್ಟಿಕೊಳ್ಳುವುದು. ಕನ್ನಡಿಗಳು, ಕಾಡಿಗೆ, ಮಾಲೆಗಳು, ಕೆನ್ನೆ ಮತ್ತು ತುಟಿಗಳಿಗೆ ಹಚ್ಚುವ ರಂಗುಗಳು, ಅಂಗರಾಗಗಳು, ಬಳೆಗಳು, ಸರಗಳು, ಕೈಗೋಲುಗಳು, ಔಷಧ ವಸ್ತುಗಳನ್ನಿಡುವ ಗಲಗಿನ ಭರಣಿಗಳು, ಇರಿಗತ್ತಿಗಳು, ಛತ್ರಿಗಳು, ಕಸೂತಿ ಹಾಕಿದ ಪಾದರಕ್ಷೆಗಳು, ರುಮಾಲು, ಮುಕುಟಗಳು, ಯಾಕ್ ಮೃಗದ ಬಾಲದಿಂದ ಮಾಡಿದ ಪೊರಕೆಗಳು, ಉದ್ದ ಅಂಚುಗಳುಳ್ಳ ನೀಳಾದ ಬಿಳಿ ಉಡುಪುಗಳು ಮುಂತಾದ ವಸ್ತುಗಳ ಉಪಯೋಗ.

ಬ್ರಾಹ್ಮಣರು ಇಂತಹ ಕೀಳು ಸಂಭಾಷಣೆಯಲ್ಲಿ ತೊಡಗುತ್ತಿದ್ದರು:

ರಾಜರ ಕಥೆಗಳು, ಕಳ್ಳರ ಕಥೆಗಳು, ಮಂತ್ರಿಗಳ ಕಥೆಗಳು, ಯುದ್ಧದ ಕಥೆಗಳು, ಭಯಾನಕ ಕಥೆಗಳು, ಸಂಗ್ರಾಮದ ವಾರ್ತೆಗಳು, ಆಹಾರ ಮತ್ತು ಪಾನೀಯ, ಬಟ್ಟೆಗಳು, ಹಾಸಿಗೆಗಳು, ಮಾಲೆಗಳು, ಸುಗಂಧ ದ್ರವ್ಯಗಳು ಇತ್ಯಾದಿಗಳ ಬಗೆಗೆ ಮಾತುಕತೆ, ಸಂಬಂಧಗಳು, ಸಾಮಾನು ಸರಂಜಾಮುಗಳು, ಹಳ್ಳಿಗಳು, ಪಟ್ಟಣಗಳು, ನಗರಗಳು, ಜನಪದಗಳನ್ನು ಕುರಿತು ಹರಟೆ, ನೀರು ತರುವ ಸ್ಥಳಗಳಲ್ಲಿ ಹರಟೆ, ದೆವ್ವದ ಕಥೆಗಳು, ಅಸಂಬದ್ಧ ಹರಟೆ, ಭೂಮಿ ಅಥವಾ ಸಮುದ್ರದ ಸೃಷ್ಟಿಯನ್ನು ಕುರಿತು, ಅಥವಾ ಅಸ್ತಿತ್ವ ಮತ್ತು ಅಭಾವಗಳ ಕುರಿತು ಊಹಾಪೋಹಗಳು.

ಬ್ರಾಹ್ಮಣರು ಗಟ್ಟಿಯಾಗಿ ಕೂಗಾಡುತ್ತ ರಂಪದ ಮಾತುಗಳನ್ನು ಆಡುತ್ತಿದ್ದರು. ಉದಾಹರಣೆಗೆ:

"ಈ ತತ್ವ ಮತ್ತು ವಿದ್ಯೆಯನ್ನು ನೀನು ತಿಳಿಯಲಾರೆ. ನಾನು ತಿಳಿದ್ದೇನೆ."

"ಈ ತತ್ವ ಮತ್ತು ವಿದ್ಯೆಯನ್ನು ನೀನು ಹೇಗೆ ತಿಳಿಯಬಲ್ಲೆ?"

"ನೀನು ತಪ್ಪು ಅಭಿಪ್ರಾಯಗಳನ್ನು ಹೊಂದಿರುತ್ತೀಯೆ. ನಾನೇ ಸರಿಯಾಗಿದ್ದೇನೆ."

"ನಾನು ಪ್ರಸ್ತುತವಾದುದನ್ನು ಮಾತಾಡುತ್ತಿದ್ದೇನೆ. ನೀನು ಇಲ್ಲ."

"ನೀನು ಮೊದಲು ಹೇಳಬೇಕಾದ್ದನ್ನು ಕೊನೆಗೆ ಮತ್ತು ಕೊನೆಗೆ ಹೇಳಬೇಕಾದ್ದನ್ನು ಮೊದಲು ಹೇಳುತ್ತಿದ್ದೀಯೆ."

"ನೀನು ಇಲ್ಲಿಯವರೆಗೆ ಆಲೋಚಿಸಿದ್ದೆಲ್ಲವೂ ವ್ಯರ್ಥವಾಗಿದೆ."

"ನೀನು ಅಭಿಪ್ರಾಯಗಳನ್ನು ಸರಿಪಡಿಸಿಕೊಳ್ಳಲು ಪ್ರಯತ್ನಮಾಡು."

"ಸಾಧ್ಯವಿದ್ದರೆ ನಿನ್ನನ್ನು ನೀನು ಬಿಡಿಸಿಕೊ."

ಸಂದೇಶವಾಹಕರಾಗಿ, ದೂತರಾಗಿ, ಮಧ್ಯವರ್ತಿಗಳಾಗಿ ಕೆಲಸ ಮಾಡುತ್ತಿದ್ದರು. ರಾಜರು, ಮಂತ್ರಿಗಳು, ಕ್ಷತ್ರಿಯರು, ಬ್ರಾಹ್ಮಣರು ಅಥವಾ ಯುವಕರ ಮಧ್ಯದಲ್ಲಿ 'ಅಲ್ಲಿ ಹೋಗು, ಇಲ್ಲಿ ಬಾ, ಇದನ್ನು ತೆಗೆದುಕೊಂಡು ಹೋಗು, ಅಲ್ಲಿಂದ ಅದನ್ನು ತೆಗೆದುಕೊಂಡು ಬಾ ಹೀಗೆ ಹೇಳುವುದು ಬ್ರಾಹ್ಮಣರ ಸ್ವಭಾವವಾಗಿತ್ತು.'

"ಬ್ರಾಹ್ಮಣರು ಮೋಸಗಾರರು, ಲಾಭಕ್ಕಾಗಿ ಪ್ರಾರ್ಥನಾ ಗೀತಗಳನ್ನು ಒಂದೇ ರಾಗದಲ್ಲಿ ಹೇಳುವವರು, ಭವಿಷ್ಯ ಹೇಳುವವರು, ಮಾಂತ್ರಿಕರೂ ಮತ್ತು ಸದಾ ಅಧಿಕಾಧಿಕ ಲಾಭಕ್ಕಾಗಿ ಹಂಬಲಿಸುವವರೂ ಆಗಿದ್ದರು."

ಬ್ರಾಹ್ಮಣರು ಆಯೋಗ್ಯ ಮಾರ್ಗಗಳಿಂದ, ನೀಚ ಕಲೆಗಳಿಂದ, ತಮ್ಮ ಉಪಜೀವಿಕೆಯನ್ನು ಸಂಪಾದಿಸುತ್ತಿದ್ದರು. ಉದಾಹರಣೆಗೆ:

(೧) ಹಸ್ತ ಮುದ್ರಿಕ ಶಾಸ್ತ್ರ – ದೀರ್ಘಾಯುಷ್ಯ, ಅಭಿವೃದ್ಧಿ ಆಗುವುದೆಂದು ಭವಿಷ್ಯ ಹೇಳುವುದು (ಅಥವಾ ಬಾಲಕರ ಕೈಕಾಲುಗಳ ಮೇಲಿನ ಗುರುತುಗಳಿಂದ ಇದರ ವಿರುದ್ಧವಾಗಿ ಹೇಳುವುದು) (ಮುಂ.)

(೨) ಶಕುನಗಳನ್ನು ಮತ್ತು ಸಂಕೇತಗಳನ್ನು ನೋಡಿ ಭವಿಷ್ಯ ಹೇಳುವುದು.

(೩) ಗುಡುಗು ಮತ್ತು ಇತರ ದೈವೀ ಶಕುನ ಸೂಚನೆಗಳನ್ನು ನೋಡಿ ಕಣಿ ಹೇಳುವುದು.

(೪) ಕನಸುಗಳನ್ನು ವಿವರಿಸಿ ಭವಿಷ್ಯ ಹೇಳುವುದು.

(೫) ದೇಹದ ಮೇಲಿನ ಗುರುತುಗಳನ್ನು ನೋಡಿ ಭವಿಷ್ಯ ಹೇಳುವುದು.

(೬) ಇಲಿಗಳು ಕಡಿದುದರಿಂದ ಬಟ್ಟೆಯ ಮೇಲೆ ಉಂಟಾದ ಗುರುತುಗಳನ್ನು ನೋಡಿ ಭವಿಷ್ಯ ಹೇಳುವುದು.

(೭) ಅಗ್ನಿಗೆ ಆಹುತಿಯನ್ನು ಕೊಡುವುದು.

(೮) ಚಮಚದಿಂದ ಆಹುತಿಯನ್ನು ಹಾಕುವುದು.

(೯–೧೩) ಹೊಟ್ಟಿನ ದೇವತೆಗಳಿಗೆ ಆಹುತಿಗಳನ್ನು ಕೊಡುವುದು. ಕಾಳು ಮತ್ತು ಹೊಟ್ಟು ಇವೆರಡರ ನಡುವಿನ ಕೆಂಪುಪುಡಿಯ ದೇವತೆಗಳಿಗೆ, ಹೊಟ್ಟು ತೆಗೆದು ಬೇಯಿಸಲು ಸಿದ್ಧವಾದ ಕಾಳಿನ ದೇವತೆಗಳಿಗೆ ಮತ್ತು ತುಪ್ಪ ಮತ್ತು ಎಣ್ಣೆಯ ದೇವತೆಗಳಿಗೆ ಅಹುತಿಯನ್ನು ಕೊಡುವುದು.

(೧೪) ಬಾಯಿಯಲ್ಲಿ ಹಾಕಿಕೊಂಡ ಸಾಸಿವೆ ಕಾಳು ಅಥವಾ ಬೇರೆ ವಸ್ತುಗಳನ್ನು ಅಗಿದು ಅದನ್ನು ಅಗ್ನಿಗೆ ಉಗಿಯುತ್ತ ಆಹುತಿ ಕೊಡುವುದು.

(೧೫) ದೇವತೆಗಳಿಗೆ ಯಜ್ಞವೆಂದು ಬಲ ಮೊಣಕಾಲಿನಿಂದ ರಕ್ತವನ್ನು ತೆಗೆಯುವುದು.

(೧೬) ಮಂತ್ರವನ್ನು ಹೇಳುತ್ತ ಮೊಣಕಾಲಿನ ಮಂಡಿಯನ್ನು ಅಥವಾ ಬೆರಳಿನ ಗೆಣ್ಣುಗಳನ್ನು ನೋಡಿ ಒಬ್ಬ ವ್ಯಕ್ತಿಯು ಸುದೈವಿಯೋ ಅಲ್ಲವೋ ಎಂದು ಊಹಿಸುವುದು.

(೧೭) ಮನೆ ಕಟ್ಟಲಿರುವ ಜಾಗ ಅಥವಾ ವಿಹಾರ ಭೂಮಿಯು ಶುಭ ಅಥವಾ ಅಶುಭ ಎಂದು ನಿರ್ಣಯಿಸುವುದು.

(೧೮) ಸಂಪ್ರದಾಯದ ನಿಯಮಗಳನ್ನು ತಿಳಿಸುವುದು.

(೧೯) ಭೂತಗಳನ್ನು ಸ್ಮಶಾನದಲ್ಲಿ ಬಂಧಿಸುವುದು.

(೨೦) ಪ್ರೇತಗಳನ್ನು ಹಿಡಿದಿಡುವುದು.

(೨೧) ನೆಲಮನೆಯಲ್ಲಿ ವಾಸಿಸುವಾಗ ಉಪಯೋಗಿಸುವ ರಕ್ಷಾಮಂತ್ರಗಳನ್ನು ತಿಳಿದುಕೊಳ್ಳುವುದು.

(೨೨) ಹಾವುಗಳನ್ನು ಆಡಿಸುವುದು.

(೨೩) ವಿಷವಿದ್ಯೆ.

(೨೪) ಚೇಳನ್ನು ಹಿಡಿಯುವ ಅಥವಾ ಚೇಳಿನ ವಿಷ ಪರಿಹಾರ ಮಾಡುವ ವಿದ್ಯೆ.

(೨೫) ಮೂಷಕ ವಿದ್ಯೆ.

(೨೬) ಪಕ್ಷಿ ವಿದ್ಯೆ.

(೨೭) ಕಾಕ ವಿದ್ಯೆ.

(೨೮) ಮನುಷ್ಯನು ಇನ್ನೂ ಎಷ್ಟು ವರ್ಷ ಬದುಕುವನೆಂದು ಭವಿಷ್ಯ ಹೇಳುವುದು.

(೨೯) ಬಾಣಗಳಿಂದ ತಪ್ಪಿಸಿಕೊಳ್ಳುವ ಮಂತ್ರಗಳನ್ನು ಹೇಳುವುದು.

(೩೦) ಪ್ರಾಣಿ ಚಕ್ರ.

ಬ್ರಾಹ್ಮಣರು ಅಯೋಗ್ಯ ಮಾರ್ಗಗಳಿಂದ, ಕೀಳು ಕಲೆಗಳಿಂದ ಉಪ ಜೀವಿಕೆಯನ್ನು ಸಂಪಾದಿಸುತ್ತಿದ್ದರು. ಉದಾಹರಣೆಗೆ:

ಈ ಮುಂದಿನ ವಸ್ತುಗಳ ಒಳ್ಳೆಯ ಅಥವಾ ಕೆಟ್ಟ ಗುಣಗಳ ಬಗೆಗಿನ ಚಿಹ್ನೆಗಳ ಜ್ಞಾನ ಮತ್ತು ಅವುಗಳ ಒಡೆಯರಿಗೆ ಆರೋಗ್ಯ ಅಥವಾ ಅದೃಷ್ಟವನ್ನು ಸೂಚಿಸುವ ಚಿಹ್ನೆಗಳ ಜ್ಞಾನ.

ರತ್ನಗಳು, ದಂಡಗಳು, ಬಟ್ಟೆಗಳು, ಖಡ್ಗಗಳು, ಬಾಣಗಳು, ಬಿಲ್ಲು, ಇತರ ಆಯುಧಗಲು, ಸ್ತ್ರೀಯರು, ಪುರುಷರು, ಬಾಲಕರು, ಬಾಲಕಿಯರು, ದಾಸರು, ದಾಸಿಯರು, ಆನೆಗಳು, ಕುದುರೆಗಳು, ಎಮ್ಮೆಗಳು, ಹೋರಿಗಳು, ಎತ್ತುಗಳು, ಆಡು, ಕುರಿ, ಕೋಳಿ, ಲಾವಕ್ಕಿ, ಉಡ, ಮೀನು, ಆಮೆ ಮತ್ತು ಇತರ ಪ್ರಾಣಿಗಳು.

ಬ್ರಾಹ್ಮಣರು ಅಯೋಗ್ಯ ಮಾರ್ಗಗಳಿಂದ ಅಂದರೆ ಕೀಳು ಕಲೆಗಳಿಂದ ಉಪಜೀವಿಕೆಯನ್ನು ಸಂಪಾಸುತ್ತಿದ್ದರು. ಉದಾಹರಣೆಗೆ, ಅವರು ಹೀಗೆ ಕಣಿ ಹೇಳುತ್ತಿದ್ದರು:

ನಾಯಕರು ಯುದ್ಧಕ್ಕೆ ಹೊರಡುವರು.

ನಮ್ಮ ನಾಯಕರು ಆಕ್ರಮಣ ಮಾಡುವರು ಮತ್ತು ಶತ್ರುಗಳು ಹಿಂದೆ ಸರಿಯುವರು.

ಶತ್ರು ನಾಯಕರು ಆಕ್ರಮಣ ಮಾಡುವರು ಮತ್ತು ನಮ್ಮವರು ಹಿಂದೆ ಸರಿಯುವರು.

ನಮ್ಮ ನಾಯಕರು ಜಯ ಸಂಪಾದಿಸಲು ಮತ್ತು ಶತ್ರುಗಳು ಸೋಲುವರು.

ವಿದೇಶಿ ನಾಯಕರು ಜಯ ಸಂಪಾದಿಸುವರು ಮತ್ತು ನಮ್ಮವರು ಸೋಲನ್ನು ಅನುಭವಿಸುವರು.

ಈ ಕಡೆ ಜಯವುಂಟಾಗುವುದು, ಆ ಕಡೆ ಸೋಲುಂಟಾಗುವುದು.

ಶ್ರದ್ಧಾಳುಗಳು ತಂದುಕೊಟ್ಟ ಆಹಾರದಿಂದ ಜೀವಿಸುವಾಗಲೂ ಬ್ರಾಹ್ಮಣರು ಅಯೋಗ್ಯ ಮಾರ್ಗಗಳಿಂದ ಅಂದರೆ ಭವಿಷ್ಯ ಹೇಳುವಂಥ ನೀಚ ಕಲೆಗಳಿಂದ ಉಪಜೀವಿಕೆಯನ್ನು ಸಂಪಾದಿಸುತ್ತಿದ್ದರು. ಉದಾಹರಣೆಗೆ:

(೧) ಚಂದ್ರ ಗ್ರಹಣ ಉಂಟಾಗುವುದು.

(೨) ಸೂರ್ಯ ಗ್ರಹಣ ಉಂಟಾಗುವುದು.

(೩) ನಕ್ಷತ್ರ ಗ್ರಹಣ ಉಂಟಾಗುವುದು.

(೪) ಸೂರ್ಯ ಅಥವಾ ಚಂದ್ರನ ಗತಿ ವಕ್ರವಾಗುವುದು.

(೫) ಸೂರ್ಯ ಅಥವಾ ಚಂದ್ರ ಮರಳಿ ಸರಿಯಾದ ಪರಿಭ್ರಮಣ ಮಾಡುವುದು.

(೬) ನಕ್ಷತ್ರಗಳ ಗತಿ ವ್ಯಕ್ತವಾಗುವುದು.

(೭) ನಕ್ಷತ್ರಗಳು ಮರಳಿ ಸರಿಯಾಗಿ ಪರಿಭ್ರಮಣ ಮಾಡುವವು.

(೮) ದಾವಾನಲ ಉಂಟಾಗುವುದು.

(೯) ಧೂಮಕೇತುಗಳು ಬೀಳುವವು.

(೧೦) ಭೂಕಂಪ ಉಂಟಾಗುವುದು.

(೧೧) ದೇವನು ಗುಡುಗುವನು.

(೧೨–೧೫) ಸೂರ್ಯ ಅಥವಾ ಚಂದ್ರ ಅಥವಾ ನಕ್ಷತ್ರಗಳು ಉದಯಿಸುವವು ಮತ್ತು ಅಸ್ತವಾಗುವವು. ಪ್ರಕಾಶಿಸುವವು ಮತ್ತು ಕಾಂತಿ ಹೀನವಾಗುವವು ಅಥವಾ ಈ ಹದಿನೈದು ಘಟನೆಗಳಲ್ಲಿ ಪ್ರತಿಯೊಂದು ಇಂತಿಂಥ ಫಲವನ್ನು ಸೂಚಿಸುವುದೆಂದು ಭವಿಷ್ಯ ಹೇಳುವುದು.

ಬ್ರಾಹ್ಮಣರು ಅಯೋಗ್ಯ ಮಾರ್ಗಗಳಿಂದ ಅಂದರೆ ಇಂತಹ ಕೀಳು ಕಲೆಗಳಿಂದ ಉಪಜೀವಿಕೆಯನ್ನು ಸಂಪಾದಿಸುತ್ತಿದ್ದರು:

ಬಹಳ ಮಳೆಯಾಗುವುದೆಂದು ಭವಿಷ್ಯ ಹೇಳುವುದು.

ಮಳೆ ಕಡಿಮೆಯಾಗುವುದೆಂದು ಭವಿಷ್ಯ ಹೇಳುವುದು.

ಸುಗ್ಗಿಯು ಸಮೃದ್ಧವಾಗುವುದೆಂದು ಭವಿಷ್ಯ ಹೇಳುವುದು.

ಆಹಾರ ಧಾನ್ಯಗಳ ಕೊರತೆಯಾಗುವುದೆಂದು ಭವಿಷ್ಯ ಹೇಳುವುದು.

ಶಾಂತಿಯುಂಟಾಗುವುದೆಂದು ಭವಿಷ್ಯ ಹೇಳುವುದು.

ಗಲಭೆಗಳುಂಟಾಗುವುದೆಂದು ಭವಿಷ್ಯ ಹೇಳುವುದು.

ಮಾರಕ ಸೋಂಕು ರೋಗಗಳುಂಟಾಗುವುದೆಂದು ಭವಿಷ್ಯ ಹೇಳುವುದು.

ಆರೋಗ್ಯಕರ ಋತುಮಾನ ಉಂಟಾಗುವುದೆಂದು ಭವಿಷ್ಯ ಹೇಳುವುದು.

ಬೆರಳುಗಳ ಮೇಲೆ ಎಣಿಸುವುದು.

ಬೆರಳುಗಳ ಸಹಾಯವಿಲ್ಲದೆ ಎಣಿಸುವುದು.

ದೊಡ್ಡ ಸಂಖ್ಯೆಗಳನ್ನು ಕೂಡಿಸುವುದು.

ಲಾವಣಿಗಳನ್ನು ರಚಿಸುವುದು, ಕವಿತ್ವ ಮಾಡುವುದು.

ಕುತರ್ಕ ಮಾಡುವುದು, ಕೂಟವಾದ ಮಾಡುವುದು.

ಶ್ರದ್ಧಾಳುಗಳು ತಂದುಕೊಟ್ಟ ಆಹಾರದ ಮೇಲೆ ಜೀವಿಸುವಾಗ, ಬ್ರಾಹ್ಮಣರು, ಅಯೋಗ್ಯ ಮಾರ್ಗಗಳಿಂದಲೂ ಅಂದರೆ ಇಂತಹ ಕೀಳು ಕಲೆಗಳಿಂದ ಉಪಜೀವಿಕೆಯನ್ನು ಸಂಪಾದಿಸುತ್ತಿದ್ದರು:

(೧) ಕನ್ಯೆ ಅಥವಾ ವರನನ್ನು ಮನೆಗೆ ಕರೆ ತರುವ ವಿವಾಹಗಳಿಗೆ ಶುಭ ಮುಹೂರ್ತವನ್ನು ಹುಡುಕಿಕೊಡುವುದು.

(೨) ಕನ್ಯೆ ಅಥವಾ ವರನನ್ನು ಮನೆಯಿಂದ ಹೊರಗೆ ಕಳಿಸುವ ವಿವಾಹಗಳಿಗೆ ಶುಭ ಮುಹೂರ್ತವನ್ನು ಹುಡುಕಿಕೊಡುವುದು.

(೩) ಶಾಂತಿ ಒಪ್ಪಂದಗಳನ್ನು ಏರ್ಪಡಿಸಲಿಕ್ಕೆ ಮುಹೂರ್ತವನ್ನು ನಿಶ್ಚಯಿಸುವುದು (ಅಥವಾ ಸ್ನೇಹ ಸಂಪಾದನೆಗೆ ಮಂತ್ರಗಳನ್ನು ಬಳಸುವುದು).

(೪) ದ್ವೇಷಗಳು ತಲೆದೋರಲು ಯುಕ್ತ ಮುಹೂರ್ತವನ್ನು ನಿಶ್ಚಯಿಸುವುದು (ಅಥವಾ ವಿರಸ ಉಂಟಾಗುವಂತೆ ಮಂತ್ರಗಳನ್ನು ಬಳಸುವುದು).

(೫) ಸಾಲವನ್ನು ತಿರುಗಿ ಕೊಡೆಂದು ಕೇಳಲು ಶುಭ ಮುಹೂರ್ತವನ್ನು ನಿಶ್ಚಯಿಸುವುದು (ಅಥವಾ ದಾಳಗಳ ಎಸೆತದಲ್ಲಿ ಜಯ ಸಂಪಾದನೆಗೆ ಮಂತ್ರಗಳನ್ನು ಬಳಸುವುದು).

(೬) ಹಣವನ್ನು ಖರ್ಚು ಮಾಡಲಿಕ್ಕೆ ಶುಭ ಮುಹೂರ್ತವನ್ನು ನಿಶ್ಚಯಿಸುವುದು (ಅಥವಾ ದಾಳದ ಎಸೆತದಲ್ಲಿ ವಿರೋಧಿಯಾದವನಿಗೆ ಅಪಜಯವುಂಟಾಗಲೆಂದು ಮಂತ್ರಗಳನ್ನು ಬಳಸುವುದು).

(೭) ಜನರಿಗೆ ಶುಭವುಂಟಾಗಲಿಯೆಂದು ಮಂತ್ರಗಳನ್ನು ಬಳಸುವುದು.

(೮) ಜನರಿಗೆ ಅಶುಭವುಂಟಾಗಲಿಯೆಂದು ಮಂತ್ರಗಳನ್ನು ಬಳಸುವುದು.

(೯) ಗರ್ಭಪಾತವುಂಟಾಗಲಿಯೆಂದು ಮಂತ್ರಗಳನ್ನು ಬಳಸುವುದು.

(೧೦) ದವಡೆಗಳು ಅಲ್ಲಾಡದಂತೆ ಮಾಡಲು ಮಂತ್ರ ಪ್ರಯೋಗ.

(೧೧) ಮೂಕತನ ಬರಿಸುವಂತೆ ಮಂತ್ರ ಪ್ರಯೋಗ.

(೧೨) ಕೈಗಳನ್ನು ಮೇಲೆತ್ತಿ ಇರುವಂತೆ ಮಂತ್ರ ಪ್ರಯೋಗ.

(೧೩) ಕಿವುಡುತನ ಬರಿಸುವಂತೆ ಮಂತ್ರ ಪ್ರಯೋಗ.

(೧೪) ಮಾಯಾ ಕನ್ನಡಿಯಿಂದ ದ್ವಂದ್ವಾರ್ಥ ಬರುವ ಉತ್ತರಗಳನ್ನು ಪಡೆಯುವುದು.

(೧೫) ದೆವ್ವ ಹಿಡಿದ ಹುಡುಗಿಯೊಬ್ಬಳಿಂದ ಗೂಢ ಉತ್ತರಗಳನ್ನು ಪಡೆಯುವುದು.

(೧೬) ದೈವವೊಂದರಿಂದ ಗೂಢ ಉತ್ತರಗಳನ್ನು ಪಡೆಯುವುದು.

(೧೭) ಸೂರ್ಯನ ಪೂಜೆ ಮಾಡುವುದು.

(೧೮) ಮಹಾಮಹಿಮನ ಪೂಜೆ ಮಾಡುವುದು.

(೧೯) ಮುಖದಿಂದ ಜ್ವಾಲೆಗಳನ್ನು ಹೊರತರುವುದು.

(೨೦) ಅದೃಷ್ಟ ದೇವತೆ, ಸಿರಿಯನ್ನು ಆಹ್ವಾನಿಸುವುದು.

ಬ್ರಾಹ್ಮಣರು ಅಯೋಗ್ಯ ಮಾರ್ಗಗಳಿಂದ ಅಂದರೆ ಕೆಳಗೆ ಸೂಚಿಸಿದಂತಹ ಕೀಳು ಕಲೆಗಳಿಂದ ಉಪಜೀವಿಕೆಯನ್ನು ಸಂಪಾದಿಸುತ್ತಿದ್ದರು.

(೧) ತನಗೆ ಅಪೇಕ್ಷಿತ ಲಾಭ ಮಾಡಿಕೊಟ್ಟರೆ ಮುಡಿಪು ಕೊಡುತ್ತೇನೆಂದು ದೇವರಿಗೆ ಹರಕೆ ಹೊರುವುದು.

(೨) ಹೀಗೆ ಹೊತ್ತ ಹರಕೆಗಳನ್ನು ಮುಟ್ಟಿಸುವುದು.

(೩) ನೆಲಮನೆಯಲ್ಲಿ ಇರುವಾಗ ಮಂತ್ರಗಳನ್ನು ಜಪಿಸುವುದು.

(೪) ಪುರುಷತ್ವವನ್ನು ತಂದುಕೊಡುವುದು.

(೫) ಒಬ್ಬನನ್ನು ನಪುಂಸಕನನ್ನಾಗಿ ಮಾಡುವುದು.

(೬) ವಾಸಸ್ಥಾನಗಳಿಗಾಗಿ ಅದೃಷ್ಟಶಾಲಿ ನಿವೇಶನಗಳನ್ನು ನಿಶ್ಚಯಿಸುವುದು.

(೭) ನಿವೇಶನಗಳನ್ನು ಪವಿತ್ರಗೊಳಿಸುವುದು.

(೮) ವಿಧಿವಿಹಿತ ರೀತಿಯಲ್ಲಿ ಬಾಯಿ ಮುಕ್ಕಳಿಸುವುದು.

(೯) ಶಾಸ್ತ್ರೋಕ್ತ ರೀತಿಯಲ್ಲಿ ಸ್ನಾನ ಮಾಡುವುದು.

(೧೦) ಯಜ್ಞಗಳನ್ನು ಮಾಡುವುದು.

(೧೧–೧೪) ವಾಂತಿಮಾಡಿಸುವ ಮತ್ತು ಭೇದಿಯನ್ನುಂಟುಮಾಡುವ ಔಷಧಗಳನ್ನು ಕೊಡುವುದು.

(೧೫) ತಲೆಯನ್ನು ಹಗುರ ಮಾಡಲು ಜನರಿಗೆ ಔಷಧ ಕೊಡುವುದು (ಜನರು ಸೀನುವಂತೆ ಮಾಡಲು ಔಷಧ ಕೊಡುವುದು).

(೧೬) ಜನರ ಕಿವಿಗಳಿಗೆ ಎಣ್ಣೆ ಹಚ್ಚುವುದು (ಅವು ಬೆಳೆಯಲಿಕ್ಕೆ ಅಥವಾ ಅವುಗಳ ಮೇಲಿನ ಗಾಯಗಳು ಮಾಯಲಿಕ್ಕೆ).

(೧೭) ಜನರ ಕಣ್ಣುಗಳಿಗೆ ಪರಿಹಾರ ಒದಗಿಸುವುದು (ಔಷಧ ತೈಲಗಳನ್ನು ಹನಿ ಹನಿಯಾಗಿ ಕಣ್ಣಿನಲ್ಲಿ ಹಾಕುತ್ತ ಅವುಗಳನ್ನು ತಂಪಾಗಿಡುವುದು).

(೧೮) ಮೂಗಿನ ಮುಖಾಂತರ ಔಷಧಗಳನ್ನು ಹಾಕುವುದು.

(೧೯) ಕಣ್ಣುಗಳಿಗೆ ಔಷಧೀಯ ಮುಲಾಮುಗಳನ್ನು ಲೇಪಿಸುವುದು.

(೨೦) ಕಣ್ಣುಗಳಿಗೆ ಕಾಡಿಗೆಯನ್ನು ಹಚ್ಚುವುದು.

(೨೧) ನೇತ್ರ ಚಿಕಿತ್ಸಕನಾಗುವುದು.

(೨೨) ಶಸ್ತ್ರ ಚಿಕಿತ್ಸಕನಾಗುವುದು.

(೨೩) ಚಿಕ್ಕಮಕ್ಕಳ ವೈದ್ಯನಾಗುವುದು.

(೨೪) ಮೂಲಿಕೆಗಳನ್ನು ಮತ್ತು (ಮತ್ತು ಬರಿಸುವ) ಔಷಧಗಳನ್ನು ಕೊಡುವುದು.

(೨೫) ಸರದಿಯ ಪ್ರಕಾರ ಔಷಧಗಳನ್ನು ಕೊಡುವುದು.

(ಅಪೂರ್ಣ)

* * * *

## ಅಧ್ಯಾಯ ೮

# ಸುಧಾರಕರು ಮತ್ತು ಅವರಿಗಾದ ಗತಿ

*ಬೆರಳಚ್ಚು ಮಾಡಿ ರಟ್ಟುಕಟ್ಟಿದ ಈ ಪ್ರತಿಯಲ್ಲಿ ೮೭ ಪುಟಗಳಿವೆ. ಹಸ್ತಪ್ರತಿಯ ೬೯ನೆಯ ಪುಟದಿಂದ 'ಅಂಬತ್ತ ಸುತ್ತ'ವು ಪ್ರಾರಂಭವಾಗುತ್ತದೆ. ೭೦ನೆಯ ಪುಟದ ಅನಂತರದ ಪುಟಗಳಿಗೆ A ದಿಂದ Z ವರೆಗೆ ಸಂಖ್ಯೆಗಳನ್ನು ಕೊಡಲಾಗಿದೆ. ೭೧ನೆಯ ಪುಟದ ಪ್ರಾರಂಭದಲ್ಲಿ 'ಲೋಹಿಕ್ಕ ಸುತ್ತ'ವು ಪ್ರಾರಂಭವಾಗುತ್ತದೆ.*

– ಸಂಪಾದಕರು

I ಆರ್ಯ ಸಮಾಜ, II ಬುದ್ಧ ಮತ್ತು III ಸುಧಾರಣೆ

## I

ಸರ್.ಟಿ. ಮಾಧವರಾವ್ ಅವರು ತಮ್ಮ ಕಾಲದ ಹಿಂದೂ ಸಮಾಜದ ಬಗೆಗೆ ಮಾತಾಡುತ್ತ ಹೀಗೆ ಹೇಳಿದರು:

"ದೀರ್ಘಕಾಲ ಬದುಕಿ, ವೀಕ್ಷಿಸಿ, ವಿಚಾರಿಸುತ್ತಾ ಹೋದಂತೆ ಹೆಚ್ಚು ಹೆಚ್ಚು ಮನದಟ್ಟಾಗುವ ಮಾತೇನೆಂದರೆ ಭೂಮಂಡಲದಲ್ಲಿ ಬೇರೆ ಯಾವ ಸಮಾಜವು ಹಿಂದೂ ಸಮಾಜದಂತೆ ತಾನಾಗಿ ಹೊತ್ತುಕೊಂಡು, ಸ್ವೀಕರಿಸಿದ ಅಥವಾ ಸೃಷ್ಟಿಸಿದ, ಆದ್ದರಿಂದಲೇ ನಿವಾರಣೀಯವಾದ ಕೆಡಕುಗಳಿಂದ ತೊಂದರೆಗೀಡಾದಷ್ಟು ರಾಜಕೀಯ ಕೆಡಕುಗಳಿಂದ ತೊಂದರೆಗೀಡಾಗಿಲ್ಲ."

ಈ ಅಭಿಪ್ರಾಯವು ಹಿಂದೂ ಸಮಾಜದಲ್ಲಿ ಸಾಮಾಜಿಕ ಸುಧಾರಣೆಯ ಅಗತ್ಯವಿದೆಯೆಂಬುದನ್ನು ಸರಿಯಾಗಿ, ಅನತಿರಂಜಿತವಾಗಿ ತಿಳಿಸುತ್ತದೆ.

ಗೌತಮ ಬುದ್ಧನು ಪ್ರಥಮ ಸಮಾಜ ಸುಧಾರಕ ಮತ್ತು ಸುಧಾರಕರಲ್ಲೆಲ್ಲ ಅತ್ಯಂತ ದೊಡ್ಡವನು. ಸಮಾಜ ಸುಧಾರಣೆಯ ಯಾವುದೇ ಇತಿಹಾಸವೂ ಅವನಿಂದ ಪ್ರಾರಂಭವಾಗಬೇಕು. ಅವನ ಸಾಧನೆಗಳನ್ನು ಪರಿಗಣನೆಗೆ ತೆಗೆದುಕೊಳ್ಳದೇ ಇರುವ ಭಾರತದಲ್ಲಿನ ಸಮಾಜ ಸುಧಾರಣೆಯ ಯಾವುದೇ ಇತಿಹಾಸವೂ ಪೂರ್ಣವಾಗುವುದಿಲ್ಲ.

ಸಿದ್ಧಾರ್ಥ ಗೌತಮನು ಕ್ರಿ.ಪೂ. ೫೬೩ ರಲ್ಲಿ ನೇಪಾಳದ ಗಡಿಯಲ್ಲಿರುವ ಉತ್ತರ ಭಾರತದ ಕಪಿಲವಸ್ತು ನಗರದಲ್ಲಿ ಶಾಕ್ಯವಂಶದಲ್ಲಿ ಹುಟ್ಟಿದನು. ಸಂಪ್ರದಾಯದ ಪ್ರಕಾರ ಅವನೊಬ್ಬ ರಾಜಕುಮಾರ. ರಾಜಕುಮಾರನಿಗೆ ಯೋಗ್ಯವಾದ ಶಿಕ್ಷಣವನ್ನು ಪಡೆದನು. ಅವನ ಮದುವೆಯಾಗಿತ್ತು ಮತ್ತು ಒಬ್ಬ

ಮಗನಿದ್ದನು. ಆ ಕಾಲದ ಆರ್ಯಸಮಾಜದಲ್ಲಿ ಇದ್ದ ಕೆಡಕುಗಳು ಮತ್ತು ದುರವಸ್ಥೆಯಿಂದಾಗಿ ದುಃಖಿತನಾಗಿ ತನ್ನ ಇಪ್ಪತ್ತೊಂಬತ್ತನೆಯ ವಯಸ್ಸಿನಲ್ಲಿ ಸಂಸಾರವನ್ನು ತ್ಯಜಿಸಿದನು ಮತ್ತು ಸತ್ಯ ಮತ್ತು ಮುಕ್ತಿಯ ಶೋಧಕ್ಕಾಗಿ ಮನೆಯನ್ನು ಬಿಟ್ಟು ಹೊರಟನು. ಅವನು ಭಿಕ್ಷುವಾದನು, ಇಬ್ಬರು ಪ್ರಸಿದ್ಧ ಗುರುಗಳ ಹತ್ತಿರ ಅಧ್ಯಯನ ಮಾಡಿದನು. ಆದರೆ ಅವರ ಉಪದೇಶದಿಂದ ಅವನಿಗೆ ಸಮಾಧಾನವಾಗದಿದ್ದರಿಂದ ಅವರನ್ನು ಬಿಟ್ಟುಹೋದನು ಮತ್ತು ಸನ್ಯಾಸಿಯಾದನು. ಆದರೆ ಸನ್ಯಾಸವನ್ನು ವ್ಯರ್ಥವೆಂದು ಬಿಟ್ಟುಕೊಟ್ಟನು. ತೀಕ್ಷ್ಣ ಆಲೋಚನೆ ಮಾಡಿ ಪದಾರ್ಥಗಳ ಸೂಕ್ಷ್ಮಜ್ಞಾನವನ್ನು ಹೊಂದಿದನು. ಈ ಸೂಕ್ಷ್ಮ ದೃಷ್ಟಿಯ ಫಲವಾಗಿ ತನ್ನದೇ ಆದ ಧರ್ಮವನ್ನು ರೂಪಿಸಿದನು. ಆಗ ಅವನಿಗೆ ಮೂವತ್ತೈದು ವರ್ಷದ ಪ್ರಾಯ. ತನ್ನ ಎಂಬತ್ತು ವರ್ಷ ಆಯುಷ್ಯದ ಉಳಿದ ಭಾಗವನ್ನು ತನ್ನ ಧಮ್ಮವನ್ನು ಪ್ರಸಾರ ಮಾಡುವುದರಲ್ಲಿ ಮತ್ತು ಭಿಕ್ಷುಗಳ ಒಂದು ವರ್ಗ(ಸಂಘ)ದ ನಿರ್ಮಾಣ ಹಾಗೂ ನಿರ್ವಹಣೆಯಲ್ಲಿ ಕಳೆದನು. ತನ್ನ ಅನುಯಾಯಿಗಳ ಮಧ್ಯದಲ್ಲಿ, ಕುಶೀನಾರಾ ಎಂಬಲ್ಲಿ ಕ್ರಿ.ಪೂ. ೪೮೩ರಲ್ಲಿ ಅವನು ಮರಣಹೊಂದಿದನು.

ಜ್ಞಾನೋದಯವಾದ ಅನಂತರ ಬುದ್ಧನು ತನ್ನ ಉಳಿದ ಆಯುಷ್ಯವನ್ನು ತನ್ನ ಧ್ಯೇಯ ಪ್ರಸಾರಕ್ಕಾಗಿ ಮೀಸಲಾಗಿಟ್ಟನು. ತನ್ನ ಸಮಯವನ್ನು ಎರಡು ಭಾಗವಾಗಿ ಮಾಡಿದ್ದನು. ಒಂದು ಭಾಗದಲ್ಲಿ ಯೇಸುಕ್ರಿಸ್ತನು ಏಕಾಂತದ ಪ್ರಾರ್ಥನೆಯಲ್ಲಿ ಗಂಟೆಗಳನ್ನು ಕಳೆದಂತೆಯೇ ಏಕಾಂತದ ಧ್ಯಾನಗಳಿಂದ ತನ್ನ ಆಧ್ಯಾತ್ಮ ಜೀವನ ಜ್ಯೋತಿಯನ್ನು ಬೆಳಗಿಸುವುದು ಮತ್ತು ಎರಡನೆಯ ಭಾಗದಲ್ಲಿ ಭಿಕ್ಷುಗಳ ದೊಡ್ಡ ದೊಡ್ಡ ಶ್ರೋತೃ ವೃಂದಗಳಿಗೆ ಉಪದೇಶಿಸುವುದು, ಆತ್ಮೋನ್ನತಿಯ ವಿಷಯದಲ್ಲಿ ಹೆಚ್ಚು ತಿಳಿದವರಿಗೆ ಸೂಕ್ಷ್ಮ ವಿಚಾರಗಳನ್ನು ತಿಳಿಸುವುದು, ಧರ್ಮಪ್ರಚಾರದ ವ್ಯವಹಾರವನ್ನು ನಿರ್ದೇಶಿಸುವುದು, ಶಿಸ್ತುಭಂಗದ ಪ್ರಕರಣಗಳನ್ನು ನಿಂದಿಸುವುದು, ಶ್ರದ್ಧಾಳುಗಳ ನಡತೆಯನ್ನು ದೃಢೀಕರಿಸುವುದು, ನಿಯೋಗಗಳನ್ನು ಸ್ವೀಕರಿಸುವುದು, ವಿದ್ವಾಂಸರಾದ ಎದುರಾಳಿಗಳೊಡನೆ ಚರ್ಚಿಸುವುದು, ದುಃಖಿತರಿಗೆ ಸಮಾಧಾನ ಹೇಳುವುದು, ರಾಜರು ಹಾಗೂ ರೈತರನ್ನು, ಬ್ರಾಹ್ಮಣರು ಹಾಗೂ ಅಂತ್ಯಜರು ಮತ್ತು ಶ್ರೀಮಂತರು ಹಾಗೂ ಬಡವರನ್ನು ಭೆಟ್ಟಿಯಾಗುವುದು. ಅವನು ಹಾದಿಯಂಗಡಿಯವರ ಮತ್ತು ಪಾಪಿಗಳ ಸ್ನೇಹಿತನಾಗಿದ್ದನು. ತಮ್ಮ ಪರಿಸ್ಥಿತಿಯನ್ನು ತಿಳಿದುಕೊಂಡು ಕರುಣೆ ತೋರಿದ್ದರಿಂದ ಅನೇಕ ವೇಶ್ಯೆಯರು ತಮ್ಮ ಪಾಪದ ಜೀವನವನ್ನು ತ್ಯಜಿಸಿ ಆ ದಿವ್ಯ ಜೀವನವನ್ನು ಆಶ್ರಯಿಸಿದರು. ಇಂತಹ ಜೀವನಕ್ಕೆ ವಿವಿಧ ನೈತಿಕ ಗುಣಗಳು ಮತ್ತು ಸಾಮಾಜಿಕ ಅನುಗ್ರಹಗಳು ಬೇಕು. ಅಲ್ಲದೆ ಪ್ರಜಾಸತ್ತಾತ್ಮಕ ಭಾವನೆಗಳು ಹಾಗೂ ದುರ್ಲಭವಾದ ಶ್ರೀಮಂತ ಜನರಿಗೆ ಸಹಜವಾದ ಚಾತುರ್ಯ ಇವುಗಳ ಒಂದು ಸಮನ್ವಯವೂ ಬೇಕು. ಅವನು ಶ್ರೀಮಂತಿಕೆಯಲ್ಲಿ ಬೆಳೆದನು ಎಂಬುದನ್ನು ಮರೆಯಲು ಸಾಧ್ಯವಿಲ್ಲ. ಅವನು ಕೇವಲ ಬ್ರಾಹ್ಮಣರು ಮತ್ತು ಪಂಡಿತರೊಡನೆ ಸಂಭಾಷಿಸುವುದಲ್ಲ ರಾಜಕುಮಾರರು ಮತ್ತು ಮಂತ್ರಿಗಳು ಅವರೊಡನೆಯೂ ಸಮಾನಸ್ಕಂಧನಂತೆ ಸಂಭಾಷಿಸುತ್ತಾನೆ. ಇಂಥವನು ಸದಾ ಭೋಜನಕ್ಕೆ ಆಮಂತ್ರಣ ಪಡೆಯುತ್ತಿದ್ದನು. ಅವನಲ್ಲಿ ಕಥೆಗಳ ಸಂಗ್ರಹವಿರುತ್ತಿತ್ತು. ನೈಜವಾದ ಹಾಸ್ಯಪ್ರಜ್ಞೆಯಿತ್ತು ಎಂಬುದೂ ಸ್ಪಷ್ಟವಾಗಿದೆ. ಹೀಗಾಗಿ ಅವನು ಪ್ರತಿಯೊಂದು ಮನೆಯಲ್ಲಿಯೂ ಸ್ವಾಗತಾರ್ಹನಾದ ಅತಿಥಿಯಾಗಿದ್ದನು. ಒಬ್ಬ ಪ್ರಸಿದ್ಧ ಬ್ರಾಹ್ಮಣನು ಅವನನ್ನು ಹೀಗೆ ವರ್ಣಿಸುತ್ತಿದ್ದನೆಂದು ಚಿತ್ರಿಸಲಾಗಿದೆ:

> "ಪೂಜ್ಯ ಗೌತಮನು (ತಂದೆ ಮತ್ತು ತಾಯಿ ಹೀಗೆ) ಎರಡು ಕಡೆಯಿಂದಲೂ ಕುಲೀನ ಜನ್ಮವನ್ನು ಹೊಂದಿದ್ದಾನೆ, ಶುದ್ಧ ವಂಶದವನಾಗಿದ್ದಾನೆ; ನೋಡಲು ಸುಂದರ, ಆಕರ್ಷಕ, ವಿಶ್ವಾಸವನ್ನು ಕುದುರಿಸುವ ಸುಂದರ ಮೈಬಣ್ಣವುಳ್ಳವನು; ಉತ್ತಮ ಮುಖಭಾವ, ನೋಡು ಗಂಭೀರ, ಅರ್ಹಂತರ ಗುಣಗಳನ್ನು ಹೊಂದಿರುವ ಸದ್ಗುಣಿ, ಸೌಜನ್ಯಶಾಲಿ,

ಮಧುರ ಧ್ವನಿಯುಳ್ಳವನು, ವಿನಯಶೀಲ, ಕಾಮಾದಿ ದೋಷರಹಿತ ಮತ್ತು ಸ್ಥಿರವಾದ ಮನಸ್ಸುಳ್ಳವನು. ಅವನು ಎಲ್ಲರನ್ನು ಸ್ವಾಗತಿಸುತ್ತಾನೆ, ಎಲ್ಲರೊಂದಿಗೆ ಹೊಂದಿಕೊಳ್ಳುತ್ತಾನೆ, ಗೌರವವನ್ನು ಪಡೆಯುತ್ತಾನೆ. ಒಣ ಪ್ರತಿಷ್ಠೆಯವನಲ್ಲ, ಎಲ್ಲರೂ ಸುಲಭವಾಗಿ ಅವನನ್ನು ಸಮೀಪಿಸಬಹುದು, ಸಂಭಾಷಣೆಯಲ್ಲಿ ಮಂದನಲ್ಲ."

ಆದರೆ ಅವನ ಕಾಲದ ಭಾರತೀಯರಿಗೆ ಹಾಗೂ ಅನಂತರದ ಭಾರತೀಯರಿಗೆ ಅತಿ ಹೆಚ್ಚು ಮೆಚ್ಚಿಗೆಯಾದುದನ್ನು ಆ ಬ್ರಾಹ್ಮಣನು ಈ ಮಾತುಗಳಲ್ಲಿ ಹೇಳುತ್ತಾನೆ:

"ತನ್ನ ಬಂಧುಗಳ ಬಹು ದೊಡ್ಡ ವಂಶವನ್ನು ತ್ಯಜಿಸಿ, ದನಕರುಗಳನ್ನು ತ್ಯಜಿಸಿ, ಭೂಗತವಾದ ಮತ್ತು ಕೋಶದಲ್ಲಿರುವ ನಿಧಿಯನ್ನು ಬಿಟ್ಟು, ಭಿಕ್ಷು ಗೌತಮನು ಧಾರ್ಮಿಕ ಜೀವವನ್ನು ಪ್ರವೇಶಿಸಿದ್ದಾನೆ. ಅವನಿನ್ನೂ ಯುವಕನಿದ್ದಾಗ, ತಲೆಯ ಮೇಲೆ ಬಿಳಿ ಕೂದಲು ಬಾರದಿದ್ದಾಗ, ಹರೆಯದ ವಯಸ್ಸಿನಲ್ಲಿ, ಗೃಹಸ್ಥ ಜೀವವನ್ನು ತೊರೆದು ಮನೆಮಾರು ಇಲ್ಲದ ಸ್ಥಿತಿಯನ್ನು ಸ್ವೀಕರಿಸಿದನು."

"ಅವನ ಇಂತಹ ಜೀವನಕ್ಕೆ ಆಕರ್ಷಕ ನಡತೆ, ಸಹಾನುಭೂತಿ ಮತ್ತು ದಯೆಗಳಷ್ಟೇ ಅಲ್ಲ, ಜೊತೆಗೆ ಸ್ಥೈರ್ಯ ಮತ್ತು ಧೈರ್ಯಗಳೂ ಬೇಕು. ವ್ಯವಸ್ಥೆಯನ್ನು ಕೆಡಿಸುವವರ ವಿರುದ್ಧ ಅವನು ಸಾಧಾರಣವಾಗಿ ಶಾಂತವಾಗಿದ್ದರೂ ಪ್ರಸಂಗ ಬಂದಾಗ ಕಠೋರವಾಗುತ್ತಿದ್ದನು. ಆಂತರಿಕ ಸಂತೋಷ ಮತ್ತು ದೈಹಿಕ ನೋವುಗಳನ್ನು ಸಮಭಾವದಿಂದ ಅನುಭವಿಸುತ್ತಿದ್ದನು. ಆದರೆ ಅಂತಸ್ಸಂತೋಷವೇನೂ ಕಡಿಮೆಯಾಗುತ್ತಿರಲಿಲ್ಲ. ಧೈರ್ಯ ಎಂಬುದು ಅಪೇಕ್ಷಿತ ಗುಣ ಮತ್ತು ಅವನಲ್ಲಿ ಆ ಧೈರ್ಯವಿತ್ತು. ಉದಾಹರಣೆಗೆ ದೇವದತ್ತನು ಅನೇಕ ರೀತಿಯಿಂದ ಕೊಲ್ಲಲು ಯತ್ನಿಸಿದಾಗಲೂ ಬುದ್ಧನು ಶಾಂತನಾಗಿದ್ದನು. ಅದೇ ರೀತಿ ಕೊಲೆಯ ಬೆದರಿಕೆಗಳನ್ನು ಎದುರಿಸಿದಾಗ, ಜನರೆಲ್ಲರೂ ಹೆದರುತ್ತಿದ್ದ ಕೋಸಲ ರಾಜ್ಯದ ಪ್ರಸಿದ್ಧ ದರೋಡೆಕೋರನನ್ನು ಬುದ್ಧನು ಏಕಾಕಿಯಾಗಿ ಮತ್ತು ನಿರಾಯುಧನಾಗಿ ಅವನ ವಾಸಸ್ಥಳದಲ್ಲಿ ಎದುರಿಸಿ ಅವನ ಮನಸ್ಸನ್ನು ಪರಿವರ್ತನೆಗೊಳಿಸುವಾಗ ಮತ್ತು ರಾಜ್ಯಕ್ಕೆ ಪೀಡೆಯಾಗಿದ್ದ ಅವನನ್ನು ಸಮಾಜದ ಒಬ್ಬ ಶಾಂತಿಪ್ರಿಯ ಸದಸ್ಯನನ್ನಾಗಿ ಬದಲಿಸುವಾಗ ಬುದ್ಧನು ಶಾಂತನಾಗಿದ್ದನು. ನೋವು, ಅಪಾಯ ಅಥವಾ ಅವಮಾನಗಳು ಅವನ ಆಧ್ಯಾತ್ಮಿಕ ಶಾಂತಿಯನ್ನು ಕದಡಲಿಲ್ಲ. ಅವನನ್ನು ಬಯ್ದರೆ ಅವನು ತಿರುಗಿ ಬಯ್ಯುತ್ತಿರಲಿಲ್ಲ, ಅವನ ಸಾಂತ್ವನ ಮತ್ತು ಆಸರೆಗಳನ್ನು ಬಯಸುವವರಿಗೆ ಹಿತಕರ ಮೃದುಭಾವನೆಗಳ ಕೊರತೆ ಅವನಲ್ಲಿ ಇರಲಿಲ್ಲ."

ಎಲ್ಲರೂ ಅವನನ್ನು ಪ್ರೀತಿಸುತ್ತಿದ್ದರು. ಅನೇಕರ ಹಿತಕ್ಕಾಗಿ, ಅನೇಕರ ಸುಖಕ್ಕಾಗಿ, ದೇವತೆಗಳ ಮತ್ತು ಮನುಷ್ಯರ ಲಾಭ, ಹಿತ ಮತ್ತು ಸುಖಕ್ಕಾಗಿ, ಲೋಕದ ಮೇಲೆ ದಯೆಯಿಂದ ಈ ಜಗತ್ತಿನಲ್ಲಿ ಅವನು ಹುಟ್ಟಿದ್ದಾನೆಂದು ಮೇಲಿಂದ ಮೇಲೆ ಅವನನ್ನು ವರ್ಣಿಸಿದ್ದಾರೆ, ಅಥವಾ ಅವನೇ ಹಾಗೆ ಹೇಳಿಕೊಂಡಿದ್ದಾನೆ.

ಆರ್ಯ ಸಮಾಜದ ಮೇಲೆ ಅವನು ಅಚ್ಚಳಿಯದ ಪ್ರಭಾವ ಬೀರಿದ್ದಾನೆ ಮತ್ತು ಅವನ ಹೆಸರು ಭಾರತದಿಂದ ಹೊರಟುಹೋಗಿದ್ದರೂ ಅವನ ಉಪದೇಶಗಳ ಪ್ರಭಾವ ಇನ್ನೂ ಇದೆ.

ಅವನ ಧರ್ಮವು ದಾವಾಗ್ನಿಯಂತೆ ಪಸರಿತು. ಶೀಘ್ರವಾಗಿ ಅದು ಸಮಗ್ರ ಭಾರತದ ಧರ್ಮವಾಯಿತು. ಆದರೆ ಭಾರತಕ್ಕೆ ಸೀಮಿತವಾಗಿ ಉಳಿಯಲಿಲ್ಲ. ಆ ಕಾಲದ ಪರಿಚಿತ ವಿಶ್ವ ಮೂಲೆ ಮೂಲೆಗೂ ಅದು

ಮುಟ್ಟಿತು. ಎಲ್ಲ ಜನಾಂಗದವರೂ ಅದನ್ನು ಸ್ವೀಕರಿಸಿದರು. ಅಫ್‌ಘಾನಿಸ್ತಾನದವರೂ ಹಿಂದೊಮ್ಮೆ ಬೌದ್ಧಧರ್ಮೀಯರಾಗಿದ್ದರು. ಅದು ಏಶಿಯಕ್ಕು ಸೀಮಿತವಿರಲಿಲ್ಲ. ಪ್ರಾಚೀನ (ಸೆಲ್ಟಿಕ್) ಬ್ರಿಟನ್ನಿನ ಧರ್ಮ ಬೌದ್ಧಧರ್ಮವಾಗಿತ್ತೆಂದು ತೋರಿಸುವ ಸಾಕ್ಷ್ಯಾಧಾರಗಳಿವೆ.[೧]

ಬೌದ್ಧಧರ್ಮದ ಈ ಶೀಘ್ರ ಪ್ರಸಾರಕ್ಕೆ ಏನು ಕಾರಣ? ಈ ವಿಷಯದ ಬಗೆಗೆ ಪ್ರೊ. ಹಾಪ್‌ಕಿನ್ಸ್ ಹೇಳಿರುವುದನ್ನು ಉದ್ಧರಿಸುವುದು ಯೋಗ್ಯವಾಗಿದೆ. ಅವರು ಹೀಗೆ ಹೇಳುತ್ತಾರೆ:

> "ಸ್ಥಾಪನೆಯಾದ ಹೊಸದರಲ್ಲಿಯೇ ಬೌದ್ಧಧರ್ಮ ಶೀಘ್ರವಾಗಿ ಪ್ರಸಾರವಾಗಲು ಅದರ ತತ್ವಗಳು ಮತ್ತು ಅದರ ಸ್ಥಾಪಕನ ಪ್ರಭಾವಶಾಲಿ ವ್ಯಕ್ತಿತ್ವ ಕಾರಣವಾಗಿವೆ. ಬುದ್ಧನ ವ್ಯಕ್ತಿತ್ವ ಜನರನ್ನು ಆಕರ್ಷಿಸಿತು. ಅವನಿಂದ ಹೊರಹೊಮ್ಮಿದ ಉಪದೇಶ ಅವರಲ್ಲಿ ಉತ್ಸಾಹವನ್ನು ತುಂಬಿತು. ಅವನು ರಾಜಪುತ್ರನಾದುದರಿಂದ ಶ್ರೀಮಂತವರ್ಗಕ್ಕೆ ಸ್ವೀಕಾರಾರ್ಹನಾದನು. ಅವನ ಆಕರ್ಷಕತೆಯು ಅವನನ್ನು ಜನರ ಆರಾಧ್ಯ ದೈವವನ್ನಾಗಿ ಮಾಡಿತು. ಜನರ ಹೃದಯವನ್ನು ಗೆದ್ದ ಈ ಉಪದೇಶಕನ ಪ್ರಬಲ ಮತ್ತು ಆಕರ್ಷಕ ವ್ಯಕ್ತಿತ್ವ ಪ್ರತಿಯೊಂದು ಪುಟದಲ್ಲಿ ಎದ್ದು ಕಾಣುವಂತಿದೆ. ನಿರೀಶ್ವರವಾದಿಯಾದ ಬೇರೆ ಯಾವನೂ ಅವನಂತೆ ದೇವತೆಯಂತೆ ಕಾಣುತ್ತಿರಲಿಲ್ಲ. ಅವನು ತನಗೆ ದೇವತ್ವವನ್ನು ಆರೋಪಿಸಿಕೊಳ್ಳಲಿಲ್ಲ; ಭವಿಷ್ಯದ ಸುಖದ ಆಶೆ ಅವನಿಗಿರಲಿಲ್ಲ; ಆಶಾರಹಿತನಾಗಿದ್ದಂತೆ ಭಯರಹಿತನೂ ಆಗಿದ್ದನು; ವೈಚಾರಿಕ ನಾಯಕನು; ಲೋಕದ ಅವಿವೇಕವನ್ನು ಪ್ರೇಮದಿಂದ ಉಪೇಕ್ಷಿಸುವವನು; ಮಹೋನ್ನತ ಆದರೆ (ಜನರಿಂದ) ಆರಾಧಿತನು, ವಿಶ್ವದ ಸೋದರ, ಹೀಗೆ ಅವನು ಸರಳವಾಗಿ, ಪ್ರಶಾಂತನಾಗಿ ಜನರ ಮಧ್ಯದಲ್ಲಿ ಸಂಚರಿಸುತ್ತಿದ್ದನು. ತನ್ನನ್ನು ವಿರೋಧಿಸುವವರನ್ನು ಮೃದುವಾದ ವ್ಯಂಗ್ಯದಿಂದ ವಶಪಡಿಸಿಕೊಳ್ಳುತ್ತಿದ್ದನು. ಪ್ರತಿಯೊಬ್ಬನಿಗೆ ಗುರು, ಎಲ್ಲರಿಗೆ ಗೆಳೆಯನಾಗಿ ಒಂದರ ಮೇಲೊಂದು ಸಭೆಯಲ್ಲಿ ಪ್ರಭಾವಶಾಲಿಯಾದ ಮಾಧುರ್ಯದಿಂದ ಮಾತನಾಡುತ್ತಿದ್ದನು. ಅವನ ಧ್ವನಿ ರೋಮಾಂಚಕವೂ ವಾಕ್ಪಟುತ್ವದಿಂದ ಕೂಡಿದ್ದೂ ಆಗಿತ್ತು. ವಾಗ್ವೈಖರಿ ಶ್ರೋತೃಗಳ ಮನವೊಲಿಸುವಂತಿತ್ತು. ಅವನ ದೃಷ್ಟಿ ಗೌರವವನು ಹುಟ್ಟಿಸುತ್ತಿತ್ತು. ಅವನ ಅನುಯಾಯಿಗಳು ಅವನನ್ನು ತಮ್ಮ ನಾಯಕ ಹಾಗೂ ದೇವತೆಯೆಂದು ಸ್ವೀಕರಿಸಲು ಅವನ ವ್ಯಕ್ತಿತ್ವವೊಂದೇ ಸಾಕಾಗಿತ್ತು. ಅವನು ಅಂತಹ ವ್ಯಕ್ತಿ – ಹೀಗೆಂದು ಸಂಪ್ರದಾಯದಿಂದ ತಿಳಿದುಬರುತ್ತದೆ. ಅಂತಹ ವ್ಯಕ್ತಿ ಮಾತನಾಡುವಾಗ ಸಹಜವಾಗಿಯೇ ಅವನಿಗೆ ಶ್ರೋತೃಗಳು ದೊರೆಯುತ್ತಾರೆ. ಅವನು ಏನು ಹೇಳುವನು ಎಂಬುದಕ್ಕೆ ಮಹತ್ವವಿಲ್ಲ. ಏಕೆಂದರೆ ಚಟುವಟಿಕೆಗಳ ಮೇಲೆ ಅವನು ಪ್ರಭಾವ ಬೀರುತ್ತಾನೆ ಮತ್ತು ತನ್ನ ಮಾತನ್ನು ಕೇಳುವವರನ್ನು ಒಲಿಸಿಕೊಳ್ಳುತ್ತಾನೆ. ಆದರೆ ಈ ವ್ಯಕ್ತಿತ್ವದ ಜೊತೆಗೆ, ಈ ವ್ಯಕ್ತಿತ್ವದ ಸುತ್ತಲೂ, ಅವನು ಉಪದೇಶಿಸುವುದು ಭಿನ್ನವಾಗಿದೆಯಷ್ಟೇ ಅಲ್ಲ, ಅದರಲ್ಲಿ ನಮ್ಮ ಮೋಕ್ಷದ ಭರವಸೆಯಿದೆ ಎಂಬ ಭಾವನೆಯು ಕೇಳುಗರ ಮನಸ್ಸಿನಲ್ಲಿ ಉಂಟಾಗುತ್ತಿತ್ತು. ಗುಲಾಮರನ್ನು ಸ್ವತಂತ್ರರನ್ನಾಗಿ ಮಾಡುವ ಮತ್ತು ವರ್ಗಗಳನ್ನು ಸೋದರರನ್ನಾಗಿ ಮಾಡುವ ಸತ್ಯವನ್ನು ಅವನ ಮಾತುಗಳಲ್ಲಿ ಮೊಟ್ಟಮೊದಲಿಗೆ ಅವರು ಗುರುತಿಸುತ್ತಿದ್ದರು. ಆಗ ಹೃದಯದಿಂದ ಹೃದಯಕ್ಕೆ ಹೋಗುವ ವಿದ್ಯುತ್ಪ್ರವಾಹದ

೧. ಡಾ. ಡೊನಾಲ್ಡ್ ಎ. ಮೆಕಂಜಿ : 'ಬುದ್ಧಿಸಂ ಇನ್ ಪ್ರಿ–ಕ್ರಿಶ್ಚಿಯನ್ ಬ್ರಿಟನ್', ಬ್ಲಾಕೀ ಎಂಡ್ ಸನ್, ಲಂಡನ್, ೧೯೨೮ ಸಂಪಾದಕರು.

ಮಿಂಚಿನ ವೇಗಕ್ಕೆ ಕಾರಣವನ್ನು ತಿಳಿಯುವುದು ಕಷ್ಟವಾಗುವುದಿಲ್ಲ. ಬುದ್ಧ ಅಂತಹ ವ್ಯಕ್ತಿ. ಅವನ ಉಪದೇಶದ ಸಾರವೂ ಅಂತಹದು. ಹೊಸ ಧರ್ಮದಿಂದ ಬುದ್ಧನ ಕಾಲದ ಜನರ ನೈತಿಕ ಜಾಗೃತಿಯ ಮೇಲಾದ ಆಘಾತಕರ ಗಂಭೀರ ಪ್ರಭಾವ ಮತ್ತು ಬುದ್ಧ ಧರ್ಮದ ಅನಿವಾರ್ಯ ತೀವ್ರ ಪ್ರಸಾರ ಇಂತಹವಾಗಿವೆ."

ತನ್ನ ಉಪದೇಶಗಳಿಂದ ಬುದ್ಧನು ತಂದ ಮಹಾ ಸುಧಾರಣೆಯನ್ನು ಅರ್ಥ ಮಾಡಿಕೊಳ್ಳಬೇಕಾದರೆ, ಅವನು ತನ್ನ ಉದ್ದಿಷ್ಟ ಕಾರ್ಯವನ್ನು ಪ್ರಾರಂಭಮಾಡುವ ಹೊತ್ತಿಗೆ ಆರ್ಯ ನಾಗರಿಕತೆಯು ಎಂಥ ಅವನತಿಯ ಸ್ಥಿತಿಯಲ್ಲಿತ್ತು ಎಂಬುದರ ಕಲ್ಪನೆ ಒಂದಿಷ್ಟಾದರೂ ನಮಗೆ ಇರಬೇಕು.

ಅವನ ಕಾಲದ ಆರ್ಯ ಸಮುದಾಯವು ಸಾಮಾಜಿಕವಾಗಿ, ಧಾರ್ಮಿಕವಾಗಿ ಮತ್ತು ಆಧ್ಯಾತ್ಮಿಕವಾಗಿ ಅತ್ಯಧಮ ರೀತಿಯ ವಿಷಯ ಲಂಪಟತನದಲ್ಲಿ ಮುಳುಗಿಹೋಗಿತ್ತು.

ಕೆಲವೇ ಕೆಲವು ಸಾಮಾಜಿಕ ಅನಿಷ್ಟಗಳನ್ನು ಸೂಚಿಸುವುದಾದರೆ ದ್ಯೂತವನ್ನು ಗಮನಿಸಬಹುದು. ಮದ್ಯಪಾನದಂತೆಯೇ ದ್ಯೂತವು ಆರ್ಯರಲ್ಲಿ ಬಹಳ ಪ್ರಚಲಿತವಾಗಿತ್ತು.

ಪ್ರತಿಯೊಬ್ಬ ರಾಜನ ಅರಮನೆಗೆ ಹೊಂದಿಕೊಂಡಂತೆ ಒಂದು ದ್ಯೂತ ಗೃಹವಿರುತ್ತಿತ್ತು. ಪ್ರತಿಯೊಬ್ಬ ರಾಜನೂ ತನ್ನ ಜೊತೆಗೆ ಆಡಲು ಒಬ್ಬ ನಿಷ್ಣಾತ ಜೂಜುಗಾರನನ್ನು ನಿಯಮಿಸಿಕೊಂಡಿದ್ದನು. ವಿರಾಟರಾಜನ ಆಸ್ಥಾನದಲ್ಲಿ ಕಂಕನೆಂಬ ನಿಷ್ಣಾತ ಜೂಜುಗಾರನಿದ್ದನು. ರಾಜರಲ್ಲಿ ವಿನೋದವು ಕೇವಲ ವಿನೋದವಾಗಿರಲಿಲ್ಲ. ಅವರು ದೊಡ್ಡ ದೊಡ್ಡ ಪಣಗಳನ್ನು ಹಚ್ಚಿ ಆಡುತ್ತಿದ್ದರು. ತಮ್ಮ ರಾಜ್ಯಗಳನ್ನು, ಆಶ್ರಿತರನ್ನು, ಬಂಧುಗಳನ್ನು, ಗುಲಾಮರನ್ನು ಹಾಗೂ ಸೇವಕರನ್ನು ಪಣಕ್ಕೆ ಇಡುತ್ತಿದ್ದರು.[೧] ನಳ ಮಹಾರಾಜನು ಪುಷ್ಕರನೊಡನೆ ದ್ಯೂತವಾಡುವಾಗ ಎಲ್ಲವನ್ನೂ ಪಣಕ್ಕಿಟ್ಟು ಸೋತನು. ಅವನು ತನ್ನನ್ನು ಮತ್ತು ತನ್ನ ಹೆಂಡತಿ ದಮಯಂತಿಯನ್ನು ಮಾತ್ರ ಪಣಕ್ಕಿಡಲಿಲ್ಲ. ನಳನು ಕಾಡಿಗೆ ಹೋಗಿ ಭಿಕ್ಷುಕನಂತೆ ಜೀವಿಸಬೇಕಾಯಿತು. ನಳನನ್ನು ಮೀರಿಸಿದ ರಾಜರೂ ಇದ್ದರು. ಪಾಂಡವರಲ್ಲಿ ಹಿರಿಯನಾದ ಧರ್ಮರಾಯನು ದ್ಯೂತದಲ್ಲಿ ಸರ್ವಸ್ವವನ್ನೂ, ತನ್ನ ಸಹೋದರರನ್ನೂ, ತನ್ನ ಮತ್ತು ಸಹೋದರರೆಲ್ಲರ ಪತ್ನಿಯಾದ ದ್ರೌಪದಿಯನ್ನೂ ಹೇಗೆ ಜೂಜಿಗೊಡ್ಡಿದನೆಂಬುದನ್ನು 'ಮಹಾಭಾರತ'ವು ತಿಳಿಸುತ್ತದೆ. ಆರ್ಯರಿಗೆ ದ್ಯೂತವು ಒಂದು ಗೌರವದ ಪ್ರಶ್ನೆಯಾಗಿತ್ತು. ದ್ಯೂತಕ್ಕೆ ಕರೆಯುವುದು ಒಬ್ಬನ ಗೌರವ ಮತ್ತು ಪ್ರತಿಷ್ಠೆಗೆ ಮಾಡಿದ ಸವಾಲೆಂದು ತಿಳಿಯಲಾಗುತ್ತಿತ್ತು. ಜೂಜಿನ ಅನರ್ಥಕಾರಿ ಪರಿಣಾಮಗಳ ಬಗೆಗೆ ಮೊದಲೇ ಎಚ್ಚರಿಕೆ ಕೊಟ್ಟಿದ್ದರೂ ಧರ್ಮರಾಯನು ದ್ಯೂತಮಾಡಿದನು. ಅವನು ಕೊಟ್ಟ ಸಮಾಧಾನವೆಂದರೆ ಅವನನ್ನು ದ್ಯೂತಕ್ಕೆ ಆಮಂತ್ರಿಸಲಾಗಿತ್ತು ಮತ್ತು ಹಾಗೆ ಆಮಂತ್ರಿಸಿದ ಮೇಲೆ ಗೌರವಸ್ಥನಾದ ತಾನು ಅಂಥ ಆಮಂತ್ರಣವನ್ನು ನಿರಾಕರಿಸುವುದು ಸಾಧ್ಯವಿರಲಿಲ್ಲ.

ದ್ಯೂತದ ಈ ದುಷ್ಟ ಚಟವು ರಾಜರಿಗೆ ಮಾತ್ರ ಸೀಮಿತವಾಗಿರಲಿಲ್ಲ. ಶ್ರೀಸಾಮಾನ್ಯರಿಗೂ ಈ ಸೋಂಕು ಬಡಿದಿತ್ತು. ದ್ಯೂತರಿಂದ ಹಾಳಾದ ಬಡ ಆರ್ಯನೊಬ್ಬನ ಪ್ರಲಾಪ 'ಋಗ್ವೇದ'ದಲ್ಲಿದೆ. ಕೌಟಿಲ್ಯನ ಕಾಲದಲ್ಲಿ ಜೂಜು ಎಷ್ಟೊಂದು ಸಾಮಾನ್ಯವಾಗಿತ್ತೆಂದರೆ ರಾಜನ ಪರವಾನಗಿ ಪಡೆದ ದ್ಯೂತಗೃಹಗಳು ಇರುತ್ತಿದ್ದವು ಮತ್ತು ಇವುಗಳಿಂದ ರಾಜನಿಗೆ ಸಾಕಷ್ಟು ಆದಾಯ ಬರುತ್ತಿತ್ತು.

ಆರ್ಯರಲ್ಲಿ ಬಹಳ ಪ್ರಚಲಿತವಾಗಿದ್ದ ಇನ್ನೊಂದು ದುಷ್ಟ ಚಟವೆಂದರೆ ಮದ್ಯಪಾನ. ಮದ್ಯಗಳಲ್ಲಿ ಸೋಮ ಮತ್ತು ಸುರಾ ಎಂಬ ಎರಡು ಪ್ರಕಾರಗಳು ಸೋಮವು ಯಜ್ಞಗಳಲ್ಲಿ ಬಳಸುವ ಮದ್ಯ.

---

೧. 'ಮಹಾಭಾರತ' – ವನಪರ್ವ.

ಮೊದಲಿಗೆ ಬ್ರಾಹ್ಮಣರು, ಕ್ಷತ್ರಿಯರು ಮತ್ತು ವೈಶ್ಯರಿಗೆ ಮಾತ್ರ ಸೋಮಪಾನ ಮಾಡಲು ಅನುಮತಿ ನೀಡಲಾಗಿತ್ತು. ಅನಂತರ ಬ್ರಾಹ್ಮಣರು ಮತ್ತು ಕ್ಷತ್ರಿಯರಿಗೆ ಮಾತ್ರ ಅನುಮತಿ ನೀಡಲಾಯಿತು. ವೈಶ್ಯರನ್ನು ಸೋಮಪಾನದಿಂದ ಹೊರಗಿಡಲಾಯಿತು. ಶೂದ್ರರು ಎಂದೂ ಅದರ ರುಚಿ ನೋಡುವಂತಿರಲಿಲ್ಲ. ಸೋಮರಸವನ್ನು ತಯಾರಿಸುವ ರಹಸ್ಯ ಬ್ರಾಹ್ಮಣರಿಗೆ ಮಾತ್ರ ತಿಳಿದಿತ್ತು. ಆದರೆ ಸುರಾಪಾನ ಎಲ್ಲರಿಗೂ ಮುಕ್ತವಾಗಿತ್ತು. ಅಲ್ಲದೇ ಎಲ್ಲರೂ ಅದನ್ನು ಕುಡಿಯುತ್ತಿದ್ದರು. ಬ್ರಾಹ್ಮಣರೂ ಸುರಾಪಾನ ಮಾಡುತ್ತಿದ್ದರು. ಅಸುರರ ಗುರುವಾದ ಶುಕ್ರಾಚಾರ್ಯನು ಎಷ್ಟು ಅತಿಶಯವಾಗಿ ಕುಡಿದಿದ್ದನೆಂದರೆ ಅವನು ತನಗೊಬ್ಬನಿಗೆ ಮಾತ್ರ ತಿಳಿದಿದ್ದ ಹಾಗೂ ದೇವರಿಂದ ಹತರಾದ ಅಸುರರಿಗೆ ಜೀವದಾನ ಮಾಡಬಲ್ಲ ಮಂತ್ರವನ್ನು ದೇವರುಗಳ ಗುರುವಾದ ಬೃಹಸ್ಪತಿಯ ಮಗ ಕಚನಿಗೆ ಸುರೆಯ ಅಮಲಿನಲ್ಲಿ ಕೊಟ್ಟುಬಿಟ್ಟನು. ಕೃಷ್ಣ ಮತ್ತು ಅರ್ಜುನರು ಒಂದು ಪ್ರಸಂಗದಲ್ಲಿ ಬಹಳಷ್ಟು ಮದ್ಯಪಾನ ಮಾಡಿ ಎಚ್ಚರ ತಪ್ಪಿದ್ದರೆಂದು 'ಮಹಾಭಾರತ'ದಲ್ಲಿ ಹೇಳಿದೆ. ಆರ್ಯರ ಸಮಾಜದಲ್ಲಿ ಉತ್ತಮೋತ್ತಮರೂ ಕೂಡ ಮದ್ಯಪಾನದಿಂದ ಮುಕ್ತರಾಗಿರಲಿಲ್ಲ ಎಂಬುದೂ, ಅವರು ವಿಪರೀತವಾಗಿ ಕುಡಿಯುತ್ತಿದ್ದರೆಂಬುದೂ ಇದರಿಂದ ತಿಳಿಯುತ್ತದೆ. ಆದರೆ ಇವೆಲ್ಲಕ್ಕಿಂತ ಹೆಚ್ಚು ಲಜ್ಜಾಸ್ಪದವಾದ ವಿಷಯವೆಂದರೆ ಆರ್ಯ ಸ್ತ್ರೀಯರೂ ಮದ್ಯಪಾನ ವ್ಯಸನಿಗಳಾಗಿದ್ದರು. ಉದಾಹರಣೆಗೆ, ವಿರಾಟರಾಜನ ಹೆಂಡತಿ ಸುಧೇಷ್ಣೆಯು ತನಗೆ ಮದ್ಯದ ದಾಹ ಬಹಳವಾಗಿರುವುದರಿಂದ ಕೀಚಕನ ಮನೆಗೆ ಹೋಗಿ ಮದ್ಯವನ್ನು ತೆಗೆದುಕೊಂಡು ಬಾ ಎಂದು ತನ್ನ ಸೇವಕಿ ಸೈರಂಧ್ರಿಗೆ ಹೇಳುತ್ತಾಳೆ. ಕೇವಲ ರಾಣಿಯರು ಮಾತ್ರ ಕುಡಿಯುತ್ತಿದ್ದರೆಂದು ತಿಳಿಯಬಾರದು. ಮದ್ಯಪಾನವು ಎಲ್ಲ ವರ್ಣಗಳ ಸ್ತ್ರೀಯರಲ್ಲಿ ಸಾಮಾನ್ಯವಾಗಿತ್ತು. ಬ್ರಾಹ್ಮಣ ಸ್ತ್ರೀಯರೂ ಅದರಿಂದ ಮುಕ್ತರಾಗಿರಲಿಲ್ಲ.

ಆರ್ಯ ಸ್ತ್ರೀಯರು ಮದ್ಯಪಾನ ಮತ್ತು ನೃತ್ಯಗಳಲ್ಲಿ ಆಸಕ್ತರಾಗಿದ್ದರೆಂಬುದನ್ನು 'ಕೌಷೀತಕೀ ಗೃಹ್ಯ ಸೂತ್ರ' ೧. ೧೧–೧೨ರಲ್ಲಿ ಹೇಳಿರುವ ಈ ಮಾತಿನಿಂದ ಸ್ಪಷ್ಟವಾಗುತ್ತದೆ: "ವಿವಾಹ ಸಮಾರಂಭದ ಹಿಂದಿನ ರಾತ್ರಿ ವಿಧವೆಯರಲ್ಲದ ನಾಲ್ಕು ಅಥವಾ ಎಂಟು ಜನ ಸ್ತ್ರೀಯರು, ಮದ್ಯಪಾನ ಮತ್ತು ಭೋಜನದ ಅನಂತರ ಸಂತುಷ್ಟರಾಗಿ, ನಾಲ್ಕು ಸಲ ನೃತ್ಯಮಾಡುವರು."

ಆರ್ಯ ಸಮಾಜದ ರಚನೆಯ ಕಡೆ ನೋಡಿದರೆ, ಅದು ವರ್ಗಯುದ್ಧ ಮತ್ತು ವರ್ಗ ನೀತಿ ಭ್ರಷ್ಟತೆಯ ಲಕ್ಷಣಗಳಿಂದ ಕೂಡಿತ್ತು. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಎಂಬ ನಾಲ್ಕು ವರ್ಣಗಳನ್ನು ಆರ್ಯ ಸಮಾಜವು ಮನ್ನಿಸಿತ್ತು. ಈ ವರ್ಣಗಳು ಕೇವಲ ಸಮಾನವಾದ ಸಾಮಾಜಿಕ ಸಂಬಂಧಗಳನ್ನು ಹೊಂದಿದ ಸಮತಲ ವಿಭಾಗಗಳಾಗಿರಲಿಲ್ಲ. ಅವು ಒಂದರ ಮೇಲೊಂದು ಇರುವ ಲಂಬ ವಿಭಾಗಗಳಾಗಿ ಬೆಳೆದು ಬಂದಿದ್ದವು. ಮೇಲೆ ಕೆಳಗೆ ಎಂಬಂತೆ ಏರ್ಪಟ್ಟಿರುವುದರಿಂದ ನಾಲ್ಕು ವರ್ಗಗಳ ನಡುವೆ ಮತ್ಸರ ಮತ್ತು ಪೈಪೋಟಿ ಇತ್ತು. ಈ ಮತ್ಸರ ಮತ್ತು ಪೈಪೋಟಿಗಳು ವೈರತ್ವವನ್ನೂ ಕೂಡ ಹುಟ್ಟಿಸಿದ್ದವು. ಎರಡು ಮೇಲ್ವರ್ಗಗಳಾದ ಬ್ರಾಹ್ಮಣ ಮತ್ತು ಕ್ಷತ್ರಿಯರ ನಡುವಿನ ವೈರ ವಿಶೇಷವಾಗಿ ಲಕ್ಷ್ಯಕ್ಕೆ ಬರುವಂತಿತ್ತು. ಇವರ ನಡುವೆ ಎಷ್ಟು ನಿಯತವಾಗಿ ತೀವ್ರವಾದ ವರ್ಗಯುದ್ಧ ನಡೆಯುತ್ತಿತ್ತೆಂದರೆ ಅದರ ವರ್ಣನೆಯನ್ನು ಓದಿದರೆ ಯಾವುದೇ ಮಾರ್ಕ್ಸ್‌ವಾದಿಯ ಹೃದಯಕ್ಕೂ ಖುಷಿಯುಂಟಾದೀತು. ಆದರೆ ದುರದೃಷ್ಟವಶಾತ್ ಬ್ರಾಹ್ಮಣ ಮತ್ತು ಕ್ಷತ್ರಿಯರ ನಡುವೆ ನಡೆದ ಈ ವರ್ಗಯುದ್ಧದ ವಿವರವಾದ ಇತಿಹಾಸ ಲಭ್ಯವಿಲ್ಲ. ಕೆಲವೇ ಕೆಲವು ಪ್ರಸಂಗಗಳು ಮಾತ್ರ ಉಲ್ಲೇಖಗೊಂಡಿವೆ. ವೇನ, ಪುರೂರವಸ್, ನಹುಷ, ಸುದಾಸ, ಸುಮುಖ ಮತ್ತು ನಿಮಿ ಇವರು ಬ್ರಾಹ್ಮಣರೊಡನೆ ಸಂಘರ್ಷಕ್ಕಿಳಿದ ಕೆಲವು ಕ್ಷತ್ರಿಯ ರಾಜರುಗಳು. ಈ ಸಂಘರ್ಷಗಳಿಗೆ ಕಾರಣವಾದ ವಿವಾದಾಂಶಗಳು ಭಿನ್ನಭಿನ್ನವಾಗಿವೆ.

ದೇವರ ಬದಲಿಗೆ ರಾಜನೊಬ್ಬನನ್ನು ಪೂಜಿಸಲು ಹಾಗೂ ರಾಜನಿಗೆ ಕಾಣಿಕೆ ಒಪ್ಪಿಸಲು ಬ್ರಾಹ್ಮಣರಿಗೆ ಆದೇಶ ಮಾಡಬಹುದೇ ಮತ್ತು ನಿಯಮನ ಮಾಡಬಹುದೇ ಎಂಬುದು ವೇನ ಮತ್ತು ಬ್ರಾಹ್ಮಣರ ನಡುವಿನ ವಿವಾದಾಂಶವಾಗಿತ್ತು. ಬ್ರಾಹ್ಮಣನ ಆಸ್ತಿಯನ್ನು ಒಬ್ಬ ಕ್ಷತ್ರಿಯ ರಾಜನು ಮುಟ್ಟುಗೋಲು ಹಾಕಿಕೊಳ್ಳಬಹುದೇ ಎಂಬುದು ಪುರೂರವಸ್ ಮತ್ತು ಬ್ರಾಹ್ಮಣರ ನಡುವಿನ ವಿವಾದಾಂಶವಾಗಿತ್ತು. ಯಜ್ಞಕಾರ್ಯದಲ್ಲಿ ರಾಜನು ತನ್ನ ಕುಲಪುರೋಹಿತನನ್ನು ಮಾತ್ರ ನಿಯಮಿಸಿಕೊಳ್ಳಬೇಕೆಂಬ ಕಟ್ಟುಪಾಡಿದೆಯೇ ಎಮಬುದು ನಿಮಿ ಮತ್ತು ಬ್ರಾಹ್ಮಣರ ನಡುವಿನ ವಿವಾದಾಂಶವಾಗಿತ್ತು. ರಾಜನು ಬ್ರಾಹ್ಮಣನನ್ನು ಮಾತ್ರ ಪುರೋಹಿತನನ್ನಾಗಿ ನಿಯಮಿಸಿಕೊಳ್ಳಬೇಕೆಂಬ ಕಟ್ಟುಪಾಡಿದೆಯೇ ಎಂಬುದು ಸುದಾಸ ಮತ್ತು ಬ್ರಾಹ್ಮಣರ ನಡುವಿನ ವಿವಾದಾಂಶವಾಗಿತ್ತು.

ಈ ಎರಡು ವರ್ಗಗಳ ನಡುವೆ ಎಷ್ಟು ದೊಡ್ಡ ವಿವಾದಾಂಶಗಳಿದ್ದವು ಎಂಬುದನ್ನು ಇದು ತೋರಿಸುತ್ತದೆ. ಅವುಗಳ ನಡುವಿನ ಸಂಘರ್ಷ ಅತಿ ಕಟುವಾಗಿದ್ದರಲ್ಲಿ ಆಶ್ಚರ್ಯವೇನು ಇಲ್ಲ. ಈ ಹೋರಾಟಗಳು ಕೇವಲ ಆಗೊಮ್ಮೆ ಈಗೊಮ್ಮೆ ನಡೆಯುವ ಗಲಭೆಗಳಾಗಿರಲಿಲ್ಲ. ಅವು ವಂಶ ನಿರ್ಮೂಲನದ ಉದ್ದೇಶವುಳ್ಳ ಯುದ್ಧಗಳಾಗಿದ್ದವು. ಬ್ರಾಹ್ಮಣನಾದ ಪರಶುರಾಮನು ಇಪ್ಪತ್ತೊಂದು ಬಾರಿ ಕ್ಷತ್ರಿಯರ ವಿರುದ್ಧ ಹೋರಾಡಿದನೆಂದೂ ಪ್ರತಿಯೊಬ್ಬ ಕ್ಷತ್ರಿಯನನ್ನೂ ಕೊಂದನೆಂದೂ ಹೇಳಲಾಗಿದೆ.

ಪರಮಾಧಿಪತ್ಯಕ್ಕಾಗಿ ಇವೆರಡು ವರ್ಗಗಳು ತಮ್ಮ ತಮ್ಮೊಳಗೆ ಹೊಡೆದಾಡಿಕೊಳ್ಳುತ್ತಿರುವಾಗಲೇ ಅವು ವೈಶ್ಯ ಮತ್ತು ಶೂದ್ರರನ್ನು ಹತ್ತಿಕ್ಕಿ ಇಡುವ ಕೆಲಸಮಾಡಿದವು. ವೈಶ್ಯನು ಹಿಂಡುವ ಆಕಳಿನಂತಿದ್ದನು. ತೆರಿಗೆ ಕೊಡುವುದಕ್ಕಾಗಿಯೇ ಅವನು ಹುಟ್ಟಿದಂತಿತ್ತು. ಶೂದ್ರನು ಹೇರು ಹೊರುವ ಮೂಕಪ್ರಾಣಿಯಂತಿದ್ದನು. ಬ್ರಾಹ್ಮಣರ ಮತ್ತು ಕ್ಷತ್ರಿಯರ ಜೀವನವು ವೈಭವಯುತವೂ ಸಂತೋಷಕರವೂ ಆಗಿರಲಿ ಎಂಬ ಏಕೈಕ ಉದ್ದೇಶಕ್ಕಾಗಿಯೇ ಈ ಎರಡು ವರ್ಗಗಳು ಇದ್ದವು. ಅವರಿಗೆ ತಮ್ಮ ಸ್ವಂತಕ್ಕಾಗಿ ಬದುಕುವ ಅಧಿಕಾರವಿರಲಿಲ್ಲ. ತಮಗಿಂತ ಶ್ರೇಷ್ಠರಾದವರ ಜೀವನಕ್ಕಾಗಿಯೇ ಅವರು ಬದುಕಬೇಕಾಗಿತ್ತು.

ಈ ಎರಡು ವರ್ಗಗಳ ಕೆಳಗೆ ಇತರ ಕೆಲವರು ಇದ್ದರು. ಅವರೇ ಚಂಡಾಲರು ಮತ್ತು ಶ್ವಪಚರು. ಅವರು ಅಸ್ಪೃಶ್ಯರಲ್ಲ, ಆದರೆ ಹೀನರು. ಅವರು ಸಮಾಜದ ಹೊರ ವಲಯದಲ್ಲಿ ಇರುವವರು ಮತ್ತು ಧರ್ಮ ನಿಯಮಗಳ ಹೊರಗೆ ಇರುವವರು. ಅವರಿಗೆ ಹಕ್ಕುಗಳೂ ಇಲ್ಲ, ಅವಕಾಶಗಳೂ ಇಲ್ಲ. ಅವರು ಆರ್ಯ ಸಮಾಜದಿಂದ ತಿರಸ್ಕೃತರಾದ ಜನರು.

ಆರ್ಯ ಸಮಾಜದ ಲೈಂಗಿಕ ಅನೈತಿಕತೆಯು ಈಗಿರುವ ಅವರ ವಂಶಜರಿಗೆ ಆಘಾತವನ್ನು ಉಂಟುಮಾಡುವಂತಿದೆ. ಬುದ್ಧ ಪೂರ್ವಕಾಲದ ಆರ್ಯರಿಗೆ ಈಗಿನವರಿಗೆ ಇರುವಂತೆ ಲೈಂಗಿಕ ಮತ್ತು ವೈವಾಹಿಕ ಸಂಬಂಧಗಳ ವಿಷಯದಲ್ಲಿ ನಿಷಿದ್ಧ ಬಾಂಧವ್ಯದ ತಲೆಮೊರೆಗಳ ನಿಯಮಗಳು ಇರಲಿಲ್ಲ.

ಆರ್ಯ ಪುರಾಣ ಸಾಹಿತ್ಯದ ಪ್ರಕಾರ, ಬ್ರಹ್ಮನು ಸೃಷ್ಟಿಕರ್ತ. ಬ್ರಹ್ಮನಿಗೆ ಮೂವರು ಗಂಡುಮಕ್ಕಳೂ ಒಬ್ಬ ಮಗಳೂ ಇದ್ದರು. ಗಂಡುಮಕ್ಕಳಲ್ಲಿ ಒಬ್ಬನಾದ ದಕ್ಷನು ತನ್ನ ಸಹೋದರಿಯನ್ನು ಮದುವೆಯಾಗಿದ್ದನು. ಈ ಸಹೋದರ–ಸಹೋದರಿಯರಿಂದ ಹುಟ್ಟಿದ ಪುತ್ರಿಯರಲ್ಲಿ ಕೆಲವರು ಬ್ರಹ್ಮನ ಮಗನಾದ ಮರೀಚಿಯ ಮಗ ಕಾಶ್ಯಪನನ್ನು ಮದುವೆಯಾದರೆ, ಕೆಲವರು ಬ್ರಹ್ಮನ ಮೂರನೆಯ ಮಗನಾದ ಧರ್ಮವನ್ನು ಮದುವೆಯಾದರು.[೧]

'ಋಗ್ವೇದ'ದಲ್ಲಿ ಯಮ ಮತ್ತು ಯಮಿ ಎಂಬ ಸಹೋದರ ಸಹೋದರಿಯರಿಗೆ ಸಂಬಂಧಿಸಿದ

೧. 'ಮಹಾಭಾರತ', ಆದಿಪರ್ವ, ಅಧ್ಯಾಯ ೬೬.

ಒಂದು ಪ್ರಸಂಗವನ್ನು ಹೇಳಲಾಗಿದೆ. ಈ ಉಪಾಖ್ಯಾನದಂತೆ ಯಮಿಯು ತನ್ನ ಸಹೋದರ ಯಮನನ್ನು ತನ್ನೊಡನೆ ಸಮಾಗಮಿಸುವಂತೆ ಕೇಳಿಕೊಳ್ಳುತ್ತಾಳೆ ಮತ್ತು ಅವನು ಹಾಗೆ ಮಾಡಲು ನಿರಾಕರಿಸಿದಾಗ ಕೋಪೋದ್ರೇಕಗೊಳ್ಳುತ್ತಾರೆ.[೧]

ತಂದೆಯು ತನ್ನ ಮಗಳನ್ನು ವಿವಾಹವಾಗಬಹುದಿತ್ತು. ವಶಿಷ್ಠನು ತನ್ನ ಮಗಳಾದ ಶತ್ರಪಳು ಪ್ರಾಯ ಪ್ರಬುದ್ಧಳಾದೊಡನೆ ಅವಳನ್ನು ಮದುವೆಯಾದನು.[೨]

ಮನುವು ತನ್ನ ಮಗಳಾದ ಇಳಾಳನ್ನು ಮದುವೆಯಾದನು.[೩] ಜಹ್ನುವು ತನ್ನ ಮಗಳಾದ ಜಾಹ್ನವಿಯನ್ನು ಮದುವೆಯಾದನು.[೪] ಸೂರ್ಯನು ತನ್ನ ಮಗಳಾದ ಉಷಾಳನ್ನು ವಿವಾಹವಾದನು.[೫]

ಅಸಾಮಾನ್ಯ ರೀತಿಯ ಬಹುಪತಿತ್ವವೂ ಆಚರಣೆಯಲ್ಲಿತ್ತು. ಆರ್ಯರಲ್ಲಿ ಪ್ರಚಲಿತವಾಗಿದ್ದ ಬಹುಪತಿತ್ವ ಪದ್ಧತಿಯಂತೆ ರಕ್ತಸಂಬಂಧಿಗಳು ಒಂದೇ ಹೆಣ್ಣಿನೊಡನೆ ಸಹವಾಸ ಮಾಡಬಹುದಿತ್ತು. ದಾಹಪ್ರಚೇತನಿ ಮತ್ತು ಅವನ ಮಗ ಸೋಮ ಇವರಿಬ್ಬರು ಸೋಮನ ಮಗಳಾದ ಮರಿಷಳನ್ನು ಮದುವೆಯಾಗಿದ್ದರು.[೬]

ಅಜ್ಜನು ತನ್ನ ಮೊಮ್ಮಗಳನ್ನು ಮದುವೆಯಾಗುವ ಉದಾಹರಣೆಗಳೂ ಇದ್ದವು. ದಕ್ಷನು ತನ್ನ ಮಗಳನ್ನು ತನ್ನ ತಂದೆಯಾದ ಬ್ರಹ್ಮನಿಗೆ ಮದುವೆ ಮಾಡಿಕೊಟ್ಟನು[೭] ಮತ್ತು ಆ ಮದುವೆಯಿಂದ ಪ್ರಸಿದ್ಧನಾದ ನಾರದನು ಹುಟ್ಟಿದನು. ದೌಹಿತ್ರನು ತನ್ನ ಇಪ್ಪತ್ತೇಳು ಜನ ಪುತ್ರಿಯರನ್ನು ತನ್ನ ತಂದೆಯಾದ ಸೋಮನಿಗೆ ಸಮಾಗಮ ಮತ್ತು ಸಂತಾನ ಪ್ರಾಪ್ತಿಗಾಗಿ ಕೊಟ್ಟನು.

ಆರ್ಯರಿಗೆ ಬಯಲಿನಲ್ಲಿ ಎಲ್ಲರೆದುರು ಸಮಾಗಮಿಸುವುದರಲ್ಲಿ ಸಂಕೋಚವಿರಲಿಲ್ಲ. ಋಷಿಗಳು ವಾಮದೇವ್ಯ ವ್ರತಗಳೆಂಬ ಕೆಲವು ಧಾರ್ಮಿಕ ಕ್ರಿಯಾವಿಧಿಗಳನ್ನು ನಡೆಸುತ್ತಿದ್ದರು. ಇವು ಯಜ್ಞಭೂಮಿಯಲ್ಲಿ ನಡೆಯುತ್ತಿದ್ದವು. ಅಲ್ಲಿಗೆ ಯಾವಳೇ ಸ್ತ್ರೀಯು ಬಂದು ಲೈಂಗಿಕ ಸಂಭೋಗವನ್ನು ಬಯಸಿದರೆ ಮತ್ತು ತನ್ನನ್ನು ತೃಪ್ತಿಗೊಳಿಸಲು ಋಷಿಯನ್ನು ಕರೆದರೆ ಆಗ ಋಷಿಯು ಯಜ್ಞ ಭೂಮಿಯಲ್ಲಿ ಎಲ್ಲರೆದುರಿಗೆ ಅವಳ ಸಮಾಗಮ ಮಾಡುತ್ತಿದ್ದನು. ಇಂಥ ಅನೇಕ ಪ್ರಸಂಗಗಳನ್ನು ಹೇಳಬಹುದು. ಸತ್ಯವತಿಯೊಡನೆ ಹೀಗೆ ಸಂಭೋಗ ಮಾಡಿದ ಪರಾಶರ ಋಷಿಯ ಪ್ರಸಂಗವಿದೆ. ಹಾಗೆಯೇ ದೀರ್ಘತಪ ಪ್ರಸಂಗ ಕೂಡ. ಅಂಥ ಪದ್ಧತಿಯು ಸರ್ವೇಸಾಮಾನ್ಯವಾಗಿರುತ್ತೆಂಬುದನ್ನು ಅಯೋನಿಜ ಎಂಬ ಪದವು ಸೂಚಿಸುತ್ತದೆ. ಅಯೋನಿ ಎಂಬ ಪದಕ್ಕೆ ನಿಷ್ಕಳಂಕ (ಅಕ್ಷತಯೋನಿ) ಗರ್ಭಧಾರಣೆ ಎಂದು ಅರ್ಥ ಹಚ್ಚಲಾಗುತ್ತದೆ. ಆದರೆ ಆ ಪದದ ಮೂಲಾರ್ಥ ಹಾಗೆ ಇಲ್ಲ. ಯೋನಿ ಪದದ ಮೂಲಾರ್ಥವು ಮನೆ ಎಂದಿದೆ. ಅಯೋನಿಯೆಂದರೆ ಮನೆಯಿಂದ ಹೊರಗೆ ಅರ್ಥಾತ್ ಬಯಲಿನಲ್ಲಿ ಹುಟ್ಟಿದವರು ಎಂದಾಗುತ್ತದೆ. ಸೀತೆ ಮತ್ತು ದ್ರೌಪದಿ ಇವರಿಬ್ಬರೂ ಅಯೋನಿಜೆಯರು ಎಂದ ಮೇಲೆ ಹೀಗೆ ಹುಟ್ಟುವುದರಲ್ಲಿ ತಪ್ಪಿಲ್ಲ ಎಂದು ಭಾವಿಸುತ್ತಿದ್ದರು ಎಂದಾಯಿತು. ಈ ಪದ್ಧತಿ ಎಷ್ಟು ಸಾಮಾನ್ಯವಾದ ಸಂಗತಿಯಾಗಿತ್ತು ಎಂದರೆ ಅಂಥ ಆಚರಣೆಯ ವಿರುದ್ಧ ಧಾರ್ಮಿಕ ನಿಷೇಧಾಜ್ಞೆಗಳನ್ನು ಹೊರಡಿಸಬೇಕಾಯಿತು.

---

೧. 'ಋಗ್ವೇದ'.
೨. 'ಹರಿವಂಶ' ಅಧ್ಯಾಯ II
೩. 'ಹರಿವಂಶ' ಅಧ್ಯಾಯ X.
೪. ಅದೇ, ಅಧ್ಯಾಯ XXVII.
೫. ಯಾಸ್ಕ : 'ನಿರುಕ್ತ', ಅಧ್ಯಾಯ V ಖಂಡ VI.
೬. 'ಹರಿವಂಶ', ಅಧ್ಯಾಯ X.
೭. ಅದೇ, ಅಧ್ಯಾಯ III.

ಆರ್ಯರಲ್ಲಿ ತಮ್ಮ ಸ್ತ್ರೀಯರನ್ನು ಕೆಲಕಾಲದ ಮಟ್ಟಿಗೆ ಇತರರಿಗೆ ಅವರು ಉಪಯೋಗಕ್ಕಾಗಿ ಕೊಡುವ ಪದ್ಧತಿಯೂ ಪ್ರಚಾರದಲ್ಲಿತ್ತು. ಇದಕ್ಕೆ ಉದಾಹರಣೆಯೆಂದು ಮಾಧವಿಯ ಕಥೆಯನ್ನು ಹೇಳಬಹುದು. ಯಯಾತಿ ರಾಜನು ತನ್ನ ಮಗಳು ಮಾಧವಿಯನ್ನು ತನ್ನ ಗುರು ಗಾಲವನಿಗೆ ಕಾಣಿಕೆಯಾಗಿ ಕೊಟ್ಟನು. ಗಾಲವನು ಈ ಕನ್ಯೆ ಮಾಧವಿಯನ್ನು ಒಂದೊಂದು ಅವಧಿಗಾಗಿ ಮೂವರು ರಾಜರಿಗೆ ಎರವಲು ಕೊಟ್ಟನು. ಅನಂತರ ಅವನು ಅವಳನ್ನು ವಿಶ್ವಾಮಿತ್ರನಿಗೆ ಮದುವೆ ಮಾಡಿಕೊಟ್ಟನು. ಅವಳು ತನಗೆ ಒಂದು ಗಂಡುಮಗು ಹುಟ್ಟುವ ತನಕ ಅವನೊಡನೆ ಇದ್ದಳು. ತದನಂತರ ಗಾಲವನು ಈ ಹೆಣ್ಣನ್ನು ಮತ್ತೆ ಅವಳ ತಂದೆ ಯಯಾತಿಗೆ ಮರಳಿಸಿದನು.

ಹೀಗೆ ತಾತ್ಕಾಲಿಕವಾಗಿ ತಮ್ಮ ಸ್ತ್ರೀಯರನ್ನು ಇತರರಿಗೆ ಬಾಡಿಗೆಗೆ ಕೊಡುವ ಪದ್ಧತಿಯಲ್ಲದೆ ಆರ್ಯರಲ್ಲಿ ಇನ್ನೊಂದು ಪದ್ಧತಿಯೂ ಪ್ರಚಲಿತವಾಗಿತ್ತು. ಅದೇನೆಂದರೆ ಆರ್ಯರಲ್ಲಿ ಶ್ರೇಷ್ಠರೆನಿಸಿಕೊಳ್ಳುವ ಗಂಡಸರಿಂದ ಹೆಂಗಸು ಸಂತಾನ ಪಡೆಯಲು ಅನುಮತಿ ಕೊಡುವುದು. ಕುಟುಂಬವನ್ನು ಬೆಳೆಸುವುದೆಂದರೆ ಅವರು ದನಗಳ ತಳಿ ತಯಾರು ಮಾಡಿದಂತೆ ಅಥವಾ ಸಂತಾನ ವೃದ್ಧಿ ಮಾಡಿದಂತೆ ಎಂದು ತಿಳಿಯುತ್ತಿದ್ದರು. ಆರ್ಯರಲ್ಲಿ ದೇವ ಎಂಬ ಜನರ ವರ್ಗವಿತ್ತು. ಅವರು ಆರ್ಯರೇ ಇದ್ದರೂ ಅವನ ಸ್ಥಾನ ಮತ್ತು ಶೌರ್ಯ ಹೆಚ್ಚಿನದೆಂದು ತಿಳಿಯಲಾಗುತ್ತಿತ್ತು. ಉತ್ತಮ ಸಂತಾನ ಪಡೆಯುವ ಉದ್ದೇಶದಿಂದ ಆರ್ಯರು ತಮ್ಮ ಸ್ತ್ರೀಯರು ದೇವ ವರ್ಗದ ಬೇಕಾದ ಗಂಡಸನ್ನು ಸಂಭೋಗಿಸಲು ಅನುಮತಿ ಕೊಡುತ್ತಿದ್ದರು. ಈ ಪದ್ಧತಿ ಎಷ್ಟು ವ್ಯಾಪಕವಾಗಿ ಪ್ರಚಲಿತವಾಗಿತ್ತೆಂದರೆ ಆರ್ಯ ಸ್ತ್ರೀಯರ ಕನ್ಯಾತ್ವ ಹರಣವು ತಮಗಾಗಿಯೇ ಕಾಯ್ದಿರಿಸಿದ ಹಕ್ಕೆಂದು ದೇವ ವರ್ಗದವರು ತಿಳಿಯುತ್ತಿದ್ದರು. ಈ ಕನ್ಯಾತ್ವದ ಹಕ್ಕನ್ನು ದೇವರು ಚಲಾಯಿಸದೇ ಹೋದರೆ ಹಾಗೂ ತಾಂತ್ರಿಕವಾಗಿ ಅವದಾನ ಎಂದು ಕರೆಯಿಸಿಕೊಳ್ಳುವ ಕಾಣಿಕೆಯನ್ನು ಅವರಿಗೆ ಕೊಟ್ಟು ದೇವಜನರ ನಿಯಂತ್ರಣದಿಂದ ಮುಕ್ತರಾಗದೇ ಹೋದರೆ ಯಾವ ಆರ್ಯ ಸ್ತ್ರೀಯೂ ಮದುವೆಯಾಗುವಂತಿರಲಿಲ್ಲ. ಎಲ್ಲ ಹಿಂದೂ ವಿವಾಹಗಳಲ್ಲಿ ವರ್ಣಿತವಾಗಿರುವ, ಲಾಜಾಹೋಮವು ಆರ್ಯಸ್ತ್ರೀಯರ ಕನ್ಯಾತ್ವ ಹರಣದ ವಿಷಯದಲ್ಲಿ ದೇವರಿಗಿರುವ ಹಕ್ಕನ್ನೂ ದೇವರ ನಿಯಂತ್ರಣದಿಂದ ಮುಕ್ತವಾಗುವ ವಿಧಾನವನ್ನೂ ಸೂಚಿಸುವ ಒಂದು ಅವಶೇಷವೆಂದರೆ ತಪ್ಪಿಲ್ಲ. ಲಾಜಾ ಹೋಮದಲ್ಲಿರುವ ಅವದಾನ ಎಂಬುದು ಕನ್ಯೆಯ ಮೇಲೆ ದೇವರಿಗಿರುವ ಹಕ್ಕನ್ನು ಸಮಾಪ್ತಗೊಳಿಸಲು ಕೊಡುವ ಶುಲ್ಕವಲ್ಲದೆ ಬೇರೇನೂ ಅಲ್ಲ. ಎಲ್ಲ ಹಿಂದೂ ವಿವಾಹಗಳಲ್ಲಿ ತಪ್ಪದೇ ಆಚರಿಸಲಾಗುವ ಹಾಗೂ ವಿವಾಹದ ಅತಿ ಅವಶ್ಯಕವಾದ ಆಚರಣೆಯೆಂದು ತಿಳಿಯಲಾಗುವ ಸಪ್ತಪದಿ ಆಚರಣೆಗೆ ದೇವಜನರ ಕನ್ಯಾತ್ವ ಹರಣದ ಹಕ್ಕಿನೊಡನೆ ಅವಿಭಾಜ್ಯ ಸಂಬಂಧವುಂಟು. ಸಪ್ತಪದಿ ಎಂದರೆ ವಧುವಿನೊಡನೆ ವರನು ಏಳು ಹೆಜ್ಜೆಗಳನ್ನು ಹಾಕುವುದು. ಇದು ಅವಶ್ಯಕವೆನ್ನುವುದು ಏಕೆ? ಇದಕ್ಕೆ ಉತ್ತರವೆಂದರೆ, ತಮಗೆ ಕೊಡುವ ಪರಿಹಾರದ ಬಗೆಗೆ ದೇವರಿಗೆ ತೃಪ್ತಿಯಾಗಿದ್ದರೆ, ವಧುವು ಏಳನೇ ಹೆಜ್ಜೆ ಇಡುವ ಮೊದಲು ಅವಳನ್ನು ತಮ್ಮವಳನ್ನಾಗಿ ಇಟ್ಟುಕೊಳ್ಳಬಹುದಾಗಿತ್ತು. ಆದರೆ ಏಳನೇ ಹೆಜ್ಜೆಯಿಟ್ಟ ಅನಂತರವೇ ದೇವರ ಹಕ್ಕು ಸಮಾಪ್ತಿಯಾಗುತ್ತಿತ್ತು. ವರನು ಇನ್ನು ಮುಂದೆ ವಧುವನ್ನು ಕೊಂಡೊಯ್ಯಬಹುದು ಹಾಗೂ ದೇವರ ಅಡ್ಡಿ ಆತಂಕ ಮತ್ತು ಪೀಡನೆಯ ಭಯವಿಲ್ಲದೆ ಅವರಿಬ್ಬರೂ ಸತಿ ಪತಿಗಳಾಗಿ ಬಾಳಬಹುದು.

ಕನ್ಯೆಯರು ಕನ್ಯಾತ್ವವನ್ನು ಪಾಲಿಸಬೇಕೆಂಬ ನಿಯಮವಿರಲಿಲ್ಲ. ಅವಿವಾಹಿತಳಾಗಿರುವಾಗಲೇ ಹುಡುಗಿ ತನಗೆ ಇಷ್ಟ ಬಂದವನೊಡನೆ ಲೈಂಗಿಕ ಸಂಬಂಧ ಹೊಂದಬಹುದಾಗಿತ್ತು. ಹಾಗೆಯೇ ಸಂತಾನ ಪಡೆಯಬಹುದಾಗಿತ್ತು. ಈ ಮಾತು ಕನ್ಯಾ ಎಂಬ ಪದದ ಮೂಲಾರ್ಥದಿಂದ ಸ್ಪಷ್ಟವಾಗುತ್ತದೆ. ಕನ್ಯೆ ಎಂದರೆ ಹುಡುಗಿ. ಕನ್ಯಾ ಎಂಬ ಪದವು ಕಂ ಎಂಬ ಮೂಲದಿಂದ ಬಂದಿದ್ದು. ಅದರ ಅರ್ಥ ಕನ್ಯೆಯು

ಬೇಕಾದ ಗಂಡಸಿಗೆ ಅರ್ಪಿಸಿಕೊಳ್ಳಲು ಸ್ವತಂತ್ರಳು ಎಂದಾಗುತ್ತದೆ. ಕುಂತಿ ಮತ್ತು ಮತ್ಸ್ಯಗಂಧಿ ಇವರ ಪ್ರಸಂಗಗಳಿಂದ ಕನ್ಯೆಯರು ವಿಧಿಬದ್ಧವಾಗಿ ವಿವಾಹವಾಗದೇ ತಮಗೆ ಬೇಕಾದವರಿಗೆ ಅರ್ಪಿಸಿಕೊಳ್ಳಬಹುದಿತ್ತು ಮತ್ತು ಮಕ್ಕಳನ್ನು ಪಡೆಯಬಹುದಿತ್ತು ಎಂಬುದು ವಿಶದವಾಗುತ್ತದೆ. ಪಾಂಡುವನ್ನು ವಿವಾಹವಾಗುವ ಮೊದಲೇ ಕುಂತಿಯು ಬೇರೆ ಪುರುಷರಿಂದ ಮಕ್ಕಳನ್ನು ಪಡೆದಿದ್ದಳು. ಭೀಷ್ಮನ ತಂದೆಯಾದ ಶಂತನುವನ್ನು ವಿವಾಹವಾಗುವ ಮೊದಲೇ ಮತ್ಸ್ಯಗಂಧಧಿ ಋಷಿ ಪರಾಶರನೊಡನೆ ಲೈಂಗಿಕ ಸಂಬಂಧ ಹೊಂದಿದ್ದಳು.

ಆರ್ಯರಲ್ಲಿ ಪಶುಗಮನವೂ ಕೂಡ ಪ್ರಚಲಿತವಾಗಿತ್ತು. ದಮ ಎಂಬ ಋಷಿಯು ಹೆಣ್ಣು ಜಿಂಕೆಯೊಡನೆ ಲೈಂಗಿಕ ಸಂಪರ್ಕ ಹೊಂದಿದ ಕಥೆ ಸುಪರಿಚಿತವಾಗಿದೆ. ಸೂರ್ಯನು ಹೆಣ್ಣು ಕುದುರೆಯೊಡನೆ ಸಂಪರ್ಕ ಹೊಂದಿದ ಇನ್ನೊಂದು ಉದಾಹರಣೆಯುಂಟು. ಆದರೆ ಅಶ್ವಮೇಧ ಯಜ್ಞದಲ್ಲಿ ಕುದುರೆಯೊಡನೆ ಸಂಭೋಗಿಸಿದ ಹೆಂಗಸಿನ ಉದಾಹರಣೆ ಇವೆಲ್ಲಕ್ಕಿಂತ ಅಸಹ್ಯಕರವಾದುದು.

ಆರ್ಯಧರ್ಮವು ಯಜ್ಞದಿಂದ ಕೂಡಿದ ಧರ್ಮವಾಗಿತ್ತು. ಯಜ್ಞವು ದೇವತ್ವವನ್ನು ಹೊಂದುವ ಅಂದರೆ ದೇವಗಣದಲ್ಲಿ ಪ್ರವೇಶ ಪಡೆಯುವ ಒಂದು ಸಾಧನವಾಗಿತ್ತು. ಅಷ್ಟೇ ಅಲ್ಲ, ಅದು ದೇವತೆಗಳನ್ನು ನಿಯಂತ್ರಿಸುವ ಸಾಧನವೂ ಆಗಿತ್ತು. ಸಂಪ್ರದಾಯದಂತೆ ಯಜ್ಞಗಳ ಸಂಖ್ಯೆ ಇಪ್ಪತ್ತೊಂದು. ಅವುಗಳನ್ನು ಏಳರ ಮೂರು ಗುಂಪುಗಳನ್ನಾಗಿ ವಿಭಾಗಿಸಲಾಗಿತ್ತು. ಮೊದಲನೆಯ ಗುಂಪಿನಲ್ಲಿ ಬೆಣ್ಣೆ, ಹಾಲು, ಧಾನ್ಯ ಮೊದಲಾದವುಗಳ ಯಜ್ಞಗಳು ಸೇರಿದ್ದವು. ಎರಡನೆಯ ಗುಂಪಿನಲ್ಲಿ ಸೋಮ ಯಾಗಗಳು ಸೇರಿದ್ದವು ಮತ್ತು ಪಶು ಯಾಗಗಳು ಮೂರನೆಯ ಗುಂಪಿಗೆ ಸೇರಿದ್ದವು. ಯಜ್ಞಗಳು ಅಲ್ಪಕಾಲವಿರಬಹುದು ಅಥವಾ ಒಂದು ವರ್ಷ ಅಥವಾ ಅದಕ್ಕೂ ಹೆಚ್ಚು ದೀರ್ಘ ಅವಧಿಯ ಯಜ್ಞವಾಗಬಹುದು. ಈ ಎರಡನೆ ಜಾತಿಯ ಯಜ್ಞವನ್ನು 'ಸತ್ರ'ವೆಂದು ಕರೆಯುತ್ತಿದ್ದರು. ಯಜ್ಞದ ಪರವಾಗಿ ಹೀಗೆ ವಾದಮಾಡಲಾಗುತ್ತದೆ: ಯಜ್ಞ ಮಾಡುವವನು ಶಾಶ್ವತ ಪುಣ್ಯವನ್ನು ಪಡೆಯುತ್ತಾನೆ. ಕೇವಲ ಯಜ್ಞ ಮಾಡುವ ಯಜಮಾನನ ಆತ್ಮವೊಂದೇ ಅಲ್ಲ, ಅವನ ಪಿತೃಗಳೂ ಸಹ ಯಜ್ಞದಿಂದ ಲಾಭ ಪಡೆಯುತ್ತಾರೆ. ಅವನು ತಾನು ಅರ್ಪಿಸುವ ಆಹುತಿಗಳಿಂದ ಪಿತೃಗಳಿಗೆ ಸಂತೋಷವನ್ನು ಕೊಡುತ್ತಾನೆ. ಅಷ್ಟೇ ಅಲ್ಲ, ಅವರ ಸ್ಥಾನವನ್ನು ಹೆಚ್ಚಿಸುತ್ತಾನೆ ಮತ್ತು ಉನ್ನತ ಲೋಕದ ವಾಸಿಯಾಗಲು (ಅವರನ್ನು) ಮೇಲೆ ಕಳುಹಿಸುತ್ತಾನೆ.

ಯಜ್ಞವು ಕೇವಲ ಪಾರಲೌಕಿಕ ಸುಖವನ್ನು ಸಂಪಾದಿಸುವ ಸಾಧನವೊಂದೇ ಆಗಿರಲಿಲ್ಲ. ಮಹಾಯಜ್ಞಗಳಲ್ಲಿ ಹಲವು ಈ ಜಗತ್ತಿನ ಒಳ್ಳೆಯ ವಸ್ತುಗಳನ್ನು ಸಂಪಾದಿಸುವುದಕ್ಕೆಂದೇ ಇದ್ದುವು. ಲಾಭಾಕಾಂಕ್ಷೆಯಿಲ್ಲದೇ ನಿರುದ್ದಿಶ್ಯವಾಗಿ ಯಜ್ಞ ಮಾಡುವುದು ಆರ್ಯರಿಗೇ ಅರಿಯದ ವಿಷಯವಾಗಿತ್ತು. ವೈದಿಕ ಕಾಲದ ಭಾರತದಲ್ಲಿ ಕೃತಜ್ಞತಾರ್ಪಣೆಯೂ ಇರಲಿಲ್ಲ. ಸಾಮಾನ್ಯವಾಗಿ ಯಾವ ದೇವತೆಯನ್ನು ಕುರಿತು ಯಜ್ಞ ಮಾಡಲಾಗುತ್ತಿತ್ತೋ, ಆ ದೇವತೆಯು (ತನಗೆ ಅರ್ಪಿಸಿದ ಆಹುತಿಗಳಿಗೆ) ಪ್ರತಿಯಾಗಿ ಕೊಡುವ ಉಡುಗೊರೆಯೇ ಯಜ್ಞದಿಂದಾಗುವ ಲಾಭ. ಯಜ್ಞವು ಈ ಮಾತುಗಳಿಂದ ಪ್ರಾರಂಭವಾಗುತ್ತಿತ್ತು. ಅವನು ದೇವನಿಗೆ ಈ ಮಾತುಗಳಿಂದ ಯಜ್ಞವನ್ನು ಅರ್ಪಿಸುತ್ತಾನೆ. "ನೀನು ನನಗೆ ಕೊಡು, ನಾನು ನಿನಗೆ ಕೊಡುವೆನು. ನೀನು ನನಗೆ ಅನುಗ್ರಹಿಸು, ನಾನು ನಿನಗೆ ಅರ್ಪಿಸುವೆನು."

ಯಜ್ಞ ಸಮಾರಂಭವು ಭಯಭಕ್ತಿಯನ್ನು ಹುಟ್ಟಿಸುವಂತೆ ಇರುತ್ತಿತ್ತು. ಆಡುವ ಪ್ರತಿಯೊಂದು ಶಬ್ದವೂ ಪರಿಣಾಮಕಾರಿಯಾಗಿರುತ್ತಿತ್ತು ಮತ್ತು ಶಬ್ದ ಉಚ್ಚಾರ ಅಥವಾ ಸ್ವರವೂ ಸಹ ಮಹತ್ವಪೂರ್ಣವಾಗಿರುತ್ತಿತ್ತು. ಅಲ್ಲದೆ ಸಮಾರಂಭದ ಬಹುಭಾಗ ಕೈಚಳಕದಿಂದ ಕೂಡಿದ್ದಿತು ಮತ್ತು ತೋರುವಷ್ಟು ಮಹತ್ವವುಳ್ಳದ್ದಾಗಿಲ್ಲವೆಂದು ಪುರೋಹಿತರೆಲ್ಲರೂ ತಿಳಿದಿದ್ದರು ಎಂಬ ಸೂಚನೆಗಳು (ಅಲ್ಲಲ್ಲಿ) ಕಂಡುಬರುತ್ತವೆ.

ಯಜ್ಞವೆಂದರೆ ಪುರೋಹಿತರಿಗೆ ದಕ್ಷಿಣೆಯೆಂದರ್ಥ. ದಕ್ಷಿಣೆಯ ಬಗೆಗೆ ನಿಯಮಗಳು ಸ್ಪಷ್ಟವಾಗಿದ್ದವು ಮತ್ತು ಅವುಗಳನ್ನು ಪ್ರತಿಪಾದಿಸುವವರಿಗೆ ಯಾವುದೇ ಸಂಕೋಚವಿರಲಿಲ್ಲ. ಪುರೋಹಿತರು ದಕ್ಷಿಣೆಗಾಗಿಯೇ ಯಜ್ಞವನ್ನು ಮಾಡುತ್ತಿದ್ದರು. ಅಲ್ಲಿ ಬೆಲೆಯುಳ್ಳ ಬಟ್ಟೆಗಳು, ಗೋವುಗಳು, ಕುದುರೆ ಅಥವಾ ಬಂಗಾರ ಹೀಗೆ ಯಾವುದನ್ನು ಯಾವಾಗ ಕೊಡಬೇಕೆಂಬುದನ್ನೂ ಲಕ್ಷ್ಯಪೂರ್ವಕವಾಗಿ ಹೇಳಿದ್ದಾರೆ. ಪುರೋಹಿತರು ಬಹುಸಂಕೀರ್ಣವಾದ ವಿಧಾನಗಳನ್ನು ಏರ್ಪಾಡು ಮಾಡಿಕೊಂಡಿದ್ದರು ಮತ್ತು ಪ್ರತಿಯೊಂದು ಸಂದರ್ಭದಲ್ಲಿಯೂ ದಕ್ಷಿಣೆಯನ್ನು ಕೇಳುತ್ತಿದ್ದರು. ಯಾವನ ಲಾಭಕ್ಕಾಗಿ ಯಜ್ಞವನ್ನು ಮಾಡುತ್ತಾನೋ ಅವನೊಬ್ಬನೇ ಯಜ್ಞದ ಎಲ್ಲ ಖರ್ಚನ್ನೂ ವಹಿಸಬೇಕೆಂದ ಮೇಲೆ ಖರ್ಚು ಅತಿಯಾಗುವುದು ಸಹಜ. ಒಂದು ಕಡೆ, ಯಜ್ಞದ ದಕ್ಷಿಣೆಯು ಒಂದು ಸಾವಿರ ಆಕಳುಗಳಷ್ಟು ಎಂದು ಹೇಳಿದೆ. ಅಂದಮೇಲೆ ಯಜ್ಞ ಎಷ್ಟು ದುಬಾರಿಯಾಗಿತ್ತೆಂಬುದನ್ನು ತಿಳಿಯಬಹುದು. ಈ ಲೋಭಕ್ಕಾಗಿ ಸಾವಿರ ಆಕಳುಗಳನ್ನು ಕೊಟ್ಟವನು ಸ್ವರ್ಗದಲ್ಲಿ ಎಲ್ಲವನ್ನು ಪಡೆಯುತ್ತಾನೆಂದು ಪುರೋಹಿತನು ಘೋಷಿಸುವಂತೆ ಆಯಿತು. ಈ ವಿಷಯದಲ್ಲಿ ಪುರೋಹಿತನು ಒಳ್ಳೆಯ ದೃಷ್ಟಾಂತಗಳನ್ನು ಕೊಡಬಹುದಿತ್ತು. ಸ್ವರ್ಗದಲ್ಲಿಯ ದೇವತೆಗಳು ತಮ್ಮ ಜೊತೆಯ ದೇವತೆಗಳಿಗೆ ಸಹಾಯ ಮಾಡಿದಾಗ ಪ್ರತಿಫಲವನ್ನು ಕೇಳುವ ಹಕ್ಕು ಇದ್ದೇ ಇರುತ್ತದೆ.

ಪಶು ಯಜ್ಞವು ಮುಖ್ಯ ಯಜ್ಞವಾಗಿತ್ತು. ಅದು ಬಹಳ ವೆಚ್ಚದ್ದೂ ಮತ್ತು ಅನಾಗರಿಕವೂ ಆಗಿತ್ತು. ಆರ್ಯರ ಧರ್ಮದಲ್ಲಿ ಐದು ತೆರನಾದ ಪಶುಗಳನ್ನು ಯಜ್ಞಕ್ಕೆ ಯೋಗ್ಯವೆಂದು ಹೇಳಲಾಗಿದೆ. ಯಜ್ಞಕ್ಕೆ ಯೋಗ್ಯವಾದ ಪಶುಗಳ ಪಟ್ಟಿಯಲ್ಲಿ ಮನುಷ್ಯನು ಮೊದಲಿಗನು. ಮನುಷ್ಯ ಯಜ್ಞವು ಅತ್ಯಂತ ದುಬಾರಿಯಾಗಿತ್ತು. ಮನುಷ್ಯ ಯಜ್ಞದ ನಿಯಮಗಳ ಪ್ರಕಾರ ಕೊಲ್ಲಲ್ಪಡುವ ವ್ಯಕ್ತಿಯು ಪುರೋಹಿತ (ವರ್ಗದವ)ನೂ ಆಗಿರಬಾರದು, ದಾಸನೂ ಆಗಿರಬಾರದು. ಅವನು ಕ್ಷತ್ರಿಯ ಅಥವಾ ವೈಶ್ಯನಿರಬೇಕು. ಆ ಕಾಲದ ಸಾಮಾನ್ಯ ಮೌಲ್ಯದ ಪ್ರಕಾರ ಯಜ್ಞ ಪಶುವಾದ ಮನುಷ್ಯನನ್ನು ಕೊಳ್ಳಬೇಕಾದರೆ ಅವನ ಬೆಲೆ ಒಂದು ಸಾವಿರ ಆಕಳು. ಮನುಷ್ಯ ಯಜ್ಞವು ಬಹುವೆಚ್ಚದ್ದೂ ಮತ್ತು ಅನಾಗರಿಕವೂ ಆಗಿತ್ತಲ್ಲದೆ ಅದು ಓಕರಿಕೆ ಬರುವಂತಹದೂ ಆಗಿದ್ದಿರಬೇಕು. ಏಕೆಂದರೆ ಯಜ್ಞ ಮಾಡುವವರು ಯಜ್ಞ ಪಶುವಾದ ಮನುಷ್ಯನನ್ನು ಕೊಲ್ಲುವುದಷ್ಟೇ ಅಲ್ಲ, ಅವನನ್ನು ತಿನ್ನಬೇಕಾಗಿತ್ತು. ಮನುಷ್ಯನ ಅನಂತರದ ಸ್ಥಾನ ಕುದುರೆಯದು. ಅದೂ ಸಹ ಬಹಳ ವೆಚ್ಚದ ಯಜ್ಞವಾಗಿತ್ತು. ಏಕೆಂದರೆ ಕುದುರೆಯು ಆರ್ಯರಿಗೆ ಭಾರತವನ್ನು ಜಯಿಸುವಲ್ಲಿ ಅಪರೂಪದ ಹಾಗೂ ಅವಶ್ಯಕವಾದ ಪ್ರಾಣಿಯಾಗಿತ್ತು. ಇಂತಹ ಸೈನಿಕ ಮಹತ್ವದ ಮತ್ತು ಸಮರ್ಥವಾದ ಪ್ರಾಣಿಯನ್ನು ಯಜ್ಞ ಪಶುವನ್ನಾಗಿ ಸಂಹರಿಸಿ ಆಹುತಿಗಳನ್ನು ಅರ್ಪಿಸುವುದು ಆರ್ಯರಿಗೆ ಸುಲಭವಾಗಿರಲಿಲ್ಲ. ಅಶ್ವಮೇಧ (ಕುದುರೆಯ ಯಜ್ಞ)ವು ಓಕರಿಕೆ ಬರುವಂತಹುದೂ ಆಗಿರಬೇಕು. ಏಕೆಂದರೆ ಅದರ ವಿಧಿಗಳಲ್ಲಿ ಒಂದರ ಪ್ರಕಾರ ಕುದುರೆಯನ್ನು ಕೊಲ್ಲುವುದಕ್ಕಿಂತ ಮೊದಲು ಯಜ್ಞಮಾಡುವವನ ಹೆಂಡತಿಯ ಜೊತೆ ಕುದುರೆಯು ಸಂಭೋಗ ಮಾಡಬೇಕಾಗಿತ್ತು.

ಜನರು ಕೃಷಿಯ ಉದ್ದೇಶಗಳಿಗಾಗಿ ಉಪಯೋಗಿಸುತ್ತಿದ್ದ ದನಗಳನ್ನೇ ಹೆಚ್ಚಾಗಿ ಯಜ್ಞಗಳಲ್ಲಿ ಬಲಿಕೊಡುತ್ತಿದ್ದರು. ಸಾಮಾನ್ಯವಾಗಿ ಅವು ಆಕಳುಗಳು ಮತ್ತು ಎತ್ತುಗಳಾಗಿದ್ದವು.

ಯಜ್ಞಗಳ ವೆಚ್ಚ ಅತಿಯಾಗಿತ್ತು. ಆದುದರಿಂದ ಅವುಗಳಿಗೆ ಬೇಕಾದ ದುಬಾರಿ ಖರ್ಚಿನ ವಿಚಾರ ಮಾಡಿದರೆ ಅವು ಕಣ್ಮರೆಯಾಗಬೇಕಾಗಿತ್ತು. ಆದರೆ ಅವು ಹಾಗೆ ಕಣ್ಮರೆಯಾಗಲಿಲ್ಲ. ಕಾರಣವಿಷ್ಟೇ, ಯಜ್ಞ ನಿಂತುಹೋದರೆ ಪುರೋಹಿತರ ದಕ್ಷಿಣೆಯೂ ಇಲ್ಲದಂತೆ ಆಗುತ್ತಿತ್ತು. ಯಜ್ಞಗಳನ್ನು ಮಾಡದಿದ್ದರೆ ದಕ್ಷಿಣೆಯಿಲ್ಲ. (ದಕ್ಷಿಣೆಯಿಲ್ಲದಿದ್ದರೆ) ಬ್ರಾಹ್ಮಣರು ಉಪವಾಸ ಸಾಯಬೇಕಾಗುತ್ತಿತ್ತು. ಆದ್ದರಿಂದ ಬ್ರಾಹ್ಮಣರು ಅತಿವೆಚ್ಚದ

ಯಜ್ಞ ಪಶುಗಳಿಗೆ ಬದಲಿ ವಸ್ತುಗಳನ್ನು ಕಂಡುಹಿಡಿದರು. ಮನುಷ್ಯ ಯಜ್ಞದಲ್ಲಿ ಬ್ರಾಹ್ಮಣರು ಜೀವಂತ ಮನುಷ್ಯನಿಗೆ ಬದಲಾಗಿ ಹುಲ್ಲಿನ, ಲೋಹದ ಅಥವಾ ಮಣ್ಣಿನ ಮನುಷ್ಯನನ್ನು ಅರ್ಪಿಸಲು ಅನುಮತಿ ನೀಡಿದರು. ಆದರೆ ಅವರು ನರ ಯಜ್ಞವನ್ನು ಸಂಪೂರ್ಣವಾಗಿ ತ್ಯಜಿಸಲಿಲ್ಲ. ಹಾಗೆ ಮಾಡಿದರೆ ಈ ಯಜ್ಞವೇ ನಿಂತು ಹೋಗಬಹುದು ಮತ್ತು ತಮಗೆ ದಕ್ಷಿಣೆ ಸಿಗುವುದಿಲ್ಲವೆಂಬ ಹೆದರಿಕೆ ಅವರಿಗೆ ಇರಬೇಕು. ಮನುಷ್ಯ ಯಜ್ಞವು ಅಪರೂಪವಾಗುತ್ತ ಬಂದಂತೆ, ಅದಕ್ಕೆ ಬದಲಾಗಿ ಪಶು ಯಜ್ಞವು ಹೆಚ್ಚಾಗಿ ರೂಢಿಯಲ್ಲಿ ಬಂದಿತು. ಪಶು ಯಜ್ಞವು ಸಹ ಲೌಕಿಕರಿಗೆ ಖರ್ಚಿನ ಸಮಸ್ಯೆಯಾಗಿತ್ತು. ಇಲ್ಲಿಯೂ ಯಜ್ಞವು ಸಂಪೂರ್ಣ ಕಣ್ಮರೆಯಾಗಬಾರದೆಂದು, ಮನುಷ್ಯ ಮತ್ತು ಕುದುರೆಗಳ ಬದಲಿಗೆ ದನಗಳನ್ನು ಅನುಮತಿಸಿದಂತೆ, ದನಗಳ ಬದಲಿಗೆ ಇನ್ನೂ ಚಿಕ್ಕ ಪ್ರಾಣಿಗಳನ್ನು ಬಲಿಕೊಡಲು ಬ್ರಾಹ್ಮಣರು ಅನುಮತಿಸಿದರು. ಇವೆಲ್ಲವೂ ಯಜ್ಞದ ಆಚರಣೆಯನ್ನು ಉಳಿಸಿಕೊಳ್ಳುವುದಕ್ಕಾಗಿತ್ತು. ಹೀಗೆ ಮಾಡುವುದರಿಂದ ಬ್ರಾಹ್ಮಣರ ಉಪಜೀವನಕ್ಕೆ ಬೇಕಾದ ದಕ್ಷಿಣೆಗೆ ಸಂಚಕಾರ ಬರಲಿಲ್ಲ. ಯಜ್ಞಗಳನ್ನು ಮುಂದುವರಿಸಿಕೊಂಡು ಹೋಗಬೇಕೆಂಬ ಬ್ರಾಹ್ಮಣರ ಹಟ ಎಷ್ಟಿತ್ತೆಂದರೆ ಕೇವಲ ಅನ್ನವನ್ನು ಬಲಿಯಾಗಿ ಅರ್ಪಿಸುವುದರಿಂದಲೂ ಅವರು ತೃಪ್ತರಾದರು.

ಆದರೆ ಆರ್ಯರ ಯಜ್ಞಗಳ ಬದಲಿ ವ್ಯವಸ್ಥೆಯಿಂದ ಅದರ ಭೀಕರತೆ ಕಡಿಮೆಯಾಯಿತೆಂದು ಭಾವಿಸಬಾರದು. ಬದಲಿ ವ್ಯವಸ್ಥೆಯೆಂದರೆ, ಅತಿ ಖರ್ಚಿನ ಮತ್ತು ಬಹಳ ಭೀಕರವಾದ ಯಜ್ಞಗಳನ್ನು ಪೂರ್ಣವಾಗಿ ತ್ಯಜಿಸಿ ಕಡಿಮೆ ಖರ್ಚಿನ ಹಾಗೂ ಸೌಮ್ಯವಾದ ಯಜ್ಞಗಳನ್ನು ಮಾಡುವುದಾಗಿರಲಿಲ್ಲ. ಯಜ್ಞಮಾಡುವವನು ತನ್ನ ಸಾಮರ್ಥ್ಯಕ್ಕೆ ಅನುಗುಣವಾಗಿ ಆಹುತಿಗಳನ್ನು ಅರ್ಪಿಸಬೇಕೆನ್ನುವುದೇ ಅದರ ಅರ್ಥ. ಅವನು ಬಡವನಾಗಿದ್ದರೆ ಅನ್ನವನ್ನು ಆಹುತಿಯಾಗಿ ಅರ್ಪಿಸಬಹುದು. ಸುಸ್ಥಿತಿಯಲ್ಲಿದ್ದರೆ ಒಂದು ಆಡನ್ನು ಬಲಿ ಕೊಡಬಹುದು. ಅವನು ಶ್ರೀಮಂತನಿದ್ದರೆ ಮನುಷ್ಯ ಅಥವಾ ಕುದುರೆ ಅಥವಾ ಆಕಳು ಅಥವಾ ಎತ್ತು ಬಲಿ ಪಶು ಆಗಬಹುದು. ಬದಲಿ ವ್ಯವಸ್ಥೆಯ ಪರಿಣಾಮವೆಂದರೆ, ಯಜ್ಞವನ್ನು ಎಲ್ಲರ ಸಾಮರ್ಥ್ಯಕ್ಕೆ ಒಳಪಡಿಸಿದಂತಾಯ್ತು ಮತ್ತು ಒಟ್ಟಿನಲ್ಲಿ ಬ್ರಾಹ್ಮಣರು ಹೆಚ್ಚು ಲಾಭ ಪಡೆಯುವಂತಾಯಿತು. ಅದರಿಂದ ಪಶುಯಜ್ಞವನ್ನು ನಿಲ್ಲಿಸಲಾಗಿಲ್ಲ. ಬದಲಾಗಿ ಸಾವಿರಾರು ಪಶುಗಳನ್ನು ಬಲಿಕೊಡುವುದು ನಡೆದೇ ಇತ್ತು.

ಯಜ್ಞಗಳಲ್ಲಿ ಆಗಾಗ್ಗೆ ದನಗಳ ಕಗ್ಗೊಲೆ ನಡೆಯುತ್ತಿತ್ತು. ಅಲ್ಲಿ ಬ್ರಾಹ್ಮಣರು ಕಟುಕರಾಗಿದ್ದರು. ಬೌದ್ಧ ಸಾಹಿತ್ಯದಲ್ಲಿ ಬರುವ ಯಜ್ಞದ ಉಲ್ಲೇಖಗಳನ್ನು ನೋಡಿದಾಗ ಈ ಮುಗ್ಧಪಶುಗಳ ಕಗ್ಗೊಲೆಯ ವ್ಯಾಪಕತೆಯ ಕಲ್ಪನೆ ಬರುತ್ತದೆ. 'ಸುತ್ತನಿಪಾತ'ದಲ್ಲಿ ಕೋಸಲದ ರಾಜ, ಪಸನದಿ ಮಾಡಬೇಕಾದ ಯಜ್ಞದ ವರ್ಣನೆಯಿದೆ. ಅಲ್ಲಿ ಹೀಗೆ ಹೇಳಿದೆ: ಯಜ್ಞದಲ್ಲಿ ಕೊಲ್ಲುವುದಕ್ಕಾಗಿ ಐದು ನೂರು ಎತ್ತುಗಳು, ಐದು ನೂರು ಕುರಿಗಳನ್ನು ಕಂಬಗಳಿಗೆ ಕಟ್ಟಿದ್ದರು ಮತ್ತು ಪುರೋಹಿತರು ಹೇಳಿದ ಕೆಲಸಗಳನ್ನು ಮಾಡುವುದಕ್ಕಾಗಿ ನಿಯಮಿಸಲ್ಪಟ್ಟಿದ್ದ ರಾಜನ ಸೇವಕರು ಅಶ್ರುಪೂರ್ಣ ಕಣ್ಣುಳ್ಳವರಾಗಿ ತಮ್ಮ ತಮ್ಮ ಕೆಲಸಗಳನ್ನು ಮಾಡುತ್ತಿದ್ದರು.

ಯಜ್ಞವು ಕಗ್ಗೊಲೆಯನ್ನು ಒಳಗೊಂಡಿತ್ತಷ್ಟೇ ಅಲ್ಲ. ಅದೊಂದು ಸ್ವೇಚ್ಛಾ ವಿಹಾರೋತ್ಸವವಾಗಿತ್ತು. ಸುಟ್ಟ ಮಾಂಸವಲ್ಲದೆ ಮದ್ಯವೂ ಅಲ್ಲಿರುತ್ತಿತ್ತು. ಬ್ರಾಹ್ಮಣರು ಸೋಮ ಮತ್ತು ಸುರಾಪಾನ ಮಾಡುತ್ತಿದ್ದರು. ಪ್ರತಿಯೊಂದು ಯಜ್ಞ ಮುಗಿದ ನಂತರ ಜೂಜಾಟವಾಡುತ್ತಿದ್ದರು ಮತ್ತು ಇನ್ನೂ ಅಸಾಧಾರಣವಾದ ಒಂದು ಮಾತೆಂದರೆ ಅದರ ಜೊತೆಯಲ್ಲಿಯೇ ಬಯಲಿನಲ್ಲಿ ಮೈಥುನ ನಡೆಯುತ್ತಿತ್ತು. ಯಜ್ಞವೆಂದರೆ ವ್ಯಭಿಚಾರವಾಗಿತ್ತು ಮತ್ತು ಅದರಲ್ಲಿ ಧರ್ಮವೆಂಬುದೇನೂ ಉಳಿದಿರಲಿಲ್ಲ.

ಆರ್ಯರ ಧರ್ಮವು ಕೇವಲ ಆಚರಣೆಗಳ ಸರಮಾಲೆಯಾಗಿತ್ತು. ಈ ಆಚರಣೆಗಳ ಹಿಂದೆ ಒಳ್ಳೆಯ ಮತ್ತು ನೈತಿಕ ಜೀವನಕ್ಕಾಗಿ ಹಂಬಲವಿರಲಿಲ್ಲ. ಸಚ್ಚಾರಿತ್ರಕ್ಕಾಗಿ ಪಿಪಾಸೆಯಿರಲಿಲ್ಲ. ಅವರ ಧರ್ಮದಲ್ಲಿ

ಅಧ್ಯಾತ್ಮದ ಯಾವ ತಳಹದಿಯೂ ಇರಲಿಲ್ಲವೆಂಬ ಬಗ್ಗೆ 'ಋಗ್ವೇದ'ದ ಸೂಕ್ತಗಳು ಒಳ್ಳೆಯ ಸಾಕ್ಷ್ಯವನ್ನೊದಗಿಸುತ್ತವೆ. ಸೂಕ್ತಗಳೆಂದರೆ ಆರ್ಯರು ತಮ್ಮ ದೇವತೆಗಳನ್ನು ಉದ್ದೇಶಿಸಿ ಮಾಡಿದ ಪ್ರಾರ್ಥನೆಗಳು. ಈ ಪ್ರಾರ್ಥನೆಗಳಲ್ಲಿ ಅವರು ಏನನ್ನು ಬೇಡುತ್ತಾರೆ? ಆಮಿಷಗಳಿಂದ ತಮ್ಮನ್ನು ದೂರ ಇಡಬೇಕೆಂದು ಬೇಡುತ್ತಾರೆಯೆ? ಬಹಳ ಸೂಕ್ತಗಳು ಇಂದ್ರನ ಸ್ತುತಿ ಪರವಾಗಿದೆ. ಆರ್ಯರ ಶತ್ರುಗಳನ್ನು ನಾಶ ಮಾಡಿದ್ದಕ್ಕಾಗಿ ಅವನನ್ನು ಅವು ಸ್ತುತಿಸುತ್ತವೆ. ಕೃಷ್ಣನೆಂಬ ಅಸುರನ ಗರ್ಭಿಣಿಯರಾದ ಎಲ್ಲ ಹೆಂಡಂದಿರನ್ನು ಕೊಂದದ್ದಕ್ಕಾಗಿ ಅವನನ್ನು ಸ್ತುತಿಸುತ್ತವೆ. ಲಕ್ಷಗಟ್ಟಲೆ ಅಸುರರನ್ನು ಸಂಹಾರ ಮಾಡಿದ್ದಕ್ಕಾಗಿ ಅವನನ್ನು ಸುತ್ತಿಸುತ್ತವೆ. ಅನಾರ್ಯರ ಆಹಾರ ಧಾನ್ಯಗಳೆಲ್ಲ ತಮಗೇ ದೊರೆಯಬೇಕು ಮತ್ತು ಅನಾರ್ಯರ ಧನ ಸಂಪತ್ತೆಲ್ಲ ತಮಗೇ ಸಿಗಬೇಕು ಎಂಬ ಆಸೆಯಿಂದ ಅನಾರ್ಯರನ್ನು ಇನ್ನೂ ಹೆಚ್ಚಾಗಿ ನಾಶಪಡಿಸು ಎಂದು ಆರ್ಯರು ಇಂದ್ರನನ್ನು ಪ್ರಾರ್ಥಿಸುತ್ತಾರೆ. ಆಧ್ಯಾತ್ಮಿಕವಾಗಿರುವುದನ್ನು ಮತ್ತು ಉದಾತ್ತವಾಗಿರುವುದನ್ನು ಬಿಟ್ಟು 'ಋಗ್ವೇದ'ದ ಸೂತ್ರಗಳು ಕೆಟ್ಟ ವಿಚಾರಗಳು ಮತ್ತು ಕೆಟ್ಟ ಉದ್ದೇಶಗಳಿಂದ ತುಂಬಿವೆ. ನೈತಿಕ ಜೀವನವೆಂದು ಯಾವುದನ್ನು ಕರೆಯಬಹುದೋ ಅದರ ಬಗೆಗೆ ಆರ್ಯರ ಧರ್ಮವು ಯಾವ ಕಾಲಕ್ಕೂ ಕಾಳಜಿ ಹೊಂದಿರಲಿಲ್ಲ.

## II

ಬುದ್ಧನು ಜನಿಸಿದಾಗ ಆರ್ಯ ಸಮಾಜದ ಪರಿಸ್ಥಿತಿ ಹಾಗೆ ಇತ್ತು. ಬುದ್ಧನು ಆರ್ಯ ಸಮಾಜವನ್ನು ಸುಧಾರಿಸುವುದಕ್ಕಾಗಿ ಶ್ರಮಿಸಿದ ಸುಧಾರಕನು ಎಂದು ಹೇಳಿದಾಗ ಎರಡು ಪ್ರಶ್ನೆಗಳನ್ನು ಕೇಳುವುದು ಉಚಿತವಾಗಿದೆ. ಅವನ ಸುಧಾರಣೆಯಲ್ಲಿ ಮುಖ್ಯ ಗುರಿಗಳು ಯಾವುವು? ತನ್ನ ಸುಧಾರಣೆಯ ಪ್ರಯತ್ನದಲ್ಲಿ ಅವನು ಎಷ್ಟರಮಟ್ಟಿಗೆ ಸಫಲನಾದನು?

ಮೊದಲನೆಯ ಪ್ರಶ್ನೆಯನ್ನು ವಿಚಾರಿಸೋಣ:

ಒಳ್ಳೆಯ ಮತ್ತು ಪರಿಶುದ್ಧ ಜೀವನದ ಬೋಧನೆಗೆ ಉಪದೇಶಕ್ಕಿಂತ ಉದಾಹರಣೆಯೇ ಮೇಲು ಎಂದು ಬುದ್ಧನು ತಿಳಿದನು. ಇತರರಿಗೆ ಮಾದರಿಯಾಗಲೆಂದು ಅವನು ಒಳ್ಳೆಯ ಮತ್ತು ಪರಿಶುದ್ಧ ಜೀವನವನ್ನು ಸಾಗಿಸಿದನು. ಇದು ಅವನು ಮಾಡಿದ ಅತಿ ಮಹತ್ವದ ಕೆಲಸ. ಅವನ ಜೀವನವು ಹೇಗೆ ದೋಷ ರಹಿತವಾಗಿತ್ತು ಎಂಬುದನ್ನು 'ಬ್ರಹ್ಮಜಾಲ ಸುತ್ತ'ದಿಂದ ತಿಳಿದುಕೊಳ್ಳಬಹುದು. ಅದು ಬುದ್ಧನ ಜೀವನವು ಎಷ್ಟು ಪರಿಶುದ್ಧವಾಗಿತ್ತು ಎಂಬುದನ್ನು ತಿಳಿಸುವುದಲ್ಲದೆ, ಆರ್ಯರಲ್ಲಿ ಶ್ರೇಷ್ಠರಾದ ಬ್ರಾಹ್ಮಣರ ಜೀವನವು ಎಷ್ಟು ಅಶುದ್ಧವಾಗಿತ್ತು ಎಂಬುದರ ಕಲ್ಪನೆಯನ್ನೂ ಕೊಡುತ್ತದೆ ಆದ್ದರಿಂದ ಅದನ್ನು ಹೇಗೆ ಉದ್ಧರಿಸಲಾಗಿದೆ.

## ಬ್ರಹ್ಮಜಾಲ ಸುತ್ತ

೧. ಹೀಗೆ ನಾನು ಕೇಳಿದ್ದೇನೆ. ಒಮ್ಮೆ ಆ ಅನುಗ್ರಹೀತನು ರಾಜಗೃಹ ಮತ್ತು ನಾಲಂದ ಇವುಗಳ ಮಧ್ಯದ ರಾಜಮಾರ್ಗದಲ್ಲಿ ಹೋಗುತ್ತಿದ್ದನು. ಅವನ ಜೊತೆಯಲ್ಲಿ ಸುಮಾರು ಐದು ನೂರು ಜನ ಸಂಗಾತಿಗಳು (ಭಿಕ್ಷುಗಳು) ಇದ್ದರು. ಸುಪ್ಪಿಯ ಎಂಬ ಭಿಕ್ಷು ಸಹ ರಾಜಗೃಹ ಮತ್ತು ನಾಲಂದಗಳ ಮಧ್ಯದ ರಾಜಮಾರ್ಗದಲ್ಲಿ ತನ್ನ ಶಿಷ್ಯ ಬಾಲಕ ಬ್ರಹ್ಮದತ್ತನೊಂದಿಗೆ ಹೋಗುತ್ತಿದ್ದನು. ಆಗ ಸುಪ್ಪಿಯನೆಂಬ ಭಿಕ್ಷು ಬುದ್ಧನ, ಅವನ ತತ್ವದ ಮತ್ತು ಸಂಘಗಳ ನಿಂದೆಯನ್ನು ಅನೇಕ ರೀತಿಯಿಂದ ಮಾಡತೊಡಗಿದನು.

ಆದರೆ ಅವನ ತತ್ವವನ್ನು ಮತ್ತು ಸಂಘವನ್ನು ಅನೇಕ ರೀತಿಯಿಂದ ಸ್ತುತಿಸತೊಡಗಿದನು. ಹೀಗೆ ಅವರಿಬ್ಬರು ಗುರು ಮತ್ತು ಶಿಷ್ಯರಿಬ್ಬರು ಪರಸ್ಪರ ಅತ್ಯಂತ ವಿರುದ್ಧವಾದ ಅಭಿಪ್ರಾಯಗಳನ್ನು ವ್ಯಕ್ತಮಾಡುತ್ತ ಅನುಗ್ರಹೀತನನ್ನು ಮತ್ತು ಅವನ ಸಂಗಾತಿಗಳ ಗುಂಪನ್ನು ಹೆಜ್ಜೆ–ಹೆಜ್ಜೆಯಿಂದ ಅನುಸರಿಸುತ್ತಿದ್ದರು.

೨. ಅನಂತರ ಅನುಗ್ರಹೀತನು ಅಂಬಲತ್ಥಿ ವಿಹಾರ ಭೂಮಿಯಲ್ಲಿರುವ ಅರಸನ ವಿಶ್ರಾಂತಿಧಾಮದಲ್ಲಿ ರಾತ್ರಿಯನ್ನು ಕಳೆಯುವುದಕ್ಕಾಗಿ ವಿಶ್ರಮಿಸಿದನು. ಅವನ ಜೊತೆ ಸಂಗಾತಿಗಳ ಸಂಘವೂ ಬೀಡುಬಿಟ್ಟಿತು. ಅದರಂತೆ ಭಿಕ್ಷು ಸುಪ್ಪಿಯ ಮತ್ತು ಅವನ ತರುಣ ಶಿಷ್ಯ ಬ್ರಹ್ಮದತ್ತ ಅವರೂ ಸಹ ಅಲ್ಲಿಯೇ ವಿಶ್ರಮಿಸಿದರು ಮತ್ತು ಆ ವಿಶ್ರಾಂತಿಧಾಮದಲ್ಲಿ ಹಿಂದಿನಂತೆಯೇ ತಮ್ಮ ತಮ್ಮ ಅಭಿಪ್ರಾಯಗಳನ್ನು ಹೇಳತೊಡಗಿದರು.

೩. ಮತ್ತು ನಸುಕಿನಲ್ಲಿ ಎಚ್ಚರಗೊಂಡ ಅನೇಕ ಸಂಗಾತಿಗಳು ಮೊಗಸಾಲೆಯಲ್ಲಿ ನೆರೆದರು. ಅವರು ಅಲ್ಲಿ ಕುಳಿತುಕೊಂಡ ಅನಂತರ, ಅವರೊಳಗೆ ನಡೆದ ಮಾತುಕತೆಯ ಲಹರಿ ಈ ರೀತಿಯಾಗಿತ್ತು: "ಸೋದರರೇ, ಇದೆಷ್ಟು ಆಶ್ಚರ್ಯಕರವಾಗಿದೆ! ಪರಮಬುದ್ಧ, ಅರ್ಹತ, ಎಲ್ಲವನ್ನೂ ತಿಳಿದುಕೊಂಡವನು ಮತ್ತು ನೋಡುವ ಪುಣ್ಯಶಾಲಿಯು ಜನರ ಪ್ರವೃತ್ತಿಗಳು ಭಿನ್ನವಾಗಿರುವುದನ್ನು ಇಷ್ಟು ಸ್ಪಷ್ಟವಾಗಿ ತಿಳಿದುಕೊಂಡಿರುವುದು ಬಹಳ ಆಶ್ಚರ್ಯಕರವಾಗಿದೆ! ಏಕೆಂದರೆ, ಇಲ್ಲಿ ನೋಡಿ, ಸುಪ್ಪಿಯ ಭಿಕ್ಷುವು ಬುದ್ಧನನ್ನು, ಅವನ ತತ್ವ ಮತ್ತು ಸಂಘವನ್ನು ಅನೇಕ ರೀತಿಯಿಂದ ನಿಂದಿಸುತ್ತಿದ್ದಾನೆ. ಆದರೆ ಅವನ ತರುಣ ಶಿಷ್ಯ ಬ್ರಹ್ಮದತ್ತನು ಅವುಗಳನ್ನೇ ಅನೇಕ ರೀತಿಯಿಂದ ಸ್ತುತಿಸುತ್ತಿದ್ದಾನೆ. ಹೀಗೆ ಗುರು ಶಿಷ್ಯರಿಬ್ಬರೂ ಅನುಗ್ರಹೀತನನ್ನು ಮತ್ತು ಅವನ ಸಂಗಾತಿಗಳನ್ನು ಹೆಜ್ಜೆ ಹೆಜ್ಜೆಯಾಗಿ ಅನುಸರಿಸುತ್ತಿದ್ದಾರೆ ಮತ್ತು ಪರಸ್ಪರ ಅತ್ಯಂತ ವಿರುದ್ಧವಾದ ಅಭಿಪ್ರಾಯಗಳನ್ನು ವ್ಯಕ್ತಮಾಡುತ್ತಿದ್ದಾರೆ."

೪. ಆಗ ಅನುಗ್ರಹೀತನು ಅವರ ಮಾತುಕತೆಯ ಒಲವನ್ನು ತಿಳಿದುಕೊಂಡು ಮೊಗಸಾಲೆಗೆ ಬಂದನು ಮತ್ತು ತನಗಾಗಿ ಹಾಸಿದ ಚಾಪೆಯ ಮೇಲೆ ಕುಳಿತುಕೊಂಡನು. ಕುಳಿತುಕೊಂಡ ನಂತರ ಅವನು ಕೇಳಿದನು: "ಇಲ್ಲಿ ಸಂಭಾಷಣೆಯ ವಿಷಯವೇನು?" ಆಗ ಅವರು ಅವನಿಗೆ ಎಲ್ಲವನ್ನೂ ಹೇಳಿದರು. ಅದಕ್ಕೆ ಅವನು ಹೇಳಿದನು:

೫. "ಸೋದರರೇ, ಪರಕೀಯರು ನನ್ನ ವಿರುದ್ಧ ಅಥವಾ ತತ್ವದ ವಿರುದ್ಧ ಅಥವಾ ಸಂಘದ ವಿರುದ್ಧ ಮಾತನಾಡಿದರೆ ಅದಕ್ಕಾಗಿ ನೀವು ದ್ವೇಷಿಸಬಾರದು, ವ್ಯಥೆಪಡಬಾರದು ಅಥವಾ ಕೆಟ್ಟ ಭಾವನೆಗಳನ್ನು ಹೊಂದಬಾರದು. ಅದರ ಸಲುವಾಗಿ ನೀವು ಸಿಟ್ಟಾದರೆ ಮತ್ತು ವ್ಯಥೆಪಟ್ಟರೆ, ಅದು ನಿಮ್ಮ ಸ್ವಂತದ ಆತ್ಮವಿಜಯಕ್ಕೆ ವಿಘ್ನವನ್ನು ಒಡ್ಡುತ್ತದೆ. ಇತರರು ನಮ್ಮ ವಿರುದ್ಧ ಮಾತನಾಡಿದಾಗ ನೀವು ಸಿಟ್ಟಿಗೆದ್ದರೆ ಮತ್ತು ಅಸಮಾಧಾನ ಹೊಂದಿದರೆ, ಅವರು ಹೇಳಿದ ಮಾತು ಎಷ್ಟರಮಟ್ಟಿಗೆ ಸರಿಯಾಗಿದೆ ಅಥವಾ ತಪ್ಪಾಗಿದೆ ಎಂದು ನಿರ್ಣಯಿಸಲು ಸಮರ್ಥರಾಗುವಿರಾ?"

"ಪೂಜ್ಯರೇ, ಅದು ಸಾಧ್ಯವಾಗುವುದಿಲ್ಲ."

"ಆದರೆ ಇತರರು ನನ್ನನ್ನು ನಿಂದಿಸಿದಾಗ ಅಥವಾ ತತ್ವವನ್ನು ಅಥವಾ ಸಂಘವನ್ನು ನಿಂದಿಸಿದಾಗ, 'ಈ ಕಾರಣಕ್ಕಾಗಿ ಅಥವಾ ಆ ಕಾರಣಕ್ಕಾಗಿ ಇದು ಸತ್ಯಸಂಗತಿಯಲ್ಲ. ಅದು ಆ ರೀತಿಯಲ್ಲ, ಇಂತಹ ಸಂಗತಿ ನಮ್ಮೊಳಗೆ ಕಂಡುಬಂದಿಲ್ಲ. ನಮ್ಮಲ್ಲಿ ಇಲ್ಲ', ಹೀಗೆ ಹೇಳುತ್ತ ಅದು ಸುಳ್ಳು ಎಂದು ಸ್ಪಷ್ಟಪಡಿಸಬೇಕು ಮತ್ತು ಅದು ತಪ್ಪು ಎಂದು ತೋರಿಸಬೇಕು."

೬. "ಮತ್ತು ಅದೇ ರೀತಿ, ಸೋದರರೇ, ಇತರರು ನನ್ನನ್ನು ಸ್ತುತಿಸಿದರೆ ಅಥವಾ ತತ್ವವನ್ನು ಅಥವಾ ಸಂಘವನ್ನು ಹೊಗಳಿದರೆ ಅದಕ್ಕಾಗಿ ನೀವು ಸಂತೋಷ ಪಡಬಾರದು ಅಥವಾ ಮನಸ್ಸಿನಲ್ಲಿ ಉಬ್ಬಬಾರದು.

ನೀವು ಆ ರೀತಿ ಸಂತೋಷಪಟ್ಟರೆ, ಅದೂ ಸಹ ನಿಮ್ಮ ಆತ್ಮವಿಜಯದ ಮಾರ್ಗದಲ್ಲಿ ವಿಘ್ನವಾಗುವುದು. ಇತರರು ನನ್ನ ಅಥವಾ ತತ್ವದ ಅಥವಾ ಸಂಘದ ಸ್ತೋತ್ರ ಮಾಡಿದಾಗ, 'ಈ ಕಾರಣದಿಂದ ಅಥವಾ ಆ ಕಾರಣದಿಂದ ಇದು ವಸ್ತುಸ್ಥಿತಿಯಾಗಿದೆ. ಅದು ಆ ರೀತಿ ಇದೆ, ಇಂತಹ ಸಂಗತಿ ನಮ್ಮಲ್ಲಿ ಕಂಡುಬರುತ್ತದೆ, ನಮ್ಮಲ್ಲಿ ಇರುತ್ತದೆ,' ಹೀಗೆ ಹೇಳುತ್ತ ಸರಿಯಾದುದನ್ನು ಸತ್ಯ ಸಂಗತಿಯೆಂದು ನೀವು ಒಪ್ಪಿಕೊಳ್ಳಬೇಕು."

೭.. ಪರಿವರ್ತನೆಯನ್ನು ಹೊಂದದ ಮನುಷ್ಯನು ತಥಾಗತನನ್ನು ಸ್ತುತಿಸುವಾಗ ಕೇವಲ ಕ್ಷುಲ್ಲಕ ವಿಷಯಗಳನ್ನು, ಅತ್ಯಲ್ಪ ಮಹತ್ವದ ವಿಷಯಗಳನ್ನು ಅಥವಾ ಕೇವಲ ನೀತಿ–ನಡತೆಗಳನ್ನು ಕುರಿತು ಮಾತನಾಡುತ್ತಾನೆ ಮತ್ತು ಅವನು ಸ್ತುತಿಸುವ ಇಂತಹ ಕ್ಷುಲ್ಲಕ ವಿಷಯಗಳು ಅಥವಾ ಮಹತ್ವವಿಲ್ಲದ ನೀತಿ ನಡತೆಯ ವಿಷಯಗಳು ಯಾವುವು?

(ನೀತಿ ನಡತೆಗಳು – ಭಾಗ –೧)

೮. ಸಜೀವ ಪ್ರಾಣಿಗಳ ವಧೆಯನ್ನು ನಿಷೇಧಿಸುತ್ತ ವಿರಕ್ತನಾಗಿರುವ ಗೌತಮನು ಪ್ರಾಣಿ ಹಿಂಸೆಯಿಂದ ದೂರವಿರುತ್ತಾನೆ. ಅವನು ದೊಣ್ಣೆ ಮತ್ತು ಖಡ್ಗಗಳನ್ನು ದೂರವಿಟ್ಟಿದ್ದಾನೆ. ಒರಟುತನವನ್ನು ಕಂಡು ನಾಚುತ್ತಾನೆ. ದಯಾಳುವಾಗಿದ್ದಾನೆ. ಬದುಕಿರುವ ಎಲ್ಲ ಪ್ರಾಣಿಗಳ ಬಗ್ಗೆ ಅನುಕಂಪ ಮತ್ತು ದಯೆಯುಳ್ಳವನಾಗಿದ್ದಾನೆ. ತಥಾಗತನ ಸ್ತೋತ್ರಮಾಡುವಾಗ ಪರಿವರ್ತನೆಯನ್ನು ಹೊಂದದ ಮನುಷ್ಯನು ಈ ರೀತಿ ಹೇಳಬಹುದು: "ಯಾವುದನ್ನು ಕೊಟ್ಟಿಲ್ಲವೊ ಅದನ್ನು ತೆಗೆದುಕೊಳ್ಳಬಾರದೆಂದು ನಿಷೇಧಿಸುತ್ತ ವಿರಕ್ತನಾದ ಗೌತಮನು ತನ್ನದಲ್ಲದ್ದನ್ನು ಹಿಡಿಯದೆ ದೂರವಿರುತ್ತಾನೆ. ಕೊಟ್ಟಿದ್ದನ್ನು ಮಾತ್ರ ಅವನು ಸ್ವೀಕರಿಸುತ್ತಾನೆ. ದಾನಗಳು ಬರುವವೆಂಬ ನಿರೀಕ್ಷೆಯಲ್ಲಿ ಪ್ರಾಮಾಣಿಕತೆ ಮತ್ತು ಹೃದಯದ ಪರಿಶುದ್ಧತೆಗಳಿಂದ ಜೀವವನ್ನು ಸಾಗಿಸುತ್ತಾನೆ."

ಅಥವಾ ಅವನು ಹೀಗೆ ಹೇಳಬಹುದು: "ವ್ಯಭಿಚಾರವನ್ನು ನಿಷೇಧಿಸಿ ವಿರಕ್ತನಾಗಿರುವ ಗೌತಮನು ಜಿತೇಂದ್ರಿಯನಾಗಿದ್ದಾನೆ. ಗ್ರಾಮ್ಯ ಭೋಗವಾದ ಆಚರಣೆಯಿಂದ, ಸಂಭೋಗದಿಂದ ಅವನು ಅತ್ಯಂತ ದೂರವಿದ್ದಾನೆ."

೯. ಅಥವಾ ಅವನು ಹೀಗೆ ಹೇಳಬಹುದು: "ಸುಳ್ಳು ಹೇಳುವುದನ್ನು ನಿಷೇಧಿಸಿ ವಿರಕ್ತನಾಗಿರುವ ಗೌತಮನು ಅಸತ್ಯದಿಂದ ಅತ್ಯಂತ ದೂರದಲ್ಲಿದ್ದಾನೆ. ಅವನು ಸತ್ಯವನ್ನು ಹೇಳುತ್ತಾನೆ. ಅವನೆಂದೂ ಸತ್ಯದಿಂದ ಚ್ಯುತನಾಗುವುದಿಲ್ಲ. ಶ್ರದ್ಧಾಳು ಮತ್ತು ವಿಶ್ವಾಸಪಾತ್ರದ ಅವನು ಜನರಿಗೆ ಕೊಟ್ಟ ಮಾತನ್ನು ಎಂದೂ ತಪ್ಪುವುದಿಲ್ಲ."

ಅಥವಾ ಅವನು ಹೀಗೆ ಹೇಳಬಹುದು: "ಮಿಥ್ಯಾಪವಾದವನ್ನು ನಿಷೇಧಿಸುವ ವಿರಕ್ತನಾಗಿರುವ ಗೌತಮನು ಪರ ನಿಂದೆಯಿಂದ ಬಹಳ ದೂರದಲ್ಲಿದ್ದಾನೆ. ಅವನು ಇಲ್ಲಿ ಕೇಳಿದ್ದನ್ನು ಮತ್ತೊಂದು ಕಡೆ ಉಚ್ಚರಿಸುವುದಿಲ್ಲ ಮತ್ತು ಇಲ್ಲಿಯ ಜನರ ವಿರುದ್ಧ ಜಗಳವನ್ನು ಹುಟ್ಟಿಸುವುದಿಲ್ಲ. ಈ ರೀತಿ ಅವನು ವಿಭಕ್ತರಾದವರನ್ನು ಒಟ್ಟುಗೂಡಿಸುತ್ತಾನೆ, ಸ್ನೇಹಿತರಿಗೆ ಉತ್ತೇಜನ ಕೊಡುತ್ತಾನೆ.... ಹೀಗೆ ಅವನೊಬ್ಬ ಶಾಂತಿದೂತ, ಶಾಂತಿಪ್ರಿಯ, ಶಾಂತಿಗಾಗಿ ಒತ್ತಾಸೆಯುಳ್ಳವ ಮತ್ತು ಶಾಂತಿಯನ್ನು ಉಂಟುಮಾಡುವ ಮಾತುಗಳನ್ನು ಆಡುವವನಾಗಿರುತ್ತಾನೆ."

ಅಥವಾ ಅವನು ಹೀಗೆ ಹೇಳಬಹುದು: "ಒರಟು ಮಾತುಗಳನ್ನು ನಿಷೇಧಿಸುವ ವಿರಕ್ತನಾಗಿರುವ ಗೌತಮನು ಕರ್ಕಶವಾದ ಮಾತುಗಳನ್ನಾಡುವುದಿಲ್ಲ. ದೋಷರಹಿತವಾದ, ಕೇಳಲು ಮಧುರವಾದ, ಮನೋಹರವಾದ, ಹೃದಯವನ್ನು ಮುಟ್ಟುವ, ಸುಸಂಸ್ಕೃತವಾದ, ಜನರಿಗೆ ಸಂತೋಷವನ್ನುಂಟುಮಾಡುವ, ಜನರ ಮನಸ್ಸಿಗೆ ಒಪ್ಪುವ ಶಬ್ದಗಳನ್ನು ಮಾತ್ರ ಅವನು ಬಳಸುತ್ತಾನೆ."

ಅಥವಾ ಅವನು ಹೀಗೆ ಹೇಳಬಹುದು: "ಹುಡುಗಾಟಿಕೆಯ ಲಘು ಮಾತುಗಳನ್ನು ನಿಷೇಧಿಸುವ, ವಿರಕ್ತನಾಗಿರುವ ಗೌತಮನು ವ್ಯರ್ಥ ಸಂಭಾಷಣೆಯನ್ನು ಮಾಡುವುದಿಲ್ಲ. ಸಕಾಲದಲ್ಲಿ ವಾಸ್ತವಿಕ ಸಂಗತಿಗಳನ್ನು ಅನುಸರಿಸಿ ಧರ್ಮ ಮತ್ತು ಸಂಘಗಳ ನೀತಿಗಳನ್ನು ಕುರಿತು ಅರ್ಥಗರ್ಭಿತ ಶಬ್ದಗಳನ್ನು ಅವನು ಮಾತನಾಡುತ್ತಾನೆ. ಮನಸ್ಸಿನಲ್ಲಿ ನೆನಪಿಟ್ಟುಕೊಳ್ಳಲು ಯೋಗ್ಯವಾದ, ಸರಿಯಾದ ದೃಷ್ಟಾಂತವುಳ್ಳ, ಸ್ಪಷ್ಟವಾದ, ನೇರವಾದ ಮಾತುಗಳನ್ನು ಅವನು ಸರಿಯಾದ ವೇಳೆಯಲ್ಲಿ ಹೇಳುತ್ತಾನೆ."

೧೦. ಅಥವಾ ಅವನು ಹೀಗೆ ಹೇಳಬಹುದು: "ವಿರಕ್ತನಾದ ಗೌತಮನು ಬೀಜಗಳಿಗೆ ಅಥವಾ ಸಸ್ಯಗಳಿಗೆ ಹಿಂಸೆಯನ್ನು ಮಾಡುವುದಿಲ್ಲ.

ಅವನು ದಿನಕ್ಕೆ ಒಂದೇ ಸಲ ಊಟ ಮಾಡುತ್ತಾನೆ.

ರಾತ್ರಿ ವೇಳೆ ಮಧ್ಯಾಹ್ನದ ಅನಂತರ ಊಟ ಮಾಡುವುದಿಲ್ಲ.

ಸೂಳೆಯರ ಕುಣಿತ, ಹಾಡು ಮತ್ತು ವಾದ್ಯಗಳಿರುವ ದೃಶ್ಯಗಳು ಅಥವಾ ಜಾತ್ರೆಗಳಲ್ಲಿ ಅವನು ಪ್ರೇಕ್ಷಕನಾಗುವುದಿಲ್ಲ.

ಮಾಲೆಗಳನ್ನು ಧರಿಸುವುದು, ಸುಗಂಧ ದ್ರವ್ಯಗಳನ್ನು ಲೇಪಿಸಿಕೊಳ್ಳುವುದು, ಅಲಂಕಾರ ಮಾಡಿಕೊಳ್ಳುವುದು ಇವುಗಳಿಂದ ಅವನು ವಿಮುಖನಾಗಿರುತ್ತಾನೆ.

ಅವನು ದೊಡ್ಡ ಮತ್ತು ಎತ್ತರವಾದ ಹಾಸಿಗೆಗಳನ್ನು ಬಳಸುವುದಿಲ್ಲ.

ಅವನು ಬೆಳ್ಳಿ ಅಥವಾ ಬಂಗಾರವನ್ನು ಸ್ವೀಕರಿಸುವುದಿಲ್ಲ.

ಅವನು ಬೇಯಿಸಿದ ಧಾನ್ಯಗಳನ್ನು ಸ್ವೀಕರಿಸುವುದಿಲ್ಲ.

ಅವನು ಬೇಯಿಸಿದ ಮಾಂಸವನ್ನು ಸ್ವೀಕರಿಸುವುದಿಲ್ಲ.

ಅವನು ಹೆಂಗಸರನ್ನು ಅಥವಾ ಹುಡುಗಿಯರನ್ನು ಸ್ವೀಕರಿಸುವುದಿಲ್ಲ.

ಅವನು ದಾಸರನ್ನು ಅಥವಾ ದಾಸಿಯರನ್ನು ಸ್ವೀಕರಿಸುವುದಿಲ್ಲ.

ಅವನು ಕುರಿಗಳನ್ನು ಅಥವಾ ಆಡುಗಳನ್ನು ಸ್ವೀಕರಿಸುವುದಿಲ್ಲ.

ಅವನು ಕೋಳಿಗಳನ್ನು ಅಥವಾ ಹಂದಿಗಳನ್ನು ಸ್ವೀಕರಿಸುವುದಿಲ್ಲ.

ಅವನು ಆನೆಗಳು, ದನಕರುಗಳು, ಕುದುರೆಗಳು ಮತ್ತು ಹೆಣ್ಣು ಕುದುರೆಗಳನ್ನು ಸ್ವೀಕರಿಸುವುದಿಲ್ಲ.

ಅವನು ಸಾಗುಮಾಡಿದ ಭೂಮಿಗಳನ್ನು ಅಥವಾ ಬಂಜರು ಭೂಮಿಗಳನ್ನು ಸ್ವೀಕರಿಸುವುದಿಲ್ಲ.

ಅವನು ಮಧ್ಯಸ್ಥ ಅಥವಾ ದೂತನ ಕೆಲಸವನ್ನು ಸ್ವೀಕರಿಸುವುದಿಲ್ಲ.

ಅವನು ಮಾರುವುದಿಲ್ಲ ಮತ್ತು ಕೊಳ್ಳುವುದಿಲ್ಲ.

ಅವನು ತಕ್ಕಡಿಗಳು, ಕಂಚು ಅಥವಾ ಅಳತೆಗಳಿಂದ ಮೋಸ ಮಾಡುವುದಿಲ್ಲ.

ಅವನು ಲಂಚಗುಳಿತನ, ವಂಚನೆ, ಕಪಟತನ ಇಂತಹ ಮೋಸದ ವ್ಯವಹಾರದಿಂದ ದೂರವಿರುತ್ತಾನೆ.

ಅವನು ಅಂಗಹೀನರನ್ನಾಗಿ ಮಾಡುವುದು, ವಧೆ, ಬಂಧನದಲ್ಲಿಡುವುದು, ದರೋಡೆ, ಹಗಲುಗಳ್ಳತನ, ಹಿಂಸೆ ಇವುಗಳಿಂದ ವಿಮುಖನಾಗಿದ್ದಾನೆ.

ಸೋದರರೇ, ಪರಿವರ್ತನೆಯನ್ನು ಹೊಂದದ ಮನುಷ್ಯನು ತಥಾಗತನನ್ನು ಸ್ತೋತ್ರಮಾಡುವಾಗ ಇಂತಹ ವಿಷಯಗಳನ್ನು ಹೇಳಬಹುದು."

ಇಲ್ಲಿ ಕುಲ ಶೀಲ ಮುಗಿಯಿತು.

(ನಡತೆಯ ಬಗ್ಗೆ ಚಿಕ್ಕ ವಾಕ್ಯವೃಂದಗಳು)

೧೧. ಅಥವಾ ಅವನು ಹೀಗೆ ಹೇಳಬಹುದು: "ಕೆಲವು ವಿರಕ್ತರು ಮತ್ತು ಬ್ರಾಹ್ಮಣರು, ಭಕ್ತರು

ತಂದುಕೊಟ್ಟ ಆಹಾರದ ಮೇಲೆ ಜೀವನ ಸಾಗಿಸುತ್ತಿದ್ದರೂ, ಮೊಳಕೆಯೊಡೆದ ಸಸಿಗಳು, ಬೇರುಗಳು ಅಥವಾ ಟೊಂಗೆಯ ತುಂಡುಗಳು ಅಥವಾ ಜೋಡಣೆಗಳು ಅಥವಾ ಮೊಗ್ಗೆಗಳು ಅಥವಾ ಬೀಜಗಳಿಂದ ಬೆಳೆಯುತ್ತಿರುವ ಸಸ್ಯಗಳನ್ನು ಹಿಂಸಿಸುವ ಚಟವುಳ್ಳವರಾಗಿರುತ್ತಾರೆ. ಆದರೆ ವಿರಕ್ತನಾಗಿರುವ ಗೌತಮನು ಸಸಿಗಳು ಬೆಳೆಯುವ ಸಸ್ಯಗಳಿಗೂ ಇಂತಹ ಹಿಂಸೆ ಮಾಡುವುದರಿಂದ ವಿಮುಖನಾಗಿರುತ್ತಾನೆ."

೧೨. ಅಥವಾ ಅವನು ಹೀಗೆ ಹೇಳಬಹುದು: "ಕೆಲವು ವಿರಕ್ತರು ಮತ್ತು ಬ್ರಾಹ್ಮಣರು, ಭಕ್ತರು ತಂದುಕೊಟ್ಟ ಆಹಾರದ ಮೇಲೆ ಜೀವನವನ್ನು ಸಾಗಿಸುತ್ತಿದ್ದರೂ ಪ್ರದರ್ಶನಗಳನ್ನು ನೋಡುವ ಚಟವನ್ನು ಮುಂದುವರಿಸುತ್ತಾರೆ."

ಉದಾಹರಣೆಗೆ:

(೧) ಸೂಳೆಯ ಕುಣಿತ (ನಕ್ಕಂ)

(೨) ಗೀತಗಳನ್ನು ಹಾಡುವುದು (ಗೀತಂ)

(೩) ವಾದ್ಯ ಸಂಗೀತ (ವಾದಿತಂ)

(೪) ಜಾತ್ರೆಗಳಲ್ಲಿಯ ಆಟಗಳು (ಪ್ರೇಖಂ)

(೫) ಲಾವಣಿಗಳನ್ನು ಹಾಡುವುದು (ಆಕ್ಖಾಣಂ)

(೬) ಹಸ್ತವಾದ್ಯ (ಪಾಣಿಸರಂ)

(೭) ಚಾರಣರ ಹಾಡುಗಳು (ವೇತಾಳ)

(೮) ಗುಮ್ಮಡಿ ಬಾರಿಸುವುದು (ಕುಂಭಥೂಣಂ)

(೯) ಜಾತ್ರೆ ದೃಶ್ಯಗಳು (ಶೋಭನಗರ್ಕಂ)

(೧೦) ಚಂಡಾಲರ ದೊಂಬರಾಟ (ಚಂಡಾಲವಂಶಧೋಪನಂ)

(೧೧) ಆನೆ, ಕುದುರೆ, ಕೋಣ, ಎತ್ತು, ಆಡು, ಟಗರೆ, ಹುಂಜ, ಲಾವಕ್ಕಿ ಇವುಗಳ ಹೊಡೆದಾಟ.

(೧೨) ದಂಡಯುದ್ಧ, ಮುಷ್ಟಿಯುದ್ಧ, ಕುಸ್ತಿ.

(೧೩–೧೬) ಹುಸಿಕಾಳಗ, ಸೈನಿಕ ಹಾಜರಿ ಸಾಲು, ವ್ಯೂಹರಚನೆ, ಸೈನ್ಯ ಪ್ರದರ್ಶನ.

ವಿರಕ್ತನಾಗಿರುವ ಗೌತಮನು ಇಂತಹ ಆಟಗಳನ್ನು ನೋಡುವುದರಿಂದ ದೂರವಿರುತ್ತಾನೆ.

೧೪. ಅಥವಾ ಅವನು ಹೀಗೆ ಹೇಳಬಹುದು: "ಕೆಲವು ವಿರಕ್ತರು ಮತ್ತು ಬ್ರಾಹ್ಮಣರು, ಶ್ರದ್ಧಾಳುಗಳು ತಂದುಕೊಡುವ ಆಹಾರದ ಮೇಲೆ ಜೀವನ ಸಾಗಿಸುತ್ತಿದ್ದರೂ ಆಟಗಳು ಮತ್ತು ಮನೋರಂಜನೆಗಳಿಗೆ ಮನಸೋತಿದ್ದರು."

ಉದಾಹರಣೆಗೆ:

(೧) ಎಂಟು ಅಥವಾ ಹತ್ತು ಸಾಲು ಚೌಕಗಳನ್ನುಳ್ಳ ಹಲಗೆಗಳ ಮೇಲೆ ಆಟಗಳನ್ನು ಆಡುವುದು.

(೨) ಇಂತಹ ಹಲಗೆಗಳನ್ನು ಬಯಲಲ್ಲಿ ಕಲ್ಪನೆಮಾಡಿಕೊಂಡು ಇವೇ ಆಟಗಳನ್ನು ಆಡುವುದು.

(೩) ಎಲ್ಲಿ (ಹೆಜ್ಜೆ) ಹೋಗಬಾರದೋ ಅಲ್ಲಿಯೇ ಹೆಜ್ಜೆಯನ್ನು ಇಡಬೇಕಾಗುವಂತೆ ನೆಲದ ಮೇಲೆ ಚಿತ್ರಗಳನ್ನ ಬರೆಯುವುದು.

(೪) ಗುಂಪನ್ನು ಅಲ್ಲಾಡಿಸದಂತೆ, ಗುಂಪಿನಲ್ಲಿಯ ವಸ್ತುಗಳನ್ನು ಅಥವಾ ಜನರನ್ನು ಉಗುರಿನಿಂದ ದೂರ ಸರಿಸುವುದು ಅಥವಾ ವಸ್ತುಗಳನ್ನು ಅಥವಾ ಜನರನ್ನು ಗುಂಪಾಗಿ ಸೇರಿಸುವುದು. ಇಲ್ಲಿ ಗುಂಪನ್ನು ಅಲ್ಲಾಡಿಸುವವರು ಸೋತಂತೆ ಆಗುವುದು.

(೫) ದಾಳಗಳನ್ನು ಒಗೆಯುವುದು.

(೬) ಉದ್ದವಾದ ದಂಡದಿಂದ ಚಿಕ್ಕ ದಾಂಡನ್ನು ಬಡಿಯುವುದು

(೭) ಬೆರಳುಗಳನ್ನು ಚಾಚಿ ಮುಂಗೈಯನ್ನು ಅರಗು, ಕೆಂಪು ಬಣ್ಣ, ಅಥವಾ ಹಿಟ್ಟಿನ ನೀರಿನಲ್ಲಿ ಅದ್ದುವುದು ಮತ್ತು ಹಸಿಯಾದ ಕೈಯನ್ನು ನೆಲದ ಮೇಲೆ ಅಥವಾ ಗೋಡೆಯ ಮೇಲೆ 'ಇದೇನಾಗಬೇಕು?' ಎನ್ನುತ್ತಾ ಬಡಿಯುವುದು ಮತ್ತು ಅಪೇಕ್ಷಿತ ಆನೆ, ಕುದುರೆಗಳ ಆಕಾರಗಳನ್ನು ತೋರಿಸುವುದು.

(೮) ಚೆಂಡಾಟಗಳನ್ನು ಆಡುವುದು.

(೯) ಎಲೆಗಳಿಂದ ಮಾಡಿದ ಆಟಿಕೆಯ ಪೀಪಿಗಳನ್ನು ಊದುವುದು.

(೧೦) ಆಟಿಕೆಯ ನೇಗಿಲಿನಿಂದ ಉಳುವುದು

(೧೧) ದೊಂಬರಲಾಗ ಹಾಕುವುದು.

(೧೨) ತಾಳೆಗರಿಗಳಿಂದ ಮಾಡಿದ ಆಟಿಕೆಯ ಗಾಳಿ ಯಂತ್ರಗಳಿಂದ ಆಡುವುದು.

(೧೩) ತಾಳೆಗರಿಗಳಿಂದ ಮಾಡಿದ ಆಟಿಕೆಯ ಅಳತೆ ಪಾತ್ರೆಗಳಿಂದ ಆಡುವುದು.

(೧೪–೧೫) ಆಟಿಗೆಯ ಚಕ್ಕಡಿಗಳು ಅಥವಾ ಬಿಲ್ಲುಗಳಿಂದ ಆಡುವುದು.

(೧೬) ಬಯಲಲ್ಲಿ ಅಥವಾ ಜೊತೆಗಾರನ ಬೆನ್ನ ಮೇಲೆ ತೋರುವ ಅಕ್ಷರಗಳನ್ನು ಊಹಿಸಿ ಹೇಳುವುದು.

(೧೭) ಜೊತೆಗಾರರ ಮನದ ಇಂಗಿತವನ್ನು ಊಹಿಸುವುದು.

(೧೮) (ಇನ್ನೊಬ್ಬರ ದೈಹಿಕ) ದೋಷಗಳ ಅಣಕು ಮಾಡುವುದು.

ವಿರಕ್ತನಾಗಿರುವ ಗೌತಮನು ಇಂತಹ ಆಟಗಳು ಮತ್ತು ಮನೋರಂಜನೆಗಳಿಂದ ದೂರವಿರುತ್ತಾನೆ.

೧೫. ಅಥವಾ ಅವನು ಹೀಗೆ ಹೇಳಬಹುದು: "ಕೆಲವು ವಿರಕ್ತರು ಮತ್ತು ಬ್ರಾಹ್ಮಣರು, ಶ್ರದ್ಧಾಳುಗಳು ತಂದುಕೊಟ್ಟ ಆಹಾರದ ಮೇಲೆ ಉಪಜೀವನವನ್ನು ಸಾಗಿಸುತ್ತಿದ್ದರೂ, ಸಣ್ಣ ಮತ್ತು ದೊಡ್ಡ ಸುಪ್ಪತ್ತಿಗೆ ಅಥವಾ ಹಾಸಿಗೆಗಳನ್ನು ಬಳಸುವ ಚಟವುಳ್ಳವರಾಗಿರುತ್ತಾರೆ.

ಉದಾಹರಣೆಗೆ:

(೧) ಎತ್ತರವಾದ ಮತ್ತು ಆರು ಅಡಿ ಉದ್ದವುಳ್ಳ ಚರಪೀಠಗಳು (ಆಸಂದಿ).

(೨) ಕಾಲುಗಳ ಮೇಲೆ ಪ್ರಾಣಿಗಳ ಚಿತ್ರ ಕೆತ್ತಿರುವ ದಿವಾನುಗಳು (ಉದ್ದಪೀಠಗಳು)(ಪಲ್ಲಂಕೋ).

(೩) ಬಹಳ ಉದ್ದ ತುಪ್ಪಳವುಳ್ಳ ಆಡಿನ ಕೂದಲಿನ ಹೊದಿಕೆಗಳು.

(೪) ಬಣ್ಣ ಬಣ್ಣದ ತೇಪೆ ಕೆಲಸದ ಕೌದಿಗಳು (ಕಿಟ್ಟಕ).

(೫) ಬಿಳಿಯ ಹೊದಿಕೆಗಳು (ಪಾಟಿಕ).

(೬) ಹೂವಿನ ಕಸೂತಿಯಿರುವ ಉಣ್ಣೆಯ ಮೇಲು ಹೊದಿಕೆಗಳು (ಪಾಟಲಿಕಾ).

(೭) ಗಾದಿಗಳು (ತೂಲಿಕಾ).

(೮) ಸಿಂಹ, ಹುಲಿ ಮುಂತಾದ ಪ್ರಾಣಿಗಳ ಕಸೂತಿಯಿರುವ ಹೊದಿಕೆಗಳು (ವಿಕಟಿಕಾ).

(೯) ಎರಡೂ ಬದಿಗೆ ನಯವಾದ ಕೂದಲುಳ್ಳ ರಗ್ಗುಗಳು (ಉದ್ದಲೋಮಿ).

(೧೦) ಒಂದೇ ಬದಿಗೆ ನಯವಾದ ಕೂದಲುಗಳುಳ್ಳ ರಗ್ಗುಗಳು (ಏಕಾಂತ ಲೋಮಿ).

(೧೧) ರತ್ನಗಳ ಕಸೂತಿಯಿರುವ ಹೊದಿಕೆಗಳು (ಕತ್ಥಿಸ್ಸಮ್).

(೧೨) ರೇಷ್ಮೆಯ ಚಾದರಗಳು (ಕೋಸೇಯ್ಯಂ).

(೧೩) ಹದಿನಾರು ನರ್ತಕರಿಗೆ ಸಾಲುವಷ್ಟು ದೊಡ್ಡ ಜಮಾಖಾನೆಗಳು (ಕುಟ್ಟಕಂ).

(೧೪–೧೬) ಆನೆ, ಕುದುರೆ (ಥಡಿ) ಮತ್ತು ರಥಗಳ ರಗ್ಗುಗಳು.

(೧೭) ಚಿಗರೆಯ ಚರ್ಮವನ್ನು ಹೊಲಿದು ಮಾಡಿದ ರಗ್ಗುಗಳು (ಅಜಿನಪವೇನಿ).

(೧೮) ಚಿಗರೆಯ ಚರ್ಮದಿಂದ ಮಾಡಿದ ರಗ್ಗುಗಳು.

(೧೯) ಮೇಲೆ ದಪ್ಪ ಮಿದು ಬಟ್ಟೆಯನ್ನು ಹೊಲಿದ ಜಮಖಾನೆಗಳು (ಸೌತ್ತರಕ್ಷದಂ).

(೨೦) ತಲೆ ಮತ್ತು ಪಾದಗಳಿಗೆ ಕೆಂಪು ದಿಂಬುಗಳುಳ್ಳ ಸೋಫಾಗಳು."

೧೬ ಅಥವಾ ಅವನು ಹೀಗೆ ಹೇಳಬಹುದು: "ಕೆಲವು ವನವಾಸಿಗಳು ಮತ್ತು ಬ್ರಾಹ್ಮಣರು, ಶ್ರದ್ಧಾಳುಗಳು ತಂದುಕೊಟ್ಟ ಆಹಾರದಿಂದ ಜೀವನವನ್ನು ಸಾಗಿಸುತ್ತಿದ್ದರೂ, ಅಲಂಕಾರದ ಮತ್ತು ಸೌಂದರ್ಯದ ಸಾಧನಗಳನ್ನು ಉಪಯೋಗಿಸುವ ಚಟವನ್ನು ಹೊಂದಿರುತ್ತಾರೆ."

ಉದಾಹರಣೆಗೆ:

ಗಂಧದ ಹುಡಿಯಿಂದ ತಮ್ಮ ಮೈಯನ್ನು ತಿಕ್ಕಿಕೊಳ್ಳುವುದು. ಅಂಗಮರ್ದನ ಮಾಡುವುದು ಮತ್ತು ಸ್ನಾನಮಾಡುವುದು. ಗರಡಿಯಾಳುಗಳಂತೆ ಅವಯವಗಳನ್ನು ದಂಡದಿಂದ ತಟ್ಟಿಕೊಳ್ಳುವುದು. ಕನ್ನಡಿಗಳು, ಕಾಡಿಗೆ, ಮಾಲೆಗಳು, ಕೆನ್ನೆ ಮತ್ತು ತುಟಿಗಳಿಗೆ ಹಚ್ಚುವ ರಂಗುಗಳು, ಅಂಗರಾಗಗಳು, ಬಳೆಗಳು, ಸರಗಳು, ಕೈಗೋಲುಗಳು, ಔಷಧಿಗಳನ್ನಿಡುವ ಗಲಗಿನ ಭರಣಿಗಳು, ಸಣ್ಣ ಕತ್ತಿಗಳು, ಛತ್ರಿಗಳು, ಕಸೂತಿ ಹಾಕಿದ ಪಾದರಕ್ಷೆಗಳು, ರುಮಾಲು, ಮುಕುಟಗಳನ್ನು, ಯಾಕ್ ಮೃಗದ ಬಾಲದಿಂದ ಮಾಡಿದ ಬೀಸಣಿಗೆಗಳು, ಉದ್ದ ಅಂಚುಗಳುಳ್ಳ ನೀಳಾದ ಬಿಳಿ ಉಡುಪುಗಳು ಮುಂತಾದವುಗಳ ಉಪಯೋಗ.

ವಿರಕ್ತನಾಗಿರುವ ಗೌತಮನು ಇಂತಹ ಅಲಂಕಾರದ ಮತ್ತು ಸೌಂದರ್ಯದ ಸಾಧನಗಳಿಂದ ದೂರವಿರುತ್ತಾನೆ.

೧೭. ಅಥವಾ ಅವನು ಹೀಗೆ ಹೇಳಬಹುದು: "ಕೆಲವು ವನವಾಸಿಗಳು ಮತ್ತು ಬ್ರಾಹ್ಮಣರು, ಶ್ರದ್ಧಾಳುಗಳು ತಂದುಕೊಟ್ಟ ಆಹಾರದಿಂದ ಜೀವನವನ್ನು ಸಾಗಿಸುತ್ತಿದ್ದರೂ, ಇಂತಹ ಕೀಳು ಸಂಭಾಷಣೆಯಲ್ಲಿ ತೊಡಗುತ್ತಿದ್ದರು:

ರಾಜರ ಕತೆಗಳು, ಕಳ್ಳರ ಕತೆಗಳು, ಮಂತ್ರಿಗಳ ಕತೆಗಳು, ಯುದ್ಧದ ಕತೆಗಳು, ಭಯಾನಕ ಕತೆಗಳು, ಸಂಗ್ರಾಮದ ವಾರ್ತೆಗಳು ಆಹಾರ ಮತ್ತು ಪಾನೀಯ, ಬಟ್ಟೆಗಳು, ಹಾಸಿಗೆಗಳು, ಮಾಲೆಗಳು, ಸುಗಂಧ ದ್ರವ್ಯಗಳು, ಇವುಗಳ ಬಗ್ಗೆ ಮಾತುಕತೆ ಸಂಬಂಧಗಳು, ಸಾಮಾನು ಸರಂಜಾಮುಗಳು, ಹಳ್ಳಿಗಳು, ಪಟ್ಟಣಗಳು, ನಗರಗಳು, ಜನಪದಗಳು ಇವುಗಳನ್ನು ಕುರಿತು ಹರಟೆ, ಸ್ತ್ರೀಯರ ಮತ್ತು ನಾಯಕರ ಕತೆಗಳು, ದಾರಿಯ ಸಂದಿಗೊಂದಿನಲ್ಲಿ ಹರಟೆ, ನೀರು ತರುವ ಸ್ಥಳಗಳಲಲಿ ಹರಟೆ, ದೆವ್ವದ ಕತೆಗಳು, ಅಸಂಬದ್ಧ ಹರಟೆ, ಭೂಮಿ ಅಥವಾ ಸಮುದ್ರದ ಸೃಷ್ಟಿಯನ್ನು ಕುರಿತು ಊಹೆಗಳು ಅಥವಾ ಅಸ್ತಿತ್ವ ಮತ್ತು ಅನಸ್ತಿತ್ವವನ್ನು ಕುರಿತು ಊಹೆಗಳು."

ವಿರಕ್ತನಾಗಿರುವ ಗೌತಮನು ಇಂತಹ ಕೀಳು ಸಂಭಾಷಣೆಯಲ್ಲಿ ತೊಡಗುವುದಿಲ್ಲ.

೧೮. ಅಥವಾ ಅವನು ಹೀಗೆ ಹೇಳಬಹುದು; "ಕೆಲವು ವನವಾಸಿಗಳು ಮತ್ತು ಬ್ರಾಹ್ಮಣರು, ಶ್ರದ್ಧಾಳುಗಳು ತಂದುಕೊಟ್ಟ ಆಹಾರದಿಂದ ಜೀವನ ಸಾಗಿಸುತ್ತಿದ್ದರೂ, ಕೂಗಾಡುತ್ತ ವಾಗ್ವಾದ ಮಾಡುತ್ತಾರೆ.

ಉದಾಹರಣೆಗೆ:

"ಈ ತತ್ವ ಮತ್ತು ವಿದ್ಯೆಯನ್ನು ನೀನು ತಿಳಿದಿರಲಾರೆ, ನಾನು ತಿಳಿದಿದ್ದೇನೆ."

ಈ ತತ್ವ ಮತ್ತು ವಿದ್ಯೆಯನ್ನು ನೀನು ಹೇಗೆ ತಿಳಿಯಬಲ್ಲೆ?"

"ನೀನು ತಪ್ಪು ಅಭಿಪ್ರಾಯಗಳನ್ನು ಹೊಂದಿರುತ್ತೀಯೆ. ನಾನೇ ಸರಿಯಾಗಿದ್ದೇನೆ."

"ನಾನು ಪ್ರಸ್ತುತವಾದದ್ದನ್ನು ಮಾತನಾಡುತ್ತಿದ್ದೇನೆ. ನೀನು ಇಲ್ಲ."

"ನೀನು ಮೊದಲು ಹೇಳಬೇಕಾದದ್ದನ್ನು ಕೊನೆಗೆ ಮತ್ತು ಕೊನೆಗೆ ಹೇಳಬೇಕಾದದ್ದನ್ನು ಮೊದಲು ಹೇಳುತ್ತಿದ್ದೀಯೆ."

"ನೀನು ಇಲ್ಲಿಯವರೆಗೆ ಆಲೋಚಿಸಿದ್ದೆಲ್ಲವೂ ವ್ಯರ್ಥವಾಗಿದೆ."

"ನಿನ್ನ ಸವಾಲನ್ನು ಸ್ವೀಕರಿಸಲಾಗಿದೆ."

"ನೀನು ಹೇಳುವುದು ತಪ್ಪು."

"ನಿನ್ನ ಅಭಿಪ್ರಾಯಗಳನ್ನು ಸರಿಪಡಿಸಲು ಪ್ರವೃತ್ತನಾಗು."

"ನಿನಗೆ ಸಾಧ್ಯವಾದರೆ ನಿನ್ನನ್ನು ನೀನು ಬಿಡಿಸಿಕೋ."

ವಿರಕ್ತನಾಗಿರುವ ಗೌತಮನು ಇಂತಹ ಕೂಗಾಟ ಮತ್ತು ವಾಗ್ವಾದಗಳಿಂದ ದೂರವಿರುತ್ತಾನೆ.

೧೯. ಅಥವಾ ಅವನು ಹೀಗೆ ಹೇಳಬಹುದು: "ಕೆಲವು ವನವಾಸಿಗಳು ಮತ್ತು ಬ್ರಾಹ್ಮಣರು, ಶ್ರದ್ಧಾಳುಗಳು ತಂದುಕೊಟ್ಟ ಆಹಾರದಿಂದ ಜೀವವನ್ನು ಸಾಗಿಸುತ್ತಿದ್ದರೂ, ಸಂದೇಶವಾಹಕರಾಗಿ, ದೂತರಾಗಿ, ಮಧ್ಯವರ್ತಿಗಳಾಗಿ ಕೆಲಸ ಮಾಡುತ್ತಾರೆ. ರಾಜರು, ಮಂತ್ರಿಗಳು, ಕ್ಷತ್ರಿಯರು, ಬ್ರಾಹ್ಮಣರು ಅಥವಾ ಯುವಕರ ನಡುವೆ 'ಅಲ್ಲಿ ಹೋಗು, ಇಲ್ಲಿ ಬಾ, ಇದನ್ನು ತೆಗೆದುಕೊಂಡು ಹೋಗು, ಅಲ್ಲಿಂದ ಅದನ್ನು ತೆಗೆದುಕೊಂಡು ಬಾ' ಹೀಗೆ ಹೇಳುವುದು ಅವರ ಸ್ವಭಾವವಾಗಿದೆ."

ವಿರಕ್ತನಾಗಿರುವ ಗೌತಮನು ಇಂತಹ ದಾಸ್ಯದ ಕೆಲಸಗಳನ್ನು ಮಾಡುವುದಿಲ್ಲ.

೨೦. ಅಥವಾ ಅವನು ಹೀಗೆ ಹೇಳಬಹುದು: "ಕೆಲವು ವನವಾಸಿಗಳು ಮತ್ತು ಬ್ರಾಹ್ಮಣರು, ಶ್ರದ್ಧಾಳುಗಳು ತಂದುಕೊಟ್ಟ ಆಹಾರದಿಂದ ಜೀವನ ಸಾಗಿಸುತ್ತಿದ್ದರೂ, ಮೋಸಗಾರರು, ಹಣಕ್ಕಾಗಿ ಪ್ರಾರ್ಥನಾ ಪದ್ಯಗಳನ್ನು ಒಂದೇ ರಾಗದಲ್ಲಿ ಹೇಳುವವರು, ಭವಿಷ್ಯ ಹೇಳುವವರು ಮತ್ತು ಮಾಂತ್ರಿಕರು ಆಗಿದ್ದಾರೆ. ಹೀಗಾಗಿ ಯಾವಾಗಲೂ ಹೆಚ್ಚು ಹೆಚ್ಚು ಲಾಭ ಮಾಡಿಕೊಳ್ಳುತ್ತಾರೆ.

ವಿರಕ್ತನಾಗಿರುವ ಗೌತಮನು ಇಂತಹ ಮೋಸ ಮತ್ತು ಬಡಬಡಿಕೆಗಳಿಂದ ದೂರವಿರುತ್ತಾನೆ."

ಇಲ್ಲಿಗೆ ಮಜ್ಝಿಮಶೀಲ ಮುಗಿಯಿತು.

(ನಡತೆಯ ಮೇಲಿನ ದೀರ್ಘ ವಾಕ್ಯವೃಂದಗಳು)

೨೧. ಅಥವಾ ಅವನು ಹೀಗೆ ಹೇಳಬಹುದು: "ಕೆಲವು ವನವಾಸಿಗಳು ಮತ್ತು ಬ್ರಾಹ್ಮಣರು, ಶ್ರದ್ಧಾಳುಗಳು ತಂದುಕೊಟ್ಟ ಆಹಾರದಿಂದ ಜೀವನ ಸಾಗಿಸುತ್ತಿದ್ದರೂ ಅಯೋಗ್ಯ ಮಾರ್ಗಗಳಿಂದ, ನೀಚ ಕಲೆಗಳಿಂದ ತಮ್ಮ ಉಪಜೀವಿಕೆಯನ್ನು ಸಂಪಾದಿಸುತ್ತಾರೆ.

ಉದಾಹರಣೆಗೆ:

(೧) ಹಸ್ತ ಮುದ್ರಿಕಾ ಶಾಸ್ತ್ರ – ದೀರ್ಘಾಯುಷ್ಯ, ಅಭಿವೃದ್ಧಿ ಆಗುವುದೆಂದು ಭವಿಷ್ಯ ಹೇಳುವುದು. ಅಥವಾ ಬಾಲಕರ ಕೈ ಕಾಲುಗಳ ಮೇಲಿನ ಗುರುತುಗಳಿಂದ ಭವಿಷ್ಯ ಹೇಳುವುದು. (ಅಥವಾ ಇದಕ್ಕೆ ವಿರುದ್ಧವಾಗಿ ಹೇಳುವುದು).

(೨) ಶಕುನಗಳು ಮತ್ತು ಸಂಕೇತಗಳನ್ನು ನೋಡಿ ಭವಿಷ್ಯ ಹೇಳುವುದು.
(೩) ಗುಡುಗು ಮತ್ತು ಇತರ ದೈವಿ ಶಕುನಗಳನ್ನು ನೋಡಿ ಕಣಿ ಹೇಳುವುದು.
(೪) ಕನಸುಗಳನ್ನು ವಿವರಿಸಿ ಭವಿಷ್ಯ ಹೇಳುವುದು.
(೫) ದೇಹದ ಮೇಲಿನ ಗುರುತುಗಳನ್ನು ನೋಡಿ ಭವಿಷ್ಯ ಹೇಳುವುದು.
(೬) ಇಲಿಗಳು ಕಡಿದ ಬಟ್ಟೆಯ ಮೇಲಿನ ಗುರುತುಗಳನ್ನು ನೋಡಿ ಭವಿಷ್ಯ ಹೇಳುವುದು.
(೭) ಅಗ್ನಿಗೆ ಆಹುತಿಯನ್ನು ಕೊಡುವುದು.
(೮) ಚಮಚದಿಂದ ಆಹುತಿಗಳನ್ನು ಹಾಕುವುದು.
(೯–೧೩) ಹೊಟ್ಟಿನ ದೇವತೆಗಳಿಗೆ ಆಹುತಿಗಳನ್ನು ಕೊಡುವುದು. ಕಾಳು ಮತ್ತು ಹೊಟ್ಟು ಇವೆರಡರ ನಡುವಿರುವ ಕೆಂಪು ಪುಡಿಯ ದೇವತೆಗಳಿಗೆ ಹೊಟ್ಟು ತೆಗೆದು ಬೇಯಿಸಲು ಸಿದ್ಧವಾದ ಕಾಳಿನ ದೇವತೆಗಳಿಗೆ ಮತ್ತು ತುಪ್ಪ ಹಾಗೂ ಎಣ್ಣೆಯ ದೇವತೆಗಳಿಗೆ ಆಹುತಿಯನ್ನು ಕೊಡುವುದು.
(೧೪) (ಬಾಯಿಯಿಂದ ಹೊರಗೆ) ಸಾಸಿವೆ ಕಾಳನ್ನು ಕಕ್ಕಿ ಅಗ್ನಿಯಲ್ಲಿ ಆಹುತಿಯನ್ನು ಕೊಡುವುದು.
(೧೫) ದೇವತೆಗಳಿಗೆ ಯಜ್ಞವೆಂದು ಬಲ ಮೊಣಕಾಲಿನಿಂದ ರಕ್ತವನ್ನು ತೆಗೆಯುವುದು.
(೧೬) ಮಂತ್ರವನ್ನು ಹೇಳುತ್ತ ಮೊಣಕಾಲ ಮಂಡಿಯನ್ನು ಅಥವಾ ಬೆರಳಿನ ಗೇಣ್ಣುಗಳನ್ನು ನೋಡುವುದು ಮತ್ತು ಮನುಷ್ಯನು ಸುದೈವಿ ಅಹುದೋ ಅಲ್ಲವೋ ಎಂದು ಊಹಿಸುವುದು.
(೧೭) ಮನೆ ಕಟ್ಟಲಿರುವ ಅಥವಾ ವಿಹಾರ ಭೂಮಿಯನ್ನಾಗಿ ಮಾಡಲಿರುವ ಜಾಗವು ಶುಭ ಅಥವಾ ಅಶುಭ ಎಂದು ನಿರ್ಣಯಿಸುವುದು.
(೧೮) ಸಂಪ್ರದಾಯದ ನಿಯಮಗಳನ್ನು ತಿಳಿಸುವುದು.
(೧೯) ಭೂತಗಳನ್ನು ಸ್ಮಶಾನದಲ್ಲಿ ಬಂಧಿಸುವುದು.
(೨೦) ಪ್ರೇತಗಳನ್ನು ಹಿಡಿದಿಡುವುದು.
(೨೧) ನೆಲಮನೆಯಲ್ಲಿ ವಾಸಿಸುವಾಗ ಉಪಯೋಗಿಸುವ ರಕ್ಷಾ ಮಂತ್ರಗಳನ್ನು ತಿಳಿಯುವುದು.
(೨೨) ಹಾವುಗಳನ್ನು ಆಡಿಸುವುದು.
(೨೩) ವಿಷ ವಿದ್ಯೆ.
(೨೪) ಚೇಳನ್ನು ಹಿಡಿಯುವ ಅಥವಾ ಚೇಳಿನ ವಿಷ ಪರಿಹಾರ ಮಾಡುವ ವಿದ್ಯೆ.
(೨೫) ಮೂಷಕ ವಿದ್ಯೆ.
(೨೬) ಮನುಷ್ಯನು ಇನ್ನೂ ಎಷ್ಟು ವರ್ಷ ಬದುಕುವನೆಂದು ಭವಿಷ್ಯ ಹೇಳುವುದು.
(೨೭) ಕಾಕ ವಿದ್ಯೆ.
(೨೮) ಪಕ್ಷಿ ವಿದ್ಯೆ.
(೨೯) ಬಾಣಗಳನ್ನು ತಪ್ಪಿಸಿಕೊಳ್ಳಲು ಮಂತ್ರಗಳನನು ಹೇಳುವುದು.
(೩೦) ಪ್ರಾಣಿ ಚಕ್ರ.

ವಿರಕ್ತನಾಗಿರುವ ಗೌತಮನು ಇಂತಹ ಕೀಟಲೆಗಳಿಂದ ದೂರವಿರುತ್ತಾನೆ.

(೨೨) ಅಥವಾ ಅವನು ಹೀಗೆ ಹೇಳಬಹುದು: "ಕೆಲವು ವನವಾಸಿಗಳು ಮತ್ತು ಬ್ರಾಹ್ಮಣರ, ಶ್ರದ್ಧಾಳುಗಳು ತಂದುಕೊಟ್ಟ ಆಹಾರದಿಂದ ಜೀವನ ಸಾಗಿಸುತ್ತಿದ್ದರೂ, ಅಯೋಗ್ಯ ಮಾರ್ಗಗಳಿಂದ ಮತ್ತು ಇಂತಹ ಕೀಳು ಕಲೆಗಳಿಂದ ಉಪಜೀವಿಕೆಯನ್ನು ಸಂಪಾದಿಸುತ್ತಾರೆ.

ಉದಾಹರಣೆಗೆ:

ಈ ಮುಂದಿನ ವಸ್ತುಗಳ ಒಳ್ಳೆಯ ಅಥವಾ ಕೆಟ್ಟ ಗುಣಗಳ ಚಿಹ್ನೆಗಳ ಜ್ಞಾನ ಮತ್ತು ಅವುಗಳ ಒಡೆಯರಿಗೆ ಆರೋಗ್ಯ ಅಥವಾ ಅದೃಷ್ಟವನ್ನು ಸೂಚಿಸುವ ಚಿಹ್ನೆಗಳ ಜ್ಞಾನ.

ರತ್ನಗಳು, ಹಲಗೆಗಳು, ಬಟ್ಟೆಗಳು, ಖಡ್ಗಗಳು, ಬಾಣಗಳು, ಇತರ ಆಯುಧಗಳು, ಸ್ತ್ರೀಯರು, ಪುರುಷರು, ಬಾಲಕರು, ಬಾಲಕಿಯರು, ದಾಸರು, ದಾಸಿಯರು, ಆನೆಗಳು, ಕುದುರೆಗಳು, ಎಮ್ಮೆಗಳು, ಹೋರಿಗಳು, ಎತ್ತುಗಳು, ಆಡು, ಕುರಿ, ಕೋಳಿ, ಲಾವಕ್ಕಿ, ಉಡ, ಮೀನು, ಆಮೆ ಮತ್ತು ಇತರ ಪ್ರಾಣಿಗಳು.

ವಿರಕ್ತನಾಗಿರುವ ಗೌತಮನು ಇಂತಹ ಕೀಳು ಕಲೆಗಳಿಂದ ದೂರವಿರುತ್ತಾನೆ.

೨೩. ಅಥವಾ ಅವನು ಹೀಗೆ ಹೇಳಬಹುದು: "ಕೆಲವು ವನವಾಸಿಗಳು ಮತ್ತು ಬ್ರಾಹ್ಮಣರು ಶ್ರದ್ಧಾಳುಗಳು ತಂದುಕೊಟ್ಟ ಆಹಾರದಿಂದ ಜೀವನವನ್ನು ಸಾಗಿಸುತ್ತಿದ್ದರೂ, ಅಯೋಗ್ಯ ಮಾರ್ಗಗಳಿಂದ ಅಂದರೆ ಕೀಳು ಕಲೆಗಳಿಂದ ಉಪಜೀವಿಕೆಯನ್ನು ಸಂಪಾದಿಸುತ್ತಾರೆ.

ಉದಾಹರಣೆಗೆ : ಕೆಳಗಿನಂತೆ ಕಣಿ ಹೇಳುತ್ತಾರೆ.

ನಾಯಕರು ಯುದ್ಧಕ್ಕೆ ಹೊರಡುವರು.

ನಮ್ಮ ನಾಯಕರು ಆಕ್ರಮಣ ಮಾಡುವರು ಮತ್ತು ಶತ್ರುಗಳು ಹಿಂದೆ ಸರಿಯುವರು.

ಶತ್ರು ನಾಯಕರು ಆಕ್ರಮಣ ಮಾಡುವರು ಮತ್ತು ನಮ್ಮವರು ಹಿಂದೆ ಸರಿಯುವರು.

ನಮ್ಮ ನಾಯಕರು ಜಯ ಸಂಪಾದಿಸುವರು ಮತ್ತು ಶತ್ರುಗಳು ಸೋಲುವರು.

ವಿದೇಶಿ ನಾಯಕರು ಈ ಕಡೆ ಜಯ ಸಂಪಾದಿಸುವರು ಮತ್ತು ನಮ್ಮವರು ಸೋಲನ್ನು ಅನುಭವಿಸುವರು.

ಹೀಗೆ ಈ ಕಡೆ ಜಯವುಂಟಾಗುವುದು, ಆ ಕಡೆ ಸೋಲುಂಟಾಗುವುದು.

ವಿರಕ್ತನಾಗಿರುವ ಗೌತಮನು ಇಂತಹ ಕೀಳು ಕಲೆಗಳಿಂದ ದೂರವಿರುತ್ತಾನೆ."

೨೪. ಅಥವಾ ಅವನು ಹೀಗೆ ಹೇಳಬಹುದು: "ಕೆಲವು ವನವಾಸಿಗಳು ಮತ್ತು ಬ್ರಾಹ್ಮಣರು, ಶ್ರದ್ಧಾಳುಗಳು ತಂದುಕೊಟ್ಟ ಆಹಾರದಿಂದ ಜೀವನವನ್ನು ಸಾಗಿಸುತ್ತಿದ್ದರೂ, ಆಯೋಗ್ಯಮಾರ್ಗಗಳಿಂದ ಅಂದರೆ ಹೀಗೆ ಭವಿಷ್ಯ ಹೇಳುವ ನೀಚ ಕಲೆಗಳಿಂದ ಉಪಜೀವಿಕೆಯನ್ನು ಸಂಪಾದಿಸುತ್ತಾರೆ.

ಉದಾಹರಣೆಗೆ:

(೧) ಚಂದ್ರ ಗ್ರಹಣವಾಗುವುದು.

(೨) ಸೂರ್ಯ ಗ್ರಹಣವಾಗುವುದು.

(೩) ನಕ್ಷತ್ರ ಗ್ರಹಣವಾಗುವುದು.

(೪) ಸೂರ್ಯ ಅಥವಾ ಚಂದ್ರನ ಗತಿ ವಕ್ರವಾಗುವುದು.

(೫) ಸೂರ್ಯ ಅಥವಾ ಚಂದ್ರನು ಮರಳಿ ಸರಿಯಾಗಿ ಪರಿಭ್ರಮಣ ಮಾಡುವನು.

(೬) ನಕ್ಷತ್ರಗಳ ಗತಿ ವಕ್ರವಾಗುವುದು.

(೭) ನಕ್ಷತ್ರಗಳು ಸರಿಯಾಗಿ ಪರಿಭ್ರಮಣ ಮಾಡುವುವು.

(೮) ಧೂಮಕೇತುಗಳು ಬೀಳುವುವು.

(೯) ದಾವಾನಲವುಂಟಾಗುವುದು.

(೧೦) ಭೂಕಂಪವಾಗುವುದು.

(೧೧) ದೇವನು ಗುಡುಗುವನು.

(೧೨–೧೫) ಸೂರ್ಯ ಅಥವಾ ಚಂದ್ರ ಅಥವಾ ನಕ್ಷತ್ರಗಳು ಉದಯಿಸುವವು ಮತ್ತು ಅಸ್ತವಾಗುವವು, ಪ್ರಕಾಶಿಸುವವು ಮತ್ತು ಕಾಂತಿಹೀನವಾಗುವವು ಅಥವಾ ಈ ಹದಿನೈದು ಘಟನೆಗಳಲ್ಲಿ ಪ್ರತಿಯೊಂದೂ ಇಂತಿಂಥ ಫಲವನ್ನು ಸೂಚಿಸುವುದೆಂದು ಭವಿಷ್ಯ ಹೇಳುವುದು.

ವಿರಕ್ತನಾಗಿರುವ ಗೌತಮನು ಇಂತಹ ಕೀಳುಕಲೆಗಳಿಂದ ದೂರವಿರುತ್ತಾನೆ.

೨೫. ಅಥವಾ ಅವನು ಹೀಗೆ ಹೇಳಬಹುದು: "ಕೆಲವು ವನವಾಸಿಗಳು ಮತ್ತು ಬ್ರಾಹ್ಮಣರು ಶ್ರದ್ಧಾಳುಗಳು ತಂದುಕೊಟ್ಟ ಆಹಾರದಿಂದ ಜೀವನ ಸಾಗಿಸುತ್ತಿದ್ದರೂ, ಅಯೋಗ್ಯ ಮಾರ್ಗಗಳಿಂದ ಅಂದರೆ ಇಂತಹ ನೀಚ ಕಲೆಗಳಿಂದ ಉಪಜೀವಿಕೆಯನ್ನು ಸಂಪಾದಿಸುತ್ತಾರೆ."

ಬಹಳ ಮಳೆಯಾಗುವುದೆಂದು ಭವಿಷ್ಯ ಹೇಳುವುದು
ಮಳೆ ಕಡಿಮೆಯಾಗುವುದೆಂದು ಭವಿಷ್ಯ ಹೇಳುವುದು
ಸುಗ್ಗಿಯು ಸಮೃದ್ಧವಾಗುವುದೆಂದು ಭವಿಷ್ಯ ಹೇಳುವುದು
ಆಹಾರ ಧಾನ್ಯಗಳ ಕೊರತೆಯಾಗುವುದೆಂದು ಭವಿಷ್ಯ ಹೇಳುವುದು
ಶಾಂತಿಯುಂಟಾಗುವುದೆಂದು ಭವಿಷ್ಯ ಹೇಳುವುದು
ಗಲಭೆಗಳುಂಟಾಗುವುದೆಂದು ಭವಿಷ್ಯ ಹೇಳುವುದು
ಸೋಂಕು ರೋಗಗಳುಂಟಾಗುವುದೆಂದು ಭವಿಷ್ಯ ಹೇಳುವುದು
ಆರೋಗ್ಯಕರ ಋತುಮಾನವುಂಟಾಗುವುದೆಂದು ಭವಿಷ್ಯ ಹೇಳುವುದು
ಬೆರಳುಗಳ ಮೇಲೆ ಎಣಿಸುವುದು
ಬೆರಳುಗಳ ಸಹಾಯವಿಲ್ಲದೇ ಎಣಿಸುವುದು
ದೊಡ್ಡ ಸಂಖ್ಯೆಗಳನ್ನು ಕೂಡಿಸುವುದು
ಲಾವಣಿಗಳನ್ನು, ಹಾಡುಗಳನ್ನು ರಚಿಸುವುದು
ಕುತರ್ಕ ಮಾಡುವುದು, ಕೂಟವಾದ ಮಾಡುವುದು

ವಿರಕ್ತನಾಗಿರುವ ಗೌತಮನು ಇಂತಹ ಕೀಳುಕಲೆಗಳಿಂದ ದೂರವಿರುತ್ತಾನೆ.

೨೬. ಅಥವಾ ಅವನು ಹೀಗೆ ಹೇಳಬಹುದು: "ಕೆಲವು ವನವಾಸಿಗಳು ಮತ್ತು ಬ್ರಾಹ್ಮಣರು, ಶ್ರದ್ಧಾಳುಗಳು ತಂದುಕೊಟ್ಟ ಆಹಾರದಿಂದ ಜೀವನ ಸಾಗಿಸುತ್ತಿದ್ದರೂ ಅಯೋಗ್ಯಮಾರ್ಗಗಳಿಂದ, ಅಂದರೆ ಕೆಳಗಿನ ಕೀಳು ಕಲೆಗಳಿಂದ ಉಪಜೀವಿಕೆಯನ್ನು ಸಂಪಾದಿಸುತ್ತಾರೆ:

(೧) ಕನ್ಯೆ ಅಥವಾ ವರನನ್ನು ಮನೆಗೆ ಕರೆ ತರುವಂಥ ವಿವಾಹಗಳಿಗೆ ಒಳ್ಳೆಯ ಮುಹೂರ್ತವನ್ನು ಹುಡುಕಿಕೊಡುವುದು.

(೨) ಕನ್ಯೆ ಅಥವಾ ವರನನ್ನು ಮನೆಯ ಹೊರಗೆ ಕಳಿಸುವಂಥ ವಿವಾಹಗಳಿಗೆ ಮುಹೂರ್ತವನ್ನು ಹುಡುಕಿಕೊಡುವುದು.

(೩) ಶಾಂತಿ ಒಪ್ಪಂದಗಳನ್ನು ಏರ್ಪಡಿಸಲಿಕ್ಕೆ ಮುಹೂರ್ತವನ್ನು ನಿಶ್ಚಯಿಸುವುದು (ಅಥವಾ ಸ್ನೇಹ ಸಂಪಾದನೆಗೆ ಮಂತ್ರಗಳನ್ನು ಬಳಸುವುದು)

(೪) ದ್ವೇಷಗಳು ತಲೆದೋರಲು ಯೋಗ್ಯವಾದ ಮುಹೂರ್ತವನ್ನು ನಿಶ್ಚಯಿಸುವುದು (ವೈಮನಸ್ಯವನ್ನು ಉಂಟುಮಾಡಲಿಕ್ಕೆ ಮಂತ್ರಗಳನ್ನು ಬಳಸುವುದು)

(೫) ಸಾಲವನ್ನು ತಿರುಗಿಕೊಡು ಎಂದು ಕೇಳಲು ಮುಹೂರ್ತವನ್ನು ನಿಶ್ಚಯಿಸುವುದು (ಅಥವಾ ದಾಳಗಳ ಒಗೆತದಲ್ಲಿ ಜಯ ಸಂಪಾದನೆಗೆ ಮಂತ್ರಗಳನ್ನು ಬಳಸುವುದು).

(೬) ಹಣವನ್ನು ಖರ್ಚು ಮಾಡಲಿಕ್ಕೆ ಮುಹೂರ್ತವನ್ನು ನಿಶ್ಚಯಿಸುವುದು. (ಅಥವಾ ದಾಳದ ಒಗೆತದಲ್ಲಿ ವಿರೋಧಿಯಾದವನಿಗೆ ಅಪಜಯವುಂಟಾಗಲೆಂದು ಮಂತ್ರಗಳನ್ನು ಬಳಸುವುದು).

(೭) ಜನರಿಗೆ ಶುಭವುಂಟಾಗಲೆಂದು ಮಂತ್ರಗಳನ್ನು ಬಳಸುವುದು.

(೮) ಜನರಿಗೆ ಅಶುಭವುಂಟಾಗಲೆಂದು ಮಂತ್ರಗಳನ್ನು ಬಳಸುವುದು.

(೯) ಗರ್ಭಪಾತವಾಗಲೆಂದು ಮಂತ್ರಗಳನ್ನು ಬಳಸುವುದು.

(೧೦) ದವಡೆಗಳು ಅಲ್ಲಾಡದಂತೆ ಮಾಡಲು ಮಂತ್ರ ಪ್ರಯೋಗ (ಮಾಟ).

(೧೧) ಮೂಕನನ್ನಾಗಿ ಮಾಡಲು ಮಾಟ ಮಾಡುವುದು.

(೧೨) ಕೈಗಳನ್ನು ಮೇಲೆತ್ತುವಂತೆ ಮಾಟ ಮಾಡುವುದು.

(೧೩) ಕಿವುಡನನ್ನಾಗಿಸಲು ಮಾಟ ಮಾಡುವುದು

(೧೪) ಮಾಯಾ ಕನ್ನಡಿಯಿಂದ ದ್ವಂದ್ವಾರ್ಥ ಬರುವ ಉತ್ತರಗಳನ್ನು ಪಡೆಯುವುದು.

(೧೫) ದೆವ್ವ ಹಿಡಿದ (ಮೈ ಮೇಲೆ ಬಂದ) ಹುಡುಗಿಯಿಂದ ಗೂಢ ಉತ್ತರಗಳನ್ನು ಪಡೆಯುವುದು.

(೧೬) ದೇವತೆಗಳಿಂದ ಗೂಢ ಉತ್ತರಗಳನ್ನು ಪಡೆಯುವುದು.

(೧೭) ಸೂರ್ಯನ ಪೂಜೆ.

(೧೮) ಮಹಾಮಹಿಮನ ಪೂಜೆ.

(೧೯) ಮುಖದಿಂದ ಜ್ವಾಲೆಗಳನ್ನು ಹೊರತರುವುದು.

(೨೦) ಅದೃಷ್ಟದೇವತೆ, ಸಿರಿಯನ್ನು ಆಹ್ವಾನಿಸುವುದು.

ವಿರಕ್ತನಾಗಿರುವ ಗೌತಮನು ಇಂತಹ ಕೀಳು ಕಲೆಗಳಿಂದ ದೂರವಿರುತ್ತಾನೆ.

೨೭. ಅಥವಾ ಅವನು ಹೀಗೆ ಹೇಳಬಹುದು: "ಕೆಲವು ವನವಾಸಿಗಳು ಮತ್ತು ಬ್ರಾಹ್ಮಣರು ಶ್ರದ್ಧಾಳುಗಳು ತಂದುಕೊಟ್ಟ ಆಹಾರದಿಂದ ಜೀವನ ಸಾಗಿಸುತ್ತಿದ್ದರೂ, ಅಯೋಗ್ಯ ಮಾರ್ಗಗಳಿಂದ ಅಂದರೆ ಇಂತಹ ಕೀಳು ಕಲೆಗಳಿಂದ ಉಪಜೀವಿಕೆಯನ್ನು ಸಂಪಾದಿಸುತ್ತಾರೆ.

(೧) ತನಗೆ ಅಪೇಕ್ಷಿತ ಲಾಭ ಮಾಡಿಕೊಟ್ಟರೆ ಮುಡಿಪು ಕೊಡುತ್ತೇನೆಂದು ದೇವರಿಗೆ ಹರಕೆ ಹೇಳಿಕೊಳ್ಳುವುದು.

(೨) ಇಂತಹ ಹರಕೆಗಳನ್ನು ಮುಟ್ಟಿಸುವುದು.

(೩) ನೆಲಮನೆಯಲ್ಲಿರುವಾಗ ಮಂತ್ರಗಳನ್ನು ಜಪಿಸುವುದು.

(೪) ಪುರುಷತ್ವವನ್ನು ತಂದುಕೊಡುವುದು.

(೫) ಒಬ್ಬ ಮನುಷ್ಯನನ್ನು ನಪುಂಸಕನನ್ನಾಗಿ ಮಾಡುವುದು.

(೬) ವಾಸಸ್ಥಾನಗಳಿಗೆ ಅದೃಷ್ಟಶಾಲಿ ಜಾಗಗಳನ್ನು ಗುರುತಿಸುವುದು.

(೭) ನಿವೇಶನಗಳನ್ನು ಪವಿತ್ರಗೊಳಿಸುವುದು.

(೮) ವಿಧಿವಿಹಿತ ರೀತಿಯಲ್ಲಿ ಬಾಯಿ ಮುಕ್ಕಳಿಸುವುದು.

(೯) ಶಾಸ್ತ್ರೋಕ್ತ ರೀತಿಯಲ್ಲಿ ಸ್ನಾನ ಮಾಡುವುದು.

(೧೦) ಯಜ್ಞಗಳನ್ನು ಮಾಡುವುದು.
(೧೧–೧೪) ವಾಂತಿ ಮಾಡಿಸುವ ಮತ್ತು ಭೇದಿಯನ್ನುಂಟು ಮಾಡುವ ಔಷಧಿಗಳನ್ನು ಕೊಡುವುದು.
(೧೫) ತಲೆಯನ್ನು ಹಗುರ ಮಾಡಲು ಜನರಿಗೆ ಔಷಧವನ್ನು ಕೊಡುವುದು.
(೧೬) ಜನರ ಕಿವಿಗಳಿಗೆ ಎಣ್ಣೆ ಹಚ್ಚುವುದು. (ಅವು ಬೆಳೆಯಲಿಕ್ಕೆ ಅಥವಾ ಅವುಗಳ ಮೇಲಿನ ಗಾಯಗಳು ಮಾಯಲಿಕ್ಕೆ).
(೧೭) ಜನರ ಕಣ್ಣುಗಳಿಗೆ ಪರಿಹಾರವನ್ನು ಒದಗಿಸುವುದು. (ಔಷಧ ತೈಲಗಳನ್ನು ಹನಿ ಹನಿಯಾಗಿ ಕಣ್ಣಿನಲ್ಲಿ ಹಾಕುತ್ತ ಅವುಗಳಿಗೆ ತಂಪನ್ನುಂಟು ಮಾಡುವುದು).
(೧೮) ಮೂಗಿನ ಮುಖಾಂತರ ಔಷಧಿಗಳನ್ನು ಹಾಕುವುದು.
(೧೯) ಕಣ್ಣುಗಳಿಗೆ ಕಾಡಿಗೆಯನ್ನು ಹಚ್ಚುವುದು.
(೨೦) ಕಣ್ಣುಗಳಿಗೆ ಮುಲಾಮನ್ನು ಲೇಪಿಸುವುದು.
(೨೧) ನೇತ್ರ ಚಿಕಿತ್ಸಕನಾಗುವುದು.
(೨೨) ಶಸ್ತ್ರ ಚಿಕಿತ್ಸಕನಾಗುವುದು.
(೨೩) ಚಿಕ್ಕ ಮಕ್ಕಳ ವೈದ್ಯನಾಗುವುದು.
(೨೪) ಮೂಲಿಕೆಗಳನ್ನು ಮತ್ತು (ನಿದ್ದೆ ಬರಿಸುವ) ಔಷಧಿಗಳನ್ನು ಕೊಡುವುದು.
(೨೫) ಸರದಿಯ ಪ್ರಕಾರ ಔಷಧಿಗಳನ್ನು ಕೊಡುವುದು.

ವಿರಕ್ತನಾಗಿರುವ ಗೌತಮನು ಇಂತಹ ಕೀಳು ಕಲೆಗಳಿಂದ ದೂರವಿರುತ್ತಾನೆ.

"ಸೋದರರೇ, ಇವುಗಳೆಲ್ಲ ಕ್ಷುಲ್ಲಕ ವಿಷಯಗಳು. ನೀತಿ ಶಾಸ್ತ್ರದ ಅಮುಖ್ಯ ವಿವರಗಳು. ತಥಾಗತನನ್ನು ಸ್ತುತಿಸುವಾಗ ಪರಿವರ್ತನೆಯನ್ನು ಹೊಂದದ ಮನುಷ್ಯನು ಇವುಗಳನ್ನು ಕುರಿತು ಹೇಳಬಹುದು."

ಇಲ್ಲಿಗೆ ನೀತಿ ಸಂಹಿತೆಯ ದೀರ್ಘವಾಕ್ಯ ವೃಂದಗಳು ಮುಗಿದುವು.

## III

ಒಬ್ಬ ವ್ಯಕ್ತಿಯು ಅನುಸರಿಸಲಿಕ್ಕೆ ಇದು ನಿಜವಾಗಿಯೂ ನೈತಿಕ ಜೀವನದ ಅತ್ಯುತ್ತಮ ಮಟ್ಟವಾಗಿದೆ. ಅವನ ಕಾಲದ ಆರ್ಯ ಸಮಾಜಕ್ಕೆ ನೈತಿಕ ಜೀವನದ ಇಂಥ ಉತ್ತಮ ಮಟ್ಟದ ಪರಿಚಯವಿರಲೇ ಇಲ್ಲ.

ಪರಿಶುದ್ಧ ಜೀವನವನ್ನು ನಡೆಸಿ ಒಂದು ಆದರ್ಶವನ್ನು ಸ್ಥಾಪಿಸುವಷ್ಟರಿಂದಲೇ ಅವನು ಸುಮ್ಮನಾಗಲಿಲ್ಲ. ಸಮಾಜದಲ್ಲಿನ ಸಾಮಾನ್ಯ ಪುರುಷರ ಮತ್ತು ಸ್ತ್ರೀಯರ ನಡತೆಯನ್ನು ತಿದ್ದಬೇಕೆಂದೂ ಅವನು ಬಯಸಿದನು. ಅವರ ಮಾರ್ಗದರ್ಶನಕ್ಕಾಗಿ ಅವನು ಒಂದು ದೀಕ್ಷಾ ಪದ್ಧತಿಯನ್ನು ರೂಪಿಸಿದನು. ಇದು ಆರ್ಯ ಸಮಾಜಕ್ಕೆ ತಿಳಿದಿರಲಿಲ್ಲ. ಈ ದೀಕ್ಷಾ ಪದ್ಧತಿಯ ಪ್ರಕಾರ ಬುದ್ಧ ಧರ್ಮಕ್ಕೆ ಪರಿವರ್ತಿತನಾದವನು ಬುದ್ಧನು ವಿಧಿಸಿದ ಕೆಲವು ನೀತಿಗಳನ್ನು ಪಾಲಿಸಬೇಕಾಗುತ್ತಿತ್ತು. (ಅವನು ವಿಧಿಸಿದ) ಈ ನೀತಿಗಳು 'ಪಂಚ ಶೀಲ'ಗಳು ಅಥವಾ ಐದು ವಿಧಿಗಳು ಎಂದು ಪ್ರಸಿದ್ಧವಾಗಿವೆ. ಅವು ಯಾವುವೆಂದರೆ:

(೧) ಕೊಲ್ಲಬಾರದು.
(೨) ಕಳವು ಮಾಡಬಾರದು.
(೩) ಸುಳ್ಳು ಹೇಳಬಾರದು.
(೪) ವ್ಯಭಿಚಾರ ಮಾಡಬಾರದು.

(೫) ಮತ್ತು ಬರಿಸುವ ಪೇಯಗಳನ್ನು ಕುಡಿಯಬಾರದು.

ಈ ಐದು ವಿಧಿಗಳು ಲೌಕಿಕರಿಗಾಗಿ ಇದ್ದುವು. ಭಿಕ್ಷುಗಳಿಗಾಗಿ ಇನ್ನೂ ಐದು ಹೆಚ್ಚಿನ ವಿಧಿಗಳಿದ್ದವು:

(೬) ನಿಷಿದ್ಧ ಸಮಯದಲ್ಲಿ ತಿನ್ನಬಾರದು.

(೭) ನರ್ತಿಸಬಾರದು, ಹಾಡಬಾರದು, ರಂಗಭೂಮಿಯ ಮೇಲಿನ ಅಥವಾ ಬೇರೆ ಪ್ರದರ್ಶನಗಳನ್ನು ನೋಡಬಾರದು.

(೮) ಮಾಲೆಗಳು, ಸುಗಂಧ ದ್ರವ್ಯಗಳು ಮತ್ತು ಆಭರಣಗಳನ್ನು ಉಪಯೋಗಿಸಬಾರದು.

(೯) ಎತ್ತರ ಅಥವಾ ಅಗಲವಾದ ಹಾಸಿಗೆಗಳನ್ನು ಉಪಯೋಗಿಸಬಾರದು.

(೧೦) ಎಂದೂ ಹಣವನ್ನು ಸ್ವೀಕರಿಸಬಾರದು.

ಈ ಶೀಲಗಳು ಅಥವಾ ವಿಧಿಗಳು ನೀತಿ ಸಂಹಿತೆಯನ್ನು ರೂಪಿಸಿದವು. ಇದರ ಉದ್ದೇಶ ಸ್ತ್ರೀ ಪುರುಷರ ವಿಚಾರ ಮತ್ತು ಕೃತಿಗಳನ್ನು ಕ್ರಮಬದ್ಧಗೊಳಿಸುವುದಾಗಿತ್ತು.

ಇವುಗಳಲ್ಲಿ 'ಕೊಲ್ಲಬಾರದು' ಎನ್ನುವುದು ಅತ್ಯಂತ ಮಹತ್ವದ ವಿಧಿಯಾಗಿತ್ತು. ಕೇವಲ ಜೀವವನ್ನು ಅಪಹರಿಸದಿರುವುದು ಈ ವಿಧಿಯ ಅರ್ಥವಲ್ಲವೆಂದು ಬುದ್ಧನು ಸ್ಪಷ್ಟಪಡಿಸಿದನು. ಶ್ವಾಸೋಚ್ಛ್ವಾಸವುಳ್ಳ ಎಲ್ಲ ವಸ್ತುಗಳ ಬಗ್ಗೆ ಸ್ವಾಭಾವಿಕ ಸಹಾನುಭೂತಿ, ಸದಿಚ್ಛೆ ಮತ್ತು ಪ್ರೇಮ ಇವುಗಳು ಸಹ ಈ ವಿಧಿಯಲ್ಲಿ ಅಡಕವಾಗಿವೆ ಎಂದು ಅವನು ಒತ್ತಿ ಹೇಳಿದನು.

ಇತರ ವಿಧಿಗಳಿಗೂ ಈ ಅಭಿಪ್ರಾಯಗಳಿವೆಯೆಂದು ಪ್ರತಿಪಾದಿಸಿ ಅವನು ಅವುಗಳನ್ನು ಅರ್ಥಪೂರ್ಣಗೊಳಿಸಿದನು. ಬುದ್ಧನ ಒಬ್ಬ ಲೌಕಿಕ ಅನುಯಾಯಿಯು ಒಂದು ಸಲ ಬೌದ್ಧನಲ್ಲದ ಒಬ್ಬ ಸನ್ಯಾಸಿಯ ಉಪದೇಶವನ್ನು ಬುದ್ಧನ ಎದುರಿಗೆ ಹೇಳುತ್ತಾ, ಅತ್ಯುತ್ತಮ ಆದರ್ಶವೆಂದರೆ ಕೆಟ್ಟ ಕೃತಿಗಳನ್ನು ಮಾಡದಿರುವುದು, ಕೆಟ್ಟ ಶಬ್ದಗಳನ್ನು ಉಚ್ಚರಿಸದಿರುವುದು, ಕೆಟ್ಟ ವಿಚಾರಗಳನ್ನು ಮಾಡದಿರುವುದು ಮತ್ತು ದುಷ್ಟ ಜೀವನವನ್ನು ನಡೆಸದಿರುವುದು ಎಂದು ಹೇಳಿದನು. ಇದರ ಬಗ್ಗೆ ಬುದ್ಧನ ಪ್ರತಿಕ್ರಿಯೆ ಮಾರ್ಮಿಕವಾಗಿದೆ. ಅವನು ಅಂದನು "ಇದು ನಿಜವಾದರೆ ಸ್ತನ್ಯಪಾನ ಮಾಡುವ ಪ್ರತಿಯೊಂದು ಕೂಸಿಗೂ ಜೀವನದ ಆದರ್ಶ ಪ್ರಾಪ್ತಿಯಾಗಬೇಕು.... ಜೀವನವು ಒಳ್ಳೆಯದು ಮತ್ತು ಕೆಟ್ಟದು ಇವೆರಡರ ಜ್ಞಾನ. ಅನಂತರ ಕೆಟ್ಟ ಕೃತಿ, ಶಬ್ದ, ವಿಚಾರ ಮತ್ತು ಜೀವನ ಇವುಗಳನ್ನು ಒಳ್ಳೆಯವುಗಳಿಗಾಗಿ ವಿನಿಮಯ ಮಾಡುವುದು ದೀರ್ಘ ಮತ್ತು ದೃಢವಾದ ಮಾನಸಿಕ ಪ್ರಯತ್ನದಿಂದ ಇದನ್ನು ಸಂಪಾದಿಸಬೇಕು."

ಬುದ್ಧನ ಉಪದೇಶಗಳು ಕೇವಲ ನಿಷೇಧಾತ್ಮಕವಾಗಿರಲಿಲ್ಲ. ಅವು ವಿಧಾನಾತ್ಮಕ ಮತ್ತು ರಚನಾತ್ಮಕವಾಗಿದೆ. ಒಬ್ಬ ಮನುಷ್ಯನು ಅವುಗಳನ್ನು ಅನುಸರಿಸಿದ ಮಾತ್ರಕ್ಕೆ ಅವನಿಗೆ ಸಮಾಧಾನವಾಗುತ್ತಿರಲಿಲ್ಲ. ಉಳಿದವರೂ ಅವುಗಳನ್ನು ಅನುಸರಿಸುವಂತೆ ಪ್ರೋತ್ಸಾಹಿಸಬೇಕೆಂದು ಅವನು ಒತ್ತಿಹೇಳುತ್ತಿದ್ದನು.

ಉದಾಹರಣೆಗೆ:

'ಔಗುತ್ತರ ನಿಕಾಯ'ದಲ್ಲಿ ಹಿಂಸೆ, ಕಳ್ಳತನ, ವ್ಯಭಿಚಾರ, ಸುಳ್ಳು ಮತ್ತು ಮದ್ಯಪಾನಗಳನ್ನು ಮಾಡದಿರುವವನು ಒಳ್ಳೆಯ ಮನುಷ್ಯನೆಂದು ಕರೆಸಿಕೊಳ್ಳಬಹುದು. ಆದರೆ ಯಾವನು ಸ್ವತಃ ಈ ಕೆಟ್ಟ ಪದಾರ್ಥಗಳಿಂದ ದೂರವಿರುವನಲ್ಲದೇ, ಇತರರನ್ನು ತನ್ನಂತೆ ಮಾಡಲು ಪ್ರೇರಿಸುವನೋ ಅವನು ಬಹಳ ಒಳ್ಳೆಯ ಮನುಷ್ಯ ಎಂದು ಕರೆಸಿಕೊಳ್ಳಲು ಅರ್ಹನಾಗಿರುತ್ತಾನೆ. ಹೀಗೆ ಒಳ್ಳೆಯ ಮನುಷ್ಯ ಮತ್ತು ಬಹಳ ಒಳ್ಳೆಯ ಮನುಷ್ಯರನ್ನು ಬುದ್ಧನು ವಿಂಗಡಿಸುತ್ತಾನೆಂದು ನಿರೂಪಿಸಿದೆ.

ಈಗಾಗಲೇ ನಿರೂಪಿಸಿದಂತೆ ಬೌದ್ಧ ಧರ್ಮದ ಎರಡು ಪ್ರಧಾನ ಗುಣಗಳೆಂದರೆ ಪ್ರೇಮ ಮತ್ತು ವಿವೇಕ.

ಪ್ರೇಮವನ್ನು ಒಂದು ಸದ್ಗುಣವೆಂದು ಅವನು ಪದೇ ಪದೇ ಬೋಧಿಸುತ್ತಾನೆಂಬುದು ಅವನ ಮಾತುಗಳಲ್ಲಿಯೇ ಸ್ಪಷ್ಟವಾಗಿದೆ "ತನ್ನ ಕೂಸನ್ನು, ಒಂದೇ ಕೂಸನ್ನು ಒಬ್ಬ ತಾಯಿಯು ತನ್ನ ಜೀವವನ್ನು ಲೆಕ್ಕಿಸದೇ ಜಾಗರೂಕಳಾಗಿ ರಕ್ಷಿಸುವಂತೆ ಪ್ರತಿಯೊಬ್ಬನನ್ನೂ ಎಲ್ಲ ಪ್ರಾಣಿಗಳ ಬಗ್ಗೆ ನಿಸ್ಸೀಮ ಪ್ರೇಮವನ್ನು ಬೆಳೆಸಿಕೊಳ್ಳಬೇಕು ಮತ್ತು ಸಮಸ್ತಲೋಕದ ಬಗ್ಗೆ ಮೇಲೆ, ಕೆಳಗೆ, ಆಚೆ, ಈಚೆ ನಿರಾತಂಕವಾದ, ದ್ವೇಷ ರಹಿತವಾದ, ವೈರವಿಲ್ಲದ, ಪ್ರೇಮಮಯ ಭಾವತುಂಬಿದ ಸದಿಚ್ಛೆಯನ್ನು ಅವನು ಬೆಳೆಸಿಕೊಳ್ಳಬೇಕು. ಈ ರೀತಿಯ ಜೀವನವು ಈ ಲೋಕದಲ್ಲಿ ಅತ್ಯುತ್ತಮವಾಗಿರುತ್ತದೆ" ಹೀಗೆಂದು ಬುದ್ಧನು ಉಪದೇಶಿಸಿದನು.[೧]

"ಸಾರ್ವತ್ರಿಕ ದಯೆ, ದುಃಖವನ್ನು ಅನುಭವಿಸುವ ಪ್ರತಿಯೊಂದು ಪ್ರಾಣಿಯ ಬಗೆಗೆ ಸಹಾನುಭೂತಿ, ಪ್ರತಿಯೊಂದು ಸಚೇತನ ವಸ್ತುವಿನ ಬಗೆಗೆ ಸದಿಚ್ಛೆ – ಇವು ತಥಾಗತ (ಬುದ್ಧ)ನ ಲಕ್ಷಣವಾಗಿದ್ದವು. ಇಂತಹ ಸ್ವಭಾವವುಳ್ಳ ಮನುಷ್ಯರು ಬಹಳ ಕಡಿಮೆ. ತನ್ನ ಅನುಯಾಯಿಗಳಿಗೆ ತನ್ನ ಅಭಿಪ್ರಾಯವನ್ನು ಮನದಟ್ಟು ಮಾಡಿಕೊಡುವಲ್ಲಿ ನಿರೀಕ್ಷಿತ ಸಾಫಲ್ಯವನ್ನು ಅವನು ಪಡೆದಿದ್ದಾನೆ."[೨]

ಬುದ್ಧನು ಪ್ರೇಮ ಸಿದ್ಧಾಂತವನ್ನು ನಂಬಿದಷ್ಟು ದೃಢವಾಗಿಯೇ ವಿವೇಕ ಸಿದ್ಧಾಂತವನ್ನು ನಂಬಿದ್ದಾನೆ. ನೈತಿಕ ಜೀವನವು ಜ್ಞಾನದಿಂದ ಪ್ರಾರಂಭವಾಗುತ್ತದೆ ಮತ್ತು ವಿವೇಕದಿಂದ ಕೊನೆಗೊಳ್ಳುತ್ತದೆಯೆಂಬುದು ಅವನ ಅಭಿಪ್ರಾಯ.

> "ಅವನು ಜಗತ್ತನ್ನು ರಕ್ಷಿಸುವುದಕ್ಕಾಗಿ ಬಂದನು. ಈ ಉದ್ದೇಶವನ್ನು ಸಾಧಿಸಲು ಅವನು ಅಜ್ಞಾನ ನಾಶ ಮತ್ತು ಜ್ಞಾನ ಪ್ರಸಾರ ಇವೆರಡನ್ನು ಸಾಧನಗಳನ್ನಾಗಿ ಮಾಡಿಕೊಂಡನು. ಇವೇ ಜೀವನದ ನೈಜ ಮೌಲ್ಯಗಳು ಮತ್ತು ಬದುಕಿಗೆ ವಿವೇಕಯುತ ಮಾರ್ಗವೆಂದು ತಿಳಿಸಿದನು. ಜನರನ್ನು ರಕ್ಷಿಸುವ ಸಾಮರ್ಥ್ಯ ತನಗಿದೆಯೆಂಬ ಅಹಂಭಾವ ಬುದ್ಧನಿಗೆ ಇರಲಿಲ್ಲ. ತಮ್ಮ ರಕ್ಷಣೆಗೆ ಜನರು ತಾವೇ ಸ್ವತಃ ಪ್ರಯತ್ನಿಸಬೇಕಾಗಿದೆ ಮತ್ತು ರಕ್ಷಣೆಯ ಮಾರ್ಗವು ಜ್ಞಾನದಲ್ಲಿ ಇದೆ. ಜ್ಞಾನವಿಲ್ಲದ ನೈತಿಕ ವರ್ತನೆಯನ್ನು ಸದ್ಗುಣವೆಂದು ಅವನು ಮನ್ನಿಸಿರಲಿಲ್ಲ. ಅಷ್ಟು ಮಹತ್ವವನ್ನು ಅವನು ಜ್ಞಾನಕ್ಕೆ ಕೊಟ್ಟಿದ್ದನು."

ಮೂರು ವಿಷಯಗಳ ವಿರುದ್ಧ ಬುದ್ಧನು ದೊಡ್ಡ ಚಳುವಳಿಯನ್ನೇ ಹೂಡಿದನು.

ಅವನು ವೇದಗಳ ಪ್ರಾಮಾಣ್ಯವನ್ನು (ಅಧಿಕಾರವನ್ನು ಅಥವಾ ಪ್ರಮಾಣ ಗ್ರಂಥಗಳೆಂಬುದನ್ನು) ನಿರಾಕರಿಸಿದನು.

ಎರಡನೆಯದಾಗಿ ಯಜ್ಞವು ಒಂದು ರೀತಿಯ ಧರ್ಮವೆಂಬುದನ್ನು ಅವನು ಖಂಡಿಸಿದನು. ಯಜ್ಞದ ಬಗೆಗಿನ ಬುದ್ಧನ ಅಭಿಪ್ರಾಯವು 'ಜಾತಕಮಾಲ'ದಲ್ಲಿ ಒಂದು ಕತೆಯ ರೂಪದಲ್ಲಿ ಚೆನ್ನಾಗಿ ವಿವರಿಸಲ್ಪಟ್ಟಿದೆ. ಆ ಕತೆಯು ಹೀಗಿದೆ:

## ಯಜ್ಞದ ಕತೆ

ಶುದ್ಧವಾದ ಹೃದಯವುಳ್ಳವರು (ಅಂತಃಕರಣವುಳ್ಳವರು) ದುಷ್ಟರ ಸೆಳೆತಕ್ಕೆ ಒಳಗಾಗಿ ಕಾರ್ಯ ಮಾಡುವುದಿಲ್ಲ. ಇದನ್ನು ತಿಳಿದುಕೊಂಡು ಪ್ರಯತ್ನಪೂರ್ವಕವಾಗಿ ಶುದ್ಧಾಂತಃಕರಣರಾಗಬೇಕು. ಮುಂದಿನ ಕತೆಯು ಇದನ್ನು ತಿಳಿಸಿಕೊಡುತ್ತದೆ:

---

೧. 'ಸುತ್ತ ನಿಪಾತ.'

೨. ಪ್ರಾಟ್: 'ಬುದ್ಧಿಸಮ್', ಪುಟ ೪೯

ಹಿಂದೆ ಬೋಧಿಸತ್ವನು ರಾಜನಾಗಿದ್ದನು. ವಂಶ ಪಾರಂಪರ್ಯದಿಂದ ಅವನು ರಾಜ್ಯವನ್ನು ಪಡೆದಿದ್ದನು. ತನ್ನ ಪುಣ್ಯದ ಫಲವಾಗಿ ಅವನು ಈ ಸ್ಥಾನವನ್ನು ಪಡೆದಿದ್ದನು ಮತ್ತು ವಿರೋಧಿಗಳ ಕಾಟವಿಲ್ಲದೆ ತನ್ನ ರಾಜ್ಯವನ್ನು ಶಾಂತಿಯಿಂದ ಆಳುತ್ತಿದ್ದನು. ಅವನ ಚಕ್ರಾಧಿಪತ್ಯವನ್ನು ಸಾರ್ವತ್ರಿಕವಾಗಿ ಒಪ್ಪಿಕೊಂಡಿದ್ದರು. ಆಂತರಿಕವಾಗಿ ಮತ್ತು ವಿದೇಶಗಳೊಡನೆ ಇದ್ದ ಅವನ ರಾಜ್ಯ ಸಂಬಂಧಗಳು ಎಲ್ಲ ರೀತಿಯಿಂದ ಉತ್ತಮವಾಗಿದ್ದವು. ಅವನ ಸಾಮಂತರು ಅವನ ಆಜ್ಞೆಯನ್ನು ಪಾಲಿಸುತ್ತಿದ್ದರು.

೧. ಈ ಚಕ್ರವರ್ತಿಯು ತನ್ನ ಶತ್ರುಗಳಾದ ಕಾಮನೆಗಳಿಗೆ ವಶನಾಗಿರಲಿಲ್ಲ. ಅನುಭವಿಸಿದ ನಂತರ ನಿಂದೆಗೀಡಾಗುವ ಕ್ಷುಲ್ಲಕ ಲಾಭಗಳ ಆಕರ್ಷಣೆ ಅವನಿಗೆ ಇರಲಿಲ್ಲ. ಆದರೆ ತನ್ನ ಪ್ರಜೆಗಳ ಸುಖಾಭಿವೃದ್ಧಿಗಾಗಿ ಹೃತ್ಪೂರ್ವಕವಾಗಿ ಪ್ರಯತ್ನಿಸುತ್ತಿದ್ದನು. ಅವನ ಕೃತಿಗಳ ಒಂದೇ ಉದ್ದೇಶವಾದ ಧರ್ಮಾಚರಣೆಯಿಂದ ಅವನೊಬ್ಬ ಮುನಿಯಂತೆ ಇದ್ದನು

೨. ಯಾಕೆಂದರೆ ಉತ್ತಮ ಜನರ ನಡತೆಯನ್ನು ಅನುಕರಿಸುವುದೇ ಜನರ ಜೀವನ ಮೌಲ್ಯವಾಗಿದೆಯೆಂಬ ಮಾನವ ಸ್ವಭಾವ ಅವನಿಗೆ ತಿಳಿದಿತ್ತು. ಈ ಕಾರಣದಿಂದ ತನ್ನ ಪ್ರಜೆಗಳಿಗೆ ದುಃಖ ವಿಮೋಚನೆಯನ್ನುಂಟುಮಾಡಬೇಕೆಂಬ ಬಯಕೆಯುಳ್ಳವನಾಗಿ ತನ್ನ ಧಾರ್ಮಿಕ ಕರ್ತವ್ಯಗಳನ್ನು ತಪ್ಪದೇ ನೆರವೇರಿಸುತ್ತಿದ್ದನು.

೩. ಅವನು ಭಿಕ್ಷೆಯನ್ನು ನೀಡುತ್ತಿದ್ದನು. ಶೀಲದ ನಿಯಮಗಳನ್ನು ತಪ್ಪದೇ ಪಾಲಿಸುತ್ತಿದ್ದನು. ಕ್ಷಮಾಗುಣವನ್ನು ಬೆಳೆಸಿಕೊಂಡಿದ್ದನು. ಸಕಲ ಪ್ರಾಣಿಗಳ ಹಿತಕ್ಕಾಗಿ ಪ್ರಯತ್ನಿಸುತ್ತಿದ್ದನು. ಅವನ ವಿಚಾರಗಳನ್ನು ಪ್ರತಿಫಲಿಸುತ್ತಿದ್ದ ಅವನ ಸೌಮ್ಯ ಮುಖಭಾವವು ಪ್ರಜೆಗಳ ಸುಖಕ್ಕಾಗಿ ಕಾತರಗೊಂಡಿತ್ತು. ಮೂರ್ತಿಮಂತ ಧರ್ಮವೆಂಬಂತೆ ಅವನು ತೋರುತ್ತಿದ್ದನು.

ಆಗ ಒಮ್ಮೆ ಹೀಗೆ ನಡೆಯಿತು. ಅವನ ಭುಜಗಳಿಂದ ರಕ್ಷಿಸಲ್ಪಟ್ಟಿದ್ದರೂ ಪ್ರಜೆಗಳ ತಪ್ಪು ಕೃತಿಗಳ ಪರಿಣಾಮವಾಗಿ ಮತ್ತು ಮಳೆಯ ದೇವತೆಗಳ ಉಪೇಕ್ಷೆಯಿಂದಾಗಿ ಅವನ ರಾಜ್ಯದ ಅನೇಕ ಭಾಗಗಳಲ್ಲಿ ಬರಗಾಲವುಂಟಾಯಿತು.

ಮತ್ತು ಇಂತಹ ವಿಪತ್ತಿನಿಂದ ಭೀಕರ ಪರಿಣಾಮಗಳುಂಟಾದವು. ಇದನ್ನು ಕೇಳಿದ ರಾಜನು ಈ ವಿಪತ್ತು ತಾನು ಅಥವಾ ತನ್ನ ಪ್ರಜೆಗಳು ಮಾಡಿದ ಧರ್ಮವು ಉಲ್ಲಂಘನೆಯ ಪರಿಣಾಮವೆಂದು ತಿಳಿದನು. ಪ್ರಜೆಗಳ ಅಭಿವೃದ್ಧಿಗಾಗಿ ಸತತವಾಗಿ ವಿಚಾರಮಾಡುತ್ತಿದ್ದ ಮತ್ತು ಕಾಳಜಿ ಮಾಡುತ್ತಿದ್ದ ರಾಜನು, ಪ್ರಜೆಗಳ ವ್ಯಥೆಯನ್ನು ಕಂಡು ಬಹಳ ಮನ ನೊಂದವನಾಗಿ ಧಾರ್ಮಿಕ ವಿಷಯಗಳ ಬಗೆಗೆ ಜ್ಞಾನವುಳ್ಳವರೆಂದು ಪ್ರಸಿದ್ಧರಾದ ಮತ್ತು ಸಮರ್ಥರೆಂದು ಸಮ್ಮತರಾದ ಜನರ ಸಲಹೆಯನ್ನು ಕೇಳಿದನು. ತನ್ನ ಕುಲಪುರೋಹಿತ ಮತ್ತು ಮಂತ್ರಿಗಳ ನೇತೃತ್ವವನ್ನು ಹೊಂದಿದ ವೃದ್ಧ ಬ್ರಾಹ್ಮಣರನ್ನು ಆ ವಿಪತ್ತನ್ನು ನಿವಾರಿಸಲು ಉಪಾಯವನ್ನು ಹೇಳಿರೆಂದು ಕೇಳಿದನು. ವೇದೋಕ್ತವಾದ ಯಜ್ಞವನ್ನು ವಿಧಾನ ಪೂರ್ವಕ ಮಾಡಿದರೆ ಸಾಕಷ್ಟು ಮಳೆಯಾಗುವುದೆಂಬ ನಂಬಿಗೆಯುಳ್ಳ ಅವರು ನೂರಾರು ಪ್ರಾಣಿಗಳ ವಧೆ ಮಾಡಬೇಕಾದ ಭೀಕರ ಯಜ್ಞವನ್ನು ಮಾಡಬೇಕೆಂದು ರಾಜನಿಗೆ ವಿವರಿಸಿದನು. ಯಜ್ಞದಲ್ಲಿ ವಿಹಿತವಾದ ವಧೆಯ ಬಗೆಗೆ ಎಲ್ಲವನ್ನೂ ತಿಳಿಸಿದ ಅನಂತರ (ಪ್ರಾಣಿಗಳ ಬಗೆಗಿನ) ಅವನ ಹೃದ್ಗತ ಸ್ವಾಭಾವಿಕ ಅನುಕಂಪವು ಅವರ ಉಪದೇಶವನ್ನು ಸ್ವೀಕರಿಸುವುದು ಬೇಡವೆಂದಿತು. ಆದರೂ ಕಟು ಶಬ್ದಗಳಿಂದ ನಿರಾಕರಿಸಿ ಅವರ ಮನಸ್ಸಿಗೆ ನೋವನ್ನುಂಟು ಮಾಡಲು ಇಚ್ಛೆಯಿಲ್ಲದೆ, ಸೌಜನ್ಯದಿಂದ ಸಂಭಾಷಣೆಯನ್ನು ಬೇರೆ ವಿಷಯಕ್ಕೆ ಹೊರಳಿಸಿ ಈ ವಿಷಯದಿಂದ ಜಾರಿಕೊಂಡನು. ಆದರೆ ಅವನ ಮನೋಗತವನ್ನು ತಿಳಿದುಕೊಳ್ಳಲಾರದ ಅವರು ಧಾರ್ಮಿಕ ವಿಷಯಗಳ

ಬಗೆಗೆ ರಾಜನೊಂದಿಗೆ ಸಂಭಾಷಿಸುವ ಅವಕಾಶ ಸಿಕ್ಕಕೂಡಲೇ ಯಜ್ಞವನ್ನು ಪೂರ್ಣಮಾಡಬೇಕೆಂದು ಅವನಿಗೆ ಮತ್ತೆ ಬುದ್ಧಿವಾದ ಹೇಳಿದರು.

೪. ಭೂಮಿ ಸಂಪಾದನೆ ಮತ್ತು ಅದರ ಆಡಳಿತಕ್ಕಾಗಿ ವಿಹಿತವಾದ ನಿನ್ನ ಬೇರೆ ಬೇರೆ ಕರ್ತವ್ಯಗಳ ನಿರ್ವಹಣೆಯ ಸಮಯ ಮೀರದಂತೆ ನೀನು ತಪ್ಪದೇ ಕಾಳಜಿವಹಿಸುತ್ತೀಯೆ. ನಿನ್ನ ಕೃತಿಗಳ ಈ ಕ್ರಮವು ಧರ್ಮದ ನಿಯಮಗಳಿಗೆ ಅನುಗುಣವಾಗಿದೆ.

೫. (ಧರ್ಮ, ಅರ್ಥ, ಕಾಮಗಳೆಂಬ) ತ್ರಿವಿಧ ಪುರುಷಾರ್ಥಗಳ ಆಚರಣೆಯಲ್ಲಿ (ಎಲ್ಲ ದೃಷ್ಟಿಯಿಂದಲೂ) ನಿಪುಣನಾಗಿರುವ ನೀನು, ಪ್ರಜೆಗಳ ಹಿತರಕ್ಷಣೆಗೆ ಬಿಲ್ಲನ್ನು ಹಿಡಿದಿರುವ ನೀನು, ದೇವಲೋಕಕ್ಕೆ ಸೇತುವೆಯಾಗಿರುವ, 'ಯಜ್ಞ'ವೆಂದು ಹೆಸರುಳ್ಳ ಕರ್ತವ್ಯದ ನಿರ್ವಹಣೆಯ ಬಗೆಗೆ ಏಕೆ ಇಷ್ಟು ಉದಾಸೀನನಾಗಿ ಹಾಗೂ ಸೋಮಾರಿಯಾಗಿರುತ್ತೀಯೆ?

೬. ನಿನ್ನ ಆಜ್ಞೆಗಳು ವಿಜಯದ (ಸಫಲತೆಯ) ನಿಶ್ಚಿತ ಆಹ್ವಾನಗಳೆಂದು ತಿಳಿದು ನಿನ್ನ ಸಾಮಂತರಾಜರು ಸೇವಕರಂತೆ ನಿನ್ನ ಆಜ್ಞೆಗಳನ್ನು ಗೌರವಿಸುತ್ತಾರೆ. ಶತ್ರು ಸಂಹಾರಕನೇ, ಯಜ್ಞದ ಮೂಲಕ ನಿನಗೆ ವಿಶೇಷ ಕೀರ್ತಿಯನ್ನು ತಂದುಕೊಡುವ (ದೇವತೆಗಳ) ಉತ್ತಮ ಆಶೀರ್ವಾದಗಳನ್ನು ಸಂಪಾದಿಸುವ ಸಮಯವು ಈಗ ಬಂದಿದೆ.

೭,೮. ನಿನ್ನ ಸ್ವಾಭಾವಿಕ ಧರ್ಮಾಚರಣೆಯಿಂದ ಮತ್ತು (ಒಳ್ಳೆಯ ನಡತೆಯ) ನಿಗ್ರಹವನ್ನು ನೀನು ತಪ್ಪದೇ ಪಾಲಿಸುತ್ತಿರುವುದರಿಂದ (ಯಜ್ಞದಲ್ಲಿ) ದೀಕ್ಷಿತನಾದವನಿಗೆ ಇರಬೇಕಾದ ಪಾವಿತ್ರ್ಯವು ನಿಶ್ಚಿತವಾಗಿ ಈಗಾಗಲೇ ನಿನ್ನಲ್ಲಿ ಇದೆ. ಆದರು ವೇದದಲ್ಲಿ ಚರ್ಚಿತ ವಿಷಯವಾದ ಇಂತಹ ಯಜ್ಞಗಳನ್ನು ಮಾಡಿ ದೇವತೆಗಳ ಋಣವನ್ನು ತೀರಿಸುವುದು ನಿನಗೆ ಅತ್ಯಂತ ಉಚಿತವಾಗಿದೆ. ಕ್ರಮವಾಗಿ ಮತ್ತು ನ್ಯೂನತೆಗಳಿಲ್ಲದಂತೆ ಮಾಡಿದ ಯಜ್ಞದಿಂದ ಪ್ರೀತರಾದ ದೇವತೆಗಳು (ಯಜ್ಞಕ್ಕೆ) ಪ್ರತಿಯಾಗಿ ಮಳೆಯನ್ನು ಸುರಿಸಿ ಪ್ರಾಣಿಗಳನ್ನು ಅನುಗ್ರಹಿಸುತ್ತಾರೆ. ಹೀಗೆ ವಿಚಾರಮಾಡಿ, ನಿನ್ನ ಪ್ರಜೆಗಳ ಮತ್ತು ನಿನ್ನ ಸ್ವಂತದ ಹಿತವನ್ನು ಗಮನದಲ್ಲಿಟ್ಟುಕೊ ಮತ್ತು ನಿಯಮಿತವಾದ ಯಜ್ಞವನ್ನು ಮಾಡಲಿಕ್ಕೆ ಒಪ್ಪಿಗೆಯನ್ನು ಕೊಡು. ಇದರಿಂದ ನಿನ್ನ ಕೀರ್ತಿಯು ಹೆಚ್ಚಾಗುವುದು.

ಆಗ ಅವನು ಹೀಗೆ ವಿಚಾರಮಾಡಿದನು: ಇಂತಹ ಸಲಹೆಗಾರರಲ್ಲಿ ವಿಶ್ವಾಸವನ್ನಿಟ್ಟಿರುವ ಅಸಹಾಯಕನಾದ ನಾನು ನಿಜವಾಗಿ ಬಹಳ ಅಸುರಕ್ಷಿತನಾಗಿದ್ದೇನೆ. ನಿಯಮಗಳನ್ನು ಶ್ರದ್ಧೆಯಿಂದ ನಂಬುತ್ತಿರುವ ಮತ್ತು ಪ್ರೀತಿಸುವ ನಾನು ಇನ್ನೊಬ್ಬರ ಮಾತುಗಳಲ್ಲಿ ವಿಶ್ವಾಸವಿಟ್ಟು ನನ್ನ ಸದ್ಗುಣವಾದ ಮೃದು ಹೃದಯದ ಅನುಕಂಪವನ್ನು ಬೇರು ಸಹಿತ ಕಿತ್ತೊಗೆಯಬೇಕಾಗಿದೆ. ಏಕೆಂದರೆ ಇದು ನಿಜ.

೯. ಜನರಲ್ಲಿ ಆಶ್ರಯದಾತರೆಂದು ಪ್ರಸಿದ್ಧರಾದವರೇ ಹಿಂಸೆಯನ್ನು ಮಾಡಲು ಬಯಸುತ್ತಾರೆ ಮತ್ತು ಅದಕ್ಕೆ ಧರ್ಮಶಾಸ್ತ್ರದಿಂದಲೇ ಆಧಾರಗಳನ್ನು ತೋರಿಸುತ್ತಾರೆ. ಅಯ್ಯೋ! ಅವರು ತೋರಿಸಿದ ತಪ್ಪು ಮಾರ್ಗವನ್ನು ಅನುಸರಿಸುವ ಮನುಷ್ಯನು ಇಕ್ಕಟ್ಟಿನಲ್ಲಿ ಸಿಕ್ಕಿಕೊಳ್ಳುತ್ತಾನೆ. ಏಕೆಂದರೆ ಅವನು ಪಾಪದಿಂದ ಆವರಿಸಲ್ಪಡುತ್ತಾನೆ.

೧೦. ನಿಜವಾಗಿ ಧರ್ಮ ಮತ್ತು ಪ್ರಾಣಿ ಹಿಂಸೆ ಇವುಗಳಲ್ಲಿ ಏನು ಸಂಬಂಧವಿರಬಹುದು? ದೇವಲೋಕದಲ್ಲಿಯ ನನ್ನ ವಾಸಕ್ಕೂ ಅಥವಾ ದೇವತೆಗಳ ಆರಾಧನೆಗೂ ಬಲಿಪಶುಗಳನ್ನು ಕೊಲ್ಲುವುದಕ್ಕೂ ಏನು ಸಂಬಂಧವಿರಬಹುದು?

೧೧-೧೨. ಪವಿತ್ರ ಮಂತ್ರಗಳು ಬಲಿಪಶುವನ್ನು ಗಾಯಗೊಳಿಸುವ ಅಷ್ಟೊಂದು ಈಟಿಗಳೋ

ಎಂಬಂತೆ ವಿಹಿತವಾದ ಸ್ತೋತ್ರಗಳನ್ನು ಹೇಳಿ ವಿಧಿ ಪ್ರಕಾರ ಕೊಲ್ಲಲ್ಪಟ್ಟ ಪ್ರಾಣಿಯು ಸ್ವರ್ಗಕ್ಕೆ ಹೋಗುವುದೆಂದು ಅವರು ಹೇಳುತ್ತಾರೆ ಮತ್ತು ಈ ಉದ್ದೇಶದಿಂದ ಅದು ಕೊಲ್ಲಲ್ಪಡುತ್ತದೆ. ಈ ರೀತಿಯಾಗಿ ಧರ್ಮಶಾಸ್ತ್ರಕ್ಕೆ ಅನುಗುಣವಾಗಿ ಆ ಕೃತಿಯನ್ನು (ಪ್ರಾಣಿ ಹಿಂಸೆಯನ್ನು) ವಿವರಿಸುತ್ತಾರೆ. ಆದರೂ ಇದು ಸುಳ್ಳು. ಏಕೆಂದರೆ ಒಬ್ಬನು ಇನ್ನೊಬ್ಬರು ಮಾಡಿದ ಕರ್ಮಗಳ ಫಲವನ್ನು ಪರಲೋಕದಲ್ಲಿ ಪಡೆಯುವುದು ಹೇಗೆ ಸಾಧ್ಯವಿದೆ? ಬಲಿಪಶು ತಾನು ದುಷ್ಟ ಕೃತಿಗಳಿಂದ ವಿಮುಖವಾಗದೇ ಇದ್ದರೂ, ಒಳ್ಳೆಯ ಕೃತಿಗಳನ್ನು ಮಾಡುವ ನಿಷ್ಠೆ ಇಲ್ಲದಿದ್ದರೂ ಕೇವಲ ಯಜ್ಞದಲ್ಲಿ ಕೊಲ್ಲಲ್ಪಟ್ಟ ಮಾತ್ರಕ್ಕೆ ಯಾವ ಯುಕ್ತಿಯಿಂದ ಸ್ವರ್ಗಕ್ಕೆ ಹೋಗುವುದು ಮತ್ತು ತನ್ನ ಸ್ವಂತ ಕೃತಿಗಳ ಬಲದಿಂದ ಹೋಗುವುದಿಲ್ಲವೆಂದು ಯಾವ ಯುಕ್ತಿಯಿಂದ ಹೇಳಬೇಕು?

೧೩. ಒಂದು ವೇಳೆ ಯಜ್ಞದಲ್ಲಿ ಕೊಲ್ಲಲ್ಪಟ್ಟ ಬಲಿಪಶು ನಿಜವಾಗಿಯೂ ಸ್ವರ್ಗಕ್ಕೆ ಹೋಗುವುದಾದರೆ, ಯಜ್ಞದಲ್ಲಿ ಬ್ರಾಹ್ಮಣರು ತಮ್ಮನ್ನೇ ಬಲಿಕೊಡಲಿ ಎಂದು ನಾವೇಕೆ ನಿರೀಕ್ಷಿಸಬಾರದು? ಆದರೆ ಇಂತಹ ರೂಢಿಯು ಅವರಲ್ಲಿ ಎಲ್ಲಿಯೂ ಕಂಡುಬರುವುದಿಲ್ಲ. ಅಂದಮೇಲೆ ಈ ಸಲಹೆಗಾರರ ಉಪದೇಶವನ್ನು ಯಾರು ಮನಸ್ಸಿಗೆ ತೆಗೆದುಕೊಳ್ಳುವರು?

೧೪. ದೇವತೆಗಳ ಬಗೆಗೆ ಹೇಳಬೇಕೆಂದರೆ, ಸುಂದರಿಯಾದ ಅಪ್ಸರೆಯರು ಬಡಿಸುವ ಅಸದೃಶವಾದ, ಸುಗಂಧಯುತವಾದ ಮಾಧುರ್ಯ ಮತ್ತು ಉತ್ಕೃಷ್ಟ ಪರಿಣಾಮಕಾರಿ ಶಕ್ತಿಯುಳ್ಳ ಉತ್ತಮ ಅಮೃತಪಾನ ಮಾಡುವ ರೂಢಿಯುಳ್ಳ ಅವರು ಅದನ್ನು ಬಿಟ್ಟುಕೊಟ್ಟು ದಯನೀಯ ಬಲಿಪಶುವಿನ ವಧೆಯಿಂದ ಸಂತೋಷ ಪಡುವರೆಂದು ನಾವು ನಂಬಬೇಕೇ? ಯಜ್ಞದಲ್ಲಿ ತಮಗೆ ಆಹುತಿಕೊಟ್ಟ ಪ್ರಾಣಿಯ ಉದರದಲ್ಲಿಯ ಜಠರ, ಚರ್ಮ ಮತ್ತು ದೇಹದ ಇತರ ಅವಯವಗಳಿಂದ ತೃಪ್ತರಾಗಿ ಸುಖ ಭೋಜನವನ್ನು ಮಾಡುವರೆಂದು ನಂಬಬೇಕೆ?

ಆದ್ದರಿಂದ ಹೀಗೆ ಹೀಗೆ ಮಾಡಲು ಪ್ರವೃತ್ತನಾಗುವುದಕ್ಕೆ ಇದು ಯೋಗ್ಯಸಮಯ. ಹೀಗೆ ತನ್ನ ಮನಸ್ಸಿನಲ್ಲಿ ನಿಶ್ಚಯಿಸಿ, ಅರಸು ಯಜ್ಞಮಾಡಲು ಉತ್ಸಕನಾಗಿರುವಂತೆ ನಟನೆ ಮಾಡಿದನು ಮತ್ತು ಅವರ ಮಾತಿಗೆ ಒಪ್ಪಿಗೆ ನೀಡುತ್ತಾ ಅವರಿಗೆ ಈ ರೀತಿ ಹೇಳಿದನು.

"ನನಗೆ ಸುಖ ಸಮೃದ್ಧಿಯನ್ನು ತಂದುಕೊಡುವುದಕ್ಕಾಗಿ ನಿರತರಾದ ನಿಮ್ಮಂತಹ ಪೂಜ್ಯರು ನನಗೆ ಸಲಹೆಗಾರರಾಗಿರುವುದರಿಂದ ನಾನು ನಿಜವಾಗಿಯೂ ಸುರಕ್ಷಿತನಾಗಿದ್ದೇನೆ ಮತ್ತು ಸಂತೃಪ್ತನಾಗಿದ್ದೇನೆ! ಆದ್ದರಿಂದ ನಾನು ಒಂದು ಪುರುಷಮೇಧವನ್ನು ಮಾಡುವೆನು. ಅದರಲ್ಲಿ ಒಂದು ಸಾವಿರ ನರಬಲಿಯನ್ನು ಕೊಡಬೇಕು. ತಮ್ಮ ತಮ್ಮ ಉದ್ಯೋಗದಲ್ಲಿ ತೊಡಗಿದ ನನ್ನ ಅಧಿಕಾರಿಗಳಿಗೆ ಈ ಉದ್ದೇಶಕ್ಕೆ ಬೇಕಾದ ಎಲ್ಲ ವಸ್ತುಗಳನ್ನೂ ಸಂಗ್ರಹಿಸಬೇಕೆಂದು ಆಜ್ಞೆ ಮಾಡಬೇಕು. ಈ ಸತ್ರಕ್ಕೆ ಬೇಕಾದ ಯಜ್ಞಶಾಲೆ ಮತ್ತು ಇತರ ಮಂಟಪಗಳನ್ನು ಕಟ್ಟಲಿಕ್ಕೆ ಅತ್ಯಂತ ಯೋಗ್ಯವಾದ ಭೂಮಿಯನ್ನು ಕುರಿತು ವಿಚಾರಿಸಬೇಕು. ಮತ್ತು (ಜ್ಯೋತಿಷಿಗಳ ಸಹಾಯದಿಂದ) ಶುಭಕರವಾದ ಚಂದ್ರಮಾನದ ತಿಥಿ, ಕರಣ, ಮುಹೂರ್ತ ಮತ್ತು ನಕ್ಷತ್ರಗಳನ್ನು ಪರೀಕ್ಷಿಸಿ ಯಜ್ಞಕ್ಕೆ ಉಚಿತ ಮುಹೂರ್ತವನ್ನು ನಿಶ್ಚಯಿಸಬೇಕು." ಪುರೋಹಿತನು ಉತ್ತರಿಸಿದನು: "ನೀನು ಕೈಕೊಂಡ ಕಾರ್ಯವು ಸಫಲವಾಗಬೇಕಾದರೆ, ಯಜ್ಞವು ಮುಗಿದ ಅನಂತರ ಮಹಾರಾಜರು ಅವಭೃತಸ್ನಾನವನ್ನು ಮಾಡಬೇಕು. ಅನಂತರ ಉಳಿದ ಕಾರ್ಯಗಳನ್ನು ಅನುಕ್ರಮವಾಗಿ ನೀವು ಮಾಡಬಹುದು. ಯಾಕೆಂದರೆ ಒಂದು ಸಾವಿರ ನರಪಶುಗಳನ್ನು ಒಮ್ಮೆಲೇ ಬಂಧಿಸಿದರೆ, ನಿಮ್ಮ ಪ್ರಜೆಗಳು ನಿಶ್ಚಿತವಾಗಿ ಅವರ ಸಲುವಾಗಿ ಬಹಳ ಕೆರಳುವರು." ಉಳಿದ ಬ್ರಾಹ್ಮಣರು ಪುರೋಹಿತನ ಈ ಮಾತುಗಳನ್ನು ಅನುಮೋದಿಸಿದರು. ಆಗ ರಾಜನು ಅಂದನು: "ಪೂಜ್ಯರೇ, ಜನರ ಕೋಪದ ಬಗ್ಗೆ ಹೆದರಬೇಡಿರಿ. ಪ್ರಜೆಗಳಲ್ಲಿ ಸಂಭವನೀಯ ಕೋಲಾಹಲವನ್ನು ತಡೆಗಟ್ಟಲು ನಾನು ಎಲ್ಲ ಕ್ರಮಗಳನ್ನು ಕೈಕೊಳ್ಳುವೆನು."

ಇದಾದ ಅನಂತರ ರಾಜನು ನಾಗರಿಕರ ಮತ್ತು ಜಾನಪದದ ಸಭೆಯನ್ನು ಕೂಡಿಸಿದನು ಮತ್ತು (ಅವರಿಗೆ) ಹೇಳಿದನು; "ಒಂದು ಸಾವಿರ ನರಬಲಿಯನ್ನು ಕೊಡಬೇಕಾದ ಒಂದು ಪುರುಷಮೇಧವನ್ನು ಮಾಡಲು ಬಯಸುತ್ತೇನೆ. ಆದರೆ, ನನ್ನ ದೃಷ್ಟಿಯಲ್ಲಿ, ಪ್ರಾಮಾಣಿಕವಾಗಿ ವರ್ತಿಸುವ ಯಾವನೂ ಬಲಿಪಶುವಾಗಲು ಯೋಗ್ಯನಿಲ್ಲ. ಇದನ್ನು ಮನಸ್ಸಿನಲ್ಲಿಟ್ಟುಕೊಂಡು, ನಾನು ನಿಮಗೆ ಈ ಉಪದೇಶವನ್ನು ಮಾಡುತ್ತೇನೆ. ಇನ್ನು ಮುಂದೆ ನಿಮ್ಮಲ್ಲಿ ಯಾರಾದರೂ ನನ್ನ ಆಜ್ಞೆಯನ್ನು ಮೀರಿ ನೈತಿಕ ವರ್ತನೆಯ ಮರ್ಯಾದೆಯನ್ನು ಉಲ್ಲಂಘಿಸಿರುವುದು ನನಗೆ ತಿಳಿದು ಬಂದರೆ ಅಂತಹ ವ್ಯಕ್ತಿಯು ತಮ್ಮ ಕುಲಕ್ಕೆ ಕಳಂಕ ಹಾಗೂ ನಮ್ಮ ದೇಶಕ್ಕೆ ಗಂಡಾಂತರಕಾರಿಯೆಂದು ಬಗೆದು ಅಂತಹ ವ್ಯಕ್ತಿಯನ್ನು ನನ್ನ ಯಜ್ಞಕ್ಕೆ ಬಲಿಪಶುವೆಂದು ಬಂಧಿಸಬೇಕೆಂದು ನಾನು ಆಜ್ಞಾಪಿಸುತ್ತೇನೆ. ಈ ನಿರ್ಣಯವನ್ನು ಕಾರ್ಯರೂಪಕ್ಕೆ ತರುವುದಕ್ಕಾಗಿ ತಪ್ಪುಗಳನ್ನು ಮಾಡದ ಮತ್ತು ತೀಕ್ಷ್ಣದೃಷ್ಟಿಯುಳ್ಳ ದೂತರನ್ನು ನಿಮ್ಮ ಮೇಲೆ ಗಮನವಿಡುವುದಕ್ಕಾಗಿ ನಿಯಮಿಸುತ್ತೇನೆ. ಅವರು ತಮ್ಮ ಅಜಾಗರೂಕತೆಯನ್ನು ಸಂಪೂರ್ಣವಾಗಿ ತೊರೆದು ನಿಮ್ಮ ನಡತೆಯನ್ನು ನನಗೆ ನಿವೇದಿಸುವರು."

ಆಗ ಸಭೆಯಲ್ಲಿ ಪ್ರಮುಖರು, ಕೈಗಳನ್ನು ಜೋಡಿಸಿ, ತಮ್ಮ ಹಣೆಯತ್ತ ಒಯ್ದು ಹೇಳಿದರು:

೧೫,೧೬. "ಮಹಾರಾಜಾ! ನಿನ್ನ ಎಲ್ಲ ಕೃತಿಗಳು ನಿನ್ನ ಪ್ರಜೆಗಳ ಹಿತದಲ್ಲಿಯೇ ಪರ್ಯವಸಾನ ಹೊಂದುತ್ತವೆ. ಅಂದ ಮೇಲೆ ನಿನ್ನನ್ನು ಕಡೆಗಣಿಸಲಿಕ್ಕೆ ಏನು ಕಾರಣವಿದೆ? ಬ್ರಹ್ಮದೇವನೂ ಸಹ ನಿನ್ನ ನಡತೆಯನ್ನು ಅನುಮೋದಿಸಲೇಬೇಕು. ಮಹಾರಾಜ, ಸದ್ಗುಣಗಳಿಗೆ ಪ್ರಭುವಾಗಿರುವ ನೀನು, ನಮಗೂ ಸರ್ವೋತ್ತಮ ಪ್ರಭುವಾಗಿರಬೇಕು. ಆದ್ದರಿಂದ ಯಾವುದು ಮಹಾರಾಜರನ್ನು ಸಂತೋಷಪಡಿಸುವುದೋ, ಅದು ನಮ್ಮನ್ನೂ ಸಂತೋಷಪಡಿಸಬೇಕು. ನಿಜವಾಗಿಯೂ ನಮ್ಮ ಸುಖ ಮತ್ತು ಹಿತವನ್ನು ಬಿಟ್ಟು ಬೇರೆ ಯಾವುದರಿಂದಲೂ ನಿನಗೆ ಸಂತೋಷವಾಗುವುದಿಲ್ಲ."

ಆಮೇಲೆ, ನಾಗರಿಕ ಮತ್ತು ಜಾನಪದ ಪ್ರಮುಖರು ಈ ರೀತಿ ಅವನ ಆಜ್ಞೆಯನ್ನು ಸ್ವೀಕರಿಸಿದರು. ರಾಜನು ತನ್ನ ನಗರಗಳು ಮತ್ತು ರಾಜ್ಯದಲ್ಲೆಲ್ಲ ಕಡೆ ದುಷ್ಟರನ್ನು ಬಂಧಿಸುವ ಅಧಿಕಾರವುಳ್ಳ ಇಂತಹ ವೇಷ ಧರಿಸಿದವರೆಂದು ಜನರಿಗೆ ತಿಳಿಯಪಡಿಸಿದ ಅಧಿಕಾರಿಗಳನ್ನು ಕಳಿಸಿದನು ಮತ್ತು ಎಲ್ಲ ಕಡೆಗೆ ದಿನ ದಿನವೂ ಹಲಗೆಗಳನ್ನು ಬಾರಿಸಿ ಈ ರೀತಿ ಘೋಷಣೆಯನ್ನು ಮಾಡಬೇಕೆಂದು ಆಜ್ಞಾಪಿಸಿದನು.

೧೭. ರಕ್ಷಣೆಯ ಹೊಣೆಯನ್ನು ಹೊತ್ತ ಮಹಾರಾಜನು ಪ್ರಾಮಾಣಿಕತೆ ಮತ್ತು ಸದಾಚಾರವನ್ನು ನಿತ್ಯವೂ ಬೆಳೆಸಿಕೊಳ್ಳುವವರಿಗೆಲ್ಲ ಅಂದರೆ ಸದ್ಗುಣಿಗಳಿಗೆಲ್ಲ ಸುರಕ್ಷಿತತೆಯ ಭರವಸೆಯನ್ನು ಕೊಡುತ್ತಾನೆ. ಆದರೆ ತನ್ನ ಪ್ರಜೆಗಳ ಹಿತಕ್ಕಾಗಿ ನರಮೇಧವನ್ನು ಮಾಡಬೇಕೆಂದು ಇಚ್ಛಿಸುವ ಅವನು ಅಯೋಗ್ಯ ವರ್ತನೆಯಲ್ಲಿ ಆಸಕ್ತಿಯುಳ್ಳವರೊಳಗಿಂದ ಸಾವಿರಾರು ಜನರನ್ನು ಬಲಿಪಶುಗಳಾಗಿಸಬೇಕೆಂದು ಬಯಸುತ್ತಾನೆ.

೧೮. ಆದ್ದರಿಂದ ಇಂದಿನಿಂದ ಯಾರು ವಿಷಯ ಲಂಪಟರಾಗಿ ಅಡ್ಡ ದಾರಿಯನ್ನು ಹಿಡಿಯುವರೋ ರಾಜರೂ, ಸಾಮಂತರೂ ಪಾಲಿಸುವ ನಮ್ಮ ಮಹಾರಾಜನ ಆಜ್ಞೆಯನ್ನು ತಿರಸ್ಕರಿಸುವರೋ ಅವರನ್ನು ತಾವು ಮಾಡಿದ ತಪ್ಪು ಕೃತ್ಯಗಳ ಪರಿಣಾಮವಾಗಿ ಯಜ್ಞಪಶುವೆಂದು ಹಿಡಿದು ರಾಜನ ಹತ್ತಿರ ತರಲಾಗುವುದು ಮತ್ತು ಅವರ ದೇಹವು ಯಜ್ಞಸ್ತಂಭಕ್ಕೆ ಕಟ್ಟಲ್ಪಟ್ಟು ನೋವಿನಿಂದ ಅವರು ದುಃಖಪಡುತ್ತಿರುವಾಗ ಅವನ ಸಂಕಟಕರ ಗೋಳಾಟವನ್ನು ಜನರು ನೋಡುವರು.

ತಮ್ಮ ಮಹಾರಾಜನು ತಾನು ಮಾಡುವ ನರಮೇಧದಲ್ಲಿ ಬಲಿಪಶುಗಳನ್ನಾಗಿ ಮಾಡಬೇಕೆಂಬ ಉದ್ದೇಶದಿಂದ ದುಷ್ಟರನ್ನು ಲಕ್ಷ್ಯಗೊಟ್ಟು ಹುಡುಕಿಸುತ್ತಿದ್ದಾನೆಂದು ಆ ರಾಜ್ಯದ ನಿವಾಸಿಗಳಿಗೆ ತಿಳಿದಾಗ

ಅವರು ದುಷ್ಟ ನಡತೆಯಲ್ಲಿಯ ತಮ್ಮ ಆಸಕ್ತಿಯನ್ನು ತ್ಯಜಿಸಿದರು. ಯಾಕೆಂದರೆ ಅವರು ಪ್ರತಿನಿತ್ಯ ರಾಜನ ಆ ಬಹು ಭೀಕರ ಘೋಷಣೆಯನ್ನು ಕೇಳಿದರು ಮತ್ತು ಎಲ್ಲೆಡೆಗೆ ಮೇಲಿಂದ ಮೇಲೆ ದುಷ್ಟರನ್ನು ಹುಡುಕುವುದಕ್ಕಾಗಿ ಮತ್ತು ಅವರನ್ನು ಬಂಧಿಸುವುದಕ್ಕಾಗಿ ನಿಯಮಿಸಲ್ಪಟ್ಟ ರಾಜನ ಸೇವಕರನ್ನು ಕಂಡರು. ಮತ್ತು ನೀತಿ ನಿಯಮಗಳನ್ನು ಮತ್ತು ಆತ್ಮ ನಿಗ್ರಹವನ್ನು ತಪ್ಪದೇ ಪಾಲಿಸತೊಡಗಿದರು. ದ್ವೇಷ ಮತ್ತು ವೈರದ ಎಲ್ಲ ಪ್ರಸಂಗಗಳನ್ನೂ ತಪ್ಪಿಸಿದರು. ತಮ್ಮಲ್ಲಿಯ ಜಗಳ ಮತ್ತು ಭಿನ್ನಾಭಿಪ್ರಾಯಗಳನ್ನು ಪರಿಹರಿಸಿಕೊಂಡರು. ಪರಸ್ಪರ ಪ್ರೇಮ ಮತ್ತು ಪರಸ್ಪರ ಗೌರವಗಳನ್ನು ಬೆಳೆಸಿಕೊಂಡರು. ತಂದೆತಾಯಿಗಳು ಮತ್ತು ಗುರುಗಳ ವಚನಗಳನ್ನು ಪಾಲಿಸುವುದು, ಔದಾರ್ಯ ಮತ್ತು ಇತರರೊಂದಿಗೆ ಪಾಲುಗೊಳ್ಳುವ ಸಾಮಾನ್ಯ ಸ್ವಭಾವ, ಆತಿಥ್ಯ, ಸದಾಚಾರ ವಿನಯಶೀಲತೆಯಂತಹ ಗುಣಗಳು ಅವರಲ್ಲಿ ನೆಲೆಗೊಂಡವು. ಸಂಕ್ಷೇಪವಾಗಿ, ಕೃತಯುಗದಲ್ಲಿ ಇದ್ದಂತೆ ಅವರು ಇರತೊಡಗಿದರು.

೧೯. ಮರಣದ ಭಯವು ಅವರಲ್ಲಿ ಪರಲೋಕದ ವಿಚಾರಗಳನ್ನು ಜಾಗೃತಗೊಳಿಸಿತು. ತಮ್ಮ ವಂಶಗಳ ಗೌರವಕ್ಕೆ ಕುಂದು ಉಂಟಾಗುವುದೆಂಬ ಗಂಡಾಂತರವು ತಮ್ಮ ಕೀರ್ತಿಯ್ನು ರಕ್ಷಿಸಿಕೊಳ್ಳಬೇಕೆಂಬ ಜಾಗೃತಿಯನ್ನು ಅವರಲ್ಲಿ ಉಂಟುಮಾಡಿತು. ಅವರ ಹೃದಯದ ಪರಿಶುದ್ಧತೆಯು ಅವರ ಲಜ್ಜೆಯ ಭಾವನೆಯನ್ನು ದೃಢಗೊಳಿಸಿತು. ಈ ಅಂಶಗಳು ಕಾರ್ಯ ಮಾಡತೊಡಗಿದಂತೆ ಜನರು ನಿಷ್ಕಲಂಕ ವರ್ತನೆಯಿಂದ ಹೆಸರು ಪಡೆದರು.

೨೦. ಪ್ರತಿಯೊಬ್ಬನಿಗೂ ನಿರೀಕ್ಷೆಗಿಂತ ಹೆಚ್ಚು ಸದಾಚಾರವುಳ್ಳವನಾದರೂ ರಾಜನ ಸೇವಕರು ದುಷ್ಟರ ಶೋಧನೆಯ ತಮ್ಮ ಜಾಗರೂಕತೆಯನ್ನು ಸಡಿಲಗೊಳಿಸಲಿಲ್ಲ. ಇದೂ ಸಹ ಜನರ ಸದಾಚಾರದಿಂದ ಹಿನ್ನಡೆಯದಂತೆ ತಡೆಯಲು ಸಹಕಾರಿಯಾಯಿತು.

೨೧. ತನ್ನ ದೂತರಿಂದ ತನ್ನ ರಾಜ್ಯದಲ್ಲಿಯ ಈ ಸ್ಥಿತಿಗತಿಗಳನ್ನು ತಿಳಿದುಕೊಂಡು ಮಹಾರಾಜನು ಬಹಳ ಸಂತೋಷಪಟ್ಟನು. ತನಗೆ ಒಳ್ಳೆಯ ವಾರ್ತೆಯನ್ನು ತಂದು ಹೇಳಿದ ದೂತರಿಗೆ ಬೆಲೆಯುಳ್ಳ ಬಹುಮಾನಗಳನ್ನು ಕೊಟ್ಟನು ಮತ್ತು ತನ್ನ ಮಂತ್ರಿಗಳಿಗೆ ಆಜ್ಞಾಪಿಸುತ್ತ ಹೀಗೆ ಹೇಳಿದನು:

೨೨–೨೪. "ನನ್ನ ಪ್ರಜೆಗಳ ರಕ್ಷಣೆಯೇ ನನ್ನ ಹಿರಿಯ ಇಚ್ಛೆ ಎಂಬುದು ನಿಮಗೆ ಗೊತ್ತಿದೆ. ಈಗ, ಯಜ್ಞದ ಅಂಗವಾದ ದಾನಗಳನ್ನು ಸ್ವೀಕರಿಸಲು ಅವರು ಅರ್ಹರಾಗಿದ್ದಾರೆ ಮತ್ತು ನಾನು ಮಾಡಬೇಕೆಂದಿರುವ ಯಜ್ಞಕ್ಕಾಗಿ ಈ ಧನವನ್ನೆಲ್ಲ ಮೀಸಲಾಗಿಟ್ಟಿದ್ದೇನೆ. ಸರಿ ನಾನು ಯೋಗ್ಯವಾದದ್ದೆಂದು ತಿಳಿದುಕೊಂಡ ರೀತಿಯಲ್ಲಿ ಯಜ್ಞವನ್ನು ಪೂರ್ಣಮಾಡಲು ನಾನು ಇಚ್ಛಿಸುತ್ತೇನೆ. ತನ್ನ ಸುಖ ಭೋಗಕ್ಕೆ ಹಣವು ಸಾಧನವೆಂದು ಅದನ್ನು ಬಯಸುವ ಪ್ರತಿಯೊಬ್ಬನು ಬರಲಿ ಮತ್ತು ನನ್ನ ಕೈಯಿಂದ ತನಗೆ ತೃಪ್ತಿಯಾಗುವಷ್ಟು ಸ್ವೀಕರಿಸಲಿ. ಈ ರೀತಿ ನಮ್ಮ ದೇಶವನ್ನು ಕಾಡುತ್ತಿರುವ ದುಃಖ ಮತ್ತು ದಾರಿದ್ರ್ಯಗಳು ಹೊರಹಾಕಲ್ಪಡಬಹುದು. ಸತ್ಯವಾಗಿ ನನ್ನ ಪ್ರಜೆಗಳನ್ನು ರಕ್ಷಿಸಬೇಕು ಎಂಬ ನನ್ನ ದೃಢನಿರ್ಧಾರವನ್ನು ವಿಮರ್ಶಿಸಿದಾಗ ಮತ್ತು ಈ ಕಾರ್ಯದಲ್ಲಿ ನನ್ನ ಅತ್ಯುತ್ತಮ ಸಹಾಯಕರಾದ ನಿಮ್ಮಿಂದ ನಾನು ಪಡೆಯುವ ಉತ್ತಮ ಸಹಾಯವನ್ನು ನೆನೆದಾಗ ನನಗೆ ನನ್ನ ಜನರ ಈ ಗೋಳಾಟಗಳು ನನ್ನ ಕೋಪವನ್ನು ಬಡಿದೆಬ್ಬಿಸಿ ನನ್ನ ಮನಸ್ಸಿನಲ್ಲಿ ಧಗಧಗಿಸುವ ಜ್ವಾಲೆಯಂತೆ ಸುಡುತ್ತಿವೆಯೇನೋ ಎಂದು ಭಾಸವಾಗುತ್ತದೆ."

ಮಂತ್ರಿಗಳು ಮಹಾರಾಜನ ಆಜ್ಞೆಯನ್ನು ಸ್ವೀಕರಿಸಿದರು ಮತ್ತು ಕೂಡಲೇ ಅದನ್ನು ಕಾರ್ಯಗತಗೊಳಿಸಲು ಹೊರಟರು. ಎಲ್ಲ ಹಳ್ಳಿಗಳಲ್ಲಿ, ಪಟ್ಟಣಗಳಲ್ಲಿ ಮತ್ತು ಪೇಟೆಗಳಲ್ಲಿ ಅದರಂತೆ ರಾಜಮಾರ್ಗದಲ್ಲಿಯ ಎಲ್ಲ ವಿಶ್ರಾಂತಿ ಸ್ಥಾನಗಳಲ್ಲಿ ಧರ್ಮಶಾಲೆಗಳನ್ನು ಸ್ಥಾಪಿಸಲು ಅವರು ಆಜ್ಞೆ ಮಾಡಿದರು. ಇದಾದ ಅನಂತರ

ಮಹಾರಾಜನ ಆಜ್ಞೆಯ ಪ್ರಕಾರ ತಮ್ಮ ಬೇಡಿಕೆಗಳನ್ನು ಪೂರ್ಣಮಾಡಬೇಕೆಂದು ಕೇಳಿ ಕೊಂಡವರಿಗೆಲ್ಲ ಆ ವಸ್ತುಗಳನ್ನು ದಿನ ದಿನವೂ ಕಾಣಿಕೆಯಾಗಿ ಕೊಡಿಸಹತ್ತಿದರು.

೨೫. ಹೀಗೆ ದಾರಿದ್ರ್ಯವು ಅದೃಶ್ಯವಾಯಿತು ಮತ್ತು ಜನರು ಮಹಾರಾಜನ ಭಾಗದ ಸಂಪತ್ತನ್ನು ಪಡೆದು ವಿವಿಧ ರೀತಿಯ ಮತ್ತು ಉತ್ತಮವಾದ ಬಟ್ಟೆಗಳನ್ನು ತೊಟ್ಟುಕೊಂಡರು. ಆಭರಣಗಳಿಂದ ಅಲಂಕರಿಸಿಕೊಂಡರು. ಉತ್ಸವದ ದಿನಗಳ ಶೋಭೆಯನ್ನು ಪ್ರದರ್ಶಿಸಿದರು.

೨೬. ಅವನ ದಾನಗಳನ್ನು ಸ್ವೀಕರಿಸಿ ಸಂತುಷ್ಟರಾದ ಪ್ರಜೆಗಳ ಸ್ತುತಿಗಳಿಂದ ವರ್ಧಿಸಿದ ಮಹಾರಾಜನ ಕೀರ್ತಿಯು, ಸರೋವರದ ಚಿಕ್ಕ ಚಿಕ್ಕ ತೆರೆಗಳಿಂದ ಹೊತ್ತೊಯ್ಯಲ್ಪಟ್ಟ ಕಮಲಗಳ ಪರಾಗವು ಸರೋವರ ನೀರಿನ ಮೇಲ್ಪಾತಳಿಯಲ್ಲಿ ದೂರ ದೂರ ಹರಡುವಂತೆ, ಎಲ್ಲ ದಿಕ್ಕುಗಳಲ್ಲಿ ಒಂದೇ ರೀತಿಯಾಗಿ ಹರಡಿತು.

೨೭. ಮಹಾರಾಜನು ಕೈಕೊಂಡ ವಿವೇಕದ ಕ್ರಮಗಳ ಪರಿಣಾಮವಾಗಿ, ಎಲ್ಲ ಪ್ರಜೆಗಳೂ ಶ್ರದ್ಧೆಯಿಂದ ಸದಾಚಾರವನ್ನು ಅನುಸರಿಸತೊಡಗಿದ ಅನಂತರ ಅಭಿವೃದ್ಧಿಗೆ ಪೋಷಕವಾದ ಗುಣಗಳ ಬೆಳವಣಿಗೆಯಿಂದ ಕಂಗೆಟ್ಟು, ಆಶ್ರಯಸ್ಥಾನವಿಲ್ಲದೆ ರೋಗಗಳು ಮತ್ತು ವಿಪತ್ತುಗಳು ಬಾಡಿ ನಶಿಸಿಹೋದವು.

೨೮. ತಮ್ಮ ನಿಯಮಿತತನದಿಂದ ಪ್ರತಿಯೊಬ್ಬನನ್ನೂ ಸಂತೋಷಪಡಿಸುತ್ತಾ ಮತ್ತು ಹೊಸದಾಗಿ ಅಭಿಷಿಕ್ತನಾದ ರಾಜನಂತೆ ವಸ್ತುಗಳ ನಿಸರ್ಗ ನಿಯಮವನ್ನು ಪಾಲಿಸುತ್ತಾ ಋತುಗಳು ಅನುಕ್ರಮವಾಗಿ ಕಾಲಕ್ರಮದಲ್ಲಿ ಬರತೊಡಗಿದವು. ಇದರ ಪರಿಣಾಮವಾಗಿ ಭೂಮಿಯು ಅನೇಕ ಧಾನ್ಯಗಳನ್ನು ಹುಲುಸಾಗಿ ಬೆಳೆಸಿತು ಮತ್ತು ಎಲ್ಲ ಜಲಾಶಯಗಳಲ್ಲಿ ಸ್ವಚ್ಛ ಮತ್ತು ನೀಲವರ್ಣದ ನೀರು ಮತ್ತು ಕಮಲಗಳು ತುಂಬಿದುವು.

೨೯. ಸಾಂಕ್ರಾಮಿಕ ರೋಗಗಳು ಜನರನ್ನು ಬಾಧಿಸುವುದಿಲ್ಲ. ಔಷಧೀಯ ಸಸ್ಯಗಳು ತಮ್ಮ ಗುಣಕಾರಿ ಸಾಮರ್ಥ್ಯವನ್ನು ಎಂದಿಗಿಂತ ಹೆಚ್ಚಾಗಿ ಪಡೆದವು. ಮಳೆ ಗಾಳಿಗಳು ಸರಿಯಾದ ಸಮಯದಲ್ಲಿ ನಿಯಮಿತವಾಗಿ ಬೀಸುತ್ತಿದ್ದವು. ಗ್ರಹಗಳು ಮಂಗಳಕರ ಪಥದಲ್ಲಿ ಚಲಿಸುತ್ತಿದ್ದವು.

೩೦. ಹೊರಗಿನಿಂದಾಗಲೀ, ಒಳಗಿನಿಂದಾಗಲೀ ಅಥವಾ (ಪಂಚ) ಮಹಾಭೂತಗಳ ಅಪಾಯಕಾರಕ ಅವ್ಯವಸ್ಥೆಯಿಂದ ಉಂಟಾಗಬಹುದಾದ ಗಾಬರಿಗೆ ಕಾರಣವಾದ ಅನರ್ಥಗಳು ಎಲ್ಲಿಯೂ ಇರಲಿಲ್ಲ. ಧಾರ್ಮಿಕ ನಡತೆ ಮತ್ತು ಇಂದ್ರಿಯ ನಿಗ್ರಹಗಳನ್ನು ಮುಂದುವರಿಸಿಕೊಂಡು ಸದಾಚಾರ ಮತ್ತು ವಿನಯಶೀಲತೆಗಳನ್ನು ಬೆಳೆಸಿಕೊಳ್ಳುತ್ತ ಆ ರಾಜ್ಯದ ಜನರು ಕೃತಯುಗದ ಸೌಕರ್ಯಗಳೆಂಬಂತೆ ಸುಖವನ್ನು ಅನುಭವಿಸುತ್ತಿದ್ದರು.

ಶಾಸ್ತ್ರೋಕ್ತ ನಿಯಮಗಳಿಗೆ ಅನುಸಾರವಾಗಿ ರಾಜನು ನಡೆಸಿದ ಇಂಥ ಯಜ್ಞದ ಬಲದಿಂದ ದೀನದರಿದ್ರರ ಸಂಕಟಗಳನ್ನು ಕೊನೆಗೊಳಿಸಲಾಯಿತು. ಹಾಗೆಯೇ ರೋಗರುಜಿನಗಳೂ ವಿಪತ್ತುಗಳೂ ಕೊನೆಗೊಂಡವು. ದೇಶವು ಸಮೃದ್ಧಿಯಿಂದ ಕೂಡಿದ ಸೌಭಾಗ್ಯವಂತ ಜನರಿಂದ ತುಂಬಿಕೊಂಡಿತು. ಹೀಗಾಗಿ ಜನರು ತಮ್ಮ ರಾಜನನ್ನು ಬೇಸರವಿಲ್ಲದೆ ಹಾಡಿ ಹರಸಿದರು ಮತ್ತು ಅವನ ಕೀರ್ತಿಯನ್ನು ದಿಗ್ದೆಸೆಗಳಿಗೆ ಹರಡಿದರು.

ಒಂದು ದಿನ ಹೃದಯದಲ್ಲಿ ನಿಜವಾದ ಧರ್ಮವನ್ನು ನಂಬಿದ ರಾಜನ ಅತ್ಯುಚ್ಚ ಅಧಿಕಾರಿಗಳಲ್ಲಿ ಒಬ್ಬನು ರಾಜನಿಗೆ ಹೀಗೆ ಹೇಳಿದನು. "ನಿಜವಾಗಿ ಇದೊಂದು ಸತ್ಯೋಕ್ತಿಯಾಗಿದೆ."

೩೧. "ಮಹಾರಾಜರುಗಳು ಉತ್ತಮ, ಅಧಮ ಮತ್ತು ಮಧ್ಯಮ ರೀತಿಯ ಎಲ್ಲ ವ್ಯವಹಾರಗಳನ್ನು ನಿರ್ವಹಿಸುತ್ತಿರುವುದರಿಂದ ಅವರ ಯಾವುದೇ ಪ್ರಾಜ್ಞರಿಗಿಂತ ಮಿಗಿಲಾದ ವಿವೇಕಿಗಳಾಗಿರುತ್ತಾರೆ."

"ಮಹಾರಾಜ, ಇದಕ್ಕೆ ಕಾರಣವೆಂದರೆ ನೀನು ಪ್ರಾಣಿ ಹತ್ಯೆಯ ಪಾಪದ ಅಪವಾದವಿಲ್ಲದೇ ಆಚರಿಸಿದ ಯಜ್ಞದ ಬಲದಿಂದ ಇಹಲೋಕ ಮತ್ತು ಪರಲೋಕ, ಇವೆರಡರಲ್ಲೂ ನಿನ್ನ ಪ್ರಜೆಗಳಿಗೆ ಆನಂದವನ್ನು ತಂದಿರುತ್ತೀಯೆ. ಜನರಲ್ಲಿ ನಿನ್ನ ಸದ್ವರ್ತನೆಯ ಉಪದೇಶ ಸ್ಥಿರವಾಗಿ ನೆಲೆಸಿರುವುದರಿಂದ ಇನ್ನು ಕಷ್ಟದ ದಿನಗಳು ಮುಗಿದವು ಮತ್ತು ದಾರಿದ್ರ್ಯದ ಸಂಕಟಗಳು ಮುಗಿದುಹೋದವು. ಬಹಳ ಮಾತಿಂದೇನು? ನಿನ್ನ ಪ್ರಜೆಗಳು ಸುಖದಿಂದಿದ್ದಾರೆ."

೩೨. "ನಿನ್ನ ಅಂಗಾಂಗಗಳನ್ನು ಮುಚ್ಚಿಕೊಂಡಿರುವ ಕೃಷ್ಣ ಮೃಗದ ಚರ್ಮವು ಹೊಳೆಯುವ ಚಂದ್ರನ ಮೈಯ ಮೇಲಿರುವ ಕಲೆಗಳಂತೆ ಕಾಣುತ್ತದೆ. ನೀನು ದೀಕ್ಷಿತನಾಗಿರುವುದರಿಂದ ಬರಬಹುದಾದ ಪ್ರತಿಬಂಧಗಳು ನಿನ್ನ ನಡತೆಯ ಸಹಜ ಸೌಂದರ್ಯವನ್ನು ನಿಗ್ರಹಿಸಲಾರವು. ದೀಕ್ಷೆಯ ನಿಯಮಗಳಿಗೆ ಹಾಕಿಕೊಂಡಿರುವ ನಿನ್ನ ಶಿರೋವಸ್ತ್ರವು ರಾಜ ಛತ್ರಕ್ಕೆ ಸಮಾನವಾಗಿ ನಿನ್ನ ತಲೆಯಲ್ಲಿ ಶೋಭಿಸುತ್ತದೆ. ಕೊನೆಯದಾಗಿ, ನಿನ್ನ ಉದಾರ ದಾನಗಳಿಂದ ನಿನ್ನ ಕೀರ್ತಿ ಗೌರವಗಳು ನೂರು ಯಜ್ಞಗಳನ್ನು ನೆರವೇರಿಸಿದ ಮಹಾಮಹಿಮನಿಗಿಂತ ಮಿಗಿಲಾಗಿವೆ."

೩೩. "ವಿವೇಕಿಯಾದ ಮಹಾರಾಜನೇ, ಸಾಮಾನ್ಯವಾಗಿ ಯಜ್ಞಗಳನ್ನು ಜನರು ಯಾವುದಾದರೂ ಇಷ್ಟಾರ್ಥಗಳ ಪೂರ್ತಿಗಾಗಿ ನೆರವೇರಿಸುತ್ತಾರೆ. ಆದರೆ ಜೀವಂತ ಪ್ರಾಣಿಗಳಿಗೆ ಹಿಂಸೆಯನ್ನು ಕೊಡುವುದರಿಂದ ಅವು ಅನಿಷ್ಟಗಳೆನಿಸುವವು. ತದ್ವಿರುದ್ಧವಾಗಿ, (ಅಹಿಂಸಾತ್ಮಕವಾಗಿರುವ) ನಿನ್ನ ಯಜ್ಞವು ನಿನ್ನ ಮನೋಹರವಾದ ನಡತೆ ಮತ್ತು ದುರ್ಗುಣ ದೂರತೆಗೆ ಅನುಗುಣವಾಗಿದ್ದು ನಿನ್ನ ಅತಿಶಯ ಕೀರ್ತಿಗೆ ಸಾಕ್ಷಿಯಾಗಿದೆ."

೩೪. "ನಿನ್ನನ್ನು ರಕ್ಷಕನನ್ನಾಗಿ ಪಡೆದ ಪ್ರಜೆಗಳು ನಿಜವಾಗಿ ಧನ್ಯರು."

ಇನ್ನೊಬ್ಬನು ಹೇಳಿದನು:

೩೫. "ಶ್ರೀಮಂತರು ದಾನ ಮಾಡಿದರೆ ಸಾಮಾನ್ಯವಾಗಿ ಅದರಿಂದುಂಟಾಗುವ ಲಾಭಗಳ ಆಸೆಯಿಂದ ಹಾಗೆ ಮಾಡುತ್ತಾರೆ. ಸದ್ವರ್ತನೆಯ ಮಾತೂ ಹಾಗೆಯೇ. ಅದು (ಇತರ) ಮನುಷ್ಯರಿಂದ ಮನ್ನಣೆ ಪಡೆಯಬೇಕೆಂಬ ಬಯಕೆಯಿಂದ ಹುಟ್ಟಿರಬಹುದು ಅಥವಾ ಮರಣಾನಂತರ ಸ್ವರ್ಗವನ್ನು ಸೇರಬೇಕೆಂಬ ಬಯಕೆಯಿಂದ ಹುಟ್ಟಿರಬಹುದು. ಆದರೆ ನಿನ್ನಂತೆ ಪರ ಹಿತವನ್ನು ಸಾಧಿಸುವ ನಿಷ್ಪಾತತೆಯು ಕೇವಲ ಜ್ಞಾನ ಮತ್ತು ಸದ್ಗುಣ ಪರಿಶ್ರಮಗಳೆರಡನ್ನೂ ಸಾಧಿಸಿದ ಜನರಲ್ಲಿ ಮಾತ್ರ ಕಂಡುಬರುವುದು. ಹೀಗೆ ಯಾರ ಹೃದಯವು ಪರಿಶುದ್ಧವಾಗಿದೆಯೋ ಅವರು ಮಾತ್ರ ದುಷ್ಟರ ಸೆಳೆತಕ್ಕೆ ಸಿಗುವುದಿಲ್ಲ. ಇದನ್ನು ತಿಳಿದುಕೊಂಡು ಹೃದಯ ಪರಿಶುದ್ಧಿಗಾಗಿ ಪ್ರಯತ್ನಿಸಬೇಕು."

(ರಾಜಕುಮಾರಿಗೆ ಹೇಳಿಕೊಡುವ ಆಧ್ಯಾತ್ಮಿಕ ಪಾಠಗಳಲ್ಲಿ ಇದನ್ನು ಕೂಡ ಹೇಳಬೇಕು. "ಯಾವನು ತನ್ನ ಪ್ರಜೆಗಳ ಹಿತವನ್ನು ಬಯಸಿ ಸ್ವಯಂ ಪರಿಶ್ರಮಿಸುತ್ತಾನೋ ಅವನು ಮೋಕ್ಷವನ್ನೂ, ಕೀರ್ತಿಯನ್ನೂ, ಸುಖ ಸಂತೋಷಗಳನ್ನೂ ತರುತ್ತಾನೆ. ರಾಜನಿಗೆ ಅದಕ್ಕಿಂತ ಭಿನ್ನವಾದ ಕರ್ತವ್ಯವಿಲ್ಲ."

ಅಲ್ಲದೇ, ಇಲ್ಲಿ ಇದನ್ನು ಹೇಳಬೇಕು: "ಪ್ರಾಣಿಗಳನ್ನು ಹಿಂಸಿಸುವುದು ಎಂದೂ ಪರಮ ಸುಖವನ್ನು ತರುವುದಿಲ್ಲ. ಆದರೆ ದಾನ, ಸಂಯಮ, ಬ್ರಹ್ಮಚರ್ಯ ಮತ್ತಿತರ ಗುಣಗಳು ಇಂಥ ಶಕ್ತಿಯನ್ನು ಹೊಂದಿವೆ. ಈ ಕಾರಣಕ್ಕಾಗಿ, ಪರಮ ಸುಖವನ್ನು ಬಯಸುವವನು ಇಂಥ ಸದ್ಗುಣಗಳಿಗೆ ತನ್ನನ್ನು ಸಮರ್ಪಿಸಿಕೊಳ್ಳಬೇಕು." ತಥಾಗತನ ಬಗ್ಗೆ ವ್ಯಾಖ್ಯಾನ ಮಾಡುತ್ತ "ಈ ರೀತಿ ಭಗವಾನನು ತನ್ನ ಪೂರ್ವಜನ್ಮಗಳಲ್ಲಿರುತ್ತಿರುವಾಗಲೇ ಲೋಕಕಲ್ಯಾಣದ ಕಡೆಗೆ ತನಗಿರುವ ಒಲವನ್ನು ತೋರಿಸಿದನು."

# IV

'ಕುಟದಂತ ಸುತ್ತ' ಎಂಬ ಒಂದು ಪ್ರವಚನದಲ್ಲಿ ಯಜ್ಞದ ವಿರುದ್ಧ ಅವನ ಇನ್ನೊಂದು ಪ್ರಭಾವಶಾಲಿಯಾದ ಆಕ್ರಮಣವಿದೆ. ಅದು ಹೀಗಿದೆ:

## ಸರಿಯಾದ ಯಜ್ಞ ಮತ್ತು ತಪ್ಪು ಯಜ್ಞ

೧. ಒಮ್ಮೆ ಅನುಗ್ರಹೀತನು ಸುಮಾರು ಐನೂರು ಜನರಿಂದ ಕೂಡಿದ ತನ್ನ ವಿಶಾಲ ಬಳಗದೊಂದಿಗೆ ಮಗಧ ದೇಶದ ಮೂಲಕ ಸಂಚರಿಸುತ್ತಾ, ಮಗಧದಲ್ಲಿ ಖನುಮತ ಎಂದು ಪ್ರಸಿದ್ಧವಾಗಿರುವ ಒಂದು ಅಗ್ರಹಾರಕ್ಕೆ ಬಂದು ಅಲ್ಲಿಯೇ ಇರುವ ಅಂಬಲತ್ತಿಕಾ ಎಂಬ ವಿಹಾರದಲ್ಲಿ ಬೀಡು ಬಿಟ್ಟನು.

ಅದೇ ಸಮಯದಲ್ಲಿ ಕುಟದಂತ ಎಂಬ ಬ್ರಾಹ್ಮಣನು ಖನುಮತದಲ್ಲಿ ವಾಸಿಸುತ್ತಿದ್ದನು. ಆ ಪ್ರದೇಶವು ಹಚ್ಚ ಹಸಿರಿನಿಂದಲೂ ವನರಾಶಿಯಿಂದಲೂ ಮತ್ತು ಜಲ, ದವಸ ಧಾನ್ಯಗಳಿಂದಲೂ ಕೂಡಿತ್ತು. ಅದು ಸೇನಿಯ ಬಿಂಬಸಾರನಿಂದ ಕುಟದಂತನಿಗೆ ರಾಜಕಾಣಿಕೆಯಾಗಿ ಕೊಡಲ್ಪಟ್ಟಿತ್ತು. ಖನುಮತದ ಮೇಲೆ ಅವನಿಗೆ ಸ್ವತಃ ರಾಜನಿಗಿರುವಂತಹ ಪೂರ್ಣಾಧಿಕಾರವಿತ್ತು.

ಅದೇ ಆಗ ಕುಟದಂತೆ ಬ್ರಾಹ್ಮಣನ ವತಿಯಿಂದ ಒಂದು ಮಹಾಯಜ್ಞ ಸಿದ್ಧಗೊಳ್ಳುತ್ತಲಿತ್ತು. ಬಲಿಗಾಗಿ ನೂರು ಗೂಳಿಗಳು, ನೂರು ಬೀಜದ ಹೋರಿಗಳು, ನೂರು ಮಣಕಗಳು, ನೂರು ಆಡುಗಳು ಮತ್ತು ನೂರು ಟಗರುಗಳನ್ನು ಬಲಿ ಕಂಬದ ಹತ್ತಿರ ತರಲಾಗಿತ್ತು.

೨. ಆಗ ಆ ಪ್ರದೇಶದ ಬ್ರಾಹ್ಮಣರು ಮತ್ತು ಗೃಹಸ್ಥರು ಸಮಣ ಗೌತಮನ ಆಗಮನವನ್ನು ತಿಳಿದರು ಮತ್ತು ಅವರೆಲ್ಲರೂ ಗುಂಪು ಗುಂಪಾಗಿ ಖನುಮತದಲ್ಲಿರುವ ಅಂಬಲತ್ತಿಕಾ ವಿಹಾರಕ್ಕೆ ಹೋಗಲು ಆ ಸ್ಥಳವನ್ನು ಬಿಡಹತ್ತಿದರು.

೩. ಅದೇ ವೇಳೆಯಲ್ಲಿ ಕುಟದಂತ ಬ್ರಾಹ್ಮಣನು, ಭೋಜನಾನಂತರದ ವಿಶ್ರಾಂತಿಗಾಗಿ ತನ್ನ ಮನೆಯ ಮೇಲ್ಛಾವಣಿಗೆ ತೆರಳಿದನು. ಜನರು ಆ ರೀತಿಯಲ್ಲಿ ಹೋಗುತ್ತಿರುವುದನ್ನು ಕಂಡು ಅವನು ದ್ವಾರಕಾಪಾಲಕನೊಡನೆ ಅದರ ಕಾರಣವನ್ನು ಕೇಳಿದನು. ದ್ವಾರಪಾಲಕನು ಅವನಿಗೆ ಕಾರಣವನ್ನು ತಿಳಿಸಿದನು.

೪. ಆಗ ಕುಟದಂತನು ಹೀಗೆ ಯೋಚಿಸಿದನು: 'ಸಮಣ ಗೌತಮನು ಯಜ್ಞದ ವಿಧಾನತ್ರಯ ಮತ್ತು ಹದಿನಾರು ಆಂಗಿಕ ಸಾಧನಗಳೊಡನೆ ಅದರ ಯಶಸ್ವೀ ಪ್ರಯೋಗವನ್ನು ಸರಿಯಾಗಿ ಅರಿತಿದ್ದಾನೆ. ಈಗ ಇದಾವುದನ್ನು ನಾನು ತಿಳಿಯದೆ ಯಜ್ಞವನ್ನು ನಿರ್ವಹಿಸಬೇಕಾಗಿದೆ. ನಾನು ಈಗ ಸಮಣ ಗೌತಮನ ಬಳಿ ಹೋಗಿ ಅದರ ಬಗ್ಗೆ ತಿಳಿದುಕೊಳ್ಳುವುದು ಒಳ್ಳೆಯದು."

ಅನಂತರ ಅವನು ತನ್ನ ದ್ವಾರಪಾಲಕನನ್ನು ಬ್ರಾಹ್ಮಣರ ಮತ್ತು ಗೃಹಸ್ಥರ ಹತ್ತಿರ ಕಳುಹಿಸಿ ಭಗವಾನನನ್ನು ಕಾಣಲು ನಾನು ಬಂದು ಅವರನ್ನು ಕೂಡಿಕೊಳ್ಳುವವರೆಗೆ ಕಾಯಬೇಕೆಂದು ತಿಳಿಸಿದನು.

೫. ಆದರೆ ಆಗ ಅನೇಕ ಬ್ರಾಹ್ಮಣರು ಆ ಮಹಾಯಜ್ಞದಲ್ಲಿ ಪಾಲುಗೊಳ್ಳಲೆಂದು ಬಂದು ಖನುಮತದಲ್ಲಿ ತಂಗಿದ್ದರು. (ಕುಟದಂತನು ಸಮಣನನ್ನು ಕಾಣುವ) ಈ ವಿಚಾರವನ್ನು ಕೇಳಿದ ಕೂಡಲೇ ಅವರು ಕುಟದಂತನ ಬಳಿಗೆ ಬಂದು ಯಾವ ರೀತಿ ಸೋನದಂಡನ ಮುಂದೆ ತಮ್ಮ ವಾದವನ್ನು ಮಂಡಿಸಿದ್ದರೋ ಅದೇ ರೀತಿಯಲ್ಲಿ ಕುಟದಂತನನ್ನು ಹೋಗದಿರುವಂತೆ ಮನವೊಲಿಸಲು ಪ್ರಯತ್ನಿಸಿದರು. ಆದರೆ ಅವನು ಸೋನದಂಡನು ಯಾವ ರೀತಿ ಉತ್ತರಿಸಿದ್ದನೋ ಅದೇ ರೀತಿ ಬ್ರಾಹ್ಮಣರಿಗೆ ಉತ್ತರಿಸಿದನು. ಇದರಿಂದ ಸಂತೃಪ್ತರಾದ ಅವರು ತಾವೂ ಅನುಗ್ರಹೀತನನ್ನು ಕಾಣಲು ಅವನ ಸಂಗಡ ಹೊರಟರು.

೯. ಕುಟದಂತ ಬ್ರಾಹ್ಮಣನು ಅಲ್ಲಿ ಕುಳಿತುಕೊಂಡನು, ಆಮೇಲೆ ತಾನು ಕೇಳಿದ್ದನ್ನು ತಿಳಿಸಿದನು. ವಿಧಾನತ್ರಯದಿಂದಲೂ, ಹದಿನಾರು ಅಂಗಗಳಿಂದಲೂ ಕೂಡಿದ ಯಜ್ಞದ ಯಶಸ್ವಿ ಪ್ರಯೋಗವನ್ನು ತಿಳಿಸಿ ಹೇಳುವಂತೆ ಅನುಗ್ರಹೀತನನ್ನು ಪ್ರಾರ್ಥಿಸಿಕೊಂಡನು.

"ಒಳ್ಳೆಯದು, ಓ ಬ್ರಾಹ್ಮಣನೇ, ನಾನು ಹೇಳುವುದನ್ನು ಕಿವಿಗೊಟ್ಟು ಏಕಾಗ್ರಚಿತ್ತದಿಂದ ಕೇಳು."

"ಬಹಳ ಒಳ್ಳೆಯದು ಮಹಾತ್ಮನೇ" ಎಂದು ಕುಟದಂತನು ಪ್ರತ್ಯುತ್ತರಿಸಿದನು ಮತ್ತು ಆ ಅನುಗ್ರಹೀತನು ಹೀಗೆ ನುಡಿದನು:

೧೦. ಬಹಳ ಹಿಂದೆ, ಓ ಬ್ರಾಹ್ಮಣನೇ, ಮಹಾವಿಗೀತನೆಂಬ ರಾಜನು ತನ್ನ ಅಪಾರವಾದ ಸಂಪತ್ತಿನಿಂದಲೂ, ಬೆಳ್ಳಿ ಬಂಗಾರಗಳಿಂದಲೂ, ವೈಭೋಗದ ವಸ್ತುಗಳಿಂದಲೂ, ದವಸ ಧಾನ್ಯಗಳಿಂದಲೂ, ತುಂಬಿದ ಖಜಾನೆ ಮತ್ತು ಗೋದಾಮುಗಳಿಂದ ಕೂಡಿದವನಾಗಿ ಶಕ್ತಿಶಾಲಿಯಾಗಿದ್ದನು. ಒಂದು ಸಲ ಮಹಾವಿಗೀತನು ಏಕಾಂಗಿಯಾಗಿ ಧ್ಯಾನಾಸಕ್ತನಾಗಿರುವಾಗ ಹೀಗೆ ಯೋಚಿಸಿ ವ್ಯಗ್ರನಾದನು: "ಒಬ್ಬ ಮನುಷ್ಯನ ವೈಭೋಗಕ್ಕೆ ಬೇಕಾಗುವ ವಸ್ತುಗಳೆಲ್ಲವೂ ನನ್ನಲ್ಲಿ ಹೇರಳವಾಗಿವೆ. ಸಮಸ್ತ ಭೂಮಂಡಲವನ್ನು ಗೆದ್ದು ನನ್ನದಾಗಿಸಿಕೊಂಡಿದ್ದೇನೆ. ಬಹುಕಾಲ ಕ್ಷೇಮ ಮತ್ತು ಕಲ್ಯಾಣಕ್ಕೆ ಕಾರಣವಾದ ಒಂದು ಮಹಾಯಜ್ಞವನ್ನು ನಾನು ಕೈಗೊಂಡಲ್ಲಿ ಇನ್ನೂ ಸೂಕ್ತವಾಗಬಹುದು."

ಮತ್ತೆ ಅವನು ತನ್ನ ಬ್ರಾಹ್ಮಣ ಕಂಚುಕಿಯನ್ನು ಕರೆಸಿದನು. ತಾನು ಆವರೆಗೆ ಯೋಚಿಸಿದ್ದೆಲ್ಲವನ್ನೂ ಅವನಿಗೆ ತಿಳಿಸುತ್ತ ನುಡಿದನು: "ಓ ಬ್ರಾಹ್ಮಣನೇ, ನನ್ನ ಕ್ಷೇಮ ಮತ್ತು ಕಲ್ಯಾಣಕ್ಕಾಗಿ ಒಂದು ಮಹಾಯಜ್ಞವನ್ನು ಏರ್ಪಡಿಸಲು ಬಯಸಿದ್ದೇನೆ. ಪೂಜ್ಯರು ಅದನ್ನು ಹೇಗೆ ಮಾಡಬೇಕೆಂದು ನನಗೆ ತಿಳಿಸಲಿ."

೧೧. ಅನಂತರ ಕಂಚುಕಿಯಾಗಿದ್ದ ಬ್ರಾಹ್ಮಣನು ರಾಜನಿಗೆ ಈ ರೀತಿ ಹೇಳಿದನು: "ಮಹಾಸ್ವಾಮಿ, ಪ್ರಭುಗಳ ರಾಜ್ಯವು ಹಿಂಸೆಗೆ ಮತ್ತು ಭೀತಿಗೆ ಒಳಗಾಗಿದೆ. ಹೊರಗಿನಿಂದ ಬಂದ ದರೋಡೆಕೋರರು ಹಳ್ಳಿ ಪಟ್ಟಣಗಳನ್ನು ಲೂಟಿ ಮಾಡುತ್ತಿದ್ದಾರೆ ಮತ್ತು ಹಾದಿಗಳಲ್ಲಿ ಭೀತಿ ಹುಟ್ಟಿಸಿದ್ದಾರೆ. ಎಲ್ಲಿಯವರೆಗೆ ಇದೇ ರೀತಿ ನಡೆದಿರುತ್ತದೆಯೋ, ಅಲ್ಲಿಯವರೆಗೆ ಹೊಸ ತೆರಿಗೆಗಳನ್ನು ರಾಜನು ವಿಧಿಸಿದಲ್ಲಿ ಅದು ಅನುಚಿತ ವರ್ತನೆಯಾಗುತ್ತದೆ. ಆದರೆ ಪ್ರಭುಗಳು ಈ ರೀತಿ ಯೋಚಿಸಬಹುದು: 'ನಾನು ಕೂಡಲೇ ಈ ದುರುಳರ ಚೇಷ್ಟೆಯನ್ನು ಪದಚ್ಯುತಿ ಮತ್ತು ಗಡಿಪಾರುಗಳ ಮೂಲಕ, ದಂಡ, ಬಂಧನ ಮತ್ತು ಮರಣ ದಂಡನೆಗಳ ಮೂಲಕ ಅಡಗಿಸಿಬಿಡುತ್ತೇನೆ.' ಆದರೆ ಅವರ ಸ್ವೇಚ್ಛಾಚಾರವನ್ನು ಸಂಪೂರ್ಣವಾಗಿ ನಿಲ್ಲಿಸುವುದು ಅಸಾಧ್ಯ. ಶಿಕ್ಷೆಗೆ ಒಳಗಾಗದೇ ಉಳಿದ ಕೆಲವರು ಇನ್ನು ಮುಂದೆಯೂ ರಾಜ್ಯವನ್ನು ಹಿಂಸಿಸುತ್ತಾ ಹೋಗಬಹುದು. ಅದನ್ನು ಸಂಪೂರ್ಣವಾಗಿ ನಿಲ್ಲಿಸಲು ಒಂದೇ ಒಂದು ಮಾರ್ಗವಿದೆ. ಯಾರು ಪ್ರಭುಗಳ ರಾಜ್ಯದಲ್ಲಿ ತಮ್ಮನ್ನು ಹೈನುಗಾರಿಕೆ ಮತ್ತು ವ್ಯವಸಾಯಗಳಲ್ಲಿ ತೊಡಗಿಸಿಕೊಳ್ಳುತ್ತಾರೋ ಅವರಿಗೆ ಆಹಾರ ಮತ್ತು ಕಾಳುಗಳನ್ನು ನೀಡಲಿ. ಯಾರು ತಮ್ಮನ್ನು ವ್ಯಾಪಾರದಲ್ಲಿ ತೊಡಗಿಸಿಕೊಳ್ಳುತ್ತಾರೋ ಅವರಿಗೆ ಪ್ರಭುಗಳು ಮೂಲ ಧನವನ್ನು ನೀಡಲಿ. ಯಾರು ರಾಜ್ಯದ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಾರೋ ಅವರಿಗೆ ರಾಜರು ಸಂಬಳ ಮತ್ತು ಆಹಾರವನ್ನು ನೀಡಲಿ. ಹೀಗೆ ಯಾರು ತಮ್ಮ ತಮ್ಮ ವ್ಯವಹಾರದಲ್ಲಿ ತೊಡಗಿರುತ್ತಾರೋ ಅವರು ಎಂದೆಂದಿಗೂ ರಾಜ್ಯವನ್ನು ಹಿಂಸಿಸುವುದಿಲ್ಲ. ಇದರಿಂದ ರಾಜನ ಆದಾಯ ಹೆಚ್ಚುತ್ತದೆ. ದೇಶವು ಶಾಂತಿಯುತವಾಗುತ್ತದೆ. ಜನತೆ ಸಂತುಷ್ಟರಾಗಿ ತಮ್ಮ ಮಕ್ಕಳೊಡನೆ ನಲಿಯುತ್ತಿರುತ್ತಾರೆ ಮತ್ತು ನಿರ್ಭೀತರಾಗಿ ವಾಸಮಾಡುತ್ತಾರೆ."

ಓ ಬ್ರಾಹ್ಮಣನೇ, ಅನಂತರ ರಾಜ ಮಹಾವಿಗೀತನು ತನ್ನ ಕಂಚುಕಿಯ ಮಾತುಗಳನ್ನು ಒಪ್ಪಿಕೊಂಡನು

ಮತ್ತು ಅವನು ಹೇಳಿದಂತೆಯೇ ಮಾಡಿದನು. ಪ್ರತಿಯೊಬ್ಬನೂ ತನ್ನ ಉದ್ಯೋಗದಲ್ಲಿ ನಿರತನಾದುದರಿಂದ ಆ ಜನರು ರಾಜ್ಯವನ್ನು ಹಿಂಸಿಸುವುದನ್ನೂ ನಿಲ್ಲಿಸಿದರು. ರಾಜನ ಆದಾಯ ಅಧಿಕವಾಯಿತು. ರಾಜ್ಯ ಶಾಂತಿಯುತವಾಯಿತು. ಪ್ರಜೆಗಳು ಪರಸ್ಪರ ಸಂತುಷ್ಟರಾಗಿ ತಮ್ಮ ಮಕ್ಕಳೊಂದಿಗೆ ನಲಿದರು ಮತ್ತು ನಿರ್ಭೀತರಾಗಿ ವಾಸಮಾಡಿದರು.

೧೨. ಅನಂತರ ಮಹಾವಿಗೀತನು ತನ್ನ ಪುರೋಹಿತನನ್ನು ಕರೆದು ಹೇಳಿದನು: "ಅವ್ಯವಸ್ಥೆ ಈಗ ಕೊನೆಗೊಂಡಿದೆ. ದೇಶದಲ್ಲಿ ಶಾಂತಿಯುಂಟಾಗಿದೆ. ದೀರ್ಘ ಕಾಲದವರೆಗೆ ನನಗೆ ಸುಖ ಸಮೃದ್ಧಿಯನ್ನು ಕೊಡುವ ಮಹಾಯಜ್ಞವನ್ನು ಏರ್ಪಡಿಸಬೇಕೆಂದಿದ್ದೇನೆ. ಈಗ ಅದನ್ನು ಹೇಗೆ ಮಾಡಬೇಕೆಂದು ಪೂಜ್ಯರು ತಿಳಿಸಬೇಕು."

"ಹಾಗಿದ್ದರೆ ಮಹಾಸ್ವಾಮಿಗಳು ರಾಜ್ಯದಲ್ಲಿರುವ ಕ್ಷತ್ರಿಯ ಸಾಮಂತರಿಗೆ ಅವರು ದೇಶದ ಯಾವುದೇ ಭಾಗದಲ್ಲಿರಲಿ ಅಥವಾ ಪಟ್ಟಣಗಳಲ್ಲಿರಲಿ ಆಮಂತ್ರಣಗಳನ್ನು ಕಳುಹಿಸುವಂತಾಗಲಿ. ಅದೇ ರೀತಿ ಮಂತ್ರಿಗಳು ಮತ್ತು ಅಧಿಕಾರಿಗಳಿಗೆ ಅಥವಾ ಪ್ರತಿಷ್ಠಿತ ಬ್ರಾಹ್ಮಣರಿಗೆ ಅವರು ಗ್ರಾಮಾಂತರದಲ್ಲಿರಲಿ ಅಥವಾ ಪಟ್ಟಣಗಳಲ್ಲಿರಲಿ ಆಮಂತ್ರಣಗಳನ್ನು ಕಳುಹಿಸುವಂತಾಗಲಿ ಅಥವಾ ಸ್ಥಿತಿವಂತರಾದ ಗೃಹಸ್ಥರಿಗೆ "ನಾನು ಒಂದು ಮಹಾಯಜ್ಞವನ್ನು ನಿರ್ವಹಿಸಬೇಕೆಂದಿದ್ದೇನೆ. ನನ್ನ ಅನಂತಕಾಲದ ಸುಖ ಕಲ್ಯಾಣಗಳಿಗಾಗಿರುವ (ಈ ಮಹಾಯಜ್ಞಕ್ಕೆ) ಪೂಜ್ಯರು ಅನುಮತಿ ಕೊಡಬೇಕು" ಎಂದು ಆಮಂತ್ರಣ ಕೊಡಬೇಕು."

ಓ ಬ್ರಾಹ್ಮಣನೇ, ರಾಜಾ ಮಹಾವಿಗೀತನು ತನ್ನ ಪುರೋಹಿತರ ಮಾತನ್ನು ಒಪ್ಪಿ ಅದರಂತೆಯೇ ನಡೆದನು. ಬ್ರಾಹ್ಮಣರಾಗಲೀ, ಕ್ಷತ್ರಿಯರಾಗಲೀ, ಸ್ಥಿತಿವಂತ ಗೃಹಸ್ಥರಾಗಲೀ ಎಲ್ಲರೂ ಒಂದೇ ಸ್ವರದಿಂದ ನುಡಿದರು; 'ಮಹಾಸ್ವಾಮಿಗಳು ಮಹಾಯಾಗವನ್ನು ನೆರವೇರಿಸಲಿ. ಕಾಲ ಸೂಕ್ತವಾಗಿದೆ.'

(೧೩) ರಾಜಾ ಮಹಾವಿಗೀತನು ಈ ಕೆಳಗಿನ ಎಂಟು ವಿಧದಲ್ಲಿ ಗುಣಪೂರ್ಣನಾಗಿದ್ದನು. ಮಾತಾಪಿತೃಗಳ ಉಭಯ ದೃಷ್ಟಿಯಿಂದಲೂ ಉತ್ತಮ ಜನ್ಮ ಪಡೆದಿದ್ದನು. ಶುದ್ಧವಾದ ಏಳು ತಲೆಮಾರಿನ ವಂಶ ಪರಂಪರೆಯನ್ನು ಪಡೆದಿದ್ದನು. ಅವನ ಜನನದ ಬಗೆಗೆ ಯಾವುದೇ ರೀತಿಯಾದ ನಿಂದನೆಗಳಿರಲಿಲ್ಲ.

ಆತನು ಸುರೂಪಿಯೂ, ಆಹ್ಲಾದವನ್ನುಂಟುಮಾಡುವಂಥ ವ್ಯಕ್ತಿತ್ವವನ್ನು ಪಡೆದವನೂ, ವಿಶ್ವಾಸವನ್ನು ಮೂಡಿಸುವವನೂ, ಮಹಾ ಸೌಂದರ್ಯಶಾಲಿಯಾದ ಮೈಕಾಂತಿಯವನೂ, ಗೌರವ ವರ್ಣದವನೂ, ಉತ್ತಮ ಮುಖಭಾವವುಳ್ಳವನೂ, ನೋಡಲು ಭವ್ಯವಾಗಿರುವವನೂ ಆಗಿದ್ದನು.

ಅಭೂತಪೂರ್ವವಾದ ಸಂಪತ್ತಿನಿಂದಲೂ, ಆಸ್ತಿಯಿಂದಲೂ, ಹೇರಳವಾಗಿ ಕೂಡಿದ ಬೆಳ್ಳಿ ಬಂಗಾರಗಳಿಂದಲೂ, ವೈಭೋಗದ ವಸ್ತುಗಳಿಂದಲೂ, ದವಸ ಧಾನ್ಯಗಳಿಂದ ತುಂಬಿದ ಕಣಜಗಳಿಂದಲೂ ಆತನು ಬಹಳ ಸಾಮರ್ಥ್ಯಶಾಲಿಯಾಗಿದ್ದನು.

ಸೈನ್ಯ ಬಲದ ಮೇಲೆ ಹಿಡಿತವುಳ್ಳವನೂ, (ಗಜ, ಅಶ್ವ, ರಥ ಮತ್ತು ಧನುರ್ಧಾರಿಗಳಿಂದ ಕೂಡಿದ) ಚತುರಂಗ ಬಲವುಳ್ಳವನೂ ಆಗಿದ್ದು ಅವನ ವೈಭವವನ್ನು ಕಂಡು ಅವನ ಶತ್ರುಗಳ ಉರಿಯುತ್ತಿದ್ದರು.

> ವಿಶ್ವಾಸದ ಸ್ವಭಾವವುಳ್ಳವನೂ, ಉದಾರಿಯೂ, ಮಹಾದಾನಿಯೂ, ತೆರೆದ ಗೃಹವುಳ್ಳವನೂ ಆದ ಅವನು, ಸಮಣರಿಗೆ, ಬ್ರಾಹ್ಮಣರಿಗೆ, ಬಡವರಿಗೆ, ದಾರಿಹೋಕರಿಗೆ, ಭಿಕ್ಷುಕರಿಗೆ ಮತ್ತು ಶರಣು ಬಂದವರಿಗೆ ಉಕ್ಕುವ ಚಿಲುಮೆಯುಳ್ಳ ಬಾವಿಯಂತಿದ್ದು ಎಲ್ಲರಿಗೂ ಉಪಕಾರಿಯಾಗಿದ್ದನು ಮತ್ತು ಸತ್ಕಾರ್ಯ ಪ್ರವರ್ತಕನಾಗಿದ್ದನು.
>
> ಸಕಲ ವಿದ್ಯಾಪಾರಂಗರನಾಗಿದ್ದನು.

"ಆತನು ತಾನು ಹೇಳಿದುದರ ಅರ್ಥವನ್ನು ಅರಿತವಾಗಿದ್ದನು ಹಾಗೂ 'ಈ ಮಾತಿನ ಅರ್ಥ ಹೀಗೆ ಮತ್ತು ಆ ಮಾತಿನ ಅರ್ಥ ಹಾಗೆ' ಎಂದು ವಿವರಿಸಬಲ್ಲವನಾಗಿದ್ದನು."

"ಆತನು ಬಹಳ ಬುದ್ಧಿಶಾಲಿಯಾಗಿದ್ದನು. ಭೂತ, ಭವಿಷ್ಯತ್ ಮತ್ತು ವರ್ತಮಾನಗಳನ್ನು ಸರಿಯಾಗಿ ವಿಮರ್ಶಿಸಬಲ್ಲವನಾಗಿದ್ದನು."

'ಆತನಲ್ಲಿದ್ದ ಈ ಎಂಟು ಗುಣಗಳು ಕೂಡ ಅವನು ಯಜ್ಞ ಮಾಡುವುದಕ್ಕೆ ಸಹಾಯಕವಾಗಿದ್ದವು."

(೧೪) 'ಅವನ ಪುರೋಹಿತನಾದ ಬ್ರಾಹ್ಮಣನು ಈ ನಾಲ್ಕು ಗುಣಗಳಿಂದ ಪ್ರಪೂರ್ಣನಾಗಿದ್ದನು:

'ಅವನು ಏಳು ತಲೆಮಾರುಗಳಿಂದಲೂ ಶುದ್ಧವಾದ ಮಾತಾಪಿತೃಗಳಲ್ಲಿ ಜನ್ಮಪಡೆದವನಾಗಿದ್ದನು. ಅವನ ಹುಟ್ಟಿನ ಬಗ್ಗೆ ಯಾವುದೇ ರೀತಿಯ ಅಪವಾದವಿರಲಿಲ್ಲ. ಆತನು ರಹಸ್ಯ ಮಂತ್ರಗಳನ್ನೆಲ್ಲಾ ಹೃದ್ಗತಮಾಡಿಕೊಂಡು ನಿರಂತರ ವಿದ್ಯಾರ್ಥಿಯಾಗಿದ್ದನು. ವೇದತ್ರಯ ಪಾರಂಗತನೂ, ಸೂಚಿ, ಧಾರ್ಮಿಕ ವಿಧಿ ವಿಧಾನ, ಧ್ವನಿಶಾಸ್ತ್ರಗಳನ್ನಲ್ಲದೆ, ನಾಲ್ಕನೆಯದಾಗಿ ಭಾಷ್ಯವನ್ನು, ಐದನೆಯದಾಗಿ ಇತಿಹಾಸವನ್ನು ಕೂಡಿದ ವೇದಗಳಲ್ಲಿ ಪಾರಂಗತನಾಗಿದ್ದನು. ನುಡಿಗಟ್ಟು, ವ್ಯಾಕರಣಗಳಲ್ಲಿ ವಿದ್ವಾಂಸನೂ ಲೋಕಾಯತ ಮತ್ತು ಉತ್ತಮ ಪುರುಷನ ಮೂವತ್ತು ಲಕ್ಷಣಗಳ ವಿಷಯದಲ್ಲಿ ಅಪಾರ ಜ್ಞಾನವುಳ್ಳವನೂ ಆಗಿದ್ದನು."

'ಕೇವಲ ಸದ್ಗುಣಿಯಲ್ಲ, ಸ್ವಭಾವ ಜನ್ಯ ಸದ್ಗುಣಗಳ ಅನುಗ್ರಹ ಪಡೆದವನು ಆಗಿದ್ದನು.'

'ಅವನು ಬುದ್ಧಿಶಾಲಿಯೂ, ವಿಚಕ್ಷಣನೂ, ಪ್ರಾಜ್ಞನೂ ಆಗಿದ್ದನು. ಧರ್ಮಕ್ರಿಯೆಯಲ್ಲಿ ಪ್ರಥಮ ಸ್ಥಾನೀಯನೂ, ಏನಿಲ್ಲೆಂದರೂ ದ್ವಿತೀಯನೂ ಆಗಿದ್ದನು.'

'ಹೀಗೆ ಅವನ ಈ ನಾಲ್ಕು ಗುಣಗಳು ಕೂಡ ಅವನಿಗೆ ಆ ಯಜ್ಞವನ್ನು ಹವಣಿಸಲು ಸಹಾಯಕವಾದವು.'

(೧೫) 'ಮತ್ತು ಓ ಬ್ರಾಹ್ಮಣನೇ, ಯಜ್ಞ ಪ್ರಾರಂಭವಾಗುವುದಕ್ಕೆ ಮುಂಚೆ ಆ ಪುರೋಹಿತನು ರಾಜಾ ಮಹಾವಿಗೀತನಿಗೆ ಯಜ್ಞದ ಮೂರು ವಿಧಾನಗಳನ್ನು ವಿವರಿಸಿದನು:'

'ಮಹಾಪ್ರಭುಗಳು ಯಜ್ಞ ಪ್ರಾರಂಭವಾಗುವುದಕ್ಕಿಂತ ಮುಂಚೆ 'ಅಯ್ಯೋ! ಬಹಳಷ್ಟು ನನ್ನ ಸಂಪತ್ತನ್ನು ಇದರಲ್ಲಿ ತೊಡಗಿಸಬೇಕಾಯಿತಲ್ಲಾ' ಎಂದು ಪರಿತಪಿಸಬಾರದು. ಅನಂತರ ಯಜ್ಞದ ಮಹಾ ಆಹುತಿಯನ್ನು ಕೊಡುವ ಸಂದರ್ಭದಲ್ಲಿಯೂ ಮಹಾಪ್ರಭುಗಳು 'ಅಯ್ಯೋ! ಬಹಳಷ್ಟು ನನ್ನ ಸಂಪತ್ತನ್ನು ಇದರಲ್ಲಿ ತೊಡಗಿಸಿದೆನಲ್ಲಾ' ಎಂದು ದುಃಖಿಸಬಾರದು. (ಹಾಗೆಯೇ) ಮಹಾಪ್ರಭುಗಳು ಯಜ್ಞ ಪರಿಸಮಾಪ್ತಿಯಾದ ಅನಂತರ 'ಅಯ್ಯೋ! ಬಹಳಷ್ಟು ನನ್ನ ಸಂಪತ್ತನ್ನು ಇದರಲ್ಲಿ ತೊಡಗಿಸಿದೆನಲ್ಲಾ' ಎಂದು ದುಃಖಿಸಬಾರದು.'

'ಹೀಗೆ ಓ ಬ್ರಾಹ್ಮಣನೇ, ಆ ಪುರೋಹಿತನು ಯಜ್ಞ ಪ್ರಾರಂಭಿಸುವುದಕ್ಕೆ ಮುಂಚೆ ರಾಜಾ ಮಹಾವಿಗೀತನಿಗೆ ಈ ಮೂರು ವಿಧಾನಗಳನ್ನು ವಿವರಿಸಿದನು.'

(೧೬) 'ಮತ್ತು ಓ ಬ್ರಾಹ್ಮಣನೇ, ಆ ಪುರೋಹಿತನು ಯಜ್ಞ ಪ್ರಾರಂಭಿಸುವ ಮುಂಚೆ, ಯಜ್ಞದಲ್ಲಿ ಪಾಲ್ಗೊಂಡವರ ವಿಷಯದಲ್ಲಿ ಒದಗಬಹುದಾದ ಹತ್ತು ವಿಧದ ಅಚಾತುರ್ಯಗಳನ್ನು ತಡೆಯುವ ಉದ್ದೇಶದಿಂದ ಈ ರೀತಿ ಹೇಳಿದನು: 'ಮಹಾಪ್ರಭುಗಳೇ, ನಿಮ್ಮ ಯಜ್ಞದಲ್ಲಿ ಭಾಗವಹಿಸಲು ಜೀವಿಗಳನ್ನು ಹಿಂಸಿಸದವರು ಬರುತ್ತಾರೆ ಹಾಗೆ ಹಿಂಸೆ ಕೊಡುವರೂ ಬರುತ್ತಾರೆ. ಕೈಯೆತ್ತಿ ಕೊಡದ ವಸ್ತುಗಳನ್ನು ತೆಗೆದುಕೊಳ್ಳುವ ಜನರು ಬರುತ್ತಾರೆ ಹಾಗೆ ತೆಗೆದುಕೊಳ್ಳದವರೂ ಬರುತ್ತಾರೆ. ಸುಳ್ಳು ಮಾತಾಡುವವರು ಮತ್ತು ಸುಳ್ಳು ಮಾತಾಡದವರು, ನಿಂದಿಸುವವರು ಮತ್ತು ನಿಂದನೆ ಮಾಡದವರು, ದಾರ್ಷ್ಟ್ಯದಿಂದ ಮಾತನಾಡುವವರು

ಮತ್ತು ಹಾಗೆ ಮಾತನಾಡದವರು, ವ್ಯರ್ಥ ಹರಟೆ ಹೊಡೆಯುವವರು ಮತ್ತು ಹಾಗೆ ಹರಟೆ ಹೊಡೆಯದವರು, ಲೋಭಿಗಳು ಮತ್ತು ಲೋಭಿಗಳಲ್ಲದವರು, ಜನರೊಡನೆ ದ್ವೇಷ ಸಾಧಿಸುವವರು ಮತ್ತು ದ್ವೇಷ ತಾಳದವರು, ಸಮಂಜಸ ದೃಷ್ಟಿಯವರು ಮತ್ತು ಅಸಮಂಜಸ ದೃಷ್ಟಿಯವರು ಬರುತ್ತಾರೆ. ಇವರಲ್ಲಿ ಯಾರು ಕೆಟ್ಟದ್ದನ್ನು ಬಯಸುವರೋ ಅವರನ್ನು ಅವರ ಅನಿಷ್ಟಕ್ಕೆ ಬಿಟ್ಟುಬಿಡಿ. ಆದರೆ ಯಾರೂ ಒಳ್ಳೆಯದನ್ನು ಬಯಸುವರೋ ಅವರಿಗೆ ಮಹಾಪ್ರಭುಗಳು ಸತ್ಕರಿಸಿ ಸಂತೋಷಪಡಿಸಲಿ. ಅವರಿಂದಲೇ ನಮ್ಮ ಹೃದಯ ಶಾಂತಿಯನ್ನು ಪಡೆಯುತ್ತದೆ.

(೧೭) 'ಓ ಬ್ರಾಹ್ಮಣನೇ, ಆ ಪುರೋಹಿತನು ರಾಜನು ಯಜ್ಞವನ್ನು ನಡೆಸುತ್ತಿರುವಾಗ ಅವನ ಹೃದಯವನ್ನು ಹದಿನಾರು ವಿಧಗಳಲ್ಲಿ ಉತ್ತೇಜಿಸಿ ಬೋಧಿಸಿ ಪ್ರಚೋದಿಸಿ ಸಂತೋಷಗೊಳಿಸಿದನು. "ರಾಜನು ಯಜ್ಞವನ್ನು ಮಾಡುವಾಗ ಜನಗಳು ಈ ರೀತಿ ಹೇಳಬಹುದು: ರಾಜಾ ಮಹಾವಿಗೀತನು ತನ್ನ ನಾಲ್ಕು ವರ್ಣಗಳ ಪ್ರಜೆಗಳನ್ನು ಆಹ್ವಾನಿಸದೆ, ಎಂಟು ವಿಧವಾದ ವೈಯಕ್ತಿಕ ಗುಣಗಳನ್ನು (ಯೋಗ್ಯತೆಗಳನ್ನು) ಹೊಂದದೆ, ನಾಲ್ಕು ವಿಧವಾದ ವೈಯಕ್ತಿಕ ಗುಣಗಳನ್ನು ಹೊಂದಿದ ಬ್ರಾಹ್ಮಣನ ಸಹಾಯವಿಲ್ಲದೆ ಯಜ್ಞವನ್ನು ನಿರ್ವಹಿಸುತ್ತಿದ್ದಾನೆ" ಆದರೆ ಅವರು ಯಥಾರ್ಥವನ್ನು ತಿಳಿಯದೆ ಮಾತನಾಡುತ್ತಿರುವರು. ಏಕೆಂದರೆ ನಾಲ್ಕೂ ವರ್ಗದ ಜನರ ಒಪ್ಪಿಗೆಯನ್ನು ತೆಗೆದುಕೊಳ್ಳಲಾಗಿದೆ. ರಾಜನು ಸ್ವತಃ ಎಂಟು ಗುಣಗಳನ್ನು ಹೊಂದಿದ್ದಾನೆ. ಈ ಹದಿನಾರು ವಿಧಿಗಳಲ್ಲಿ ಒಂದೊಂದನ್ನೂ ತೃಪ್ತಿಪಡಿಸಲಾಗುತ್ತದೆ ಎಂದು ರಾಜನು ಭರವಸೆ ತಾಳಬಹುದು. ರಾಜನು ಯಜ್ಞವನ್ನು ಮಾಡಲಿ, ಸಂತುಷ್ಟನಾಗಲಿ ಮತ್ತು ಸಮಾಧಾನಚಿತ್ತನಾಗಲಿ.

೧೮. 'ಮತ್ತು ಓ ಬ್ರಾಹ್ಮಣನೇ ಆ ಮಹಾಯಜ್ಞದಲ್ಲಿ ಎತ್ತುಗಳಾಗಲೀ, ಆಡುಗಳಾಗಲೀ, ಕೋಳಿಗಳಾಗಲೀ, ಕೊಬ್ಬಿದ ಹಂದಿಗಳಾಗಲೀ ಅಥವಾ ಯಾವುದೇ ವಿಧವಾದ ಜೀವಿಗಳಾಗಲೀ ಕೊಲ್ಲಲ್ಪಡಲಿಲ್ಲ. ಯಜ್ಞಸ್ಥಂಭಗಳನ್ನು ನಿರ್ಮಿಸಲೆಂದು ವೃಕ್ಷಗಳನ್ನು ಕಡಿದು ಕೆಡಹಲಿಲ್ಲ, ಯಜ್ಞಕುಂಡದ ಸುತ್ತಲೂ ಹರಡಲೆಂದು ಯಾವ ದರ್ಭೆಯನ್ನೂ ಕತ್ತರಿಸಲಿಲ್ಲ. ದೂತರನ್ನಾಗಲೀ, ಗುಲಾಮರನ್ನಾಗಲೀ ಅಥವಾ ಅಲ್ಲಿ ಕೆಲಸಕ್ಕೆ ನೇಮಿಸಲ್ಪಟ್ಟ ಕೆಲಸಗಾರರನ್ನಾಗಲೀ ಸಲಾಕೆಗಳಿಂದ ಅಥವಾ ಹೆದರಿಸುವುದರಿಂದ ಅಲ್ಲಿಗೆ ತರಲಾಗಲಿಲ್ಲ. ಅವರು ಕಣ್ಣೀರು ತುಂಬಿದ ಮುಖಗಳಿಂದ ತಮ್ಮ ಕೆಲಸವನ್ನು ನಿರ್ವಹಿಸಲಿಲ್ಲ. ಯಾರು ಸಹಾಯ ಮಾಡಬೇಕೆಂದಿದ್ದರೋ ಅವರು ಕೆಲಸಮಾಡಿದರು. ಯಾರು ಸಹಾಯ ಮಾಡಲೊಪ್ಪಲಿಲ್ಲವೋ ಅವರು ಕೆಲಸ ಮಾಡಲಿಲ್ಲ. ಯಾರು ಯಾವುದನ್ನು ಮಾಡಬೇಕೆಂದಿದ್ದರೋ ಅದನ್ನು ಅವರು ನಿರ್ವಹಿಸಿದರು. ಯಾವುದನ್ನು ಮಾಡಬೇಡವೆಂದಿದ್ದರೋ ಅದನ್ನು ಅವರು ಮಾಡಲಿಲ್ಲ. ಕೇವಲ ತುಪ್ಪ ಮತ್ತು ಎಣ್ಣೆ, ಬೆಣ್ಣೆ ಮತ್ತು ಹಾಲು, ಜೇನುತುಪ್ಪ ಮತ್ತು ಸಕ್ಕರೆಗಳನ್ನು ಬಳಸಿ ಆ ಯಜ್ಞವನ್ನು ನೆರವೇರಿಸಲಾಯಿತು.

೧೯. 'ಮತ್ತೆ ಓ ಬ್ರಾಹ್ಮಣನೇ, ಕ್ಷತ್ರಿಯ ಸಾಮಂತರು, ಮಂತ್ರಿಗಳು ಮತ್ತು ಅಧಿಕಾರಿಗಳು ಪ್ರತಿಷ್ಠಿತ ಬ್ರಾಹ್ಮಣರು ಮತ್ತು ಸ್ಥಿತಿವಂತರಾದ ಗೃಹಸ್ಥರು – ಅವರು ಗ್ರಾಮೀಣರಿರಲಿ ಅಥವಾ ಪಟ್ಟಣಿಗರಿರಲಿ – ತಮ್ಮ ಅಭೂತಪೂರ್ವ ಸಂಪತ್ತಿನೊಡನೆ ರಾಜಾ ಮಹಾವಿಗೀತನ ಸಮೀಪಕ್ಕೆ ಹೋಗಿ ಈ ರೀತಿ ನುಡಿದರು: "ಪ್ರಭುಗಳೇ, ಈ ಮಹಾಸಂಪತ್ತನ್ನು ತಮ್ಮ ಉಪಯೋಗಕ್ಕೆಂದು ತಂದಿದ್ದೇವೆ. ತಮ್ಮ ಹಸ್ತದಿಂದ ಪ್ರಭುಗಳು ಇದನ್ನು ಸ್ವೀಕರಿಸಬೇಕು!"

"ಮಿತ್ರರೇ, ನ್ಯಾಯಯುತವಾದ ತೆರಿಗೆಯಿಂದ ಸಂಗ್ರಹವಾದ ಸಂಪತ್ತು ನನ್ನಲ್ಲಿ ಹೇರಳವಾಗಿದೆ. ನಿಮ್ಮದನ್ನು ನಿಮ್ಮ ಹತ್ತಿರವೇ ಇಟ್ಟುಕೊಳ್ಳಿ ಮತ್ತು ಇನ್ನಿಷ್ಟು ಹೆಚ್ಚಿನ ಸಂಪತ್ತನ್ನು ತೆಗೆದುಕೊಂಡು ಹೋಗಿ."

ಹೀಗೆ ರಾಜನು ಅವರೆಲ್ಲರನ್ನೂ ನಿರಾಕರಿಸಿದಾಗ ಅವರು ತಮ್ಮ ತಮ್ಮಲ್ಲೇ ಏಕಾಂತದಲ್ಲಿ ಹೀಗೆ ನಿರ್ಧರಿಸಿದರು: "ಈ ಸಂಪತ್ತನ್ನು ಮತ್ತೆ ನಮ್ಮ ಮನೆಗೆ ತೆಗೆದುಕೊಂಡು ಹೋಗುವುದು ಯೋಗ್ಯವಲ್ಲ.

ರಾಜಾ ಮಹಾವಿಗೀತನು ಒಂದು ದೊಡ್ಡ ಸತ್ರವನ್ನು ಪ್ರಾರಂಭಿಸಿದ್ದಾನೆ. ನಾವು ಕೂಡ ಒಂದು ಪಶ್ಚಾತ್ ಯಜ್ಞವನ್ನು ಕೈಕೊಳ್ಳೋಣ."

೨೦. 'ಹೀಗೆ ಕ್ಷತ್ರಿಯರು ಯಜ್ಞಕುಂಡದ ಪೂರ್ವದಿಕ್ಕಿನಲ್ಲಿ ನಿರಂತರವಾಗಿ ಭೂರಿದಾನವನ್ನು ಪ್ರಾರಂಭಿಸಿದನು. ಅದರ ದಕ್ಷಿಣಕ್ಕೆ ಅಧಿಕಾರಿಗಳೂ, ಪಶ್ಚಿಮಕ್ಕೆ ಬ್ರಾಹ್ಮಣರೂ, ಉತ್ತರಕ್ಕೆ ಗೃಹಸ್ಥರೂ ನಿರಂತರವಾದ ಉಡುಗೊರೆಗಳನ್ನು ಕೊಡಲು ಪ್ರಾರಂಭಿಸಿದರು. ಅವರು ಕೊಟ್ಟ ವಸ್ತು ಒಡವೆಗಳೂ ಕಾಣಿಕೆಗಳೂ ಎಲ್ಲ ವಿಧವಾಗಿ ಸ್ವತಃ ರಾಜಾ ಮಹಾವಿಗೀತನು ಯಜ್ಞ ಕಾಲದಲ್ಲಿ ಕೊಟ್ಟ ಉಡುಗೊರೆಗಳಂತಿದ್ದವು.'

'ಹೀಗೆ, ಓ ಬ್ರಾಹ್ಮಣನೇ, ಅಲ್ಲಿ ನಾಲ್ಕು ವಿಧವಾದ ಸಹಕಾರವಿತ್ತು ಮತ್ತು ರಾಜಾ ಮಹಾವಿಗೀತನು ಎಂಟು ವಿಧವಾದ ವೈಯಕ್ತಿಕ ಗುಣಗಳಿಂದ ಕೂಡಿದ್ದನು ಮತ್ತು ಅವನ ಸಹಕಾರಿಯಾದ ಬ್ರಾಹ್ಮಣನು ನಾಲ್ಕು ಗುಣಗಳಿಂದ ಕೂಡಿದವನಾಗಿದ್ದನು ಮತ್ತು ಆ ಯಜ್ಞದಲ್ಲಿ ಮೂರು ವಿಧವಾದ ಕೊಡುಗೆಗಳಿದ್ದವು. ಇದೇ, ಓ ಬ್ರಾಹ್ಮಣನೇ, ಮೂರು ವಿಧಾನಗಳಿಂದ ಮತ್ತು ಹದಿನಾರು ಅಂಗಗಳಿಂದ ಕೂಡಿದ ಯೋಗ್ಯವಾದ ಯಜ್ಞವಾಗಿತ್ತು.

೨೧. 'ಯಾವಾಗ ಅವನು ಈ ರೀತಿ ನುಡಿದನೋ ಆಗ ಎಲ್ಲ ಬ್ರಾಹ್ಮಣರೂ ಒಟ್ಟಿಗೆ "ಎಂಥಾ ವೈಭವೋಪೇತವಾದ ಯಜ್ಞವಿದು! ಎಂಥಾ ಪರಿಶುದ್ಧವಾದ ಸಾಧನೆಯಿದು!" ಎಂದು ಎತ್ತರಿಸಿದ ಸ್ವರದಲ್ಲಿ ಉದ್ಗರಿಸಿದರು. ಆದರೆ ಕುಟದಂತನು ಮಾತ್ರ ಅಲ್ಲಿ ಮೌನವಾಗಿ ಕುಳಿತಿದ್ದನು.

ಆಗ ಆ ಬ್ರಾಹ್ಮಣರು ಕುಟದಂತನನ್ನು ಕೇಳಿದರು: "ಸಮಣ ಗೌತಮನು ಹೇಳಿದ ಸೂಕ್ತಿಗಳನ್ನು ನೀನು ಏಕೆ ಸಮ್ಮತಿಸುವುದಿಲ್ಲ?"

"ನಾನು ಸಮ್ಮತಿಸುವುದಕ್ಕೆ ಹಿಂದೆ ಬೀಳುವುದಿಲ್ಲ. ಯಾವನು ಸಮಣ ಗೌತಮನ ಮಾತುಗಳನ್ನು ಸೂಕ್ತಿಗಳನ್ನು ಸಮ್ಮತಿಸುವುದಿಲ್ಲವೋ ಅವನ ಶಿರಸ್ಸು ಖಂಡಿತವಾಗಿ ಎರಡು ಹೋಳಾಗಿ ಸೀಳಿಹೋಗುವುದು. ಆದರೆ ನನ್ನ ಅಭಿಪ್ರಾಯವೇನೆಂದರೆ ಸಮಣ ಗೌತಮನು "ನಾನು ಈ ರೀತಿ ಕೇಳಿದ್ದೇನೆ" ಅಥವಾ "ಅದು ಹೀಗಿದ್ದಿರಬೇಕು" ಎಂದು ಹೇಳದೇ, "ಅದು ಆಗ ಹೀಗೆ ಇತ್ತು" ಅಥವಾ "ಅದು ಆಗ ಅದರಂತೆ ಇತ್ತು" ಎಂದು ಹೇಳುತ್ತಾನೆ. ಆದುದರಿಂದ ನಾನು ಯೋಚಿಸಿದೆ: "ಖಂಡಿತವಾಗಿಯೂ ಸಮಣ ಗೌತಮನು ಆಗ ರಾಜಾ ಮಹಾವಿಗೀತನಾಗಿದ್ದಿರಬೇಕು ಅಥವಾ ಅವನು ಯಜ್ಞವನ್ನು ನಿರ್ವಹಿಸಿದ ಬ್ರಾಹ್ಮಣನಾದರೂ ಆಗಿದ್ದಿರಬೇಕು. ಪೂಜ್ಯನಾದ ಗೌತಮನು, ಯಜ್ಞವನ್ನು ಮಾಡಿಸುವವರು ಅಥವಾ ಯಜ್ಞವನ್ನು ನೆರವೇರಿಸಿ ಕೊಡುವವರು ತಮ್ಮ ದೇಹತ್ಯಾಗದ ಅನಂತರ ಪುನರ್ಜನ್ಮ ಪಡೆದು ಸ್ವರ್ಗ ಸುಖವನ್ನು ಅನುಭವಿಸುತ್ತಾರೆಂದು ಒಪ್ಪಿಕೊಳ್ಳುತ್ತಾನೆಯೋ?"

"ಹೌದು, ಓ ಬ್ರಾಹ್ಮಣನೇ, ನಾನು ಅದನ್ನು ಒಪ್ಪುತ್ತೇನೆ, ನಾನು ಈ ಸಮಯದಲ್ಲಿ ಬ್ರಾಹ್ಮಣ ಪುರೋಹಿತನಾಗಿ ಯಜ್ಞವನ್ನು ನಡೆಸಿದ್ದೆ."

೨೨. "ಓ ಗೌತಮನೇ, ಇದಕ್ಕಿಂತಲೂ ಹಗುರವಾದ, ಇದಕ್ಕಿಂತಲೂ ಸುಲಭವಾದ, ಹೆಚ್ಚು ಫಲಪ್ರದವಾದ ಹಾಗೂ ಲಾಭದಾಯಕವಾದ ಯಾವುದಾದರೂ ಯಜ್ಞವಿದೆಯೇ?"

"ಹೌದು, ಓ ಬ್ರಾಹ್ಮಣನೇ, ಖಂಡಿತವಾಗಿಯೂ ಇದೆ."

"ಓ ಗೌತಮ, ಅದು ಯಾವುದಿರಬಹುದು?"

"ನಿರ್ದಿಷ್ಟವಾಗಿ, ಸದ್ಗುಣಿಗಳಾದ ವಿರಕ್ತರಿಗೆ ಕುಟುಂಬಗಳು ಪರಂಪರಾಗತವಾಗಿ ನಿರಂತರವಾಗಿ ದಾನಕೊಡುವುದೇ ಅಂಥ ಯಜ್ಞವೆನ್ನಬಹುದು?"

೨೩. "ಓ ಗೌತಮ, ಯಾವ ಕಾರಣಕ್ಕಾಗಿ ನಿರ್ದಿಷ್ಟವಾಗಿ ಸದ್ಗುಣಿಗಳಾದ ವಿರಕ್ತರಿಗೆ ಕುಟುಂಬಗಳು ಪರಂಪರಾಗತವಾಗಿ ಕೊಡುವ ದಾನವು ಮೂರು ವಿಧಾನಗಳು ಮತ್ತು ಹದಿನಾರು ಅಂಗಗಳಿಂದ ಕೂಡಿದ ಇತರ ಯಜ್ಞಗಳಿಗಿಂತ ಕಡಿಮೆ ಶ್ರಮದ್ದೂ ಹೆಚ್ಚು ಫಲಕಾರಿಯೂ ಹೆಚ್ಚು ಗುಣಕಾರಿಯೂ ಆಗಿದೆ?"

"(ಮೂರು ವಿಧಾನ ಮತ್ತು ಹದಿನಾರು ಅಂಗಗಳಿಂದ ಕೂಡಿದ) ಈ ಎರಡನೇ ಬಗೆಯ ಯಜ್ಞಕ್ಕೆ, ಓ ಬ್ರಾಹ್ಮಣ, ಯಾವ ಅರ್ಹತರು ಅಥವಾ ಅರ್ಹತರಾಗುವ ಹಾದಿಯಲ್ಲಿರುವ ಜನರು ಹೋಗುವುದಿಲ್ಲ. ಮತ್ತೆ ಏಕೆ ಹೋಗಬಾರದು? ಕಾರಣ ಏನೆಂದರೆ (ಕೋಲಿನ) ಹೊಡೆತ ಬಡಿತ ಮತ್ತು (ಕತ್ತು ಹಿಸುಕುವ) ಹಿಂಸೆ ಇರುತ್ತದೆ. ಆದರೆ ಅವರು ಇವೆಲ್ಲವೂ ಇರದ ಮೊದಲನೆಯ ಬಗೆಯ ಯಜ್ಞಕ್ಕೆ ಹೋಗುವರು. ಆದುದರಿಂದ ಆ ನಿರಂತರವಾದ ದಾನಗಳು ಇತರ ರೀತಿಯ ಯಜ್ಞಗಳಿಗಿಂತ ಮೇಲು ಎನ್ನಬಹುದು."

೨೪. "ಓ ಗೌತಮ, ಇವೆರಡಕ್ಕಿಂತಲೂ ಹೆಚ್ಚು ಹಗುರವಾದ, ತೊಂದರೆಯಿಲ್ಲದ, ಅತೀವ ಫಲಕಾರಿಯಾದ, ಗುಣಕಾರಿಯಾದ ಯಜ್ಞವು ಯಾವುದಾದರೂ ಇದೆಯೇ?"

"ಹೌದು, ಬ್ರಾಹ್ಮಣ, ಇದೆ."

"ಓ ಗೌತಮ, ಅಂಥದು ಯಾವುದು?"

"ಸಂಘದ ವತಿಯಿಂದ ನಾಲ್ಕೂ ದಿಕ್ಕುಗಳಲ್ಲಿ 'ವಿಹಾರ'ಗಳನ್ನು ಸ್ಥಾಪಿಸುವುದು."

೨೫. "ಓ ಗೌತಮ, ಈ ಮೂರಕ್ಕಿಂತಲೂ ಸುಲಭವಾದ, ನಿರಾಯಾಸಕರವಾದ, ಹೆಚ್ಚು ಫಲಕಾರಿಯಾದ, ಗುಣಕಾರಿಯಾದ ಯಜ್ಞವು ಬೇರೆ ಯಾವುದಾದರೂ ಇದೆಯೇ?"

"ಹೌದು ಬ್ರಾಹ್ಮಣ ಇದೆ."

"ಓ ಗೌತಮ, ಅಂಥದು ಯಾವುದು?"

"ಯಾರು ಹಾರ್ದಿಕವಾದ ವಿಶ್ವಾಸದಿಂದ ಬುದ್ಧನನ್ನೇ ಮಾರ್ಗದರ್ಶಕನನ್ನಾಗಿಯೂ, ಸತ್ಯವನ್ನೂ, ಸಂಘವನ್ನೂ ಒಪ್ಪುತ್ತಾರೆಯೋ, ಅದೇ ಯಥೇಷ್ಟ ದಾನಕ್ಕಿಂತಲೂ, ನಿರಂತರ ದಾನಗಳಿಗಿಂತಲೂ ಮತ್ತು ವಿಹಾರ ಭೂಮಿಯ ದಾನಕ್ಕಿಂತಲೂ ಮಿಗಿಲಾದ ಯಜ್ಞವಾಗಿರುತ್ತದೆ."

೨೬. " ಓ ಗೌತಮ, ಈ ನಾಲ್ಕು (ಯಜ್ಞ) ಗಳಿಗಿಂತಲೂ ಸುಲಭವಾದ, ನಿರಾಯಾಸಕರವಾದ ಹೆಚ್ಚು ಫಲಕಾರಿಯಾದ, ಗುಣಕಾರಿಯಾದ ಯಜ್ಞವು ಬೇರೆ ಯಾವುದಾದರೂ ಇದೆಯೆ?"

"ಯಾವಾಗ ಒಬ್ಬ ಮನುಷ್ಯನು ಹಾರ್ದಿಕ ವಿಶ್ವಾಸದಿಂದ ತಾನಾಗಿ ಪ್ರಾಣಿ ಹಿಂಸೆಯಿಂದ ದೂರವಿರುತ್ತಾನೋ, ತನಗೆ (ದಾನವಾಗಿ) ಕೊಡದ ವಸ್ತುವನ್ನು ವರ್ಜಿಸುತ್ತಾನೋ, ಕಾಮನೆಗಳಿಂದ ಉಂಟಾದ ಕೆಡಕುಗಳನ್ನು ವರ್ಜಿಸುತ್ತಾನೋ, ಅಸತ್ಯದಿಂದ ದೂರವಿರುತ್ತಾನೆಯೋ, ಅಜಾಗರೂಕತೆಗೆ ಕಾರಣವಾದ ತೀಕ್ಷ್ಣವಾದ, ಮತ್ತು ಬರಿಸುವ, ಉನ್ಮಾದಕಾರಿಯಾದ ಪಾನೀಯಗಳಿಂದ ದೂರವಿರುತ್ತಾನೆಯೋ ಅದೇ ಯಥೇಷ್ಟ ದಾನಕ್ಕಿಂತ, ನಿರಂತರ ದಾನಗಳಿಗಿಂತ ಮತ್ತು ವಿಹಾರ ಭೂಮಿಯ ದಾನಕ್ಕಿಂತ, (ಬುದ್ಧನ) ಮಾರ್ಗದರ್ಶನವನ್ನು ಪಡೆಯುವುದಕ್ಕಿಂತಲೂ ಮಿಗಿಲಾದ ಯಜ್ಞವಾಗಿರುತ್ತದೆ."

೨೭. "ಓ ಗೌತಮ, ಈ ಐದು ವಿಧವಾದ ಯಜ್ಞಗಳಿಗಿಂತಲೂ ಸುಲಭವಾದ, ನಿರಾಯಾಸಕರವಾದ, ಹೆಚ್ಚು ಫಲಕಾರಿಯಾದ, ಹೆಚ್ಚು ಗುಣಕಾರಿಯಾದ ಬೇರೆ ಯಾವುದಾದರೂ ಯಜ್ಞವಿದೆಯೇ?"

"ಹೌದು, ಬ್ರಾಹ್ಮಣ, ಇದೆ."

"ಓ ಗೌತಮ, ಅಂಥದ್ದು ಯಾವುದಿದೆ?"

(ಇದಕ್ಕೆ ಉತ್ತರ ಸಮಣ–ಫಲೋ ಸುತ್ತದಲ್ಲಿ ಬರುವ ದೀರ್ಘ ಪರಿಚ್ಛೇದದಲ್ಲಿ–೪೦, ಪು. ೬೨–

೭೫(ಪು, ೭೪) ಪ್ರಥಮ ಘನದಲ್ಲಿ ಬಂದಿದೆ. ಅದು ಹೀಗಿದೆ:

೧. ಬುದ್ಧನ ಆಗಮನ, ಅವನ ಉಪದೇಶ, ಶ್ರೋತೃಗಳ ಮತಾಂತರ (ಮನಃ ಪರಿವರ್ತನೆ) ಮತ್ತು ಪ್ರಪಂಚ ಪರಿತ್ಯಾಗ ಇವುಗಳನ್ನು ಕುರಿತ ಪ್ರಾರಂಭಿಕ ಪರಿಚ್ಛೇದಗಳು.

೨. ಶೀಲಗಳು (ಸಾಮಾನ್ಯ ನೀತಿ)

೩. ನಂಬಿಕೆ (ಭರವಸೆ)ಯ ಮೇಲಿನ ಪರಿಚ್ಛೇದ.

೪. 'ಅವನ ಇಂದ್ರಿಯದ ದ್ವಾರಗಳ ಮೇಲೆ ಕಾವಲಿದೆ' ಎಂಬ ವಿಷಯದ ಮೇಲಿನ ಪರಿಚ್ಛೇದ.

೫. 'ಜಾಗರೂಕನನ್ನು ಸ್ವಸ್ಥ ಚಿತ್ತನನ್ನೂ' ಕುರಿತ ಪರಿಚ್ಛೇದ.

೬. ತೃಪ್ತಿ (ಸಮಾಧಾನ) ಕುರಿತ ಪರಿಚ್ಛೇದ.

೭. ಏಕಾಂತತೆ ಕುರಿತ ಪರಿಚ್ಛೇದ.

೮. ಐದು ವಿಧದ ಕಂಟಕಗಳನ್ನು ಕುರಿತ ಪರಿಚ್ಛೇದ.

೯. ಪ್ರಥಮ ಘನದ ವರ್ಣನೆ.

"ಓ ಬ್ರಾಹ್ಮಣ, ಈ ಯಜ್ಞವೇ ಈ ಮೊದಲಿನ ಎಲ್ಲ ಯಜ್ಞಗಳಿಗಿಂತ ಹೆಚ್ಚು ಸುಲಭವಾದುದೂ, ಹೆಚ್ಚು ನಿರಾಯಸಕರವಾದುದೂ, ಹೆಚ್ಚು ಫಲಕಾರಿ ಮತ್ತು ಲಾಭದಾಯಕವೂ ಆಗಿದೆ."

[(ನಂತರ ಎರಡನೇ, ಮೂರನೇ ಮತ್ತು ನಾಲ್ಕನೇ ಘನಗಳಲ್ಲಿ ಅನುಕ್ರಮವಾಗಿ ಇದನ್ನೇ ಮತ್ತೆ ಹೇಳಲಾಗಿದೆ (ಸಮಣೋ–ಫಲೋ ಸುತ್ತಗಳಲ್ಲಿರುವಂತೆ ೭೭–೭೮). ಜ್ಞಾನದಿಂದ ಬರುವ ಅಂತರ್ದೃಷ್ಟಿ (ಅದೇ ೮೩,೮೪) ಹಾಗೂ ಮಾರಕ ಅಮಲುಗಳಾದ ಆಸವಗಳ ಜ್ಞಾನದ ಬಗೆಗೂ ಹೇಳಿದೆ (೮೫–೯೬ನ್ನು ನೇರವಾಗಿ ಹೇಳಲಾಗಿಲ್ಲ.)]

"ಓ ಬ್ರಾಹ್ಮಣ, ಇದಕ್ಕಿಂತ ಉತ್ತಮವಾದ ಹಾಗೂ ಹಿತವಾದ ಯಜ್ಞವನ್ನು ಯಾವ ಮನುಷ್ಯನು ಆಚರಿಸಲಾರ."

೨೮. ಹೀಗೆ ಭಗವಾನನು ನುಡಿದಾಗ, ಕಟುದಂತ ಬ್ರಾಹ್ಮಣನು ಅನುಗ್ರಹೀತನನ್ನು ಕುರಿತು ಈ ರೀತಿ ನುಡಿದನು:

"ಓ ಗೌತಮ, ನಿನ್ನ ಮುಖದಿಂದ ಹೊರ ಹೊರಟ ಈ ಮಾತುಗಳು ನಿಜವಾಗಲೂ ಮಹತ್ತರವಾಗಿವೆ! ಕೆಳಕ್ಕೆ ಬಿಸಾಡಿದ ವಸ್ತುವನ್ನು ಮತ್ತೆ ಎದ್ದು ನಿಲ್ಲಿಸುವಂತೆ ಅಥವಾ ಮುಚ್ಚಿಟ್ಟಿದ್ದನ್ನು ಪ್ರಕಟಪಡಿಸಿದಂತೆ, ದಾರಿ ತಪ್ಪಿದ ಮನುಷ್ಯನಿಗೆ ಸರಿ ದಾರಿ ತೋರಿಸುವಂತೆ, ಅಂಧಕಾರದಲ್ಲಿ ಮುಳುಗಿದವನಿಗೆ ಹೊರಗಿನ ವಸ್ತುಗಳನ್ನು ಕಾಣಲು ಬೆಳಕು ನೀಡುವಂತೆ, ಓ ಗೌತಮನೇ, ನೀನು ಸತ್ಯವನ್ನು ಅನೇಕ ರೂಪಗಳಲ್ಲಿ ತೋರಿಸಿರುವೆ. ನಾನು ಕೂಡ ಪೂಜ್ಯ ಗೌತಮನನ್ನು ನನ್ನ ಮಾರ್ಗದರ್ಶಕನನ್ನಾಗಿ ಸ್ವೀಕರಿಸುತ್ತೇನೆ. ಅಂತೆಯೇ ಅವನ ತತ್ವವನ್ನೂ ಸಂಘವನ್ನೂ ಸ್ವೀಕರಿಸುತ್ತೇನೆ. ಪೂಜ್ಯ ಗೌತಮ, ಅಜೀವ ಪರ್ಯಂತ ನೀನು ಮಾರ್ಗದರ್ಶಕನಾಗಿ ಇದ್ದುಕೊಂಡು ನನ್ನನ್ನು ನಿನ್ನ ಶಿಷ್ಯನನ್ನಾಗಿ ಸ್ವೀಕರಿಸುತ್ತೀಯಾ? ಸ್ವತಃ ನಾನೇ ನನ್ನ ಬಳಿಯಿರುವ ಏಳು ನೂರು ಗೂಳಿಗಳು, ಏಳು ನೂರು ಹೋರಿಗಳು, ಏಳು ನೂರು ಮಣಕಗಳು, ಆಡುಗಳು ಮತ್ತು ಏಳು ನೂರು ಟಗರುಗಳನ್ನು ಮುಕ್ತಿಗೊಳಿಸಿದ್ದೇನೆ. ಅವುಗಳಿಗೆಲ್ಲ ಜೀವದಾನ ಮಾಡಿದ್ದೇನೆ. ಅವುಗಳೆಲ್ಲವೂ ಹಸಿರು ಹುಲ್ಲನ್ನು ತಿನ್ನಲಿ, ಶುದ್ಧವಾದ ನೀರು ಕುಡಿಯಲಿ, ತಂಪಾದ ವಾಯು ಅವುಗಳ ಸುತ್ತ ಬೀಸಲಿ."

೨೯. ಅನಂತರ ಅನುಗ್ರಹೀತನು ಕುಟದಂತ ಬ್ರಾಹ್ಮಣನೊಡನೆ ಉಚಿತ ಕ್ರಮದಲ್ಲಿ ಚರ್ಚಿಸಿದನು. ಉದಾರತೆಯ ಬಗ್ಗೆ, ಶುದ್ಧ ಚಾರಿತ್ರ್ಯದ ಬಗ್ಗೆ, ಸ್ವರ್ಗದ ಬಗ್ಗೆ, ಅಪಾಯಗಳ ಬಗ್ಗೆ, ಒಣ ಜಂಬದ ಬಗ್ಗೆ, ಕಾಮನೆಗಳಿಂದುಂಟಾಗುವ ಕಳಂಕಗಳ ಬಗಗೆ ಮತ್ತು ಪ್ರಪಂಚ ಪರಿತ್ಯಾಗದ ಬಗ್ಗೆ ಉಪದೇಶಿಸಿದರು.

ಕುಟದಂತ ಬ್ರಾಹ್ಮಣನು ಸ್ಥಿರನಾಗಿದ್ದಾನೆ, ಮೃದುವಾಗಿದ್ದಾನೆ, ದ್ವೇಷರಹಿತನಾಗಿದ್ದಾನೆ, ಉನ್ನತ ಭಾವನೆಗಳಿಂದ ಕೂಡಿದ್ದಾನೆ ಮತ್ತು ಆತ್ಮದಲ್ಲಿ ವಿಶ್ವಾಸವುಳ್ಳವನಾಗಿದ್ದಾನೆ ಎಂಬ ಅರಿವು ಅನುಗ್ರಹೀತನಿಗೆ ಯಾವಾಗ ಉಂಟಾಯಿತೋ ಆಗ ಅವನು ಬುದ್ಧರಾದವರು ಮಾತ್ರ ತಿಳಿಯಲು ಅರ್ಹವಾದ ತತ್ವಗಳನ್ನು (ಕುಟದಂತನಿಗೆ) ಉಪದೇಶಿಸಿದನು: ಅದೇನೆಂದರೆ, ದುಃಖ ತತ್ವ, ಅದರ ಮೂಲ, ಅದರ ಅಂತ್ಯ ಮತ್ತು ಮಾರ್ಗ. ಯಾವ ರೀತಿ ಕಲೆಗಳನ್ನೆಲ್ಲಾ ಕಳೆದುಕೊಂಡ ಶುದ್ಧವಾದ ವಸ್ತ್ರ ಬಹುಬೇಗ ಬಣ್ಣವನ್ನು ಸ್ವೀಕರಿಸುತ್ತದೆಯೋ ಅದೇ ರೀತಿ ಕುಟದಂತ ಬ್ರಾಹ್ಮಣನು ಅಲ್ಲಿ ಆಸೀನನಾಗಿರುವಾಗಲೇ ಸತ್ಯದ ಬಗ್ಗೆ ಶುದ್ಧವಾದ ದೃಷ್ಟಿಯನ್ನು ಹೊಂದಿದನು. ಯಾವುದಕ್ಕೆಲ್ಲ ಆದಿಯಿದೆಯೋ ಅದರಲ್ಲಿ ಅಂತ್ಯವೂ ಅವಶ್ಯವಾಗಿ ಅಂತರ್ಗತವಾಗಿರುತ್ತದೆ ಎಂಬುದನ್ನು ಅವನು ಅರಿತನು.

೩೦. ಅನಂತರ ಸತ್ಯವನ್ನು ಅರಿತವನಾದ, ಅದರ ಮೇಲೆ ಪ್ರಭುತ್ವವನ್ನು ಪಡೆದ, ಸರಿಯಾಗಿ ಅರ್ಥಮಾಡಿಕೊಂಡ ಕುಟದಂತ ಬ್ರಾಹ್ಮಣನು ಸತ್ಯವನ್ನು ಮತ್ತೂ ಆಳವಾಗಿ ಅಭ್ಯಸಿಸಿದನು. ಸಂಶಯಾತೀತನಾದ, ಮಾನಸಿಕ ಗೊಂದಲದಿಂದ ದೂರನಾದ, ದೃಢ ವಿಶ್ವಾಸವುಳ್ಳ ಮತ್ತು ತನ್ನ ಗುರುವು ನೀಡಿದ ಜ್ಞಾನವನ್ನು ಪಡೆಯಲು ಮತ್ತಾರನ್ನೂ ಆಶ್ರಯಿಸಬೇಕಾಗದಿರುವ ಕುಟದಂತ ಬ್ರಾಹ್ಮಣನು ಅನುಗ್ರಹೀತನನ್ನು ಕುರಿತು ಈ ರೀತಿ ನುಡಿದನು:

"ಪೂಜ್ಯ ಗೌತಮನು ತನ್ನ ಸಂಘದ ಸದಸ್ಯರಿಂದ ಕೂಡಿಕೊಂಡು ನಾಳೆಯ (ಮಧ್ಯಾಹ್ನದ) ಭೋಜನವನ್ನು ನನ್ನಲ್ಲಿ ಸ್ವೀಕರಿಸುವ ಕೃಪೆ ಮಾಡಬೇಕು."

ಇದಕ್ಕೆ ಅನುಗ್ರಹೀತನು ಮೌನದಿಂದಲೇ ತನ್ನ ಸಮ್ಮತಿಯನ್ನು ಸೂಚಿಸಿದನು. ಅನಂತರ ಕುಟದಂತ ಬ್ರಾಹ್ಮಣನು ಅನುಗ್ರಹೀತನು (ತನ್ನ ಆಮಂತ್ರಣ) ಸ್ವೀಕರಿಸಿದ್ದಾನೆಂದು ಭಾವಿಸಿ, ತನ್ನ ಸ್ಥಳದಿಂದ ಮೇಲಕ್ಕೆದ್ದು ಅಲ್ಲಿಂದ ಹೊರಟುಹೋದನು. (ಮರುದಿನ) ಸೂರ್ಯೋದಯದ ಹೊತ್ತಿಗೆ ಯಜ್ಞಕ್ಕೆಂದು ಸಿದ್ಧಪಡಿಸಿದ ಯಜ್ಞಕುಂಡದಲ್ಲಿಯೇ ಮೃದು ಮತ್ತು ಬಿರುಸಾದ ಸಿಹಿ ಪದಾರ್ಥಗಳನ್ನು ಸಿದ್ಧಪಡಿಸಿ ಅನುಗ್ರಹೀತನಿಗೆ ಈ ರೀತಿ ತಿಳಿಸಿದನು: "ಓ ಗೌತಮ, ವೇಳೆಯಾಗಿದೆ ಮತ್ತು ಭೋಜನ ಸಿದ್ಧವಾಗಿದೆ.' ಅನಂತರ ಅನುಗ್ರಹೀತನು ಪ್ರಾತಃಕಾಲದಲ್ಲಿಯೇ ಉಡುಪು ಧರಿಸಿ ಅನಂತರ ತನ್ನ ಹೊರವಸ್ತ್ರ (ಉತ್ತರೀಯ)ವನ್ನು ಧರಿಸಿ, ತನ್ನ ಭಿಕ್ಷಾಪಾತ್ರೆಯನ್ನು ಹಿಡಿದು ತನ್ನ ಸಂಗಾತಿಗಳೊಡನೆ ಕುಟದಂತನ ಯಜ್ಞಕುಂಡದ ಬಳಿಗೆ ಹೋಗಿ ತನಗಾಗಿ ಮೀಸಲಾದ ಸ್ಥಳದಲ್ಲಿ ಕುಳಿತುಕೊಂಡನು. ಅನಂತರ ಕುಟದಂತ ಬ್ರಾಹ್ಮಣನು ಬುದ್ಧನನ್ನು ನಾಯಕನ್ನಾಗಿ ಪಡೆದ ಸಂಘದ ಸದಸ್ಯರಿಗೆಲ್ಲಾ ತನ್ನ ಹಸ್ತದಿಂದಲೇ ಮೃದುವಾದ ಮತ್ತು ಬಿರುಸಾದ ಸಿಹಿ ಪದಾರ್ಥಗಳನ್ನು ಅವರು ಸಾಕೆನ್ನುವವರೆಗೆ ನೀಡುತ್ತಾ ಅವರನ್ನು ತೃಪ್ತಿಪಡಿಸಿದನು. ಅನಂತರ ಅನುಗ್ರಹೀತನು ಭೋಜನಾನಂತರ ತನ್ನ ಕೈಗಳನ್ನೂ ಊಟದ ತಟ್ಟೆಯನ್ನೂ ಶುಚಿಗೊಳಿಸಿದನು. ನಂತರ ಕುಟದಂತ ಬ್ರಾಹ್ಮಣನು ಒಂದು ಗಿಡ್ಡವಾದ ಆಸನವನ್ನು ತೆಗೆದುಕೊಂಡು ಅವನ ಪಕ್ಕದಲ್ಲಿಯೇ ಆಸೀನನಾದನು. ಆ ರೀತಿ ಅವನು ಕುಳಿತುಕೊಂಡ ಮೇಲೆ ಅನುಗ್ರಹೀತನು ತನ್ನ ಧಾರ್ಮಿಕ ಉಪದೇಶಗಳಿಂದ ಕುಟದಂತ ಬ್ರಾಹ್ಮಣನನ್ನು ಜಾಗೃತಗೊಳಿಸಿದನು, ಉತ್ತೇಜಿಸಿದನು ಮತ್ತು ಸಂತೋಷಗೊಳಿಸಿದನು. ಅನಂತರ ಕುಳಿತಲ್ಲಿಂದ ಎದ್ದು ಅಲ್ಲಿಂದ ಹೊರಟನು.

*'ಕುಟದಂತ ಸುತ್ತ'ವು ಸಮಾಪ್ತವಾಯಿತು.*

# V

ಮೂರನೆಯದಾಗಿ, ಬುದ್ಧನು ಜಾತಿಪದ್ಧತಿಯನ್ನು ಅಲ್ಲಗಳೆದನು. ಈಗಿರುವಂತಹ ಜಾತಿಪದ್ಧತಿಯು ಹಿಂದೆ ಅಸ್ತಿತ್ವದಲ್ಲಿ ಇರಲಿಲ್ಲ. ಸಹಭೋಜನ ಮತ್ತು ಅಂತರ್ಜಾತೀಯ ವಿವಾಹಗಳ ಬಗ್ಗೆ ನಿಷೇಧವೂ ಆಗ ಚಾಲ್ತಿಯಲ್ಲಿ ಇರಲಿಲ್ಲ. (ಈ ವಿಚಾರಗಳಲ್ಲಿ) ಹಿಂದೆ ಸಾಕಷ್ಟು ನಮ್ಯತೆಯಿತ್ತು ಮತ್ತು ಈಗಿರುವ ಕಾಠಿಣ್ಯವಿರಲಿಲ್ಲ. ಆದರೆ ಜಾತಿಪದ್ಧತಿಗೆ ಮೂಲಾಧಾರವಾದ ತಾರತಮ್ಯವು ಬಹಳ ಆಳವಾಗಿ ರೂಢ ಮೂಲವಾಗಿತ್ತು. ಇದರ ವಿರುದ್ಧವಾಗಿಯೇ ಭಗವಾನ್ ಬುದ್ಧನು ದೃಢವಾದ ಮತ್ತು ಕಟುವಾದ ಯುದ್ಧವನ್ನು ಸಾರಿದನು. ಬ್ರಾಹ್ಮಣರು ಉಳಿದ ಜಾತಿಯವರಿಗಿಂತ ತಾವು ಶ್ರೇಷ್ಠರು ಎಂಬುದನ್ನು ಬುದ್ಧನು ಯಾವ ರೀತಿಯಾಗಿ ಖಂಡಿಸಿದ್ದಾನೆ ಎಂಬುದನ್ನು ಅವನ ಅನೇಕ ಸಂವಾದಗಳಲ್ಲಿ ಕಾಣಬಹುದು. ಇವುಗಳಲ್ಲಿ ಮುಖ್ಯವಾದುದು 'ಅಂಬಟ್ಠ ಸುತ್ತ' ಎಂದು ಪ್ರಸಿದ್ಧವಾಗಿದೆ.

## ಅಂಬಟ್ಠ ಸುತ್ತ

(ತರುಣ ಬ್ರಾಹ್ಮಣನೊಬ್ಬನ ಧಾರ್ಷ್ಟ್ಯ ಮತ್ತು ವೃದ್ಧನೊಬ್ಬನ ನಂಬಿಕೆ)

೧. ನಾನು ಈ ರೀತಿ ಕೇಳಿದ್ದೆ. ಒಂದು ಸಲ ಭಗವಾನನು ತನ್ನ ಸುಮಾರು ಐನೂರು ಸಹೋದರ ಸಂಗಾತಿಗಳ ದೊಡ್ಡ ಗುಂಪಿನೊಡನೆ ಕೋಸಲ ದೇಶದಲ್ಲಿ ಸಂಚರಿಸುತ್ತಿರುವಾಗ ಇಚ್ಛಾನಂಕಲ ಎಂಬ ಬ್ರಾಹ್ಮಣ ಅಗ್ರಹಾರಕ್ಕೆ ಆಗಮಿಸಿದನು. ಅಲ್ಲಿರುವಾಗ ಅವನು ಇಚ್ಛಾನಂಕಲ ವನದಲ್ಲಿ ತಂಗಿದ್ದನು.

ಆ ವೇಳೆಯಲ್ಲಿ ಪೊಕ್ಖರಸಾಡಿ ಎಂಬ ಬ್ರಾಹ್ಮಣನು ಅರಣ್ಯ, ಹುಲ್ಲುಗಾವಲು ಮತ್ತು ಧಾನ್ಯಗಳಿಂದ ತುಂಬಿದ್ದ ಹಾಗೂ ಜೀವಕಳೆಯಿಂದ ನಳನಳಿಸುತ್ತಿದ್ದ ಉಕ್ಕಟ್ಠ ಎಂಬಲ್ಲಿ ವಾಸವಾಗಿದ್ದನು. ಅದು ಕೋಸಲದ ರಾಜನಾದ ಪಸನದಿಯಿಂದ ಉಂಬಳಿಯಾಗಿ ಕೊಟ್ಟ ಭೂಮಿಯಾಗಿದ್ದು ಪೊಕ್ಖರಸಾಡಿಯು ಇಲ್ಲಿ ತಾನೇ ರಾಜನೆಂಬಂತೆ ಅಧಿಕಾರ ಹೊಂದಿದ್ದನು.

೨. ಒಮ್ಮೆ ಬ್ರಾಹ್ಮಣ ಪೊಕ್ಖರಸಾಡಿಯು ಈ ಸುದ್ದಿಯನ್ನು ಕೇಳಿದನು. ಶಾಕ್ಯ ಕುಲಕ್ಕೆ ಸೇರಿದ ಸಮಣ ಗೌತಮನು ಧಾರ್ಮಿಕ ಜೀವನವನ್ನು ಅನುಸರಿಸಲು ತನ್ನ ಶಾಕ್ಯ ಕುಲವನ್ನು ತ್ಯಜಿಸಿ ಇಲ್ಲಿಗೆ ಆಗಮಿಸಿದ್ದಾನೆ ಎಂದು ಹೇಳುತ್ತಾರೆ. ಅವನು ತನ್ನ ಸಂಘದ ಸಹೋದರರ ದೊಡ್ಡ ಗುಂಪಿನೊಡನೆ ಇಚ್ಛಾನಂಕಲಕ್ಕೆ ಆಗಮಿಸಿ ಇಚ್ಛಾನಂಕಲದ ವನದಲ್ಲಿ ವಾಸಿಸುತ್ತಿದ್ದಾನಂತೆ. ಪೂಜ್ಯ ಗೌತಮನ ಬಗ್ಗೆ ದೇಶ ವಿದೇಶಗಳಲ್ಲಿ ಈ ರೀತಿಯ ಪ್ರಖ್ಯಾತಿ ಇದೆ: ಭಗವಾನನು ಅರ್ಹತನಾಗಿದ್ದಾನೆ, ಪ್ರಾಪಂಚಿಕ ಜ್ಞಾನದಿಂದ ತುಂಬಿದ್ದಾನೆ, ಮಾರ್ಗದರ್ಶನ ಬೇಕೆನ್ನುವವರಿಗೆ ಅತ್ಯುತ್ತಮ ಮಾರ್ಗದರ್ಶಕನಾಗಿದ್ದಾನೆ, ದೇವರಿಗೂ ಮಾನವರಿಗೂ ಗುರುವಾಗಿದ್ದಾನೆ, ಅವನು ಅನುಗ್ರಹೀತನೂ ಬುದ್ಧನೂ ಆಗಿದ್ದಾನೆ. ಅವನು ಸ್ವತಃ ಇದ್ದದ್ದನ್ನು ಇದ್ದ ಹಾಗೆ ತಿಳಿಯಬಲ್ಲ ಮತ್ತು ನೋಡಬಲ್ಲ. ದೇವರುಗಳು, ಬ್ರಾಹ್ಮಣರು ಮತ್ತು ಮಾರರಿಂದ ಕೂಡಿದ ಮೇಲಿನ ಲೋಕಗಳನ್ನೂ, ನಿಸ್ಸಂಗಿಗಳು ಮತ್ತು ಬ್ರಾಹ್ಮಣರು, ರಾಜಕುಮಾರರು ಮತ್ತು ಪೌರರಿಂದ ಕೂಡಿದ ಕೆಳಗಿನ ಲೋಕಗಳನ್ನೂ ತಿಳಿಯಬಲ್ಲನು ಮಾತ್ರವಲ್ಲ, ತನಗೆ ತಿಳಿದದ್ದನ್ನು ಮತ್ತೊಬ್ಬರಿಗೆ ತಿಳಿಸಬಲ್ಲವನಾಗಿದ್ದಾನೆ. ಮೂಲದಲ್ಲಿ ಮನೋಹರವಾದ, ವೃದ್ಧಿಯಲ್ಲಿ ಮನೋಹರವಾದ, ಅಂತ್ಯದಲ್ಲಿ ಮನೋಹರವಾದ ಸತ್ಯವನ್ನು ಅವನು ಸಾರುತ್ತಾನೆ. ಸರ್ವವಿಧವಾಗಿ ಪರಿಪೂರ್ಣವಾದ ಮತ್ತು ಪರಿಶುದ್ಧವಾದ ಉನ್ನತ ಜೀವನದ ಬಗೆಗೆ ಅವನು ತಿಳಿಸಿಹೇಳುತ್ತಾನೆ.

ಇಂತಹ ಅರ್ಹತರನ್ನು ಸಂದರ್ಶಿಸುವುದು ಒಳ್ಳೆಯದು.

೩. ಇಂತಹ ಸಮಯದಲ್ಲಿ ಬ್ರಾಹ್ಮಣ ಪೊಕ್ಕರಸಾಡಿಗೆ ಅಂಬಟ್ಠನೆಂಬ ತರುಣ ಬ್ರಾಹ್ಮಣನೊಬ್ಬನು ಶಿಷ್ಯನಾಗಿದ್ದನು. ಆತನು ವೈದಿಕ ರಹಸ್ಯ ಮಂತ್ರಗಳನ್ನು ಹೃದ್ಗತಮಾಡಿಕೊಂಡ ನಿರಂತರ ವಿದ್ಯಾರ್ಥಿಯಾಗಿದ್ದನು.

೪. ಪೊಕ್ಕರಸಾಡಿಯು ಅಂಬಟ್ಠನಿಗೆ (ಗೌತಮನ ಆಗಮನದ) ಈ ಸುದ್ದಿಯನ್ನು ತಿಳಿಸಿ ಹೀಗೆ ಹೇಳಿದನು: "ಪ್ರಿಯ ಅಂಬಟ್ಠನೇ, ಸಮಣ ಗೌತಮನಿದ್ದಲ್ಲಿಗೆ ಹೋಗಿ, ದೇಶವಿದೇಶಗಳಲ್ಲಿ ಪ್ರಖ್ಯಾತವಾದ ಅವನ ವಿಚಾರವು ಸತ್ಯವೋ ಅಥವಾ ಮಿಥ್ಯವೋ ಎಂಬುದನ್ನು ಕಂಡುಹಿಡಿ. ಸಮಣ ಗೌತಮನು ಅವರು ಹೇಳಿದಂತೆ ಇದ್ದಾನೆಯೋ ಇಲ್ಲವೋ ಎಂಬುದನ್ನು ಅರಿತುಕೋ."

೫. "ಗುರುಗಳೇ, ಅದು ಹಾಗಿದೆಯೋ ಇಲ್ಲವೋ ಎಂಬುದನ್ನು ನಾನು ಹೇಗೆ ತಿಳಿಯಬಹುದು?"

"ಓ ಅಂಬಟ್ಠ, ನಮ್ಮ ವೈದಿಕ ರಹಸ್ಯ ಮಂತ್ರಗಳಲ್ಲಿ ಮಹಾಪುರುಷನ ಮೂವತ್ತೆರಡು ಶಾರೀರಿಕ ಲಕ್ಷಣಗಳನ್ನು ವಿವರಿಸಲಾಗಿದೆ. ಈ ಎಲ್ಲ ಲಕ್ಷಣಗಳನ್ನು ಒಂದು ವೇಳೆ ಯಾವನೇ ಒಬ್ಬ ಮನುಷ್ಯ ಪಡೆದಿದ್ದರೆ ಅವನು ಎರಡರಲ್ಲಿ ಒಂದಾಗುವನೇ ಹೊರತು ಬೇರೊಂದು ಆಗುವುದಿಲ್ಲ. ಅವನು ಗೃಹಸ್ಥ ಜೀವನದಲ್ಲಿದ್ದರೆ ಈ ಜಗತ್ತಿನ ಸಾರ್ವಭೌಮನಾಗುತ್ತಾನೆ, ಒಬ್ಬ ಸದ್ಗುಣಿಯಾದ ರಾಜನಾಗುತ್ತಾನೆ, ನಾಲ್ಕು ಸಮುದ್ರಗಳ ಪರ್ಯಂತ ಹಬ್ಬಿರುವ ಭೂಮಂಡಲವನ್ನು ಆಳುತ್ತಾನೆ, ವಿಜಯಿಯಾಗುತ್ತಾನೆ, ಪ್ರಜೆಗಳ ರಕ್ಷಕನಾಗುತ್ತಾನೆ ಮತ್ತು ಸಪ್ತ ರಾಜನಿಧಿಯನ್ನು ಹೊಂದಿದವನಾಗುತ್ತಾನೆ. ಆ ಸಪ್ತ ರಾಜನಿಧಿಗಳೆಂದರೆ ರಥ (ಚಕ್ರ), ಗಜ, ಅಶ್ವ, ರತ್ನಗಳು, ಸ್ತ್ರೀ, ಕೋಶ ಮತ್ತು ಏಳನೆಯದಾಗಿ ಮಂತ್ರಿ (ಸಚಿವ). ಅವನು ವೀರರಾದ, ಸುದೃಢರಾದ ಶತ್ರುಸೇನೆಯನ್ನು ನಿರ್ನಾಮ ಮಾಡಬಲ್ಲ ಸಾವಿರ ಪುತ್ರರನ್ನು ಪಡೆಯುತ್ತಾನೆ. ಸಮುದ್ರದಿಂದ ಸಮುದ್ರಕ್ಕೆ ಹಬ್ಬಿರುವ ಈ ವಿಶಾಲವಾದ ಭೂಮಂಡಲದಲ್ಲಿ ಋಜುಮಾರ್ಗದಿಂದ ದಂಡ ಅಥವಾ ಖಡ್ಗವಿಲ್ಲದೆ ಆಳುತ್ತ ವೃದ್ಧಿ ಹೊಂದುತ್ತಾನೆ. ಒಂದು ವೇಳೆ ಅವನೇನಾದರೂ ಗೃಹಸ್ಥ ಜೀವನದಿಂದ ಸನ್ಯಾಸ ಜೀವನಕ್ಕೆ ಬಂದರೆ ಸಂಸಾರದ ದುಃಖಗಳನ್ನೆಲ್ಲ ನಿವಾರಿಸುವ (ಜಗತ್ತಿನ ಕಣ್ಣುಗಳನ್ನು ತೆರೆಯಿಸುವ) ಬುದ್ಧನಾಗುತ್ತಾನೆ. ಅಂಬಟ್ಠ, ಈಗ ನಿನಗೆ ನಾನು ರಹಸ್ಯ ಮಂತ್ರಗಳನ್ನು ಕೊಡುತ್ತಿದ್ದೇನೆ. ನೀನು ಅವುಗಳನ್ನು ಪಡೆದವನಾಗಿರುತ್ತೀಯೆ.

೬. "ಬಹಳ ಒಳಿತಾಯಿತು ಪೂಜ್ಯರೇ" ಎಂದು ಅಂಬಟ್ಠನು ನುಡಿದು, ತನ್ನ ಆಸನದಿಂದೆದ್ದು ಪೊಕ್ಕರಸಾಡಿಗೆ ಗೌರವವನ್ನು ಸೂಚಿಸುತ್ತ ಅಶ್ವಗಳಿಂದ ಎಳೆಯಲ್ಪಡುವ ರಥವನ್ನೇರಿ ಬ್ರಾಹ್ಮಣರ ಗುಂಪಿನೊಂದಿಗೆ ಇಕ್ಕನಂಕಲ ವನಕ್ಕೆ ಹೊರಟನು. ವಾಹನಗಳು ಎಲ್ಲಿಯವರೆಗೆ ಹೋಗಲು ಸಾಧ್ಯವೋ ಅಲ್ಲಿಯ ತನಕ ರಥದಲ್ಲಿ ಹೋಗಿ ಅನಂತರ ಇಳಿದು ಕಾಲ್ನಡಿಗೆಯಲ್ಲಿ ವನದೊಳಕ್ಕೆ ಹೋದನು.

೭. ಆ ಹೊತ್ತಿನಲ್ಲಿ ಸಂಘದ ಕೆಲವು ಸೋದರರು ಬಯಲಿನಲ್ಲಿ ಆ ಕಡೆ ಈ ಕಡೆ ಸಂಚರಿಸುತ್ತಿದ್ದರು. ಅಂಬಟ್ಠನು ಅವರ ಬಳಿಗೆ ಹೋಗಿ (ಹೀಗೆ) ಹೇಳಿದನು: "ಪೂಜ್ಯನಾದ ಗೌತಮನು ಈಗ ಎಲ್ಲಿ ತಂಗಿದ್ದಾನೆ? ಅವನನ್ನು ಕಾಣಲು ನಾವು ಇಲ್ಲಿಗೆ ಬಂದಿದ್ದೇನೆ."

೮. ಆಗ ಸೋದರರು (ಸಂಘದ ಸದಸ್ಯರು) ಯೋಚಿಸಿದರು: "ಈ ತರುಣ ಬ್ರಾಹ್ಮಣ ಅಂಬಟ್ಠನು ಉಚ್ಚ ಕುಲದವನಾಗಿದ್ದಾನೆ. ಪಂಡಿತ ಬ್ರಾಹ್ಮಣ ಪೊಕ್ಕರಸಾಡಿಯ ಶಿಷ್ಯನಾಗಿದ್ದಾನೆ. ಅನುಗ್ರಹೀತನಿಗೆ ಇವನೊಡನೆ ಸಂಭಾಷಿಸಲು ಯಾವ ತೊಂದರೆಯಾಗಲಿಕ್ಕಿಲ್ಲ. ಅನಂತರ ಅವರು ಅಂಬಟ್ಠನನ್ನು ಕುರಿತು ನುಡಿದರು: "ಅಲ್ಲಿ ದ್ವಾರ ಮುಚ್ಚಿರುವಲ್ಲಿ ಗೌತಮನು ತಂಗಿದ್ದಾನೆ, ಸದ್ದಿಲ್ಲದೆ ಮೇಲುಗಡೆ ಹೋಗಿರಿ. ಮುಖಮಂಟಪವನ್ನು ನಿಧಾನವಾಗಿ ಪ್ರವೇಶಿಸಿರಿ. ತುಸು ಕೆಮ್ಮಿ ಅಡ್ಡಪಟ್ಟಿಯ ಮೇಲೆ ಬಡಿಯಿರಿ. ಅನುಗ್ರಹೀತನು ನಿಮಗಾಗಿ ಬಾಗಿಲನ್ನು ತೆರೆಯುವನು."

೯. ಅನಂತರ ಅಂಬಟ್ಠನು ಅದೇ ರೀತಿ ಮಾಡಿದನು. ಅನುಗ್ರಹೀತನು ದ್ವಾರವನ್ನು ತೆಗೆದನು.

ಅಂಬಟ್ಠನು ಒಳಗೆ ಪ್ರವೇಶಿಸಿದನು. ತರುಣ ಬ್ರಾಹ್ಮಣರೂ ಪ್ರವೇಶಿಸಿದರು. ಅನಂತರ ಅವರು ಅನುಗ್ರಹೀತನೊಡನೆ ತಮ್ಮ ಶುಭಾಶಯಗಳನ್ನೂ ಗೌರವನ್ನೂ ವಿನಿಮಯ ಮಾಡಿಕೊಂಡು ತಮ್ಮ ಆಸನದ ಮೇಲೆ ಕುಳಿತುಕೊಂಡರು. ಆದರೆ ಅಂಬಟ್ಠನು ಮಾತ್ರ ಆಚೆಂದೀಚೆ ಅಡ್ಡಾಡುತ್ತಲೇ ಇದ್ದನು. ಅನುಗ್ರಹೀತನು ಕುಳಿತಿದ್ದಾಗಲು ಅವನು ಚಡಪಡಿಸುತ್ತ ನಿಂತೇ ಇದ್ದನು.

೧೦. ಆಗ ಅನುಗ್ರಹೀತನು ಹೀಗೆ ನುಡಿದನು: "ಅಂಬಟ್ಠ, ವೃದ್ಧರಾದ ಗುರುಗಳ ಹತ್ತಿರ, ಅಥವಾ ವೃದ್ಧರಾದ ಗುರುಗಳ ಹತ್ತಿರ, ಈಗ ನೀನು ಓಡಾಡುತ್ತಿರುವಂತೆ ಓಡಾಡುತ್ತೀಯಾ ಅಥವಾ ನಿಂತುಕೊಂಡೇ ಇದ್ದು ಕುಳಿತಿರುವ ನನ್ನೊಡನೆ ಸಂಭಾಷಣೆ ನಡೆಸುತ್ತೀಯಾ?"

೧೧. "ಖಂಡಿತವಾಗಿಯೂ ಇಲ್ಲ, ಗೌತಮ. ಯಾವ ಬ್ರಾಹ್ಮಣನು ಓಡಾಡುತ್ತಿರುವನೋ ಅವನೊಡನೆ ಓಡಾಡುತ್ತ, ನಿಂತಿರುವ ಬ್ರಾಹ್ಮಣನೊಡನೆ ನಿಂತುಕೊಂಡು, ಕುಳಿತಿರುವ ಬ್ರಾಹ್ಮಣನೊಡನೆ ಕುಳಿತುಕೊಳ್ಳುತ್ತ ಅಥವಾ ಒರಗಿಕೊಂಡಿರುವ ಬ್ರಾಹ್ಮಣನೊಡನೆ ಒರಗಿಯೇ ಇದ್ದು ಮಾತನಾಡುವುದೇ ಯೋಗ್ಯವಾದುದು. ಆದರೆ ತಲೆ ಬೋಳಿಸಿಕೊಂಡವರು, ಢೋಂಗಿ ಸನ್ಯಾಸಿಗಳು, ನಮ್ಮ ಕುಲಬಂಧುಗಳ ಕಾಲು ತೊಳೆಯುವ ಕ್ಷುದ್ರ ಕರಿಯ ಮನುಷ್ಯರು (ಕೃಷ್ಣ ವರ್ಣೀಯರು) ಇವರೊಡನೆ ತಾನು ನಿನ್ನೊಡನೆ ಈಗ ಮಾತನಾಡುತ್ತಿರುವಂತೆಯೇ ಮಾತನಾಡುತ್ತೇನೆ."

"ಆದರೆ ಅಂಬಟ್ಠ, ನೀನು ಇಲ್ಲಿಗೆ ಬಂದಾಗ ಏನನ್ನೋ ಬಯಸಿ ಬಂದಿರಬೇಕಲ್ಲ. ನೀನು ಇಲ್ಲಿಗೆ ಬಂದಾಗ ನಿನ್ನ ಮನಸ್ಸಿನಲ್ಲಿ ಯಾವ ಉದ್ದೇಶವಿತ್ತೋ ಅದರ ಕಡೆ ನಿನ್ನ ಮನಸ್ಸನ್ನು ತಿರುಗಿಸಿಕೊ." ತನ್ನ ಸಂಸ್ಕೃತಿಯ ಬಗ್ಗೆ ಇವನಿಗೆ ಬಹಳ ಅಭಿಮಾನವಿದ್ದರೂ ಈ ತರುಣ ಬ್ರಾಹ್ಮಣ ಅಂಬಟ್ಠನು ವಿನಯವನ್ನು ಕಲಿತಿಲ್ಲ. (ಇಂಥ ಅವಿನಯವು) ಸರಿಯಾದ ಶಿಕ್ಷಣ ಅಭಾವದಿಂದಲ್ಲದೆ ಬೇರೆ ಇನ್ನಾವುದರಿಂದ ಬಂದೀತು?

೧೨. ತನ್ನನ್ನು ಒರಟನೆಂದು ಅನುಗ್ರಹೀತನು ಕರೆದುದಕ್ಕೆ ಅಂಬಟ್ಠನಿಗೆ ಅಸಂತೋಷವು ಕ್ರೋಧವೂ ಉಂಟಾಯಿತು. ಅನುಗ್ರಹೀತನು ತನ್ನ ಬಗ್ಗೆ ಕ್ಷುಬ್ಧನಾಗಿರುವುದನ್ನು ನೆನೆದು (ಅಂಬಟ್ಠನು) ಅನುಗ್ರಹೀತನನ್ನು ಹೀಯಾಳಿಸುತ್ತ ವ್ಯಂಗ್ಯಮಾಡುತ್ತ ಹೀಗೆ ಹೇಳಿದನು: "ಗೌತಮ, ನಿನ್ನ ಶಾಕ್ಯ ವಂಶದವರು ಒರಟು ಸ್ವಭಾವದವರು, ಧಾರ್ಷ್ಟ್ಯರು, ಬಹುಬೇಗ ಉದ್ವೇಗಗೊಳ್ಳುವವರು ಮತ್ತು ತೀವ್ರ ಆವೇಶದವರು. ಕೀಳು ಜನ, ಅತ್ಯಂತ ಕೀಳು ಜನ. ಅವರು ಬ್ರಾಹ್ಮಣರಿಗೆ ಗೌರವವನ್ನಾಗಲೀ, ಬೆಲೆಯನ್ನಾಗಲೀ, ಉನ್ನತ ಸ್ಥಾನವನ್ನಾಗಲೀ, ಕಾಣಿಕೆಯನ್ನಾಗಲೀ ಕೊಡುವುದಿಲ್ಲ. ಅದು ಯೋಗ್ಯವೂ ಅಲ್ಲ."

ಹೀಗೆ ತರುಣ ಬ್ರಾಹ್ಮಣ ಅಂಬಟ್ಠನು ಪ್ರಪ್ರಥಮವಾಗಿ ಶಾಕ್ಯರನ್ನು ಕೀಳು ಜನರೆಂದು ಜರೆದನು.

೧೩. "ಆದರೆ ಅಂಬಟ್ಠನೇ, ಶಾಕ್ಯರು ನಿನಗೆ ಮಾಡಿದ ಅನ್ಯಾಯವಾದರೂ ಏನು?"

"ಓ ಗೌತಮ, ಒಮ್ಮೆ ಪೊಕ್ಖರಸಾಡಿಯವರ ಯಾವುದೋ ಒಂದು ಕೆಲಸದ ಮೇಲೆ ಕಪಿಲವಸ್ತುವಿಗೆ ಹೋಗಬೇಕಾಗಿತ್ತು. ಅಲ್ಲಿಗೆ ಹೋದಾಗ ಶಾಕ್ಯರ ಸಭಾಭವನಕ್ಕೆ ಹೋಗಿದ್ದೆ. ಆ ಹೊತ್ತಿನಲ್ಲಿ ಅಲ್ಲಿ ಕೆಲವು ವೃದ್ಧರು ತರುಣರು ಆದ ಶಾಕ್ಯರು ವೈಭವೋಪೇತವಾದ ಆಸನಗಳಲ್ಲಿ ಆಸೀನರಾಗಿ, ಪರಸ್ಪರವಾಗಿ ಹಾಸ್ಯಮಾಡುತ್ತ, ಮೋಜುಮಾಡುತ್ತ ಬೆರಳುಗಳಿಂದ ಒಬ್ಬರನ್ನೊಬ್ಬರು ತಿವಿಯುತ್ತಿದ್ದರು. ನಿಜ ಹೇಳುವುದಾದರೆ, ನಾನೇ ಅವರ ಹಾಸ್ಯದ ವಸ್ತುವಾಗಿದ್ದೆ. ಅವರಲ್ಲಿ ಒಬ್ಬನಾದರೂ ನನಗೆ (ಕುಳಿತುಕೊಳ್ಳಲು) ಆಸನ ತೋರಿಸಲಿಲ್ಲ. ಗೌತಮ, ಕೀಳುಜನರಾದ, ಅತ್ಯಂತ ಕೀಳು ಜನರಾದ ಶಾಕ್ಯರು ಬ್ರಾಹ್ಮಣರನ್ನು ಗೌರವಿಸುವುದಾಗಲೀ, ಬೆಲೆ ಕೊಡುವುದಾಗಲೀ, ಆದರದಿಂದ ಕಾಣುವುದಾಗಲೀ, ಕಾಣಿಕೆ ಕೊಡುವುದಾಗಲೀ, ಮರ್ಯಾದೆ ಸಲ್ಲಿಸುವುದಾಗಲೀ ಮಾಡದೇ ಇದ್ದರೆ ಅದು ಯೋಗ್ಯವೂ ಅಲ್ಲ, ಸಭ್ಯವೂ ಅಲ್ಲ."

ಹೀಗೆ ತರುಣನಾದ ಬ್ರಾಹ್ಮಣ ಅಂಬಟ್ಠನು ಎರಡನೆಯ ಬಾರಿ ಶಾಕ್ಯರನ್ನು ಕೀಳು ಜನರೆಂದು ಜರಿದನು.

೧೪. "ಅಂಬಟ್ಠ, ತನ್ನ ಗೂಡಿನಲ್ಲಿರುವ ಒಂದು ಸಾಮಾನ್ಯ ಮರಲಿ ಹಕ್ಕಿ ತನ್ನ ಮನಸ್ಸಿನಲ್ಲಿ ಬಂದದ್ದನ್ನು ಹೇಳಬಲ್ಲದು. (ಅಂತೆಯೇ) ಶಾಕ್ಯರು ತಮ್ಮ ಸ್ವಂತ ಸ್ಥಳವಾದ ಕಪಿಲವಸ್ತುವಿನಲ್ಲಿದ್ದರು. ಇಂಥ ಒಂದು ಕ್ಷುಲ್ಲಕ ವಿಚಾರವನ್ನು ದೊಡ್ಡ ಅಪರಾಧವೆಂದು ಭಾವಿಸುವುದು ನಿನಗೆ ಯೋಗ್ಯವಲ್ಲ."

೧೫. " ಗೌತಮ, ಜನರಲ್ಲಿ ಉತ್ತಮರು (ಕ್ಷತ್ರಿಯರು), ಬ್ರಾಹ್ಮಣರು, ವೈಶ್ಯರು ಮತ್ತು ಸೇವಕರು (ಶೂದ್ರರು) ಎಂದು ನಾಲ್ಕು ವರ್ಗಗಳ ಜನರಿದ್ದಾರೆ. ಈ ನಾಲ್ಕರಲ್ಲಿ ಮೂವರು ಅಂದರೆ ಕ್ಷತ್ರಿಯರು, ವೈಶ್ಯರು ಮತ್ತು ಶೂದ್ರರು ಖಂಡಿತವಾಗಿ ಬ್ರಾಹ್ಮಣರ ಸೇವಕರು. ಆದುದರಿಂದ, ಗೌತಮ, ಕೀಳು ಜನರಾದ ಶಾಕ್ಯರು ಬ್ರಾಹ್ಮಣರನ್ನು ಗೌರವಿಸದೇ ಇರುವುದು, ಬೆಲೆ ಕೊಡದೇ ಇರುವುದು, ಆದರದಿಂದ ಕಾಣದಿರುವುದು, ಕಾಣಿಕೆ ಕೊಡದೇ ಇರುವುದು, ಮರ್ಯಾದೆ ಸಲ್ಲಿಸದೇ ಇರುವುದು ಯೋಗ್ಯವೂ ಅಲ್ಲ, ಸಭ್ಯವೂ ಅಲ್ಲ.'

ಹೀಗೆ ತರುಣನಾದ ಬ್ರಾಹ್ಮಣ ಅಂಬಟ್ಠನು ಮೂರನೆಯ ಬಾರಿಗೆ ಶಾಕ್ಯರನ್ನು ಕೀಳು ಜನರೆಂದು ಜರಿದನು.

೧೬. ಆಗ ಅನುಗ್ರಹೀತನು ಹೀಗೆ ಯೋಚಿಸಿದನು: "ಈ ಅಂಬಟ್ಠನು ಶಾಕ್ಯರನ್ನು ಹೀನ ಮೂಲದವರೆಂದು ಹಳಿದು ಅವರನ್ನು ನಮ್ರರನ್ನಾಗಿ ಮಾಡಲು ದೃಢ ಮನಸ್ಸು ಮಾಡಿದ್ದಾನೆ. (ಈಗ ನಾನು) ಅವನ ಸ್ವಂತ ವಂಶದ ಬಗ್ಗೆ ವಿಚಾರಿಸಿದರೆ ಹೇಗೆ!" ಅನಂತರ ಅವನನ್ನು ಕುರಿತು ಈ ರೀತಿ ನುಡಿದನು:

"ಇರಲಿ ಅಂಬಟ್ಠ, ನೀನು ಯಾವ ಕುಟುಂಬ (ವಂಶ)ಕ್ಕೆ ಸೇರಿದವನು?"

"ಹೌದು, ಆದರೆ ಯಾರಾದರೂ ನಿನ್ನ ತಂದೆ ಮತ್ತು ನಿನ್ನ ತಾಯಿಯರ ಕುಟುಂಬದ ಹೆಸರು ಮತ್ತು ವಂಶಾವಳಿಯನ್ನು ಕೆದಕಿ ನೋಡಿದರೆ, ಅಂಬಟ್ಠನೇ, ಶಾಕ್ಯರು ಹಿಂದೊಮ್ಮೆ ನಿಮ್ಮ ಪ್ರಭುಗಳಾಗಿದ್ದರು ಮತ್ತು ನೀನೊಬ್ಬ ಶಾಕ್ಯರ ದಾಸೀಪುತ್ರನೆಂಬುದು ಬೆಳಕಿಗೆ ಬರುತ್ತದೆ. ಆದರೆ (ನೀನು ಹೀಯಾಳಿಸುವ) ಶಾಕ್ಯರಾದರೂ ಒಕ್ಕಕ ರಾಜರ ವಂಶಕ್ಕೆ ಸೇರಿದವರಾಗಿದ್ದಾರೆ."

"ಬಹಳ ಹಿಂದೆ, ಅಂಬಟ್ಠನೇ, ಒಕ್ಕಕ ರಾಜನು ತನ್ನ ಪ್ರೀತಿ ಪಾತ್ರಳಾದ ರಾಣಿಯ ಮಗನಿಗೆ ಉತ್ತರಾಧಿಕಾರವನ್ನು ನೀಡುವ ಉದ್ದೇಶದಿಂದ ತನ್ನ ಹಿರಿಯ ಪುತ್ರರಾದ ಒಕ್ಕಮುಖ, ಕರಂಡ, ಹತ್ಥಿನಿಕ ಮತ್ತು ಸಿನಿಪುರ ಇವರನ್ನೆಲ್ಲ ತನ್ನ ದೇಶದಿಂದ ಹೊರಹಾಕಿದನು. ಹೀಗೆ ಹೊರಹಾಕಲ್ಪಟ್ಟ ಅವರು ಹಿಮಾಲಯದ ತಪ್ಪಲು ಪ್ರದೇಶಕ್ಕೆ ಹೋಗಿ ಒಂದು ಸರೋವರ ದಂಡೆಯ ಮೇಲೆ ಬೆಳೆದಿರುವ ದೇವದಾರು ವೃಕ್ಷದ ಕೆಳಗೆ ವಾಸಿಸಲು ಪ್ರಾರಂಭಿಸಿದರು. ತಮ್ಮ ವಂಶದ ಪರಿಶುದ್ಧತೆಗೆ ಭಂಗ ಬರುವುದೆಂಬ ಹೆದರಿಕೆಯಿಂದ ಅವರು ಸೋದರಿಯರೊಡನೆಯೇ ಅಂತರ್ವಿವಾಹ ಮಾಡಿಕೊಂಡರು.

ಆಗ ಒಕ್ಕಕ ರಾಜನು ತನ್ನ ಆಸ್ಥಾನದ ಮಂತ್ರಿಗಳನ್ನು ಕೇಳಿದನು: "ಸಭ್ಯರೇ ಈಗ ಆ ಮಕ್ಕಳು ಎಲ್ಲಿ ಇದ್ದಾರೆ?"

"ಹಿಮಾಲಯದ ತಪ್ಪಲು ಪ್ರದೇಶದಲ್ಲಿ ಒಂದು ಸರೋವರದ ದಂಡೆಯ ಮೇಲೆ ಒಂದು ಸ್ಥಳವಿದೆ. ಅಲ್ಲಿ ಒಂದು ದೊಡ್ಡ ಓಕ್ (ಸಾಕೋ) ವೃಕ್ಷವು ಬೆಳೆದಿದೆ. ಅವರು ಅಲ್ಲಿ ವಾಸಿಸುತ್ತಾರೆ. ತಮ್ಮ ವಂಶದ ಪರಿಶುದ್ಧತೆಗೆ ಅಪಚಾರ ಮಾಡಬಾರದೆಂದು ಅವರು ತಮ್ಮ ಸೋದರಿಯರನ್ನೇ ಮದುವೆಯಾಗಿದ್ದಾರೆ."

ಆಗ ಒಕ್ಕಕ ರಾಜನು ಮೆಚ್ಚಿಕೆಯಿಂದ (ಮಧ್ಯದಲ್ಲಿಯೇ) ಹೇಳಿದನು. "ಆ ಯುವಕರು ಶಾಕ್ಯದ ಹೃದಯದವರಾಗಿದ್ದಾರೆ! ಅವರು ಸರಿಯಾಗಿ ತಮ್ಮತನವನ್ನು ಕಾಯ್ದುಕೊಂಡಿದ್ದಾರೆ (ಪರಮಶಾಕ್ಯ)!"

"ಅಂಬಟ್ಠನೇ! ಈ ಕಾರಣದಿಂದ ಅವರು ಶಾಕ್ಯರೆಂದು ಪ್ರಸಿದ್ಧರಾಗಿದ್ದಾರೆ. ಆಗ ಒಕ್ಕಕನಿಗೆ ದಿಸಾ ಎಂಬ ಹೆಸರಿನ ದಾಸಿಯೊಬ್ಬಳಿದ್ದಳು. ಅವಳು ಒಂದು ಕಪ್ಪು ಕೂಸಿಗೆ ಜನ್ಮವಿತ್ತಳು. ಹುಟ್ಟಿದ ಕೂಡಲೇ ಆ ಚಿಕ್ಕ ಕಪ್ಪು ವಸ್ತು ಹೇಳಿತು: "ಅಮ್ಮಾ, ನನ್ನನ್ನು ತೊಳೆದು ಸ್ವಚ್ಛಮಾಡು. ಅಮ್ಮಾ, ನನಗೆ ಸ್ನಾನಮಾಡಿಸು. ಅಮ್ಮಾ, ನನ್ನನ್ನು ಈ ಹೊಲಸಿನಿಂದ ಬಿಡುಗಡೆ ಮಾಡು. ಅಂದರೆ ನನ್ನಿಂದ ನಿನಗೆ ಉಪಯೋಗ ವಾಗುತ್ತದೆ."

"ಅಂಬಟ್ಠನೇ, ಈಗಿನಂತೆ ಆಗ ಜನರು 'ದೆವ್ವ'ಗಳನ್ನು 'ದೆವ್ವ' ಎಂದು ಕರೆಯುತ್ತಿದ್ದರು. ಆಗ ಅವರು ಕಪ್ಪು ವ್ಯಕ್ತಿಗಳನ್ನು (ಕನ್ಹೇ) ದೆವ್ವ ಎಂದು ಕರೆದರು ಮತ್ತು ಅವರು ಹೇಳಿದರು. "ಈ ಮಗು ಹುಟ್ಟಿದ ಕೂಡಲೇ ಮಾತನಾಡಿತು. ಈಗ ಹುಟ್ಟಿರುವುದು ಒಂದು ಕಪ್ಪು (ಕನ್ಹ) ವಸ್ತು. ಒಂದು ದೆವ್ವವು ಹುಟ್ಟಿದೆ. ಅಂಬಟ್ಠನೇ, ಅದು ಕನ್ಹಾಯನರ ಮೂಲವಾಗಿದೆ. ಅವನು ಕನ್ಹಾಯವರ ಪೂರ್ವಜನಾಗಿದ್ದಾನೆ. ಆದ್ದರಿಂದ, ಅಂಬಟ್ಠನೇ, ತಂದೆಯ ಕಡೆಯಿಂದ ಮತ್ತು ತಾಯಿಯ ಕಡೆಯಿಂದ ನಿಮ್ಮ ಪ್ರಾಚೀನ ಹೆಸರು ಮತ್ತು ಪರಂಪರೆಯನ್ನು ಹುಡುಕುತ್ತ ಹೊರಟರೆ ಶಾಕ್ಯರು ಒಮ್ಮೆ ನಿಮ್ಮ ಒಡೆಯರಾಗಿದ್ದರು ಮತ್ತು ನೀವು ಅವರ ದಾಸಿಯರ (ಮಕ್ಕಳ) ಸಂತಾನವಾಗಿದ್ದೀರಿ ಎಂದು ತೋರುತ್ತದೆ."

೧೭. ಅವನು ಹೀಗೆ ಹೇಳಿದಾಗ ತರುಣ ಬ್ರಾಹ್ಮಣರು ಅನುಗ್ರಹೀತನಿಗೆ ಅಂದರು: "ದಾಸಿಯ ವಂಶಜನೆಂದು ಈ ರೀತಿ ನಿಂದಿಸಿ ಪೂಜ್ಯನಾದ ಗೌತಮನು ನಿಷ್ಠುರವಾಗಿ ಅಂಬಟ್ಠನನ್ನು ಹೀಗಳೆಯಬಾರದು. ಗೌತಮ, ಅವನು ಒಳ್ಳೆಯ ವಂಶದಲ್ಲಿ ಹುಟ್ಟಿದ್ದಾನೆ. (ವೇದಗಳನ್ನು) ಪವಿತ್ರ ಮಂತ್ರಗಳನ್ನು ಚೆನ್ನಾಗಿ ಅಧ್ಯಯನ ಮಾಡಿದ್ದಾನೆ. ಸಮರ್ಥವಾಗಿ ಪಠನ ಮಾಡುತ್ತಾನೆ. (ಒಳ್ಳೆಯ) ವಿದ್ವಾಂಸನಾಗಿದ್ದಾನೆ ಮತ್ತು ಈ ವಿಷಯದಲ್ಲಿ ಪೂಜ್ಯ ಗೌತಮನಿಗೆ ಅವನು ಉತ್ತರಕೊಡಲು ಸಮರ್ಥನಿದ್ದಾನೆ."

೧೮. ಆಗ ಅನುಗ್ರಹೀತನು ಅವರಿಗೆ ಹೇಳಿದನು: "ಅದು ಸರಿ, ನೀವು ಬೇರೆ ರೀತಿ ವಿಚಾರ ಮಾಡುತ್ತಿದ್ದರೆ, ನಮ್ಮ ಚರ್ಚೆಯನ್ನು ಮುಂದುವರಿಸುವುದು ನಿಮಗೆ ಸೇರುತ್ತಿತ್ತು. ಆದರೆ ನೀವು ಈ ರೀತಿ ವಿಚಾರ ಮಾಡುತ್ತಿರುವುದರಿಂದ ಅಂಬಟ್ಠನೇ ಮಾತಾಡಲಿ."

೧೯. "ನಾವು ಹಾಗೆ ವಿಚಾರ ಮಾಡುವುದಿಲ್ಲ ಮತ್ತು ನಾವು ಮೌನದಿಂದ ಇರುವೆವು. ಈ ವಿಷಯಗಳಲ್ಲಿ ಪೂಜ್ಯ ಗೌತಮನಿಗೆ ಉತ್ತರಕೊಡಲು ಅಂಬಟ್ಠನು ಸಮರ್ಥನಿದ್ದಾನೆ."

೨೦. ಆಗ ಅನುಗ್ರಹೀತನು ಬ್ರಾಹ್ಮಣ ಅಂಬಟ್ಠನಿಗೆ ಹೇಳಿದನು: "ಅಂಬಟ್ಠನೇ, ಈಗ ಈ ಪ್ರಶ್ನೆಯು ಉಂಟಾಗುತ್ತದೆ. ಮನಸ್ಸಿಲ್ಲದಿದ್ದರೂ ನೀನು ಉತ್ತರ ಕೊಡಲೇಬೇಕಾದ ಅತ್ಯಂತ ಯುಕ್ತಿಯುಕ್ತವಾದ ಪ್ರಶ್ನೆ. ನೀನು ಸರಿಯಾದ ಉತ್ತರ ಕೊಡದಿದ್ದರೆ, ಬೇರೊಂದು ವಿಷಯವನ್ನು ಪ್ರಾರಂಭಿಸಿದರೆ, ಮೌನವಾಗಿ ಉಳಿದರೆ ಅಥವಾ ದೂರ ಹೊರಟುಹೋದರೆ ಈ ಸ್ಥಳದಲ್ಲಿಯೇ ನಿನ್ನ ತಲೆಯೊಡೆದು ತುಂಡು ತುಂಡಾಗುತ್ತದೆ. ವಯಸ್ಸಿನಿಂದ ವೃದ್ಧರಾದ ಮತ್ತು ಜರ್ಝರಿತವಾದ ಬ್ರಾಹ್ಮಣರು, ನಿಮ್ಮ ಗುರುಗಳು, ಅಥವಾ ಅವರ ಗುರುಗಳು ಕನ್ಹಾಯನರು ತಮ್ಮ ಮೂಲವನ್ನು ಎಲ್ಲಿ ಗುರುತಿಸುತ್ತಾರೆ ಮತ್ತು ಅವರು ಗುರುತಿಸುವ ಮೂಲ ಪುರುಷನಾರು ಎಂದು ತಮ್ಮ ತಮ್ಮಲ್ಲಿ ಚರ್ಚಿಸುತ್ತಿದ್ದಾಗ ನೀನು ಏನು ಕೇಳಿರುತ್ತೀ?"

ಅವನು ಹೀಗೆ ಹೇಳಿದಾಗ ಅಂಬಟ್ಠನು ಸುಮ್ಮನೇ ಕುಳಿತನು. ಅನುಗ್ರಹೀತನು ಅದೇ ಪ್ರಶ್ನೆಯನ್ನು ಮತ್ತೊಮ್ಮೆ ಕೇಳಿದನು. ಆದರೂ ಅಂಬಟ್ಠನು ಸುಮ್ಮನಿದ್ದನು. ಆಗ ಅನುಗ್ರಹೀತನು ಅವನಿಗೆ ಅಂದನು: "ಅಂಬಟ್ಠ, ನೀನು ಈಗ ಉತ್ತರ ಕೊಡುವುದು ಒಳ್ಳೆಯದು. ನೀನು ಸುಮ್ಮನೇ ಕೂಡಲಿಕ್ಕೆ ಇದು ಸಮಯವಲ್ಲ. ಏಕೆಂದರೆ, ಅಂಬಟ್ಠನೇ, ತಥಾಗತನು (ಸತ್ಯವನ್ನು ಜಯಿಸಿದಾತನು) ಯೋಗ್ಯವಾದ (ಯುಕ್ತಿಯುಕ್ತವಾದ)

ಪ್ರಶ್ನೆ ಮಾಡಿದಾಗ, ಮೂರನೆಯ ಸಲ ಕೇಳಿದಾಗಲೂ ಯಾವನು ಉತ್ತರಿಸುವುದಿಲ್ಲವೋ ಆ ಸ್ಥಳದಲ್ಲಿಯೇ ಅವನ ತಲೆಯೊಡೆದು ತುಂಡು ತುಂಡಾಗುತ್ತದೆ."

೨೧. ಆ ಸಮಯದಲ್ಲಿ ಅಂಬಟ್ಠನ ಮೇಲೆ ಆಕಾಶದಲ್ಲಿ ಅವನು ಉತ್ತರವನ್ನು ಕೊಡದಿದ್ದರೆ ಆಗಿಂದಾಗಲೇ ಅವನ ತಲೆಯನ್ನು ತುಂಡುತುಂಡಾಗಿ ಒಡೆಯಬೇಕೆಂದು ವಜ್ರಾಯುಧಧಾರಿಯಾದ ದೇವನು ಉರಿಯನ್ನು ಉಗುಳುತ್ತಿರುವ (ಅಥವಾ ಬೆಂಕಿಯಂತೆ ಉರಿಯುವ) ಪ್ರಜ್ವಲಿಸುತ್ತಿರುವ ಮತ್ತು ಹೊಳೆಯುತ್ತಿರುವ ಒಂದು ಬಲಿಷ್ಠವಾದ ಕಬ್ಬಿಣದ ವಸ್ತುವನ್ನು ಹಿಡಿದುಕೊಂಡು ನಿಂತಿದ್ದನು. ಪುಣ್ಯಶಾಲಿಯು ವಜ್ರಾಯುಧವನ್ನು ಹಿಡಿದ ದೇವನನ್ನು ನೋಡಿದನು ಮತ್ತು ಬ್ರಾಹ್ಮಣ ಅಂಬಟ್ಠನೂ ನೋಡಿದನು. ಆಗ ಅಂಬಟ್ಠನು ಅದನ್ನು ತಿಳಿದುಕೊಂಡು ಹೆದರಿ ಗಾಬರಿಯಾಗಿ ಮತ್ತು ಕ್ಷುಬ್ಧನಾಗಿ ಪುಣ್ಯಶಾಲಿಯಿಂದ ಸುರಕ್ಷಿತತೆ, ರಕ್ಷಣೆ ಮತ್ತು ಸಹಾಯವನ್ನು ಬಯಸಿ, ಭಯಭಕ್ತಿಯಿಂದ ಅವನ ಬದಿಯಲ್ಲಿ ಮುದುಡಿಕೊಂಡನು ಮತ್ತು ಅಂದನು: "ಪುಣ್ಯಶಾಲಿಯು ಹೇಳಿದ್ದೇನು? ಅದನ್ನು ಇನ್ನೊಮ್ಮೆ ಹೇಳಬೇಕು!"

"ಅಂಬಟ್ಠಾ, ನಿನಗೆ ಏನು ಅನಿಸುತ್ತದೆ? ಕನ್ಹಾಯನರು ತಮ್ಮ ಮೂಲವನ್ನು ಎಲ್ಲಿ ಗುರುತಿಸುತ್ತಾರೆ ಮತ್ತು ಅವರು ಗುರುತಿಸುವ ಮೂಲ ಪುರುಷನಾರು? ಎಂದು ವೃದ್ಧರಾದ ಮತ್ತು ಜರ್ಝರಿತರಾದ ಬ್ರಾಹ್ಮಣರು, ನಿಮ್ಮ ಗುರುಗಳು ಅಥವಾ ಅವರ ಗುರುಗಳು ತಮ್ಮ ತಮ್ಮಲ್ಲಿ ಚರ್ಚಿಸುತ್ತಿದ್ದಾಗ ನೀನು ಏನು ಕೇಳಿರುತ್ತೀ?"

"ಗೌತಮನೇ, ಸರಿಯಾಗಿ ಅದನ್ನೇ ಕೇಳಿದ್ದೇನೆ. ಪೂಜ್ಯ ಗೌತಮನು ಹೇಳಿದಂತೆಯೇ ಕೇಳಿದ್ದೇನೆ. ಅದು ಕನ್ಹಾಯನರ ಮೂಲವಾಗಿದೆ ಮತ್ತು ಅವರು ಗುರುತಿಸುತ್ತಿರುವ ಮೂಲ ಪುರುಷನೇ ಅವನು ಆಗಿದ್ದಾನೆ!"

೨೨. ಅವನು ಈ ರೀತಿ ಹೇಳಿದಾಗ ತರುಣ ಬ್ರಾಹ್ಮಣರಲ್ಲಿ ಗೊಂದಲ, ಕೋಲಾಹಲ, ಹುಯಿಲು ಉಂಟಾಯಿತು ಮತ್ತು ಅವರು ಅಂದರು: "ಅಂಬಟ್ಠ ಬ್ರಾಹ್ಮಣನು ಕೀಳು ಜಾತಿಯವನೆಂದು ಅವರೆನ್ನುತ್ತಾರೆ. ಅವನ ಮನೆತನವು ಗಣ್ಯ ಮನೆತನಲ್ಲವೆಂದು ಅವರು ಹೇಳುತ್ತಾರೆ. ಅವನು ದಾಸಿಯ ವಂಶಜನೆಂದು ಅವರು ಹೇಳುತ್ತಾರೆ ಮತ್ತು ಶಾಕ್ಯರು ಅವನ ಪ್ರಭುಗಳಾಗಿದ್ದರಂತೆ. ಸಮಣ ಗೌತಮನ ಮಾತುಗಳು ಧರ್ಮದ ಮೂರ್ತರೂಪವಾಗಿದೆ. ಅಂತಹ ಗೌತಮನು ನಂಬಲರ್ಹನಲ್ಲವೆಂದು ನಾವು ತಿಳಿದಿರಲಿಲ್ಲ!'

೨೩. ಆಗ ಅನುಗ್ರಹೀತನು ಹೀಗೆ ವಿಚಾರ ಮಾಡಿದನು: ದಾಸಿಯ ಸಂತತಿಯವನೆಂದು ಅಂಬಟ್ಠನನ್ನು ಹೀಗಳೆಯುವುದರಲ್ಲಿ ಈ ಬ್ರಾಹ್ಮಣರು ಅತಿರೇಕವನ್ನು ಮಾಡುತ್ತಾರೆ. ಅವರ ನಿಂದೆಯಿಂದ ಅವನನ್ನು ನಾನು ಮುಕ್ತವಾಗಿಸಬೇಕು ಮತ್ತು ಅವನು ಅವರಿಗೆ ಹೇಳಿದನು. "ಅವನ ವಂಶವನ್ನು ನಿಮಿತ್ತಮಾಡಿಕೊಂಡು ಅಂಬಟ್ಠ ಬ್ರಾಹ್ಮಣನನ್ನು ನಿಂದೆ ಮಾಡುವಲ್ಲಿ ಅಷ್ಟು ಕಠಿಣರಾಗಬೇಡಿರಿ. ಆ ಕನ್ಹನು ಒಬ್ಬ ದೊಡ್ಡ ಋಷಿಯಾದನು. ಅವನು ದಕ್ಷಿಣಕ್ಕೆ ಹೋದನು. ಅವನು ಅಲ್ಲಿ ರಹಸ್ಯ ಮಂತ್ರಗಳನ್ನು ಕಲಿತನು. ಒಕ್ಕನು ರಾಜನ ಹತ್ತಿರ ತಿರುಗಿ ಬಂದು ಅವನ ಮಗಳಾದ 'ಮದ್ದರೂಪಿ'ಯನ್ನು ಮದುವೆ ಮಾಡಿಕೊಡು ಎಂದು ಬೇಡಿದನು. ಅವನಿಗೆ ರಾಜನು ಹೀಗೆ ಉತ್ತರಿಸಿದನು: "ನನ್ನ ದಾಸಿಯ ಮಗನಾದ ಇವನು ನನ್ನ ಮಗಳನ್ನು ಮದುವೆ ಮಾಡಿಕೊಡು ಎಂದು ಬೇಡುವ ಇವನಾರು?" ಸಿಟ್ಟಿಗೆದ್ದ, ಅಸಂತುಷ್ಟನಾದ ಅವನು ತನ್ನ ಬಿಲ್ಲಿಗೆ ಬಾಣವನ್ನು ಹೂಡಿದನು. ಆದರೆ ಅವನು ಬಾಣವನ್ನು ಬಿಡಲೂ ಸಮರ್ಥನಾಗಲಿಲ್ಲ ಮತ್ತು ಹೆದೆಯಿಂದ ಪುನಃ ಅದನ್ನು ತೆಗೆದುಕೊಳ್ಳಲೂ ಸಮರ್ಥನಾಗಲಿಲ್ಲ.

ಆಗ ಮಂತ್ರಿಗಳು ಮತ್ತು ಆಸ್ಥಾನಿಕರು ಋಷಿ ಕನ್ಹನ ಹತ್ತಿರ ಹೋದರು ಮತ್ತು ಕೇಳಿದರು

"ರಾಜನು ಸುರಕ್ಷಿತವಾಗಿರಲಿ, ಪೂಜ್ಯನೇ ರಾಜನು ಸುರಕ್ಷಿತವಾಗಿರಲಿ."

"ರಾಜನಿಗೆ ಏನೂ ತೊಂದರೆಯಾಗುವುದಿಲ್ಲ. ಆದರೆ ಅವನು ಬಾಣವನ್ನು ಕೆಳಗೆ ಬಿಟ್ಟರೆ ಅವನ ಆಡಳಿತವಿರುವವರೆಗೆ ಭೂಮಿಯು ಒಣಗುವುದು."

"ಪೂಜ್ಯನೇ, ರಾಜನೂ ಅವನ ರಾಷ್ಟ್ರವೂ ಸುರಕ್ಷಿತವಾಗಿರಲಿ."

"ರಾಜನಿಗೂ ಅವನ ರಾಜ್ಯಕ್ಕೂ ಏನೂ ತೊಂದರೆಯಾಗುವುದಿಲ್ಲ. ಆದರೆ ಅವನು ಬಾಣವನ್ನು ಮೇಲೆ ಬಿಟ್ಟರೆ ಅವನ ಆಡಳಿತವಿರುವ ಪ್ರದೇಶದಲ್ಲಿ ಏಳು ವರುಷಗಳವರೆಗೆ ದೇವನು ಮಳೆಗರೆಯುವುದಿಲ್ಲ."

"ಪೂಜ್ಯನೇ, ರಾಜನು ಮತ್ತು ರಾಷ್ಟ್ರವೂ ಸುರಕ್ಷಿತವಾಗಿರಲಿ. ದೇವನು ಮಳೆಗರೆಯಲಿ."

"ರಾಜನಿಗೂ ರಾಷ್ಟ್ರಕ್ಕೂ ಏನೂ ತೊಂದರೆಯಾಗುವುದಿಲ್ಲ ಮತ್ತು ದೇವರು ಮಳೆಗರೆಯುವನು. ಆದರೆ ರಾಜನು ತನ್ನ ಜ್ಯೇಷ್ಠಪುತ್ರನಿಗೆ ಗುರಿಯಿಡಲಿ. ರಾಜಕುಮಾರನಿಗೆ ಏನೂ ಅಪಾಯವಾಗುವುದಿಲ್ಲ, ಅವನ ಒಂದು ರೋಮವೂ ಅಲ್ಲಾಡುವುದಿಲ್ಲ."

ಬ್ರಾಹ್ಮಣರೇ, ಆಗ ಮಂತ್ರಿಗಳು ಒಕ್ಕಕನಿಗೆ ಇದನ್ನು ತಿಳಿಸಿದರು ಮತ್ತು ಅಂದರು. "ರಾಜನು ತನ್ನ ಜ್ಯೇಷ್ಠ ಪುತ್ರನಿಗೆ ಗುರಿಯಿಡಲಿ. ಅವನಿಗೆ ಅಪಾಯವೂ ಭಯವೂ ಆಗುವುದಿಲ್ಲ. ರಾಜನು ಅದರಂತೆ ಮಾಡಿದನು. ಅಲ್ಲದೆ ಏನೂ ಅಪಾಯವಾಗಲಿಲ್ಲ. ಆದರೆ ತನಗೆ ತಿಳಿಸಿದ (ಹೇಳಿಕೊಟ್ಟ) ಪಾಠದಿಂದ ಗಾಬರಿಯಾದ ರಾಜನು ತನ್ನ ಮಗಳು ಮದ್ದರೂಪಿಯನ್ನು ಹೆಂಡತಿಯೆಂದು ಮದುವೆ ಮಾಡಿ ಅವನಿಗೆ ಕೊಟ್ಟನು. ಆದ್ದರಿಂದ ಬ್ರಾಹ್ಮಣರೇ, ದಾಸಿಯ ಸಂತತಿಯವನೆಂದು ಅಂಬಟ್ಠನನ್ನು ನೀವು ನಿಷ್ಕರುಣಿಗಳಾಗಿ ಹೀಗಳೆಯಬೇಡಿರಿ. ಆ ಕನ್ಹನು ಒಬ್ಬ ದೊಡ್ಡ ಋಷಿಯಾಗಿದ್ದನು."

೨೪. ಅನಂತರ ಅನುಗ್ರಹೀತನು ಅಂಬಟ್ಠನಿಗೆ ಹೇಳಿದನು: "ಅಂಬಟ್ಠನೇ ನಿನಗೆ ಏನು ಅನಿಸುತ್ತದೆ ಒಬ್ಬ ಕ್ಷತ್ರಿಯ ಯುವಕನು ಒಬ್ಬ ಬ್ರಾಹ್ಮಣ ತರುಣಿಯ ಸಂಬಂಧ ಮಾಡಿದ್ದಾನೆ ಮತ್ತು ಅವರ ಸಂಬಂಧದಿಂದ ಒಬ್ಬ ಮಗನು ಹುಟ್ಟಿದ್ದಾನೆ ಎಂದು ಭಾವಿಸಿಕೊ. ಈಗ ಬ್ರಾಹ್ಮಣ ತರುಣಿಗೆ ಕ್ಷತ್ರಿಯ ಯುವಕನಿಂದ ಹುಟ್ಟಿದ ಮಗನು ಬ್ರಾಹ್ಮಣರಿಂದ (ಗೌರವದ ಅಥವಾ ಆದರದ ಚಿಹ್ನೆಯಾದ) ಆಸನ ಮತ್ತು ನೀರನ್ನು ಪಡೆಯುತ್ತಾನೆಯೇ?'

"ಹೌದು, ಗೌತಮನೇ! ಅವನು ಪಡೆಯುತ್ತಾನೆ."

"ಆದರೆ ಪಿತೃಗಳಿಗೆ ಅರ್ಪಿಸಿದ ಆಹಾರವನ್ನು (ಭಕ್ಷ್ಯವನ್ನು) ಅಥವಾ ಹಾಲಿನಲ್ಲಿ ಬೇಯಿಸಿದ ಆಹಾರವನ್ನು ಅಥವಾ ದೇವತೆಗಳಿಗೆ ಅರ್ಪಿಸಿದ ಆಹಾರವನ್ನು ಅಥವಾ ಉಡುಗೊರೆಯಾಗಿ ಬಂದ ಆಹಾರವನ್ನು ಅವನು ಸ್ವೀಕರಿಸಲಿಕ್ಕೆ ಬ್ರಾಹ್ಮಣರು ಒಪ್ಪಿಗೆ ನೀಡುವರೇ?"

"ಹೌದು ಗೌತಮನೇ, ಅವರು ಒಪ್ಪಿಕೊಳ್ಳುವರು."

"ಆದರೆ ಬ್ರಾಹ್ಮಣರು ಅವನಿಗೆ ತಮ್ಮ ಮಂತ್ರಗಳನ್ನು ಉಪದೇಶಿಸುವರೋ ಇಲ್ಲವೋ?"

"ಗೌತಮನೇ, ಅವರು ಉಪದೇಶಿಸುವರು."

"ಆದರೆ ಅವನನ್ನು ತಮ್ಮ ಸ್ತ್ರೀಯರಿಂದ ದೂರವಿಡುವರೋ ಅಥವಾ ಇಲ್ಲವೋ?"

"ಅವನನ್ನು ದೂರವಿಡುವುದಿಲ್ಲ."

"ಆದರೆ ಕ್ಷತ್ರಿಯರ ದೀಕ್ಷೆ ಅಥವಾ ಸಂಸ್ಕಾರವನ್ನು ಪಡೆಯಲು ಕ್ಷತ್ರಿಯರು ಅವನಿಗೆ ಸಮ್ಮತಿಸುವರೇ?"

"ಗೌತಮನೇ, ನಿಶ್ಚಯವಾಗಿಯೂ ಇಲ್ಲ."

"ಏಕೆಂದರೆ ತಾಯಿಯ ಕಡೆಯಿಂದ ಅವನು ಶುದ್ಧ ಸಂತತಿಯವನಲ್ಲ."

ಈಗ ಅಂಬಟ್ಠನೇ, ನಿನಗೆ ಏನು ಅನಿಸುತ್ತದೆ? ಒಬ್ಬ ಬ್ರಾಹ್ಮಣ ಯುವಕನು ಒಬ್ಬ ಕ್ಷತ್ರಿಯ

ತರುಣಿಯ ಸಂಬಂಧ ಮಾಡಿದ್ದಾನೆ ಮತ್ತು ಈ ಸಂಬಂಧದಿಂದ ಒಬ್ಬ ಮಗ ಹುಟ್ಟಿದ್ದಾನೆ ಎಂದು ಭಾವಿಸಿಕೊ. ಈಗ ಕ್ಷತ್ರಿಯ ತರುಣಿಗೆ ಬ್ರಾಹ್ಮಣ ಯುವಕನಿಂದ ಹುಟ್ಟಿದ ಮಗನು ಬ್ರಾಹ್ಮಣರಿಂದ (ಆದರದ ಗುರುತಾಗಿ) ಆಸನ ಮತ್ತು ನೀರನ್ನು ಪಡೆಯುವನೇ?

"ಹೌದು, ಗೌತಮನೇ, ಪಡೆಯುವನು."

"ಆದರೆ ಪಿತೃಗಳಿಗೆ ಅರ್ಪಿಸಿದ ಆಹಾರವನ್ನು (ಭಕ್ಷ್ಯವನ್ನು) ಅಥವಾ ಹಾಲಿನಲ್ಲಿ ಬೇಯಿಸಿದ ಆಹಾರವನ್ನು ಅಥವಾ ದೇವತೆಗಳಿಗೆ ಅರ್ಪಿಸಿದ ಆಹಾರವನ್ನು ಅಥವಾ ಉಡುಗೊರೆಯಾಗಿ ಬಂದ ಆಹಾರವನ್ನು ಸ್ವೀಕರಿಸಲು ಬ್ರಾಹ್ಮಣರು ಅವನಿಗೆ ಒಪ್ಪಿಗೆ ನೀಡುವರೇ?"

"ಹೌದು ಗೌತಮನೇ, ಅವರು ಒಪ್ಪಿಗೆ ನೀಡುವರು."

"ಆದರೆ ಬ್ರಾಹ್ಮಣರು ಅವನಿಗೆ ತಮ್ಮ ಮಂತ್ರಗಳನ್ನು ಉಪದೇಶಿಸುವರೋ ಇಲ್ಲವೋ?"

"ಗೌತಮನೇ, ಅವರು ಉಪದೇಶಿಸುವರು."

"ಆದರೆ ಕ್ಷತ್ರಿಯರ ದೀಕ್ಷೆ ಅಥವಾ ಸಂಸ್ಕಾರವನ್ನು ಅವನು ಪಡೆಯಲು ಕ್ಷತ್ರಿಯರು ಸಮ್ಮತಿಸುವರೇ?"

"ಗೌತಮನೇ, ನಿಶ್ಚಯವಾಗಿಯೂ ಇಲ್ಲ."

"ಅದೇಕೆ ಇಲ್ಲ?"

"ಏಕೆಂದರೆ, ತಂದೆಯ ಕಡೆಯಿಂದ ಅವನು ಶುದ್ಧ ಸಂತತಿಯವನಲ್ಲ."

೨೬. "ಅಂಬಟ್ಠನೇ, ಹೀಗೆ ಸ್ತ್ರೀಯರನ್ನು ಸ್ತ್ರೀಯರಿಗೆ ಹೋಲಿಸಲಿ ಅಥವಾ ಪುರುಷರನ್ನು ಪುರುಷರಿಗೆ ಹೋಲಿಸಲಿ. ಕ್ಷತ್ರಿಯರು ಉಚ್ಚರು (ಉತ್ತಮ ವರ್ಗದವರು) ಮತ್ತು ಬ್ರಾಹ್ಮಣರು ನೀಚರು (ಅಧಮ ತರಗತಿಯವರು) ಎಂದಾಗುತ್ತದೆ."

"ಅಂಬಟ್ಠನೇ, ನಿನಗೆ ಏನು ಅನಿಸುತ್ತದೆ? ಒಂದಲ್ಲ ಒಂದು ತಪ್ಪಿಗಾಗಿ ಒಬ್ಬ ಬ್ರಾಹ್ಮಣನನ್ನು (ಸಮಾಜದಿಂದ) ಹೊರಹಾಕಿ ತಲೆ ಬೋಳಿಸಿ, ತಲೆಯ ಮೇಲೆ ಬೂದಿಯನ್ನು ಸುರುವಿ, ನಗರದಿಂದ ಮತ್ತು ದೇಶದಿಂದ ಹೊರ ಹಾಕಿದ್ದಾರೆಯೆಂದು ಭಾವಿಸಿಕೊ. ಬ್ರಾಹ್ಮಣರು ಅವನಿಗೆ ಆಸನ ಅಥವಾ ನೀರನ್ನು ಕೊಡುವರೇ?"

"ಗೌತಮನೇ, ನಿಶ್ಚಯವಾಗಿಯೂ ಇಲ್ಲ."

"ಅಥವಾ ಪಿತೃಗಳಿಗೆ ಅರ್ಪಿಸಿದ ಆಹಾರವನ್ನು (ಭಕ್ಷ್ಯವನ್ನು) ಅಥವಾ ಹಾಲಿನಲ್ಲಿ ಬೇಯಿಸಿದ ಆಹಾರವನ್ನು ಅಥವಾ ದೇವತೆಗಳಿಗೆ ಅರ್ಪಿಸಿದ ಆಹಾರವನ್ನು ಅಥವಾ ಉಡುಗೊರೆ (ಕಾಣಿಕೆ)ಯಾಗಿ ಬಂದ ಆಹಾರವನ್ನು ಸ್ವೀಕರಿಸಲು ಬ್ರಾಹ್ಮಣರು ಅವನಿಗೆ ಅನುಮತಿ ನೀಡುವರೇ?"

"ಗೌತಮನೇ ನಿಶ್ಚಯವಾಗಿಯೂ ಇಲ್ಲ."

"ಮತ್ತು ಅವನನ್ನು ತಮ್ಮ ಸ್ತ್ರೀಯರಿಂದ ದೂರ ಮಾಡುವರೋ ಅಥವಾ ಇಲ್ಲವೋ?"

"ಅವನನ್ನು ದೂರಮಾಡುವರು."

೨೭. "ಅಂಬಟ್ಠನೇ ನಿನಗೆ ಏನು ಅನಿಸುತ್ತದೆ? ಅದೇ ರೀತಿಯಲ್ಲಿ ಕ್ಷತ್ರಿಯರು ಒಬ್ಬ ಕ್ಷತ್ರಿಯನನ್ನು ಬಹಿಷ್ಕರಿಸಿ ನಗರದಿಂದ ಮತ್ತು ದೇಶದಿಂದ ಹೊರಹಾಕಿದರೆ, ಬ್ರಾಹ್ಮಣರು ಅವನಿಗೆ ನೀರು ಮತ್ತು ಆಸನವನ್ನು ಕೊಡುತ್ತಾರೆಯೇ? (ಅವನು ಬ್ರಾಹ್ಮಣರಿಂದ ಪಡೆಯುತ್ತಾನೆಯೇ?)"

"ಹೌದು ಗೌತಮನೇ, ಕೊಡುತ್ತಾರೆ (ಅವನು ಪಡೆಯುತ್ತಾನೆ)."

"ಮತ್ತು ಪಿತೃಗಳಿಗೆ ಅರ್ಪಿಸಿದ ಆಹಾರವನ್ನು (ಭಕ್ಷ್ಯವನ್ನು) ಅಥವಾ ಹಾಲಿನಲ್ಲಿ ಬೇಯಿಸಿದ

ಆಹಾರವನ್ನು ಅಥವಾ ಕಾಣಿಕೆಯಾಗಿ ಬಂದ ಆಹಾರವನ್ನು ಸ್ವೀಕರಿಸಲು ಅವನಿಗೆ ಬ್ರಾಹ್ಮಣರು ಅನುಮತಿ ನೀಡುವರೇ?"

"ಗೌತಮನೇ, ಅವನು ಅನುಮತಿ ಪಡೆಯುತ್ತಾನೆ."

"ಮತ್ತು ಬ್ರಾಹ್ಮಣರು ಅವನಿಗೆ ತಮ್ಮ ಮಂತ್ರಗಳನ್ನು ಉಪದೇಶಿಸುವರೇ?"

"ಗೌತಮನೇ, ಅವರು ಉಪದೇಶಿಸುವರು."

"ಮತ್ತು ತಮ್ಮ ಸ್ತ್ರೀಯರಿಂದ ಅವನನ್ನು ದೂರ ಮಾಡುವರೋ ಅಥವಾ ಇಲ್ಲವೋ?"

"ಗೌತಮನೇ, ಅವನನ್ನು ದೂರಮಾಡುವುದಿಲ್ಲ."

"ಆದರೆ ಅಂಬಟ್ಠನೇ ಆಗ ತಲೆ ಬೋಳಿಸಿಕೊಂಡು ತಲೆಯ ಮೇಲೆ ಬೂದಿಯನ್ನು ಸುರುವಿಕೊಂಡು ನಗರ ಮತ್ತು ರಾಷ್ಟ್ರದಿಂದ ಹೊರಹಾಕಲ್ಪಟ್ಟ ಕ್ಷತ್ರಿಯನು ಅತ್ಯಂತ ನೀಚಗತಿಯನ್ನು ಹೊಂದಿರುತ್ತಾನೆ. ಹೀಗೆ ಕ್ಷತ್ರಿಯನು ಅತ್ಯಂತ ನೀಚಗತಿಯನ್ನು ಹೊಂದಿದಾಗಲೂ, ಕ್ಷತ್ರಿಯನು ಉಚ್ಚ ವರ್ಗದವನು ಮತ್ತು ಬ್ರಾಹ್ಮಣನು ನೀಚ ವರ್ಗದವನು ಎಂಬುವುದು ಊರ್ಜಿತವಾಗಿರುತ್ತದೆ.

೨೮. "ಮೇಲಾಗಿ ಬ್ರಹ್ಮ ದೇವತೆಗಳಲ್ಲಿ ಒಬ್ಬನಾದ ಸನತ್‌ಕುಮಾರನು ಈ ಶ್ಲೋಕವನ್ನು ಹೇಳಿದನು."

"ತಮ್ಮ ಪರಂಪರೆಯಲ್ಲಿ ವಿಶ್ವಾಸವುಳ್ಳ ಈ ಜನತೆಯಲ್ಲಿ ಕ್ಷತ್ರಿಯನು ಅತ್ಯುತ್ತಮವಾಗಿದ್ದಾನೆ."

"ಆದರೆ ಜ್ಞಾನ ಮತ್ತು ಧರ್ಮಗಳಲ್ಲಿ ಯಾವನು ಪರಿಪೂರ್ಣನಾಗಿದ್ದಾನೋ ಅವನು ದೇವತೆಗಳಲ್ಲಿ ಮತ್ತು ಮನುಷ್ಯರಲ್ಲಿ ಶ್ರೇಷ್ಠನಾಗಿದ್ದಾನೆ, ಅಂಬಟ್ಠನೇ, ಬ್ರಹ್ಮ ಸನತ್‌ಕುಮಾರನ ಈ ಶ್ಲೋಕವು ಮಧುರವಾಗಿ ಹಾಡಲ್ಪಟ್ಟಿದೆ. ಕರ್ಕಶವಾಗಿ ಹಾಡಲ್ಪಟ್ಟಿಲ್ಲ. ಚೆನ್ನಾಗಿ ಹೇಳಲ್ಪಟ್ಟಿದೆ, ಒರಟಾಗಿ ಹೇಳಲ್ಪಟ್ಟಿಲ್ಲ; ಇದು ಅರ್ಥ ಪೂರ್ಣವಾಗಿದೆ, ನಿರರ್ಥಕವಾಗಿಲ್ಲ; ನಾನು ಇದಕ್ಕೆ ಸಮ್ಮತಿಸುತ್ತೇನೆ."

"ನಾನು ಸಹ" ಅಂಬಟ್ಠನು ಹೇಳಿದನು.

"ತಮ್ಮ ವಂಶಪರಂಪರೆಯಲ್ಲಿ ವಿಶ್ವಾಸವುಳ್ಳ ಈ ಜನತೆಯಲ್ಲಿ ಕ್ಷತ್ರಿಯನು ಅತ್ಯುತ್ತಮನಾಗಿದ್ದಾನೆ."

"ಆದರೆ ಜ್ಞಾನ ಮತ್ತು ಧರ್ಮಗಳಲ್ಲಿ ಯಾವನು ಪರಿಪೂರ್ಣನಾಗಿದ್ದಾನೋ ಅವನು ದೇವತೆಗಳಲ್ಲಿ ಮತ್ತು ಮನುಷ್ಯರಲ್ಲಿ ಶ್ರೇಷ್ಠನಾಗಿದ್ದಾನೆ."

"ಇಲ್ಲಿಗೆ ಪತನದ (ಪತನೆಗಳ ನಿರೂಪಣೆಯ) ಪ್ರಥಮ ಭಾಗ ಮುಗಿಯಿತು."

೧. "ಆದರೆ ಗೌತಮನೇ, ಆ ಶ್ಲೋಕದಲ್ಲಿ ಹೇಳಿರುವ ಧರ್ಮ ಎಂದರೇನು? ಮತ್ತು 'ಜ್ಞಾನಿ' (ಬುದ್ಧ) ಎಂದರೇನು?"

"ಅಂಬಟ್ಠನೇ, ಜ್ಞಾನ ಮತ್ತು ಪರಿಪೂರ್ಣತೆಯಲ್ಲಿ ಜನ್ಮ ವಂಶ 'ನೀನು ನನ್ನಂತೆ ಅರ್ಹನೆಂದು ಗಣಿಸಲ್ಪಡುತ್ತೀಯೆ' ಅಥವಾ 'ನೀನು ನನ್ನಂತೆ ಅರ್ಹನಲ್ಲ' ಎಂದು ಹೇಳುವ ಗರ್ವದ ಉಲ್ಲೇಖವಿರುವುದಿಲ್ಲ. ಮದುವೆಯಾಗುವಾಗ ಅಥವಾ ಮದುವೆ ಮಾಡಿಕೊಡುವಾಗ ಇಂತಹ ವಿಷಯಗಳ ಉಲ್ಲೇಖ ಮಾಡುತ್ತಾರೆ. ಅಂಬಟ್ಠನೇ, ಯಾರು ಜನ್ಮ ಅಥವಾ ವಂಶಗಳ ಕಲ್ಪನೆಗೆ ಬದ್ಧರಾಗಿರುತ್ತಾರೋ ಅಥವಾ ಸಾಮಾಜಿಕ ಸ್ಥಾನಮಾನದ ಅಭಿಯಾನಕ್ಕೆ ಅಥವಾ ಮದುವೆಯ ಸಂಬಂಧಕ್ಕೆ ಬದ್ಧರಾಗಿರುತ್ತಾರೋ ಅವರು ಉತ್ತಮ ಜ್ಞಾನ ಮತ್ತು ಧರ್ಮಗಳಿಂದ ಬಹುದೂರದಲ್ಲಿರುತ್ತಾರೆ. ಇಂತಹ ಬಂಧನಗಳನ್ನು ಕಿತ್ತೊಗೆದಾಗಲೇ ಮಾನವನಿಗೆ ತಾನಾಗಿ ಜ್ಞಾನ ಮತ್ತು ನಡತೆಗಳ ಪರಿಪೂರ್ಣತೆಯ ಅನುಭವವುಂಟಾಗುತ್ತದೆ."

೨. "ಆದರೆ ಗೌತಮನೇ, ಆ ನಡತೆಯೆಂದರೇನು? ಮತ್ತು ಆ ಜ್ಞಾನವೆಂದರೇನು?"

(ಇಲ್ಲಿ ನಡತೆ ಶೀಲ ಈ ವಿಷಯದ ಕೆಳಗೆ ಬುದ್ಧನ ದರ್ಶನ, ಶ್ರೋತೃವಿನ ಪರಿವರ್ತನೆಗಾಗಿ ಅವನ ಉಪದೇಶ ಮತ್ತು ಅವನಿಂದ ಸಂಸಾರ ತ್ಯಾಗ ಈ ವಿಷಯಗಳ ಬಗೆಗಿನ ಪ್ರಾರಂಭದ ವಾಕ್ಯಾವಳಿಗಳು

ಗ್ರಂಥದ ೬೨–೬೩ನೇ ಪುಟಗಳಲ್ಲಿ, 'ಸಮಾನ ಫಲ'ದ ೪೦–೪೨ನೇ ಪರಿಚ್ಛೇದಗಳಲ್ಲಿ ಮುಂದುವರಿಯುತ್ತವೆ. ಅದಾದ ಅನಂತರ:

೧. ಶೀಲಗಳು, ಮೇಲಿನ ಗ್ರಂಥದ ಪು. ೪–೧೨ (೮–೨೭)ರಲ್ಲಿ ಕೇವಲ ಕೊನೆಯಲ್ಲಿನ ಪಲ್ಲವಿ ಬದಲಾಗುತ್ತದೆ. ಇಲ್ಲಿ ಪುನರಾವರ್ತನೆಯಾದ ಈ ಇಡಿ ವಾಕ್ಯವೃಂದ ಪ್ರತಿಯೊಂದು ವಾಕ್ಯದ ಕೊನೆಗೆ ಹೀಗಿದೆ: 'ಇದು ಅವನಲ್ಲಿ ನೀತಿ ಎಂದು ಕರೆಸಿಕೊಳ್ಳುತ್ತದೆ.'

ಅನಂತರ 'ನಡತೆ'. (ಕರುಣ) ಈ ವಿಷಯದ ಕೆಳಗೆ:

೨. 'ವಿಶ್ವಾಸದ ಮೇಲಿನ ವಾಕ್ಯವೃಂದ. ಪಥ್ಯ ೬೩ರ ಪುಟ ೬೯ರಲ್ಲಿ. ಇಲ್ಲಿಂದ ಮುಂದೆ ಕೊನೆಯ ಪಲ್ಲವಿ ಹೀಗಿದೆ: 'ಇದು ಅವನಲ್ಲಿ ನಡತೆ ಎನ್ನಿಸಿಕೊಳ್ಳುತ್ತದೆ.'

೩. ಜ್ಞಾನ, ಇಂದ್ರಿಯಗಳ ದ್ವಾರವು ಸುರಕ್ಷಿತವಾಗಿದೆ. ಪಥ್ಯ ೬೪ರ ಪುಟ ೭೦ರಲ್ಲಿ.

೪. ಲಕ್ಷ್ಯ (ಗಮನ) ಮತ್ತು ಆತ್ಮನಿಷ್ಠೆಯನ್ನು (ನಿಗ್ರಹ) ಕುರಿತ ವಾಕ್ಯವೃಂದ ಪಥ್ಯ ೬೫ರ ಪುಟ ೭೦ರಲ್ಲಿ.

೫. 'ತೃಪ್ತಿ' (ಅಥವಾ ವಿಷಯ) ವನ್ನು ಕುರಿತು ವಾಕ್ಯವೃಂದ ಪಥ್ಯ ೬೫ರ ಪುಟ ೭೧ರಲ್ಲಿ.

೬. 'ಏಕಾಂತ'ವನ್ನು ಕುರಿತ ವಾಕ್ಯವೃಂದ ಪಥ್ಯ ೬೭ರ ಪುಟ ೭೧ರಲ್ಲಿ.

೭. 'ಐದು ವಿಘ್ನಗಳು' ಇದನ್ನು ಕುರಿತು ಇರುವ ವಾಕ್ಯ ವೃಂದಗಳು ಪಥ್ಯ ೬೮–೭೪ರ ಪುಟ ೭೧–೭೨ರಲ್ಲಿ.

ನಾಲ್ಕು ತನ್ಮಯ ಚಿಂತನೆ (ಧಾನ್ಯ)ಗಳು ಇದನ್ನು ಕುರಿತ ವಾಕ್ಯವೃಂದಗಳು. ಪಥ್ಯ ೭೩–೭೬ರ ಪುಟ ೭೫–೮೨ರಲ್ಲಿ. ಇವುಗಳಲ್ಲಿ ಪ್ರತಿಯೊಂದರ ಕೊನೆಯಲ್ಲಿನ ಪಲ್ಲವಿಯನ್ನು (ಕೊನೆಯದಕ್ಕಿಂತ ಉನ್ನತವಾದ ಮತ್ತು ಒಳ್ಳೆಯದಾದ) ಏಕಾಂತವಾಸಿಯ ಜೀವನದ ಉತ್ತಮ ಫಲವೆಂದು ಓದಬಾರದು. ಆದರೆ ಉನ್ನತ ನಡತೆಯೆಂದು ಪರಿಗಣಿಸಬೇಕು.

## ಜ್ಞಾನ (ವಿಗ್ಗ)ವನ್ನು ಕುರಿತು

೯. 'ಜ್ಞಾನದಿಂದ ಉತ್ಪನ್ನವಾಗುವ ಅಂತರ್ದೃಷ್ಟಿ (ನಾನಾದಸ್ಸನಮ್) ಯನ್ನು ಕುರಿತ ವಾಕ್ಯವೃಂದಗಳು. ಪಥ್ಯ ೮೩, ೮೪ರ ಪುಟ ೭೬ರಲ್ಲಿ. ಇಲ್ಲಿಂದ ಮುಂದಿನ ಕೊನೆಯ ಪಲ್ಲವಿ ಹೀಗಿದೆ: 'ಇದು ಅವನ ಜ್ಞಾನವೆನಿಸುತ್ತದೆ ಮತ್ತು ಅದು ಹಿಂದಿನದಕ್ಕಿಂತ ಉನ್ನತ ಹಾಗೂ ಮಧುರವಾಗಿದೆ.'

೧೦. 'ಮಾನಸ ಕಲ್ಪನೆ (ಚಿತ್ತ)' ಯನ್ನು ಕುರಿತ ವಾಕ್ಯವೃಂದಗಳು ಪಥ್ಯ–೮೫, ೮೬ರ ಪುಟ ೭೭ರಲ್ಲಿ.

೧೧. 'ರಹಸ್ಯ (ಅತೀಂದ್ರಿಯ) ಕಾಣಿಕೆ' (ಇದ್ಧಿ)ಯನ್ನು ಕುರಿತ ವಾಕ್ಯ ವೃಂದಗಳು. ಪಥ್ಯ ೮೭, ೮೮ರ ಪುಟ ೭೭ರಲ್ಲಿ.

೧೨. 'ದಿವ್ಯ ಕಿವಿ' (ದಿಬ್ಬ ಸೋತ)ಯನ್ನು ಕುರಿತ ವಾಕ್ಯವೃಂದಗಳು ಪಥ್ಯ ೮೯–೯೦ ಪುಟ ೭೯ರಲ್ಲಿ.

೧೩. 'ಪರಹೃದಯ ಪರಿಜ್ಞಾನ' (ಕಟೋಪರಿಯನಾನಮ್)ವನ್ನು ಕುರಿತ ವಾಕ್ಯವೃಂದಗಳು ಪಥ್ಯ ೯೧–೯೨ರ ಪುಟ ೭೯ರಲ್ಲಿ.

೧೪. 'ತನ್ನ (ಹಿಂದಿನ) ಗತ ಜನ್ಮಗಳ ಸ್ಮರಣೆ'ಯನ್ನು (ಪುಬ್ಬೆ ನಿವಾಸ – ಅನುಸ್ಸತಿ – ನಾಮ) ಕುರಿತು ವಾಕ್ಯವೃಂದಗಳು. ಪಥ್ಯ ೯೩–೯೪ರ ಪುಟ ೮೧ರಲ್ಲಿ.

೧೫. 'ದಿವ್ಯಚುಕ್ಷು' (ದಿಬ್ಬಕಕ್ಖು) ವನ್ನು ಕುರಿತ ವಾಕ್ಯವೃಂದ. ಪರ್ತ್ಯ ೯೫–೯೬ರ ಪುಟ ೮೨ರಲ್ಲಿ.

೧೬. 'ಮಾರಕ ಮಹಾಪೂರಗಳ ನಾಶ'ವನ್ನು (ಅಸವಾನಾಂ ಖಯನಾನಂ) ಕುರಿತ ವಾಕ್ಯವೃಂದಗಳು ಪರ್ತ್ಯ ೯೭–೯೮ರ ಪುಟ ೮೩ರಲ್ಲಿ.

"ಅಂಬಟ್ಠನೇ, ಇಂತಹ ಮನುಷ್ಯನು ಜ್ಞಾನದಲ್ಲಿ ಪರಿಪೂರ್ಣ, ನಡತೆಯಲ್ಲಿ ಪರಿಪೂರ್ಣ, ಜ್ಞಾನ ಮತ್ತು ನಡತೆಯಲ್ಲಿ ಇದಕ್ಕಿಂತ ಉಚ್ಚ ಮತ್ತು ಮಧುರವಾದ ಬೇರೆ ಪರಿಪೂರ್ಣತೆಯೆಂಬುದಿಲ್ಲ."

೩. "ಅಂಬಟ್ಠನೇ, ಜ್ಞಾನ ಮತ್ತು ಒಳ್ಳೆಯ ನಡತೆ (ಸಜ್ಜನಿಕೆ) ಗಳ ಪರಿಪೂರ್ಣತೆಗೆ ನಾಲ್ಕು ರಂಧ್ರಗಳು (ಸೋರುಗಿಂಡಿಗಳು) ಇವೆ. "ಆ ನಾಲ್ಕು ರಂಧ್ರಗಳು ಯಾವುವು?"

"ಅಂಬಟ್ಠ, ಯಾವುದೇ ವಿರಕ್ತ (ಏಕಾಂತ ವಾಸಿ) ಅಥವಾ ಬ್ರಾಹ್ಮಣನು, ಜ್ಞಾನ ಮತ್ತು ನಡತೆಯಲ್ಲಿ ಪರಿಪೂರ್ಣತೆಯನ್ನು ಸಂಪಾದಿಸದೆ (ಸಮಿಧೆಗಳು, ಕಮಂಡಲು, ಸೂಜಿಗಳು ಮತ್ತು ಭಿಕ್ಷುವಿನ ಇತರ ಸಾಮಗ್ರಿಗಳನ್ನು ಹೊತ್ತೊಯ್ಯಲು) ಹೆಗಲ ಮೇಲೆ ನೊಗವನ್ನಿಟ್ಟುಕೊಂಡು 'ಇನ್ನು ಮುಂದೆ ನಾನು ತಾವಾಗಿ ಉದುರಿಬಿದ್ದ ಹಣ್ಣುಗಳ ಮೇಲೆ ಉಪಜೀವನ ಸಾಗಿಸುವವರಲ್ಲಿ ಒಬ್ಬನಾಗುತ್ತೇನೆ' ಎಂದು ಪ್ರತಿಜ್ಞೆಮಾಡಿ ದಟ್ಟಡವಿಯನ್ನು ಪ್ರವೇಶಿಸಿದರೆ, ಆಗ ಅವನು ನಿಜವಾಗಿ ಜ್ಞಾನ ಮತ್ತು ಧರ್ಮಗಳ ಪೂರ್ಣತೆಯನ್ನು ಸಂಪಾದಿಸಿದವನ ಕೇವಲ ಸೇವಕನಾಗಲು ಅರ್ಹನಾಗುತ್ತಾನೆ ಅಷ್ಟೆ."

"ಮತ್ತು ಅಂಬಟ್ಠನೇ, ಯಾವುದೇ ವಿರಕ್ತ ಅಥವಾ ಬ್ರಾಹ್ಮಣನು, ಜ್ಞಾನ ಮತ್ತು ನಡತೆಯಲ್ಲಿ ಈ ಪರಿಪೂರ್ಣತೆಯನ್ನು ಸಂಪಾದಿಸದೇ, ತಾವಾಗಿ ಉದುರಿಬಿದ್ದ ಹಣ್ಣುಗಳಿಂದ ಉಪಜೀವನವನ್ನು ಸಾಗಿಸದೆ, ಕಂದಮೂಲ ಮತ್ತು ಹಣ್ಣುಗಳಿಂದ ಉಪಜೀವನವನ್ನು ಸಾಗಿಸದೆ, ಯಾವುದಾದರೂ ಗ್ರಾಮ ಅಥವಾ ನಗರದ ಹೊರವಲಯದಲ್ಲಿ ಅಗ್ನಿಶಾಲೆಯನ್ನು ಕಟ್ಟಿಕೊಳ್ಳುವನೋ ಮತ್ತು ಅಗ್ನಿದೇವನನ್ನು ಪೂಜಿಸುತ್ತ ಅಲ್ಲಿ ವಾಸಿಸುವನೋ, ಅವನು ವಾಸ್ತವಿಕವಾಗಿ ಜ್ಞಾನ ಮತ್ತು ಧರ್ಮಗಳಲ್ಲಿ ಪರಿಪೂರ್ಣತೆಯನ್ನು ಸಂಪಾದಿಸಿದವನ ಸೇವಕನಾಗಲು ಅರ್ಹನಾಗುತ್ತಾನೆ ಅಷ್ಟೇ."

"ಮತ್ತು ಅಂಬಟ್ಠನೇ, ಯಾವುದೇ ವಿರಕ್ತ (ಏಕಾಂತವಾಸಿಯು) ಅಥವಾ ಬ್ರಾಹ್ಮಣನು ಜ್ಞಾನ ಮತ್ತು ನಡತೆಯಲ್ಲಿ ಪರಿಪೂರ್ಣತೆಯನ್ನು ಸಂಪಾದಿಸದೇ ಮತ್ತು ತಾವಾಗಿ ಉದುರಿಬಿದ್ದ ಹಣ್ಣುಗಳಿಂದ ಉಪಜೀವನವನ್ನು ಸಾಗಿಸದೆ, ಕಂದಮೂಲ, ಹಣ್ಣುಗಳಿಂದ ಉಪಜೀವನವನ್ನು ಸಾಗಿಸದೆ ಮತ್ತು ಅಗ್ನಿದೇವನ ಆರಾಧನೆಯನ್ನು ಮಾಡದೆ, ನಾಲ್ಕು ದೊಡ್ಡ ದಾರಿಗಳು (ಮಾರ್ಗಗಳು) ಕೂಡುವ ಚೌಕದಲ್ಲಿ ನಾಲ್ಕು ಬಾಗಿಲುಗಳ ಭಿಕ್ಷುಗೃಹವನ್ನು ಕಟ್ಟಿಕೊಂಡು "ಯಾವುದೇ ವಿರಕ್ತ ಅಥವಾ ಬ್ರಾಹ್ಮಣನು ನಾಲ್ಕು ದಿಕ್ಕುಗಳಲ್ಲಿ ಯಾವುದೇ ದಿಕ್ಕಿನಿಂದ ಇಲ್ಲಿ ಬಂದು ಹೋಗುವನೋ ಅವನನ್ನು ನನ್ನ ಯೋಗ್ಯತೆ ಮತ್ತು ಸಾಮರ್ಥ್ಯಕ್ಕೆ ಅನುಗುಣವಾಗಿ ನಾನು ಸೇವಿಸುತ್ತೇನೆ" ಎಂದು ತನ್ನಷ್ಟಕ್ಕೇ ಹೇಳಿಕೊಳ್ಳುತ್ತ ಅಲ್ಲಿ ವಾಸಿಸುವನೋ ಅವನು ವಾಸ್ತವಿಕವಾಗಿ ಜ್ಞಾನ ಮತ್ತು ಧರ್ಮಗಳಲ್ಲಿ ಪೂರ್ಣತೆಯನ್ನು ಪಡೆದವನ ಸೇವಕನಾಗಲು ಅರ್ಹನಾಗುತ್ತಾನೆ ಅಷ್ಟೇ."

"ಅಂಬಟ್ಠನೇ, ಧರ್ಮ ಮತ್ತು ನಡತೆಯಲ್ಲಿ ಪರಿಪೂರ್ಣತೆಯನ್ನು ಸಂಪಾದಿಸಲಿಕ್ಕೆ (ಆತಂಕವಾಗಿ) ಈ ನಾಲ್ಕು ರಂಧ್ರಗಳಿವೆ."

೪. "ಅಂಬಟ್ಠನೇ, ಈಗ ನಿನಗೆ ಏನು ಅನಿಸುತ್ತದೆ? ಅದೇ ಶಿಕ್ಷಕನ ಅನೇಕ ಶಿಷ್ಯರಲ್ಲಿ ಒಬ್ಬನಾದ ನೀನು ಜ್ಞಾನ ಮತ್ತು ನಡತೆಯ ಈ ಪರಿಪೂರ್ಣತೆಯಲ್ಲಿ ಉಪದೇಶವನ್ನು ಪಡೆದಿದ್ದೀಯಾ?"

"ಇಲ್ಲ ಗೌತಮನೆ, ಇಲ್ಲ. ನಾನು ಕಲಿತಿದ್ದೇನೆ ಎಂದು ಹೇಳಿಕೊಳ್ಳುವ ವಿಷಯ ಎಷ್ಟು ಅಲ್ಪವಾಗಿದೆ!

ಜ್ಞಾನ ಮತ್ತು ನಡತೆಯ ಈ ಪರಿಪೂರ್ಣತೆಯು ಎಷ್ಟು ಮಹೋನ್ನತವಾಗಿದೆ! ಅದರಲ್ಲಿ ನಾನು ತರಬೇತಿ ಪಡೆದಿದ್ದೇನೆಂಬುದು ಕಲ್ಪನಾತೀತವಾಗಿದೆ."

"ಅಂಬಟ್ಠ, ನಿನಗೆ ಏನು ಅನಿಸುತ್ತದೆ? ಜ್ಞಾನ ಮತ್ತು ಸೌಶೀಲ್ಯ(ಒಳ್ಳೆಯತನ)ಗಳ ಈ ಪರಿಪೂರ್ಣತೆಯನ್ನು ನೀನು ಸಂಪಾದಿಸಿರದಿದ್ದರೂ, ತಾವಾಗಿ ಉದುರಿಬಿದ್ದ ಹಣ್ಣುಗಳಿಂದ ಉಪಜೀವನ ಸಾಗಿಸುವ ವ್ರತವನ್ನು ಧರಿಸಿರುವವನಂತೆ ಎಲ್ಲ ಸಾಮಗ್ರಿಗಳನ್ನು ಹೊತ್ತುಕೊಂಡು ದಟ್ಟಡವಿಯನ್ನು ಪ್ರವೇಶಿಸಲಿಕ್ಕೆ ಶಿಕ್ಷಣವನ್ನು ಪಡೆದಿದ್ದೀಯಾ?"

"ಗೌತಮನೇ, ಅದೂ ಇಲ್ಲ."

"ಅಂಬಟ್ಠ, ಹಾಗಾದರೆ ನಿನಗೆ ಏನು ಅನಿಸುತ್ತದೆ? ಜ್ಞಾನ ಮತ್ತು ಸೌಶೀಲ್ಯ (ಒಳ್ಳೆಯತನ)ಗಳ ಈ ಪರಿಪೂರ್ಣತೆಯನ್ನು ನೀನು ಸಂಪಾದಿಸದಿದ್ದರೂ ಮತ್ತು ತಾವಾಗಿ ಉದುರಿಬಿದ್ದ ಹಣ್ಣುಗಳಿಂದ ಉಪಜೀವನವನ್ನು ಸಾಗಿಸದಿದ್ದರೂ ಮತ್ತು ಕಂದಮೂಲ ಫಲಗಳಿಂದ ಉಪಜೀವನವನ್ನು ಮಾಡುವ ಶಿಕ್ಷಣ ಪಡೆದಿರದಿದ್ದರೂ ಗ್ರಾಮ ಅಥವಾ ನಗರದ ಸೀಮೆಯಲ್ಲಿ (ಹೊರ ವಲಯದಲ್ಲಿ) ಒಂದು ಅಗ್ನಿ ಶಾಲೆಯನ್ನು ಕಟ್ಟಿಕೊಂಡು ಅಗ್ನಿದೇವನ ಸೇವೆ ಮಾಡುತ್ತಾ ಅಲ್ಲಿ ವಾಸಮಾಡುವ ಶಿಕ್ಷಣವನ್ನು ಪಡೆದಿದ್ದೀಯಾ?"

"ಗೌತಮನೇ, ಅದೂ ಇಲ್ಲ."

"ಅಂಬಟ್ಠನೇ, ಹಾಗಾದರೆ ನಿನಗೆ ಏನು ಅನಿಸುತ್ತದೆ? ಜ್ಞಾನ ಮತ್ತು ಸೌಶೀಲ್ಯ (ಒಳ್ಳೆಯತನ)ಗಳ ಈ ಪರಿಪೂರ್ಣತೆಯನ್ನು ನೀನು ಸಂಪಾದಿಸಿರದಿದ್ದರೂ ಮತ್ತು ತಾವಾಗಿ ಉದುರಿಬಿದ್ದ ಹಣ್ಣುಗಳಿಂದ ಉಪಜೀವನವನ್ನು ಸಾಗಿಸದಿದ್ದರೂ ಮತ್ತು ಕಂದಮೂಲ ಫಲಗಳಿಂದ ಉಪಜೀವನವನ್ನು ಮಾಡದಿದ್ದರೂ, ಮತ್ತು ಅಗ್ನಿದೇವನ ಸೇವೆಯನ್ನು ಮಾಡುವ ಶಿಕ್ಷಣ ಪಡೆದಿರದಿದ್ದರೂ ನಾಲ್ಕು ಮಾರ್ಗಗಳು ಕೂಡುವ ಸ್ಥಳದಲ್ಲಿ ನಾಲ್ಕು ಬಾಗಿಲುಗಳ ಒಂದು ಭಿಕ್ಷಾಶಾಲೆಯನ್ನು ಕಟ್ಟಿಕೊಂಡು ನಾಲ್ಕು ದಿಕ್ಕುಗಳಲ್ಲಿ ಯಾವುದೇ ದಿಕ್ಕಿನಿಂದ ಬರುವ ಯಾರನ್ನೇ ಆಗಲಿ ನಿನ್ನ ಯೋಗ್ಯತೆಗೆ ಮತ್ತು ನಿನ್ನ ಸಾಮರ್ಥ್ಯಕ್ಕೆ ಅನುಗುಣವಾಗಿ ಸತ್ಕರಿಸುವ ವ್ರತವನ್ನು ಧರಿಸಿ ಅಲ್ಲಿ ವಾಸ ಮಾಡುವ ಬಗೆಗೆ ಶಿಕ್ಷಣವನ್ನು ಪಡೆದಿದ್ದೀಯಾ?"

"ಗೌತಮನೆ, ಅದೂ ಇಲ್ಲ."

೫. 'ಅಂಬಟ್ಠನೇ, ಹಾಗಾದರೆ ನೀನು, ಪರಮ ಜ್ಞಾನ ಮತ್ತು ನಡತೆಯಲ್ಲಷ್ಟೇ ಅಲ್ಲ, ಪರಿಪೂರ್ಣತೆಯ ಸಿದ್ಧಿಗೆ (ಸಾಧನೆಗೆ) ವಿಘ್ನವಾಗಿರುವ ನಾಲ್ಕು ರಂಧ್ರಗಳಲ್ಲಿಯೂ ಸೋರು ಕಿಂಡಿಗಳಲ್ಲಿಯೂ ವಿದ್ಯಾರ್ಥಿಯಾಗಿ ಪಡೆಯಬೇಕಾದ ಶಿಕ್ಷಣವನ್ನು ಪಡೆದಿಲ್ಲ ಮತ್ತು ನಿನ್ನ ಶಿಕ್ಷಕನಾದ ಬ್ರಾಹ್ಮಣ ಪೊಕ್ಖರಸಾಡಿಯೂ ನಿನಗೆ ಹೀಗೆ ಹೇಳಿದ್ದಾನೆ. "ತ್ರಿವಿಧ ವೇದವಿದ್ಯೆಯಲ್ಲಿ ನಿಷ್ಣಾತರಾದ ಬ್ರಾಹ್ಮಣರ ಸಂಗಡ ಸಂಭಾಷಿಸಲು ಬಯಸುವ ನಮ್ಮ ಬಂಧುಗಳ ಪಾದಧೂಳಿಯಾಗಿರುವ ಸಂನ್ಯಾಸಿಗಳು, ಠಕ್ಕ ಭಿಕ್ಷುಗಳು ಮತ್ತು ಕೀಳು ತರಗತಿಯ ಕಪ್ಪು ವ್ಯಕ್ತಿಗಳು ಇವರು ಯಾರು?" (ಆದರೆ) ಅವನು ತಾನು ಈ ಅಧಮ ಕರ್ತವ್ಯಗಳನ್ನು (ಯಾವ ಕರ್ತವ್ಯಗಳು, ಉತ್ತಮ ಕರ್ತವ್ಯಗಳನ್ನು ನಿರ್ಲಕ್ಷಿಸಲು ಕಾರಣವಾಗುತ್ತವೆಯೋ ಅಂತಹವುಗಳು) ಪೂರ್ಣವಾಗಿ ಮಾಡಿಲ್ಲ. ನೋಡು, ಅಂಬಟ್ಠ! ನಿನ್ನ ಶಿಕ್ಷಕ, ಬ್ರಾಹ್ಮಣ ಪೊಕ್ಖರಸಾಡಿಯು ಈ ವಿಷಯದಲ್ಲಿ ನಿನಗೆ ಎಷ್ಟು ಅನ್ಯಾಯ ಮಾಡಿದ್ದಾನೆ!"

೬. "ಅಂಬಟ್ಠನೇ, ಬ್ರಾಹ್ಮಣ ಪೊಕ್ಖರಸಾಡಿಯು ಕೋಸಲ ರಾಜ ಪಸನದಿಯಿಂದ ಒಂದು ದಾನವನ್ನು (ದತ್ತಿಯನ್ನು) ಸ್ವೀಕರಿಸಿ ಅನುಭವಿಸುತ್ತಿದ್ದಾನೆ. ಆದರೆ ಅವನು ತನ್ನ ಎದುರಿಗೆ ಬರಲು ರಾಜನು ಅನುಮತಿಸುವುದಿಲ್ಲ. ಅವನ ಜೊತೆ ವಿಚಾರ ವಿನಿಮಯ ಮಾಡುವಾಗ ಪರದೆಯ ಹಿಂದಿನಿಂದ

ಮಾತನಾಡುತ್ತಾನೆ. ಅಂಬಟ್ಠನೇ, ಅದೇ ರಾಜನಿಂದ ಇವನು ಪವಿತ್ರ ಮತ್ತು ನ್ಯಾಯಯುತವಾದ ಜೀವನಾಂಶವನ್ನು ಸ್ವೀಕರಿಸುತ್ತಿರುವಾಗ ಕೋಸಲರಾಜ ಪಸನದಿಯು ಅವನನ್ನು ತನ್ನ ಎದುರಿಗೆ ಬರಗೊಡುವುದಿಲ್ಲ. ಇದು ಹೇಗೆ? ನೋಡು, ಅಂಬಟ್ಠ! ನಿನ್ನ ಶಿಕ್ಷಕ ಬ್ರಾಹ್ಮಣ ಪೊಕ್ಖರಸಾಡಿಯು ನಿನಗೆ ಎಷ್ಟು ಗಂಭೀರ ಅನ್ಯಾಯ ಮಾಡಿದ್ದಾನೆ?"

೭. "ಅಂಬಟ್ಠನೇ, ಈಗ ನಿನಗೆ ಏನು ಅನಿಸುತ್ತದೆ? ರಾಜನು ತನ್ನ ಆನೆಯ ಮೇಲೆ ಕುಳಿತುಕೊಂಡು ಅಥವಾ ತನ್ನ ಕುದುರೆಯ ಮೇಲೆ ಕುಳಿತುಕೊಂಡು ಅಥವಾ ತನ್ನ ರಥದ ಮೆಟ್ಟಲಿನ ಮೇಲೆ ನಿಂತುಕೊಂಡು ತನ್ನ ಅಧಿಕಾರಿಗಳು ಅಥವಾ ರಾಜಕುಮಾರರು (ಅಥವಾ ಮಾಂಡಲಿಕರು) ಇವರೊಡನೆ ರಾಜ್ಯಾಡಳಿತದ ವಿಷಯವನ್ನು ಕುರಿತು ಚರ್ಚಿಸುವನೆಂದು ತಿಳಿದುಕೊ ಮತ್ತು ಅವನು ಆ ಸ್ಥಳವನ್ನು ಬಿಟ್ಟು ಬೇರೆಡೆಗೆ ಹೋದ ಅನಂತರ ಒಬ್ಬ ಶೂದ್ರನು ಅಥವಾ ಶೂದ್ರನ ಸೇವಕನು ಅಲ್ಲಿಗೆ ಬಂದು ಅಲ್ಲಿ ನಿಂತುಕೊಂಡು 'ಪಸನದಿ ರಾಜನು ಹೀಗೆ ಹೇಳಿದನು' ಎನ್ನುತ್ತ ಆ ವಿಷಯವನ್ನು ಚರ್ಚಿಸುತ್ತಾನೆ ಎಂದು ತಿಳಿದುಕೊ. ಅವನು ರಾಜನು ಹೇಳಿರಬಹುದಾದ ರೀತಿಯಲ್ಲಿಯೇ ಹೇಳಿದರೂ ಅಥವಾ ರಾಜನು ಚರ್ಚಿಸಿರಬಹುದಾದ ರೀತಿಯಲ್ಲಿಯೇ ಚರ್ಚಿಸಿದರೂ ಅದರಿಂದ ಅವನು ರಾಜನಾಗಬಹುದೇ ಅಥವಾ ಅವನ ಅಧಿಕಾರಿಗಳಲ್ಲಿ ಒಬ್ಬನಾಗಬಹುದೇ?"

"ಗೌತಮ, ನಿಶ್ಚಯವಾಗಿಯೂ ಇಲ್ಲ."

೮. 'ಅಂಬಟ್ಠ, ಅದರಂತೆಯೇ ಮಂತ್ರಗಳ ದ್ರಷ್ಟಾರರಾದ ಆ ಪ್ರಾಚೀನ ಋಷಿಗಳು ಉಚ್ಚರಿಸಿದ ಮಂತ್ರಗಳನ್ನು ಅವರು ಹಾಡಿದ, ಪಠಿಸಿದ, ರಚಿಸಿದ ಪ್ರಾಚೀನ ರೂಪಗಳಲ್ಲಿಯೇ ಈಗಿನ ಬ್ರಾಹ್ಮಣರು ಪುನಃ ಪುನಃ ಪಠಿಸುತ್ತಾರೆ ಹಾಡುತ್ತಾರೆ. ಅಟ್ಠಕ, ವಾಮಕ, ವಾಸುದೇವ, ಜಮದಗ್ನಿ, ಅಂಗೀರಸ, ಭಾರದ್ವಾಜ, ವಸಿಷ್ಠ, ವಿಶ್ವಾಮಿತ್ರ, ಕಶ್ಯಪ ಮತ್ತು ಭೃಗು ಮೊದಲಾದವರು ಹಾಡಿದ, ಪಠಿಸಿದ ಸ್ವರಗಳಲ್ಲಿಯೇ ಹಾಡುವ, ಪಠಿಸುವ ರೂಢಿಯನ್ನು ಮಾಡುತ್ತಾರೆ. 'ವಿದ್ಯಾರ್ಥಿಯಾಗಿ ನಾನು ಅವರ ಮಂತ್ರಗಳನ್ನು ಮುಖೋದ್ಗತವಾಗಿ ಬಲ್ಲೆನು' ಎಂದು ನೀನು ಹೇಳಬಹುದಾದರೂ, ಅಷ್ಟರಿಂದ ನೀನು ಋಷಿಯಾಗಬಲ್ಲೆಯಾ? ಅಥವಾ ಋಷಿಯ ಸ್ಥಾನವನ್ನು ಹೊಂದಿದಂತಾಗುವುದೇ? ಇಂತಹ ಸ್ಥಿತಿಗೆ ಏನೂ ಆಧಾರವಿಲ್ಲ!"

೯. "ಅಂಬಟ್ಠ, ನಿನಗೆ ಏನು ಅನಿಸುತ್ತದೆ? ವಯಸ್ಸಿನಿಂದ ವೃದ್ಧರಾದ ನಿನ್ನ ಶಿಕ್ಷಕರು ಮತ್ತು ಅವನ ಗುರುಗಳಾದ ಬ್ರಾಹ್ಮಣರು ತಮ್ಮ ತಮ್ಮೊಳಗೆ ಮಾತನಾಡುತ್ತಿರುವಾಗ ನೀನು ಏನು ಕೇಳಿರುತ್ತೀ? ಯಾರ ಮಂತ್ರಗಳನ್ನು ನೀನು ಪುನಃ ಪುನಃ ಪಠಿಸುತ್ತಿದ್ದಿರೋ ಆ ಪ್ರಾಚೀನ ಋಷಿಗಳು ಈಗ ನೀನು ಮತ್ತು ನಿಮ್ಮ ಗುರುಗಳು ಮಾಡುತ್ತಿರುವಂತೆ ತಲೆಗೂದಲನ್ನು ಮತ್ತು ಗಡ್ಡಗಳನ್ನು ಚೆನ್ನಾಗಿ ಬಾಚಿಕೊಂಡು, ಸುಗಂಧಲೇಪನ ಮಾಡಿಕೊಂಡು, ಅಚ್ಚುಕಟ್ಟಾಗಿ ಇಟ್ಟುಕೊಂಡು ಮಾಲೆಗಳು ಮತ್ತು ರತ್ನಹಾರಗಳಿಂದ ಅಲಂಕರಿಸಿಕೊಂಡು, ಶುಭ್ರ ಬಟ್ಟೆಗಳನ್ನು ತೊಟ್ಟುಕೊಂಡು ಪ್ರದರ್ಶಿಸುತ್ತಿದ್ದರೇ ಮತ್ತು ಪಂಚೇಂದ್ರಿಯಗಳಿಂದ ವಿಷಯ ಭೋಗಗಳನ್ನು ಮಾಡುತ್ತಿದ್ದರೇ?"

"ಗೌತಮ, ಇಲ್ಲ."

"ಅಥವಾ (ಕಪ್ಪು) ಕಸ ಕಡ್ಡಿಗಳನ್ನೆಲ್ಲ ತೆಗೆದು (ಆರಿಸಿ) ಸ್ವಚ್ಛ ಮಾಡಿದ ಉತ್ತಮ ದರ್ಜೆಯ ಅಕ್ಕಿಯಿಂದ ಮಾಡಿದ ಅನ್ನವನ್ನು ವಿವಿಧ ರೀತಿಯ ಮಸಾಲೆಯ ಪದಾರ್ಥಗಳಿಂದ ಕೂಡಿರುವ ಸಾರಿನಿಂದ ಸುವಾಸಿತವಾಗುವಂತೆ ಮಾಡಿ ಈಗ ನೀವು ನಿಮ್ಮ ಗುರುಗಳು ಮಾಡುವಂತೆ ಇಂತಹ (ಸುವಾಸನೆಯುಳ್ಳ) ಆಹಾರದಿಂದ ಜೀವನವನ್ನು ಸಾಗಿಸುತ್ತಿದ್ದಿರೇ?"

"ಗೌತಮ, ಇಲ್ಲ."

"ಅಥವಾ ಈಗ ನೀವು ಮತ್ತು ನಿಮ್ಮ ಶಿಕ್ಷಕರು ಸೇವಿಸಲ್ಪಡುವಂತೆ, ಅವರು ಟೊಂಕದ ಸುತ್ತಲೂ ನೆರಿಗೆಗಳನ್ನು ಹಾಕಿಕೊಂಡು ಸೆರಗನ್ನು ಕಟ್ಟಿಕೊಂಡ ಸ್ತ್ರೀಯರಿಂದ ಅವರು ಸೇವಿಸಲ್ಪಡುತ್ತಿದ್ದರೇ?"

"ಅಥವಾ, ಈಗ ನೀವು ಮತ್ತು ನಿಮ್ಮ ಶಿಕ್ಷಕರು ಮಾಡುತ್ತಿರುವಂತೆ, ಅಲಂಕೃತ ಆಯಾಲು ಮತ್ತು ಬಾಲಗಳುಳ್ಳ ಹೆಣ್ಣು ಕುದುರೆಗಳನ್ನು ಹೂಡಿದ ರಥಗಳನ್ನು ಹೊಡೆಯುತ್ತ ಕೈಯಲ್ಲಿ ಉದ್ದ ಕೋಲು ಅಂಕುಶಗಳನ್ನು ಹಿಡಿದುಕೊಂಡು ಸಂಚರಿಸುತ್ತಿದ್ದರೇ?"

"ಗೌತಮ, ಇಲ್ಲ."

"ಅಥವಾ ಈಗ ನೀನು ಮತ್ತು ನಿಮ್ಮ ಶಿಕ್ಷಕರು ಮಾಡುತ್ತಿರುವಂತೆ, ಕಂದಕಗಳಿಂದ ಸುತ್ತುವರಿಯಲ್ಪಟ್ಟ ಮತ್ತು ಬಾಗಿಲುಗಳ ಮುಂದೆ (ಕಬ್ಬಿಣದ) ಅಡ್ಡ ಪಟ್ಟಿಗಳನ್ನು ಇಳಿ ಬಿಟ್ಟ ಕೋಟೆಗಳಲ್ಲಿ ಉದ್ದವಾದ ಖಡ್ಗಗಳನ್ನು ಟೊಂಕಕ್ಕೆ ಕಟ್ಟಿಕೊಂಡ ಜನರಿಂದ ರಕ್ಷಿಸಲ್ಪಡುತ್ತಿದ್ದರೇ?"

"ಗೌತಮ, ಇಲ್ಲ."

೧೦. " ಆದ್ದರಿಂದ, ಅಂಬಟ್ಠನೇ, ನೀನು ಋಷಿಯಲ್ಲ. ನಿಮ್ಮ ಗುರುವೂ ಸಹ ಋಷಿ ಅಲ್ಲ. ಋಷಿಗಳು ಜೀವಿಸುತ್ತಿದ್ದ ರೀತಿಯಲ್ಲಿ ನೀವು ಜೀವಿಸುತ್ತಿಲ್ಲ. ಆದರೆ ಅದೇನೇ ಇರಲಿ, ಅಂಬಟ್ಠನೇ, ನನ್ನ ಬಗ್ಗೆ ನಿನಗೆ ಏನು ಸಂಶಯ ಅಥವಾ ಮಾನಸಿಕ ಗೊಂದಲವಿದೆಯೋ, ಅದರ ಬಗ್ಗೆ ನನ್ನನ್ನು ಕೇಳು. ನಾನು ಅದನ್ನು ವಿವರಿಸಿ ಸ್ಪಷ್ಟಪಡಿಸುತ್ತೇನೆ."

೧೧. ಅನಂತರ ಅನುಗ್ರಹೀತನು ತನ್ನ ಕೊಠಡಿಯಿಂದ ಹೊರಟು ಮೇಲೆ ಕೆಳಗೆ ಅಡ್ಡಾಡಹತ್ತಿದನು. ಅಂಬಟ್ಠನು ಅವನಂತೆಯೇ ಮಾಡತೊಡಗಿದನು ಮತ್ತು ಅನುಗ್ರಹೀತನನ್ನು ಅನುಸರಿಸಿ ಅವನು ಹೀಗೆ ಮೇಲೆ ಕೆಳಗೆ ಸಂಚರಿಸುತ್ತಿರುವಾಗ, ಮಹಾತ್ಮರಲ್ಲಿರುವ ಮೂವತ್ತೆರಡು ಲಕ್ಷಣಗಳು ಅನುಗ್ರಹೀತನ ಶರೀರದ ಮೇಲೆ ಕಾಣುತ್ತಿವೆಯೋ ಅಥವಾ ಇಲ್ಲವೋ ಎಂದು ಪರೀಕ್ಷಿಸಿದನು. ಎರಡನ್ನು ಬಿಟ್ಟು ಉಳಿದೆಲ್ಲವುಗಳನ್ನೂ ಅವನು ನೋಡಿದನು. ಗುಪ್ತ ಇಂದ್ರಿಯ ಮತ್ತು ನಾಲಿಗೆಯ ಉದ್ದಳತೆ ಇವೆರಡನ್ನು ಕುರಿತು ಅವನಿಗೆ ಸಂಶಯ ಮತ್ತು ಮಾನಸಿಕ ಗೊಂದಲವಿತ್ತು. ಸಮಾಧಾನವೂ ಇರಲಿಲ್ಲ. ಖಾತ್ರಿಯೂ ಇರಲಿಲ್ಲ.

೧೨. ಮತ್ತು ಅವನಿಗೆ ಈ ರೀತಿ ಸಂಶಯವುಂಟಾಗಿದೆಯೆಂದು ಅನುಗ್ರಹೀತನಿಗೆ ತಿಳಿಯಿತು. ಆಗ ಬಟ್ಟೆಗಳಿಂದ ಮುಚ್ಚಿರಬೇಕಾದ ಅವನ ಅಂಗವು ಕೋಶದಲ್ಲಿ ಆವೃತವಾಗಿರುವುದನ್ನು ಬ್ರಾಹ್ಮಣ ಅಂಬಟ್ಠನು ನೋಡುವಂತೆ ಅನುಗ್ರಹೀತನು ತನ್ನ ವಿಚಿತ್ರ ಸಾಮರ್ಥ್ಯದಿಂದ ಏರ್ಪಡಿಸಿದನು ಮತ್ತು ತನ್ನ ನಾಲಿಗೆಯು ಎರಡೂ ಕಿವಿಗಳನ್ನು ಮುಟ್ಟುವಂತೆ ಮತ್ತು ನೇವರಿಸುವಂತೆ ಹೊರಳಿಸಿದನು ಮತ್ತು ತನ್ನ ಇಡಿ ಹಣೆಯನ್ನು ನಾಲಿಗೆಯಿಂದ ಆವರಿಸಿದನು.

ಆಗ ಯುವಕ ಬ್ರಾಹ್ಮಣ ಅಂಬಟ್ಠನು ಅಂದುಕೊಂಡನು:

ಮಹಾತ್ಮರಲ್ಲಿ ಇರಬೇಕಾದ ಮೂವತ್ತೆರಡು ಲಕ್ಷಣಗಳು ಸಮಣ ಗೌತಮನಲ್ಲಿವೆ. ಎಲ್ಲವೂ ಇವೆ. ಕೇವಲ ಕೆಲವೇ ಅಲ್ಲ. ಆಗ ಅವನು ಅನುಗ್ರಹೀತನಿಗೆ ಅಂದನು: "ಈಗ, ಗೌತಮನೇ, ನಾವು ಸಂತೋಷದಿಂದ ಬೀಳ್ಕೊಳ್ಳೋಣ. ನಾವು ಕರ್ತವ್ಯ ನಿರತರಾಗಿದ್ದೇವೆ. ನಾವು ಮಾಡಬೇಕಾದದ್ದು ಬಹಳ ಇದೆ."

"ಅಂಬಟ್ಠ, ನಿನಗೆ ಸರಿಯೆನಿಸಿದ್ದನ್ನು ಮಾಡು."

ಆಗ ಅಂಬಟ್ಠನು ಹೆಣ್ಣು ಕುದುರೆಗಳನ್ನು ಹೂಡಿದ ತನ್ನ ರಥವನ್ನು ಏರಿದನು ಮತ್ತು ಅಲ್ಲಿಂದ ಹೊರಟನು.

೧೩. ಆ ಸಮಯದಲ್ಲಿ, ಬ್ರಾಹ್ಮಣ ಪೊಕ್ಕರಸಾಡಿಯು ಬ್ರಾಹ್ಮಣರ ದೊಡ್ಡ ಪರಿವಾರದಿಂದ ಕೂಡಿಕೊಂಡು ಉಕ್ಕಟ್ಠದಿಂದ ಹೊರಟು ಅಂಬಟ್ಠನ ದಾರಿ ಕಾಯುತ್ತ ತನ್ನ ವಿಹಾರ ಭೂಮಿಯಲ್ಲಿ ಕುಳಿತಿದ್ದನು. ಆಗ ಅಂಬಟ್ಠನು ವಿಹಾರ ಭೂಮಿಗೆ ಬಂದನು. ರಥ ಸಂಚಾರಕ್ಕೆ ಯೋಗ್ಯವಾಗಿರುವವರೆಗೆ ಆ ದಾರಿಯಲ್ಲಿ ರಥದಲ್ಲಿ ಬಂದನು. ರಥದಿಂದ ಕೆಳಗಿಳಿದನು ಮತ್ತು ಕಾಲುನಡಿಗೆಯಲ್ಲಿ ಪೊಕ್ಕರಸಾಡಿಯಿರುವಲ್ಲಿಗೆ ಬಂದು ಅವನಿಗೆ ನಮಸ್ಕರಿಸಿದನು ಮತ್ತು ಒಂದು ಬದಿಯಲ್ಲಿ ಗೌರವದಿಂದ ಕುಳಿತುಕೊಂಡನು. ಅವನು ಹೀಗೆ ಕುಳಿತುಕೊಂಡ ನಂತರ ಪೊಕ್ಕರಸಾಡಿಯು ಅವನಿಗೆ ಅಂದನು:

೧೪. "ಸರಿ, ಅಂಬಟ್ಠ! ನೀನು ಅನುಗ್ರಹೀತನನ್ನು ನೋಡಿದೆಯಾ?"

"ಹೌದು, ಪೂಜ್ಯರೇ, ನಾವು ಅವನನ್ನು ನೋಡಿದೆವು."

"ಹಾಗಾದರೆ ಅವನ ಬಗ್ಗೆ ಏನು ಪ್ರಸಿದ್ಧಿಯಿರುವುದೆಂದು ನಾನು ನಿನಗೆ ಹೇಳಿದೆನೋ, ಅದರಂತೆಯೇ ಪೂಜ್ಯ ಗೌತಮನು ಇದ್ದಾನೆಯೋ? ಮತ್ತು ಬೇರೆ ರೀತಿಯಲ್ಲಿ ಅಲ್ಲವಷ್ಟೇ. ಅವನು ಹಾಗಿರುವನೋ ಅಥವಾ ಇಲ್ಲವೋ?"

"ಪೂಜ್ಯರೇ, ಅವನ ಪ್ರಸಿದ್ಧಿ ಇರುವಂತೆಯೇ ಅವನು ಇದ್ದಾನೆ ಮತ್ತು ಬೇರೆ ರೀತಿಯಲ್ಲಿ ಅಲ್ಲ, ಅವನು ಹಾಗೆಯೇ ಇದ್ದಾನೆ. ಬೇರೆ ಅಲ್ಲ ಮತ್ತು ಮಹಾತ್ಮರ ಮೂವತ್ತೆರಡು ಲಕ್ಷಣಗಳನ್ನು ಅವನು ಹೊಂದಿದ್ದಾನೆ. ಕೇವಲ ಕೆಲವನ್ನೇ ಅಲ್ಲ."

"ಮತ್ತು ಅಂಬಟ್ಠ, ಸಮಣ ಗೌತಮನೊಡನೆ ನೀನು ಏನಾದರೂ ಸಂಭಾಷಿಸಿದೆಯಾ?"

"ಹೌದು ಪೂಜ್ಯರೇ, ನಾನು ಸಂಭಾಷಿಸಿದೆನು."

"ಅಂದರೆ ಸಂಭಾಷಣೆಯು ಹೇಗೆ ನಡೆಯಿತು?"

ಆಗ ಅಂಬಟ್ಠನು ಬ್ರಾಹ್ಮಣ ಪೊಕ್ಕರಸಾಡಿಗೆ ಅನುಗ್ರಹೀತನ ಜೊತೆ ನಡೆದ ತನ್ನ ಮಾತುಕತೆಯನ್ನೆಲ್ಲ ಹೇಳಿದನು.

೧೫. ಅವನು ಹೀಗೆ ಹೇಳಿದ ಅನಂತರ ಪೊಕ್ಕರಸಾಡಿಯು ಅವನಿಗೆ ಅಂದನು: "ಆಹಾ! ಪಿಪಂಡಿತಂ ಮನ್ಯ! ದಡ್ಡ! ತ್ರಿವಿಧ ವೇದ ವಿದ್ಯೆಯಲ್ಲಿ ಪಾರಂಗತನೇ! ಯಾವನು ತನ್ನ ಕಾರ್ಯವನ್ನು ಈ ರೀತಿ ಮಾಡುತ್ತಾನೆಯೋ, ಅವನು ಮರಣಾನಂತರ ತನ್ನ ದೇಹವು ಲೀನವಾದ ಮೇಲೆ ಭಯಾನಕ ಮತ್ತು ದುಃಖಮಯ ಸ್ಥಿತಿಯಲ್ಲಿ ಪುನರ್ಜನ್ಮ ಹೊಂದುತ್ತಾನೆಂದು ಹೇಳುತ್ತಾರೆ. ನಿನ್ನ ದುರಹಂಕಾರದ ಮಾತುಗಳಲ್ಲಿ ನೀನು ಒರಟಾಗಿ ಹೇಳಿದ ವಿಷಯಗಳು ಪೂಜ್ಯ ಗೌತಮನು ಬಹಿರಂಗಗೊಳಿಸಿದ್ದನ್ನು ಬಿಟ್ಟು ಬೇರೆ ಏನನ್ನು ತಿಳಿಸಬಲ್ಲವು? ಎಂತಹ ಪಂಡಿತಂಮನ್ಯನಿದ್ದೀಯಾ! ಎಂತಹ ದಡ್ಡ! ನಮ್ಮ ತ್ರಿವಿಧ ವಿದ್ಯೆಯಲ್ಲಿ ಎಂತಹ ಪಾರಂಗತ!" ಹೀಗೆ ಸಿಟ್ಟಿಗೆದ್ದು ಅಸಂತುಷ್ಟನಾಗಿ ಅವನು ಕಾಲಿನಿಂದ ಒದ್ದನು ಮತ್ತು ಅಂಬಟ್ಠನನ್ನು ಕೆಡವಿದನು. ಆಗಿಂದಾಗ ತಾನೇ ಹೋಗಿ ಅನುಗ್ರಹೀತನನ್ನು ಭೇಟಿಯಾಗ ಬಯಸಿದನು.

೧೬. ಆದರೆ ಅಲ್ಲಿನ ಬ್ರಾಹ್ಮಣರು ಪೊಕ್ಕರಸಾಡಿಗೆ ಹೀಗೆ ಅಂದರು: "ಪೂಜ್ಯರೇ, ಇಂದೇ ಹೋಗಿ" ಸಮಣ ಗೌತಮನನ್ನು ಭೇಟಿಯಾಗಬೇಕೆಂದರೆ, ಈಗ ಬಹಳ ತಡವಾಗಿದೆ. ಪೂಜ್ಯರಾದ ಪೊಕ್ಕರಸಾಡಿಯವರು ನಾಳೆ ಹೋಗಬಹುದು."

ಆಗ ತನ್ನ ಮನೆಯಲ್ಲಿ ಸಿದ್ಧಪಡಿಸಿ ಉರಿಯುತ್ತಿದ್ದ ಪಂಜುಗಳ ಬೆಳಕಿನಲ್ಲಿ ಬಂಡಿಗಳ ಮೇಲೆ ಉಕ್ಕಟ್ಠಕ್ಕೆ ತಂದ ಬಿರುಸಾದ ಮತ್ತು ಮೃದುವಾದ ಮಧುರವಾದ ಊಟವನ್ನು ಪೊಕ್ಕರಸಾಡಿಯು ಮಾಡಿದನು. ಅನಂತರ ಮಾರ್ಗವು ಎಲ್ಲಿಯವರೆಗೆ ವಾಹನ ಸಂಚಾರಕ್ಕೆ ಯೋಗ್ಯವಾಗಿದ್ದಿತೋ ಅಲ್ಲಿಯವರೆಗೆ ಇಕ್ಕಸಂಕಲ

ವನಕ್ಕೆ ಹೋದನು ಮತ್ತು ಅನಂತರ ಕಾಲ್ನಡಿಗೆಯಲ್ಲಿ ಅನುಗ್ರಹೀತನಿದ್ದಲ್ಲಿಗೆ ಹೋದನು. ಅಲ್ಲಿ ವಿನಯ ಮತ್ತು ಸೌಜನ್ಯದಿಂದ ಅನುಗ್ರಹೀತನಿಗೆ ಗೌರವವನ್ನು ಅರ್ಪಿಸಿ ಅವನಿಂದ ಸ್ವಾಗತವನ್ನು ಸ್ವೀಕರಿಸಿದ ಅನಂತರ ಅವನು ಒಂದು ಬದಿಗೆ ಆಸನದಲ್ಲಿ ಕುಳಿತುಕೊಂಡನು ಮತ್ತು ಅನುಗ್ರಹೀತನಿಗೆ ಅಂದನು:

೧೭. "ಗೌತಮನೇ, ನಮ್ಮ ಶಿಷ್ಯ, ತರುಣ ಬ್ರಾಹ್ಮಣ ಅಂಬಟ್ಠನು ಇಲ್ಲಿಗೆ ಬಂದಿದ್ದನೆ?"

"ಹೌದು, ಬ್ರಾಹ್ಮಣ, ಅವನು ಬಂದಿದ್ದ."

"ಗೌತಮ, ನೀನು ಅವನ ಜೊತೆ ಏನಾದರೂ ಸಂಭಾಷಿಸಿದೆಯಾ?"

"ಹೌದು, ಬ್ರಾಹ್ಮಣ ನಾನು ಸಂಭಾಷಿಸಿದೆ."

"ಅವನ ಜೊತೆಯಲ್ಲಿ ನಿನ್ನ ಸಂಭಾಷಣೆ ಯಾವ ರೀತಿಯಲ್ಲಿ ನಡೆಯಿತು?"

೧೮. ಆಗ ಅನುಗ್ರಹೀತನು ನಡೆದ ಸಂಭಾಷಣೆಯನ್ನೆಲ್ಲ ಬ್ರಾಹ್ಮಣ ಪೊಕ್ಖರಸಾಡಿಗೆ ಹೇಳಿದನು. ಅವನು ಹೀಗೆ ಹೇಳಿದ ಅನಂತರ ಪೊಕ್ಖರಸಾಡಿಯು ಅನುಗ್ರಹೀತನಿಗೆ ಅಂದನು:

"ಗೌತಮನೇ, ಆ ತರುಣ ಬ್ರಾಹ್ಮಣ ಅಂಬಟ್ಠನು ಯುವಕನೂ, ಮೂರ್ಖನೂ ಇದ್ದಾನೆ. ಗೌತಮ, ಅವನನ್ನು ಕ್ಷಮಿಸು."

"ಬ್ರಾಹ್ಮಣನೇ, ಆ ತರುಣ ಬ್ರಾಹ್ಮಣ ಅಂಬಟ್ಠನು ಸುಖವಾಗಿರಲಿ."

೧೯. ಆಗ ಬ್ರಾಹ್ಮಣ ಪೊಕ್ಖರಸಾಡಿಯು ಮಹಾತ್ಮರಲ್ಲಿ ಇರುವ ಮೂವತ್ತೆರಡು ಲಕ್ಷಣಗಳು ಅನುಗ್ರಹೀತನ ಶರೀರದ ಮೇಲೆ ಇವೆಯೇ ಎಂದು ಪರೀಕ್ಷಿಸಿದನು. ಕೇವಲ ಎರಡನ್ನು ಬಿಟ್ಟು ಉಳಿದವುಗಳನ್ನೂ ಸ್ಪಷ್ಟವಾಗಿ ಕಂಡನು. ಕೋಶದಿಂದ ಅಡಗಿಸಲ್ಪಟ್ಟ ಅಂಗ ಮತ್ತು ಉದ್ದವಾದ ನಾಲಿಗೆ ಇವೆರಡರ ಬಗೆಗೆ ಅವನು ಇನ್ನೂ ಸಂಶಯ ಹಾಗೂ ಅನಿಶ್ಚಯತೆ ಉಳ್ಳವನಾಗಿದ್ದನು. ಆದರೆ ಅಂಬಟ್ಠನಿಗೆ ಅವುಗಳನ್ನು ತೋರಿಸಿದಂತೆಯೇ ಅನುಗ್ರಹೀತನು ಅವುಗಳನ್ನು ಪೊಕ್ಖರಸಾಡಿಗೆ ತೋರಿಸಿದನು. ಆಗ ಪೊಕ್ಖರಸಾಡಿಯು, ಅನುಗ್ರಹೀತನು ಮಹಾತ್ಮರ ಮೂವತ್ತೆರಡು ಲಕ್ಷಣಗಳನ್ನೂ ಕೇವಲ ಕೆಲವೇ ಅಲ್ಲ, ಎಲ್ಲವುಗಳನ್ನೂ ಹೊಂದಿದ್ದಾನೆಂಬುದನ್ನು ಕಂಡುಕೊಂಡನು. ಅವನು ಅನುಗ್ರಹೀತನಿಗೆ ಅಂದನು: "ಪೂಜ್ಯ ಗೌತಮನು ನಾಳಿನ ಭೋಜನವನ್ನು ನನ್ನ ಜೊತೆ ಸ್ವೀಕರಿಸುವ ಅನುಗ್ರಹ ಮಾಡಬೇಕು ಮತ್ತು ಅವನ ಜೊತೆ ಅವನ ಸಂಘದವರೆಲ್ಲರೂ ಸಹ ಭೋಜನವನ್ನು ಸ್ವೀಕರಿಸಬೇಕು." ಅನುಗ್ರಹೀತನು ಅವನ ಪ್ರಾರ್ಥನೆಯನ್ನು ಮೌನದಿಂದ ಸ್ವೀಕರಿಸಿದನು.

೨೦. ಅನುಗ್ರಹೀತನು ಆಮಂತ್ರಣವನ್ನು ಸ್ವೀಕರಿಸಿದ್ದನ್ನು ನೋಡಿ ಬ್ರಾಹ್ಮಣ ಪೊಕ್ಖರಸಾಡಿಯು (ಮರುದಿನ) ಅವನಿಗೆ ಸಮಯವನ್ನು ತಿಳಿಸಿದನು: "ಗೌತಮನೇ, ಊಟದ ವೇಳೆಯಾಗಿದೆ. ಭೋಜನವು ಸಿದ್ಧವಾಗಿದೆ" ಆಗ ನಸುಕಿನಲ್ಲಿಯೇ ಬಟ್ಟೆ ತೊಟ್ಟುಕೊಂಡಿದ್ದ ಅನುಗ್ರಹೀತನು ಉತ್ತರೀಯವನ್ನು ಧರಿಸಿದನು ಮತ್ತು ತನ್ನ (ಊಟದ) ಪಾತ್ರೆಯನ್ನು ತೆಗೆದುಕೊಂಡು ಬಂಧುಗಳೊಡನೆ ಪೊಕ್ಖರಸಾಡಿಯ ಮನೆಗೆ ಹೋದನು. ತನಗಾಗಿ ಸಿದ್ಧಪಡಿಸಿದ ಆಸನದಲ್ಲಿ ಕುಳಿತುಕೊಂಡನು. ಬ್ರಾಹ್ಮಣ ಪೊಕ್ಖರಸಾಡಿಯು ಬಿರುಸಾದ ಮತ್ತು ಮೃದುವಾದ ಮಧುರ ಆಹಾರವನ್ನು ಅವನು ಸಾಕೆನ್ನುವವರೆಗೆ ತನ್ನ ಕೈಯಿಂದಲೇ ಬಡಿಸಿ ಅನುಗ್ರಹೀತನನ್ನು ತೃಪ್ತಿಪಡಿಸಿದನು. ಯುವಕ ಬ್ರಾಹ್ಮಣರನ್ನೂ, ಸಂಘದ ಸದಸ್ಯರನ್ನೂ ತೃಪ್ತಿಪಡಿಸಿದನು. ಅನುಗ್ರಹೀತನು ಊಟವನ್ನು ಮುಗಿಸಿ (ಊಟದ) ತಾಟು ಮತ್ತು ಕೈಗಳನ್ನು ತೊಳೆದುಕೊಂಡ ಅನಂತರ ಪೊಕ್ಖರಸಾಡಿಯು ಅವನ ಬದಿಯಲ್ಲಿ ಕೆಳಗಿನ ಆಸನದಲ್ಲಿ ಕುಳಿತುಕೊಂಡನು.

೨೧. ಅನಂತರ ಹೀಗೆ ಕುಳಿತ ಅವನೊಡನೆ ಅನುಗ್ರಹೀತನು ಅನುಕ್ರಮವಾಗಿ ಹೀಗೆ ಚರ್ಚಿಸಿದನು:

ಅಂದರೆ ಅವನಿಗೆ ಔದಾರ್ಯ, ಸರಿಯಾದ (ಸಮ್ಯಕ್) ನಡತೆ, ಸ್ವರ್ಗ, ಅಪಾಯ, ಗರ್ವ, ವಿಷಯಾಭಿಲಾಷೆಗಳ ಕಳಂಕ ಮತ್ತು ಸನ್ಯಾಸದ ಲಾಭಗಳನ್ನು ಕುರಿತು ಹೇಳಿದನು. ಬ್ರಾಹ್ಮಣ ಪೊಕ್ಖರಸಾಡಿಯು ಸಿದ್ಧನಾಗಿದ್ದಾನೆ, ಮೃದುವಾಗಿದ್ದಾನೆ, ಮುಕ್ತಮನಸ್ಸುಳ್ಳವನಾಗಿದ್ದಾನೆ, ಉದಾತ್ತನಾಗಿದ್ದಾನೆ, ಶ್ರದ್ಧಾವಂತನಾಗಿದ್ದಾನೆ ಎಂದು ಯಾವಾಗ ಮನವರಿಕೆಯಯಿತೋ ಆಗ ಅನುಗ್ರಹೀತನು ಕೇವಲ ಬುದ್ಧರು ಮಾತ್ರ ಸಾಧಿಸಿದ ಸಿದ್ಧಾಂತವನ್ನು ಅವನಿಗೆ ಘೋಷಿಸಿದನು. ಅಂದರೆ ದುಃಖ ಅದರ ಮೂಲ, ಅದರ ನಾಶ ಮತ್ತು ಮಾರ್ಗ ಇವುಗಳ ತತ್ವವನ್ನು ಹೇಳಿದನು. ಎಲ್ಲ ಕಲೆಗಳನ್ನೂ ತೊಳೆದು ಒಗೆದ ಸ್ವಚ್ಛವಾದ ಬಟ್ಟೆಯು ಬಣ್ಣವನ್ನು ಬೇಗನೇ ಸ್ವೀಕರಿಸುವಂತೆ ಬ್ರಾಹ್ಮಣ ಪೊಕ್ಖರಸಾಡಿಯು ಅಲ್ಲಿ ಕುಳಿತಿರುವಾಗಲೇ ಸತ್ಯವನ್ನು ಕಾಣುವ ಶುದ್ಧ ಮತ್ತು ನಿಷ್ಕಳಂಕ ದೃಷ್ಟಿಯನ್ನು ಪಡೆದನು ಮತ್ತು ಅವನು ಹೀಗೆ ತಿಳಿದುಕೊಂಡನು.

"ಯಾವುದಕ್ಕೆ ಆದಿಯಿದೆಯೋ, ಅದರಲ್ಲಿಯೇ ಅದರ ಅಂತ್ಯವೂ ಅವಶ್ಯವಾಗಿ ಇದೆ."

೨೨. ಅನಂತರ ಬ್ರಾಹ್ಮಣ ಪೊಕ್ಖರಸಾಡಿಯು ಸತ್ಯವನ್ನು ಕಂಡವನಂತೆ, ಅದರ ಸಂಪೂರ್ಣ ಜ್ಞಾನ ಪಡೆದವನಂತೆ, ಅದನ್ನು ತಿಳಿದುಕೊಂಡವನಂತೆ, ಅದರಲ್ಲಿ ಆಳವಾಗಿ ಮುಳುಗಿದವನಂತೆ, ಸಂಶಯವನ್ನು ಪೂರ್ಣವಾಗಿ ಅತಿಕ್ರಮಿಸಿ, ಮಾನಸಿಕ ಗೊಂದಲವನ್ನು ಕಿತ್ತೊಗೆದು ಆತ್ಮವಿಶ್ವಾಸವನ್ನು ಪಡೆದನು. ಗುರುವಿನ ಉಪದೇಶದ ಜ್ಞಾನಕ್ಕಾಗಿ ಯಾರನ್ನೂ ಅವನು ಅವಲಂಬಿಸಲಿಲ್ಲ ಮತ್ತು ಅನುಗ್ರಹೀತನನ್ನು ಸಂಬೋಧಿಸಿ ಹೀಗೆ ಅಂದನು:

"ಗೌತಮನೇ, ನಿನ್ನ ಬಾಯಿಯಿಂದ ಬಂದ ಶಬ್ದಗಳು ಅತ್ಯಂತ ಶ್ರೇಷ್ಠವಾಗಿವೆ, ಘನವಾಗಿವೆ! ಕೆಳಗೆ ಒಗೆದದ್ದನ್ನು ಒಬ್ಬ ಮನುಷ್ಯನು ಸರಿಯಾಗಿ ನಿಲ್ಲಿಸುವಂತೆ ಅಥವಾ ಮುಚ್ಚಿ ಇಟ್ಟಿದ್ದನ್ನು ಹೊರಗೆ ಹಾಕುವಂತೆ, ಅಥವಾ ದಾರಿತಪ್ಪಿದ ಮನುಷ್ಯನಿಗೆ ಸರಿಯಾದ ದಾರಿಯನ್ನು ತೋರಿಸುವಂತೆ ಅಥವಾ ಕಣ್ಣುಗಳಿದ್ದವರು ಹೊರಗಿನ (ಬಾಹ್ಯ) ವಸ್ತುಗಳನ್ನು ನೋಡಲು ಸಾಧ್ಯವಾಗುವಂತೆ ಕತ್ತಲೆಯಲ್ಲಿ ದೀಪವನ್ನು ತಂದಿಡುವಂತೆ ಒಡೆಯನೇ, ಅನೇಕ ರೀತಿಯಿಂದ ಪೂಜ್ಯನಾದ ಗೌತಮನಿಂದ ನನಗೆ ಸತ್ಯವು ತಿಳಿಸಲ್ಪಟ್ಟಿದೆ. ಗೌತಮನೇ, ನಾನು, ನನ್ನ ಮಕ್ಕಳು, ನನ್ನ ಹೆಂಡತಿ, ನನ್ನ ಬಂಧುಗಳು ಮತ್ತು ನನ್ನ ಜೊತೆಗಾರರೊಡನೆ ಪೂಜ್ಯನಾದ ಗೌತಮನನ್ನು ನನ್ನ ಮಾರ್ಗದರ್ಶಿಯೆಂದು ಅನುಸರಿಸುತ್ತೇನೆ. ಅದರಂತೆ ಸತ್ಯವನ್ನು ಮತ್ತು ಸಂಘವನ್ನು ಅನುಸರಿಸುತ್ತೇನೆ. ಇಂದಿನಿಂದ ಬದುಕಿರುವವರೆಗೆ ತನ್ನನ್ನು ಮಾರ್ಗದರ್ಶಕ (ಉಪದೇಶಕ)ನೆಂದು ಸ್ವೀಕರಿಸಿದ ಶಿಷ್ಯನೆಂದು ಪೂಜ್ಯ ಗೌತಮನು ನನ್ನನ್ನು ಸ್ವೀಕರಿಸಲಿ ಮತ್ತು ಪೂಜ್ಯ ಗೌತಮನು ಉಕ್ಕಟ್ಟದಲ್ಲಿರುವ ತನ್ನ ಇತರ ಶಿಷ್ಯರ ಕುಟುಂಬಗಳಿಗೆ ಬೇಟಿ ನೀಡುವಂತೆ ನನ್ನ ಕುಟುಂಬಕ್ಕೂ ಭೇಟಿಯನ್ನು ಕೊಡಲಿ. ಯಾವುದೇ ಬ್ರಾಹ್ಮಣರು ಅಥವಾ ಅವನ ಹೆಂಡಂದಿರು ಪೂಜ್ಯ ಗೌತಮನಿಗೆ ಗೌರವವನ್ನು ಸಲ್ಲಿಸುವರೋ ಅಥವಾ ಅವನ ಎದುರಿಗೆ ಎದ್ದುನಿಲ್ಲುವರೋ ಅಥವಾ ಅವನಿಗೆ ಕೂಡಲು ಆಸನವನ್ನಾಗಲಿ, ಕುಡಿಯಲು ನೀರನ್ನಾಗಲಿ ಕೊಡುವರೋ ಅಥವಾ ಅವನನ್ನು ಕಂಡು ಸಂತೋಷಪಡುವರೋ, ಅಂತಹವರಿಗೆ ಗೌತಮನಿಗೆ ಸಲ್ಲಿಸುವ ಸೇವೆಯು ಕಲ್ಯಾಣಕ್ಕೆ ಮತ್ತು ಪರಮ ಸುಖಕ್ಕೆ ಕಾರಣವಾಗುವುದು."

"ಬ್ರಾಹ್ಮಣ, ನೀನು ಹೇಳುವುದೆಲ್ಲ ಸರಿ."

– *ಇಲ್ಲಿಗೆ 'ಅಂಬಟ್ಠ ಸುತ್ತ'ವು ಮುಗಿಯಿತು.*

# VI

ಜಾತಿ ವಿರೋಧದ ವಿಷಯದಲ್ಲಿ ಬುದ್ಧನು ತಾನು ಏನನ್ನು ಉಪದೇಶಿಸುತ್ತಿದ್ದನೋ ಅದರಂತೆ ನಡೆಯುತ್ತಿದ್ದನು. ಆರ್ಯರ ಸಮಾಜವು ಯಾವುದನ್ನು ಮಾಡಲು ನಿರಾಕರಿಸಿತೋ ಅದನ್ನು ಅವನು ಮಾಡಿದನು. ಆರ್ಯರ ಸಮಾಜದಲ್ಲಿ ಶೂದ್ರನು ಅಥವಾ ಕೆಳ ಜಾತಿಯ ಮನುಷ್ಯನು ಎಂದೂ ಬ್ರಾಹ್ಮಣನಾಗಲು ಸಾಧ್ಯವಿರಲಿಲ್ಲ. ಆದರೆ ಬುದ್ಧನು ಜಾತಿಯನ್ನು ವಿರೋಧಿಸಿ ಉಪದೇಶ ಮಾಡಿದನಷ್ಟೇ ಅಲ್ಲ, ಶೂದ್ರ ಮತ್ತು ಕೆಳ ಜಾತಿಯವರಿಗೆ ಭಿಕ್ಕುವಿನ ಸ್ಥಾನವನ್ನು ಕೊಟ್ಟನು. ಬ್ರಾಹ್ಮಣ ಸಮಾಜದಲ್ಲಿ ಬ್ರಾಹ್ಮಣನಿಗೆ ಇರುವ ಸ್ಥಾನವು ಬೌದ್ಧರ್ಮದಲ್ಲಿ ಭಿಕ್ಕುವಿಗೆ ಇತ್ತು. ರೈಸ್ ಡೇವಿಸ್‌ನು ಹೇಳುವಂತೆ (ವಾಕ್ಯವನ್ನು ಉದ್ಧರಿಸಿಲ್ಲ).

ಮೊದಲನೆಯದಾಗಿ, ಸಂಪೂರ್ಣವಾಗಿ ತನ್ನ ನಿಯಂತ್ರಣದಲ್ಲಿದ್ದ ತನ್ನ ಸಂಘದಲ್ಲಿ ಅವನು ಜನ್ಮ, ಉದ್ಯೋಗ ಮತ್ತು ಸಾಮಾಜಿಕ ಸ್ಥಾನಮಾನಗಳಿಂದ ಬರುವ ಎಲ್ಲ ಲಾಭ ಅಥವಾ ಹಾನಿಗಳನ್ನು ಸಂಪೂರ್ಣವಾಗಿ ಮತ್ತು ಖಂಡಿತವಾಗಿ ನಿರ್ಲಕ್ಷಿಸಿದನು ಮತ್ತು ಕೇವಲ ಸಂಸ್ಕಾರದ ಅಥವಾ ಸಾಮಾಜಿಕ ಅಶುದ್ಧತೆಯ ಆಧಾರದ ಮೇಲೆ ಸೃಷ್ಟಿಸಿದ ನಿಯಮಗಳಿಂದ ಉಂಟಾದ ಪ್ರತಿಬಂಧಕಗಳನ್ನು ಮತ್ತು ಅಸಮರ್ಥತೆಗಳನ್ನು ಕಿತ್ತುಹಾಕಿದನು.

ಅವನ ಸಂಘದ ಪ್ರಮುಖ ವ್ಯಕ್ತಿಗಳಲ್ಲಿ ಒಬ್ಬನು, ಗೌತಮನ ಅನಂತರ, ಸಂಘದ ನೀತಿ ನಿಯಮಗಳ ಬಗ್ಗೆ ಅಧಿಕಾರವಾಣಿಯಿಂದ ಮಾತನಾಡಬಲ್ಲವನೆಂದು ಪರಿಗಣಿಸಲ್ಪಟ್ಟವನೆಂದರೆ ಉಪಲಿ ಎಂಬುವನು. ಅವನು ಮೊದಲು ಕೀಳು ವೃತ್ತಿಗಳಲ್ಲಿ ಒಂದಾದ ಕ್ಷೌರಿಕನ ಉದ್ಯೋಗವನ್ನು ಮಾಡುತ್ತಿದ್ದನು. ಅದೇ ರೀತಿ ಸುನೀತನು ಸಂಘದ ಒಬ್ಬ ಸೋದರ. ಇವನ ಪದ್ಯಗಳನ್ನು 'ಥೇರಾ ಗಾಥಾ' ಎಂಬ ಗ್ರಂಥದಲ್ಲಿ ಸೇರಿಸಿದ್ದಾರೆ. ಇವನು ಕೀಳು ಪಂಗಡಗಳಲ್ಲಿ ಒಂದಾದ ಪುಕ್ಕಸಕ್ಕೆ ಸೇರಿದವನಾಗಿದ್ದನು. ಪ್ರಬಲ ಪಾಷಂಡವಾದದ ಪ್ರಚಾರ ಮಾಡಿದ ಸತಿಯದ್ದು ಮೀನುಗಾರರ ಸಂತಾನ. ನೀಚ ಜಾತಿಯಾದ ಅದು ಮತ್ತು ಆ ಜಾತಿಯ ಉದ್ಯೋಗವು, ಅದರ ಕ್ರೌರ್ಯಕ್ಕಾಗಿ ತುಚ್ಛೀಕಾರಕ್ಕೆ ಗುರಿಯಾಗಿತ್ತು. ನಂದನು ಗೌಳಿಗನಾಗಿದ್ದನು. ಇಬ್ಬರೂ ಪಂಥಕರು ಒಳ್ಳೆಯ ಮನೆತನದ ಒಬ್ಬ ಮದುವೆಯಾಗದ ಹುಡುಗಿ ಮತ್ತು ಒಬ್ಬ ದಾಸನ ವಿವಾಹ ಬಾಹಿರ ಸಂಬಂಧದಿಂದ ಹುಟ್ಟಿದ್ದರು. ('ಮನುಸ್ಮೃತಿ', ೩೧ ರ ಪ್ರಕಾರ ಅವರಿಬ್ಬರು ಜಾತಿ ಬಾಹಿರರಾಗಿದ್ದರು) ಕಾಪಾ ಎಂಬುವಳು ಜಿಂಕೆ ಬೇಟೆಯಾಡುವವನ ಮಗಳಾಗಿದ್ದಳು. ಪುನ್ನಾ ಮತ್ತು ಪುನ್ನಿಕಾ ದಾಸೀ ಕನ್ನಿಕೆಯರಾಗಿದ್ದರು. ಸುಮಂಗಲ ಮಾತಾ ಜವುಳಿನಲ್ಲಿ ಬೆಳೆಯುವ ಹುಲ್ಲುಗಳಲ್ಲಿ ಕೆಲಸಮಾಡುವ ಕೆಲಸಗಾರರಿಗೆ ಮಗಳು ಮತ್ತು ಹೆಂಡತಿಯಾಗಿದ್ದಳು ಮತ್ತು ಸುಭಾ ಒಬ್ಬ ಕಮ್ಮಾರನ ಮಗಳಾಗಿದ್ದಳು. ಇನ್ನೂ ಅನೇಕ ಉದಾಹರಣೆಗಳನ್ನು ನಿಸ್ಸಂಶಯವಾಗಿ ಉದ್ಧರಿಸಬಹುದು ಮತ್ತು ಹೆಚ್ಚು ಗ್ರಂಥಗಳು ಪ್ರಕಟವಾದಂತೆ ಉಳಿದವುಗಳೂ ಗೊತ್ತಾಗುವುವು. ಇಂಥವರ ಸಂಖ್ಯೆ ಅಲ್ಪವಾಗಿದೆಯೆಂದು ಅಪಹಾಸ್ಯ ಮಾಡುವುದಾಗಲೀ ತಥಾಕಥಿತ ಜ್ಞಾನೋದಯ ಅಥವಾ ಔದಾರ್ಯ ಕೇವಲ ನಟನೆಯಾಗಿತ್ತೆಂದು ಸೂಚಿಸುವುದಾಗಲೀ ಐತಿಹಾಸಿಕ ಸೂಕ್ಷ್ಮ ದೃಷ್ಟಿಯನ್ನು ತೋರಿಸುವುದಿಲ್ಲ. ಘಟನೆಗಳು ಸುಸ್ಪಷ್ಟವಾಗಿವೆ. ಜನಸಂಖ್ಯೆಯಲ್ಲಿಯ ಇತರ ಜಾತಿಗಳ ಜೊತೆ ಹೋಲಿಸಿದಾಗ ನೀಚ ಜಾತಿಗಳು ಮತ್ತು ಸಿಪ್ಪ ಪಂಗಡಗಳಿಗೆ ಸೇರಿದ ಜನರ ಪ್ರಮಾಣಕ್ಕೆ ಅನುಗುಣವಾಗಿ ಸಂಘಕ್ಕೆ ಸೇರಿದ ಕೀಳು ಜಾತಿಯ ಸದಸ್ಯರ ಸಂಖ್ಯೆಯು ಯೋಗ್ಯ ಪ್ರಮಾಣದಲ್ಲಿತ್ತು. ಹೀಗೆ 'ಥೇರಿ ಗಾಥಾ'ದಲ್ಲಿ ಹೇಳಿದ ಥೇರಿಯರಲ್ಲಿ ಅರುವತ್ತು ಜನರ ಸಾಮಾಜಿಕ ಸ್ಥಿತಿಗತಿ ನಮಗೆ ತಿಳಿದು ಬರುತ್ತದೆ. ಅವರಲ್ಲಿ ಐವರನ್ನು ಮೇಲೆ ಸೂಚಿಸಿದೆ. ಅಂದರೆ ಒಟ್ಟು ಸಂಖ್ಯೆಯಲ್ಲಿ ನೂರಕ್ಕೆ ೮ ೧/೨ ರಷ್ಟು

ಜನರು ಕೀಳು ಜಾತಿಯವರಿದ್ದರು. ಇಂತಹ ಸಾಮಾಜಿಕ ಸ್ಥಿತಿಯುಳ್ಳ ಜನರು ಒಟ್ಟು ಜನಸಂಖ್ಯೆಯ ಇತರ ಜನರೊಡನೆ ಯಾವ ಪ್ರಮಾಣದಲ್ಲಿದ್ದರೋ ಬಹುಶಃ ಅದೇ ಪ್ರಮಾಣದಲ್ಲಿ ಇದು ಇದೆಯೆಂದು ಹೇಳಬಹುದಾಗಿದೆ.

ಬುದ್ಧನು ಶೂದ್ರರು ಮತ್ತು ಕೀಳು ಜಾತಿಯ ಜನರನ್ನು ಭಿಕ್ಕುಗಳ ಉತ್ತಮ ಸ್ಥಾನಕ್ಕೆ ಏರಿಸುವುದರ ಮೂಲಕ ಅವರ ಸ್ಥಾನಮಾನವನ್ನು ಸುಧಾರಿಸಿದಂತೆಯೇ ಅವನು ಸ್ತ್ರೀಯರ ಸ್ಥಾನಮಾನವನ್ನು ಕೂಡ ಸುಧಾರಿಸಿದನು. ಆರ್ಯರ ಸಮಾಜದಲ್ಲಿ ಸ್ತ್ರೀಯರನ್ನು ಶೂದ್ರರಿಗೆ ಸಮಾನವಾದ ಸ್ಥಾನಮಾನ ದಲ್ಲಿಯೇ ಇಟ್ಟಿದ್ದಾರೆ. ಆರ್ಯರ ಎಲ್ಲ ಸಾಹಿತ್ಯದಲ್ಲಿ ಸ್ತ್ರೀಯರು ಮತ್ತು ಶೂದ್ರರಿಗೆ ಸಮಾಜ ದರ್ಜೆ ನಿರಾಕರಿಸಲ್ಪಟ್ಟಿತ್ತು. ಮೋಕ್ಷಕ್ಕೆ ಸನ್ಯಾಸವೊಂದೇ ಮಾರ್ಗವಾಗಿದ್ದರಿಂದ ಸ್ತ್ರೀಯರ ವಿಷಯದಲ್ಲಿಯೂ ಆರ್ಯರ ಈ ನಿಯಮವನ್ನು ಬುದ್ಧನು ಮುರಿದನು. ಒಬ್ಬ ಶೂದ್ರನು ಭಿಕ್ಕುವಾಗುವಂತೆ ಒಬ್ಬ ಸ್ತ್ರೀ ಸಹ ಸನ್ಯಾಸಿಯಾಗಬಹುದಿತ್ತು. ಇದು ಆರ್ಯ ಸಮಾಜದ ದೃಷ್ಟಿಯಲ್ಲಿ ಕಲ್ಪಿಸಬಹುದಾದ ಅತಿ ಉತ್ತಮ ದರ್ಜೆಗೆ ಅವಳನ್ನು ಒಯ್ಯುವುದಾಗಿತ್ತು.

ಆರ್ಯ ಸಮಾಜದ ನಾಯಕರ ವಿರುದ್ಧ ಬುದ್ಧನು ಮಾಡಿದ ಹೋರಾಟದ ಇನ್ನೊಂದು ವಿಷಯವೆಂದರೆ ಶಿಕ್ಷಕರು ಮತ್ತು ಶಿಕ್ಷಣದ ನೀತಿಯನ್ನು ಕುರಿತದ್ದೇ ಆಗಿತ್ತು. ಆರ್ಯ ಸಮಾಜದ ನಾಯಕರು ವಿದ್ಯೆ ಮತ್ತು ಅಧ್ಯಯನಗಳನ್ನು ಬ್ರಾಹ್ಮಣ, ಕ್ಷತ್ರಿಯ ಮತ್ತು ವೈಶ್ಯರ ಹಕ್ಕು ಎಂಬ ಅಭಿಪ್ರಾಯವುಳ್ಳವರಾಗಿದ್ದರು. ಶೂದ್ರರಿಗೆ ವಿದ್ಯೆಯನ್ನು ಕಲಿಸಿದರೆ ಸಾಮಾಜಿಕ ವ್ಯವಸ್ಥೆಗೆ ಅಪಾಯವುಂಟಾಗುವುದೆಂದು ಅವರು ಸಾಧಿಸುತ್ತಿದ್ದರು. ಬುದ್ಧನು ಆರ್ಯರ ಈ ಸಿದ್ಧಾಂತವನ್ನು ಖಂಡಿಸಿದನು. ರ್ಹೈಸ್ ಡೇವಿಸ್ ಹೇಳಿರುವಂತೆ ಈ ವಿಷಯವು ಹೀಗಿದೆ: "ಪ್ರತಿಯೊಬ್ಬನಿಗೂ ಕಲಿಸಲು ಅವಕಾಶ ಕೊಡಬೇಕು. ವಿಶಿಷ್ಟ ಸಾಮರ್ಥ್ಯವುಳ್ಳ ಪ್ರತಿಯೊಬ್ಬನಿಗೂ ಕಲಿಯಲು ಅವಕಾಶ ಕೊಡಬೇಕು ಮತ್ತು ಅವನು ಕಲಿಸುತ್ತಿದ್ದರೆ ಎಲ್ಲರಿಗೂ ಎಲ್ಲವನ್ನೂ ಕಲಿಸಬೇಕು. ಏನನ್ನೂ ಮುಚ್ಚಿಡಬಾರದು. ಯಾರನ್ನೂ ಪ್ರತಿಬಂಧಿಸಬಾರದು." ಈ ವಿಷಯದಲ್ಲಿ ಬುದ್ಧ ಮತ್ತು ಬ್ರಾಹ್ಮಣ ಲೋಹಿಕ್ಕನ ಸಂವಾದವನ್ನು ವಿವರಿಸಬಹುದು ಮತ್ತು ಇದಕ್ಕೆ 'ಲೋಹಿಕ್ಕ' ಸುತ್ತ ಎಂದು ಹೆಸರು.

## ಲೋಹಿಕ್ಕ ಸುತ್ತ

(ಶಿಕ್ಷಣ ನೀತಿಗೆ ಸೇರಿದ ಕೆಲ ವಿಷಯಗಳು)

ನಾನು ಹೀಗೆ ಕೇಳಿದ್ದೇನೆ: ಸುಮಾರು ಐದು ನೂರು ಭಿಕ್ಕುಗಳಿಂದ ಕೂಡಿದ ಸಂಘದ ಸದಸ್ಯರ ದೊಡ್ಡ ಸಮೂಹದೊಡನೆ ಕೋಸಲ ದೇಶದ ಪ್ರಾಂತಗಳಲ್ಲಿ ಸಂಚರಿಸುತ್ತಿರುವಾಗ ಘನಮಹಿಮನು ಸಾಲವಾಟಿಕೆಗೆ ಬಂದನು. ಆ ಸಮಯದಲ್ಲಿ ಲೋಹಿಕ್ಕ ಬ್ರಾಹ್ಮಣನು ಹುಲ್ಲುಗಾವಲು, ಅಡವಿ, ಧಾನ್ಯ ಕ್ಷೇತ್ರಗಳಿಂದ ಕೂಡಿದ್ದ ಚೈತನ್ಯ ಪೂರ್ಣ (ಹಚ್ಚ ಹಸಿರು) ಸ್ಥಳದಲ್ಲಿ ಸಾಲವಾಟಿಕೆಯಲ್ಲಿ ವಾಸವಾಗಿದ್ದನು. ಅದು ಕೋಸಲದ ರಾಜ ಪಸನದಿಯು ರಾಜಕಾರಣಿಕೆಗೆಂದು ಕೊಟ್ಟ ರಾಜನ ಕ್ಷೇತ್ರವಾಗಿತ್ತು ಮತ್ತು ಅವನು ಅಲ್ಲಿ ರಾಜನಂತೆ ಅಧಿಕಾರ ನಡೆಸಬಹುದಿತ್ತು.

೨. ಆಗ ಆ ಸಮಯದಲ್ಲಿ ಲೋಹಿಕ್ಕ ಬ್ರಾಹ್ಮಣನು ಈ ದುಷ್ಟ ವಿಚಾರವುಳ್ಳವನಾಗಿದ್ದನು: "ಸಮಣನಾಗಲಿ ಅಥವಾ ಬ್ರಾಹ್ಮಣನಾಗಲಿ ಉತ್ತಮ (ಮಾನಸಿಕ) ಸ್ಥಿತಿಯನ್ನು ಹೊಂದಿದ್ದಾನೆಂದು ತಿಳಿಯೋಣ. ಆಗ ಅವನು ಯಾರಿಗೂ ಅದರ ಬಗ್ಗೆ ಹೇಳಬಾರದು. ಯಾಕೆಂದರೆ ಒಬ್ಬ ಮನುಷ್ಯನು ಇನ್ನೊಬ್ಬನಿಗೆ ಏನು ಮಾಡಬಲ್ಲನು? ಇನ್ನೊಬ್ಬರಿಗೆ ಹೇಳುವುದೆಂದರೆ, ಹಳೆಯ ಪಾಶವನ್ನು ಕಡಿದುಕೊಂಡು ಹೊಸ ಪಾಶದಲ್ಲಿ

ಸಿಲುಕಿಕೊಂಡ ಮನುಷ್ಯನಂತೆ ಆಗುವುದು. ಅದರಂತೆಯೇ ಇದು (ಇನ್ನೊಬ್ಬರಿಗೆ ಹೇಳಬೇಕೆಂಬ ಇಚ್ಛೆ) ಇದೆ ಎಂದು ನಾನು ಅನ್ನುತ್ತೇನೆ; ಅದೊಂದು ರೀತಿಯ ಕಾಮನೆ. ಯಾಕೆಂದರೆ ಒಬ್ಬ ಮನುಷ್ಯನು ಇನ್ನೊಬ್ಬನಿಗೆ ಏನು ಮಾಡಬಲ್ಲನು?"

೩. ಆಗ ಲೋಹಿಕ್ಕ ಬ್ರಾಹ್ಮಣನು ಈ ಸುದ್ದಿಯನ್ನು ಕೇಳಿದನು. ಶಾಕ್ಯ ವಂಶವನ್ನು ತ್ಯಾಗಮಾಡಿ ಧಾರ್ಮಿಕ ಜೀವನವನ್ನು ಸ್ವೀಕರಿಸಿರುವ ಶಾಕ್ಯರ ಮಕ್ಕಳಲ್ಲಿ ಒಬ್ಬನಾದ ಸಮಣ ಗೌತಮನು ತನ್ನ ಸಂಘದ ಸೋದರರ ದೊಡ್ಡ ಸಮೂಹದೊಡನೆ ಕೋಸಲದ ಪ್ರಾಂತಗಳಲ್ಲಿಯ ತನ್ನ ಸಂಚಾರ ಕಾಲದಲ್ಲಿ ಈಗ ಸಾಲವಾಟಿಕೆಗೆ ಬಂದಿದ್ದಾನೆ ಎಂದು ಜನರು ಹೇಳುತ್ತಾರೆ. ಈಗ ಪೂಜ್ಯ ಗೌತಮನ ಬಗೆಗೆ ಎಲ್ಲೆಡೆಗೆ ಪ್ರಚಲಿತವಾಗಿರುವ ಉತ್ತಮ ಪ್ರಸಿದ್ಧಿಯು ಹೀಗಿದೆ: 'ಅರ್ಹತನಾದ ಆ ಘನಮಹಿಮನು ಪೂರ್ಣ ಜಾಗೃತವಾದ, ಜ್ಞಾನ ಮತ್ತು ಒಳ್ಳೆಯತನವನ್ನು ಅತಿಯಾಗಿ ಪಡೆದಿರುವ, ಸುಖಿಯಾದ, ಲೋಕಗಳ ಜ್ಞಾನವುಳ್ಳ, ಮಾರ್ಗದರ್ಶನವನ್ನು ಬಯಸುವ ಮರ್ತ್ಯರಿಗೆ ಅಸದೃಶ ಮಾರ್ಗದರ್ಶಕನಾದ, ದೇವತೆಗಳಿಗೆ ಮತ್ತು ಮನುಷ್ಯರಿಗೆ ಗುರುವಾದ ಉದಾತ್ತನಾದ ಬುದ್ಧನಾಗಿದ್ದಾನೆ. ಮೇಲೆ ಇರುವ ದೇವತೆಗಳ, ಬ್ರಾಹ್ಮಣರ, ಮಾರರ ಲೋಕಗಳು ಮತ್ತು ಕೆಳಗಿರುವ ಸಮಣರು, ಬ್ರಾಹ್ಮಣರು, ರಾಜಕುಮಾರರು ಮತ್ತು ಜನಾಂಗಗಳು ಇವರಿಂದ ಕೂಡಿದ ಲೋಕಗಳು – ಇವುಗಳಿಂದ ಕೂಡಿದ ವಿಶ್ವವನ್ನು ಅವನು ಸಂಪೂರ್ಣವಾಗಿ ತಿಳಿದುಕೊಂಡಿದ್ದಾನೆ ಮತ್ತು ಪ್ರತ್ಯಕ್ಷವಾಗಿ ನೋಡುವಂತೆ ನೋಡುತ್ತಾನೆ. ಅದನ್ನು ತಿಳಿದುಕೊಂಡು ತನ್ನ ಜ್ಞಾನವನ್ನು ಇತರರಿಗೆ ತಿಳಿಸುತ್ತಾನೆ. ಉಗಮದಲ್ಲಿ ಮನೋಹರವಾದ, ಪ್ರಗತಿಯಲ್ಲಿ ಮನೋಹರವಾದ, ಗುರಿಯಲ್ಲಿ ಮನೋಹರವಾದ ಸತ್ಯವನ್ನು ತಾತ್ಪರ್ಯದಿಂದ ಮತ್ತು ಅಕ್ಷರಶಃ ಉಪದೇಶಿಸುತ್ತಾನೆ. ಅತ್ಯಂತ ಪರಿಪೂರ್ಣತೆಯನ್ನು ಮತ್ತು ಪರಿಶುದ್ಧತೆಯನ್ನು ಪಡೆದ ಉಚ್ಚ ಜೀವನದ ಬಗ್ಗೆ ಅವನು ತಿಳಿಸುತ್ತಾನೆ. ಮತ್ತು ಇಂತಹ ಅರ್ಹತರನ್ನು ಭೇಟಿಯಾಗುವುದು ಹಿತದಾಯಕವಾಗಿದೆ.

೪. ಅನಂತರ ಲೋಹಿಕ್ಕ ಬ್ರಾಹ್ಮಣನು ಕ್ಷೌರಿಕ ಭೇಸಿಕನಿಗೆ ಅಂದನು: "ಒಳ್ಳೆಯ ಭೇಸಿಕನೇ, ಇತ್ತ ಬಾ. ಸಮಣ ಗೌತಮನು ಇರುವಲ್ಲಿಗೆ ಹೋಗು ಮತ್ತು ನೀನು ಅಲ್ಲಿ ಹೋದನಂತರ ಅವನ ಅನಾರೋಗ್ಯ ಮತ್ತು ಅಸ್ವಸ್ಥತೆ ಕಡಿಮೆಯಾಗಿದೆಯೋ ಹೇಗೆ ಅವನ ಆರೋಗ್ಯ, ಉತ್ಸಾಹ ಮತ್ತು ಮನಃ ಸಮಾಧಾನ ಹೇಗಿದೆ ಎಂದು ನನ್ನ ಹೆಸರಿನಲ್ಲಿ ಕೇಳು ಮತ್ತು ಹೀಗೆ ಹೇಳು: 'ಪೂಜ್ಯ ಗೌತಮನು ಮತ್ತು ಅವನ ಜೊತೆಗೆ ಸಂಘದ ಸದಸ್ಯರು ನಾಳಿನ ಊಟವನ್ನು ಲೋಹಿಕ್ಕ ಬ್ರಾಹ್ಮಣನಿಂದ ಸ್ವೀಕರಿಸಬೇಕು."

೫. 'ಒಳ್ಳೆಯದು ಸ್ವಾಮಿ' ಲೋಹಿಕ್ಕ ಬ್ರಾಹ್ಮಣನ ಮಾತುಗಳಿಗೆ ಒಪ್ಪಿಕೊಳ್ಳುತ್ತ ಕ್ಷೌರಿಕ ಭೇಸಿಕನು ಅಂದನು ಮತ್ತು ತನಗೆ ಮಾಡಲು ಹೇಳಿದ ಕೆಲಸವನ್ನು ಮಾಡಿದನು ಮತ್ತು ಘನಮಹಿಮನು ಅವನ ಪ್ರಾರ್ಥನೆಗೆ ಮೌನದಿಂದ ಸಮ್ಮತಿಸಿದನು.

೬. ಘನಮಹಿಮನು ಒಪ್ಪಿಗೆ ನೀಡಿದ್ದಾನೆಂದು ಕ್ಷೌರಿಕ ಭೇಸಿಕನಿಗೆ ತಿಳಿದ ನಂತರ ಅವನು ತನ್ನ ಆಸನದಿಂದ ಮೇಲೆದ್ದನು ಮತ್ತು ಘನಮಹಿಮನ ಬಲಗೈಯನ್ನು ತನ್ನ ಕಡೆಗೆ ಮಾಡಿಕೊಂಡು ಹೊರ ಹೊರಟು ಲೋಹಿಕ್ಕ ಬ್ರಾಹ್ಮಣನ ಹತ್ತಿರ ಬಂದನು ಮತ್ತು ಅಲ್ಲಿ ಬಂದನಂತರ ಅವನಿಗೆ ಹೀಗೆ ಹೇಳಿದನು: "ಸ್ವಾಮಿ, ನೀವು ಹೇಳಿದಂತೆ ನಿಮ್ಮ ಹೆಸರಿನಲ್ಲಿ ಘನಮಹಿಮನನ್ನು ನಾವು ಸಂಬೋಧಿಸಿದೆವು ಮತ್ತು ಘನಮಹಿಮನು ಬರಲು ಒಪ್ಪಿಕೊಂಡಿದ್ದಾನೆ."

೭. ಅನಂತರ ಲೋಹಿಕ್ಕ ಬ್ರಾಹ್ಮಣನು ರಾತ್ರಿಯು ಕಳೆದ ನಂತರ ತನ್ನ ಮನೆಯಲ್ಲಿ ಬಿರುಸಾದ ಮತ್ತು ಮೃದುವಾದ ಹಾಗೂ ಮಧುರವಾದ ಹಾಗೂ ಅಡುಗೆಯನ್ನು ಸಿದ್ಧಪಡಿಸಿದನು ಮತ್ತು ಕ್ಷೌರಿಕ ಭೇಸಿಕನಿಗೆ ಅಂದನು:

"ಒಳ್ಳೆಯ ಭೇಸಿಕನೇ, ಇತ್ತ ಬಾ. ಸಮಣ ಗೌತಮನು ಇರುವಲ್ಲಿಗೆ ಹೋಗು ಮತ್ತು ನೀನು ಅಲ್ಲಿಗೆ ಹೋದ ನಂತರ ಅವನಿಗೆ ಸಮಯವನ್ನು ತಿಳಿಸುತ್ತಾ (ಹೀಗೆ) ಹೇಳು: "ಗೌತಮನೇ, ವೇಳೆಯಾಗಿದೆ ಮತ್ತು ಅಡುಗೆಯು ಸಿದ್ಧವಾಗಿದೆ."

"ಒಳ್ಳೆಯದು ಸ್ವಾಮಿ" ಲೋಹಿಕ್ಕ ಬ್ರಾಹ್ಮಣನ ಮಾತುಗಳಿಗೆ ಸಮ್ಮತಿಸುತ್ತ ಕ್ಷೌರಿಕ ಭೇಸಿಕನು ಅಂದನು ಮತ್ತು ತನಗೆ ಹೇಳಿದಂತೆಯೇ ಮಾಡಿದನು.

ನಸುಕಿನಲ್ಲಿ ಬಟ್ಟೆಗಳನ್ನು ಧರಿಸಿದ್ದ ಘನಮಹಿಮನು ಬಟ್ಟೆಗಳನ್ನು ತೊಟ್ಟುಕೊಂಡ ಹಾಗೆಯೇ ಕೈಯಲ್ಲಿ ಊಟದ ತಟ್ಟೆಯನ್ನು ತೆಗೆದುಕೊಂಡು ಸಂಘದ ಸೋದರರೊಡನೆ ಸಾಲವಾಟಿಕೆಯ ಕಡೆ ಹೊರಟನು.

೮. ಅವನು ಹೋಗುತ್ತಿರುವಾಗ ಘನಮಹಿಮನ ಹಿಂದಿನಿಂದ ಕ್ಷೌರಿಕ ಭೇಸಿಕನು ಹೆಜ್ಜೆಯ ಮೇಲೆ ಹೆಜ್ಜೆಯನ್ನು ಇಡುತ್ತ ನಡೆಯುತ್ತಿದ್ದನು. ಆಗ ಅವನು ಘನಮಹಿಮನಿಗೆ ಅಂದನು:

"ಲೋಹಿಕ್ಕ ಬ್ರಾಹ್ಮಣನಿಗೆ ಈ ದುಷ್ಟ ವಿಚಾರವು ಬಂದಿದೆ: 'ಸಮಣನಾಗಲಿ ಅಥವಾ ಬ್ರಾಹ್ಮಣನಾಗಲಿ ಉತ್ತಮ (ಮಾನಸಿಕ) ಸ್ಥಿತಿಯನ್ನು ಹೊಂದಿದ್ದಾನೆ ಎಂದು ತಿಳಿಯೋಣ. ಆಗ ಅವನು ಯಾರಿಗೂ ಅದರ ಬಗ್ಗೆ ಹೇಳಬಾರದು. ಯಾಕೆಂದರೆ ಒಬ್ಬ ಮನುಷ್ಯನು ಇನ್ನೊಬ್ಬನಿಗೆ ಏನು ಮಾಡಬಲ್ಲನು? ಇನ್ನೊಬ್ಬನಿಗೆ ಹೇಳುವದೆಂದರೆ, ಹಳೆಯ ಪಾಶವನ್ನು ಕಳೆದುಕೊಂಡು ಹೊಸ ಪಾಶದಲ್ಲಿ ತನ್ನನ್ನು ತಾನು ಸಿಲುಕಿಕೊಂಡ ಮನುಷ್ಯನಂತೆ ಆಗುವುದು. ಇನ್ನೊಬ್ಬರಿಗೆ ಹೇಳಬೇಕೆಂಬ ಇಚ್ಛೆಯೂ ಅದರಂತೆಯೇ ಇರುತ್ತದೆ ಎಂದು ನಾನು ಅನ್ನುತ್ತೇನೆ. ಅದೊಂದು ರೀತಿಯ ಕಾಮನೆ.' ಪೂಜ್ಯರೇ, ಘನಮಹಿಮರಾದ ತಾವು ಅವನ ಮನಸ್ಸನ್ನು ಸರಿಪಡಿಸಿದರೆ ಒಳ್ಳೆಯದು. ಯಾಕೆಂದರೆ ಒಬ್ಬ ಮನುಷ್ಯನು ಇನ್ನೊಬ್ಬನಿಗೆ ಏನು ಮಾಡಬಲ್ಲನು?'

"ಅದು ಸರಿ, ಭೇಸಿಕನೇ ಅದು ಸರಿ."

೯. ಅನಂತರ ಘನಮಹಿಮನು ಲೋಹಿಕ್ಕ ಬ್ರಾಹ್ಮಣನ ವಾಸಸ್ಥಾನಕ್ಕೆ ಹೋದನು ಮತ್ತು ತನಗಾಗಿ ಸಿದ್ಧಪಡಿಸಿದ ಆಸನದಲ್ಲಿ ಕುಳಿತುಕೊಂಡನು. ಲೋಹಿಕ್ಕ ಬ್ರಾಹ್ಮಣನು ಬುದ್ಧನ ನಾಯಕತ್ವದಲ್ಲಿರುವ ಸಂಘದ ಸದಸ್ಯರಿಗೆ ಅವರು ಸಾಕು ಎನ್ನುವವರೆಗೆ ತನ್ನ ಕೈಯಿಂದಲೇ ಬಿರುಸು ಮತ್ತು ಮೃದುವಾದ ಮಧುರ ಆಹಾರವನ್ನು ಬಡಿಸಿ ತೃಪ್ತಿಪಡಿಸಿದನು. ಘನಮಹಿಮನು ಊಟವನ್ನು ಮುಗಿಸಿ ಊಟದ ತಟ್ಟೆಯನ್ನು ಮತ್ತು ಕೈಗಳನ್ನು ತೊಳೆದುಕೊಂಡ ಅನಂತರ, ಲೋಹಿಕ್ಕ ಬ್ರಾಹ್ಮಣನು ಒಂದು ಗಿಡ್ಡ ಆಸನವನ್ನು ಘನಮಹಿಮನಿಗಾಗಿ ತಂದನು ಮತ್ತು ಅವನ ಬದಿಯಲ್ಲಿ ಕುಳಿತುಕೊಂಡನು. ಹೀಗೆ ಕುಳಿತುಕೊಂಡ ಘನಮಹಿಮನು ಆಗ ಅವನಿಗೆ ಈ ರೀತಿ ಅಂದನು:

"ಲೋಹಿಕ್ಕ, ಈ ದುಷ್ಟ ಅಭಿಪ್ರಾಯವು ನಿನ್ನ ಮನಸ್ಸಿನಲ್ಲಿ ಉಂಟಾಗಿದೆಯೆಂದು ಅವರು ಹೇಳುತ್ತಾರಲ್ಲ. ಅದು ಸರಿಯೇ? (ಮತ್ತು ಮೇಲೆ ಹೇಳಿದಂತೆ ಆ ವಿಚಾರವನ್ನು ಅಥವಾ ಅಭಿಪ್ರಾಯವನ್ನು ತಿಳಿಸಿದನು)

"ಅದು ಸರಿ, ಗೌತಮ?"

"ಲೋಹಿಕ್ಕ ನಿನಗೆ ಏನು ಅನಿಸುತ್ತದೆ? ನೀನು ಸಾಲವಾಟಿಕೆಯಲ್ಲಿ ವಾಸವಾಗಿಲ್ಲವೇ?"

"ಹೌದು ಗೌತಮ, ಅದು ನಿಜ."

"ಹಾಗಾದರೆ, ಲೋಹಿಕ್ಕ, ಒಬ್ಬನು ಹೀಗೆ ಅಂದನೆಂದು ತಿಳಿದುಕೋ: 'ಸಾಲವಾಟಿಕೆಯ ಲೋಹಿಕ್ಕ ಬ್ರಾಹ್ಮಣನ ಅಧಿಕಾರಕ್ಕೊಳಪಟ್ಟಿದೆ. ಸಾಲವಾಟಿಕೆಯ ಎಲ್ಲ ಆದಾಯ ಮತ್ತು ಎಲ್ಲ ಉತ್ಪನ್ನಗಳನ್ನು ಅವನೊಬ್ಬನೇ

ಅನುಭವಿಸಲಿ. ಬೇರೆ ಯಾರಿಗೂ ಏನನ್ನೂ ಕೊಡುವುದು ಬೇಡ!' ಈ ರೀತಿ ಮಾತನಾಡುವವನು ನಿನ್ನನ್ನು ಆಶ್ರಯಿಸಿಕೊಂಡಿರುವ ಜನರಿಗೆ ಅಪಾಯ ಮಾಡುವವನಾಗುವನೋ ಅಥವಾ ಇಲ್ಲವೋ?"

"ಗೌತಮ, ಅವನು ಅಪಾಯ ಮಾಡುವವನಾಗುತ್ತಾನೆ."

"ಮತ್ತು ಆ ಅಪಾಯವನ್ನು ಉಂಟುಮಾಡಿ, ಅವನು ಅವರ ಯೋಗಕ್ಷೇಮದ ಬಗ್ಗೆ ಸಹಾನುಭೂತಿಯುಳ್ಳವನಾಗುತ್ತಾನೆಯೋ ಅಥವಾ ಇಲ್ಲವೋ?"

"ಗೌತಮ, ಅವರ ಯೋಗಕ್ಷೇಮವನ್ನು ನೋಡಿಕೊಳ್ಳುವವನಾಗುವುದಿಲ್ಲ."

"ಮತ್ತು ಅವರ ಹಿತವನ್ನು ಬಯಸಿದ್ದರೆ, ಅವನ ಮನಸ್ಸಿನಲ್ಲಿ (ಹೃದಯದಲ್ಲಿ) ಅವರ ಬಗ್ಗೆ ದೃಢವಾದ ಪ್ರೀತಿಯಿರುವುದೋ ಅಥವಾ ದ್ವೇಷವಿರುವುದೋ?"

"ದ್ವೇಷವಿರುವುದು, ಗೌತಮ."

"ಆದರೆ (ಈ ರೀತಿ) ಹೃದಯದಲ್ಲಿ ದೃಢವಾದ ದ್ವೇಷವಿದ್ದಾಗ ಅದು ಅದೃಢವಾದ ತತ್ವವೋ ಅಥವಾ ದೃಢವಾದದ್ದೋ?"

"ಗೌತಮ, ಅದು ಅದೃಢವಾದ ತತ್ವವು."

"ಹಾಗಾದರೆ, ಲೋಹಿಕ್ಕನೇ, ಯಾವನಾದರೂ ಅದೃಢವಾದ ತತ್ವವನ್ನು ಆಶ್ರಯಿಸಿದರೆ ಅವನಿಗೆ ಭವಿಷ್ಯತ್ತಿನಲ್ಲಿ ನರಕವಾಸ ಅಥವಾ ಪ್ರಾಣಿಯಾಗಿ ಜನ್ಮ ಇವೆರಡರಲ್ಲಿ ಒಂದು ಪ್ರಾಪ್ತಿಯಾಗುವುದು ನಿಶ್ಚಿತ ಎಂದು ನಾನು ಘೋಷಿಸುತ್ತೇನೆ."

೧೧. "ಲೋಹಿಕ್ಕ ನಿನಗೆ ಏನು ಅನಿಸುತ್ತದೆ? ಕೋಸಲದ ರಾಜ ಪಸನದಿಯು ಕಾಶಿ ಮತ್ತು ಕೋಸಲಗಳ ಒಡೆತನವನ್ನು ಹೊಂದಿರುವನಲ್ಲವೇ?"

"ಹೌದು, ಗೌತಮ, ಅದು ನಿಜ."

"ಹಾಗಾದರೆ ಲೋಹಿಕ್ಕನೇ, ಒಬ್ಬನು ಹೀಗೆ ಅಂದನೆಂದು ತಿಳಿದುಕೋ: 'ಕೋಸಲದ ರಾಜ ಪಸನದಿಯು ಕಾಶಿ ಮತ್ತು ಕೋಸಲಗಳ ಒಡೆಯನಾಗಿದ್ದಾನೆ. ಕಾಶಿ ಮತ್ತು ಕೋಸಲಗಳ ಎಲ್ಲ ಆದಾಯ ಮತ್ತು ಉತ್ಪನ್ನಗಳನ್ನು ಅವನೊಬ್ಬನೇ ಭೋಗಿಸಲಿ. ಬೇರೆ ಯಾರಿಗೂ ಏನನ್ನೂ ಕೊಡುವುದು ಬೇಡ.' ಈ ರೀತಿ ಮಾತನಾಡುವವನು, ಕೋಸಲದ ರಾಜ ಪಸನದಿಯನ್ನು ಆಶ್ರಯಿಸಿಕೊಂಡಿರುವ ನೀನು ಮತ್ತು ಇತರ ಜನರಿಗೆ ಅಪಾಯ ಮಾಡುವವನಾಗುವನೋ ಅಥವಾ ಇಲ್ಲವೋ?"

"ಗೌತಮ, ಅವನು ಅಪಾಯಕಾರಿ ಆಗುವನು."

"ಮತ್ತು ಆ ಅಪಾಯವನ್ನು ಮಾಡಿ, ಅವನು ಅವರ ಯೋಗಕ್ಷೇಮದ ಬಗ್ಗೆ ಸಹಾನುಭೂತಿಯುಳ್ಳವನಾಗುವನೋ ಅಥವಾ ಇಲ್ಲವೋ?"

"ಗೌತಮ, ಅವರ ಯೋಗ ಕ್ಷೇಮವನ್ನು ಬಯಸುವವನಾಗುವುದಿಲ್ಲ."

"ಅವರ ಹಿತವನ್ನು ಬಯಸಿದ್ದರೆ, ಅವನ ಮನಸ್ಸಿನಲ್ಲಿ ಅವರ ಬಗ್ಗೆ ದೃಢವಾದ ಪ್ರೀತಿಯಿರುವುದೋ ಅಥವಾ ದ್ವೇಷವಿರುವುದೋ?"

"ಗೌತಮ, ದ್ವೇಷವೇ ಇರುವುದು."

"ಆದರೆ (ಈ ರೀತಿ) ಹೃದಯದಲ್ಲಿ ದೃಢವಾದ ದ್ವೇಷವಿದ್ದಾಗ, ಅದು ಅದೃಢವಾದ ತತ್ವವೋ, ಅಥವಾ ದೃಢವಾದದ್ದೋ?"

"ಗೌತಮ, ಅದು ಅದೃಢವಾದ ತತ್ವ."

"ಹಾಗಾದರೆ, ಲೋಹಿಕ್ಕನೇ, ಯಾವನಾದರೂ ಅದೃಢವಾದ ತತ್ವವನ್ನು ಆಶ್ರಯಿಸಿದರೆ ಅವನಿಗೆ ಭವಿಷ್ಯತ್ತಿನಲ್ಲಿ ನರಕವಾಸ ಅಥವಾ ಪ್ರಾಣಿಯಾಗಿ ಜನ್ಮ ಇವೆರಡರಲ್ಲಿ ಒಂದು ಪ್ರಾಪ್ತಿಯಾಗುವುದು ಎಂದು ನಾನು ಘೋಷಿಸುತ್ತೇನೆ.

೧೨ ಮತ್ತು ೧೪. "ಆದ್ದರಿಂದ, ಲೋಹಿಕ್ಕನೇ, ಸಾಲವಾಟಿಕೆಯು ನಿನ್ನ ಆಡಳಿತದಲ್ಲಿರುವುದ ರಿಂದ, ಅದರಿಂದ ಬರುವ ಎಲ್ಲ ಆದಾಯ ಮತ್ತು ಉತ್ಪನ್ನವನ್ನು ಯಾರಿಗೂ ಏನನ್ನು ಕೊಡದೆ ನೀನೇ ಭೋಗಿಸಬೇಕು ಎಂದು ಹೇಳುವವನು, ಕಾಶಿ ಮತ್ತು ಕೋಸಲಗಳ ಮೇಲೆ ಅಧಿಕಾರವಿರುವ ಕೋಸಲದ ರಾಜ ಪಸನದಿಯು ಅದರಿಂದ ಬರುವ ಎಲ್ಲ ಆದಾಯ ಮತ್ತು ಎಲ್ಲ ಉತ್ಪನ್ನವನ್ನು ಯಾರಿಗೂ ಏನನ್ನೂ ಕೊಡದೇ ತಾನೇ ಎಲ್ಲವನ್ನು ಭೋಗಿಸಬೇಕು ಎನ್ನುವವನು, ನಿನ್ನನ್ನು ಆಶ್ರಯಿಸಿರುವ ಜನರಿಗೆ ಅಥವಾ ರಾಜನನ್ನು ಆಶ್ರಯಿಸಿರುವ ನಿನಗೆ ಮತ್ತು ಇತರ ಜನರಿಗೆ ಅಪಾಯವನ್ನು ಉಂಟು ಮಾಡುತ್ತಾನೆಂದು ನೀನು ಒಪ್ಪುತ್ತೀಯೆ. ಹೀಗೆ ಇತರರಿಗೆ ಅಪಾಯವನ್ನು ಉಂಟುಮಾಡುವವರು ಅವರ ಬಗ್ಗೆ ಸಹಾನುಭೂತಿಯುಳ್ಳವರಾಗಿರುವುದಿಲ್ಲ ಮತ್ತು ಸಹಾನುಭೂತಿಯಿಲ್ಲದವನ ಮನಸ್ಸಿನಲ್ಲಿ ದೃಢವಾದ ದ್ವೇಷವಿರುತ್ತದೆ ಮತ್ತು ಈ ರೀತಿ ಮನಸ್ಸಿನಲ್ಲಿ ದೃಢವಾದ ದ್ವೇಷವನ್ನು ಹೊಂದಿರುವುದು ಅದೃಢವಾದ ತತ್ವವಾಗಿದೆ ಎಂದು ನೀನು ಒಪ್ಪುತ್ತೀಯೆ."

೧೩ ಮತ್ತು ೧೫. ಲೋಹಿಕ್ಕ ಅದರಂತೆಯೇ ಹೀಗೆ ಹೇಳುವವನು ಸಹ: 'ಒಬ್ಬ ಸಮಣನಾಗಲಿ ಅಥವಾ ಬ್ರಾಹ್ಮಣನಾಗಲಿ ಉತ್ತಮ ಮಾನಸಿಕ ಸ್ಥಿತಿಯನ್ನು ಹೊಂದಿದ್ದಾನೆಂದು ತಿಳಿಯೋಣ. ಆಗ ಅವನು ಯಾರಿಗೂ ಅದರ ಬಗ್ಗೆ ಹೇಳಬಾರದು. ಯಾಕೆಂದರೆ ಒಬ್ಬ ಮನುಷ್ಯನು ಇನ್ನೊಬ್ಬನಿಗೆ ಏನು ಮಾಡಬಲ್ಲನು? ಇನ್ನೊಬ್ಬರಿಗೆ ಹೇಳುವುದಾದರೆ, ಹಳೆಯ ಪಾಶವನ್ನು ಕಡಿದುಕೊಂಡು ಹೊಸ ಪಾಶದಲ್ಲಿ ತನ್ನನ್ನು ತಾನು ಸಿಲುಕಿಸಿಕೊಂಡ ಮನುಷ್ಯನಂತೆ ಆಗುವುದು. ಅದರಂತೆಯೇ ಇದು (ಇನ್ನೊಬ್ಬರಿಗೆ ಹೇಳಬೇಕೆಂಬ ಇಚ್ಛೆ) ಇರುತ್ತದೆ ಎಂದು ನಾನು ಅನ್ನುತ್ತೇನೆ. ಅದೊಂದು ರೀತಿಯ ಕಾಮನೆ ಅದರಂತೆ – ಯಾವನು ಈ ರೀತಿ ಹೇಳುತ್ತಾನೋ ಅವನು ಸತ್ಯವನ್ನು ಜಯಿಸಿದವನು. ಉಪದೇಶಿಸಿದ ಸಿದ್ಧಾಂತ ಮತ್ತು ನೀತಿಗಳನ್ನು ಸ್ವೀಕರಿಸಿ ಅದರಲ್ಲಿ ಉತ್ತಮಸಿದ್ಧಿಯನ್ನು, ಮತಾಂತರದ ಫಲವನ್ನು ಪಡೆದಿರುವರೋ ಅಂತಹ ಸ್ವಜನರಿಗೆ ಅವನು ವಿಘ್ನಗಳನ್ನು ಉಂಟುಮಾಡುತ್ತಾನೆ.

ಉದಾಹರಣೆಗೆ, ಒಂದು ಸಲ ಹುಟ್ಟಿ ಬರುವ ಫಲವನ್ನು, ಅಥವಾ ಎಂದೂ ತಿರುಗಿ ಹುಟ್ಟಿ ಬಾರದ ಫಲವನ್ನು ಅಥವಾ ಅರ್ಹತನ ಸ್ಥಾನವನ್ನು ಯಾರು ಪಡೆದಿರುವರೋ ಅಂತಹ ಜನರು ಸ್ವರ್ಗದ ಪರಮಾನಂದ ಸ್ಥಿತಿಯಲ್ಲಿ ಪುನರ್ಜನ್ಮಕ್ಕೆ ಕಾರಣವಾಗುವ ನೀತಿ ಮಾರ್ಗದ ಫಲವನ್ನು ಹೊಂದುವ ಮಾರ್ಗದಲ್ಲಿ ವಿಘ್ನಗಳನ್ನು ಉಂಟುಮಾಡುತ್ತಾರೆ. ಆದರೆ ಅವರ ಮಾರ್ಗದಲ್ಲಿ ವಿಘ್ನಗಳನ್ನು ಉಂಟುಮಾಡುವುದರಿಂದ ಅವರ ಯೋಗಕ್ಷೇಮದ ಬಗ್ಗೆ ಅವನಿಗೆ ಸಹಾನುಭೂತಿ ಇರುವುದಿಲ್ಲ. ಅವನ ಯೋಗಕ್ಷೇಮದ ಬಗ್ಗೆ ಸಹಾನುಭೂತಿಯಿಲ್ಲದಿರುವುದರಿಂದ ಅವನ ಹೃದಯದಲ್ಲಿ ದ್ವೇಷವು ಬೇರೂರುತ್ತದೆ ಮತ್ತು ಒಬ್ಬನ ಹೃದಯದಲ್ಲಿ ದ್ವೇಷವು ಬೇರೂರಿದರೆ ಅದು ದೃಢವಾದ ಸಿದ್ಧಾಂತವಾಗುತ್ತದೆ. ಹಾಗಾದರೆ ಲೋಹಿಕ್ಕನೇ, ಅದೃಢವಾದ ಸಿದ್ಧಾಂತವನ್ನು ಆಶ್ರಯಿಸಿದವನಿಗೆ ಭವಿಷ್ಯತ್ತಿನಲ್ಲಿ ನರಕ ಅಥವಾ ಪ್ರಾಣಿಯಾಗಿ ಪುನರ್ಜನ್ಮ ಇವೆರಡರಲ್ಲಿ ಒಂದು ಪ್ರಾಪ್ತಿಯಾಗುವುದು ಎಂದು ನಾನು ಘೋಷಿಸುತ್ತೇನೆ.

೧೬. ಲೋಹಿಕ್ಕನೇ, ಈ ಜಗತ್ತಿನಲ್ಲಿ ನಿಂದಾರ್ಹರಾದ ಮೂರು ರೀತಿಯ ಶಿಕ್ಷಕರು ಇದ್ದಾರೆ; ಅಂತಹವರನ್ನು ಯಾವನಾದರೂ ನಿಂದಿಸಿದರೆ ಅವನು ಮಾಡುವ ನಿಂದೆಯು ವಸ್ತು ಸ್ಥಿತಿ ಮತ್ತು ಸತ್ಯಕ್ಕೆ ಅನುಗುಣವಾಗಿ ಸಮರ್ಥನೀಯವಾಗುತ್ತದೆ, ಅನುಚಿತವಾಗಿರುವುದಿಲ್ಲ ಆ ಮೂವರು ಯಾರು?

"ಲೋಹಿಕ್ಕನೇ, ಮೊದಲನೆಯದಾಗಿ ಅಂತಹ ಒಬ್ಬ ಶಿಕ್ಷಕನು (ಹೀಗಿರುತ್ತಾನೆ): ಸಮಣನಾಗುವುದಕ್ಕಾಗಿ ಅವನು ಮನೆಯನ್ನು ಬಿಟ್ಟು ಮನೆಯಿಲ್ಲದ ಜೀವನವನ್ನು ಆಶ್ರಯಿಸಿರುತ್ತಾನೆ. ಆದರೂ (ತನ್ನ) ಗುರಿಯಾದ ಸಮಣಭಾವವನ್ನು ಪಡೆದಿರುವುದಿಲ್ಲ. ತಾನು ಅದನ್ನು ಪಡೆಯದೇ ಇದ್ದರೂ ಶ್ರೋತೃಗಳಿಗೆ ಧಮ್ಮವನ್ನು ಈ ರೀತಿ ಉಪದೇಶಿಸುತ್ತಾನೆ. "ಇದು ನಿಮಗೆ ಒಳ್ಳೆಯದು. ಇದು ನಿಮಗೆ ಸುಖಿಗಳನ್ನಾಗಿ ಮಾಡುತ್ತದೆ." ಆಗ ಅವನ ಆ ಶ್ರೋತೃಗಳು ಅವನಿಗೆ ಲಕ್ಷ್ಯಕೊಡುವುದಿಲ್ಲ ಅಥವಾ ಅವನ ಮಾತುಗಳಿಗೆ ಕಿವಿಗೊಡುವುದಿಲ್ಲ ಅಥವಾ ಅದರಿಂದ (ಕೇಳುವುದರಿಂದ) ಉಂಟಾದ ಜ್ಞಾನದಿಂದ ಹೃದಯದಲ್ಲಿ (ಅಂತಃಕರಣದಲ್ಲಿ) ದಾರ್ಢ್ಯವನ್ನು ಹೊಂದುವುದಿಲ್ಲ. ತಮ್ಮ ಗುರುವಿನ ಉಪದೇಶವನ್ನು ಬಿಟ್ಟು ತಮ್ಮ ಮನಸ್ಸಿಗೆ ಬಂದಂತೆ ನಡೆಯುತ್ತಾರೆ. ಈ ಘಟನೆಗಳನ್ನು ಎತ್ತಿ ತೋರಿಸಿ ಇಂತಹ ಶಿಕ್ಷಕನನ್ನು ನಿಂದಿಸಬಹುದು ಮತ್ತು (ಹೀಗೆ) ಹೇಳಬಹುದು: "ತನ್ನನ್ನು ತಿರಸ್ಕರಿಸುವವಳ ಕಡೆಗೆ ಯಾವನು ಮುಂದುವರಿಯುತ್ತಾನೋ ಅವನಂತೆ ಅಥವಾ ತನ್ನಿಂದ ಮುಖವನ್ನು ದೂರ ಹೊರಳಿಸುವವಳನ್ನು ಯಾವನು ಆಲಿಂಗಿಸುವನೋ ಅವನಂತೆ ನೀನು ಇರುತ್ತೀಯೆ. ಅದರಂತೆ ಈ ನಿನ್ನ ಕಾಮನೆ (ನಿನ್ನ ಮೇಲೆ ಅವರಿಗೆ ವಿಶ್ವಾಸ ಇಲ್ಲದಿರುವುದರಿಂದ ನಿನ್ನ ಮಾತಿಗೆ ಅವರು ಲಕ್ಷ್ಯಕೊಡದೇ ಇದ್ದರೂ ಆ ಜನರ ಶಿಕ್ಷಕನೆಂದು ನಟನೆ ಮಾಡುವುದು) ಇದೆಯೆಂದು ನಾನು ಹೇಳುತ್ತೇನೆ. ಯಾಕೆಂದರೆ ಒಬ್ಬ ಮನುಷ್ಯನು ಇನ್ನೊಬ್ಬನಿಗೆ ಏನು ಮಾಡಬಲ್ಲನು?"

"ಲೋಹಿಕ್ಕನೇ, ಇವನು ಈ ಲೋಕದಲ್ಲಿ ನಿಂದಾರ್ಹರಾದ ಶಿಕ್ಷಕರಲ್ಲಿ ಮೊದಲನೆಯವನು ಮತ್ತು ಯಾವನಾದರು ಇಂತಹವನನ್ನು ನಿಂದಿಸಿದರೆ, ಅವನು ಮಾಡುವ ನಿಂದೆಯು ವಸ್ತು ಸ್ಥಿತಿ ಮತ್ತು ಸತ್ಯಕ್ಕೆ ಅನುಗುಣವಾಗಿ ಸಮರ್ಥನೀಯವಾಗಿರುತ್ತದೆ. ಅದು ಅನುಚಿತವಾಗಿರುವುದಿಲ್ಲ.

೧೭. ಎರಡನೆಯದಾಗಿ ಲೋಹಿಕ್ಕನೇ, ಇಂತಹ ಒಬ್ಬ ಶಿಕ್ಷಕನು (ಹೀಗಿರುತ್ತಾನೆ): ಸಮಣನಾಗುವುದಕ್ಕಾಗಿ ಅವನು ಮನೆಯನ್ನು ಬಿಟ್ಟು ಅನಗಾರ ಜೀವನವನ್ನು ಆಶ್ರಯಿಸಿದನು. ಆದರೂ (ತನ್ನ) ಗುರಿಯಾದ ಸಮಣಭಾವವನ್ನು ಪಡೆದಿಲ್ಲ. ತಾನು ಅದನ್ನು ಸಂಪಾದಿಸದೆ, ಕೇಳುಗರಿಗೆ ಧಮ್ಮವನ್ನು ಈ ರೀತಿ ಉಪದೇಶಿಸುತ್ತಾನೆ: "ಇದು ನಿಮಗೆ ಒಳ್ಳೆಯದು, ಇದು ನಿಮ್ಮನ್ನು ಸುಖಿಗಳನ್ನಾಗಿ ಮಾಡುವುದು" ಮತ್ತು ಅವನ ಶಿಷ್ಯರು (ಅವನು ಹೇಳುವುದನ್ನು) ಲಕ್ಷ್ಯಗೊಟ್ಟು ಕೇಳುವರು. ಅವರು ಅವನ ಮಾತುಗಳಿಗೆ ಕಿವಿಗೊಡುವರು. (ತಮಗೆ) ಹೇಳಿದ್ದನ್ನು ತಿಳಿದುಕೊಂಡು ಹೃದಯದಲ್ಲಿ ದಾರ್ಢ್ಯವನ್ನು ಹೊಂದುವರು ಮತ್ತು (ತಮ್ಮ) ಶಿಕ್ಷಕನ ಉಪದೇಶವನ್ನು ಬಿಟ್ಟು ತಮ್ಮ ಮನಸ್ಸಿಗೆ ಬಂದಂತೆ ನಡೆಯುವುದಿಲ್ಲ. ಈ ಘಟನೆಗಳನ್ನು ಎತ್ತಿ ತೋರಿಸಿ ಇಂತಹ ಶಿಕ್ಷಕನನ್ನು ನಿಂದಿಸಬಹುದು ಮತ್ತು (ಹೀಗೆ) ಕಸವನ್ನು ತೆಗೆಯುವ ವಿಚಾರ ಮಾಡುವವನಂತೆ ನೀನು ಇರುತ್ತೀಯೆ. ಅದರಂತೆ ಈ ನಿನ್ನ ಕಾಮನೆಯು (ನಿನಗೆ ನೀನು ಉಪದೇಶ ಮಾಡಿಕೊಳ್ಳದೆ ನೀನು ಸ್ವಂತ ಕಲಿಯದೆ ಇತರರಿಗೆ ಉಪದೇಶ ಮಾಡುತ್ತ ಹೋಗುವುದು) ಇದೆಯೆಂದು ನಾನು ಹೇಳುತ್ತೇನೆ. ಯಾಕೆಂದರೆ ಒಬ್ಬ ಮನುಷ್ಯನು ಇನ್ನೊಬ್ಬನಿಗೆ ಏನು ಮಾಡಬಲ್ಲನು?"

"ಲೋಹಿಕ್ಯನೇ, ಇವನು ಈ ಲೋಕದಲ್ಲಿ ನಿಂದಾರ್ಹರಾದ ಶಿಕ್ಷಕರಲ್ಲಿ ಎರಡನೆಯ ರೀತಿಯವನು ಮತ್ತು ಯಾವನಾದರೂ ಇಂತಹವನನ್ನು ನಿಂದಿಸಿದರೆ ಅವನು ಮಾಡುವ ನಿಂದೆಯು ವಸ್ತುಸ್ಥಿತಿ ಮತ್ತು ಸತ್ಯಕ್ಕೆ ಅನುಗುಣವಾಗಿ ಸಮರ್ಥನೀಯವಾಗಿರುತ್ತದೆ. ಅದು ಅನುಚಿತವಾಗಿರುವುದಿಲ್ಲ."

೧೮. ಮತ್ತು ಲೋಹಿಕ್ಯನೇ, ಮೂರನೆಯದಾಗಿ ಇಂತಹ ಒಬ್ಬ ಶಿಕ್ಷಕನು (ಹೀಗಿರುತ್ತಾನೆ): ಸಮಣನಾಗುವುದಕ್ಕಾಗಿ ಅಗಾರವನ್ನು ಬಿಟ್ಟು ಅನಗಾರ ಜೀವನವನ್ನು ಆಶ್ರಯಿಸಿದ್ದಾನೆ ಮತ್ತು ತನ್ನ ಗುರಿಯಾದ ಸಮಣಭಾವವನ್ನು ತಾನು ಸ್ವತಃ ಸಂಪಾದಿಸಿದ್ದಾನೆ. ತಾನು ಸ್ವತಃ ಸಂಪಾದಿಸಿಕೊಂಡು ತನ್ನ

ಶ್ರೋತೃಗಳಿಗೆ ಧಮ್ಮವನ್ನು ಹೀಗೆ ಉಪದೇಶಿಸುತ್ತಾನೆ. "ಇದು ನಿಮಗೆ ಒಳ್ಳೆಯದು. ಇದು ನಿಮ್ಮನ್ನು ಸುಖಿಗಳನ್ನಾಗಿ ಮಾಡುವುದು" ಆದರೆ ಅವನ ಶ್ರೋತೃಗಳು ಅವನಿಗೆ ಲಕ್ಷಕೊಡುವುದಿಲ್ಲ ಅಥವಾ ಅವನ ಮಾತುಗಳಿಗೆ ಕಿವಿಗೊಡುವುದಿಲ್ಲ ಅಥವಾ ಅದರಿಂದ (ಅವನ ಮಾತುಗಳನ್ನು ಕೇಳುವುದರಿಂದ) ಉಂಟಾದ ಜ್ಞಾನದಿಂದ ಹೃದಯದಲ್ಲಿ ದಾರ್ಢ್ಯವನ್ನು ಹೊಂದುವುದಿಲ್ಲ. ತಮ್ಮ ಶಿಕ್ಷಕನ ಉಪದೇಶವನ್ನು ಬಿಟ್ಟು ತಮ್ಮ ಮನಸ್ಸಿಗೆ ಬಂದಂತೆ ನಡೆಯುತ್ತಾರೆ. ಈ ಘಟನೆಗಳನ್ನು ಎತ್ತಿ ತೋರಿಸಿ ಇಂತಹ ಶಿಕ್ಷಕನನ್ನು ನಿಂದಿಸಬಹುದು ಮತ್ತು (ಹೀಗೆ) ಹೇಳಬಹುದು: "ಹಳೆಯ ಪಾಶವನ್ನು ಕಡಿದುಕೊಂಡು ಹೊಸ ಪಾಶದಲ್ಲಿ ತನ್ನನ್ನು ತಾನು ಯಾವನು ಸಿಲುಕಿಸಿಕೊಳ್ಳುವನೋ, ಅವನಂತೆ ನೀನು ಇರುತ್ತೀಯೆ. ಅದರಂತೆ ಈ ನಿನ್ನ ಕಾಮನೆಯು (ಉಪದೇಶಿಸಲಿಕ್ಕೆ ಯೋಗ್ಯವಾದ ತರಬೇತಿಯನ್ನು ಸಂಪಾದಿಸದೆ ಪಡೆಯದೆ ಉಪದೇಶಿಸುತ್ತ ಹೋಗುವುದು) ಇದೆಯೆಂದು ನಾನು ಹೇಳುತ್ತೇನೆ. ಯಾಕೆಂದರೆ ಒಬ್ಬ ಮನುಷ್ಯನು ಇನ್ನೊಬ್ಬನಿಗೆ ಏನು ಮಾಡಬಲ್ಲನು?"

"ಲೋಹಿಕ್ಕನೇ, ಇವನು ಈ ಲೋಕದಲ್ಲಿ ನಿಂದಾರ್ಹರಾದ ಶಿಕ್ಷಕರಲ್ಲಿ ಮೂರನೆಯವನು ಮತ್ತು ಯಾವನಾದರೂ ಇಂತಹವನನ್ನು ನಿಂದಿಸಿದರೆ ಅವನು ಮಾಡುವ ನಿಂದೆಯು ವಸ್ತುಸ್ಥಿತಿ ಮತ್ತು ಸತ್ಯಕ್ಕೆ ಅನುಗುಣವಾಗಿ ಸಮರ್ಥನೀಯವಾಗಿರುತ್ತದೆ ಅದು ಅನುಚಿತವಾಗಿರುವುದಿಲ್ಲ. ಲೋಹಿಕ್ಕನೇ, ಇವರೇ ನಾನು ಹೇಳಿದ ಮೂರು ರೀತಿಯ ಶಿಕ್ಷಕರು.'

೧೯. ಅನಂತರ ಅವನು ಈ ರೀತಿ ಹೇಳಿದಾಗ, ಲೋಹಿಕ್ಕ ಬ್ರಾಹ್ಮಣನು ಘನಮಹಿಮನಿಗೆ ಹೀಗೆ ಅಂದನು:

"ಆದರೆ ಗೌತಮನೆ, ಈ ಜಗತ್ತಿನಲ್ಲಿ, ನಿಂದಾರ್ಹನಲ್ಲದ ಯಾವುದೇ ಶಿಕ್ಷಕನು ಇರುವನೆ?"

"ಹೌದು. ಲೋಹಿಕ್ಕನೇ, ಈ ಜಗತ್ತಿನಲ್ಲಿ ನಿಂದಾರ್ಹನಲ್ಲದ ಶಿಕ್ಷಕನು ಇರುವನು?"

"ಗೌತಮ, ಹಾಗಾದರೆ ಅವನು ಯಾವ ರೀತಿಯ ಶಿಕ್ಷಕನಾಗಿರುತ್ತಾನೆ?"

ಮೇಲೆ ಸಮಣ್ಣಫಲದಲ್ಲಿ ನಿರೂಪಿಸಿದ ವಿವರಣೆಯ ಶಬ್ದಗಳಲ್ಲಿ ಉತ್ತರವು ಈ ರೀತಿ ಇದೆ:

೧. ತಥಾಗತನ (ಸತ್ಯವನ್ನು ಜಯಿಸಿದವನ) ವೇಷ, ಅವನ ಉಪದೇಶ, ಶ್ರೋತೃವಿನ ಮತಾಂತರ. ಅವನು ಅನಗಾರ ಸ್ಥಿತಿಯನ್ನು ಸ್ವೀಕರಿಸುವುದು.

೨. ಅವನು ಆಚರಿಸುವ ಕೇವಲ ನೀತಿಯ ಗೌಣ ವಿವರಗಳು.

೩. ಈ ಆಚರಣೆಯಿಂದ ಅವನು ಸಂಪಾದಿಸುವ ಆತ್ಮವಿಶ್ವಾಸ.

೪. 'ಅವನು ಜ್ಞಾನೇಂದ್ರಿಯಗಳ ಬಾಗಿಲು ಸುರಕ್ಷಿತವಾಗಿದೆ' ಇದರ ಬಗೆಗಿನ ವಾಕ್ಯವೃಂದ.

೫. 'ಗಮನ (ಲಕ್ಷವಿಡುವುದು) ಮತ್ತು ಸ್ವಸ್ಥ ಚಿತ್ತತೆ' ಇದರ ಬಗೆಗಿನ ವಾಕ್ಯವೃಂದ.

೬. 'ಸರಳಜೀವನ ಮತ್ತು ಅಲ್ಪ ಸಂತೋಷ ಇದರ ಬಗೆಗಿನ ವಾಕ್ಯವೃಂದ.

೭. 'ನಿರ್ಮಾಣ, ಸಿಡುಕು ಸ್ವಭಾವ, ಆಲಸ್ಯ, ಚಿಂತೆ ಮತ್ತು ದಿಗ್ಭ್ರಮೆ' ಇವುಗಳ ಬಗೆಗಿನ ವಾಕ್ಯವೃಂದ.

೮. 'ಈ ನಿರ್ಮಾಣದ ಫಲವಾಗಿ ಅವನ ಅಸ್ತಿತ್ವವನ್ನೆಲ್ಲ ವ್ಯಾಪಿಸಿರುವ ಆನಂದ ಮತ್ತು ಶಾಂತಿ' ಇದರ ಮೇಲಿನ ವಾಕ್ಯವೃಂದ.

೯. ನಾಲ್ಕು 'ಪರವಶತೆ'(ಧ್ಯಾನ)ಗಳ ಬಗೆಗಿನ ವಾಕ್ಯವೃಂದಗಳು.

೧೦. '(ಮೊದಲ ಮಾರ್ಗದ ಜ್ಞಾನ)' ಜ್ಞಾನದಿಂದ ಉತ್ಪನ್ನವಾಗುವ ಅಂತರ್ ದೃಷ್ಟಿಯ ಬಗೆಗಿನ ವಾಕ್ಯವೃಂದಗಳು.

೧೧. ನಾಲ್ಕು ಸಮ್ಯಕ್ ಸತ್ಯಗಳ ಸಿದ್ಧಿ: ಕಾಮನೆ, ಮೋಹ (ಭ್ರಾಂತಿ), ಹೊಂದಾಣಿಕೆ ಮತ್ತು ಅಜ್ಞಾನ. ಈ ನಾಲ್ಕು ಮಾದಕಗಳ ವಿನಾಶ ಮತ್ತು ಅರ್ಹತ ಸ್ಥಿತಿಯ ಸಂಪಾದನೆಗಳ ಬಗೆಗಿನ ವಾಕ್ಯವೃಂದಗಳು.

ಅದರಲ್ಲಿ ಎಲ್ಲ ಕಡೆಯಲ್ಲಿ ಇರುವ ಪಲ್ಲವಿ ಮತ್ತು ಕೊನೆಯ ವಾಕ್ಯವೃಂದ ಹೀಗಿದೆ:

"ಲೋಹಿಕ್ಕನೇ, ಶಿಕ್ಷಕನು ಯಾರೇ ಇರಲಿ, ಯಾರ ಮಾರ್ಗದರ್ಶನದಲ್ಲಿ ಶಿಷ್ಯನು ಅಷ್ಟು ಉತ್ತಮ ಸಿದ್ಧಿಯನ್ನು ಹೊಂದುತ್ತಾನೋ ಅವನು ಈ ಜಗತ್ತಿನಲ್ಲಿ ನಿಂದಾರ್ಹನಲ್ಲದ ಶಿಕ್ಷಕನಾಗಿರುತ್ತಾ ಯಾರಾದರೂ ಇಂತಹವರನ್ನು ನಿಂದಿಸಿದರೆ, ಆ ನಿಂದೆಯು ವಸ್ತುಸ್ಥಿತಿ ಅಥವಾ ಸತ್ಯಕ್ಕೆ ಅನುಗುಣವಾಗಿ ಇಲ್ಲದಿರುವುದರಿಂದ, (ಅಥವಾ) ಆಧಾರವಿಲ್ಲದಿರುವುದರಿಂದ ಅಸಮರ್ಥನೀಯವಾಗುತ್ತದೆ."

೭೮. ಅವನು ಈ ರೀತಿ ಹೇಳಿದಾಗ, ಲೋಹಿಕ್ಕ ಬ್ರಾಹ್ಮಣನು ಘನಮಹಿಮನಿಗೆ (ಹೀಗೆ) ಹೇಳಿದನು: 'ಗೌತಮನೇ, ಶುದ್ಧಿಲೋಕದ ಕಡಿದಾದ ಅಂಚಿನಿಂದ ಬೀಳುತ್ತಿರುವ ವ್ಯಕ್ತಿಯನ್ನು ಯಾವನಾದರೂ ಅವನ ತಲೆಗೂದಲನ್ನು ಹಿಡಿದು ಮೇಲೆತ್ತಿ ಸುರಕ್ಷಿತವಾಗಿ ಗಟ್ಟಿ ನೆಲದ ಮೇಲೆ ನಿಲ್ಲಿಸುವಂತೆ, ಶುದ್ಧಿಲೋಕದಲ್ಲಿ ಬೀಳುತ್ತಿರುವ ನನ್ನನ್ನು ಪೂಜ್ಯ ಗೌತಮನು ಹಿಡಿದೆತ್ತಿ ಗಟ್ಟಿ ನೆಲದ ಮೇಲೆ ನಿಲ್ಲಿಸಿದ್ದಾನೆ. ಗೌತಮನೇ, ನಿನ್ನ ಬಾಯಿಯಿಂದ ಬರುವ ಶಬ್ದಗಳು ಅತ್ಯುತ್ಕೃಷ್ಟವಾಗಿವೆ. ಯಾವನಾದರೂ ಬೀಸಿ ಒಗೆದದ್ದನ್ನು ಪುನಃ ಸ್ಥಿರವಾಗಿ ನಿಲ್ಲಿಸುವಂತೆ ಅಥವಾ ಮುಚ್ಚಿ ಇಟ್ಟಿದ್ದನ್ನು ಪ್ರಕಟಮಾಡುವಂತೆ ಅಥವಾ ಅಡ್ಡದಾರಿಯಲ್ಲಿ ಹೊರಟವನಿಗೆ ಸರಿಯಾದ ದಾರಿಯನ್ನು ತೋರಿಸುವಂತೆ ಅಥವಾ ಕಣ್ಣಿದ್ದವರು ಬಾಹ್ಯ ವಸ್ತುವನ್ನು ನೋಡಲು ಅನುಕೂಲವಾಗುವುದಕ್ಕಾಗಿ ಕತ್ತಲೆಯಲ್ಲಿ ದೀಪವನ್ನು ತರುವಂತೆ ಪೂಜ್ಯ ಗೌತಮನು ನನಗೆ ಅನೇಕ ರೀತಿಯಿಂದ ಸತ್ಯವನ್ನು ತಿಳಿಸಿಕೊಟ್ಟಿದ್ದಾನೆ. ಸಿದ್ಧಾಂತ ಮತ್ತು ಧರ್ಮದ ವಿಷಯದಲ್ಲಿ ಪೂಜ್ಯ ಗೌತಮನನ್ನು ನನ್ನ ಮಾರ್ಗದರ್ಶಕನೆಂದು ಸ್ವೀಕರಿಸುತ್ತೇನೆ. ಇಂದಿನಿಂದ ಜೀವನ ಪರ್ಯಂತ ತನ್ನನ್ನು ಮಾರ್ಗದರ್ಶಕನೆಂದು ಸ್ವೀಕರಿಸಿದ ಗೌತಮನು ನನ್ನನ್ನು ತಮ್ಮ ಶಿಷ್ಯನೆಂದು ಸ್ವೀಕರಿಸಲಿ!'

* * * *

## ಅಧ್ಯಾಯ ೯

# ಬೌದ್ಧ ಧರ್ಮದ ಅವಸಾನ ಮತ್ತು ಪತನ

*ಡಾ. ಬಿ. ಆರ್. ಅಂಬೇಡ್ಕರ್ ಅವರು 'ಕ್ರಾಂತಿ ಮತ್ತು ಪ್ರತಿಕ್ರಾಂತಿ' ಎಂಬ ಪುಸ್ತಕದ ಅಂಗವಾಗಿ 'ಬೌದ್ಧ ಧರ್ಮದ ಅವಸಾನ ಮತ್ತು ಪತನ' ಎಂಬ ಲೇಖನವನ್ನು ಬರೆದಿದ್ದರು. ನಮಗೆ ಕೇವಲ ಐದು ಪುಟಗಳು ಮಾತ್ರ ದೊರೆತಿವೆ. ಅವುಗಳನ್ನು ಕೂಡಾ ತಿದ್ದಿಲ್ಲ. ಈ ಪ್ರಬಂಧದ ಒಂದು ಪ್ರತಿಯು ಶ್ರೀ ಎಸ್.ಎಸ್. ರೇಗೆ ಅವರಿಂದ ದೊರೆತಿದೆ. ಅದರಲ್ಲಿ ಡಾ. ಅಂಬೇಡ್ಕರ್ ಅವರ ಕೈಬರಹದ ಕೆಲವು ತಿದ್ದುಪಡಿಗಳಿವೆ. ಈ ಪ್ರಬಂಧದಲ್ಲಿ ಬೆರಳಚ್ಚು ಮಾಡಿದ ೧೭ ಪುಟಗಳಿವೆ. ಅದನ್ನು ಇಲ್ಲಿ ಸೇರಿಸಲಾಗಿದೆ.*

– ಸಂಪಾದಕರು

## I

ಭಾರತದಿಂದ ಬೌದ್ಧ ಧರ್ಮವು ಅದೃಶ್ಯವಾಗಿ ಹೋದದ್ದು ಆ ವಿಷಯದ ಬಗ್ಗೆ ಕಾಳಜಿಯುಳ್ಳ ಪ್ರತಿಯೊಬ್ಬನಿಗೂ ಅತ್ಯಂತ ವಿಸ್ಮಯದ ವಿಷಯವಾಗಿದೆ ಮತ್ತು ವಿಷಾದಕರವಾಗಿದೆ. ಆದರೆ ಅದು ಚೀನ, ಜಪಾನ್, ಬರ್ಮ, ಸಯಾಮ್, ಅನ್ನಮ್, ಇಂಡೋಚೈನಾ, ಸಿಂಹಳ ಮತ್ತು ಮಲಯಾ ದ್ವೀಪ ಕಲ್ಪದ ಕೆಲಭಾಗಗಳಲ್ಲಿ ಇಂದಿಗೂ ಜೀವಂತವಿದೆ. ಭಾರತದಲ್ಲಿ ಅದು ಅಸ್ತಿತ್ವದಲ್ಲಿ ಇಲ್ಲವಷ್ಟೇ ಅಲ್ಲ. ಬುದ್ಧನ ಹೆಸರೂ ಬಹು ಸಂಖ್ಯಾತ ಹಿಂದೂಗಳ ಸ್ಮರಣೆಯಲ್ಲಿ ಉಳಿದಿಲ್ಲ. ಇಂತಹ ಸಂಗತಿ ಹೇಗೆ ಸಂಭವಿಸಿರಬಹುದು? ಇದೊಂದು ಮಹತ್ವದ ಪ್ರಶ್ನೆ. ಇದಕ್ಕೆ ಸಮಾಧಾನಕರ ಉತ್ತರ ಇನ್ನು ದೊರೆತಿಲ್ಲ. ಸಮಾಧಾನಕರ ಉತ್ತರ ದೊರೆತಿಲ್ಲವಷ್ಟೇ ಅಲ್ಲ, ಸಮಾಧಾನಕರ ಉತ್ತರ ಪಡೆಯಲು ಯಾರೂ ಪ್ರಯತ್ನವನ್ನು ಮಾಡಿಲ್ಲ. ಈ ವಿಷಯದ ಬಗ್ಗೆ ವಿಚಾರ ಮಾಡುವಾಗ ಒಂದು ಮಹತ್ವದ ಅಂತರವನ್ನು ಮರೆಯುತ್ತಾರೆ. ಬೌದ್ಧ ಧರ್ಮದ ಪತನ ಮತ್ತು ಬೌದ್ಧ ಧರ್ಮದ ಅವಸಾನ ಇವೆರಡರ ನಡುವಿನ ಅಂತರವೇ ಅದು. ಈ ಅಂತರವನ್ನು ಮಾಡುವುದು ಅತ್ಯವಶ್ಯವಾಗಿದೆ ಏಕೆಂದರೆ ಬೌದ್ಧ ಧರ್ಮದ ಪತನದ ಕಾರಣಗಳು ಅತ್ಯಂತ ಸ್ಪಷ್ಟವಾಗಿದೆ. ಆದರೆ ಅದರ ಅವಸಾನದ ಕಾರಣಗಳು ಅಷ್ಟು ಸ್ಪಷ್ಟವಾಗಿಲ್ಲ.

ಭಾರತದಲ್ಲಿ ಬುದ್ಧ ಧರ್ಮದ ಪತನಕ್ಕೆ ಮುಸಲ್ಮಾನರ ಧಾಳಿಗಳು ಕಾರಣವಾಗಿವೆಯೆಂಬುದರಲ್ಲಿ ಏನೂ ಸಂಶಯವಿಲ್ಲ. 'ಬುತ್'ದ (but) ಶತ್ರುವಾಗಿ ಇಸ್ಲಾಂ ಬಂದಿತು. ಎಲ್ಲರಿಗೂ ಗೊತ್ತಿರುವಂತೆ 'ಬುತ್'

ಎಂಬುದು ಅರೇಬಿಕ್ ಶಬ್ದ ಮತ್ತು ಇದರರ್ಥ 'ಮೂರ್ತಿ' (ಗೊಂಬೆ ಪ್ರತಿಮೆ) ಅನೇಕರಿಗೆ 'ಬುತ್' ಶಬ್ದದ ವ್ಯುತ್ಪತ್ತಿ ಏನೆಂಬುದು ತಿಳಿದಿಲ್ಲ. 'ಬುತ್' ಇದು 'ಬುದ್ಧ' ಈ ಶಬ್ದದ ಅರೇಬಿಕ್ ಅಪಭ್ರಂಶ. ಹೀಗೆ ಮುಸಲ್ಮಾನರ ಮನಸ್ಸಿನಲ್ಲಿ ಮೂರ್ತಿ ಪೂಜೆ ಮತ್ತು ಬೌದ್ಧ ಧರ್ಮಗಳು ಅಭಿನ್ನವೆಂಬ ಕಲ್ಪನೆಯಿದೆಯೆಂದು ಶಬ್ದದ ವ್ಯುತ್ಪತ್ತಿಯಿಂದ ತಿಳಿದುಬರುತ್ತದೆ. ಮುಸಲ್ಮಾನರಿಗೆ ಅವೆರಡೂ ಒಂದೇ ಆಗಿದ್ದವು. ಹೀಗೆ ಮೂರ್ತಿ ಭಂಜನೆಯ ಕಾರ್ಯವು ಬೌದ್ಧ ಧರ್ಮವನ್ನು ನಾಶಪಡಿಸುವ ಕಾರ್ಯವಾಗಿತ್ತು. ಇಸ್ಲಾಂ ಭಾರತದಲ್ಲಿ ಮಾತ್ರವೇ ಬೌದ್ಧ ಧರ್ಮವನ್ನು ನಾಶಪಡಿಸಲಿಲ್ಲ, ಅದು ಹೋದಲ್ಲೆಲ್ಲ (ಅದನ್ನು) ನಾಶಪಡಿಸಿತು. ಇಸ್ಲಾಂ ಪ್ರಚಾರದಲ್ಲಿ ಬರುವುದಕ್ಕಿಂತ ಮೊದಲು ಬ್ಯಾಕ್ಟ್ರಿಯಾ, ಪಾರ್ಥಿಯಾ, ಆಫ್‌ಘಾನಿಸ್ತಾನ, ಗಾಂಧಾರ ಮತ್ತು ಚೀಣೀ ತುರ್ಕಿಸ್ತಾನ ಹಾಗೂ ಸಂಪೂರ್ಣ ಏಷಿಯಾದ ಧರ್ಮವು ಬೌದ್ಧ ಧರ್ಮವಾಗಿತ್ತು. ಈ ಎಲ್ಲ ದೇಶಗಳಲ್ಲಿ ಇಸ್ಲಾಂ ಬೌದ್ಧ ಧರ್ಮವನ್ನು ನಾಶಪಡಿಸಿತು. ವಿನ್ಸೆಂಟ್ ಸ್ಮಿಥ್ ಹೀಗೆ ಹೇಳುತ್ತಾರೆ:

> "ಸಾಂಪ್ರದಾಯಿಕ ಹಿಂದೂಗಳು ಮಾಡಿದ ಕಿರುಕುಳದ (ಹಿಂಸೆ) ಗಿಂತಲೂ ಮುಸಲ್ಮಾನ ಧಾಳಿಕೋರರು ಅನೇಕ ಸ್ಥಳಗಳಲ್ಲಿ ನಡೆಸಿದ ಭೀಕರ ಹತ್ಯಾಕಾಂಡಗಳು ಹೆಚ್ಚು ಪರಿಣಾಮಕಾರಿಯಾಗಿದ್ದವು ಮತ್ತು (ಭಾರತದ) ಅನೇಕ ಪ್ರಾಂತಗಳಿಂದ ಬೌದ್ಧ ಧರ್ಮವು ಅದೃಶ್ಯವಾಗಲು ಬಹುಮಟ್ಟಿಗೆ ಕಾರಣವಾಗಿದ್ದವು."

ಈ ಸ್ಪಷ್ಟೀಕರಣದಿಂದ ಎಲ್ಲರಿಗೂ ಸಮಾಧಾನವಾಗುವುದಿಲ್ಲ. ಅದು ಅಸಮರ್ಪಕವಾಗಿರುವದು ಸ್ಪಷ್ಟವಾಗಿದೆ. ಬ್ರಾಹ್ಮಣ ಮತ್ತು ಬೌದ್ಧ ಎರಡು ಧರ್ಮಗಳ ಮೇಲೆ ಇಸ್ಲಾಂ ಧಾಳಿ ಮಾಡಿತು. ಒಂದು ಉಳಿಯಿತು ಮತ್ತು ಇನ್ನೊಂದು ನಾಶವಾಯಿತು ಹೀಗೇಕೆ ಎಂದು ಕೇಳಬಹುದು. ಈ ವಾದವು ಸರಿಯಾಗಿದೆಯಾದರೂ, ವಿಷಯದ ಸಮಂಜಸತೆಯನ್ನು ನಾಶಪಡಿಸಲಾರದು. ಬ್ರಾಹ್ಮಣ ಧರ್ಮ ಉಳಿಯಿತು ಎಂದು ಒಪ್ಪಿಕೊಂಡರೆ ಬೌದ್ಧ ಧರ್ಮದ ಪತನಕ್ಕೆ ಇಸ್ಲಾಂ ಖಡ್ಗವು ಕಾರಣವಲ್ಲವೆಂದು ಅರ್ಥವಾಗುವುದಿಲ್ಲ. ಇದರ ಒಟ್ಟು ಅರ್ಥ ಇಷ್ಟು. ಆಗಿನ ಪರಿಸ್ಥಿತಿಯು ಇಸ್ಲಾಂ ಧಾಳಿಯನ್ನು ಎದುರಿಸಲು ಬ್ರಾಹ್ಮಣ ಧರ್ಮಕ್ಕೆ ಅನುಕೂಲವಾಗಿತ್ತು ಮತ್ತು ಬೌದ್ಧ ಧರ್ಮಕ್ಕೆ ಅನುಕೂಲವಾಗಿರಲಿಲ್ಲ. ಬ್ರಾಹ್ಮಣ ಧರ್ಮದ ಸುದೈವದಿಂದ ಮತ್ತು ಬೌದ್ಧ ಧರ್ಮದ ದುರ್ದೈವದಿಂದ ಎಂದು ಹೇಳಬಹುದೇನೋ! ಅದು ವಸ್ತುಸ್ಥಿತಿಯಾಗಿತ್ತು.

ಮುಸ್ಲಿಂ ಧಾಳಿಯ ಆಪತ್ತನ್ನು ಎದುರಿಸಲು ಬ್ರಾಹ್ಮಣ ಧರ್ಮಕ್ಕೆ ಸಾಧ್ಯವಾಗುವಂತೆ ಮಾಡಿದ ಮತ್ತು ಬೌದ್ಧ ಧರ್ಮಕ್ಕೆ ಅಸಾಧ್ಯವಾಗುವಂತೆ ಮಾಡಿದ ಮೂರು ವಿಶೇಷ ಪರಿಸ್ಥಿತಿಗಳು ಆಗ ಇದ್ದವು ಎಂದು ಈ ವಿಷಯದ ಅಧ್ಯಯನವನ್ನು ಮುಂದುವರಿಸುವವರಿಗೆ ತಿಳಿದುಬರುತ್ತದೆ. ಮೊದಲನೆಯದಾಗಿ, ಮುಸ್ಲಿಂ ಧಾಳಿಯ ಸಮಯದಲ್ಲಿ ಬ್ರಾಹ್ಮಣ ಧರ್ಮಕ್ಕೆ ರಾಜಾಶ್ರಯವಿತ್ತು. ಬೌದ್ಧ ಧರ್ಮಕ್ಕೆ ಇಂತಹ ರಾಜಾಶ್ರಯವಿರಲಿಲ್ಲ, ಇದಕ್ಕಿಂತ ಹೆಚ್ಚು ಮಹತ್ವದ ಸಂಗತಿಯೆಂದರೆ, ಮೂರ್ತಿ ಪೂಜೆಯ ವಿರುದ್ಧವಾದ ಅದರ ಪ್ರಾರಂಭದ ರೋಷದ ಜ್ವಾಲೆಗಳು ಆರಿ, ಇಸ್ಲಾಂ ಒಂದು ಶಾಂತ ಧರ್ಮವಾಗುವವರೆಗೆ ಬ್ರಾಹ್ಮಣ ಧರ್ಮಕ್ಕೆ ಈ ರಾಜಾಶ್ರಯವಿತ್ತು. ಎರಡನೆಯದಾಗಿ, ಇಸ್ಲಾಂ ಖಡ್ಗದಿಂದ ಬೌದ್ಧ ಪೌರೋಹಿತ್ಯವು ನಾಶಹೊಂದಿತು ಮತ್ತು ಪುನರುಜ್ಜೀವನ ಹೊಂದಲು ಸಮರ್ಥವಾಗಲಿಲ್ಲ. ಆದರೆ ಅದಕ್ಕೆ ಪ್ರತಿಯಾಗಿ ಬ್ರಾಹ್ಮಣ ಪೌರೋಹಿತ್ಯವನ್ನು ನಾಶಪಡಿಸಲು ಇಸ್ಲಾಮಿಗೆ ಸಾಧ್ಯವಾಗಲಿಲ್ಲ. ಮೂರನೆಯದಾಗಿ, ಬೌದ್ಧ ಜನಸಾಮಾನ್ಯರು ಭಾರತದ ಬ್ರಾಹ್ಮಣ ಧರ್ಮಾನುಯಾಯಿ ರಾಜರಿಂದ ಕಿರುಕುಳಕ್ಕೊಳಗಾದರು ಮತ್ತು ಈ ಹಿಂಸೆಯನ್ನು ತಪ್ಪಿಸಿಕೊಳ್ಳುವುದಕ್ಕಾಗಿ ಭಾರತದ ಅಧಿಕಾಂಶ ಬೌದ್ಧ ಜನತೆಯು ಇಸ್ಲಾಂ ಧರ್ಮವನ್ನು ಸ್ವೀಕರಿಸಿತು ಮತ್ತು ಬೌದ್ಧ ಧರ್ಮವನ್ನು ತ್ಯಜಿಸಿತು.

ಇತಿಹಾಸದ ಸಮರ್ಥನೆಯಿಲ್ಲದಿರುವ ಅಂಶವೂ ಯಾವ ಈ ಸಂಗತಿಗಳಲ್ಲಿ ಇಲ್ಲ.

ಮುಸ್ಲಿಂ ಆಡಳಿತಕ್ಕೊಳಪಟ್ಟ ಭಾರತದ ಪ್ರಾಂತಗಳಲ್ಲಿ ಸಿಂಧ್ ಪ್ರಾಂತವು ಮೊದಲನೆಯದು. ಅದನ್ನು ಒಬ್ಬ ಶೂದ್ರ ರಾಜನು ಆಳುತ್ತಿದ್ದನು. ಆದರೆ ಒಬ್ಬ ಬ್ರಾಹ್ಮಣನು (ಅವನ) ಸಿಂಹಾಸನವನ್ನು ಆಕ್ರಮಿಸಿದನು. ಅವನು ತನ್ನ ವಂಶವನ್ನು ಸ್ಥಾಪಿಸಿದನು. ಕ್ರಿ.ಶ. ೭೧೨ರಲ್ಲಿ ಇಬ್‌ಕಾಶಿಮನು ಸಿಂಧ್‌ನ ಮೇಲೆ ದಾಳಿ ಮಾಡಿದ ಸಮಯದಲ್ಲಿ ಅದು ಸ್ವಾಭಾವಿಕವಾಗಿಯೇ ಬ್ರಾಹ್ಮಣ ಧರ್ಮಕ್ಕೆ ಆಶ್ರಯವನ್ನು ಕೊಟ್ಟಿತ್ತು. ಆಗ ದಹೀರನು ಸಿಂಧದ ರಾಜನಾಗಿದ್ದನು. ಈ ದಹೀರನು ಬ್ರಾಹ್ಮಣ ರಾಜರ ವಂಶಕ್ಕೆ ಸೇರಿದ್ದನು.

ತಾನು ಬಂದ ಸಮಯದಲ್ಲಿ ಪಂಜಾಬ್‌ನಲ್ಲಿ ಕ್ಷತ್ರಿಯ ಬೌದ್ಧ ವಂಶದವರು ರಾಜ್ಯವಾಳುತ್ತಿದ್ದರೆಂದು ಹ್ಯೂಯೆನ್‌ತ್ಸಾಂಗನು ಬರೆದಿದ್ದಾನೆ. ಈ ವಂಶವು ಪಂಜಾಬ್‌ನಲ್ಲಿ ಸುಮಾರು ಕ್ರಿ.ಶ. ೮೮೦ ರಿಂದ ೧೫೫೦ರವರೆಗೆ ರಾಜ್ಯವಾಳುತ್ತಿತ್ತು. ಆ ವರುಷದಲ್ಲಿ ಎಂಬ ಒಬ್ಬ ಬ್ರಾಹ್ಮಣ ಸೇನಾಪತಿಯು ಸಿಂಹಾಸನವನ್ನು ಆಕ್ರಮಿಸಿದನು. ಅವನು ಬ್ರಾಹ್ಮಣಶಾಹಿ ವಂಶವನ್ನು ಸ್ಥಾಪಿಸಿದನು. ಈ ವಂಶವು ಕ್ರಿ.ಶ. ೮೮೦ ರಿಂದ ೧೦೨೧ರವರೆಗೆ ಪಂಜಾಬನ್ನು ಆಳಿತು. ಹೀಗೆ ಸಬುಕ್ತಗೀನ ಮತ್ತು ಮಹಮ್ಮದ ಅವರು ಪಂಜಾಬ್‌ನ ಮೇಲೆ ಧಾಳಿ ಪ್ರಾರಂಭ ಮಾಡಿದಾಗ ಸೈನಿಕ ರಾಜರು ಬ್ರಾಹ್ಮಣ ಧರ್ಮಕ್ಕೆ ಸೇರಿದವರಾಗಿದ್ದರೆಂದು ತಿಳಿದುಬರುತ್ತದೆ ಮತ್ತು ಜಯಪಾಲ (ಕ್ರಿ.ಶ. ೯೬೦–೯೮೦), ಆನಂದ ಪಾಲ (ಕ್ರಿ.ಶ. ೯೮೦–೧೦೦೦) ಮತ್ತು ತ್ರಿಲೋಚನ ಪಾಲ (ಕ್ರಿ.ಶ. ೧೦೦೦––೧೦೨೦) ಇವರು ಸಬುಕ್ತಗೀನ ಮತ್ತು ಮಹಮ್ಮದರೊಡನೆ ಹೋರಾಡಿದ ಬಗ್ಗೆ ನಾವು ಬಹಳ ಓದಿದ್ದೇವೆ. ಈ ರಾಜರು ಬ್ರಾಹ್ಮಣ ಧರ್ಮಕ್ಕೆ ಸೇರಿದವರಾಗಿದ್ದರು.

ಮಹಮ್ಮದನ ಕಾಲದಿಂದ ಮಧ್ಯ ಭಾರತವು ಮುಸ್ಲಿಂರ ಧಾಳಿಗೆ ಒಳಗಾಗತೊಡಗಿತು. ಅಂಥ ಧಾಳಿ ಶಹಾಬುದ್ದೀನ್ ಘೋರಿಯ ನಾಯಕತ್ವದಲ್ಲಿ ಮುಂದುವರಿಯಿತು. ಆಗ ಮಧ್ಯ ಭಾರತದಲ್ಲಿ ಅನೇಕ ರಾಜ್ಯಗಳಿದ್ದವು. (ಈಗ ಉದಯಪುರವೆಂದು ಪ್ರಸಿದ್ಧವಾಗಿರುವ) ಮೇವಾಡದಲ್ಲಿ ಗುಲೋಹಿತರು ಆಳುತ್ತಿದ್ದರು. (ಈಗ ಬುಂದಿ, ಕೋಟ ಮತ್ತು ಸಿರೋಹಿ ಎಂದು ಭಾಗವಾಗಿರುವ) ಸಂಭಾರದಲ್ಲಿ ಚೌಹಾನರು ಆಳುತ್ತಿದ್ದರು. ಕನೌಜದಲ್ಲಿ ಪ್ರತೀಹಾರರು ಆಳುತ್ತಿದ್ದರು. ಬುಂದೇಲ ಖಂಡದಲ್ಲಿ ಚಂದೇಲರು ಆಳುತ್ತಿದ್ದರು. ಪರಮಾರರು ಧಾರ್‌ದಲ್ಲಿ ಆಳುತ್ತಿದ್ದರು. ಅನಹಿಲವಾಡದಲ್ಲಿ ಚಾವಡರು ಆಳುತ್ತಿದ್ದರು. ಚೇದಿಯಲ್ಲಿ ಕಲಚೂರಿಗಳು ಆಳುತ್ತಿದ್ದರು. ಈ ಎಲ್ಲ ರಾಜ್ಯಗಳ ರಾಜರು ರಾಜಪೂತರಾಗಿದ್ದರು ಮತ್ತು ರಾಜಪೂತರು ಬ್ರಾಹ್ಮಣ ಧರ್ಮದ ಅತ್ಯಂತ ನಿಷ್ಠಾವಂತರಾದ ಆಶ್ರಯದಾತರಾಗಿದ್ದರು. ಇದರ ಕಾರಣಗಳು ಗೂಢವಾಗಿವೆ ಮತ್ತು ನಾನು ಇದನ್ನು ಮುಂದೆ ಚರ್ಚಿಸಲಿದ್ದೇನೆ.

ಈ ಧಾಳಿಗಳ ಕಾಲದಲ್ಲಿ ಬಂಗಾಳವು ಪೂರ್ವ ಮತ್ತು ಪಶ್ಚಿಮವೆಂದು ಎರಡು ರಾಜ್ಯಗಳಾಗಿ ಭಾಗವಾಗಿತ್ತು. ಪಶ್ಚಿಮ ಬಂಗಾಳವನ್ನು ಪಾಲವಂಶದ ರಾಜರು ಆಳುತ್ತಿದ್ದರು ಮತ್ತು ಪೂರ್ವ ಬಂಗಾಲದಲ್ಲಿ ಸೇನ ವಂಶದ ರಾಜರು ಆಳುತ್ತಿದ್ದರು. ಪಾಲರು ಕ್ಷತ್ರಿಯರಾಗಿದ್ದರು. ಅವರು ಬೌದ್ಧರಾಗಿದ್ದರು. ಆದರೆ ಶ್ರೀ ವೈದ್ಯರು ಹೇಳುವಂತೆ ಅವರು ಬಹುಶಃ ಆರಂಭದಲ್ಲಿ ಮಾತ್ರ ಅಥವಾ ಹೆಸರಿನಲ್ಲಿ ಮಾತ್ರ ಬೌದ್ಧರಾಗಿದ್ದರು. ಸೇನ ರಾಜರ ಬಗೆಗೆ ಭಿನ್ನಾಭಿಪ್ರಾಯವಿದೆ. ಅವರು ಕ್ಷತ್ರಿಯರ ಸೈನಿಕ ಉದ್ಯೋಗವನ್ನು ಸ್ವೀಕರಿಸಿದ ಬ್ರಾಹ್ಮಣರೆಂದು ಡಾ. ಭಂಡಾರ್‌ಕರ್ ಹೇಳುತ್ತಾರೆ. ಆದರೆ ಸೇನ ರಾಜರು ಆರ್ಯ ಕ್ಷತ್ರಿಯರು ಅಥವಾ ಚಂದ್ರವಂಶದ ರಾಜಪೂತರು ಎಂದು ಶ್ರೀ ವೈದ್ಯರು ಸಾಧಿಸುತ್ತಾರೆ. ಏನೇ ಆಗಲಿ, ರಾಜಪೂತರಂತೆ ಸೇನರು ಸಾಂಪ್ರದಾಯಿಕ ಧರ್ಮದ ಆಶ್ರಯದಾತರಾಗಿದ್ದರೆನ್ನುವದರಲ್ಲಿ ಸಂಶಯವಿಲ್ಲ.

ಮುಸ್ಲಿಂ ಧಾಳಿಗಳ ಕಾಲಕ್ಕೆ ನರ್ಮದಾ ನದಿಯ ದಕ್ಷಿಣಕ್ಕೆ ನಾಲ್ಕು ರಾಜ್ಯಗಳಿದ್ದವು: (೧) ಪಶ್ಚಿಮ

ಚಾಲುಕ್ಯರ ದಕ್ಷಿಣ (ಡೆಕ್ಕನ್) ರಾಜ್ಯ, (೨) ಚೋಳದ ದಕ್ಷಿಣ ರಾಜ್ಯ, (೩) ಪಶ್ಚಿಮ ಸಮುದ್ರ ದಂಡೆಯ ಕೊಂಕಣದಲ್ಲಿ ಶಿಲಾಹಾರದ ರಾಜ್ಯ ಮತ್ತು (೪) ಪೂರ್ವ ಸಮುದ್ರದ ದಂಡೆಯಲ್ಲಿ ತ್ರಿಕಲಿಂಗದ ಗಂಗರ ರಾಜ್ಯ. ಈ ರಾಜ್ಯಗಳು ಕ್ರಿ.ಶ.೧೦೦೦ದಿಂದ ಕ್ರಿ.ಶ. ೧೨೦೦ ರವರೆಗೆ ಸುಸ್ಥಿತಿಯಲ್ಲಿದ್ದವು. ಇದು ಮುಸ್ಲಿಂ ಧಾಳಿಯ ಕಾಲವಾಗಿತ್ತು. ೧೨ನೆಯ ಶತಮಾನದಲ್ಲಿ ಅಧಿಕಾರಕ್ಕೆ ಬಂದ ಕೆಲವು ಸಾಮಂತ ರಾಜ್ಯಗಳು ಇವರ ಅಧೀನಕ್ಕೊಳಪಟ್ಟಿದ್ದುವು ಮತ್ತು ಇವು ೧೩ನೆಯ ಶತಮಾನದಲ್ಲಿ ಸ್ವತಂತ್ರ ಮತ್ತು ಪ್ರಬಲ ರಾಜ್ಯಗಳಾದವು. ಇವು ಯಾವುವೆಂದರೆ, (೧) ಯಾದವರ ದೇವಗಿರಿ, (೨) ಕಾಕತೀಯರ ವಾರಂಗಲ್, (೩) ಹೊಯ್ಸಳರ ಹಳೇಬೀಡು, (೪) ಪಾಂಡ್ಯರ ಮಧುರೆ ಮತ್ತು (೫) ಚೇರರ ತಿರುವಾಂಕೂರು.

ಈ ಎಲ್ಲ ರಾಜವಂಶದವರು ಸಾಂಪ್ರದಾಯಿಕ ಬ್ರಾಹ್ಮಣ ಧರ್ಮದ ಅನುಯಾಯಿಗಳಾಗಿದ್ದರು.

ಭಾರತದ ಮೇಲೆ ಮುಸ್ಲಿಂ ಧಾಳಿಗಳು ಕ್ರಿ.ಶ. ೧೦೦೧ರಲ್ಲಿ ಪ್ರಾರಂಭವಾದವು. ಈ ಧಾಳಿಯ ಕೊನೆಯ ತರಂಗವು ದಕ್ಷಿಣ ಭಾರತವನ್ನು ಕ್ರಿ.ಶ. ೧೨೯೬ರಲ್ಲಿ ತಲುಪಿತು. ಆಗ ಅಲ್ಲಾವುದ್ದೀನ ಖಿಲ್ಜಿಯು ದೇವಗಿರಿಯ ರಾಜ್ಯವನ್ನು ವಶಪಡಿಸಿಕೊಂಡನು. ೧೨೯೬ರ ಹೊತ್ತಿಗೆ ಭಾರತದ ಮೇಲಿನ ಮುಸ್ಲಿಂ ವಿಜಯವು ಪೂರ್ತಿಯಾಗಿರಲಿಲ್ಲ. ಮುಸ್ಲಿಂ ಜಯಶಾಲಿಗಳು ಮತ್ತು ಸ್ಥಾನಿಕ ರಾಜರ ನಡುವೆ ಸ್ವಾಧೀನಕ್ಕಾಗಿ ಯುದ್ಧಗಳು ನಡೆದೇ ಇದ್ದವು. ಸ್ಥಾನಿಕ ರಾಜರು ಸೋತರೂ ನಾಶವಾಗಿರಲಿಲ್ಲ. ಆದರೆ ಇಲ್ಲಿ ನೆನಪಿಡಬೇಕಾದ ಸಂಗತಿಯೆಂದರೆ ಈ ಮುಸ್ಲಿಂ ಜಯಶಾಲಿ ಯುದ್ಧಗಳ ೩೦೦ ವರ್ಷಗಳ ಕಾಲದಲ್ಲಿ ಭಾರತವು ಎಲ್ಲೆಡೆ ಸಾಂಪ್ರದಾಯಿಕ ಬ್ರಾಹ್ಮಣ ಧರ್ಮದ ಅನುಯಾಯಿಗಳಾದ ರಾಜರಿಂದ ಆಳಲ್ಪಡುತ್ತಿತ್ತು. ಬ್ರಾಹ್ಮಣ ಧರ್ಮವು ಮುಸ್ಲಿಂ ಧಾಳಿಕಾರರ ಹೊಡೆತಕ್ಕೆ ಒಳಗಾಗಿ ರಾಜಾಶ್ರಯ ಮತ್ತು ರಾಜಪೋಷಣೆಯನ್ನು ಎದುರು ನೋಡುತ್ತಿತ್ತು ಮತ್ತು ಅದನ್ನು ಪಡೆಯಿತು. ಮುಸ್ಲಿಂ ಧಾಳಿಕಾರರಿಂದ ಹೊಡೆತ ಮತ್ತು ತುಳಿತಕ್ಕೊಳಗಾದ ಬೌದ್ಧ ಧರ್ಮಕ್ಕೆ ಇಂತಹ ಆಶೆಯಿರಲಿಲ್ಲ. ಅದೊಂದು ನಿರ್ಲಕ್ಷಿಸಲ್ಪಟ್ಟ ಅನಾಥ ಶಿಶುವಾಗಿತ್ತು. ಸ್ಥಾನಿಕ ರಾಜರ ಚಳಿಗಾಳಿಯಲ್ಲಿ ಅದು ಒಣಗಿಹೋಯಿತು. ಜಯಶಾಲಿಗಳು ಹಚ್ಚಿದ ಬೆಂಕಿಯಲ್ಲಿ ಸುಟ್ಟುಹೋಯಿತು.

ಮುಸಲ್ಮಾನ ಧಾಳಿಕಾರರು ಬೌದ್ಧ ವಿಶ್ವವಿದ್ಯಾಲಯಗಳನ್ನು ಕೊಳ್ಳೆ ಹೊಡೆದರು. ನಲಂದ, ವಿಕ್ರಮಶಿಲಾ, ಜಗದ್ಧಲ, ಓದಂತಪುರಿ ಇವು ಕೊಳ್ಳೆಗೊಳಗಾದ ವಿಶ್ವವಿದ್ಯಾಲಯಗಳಲ್ಲಿ ಕೆಲವು ಮಾತ್ರ ದೇಶದ ತುಂಬೆಲ್ಲ ಹರಡಿದ್ದ ಬೌದ್ಧ ವಿಹಾರಗಳನ್ನು ಅವರು ನೆಲಸಮಮಾಡಿದರು. (ಬೌದ್ಧ) ಸನ್ಯಾಸಿಗಳು ಸಾವಿರಾರು ಸಂಖ್ಯೆಯಲ್ಲಿ ಭಾರತದ ಹೊರಗಿರುವ ನೇಪಾಲ, ಟಿಬೆಟ್ ಮತ್ತು ಇತರ ಪ್ರದೇಶಗಳಿಗೆ ಓಡಿಹೋದರು. ಮುಸ್ಲಿಂ ಸೇನಾಪತಿಗಳು ಬಹುಸಂಖ್ಯೆಯ ಜನರನ್ನು ನಿರ್ದಯವಾಗಿ ಸಂಹರಿಸಿದರು. ಮುಸ್ಲಿಂ ಧಾಳಿಕಾರರ ಖಡ್ಗದಿಂದ ಬೌದ್ಧ ಪೌರೋಹಿತ್ಯವು ಹೇಗೆ ನಾಶ ಹೊಂದಿತೆಂಬುದನ್ನು ಮುಸ್ಲಿಂ ಇತಿಹಾಸಕಾರರೇ ಬರೆದಿಟ್ಟಿದ್ದಾರೆ. ಕ್ರಿ.ಶ. ೧೧೯೨ರಲ್ಲಿ ಬಿಹಾರದ ಮೇಲೆ ಧಾಳಿಮಾಡಿದಾಗ ಮುಸಲ್ಮಾನ ಸೇನಾಪತಿಯು ಮಾಡಿದ ಬೌದ್ಧ ಸನ್ಯಾಸಿಗಳ ಕಗ್ಗೊಲೆಯ ಪುರಾವೆಗಳನ್ನು ಸಂಗ್ರಹಿಸುತ್ತಾ ಮಿ. ವಿನ್ಸೆಂಟ್ ಸ್ಮಿಥ್ ಹೀಗೆ ಹೇಳುತ್ತಾರೆ:

> "ಬಿಹಾರದಲ್ಲಿ ಕೊಳ್ಳೆ ಹೊಡೆಯುವ ಧಾಳಿಗಳನ್ನು ಮೇಲಿಂದ ಮೇಲೆ ಮಾಡಿ (ತನ್ನ ಹೆಸರನ್ನು ಭಯಕ್ಕೆ ಪರ್ಯಾಯ ಶಬ್ದವಾಗಿ ಮಾಡಿದ್ದ) ತನ್ನ ಹೆಸರನ್ನು ಕೇಳಿದರೆ ಭಯವುಂಟಾಗುವಂತೆ ಮಾಡಿದ ಮುಸಲ್ಮಾನ ಸೇನಾಪತಿಯು ನಿರ್ಭೀತ ಆಕ್ರಮಣ ಮಾಡಿ ರಾಜಧಾನಿಯನ್ನು ವಶಪಡಿಸಿಕೊಂಡನು. ಬಹುಶಃ ಸಮಕಾಲೀನ ಇತಿಹಾಸಕಾರನೊಬ್ಬನು ಧಾಳಿಕಾರರಲ್ಲಿ ಬದುಕಿ ಉಳಿದವನೊಬ್ಬನನ್ನು ಕ್ರಿ.ಶ. ೧೨೪೩ರಲ್ಲಿ ಭೇಟಿಯಾದನು. ಕೇವಲ ಎರಡು ನೂರು ಅಶ್ವಾರೋಹಿಗಳು ಧೈರ್ಯದಿಂದ ಹಿಂದಿನ ಗುಪ್ತ ಸುರಂಗ ಮಾರ್ಗದಿಂದ

ಪ್ರವೇಶಿಸಿ ಬಿಹಾರದ ಕೋಟೆಯನ್ನು ವಶಪಡಿಸಿಕೊಂಡರೆಂದು ಅವನಿಂದ ತಿಳಿದುಕೊಂಡನು. ಬಹಳ (ಸಂಪತ್ತನ್ನು) ಲೂಟಿ ಮಾಡಲಾಯಿತು ಮತ್ತು ಬೋಳಿಸಿದ ತಲೆಯುಳ್ಳ ಬ್ರಾಹ್ಮಣರ (ಅಂದರೆ ಬೌದ್ಧ ಸನ್ಯಾಸಿಗಳ) ಕಗ್ಗೊಲೆಯನ್ನು ಎಷ್ಟು ಪೂರ್ಣವಾಗಿ ಮಾಡಲಾಯಿತೆಂದರೆ ವಿಜಯಿಯ ಬೌದ್ಧ ವಿಹಾರಗಳ ಪುಸ್ತಕಾಲಯದಲ್ಲಿ ದೊರೆತ ಪುಸ್ತಕಗಳಲ್ಲಿರುವ ವಿಷಯಗಳನ್ನು ತಿಳಿಸಲು ಸಮರ್ಥನಾದ ವ್ಯಕ್ತಿಗಾಗಿ ಹುಡುಕಾಡಿಸಿದರೆ, ಅವುಗಳನ್ನು ಓದಬಲ್ಲ ಒಬ್ಬ ಮನುಷ್ಯನೂ ಬದುಕಿರಲಿಲ್ಲ. "ಆ ಇಡಿ ಕೋಟೆ ಮತ್ತು ನಗರವು ಒಂದು ಮಹಾವಿದ್ಯಾಲಯವಾಗಿತ್ತು ಮತ್ತು ಹಿಂದಿ ಭಾಷೆಯಲ್ಲಿ ಮಹಾ ವಿದ್ಯಾಲಯವನ್ನು 'ಬಿಹಾರ' ಎಂದು ಕರೆಯುತ್ತಾರೆ ಎಂದು ನಾವು ಕೇಳಿದ್ದೇವೆ."

ಇಸ್ಲಾಮಿಕ್ ಧಾಳಿಕಾರರು ಮಾಡಿದ ಬೌದ್ಧ ಪೌರೋಹಿತ್ಯದ ಕಗ್ಗೊಲೆಯು ಇಂತಹದಾಗಿತ್ತು. ಕೊಡಲಿಯಿಂದ ಮೂಲ ಬೇರನ್ನೇ ಕತ್ತರಿಸಲಾಯಿತು. ಏಕೆಂದರೆ ಬೌದ್ಧ ಪೌರೋಹಿತ್ಯವನ್ನು ಸಂಹರಿಸಿ ಇಸ್ಲಾಂ ಬೌದ್ಧ ಧರ್ಮವನ್ನು ಸಂಹರಿಸಿತು. ಇದು ಬುದ್ಧನು ಸ್ಥಾಪಿಸಿದ ಧರ್ಮ ಮೇಲೆ ಭಾರತದಲ್ಲಿ ಸಂಭವಿಸಿದ ಅತ್ಯಂತ ದೊಡ್ಡ ಆಪತ್ತು. ಇತರ ಯಾವುದೇ ವಿಚಾರಗಳಂತೆಯೇ ಪ್ರಚಾರದಿಂದಲೇ ಧರ್ಮವನ್ನು ಪಡೆಯಬಹುದು. ಪ್ರಚಾರವಾಗದೇ ಹೋದರೆ ಧರ್ಮವು ಅದೃಶ್ಯವಾಗಲೇಬೇಕು. ಪುರೋಹಿತ ವರ್ಗವು (ಅದು ಎಷ್ಟೇ ಜುಗುಪ್ಸೆಪಡುವಂತಿದ್ದರೂ) ಸಹ ಧರ್ಮದ ಉಳಿವಿಗೆ ಅವಶ್ಯವಾಗಿದೆ. ಯಾಕೆಂದರೆ ಅದರ (ಪುರೋಹಿತ ವರ್ಗದ) ಪ್ರಚಾರದಿಂದಲೇ ಧರ್ಮವು ರಕ್ಷಿಸಲ್ಪಡುತ್ತದೆ. ಪುರೋಹಿತ ವರ್ಗವು ಇಲ್ಲದಿದ್ದರೆ ಧರ್ಮವು ಅದೃಶ್ಯವಾಗಲೇಬೇಕು. ಇಸ್ಲಾಂ ಖಡ್ಗವು ಪುರೋಹಿತ ವರ್ಗವನ್ನು ಸದೆಬಡೆಯಿತು. ಅದು ನಾಶಹೊಂದಿತು, ಇಲ್ಲವೇ ಭಾರತದಿಂದ ಹೊರಗೆ ಓಡಿ ಹೋಯಿತು. ಬೌದ್ಧ ಧರ್ಮದ ಜ್ವಾಲೆಯನ್ನು ಉರಿಸತಕ್ಕವರು ಯಾರೂ ಉಳಿಯಲಿಲ್ಲ.

ಬ್ರಾಹ್ಮಣ ಪುರೋಹಿತ ವರ್ಗಕ್ಕೂ ಇದೇ ಗತಿಯಾಗಿರಬೇಕಿತ್ತು ಎಂದು ಹೇಳಬಹುದು. ಇಷ್ಟು ಪ್ರಮಾಣದಲ್ಲಿಲ್ಲದಿದ್ದರೂ ಹಾಗಾಗಿರುವುದು ಸಾಧ್ಯ. ಆದರೆ ಎರಡೂ ಧರ್ಮಗಳ ಸಂಘಟನೆಯಲ್ಲಿ ಈ ಭೇದವಿದೆ ಮತ್ತು ಭೇದವೂ ಎಷ್ಟು ಹೆಚ್ಚಾಗಿದೆಯೆಂದರೆ, ಇಸ್ಲಾಂ ಆಕ್ರಮಣವನ್ನು ತಾಳಿಕೊಂಡು ಬ್ರಾಹ್ಮಣ ಧರ್ಮವು ಏಕೆ ಬದುಕಿ ಉಳಿಯಿತು ಮತ್ತು ಬೌದ್ಧ ಧರ್ಮವು ಏಕೆ ಬದುಕಲಿಲ್ಲ ಎಂಬುದರ ಪೂರ್ಣ ಕಾರಣವು ಇದರಲ್ಲಿವೆ. ಈ ಭೇದವು ಪುರೋಹಿತ ಸಂಘಟನೆಗೆ ಸಂಬಂಧಿಸಿದ್ದು.

ಬ್ರಾಹ್ಮಣ ಪುರೋಹಿತ ವರ್ಗವು ಬಹು ವಿಸ್ತಾರವಾದ ಸಂಘಟನೆಯನ್ನು ಹೊಂದಿದೆ. ಕೀರ್ತಿಶೇಷ ಸರ್ ರಾಮಕೃಷ್ಣ ಭಂಡಾರಕರ ಅವರು 'ಇಂಡಿಯನ್ ಆ್ಯಂಟಿಕ್ವೆರಿ'ಯ ಪುಟಗಳಲ್ಲಿ ಅದರ ಸ್ಪಷ್ಟ ಮತ್ತು ಸಂಕ್ಷಿಪ್ತ ವಿವರಣೆಯನ್ನು ಕೊಟ್ಟಿದ್ದಾರೆ.[೧]

ಅವರು ಹೀಗೆ ಬರೆದಿದ್ದಾರೆ: "ಪ್ರತಿಯೊಂದು ಬ್ರಾಹ್ಮಣ ಕುಟುಂಬವೂ ಒಂದು ವಿಶಿಷ್ಟ ವೇದದ ವಿಶಿಷ್ಟ ಶಾಖೆಯನ್ನು ಅಧ್ಯಯನ ಮಾಡುತ್ತದೆ ಮತ್ತು ಆ ವೇದಕ್ಕೆ ಸಂಬಂಧಿಸಿದ ಸೂತ್ರದಲ್ಲಿ ವರ್ಣಿಸಿದ ವಿಧಾನದ ಪ್ರಕಾರ ಗೃಹಕರ್ಮ ಮತ್ತು ಕುಲಾಚಾರಗಳನ್ನು ಆಯಾ ಕುಟುಂಬದವರು ಆಚರಿಸುತ್ತಾರೆ. ಆಯಾ ವೇದಕ್ಕೆ ಸೇರಿದ ಗ್ರಂಥಗಳನ್ನು ಬಾಯಿಪಾಠ ಮಾಡುವುದು ಅವರ ಅಧ್ಯಯನದ ಒಂದು ಅಂಗ. ಉತ್ತರ ಭಾರತದಲ್ಲಿ ಶುಕ್ಲ ಯಜುರ್ವೇದವು

---

೧. 'ಇಂಡಿಯನ್ ಆ್ಯಂಟಿಕ್ವೆರಿ'. ೧೮೭೪ ಪು. ೧೩೨. ಮ್ಯಾಕ್ಸ್ ಮುಲ್ಲರ್ ಉದ್ಧೃತ 'ಹಿಬ್ಬರ್ಟ ಉಪನ್ಯಾಸಗಳು' (೧೮೭೮) ಪು. ೧೬೨–೧೬೪.

ಪ್ರಮುಖ ವೇದವಾಗಿದೆ ಮತ್ತು ಮಾಧ್ಯಂದಿನ ಶಾಖೆಯು ಪ್ರಮುಖ ಶಾಖೆಯಾಗಿದೆ. ಆದರೆ ಭಾರತದ ಎಲ್ಲ ಭಾಗಗಳಿಂದ ಬ್ರಾಹ್ಮಣ ಕುಟುಂಬಗಳು ಬಂದು ನೆಲೆಸಿರುವ ಬನಾರಸವನ್ನು ಬಿಟ್ಟು ಉಳಿದೆಲ್ಲ ಕಡೆ ಈ ಅಧ್ಯಯನವು ನಶಿಸಿದಂತೆ ಆಗಿದೆ. ಗುಜರಾತದಲ್ಲಿ ಅದು ಕೆಲಮಟ್ಟಿಗೆ ಉಳಿದುಕೊಂಡಿದೆ. ಆದರೆ ಮಹಾರಾಷ್ಟ್ರದಲ್ಲಿ ಅದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಅದು ಉಳಿದುಕೊಂಡಿದೆ ಮತ್ತು ತೆಲಂಗಾಣದಲ್ಲಿ ಈ ಅಧ್ಯಯನಕ್ಕೆ ತಮ್ಮ ಜೀವನವನ್ನೇ ಮುಡಿಪಾಗಿಟ್ಟಿರುವ ಅನೇಕ ಬ್ರಾಹ್ಮಣ ಕುಟುಂಬಗಳಿವೆ. ಇವರಲ್ಲಿ ಅನೇಕರು ಭಾರತದ ಎಲ್ಲ ಭಾಗಗಳಿಗೆ ದಕ್ಷಿಣೆ (ಭಿಕ್ಷೆ, ದಾನ, ಸಂಭಾವನೆ)ಯನ್ನು ಸಂಪಾದಿಸುವುದಕ್ಕಾಗಿ ಹೋಗುತ್ತಾರೆ ಮತ್ತು ಸ್ಥಿತಿವಂತರಾದ ಜನರು ಅವರಿಂದ ಅವರ ವೇದದ ಅಂದರೆ ಸಾಮಾನ್ಯವಾಗಿ 'ಕೃಷ್ಣ ಯಜುರ್ವೇದ' ಮತ್ತು ಅದರ ಸೂತ್ರವಾದ 'ಆಪಸ್ತಂಬಸೂತ್ರ' ಇವುಗಳ ಪಠನವನ್ನು ಮಾಡಿಸಿ ತಮ್ಮ ಯೋಗ್ಯತೆಗೆ ಅನುಗುಣವಾಗಿ ಅವರಿಗೆ ಸಂಭಾವನೆ ನೀಡುತ್ತಾರೆ. ಇಲ್ಲಿ ಮುಂಬಯಿಯಲ್ಲಿ ತೆಲಂಗಾಣ ಬ್ರಾಹ್ಮಣನೊಬ್ಬನು ದಕ್ಷಿಣೆಯನ್ನು ಕೇಳಲಿಕ್ಕೆ ನನ್ನ ಹತ್ತಿರ ಬಾರದಿರುವ ಒಂದು ವಾರವೂ ಇಲ್ಲ. ಪ್ರತಿ ಸಂದರ್ಭದಲ್ಲಿ ಅವನು ಅಧ್ಯಯನ ಮಾಡಿದ್ದನ್ನು ಪಠನ ಮಾಡಲು ಹೇಳುತ್ತೇನೆ ಮತ್ತು ನನ್ನ ಹತ್ತಿರ ಇರುವ ಮುದ್ರಿತ ಪುಸ್ತಕಗಳೊಡನೆ ಅದನ್ನು ಹೋಲಿಸಿನೋಡುತ್ತೇನೆ."

"ಇನ್ನು ಅವರ ಉದ್ಯೋಗ. ಪ್ರತಿಯೊಂದು ವೇದಕ್ಕೆ ಸೇರಿದ ಬ್ರಾಹ್ಮಣರಲ್ಲಿ ಸಾಮಾನ್ಯವಾಗಿ ಗೃಹಸ್ಥರು ಮತ್ತು ಭಿಕ್ಷುಕರು ಎಂದು ಎರಡು ಗುಂಪುಗಳಿವೆ. ಗೃಹಸ್ಥರು ಯಾವುದಾದರೊಂದು ಲೌಕಿಕ ಉದ್ಯೋಗ (ಜೀವನೋಪಾಯ)ದಲ್ಲಿ ತೊಡಗಿರುತ್ತಾರೆ. ಆದರೆ ಭಿಕ್ಷುಕರು ಪವಿತ್ರಗ್ರಂಥಗಳ ಅಧ್ಯಯನ ಮತ್ತು ತಮ್ಮ ಧಾರ್ಮಿಕ ವಿಧಿ, ವಿಧಾನಗಳ ಆಚರಣೆಯಲ್ಲಿ ಕಾಲವನ್ನು ಕಳೆಯುತ್ತಾರೆ."

"ಈ ಎರಡೂ ಗುಂಪಿನ ಜನರು ಪ್ರತಿ ದಿನ ಸಂಧ್ಯಾವಂದನವನ್ನು ಮಾಡಬೇಕು. ಸಂಧ್ಯಾವಂದನದ ಕ್ರಮವು ಬೇರೆ ಬೇರೆ ವೇದಗಳಿಗೆ ಬೇರೆಯಾಗಿದೆ. ಆದರೆ ಸಂಧ್ಯಾವಂದನದ ಮುಖ್ಯ ಅಂಗವಾದ 'ತತ್‌ಸವಿತುರ್ವರೇಣ್ಯಂ' ಇತ್ಯಾದಿ ಗಾಯತ್ರೀ ಮಂತ್ರವನ್ನು ಐದು, ಇಪ್ಪತ್ತೆಂಟು ಅಥವಾ ಒಂದು ನೂರು ಎಂಟು ಸಲ ಪಠನ ಮಾಡುವುದು ಎಲ್ಲರಿಗೂ ಸಮಾನವಾಗಿದೆ."

"ಇದಲ್ಲದೆ ಅನೇಕರು ಬ್ರಹ್ಮಯಜ್ಞವೆಂಬ ವಿಧಿಯನ್ನು ಆಚರಿಸುತ್ತಾರೆ. ಕೆಲವೊಂದು ವಿಶಿಷ್ಟ ಸಂದರ್ಭಗಳಲ್ಲಿ ಇದು ಎಲ್ಲರೂ ಮಾಡಬೇಕಾದ ಕರ್ತವ್ಯವಾಗಿರುತ್ತದೆ. 'ಋಗ್ವೇದ'ದ ಅನುಯಾಯಿಗಳಿಗೆ ಇದು ಈ ರೀತಿಯಾಗಿದೆ: 'ಋಗ್ವೇದ'ದ ಒಂದನೆಯ ಮಂಡಲದ ಮೊದಲ ಸೂಕ್ತ, 'ಐತರೇಯ ಬ್ರಾಹ್ಮಣ'ದ ಆರಂಭದ ವಾಕ್ಯಗಳು, 'ಐತರೇಯ ಆರಣ್ಯ'ಕದ ಐದು ಭಾಗಗಳು, 'ಯಜುಃ ಸಂಹಿತಾ', 'ಸಾಮ ಸಂಹಿತಾ', 'ಅಥರ್ವ ಸಂಹಿತಾ, 'ಆಶ್ವಲಾಯನ ಕಲ್ಪ ಸೂತ್ರ', ನಿರುಕ್ತ, ಛಂದಸ್ಸು, ನಿಘಂಟು, ಜ್ಯೋತಿಷ, ಶಿಕ್ಷಾ, ಪಾಣಿನಿ, 'ಯಾಜ್ಞವಲ್ಕ್ಯಸ್ಮೃತಿ', 'ಮಹಾಭಾರತ' ಮತ್ತು ಕಣಾದ, 'ಜೈಮಿನಿ' ಮತ್ತು 'ಬಾದರಾಯಣ ಸೂತ್ರ'ಗಳು.'

ಇಲ್ಲಿ ನೆನಪಿಡಬೇಕಾದ ಸಂಗತಿ ಇದು: ಪೌರೋಹಿತ್ಯ ನಡೆಸುವ ಕಾರ್ಯದಲ್ಲಿ ಭಿಕ್ಷುಕ ಮತ್ತು ಗೃಹಸ್ಥರ ನಡುವೆ ಏನೂ ಅಂತರವಿಲ್ಲ. ಬ್ರಾಹ್ಮಣ ಧರ್ಮದಲ್ಲಿ ಇಬ್ಬರೂ ಪುರೋಹಿತರೇ. ಪುರೋಹಿತನ ಕಾರ್ಯ

ಮಾಡಲಿಕ್ಕೆ ಭಿಕ್ಷುಕನಿಗಿಂತ ಗೃಹಸ್ಥನೇನೂ ಕಡಿಮೆ ಅಧಿಕಾರಿಯಲ್ಲ. ಗೃಹಸ್ಥನು ಪುರೋಹಿತನ ಕಾರ್ಯ ಮಾಡುವುದಿಲ್ಲವಲ್ಲ ಎಂದರೆ ಅವನು ವಿಧಿ ವಿಧಾನಗಳನ್ನು ಮತ್ತು ಮಂತ್ರಗಳನ್ನು ಸರಿಯಾಗಿ ಕಲಿತುಕೊಂಡಿಲ್ಲವೆಂದು ಅದನ್ನು ಮಾಡುವುದಿಲ್ಲ ಅಥವಾ ಅವನು ಹೆಚ್ಚು ಆದಾಯದ ಮತ್ತೊಂದು ಉದ್ಯೋಗವನ್ನು ಅನುಸರಿಸುತ್ತಿರುವುದರಿಂದ ಮಾಡುವುದಿಲ್ಲ. ಬ್ರಾಹ್ಮಣ ಧರ್ಮದ ವ್ಯವಸ್ಥೆಯಲ್ಲಿ ಪತಿತನಲ್ಲದ ಪ್ರತಿಯೊಬ್ಬ ಬ್ರಾಹ್ಮಣನೂ ಪುರೋಹಿತನಾಗಲು ಸಮರ್ಥನಿದ್ದಾನೆ. ಭಿಕ್ಷುಕನು ಪ್ರತ್ಯಕ್ಷ ಪುರೋಹಿತನಾಗಿದ್ದಾನೆ. (ಆದರೆ) ಗೃಹಸ್ಥನು ಗುಪ್ತ ಪುರೋಹಿತನಾಗಿದ್ದಾನೆ. ಎಲ್ಲ ಬ್ರಾಹ್ಮಣರೂ ಬ್ರಾಹ್ಮಣ ಧರ್ಮದ ಪೌರೋಹಿತ್ಯದ ಸೇನೆಯನ್ನು ಸೇರಿಕೊಳ್ಳಬಹುದು ಮತ್ತು ಪುರೋಹಿತನ ಕೆಲಸ ಮಾಡಲು ಬ್ರಾಹ್ಮಣನಿಗೆ ಯಾವುದೇ ತರಬೇತಿ ಅಥವಾ ದೀಕ್ಷೆಯ ಅವಶ್ಯಕತೆಯಿಲ್ಲ. ಪುರೋಹಿತನಾಗಿ ಕೆಲಸ ಮಾಡಬೇಕೆಂಬ ಇಚ್ಛೆ ಅವನಿಗೆ ಇದ್ದರೆ ಸಾಕು, ಅವನು ಪುರೋಹಿತನಾಗಬಲ್ಲನು. ಬ್ರಾಹ್ಮಣ ಧರ್ಮದಲ್ಲಿ ಪುರೋಹಿತವರ್ಗವು ಎಂದೂ ನಾಶವಾಗಲಾರದು. ಪ್ರತಿಯೊಬ್ಬ ಬ್ರಾಹ್ಮಣನೂ ಬ್ರಾಹ್ಮಣ ಧರ್ಮದ ಗುಪ್ತ ಪುರೋಹಿತನಾಗಿದ್ದಾನೆ ಮತ್ತು ಅವಶ್ಯವಿದ್ದಾಗ ಅವನನ್ನು (ಪುರೋಹಿತ) ಕಾರ್ಯದಲ್ಲಿ ತೊಡಗಿಸಬಹುದು. ಹಡಗಿನ (ಕೂವೆಯ) ಆಯುಷ್ಯ ಮತ್ತು ಪ್ರಗತಿಯನ್ನು ತಡೆಯಲು ಏನೂ ಅಡೆ ತಡೆಯಿಲ್ಲ. ಇದು ಬೌದ್ಧ ಧರ್ಮದಲ್ಲಿ ಸಾಧ್ಯವಿಲ್ಲ. ಪುರೋಹಿತನೆಂದು ಕಾರ್ಯ ಮಾಡುವುದಕ್ಕೆ ಮೊದಲು, ಆ ಮೊದಲೇ ದೀಕ್ಷೆ ಹೊಂದಿದಂತಹ ಪುರೋಹಿತರಿಂದ ಸಾಂಪ್ರದಾಯಿಕ ವಿಧಿಗಳಿಗನುಗುಣವಾಗಿ ಪುರೋಹಿತನಾಗಬಯಸುವ ಮನುಷ್ಯನು ದೀಕ್ಷೆಯನ್ನು ಹೊಂದಬೇಕು. ಬೌದ್ಧ ಪುರೋಹಿತರ ಕಗ್ಗೊಲೆಯಾದ ನಂತರ ದೀಕ್ಷಾ ಪ್ರದಾನವು ಅಸಾಧ್ಯವಾಯಿತು ಮತ್ತು (ಬೌದ್ಧ) ಪೌರೋಹಿತ್ಯವು ಸಂಪೂರ್ಣ ನಶಿಸಿದಂತಾಯಿತು. ಬೌದ್ಧ ಪುರೋಹಿತರ ಖಾಲಿಯಾದ ಸ್ಥಾನಗಳನ್ನು ತುಂಬಲು ಸ್ವಲ್ಪ ಪ್ರಯತ್ನವು ಮಾಡಲ್ಪಟ್ಟಿತ್ತು. ಸಾಧ್ಯವಿದ್ದ ಎಲ್ಲ (ಜನಸಾಮಾನ್ಯರ) ಗುಂಪುಗಳಿಂದ ಪೌರೋಹಿತ್ಯಕ್ಕಾಗಿ ಹೊಸ ಉಮೇದುವಾರರನ್ನು ತರಬೇಕಾಯಿತು. ಖಂಡಿತವಾಗಿಯೂ ಅವರು ಉತ್ತಮರಾಗಿರಲಿಲ್ಲ. ಹರಪ್ರಸಾದ ಶಾಸ್ತ್ರಿಗಳ ಪ್ರಕಾರ:

> "ಭಿಕ್ಷುಗಳ ಕೊರತೆಯು ಬೌದ್ಧ ಪುರೋಹಿತ ವರ್ಗದ ಸಂಘಟನೆಯಲ್ಲಿ ಬಹಳ ಬದಲಾವಣೆಯನ್ನುಂಟು ಮಾಡಿತು. ವಿವಾಹಿತರಾದ ಕುಟುಂಬವುಳ್ಳ ಆರ್ಯರೆಂದು ಕರೆಯಲಾಗುತ್ತಿದ್ದ ಪುರೋಹಿತರು ಭಿಕ್ಷುಗಳ ಸ್ಥಾನವನ್ನು ಸ್ವೀಕರಿಸಿದರು ಮತ್ತು ಬೌದ್ಧ ಜನಸಾಮಾನ್ಯರ ಧಾರ್ಮಿಕ ಅವಶ್ಯಕತೆಗಳನ್ನು ಪೂರೈಸತೊಡಗಿದರು. ಕೆಲವೊಂದು ಸಂಸ್ಕಾರಗಳನ್ನು ಮಾಡುವುದರಿಂದ ಅವರು ಭಿಕ್ಷುಗಳ ಸ್ವಾಭಾವಿಕ ಸ್ಥಾನಗಳನ್ನು ಪಡೆಯತೊಡಗಿದರು. (ಉಪೋ.ಪು.೧೯.೭ ಉದ್ಧರಣ. ತಾತಾಕರ ಗುಪ್ತರ ಆದಿಕರ್ಮಾಚರಣ: ೧೪೯, ಪು. ೧೨೦೭–೧೨೦೮) ಅವರು ಧಾರ್ಮಿಕ ಸಮಾರಂಭಗಳಲ್ಲಿ ಪುರೋಹಿತರ ಕಾರ್ಯವನ್ನು ಮಾಡುತ್ತಿದ್ದರು. ಅದೇ ವೇಳೆಗೆ ತಮ್ಮ ಪೌರೋಹಿತ್ಯದ ಉದ್ಯೋಗದ ಜೊತೆಗೆ ಕಟ್ಟಡ ಕಟ್ಟುವ, ಬಣ್ಣಗಾರ, ಶಿಲ್ಪಿ, ಅಕ್ಕಸಾಲಿಗ ಮತ್ತು ಬಡಿಗ ಮುಂತಾದ ಉದ್ಯೋಗಗಳಿಂದ ಜೀವನೋಪಾಯವನ್ನು ಸಂಪಾದಿಸುತ್ತಿದ್ದರು. ಕಾಲಾಂತರದಲ್ಲಿ ಈ ಕುಶಲಕರ್ಮಿಗಳಾದ ಪುರೋಹಿತರು ಭಿಕ್ಷುಗಳಿಗಿಂತ ಅಧಿಕ ಸಂಖ್ಯೆಯುಳ್ಳವರಾದರು ಮತ್ತು ಅವರು ಜನಸಾಮಾನ್ಯರಿಗೆ ಧಾರ್ಮಿಕ ಮಾರ್ಗದರ್ಶಕರಾದರು. ಅವರ ಉದ್ಯೋಗಗಳು ಅವರಿಗೆ ಜ್ಞಾನ ಸಂಪಾದನೆ, ಆಳವಾದ ವಿಚಾರ, ಧ್ಯಾನ ಮಾಡುವುದು ಮತ್ತು ಇತರ

ಆಧ್ಯಾತ್ಮಿಕ ಪ್ರಯತ್ನಗಳಿಗೆ ವೇಳೆ ಮತ್ತು ಇಚ್ಛೆ ಇಲ್ಲದಂತೆ ಮಾಡಿದವು. ಅವನತಿ ಹೊಂದುತ್ತಿದ್ದ ಬೌದ್ಧ ಧರ್ಮ ಉದ್ಧರಣಕ್ಕಾಗಲೀ ಅಥವಾ ತಮ್ಮ ಹೊಸ ಹಿತರಕ್ಷಣ ಸುಧಾರಣೆಗಳಿಂದ ಪತನದ ಮಾರ್ಗವನ್ನು ತಡೆಯಬಲ್ಲ ಪ್ರಯತ್ನಗಳನ್ನು ಅವರು ಮಾಡಲು ಶಕ್ತರೆಂದಾಗಲೀ ನಿರೀಕ್ಷಿಸಲು ಸಾಧ್ಯವಿರಲಿಲ್ಲ."

ಚಾತುರ್ಯ, ಅದಕ್ಕೆ ಸರಿಸಮನಾದ ಜ್ಞಾನವುಳ್ಳ ಪ್ರತಿಸ್ಪರ್ಧಿಗಳಾದ ಬ್ರಾಹ್ಮಣರಿಗೆ ಈ ಹೊಸ ಬೌದ್ಧ ಪುರೋಹಿತ ವರ್ಗವು ಸರಿ ಜೋಡಿಯಾಗಿದ್ದಿಲ್ಲ ಮತ್ತು ಅವರಿಗೆ ಬೇಕಾದ ಗೌರವ ಮತ್ತು ಜ್ಞಾನಗಳಿದ್ದಿಲ್ಲವೆಂಬುದು ಸ್ಪಷ್ಟವಾಗಿದೆ.

ಬೂದಿಯಿಂದ ಬ್ರಾಹ್ಮಣ ಧರ್ಮವು ಮೇಲೆದ್ದಿತು ಮತ್ತು ಬೌದ್ಧ ಧರ್ಮವು ಮೇಲೇಳಲಿಲ್ಲ ಏಕೆ? ಬೌದ್ಧ ಧರ್ಮದ ಮೇಲಿನ ಬ್ರಾಹ್ಮಣ ಧರ್ಮದ ಸ್ವಾಭಾವಿಕವಾದ ಮೇಲ್ಮೆ (ಹಿರಿಮೆ, ಶ್ರೇಷ್ಠತೆ) ಇದಕ್ಕೆ ಕಾರಣವೆಂದು ಹೇಳಬಾರದು. ಅವರ (ಬ್ರಾಹ್ಮಣರ) ಪುರೋಹಿತ ವರ್ಗದ ವಿಶಿಷ್ಟ ಸಂಘಟನೆಯಲ್ಲಿ ಈ ಕಾರಣವನ್ನು ಹುಡುಕಬೇಕು. ಪುರೋಹಿತ ವರ್ಗವೆಂಬ ಸೈನ್ಯವು ಸತ್ತದ್ದರಿಂದ ಬೌದ್ಧ ಧರ್ಮವು ಸತ್ತಿತು ಮತ್ತು ಅದನ್ನು (ಪುನಃ) ಹುಟ್ಟಿಸಲಿಕ್ಕೆ ಆಗಲಿಲ್ಲ. ಹೊಡೆತ ತಿಂದರೂ ಅದು ಪೂರ್ಣ ನಾಶಹೊಂದಲಿಲ್ಲ. ಬದುಕಿದ ಪ್ರತಿಯೊಬ್ಬ ಬ್ರಾಹ್ಮಣನೂ ಪುರೋಹಿತನಾದನು ಮತ್ತು ಮರಣ ಹೊಂದಿದ ಪ್ರತಿಯೊಬ್ಬ ಬ್ರಾಹ್ಮಣ ಪುರೋಹಿತನ ಸ್ಥಾನವನ್ನು ಅವನು ತುಂಬಿದನು.

ಬೌದ್ಧ ಜನಸಮೂಹವು ಇಸ್ಲಾಂ ಧರ್ಮಕ್ಕೆ ಮತಾಂತರ ಹೊಂದಿದ್ದು ಬೌದ್ಧ ಧರ್ಮದ ಪತನದ ಕಾರಣಗಳಲ್ಲಿ ಒಂದು ಎಂಬುದರಲ್ಲಿ ಏನೂ ಸಂಶಯವಿಲ್ಲ.

ಕ್ರಿ.ಶ. ೧೯೩೮ರಲ್ಲಿ ಅಲಹಾಬಾದದಲ್ಲಿ ಜರುಗಿದ ಭಾರತೀಯ ಇತಿಹಾಸ ಸಮ್ಮೇಳನದ ಆರಂಭದ ಮಧ್ಯಕಾಲೀನ ಮತ್ತು ರಾಜಪೂತ ವಿಭಾಗದಲ್ಲಿ ಮಾಡಿದ ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಪ್ರೊ. ಸುರೇಂದ್ರನಾಥ ಸೇನ್ ಅವರು ಭಾರತದ ಮಧ್ಯಕಾಲೀನ ಇತಿಹಾಸಕ್ಕೆ ಸಂಬಂಧಿಸಿದ ಎರಡು ಸಮಸ್ಯೆಗಳಿಗೆ ಇದುವರೆಗೆ ಸಮಾಧಾನಕಾರಕ ಉತ್ತರಗಳು ದೊರೆತಿಲ್ಲವೆಂದು ಹೇಳಿರುವುದು ಅತ್ಯಂತ ಯೋಗ್ಯವಾಗಿದೆ. ಅವರು ಎರಡನ್ನು ಹೇಳಿದರು. ಒಂದು, ರಾಜಪೂತರ ಉಗಮಕ್ಕೆ ಸಂಬಂಧಿಸಿದೆ ಮತ್ತು ಇನ್ನೊಂದು, ಭಾರತದಲ್ಲಿ ಮುಸ್ಲಿಂ ಜನಾಂಗ ಹರಡಿಕೊಂಡಿರುವುದಕ್ಕೆ ಸಂಬಂಧಿಸಿದೆ. ಎರಡನೆಯದನ್ನು ಕುರಿತು ಅವರು ಹೀಗೆ ಹೇಳಿದರು:

"ಆದರೆ, ಈಗ ಪುರಾತನ ಅನ್ವೇಷಕರಿಗೆ ವಿಶೇಷ ಆಸಕ್ತಿಯಿಲ್ಲದ ಒಂದು ಪ್ರಶ್ನೆಯನ್ನು ನಾನು ವಿವರಿಸ ಬಯಸುತ್ತೇನೆ. ಭಾರತದಲ್ಲಿ ಮುಸ್ಲಿಂ ಜನಾಂಗದ ಹರಡುವಿಕೆಯು ಸ್ವಲ್ಪ ವಿವರಣೆಯನ್ನು ಅಪೇಕ್ಷಿಸುತ್ತದೆ. ಇಸ್ಲಾಂ ತನ್ನ ವಿಜಯದ ದಾರಿಯಲ್ಲಿ ಪಸರಿಸಿತು ಮತ್ತು ಸೋತ ಜನರು ವಿಜಯಿಗಳ ಧರ್ಮಗಳನ್ನು ಸ್ವೀಕರಿಸುವಂತೆ ಬಲಾತ್ಕರಿಸಲ್ಪಟ್ಟರು ಎಂದು ಸಾಮಾನ್ಯವಾಗಿ ತಿಳಿಯಲಾಗಿದೆ. (ವಾಯುವ್ಯ) ಸರಹದ್ದಿನ ಪ್ರಾಂತ ಮತ್ತು ಪಂಜಾಬ್‌ನಲ್ಲಿ ಮುಸ್ಲಿಮರ ಆಧಿಕ್ಯವು ಈ ವಾದಕ್ಕೆ ಪುಷ್ಟಿಯನ್ನು ಕೊಡುತ್ತದೆ. ಆದರೆ ಈ ವಾದವು ಪೂರ್ವ ಬಂಗಾಳದಲ್ಲಿ ಮುಸ್ಲಿಮರ ಅತ್ಯಧಿಕ ಸಂಖ್ಯೆಗೆ ವಿವರಣೆಯನ್ನು ಕೊಡಲಾರದು. ವಾಯುವ್ಯ ಸರಹದ್ದಿನ ಪ್ರಾಂತದಲ್ಲಿ ಕುಶಾನರ ಕಾಲದಲ್ಲಿ ತುರ್ಕಿ ಜನಾಂಗದವರು ವಾಸವಾಗಿದ್ದರು ಹಾಗೂ ಅವರನ್ನು ಜಯಿಸಿದವರಿಗೂ ಅವರಿಗೂ ಜನಾಂಗ ಸಾಮ್ಯವಿದ್ದದ್ದರಿಂದ ಅವರು

ಸುಲಭವಾಗಿ ಮತಾಂತರ ಹೊಂದಿದರು ಎಂದು ಹೇಳಬಹುದು. ಆದರೆ ಪೂರ್ವ ಬಂಗಾಳದ ಮುಸ್ಲಿಮರಿಗೂ ಮತ್ತು ತುರ್ಕರು ಹಾಗೂ ಅಫಘಾನರಿಗೂ ಜನಾಂಗಿಕ ಸಾಮ್ಯವೇನೂ ಇರಲಿಲ್ಲ. ಆದ್ದರಿಂದ ಆ ಪ್ರದೇಶದ ಹಿಂದೂಗಳು ಮತಾಂತರ ಹೊಂದಲಿಕ್ಕೆ ಬೇರೆ ಕಾರಣಗಳಿರಬೇಕು."[೧]

ಈ ಕಾರಣಗಳು ಯಾವುವು? ಮುಸ್ಲಿಂ ಚರಿತ್ರ ಗ್ರಂಥಗಳಲ್ಲಿ ದೊರೆಯುವ ಈ ಕಾರಣಗಳನ್ನು ಪ್ರೊ. ಸೇನ್ ವಿವರಿಸುತ್ತಾರೆ. ಅವರು ಸಿಂಧದ ಉದಾಹರಣೆಯನ್ನು ನೀಡುತ್ತಾರೆ. ಯಾಕೆಂದರೆ ಅದಕ್ಕೆ ಪುರಾವೆಯಿದೆ. ಅವರು ಹೇಳುತ್ತಾರೆ.[೨]

"ಚಚನಾಮಾ (?) ದಲ್ಲಿ ಹೇಳಿದ ಪ್ರಕಾರ, ಸಿಂಧದ ಬೌದ್ಧರು ತಮ್ಮ ಬ್ರಾಹ್ಮಣ ರಾಜರ ಕೈಯಲ್ಲಿ ಎಲ್ಲ ರೀತಿಯ ಅವಮಾನ ಹಾಗೂ ತಿರಸ್ಕಾರವನ್ನು ಅನುಭವಿಸಿದರು ಮತ್ತು ಅರಬರು ಅವರ ದೇಶದ ಮೇಲೆ ಧಾಳಿ ಮಾಡಿದಾಗ ಬೌದ್ಧರು ಅವರಿಗೆ ಮನಃಪೂರ್ವಕ ಸಹಾಯಮಾಡಿದರು. ಅನಂತರ ದಾಹಿರನು ಕೊಲ್ಲಲ್ಪಟ್ಟು ಅವನ ರಾಜ್ಯದಲ್ಲಿ ಮುಸ್ಲಿಂ ಸರಕಾರವು ಸ್ಥಾಪಿಸಲ್ಪಟ್ಟಾಗ ಬೌದ್ಧರ ಹಕ್ಕು ಬಾಧ್ಯತೆಗಳ ವಿಷಯದಲ್ಲಿ ಅರಬರು ಯುದ್ಧಕ್ಕಿಂತ ಮೊದಲು ಇದ್ದ ಸ್ಥಿತಿಯನ್ನೇ ಮುಂದುವರಿಸಲು ಸಿದ್ಧರಿದ್ದರು ಮತ್ತು ಹೊಸ ಆಡಳಿತದಲ್ಲಿಯೂ ಹಿಂದೂಗಳಿಗೆ ಹೆಚ್ಚಿನ ಸ್ಥಾನಮಾನ ದೊರೆಯಿತು. ಇದನ್ನು ಕಂಡ ಬೌದ್ಧರು ದಿಗಿಲುಗೊಂಡರು. ಈ ತೊಂದರೆಯಿಂದ ಪಾರಾಗುವ ಒಂದೇ ಉಪಾಯವೆಂದರೆ ಇಸ್ಲಾಮ್ ಧರ್ಮವನ್ನು ಸ್ವೀಕರಿಸುವುದಾಗಿತ್ತು. ಏಕೆಂದರೆ ಮತಾಂತರ ಹೊಂದಿದವರಿಗೆ ಆಡಳಿತವರ್ಗದವರಿಗೆ ಮೀಸಲಾದ ಎಲ್ಲ ಸೌಕರ್ಯಗಳು ದೊರೆಯುತ್ತಿದ್ದವು. ಆದ್ದರಿಂದ ಸಿಂಧದ ಬೌದ್ಧರು ಬಹುಸಂಖ್ಯೆಯಲ್ಲಿ ಮುಸ್ಲಿಮ್ ಧರ್ಮವನ್ನು ಸೇರಿಸಿಕೊಂಡರು."

ಅನಂತರ ಪ್ರೊ. ಸೇನ್ ಅವರು ಈ ಮಹತ್ವದ ವಾಕ್ಯ ವೃಂದವನ್ನು ಬರೆಯುತ್ತಾರೆ:

"ಈಗ ಮುಸ್ಲಿಮರು ಹೆಚ್ಚು ಸಂಖ್ಯೆಯಲ್ಲಿ ನೆಲೆಸಿರುವ ಪಂಜಾಬ್, ಕಾಶ್ಮೀರ, ಬಿಹಾರ ಶರೀಫದ ಸುತ್ತಲಿನ ಜಿಲ್ಲೆಗಳು, ಈಶಾನ್ಯ ಬಂಗಾಳ ಇವುಗಳು ಮುಸ್ಲಿಮರು ಬರುವುದಕ್ಕಿಂತ ಮೊದಲು ಪ್ರಬಲ ಬೌದ್ಧ ಕೇಂದ್ರಗಳಾಗಿದ್ದವು ಎಂಬುದು ಆಕಸ್ಮಿಕವಾಗಲಾರದು. ಹಿಂದೂಗಳಿಗಿಂತಲೂ ಬೌದ್ಧರು ಸುಲಭವಾಗಿ ರಾಜಕೀಯ ಆಮಿಷಗಳಿಗೆ ಬಲಿಯಾದರು ಎಂದು ಹೇಳುವುದು ಸರಿಯಾಗಲಾರದು. ತಮ್ಮ ರಾಜಕೀಯ ಸ್ಥಾನಮಾನದ ಸುಧಾರಣೆಯ ನಿರೀಕ್ಷೆಯಿಂದ ಅವರು ಮತಾಂತರಗೊಂಡರು."

ಭಾರತದ ಬೌದ್ಧ ಜನತೆಯು ಬೌದ್ಧ ಧರ್ಮವನ್ನು ತ್ಯಜಿಸಿ ಇಸ್ಲಾಮ್ ಸ್ವೀಕರಿಸಲು ಪ್ರಬಲ ಕಾರಣಗಳೇನು ಎಂಬುದನ್ನು ದುರ್ದೈವದಿಂದ ಶೋಧಿಸಿಲ್ಲ. ಆದ್ದರಿಂದ ಬ್ರಾಹ್ಮಣ ಧರ್ಮದ ರಾಜರ ಕಿರುಕುಳವು ಈ ಪರಿಣಾಮಕ್ಕೆ ಎಷ್ಟರ ಮಟ್ಟಿಗೆ ಹೊಣೆಯಾಗಿದೆ ಎಂದು ಹೇಳುವುದು ಸಾಧ್ಯವಿಲ್ಲ. ಆದರೆ ಇದು ಪ್ರಮುಖ ಕಾರಣವೆಂದು ಸೂಚಿಸುವ ಪ್ರಸಂಗಗಳು ಇಲ್ಲವೆಂದೇನೂ ಇಲ್ಲ. ಬೌದ್ಧ ಜನಾಂಗದ ಮೇಲೆ ಹಿಂಸಾಚಾರದಲ್ಲಿ ತೊಡಗಿದ ಇಬ್ಬರು ರಾಜರ ಉದಾಹರಣೆಗಳು ನಮಗೆ ದೊರೆತಿವೆ.

---

೧. 'ಅರ್ಲಿ ಕರಿಯರ್ ಆಫ್ ಕನ್ಹೋಜಿ ಆ್ಯಂಗ್ರಿಯಾ ಅಂಡ್ ಅದರ್ ಪೇಪರ್ಸ್', ಪು. ೧೮೮–೧೮೯.

೨. ಅದೇ, ಪು.೧೮೮–೧೮೯.

ಮೊದಲನೆಯವನು ಮಿಹಿರಕುಲ. ಕ್ರಿ.ಶ. ೪೫೫ರಲ್ಲಿ ಭಾರತದ ಮೇಲೆ ಧಾಳಿ ಮಾಡಿದ ಹೂಣರ ಜನಾಂಗಕ್ಕೆ ಸೇರಿದವನು ಅವನು. ಹೂಣರು ಉತ್ತರ ಭಾರತದಲ್ಲಿ ಶಾಕಲ ಎಂಬಲ್ಲಿ ಅಂದರೆ ಪಂಜಾಬ್‌ನಲ್ಲಿ ಈಗಿನ ಸಿಯಾಲ್‌ಕೋಟ ನಗರವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ತಮ್ಮ ರಾಜ್ಯವನ್ನು ಸ್ಥಾಪಿಸಿದರು. ಮಿಹಿರಕುಲನು ಸುಮಾರು ಕ್ರಿ.ಶ. ೪೨೮ರಲ್ಲಿ ಆಳುತ್ತಿದ್ದನು. ವಿನ್ಸೆಂಟ್ ಸ್ಮಿಥ್ ಹೇಳುತ್ತಾರೆ:[೧]

> "ಮಿಹಿರಕುಲನು ರಕ್ತ ಪಿಪಾಸು ನಿರಂಕುಶ ರಾಜನಾಗಿದ್ದನು ಎಂದು ಎಲ್ಲ ಭಾರತೀಯ ಸಂಪ್ರದಾಯಗಳು ಸಹಮತವನ್ನು ವ್ಯಕ್ತಪಡಿಸುತ್ತವೆ. 'ಭಾರತದ ಅತ್ತಿಲ (?)' ಎಂದು ಕರೆಸಿಕೊಂಡ ಅವನು ಅಸಾಮಾನ್ಯವಾದ ಅತಿ ಕ್ರೌರ್ಯದಿಂದ ಕಲಂಕಿತನಾಗಿದ್ದನು. ಕ್ರೌರ್ಯವು ಹೂಣರ ಸ್ವಭಾವದ ವಿಶಿಷ್ಟ ಲಕ್ಷಣವೆಂದು ಇತಿಹಾಸಕಾರರು ಗುರುತಿಸಿದ್ದಾರೆ."

ಸ್ಮಿಥ್‌ರ ಮಾತಿನಲ್ಲಿ ಹೇಳುವುದಾದರೆ "ಮಿಹಿರಕುಲನು ಶಾಂತ ಬೌದ್ಧರ ಮೇಲೆ ಭಯಂಕರ ದ್ವೇಷವನ್ನು ಪ್ರಕಟಿಸಿದನು ಮತ್ತು ನಿರ್ದಯವಾಗಿ ಸ್ತೂಪಗಳನ್ನು ಮತ್ತು ವಿಹಾರಗಳನ್ನು ಕೆಡವಿಸಿದನು ಮತ್ತು ಅಲ್ಲಿಯ ಸಂಪತ್ತನ್ನು ಸೂರೆ ಮಾಡಿದನು."[೨]

ಎರಡನೆಯವನೆಂದರೆ ಪೂರ್ವ ಭಾರತದ ರಾಜನಾದ ಶಶಾಂಕ. ಆತನು ಏಳನೆಯ ಶತಮಾನದ ಮೊದಲನೆಯ ದಶಕದಲ್ಲಿ ಆಳುತ್ತಿದ್ದನು ಮತ್ತು ಹರ್ಷನ ಜೊತೆಯ ಹೋರಾಟದಲ್ಲಿ ಸೋಲಿಸಲ್ಪಟ್ಟನು. ವಿನ್ಸೆಂಟ್ ಸ್ಮಿಥ್‌ರ ಮಾತಿನಲ್ಲಿ ಹೇಳುವುದಾದರೆ, "ಹರ್ಷನ ಅಣ್ಣನನ್ನು ಮೋಸದಿಂದ ಕೊಂದವನೆಂದು ಹೇಳಲ್ಪಟ್ಟ ಮತ್ತು ಬಹುಶಃ ಗುಪ್ತ ವಂಶಜನಾದ ಶಶಾಂಕನು ಶಿವನ ಪೂಜಕನಾಗಿದ್ದನು, ಬೌದ್ಧ ಧರ್ಮವನ್ನು ದ್ವೇಷಿಸುತ್ತಿದ್ದನು ಮತ್ತು ಅದನ್ನು ನಿರ್ಮೂಲ ಮಾಡಲಿಕ್ಕೆ ತನಗೆ ಸಾಧ್ಯವಿದ್ದುದನ್ನೆಲ್ಲ ಮಾಡಿದನು. ಬುದ್ಧ ಗಯಾದಲ್ಲಿ ಇದ್ದ ಬೋಧಿವೃಕ್ಷವನ್ನು ಅವನು ಅಗೆದು ಸುಟ್ಟುಹಾಕಿದನು. ಅಶೋಕನು ಆ ವೃಕ್ಷದ ಮೇಲೆ ಮಿತಿಮೀರಿದ ಭಕ್ತಿಯುಳ್ಳವನಾಗಿದ್ದನೆಂದು ದಂತಕತೆಯಿದೆ. ಅವನು (ಶಶಾಂಕನು) ಪಾಟಲಿಪುತ್ರದಲ್ಲಿ ಇದ್ದ ಬುದ್ಧನ ಪಾದಗಳ ಗುರುತುಗಳುಳ್ಳ ಶಿಲೆಯನ್ನು ಒಡೆದುಹಾಕಿದನು, ವಿಹಾರಗಳನ್ನು ನಾಶಪಡಿಸಿದನು. ಬೌದ್ಧ ಭಿಕ್ಷುಗಳನ್ನು ಚೆಲ್ಲಾಪಿಲ್ಲಿಯಾಗಿ ಓಡಿಸಿದನು. ಹೀಗೆ ನೇಪಾಳದ ಪರ್ವತಗಳವರೆಗೂ ತನ್ನ ಹಿಂಸಾಚಾರವನ್ನು ನಡೆಸಿದನು."

ಏಳನೆಯ ಶತಮಾನವು ಭಾರತದಲ್ಲಿ ಧಾರ್ಮಿಕ ಹಿಂಸಾಚಾರದ ಶತಮಾನವೆಂದು ತೋರುತ್ತದೆ. ಸ್ಮಿಥ್‌ರು ಹೇಳುತ್ತಾರೆ:

"ಏಳನೆಯ ಶತಮಾನದಲ್ಲಿ ಸಜಾತೀಯವಾದ ಜೈನ ಧರ್ಮದ ಮೇಲೆ ದಕ್ಷಿಣ ಭಾರತದಲ್ಲಿ ಭೀಕರ ಹಿಂಸೆಯುಂಟಾಯಿತು."[೩]

ಮುಸ್ಲಿಂ ಧಾಳಿಗಳ ಕಾಲಕ್ಕೆ ಸಮೀಪಿಸಿದಂತೆ ಸಿಂಧ್‌ನ ಉದಾಹರಣೆ ನಮಗೆ ದೊರೆಯುತ್ತದೆ. ಅಲ್ಲಿ ಹಿಂಸಾಚಾರವೇ ಕಾರಣವಾಗಿತ್ತೆಂಬುದು ನಿಸ್ಸಂಶಯ. ಉತ್ತರ ಭಾರತದಲ್ಲಿ ಬ್ರಾಹ್ಮಣರು ಅಥವಾ ರಾಜಪೂತರು ರಾಜರಾಗಿದ್ದರು ಮತ್ತು ಇವರೀರ್ವರೂ ಬೌದ್ಧ ವಿರೋಧಿಗಳಾಗಿದ್ದರು ಎಂಬುದನ್ನು ತಿಳಿದುಕೊಂಡಾಗ

---

೧. 'ಅರ್ಲಿ ಹಿಸ್ಟರಿ ಆಫ್ ಇಂಡಿಯಾ' (೧೯೨೪), ಪು. ೩೩೬

೨. ಅದೇ, ಪು. ೩೩೭

೩. ಅದೇ, ಪು. ೩೬೦

೪. ಅದೇ, ಅಡಿಟಿಪ್ಪಣಿ, ಪು. ೨೧೪.

ಈ ಹಿಂಸೆಗಳು ಮುಸ್ಲಿಂ ಧಾಳಿಗಳ ಕಾಲದವರೆಗೆ ಮುಂದುವರಿದವು ಎಂದು ಊಹಿಸಬಹುದು. ೧೨ನೆಯ ಶತಮಾನದಲ್ಲಿಯೂ ಜೈನರು ಹಿಂಸೆಗೊಳಗಾದರು ಎಂಬುದಕ್ಕೆ ಇತಿಹಾಸ ಸಾಕ್ಷಿಯಾಗಿದೆ. ಗುಜರಾತ್‌ನ ಶೈವರಾಜನಾದ, ಅಜಯದೇವನನ್ನು ಕುರಿತು ಸ್ಮಿಥ್ ಹೇಳುತ್ತಾರೆ. ಅವನು ಕ್ರಿ.ಶ. ೧೧೭೪–೭೬ರಲ್ಲಿ ಸಿಂಹಾಸನವನ್ನೇರಿದನು. ಜೈನರನ್ನು ನಿರ್ದಯವಾಗಿ ಹಿಂಸಿಸುತ್ತಾ ತನ್ನ ಆಳ್ವಿಕೆಯನ್ನು ಪ್ರಾರಂಭ ಮಾಡಿದನು ಮತ್ತು ಅವರ ನಾಯಕನನ್ನು ಚಿತ್ರಹಿಂಸೆಗೀಡುಮಾಡಿ ಸಂಹರಿಸಿದನು. "ಇನ್ನು ಅನೇಕ ಕ್ರೂರ ಹಿಂಸೆಯ ಉದಾಹರಣೆಗಳನ್ನು ಕೊಡಬಹುದೆಂದು " ಎಂದು ಸ್ಮಿಥ್ ಹೇಳುತ್ತಾರೆ."

ಆದ್ದರಿಂದ, ಬೌದ್ಧ ಧರ್ಮದ ಪತನಕ್ಕೆ ಕಾರಣವೆಂದರೆ ಬ್ರಾಹ್ಮಣ ಧರ್ಮದ ದಬ್ಬಾಳಿಕೆಯಿಂದ ಪಾರಾಗಲು ಬೌದ್ಧರು ಇಸ್ಲಾಂ ಧರ್ಮವನ್ನು ಸ್ವೀಕರಿಸುವುದು ಒಂದು ಉಪಾಯವಾಗಿತ್ತು ಎಂಬ ನಿರ್ಣಯವನ್ನು ಬದಲಿಸುವ ಕಾರಣವೇನೂ ಇಲ್ಲ. (ಮೇಲೆ ಉದಾಹರಿಸಿದ) ಪುರಾವೆಯು ಈ ನಿರ್ಣಯಕ್ಕೆ ಪೋಷಕವಾಗಿರದಿದ್ದರೂ ಕನಿಷ್ಠ ಅದು ಸಂಭವನೀಯವೆಂದು ತೋರಿಸುತ್ತದೆ. ಅದೊಂದು ಅನರ್ಥವಾಗಿದ್ದರೆ, ಬ್ರಾಹ್ಮಣ ಧರ್ಮವು ತನಗೆ ತಾನೇ ಆಭಾರಿಯಾಗಬೇಕಾದಂತಹ ಅನರ್ಥವಾಗಿದೆ.

* * * *

## ಅಧ್ಯಾಯ ೧೦

# ಬ್ರಾಹ್ಮಣ ಸಾಹಿತ್ಯ

*ಈ ಪ್ರಬಂಧದ ಚದುರಿಹೋದ ಹಾಳೆಗಳಲ್ಲಿ ೬ ರಿಂದ ೧೪ ಹಾಗು ೧೭ ರಿಂದ ೩೯ ಪುಟಗಳು ನಮಗೆ ಸಿಕ್ಕಿವೆ. ಈ ಪುಟಗಳು "ಬೌದ್ಧಧರ್ಮದ ಅವನತಿ ಹಾಗೂ ಪತನ" ಎಂಬ ಅಧ್ಯಾಯದ ಮುಂದುವರಿದ ಭಾಗದಂತಿದೆ. ಇದರಲ್ಲಿ ಕೆಲವು ಮೂಲ ಪುಟಗಳಾದರೆ, ಇನ್ನು ಕೆಲವು ಕಾರ್ಬನ್ ಪ್ರತಿಗಳು. ಇದಲ್ಲದೆ, 'ವೇದಾಂತ ಸೂತ್ರಗಳು' ಹಾಗು 'ಭಗವದ್ಗೀತೆ' ಕುರಿತು ಇನ್ನು ೧೪ ಪುಟಗಳು ಇವೆ. (೧) ಬೌದ್ಧ ಧರ್ಮದ ಅವನತಿ ಹಾಗೂ ಪತನ, (೨) ಬ್ರಾಹ್ಮಣ ಸಾಹಿತ್ಯ ಮತ್ತು (೩) 'ವೇದಾಂತ ಸೂತ್ರಗಳು ಹಾಗೂ 'ಭಗವದ್ಗೀತೆ' ಎಂಬ ಮೂರು ಅಧ್ಯಾಯಗಳುಳ್ಳ ಪುಟಗಳು ಒಂದು ರೀತಿ ಇದ್ದು ಇತರ ಅಧ್ಯಾಯಗಳ ಪುಟಗಳು ಆಕಾರದಲ್ಲಿ ಬೇರೆ ಬಗೆಯಾಗಿವೆ.*

– ಸಂಪಾದಕರು

## I

ಪುಷ್ಯಮಿತ್ರನ ನೇತೃತ್ವದ ರಾಜಕೀಯ ದಿಗ್ವಿಜಯದ ಅನಂತರ ಹುಟ್ಟಿಕೊಂಡ ಬ್ರಾಹ್ಮನ ಸಾಹಿತ್ಯದಿಂದ ಕಾರಣೀಭೂತ ಸತ್ಯಗಳನ್ನು ಹೆಕ್ಕಿಕೊಳ್ಳಬೇಕಿದೆ:

ಈ ಸಾಹಿತ್ಯದಲ್ಲಿ ಆರು ಪ್ರಕಾರಗಳಿವೆ – (೧) 'ಮನುಸ್ಮೃತಿ', (೨) 'ಗೀತೆ', (೩) ಶಂಕರಾಚಾರ್ಯರ ವೇದಾಂತ, (೪) 'ಮಹಾಭಾರತ' ಹಾಗೂ (೫) 'ರಾಮಾಯಣ' ಮತ್ತು ಪುರಾಣಗಳು. ಈ ಸಾಹಿತ್ಯವನ್ನು ವಿಶ್ಲೇಷಿಸುವಾಗ ನಾನು ಬೌದ್ಧಧರ್ಮದ ಅವನತಿಗೆ ಕಾರಣವಾದಂಥ ಸತ್ಯಗಳನ್ನು ಮಾತ್ರ ಹೊರಗೆಳೆಯಬಯಸುತ್ತೇನೆ.

ಇದರಲ್ಲಿ ಅಸತ್ಯವಾಗಲೀ, ಅನ್ಯಾಯವಾಗಲೀ ಇಲ್ಲ. ಯಾಕೆಂದರೆ ಸಾಹಿತ್ಯ ಜನಜೀವನವನ್ನು ಪ್ರತಿಬಿಂಬಿಸುವ ಕನ್ನಡಿ.

ಇಲ್ಲಿ ಒಂದು ಅಂಶವನ್ನು ಸ್ಪಷ್ಟಪಡಿಸಬೇಕಿದೆ. ಅದು ಈ ಸಾಹಿತ್ಯವು ಅಸ್ತಿತ್ವಕ್ಕೆ ಬಂದ ಕಾಲಮಾನವನ್ನು ಕುರಿತಾದ್ದು. ಈ ಸಾಹಿತ್ಯ ಪುಷ್ಯಮಿತ್ರನ ಕ್ರಾಂತಿಯ ಅನಂತರವೇ ಅಸ್ತಿತ್ವಕ್ಕೆ ಬಂದಿತೆಂಬುದನ್ನು ಎಲ್ಲರೂ ಒಪ್ಪಲಾರರು. ಇದಕ್ಕೆ ಪ್ರತಿಯಾಗಿ ಬಹುತೇಕ ಹಿಂದೂಗಳು ತಾವು ಧರ್ಮನಿಷ್ಠರು ಹೌದೋ ಅಲ್ಲವೋ, ಕಲಿತವರೋ ಅಲ್ಲವೋ, ಅಂತೂ ತಮ್ಮ ಸಾಹಿತ್ಯ ಅತ್ಯಂತ ಪ್ರಾಚೀನವಾದುದೆಂಬ ಅಚಲ ನಂಬಿಕೆ

ಹೊಂದಿದ್ದಾರೆ. ಅಷ್ಟೇಕೆ, ತಮ್ಮ ಪವಿತ್ರ ಸಾಹಿತ್ಯದ ಪ್ರಾಚೀನತೆಯನ್ನು ನಂಬುವುದು ಹಿಂದೂಗಳ ಪಾಲಿಗೆ ಧರ್ಮಶ್ರದ್ಧೆಯ ವಿಷಯವೇ ಆಗಿದೆ.

ಮನುವಿನ ಕಾಲಾವಧಿಗೆ ಸಂಬಂಧಿಸಿದಂತೆ 'ಮನುಸ್ಮೃತಿ'ಯನ್ನು ಸುಮತಿ ಭಾರ್ಗವನು ಕ್ರಿ.ಪೂ. ೧೮೫ರಲ್ಲಿ ಅಂದರೆ ಪುಷ್ಯಮಿತ್ರನ ಕ್ರಾಂತಿಯ ಅನಂತರವೇ ಬರೆದನೆಂಬುದನ್ನು ನಾನು ಉಲ್ಲೇಖಿಸಿದ್ದೇನೆ. ಈ ವಿಚಾರವಾಗಿ ಹೆಚ್ಚೇನೂ ಹೇಳುವ ಅಗತ್ಯವಿಲ್ಲ.

'ಭಗವದ್ಗೀತೆ'ಯ ಕಾಲಮಾನಕ್ಕೆ ಸಂಬಂಧಿಸಿದಂತೆ ಅಭಿಪ್ರಾಯ ಭೇದ ಕಂಡು ಬರುತ್ತದೆ.

ತೆಲಾಂಗ್‌ರ ಪ್ರಕಾರ, 'ಗೀತೆ'ಯು ಕ್ರಿಸ್ತ ಪೂರ್ವ ಮೂರನೇ ಶತಮಾನಕ್ಕಿಂತ ಹಿಂದಿನದಾದರೂ, ಎಷ್ಟು ಹಿಂದಿನದೆಂದು ಅವರು ಹೇಳಿಲ್ಲ.

ತಿಲಕರು.....

ಪ್ರೊ. ಗಾರ್ಬೆಯವರ[1] ಅಭಿಪ್ರಾಯದಲ್ಲಿ ಈಗ ನಮ್ಮ ಮುಂದಿರುವ 'ಗೀತೆ'ಯು ತನ್ನ ಮೂಲ ಸ್ವರೂಪಕ್ಕಿಂತ ಭಿನ್ನವಾದುದು. 'ಗೀತೆ'ಯು ತನ್ನ ಮೂಲ ಸ್ವರೂಪವನ್ನು ಬಿಟ್ಟು ಹಲವಾರು ಸಹಜ ರೂಪಾಂತರಗಳನ್ನು ಹೊಂದಿ ಬಂದಿರುವುದನ್ನು ಭಾರತದಾಚೆಗಿನ ಅನೇಕ ಭಾರತೀಯ ಶಾಸ್ತ್ರಜ್ಞರು ಒಪ್ಪುತ್ತಾರೆ. ಪ್ರೊ. ಗಾರ್ಬೆಯವರ ಪ್ರಕಾರ 'ಭಗವದ್ಗೀತೆ'ಯಲ್ಲಿ ಮೂಲದಲ್ಲಿ ಇರದಿದ್ದ ಒಂದು ನೂರ ನಲವತ್ತಾರು ಶ್ಲೋಕಗಳು ಹೊಸದಾಗಿ ಸೇರಿವೆ. ಇನ್ನು ಅದು ರಚನೆಯಾದದ್ದು ಯಾವಾಗ ಎನ್ನಲು ಪ್ರೊ. ಗಾರ್ಬೆ "ಕ್ರಿಸ್ತ ಶಕ ಎರಡನೇ ಶತಮಾನಕ್ಕಿಂತ ಹಿಂದಿರಲಾರದು" ಎನ್ನುತ್ತಾರೆ.

ಪ್ರೊ. ಕೋಸಾಂಬಿಯವರು 'ಗೀತೆ' ರಚನೆಯಾದದ್ದು ಬಾಲಾದಿತ್ಯ ದೊರೆಯ ಕಾಲದಲ್ಲೇ ಎಂದು ವಾದಿಸುತ್ತಾರೆ. ಬಾಲಾದಿತ್ಯನು ಆಂಧ್ರ ವಂಶವನ್ನು.... ದುರಾಕ್ರಮಿಸಿದ ಗುಪ್ತ ವಂಶಕ್ಕೆ ಸೇರಿದವನು. ಬಾಲಾದಿತ್ಯ ಪಟ್ಟಕ್ಕೆ ಬಂದಿದ್ದು ಕ್ರಿ.ಶ. ೪೬೭ರಲ್ಲಿ. ಕೋಸಾಂಬಿಯವರು ಇಷ್ಟು ಅರ್ವಾಚೀನ ಕಾಲಮಾನವನ್ನು ನಿಗದಿ ಮಾಡಲು ಕೊಡುವ ಕಾರಣಗಳು ಎರಡು.

ಕ್ರಿ.ಶ. ೭೮೮ರಲ್ಲಿ ಹುಟ್ಟಿ ೮೨೦ರಲ್ಲಿ ಸತ್ತ ಶಂಕರಾಚಾರ್ಯರು 'ಭಗವದ್ಗೀತೆ'ಯ ಬಗ್ಗೆ ಭಾಷ್ಯ ಬರೆಯುವ ಮುನ್ನ ಅದರ ಬಗ್ಗೆ ಯಾರಿಗೂ ಗೊತ್ತೇ ಇರಲಿಲ್ಲ. ಶಂಕರಾಚಾರ್ಯರಿಗೆ ಕೇವಲ ೫೦ ವರ್ಷದ ಹಿಂದೆ ಶಾಂತರಕ್ಷಿತ ಬರೆದ 'ತತ್ವಸಂಗ್ರಹ'ದಲ್ಲೂ 'ಗೀತೆ'ಯ ಪ್ರಸ್ತಾಪವಿಲ್ಲ. ಇನ್ನು ಎರಡನೇ ಕಾರಣ: 'ವಿಜ್ಞಾನವಾದ' ಎಂಬ ವಿಚಾರಪಂಥವನ್ನು ಹುಟ್ಟುಹಾಕಿದನು ವಸುಬಂಧು. 'ಬ್ರಹ್ಮಸೂತ್ರ ಭಾಷ್ಯ'ದಲ್ಲಿ ಈ ವಸುಬಂಧುವಿನ ವಿಜ್ಞಾನವಾದದ ವಿಮರ್ಶೆಯಿದೆ ಮತ್ತು 'ಗೀತೆ'ಯಲ್ಲಿ[2] 'ಬ್ರಹ್ಮಸೂತ್ರಭಾಷ್ಯ'ದ ಪ್ರಸ್ತಾಪವಿದೆ. ಆದ್ದರಿಂದ ಗೀತೆಯು ವಸುಬಂಧು ಮತ್ತು 'ಬ್ರಹ್ಮಸೂತ್ರಭಾಷ್ಯ'ಗಳ ಅನಂತರದ್ದಾಗಿರಬೇಕು. ವಸುಬಂಧು ಗುಪ್ತರ ದೊರೆ ಬಾಲಾದಿತ್ಯನ ಕುಲಗುರುವಾಗಿದ್ದವನು. ಆದ್ದರಿಂದ ಗೀತೆಯ ರಚನೆ, ಬಾಲಾದಿತ್ಯನ ಕಾಲದಲ್ಲಿ ಅಥವಾ ಅವನ ಅನಂತರದ ಕಾಲದಲ್ಲಿ ಆಗಿರಬೇಕು.

ಶಂಕರಾಚಾರ್ಯರ ಕಾಲ ಕುರಿತು ಹೆಚ್ಚು ಹೇಳಬೇಕಾದ್ದೇನೂ ಇಲ್ಲ. ಆತ ಬದುಕಿ ಬರೆದ ಕಾಲದ ಬಗ್ಗೆ ಸಾಮಾನ್ಯವಾಗಿ ಒಮ್ಮತವಿದೆ. ಆತನ ಬದುಕಿನ ಬಗ್ಗೆ ಸ್ವಲ್ಪ ಹೇಳಬೇಕಿದೆ. ಆದರೆ ಅದನ್ನು ಬೇರೊಂದು ಕಡೆ ಪ್ರಸ್ತಾಪಿಸುತ್ತೇನೆ.

---

೧. ಅವರ 'ಇಂಟ್ರಡಕ್ಷನ್ ಟು ದಿ ಭಗವದ್ಗೀತಾ' ನೋಡಿ; ಇಂಗ್ಲಿಷ್ ಅನು. ಪ್ರೊ. ಉಕ್ಷೀಕರ್.

೨. 'ಗೀತಾ'. ಅಧ್ಯಾಯ ೧೩, ಶ್ಲೋಕ ೪.

'ಮಹಾಭಾರತ'ದ ರಚನೆಯ ಕಾಲವನ್ನು ನಿಷ್ಕರ್ಷೆ ಮಾಡುವುದಂತೂ ಹೆಚ್ಚು ಕಮ್ಮಿ ಅಸಾಧ್ಯದ ಕೆಲಸ. ಆ ನಿಟ್ಟಿನಲ್ಲಿ ಪ್ರಯತ್ನ ಮಾತ್ರ ಮಾಡಬಹುದಷ್ಟೇ. 'ಮಹಾಭಾರತ'ವು ಮೂರು ಆವೃತ್ತಿಗಳನ್ನು ಕಂಡಿದ್ದು ಪ್ರತಿಯೊಬ್ಬ ಹೊಸ ಸಂಪಾದಕನ ಕೈಯಲ್ಲೂ ಅದರ ಶೀರ್ಷಿಕೆ ಹಾಗೂ ವಸ್ತು ವಿಷಯ ಬದಲಾಗಿದೆ. ಅದರ ಮೂಲ ಸ್ವರೂಪದ ಶೀರ್ಷಿಕೆ 'ಜಯ'. ಈ ಮೂಲ ಹೆಸರು ಮೂರನೇ ಆವೃತ್ತಿಯ ಆದಿ ಹಾಗೂ ಅಂತ್ಯದಲ್ಲು ಕಂಡುಬರುತ್ತದೆ. 'ಜಯ' ಎಂಬ ಹೆಸರಿನ ಮೊದಲ ಆವೃತ್ತಿಯನ್ನು ಬರೆದವನು ವ್ಯಾಸ. ಇದರ ಎರಡನೇ ಆವೃತ್ತಿಯ ಹೆಸರು 'ಭಾರತ'. ಈ ಎರಡನೇ ಆವೃತ್ತಿಯ ಸಂಪಾದಕ ವೈಶಂಪಾಯನ. ವೈಶಂಪಾಯನನ 'ಭಾರತ' ಒಂದೇ. ಅದರ ಎರಡನೆಯ ಆವೃತ್ತಿ ಅಲ್ಲ. ವ್ಯಾಸನಿಗೆ ವೈಶಂಪಾಯನನಲ್ಲದೆ ಇನ್ನೂ ಅನೇಕ ಶಿಷ್ಯರಿದ್ದರು. ಸುಮಂತು, ಜೈಮಿನಿ, ಪೈಲ ಮತ್ತು ಶುಕ ಎಂಬುವರು ಅವರ ಇತರ ನಾಲ್ಕು ಶಿಷ್ಯರು. ಅವರೆಲ್ಲರೂ ವ್ಯಾಸನ ಪದತಲದಲ್ಲಿ ಕಲಿತವರು. ಅವರೆಲ್ಲರೂ ತಮ್ಮ ತಮ್ಮ ಆವೃತ್ತಿಯನ್ನು ಹೊರತಂದರು. ಆದ್ದರಿಂದ 'ಭಾರತ'ದ್ದೇ ಇನ್ನೂ ನಾಲ್ಕು ಆವೃತ್ತಿಗಳಾದವು. ವೈಶಂಪಾಯನ ಇವೆಲ್ಲವನ್ನೂ ಸೇರಿಸಿ ತನ್ನ ಆವೃತ್ತಿಯನ್ನು ಸಿದ್ಧಪಡಿಸಿದ. ಇದಾದ ಮೇಲೆ ಬಂದ ಮೂರನೆಯವನು ಸೌತಿ. ಈತ ವೈಶಂಪಾಯನನ ಆವೃತ್ತಿಯನ್ನು ಪುನರ್‌ರಚಿಸಿದ. ಕೊನೆಗ ಸೌತಿಯ ಆವೃತ್ತಿಗೇ 'ಮಹಾಭಾರತ' ಎಂಬ ಹೆಸರು ಬಂದು ನಿಂತಿತು. ಈ ಗ್ರಂಥ ತನ್ನ ಗಾತ್ರ ವಸ್ತು ವಿಷಯಗಳೆರಡರಲ್ಲೂ ಬೆಳೆದುನಿಂತಿದೆ. ವ್ಯಾಸನ 'ಜಯ' ಕೇವಲ ೮,೮೦೦ ಶ್ಲೋಕಗಳುಳ್ಳ ಪುಟ್ಟ ಕೃತಿಯಾಗಿತ್ತು. ಇದೇ ವೈಶಂಪಾಯನನ ಕೈಯಲ್ಲಿ ೨೪,೦೦೦ ಶ್ಲೋಕಗಳಾಯಿತು. ಸೌತಿ ಅದನ್ನು ಬೆಳೆಸಿ ೯೬,೮೩೬ ಶ್ಲೋಕಗಳಿಗೆ ವಿಸ್ತರಿಸಿದ.

ವಸ್ತು ಮತ್ತು ವಿಷಯಕ್ಕೆ ಬಂದರೆ ವ್ಯಾಸ ಬರೆದದ್ದು ಕೌರವರು ಹಾಗೂ ಪಾಂಡವರ ಯುದ್ಧದ ಕಥೆ ಮಾತ್ರವಾಗಿತ್ತು. ವೈಶಂಪಾಯನನ ಕೈಯಲ್ಲಿ ಇದೇ ಕಥೆ ಎರಡು ಆಯಾಮದ್ದಾಯಿತು. ಮೂಲಕಥೆಗೆ ಈಗ ನೀತಿಬೋಧೆಯೂ ಸೇರಿಕೊಂಡಿತು. ಕೇವಲ ಚಾರಿತ್ರಿಕ ಕೃತಿಯಾಗಿದ್ದದ್ದು ಈಗ ಸಾಮಾಜಿಕ, ನೈತಿಕ ಮತ್ತು ಧಾರ್ಮಿಕ ಕರ್ತವ್ಯಗಳನ್ನು ಬೋಧಿಸುವ ಉಪದೇಶಾತ್ಮಕ ಕೃತಿಯಾಗಿ ಮಾರ್ಪಟ್ಟಿತು.

ಇನ್ನು ಕೊನೆಯ ಸಂಪಾದಕ ಸೌತಿಯಂತೂ ಅದನ್ನು ಸರ್ವಗ್ರಾಹಿ ಐತಿಹ್ಯಗಾಥೆಗಳ ಭಂಡಾರವಾಗಿ ಮಾಡಿದ. 'ಭಾರತ'ಕ್ಕೆ ಸಂಬಂಧವಿರದಿದ್ದ ದಂತ ಕತೆಗಳು, ಚಾರಿತ್ರಿಕ ಕತೆಗಳೆಲ್ಲವೂ ಕಳೆದುಹೋಗದಂತೆ ಅಥವಾ ಒಂದೆಡೆ ಸಿಗುವಂತೆ ಸೌತಿ ಕಲೆ ಹಾಕಿದ. ಆತನಿಗೆ 'ಭಾರತ'ವು ಎಲ್ಲ ಕಲಿಕೆ ಹಾಗೂ ಜ್ಞಾನದ ಭಂಡಾರವಾಗಬೇಕೆಂಬ ಇನ್ನೊಂದು ಆಕಾಂಕ್ಷೆಯೂ ಇತ್ತು. ಅದಕ್ಕೇ ಆತ ರಾಜನೀತಿ, ಭೂಗೋಳ, ಧನುರ್ವಿದ್ಯೆಯೇ ಮುಂತಾದ ಎಲ್ಲ ಜ್ಞಾನಶಾಖೆಗಳ ಅಂಶಗಳನ್ನೂ 'ಭಾರತ'ಕ್ಕೆ ಸೇರಿಸಿದ. ಸೌತಿಯ ಪುನರಾವರ್ತನೆಯ ಪ್ರವೃತ್ತಿ ನೋಡಿದರೆ 'ಭಾರತ' ಆತನ ಕೈಯಲ್ಲಿ 'ಮಹಾಭಾರತ' ವಾದುದರಲ್ಲಿ ಆಶ್ಚರ್ಯವೇನೂ ಇಲ್ಲ.

ಈಗ ಅದರ ರಚನೆಯ ಕಾಲದ ಬಗ್ಗೆ ಹೇಳಬೇಕೆಂದರೆ ಕೌರವ–ಪಾಂಡವರ ಯುದ್ಧ ಅತ್ಯಂತ ಪ್ರಾಚೀನವಾದದ್ದೆಂಬುದರಲ್ಲಿ ಯಾವ ಸಂದೇಹವೂ ಇಲ್ಲ. ಅಂದ ಮಾತ್ರಕ್ಕೆ ವ್ಯಾಸ ಸೃಷ್ಟಿಯೂ ಅಷ್ಟೇ ಹಳೆಯದು ಅಥವಾ ಆ ಘಟನೆಗೆ ಸಮಕಾಲೀನವಾದದ್ದು ಎಂದೇನೂ ಅರ್ಥವಲ್ಲ. ಈ ಬೇರೆ ಆವೃತ್ತಿಗಳ ನಿರ್ದಿಷ್ಟ ಕಾಲಮಾನ ನಿಗದಿಪಡಿಸುವುದೇ ಕಷ್ಟದ ಕೆಲಸ. ಇವೆಲ್ಲವನ್ನೂ ಒಟ್ಟಾಗಿಸಿ ಪ್ರೊ. ಹಾಪ್‌ಕಿನ್ಸ್[೧] ಹೀಗೆ ಹೇಳುತ್ತಾರೆ:

---

೧. ಪ್ರೊ. ಹಾಪ್‌ಕಿನ್ಸ್: 'ದಿ ಗ್ರೇಟ್ ಎಪಿಕ್ ಆಫ್ ಇಂಡಿಯಾ', ಪು. ೩೮೯.

'ಅಂದಾಜು ಮಾಡಿ ಹೇಳುವುದಾದರೆ, ಇಡಿ ಮಹಾಭಾರತ ರಚನೆಯ ಕಾಲ ಕ್ರಿ.ಶ. ೨೦೦–೪೦೦ ಅನ್ನಬಹುದು. ಈ ಕಾಲಮಾನ ನಂತರದ ಆವೃತ್ತಿಗಳಿಗಾಗಲೀ, ಒಬ್ಬರಾದ ಮೇಲೊಬ್ಬರು ತೆಗೆದ ಪ್ರತಿಗಳಲ್ಲಿ ಕಂಡ ಬದಲಾವಣೆಗಳಿಗಾಗಲೀ ಅನ್ವಯಿಸುವುದಿಲ್ಲ."

ಆದರೆ ಇನ್ನೂ ಈಚಿನ ಕಾಲಾವಧಿಯನ್ನು ಸ್ಪಷ್ಟವಾಗಿ ಸೂಚಿಸುವ ಇತರೆ ಸನ್ನಿವೇಶಗಳೂ ಇವೆ.

'ಮಹಾಭಾರತ'ದಲ್ಲಿ ಹೂಣರ ಉಲ್ಲೇಖವಿದೆ. ಕ್ರಿ.ಶ. ೪೫೫ರ ಸುಮಾರಿನಲ್ಲಿ ಹೂಣರ ವಿರುದ್ಧ ಯುದ್ಧ ಸಾರಿ ಸೋಲಿಸಿದವನು ಸ್ಕಂದಗುಪ್ತ. ಇದಾದ ಮೇಲೂ ಹೂಣರ ಧಾಳಿ ಕ್ರಿ.ಶ. ೫೨೮ರವರೆಗೂ ನಡೆಯಿತು. ಈ ಕಾಲದಲ್ಲಿ ಅಥವಾ ಇದರ ಅನಂತರ 'ಮಹಾಭಾರತ'ದ ರಚನೆಯಾಯಿತೆಂಬುದು ಸ್ವಯಂವೇದ್ಯವಾಗಿದೆ.

ಇದಕ್ಕೂ ಈಚಿನ ಕಾಲಮಾನ ಸೂಚಿಸುವ ಇನ್ನೂ ಕೆಲವು ಸುಳಿವುಗಳಿವೆ. 'ಮಹಾಭಾರತ'ವು ಮ್ಲೇಚ್ಛರು ಅಥವಾ ಮುಸ್ಲಿಮರನ್ನು ಉಲ್ಲೇಖಿಸುತ್ತದೆ. ವನಪರ್ವದ ೧೯೦ನೇ ಅಧ್ಯಾಯದ ೨೯ನೇ ಶ್ಲೋಕದಲ್ಲಿ ಗ್ರಂಥಕರ್ತನು "ಇಡಿ ಜಗತ್ತು ಇಸ್ಲಾಮೀಕರಣಗೊಳ್ಳುವುದು. ಎಲ್ಲ ಯಜ್ಞ, ವಿಧಿ, ಆಚರಣೆ, ಧಾರ್ಮಿಕ ಸಮಾರಂಭಗಳೂ ನಿಂತುಹೋಗುತ್ತವೆ" ಎನ್ನುತ್ತಾನೆ. ಇದು ಮುಸ್ಲಿಮರನ್ನು ಕುರಿತ ನೇರ ಪ್ರಸ್ತಾಪವಾಗಿದ್ದು ಆ ಶ್ಲೋಕ ಭವಿಷ್ಯವಾಣಿಯಂತಿದ್ದರೂ, 'ಮಹಾಭಾರತ'ವು ಪುರಾಣವಾಗಿರುವುದರಿಂದ ನಡೆದುಹೋದ ಘಟನೆಯ ಉಲ್ಲೇಖವೆಂದೇ ತಿಳಿಯಬೇಕಾಗುತ್ತದೆ. ಈ ಶ್ಲೋಕದ ಇಂಥ ವ್ಯಾಖ್ಯಾನವು ಭಾರತದ ಮೇಲೆ ಮುಸ್ಲಿಮರು ದಂಡೆತ್ತಿ ಬಂದ ಮೇಲೆಯೇ 'ಮಹಾಭಾರತ' ಬರೆಯಲಾಯಿತೆಂಬುದನ್ನು ತೋರಿಸುತ್ತದೆ.

ಇದೇ ತೀರ್ಮಾನಕ್ಕೆ ದಾರಿ ಮಾಡುವ ಇನ್ನೂ ಕೆಲವು ಉಲ್ಲೇಖಗಳಿವೆ.

ಅದೇ ಅಧ್ಯಾಯದ ೩೯ನೇ ಶ್ಲೋಕ 'ವೃಷಲರ ಪಚ್ಚಾಳಿಕೆಯಿಂದ ಭೀತಿಗ್ರಸ್ತರಾದ ಬ್ರಾಹ್ಮಣರು, ರಕ್ಷಕನಿಲ್ಲದೇ ಜಗತ್ತಿನಾದ್ಯಂತ ನರಳುತ್ತ ಅಳುತ್ತ ಅಲೆದಾಡುತ್ತಾರೆ" ಎನ್ನುತ್ತದೆ.

ಈ ಶ್ಲೋಕದಲ್ಲೂ ಪ್ರಸ್ತಾಪಗೊಂಡ ವೃಷಲರು ಬೌದ್ಧರಾಗಿರಲು ಸಾಧ್ಯವಿಲ್ಲ. ಯಾಕೆಂದರೆ ಬ್ರಾಹ್ಮಣರ ಮೇಲೆ ದಬ್ಬಾಳಿಕೆ ನಡೆಯಿತೆನ್ನಲು ಅಣು ಮಾತ್ರದಷ್ಟೂ ರುಜುವಾತಿಲ್ಲ. ಇದಕ್ಕೆ ಪ್ರತಿಯಾಗಿ ಬೌದ್ಧರ ರಾಜ್ಯಭಾರದಲ್ಲಿ ಬೌದ್ಧ ಭಿಕ್ಷುಗಳಷ್ಟೇ ಔದಾರ್ಯದಿಂದ ಬ್ರಾಹ್ಮಣರನ್ನೂ ನಡೆಸಿಕೊಳ್ಳಲಾಗುತ್ತಿತ್ತೆನ್ನಲು ಸಾಕ್ಷ್ಯಾಧಾರಗಳಿವೆ. ಆದ್ದರಿಂದ ವೃಷಲ ಅಥವಾ ಕುಸಂಸ್ಕೃತ ಎನ್ನುವ ಉಲ್ಲೇಖ ಮುಸ್ಲಿಮ್ ಧಾಳಿಕೋರರನ್ನು ಕುರಿತದ್ದೇ ಇರಬೇಕು.

ವನಪರ್ವದ ಅದೇ ಅಧ್ಯಾಯದಲ್ಲಿ ಇನ್ನೂ ಕೆಲವು ಶ್ಲೋಕಗಳಿವೆ. ೬೫, ೬೬ ಮತ್ತು ೬೭ನೇ ಶ್ಲೋಕಗಳಲ್ಲಿ "ಸಮಾಜವು ಅಸ್ತವ್ಯಸ್ತಗೊಳ್ಳುತ್ತದೆ. ಜನರು 'ಯೇದುಕಾ'ಗಳನ್ನು ಪೂಜಿಸುತ್ತಾರೆ. ಅವರು ದೇವರನ್ನು ಬಹಿಷ್ಕರಿಸುತ್ತಾರೆ. ಶೂದ್ರರು ದ್ವಿಜರ ಸೇವೆ ಮಾಡುವುದಿಲ್ಲ. ಇಡಿ ಜಗತ್ತು 'ಯೇದುಕಾ'ಗಳಿಂದಲೇ ತುಂಬಿ ಹೋಗುತ್ತದೆ. ಯುಗವು ಅಂತ್ಯಗೊಳ್ಳುತ್ತದೆ." ಎಂಬ ಮಾತುಗಳಿವೆ.

'ಯೇದುಕಾ'ಗಳು ಎಂದರೇನು? ಕೆಲವರು ಇವು ಬೌದ್ಧ 'ಚೈತ್ಯ'ಗಳೆಂದು ತಿಳಿದಿದ್ದಾರೆ. ಆದರೆ ಕೋಸಾಂಬಿಯವರ[೧] ಪ್ರಕಾರ ಇದು ತಪ್ಪು. ಬೌದ್ಧ ಸಾಹಿತ್ಯದಲ್ಲಾಗಲೀ ವೈದಿಕ ಸಾಹಿತ್ಯದಲ್ಲಾಗಲೀ ಯೇದುಕಾ ಎಂಬ ಪದ ಚೈತ್ಯ ಎಂಬರ್ಥದಲ್ಲಿ ಎಲ್ಲೂ ಬಳಕೆಯಾಗಿಲ್ಲ. ಇದಕ್ಕೆ ಪ್ರತಿಯಾಗಿ ಮಹೇಶ್ವರ ಭಟ್ಟನ ವ್ಯಾಖ್ಯಾನದ 'ಅಮರಕೋಶ'ದ ಪ್ರಕಾರ ಯೇದುಕಾ ಅಂದರೆ ಮರದ ರಚನೆಯೊಂದರ ಆಧಾರದ

೧. 'ಹಿಂದಿ ಸಂಸ್ಕೃತಿ ಆಣಿ ಅಹಿಂಸಾ'. ಪು. ೧೫೬

ಮೇಲೆ ನಿಂತ ಗೋಡೆ ಎಂದರ್ಥ. ಹಾಗಾದರೆ ಯೇದುಕಾ ಎಂದರೆ ಮುಸ್ಲಿಮರು ಪ್ರಾರ್ಥನೆ ಹೇಳುವ 'ಈದ್ಗಾ' ಆಗಿರಬೇಕು ಎಂದು ಕೋಸಾಂಬಿ ತರ್ಕಿಸುತ್ತಾರೆ. ಇದೇ ನಿಜವಾದ ಅರ್ಥವಾದರೆ, ಮಹಮದ್ ಗೋರಿಯ ಧಾಳಿಯ ಅನಂತರವೇ 'ಮಹಾಭಾರತ'ದ ರಚನೆಯಾಯಿತೆಂಬುದು ಸ್ಪಷ್ಟವಾಗುತ್ತದೆ. ಮೊದಲ ಮುಸ್ಲಿಂ ಧಾಳಿ ನಡೆದದ್ದು ಕ್ರಿ.ಶ. ೭೧೨ರಲ್ಲಿ ಇಬ್ನೆ ಕಾಸಿಂ ನೇತೃತ್ವದಲ್ಲಿ. ಆತನು ಉತ್ತರ ಭಾರತದ ಕೆಲವು ಪಟ್ಟಣಗಳನ್ನು ವಶಪಡಿಸಿಕೊಂಡನೇ ಹೊರತು ಹೆಚ್ಚು ವಿಧ್ವಂಸಕ ಕೃತ್ಯಗಳನ್ನೇನೂ ಮಾಡಲಿಲ್ಲ. ಅವನ ಅನಂತರ ಬಂದ ಘಜನಿ ಮಹಮದ್ ದೇವಾಲಯ ವಿಹಾರಗಳನ್ನೆಲ್ಲ ನಾಶಮಾಡಿ ಎರಡೂ ಧರ್ಮಗಳ ಅರ್ಚಕರ ಕಗ್ಗೊಲೆಗೈದ. ಆದರೆ ಆತ ಸ್ವತಃ ಈದ್ಗಾ ಅಥವಾ ಮಸೀದಿಗಳ ನಿರ್ಮಾಣದಲ್ಲಿ ತೊಡಗಲಿಲ್ಲ. ಆ ಕೆಲಸ ಮಾಡಿದವನು ಮಹಮದ್ ಗೋರಿ. ಇದರಿಂದ ಕ್ರಿಸ್ತಶಕ ೧೨೦೦ರವರೆಗೂ 'ಮಹಾಭಾರತ'ದ ರಚನೆ ಪೂರ್ಣಗೊಂಡಿರಲಿಲ್ಲ ಎಂದು ಹೇಳಬಹುದು.

'ಮಹಾಭಾರತ'ದ ಹಾಗೆಯೇ 'ರಾಮಾಯಣ'ವೂ ಮೂರು ವಿಭಿನ್ನ ಆವೃತ್ತಿಗಳನ್ನು ಹಾದುಬಂದಂತೆ ಕಾಣುತ್ತದೆ. 'ಮಹಾಭಾರತ'ದಲ್ಲಿ 'ರಾಮಾಯಣ'ದ ಬಗ್ಗೆ ಎರಡು ಬಗೆಯ ಉಲ್ಲೇಖಗಳಿವೆ. ಒಂದು ಕಡೆ ಗ್ರಂಥಕರ್ತನ ಉಲ್ಲೇಖವೇ ಇಲ್ಲದೆ 'ರಾಮಾಯಣ'ದ ಪ್ರಸ್ತಾಪವಿದೆ. ಇನ್ನೊಂದು ಕಡೆ ವಾಲ್ಮೀಕಿ 'ರಾಮಾಯಣ'ದ ಉಲ್ಲೇಖವಿದೆ. ಆದರೆ ಈಗಿರುವ 'ರಾಮಾಯಣ'ವಲ್ಲ.[೧] ಸಿ.ವಿ.ವೈದ್ಯ ಅವರ ಅಭಿಪ್ರಾಯದಲ್ಲಿ:

> "ಈಗಿರುವ 'ರಾಮಾಯಣ'ವನ್ನು ಸರ್ವಮಾನ್ಯ ಟೀಕಾಕಾರನಾದ ಕಟಕನೇ ಒಪ್ಪಿ ಅನುಮೋದಿಸಿದ್ದರೂ, ಇದು ವಾಲ್ಮೀಕಿ ಬರೆದ ಮೂಲ 'ರಾಮಾಯಣ'ವಲ್ಲ ಎಂಬುದರಲ್ಲಿ ಸಂದೇಹಕ್ಕೆ ಆಸ್ಪದವೇ ಇಲ್ಲ. ಸಂಪ್ರದಾಯವಾದಿಗೂ ಆ ಬಗ್ಗೆ ಅನುಮಾನವಿರಲಾರದು. ಇದರ ಬಂಗಾಳ ಪಾಠವನ್ನಾಗಲೀ, ಮುಂಬಯಿ ಪಾಠವನ್ನಾಗಲೀ 'ರಾಮಾಯಣ'ವನ್ನು ಸುಮ್ಮನೆ ತಿರುವಿ ಹಾಕುವವನೂ ಅದರಲ್ಲಿ ತುಂಬಿರುವ ವಿಸಂಗತಿಗಳು, ತಪ್ಪಿದ ಕೊಂಡಿಗಳು, ಹಳೆ ಹೊಸ ವಿಚಾರಗಳ ಸಮಾಂತರ ಮಂಡನೆ ಒಡೆದು ಕಾಣುತ್ತವೆ ಮತ್ತು ವಾಲ್ಮೀಕಿಯ 'ರಾಮಾಯಣ'ವನ್ನು ಅನಂತರದ ದಿನಗಳಲ್ಲಿ ಪುನರ್‌ರಚಿಸಲಾಗಿತೆಂಬ ತೀರ್ಮಾನಕ್ಕೆ ಬರಲೇಬೇಕಾಗುತ್ತದೆ."
>
> " 'ಮಹಾಭಾರತ'ದಂತೆಯೇ, 'ರಾಮಾಯಣ'ದ ವಸ್ತುವಿಷಯವೂ ಬೆಳವಣಿಗೆ ಹೊಂದಿದೆ. ಮೂಲದಲ್ಲಿ ಅದು ರಾಮನ ಪತ್ನಿ ಸೀತೆಯನ್ನು ರಾವಣ ಅಪಹರಿಸಿದ್ದರಿಂದ ಉಂಟಾದ ರಾಮ-ರಾವಣರ ಯುದ್ಧದ ಕತೆ ಮಾತ್ರ. ಎರಡನೇ ಆವೃತ್ತಿಯಲ್ಲಿ ಇದೇ ಕತೆಗೆ ನೀತಿ ಬೋಧೆಯೂ ಸೇರಿಕೊಂಡಿತು. ಶುದ್ಧ ಚಾರಿತ್ರಿಕ ಕೃತಿಯಾಗಿದ್ದ ರಾಮಾಯಣವು ಈಗ ಸಾಮಾಜಿಕ, ನೈತಿಕ ಮತ್ತು ಧಾರ್ಮಿಕ ಕರ್ತವ್ಯಗಳನ್ನು ಬೋಧಿಸುವ ಉದ್ದೇಶದ ಉಪದೇಶಾತ್ಮಕ ಗ್ರಂಥವಾಯಿತು. ಇದೇ ಮತ್ತೆ ಮೂರನೆಯ ಆವೃತ್ತಿಯನ್ನು ಕಂಡಾಗ 'ಮಹಾಭಾರತ'ದಂತೆಯೇ ದಂತಕತೆಗಳು, ಜ್ಞಾನ, ಕಲಿಕೆ, ತತ್ವಶಾಸ್ತ್ರ, ಮತ್ತಿತರ ಕಲೆ-ವಿಜ್ಞಾನಗಳ ಭಂಡಾರವಾಗಿ ಮಾರ್ಪಟ್ಟಿತು."
>
> "ಇನ್ನು 'ರಾಮಾಯಣ' ರಚನೆಯ ಅವಧಿ ಕುರಿತಂತೆ ರಾಮನ ಕತೆ ಪಾಂಡುವಿನ ಕತೆಗಿಂತಲೂ ಹಳೆಯದೆಂದು ಸಿದ್ಧವಾಗಿದೆ. ಆದರೂ, ರಾಮಾಯಣದ ರಚನೆಯೂ

೧. ಹಾಪ್‌ಕಿನ್ಸ್ : 'ದಿ ಗ್ರೇಟ್ ಎಪಿಕ್ ಆಫ್ ಇಂಡಿಯಾ', ಪು. ೬೨

೨. 'ದಿ ರಿಡ್ಲ್ ಆಫ್ ದಿ ರಾಮಾಯಣ' ಎರಡನೇ ಅಧ್ಯಾಯ, ಪು. ೬

'ಮಹಾಭಾರತ'ದ ರಚನೆಯೊಡನೆ ಸಮಸಮನಾಗಿ ನಡೆದುಬಂದಿದೆ. 'ರಾಮಾಯಣ'ದ ಕೆಲವು ಭಾಗಗಳು 'ಮಹಾಭಾರತ'ಕ್ಕಿಂತ ಪ್ರಾಚೀನವಾಗಿರಬಹುದು. ಆದರೆ 'ರಾಮಾಯಣ'ದ ಬಹುಪಾಲನ್ನು 'ಮಹಾಭಾರತ'ದ ಬಹುಪಾಲು ರಚನೆಯಾದ ಮೇಲೆ ಬರೆಯಲಾಯಿತೆಂಬುದರಲ್ಲಿ ಅನುಮಾನವಿಲ್ಲ.[೧]"

(ಅಪೂರ್ಣ)

## II

ನಾನು ಬಳಸಬಯಸಿರುವ ಸಾಹಿತ್ಯವೆಂದರೆ (೧) 'ಭಗವದ್ಗೀತೆ', (೨) 'ವೇದಾಂತ ಸೂತ್ರ'ಗಳು, (೩) 'ಮಹಾಭಾರತ', (೪) 'ರಾಮಾಯಣ' ಮತ್ತು (೫) ಪುರಾಣಗಳು. ಈ ಸಾಹಿತ್ಯವನ್ನು ವಿಶ್ಲೇಷಿಸುವಾಗ, ಬೌದ್ಧಧರ್ಮದ ಅವನತಿಗೆ ಕಾರಣಗಳನ್ನು ಸೂಚಿಸಬಲ್ಲ ಸತ್ಯಾಂಶಗಳನ್ನು ಮಾತ್ರ ಹೊರಗೆಳೆಯ ಬಯಸುತ್ತೇನೆ.

ಈ ಸಾಹಿತ್ಯದ ವಸ್ತುವಿಷಯದ ವಿವೇಚನೆಗೆ ಹೊರಡುವ ಮುನ್ನ ಈ ಸಾಹಿತ್ಯವು ಅಸ್ತಿತ್ವಕ್ಕೆ ಬಂದ ಕಾಲಮಾನದ ಪ್ರಶ್ನೆಯನ್ನು ಬಗೆಹರಿಸಬೇಕು. ಈ ಸಾಹಿತ್ಯ ಪುಷ್ಯಮಿತ್ರನ ಕ್ರಾಂತಿಯ ಅನಂತರ ಸೃಷ್ಟಿಯಾಯಿತೆಂಬುದನ್ನು ಎಲ್ಲರೂ ಒಪ್ಪಲಾರರು. ಇದಕ್ಕೆ ಪ್ರತಿಯಾಗಿ ಬಹುತೇಕ ಹಿಂದೂಗಳು, ಧರ್ಮನಿಷ್ಠರಿರಲಿ ಇಲ್ಲದಿರಲಿ ಅಥವಾ ಕಲಿತವರೋ ಅಲ್ಲವೋ, ಅಂತೂ ತಮ್ಮ ಸಾಹಿತ್ಯ ಅತ್ಯಂತ ಪುರಾತನವಾದುದೆಂಬ ಅಚಲ ನಂಬಿಕೆ ಹೊಂದಿದ್ದಾರೆ. ಹಾಗೆ ನೋಡಿದರೆ ತಮ್ಮ ಪವಿತ್ರ ಸಾಹಿತ್ಯದ ಪ್ರಾಚೀನತೆಯನ್ನು ನಂಬುವುದು ಪ್ರತಿಯೊಬ್ಬ ಹಿಂದೂವಿನ ಪಾಲಿಗೆ ಧರ್ಮಶ್ರದ್ಧೆಯ ವಿಷಯವೇ ಆಗಿದೆ.

## ೧. ಭಗವದ್ಗೀತೆ

'ಭಗವದ್ಗೀತೆ'ಯಿಂದ ಆರಂಭಿಸೋಣ. ಇದರ ರಚನೆಯ ಕಾಲವೂ ವಿವಾದಾತ್ಮಕ ವಿಷಯವಾಗಿದೆ. ತೆಲಾಂಗ್[೨] ಅವರು "ಗೀತೆಯು ಕ್ರಿಸ್ತಪೂರ್ವ ಎರಡನೇ ಶತಮಾನಕ್ಕೆ ಮುಂಚೆಯೇ ರಚನೆಯಾಯಿತು" ಎಂಬ ಅಭಿಪ್ರಾಯ ಹೊಂದಿದ್ದರು. ದಿವಂಗತ ತಿಲಕರು[೩] ಶಕ 'ಯುಗ'ಕ್ಕೆ ಐನೂರು ವರ್ಷಗಳಿಗೂ ಹಿಂದೆಯೇ 'ಗೀತೆ' ರಚನೆಯಾಯಿತು. ಎಂದು ತಿಳಿದಿದ್ದರು. ಅಂದರೆ ಈಗಿನ 'ಗೀತೆ'....ಕಾಲಕ್ಕೇ ರಚನೆಯಾಯಿತು ಎಂದರ್ಥ.

ಪ್ರೊ. ಗಾರ್ಬೆಯವರ[೪] ಪ್ರಕಾರ 'ಭಗವದ್ಗೀತೆ'ಯ ರಚನೆಯ ಕಾಲ ಕ್ರಿಸ್ತಶಕ ೨೦೦ರಿಂದ ೪೦೦ರ ನಡುವಿನದು. ಕೋಸಾಂಬಿಯವರದು ಇನ್ನೊಂದು ದೃಷ್ಟಿಕೋನವಿದ್ದು ಅದಕ್ಕೆ ನಿಸ್ಸಂದಿಗ್ಧ ಸಾಕ್ಷ್ಯಾಧಾರವಿದೆ.

---

೧. ಎರಡೂ ಮಹಾಕಾವ್ಯಗಳಲ್ಲಿನ ಸಮಾನ ಪದಗುಚ್ಛಗಳ ಬಗ್ಗೆ ಹಾಪ್‌ಕಿನ್ಸ್‌ನ 'ದಿ ಗ್ರೇಟ್ ಎಪಿಕ್ ಆಫ್ ಇಂಡಿಯಾ'ದ ಅನುಬಂಧ 'ಎ' ಅನ್ನು ನೋಡಿ.

೨. 'ಸೇಕ್ರೆಡ್ ಬುಕ್ಸ್ ಆಫ್ ದಿ ಈಸ್ಟ್' ಮಾಲಿಕೆಯಲ್ಲಿನ 'ಗೀತೆ'ಯ ಭಾಷಾಂತರದ ಮುನ್ನುಡಿ ನೋಡಿ.

೩. 'ಗೀತಾ ರಹಸ್ಯ' (ಇಂಗ್ಲಿಷ್), ಸಂಪುಟ ೨, ಪು. ೮೦೦.

೪. 'ಭಗವದ್ಗೀತೆ' ಮುನ್ನುಡಿ ಅನು, ಪ್ರೊ. ಉತ್ಗೀಕರ್.

'ಗೀತೆ'ಯು ಗುಪ್ತರ ದೊರೆ ಬಾಲಾದಿತ್ಯನ ಕಾಲದಲ್ಲೇ ರಚನೆಯಾಯಿತೆಂದು ಪ್ರೊ. ಕೋಸಾಂಬಿ ವಾದಿಸುತ್ತಾರೆ. ಬಾಲಾದಿತ್ಯನು ಆಂಧ್ರ ವಂಶವನ್ನು... ಇಸವಿಯಲ್ಲಿ ನಿರ್ಮೂಲ ಮಾಡಿದ ಗುಪ್ತ ವಂಶಕ್ಕೆ ಸೇರಿದವರು. ಆತ ಪಟ್ಟಕ್ಕೆ ಬಂದಿದ್ದು ಕ್ರಿ.ಶ. ೪೬೭ರಲ್ಲಿ. 'ಗೀತೆ' ಇಷ್ಟು ಈಚಿನದೆನ್ನಲು ಕೋಸಾಂಬಿಯವರು ಕೊಡುವ 'ಕಾರಣಗಳು' ಎರಡು. ಕ್ರಿಸ್ತಶಕ ೭೮೮ರಲ್ಲಿ ಹುಟ್ಟಿ ೮೨೦ರಲ್ಲಿ ಮೃತಪಟ್ಟ ಶಂಕರಾಚಾರ್ಯರು 'ಭಗವದ್ಗೀತೆ'ಗೆ ಭಾಷ್ಯ ಬರೆಯುವ ಮುನ್ನ ಅದರ ಬಗ್ಗೆ ಯಾರಿಗೂ ಗೊತ್ತಿರಲಿಲ್ಲ. ಶಂಕರಾಚಾರ್ಯರಿಗೆ ಕೇವಲ ೫೦ ವರ್ಷಗಳ ಮುಂಚಿನ ಶಾಂತರಕ್ಷಿತನ 'ತತ್ವ ಸಂಗ್ರಹ'ದಲ್ಲಂತೂ ಗೀತೆಯ ಪ್ರಸ್ತಾಪವಿಲ್ಲ. ಇನ್ನು ಎರಡನೇ ಕಾರಣವೆಂದರೆ ವಸುಬಂಧ ಎಂಬಾತ 'ವಿಜ್ಞಾನವಾದ' ಎಂಬ ವಿಚಾರ ಪಂಥವನ್ನು ಹುಟ್ಟಿ ಹಾಕಿದ. 'ಬ್ರಹ್ಮಸೂತ್ರ ಭಾಷ್ಯ'ದಲ್ಲಿ ಈ ವಿಜ್ಞಾನವಾದದ ವಿಮರ್ಶೆಯಿದೆ. 'ಗೀತೆ'ಯಲ್ಲಿ[೧] 'ಬ್ರಹ್ಮಸೂತ್ರ' ಭಾಷ್ಯದ ಪ್ರಸ್ತಾಪವಿದೆ. ಈ ವಸುಬಂಧು ಗುಪ್ತರ ದೊರೆ ಬಾಲಾದಿತ್ಯನ ಕುಲಗುರುವಾಗಿದ್ದ. ಆದ್ದರಿಂದ 'ಭಗವದ್ಗೀತೆ'ಯು ಬಾಲಾದಿತ್ಯನ ಕಾಲದಲ್ಲಿ ಅಂದರೆ ಕ್ರಿ.ಶ. ೪೬೭ರ ಸುಮಾರಿಗೆ ರಚಿತವಾಗಿರಬೇಕು ಅಥವಾ ಕೊನೆ ಪಕ್ಷ ಮೂಲ 'ಗೀತೆ'ಗೆ ಆ ಕಾಲದಲ್ಲಿ ಕೆಲವು ಭಾಗಗಳನ್ನು ಸೇರಿಸಿರಬೇಕು.

'ಭಗವದ್ಗೀತೆ' ರಚನೆಯಾಗಿದ್ದು ಯಾವಾಗ ಎಂಬ ವಿಷಯದಲ್ಲಿ ಅಭಿಪ್ರಾಯ ಭೇದವಿದ್ದರೂ, 'ಗೀತೆ' ಹಲವು ಆವೃತ್ತಿಗಳನ್ನು ಕಂಡಿದೆ ಎಂಬುವಲ್ಲಿ ಮಾತ್ರ ಭಿನ್ನಾಭಿಪ್ರಾಯವಿಲ್ಲ. ಗೀತೆಯು ಮೂಲ ಸ್ವರೂಪದಲ್ಲೇ ನಮ್ಮವರೆಗೆ ಬಂದಿಲ್ಲವೆಂದೂ, ಕಾಲಕಾಲಕ್ಕೆ ಬೇರೆ ಬೇರೆ ಸಂಪಾದಕರ ಕೈಯಲ್ಲಿ ರೂಪಾಂತರ ಹೊಂದುತ್ತ ಬಂದಿದೆಯೆಂದೂ ಎಲ್ಲರೂ ಒಪ್ಪುತ್ತಾರೆ. ಜೊತೆಗೆ 'ಗೀತೆ'ಯಲ್ಲಿ ಬದಲಾವಣೆಗಳನ್ನು ಮಾಡಿದ ಸಂಪಾದಕರೆಲ್ಲರೂ ಸಮಾನ ಯೋಗ್ಯತೆಯವರಲ್ಲವೆಂಬುದೂ ಅಷ್ಟೇ ಸ್ಪಷ್ಟವಾಗಿದೆ. ಪ್ರೊ. ಗಾರ್ಬೆಯವರು[೨] ಎತ್ತಿ ತೋರಿಸಿದಂತೆ "ಗೀತೆಯು, ಪ್ರತಿಭಾ ವಿಶೇಷದ ಸರ್ವಗ್ರಾಹಿ ದರ್ಶನ ಸೃಷ್ಟಿಸಿದ ಕಲಾಕೃತಿಯಂತೂ ಖಂಡಿತ ಅಲ್ಲ. ಅಲ್ಲಲ್ಲಿ ಸ್ಫೂರ್ತಿಯ ಚಳಕ ಕಾಣುವುದು ನಿಜ. ಹಾಗೆಯೇ ಅದಾಗಲೇ ಹಲವು ಬಾರಿ ವಿವರಿಸಲ್ಪಟ್ಟ ಕಲ್ಪನೆಗಳೂ ಮತ್ತೆ ಮತ್ತೆ ಪೊಳ್ಳು ಶಬ್ದಾಡಂಬರಗಳೊಂದಿಗೆ ಪುನರುಕ್ತಗೊಂಡ ಪ್ರಸಂಗಗಳೂ ಇವೆ. ಮತ್ತೆ ಕೆಲವು ಬಾರಿ ಸಾಹಿತ್ಯ ಅಭಿವ್ಯಕ್ತಿ ತೀರಾ ದೋಷಯುಕ್ತವಾಗಿದೆ. ಉಪನಿಷತ್ತುಗಳಿಂದ ಕೆಲವು ಶ್ಲೋಕಗಳನ್ನು ನೇರವಾಗಿ ಎತ್ತಿಕೊಂಡಿರುವುದೂ ಇದೆ. ಇದಂತೂ ಸ್ಫೂರ್ತಿ ತುಂಬಿ ಹೊರಟ ಕವಿ ಮಾಡುವ ಕೆಲಸವಂತೂ ಅಲ್ಲವೇ ಅಲ್ಲ. ಸತ್ವ, ರಾಜಸ ಮತ್ತು ತಾಮಸ ಗುಣಗಳ ವೈಖರಿಯನ್ನು ನೈಜ ಭಾರತೀಯ ಶುಷ್ಕ ಪಾಂಡಿತ್ಯದೊಂದಿಗೆ ಸೂತ್ರೀಕರಿಸಲಾಗಿದೆ. ಇದಲ್ಲದೆ ಇನ್ನೂ ಬೇಕಾದಷ್ಟು ದೃಷ್ಟಾಂತಗಳು ಕೊಟ್ಟು 'ಭಗವದ್ಗೀತೆ'ಯು ಸೃಷ್ಟಿಶೀಲ ಕಾವ್ಯಾತ್ಮಕ ಪ್ರೇರಣೆಯ ಫಲಶ್ರುತಿಯಲ್ಲ ಎಂಬುದನ್ನು ಸಾಬೀತು ಮಾಡಬಹುದು....."

'ಭಗವದ್ಗೀತೆ'ಯಲ್ಲಿ ಎಷ್ಟರಮಟ್ಟಿನ ಉದಾತ್ತತೆಯಿದೆಯೋ ಅಷ್ಟೇ ಕ್ಷುಲ್ಲಕತೆಯೂ ಇದೆ. ಎಷ್ಟು ತರ್ಕವಿದೆಯೋ ಅಷ್ಟೇ ಅದರ ಅಭಾವವೂ ಇದೆಯೆಂದು ಹಾಪ್‌ಕಿನ್ಸ್ ವರ್ಣಿಸುತ್ತಾರೆ. ಅಲ್ಲಲ್ಲಿ ಕಂಡುಬರುವ ಸತ್ವ ಮತ್ತು ಆಧ್ಯಾತ್ಮಿಕ ಪರವಶತೆಗಳಿದ್ದಾಗ್ಯೂ 'ಗೀತೆ'ಯು ಒಂದು ಕಾವ್ಯಸೃಷ್ಟಿಯಾಗಿ ತೃಪ್ತಿಕರವಾಗಿಲ್ಲ. ಅದೇ ವಿಷಯ ಮತ್ತೆ ಮತ್ತೆ ಹೇಳುವುದು, ಪರಿಭಾಷೆ ಮತ್ತು ಅರ್ಥದಲ್ಲಿ ಪುನರುಕ್ತಿಗಳಷ್ಟೇ ವಿರೋಧಾಭಾಸವಾಗಿರುವುದು, ಅದಕ್ಕೇ 'ಗೀತೆ'ಯನ್ನು ರೋಮ ನಿಮಿರಿ ನಿಲ್ಲುವಂತೆ ಮಾಡುವ ಅದ್ಭುತ 'ಗೀತೆ' ಎಂದು ವರ್ಣಿಸಿದಾಗ ಆಶ್ಚರ್ಯವೇನು ಆಗುವುದಿಲ್ಲ.

---

೧. 'ಗೀತಾ', ಪು. ૩

೨. ಅಧ್ಯಾಯ ೧૩, ಶ್ಲೋಕ ೪.

ಇದು ಪರಕೀಯರ ದೃಷ್ಟಿ ಎಂದೇನೂ ತಳ್ಳಿ ಹಾಕಬೇಕಾದಿಲ್ಲ. ಪ್ರೊ. ರಾಜವಾಡೆ[೧]ಯವರೂ 'ಭಗವದ್ಗೀತೆ' ರಚಿಸಿದವರಿಗೆ ವ್ಯಾಕರಣದ ನಿಯಮಗಳೇ ಗೊತ್ತಿಲ್ಲ ಅನ್ನುವ ಮೂಲಕ ಇದೇ ದೃಷ್ಟಿಯನ್ನು ಬೆಂಬಲಿಸುತ್ತಾರೆ.

ಬೇರೆ ಬೇರೆ ಸಂಪಾದಕರ ಕೈಯಲ್ಲಿ 'ಗೀತೆ' ಬೇರೆ ಬೇರೆ ಆವೃತ್ತಿಗಳನ್ನು ಕಂಡಿದೆ ಎಂಬುದನ್ನು ಎಲ್ಲರೂ ಒಪ್ಪಿದರೂ, ಯಾವ ಭಾಗಗಳು ಮೂಲವಾದವು, ಇನ್ನಾವ ಭಾಗಗಳನ್ನು ನಂತರ ಸೇರಿಸಲಾಗಿದೆ ಎಂಬುದರಲ್ಲಿ ಒಮ್ಮತವಿಲ್ಲ. ದಿವಂಗತ ರಾಜಾರಾಮ ಶಾಸ್ತ್ರಿ ಭಾಗವತ ಅವರ ಅಭಿಪ್ರಾಯದಲ್ಲಿ ಮೂಲ 'ಗೀತೆ'ಯಲ್ಲಿದ್ದದ್ದು ೬೦ ಶ್ಲೋಕಗಳು ಮಾತ್ರ. ಹಂಬೋಲ್ಟ್ ಅವರು ಗೀತೆಯ ಮೊದಲ ಹನ್ನೊಂದು ಅಧ್ಯಾಯಗಳು ಮಾತ್ರ ಮೂಲ ಕೃತಿಯೆಂದೂ, ೧೨ರಿಂದ ೧೮ರವರೆಗಿನ ಅಧ್ಯಾಯಗಳನ್ನು ಸೇರಿಸಲಾಯಿತೆಂದು ಬರೆದಿದ್ದರು. ಮೊದಲ ಹದಿನಾಲ್ಕು ಅಧ್ಯಾಯಗಳು ಮಾತ್ರ ಆ ಕಾವ್ಯದ ಮೂಲ ಭಾಗವೆಂಬುದು ಹಾಪ್‌ಕಿನ್ಸ್ ದೃಷ್ಟಿಯಾಗಿತ್ತು. ಪ್ರೊ. ರಾಜವಾಡೆಯವರು, ಹತ್ತು ಹಾಗೂ ಹನ್ನೊಂದನೇ ಅಧ್ಯಾಯಗಳು ಕೃತ್ರಿಮ ಎಂದು ಭಾವಿಸಿದ್ದಾರೆ. ಪ್ರೊ. ಗಾರ್ಬೆಯವರು, ಗೀತೆಯಲ್ಲಿ ಮೂಲದಲ್ಲಿಲ್ಲದ ೧೪೬ ಶ್ಲೋಕಗಳನ್ನು ಅಂದರೆ ಐದನೇ ಒಂದು ಭಾಗಕ್ಕಿಂತ ಹೆಚ್ಚಿನಷ್ಟನ್ನು ಹೊಸದಾಗಿ ಸೇರಿಸಲಾಗಿದೆ ಅನ್ನುತ್ತಾರೆ.

'ಗೀತೆ'ಯ ಗ್ರಂಥಕರ್ತ ಯಾರೆಂಬ ಬಗ್ಗೆಯೂ ಉಲ್ಲೇಖವಿಲ್ಲ. ಯುದ್ಧ ಭೂಮಿಯಲ್ಲಿ ಕೃಷ್ಣ ಅರ್ಜುನರ ನಡುವೆ ನಡೆದ ಸಂವಾದ ಸಂದರ್ಭದಲ್ಲಿ ಕೃಷ್ಣನು ಅರ್ಜುನನಿಗೆ ತನ್ನ ತತ್ವವನ್ನು ಪ್ರತಿಪಾದಿಸಿ ಹೇಳುವುದೇ 'ಗೀತೆ'. ಈ ಸಂಭಾಷಣೆಯನ್ನು ಸಂಜಯನು ಕೌರವರ ತಂದೆಯಾದ ಧೃತರಾಷ್ಟ್ರನಿಗೆ ನಿರೂಪಿಸುತ್ತಾನೆ. 'ಗೀತೆ'ಯ ಹಿನ್ನೆಲೆಯಾದ ಘಟನೆ ಮಹಾಭಾರತದ್ದೇ ಆದ್ದರಿಂದ 'ಗೀತೆ'ಯೂ ಮಹಾಭಾರತದಲ್ಲೇ ಇರಬೇಕಾಗಿತ್ತು. ಆದರೆ ಅಲ್ಲಿಲ್ಲ. ಇದು ಪ್ರತ್ಯೇಕವಾದ ಸ್ವತಂತ್ರ ಕೃತಿಯಾಗಿದೆ. ಅಷ್ಟಾದರೂ ಬರೆದವರಾರೆಂಬ ಹೆಸರಿಲ್ಲ. ಅರ್ಜುನ ಮತ್ತು ಕೃಷ್ಣರ ಸಂವಾದವನ್ನು ಧೃತರಾಷ್ಟ್ರನಿಗೆ ವರದಿ ಮಾಡಲು ವ್ಯಾಸ ಸಂಜಯನಿಗೆ ಹೇಳುತ್ತಾನೆ ಎಂಬುದಷ್ಟೇ ನಮಗೆ ಗೊತ್ತಿರುವುದು. ಆದ್ದರಿಂದ ವ್ಯಾಸನೇ 'ಗೀತೆ'ಯ ಗ್ರಂಥಕರ್ತನಿರಬೇಕೆಂದು ಹೇಳಬಹುದು.

## ೨. ವೇದಾಂತ ಸೂತ್ರಗಳು

ಮೊದಲೇ ಹೇಳಿದ ಹಾಗೆ ವೈದಿಕ ಸಾಹಿತ್ಯದಲ್ಲಿ ವೇದಗಳು, ಬ್ರಾಹ್ಮಣಗಳು, ಅರಣ್ಯಕಗಳು ಮತ್ತು ಉಪನಿಷತ್ತುಗಳು ಬರುತ್ತವೆ. ಅವುಗಳ ವಸ್ತು ವಿಷಯದ ಆಧಾರದ ಮೇಲೆ ಈ ಸಾಹಿತ್ಯವನ್ನು ಎರಡು ವರ್ಗಗಳಾಗಿ ವಿಂಗಡಿಸಬಹುದು. ೧. ಧಾರ್ಮಿಕ ಆಚರಣೆಗಳು, ವಿಧಿ, ಸಮಾರಾಧನೆಗಳು ಇವಕ್ಕೆ ಸಂಬಂಧಪಟ್ಟ ಸಾಹಿತ್ಯ, ತಾಂತ್ರಿಕವಾಗಿ ಹೇಳುವುದಾದರೆ 'ಕರ್ಮಕಾಂಡ'. ೨. ದೈವಜ್ಞಾನಕ್ಕೆ ಸಂಬಂಧಿಸಿದ ಸಾಹಿತ್ಯ ಅಥವಾ 'ಜ್ಞಾನಕಾಂಡ'.

ವೇದಗಳು ಮತ್ತು ಬ್ರಾಹ್ಮಣಗಳು ಮೊದಲ ವರ್ಗದ ಸಾಹಿತ್ಯವಾದರೆ, ಅರಣ್ಯಕಗಳು ಹಾಗೂ ಉಪನಿಷತ್ತುಗಳು ಎರಡನೇ ವರ್ಗಕ್ಕೆ ಸೇರುತ್ತವೆ.

ವೈದಿಕ ಸಾಹಿತ್ಯವು ಅಗಾಧ ಪ್ರಮಾಣದಲ್ಲಿ ಬೆಳೆದಿದ್ದಲ್ಲದೆ ವನ್ಯ ರೀತಿಯಲ್ಲಿಯೂ ಬೆಳೆದಿತ್ತು. ಈ

---

೧. 'ಭಂಡಾರ್‌ಕರ್ ಸ್ಮಾರಕ ಗ್ರಂಥ'.

ಗೋಜಲನ್ನು ಬಿಡಿಸಿ ಕ್ರಮಬದ್ಧಗೊಳಿಸುವ ಒಂದು ವ್ಯವಸ್ಥೆ ಮತ್ತು ಸಮನ್ವಯದ ಅವಶ್ಯಕತೆಯಿತ್ತು. ಈ ಸಮನ್ವಯದ ಅವಶ್ಯಕತೆಯಿಂದಾಗಿಯೇ 'ಮೀಮಾಂಸೆ' ಎಂಬ ಸಂಶೋಧದ ಶಾಖೆಯೇ ಬೆಳೆದು ಬಂತು. ಈ ಸೂತ್ರೀಕರಣ ಹಾಗೂ ಸಮನ್ವಯದ ಅಗತ್ಯ ಮನಗಂಡವರೂ ಎರಡು ಪದಾರ್ಥಗಳಾಗಿ ವಿಂಗಡಣೆಯಾದರು. 'ಕರ್ಮಕಾಂಡ' ಭಾಗಗಳದ್ದೇ ಒಂದು ಪಂಥವಾದರೆ 'ಜ್ಞಾನಕಾಂಡ' ಸಾಹಿತ್ಯದ್ದೇ ಇನ್ನೊಂದು ಪಂಥ. ಇದರ ಫಲವಾಗಿ 'ಮೀಮಾಂಸೆ' ಶಾಸ್ತ್ರದಲ್ಲಿ 'ಪೂರ್ವ ಮೀಮಾಂಸೆ' ಹಾಗೂ 'ಉತ್ತರ ಮೀಮಾಂಸೆ' ಎಂಬ ಎರಡು ಶಾಖೆಗಳು ಬೆಳೆದು ಬಂದವು. ಅವುಗಳ ಹೆಸರೇ ಸೂಚಿಸುವಂತೆ 'ಪೂರ್ವ ಮೀಮಾಂಸೆ' ವೈದಿಕ ಸಾಹಿತ್ಯದ ಮೊದಲ ಭಾಗಗಳಾದ ವೇದಗಳು ಹಾಗೂ ಬ್ರಾಹ್ಮಣಗಳ ಮೀಮಾಂಸೆಯಾಯಿತು. 'ಉತ್ತರ ಮೀಮಾಂಸೆ'ಯು ವೈದಿಕ ಸಾಹಿತ್ಯದ ನಂತರದ ಭಾಗಗಳಾದ ಅರಣ್ಯಕಗಳು ಹಾಗೂ ಉಪನಿಷತ್ತುಗಳ ಮೀಮಾಂಸೆಯಾಯಿತು.

ಮೀಮಾಂಸಾ ಶಾಸ್ತ್ರದ ಈ ಎರಡು ಶಾಖೆಗಳಿಗೆ ಸಂಬಂಧಪಟ್ಟ ಸಾಹಿತ್ಯವು ಅಗಾಧವಾಗಿದೆ. ಅದರಲ್ಲಿ ಸೂತ್ರಗಳ ಎರಡು ಸಂಗ್ರಹಗಳು ಮಾತ್ರ ಮೀಮಾಂಸಾ ಕ್ಷೇತ್ರದಲ್ಲಿ ಅಗ್ರಗಣ್ಯ ಕೃತಿಗಳಾಗಿ ಎದ್ದುನಿಲ್ಲುತ್ತವೆ. ಇವೆರಡು ಸಂಗ್ರಹಗಳನ್ನು ಹೊರತಂದವರು ಜೈಮಿನಿ ಮತ್ತು ಬಾದರಾಯಣ. ಜೈಮಿನಿ ಸೂತ್ರಗಳು 'ಕರ್ಮಕಾಂಡ'ಕ್ಕೆ ಸಂಬಂಧಿಸಿದ್ದರೆ, ಬಾದರಾಯಣ ಸೂತ್ರಗಳು 'ಜ್ಞಾನಕಾಂಡ'ವನ್ನು ಕುರಿತದ್ದು. ಬಾದರಾಯಣರಿಗೆ ಮುಂಚೆಯೂ ಜೈಮಿನಿ ಈ ವಿಷಯಗಳ ಮೇಲೆ ಭಾಷ್ಯ ಬರೆದವರಿದ್ದರೆಂಬುದರಲ್ಲಿ ಸಂದೇಹವಿಲ್ಲ. ಅಷ್ಟಾದರೂ ಮೀಮಾಂಸಾ ಶಾಸ್ತ್ರದ ಎರಡು ಶಾಖೆಗಳಲ್ಲಿ ಜೈಮಿನಿ, ಬಾದರಾಯಣರ ಸೂತ್ರಗಳನ್ನೇ ಪ್ರಮಾಣ ಗ್ರಂಥಗಳೆಂದು ಸ್ವೀಕರಿಸಲಾಗಿದೆ.

ಇವೆರಡೂ ಮೀಮಾಂಸೆಗಳಿಗೆ ಸಂಬಂಧಿಸಿದ ಶೋಧಗಳೇ ಆದರೂ ಜೈಮಿನಿ ಸೂತ್ರಗಳಿಗೆ 'ಮೀಮಾಂಸಾ ಸೂತ್ರ' ಗಳೆಂದೂ,[೨] ಬಾದರಾಯಣ ಸೂತ್ರಗಳಿಗೆ 'ವೇದಾಂತ ಸೂತ್ರ'ಗಳೆಂದು ಕರೆಯುತ್ತಾರೆ. 'ವೇದಾಂತ' ಎಂದರೆ 'ವೇದದ ಕೊನೆ' ಅಥವಾ ವೇದಗಳ ಕಡೆ ಅಧ್ಯಾಯದಲ್ಲಿ ಬರುವ ತತ್ವಗಳು, ಅರ್ಥಾತ್ ಉಪನಿಷತ್ತುಗಳು ಎಂದರ್ಥ. ಉಪನಿಷತ್ತುಗಳೇ 'ವೇದಗಳ ಅಂತಿಮ ಧ್ಯೇಯ' ಅನಿಸಿಕೊಳ್ಳುವುದ ರಿಂದ, ಅವುಗಳನ್ನು ಸಮನ್ವಯಗೊಳಿಸುವ ಬಾದರಾಯಣ ಸೂತ್ರಗಳಿಗೆ 'ವೇದಾಂತ ಸೂತ್ರ'[೩] ಎಂಬ ಹೆಸರು ಬಂದಿದೆ. ಸಂಜಯ ವರದಿ ಮಾಡಬೇಕಾದ ವೇದಗಳ ಕಡೆ ಅಧ್ಯಾಯದಲ್ಲಿ ಬರುವ ತತ್ವಗಳಿವು. ಇದೇ ವೇದಾಂತ ಸೂತ್ರಗಳ ಉಗಮ.

ಯಾರು ಈ ಬಾದರಾಯಣ? ಆತ ಈ ಸೂತ್ರಗಳನ್ನು ಯಾಕೆ ಮತ್ತು ಯಾವಾಗ ರಚಿಸಿದ? ಆ ಹೆಸರಿನ ಹೊರತಾಗಿ ಬಾದರಾಯಣನ ಬಗ್ಗೆ ಬೇರೇನೂ ತಿಳಿದುಬಂದಿಲ್ಲ.[೪] ಇದು ಈ ಲೇಖಕನ

---

೧. ಹಾಗೆ ನೋಡಿದರೆ ಕರ್ಮಕಾಂಡದ ಸಮನ್ವಯವು ಕಲ್ಪಸೂತ್ರಗಳು ಮತ್ತು ಪೂರ್ವ ಮೀಮಾಂಸಾ ಸೂತ್ರಗಳೆಂಬ ಎರಡು ಬಗೆಯ ಕೃತಿಗಳಿಗೆ ದಾರಿಯಾಯಿತು. ಮೊದಲನೆಯದು, ಬ್ರಾಹ್ಮಣಗಳಲ್ಲಿ ಅಡಕವಾದ ವಿಧಿ ವಿಧಾನಗಳ ಸಂಕ್ಷಿಪ್ತ ವಿವರಣೆ ಕೊಟ್ಟರೆ, ಎರಡನೆಯದು ಕಲ್ಪಸೂತ್ರದ ಸಿದ್ಧಾಂತವನ್ನೇ ವಿವರಿಸಿ ಬೆಂಬಲಿಸುತ್ತದೆ.

೨. ಅವಕ್ಕೆ 'ಕರ್ಮ ಮೀಮಾಂಸೆ' ಎಂಬ ಹೆಸರೂ ಇದೆ.

೩. ಇದಕ್ಕೆ ಉತ್ತರ ಮೀಮಾಂಸಾ ಸೂತ್ರ, ಬ್ರಹ್ಮಸೂತ್ರ, ಶಾರೀರಿಕ ಸೂತ್ರ, ಶಾರೀರಿಕ ಮೀಮಾಂಸಾ ಸೂತ್ರ ಎಂಬ ಹೆಸರುಗಳೂ ಇವೆ.

೪. ಜೈಮಿನಿ ವಿಷಯವೂ ಹಾಗೆಯೇ ಕಾಣೆ. "ಎ ಬ್ರೀಫ್ ಸ್ಕೆಚ್ ಆಫ್ ಪೂರ್ವ ಮೀಮಾಂಸ'ದಲ್ಲಿ (ಪು. ೧೨) ಹೇಳುತ್ತಾರೆ. ಜೈಮಿನಿಯ ಬಗ್ಗೆ ಏನು ತಿಳಿದುಬಂದಿಲ್ಲ. ಜೈಮಿನಿ ಹೆಸರಿಗೆ ಒಂದು ಬ್ರಾಹ್ಮಣ, ಒಂದು ಪೌತ್ರಸೂತ್ರ ಹಾಗೂ ಒಂದು ಗೃಹ್ಯ ಸೂತ್ರವನ್ನು ಜೋಡಿಸಲಾಗಿದೆ. ಆದರೆ ಅವೆಲ್ಲವೂ ವೇದಾಂತ ಸೂತ್ರ ಕರ್ತೃವಿನ ಕೃತಿಗಳೇ

ನಿಜವಾದ ಹೆಸರೇ ಎಂಬುದೂ ಸ್ಪಷ್ಟವಿಲ್ಲ. ಮುಖ್ಯ ಟೀಕಾಕಾರರಲ್ಲೂ ಈ ಸೂತ್ರಗಳನ್ನು ಬರೆದವರಾರೆಂಬ ಬಗ್ಗೆ ಸಾಕಷ್ಟು ಅನಿಶ್ಚಯತೆ ಇದೆ. ಕೆಲವರು ಬಾದರಾಯಣನೇ ಸೂತ್ರಗಳ ರಚನಾಕಾರ ಎಂದರೆ ಉಳಿದವರು ವ್ಯಾಸನೇ ಲೇಖಕ ಎನ್ನುತ್ತಾರೆ. ಇನ್ನು ಉಳಿದವರು ಬಾದರಾಯಣ ಮತ್ತು ವ್ಯಾಸ ಇಬ್ಬರೂ ಒಬ್ಬರೇ ಅನ್ನುತ್ತಾರೆ. ಸೂತ್ರಗಳ ರಚನಕಾರನನ್ನು ಕುರಿತಂತೆ ಇರುವ ಗೊಂದಲಮಯ ಭಿನ್ನಾಭಿಪ್ರಾಯ ಹೀಗಿದೆ.

ಆತ ಈ ಸೂತ್ರಗಳನ್ನು ರಚಿಸಿದ್ದೇಕೆ? ಬ್ರಾಹ್ಮಣರು ವೈದಿಕ ಸಾಹಿತ್ಯದ ಕರ್ಮಕಾಂಡ ಭಾಗವನ್ನು ಸೂತ್ರೀಕರಿಸಲು ಮುಂದಾಗಿದ್ದನ್ನು ಅರ್ಥ ಮಾಡಿಕೊಳ್ಳಬಹುದು. ಬ್ರಾಹ್ಮಣರಿಗೆ ಕರ್ಮಕಾಂಡದ ಬಗ್ಗೆ ಆಳವಾದ ಕಾಳಜಿಯಿತ್ತು.

ಬ್ರಾಹ್ಮಣರ ಅಸ್ತಿತ್ವ, ಅವರ ಜೀವನೋಪಾಯ ಎಲ್ಲವೂ ವೈದಿಕ ಸಾಹಿತ್ಯದ 'ಕರ್ಮಕಾಂಡ' ಭಾಗವನ್ನೇ ಅವಲಂಬಿಸಿತ್ತು. ಅದೇ ಬ್ರಾಹ್ಮಣರಿಗೆ ವೈದಿಕ ಸಾಹಿತ್ಯದ ಜ್ಞಾನಕಾಂಡ ಭಾಗದಲ್ಲಿ ಏನೇನೂ ಆಸಕ್ತಿಯಿರಲಿಲ್ಲ. ಅಂದ ಮೇಲೆ ಅವರೇಕೆ ಜ್ಞಾನಕಾಂಡದ ಸಮನ್ವಯಕ್ಕೆ ಕೈ ಹಾಕಿದರು? ಈ ಪ್ರಶ್ನೆಯನ್ನು ಯಾರೂ ಎತ್ತಿಲ್ಲ. ಆದರೂ ಇದೊಂದು ಮುಖ್ಯ ಪ್ರಶ್ನೆ. ಆದ್ದರಿಂದ ಈ ಪ್ರಶ್ನೆಯ ಉತ್ತರವೂ ಮುಖ್ಯವಾಗಿರಲೇಬೇಕು. ಈ ಪ್ರಶ್ನೆ ಯಾಕೆ ಮುಖ್ಯ, ಇದರ ಉತ್ತರವೇನು ಎಂಬುದನ್ನು ನಂತರ ಚರ್ಚಿಸುತ್ತೇನೆ.

ವೇದಾಂತ ಸೂತ್ರಗಳಿಗೆ ಸಂಬಂಧಿಸಿದಂತೆ ಇನ್ನೂ ಎರಡು ಪ್ರಶ್ನೆಗಳಿವೆ. ಮೊದಲನೆಯದು, ಈ ಕೃತಿಯ ಸ್ವರೂಪ ಮತ ಧಾರ್ಮಿಕವೋ ಅಥವಾ ತಾತ್ವಿಕವೋ? ಅಥವಾ ಇದು ಸ್ಥಾಪಿತ ಮತ ಧರ್ಮಶಾಸ್ತ್ರವನ್ನು ತತ್ವಶಾಸ್ತ್ರವನ್ನು ಬಾಲಂಗೋಚಿಯಾಗಿ ಕಟ್ಟಿ ಅದನ್ನು ನಿರುಪದ್ರವಿಯಾಗಿ ಮಾಡುವ ಪ್ರಯತ್ನವೇ?

ಇನ್ನೊಂದು ಪ್ರಶ್ನೆ, ವೇದಾಂತ ಸೂತ್ರಗಳ ವ್ಯಾಖ್ಯಾನದ ಕುರಿತದ್ದು. ವೇದಾಂತ ಸೂತ್ರಗಳ ಬಗ್ಗೆ ತಮ್ಮ ಬುದ್ಧಿಮತ್ತೆಯಿಂದ 'ಆಚಾರ್ಯ' ಎಂಬ ಹೆಸರಿಗೆ ಪಾತ್ರರಾದ ಐವರು ಮಹಾವ್ಯಕ್ತಿಗಳು ಐದು ಪ್ರತ್ಯೇಕ ವ್ಯಾಖ್ಯಾನಗಳನ್ನು ಕೊಟ್ಟಿದ್ದಾರೆ. ಅವರು ೧. ಶಂಕರಾಚಾರ್ಯ (ಕ್ರಿ.ಶ. ೭೮೮–೮೨೦), ೨. ರಾಮಾನುಜಾಚಾರ್ಯ (ಕ್ರಿ.ಶ. ೧೦೧೭–೧೧೩೭), ೩. ನಿಂಬರ್ಕಾಚಾರ್ಯ (ಮರಣ: ಸುಮಾರು ಕ್ರಿ.ಶ. ೧೧೬೨), ೪. ಮಧ್ವಾಚಾರ್ಯ (ಕ್ರಿ.ಶ. ೧೧೯೭–೧೨೭೬) ಮತ್ತು ೫. ವಲ್ಲಭಾಚಾರ್ಯ (ಜನನ : ಕ್ರಿ.ಶ. ೧೪೧೭). ಈ ಆಚಾರ್ಯರು ವೇದಾಂತ ಸೂತ್ರಗಳ ಬಗ್ಗೆ ಬರೆದ ವ್ಯಾಖ್ಯಾನಗಳು, ಆ ವೇದಾಂತ ಸೂತ್ರಗಳಿಗಿಂತ ಮುಖ್ಯವಾಗಿ ಬಿಟ್ಟಿವೆ. ಇಲ್ಲಿನ ಮಹತ್ವದ ಅಂಶವೆಂದರೆ ವೇದಾಂತ ಸೂತ್ರ ಸಂಗ್ರಹದ ಒಂದೇ ಪಾಠದ ಮೇಲೆ ಈ ಐವರು ಆಚಾರ್ಯರೂ ಐದು ಪ್ರತ್ಯೇಕ ವಿಚಾರ ಪಂಥಗಳನ್ನು ಸ್ಥಾಪಿಸಲೆತ್ನಿಸಿದ್ದಾರೆ ಎಂಬುದು. ಶಂಕರರ ಪ್ರಕಾರ ವೇದಾಂತ ಸೂತ್ರಗಳು ಸಂಪೂರ್ಣ ಅದ್ವೈತವನ್ನು ಬೋಧಿಸುತ್ತವೆ. ರಾಮಾನುಜರ ಪ್ರಕಾರ ವಿಶಿಷ್ಟಾದ್ವೈತ. ನಿಂಬರ್ಕರ ಪ್ರಕಾರ ಏಕದ್ವೈತ. ಮಧ್ವರ ಪ್ರಕಾರ ದ್ವೈತ ಮತ್ತು ವಲ್ಲಭರ ಪ್ರಕಾರ ಶುದ್ಧ ಅದ್ವೈತ. ಈ ಶಬ್ದಗಳ ಅರ್ಥವನ್ನು ನಾನಿಲ್ಲಿ ಚರ್ಚಿಸುವುದಿಲ್ಲ. ಆದರೆ ಒಂದೇ ಸೂತ್ರ ಸಂಗ್ರಹದ ಐದು ವಿಭಿನ್ನ ವ್ಯಾಖ್ಯಾನಗಳ ಫಲವಾಗಿ ಐದು ಪ್ರತ್ಯೇಕ ವಿಚಾರಪಂಥಗಳೇಕೆ ಹುಟ್ಟಿಕೊಂಡವು ಎಂಬುದಷ್ಟೇ ನಾನು ಹೇಳಬಯಸಿರುವುದು. ಇದೇನು ಕೇವಲ ವ್ಯಾಕರಣದ ವಿಚಾರವೇ? ಅಥವಾ ಈ ವಿಭಿನ್ನ ವ್ಯಾಖ್ಯಾನಗಳ ಹಿಂದೆ ಬೇರೇನಾದರೂ ಉದ್ದೇಶವಿದೆಯೇ? ಈ ವ್ಯಾಖ್ಯಾನ ಭಿನ್ನತೆಯಿಂದಾಗಿ

---

ಅನ್ನುವಂತಿಲ್ಲ. ಅಶ್ವಲಾಯನ ಗೃಹ್ಯಸೂತ್ರದ 'ತರ್ಪಣ'ದಲ್ಲಿ ಸುಮಂತುವಿನ ಜೊತೆ ಜೈಮಿನಿಯ ಹೆಸರೂ ಕಂಡುಬರುತ್ತದೆ. 'ಭಾಗವತ ಪುರಾಣ'ದಲ್ಲಿ ಜೈಮಿನಿಯೇ ಸುಮಂತುವಿನ ಗುರುವೆಂದೂ, ಸಾಮವೇದದ ಸಂಸ್ಥಾಪಕ ಆತನೇ ಎಂದೂ ಹೇಳಲಾಗಿದೆ. ಮೀಮಾಂಸಾ ರಚನಕಾರ ಜೈಮಿನಿಯನ್ನು ಆನೆಯೊಂದು ತುಳಿದು ಹಾಕಿತೆಂದು ಪಂಚತಂತ್ರ ಹೇಳುತ್ತದೆ.

ಇನ್ನೊಂದು ಪ್ರಶ್ನೆಯೂ ಹುಟ್ಟಿಕೊಳ್ಳುತ್ತದೆ. ಆತ್ಮ ಹಾಗೂ ಪರಮಾತ್ಮನನ್ನು ನೋಡುವ ಐದು ಪ್ರತ್ಯೇಕ ಮಾರ್ಗಗಳನ್ನು ಪ್ರತಿಪಾದಿಸುವಂಥ ಐದು ವಿಭಿನ್ನ ವ್ಯಾಖ್ಯಾನಗಳು ಇವೆಯಾದರೂ, ಅಲ್ಲಿರುವ ದೃಷ್ಟಿಕೋನಗಳು ಎರಡೇ ಶಂಕರಾಚಾರ್ಯರ ದೃಷ್ಟಿಯೊಂದು ಹಾಗೂ ಉಳಿದ ನಾಲ್ವರ ದೃಷ್ಟಿಯೊಂದು. ಆ ನಾಲ್ವರಲ್ಲೇ ಭಿನ್ನಾಭಿಪ್ರಾಯಗಳಿದ್ದರೂ (೧) ಆತ್ಮ ಪರಮಾತ್ಮ ಒಂದೇ ಹಾಗೂ (೨) ಈ ಜಗತ್ತು ಮಾಯೆ ಎಂಬ ಎರಡು ವಿಚಾರಗಳಲ್ಲಿ ಅವರೆಲ್ಲರೂ ಶಂಕರಾಚಾರ್ಯರನ್ನು ಒಂದಾಗಿ ವಿರೋಧಿಸುತ್ತಾರೆ. ಈಗ ಮೂರನೇ ಪ್ರಶ್ನೆ ಉದ್ಭವವಾಗುತ್ತದೆ. ಅದೆಂದರೆ ಶಂಕರಾಚಾರ್ಯರು ಬಾದರಾಯಣನ ವೇದಾಂತ ಸೂತ್ರಗಳ ಬಗ್ಗೆ ಅಂಥ ಅನನ್ಯವಾದ ದೃಷ್ಟಿಕೋನವನ್ನೇಕೆ ಪ್ರತಿಪಾದಿಸಿದರು? ಅದು ಸೂತ್ರಗಳ ವಿಮರ್ಶಾತ್ಮಕ ಅಧ್ಯಯನದ ಫಲವೇ? ಅಥವಾ ಅದು ಪೂರ್ವಕಲ್ಪಿತ ಉದ್ದೇಶವೊಂದರ ಸಾಧನೆಗಾಗಿ ರೂಪುಗೊಂಡ ಉದ್ದೇಶಪೂರ್ವಕ ವ್ಯಾಖ್ಯಾನವೇ?

ನಾನು ಕೇವಲ ಈ ಪ್ರಶ್ನೆಯನ್ನು ಎತ್ತುತ್ತಿದ್ದೇನೆ. ಆ ಪ್ರಶ್ನೆಯ ಚರ್ಚೆಯನ್ನು ಇಲ್ಲಿ ಮಾಡುವುದಿಲ್ಲ. ಇಲ್ಲಿ ನನ್ನ ಕಾಳಜಿಯಿರುವುದು ಈ ಸಾಹಿತ್ಯ ಬುದ್ಧ ಪೂರ್ವವೋ ಅಥವಾ ಬುದ್ಧೋತ್ತರವೋ ಎಂಬ ಅದರ ಕಾಲಮಾನದ ಪ್ರಶ್ನೆಯಲ್ಲಿ ಮಾತ್ರ.

ವೇದಾಂತ ಸೂತ್ರಗಳೂ ಕೂಡಾ ಭಗವದ್ಗೀತೆಯಂತೆ ಹಲವು ಆವೃತ್ತಿಗಳನ್ನು ಕಂಡಿವೆಯೆಂಬುದೇ ಅದರ ಕಾಲಮಾನ ನಿಷ್ಕರ್ಷೆ ಮಾಡಲು ಇರುವ ತೊಡಕು. ಕೆಲವರ ಪ್ರಕಾರ[೧] ವೇದಾಂತ ಸೂತ್ರಗಳು ಮೂರು ಆವೃತ್ತಿಗಳನ್ನು ಹಾದು ಬಂದಿವೆ. ಆದ್ದರಿಂದ ಅದರ ರಚನೆಯ ಕಾಲದ ಬಗ್ಗೆ ನಿರ್ದಿಷ್ಟವಾಗಿ ಏನೂ ಹೇಳಬರುವುದಿಲ್ಲ.[೨] ಅದರ ಬಗ್ಗೆ ಇರುವ ಅಭಿಪ್ರಾಯಗಳು ಅಂದಾಜು ಮಾತ್ರ. ಆದರೆ ವೇದಾಂತ ಸೂತ್ರಗಳಲ್ಲಿ ಬೌದ್ಧಧರ್ಮದ ಪ್ರಸ್ತಾಪ ಇರುವುದರಿಂದ, ಬೌದ್ಧ ಧರ್ಮದ ಉನ್ನತಿಯಾದ ನಂತರವೇ ಆ ಸೂತ್ರಗಳ ರಚನೆಯಾಯಿತೆನ್ನಲು ಸಂಶಯವಿಲ್ಲ. ಆದರೆ ಈ ಸೂತ್ರಗಳ ಉಲ್ಲೇಖ ಮನುಸ್ಮೃತಿಯಲ್ಲಿ ಬರುವುದರಿಂದ ಇವು ಮನುವಿನ ನಂತರ ಅಸ್ತಿತ್ವಕ್ಕೆ ಬಂದಿರಲಾರವು. ಪ್ರೊ. ಕೀತ್ ಅವರು ಕ್ರಿ.ಶ. ೨೦೦ರ ಸುಮಾರಿಗೆ ವೇದಾಂತ ಸೂತ್ರಗಳ ರಚನೆಯಾಗಿರಬೇಕು. ಎಂದರೆ ಪ್ರೊ. ಜಾಕೋಬಿಯವರು ಸೂತ್ರಗಳ ರಚನೆ ಕ್ರಿ.ಶ. ೨೦೦ರಿಂದ ೪೫೦ರವರೆಗಿನ ಅವಧಿಯಲ್ಲಿ ನಡೆದಿರಬೇಕೆಂದು ಅಭಿಪ್ರಾಯ ಪಡುತ್ತಾರೆ.

## ೩. ಮಹಾಭಾರತ

'ಮಹಾಭಾರತ' ರಚನೆಯ ಕಾಲ ನಿಷ್ಕರ್ಷೆ ಮಾಡುವುದು ಹೆಚ್ಚು ಕಮ್ಮಿ ಅಸಾಧ್ಯದ ಕೆಲಸ. ಆ ನಿಟ್ಟಿನಲ್ಲಿ ಪ್ರಯತ್ನ ಮಾಡಬಹುದಷ್ಟೇ. 'ಮಹಾಭಾರತ'ದ ಮೂರು ಆವೃತ್ತಿಗಳು ಬೆಳೆದಿದ್ದು, ಪ್ರತಿಯೊಬ್ಬ ಸಂಪಾದಕರ ಕೈಯಲ್ಲೂ, ಅದರ ಶೀರ್ಷಿಕೆ ಮತ್ತು ವಸ್ತು ವಿಷಯ ಬದಲಾಗಿದೆ. ಅದರ ಮೂಲ ಸ್ವರೂಪದ ಶೀರ್ಷಿಕೆ 'ಜಯ'. ಈ ಮೂಲ ಹೆಸರು ಮೂರನೇ ಆವೃತ್ತಿಯ ಆದಿ ಮತ್ತು ಅಂತ್ಯದಲ್ಲೂ ಕಂಡುಬರುತ್ತದೆ. 'ಜಯ' ಎಂಬ ಹೆಸರಿನ ಮೂಲ ಆವೃತ್ತಿಯ ಕರ್ತೃ ವ್ಯಾಸ. ಎರಡನೇ ಆವೃತ್ತಿಯ ಹೆಸರು 'ಭಾರತ' ಮತ್ತು ಈ ಎರಡನೇ ಆವೃತ್ತಿಯ ಸಂಪಾದಕ ವೈಶಂಪಾಯನ. ವೈಶಂಪಾಯನನಲ್ಲದೆ ವ್ಯಾಸನಿಗೆ ಇನ್ನೂ ಹಲವಾರು ಶಿಷ್ಯರಿದ್ದರು. ಸುಮಂತು, ಜೈಮಿನಿ, ಪೈಲ ಮತ್ತು ಶುಕ ಎಂಬುವವರು

---

೧. ಬೆಳವಳಕರ್, ನೋಡಿ: ಬಸು ಮಲ್ಲಿಕ್ ಉಪನ್ಯಾಸ – ವೇದಾಂತ ಉಪನ್ಯಾಸ ೪.

೨. ರಾಧಾಕೃಷ್ಣನ್: 'ಇಂಡಿಯನ್ ಫಿಲಾಸಫಿ', ಸಂಪುಟ ೨. ಪುಟ ೪೩೦, ನೋಡಿ.

ವ್ಯಾಸನ ಇನ್ನೂ ನಾಲ್ವರು ಶಿಷ್ಯರು. ಇವರೆಲ್ಲರೂ ತಂತಮ್ಮ ಆವೃತ್ತಿಗಳನ್ನು ಹೊರತಂದರು. ಆದ್ದರಿಂದ 'ಭಾರತ'ದ್ದೇ ಇನ್ನೂ ನಾಲ್ಕು ಆವೃತ್ತಿಗಳಿವೆ. ವೈಶಂಪಾಯನ ಇವೆಲ್ಲವನ್ನೂ ಕ್ರೋಢೀಕರಿಸಿ ತನ್ನದೇ ಆವೃತ್ತಿ ರೂಪಿಸಿದ. ಮೂರನೇ ಸಂಪಾದಕ ಸೌತಿ. ಈತ ವೈಶಂಪಾಯನನ ಭಾರತವನ್ನೇ ಪುನರ್‌ರಚಿಸಿದ. ಕಡೆಗೆ ಸ್ವತಿಯ ಆವೃತ್ತಿಗೇ 'ಮಹಾಭಾರತ' ಎಂಬ ಹೆಸರು ಬಂದಿತು. ಇಷ್ಟರಲ್ಲಿ ಆ ಗ್ರಂಥವೂ ಗಾತ್ರ ಹಾಗೂ ವಸ್ತು ವಿಷಯಗಳೆರಡರಲ್ಲೂ ಬೆಳೆಯಿತು. ವ್ಯಾಸನ 'ಜಯ' ೮,೮೦೦ ಶ್ಲೋಕಗಳಿಗಿಂತ ಹೆಚ್ಚಿಲ್ಲದ ಪುಟ್ಟ ಕೃತಿಯಾಗಿತ್ತು. ವೈಶಂಪಾಯನನ ಕೈಯಲ್ಲಿ ಅದೇ ೨೪,೦೦೦ ಶ್ಲೋಕಗಳಿಗೆ ಬೆಳೆಯಿತು. ಸೌತಿ ಅದನ್ನು ೯೬,೮೩೬ ಶ್ಲೋಕಗಳಿಗೆ ವಿಸ್ತರಿಸಿದ. ಇನ್ನು ವಸ್ತುವಿಷಯಕ್ಕೆ ಬಂದರೆ ವ್ಯಾಸನ ಮೂಲ ಕೃತಿಯು ಕೌರವ ಪಾಂಡವರ ಯುದ್ಧದ ಕತೆ ಮಾತ್ರವಾಗಿತ್ತು. ವೈಶಂಪಾಯನನ ಕೈಯಲ್ಲಿ ಇದೇ ವಸ್ತುವಿಗೆ ಎರಡು ಆಯಾಮ ಸಿಕ್ಕಿತು. ಮೂಲ ಕತೆಗೆ ಈಗ ನೀತಿಬೋಧೆಯೂ ಸೇರ್ಪಡೆಯಾಯಿತು. ಶುದ್ಧ ಚಾರಿತ್ರಿಕ ಕೃತಿಯಾಗಿದ್ದದ್ದು ಈಗ ಸಾಮಾಜಿಕ, ನೈತಿಕ ಹಾಗೂ ಧಾರ್ಮಿಕ ಕರ್ತವ್ಯಗಳನ್ನು ಬೋಧಿಸುವ ಉಪದೇಶಾತ್ಮಕ ಗ್ರಂಥವಾಗಿ ಮಾರ್ಪಟ್ಟಿತು. ಇನ್ನು ಕಡೆಯ ಸಂಪಾದಕ ಸೌತಿಯು ಅದನ್ನೇ ಸರ್ವಗ್ರಾಹಿ ಐತಿಹ್ಯಗಾಥೆಗಳ ಭಂಡಾರವಾಗಿ ಮಾಡಿದ. 'ಭಾರತ'ಕ್ಕೆ ಸಂಬಂಧವೇ ಇರದಿದ್ದ ಎಲ್ಲ ಸಣ್ಣಪುಟ್ಟ ಸ್ವತಂತ್ರ ದಂತಕತೆಗಳು, ಚಾರಿತ್ರಿಕ ಕತೆಗಳೆಲ್ಲವೂ ಕಳೆದುಹೋಗದಂತೆ ಅಥವಾ ಒಂದೆಡೆ ಸಿಗುವಂತೆ ಇದರಲ್ಲಿ ಒಟ್ಟುಗೂಡಿದವು. ಜೊತೆಗೆ ಸೌತಿಗೆ 'ಭಾರತ'ವನ್ನು ಎಲ್ಲ ಕಲಿಕೆ ಹಾಗೂ ಜ್ಞಾನಗಳ ಭಂಡಾರವಾಗಿ ಮಾಡುವ ಇನ್ನೊಂದು ಆಕಾಂಕ್ಷೆಯೂ ಇತ್ತು. ಇದೇ ಕಾರಣಕ್ಕೆ ಆತ ರಾಜನೀತಿ, ಭೂಗೋಳ, ಧನುರ್ವಿದ್ಯೆ ಮುಂತಾದ ಎಲ್ಲ ಜ್ಞಾನಶಾಖೆಗಳ ಭಾಗಗಳನ್ನು ಸೇರಿಸಿದ. ಸೌತಿಯ ಪುನರಾವರ್ತನೆಯ ಹವ್ಯಾಸವನ್ನು ನೋಡಿದರೆ ಆತನ ಕೈಯಲ್ಲಿ 'ಭಾರತ'ವು 'ಮಹಾಭಾರತ' ವಾದದ್ದರಲ್ಲೇನು ಆಶ್ಚರ್ಯವಿಲ್ಲ.

ಈಗ ಅದರ ರಚನೆಯ ಕಾಲದ ಬಗ್ಗೆ ಹೇಳಬೇಕೆಂದರೆ ಕೌರವ-ಪಾಂಡವರ ಯುದ್ಧ ತೀರಾ ಪ್ರಾಚೀನ ಘಟನೆಯೆಂಬುದರಲ್ಲೇನೂ ಅನುಮಾನವಿಲ್ಲ. ಅಂದ ಮಾತ್ರಕ್ಕೆ ವ್ಯಾಸನ ರಚನೆಯೂ ಈ ಘಟನೆಯಷ್ಟೇ ಹಳೆಯದು ಅಥವಾ ಸಮಕಾಲೀನವಾದದ್ದು ಎಂದೇನೂ ಅರ್ಥವಲ್ಲ. ಇದರ ಪ್ರತ್ಯೇಕ ಆವೃತ್ತಿಗಳ ಕಾಲ ನಿಗದಿಮಾಡುವುದು ಕಷ್ಟವೇ. ಒಟ್ಟಾರೆಯಾಗಿ ನೋಡಿ ಪ್ರೊ. ಹಾಪ್‌ಕಿನ್ಸ್ ಹೀಗೆ ಹೇಳುತ್ತಾರೆ:[೧]

"ಸಾಧಾರಣವಾಗಿ ಹೇಳುವುದಾದರೆ 'ಮಹಾಭಾರತ' ರಚನೆಯ ಕಾಲ ಕ್ರಿ.ಶ. ೨೦೦-೪೦೦ರ ನಡುವಿನದು. ಇದರಲ್ಲಿ ನಂತರದ ಸೇರ್ಪಡೆಗಳನ್ನಾಗಲೀ ಅಥವಾ ಮುಂದಿನ ಸಂಪಾದಕರು ಮಾಡಿದ ಬದಲಾವಣೆಗಳನ್ನಾಗಲೀ ಗಣನೆಗೆ ತೆಗೆದುಕೊಂಡಿಲ್ಲ."

ಆದರೆ ಇನ್ನೂ ಈಚಿನ ಕಾಲಮಾನದತ್ತ ಸ್ಪಷ್ಟವಾಗಿ ಬೊಟ್ಟು ಮಾಡುವ ಬೇರೆ ಕೆಲವು ಸನ್ನಿವೇಶಗಳಿವೆ.

'ಮಹಾಭಾರತ'ದಲ್ಲಿ ಹೂಣರ ಪ್ರಸ್ತಾಪವಿದೆ. ಹೂಣರೊಡನೆ ಕ್ರಿ.ಶ. ೪೫೫ರ ಸುಮಾರಿಗೆ ಕಾದಾಡಿ ಅವರನ್ನು ಸೋಲಿಸಿದವನು ಸ್ಕಂದಗುಪ್ತ. ಅಷ್ಟಾದರೂ, ಕ್ರಿ.ಶ. ೫೨೮ರವರೆಗೆ ಹೂಣರ ಧಾಳಿ ಮುಂದುವರೆಯಿತು. ಆದ್ದರಿಂದ ಆ ಕಾಲದಲ್ಲಿ ಅಥವಾ ಅದರ ನಂತರ 'ಮಹಾಭಾರತ' ರಚನೆಯಾಯಿತೆಂಬುದು ಸ್ಪಷ್ಟವಾಗುತ್ತದೆ.

ಇನ್ನೂ ನಂತರದ ಕಾಲಮಾನವನ್ನು ಸೂಚಿಸುವ ಸುಳಿವುಗಳನ್ನು ಕೋಸಾಂಬಿಯವರು[೨] ಎತ್ತಿ

೧. ಹಾಪ್‌ಕಿನ್ಸ್: "ದಿ ಗ್ರೇಟ್ ಎಪಿಕ್ ಆಫ್ ಇಂಡಿಯಾ", ಪು. ೩೯೮.
೨. 'ಹಿಂದಿ ಸಂಸ್ಕೃತಿ ಆಣಿ ಅಹಿಂಸಾ' (ಮರಾಠಿ).

ತೋರಿಸಿದ್ದಾರೆ. 'ಮಹಾಭಾರತ'ವು ಮ್ಲೇಚರು ಅಥವಾ ಮುಸ್ಲಿಮರನ್ನು ಉಲ್ಲೇಖಿಸುತ್ತದೆ. ವನಪರ್ವದ ೧೯೦ನೇ ಅಧ್ಯಾಯದ ೨೯ನೇ ಶ್ಲೋಕದಲ್ಲಿ ಗ್ರಂಥಕರ್ತನು "ಇಡಿ ಜಗತ್ತು ಇಸ್ಲಾಂಮಯವಾಗುವುದು. ಎಲ್ಲ ಆರ್ಯ ವಿಧಿ, ಧಾರ್ಮಿಕ ಪದ್ಧತಿಗಳೂ ಕೊನೆಗೊಳ್ಳುವುವು" ಎನ್ನುತ್ತಾನೆ. ಇದು ಮುಸ್ಲಿಮರ ನೇರ ಪ್ರಸ್ತಾಪವಾಗಿದ್ದು ಈ ಶ್ಲೋಕ ಭವಿಷ್ಯವಾಣಿಯಂತಿದ್ದರೂ ಮಹಾಭಾರತವು ಪುರಾಣವಾದ್ದರಿಂದ ಇದು ಆಗಿಹೋದ ಘಟನೆಯೆಂದೇ ತಿಳಿದುಬೇಕಾಗುತ್ತದೆ. ಈ ಶ್ಲೋಕವನ್ನು ಹೀಗೆ ಅರ್ಥಮಾಡಿಕೊಂಡಾಗ ಭಾರತದ ಮೇಲೆ ಮುಸ್ಲಿಮರ ಧಾಳಿ ನಡೆದ ಮೇಲೆಯೇ 'ಮಹಾಭಾರತ' ರಚನೆಯಾಯಿತು ಎಂದಾಗುತ್ತದೆ.

ಇದೇ ತೀರ್ಮಾನಕ್ಕೆ ದಾರಿಯಾಗುವ ಇನ್ನೂ ಕೆಲವು ಪ್ರಸ್ತಾಪಗಳಿವೆ.

ಅದೇ ಅಧ್ಯಾಯದ ೫೯ನೇ ಶ್ಲೋಕ "ವೃಷಲರಿಂದ ದಮನಗೊಂಡ ಭೀತಿಗ್ರಸ್ತ ಬ್ರಾಹ್ಮಣರು, ತಮ್ಮನ್ನು ರಕ್ಷಿಸಲು ಯಾರನ್ನೂ ಕಾಣದೆ, ನರಳುತ್ತ ಅಳುತ್ತ ಇಡಿ ಜಗತ್ತು ಸುತ್ತುತ್ತಾರೆ" ಎನ್ನುತ್ತದೆ.

ಈ ಶ್ಲೋಕದಲ್ಲಿ ಬರುವ ವೃಷಲರು ಎಂದರೆ ಬೌದ್ಧರಿರಲಾರರು. ಯಾಕೆಂದರೆ ಬ್ರಾಹ್ಮಣರ ಮೇಲೆ ದಬ್ಬಾಳಿಕೆ ನಡೆಯಿತೆನ್ನಲು ಅಣು ಮಾತ್ರದಷ್ಟು ರುಜುವಾತಿಲ್ಲ. ಇದಕ್ಕೆ ಪ್ರತಿಯಾಗಿ ಬೌದ್ಧರ ಕಾಲದಲ್ಲಿ ಬೌದ್ಧ ಭಿಕ್ಷುಗಳಷ್ಟೇ ಔದಾರ್ಯದಿಂದ ಬ್ರಾಹ್ಮಣರನ್ನು ನಡೆಸಿಕೊಳ್ಳಲಾಗುತ್ತಿತ್ತೆನ್ನಲು ರುಜುವಾತಿದೆ. ಆದ್ದರಿಂದ ಇಲ್ಲಿ ವೃಷಲ ಎಂದರೆ ಅಸಂಸ್ಕೃತ ಎನ್ನುವ ಉಲ್ಲೇಖ ಮುಸ್ಲಿಂ ಧಾಳಿಕೋರರನ್ನು ಕುರಿತದ್ದೇ ಆಗಿರಬೇಕು. ಹಾಗಾದಲ್ಲಿ, ಭಾರತದ ಮೇಲೆ ಮುಸ್ಲಿಂ ಧಾಳಿ ಆರಂಭವಾದ ಮೇಲೆಯೇ 'ಮಹಾಭಾರತ'ದ ಕೆಲವು ಭಾಗಗಳಾದರೂ ರಚನೆಯಾಗಿರಬೇಕು ಎಂದಾಗುತ್ತದೆ.

ವನಪರ್ವದ ಅದೇ ಅಧ್ಯಾಯದ ಇನ್ನೂ ಕೆಲವು ಶ್ಲೋಕಗಳು ಇದೇ ತೀರ್ಮಾನಕ್ಕೆ ದಾರಿ ಮಾಡುತ್ತವೆ. ೬೫, ೬೬, ೬೭ನೇ ಶ್ಲೋಕಗಳಲ್ಲಿ "ಸಮಾಜವು ಅಸ್ತವ್ಯಸ್ತವಾಗುವುದು. ಜನರು 'ಯೇದುಕಾ'ಗಳನ್ನು ಪೂಜಿಸುವರು. ದೇವರುಗಳನ್ನು ಬಹಿಷ್ಕರಿಸುವರು. ಶೂದ್ರರು ದ್ವಿಜರ ಸೇವೆ ಮಾಡುವುದಿಲ್ಲ. ಇಡಿ ಜಗತ್ತು ಯೇದುಕಾಗಳಿಂದ ತುಂಬಿ ಹೋಗುವುದು. ಯುಗವು ಕೊನೆಗೊಳ್ಳುವುದು" ಎಂದು ಹೇಳಲಾಗಿದೆ.

ಇಲ್ಲಿ 'ಯೇದುಕಾ' ಎಂಬ ಶಬ್ದಕ್ಕೆ ಅತೀವ ಮಹತ್ವವಿದೆ. ಯೇದುಕಾ ಎಂದರೆ ಮೂಳೆ, ಅದರಲ್ಲೂ ಬುದ್ಧನ ಮೂಳೆ ಮತ್ತು ಮೂಳೆಗಳು 'ಚೈತ್ಯ'ದಲ್ಲಿರುವುದರಿಂದ ಯೇದುಕಾ ಎಂದರೆ ಬೌದ್ಧ 'ಚೈತ್ಯ'ಗಳೇ ಎಂದು ಕೆಲವರು ಅರ್ಥ ಮಾಡಿಕೊಂಡಿದ್ದಾರೆ. ಆದರೆ ಕೋಸಾಂಬಿಯವರ ಪ್ರಕಾರ ಈ ದೃಷ್ಟಿ ತಪ್ಪು. ಯಾಕೆಂದರೆ ಬೌದ್ಧ ಸಾಹಿತ್ಯದಲ್ಲಾಗಲೀ, ವೈದಿಕ ಸಾಹಿತ್ಯದಲ್ಲಾಗಲಿ ಯೇದುಕಾ ಎಂಬ ಪದ ಎಲ್ಲೂ 'ಚೈತ್ಯ' ಎಂಬ ಅರ್ಥದಲ್ಲಿ ಬಳಕೆಯಾಗಿಲ್ಲ. ಇದಕ್ಕೆ ಪ್ರತಿಯಾಗಿ ಮಹೇಶ್ವರ ಭಟ್ಟನ ವ್ಯಾಖ್ಯಾನದ ಅಮರಕೋಶದ ಪ್ರಕಾರ, ಯೇದುಕಾ ಎಂಬುದು ಮರದ ರಚನೆಯ ಬಲದ ಮೇಲೆ ನಿಂತ ಗೋಡೆ. ಹೀಗಾದಲ್ಲಿ, ಯೇದುಕಾ ಅಂದರೆ ಮುಸ್ಲಿಮರು ಪ್ರಾರ್ಥನೆ ಹೇಳುವ 'ಈದ್ಗಾ' ಎಂದು ಕೋಸಾಂಬಿ ಹೇಳುತ್ತಾರೆ. ಇದು ಸರಿಯಾದ ವ್ಯಾಖ್ಯಾನವಾಗಿದ್ದರೆ 'ಮಹಾಭಾರತ'ದ ಕೆಲವು ಭಾಗಗಳಾದರೂ ಮುಸ್ಲಿಮರ ಅದರಲ್ಲೂ ಮಹಮದ್ ಗೋರಿಯ ಧಾಳಿ ನಂತರದ ಕಾಲದಲ್ಲಿ ರಚನೆಯಾಗಿರಬೇಕು ಎಂದಾಗುತ್ತದೆ. ಮೊದಲ ಮುಸ್ಲಿಂ ಧಾಳಿ ನಡೆದಿದ್ದು ಕ್ರಿ.ಶ. ೭೨೧ರಲ್ಲಿ ಇಬ್ನೆ ಕಾಸಿಂ ನೇತೃತ್ವದಲ್ಲಿ. ಆತ ಉತ್ತರ ಭಾರತದ ಕೆಲವು ಪಟ್ಟಣಗಳನ್ನು ವಶಕ್ಕೆ ತೆಗೆದುಕೊಂಡು ಎರಡೂ ಧರ್ಮಗಳ ಅರ್ಚಕರನ್ನು ಕೊಂದರೂ ಹೆಚ್ಚಾಗಿ ದೇವಾಲಯಗಳು ಹಾಗೂ ವಿಹಾರಗಳನ್ನು ನಾಶಪಡಿಸಲಿಲ್ಲ. ಅದೂ ಅಲ್ಲದೆ ಆತ ಮಸೀದಿ, ಈದ್ಗಾಗಳ ನಿರ್ಮಾಣದಲ್ಲೂ ತೊಡಗಲಿಲ್ಲ. ಆ ಕೆಲಸ ಮಾಡಿದ್ದು ಮಹಮದ್ ಗೋರಿ. ಆದ್ದರಿಂದ ಮಹಾಭಾರತದ ರಚನೆ ಕ್ರಿಸ್ತಶಕ ೧೨೦೦ರವರೆಗೂ ನಡೆದೇ ಇತ್ತೆಂದು ಧಾರಾಳವಾಗಿ ಹೇಳಬಹುದು.

## ೪. ರಾಮಾಯಣ

'ಮಹಾಭಾರತ'ದಂತೆಯೇ 'ರಾಮಾಯಣ'ವೂ ಮೂರು ಆವೃತ್ತಿಗಳನ್ನು ಕೂಡಿದೆಯೆಂಬುದು ನಿಜ. 'ಮಹಾಭಾರತ'ದಲ್ಲಿ 'ರಾಮಾಯಣ' ಕುರಿತು ಎರಡು ಬಗೆಯ ಉಲ್ಲೇಖಗಳಿವೆ. ಒಂದು ಕಡೆ ಕರ್ತೃವಿನ ಪ್ರಸ್ತಾಪವೇ ಇಲ್ಲದೇ ಕೇವಲ 'ರಾಮಾಯಣ'ದ ಹೆಸರು ಬರುತ್ತದೆ. ಇನ್ನೊಂದು ಕಡೆ 'ವಾಲ್ಮೀಕಿ ರಾಮಾಯಣ' ಎಂಬ ಉಲ್ಲೇಖವೂ ಇದೆ. ಆದರೆ ಈಗಿರುವ 'ರಾಮಾಯಣ'ವಂತೂ ವಾಲ್ಮೀಕಿಯ ರಾಮಾಯಣವಲ್ಲ.[೧] ಸಿ.ವಿ.ವೈದ್ಯ[೨] ಅವರ ಅಭಿಪ್ರಾಯದಲ್ಲಿ:

"ಈಗಿನ 'ರಾಮಾಯಣ'ವನ್ನು ಸರ್ವಮಾನ್ಯ ಟೀಕಾಕಾರ ಕಟಕನೇ ಒಪ್ಪಿ ಅನುಮೋದಿಸಿದ್ದರೂ ಅದು ವಾಲ್ಮೀಕಿ ಬರೆದ ಮೂಲ 'ರಾಮಾಯಣ'ವಲ್ಲ ಎಂಬುದರಲ್ಲಿ ಯಾರಿಗೂ ಅನುಮಾನವಿರಲಾರದು. ನಾವು ಬಂಗಾಳ ಪಾಠವನ್ನು ನೋಡಲಿ, ಮುಂಬಯಿ ಪಾಠವನ್ನು ನೋಡಲಿ, ಈಗಿನ 'ರಾಮಾಯಣ'ದಲ್ಲಿ ತುಂಬಿಹೋಗಿರುವ ವಿಸಂಗತಿಗಳು, ಕೊಂಡಿ ತಪ್ಪಿದ ವಿವರಗಳು, ಹಳೆ ಹಾಗೂ ಹೊಸ ವಿಚಾರಗಳ ಸಮಾಂತರ ಮಂಡನೆ ಇವು ಕುತೂಹಲಕ್ಕೆ ಕಾವ್ಯ ಓದುವವನಿಗೂ ಒಡೆದು ಕಾಣಿಸುತ್ತದೆ. ಆದ್ದರಿಂದ 'ವಾಲ್ಮೀಕಿ ರಾಮಾಯಣ'ವನ್ನು ನಂತರದ ದಿನಗಳಲ್ಲಿ ಸಾಕಷ್ಟು ಪುನರ್‌ರಚಿಸಲಾಗಿದೆಯೆಂಬ ನಿರ್ಧಾರಕ್ಕೆ ಬರಲೇಬೇಕಾಗುತ್ತದೆ."

'ಮಹಾಭಾರತ'ದಂತೆಯೇ 'ರಾಮಾಯಣ'ದ ವಸ್ತುವೂ ಅಂಗವೃದ್ಧಿ ಹೊಂದಿದೆ. ಮೂಲದಲ್ಲಿ ಅದು ರಾಮನ ಪತ್ನಿ ಸೀತೆಯನ್ನು ರಾವಣ ಅಪಹರಿಸಿದ್ದರಿಂದ ಉಂಟಾದ ರಾಮ–ರಾವಣರ ಕಾಳಗದ ಕತೆ. ಎರಡನೇ ಆವೃತ್ತಿಯಲ್ಲಿ ಇದೇ ನೀತಿಬೋಧೆ ಸಹಿತ ಕತೆಯಾಯಿತು. ಶುದ್ಧ ಚಾರಿತ್ರಿಕ ಕೃತಿಯಿಂದ ಸಾಮಾಜಿಕ, ನೈತಿಕ ಹಾಗೂ ಧಾರ್ಮಿಕ ಕರ್ತವ್ಯಗಳನ್ನು ಬೋಧಿಸುವ ಉಪದೇಶಾತ್ಮಕ ಸಂಹಿತೆಯಾಗಿ ಬೆಳೆಯಿತು. ಇದೇ ಮೂರನೇ ಆವೃತ್ತಿಯ ರೂಪ ತಳೆದಾಗ ಇದೂ ಕೂಡ ಮತ್ತೆ 'ಮಹಾಭಾರತ'ದಂತೆಯೇ ದಂತೆಕತೆಗಳು, ಜ್ಞಾನ, ಕಲಿಕೆ, ತತ್ವಶಾಸ್ತ್ರ ಮತ್ತಿತರ ಕಲೆ ವಿಜ್ಞಾನಗಳ ಭಂಡಾರವಾಯಿತು.

ಇನ್ನು 'ರಾಮಾಯಣ' ರಚನೆಯ ಕಾಲಕ್ಕೆ ಬಂದರೆ ರಾಮನ ಕತೆ ಪಾಂಡುವಿನ ಕತೆಗಿಂತಲೂ ಹಳೆಯದೆಂದು ಸಿದ್ಧವಾಗಿದೆ. ಆದರೆ 'ರಾಮಾಯಣ'ದ ರಚನೆಯೂ 'ಮಹಾಭಾರತ'ದ ರಚನೆಯ ಜೊತೆಗೇ ಸಮಾಂತರದಲ್ಲಿ ನಡೆದುಬಂದಿದೆ. ರಾಮಾಯಣದ ಕೆಲವು ಭಾಗಗಳು ಮಹಾಭಾರತಕ್ಕಿಂತ ಹಿಂದಿನದಿರಬಹುದು. ಆದರೆ, 'ಮಹಾಭಾರತ'ದ ಬಹುಭಾಗ ರಚನೆಯಾದ ಮೇಲೆಯೇ 'ರಾಮಾಯಣ'ದ ಬಹುಭಾಗ ಅಸ್ತಿತ್ವಕ್ಕೆ ಬಂತೆಂಬುದರಲ್ಲಿ ಸಂದೇಹವಿರಲಾರದು.[೩]

## ೫. ಪುರಾಣಗಳು

ಈಗಿರುವ ಪುರಾಣಗಳ[೪] ಸಂಖ್ಯೆ ೧೮. ಆದರೂ ಇದು ಮೂಲ ಸಂಖ್ಯೆಯಲ್ಲ. ಸಂಪ್ರದಾಯಗಳನ್ನು ಗಮನಿಸಿ ಹೇಳುವುದಾದರೆ ಮೂಲದಲ್ಲಿ ಒಂದೇ ಪುರಾಣವಿತ್ತು ಎಂದು ಊಹಿಸಲು ಆಕ್ಷೇಪವೇನಿಲ್ಲ. ಈ

---

೧. ಹಾಪ್‌ಕಿನ್ಸ್ "ದಿ ಗ್ರೇಟ್ ಎಪಿಕ್ ಆಫ್ ಇಂಡಿಯಾ" ಪು. ೬೨

೨. "ದಿ ರಿಡ್ಲ್ ಆಫ್ ದಿ ರಾಮಾಯಣ" ಅಧ್ಯಾಯ ೨. ಪುಟ ೬

೩. 'ರಾಮಯಣ' 'ಮಹಾಭಾರತ' ಸಮಾಂತರ ಬೆಳವಣಿಗೆ ವಿವರಗಳಿಗಾಗಿ ಹಾಪ್‌ಕಿನ್ಸ್ ಕೃತಿ ಅನುಬಂಧ ನೋಡಿ.

೪. ಪುರಾಣ ಕುರಿತ ಈ ಕೆಳಗಿನ ವಿವರಗಳಿಗಾಗಿ ನಾನು ಕಾಳೆಯವರ 'ಪುರಾಣ ನಿರೀಕ್ಷಣ' (ಮರಾಠಿ) ಮತ್ತು ಪರ್ಗಿಟಾರ್ ಅವರ 'ಏನ್ಷಿಯಂಟ್ ಇಂಡಿಯನ್ ಹಿಸ್ಟಾರಿಕಲ್ ಟ್ರೆಡಿಷನ್'ಗಳನ್ನು ಬಳಸಿದ್ದೇನೆ.

ಪುರಾಣವು ವೇದಗಳಿಗಿಂತ ಪ್ರಾಚೀನವಾದುದೆಂದು ಸಂಪ್ರದಾಯದ ಆರೋಪ. ಅಥರ್ವವೇದ ಈ ಪುರಾಣದ ಪ್ರಸ್ತಾಪ ಮಾಡಿದರೆ, ಬ್ರಹ್ಮಾಂಡ ಪುರಾಣವು ಅದು ವೇದಕ್ಕಿಂತ ಹಳೆಯದು ಎನ್ನುತ್ತದೆ. ಈ ಪುರಾಣವು ರಾಜನು ಶಪಪಾದಕ್ಕಾಗಿ ತಿಳಿದಿರಬೇಕಾದ ಗಾಥೆಯಾಗಿತ್ತು. ಯಜ್ಞದ ಹತ್ತನೇ ದಿನ ಅಧ್ವರ್ಯುವು ರಾಜನಿಗೆ ಪುರಾಣಪಠನ ಮಾಡಬೇಕಿತ್ತೆಂದು ಬ್ರಾಹ್ಮಣ ಹೇಳುತ್ತದೆ.

ಪುರಾಣಗಳ ಉಗಮಕ್ಕೆ ವ್ಯಾಸನೇ ಕಾರಣಕರ್ತನೆಂದು ಹೇಳಲಾಗಿದ್ದು ಆತನು ಒಂದೇ ಪುರಾಣಕ್ಕೆ ಕೂಡಿ ಕಳೆದು ೧೮ ಪುರಾಣಗಳನ್ನು ರೂಪಿಸಿದ ಎನ್ನಲಾಗಿದೆ. ಅಂದರೆ ಪುರಾಣದ ವಿಕಾಸದಲ್ಲಿ ೧೮ ಪುರಾಣಗಳನ್ನು ಸೃಷ್ಟಿ ಎರಡನೇ ಹಂತ. ವ್ಯಾಸನು ಪ್ರಕಟಿಸಿದ ಅಥವಾ ಪಠಿಸಿದ ಈ ೧೮ ಪುರಾಣಗಳ ಆವೃತ್ತಿಯನ್ನು ಆದಿಪುರಾಣ[೧] ಅಂದರೆ ವ್ಯಾಸನು ಹೊರತಂದ ಮೂಲ ಆವೃತ್ತಿ ಎಂದು ಕರೆಯಲಾಗಿದೆ. ಈ ಹದಿನೆಂಟು ಪುರಾಣಗಳನ್ನು ರಚಿಸಿದ ಮೇಲೆ ವ್ಯಾಸನು ಅವುಗಳನ್ನು ತನ್ನ ಶಿಷ್ಯ ರೋಮ ಹರ್ಷಣನಿಗೆ ಬೋಧಿಸಿದ. ರೋಮಹರ್ಷಣ ಪುರಾಣಗಳ ತನ್ನದೇ ಆವೃತ್ತಿಯನ್ನು ಸಿದ್ಧಪಡಿಸಿ ಅದನ್ನು ತನ್ನ ಆರು ಮಂದಿ ಶಿಷ್ಯರಿಗೆ ಬೋಧಿಸಿದ. ಹಾಗೆ ರೋಮಹರ್ಷಣನ ಕೃತಿ–ಪುರಾಣಗಳ ಮೂರನೇ ಆವೃತ್ತಿಯಾಯಿತು. ರೋಮಹರ್ಷಣನ ಆರು ಮಂದಿ ಶಿಷ್ಯರಲ್ಲಿ ಮೂವರಾದ ಕಶ್ಯಪ, ಸವರ್ಣಿ ಮತ್ತು ವ್ಯಶಂಪಾಯನರು ಮೂರು ಆವೃತ್ತಿಗಳನ್ನು ರೂಪಿಸಿದರು. ಅವರ ಹೆಸರುಗಳಿಂದಲೇ ಪರಿಚಿತವಾದ ಆ ಪುರಾಣಗಳು ನಾಲ್ಕನೇ ಆವೃತ್ತಿ ಎಂದಾಯಿತು. ಭವಿಷ್ಯ ಪುರಾಣದ ಪ್ರಕಾರ ದೊರೆ ವಿಕ್ರಮಾದಿತ್ಯನ[೨] ರಾಜ್ಯಭಾರ ಕಾಲದಲ್ಲಿ ಪುರಾಣಗಳನ್ನು ಪುನರ್‌ರೂಪಿಸಲಾಯಿತು.

ಇನ್ನು ಪುರಾಣಗಳ ವಸ್ತು ವಿಷಯ ಕುರಿತು ಹೇಳುವುದಾದರೆ, ಅನಾದಿ ಕಾಲದಿಂದಲೂ ಪುರಾಣ ಎನ್ನುವುದು ಮನ್ನಣೆ ಪಡೆದ ಜ್ಞಾನಶಾಖೆ. ಉದಾಹರಣೆಗೆ, ಇದು ಇತಿಹಾಸಕ್ಕಿಂತ ಭಿನ್ನವಾದುದು. ಇತಿಹಾಸವೆಂದರೆ ಆಡಳಿತಾರೂಢ ದೊರೆಗಳಿಗೆ ಸಂಬಂಧಪಟ್ಟ ಗತ ವಿವರಗಳು ಎಂದರ್ಥ. ಆಖ್ಯಾನವೆಂದರೆ ಒಬ್ಬನು ಕಣ್ಣಾರೆ ಕಂಡ ಘಟನೆಯ ಪಠನ. ಉಪಾಖ್ಯಾನವೆಂದರೆ ಕೇಳಿದ ವಿಷಯಗಳ ಪಠನ. ಗಾಥೆ ಎಂದರೆ ಆಗಿಹೋದ ಪೂರ್ವಿಕರು ಮತ್ತು ಪ್ರಕೃತಿ ವಿಶ್ವಗಳನ್ನು ಕುರಿತು ಗೀತೆಗಳು.

ಕಲ್ಪಶುದ್ಧಿ[೩] ಎನ್ನುವುದು ಶ್ರಾದ್ಧ ಮತ್ತು ಕಲ್ಪ[೪] ಕುರಿತ ಪ್ರಾಚೀನ ಕ್ರಿಯೆ. ಪುರಾಣವು ಇವೆಲ್ಲಕ್ಕಿಂತ ಭಿನ್ನವಾದದ್ದು. ಪುರಾಣವು ಐದು ವಿಚಾರಗಳಿಗೆ ಸಂಬಂಧಪಟ್ಟಿದ್ದು ೧. ಸ್ವರ್ಗ, ೨. ಪ್ರತಿಸರ್ಗ, ೩. ವಂಶ, ೪. ಮನ್ವಂತರ ಮತ್ತು ೫. ವಂಶಚರಿತ. ಸರ್ಗ ಎಂದರೆ ವಿಶ್ವದ ಸೃಷ್ಟಿ. ಪ್ರತಿಸರ್ಗವೆಂದರೆ ವಿಶ್ವದ ಲಯ. ವಂಶವೆಂದರೆ ವಂಶಾವಳಿ. ಮನ್ವಂತರವೆಂದರೆ ಬೇರೆ ಬೇರೆ ಮನುಗಳ ಅದರಲ್ಲೂ ಪೃಥ್ವಿಯ ಸೃಷ್ಟಿಕರ್ತರು ಅಥವಾ ಸಾರ್ವಭೌಮರಾದ ಹದಿನಾಲ್ಕು ಮನುಗಳ ಯುಗ. ವಂಶಚರಿತ ಎಂದರೆ ರಾಜವಂಶಗಳ ಕಥನ.

ಪುರಾಣಗಳ ವ್ಯಾಪ್ತಿ ಮತ್ತು ವಸ್ತು ವಿಷಯದಲ್ಲೂ ಬಹಳಷ್ಟು ಸೇರ್ಪಡೆಯಾಗಿದೆ. ಯಾಕೆಂದರೆ ನಮ್ಮಲ್ಲಿರುವ ಪುರಾಣಗಳು ಮೇಲ್ಕಂಡ ವಸ್ತು ವಿಷಯಗಳಿಗೆ ಮಾತ್ರ ಸೀಮಿತವಾಗಿಲ್ಲ. ಈ ವಿಷಯಗಳ

---

೧. ಆದಿಪುರಾಣವೆಂದರೆ ಆ ಹೆಸರಿನ ಪ್ರತ್ಯೇಕ ಪುರಾಣವಲ್ಲ. ಹಾಗೆಂದರೆ ೧೮ ಪುರಾಣಗಳ ಮೊದಲ ಆವೃತ್ತಿಗಳು ಎಂದರ್ಥ.

೨. ಯಾರು ಈ ವಿಕ್ರಮಾದಿತ್ಯ? ಯಾರೂ ಹೇಳಲು ಸಾಧ್ಯವಿಲ್ಲ.

೩. ಹಜಾರಾ ಅವರು ಕಲ್ಪಶುದ್ಧಿಯ ಬದಲು ಪರಂಪರಾಗತವಾಗಿ ಬಂದ ಗಾಥೆ 'ಕಲ್ಪಜೋಕ್ತ' ಬಗ್ಗೆ ಹೇಳುತ್ತಾರೆ. 'ಕ್ರಾನಾಲಜಿ ಆಫ್ ಪುರಾಣಾಸ್', ಪು. ೪.

೪. ಕಲ್ಪ ಪದಕ್ಕೆ ನಾನಾ ಅರ್ಥಗಳಿವೆ. ವ್ಯಾವಹಾರಿಕ, ಸಮಂಜಸ, ದಕ್ಷ, ಪವಿತ್ರ ನಿಯಮ, ವಿಧಾಯಕ ಪರ್ಯಾಮ, ಧಾರ್ಮಿಕ ವಿಧಿ ವಿಧಾನ, ವಿಶ್ವ ಲಯ, ಬ್ರಹ್ಮಯುಗದ ಒಂದು ದಿನ, ಶುಶ್ರೂಷೆ, ವೇದಾಂಗಗಳಲ್ಲೊಂದು......

ಜೊತೆಗೆ ಅವುಗಳ ವ್ಯಾಪ್ತಿಯಿಂದ ಸಂಪೂರ್ಣ ಹೊರಗಿರುವ ವಸ್ತು ವಿಷಯಗಳೂ ಪುರಾಣದಲ್ಲಿ ಸೇರಿವೆ. ಪುರಾಣದ ವ್ಯಾಪ್ತಿ ಕುರಿತ ಮೂಲ ಕಲ್ಪನೆಯಲ್ಲಿ ಎಷ್ಟರಮಟ್ಟಿಗೆ ಬದಲಾವಣೆಯಾಗಿದೆ ಎಂದರೆ ಕೆಲವು ಪುರಾಣಗಳು ಈ ವಸ್ತುಗಳಿಗೆ ಸ್ವಲ್ಪವೂ ಸಂಬಂಧವಿರದ ತೀರಾ ಹೊಸ ವಿಷಯಗಳನ್ನೊಳಗೊಂಡಿವೆ. ಆ ಹೆಚ್ಚುವರಿ ವಸ್ತುಗಳಲ್ಲಿ ಈ ಕೆಳಗಿನವು ಮುಖ್ಯವಾಗಿವೆ:

೧. ವರ್ಣಾಶ್ರಮ ಧರ್ಮ, ಆಚಾರ, ಆಹ್ನಿಕ, ಭಾಷ್ಯಾಭಾಷ್ಯ, ವಿವಾಹ, ಅಶೌಚ, ಶ್ರಾದ್ಧ, ದ್ರವ್ಯಶುದ್ಧಿ, ಪಾತಕ, ಪ್ರಾಯಶ್ಚಿತ್ತ, ನರಕ, ಕರ್ಮವಿಪಾಕ ಮತ್ತು ಯುಗಧರ್ಮಗಳನ್ನು ಚರ್ಚಿಸುವ 'ಸ್ಮೃತಿಧರ್ಮ'.

೨. ವ್ರತಗಳು, ಪವಿತ್ರ ದಿನಗಳ ಆಚರಣೆ ಕುರಿತ 'ವ್ರತ ಧರ್ಮ.'

೩. ಯಾತ್ರಾಸ್ಥಳಗಳು ಮತ್ತು ತೀರ್ಥಯಾತ್ರೆ ಕುರಿತ 'ಕ್ಷೇತ್ರ ಧರ್ಮ.'

೪. ಪುಣ್ಯಜೀವಗಳಿಗೆ ಉಡುಗೊರೆ ಕೊಡುವುದನ್ನು ಕುರಿತ 'ದಾನ ಧರ್ಮ'.

ಇವಿಷ್ಟಲ್ಲದೇ ಪುರಾಣಗಳು ಆಳವಾದ ಕಾಳಜಿ ವಹಿಸುವ ಇನ್ನೂ ಎರಡು ವಿಚಾರಗಳಿವೆ.

ಅದರಲ್ಲಿ ಮೊದಲನೆಯದು, ಪ್ರತ್ಯೇಕ ಪಂಥ ಪೂಜೆ ಕುರಿತದ್ದು. ನಿರ್ದಿಷ್ಟ ದೇವತೆ ಮತ್ತು ದೇವತಾ ಪೂಜೆಯನ್ನು ಎತ್ತಿಹಿಡಿಯುವ ಪುರಾಣಗಳಿವೆ. ಐದು[೧] ಪುರಾಣಗಳು ವಿಷ್ಣುಪೂಜೆಯನ್ನು ಎತ್ತಿಹಿಡಿದರೆ, ಎಂಟು[೨] ಶಿವಪೂಜೆಯ ಪರವಾಗಿವೆ. ಒಂದು[೩] ಬ್ರಹ್ಮಪೂಜೆ, ಒಂದು[೪] ಸೂರ್ಯಪೂಜೆ, ಎರಡು ದೇವಿಪೂಜೆ ಮತ್ತೊಂದು ಗಣೇಶಪೂಜೆಯನ್ನು ಪ್ರತಿಪಾದಿಸುತ್ತವೆ.

ಪುರಾಣಗಳ ಇನ್ನೊಂದು ವಸ್ತು ವಿಷಯವೆಂದರೆ ದೇವರ ಅವತಾರಗಳ ಚರಿತ್ರೆ, ಪುರಾಣಗಳ ಪ್ರಕಾರ ಇಬ್ಬರು ದೇವರ ಸಮೀಕರಣಕ್ಕೂ ಒಬ್ಬನೇ ದೇವರ ಬೇರೆ ಬೇರೆ ಅವತಾರಗಳಿಗೂ ವ್ಯತ್ಯಾಸವಿದೆ. ಸಮೀಕರಣದಲ್ಲಿ ಎರಡು ಹೆಸರಿದ್ದರೂ ದೇವರು ಒಬ್ಬನೇ ಎಂದರ್ಥ. ಅವತಾರದಲ್ಲಾದರೆ ಒಬ್ಬನೇ ದೇವರು ಇನ್ನೊಬ್ಬ ವ್ಯಕ್ತಿ ಅಥವಾ ಪ್ರಾಣಿಯಾಗಿ ರೂಪು ತಳೆದವನಾದರೂ ಪವಾಡ ಮಾಡುತ್ತಾನೆ. ಈ ಅವತಾರ ಚರಿತ್ರೆಯ ಮುಖ್ಯ ದೇವರು ವಿಷ್ಣು. ಯಾಕೆಂದರೆ ವಿಷ್ಣುವೊಬ್ಬನೇ ಕಾಲಕಾಲಕ್ಕೆ ಅವತಾರವೆತ್ತಿ ಪವಾಡಗಳನ್ನು ಮಾಡಿದ್ದಾನೆ. ಪುರಾಣಗಳು ಈ ಹೊಸ ವಿಚಾರವನ್ನು ಸವಿಸ್ತಾರವಾಗಿ ಚರ್ಚಿಸಿರುವವು.

ಈ ಹೊಸ ವಸ್ತು ವಿಚಾರಗಳ ಸೇರ್ಪಡೆಯಿಂದಾಗಿ ಪುರಾಣಗಳು ಗುರುತೇ ಸಿಕ್ಕದಷ್ಟು ರೂಪಾಂತರ ಹೊಂದಿರುವುದರಲ್ಲಿ ಆಶ್ಚರ್ಯವೇನಿಲ್ಲ.

ಪುರಾಣಗಳ ಗ್ರಂಥಕರ್ತರ ಕುರಿತಂತೆ ಇನ್ನೊಂದು ಗಮನಾರ್ಹ ಸಂಗತಿಯಿದೆ. ಅದೆಂದರೆ ಪುರಾಣಗಳ ಗ್ರಂಥಕರ್ತರ ಬದಲಾವಣೆ. ಪ್ರಾಚೀನ ಹಿಂದೂ ಸಾಹಿತ್ಯಿಕ ವಲಯದಲ್ಲಿ ಎರಡು ಪ್ರತ್ಯೇಕ ವರ್ಗಗಳಿದ್ದವು. ಬ್ರಾಹ್ಮಣರದು ಒಂದು ವರ್ಗವಾದರೆ, ಸೂತರೆಂಬ ಬ್ರಾಹ್ಮಣೇತರರದು ಇನ್ನೊಂದು ವರ್ಗ. ಈ ಎರಡು ವರ್ಗಗಳ ಸಾಹಿತ್ಯ ಶಾಖೆಗಳೂ ಬೇರೆ ಬೇರೆಯಾಗಿದ್ದವು. ಪುರಾಣಗಳ ವಿಷಯದಲ್ಲಿ ಸೂತರದ್ದೇ ಏಕಸ್ವಾಮ್ಯ. ಪುರಾಣಗಳ ರಚನೆ ಅಥವಾ ಪಠನದಲ್ಲಿ ಬ್ರಾಹ್ಮಣರದ್ದೇನೂ ಇರಲಿಲ್ಲ. ಪುರಾಣಗಳು ಸೂತರಿಗೆ ಮಾತ್ರ ಮೀಸಲಾದ ಶಾಖೆಯಾಗಿತ್ತು. ಸೂತರು ಪುರಾಣಗಳ ರಚನೆ, ಪಠನದಲ್ಲಿ ಸಿದ್ಧಿ ಗಳಿಸಿದ್ದರು ಆ

---

೧. ವಿಷ್ಣು, ಭಾಗವತ, ನಾರದ, ವಾಮನ ಮತ್ತು ಗರುಡ ಪುರಾಣಗಳು.

೨. ಶಿವ, ಬ್ರಹ್ಮ, ಲಿಂಗ, ವರಾಹ, ಸ್ಕಂದ, ಮತ್ಸ್ಯ, ಕೈರ್ಮ ಮತ್ತು ಬ್ರಹ್ಮಾಂಡ ಪುರಾಣಗಳು.

೩. 'ಪದ್ಮಪುರಾಣ'.

೪. 'ಅಗ್ನಿಪುರಾಣ.'

ಕ್ಷೇತ್ರದಲ್ಲಿ ವಂಶ ಪರಂಪರಾಗತ ಶಾಖೆಯನ್ನೂ ತಮ್ಮ ಅಧಿಪತ್ಯಕ್ಕೇ ತೆಗೆದುಕೊಂಡರು. ಹೀಗೆ ಪುರಾಣ ರಚನಾಕಾರರಲ್ಲೂ ಬದಲಾವಣೆಯಾಯಿತು. ಸೂತರ ಬದಲು ಬ್ರಾಹ್ಮಣರೇ ಕರ್ತೃಗಳಾದರು.[೧]

ಹೀಗೆ ಪುರಾಣಗಳು ಬ್ರಾಹ್ಮಣರ ಕೈವಶವಾದ ಮೇಲೆಯೇ ಬಹುಶಃ ಹೊಸ ವಸ್ತು ವಿಷಯಗಳನ್ನು ಸೇರಿಸಲು ಅನುವಾಗುವಂತೆ ಪುರಾಣಗಳ ಸಂಗ್ರಹ ಹಾಗೂ ಪುನರ್‌ರಚನೆಯಾಯಿತೆಂದು ತೋರುತ್ತದೆ. ಈ ಬಗೆಯ ಸಂಗ್ರಹ ಹಾಗೂ ಪುನರ್‌ರಚನೆ ಅತ್ಯಂತ ನಿರ್ಭಿಡೆಯ ಸ್ವರೂಪದ್ದಾಗಿತ್ತು. ಯಾಕೆಂದರೆ ಹಾಗೆ ಮಾಡುವಾಗ ಅವರು ಹೊಸ ಅಧ್ಯಾಯಗಳನ್ನೇ ಸೇರಿಸಿದ್ದಾರೆ, ಹಳೆ ಅಧ್ಯಾಯಗಳ ಜಾಗದಲ್ಲಿ ಹೊಸ ಅಧ್ಯಾಯಗಳನ್ನು ಬರೆದಿದ್ದಾರೆ ಮತ್ತು ಹಳೆ ಅಧ್ಯಾಯಗಳ ಹೆಸರಲ್ಲಿ ಹೊಸ ಅಧ್ಯಾಯಗಳನ್ನು ಬರೆದಿದ್ದಾರೆ. ಈ ಪ್ರಕ್ರಿಯೆಯಲ್ಲಿ ಕೆಲವು ಪುರಾಣಗಳು ಹಳೆಯ ವಸ್ತು ವಿಷಯಗಳನ್ನು ಉಳಿಸಿಕೊಂಡಿವೆ. ಕೆಲವು ಕಳೆದುಕೊಂಡಿವೆ ಮತ್ತೆ ಕೆಲವು ಹೊಸ ವಿಷಯಗಳನ್ನು ಸಂಪಾದಿಸಿದೆ. ಇನ್ನೂ ಕೆಲವು ಪೂರ್ತಿ ಹೊಸ ಕೃತಿಗಳಾಗಿಯೇ ಮಾರ್ಪಟ್ಟಿವೆ.

ಪುರಾಣಗಳ ರಚನೆ ಕಾಲವನ್ನು ನಿಗದಿ ಮಾಡುವ ಸಮಸ್ಯೆಯತ್ತ ಯಾರೂ ಗಮನ ಹರಿಸಿಲ್ಲ. ಬ್ರಾಹ್ಮಣರು ಬರೆದ ಎಲ್ಲ ಇತಿಹಾಸವೂ ಇಸವಿ ದಿನಾಂಕವಿಲ್ಲದ ಇತಿಹಾಸ. ಇದಕ್ಕೆ ಪುರಾಣವೂ ಹೊರತಲ್ಲ. ಹಾಗಾಗಿ ಕಾಲಮಾನ ಗೊತ್ತಿರುವಂಥ ಸಾಂದರ್ಭಿಕ ಘಟನೆಗಳ ಆಧಾರದ ಮೇಲೆಯೇ ಪುರಾಣಗಳ ಕಾಲವನ್ನೂ ನಿಷ್ಕರ್ಷೆ ಮಾಡಬೇಕಿದೆ. ಇತರೆ ಬ್ರಾಹ್ಮಣ ಸಾಹಿತ್ಯದ ಕಾಲ ನಿಷ್ಕರ್ಷೆಗೆ ಕೊಟ್ಟ ಗಮನವನ್ನು ಪುರಾಣಗಳಿಗೆ ಕೊಟ್ಟಿಲ್ಲ. ಅಷ್ಟೇಕೆ, ವಿದ್ವಾಂಸರು ಪುರಾಣಗಳನ್ನು ಪರಿಶೀಲಿಸಿದೆಯೇ ಇಲ್ಲ ಅಥವಾ ವೈದಿಕ ಸಾಹಿತ್ಯಕ್ಕೆ ಅವರು ಕೊಟ್ಟ ಗಮನದ ಸ್ವಲ್ಪ ಭಾಗವನ್ನೂ ಇತ್ತ ಹರಿಸಿಲ್ಲ. ಪುರಾಣ ರಚನೆ ಕಾಲಕ್ಕೆ ಸಂಬಂಧಿಸಿದಂತೆ ನನಗೆ ಗೊತ್ತಿರುವ ಮಟ್ಟಿಗೆ ಪ್ರಯತ್ನ ನಡೆದಿರುವುದು ಹರಾಜಾ ಅವರ ಕೃತಿಯೊಂದರಲ್ಲೇ. ಅವರು ಪತ್ತೆ ಮಾಡಿದಂಥ ಪುರಾಣಗಳ ಕಾಲವನ್ನು ಇಲ್ಲಿ ಕೊಡುತ್ತೇನೆ:

| | ಪುರಾಣಗಳು | ರಚನೆಯ ಕಾಲ |
|---|---|---|
| ೧. | ಮಾರ್ಕಂಡೇಯ | ಕ್ರಿಸ್ತ ಶಕ ೨೦೦–೬೦೦ |
| ೨. | ವಾಯು | ಕ್ರಿ.ಶ. ೨೦೦–೫೦೦ |
| ೩. | ಬ್ರಹ್ಮಾಂಡ | ಕ್ರಿ.ಶ. ೨೦೦–೫೦೦ |
| ೪. | ವಿಷ್ಣು | ಕ್ರಿ.ಶ. ೧೦೦–೩೫೦ |
| ೫. | ಮತ್ಸ್ಯ | ಭಾಗಶಃ ಸುಮಾರು ಕ್ರಿ.ಶ. ೩೨೫ |
| | | ಭಾಗಶಃ ಸುಮಾರು ಕ್ರಿ.ಶ. ೧೧೦೦ |
| ೬. | ಭಾಗವತ | ಕ್ರಿ.ಶ. ೫೦೦–೬೦೦ |
| ೭. | ಕೂರ್ಮ | ಕ್ರಿ.ಶ. ೫೫೦–೧೦೦೦ |
| ೮. | ವಾಮನ | ಕ್ರಿ.ಶ. ೭೦೦–೧೦೦೦ |
| ೯. | ಲಿಂಗ | ಕ್ರಿ.ಶ. ೬೦೦–೧೦೦೦ |
| ೧೦. | ವರಾಹ | ಕ್ರಿ.ಶ. ೮೦೦–೧೫೦೦ |
| ೧೧. | ಪದ್ಮ | ಕ್ರಿ.ಶ. ೬೦೦–೯೫೦ |

೧. ಪರ್ಗಿಟರ್.

| | |
|---|---|
| ೧೨. ಬೃಹನಾರದೀಯ | ಕ್ರಿ.ಶ. ೮೭೫–೧೦೦೦ |
| ೧೩. ಅಗ್ನಿ | ಕ್ರಿ.ಶ. ೮೦೦–೯೦೦ |
| ೧೪. ಗರುಡ | ಕ್ರಿ.ಶ. ೮೫೦–೧೦೦೦ |
| ೧೫. ಬ್ರಹ್ಮ | ಕ್ರಿ.ಶ. ೯೦೦–೧೦೦೦ |
| ೧೬. ಸ್ಕಂದ | ಕ್ರಿ.ಶ. ೭೦೦ರ ನಂತರ |
| ೧೭. ಬ್ರಹ್ಮ ವೈವರ್ತ | ಕ್ರಿ.ಶ. ೭೦೦ರ ನಂತರ |
| ೧೮. ಭವಿಷ್ಯ | ಕ್ರಿ.ಶ. ೫೦೦ರ ನಂತರ |

ಇದಕ್ಕಿಂತ ಹೆಚ್ಚು ನಿಖರವಾದ ಕಾಲ ನಿಷ್ಕರ್ಷೆ ಸದ್ಯಕ್ಕಂತೂ ಸಾಧ್ಯವಿಲ್ಲ. ಈ ನಿಷ್ಕರ್ಷೆಯ ಗರಿಷ್ಠ ಹಾಗೂ ಕನಿಷ್ಠ ದಿನಾಂಕಗಳನ್ನು ಇನ್ನಷ್ಟು ಹೊಸ ಸಂಶೋಧನೆಯ ಮೂಲಕ ಇನ್ನೂ ನಿಕಟಗೊಳಿಸಬಹುದೇನೋ. ಅಂದರೂ ಆ ವ್ಯತ್ಯಾಸವು ಪ್ರಮಾಣದ ವ್ಯತ್ಯಾಸವಾಗಬಹುದಷ್ಟೇ. ಯುಗಗಳೇ ಬದಲಾಗುವಂಥ ವ್ಯತ್ಯಾಸವಾಗಲಾರದು.

ಈ ಸಾಹಿತ್ಯ ಬುದ್ಧೋತ್ತರ ಸಾಹಿತ್ಯವೆನ್ನಲು ಈ ದಿನಾಂಕಗಳ ಕ್ಷಿಪ್ರ ಸಮೀಕ್ಷೆಯೇ ಸಾಕಾಗುತ್ತದೆ. ಈ ಸಮೀಕ್ಷೆ ಇನ್ನೂ ಒಂದು ಮಹತ್ವದ ಅಂಶವನ್ನು ಸ್ಥಾಪಿಸುತ್ತದೆ. ಅಂದರೆ ಪುಷ್ಯಮಿತ್ರನ ನೇತೃತ್ವದಲ್ಲಿ ಬ್ರಾಹ್ಮಣರು ದಿಗ್ವಿಜಯ ಗಳಿಸಿದ ನಂತರದ ಕಾಲದಲ್ಲೇ ಈ ಸಾಹಿತ್ಯ ಅಸ್ತಿತ್ವಕ್ಕೆ ಬಂದಿದೆ. ಇನ್ನೂ ಒಂದು ಅಂಶ ಸಮೀಕ್ಷೆಯಿಂದ ಹೊರಬರುತ್ತದೆ. ಭಗವದ್ಗೀತೆ ಹಾಡುತ್ತಾನೆ. ವ್ಯಾಸನೇ ಪುರಾಣಗಳನ್ನೂ ಬರೆಯುತ್ತಾನೆ. ಮಹಾಭಾರತದಲ್ಲಿ ೧೮ ಪರ್ವಗಳಿವೆ. ಗೀತೆಯಲ್ಲಿ ೧೮ ಅಧ್ಯಾಯಗಳಿವೆ. ಪುರಾಣಗಳ ಸಂಖ್ಯೆಯೂ ೧೮. ಇವೆಲ್ಲ ಕೇವಲ ಆಕಸ್ಮಿಕವೇ? ಅಥವಾ ಪೂರ್ವಯೋಜನೆಯೊಂದಿಗೆ ಅನುಷ್ಠಾನಗೊಂಡ ಒಂದು ಹಂಚಿಕೆಯೇ? ಕಾದು ನೋಡಬೇಕು.

# III

## ವೇದಾಂತ ಸೂತ್ರಗಳು

ಬಾದರಾಯಣನ ವೇದಾಂತ ಸೂತ್ರಗಳು ಈ ಮೊದಲೇ ಹೇಳಿದ ಹಾಗೆ ಜೈಮಿನಿಯ ಕರ್ಮಸೂತ್ರಗಳ ಮಾದರಿಯಲ್ಲೇ ಇರುವ ಅಧ್ಯಯನ ಶಾಖೆ. ಈ ಎರಡೂ ವಿಚಾರ ಪಂಥಗಳು ಪರಸ್ಪರ ಎಂಥ ಭಾವನೆ ತಳೆದಿವೆ ಎಂಬ ಪ್ರಶ್ನೆ ಸಹಜವಾಗಿಯೇ ಉದ್ಭವವಾಗುತ್ತದೆ. ಈ ವಿಚಾರದಲ್ಲಿ ಶೋಧನೆ ಆರಂಭಿಸಿದಾಗ ಕೆಲವು ಕೌತುಕದ ಸತ್ಯಗಳು ಹೊರಬೀಳುತ್ತವೆ. ಮೊದಲನೆಯದಾಗಿ, ಪ್ರೊ. ಬೆಳವಕರ್[೧] ಹೇಳುವಂತೆ "ವೇದಾಂತ ಸೂತ್ರಗಳು ಕರ್ಮಸೂತ್ರಗಳ ಮಾದರಿಯನ್ನೇ ನಿಕಟವಾಗಿ ಅನುಸರಿಸಿವೆ." ವಿಧಾನ ಮತ್ತು ಪರಿಭಾಷೆಗಳ ವಿಷಯದಲ್ಲಿ ಬಾದರಾಯಣನಂತೂ ಜೈಮಿನಿಯನ್ನು ಗುಲಾಮನಂತೆ ಹಿಂಬಾಲಿಸಿದ್ದಾನೆ. ಈತ ಶ್ರುತಿಪಾಠಗಳಲ್ಲಿ ಜೈಮಿನಿಯ ವ್ಯಾಖ್ಯಾನವನ್ನೇ ಒಪ್ಪಿಕೊಳ್ಳುತ್ತಾನೆ. ಜೈಮಿನಿ ಬಳಸಿದ ತಾಂತ್ರಿಕ ಶಬ್ದಗಳನ್ನೇ, ಅದೇ ಅರ್ಥದಲ್ಲೇ ಈತ ಬಳಸುತ್ತಾನೆ. ಜೈಮಿನಿ ಕೊಡುವ ಉದಾಹರಣೆಗಳನ್ನೇ ಈತನು ಕೊಡುತ್ತಾನೆ.

೧. 'ಬಸು ಮಲ್ಲಿಕ್ ಉಪನ್ಯಾಸಗಳು', ಪು. ೧೫೨

ಇದರಲ್ಲಿ ಹೆಚ್ಚು ಆಶ್ಚರ್ಯವಾಗಬೇಕಾದ್ದೇನೂ ಇಲ್ಲ. ಆದರೆ ಆಶ್ಚರ್ಯವಾಗುವುದು ಸಿದ್ಧಾಂತದ ವಿಷಯಗಳಲ್ಲಿ ಈ ಎರಡೂ ಪಂಥಗಳಿಗಿರುವ ಪರಸ್ಪರ ಧೋರಣೆಯನ್ನು ಕಂಡಾಗ. ಒಂದು ದೃಷ್ಟಾಂತ ಕೊಡುತ್ತೇನೆ.

ವೇದಾಂತಗಳ ಬಗ್ಗೆ ಜೈಮಿನಿ ನಿಲುವನ್ನು ವಿವರಿಸಲು ಬಾದರಾಯಣ ಕೆಳಗಿನ ಸೂತ್ರಗಳನ್ನು[೧] ಕೊಟ್ಟಿದ್ದಾನೆ.

೨. (ಯಜ್ಞಯಾಗಾದಿಗಳಿಗೆ ಆತ್ಮವು) ಪೂರಕವಾಗಿರುವುದರಿಂದ (ಆತ್ಮ ಜ್ಞಾನದ ಫಲಗಳು) ಕೇವಲ ಮಾಧ್ಯಮದ ಸ್ತುತಿಯಂತಾಗುತ್ತದೆ ಎಂದು ಜೈಮಿನಿ ಉವಾಚ..

> "ಜೈಮಿನಿ ಪ್ರಕಾರ, ವೇದಗಳು ಮೋಕ್ಷವೂ ಸೇರಿದಂತೆ ಕೆಲವು ಉದ್ದೇಶ ಸಾಧನೆಗೆ ಅಗತ್ಯವಾದ ಕ್ರಿಯೆಗಳನ್ನು ವಿಧಿಸುವ ಹೊರತು ಹೆಚ್ಚೇನೂ ಮಾಡುವುದಿಲ್ಲ. ವೇದಾಂತ ಹೇಳುವಂತೆ ಆತ್ಮಜ್ಞಾನ ಮಾತ್ರದಿಂದ ಯಾವ ಸ್ವತಂತ್ರ ಫಲಗಳೂ ದಕ್ಕುವುದಿಲ್ಲವೆಂದೂ ಆತ್ಮವು ಆ ಕ್ರಿಯೆಗಳಿಗೆ ನಿಯೋಗಿಯ ಮೂಲಕ ಮಾತ್ರ ಸಂಪರ್ಕ ಹೊಂದಿದೆಯೆಂದೂ ಜೈಮಿನಿ ವಾದಿಸುತ್ತಾನೆ. ತಾನು ಈ ದೇಹದಿಂದ ಭಿನ್ನ ಮತ್ತು ಸಾವಿನ ನಂತರ ಸ್ವರ್ಗಕ್ಕೆ ಹೋಗಿ ತನ್ನ ಯಜ್ಞಯಾಗಾದಿಗಳ ಫಲವುಣ್ಣುತ್ತೇನೆ ಎಂಬ ಅರಿವಿರದೆ ಯಾರೂ ಯಜ್ಞದಲ್ಲಿ ತೊಡಗುವುದಿಲ್ಲ. ಆತ್ಮಜ್ಞಾನಕ್ಕೆ ಸಂಬಂಧಪಟ್ಟ ಪಾಠವು ನಿಯೋಗಿಯ ಜ್ಞಾನಾರ್ಜನೆಗೆ ಸೀಮಿತವಾಗಿರುವುದರಿಂದ ಯಜ್ಞಕ್ರಿಯೆಗೆ ಅಧೀನವಾಗಿದೆ. ಆತ್ಮಜ್ಞಾನದ ಫಲಗಳೆಂದು ವೇದಾಂತ ಘೋಷಿಸುವ ಫಲಗಳು ಸ್ತುತಿಸುವ ರೀತಿಯಲ್ಲೇ ಇವೆ. ಯಾವ ರೀತಿ ಬೇರೆ ಬೇರೆ ವಸ್ತುಗಳು ಶುದ್ಧೀಕರಣದ ಮೂಲಕ ಯಜ್ಞಕ್ಕೆ ಅರ್ಹವಾಗುತ್ತವೋ, ಅದೇ ರೀತಿ ಆತ್ಮವು ದೇಹಾತೀತವೆಂಬ ಜ್ಞಾನದ ಮೂಲಕ ನಿಯೋಗಿಯ ಯಜ್ಞಕ್ರಿಯೆಗೆ ಅರ್ಹನಾಗುತ್ತಾನೆ ಎಂಬುದು ಜೈಮಿನಿಯ ವಾದ."
>
> ೩. (ಪವಿತ್ರ ಗ್ರಂಥಗಳ ಜ್ಞಾನಿಗಳ) ವರ್ತನೆ ಕುರಿತು ಹೀಗೆ ಹೇಳುವುದರಿಂದ "ವಿದೇಹದ ಸಾಮ್ರಾಜ್ಯ ಜನಕನು ಮಾಡಿದ ಯಜ್ಞದಲ್ಲಿ ಮುಕ್ತವಾಗಿ ದಾನ ನಡೆಯಿತು": (ಬೃ.೩.೧.೧) "ನಾನು ಯಜ್ಞ ಮಾಡುತ್ತೇನೆ, ಸ್ವಾಮಿಗಳೇ" (ಛಾ.೫.೧೧.೫). ಜನಕ ಹಾಗೂ ಅಶ್ವಪತಿಗಳಿಬ್ಬರೂ ಆತ್ಮಜ್ಞಾನಿಗಳು. ಅವರಿಗೆ ಆತ್ಮಜ್ಞಾನದಿಂದಲೇ ಮೋಕ್ಷ ಲಭಿಸುವಂತಿದ್ದರೆ ಯಜ್ಞದ ಅಗತ್ಯವೇ ಇರುತ್ತಿರಲಿಲ್ಲ. ಆದರೆ ಅವರಿಬ್ಬರೂ ಯಜ್ಞಯಾಗಾದಿಗಳಲ್ಲಿ ತೊಡಗಿದ್ದರೆಂದು ಮೇಲಿನ ಪಾಠಗಳೇ ತೋರಿಸುತ್ತವೆ. ಇದರಿಂದ ವೇದಾಂತಿಗಳು ಹೇಳುವಂತೆ ಮೋಕ್ಷಸಾಧನೆಗೆ ಯಜ್ಞ ಹಾದಿಯೇ ಹೊರತು ಆತ್ಮಜ್ಞಾನವಲ್ಲ ಎಂಬುದು ಸಾಬೀತಾಗುತ್ತದೆ.
>
> ೪. (ಆತ್ಮಜ್ಞಾನವು ಯಜ್ಞಕ್ಕೆ ಅಧೀನವಾಗಿದೆಯೆಂಬುದನ್ನು) ಪವಿತ್ರ ಗ್ರಂಥಗಳೇ ಸಾರುತ್ತವೆ: (ಛಾ.೧.೧.೧೧). ಜ್ಞಾನವು ಯಜ್ಞದ ಅಂಗವೆಂಬುದನ್ನು ಈ ಪಾಠ ಸ್ಪಷ್ಟವಾಗಿ ತೋರುತ್ತದೆ.
>
> ೫. (ಆತ್ಮದೊಂದಿಗೆ) ಜ್ಞಾನ, ಕರ್ಮಗಳೆರಡೂ ಸೇರಿ ಫಲಕಾರಿಯಾಗುವುದರಿಂದ: "ಜ್ಞಾನ, ಕರ್ಮ ಹಾಗೂ ಅನುಭವಗಳು ಅದನ್ನು ಹಿಂಬಾಲಿಸುತ್ತವೆ. (ಬೃ.೪.೪.೨) ಜ್ಞಾನ ಹಾಗೂ ಕರ್ಮಗಳೆರಡೂ ಜೊತೆಗೂಡಿ ಹೋಗಿ ಭೋಗದ ಫಲವನ್ನು ಸೃಷ್ಟಿಸುತ್ತವೆಂದು

೧. ಸ್ವಾಮಿ ವೀರೇಶ್ವರಾನಂದ: 'ಬ್ರಹ್ಮಸೂತ್ರಗಳು' (ಅದ್ವೈತ ಆಶ್ರಮ ಪ್ರಕಟನೆ, ೧೯೩೬), ಪು. ೪೦೮-೪೧೧.

ಈ ಪಾಠದಿಂದ ಸ್ಪಷ್ಟವಾಗುತ್ತದೆ. ಆದ್ದರಿಂದ ಜ್ಞಾನವೊಂದೇ ಸ್ವತಂತ್ರವಾಗಿ ಯಾವ ಫಲಿತವನ್ನೂ ಸೃಷ್ಟಿಸಲಾರದು."

೭. ಈ ವಿಧಾಯಕ ನಿಯಮಗಳಿಂದಾಗಿ "ಕರ್ಮವು ನೂರು ವರ್ಷ ಬದುಕುವ ಆಸೆ ಹುಟ್ಟಿಸುತ್ತದೆ" (ಈ. ೨)

"ಅಗ್ನಿಹೋತ್ರವೆಂಬ ಯಜ್ಞವು ಮುಪ್ಪು, ಸಾವಿನವರೆಗೆ ಫಲ ನೀಡುತ್ತದೆ. ಮುಪ್ಪು ಅಥವಾ ಸಾವಿನಿಂದಲೇ ಬಿಡುಗಡೆ ಸಾಧ್ಯ" (ಸತ್.ಬೃ.೧೨.೪.೧.೧.). ಇಂಥ ವಿಧಾಯಕ ನಿಯಮಗಳಿಂದಲೂ ಜ್ಞಾನವು ಕರ್ಮಕ್ಕೆ ಅಧೀನವಾಗಿರುವುದನ್ನು ಕಾಣಬಹುದು.

ಜೈಮಿನಿ ಮತ್ತು ಕರ್ಮಕಾಂಡ ಶಾಸ್ತ್ರಗಳನ್ನು ಕುರಿತಂತೆ ಬಾದರಾಯಣನ ನಿಲುವೇನು? ಈ ಸಂಗತಿಯು ಮೇಲಿನ ಸೂತ್ರಗಳಲ್ಲಿ ಕಂಡುಬರುವ ಜೈಮಿನಿಯ ವೇದಾಂತ ವಿರೋಧಕ್ಕೆ ಬಾದರಾಯಣ ಕೊಡುವ ಉತ್ತರದಲ್ಲಿ ಸ್ಪಷ್ಟವಾಗಿ ಬಿಂಬಿತವಾಗಿದೆ. ಈ ಉತ್ತರ ಈ ಕೆಳಗಿನ ಸೂತ್ರಗಳಲ್ಲಿ ಅರ್ಥವಾಗಿದೆ.[೧]

೮. ಆದರೆ (ಪರಮಾತ್ಮನು ನಿಯೋಗಿಗಿಂತ) ಭಿನ್ನ ಎಂದು (ಪವಿತ್ರ ಗ್ರಂಥಗಳು) ಬೋಧಿಸಿರುವುದರಿಂದ ಬಾದರಾಯಣನ (ದೃಷ್ಟಿ) ಸರಿಯಾದುದು. ಯಾಕೆಂದರೆ ಅದು (ಪವಿತ್ರ ಗ್ರಂಥಗಳಲ್ಲೇ) ಸ್ಪಷ್ಟವಾಗಿದೆ.

"೨–೭ ಸೂತ್ರಗಳು ಮೀಮಾಂಸಕರ ದೃಷ್ಟಿಯನ್ನು ನೀಡಿದರೆ ೮–೧೭ ಸೂತ್ರಗಳು ಇದನ್ನು ವಿರೋಧಿಸುತ್ತವೆ."

ವೇದಾಂತ ಪಾಠಗಳು ನಿಯೋಗಿಯಾದ ಸೀಮಿತ ಆತ್ಮವನ್ನು ಬೋಧಿಸುವುದಿಲ್ಲ. ನಿಯೋಗಿಗಿಂತ ಭಿನ್ನವಾದ ಪರಮಾತ್ಮನನ್ನು ಬೋಧಿಸುತ್ತವೆ. ಆದ್ದರಿಂದ ವೇದಾಂತಗಳು ಸಾರುವ ಆತ್ಮಜ್ಞಾನವು ನಿಯೋಗಿ ಹೊಂದಿದ ಆತ್ಮಜ್ಞಾನಕ್ಕಿಂತ ಭಿನ್ನವಾದುದು. ಎಲ್ಲ ಸೀಮಿತ ಲಕ್ಷಣಗಳಿಂದ ಮುಕ್ತವಾದ ಅಂಥ ಆತ್ಮದ ಜ್ಞಾನದಿಂದ ಪ್ರಯೋಜನವೇನು ಇಲ್ಲ. ಅಷ್ಟೇ ಅಲ್ಲ ಅದು ಎಲ್ಲ ಬೋಧಿಸುತ್ತದೆ ಎಂಬುದು ಈ ಕೆಳಗಿನ ಪಾಠಗಳಿಂದ ಸ್ಪಷ್ಟವಾಗುತ್ತದೆ. "ಸರ್ವವನ್ನೂ ಗ್ರಹಿಸುವವನು ಮತ್ತು ಸರ್ವಜ್ಞ" (ಮು.೧.೧.೯) "ನಿಶ್ಚಲ ನಿರ್ವಿಕಾರನ ಬಲಿಷ್ಠ ಆಳ್ವಿಕೆಯಲ್ಲಿ, ಓ ಗಾರ್ಗಿ" ಇತ್ಯಾದಿ (ಬೃ.೩.೮.೯).

೯. ಆದರೆ ಶೃತಿಯ ಘೋಷಣೆಗಳು ಎರಡೂ ದೃಷ್ಟಿಗಳನ್ನು ಸಮಾನವಾಗಿ ಬೆಂಬಲಿಸುತ್ತವೆ.

"ಈ ಸೂತ್ರವು ಮೂರನೇ ಸೂತ್ರದಲ್ಲಿ ವ್ಯಕ್ತವಾದ ಅಭಿಪ್ರಾಯವನ್ನು ಅಲ್ಲಗಳೆಯುತ್ತದೆ. ಅಲ್ಲಿ ಜನಕ ಮತ್ತಿತರರು ಆತ್ಮಜ್ಞಾನ ಸಾಧಿಸಿದ ಮೇಲೂ ಕರ್ಮದಲ್ಲಿ ತೊಡಗಿದ್ದನ್ನು ತೋರಿಸಲಾಗಿತ್ತು. ಈ ಸೂತ್ರವು, ಜ್ಞಾನಿಯಾದವನಿಗೆ ಕರ್ಮ ಬೇಕಿಲ್ಲ ಎನ್ನಲು ಪವಿತ್ರ ಗ್ರಂಥಗಳ ಪ್ರಮಾಣವಿದೆ ಎಂದು ಹೇಳುತ್ತದೆ. "ಈ ಆತ್ಮವನ್ನು ಅರಿತೇ ಬ್ರಾಹ್ಮಣರು ಮಕ್ಕಳು, ಸಂಪತ್ತು ಮತ್ತು ಜಗತ್ತಿನ ಆಸೆ ತೊರೆದು ಸನ್ಯಾಸಿಯ ಜೀವನ ಬಾಳುತ್ತಾರೆ." (ಬೃ.೫.೫.೧)

'ಯಾಜ್ಞವಲ್ಕ್ಯರಂಥ ಆತ್ಮಜ್ಞಾನಿಗಳು ಕರ್ಮವನ್ನು ಬಿಟ್ಟರೆಂಬುದನ್ನು ಪವಿತ್ರ ಗ್ರಂಥಗಳಲ್ಲಿ ನೋಡಿದ್ದೇವೆ." 'ಇದಿಷ್ಟೇ ಅಮರತ್ವದ (ಸಾಧನ) ಪ್ರಿಯೆ. ಹೀಗೆಂದು ಯಾಜ್ಞವಲ್ಕ್ಯ ಮನೆಯನ್ನು ಬಿಟ್ಟ' (ಬೃ.೪.೫.೧೫). ಜನಕ ಮತ್ತಿತರರ ಕರ್ಮದ ವೈಶಿಷ್ಟ್ಯವೇ ನಿರ್ಲಿಪ್ತತೆ. ಆದ್ದರಿಂದ ಅದು ಕರ್ಮವೇ ಅಲ್ಲ. ಆದ್ದರಿಂದ ಮೀಮಾಂಸೆಯ ವಾದ ದುರ್ಬಲವಾಗಿದೆ.

೧೦. (ಸೂತ್ರ ೪ರಲ್ಲಿ ಪ್ರಸ್ತಾಪವಾದ ಪವಿತ್ರ ಗ್ರಂಥಗಳ ಘೋಷಣೆ) ಸದಾ ಸತ್ಯವಲ್ಲ.

---

೧. ಸ್ವಾಮಿ ವೀರೇಶ್ವರಾನಂದ: 'ಬ್ರಹ್ಮಸೂತ್ರಗಳು', ೪೧೧–೪೧೬.

ಜ್ಞಾನವು ಯಜ್ಞದ ಫಲವನ್ನು ವೃದ್ಧಿಸುತ್ತದೆ ಎಂಬ ಶ್ರುತಿ ಘೋಷಣೆ ಎಲ್ಲ ಜ್ಞಾನಗಳಿಗೆ ಅನ್ವಯಿಸುವುದಿಲ್ಲ. ಅದು ಉದ್ಗೀತಕ್ಕೆ ಮಾತ್ರ ಸಂಬಂಧಿಸಿದೆ.

ನೂರನ್ನು (ಇಬ್ಬರ ನಡುವೆ) ಹಂಚಿದಂತೆಯೇ ಜ್ಞಾನ, ಕರ್ಮಗಳೂ ಬೇರೆ ಬೇರೆಯಾಗಿವೆ.

ಈ ಸೂತ್ರವು ಸೂತ್ರ ೫ನ್ನು ಅಲ್ಲಗಳೆಯುತ್ತದೆ. "ಜ್ಞಾನ, ಕರ್ಮ ಮತ್ತು ಅನುಭವಗಳೂ ಅದನ್ನೇ ಹಿಂಬಾಲಿಸುತ್ತವೆ" (ಬೃ.೪.೪.೨೦ ಇಲ್ಲಿ ನಾವು ಜ್ಞಾನ ಮತ್ತು ಕರ್ಮ ಬೇರೆ ಬೇರೆಯಾಗಿ ಹಾದುಹೋದಂತೆ ತೆಗೆದುಕೊಳ್ಳಬೇಕು) ಹೇಗೆ ನೂರನ್ನು ಇಬ್ಬರಿಗೆ ಹಂಚುವುದೆಂದರೆ ಐವತ್ತು, ಐವತ್ತು ಹೇಗೆ ಹಂಚುತ್ತೇವೋ, ಹಾಗೇ ಜ್ಞಾನ ಒಂದನ್ನು, ಕರ್ಮ ಇನ್ನೊಂದನ್ನು ಹಿಂಬಾಲಿಸುತ್ತದೆ. ಎರಡರ ಸಂಯೋಗವಿಲ್ಲ. ಈ ವಿವರಣೆ ಇಲ್ಲದಿದ್ದಾಗ್ಯೂ ೫ನೇ ಸೂತ್ರವನ್ನು ಅಲ್ಲಗಳೆಯಬಹುದು. ಯಾಕೆಂದರೆ ಅಲ್ಲಿ ಉದ್ಧರಿಸಲಾದ ಪಾಠ ದೇಹಾಂತರ ಹೊಂದಿದ ಆತ್ಮಕ್ಕೆ ಅನ್ವಯಿಸುವುದೇ ಹೊರತು ವಿಮುಕ್ತ ಆತ್ಮಕ್ಕಲ್ಲ. ಹೇಗೆಂದರೆ "ಆಸೆಯಿಂದಾಗಿ ಮನುಷ್ಯ ದೇಹಾಂತರ ಹೊಂದುತ್ತಾನೆ" (ಬೃ.೪.೪.೬) ಎಂಬ ಸಾಲು ಹಿಂದಿನ ಉಲ್ಲೇಖ ದೇಹಾಂತರ ಹೊಂದುವ ಆತ್ಮಕ್ಕೆ ಮಾತ್ರ ಸಂಬಂಧಿಸಿದ್ದೆಂಬುದನ್ನು ತೋರಿಸುತ್ತದೆ. ಇನ್ನು ವಿಮುಕ್ತ ಆತ್ಮದ ಬಗ್ಗೆ ಶ್ರುತಿ.

"ಆಸೆ ಪಡೆದ ಜೀವಿ (ದೇಹಾಂತರ ಹೊಂದುವುದಿಲ್ಲ)" ಇತ್ಯಾದಿ (ಬೃ.೪.೪.೬) ಹೇಳುತ್ತದೆ.

೧೨. ವೇದಗಳನ್ನು ಓದಿದವರಿಗೆ ಮಾತ್ರ (ಪವಿತ್ರ ಗ್ರಂಥಗಳು ಕರ್ಮವನ್ನು ವಿಧಿಸುತ್ತದೆ).

"ಈ ಸೂತ್ರ ೬ನೇ ಸೂತ್ರವನ್ನು ಅಲ್ಲಗಳೆಯುತ್ತದೆ. ವೇದಗಳನ್ನು ಓದಿ, ಯಜ್ಞಕ್ರಿಯೆಗಳ ಬಗ್ಗೆ ತಿಳಿದವರು ಕರ್ಮದಲ್ಲಿ ತೊಡಗಬಹುದು. ಆದರೆ ಉಪನಿಷತ್ತುಗಳಿಂದ ಆತ್ಮಜ್ಞಾನ ಪಡೆದವರಿಗೆ ಯಾವುದೇ ಕರ್ಮ ವಿಧಿಸಲಾಗಿಲ್ಲ. ಅಂಥ ಜ್ಞಾನಕ್ಕೂ ಕರ್ಮಕ್ಕೂ ಹೊಂದುವುದಿಲ್ಲ."

೧೩. (ಜೈಮಿನಿಯ) ವಿಶೇಷ ಉಲ್ಲೇಖ ಇಲ್ಲದಿರುವುದರಿಂದ (ಆತನಿಗೆ ಅನ್ವಯಿಸುವುದಿಲ್ಲ).

"ಈ ಸೂತ್ರ ೭ನೇ ಸೂತ್ರವನ್ನು ಅಲ್ಲಗಳೆಯುತ್ತದೆ. ಈಶೋಪನಿಷತ್ತಿನಿಂದ ಉದ್ಧರಿಸಲಾದ ಹೇಳಿಕೆಯು ಸಾಮಾನ್ಯ ಹೇಳಿಕೆ ಮಾತ್ರ. ಅದರಲ್ಲಿ ಜ್ಞಾನಿಗೆ ಅನ್ವಯಿಸುವ ವಿಶೇಷ ಪ್ರಸ್ತಾಪವಿಲ್ಲದಿರುವುದರಿಂದ ಆ ಹೇಳಿಕೆ ಜ್ಞಾನಿಗೆ ಅನ್ವಯಿಸುವುದಿಲ್ಲ."

೧೪. ಅಥವಾ (ಕರ್ಮಕ್ಕಿರುವ) ಅನುಮತಿ (ಜ್ಞಾನದ) ಸ್ತುತಿಗಾಗಿ ಮಾತ್ರ.

"ಆತ್ಮಜ್ಞಾನಿಗಳು ಕರ್ಮದಲ್ಲಿ ತೊಡಗಬೇಕೆನ್ನುವುದು ಜ್ಞಾನದ ವೈಭವೀಕರಣಕ್ಕಾಗಿಯೇ. ಇಲ್ಲಿ ಅಡಗಿರುವ ಸ್ತುತಿ ಹೇಗೆಂದರೆ: ಜ್ಞಾನಿಯು ಜೀವಮಾನವಿಡೀ ಕರ್ಮದಲ್ಲಿ ತೊಡಗಿದರೂ ಅತನ ಜ್ಞಾನದಿಂದಾಗಿ ಕರ್ಮದ ಪರಿಣಾಮಗಳಿಗೆ ಬದ್ಧನಾಗಿರುವುದಿಲ್ಲ."

೧೫. ಇನ್ನು ಕೆಲವರು ಸ್ವ ಇಚ್ಛೆಯಿಂದ (ಕರ್ಮದಲ್ಲಿ ತೊಡಗಿಲ್ಲ).

"ಜನಕ ಮತ್ತಿತರ ಜ್ಞಾನ ಪಡೆದಿದ್ದರೂ ಕರ್ಮದಲ್ಲಿ ತೊಡಗಿದ್ದರೆಂದು ೩ನೇ ಸೂತ್ರ ಹೇಳುತ್ತದೆ. ಕೆಲವರು ಸ್ವ ಇಚ್ಛೆಯಿಂದ ಕರ್ಮ ಬಿಟ್ಟು ಬಿಟ್ಟರೆಂದೂ ಇದೇ ಸೂತ್ರ ಹೇಳುತ್ತದೆ. ಇದರರ್ಥ, ಜ್ಞಾನ ಹೊಂದಿದವರು ಇತರರಿಗೆ ಮಾದರಿಯಾಗಲೆಂದು ಕರ್ಮದಲ್ಲಿ ತೊಡಗಬಹುದು. ಮಿಕ್ಕವರು ಕರ್ಮವನ್ನು ಬಿಟ್ಟುಬಿಡಬಹುದು. ಅಂದರೆ ಜ್ಞಾನಿಗಳಿಗೆ ತೊಡಗಬೇಕೆಂಬ ಯಾವ ನಿರ್ಬಂಧವೂ ಇಲ್ಲ."

೧೬. ಮತ್ತು (ಜ್ಞಾನದ ಫಲವಾಗಿ ಕರ್ಮದ ಎಲ್ಲ ಅರ್ಹತೆಗಳು) ನಷ್ಟವಾಗುತ್ತವೆ (ಎಂದು ಪವಿತ್ರ ಗ್ರಂಥಗಳು ಹೇಳುತ್ತವೆ).

"ಜ್ಞಾನವು ಎಲ್ಲ ಬಗೆಯ ಅಜ್ಞಾನ ಹಾಗೂ ಅದರ ಫಲಗಳಾದ ನಿಯೋಗಿ, ಕ್ರಿಯೆ, ಪರಿಣಾಮ ಮುಂತಾದವುಗಳನ್ನು ನಾಶಮಾಡುತ್ತದೆ. "ಆದರೆ ಬ್ರಹ್ಮಜ್ಞಾನಿಯ ಪಾಲಿಗೆ ಎಲ್ಲವೂ ಆತ್ಮವೇ ಎಂದಾದ

ಮೇಲೆ, ಯಾರಾದರೂ ಏನು ನೋಡಬೇಕು ಮತ್ತು ಯಾವುದರ ಮೂಲಕ" ಇತ್ಯಾದಿ. (ಬೃ.೪.೫.೧೫). ಆತ್ಮಜ್ಞಾನವು ಎಲ್ಲ ಕರ್ಮಕ್ಕೂ ವಿರೋಧಿಯಾದ್ದರಿಂದ ಅದು ಕರ್ಮಕ್ಕೆ ಅಧೀನವಾಗಿರುವುದು ಸಾಧ್ಯವಿಲ್ಲ."

೧೭. ಮತ್ತು (ಜ್ಞಾನವು) ಇಂದ್ರಿಯ ನಿಗ್ರಹ ಮಾಡುವವರಿಗೆ (ಅಂದರೆ ಸನ್ಯಾಸಿಗಳಿಗೆ ಸೇರಿದೆ). ಯಾಕೆಂದರೆ ಪವಿತ್ರಗ್ರಂಥಗಳಲ್ಲಿ (ಈ ಚತುರ್ಥಾಶ್ರಮದ ಬಗ್ಗೆ ಹೇಳಲಾಗಿದೆ).

"ಜ್ಞಾನವು, ಇಂದ್ರಿಯ ನಿಗ್ರಹ ವಿಧಿಸಿರುವಂಥ ಬಾಳಿನ ಘಟ್ಟದಲ್ಲಿ ಅಂದರೆ ಚತುರ್ಥಾಶ್ರಮ ಅಥವಾ ಸನ್ಯಾಸ ಆಶ್ರಮದಲ್ಲಿ ಲಭಿಸುವುದೆಂದು ಪವಿತ್ರ ಗ್ರಂಥಗಳು ಘೋಷಿಸುತ್ತವೆ. ತಾರತಮ್ಯದ ಹೊರತು ಸನ್ಯಾಸಿಗಳಿಗೆ ಬೇರೆ ಯಾವ ಕರ್ಮವನ್ನೂ ವಿಧಿಸಲಾಗಿಲ್ಲ. ಅಂದ ಮೇಲೆ ಜ್ಞಾನವು ಕರ್ಮಕ್ಕೆ ಹೇಗೆ ಅಧೀನವಾಗುತ್ತದೆ? ಬಾಳಿನಲ್ಲಿ ಸನ್ಯಾಸ ಎಂಬ ಘಟ್ಟವೊಂದಿದೆ ಎಂಬುದು ಪವಿತ್ರಗ್ರಂಥಗಳ ಪಾಠಗಳಿಂದಲೇ ತಿಳಿದುಬರುತ್ತದೆ. "ಕರ್ತವ್ಯದ ಮೂರು ಶಾಖೆಗಳಿವೆ: ಯಜ್ಞ, ಅಧ್ಯಯನ, ದಾನ ಇವು ಮೊದಲನೆಯವು. ಇವೆಲ್ಲವೂ ಗುಣಶೀಲರ ಜಗತ್ತನ್ನು ಗಳಿಸುತ್ತದೆ. ಆದರೆ ಬ್ರಹ್ಮನಲ್ಲಿ ಸ್ಥಿರನಾದವನು ಮಾತ್ರ ಅಮರತ್ವ ಸಾಧಿಸಬಲ್ಲ." (ಛಾ.೨.೩೩.೧–೨) "ಈ ಜನ್ಮವನ್ನು (ಆತ್ಮ) ಮಾತ್ರ ಬಯಸಿ, ಸನ್ಯಾಸಿಗಳು ಪರಿತ್ಯಾಗ ಮಾಡುತ್ತಾರೆ" (ಬೃ.೪.೪.೨೨). ಮು.೧.೨.೧೧ ಮತ್ತು ಛಾ.೫.೧೦.೧ಗಳನ್ನೂ ನೋಡಿ. ಗೃಹಸ್ಥನಾಗದೆಯೂ ಈ ಜನ್ಮ ನಡೆಸಬಹುದು ಇತ್ಯಾದಿ ಜ್ಞಾನದ ಸ್ವಾತಂತ್ರ್ಯವನ್ನೇ ತೋರಿಸುತ್ತದೆ."

ಇವೆರಡು ವಿಚಾರ ಪಂಥಗಳು ಪರಸ್ಪರ ಯಾವ ಧೋರಣೆ ತಳೆದಿದ್ದವೆಂದು ಸೂಚಿಸಲು ಬಾದರಾಯಣನ ಇಂಥದೇ ಅನೇಕ ಸೂತ್ರಗಳನ್ನು ಉದಾಹರಿಸಬಹುದು. ಆದರೆ ಈ ಉದ್ದೇಶಕ್ಕೆ ಒಂದೇ ಸಾಕು ಸರಿಯಾಗಿ ಪರಿಶೀಲಿಸಿದರೆ, ಅವರಿಬ್ಬರ ನಿಲುವು ಅಷ್ಟರಲ್ಲೇ ಸುಸ್ಪಷ್ಟವಾಗುತ್ತದೆ. ಜೈಮಿನಿಯು, ವೇದಾಂತವನ್ನು ಖೋಟಾ ಶಾಸ್ತ್ರ, ಒಂದು ಪಾಶ, ಮಾಯೆ, ಮೇಲು ಮೇಲಿನದು, ಅನವಶ್ಯಕ ಹಾಗೂ ಅಪೂರ್ಣ ಎಂದು ಹೀಗಳೆಯುತ್ತಾನೆ. ಅದೇ ರೀತಿ ಜೈಮಿನಿಯ ಕರ್ಮಕಾಂಡವು ಒಂದು ಖೊಟ್ಟಿ ಧರ್ಮವೆಂದು ಬಾದರಾಯಣ ಜರೆದನೆಂದು ನಿರೀಕ್ಷಿಸಬೇಕು. ಆದರೆ ಬಾದರಾಯಣ ಅಂಥ ಧೈರ್ಯವನ್ನೇ ತೋರುವುದಿಲ್ಲ. ಇದಕ್ಕೆ ಪ್ರತಿಯಾಗಿ ಆತ ಕ್ಷಮೆ ಯಾಚಿಸುವಂತಿದ್ದಾನೆ. ಆತ, ಜೈಮಿನಿಯ ಕರ್ಮಕಾಂಡ ಪವಿತ್ರಗ್ರಂಥಗಳ ಆಧಾರದ ಮೇಲೆ ನಿಂತಿರುವುದು ಅದನ್ನು ಅಲ್ಲಗಳೆಯಲಾಗದು ಎಂದು ಒಪ್ಪಿಕೊಳ್ಳುತ್ತಾನೆ. ಆತ ಹೇಳುವುದೆಲ್ಲ ಇಷ್ಟೇ ತನ್ನ ವೇದಾಂತ ಸಿದ್ಧಾಂತವೂ ಸತ್ಯವೇ. ಯಾಕೆಂದರೆ ಅದಕ್ಕೂ ಪವಿತ್ರಗ್ರಂಥಗಳ ಆಧಾರವಿದೆ. ಬಾದರಾಯಣನ ಈ ಧೋರಣೆಗೆ ಸ್ವಲ್ಪ ವಿವರಣೆಯ ಅಗತ್ಯವಿದೆ.

## ಭಗವದ್ಗೀತೆ

ಭಗವದ್ಗೀತೆಯು ಮಹಾಭಾರತವೆಂಬ ಮಹಾಕಾವ್ಯದಲ್ಲಿನ ಭೀಷ್ಮ ಪರ್ವದ ಒಂದು ಭಾಗ. ಈ ಮಹಾಕಾವ್ಯವು ಮುಖ್ಯವಾಗಿ, ಧೃತರಾಷ್ಟ್ರನ ಮಕ್ಕಳಾದ ಕೌರವರು ಹಾಗೂ ಪಾಂಡವರೆಂಬ ದಾಯಾದಿಗಳು ಸಾರ್ವಭೌಮತ್ವಕ್ಕಾಗಿ ನಡೆಸಿದ ಹೋರಾಟವನ್ನು ಕುರಿತದ್ದು. ಪಾಂಡು ದೃತರಾಷ್ಟ್ರನ ತಮ್ಮ. ಆದರೆ ಧೃತರಾಷ್ಟ್ರ ಕುರುಡನಾದ್ದರಿಂದ ಸಿಂಹಾಸನ ಪಾಂಡುವಿನ ಪಾಲಾಯಿತು. ಪಾಂಡು ಸತ್ತ ಮೇಲೆ ಅವನ ಮಕ್ಕಳಿಗೂ ಧೃತರಾಷ್ಟ್ರನ ಮಕ್ಕಳಿಗೂ ಉತ್ತರಾಧಿಕಾರದ ಹಕ್ಕಿಗಾಗಿ ಜಗಳ ಬರುತ್ತದೆ. ಸಾರ್ವಭೌಮತ್ವಕ್ಕಾಗಿ ನಡೆದ ಹೋರಾಟ (ಆಧುನಿಕ ಪಾನಿಪಟ್ ಸಮೀಪದ) ಕುರುಕ್ಷೇತ್ರ ಕಾಳಗದಲ್ಲಿ ಕೊನೆಗೊಳ್ಳುತ್ತದೆ. ಈ ಕಾಳಗದಲ್ಲಿ ಕೃಷ್ಣನು ಪಾಂಡವರ ಪರ ನಿಂತು ಅವರ ಸಖ, ತತ್ವಜ್ಞಾನಿ ಹಾಗೂ ಮಾರ್ಗದರ್ಶನಕ್ಕಾಗಿ ವರ್ತಿಸುತ್ತಾನೆ. ಅಷ್ಟೇ ಇಲ್ಲ, ಪಾಂಡವರ ಪೈಕಿ ಮುಖ್ಯ ಯೋಧನಾದ, ಪಾಂಡವ ಸೋದರರಲ್ಲೊಬ್ಬನಾದ ಅರ್ಜುನನ ಸಾರಥಿಯಾಗಿ ವರ್ತಿಸುತ್ತಾನೆ.

ಕೌರವ ಪಾಂಡವರ ಸೈನ್ಯಗಳೆರಡೂ ರಣಭೂಮಿಯಲ್ಲಿ ಸಜ್ಜಾಗಿ ನಿಲ್ಲುತ್ತವೆ. ಕೃಷ್ಣನು ಸಾರಥಿಯಾದ ರಥದಲ್ಲಿ ಅರ್ಜುನನು ಬಂದ ಪಾಂಡವ ಸೈನ್ಯದ ಮುಂಭಾಗದಲ್ಲಿ ನಿಲ್ಲುತ್ತಾನೆ. ಬಲಿಷ್ಠನೂ, ಪರಾಕ್ರಮಿಯೂ ಆದ ಆತ ಕೌರವರ ವಿರೋಧಿ ಸೇನೆಯತ್ತ ನೋಡುತ್ತಾನೆ. ನೋಡಿದರೆ ತನ್ನ ದಾಯಾದಿಗಳನ್ನೇ ಕೊಲ್ಲಬೇಕಾದ, ತಾನು ಗೌರವಿಸುವವರನ್ನೇ ವಧಿಸಬೇಕಾದ, ತನ್ನ ಆಪ್ತರನ್ನೇ ಸಾಯಿಸಬೇಕಾದ ಈ ಬಂಧು ಹತ್ಯೆಯ ಸಮರದ ಭೀಕರತೆ ಆತನಿಗೆ ತಟ್ಟುತ್ತದೆ. ಆಗ ಜಿಗುಪ್ಸೆಗೊಂಡು ಶಸ್ತ್ರಾಸ್ತ್ರಗಳನ್ನು ಬಿಸಾಕಿ ಯುದ್ಧ ಮಾಡುವುದಿಲ್ಲವೆಂದು ನಿಂತುಬಿಡುತ್ತಾನೆ. ಕೃಷ್ಣ ಅವನೊಂದಿಗೆ ವಾದದಲ್ಲಿ ತೊಡಗಿ ಯುದ್ಧಕ್ಕೆ ಪ್ರಚೋದಿಸುತ್ತಾನೆ, ಈ ವಾದವೇ ಅರ್ಜುನ ಕೃಷ್ಣರ ಪ್ರಶ್ನೋತ್ತರ ಸಂವಾದದ ರೂಪ ತಳೆದು ಕಡೆಗೆ ಅರ್ಜುನ ಯುದ್ಧಮಾಡಲು ಒಪ್ಪುತ್ತಾನೆ.

ಭಗವದ್ಗೀತೆಯ ಆರಂಭದಲ್ಲಿ ವೃದ್ಧ ಧೃತರಾಷ್ಟ್ರನು ಯುದ್ಧದ ಬಗ್ಗೆ ಸಂಜಯವನ್ನು ಪ್ರಶ್ನಿಸುವುದನ್ನು ನೋಡುತ್ತೇವೆ. ಇದು ಯಾಕೆಂದರೆ, ಕೌರವರ ತಂದೆಯಾದ ಧೃತರಾಷ್ಟ್ರ ತಾನು ಬದುಕಿದ್ದರೂ ಕುರುಡನಾದ್ದರಿಂದ ತಾನೇ ಏನನ್ನೂ ನೋಡಿ ತಿಳಿಯಲಾರ. ವಿದ್ಯಮಾನಗಳ ತಿಳಿವಿಗಾಗಿ ಆತ ಇತರರ ವರದಿಯನ್ನೇ ನೆಚ್ಚಿಕೊಳ್ಳಬೇಕು. ಧೃತರಾಷ್ಟ್ರನಿಗೆ ಯಾರ ಮುಖಾಂತರವಾದರೂ ಯಥಾರ್ಥ ಕತೆಯನ್ನು ಹೇಳಿಸಬೇಕಾದ ಸಮಸ್ಯೆಯನ್ನು ಮನಗಂಡ ವ್ಯಾಸನು ರಣರಂಗದಲ್ಲಿ ಮನೋವ್ಯಾಪಾರಗಳೂ ಸೇರಿದಂತೆ ನಡೆಯುವ ಎಲ್ಲವನ್ನೂ ತಿಳಿಯುವ ಶಕ್ತಿಯನ್ನು ಧೃತರಾಷ್ಟ್ರನ ಸಾರಥಿಯಾದ ಸಂಜಯನಿಗೆ ಧಾರೆಯೆರೆದು ಹೇಳಿಸಿದ ಎನ್ನುತ್ತಾನೆ. ಆದ್ದರಿಂದಲೇ ಭಗವದ್ಗೀತೆಯು ಧೃತರಾಷ್ಟ್ರನ ಪ್ರಶ್ನೆಗಳಿಗೆ ಸಂಜಯ ಉತ್ತರಿಸುವ ಪ್ರಸಂಗದಂತೆ ಕಂಡುಬರುತ್ತದೆ. ವಸ್ತುತಃ 'ಗೀತೆ' ಅರ್ಜುನ ಹಾಗೂ ಕೃಷ್ಣರ ನಡುವಣ ಸಂವಾದವಾಗಿದ್ದು ಅದಕ್ಕೆ ಸಮರ್ಪಕವಾಗಿಯೇ 'ಕೃಷ್ಣಾರ್ಜುನ ಸಂವಾದ' ಎಂಬ ಹೆಸರು ಬಂದಿದೆ.

ಈ ಕೃಷ್ಣಾರ್ಜುನ ಸಂವಾದದಲ್ಲಿ ಭಿನ್ನಾಭಿಪ್ರಾಯಕ್ಕೆ ಕಾರಣವಾದ ಮುಖ್ಯ ಪ್ರಶ್ನೆಯಿದ್ದದ್ದು ಯುದ್ಧವನ್ನು ಮಾಡಬೇಕೇ ಬೇಡವೇ ಎಂಬುದರಲ್ಲಿ ಮಾತ್ರ. ಅಲ್ಲಿ ಇನ್ನಾವ ಪ್ರಶ್ನೆಯೂ ಇರಲಿಲ್ಲ. ಅವರಿಬ್ಬರ ನಡುವೆ ವಾದ ವಿವಾದಕ್ಕೆ ಈಡಾದ ಪ್ರಶ್ನೆ ಇದೊಂದೇ. ಈ ದೃಷ್ಟಿಕೋನದಿಂದ ಹೊರಟರೆ ಕೃಷ್ಣನಿಗೆ ಗೀತೆಯನ್ನು ಜನಸಾಮಾನ್ಯರಿಗೆ ನೈತಿಕ ಶಿಕ್ಷಣ ಕೊಡುವ ಅಥವಾ ಯಾವುದೇ ಧರ್ಮವ್ಯವಸ್ಥೆಯ ಸೈದ್ಧಾಂತಿಕ ಪ್ರತಿಪಾದನೆ ಮಾಡುವ ಅಥವಾ ಯಾವುದೇ ಮತಪಂಥದ ಪ್ರಶ್ನೋತ್ತರ ಪಾಠದ ಸಂದರ್ಭವನ್ನಾಗಿ ಮಾಡುವ ಕಾರಣವೇ ಇರಲಿಲ್ಲ ಎಂಬುದು ಸ್ಪಷ್ಟವಾಗುತ್ತದೆ. ಆದರೂ ಕೊನೆಗೆ ಗೀತೆ ಪಡೆದ ಸ್ವರೂಪ ಅದೇ. ಅದು ಯುದ್ಧ ಮಾಡಬೇಕೋ ಬೇಡವೋ ಎಂಬುದನ್ನು ನಿರ್ಧರಿಸುವ ಸಂದರ್ಭವಾಗಿದ್ದರೂ ಗೀತೆಯು ಕೃಷ್ಣನು ಅರ್ಜುನನಿಗೆ ಬೋಧಿಸಿದ ಧಾರ್ಮಿಕ ಸಿದ್ಧಾಂತವನ್ನು ಒಳಗೊಂಡಿರುವುದಾಗಿ ಹೇಳಲಾಗಿದೆ.

ಇಲ್ಲಿ ಏಳುವ ಮೊದಲ ಪ್ರಶ್ನೆಯೆಂದರೆ ಈ ಕೃಷ್ಣ ಯಾರು? ಈ ಪ್ರಶ್ನೆಗೆ ಆಶ್ಚರ್ಯಕರವಾಗಿ ಗೀತೆಯಿಂದಲೇ ವೈವಿಧ್ಯಮಯ ಉತ್ತರಗಳು ಸಿಕ್ಕುತ್ತವೆ. ಮೊದಮೊದಲು ಕೃಷ್ಣ ಸಂಪೂರ್ಣ ಮನುಷ್ಯ ವ್ಯಕ್ತಿತ್ವದ ಸಾಮಾನ್ಯ ವ್ಯಕ್ತಿಯಾಗಿ ಕಾಣಿಸುತ್ತಾನೆ. ಅವನು ವೃತ್ತಿಯಿಂದ ಯೋಧ.

ಅರ್ಜುನ ರಥದ ಸಾರಥಿಯಾಗುವ ನಮ್ರ ಕರ್ತವ್ಯವನ್ನು ಆರಿಸಿಕೊಂಡಿದ್ದರೂ[೧] ಆತ ಮಹಾಯೋಧ.

---

೧. ಇದು ಕೃಷ್ಣ ಹಾಗೂ ಕೌರವ ನಾಯಕ ದುರ್ಯೋಧನನ ನಡುವೆ ಆದ ಒಪ್ಪಂದದ ಫಲ. ಯುದ್ಧ ಆರಂಭವಾಗುವ ಮುನ್ನ ದುರ್ಯೋಧನ ಕೃಷ್ಣನ ಬಳಿ ಹೋಗಿ ಕೌರವರ ಪರ ವಹಿಸುವಂತೆ ಹೇಳುತ್ತಾನೆ. ಕೃಷ್ಣ ತಾನು ಬೇಕೋ ಅಥವಾ ತನ್ನ ಯಾದವ ಸೇನೆ ಬೇಕೋ ಎಂಬ ಆಯ್ಕೆಯನ್ನು ಮುಂದಿಡುತ್ತಾನೆ. ದುರ್ಯೋಧನ ಯಾದವ ಸೇನೆಯನ್ನು ಆರಿಸಿಕೊಳ್ಳುತ್ತಾನೆ. ಆದ್ದರಿಂದಲೇ ಕೃಷ್ಣ ಹಾಗೂ ಯಾದವ ಸೈನ್ಯಗಳು ಎದುರುಬದುರಾಗಿ ಹೊಡೆದಾಡುತ್ತಾರೆ.

ಕೇವಲ ಸಾಮಾನ್ಯ ವ್ಯಕ್ತಿಯಾಗಿದ್ದ ಕೃಷ್ಣ ಇಡಿ ಯುದ್ಧ ಹಾಗೂ ಅದರ ಆಗುಹೋಗುಗಳನ್ನು ನಿಯಂತ್ರಿಸುವ ಹಾಗೂ ದಿಗ್ದರ್ಶನ ಮಾಡುವ ಅತಿಮಾನವನಾಗಿ ಬೆಳೆಯುತ್ತಾನೆ. ಈ ಅತಿ ಮಾನವತೆಯಿಂದ ಆತ ಮತ್ತೆ ಅರೆದೈವವಾಗಿ ಸರ್ವಾಧಿಕಾರಿಯಾಗಿ ಬೆಳೆಯುತ್ತಾನೆ. ಎಲ್ಲ ವಾದಗಳೂ ಸೋತ ಮೇಲೆ ಕೃಷ್ಣ ಸುಮ್ಮನೆ ಅರ್ಜುನನಿಗೆ ಯುದ್ಧ ಮಾಡುವ ಆದೇಶ ಕೊಡುತ್ತಾನೆ. ಇದರಿಂದ ಹೆದರಿದ ಅರ್ಜುನ ಮೇಲೆದ್ದು ಆದೇಶ ಪಾಲಿಸುತ್ತಾನೆ. ಈಗ ಅರೆದೈವ ಸ್ಥಾನದಿಂದ ಕೃಷ್ಣ ದೇವರೇ ಆಗಿ 'ಈಶ್ವರ' ಅನಿಸಿಕೊಳ್ಳುತ್ತಾನೆ.

ಕೃಷ್ಣನ ವ್ಯಕ್ತಿತ್ವದ ಬೆಳವಣಿಗೆ ಹೀಗಿದೆ. ಇಲ್ಲಿ ಇನ್ನೂ ಮುಖ್ಯ ವಿಚಾರವೆಂದರೆ, ಇದೇ ಗೀತೆಯಲ್ಲಿ ಕೃಷ್ಣನು ದೇವರ ಇತರ ಸ್ವರೂಪಗಳ ಪ್ರತಿನಿಧಿಯೂ ಆಗಿ ನಿಲ್ಲುತ್ತಾನೆ. ಗೀತೆಯನ್ನು ತಿರುವಿ ಹಾಕುವವರಿಗೂ ಕೃಷ್ಣನ ಅಂಥ ನಾಲ್ಕು ಪ್ರಾತಿನಿಧಿಕ ಸ್ವರೂಪಗಳು ಸ್ಪಷ್ಟವಾಗುತ್ತವೆ.

ಕೃಷ್ಣನೇ ವಾಸುದೇವ.

ಭಗವದ್ಗೀತೆ:

ಅಧ್ಯಾಯ ೧೦.೩೭ ವೃಷ್ಣಿಗಳಲ್ಲಿ ನಾನು ವಾಸುದೇವ; ಪಾಂಡವರಲ್ಲಿ ಅರ್ಜುನ; ಮುನಿಗಳಲ್ಲಿ ನಾನು ವ್ಯಾಸ; ಕವಿಗಳಲ್ಲಿ ನಾನು ಉಶಾನಾ ಕವಿ. ಭಗವಂತನಾಗಿ ಕೃಷ್ಣ.

ಅಧ್ಯಾಯ ೧೦.೧೨. ಪರಂಬ್ರಹ್ಮ, ಪರಂಧಾಮ, ಪವಿತ್ರ ಪರಮ..... ನೀನು.

ವಿಷ್ಣುವಿನ ಅವತಾರವಾಗಿ ಕೃಷ್ಣ.

ಅಧ್ಯಾಯ ೧೦.೨೧. ಆದಿತ್ಯರಲ್ಲಿ ನಾನು ವಿಷ್ಣು; ಜ್ಯೋತಿಗಳಲ್ಲಿ ನಾನು ಸೂರ್ಯ; ಮರುತ್ತುಗಳಲ್ಲಿ ನಾನು ಮರೀಚ; ನಕ್ಷತ್ರಗಳಲ್ಲಿ ಚಂದ್ರ.

ಅಧ್ಯಾಯ ೧೧.೨೪. ಅನೇಕ ವರ್ಣಗಳಿಂದ ದೀಪ್ತನಾಗಿ ಆಕಾಶ ಮುಟ್ಟುವ ನಿನ್ನನ್ನು – ಬಹುಮುಖ, ದೀಪ್ತವಾದ ವಿಶಾಲನೇತ್ರಗಳನ್ನೂ, ನೋಡಿ ಅಂತರಾರ್ತದಲ್ಲಿ ವ್ಯಥಿತನಾದ ನನಗೆ ಧೃತಿಯೂ ಇಲ್ಲ, ಶಾಂತಿಯೂ ಇಲ್ಲ, ಓ ವಿಷ್ಣು.

೧೧.೩೦. ನಿನ್ನ ಜ್ವಲಿಸುವ ಬಾಯಿಗಳಿಂದ ಸಮಗ್ರ ಲೋಕಗಳನ್ನೂ ನುಂಗಿ ನೆಕ್ಕುತ್ತಿರುವೆ. ನಿನ್ನ ತೇಜೋಕಿರಣಗಳು ಜಗತ್ತನ್ನು ತುಂಬಿ ಸುಡುತ್ತಿವೆ, ಓ ವಿಷ್ಣು.

ಕೃಷ್ಣನು ಶಂಕರನ ಅವತಾರವೂ ಹೌದು.

೧೦.೨೩. ರುದ್ರರಲ್ಲಿ ನಾನು ಶಂಕರ: ಯಕ್ಷ–ರಾಕ್ಷಸರಲ್ಲಿ ನಾನು ಕುಬೇರ; ವಸುಗಳಲ್ಲಿ ನಾನು ಪಾವಕ; ಶಿಖರಗಳಲ್ಲಿ ನಾನು ಮೇರು.

ಕೃಷ್ಣನೇ ಬ್ರಹ್ಮ.

೧೫.೧೫. ಎಲ್ಲರ ಹೃದಯಗಳಲ್ಲಿ ಕೇಂದ್ರವಾದವನು ನಾನು; ಸ್ಮೃತಿ, ಜ್ಞಾನಗಳು, ಅವುಗಳ ನಾಶವೂ ನನ್ನಿಂದ. ಎಲ್ಲ ವೇದಗಳಲ್ಲಿ ತಿಳಿಯಬೇಕಾದ್ದು. ನನ್ನನ್ನೇ ನಾನೇ ವೇದದ ಕರ್ತೃ. ವೇದವಿದ ನಾನೇ.

೧೫.೧೬. ಲೋಕದಲ್ಲಿ ಇಬ್ಬರು ಪುರುಷರಿದ್ದಾರೆ. ಕ್ಷರ ಮತ್ತು ಅಕ್ಷರ (ನಶ್ವರ ಮತ್ತು ಶಾಶ್ವತ). ಸರ್ವಭೂತಗಳು ಕ್ಷರವಾದರೆ, ಕೂಟಸ್ಥನೇ ಅಕ್ಷರ ಎನ್ನುತ್ತಾರೆ.

೧೫.೧೭. ಆದರೆ ಇನ್ನೊಬ್ಬನಿದ್ದಾನೆ. ಉತ್ತಮ ಪುರುಷ ಪರಮಾತ್ಮನೆಂಬ ಈಶ್ವರ; ಮೂರು ಲೋಕಗಳನ್ನು ಆವರಿಸಿ ಭರಿಸುವವನು ಅವನೇ.

೧೫.೧೮. ನಾನು ನಶ್ವರವಾದುದಕ್ಕೆ ಅತೀತವಾಗಿ, ಶಾಶ್ವತವಾದುದಕ್ಕೂ ಉತ್ತಮ. ಆದ್ದರಿಂದ ಲೋಕದಲ್ಲಿ ಹಾಗೂ ವೇದಗಳಲ್ಲಿ (ನನ್ನನ್ನು) ಪುರುಷೋತ್ತಮನೆಂದು ಕೊಂಡಾಡುತ್ತಾರೆ.

೧೫.೧೯. ಯಾರು ಮೌಢ್ಯವಿಲ್ಲದೆ ಪುರುಷೋತ್ತಮನಾದ ನನ್ನನ್ನು ತಿಳಿಯುತ್ತಾನೋ ಅವನು ಎಲ್ಲವನ್ನೂ ತಿಳಿಯುತ್ತಾನೆ ಮತ್ತು ಸರ್ವಭಾವದಿಂದ ನನ್ನನ್ನು ಭಜಿಸುತ್ತಾನೆ, ಓ ಭಾರತ.

ಕೃಷ್ಣನು ಅರ್ಜುನನಿಗೆ ಬೋಧಿಸುವ ತತ್ವವೇನು ಎಂಬ ಮುಂದಿನ ಪ್ರಶ್ನೆ ಕೇಳಿ. ಕೃಷ್ಣನು ಅರ್ಜುನನಿಗೆ ಬೋಧಿಸಿದ್ದು ಮಾನವ ಆತ್ಮದ ಮುಕ್ತಿಯ ತತ್ವ ಎನ್ನುತ್ತಾರೆ. ಕೃಷ್ಣನು ಹೇಳಿದ್ದು ಮುಕ್ತಿಗೆ ಸಂಬಂಧಿಸಿದ ಪ್ರಶ್ನೆಯಾದರೂ ಆತ ಮುಕ್ತಿಯ ಮೂರು ವಿಭಿನ್ನ ತತ್ವಗಳನ್ನು ಬೋಧಿಸುತ್ತಾನೆ.

ಸಾಂಖ್ಯಯೋಗ ಹೇಳಿದಂತೆ ಮುಕ್ತಿಯು ಜ್ಞಾನಮಾರ್ಗದಲ್ಲಿ ಸಾಧ್ಯವಿದೆ.

೨.೩೯. ಈ ಆತ್ಮಜ್ಞಾನದ ವಿವೇಕವನ್ನು ನಿನಗೆ ಕೊಡಲಾಗಿದೆ. ಈಗ ಯೋಗಜ್ಞಾನ ಕುರಿತು ಕೇಳು. ನೀನು ಇದನ್ನು ಅಳವಡಿಸಿಕೊಂಡರೆ ಕರ್ಮ ಬಂಧನವನ್ನು ಕಳಚಿಕೊಳ್ಳುವೆ, ಓ ಪದಾರ್ಥ.

ಇದು ಎರಡನೇ ಅಧ್ಯಾಯದ ೧೧–೧೬ ಮತ್ತು ೧೮–೩೦ ಶ್ಲೋಕಗಳಲ್ಲಿ ಚರ್ಚೆಯಾದ ಸಾಂಖ್ಯಯೋಗ ಕುರಿತ ವ್ಯಾಖ್ಯಾನದ ಕಡೇ ಶ್ಲೋಕ.

(೨) ಕರ್ಮ ಮಾರ್ಗದಿಂದ ಮುಕ್ತಿ ಸಾಧ್ಯವಿದೆ.

೫.೨. ಸನ್ಯಾಸ ಮತ್ತು ಕರ್ಮಗಳೆರಡೂ ಸ್ವಾತಂತ್ರ್ಯಕ್ಕೆ ದಾರಿಗಳೇ. ಇವುಗಳಲ್ಲಿ ಸನ್ಯಾಸಕ್ಕಿಂತ ಕರ್ಮಯೋಗವೇ ಶ್ರೇಷ್ಠ.

(೩) ಭಕ್ತಿ ಮಾರ್ಗದಿಂದಲೂ ಮುಕ್ತಿ ಸಾಧ್ಯವಿದೆ.

೯.೧೩. ದೈವೀ ಪ್ರಕೃತಿಯನ್ನು ಆಶ್ರಯಿಸಿದ ಮಹಾತ್ಮರು, ನಾನು ಸರ್ವ ಭೂತಗಳ ಆದಿಯೆಂದು, ಅವ್ಯಯನೆಂದೂ ತಿಳಿದು ಅನನ್ಯ ಮನಸ್ಸಿನಿಂದ ನನ್ನನ್ನು ಭಜಿಸುವರು, ಓ ಪಾರ್ಥ.

೯.೧೪. ಸತತವಾಗಿ ಕೀರ್ತಿಸುತ್ತ, ಅಂತರ್ಯದಲ್ಲಿ ದೃಢ ವ್ರತರಾಗಿ, ಭಕ್ತಿಯಿಂದ ನಮಿಸುತ್ತ ನನ್ನ ಉಪಾಸನೆ ಮಾಡುತ್ತಾರೆ.

೯.೧೫. ಇತರರೂ ಜ್ಞಾನ ಯಜ್ಞದಿಂದ (ಅಂದರೆ ಎಲ್ಲದರಲ್ಲೂ ಆತ್ಮನನ್ನು ಕಾಣುತ್ತಾ) ಏಕನೆಂದು, ವಿಶಿಷ್ಟನೆಂದು, ಬಹುರೂಪಿಯೆಂದು ವಿಶ್ವತೋಮುಖನಾದ ನನ್ನ ಉಪಾಸನೆ ಮಾಡುತ್ತಾರೆ.

೯.೧೭. ನಾನು ಈ ಜಗತ್ತಿನ ತಂದೆ, ತಾಯಿ, ಧಾತ, ಪಿತಾಮಹ, ವೇದ್ಯನೂ, ಪವಿತ್ರನೂ, ಓಂಕಾರನೂ, ಋಕ್, ಸಾಮ, ಯಜುರ್ ಕೂಡಾ ನಾನೇ.

೯.೨೨. ನನ್ನನ್ನು ಅನನ್ಯವೆಂದು ತಿಳಿದು ಪೂಜಿಸುವ ಈ ಭಕ್ತ ಜನರಿಗೆ ನಾನು ಯೋಗಕ್ಷೇಮಗಳನ್ನು ನೋಡಿಕೊಳ್ಳುತ್ತೇನೆ.

ಭಗವದ್ಗೀತೆಯಲ್ಲಿ ಗಮನ ಸೆಳೆಯುವ ಇನ್ನೆರಡು ಲಕ್ಷಣಗಳಿವೆ.

(೧) ಅಲ್ಲಿ ವೇದಗಳು, ವೈದಿಕ ಆಚರಣೆ ಮತ್ತು ಯಜ್ಞಗಳನ್ನು ಹೀಗಳೆಯುವ ಧೋರಣೆಯಿದೆ.

೨.೪೨–೪೪. ಓ ಪಾರ್ಥ, ಭೋಗೈಶ್ವರ ಮತ್ತು ಸ್ವರ್ಗಪರರಾದ, ಮೂರ್ಖರ ಹೂವಿನಂಥ ಮಾತಿನಿಂದ ಅಪಹೃತರಾದವರ ಮನಸ್ಸಿನಲ್ಲಿ ದೃಢ ನಿಶ್ಚಯ ರೂಪುಗೊಳ್ಳುವುದಿಲ್ಲ. ವೇದವಾದಗಳಲ್ಲಿ ಸಂತೋಷಪಡುವವರು 'ಬೇರೇನೂ ಇಲ್ಲ'' ಎನ್ನುತ್ತಾರೆ. ಅವರ ಹೂವಿನಂಥ ಮಾತುಗಳು ಕಾಮ

ಮತ್ತು ಸ್ವರ್ಗಗಳಿಗಾಗಿ ಅನೇಕ ಕ್ರಿಯಾವಿಶೇಷಗಳನ್ನು ಉಲ್ಲೇಖಿಸುತ್ತವೆ ಮತ್ತು ಜನ್ಮ ಕರ್ಮಫಲವನ್ನು ಹೇಳುತ್ತವೆ.

೨.೪೫. ವೇದಗಳು ಮೂರು ಗುಣ ವಿಷಯಗಳನ್ನು ಹೊಂದಿವೆ. ಓ ಅರ್ಜುನ, ನೀನು ಆ ಮೂರು ಗುಣಗಳನ್ನು ಮೀರಿ, ದ್ವಂದ್ವಗಳನ್ನು ದಾಟಿ, ಸತ್ಯದಲ್ಲಿ ನೆಲೆಸಿ, ಯೋಗಕ್ಷೇಮದ ಚಿಂತೆ ಬಿಟ್ಟು ಆತ್ಮದಲ್ಲಿ ತೊಡಗು.

೨.೪೬. ಜ್ಞಾನಿಯಾದ ಬ್ರಾಹ್ಮಣನಿಗೆ ಸರ್ವ ವೇದಗಳ ಪ್ರಯೋಜನ ಎಷ್ಟೆಂದರೆ, ಎಲ್ಲೆಡೆ ಪ್ರವಾಹ ಇರುವಾಗ ಜಲಾಶಯದಿಂದ ಆಗುವಷ್ಟು ಇದೆ.

೯.೨೧. ವಿಶಾಲ ಸ್ವರ್ಗ ಲೋಕವನ್ನು ಅನುಭವಿಸಿದ ಅವರ ಪುಣ್ಯವು ಕ್ಷೀಣಿಸಿದಾಗ ಮರ್ತ್ಯಲೋಕಕ್ಕೆ ಬರುತ್ತಾರೆ. ಹೀಗೆ ಮೂರು (ವೇದಗಳ) ಧರ್ಮ ಅನುಸರಿಸುವವರು, ಆಶಾವಶರಾಗಿ (ಯಾವಾಗಲೂ) ಹೋಗಿ ಬರುತ್ತಿರುತ್ತಾರೆ.

ಅಪೂರ್ಣ

* * * *

## ಅಧ್ಯಾಯ ೧೧

# ಬ್ರಾಹ್ಮಣ ಧರ್ಮದ ದಿಗ್ವಿಜಯ: ರಾಜಹತ್ಯೆ ಅಥವಾ ಪ್ರತಿಕ್ರಾಂತಿಯ ಹುಟ್ಟು

*ಈ ಶೀರ್ಷಿಕೆಯಡಿ ಬೆರಳಚ್ಚಾದ ಕೇವಲ ಮೂರು ಪುಟಗಳು ಸಿಕ್ಕಿವೆ. ಅದೃಷ್ಟವಶಾತ್ ಈ ಪ್ರಬಂಧದ ಒಂದು ಪ್ರತಿಯನ್ನು ಎಸ್.ಎಸ್. ರೀಜೆ ಅವರು ಪ್ರಕಟಣೆಗಾಗಿ ಕೊಟ್ಟರು. ಅವರು ಕೊಟ್ಟ ಪ್ರತಿಯಲ್ಲೂ ೩ ರಿಂದ ೭ ಹಾಗೂ ೯ ರಿಂದ ೧೭ ಪುಟಗಳು ಇಲ್ಲದಿರುವುದು ನಮ್ಮ ಗಮನಕ್ಕೆ ಬಂದಿದೆ. ನಾಪತ್ತೆಯಾದ ಆ ಪುಟಗಳನ್ನೂ ಸೇರಿಸಿ ಈ ಪ್ರಬಂಧದಲ್ಲಿ ಒಟ್ಟು ೯೨ ಪುಟಗಳಿವೆ. ರೀಜೆಯವರ ಬಳಿಯಿರುವ ಪ್ರತಿಯ ಮೇಲೆ 'ಬ್ರಾಹ್ಮಣಿಕೆಯ ದಿಗ್ವಿಜಯ' ಎಂಬ ಶೀರ್ಷಿಕೆಯಿತ್ತು. ಆದರೆ ನಮ್ಮ ಬಳಿಯಿರುವ ಪ್ರತಿಯ ಮೊದಲ ಪುಟದಲ್ಲಿ 'ರಾಜಹತ್ಯೆ ಅಥವಾ ಪ್ರತಿಕ್ರಾಂತಿಯ ಹುಟ್ಟು' ಎಂಬ ಶೀರ್ಷಿಕೆಯಿದೆ. ನಮ್ಮ ಪ್ರತಿಯಲ್ಲಿ ಒಂಬತ್ತು ಅಧ್ಯಾಯಗಳ ವಿಂಗಡಣೆಯಿದ್ದರೆ, ರೀಜೆಯವರ ಪ್ರತಿಯಲ್ಲಿ ಅದಿಲ್ಲ. ಅಧ್ಯಾಯಗಳು ಹಾಗೂ ಶೀರ್ಷಿಕೆಗಳು ಡಾ. ಅಂಬೇಡ್ಕರರ ಹಸ್ತಾಕ್ಷರದಲ್ಲೇ ಇವೆ. ಆದ್ದರಿಂದ ಇಲ್ಲೂ ಅವನ್ನು ಉಳಿಸಿಕೊಂಡಿದ್ದೇವೆ. ಜೊತೆಗೆ ೯ ರಿಂದ ೧೭ ಪುಟಗಳು ಇನ್ನೊಂದು ಕಡತದಲ್ಲಿ ಸೇರಿಕೊಂಡಿದ್ದೂ ಬೆಳಕಿಗೆ ಬಂತು. ಈಗ ಅವೆಲ್ಲವನ್ನೂ ಸರಿಯಾದ ಜಾಗಗಳಲ್ಲಿ ಸೇರಿಸಲಾಗಿದೆ. ಆದ್ದರಿಂದ ೪ ರಿಂದ ೭ ಪುಟಗಳನ್ನು ಬಿಟ್ಟರೆ ಈ ಹಸ್ತಪ್ರತಿ ಪೂರ್ಣವಾಗಿದೆ.*

– ಸಂಪಾದಕರು

## I

೧. ಬೌದ್ಧಧರ್ಮದ ವಿರುದ್ಧ ಬ್ರಾಹ್ಮಣ ಬಂಡಾಯ; ೨. ಮನು ಬ್ರಾಹ್ಮಣ ಧರ್ಮದ ಪ್ರವರ್ತಕ; ೩. ಬ್ರಾಹ್ಮಣ ಧರ್ಮ ಹಾಗೂ ಬ್ರಾಹ್ಮಣರಿಗೆ ಆಳ್ವಿಕೆ ಮತ್ತು ರಾಜಹತ್ಯೆಯ ಹಕ್ಕು; ೪. ಬ್ರಾಹ್ಮಣ ಧರ್ಮ ಹಾಗೂ ಬ್ರಾಹ್ಮಣರ ಸವಲತ್ತುಗಳು; ೫. ಬ್ರಾಹ್ಮಣ ಧರ್ಮ ಹಾಗೂ ಜಾತಿಯ ಸೃಷ್ಟಿ; ೬. ಬ್ರಾಹ್ಮಣ ಧರ್ಮ ಹಾಗೂ ಬ್ರಾಹ್ಮಣೇತರರ ಅವಹೇಳನ; ೭. ಬ್ರಾಹ್ಮಣ ಧರ್ಮ ಹಾಗೂ ಶೂದ್ರರ ದಮನ; ೮. ಬ್ರಾಹ್ಮಣ ಧರ್ಮ ಹಾಗೂ ಸ್ತ್ರೀಯರ ಗುಲಾಮೀಕರಣ; ೯. ಬ್ರಾಹ್ಮಣ ಧರ್ಮ ಹಾಗೂ ಸಮಾಜ ವ್ಯವಸ್ಥೆಯ ಸೂತ್ರೀಕರಣ.

ಪ್ರೊ. ಬ್ಲೂಮ್‌ಫೀಲ್ಡ್ ಅವರು ಭಾರತದ ಬಗ್ಗೆ ಮಾತಾಡುತ್ತಾ ವೈದಿಕ ಧರ್ಮದ ಬಗ್ಗೆ ತಮ್ಮ ಉಪನ್ಯಾಸಗಳನ್ನು ಹೀಗೆ ಆರಂಭಿಸುತ್ತಾರೆ "ಹಲವು ಅರ್ಥಗಳಲ್ಲಿ ಭಾರತವು ಧರ್ಮಗಳ ನಾಡು. ಈ ನಾಡು ತನ್ನ ಒಡಲೊಳಗಿಂದ ಅನೇಕ ಪ್ರತ್ಯೇಕ ವ್ಯವಸ್ಥೆಗಳನ್ನೂ ಮತಪಂಥಗಳನ್ನೂ ಸೃಷ್ಟಿಸಿದೆ....."

ಇನ್ನೊಂದು ಅರ್ಥದಲ್ಲೂ ಭಾರತ ಧರ್ಮಗಳ ನೆಲೆವೀಡು. ಇಲ್ಲಿ ಧಾರ್ಮಿಕ ನಂಬಿಕೆಗಳು ಹಾಗೂ ಆಚರಣೆಗಳು ಜನಜೀವನನೊಡನೆ ಹಾಸುಹೊಕ್ಕಾಗಿರುವಂತೆ ಬೇರೆಲ್ಲೂ ಆಗಿಲ್ಲ.[೧]

ಈ ಅಭಿಪ್ರಾಯಗಳಲ್ಲಿ ಗಾಢ ಸತ್ಯ ಅಡಗಿದೆ. ಅವರೇನಾದರೂ, ಭಾರತವು ಸಮರ ನಿರತ ಧರ್ಮಗಳ ನಾಡು ಎಂದಿದ್ದರೆ ಅದು ಇನ್ನೂ ಗಾಢವಾದ ಪ್ರಮುಖ ಸತ್ಯವಾಗುತ್ತಿತ್ತು. ನಿಜ, ಭಾರತದ ಚರಿತ್ರೆಯಲ್ಲಿ ಧರ್ಮ ವಹಿಸಿದಂಥ ಮಹತ್ತರ ಪಾತ್ರವನ್ನು ಇನ್ನಾವ ದೇಶದ ಧರ್ಮವೂ ವಹಿಸಿಲ್ಲ. ಭಾರತದ ಚರಿತ್ರೆಯೆಂದರೆ ಬೌದ್ಧ ಧರ್ಮ ಹಾಗೂ ಬ್ರಾಹ್ಮಣ ಧರ್ಮಗಳ ನಡುವಣ ಮಾರಕ ಕಾಳಗದ ಚರಿತ್ರೆಯೇ ಆಗಿದೆ. ಈ ಸತ್ಯವನ್ನೂ ಎಷ್ಟು ನಿರ್ಲಕ್ಷಿಸಲಾಗಿದೆಯೆಂದರೆ ಯಾರೂ ಇದನ್ನು ತಕ್ಷಣ ಒಪ್ಪಲು ಸಿದ್ಧರಾಗುವುದಿಲ್ಲ. ಅಷ್ಟೇಕೆ, ಇಂಥ ಸೂಚನೆಯನ್ನು ಅಲ್ಲಗಳೆಯುವವರಿಗೇನೂ ಬರವಿರಲಾರದು.

ಆದರೆ ಭಾರತೀಯ ಇತಿಹಾಸದ ಕೆಲವು ಮೂಲಭೂತ ಸತ್ಯಗಳನ್ನು ಇಲ್ಲಿ ಸಂಕ್ಷಿಪ್ತವಾಗಿ ನಿರೂಪಿಸಬಯಸುತ್ತೇನೆ. ಯಾಕೆಂದರೆ ಭಾರತದ ಚರಿತ್ರೆಯನ್ನು ಅರ್ಥ ಮಾಡಿಕೊಳ್ಳಬೇಕೆನ್ನುವವರೆಲ್ಲರೂ, ಇದು ಬ್ರಾಹ್ಮಣ ಧರ್ಮ ಹಾಗೂ ಬೌದ್ಧ ಧರ್ಮಗಳ ನಡುವೆ ಹಿರಿಮೆಗಾಗಿ ನಡೆದ ಸಂಘರ್ಷದ ಚರಿತ್ರೆ ಎಂಬುದನ್ನು ತಿಳಿಯಬೇಕಿದೆ.

ಭಾರತದ ಮೇಲೆ ಧಾಳಿ ಮಾಡಿ ಇದನ್ನೇ ತಮ್ಮ ಮನೆಯಾಗಿಸಿಕೊಂಡು ತಮ್ಮ ಸಂಸ್ಕೃತಿಯನ್ನು ಸ್ಥಾಪಿಸಿದ ಆರ್ಯರೊಂದಿಗೆ ಭಾರತದ ಚರಿತ್ರೆ ಆರಂಭವಾಗುತ್ತದೆ ಎನ್ನುತ್ತಾರೆ. ಆರ್ಯರು ಅವರ ಸಂಸ್ಕೃತಿ, ಅವರ ಧರ್ಮ ಹಾಗೂ ಅವರ ಸಮಾಜ ವ್ಯವಸ್ಥೆಯ ಗುಣಗಳೇನೇ ಇರಲಿ, ಅವರ ರಾಜಕೀಯ ಚರಿತ್ರೆಯ ಬಗ್ಗೆ ತಿಳಿದಿರುವುದು ಮಾತ್ರ ಅತ್ಯಲ್ಪ. ಆರ್ಯರು ಅನಾರ್ಯರಿಗಿಂತ ಮೇಲ್ಮಟ್ಟದವರೆಂದು ಎಷ್ಟೇ ಹೇಳಿಕೊಂಡರೂ ಭಾರತದ ಚರಿತ್ರೆಗೆ ಅವರು ಬಿಟ್ಟುಹೋದ ರಾಜಕೀಯ ಸಾಧನೆಗಳು ತೀರಾ ಕಮ್ಮಿ. ಆರ್ಯರು ಜಯಿಸಲಾಗದೆ ಶಾಂತಿ ಬಯಸಬೇಕಾದಂಥ – ಆರ್ಯರು ತಮ್ಮ ಸಮಾನರೆಂದೇ ಪರಿಗಣಿಸಬೇಕಾಗಿ ಬಂದ – ನಾಗ ಎಂಬ ಬಲಿಷ್ಠ ಅನಾರ್ಯ ಜನಾಂಗದ ಉತ್ಕರ್ಷದೊಡನೆ ಭಾರತದ ರಾಜಕೀಯ ಚರಿತ್ರೆ ಆರಂಭವಾಗುತ್ತದೆ. ಪುರಾತನ ಕಾಲದಲ್ಲಿ ಭಾರತವು ರಾಜಕೀಯ ಕ್ಷೇತ್ರದಲ್ಲಿ ಸಾಧಿಸಿದ ಎಲ್ಲ ಖ್ಯಾತಿ ಮತ್ತು ವೈಭವದ ಪೂರ್ಣ ಶ್ರೇಯಸ್ಸು ಈ ಅನಾರ್ಯ ನಾಗರಿಗೇ ಸಲ್ಲಬೇಕು. ಜಗತ್ತಿನ ಇತಿಹಾಸದಲ್ಲಿ ಭಾರತವನ್ನು ಮಹೋನ್ನತ ಹಾಗೂ ಭವ್ಯವಾಗಿ ಮಾಡಿದ್ದು ಈ ಜನಾಂಗವೇ.

ಕ್ರಿಸ್ತಪೂರ್ವ ೬೪೨ರಲ್ಲಿ ಬಿಹಾರದಲ್ಲಿ ಉದಯಿಸಿದ ಮಗಧ ಸಾಮ್ರಾಜ್ಯವೇ ಭಾರತದ ರಾಜಕೀಯ ಇತಿಹಾಸದ ಮೊದಲ ಮೈಲಿಗಲ್ಲು. ಈ ಮಗಧ ಸಾಮ್ರಾಜ್ಯವನ್ನು ಸ್ಥಾಪಿಸಿದವನು ಅನಾರ್ಯ ನಾಗ ಜನಾಂಗಕ್ಕೆ ಸೇರಿದ ಶಿಶುನಾಗ.[೨]

ಶಿಶುನಾಗನ ನಮ್ರ ಆರಂಭವನ್ನೇ ಸಮರ್ಥ ಆಡಳಿತಗಾರರಾದ ಶಿಶುನಾಗ ವಂಶಸ್ಥರು ಮಗಧ ಸಾಮ್ರಾಜ್ಯವಾಗಿ ವಿಸ್ತರಿಸಿದರು. ಈ ವಂಶದ ಐದನೇ ದೊರೆಯಾದ ಬಿಂಬಿಸಾರನ ಕಾಲದಲ್ಲಿ ಇದು

---

೧. "ದಿ ರಿಲಿಜನ್ ಆಫ್ ದಿ ವೇದ". ಪು. ೧.

೨. ಈತನಿಗೆ ಶಿಶುನಾಕ ಎಂದೂ ಹೇಳುತ್ತಾರೆ.

ಮಹಾಸಾಮ್ರಾಜ್ಯವಾಗಿ ಬೆಳೆಯಿತು. ಇದೇ ಶಿಶುನಾಗ ವಂಶವು ಕ್ರಿಸ್ತಪೂರ್ವ ೪೧೩ರವರೆಗೆ ಈ ಸಾಮ್ರಾಜ್ಯವನ್ನು ಆಳಿತು. ಈ ವರ್ಷವೇ ಶಿಶುನಾಗ ವಂಶದ ಮಹಾನಂದ ಎಂಬ ಚಕ್ರವರ್ತಿಯು ನಂದ ಎಂಬ ಸಾಹಸಿಯ ಕೈಯಲ್ಲಿ ಕೊಲೆಗೀಡಾದ. ಈ ನಂದ ಮಗಧ ಸಿಂಹಾಸನವನ್ನು ಆಕ್ರಮಿಸಿ ನಂದ ವಂಶೀಯರ ಆಳ್ವಿಕೆಯನ್ನು ಸ್ಥಾಪಿಸಿದ. ಈ ನಂದವಂಶ ಮಗಧ ಸಾಮ್ರಾಜ್ಯವನ್ನು ಕ್ರಿಸ್ತಪೂರ್ವ ೩೨೨ರವರೆಗೆ ಆಳಿತು. ಕೊನೆಯ ನಂದ ದೊರೆಯನ್ನು ಚಂದ್ರಗುಪ್ತನು ಪದಚ್ಯುತಗೊಳಿಸಿ ಮೌರ್ಯ ಆಳ್ವಿಕೆಯನ್ನು ಸ್ಥಾಪಿಸಿದ. ಈ ಚಂದ್ರಗುಪ್ತನು ಶಿಶುನಾಗ ವಂಶದ ಕೊನೆ ದೊರೆಯ ಸಂಬಂಧಿಯಾದ್ದರಿಂದ[೧] ಚಂದ್ರಗುಪ್ತನ ಕ್ರಾಂತಿಯು ನಾಗ ಆಳ್ವಿಕೆಯ ಮರುಸ್ಥಾಪನೆಯೆಂದೇ ಹೇಳಬಹುದು.

ಮೌರ್ಯರು ತಮ್ಮ ದಿಗ್ವಿಜಯಗಳಿಂದ ತಾವು ಪಡೆದ ಮಗಧ ಸಾಮ್ರಾಜ್ಯದ ಸರಹದ್ದುಗಳನ್ನು ಅಗಾಧವಾಗಿ ವಿಸ್ತರಿಸಿದರು. ಅಶೋಕನ ಆಳ್ವಿಕೆಯಲ್ಲಿ ಈ ಸಾಮ್ರಾಜ್ಯ ಎಷ್ಟು ವಿಶಾಲವಾಯಿತೆಂದರೆ ಸಾಮ್ರಾಜ್ಯಕ್ಕೆ ಇನ್ನೊಂದೇ ಹೆಸರು ಬಂತು.

*(ಇಲ್ಲಿಂದ ಹಸ್ತಪ್ರತಿಯ ೪ ರಿಂದ ೭ ಪುಟಗಳು ನಾಪತ್ತೆಯಾಗಿವೆ.)*

ಅದು ಆಗ ಚಾಲ್ತಿಯಲ್ಲಿದ್ದ ಅನೇಕ ವಿಭಿನ್ನ ಧರ್ಮಗಳಲ್ಲೊಂದಾಗಿ ಉಳಿಯಲಿಲ್ಲ. ಅಶೋಕ ಅದನ್ನು ರಾಜ್ಯಧರ್ಮವಾಗಿ ಮಾಡಿದ. ಬ್ರಾಹ್ಮಣ ಧರ್ಮಕ್ಕೆ ಒದಗಿದ ಬಹುದೊಡ್ಡ ಪೆಟ್ಟು ಇದೇ. ಅಶೋಕ ಸಾಮ್ರಾಜ್ಯದಲ್ಲಿ ಬ್ರಾಹ್ಮಣರು ಎಲ್ಲ ರಾಜಾಶ್ರಯ ಕಳೆದುಕೊಂಡು ಎರಡನೆಯ ಹಾಗೂ ಅಧೀನ ಸ್ಥಾನಕ್ಕೆ ತಳ್ಳಲ್ಪಟ್ಟರು. ಹಾಗೆ ನೋಡಿದರೆ ಬ್ರಾಹ್ಮಣ ಧರ್ಮದ ಜೀವಾಳವಾದ ಎಲ್ಲ ಬಗೆಯ ಪ್ರಾಣಿಬಲಿಯ ಯಜ್ಞಗಳನ್ನು ಅಶೋಕ ನಿಷೇಧಿಸಿದ ಸರಳ ಕಾರಣಕ್ಕೆ ಅದು ದಮನಗೊಂಡಿತೆಂದು ಹೇಳಬಹುದು. ಬ್ರಾಹ್ಮಣರು ರಾಜಾಶ್ರಯ ಕಳೆದುಕೊಂಡಿದ್ದಷ್ಟೇ ಅಲ್ಲ, ಅವರು ಯಜ್ಞಗಳನ್ನು ಮಾಡಿ ತಮ್ಮ ಜೀವನಕ್ಕಾಗಿ ಪಡೆಯುತ್ತಿದ್ದ ದಕ್ಷಿಣೆಯನ್ನೂ ಕಳೆದುಕೊಂಡಿದ್ದರಿಂದ ಅವರಿಗೆ ವೃತ್ತಿ ನಷ್ಟವೂ ಆದಂತಾಯಿತು. ಹಾಗಾಗಿ ಬ್ರಾಹ್ಮಣರು ಮೌರ್ಯ ಸಾಮ್ರಾಜ್ಯವಿದ್ದ ೧೪೦ ವರ್ಷಗಳ ಕಾಲ ದಮನಕ್ಕೊಳಗಾದ ನಿಮ್ನ ವರ್ಗವಾಗಿ[೨] ಜೀವಿಸಿದರು. ಆದ್ದರಿಂದ ಕಷ್ಟಜೀವಿಗಳಾಗಿದ್ದ ಬ್ರಾಹ್ಮಣರಿಗೆ ಬೌದ್ಧ ರಾಜ್ಯದ ವಿರುದ್ಧ ಬಂಡಾಯ ವೇಳುವುದೊಂದೇ ಮಾರ್ಗವಾಗಿತ್ತು ಮತ್ತು ಮೌರ್ಯರ ಆಳ್ವಿಕೆಯ ವಿರುದ್ಧ ಪುಷ್ಯಮಿತ್ರನೇಕೆ ದಂಗೆಯ ಧ್ವಜ ಎತ್ತಿದನೆಂಬುದಕ್ಕೂ ವಿಶೇಷ ಕಾರಣವಿದೆ. ಪುಷ್ಯಮಿತ್ರ ಶುಂಗಗೋತ್ರದವನು. ಶುಂಗರು ಸಾಮವೇದಿ ಬ್ರಾಹ್ಮಣರಾಗಿದ್ದರು.[೩] ಅವರಿಗೆ ಪ್ರಾಣಿಬಲಿ ಹಾಗೂ ಸೋಮಯಜ್ಞಗಳಲ್ಲಿ ನಂಬಿಕೆ. ಅಶೋಕನ ಶಿಲಾಶಾಸನವು ಮೌರ್ಯ ಸಾಮ್ರಾಜ್ಯದಾದ್ಯಂತ ಪ್ರಾಣಿಬಲಿಯ ವಿರುದ್ಧ ನಿಷೇಧ ಹೇರಿದ್ದರಿಂದ ಶುಂಗ ಬ್ರಾಹ್ಮಣರು ಸಹಜವಾಗಿಯೇ ಕುದಿಯುತ್ತಿದ್ದರು. ಹಾಗಾಗಿ ತಮ್ಮ ಅವಹೇಳನದ ಮೂಲ ಕಾರಣವಾಗಿದ್ದ ಬೌದ್ಧ ರಾಜ್ಯವನ್ನು ನಾಶಮಾಡಿ ಬ್ರಾಹ್ಮಣ ಧರ್ಮ ಆಚರಣೆಯ ಸ್ವಾತಂತ್ರ್ಯ ಗಳಿಸುವ ಕಲ್ಪನೆ ಸಾಮವೇದಿ ಬ್ರಾಹ್ಮಣನಾದ ಪುಷ್ಯನಿಗೆ ಬಂದಿದ್ದರಲ್ಲಿ ಆಶ್ಚರ್ಯವೇನೂ ಇಲ್ಲ.

ರಾಜ್ಯ ಧರ್ಮವಾಗಿದ್ದ ಬೌದ್ಧಧರ್ಮವನ್ನು ನಾಶ ಮಾಡುವುದು ಮತ್ತು ಬ್ರಾಹ್ಮಣರನ್ನೇ ಭಾರತದ ಸಾರ್ವಭೌಮ ದೊರೆಗಳನ್ನಾಗಿ ಮಾಡಿ ಆ ಮೂಲಕ ರಾಜಕೀಯ ಅಧಿಕಾರ ಬಳಸಿ ಬೌದ್ಧಧರ್ಮದ

---

೧. ಹರಿಕೃಷ್ಣದೇವ್: ಸ್ಮಿತ್ ಅವರ 'ಅರ್ಲಿ ಹಿಸ್ಟರಿ ಆಫ್ ಇಂಡಿಯಾ'ದಲ್ಲಿ ಉದ್ಧೃತ, ಪು. ೪೪.

೨. ಮನುಸ್ಮೃತಿಯಲ್ಲಿ ಮನು ಬ್ರಾಹ್ಮಣರಿಗಾಗಿ ಕೇಳುವ ಸವಲತ್ತುಗಳಲ್ಲೇ ಮೌರ್ಯ ಆಳ್ವಿಕೆಯಲ್ಲಿ ಅವರಿಗಿದ್ದ ಕೀಳರಿಮೆ ವ್ಯಕ್ತವಾಗುತ್ತದೆ. ಅವರು ನಿಮ್ಮ ವರ್ಗವಾಗಿದ್ದುದೇ ಅವರ ಕೀಳರಿಮೆಗೆ ಕಾರಣವಿರಬೇಕು.

೩. ಹರಿಪ್ರಸಾದ್ ಶಾಸ್ತ್ರಿ : 'ಬುದ್ಧಿಸ್ಟಿಕ್ ಸ್ಟಡೀಸ್', ಅಧ್ಯಾಯ ೩೪, ಪು. ೮೧.

ವಿರುದ್ಧ ಬ್ರಾಹ್ಮಣ ಧರ್ಮದ ವಿಜಯ ಸಾಧಿಸುವುದು ಇವೇ ಪುಷ್ಯಮಿತ್ರನ ರಾಜಹತ್ಯೆಯ ಉದ್ದೇಶವಾಗಿತ್ತೆಂದು ಇನ್ನೂ ಎರಡು ಸಂದರ್ಭಗಳಿಂದ ಸುಸ್ಪಷ್ಟವಾಗುತ್ತದೆ.

ಮೊದಲ ಸಂದರ್ಭವು ಪುಷ್ಯಮಿತ್ರನ ವರ್ತನೆಗೆ ಸಂಬಂಧಪಟ್ಟಿದ್ದು.

ಪುಷ್ಯಮಿತ್ರನು ಸಿಂಹಾಸನಾರೋಹಣ ಮಾಡುತ್ತಿದ್ದಂತೆಯೇ ಸಾರ್ವಭೌಮ ಚಕ್ರವರ್ತಿ ಮಾತ್ರ ಮಾಡಬಹುದಾದ ಅಶ್ವಮೇಧ ಯಾಗವೆಂಬ ವೈದಿಕ ಯಜ್ಞ ಮಾಡಿದನೆನ್ನಲು ಸಾಕ್ಷ್ಯಾಧಾರವಿದೆ. ವಿನ್ಸೆಂಟ್ ಸ್ಮಿತ್ ಅವರು ಹೇಳುವಂತೆ:

> "ಜೀವದ ಪಾವಿತ್ರ್ಯ ಕುರಿತ ಉತ್ಪ್ರೇಕ್ಷಿತ ಕಾಳಜಿ ಬೌದ್ಧ ಧರ್ಮದ ಪೋಷಿತ ಲಕ್ಷಣಗಳಲ್ಲೊಂದಾಗಿದ್ದಂತೆಯೇ ಅಶೋಕನ ವಿಶಿಷ್ಟ ಶಾಸನದ ಪ್ರೇರಣೆಯೂ ಆಗಿತ್ತು. ಈ ಕಾಳಜಿಯಿಂದಲೇ ಧರ್ಮನಿಷ್ಠರು ಅತ್ಯುನ್ನತ ಉದ್ಧಾರಕ ಕ್ರಿಯೆಯೆಂದು ಬಗೆದ ಹಾಗೂ ಬ್ರಾಹ್ಮಣರ ಕೆಲ ಬಗೆಯ ಪೂಜೆಗಳಿಗೆ ಅನಿವಾರ್ಯವಾದ ಪ್ರಾಣಿಬಲಿಯನ್ನು ನಿಷೇಧಿಸುವುದು ಅತ್ಯಗತ್ಯವಾಗಿತ್ತು. ಪುಷ್ಯಮಿತ್ರನ ಸ್ಮರಣೀಯ ಅಶ್ವಮೇಧಗಳು, ಐದು ಶತಮಾನಗಳಲ್ಲಿ ಸಮುದ್ರಗುಪ್ತ ಮತ್ತವನ ವಂಶಸ್ಥರ ಕಾಲದಲ್ಲಿ ಪೂರ್ಣ ವೃದ್ಧಿ ಹೊಂದಿದಂಥ ಬ್ರಾಹ್ಮಣ ಪ್ರತಿಕ್ರಿಯೆಯ ಮೊದಲ ಹಂತವಾಗಿ ಕಾಣಿಸಿಕೊಂಡವು."

ಜೊತೆಗೆ, ಪುಷ್ಯಮಿತ್ರನು ಪಟ್ಟಕ್ಕೆ ಬಂದ ಕೂಡಲೇ ಬೌದ್ಧರು ಹಾಗೂ ಬೌದ್ಧ ಧರ್ಮದ ವಿರುದ್ಧ ಅತ್ಯುಗ್ರ ಹಿಂಸಾತ್ಮಕ ಪ್ರಚಾರವನ್ನೇ ಆರಂಭಿಸಿದನೆನ್ನಲೂ ಪ್ರಮಾಣವಿದೆ.

ಬೌದ್ಧ ಧರ್ಮದ ವಿರುದ್ಧ ಪುಷ್ಯಮಿತ್ರನ ಪೀಡನೆ ಎಷ್ಟು ನಿರ್ದಯವಾಗಿತ್ತೆನ್ನಲು ಬೌದ್ಧ ಭಿಕ್ಷುಗಳ ವಿರುದ್ಧದ ಆತನ ಘೋಷಣೆಯೇ ಸಾಕ್ಷಿಯಾಗಿದೆ. ಪ್ರತಿಯೊಬ್ಬ ಭಿಕ್ಷುವಿನ ತಲೆಗೆ ಆತ ನೂರು ಚಿನ್ನದ ನಾಣ್ಯಗಳ ಬೆಲೆ ಕಟ್ಟಿದ್ದ.[೧]

ಪುಷ್ಯಮಿತ್ರನ ಕಾಲದಲ್ಲಿ ಬೌದ್ಧರು ಅನುಭವಿಸಿದ ಕಿರುಕುಳದ ಬಗ್ಗೆ ಡಾ. ಹರಿಪ್ರಸಾದ್ ಶಾಸ್ತ್ರಿ ಹೀಗೆ ಹೇಳುತ್ತಾರೆ:[೨]

"ಕಂದಾಚಾರಿಗಳೂ, ಧರ್ಮಾಂಧರೂ ಆಗಿದ್ದ ಶುಂಗರ ಸಾಮ್ರಾಜ್ಯಶಾಹಿ ಪ್ರಭುತ್ವದಲ್ಲಿ ಬೌದ್ಧರು ಅನುಭವಿಸಿದ ಸ್ಥಿತಿಯನ್ನು ವಿವರಿಸುವುದಕ್ಕಿಂತ ಊಹಿಸುವುದು ಸುಲಭ. ಅನೇಕ ಬೌದ್ಧರು ಈಗಲೂ ಶಾಪವಿಲ್ಲದೆ ಪುಷ್ಯಮಿತ್ರನ ಹೆಸರು ತೆಗೆಯುವುದಿಲ್ಲವೆಂದು ಚೀನಿ ಮೂಲಗಳಿಂದ ತಿಳಿದುಬರುತ್ತದೆ."

ಪುಷ್ಯಮಿತ್ರನ ಕ್ರಾಂತಿ ರಾಜಕೀಯ ಕ್ರಾಂತಿ ಮಾತ್ರವಾಗಿದ್ದರೆ, ಘಜನಿ ಮಹಮದನು ಹಿಂದೂ ಧರ್ಮದ ವಿರುದ್ಧ ನಡೆಸಿದ ಅತ್ಯಾಚಾರವನ್ನೇ ಈತನೂ ಬೌದ್ಧ ಧರ್ಮದ ವಿರುದ್ಧ ನಡೆಸುವ ಅಗತ್ಯವಿರಲಿಲ್ಲ. ಪುಷ್ಯಮಿತ್ರನ ಧ್ಯೇಯ ಬೌದ್ಧ ಧರ್ಮವನ್ನು ಉಚ್ಚಾಟಿಸಿ ಅದರ ಜಾಗದಲ್ಲಿ ಬ್ರಾಹ್ಮನ ಧರ್ಮವನ್ನು ಸ್ಥಾಪಿಸುವುದೇ ಆಗಿತ್ತೆನ್ನಲು ಇದೊಂದು ಸಾಂದರ್ಭಿಕ ಪುರಾವೆಯಾಗಿದೆ.

ಮೌರ್ಯರ ವಿರುದ್ಧ ಪುಷ್ಯಮಿತ್ರನ ಕ್ರಾಂತಿಯ ಮೂಲ ಹಾಗೂ ಉದ್ದೇಶ ಬೌದ್ಧಧರ್ಮವನ್ನು ನಾಶಮಾಡಿ ಬ್ರಾಹ್ಮಣ ಧರ್ಮ ಸ್ಥಾಪನೆ ಮಾಡುವುದಾಗಿತ್ತೆನ್ನಲು ಆತ ಮನುಸ್ಮೃತಿಯನ್ನೇ ಕಾನೂನು ಸಂಹಿತೆಯಾಗಿ ಜಾರಿಗೊಳಿಸಿದ್ದು ಇನ್ನೊಂದು ಪುರಾವೆ.

---

೧. ಬರ್ಸೋಫ್ L'Introduction a L'Historic on Buddhisme Indien (2nd Ed) ಪು. ೩೮೮

೨. 'ಬುದ್ಧಿಸ್ಟಿಕ್ ಸ್ಟಡೀಸ್' (ಸಂ. ೮), ಅಧ್ಯಾಯ ೩೪, ಪು. ೮೨೦

ಮನುಸ್ಮೃತಿ ದೈವಿಕ ಮೂಲದ್ದು ಎನ್ನಲಾಗಿದೆ. ಸ್ವಯಂಭೂವಿನಿಂದ (ಸೃಷ್ಟಿಕರ್ತನಿಂದ) ಅದನ್ನು ಕೇಳಿದ ಮನುವೇ ಮನುಷ್ಯನಿಗೆ ಬೋಧಿಸಿದನೆಂದೂ ಹೇಳಲಾಗಿದೆ. ಆಗಲೇ ಹೇಳಿದ ಹಾಗೆ ಮನುಸ್ಮೃತಿಯಲ್ಲೇ ಈ ಬಗೆಯ ಘೋಷಣೆಯಿದೆ. ಈ ಘೋಷಣೆಯ ಆಧಾರಗಳನ್ನು ಯಾರೂ ಪರೀಕ್ಷಿಸಲು ಮುಂದಾಗದಿರುವುದೇ ಆಶ್ಚರ್ಯ. ಇದರ ಪರಿಣಾಮವಾಗಿ ಭಾರತದ ಚರಿತ್ರೆಯಲ್ಲಿ ಮನುಸ್ಮೃತಿಯ ಮಹತ್ವ ಹಾಗೂ ಸ್ಥಾನಗಳನ್ನು ಅರಿಯುವುದೇ ಸಾಧ್ಯವಾಗಿಲ್ಲ. ಮನುಸ್ಮೃತಿಯು ಹಿಂದೂ ಸಮಾಜ ಕಂಡ ಅತ್ಯಂತ ದೊಡ್ಡ ಸಾಮಾಜಿಕ ಕ್ರಾಂತಿಯ ದಾಖಲೆಯಾಗಿದ್ದಾಗ್ಯೂ ಈ ಆಕ್ಷೇಪ ಭಾರತದ ಚರಿತ್ರಾಕಾರರಿಗೂ ಅನ್ವಯಿಸುತ್ತದೆ. ಅಷ್ಟಾದರೂ, ಮನುಸ್ಮೃತಿ ಕರ್ತೃವನ್ನು ಕುರಿತ ಘೋಷಣೆ ಪೂರ್ಣ ಠಕ್ಕುತನದ್ದಾಗಿದ್ದು ಆ ಘೋಷಣೆಯ ಫಲವಾದ ನಂಬಿಕೆಗಳೂ ಅಸಮರ್ಥನೀಯವಾಗಿವೆಯೆಂಬುದರಲ್ಲಿ ಯಾವ ಸಂದೇಹವೂ ಇಲ್ಲ.

ಭಾರತದ ಪ್ರಾಚೀನ ಇತಿಹಾಸದಲ್ಲಿ ಮನು ಎಂಬ ಹೆಸರಿಗೆ ತುಂಬಾ ಗೌರವ ಇರುವುದರಿಂದ ಈ ಸಂಹಿತೆಗೂ ಆ ಪ್ರಾಚೀನ ಗೌರವ ದಕ್ಕಲೆಂಬ ಉದ್ದೇಶದಿಂದಲೇ ಮನುವಿನ ಹೆಸರನ್ನು ಅದಕ್ಕೆ ಜೋಡಿಸಲಾಯಿತು. ಇದು ಜನರನ್ನು ಮೋಸಗೊಳಿಸುವ ಉದ್ದೇಶದ ದಗಾಕೋರತನವೆಂಬುದರಲ್ಲೂ ಅನುಮಾನವಿಲ್ಲ. ಪುರಾತನ ಪದ್ಧತಿಗನುಗುಣವಾಗಿ, ಈ ಸಂಹಿತೆಗೆ ಭೃಗು ವಂಶೀಯನು ಕರ್ತೃವೆಂದು ನಮೂದಿಸಲಾಗಿದೆ.[೧] "ಭೃಗು ರಚಿಸಿದ ಪಾಠ – ಮನು ಧರ್ಮ ಸಂಹಿತೆ" ಎಂಬುದೇ ಈ ಕೃತಿಯ ನಿಜ ಶೀರ್ಷಿಕೆ. ಸಂಹಿತೆಯ ಪ್ರತಿ ಅಧ್ಯಾಯದ ಕೊನೆಯಲ್ಲೂ ಭೃಗುವಿನ ಹೆಸರು ಕಾಣುತ್ತದೆ. ಇದರಿಂದ ನಮಗೆ ಸಂಹಿತೆಯ ರಚನಾಕಾರನ ವಂಶ ಗೊತ್ತಾದಂತಾಯಿತು. ಆದರೆ ಕೃತಿಯಲ್ಲಿ ಕರ್ತೃವಿನ ನಾಮಧೇಯವನ್ನು ಬಹಿರಂಗಪಡಿಸಿಲ್ಲ. ಅಷ್ಟಾದರೂ ಆ ಹೆಸರು ಬಹಳ ಜನಕ್ಕೆ ಗೊತ್ತಿತ್ತು. ಕ್ರಿಸ್ತಶಕ ನಾಲ್ಕನೇ ಶತಮಾನದಲ್ಲಿ ನಾರದಸ್ಮೃತಿ ರಚಿಸಿದವನಿಗೆ ಮನುಸ್ಮೃತಿಯ ಕರ್ತೃವಿನ ಹೆಸರು ಗೊತ್ತಿದ್ದು ಅದನ್ನು ಆತ ಹೊರಗೆಡಹಿದ್ದಾನೆ. ನಾರದನ ಪ್ರಕಾರ ಮನುಸ್ಮೃತಿಯನ್ನು ರಚಿಸಿದವನ ಹೆಸರು ಸುಮತಿ ಭಾರ್ಗವ. ಸುಮತಿ ಭಾರ್ಗವ ಎಂಬುದು ಪೌರಾಣಿಕ ಹೆಸರಾಗಿರದೆ ಚಾರಿತ್ರಿಕ ವ್ಯಕ್ತಿಯೊಬ್ಬನ ಹೆಸರಾಗಿರಬೇಕು. ಯಾಕೆಂದರೆ ಮನುಸ್ಮೃತಿಯ ಮುಖ್ಯ ವ್ಯಾಖ್ಯಾನಕಾರನಾದ ಮೇಧಾತಿಥಿ[೨] ಕೂಡಾ ಮನು 'ಒಬ್ಬ ವ್ಯಕ್ತಿ' ಎಂದಿದ್ದಾನೆ. ಆದ್ದರಿಂದ ಮನು ಎಂಬುದು ಮನುಸ್ಮೃತಿ ರಚನಾಕಾರನಾದ ಸುಮತಿ ಭಾರ್ಗವನ ಸುಳ್ಳು ಹೆಸರು.

ಈ ಸುಮತಿ ಭಾರ್ಗವ ಸಂಹಿತೆಯನ್ನು ರಚಿಸಿದ್ದು ಯಾವಾಗ? ಅದರ ರಚನೆಯ ನಿಖರ ಕಾಲ ಹೇಳುವುದು ಸಾಧ್ಯವಿಲ್ಲ. ಆದರೆ ಅಂದಾಜು ಕಾಲವನ್ನು ಹೇಳಬಹುದು. ಕೆಲವು ಪ್ರಶ್ನಾತೀತ ವಿದ್ವಾಂಸರ ಪ್ರಕಾರ ಸುಮತಿ ಭಾರ್ಗವನು ಉದ್ದೇಶಪೂರ್ವಕವಾಗಿ ಮನುಸ್ಮೃತಿ ಎಂದು ಕರೆದುಕೊಂಡ ಸಂಹಿತೆಯನ್ನು ಕ್ರಿಸ್ತಪೂರ್ವ ೧೭೦ ರಿಂದ ೧೫೦ರವರೆಗಿನ ಅವಧಿಯಲ್ಲಿ ರಚಿಸಿರಬೇಕು. ಈಗ ಪುಷ್ಯಮಿತ್ರನ ಬ್ರಾಹ್ಮಣಕ್ರಾಂತಿ ಕ್ರಿಸ್ತಪೂರ್ವ ೧೮೫ರಲ್ಲಿ ಜರುಗಿತೆಂಬುದನ್ನು ಮನಸ್ಸಿನಲ್ಲಿಟ್ಟುಕೊಂಡರೆ, ಮೌರ್ಯರ ಬೌದ್ಧ ರಾಜ್ಯದ ವಿರುದ್ಧ ನಡೆದ ಬ್ರಾಹ್ಮಣ ಕ್ರಾಂತಿಯ ತತ್ವಗಳು ಅಡಕವಾದ ಮನುಸ್ಮೃತಿಯನ್ನು ಆತನೇ ಜಾರಿಗೊಳಿದನೆಂಬುದಲ್ಲಿ ಸಂದೇಹ ಉಳಿಯುವುದಿಲ್ಲ. ಮನುಸ್ಮೃತಿಯು ಬ್ರಾಹ್ಮಣ ಧರ್ಮದ ಆಧಾರಸ್ತಂಭವಾಗಿದ್ದು ಪುಷ್ಯಮಿತ್ರನ ಕ್ರಾಂತಿ ಕೇವಲ ವ್ಯಕ್ತಿಗತ ಸಾಹಸವಲ್ಲ ಎಂಬುದಕ್ಕೂ ಪುರಾವೆಯಾಗಿರುವುದು ಸ್ಪಷ್ಟವಾಗುತ್ತದೆ.

---

೧. ಈ ಅಂಶದ ಬಗ್ಗೆ ಮನು ಮತ್ತು ಯಾಜ್ಞವಲ್ಕ್ಯರನ್ನು ಕುರಿತ ಜಯಸ್ವಾಲ್ ಅವರ ಕೃತಿ ನೋಡಿ.

೨. ಮನು ಕುರಿತ ವ್ಯಾಖ್ಯಾನ ೧.೧.

ಮೊದಲನೆಯದಾಗಿ, ಮನುಸ್ಮೃತಿಯು ಪುಷ್ಯಮಿತ್ರನ ಆಳ್ವಿಕೆಯಲ್ಲಿ ಜಾರಿಗೊಂಡ ಹೊಸ ಶಾಸನ ಸಂಹಿತೆ ಎಂಬುದು ಗಮನಾರ್ಹ. ಮುಂಚೆ ಮಾನವ ಧರ್ಮಸೂತ್ರ ಎಂಬ ಸಂಹಿತೆಯೊಂದಿದ್ದು ಮನುಸ್ಮೃತಿ ಈ ಹಳೆಯ ಮಾನವ ಧರ್ಮಸೂತ್ರದ್ದೇ ಹೊಸ ರೂಪ ಎಂಬುದೊಂದು ದೃಷ್ಟಿ ಚಾಲ್ತಿಯಲ್ಲಿತ್ತು. ಆದರೆ ಅಂಥ ಯಾವ ಕೃತಿಯ ಸುಳಿವೂ ಸಿಕ್ಕಿಲ್ಲವಾದ್ದರಿಂದ ಆ ದೃಷ್ಟಿಕೋನವನ್ನು ತ್ಯಜಿಸಲಾಗಿದೆ. ಈಗಿನ ಮನುಸ್ಮೃತಿಗೆ ಮುಂಚೆ ಇನ್ನೆರಡು ಕೃತಿಗಳೂ ಅಸ್ತಿತ್ವದಲ್ಲಿದ್ದವು. ಒಂದರ ಹೆಸರು ಮಾನವ ಅರ್ಥಶಾಸ್ತ್ರ ಅಥವಾ ಮಾನವ ರಾಜಶಾಸ್ತ್ರ ಅಥವಾ ಮಾನವ ರಾಜಧರ್ಮಶಾಸ್ತ್ರ. ಇನ್ನೊಂದರ ಹೆಸರು ಮಾನವ ಗೃಹ್ಯ ಸೂತ್ರ. ಇವುಗಳೊಂದಿಗೆ ವಿದ್ವಾಂಸರು ಮನುಸ್ಮೃತಿಯನ್ನು ಹೋಲಿಸಿ ನೋಡಿದ್ದಾರೆ. ಮುಖ್ಯ ಅಂಶಗಳಲ್ಲಿ ಒಂದಕ್ಕೂ ಇನ್ನೊಂದಕ್ಕೂ ಹೋಲಿಕೆಯಿಲ್ಲ ಅನ್ನುವುದಷ್ಟೇ ಅಲ್ಲ. ಒಂದಕ್ಕೂ ಇನ್ನೊಂದಕ್ಕೂ ತದ್ವಿರುದ್ಧ ಕಂಡುಬಂದಿದೆ. ಮನುಸ್ಮೃತಿಯು ಹೊಸ ಸಾಮ್ರಾಜ್ಯದ ಹೊಸ ಶಾಸನವಾಗಿತ್ತೆನ್ನಲು ಇಷ್ಟೇ ಸಾಕು.

ಪುಷ್ಯಮಿತ್ರನ ಹೊಸ ಸಾಮ್ರಾಜ್ಯ ಬುದ್ಧ ವಿರೋಧಿಯಾಗಿತ್ತೆನ್ನುವುದನ್ನು ಬೌದ್ಧರು ಹಾಗೂ ಬೌದ್ಧಧರ್ಮದ ವಿರುದ್ಧ ಮನುಸ್ಮೃತಿಯಲ್ಲಿ ಕಂಡುಬರುವ ಬಹಿರಂಗ ಸೂತ್ರಗಳೇ ಎತ್ತಿತೋರುತ್ತವೆ. ಮನುಸ್ಮೃತಿಯ ಈ ಕೆಳಗಿನ ಶ್ಲೋಕಗಳನ್ನು ಗಮನಿಸಿ:

IX೨೨೫. ".....ಪಾಷಂಡಿಗಳನ್ನು.....ರಾಜನು ತನ್ನ ದೇಶದಿಂದ ಹೊರಹಾಕಬೇಕು...."

IX೨೨೬. "ಇವರು ಯಥಾರ್ಥ ಕಳ್ಳರಲ್ಲದಿದ್ದರೂ, ರಾಜ್ಯದಲ್ಲಿದ್ದರೆ ನಿತ್ಯವೂ ತಮ್ಮ ವಿಕರ್ಮಕ್ರಿಯೆಯಿಂದ ಪ್ರಜೆಗಳನ್ನು ಪೀಡಿಸುತ್ತಾರೆ."

V೮೯. "ոոಜಾತಿ ಸಂಕರದಿಂದ (ವೃಥಾ) ಹುಟ್ಟಿ ವಿಧಿಗಳನ್ನು ಅಲಕ್ಷಿಸಿದವರಿಗೆ, (ವೇದವಿರೋಧಿ) ವಿರಕ್ತರಿಗೆ ಜಲತರ್ಪಣ ಮಾಡಬಾರದು."

V೯೦. "ವೇದವಿರೋಧಿಗಳನ್ನು ಆಶ್ರಯಿಸಿದ ಹೆಂಗಸರಿಗೆ..... (ಜಲತರ್ಪಣ ಮಾಡಬಾರದು)"

IV೩೦. "ಪಾಷಂಡಿಗಳು, ತರ್ಕವಾದಿಗಳನ್ನು (ಗೃಹಸ್ಥನು) ಗೌರವಾದರಗಳಿಂದ ಮಾತನಾಡಿಸಬಾರದು."

XII೯೫. "ವೇದಲಾಹ್ಯವಾದ ಸ್ಮೃತಿಗಳು ವಾದವಿವಾದಗಳು ನಿಷ್ಫಲವಾದುವು. ಯಾಕೆಂದರೆ ಅವು ತಮೋನಿಷ್ಟ (ತಾಮಸ) ವಾಗಿವೆ."

XII೯೬. "ನಿಷ್ಫಲವೂ, ಅಸತ್ಯವೂ ಆದ ಈ ವೇದ ವಿರೋಧಿ ಸಿದ್ಧಾಂತಗಳು ಪ್ರಾಚೀನವಲ್ಲದ್ದರಿಂದ ಹುಟ್ಟಿ (ಹಾಗೆಯೇ) ನಶಿಸಿಹೋಗುತ್ತವೆ."

ಈ ಜೀವನದಲ್ಲಾಗಲೀ ಮರಣಾನಂತರವಾಗಲೀ ಗೃಹಸ್ಥರು ಗೌರವಿಸಬಾರದೆಂದೂ ಹೊಸ ರಾಜನು ತನ್ನ ರಾಜ್ಯದಿಂದಲೇ ಓಡಿಸಬೇಕೆಂದು ಮನು ವಿಧಿಸುವ ಈ ಪಾಷಂಡಿಗಳು (ವೇದವಿರೋಧಿಗಳು) ಯಾರು? ವೇದಬಾಹಿರವಾದ, ಪ್ರಾಚೀನವಲ್ಲದ, ನಿಷ್ಫಲವಾದ, ನಶಿಸಲೇಬೇಕಾದ ಈ ತಮೋನಿಷ್ಟ ಸಿದ್ಧಾಂತವಾದರೂ ಯಾವುದು? ಮನುವಿನ ಪ್ರಕಾರ ಪಾಷಂಡಿಯಾದವನು ಬೌದ್ಧನೇ ಮತ್ತು ವೇದ ಬಾಹಿರವಾದ ಈಚಿನ ನಿಷ್ಫಲ ಸಿದ್ಧಾಂತ ಬೌದ್ಧಧರ್ಮವೇ ಅನ್ನುವುದರಲ್ಲಿ ಸಂದೇಹವಿಲ್ಲ. ಜೊತೆಗೆ ಮನುಸ್ಮೃತಿಯ ಇನ್ನೊಬ್ಬ ಭಾಷ್ಯಕಾರನಾದ ಕಲ್ಲೂಕ ಭಟ್ಟನು ಮನುಸ್ಮೃತಿಯ ಈ ಶ್ಲೋಕಗಳಲ್ಲಿ ಬರುವ ಪಾಷಂಡಿಯ ಉಲ್ಲೇಖ ಬೌದ್ಧರು ಹಾಗೂ ಬೌದ್ಧಧರ್ಮವನ್ನೇ ಕುರಿತದ್ದೆಂದು ಸ್ಪಷ್ಟವಾಗಿಯೇ ಹೇಳಿದ್ದಾನೆ.

ಇನ್ನು ಮೂರನೇ ಸಾಂದರ್ಭಿಕ ಸಾಕ್ಷ್ಯವೆಂದರೆ ಮನುಸ್ಮೃತಿಯಲ್ಲಿ ಬ್ರಾಹ್ಮಣರಿಗೆ ಕೊಟ್ಟ ಸ್ಥಾನಮಾನ. ಮನುವಿನ ಈ ಕೆಳಗಿನ ವಿಧಿಗಳನ್ನು ಗಮನಿಸಿ:

I ೯೩. ಬ್ರಾಹ್ಮಣನು (ಬ್ರಹ್ಮನ) ಮುಖದಿಂದ ಬಂದವನಾದ್ದರಿಂದ, ಜ್ಯೇಷ್ಠನಾದ್ದರಿಂದ ಮತ್ತು ವೇದವನ್ನು ಹೊಂದಿದವನಾದ್ದರಿಂದ ಬ್ರಾಹ್ಮಣನೇ ಈ ಸೃಷ್ಟಿಯ ಪ್ರಭು.

I ೯೬. ಸರ್ವಭೂತಗಳಲ್ಲಿ ಪ್ರಾಣಿಗಳು ಶ್ರೇಷ್ಠ. ಪ್ರಾಣಿಗಳಲ್ಲಿ ಬುದ್ಧಿವಂತ (ಪ್ರಾಣಿಗಳು) ಶ್ರೇಷ್ಠ, ಅದರಲ್ಲೂ ಮನುಷ್ಯರು ಶ್ರೇಷ್ಠ. ಮನುಷ್ಯರಲ್ಲಿ ಬ್ರಾಹ್ಮಣರೇ ಶ್ರೇಷ್ಠ.

I ೧೦೦. ಈ ಜಗತ್ತಿನಲ್ಲಿರುವುದೆಲ್ಲ ಬ್ರಾಹ್ಮಣನ ಸೊತ್ತು. ತನ್ನ ಶ್ರೇಷ್ಠ ಜನ್ಮದಿಂದಲೇ ಬ್ರಾಹ್ಮಣನು ಎಲ್ಲ (ವಸ್ತುಗಳಿಗೂ) ಅರ್ಹತೆ ಪಡೆದಿದ್ದಾನೆ.

I ೧೦೧. ಬ್ರಾಹ್ಮಣನು ತನ್ನ ಊಟವನ್ನೇ ಉಣ್ಣುತ್ತಾನೆ. ತನ್ನ ವಸ್ತುವನ್ನೇ ಉಡುತ್ತಾನೆ. ತನ್ನ ದಾನವನ್ನೇ ಮಾಡುತ್ತಾನೆ. ಇತರರು ಬ್ರಾಹ್ಮಣನ ಔದಾರ್ಯದಲ್ಲಿ ಬದುಕುತ್ತಾರೆ.

X ૩. ತನ್ನ ಸಂಸ್ಕಾರ, ನಿಯಮ ಮತ್ತು ಪ್ರಕೃತಿ ವಿಶೇಷಗಳಿಂದ ಸಕಲ ವರ್ಣಗಳಿಗೂ ಬ್ರಾಹ್ಮಣನೇ ಪ್ರಭು.

XI ૩૫. ಬ್ರಾಹ್ಮಣನೇ (ಈ ಜಗತ್ತಿನ) ವಿಧಾನ, ಶಾಸನಕಾರ, ಅಧ್ಯಾಪಕ. ಆದ್ದರಿಂದ (ಎಲ್ಲ ಜೀವಿಗಳ) ಮಿತ್ರ. ಆ ಬ್ರಾಹ್ಮಣನಿಗೆ ಯಾರೂ ಅಕುಶಲವಾದ ಅಥವಾ ಶುಷ್ಕವಾದ ಮಾತುಗಳನ್ನಾಡದಿರಲಿ.

ರಾಜರೂ ಕೂಡಾ ಬ್ರಾಹ್ಮಣರನ್ನು ಅಸಂತುಷ್ಟಗೊಳಿಸಬಾರದೆಂದು ಮನು ಈ ಕೆಳಗಿನಂತೆ ವಿಧಿಸುತ್ತಾನೆ:

IX ૩೧. ಬ್ರಾಹ್ಮಣನು ಎಂಥ ಕಷ್ಟಕ್ಕೆ ಸಿಲುಕಿದ ಸಮಯದಲ್ಲೂ (ರಾಜನು) ಅವನನ್ನು ಕುಪಿತಗೊಳಿಸಬಾರದು. ಹಾಗೆ (ಬ್ರಾಹ್ಮಣನು) ಕೋಪಗೊಂಡರೆ ರಾಜನ ಸೈನ್ಯ ವಾಹನಗಳೆಲ್ಲವನ್ನೂ ತಕ್ಷಣವೇ ನಾಶಮಾಡಬಲ್ಲ.

ಮನು ಇನ್ನೂ ಮುಂದುವರೆದು ಹೇಳುತ್ತಾನೆ:

XI ૩೧. ಧರ್ಮವನ್ನು ಸ್ವತಃ ತಿಳಿದ ಬ್ರಾಹ್ಮಣನು (ತನಗೆ) ಯಾರಾದರೂ ಹಾನಿ ಮಾಡಿದರೆ ಅದನ್ನು ರಾಜನ ಗಮನಕ್ಕೆ ತರಬೇಕಾಗಿಲ್ಲ. ಬ್ರಾಹ್ಮಣನು ತನಗೆ ಹಾನಿ ಮಾಡಿದವರನ್ನು ತನ್ನ ಬಲದಿಂದಲೇ ಶಿಕ್ಷೆಗೆ ಗುರಿಪಡಿಸಬಹುದು.

XI ૩೨. (ಬ್ರಾಹ್ಮಣನ) ಸ್ವಂತ ಬಲವು ರಾಜಬಲಕ್ಕಿಂತ ಬಲವತ್ತರವಾದುದು. ಆ ಬಲದಿಂದಲೇ ದ್ವಿಜರು (ಶತ್ರುಗಳನ್ನು) ನಿಗ್ರಹಿಸಬಲ್ಲರು.

ಮನುವಿನ ದೃಷ್ಟಿಕೋನವನ್ನು ಒಪ್ಪುವಂಥ ಬ್ರಾಹ್ಮಣನೇ ರಾಜನಾಗಿರದಿದ್ದ ಪಕ್ಷದಲ್ಲಿ ಬ್ರಾಹ್ಮಣರ ಇಂಥ ದೈವೀಕರಣವಾಗಲಿ ಬ್ರಾಹ್ಮಣನಿಗೆ ರಾಜನಿಗಿಂತ ಮಿಗಿಲಾದ ಸ್ಥಾನಮಾನ ಕೊಡುವದಾಗಲೀ ಸಾಧ್ಯವಾಗುತ್ತಿರಲಿಲ್ಲ. ಪುಷ್ಯಮಿತ್ರ ಹಾಗೂ ಅವನ ಉತ್ತರಾಧಿಕಾರಿಗಳು ಸ್ವತಃ ಬ್ರಾಹ್ಮಣರಾಗಿದ್ದು ಬ್ರಾಹ್ಮಣಿಕೆಯ ಪ್ರತಿಷ್ಠಾಪನೆಯಲ್ಲಿ ಆಸಕ್ತರಾಗಿರದಿದ್ದರೆ ಬ್ರಾಹ್ಮಣರ ಇಂಥ ಉತ್ಪ್ರೇಕ್ಷಿತ ಸ್ಥಾನಮಾನವನ್ನು ಸಹಿಸುತ್ತಲೂ ಇರಲಿಲ್ಲ. ಹಾಗೆ ನೋಡಿದರೆ, ಬ್ರಾಹ್ಮಣ ಧರ್ಮ ಸಿದ್ಧಾಂತದ ಪಾಠವಾದ ಮನುಸ್ಮೃತಿಯು ಪುಷ್ಯಮಿತ್ರನ ಆದೇಶದ ಮೇರೆಗೆ ಸೃಷ್ಟಿಯಾಗಿರುವುದೂ ಸಾಧ್ಯವಿದೆ.

ಇವೆಲ್ಲ ಸತ್ಯಾಂಶಗಳನ್ನು ಗಮನಿಸಿದರೆ, ಬೌದ್ಧ ಧರ್ಮವನ್ನು ನಾಶಮಾಡಿ, ಬ್ರಾಹ್ಮಣ ಧರ್ಮವನ್ನು ಮರುಸ್ಥಾಪಿಸುವುದೇ ಪುಷ್ಯಮಿತ್ರನ ಕ್ರಾಂತಿಯ ಏಕೈಕ ಉದ್ದೇಶವಾಗಿತ್ತೆಂಬುದರಲ್ಲಿ ಸಂದೇಹ ಉಳಿಯುವುದಿಲ್ಲ.

ಭಾರತೀಯ ಚರಿತ್ರೆಯನ್ನು ಬರೆಯುತ್ತಿರುವ ವೈಖರಿಯ ಬಗ್ಗೆ ನನಗೆ ಸಮಾಧಾನವಿದ್ದಿದ್ದರೆ ಈ ಅಧ್ಯಾಯದ ಉದ್ದೇಶಕ್ಕಾಗಿ ಭಾರತೀಯ ರಾಜಕೀಯ ಚರಿತ್ರೆಯ ಸಾರಾಂಶವನ್ನು ಈ ಮೇಲಿನಂತೆ

ಕೊಡುವ ಅಗತ್ಯವೇ ಇರುತ್ತಿರಲಿಲ್ಲ. ಆದರೆ ನೇರವಾಗಿ ಹೇಳುವುದಾದರೆ, ನನಗೆ ಆ ಸಮಾಧಾನವಿಲ್ಲ. ಯಾಕೆಂದರೆ ಮುಸ್ಲಿಮರು ಭಾರತದ ಮೇಲೆ ನಡೆಸಿದ ಧಾಳಿಗೆ ತೀರಾ ಮಹತ್ವ ಕೊಡಲಾಗಿದೆ. ಹೇಗೆ ಮುಸ್ಲಿಮರ ಧಾಳಿಯ ಅಲೆಗಳ ಮಹಾಪೂರವೇ ಹರಿದು ಬಂದು ಜನರನ್ನು ಆವರಿಸಿ ಆಡಳಿತಾರೂಢರನ್ನು ಕಿತ್ತೆಸೆಯಿತೆಂಬುದನ್ನು ತೋರಿಸಲೆಂದೇ ರೀಲುಗಟ್ಟಳೆ ಬರೆಯಲಾಗಿದೆ. ಇಡಿ ಭಾರತೀಯ ಚರಿತ್ರೆ ಮುಸ್ಲಿಂ ದಂಡಯಾತ್ರೆಗಳ ಪಟ್ಟಿ ಮಾತ್ರ ಎಂಬಂತೆ ತೋರ್ಪಡಿಸಲಾಗಿದೆ. ಆದರೆ ಸಂಕುಚಿತ ದೃಷ್ಟಿಕೋನದಿಂದ ನೋಡಿದಾಗ್ಯೂ ಕೂಡ, ಅಧ್ಯಯನಕ್ಕೆ ಅರ್ಹವಾದದ್ದು ಮುಸ್ಲಿಂ ಧಾಳಿಯೊಂದೇ ಅಲ್ಲ ಎಂಬುದು ಸ್ಪಷ್ಟವಾಗುತ್ತದೆ. ಇದರಷ್ಟೇ ಅಥವಾ ಇದಕ್ಕಿಂತ ಮುಖ್ಯವಾದ ಬೇರೆ ಧಾಳಿಗಳೂ ಇವೆ. ಮುಸ್ಲಿಂ ದಾಳಿಕೋರರು ಹಿಂದೂ ಭಾರತದ ಮೇಲೆ ಧಾಳಿ ಮಾಡಿದರೆ ಬ್ರಾಹ್ಮಣ ಧಾಳಿಕೋರರು ಬೌದ್ಧ ಭಾರದ ಮೇಲೆ ಧಾಳಿ ಮಾಡಿದರು ಮತ್ತು ಈ ಎರಡೂ ಧಾಳಿಗಳ ನಡುವೆ ಅನೇಕ ಹೋಲಿಕೆಗಳಿವೆ. ಹಿಂದೂ ಭಾರತದ ಮೇಲೆ ದಂಡೆತ್ತಿ ಬಂದ ಮುಸ್ಲಿಂ ಧಾಳಿಕೋರರು ತಮ್ಮ ವಂಶೀಯ ಆಕಾಂಕ್ಷೆಗಳಿಗಾಗಿ ತಮ್ಮ ತಮ್ಮಲ್ಲೇ ಹೊಡೆದಾಡಿದರು. ಅರಬ್ಬರು, ತುರ್ಕರು, ಮಂಗೋಲರು ಮತ್ತು ಆಫ್ಘನ್ನರು ಪರಸ್ಪರ ಹಿರಿಮೆಗಾಗಿ ಬಡಿದಾಡಿದರು. ಆದರೆ ಮೂರ್ತಿಪೂಜೆಯನ್ನು ನಾಶಮಾಡುವುದು ಅವರೆಲ್ಲರ ಗುರಿಯಾಗಿತ್ತು. ಇದೇ ರೀತಿ ಬೌದ್ಧ ಭಾರತದ ಮೇಲೆ ಧಾಳಿ ಮಾಡಿದ ಬ್ರಾಹ್ಮಣ ಧಾಳಿಕೋರರು ತಮ್ಮ ತಮ್ಮ ವಂಶದ ಹಿರಿಮೆಗಾಗಿ ಪರಸ್ಪರ ಹೊಡೆದಾಡಿಕೊಂಡರು. ಶುಂಗರು, ಕಣ್ವರು ಮತತು ಆಂಧ್ರರು ಪರಸ್ಪರ ಮೇಲ್ಮೆಗಾಗಿ ಹೋರಾಟ ಮಾಡಿದರು. ಆದರೆ ಮುಸ್ಲಿಂ ಧಾಳಿಕೋರರಂತೆಯೇ ಅವರಿಗೂ ಏಕ ಗುರಿಯಿತ್ತು. ಬೌದ್ಧ ಧರ್ಮ ಹಾಗೂ ಮೌರ್ಯರ ಬೌದ್ಧ ಸಾಮ್ರಾಜ್ಯವನ್ನು ನಾಶ ಮಾಡುವುದೇ ಆ ಗುರಿ. ಹಿಂದೂ ಭಾರತದ ಮೇಲೆ ಮುಸ್ಲಿಂ ಧಾಳಿಕೋರರ ದಂಡಯಾತ್ರೆಗಳು ಚರಿತ್ರಕಾರರ ಅಧ್ಯಯನಕ್ಕೆ ಅರ್ಹವಾಗಿದ್ದರೆ, ಬೌದ್ಧ ಭಾರತದ ಮೇಲೆ ಬ್ರಾಹ್ಮಣ ಧಾಳಿಕೋರರ ದಂಡೆಯಾತ್ರೆಗಳೂ ಅಷ್ಟೇ ಅಧ್ಯಯನ ಯೋಗ್ಯವಾಗಿವೆ. ಬೌದ್ಧ ಭಾರತದ ಬ್ರಾಹ್ಮಣ ಧಾಳಿಕೋರರು ಬೌದ್ಧಧರ್ಮವನ್ನು ಅಡಗಿಸಲು ಅನುಸರಿಸಿದ ಮಾರ್ಗವಿಧಾನಗಳು, ಹಿಂದೂ ಧರ್ಮವನ್ನು ಅಡಗಿಸಲು ಮುಸ್ಲಿಂ ಧಾಳಿಕೋರರು ಅನುಸರಿಸಿದ ಮಾರ್ಗವಿಧಾನಗಳಿಗಿಂತ ಕಡಿಮೆ ವಿಷಮಯ ಅಥವಾ ಹಿಂಸಾತ್ಮಕವಾದುವೇನೂ ಆಗಿರಲಿಲ್ಲ. ಜನರ ಸಾಮಾಜಿಕ ಹಾಗೂ ಆಧ್ಯಾತ್ಮಿಕ ಜೀವನದ ಮೇಲೆ ಉಂಟಾದ ಶಾಶ್ವತ ಪರಿಣಾಮದ ದೃಷ್ಟಿಯಿಂದ ನೋಡಿದಾಗ, ಬೌದ್ಧ ಭಾರತದ ಮೇಲೆ ನಡೆದ ಬ್ರಾಹ್ಮಣ ಧಾಳಿಗಳಿಗೆ ಹೋಲಿಸಿದರೆ, ಹಿಂದೂ ಭಾರತದ ಮೇಲೆ ಮುಸ್ಲಿಂ ಧಾಳಿಗಳ ಪರಿಣಾಮ ಮೇಲುಮೇಲಿನದೂ, ಅಲ್ಪಾಯುಷಿಯಾದದ್ದೂ ಆಗಿದೆ. ಮುಸ್ಲಿಂ ಧಾಳಿಕೋರರು ಹಿಂದೂ ಧರ್ಮದ ದೇವಾಲಯಗಳು ಮತ್ತು ಮಠಗಳಂಥ ಬಾಹ್ಯ ಸಂಕೇತಗಳನ್ನಷ್ಟೇ ನಾಶಮಾಡಿದರು. ಅವರು ಹಿಂದೂ ಧರ್ಮದ ಮೂಲೋತ್ಪಾಟನೆಯನ್ನು ಮಾಡಲಿಲ್ಲ. ಜನರ ಆಧ್ಯಾತ್ಮಿಕ ಜೀವನವನ್ನು ಆಳುವ ತತ್ವಗಳು ಅಥವಾ ಸಿದ್ಧಾಂತಗಳನ್ನೂ ಬುಡಮೇಲು ಮಾಡಲಿಲ್ಲ. ಆದರೆ ಬ್ರಾಹ್ಮಣ ಧಾಳಿಯ ಪರಿಣಾಮಗಳು, ಒಂದು ಶತಮಾನ ಕಾಲ ಬೌದ್ಧ ಧರ್ಮವು ಆಧ್ಯಾತ್ಮಿಕ ಜೀವನದ ನಿಜ ಹಾಗೂ ಶಾಶ್ವತ ತತ್ವಗಳೆಂದು ಬೋಧಿಸಿ ಜನಸ್ತೋಮವು ಒಪ್ಪಿಕೊಂಡು ಜೀವನದ ರೀತಿಯಾಗಿ ಪಾಲಿಸುತ್ತಿದ್ದ ತತ್ವಗಳ ಅಮೂಲಾಗ್ರ ಬದಲಾವಣೆಯಾಗಿದ್ದವು. ಹೋಲಿಕೆ ನೀಡುವುದಾದರೆ ಮುಸ್ಲಿಂ ಧಾಳಿಕೋರರು ಸ್ನಾನದ ನೀರನ್ನು ಕೇವಲ ಕಲಕಿದರು. ಅದೂ ಸ್ವಲ್ಪ ಸಮಯ ಮಾತ್ರ. ಆಮೇಲೆ ಈ ಕಲಕುವಿಕೆ ಸಾಕಾಗಿ ರಾಡಿ ತಂತಾನೇ ತಿಳಿಯಾಗಲು ಬಿಟ್ಟುಕೊಟ್ಟರು. ಹಿಂದೂ ಧರ್ಮದ ತತ್ವಗಳನ್ನು ಕೂಸು ಎಂದು ಕರೆಯಬಹುದಾದರೆ ಅವರು ಕೂಸನ್ನೆಂದೂ ಸ್ನಾನದಿಂದ ತೆಗೆದೆಸೆಯಲಿಲ್ಲ. ಆದರೆ ಬ್ರಾಹ್ಮಣಧರ್ಮ–ಬೌದ್ಧ ಧರ್ಮಗಳ ಸಂಘರ್ಷವು ಚೊಕ್ಕಟ ಗುಡಿಸುವ ಕಾಯಕವಾಗಿತ್ತು. ಅದು ಬೌದ್ಧ ಕೂಸನ್ನು ನೀರಿನ ಸಮೇತ ಬರಿದು ಮಾಡಿ ಅಲ್ಲಿ

ತನ್ನ ನೀರು ತುಂಬಿ ತನ್ನ ಕೂಸನ್ನೇ ಇಟ್ಟಿತು. ತನಗೆ ಹೋಲಿಸಿದರೆ ಬೌದ್ಧಧರ್ಮದ ಉದಾತ್ತ ನೆಲೆಯಿಂದ ಹರಿದುಬಂದ ನೀರು ಎಷ್ಟು ಶುಚಿಯಾದ ಪರಿಮಳಭರಿತ ಜಲವೆಂಬುದನ್ನೂ ಬ್ರಾಹ್ಮಣ ಧರ್ಮ ಕಾಣಲಿಲ್ಲ. ಬೌದ್ಧ ಕೂಸಿಗೆ ಹೋಲಿಸಿದರೆ ತನ್ನ ಕೂಸು ಎಷ್ಟು ಭೀಕರವಾದುದೆಂಬುದನ್ನೂ ಬ್ರಾಹ್ಮಣ ಧರ್ಮ ಕಾಣಲಿಲ್ಲ. ಬೌದ್ಧ ಕೂಸಿಗೆ ಹೋಲಿಸಿದರೆ ತನ್ನ ಕೂಸು ಎಷ್ಟು ಭೀಕರವಾದುದೆಂಬುದನ್ನು ಕಾಣಲೂ ಬ್ರಾಹ್ಮಣ ಧರ್ಮ ಮನಸ್ಸು ಮಾಡಲಿಲ್ಲ. ತನ್ನ ದಂಡಯಾತ್ರೆಗಳ ಮೂಲಕ ಬ್ರಾಹ್ಮಣ ಧರ್ಮವು ಬೌದ್ಧ ಧರ್ಮವನ್ನೂ ವಿನಾಶಗೊಳಿಸುವ ರಾಜಕೀಯ ಅಧಿಕಾರ ಪಡೆಯಿತು ಮತ್ತು ಬೌದ್ಧ ಧರ್ಮವನ್ನು ನಾಶ ಮಾಡಿತು ಕೂಡಾ, ಇಸ್ಲಾಂ ಹೀಗೆ ಗುಡಿಸಿ ಸಾರಿಸಲು ಸಾಧ್ಯವಾಗಲಿಲ್ಲ. ಬ್ರಾಹ್ಮಣ ಧರ್ಮಕ್ಕೆ ಸಾಧ್ಯವಾಯಿತು. ಅದು ಒಂದು ಧರ್ಮವಾಗಿ ಬೌದ್ಧ ತತ್ವವನ್ನು ಓಡಿಸಿ ಆ ಸ್ಥಾನವನ್ನು ತಾನು ಆಕ್ರಮಿಸಿಕೊಂಡಿತು.

ಈ ಸತ್ಯಾಂಶಗಳು, ಭಾರತದ ಚರಿತ್ರಕಾರನ ಪಾಲಿಗೆ ಮುಸ್ಲಿಂ ಧಾಳಿಗಳಿಗಿಂತ, ಬೌದ್ಧ ಭಾರತದ ಮೇಲೆ ನಡೆದ ಬ್ರಾಹ್ಮಣ ಧಾಳಿಯೇ ಹೆಚ್ಚು ಮಹತ್ವದ್ದು ಎಂಬುದನ್ನು ತೋರುತ್ತದೆ. ಇಷ್ಟಾದರೂ, ಮೌರ್ಯರು ಕಟ್ಟಿದ ಬೌದ್ಧ ಭಾರತಕ್ಕೆ ಬಂದೊದಗಿದ ಗತಿಯ ಬಗ್ಗೆ ಚರಿತ್ರಕಾರರು ತೀರಾ ಕಡಿಮೆ ಬರೆದಿದ್ದಾರೆ. ಬರೆದಾಗಲೂ ಇಲ್ಲಿ ಸಹಜವಾಗಿ ಉದ್ಭವವಾಗುವ ಪ್ರಶ್ನೆಗಳನ್ನು ಸ್ಪಷ್ಟವಾಗಿ ಎದುರಿಸಿಲ್ಲ. ಉದಾಹರಣೆಗೆ ಶುಂಗರು, ಕಣ್ವರು ಮತ್ತು ಆಂಧ್ರರು ಯಾರು? ಅವರೇಕೆ ಮೌರ್ಯರು ಕಟ್ಟಿದ ಬೌದ್ಧ ಭಾರತವನ್ನು ನಾಶ ಮಾಡಿದರು. ಜೊತೆಗೆ ಬೌದ್ಧ ಧರ್ಮದ ವಿರುದ್ಧ ಗೆಲುವು ಸಾಧಿಸಿದ ನಂತರ ಬ್ರಾಹ್ಮನ ಧರ್ಮವು ತಂದ ರಾಜಕೀಯ ಸಾಮಾಜಿಕ ಬದಲಾವಣೆಗಳನ್ನು ಅಭ್ಯಸಿಸುವ ಪ್ರಯತ್ನವೂ ನಡೆದಿಲ್ಲ.

ಭಾರತೀಯ ಚರಿತ್ರೆಯ ಈ ಮುಖವನ್ನು ಸರಿಯಾಗಿ ಕಂಡರಿಯದಿರಲು ಕೆಲವು ತಪ್ಪು ಕಲ್ಪನೆಗಳೇ ಕಾರಣವಾಗಿವೆ. ಭಾರತೀಯ ಸಂಸ್ಕೃತಿಯು ಚರಿತ್ರೆಯುದ್ಧಕ್ಕೂ ಒಂದೇ ಬಗೆಯಾಗಿತ್ತೆಂದು ಭಾವಿಸಲಾಗಿದೆ. ಜೊತೆಗೆ ಬ್ರಾಹ್ಮನ ಧರ್ಮ, ಬೌದ್ಧ ಧರ್ಮ ಹಾಗೂ ಜೈನ ಧರ್ಮಗಳು ಕೇವಲ ವಿವಿಧ ಹಂತಗಳಾಗಿದ್ದು ಅವುಗಳ ನಡುವೆ ಯಾವುದೇ ಬಗೆಯ ವೈಷಮ್ಯವಿಲ್ಲವೆಂದೂ ತಿಳಿಯಲಾಗಿದೆ. ಎರಡನೆಯದಾಗಿ, ಭಾರತದ ರಾಜಕೀಯದಲ್ಲಿ ಸಂಭವಿಸಿದ ಸಂಘರ್ಷಗಳೆಲ್ಲ ಪೂರ್ಣವಾಗಿ ರಾಜಕೀಯಾತ್ಮಕ ಹಾಗೂ ವಂಶೀಯವೆಂದೂ ಅದಕ್ಕೆ ಯಾವುದೇ ಸಾಮಾಜಿಕ ಆಧ್ಯಾತ್ಮಿಕ ಮಹತ್ವವಿಲ್ಲವೆಂದೂ ಭಾವಿಸಲಾಗಿದೆ. ಈ ಕಾರಣಕ್ಕಾಗಿಯೇ ಭಾರತೀಯ ಚರಿತ್ರೆ ಸಂಪೂರ್ಣ ಯಾಂತ್ರಿಕವಾದ ವಂಶಾವಳಿ ಹಾಗೂ ಆಡಳಿತಗಾರರ ದಾಖಲೆಯಾಗಿಬಿಟ್ಟಿದೆ. ಈ ಧೋರಣೆ ಹಾಗೂ ಚರಿತ್ರೆ ರಚನೆಯ ವಿಧಾನವನ್ನು ತಿದ್ದಬೇಕಾದರೆ ನಿಸ್ಸಂಧಿಗ್ಧವಾದ ಎರಡು ಸತ್ಯಾಂಶಗಳನ್ನು ಮೊದಲು ಗುರುತಿಸಬೇಕು.

ಮೊದಲನೆಯದಾಗಿ, ಸಾರ್ವತ್ರಿಕ ಭಾರತೀಯ ಸಂಸ್ಕೃತಿ ಎಂಬುದೇ ಇರಲಿಲ್ಲ. ಚಾರಿತ್ರಿಕವಾಗಿ ಬ್ರಾಹ್ಮಣ ಭಾರತ, ಬೌದ್ಧ ಭಾರತ ಮತ್ತು ಹಿಂದೂ ಭಾರತವೆಂಬ ಮೂರು ಭಾರತಗಳಿವೆ. ಎರಡನೆಯದಾಗಿ, ಮುಸ್ಲಿಂ ಧಾಳಿಗಳ ಮುಂಚಿನ ಭಾರತೀಯ ಚರಿತ್ರೆಯೆಂದರೆ ಬ್ರಾಹ್ಮಣಧರ್ಮ ಹಾಗೂ ಬೌದ್ಧ ಧರ್ಮಗಳ ನಡುವಣ ಮಾರಕ ಸಂಘರ್ಷದ ಚರಿತ್ರೆಯೆಂಬುದನ್ನು ಗುರುತಿಸಬೇಕು. ಈ ಎರಡು ಸತ್ಯಗಳನ್ನು ಕಾಣಲಾರದವನು ಭಾರತದ ನೈಜ ಇತಿಹಾಸವನ್ನು ಎಂದೆಂದಿಗೂ ಬರೆಯಲಾರ. ಇತಿಹಾಸದ ನಿಜವಾದ ಅರ್ಥ, ಉದ್ದೇಶಗಳನ್ನು ಹೊರಗೆಡಹಲಾರ. ಈಗ ಬರೆಯಲಾಗಿರುವ ಚರಿತ್ರೆಗೆ ತಿದ್ದುಪಡಿ ಮಾಡಿ, ಅದರ ಅರ್ಥ ಉದ್ದೇಶಗಳನ್ನು ಬಯಲಿಗೆಳೆಯುವುದಕ್ಕಾಗಿಯೇ ನಾನು ಬೌದ್ಧ ಭಾರತದ ಮೇಲೆ ನಡೆದ ಬ್ರಾಹ್ಮಣ ಧಾಳಿಗಳು ಮತ್ತು ಬೌದ್ಧಧರ್ಮದ ವಿರುದ್ಧ ಬ್ರಾಹ್ಮಣಧರ್ಮ ಗಳಿಸಿದ ರಾಜಕೀಯ ದಿಗ್ವಿಜಯ ಚರಿತ್ರೆಯನ್ನು ಪುನರ್ರಚಿಸಬೇಕಾಯಿತು.

ಆದ್ದರಿಂದ ನಾವು ಮೊದಲಲ್ಲೇ ಪುಷ್ಯಮಿತ್ರನ ಕ್ರಾಂತಿಯು ಬೌದ್ಧ ಧರ್ಮವನ್ನು ಓಡಿಸಲು ಬ್ರಾಹ್ಮಣರು ಹುಟ್ಟುಹಾಕಿದ ಕ್ರಾಂತಿ ಎಂಬುದನ್ನು ಅರಿಯಬೇಕು.

ಈಗ ಹೀಗೆ ವಿಜೇತರಾದ ಬ್ರಾಹ್ಮಣರು ಮುಂದೆ ಮಾಡಿದ್ದೇನು ಎಂದು ಕುತೂಹಲಿಗಳು ಸಹಜವಾಗಿಯೇ ಕೇಳುವರು. ನಾನು ಈಗ ಈ ಪ್ರಶ್ನೆಗೆ ತಿರುಗುತ್ತೇನೆ. ಬ್ರಾಹ್ಮಣರ ಕೃತ್ಯಗಳು ಅಥವಾ ಕುಕೃತ್ಯಗಳನ್ನು ಏಳು ವರ್ಗಗಳಾಗಿ ವಿಂಗಡಿಸಬಹುದು. ೧. ಅದು ಬ್ರಾಹ್ಮಣರಿಗೆ ಆಳ್ವಿಕೆಯ ಹಕ್ಕು ಹಾಗೂ ರಾಜಹತ್ಯೆಯ ಹಕ್ಕನ್ನು ರೂಢಿಸಿಕೊಟ್ಟಿತು. ೨. ಅದು ಬ್ರಾಹ್ಮಣರನ್ನು ಸವಲತ್ತುಗಳುಳ್ಳ ವರ್ಗವಾಗಿ ಮಾರ್ಪಡಿಸಿತು. ೩. ಅದು ವರ್ಣವನ್ನು ಜಾತಿಗೆ ರೂಪಾಂತರಿಸಿತು. ೪. ಅದು ವಿವಿಧ ಜಾತಿಗಳ ನಡುವೆ ಪರಸ್ಪರ ವಿರೋಧಿ ಭಾವನೆ ಹಾಗೂ ಘರ್ಷಣೆಗಳನ್ನು ಹುಟ್ಟುಹಾಕಿತು. ೫. ಅದು ಶೂದ್ರರು ಹಾಗೂ ಮಹಿಳೆಯರನ್ನು ಕೆಳಕ್ಕೆ ತಳ್ಳಿತು, ೬. ಅದು ಶ್ರೇಣೀಕೃತ ಅಸಮಾನತೆಯನ್ನು ಜಾರಿಗೆ ತಂದಿತು ಮತ್ತು ೭.ಅವರಿಗೆ ಕೇವಲ ರೂಢಿಗತ ಹಾಗೂ ಪರಿವರ್ತನಾತ್ಮಕವಾಗಿದ್ದ ಸಮಾಜ ವ್ಯವಸ್ಥೆಯನ್ನು ಕಾನೂನುಬದ್ಧಗೊಳಿಸಿ ಜಡಗೊಳಿಸಿತು.

ಮೊದಲನೆಯದರಿಂದ ಆರಂಭಿಸೋಣ:

ಪುಷ್ಯ ಮಿತ್ರನು ಜರುಗಿಸಿದ ಕ್ರಾಂತಿಯಿಂದ ಬ್ರಾಹ್ಮಣರಿಗೆ ಮೊದಲಲ್ಲಿ ತುಸು ಕಷ್ಟವಾಯಿತು. ಜನರು ಸುಲಭವಾಗಿ ಈ ಕ್ರಾಂತಿಯನ್ನು ಒಪ್ಪಿಕೊಳ್ಳಲು ತಯಾರಿರಲಿಲ್ಲ. ಕವಿ ಬಾಣನು.[೧] ಈ ಕ್ರಾಂತಿಯನ್ನು ಉಲ್ಲೇಖಿಸುವಾಗ ಪುಷ್ಯಮಿತ್ರನನ್ನು ನೀಚ ಜನ್ಮದವನೆಂದೂ ಅನಾರ್ಯನೆಂದೂ ಹೀಯಾಳಿಸುವ ಮೂಲಕ ಜನರ ಅಸಹನೆಯನ್ನು ತೋರ್ಪಡಿಸಿದ್ದಾನೆ. ಬಾಣನು ಪುಷ್ಯಮಿತ್ರನ ಕೃತ್ಯವನ್ನು ಅನಾರ್ಯ ಅಂದರೆ ಆರ್ಯ ಶಾಸನಕ್ಕೆ ವಿರೋಧಿ ಎಂದು ಸೂಕ್ತವಾಗಿಯೇ ಬಣ್ಣಿಸಿದ್ದಾನೆ. ಯಾಕೆಂದರೆ ಪುಷ್ಯಮಿತ್ರನ ಕಾಲದಲ್ಲಿ ಮೂರು ವಿಷಯಗಳಲ್ಲಿ ಆರ್ಯ ಶಾಸನ ಸ್ಪಷ್ಟವಾಗಿತ್ತು. ಆಗಿನ ಆರ್ಯ ಶಾಸನವು ೧.ದೊರೆತನ ಕ್ಷತ್ರಿಯನ ಹಕ್ಕು ಮಾತ್ರ. ಬ್ರಾಹ್ಮಣನು ಎಂದೂ ರಾಜನಾಗುವಂತಿಲ್ಲ. ೨. ಬ್ರಾಹ್ಮಣರು ಶಸ್ತ್ರಾಸ್ತ್ರ ಹಿಡಿಯುವಂತಿರಲಿಲ್ಲ[೨] ಹಾಗೂ ೩. ದೊರೆಯ ವಿರುದ್ಧ ಬಂಡಾಯವೇಳುವುದು ಪಾಪಕೃತ್ಯ ಎಂದು ಘೋಷಿಸಿತ್ತು. ಪುಷ್ಯಮಿತ್ರ ತನ್ನ ಬಂಡಾಯದ ಮೂಲಕ ಈ ಮೂರು ನಿಯಮಗಳನ್ನು ಉಲ್ಲಂಘಿಸಿದ್ದ. ಆತನೊಬ್ಬ ಬ್ರಾಹ್ಮಣ ಹಾಗೆ ಬ್ರಾಹ್ಮಣನಾದರೂ ರಾಜನ ವಿರುದ್ಧ ಬಂಡೆದ್ದ ಮತ್ತು ಶಸ್ತ್ರಾಸ್ತ್ರ ಹಿಡಿದು ತಾನೇ ರಾಜನೂ ಆದ. ಜನರು ನಿಯಮಗಳ ಇಂಥ ನೇರ ಉಲ್ಲಂಘನೆ ಹಾಗೂ ಸಿಂಹಾಸನ ಗ್ರಹಣಗಳನ್ನು ಒಪ್ಪಿಕೊಳ್ಳದ್ದರಿಂದ ಪುಷ್ಯಮಿತ್ರನು ಕಲ್ಪಿಸಿದ ಸ್ಥಾನಮಾನಗಳನ್ನು ಬ್ರಾಹ್ಮಣರು ಕ್ರಮಬದ್ಧಗೊಳಿಸಬೇಕಾಯಿತು. ಇದನ್ನು ಬ್ರಾಹ್ಮಣರು ಶಾಸನವನ್ನೇ ಬದಲಿಸುವ ದಿಟ್ಟ ಹೆಜ್ಜೆಯ ಮೂಲಕ ಸಾಧಿಸಿದರು. ಈ ಶಾಸನ ಬದಲಾವಣೆಯು ಮನುಸ್ಮೃತಿಯಿಂದಲೇ ತಿಳಿದುಬರುತ್ತದೆ. ಸಂಹಿತೆಯ ಸೂಕ್ತ ಶ್ಲೋಕಗಳನ್ನು ಇಲ್ಲಿ ಉಲ್ಲೇಖಿಸುತ್ತೇನೆ:

---

೧. 'ಹರ್ಷಚರಿತ', ಸ್ಮಿತ್‌ರಿಂದ (೧೯೨೪) ಉದ್ಧೃತ, ಪು. ೨೦೮

೨. ನಿಯಮಗಳು ಎಷ್ಟು ಉಗ್ರವಾಗಿದ್ದುವೆಂದರೆ, ಬ್ರಾಹ್ಮಣನು ಕೇವಲ ಪರೀಕ್ಷಿಸುವುದಕ್ಕೂ ಕೈಯಲ್ಲಿ ಶಸ್ತ್ರ ಹಿಡಿಯಲಾರನೆಂದು ಅಪಸ್ತಂಭ ಧರ್ಮಸೂತ್ರ ಹೇಳುತ್ತದೆ. ಅಂದಾಗ ಪುಷ್ಯಮಿತ್ರನು ಬ್ರಾಹ್ಮಣನಾಗಿದ್ದು ಅದು ಹೇಗೆ ಕ್ಷತ್ರಿಯನಂತೆ ವರ್ತಿಸಿದನೆಂದು ಆಶ್ಚರ್ಯವಾಗುತ್ತದೆ. ಇದಕ್ಕು ಹರಿಪ್ರಸಾದ್ ಶಾಸ್ತ್ರಿ ಒಂದು ವಿವರಣೆ ಕೊಟ್ಟಿದ್ದಾರೆ. ಅವರ ಪ್ರಕಾರ ಶುಂಗರು ಬ್ರಾಹ್ಮಣರಾದರೂ ಕ್ಷಾತ್ರ ಕುಲವಾಗಿದ್ದರು. ಇಂಥ ಕ್ಷಾತ್ರ ಬ್ರಾಹ್ಮಣರಲ್ಲಿ ಎರಡು ವಿಭಾಗಗಳು – ವಿಶ್ವಾಮಿತ್ರರು ಮತ್ತು ಭಾರದ್ವಾಜರು. ವಿಶ್ವಾಮಿತ್ರ ಬ್ರಾಹ್ಮಣನ ಹೆಂಡತಿ ನಿಸ್ಸಂತಾನಳಾಗಿದ್ದರೆ ಭಾರದ್ವಾಜನಿಂದ 'ನಿಯೋಗ' ಮಾಡಿಸಿ ಮಕ್ಕಳನ್ನು ಪಡೆಯುವುದು ಪ್ರಾಚೀನ ಪದ್ಧತಿ. ಹಾಗೆ ಹುಟ್ಟಿದವರು ಶುಂಗರು. ಅದಕ್ಕೇ ಶುಂಗರು ದ್ವಯಮುಷ್ಯಂ ಗೋತ್ರರು ಅಂದರೆ ಎರಡು ಗೋತ್ರಗಳಿಗೆ ಜನಿಸಿದವರು. ಇವರು ಸಾಮವೇದ ಅಧ್ಯಯನದಲ್ಲಿ ತೊಡಗಿದರು. ನೋಡಿ – 'ಬುದ್ಧಿಸ್ಟಿಕ್ ಸ್ಟಡೀಸ್' (ಸಂ.ಲಾ). ಅಧ್ಯಾಯ ೩೪, ಪುಟ ೮೨೦.

XII ೧೦೦. ಸೇನಾಧಿಪತ್ಯ, ರಾಜ್ಯ ಪ್ರಧಾನ ಮತ್ತು ಸರ್ವಲೋಕದ ಆಧಿಪತ್ಯಕ್ಕೆ ಬ್ರಾಹ್ಮಣರು ಅರ್ಹರಾಗಿದ್ದಾರೆ.

ಇಲ್ಲಿ ಒಂದು ನಿಯಮದ ಬದಲಾವಣೆ ಕಾಣುತ್ತದೆ. ಈ ನಿಯಮವು ಬ್ರಾಹ್ಮಣನಿಗೆ ಸೇನಾಧಿಪತಿಯಾಗುವ, ರಾಜ್ಯ ಗೆಲ್ಲುವ ಮತ್ತು ಆಳುವ ಹಕ್ಕಿದೆಯೆಂದು ಘೋಷಿಸುತ್ತದೆ.

XI ೩೧. ತನಗೆ ಹಾನಿ ಮಾಡಿದವನ ವಿರುದ್ಧ ಬ್ರಾಹ್ಮಣನು ರಾಜನಿಗೆ ದೂರು ಒಯ್ಯಬೇಕಿಲ್ಲ. ತನ್ನ ಬಲದಿಂದಲೇ ಅಪಕಾರಿಗಳನ್ನು ಬ್ರಾಹ್ಮಣನು ನಿಗ್ರಹಿಸಬಲ್ಲ.

XI ೩೨. ರಾಜಬಲಕ್ಕಿಂತ (ಬ್ರಾಹ್ಮಣನ) ಸ್ವಂತ ಬಲವೇ ಬಲವತ್ತರವಾದುದು. ಆದ್ದರಿಂದ ಬ್ರಾಹ್ಮಣನು ತನ್ನ ಬಲದಿಂದಲೇ ವೈರಿಗಳನ್ನು ನಿಗ್ರಹಿಸಬಲ್ಲ.

XI ೨೬೧–೬೨. ಬ್ರಾಹ್ಮಣನು (ಮೂರು) ಲೋಕಗಳನ್ನು ಕೊಂದರೂ ಮೂರು ವೇದಗಳನ್ನು ಉಪನಿಷತ್ (ರಹಸ್ಯ) ಸಹಿತವಾಗಿ ಮೂರು ಬಾರಿ ಪಠಿಸಿದರೆ ಸರ್ವಪಾಪ ಪರಿಹಾರವಾಗುವುದು.

ಇದು ನಿಯಮದ ಎರಡನೇ ಬದಲಾವಣೆ. ಈ ನಿಯಮದಿಂದ ಬ್ರಾಹ್ಮಣನು ರಾಜಹತ್ಯೆ ಮಾಡಬಹುದಷ್ಟೇ ಅಲ್ಲ. ತನ್ನ ಅಧಿಕಾರ ಹಾಗೂ ಸ್ಥಾನಮಾನಕ್ಕೆ ಧಕ್ಕೆ ತರುವವರ ನರಮೇಧವನ್ನೂ ಮಾಡುವ ಅಧಿಕಾರವನ್ನೂ ಆತನಿಗೆ ಕೊಡಲಾಗಿದೆ.

VIII ೩೪೮. (ವರ್ಣಾಶ್ರಮ) ಧರ್ಮಕ್ಕೆ ಚ್ಯುತಿಯಾದಾಗ ಅಥವಾ ವಿಪ್ಲವ ಕಾಲದಲ್ಲಿ ದ್ವಿಜರು (ಆತ್ಮರಕ್ಷಣೆಗಾಗಿ) ಶಸ್ತ್ರ ಹಿಡಿಯಬಹುದು.

IX ೩೨೦. ಬ್ರಾಹ್ಮಣನ ವಿರುದ್ಧ (ಕತ್ತಿ ಎತ್ತಿದ) ಸೊಕ್ಕಿದ ಕ್ಷತ್ರಿಯನನ್ನು ಬ್ರಾಹ್ಮಣನೇ ಅಂಕೆಗೆ ತರಬಲ್ಲನು. ಯಾಕೆಂದರೆ ಕ್ಷತ್ರಿಯನು ಹುಟ್ಟಿದ್ದೂ ಬ್ರಹ್ಮನಿಂದಲೇ (ಬ್ರಹ್ಮ ಮತ್ತು ಬ್ರಾಹ್ಮಣರು ಸಮಾನರು).

ಇದು ಮೂರನೇ ಶಾಸನ ಬದಲಾವಣೆ. ಇದು ಬಂಡಾಯ ಹಾಗೂ ರಾಜಹತ್ಯೆಯ ಹಕ್ಕನ್ನು ಮನ್ನಿಸುತ್ತದೆ. ಈ ಹೊಸ ಶಾಸನವನ್ನು ತುಂಬಾ ಸೂಕ್ಷ್ಮವಾಗಿ ರೂಪಿಸಲಾಗಿದೆ. ಇದು ಮೂರು ಉಚ್ಚ ವರ್ಣಗಳಿಗೆ ಬಂಡಾಯದ ಹಕ್ಕು ನೀಡುತ್ತದೆ. ಅಷ್ಟಾದರೂ ಕ್ಷತ್ರಿಯರು ಹಾಗೂ ವೈಶ್ಯರು ಬ್ರಾಹ್ಮಣನೊಡನೆ ಬಂಡಾಯದಲ್ಲಿ ಕೈಗೂಡಿಸಲಾಗದಂಥ ಸನ್ನಿವೇಶವನ್ನೂ ಸೃಷ್ಟಿಸಿ ಬ್ರಾಹ್ಮಣನಿಗೆ ಮಾತ್ರ ಹಕ್ಕು ನೀಡಿದೆ. ಬಂಡಾಯದ ಹಕ್ಕಿನ ಸೀಮೆಗಳನ್ನು ಸ್ಪಷ್ಟವಾಗಿ ಗುರುತಿಸಲಾಗಿದೆ. ವಿವಿಧ ವರ್ಣಗಳಿಗೆ ಮನು ವಿಧಿಸಿದ ಕರ್ಮವನ್ನು ರಾಜನು ಏರುಪೇರುಗೊಳಿಸಿದ ಸಂದರ್ಭದಲ್ಲಿ ಮಾತ್ರ ಬಂಡೇಳುವ ಹಕ್ಕು ನೀಡಲಾಗಿದೆ.

ಈ ಶಾಸನ ಬದಲಾವಣೆಗಳು ಕ್ರಾಂತಿಕಾರಕವಾಗಿದ್ದಂತೆಯೇ ಅಗತ್ಯವೂ ಆಗಿದ್ದವು. ಕಡೆಯ ಮೌರ್ಯ ದೊರೆಯನ್ನು ಪುಷ್ಯಮಿತ್ರನು ಕೊಂದಿದ್ದರಿಂದ ಉಂಟಾದ ಸ್ಥಾನಮಾನವನ್ನು ಕ್ರಮಬದ್ಧವಾದ ಶಾಸನಬದ್ಧಗೊಳಿಸುವುದೇ ಅವುಗಳ ಉದ್ದೇಶವಾಗಿತ್ತು. ಈ ಬದಲಾವಣೆಗಳ ಬಲದಿಂದ ಬ್ರಾಹ್ಮಣನು ಕಾನೂನುಬದ್ಧವಾಗಿಯೇ ರಾಜನಾಗಬಹುದಿತ್ತು. ಕಾನೂನುಬದ್ಧವಾಗಿಯೇ ಶಸ್ತ್ರಾಸ್ತ್ರ ಹಿಡಿಯಬಹುದು. ಚಾತುರ್ವರ್ಣ ವಿರೋಧಿಯಾದ ದೊರೆಯನ್ನು ಕಾನೂನುಬದ್ಧವಾಗಿಯೇ ಪದಚ್ಯುತಗೊಳಿಸಬಹುದು ಇಲ್ಲವೇ ಕೊಲ್ಲಬಹುದು. ಬ್ರಾಹ್ಮಣನ ಪರಮಾಧಿಕಾರವನ್ನು ವಿರೋಧಿಸುವ ಯಾವುದೇ ಪ್ರಜೆಯನ್ನು ಕಾನೂನುಬದ್ಧವಾಗಿಯೇ ಕೊಲ್ಲಬಹುದು.

ಈ ರೀತಿ ಬ್ರಾಹ್ಮನ ಧರ್ಮವು ಬ್ರಾಹ್ಮಣನ ಆಳ್ವಿಕೆಯ ಹಕ್ಕನ್ನು ಪ್ರತಿಷ್ಠಾಪಿಸಿದ್ದಲ್ಲದೆ, ಈ ವಿಷಯದಲ್ಲಿ

ಇರಬಹುದಾದ ಯಾವುದೇ ಸಂದೇಹ ವಿವಾದಗಳಿಗೆ ತೆರೆ ಎಳೆಯಿತು. ಆದರೆ ಬ್ರಾಹ್ಮಣರಿಗೆ ಇದೂ ಸಾಲುತ್ತಿರಲಿಲ್ಲ. ಯಾಕೆಂದರೆ ಇದು ಹೆಮ್ಮೆಯ ವಿಷಯವಾಗಬಹುದಿತ್ತೇ ಹೊರತು ಲಾಭಾನುಕೂಲದ್ದಲ್ಲ. ಬ್ರಾಹ್ಮಣರೂ ಬ್ರಾಹ್ಮಣೇತರರಿಗೆ ಸಮಾನವಾದ ಸಾಮಾನ್ಯ ಪ್ರಜೆಗಳಾಗಿದ್ದರೆ ಅವರಿಗೂ ಸಮಾನ ಹಕ್ಕು ಕರ್ತವ್ಯಗಳಿರುವುದಾದರೆ ಬ್ರಾಹ್ಮಣ ಆಳ್ವಿಕೆಗೆ ವಿಶೇಷ ಹೆಗ್ಗಳಿಕೆಯೇನೂ ಇರುವುದಿಲ್ಲ. ಬ್ರಾಹ್ಮಣ ಆಳ್ವಿಕೆಯು ತನ್ನನ್ನು ತಾನು ಸಮರ್ಥಿಸಿಕೊಳ್ಳುವುದಿದ್ದರೆ ಅದು ಒಂದು ವರ್ಗವಾಗಿ ಎಲ್ಲ ಬ್ರಾಹ್ಮಣರಿಗೆ ಕೆಲವು ವಿಶೇಷ ಸವಲತ್ತುಗಳು ಮತ್ತು ರಕ್ಷಣೆಗಳನ್ನು ಒದಗಿಸಿಕೊಡಬೇಕಿತ್ತು. ಹಾಗೆ ನೋಡಿದರೆ, ಬ್ರಾಹ್ಮಣದ ಹಿರಿಮೆಯನ್ನು ಗುರುತಿಸಿ ಅವರಿಗೆ ವಿಶೇಷ ಅನುಕೂಲಗಳನ್ನು ಒದಗಿಸದಿದ್ದ ಪಕ್ಷದಲ್ಲಿ ಪುಷ್ಯಮಿತ್ರನ ಕ್ರಾಂತಿ ಯಾವ ಒಳಿತಿಗೂ ಬಾರದ ದುರ್ಗಾಳಿ ಅನಿಸಿಕೊಳ್ಳುತ್ತಿತ್ತು. ಇದನ್ನು ಅರಿತು ಸ್ಪಂದಿಸಿದ ಮನು ಬ್ರಾಹ್ಮಣರ ಏಕಸ್ವಾಮ್ಯವನ್ನು ಕಲ್ಪಿಸಿ ಅವರಿಗೆ ಕೆಲವು ರಕ್ಷಣೆ ಹಾಗೂ ಸವಲತ್ತುಗಳನ್ನು ಒದಗಿಸಹೊರಟಿದ್ದು ಸಂಹಿತೆಯಿಂದಲೇ ವೇದ್ಯವಾಗಿದೆ.

ಮೊದಲು ಏಕಸ್ವಾಮ್ಯಗಳು:

I ೮೮. ಅಧ್ಯಯನ, ಅಧ್ಯಾಪನ, ತನಗಾಗಿ ಮತ್ತು ಇತರರಿಗಾಗಿ ಯಜ್ಞ ಯಾಗಾದಿಗಳನ್ನು ಮಾಡುವುದು, ದಾನ ಕೊಡುವುದು ಮತ್ತು ಸ್ವೀಕರಿಸುವುದು – ಇವು ಬ್ರಾಹ್ಮಣನ ಕೆಲಸಗಳು.

X ೧. ಸ್ವಕರ್ಮ ನಿರತವಾದ ಮೂರು ದ್ವಿಜ ವರ್ಣಗಳು ವೇದಾಧ್ಯಯನ ಮಾಡಬಹುದು. ಆದರೆ ಬೋಧನೆಯನ್ನು ಬ್ರಾಹ್ಮಣನು ಮಾತ್ರ ಮಾಡಬೇಕು, ಇತರರಲ್ಲ ಎಂಬುದು ನಿಶ್ಚಯ.

X ೨. ಬ್ರಾಹ್ಮಣನು ವಿಧಿವತ್ತಾದ ಎಲ್ಲರ ವೃತ್ತಿ ಉಪಾಯಗಳನ್ನು ಅರಿತಿರಬೇಕು. ಎಲ್ಲರಿಗೂ ಬೋಧಿಸಬೇಕು ಮತ್ತು ತಾನೂ ವಿಧಿವತ್ತಾಗಿ ಜೀವಿಸಬೇಕು.

X ೩. ನಿಯಮ, ಧಾರಣೆ, ಸಂಸ್ಕಾರ ಮತ್ತು ಪ್ರಕೃತಿ ವಿಶೇಷಗಳಿಂದ ಬ್ರಾಹ್ಮಣನೇ ಎಲ್ಲ ವರ್ಣಗಳಲ್ಲಿ ಸರ್ವಶ್ರೇಷ್ಠನಾದ್ದರಿಂದ ಎಲ್ಲ ವರ್ಣಗಳಿಗೂ ಆತನೇ ಪ್ರಭು.

X ೭೪. ಸ್ವಕರ್ಮನಿಷ್ಠರಾದ ಬ್ರಹ್ಮಧ್ಯಾನ ನಿರತರಾದ ಬ್ರಾಹ್ಮಣರು ಕ್ರಮವಾಗಿ ಈ ಮುಂದಿನ ಆರು ಕರ್ಮಗಳನ್ನು ಆಚರಿಸಬೇಕು.

X ೭೫. ಅಧ್ಯಾಪನ, ಅಧ್ಯಯನ, ಸ್ವಂತಕ್ಕಾಗಿ ಯಜ್ಞ ಮಾಡುವುದು, ಯಜ್ಞ ಮಾಡಿಸುವುದು, ದಾನ ಕೊಡುವುದು ಮತ್ತು ಸ್ವೀಕರಿಸುವುದು ಇವೇ ಆ ಆರು ಕರ್ಮಗಳು.

X ೭೬. ಈ ಆರು ಕರ್ಮಗಳಲ್ಲಿ ಅಧ್ಯಾಪನ, ಯಜ್ಞ ಮತ್ತು ಪಾತ್ರದಿಂದ ದಾನ ಸ್ವೀಕಾರ ಇವು ಬ್ರಾಹ್ಮಣನ ಜೀವನೋಪಾಯಗಳು.

X ೭೭. ಬ್ರಾಹ್ಮಣನಿಂದ ಕ್ಷತ್ರಿಯನಿಗೆ ಬಂದರೆ ಕ್ಷತ್ರಿಯನಿಗೆ ಮೂರು ಕರ್ಮಗಳು (ಅಧ್ಯಾಪನ, ಬೇರೆಯವರಿಗಾಗಿ ಯಜ್ಞ ಮತ್ತು ದಾನ ಸ್ವೀಕಾರಗಳು) ನಿಷಿದ್ಧ.

X ೭೮. ಇದೇ ರೀತಿ ಇವೇ ಕರ್ಮಗಳೂ ವೈಶ್ಯರಿಗೂ ನಿಷಿದ್ಧ. ಪ್ರಜಾಪತಿಯಾದ ಮನುವು ಈ ಕರ್ಮಗಳನ್ನು ಈ ವರ್ಣಗಳಿಗೆ ಕೊಟ್ಟಿಲ್ಲ.

X ೭೯. ಕ್ಷತ್ರಿಯರಿಗೆ ಶಸ್ತ್ರಾಸ್ತ್ರ, ವೈಶ್ಯರಿಗೆ ವಣಿಕ ವೃತ್ತಿ, ಕೃಷಿ ಮತ್ತು ಪಶು ಪಾಲನೆಗಳೇ ಜೀವನೋಪಾಯಗಳು. ದಾನ, ಅಧ್ಯಯನ ಮತ್ತು ಯಜ್ಞ–ಅವರ ಕರ್ಮಗಳು.

ಇಲ್ಲಿ ಮನುವು ವೇದ ಬೋಧನೆ, ಯಜ್ಞ ಮಾಡುವುದು (ಇತರರಿಗಾಗಿ) ಮತ್ತು ದಾನ ಸ್ವೀಕಾರಗಳನ್ನು ಬ್ರಾಹ್ಮಣರ ಏಕಸ್ವಾಮ್ಯಕ್ಕೆ ಒಳಪಡಿಸಿದ್ದಾನೆ.

ಇನ್ನು ಕೆಳಗಿನವು ಬ್ರಾಹ್ಮಣರಿಗೆ ದೊರೆತ ವಿಶೇಷ ರಕ್ಷಣೆಗಳು. ಇವು ಎರಡು ವರ್ಗಗಳಿಗೆ ಸೇರಿವೆ: ಒಂದು ತೆರಿಗೆ ಕಟ್ಟದಿರುವ ಸ್ವಾತಂತ್ರ್ಯ. ಇನ್ನೊಂದು ಕೆಲವು ಬಗೆಯ ಶಿಕ್ಷೆಗಳಿಂದ ವಿನಾಯ್ತಿ.

VII ೧೩೩. ರಾಜನು ಎಂಥ ವಿಪತ್ಕಾಲದಲ್ಲಿಯೂ ಶ್ರೋತ್ರಿಯನಿಂದ ಕರ ವಸೂಲಿ ಮಾಡಬಾರದು ಮತ್ತು ರಾಜ್ಯದ ಯಾವ ಶ್ರೋತ್ರಿಯನೂ ಹಸಿವಿನ ಬಾಧೆಯಿಂದ ನರಳಬಾರದು.

VIII ೧೨೨. ಅಧರ್ಮ ಹಾಗೂ ಅನ್ಯಾಯ ತಡೆಯಲು ಮತ್ತು ಸುಳ್ಳು ಸಾಕ್ಷಿ ನಿಯಂತ್ರಿಸಲು ಈ ದಂಡನೆಗಳನ್ನು ವಿಧಿಸಲಾಗಿದೆ ಎನ್ನುತ್ತಾರೆ.

VIII ೧೨೩. ಧಾರ್ಮಿಕ ರಾಜನು ಸುಳ್ಳು ಸಾಕ್ಷ್ಯ ಹೇಳಿದ ಮೂರು ವರ್ಣಗಳವರಿಗೆ ದಂಡ ವಿಧಿಸಿ ಊರಿಂದ ಓಡಿಸಬೇಕು. ಆದರೆ ಬ್ರಾಹ್ಮಣನಿಗೆ (ದಂಡ ವಿಧಿಸದೆ) ಕೇವಲ ಓಡಿಸಬೇಕು.

VIII ೧೨೪. ಮೂರು ವರ್ಣಗಳಿಗೆ ಸ್ವಯಂಭು ಮನುವು ಹತ್ತು ದಂಡ ಸ್ಥಾನಗಳನ್ನು ಹೇಳಿದ್ದಾನೆ. ಆದರೆ ಬ್ರಾಹ್ಮಣನಿಗೆ ದಂಡವಿಲ್ಲ.

VIII ೩೭೯. ಬ್ರಾಹ್ಮಣನಿಗೆ ತಲೆ ಬೋಳಿಸುವುದೇ ಮರಣ ದಂಡನೆಗೆ ಸಮ. ಇತರೆ ವರ್ಣಗಳಿಗೆ ಮರಣ ದಂಡನೆಯನ್ನೇ ವಿಧಿಸಬಹುದು.

VIII ೩೮೦. ಸರ್ವ ಪಾಪಗಳನ್ನು ಮಾಡಿದಾಗಲೂ ಬ್ರಾಹ್ಮಣನನ್ನು ವಧಿಸಬಾರದು. ಆತನನ್ನು ದಂಡಿಸದೆ ಸಮಗ್ರ ಧನಸಹಿತವಾಗಿ ರಾಷ್ಟ್ರದಿಂದ ಓಡಿಸಬೇಕು.

ಹೀಗೆ ಮನುವು ಬ್ರಾಹ್ಮಣನನ್ನು ಸಾಮಾನ್ಯ ದಂಡ ಸಂಹಿತೆಗೆ ಅತೀತವಾಗಿ ಇರಿಸಿದ್ದಾನೆ. ಮರಣದಂಡನೆಗೆ ಯೋಗ್ಯವಾದ ಅಪರಾಧಗಳನ್ನು ಮಾಡಿದರೂ ಆತನ ಕೂದಲು ಕೊಂಕಿಸದೆ ಎಲ್ಲ ಸ್ವತ್ತುಗಳ ಸಮೇತ ದೇಶ ತೊರೆಯಲು ಬಿಡಬೇಕು. ಆತನಿಗೆ ದಂಡ ಶುಲ್ಕವೂ ಇಲ್ಲ. ಮರಣದಂಡನೆಯೂ ಇಲ್ಲ. ಆತ ಅನುಭವಿಸುವುದು ಕೇವಲ ದೇಶಭ್ರಷ್ಟತೆ. ಹೊಬ್ಸ್ ಮಾತಿನಲ್ಲಿ ಹೇಳುವುದಾದರೆ ಎಲ್ಲ ಬಗೆಯ ಘೋರ ಪಾತಕಗಳನ್ನು ಮಾಡಿದ ಮೇಲೆ "ಹವಾ ಬದಲಾವಣೆ" ಮಾತ್ರ.

ಮನು ಬ್ರಾಹ್ಮಣನಿಗೆ ಕೆಲವು ಸವಲತ್ತುಗಳನ್ನೂ ಕೊಟ್ಟ.

ನ್ಯಾಯಾಧಿಕಾರಿ ಬ್ರಾಹ್ಮಣನೇ ಆಗಿರಬೇಕು.

VIII ೯. ತಾನೇ ಕಾರ್ಯದರ್ಶನ (ಅಪರಾಧ ವಿಚಾರಣೆ) ಮಾಡಲಾಗದ ರಾಜನು ಆ ಸ್ಥಾನಕ್ಕೆ ವಿದ್ವಾಂಸನಾದ ಬ್ರಾಹ್ಮಣನನ್ನು ನೇಮಿಸಲಿ.

VIII ೧೦. ಆತನು (ಬ್ರಾಹ್ಮಣನು) ಮೂವರು ಸಭ್ಯರೊಂದಿಗೆ ಸಭೆ ಪ್ರವೇಶಿಸಿ ಕುಳಿತು ಅಥವಾ ನಿಂತು ವಿಚಾರಣೆ ನಡೆಸಬೇಕು.

ಮಿಕ್ಕ ಸವಲತ್ತುಗಳು ಹಣಕಾಸಿಗೆ ಸಂಬಂಧಪಟ್ಟವು.

VIII ೩೭ ವಿದ್ವಾಂಸರು ಎಲ್ಲರಿಗೂ ಅಧಿಪತಿಯಾದ್ದರಿಂದ ಬ್ರಾಹ್ಮಣನ ಕಣ್ಣಿಗೆ ಬಿದ್ದ ಪುರಾತನ ನಿಧಿಯು ಆತನಿಗೇ ಸಲ್ಲುತ್ತದೆ.

VIII ೩೮. ಅದೇ ರಾಜನಿಗೆ ನಿಧಿ ಸಿಕ್ಕಿದರೆ ಅದರಲ್ಲಿ ಅರ್ಧವನ್ನು ಬ್ರಾಹ್ಮಣರಿಗೆ ಕೊಟ್ಟು ಉಳಿದರ್ಧವನ್ನು ರಾಜಕೋಶಕ್ಕೆ ಸೇರಿಸಬೇಕು.

IX ೩೨೩. (ತನ್ನ ಕಾಲ ಸನ್ನಿಹಿತವಾದ) ರಾಜನು ದಂಡದಿಂದ ಕೂಡಿದ ಎಲ್ಲ ಧನವನ್ನು ಬ್ರಾಹ್ಮಣರಿಗೆ, ರಾಜ್ಯವನ್ನು ಮಗನಿಗೆ ಒಪ್ಪಿಸಿ ವೀರ ಮರಣವನ್ನು ಬಯಸಬೇಕು.

IX ೧೮೭. ಸಪಿಂಡರಲ್ಲಿ ಮೂರು ಹಂತದವರೆಗೆ ಧನವು ಸೇರುತ್ತದೆ. ಸಪಿಂಡರು ಇಲ್ಲವಾದರೆ ಸ್ವಂತ ಕುಲದವರು ನಂತರ ಆಚಾರ್ಯ ನಂತರ ಶಿಷ್ಯರೇ (ಉತ್ತರಾಧಿಕಾರಿಗಳು).

IX ೧೮೮. ಇನ್ಯಾರು ಇಲ್ಲದಿದ್ದರೆ ಮೂರು ವೇದಗಳಲ್ಲಿ ಪಾರಂಗತರಾದ ಶುಚಿಯಾದ ಹಾಗೂ ಯೋಗ್ಯರಾದ ಬ್ರಾಹ್ಮಣರೇ (ಸಂಪತ್ತಿನ) ಉತ್ತರಾಧಿಕಾರಿಗಳು. ಆಗ ಧರ್ಮ ಚ್ಯುತಿಯಾಗುವುದಿಲ್ಲ.

IX ೧೮೯. ಬ್ರಾಹ್ಮಣ ದ್ರವ್ಯವನ್ನು ರಾಜನು ಎಂದೂ ತೆಗೆದುಕೊಳ್ಳಬಾರದು. ಇತರೆ ಮೂರು ವರ್ಣಗಳವರಲ್ಲಿ (ಉತ್ತರಾಧಿಕಾರಿಯ) ಅಭಾವವಿದ್ದಾಗ ರಾಜನೇ ಅವರ ಸಂಪತ್ತನ್ನು ವಶಪಡಿಸಿಕೊಳ್ಳಬಹುದು.

ಇವು ಬ್ರಾಹ್ಮಣರಿಗೆ ಮನುವು ಕೊಟ್ಟ ಅನುಕೂಲ, ರಕ್ಷಣೆ, ಸವಲತ್ತುಗಳಲ್ಲಿ ಕೆಲವು. ಇದು ಬ್ರಾಹ್ಮಣನೊಬ್ಬ ರಾಜನಾದದ್ದರ ದ್ಯೋತಕವಾಗಿತ್ತು.

ಬ್ರಾಹ್ಮಣ ಧರ್ಮದ ಬೆಂಬಲಿಗರ ಬ್ರಾಹ್ಮಣ ಧರ್ಮದ ಸರ್ವಶ್ರೇಷ್ಠತೆಯಲ್ಲಿರುವ ನಂಬಿಕೆ ಎಷ್ಟು ಗಾಢವಾದುದೆಂದರೆ ಅವರ ಪರವಾದ ಕ್ಷಮಾಯಾಚಕರೂ ಇನ್ನೂ ಯಾರೂ ಇಲ್ಲ. ಮನು ಬ್ರಾಹ್ಮಣರ ಮೇಲೆ ವಿಧಿಸಿದ ಅನಾನುಕೂಲಗಳನ್ನೂ ಎತ್ತಿ ತೋರಿಸಲು ಎಂದೂ ಸೋಲುವುದಿಲ್ಲ. ಮನು ಬ್ರಾಹ್ಮಣರ ಮುಂದಿಟ್ಟ ಆದರ್ಶವೆಂದರೆ ಬಡತನ ಮತ್ತು ಸೇವೆ ಎಂದು ತೋರಿಸುವುದೇ ಅಂಥವರ ಉದ್ದೇಶ. ಮನು ಬ್ರಾಹ್ಮಣರಿಗೆ ಕೆಲವು ಅನಾನುಕೂಲ ಇಟ್ಟಿದ್ದು ನಿಜ. ಆದರೆ ಅಷ್ಟರಿಂದಲೇ ಬಡತನ ಮತ್ತು ಸೇವೆಗಳೇ ಮನು ಬ್ರಾಹ್ಮಣರ ಮುಂದಿಟ್ಟ ಆದರ್ಶ ಅನ್ನುವುದು ಉದ್ದೇಶಪೂರ್ವಕವಾದ ಶುದ್ಧಾಂಗ ಅಪಕಲ್ಪನೆ. ಅದಕ್ಕೆ ಮನುವಿನಲ್ಲಿ ಯಾವ ಆಧಾರವೂ ಇಲ್ಲ.

ಮನು ಈ ಅನಾನುಕೂಲಗಳನ್ನು ಸೃಷ್ಟಿಸಿದ್ದು ಏಕೆಂದು ಅರಿಯಬೇಕಾದರೆ ಎರಡು ಸಂಗತಿಗಳನ್ನು ಗಮನದಲ್ಲಿರಬೇಕು. ಮೊದಲನೆಯದು ಸಮಾಜದ ಸಾಮಾನ್ಯ ರಚನೆಯಲ್ಲಿ ಬ್ರಾಹ್ಮಣರಿಗೆ ಮನು ಕಲ್ಪಿಸಿದ ಸ್ಥಾನ, ಎರಡನೆಯದು ಈ ಅನಾನುಕೂಲಗಳ ಸ್ವರೂಪ. ಬ್ರಾಹ್ಮಣರಿಗೆ ಕೊಟ್ಟ ಸ್ಥಾನವನ್ನು ಮನು ನಿಸ್ಸಂದಿಗ್ಧ ಮಾತುಗಳಲ್ಲಿ ಸ್ಪಷ್ಟಪಡಿಸಿದ್ದಾನೆ. ಈ ವಿಷಯ ಮಹತ್ವಪೂರ್ಣವಾದ್ದರಿಂದ, ಮುಂಚೆ ಉಲ್ಲೇಖಿಸಿದ ಶ್ಲೋಕಗಳನ್ನೇ ನಾನು ಮತ್ತೆ ಉದ್ಧರಿಸಬೇಕು.

I ೯೩. ಬ್ರಾಹ್ಮಣನು (ಬ್ರಹ್ಮನ) ಮುಖದಿಂದ ಬಂದವನಾದ್ದರಿಂದ ಜ್ಯೇಷ್ಠನಾದ್ದರಿಂದ ಮತ್ತು ವೇದವನ್ನು ಹೊಂದಿದವನಾದ್ದರಿಂದ ಬ್ರಾಹ್ಮಣನೇ ಈ ಸೃಷ್ಟಿಯ ಪ್ರಭು.

ಇನ್ನು ಅನಾನುಕೂಲಗಳ ಸ್ವರೂಪವನ್ನು ಗಮನಿಸಿ:

IV ೨. ವಿಪತ್ಕಾಲವನ್ನು ಸೇರಿಸಿದಂತೆ ಬ್ರಾಹ್ಮಣನು ತನ್ನ ಜೀವನೋಪಾಯಕ್ಕಾಗಿ ದ್ರೋಹರಹಿತವಾದ ಅಥವಾ ಅಲ್ಪದ್ರೋಹದ ವೃತ್ತಿ ವಿಧಾನಗಳನ್ನು ಅನುಸರಿಸಬೇಕು.

IV ೩. ಬ್ರಾಹ್ಮಣನು ಅರ್ಹ ಕರ್ಮದ ಮೂಲಕ ಮಾತ್ರ ದೇಹಕ್ಕೆ ಕ್ಲೇಶ ಕೊಡದೆ ಧನಸಂಚಯ ಮಾಡಬೇಕು.

VIII ೨೨೭. ಶೂದ್ರ ಮಾಡಿದ ಕಳ್ಳತನಕ್ಕೆ ಎಂಟು ಪಟ್ಟು ದಂಡನೆ, ವೈಶ್ಯನಿಗೆ ಹದಿನಾರು ಪಟ್ಟು ದಂಡನೆ ಮತ್ತು ಕ್ಷತ್ರಿಯನಿಗೆ ಮೂವತ್ತೆರಡು ಪಟ್ಟು ದಂಡನೆ.

VIII 338 ದೋಷಗುಣವನ್ನು ಅನುಸರಿಸಿ ಬ್ರಾಹ್ಮಣನಿಗೆ ಅರವತ್ತನಾಲ್ಕು ಪಟ್ಟು ಅಥವಾ ನೂರು ಪಟ್ಟು ಅಥವಾ ನೂರು ಇಪ್ಪತ್ತೆಂಟು ಪಟ್ಟು ದಂಡನೆ ವಿಧಿಸಬೇಕು.

VIII 383 ರಕ್ಷಿತ ಕ್ಷತ್ರಿಯ ಅಥವಾ ವೈಶ್ಯ ಸ್ತ್ರೀಯ ಸಂಗದಿಂದ ಬ್ರಾಹ್ಮಣನಿಗೆ ಮತ್ತು ರಕ್ಷಿತ ಶೂದ್ರ ಸ್ತ್ರಿ ಸಂಗ ಮಾಡಿದ ಕ್ಷತ್ರಿಯ ವೈಶ್ಯರಿಗೆ ತಲಾ ಸಾವಿರ ಪಣ ದಂಡ ವಿಧಿಸಬೇಕು.

VIII 384 ಅನಾಥ ಕ್ಷತ್ರಿಯ ಹೆಣ್ಣಿನ (ಸಂಗ ಮಾಡುವ) ವೈಶ್ಯನಿಗೆ ಮೂರು ಪಣ ದಂಡ. ಅದೇ ತಪ್ಪಿಗೆ ಕ್ಷತ್ರಿಯನ ತಲೆಯನ್ನು ಮೂತ್ರದಿಂದ ಬೋಳಿಸಬೇಕು ಅಥವಾ ಅಷ್ಟೇ ದಂಡ ತೆರಬೇಕು.

VIII 386 ಬ್ರಾಹ್ಮಣನು ಅನಾಥ ಕ್ಷತ್ರಿಯ, ವೈಶ್ಯ ಅಥವಾ ಶೂದ್ರ ಸ್ತ್ರೀಯನ್ನು ಭೋಗಿಸಿದರೆ ಐನೂರು ಪಣ ದಂಡನೆ. ಅದೇ ಅಂತ್ಯಜ ಸ್ತ್ರೀಯನ್ನು ಭೋಗಿಸಿದರೆ ಒಂದು ಸಾವಿರ ಪಣ ದಂಡ.

ಮನುವು ಬ್ರಾಹ್ಮಣರಿಗೆ ಕಲ್ಪಿಸಿಕೊಟ್ಟ ಸ್ಥಾನಮಾನದ ಹಿನ್ನೆಲೆಯಲ್ಲಿ ಈ ಅನಾನುಕೂಲಗಳನ್ನು ಪರಿಶೀಲಿಸಿದರೆ ಬ್ರಾಹ್ಮಣನು ಕಷ್ಟಪಡುವಂತೆ ಮಾಡುವುದು ಈ ಅನಾನುಕೂಲಗಳ ಉದ್ದೇಶವಾಗಿರಲಿಲ್ಲ ವೆಂಬುದು ಸ್ವಯಂವೇದ್ಯವಾಗಿದೆ. ಅದಕ್ಕೆ ಪ್ರತಿಯಾಗಿ ತಾನು ಯಾವ ಉತ್ತುಂಗ ಶಿಖರದ ಮೇಲೆ ಬ್ರಾಹ್ಮಣ ರನ್ನು ಇರಿಸಿದ್ದನೋ ಅಲ್ಲಿಂದ ಅವರು ಕೆಳಗೆ ಬಿದ್ದು ಬ್ರಾಹ್ಮಣೇತರರ ಮುಂದೆ ಮಾನಹೀನರಾಗಲಾದೆಂಬುದೇ ಮನುವಿನ ಉದ್ದೇಶವಾಗಿದ್ದದು ಸ್ಪಷ್ಟವಾಗುತ್ತದೆ.

ಬ್ರಾಹ್ಮಣರನ್ನು ಬಡತನ ದಾರಿದ್ರ್ಯಕ್ಕೆ ದೂಡುವುದು ಮನುವಿನ ಉದ್ದೇಶವಾಗಿರಲಿಲ್ಲವೆಂಬುದು ಮನುಸ್ಮೃತಿಯ ಇತರ ಶ್ಲೋಕಗಳಿಂದ ಗೊತ್ತಾಗುತ್ತದೆ. ಇದಕ್ಕೆ ಸಂಬಂಧಿಸಿದಂತೆ ವಿಪತ್ಕಾಲಬಂದಾಗ ಬ್ರಾಹ್ಮಣನು ಯಾವ ವರ್ತನೆ ಅನುಸರಿಸಬೇಕೆಂದು ವಿಧಿಸುವ ಮನುಸ್ಮೃತಿಯ ನಿಯಮಗಳನ್ನು ಉಲ್ಲೇಖಿಸಬೇಕು.

X ೮೦. ವಿವಿಧ ವೃತ್ತಿಗಳಲ್ಲಿ ಬ್ರಾಹ್ಮಣನಿಗೆ ವೇದಾಭ್ಯಾಸ, ಕ್ಷತ್ರಿಯನಿಗೆ ರಕ್ಷಣ ಕಾರ್ಯ ಮತ್ತು ವೈಶ್ಯನಿಗೆ ಕೃಷಿ – ಇವೇ ವಿಶಿಷ್ಟವಾದ ಸ್ವಕರ್ಮಗಳು.

X ೮೧. ಆದರೆ ಬ್ರಾಹ್ಮಣನಿಗೆ ಸ್ವಕರ್ಮದಿಂದ ಜೀವನ ನಿರ್ವಹಣೆ ಸಾಧ್ಯವಿಲ್ಲವೆಂದಾದರೆ ತನ್ನ ನಂತರದ ಕ್ಷಾತ್ರ ವೃತ್ತಿಯನ್ನು ಅವಲಂಬಿಸಬಹುದು.

X ೮೨. ಇವೆರಡೂ ವೃತ್ತಿಗಳಿಂದ ಜೀವನ ನಿರ್ವಹಣೆ ಸಾಧ್ಯವಾಗದಿದ್ದರೆ, ಕೃಷಿ ಹಾಗೂ ಗೋರಕ್ಷಣೆಯ ವೈಶ್ಯ ವೃತ್ತಿಯನ್ನು (ಬ್ರಾಹ್ಮಣನು) ಅವಲಂಬಿಸಬಹುದು.

X ೮೩. ಆದರೆ ವೈಶ್ಯ ವೃತ್ತಿಯನ್ನು ಅವಲಂಬಿಸಿದ ಬ್ರಾಹ್ಮಣ–ಕ್ಷತ್ರಿಯರು, ಹಿಂಸಾಮಯವಾದ ಹಾಗೂ ಪರಾಧೀನವಾದ ಕೃಷಿಯನ್ನು ತ್ಯಜಿಸಲು ಯತ್ನಿಸಬೇಕು.

X ೮೪. (ಕೆಲವರು) ಕೃಷಿಯು ಅರ್ಹ ವೃತ್ತಿಯೆಂದು ಮನ್ನಿಸಿದರೂ, ನೆಲವನ್ನು ಉಳುವಾಗ ಮರದ ಹಿಡಿ, ಕಬ್ಬಿಣ ಮೂತಿಯ ನೇಗಿಲಿನಿಂದ ಭೂಮಿಗೂ, ಜಂತುಗಳಿಗೂ ಹಾನಿಯಾಗುವುದರಿಂದ (ಅದು ಹಿಂಸಾಮಯವಾದುದು).

X ೮೫. ನಿರ್ವಾಹವಿಲ್ಲದೆ ವೈಶ್ಯ ವೃತ್ತಿಯನ್ನು ಅವಲಂಬಿಸಿದ (ಬ್ರಾಹ್ಮಣ–ಕ್ಷತ್ರಿಯರು) ಸಂಪತ್ತು ವರ್ಧನೆಗಾಗಿ ಈ ಕೆಳಗಿನ ವಸ್ತುಗಳನ್ನು ಬಿಟ್ಟು ಉಳಿದವನ್ನು ವಿಕ್ರಯಿಸಬಹುದು.

ಬ್ರಾಹ್ಮಣನಿಗೆ ಹಕ್ಕಿನೋಪಾದಿಯಲ್ಲಿ ಮೀಸಲಾದ ವೃತ್ತಿಗಳಲ್ಲಿ ಆತ ಸಮೃದ್ಧಿ ಹೊಂದುತ್ತಿರುವವರೆಗೆ ಮಾತ್ರ ಈ ಅನಾನುಕೂಲಗಳು ಅನ್ವಯಿಸುತ್ತವೆ ಎಂಬುದನ್ನು ಇಲ್ಲಿ ನೋಡಬಹುದು. ಆದರೆ ಆತನಿಗೆ ವಿಪತ್ಕಾಲ ಒದಗಿದೊಡನೆ ಈ ಅನಾನುಕೂಲಗಳು ಮಾಯವಾಗುತ್ತವೆ ಮತ್ತು ಆತ ಸ್ವಕರ್ಮ ವೃತ್ತಿಯಿಲ್ಲದೆ

ಬೇರೆ ಯಾವ ವೃತ್ತಿಯನ್ನು ಅವಲಂಬಿಸಲೂ ಸ್ವತಂತ್ರನಾಗುತ್ತಾನೆ. ಬ್ರಾಹ್ಮಣನಾಗಿಯೆ ಉಳಿಯುತ್ತಾನೆ. ಇದಲ್ಲದೆ, ವಿಪತ್ಕಾಲ ಬಂದೊದಗಿದೆಯೋ ಇಲ್ಲವೋ ಎಂಬುದು ಬ್ರಾಹ್ಮಣನ ಸ್ವಂತ ವಿವೇಚನೆಗೆ ಬಿಟ್ಟ ನಿರ್ಧಾರ. ಆದ್ದರಿಂದ ಸುಖ ಸಮೃದ್ಧಿಯಲ್ಲಿರುವ ಬ್ರಾಹ್ಮಣನೂ ಕೂಡಾ ತನ್ನ ಆತ್ಮಸಾಕ್ಷಿಯ ಬಾಯಿ ಮುಚ್ಚಿಸಿ ವಿಪತ್ಕಾಲದ ವೃತ್ತಿಗಳನ್ನೂ ಹಿಡಿಯುವ ಮೂಲಕ ಗಳಿಕೆ ಹೆಚ್ಚಿಸಿಕೊಳ್ಳಲು ಯಾವ ಅಡೆತಡೆಯೂ ಇಲ್ಲ.

ಬ್ರಾಹ್ಮಣರಿಗೆ ಐಹಿಕ ಲಾಭ ಒದಗಿಸಿಕೊಡುವ ಇತರ ವಿಧಿ ನಿಯಮಗಳೂ ಮನುಸ್ಮೃತಿಯಲ್ಲಿವೆ. ಅದು ದಕ್ಷಿಣೆ ಮತ್ತು ದಾನ. ಬ್ರಾಹ್ಮಣನು ಯಾವುದೇ ಧಾರ್ಮಿಕ ಸಮಾರಂಭ ನಡೆಸಿ ಕೊಡಬೇಕಾದಾಗ ವಿಧಿಸಬಹುದಾದ ಶುಲ್ಕವೇ ದಕ್ಷಿಣೆ. ಬ್ರಾಹ್ಮಣ ಧರ್ಮವಂತೂ ವಿಧಿ ವಿಧಾನ ಆಚರಣೆಗಳಿಂದ ತುಂಬಿಹೋಗಿದೆ. ಇದು ಬ್ರಾಹ್ಮಣರಿಗೆ ಎಂಥ ಮಹತ್ತರ ಆದಾಯದ ಮೂಲವಾಗಿರಬೇಕೆಂಬುದನ್ನು ಊಹಿಸುವುದು ಕಷ್ಟವಲ್ಲ. ಪುರೋಹಿತರಿಗೆ ಶುಲ್ಕ ಕೊಡದಿರುವ ಅವಕಾಶವೇ ಇರಲಿಲ್ಲ. ದಕ್ಷಿಣೆಗೆ ಅಂಟಿಕೊಂಡ ಧಾರ್ಮಿಕ ಪ್ರಜ್ಞೆಯೇ ನಿಯತ ಪಾವತಿಗೆ ಸಾಕಾಗಿತ್ತು. ಆದರೆ ಮನು ಬ್ರಾಹ್ಮಣರಿಗೆ ವಸೂಲಿಯ ಹಕ್ಕನ್ನೂ ನೀಡಬಯಸಿದ್ದ.

XI ೩೮. ಅಗ್ನ್ಯಾಧೇಯ ಆಚರಣೆಗಾಗಿ, ಬ್ರಾಹ್ಮಣನು ಧನಿಕನಾದರೂ ಪ್ರಜಾಪತಿಗೆ ಪ್ರಿಯವಾದ ಕುದುರೆಯನ್ನು ಆತನಿಗೆ ದಕ್ಷಿಣೆ ಕೊಡದಿದ್ದರೆ ಅಂಥ ಬ್ರಾಹ್ಮಣನು ಪವಿತ್ರ ಅಗ್ನಿಯನ್ನು ಹೊತ್ತಿಸದವನಿಗೆ ಸಮನಾಗುತ್ತಾನೆ.

XI ೩೯. ಶುದ್ಧನೂ ಜಿತೇಂದ್ರಿಯನೂ ಆದವನು ಬೇಕಾದರೆ ಅನ್ಯ ಪುಣ್ಯ ಕಾರ್ಯಗಳನ್ನು ಮಾಡಲಿ. ಆದರೆ ಆತ ಯಜ್ಞವನ್ನು ಎಂದೂ ಅಲ್ಪ ದಕ್ಷಿಣೆಗೆ ಮಾಡಬಾರದು.

XI ೪೦. ಅಲ್ಪ ದಕ್ಷಿಣೆಯ ಯಜ್ಞದಿಂದ ಇಂದ್ರಿಯಗಳು, ಯಶಸ್ಸು, ಸ್ವರ್ಗ, ಆಯಸ್ಸು, ಕೀರ್ತಿ, ಮಕ್ಕಳು ಮತ್ತು ಗೋವುಗಳೆಲ್ಲವೂ ನಾಶವಾಗುತ್ತವೆ. ಆದ್ದರಿಂದ ಅಲ್ಪ ಧನನಾದವನು ಯಜ್ಞವನ್ನು ಮಾಡಲೇಬಾರದು.

ದಕ್ಷಿಣೆ ಪಡೆಯಲು ಬ್ರಾಹ್ಮಣನು ಏನೇ ಮಾಡಿದರೂ ಕಾನೂನಿನ ದೃಷ್ಟಿಯಲ್ಲಿ ಅದು ಅಪರಾಧವಾಗಲಾರದು ಎನ್ನುವವರೆಗೂ ಮನು ಮುಂದುವರೆಯುತ್ತಾನೆ.

VIII ೩೪೯. ಆತ್ಮರಕ್ಷಣೆಗಾಗಿ ಅಥವಾ ದಕ್ಷಿಣೆಗಾಗಿ ಉಂಟಾದ ವ್ಯಾಜ್ಯದಲ್ಲಿ ಅಥವಾ ಸ್ತ್ರೀಯರು ಮತ್ತು ಬ್ರಾಹ್ಮಣರ ರಕ್ಷಣೆಗಾಗಿ (ಕೊಲೆ ಮಾಡುವುದು ಅಪರಾಧವಲ್ಲ).

ಆದರೂ ಬ್ರಾಹ್ಮಣರಿಗೆ ಫಲ ಪ್ರದ ಆದಾಯದ ಮೂಲವೆಂದರೆ ದಾನ. ಬ್ರಾಹ್ಮಣರಿಗೆ ರಾಜನು ದಾನ ಮಾಡಬೇಕೆಂದು ಮನು ವಿಧಿಸುತ್ತಾನೆ.

VII ೭೯. ಉದಾರ ದಕ್ಷಿಣೆಗಳನ್ನು ಕೊಟ್ಟು ರಾಜನು ಯಾಗಗಳನ್ನು ಮಾಡಬೇಕು. ಧರ್ಮಾರ್ಥವಾಗಿ ಬ್ರಾಹ್ಮಣರಿಗೆ ಧನ, ಭೋಗಾದಿಗಳನ್ನು ಕೊಡಬೇಕು.

VII ೮೨. ಗುರುಕುಲದಿಂದ (ವಿದ್ಯಾಭ್ಯಾಸ ಮುಗಿಸಿ ಬಂದ) ಬ್ರಾಹ್ಮಣರಿಗೆ ರಾಜರು ಉಚಿತ ದಾನಗಳ ಮೂಲಕ ಗೌರವಿಸಬೇಕು. ಬ್ರಾಹ್ಮಣರಿಗೆ ಕೊಟ್ಟ ಧನ ರಾಜನ ಪಾಲಿಗೆ ಅಕ್ಷಯ ನಿಧಿಯಂತೆ.

VII ೮೩. ಆ ಹಣವನ್ನು ಕಳ್ಳರಾಗಲೀ, ಶತ್ರುಗಳಾಗಲೀ ಅಪಹರಿಸಲಾರರು. ಆದ್ದರಿಂದ ರಾಜರು ಬ್ರಾಹ್ಮಣರ ಬಳಿ ಅಕ್ಷಯ ನಿಧಿಯನ್ನು ಇಡಬೇಕು.

XI ೪. ಯಜ್ಞಾರ್ಥವಾಗಿ ರಾಜನು ವೇದವಿದರಾದ ಬ್ರಾಹ್ಮಣರಿಗೆ ಎಲ್ಲ ರತ್ನಗಳು ಹಾಗು ದಕ್ಷಿಣೆಯನ್ನು ಕೊಡಬೇಕು.

ರಾಜರಿಗೆ ಮನು ವಿಧಿಸಿದ ಈ ಕಟ್ಟಳೆ ಬ್ರಾಹ್ಮಣರ ಪಾಲಿಗೆ ಭರವಸೆ ಮಾತ್ರವಾಗಿಯೇನೂ ಉಳಿಯಲಿಲ್ಲ. ಭೂಗರ್ಭ ವಿಜ್ಞಾನಿಗಳು ಶೋಧಿಸಿರುವ ದಾನ ಪತ್ರಗಳ ಸಂಖ್ಯೆಯೇ ಬ್ರಾಹ್ಮಣರು ಈ ಉತ್ತೇಜನವನ್ನು ಸಂಪೂರ್ಣವಾಗಿ ಬಳಸಿಕೊಂಡಿದ್ದಕ್ಕೆ ಚರಿತ್ರೆ ನೀಡುವ ಸಾಕ್ಷಿಯಾಗಿದೆ. ಹೇಗೆ ಚಾಣಾಕ್ಷರೂ, ಮೈಗಳ್ಳರೂ, ಆಲಸಿಗಳೂ ಆದ ಬ್ರಾಹ್ಮಣರು ಹಳ್ಳಿಯಾದ ಮೇಲೆ ಹಳ್ಳಿಗಳನ್ನು ತಮಗೆ ವರ್ಗಾಯಿಸಲು ರಾಜರನ್ನು ಮೋಸಗೊಳಿಸಿದರೆಂಬ ಅಂಶ ದಿಗ್ಭ್ರಮೆ ಹುಟ್ಟಿಸುವಂಥದ್ದು. ಹಾಗೆ ನೋಡಿದರೆ ಈ ಕಾಲದ ಬ್ರಾಹ್ಮಣರ ಸಂಪತ್ತಿನ ಬಹುಭಾಗವು ಕುತಂತ್ರಿ ಬ್ರಾಹ್ಮಣರು ಆ ಕಾಲದ ಸಾತ್ವಿಕರಾದ ಆದರೆ ಮೂರ್ಖರಾದ ರಾಜರಿಂದ ಅಪಹರಿಸಿದ್ದೇ ಆಗಿದೆ. ರಾಜರಿಂದ ಬ್ರಾಹ್ಮಣರು ದಾನವೆಂಬ ಸುಲಿಗೆ ಮಾಡಲು ಬಿಡುವಷ್ಟಕ್ಕೇ ಮನು ತೃಪ್ತಿಗೊಳ್ಳಲಿಲ್ಲ. ಬದಲು ಸಾರ್ವಜನಿಕರಿಂದಲೂ ದಾನದ ಸುಲಿಗೆ ಮಾಡುವಂತೆ ಬ್ರಾಹ್ಮಣರಿಗೆ ಅವಕಾಶ ಮಾಡಿಕೊಟ್ಟ. ಮನು ಇದನ್ನು ಮೂರು ರೀತಿಗಳಲ್ಲಿ ಮಾಡಿದ್ದಾನೆ. ಮೊದಲನೆಯದಾಗಿ, ದಾನ ಮಾಡುವುದು ಸಾತ್ವಿಕರ ಕರ್ತವ್ಯ ಎಂದು ಬೋಧಿಸುವುದಲ್ಲದೆ ಬ್ರಾಹ್ಮಣನಿಗೆ ಕೊಟ್ಟದ್ದೇ ಶ್ರೇಷ್ಠದಾನ ಎಂದೂ ಬಣ್ಣಿಸುತ್ತಾನೆ.

VII ೮೫. ಬ್ರಾಹ್ಮಣೇತರನಿಗೆ ಕೊಟ್ಟ ದಾನ ಸಾಮಾನ್ಯ. ಬ್ರಾಹ್ಮಣನಿಗೆ ಕೊಟ್ಟಿದ್ದು ದುಪ್ಪಟ್ಟು ಫಲಕಾರಿ. ಅಧ್ಯಯನಶೀಲ ಬ್ರಾಹ್ಮಣನಿಗೆ ಕೊಟ್ಟ ದಾನ ಶತಸಹಸ್ರ ಫಲವುಳ್ಳದ್ದು. ಅದೇ ವೇದ ಪಾರಂಗತದಲ್ಲಿ ಬ್ರಾಹ್ಮಣನಿಗೆ ಮಾಡಿದ ದಾನ ಅನಂತ ಫಲಕಾರಿ.

VII ೮೬ ಯಾಕೆಂದರೆ, ದಾನ ಸ್ವೀಕರಿಸುವವನ ವಿಶೇಷಗಳಿಗೆ ತಕ್ಕಂತೆ ಮತ್ತು ದಾನ ಕೊಡುವವನ ಶ್ರದ್ಧೆಗೆ ತಕ್ಕಂತೆ ಪರಲೋಕದಲ್ಲಿ ಫಲ ಪ್ರಾಪ್ತಿಯಾಗುವುದು.

ಇನ್ನು ಮುಂದೆ ಕೆಲವು ಸಂದರ್ಭಗಳಲ್ಲಿ ಬ್ರಾಹ್ಮಣನಿಗೆ ದಾನ ಮಾಡುವುದು ಕಡ್ಡಾಯವೆಂದು ಮನು ವಿಧಿಸುತ್ತಾನೆ.

XI ೧. ಸಂತಾನಾರ್ಥಿಯಾದವನು, ಯಜ್ಞಾರ್ಥಿಯಾದವನು, ಪಾಂಥ, ತನ್ನ ಸೊತ್ತನ್ನೆಲ್ಲ ದಾನ ಮಾಡಿಬಿಟ್ಟವನು, ತನ್ನ, ಗುರು, ತಂದೆ ಅಥವಾ ತಾಯಿಯ ಸಲುವಾಗಿ ಬೇಡುವವನು, ವೇದಾಧ್ಯಯನ ನಿರತನಾದವನು ಮತ್ತು ರೋಗಿ.

XI ೨. ಈ ಒಂಬತ್ತು ಬಗೆಯ ಬ್ರಾಹ್ಮಣರನ್ನು ಸ್ನಾತಕರೆಂದೂ ಧರ್ಮ ಭಿಕ್ಷುಕರೆಂದೂ ಪರಿಗಣಿಸಬೇಕು ಮತ್ತು ಅವರ ವಿದ್ಯಾ ವಿಶೇಷಕ್ಕೆ ಅನುಗುಣವಾಗಿ ಅವರಿಗೆ ದಾನ ಮಾಡತಕ್ಕದ್ದು.

XI ೩. ದ್ವಿಜಾಗ್ರರಾದ ಈ ಮಂದಿಗೆ ಅನ್ನಸಹಿತ ದಕ್ಷಿಣೆಯನ್ನು ಕೊಡತಕ್ಕದ್ದು. ಇತರರಿಗೆ ಬಹಿರ್ವೇದಿ ದಾನ.

XI ೬. ಏಕಾಂಗಿಯಾದ, ವೇದವಿದರಾದ ಬ್ರಾಹ್ಮಣರಿಗೆ ಯಥಾಶಕ್ತಿ ದಾನ ಮಾಡತಕ್ಕದ್ದು. (ಹಾಗೆ ಮಾಡಿದರೆ) ಸ್ವರ್ಗ ಪ್ರಾಪ್ತಿಯಾಗುತ್ತದೆ.

ದಾನವೇ ಸುಭದ್ರ ಹಾಗೂ ಸತತ ಆದಾಯ ಮೂಲವಾಗುವಂತೆ ಮಾಡಲು ಮನು ಅನುಸರಿಸಿದ ಮೂರನೇ ವಿಧಾನವಂತೂ ನಿಸ್ಸಂದೇಹವಾಗಿ ಅತ್ಯಂತ ಚಾತುರ್ಯಯುಕ್ತವಾದದ್ದು. ಮನು ದಾನವನ್ನು ಪ್ರಾಯಶ್ಚಿತ್ತದೊಂದಿಗೆ ಗಂಟು ಹಾಕಿಬಿಟ್ಟ. ಮನುವಿನ ಯೋಜನೆಯಂತೆ ಒಂದು ಅನುಚಿತ ಕೃತ್ಯವು ಅಪರಾಧವಲ್ಲದಿದ್ದರೂ ಪಾಪ ಕೃತ್ಯವೆನಿಸಬಹುದು ಅಥವಾ ಅದು ಒಟ್ಟಿಗೇ ಪಾಪವೂ, ಅಪರಾಧವೂ ಆಗಿರಬಹುದು. ಪಾಪವೆಂದರೆ ಅದಕ್ಕೆ ಧಾರ್ಮಿಕ ಕಾನೂನಿನ ಶಿಕ್ಷೆ. ಅಪರಾಧವಾದರೆ ಸಾರ್ವತ್ರಿಕ ಕಾನೂನಿನಂತೆ

ಶಿಕ್ಷೆ. ಪಾಪ ಕೃತ್ಯವಾದರೆ ಅದಕ್ಕೆ ಪಾತಕ ಎಂಬ ಹೆಸರು ಮತ್ತು ಅದಕ್ಕೆ ಪ್ರಾಯಶ್ಚಿತ್ತವೇ ಶಿಕ್ಷೆ. ಮನುವಿನ ಯೋಜನೆಯಲ್ಲಿ ಪ್ರತಿಯೊಂದು ಪಾಪ ಕೃತ್ಯಕ್ಕೂ ಪ್ರಾಯಶ್ಚಿತ್ತದ ಪರಿಹಾರವಿದೆ.

XI ೪೪. ವಿಹಿತಕರ್ಮ ಪರಿತ್ಯಾಗ ಮಾಡಿದವನು ಅಥವಾ ನಿಂದಿತ ಆಚಾರದಲ್ಲಿ ತೊಡಗಿದವನು ಮತ್ತು ಇಂದ್ರಿಯ ಪರವಶನಾದವನು ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕು.

XI ೪೫. ತಿಳಿಯದೆ ಮಾಡಿದ ಅಪರಾಧಕ್ಕೆ (ಮಾತ್ರ) ಪ್ರಾಯಶ್ಚಿತ್ತವಿದೆಯೆಂದು (ಎಲ್ಲರೂ) ಹೇಳುತ್ತಾರೆ. ಆದರೆ ಉದ್ದೇಶಪೂರ್ವಕ ಅಪರಾಧಕ್ಕೂ ಪ್ರಾಯಶ್ಚಿತ್ತವಿದೆ ಎಂಬುದು ಶ್ರುತಿ ನಿದರ್ಶನಗಳಿಂದ ತಿಳಿದುಬರುತ್ತದೆ.

XI ೪೬ ತಿಳಿಯದೆ ಮಾಡಿದ ಪಾಪಕ್ಕೆ ವೇದಾಭ್ಯಾಸವೇ ಪ್ರಾಯಶ್ಚಿತ್ತ. ಆದರೆ ತಿಳಿದು ಮಾಡಿದ ಪಾಪ ಕೃತ್ಯಕ್ಕೆ ವಿವಿಧ ಉಕ್ತ ಪ್ರಾಯಶ್ಚಿತ್ತಗಳಿವೆ.

XI ೫೩. ಇಂಥ (ಪೂರ್ವ) ಕರ್ಮದೋಷಗಳಿಂದ ಜಡ, ಮೂಕ, ಕುರುಡ, ಕಿವುಡ ಮತ್ತು ವಿಕೃತ ಮಕ್ಕಳು ಹುಟ್ಟುತ್ತವೆ.

XII ೫೪. ಪ್ರಾಯಶ್ಚಿತ್ತದಿಂದ ಪಾಪ ಪರಿಹಾರ ಮಾಡಿಕೊಳ್ಳದೆ ಹೋದರೆ (ಹಿಂದೆ ಹೇಳಿದ) ದುರ್ಲಕ್ಷಣಗಳು ಜನ್ಮ ಉಂಟಾಗುವುದು.

ಮನು ಹೇಳಿದ ಪ್ರಾಯಶ್ಚಿತ್ತ ಮಾರ್ಗಗಳು ಅನೇಕವಿದ್ದು ಕುತೂಹಲಿಗಳು ಆ ಪ್ರಾಯಶ್ಚಿತ್ತಗಳೇನೆಂದು ತಿಳಿಯಬೇಕಾದರೆ ಮನುಸ್ಮೃತಿಯನ್ನೇ ನೋಡಬಹುದು. ಇಲ್ಲಿ ಗಮನಾರ್ಹವಾದ ಸಂಗತಿಯೆಂದರೆ ಇವೆಲ್ಲ ಪ್ರಾಯಶ್ಚಿತ್ತಗಳಿಂದ ಬ್ರಾಹ್ಮಣರಿಗೆ ಐಹಿಕ ಲಾಭವಾಗುವಂತೆ ನಿಯೋಜಿಸಲಾಗಿದೆ. ಕೆಲವು ಬಗೆಯ ಪಶ್ಚಾತ್ತಾಪಗಳಲ್ಲಿ ಬ್ರಾಹ್ಮಣರಿಗೆ ದಾನ ಕೊಟ್ಟರೆ ಸಾಕು. ಇನ್ನು ಕೆಲವು ಪ್ರಾಯಶ್ಚಿತ್ತಗಳಲ್ಲಿ ಧಾರ್ಮಿಕ ಆಚರಣೆಗಳನ್ನು ವಿಧಿಸಲಾಗಿದೆ. ಆದರೆ ಧಾರ್ಮಿಕ ಆಚರಣೆಗಳನ್ನು ಬ್ರಾಹ್ಮಣರಲ್ಲದೆ ಇನ್ನಾರು ಮಾಡುವಂತಿಲ್ಲವಾದ್ದರಿಂದ ಮತ್ತು ಯಾವುದೇ ಧಾರ್ಮಿಕ ಆಚರಣೆಗೆ ದಕ್ಷಿಣೆ ತೆರುವುದು ಕಡ್ಡಾಯವಾದ್ದರಿಂದ ದಾನ ವ್ಯವಸ್ಥೆಯಿಂದ ಲಾಭವಾಗುವುದು ಬ್ರಾಹ್ಮಣರಿಗೆ ಮಾತ್ರ.

ಆದ್ದರಿಂದ ಮನುವು ಬ್ರಾಹ್ಮಣರ ಮುಂದೆ ನಮ್ರತೆ, ಬಡತನ ಮತ್ತು ಸೇವೆಗಳ ಆದರ್ಶ ಇರಿಸಿದ್ದನೆಂದು ಹೇಳುವುದು ಅಸಂಗತವಾಗುತ್ತದೆ. ಆದರೆ ಬ್ರಾಹ್ಮಣರಂತೂ ಮನುವನ್ನು ಹಾಗೆ ಅರ್ಥ ಮಾಡಿಕೊಳ್ಳಲಿಲ್ಲ. ಹಾಗೆ ನೋಡಿದರೆ ತಾವು ವಿಶೇಷ ಸವಲತ್ತುಗಳ ವರ್ಗವೆಂದೇ ಭಾವಿಸಿದರು. ಭಾವಿಸಿದ್ದಷ್ಟೇ ಅಲ್ಲ ಈ ಸವಲತ್ತುಗಳನ್ನು ಬೇರೆ ಬೇರೆ ದಿಕ್ಕುಗಳಲ್ಲಿ ವಿಸ್ತರಿಸಲೂ ಮುಂದಾದರು. ಇದನ್ನು ನಂತರ ಚರ್ಚಿಸೋಣ. ಅಂತೂ ಅವರ ದೃಷ್ಟಿಯಲ್ಲಿ ಅವರ ಕೃತ್ಯ ಪೂರ್ಣ ಸಮರ್ಥನೀಯವಾಗಿತ್ತು. ಮನು ಬ್ರಾಹ್ಮಣರನ್ನು 'ಭೂ ಸುರರು' ಎಂದು ಕರೆದ ಮತ್ತು ಅವರು ಅದೇ ಸ್ಥಾನದಲ್ಲಿ ಉಳಿಯುವಂತೆ ಜಾಗರೂಕತೆಯಿಂದ ಕಾನೂನು ರೂಪಿಸಿದ.

ಬ್ರಾಹ್ಮಣ ಆಳ್ವಿಕೆ ಮತ್ತು ಬ್ರಾಹ್ಮಣ ಹಿರಿಮೆಗೆ ಪೂರ್ಣ ಅವಕಾಶ ಕಲ್ಪಿಸಿದ ಮೇಲೆ ಮನು ತನ್ನ ಉದ್ದೇಶಕ್ಕೆ ಹೊಂದುವಂತೆ ಸಮಾಜವನ್ನೇ ರೂಪಿಸಲು ಮುಂದಾಗುತ್ತಾನೆ.

ಬ್ರಾಹ್ಮಣ ಧರ್ಮವು ದಿಗ್ವಿಜಯ ಸಾಧಿಸಿದ ಮೇಲೆ ಮೊದಲು ಕೈ ಹಾಕಿದ್ದು ವರ್ಣವನ್ನು ಜಾತಿಯಾಗಿ ರೂಪಾಂತರಿಸುವ ಅಗಾಧವಾದ ಹಾಗೂ ಸ್ವಾರ್ಥ ಸಾಧನೆಯ ಕೆಲಸದಲ್ಲಿ. ಈ ಬದಲಾವಣೆಯನ್ನು ಸಾಧಿಸಲು ಬ್ರಾಹ್ಮಣ ಧರ್ಮ ಇಟ್ಟ ಹೆಜ್ಜೆಗಳ ಸ್ಪಷ್ಟ ದಾಖಲೆಗಳು ನಮಗೆ ಸಿಕ್ಕಿಲ್ಲ. ಇದಕ್ಕೆ ಪ್ರತಿಯಾಗಿ, ವರ್ಣ ಹಾಗೂ ಜಾತಿಗಳ ಸಂಬಂಧ ಕುರಿತ ಗೊಂದಲಮಯ ಆಲೋಚನೆಗಳು ದಂಡಿಯಾಗಿವೆ. ತಾವು

ಭಿನ್ನ ಚಿಂತಕರೆಂದು ಭಾವಿಸುವವರು ಸಮಾಜ ವ್ಯವಸ್ಥೆಯಲ್ಲಿ ಭಿನ್ನ ಗೋತ್ರ ವಿವಾಹದ ನಿಷೇಧ ಉಂಟಾದ ಮೇಲೆ ವರ್ಣವೇ ಜಾತಿಯಾಯಿತೆಂದು ಭಾವಿಸುತ್ತಾರೆ. ಇವೆಲ್ಲವೂ ದೋಷಪೂರ್ಣ ಚಿಂತನೆ. ಮನು ವರ್ಣವನ್ನು ಜಾತಿಯಾಗಿ ರೂಪಾಂತರಿಸುವಾಗ ತನ್ನ ಉದ್ದೇಶವೇನೆಂದು ಎಲ್ಲೂ ವಿವರಿಸಿಲ್ಲ ಮತ್ತು ತನ್ನ ವಿಧಾನಗಳಿಗೂ ಉದ್ದೇಶಕ್ಕೂ ಇರುವ ಸಂಬಂಧವನ್ನೂ ವಿವರಿಸಿಲ್ಲವಾದ್ದರಿಂದಲೇ ಈ ಬಗೆಯ ತಪ್ಪು ಚಿಂತನೆ ಚಾಲ್ತಿಯಲ್ಲಿದೆ. ಆಸ್ಕರ್ ವೈಲ್ಡ್ ಹೇಳುವಂತೆ ಬುದ್ಧಿಗ್ರಾಹ್ಯವಾಗುವುದೆಂದರೆ ಸಿಕ್ಕಿಹಾಕಿಕೊಳ್ಳುವುದು ಎಂದೇ ಅರ್ಥ. ಮನು ಎಲ್ಲೂ ಸಿಕ್ಕಿಹಾಕಿಕೊಳ್ಳಲು ಇಷ್ಟಪಡಲಿಲ್ಲ. ಆದ್ದರಿಂದಲೇ ಆತ ತನ್ನ ವಿಧಾನಗಳು ಹಾಗೂ ಉದ್ದೇಶಗಳ ಬಗ್ಗೆ ಮೌನವಹಿಸಿ ಜನರ ಕಲ್ಪನೆಗೇ ಬಿಟ್ಟಿದ್ದಾನೆ. ಹಿಂದೂಗಳಿಗೆ ಈ ವಿಷಯ ತೀರಾ ಮಹತ್ವದ್ದು. ಮನುವಿನ ಯೋಜನೆಯನ್ನು ಬೇರೆ ಬೇರೆಯವರು ಬೇರೆ ಬೇರೆ ಥರ ಕಲ್ಪಿಸಿಕೊಳ್ಳುವ ಗೊಂದಲವನ್ನು ನಿವಾರಿಸಲು ಮತ್ತು ಸಮಾಜದ ಆಧಾರವಾದ ವರ್ಣದ ಮೂಲ ಕಲ್ಪನೆಗೆ ಬ್ರಾಹ್ಮಣ ಧರ್ಮ ಕೊಟ್ಟ ತಪ್ಪು ಹಾಗೂ ದುಷ್ಟ ತಿರುವಿನ ಮೇಲೆ ಬೆಳಕು ಚೆಲ್ಲಲು ಇಲ್ಲಿ ಸ್ಪಷ್ಟೀಕರಣದ ಪ್ರಯತ್ನ ಅತ್ಯಗತ್ಯವಾಗಿದೆ.

ನಾನು ಮೊದಲೇ ಹೇಳಿದ ಹಾಗೆ, ಮನುವಿನ ವಿಧಾನಗಳು ಮೌನಿ ಹಾಗೂ ಗುಪ್ತಗಾಮಿನಿಯಾದ್ದರಿಂದ, ವರ್ಣವು ಜಾತಿಯಾಗಿ ರೂಪಾಂತರಗೊಂಡ ಬಗೆಯ ವಿವರವಾದ ಮತ್ತು ಕಾಲ ಕ್ರಮಾನುಗತ ಚರಿತ್ರೆಯನ್ನು ಇಲ್ಲಿ ಕೊಡಲಾರೆವು. ಆದರೆ ಅದೃಷ್ಟವಶಾತ್ ಈ ಬದಲಾವಣೆ ಹೇಗಾಯಿತೆಂದು ಸೂಚಿಸುವ ಮೈಲಿ ಗಲ್ಲುಗಳಂತೂ ಸುಸ್ಪಷ್ಟವಾಗಿವೆ.

ಈ ರೂಪಾಂತರ ಸಾಧ್ಯವಾದದ್ದನ್ನು ವಿವರಿಸುವ ಮುನ್ನ, ವರ್ಣ ಮತ್ತು ಜಾತಿಗಳ ನಡುವಣ ಗೊಂದಲವನ್ನು ಮೊದಲು ಪರಿಹರಿಸಿಬಿಡುತ್ತೇನೆ. ಇವೆರಡರ ನಡುವಣ ಹೋಲಿಕೆ ಮತ್ತು ಅಂತರಗಳನ್ನು ಗುರುತಿಸುವುದರಿಂದಲೇ ಇದನ್ನು ಸಮರ್ಥವಾಗಿ ಮಾಡಬಹುದು. ಒಂದು ಅರ್ಥದಲ್ಲಿ ವರ್ಣ ಹಾಗೂ ಜಾತಿಗಳೆರಡೂ ಸಮಾನ ಶಬ್ದಗಳು. ಎರಡೂ ಅಂತಸ್ತು ಹಾಗೂ ವೃತ್ತಿಯ ಸೂಚಕಗಳು. ವರ್ಣ ಹಾಗೂ ಜಾತಿಗಳೆರಡಲ್ಲೂ ವೃತ್ತಿ ಅಂತಸ್ತುಗಳ ಎರಡು ಕಲ್ಪನೆಗಳು ಧ್ವನಿಸುತ್ತವೆ. ಆದರೆ ವರ್ಣ–ಜಾತಿಗಳು ಒಂದು ಮುಖ್ಯ ಅಂಶದಲ್ಲಿ ಭಿನ್ನವಾಗುತ್ತವೆ. ವರ್ಣವು ಅಂತಸ್ತಿನಲ್ಲಾಗಲೀ, ವೃತ್ತಿಯಲ್ಲಾಗಲೀ ಅನುವಂಶಿಕವಲ್ಲ. ಅದೇ ಜಾತಿಯು ಅಂತಸ್ತು ಹಾಗೂ ವ್ಯಕ್ತಿಗಳು ಅನುವಂಶಿಕವಾಗಿ ತಂದೆಯಿಂದ ಮಗನಿಗೆ ಹರಿದು ಬರುವ ವ್ಯವಸ್ಥೆಯನ್ನು ಸೂಚಿಸುತ್ತದೆ.

ಬ್ರಾಹ್ಮಣ ಧರ್ಮವು ವರ್ಣವನ್ನು ಜಾತಿಯಾಗಿ ಪರಿವರ್ತಿಸಿತು ಎಂಬ ನನ್ನ ಮಾತಿನ ಅರ್ಥವೆಂದರೆ ಅದು ಅಂತಸ್ತು ಹಾಗೂ ವೃತ್ತಿಗಳನ್ನು ಅನುವಂಶಿಕಗೊಳಿಸಿತು ಎಂದು.

ಈ ರೂಪಾಂತರ ಸಾಧನೆಯಾದದ್ದು ಹೇಗೆ? ನಾನು ಹೇಳಿದ ಹಾಗೆ ಈ ಬದಲಾವಣೆಯನ್ನು ಸಾಧಿಸಲು ಬ್ರಾಹ್ಮಣ ಧರ್ಮವು ಕೈಗೊಂಡ ಕ್ರಮಗಳ ಹೆಜ್ಜೆ ಗುರುತುಗಳಂತೂ ಇಲ್ಲ. ಆದರೆ ಈ ಕೃತ್ಯದ ಸ್ಪಷ್ಟನೋಟ ದೊರಕಿಸುವ ಮೈಲಿಗಲ್ಲುಗಳಂತೂ ಇದ್ದೇ ಇವೆ.

ಈ ಬದಲಾವಣೆಯು ಹಂತ ಹಂತವಾಗಿ ಬಂತು. ವರ್ಣವು ಜಾತಿಯಾಗಿ ರೂಪಾಂತರ ಹೊಂದುವಲ್ಲಿ ಮೂರು ಹಂತಗಳಂತೂ ಸುಸ್ಪಷ್ಟವಾಗಿ ಗೋಚರಿಸುತ್ತವೆ. ಮೊದಲ ಹಂತವೆಂದರೆ ವರ್ಣ. ಅಂದರೆ ಅಂತಸ್ತು ಹಾಗೂ ವೃತ್ತಿಗಳು. ಒಂದು ನಿರ್ದಿಷ್ಟ ಅವಧಿಗೆ ಸೀಮಿತಗೊಂಡಿರುತ್ತಿದ್ದ ಹಂತ. ಎರಡನೇ ಹಂತದಲ್ಲಿ ವರ್ಣದ ಅಂತಸ್ತು, ವೃತ್ತಿಗಳು ಒಬ್ಬ ವ್ಯಕ್ತಿಯ ಜೀವಮಾನದವರೆಗೆ ಮಾತ್ರ ಇರುತ್ತಿದ್ದವು. ಕಾನೂನಿನ, ಭಾಷೆ ಬಳಸಿ ಹೇಳುವುದಾದರೆ, ವರ್ಣದಿಂದ ನಿಗದಿಯಾದ ದರ್ಜೆ ಒಂದು ನಿರ್ದಿಷ್ಟ

ಕಾಲಾವಧಿಗೆ ಮಾತ್ರ ಇರುತ್ತಿತ್ತು. ಅದರಾಚೆಗೆ ಅದು ಜೀವಮಾನದ ಅಂತಸ್ತಾಯಿತು. ಕೊನೆಗೆ ಅದೇ ಅನುವಂಶಿಕ ಅಂತಸ್ತಾಯಿತು. ಅರ್ಥಾತ್ ವರ್ಣವೇ ಜಾತಿಯಾಯಿತು. ವರ್ಣವು ಜಾತಿಯಾಗಿ ಬದಲಾದ ಹಂತಗಳಿವು ಎನ್ನಲು ಧಾರ್ಮಿಕ ಗ್ರಂಥಗಳಲ್ಲಿ ದಾಖಲಾದ ಪರಂಪರೆಯನ್ವಯ ಸಾಕಷ್ಟು ಆಧಾರಗಳು ಸಿಕ್ಕುತ್ತವೆ.[೧] ಈ ಪರಂಪರೆಯಲ್ಲಿ ನೈಜ ಸಂಗತಿ ಅಡಕವಾಗಿದೆ ಎಂದು ಒಪ್ಪದಿರಲು ಯಾವ ಕಾರಣವೂ ಇಲ್ಲ. ಈ ಸಂಪ್ರದಾಯದ ಪ್ರಕಾರ, ಒಬ್ಬ ವ್ಯಕ್ತಿಯ ವರ್ಣವನ್ನು ನಿರ್ಧರಿಸಲು ಮನು ಹಾಗೂ ಸಪ್ತ ಋಷಿಗಳೆಂಬ ಅಧಿಕಾರಿಗಳ ಒಂದು ಸಂಸ್ಥೆಯಿರುತ್ತಿತ್ತು. ಜನಗಳ ಪೈಕಿ ಯಾರು ಕ್ಷತ್ರಿಯ ಹಾಗೂ ವೈಶ್ಯರಾಗಲು ಯೋಗ್ಯರೆಂದು ಮನು ಆರಿಸಿದರೆ, ಸಪ್ತ ಋಷಿಗಳು ಬ್ರಾಹ್ಮಣರಾಗಲು ಅರ್ಹರಾದವರನ್ನು ಆರಿಸುತ್ತಿದ್ದರು. ಮನು ಹಾಗೂ ಸಪ್ತ ಋಷಿಗಳು ಬ್ರಾಹ್ಮಣ, ಕ್ಷತ್ರಿಯ, ವೈಶ್ಯನಾಗಲು ಯೋಗ್ಯರಾದವರನ್ನು ಆರಿಸಿದ ಮೇಲೆ, ಆಯ್ಕೆಯಾಗದೆ ಉಳಿದವರೆಲ್ಲರೂ ಶೂದ್ರರೆಂದು ಕರೆಸಿ ಕೊಳ್ಳುತ್ತಿದ್ದರು. ಹೀಗೆ ನಿರ್ಧರಿಸಲಾದ ವರ್ಣ ವ್ಯವಸ್ಥೆ ಒಂದು ಯುಗ ಅಥವಾ ನಾಲ್ಕು ವರ್ಷಗಳ ಕಾಲ ಚಾಲ್ತಿಯಲ್ಲಿರುತ್ತಿತ್ತು. ಪ್ರತಿ ನಾಲ್ಕನೇ ವರ್ಷವೂ ಮನು ಹಾಗೂ ಸಪ್ತರ್ಷಿಗಳೆಂಬ ಅದೇ ಹೆಸರಿನ ಅಧಿಕಾರ ವರ್ಗವನ್ನು ಹೊಸ ಆಯ್ಕೆ ಮಾಡಲು ನೇಮಿಸಲಾಗುತ್ತಿತ್ತು. ಆಗ ಕಳೆದ ಬಾರಿ ಶೂದ್ರರಾಗಲು ಮಾತ್ರ ಅರ್ಹರೆಂದು ಬಿಟ್ಟವರು ಈ ಸಲ ಬ್ರಾಹ್ಮಣ, ಕ್ಷತ್ರಿಯ, ವೈಶ್ಯರಾಗಿ ಆಯ್ಕೆಯಾಗಬಹುದಿತ್ತು ಮತ್ತು ಹೋದ ಬಾರಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯನಾಗಿ ಆಯ್ಕೆಯಾದವರೂ ಈ ಬಾರಿ ಶೂದ್ರರಾಗಿ ಉಳಿಯಬಹುದಿತ್ತು. ಹೀಗೆ ವರ್ಣದ 'ಸಿಬ್ಬಂದಿ' ಬದಲಾಗುತ್ತಿದ್ದರು. ಇದು ದೈಹಿಕ ಹಾಗೂ ಮಾನಸಿಕ ಅರ್ಹತೆಗನುಸಾರವಾಗಿ ಸಮುದಾಯ ಬದುಕಿಗೆ ಅಗತ್ಯವಾದ ವೃತ್ತಿಗಳನ್ನು ಅನುಸರಿಸಲು ಜನರನ್ನು ಆರಿಸುವ ಒಂದು ಬಗೆಯ ನಿಯತಕಾಲಿಕ ಬದಲಾವಣೆ ಹಾಗೂ ಆಯ್ಕೆಯಾಗಿತ್ತು. ವರ್ಣಗಳು ಬದಲಾಗುವ ಕಾಲವನ್ನು ಮನ್ವಂತರ ಅಂದರೆ ಮನು ಮಾಡಿದ ವರ್ಣ ಮರುಬದಲಾವಣೆಯ ಕಾಲಾವಧಿ ಎಂದು ಕರೆಯಲಾಗುತ್ತಿತ್ತು. ಜೊತೆಗೆ ಮನ್ವಂತರ ಶಬ್ದವು ಒಬ್ಬ ವ್ಯಕ್ತಿಯ ವರ್ಣವು ನಿಗದಿಯಾದ ಕಾಲಾವಧಿ ಎಂಬ ಅರ್ಥವನ್ನು ಹೊಂದಿದೆ, ಈ ಮನ್ವಂತರ ಶಬ್ದವು ತನ್ನ ಸತ್ವ ಹಾಗೂ ಅರ್ಥಗಳಲ್ಲಿ ಶ್ರೀಮಂತವಾಗಿದ್ದು ವರ್ಣ ವ್ಯವಸ್ಥೆಯ ಎರಡು ಮುಖ್ಯ ಅಂಶಗಳನ್ನು ಧ್ವನಿಸುತ್ತದೆ. ಮೊದಲನೆಯದಾಗಿ, ಅದು ಮನು ಮತ್ತು ಸಪ್ತರ್ಷಿಗಳೆಂಬ ಸ್ವತಂತ್ರ ಅಧಿಕಾರದ ವರ್ಗದಿಂದ ವರ್ಣ ನಿಗದಿಯಾಗುತ್ತಿತ್ತು ಎಂಬುದನ್ನು ತೋರಿಸುತ್ತದೆ. ಎರಡನೆಯದಾಗಿ, ಅದು ವರ್ಣವು ಒಂದು ನಿರ್ದಿಷ್ಟ ಅವಧಿಗಾಗಿ ಇದ್ದು ಅನಂತರ ಮನು ಅದನ್ನು ಬದಲಾಯಿಸುತ್ತಿದ್ದ ಎಂಬುದನ್ನೂ ಸೂಚಿಸುತ್ತದೆ.[೨] ಪುರಾಣಗಳಲ್ಲಿ ವ್ಯಕ್ತವಾಗುವ ಸನಾತನ ಸಂಪ್ರದಾಯದಂತೆ ಮನು ಹಾಗೂ ಸಪ್ತರ್ಷಿಗಳು ಒಬ್ಬ ವ್ಯಕ್ತಿಯ ವರ್ಣವನ್ನು ನಾಲ್ಕು ವರ್ಷ ಅಂದರೆ ಒಂದು ಯುಗ ಕಾಲಕ್ಕಾಗಿ ನಿಗದಿ ಮಾಡುತ್ತಿದ್ದರು. ಈ ನಾಲ್ಕು ವರ್ಷಗಳ ಕೊನೆಯಲ್ಲಿ ಮನ್ವಂತರ ಉಂಟಾಗುತ್ತಿತ್ತು, ಆ ಮೂಲಕ ಪ್ರತಿ ನಾಲ್ಕನೇ ವರ್ಷ ಪಟ್ಟಿ ಬದಲಾಗುತ್ತಿತ್ತು. ಈ ಸುಧಾರಣೆಯಲ್ಲಿ ಕೆಲವರು ಹಳೆಯ ವರ್ಣವನ್ನು

೧. ನಾನಿಲ್ಲಿ ದಫ್ತರಿ ಮತ್ತು ಪ್ರಜ್ಞಾನೇಶ್ವರ ಯತಿಯವರ ಶೋಧದಿಂದ ದೊರೆತ ಸುಳಿವುಗಳನ್ನು ಅನುಸರಿಸಿದ್ದೇನೆ. ದಫ್ತರಿಯ ಧರ್ಮರಹಸ್ಯ ಮತ್ತು ಪ್ರಜ್ಞಾನೇಶ್ವರ ಯತಿಯ ಚಾತುರ್ವರ್ಣ್ಯಗಳು ತಮ್ಮ ಹೊರ ದೃಷ್ಟಿಕೋನದಿಂದ ಅಮೂಲ್ಯವಾಗಿವೆ. ಅವರು ಸೂಚಿಸಿದ ಹಾದಿಯಲ್ಲಿ ಇನ್ನಷ್ಟು ಸಂಶೋಧನೆ ನಡೆಯುವ ಅಗತ್ಯವಿದೆ.

೨. ಸುಮತಿ ಭಾರ್ಗವ ತನ್ನ ಸಂಹಿತೆಯನ್ನು ಮನುಸ್ಮೃತಿ ಎಂದೇಕೆ ಕರೆದನೆಂದು ಈಗ ಅರಿವಾಗುತ್ತದೆ. ಪುರಾತನ ಕಾನೂನು ನಿರ್ಮಾಪಕ ಮನುವಿನ ಘನತೆ ಹಾಗೂ ಅಧಿಕಾರವನ್ನು ತನ್ನ ಸಂಹಿತೆಗೆ ತುಂಬುವುದು ಅವನ ಉದ್ದೇಶವಾಗಿತ್ತು.

ಬದಲಾಯಿಸಿಕೊಳ್ಳುತ್ತಿದ್ದರು. ಕೆಲವರು ಉಳಿಸಿಕೊಳ್ಳುತ್ತಿದ್ದರು, ಕೆಲವರು ಕಳೆದುಕೊಳ್ಳುತ್ತಿದ್ದರು ಮತ್ತು ಕೆಲವರು ಗಳಿಸಿಕೊಳ್ಳುತ್ತಿದ್ದರು.[೧]

ಮೂಲ ವ್ಯವಸ್ಥೆಯು ವಯಸ್ಕರ ವರ್ಣ ನಿಗದಿಯ ಬಗ್ಗೆ ಮಾತ್ರ ಆಲೋಚಿಸಿದಂತೆ ಕಾಣುತ್ತದೆ. ಅದು ಪೂರ್ವ ತರಬೇತಿಯ ಮೇಲಾಗಲೀ, ಒಲವು ನಿಲುವುಗಳ ನಿಕಟ ಪರಿಶೀಲನೆಯ ಮೇಲಾಗಲೀ ನಿಂತಿರಲಿಲ್ಲ. ಮನು ಮತ್ತು ಸಪ್ತರ್ಷಿಗಳು ಒಂದು ಬಗೆಯ ಸಂದರ್ಶನ ಮಂಡಳಿಯಂತಿದ್ದು ಒಬ್ಬ ವ್ಯಕ್ತಿ ಸಂದರ್ಶನದಲ್ಲಿ ಹೇಗೆ ನಡೆದುಕೊಂಡ ಎಂಬುದರ ಮೇಲೆಯೇ ಅವನ ವರ್ಣ ನಿರ್ಧರಿಸುತ್ತಿದ್ದರು. ವರ್ಣ ನಿರ್ಧಾರ ಹೇಗೆಂದರೆ ಹಾಗೆ ಒರಟೊರಟಾಗಿ ನಡೆಯುತ್ತಿತ್ತು. ಈ ವ್ಯವಸ್ಥೆ ಬೆಳೆಯಿತು. ಅದಕ್ಕೆ ಗುರುಕುಲ ವ್ಯವಸ್ಥೆ ಎಂದು ಹೆಸರು. ಗುರುಕುಲವೆಂದರೆ ಆಚಾರ್ಯ ಅಥವಾ ಗುರುವೊಬ್ಬ ನಡೆಸುವ ಶಾಲೆ. ಎಲ್ಲ ಮಕ್ಕಳೂ ವಿದ್ಯಾಭ್ಯಾಸಕ್ಕಾಗಿ ಈ ಶಾಲೆಗೆ ಹೋಗುತ್ತಿದ್ದರು. ಈ ಶಿಕ್ಷಣದ ಅವಧಿ ಹನ್ನೆರಡು ವರ್ಷ. ಗುರುಕುಲದಲ್ಲಿರುವ ಮಗುವಿಗೆ ಬ್ರಹ್ಮಚಾರಿ ಎನ್ನುತ್ತಿದ್ದರು. ಶಿಕ್ಷಣದ ಅವಧಿ ಮುಗಿದ ಮೇಲೆ ಗುರುಕುಲದಲ್ಲೇ ಆಚಾರ್ಯರಿಂದ ಉಪನಯನ ಸಮಾರಂಭವಿರುತ್ತಿತ್ತು. ಈ ಉಪನಯನವು ಅತ್ಯಂತ ಮುಖ್ಯ ಸಮಾರಂಭವಾಗಿತ್ತು. ಇದು ಆಚಾರ್ಯರು ವಿದ್ಯಾರ್ಥಿಯ ವರ್ಣವನ್ನು ನಿರ್ಧರಿಸಿ ಆ ವರ್ಣದ ಕರ್ತವ್ಯಗಳನ್ನು ನಿರ್ವಹಿಸಲು ಹೊರ ಜಗತ್ತಿಗೆ ಕಳಿಸುವ ಸಮಾರಂಭವಾಗಿತ್ತು. ಆಚಾರ್ಯರು ನಡೆಸುತ್ತಿದ್ದ ಉಪನಯನವು ಮನು ಮತ್ತು ಸಪ್ತರ್ಷಿಗಳ ಜಾಗದಲ್ಲಿ ಜಾರಿಗೆ ಬಂದ ವರ್ಣ ನಿರ್ಧಾರದ ಹೊಸ ವಿಧಾನವಾಗಿತ್ತು. ಈ ಹೊಸ ವಿಧಾನ ಹಳೆ ವಿಧಾನಕ್ಕಿಂತ ನಿಸ್ಸಂದೇಹವಾಗಿ ಉತ್ತಮವಾಗಿತ್ತು. ವರ್ಣವು ನಿಷ್ಪಕ್ಷಪಾತವಾದ ಸ್ವತಂತ್ರವಾದ ಸಂಸ್ಥೆಯಿಂದ ನಿರ್ಧಾರವಾಗಬೇಕೆಂಬ ಹಳೆ ವ್ಯವಸ್ಥೆಯ ಲಕ್ಷಣವನ್ನೂ ಇದು ಉಳಿಸಿಕೊಂಡಿತು. ಜೊತೆಗೆ ವರ್ಣ ನಿರ್ಧಾರಕ್ಕೆ ಮುನ್ನ ತರಬೇತಿಯೂ ಅಗತ್ಯವೆಂಬ ಹೊಸ ಅಂಶವನ್ನು ಸೇರಿಸಿತು. ವ್ಯಕ್ತಿಯ ವ್ಯಕ್ತಿತ್ವದ ಬೆಳವಣಿಗೆಗೆ ತರಬೇತಿಯೊಂದೇ ಮಾರ್ಗ ಮತ್ತು ವ್ಯಕ್ತಿತ್ವದ ಅರಿವೇ ವರ್ಣ ನಿರ್ಧಾರ ಮಾಡುವ ಏಕೈಕ ಸುರಕ್ಷಿತ ವಿಧಾನ ಎನ್ನುವ ಹಿನ್ನೆಲೆಯಲ್ಲಿ ಈ ಹೊಸ ಲಕ್ಷಣದ ಸೇರ್ಪಡೆ ನಿಜಕ್ಕೂ ದೊಡ್ಡ ಸುಧಾರಣೆ ಎಂಬುದರಲ್ಲಿ ಸಂದೇಹವಿಲ್ಲ.

ಆಚಾರ್ಯ ಗುರುಕುಲ ವ್ಯವಸ್ಥೆಯೊಂದಿಗೆ ವರ್ಣದ ಅವಧಿಯೂ ಬದಲಾಯಿತು. ಒಂದು ನಿರ್ದಿಷ್ಟ ಅವಧಿಯ ವರ್ಣದ ಬದಲು ವರ್ಣವು ಈಗ ಜೀವಮಾನದ ವರ್ಣವಾಯಿತು. ಆದರೆ ಅದು ಅನುವಂಶೀಯವಾಗಿರಲಿಲ್ಲ.

ಈ ವ್ಯವಸ್ಥೆಯಿಂದ ಬ್ರಾಹ್ಮಣ ಧರ್ಮ ತೃಪ್ತವಾಗಲಿಲ್ಲವೆಂಬುದು ಸ್ಪಷ್ಟವಾಗಿಯೇ ಇದೆ ಮತ್ತು ಅತೃಪ್ತಿಯ ಕಾರಣವೂ ಸುಸ್ಪಷ್ಟವಾಗಿದೆ. ಆಗ ಪ್ರಚಲಿತವಿದ್ದ ವ್ಯವಸ್ಥೆಯಲ್ಲಿ ಆಚಾರ್ಯರು ಬ್ರಾಹ್ಮಣ ಮಗುವನ್ನು ಶೂದ್ರನಾಗಲು ಮಾತ್ರ ಯೋಗ್ಯನೆಂದು ಘೋಷಿಸುವ ಎಲ್ಲ ಸಾಧ್ಯತೆಗಳು ಇದ್ದವು. ಈ ಫಲಿತಾಂಶವನ್ನು ತಪ್ಪಿಸಲು ಬ್ರಾಹ್ಮಣಧರ್ಮ ಸಹಜವಾಗಿಯೇ ಕಾತರವಾಗಿತ್ತು. ಅದು ವರ್ಣ ಅನುವಂಶೀಯವಾಗ ಬೇಕೆಂದು ಬಯಸಿತ್ತು. ವರ್ಣವನ್ನು ಅನುವಂಶೀಯಗೊಳಿಸುವ ಮೂಲಕ ಮಾತ್ರ ಬ್ರಾಹ್ಮಣರ ಮಕ್ಕಳು ಶೂದ್ರರಾಗುವುದನ್ನು ತಪ್ಪಿಸಬಹುದಿತ್ತು. ಇದನ್ನು ಸಾಧಿಸಲು ಬ್ರಾಹ್ಮಣ ಧರ್ಮವೂ ಅತ್ಯಂತ ನಿರ್ಲಜ್ಜ ರೀತಿಯಲ್ಲಿ ಮುಂದಾಯಿತು.

---

೧. ವೇದಗಳಲ್ಲಿ ಶೂದ್ರರೇ ರಚಿಸಿದ ಕೆಲವು ಮಂತ್ರಗಳಿವೆ. ಶೂದ್ರರು ವೇದವನ್ನು ಕೇಳಲೂ ಬಾರದು, ಪಠಿಸಲೂ ಬಾರದು ಎಂಬ ಮನುವಿನ ಶಾಸನಕ್ಕೆ ಇದೊಂದೇ ವಿವರಣೆ ಕೊಡಲು ಸಾಧ್ಯ. ಇಲ್ಲವಾದರೆ ಅದು ಒಗಟಾಗುತ್ತದೆ.

# III

ಮನುವಿನ ವರ್ಣ ನಿರ್ಧಾರದ ವ್ಯವಸ್ಥೆಯಲ್ಲಿ ಬ್ರಾಹ್ಮಣ ಧರ್ಮವು ಮೂರು ಮೂಲಭೂತ ಬದಲಾವಣೆಗಳನ್ನು ಮಾಡಿತು. ಮೊದಲನೆಯದಾಗಿ, ಮಕ್ಕಳಿಗೆ ತರಬೇತಿ ನೀಡುವ ಮತ್ತು ತರಬೇತಿಯ ಅವಧಿ ಮುಗಿದ ನಂತರ ಗುರುವೇ ಮಕ್ಕಳ ವರ್ಣ ನಿರ್ಧಾರ ಮಾಡುವ ಗುರುಕುಲ ವ್ಯವಸ್ಥೆಯನ್ನು ರದ್ದು ಮಾಡಲಾಯಿತು. ಮನುವಿಗೆ ಗುರುಕುಲದ ಬಗ್ಗೆ ಗೊತ್ತಿತ್ತು ಮತ್ತು ಗುರುವಿನ ಕೈಕೆಳಗೆ ಕಲಿಯುವ ಹಾಗೂ ನೆಲೆಸುವ ಗುರುವಾಸದ[೧] ಉಲ್ಲೇಖವನ್ನೂ ಆತ ಮಾಡುತ್ತಾನೆ. ಆದರೆ ಉಪನಯನಕ್ಕೆ ಸಂಬಂಧಿಸಿದಂತೆ ಅದರ ಹೆಸರೇ ತೆಗೆಯುವುದಿಲ್ಲ. ಉಪನಯನಕ್ಕೆ ಸಂಬಂಧಿಸಿದ ಗುರುವಿನ ಉಲ್ಲೇಖವನ್ನೇ ಮಾಡದಿರುವ ಮೂಲಕ ಮನು ಉಪನಯನ ನೆರವೇರಿಸುವ ಗುರುವಿನ ಅಧಿಕಾರವನ್ನೇ ರದ್ದುಗೊಳಿಸುತ್ತಾನೆ. ಗುರುವಿನ ಬದಲು ತಂದೆಯೇ ಮನೆಯಲ್ಲಿ ಮಗುವಿನ ಉಪನಯನ ಮಾಡುವ ಅವಕಾಶ ಕಲ್ಪಿಸಿಕೊಡುತ್ತಾನೆ.[೨] ಎರಡನೆಯದಾಗಿ, ಉಪನಯನ ಒಂದು ಸಂಸ್ಕಾರ ಎಂದು ಮಾಡಲಾಯಿತು. ಪ್ರಾಚೀನ ಕಾಲದಲ್ಲಿ ಉಪನಯನವೆಂದರೆ ಯಾವುದೇ ವರ್ಣ ವೃತ್ತಿಯಲ್ಲಿ ನೈಪುಣ್ಯದ ಪದವಿ ಪ್ರಮಾಣ ಪತ್ರವನ್ನು ಗುರುವು ಶಿಷ್ಯರಿಗೆ ನೀಡುವ ಘಟಿಕೋತ್ಸವ ಸಮಾರಂಭದಂತಿತ್ತು.[೩] ಮನುವಿನ ಶಾಸನದಲ್ಲಿ ಈ ಬಹುಮುಖ್ಯ ವ್ಯವಸ್ಥೆಯ ಅರ್ಥ ಹಾಗೂ ಉದ್ದೇಶಗಳ ಸಂಪೂರ್ಣ ಬದಲಾವಣೆ ಜಾರಿಯಾಯಿತು. ಮೂರನೆಯದಾಗಿ, ತರಬೇತಿಗು ಉಪನಯನಕ್ಕೂ ಇದ್ದ ಸಂಬಂಧವನ್ನು ಪೂರ್ತಿಯಾಗಿ ತಿರುಗು ಮುರುಗು ಮಾಡಲಾಯಿತು. ಪ್ರಾಚೀನ ಕಾಲದಲ್ಲಿ ಉಪನಯನಕ್ಕೆ ಮುಂಚೆ ತರಬೇತಿಯಿತ್ತು. ಬ್ರಾಹ್ಮಣ ಧರ್ಮದಲ್ಲಿ ತರಬೇತಿಗೆ ಮುಂಚೆ ಉಪನಯನ ಜಾರಿಯಾಯಿತು. ಮಗುವನ್ನು ಗುರುವಿನ ಬಳಿ ತರಬೇತಿಗೆ ಕಳಿಸಬೇಕು. ಆದರೆ ಅದು ಉಪನಯನದ ನಂತರ. ಅಂದರೆ ತಂದೆಯು ಮಗುವಿನ ವರ್ಣ ನಿರ್ಧಾರ ಮಾಡಿದ ನಂತರ[೪] ಎಂದು ಮನು ನಿರ್ದೇಶಿಸುತ್ತಾನೆ.

ಬ್ರಾಹ್ಮಣಧರ್ಮ ತಂದ ಪ್ರಧಾನ ಬದಲಾವಣೆ ಎಂದರೆ ಉಪನಯನ ಮಾಡುವ ಅಧಿಕಾರವನ್ನು ಗುರುವಿನಿಂದ ತಂದೆಗೆ ವರ್ಗಾಯಿಸಿದ್ದು. ಇದರ ಪರಿಣಾಮವಾಗಿ ತನ್ನ ಮಗುವಿನ ಉಪನಯನ ಮಾಡುವ ಅಧಿಕಾರ ಪಡೆದ ತಂದೆ ಮಗುವಿಗೆ ತನ್ನ ವರ್ಣವನ್ನೇ ಕೊಡುವ ಮೂಲಕ ಅದನ್ನು ಅನುವಂಶೀಯಗೊಳಿಸಿದ. ಬ್ರಾಹ್ಮಣಧರ್ಮವು ವರ್ಣನಿರ್ಧಾರದ ಅಧಿಕಾರವನ್ನು ಗುರುವಿನಿಂದ ಕಿತ್ತು ತಂದೆಗೆ ಕೊಡುವ ಮೂಲಕ ಅಂತಿಮವಾಗಿ ವರ್ಣವನ್ನು ಜಾತಿಯಾಗಿ ಬದಲಾಯಿಸಿತು.

ವರ್ಣವು ಜಾತಿಯಾಗಿ ರೂಪಾಂತರಗೊಂಡ ಕತೆಯಿದು. ಒಂದು ಇನ್ನೊಂದಾಗುವ ಈ ಬದಲಾವಣೆಯ ಕತೆಯನ್ನು ಮುನರ್ರಚಿಸಿದ್ದೇನೆ ಎಂಬುದು ನಿಜ. ಈಗಾಗಲೇ ಹೇಳಿದ ಕಾರಣದಿಂದಾಗಿ ಇದು ತನ್ನೆಲ್ಲ ವಿವರಗಳಲ್ಲೂ ನಾವು ಬಯಸಿದ್ದಷ್ಟು ಕರಾರುವಾಕ್ಕಾಗಿರಲಾರದು. ಆದರೆ ವರ್ಣದ ಅಸ್ತಿತ್ವ ಇಲ್ಲವಾಗಿ ಜಾತಿ ಅಸ್ತಿತ್ವಕ್ಕೆ ಬಂದ ಹಂತಗಳು ಹಾಗೂ ವಿಧಾನಗಳು ಈವರೆಗಿನ ಚರ್ಚೆ ತೋರಿದ ಮಾದರಿಯಲ್ಲೇ ಇರಬೇಕೆಂಬುದರಲ್ಲಿ ಅನುಮಾನವಿಲ್ಲ.

---

೧. ಮನು ೨.೬೭.

೨. ಮನು ೨.೩೬–೩೭

೩. ಈ ಅಂಶದ ಮೇಲೆ ಉಪನಯನ ಕುರಿತ ಪ್ರಜ್ಞಾನೇಶ್ವರ ಯತಿಯವರ ಕಿರುಹೊತ್ತಿಗೆ ನೋಡಿ.

೪. ಮನು ೨.೬೯.

ವರ್ಣವನ್ನು ಜಾತಿಯಾಗಿ ಬದಲಿಸುವಲ್ಲಿ ಮನುವಿನ ಉದ್ದೇಶ ಏನಿತ್ತೆಂದು ಊಹಿಸುವುದೇನೂ ಕಷ್ಟವಿಲ್ಲ. ಪುರಾತನ ಕಾಲದಿಂದಲೂ ಅನುಭವಿಸುತ್ತ ಬಂದ ಉಚ್ಚ ಅಂತಸ್ತನ್ನು ಅರ್ಹತೆ ಯೋಗ್ಯತೆಗಳನ್ನು ಚಕಾರವೆತ್ತದೆ ಎಲ್ಲರೂ ಬ್ರಾಹ್ಮಣರು ಮತ್ತವರ ಸಂತಾನದ ಸವಲತ್ತಾಗಿ ಮಾಡುವುದೇ ಆತನ ಉದ್ದೇಶವಾಗಿತ್ತು. ಬೇರೆ ಮಾತುಗಳಲ್ಲಿ ಹೇಳುವುದಾದರೆ, ತಮ್ಮ ಗುಣಬಲದಿಂದ ಕೆಲವರು ಸಾಧಿಸಿದ ಉನ್ನತ ಅಂತಸ್ತಿಗೆ ಎಲ್ಲ ಬ್ರಾಹ್ಮಣರನ್ನೂ–ಅವರೆಷ್ಟೇ ನೀಚ ಹಾಗು ಅಪಾತ್ರರಿರಲಿ – ಏರಿಸುವುದೇ ಮನುವಿನ ಉದ್ದೇಶವಾಗಿತ್ತು. ಅದು ಸಮಸ್ತ ಬ್ರಾಹ್ಮನ ಸಮುದಾಯವನ್ನು ಉನ್ನತಿಗೇರಿಸುವ ಯತ್ನವಾಗಿತ್ತು.

ಬ್ರಾಹ್ಮಣ ಧರ್ಮದ ಉದ್ದೇಶ ಇದೇ ಎಂಬುದು ಮನು ಪ್ರಣೀತ ಶಾಸನಗಳಿಂದ ಸ್ಪಷ್ಟವಾಗುತ್ತದೆ. ವರ್ಣವನ್ನು ಅನುವಂಶೀಯಗೊಳಿಸುವುದರಿಂದ ಅತ್ಯಂತ ಅಜ್ಞಾನಿ ಬ್ರಾಹ್ಮಣನೂ[೧] ಅತ್ಯಂತ ಸುಶಿಕ್ಷಿತ ಬ್ರಾಹ್ಮಣನ ಅಂತಸ್ತಿಗೆ ಏರುವನೆಂದು ಮನುವಿಗೆ ಗೊತ್ತಿತ್ತು. ಇಡಿ ಬ್ರಾಹ್ಮಣ ವರ್ಗವನ್ನೇ ಉನ್ನತಿಗೇರಿಸದಿದ್ದರೆ ಮೂಢ ಬ್ರಾಹ್ಮಣನಿಗೆ ಸುರಕ್ಷಿತ ಬ್ರಾಹ್ಮಣನಿಗಿರುವ ಗೌರವ ದೊರೆಯಲಾರದೆಂಬ ಭಯ ಅವನಿಗಿತ್ತು. ಮನು ಅಜ್ಞಾನಿ ಬ್ರಾಹ್ಮಣ ಎಂಬ ಹೊಸ ಕಲ್ಪನೆಯ ಬಗ್ಗೆ ಅತೀವ ಕಾಳಜಿ ಹೊಂದಿದ್ದ ಮತ್ತು ಆತ ಅಜ್ಞಾನಿ ಹಾಗೂ ನೀಚ ಬ್ರಾಹ್ಮಣರಿಗೆ ಅಗೌರವ ತೋರಿಸುವುದರ ವಿರುದ್ಧ ಜನರಿಗೆ ಎಚ್ಚರಿಕೆ ನೀಡಿದ್ದಾನೆ.

IX ೩೧೭. ವಿದ್ಯಾವಂತನಾಗಿರಲಿ, ಅವಿದ್ಯಾವಂತನಾಗಿರಲಿ ಬ್ರಾಹ್ಮಣನು ಮಹತ್ ದೈವ. ಅಗ್ನಿಯು ಪ್ರಣೀತವಾದುದಾಗಿರಲಿ ಅಲ್ಲದಿರಲಿ ಮಹತ್ ದೈವವಾದಂತೆಯೇ.

IX. ೩೧೯. ಬ್ರಾಹ್ಮಣರು ಎಂಥ ಅನಿಷ್ಟ ವರ್ತನೆ, ಕರ್ಮಗಳಲ್ಲಿ ತೊಡಗಿದರೂ ಅವರು ಪರಮ ದೈವವಾದ್ದರಿಂದ ಸರ್ವಥಾ ಪೂಜ್ಯರು.

ಇಡಿ ಬ್ರಾಹ್ಮಣವರ್ಗವನ್ನೇ ಉನ್ನತಿಗೇರಿಸುವ ಉದ್ದೇಶವಿರದಿದ್ದರೆ ಇಂಥ ಎಚ್ಚರಿಕೆಯ ಅಗತ್ಯವೇ ಇರುತ್ತಿರಲಿಲ್ಲ. ದುರ್ಗುಣವು, ಸದ್ಗುಣಕ್ಕೆ ಬೂಟಾಟಿಕೆಯ ಗೌರವವನ್ನೂ ಕೊಡಲು ನಿರಾಕರಿಸಲು ಸನ್ನಿವೇಶವಿದು. ಬ್ರಾಹ್ಮಣರು ನೀಚರಾದರೂ, ಅಜ್ಞಾನಿಗಳಾದರೂ ಅವರಿಗೆ ಪೂಜೆ ಸಲ್ಲಿಸಬೇಕೆಂದು ಮನು ಒತ್ತಾಯಿಸುತ್ತಿರುವುದಕ್ಕಿಂತ ಮಿಗಿಲಾದ ನೈತಿಕ ಅವನತಿ ಇರಲು ಸಾಧ್ಯವೇ?

ಇದಿಷ್ಟೂ ವರ್ಣವನ್ನು ಜಾತಿಗೆ ಬದಲಾಯಿಸಿದ ಉದ್ದೇಶ ಕುರಿತದ್ದಾಯಿತು. ಇನ್ನು ಇ ಬದಲಾವಣೆಯಿಂದ ಉಂಟಾದ ಪರಿಣಾಮಗಳೇನು?

ಆಧ್ಯಾತ್ಮಿಕ ದೃಷ್ಟಿಯಿಂದ ನೋಡಿದರೆ ಇದರ ಪರಿಣಾಮಗಳು ಸಮಚಿತ್ತದಿಂದ ವಿವೇಚಿಸಲೂ ಆಗದಷ್ಟು ಹಾನಿಕಾರಕವಾಗಿವೆ. ಮನುವಿನ ಶಾಸನ ಬಲದಿಂದ ಪುರೋಹಿತನಾದ ಬ್ರಾಹ್ಮಣನ ಸ್ಥಾನವನ್ನು ಇಂಗ್ಲಿಷಿನ ಚರ್ಚಿನ ಧರ್ಮಗುರುಗಳ ಶಾಸನಕ್ಕೆ ಹೋಲಿಸಿದರೆ ಈ ವ್ಯವಸ್ಥೆಯಿಂದಾದ ಹಾನಿಯನ್ನು ಹೆಚ್ಚು ಸರಿಯಾಗಿ ಅರ್ಥ ಮಾಡಿಕೊಳ್ಳಬಹುದು ಅನಿಸುತ್ತದೆ. ಅಲ್ಲಿನ ಧರ್ಮಗುರುವು ಇನ್ನಾವುದೇ ಪ್ರಜೆಯಂತೆ ತಾನೂ ಅಪರಾಧ ಶಾಸನಗಳಿಗೆ ಒಳಪಟ್ಟಿರುತ್ತಾನೆ. ಅದರ ಜೊತೆಯಲ್ಲೇ ಆತ ಸರ್ವದಾ ಚರ್ಚ್ ಶಿಸ್ತು ಕಾಯ್ದೆಗೂ ಬದ್ಧನಾಗಿರುತ್ತಾನೆ. ಅಪರಾಧ ಶಾಸನದ ಅನ್ವಯ ಆತ ಸೂಕ್ತ ಶಿಕ್ಷಣವಿಲ್ಲದೆ ಧರ್ಮಗುರುವಾಗಿ ವರ್ತಿಸಿದರೆ ಆತನಿಗೆ ದಂಡನೆಯಿದೆ. ಚರ್ಚ್ ಶಿಸ್ತು ಕಾಯ್ದೆಯಂತೆ ಆತನ ವರ್ತನೆ ಅಪರಾಧವಲ್ಲದಿದ್ದರೂ ಅನೈತಿಕವೆಂದು ಪರಿಗಣಿಸಿ ಧರ್ಮಗುರು ಸ್ಥಾನದಿಂದ ಪದಚ್ಯುತಿಗೊಳಿಸಲಾಗುವುದು. ಜನರ ಆಧ್ಯಾತ್ಮಿಕ ಅಗತ್ಯಗಳನ್ನು ಪೂರೈಸುವ ಧರ್ಮಗುರುವಿನ ವೃತ್ತಿಗೆ ವಿದ್ಯೆ ಮತ್ತು ನೈತಿಕತೆಗಳೆರಡೂ

೧. ವರ್ಣದಡಿಯಲ್ಲಿ ಅಜ್ಞಾನಿ ಬ್ರಾಹ್ಮಣ ಇರಲು ಸಾಧ್ಯವೇ ಇರಲಿಲ್ಲ. ವರ್ಣವು ಜಾತಿಯಾದಾಗ ಮಾತ್ರ ಅಂದರೆ ಹುಟ್ಟಿನಿಂದ ಬ್ರಾಹ್ಮಣನಾಗುವ ಸಂದರ್ಭದಲ್ಲಿ ಮಾತ್ರ ಅಜ್ಞಾನಿ ಬ್ರಾಹ್ಮಣ ಇರುವ ಸಾಧ್ಯತೆಯಿದೆ.

ಅಗತ್ಯವಾದ್ದರಿಂದ ಈ ಜಂಟಿ ನಿಯಂತ್ರಣ ಸಮರ್ಥನೀಯವಾದುದು. ಅದೇ ಬ್ರಾಹ್ಮಣ ಧರ್ಮದನ್ವಯ ತಾನೊಬ್ಬನೇ ಧರ್ಮಗುರುವಾಗಬಲ್ಲ. ಬ್ರಾಹ್ಮಣನಿಗೆ ವಿದ್ಯೆಯಾಗಲೀ, ನೀತಿಯಾಗಲೀ ಇರಬೇಕಿಲ್ಲ, ಅಷ್ಟಾದರೂ ಆತ ಜನರ ಆಧ್ಯಾತ್ಮಿಕ ವ್ಯವಹಾರಗಳ ಏಕೈಕ ನೇತಾರ!! ಇಂಥದಕ್ಕೆ ಆಸ್ಪದ ಕೊಡುವ ಮತಪಂಥದ ಮೌಲ್ಯಗಳ ಬಗ್ಗೆ ವಿಮರ್ಶೆ ಮಾಡುವುದೇ ಅನಗತ್ಯ.

ಜಾತ್ಯಾತೀತ ದೃಷ್ಟಿಯಿಂದ ನೋಡುವುದಾದರೆ ವರ್ಣದಿಂದ ಜಾತಿಗೆ ಆದ ಈ ರೂಪಾಂತರ ಹಿಂದೂಗಳಲ್ಲಿ ಅತ್ಯಂತ ದುಷ್ಟ ಮನೋಭಾವವನ್ನು ಹುಟ್ಟು ಹಾಕಲೇಬೇಕಿತ್ತು. ಅದು ಯೋಗ್ಯತೆಯನ್ನು ಕಡೆಗಣಿಸಿ ಹುಟ್ಟಿಗೆ ಮಾತ್ರ ಒತ್ತು ಕೊಡುವಂಥದ್ದು. ಉತ್ತಮ ಜನ್ಮದವನಾದರೆ ಆತನಲ್ಲಿ ಅರ್ಹತೆ ಯೋಗ್ಯತೆಗಳ ಸಂಪೂರ್ಣ ಅಭಾವವಿದ್ದರೂ ಆತನಿಗೆ ಗೌರವ. ಯೋಗ್ಯತೆಯ ದೃಷ್ಟಿಯಿಂದ ನೀಚ ಹುಟ್ಟಿನವನು ಉಚ್ಚ ಜನ್ಮದವನಿಗಿಂತ ಮೇಲುಗೈ ಪಡೆದಿದ್ದರೂ ಉಚ್ಚ ಜನ್ಮದವನೇ ಅವನಿಗಿಂತ ಶ್ರೇಷ್ಠವೆನಿಸುತ್ತಾನೆ. ಬ್ರಾಹ್ಮಣ ಧರ್ಮದಲ್ಲಿ ಹುಟ್ಟೇ ಯಾವಾಗಲೂ ಗೆಲ್ಲುವುದು. ಅದು ಅರ್ಹತೆಯ ವಿರುದ್ಧವಿರಲಿ, ಯೋಗ್ಯತೆಯ ವಿರುದ್ಧವಿರಲಿ, ಯೋಗ್ಯತೆಯೊಂದಕ್ಕೆ ಏನೂ ಬೆಲೆಯಿಲ್ಲ. ಇದು ಸಂಪೂರ್ಣವಾಗಿ ಅಂತಸ್ತಿನಿಂದ ಯೋಗ್ಯತೆಯನ್ನು ಬೇರ್ಪಡಿಸಿದ ಬ್ರಾಹ್ಮಣಧರ್ಮದ ಕೆಲಸ. ಉತ್ತಮ ಹುಟ್ಟಿನ ಬಲಿಪೀಠದ ಮೇಲೆ ಬುದ್ಧಿಮತ್ತೆಯ ಬಲಿ ಕೊಡುವ ಪ್ರಗತಿ ವಿರೋಧಿ ಸಮಾಜವನ್ನು ಸೃಷ್ಟಿಸಲು ಇದಕ್ಕಿಂತ ಮಿಗಿಲಾದ ಪ್ರಯತ್ನವಿರುವುದೇ ಸಾಧ್ಯವಿಲ್ಲ.

ಈಗ ಬೌದ್ಧಧರ್ಮದ ವಿರುದ್ಧ ದಿಗ್ವಿಜಯ ಗಳಿಸಿದ ಬ್ರಾಹ್ಮಣಧರ್ಮದ ಮೂರನೇ ಕೃತ್ಯ. ಅದು ಬ್ರಾಹ್ಮಣೇತರ ಜನಸಮುದಾಯದ ಫಲಿತಗಳಿಂದ ಬ್ರಾಹ್ಮಣರನ್ನು ಪ್ರತ್ಯೇಕಿಸಿದ್ದು ಮತ್ತು ಬ್ರಾಹ್ಮಣೇತರ ಸಮುದಾಯದ ಬೇರೆ ಬೇರೆ ಸಮಾಜ ಶ್ರೇಣಿಗಳನ್ನು ಪರಸ್ಪರ ಬೇರ್ಪಡಿಸಿದ್ದು.

ಬೌದ್ಧ ಆಳ್ವಿಕೆಯು ಮೂಲೆಗೊತ್ತಿದ್ದ ಪುರಾತನ ಚಾತುರ್ವರ್ಣ ವ್ಯವಸ್ಥೆಯನ್ನು ಮತ್ತೆ ಅನುಷ್ಠಾನಗೊಳಿಸುವುದೇ ಪುಷ್ಯಮಿತ್ರನ ಬ್ರಾಹ್ಮಣ ಕ್ರಾಂತಿಯ ಉದ್ದೇಶವಾಗಿತ್ತು. ಆದರೆ ಬ್ರಾಹ್ಮಣ ಧರ್ಮವು ಬೌದ್ಧಧರ್ಮದ ವಿರುದ್ಧ ಜಯಗಳಿಸಿದ ಮೇಲೆ ಚಾತುರ್ವರ್ಣದ ಮರುಸ್ಥಾಪನೆಯಿಂದಷ್ಟೇ ತೃಪ್ತಗೊಳ್ಳಲಿಲ್ಲ. ಬುದ್ಧಪೂರ್ವ ದಿನಗಳ ಚಾತುರ್ವರ್ಣ ಬದಲಾವಣೆಗೆ ಬಗ್ಗಬಲ್ಲ ಮುಕ್ತ ವ್ಯವಸ್ಥೆಯಾಗಿತ್ತು. ಯಾಕೆಂದರೆ ಆಗ ವರ್ಣವ್ಯವಸ್ಥೆಗೂ ವಿವಾಹವ್ಯವಸ್ಥೆಗೂ ಯಾವ ಸಂಬಂಧವೂ ಇರಲಿಲ್ಲ. ಚಾತುರ್ವರ್ಣ ವ್ಯವಸ್ಥೆಯು ನಾಲ್ಕು ವರ್ಣಗಳ ಪ್ರತ್ಯೇಕ ಅಸ್ತಿತ್ವವನ್ನು ಗುರುತಿಸಿದರೂ ಅದು ವರ್ಣಗಳ ಅಂತರ್ವಿವಾಹವನ್ನು ನಿಷೇಧಿಸಿರಲಿಲ್ಲ. ಒಂದು ವರ್ಣದ ಒಬ್ಬ ಗಂಡಸು ಕಾನೂನು ಸಮ್ಮತವಾಗಿಯೇ ಇನ್ನೊಂದು ವರ್ಣದ ಹೆಣ್ಣನ್ನು ಮದುವೆಯಾಗಬಹುದಿತ್ತು. ಈ ದೃಷ್ಟಿಯನ್ನು ಬೆಂಬಲಿಸುವ ಅನೇಕ ನಿದರ್ಶನಗಳಿವೆ. ನಾನಿಲ್ಲಿ ಹಿಂದೂಗಳ ಪವಿತ್ರಗಾಥೆಗಳಲ್ಲಿ ಖ್ಯಾತಿವೆತ್ತ ಹೆಸರಾಂತ ಹಾಗೂ ಗೌರವಾನ್ವಿತ ವ್ಯಕ್ತಿಗಳ ಕೆಲವು ನಿದರ್ಶನಗಳನ್ನು ಕೊಡುತ್ತೇನೆ.

| | **ಗಂಡ** | **ಅವನ ವರ್ಣ** | **ಹೆಂಡತಿ** | **ಅವಳ ವರ್ಣ** |
|---|---|---|---|---|
| ೧. | ಶಂತನು | ಕ್ಷತ್ರಿಯ | ಗಂಗಾ | ಶೂದ್ರ–ಅನಾಮಿಕ |
| ೨. | ಶಂತನು | ಕ್ಷತ್ರಿಯ | ಮತ್ಸ್ಯಗಂಧಿ | ಶೂದ್ರ–ಬೆಸ್ತ |
| ೩. | ಪರಾಶರ | ಬ್ರಾಹ್ಮಣ | ಮತ್ಸ್ಯಗಂಧಿ | ಶೂದ್ರ–ಬೆಸ್ತ |
| ೪. | ವಿಶ್ವಾಮಿತ್ರ | ಕ್ಷತ್ರಿಯ | ಮೇನಕಾ | ಅಪ್ಸರೆ |
| ೫. | ಯಯಾತಿ | ಕ್ಷತ್ರಿಯ | ದೇವಯಾನಿ | ಬ್ರಾಹ್ಮಣ |

| | | | | |
|---|---|---|---|---|
| ೬. | ಯಯಾತಿ | ಕ್ಷತ್ರಿಯ | ಶರ್ಮಿಷ್ಠೆ | ಅಸುರಿ–ಅನಾರ್ಯ |
| ೭. | ಜರತ್ಕಾರು | ಬ್ರಾಹ್ಮಣ | ಜರತ್ಕಾರಿ | ನಾಗ–ಅನಾರ್ಯ |

ವರ್ಗಗಳಾಗಿ ಸಮಾಜ ವಿಭಜನೆಯಾಗಿದ್ದರೂ ನಾಲ್ಕು ವರ್ಣಗಳ ಅಂತರ್ವಿವಾಹಕ್ಕೆ ನಿಷೇಧ ವಿರಲಿಲ್ಲ ಅನ್ನುವಲ್ಲಿ ಯಾರಿಗಾದರೂ ಸಂದೇಹವುಳಿದಿದ್ದರೆ ಬ್ರಾಹ್ಮಣ ಮಹರ್ಷಿ ವ್ಯಾಸನ ವಂಶಾವಳಿಯನ್ನು ಗಮನಿಸಲಿ.

**ವ್ಯಾಸನ ವಂಶಾವಳಿ**

ವರುಣಮಿತ್ರ = ಊರ್ವಶಿ

ವಸಿಷ್ಠ = ಅಕ್ಷರಮಾಲಾ

ಶಕ್ತಿ

ಪರಾಶರ = ಮತ್ಸ್ಯಗಂಧಿ

ವ್ಯಾಸ

ಬ್ರಾಹ್ಮಣಧರ್ಮವು ಕೆರಳಿದ ಪಶುವಿನ ವ್ಯಗ್ರತೆಯಿಂದ, ಬೇರೆ ಬೇರೆ ವರ್ಣಗಳ ಅಂತರ್ವಿವಾಹಕ್ಕೆ ತಡೆಯೊಡ್ಡಲು ಮುಂದಾಯಿತು. ಮನು ಹೊಸ ಶಾಸನವನ್ನೇ ಘೋಷಿಸಿದ. ಅದು ಈ ಕೆಳಗಿನಂತಿದೆ:

III ೧೨. ದ್ವಿಜನರಿಗೆ ಮೊದಲ ಹೆಂಡತಿಯಾಗಲು ಸವರ್ಣ (ಕನ್ಯೆಯೇ) ಪ್ರಶಸ್ತ.

III ೧೩. ಶೂದ್ರನಿಗೆ ಶೂದ್ರ (ಹೆಣ್ಣು) ಮಾತ್ರ ಹೆಂಡತಿಯಾಗಬಹುದು.

III ೧೪. ಬ್ರಾಹ್ಮಣ ಅಥವಾ ಕ್ಷತ್ರಿಯರಿಗೆ ಎಂಥ ಸಂದರ್ಭದಲ್ಲೂ ಶೂದ್ರ ಸ್ತ್ರೀ ಮೊದಲ ಹೆಂಡತಿಯಾದದ್ದು ಯಾವ ವೃತ್ತಾಂತದಲ್ಲೂ ಇಲ್ಲ.

III ೧೫. ಮೋಹದಲ್ಲಿ ಹೀನ ಜಾತಿಯ ಸ್ತ್ರೀಯನ್ನು ಮದುವೆಯಾದ ಬ್ರಾಹ್ಮಣರು ಅನತಿ ಕಾಲದಲ್ಲೇ ತಮ್ಮ ಕುಲ ಮತ್ತು ಸಂತಾನವನ್ನು ಶೂದ್ರತ್ವಕ್ಕಿಳಿಸುವರು.

III ೧೬. ಅತ್ರಿ ಮತ್ತು ಉತಥ್ಯನ ಮಗ (ಗೌತಮನ ಪ್ರಕಾರ) ಶೂದ್ರ ಸ್ತ್ರೀಯನ್ನು ಮದುವೆಯಾದನು. ಶೌನಕನ ಪ್ರಕಾರ (ಶೂದ್ರ ಸ್ತ್ರೀಯಿಂದ ಮಗನನ್ನು ಪಡೆದವನೂ ಭೃಗುವಿನ ಪ್ರಕಾರ (ಕೇವಲ ಶೂದ್ರ ಸ್ತ್ರೀಯಿಂದ) ಮಗನನ್ನು ಪಡೆದವನೂ (ಶೂದ್ರನಾಗುತ್ತಾನೆ.)

III ೧೭. ಶೂದ್ರನ ಹೆಣ್ಣನ್ನು ಶಯನಕ್ಕೊಯ್ಯುವ ಬ್ರಾಹ್ಮಣನು ಅಧೋಗತಿ ಹೊಂದುತ್ತಾನೆ. ಆಕೆಯಿಂದ ಮಗ ಹುಟ್ಟಿದರಂತೂ ಬ್ರಾಹ್ಮಣತ್ವವನ್ನೇ ಕಳೆದುಕೊಳ್ಳುತ್ತಾನೆ.

III ೧೮. ಶೂದ್ರ ಹೆಂಡತಿಯೊಡನೆ ಮಾಡಿದ ದೈವಕಾರ್ಯ, ಪಿತೃಕಾರ್ಯ ಮತ್ತು ಅತಿಥಿ ಸತ್ಕಾರಗಳನ್ನು ದೇವ ಪಿತೃಗಳು ಸ್ವೀಕರಿಸುವುದಿಲ್ಲ. (ಅಂಥ ಕಾರ್ಯ ಮಾಡಿದವನು) ಸ್ವರ್ಗಕ್ಕೂ ಹೋಗುವುದಿಲ್ಲ.

III ೧೯. ಶೂದ್ರ ಹೆಣ್ಣಿನ ಅಧರರಸ ಸೇವಿಸಿದವನು, ಆಕೆಯ ನಿಶ್ವಾಸಕ್ಕೆ ತಾಕಿದವನು, ಆಕೆಯಿಂದ ಮಗುವನ್ನು ಪಡೆದವನಿಗೆ ಪರಿಹಾರವೇ ಇಲ್ಲ.

ಬ್ರಾಹ್ಮಣ ಧರ್ಮವು ಅಂತರ ವರ್ಣ ಮದುವೆಯನ್ನು ನಿಷೇಧಿಸಿದ್ದರಲ್ಲೂ ತೃಪ್ತಿ ಕಾಣಲಿಲ್ಲ. ಬ್ರಾಹ್ಮಣಧರ್ಮ ಇನ್ನೂ ಮುಂದೆ ಹೋಗಿ ಅಂತರ್ಭೋಜನವನ್ನೂ ನಿಷೇಧಿಸಿತು.

ಮನು ಆಹಾರದ ಮೇಲೆ ಕೆಲವು ನಿಷೇಧಗಳನ್ನು ಹೇರಿದ್ದಾನೆ. ಅದರಲ್ಲಿ ಕೆಲವು ಆರೋಗ್ಯಕ್ಕೆ ಸಂಬಂಧಪಟ್ಟವು. ಇನ್ನು ಕೆಲವು ಸಾಮಾಜಿಕ ನಿಷೇಧಗಳ ಪೈಕಿ ಈ ಕೆಳಗಿನವು ಗಮನಾರ್ಹವಾಗಿವೆ:

IV ೧೨೮. ರಾಜಾನ್ನವು ತೇಜಸ್ಸನ್ನೂ, ಶೂದ್ರಾನ್ನವು ಬ್ರಹ್ಮವರ್ಚಸ್ಸನ್ನು, ಅಕ್ಕಸಾಲಿಗರ ಅನ್ನ ಆಯಸ್ಸನ್ನು ಮತ್ತು ಚರ್ಮಕಾರರ ಅನ್ನ ಕೀರ್ತಿಯನ್ನು ಕುಂದಿಸುತ್ತದೆ.

IV ೧೨೯. ಅಡಿಗೆಯವರು ಮತ್ತಿತರ ಕರ್ಮಚಾರಿಗಳ ಅನ್ನ ಸಂತತಿಯನ್ನೂ ಹಾಗೂ ಅಗಸನ ಅನ್ನ ಬಲವನ್ನೂ ಕುಂದಿಸುತ್ತದೆ.

IV ೨೨೧. ತಿನ್ನಬಾರದೆಂದು ಈ ಹಿಂದೆ ಹೇಳಲಾದ ಎಲ್ಲ ಅನ್ನವೂ ಚರ್ಮ, ಎಲುಬು ಮತ್ತು ರೋಮಗಳಿಗೆ ಸಮಾನವೆಂದು ಹೇಳುತ್ತಾರೆ.

IV ೨೨. ಹಿಂದೆ ಹೇಳಿದ ನಿಷಿದ್ಧ ಅನ್ನವನ್ನು ತಿಳಿಯದೆ ತಿಂದರೆ ಮೂರು ದಿನಗಳ ಉಪವಾಸ ಮಾಡಬೇಕು. ತಿಳಿಯದೇ ತಿಂದರೆ ರೇತಸ್ಸು, ಮೂತ್ರ ಸೇವಿಸಿದಂತೆ ತಿಳಿದು ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕು.

ಅಂತರ್ವಿವಾಹ ಮತ್ತು ಅಂತರ್ಭೋಜನವನ್ನು ನಿಷೇಧಿಸುವ ಕೆಲಸದಲ್ಲಿ ಬ್ರಾಹ್ಮಣಧರ್ಮವು ಕೆರಳಿದ ಪಶುವಿನ ವ್ಯಗ್ರತೆಯಿಂದ ಮುಂದಾಯಿತೆಂದು ಹೇಳಿದೆ. ಯಾರಿಗಾದರೂ ಅನುಮಾನವಿದ್ದರೆ ಅಂಥವರು ಮನುವಿನ ಭಾಷೆಯನ್ನು ಅವಲೋಕಿಸಲಿ.

ಮನು ಶೂದ್ರ ಹೆಣ್ಣಿನ ಬಗ್ಗೆ ತೋರುವ ಜಿಗುಪ್ಸೆಯನ್ನು ಗಮನಿಸಿ.

ಮನು ಶೂದ್ರಾನ್ನದ ಬಗ್ಗೆ ಹೇಳುವುದನ್ನು ಗಮನಿಸಿ. ಅದು ವೀರ್ಯ ಅಥವಾ ಮೂತ್ರದಷ್ಟೇ ಮಲಿನ ಎನ್ನುತ್ತಾನವನು.

ಇವೆರಡು ನಿಯಮಗಳೇ ಜಾತಿ ವ್ಯವಸ್ಥೆಯನ್ನು ಸೃಷ್ಟಿಸಿವೆ. ಅಂತರ್ವಿವಾಹದ ನಿಷೇಧ ಮತ್ತು ಅಂತರ್ಭೋಜನದ ನಿಷೇಧ ಇವೆರಡೇ ಆಧಾರಸ್ತಂಭಗಳು. ಜಾತಿ ಪದ್ಧತಿ ಮತ್ತು ಅಂತರ್ವಿವಾಹ, ಅಂತರ್ಭೋಜನ ಕುರಿತ ನಿಯಮಗಳಿಗಿರುವ ಸಂಬಂಧವು ಗುರಿ ಮತ್ತು ದಾರಿಗಿರುವ ಸಂಬಂಧ. ಹಾಗೆ ನೋಡಿದರೆ ಈ ವಿಧಾನದ ಹೊರತು ಬೇರಾವುದರಿಂದಲೂ ಈ ಗುರಿ ಸಾಧ್ಯವಿರಲಿಲ್ಲ.

ಜಾತಿವ್ಯವಸ್ಥೆಯ ಸೃಷ್ಟಿಯೇ ಬ್ರಾಹ್ಮಣ ಧರ್ಮದ ಅಂತಿಮ ಧ್ಯೇಯವಾಗಿತ್ತೆಂಬುದು ಈ ವಿಧಾನಗಳ ಬಳಕೆಯಿಂದಲೇ ಗೊತ್ತಾಗುತ್ತದೆ. ಬ್ರಾಹ್ಮಣ ಧರ್ಮವು ಅಂತರ್ವಿವಾಹ ಮತ್ತು ಅಂತರ್ಭೋಜನಗಳ ವಿರುದ್ಧ ನಿಷೇಧ ಹೇರಿತು. ಆದರೆ ಬ್ರಾಹ್ಮಣಧರ್ಮವು ಸಮಾಜ ವ್ಯವಸ್ಥೆಯಲ್ಲಿ ಇನ್ನು ಕೆಲವು ಬದಲಾವಣೆಗಳನ್ನೂ ಜಾರಿಗೊಳಿಸಿತು. ಈ ಬದಲಾವಣೆಗಳ ಉದ್ದೇಶ ನಾನು ಹೇಳುವಂಥದ್ದಾಗಿದ್ದರೆ, ಬ್ರಾಹ್ಮಣಧರ್ಮವು ತನ್ನ ವಿಧಾನ ಸರಿಯೋ ತಪ್ಪೋ, ನೈತಿಕವೋ ಅನೈತಿಕವೋ ತಲೆ ಕೆಡಿಸಿಕೊಳ್ಳದೆ ಜಾತಿ ವ್ಯವಸ್ಥೆಯನ್ನು ಉಳಿಸಿ ಕೊಳ್ಳುವುದರಲ್ಲೇ ಮಗ್ನವಾಗಿತ್ತೆಂದು ಒಪ್ಪಿಕೊಳ್ಳಬೇಕಾಗುತ್ತದೆ. ನಾನು ಮನು ಸಂಹಿತೆಯಲ್ಲಿ ಅಡಕವಾದ, ಬಾಲಿಕಾ ವಿವಾಹ ಮತ್ತು ವಿಧವೆಯರ ಬದುಕು ಕುರಿತ ಶಾಸನಗಳನ್ನು ಉಲ್ಲೇಖಿಸುತ್ತೇನೆ.

ಸ್ತ್ರೀಯರ ನಡುವೆ ಕುರಿತ ಮನು ಪ್ರಣೀತ ಶಾಸನವನ್ನು ನೋಡಿ.

IX ೪. ಸಕಾಲದಲ್ಲಿ ಮಗಳ ಮದುವೆ ಮಾಡದ ತಂದೆ ಅಪರಾಧಿಯೆನಿಸುತ್ತಾನೆ.

IX ೮೮. ಉತ್ಕೃಷ್ಟನಾದ ರೂಪವಂತನಾದ ಸ್ವಜಾತಿಯ ವರ ಸಿಕ್ಕುವಾಗ (ಹುಡುಗಿಯು) ಅಪ್ರಾಪ್ತ ವಯಸ್ಕಳಾದರೂ ಅವಳನ್ನು ಮದುವೆ ಮಾಡಿ ಕೊಡಬಹುದು.

ಈ ನಿಯಮದನ್ವಯ ಹುಡುಗಿಯು ಅಪ್ರಾಪ್ತ ವಯಸ್ಕಳಾದರೂ ಅಂದರೆ ಮಗುವಾಗಿದ್ದಾಗಲೂ ಮದುವೆ ಮಾಡಿಕೊಡಬಹುದೆಂದು ಮನು ವಿಧಿಸುತ್ತಾನೆ.

ಈಗ ವಿಧವೆಯರಿಗೆ ಸಂಬಂಧಪಟ್ಟಂತೆ ಮನು ಈ ಕೆಳಗಿನ ಶಾಸನ ವಿಧಿಸಿದ್ದಾನೆ.

V ೧೫೭. ಆಕೆಯು (ವಿಧವೆಯು) ಸ್ವ ಇಚ್ಛೆಯಿಂದ ಕೇವಲ ಫಲ, ಬೇರು ಮತ್ತು ಹಣ್ಣುಗಳಿಂದ ದೇಹವನ್ನು ಜೀರ್ಣಗೊಳಿಸಲಿ. ಆದರೆ ಪತಿ ತೀರಿದ ಮೇಲೆ ಪರಪುರುಷನ ಹೆಸರನ್ನು ಎತ್ತಕೂಡದು.

I ೧೬೧. ಸತ್ತ ಗಂಡಸನ್ನು ಮೀರಿ ಯಾರು ಸಂತಾನಾಪೇಕ್ಷೆಯಿಂದ ಪರ ಪುರುಷನನ್ನು ಸೇವಿಸುತ್ತಾಳೋ (ಮರುಮದುವೆಯಾಗುತ್ತಾಳೋ) ಅಂಥವಳು ನಿಂದೆಗೆ ಗುರಿಯಾಗುವುದಲ್ಲದೆ (ಸ್ವರ್ಗದ) ಪತಿಲೋಕದಿಂದಲೂ ಚ್ಯುತಿ ಹೊಂದುವಳು.

V ೧೬೨. ಅನ್ಯಸ್ತ್ರೀ ಸಂಜಾತ ಮಗುವು ಹೇಗೆ ಗಂಡಿನ ಸಂತಾನವೆನಿಸದೋ, ಹಾಗೆಯೇ ಗಂಡನಲ್ಲದೆ ಅನ್ಯ ಪುರುಷನಿಗೆ ಪಡೆದ ಮಗುವೂ (ವಿಧವೆ) ಸಂತಾನವೆನಿಸುವುದಿಲ್ಲ. ಸಾಧ್ವಿಯಾದವಳಿಗೆ ಎರಡನೇ ಗಂಡ ಸರ್ವಥಾ ಕೂಡದು.

ಬಲಾತ್ಕಾರ ವೈಧವ್ಯದ ನಿಯಮವಿದು. ಸತಿ ಅಥವಾ ಗಂಡನ ಚಿತೆಯೇರಿ ತನ್ನನ್ನೇ ದಹಿಸಿಕೊಳ್ಳುವ ಹೆಣ್ಣಿನ ಉಲ್ಲೇಖವನ್ನೂ ಮಾಡಬಹುದು. ಆದರೆ ಮನು ಅದರ ಬಗ್ಗೆ ಮೌನ ವಹಿಸಿದ್ದಾನೆ.

ಹೆಚ್ಚು ಕಮ್ಮಿ ಮನುವಿನಷ್ಟೇ ದೊಡ್ಡ ಮುನಿಯಾದ ಯಾಜ್ಞವಲ್ಕ್ಯ ಆಕೆ ಪ್ರತ್ಯೇಕವಾಗಿಯಾಗಲೀ ಏಕಾಂಗಿಯಾಗಿ ಆಗಲಿ ಇರಬಾರದು ಎನ್ನುತ್ತಾನೆ.[೧]

೮೬. ಗಂಡ ಸತ್ತಾಗ, ಆಕೆ ತಂದೆ, ತಾಯಿ, ಮಗ, ಸೋದರ, ಅತ್ತೆ ಅಥವಾ ಮಾವನಿಂದ ಬೇರ್ಪಟ್ಟು ಇರಬಾರದು. ಇಲ್ಲವಾದರೆ ಆಕೆ ನಿಂದಾರ್ಹಳಾಗುತ್ತಾಳೆ.

ಇಲ್ಲಿಯೂ ವಿಧೆಯಾದವಳು ಸತಿ ಹೋಗಬೇಕೆಂದು ಯಾಜ್ಞವಲ್ಕ್ಯ ಹೇಳುವುದಿಲ್ಲ. ಆದರೆ ಯಾಜ್ಞವಲ್ಕ್ಯ ಸ್ಮೃತಿಯ ವ್ಯಾಖ್ಯಾನ ಮಾಡಿರುವ ಮಿತಾಕ್ಷರದ ಗ್ರಂಥಕರ್ತನಾದ ವಿಜ್ಞಾನೇಶ್ವರನು ಮೇಲಿನ ಶ್ಲೋಕದ ಬಗ್ಗೆ ಈ ಕೆಳಗಿನಂತೆ ಹೇಳುತ್ತಾನೆ:

"ವಿಷ್ಣುಸ್ಮೃತಿಯ[೨] ಪ್ರಕಾರ, ಇದು ಬ್ರಹ್ಮಚರ್ಯ ಜೀವನಕ್ಕೆ ಪರ್ಯಾಯವಾದದ್ದು. ಗಂಡ ಸತ್ತ ಮೇಲೆ ಆಕೆ ಬ್ರಹ್ಮಚರ್ಯವನ್ನಾದರೂ ಪಾಲಿಸಬಹುದು ಅಥವಾ ಆತನ ಚಿತೆಯೇರಬಹುದು."

"ಚಿತೆಯೇರುವುದರಲ್ಲಿ ಮಹತ್ತರ ಪುಣ್ಯವಿದೆ" ಎಂದು ವಿಜ್ಞಾನೇಶ್ವರ[೩] ತನ್ನ ಅಭಿಪ್ರಾಯ ಹೇಳುತ್ತಾನೆ.

ಇದರಿಂದ ಸತಿ ನಿಯಮ ರೂಪುಗೊಂಡಿದ್ದು ಹೇಗೆಂಬುದನ್ನು ಸುಲಭವಾಗಿ ಹಾಗೂ ಸ್ಪಷ್ಟವಾಗಿ ತಿಳಿಯಬಹುದು. ಮನು ಶಾಸನದ ಪ್ರಕಾರ ವಿಧವೆ ಮರುವಿವಾಹ ಮಾಡಿಕೊಳ್ಳುವಂತಿರಲಿಲ್ಲ. ಆದರೆ ವಿಷ್ಣುಸ್ಮೃತಿಯ ಕಾಲದಿಂದ ಮನುವಿನ ಈ ನಿಯಮಕ್ಕೆ ಇನ್ನೊಂದೇ ವ್ಯಾಖ್ಯಾನ ಹುಟ್ಟಿಕೊಂಡಿತೆಂದು

---

೧. 'ಯಾಜ್ಞವಲ್ಕ್ಯ ಸ್ಮೃತಿ'ಯ ಕಾಲ – ಕ್ರಿ.ಶ.೧೫೦–೨೦೦

೨. 'ವಿಷ್ಣುಸ್ಮೃತಿ', ೨೫.೧೪.

೩. ಆತ ಕ್ರಿ.ಶ. ೧೦೭೦–೧೧೦೦ರ ನಡುವೆ ಮಿತಾಕ್ಷರ ರಚಿಸಿದ.

ವಿಜ್ಞಾನೇಶ್ವರನ ಹೇಳಿಕೆಯಿಂದ ಕಂಡುಬರುತ್ತದೆ. ಹೊಸ ವ್ಯಾಖ್ಯಾನದ ಪ್ರಕಾರ ಮನುವಿನ ಶಾಸನವು ವಿಧವೆಯರಿಗೆ ೧. ನಿನ್ನ ಗಂಡನ ಚಿತೆಯೇರು, ೨. ಇಲ್ಲದಿದ್ದರೆ ಅವಿವಾಹಿತಳಾಗಿರು ಎಂಬ ಎರಡು ಆಯ್ಕೆಗಳನ್ನು ಕೊಟ್ಟಿತೆಂದು ವಿವರಿಸಲಾಯಿತು. ಇದು ಮನುವಿನ ಸ್ಪಷ್ಟ ಮಾತುಗಳ ಹಿನ್ನೆಲೆಯಲ್ಲಿ ತೀರಾ ಅನಗತ್ಯವಾದ ವ್ಯಾಖ್ಯಾನವೆಂದು ಹೇಳಬೇಕಾಗಿಯೇ ಇಲ್ಲ. ಅದು ಹೇಗೋ ಇದು ಕೂಡ ಸ್ವೀಕೃತವಾಗಿಬಿಟ್ಟಿತು. ವಿಷ್ಣುಸ್ಮೃತಿ ಸುಮಾರು ಮೂರು ಅಥವಾ ನಾಲ್ಕನೇ ಶತಮಾನಕ್ಕೆ ಸೇರಿದ್ದು. ಆದ್ದರಿಂದ ಸತಿ ನಿಯಮ ಈ ಕಾಲಾವಧಿಯಲ್ಲಿ ಹುಟ್ಟಿತೆಂದು ಹೇಳಬಹುದು.

ಇವು ಹೊಸ ನಿಯಮಗಳೆಂಬ ವಿಷಯವಂತೂ ನಿಶ್ಚಿತ. ಹುಡುಗಿಯ ಪ್ರಾಪ್ತ ವಯಸ್ಕಳಾಗುವ ಮೊದಲೇ ಮದುವೆ ಮಾಡಬೇಕೆಂಬ ಮನುವಿನ ನಿಯಮ ಹೊಸದು. ಬುದ್ಧಪೂರ್ವ ಬ್ರಾಹ್ಮಣ ಧರ್ಮದಲ್ಲಿ[೧] ಮದುವೆಗಳು ಹೆಣ್ಣು ಪ್ರಾಪ್ತ ವಯಸ್ಕಳಾದ ಮೇಲಷ್ಟೇ ಅಲ್ಲ, ಆಕೆ ಪ್ರೌಢಳಾದ ಮೇಲೇ ನಡೆಯುತ್ತಿದ್ದವು. ಇದಕ್ಕೆ ಬೇಕಾದಷ್ಟು ಸಾಕ್ಷ್ಯಾಧಾರವಿದೆ. ಇದೇ ರೀತಿ ಗಂಡನನ್ನು ಕಳೆದುಕೊಂಡ ಹೆಂಗಸು ಮರು ಮದುವೆಯಾಗಬಾರದೆಂಬುದೂ ಹೊಸ ನಿಯಮವೇ. ಬುದ್ಧಪೂರ್ವ ಬ್ರಾಹ್ಮಣ ಧರ್ಮದಲ್ಲಿ ವಿಧವಾ ವಿವಾಹದ ಮೇಲೆ ನಿಷೇಧವಿರಲೇ ಇಲ್ಲ. ಸಂಸ್ಕೃತ ಭಾಷೆಯಲ್ಲಿ ಪುನರ್ಭೂ (ಎರಡನೇ ಮದುವೆಯಾದ ಹೆಂಗಸು) ಮತ್ತು ಪುನರ್ಭವ (ಎರಡನೇ ಗಂಡ) ಎಂಬ ಶಬ್ದಗಳಿರುವುದೇ ಬುದ್ಧಪೂರ್ವ ಬ್ರಾಹ್ಮಣ ಧರ್ಮದಲ್ಲಿ ಅಂಥ ಮದುವೆಗಳು ಸಾಮಾನ್ಯವಾಗಿದ್ದವೆಂಬುದಕ್ಕೆ ಸಾಕ್ಷಿ.[೨] ಇನ್ನು ಸತಿ ಪದ್ಧತಿ ಯಾವಾಗ ಹುಟ್ಟಿಕೊಂಡಿತೆಂಬುದಕ್ಕೆ ಬಂದರೆ ಅದು ಪುರಾತನ ಕಾಲದಿಂದಲೂ ಪ್ರಚಲಿತವಿತ್ತೆನ್ನಲು ಸಾಕ್ಷ್ಯಾಧಾರಗಳಿವೆ[೩]. ಆದರೆ ಅದು ಒಂದು ಕಾಲದಲ್ಲಿ ನಶಿಸಿಹೋಗಿ ಮತ್ತೆ ಬೌದ್ಧಧರ್ಮದ ಮೇಲೆ ಪುಷ್ಯಮಿತ್ರನ ನೇತೃತ್ವದಲ್ಲಿ ಬ್ರಾಹ್ಮಣ ಧರ್ಮ ಜಯಗಳಿಸಿದ ಮೇಲೆ ಪುನರುಜ್ಜೀವನಗೊಂಡಿತೆನ್ನಲು ಆಧಾರಗಳಿವೆ. ಮನುವಿನ ನಂತರದ ಬೆಳವಣಿಗೆಯಿದು.

ಇಲ್ಲಿ ವಿಜೇತ ಬ್ರಾಹ್ಮಣಧರ್ಮ ಈ ಬದಲಾವಣೆಗಳನ್ನು ಮಾಡಿದ್ದಾದರೂ ಏಕೆ ಎಂಬುದೇ ಪ್ರಶ್ನೆ. ಹುಡುಗಿಯರು ಪ್ರಾಪ್ತ ವಯಸ್ಕರಾಗುವ ಮೊದಲೇ ಮದುವೆ ಮಾಡಿ, ವಿಧವೆಯರ ಮರು ವಿವಾಹದ ಹಕ್ಕನ್ನು ನಿರಾಕರಿಸಿ ಸತ್ತ ಗಂಡನ ಚಿತೆಯೇರಿ ಆತ್ಮಾಹುತಿ ಮಾಡಿಕೊಳ್ಳುವಂತೆ ವಿಧಿಸುವ ಮೂಲಕ ಬ್ರಾಹ್ಮಣಧರ್ಮ ಏನು ಸಾಧಿಸಿತು? ಈ ಬದಲಾವಣೆಗಳಿಗೆ ಸಂಬಂಧಿಸಿ ಯಾವ ವಿವರಣೆಗಳೂ ಮುಂದೆ ಬರುತ್ತಿಲ್ಲ. ಬಾಲ್ಯವಿವಾಹಕ್ಕೆ ಒಂದು ವಿವರಣೆ ನೀಡುವ ಸಿ.ಟಿ. ವೈದ್ಯ ಬೌದ್ಧ ಸಂಘದ ಭಿಕ್ಷುಕಿಯರಾಗದಂತೆ ಹುಡುಗಿಯರನ್ನು ತಡೆಯಲು ಈ ಪದ್ಧತಿ ಜಾರಿಗೊಳಿಸಲಾಯಿತು ಅನ್ನುತ್ತಾರೆ.[೪] ಈ ಸಮಜಾಯಿಷಿಯಿಂದ ನನಗೆ ಸಮಾಧಾನವಾಗಿಲ್ಲ. ವೈದ್ಯ ಅವರು ಮದುವೆಯ ಸೂಕ್ತ ಪ್ರಾಯ ಕುರಿತ ಮನುವಿನ ಇನ್ನೊಂದು ನಿಯಮಗಳನ್ನು ಗಣನೆಗೆ ತೆಗೆದುಕೊಂಡಿಲ್ಲ. ಆ ನಿಯಮದ ಪ್ರಕಾರ–

IX ೯೪. ಮೂವತ್ತರ ಗಂಡು ತನಗೆ ಇಷ್ಟವಾದ ಹನ್ನೆರಡು ವರ್ಷದ ಹುಡುಗಿಯರನ್ನು ಮದುವೆಯಾಗಬೇಕು. ಇಪ್ಪತ್ತನಾಲ್ಕರ ಗಂಡು ಎಂಟು ವರ್ಷದವಳನ್ನು ವಿವಾಹವಾಗಬೇಕು.

---

೧. ಕಾಣೆಯವರ 'ಹಿಸ್ಟರಿ ಆಫ್ ಧರ್ಮಶಾಸ್ತ್ರ' ಸಂ. ೧. ಭಾಗ ೧ ನೋಡಿ.

೨. ಅದೇ. ಸಂ. ೨, ಭಾಗ ೨.

೩. ಕಾಣೆಯವರು ಲಭ್ಯ ಆಧಾರಗಳೆಲ್ಲವನ್ನೂ ಕಲೆ ಹಾಕಿದ್ದಾರೆ. 'ಹಿಸ್ಟರಿ ಆಫ್ ಧರ್ಮಶಾಸ್ತ್ರ', ಸಂಪುಟ ೨. ಭಾಗ ೧ ಪುಟ ೬೧೭–೬೩೬.

೪. 'ಹಿಸ್ಟರಿ ಆಫ್ ಇಂಡಿಯಾ' ಸಂ. ೨.

ಇಲ್ಲಿನ ಪ್ರಶ್ನೆ ಬಾಲಿಕಾ ವಿವಾಹ ಯಾಕೆ ಜಾರಿಯಾಯಿತೆಂಬುದಲ್ಲ. ಆದರೆ ವರ ಹಾಗೂ ವಧುವಿನ ವಯಸ್ಸಿನಲ್ಲಿ ಮನು ಯಾಕಷ್ಟು ಅಂತರವಿರಿಸಿದ ಎಂಬುದೇ ಪ್ರಶ್ನೆ.

ಕಾಣೆಯವರು[೧] ಸತಿ ಪದ್ಧತಿಗೊಂದು ವಿವರಣೆ ಕೊಟ್ಟಿದ್ದಾರೆ. ಆ ಪದ್ಧತಿ ಹೊಸದಲ್ಲ ಎಂಬುದೇ ಅವರ ವಿವರಣೆ. ಅದು ಜಗತ್ತಿನ ಇತರ ಭಾಗಗಳಂತೆಯೇ ಭಾರತದಲ್ಲೂ ಪ್ರಾಚೀನ ಕಾಲದಲ್ಲಿ ಅಸ್ತಿತ್ವದಲ್ಲಿತ್ತು. ಇದೂ ಕೂಡಾ ಸರ್ವಮಾನ್ಯ ವಿವರಣೆಯಲ್ಲ. ಅದು ಭಾರತದ ಹೊರಗೂ ಚಾಲ್ತಿಯಲ್ಲಿದ್ದಾಗ್ಯೂ ಭಾರತದಲ್ಲಿದ್ದಷ್ಟು ವ್ಯಾಪಕವಾಗಿ ಆಚರಣೆಯಲ್ಲಿರಲಿಲ್ಲ. ಎರಡನೆಯದಾಗಿ, ಪ್ರಾಚೀನ ಭಾರತದ ಕ್ಷತ್ರಿಯರಲ್ಲಿ ಆ ಆಚರಣೆಯ ಸುಳಿವುಗಳಿದ್ದರೆ ಅದನ್ನು ಪುನರುಜ್ಜೀವನಗೊಳಿಸಿದ್ದೇಕೆ? ಮತ್ತು ಅದನ್ನೇಕೆ ಸಾರ್ವತ್ರಿಕಗೊಳಿಸಲಿಲ್ಲ? ಇಲ್ಲಿಯೂ ಸಮಾಧಾರಕರ ವಿವರಣೆಯಿಲ್ಲ.

ಉತ್ತರಾಧಿಕಾರ ನಿಯಮಗಳನ್ನು ಉಲ್ಲೇಖಿಸಿ ಸತಿಯ ಅಸ್ತಿತ್ವವನ್ನು ವಿವರಿಸುವ ಕಾಣೆಯವರ ವಾದವಂತೂ ನನಗೆ ಸಮಂಜಸವಾಗಿ ಕಾಣುವುದಿಲ್ಲ. ಬಂಗಾಳದಲ್ಲಿದ್ದ ಹಿಂದೂ ಉತ್ತರಾಧಿಕಾರ ಕಾನೂನಿನಂತೆ ಹೆಂಗಸರಿಗೂ ಆಸ್ತಿಯಲ್ಲಿ ಪಾಲಿತ್ತು ಎಂದಿರಬಹುದು. ವಿಧವೆಯ ಗಂಡನ ಸಂಬಂಧಿಕರು ಆ ಆಸ್ತಿ ಪಾಲು ಕೊಡುವುದನ್ನು ತಪ್ಪಿಸಲೆಂದೇ ಆಕೆಗೆ ಸತಿ ಹೋಗಿಸುತ್ತಿದ್ದರು ಎಂಬುದು ಬಂಗಾಳದಲ್ಲಿನ ವ್ಯಾಪಕ ಆಚರಣೆಯನ್ನು ವಿವರಿಸಬಹುದು. ಆದರೆ ಆ ಪದ್ಧತಿ ಹುಟ್ಟಿದ್ದಾದರೂ ಹೇಗೆ ಮತ್ತು ಭಾರತದ ಇತರೆಡೆಗಳಲ್ಲಿ ಆಚರಣೆಗೆ ಬಂದಿದ್ದು ಹೇಗೆ ಅನ್ನುವುದನ್ನಂತೂ ಈ ವಾದ ವಿವರಿಸಲಾರದು.

ಇನ್ನು ವಿಧವಾ ವಿವಾಹ ನಿಷೇಧದ ಬಗ್ಗೆಯೂ ಯಾವುದೇ ವಿವರಣೆಗಳಿಲ್ಲ. ಸ್ಥಾಪಿತ ಪದ್ಧತಿಗೆ ವಿರುದ್ಧವಾಗಿ ವಿಧವೆಯ ಮರು ವಿವಾಹಕ್ಕೆ ನಿಷೇಧ ಬಂದಿದ್ದು ಹೇಗೆ? ಆಕೆ ದುಃಖಮಯ ಜೀವನವನ್ನೇ ಯಾಕೆ ನಡೆಸಬೇಕು? ಆಕೆಯನ್ನು ವಿರೂಪಗೊಳಿಸದ್ದೇಕೆ? ಬಾಲಿಕಾ ವಿವಾಹ, ಬಲವಂತದ ವೈಧವ್ಯ ಮತ್ತು ಸತಿ ಕುರಿತು ನನ್ನ ವಿವರಣೆ ಬೇರೆಯೇ ಇದೆ. ಅದರ ಮೌಲ್ಯವೇನೇ ಇರಲಿ, ಅದನ್ನಿಲ್ಲಿ ಕೊಡುತ್ತೇನೆ.[೨]

"ಆದ್ದರಿಂದ ಭಿನ್ನಗೋತ್ರ ವಿವಾಹದ ಜಾಗದಲ್ಲಿ ಸ್ವಗೋತ್ರವಿವಾಹವನ್ನು ಹೇರಿದ್ದು ಜಾತಿಯ ಸೃಷ್ಟಿಗೆ ಮೂಲ. ಆದರಿದು ಸುಲಭ ವ್ಯವಹಾರವಾಗಿರಲಿಲ್ಲ. ಜಾತಿಯಾಗ ಬಯಸುವ ಒಂದು ಕಲ್ಪಿತ ಗುಂಪಿನ ಉದಾಹರಣೆ ತೆಗೆದುಕೊಂಡು, ಅದು ಸ್ವಗೋತ್ರ ವಿವಾಹ ಗುಂಪಾಗಲು ಅನುಸರಿಸಬೇಕಾದ ವಿಧಾನಗಳನ್ನು ವಿಶ್ಲೇಷಿಸೋಣ. ಒಂದು ಗುಂಪು ಸ್ವಗೋತ್ರ ವಿವಾಹಗಳ ಪಂಗಡವಾಗಬೇಕಾದರೆ ಹೊರಗಿನ ಪಂಗಡಗಳೊಂದಿಗೆ ಅಂತರ ವಿವಾಹವಾಗಬಾರದೆಂದು ಔಪಚಾರಿಕ ಕಟ್ಟಳೆ ವಿಧಿಸಿದರೆ ಏನೂ ಪ್ರಯೋಜನವಾಗುವುದಿಲ್ಲ. ಅದರಲ್ಲೂ ಮುಂಚಿನಿಂದಲೂ ಅಂತರ ವಿವಾಹಗಳ ನಿಯಮವೇ ಇದ್ದರಂತೂ ಅದು ಸಾಧ್ಯವೇ ಇಲ್ಲ. ಇದಲ್ಲದೆ ನಿಕಟ ಸಂಪರ್ಕದಲ್ಲಿರುವ ಎಲ್ಲ ಪಂಗಡಗಳಲ್ಲಿಯೂ ಒಂದರೊಳಗೊಂದು ಬೆರೆತು ಏಕರೂಪ ಸಮಾಜವಾಗುವ ಪ್ರವೃತ್ತಿ ಇದ್ದೇ ಇರುತ್ತದೆ. ಜಾತಿ ಸೃಷ್ಟಿಗಾಗಿ ಈ ಪ್ರವೃತ್ತಿಯನ್ನು ಬಲವಾಗಿ ಎದುರಿಸಬೇಕಾದರೆ ಮದುವೆಗಳಿಗೆಯೇ ಒಂದು ಕಟ್ಟುಪಾಡಿನ ವರ್ತುಲ ಎಳೆಯಬೇಕಾದ ಅಗತ್ಯವಿರುತ್ತದೆ."

"ಅಷ್ಟಾದರೂ ಹೊರ ಮದುವೆಗಳನ್ನು ನಿಷೇಧಿಸುವ ಕಟ್ಟುಪಾಡಿನಿಂದ ಆ ಪಂಗಡದೊಳಗೇ ಸುಲಭ ಪರಿಹಾರವಿಲ್ಲದ ಸಮಸ್ಯೆಗಳು ಹುಟ್ಟಿಕೊಳ್ಳುತ್ತವೆ. ಸಾಮಾನ್ಯವಾಗಿ ಹೇಳುವುದಾದರೆ, ಯಾವುದೇ ಪಂಗಡದಲ್ಲಿ ಗಂಡು ಹೆಣ್ಣುಗಳ ಸಂಖ್ಯೆ ಹೆಚ್ಚುಕಮ್ಮಿ ಸರಿಸಮವಾಗಿರುತ್ತದೆ ಮತ್ತು ಒಂದೇ ವಯಸ್ಸಿನ

---

೧. 'ಹಿಸ್ಟರಿ ಆಫ್ ಧರ್ಮಶಾಸ್ತ್ರ.'

೨. ಇವು ೧೫೧೭ರಲ್ಲಿ 'ಇಂಡಿಯನ್ ಆಂಟಿಕ್ವರಿ'ಯಲ್ಲಿ ಪ್ರಕಟವಾದ ನನ್ನ 'ಕ್ಯಾಸ್ಟ್ಸ್ ಇನ್ ಇಂಡಿಯಾ' ಪ್ರಬಂಧದಲ್ಲಿದೆ.

ಗಂಡು ಹೆಣ್ಣುಗಳ ಸಂಖ್ಯೆಯೂ ನಿಜವಾಗಿ ಅಸ್ತಿತ್ವದಲ್ಲಿರುವುದಿಲ್ಲ. ಈ ಸಮಾನತೆಯಿಲ್ಲದೆ ಸ್ವಗೋತ್ರ ವಿವಾಹ ಸಾಧ್ಯವಾಗದಿರುವುದರಿಂದ ಜಾತಿಯಾಗ ಬಯಸುವ ಯಾವುದೇ ಪಂಗಡಕ್ಕೆ ಈ ಸಮಾನತೆಯೇ ಅಂತಿಮ ಧ್ಯೇಯವಾಗುತ್ತದೆ. ಬೇರೆ ಮಾತುಗಳಲ್ಲಿ ಹೇಳುವುದಾದರೆ ಸ್ವಗೋತ್ರವಿವಾಹ ಪದ್ಧತಿಯನ್ನು ಉಳಿಸಿಕೊಳ್ಳಬೇಕೆಂದರೆ ಪಂಗಡದೊಳಗಿನಿಂದಲೇ ವೈವಾಹಿಕ ಹಕ್ಕುಗಳನ್ನು ಒದಗಿಸಬೇಕಾಗುತ್ತದೆ. ಇಲ್ಲದಿದ್ದರೆ ಆ ಪಂಗಡದ ಸದಸ್ಯರು ತಮಗಿಷ್ಟ ಬಂದ ರೀತಿಯಲ್ಲಿ ವರ್ತಿಸಿ ಆ ಕಟ್ಟುಪಾಡಿನ ವರ್ತುಲದಿಂದ ಹೊರಹೋಗುತ್ತಾರೆ. ಪಂಗಡದೊಳಗಿನಿಂದಲೇ ವೈವಾಹಿಕ ಹಕ್ಕು ಒದಗಿಸಬೇಕಾದರೆ ಆ ಗುಂಪಿನ ವಿವಾಹ ಯೋಗ್ಯ ಗಂಡು ಹೆಣ್ಣುಗಳ ಘಟಕಗಳಲ್ಲಿ ಸಂಖ್ಯಾ ಸಮಾನತೆಯಿರುವಂತೆ ನೋಡಿಕೊಳ್ಳಬೇಕಾಗುತ್ತದೆ. ಈ ಸಮಾನತೆಯೊಂದರಿಂದಲೇ ಆ ಪಂಗಡದ ಸ್ವಗೋತ್ರ ವಿವಾಹ ನಿಯಮವನ್ನು ಕಾಯಲು ಸಾಧ್ಯ. ಮತ್ತು ಯಾವುದೇ ದೊಡ್ಡ ತಾರತಮ್ಯವು ಆ ಪಂಗಡವನ್ನು ಮುರಿಯುತ್ತದೆ."

"ಅಂದರೆ ಜಾತಿ ಸಮಸ್ಯೆಯು ಅಂತಿಮವಾಗಿ ಒಂದು ಪಂಗಡದ ವಿವಾಹ ಯೋಗ್ಯ ಗಂಡು ಹೆಣ್ಣು ಘಟಕಗಳ ಸಂಖ್ಯಾ ತಾರತಮ್ಯವನ್ನು ರಿಪೇರಿ ಮಾಡುವ ಸಮಸ್ಯೆ ಮಾತ್ರ. ದಂಪತಿಗಳಿಬ್ಬರೂ ಒಟ್ಟಿಗೆ ಸತ್ತಾಗ ಮಾತ್ರ ಗಂಡು ಹೆಣ್ಣು ಘಟಕಗಳ ಅತ್ಯಗತ್ಯ ಸಮಾನತೆಯಿರಲು ಸಾಧ್ಯ. ಆದರೆ ಹಾಗಾಗುವುದು ಅಪರೂಪ. ಗಂಡನೇ ಮೊದಲು ಸತ್ತು ಹೇಗಾದರೂ ವಿಲೇವಾರಿ ಮಾಡಬೇಕಾದ ಒಂದು ಹೆಚ್ಚುವರಿ ಹೆಣ್ಣನ್ನು ಬಿಟ್ಟುಹೋಗಬಹುದು, ಆಕೆ ಪಂಗಡದ ಸ್ವಗೋತ್ರ ನಿಯಮವನ್ನು ಉಲ್ಲಂಘಿಸಬಹುದು. ಅದೇ ರೀತಿ ಹೆಂಡತಿ ಸತ್ತ ಮೇಲೆ ಗಂಡ ಉಳಿದ ಪಂಗಡಕ್ಕೆ ಹೆಚ್ಚುವರಿ ಗಂಡಾಗಬಹುದು. ಆತನ ವಿಯೋಗದ ದುಃಖಕ್ಕೆ ಆ ಪಂಗಡ ಸಹಾನುಭೂತಿ ಸೂಚಿಸಿದರೂ ಆತನನ್ನು ವಿಲೇವಾರಿ ಮಾಡಲೇಬೇಕು. ಇಲ್ಲದಿದ್ದರೆ ಆತ ಜಾತಿಯ ಹೊರಗೆ ಮದುವೆಯಾಗಿ ಸ್ವಗೋತ್ರ ನಿಯಮವನ್ನು ಮುರಿಯುತ್ತಾನೆ. ಹೀಗಾಗಿ ಹೆಚ್ಚುವರಿ ಗಂಡು ಮತ್ತು ಹೆಚ್ಚುವರಿ ಹೆಣ್ಣುಗಳಿಗೆ ಅವರ ನಿಗದಿತ ವರ್ತುಲದೊಳಗೇ ಸೂಕ್ತ ಸಂಗಾತಿ ಹುಡುಕಿಕೊಡದಿದ್ದರೆ (ಇದೂ ಸಾಧ್ಯವಿಲ್ಲ, ಯಾಕೆಂದರೆ ಇಲ್ಲಿ ಕೇವಲ ಅಗತ್ಯ ಸಂಖ್ಯೆಯೂ ಜೋಡಿಗಳು ಮಾತ್ರ ಇವೆ), ಅವರು ಗಡಿ ದಾಟಿ ಹೊರಗೆ ಮದುವೆಯಾಗಿ ಪರಕೀಯವಾದ ಜನರನ್ನು ಆಮದು ಮಾಡುವುದರಿಂದ ಅವರು ಜಾತಿಗೆ ಕಂಟಕವಾಗುತ್ತಾರೆ. ಈ ಹೆಚ್ಚುವರಿ ಹೆಣ್ಣು ಗಂಡುಗಳ ವಿಷಯದಲ್ಲಿ ನಮ್ಮ ಕಲ್ಪನೆಯ ಪಂಗಡ ಏನು ಮಾಡಬಹುದೆಂದು ನೋಡೋಣ. ಮೊದಲು ಹೆಚ್ಚುವರಿ ಹೆಣ್ಣಿನ ನಿದರ್ಶನ ತೆಗೆದುಕೊಳ್ಳೋಣ. ಜಾತಿಯ ಸ್ವಗೋತ್ರನಿಯಮ ಕಾಪಾಡಲು ಆಕೆಯನ್ನು ಎರಡು ವಿಭಿನ್ನ ರೀತಿಗಳಲ್ಲಿ ವಿಲೇವಾರಿ ಮಾಡಬಹುದು."

"ಮೊದಲನೆಯದು, ಅವಳನ್ನು ಸತ್ತ ಗಂಡನ ಚಿತೆಯೇರಿಸಿ ಸುಟ್ಟುಹಾಕಿ ಕೈ ತೊಳೆದುಕೊಳ್ಳಿ. ಆದರೆ ಇದು ಲಿಂಗ ತಾರತಮ್ಯ ನಿವಾರಿಸಲು ಕಾರ್ಯ ಯೋಗ್ಯವಲ್ಲದ ವಿಧಾನ. ಕೆಲವು ಸಂದರ್ಭಗಳಲ್ಲಿ ನಡೆಯಬಹುದು. ಇನ್ನು ಕೆಲವು ಬಾರಿ ನಡೆಯುವುದಿಲ್ಲ. ಈ ವಿಧಾನ ಸುಲಭ ಪರಿಹಾರವಾದರೂ ಕಾರ್ಯಗತಗೊಳಿಸುವುದು ಕಷ್ಟವಾದ್ದರಿಂದ ಪ್ರತಿಯೊಬ್ಬ ಹೆಚ್ಚುವರಿ ಹೆಣ್ಣನ್ನು (ವಿಧವೆ) ವಿಲೇವಾರಿ ಮಾಡದಿದ್ದರೆ ಆಕೆ ಆ ಪಂಗಡದಲ್ಲೇ ಉಳಿಯುತ್ತಾಳೆ. ಅವಳ ಅಸ್ತಿತ್ವದಿಂದಲೇ ದ್ವಿಮುಖ ಅಪಾಯವಿದೆ. ಅವಳು ಜಾತಿಯ ಹೊರಗೆ ಮದುವೆಯಾಗಿ ಸ್ವಗೋತ್ರ ನಿಯಮವನ್ನು ಮುರಿಯಬಹುದು ಅಥವಾ ಜಾತಿಯೊಳಗೇ ಮದುವೆಯಾಗಿ ಪೈಪೋಟಿಯಿಂದ ಜಾತಿಯೊಳಗಿನ ಇತರೆ ವಧುಗಳ ಕಂಟಕಪ್ರಾಯಳೇ. ಆದ್ದರಿಂದ, ಸತ್ತ ಗಂಡನ ಜತೆ ಚಿತೆಯೇರದ ಪಕ್ಷದಲ್ಲಿ ಅವಳಿಗೆ ಏನಾದರೂ ಮಾಡಲೇಬೇಕಾಗುತ್ತದೆ."

"ಇಲ್ಲಿರುವ ಎರಡನೇ ಪರಿಹಾರವೆಂದರೆ ಅವಳಿಗೆ ಅಜೀವಪರ್ಯಂತ ವೈಧವ್ಯ ಹೇರುವುದಕ್ಕಿಂತ ಸುಡುವುದೇ ಉತ್ತಮತರ ಪರಿಹಾರ. ಸುಡುವಿಕೆಯು ಹೆಚ್ಚುವರಿ ಹೆಣ್ಣು ಸೃಷ್ಟಿಸುವ ಮೂರು ಕೆಡಕುಗಳನ್ನು ನಿವಾರಿಸಿಬಿಡುತ್ತದೆ. ಸತ್ತ ಮೇಲೆ ಜಾತಿಯ ಹೊರಗಾಗಲಿ ಒಳಗಾಗಲಿ ಆಕೆ ಮರು ಮದುವೆಯ ಸಮಸ್ಯೆಯನ್ನು

ಸೃಷ್ಟಿಸಲಾರಳು. ಆದರೆ ಕಡ್ಡಾಯ ವೈಧವ್ಯ ಹೆಚ್ಚು ಕಾರ್ಯಸಾಧ್ಯವಾದ್ದರಿಂದ ಸುಡುವುದಕ್ಕಿಂತ ಅದೇ ಶ್ರೇಷ್ಠತರವಾದದ್ದು. ಹೋಲಿಕೆಯಲ್ಲಿ ಹೆಚ್ಚು ಮಾನವೀಯವಾದ ಈ ಪದ್ಧತಿ ಸುಡುವ ವಿಧಾನದಂತೆಯೇ ಮರುಮದುವೆಯ ವಿರುದ್ಧ ರಕ್ಷಣೆ ಒದಗಿಸುತ್ತದೆ. ಆದರೆ ಇದು ಯಾವುದೇ ಪಂಗಡದ ನೈತಿಕತೆ ಸಂರಕ್ಷಿಸಲು ವಿಫಲವಾಗುತ್ತದೆ. ಕಡ್ಡಾಯ ವೈಧವ್ಯದಲ್ಲಿ ಹೆಣ್ಣು ಉಳಿಯುತ್ತಾಳೆ ಮತ್ತು ಭವಿಷ್ಯದಲ್ಲಿ ಇನ್ನೊಬ್ಬರ ಹೆಂಡತಿಯಾಗುವ ಸ್ವಾಭಾವಿಕ ಹಕ್ಕು ಇಲ್ಲವಾದ್ದರಿಂದಲೇ ದುರ್ನೀತಿಯ ನಡವಳಿಕೆಗೆ ಪ್ರಚೋದನೆಯಾಗುತ್ತಾಳೆ. ಆದರೆ ಇದು ಕೂಡ ಬಗೆಹರಿಸಲಾರದ ಸಮಸ್ಯೆಯೇನಲ್ಲ. ಆಕೆ ಆಕರ್ಷಣೆಯ ಕೇಂದ್ರವೇ ಆಗದ ಹಂತಕ್ಕೆ ಅವಳನ್ನು ಇಳಿಸಿಬಿಡಬಹುದು."

"ಜಾತಿಯಾಗ ಬಯಸುವ ಪಂಗಡದಲ್ಲಿ ಹೆಚ್ಚುವರಿ ಗಂಡಿನ (ವಿಧುರ) ಸಮಸ್ಯೆ ಹೆಚ್ಚುವರಿ ಹೆಣ್ಣಿನ ಸಮಸ್ಯೆಗಿಂತಲೂ ಹೆಚ್ಚು ಮಹತ್ವದ್ದು ಮತ್ತು ಹೆಚ್ಚು ಜಟಿಲವಾದದ್ದು. ಅನಾದಿಕಾಲದಿಂದಲೂ ಗಂಡಿಗೆ ಹೆಣ್ಣಿಗಿಂತ ಹೆಚ್ಚಿನ ಮನ್ನಣೆ ಸಿಕ್ಕಿದೆ. ಯಾವುದೇ ಪಂಗಡದಲ್ಲೂ ಆತನಿಗೇ ಪ್ರಧಾನ ಸ್ಥಾನಮಾನ ಮತ್ತು ಗಂಡು ಹೆಣ್ಣುಗಳ ಪೈಕಿ ಗಂಡಿಗೇ ಹೆಚ್ಚು ಪ್ರತಿಷ್ಠೆ. ಈ ಪರಂಪರಾಗತ ಹಿರಿಮೆಯ ಕಾರಣವಾಗಿಯೇ ಆತನ ಬಯಕೆಗಳನ್ನು ಯಾವಾಗಲೂ ಗಣನೆಗೆ ತೆಗೆದುಕೊಳ್ಳಲಾಗಿದೆ. ಇನ್ನೊಂದು ಕಡೆ ಹೆಣ್ಣು ಯಾವಾಗಲೂ ಧಾರ್ಮಿಕ, ಸಾಮಾಜಿಕ ಅಥವಾ ಆರ್ಥಿಕ ಅನ್ಯಾಯಗಳಿಗೆ ಬಲಿಯಾಗಿದ್ದಾಳೆ. ಕಟ್ಟಳೆ ರೂಪಿಸುವ ಗಂಡು ಬಹುಪಾಲು ತಾನೇ ಅವುಗಳಿಂದ ಹೊರತಾಗಿದ್ದಾನೆ. ಸ್ಥಿತಿ ಹೀಗಿರುವಾಗ ಒಂದು ಜಾತಿಯೊಳಗಿನ ಹೆಚ್ಚುವರಿ ಹೆಣ್ಣಿನಂತೆಯೇ ಹೆಚ್ಚುವರಿ ಗಂಡನ್ನು ನಡೆಸಿಕೊಳ್ಳಲು ಸಾಧ್ಯವಿಲ್ಲ."

"ಸತ್ತ ಹೆಂಡತಿಯೊಡನೆ ಅವನನ್ನು ಸುಡುವುದು ಎರಡು ರೀತಿಗಳಲ್ಲಿ ಕಂಟಕಪ್ರಾಯವಾದುದು. ಮೊದಲನೆಯದಾಗಿ, ಹಾಗೆ ಮಾಡಲೇ ಸಾಧ್ಯವಿಲ್ಲ. ಯಾಕೆಂದರೆ ಆತ ಗಂಡು. ಎರಡನೆಯದಾಗಿ, ಜಾತಿಗೆ ಒಬ್ಬ ಗಟ್ಟಿಮುಟ್ಟು ಆಳಿನ ನಷ್ಟವಾಗುತ್ತದೆ. ಆತನನ್ನು ಅನುಕೂಲಕರವಾಗಿ ವಿಲೇವಾರಿ ಮಾಡಲು ಎರಡೇ ಪರಿಹಾರಗಳು ಉಳಿಯುತ್ತವೆ. ಅನುಕೂಲಕರ ಎಂದು ಯಾಕೆ ಹೇಳುತ್ತೇವೆಂದರೆ ಆತ ಪಂಗಡಕ್ಕೊಂದು ಆಸ್ತಿ."

"ಆತ ಪಂಗಡಕ್ಕೆ ಮುಖ್ಯನಾದರೂ ಸ್ವಗೋತ್ರನಿಯಮ ಇನ್ನೂ ಮುಖ್ಯವಾದ್ದರಿಂದ ಯಾವುದೇ ಪರಿಹಾರವೂ ಇವೆರಡೂ ಗುರಿ ಸಾಧಿಸುವಂತಿರಬೇಕು. ಇಂಥ ಪರಿಸ್ಥಿತಿಗಳಲ್ಲಿ ವಿಧವೆಯ ಹಾಗೆಯೇ ಆತನೂ ಜೀವಮಾನವಿಡಿ ವಿಧುರನಾಗಬೇಕೆಂದು ಒತ್ತಾಯಿಸಬಹುದು ಅಥವಾ ಒಪ್ಪಿಸಬಹುದು. ಇದೇನೂ ಸಂಪೂರ್ಣ ಕಷ್ಟದ ಪರಿಹಾರವಲ್ಲ, ಯಾಕೆಂದರೆ ಕೆಲವರು ಒತ್ತಾಯವಿಲ್ಲದೆಯೇ ತಂತಾವೇ ಬ್ರಹ್ಮಚರ್ಯ ಅನುಸರಿಸುತ್ತಾರೆ. ಇನ್ನೂ ಕೆಲವರು ಇನ್ನೂ ಒಂದು ಹೆಜ್ಜೆ ಮುಂದಿಟ್ಟು ತಾವಾಗಿಯೇ ಈ ಜಗತ್ತು ಮತ್ತು ಅದರ ಸುಖಸಂತೋಷಗಳನ್ನು ತ್ಯಾಗ ಮಾಡಲೂಬಹುದು. ಇನ್ನೊಂದು ಕಡೆ, ಆತ ಪಂಗಡದಲ್ಲೇ ಉಳಿದು ಅದರ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದರೆ, ಹೀಗಾಗುವುದೇ ಹೆಚ್ಚು ಸಾಮಾನ್ಯ – ಆತ ಆ ಪಂಗಡದ ನೈತಿಕತೆಗೆ ಅಪಾಯ ಒಡ್ಡುತ್ತಾನೆ. ಇನ್ನೊಂದು ದೃಷ್ಟಿಕೋನದಿಂದ ನೋಡಿದರೆ, ಯಶಸ್ವಿಯಾಗುವ ಕೆಲವು ಸಂದರ್ಭಗಳಲ್ಲಿ ಬ್ರಹ್ಮಚರ್ಯವೇ ಸುಲಭವಾದರೂ, ಜಾತಿಯ ಐಹಿಕ ಭವಿಷ್ಯದ ದೃಷ್ಟಿಯಿಂದ ಅಷ್ಟೇನೂ ಅನುಕೂಲಕರವಲ್ಲ. ಆತ ನಿಜವಾಗಿಯೂ ಬ್ರಹ್ಮಚರ್ಯವನ್ನು ಪಾಲಿಸಿ ಸರ್ವಸಂಗ ಪರಿತ್ಯಾಗ ಮಾಡಿದಲ್ಲಿ ಜಾತಿ ಚೌಕಟ್ಟಿನ ಸಂರಕ್ಷಣೆಗಾಗಲೀ, ಜಾತಿ ನೈತಿಕತೆಗಾಗಲೀ ಕಂಟಕವಾಗಲಾರ ಅನ್ನುವುದರಲ್ಲಿ ಸಂದೇಹವಿಲ್ಲ. ಆದರೆ ಜಾತಿಯ ಐಹಿಕ ಸುವ್ಯವಸ್ಥೆಯ ದೃಷ್ಟಿಯಿಂದ ನೈಷ್ಠಿಕ ಬ್ರಹ್ಮಚಾರಿಯಾಗಿರುವುದು, ಸುಟ್ಟುಹೋಗುವುದು ಎರಡೂ ಒಂದೇ. ಚೈತನ್ಯಶೀಲ ಸಮುದಾಯ ಬದುಕನ್ನು ಕಲ್ಪಿಸುವಷ್ಟು ವಿಶಾಲವಾಗಿರಬೇಕಾದ ಯಾವುದೇ ಜಾತಿಗೆ ತಕ್ಕಷ್ಟು ಸಂಖ್ಯಾ ಬಲವಿರಬೇಕಾಗುತ್ತದೆ. ಆದರೆ

ಬ್ರಹ್ಮಚರ್ಯವನ್ನು ಘೋಷಿಸಿ ಇದನ್ನು ಸಾಧಿಸಬೇಕೆಂದು ಬಯಸುವುದೆಂದರೆ ಊನಗೊಂಡ ಅಂಗವನ್ನು ರಕ್ತಸ್ರಾವದಿಂದ ಗುಣಪಡಿಸಲು ಯತ್ನಿಸಿದಂತೆಯೇ ಆಗುತ್ತದೆ."

"ಆದ್ದರಿಂದ ಪಂಗಡದಲ್ಲಿನ ಹೆಚ್ಚುವರಿ ಗಂಡಿನ ಮೇಲೆ ಬ್ರಹ್ಮಚರ್ಯ ಹೇರುವುದು ಸೈದ್ಧಾಂತಿಕವಾಗಿಯೂ, ಕಾರ್ಯರೂಪದಲ್ಲೂ ವಿಫಲವಾಗುತ್ತದೆ. ಸಂಸ್ಕೃತ ಪರಿಭಾಷೆಯನ್ನು ಬಳಸುವುದಾದರೆ, ಆತನನ್ನು ಗೃಹಸ್ಥನಾಗಿ ಇಡುವುದೇ ಜಾತಿಯ ಹಿತಾಸಕ್ತಿಗೆ ಪೂರಕವಾದದ್ದು. ಮೊದಲಿಗೆ ಇದು ಸಾಧ್ಯವಾಗುವುದಿಲ್ಲ. ಸಂಪೂರ್ಣ ಮುಚ್ಚಿಕೊಂಡ ಜಾತಿಯೊಳಗೆ ಯಾವಾಗಲೂ ವಿವಾಹ ಯೋಗ್ಯ ಗಂಡುಗಳಷ್ಟೇ ಸಂಖ್ಯೆಯಲ್ಲಿ ವಿವಾಹ ಯೋಗ್ಯ ಹೆಣ್ಣುಗಳಿರುವುದರಿಂದ ಜಾತಿಯಲ್ಲಿ ಒಂದು ಗಂಡಿಗೆ ಒಂದೇ ಹೆಣ್ಣು ಎಂಬ ನಿಯಮವಿದ್ದು ಯಾರಿಗೂ ಎರಡು ಮದುವೆಗಳ ಅವಕಾಶವಿರುವುದಿಲ್ಲ. ಈ ಪರಿಸ್ಥಿತಿಯಲ್ಲಿ ಹೆಚ್ಚುವರಿ ಗಂಡನ್ನು ಪಂಗಡಕ್ಕೆ ಕಟ್ಟಿಹಾಕಬೇಕಾದರೆ ಆತನಿಗೆ ವಿವಾಹ ಯೋಗ್ಯರಲ್ಲದವರ ನಡುವಿನಿಂದಲೇ ಒಬ್ಬ ವಧುವನ್ನು ಆರಿಸಿ ಹೆಂಡತಿ ಮಾಡಿಕೊಡಬೇಕಾಗುತ್ತದೆ. ಹೆಚ್ಚುವರಿ ಗಂಡಿನ ಸಂದರ್ಭದಲ್ಲಿ ಇದೇ ನಿಶ್ಚಯವಾಗಿಯೂ ಅತ್ಯುತ್ತಮ ಪರಿಹಾರ. ಈ ಮೂಲಕ ಆತನನ್ನು ಜಾತಿಯೊಳಗೇ ಇರಿಸಬಹುದು. ಇದರಿಂದ ಸತತವಾಗಿ ಹೊರಹೋಗುವವರಿಂದ ಕ್ಷೀಣಿಸುವ ಸಂಖ್ಯೆಯನ್ನು ತಡೆಗಟ್ಟಿದಂತಾಗುವುದಲ್ಲದೆ ಸ್ವಗೋತ್ರ ನಿಯಮ ಮತ್ತು ನೈತಿಕತೆಗೂ ಉಳಿಯುತ್ತವೆ."

"ಈಗ ಗಂಡು ಹೆಣ್ಣುಗಳ ಸಂಖ್ಯಾ ತಾರತಮ್ಯವನ್ನು ಅನುಕೂಲಕರವಾಗಿ ತಡೆಗಟ್ಟಲು ನಾಲ್ಕು ವಿಧಾನಗಳಿರುವುದನ್ನು ನೋಡಬಹುದು: (೧) ಸತ್ತ ಗಂಡನೊಡನೆ ವಿಧವೆಯನ್ನು ಸುಡುವುದು, (೨) ಕಡ್ಡಾಯ ವೈಧವ್ಯ–ಇದೂ ಸುಡುವುದರ ಮೃದುರೂಪವೇ, (೩) ವಿಧುರನಿಗೆ ಬ್ರಹ್ಮಚರ್ಯ ವಿಧಿಸುವುದು ಮತ್ತು (೪) ಆತನನ್ನು ಇನ್ನೂ ವಿವಾಹ ಯೋಗ್ಯಳಾಗಿರದ ಹುಡುಗಿಯೊಂದಿಗೆ ಮದುವೆ ಮಾಡುವುದು. ನಾನು ಮೊದಲೇ ಹೇಳಿದ ಹಾಗೆ ವಿಧವೆಯನ್ನು ಸುಡುವುದು ಮತ್ತು ವಿಧುರನಿಗೆ ಬ್ರಹ್ಮಚರ್ಯ ವಿಧಿಸುವುದರ ಉಪಯುಕ್ತತೆ ಶಂಕಾಸ್ಪದವಾದರೂ, ಇವೆಲ್ಲವೂ ಪಂಗಡದ ಸ್ವಗೋತ್ರ ನಿಯಮವನ್ನು ಕಾಯುವ ಸಾಧನಗಳಾಗಿ ಕೆಲಸ ಮಾಡುತ್ತವೆ. ಈ ಸಾಧನಗಳನ್ನು ಬಳಸತೊಡಗಿದಾಗ ಇವು ಒಂದು ಗುರಿಯನ್ನು ಸೃಷ್ಟಿಸುತ್ತವೆ. ಅಂದ ಮೇಲೆ ಈ ಸಾಧನಗಳ ಗುರಿಯೇನು? ಇವೆಲ್ಲವೂ ಸ್ವಗೋತ್ರ ಪದ್ಧತಿಯನ್ನು ಸೃಷ್ಟಿಸಿ ಮುಂದುವರೆಸುತ್ತವೆ ಮತ್ತು ಜಾತಿಯ ವಿವಿಧ ವ್ಯಾಖ್ಯಾನಗಳನ್ನು ನಾವು ವಿಶ್ಲೇಷಿಸಿರುವಂತೆ ಜಾತಿ ಹಾಗೂ ಸ್ವಗೋತ್ರ ಪದ್ಧತಿಗಳೆರಡೂ ಒಂದೇ. ಆದ್ದರಿಂದ ಈ ಸಾಧನೆಗಳಿವೆ ಎಂಬುದರ ಅರ್ಥವೇ ಜಾತಿ ಮತ್ತು ಜಾತಿಗೆ ಈ ಸಾಧನಗಳು ಬೇಕು."

"ಇದು ನನ್ನ ಅಭಿಪ್ರಾಯದಲ್ಲಿ ಜಾತಿಗಳ ವ್ಯವಸ್ಥೆಯಲ್ಲಿ ಒಂದು ಜಾತಿಯ ಕಾರ್ಯವಿಧಾನ. ಈಗ ನಾವು ಹಿಂದೂ ಸಮಾಜದೊಳಗಿನ ಜಾತಿಗಳತ್ತ ಗಮನ ಹರಿಸಿ ಅವುಗಳ ಕಾರ್ಯವಿಧಾನಗಳನ್ನು ವಿಶ್ಲೇಷಿಸೋಣ. ಗತಕಾಲವನ್ನು ಶೋಧಿಸುವವರಿಗೆ ಅನೇಕ ಬೃಹತ್ ಅಡಚಣೆಗಳಿವೆಯೆಂಬುದನ್ನು ನಾನು ಹೇಳಬೇಕಾಗಿಯೇ ಇಲ್ಲ ಮತ್ತು ಭಾರತದ ಜಾತಿಯಂತೂ ಅತ್ಯಂತ ಪುರಾತನ ವ್ಯವಸ್ಥೆ. ಅದರಲ್ಲೂ ಅಧಿಕೃತವಾದ ಅಥವಾ ಲಿಖಿತ ಚರಿತ್ರೆ ಅಥವಾ ದಾಖಲೆಯಿಲ್ಲದ ಕಡೆ ಅಥವಾ ಹಿಂದೂಗಳಲ್ಲಿಯಂತೆ ಈ ಜಗತ್ತು ಮಾಯೆಯಾದ್ದರಿಂದ ಚರಿತ್ರೆ ಬರೆಯುವುದೇ ಅಪರಾಧ ಎನ್ನುವಂತಾದ ಕಡೆ ಈ ಮಾತು ಇನ್ನೂ ಸತ್ಯ. ಆದರೆ ಇಂಥ ಸಂಸ್ಥೆಗಳು ಬಹುತೇಕ ಸಂದರ್ಭಗಳಲ್ಲಿ ಪಳಿಯುಳಿಕೆಗಳಂತೆ ತಮ್ಮ ಚರಿತ್ರೆಯನ್ನು ತಾವೇ ಹೇಳುತ್ತವೆ. ಇದು ನಿಜವಾದರೆ ಹೆಚ್ಚುವರಿ ಗಂಡು ಮತ್ತು ಹೆಚ್ಚುವರಿ ಹೆಣ್ಣಿನ ಸಮಸ್ಯೆಯನ್ನು ಎದುರಿಸಲು ಹಿಂದೂಗಳು ಕಂಡುಕೊಂಡ ಪರಿಹಾರವನ್ನು ಅವಲೋಕಿಸುವ ನಮ್ಮ ಪ್ರಯತ್ನ ಸಫಲ ವಾಗುತ್ತದೆ."

"ಹಿಂದೂ ಸಮಾಜದ ಸಾಮಾನ್ಯ ಕಾರ್ಯವಿಧಾನವು ಸಂಕೀರ್ಣವಾದುದಾದರೂ, ಅದು ಸ್ಥೂಲ ವೀಕ್ಷಕನಿಗೂ ಮೂರು ವಿಶಿಷ್ಟ ಭಾರ್ಯಸಕ್ತ ಪದ್ಧತಿಗಳನ್ನು ತೋರ್ಪಡಿಸುತ್ತದೆ. ಅವೆಂದರೆ:

(i) ಸತಿ ಅಥವಾ ಸತ್ತ ಗಂಡನ ಚಿತೆಯ ಮೇಲೆ ವಿಧವೆಯನ್ನು ಸುಡುವ ಪದ್ಧತಿ.

(ii) ವಿಧವೆಗೆ ಮರುಮದುವೆಯಾಗಲು ಬಿಡದ ಕಡ್ಡಾಯ ವೈಧವ್ಯ.

(iii) ಬಾಲಿಕಾ ವಿವಾಹ.

ಇವುಗಳ ಜೊತೆಗೆ, ವಿಧುರರಿಗೆ ಸಾಮಾನ್ಯವಾದ ಸನ್ಯಾಸದ ಹಂಬಲವನ್ನು ಗಮನಿಸಬಹುದು. (ಅದು ಕೆಲ ಸಂದರ್ಭಗಳಲ್ಲಿ ಕೇವಲ ಮನಃಸ್ಥಿತಿಯ ಕಾರಣವಾಗಿಯೂ ಇರಬಹುದು).

"ನನಗೆ ತಿಳಿದಮಟ್ಟಿಗೆ ಈವತ್ತಿಗೂ ಈ ಪದ್ಧತಿಗಳನ್ನು ಕುರಿತಂಥ ವೈಜ್ಞಾನಿಕ ವಿವರಣೆ ಸಿಕ್ಕುವುದಿಲ್ಲ. ಈ ಪದ್ಧತಿಗಳು ಹೇಗೆ ಗೌರವಾನ್ವಿತವಾದುವೆನ್ನಲು ಬೇಕಾದಷ್ಟು ತಾತ್ವಿಕ ಜಿಜ್ಞಾಸೆ ಮಾತ್ರ ಲಭ್ಯವಿದೆ. (ಎ.ಕೆ. ಕುಮಾರಸ್ವಾಮಿಯವರ – "ಸತಿ: ಎ ಡಿಫೆನ್ಸ್ ಆಫ್ ದಿ ಈಸ್ಟರ್ನ್ ವುಮನ್", ನೋಡಿ ಬ್ರಿಟಿಷ್ ಸೋಷಿಯಲಾಜಿಕಲ್ ರಿವ್ಯೂ, ಸಂ.೬, ೧೯೧೩) ಅದು ಗಂಡ ಹೆಂಡಿರ "ದೇಹ ಆತ್ಮಗಳ ಪರಿಪೂರ್ಣ ಐಕ್ಯದ ರುಜುವಾತು" ಮತ್ತು "ಗೋರಿಯಾಚೆಗೂ ದಾಟುವ ಭಕ್ತ" ಅದಕ್ಕೆ ಅದು ಉಮೆ ಸುವ್ಯಕ್ತಗೊಳಿಸುವ ಸತೀತ್ವದ ಆದರ್ಶದ ಪ್ರತೀಕ "ಪತಿ ಭಕ್ತಿಯೇ ಸತಿಯ ಗೌರವ, ಶಾಶ್ವತ ಸ್ವರ್ಗ, ಓ ಮಹದೇಶ್ವರ". ಉಮೆ ಮಾರ್ದವ ಆರ್ತತೆಯೊಂದಿಗೆ ಹೇಳುತ್ತಾಳೆ "ನನ್ನಲ್ಲಿ ನಿನಗೆ ತೃಪ್ತಿಯಿಲ್ಲದಿದ್ದರೆ ನನಗೆ ಆ ಸ್ವರ್ಗವೂ ಬೇಡ!" ಕಡ್ಡಾಯ ವೈಧವ್ಯವನ್ನು ಯಾಕಿಷ್ಟು ಗೌರವಿಸುತ್ತಾರೋ ನನಗಂತೂ ಗೊತ್ತಿಲ್ಲ. ಅಥವಾ ಅದರ ಗುಣಗಾನ ಮಾಡುವವರೂ ನನಗೆ ಸಿಕ್ಕಿಲ್ಲ. ಅಷ್ಟಾದರೂ ಅಸಂಖ್ಯಾತ ಜನ ಅದನ್ನು ಪಾಲಿಸುತ್ತಾರೆ. ಇನ್ನು ಬಾಲಿಕಾ ವಿವಾಹದ ಗುಣಗಾನವನ್ನು, ಡಾ. ಕೇಟ್ಕರ್ ಕೆಳಗಿನಂತೆ ವರದಿ ಮಾಡಿದ್ದಾರೆ: "ನಿಜವಾಗಿಯೂ ಶ್ರದ್ಧಾಳುವಾದ ಗಂಡು ಮತ್ತು ಹೆಣ್ಣು ತಾವು ಕೂಡಿದವರನ್ನು ಬಿಟ್ಟು ಬೇರಾವ ಹೆಣ್ಣು, ಗಂಡಿನಿಂದಲೂ ಆಕರ್ಷಿತರಾಗಕೂಡದು. ಈ ಶುದ್ಧಿ ಮದುವೆ ನಂತರವಷ್ಟೇ ಅಲ್ಲ, ಮದುವೆಗೆ ಮುಂಚೆಯೂ ಕಡ್ಡಾಯ. ಯಾಕೆಂದರೆ ಅದೇ ಶೀಲದ ಸಮಂಜಸ ಆದರ್ಶ. ತಾನು ಮದುವೆಯಾಗದ ಯಾವೊಬ್ಬ ಗಂಡನ್ನು ಪ್ರೀತಿಸುವ ಕನ್ಯೆಯೂ ಪರಿಶುದ್ಧಳೆಂದು ಹೇಳಲಾಗದು. ತಾನು ಯಾರನ್ನು ಮದುವೆಯಾಗವೆನೆಂದು ಆಕೆಗೆ ಗೊತ್ತಿಲ್ಲದಿರುವುದರಿಂದ ಆಕೆ ಮದುವೆಗೆ ಮುಂಚೆ ಯಾವ ಗಂಡಿನಲ್ಲೂ ಆಕರ್ಷಣೆಗೆ ಒಳಗಾಗಬಾರದು. ಆಕೆ ಹಾಗೆ ಮಾಡಿದರೆ ಅದು ಪಾಪ. ಆದ್ದರಿಂದ ಅವಳಲ್ಲಿ ಲೈಂಗಿಕ ಅರಿವು ಹುಟ್ಟುವ ಮೊದಲೇ ತಾನು ಯಾರನ್ನು ಪ್ರೀತಿಸಬೇಕೆಂದು ಹೆಣ್ಣಿಗೆ ತಿಳಿದಿರುವುದು ಒಳ್ಳೆಯದು." ಅದಕ್ಕೆ ಬಾಲಿಕಾ ವಿವಾಹದ ಪದ್ಧತಿ.

> "ಈ ಉನ್ನತ ಮತ್ತು ಚತುರ ಕುತರ್ಕವು ಈ ವ್ಯವಸ್ಥೆಗೆ ಯಾಕೆ ಗೌರವವಿತ್ತೆಂದು ಹೇಳುತ್ತವೆಯೇ ಹೊರತು ಈ ಪದ್ಧತಿಗಳು ಆಚರಣೆಗೆ ಬಂದುವೇಕೆಂದು ವಿವರಿಸುವುದಿಲ್ಲ. ನನ್ನ ವ್ಯಾಖ್ಯಾನವೆಂದರೆ, ಅವು ಆಚರಣೆಯಲ್ಲಿದ್ದುದರಿಂದಲೇ ಅವಕ್ಕೆ ಗೌರವ ಬಂದಿದ್ದು. ಹದಿನೆಂಟನೇ ಶತಮಾನದಲ್ಲಿ ರೂಪ ತಳೆದ ವ್ಯಕ್ತವಾದದ ಅಲ್ಪ ಪರಿಚಯವಿದ್ದವರೂ ನನ್ನ ಅಭಿಪ್ರಾಯವನ್ನು ಅನುಮೋದಿಸುತ್ತಾರೆ. ಯಾವಾಗಲೂ ಆಂದೋಳನಗಳೇ ಮುಖ್ಯ. ಕಾಲಾಂತರದಲ್ಲಿ ಆ ಆಂದೋಳನವನ್ನು ಸಮರ್ಥಿಸಿ, ನೈತಿಕ ಬೆಂಬಲ ಕೊಡಲೆಂದೇ ತತ್ವಜ್ಞಾನ ಹುಟ್ಟಿಕೊಳ್ಳುತ್ತದೆ. ಅದೇ ರೀತಿ ಈ ಪದ್ಧತಿಗಳ ಉಳಿವಿಗೆ ಸ್ತುತಿ ಪಾಠ ಬೇಕಿದ್ದ ಕಾರಣಕ್ಕಾಗಿಯೇ ಆ ಪದ್ಧತಿಗಳಿಗೆ ಇಂಥ ಸನ್ಮಾನ ಸಿಕ್ಕಿತೆಂದು ನಾನು ಬಲವಾಗಿ ಪ್ರತಿಪಾದಿಸುತ್ತೇನೆ. ಇವುಗಳು ಜಾತಿ ವ್ಯವಸ್ಥೆಯನ್ನು ಸೃಷ್ಟಿಸುವುದಕ್ಕಾಗಿಯೇ ಹುಟ್ಟಿಕೊಂಡವೆಂದೂ ಹೇಳಬಯಸುತ್ತೇನೆ ಮತ್ತು ಈ ಪದ್ಧತಿಗಳನ್ನು ಹಾಡಿ ಹೊಗಳುವ ತತ್ವಜ್ಞಾನ "ಮಾತ್ರೆಗೆ ಸ್ವರ್ಣಲೇಪ ಕೊಟ್ಟಂತೆ"

ಈ ಪದ್ಧತಿಗಳನ್ನು ಜನಪ್ರಿಯಗೊಳಿಸಲು ಹುಟ್ಟಿಕೊಂಡಿತು. ಅಮಾಯಕರ ತಿಳಿವಳಿಕೆಗೆ ಈ ಪದ್ಧತಿಗಳು ಆಘಾತಕರವಾಗಿ ಅಸಹ್ಯಕರವಾಗಿ ಕಾಣಿಸಿಕೊಂಡಿದ್ದರಿಂದಲೇ ಅವಕ್ಕೆ ಸಾಕಷ್ಟು ಸಕ್ಕರೆ ಲೇಪ ಅಗತ್ಯವಾಯಿತು. ಈ ಪದ್ಧತಿಗಳನ್ನು ಆದರ್ಶಗಳೆಂದು ಮುಂದೆ ಮಾಡಿದಾಗ್ಯೂ ಅವು ಕೇವಲ ಸಾಧನಗಳಾಗಿದ್ದವು. ಅಂದ ಮಾತ್ರಕ್ಕೆ ಸಾಕಷ್ಟು ಅವುಗಳಿಂದ ಹರಿದು ಬರುವ ಫಲಿತಾಂಶವನ್ನು ಅರ್ಥಮಾಡಿಕೊಳ್ಳದಂತೆ ನಾವು ಕುರುಡರಾಗಬೇಕಾದ್ದಿಲ್ಲ. ಸಾಧನಗಳ ಆದರ್ಶೀಕರಣ ಅಗತ್ಯವಾಗಿತ್ತೆಂದು ಈ ನಿರ್ದಿಷ್ಟ ಸಂದರ್ಭದಲ್ಲಿ ಅವುಗಳ ಪ್ರಭಾವ ಹೆಚ್ಚಿಸುವ ಉದ್ದೇಶದಿಂದ ಕೂಡಿತ್ತೆಂದು ಸುರಕ್ಷಿತವಾಗಿ ಹೇಳಬಹುದು. ಸಾಧನವನ್ನೇ ಗುರಿಯೆಂದು ಕರೆಯುವುದರಿಂದ ಅದು ನೈಜಸ್ವರೂಪವನ್ನು ಮರೆಮಾಚುತ್ತದೆಂಬುದರ ಹೊರತು ಏನೂ ಅಪಾಯವಿಲ್ಲ. ಅಂದ ಮಾತ್ರಕ್ಕೆ ಅದು ಕೇವಲ ಸಾಧನ ಎಂಬ ನಿಜ ರೂಪವೇನು ಬದಲಾಗುವುದಿಲ್ಲ. ನೀವು ಸಾಧನಗಳನ್ನೇ ಗುರಿ ಎಂದು ಕರೆಯುವಂತೆಯೇ ಎಲ್ಲ ಬೆಕ್ಕುಗಳೂ ನಾಯಿಗಳೆಂದು ಬೇಕಾದರೆ ಕಾನೂನು ಹೊರಡಿಸಬಹುದು. ಆದರೆ ಅದರಿಂದ ಹೇಗೆ ಬೆಕ್ಕುಗಳು ನಾಯಿಗಳಾಗುವುದಿಲ್ಲವೋ ಹಾಗೇ ಸಾಧನಗಳ ಸ್ವರೂಪವನ್ನೂ ಬದಲಿಸಲು ಸಾಧ್ಯವಿಲ್ಲ. ಆದ್ದರಿಂದ ಅವು ಸಾಧನಗಳೋ ಗುರಿಗಳೋ, ಅಂತೂ ಸತಿ, ಕಡ್ಡಾಯ ವೈಧವ್ಯ ಮತ್ತು ಬಾಲಿಕಾ ವಿವಾಹ ಪದ್ಧತಿಗಳೂ ಜಾತಿಯಲ್ಲಿ ಹೆಚ್ಚುವರಿ ಹೆಣ್ಣು ಗಂಡುಗಳ ಸಮಸ್ಯೆಯನ್ನು ಪರಿಹರಿಸಿ ಸ್ವಗೋತ್ರ ನಿಯಮ ಕಾಪಾಡುವ ಪ್ರಾಥಮಿಕ ಉದ್ದೇಶದವೆಂದು ಹೇಳುವುದು ಸಮರ್ಥನೀಯವಾಗುತ್ತದೆ. ಈ ಪದ್ಧತಿಗಳಿಲ್ಲದೆ ಕಟ್ಟುನಿಟ್ಟಾದ ಸ್ವಗೋತ್ರ ನಿಯಮ ಉಳಿಯುತ್ತಿರಲಿಲ್ಲ ಮತ್ತು ಸ್ವಗೋತ್ರ ನಿಯಮವಿಲ್ಲದ ಜಾತಿ ಖೋಟಾ ಆಗುತ್ತಿತ್ತು."

ನನ್ನ ದೃಷ್ಟಿಯಲ್ಲಿ ಬಾಲಿಕಾ ವಿವಾಹ, ಕಡ್ಡಾಯ ವೈಧವ್ಯ ಮತ್ತು ಸತಿ ಪದ್ಧತಿಗಳಿಗೆ ಬ್ರಾಹ್ಮಣ ಧರ್ಮವು ಅಂತರ ವಿವಾಹವನ್ನು ನಿಷೇಧಿಸುವ ಮುಲಕ ಸ್ಥಾಪಿಸ ಹೊರಟಿದ್ದ ಜಾತಿ ವ್ಯವಸ್ಥೆಗೆ ಬೆಂಬಲವಾಗುವ ಹೊರತು ಬೇರೇನೂ ಉದ್ದೇಶವಿರಲಿಲ್ಲ. ಅಂತರ ವಿವಾಹವನ್ನು ನಿಲ್ಲಿಸುವುದು ಕಷ್ಟ. ಬೇರೆ ಬೇರೆ ಜಾತಿಗಳ ಸದಸ್ಯರು ಪ್ರೀತಿಯಿಂದಲೋ ಅಥವಾ ಅಗತ್ಯ ಹುಟ್ಟಿಯೋ ತಮ್ಮ ಜಾತಿಯಿಂದ ಹೊರಹೋಗಬಹುದು. ಅಂಥ ಅಗತ್ಯ ಹುಟ್ಟಿನಿಂದಲೇ ಬ್ರಾಹ್ಮಣ ಧರ್ಮವು ಈ ನಿಯಮಗಳನ್ನು ಮಾಡಿತು. ಬ್ರಾಹ್ಮಣ ಧರ್ಮದ ಈ ಹೊಸ ನಿಯಮಗಳಿಗೆ, ಇದು ನನ್ನ ವಿವರಣೆ. ಈ ವಿವರಣೆ ಎಲ್ಲರಿಗೂ ಸ್ವೀಕಾರಾರ್ಹವಲ್ಲದಿರಬಹುದು. ಆದರೆ ವಿವಿಧ ವರ್ಗಗಳ ನಡುವೆ ನಡೆಯುತ್ತಿದ್ದ ಅಂತರ ವಿವಾಹಗಳನ್ನು ತಪ್ಪಿಸಲು ಬ್ರಾಹ್ಮಣ ಧರ್ಮ ಸಾಧ್ಯವಿದ್ದ ಎಲ್ಲ ಸಾಧನಗಳನ್ನೂ ಬಳಸಿತೆಂಬುದರಲ್ಲಿ ಸಂದೇಹವಿರಲಾರದು.

ಬ್ರಾಹ್ಮಣ ಧರ್ಮದ ಈ ಬಯಕೆಗೆ ಇನ್ನೊಂದು ನಿದರ್ಶನವು ಮನು ರೂಪಿಸಿದ ಬಹಿಷ್ಕಾರ ನಿಯಮದಲ್ಲಿ ಸಿಕ್ಕುತ್ತದೆ.

ತನ್ನ ಜಾತಿಯಿಂದ ಬಹಿಷ್ಕೃತಗೊಂಡವನು 'ಪತಿತ' ಎಂದು ಮನು ಹೇಳುತ್ತಾನೆ.[೧] ಮನು ಪ್ರಕಾರ, ಪತಿತನನ್ನು ಸತ್ತವನಂತೆಯೇ ನಡೆಸಿಕೊಳ್ಳಬೇಕು. ಆತನ ಉತ್ತರಕ್ರಿಯೆಗಳನ್ನೂ ನಡೆಸಬೇಕೆಂದು ಹೇಳುವ ಮನು, ಪತಿತನ ಅಂತ್ಯ ಸಂಸ್ಕಾರದ ವಿಧಿ ವಿಧಾನಗಳನ್ನು ರೂಪಿಸಿದ್ದಾನೆ.

XI ೧೮೩. (ಸತ್ತವರಿಗೆ ಮಾಡುವಂತೆ) ಪತಿತನ ಉದಕ ಪಿಂಡ–ಕಾರ್ಯಗಳನ್ನು ಊರ ಹೊರಗೆ ಅಶುಭ ದಿನದ ಸಂಜೆ ವೇಳೆ ಬಾಂಧವರು, ಋತ್ವಿಕರು ಮತ್ತು ಗುರುಗಳ ಸನ್ನಿಧಿಯಲ್ಲಿ ಮಾಡಬೇಕು.

---

೧. ಪತಿತನೇ ಬೇರೆ ಅಸ್ಪೃಶ್ಯನೇ ಬೇರೆ. ಇದನ್ನು ನಂತರ ನೋಡೋಣ.

IX ೧೮೪. ಮರಣೋತ್ತರ ಕ್ರಿಯೆಯ ಹಾಗೆ ದಾಸಿಯು ಜಲಕುಂಭವನ್ನು ಮೆಟ್ಟಿ ನೀರು ಚೆಲ್ಲಬೇಕು. (ಪತಿತನ) ಪಿಂಡೋದಕಗಳು ಒಂದು ರಾತ್ರಿ ಒಂದು ಹಗಲು ಅಶೌಚ.

ಅಷ್ಟಾದರೂ ಪತಿತನು ಪ್ರಾಯಶ್ಚಿತ್ತರ ನಂತರ ಜಾತಿಗೆ ಮರಳಬಹುದು ಎಂದು ಮನು ಕೆಳಗಿನ ನಿಯಮಗಳನ್ನು ಮಾಡಿದ್ದಾನೆ.

XI ೧೮೭. ಪತಿತನು ಪ್ರಾಯಶ್ಚಿತ್ತ ಮಾಡಿದರೆ ಅವರು ಅವನನ್ನು ಪುಣ್ಯ ಜಲಾಶಯದಲ್ಲಿ ಸ್ನಾನ ಮಾಡಿಸಿ, ನೀರು ತುಂಬಿದ ಹೊಸ ಪೂರ್ಣ ಕುಂಭವನ್ನು ಬೀಳಿಸಬೇಕು.

XI ೧೮೮. ಆದರೆ ಆ ಘಟವನ್ನು ನೀರಿಗೆ ಬೀಳಿಸಿ ತನ್ನ ಭವನವನ್ನು ಪ್ರವೇಶಿಸಿ ಹಿಂದಿನಂತೆಯೇ ಜ್ಞಾತಿ ಕಾರ್ಯಗಳನ್ನು ಆಚರಿಸಬೇಕು.

XI ೧೮೯. ಪತಿತೆಯರ ವಿಷಯದಲ್ಲೂ ಇದೇ ವಿಧಿಗಳನ್ನು ಅನುಸರಿಸಬೇಕು. ಆದರೆ ಅವರಿಗೆ ವಸ್ತ್ರ, ಅನ್ನ, ಪಾನಗಳನ್ನು ನೀಡಿ ಮನೆಯ ಹತ್ತಿರ ಉಳಿಸಬೇಕು.

ಪತಿತರು ಅವಿಧೇಯರಾಗಿ ಪ್ರಾಯಶ್ಚಿತ್ತಕ್ಕೆ ತಯಾರಾಗದಿದ್ದರೆ ಮನು ಅವರಿಗೆ ಶಿಕ್ಷೆಯನ್ನೂ ವಿಧಿಸುತ್ತಾನೆ. ಅವರು ಕುಟುಂಬದ ಮನೆಯೊಳಗಿರಬಾರದು ಎನ್ನುತ್ತಾನೆ ಮನು. ಆತ ವಿಧಿಸುವ ಪ್ರಕಾರ:

XI ೧೮೯ .......ವಸ್ತ್ರ, ಅನ್ನ, ಪಾನಗಳನ್ನು ನೀಡಿ ಮನೆಯ ಹತ್ತಿರ ಉಳಿಸಬೇಕು.

III ೯೨. ನಾಯಿಗಳಿಗೆ, ಪತಿತರಿಗೆ, ಶ್ವಪಚರಿಗೆ, ಪಾಪ ರೋಗಿಗಳಿಗೆ, ಕಾಗೆಗಳಿಗೆ ಮತ್ತು ಕ್ರಿಮಿಗಳಿಗೆ, ಅನ್ನ ತಂದು ಮೆಲ್ಲಗೆ ನೆಲದ ಮೇಲಿಡಬೇಕು.

ಪತಿತರೊಂದಿಗೆ ಸಾಮಾಜಿಕ ಸಂಸರ್ಗವೂ ಪಾಪವೆಂದು ಮನು ಘೋಷಿಸುತ್ತಾನೆ.

IV ೭೯. ...... ಪತಿತರೊಂದಿಗೆ ಇರಕೂಡದು.

IV ೨೧೩. .....ಪತಿತರ ಆಹಾರ ತಿನ್ನಬಾರದು.

ಎಂದು ಮನು ಸ್ನಾತಕರಿಗೆ ಎಚ್ಚರಿಕೆ ನೀಡುತ್ತಾನೆ.

ಗೃಹಸ್ಥನಿಗೆ ಮನು ವಿಧಿಸುವುದು:

III ೧೫೧. ಗೃಹಸ್ಥನು ಶ್ರಾದ್ಧದಲ್ಲಿ (ಪತಿತನನ್ನು) ಸೇರಿಸದಿರಲಿ.

III ೧೫೭. ಅಕಾರಣವಾಗಿ ತಾಯಿ, ತಂದೆ, ಗುರುವನ್ನು ತ್ಯಜಿಸುವವನು. ಮದುವೆ ಅಥವಾ ವೇದದ ಮೂಲಕ ಪತಿತ ಸಂಯೋಗ ಮಾಡಿದವನು.... (ವರ್ಜ್ಯನು).

ಪತಿತರ ಸಂಪರ್ಕ ಮಾಡುವವರನ್ನು ಶಿಕ್ಷಿಸುವ ಮೂಲಕ ಮನು, ಪತಿತರಿಗೆ ಸಾಮಾಜಿಕ ಬಹಿಷ್ಕಾರ ವಿಧಿಸುತ್ತಾನೆ.

XI ೧೮೧. ಒಂದು ವರ್ಷ ಪತಿತನೊಡನೆ ಇದ್ದವನು ತಾನೇ ಪತಿತನಾಗುತ್ತಾನೆ. ಬೋಧನೆ, ಯಾಜನ, ಮದುವೆಗಳ ಮೂಲಕ (ಆತ) ಕೂಡಲೇ ಪತಿತನಾಗುತ್ತಾನೆ. ಒಂದೇ ಕಡೆ ಕೂರುವುದರಿಂದ ಊಟ ಮಾಡುವುದರಿಂದಲೂ (ಪತಿತನಾಗುತ್ತಾನೆ).

XI ೧೮೨. ಪತಿತ ಸಂಸರ್ಗ ಮಾಡಿದವನು ಪತಿತರಿಗೆ ಮೀಸಲಾದ ಪ್ರಾಯಶ್ಚಿತ್ತವನ್ನೇ ಮಾಡಬೇಕು.

ಇದಾದ ಮೇಲೆ ತನ್ನ ಜಾತಿಯನ್ನು ವಿರೋಧಿಸಿ ಪತಿತನಾಗೇ ಉಳಿಯ ಬಯಸುವ ಪತಿತನಿಗೆ ಶಿಕ್ಷೆಗಳಿವೆ. ಮನು, ಪರಲೋಕದಲ್ಲಿ ಅಂಥವನಿಗೇನು ಶಿಕ್ಷೆಯೆಂದು ಹೇಳುತ್ತಾನೆ.

XII ೬೦. ಪತಿತ ಸಂಸರ್ಗ ಮಾಡಿದವರು ಬ್ರಹ್ಮ ರಾಕ್ಷಸರಾಗುತ್ತಾರೆ.

ಅಷ್ಟಾದರೂ, ಪತಿತನನ್ನು ಇದಿಷ್ಟಕ್ಕೇ ಬಿಡಲು ಮನು ತಯಾರಿರಲಿಲ್ಲ. ಆತ ಘೋರ ದಂಡನೆ

ವಿಧಿಸಲೂ ಮುಂದಾಗುತ್ತಾನೆ. ಮನುಸ್ಮೃತಿಯಲ್ಲಿ ಪತಿತರ ವಿರುದ್ಧ ವಿಧಿಸಲಾದ ದಂಡನಾ ವಿಧಿಗಳು ಈ ಕೆಳಗಿನಂತಿವೆ.

III ೧೫೦. ..... ಪತಿತರಾದ..... ನಾಸ್ತಿಕರಾದ ಬ್ರಾಹ್ಮಣರು ಹವ್ಯಕವ್ಯಗಳಿಗೆ ಅನರ್ಹರು.

IX ೦೧. .....ಪತಿತರಿಗೆ ಪಿತೃಧನದಲ್ಲಿ ಪಾಲಿಲ್ಲ.

XI ೧೮೫. (ಪತಿತನ ಪಿಂಡೋದಕ ಕ್ರಿಯೆಯ ನಂತರ) ಅಂಥವನೊಡನೆ ಸಂಭಾಷಣೆ, ಜೊತೆಯಲ್ಲಿ ಕೂರುವುದು, ಭಾಗ ಕೊಡುವುದು ಮತ್ತಿತರ ಲೌಕಿಕ ವ್ಯವಹಾರಗಳಲ್ಲಿ ತೊಡಗುವುದು ನಿಷಿದ್ಧ.

XI ೧೮೬. (ಜ್ಯೇಷ್ಠನು ಪತಿತನಾದರೆ) ಜ್ಯೇಷ್ಠನಿಗೆ (ಆಸ್ತಿಯ) ಜ್ಯೇಷ್ಠಾಂಶವಿಲ್ಲ. ಆ ಜ್ಯೇಷ್ಠಾಂಶವು ಗುಣವಂತನಾದ (ಜಾತಿಯಲ್ಲಿ ಉಳಿದ) ಕಿರಿಯನಿಗೆ ಸೇರುವುದು.

ಪತಿತರ ವಿರುದ್ಧ ಮನುವಿನ ಶಾಸನ ಇಂಥಾದ್ದು. ಅಂಥವರಿಗೆ ವಿಧಿಸುವ ದಂಡನೆಯ ಘೋರತೆ ಸ್ಪಷ್ಟವಾಗಿದೆ. ಆತನನ್ನು ಎಲ್ಲ ಬಗೆಯ ಸಾಮಾಜಿಕ ಸಂಸರ್ಗದಿಂದ ದೂರ ಇಡುವುದು, ಎಲ್ಲ ನಾಗರಿಕ ಸಮಾರಂಭಗಳಿಂದ ಹೊರಗಿಡುವುದು, ಎಲ್ಲ ಹುದ್ದೆಗಳಿಗೂ ಆತನನ್ನು ಅನರ್ಹಗೊಳಿಸುವುದು ಮತ್ತು ಆಸ್ತಿ ಉತ್ತರಾಧಿಕಾರ ಪಡೆಯದಂತೆ ಮಾಡುವುದೇ ಇದರ ಪರಿಣಾಮ. ಈ ವೇದನೆ, ದಂಡನೆಗಳಡಿ ಪತಿತನು ಸತ್ತವನಂತೆಯೇ. ಹಾಗೆ ನೋಡಿದರೆ ಮನು ಪಿಂಡೋದಕಗಳನ್ನು ಕೊಟ್ಟು ಪತಿತರನ್ನು ಸತ್ತವರಂತೆಯೇ ಕಾಣುತ್ತಾನೆ. ಈ ದಮನಕಾರಿ ವ್ಯವಸ್ಥೆಯನ್ನು, ಪತಿತನೊಡನೆ ವ್ಯವಹರಿಸುವವನಿಗೂ ವಿಧಿಸುವ ಮೂಲಕ ಜಾರಿ ಮಾಡಲಾಯಿತು. ದಂಡನೆ ಪತಿತನಿಗೆ ಮಾತ್ರ ಸೀಮಿತವಲ್ಲ. ಕೇವಲ ಗಂಡಿಗೂ ಸೀಮಿತವಲ್ಲ. ಪತಿತರ ಶಾಸನಕ್ಕೆ ಗಂಡು ಹೆಣ್ಣುಗಳಿಬ್ಬರೂ ಬಾಧ್ಯರು. ಅವರ ಸಂತಾನವೂ ದಂಡನಾರ್ಹ. ಈ ಕಾನೂನನ್ನು ಪತಿತನ ಮಗನಿಗೂ ವಿಸ್ತರಿಸಲಾಯಿತು. ಬಹಿಷ್ಕಾರಕ್ಕೆ ಮುಂಚೆ ಹುಟ್ಟಿದ ಮಗನಾದರೆ ತಂದೆ ಸತ್ತನೇನೋ ಎಂಬಂತೆ (ಬಹಿಷ್ಕೃತನಾದ) ಕೂಡಲೇ ಆಸ್ತಿ ಉತ್ತರಾಧಿಕಾರ ಸಿಕ್ಕುತ್ತದೆ. ಬಹಿಷ್ಕಾರದ ನಂತರ ಹುಟ್ಟಿದವನಾದರೆ ಆತನ ಉತ್ತರಾಧಿಕಾರದ ಹಕ್ಕೂ ಹೋಗುತ್ತದೆ. ಅಂದರೆ ತಂದೆಯೊಡನೆ ಮಗನೂ ಪತಿತನಾಗುತ್ತಾನೆ.

ಪತಿತರಿಗೆ ಸಂಬಂಧಿಸಿದ ಮನು ಶಾಸನದಲ್ಲಿ ಮಾನವೀಯತೆ ನ್ಯಾಯಗಳ ಸೋಂಕೇ ಇಲ್ಲವೆಂದು ಹೇಳಬೇಕಾಗಿಯೇ ಇಲ್ಲ. ಇದರಲ್ಲಿ ವಿಚಿತ್ರವೇನೂ ಇಲ್ಲ ಎಂದು ಕೆಲವರು ಯೋಚಿಸಬಹುದು. ಇದು ಯಾಕೆಂದರೆ ಎಲ್ಲ ಧಾರ್ಮಿಕ ಸಂಹಿತೆಗಳಲ್ಲೂ ಸ್ವ ಧರ್ಮತ್ಯಾಗ ಹಾಗೂ ಪಾಷಂಡಿತನಗಳ ವಿರುದ್ಧ ಇಂಥವೇ ಕಾನೂನುಗಳಿವೆ. ದುರದೃಷ್ಟವಶಾತ್ ಅದು ನಿಜವೂ ಹೌದು. ಬೌದ್ಧಧರ್ಮವನ್ನು ಹೊರತುಪಡಿಸಿ ಉಳಿದೆಲ್ಲ ಧರ್ಮಗಳೂ ಧರ್ಮಪಾಲನೆಯನ್ನೂ ಅನುಷ್ಠಾನಗೊಳಿಸಲು ಉತ್ತರಾಧಿಕಾರದ ಕಾನೂನನ್ನು ಉಪಯೋಗಿಸಿವೆ ಅಥವಾ ದುರುಪಯೋಗಪಡಿಸಿಕೊಂಡಿವೆ. ಜುದಾಯಿಸಮ್ಮಿಗೆ ಅಥವಾ ಕ್ಷುದ್ರ ಧರ್ಮಕ್ಕೆ ಅಥವಾ ಇನ್ನಾವುದೇ ಧರ್ಮಕ್ಕೆ ಪರಿವರ್ತನಗೊಳ್ಳುವವರನ್ನು ಕಾನ್‌ಸ್ಟಾಂಟೈನ್ಸ್ ಮತ್ತು ಜೂಲಿಯಸ್ ಸೀಸರ್ ಚಕ್ರವರ್ತಿಗಳು ದಂಡಿಸಿದ್ದಾರೆ. ಇತರರನ್ನೂ ತಮ್ಮೊಡನೆ ಸೆಳೆದುಕೊಳ್ಳುವ ಧರ್ಮ ಪ್ರವರ್ತಕರಿಗೆ ಥಿಯೋಡೋಸಿಯಸ್ ಮತ್ತು ವ್ಯಾಲೆಂಟಿನಿಯಾಸ್ ಚಕ್ರವರ್ತಿಗಳು ಮರಣ ದಂಡನೆಯ ಶಿಕ್ಷೆಯನ್ನೂ ಸೇರಿಸಿದರು. ಇದನ್ನೇ ಕ್ರಿಸ್ತ ಶ್ರದ್ಧೆಯ ಅನುಷ್ಠಾನಕ್ಕಾಗಿ ಎಲ್ಲ ಐರೋಪ್ಯ ದೇಶಗಳೂ ಕೂಡ ತೆಗೆದುಕೊಂಡವು.[೧]

ಆದರೆ ಪತಿತ ಶಾಸನದ ಇಂಥ ದೃಷ್ಟಿಕೋನ ಮೇಲುಮೇಲಿನದು ಮಾತ್ರ. ಎಲ್ಲಕ್ಕೂ ಮೊದಲು, ಪತಿತ ಎಂಬ ಕಲ್ಪನೆಯೇ ಬ್ರಾಹ್ಮಣಧರ್ಮದ ಸೃಷ್ಟಿ. ಅದು ಜಾತಿಯ ಅನಿವಾರ್ಯ ಸಹಕಲ್ಪನೆ. ಬ್ರಾಹ್ಮಣಧರ್ಮ

೧. ಇಂಗ್ಲೆಂಡಿನ ಕಾನೂನುಗಳ ಬಗ್ಗೆ ಸ್ಟೀಫನ್‌ರ ವಿಮರ್ಶೆ ನೋಡಿ (೧೫ನೇ ಆವೃತ್ತಿ) ಸಂ. ೪, ಪು. ೧೭೯.

ಜಾತಿ ವ್ಯವಸ್ಥೆಯನ್ನು ಸೃಷ್ಟಿಸಲು ನಿರ್ಧರಿಸಿದ ಕೂಡಲೇ ಪತಿತರ ವಿರುದ್ಧ ಕಾನೂನು ಮಾಡುವುದು ಅತ್ಯಗತ್ಯವಾಯಿತು. ಯಾಕೆಂದರೆ ಪತಿತರನ್ನು ಶಿಕ್ಷಿಸುವ ಮೂಲಕ ಮಾತ್ರವೇ ಜಾತಿ ವ್ಯವಸ್ಥೆಯನ್ನು ಉಳಿಸುವುದು ಸಾಧ್ಯ. ಎರಡನೆಯದಾಗಿ, ಕ್ರೈಸ್ತ ಅಥವಾ ಮಹಮ್ಮದೀಯ ಧರ್ಮಪರಿವರ್ತನೆ ಕಾನೂನಿಗೂ ಬ್ರಾಹ್ಮಣಧರ್ಮದ ಜಾತಿ ಕಾನೂನಿಗೂ ವ್ಯತ್ಯಾಸವಿದೆ. ಕ್ರೈಸ್ತ, ಮಹಮ್ಮದೀಯ ಧರ್ಮ ಪರಿವರ್ತನೆ ಕಾನೂನಿನಡಿ ಧರ್ಮಶ್ರದ್ಧೆಯ ಅಭಾವ ಅಥವಾ ತಪ್ಪು ಧರ್ಮಶ್ರದ್ಧೆ ಮಾತ್ರ ದಂಡನಾರ್ಹವಾಗುತ್ತಿತ್ತು. ಬ್ರಾಹ್ಮಣಧರ್ಮದ ಕಾನೂನಿನಲ್ಲಿ ಶ್ರದ್ಧೆ ಅಥವಾ ಅದರ ಅಭಾವಕ್ಕೂ  ಹಾಗೂ ಅನರ್ಹತೆಗೂ ಸಂಬಂಧವೇ ಇಲ್ಲ. ಅದು ಜಾತಿ ಎಂಬ ನಿರ್ದಿಷ್ಟ ಸಾಮಾಜಿಕ ವ್ಯವಸ್ಥೆಯ ಪಾವಿತ್ರ್ಯಕ್ಕೆ ಮಾತ್ರ ಸಂಬಂಧಿಸಿದ್ದು. ಒಬ್ಬನ ಜಾತಿಯಿಂದ ಹೊರಹೋಗುವ ಕೃತ್ಯವಷ್ಟೇ ಶಿಕ್ಷಾರ್ಹವಾದದ್ದು. ಇದು ಅತ್ಯಂತ ಮಹತ್ವದ ವ್ಯತ್ಯಾಸ.

ಬೇರೆ ಧರ್ಮಗಳ ಧರ್ಮಪರಿವರ್ತನೆ ಕಾನೂನಿಗೆ ಬ್ರಾಹ್ಮಣ ಕಾನೂನನ್ನು ಹೋಲಿಸಿ ನೋಡಿದರೆ, ಬ್ರಾಹ್ಮಣ ಧರ್ಮದಲ್ಲಿ ದೇವರಿಗೆ ನಂಬಿಕೆಯಿಡಬೇಕಾದ ಅಗತ್ಯವಿಲ್ಲ ಎಂಬುದು ಗೋಚರವಾಗುತ್ತದೆ; ಜನ್ಮಾಂತರದಲ್ಲಿ ನಂಬಿಕೆಯೂ ಬ್ರಾಹ್ಮಣ ಧರ್ಮಕ್ಕೆ ಅತ್ಯಗತ್ಯವಲ್ಲ. ಸತ್ಕಾರ್ಯಗಳ ಮೂಲಕ ಮೋಕ್ಷ ಅಥವಾ ಪ್ರವಾದಿಯೊಬ್ಬನಲ್ಲಿ ನಂಬಿಕೆಯಿಡುವುದು ಬ್ರಾಹ್ಮಣ ಧರ್ಮಕ್ಕೆ ಅಗತ್ಯವಲ್ಲ. ಆದರೆ ವೇದಗಳ ಪಾವಿತ್ರ್ಯದಲ್ಲಿ ಶ್ರದ್ಧೆಯೇ ಬ್ರಾಹ್ಮಣ ಧರ್ಮಕ್ಕೆ ಅತ್ಯಗತ್ಯ. ಬ್ರಾಹ್ಮಣ ಧರ್ಮಕ್ಕೆ ಅನಿವಾರ್ಯವಾದದ್ದು ಇದೊಂದೇ. ಯಾಕೆಂದರೆ ಜಾತಿ ಭ್ರಷ್ಟತೆಯೊಂದೇ ಶಿಕ್ಷೆಗೊಳಗಾಗುವಂಥಾದ್ದು. ಉಳಿದದ್ದೆಲ್ಲವನ್ನು ಬೇಕಾದರೆ ಉಲ್ಲಂಘಿಸಬಹುದು.

ಕ್ರೋಢೀಕರಣದ ಈ ಶಕ್ತಿಗಳಿಗೆ ಕುರುಡಾಗದಿರುವವರು, ಅಂತರ ವಿವಾಹದ ಮತ್ತು ಅಂತರ ಭೋಜನಗಳನ್ನು ನಿಷೇಧಿಸುವ ಬ್ರಾಹ್ಮಣ ಧರ್ಮದ ಈ ಕೃತ್ಯ ಸಮಾಜದ ಸಂಪೂರ್ಣ ಅಂಗಚ್ಛೇದದ ಹೊರತು ಬೇರೇನಲ್ಲ ಎಂಬುದನ್ನು ಒಪ್ಪುತ್ತಾರೆ. ಅದು ಏಕತೆಗೆ ಬಿದ್ದ ಮೃತ್ಯುಪ್ರಹಾರ ಮತ್ತು ಸಾಮೂಹಿಕ ಕ್ರಿಯೆಗೆ ಹೇರಿದ ಪರಿಣಾಮಕಾರಿ ನಿಷೇಧ. ಮುಂದೆ ವಿವರಿಸಿರುವಂತೆ ಬ್ರಾಹ್ಮಣ ಧರ್ಮವನ್ನು ಕಿತ್ತೆಸೆಯಲು ಬ್ರಾಹ್ಮಣೇತರರು ಸಾಮೂಹಿಕ ಕ್ರಿಯೆಯಲ್ಲಿ ತೊಡಗುವುದನ್ನು ತಪ್ಪಿಸಲು ಬ್ರಾಹ್ಮಣ ಧರ್ಮ ಉತ್ಸುಕವಾಗಿತ್ತು ಮತ್ತು ಆ ವಿಷ ಪ್ರಯೋಗದ ಮಾರಕ ಪರಿಣಾಮಗಳು ವಿಷ ಕೊಡುವವನ ಮೂಲ ಉದ್ದೇಶಗಳಿಗೆ ಮಾತ್ರ ಸೀಮಿತವಾಗಿರಲು ಎಂದೂ  ಸಾಧ್ಯವಿಲ್ಲ. ಜಾತಿಯ ವಿಷಯದಲ್ಲೂ ಹಾಗೇ ನಡೆಯಿತು. ಬ್ರಾಹ್ಮಣರ ವಿರುದ್ಧ ಕ್ರಿಯಾಶೀಲರಾಗುವುದನ್ನು ತಡೆಯಲು ಬ್ರಾಹ್ಮಣೇತರರನ್ನು ನಿಶ್ಚೇತನಗೊಳ್ಳುವುದು ಬ್ರಾಹ್ಮಣ ಧರ್ಮದ ಉದ್ದೇಶವಾಗಿರಲಿಲ್ಲ. ಆದೆ ಜಾತಿ ವಿಷದ ಪರಿಣಾಮವಾಗಿ ಅವರು ಬ್ರಾಹ್ಮಣ ಧರ್ಮದ ವಿರುದ್ಧವಷ್ಟೇ ಅಲ್ಲ, ವಿದೇಶಿಯರ ವಿರುದ್ಧವೂ ನಿಷ್ಕ್ರಿಯರಾಗಿದ್ದಾರೆ. ಬೇರೆ ಮಾತುಗಳಲ್ಲಿ ಹೇಳುವುದಾದರೆ, ಬ್ರಾಹ್ಮಣ ಧರ್ಮವು ಜಾತಿ ವ್ಯವಸ್ಥೆಯನ್ನು ಸ್ಥಾಪಿಸುವ ಮೂಲಕ ರಾಷ್ಟ್ರೀಯವಾದದ ಬೆಳವಣಿಗೆಗೆ ಅತಿ ದೊಡ್ಡ ಅಡಚಣೆಯನ್ನೊಡ್ಡಿತು.

ಬೇರೆಯವರು ಏನೇ ಹೇಳಲಿ, ಜಾತಿ ಪದ್ಧತಿಯಲ್ಲಿ ಅನಿಷ್ಟಕರವಾದುದು ಏನಾದರೂ ಇದೆಯೆಂದು ಹಿಂದೂಗಳು ಒಪ್ಪುವುದಿಲ್ಲ. ಒಂದು ರೀತಿಯಲ್ಲಿ ಅವರ ದೃಷ್ಟಿಯೂ ಸರಿ. ಒಂದು ಕುಟುಂಬದ ಸದಸ್ಯರ ನಡುವೆ ಪ್ರೀತಿ, ಏಕತೆ ಮತ್ತು ಪರಸ್ಪರ ನೆರವಿನ ಸಂಬಂಧವಿರುತ್ತದೆ. ಕಳ್ಳರಿಗೆ ಅವರದೇ ಗೌರವವಿದೆ. ದರೋಡೆಕೋರರ ಗುಂಪಿನಲ್ಲಿ ಸದಸ್ಯರಿಗೆ ಸಮಾನ ಹಿತಾಸಕ್ತಿಗಳಿರುತ್ತವೆ. ಬೇರೆ ಗುಂಪುಗಳೊಡನೆ ಎಷ್ಟೇ ವಿರೋಧವಿದ್ದರೂ ತಮ್ಮ ಗುಂಪಿನಲ್ಲಿ ಭ್ರಾತೃತ್ವ ಮತ್ತು ತಮ್ಮದೇ ಗುರಿಗೆ ನಿಷ್ಠೆಗಳು ನಿಚ್ಚಳವಾಗಿರುತ್ತದೆ. ಇದನ್ನು ಅನುಸರಿಸಿ ಹೇಳುವುದಾದರೆ ಒಂದು ಜಾತಿಯಲ್ಲಿ ಸಮಾಜಕ್ಕಿರಬೇಕಾದ ಎಲ್ಲ ಸ್ತುತ್ಯ ಗುಣಲಕ್ಷಣಗಳೂ ಇವೆಯೆಂದು ಹೇಳಬಹುದು.

ಅದಕ್ಕೆ ಪ್ರೀತಿ ಐಕಮತ್ಯ ಮತ್ತು ಪರಸ್ಪರ ನೆರವಿನಂಥ ಕುಟುಂಬದ ಸದ್ಗುಣಗಳಿವೆ, ಕಳ್ಳರಲ್ಲಿ ಇರಬಹುದಾದ ಮಾನ ಸಮ್ಮಾನವಿದೆ. ಗುಂಪುಗಳಲ್ಲಿ ನಾವು ಕಾಣುವ ನಿಷ್ಠೆ ಮತ್ತು ಭ್ರಾತೃತ್ವಭಾವಗಳಿವೆ ಮತ್ತು ದರೋಡೆಕೋರರಲ್ಲಿ ಕಾಣಸಿಗುವ ಸಮಾನ ಹಿತಾಸಕ್ತಿಗಳ ಪ್ರಜ್ಞೆಯೂ ಇದೆ.

ಹಿಂದೂ ಆದವನು ಜಾತಿಯ ಈ ಸ್ತುತ್ಯ ಲಕ್ಷಣಗಳಲ್ಲೇ ತೃಪ್ತಿ ಪಡೆದು ಅದು ಅನಿಷ್ಟಕಾರಿಯೆಂಬುದನ್ನು ಅಲ್ಲಗಳೆಯಬಹುದು. ಆದರೆ ಜಾತಿಯು ಒಂದು ಆದರ್ಶ ಸಮಾಜ ವ್ಯವಸ್ಥೆಯೆಂಬ ಆತನ ಸಿದ್ಧಾಂತವು, ಪ್ರತಿಯೊಂದು ಜಾತಿಯೂ ಸ್ವತಂತ್ರ ಸಮಾಜವಾಗಿ ದೇಶಗಳ ರೀತಿ ಸಾರ್ವಭೌಮವಾಗಿವೆಯೆಂಬ ಕಲ್ಪನೆಯ ಮೇಲೆ ನಿಂತಿದೆಯೆಂಬುದನ್ನು ಆತ ಮರೆಯುತ್ತಾನೆ. ಅದೇ ಹಿಂದೂ ಸಮಾಜ ಮತ್ತು ಅದರ ಸಹಸಂವಾದಿಯಾದ ಜಾತಿಪದ್ಧತಿಗೆ ಬಂದಾಗ ಆ ಸಿದ್ಧಾಂತ ಮುರಿದುಬೀಳುತ್ತದೆ.

ವಿಷಯದ ಈ ಬಗೆಯ ವಿಶದೀಕರಣದಲ್ಲೂ ಹಿಂದೂ ಆದವನೂ ಜಾತಿ ವ್ಯವಸ್ಥೆ ಅನಿಷ್ಟವೆಂದು ಒಪ್ಪುವುದಿಲ್ಲ. ಜಾತಿ ವ್ಯವಸ್ಥೆಯ ಅನಿಷ್ಟಗಳಿಗೆ ಹಿಂದೂ ಧರ್ಮವೇ ಕಾರಣ ಅಂದು ನೋಡಿ. ಹಿಂದೂ ತಕ್ಷಣವೇ "ಯೂರೋಪಿನ ವರ್ಗ ವ್ಯವಸ್ಥೆ ಏನು?" ಎಂದು ತಿರುಗಿ ಬೀಳುತ್ತಾನೆ. ಒಂದು ಹಂತದವರೆಗೆ ಅಂದರೆ ತತ್ವಜ್ಞಾನಿಗಳು ಹೇಳಿದಂಥ ಜೈವಿಕ ಐಕಮತ್ಯ, ಸಮಾನ ಧ್ಯೇಯ ಪರಸ್ಪರ ಸಹಾನುಭೂತಿ, ಸಾರ್ವಜನಿಕ ಗುರಿಗಳಿಗೆ ನಿಷ್ಠೆ ಮತ್ತು ಸಾರ್ವತ್ರಿಕ ಕ್ಷೇಮದ ಕಾಳಜಿಗಳ ಆದರ್ಶ ಸಮಾಜ ಎಲ್ಲೂ ಇಲ್ಲ ಎಂಬ ಮಟ್ಟಿಗೆ ಅವರ ಆಕ್ಷೇಪಣೆ ಸರಿ. ಹಿಂದೂ ಆದವನು ಹೋಲಿಕೆ ಕೊಟ್ಟು ದರೋಡೆಕೋರರ ತಂಡಗಳು, ಸೀಮಿತ ಗುಂಪುಗಳು, ಕಾರ್ಮಿಕ ಸಂಘಗಳು, ನೌಕರರ ಸಂಘಗಳು, ವಾಣಿಜ್ಯ ಸಂಘಟನೆಗಳು ಮತ್ತು ರಾಜಕೀಯ ಪಕ್ಷಗಳ ರೀತಿ ಎಲ್ಲ ಸಮಾಜದಲ್ಲೂ ಪ್ರತ್ಯೇಕತೆ, ಸಂದೇಹ ಮತ್ತು ಅಸೂಯೆಗಳಿಂದ ತುಂಬಿದ ಕುಟುಂಬಗಳು ಮತ್ತು ವರ್ಗಗಳಿವೆ ಎಂದು ಹೇಳಿದರೆ ಅಲ್ಲೇನು ಹೆಚ್ಚು ಜಗಳವಿರಲಾರದು. ಈ ಗುಂಪುಗಳಲ್ಲಿ ಕೆಲವನ್ನು ಸಮಾನ ಆಸಕ್ತಿಗಳು ಮತ್ತು ಸುಲಿಗೆಗಳು ಒಟ್ಟಿಗೆ ಹಿಡಿದಿಟ್ಟಿದ್ದರೆ ಇನ್ನು ಕೆಲವು ಗುಂಪುಗಳು ಜನಸೇವೆಯ ಧ್ಯೇಯ ಹೇಳುತ್ತ ಜನರನ್ನು ಸುಲಿಯುತ್ತವೆ.

ಎಲ್ಲ ಕಡೆಯೂ, ಗತಕಾಲದಲ್ಲಾಗಲೀ, ವರ್ತಮಾನದಲ್ಲಾಗಲೀ ನೈಜ ಸಮಾಜವು ಎಂದೂ ಏಕೈಕ ಪರಿಪೂರ್ಣ ರಚನೆಯಾಗಿರದೆ, ತಕ್ಷಣದ ಮತ್ತು ನಿರ್ದಿಷ್ಟವಾದ ವಿಭಿನ್ನ ಉದ್ದೇಶಗಳಿಗೆ ಅಂಟಿಕೊಂಡ ಸಣ್ಣ ಪಂಗಡಗಳ ಸಮೂಹವಾಗಿದೆ ಎಂಬುದನ್ನು ಒಪ್ಪಬಹುದು. ಆದರೆ ಹಿಂದೂ ಜಾತಿ ವ್ಯವಸ್ಥೆ ಮತ್ತು ಹಿಂದೂಯೇತರ ವರ್ಗ ವ್ಯವಸ್ಥೆಗಳ ನಡುವಣ ಈ ಹೋಲಿಕೆಯಡಿ ಆಶ್ರಯ ಪಡೆದು ಹಿಂದೂಗಳು ಈ ವಿಷಯದಲ್ಲಿ ಇನ್ನೇನೂ ಹೇಳುವಂತಿಲ್ಲ ಎಂದು ಸುಮ್ಮನಿರುವಂತಿಲ್ಲ. ಸತ್ಯ ಸಂಗತಿಯೆಂದರೆ, ಹಿಂದೂಗಳು ಎದುರಿಸಬೇಕಾದ ಇನ್ನೂ ದೊಡ್ಡ ಪ್ರಶ್ನೆಯಿದೆ. ಪ್ರತಿಯೊಂದು ಸಮಾಜದಲ್ಲೂ ಬೇರೆ ಬೇರೆ ಪಂಗಡಗಳಿದ್ದಾಗ್ಯೂ, ಕೆಲವು ಸಮಾಜಗಳಲ್ಲಿ ಆ ಪಂಗಡಗಳು ಸಮಾಜೇತರವಾಗಿದ್ದರೆ ಇನ್ನೂ ಕೆಲವು ಸಮಾಜಗಳಲ್ಲಿ ಆ ಪಂಗಡಗಳು ಸಮಾಜ ಬಾಹಿರವಾಗಿರುತ್ತವೆಂಬ ಸತ್ಯವನ್ನೂ ಹಿಂದೂಗಳು ಗಮನಿಸಬೇಕು. ವರ್ಗ ವ್ಯವಸ್ಥೆಯ ಸಮಾಜಕ್ಕೂ, ಜಾತಿ ವ್ಯವಸ್ಥೆಯ ಸಮಾಜಕ್ಕೂ ವ್ಯತ್ಯಾಸವಿರುವುದೇ ಇಲ್ಲಿ. ವರ್ಗ ವ್ಯವಸ್ಥೆ ಕೇವಲ ಸಮಾಜೇತರವಾಗಿದ್ದರೆ ಜಾತಿ ವ್ಯವಸ್ಥೆ ಖಂಡಿತವಾಗಿ ಸಮಾಜ ವಿರೋಧಿಯಾದದ್ದು.

ಕೆಲವು ಸಮಾಜಗಳಲ್ಲಿ, ಅಲ್ಲಿನ ಪಂಗಡಗಳು ಕೇವಲ ಸಮಾಜೇತದ ಭಾವನೆಗೆ ಕಾರಣವಾದರೆ ಇನ್ನು ಕೆಲವು ಸಮಾಜಗಳಲ್ಲಿ ಗುಂಪು ವ್ಯವಸ್ಥೆ ಸಮಾಜ ಬಾಹಿರ ಧೋರಣೆ ಸೃಷ್ಟಿಸುವುದೇಕೆಂದು ಅರಿಯುವುದೂ ಮುಖ್ಯ. ಈ ಅಂತರದ ಬಗ್ಗೆ ಜಾನ್ ಡ್ಯೂಯಿ ಅವರಿಗಿಂತ ಉತ್ತಮ ವಿವರಣೆಯನ್ನು ಯಾರೂ ಕೊಡಲು ಸಾಧ್ಯವಿಲ್ಲ. ಅವರ ಪ್ರಕಾರ ಪಂಗಡಗಳು ಪ್ರತ್ಯೇಕವಾಗಿವೆಯೇ ಅಥವಾ ಒಟ್ಟುಗೂಡಿವೆಯೇ ಅವುಗಳ ನಡುವೆ ಹಿತಾಸಕ್ತಿಗಳ ಪರಸ್ಪರತೆಯಿದೆಯೇ ಅಥವಾ ಇಲ್ಲವೇ ಎಂಬುದೇ ಎಲ್ಲಕ್ಕೂ ಆಧಾರ. ಆ

ಪಂಗಡಗಳು ಒಟ್ಟುಗೂಡಿದ್ದೇ ಆದರೆ ಅವುಗಳ ನಡುವೆ ಹಿತಾಸಕ್ತಿಗಳ ಪರಸ್ಪರತೆಯಿದ್ದರೆ, ಅವುಗಳ ನಡುವಣ ಭಾವನೆ ಸಮಾಜೇತರವಾಗಿರುತ್ತದೆ ಮಾತ್ರ. ಆದರೆ ಆ ಪಂಗಡಗಳು ಪ್ರತ್ಯೇಕವಾಗಿದ್ದರೆ ಪರಸ್ಪರತೆ ಇರದಿದ್ದರೆ, ಪಂಗಡಗಳ ನಡುವಣ ಧೋರಣೆ ಸಮಾಜ ಬಾಹಿರವಾದುದಾಗಿರುತ್ತದೆ. ಪ್ರೊಫೆಸರ್ ಡ್ಯೂಯಿ ಅವರನ್ನು ಉದ್ಧರಿಸುವುದಾದರೆ:[೧]

> "ಒಂದು ಗುಂಪು ಅಥವಾ ಪಂಗಡದ ಪ್ರತ್ಯೇಕತೆಯು ಅದರ ಸಮಾಜ ವಿರೋಧಿ ಧೋರಣೆಯನ್ನು ಎತ್ತಿ ತೋರುತ್ತದೆ. ಎಲ್ಲೆಲ್ಲಿ ಒಂದು ಪಂಗಡಕ್ಕೆ ಬೇರೆ ಪಂಗಡಗಳೊಡನೆ ಸಹಕಾರ್ಯದಲ್ಲಿ ತೊಡಗದಂತೆ ಮಾಡುವ 'ಅದರದೇ ಆದ' ಹಿತಾಸಕ್ತಿಗಳಿವರುತ್ತವೋ, ಆ ಮೂಲಕ ಮರುಸಂಘಟನೆ ಹಾಗೂ ವಿಸ್ತೃತ ಸಂಬಂಧಗಳ ಬದಲು, ಕೇವಲ ತಾನು ಪಡೆದಿದ್ದನ್ನೇ ಉಳಿಸಿಕೊಳ್ಳುವ ಉದ್ದೇಶವಿರುತ್ತದೋ, ಅಲ್ಲೆಲ್ಲ ಈ ಧೋರಣೆ ಕಂಡುಬರುತ್ತದೆ. ಇದು ದೇಶ ದೇಶಗಳನ್ನು ಪ್ರತ್ಯೇಕಗೊಳಿಸುತ್ತದೆ. ಹೊರಗಿನ ಜೀವನದೊಡನೆ ಸಂಬಂಧವೇ ಇಲ್ಲವೇನೋ ಎಂಬಂಥ ಸಾಂಸಾರಿಕ ಕಾಳಜಿಗಳ ಕುಟುಂಬಗಳನ್ನು ಪ್ರತ್ಯೇಕವಾಗಿಡುತ್ತದೆ. ಮನೆ ಮತ್ತು ಸಮುದಾಯಕ್ಕೆ ಸಂಬಂಧವಿಲ್ಲದಂತೆ ಶಾಲೆಗಳನ್ನು ಬೇರೆ ಮಾಡುತ್ತದೆ. ಶ್ರೀಮಂತರು ಬಡವರನ್ನು ಪ್ರತ್ಯೇಕಿಸುತ್ತದೆ. ಕಲಿತವರು-ಕಲಿಯದವರನ್ನು ಪ್ರತ್ಯೇಕ ಮಾಡುತ್ತದೆ. ಮುಖ್ಯ ವಿಷಯವೆಂದರೆ, ಪ್ರತ್ಯೇಕತೆಯೆಂದರೆ ಜೀವನದ ಗಡುಸಾದ ಹಾಗೂ ಔಪಚಾರಿಕವಾದ ಸಾಂಸ್ಥೀಕರಣ; ಪಂಗಡದೊಳಗಿನ ನಿಶ್ಚಲ ಮತ್ತು ಸ್ವಾರ್ಥ ಆದರ್ಶ."

ಇಲ್ಲಿ ಕೇಳಬೇಕಾದ ಪ್ರಶ್ನೆ ಒಂದು ಸಮಜದೊಳಗೆ ಪಂಗಡಗಳಿವೆಯೇ ಎಂಬುದಲ್ಲ ಅಥವಾ ಸಮಾಜವು ಅಖಂಡ ಏಕರಚನೆಯಾಗಿದೆಯೇ ಎಂಬುದೂ ಅಲ್ಲ. ಕೇಳಬೇಕಾದ ಪ್ರಶ್ನೆ ಬೇರೆ ಬೇರೆ ಪಂಗಡಗಳ ನಡುವೆ ಎಷ್ಟರಮಟ್ಟಿಗಿನ ಸಂಯೋಗ, ಸಹಕಾರವಿದೆ. ಈ ಪಂಗಡಗಳು ಹಂಚಿಕೊಳ್ಳುವ ಹಿತಾಸಕ್ತಿಗಳ ಸಂಖ್ಯೆ ಮತ್ತು ವೈವಿಧ್ಯ ಎಂಥದ್ದು. ಇತರೆ ಸಂಘಟನೆಗಳೊಡನೆ ಸಂಬಂಧ ಎಷ್ಟು ಪೂರ್ಣ ಹಾಗೂ ಮುಕ್ತವಾಗಿದೆ? ಸಮಾಜದಲ್ಲಿ ಗುಂಪುಗಳಿವೆ ಎಂಬ ಕಾರಣಕ್ಕೆ ಅದನ್ನು ಖಂಡಿಸಬೇಕಿಲ್ಲ. ಆದರೆ ಆ ಪಂಗಡಗಳು ಪ್ರತ್ಯೇಕವಾಗಿದ್ದರೆ ತಮ್ಮದೇ ಬದುಕು ಬದುಕುತ್ತಿದ್ದರೆ ಅದನ್ನು ಖಂಡಿಸಬೇಕು. ಯಾಕೆಂದರೆ ಈ ಪ್ರತ್ಯೇಕತೆಯೇ ಸಾಮೂಹಿಕ ಯತ್ನಗಳನ್ನು ಅಸಾಧ್ಯಗೊಳಿಸುವ ಸಮಾಜ ಬಾಹಿರ ಧೋರಣೆಯನ್ನು ಹುಟ್ಟುಹಾಕುವುದು.

ವರ್ಗಗಳ ನಡುವಣ ಈ ಪ್ರತ್ಯೇಕತೆ ಬ್ರಾಹ್ಮಣ ಧರ್ಮದ ಕೆಲಸ. ಅದು ಕೈಗೊಂಡ ಪ್ರಧಾನ ಕಾರ್ಯಗಳೆಂದರೆ ಪ್ರಾಚೀನ ಕಾಲದಿಂದಲೂ ವರ್ಣಗಳ ನಡುವೆ ನಡೆಯುತ್ತಿದ್ದ ಅಂತರ ವಿವಾಹ ಮತ್ತು ಅಂತರ್ಭೋಜನಗಳನ್ನು ನಿಷೇಧಿಸಿದ್ದು, ಇದನ್ನು ಈ ಅಧ್ಯಾಯದಲ್ಲಿ ಮುಂಚೆಯೇ ಚರ್ಚಿಸಲಾಗಿದೆ. ಆದರೆ ಈ ಕತೆಯ ಇನ್ನೂ ಒಂದು ಭಾಗ ಬಾಕಿ ಉಳಿದಿದೆ. ವರ್ಣ ವ್ಯವಸ್ಥೆಗೂ, ಮದುವೆಗೂ ಏನೂ ಸಂಬಂಧವಿರಲಿಲ್ಲವೆಂದು ಹೇಳಿದ್ದೇನೆ. ಬೇರೆ ಬೇರೆ ವರ್ಣಗಳ ಗಂಡು ಹೆಣ್ಣುಗಳ ಮದುವೆಯಾಗಬಹುದಿತ್ತು. ಆಗಿಯೂ ಆಗುತ್ತಿದ್ದರು. ಕಾನೂನು ಅಂತರ ವಿವಾಹಕ್ಕೆ ಯಾವ ರೀತಿಯಲ್ಲೂ ಅಡ್ಡಿಯಾಗಿರಲಿಲ್ಲ. ಅಂಥ ಮದುವೆಗಳಿಗೆ ಸಾಮಾಜಿಕ ನೈತಿಕತೆಯ ವಿರೋಧವೂ ಇರಲಿಲ್ಲ. ಸವರ್ಣ ವಿವಾಹಗಳನ್ನು ಶಾಸನವಾಗಲೀ ಸಮಾಜವಾಗಲೀ ವಿಧಿಸಿರಲಿಲ್ಲ. ವಧುವು ವರನಿಗಿಂತ ಉನ್ನತ ವರ್ಣಕ್ಕೆ ಸೇರಿದವಳೇ ಅಥವಾ ವರನು

---

೧. 'ಡೆಮೊಕ್ರೆಸಿ ಅಂಡ್ ಎಜುಕೇಷನ್' ಪುಟ ೯೯.

ಉನ್ನತ ವರ್ಣಕ್ಕೆ ಸೇರಿದ್ದು ವಧು ಅವನಿಗಿಂತ ಕೆಳವರ್ಣಕ್ಕೆ ಸೇರಿದವಳೇ ಎಂಬುದರ ಪರಿಗಣನೆಯೇ ಇಲ್ಲದೆ ಎಲ್ಲ ಅಂತರ್ವರ್ಣ ಮದುವೆಗಳೂ ಸಿಂಧುವಾಗಿದ್ದವು. ಹಾಗೆ ನೋಡಿದರೆ ಪ್ರೊಫೆಸರ್ ಕಾಣೆಯವರು ಹೇಳುವಂತೆ ಅನುಲೋಮ ಮತ್ತು ಪ್ರತಿಲೋಮ ಮದುವೆಗಳ ಅಂತರವೇ ಅಪರಿಚಿತವಾಗಿತ್ತು. ಅಷ್ಟೇಕೆ ಅನುಲೋಮ ಮತ್ತು ಪ್ರತಿಲೋಮ ಎಂಬ ಪದಗಳೇ ಇರಲಿಲ್ಲ. ಇವೆಲ್ಲ ಬ್ರಾಹ್ಮಣ ಧರ್ಮದ ಸೃಷ್ಟಿ. ಬ್ರಾಹ್ಮಣ ಧರ್ಮವು ಪ್ರತಿಲೋಮ ವಿವಾಹ ಅಂದರೆ ಉನ್ನತ ವರ್ಣದ ಹೆಣ್ಣು ಮತ್ತು ನೀಚ ವರ್ಣದ ಗಂಡಿನ ನಡುವಣ ಮದುವೆಗೆ ತಡೆಯೊಡ್ಡಿತು. ಅದು ವರ್ಣಗಳ ನಡುವಣ ಸಂಬಂಧವನ್ನು ಕೊನೆಗಾಣಿಸುವ ಮತ್ತು ಅವುಗಳಲ್ಲಿ ಪರಸ್ಪರ ಪ್ರತ್ಯೇಕತೆ ಹಾಗೂ ಸಮಾಜ ಬಾಹಿರ ಧೋರಣೆ ಸೃಷ್ಟಿಸುವ ದಿಕ್ಕಿನಲ್ಲಿಟ್ಟ ಹೆಜ್ಜೆಯಾಗಿತ್ತು. ಆದರೆ ಪ್ರತಿಲೋಮ ಮದುವೆಯ ಅಂತರ್ ಸಂಬಂಧದ ದ್ವಾರ ಮುಚ್ಚಿದ್ದರೂ ಅನುಲೋಮದ ಅಂತರ್ ಸಂಬಂಧ ದ್ವಾರವಿನ್ನೂ ಮುಕ್ತವಾಗೇ ಉಳಿದಿತ್ತು. ಅದನ್ನು ಮುಚ್ಚಲಿಲ್ಲ.

ಶ್ರೇಣೀಕೃತ ಅಸಮಾನತೆ ಕುರಿತ ಅಧ್ಯಾಯದಲ್ಲಿ ಹೇಳಿದಂತೆ ಬ್ರಾಹ್ಮಣ ಧರ್ಮವು ಅನುಲೋಮ ಅಂದರೆ ಉನ್ನತ ವರ್ಣದ ಪುರುಷ ಮತ್ತು ನೀಚ ವರ್ಣದ ಸ್ತ್ರೀ ನಡುವಣ ಮದುವೆಗಳು ಮುಂದುವರೆಯಲು ಬಿಟ್ಟಿತ್ತು. ಅನುಲೋಮ ವಿವಾಹದ ಬಾಗಿಲು ಗೌರವಾನ್ವಿತವಲ್ಲದ ಒಮ್ಮುಖ ದ್ವಾರವಾಗಿದ್ದರೂ ಅದು ಇನ್ನೂ ಅಂತರ್ ಸಂಬಂಧದ ದ್ವಾರವಾಗಿ ಉಳಿದುಕೊಂಡೇ ಇತ್ತು ಮತ್ತು ಅದಕ್ಕಾಗಿಯೇ ವರ್ಣಗಳ ಸಂಪೂರ್ಣ ಪ್ರತ್ಯೇಕತೆಯನ್ನು ತಡೆಯಲು ಶಕ್ತವಾಗಿತ್ತು. ಆದರೆ ಬ್ರಾಹ್ಮಣ ಧರ್ಮ ಇಲ್ಲಿಯೂ ಕೊಳಕು ಚಮತ್ಕಾರ ತೋರಿತು. ಈ ತಂತ್ರ ಎಷ್ಟು ಕೊಳಕಾಗಿತ್ತೆಂದು ತೋರಲು, ಮೊದಲು ಮಗುವಿನ ಅಂತಸ್ತು ನಿರ್ಧರಿಸುವ ನಿಯಮವೇನಿತ್ತೆಂದು ಹೇಳಬೇಕು. ಪುರಾತನ ಕಾಲದಿಂದಲೂ ಇದ್ದ ನಿಯಮದ ಪ್ರಕಾರ ಮಗುವಿನ ಅಂತಸ್ತು ತಂದೆಯ ವರ್ಣದಿಂದ ನಿರ್ಧಾರವಾಗುತ್ತಿತ್ತು. ತಾಯಿಯ ವರ್ಣ ಮುಖ್ಯವಾಗಿರಲಿಲ್ಲ. ಈ ಕೆಳಗಿನ ಉದಾಹರಣೆಗಳು ಈ ಅಂಶವನ್ನು ಸಂದೇಹಾತೀತಗೊಳಿಸುತ್ತವೆ:

| | **ತಂದೆಯ ಹೆಸರು** | **ತಂದೆಯ ವರ್ಣ** | **ತಾಯಿಯ ಹೆಸರು** | **ತಾಯಿಯ ವರ್ಣ ಹೆಸರು** | **ಮಗುವಿನ ವರ್ಣ** | **ಮಗುವಿನ ವರ್ಣ** |
|---|---|---|---|---|---|---|
| ೧. | ಶಂತನು | ಕ್ಷತ್ರಿಯ | ಗಂಗೆ | ಶೂದ್ರ–(ಅನಾಮಿಕ) | ಭೀಷ್ಮ | ಕ್ಷತ್ರಿಯ |
| ೨. | ಶಂತನು | ಕ್ಷತ್ರಿಯ | ಮತ್ಸ್ಯಗಂಧಿ | ಶೂದ್ರ–(ಬೆಸ್ತ) | ವಿಚಿತ್ರವೀರ್ಯ | ಕ್ಷತ್ರಿಯ |
| ೩. | ಪರಾಶರ | ಬ್ರಾಹ್ಮಣ | ಮತ್ಸ್ಯಗಂಧಿ | ಶೂದ್ರ–(ಬೆಸ್ತ) | ಕೃಷ್ಣದ್ವೈಪಾಯನ | ಬ್ರಾಹ್ಮಣ |
| ೪. | ವಿಶ್ವಾಮಿತ್ರ | ಕ್ಷತ್ರಿಯ | ಮೇನಕಾ | ಅಪ್ಸರೆ | ಶಾಕುಂತಲಾ | ಕ್ಷತ್ರಿಯ |
| ೫. | ಯಯಾತಿ | ಕ್ಷತ್ರಿಯ | ದೇವಯಾನಿ | ಬ್ರಾಹ್ಮಣ | ಯದು | ಕ್ಷತ್ರಿಯ |
| ೬. | ಯಯಾತಿ | ಕ್ಷತ್ರಿಯ | ಶರ್ಮಿಷ್ಠೆ | ಅಸುರಿ(ಅನಾರ್ಯ) | ದೃಹ್ಯ | ಕ್ಷತ್ರಿಯ |
| ೭. | ಜರತ್ಕಾರು | ಬ್ರಾಹ್ಮಣ | ಜರತ್ಕಾರಿ | ನಾಗ(ಅನಾರ್ಯ) | ಅಸಿತ | ಬ್ರಾಹ್ಮಣ |

ಈ ನಿಯಮಕ್ಕೆ ಪಿತೃ ಸವರ್ಣ್ಯ ನಿಯಮವೆಂದು ಹೆಸರು. ಅನುಲೋಮ ಮತ್ತು ಪ್ರತಿಲೋಮ ವಿವಾಹಗಳ ಮೇಲೆ ಈ ಪಿತೃ ಸವರ್ಣ್ಯ ನಿಯಮದ ಪರಿಣಾಮಗಳನ್ನು ಅವಲೋಕಿಸುವುದು ಆಸಕ್ತಪೂರ್ಣವಾದುದು.

ಪ್ರತಿಲೋಮ ವಿವಾಹದ ಮೇಲಾಗುವ ಪರಿಣಾಮವೆಂದರೆ ಉನ್ನತ ವರ್ಣದ ಸ್ತ್ರೀಯರ ಮಕ್ಕಳು, ತಂದೆಯ ನೀಚ ವರ್ಣಕ್ಕೆ ಕೆಳಗಿಳಿಯುತ್ತಾರೆ. ಅನುಲೋಮ ವಿವಾಹದ ಮೇಲಿನ ಪರಿಣಾಮ ಇದಕ್ಕೆ

ವ್ಯತಿರಿಕ್ತವಾದುದು. ನೀಚ ವರ್ಣಗಳ ತಾಯಂದಿರ ಮಕ್ಕಳು ಮೇಲೇರಿ ತಂದೆಯರ ಉನ್ನತ ವರ್ಣಗಳಲ್ಲಿ ಕರಗಿಹೋಗುತ್ತಾರೆ.

ಮನು ಪ್ರತಿಲೋಮ ವಿವಾಹಗಳನ್ನು ನಿಲ್ಲಿಸಿದ ಮತ್ತು ಆ ಮೂಲಕ ಉನ್ನತ ವರ್ಣಗಳು ಕೆಳ ವರ್ಣಗಳ ಅಂತಸ್ತಿಗೆ ಎಳೆಯಲ್ಪಡುವುದನ್ನು ತಪ್ಪಿಸಿದ. ಇದು ಎಷ್ಟೇ ವಿಷಾದನೀಯವಾದರೂ ಅನುಲೋಮ ವಿವಾಹ ಮತ್ತು ಪಿತೃ ಸವರ್ಣ್ಯ ನಿಯಮ ಚಾಲ್ತಿಯಲ್ಲಿ ಮುಂದುವರೆದಿದ್ದರಿಂದ ಅಂಥ ಹಾನಿಯೇನೂ ಆಗಲಿಲ್ಲ. ಇವೆರಡು ಒಗ್ಗೂಡಿ ಒಂದು ಉಪಯುಕ್ತ ವ್ಯವಸ್ಥೆಯಾಗಿ ರೂಪುಗೊಂಡಿದ್ದವು. ಅನುಲೋಮ ಮದುವೆ ಅಂತರ್ ಸಂಬಂಧವನ್ನು ಉಳಿಸಿಕೊಂಡಿತು ಮತ್ತು ಪಿತೃ ಸವರ್ಣ್ಯ ನಿಯಮವು ಉನ್ನತ ವರ್ಣಗಳನ್ನು ಸಂಯುಕ್ತ ರಚನೆಯಾಗಿ ಮಾಡಿತ್ತು. ಯಾಕೆಂದರೆ ಮಕ್ಕಳು ವಿವಿಧ ವರ್ಣಗಳ ತಾಯಂದಿರಿಗೆ ಸೇರಿರುತ್ತಿದ್ದರು. ಬ್ರಾಹ್ಮಣ ಧರ್ಮಕ್ಕೆ ವಿವಿಧ ವರ್ಣಗಳ ನಡುವಣ ಅಂತರ್ ಸಂಬಂಧ ದ್ವಾರ ಮುಕ್ತವಾಗಿರುವುದು ಬೇಕಿರಲಿಲ್ಲ. ಅದನ್ನು ಮುಚ್ಚಲೇಬೇಕೆಂದು ಅದು ತೀರ್ಮಾನಿಸಿತ್ತು. ಆದರೆ ಹಾಗೆ ಮಾಡಿದ ವಿಧಾನ ಮಾತ್ರ ಗೌರವಹೀನವಾಗಿತ್ತು. ಅನುಲೋಮ ಮದುವೆಯನ್ನೇ ನಿಲ್ಲಿಸಿಬಿಟ್ಟಿದ್ದರೆ ಅದು ನೇರವಾದ ಗೌರವಯುತವಾದ ವಿಧಾನವಾಗುತ್ತಿತ್ತು. ಆದರೆ ಬ್ರಾಹ್ಮಣಧರ್ಮ ಹಾಗೆ ಮಾಡಲಿಲ್ಲ. ಅದು ಮಾಡಿದ್ದೇನೆಂದರೆ ಮಗುವಿನ ಅಂತಸ್ತು ನಿರ್ಣಯಿಸುವ ನಿಯಮ ಬದಲಾಯಿಸಿದ್ದು. ಅದು ಪಿತೃ ಸವರ್ಣ್ಯದ ಬದಲು ತಾಯಿಯ ಅಂತಸ್ತಿಗನುಗುಣವಾಗಿ ಮಗುವಿನ ಅಂತಸ್ತು ನಿರ್ಣಯಿಸುವ ಮಾತೃ ಸವರ್ಣ್ಯ ನಿಯಮಗಳನ್ನು ಜಾರಿಗೆ ತಂದಿತು. ಈ ಬದಲಾವಣೆಯಿಂದ ಮದುವೆಯು ಅಂತರ್ ಸಮಾಜ ಸಂಬಂಧದ ಸಾಧನವಾಗುವುದೂ ನಿಂತುಹೋಯಿತು. ಕೆಳವರ್ಣದ ಸ್ತ್ರೀಗೆ ಹುಟ್ಟಿದ್ದೆಂಬ ಒಂದೇ ಕಾರಣದಿಂದ ಅದು ಉನ್ನತ ವರ್ಣದ ಗಂಡಸರ ಪಾಲಿಗೆ ಮಕ್ಕಳ ಜವಾಬ್ದಾರಿಯನ್ನು ತಪ್ಪಿಸಿಬಿಟ್ಟಿತು. ಅದು ಅನುಲೋಮ ಮದುವೆಯನ್ನು ಕೇವಲ ಲೈಂಗಿಕ ಭೋಗವಾಗಿ ಕೆಳ ವರ್ಣಗಳಿಗೆ ಅವಹೇಳನ, ಅವಮಾನವಾಗಿ ಮತ್ತು ಉನ್ನತ ವರ್ಣಗಳು ಕೆಳವರ್ಣಗಳ ಹೆಂಗಸರೊಡನೆ ಶಾಸನಬದ್ಧ ವ್ಯಭಿಚಾರದಲ್ಲಿ ತೊಡಗಬಹುದಾದ ಸವಲತ್ತಾಗಿ ಮಾಡಿತು ಮತ್ತು ವಿಸ್ತೃತ ದೃಷ್ಟಿಯಿಂದ ನೋಡಿದರೆ, ಅದು ಹಿಂದೂ ಸಮಾಜದ ಕೇಡಾಗಿರುವ ವರ್ಣಗಳ ನಡುವಣ ಸಂಪೂರ್ಣ ಪ್ರತ್ಯೇಕತೆಯನ್ನು ಸಾಧಿಸಿತು. ಇಷ್ಟೆಲ್ಲ ಆದರೂ, ಕಂದಾಚಾರಿ ಹಿಂದೂ ಮಾತ್ರ ಜಾತಿ ಒಂದು ಆದರ್ಶ ವ್ಯವಸ್ಥೆಯೆಂದೇ ನಂಬುತ್ತಾನೆ. ಕಂದಾಚಾರಿ ಹಿಂದೂಗಳ ಮಾತೇಕೆ. ಕಲಿತ ರಾಜಕಾರಣಿಗಳು ಮತ್ತು ಚರಿತ್ರೆಕಾರರೂ ಹಾಗೆಯೇ. ಜಾತಿ ಪದ್ಧತಿಯು ರಾಷ್ಟ್ರೀಯವಾದಕ್ಕೆ ಅಡ್ಡಿ ಎಂಬುದನ್ನು ಅಲ್ಲಗಳೆಯುವ ರಾಜಕಾರಣಿಗಳೂ, ಚರಿತ್ರಕಾರರೂ ಇದ್ದಾರೆ. ಅವರು ಭಾರತವೊಂದು ರಾಷ್ಟ್ರ ಎಂದು ಭಾವಿಸುತ್ತಾರೆ ಮತ್ತು ಯಾರಾದರೂ ಭಾರತದ ದೇಶದ ಬದಲು ಭಾರತದ ಜನತೆಯ ಬಗ್ಗೆ ಮಾತಾಡತೊಡಗಿದರೆ ತಪ್ಪು ತಿಳಿಯುತ್ತಾರೆ. ಈ ಧೋರಣೆಯನ್ನು ಅರ್ಥ ಮಾಡಿಕೊಳ್ಳಬಹುದು. ಬಹುತೇಕ ರಾಜಕಾರಣಿಗಳು ಹಾಗೂ ಚರಿತ್ರಕಾರರು ಬ್ರಾಹ್ಮಣರು. ಅದಕ್ಕೇ ಅವರ ಪೂರ್ವಿಕರ ಕುಕೃತ್ಯಗಳನ್ನಾಗಲೀ, ದುಷ್ಪತನಗಳನ್ನಾಗಲೀ ಬಯಲಿಗೆಳೆಯುವ ಧೈರ್ಯವನ್ನು ಅವರಿಂದ ನಿರೀಕ್ಷಿಸಲಾಗದು. ಭಾರತ ಒಂದು ರಾಷ್ಟ್ರವೇ ಎಂದು ಅವರಲ್ಲಿ ಯಾರನ್ನಾದರೂ ಕೇಳಿದರೆ ಅವರೆಲ್ಲ ಒಕ್ಕೊರಲಿನಿಂದ 'ಹೌದು' ಎಂದು ಉತ್ತರಿಸುತ್ತಾರೆ. ಕಾರಣಗಳನ್ನು ಕೇಳಿದರೆ ದೇಶದ ಭೌಗೋಳಿಕ ಅಖಂಡತೆ ಮತ್ತು ಮೂಲಭೂತ ಸಾಂಸ್ಕೃತಿಕ ಐಕಮತ್ಯಗಳಿಂದಾಗಿ ಭಾರತ ಒಂದು ದೇಶವಾಗಿದೆ. ಹಾಗಾದರೆ ರಾಷ್ಟ್ರವೆಂದರೆ ಯಾವುದು? ರಾಷ್ಟ್ರವೆನ್ನುವುದು ಎಂಥ ಭೌಗೋಳಿಕ ಅಖಂಡತೆ ಹೊಂದಿದ್ದರೂ ಭೌತಿಕ ಅರ್ಥದ ದೇಶವಷ್ಟೇ ಅಲ್ಲ. ರಾಷ್ಟ್ರವೆಂಬುದು ಸಮಾನ ಭಾಷೆ, ಸಮಾನ ಧರ್ಮ ಅಥವಾ ಸಮಾನ ಜನಾಂಗದಿಂದ ಆವಿಷ್ಕರಿಸಿದ ಸಾಮಾನ್ಯ ಸಂಸ್ಕೃತಿಯ

ಜನರೂ ಅಲ್ಲ. ನಾನು ಇನ್ನೊಂದು ಕಡೆ ಹೇಳಿರುವುದನ್ನು ನೆನೆಸಿಕೊಳ್ಳುವುದಾದರೆ "ರಾಷ್ಟ್ರೀಯವಾದ ಒಂದು ವ್ಯಕ್ತಿಗತವಾದ ಮಾನಸಿಕ ಭಾವನೆ. ಅದು ನಾವೆಲ್ಲರೂ ಬಂಧುಗಳೆಂಬ ಭಾವನೆ ಹುಟ್ಟಿಸುವ ಭಾವನಾತ್ಮಕ ಸಂಯೋಗದ ಏಕತೆ. ಆದರೆ ಈ ರಾಷ್ಟ್ರೀಯ ಭಾವನೆಯು ಎರಡು ಅಲಗುಗಳ ಧೋರಣೆ. ಅದು ಏಕಕಾಲಕ್ಕೆ ತನ್ನವರ ಬಗ್ಗೆ ಸಹಾನುಭೂತಿ ಮತ್ತು ತನ್ನವರಲ್ಲದವರ ಬಗ್ಗೆ ವಿರೋಧ ಭಾವನೆ. ಅದು ಒಳಗಿನವರನ್ನು ಒಟ್ಟಿಗೇ ಬಂಧಿಸಿಡುವ ಮತ್ತು ಹೊರಗಿನವರನ್ನು ದೂರವಿರಿಸುವ 'ಪಂಗಡ ಪ್ರಜ್ಞೆ'. ಅದು ತನ್ನದೇ ಪಂಗಡಕ್ಕೆ ಸೇರಿಕೊಳ್ಳುವ ಮತ್ತಾವ ಪಂಗಡಕ್ಕೂ ಸೇರದಿರುವ ಹಂಬಲ. ರಾಷ್ಟ್ರೀಯವಾದ ರಾಷ್ಟ್ರೀಯ ಭಾವನೆ ಎಂಬುದರ ತಿರುಳು ಇದೇ. ತನ್ನ ಪಂಗಡಕ್ಕೇ ಸೇರಬಯಸುವ ಈ ಹಂಬಲ ನಾನು ಮೊದಲೇ ಹೇಳಿದ ಹಾಗೆ ಒಂದು: ವ್ಯಕ್ತಿಗತ ಮಾನಸಿಕ ಭಾವನೆ ಮತ್ತು ಇಲ್ಲಿ ನೆನಪಿಡಬೇಕಾದ ಮುಖ್ಯ ಸಂಗತಿಯೆಂದರೆ ಈ ಪಂಗಡಕ್ಕೆ ಸೇರಬಯಸುವ ಹಂಬಲವು ಭೂಗೋಳ, ಸಂಸ್ಕೃತಿ ಅಥವಾ ಆರ್ಥಿಕ ಅಥವಾ ಸಾಮಾಜಿಕ ಸಂಘರ್ಷಗಳಿಂದ ಸ್ವತಂತ್ರವಾದದ್ದು. ಭೌಗೋಳಿಕ ಅಖಂಡತೆಯಿರಬಹುದು ಆದರೆ ಅಲ್ಲಿ 'ಸೇರಬಯಸುವ ಹಂಬಲ' ಇಲ್ಲದಿರಬಹುದು. ಭೌಗೋಳಿಕ ಏಕತೆಯಿಲ್ಲದಿರಬಹುದು ಆದರೂ ಅಲ್ಲಿ ಸೇರಬಯಸುವ ಹಂಬಲ ಅತ್ಯಂತ ತೀವ್ರವಾಗಿರಬಹುದು. ಆರ್ಥಿಕ ಸಂಘರ್ಷಗಳು, ವರ್ಗ ವಿಭಜನೆಗಳು ಇರುವ ಕಡೆಯೂ ಒಟ್ಟಿಗೇ ಸೇರಬಯಸುವ ಹಂಬಲ ತೀವ್ರವಾಗಿರಬಹುದು. ಮುಖ್ಯ ಸಂಗತಿಯೆಂದರೆ, ರಾಷ್ಟ್ರೀಯವಾದ ಪ್ರಾಥಮಿಕವಾಗಿ ಭೂಗೋಳ, ಸಂಸ್ಕೃತಿಗಳ ಅಥವಾ ವಿಷಯವಲ್ಲ....."

ವೇದಕಾಲದ ಅವನತಿಯ ದಿನಗಳಲ್ಲಿ,[೧] ಶೂದ್ರರು ಮತ್ತು ಹೆಂಗಸರಿಗೆ ಅತ್ಯಂತ ಕೀಳು ಸ್ಥಾನ ಬಂದುಬಿಟ್ಟಿತ್ತು. ಬೌದ್ಧ ಧರ್ಮದ ಅಲೆಯುಬ್ಬರ ಇವರಿಬ್ಬರ ಅಂತಸ್ತಿನಲ್ಲೂ ದೊಡ್ಡ ಬದಲಾವಣೆ ಸಾಧಿಸಿತ್ತು. ಸಂಕ್ಷಿಪ್ತವಾಗಿ ಹೇಳುವುದಾದರೆ, ಬೌದ್ಧ ಕಾಲದಲ್ಲಿ ಶೂದ್ರನು ಆಸ್ತಿ, ವಿದ್ಯೆ ಗಳಿಸಿ ರಾಜನೂ ಆಗಬಹುದಿತ್ತು. ಅಷ್ಟೇಕೆ, ಆತ ವೇದ ಕಾಲದಲ್ಲಿ ಬ್ರಾಹ್ಮಣರು ಆಕ್ರಮಿಸಿದ್ದ ಅತ್ಯುನ್ನತ ಸಾಮಾಜಿಕ ಸ್ಥಾನಮಾನಕ್ಕೂ ಏರಬಹುದಿತ್ತು. ಬೌದ್ಧ ಭಿಕ್ಷುಗಳ ಸಂಘವು ವೇದಕಾಲಿನ ಬ್ರಾಹ್ಮಣರಿಗೆ ತತ್ಸಮಾನವಾಗಿತ್ತು. ಇವೆರಡೂ, ತಂತಮ್ಮ ಧರ್ಮಗಳೊಳಗೆ ಅಂತಸ್ತು ಹಾಗೂ ಘನತೆಗಳ ವಿಚಾರದಲ್ಲಿ ಸಮಾನವಾಗಿದ್ದವು. ವೇದಕಾಲದಲ್ಲಿ ಶೂದ್ರನೆಂದೂ ಬ್ರಾಹ್ಮಣನಾಗ ಬಯಸುವಂತಿರಲಿಲ್ಲ. ಆದರೆ ಆತ ಭಿಕ್ಷುವಾಗಿ ಬ್ರಾಹ್ಮಣರಿಗಿದ್ದ ಅಂತಸ್ತು, ಘನತೆಗಳನ್ನೇ ಪಡೆಯಬಹುದಿತ್ತು. ಯಾಕೆಂದರೆ ಬ್ರಾಹ್ಮಣಿಕೆಯಲ್ಲಿ ಶೂದ್ರರಿಗೆ ಪ್ರವೇಶವಿರದಿದ್ದರೂ ಅವರಿಗೆ ಬೌದ್ಧ ಭಿಕ್ಷುಗಳ ಸಂಘ ಮುಕ್ತವಾಗಿತ್ತು ಮತ್ತು ವೇದಕಾಲದಲ್ಲಿ ಬ್ರಾಹ್ಮಣರಾಗದಿದ್ದಾನೇಕ ಶೂದ್ರರು ಬೌದ್ಧಧರ್ಮದಲ್ಲಿ ಭಿಕ್ಷುಗಳಾಗಿ ಅವರ ಸಮಾನಸ್ಕಂದರಾಗಿದ್ದರು. ಬೌದ್ಧ ಸಾಮ್ರಾಜ್ಯದಲ್ಲಿ ಹೆಂಗಸು ಸ್ವತಂತ್ರಳಾದಳು. ಮದುವೆ ಆಕೆಯನ್ನು ಗುಲಾಮಳಾಗಿಸಲಿಲ್ಲ. ಯಾಕೆಂದರೆ, ಬೌದ್ಧ ನಿಯಮದಡಿ ಮದುವೆ ಎಂಬುದೊಂದು ಕರಾರು, ಒಪ್ಪಂದ. ಬೌದ್ಧ ಸಾಮ್ರಾಜ್ಯದಲ್ಲಿ ಅವಳು ಆಸ್ತಿ ಗಳಿಸಬಹುದಿತ್ತು. ವಿದ್ಯೆ ಪಡೆಯಬಹುದಿತ್ತು. ಇನ್ನೂ ಅನನ್ಯವಾದ್ದೆಂದರೆ, ಅವಳು ಭಿಕ್ಷುಣಿಗಳ ಸಂಘದ ಸದಸ್ಯೆಯೂ ಆಗಿ ಬ್ರಾಹ್ಮಣರಿಗೆ ಸಮಾನವಾದ ಅಂತಸ್ತು ಮತ್ತು ಘನತೆಯನ್ನು ಮುಟ್ಟಬಹುದಿತ್ತು. ಶೂದ್ರರು ಮತ್ತು ಸ್ತ್ರೀಯರ ಉನ್ನತೀಕರಣ, ಎಷ್ಟರ ಮಟ್ಟಿಗೆ ಬೌದ್ಧ ನೀತಿಯ ಫಲಿತಾಂಶವಾಗಿತ್ತೆಂದರೆ ಬೌದ್ಧ ಧರ್ಮವನ್ನು ಅದರ ಶತ್ರುಗಳು ಶೂದ್ರ ಧರ್ಮ (ಅಂದರೆ ಕೆಳವರ್ಗಗಳ ಧರ್ಮ) ಎಂದೇ ಕರೆಯುತ್ತಿದ್ದರು.

---

೧. ಅವನತಿಯ ಕಾಲವೆಂದರೆ ಬ್ರಾಹ್ಮಣರು ತಮ್ಮ ಹಿರಿಮೆ ಸ್ಥಾಪಿಸಲು ಚಾತುವರ್ಣ ಸಮತೋಲನವನ್ನು ಕದಡಲಾರಂಭಿಸಿದ ಕಾಲ.

ಇದೆಲ್ಲವೂ ಬ್ರಾಹ್ಮಣರಿಗೆ ಅತ್ಯಂತ ಮರ್ಮಭೇದಕವಾಗಿರಬೇಕು. ಇದೆಷ್ಟು ಮರ್ಮಭೇದಕವಾಗಿತ್ತೆನ್ನುವುದು ಬೌದ್ಧ ಧರ್ಮದ ವಿರುದ್ಧ ಜಯ ಗಳಿಸಿದ ನಂತರ ಬ್ರಾಹ್ಮನ ಧರ್ಮವು, ಉಜ್ಜೀವಕ ಬೌದ್ಧ ತತ್ವಗಳ ಫಲವಾದ ಕ್ರಾಂತಿಕಾರಿ ಬದಲಾವಣೆಗಳಿಂದ ಶೂದ್ರರು ಮತ್ತು ಸ್ತ್ರೀಯರು ಪಡೆದಿದ್ದ ಉನ್ನತ ಸ್ಥಾನವನ್ನು ಸಂಪೂರ್ಣವಾಗಿ ನೆಲಸಮ ಮಾಡಹೊರಟ ವಿಧ್ವಂಸಕ ಆಕ್ರೋಶದಲ್ಲಿ ಕಾಣುತ್ತದೆ.

ಈ ಹಿನ್ನೆಲೆಯಿಂದ ಮೊದಲಾಗಿ, ಶೂದ್ರರ ವಿರುದ್ಧ ಮನು ಮಾಡಿದ ಶಾಸನಗಳ ಅಮಾನವೀಯತೆ ಮತ್ತು ಕ್ರೌರ್ಯಗಳನ್ನು ಕಂಡರೆ ನಡುಕ ಹುಟ್ಟುತ್ತದೆ. ನಾನು ಕೆಲವು ಶೀರ್ಷಿಕೆಗಳಡಿ ಹಲವನ್ನು ಇಲ್ಲಿ ಉಲ್ಲೇಖಿಸುತ್ತೇನೆ:

ಮನು, ಬ್ರಾಹ್ಮಣ, ಕ್ಷತ್ರಿಯ ಮತ್ತು ವೈಶ್ಯ ಗೃಹಸ್ಥರಿಗೆ ಹೇಳುತ್ತಾನೆ:

IV ೬೧. ಆತ ಶೂದ್ರರು ಆಳುವ ರಾಜ್ಯದಲ್ಲಿ ನೆಲೆಸದಿರಲಿ......

ಇದರರ್ಥ ಶೂದ್ರನೊಬ್ಬ ರಾಜನಾದರೆ ಬ್ರಾಹ್ಮಣ, ಕ್ಷತ್ರಿಯ, ವೈಶ್ಯರು ದೇಶ ಬಿಟ್ಟು ಹೊರಡಲಿ ಎಂದಲ್ಲ. ಶೂದ್ರನು ರಾಜನಾದರೆ ಆತನನ್ನು ಕೊಲ್ಲಬೇಕು ಎಂದಷ್ಟೇ ಇದರ ಅರ್ಥ. ಶೂದ್ರ ರಾಜನಾಗಲು ಅನರ್ಹ ಎಂದಷ್ಟೇ ಅಲ್ಲ. ಆತನನ್ನು ಗೌರವಾನ್ವಿತ ವ್ಯಕ್ತಿ ಎಂದೂ ಕಾಣಬಾರದು, ಮನು ವಿಧಿಸುತ್ತಾನೆ:

XI ೨೪. ಯಾಗಕ್ಕಾಗಿ ಬ್ರಾಹ್ಮಣನು ಶೂದ್ರನಿಂದ ಬೇಡಬಾರದು.

ಶೂದ್ರನೊಂದಿಗೆ ಎಲ್ಲ ವಿವಾಹ ಸಂಬಂಧಗಳನ್ನೂ ನಿಷೇಧಿಸಲಾಯಿತು. ಮೇಲಿನ ಮೂರು ವರ್ಣಗಳ ಸ್ತ್ರೀಯೊಂದಿಗೆ ಆತ ಮದುವೆಯಾಗುವುದು ನಿಷಿದ್ಧ. ಶೂದ್ರನು ಮೇಲ್ವರ್ಗಗಳ ಸ್ತ್ರೀಯೊಂದಿಗೆ ಸಂಬಂಧವನ್ನೇ ಇರಿಸಿಕೊಳ್ಳುವಂತಿರಲಿಲ್ಲ. ಹಾಗೇನಾದರೂ ಅಂಥ ಸ್ತ್ರೀಯೊಂದಿಗೆ ಶೂದ್ರನು ವ್ಯಭಿಚಾರದಲ್ಲಿ ತೊಡಗಿದರೆ ಅದು ಮರಣದಂಡನೆಗೆ ಅರ್ಹವಾದ ಅಪರಾಧವೆಂದು ಮನು ಘೋಷಿಸುತ್ತಾನೆ.

VIII ೩೭೪. ಉನ್ನತ ವರ್ಣದ ರಕ್ಷಿತ[೧] ಅಥವಾ ಅರಕ್ಷಿತ ಸ್ತ್ರೀಯೊಡನೆ ಸಂಭೋಗ ಮಾಡಿದ ಶೂದ್ರನಿಗೆ ಈ ಕೆಳಗಿನ ಶಿಕ್ಷೆ: ಅರಕ್ಷಿತಳಾದೆ ಜನನಾಂಗ ಛೇದ. ರಕ್ಷಿತಳಾದರೆ ಆಸ್ತಿ ಮುಟ್ಟುಗೋಲು ಮತ್ತು ಮರಣದಂಡನೆ.

ಶೂದ್ರನು ಅಧಮನಾಗೇ ಉಳಿಯಬೇಕು. ಯಾವುದೇ ಹುದ್ದೆಗೆ ಅಯೋಗ್ಯನಾಗಿ, ವಿದ್ಯೆ ಆಸ್ತಿ ವಿಹೀನವಾಗಿ ಮತ್ತು ತಿರಸ್ಕಾರ ಯೋಗ್ಯ ವ್ಯಕ್ತಿಯಾಗೇ ಉಳಿಯಬೇಕೆಂದು ಮನು ಅಗ್ರಹಪಡಿಸುತ್ತಾನೆ. ಆತ ಮತ್ತು ಆತನ ಸೊತ್ತನ್ನು ಯಾವಾಗ ಬೇಕಾದರೂ ಮುಟ್ಟುಗೋಲು ಹಾಕಿಕೊಳ್ಳಬಹುದು.

ಹುದ್ದೆಗೆ ಸಂಬಂಧಪಟ್ಟಂತೆ ಮನು ಹೇಳುತ್ತಾನೆ:

VIII ೨೦. ಹುಟ್ಟು ಮಾತ್ರದಿಂದ ಬ್ರಾಹ್ಮಣನಾದರೂ ಕೂಡಾ (ಅಂದರೆ ವಿದ್ಯೆಯಿಲ್ಲದ, ಯಾವುದೇ ವೇದೋಕ್ತಕ್ರಿಯೆ ಮಾಡಿರದವನು) ರಾಜನಿಗೆ ಧರ್ಮ ಪ್ರವಚನ ಹೇಳಬಹುದು.

ಅಂದರೆ ನ್ಯಾಯಾಧೀಶನಾಗಿ ವರ್ತಿಸಬಹುದು. ಆದರೆ ಶೂದ್ರನಾದವನು (ಎಷ್ಟೇ ಕಲಿತಿದ್ದರೂ) ಆ ಕೆಲಸ ಮಾಡುವಂತಿಲ್ಲ.

VIII ೨೧. ಶೂದ್ರನು ಧರ್ಮ ವಿವೇಚನೆ ಮಾಡುವುದನ್ನು ನೋಡುವ ರಾಜರು ಇರುವ ಕಡೆ ರಾಷ್ಟ್ರವು ಕೆಸರಿನಲ್ಲಿ ಸಿಕ್ಕಿಗೊಂಡ ಗೋವಿನಂತೆ ಮುಳುಗುವುದು.

---

೧. ರಕ್ಷಿತಳೆಂದರೆ ಬಂಧುಗಳ ರಕ್ಷಣೆಯಲ್ಲಿರುವವಳು. ಅರಕ್ಷಿತಳೆಂದರೆ ಒಂಟಿ ಹೆಣ್ಣು.

VIII ೨೭೨. ಶೂದ್ರನು ದರ್ಪದಿಂದ ಬ್ರಾಹ್ಮಣನಿಗೆ ಧರ್ಮೋಪದೇಶ ಮಾಡಹೊರಟರೆ ರಾಜನು ಅವನ ಮುಖ, ಕಿವಿಗಳಿಗೆ ಕಾದ ಎಣ್ಣೆ ಹುಯ್ಯಿಸಬೇಕು.

ಪ್ರಾಚೀನ ಕಾಲದಲ್ಲಿ ವೇದಾಧ್ಯಯನವೇ ಶಿಕ್ಷಣ. ಈ ವೇದಾಧ್ಯಯನವು ಹಕ್ಕಿನ ವಿಷಯವಲ್ಲ. ಸವಲತ್ತಿನ ವಿಷಯ ಎಂದು ಮನು ಘೋಷಿಸುತ್ತಾನೆ. ಮನು ಶೂದ್ರರ ವೇದಾಧ್ಯಯನದ ಹಕ್ಕು ಕಸಿದುಕೊಂಡ ಆತ ಅದನ್ನು ಮೇಲಿನ ಮೂರು ವರ್ಣಗಳ ಸವಲತ್ತಾಗಿ ಮಾಡಿದ. ಆತ ಶೂದ್ರರಿಗೆ ವೇದಾಧ್ಯಯನವನ್ನು ನಿರಾಕರಿಸಿದ್ದಷ್ಟೇ ಅಲ್ಲ. ವೇದಜ್ಞಾನ ಪಡೆಯಲು ಶೂದ್ರರಿಗೆ ಸಹಾಯ ಮಾಡುವವರಿಗೂ ದಂಡನೆ ವಿಧಿಸಿದ. ವೇದಾಧ್ಯಯನದ ಸವಲತ್ತು ಪಡೆದವರಿಗೆ ಮನು ಬೋಧಿಸುತ್ತಾನೆ.

IV ೯೯. ಆತ ಶೂದ್ರರ ಸನ್ನಿಧಿಯಲ್ಲಿ.... ಎಂದೂ ವೇದ ಓದಬಾರದು.

ಮತ್ತು

III ೧೫೬. ಶೂದ್ರ ಶಿಷ್ಯರಿಗೆ ಬೋಧಿಸುವವನು ಅಥವಾ ಶೂದ್ರ ಗುರುವನ್ನು ಹೊಂದಿರುವವನು ಇವರನ್ನು ಶ್ರಾದ್ಧಕ್ಕೆ ಆಹ್ವಾನಿಸಬಾರದು ಎಂದು ವಿಧಿಸುತ್ತಾನೆ.

ವೇದಾಧ್ಯಯನ ಮಾಡುವ ಶೂದ್ರರಿಗೆ, ಶಿಕ್ಷೆ ವಿಧಿಸುವ ಕ್ರೌರ್ಯದಲ್ಲಿ ಮನುವಿನ ಉತ್ತರಾಧಿಕಾರಿಗಳು ಇನ್ನೂ ಮುಂದೆ ಹೋದರು. ಉದಾಹರಣೆಗೆ, ವೇದವನ್ನು ಕದ್ದು ಕೇಳಿದ ಅಥವಾ ಉಚ್ಚರಿಸುವ ಶೂದ್ರನ ನಾಲಿಗೆಯನ್ನು ಸೀಳಿ ಅವನ ಕಿವಿಗೆ ಕಾದ ಸೀಸ ಸುರಿಯಬೇಕೆಂಬ ಕಾತ್ಯಾಯನನು ರಾಜನಿಗೆ ವಿಧಿಸಿದ್ದಾನೆ.

ಇನ್ನು ಸೊತ್ತಿನ ವಿಚಾರದಲ್ಲಿ ಮನು ನಿರ್ದಯಿಯೂ, ನಿರ್ಲಜ್ಜನೂ ಆಗಿದ್ದಾನೆ. ಮನು ಸಂಹಿತೆಯ ಪ್ರಕಾರ:

X ೧೨೯. ಸಾಮರ್ಥ್ಯವಿದ್ದರೂ ಶೂದ್ರನು ಹೆಚ್ಚು ಧನಸಂಚಯ ಮಾಡಬಾರದು. ಯಾಕೆಂದರೆ ಧನಾರ್ಜನೆ ಮಾಡಿದ ಅಧಮನು ಗರ್ವಿಷ್ಠನಾಗಿ ಬ್ರಾಹ್ಮಣರನ್ನು ಬಾಧಿಸುತ್ತಾನೆ.

ಈ ನಿಯಮಕ್ಕಿಂತ ಈ ನಿಯಮದ ಕಾರಣವೇ ಹೆಚ್ಚು ಭೀಭತ್ಸವಾಗಿದೆ. ಶೂದ್ರನು ಸಂಪತ್ತು ಸಂಚಯ ಮಾಡುವುದನ್ನು ತಪ್ಪಿಸಲು ಈ ನಿಷೇಧಾತ್ಮಕ ಕಟ್ಟಳೆಯೇ ಸಾಕಾಗುವುದೆಂದು ಮನುವಿಗೆ ಖಾತ್ರಿಯಿರಲಿಲ್ಲ. ಸಂಪತ್ತು ಸಂಗ್ರಹ ಮಾಡಿದ ಶೂದ್ರನು ಬ್ರಾಹ್ಮಣರನ್ನು ಬಾಧಿಸುವ ಅವಕಾಶವೇ ಇರಬಾರದೆಂದು ಮನು ತನ್ನ ಸಂಹಿತೆಗೆ ಇನ್ನೊಂದು ನಿಯಮ ಸೇರಿಸಿ ಹೀಗೆ ಘೋಷಿಸುತ್ತಾನೆ:

VIII ೪೧೭. ವಿಪತ್ತಿನಲ್ಲಿರುವ ಬ್ರಾಹ್ಮಣರು ಶೂದ್ರನ ದ್ರವ್ಯವನ್ನು ನಿಸ್ಸಂಕೋಚವಾಗಿ ವಶಪಡಿಸಿಕೊಳ್ಳಬಹುದು.

ಶೂದ್ರನ ಸ್ವತ್ತಷ್ಟೇ ಅಲ್ಲ, ಶೂದ್ರನ ಕಾಯಕವನ್ನೂ ಮುಟ್ಟುಗೋಲು ಹಾಕಿಕೊಳ್ಳಬಹುದೆಮದು ಮನು ಘೋಷಿಸುತ್ತಾನೆ. ಮನುವಿನ ಈ ವಿಧಿಯನ್ನು ಗಮನಿಸಿ:

VIII ೪೧೩. ಕ್ರಯಕ್ಕೆ ಕೊಂಡವನಾಗಿರಲಿ ಅಲ್ಲದಿರಲಿ ಶೂದ್ರನನ್ನು ಬ್ರಾಹ್ಮಣನು ಸೇವೆ ಮಾಡಲು ಒತ್ತಾಯಿಸಬಹುದು. ಶೂದ್ರನು ಸ್ವಯಂಭೂವಿನಿಂದ ದಾಸನಾಗಲೆಂದೇ ಸೃಷ್ಟಿಯಾದವನು.

ಶೂದ್ರನು ತನ್ನ ಮಾತಿನಲ್ಲಿಯೂ ಅಧಮನಾಗಿರಬೇಕೆಂದು ಮನು ಬಯಸುತ್ತಾನೆ. ಆತನೆಷ್ಟು ಅಧಮನಾಗಿರಬೇಕಂಬುದು ಮನುವಿನ ಈ ಕೆಳಗಿನ ವಿಧಿಗಳಲ್ಲಿ ಗೋಚರವಾಗುತ್ತದೆ:

VIII ೨೭೦. ಏಕಜಾತಿಯವನು (ಶೂದ್ರ) ದ್ವಿಜರನ್ನು ದಾರುಣ ಮಾತುಗಳಿಂದ (ನಿಂದಿಸಿದರೆ), ಆತನ ಪಾಲಿಗೆ ಛೇದ ಮಾಡಬೇಕು. ಯಾಕೆಂದರೆ ಆತ ಕೆಳಹುಟ್ಟಿನವನು.

VIII ೨೭೧. ದ್ವಿಜರ ನಾಮ ಜಾತಿ ಹಿಡಿದು ದ್ವೇಷದಿಂದ ಸಂಬೋಧಿಸಿದರೆ, ಕಾಯಿಸಿದ ದಶಾಂಗುಲ ಕಬ್ಬಿಣ ಸರಳನ್ನು ಅವನ ಬಾಯಿಗೆ ತುರುಕಬೇಕು.

ಶೂದ್ರ ಕೇವಲ ಅಧಮನಾದರೆ ಸಾಲದು. ಆತ ಸಂಪೂರ್ಣ ತಿರಸ್ಕಾರ ಯೋಗ್ಯ ವ್ಯಕ್ತಿಯಾಗಬೇಕೆಂಬುದು ಮನುವಿನ ಉದ್ದೇಶವಾಗಿತ್ತು. ಮನು ಶೂದ್ರನಿಗೆ ಉತ್ತಮ ಹೆಸರಿನ ಸೌಲಭ್ಯವನ್ನೂ ನೀಡುವುದಿಲ್ಲ. ಮನು ನಿಸ್ಸಂಧಿಗ್ಧ ಪುರಾವೆಗಳನ್ನು ಒದಗಿಸಲು ಇರದಿದ್ದರೆ ಬ್ರಾಹ್ಮಣ ಧರ್ಮ ಶೂದ್ರನನ್ನು ತುಳಿಯಲು ಅಷ್ಟು ಅಖಂಡವಾಗಿ ನಿರ್ದಯವಾಗಿ ವರ್ತಿಸಿತೆಂಬುದನ್ನು ನಂಬಲೂ ಕಷ್ಟವಾಗುತ್ತಿತ್ತು. ಬೇರೆ ಬೇರೆ ವರ್ಗಗಳ ಜನ ತಮ್ಮ ಮಕ್ಕಳಿಗೆ ಹೆಸರು ಕೊಡುವ ಕುರಿತ ಮನು ಶಾಸನವನ್ನು ಗಮನಿಸಿ:

II ೩೧. ಬ್ರಾಹ್ಮಣನ (ಮೊದಲ) ಹೆಸರು ಮಂಗಳಕರವಾಗಿ, ಕ್ಷತ್ರಿಯನ (ಹೆಸರು) ಬಲಾನ್ವಿತವಾಗಿ, ವೈಶ್ಯನ (ಹೆಸರು) ಧನ ಸಂಯುಕ್ತವಾಗಿ, ಶೂದ್ರನ (ಹೆಸರು) ಜಿಗುಪ್ಸೆ ಹುಟ್ಟಿಸುವಂತೆ ಇರಲಿ.

II ೩೨. ಬ್ರಾಹ್ಮಣನ ಸಹನಾಮ (ಎರಡನೇ ಹೆಸರು) ಸಂತೋಷ ಕೊಡುವಂತೆ, ಕ್ಷತ್ರಿಯ ಸಹನಾಮ ರಕ್ಷೆಯನ್ನು ಸೂಚಿಸುವಂತೆ, ವೈಶ್ಯನ ಎರಡನೇ ಹೆಸರು ಪುಷ್ಟಿಯನ್ನು ಸೂಚಿಸುವಂತೆ ಮತ್ತು ಶೂದ್ರನ ಹೆಸರು ದಾಸ್ಯವನ್ನು ಸೂಚಿಸುವಂತೆ ಇರಬೇಕು.

ಈ ಎಲ್ಲ ಅಮಾನವೀಯ ಶಾಸನಗಳಿಗೆ, ಶೂದ್ರನ ಬಗ್ಗೆ ಮನು ರೂಪಿಸಿದ ಸಿದ್ಧಾಂತವೇ ಆಧಾರ. ತನ್ನ ಸಂಹಿತೆಯ ಮೊದಲಲ್ಲೇ ಮನು ನಾಚಿಕೊಳ್ಳದೆ ಒತ್ತಿಹೇಳುತ್ತಾನೆ:

I ೯೧. (ಉಳಿದ ಮೂರು) ವರ್ಣಗಳನ್ನು ಅಸೂಯೆಯಿಲ್ಲದೆ ಸೇವೆ ಮಾಡುವುದೇ ಶೂದ್ರನಿಗೆ ಪ್ರಭು ವಿಧಿಸಿದ ಏಕಮೇವ ಕರ್ಮ.

ದಾಸನಾಗಲೆಂದೇ ಶೂದ್ರ ಹುಟ್ಟಿದ್ದು ಎನ್ನುವ ಮನು, ಆ ಪ್ರಕಾರ ಆತ ದಾಸನಾಗಿಯೇ ಉಳಿಯುವಂತೆ ಒತ್ತಾಯಿಸಲು ಕಾನೂನು ರೂಪಿಸಿದ. ಬೌದ್ಧ ಸಾಮ್ರಾಜ್ಯದಲ್ಲಿ ಶೂದ್ರ ನ್ಯಾಯಾಧೀಶ, ಪುರೋಹಿತ ಅಥವಾ ಅತ್ಯುನ್ನತ ಸ್ಥಾನದ ರಾಜನೂ ಆಗಬಹುದಿತ್ತು, ಇದರೊಡನೆ ಶೂದ್ರನ ಮುಂದೆ ಮನು ಇರಿಸಿದ ಆದರ್ಶವನ್ನು ಹೋಲಿಸಿನೋಡಿ. ಆಗ ಬ್ರಾಹ್ಮಣ ಧರ್ಮದಡಿ ಇದ್ದ ವಿಧಿಯೇನು ಎಂದು ಗೊತ್ತಾಗಬಲ್ಲುದು:

X ೧೨೧. ಜೀವನೋಪಾಯದ ಆಕಾಂಕ್ಷೆಯುಳ್ಳ ಶೂದ್ರನು (ಬ್ರಾಹ್ಮಣರ ಸೇವೆ ಸಿಕ್ಕದಿದ್ದಲ್ಲಿ) ಕ್ಷತ್ರಿಯರಿಗೆ ಅಥವಾ ಧನಿಕ ವೈಶ್ಯರಿಗೆ ಸೇವೆ ಸಲ್ಲಿಸಬಹುದು.

X ೧೨೨. ಆದರೆ ಶೂದ್ರನು ಸ್ವರ್ಗಾರ್ಥವಾಗಿ ಅಥವಾ ಉಭಯಾರ್ಥವಾಗಿ (ಇಹ, ಪರಲೋಕಗಳ ಶ್ರೇಯಸ್ಸಿಗಾಗಿ) ಬ್ರಾಹ್ಮಣನ ಸೇವೆ ಮಾಡಲಿ. ಬ್ರಾಹ್ಮಣ ಸೇವಕನೆಂಬ ಹೆಸರಿನಿಂದಲೇ ಆತ ಕೃತ್ಯಕೃತ್ಯನಾಗುತ್ತಾನೆ.

X ೧೨೩. ಶೂದ್ರನಿಗೆ ಬ್ರಾಹ್ಮಣ ಸೇವೆಯೇ ಅತ್ಯುತ್ತಮ ಕರ್ಮವೆಂದು ಕೀರ್ತಿಸಲಾಗಿದೆ. ಬೇರೇನು ಮಾಡಿದರೂ ನಿಷ್ಫಲ.

X ೧೨೪. ಆತನ (ಸೇವಕನ) ಶಕ್ತಿ, ದಕ್ಷತೆ ಮತ್ತು ಅವಲಂಬಿತರನ್ನು ನೊಡಿ ತಮ್ಮ ಕುಟುಂಬ ದ್ರವ್ಯದಿಂದ ಅವನಿಗೆ ಜೀವನಾಂಶ ಕೊಡಬೇಕು.

X ೧೨೫. ಅವನಿಗೆ ಉಂಡು ಮಿಕ್ಕಿದ ಅನ್ನ, ಹಳೆಯ ಬಟ್ಟೆ, ಧಾನ್ಯ, ಹಾಸಿಗೆ ಕೊಡಬೇಕು.

ಮನು ಶೂದ್ರರಿಗಿಂತ ಹೆಂಗಸರ ಬಗ್ಗೆ ಹೆಚ್ಚು ಮೃದುವಾಗಿದ್ದ ಎಂದೇನು ಹೇಳುವಂತಿಲ್ಲ. ಆತ ಸ್ತ್ರೀಯರ ಬಗ್ಗೆ ಕೀಳು ಅಭಿಪ್ರಾಯದಿಂದಲೇ ಆರಂಭಿಸುತ್ತಾನೆ. ಮನು ಘೋಷಿಸುತ್ತಾನೆ:

II ೨೧೩. ಪುರುಷದೋಷವು ಈ (ಜಗತ್ತಿನ) ನಾರಿಯರ ಸ್ವಭಾವ. ಆದ್ದರಿಂದಲೇ ಬುದ್ಧಿವಂತರು ನಾರಿ ಸಹವಾಸದಲ್ಲಿ ಅಜಾಗರೂಕರಾಗಿರಬಾರದು.

II ೨೧೪. ನಾರಿಯರು ಅವಿದ್ಯಾವಂತನಷ್ಟೇ ಅಲ್ಲ, ವಿದ್ವಾಂಸರನ್ನೂ ಕಾಮ ಕ್ರೋಧ ವಶರಾಗಿಸಿ ಭ್ರಷ್ಟರನ್ನಾಗಿಸಬಲ್ಲರು.

II ೨೧೫. (ಗಂಡಸು) ತಾಯಿ, ಸೋದರಿ ಅಥವಾ ಮಗಳೊಡನೆಯೂ ಏಕಾಂತದಲ್ಲಿರಬಾರದು. ಇಂದ್ರಿಯಗಳು ಬಲವಾಗಿದ್ದು ವಿದ್ವಾಂಸನನ್ನೂ ಸೋಲಿಸಬಲ್ಲವು.

IX ೧೪. ಸ್ತ್ರೀಯರು ಸೌಂದರ್ಯವನ್ನಾಗಲೀ ವಯಸ್ಸನ್ನಾಗಲೀ ಗಣಿಸುವುದಿಲ್ಲ. ಗಂಡಾದರೆ (ಸಾಕೆಂದು) ಸುಂದರನಿಗೂ ಕುರೂಪಿಗೂ ಒಲಿಯುತ್ತಾರೆ.

IX ೧೫. ತಮ್ಮ ಪುರುಷಗತಿಯಿಂದ, ಚಂಚಲಚಿತ್ತದಿಂದ, ಸ್ವಭಾವತಃ ಸ್ನೇಹ ಹೀನರಾದ್ದರಿಂದ ಸ್ತ್ರೀಯರು ಎಷ್ಟೇ ರಕ್ಷಿತರಾಗಿದ್ದರೂ ತಮ್ಮ ಗಂಡನಲ್ಲಿ ವಿಕಾರ ಹೊಂದುತ್ತಾರೆ.

IX ೧೬. ಪ್ರಜಾಪತಿಯು ಅವರಲ್ಲಿರಿಸಿದ ಈ ಸ್ವಭಾವವನ್ನು ಅರಿತು ಪುರುಷರೆಲ್ಲರೂ ಪರಮ ಯತ್ನದಿಂದ (ತಮ್ಮ) ರಕ್ಷಣೆ ಮಾಡಿಕೊಳ್ಳಬೇಕು.

IX ೧೭. (ಅವರನ್ನು ಸೃಷ್ಟಿಸುವಾಗ) ಮನುವು (ಸ್ತ್ರೀಯರಲ್ಲಿ) ಶಯ್ಯೆ (ಪ್ರೇಮ), ಆಸನ (ಪ್ರೇಮ) ಅಲಂಕಾರ, ಕಾಮ, ಕ್ರೋಧ, ಕಪಟ, ದ್ರೋಹಭಾವ, ದುರ್ವರ್ತನೆಗಳನ್ನು ಕಲ್ಪಿಸಿದನು.

ಸ್ತ್ರೀಯರ ವಿರುದ್ಧ ಮನು ರೂಪಿಸಿದ ಶಾಸನವೂ ಇದೇ ದೃಷ್ಟಿಕೋನದ್ದು. ಯಾವ ಸಂದರ್ಭದಲ್ಲೂ ಸ್ತ್ರೀಯರು ಸ್ವತಂತ್ರರಾಗಿತಕ್ಕದ್ದಲ್ಲ. ಮನುವಿನ ಅಭಿಪ್ರಾಯದಲ್ಲಿ:

IX ೨. ಸ್ತ್ರೀಯರು ಹಗಲು ರಾತ್ರಿಯೂ ಪುರುಷರ ಅಧೀನದಲ್ಲಿರಬೇಕು. ವಿಷಯಾಸಕ್ತರಾಗಿದ್ದರೆ ಸ್ವಂತ ನಿಯಂತ್ರಣದಲ್ಲಿರಿಸಬೇಕು.

IX ೩. ಕೌಮಾರ್ಯದಲ್ಲಿ ತಂದೆ, ಯೌವನದಲ್ಲಿ ಗಂಡ, ವೃದ್ಧಾಪ್ಯದಲ್ಲಿ ಮಗ (ಅವಳನ್ನು) ರಕ್ಷಿಸುತ್ತಾರೆ. ಸ್ತ್ರೀ ಸ್ವಾತಂತ್ರ್ಯಕ್ಕೆ ಅರ್ಹಳಲ್ಲ.

IX ೫. ಎಂಥ ಸೂಕ್ಷ್ಮ ಪ್ರಸಂಗದಲ್ಲೂ ಸ್ತ್ರೀಯನ್ನು ವಿಶೇಷವಾಗಿ ರಕ್ಷಿಸಬೇಕು. ಅರಕ್ಷಿತಳಾದ ಹೆಣ್ಣು ಎರಡೂ ಕುಲಗಳಿಗೆ ಶೋಕ ತರುತ್ತಾಳೆ.

IX ೬. ಗಂಡಸರು ದುರ್ಬಲರಾದಾಗಲೂ ಸರ್ವ ವರ್ಣಗಳ ಉತ್ತಮ ಧರ್ಮವೆಂದು ತಿಳಿದು ಹೆಂಡತಿಯರನ್ನು ರಕ್ಷಿಸಬೇಕು.

V ೧೪೭. ಹುಡುಗಿಯಾಗಲಿ, ಯುವತಿಯಾಗಲಿ, ಮುದುಕಿಯಾಗಲೀ, ತನ್ನ ಮನೆಯಲ್ಲೂ ಸ್ವತಂತ್ರವಾಗಿ (ಯಜಮಾನನನ್ನು ಕೇಳದೆ) ಏನೂ ಮಾಡಬಾರದು.

V ೧೪೮. ಬಾಲ್ಯದಲ್ಲಿ ತಂದೆಯ, ಯೌವನದಲ್ಲಿ ಕೈಹಿಡಿದವನ, ಅವನಿಲ್ಲದಿದ್ದರೆ (ಮುಪ್ಪಿನಲ್ಲಿ) ಗಂಡುಮಕ್ಕಳ ವಶದಲ್ಲಿರಬೇಕು. ಸ್ತ್ರೀ ಎಂದೂ ಸ್ವತಂತ್ರಳಾಗಿರಬಾರದು.

V ೧೪೯. ತಂದೆ, ಗಂಡ ಅಥವಾ (ಗಂಡು) ಮಕ್ಕಳಿಂದ ಸ್ತ್ರೀ ಬೇರೆಯಾಗ ಬಯಸಬಾರದು. ಅವರನ್ನು ಬಿಟ್ಟರೆ (ಗಂಡನ ಹಾಗೂ ತಂದೆಯ) ಎರಡೂ ಕುಲಗಳು ದೂಷಣೆಗೆ ಗುರಿಯಾಗುತ್ತವೆ.

ಸ್ತ್ರೀಗೆ ವಿಚ್ಛೇದನದ ಹಕ್ಕು ಇರತಕ್ಕದ್ದಲ್ಲ.

IX ೪೫. ಗಂಡನೂ ಹೆಂಡತಿಯೂ ಸೇರಿ ಏಕಾಂಗರೆಂದು ಘೋಷಿಸಲಾಗಿದೆ. ಅಂದರೆ ಸ್ತ್ರೀ ಒಮ್ಮೆ ಮದುವೆಯಾದರೆ ವಿಚ್ಛೇದನವಿಲ್ಲ. ವಿಚ್ಛೇದನ ಕುರಿತಂತೆ ಮನು ಶಾಸನದ

ಪೂರ್ಣ ಕತೆ ಇದಿಷ್ಟೇ ಎಂಬಂತೆ ಅನೇಕ ಹಿಂದೂಗಳು ಇಲ್ಲಿಗೇ ನಿಲ್ಲಿಸುತ್ತಾರೆ ಮತ್ತು ಮನು ಮದುವೆಯನ್ನು ಧರ್ಮಸಂಸ್ಕಾರ ಎಂದು ಪರಿಗಣಿಸುವುದರಿಂದ ವಿಚ್ಛೇದನಕ್ಕೆ ಅವಕಾಶ ಕೊಟ್ಟಿಲ್ಲವೆಂದು ಸ್ತುತಿಸುವ ಮೂಲಕ ತಮ್ಮ ಆತ್ಮಸಾಕ್ಷಿಯನ್ನು ಸಂತೈಸಿಕೊಳ್ಳುತ್ತಾರೆ. ಇದು ಸತ್ಯಕ್ಕೆ ದೂರವೆಂದು ಹೇಳಲೇಬೇಕಿಲ್ಲ. ಆತನ ವಿಚ್ಛೇದನ ವಿರೋಧಿ ಶಾಸನಕ್ಕೆ ಬೇರೆಯೇ ಪ್ರೇರಣೆಯಿತ್ತು. ಅದು ಹೆಣ್ಣಿಗೆ ಗಂಡನ್ನು ಕಟ್ಟುವುದಲ್ಲ. ಗಂಡಿಗೆ ಹೆಣ್ಣನ್ನು ಕಟ್ಟಿ ಗಂಡನ್ನು ಮುಕ್ತವಾಗಿ ಬಿಡುವುದಾಗಿತ್ತು. ಯಾಕೆಂದರೆ ತನ್ನ ಹೆಂಡತಿಯನ್ನು ಬಿಡಲು ಮನು ಗಂಡಿಗೇನೂ ನಿರ್ಬಂಧ ಹಾಕಿಲ್ಲ. ಅಷ್ಟೇಕೆ, ಹೆಂಡತಿಯನ್ನು ಬಿಡಲಿಕ್ಕಷ್ಟೇ ಅಲ್ಲ ಮಾರಲಿಕ್ಕೂ ಆತ ಅನುಮತಿ ಕೊಟ್ಟಿದ್ದಾನೆ. ಆದರೆ ಆತ ನಿಜಕ್ಕೂ ತಪ್ಪಿಸುವುದೇನೆಂದರೆ ಹೆಂಡತಿ ಸ್ವತಂತ್ರಳಾಗುವುದು. ಮನು ಏನು ಹೇಳುತ್ತಾನೆ ನೋಡಿ:

IX ೪೬. ಕ್ರಯದಿಂದಾಗಲೀ ಗಂಡನು ತೊರೆದದರಾಗಲೀ ಪತ್ನಿಯು ವಿಮುಕ್ತಳಾಗುವುದಿಲ್ಲ. ಇದರರ್ಥವೇನೆಂದರೆ, ಗಂಡನು ಮಾರಿದ ಅಥವಾ ತ್ಯಜಿಸಿದ ಮೇಲೆ ಹೆಂಡತಿಯು ತನ್ನನ್ನು ಕೊಂಡ ಅಥವಾ ಪತಿ ಪರಿತ್ಯಾಗದ ನಂತರ ಸ್ವೀಕರಿಸಿದ ಯಾರೊಬ್ಬರ ಕಾನೂನುಬದ್ಧ ಹೆಂಡತಿಯೂ ಆಗಲಾರಳು. ಇದು ಪೈಶಾಚಿಕವಲ್ಲದಿದ್ದರೆ, ಇನ್ನಾವುದೂ ಅಲ್ಲ. ಆದರೆ ಮನುವಿಗೆ ತನ್ನ ಶಾಸನದ ನ್ಯಾಯ–ಅನ್ಯಾಯಗಳ ಚಿಂತೆಯೇ ಇರಲಿಲ್ಲ. ಆತ ಬೌದ್ಧ ಸಾಮ್ರಾಜ್ಯದಲ್ಲಿ ಸ್ತ್ರೀಗೆ ಇದ್ದ ಸ್ವಾತಂತ್ರ್ಯವನ್ನು ಕಸಿದುಕೊಳ್ಳಬಯಸಿದ್ದ ಅಷ್ಟೇ. ಅವಳ ಸ್ವಾತಂತ್ರ್ಯದ ದುರುಪಯೋಗದಿಂದ ವರ್ಣವ್ಯವಸ್ಥೆಯ ಶ್ರೇಣೀಕೃತ ಪದ್ಧತಿ ನಾಶವಾಯಿತೆಂದು ಅವನಿಗೆ ಗೊತ್ತಿತ್ತು. ಅವಳ ಸ್ವೇಚ್ಛೆಯಿಂದ ರೊಚ್ಚಿಗೆದ್ದ ಮನು ಅವಳ ಸ್ವಾತಂತ್ರ್ಯವನ್ನು ಕಸಿದುಕೊಂಡ. ಆಸ್ತಿ ವಿಚಾರದಲ್ಲಿ ಮನು ಹೆಂಡತಿಯನ್ನು ಗುಲಾಮಳ ಸ್ಥಾನಕ್ಕಿಳಿಸಿದ.

೧೪೬. ಹೆಂಡತಿ, ಮಗ ಮತ್ತು ದಾಸ ಈ ಮೂವರಿಗೂ ಆಸ್ತಿ (ಹಕ್ಕು) ಇಲ್ಲವೆಂದು ಘೋಷಿಸಲಾಗಿದೆ, ಅವರು ಗಳಿಸುವ ಸಂಪತ್ತೂ ಅವರು ಯಾರಿಗೆ ಸೇರಿದ್ದಾರೋ ಅವರಿಗೆ ಸೇರುತ್ತದೆ.

ಆಕೆ ವಿಧವೆಯಾದಾಗ, ಅವಳ ಗಂಡ ಅವಿಭಕ್ತ ಕುಟುಂಬಕ್ಕೆ ಸೇರಿದ್ದವನಾಗಿದ್ದರೆ, ಮನು ಆಕೆಗೆ ಜೀವನಾಂಶದ ಅವಕಾಶ ಕೊಟ್ಟಿದ್ದಾನೆ ಅಥವಾ ಆತ ಕುಟುಂಬದಿಂದ ಬೇರೆ ವಾಸಿಸುತ್ತಿದ್ದರೆ ಗಂಡನ ಸೊತ್ತಿನಲ್ಲಿ ಒಂದು ಪಾಲು. ಆದರೆ ಮನು ಆಕೆ ಸೊತ್ತಿನ ಅಧಿಪತ್ಯ ಹೊಂದಲು ಮಾತ್ರ ಬಿಡುವುದಿಲ್ಲ.

ಮನುವಿನ ಕಾನೂನುಗಳಲ್ಲಿ ಸ್ತ್ರೀಗೆ ದೇಹ ದಂಡನೆಯೂ ಇದೆ ಮತ್ತು ಮನು ಹೆಂಡತಿಗೆ ಹೊಡೆಯುವ ಹಕ್ಕನ್ನೂ ಗಂಡನಿಗೆ ಕೊಟ್ಟಿದ್ದಾನೆ.

VII ೨೯೯. ತಪ್ಪು ಮಾಡಿದ ಹೆಂಡತಿ, ಮಗ, ಶಿಷ್ಯ ಮತ್ತು ದಾಸನಿಗೆ ಬಳ್ಳಿ ಅಥವಾ ಬಿದಿರೆಸಳಿನಿಂದ ಹೊಡೆಯಬಹುದು.

ಇನ್ನುಳಿದ ವಿಷಯದಲ್ಲಿ ಮನು ಸ್ತ್ರೀಯನ್ನು ಶೂದ್ರನ ಸ್ಥಾನಕ್ಕೆ ಇಳಿಸಿದ್ದಾನೆ. ಶೂದ್ರನಂತೆಯೇ ಸ್ತ್ರೀದೂ ಮನು ವೇದಾಧ್ಯಯನವನ್ನು ಪ್ರತಿಬಂಧಿಸಿದ್ದಾನೆ.

II ೬೬. ಸ್ತ್ರೀಗೂ ಸಂಸ್ಕಾರಗಳ ಅಗತ್ಯವಿದೆ ಮತ್ತು ಅವನ್ನು ಆಚರಿಸಬೇಕು. ಆದರೆ ಅವನ್ನು (ವೇದ) ಮಂತ್ರಗಳ ಉಚ್ಚಾರವಿಲ್ಲದೆ ಮಾಡಬೇಕು.

IX ೧೮. ಸ್ತ್ರೀಯರಿಗೆ ವೇದಾಧ್ಯಯನದ ಹಕ್ಕಿಲ್ಲ. ಆದ್ದರಿಂದಲೇ ವೇದಮಂತ್ರಗಳ ಉಚ್ಚಾರವಿಲ್ಲದೆ ಅವರ ಸಂಸ್ಕಾರಗಳನ್ನು ಮಾಡುತ್ತಾರೆ. ಸ್ತ್ರೀಯರಿಗೆ ವೇದಜ್ಞಾನದ ಹಕ್ಕಿಲ್ಲವಾದ್ದರಿಂದ ಅವರಿಗೆ ಧರ್ಮಜ್ಞಾನವೂ ಇರುವುದಿಲ್ಲ. ಪಾಪ ಪರಿಹಾರಕ್ಕೆ ವೇದ ಮಂತ್ರ ಪಠನದ ಅಗತ್ಯವಿದೆ. ಸ್ತ್ರೀಯರು ವೇದಮಂತ್ರಗಳನ್ನು ಹೇಳುವಂತಿಲ್ಲವಾದ್ದರಿಂದ ಅವರು ಅನೃತರಷ್ಟೇ ಅಶುದ್ಧರು.

ಬ್ರಾಹ್ಮಣ ಧರ್ಮದ ಪ್ರಕಾರ ಯಜ್ಞವೇ ಧರ್ಮದ ಜೀವಾತ್ಮ. ಆದರೂ ಯಾಗದ ಆಚರಣೆಯನ್ನು ಮನು ಸ್ತ್ರೀಯರಿಗೆ ಬಿಟ್ಟುಕೊಡುವುದಿಲ್ಲ. ಮನು ವಿಧಿಸುತ್ತಾನೆ:

XI ೩೬. ಸ್ತ್ರೀಯು ವೇದೋಕ್ತ ಅಗ್ನಿಹೋತ್ರಗಳನ್ನು ಮಾಡಬಾರದು.

XI ೩೭. ಮಾಡಿದರೆ ನರಕಕ್ಕೆ ಬೀಳುತ್ತಾಳೆ.

ಅಂಥ ಯಜ್ಞಯಾಗಗಳನ್ನು ಆಕೆ ಮಾಡುವುದನ್ನು ತಪ್ಪಿಸಲೆಂದೇ ಮನು ಸ್ತ್ರೀಯು ಬ್ರಾಹ್ಮಣ ಪುರೋಹಿತನ ನೆರವು ಮತ್ತು ಸೇವೆ ಪಡೆಯುವುದನ್ನು ನಿರ್ಬಂಧಿಸುತ್ತಾನೆ.

IV ೨೦೫. ಸ್ತ್ರೀ ಮಾಡಿದ ಯಜ್ಞದಲ್ಲಿ ಬ್ರಾಹ್ಮಣನು ಊಟ ಮಾಡಬಾರದು.

IV ೨೦೬. ಸ್ತ್ರೀಯರು ಮಾಡಿದ ಯಜ್ಞವು ಅಶುಭಕರ ಮತ್ತು ದೇವರಿಗೂ ಪ್ರಿಯವಲ್ಲ. ಆದ್ದರಿಂದ ಅವನ್ನು ವರ್ಜಿಸಬೇಕು.

ಸ್ತ್ರೀ ಯಾವುದೇ ಬೌದ್ಧಿಕ ಚಟುವಟಿಕೆಗಳಲ್ಲಿ ತೊಡಗುವಂತಿರಲಿಲ್ಲ. ಆಕೆಗೆ ಸ್ವತಂತ್ರ ಸಂಕಲ್ಪವಾಗಲೀ, ಆಲೋಚನಾ ಸ್ವಾತಂತ್ರವಾಗಲೀ ಇರುವಂತಿರಲಿಲ್ಲ. ಅವಳು ಬೌದ್ಧ ಧರ್ಮದಂಥ ಸಂಪ್ರದಾಯ ವಿರೋಧಿ ಪಂಥಗಳಿಗೂ ಸೇರುವಂತಿರಲಿಲ್ಲ. ಅವಳು ಅದಕ್ಕೆ ಅಂಟಿಕೊಂಡು ಮುಂದುವರೆದರೆ ಸಾಯುವವರೆಗೂ ಆಕೆಗೆ ಸತ್ತವರೆಲ್ಲರಿಗೂ ಕೊಡುವಂತೆ ತರ್ಪಣ ಕೊಡುವಂತಿಲ್ಲ.

ಕೊನೆಗೆ ಮನು ಸ್ತ್ರೀ ಮುಂದಿರಿಸಿದ ಜೀವನದ ಆದರ್ಶ ಕುರಿತು ಒಂದು ಮಾತು. ಅದನ್ನು ಅವನದೇ ಶಬ್ದಗಳಲ್ಲಿ ಹೇಳುವುದು ಒಳ್ಳೆಯದು:

V ೧೫೧. ತನ್ನ ತಂದೆ ಅಥವಾ ತಂದೆಯ ಅನುಮತಿಯೊಂದಿಗೆ ಸೋದರನು ಯಾರಿಗೆ ತನ್ನನ್ನು ಒಪ್ಪಿಸುತ್ತಾನೋ ಆತ ಬದುಕಿರುವವರೆಗೆ ಆತನನ್ನೇ ಅನುಸರಿಸಿ ನಡೆಯಬೇಕು ಮತ್ತು ಆತ ಸತ್ತ ಮೇಲೆ ಅವನ ಸ್ಮೃತಿಗೆ ಅಪಮಾನ ಮಾಡಬಾರದು.

V ೧೫೪. ಗಂಡಸು ಶೀಲಹೀನನಾಗಿದ್ದರೂ, ಕಾಮವೃತ್ತನಾಗಿ ಬೇರೆಡೆ ಸುಖ ಅರಸುತ್ತಿದ್ದರೂ ಅಥವಾ ಗುಣವಿಹೀನನಾಗಿದ್ದರೂ ಸಾಧ್ವಿಯಾದ ಹೆಂಡತಿಯು ಅವನನ್ನೇ ದೇವರೆಂದು ತಿಳಿದು ಸತತವಾಗಿ ಪೂಜಿಸಬೇಕು.

V ೧೫೫. ಪತಿ ಸೇವೆಯಲ್ಲದೆ ಹೆಂಡತಿಯು ಯಾವುದೇ ಯಜ್ಞ, ವ್ರತ ಅಥವಾ ಉಪವಾಸ ಮಾಡಬಾರದು. ಪತಿ ಶುಶ್ರೂಷೆಯಲ್ಲಿ ತೊಡಗಿದವಳು ಅದೊಂದೇ ಕಾರಣಕ್ಕೆ ಸ್ವರ್ಗವನ್ನು ಹೊಂದುವಳು.

ಈ ಆದರ್ಶದ ಸಾರಸತ್ವವಾದ ಆಯ್ದ ಪಾಠಗಳು ಈಗ ಬರುತ್ತವೆ. ಮನು ಸ್ತ್ರೀಯರಿಗೆ ಇದನ್ನೇ ವಿಧಿಸಿದ್ದಾನೆ:

V ೧೫೩. ಮಂತ್ರ ಸಂಸ್ಕಾರದೊಂದಿಗೆ ಸ್ವೀಕರಿಸಿದ ಪತಿಯು ಯಾವಾಗಲೂ ಹೆಂಡತಿಗೆ ಸುಖದ ಮೂಲ, ಋತುವಿನಲ್ಲಿ ಅಲ್ಲದಿರುವಾಗಲೂ, ಇಹಲೋಕ, ಪರಲೋಕಗಳೆರಡಲ್ಲೂ,

V ೧೫೦. ಅವಳು ಸದಾ ಸಂತುಷ್ಟಳಾಗಿ, ಗೃಹಕಾರ್ಯದಲ್ಲಿ ದಕ್ಷಳಾಗಿ, ಪಾತ್ರೆ ತೊಳೆಯವುದರಲ್ಲಿ ಒಪ್ಪ ಓರಣದವಳಾಗಿ, ಮಿತವ್ಯಯಿಯಾಗಿರಬೇಕು.

ಇದನ್ನು ಹಿಂದೂಗಳು ಸ್ತ್ರೀಯರ ಅತ್ಯುನ್ನತ ಉತ್ತುಂಗ ಆದರ್ಶವೆಂದು ಭಾವಿಸುತ್ತಾರೆ!!!

ಶೂದ್ರರು ಮತ್ತು ಸ್ತ್ರೀಯರ ವಿರುದ್ಧದ ಈ ಶಾಸನಗಳ ಕಠೋರತೆಯು ಬೌದ್ಧ ಕಾಲದಲ್ಲಿ ಈ ವರ್ಗಗಳ ಭವ್ಯ ಉನ್ನತಿಯಿಂದ ಬ್ರಾಹ್ಮಣರು ಅತೃಪ್ತರಾಗಿದ್ದಷ್ಟೇ ಅಲ್ಲ, ಅವರಿಗಿದು ತೀರಾ ಅಸಹನೀಯವಾಯಿತೆಂಬುದನ್ನೂ ತೋರುತ್ತದೆ. ಅದು ಅವರ ಪವಿತ್ರ ಸಮಾಜ ಕ್ರಮಕ್ಕೆ ಸಂಪೂರ್ಣವಾಗಿ ಹಾಗೂ ಸಾದ್ಯಂತವಾಗಿ ವ್ಯತಿರಿಕ್ತವಾಗಿತ್ತು. ಮೊದಲನೆಯವನು ಕಡೆಯವನಾಗಿ ಕಡೆಯವನು ಪ್ರಥಮನಾಗಿದ್ದ. ಶೂದ್ರರು ಹಾಗೂ ಸ್ತ್ರೀಯರನ್ನು ಅವರ ಹಿಂದಿನ ಅಂತಸ್ತಿಗೆ ತಳ್ಳಲು ಬ್ರಾಹ್ಮಣರು ತಮ್ಮ ರಾಜಕೀಯ ಅಧಿಕಾರವನ್ನು ಬಳಸಲು ಮುಂದಾದ ದೃಢ ನಿಶ್ಚಯದ ವಿಧಾನವನ್ನು ಮನು ಶಾಸನ ವಿವರಿಸುತ್ತದೆ. ಗೆದ್ದ ಬ್ರಾಹ್ಮಣ ಧರ್ಮವು ಗುಲಾಮಗಿರಿ ಎಂಬ ತನ್ನ ಹಳೆಯ ಆದರ್ಶ ಸ್ಥಾಪನೆಗಾಗಿ ಶೂದ್ರರು ಹಾಗೂ ಸ್ತ್ರೀಯರ ಮೇಲೆ ತನ್ನ ಧಾಳಿ ಆರಂಭಿಸಿತು ಮತ್ತು ಶೂದ್ರ ಸ್ತ್ರೀಯರನ್ನು ಗುಲಾಮರಾಗಿ ಮಾಡುವಲ್ಲಿ ಯಶಸ್ವಿಯೂ ಆಯಿತು. ಶೂದ್ರರು ಮೂರು ಮೇಲ್ವರ್ಣಗಳ ಸೇವಕರಾದರೆ ಸ್ತ್ರೀಯರು ಗಂಡಂದಿರ ದಾಸಿಯರಾದರು. ಬ್ರಾಹ್ಮಣ ಧರ್ಮವು ಬೌದ್ಧ ಧರ್ಮದ ವಿರುದ್ಧ ಜಯಗಳಿಸಿದ ನಂತರ ಕೈಗೊಂಡ ಕರಾಳ ಕೃತ್ಯಗಳೆಲ್ಲೆಲ್ಲ ಇದೇ ಕರಾಳತಮವಾದದ್ದು. ವರ್ಗ ಮೇಲ್ಮೆಯ ಹಿತಾಸಕ್ತಿಯಿಂದ ಆಕ್ರಮಣಕಾರಿ ವರ್ಗವೊಂದು ಕೈಗೊಂಡ ಇಂಥ ದಮನಕಾರಿ ಅನ್ಯಾಯ ಕೃತ್ಯಗಳಿಗೆ ಚರಿತ್ರೆಯಲ್ಲಿ ಇನ್ನೊಂದು ಸಮಾನಾಂತರ ನಿದರ್ಶನವಿಲ್ಲ. ಬ್ರಾಹ್ಮಣ ಧರ್ಮ ಸಾಧಿಸಿದ ಈ ಅವನತೀಕರಣದ ವಿರಾಟ್ ಸ್ವರೂಪವನ್ನು ದುರದೃಷ್ಟವಶಾತ್ ಯಾರೂ ಸರಿಯಾಗಿ ಮನಗಂಡಿಲ್ಲ. ಅದು ಸ್ತ್ರೀ ಮತ್ತು ಶೂದ್ರ ಎಂಬ ಆ ಸಣ್ಣ ಏಕಾಕ್ಷರ ಶಬ್ದಗಳಲ್ಲಿ ಮುಚ್ಚಿಹೋಗಿದೆ. ಅವರ ಕೃತ್ಯದ ಅಗಾಧತೆಯ ಕಲ್ಪನೆ ಮಾಡಿಕೊಳ್ಳಬಯಸುವವರು ಅವೆರಡು ಶಬ್ದಗಳ ಹಿಂದಿರುವ ಸಂಖ್ಯೆಯನ್ನು ಕಲ್ಪಿಸಿಕೊಳ್ಳಲಿ. ಇವು ಜನಸಂಖ್ಯೆಯ ಯಾವ ಭಾಗಕ್ಕೆ ಅನ್ವಯಿಸುತ್ತದೆ? ಸ್ತ್ರೀಯರು ಜನಸಂಖ್ಯೆಯ ಅರ್ಧ ಭಾಗವನ್ನು ಪ್ರತಿನಿಧಿಸುತ್ತಾರೆ. ಇನ್ನುಳಿದವರಲ್ಲಿ ಶೂದ್ರರ ಸಂಖ್ಯೆಯು ಮೂರನೇ ಎರಡರಷ್ಟಕ್ಕಿಂತ ಕಮ್ಮಿಯದಲ್ಲ. ಇಬ್ಬರೂ ಸೇರಿದರೆ ಜನಸಂಖ್ಯೆಯ ಶೇಕಡಾ ೭೫ರಷ್ಟಾಗುತ್ತದೆ. ಈ ಅಗಾಧ ಜನಸ್ತೋಮವೇ ಬ್ರಾಹ್ಮಣ ಧರ್ಮದಿಂದಾಗಿ ಶಾಶ್ವತ ಗುಲಾಮಗಿರಿ ಮತ್ತು ಶಾಶ್ವತ ಅವಹೇಳನಕ್ಕೆ ಸಿಕ್ಕಿರುವುದು. ಶೇಕಡ ೭೫ರಷ್ಟು ಜನರ ಜೀವನ, ಸ್ವಾತಂತ್ರ್ಯ ಮತ್ತು ಸಂತೋಷ ಸಾಧನೆಯ ಹಕ್ಕನ್ನು ಕಸಿದ ಈ ಅವನತೀಕರಣದ ವಿರಾಟ್ ಪ್ರಮಾಣದಿಂದಲೇ ಭಾರತ ಸತ್ತ ದೇಶವಲ್ಲದಿದ್ದರೆ ಕೊಳೆಯುತ್ತಿರುವ ರಾಷ್ಟ್ರವಂತೂ ಆಗಿಹೋಗಿದೆ.

ಶ್ರೇಣೀಕೃತ ಅಸಮಾನತೆಯ ತತ್ವ ಇಡಿ ಮನುಸ್ಮೃತಿಯಲ್ಲಿ ಹಾಸುಹೊಕ್ಕಾಗಿದೆ. ಆತ ಈ ಶ್ರೇಣೀಕೃತ ಅಸಮಾನತೆಯ ತತ್ವವನ್ನು ಅಳವಡಿಸದ ಬಾಳಿನ ಯಾವ ಶಾಖೆಯೂ ಇಲ್ಲ. ಅದರ ಸಂಪೂರ್ಣ ಹಾಗೂ ಸಮರ್ಥ ಪ್ರತಿಪಾದನೆಗೆ ಇಡಿ ಮನುಸ್ಮೃತಿಯನ್ನೇ ಉಲ್ಲೇಖಿಸುವುದು ಅಗತ್ಯವಾಗಿರುತ್ತದೆ. ನಾನು ಶ್ರೇಣೀಕೃತ ಅಸಮಾನತೆಯ ತತ್ವ ಮನುವಿನ ಕೈಯಿಂದ ಹೇಗೆ ಸಾಮಾಜಿಕ ಬದುಕಿನಲ್ಲಿ ಅಡಕವಾಯಿತೆಂದು ತೋರಿಸಲು ಕೆಲವು ಶಾಖೆಗಳ ಉದಾಹರಣೆ ಮಾತ್ರ ಎತ್ತಿಕೊಳ್ಳುತ್ತೇನೆ.

ಮದುವೆಯ ಕ್ಷೇತ್ರವನ್ನೇ ತೆಗೆದುಕೊಳ್ಳಿ. ಮನು ನಿಯಮವನ್ನು ಗಮನಿಸಿ:

II ೧೩. ಶೂದ್ರನಿಗೆ ಶೂದ್ರ ಸ್ತ್ರೀ ಮಾತ್ರ ಹೆಂಡತಿಯಾಗಬಲ್ಲಳು. ವೈಶ್ಯನಿಗೆ ವೈಶ್ಯ ಮತ್ತು ಶೂದ್ರ ಸ್ತ್ರೀ, ಕ್ಷತ್ರಿಯನಿಗೆ ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಸ್ತ್ರೀ, ಬ್ರಾಹ್ಮಣನಿಗೆ ನಾಲ್ಕು ವರ್ಣಗಳ ಸ್ತ್ರೀ ಹೆಂಡತಿಯಾಗಬಲ್ಲಳು.

ಅತಿಥಿ ಸತ್ಕಾರ ಕುರಿತ ಮನು ನಿಯಮಗಳನ್ನೇ ತೆಗೆದುಕೊಳ್ಳಿ:

III ೧೧೦. ಆದರೆ ಬ್ರಾಹ್ಮಣನ ಮನೆಗೆ (ಬಂದ) ಕ್ಷತ್ರಿಯನನ್ನು ಅತಿಥಿ ಎನ್ನುವುದಿಲ್ಲ. ವೈಶ್ಯ, ಶೂದ್ರ, ಮಿತ್ರ, ಬಂಧು, ಗುರು ಇವರಾರೂ ಅತಿಥಿಗಳಲ್ಲ.

III ೧೧೧. ಆದರೆ ಕ್ಷತ್ರಿಯನೇನಾದರೂ ಅತಿಥಿಯಾಗಿ ಬ್ರಾಹ್ಮಣನ ಮನೆಗೆ ಬಂದರೆ, ಬ್ರಾಹ್ಮಣನು ತಾನು ಊಟ ಮಾಡಿದ ಮೇಲೆ, ತನಗಿಷ್ಟ ಬಂದ ರೀತಿಯಲ್ಲಿ ಭೋಜನ ಮಾಡಿಸಬಹುದು.

III ೧೧೨. ಒಂದು ವೇಳೆ ವೈಶ್ಯ, ಶೂದ್ರರು ಅತಿಥಿಗಳಾಗಿ ಮನೆಗೆ ಬಂದರೆ ಅವರಿಗೆ ಮನೆಯ ಸೇವಕರೊಡನೆ ಊಟ ಬಡಿಸಿ ದಯೆ ತೋರಿಸಬೇಕು.

ಬ್ರಾಹ್ಮಣನ ಮನೆಯಲ್ಲಿ ಬ್ರಾಹ್ಮಣನ ಹೊರತು ಇನ್ಯಾರಿಗೂ ಅತಿಥಿ ಎಂಬ ಗೌರವ ಇರುವಂತಿಲ್ಲ[೧] ಕ್ಷತ್ರಿಯನೇನಾದರೂ ಬ್ರಾಹ್ಮಣನ ಮನೆಗೆ ಅತಿಥಿಯಾಗಿ ಬಂದರೆ ಎಲ್ಲ ಬ್ರಾಹ್ಮಣರಿಗೂ ಬಡಿಸಿದ ಮೇಲೆ ಆತನಿಗೆ ಭೋಜನ ಮಾಡಿಸಬೇಕು. ಮತ್ತು ವೈಶ್ಯ ಶೂದ್ರರು ಅತಿಥಿಗಳಾಗಿ ಬಂದರೆ, ಎಲ್ಲರಿಗೂ ಬಡಿಸಿಯಾದ ಮೇಲೆ ಅವರಿಗೆ ಭೋಜನ ಮಾಡಿಸಬೇಕು, ಅದು ಸೇವಕರ ಜೊತೆಯಲ್ಲಿ.

ಸಂಸ್ಕಾರಗಳನ್ನು ಕುರಿತ ಮನು ನಿಯಮಗಳನ್ನು ತೆಗೆದುಕೊಳ್ಳಿ:

X ೧೨೬ ಶೂದ್ರನಿಗೆ ಸಂಸ್ಕಾರಗಳ ಅರ್ಹತೆಯಿಲ್ಲ.

X ೬೮. (ಮಿಶ್ರ ಜಾತಿ ಮದುವೆಯ) ಇಬ್ಬರಿಗೂ ಸಂಸ್ಕಾರವಿಲ್ಲ. ಮೊದಲನೆಯವರು ಕೆಳಹುಟ್ಟಿನಿಂದಾಗಿ, ಎರಡನೆಯವರು ಪ್ರತಿಲೋಮದಿಂದಾಗಿ ಅನರ್ಹರಾಗುತ್ತಾರೆ.

II ೬೬. ಸ್ತ್ರೀಯರಿಗೆ ಎಲ್ಲ ಜಾತಕ ಕರ್ಮಗಳನ್ನು[೨] ಯಥಾ ಕಾಲದಲ್ಲಿ ಯಥಾ ಕ್ರಮದಲ್ಲಿ ವೇದ ಮಂತ್ರೋಚ್ಚಾರವಿಲ್ಲದೆ ಶರೀರ ಸಂಸ್ಕಾರಕ್ಕಾಗಿಯೂ ಮಾಡಬೇಕು.

ಮನು ಇನ್ನೂ ವಿಧಿಸುತ್ತಾನೆ:

VI ೧. ಈ ರೀತಿ ಗೃಹಾಶ್ರಮದಲ್ಲಿದ್ದ ದ್ವಿಜ ಸ್ನಾತಕನು ದೃಢ ನಿಶ್ಚಯದಿಂದ (ಈ ಕೆಳಗಿನ ನಿಯಮಗಳಂತೆ) ಜಿತೇಂದ್ರಿಯನಾಗಿ ವನವಾಸ ಮಾಡಬೇಕು.

VI ೩೩. (ಮನುಷ್ಯ ಜೀವನದ) ಮೂರನೇ ಭಾಗವನ್ನು ವನದಲ್ಲಿ ಕಳೆದ ಮೇಲೆ ತನ್ನ ನಾಲ್ಕನೇ ಭಾಗದಲ್ಲಿ ಸರ್ವಸಂಗ ಪರಿತ್ಯಾಗ ಮಾಡಬೇಕು.

ಕಾನೂನಿನಲ್ಲಿಯೂ ಮನು ಶ್ರೇಣೀಕೃತ ಅಸಮಾನತೆಯ ತತ್ವವನ್ನು ಹೇರುತ್ತಾನೆ. ಮಾನನಷ್ಟ ನಿಂದನೆ ಕಾನೂನು ಮತ್ತು ಹಲ್ಲೆ ಕಾನೂನುಗಳ ಎರಡೇ ಉದಾಹರಣೆಗಳನ್ನು ನೋಡಿ:

VIII ೨೬೭. ಕ್ಷತ್ರಿಯನು ಬ್ರಾಹ್ಮಣನನ್ನು ನಿಂದಿಸಿದರೆ ನೂರು (ಪಣ) ದಂಡ. ವೈಶ್ಯನು ಬೈದರೆ ನೂರೈವತ್ತು ಅಥವಾ ಇನ್ನೂರು. ಶೂದ್ರನು ಬೈದರೆ ದೇಹದಂಡನೆ.

VIII ೨೬೮. ಬ್ರಾಹ್ಮಣನು ಕ್ಷತ್ರಿಯನನ್ನು ಬೈದರೆ ಐವತ್ತು (ಪಣ) ದಂಡ, ವೈಶ್ಯನಿಗೆ ಬೈದರೆ ಇಪ್ಪತ್ತೈದು, ಶೂದ್ರನಿಗೆ ಬೈದರೆ ಹನ್ನೆರಡು.

---

೧. ಮನು ಅತಿಥಿ ಶಬ್ದವನ್ನು ತಾಂತ್ರಿಕ ಅರ್ಥದಲ್ಲಿ ಬಳಸುತ್ತಾನೆ. ಒಂದು ರಾತ್ರಿಗೆ ಮಾತ್ರ ಉಳಿಯುವ ಬ್ರಾಹ್ಮಣ ಎಂದು ಅದರರ್ಥ. ನೋಡಿ ೩.೨೦೨.

೨. ಉಪನಯನದ ಹೊರತು ಯಾಕೆಂದರೆ ಸ್ತ್ರೀಗೆ ಉಪನಯನ ನಿಷಿದ್ಧ.

VIII ೨೬೯. ಸಮವರ್ಣದ ದ್ವಿಜರು ಪರಸ್ಪರ ಬೈದರೆ ಹನ್ನೆರಡು (ಪಣ) ದಂಡ, ಹೇಳಬಾರದ (ಪರುಷವಾಕ್ಯ) ಮಾತುಗಳನ್ನಾಡಿದರೆ ಎರಡರಷ್ಟು ದಂಡ.

VIII ೨೭೬. ಬ್ರಾಹ್ಮಣ, ಕ್ಷತ್ರಿಯರು ಪರಸ್ಪರ ನಿಂದಿಸಿದರೆ (ರಾಜನು) ದಂಡ ವಿಧಿಸಬೇಕು. ಬ್ರಾಹ್ಮಣನಿಗೆ ಕನಿಷ್ಠ ದಂಡ, ಕ್ಷತ್ರಿಯನಿಗೆ ಮಧ್ಯಮ ಪ್ರಮಾಣ.

VIII ೨೭೭. ವೈಶ್ಯ, ಶೂದ್ರರಿಗೆ ಅವರ ಜಾತಿಗನುಗುಣವಾಗಿ ಒಂದೇ ಶಿಕ್ಷೆ. ಆದರೆ ಶೂದ್ರನಿಗೆ ಅಂಗ (ನಾಲಿಗೆ) ಛೇದ. ಇದು ನಿಶ್ಚಯವಾಗಿದೆ.

VIII ೨೭೯. ಯಾವ ಅಂಗದಿಂದ ಅಂತ್ಯಜನು ಶ್ರೇಷ್ಠರನ್ನು (ಮೂರು ಮೇಲ್ವರ್ಣಗಳನ್ನು) ಹಿಂಸಿಸುತ್ತಾನೋ ಆ ಅಂಗವನ್ನು ಕತ್ತರಿಸಬೇಕು. ಇದು ಮನುವಿನ ಅನುಶಾಸನ.

VIII ೨೮೦. ದೊಣ್ಣೆಯಿಂದ ಅಥವಾ ಕೈಯಿಂದ ಹೊಡೆಯಲು ಎತ್ತಿದವನ ಕೈ ಕತ್ತರಿಸಬೇಕು. ಕೋಪದಿಂದ ಕಾಲಿನಲ್ಲಿ ಒದ್ದರೆ ಕಾಲು ಕತ್ತರಿಸಬೇಕು.

ಎಲ್ಲೆಲ್ಲೂ ಶ್ರೇಣೀಕೃತ ಅಸಮಾನತೆಯ ತತ್ವವೇ. ಅದು ಸಮಾಜ ವ್ಯವಸ್ಥೆಯಲ್ಲಿ ಎಷ್ಟು ಹಾಸುಹೊಕ್ಕಾಗಿ ಹೋಗಿತ್ತೆಂದರೆ, ಮನು ಬಿಟ್ಟ ಕಡೆಗಳಲ್ಲಿ ಅವನ ಉತ್ತರಾಧಿಕಾರಿಗಳು ಅದನ್ನು ಜಾರಿಗೊಳಿಸಿದ್ದಾರೆ. ಉದಾಹರಣೆಗೆ ಮನು ಗುಲಾಮಗಿರಿ ಪದ್ಧತಿಗಳನ್ನು ಗುರುತಿಸಿದ್ದಾರೆ. ಆದರೆ ಗುಲಾಮಗಿರಿಯ ಪದ್ಧತಿಯೂ ಶ್ರೇಣೀಕೃತ ವಿಧೇಯತೆ ಕ್ರಮದ ತತ್ವಕ್ಕೆ ಒಳಪಟ್ಟಿದೆಯೇ ಎಂಬುದನ್ನು ನಿರೂಪಿಸಿರಲಿಲ್ಲ.

ಇನ್ನೆಲ್ಲಿ ಗುಲಾಮಗಿರಿಗೆ ಶ್ರೇಣೀಕೃತ ಅಸಮಾನತೆ ಅನ್ವಯಿಸುವುದಿಲ್ಲವೆಂದು ತಿಳಿಯುತ್ತಾರೋ ಮತ್ತು ಎಲ್ಲಿ ಶೂದ್ರನಿಗೆ ಬ್ರಾಹ್ಮಣನು ಗುಲಾಮನಾಗಬೇಕಾಬಹುದೋ ಎಂದು ಯಾಜ್ಞವಲ್ಕ್ಯ ಆ ಕೂಡಲೇ ಸಂಶಯ ನಿವಾರಣೆಗೆ ಮುಂದಾಗುತ್ತಾನೆ. ಆತ ಸುಸ್ಪಷ್ಟವಾಗಿ ವಿಧಿಸುತ್ತಾನೆ:

"ದಾಸ್ಯವು ಅನುಲೋಮ ಕ್ರಮದಲ್ಲಿರುವುದೇ ಹೊರತು ಪ್ರತಿಲೋಮ ಕ್ರಮದಲ್ಲಲ್ಲ–(೧೪.೧೮೩)"

ವಿಜ್ಞಾನೇಶ್ವರನು ಯಾಜ್ಞವಲ್ಕ್ಯನ ಮೇಲಿನ ಭಾಷ್ಯವನ್ನು ಇನ್ನಷ್ಟು ಗಟ್ಟಿಗೊಳಿಸುತ್ತಾನೆ. ಅವನು ಹೇಳುತ್ತಾನೆ:

> "ಬ್ರಾಹ್ಮಣ ಇತ್ಯಾದಿ ವರ್ಣಗಳಲ್ಲಿ ಅನುಲೋಮ್ಯೇನ ಅಂದರೆ ಇಳಿಕ್ರಮದಲ್ಲಿ ದಾಸ್ಯ ಸ್ಥಿತಿಯಿರುತ್ತದೆ. ಆದ್ದರಿಂದ ಬ್ರಾಹ್ಮಣನಿಗೆ ಕ್ಷತ್ರಿಯ ಮತ್ತಿತರರು ದಾಸರಾಗಬಹುದು. ಕ್ಷತ್ರಿಯನಿಗೆ ವೈಶ್ಯನಿಗೆ ಶೂದ್ರ ಹೀಗೆ ದಾಸ್ಯವು ಇಳಿಕ್ರಮದಲ್ಲಿ ಕೆಲಸ ಮಾಡುತ್ತದೆ."

ಸಮಾನತೆ–ಅಸಮಾನತೆಯ ಭಾಷೆಯಲ್ಲಿ ಹೇಳುವುದಾದರೆ, ಬ್ರಾಹ್ಮಣನೇ ಅತ್ಯುಚ್ಚ ಎಂದು ಇದರರ್ಥ. ಯಾಕೆಂದರೆ ಅವನು ಯಾರಿಗೂ ಗುಲಾಮನಾಗುವಂತಿಲ್ಲ. ಆದರೆ ಇನ್ನಾವುದೇ ವರ್ಣದವನನ್ನು ತಾನು ಇಟ್ಟುಕೊಳ್ಳಬಹುದು. ಶೂದ್ರನೇ ಕನಿಷ್ಠ, ಯಾಕೆಂದರೆ ಎಲ್ಲರೂ ಅವನನ್ನು ಗುಲಾಮನನ್ನಾಗಿ ಇರಿಸಿಕೊಳ್ಳಬಹುದು. ಆದರೆ ಆತ ಮಾತ್ರ ಶೂದ್ರನ ಹೊರತು ಇನ್ನಾರನ್ನೂ ದಾಸರನ್ನಾಗಿ ಇಟ್ಟುಕೊಳ್ಳುವಂತಿಲ್ಲ. ಕ್ಷತ್ರಿಯ ಮತ್ತು ವೈಶ್ಯರಿಗೆ ವಹಿಸಲಾದ ಸ್ಥಾನವು ಶ್ರೇಣೀಕೃತ ಅಸಮಾನತೆ ಪದ್ಧತಿಯನ್ನು ಜಾರಿಗೊಳಿಸುತ್ತದೆ. ಬ್ರಾಹ್ಮಣನಿಗಿಂತ ಕೀಳಾದ ಕ್ಷತ್ರಿಯನು ಬ್ರಾಹ್ಮಣನ ದಾಸನಾಗಬಹುದು. ಆದರೂ ಆತ ವೈಶ್ಯ ಶೂದ್ರರಿಗಿಂತ ಶ್ರೇಷ್ಠ. ಯಾಕೆಂದರೆ ಅವರನ್ನು ಆತ ದಾಸರಾಗಿ ಇಟ್ಟುಕೊಳ್ಳಬಹುದು. ಅದೇ ವೈಶ್ಯ ಶೂದ್ರರಿಗೆ ಕ್ಷತ್ರಿಯನನ್ನು ದಾಸನಾಗಿ ಇಟ್ಟುಕೊಳ್ಳುವ ಹಕ್ಕಿಲ್ಲ. ಅದೇ ರೀತಿ ವೈಶ್ಯನು ಬ್ರಾಹ್ಮಣ ಕ್ಷತ್ರಿಯರಿಗಿಂತ ಕೀಳು. ಯಾಕೆಂದರೆ ಅವರು ಅವನನ್ನು ಗುಲಾಮನಾಗಿ ಇಟ್ಟುಕೊಳ್ಳಬಹುದು. ಅವನು ಅವರಿಬ್ಬರಲ್ಲಿ ಯಾರನ್ನೂ ಇರಿಸಿಕೊಳ್ಳುವಂತಿಲ್ಲ. ಅಷ್ಟಾದರೂ, ಆತ ಕೊನೇ ಪಕ್ಷ ಶೂದ್ರನಿಗಿಂತ ತಾನು ಮೇಲು ಎಂದು ಹೆಮ್ಮೆ

ಪಟ್ಟುಕೊಳ್ಳಬಹುದು. ಯಾಕೆಂದರೆ ಅವನು ಶೂದ್ರನನ್ನು ಗುಲಾಮನಾಗಿ ಮಾಡಿಕೊಳ್ಳಬಹುದು. ಅದೇ ಶೂದ್ರ ವೈಶ್ಯನನ್ನು ತನ್ನ ಗುಲಾಮನಾಗಿ ಇರಿಸಿಕೊಳ್ಳಲಾರ.

ಜನತೆಯ ಸಾರಸತ್ವಕ್ಕೆ ಬ್ರಾಹ್ಮಣ ಧರ್ಮ ಸೇರಿಸಿದ ಶ್ರೇಣೀಕೃತ ಅಸಮಾನತೆಯ ತತ್ವ ಇಂಥಾದ್ದು. ಅಸಮಾನತೆಯನ್ನು ಕಿತ್ತೊಗೆಯುವ ಸಮಾಜವನ್ನು ನಿಶ್ಚೇತನಗೊಳಿಸಲು ಇದಕ್ಕಿಂತ ಕೆಟ್ಟದಾಗಿ ಏನೂ ಮಾಡಲು ಸಾಧ್ಯವಿರಲಿಲ್ಲ. ಅದರ ಪರಿಣಾಮಗಳನ್ನು ಸ್ಪಷ್ಟವಾಗಿ ಗುರುತಿಸಿರದಿದ್ದರೂ, ಆ ಕಾರಣಕ್ಕಾಗಿಯೇ ಹಿಂದೂಗಳು ಪಾರ್ಶ್ವವಾಯು ಪೀಡಿತರಾಗಿದ್ದರೆಂಬುದರಲ್ಲಿ ಸಂದೇಹವಿರಲಾರದು. ಸಮಾಜ ಸಂಘಟನೆಯ ವಿದ್ಯಾರ್ಥಿಗಳು, ಸಮಾನತೆ–ಅಸಮಾನತೆಗಳ ನಡುವಣ ಅಂತರ ಗುರುತಿಸುವಷ್ಟಕ್ಕೇ ತೃಪ್ತರಾಗಿದ್ದಾರೆ. ಸಮಾನತೆ ಅಸಮಾನತೆಯಷ್ಟೇ ಅಲ್ಲದೆ, ಅದರ ಜೊತೆಗೆ ಶ್ರೇಣೀಕೃತ ಅಸಮಾನತೆ ಎಂಬುದೂ ಒಂದಿದೆ ಅನ್ನುವುದನ್ನು ಯಾರೂ ಅರಿತಿಲ್ಲ. ಅಷ್ಟಾದರೂ ಅಸಮಾನತೆ ಶ್ರೇಣೀಕೃತ ಅಸಮಾನತೆಯ ಅರ್ಧದಷ್ಟೂ ಅಪಾಯಕಾರಿಯಲ್ಲ. ಅಸಮಾನತೆ ತನ್ನ ಒಡಲಲ್ಲೇ ತನ್ನ ವಿನಾಶದ ಬೀಜಗಳನ್ನೂ ಹೊತ್ತಿರುತ್ತಿತ್ತು. ಅಸಮಾನತೆ ಹೆಚ್ಚು ಕಾಲ ಉಳಿಯುವುದಿಲ್ಲ. ಕೇವಲ ಶುದ್ಧ ಅಸಮಾನತೆ ಇರುವಲ್ಲಿ ಎರಡು ಸಂಗತಿಗಳು ಜರುಗುತ್ತವೆ. ಅದೂ ಕ್ರಾಂತಿಯ ಬೀಜವಾಗಿ ರೂಪುಗೊಳ್ಳಬಲ್ಲ ಸಾರ್ವತ್ರಿಕ ಅತೃಪ್ತಿಯನ್ನು ಸೃಷ್ಟಿಸುತ್ತದೆ. ಎರಡನೆಯದಾಗಿ, ಅದು ಸಂತ್ರಸ್ತರನ್ನು ಸಮಾನ ಶತ್ರುವಿನ ವಿರುದ್ಧ ಸಮಾನ ದುಃಖದ ಕಾರಣದಿಂದ ಒಗ್ಗೂಡಿಸುತ್ತದೆ. ಆದರೆ ಶ್ರೇಣೀಕೃತ ಅಸಮಾನತೆಯ ಸ್ವರೂಪ ಹಾಗೂ ಸಂದರ್ಭಗಳೆರಡೂ ಈ ಎರಡರಲ್ಲಿ ಒಂದಕ್ಕೂ ಅವಕಾಶ ಬಿಟ್ಟುಕೊಡುವುದಿಲ್ಲ. ಮೇಲೇಳುವುದನ್ನು ತಡೆಯುತ್ತದೆ. ಆದ್ದರಿಂದಲೇ ಅದು ಕ್ರಾಂತಿಯ ಚಂಡಮಾರುತದ ಕೇಂದ್ರವಾಗಲಾರದು. ಎರಡನೆಯದಾಗಿ, ಸಂತ್ರಸ್ತರು ಲಾಭ ಮತ್ತು ಹೊರೆಗಳೆರಡರ ದೃಷ್ಟಿಯಿಂದಲೂ ಅಸಮಾನರಾಗಿರುವದರಿಂದ ಅಸಮಾನತೆಯನ್ನು ಕಿತ್ತೊಗೆಯಲು ಎಲ್ಲರೂ ಒಗ್ಗೂಡುವ ಸಾಧ್ಯತೆಯೇ ಇಲ್ಲ. ಇದನ್ನು ಗಟ್ಟಿಗೊಳಿಸಲು ಬ್ರಾಹ್ಮಣ ವಿವಾಹ ಕಾನೂನೇ ಅಸಮತೆಯಿಂದ ತುಂಬಿದೆ. ತನ್ನ ಕೆಳಗಿನಿಂದ ಸ್ತ್ರೀಯನ್ನು ಪಡೆಯಲು ಆದರೆ ಅವರಿಗೆ ಸ್ತ್ರೀಯನ್ನು ಕೊಡದಿರಲು ಬ್ರಾಹ್ಮಣನಿಗಿರುವ ಹಕ್ಕೇ ಅಸಮತೆ. ಆದರೆ ಅದನ್ನು ನಾಶಗೊಳಿಸಲು ಕ್ಷತ್ರಿಯ, ವೈಶ್ಯ, ಶೂದ್ರರು ಒಂದಾಗುವುದಿಲ್ಲ. ಕ್ಷತ್ರಿಯನು ಬ್ರಾಹ್ಮಣನ ಈ ಹಕ್ಕನ್ನು ಪ್ರತಿರೋಧಿಸುತ್ತಾನೆ. ಆದರೆ ಆತ ಎರಡು ಕಾರಣಗಳಿಂದಾಗಿ ವೈಶ್ಯ, ಶೂದ್ರರೊಡನೆ ಒಗ್ಗೂಡುವುದಿಲ್ಲ. ಮೊದಲನೆಯದಾಗಿ, ಬ್ರಾಹ್ಮಣನಿಗೆ ಮೂರು ವರ್ಣಗಳಿಂದ ತೆಗೆದುಕೊಳ್ಳುವ ಹಕ್ಕಿದ್ದರೆ, ಕ್ಷತ್ರಿಯನಿಗೆ ಎರಡು ವರ್ಣಗಳಿಂದ ಹೆಂಗಸರನ್ನು ಪಡೆಯುವ ಹಕ್ಕಿದೆ ಎಂಬ ತೃಪ್ತಿ ಅವನಿಗೆ. ಆತ ಇನ್ನುಳಿದ ಎರಡು ವರ್ಗಗಳಷ್ಟು ಕಷ್ಟಪಡುವುದಿಲ್ಲ. ಎರಡನೆಯದಾಗಿ, ಆತ ಈ ವಿವಾಹ ಅಸಮತೆ ವಿರುದ್ಧ ಸಾರ್ವತ್ರಿಕ ಕ್ರಾಂತಿಯಲ್ಲಿ ಸೇರಿಕೊಂಡರೆ ಒಂದು ರೀತಿಯಲ್ಲಿ ಆತ ಬ್ರಾಹ್ಮಣನ ಮಟ್ಟಕ್ಕೆ ಏರುತ್ತಾನೆ ಇನ್ನೊಂದು ಕಡೆ ಎಲ್ಲರೂ ಸಮಾನರಾಗಿರುತ್ತಾರೆ. ಅಂದರೆ ಅವನ ಪಾಲಿಗೆ ವೈಶ್ಯ ಶೂದ್ರರೂ ತನ್ನ ಮಟ್ಟಕ್ಕೇರುತ್ತಾರೆ. ಅಂದರೆ ಅವರೂ ಕ್ಷತ್ರಿಯ ಹೆಂಗಸರನ್ನು ಪಡೆಯುತ್ತಾರೆ. ಅಂದರೆ ಈತನೂ ಅವರ ಮಟ್ಟಕ್ಕೆ ಇಳಿಯಬೇಕಾಗುತ್ತದೆ. ಇನ್ನಾವುದೇ ಅಸಮತೆ ತೆಗೆದುಕೊಂಡು ಅದರ ವಿರುದ್ಧ ದಂಗೆಯನ್ನು ಕಲ್ಪಿಸಿಕೊಳ್ಳಿ. ಅದರ ವಿರುದ್ಧ ಸಾರ್ವತ್ರಿಕ ಬಂಡಾಯ ಅಸಾಧ್ಯ ಎಂಬುದನ್ನು ಇದೇ ಸಾಮಾಜಿಕ ಮನಸ್ಥಿತಿ ತೋರಿಸುತ್ತದೆ.

ಬ್ರಾಹ್ಮಣ ಧರ್ಮ ಹಾಗೂ ಅದರ ಅಸಮತೆಗಳ ವಿರುದ್ಧ ಕ್ರಾಂತಿಯೇ ಆಗದಿರುವ ಸ್ಥಿತಿಗೆ ಶ್ರೇಣೀಕೃತ ಅಸಮಾನತೆಯ ತತ್ವವೂ ಒಂದು ಕಾರಣ. ಅದು ಒಂದು ದುಷ್ಟ ವ್ಯವಸ್ಥೆಗೆ ಬೆಂಬಲ ಗಳಿಸಿಕೊಳ್ಳಲು ಅದರ ಫಲಗಳಲ್ಲಿ ಪಾಲು ಕೊಡುವ ವ್ಯವಸ್ಥೆ. ಅಸಮಾನತೆಯನ್ನು ನಿರಂತರಗೊಳಿಸಿ ಅದರಿಂದ ಲಾಭ ಪಡೆಯುವ ಸಲುವಾಗಿ ಮನುಷ್ಯ ಕಂಡುಹಿಡಿಯಲು ಸಾಧ್ಯವಿರುವ ಎಲ್ಲ ನೀಚ ಕುತಂತ್ರಗಳನ್ನೂ ಒಳಗೊಂಡ ವ್ಯವಸ್ಥೆ

ಅದು. ಯಾಕೆಂದರೆ ಎಲ್ಲರೂ ಅಸಮತೆಯ ಬೆಂಬಲಿಗರಾಗುವಂತೆ ಜನರಿಗೆ ಅಸಮತೆಯ ಪಾಲು ಕೊಡುವ ಆಹ್ವಾನವಿದು.

ಈಗ ಈ ಬ್ರಾಹ್ಮಣ ಧರ್ಮದ ಕೊನೆ ಅಂಕದ ತೆರೆ ಎಳೆಯುವ ಕೆಲಸ ಮಾತ್ರ ಉಳಿಯಿತು.

ಬ್ರಾಹ್ಮಣ ಧರ್ಮ ಚಾತುರ್ವರ್ಣ ಪದ್ಧತಿಯನ್ನು ವೈದಿಕ ಪರಂಪರೆಯಿಂದ ಪಡೆದುಕೊಂಡಿತು. ತಮ್ಮ ಆರ್ಯಪೂರ್ವಿಕರ ಅನನ್ಯ ಸೃಷ್ಟಿಯೆಂದು ಹಿಂದೂಗಳು ಪರಿಗಣಿಸುವ ಈ ಚಾತುರ್ವರ್ಣ ವ್ಯವಸ್ಥೆ ಯಾವ ದೃಷ್ಟಿಯಲ್ಲೂ ಅನನ್ಯವಾದುದಲ್ಲ. ಅದರಲ್ಲಿ ಹೊಸ ಸ್ವಂತಿಕೆಯೇನು ಇಲ್ಲ. ಪ್ರಾಚೀನ ಜಗತ್ತೇ ಅದರಲ್ಲಿ ಎಡವಿ ಬಿದ್ದಿತ್ತು. ಈಜಿಪ್ಟಿನಲ್ಲಿ ಈ ವ್ಯವಸ್ಥೆಯಿತ್ತು. ಪ್ರಾಚೀನ ಪರ್ಷಿಯಾದಲ್ಲಿತ್ತು. ಅದರ ಉತ್ಕೃಷ್ಟತೆಯ ಬಗ್ಗೆ ಪ್ಲೇಟೋಗೆ ಎಷ್ಟು ಮನವರಿಕೆಯಾಗಿತ್ತೆಂದರೆ ಆತ ಅದನ್ನೇ ಸಮಾಜ ಸಂಘಟನೆಯ ಆದರ್ಶ ರೂಪವೆಂದು ಮುಂದಿಟ್ಟಿದ್ದ. ಚಾತುರ್ವರ್ಣದ ಆದರ್ಶ ದೋಷಪೂರಿತವಾದದ್ದು. ವ್ಯಕ್ತಿಗಳನ್ನು ಗೆರೆ ಕೊರೆದಿಟ್ಟಂಥ ಕೆಲವೇ ವರ್ಗಗಳಾಗಿ ವಿಂಗಡಿಸಿ ತುಂಬುವುದು. ಮನುಷ್ಯ ಮತ್ತು ಆತನ ಶಕ್ತಿಗಳ ಅತ್ಯಂತ ಮೇಲುಮೇಲಿನ ದೃಷ್ಟಿಯಾಗುತ್ತದೆ. ಪ್ರಾಚೀನ ಆರ್ಯರಿಗಾಗಲೀ, ಪ್ಲೇಟೋಗಾಗಲೀ, ಪ್ರತಿಯೊಬ್ಬ ವ್ಯಕ್ತಿಯೂ ತನ್ನದೇ 'ವರ್ಗ'ವಾಗುವ ಗುಣಗಳ ಕಲ್ಪನೆಯೇ ಇರಲಿಲ್ಲ. ಅವರ ಮಟ್ಟಿಗೆ ವ್ಯಕ್ತಿ ಸ್ವರೂಪದಲ್ಲಿ ಕೆಲವೊಂದು ಸಾಮರ್ಥ್ಯ ಶಕ್ತಿಗಳ ಮಾದರಿಗಳಿದ್ದವು ಮತ್ತು ಸಮಾಜ ಸಂಘಟನೆಗಾಗಿ ಮಾಡಬೇಕಾದ್ದೆಲ್ಲ ಅವುಗಳ ವರ್ಗೀಕರಣ ಮಾತ್ರ. ಇದೆಲ್ಲವನ್ನೂ ತಪ್ಪೆಂದು ಸಾಧಿಸಿ ತೋರಿಸಬಹುದು. ಕೆಲವೇ ಗೆರೆ ಕೊರೆದಿಟ್ಟಂಥ ವರ್ಗಗಳಾಗಿ ವ್ಯಕ್ತಿಗಳನ್ನು ವಿಂಗಡಿಸಿ ತುಂಬಿ ಒಂದೊಂದು ಚೌಕಟ್ಟಿಗೆ ಸೀಮಿತಗೊಳಿಸುವುದರಿಂದ ಆ ವ್ಯಕ್ತಿ ಮತ್ತು ಸಮಾಜಗಳೆರಡಕ್ಕೂ ಅನ್ಯಾಯವಾಗುತ್ತದೆಂಬುದನ್ನು ಆಧುನಿಕ ವಿಜ್ಞಾನ ತೋರಿಸಿದೆ. ಸಾಮಾಜಿಕ ಮುನ್ನಡೆಗಾಗಿ ಅಗತ್ಯವಾದ ಗುಣಲಕ್ಷಣಗಳ ಪರಿಪೂರ್ಣ ಬಳಕೆಗೆ ವರ್ಗಗಳಾಗಿ ಮತ್ತು ವೃತ್ತಿಯ ಮೇಲೆ ಸಮಾಜದ ಶ್ರೇಣೀಕರಣ ಮಾಡುವುದು ಹೊಂದಿಕೆಯಾಗುವುದೇ ಇಲ್ಲ ಮತ್ತು ಅದು ವ್ಯಕ್ತಿ ಹಾಗೂ ಸಮಾಜಗಳ ಸುರಕ್ಷತೆ ಸುಭದ್ರತೆಗಳಿಗೂ ವ್ಯತಿರಿಕ್ತವಾದುದು.[೧]

ಪ್ರಾಚೀನ ಆರ್ಯರು ಮತ್ತು ಪ್ಲೇಟೋ ಮಾಡಿದ ಇನ್ನೊಂದು ತಪ್ಪೂ ಇದೆ. ಕ್ರಿಮಿ ಕೀಟಗಳಂತೆಯೇ ಮನುಷ್ಯರನ್ನೂ ದ್ವಿಮುಖತೆ ಅಥವಾ ಬಹುರೂಪ ಇರುತ್ತದೆ ಎಂಬ ಹೇಳಿಕೆಯಲ್ಲಿ ಪ್ರಾಯಶಃ ಸ್ವಲ್ಪ ಸತ್ಯಾಂಶವಿದೆ. ಅಂದರೆ ಮನುಷ್ಯರಲ್ಲಿ ಅದು ಕೇವಲ ಮಾನಸಿಕವಾದದ್ದಾದರೆ, ಕೀಟಗಳಲ್ಲಿ ದೈಹಿಕ ಮಾನಸಿಕವೆರಡೂ ಆಗಿರುತ್ತದೆ. ಮನುಷ್ಯರಲ್ಲೂ ಮಾನಸಿಕ ದ್ವಿಮುಖತೆ ಅಥವಾ ಬಹುರೂಪತೆ ಎನ್ನುವುದಿದೆ ಎಂದೇ ಭಾವಿಸಿದರೂ, ಅವರನ್ನು ಕೆಲವರು ಒಂದು ಕೆಲಸ ಮಾಡಲು ಇನ್ನು ಕೆಲವರು ಇನ್ನೊಂದು ಕೆಲಸ ಮಾಡಲು ಹುಟ್ಟಿದವರೆಂದು ಅಂದರೆ ಕೆಲವರು ಆಳಲು ಅಥವಾ ಮಾಲೀಕರಾಗಲು, ಇನ್ನು ಕೆಲವರು ವಿಧೇಯರಾಗಿರಲು ಅಥವಾ ಗುಲಾಮರಾಗಿರಲು ಹುಟ್ಟಿದವರೆಂದು ಪ್ರತ್ಯೇಕಿಸುವುದು ತಪ್ಪು. ಒಬ್ಬ ವ್ಯಕ್ತಿಯಲ್ಲಿ ಕೆಲವು ಗುಣಗಳಿವೆಯೆಂದೂ ಇನ್ನು ಕೆಲವು ಗುಣಗಳು ಗೈರು ಹಾಜರಾಗಿವೆಯೆಂದೂ ಭಾವಿಸುವುದೇ ತಪ್ಪು. ಇದಕ್ಕೆ ವ್ಯತಿರಿಕ್ತವಾಗಿ ಪ್ರವೃತ್ತಿಗಳೇ ಪ್ರಧಾನವಾಗಿ ಒಂದೇ ಗುಣ ಎದ್ದು ಕಾಣುವಂತಾಗುವುದು ಎಂಬುದರಿಂದ ಈ ಸತ್ಯ ಕ್ಷೀಣಿಸುವುದಿಲ್ಲ. ಈ ಸತ್ಯ ಎಷ್ಟು ನಿಶ್ಚಿತವಾದುದೆಂದರೆ ಒಬ್ಬ ಮನುಷ್ಯರಲ್ಲಿ ಒಂದು ಸಮಯಕ್ಕೆ ಒಂದು ಪ್ರವೃತ್ತಿ ಪ್ರಧಾನವಾಗಿದ್ದರೆ ಇನ್ನೊಂದ ಸಮಯಕ್ಕೆ ಬೇರೆಯೇ ಆದ ಮುಂಚಿನದಕ್ಕೆ ತೀರಾ ವ್ಯತಿರಿಕ್ತವಾದ ಪ್ರವೃತ್ತಿಯೇ ಪ್ರಧಾನವಾಗಿರಬಹುದು. ನೀಷೆಯ 'ಮನುಷ್ಯರು' ಮತ್ತು 'ಗುಲಾಮರ' ಕುರಿತ ಸುಳ್ಳು ವಿರೋಧನ್ಯಾಸದ ಬಗ್ಗೆ ಪ್ರೊ. ಬರ್ಗ್‌ಸನ್[೨] ಹೇಳುವಂತೆ:

---

೧. ಈ ವಿಷಯದಲ್ಲಿ ಇನ್ನೂ ವಿಸ್ತಾರ ಅವಲೋಕನಕ್ಕಾಗಿ 'ಅನ್ನಿಹಿಲೇಷನ್ ಆಫ್ ಕ್ಯಾಸ್ಟ್'ನಲ್ಲಿ ನನ್ನ ಚಿಂತನೆ ನೋಡಿ.
೨. 'ಟೂ ಸೋರ್ಸಸ್ ಆಫ್ ಮೊರಾಲಿಟಿ' (ಹೋಲ್ಸ್), ಪು. ೩೬೭.

"ಕ್ರಾಂತಿಯ ಸಂದರ್ಭಗಳಲ್ಲಿ ಇದರ (ಸುಳ್ಳುತನದ) ಸ್ಪಷ್ಟ ದರ್ಶನ ಸಿಕ್ಕುತ್ತದೆ. ಅಮಾಯಕರಾದ ಪ್ರಜೆಗಳೂ ಆ ಗಳಿಗೆಯವರೆಗೆ ನಮ್ರ ಹಾಗೂ ವಿಧೇಯರಾಗಿರುವವರೂ ಒಂದು ದಿನ ಇದ್ದಕ್ಕಿದ್ದಂತೆ ಜನ ನಾಯಕರಾಗಿ ಮೇಲೇಳುತ್ತಾರೆ."

ಆರ್ಯರು ಮತ್ತು ಪ್ಲೇಟೋ ವಾದಕ್ಕೆ ಮುಸ್ಸೋಲಿನಿ ಮತ್ತು ಹಿಟ್ಲರ್ ವ್ಯತಿರಿಕ್ತ ಪುರಾವೆಗಳಾಗಿದ್ದಾರೆ.

ಚಾತುರ್ವರ್ಣದ ವೈದಿಕ ಪದ್ಧತಿ ಆದರ್ಶ ಪದ್ಧತಿಯಾಗುವುದಿರಲಿ ಬ್ರಾಹ್ಮಣಧರ್ಮ ಮಾಡಿದ ಈಗಾಗಲೇ ವಿವರಿಸಲಾದ ಬದಲಾವಣೆಗಳಿಂದ ಖಡಾಖಂಡಿತವಾಗಿ ಇನ್ನಷ್ಟು ಕೆಟ್ಟದಾಯಿತು. ಆ ಬದಲಾವಣೆಗಳು ಒಂದೊಂದೂ ಕುಚೋದ್ಯ ಸ್ವರೂಪದವು ಎನ್ನುವುದು ಪ್ರಶ್ನಾತೀತ. ಬೌದ್ಧ ಭಿಕ್ಷುಗಳ ಸಂಘ ಹಾಗೂ ವೈದಿಕ ಬ್ರಾಹ್ಮಣ ಪದ್ಧತಿಗಳೆರಡರ ಉದ್ದೇಶವೂ ಒಂದೇ. ಅವು ಸಮಾಜವನ್ನು ಸರಿಯಾದ ಮಾರ್ಗದಲ್ಲಿ ಮಾರ್ಗದರ್ಶನ ಮಾಡಿ ಮುನ್ನಡೆಸುವ ಬೌದ್ಧಿಕ ವರ್ಗವನ್ನು ರೂಪಿಸಿದಂಥವು. ಒಂದೇ ಕಾರ್ಯಭಾರವಿದ್ದರೂ, ಬೌದ್ಧ ಭಿಕ್ಷು ಅದನ್ನು ಬ್ರಾಹ್ಮಣನಿಗಿಂತ ಹೆಚ್ಚು ಸಮರ್ಥವಾಗಿ ಮಾಡಬಲ್ಲವನಾಗಿದ್ದ. ಇದು ಯಾಕೆಂದರೆ ತನ್ನ ಹಿಂದಿನವರಾಗಲೀ ಮುಂದಿನವರಾಗಲೀ ಗಮನಿಸಿರದ ಒಂದು ಸಂಗತಿಯನ್ನು ಬುದ್ಧ ಗುರುತಿಸಿದ. ಸಮಾಜವನ್ನು ಮುನ್ನಡೆಸಿ ಅದರ ವಿಶ್ವಾಸಾರ್ಹ ಮಾರ್ಗದರ್ಶಕನಾಗಬೇಕಾದರೆ ಒಬ್ಬ ವ್ಯಕ್ತಿ ಬೌದ್ಧಿಕವಾಗಿ ಸ್ವತಂತ್ರವಾಗಿರಬೇಕು ಹಾಗೂ ಅದಕ್ಕಿಂತ ಮುಖ್ಯವಾಗಿ ಬೌದ್ಧಿಕವಾಗಿ ಸ್ವತಂತ್ರವಾಗಿರಬೇಕಾದರೆ ಆತ ಖಾಸಗಿ ಆಸ್ತಿ ಹೊಂದಿರಬಾರದು ಎಂಬ ಅಂಶವನ್ನು ಬುದ್ಧ ಅರಿತುಕೊಂಡ. ತನ್ನ ಖಾಸಗಿ ಸೊತ್ತಿನ ನಿಗಾ ವಹಿಸಬೇಕಾದ ಬುದ್ಧಿಜೀವಿ ವರ್ಗ, ಸಮಾಜವನ್ನು ಸರಿಯಾದ ದಾರಿಯಲ್ಲಿ ಮುನ್ನಡೆಸುವ ಮಾರ್ಗದರ್ಶನದಲ್ಲಿ ಸೋಲಲೇಬೇಕು. ಆದ್ದರಿಂದಲೇ ಬುದ್ಧ ಭಿಕ್ಷುಗಳಿಗೆ ಶಿಸ್ತು ಸಂಹಿತೆ ರೂಪಿಸುವಾಗ ಯಾವುದೇ ಭಿಕ್ಷುವಿಗೆ ಖಾಸಗಿ ಸೊತ್ತು ನಿಷೇಧಿಸುವ ಅಂಶವನ್ನು ಬುದ್ಧ ಜಾಗರೂಕತೆಯಿಂದ ಸೇರಿಸಿದ. ವೈದಿಕ ಬ್ರಾಹ್ಮಣ ವ್ಯವಸ್ಥೆಯಲ್ಲಿ ಅಂಥ ಯಾವ ನಿಷೇಧವೂ ಇರಲಿಲ್ಲ. ಬ್ರಾಹ್ಮಣ ಸ್ವತಂತ್ರವಾಗಿ ಖಾಸಗಿ ಆಸ್ತಿ ಹೊಂದಬಹುದಿತ್ತು. ಈ ವ್ಯತ್ಯಾಸವೇ ಬೌದ್ಧ ಭಿಕ್ಷು ಮತ್ತು ವೈದಿಕ ಬ್ರಾಹ್ಮಣರ ವ್ಯಕ್ತಿತ್ವ ಹಾಗೂ ಜೀವನ ದೃಷ್ಟಿಗಳ ನಡುವೆ ಗಾಢ ಅಂತರವನ್ನು ಸೃಷ್ಟಿಸಿತು. ಭಿಕ್ಷುಗಳು ಬುದ್ಧಿಜೀವಿ ವರ್ಗವಾಗಿದ್ದರು. ಇನ್ನೊಂದು ಕಡೆ, ವೈದಿಕ ಬ್ರಾಹ್ಮಣರು ಕೇವಲ ಶಿಕ್ಷಿತ ವರ್ಗವಾಗಿದ್ದರು. ಬುದ್ಧಿಜೀವಿ ವರ್ಗಕ್ಕೆ ಯಾವುದೇ ವರ್ಗ ಅಥವಾ ಹಿತಾಸಕ್ತಿಗೆ ಅಂಟಿಕೊಂಡ ವರ್ಗದ ಹಿತಾಸಕ್ತಿಗಳೊಂದಿಗೆ ಗುರುತಿಸಿಕೊಳ್ಳುವುದರಿಂದ ಅದರ ದರ್ಶನ ವ್ಯಾಪ್ತಿ ಮತ್ತು ಹೊಸ ಸಿದ್ಧಾಂತಗಳಿಗೆ ಸಹಾನುಭೂತಿ ತೋರಿಸುವ ಶಕ್ತಿಗಳು ಕುಂಠಿತಗೊಳ್ಳುವುದೇ ಇದಕ್ಕೆ ಕಾರಣ.

ಆದ್ದರಿಂದ ಬ್ರಾಹ್ಮಣರು ಮೊದಲಿನಿಂದಲೇ ಜ್ಞಾನಿಗಳಾದ ಆದರೆ ಸ್ವಾರ್ಥಿಗಳಾದ ಶಿಕ್ಷಿತ ವರ್ಗ ಮಾತ್ರ ಎನಿಸಿದ್ದರು. ವೈದಿಕ ಬ್ರಾಹ್ಮಣ ವ್ಯವಸ್ಥೆಯ ಈ ಕೇಡು ಹಳೆಯ ವೈದಿಕ ವ್ಯವಸ್ಥೆಯಲ್ಲಿ ಬ್ರಾಹ್ಮಣ ಧರ್ಮ ತಂದ ಬದಲಾವಣೆಗಳಿಂದಾಗಿ ಅತಿರೇಕಕ್ಕೆ ಹೋಯಿತು. ಬ್ರಾಹ್ಮಣರ ಆಳ್ವಿಕೆಯ ಹಕ್ಕು ಮತ್ತು ಅವರಿಗೆ ಕೊಟ್ಟ ವಿಶೇಷ ಸವಲತ್ತುಗಳು ಹಾಗೂ ರಕ್ಷಣೆಗಳು ಅವರನ್ನು ಇನ್ನಷ್ಟು ಸ್ವಾರ್ಥಿಗಳಾಗಿಸಿದವು. ಮತ್ತು ತಮ್ಮ ಶಿಕ್ಷಣವನ್ನು ಜ್ಞಾನವೃದ್ಧಿಗಾಗಿ ಬಳಸದೆ ತಮ್ಮ ಕೋಮಿಗಾಗಿ ಹಾಗೂ ಸಮಾಜದ ಮುನ್ನಡೆಯ ವಿರುದ್ಧವಾಗಿ ಬಳಸುವ ಆಕಾಂಕ್ಷೆಯನ್ನು ಹುಟ್ಟುಹಾಕಿದವು.

ಅವರ ಚೈತನ್ಯ ಹಾಗೂ ಕಲಿಕೆಯೆಲ್ಲ ಜನಹಿತದ ವಿರುದ್ಧ ತಮ್ಮ ಸವಲತ್ತುಗಳನ್ನು ಉಳಿಸಿಕೊಳ್ಳುವುದರಲ್ಲೇ ಖರ್ಚಾಗಿವೆ. ಅನೇಕ ಹಿಂದೂ ಲೇಖಕರು, ಭಾರತೀಯ ನಾಗರಿಕತೆಯೇ ಜಗತ್ತಿನ ಅತ್ಯಂತ ಪ್ರಾಚೀನ ನಾಗರಿಕತೆಯೆಂದು ಕೊಚ್ಚಿಕೊಳ್ಳುತ್ತಾರೆ. ತಮ್ಮ ಪೂರ್ವಿಕರೇ ಅಗ್ರಗಣ್ಯರಾಗಿರದಿದ್ದ ಯಾವೊಂದು

ಜ್ಞಾನಶಾಖೆಯೂ ಇರಲಿಲ್ಲ ಎಂದು ಅವರು ಒತ್ತಾಯಿಸುತ್ತಾರೆ. ಪ್ರೊ. ಬಿನಯ್ ಕುಮಾರ್ ಸರ್ಕಾರ್ ಬರೆದ "ದಿ ಪಾಸಿಟಿವ್ ಬ್ಯಾಕ್ ಗ್ರೌಂಡ್ ಆಫ್ ಹಿಂದು ಸೋಷಿಯಾಲಜಿ" ಅಥವಾ ಡಾ. ಬ್ರಜೇಂದ್ರನಾಥ ಸೀಲ್ ಅವರ "ದಿ ಪಾಸಿಟಿವ್ ಸೈನ್ಸಸ್ ಆಫ್ ದಿ ಏನ್ಷಿಯೆಂಟ್ ಹಿಂದೂಸ್" ಎಂಬಂಥ ಯಾವುದೇ ಪುಸ್ತಕವನ್ನು ತೆರೆದುನೋಡಿ. ವಿವಿಧ ವೈಜ್ಞಾನಿಕ ವಿಷಯಗಳಲ್ಲಿ ಅವರ ಪೂರ್ವಿಕರಿಗಿದ್ದ ಜ್ಞಾನದ ಮಾಹಿತಿ ನೀಡಿ ಕೊಚ್ಚಿಹೋಗುತ್ತೇವೆ. ಈ ಪುಸ್ತಕಗಳಿಂದ ಪ್ರಾಚೀನ ಭಾರತೀಯರು ಖಗೋಳ ವಿಜ್ಞಾನ, ಜ್ಯೋತಿಷ್ಯ ಶಾಸ್ತ್ರ, ಜೀವ ವಿಜ್ಞಾನ, ರಾಸಾಯನಿಕ ವಿಜ್ಞಾನ, ಗಣಿತ, ವೈದಕೀಯ, ಖನಿಜ ವಿಜ್ಞಾನ, ಭೌತಶಾಸ್ತ್ರ ಹಾಗೂ ಜನರ ದೃಷ್ಟಿಯಲ್ಲಿ ವಿಮಾನಯಾನದ ಬಗ್ಗೆಯೂ ತಿಳಿದಿದ್ದರೆಂಬಂತೆ ತೋರಿಬರುತ್ತದೆ. ಇದೆಲ್ಲವೂ ನಿಜವೇ ಇರಬಹುದು. ಮುಖ್ಯ ಪ್ರಶ್ನೆಯಿರುವುದು ಪ್ರಾಚೀನ ಭಾರತೀಯರು ಇವೆಲ್ಲ ವಿಜ್ಞಾನಗಳನ್ನು ಕಂಡುಹಿಡಿದಿದ್ದು ಹೇಗೆ ಎಂಬುದರಲ್ಲಿಲ್ಲ. ಪ್ರಶ್ನೆಯೆಂದರೆ ಪ್ರಾಚೀನ ಭಾರತೀಯರು ತಾವು ಅಗ್ರಗಣ್ಯರಾಗಿದ್ದ ವಿಜ್ಞಾನಗಳಲ್ಲಿ ಸಾಧಿಸಿದ ಪ್ರಗತಿ ಅಲ್ಲೇ ನಿಂತುಹೋದದ್ದೇಕೆ? ಪ್ರಾಚೀನ ಭಾರತದ ವಿಜ್ಞಾನ ಪ್ರಗತಿಯಲ್ಲಿ ಉಂಟಾದ ಈ ಹಠಾತ್ ನಿಲುಗಡೆ ದಂಗುಬಡಿಸುವ ಹಾಗೆಯೇ ಖಂಡನೀಯವೂ ಆಗಿದೆ. ವೈಜ್ಞಾನಿಕ ಜಗತ್ತಿನಲ್ಲಿ ಭಾರತವು ಪ್ರಾಚೀನ ಕಾಲದಲ್ಲಿ ಮೊದಲನೆಯದಿರಬಹುದಾದರೂ ನಾಗರಿಕ ದೇಶಗಳ ಪೈಕಿ ಖಂಡಿತವಾಗಿ ಕಡೆಯ ಸ್ಥಾನದಲ್ಲಿದೆ. ವೈಜ್ಞಾನಿಕ ಪ್ರಗತಿಯ ಕೆಲಸ ಆರಂಭಿಸಿದ ಜನರು ಸ್ತಬ್ಧರಾಗಿ, ಹಾದಿ ಮಧ್ಯದಲ್ಲಿ ನಿಂತು, ಅಪೂರ್ಣ ಸ್ಥಿತಿಯಲ್ಲೇ ಆ ಕೆಲಸವನ್ನು ಬಿಡುವಂತೆ ಆದದ್ದಾದರೂ ಹೇಗೆ? ಈ ಪ್ರಶ್ನೆಯನ್ನು ಅವಲೋಕಿಸಿ ಉತ್ತರಿಸಬೇಕಾಗಿದೆ; ಪ್ರಾಚೀನ ಭಾರತೀಯರಿಗೆ ಏನು ಗೊತ್ತಿತ್ತು ಎಂಬುದಲ್ಲ.

ಈ ಪ್ರಶ್ನೆಗಿರುವುದು ಒಂದೇ ಉತ್ತರ ಮತ್ತು ಅದು ಅತ್ಯಂತ ಸರಳ ಉತ್ತರ. ಪ್ರಾಚೀನ ಭಾರತದಲ್ಲಿ ಬ್ರಾಹ್ಮಣರು ಮಾತ್ರವೇ ಶಿಕ್ಷತ ವರ್ಗವಾಗಿದ್ದದ್ದು ಮತ್ತು ಇತರರಿಗಿಂತ ತಾವು ಮೇಲೆಂದು ಹೇಳಿಕೊಳ್ಳುತ್ತಿದ್ದ ವರ್ಗವೂ ಅದೇ. ಬುದ್ಧ ಅವರ ಹಿರಿಮೆಯನ್ನು ಪ್ರಶ್ನೆ ಮಾಡಿ ಬ್ರಾಹ್ಮಣರ ಮೇಲೆ ಯುದ್ಧ ಸಾರಿದ. ಬ್ರಾಹ್ಮಣರು ಒಂದು ಶಿಕ್ಷಿತ ವರ್ಗ ಬುದ್ಧಿಜೀವಿ ವರ್ಗವಲ್ಲ. ಆ ಸಂದರ್ಭದಲ್ಲಿ ಏನು ಮಾಡಬಹುದೋ ಅದನ್ನು ಮಾಡಿದರು. ಆ ವರ್ಗ ಏನೆಲ್ಲ ಅನ್ವೇಷಣೆಗಳನ್ನು ಬಿಟ್ಟುಕೊಟ್ಟು ತನ್ನ ಹಿರಿಮೆಯ ಹಾಗೂ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಹಿತಾಸಕ್ತಿಗಳ ರಕ್ಷಣೆಯಲ್ಲಿ ತೊಡಗಿತು. ವಿಜ್ಞಾನ ಪುಸ್ತಕಗಳನ್ನು ಬರೆಯುವ ಬದಲು ಬ್ರಾಹ್ಮಣರು ಸ್ಮೃತಿಗಳನ್ನು ಬರೆಯತೊಡಗಿದರು. ಭಾರತದಲ್ಲಿ ವೈಜ್ಞಾನಿಕ ಪ್ರಗತಿ ಸ್ತಬ್ಧಗೊಂಡುದೇಕೆ ಎನ್ನಲು ವಿವರಣೆ ಇಲ್ಲಿದೆ. ಬ್ರಾಹ್ಮಣರು ಸಾಮಾಜಿಕ ಸಮಾನತೆಯ ಬೌದ್ಧ ಸಿದ್ಧಾಂತವನ್ನು ಹಿಮ್ಮೆಟ್ಟಿಸಲು ಸ್ಮೃತಿಗಳನ್ನು ಬರೆಯುವುದೇ ಹೆಚ್ಚು ಮುಖ್ಯ ಹಾಗೂ ಅಗತ್ಯ ಎಂದು ಕಂಡುಕೊಂಡರು.

ಬ್ರಾಹ್ಮಣರು ಹೀಗೆ 'ಎಷ್ಟು ಸ್ಮೃತಿಗಳನ್ನು ಬರೆದರು?'

ಸ್ಮೃತಿ ಸಾಹಿತ್ಯದ ಅಧಿಕಾರಯುತ ವಿದ್ವಾಂಸರಾದ ಕಾಣೆಯವರು ಅವುಗಳ ಸಂಖ್ಯೆ ೧೨೮ ಎನ್ನುತ್ತಾರೆ. ಇದು ಯಾಕಾಗಿ? ಸ್ಮೃತಿಗಳನ್ನು ಕಾನೂನು ಪುಸ್ತಕಗಳೆಂದು ಕರೆದರೂ, ಅದು ಅದರ ವಿಶೇಷ ಸವಲತ್ತುಗಳ ಹಕ್ಕನ್ನು ಸ್ಥಾಪಿಸುವ ಭಾಷ್ಯಗಳು. ವೈಜ್ಞಾನಿಕ ಪ್ರಗತಿಗಿಂತ ಬ್ರಾಹ್ಮಣ ಧರ್ಮದ ರಕ್ಷಣೆಯೇ ಮುಖ್ಯವಾಗಿತ್ತು. ಬ್ರಾಹ್ಮಣ ಧರ್ಮ ತನ್ನ ಸವಲತ್ತುಗಳನ್ನು ಸಮರ್ಥಿಸಿಕೊಂಡಿದಷ್ಟೇ ಅಲ್ಲ. ಯಾವುದೇ ಸಂಭಾವಿತ ಮನುಷ್ಯ ಹೇಸಿಕೊಳ್ಳುವ ರೀತಿಯಲ್ಲಿ ಅವನ್ನು ವಿಸ್ತರಿಸಲು ಉದ್ಯುಕ್ತವಾಯಿತು. ಬ್ರಾಹ್ಮಣರು ವಿಶೇಷತಃ ತಮಗೆ ಮನು ದಯಪಾಲಿಸಿದ್ದ ಕೆಲವು ಸವಲತ್ತುಗಳ ಅರ್ಥವನ್ನೇ ವಿಸ್ತರಿಸಲಾರಂಭಿಸಿದರು.

ಮನು ಬ್ರಾಹ್ಮಣರಿಗೆ ದಾನದ ಹಕ್ಕು ಕೊಟ್ಟಿದ್ದ. ಆ ದಾನ ಯಾವಾಗಲೂ ಹಣ ಅಥವಾ ಚಿರಾಸ್ತಿಯಾಗಿರಬೇಕಿತ್ತು. ಆದರೆ ಕಾಲಾಂತರದಲ್ಲಿ ಬ್ರಾಹ್ಮಣನಿಗೆ ಉಪಪತ್ನಿಯಾಗಿ ಇರಿಸಿಕೊಳ್ಳಲು ಹೆಣ್ಣಿನ

ಉಡುಗೊರೆ ಕೊಡುವುದು ಅಥವಾ ಹಣ ಕೊಟ್ಟು ಬಿಡಿಸಿಕೊಳ್ಳಬಹುದಾದ ಹೆಣ್ಣಿನ ಒತ್ತೆಯೂ ಸೇರುವಂತೆ ದಾನದ ಕಲ್ಪನೆಯನ್ನು ವಿಸ್ತರಿಸಲಾಯಿತು.[೧]

ಮನು ಬ್ರಾಹ್ಮಣರನ್ನು ಭೂ ದೇವರು ಪೃಥ್ವೀ ಪತಿಗಳೆಂದು ಕರೆದ. ಬ್ರಾಹ್ಮಣರು ಈ ಹೇಳಿಕೆಯ ವ್ಯಾಪ್ತಿಯನ್ನು ಹಿಗ್ಗಿಸಿ ಇತರೆ ವರ್ಗಗಳ ಹೆಂಗಸರೊಂದಿಗೆ ತಮಗೆ ಲೈಂಗಿಕ ಸಂಭೋಗದ ಹಕ್ಕಿದೆಯೆಂದು ಅಗ್ರಹಪಡಿಸತೊಡಗಿದರು. ಈ ಆಗ್ರಹಕ್ಕೆ ರಾಣಿಯರೂ ಹೊರತಾಗಿರಲಿಲ್ಲ. ಕ್ರಿಸ್ತಶಕ ೧೫೦೨ರಲ್ಲಿ ಭಾರತಕ್ಕೆ ಪ್ರವಾಸಿಯಾಗಿ ಬಂದ ಲುಡೊವಿಕೊ ಡಿ ವರ್ತೆಮಾ, ಕಲ್ಲಿಕೋಟೆಯ ಬ್ರಾಹ್ಮಣರ ಬಗ್ಗೆ ಈ ಕೆಳಗಿನ ಸಂಗತಿ ದಾಖಲು ಮಾಡಿದ್ದಾನೆ:

> "ಈ ಬ್ರಾಹ್ಮಣರು ಯಾರೆಂದು ತಿಳಿಯುವುದು ಸೂಕ್ತವಾದ ಹಾಗೆಯೇ ಆನಂದದಾಯಕವಾದ ಸಂಗತಿ. ಇವರು ನಮ್ಮ ಅರ್ಚಕರ ಹಾಗೆ ಧರ್ಮಶ್ರದ್ಧೆಯ ಪ್ರಮುಖ ವ್ಯಕ್ತಿಗಳೆಂಬುದನ್ನು ನೀವು ತಿಳಿಯಬೇಕು. ರಾಜನು ಪತ್ನಿಯನ್ನು ಪಡೆದಾಗ ಈ ಬ್ರಾಹ್ಮಣರ ಪೈಕಿ ಅತ್ಯಮೂಲ್ಯ ಹಾಗೂ ಅತ್ಯಂತ ಗೌರವಾನ್ವಿತನನ್ನು ಆರಿಸಿ ಆಕೆಯ ಕನ್ಯಾತ್ವ ಕಳೆಯಲೆಂದು ಆಕೆಯೊಡನೆ ಮೊದಲ ರಾತ್ರಿ ಮಲಗುವಂತೆ ಮಾಡುತ್ತಿದ್ದ."[೨]

ಇದೇ ರೀತಿ ಇನ್ನೊಬ್ಬ ಲೇಖಕ ಹ್ಯಾಮಿಲ್ಟನ್[೩] ಬರೆಯುತ್ತಾನೆ:

"ಸಾಮೊರಿನ್ ಮದುವೆಯಾದಾಗ, ನಂಬೂರಿ (ನಂಬೂದರಿ ಬ್ರಾಹ್ಮಣ) ಅಥವಾ ಮುಖ್ಯ ಅರ್ಚಕರು ಭೋಗಿಸುವವರೆಗೆ ತನ್ನ ವಧುವಿನೊಡನೆ ಇರುವಂತಿಲ್ಲ. ಬೇಕಾದರೆ ಆತನು (ನಂಬೂರಿ) ಮೂರು ರಾತ್ರಿಗಳ ಕಾಲ ಆಕೆಯ ಸಹವಾಸ ಹೊಂದಬಹುದು. ಯಾಕೆಂದರೆ ಆಕೆಯ ನಿಷೇಕದ ಮೊದಲ ಫಲಗಳು ಆಕೆ ಪೂಜಿಸುವ ದೇವರಿಗೆ ಪವಿತ್ರ ತರ್ಪಣವಾಗಿ ಸಲ್ಲಬೇಕು."

ಮುಂಬಯಿ ಪ್ರಾಂತ್ಯದಲ್ಲಿ ವೈಷ್ಣವ ಕುಲದ ಅರ್ಚಕರು ತಮ್ಮ ಕುಲದ ಎಲ್ಲ ಹೆಂಗಸರ ಕನ್ಯಾತ್ವ ಕಳೆಯುವ ಹಕ್ಕು ಕೇಳಿದರು. ಇದು ೧೮೬೯ರಲ್ಲಿ ಮುಂಬಯಿ ಉಚ್ಚ ನ್ಯಾಯಾಲಯದಲ್ಲಿ ಕರೊಸನ್ ದಾಸ್ ಮೂಲ್ಜಿ ಎಂಬುವವರ ವಿರುದ್ಧ ಕುಲದ ಮುಖ್ಯ ಅರ್ಚಕ ಹೂಡಿದ ಖ್ಯಾತ 'ಮಹಾರಾಜ ಮಾನಹಾನಿ ಮೊಕದ್ದಮೆ'ಗೆ ಕಾರಣವಾಯಿತು. ಅಂದರೆ ಮೊದಲ ರಾತ್ರಿಯ ಲಾಭದ ಹಕ್ಕು ಕೇಳುವ ಪದ್ಧತಿ ಅದುವರೆಗೆ ಚಾಲ್ತಿಯಲ್ಲಿತ್ತು ಎಂದಾಯಿತು.

ಮೊದಲ ರಾತ್ರಿಯ ಈ ಲೈಂಗಿಕ ಸಹಚರ್ಯದ ಹಕ್ಕನ್ನು ವಿಸ್ತರಿಬಹುದಾದಾಗ ಕೆಳವರ್ಗಗಳೆಲ್ಲರನ್ನೂ ಒಳಗೊಳ್ಳುವಂತೆ ವಿಸ್ತರಿಸುವಲ್ಲಿ ಬ್ರಾಹ್ಮಣರು ಹಿಂಜರಿಯಲಿಲ್ಲ. ಇದನ್ನು ವಿಶೇಷತಃ ಅವರು ಮಲಬಾರಿನಲ್ಲಿ ಮಾಡಿದರು. ಅಲ್ಲೇ ಮನು ಬ್ರಾಹ್ಮಣರನ್ನು ಭೂದೇವರು ಪೃಥ್ವೀಸತಿಗಳೆಂದು ಕರೆದ. ಬ್ರಾಹ್ಮಣರು ಈ ಹೇಳಿಕೆಯ ವ್ಯಾಪ್ತಿಯನ್ನು ಹಿಗ್ಗಿಸಿ ಇತರೆ ವರ್ಗಗಳ ಸ್ತ್ರೀ ಸಂಕುಲದೊಡನೆ ಸ್ವಚ್ಛಂದ ಲೈಂಗಿಕ ಸಂಭೋಗದ ಹಕ್ಕು ಕೇಳಲಾರಂಭಿಸಿದರು. ಇದು ವಿಶೇಷವಾಗಿ ಮಲಬಾರಿನಲ್ಲಾಯಿತು.

---

೧. ಒಬ್ಬ ಬ್ರಾಹ್ಮಣ ವಿವಾಹಿತ ಹೆಣ್ಣೊಬ್ಬಳನ್ನು ಪಡೆದಿಟ್ಟುಕೊಂಡು ಗಂಡ ಹಣ ಕೊಟ್ಟಾಗಲೂ ಬಿಡುಗಡೆ ಮಾಡಲು ನಿರಾಕರಿಸಿದ ಒಂದು ವರದಿ ಓದಿದ್ದು ನೆನಪಾಗುತ್ತಿದೆ.

೨. 'ದಿ ಟ್ರಾವೆಲ್ಸ್ ಆಫ್ ಲೂಡೊವಿಕೊ ವರ್ತೆಮಾ' (ಪ್ರ: ಹಾಕ್ಯೆಟ್ ಸೊಸೈಟಿ ಪು. ೧೪೧ "ಬ್ರಾಹ್ಮಣ ಈ ಕ್ರಿಯೆಗೆ ಸ್ವ ಸಂತೋಷದಿಂದ ಹೋಗುತ್ತಾನೆಂದು ಭಾವಿಸಬೇಡಿ. ರಾಜನು ಆತನಿಗೆ ನಾಲ್ಕು ಅಥವಾ ಐನೂರು ವರಹವನ್ನೂ ಕೊಡಬೇಕಾಗುತ್ತದೆ" ಎಂದು ವರ್ತೆಮಾ ಬರೆಯುತ್ತಾನೆ.

೩. 'ಎ ನ್ಯೂ ಅಕೌಂಟ್ ಆಫ್ ದಿ ಈಸ್ಟ್ ಇಂಡೀಸ್' (೧೭೪೪) ಸಂ. ೧, ಪು.೩೧೦.

"ಅಲ್ಲಿ[೧] ಬ್ರಾಹ್ಮಣ ಜಾತಿಗಳು ಮಾಕಾತ್ಯಂ ಪದ್ಧತಿ ಅಂದರೆ ಮಗುವು ತಂದೆಯ ಕುಟುಂಬಕ್ಕೆ ಸೇರುವ ವ್ಯವಸ್ಥೆಯನ್ನು ಪಾಲಿಸುತ್ತಾರೆ. ಅವರು ತಮ್ಮ ಜಾತಿಯೊಳಗೆ ಎಲ್ಲ ಕಾನೂನು ಹಾಗೂ ಧಾರ್ಮಿಕ ವಿಧಿ ವಿಧಾನಗಳೊಂದಿಗೆ ಮದುವೆಯಾಗುತ್ತಾರೆ. ಆದರೆ ಬ್ರಾಹ್ಮಣ ಗಂಡಸರು ಕೆಳಜಾತಿಗಳ ಹೆಂಗಸರೊಂದಿಗೆ ಸಂಬಂಧನ್ ಕೂಟದಲ್ಲೂ ತೊಡಗುವ ಅಭ್ಯಾಸವಿರಿಸಿಕೊಂಡಿದ್ದಾರೆ."

ಇದಿಷ್ಟೇ ಅಲ್ಲ. ಲೇಖಕ ಮುಂದೆ ಹೇಳುವುದನ್ನು ಗಮನಿಸಿ:

"ಸಂಬಂಧನ್ ಕೂಟದಲ್ಲಿ ಯಾರೊಬ್ಬರೂ ಇನ್ನೊಬ್ಬರ ಕುಟುಂಬದ ಸದಸ್ಯರಾಗುವುದಿಲ್ಲ; ಈ ಕೂಟದಿಂದ ಹುಟ್ಟಿದ ಮಕ್ಕಳು ತಾಯಂದಿರ ತರವಾಡ್‌ಗೆ (ಕುಟುಂಬ) ಸೇರುತ್ತವೆ ಮತ್ತು ಅವರಿಗೆ ತಂದೆಯ ಆಸ್ತಿಯಲ್ಲಾಗಲೀ, ಜೀವನಾಂಶದಲ್ಲಾಗಲೀ ಯಾವ ಹಕ್ಕೂ ಇಲ್ಲ."

ಈ ಪದ್ಧತಿಯ ಉಗಮದ ಬಗ್ಗೆ ಹೇಳುತ್ತ ಗೆಜೆಟಿಯರ್‌ನ ಲೇಖಕ "(ಬ್ರಾಹ್ಮಣರು) ಭೂದೇವ ಅಥವಾ ಪೃಥ್ವೀಪತಿ ಎಂದೂ ಹೇಳಿಕೊಳ್ಳುವುದರಲ್ಲಿ ಈ ಪದ್ಧತಿಯ ಉಗಮವಿದೆ ಮತ್ತು ಇನ್ನೂ ಕೆಳಗಿನ ಸ್ತರದಲ್ಲಿ ಕೆಳಜಾತಿ ಸ್ತ್ರೀತ್ವದ ಮೊದಲ ಫಲ ಕ್ಷತ್ರಿಯ ಅಥವಾ ಆಳುವ ವರ್ಗಕ್ಕೆ ಸೇರಿದೆ. ಈ ಹಕ್ಕು ಮಧ್ಯಯುಗೀನ ಪಾಳೆಯಗಾರರ ಹಕ್ಕಿಗೆ ಸಮನಾದದ್ದು" ಎನ್ನುತ್ತಾರೆ.

ಅದನ್ನು ಮಧ್ಯಯುಗೀನ ಯುರೋಪಿನಲ್ಲಿ 'ಮೊದಲ ರಾತ್ರಿಯ ಹಕ್ಕಿನ' ಬಗ್ಗೆ ಹೇಳಿದಂತೆ ಮೊದಲ ಫಲದ ಹಕ್ಕು ಎನ್ನುವುದು ಪರಿಪೂರ್ಣ ಹೇಳಿಕೆಯಲ್ಲ. ಅದಕ್ಕಿಂತ ಹೆಚ್ಚಿನದಿದು. ಅದು ಬ್ರಾಹ್ಮಣರು ಕೆಳಜಾತಿಯ ಯಾವುದೇ ಹೆಣ್ಣನ್ನು ಕೇವಲ ವ್ಯಭಿಚಾರಕ್ಕಾಗಿ, ಲೈಂಗಿಕ ಹಸಿವಿನ ತಣಿವಿಗಾಗಿ ಮದುವೆಯ ಯಾವುದೇ ಜವಾಬ್ದಾರಿಗಳ ಹೊರೆಯಿಲ್ಲದೆ ಪಡೆಯಬಹುದಾದ ಸಾರ್ವತ್ರಿಕ ಹಕ್ಕು.

ಆಧ್ಯಾತ್ಮಿಕ ಬೋಧಕರಾದ ಬ್ರಾಹ್ಮಣರು ಸಾಮಾನ್ಯತೆಗೆ ಅತೀತರಾಗಿ ಪಡೆದ ಹಕ್ಕುಗಳು ಇಂಥವು!! ಬೋರ್ಗಿ ಪೋಪರು ಪೀಟರ್ ಸಿಂಹಾಸನವೇರಿದ ಅತ್ಯಂತ ಲಂಪಟ ಆಧ್ಯಾತ್ಮಿಕ ಬೋಧಕರೆಂದು ಇತಿಹಾಸದಲ್ಲಿ ದಾಖಲಾಗಿಹೋಗಿದ್ದಾರೆ. ಅವರು ನಿಜಕ್ಕೂ ಭಾರತದ ಬ್ರಾಹ್ಮಣರಿಗಿಂತ ಕಡೆಯಾಗಿದ್ದರೇ ಎಂಬ ಸಂದೇಹ ಹುಟ್ಟುತ್ತದೆ.

ಬುದ್ಧನು ಕಲ್ಪಿಸಿದಂಥ ಯಾವುದೇ ವರ್ಗಹಿತಾಸಕ್ತಿಯಿಲ್ಲದೆ ಸರ್ವಹಿತಕ್ಕಾಗಿ ತೊಡಗಲು ಮುಕ್ತರಾದಂಥ ಶುದ್ಧ ಬುದ್ಧಿಜೀವಿ ವರ್ಗ ಎಲ್ಲೂ ಇಲ್ಲ. ಯಾಕೆಂದರೆ ಆಸ್ತಿಯಿಂದ ಬುದ್ಧಿಜೀವಿಯ ಮನಸ್ಸಿನ ಸ್ವಾತಂತ್ರ್ಯಕ್ಕೆ ಒದಗುವ ಮಿತಿಗಳನ್ನು ತೀರಾ ಈಚಿನವರೆಗೆ ಗುರುತಿಸಲಾಗಿಲ್ಲ. ಆದರೆ ಬೇರೆ ದೇಶಗಳಲ್ಲಿ ಈ ಬುದ್ಧಿಜೀವಿ ವರ್ಗದ ಕೊರತೆಯನ್ನು ಆ ದೇಶಗಳ ಸಮಾಜದ ಪ್ರತಿಯೊಂದು ಶ್ರೇಣಿಗಳ ಸುಶಿಕ್ಷಿತ ವರ್ಗಗಳಿಂದ ವ್ಯಕ್ತವಾದ ದೃಷ್ಟಿಕೋನಗಳ ಬಹುರೂಪದಲ್ಲಿ ನಿಖರ ಮಾರ್ಗದರ್ಶನವಲ್ಲದಿದ್ದರೆ ಸುರಕ್ಷತೆಯಾದರೂ ಇದೆ. ಅಂಥ ಬಹುರೂಪಿ ದೃಷ್ಟಿಗಳಿರುವ ಕಡೆ, ದೇಶದ ಹಿತಾಸಕ್ತಿಗಳಿಗಿಂತ ತನ್ನ ವರ್ಗಹಿತಾಸಕ್ತಿಯನ್ನೇ ಮೇಲಾಗಿ ಭಾವಿಸುವಂಥ ಏಕೈಕ ವರ್ಗದ, ಏಕೈಕ ಸುಶಿಕ್ಷಿತ ಸಮೂಹದ ದೃಷ್ಟಿಯು ಸಮಾಜದ ದಿಕ್ಕು ತಪ್ಪಿಸುವ ಅಥವಾ ತಪ್ಪು ಮಾರ್ಗದರ್ಶನ ನೀಡುವ ಅಪಾಯವಿರುವುದಿಲ್ಲ. ಬ್ರಾಹ್ಮಣ ಧರ್ಮ ತಂದ

೧. ಸಿ.ಎ.ಇನ್ನೆಸ್ ಅವರ 'ಗೆಜೆಟಿಯರ್ ಆಫ್ ಮಲಬಾರ್ ಆಂಡ್ ಅಂಜೆಂಗೊ ಡಿಸ್ಟ್ರಿಕ್ಟ್ಸ್' ಸಂಪುಟ ೧, ಪುಟ ೯೫.

ಬದಲಾವಣೆಗಳಿಂದ ಭಾರತಕ್ಕೆ ಬುದ್ಧಿಜೀವಿ ವರ್ಗದ ಸುರಕ್ಷಿತ ಹಾಗು ನಿಖರ. ಇತರರಿಗಿರುವ ಮತ್ತು ಸಮಾಜದ ಬೇರೆ ಬೇರೆ ಶ್ರೇಣಿಗಳ ವಿವಿಧ ಸುಶಿಕ್ಷಿತ ವರ್ಗಗಳ ಬಹುರೂಪಿ ದೃಷ್ಟಿಕೋನಗಳಿಂದ ಲಭಿಸುವ, ಸುರಕ್ಷತೆ ಹಾಗೂ ಭದ್ರತೆಗಳನ್ನು ಹಿಂದೂಗಳು ಕಳೆದುಕೊಂಡರು.

ಶೂದ್ರರಿಗೆ ವಿದ್ಯೆಯನ್ನು ನಿರಾಕರಿಸುವ ಮೂಲಕ, ಕ್ಷತ್ರಿಯರನ್ನು ಕ್ಷಾತ್ರ ಕ್ಷೇತ್ರಕ್ಕೆ ಕಳಿಸುವ ಮೂಲಕ, ವೈಶ್ಯರಿಗೆ ವಾಣಿಜ್ಯವನ್ನೇ ಮೀಸಲಿಡುವ ಮತ್ತು ಶಿಕ್ಷಣವನ್ನು ತಮಗೇ ಮುಡಿಪಿರಿಸಿಕೊಳ್ಳುವ ಮೂಲಕ ಬ್ರಾಹ್ಮಣರು ಸಮಾಜದ ದಿಕ್ಕು ತಪ್ಪಿಸಲು ಮತ್ತು ತಪ್ಪು ಮಾರ್ಗದರ್ಶನ ನೀಡಲು ಸ್ವತಂತ್ರರಾದ ಏಕೈಕ ಶಿಕ್ಷಿತ ವರ್ಗವಾದರು. ವರ್ಣವನ್ನು ಜಾತಿಯಾಗಿ ಪರಿವರ್ತಿಸುವ ಮೂಲಕ ಅವರು ಹುಟ್ಟೊಂದೇ ಮನುಷ್ಯನ ಮೌಲ್ಯದ ನಿಜವಾದ ಹಾಗೂ ಅಂತಿಮ ಅಳತೆ ಎಂದು ಸಾರಿದರು. ಜಾತಿ ಮತ್ತು ಶ್ರೇಣೀಕೃತ ಅಸಮಾನತೆಗಳು ಅನೈಕ್ಯತೆ ಹಾಗೂ ಒಡಕನ್ನು ಸಹಜಗೊಳಿಸಿಬಿಟ್ಟವು.

ಮೂಲ ವರ್ಣವ್ಯವಸ್ಥೆಯ ಈ ವಿರೂಪವು ಕೇವಲ ಸಾಮಾಜಿಕ ಪದ್ಧತಿಯಾಗಿದ್ದರೆ ಸಹನೀಯವಾದರೂ ಆಗುತ್ತಿತ್ತು. ಆದರೆ ಬ್ರಾಹ್ಮಣ ಧರ್ಮ ಅದನ್ನು ಅಷ್ಟಕ್ಕೇ ಬಿಡಲು ತಯಾರಿರಲಿಲ್ಲ. ಅದು ಚಾತುರ್ವರ್ಣದ ಬದಲಾದ ಹಾಗೂ ವಿಕೃತ ರೂಪಕ್ಕೆ ಕಾನೂನಿನ ಬಲ ಕೊಡಬಯಸಿತ್ತು. ಬ್ರಾಹ್ಮಣ ಧರ್ಮದ ಸೃಷ್ಟಿಯಾದ ಈ ಹೊಸ ಚಾತುರ್ವರ್ಣವು ಮನುಸ್ಮೃತಿಯಲ್ಲಿ ವ್ಯಕ್ತಿಗಳ ಕಾನೂನಾಗಿ ಕುಟುಂಬದ ಕಾನೂನಾಗಿ ಸೇರಿದೆ. ಅದರಲ್ಲಿ ಯಾರಿಗೂ ತಪ್ಪು ಗ್ರಹಿಕೆ ಇರುವಂತಿರಲಿಲ್ಲ. ಕೆಳಜಾತಿಯವನೊಬ್ಬ ಮೇಲ್ಜಾತಿಯವನ ಸ್ಥಾನಮಾನಕ್ಕೇರಿದ್ದಂತೆ ವರ್ತಿಸುವುದು ಅಥವಾ ಮೇಲ್ಜಾತಿಯವನ ಹೆಸರಲ್ಲಿ ಹೋಗುವುದನ್ನು ಮನು ಅಪರಾಧವಾಗಿ ಪರಿಗಣಿಸಿದ್ದಾನೆ.

X ೯೬. ಅಧಮ ಜಾತಿಯವನು ಲೋಭದಿಂದ ಉತ್ಕೃಷ್ಟ (ಜಾತಿಯ) ಕರ್ಮಗಳಿಂದ ಜೀವಿಸಿದರೆ ರಾಜನು ಅವನ ಸೊತ್ತು ಕಿತ್ತುಕೊಂಡು (ನಾಡಿನಿಂದ) ಹೊರ ದಬ್ಬಬೇಕು.

XI ೫೬. ಉತ್ತಮ ಜಾತಿಯವನೆಂದು ಸುಳ್ಳು ಹೇಳಿಕೊಳ್ಳುವುದು ರಾಜನ ಬಳಿ ವೃಥಾಪವಾದ ಹೊರಿಸುವುದು ಗುರುವಿನ ಅಪನಿಂದೆ ಇವು ಬ್ರಹ್ಮಹತ್ಯೆಗೆ ಸಮ.

ಇಲ್ಲಿ ಎರಡು ಅಪರಾಧಗಳಿವೆ. ಸಾಮಾನ್ಯ ಪರಮೂರ್ತೀಕರಣ (impersonation–೧೦.೯೬) ಮತ್ತು ಶೂದ್ರನಿಂದ ಪರಮೂರ್ತೀಕರಣ ಜೊತೆಗೆ ದಂಡನೆಗಳು ಎಷ್ಟು ಉಗ್ರವಾಗಿವೆಯೆಂಬುದನ್ನು ಗಮನಿಸಿ. ಮೊದಲನೆಯದಕ್ಕೆ ಆಸ್ತಿ ಮುಟ್ಟುಗೋಲು ಮತ್ತು ಗಡಿಪಾರಿನ ಶಿಕ್ಷೆ. ಎರಡನೆಯದಕ್ಕೆ ಬ್ರಾಹ್ಮಣ ಹತ್ಯೆಗೆ ಸಮಾನವಾದ ಶಿಕ್ಷೆ.

ಆಧುನಿಕ ನ್ಯಾಯಶಾಸ್ತ್ರದಲ್ಲೂ ಪರಮೂರ್ತೀಕರಣದ ಅಪರಾಧ ಅಪರಿಚಿತವೇನಲ್ಲ ಮತ್ತು ಭಾರತೀಯ ದಂಡ ಸಂಹಿತೆಯ ೪೧೯ನೇ ವಿಧಿ ಅದನ್ನು ಗುರುತಿಸಿದೆ. ಆದರೆ ಈ ಅಪರಾಧಕ್ಕೆ ಭಾರತೀಯ ದಂಡ ಸಂಹಿತೆಯು ವಿಧಿಸುವ ಶಿಕ್ಷೆಯೇನು? ದಂಡ ಮತ್ತು ಸೆರವಾಸವಾದರೆ ಮೂರು ವರ್ಷ ಅಥವಾ ಇವೆರಡೂ. ಬ್ರಿಟಿಷ್ ಸರ್ಕಾರ ತನ್ನ ಜಾತಿ ಶಾಸನವನ್ನು ಇಷ್ಟು ಲಘು ಮಾಡಿದ್ದು ಕಂಡು ಮನು ತನ್ನ ಗೋರಿಯಲ್ಲೇ ಹೊರಳಾಡುತ್ತಿರಬೇಕು.

ಮನು ಮುಂದಕ್ಕೆ ಈ ಕಾನೂನನ್ನು ಜಾರಿಗೊಳಿಸಬೇಕೆಂದು ರಾಜನಿಗೆ ನಿರ್ದೇಶನ ನೀಡುತ್ತಾನೆ. ಮೊದಲಿಗೆ ಆತ ಅದು ರಾಜನ ಪವಿತ್ರ ಕರ್ತವ್ಯವೆಂಬ ಹೆಸರಿನಲ್ಲಿ ವಿನಂತಿಸುತ್ತಾನೆ.

VIII ೧೭೨. ವರ್ಣಸಂಕರ ತಡೆಯುವ ಮೂಲಕ.... ರಾಜನ ಬಲವೃದ್ಧಿಯಾಗುವುದು ಮತ್ತು ಆತ ಇಹಪರಗಳಲ್ಲಿ ಶ್ರೇಯಸ್ಸು ಗಳಿಸುವನು.

ವರ್ಣಸಂಕರ ಕುರಿತ ನಿಯಮವು ರಾಜನ ಆತ್ಮಸಾಕ್ಷಿಗೆ ಒಪ್ಪಿತವಾಗದಿರಬಹುದೆಂದು ಪ್ರಾಯಶಃ ಮನುವಿಗೆ ಗೊತ್ತಿದೆ. ಅದಕ್ಕೇ ಆತ ಬಲಾತ್ಕಾರವಾಗಿ ಹೇರಲು ಹೋಗಿಲ್ಲ. ಬದಲಿಗೆ ನ್ಯಾಯಾನುಷ್ಠಾನದಲ್ಲಿ ರಾಜನು ಹೇಗೆ ವರ್ತಿಸಬೇಕೆಂದು ಮನು ಹೇಳುತ್ತಾನೆ:

VIII ೧೭೭. ಆದ್ದರಿಂದ ರಾಜನು ತನ್ನ ಇಷ್ಟಾನಿಷ್ಟಗಳನ್ನು ಗಣಿಸದೆ ಯಮನಂತೆ ವರ್ತಿಸಬೇಕು.

ಅಂದರೆ ಆತ ಮೃತದೇವತೆ ಯಮನಂತೆ ನಿಷ್ಪಕ್ಷನಾಗಿರಬೇಕು. ಇಷ್ಟಾದರೂ ಮನು ಇದನ್ನು ರಾಜನ ಪವಿತ್ರ ಕರ್ತವ್ಯ ಮಾತ್ರವಾಗಿ ಬಿಡಲು ಇಷ್ಟಪಡುವುದಿಲ್ಲ. ಮನು ಅದನ್ನು ರಾಜನ ಮೇಲಿನ ಕಟ್ಟಳೆಯಾಗಿ ಮಾಡುತ್ತಾನೆ. ಮನು ಈ ಕಟ್ಟಳೆಯನ್ನು ಹೀಗೆ ವಿಧಿಸುತ್ತಾನೆ:

VIII ೪೧೦. ವೈಶ್ಯನು ವಾಣಿಜ್ಯ, ಬಡ್ಡಿಗೆ ಸಾಲ ಕೊಡುವುದು, ಕೃಷಿ, ಪಶುಪಾಲನೆಗಳಲ್ಲಿ ತೊಡಗುವಂತೆ ಮತ್ತು ಶೂದ್ರನು ದ್ವಿಜರ ದಾಸ್ಯದಲ್ಲಿರುವಂತೆ ರಾಜನು ನೇಮಿಸಬೇಕು.

ಮನು ಮತ್ತೆ ಈ ವಿಷಯಕ್ಕೆ ಬಂದು ಹೇಳುತ್ತಾನೆ:

VIII ೪೧೮. ವೈಶ್ಯ ಶೂದ್ರರು ಸ್ವಕಾರ್ಯಗಳನ್ನು ಮಾತ್ರ ಮಾಡುವಂತೆ ಪ್ರಯತ್ನ ಮಾಡಬೇಕು.

ಇವರಿಬ್ಬರಿಂದ ಸ್ವಕರ್ಮ ಚ್ಯುತಿಯಾದರೆ ಜಗತ್ತೇ ಕ್ಷೋಭೆಗೊಳ್ಳುವುದು.

ರಾಜರೇನಾದರೂ ತಮ್ಮ ಈ ಹೊಣೆ ನಿರ್ವಹಿಸದಿದ್ದರೆ? ಮನು ದೃಷ್ಟಿಯಲ್ಲಿ ಚಾತುರ್ವರ್ಣ ಶಾಸನ ಎಷ್ಟು ಪರಮೋಚ್ಚವೆಂದರೆ ಆತ ಈ ಶಾಸನದ ಅನುಷ್ಠಾನದ ಹೊಣೆ ಹೊರದ ರಾಜನು ತನ್ನನ್ನು ಭಂಗಪಡಿಸುವುದನ್ನು ಸಹಿಸುವುದಿಲ್ಲ. ಅದಕ್ಕೇ ಮನು ಅಂಥ ರಾಜನನ್ನೇ ಮುಗಿಸಬೇಕು ಎಂಬ ಹೊಸ ನಿಯಮವನ್ನು ನೀಡಿದ್ದು ಬ್ರಾಹ್ಮಣ ಧರ್ಮಕ್ಕೆ ಎಷ್ಟು ಪ್ರೀತಿಪಾತ್ರವಾಗಿತ್ತೆಂಬುದನ್ನು ಊಹಿಸಬಹುದು.

ನಾನು ಮುಂಚೆ ಹೇಳಿದ ಹಾಗೆ ಜಾತಿ ವ್ಯವಸ್ಥೆಗಿಂತ ವೈದಿಕ ಚಾತುರ್ವರ್ಣ ವ್ಯವಸ್ಥೆ ಉತ್ತಮತರವಾಗಿದ್ದರೂ ಅದು ಆದರ್ಶ ಸಮಾಜವೊಂದರ ಒಗ್ಗಟ್ಟುಳ್ಳ ಏಕ ಅಖಂಡ ಸಮಾಜದ ಸೃಷ್ಟಿಗೆ ಅನುಕೂಲಕರವಾಗಿರಲಿಲ್ಲ. ತನ್ನ ಸಿದ್ಧಾಂತದಿಂದಲೇ ಚಾತುರ್ವರ್ಣವು ನಾಲ್ಕು ವರ್ಗಗಳಿಗೆ ಜನ್ಮ ಕೊಟ್ಟಿದೆ. ಈ ನಾಲ್ಕು ವರ್ಗಗಳ ನಡುವೆ ಮೈತ್ರಿಯೇನೂ ಇರಲಿಲ್ಲ. ಅವು ಆಗಾಗ ತಮ್ಮೊಳಗೆ ಕಾದಾಡುತ್ತಿದ್ದವು ಮತ್ತು ಈ ಕಾದಾಟಗಳು ಎಷ್ಟು ಉಗ್ರವಾಗಿರುತ್ತಿದ್ದವೆಂದರೆ ಅವನ್ನು ವರ್ಗ ಸಮರಗಳೆಂದೇ ಕರೆಯಬೇಕಾಗುತ್ತದೆ. ಇಷ್ಟಾದರೂ ಹಳೆಯ ಚಾತುರ್ವರ್ಣದಲ್ಲಿ ಎರಡು ಸಂಜೀವಿನಿ ಗುಣಗಳಿದ್ದವು. ಬ್ರಾಹ್ಮಣಧರ್ಮ ಅವನ್ನು ತೆಗೆದುಹಾಕಿತು. ಮೊದಲನೆಯದು, ವರ್ಣಗಳ ನಡುವೆ ಪ್ರತ್ಯೇಕತೆಯಿರಲಿಲ್ಲ. ಒಗ್ಗಟ್ಟಿನ ಎರಡು ಪ್ರಬಲ ಕೊಂಡಿಗಳಾದ ಅಂತರ ವಿವಾಹ ಮತ್ತು ಅಂತರ್ಭೋಜನಗಳು ಪೂರ್ಣ ಪ್ರಮಾಣದಲ್ಲಿ ಇದ್ದೇ ಇದ್ದವು. ವರ್ಣಗಳ ನಡುವೆ ಸಮಾಜದ ಅಡಿಪಾಯವನ್ನೇ ನಾಶ ಮಾಡುವ ಆ ಸಮಾಜ ವಿರೋಧಿ ಭಾವನೆಗೆ ಎಡೆಕೊಡುವಂಥ ಅವಕಾಶವಿರಲಿಲ್ಲ. ಕ್ಷತ್ರಿಯರು ಬ್ರಾಹ್ಮಣರ ವಿರುದ್ಧ ಮತ್ತು ಬ್ರಾಹ್ಮಣರು ಕ್ಷತ್ರಿಯರ ವಿರುದ್ಧ ಹೊಡೆದಾಡಿದರೂ, ಬ್ರಾಹ್ಮಣರ ಸಲುವಾಗಿ ಕ್ಷತ್ರಿಯರ ವಿರುದ್ಧವೇ ಕಾದಾಡಿದ ಕ್ಷತ್ರಿಯರ[೧] ಕೊರತೆಯಿರಲಿಲ್ಲ. ಹಾಗೇ ಬ್ರಾಹ್ಮಣರನ್ನು ತುಳಿಯಲು ಕ್ಷತ್ರಿಯರೊಡನೆ ಕೈ ಕೂಡಿಸಿದ ಬ್ರಾಹ್ಮಣರ ಕೊರತೆಯೂ[೨] ಇರಲಿಲ್ಲ.

೧. ಕ್ಷತ್ರಿಯರ ವಿರುದ್ಧ ಪರಶುರಾಮನ ಸಮರವನ್ನು ನಾನು ಅರ್ಥೈಸುವ ಬಗೆಯಿದು.

೨. ಬೌದ್ಧಧರ್ಮವು ಬ್ರಾಹ್ಮಣರು ಹಾಗೂ ಬ್ರಾಹ್ಮಣ ಧರ್ಮಗಳ ವಿರುದ್ಧದ ಬಂಡಾಯವಾಗಿತ್ತು. ಆದರೆ ಬುದ್ಧ ಹಾಗೂ ಬೌದ್ಧಧರ್ಮದ ಮೊದಲ ಹಿಂಬಾಲಕರಲ್ಲಿ ಅನೇಕರು ಬ್ರಾಹ್ಮಣರೇ.

ಎರಡನೆಯದಾಗಿ, ಈ ಹಳೆಯ ಚಾತುರ್ವರ್ಣ ಸಾಂಪ್ರದಾಯಿಕವಾದದ್ದು. ಅದು ಸಮಾಜದ ಆದರ್ಶವಾಗಿತ್ತೇ ಹೊರತು ಸರ್ಕಾರದ ಕಾನೂನಾಗಿರಲಿಲ್ಲ. ಬ್ರಾಹ್ಮಣ ಧರ್ಮವು ವರ್ಣಗಳನ್ನು ವಿಭಾಗಿಸಿ ಪರಸ್ಪರ ಪ್ರತಿರೋಧದ ಬೀಜ ಬಿತ್ತಿತ್ತು. ಬ್ರಾಹ್ಮಣ ಧರ್ಮ ರೂಢಿ ಮಾತ್ರವಾಗಿದ್ದುದನ್ನು ಶಾಸನಬದ್ಧಗೊಳಿಸಿತು. ಅದಕ್ಕೆ ಶಾಸನದ ಆಧಾರ ಕೊಡುವ ಕುತಂತ್ರ ಹೂಡಿತು. ವೈದಿಕ ಧರ್ಮ ದುಷ್ಟ ವ್ಯವಸ್ಥೆಯಾಗಿತ್ತೆಂದು ಕೊಂಡರೂ ಅದು ಕಾಲ ಸಂದರ್ಭಗಳ ಒತ್ತಡದಲ್ಲಿ ನಶಿಸಿಹೋಗುತ್ತಿತ್ತು. ಅದಕ್ಕೆ ಕಾನೂನು ಬಲಕೊಡುವ ಮೂಲಕ ಬ್ರಾಹ್ಮಣ ಧರ್ಮ ಅದನ್ನು ನಿರಂತರಗೊಳಿಸಿತ್ತು. ಪ್ರಾಯಶಃ ಹಿಂದೂ ಸಮಾಜಕ್ಕೆ ಬ್ರಾಹ್ಮಣ ಧರ್ಮ ಮಾಡಿದ ಅತ್ಯಂತ ದೊಡ್ಡ ಹಾನಿಯಿದು.

ಈ ಪ್ರಶ್ನೆಯನ್ನು ಪರಿಶೀಲಿಸುವಾಗ ಚಾತುರ್ವರ್ಣ ಅರ್ಥಾತ್ ಶ್ರೇಣೀಕೃತ ಅಸಮಾನತೆ ವ್ಯವಸ್ಥೆಯ ಅನುಷ್ಠಾನಕ್ಕಾಗಿ ತನ್ನ ಮೇಲೆ ಹೊರಿಸಿದ ಹೊಣೆಯನ್ನು ರಾಜನು ಬ್ರಾಹ್ಮಣರು ಹಾಗೂ ಕ್ಷತ್ರಿಯರ ಮೇಲೆ ಹೇರಬೇಕಿಲ್ಲ ಎಂಬುದನ್ನು ಗಮನಿಸದಿರಲು ಸಾಧ್ಯವಿಲ್ಲ. ಈ ಹೊಣೆಯು ವೈಶ್ಯರು ಹಾಗೂ ಶೂದ್ರರ ವಿರುದ್ಧ ಮಾತ್ರ ಶಾಸನ ಜಾರಿ ಮಾಡುವ ಜವಾಬ್ದಾರಿಗೆ ಸೀಮಿತಗೊಂಡಿದೆ. ಚಾತುರ್ವರ್ಣ ವ್ಯವಸ್ಥೆಗೆ ಕಾನೂನು ಬಲ ಕೊಡಲು ಬ್ರಾಹ್ಮಣ ಧರ್ಮ ಎಷ್ಟು ಉತ್ಸುಕವಾಗಿತ್ತೆಂಬುದನ್ನು ನೆನೆಸಿಕೊಂಡರೆ ಈ ಸೀಮಿತಿಯ ಪರಿಣಾಮಗಳು ಏನಿಲ್ಲೆಂದರೂ ಎಡವಟ್ಟಿನವು ಅನ್ನಲೇಬೇಕಾಗುತ್ತದೆ. ಈ ವ್ಯವಸ್ಥೆಯನ್ನು ಕಾನೂನಾಗಿಸುವ ಪ್ರಯತ್ನ ನಡೆದಾಗ್ಯೂ ಅದು ಅರ್ಧ ಶಾಸನವಾಗಿ ಅರ್ಧ ರೂಢಿಯಾಗಿಯೇ ಉಳಿಯಿತು. ವೈಶ್ಯರು ಮತ್ತು ಶೂದ್ರರ ಪಾಲಿಗೆ ಕಾನೂನು ಮತ್ತು ಬ್ರಾಹ್ಮಣರು ಕ್ಷತ್ರಿಯರ ಪಾಲಿಗೆ ಕೇವಲ ರೂಢಿಗತ ಸಂಪ್ರದಾಯ.

ಈ ವ್ಯತ್ಯಾಸಕ್ಕೆ ವಿವರಣೆ ಕೊಡುವ ಅಗತ್ಯವಿದೆ. ಈ ವ್ಯವಸ್ಥೆಗೆ ಕಾನೂನು ಬಲ ಕೊಡುವ ಯತ್ನದಲ್ಲಿ ಬ್ರಾಹ್ಮಣ ಧರ್ಮ ಪ್ರಮಾಣಿಕವಾಗಿತ್ತೇ? ನಾಲ್ಕು ವರ್ಣಗಳು ಅದಕ್ಕೆ ಬದ್ಧವಾಗಿರಬೇಕೆಂದು ಬಯಸಿತ್ತೇ? ಬ್ರಾಹ್ಮಣ ಧರ್ಮದಲ್ಲಿ ತಾನು ಮಾಡಿದ ಶಾಸನಕ್ಕೆ ಬ್ರಾಹ್ಮಣರು ಮತ್ತು ಕ್ಷತ್ರಿಯರನ್ನು ಕಟ್ಟಿ ಹಾಕದೆ ಇಟ್ಟಿದ್ದರಿಂದ, ಈ ವ್ಯವಹಾರದಲ್ಲಿ ಅದು ಪ್ರಾಮಾಣಿಕವಾಗಿರಲಿಲ್ಲವೆಂಬುದು ಗೊತ್ತಾಗುತ್ತದೆ. ಈ ವ್ಯವಸ್ಥೆ ಆದರ್ಶ ವ್ಯವಸ್ಥೆಯೆಂದು ನಂಬಿದ್ದರೆ ಬ್ರಾಹ್ಮನ ಧರ್ಮ ಅದನ್ನು ಸಾರ್ವತ್ರಿಕ ಕಟ್ಟುಪಾಡು ಮಾಡದೆ ಬಿಡುತ್ತಿರಲಿಲ್ಲ.

ಈ ಕೊಳಕು ಆಟದಲ್ಲಿ ಅಪ್ರಾಮಾಣಿಕತೆಯಷ್ಟೇ ಅಲ್ಲದೆ ಇನ್ನೂ ಇದೆ. ಬ್ರಾಹ್ಮಣರಿಗೆ ಈ ಕಾನೂನಿನ ಶೃಂಖಲೆಗಳನ್ನು ತೊಡಿಸದೆ ಯಾಕೆ ಸ್ವತಂತ್ರರಾಗಿ ಬಿಡಲಾಯಿತೆಂಬುದನ್ನು ಸುಲಭವಾಗಿ ಅರ್ಥ ಮಾಡಿಕೊಳ್ಳಬಹುದು. ಮನು ಅವರನ್ನು ಭೂ ದೇವರೆಂದು ಕರೆದ ಮತ್ತು ದೇವತೆಗಳು ಶಾಸನಾತೀತರು. ಆದರೆ ಬ್ರಾಹ್ಮಣರಂತೆಯೇ ಕ್ಷತ್ರಿಯರನ್ನೂ ಮುಕ್ತವಾಗಿ ಬಿಟ್ಟಿದ್ದೇಕೆ? ಕ್ಷತ್ರಿಯರು ಬ್ರಾಹ್ಮಣರೆದುರು ತಲೆ ಬಾಗುವುದಿಲ್ಲವೆಂದು ಅವನಿಗೆ ಗೊತ್ತಿತ್ತು. ಆತ ಮುಂದಕ್ಕೆ ಕ್ಷತ್ರಿಯರು ದರ್ಪ ತೋರಿದರೆ, ಬಂಡಾಯದ ಯೋಜನೆ ಹೂಡಿದರೆ ಅವರನ್ನು ಬ್ರಾಹ್ಮಣರು ಹೇಗೆ ಶಿಕ್ಷಿಸಬಹುದೆಂದು ಎಚ್ಚರಿಸಲು ಮುಂದಾಗುತ್ತಾನೆ.

IX ೩೨೦. ಬ್ರಾಹ್ಮಣರಿಗೆ ವಿರುದ್ಧವಾಗಿ ಕ್ಷತ್ರಿಯನು ಅತಿ ಪ್ರವೃದ್ಧನಾದರೆ, ಬ್ರಾಹ್ಮಣನೇ ಅವನನ್ನು ಅಂಕೆಯಲ್ಲಿಡಬಹುದು. ಕ್ಷತ್ರಿಯನು ಬ್ರಾಹ್ಮಣನಿಂದ ಜನಿಸಿದವನು.

IX ೩೨೧. ನೀರಿನಿಂದ ಬೆಂಕಿ, ಬ್ರಾಹ್ಮಣನಿಂದ ಕ್ಷತ್ರಿಯ, ಕಲ್ಲಿನಿಂದ ಕಬ್ಬಿಣ ಹುಟ್ಟಿವೆ. ಆದ್ದರಿಂದ ಅವುಗಳ ಸರ್ವತ್ರಗಮ್ಯ ತೇಜಸ್ಸು ಮೂಲ ವಸ್ತುವಿನ ವಿರುದ್ಧ ಏನೂ ಪರಿಣಾಮ ಬೀರುವುದಿಲ್ಲ.

ಕ್ಷತ್ರಿಯರನ್ನು ಬ್ರಾಹ್ಮಣರು ಸ್ವಂತ ಬಲದಿಂದ ನಿಗ್ರಹಿಸಬಲ್ಲರು. ಸಮಯ ಬಂದಾಗ ಪರಿಣಾಮಗಳ ಭೀತಿಯಿಲ್ಲದೆ ಕ್ಷತ್ರಿಯರನ್ನು ನಿರ್ಬಂಧಿಸಬಲ್ಲರು. ಆ ಕಾರಣಕ್ಕೇ ಕ್ಷತ್ರಿಯನ ವಿರುದ್ಧ ಶಾಸನದ ಕಟ್ಟುಪಾಡು

ಮಾಡಲು ರಾಜನಿಗೆ ವಿಧಿಸಿಲ್ಲ ಎಂದು ಯೋಚಿಸುವ ಸಾಧ್ಯತೆಗಳಿವೆ. ಆದರೆ ಇದು ಮನು ಇಂಗಿತವಿರಲಾರದು. ಯಾಕೆಂದರೆ ಪ್ರತೀಕಾರದ ಈ ಶಪಥ ಹೆದರಿಕೆ ಮತ್ತು ಶಾಪಗಳನ್ನು ಉಚ್ಚರಿಸಿದ ಕೂಡಲೇ ಮನು ಒಮ್ಮಿಂದೊಮ್ಮೆಲೇ ಕೆಳಗೆ ಬಂದು ಕ್ಷತ್ರಿಯರ ಸಹಕಾರಕ್ಕಾಗಿ ಹಾಗೂ ಬ್ರಾಹ್ಮಣರೊಡನೆ ಸಮಾನ ವೇದಿಕೆಯಲ್ಲಿ ಬರಲು ಯಾಚಿಸತೊಡಗುತ್ತಾನೆ.

IX ३२३. ಆದರೆ (ಅಂತ್ಯಕಾಲ ಸಮೀಪಿಸಿದ ರಾಜನು) ದಂಡಗಳಿಂದ ಬಂದ ಹಣವನ್ನು ಬ್ರಾಹ್ಮಣರಿಗೆ ರಾಜ್ಯವನ್ನು ಮಗನಿಗೆ ಕೊಟ್ಟು ವೀರ ಮರಣವನ್ನು ಹೊಂದಬೇಕು.

ಶಾಪಗಳಿಂದ ಯಾಚನೆಗೆ ಬಂದಿದ್ದು ಅತ್ಯಂತ ವಿಲಕ್ಷಣ ಆಕ್ರಂದನ. ಕ್ಷತ್ರಿಯರ ಬಗ್ಗೆ ಮನು ತಳೆದ ಈ ವಿಚಿತ್ರ ಧೋರಣೆಯ ವ್ಯತಿರಿಕ್ತತೆಗೆ ಏನು ವಿವರಣೆ? ಬ್ರಾಹ್ಮಣರು ಮತ್ತು ಕ್ಷತ್ರಿಯರ ಈ ಸಹಕಾರದ ಉದ್ದೇಶವೇನು? ಈ ಸಮಾನ ವೇದಿಕೆ ಯಾರ ವಿರುದ್ಧ? ಮನು ವಿವರಿಸುವುದಿಲ್ಲ. ಈ ಒಗಟು ಬಿಡಿಸಿ ಪ್ರಶ್ನೆಗಳಿಗೆ ತೃಪ್ತಿಕರ ಉತ್ತರ ಕೊಡುವ ಮುನ್ನ ಸಾವಿರ ವರ್ಷಗಳ ಪೂರ್ಣ ಇತಿಹಾಸವನ್ನೇ ಹೇಳಬೇಕಾಗುತ್ತದೆ.

ಈ ಒಗಟಿನ ಪರಿಹಾರದ ಸುಳಿವು ನೀಡುವ ಚರಿತ್ರೆಯೆಂದರೆ, ಬ್ರಾಹ್ಮಣರು ಹಾಗೂ ಕ್ಷತ್ರಿಯರ ನಡುವಣ ವರ್ಗ ಸಮರದ ಚರಿತ್ರೆ.

ಕಾರ್ಲ್‌ಮಾರ್ಕ್ಸ್ ಪ್ರತಿಪಾದಿಸಿದ ವರ್ಗ ಸಮರದ ಸಿದ್ಧಾಂತವನ್ನು ಬಹುತೇಕ ಕಂದಾಚಾರಿ ಹಿಂದೂಗಳು ದೂರ ತಳ್ಳುತ್ತಾರೆ ಮತ್ತು ಮಾರ್ಕ್ಸ್ ತನ್ನ ಸಿದ್ಧಾಂತಕ್ಕೆ ಬೆಂಬಲವಾಗಿ ಹುಡುಕುತ್ತಿದ್ದ ಅತ್ಯಂತ ಸುಸಂಬದ್ಧ ರುಜುವಾತನ್ನು ಪ್ರಾಯಶಃ ಅವರ ಪೂರ್ವಿಕರ ಚರಿತ್ರೆಯೇ ದೊರಕಿಸಿಕೊಡುತ್ತದೆ ಎಂದು ಅವರಿಗೇನಾದರೂ ಹೇಳಿದರೆ ಅವರಿಗೆ ಅಘಾತವೇ ಆಗಿಬಿಡುತ್ತದೆ. ಬ್ರಾಹ್ಮಣರು ಮತ್ತು ಕ್ಷತ್ರಿಯರ ನಡುವೆ ಅಸಂಖ್ಯಾತ ವರ್ಗ ಸಮರಗಳೇ ನಡೆದಿವೆ. ಅವುಗಳಲ್ಲಿ ತೀರಾ ಮುಖ್ಯವಾದವು ಮಾತ್ರ ಪ್ರಾಚೀನ ಹಿಂದೂ ಸಾಹಿತ್ಯದಲ್ಲಿ ದಾಖಲಾಗಿವೆ.[೧] ಬ್ರಾಹ್ಮಣರು ಮತ್ತು ಕ್ಷತ್ರಿಯರಾದ ರಾಜನ ನಡುವಣ ಸಂಘರ್ಷದ ದಾಖಲೆ ನಮಗೆ ಸಿಕ್ಕಿದೆ. ಈ ಸಂಘರ್ಷಗಳಲ್ಲಿ ಮೊದಲನೆಯದು ವೇಣ ದೊರೆಯೊಡನೆ ನಡೆದ ಸಂಘರ್ಷ, ಪುರೂರವನೊಡನೆ ಎರಡನೆಯದು, ನಹುಷನೊಡನೆ ಮೂರನೆಯದು, ನಿಮಿಯೊಡನೆ ನಾಲ್ಕನೆಯದು ಮತ್ತು ಸುಮುಖನೊಡನೆ ಐದನೆಯದು, ಬ್ರಾಹ್ಮಣನಾದ ವಸಿಷ್ಠ ಹಾಗೂ ರಾಜನಲ್ಲದೆ ಸಾಮಾನ್ಯ ಕ್ಷತ್ರಿಯನಾದ ವಿಶ್ವಾಮಿತ್ರರ ನಡುವಣ ಸಂಘರ್ಷದ ದಾಖಲೆಯೂ ಇದೆ. ಆಮೇಲೆ ಕಾರ್ತವೀರ್ಯನ ವಂಶಜರು ಭೃಗುಕುಲದ ಎಲ್ಲ ಬ್ರಾಹ್ಮಣರ ಸಾಮೂಹಿಕ ನರಮೇಧ ಮಾಡಿದ ದಾಖಲೆಯಿದೆ. ಅದಾದ ಮೇಲೆ ಬ್ರಾಹ್ಮಣರ ಪರವಾಗಿ ಪರಶುರಾಮನು ಇಡಿ ಕ್ಷತ್ರಿಯ ವರ್ಗವನ್ನೇ ನಿರ್ಮೂಲ ಮಾಡಿದನೆಂಬ ದಾಖಲೆಯಿದೆ. ಅವರ ನಡುವೆ ಸಂಘರ್ಷಕ್ಕೆ ದಾರಿಯಾದ ವಿಷಯಗಳ ವ್ಯಾಪ್ತಿ ವಿಸ್ತಾರವಾದದ್ದು ಮತ್ತು ಈ ವಿಷಯಗಳು ಬ್ರಾಹ್ಮಣ ಕ್ಷತ್ರಿಯರ ನಡುವಣ ಭಾವನೆಗಳು ಎಷ್ಟು ಕಹಿಯಾಗಿ ಹದಗೆಟ್ಟು ಹೋಗಿತ್ತೆಂಬುದನ್ನು ತೋರುತ್ತವೆ. ಕ್ಷತ್ರಿಯನಿಗೆ ಬ್ರಾಹ್ಮಣನಾಗುವ ಹಕ್ಕಿದೆಯೇ ಎಂಬ ವಿಷಯದಲ್ಲಿ ಘರ್ಷಣೆಯಿದ್ದವು. ಬ್ರಾಹ್ಮಣರು ಅಧಿಕಾರ ಕೇಂದ್ರಕ್ಕೆ ಒಳಪಡುವರೋ ಇಲ್ಲವೋ ಎಂಬ ಪ್ರಶ್ನೆಯ ಮೇಲೆ ಸಂಘರ್ಷಗಳಾಗಿವೆ. ಯಾರು ಮೊದಲು ನಮಸ್ಕರಿಸಬೇಕು ಮತ್ತು ಯಾರು ಯಾರಿಗೆ ದಾರಿ ಕೊಡಬೇಕು ಎಂಬ ಪ್ರಶ್ನೆಯ ಮೇಲೆ ಘರ್ಷಣೆಗಳಾಗಿವೆ. ಈ ಸಮರಗಳು ಅಧಿಕಾರಿ, ಅಂತಸ್ತು ಮತ್ತು ಘನತೆ ಸಮರಗಳು.[೨]

---

೧. ಈ ಎಲ್ಲ ದಾಖಲೆಗಳನ್ನೂ ಪ್ರೊ. ಮುಯಿರ್ 'ಒರಿಜಿನಲ್ ಸ್ಯಾಂಸ್ಕ್ರಿಟ್ ಟೆಕ್ಸ್ಟ್ಸ್' ನಲ್ಲಿ ಕಲೆ ಹಾಕಿದ್ದಾರೆ.

೨. ಹಾಪ್‌ಕಿನ್ಸ್‌ರ 'ಹಿಸ್ಟರಿ ಆಫ್ ರೂಲಿಂಗ್ ರೇಸಸ್' ನೋಡಿ.

ಈ ಕಾದಾಟಗಳ ಫಲಿತಾಂಶ ಬ್ರಾಹ್ಮಣರಿಗೆ ಸ್ವಯಂ ಸ್ಪಷ್ಟವಾಗದಿರಲು ಸಾಧ್ಯವಿರಲಿಲ್ಲ. ಅವರೆಷ್ಟೇ ಜಂಭದ ಮಾತಾಡಿದರೂ ತಾವು ಕ್ಷತ್ರಿಯರನ್ನು ತುಳಿದುಹಾಕಲು ಸಾಧ್ಯವಿರಲಿಲ್ಲ ಅನ್ನುವುದು ಅವರಿಗೆ ಅರಿವಾಗಿರಬೇಕು ಮತ್ತು ನಿರ್ಮೂಲದ ಸಮರಗಳೆಷ್ಟೇ ನಡೆದರೂ ಕ್ಷತ್ರಿಯರು ಬ್ರಾಹ್ಮಣರನ್ನು ಬಾಧಿಸುವಷ್ಟು ಸಂಖ್ಯೆಯಲ್ಲಿ ಉಳಿದೇ ಉಳಿದರು. ಮನುವಿನ ಕಾಲದ ಕ್ಷತ್ರಿಯರು ಮೂಲ ಕ್ಷತ್ರಿಯರಲ್ಲ. ಪರಶುರಾಮನು ಹತ್ಯೆಗೈದ ಕ್ಷತ್ರಿಯ ವಿಧವೆಯರಿಗೆ ಬ್ರಾಹ್ಮಣರಿಂದ ಹುಟ್ಟಿದ ಜನಾಂಗ ಎಂದು ಬ್ರಾಹ್ಮಣರು ಕಟ್ಟಿದ ಹಾಗೂ ಮನು ಉಲ್ಲೇಖಿಸುವ ಹೊಲಸು ಕತೆಗೆ ಗಮನ ಕೊಡಬೇಕಾದ್ದೇನಿಲ್ಲ. ತನ್ನ ಉದ್ದೇಶ ಸಾಧನೆಗೆ ಬ್ರಾಹ್ಮಣ ಧರ್ಮ ನಾಚಿಕೆಯಿಲ್ಲದೆ ಬಳಸಿಕೊಳ್ಳುವ ಸಾಧನಗಳಲ್ಲಿ ಬ್ಲಾಕ್‌ಮೇಲ್ ತಂತ್ರವೂ ಒಂದು. ಕ್ಷತ್ರಿಯರ ವಿರುದ್ಧ ಬ್ರಾಹ್ಮಣ ಧರ್ಮದ ಹೋರಾಟವು ಮೊದಲಿನಿಂದಲೂ ಮೂರ್ಖರು ಹಾಗೂ ಬಾಯಿಬಡುಕರ ನಡುವಣ ಕಾದಾಟವೇ. ಬ್ರಾಹ್ಮಣರು ಕ್ಷತ್ರಿಯರ ವಿರುದ್ಧ ಚಾತುರ್ವರ್ಣವನ್ನು ಉಳಿಸಿಕೊಳ್ಳಲು ಹೋರಾಡುತ್ತಿದ್ದರು. ಈಗ ಈ ಚಾತುರ್ವರ್ಣವೇ ಕ್ಷತ್ರಿಯರ ಕೈಗೆ ಕತ್ತಿ ಕೊಟ್ಟು ಅದನ್ನು ಬ್ರಾಹ್ಮಣರಿಗೆ ನಿರಾಕರಿಸಿದ್ದು. ಈ ಸಿದ್ಧಾಂತದ ಕೆಳಗೆ ಬ್ರಾಹ್ಮಣರು ಹೇಗೆ ಕ್ಷತ್ರಿಯರ ವಿರುದ್ಧ ಜಯದ ಆಸೆಯೊಂದಿಗೆ ಹೋರಾಡಬಹುದಿತ್ತು? ಕತ್ತಿಗಳನ್ನು ಕೊಡುವುದು ಸುಲಭ. ಆದರೆ ಅವುಗಳಿಗೆ ಗುರಿಯಾಗುವುದು ಕಠಿಣ ಎಂಬ ಟಾಲಿರ್‍ಯಾಂಡ್ ನೆಪೋಲಿಯನ್‌ಗೆ ಹೇಳಿದ ಸತ್ಯವನ್ನು ಅರಿಯಲು ಬ್ರಾಹ್ಮಣರಿಗೆ ಹೆಚ್ಚು ಕಾಲ ಬೇಕಾಗಲಿಲ್ಲ ಎನಿಸುತ್ತದೆ. ಕ್ಷತ್ರಿಯರೊಂದಿಗೆ ಯುದ್ಧವೆಂದರೆ ಅದು ವಿನಾಶದ ಹಾದಿ ಎಂದೂ ಅವರಿಗೆ ಅರಿವಾಗಿರಬೇಕು. ಇವು ಬ್ರಾಹ್ಮಣರು ಕ್ಷತ್ರಿಯರ ನಡುವಣ ಯುದ್ಧದ ನೇರ ಪರಿಣಾಮಗಳು. ಆದರೆ ಇವಲ್ಲದೆ ಬೇರೆಯೂ ಇದ್ದು ಅವು ಬ್ರಾಹ್ಮಣರ ಗಮನದಿಂದ ತಪ್ಪಿ ಹೋಗಿರಲಾರವು. ಬ್ರಾಹ್ಮಣರು ಮತ್ತು ಕ್ಷತ್ರಿಯರು ತಮ್ಮೊಳಗೆ ಹೊಡೆದಾಡುತ್ತಿರುವಾಗ ವೈಶ್ಯರು ಹಾಗೂ ಶೂದ್ರರನ್ನು ತಡೆದು ನಿಯಂತ್ರಣದಲ್ಲಿಡಲು ಯಾರೂ ಉಳಿಯಲಿಲ್ಲ. ಅವರು ಆಗಲೇ ಸಮಾನತೆಯ ದಾರಿಯಲ್ಲಿ ನಡೆಯುತ್ತ ಇನ್ನೇನು ಬ್ರಾಹ್ಮಣರು ಮತ್ತು ಕ್ಷತ್ರಿಯರ ಅಂತಸ್ತಿಗೆ ಸಮೀಪವಾಗುತ್ತಿದ್ದರು. ಬ್ರಾಹ್ಮಣ ಧರ್ಮಕ್ಕೆ ಕ್ಷತ್ರಿಯರನ್ನು ತುಳಿಯುವ ಸಾಧ್ಯತೆ ಎಲ್ಲೋ ದೂರದಲ್ಲಿದ್ದರೆ ವೈಶ್ಯ ಶೂದ್ರರು ತಮ್ಮನ್ನು ಮೀರಿಸುವ ಅಪಾಯ ನಿಜವಾಗಿ ಬಹಳ ನಿಜವಾಗಿ ಕಂಡಿತು. ಬ್ರಾಹ್ಮಣನು ಕ್ಷತ್ರಿಯನೊಡನೆ ಕಾದಾಡುತ್ತಲೇ ಇರುತ್ತ ವೈಶ್ಯರು ಮತ್ತು ಶೂದ್ರರ ಅಪಾಯವನ್ನು ಲೆಕ್ಕಿಸದಿರಬೇಕೇ? ಅಥವಾ ಕ್ಷತ್ರಿಯರ ವಿರುದ್ಧ ವ್ಯರ್ಥ ಹೋರಾಟ ಕೈಬಿಟ್ಟು ಅವರೊಡನೆ ಮೈತ್ರಿ ಸಂಪಾದಿಸಿ, ಸಮಾನ ಉದ್ದೇಶ ರೂಢಿಸಿ, ಉಲ್ಬಣಿಸುತ್ತಿದ್ದ ವೈಶ್ಯ ಶೂದ್ರರ ಅಪಾಯವನ್ನು ಹತ್ತಿಕ್ಕಬೇಕೇ? ಬ್ರಾಹ್ಮಣ ಧರ್ಮ ಕ್ಷತ್ರಿಯರೊಡನೆ ನಡೆಸಿದ ಸಮರಗಳಲ್ಲಿ ದಣಿದ ಮೇಲೆ ಎರಡನೇ ಮಾರ್ಗವನ್ನು ಆರಿಸಿಕೊಂಡಿತು. ಅದು ತಮ್ಮ ಕೆಳಗಿನ ಎರಡು ವರ್ಗಗಳಾದ ವೈಶ್ಯರು ಹಾಗೂ ಶೂದ್ರರನ್ನು ಗುಲಾಮಗಿರಿಗೆ ತಳ್ಳುವ ಹೊಸ ಆದರ್ಶದ ಸಲುವಾಗಿ ತನ್ನ ಸಾರ್ಥಕ ಶತ್ರುಗಳಾದ ಕ್ಷತ್ರಿಯರೆಡೆಗೆ ಸ್ನೇಹದ ಹಸ್ತ ಚಾಚಿತು. ಈ ಹೊಸ ಆದರ್ಶ ಸರಿ ಸುಮಾರು ಶತಪಥ ಬ್ರಾಹ್ಮಣದ ರಚನೆಯ ಕಾಲದಲ್ಲಿ ರೂಪುಗೊಂಡಿರಬೇಕು. ಶತಪಥ ಬ್ರಾಹ್ಮಣದಲ್ಲೇ ಈ ಹೊಸ ಆದರ್ಶ ಸುಸ್ಥಾಪಿತವಾಗಿ ವ್ಯಕ್ತವಾಗಿದೆ. ಅದು ವ್ಯಕ್ತವಾದ ಭಾಷೆ. ಅದು ಅನ್ವಯವಾಗುವ ವಸ್ತು ವಿಷಯಗಳು ಎಷ್ಟು ಅರ್ಥಗರ್ಭಿತವಾಗಿವೆಯೆಂದರೆ ಅದನ್ನು ಮೂಲರೂಪದಲ್ಲೇ ಉದ್ಧರಿಸಬೇಕೆಂಬುದು ನನ್ನ ಭಾವನೆ. ಶತಪಥದ[೧] ಲೇಖಕ ಹೇಳುತ್ತಾನೆ:

"ಆಮೇಲೆ ಅವರು ಗೋವನ್ನು (ಅಹವನೀಯಕ್ಕೆ[೨]) ಹಿಂತಿರುಗಿಸುತ್ತಾರೆ. ಟಗರು ಮೊದಲು

---

೧. 'ಶತಪಥ ಬ್ರಾಹ್ಮಣ' ಎಗ್ಲಿಂಗ್, ಭಾಗ ೩, ಪುಟ ೨೨೬–೨೭

೨. ಅವವನೀಯ.

ಹೋಗುತ್ತದೆ. ಆಮೇಲೆ, ಕತ್ತೆ, ಆಮೇಲೆ ಕುದುರೆ, ಈಗ (ಅಹವನೀಯದಿಂದ) ಹೋಗುವಾಗ ಕುದುರೆ ಮೊದಲು, ಆಮೇಲೆ ಕತ್ತೆ, ಆಮೇಲೆ ಟಗರು ಯಾಕೆಂದರೆ ಕುದುರೆ ಕ್ಷಾತ್ರರನ್ನು ಸೂಚಿಸುತ್ತದೆ. ಕತ್ತೆ ವೈಶ್ಯರು ಮತ್ತು ಶೂದ್ರರನ್ನು ಸೂಚಿಸುತ್ತದೆ, ಟಗರು ಬ್ರಾಹ್ಮಣರನ್ನು ಸೂಚಿಸುತ್ತದೆ. ಹೇಗೆಂದರೆ, ಇಲ್ಲಿಂದ ಹೋಗುವಾಗ ಕುದುರೆ ಮೊದಲು ಹೋಗುತ್ತದೆ. ಆದ್ದರಿಂದ ಕ್ಷತ್ರಿಯ ಮೊದಲು ಹೋಗುತ್ತಾನೆ. ನಂತರ ಉಳಿದ ಮೂರು ವರ್ಣಗಳು ಮತ್ತು ಹೇಗೆಂದರೆ ಇಲ್ಲಿಂದ ಹಿಂತಿರುವಾಗ ಟಗರು ಮೊದಲು ಹೋಗುತ್ತದೆ. ಆದ್ದರಿಂದ ಬ್ರಾಹ್ಮಣ ಮೊದಲು ಹೋಗುತ್ತಾನೆ. ನಂತರ ಉಳಿದ ಮೂರು ವರ್ಣಗಳು. ಇಲ್ಲಿಂದ ಹೋಗುವಾಗಲಾಗಲೀ, ಹಿಂತಿರುಗುವಾಗಲಾಗಲೀ ಕತ್ತೆ ಮೊದಲು ಹೋಗುವುದಿಲ್ಲ. ಆದ್ದರಿಂದ ಬ್ರಾಹ್ಮಣ ಮತ್ತು ಕ್ಷತ್ರಿಯ ಎಂದೂ ವೈಶ್ಯ ಶೂದ್ರರ ಹಿಂದೆ ಹೋಗುವುದಿಲ್ಲ. ಅವರು ಒಳಿತು ಕೆಡಕುಗಳ ನಡುವೆ ಗೊಂದಲವನ್ನು ತಪ್ಪಿಸಲು ಹೀಗೆ ನಡೆಯುತ್ತಾರೆ. ಇದಲ್ಲದೆ ಅವನು (ವೈಶ್ಯ ಹಾಗೂ ಶೂದ್ರ) ಎರಡು ಜಾತಿಗಳನ್ನು, ಎರಡೂ ಕಡೆಗಳಲ್ಲಿ ಬ್ರಾಹ್ಮಣ ಹಾಗೂ ಕ್ಷತ್ರಿಯರ ನಡುವೆ ನಿಲ್ಲಿಸಿ ವಿಧೇಯರಾಗಿ ಮಾಡುತ್ತಾನೆ."

ಕ್ಷತ್ರಿಯರನ್ನು ಗಾಯಗೊಳಿಸುವ ಆಸೆ, ಹೊಡೆಯಲು ಹೆದರಿಕೆ, ಆಳುವ ಬಯಕೆ. ಆದರೆ ಮೈತ್ರಿಯ ಆಯ್ಕೆ ಎಂಬಂಥ ಮನುವಿನ ಗೊಂದಲಮಯ ಧೋರಣೆಗೆ ವಿವರಣೆ ಇಲ್ಲಿದೆ.

ಈ ಸಮರ ಮತ್ತು ರಾಜಿ ಹೊಂದಾಣಿಕೆಗಳೇ ಬ್ರಾಹ್ಮಣ ಪ್ರಭುತ್ವಕ್ಕೆ ಕ್ಷತ್ರಿಯರನ್ನು ಬಲವಂತವಾಗಿ ಬಗ್ಗಿಸಲು ಯತ್ನಿಸುವುದರಿಂದ ಪ್ರಯೋಜನ ಇಲ್ಲವೆಂಬುದನ್ನು ಮನುವಿಗೆ ಕಲಿಸಿಕೊಟ್ಟವು. ಅದು ಎತ್ತಿ ಹಿಡಿಯಬೇಕಾದ ಆದರ್ಶವಾಗಬಹುದು. ಆದರೆ ವ್ಯವಹಾರ ರಾಜಕಾರಣದಲ್ಲಿ ಅದು ಅಸಾಧ್ಯ ಆದರ್ಶ. ಬಿಸ್ಮಾರ್ಕ್‌ನಂತೆ ರಾಜಕೀಯವೆನ್ನುವುದು ಸಾಧ್ಯತೆಗಳ ಕ್ರೀಡೆ ಎಂಬುದು ಮನುವಿಗೂ ಗೊತ್ತಿತ್ತು. ವೈಶ್ಯರು ಮತ್ತು ಶೂದ್ರರ ವಿರುದ್ಧ ಬ್ರಾಹ್ಮಣರು ಮತ್ತು ಕ್ಷತ್ರಿಯರು ಸಮಾನ ಉದ್ದೇಶದ ಸಮಾನ ವೇದಿಕೆ ಕಟ್ಟುವುದೊಂದೇ ಸಾಧ್ಯವಿದ್ದ ಸಂಗತಿ ಮತ್ತು ಮನು ಮಾಡಿದ್ದು ಇದನ್ನೇ. ಆದರೆ ಇವೆಲ್ಲವೂ ಧರ್ಮದ ಹೆಸರಿನಲ್ಲಿ ನಡೆಯಿತೆಂಬುದೇ ವ್ಯಥೆಯ ಸಂಗತಿ. ಆದರೆ ಬ್ರಾಹ್ಮಣ್ಯದ ಮೂಲ ತತ್ವ ಮತ್ತು ಅಂತರ್ಯವನ್ನು ಅಭ್ಯಾಸಿಸಿದವರಿಗೆ ಇದರಿಂದಕ ಆಶ್ಚರ್ಯವೇನೂ ಆಗಲಿಕ್ಕಿಲ್ಲ. ಬ್ರಾಹ್ಮಣ್ಯವು ತಾನು ಪಡೆದುಕೊಂಡಿರುವ ರಾಜಕೀಯವನ್ನು ಧರ್ಮದ ಹೆಸರಿನಲ್ಲಿ ಮುಚ್ಚಿಡಲು ಒಂದು ತೆರೆಯಾಗಿ ಬಳಸಿಕೊಂಡಿತು.

* * * *

## ಅಧ್ಯಾಯ ೧೨

# ಗೃಹದ ನೀತಿನಿಯಮಗಳು

*ಇದು ೬೧ ಪುಟಗಳ ಬೆರಳಚ್ಚು ಮಾಡಿದ ಹಸ್ತಪ್ರತಿ. ಇದು ಎರಡನೆಯ ಪ್ರತಿ. ಆದರೆ ಡಾ. ಅಂಬೇಡ್ಕರ್ ಅವರಿಂದಲೇ ಮಾಡಿದ ತಿದ್ದುಪಡಿಗಳು ಮತ್ತು ಮಾರ್ಪಾಡುಗಳು ಇವೆ. ಅವರ ಎಲ್ಲಾ ತಿದ್ದುಪಡಿಗಳನ್ನೂ ಗಣನೆಗೆ ತೆಗೆದುಕೊಂಡು ಅದನ್ನಿಲ್ಲಿ ಮುದ್ರಿಸಲಾಗಿದೆ. 'ಮನುಸ್ಮೃತಿ ಅಥವಾ ಪ್ರತಿಕ್ರಾಂತಿಯ ವೇದವಾಕ್ಯ' ಎಂಬ ಹೆಸರಿನ ಒಂದು ಪ್ರತ್ಯೇಕ ಕಡತವಿದೆ. ಆ ಪ್ರತಿಯಲ್ಲಿ ಮನುಸ್ಮೃತಿ ಕುರಿತು ಅನೇಕ ಭಾಗಗಳ ವತಿಯಲ್ಲಿ ಟಿಪ್ಪಣಿಗಳನ್ನು ಬರೆಯಲಾಗಿದೆ. ಆದಾಗ್ಯೂ, ಈ ಎಲ್ಲ ಟಿಪ್ಪಣಿಗಳನ್ನು 'ಗೃಹದ ನೀತಿ ನಿಯಮಗಳು' ಎಂಬ ಈ ಪ್ರಬಂಧದಲ್ಲಿ ಕಾಣಬಹುದು. ಈ ಟಿಪ್ಪಣಿಗಳನ್ನು ಈ ಪ್ರಬಂಧದಲ್ಲಿ ಮುದ್ರಿಸುವುದು ಕೇವಲ ಪುನರುಕ್ತಿಯಾಗುವುದೆಂದು ಭಾವಿಸಲಾಯಿತು. ಆದ್ದರಿಂದ ಮೇಲೆ ಹೇಳಿದ ಪ್ರತಿಯನ್ನು ಪ್ರತ್ಯೇಕವಾಗಿ ಮುದ್ರಿಸಿಲ್ಲ.*

– ಸಂಪಾದಕರು

## I

ಹಿಂದೂಗಳ ಪವಿತ್ರ ಸಾಹಿತ್ಯದ ಒಂದು ಭಾಗವಾದ 'ಸ್ಮೃತಿಗಳು' ಹಿಂದೂಗಳು ಮತ್ತು ಅವರ ಧಾರ್ಮಿಕ ಸಿದ್ಧಾಂತದ ನೀತಿನಿಯಮಗಳನ್ನು ನಿರ್ದೇಶಿಸುತ್ತವೆ. ಹಿಂದೂಗಳ ನೀತಿಶಾಸ್ತ್ರ ಮತ್ತು ಧರ್ಮಶಾಸ್ತ್ರಗಳನ್ನು ಅರ್ಥಮಾಡಿಕೊಳ್ಳಬೇಕಾದರೆ ಸ್ಮೃತಿಗಳು ಅಸಂಖ್ಯಾತವಾಗಿದ್ದರೂ ನಮ್ಮ ಸಮಸ್ಯೆಯನ್ನು ಕ್ಲಿಷ್ಟಗೊಳಿಸಲಾರವು. ಏಕೆಂದರೆ ಸ್ಮೃತಿಗಳು ಅಪಾರವಾಗಿದ್ದರೂ ಅವು ಮೂಲಾಂಶಗಳಲ್ಲಿ ಭಿನ್ನವಾಗಿಲ್ಲ. ವಾಸ್ತವವಾಗಿ ಅವು ಒಂದನ್ನೊಂದು ತುಂಬ ನಿಕಟವಾಗಿ ಪುನರುಚ್ಚರಿಸುತ್ತವೆ ಅವುಗಳನ್ನು ಓದುವುದೆಂದರೆ ಅತ್ಯಂತ ಬೇಸರದ ಕೆಲಸ. ಅವುಗಳೆಲ್ಲಾ ಒಂದೇ ಸಾಮಾನ್ಯ ಮೂಲದಿಂದ ಬಂದಿವೆ. ಆ ಮೂಲವೆಂದರೆ ಮಾನವ ಧರ್ಮಶಾಸ್ತ್ರವೆಂದು ಪರಿಚಿತವಾಗಿರುವ 'ಮನುಸ್ಮೃತಿ'. ಉಳಿದ ಸ್ಮೃತಿಗಳೆಲ್ಲ ಮನುಸ್ಮೃತಿಯ ನಿಷ್ಠಾವಂತ ಪುನರಾವೃತ್ತಿಗಳಾಗಿವೆ. ಆದ್ದರಿಂದ ಹಿಂದೂಗಳ ನೈತಿಕ ಮಾನದಂಡಗಳು ಮತ್ತು ಧಾರ್ಮಿಕ ಭಾವನೆಗಳ ಬಗ್ಗೆ ಸೂಕ್ತ ಪರಿಕಲ್ಪನೆ ಪಡೆಯಲು ಮನುಸ್ಮೃತಿಯ ಅಧ್ಯಯನ ಸಾಕಾಗುತ್ತದೆ.

ಮನುಸ್ಮೃತಿಯು ಕಟ್ಟುಪಾಡುಗಳ ಗ್ರಂಥವೆಂದು ಹೇಳಬಹುದು. ಇದೇ ಮಾತು ಇತರ ಸ್ಮೃತಿಗಳ ವಿಚಾರದಲ್ಲೂ ಸತ್ಯ. ಅದು ನೀತಿ ಶಾಸ್ತ್ರದ ಪುಸ್ತಕವಲ್ಲ ಅಥವಾ ಧರ್ಮಶಾಸ್ತ್ರದ ಕೃತಿಯಲ್ಲ. ಅದನ್ನು

ನೀತಿಶಾಸ್ತ್ರ ಮತ್ತು ಧರ್ಮಶಾಸ್ತ್ರದ ಕೃತಿಯೆಂದು ಪರಿಗಣಿಸಿದರೆ ನೀತಿಶಾಸ್ತ್ರ, ಧರ್ಮಶಾಸ್ತ್ರ ಮತ್ತು ಕಾನೂನು ಶಾಸ್ತ್ರ ಇವುಗಳನ್ನು ಕಲಸುಮೇಲೋಗರ ಮಾಡಿದಂತಾಗುತ್ತದೆ.

ಮೊದಲನೆಯದಾಗಿ, ಆಧುನಿಕ ಕಾಲದಲ್ಲಿ ಮಾತ್ರ ಕಾನೂನನ್ನು ಧರ್ಮದಿಂದ ಪ್ರತ್ಯೇಕಿಸಲಾಗಿದೆ. ಎಲ್ಲ ಪ್ರಾಚೀನ ಸಮಾಜದಲ್ಲಿಯೂ ಧರ್ಮ ಮತ್ತು ಕಾನೂನು ಒಂದೇ ಆಗಿದ್ದವು. ಪ್ರೊ॥ ಮ್ಯಾಕ್ಸ್ ಮುಲ್ಲರ್ ತಿಳಿಸುವಂತೆ:[೧]

"ಕಾನೂನು ಸ್ವಾಭಾವಿಕವಾಗಿ ಸಮಾಜದ ಅಡಿಪಾಯವಾಗಿರುವಂತೆ ಕಾಣುತ್ತದೆ. ಅದೇ ರಾಷ್ಟ್ರವನ್ನು ಒಂದುಗೂಡಿಸುವ ತಂತುವಾಗಿದೆ. ಬಾಹ್ಯರೂಪದಾಚೆ ನೋಡುವವರು ಆ ಕಾನೂನನ್ನು ಕೂಡಲೇ ಗ್ರಹಿಸುತ್ತಾರೆ. ಪ್ರಾಚೀನ ಕಾನೂನು ತನ್ನ ಅಧಿಕಾರವನ್ನು, ಶಕ್ತಿಯನ್ನು ಹಾಗೂ ತನ್ನ ಜೀವನವನ್ನು ಧರ್ಮದಿಂದ ಪಡೆಯುತ್ತದೆ.... ಸಾಮಾನ್ಯ ಜನರಿಗಿಂತ ಕಾನೂನು ನಿರ್ಮಾಪಕ ದೇವರ ಜೊತೆ ಹೆಚ್ಚು ಸಾಮೀಪ್ಯ ಹೊಂದಿರುತ್ತಾನೆಂಬ ನಂಬಿಕೆ ಅನೇಕ ರಾಷ್ಟ್ರಗಳ ಪ್ರಾಚೀನ ಪರಂಪರೆಗಳಲ್ಲಿ ಹರಡಿಕೊಂಡಿದೆ. ಡಿಯೊಡೊರಸ್ ಸೈಕ್ಯುಲಸ್‌ನ ಪ್ರಸಿದ್ಧ ಕಾವ್ಯ ಭಾಗದ ಪ್ರಕಾರ, ಹರ್ಮಿಸ್ ದೇವತೆಯಿಂದ ತಮ್ಮ ಕಾನೂನುಗಳು ಲಭ್ಯವಾಗಿವೆಯೆಂದು ಈಜಿಪ್ಟರು ನಂಬಿದ್ದರು. ಜ್ಯೂಸ್‌ನಿಂದ ತನ್ನ ಕಾನೂನುಗಳನ್ನು ಮೈನಸ್ ಸ್ವೀಕರಿಸಿದನೆಂದು ಕ್ರೀಟರೂ, ಅಪಾಲೋಮಿನಿಂದ ತನ್ನ ಕಾನೂನುಗಳನ್ನು ಲೈಕರ್‌ಗುಸ್ ಪಡೆದನೆಂದು ಲ್ಯಾಕಿಡೇಮೋನಿಯನ್ನರೂ ಭಾವಿಸಿದ್ದರು. ಅರಿಯನ್ನರ ಪ್ರಕಾರ ಸತ್‌ಶಕ್ತಿಯಿಂದ ತನ್ನ ಕಾನೂನುಗಳನ್ನು ತಮ್ಮ ಕಾನೂನು ನಿರ್ಮಾಪಕ ಜರತುಷ್ಟ್ರ ಸ್ವೀಕರಿಸಿದನು. ಸ್ಟ್ರೋಯಿ ಪ್ರಕಾರ ಹೆಸ್ಟಿಯ ದೇವತೆಯಿಂದ ತನ್ನ ಕಾನೂನುಗಳನ್ನು ಜಾಮೋಲಿಕ್ಸಿಸ್ ಸ್ವೀಕರಿಸಿದನು. ಯಹೂದಿಗಳ ಪ್ರಕಾರ ಇಯಾಸ್ ದೇವರಿಂದ ಮೋಸೆಸ್ ತನ್ನ ಕಾನೂನುಗಳನ್ನು ಸ್ವೀಕರಿಸಿದನು."

"ರಾಜ್ಯ, ಜನಾಂಗ ಮತ್ತು ಕುಟುಂಬ ಮುಂತಾದ ಆ ಕಾಲದ ಎಲ್ಲ ಪ್ರಮುಖ ಸಂಸ್ಥೆಗಳನ್ನು ಒಗ್ಗೂಡಿಸಿ ಅವುಗಳಿಗೆ ಪಾವಿತ್ರ್ಯವೊದಗಿಸುವ ಒಂದು ಅಧಿ ಭೌತಿಕ ಶಕ್ತಿ ಇದೆಯೆಂಬ ಭಾವನೆ ಇದೆ." ಎಂದು ಜೀವನದ ಪ್ರತಿಯೊಂದು ಸಂಬಂಧ ಮತ್ತು ಪ್ರತಿಯೊಂದು ಸಂಸ್ಥೆಯ ಹಿಂದೆ ಅಂತರ್ಗತವಾಗಿ ಬೆಂಬಲ ನೀಡುವ ದೈವ ಪ್ರಭಾವವೇ ಧರ್ಮವಾಗಿತ್ತೆಂಬುದನ್ನು ಸರ್ ಹೆನ್ರಿಮೇನ್[೨] ಅವರಷ್ಟು ಹೆಚ್ಚು ಶಕ್ತಿಯುತವಾಗಿ ಬೇರೆ ಯಾರೂ ತೋರಿಸಿಲ್ಲ.

ಧರ್ಮದಿಂದ ಕಾನೂನು ಅಂತಿಮವಾಗಿ ಬೇರೆಯಾಗುವ ತನಕ ಧರ್ಮದ ಅಧಿಭೌತಿಕ ಅಧಿಪತ್ಯ ದಿಂದ ಬಿಡುಗಡೆ ಪಡೆಯಲು ಕಾನೂನು ಬಹುಕಾಲದವರೆಗೆ ಸಫಲವಾಗಿರಲಿಲ್ಲ. ಆದರೆ ಮಾನವ ಇತಿಹಾಸದ ಪ್ರಾರಂಭದಿಂದಲೂ ಧರ್ಮದ ಜೊತೆ ಅದು ಹೊಂದಿದ್ದ ಸಂಬಂಧದ ಅನೇಕ ಗುರುತುಗಳನ್ನು ಬಿಟ್ಟುಕೊಡಲಿಲ್ಲ.

ಆಧುನಿಕ ಕಾಲದಲ್ಲಿ ಮಾತ್ರ ಧರ್ಮ ಮತ್ತು ನೀತಿಶಾಸ್ತ್ರಗಳ ನಡುವೆ ವ್ಯತ್ಯಾಸವನ್ನು ಮತ್ತೆ ಮಾಡಲಾಗಿದೆ. ಧರ್ಮ ಮತ್ತು ನೀತಿಶಾಸ್ತ್ರ ಬಿಡಿಸಲಾಗದಂತೆ ಒಂದಕೊಂದು ಬಂಧಿಸಲ್ಪಟ್ಟಿವೆ. ಧರ್ಮ

೧. 'ಸೈನ್ಸ್ ಆಫ್ ರಿಲಿಜನ್', ಪು. ೧೫೦–೧೫೧.
೨. 'ಏನ್ಷಿಯಂಟ್ ಲಾ'. ಪುಟ. ೬.

ಮತ್ತು ನೀತಿಶಾಸ್ತ್ರಗಳು ಸಾರಭೂತವಾಗಿ ಪ್ರಾಯೋಗಿಕವಾದವು. ಪ್ರೊ॥ ಜಾಕ್ಸ್[೧] ಹೇಳುವಂತೆ ನೀತಿಶಾಸ್ತ್ರದ ಸಮಸ್ಯೆ ಒಳ್ಳೆಯದನ್ನು ಅರ್ಥಮಾಡಿಕೊಳ್ಳುವುದಷ್ಟೇ ಅಲ್ಲ. ಅದನ್ನು ಸಾಕ್ಷಾತ್ಕರಿಸಿಕೊಳ್ಳುವುದೂ ಆಗಿದೆ. ಸರಿಯಾದುದನ್ನು ವೈಜ್ಞಾನಿಕ ಆಧಾರದ ಮೇಲೆ ಇಡುವುದಷ್ಟೇ ಅಲ್ಲ ಅದನ್ನು ಆಗುಮಾಡುವುದೂ ಆಗಿದೆ. ನೈತಿಕತೆ ಎನ್ನುವುದು ಯಾವುದು ಒಳ್ಳೆಯದು ಯಾವುದು ಸರಿಯಾದುದು ಎಂದು ವ್ಯಾಖ್ಯಾನಿಸುವುದಷ್ಟೇ ಆಗಿದೆ. ಪ್ರೊ॥ ಜಾಕ್ಸ್ ಸರಿಯಾಗಿ ಹೇಳುತ್ತಾರೆ:

> "ನೀತಿಯನ್ನು ಅನುಸರಿಸಲು ಆಸಕ್ತಿಯಿಲ್ಲದೆ ಅದರ ಅಧ್ಯಯನದಲ್ಲಿ ತೊಡಗಿದಾಗಲೆಲ್ಲ ನಾವು ಅಧ್ಯಯನ ಮಾಡುತ್ತಿರುವುದು ನೀತಿಶಾಸ್ತ್ರವಲ್ಲ ಎಂದು ನನಗನ್ನಿಸುತ್ತದೆ. ಅನುಷ್ಠಾನ ಮಾಡದ ಹೊರತು ನೀತಿಶಾಸ್ತ್ರ ಹುಟ್ಟವುದಿಲ್ಲ. ನೀತಿಶಾಸ್ತ್ರದ ಅನುಷ್ಠಾನವನ್ನು ಪ್ರಬಲ ಆಕಾಂಕ್ಷೆಗಳಿಂದ ಬಲಪಡಿಸದಿದ್ದರೆ ನೀತಿತತ್ವವನ್ನು ಲೋಕದಲ್ಲಿ ಹೇಳುವುದು ನಿರರ್ಥಕವಾಗುತ್ತದೆ. ಅರಿಸ್ಟಾಟಲ್ ಹೇಳುವಂತೆ ಒಳ್ಳೆಯ ಜೀವನ ಬಹಳ ಕಷ್ಟವಾದ ವಿಷಯ. ಹಾಲಿ ಇರುವ ಸಂಪ್ರದಾಯಗಳಿಗೆ ಅನುಸಾರವಾಗಿ ಬದುಕಿದರೂ ಕಷ್ಟವಾಗಿದೆ. ಆದರೆ ಹಾಲಿ ಮಾನದಂಡಗಳನ್ನು ಮೀರಲೇಬೇಕೆಂದು ಒಳ್ಳೆಯ ಜೀವನ ಒತ್ತಾಯಿಸಿದಾಗ ಶಕ್ತಿಯ ಅಪಾರ ಬಿಡುಗಡೆ ಇಲ್ಲದೆ ಇದು ಹೇಗೆ ತಾನೆ ಫಲಪ್ರದವಾದೀತು? ತಪ್ಪು ಮಾಡುವ ಮಾನವರ ಸಹಜ ಪ್ರವೃತ್ತಿಗಳ ವಿರುದ್ಧ ಒಳ್ಳೆಯದನ್ನು ಮಾಡಬೇಕೆಂದು ಅವರಿಗೆ ಹೇಳುವುದರಿಂದ ಪ್ರಯೋಜನವಿಲ್ಲ. ಒಳ್ಳೆಯ ಜೀವನಕ್ಕೆ ಎದುರಾಗುವ ಕಷ್ಟಗಳಿಗೆ ಅದು ಜೋಡಿಯಲ್ಲ."

ಯಾವುದಾದರೂ ಪ್ರೇರಣಾಶಕ್ತಿ ಅದರ ನೆರವಿಗೆ ಬರದಿದ್ದರೆ ನೀತಿ ಜಡವಾಗುತ್ತದೆ. ನೀತಿಶಾಸ್ತ್ರಕ್ಕೆ ನಿಸ್ಸಂದೇಹವಾಗಿ ಪ್ರೇರಣಾ ಶಕ್ತಿಯನ್ನು ಧರ್ಮ ನೀಡುತ್ತದೆ. ಪ್ರಿನ್ಸಿಪಾಲ್ ಜಾಕ್ಸರ ಭಾಷೆಯನ್ನು ಉಪಯೋಗಿಸಿ ಹೇಳುವುದಾದರೆ ಅದು ಮುನ್ನೂಕುವ ಶಕ್ತಿಯನ್ನು ಸೃಷ್ಟಿಸುತ್ತದೆ:

> "ಒಳ್ಳೆಯ ಜೀವನವನ್ನು ಸರಳತರ ರೂಪಗಳಲ್ಲಿಯೂ ನಡೆಸುವುದರಲ್ಲಿ ಇರುವ ಅಪಾರ ಸಂಕಷ್ಟಗಳನ್ನು ಎದುರಿಸಬೇಕಾದರೆ ಪ್ರೇರಣೆಗಳು ಸಾಕಷ್ಟು ಪ್ರಬಲವಾಗಿರಬೇಕು. ಆದರ್ಶವನ್ನು ನಿರಂತರವಾಗಿ ಸುಧಾರಿಸಿಕೊಂಡು ಬರುವಷ್ಟು ಸೂಕ್ತವಾಗಿರಬೇಕು."

ಧರ್ಮ ಒಂದು ಪ್ರೇರಣಾಶಕ್ತಿಯಾಗಿ ನೈತಿಕ ಸಂಕಲ್ಪವನ್ನು ನಾನಾ ರೀತಿಯಲ್ಲಿ ಬಲಪಡಿಸುತ್ತದೆ. ಸಾವಿನ ನಂತರ ಪುಣ್ಯದ ಫಲವನ್ನೂ ಪಾಪದ ಶಿಕ್ಷೆಯನ್ನೂ ವಿಧಿಸುವ ಒಂದು ಯೋಜನೆಯಾಗಿ ಧರ್ಮ ಅನೇಕ ವೇಳೆ ತನ್ನ ರೂಪವನ್ನು ಪಡೆಯುತ್ತದೆ. ಅದು ಕೆಲವೇಳೆ ದೈವದ ಕಟ್ಟಾಜ್ಞೆಗಳೆಂಬ ನೀತಿನಿಯಮಗಳನ್ನು ಮಾಡುತ್ತದೆ. ಈ ನೀತಿನಿಯಮಗಳಿಗೆ ಒಂದು ಪಾವಿತ್ರ್ಯವನ್ನು ದಯಪಾಲಿಸುವುದರಿಂದ ಅವು ಸ್ವಯಂ ವಿಧೇಯತೆಯನ್ನು ಮೂಡಿಸುತ್ತದೆ. ಧರ್ಮದಿಂದ ಮೂಡಿದ ಪ್ರೇರಣಾಶಕ್ತಿ ಈ ನಾನಾ ಮಾರ್ಗಗಳಿಂದ ಬದುಕಿನಲ್ಲಿ ನೈತಿಕ ಜೀವನವನ್ನು ಪೋಷಿಸುತ್ತದೆ. ನೈತಿಕ ಚಕ್ರವನ್ನು ಚಾಲನೆಗೊಳಿಸುವ ಚಲನಶಾಸ್ತ್ರವೇ ಧರ್ಮವಾಗಿದೆ. ನೀತಿಶಾಸ್ತ್ರ ಮತ್ತು ನೈತಿಕತೆ ಕರ್ತವ್ಯಗಳಾದಾಗ ಮನುಸ್ಮೃತಿ ಒಂದು ನೀತಿಶಾಸ್ತ್ರ ಗ್ರಂಥ ಎನ್ನುವುದರಲ್ಲಿ ಸಂದೇಹವಿಲ್ಲ. ಮನುಸ್ಮೃತಿಯನ್ನು ಓದಲು ಪ್ರಯತ್ನಿಸುವ ಯಾರೇ ಆದರೂ ಒಪ್ಪಿಕೊಳ್ಳಬೇಕಾದ ಅಂಶವೆಂದರೆ ಅದರಲ್ಲಿ ಪ್ರಧಾನವಾಗಿ ಪ್ರಸ್ತಾಪಿತವಾಗಿರುವ ವಿಷಯ ಕರ್ತವ್ಯಗಳು ಎಂಬುದು. ಹಿಂದೂ ಆದವನು ಕರ್ತವ್ಯಗಳಿಗೆ ಬದ್ಧನಾಗಿರಬೇಕು ಎಂಬುದನ್ನು ಮೊಟ್ಟಮೊದಲು ವ್ಯವಸ್ಥಾರೂಪದಲ್ಲಿ

---

೧. 'ಮಾರಲ್ಸ್ ಆ್ಯಂಡ್ ರಿಲಿಜನ್', ಹಿಬ್ಬರ್ಟ್ ಜರ್ನಲ್, ಸಂ.XIX ಪು. ೬೧೫–೬೨೧.

ಕಾನೂನುಗೊಳಿಸಿದವನು ಮನು. ಅವನು ವರ್ಣಾಶ್ರಮ ಧರ್ಮಗಳಿಗೂ ಸಾಧಾರಣ ಧರ್ಮಗಳಿಗೂ ಇರುವ ವ್ಯತ್ಯಾಸವನ್ನು ಹೇಳುತ್ತಾನೆ. ಒಂದು ವರ್ಣಕ್ಕೆ ಸೇರಿದ ವ್ಯಕ್ತಿಯ ಮತ್ತು ಆಶ್ರಮದ ಕರ್ತವ್ಯಗಳನ್ನು ವರ್ಣಾಶ್ರಮದ ಧರ್ಮಗಳೆಂದು ತೀರ್ಮಾನಿಸುತ್ತಾನೆ. ಸಾಧಾರಣ ಧರ್ಮಗಳೆಂದರೆ ವ್ಯಕ್ತಿಯ ವಯಸ್ಸು, ಜಾತಿ ಅಥವಾ ಮತ ಇವುಗಳಿಗೆ ಸಂಬಂಧಿಸಿಲ್ಲ. ಅಂದರೆ ಮನುಷ್ಯ ಮನುಷ್ಯನಾಗಿ ತನ್ನ ಕರ್ಮಗಳನ್ನು ಮಾಡಬೇಕಾಗಿದೆಯೇ ಹೊರತು ಒಂದು ವಿಶಿಷ್ಟ ಸಮುದಾಯದ ಅಥವಾ ಸಾಮಾಜಿಕ ವರ್ಗದ ಅಥವಾ ಜೀವನದ ಯಾವುದೋ ಆಶ್ರಮದ ಸದಸ್ಯನಾಗಲ್ಲ. ಇಡಿ ಮನುಸ್ಮೃತಿ ಕರ್ಮಗಳನ್ನು ಹೇಳುತ್ತದೆಯೇ ಹೊರತು ಬೇರೇನೂ ಅಲ್ಲ.

ಹೀಗೆ ಮನುಸ್ಮೃತಿಯೂ ಕಾನೂನುಶಾಸ್ತ್ರ, ಧರ್ಮಶಾಸ್ತ್ರ ಮತ್ತು ನೀತಿಶಾಸ್ತ್ರ ಎಲ್ಲಾ ಒಟ್ಟಿಗೆ ಸೇರಿರುವ ಗ್ರಂಥವಾಗಿದೆ. ಅದು ನೀತಿಶಾಸ್ತ್ರವಾಗಿದೆ. ಏಕೆಂದರೆ ಅದು ಮನುಷ್ಯನ ಕರ್ತವ್ಯಗಳನ್ನು ಹೇಳುತ್ತದೆ. ಅದು ಧರ್ಮಶಾಸ್ತ್ರ. ಏಕೆಂದರೆ ಹಿಂದೂ ಧರ್ಮದ ಜೀವವಾದ ಜಾತಿಯ ಬಗ್ಗೆ ಹೇಳುತ್ತದೆ. ಅದು ಕಾನೂನುಶಾಸ್ತ್ರ. ಏಕೆಂದರೆ ಕರ್ತವ್ಯ ಭ್ರಷ್ಟತೆಗೆ ಶಿಕ್ಷೆ ವಿಧಿಸುತ್ತದೆ. ಈ ದೃಷ್ಟಿಯಿಂದ ಹಿಂದೂಗಳ ನೈತಿಕ ಮಾನದಂಡಗಳು ಮತ್ತು ಧಾರ್ಮಿಕ ಭಾವನೆಗಳನ್ನು ಖಚಿತಪಡಿಸಿಕೊಳ್ಳಲು ಮನುಸ್ಮೃತಿಗೆ ಹೋಗುವುದರಲ್ಲಿ ತಪ್ಪಿಲ್ಲ.

ಮನುಸ್ಮೃತಿ ಧರ್ಮಶಾಸ್ತ್ರದ ಗ್ರಂಥ ಎನ್ನುವುದು ಸಂಪೂರ್ಣವಾಗಿ ಸ್ಪಷ್ಟವಲ್ಲದಿರಬಹುದು. ಏಕೆಂದರೆ ಹಿಂದೂ ಧರ್ಮ ಎನ್ನುವ ಶಬ್ದವೇ ಬಹಳ ಜಾರಿಕೆಯದು. ಅದನ್ನು ಅನೇಕರು ಅನೇಕ ವಿಧವಾಗಿ ವ್ಯಾಖ್ಯಾನಿಸಿದ್ದಾರೆ.

ಸರ್ ಡಿ. ಇಬ್ಬೆಟ್ಸನ್[೧] ಹಿಂದೂ ಧರ್ಮವನ್ನು ಹೀಗೆ ವ್ಯಾಖ್ಯಾನಿಸುತ್ತಾರೆ:

"ಬ್ರಾಹ್ಮಣರ ವಂಶಪಾರಂಪರ್ಯವಾದ ಪೌರೋಹಿತ್ಯದ ವಿಧಾನಗಳು ಅದರ ಜೀವಸತ್ವ ಜಾತಿಯೆಂಬ ಸಾಮಾಜಿಕ ಸಂಸ್ಥೆಯಲ್ಲಿ ಅಡಗಿವೆ. ಅದು ಭಾರತದ ಎಲ್ಲ ವರ್ಣ, ವರ್ಗ, ಜಾತಿ, ಧರ್ಮಗಳನ್ನು ಒಳಗೊಳ್ಳುತ್ತದೆ. ವಿದೇಶಿ ಧರ್ಮಗಳಾದ ಕ್ರೈಸ್ತ, ಇಸ್ಲಾಂ ಹಾಗು ಬೌದ್ಧ, ಸಿಖ್, ಇನ್ನೂ ಅನುಮಾನಾಸ್ಪದವಾಗಿ ಹೇಳುವುದಾದರೆ ಜೈನಧರ್ಮ ಈ ಎಲ್ಲವುಗಳಿಗಿಂತಲೂ ಭಿನ್ನವಾಗಿದೆ."

ಸರ್ ಜೆ.ಎ.ಬೇನ್ಸ್[೨] ಹಿಂದೂಧರ್ಮವನ್ನು ಹೀಗೆ ವಿವರಿಸಿದ್ದಾರೆ:

> "ಸಿಖ್ ಅಥವಾ ಜೈನ ಅಥವಾ ಬೌದ್ಧ ಅಥವಾ ಬಹಿರಂಗವಾಗಿ ಸರ್ವ ಜೀವಿಪೂಜಕ ಅಥವಾ ಇಸ್ಲಾಂ, ಪ್ರಾಚೀನ ಪರ್ಷಿಯನ್ನರ ಧರ್ಮವಾದ ಮಜ್ದಮತ ಅಥವಾ ಹೀಬ್ರೂಮತ ಇದಾವುದೂ ಅಲ್ಲದ ಬಹುಸಂಖ್ಯಾತರೇ ಹಿಂದೂಗಳು."

ಸರ್ ಎಡ್ವರ್ಡ್ ಗೇಟನ[೩] ದೃಷ್ಟಿಯಲ್ಲಿ ಹಿಂದೂ ಧರ್ಮ:

> "ಸಂಪ್ರದಾಯಗಳ, ಸಿದ್ಧಾಂತಗಳ ಒಂದು ಸಂಕೀರ್ಣ ಸಮೂಹ. ಅದು ತನ್ನ ಚೌಕಟ್ಟಿನೊಳಗೆ ಏಕದೇವೋಪಾಸಕರಿಗೆ, ಬಹುದೇವೋಪಾಸಕರಿಗೆ ಮತ್ತು ಸರ್ವದೇವೋಪಾಸಕರಿಗೆ ಆಶ್ರಯ ನೀಡುತ್ತದೆ. ಮಹಾದೇವತೆಗಳಾದ ಶಿವ ಮತ್ತು ವಿಷ್ಣು ಅಥವಾ ಅವರ ಪತ್ನಿಯರು ಹಾಗೂ ಜಗನ್ಮಾತೆಯರ ಪೂಜಕರನ್ನು, ಮರ, ಕಲ್ಲು, ಹೊಳೆ ಇವುಗಳ ಚೇತನವನ್ನು ಮತ್ತು ಗ್ರಾಮದೇವತೆಗಳನ್ನು, ದೇವತೆಗಳನ್ನು ಸಂತೃಪ್ತಿಗಾಗಿ ಎಲ್ಲ

---

೧. ಪಂಜಾಬ್ ಸೆನ್ಸಸ್ ರಿಪೋರ್ಟ್, ೧೮೮೧, ಪ್ಯಾರಾ ೨೧೪.
೨. ಸೆನ್ಸಸ್ ಆಫ್ ಇಂಡಿಯಾ ರಿಪೋರ್ಟ್, ೧೮೮೧, ಪು. ೧೫೮.
೩. ಸೆನ್ಸಸ್ ಆಫ್ ಇಂಡಿಯಾ ರಿಪೋರ್ಟ್, ೧೯೧೧, ಪು. ೧೧೪.

ಬಗೆಯ ರಕ್ತಬಲಿ ಕೊಡುವವರನ್ನು ಮತ್ತು ಯಾವ ಜೀವಬಲಿಯನ್ನೂ ಕೊಡದ 'ಕೊಲೆ' ಎಂಬ ಮಾತನ್ನೇ ಆಡದವರನ್ನು, ಧರ್ಮದ ಹೆಸರಿನಲ್ಲಿ ಹೇಳಬಾರದಂಥ ಉನ್ಮಾದಗಳಲ್ಲಿ ತಲ್ಲೀನರಾದವರನ್ನು ಅದು ಒಳಗೊಳ್ಳುತ್ತದೆ."

ಹಿಂದೂ ಧರ್ಮದ ಸಂಕೀರ್ಣತೆಯ ಈ ವಿವರಣೆ ಪೂರ್ಣವಾಗಿದ್ದರೂ ಅಸಮಗ್ರವಾಗಿದೆ. ಈ ಪಟ್ಟಿಗೆ ಗೋಪೂಜೆ ಮಾಡುವವರನ್ನು, ಅದನ್ನು ತಿನ್ನುವವರನ್ನು, ನಿಸರ್ಗಶಕ್ತಿ ಆರಾಧಕರನ್ನು ಮತ್ತು ಏಕದೇವೋಪಾಸಕರನ್ನು, ಮೂರ್ತಿಪೂಜಕರನ್ನು, ಭೂತಪಿಶಾಚಿಗಳನ್ನು, ಪಿತೃಗಳನ್ನು, ಸಂತರನ್ನು ಮತ್ತು ವೀರರನ್ನು ಪೂಜಿಸುವವರನ್ನು ಸೇರಿಸಲೇಬೇಕು.

ಹಿಂದೂ ಧರ್ಮವೆಂದರೆ ಏನು ಎಂಬ ಸರಳ ಪ್ರಶ್ನೆಗೆ ಮೇಲಿನ ಮೂವರು ಜನಗಣತಿ ಅಧಿಕಾರಿಗಳು ಈ ಬಗೆಯ ಉತ್ತರಗಳನ್ನು ಕೊಟ್ಟಿದ್ದಾರೆ. ಈ ಪ್ರಶ್ನೆಯನ್ನು ಉತ್ತರಿಸಲು ಇತರರಿಗೆ ಅಷ್ಟು ಕಷ್ಟವಾಗಿಲ್ಲ. ಈ ಪ್ರಶ್ನೆಗೆ ಯಾವ ರೀತಿ ಸರ್. ಎ. ಲ್ಯಾಲ್ ಉತ್ತರಿಸಿದ್ದಾರೆಂಬುದನ್ನು ಪರಿಶೀಲಿಸೋಣ. ೧೮೯೧ರಲ್ಲಿ ರೀಡ್ ಉಪನ್ಯಾಸವನ್ನು ಕೇಂಬ್ರಿಜ್‌ನಲ್ಲಿ ಅವರು ನೀಡಿದಾಗ ಹೇಳಿದರು[೧]:

> "ಹಿಂದೂ ಧರ್ಮದ ಬಗ್ಗೆ ವ್ಯಾಖ್ಯೆಯನ್ನು ಕೊಡು ಎಂದು ನನ್ನನ್ನು ಕೇಳಿದರೆ ನಾನು ಸ್ಪಷ್ಟವಾಗಿ ಏನೂ ಹೇಳಲಾರೆ. ಚಾರಿತ್ರಿಕ ಮಹಾಧರ್ಮಗಳನ್ನು ನಾನು ವರ್ಣಿಸಬಹುದಾದಂತೆ ಹಿಂದೂ ಧರ್ಮದ ಕೇಂದ್ರ ಸಿದ್ಧಾಂತಗಳು ಮತ್ತು ಅದರ ನಂಬಿಕೆಯ ಮೂಲಭೂತ ಅಂಶಗಳ ಬಗ್ಗೆ ನಾನು ಖಚಿತವಾಗಿ ವ್ಯಾಖ್ಯಾನಿಸಲಾರೆ. ಏಕೆಂದರೆ ಹಿಂದೂ ಎಂಬ ಶಬ್ದ ಸಂಪೂರ್ಣವಾಗಿ ಧಾರ್ಮಿಕ ಶಬ್ದವಲ್ಲ. ಅದು ಒಂದು ದೇಶವನ್ನು, ಬಹುಪಾಲು ಒಂದು ಜನಾಂಗವನ್ನು ಸೂಚಿಸುತ್ತದೆ. ಜನಾಂಗ ಅಥವಾ ಸ್ಥಳದ ಭಿನ್ನತೆಯಿಲ್ಲದೆ ವಿಶಾಲವಾದ ಅರ್ಥದಲ್ಲಿ ಕ್ರೈಸ್ತರು, ಮಹಮ್ಮದೀಯರು ಅಥವಾ ಬೌದ್ಧರು ಎಂದು ನಾವು ಹೇಳುವಾಗ ಒಂದು ವಿಶಿಷ್ಟ ಧಾರ್ಮಿಕ ಸಮುದಾಯವನ್ನು ಸೂಚಿಸುತ್ತೇವೆ. ರಷ್ಯನ್ನರು ಅಥವಾ ಪರ್ಷಿಯನ್ನರ ಬಗ್ಗೆ ನಾವು ಹೇಳುವಾಗ ಯಾವುದೇ ಧಾರ್ಮಿಕ ಪಂಥದ ಭೇದಭಾವವಿಲ್ಲದೆ ನಾವು ದೇಶ ಅಥವಾ ಕುಲವನ್ನು ಸೂಚಿಸುತ್ತೇವೆ. ಆದರೆ ಒಬ್ಬ ವ್ಯಕ್ತಿ ತಾನು ಹಿಂದೂ ಎಂದು ಹೇಳಿದಾಗ ಅವನು ಧರ್ಮ, ಕುಲ ಮತ್ತು ದೇಶ ಇವು ಮೂರನ್ನೂ ಒಟ್ಟಿಗೆ ಹೇಳುತ್ತಾನೆ ಎಂದು ನಾನು ತಿಳಿಯುತ್ತೇನೆ."

ಹಿಂದೂ ಧರ್ಮವನ್ನು ಕುರಿತು ಮಾತನಾಡುತ್ತಾ ಸರ್ ಆಲ್ಫ್ರೆಡ್ ಲ್ಯಾಲ್ ಹೀಗೆ ಹೇಳಿದ್ದಾರೆ:

> "ಹಿಂದೂ ಧರ್ಮವೆಂದರೆ ಗೊಂದಲಮಯ ಮೂಢನಂಬಿಕೆಗಳ, ಹಕ್ಕುಗಳ ಕ್ರೋಢೀಕರಣದ, ಆರಾಧನೆಗಳ, ಸಂಪ್ರದಾಯ ಮತ್ತು ಪುರಾಣಗಳ ಅಸ್ತವ್ಯಸ್ತ ಕಗ್ಗಂಟು. ಇವುಗಳಿಗೆ ಬ್ರಾಹ್ಮಣರ ಧರ್ಮಗ್ರಂಥಗಳಿಂದ ಮತ್ತು ಇವುಗಳನ್ನು ಬ್ರಾಹ್ಮಣರ ಉಪದೇಶಗಳಿಂದ ಪ್ರಚುರಪಡಿಸಲಾಗಿದೆ."

ಕೇವಲ ಹಿಂದೂ ಅಷ್ಟೇ ಅಲ್ಲದೆ ಹಿಂದೂ ಧರ್ಮದ ವಿದ್ವಾಂಸರೂ ಕೂಡ ಆಗಿ ಜನ್ಮತಃ ಹಿಂದೂ ಆದ ಶ್ರೀ ಜಿ.ಪಿ. ಸೆನ್ ಅವರ ಅಭಿಪ್ರಾಯವನ್ನು ಕೊನೆಯದಾಗಿ ಉಲ್ಲೇಖಿಸುತ್ತೇನೆ. "ಹಿಂದೂಧರ್ಮದ ಅಧ್ಯಯನದ ಪೀಠಿಕೆ" ಎಂಬ ತಮ್ಮ ಗ್ರಂಥದಲ್ಲಿ ಶ್ರೀ ಸೆನ್ ಹೀಗೆ ಹೇಳುತ್ತಾರೆ:

---

೧. 'ಏಷಿಯಾಟಿಕ್ ಸ್ಟಡೀಸ್', ಸಂ.II ಪು. ೨೮೭–೮೮.

"ಹಿಂದೂಗಳು ಅಥವಾ ಹಿಂದೂ ಸಮುದಾಯದ ಬಹು ಸಂಖ್ಯಾತರು ಏನನ್ನು ಮಾಡುತ್ತಾರೋ ಅದೇ ಹಿಂದೂ ಧರ್ಮ."

ಹಿಂದೂಗಳಲ್ಲಿ ತಮ್ಮ ತಮ್ಮ ಭಿನ್ನಾಭಿಪ್ರಾಯಗಳು ಏನೇ ಇದ್ದರೂ ಅವರನ್ನೆಲ್ಲ ಒಂದುಗೂಡಿಸುವಂತಹ ವಿಧೇಯ ಭಾವನೆ ತರುವ ತತ್ವ ಹಿಂದೂ ಧರ್ಮದಲ್ಲಿದೆಯೆ? ನನ್ನ ಅಭಿಪ್ರಾಯದಲ್ಲಿ ಹೌದು. ಆ ತತ್ವವೇ ಜಾತಿಪದ್ಧತಿ. ಹಿಂದೂಧರ್ಮಕ್ಕೆ ಸಂಬಂಧಿಸಿದಂತೆ ಅದರ ಸಾರಭೂತ ಅಂಶವೇನು ಎಂಬ ಬಗ್ಗೆ ಭಿನ್ನಾಭಿಪ್ರಾಯವಿರಬಹುದು. ಆದರೆ ಜಾತಿ ಹಿಂದೂಧರ್ಮದ ಒಂದು ಏಕೈಕ ಸಾರಭೂತವಾದ ಅವಿಭಾಜ್ಯ ಅಂಗವೆನ್ನುವುದರಲ್ಲಿ ಅನುಮಾನವಿಲ್ಲ. ಪ್ರತಿಯೊಬ್ಬ ಹಿಂದೂ ಅವನು ನಿಜವಾದ ಹಿಂದೂ ಆಗಿದ್ದಲ್ಲಿ ಜಾತಿಯನ್ನು ನಂಬುತ್ತಾನೆ. ಪ್ರತಿಯೊಬ್ಬ ಹಿಂದೂ, ತಾನು ನಿಜವಾದ ಹಿಂದೂ ಎಂದು ಹೆಮ್ಮೆಪಟ್ಟರೆ, ಅವನಿಗೆ ಜಾತಿಯಿದೆ. ಹಿಂದೂವಾದವನು ಎಷ್ಟರಮಟ್ಟಿಗೆ ಜಾತಿಯಲ್ಲಿ ಹುಟ್ಟಿದ್ದಾನೆಯೋ ಅಷ್ಟರಮಟ್ಟಿಗೆ ಅವನು ಹಿಂದೂ ಧರ್ಮದಲ್ಲಿ ಹುಟ್ಟಿದ್ದಾನೆ. ಒಬ್ಬ ವ್ಯಕ್ತಿ ಒಂದು ಜಾತಿಯಲ್ಲಿ ಹುಟ್ಟಿರದ ಹೊರತು ಅವನು ಹಿಂದೂ ಧರ್ಮದಲ್ಲಿ ಹುಟ್ಟಿರಲು ಸಾಧ್ಯವಿಲ್ಲ. ಜಾತಿ ಮತ್ತು ಹಿಂದೂಧರ್ಮವನ್ನು ಪ್ರತ್ಯೇಕಿಸಲಾಗುವುದಿಲ್ಲ. ಪ್ರೊ. ಮ್ಯಾಕ್ಸ್‌ಮುಲ್ಲರ್[೧] ಅವರು ಹೇಳುವಂತೆ:

"ಆಧುನಿಕ ಹಿಂದೂ ಧರ್ಮ ಜಾತಿ ಪದ್ಧತಿಯ ಮೇಲೆ ನಿಂತಿದೆ. ಹೆಬ್ಬಂಡೆಯಂತಿರುವ ಅದನ್ನು ಯಾವ ವಾದಗಳಿಂದಲೂ ಅಲುಗಾಡಿಸಲು ಸಾಧ್ಯವಿಲ್ಲ."

ಆದ್ದರಿಂದ ಜಾತಿ ಸಿದ್ಧಾಂತವನ್ನು ಮನು ಪ್ರತಿಪಾದಿಸುವಷ್ಟರ ಮಟ್ಟಿಗೆ ಮನುಸ್ಮೃತಿಯನ್ನು ಧಾರ್ಮಿಕ ಗ್ರಂಥವೆಂದು ಒಪ್ಪಿಕೊಳ್ಳಬೇಕಾಗುತ್ತದೆ.

## II

ಹಿಂದೂಗಳು ಆಚರಿಸಿ ಅನುಸರಿಸಲು ಮನು ನಿರ್ದೇಶಿಸಿರುವ ನೈತಿಕ ಮತ್ತು ಧಾರ್ಮಿಕ ನಿಯಮಗಳೇನು?

ಮೊದಲನೆಯದಾಗಿ, ಮನು ಹಿಂದೂಗಳನ್ನು ನಾಲ್ಕು ವರ್ಣಗಳು ಅಥವಾ ಸಾಮಾಜಿಕ ವ್ಯವಸ್ಥೆಗಳಾಗಿ ವಿಭಜಿಸುವುದಷ್ಟೇ ಅಲ್ಲದೆ ಅವರ ಸ್ಥಾನವನ್ನೂ ನಿಗದಿಪಡಿಸುತ್ತಾನೆ. ಆ ಶ್ರೇಣೀಕೃತ ವ್ಯವಸ್ಥೆ ಹೀಗಿದೆ:

X ೩. ತನ್ನ ಪ್ರಾಬಲ್ಯದಿಂದಾಗಿ, ತನ್ನ ಹುಟ್ಟಿನ ಶ್ರೇಷ್ಠತೆಯಿಂದಾಗಿ, ಕೆಲವು ವಿಶಿಷ್ಟ ನಿಯಮಗಳನ್ನು ಆಚರಿಸುವುದರಿಂದಾಗಿ, ತನ್ನ ವಿಶೇಷ ಪಾವಿತ್ರ್ಯದಿಂದಾಗಿ ಬ್ರಾಹ್ಮಣ ಸರ್ವ ವರ್ಣಗಳಿಗೂ ಪ್ರಭುವಾಗಿದ್ದಾನೆ.

ಮನು ತನ್ನ ಕಾರಣಗಳನ್ನು ವಿಸ್ತರಿಸುತ್ತಾ ಮುಂದೆ ಕಾಣಿಸಿದ ವಿಶಿಷ್ಟ ರೀತಿಯಲ್ಲಿ ವಿವರಿಸುತ್ತಾನೆ:

I ೯೩. ಪ್ರಜಾಪತಿಯ (ಅಂದರೆ ದೇವತೆಗಳ) ಬಾಯಿಂದ ಬ್ರಾಹ್ಮಣ ಮೊದಲು ಜನಿಸಿದನು. ವೇದಗಳು ಅವನ ವಶವಾದುದರಿಂದ ಅವನು ಇಡಿ ಸೃಷ್ಟಿಗೆ ಪ್ರಭುವಾಗಿದ್ದಾನೆ.

I ೯೪. ದೇವತೆಗಳಿಗೆ ಹವಿಸ್ಸು ತಲುಪಿ ಈ ವಿಶ್ವ ರಕ್ಷಣೆಯಾಗಲಿ ಎಂದು ಸ್ವಯಂಭೂವಾದ ದೇವರು ತಪಸ್ಸು ಮಾಢಿ ಅವನನ್ನು ತನ್ನ ಬಾಯಿಂದ ಮೊದಲು ಸೃಷ್ಟಿಸಿದನು.

೧. 'ಸೈನ್ಸ್ ಆಫ್ ರಿಲಿಜನ್', ಪು. ೨೮.

I ೯೫. ಯಾರ ಮುಖದಿಂದ ದೇವತೆಗಳು ಹವಿಸ್ಸುಗಳನ್ನೂ ಅನ್ನಾದಿಗಳನ್ನೂ ಸೇವಿಸುತ್ತಾರೋ ಅವನನ್ನು ಯಾವ ಸೃಷ್ಟಿ ಶಕ್ತಿ ತಾನೆ ಮೀರಿಸಬಲ್ಲದು?

I ೯೬. ಸೃಷ್ಟಿಯ ವಸ್ತುಗಳಲ್ಲಿ ಪ್ರಾಣವಿರುವಂಥ ಸೃಷ್ಟಿಯ ವಸ್ತುಗಳು ಶ್ರೇಷ್ಠವಾಗಿವೆ. ಅವುಗಳಲ್ಲಿ ಬುದ್ಧಿ ಇರುವ ಪ್ರಾಣಿಗಳು ಶ್ರೇಷ್ಠವಾಗಿವೆ. ಆ ಬುದ್ಧಿ ಇರುವ ಪ್ರಾಣಿಗಳಲ್ಲಿ ನರನು ಶ್ರೇಷ್ಠ. ನರರಲ್ಲಿ ಬ್ರಾಹ್ಮಣರು ಶ್ರೇಷ್ಠರಾಗಿದ್ದಾರೆ.

ದೇವತೆಗಳಿಗೆ ಹವಿಸ್ಸುಗಳನ್ನು ತಲುಪಿಸುವುದರಿಂದ, ದೇವರು ಬಾಯಿಂದ ಸೃಷ್ಟಿಯಾದುದರಿಂದ ಬ್ರಾಹ್ಮಣನಿಗೆ ಮನು ಅಗ್ರಸ್ಥಾನವನ್ನು ಕೊಡುತ್ತಾನೆ. ಬ್ರಾಹ್ಮಣರ ಶ್ರೇಷ್ಠತೆಗೆ ಮನು ಇನ್ನೊಂದು ಕಾರಣವನ್ನು ಕೊಡುತ್ತಾನೆ:

I ೯೮. ಧರ್ಮದ ಪ್ರತಿರೂಪವೇ ಬ್ರಾಹ್ಮಣನಾಗಿ ಜನಿಸಿದೆ. ಅವನು ಹುಟ್ಟಿರುವುದೇ ಧರ್ಮವನ್ನು ಆಚರಿಸಲು ಮತ್ತು ಬ್ರಹ್ಮದ ಜೊತೆ ಒಂದಾಗಲು.

I ೯೯. ಅಸ್ತಿತ್ವಕ್ಕೆ ಬಂದ ಬ್ರಾಹ್ಮಣ ಭೂಮಿಯಲ್ಲಿ ದೊಡ್ಡವನಾಗಿದ್ದಾನೆ, ಎಲ್ಲ ಪ್ರಾಣಿಗಳಿಗೂ ಮೇಲಿದ್ದಾನೆ. ಅವನಿರುವುದೇ ಧರ್ಮವೆಂಬ ನಿಧಿಯನ್ನು ರಕ್ಷಿಸಲು.

ಅದನ್ನು ಮುಗಿಸುತ್ತಾ ಮನು ಹೀಗೆ ಹೇಳುತ್ತಾನೆ:

I ೧೦೧. ಬ್ರಾಹ್ಮಣ ತನ್ನ ಅನ್ನವನ್ನು ಮಾತ್ರ ಭುಂಜಿಸುತ್ತಾನೆ. ತನ್ನ ಬಟ್ಟೆಯನ್ನು ಮಾತ್ರ ದಾನಮಾಡುತ್ತಾನೆ. ಬ್ರಾಹ್ಮಣನ ಔದಾರ್ಯದಿಂದಾಗಿ ಉಳಿದ ಜನರೆಲ್ಲ ಬದುಕುತ್ತಾರೆ.

ಏಕೆಂದರೆ ಮನುವಿನ ಪ್ರಕಾರ:

I ೧೦೦. ಪ್ರಪಂಚದಲ್ಲಿರುವುದೆಲ್ಲ ಬ್ರಾಹ್ಮಣನ ಸ್ವತ್ತು. ತನ್ನ ಹುಟ್ಟಿನ ಶ್ರೇಷ್ಠತೆಯಿಂದಾಗಿ ಎಲ್ಲದಕ್ಕೂ ಅವನು ಹಕ್ಕುದಾರನಾಗಿದ್ದಾನೆ.

ಎಲ್ಲ ಸೃಷ್ಟಿಗೂ ಬ್ರಾಹ್ಮಣನೇ ಒಡೆಯ ಎಂದು ಮನು ಸೂಚಿಸುತ್ತಾನೆ. ಏಕೆಂದರೆ ಮನು ಈ ಅರ್ಥ ಬರುವಂತೆ ಎಚ್ಚರಿಕೆ ನೀಡುತ್ತಾನೆ.

IX ೩೧೭. ಅಗ್ನಿಯನ್ನು ಯಜ್ಞಕ್ಕೆ ಉಪಯೋಗಿಸಲಿ ಅಥವಾ ಉಪಯೋಗಿಸದಿರಲಿ ಅದು ಹೇಗೆ ಮಹತ್ವವಾದುದೋ ಅಂತೆಯೇ ಬ್ರಾಹ್ಮಣನು ವಿದ್ಯಾವಂತನಾಗಿರಲಿ ಅಥವಾ ಅವಿದ್ಯಾವಂತನಾಗಿರಲಿ ಅವನು ದೇವರಿಗೆ ಸಮಾನ.

IX ೩೧೯. ಹೀಗೆ ಬ್ರಾಹ್ಮಣರು ಯಾವುದೇ ಕೀಳು ಕಸುಬು ಮಾಡುತ್ತಿದ್ದರೂ ಅವರನ್ನು ಗೌರವಿಸಬೇಕು. ಏಕೆಂದರೆ ಅವರಲ್ಲಿ ಪ್ರತಿಯೊಬ್ಬನೂ ಬಹುದೊಡ್ಡ ದೇವರು.

ಬ್ರಾಹ್ಮಣ ದೇವರಾಗಿರುವುದರಿಂದ ಅವನು ಕಾನೂನಿಗೂ ಮತ್ತು ರಾಜನಿಗೂ ಅತೀತನಾಗಿದ್ದಾನೆ. ಮನು ಆದೇಶಿಸುತ್ತಾನೆ:

VII ೩೭. ಮೂರು ವಿದ್ಯೆಗಳಲ್ಲಿ ಪರಿಣತರಾದ ಮತ್ತು ರಾಜ ವಿದ್ಯೆಯಲ್ಲಿ ವಿದ್ವಾಂಸರಾದ ಬ್ರಾಹ್ಮಣರನ್ನು ಬೆಳಿಗ್ಗೆ ಎದ್ದು ರಾಜ ಪೂಜಿಸಿ ಅವರ ಆಜ್ಞೆಯನ್ನು ಪಾಲಿಸಬೇಕು.

VII ೩೮. ವೇದಜ್ಞರಾದ, ಶುಚಿವಂತರಾದ ವೃದ್ಧ ಬ್ರಾಹ್ಮಣರನ್ನು ಅವನು ಪ್ರತಿದಿನ ಪೂಜಿಸಬೇಕು. ಕೊನೆಯದಾಗಿ ಮನು ಹೇಳುತ್ತಾನೆ:

XI ೩೫. ಬ್ರಾಹ್ಮಣನು ಎಲ್ಲ ಜೀವಿಗಳ ವಿಧಾತ, ಶಾಸಿತಾ, ಗುರು, ಹಾಗೂ ಮಿತ್ರನೆಂದು ಹೇಳುತ್ತಾರೆ. ಯಾರೂ ಅಮಂಗಳವಾದ ಮಾತನ್ನಾಗಲೀ, ಕಠಿಣವಾದ ಮಾತನ್ನಾಗಲೀ ಅವನಿಗೆ ಹೇಳಬಾರದು.

ಬೇರೆ ಬೇರೆ ವರ್ಣದವರು ಮಾಡಬೇಕಾದ ಬೇರೆ ಬೇರೆ ಕಸುಬುಗಳನ್ನು ಕುರಿತು ಮನುಸ್ಮೃತಿಯಲ್ಲಿ ಹೀಗೆ ಹೇಳಲಾಗಿದೆ:

I ೮೮. ವೇದಾಧ್ಯಯನ, ಅಧ್ಯಾಪನ, ಯಜ್ಞ, ಯಾಜ್ಞಿಕರಿಗೆ ನೆರವು, ಶ್ರೀಮಂತರಾಗಿದ್ದರೆ ದಾನ ಮಾಡುವುದು, ಇಲ್ಲದಿದ್ದರೆ ದಾನವನ್ನು ಸ್ವೀಕರಿಸುವುದು ಇವು ಬ್ರಾಹ್ಮಣರ ಕರ್ತವ್ಯಗಳೆಂದು ಸ್ವಯಂಭೂ ಮನು ವಿಧಿಸಿದ್ದಾನೆ.

I ೮೯. ಪ್ರಜೆಗಳ ರಕ್ಷಣೆ, ದಾನ ಮಾಡುವುದು, ಯಜ್ಞ ಮಾಡುವುದು, ವೇದಾಧ್ಯಯನ ಮಾಡುವುದು, ವಿಷಯ ಭೋಗಗಳನ್ನು ತ್ಯಜಿಸುವುದು ಇವು ಕ್ಷತ್ರಿಯನ ಕರ್ತವ್ಯಗಳು.

I ೯೦. ದನಕರುಗಳನ್ನು ಸಾಕುವುದು, ದಾನ ಮಾಡುವುದು, ಯಜ್ಞ ಮಾಡುವುದು, ವೇದಾಧ್ಯಯನ, ವ್ಯಾಪಾರ, ಬಡ್ಡಿಗೆ ಸಾಲ ಕೊಡುವುದು, ಬೇಸಾಯ ಇವು ವೈಶ್ಯನಿಗೆ ವಹಿಸಿದ ಕೆಲಸಗಳು.

I ೯೧. ಶೂದ್ರನಿಗೆ ವಿಧಿಸಿರುವ ಒಂದೇ ಒಂದು ಪ್ರಧಾನ ಕರ್ತವ್ಯವೆಂದರೆ ಮೇಲೆ ಹೇಳಿದ ಮೂರು ವರ್ಣಗಳನ್ನು ಅಸೂಯೆ ಮತ್ತು ಮತ್ಸರವಿಲ್ಲದೆ ಸೇವೆ ಮಾಡುವುದಾಗಿದೆ.

X ೭೪. ಸರ್ವಶಕ್ತನಾದ ಪರಮಾತ್ಮನನ್ನು ಸಾಕ್ಷಾತ್ಕರಿಸಿಕೊಳ್ಳಬೇಕೆಂಬ ಆಸೆಯುಳ್ಳ ಬ್ರಾಹ್ಮಣರು ಈ ಆರು ಕರ್ತವ್ಯಗಳನ್ನು ನೆರವೇರಿಸಲಿ.

X ೭೫. ಬ್ರಾಹ್ಮಣನಿಗೆ ಕಲಿಯುವುದು, ಕಲಿಸುವುದು, ಹೋಮ ಮಾಡುವುದು, ಮಾಡಿಸುವುದು, ಕೊಡುವುದು, ತೆಗೆದುಕೊಳ್ಳುವುದು, ಇವು ಆರು ಕರ್ತವ್ಯಗಳು.

X ೭೬. ಈ ಆರು ಕರ್ತವ್ಯಗಳಲ್ಲಿ ಮೂರು ಜೀವನೋಪಾಯಕ್ಕೆ ಸಂಬಂಧಿಸಿವೆ. ಹೋಮ ಮಾಡಿಸುವುದು, ವೇದಾಧ್ಯಯನ ಮಾಡಿಸುವುದು ಮತ್ತು ಶುದ್ಧರಾದವರಿಂದ ದಾನ ಸ್ವೀಕಾರ ಮಾಡುವುದು.

X ೭೭. ಬೋಧನೆ, ಯಜ್ಞ ಮಾಡುವುದು ಮತ್ತು ದಾನ ಸ್ವೀಕಾರ ಈ ಮೂರು ಕರ್ತವ್ಯಗಳು ಬ್ರಾಹ್ಮಣನಿಗೆ ಸಂಬಂಧಿಸಿವೆ, ಕ್ಷತ್ರಿಯನಿಗಲ್ಲ.

X ೭೮. ನಿಯಮದ ಪ್ರಕಾರ ಈ ಮೂರು ವೈಶ್ಯನಿಗೆ ಇಲ್ಲ. ಪ್ರಜಾಪತಿಯಾದ ಮನು ಈ ಕರ್ತವ್ಯಗಳನ್ನು ಕೆಳಗಿನ ಎರಡು ವರ್ಣಗಳಾದ ಕ್ಷತ್ರಿಯರು ಮತ್ತು ವೈಶ್ಯರಿಗೆ ನಿಷೇಧಿಸಿದ್ದಾನೆ.

X ೭೯. ಶಸ್ತ್ರಾಸ್ತ್ರಗಳು ಕ್ಷತ್ರಿಯನಿಗೂ, ವಾಣಿಜ್ಯ, ಪಶುಪಾಲನೆ ಮತ್ತು ಕೃಷಿ ಇವು ವೈಶ್ಯರಿಗೂ ವಿಶಿಷ್ಟವಾದ ಕರ್ತವ್ಯಗಳು, ಆದರೆ ಮುಂದಿನ ಜೀವನ ದೃಷ್ಟಿಯಿಂದ ದಾನ, ಅಧ್ಯಯನ, ಯಜ್ಞ ಇವು ಈ ಎರಡು ವರ್ಣಗಳು ನೆರವೇರಿಸಬೇಕಾದ ಕರ್ತವ್ಯಗಳು.

ಸ್ಥಾನ ಮತ್ತು ಕಸುಬುಗಳನ್ನು ಕೆಲವು ವರ್ಣಗಳಿಗೆ ಮನು ನಿರ್ದೇಶಿಸುವುದರ ಜೊತೆಗೆ ಕೆಲವು ಆಜ್ಞೆಗಳನ್ನು, ಶಿಕ್ಷೆಗಳನ್ನು ಅವರಿಗೆ ವಿಧಿಸುತ್ತಾನೆ.

ಮದುವೆಗೆ ಸಂಬಂಧಿಸಿದವುಗಳನ್ನು ಮೊದಲು ನೋಡಬಹುದು. ಮನು ಹೇಳುತ್ತಾನೆ:

III ೧೨. ದ್ವಿಜರು ಮೊದಲು ಮದುವೆಯಾಗುವಾಗ ತಮ್ಮ ಜಾತಿಯ ಹೆಣ್ಣನ್ನೇ ಮದುವೆಯಾಗಬೇಕು. ಪುನಃ ಮದುವೆಯಾಗಬೇಕೆಂದು ಇಷ್ಟಪಡುವವರು ತಮ್ಮ ಕೆಳಗಿನ ವರ್ಣಕ್ಕೆ ಸೇರಿದ ಹೆಂಗಸರನ್ನು ಆಗಬಹುದು.

III ೧೩. ಶೂದ್ರ ಹೆಂಗಸು ಶೂದ್ರ ಗಂಡಸಿಗೆ ಮಾತ್ರ ಹೆಂಡತಿಯಾಗಿರಬೇಕು. ಶೂದ್ರ ಸ್ತ್ರೀ ಮತ್ತು ವೈಶ್ಯ ಸ್ತ್ರೀ ವೈಶ್ಯನಿಗೆ ಹೆಂಡತಿಯರಾಗಬಹುದು. ಅವರಿಬ್ಬರು ಮತ್ತು ಕ್ಷತ್ರಿಯ ಸ್ತ್ರೀ

ಕ್ಷತ್ರಿಯನಿಗೆ ಹೆಂಡತಿಯರಾಗಬಹುದು. ಈ ಮೂವರು ಮತ್ತು ಬ್ರಾಹ್ಮಣ ಸ್ತ್ರೀ ಬ್ರಾಹ್ಮಣನಿಗೆ ಹೆಂಡತಿಯರಾಗಬಹುದು.

ಆಮೇಲೆ ಕಸುಬುಗಳಿಗೆ ಸಂಬಂಧಿಸಿದಂತೆ ಸೌಕರ್ಯಗಳಿವೆ. ಮನುಷ್ಯ ತೊಂದರೆಯಲ್ಲಿದ್ದಾಗ ಅವನು ಏನು ಮಾಡಬೇಕು ಎನ್ನುವುದರ ಬಗ್ಗೆ ಮನು ತುಂಬ ಪ್ರಧಾನವಾಗಿ ಈ ಸೌಕರ್ಯಗಳನ್ನು ಸೂಚಿಸುತ್ತಾನೆ:

X ೮೧. ತನ್ನ ಕರ್ತವ್ಯಗಳಿಂದ ಬ್ರಾಹ್ಮಣನು ಜೀವನಯಾಪನೆ ಮಾಡಲು ಸಾಧ್ಯವಿಲ್ಲದಿದ್ದರೆ ಅವನು ಕ್ಷತ್ರಿಯನ ಧರ್ಮದಿಂದ ಬದುಕಬಹುದು. ಏಕೆಂದರೆ ಕ್ಷತ್ರಿಯ ವೃತ್ತಿ ಬ್ರಾಹ್ಮಣ ವೃತ್ತಿಗೆ ಹತ್ತಿರವಾಗಿದೆ.

X ೮೨. ಮೇಲಿನ ಎರಡು ವರ್ಣಗಳ ವೃತ್ತಿಯಿಂದಲೂ ಅವನು ಜೀವನ ಸಾಗಿಸಲು ಕಷ್ಟವಾದರೆ ವೈಶ್ಯವೃತ್ತಿಯನ್ನು ಅನುಸರಿಸಿ ಬೇಸಾಯ ಮತ್ತು ಗೋರಕ್ಷಣೆ ಮಾಡಬಹುದು.

X ೮೩. ಬ್ರಾಹ್ಮಣ ಮತ್ತು ಕ್ಷತ್ರಿಯ ವೈಶ್ಯನ ವೃತ್ತಿಯಿಂದ ಬದುಕುವ ಪ್ರಸಂಗ ಬಂದರೆ ದನಕರುಗಳ ಸಾಕಣೆ ಮತ್ತು ಬೇಸಾಯವನ್ನು ಎಚ್ಚರಿಕೆಯಿಂದ ನಿವಾರಿಸಬೇಕು. ಏಕೆಂದರೆ ಸೂಕ್ಷ್ಮಜೀವಿಗಳಿಗೆ ಬೇಸಾಯದಿಂದ ತುಂಬಾ ನೋವುಂಟಾಗುತ್ತದೆ. ಎತ್ತುಗಳು ಮುಂತಾದ ಪ್ರಾಣಿಗಳ ಮೇಲೆ ಆ ಕಸಬು ಅವಲಂಬಿತವಾಗಿದೆ.

X ೮೪. ಕೆಲವರು ಬೇಸಾಯ ಕಷ್ಟವೆಂದು ಹೇಳುತ್ತಾರೆ. ಆದರೆ ಆ ಜೀವನ ವಿಧಾನವನ್ನು ಸಾತ್ವಿಕರು ನಿಂದಿಸುತ್ತಾರೆ. ಏಕೆಂದರೆ ನೇಗಿಲ ಗುಳದಿಂದ ಭೂಮಿಗೆ ಮತ್ತು ಅದರಲ್ಲಿ ವಾಸಿಸುವ ಜೀವಿಗಳಿಗೆ ನೋವಾಗುತ್ತದೆ.

X ೮೫. ಅಪದ್ಧರ್ಮವಾಗಿ ಬಂದ ವೈಶ್ಯ ವೃತ್ತಿಯಾದ ವ್ಯಾಪಾರದಿಂದ ಬ್ರಾಹ್ಮಣ ಕ್ಷತ್ರಿಯರು ಕೆಳಗೆ ಹೇಳುವ ವಸ್ತುಗಳನ್ನು ಬಿಡಬೇಕು.

X ೮೬. ಎಲ್ಲ ಬಗೆಯ ರಸಗಳು, ಸಿದ್ಧಾನ್ನ, ಎಳ್ಳು, ಕಲ್ಲು, ಉಪ್ಪು, ಪ್ರಾಣಿಗಳು, ಮನುಷ್ಯರು ಇವುಗಳು ವಾಣಿಜ್ಯ ಯೋಗ್ಯವಲ್ಲ.

X ೮೭. ಎಲ್ಲಾ ಬಣ್ಣದ ಬಟ್ಟೆಗಳು, ಸೆಣಬು, ಅಗಸೆ ನಾರು, ಉಣ್ಣೆ ಇವುಗಳ ಬಟ್ಟೆ, ಹಣ್ಣು, ಬೇರು, ಔಷಧಿ ಇವುಗಳು.

X ೮೮. ನೀರು, ಕತ್ತಿ, ವಿಷ, ಮಾಂಸ, ಸೋಮರಸ, ಪರಿಮಳ ದ್ರವ್ಯ, ಹಾಲು, ಜೇನು, ಮೊಸರು, ತುಪ್ಪ, ಎಣ್ಣೆ, ಮಧುಗುಡ ಮತ್ತು ದರ್ಭೆ ಹುಲ್ಲು.

X ೮೯. ಜಿಂಕೆಯಂಥ ಎಲ್ಲ ಬಗೆಯ ಕಾಡುಪ್ರಾಣಿಗಳು, ಹಕ್ಕಿಗಳು, ಮೀನು, ಮದ್ಯ, ನೀಲಿ, ಅರಗು ಮತ್ತು ಎಲ್ಲಾ ಗೊರಸಿನ ಪ್ರಾಣಿಗಳು.

X ೯೦. ತಾನು ನೆಟ್ಟು ಬೆಳೆಸಿದ ಎಳ್ಳನ್ನು ಬೆಳೆದ ಕೂಡಲೇ ಆ ಕಾಲದ ದರಕ್ಕೆ ಮಾರಬಹುದು. ಏಕೆಂದರೆ ಅದು ಹೋಮಕ್ಕೆ ಬೇಕಾದ ದ್ರವ್ಯ. ಲಾಭಕ್ಕೋಸ್ಕರ ಕಾಯಬಾರದು.

X ೯೧. ಊಟ, ಅಭ್ಯಂಜನ, ದಾನ ಇವುಗಳಲ್ಲದೆ ಎಳ್ಳನ್ನು ಲಾಭದ ಮಾರಾಟಕ್ಕೆ ಇಳಿಸಿದರೆ ತಾನು ಮತ್ತು ತನ್ನ ಪಿತೃಗಳು ನಾಯಿಯ ಮಲದಲ್ಲಿ ಬೀಳುವರು.

X ೯೨. ಮಾಂಸ, ಅರಗು ಅಥವಾ ಉಪ್ಪು ಇವುಗಳ ಮಾರಾಟದಿಂದ ಬ್ರಾಹ್ಮಣನು ಕೂಡಲೇ ಕೆಳಮಟ್ಟಕ್ಕೆ ಇಳಿಯುತ್ತಾನೆ. ಮೂರು ದಿವಸ ಹಾಲನ್ನು ಮಾರಾಟ ಮಾಡಿದರೆ ಅವನು ಶೂದ್ರನ ಸ್ಥಿತಿಗೆ ಬರುತ್ತಾನೆ.

X ೯೩. ನಿಷಿದ್ಧ ದ್ರವ್ಯಗಳ ವ್ಯಾಪಾರವನ್ನು ಅವನು (ಬ್ರಾಹ್ಮಣನು) ಏಳು ದಿನ ಮಾಡಿದರೆ ವೈಶ್ಯನಂತಾಗುವನು.

X ೯೪. ರಸ. ರಸ ಸಿದ್ಧಾನ್ನ, ಧಾನ್ಯ, ಎಳ್ಳು, ಇವು ಪರಸ್ಪರ ವಿನಿಮಯ ನಿಷಿದ್ಧವಲ್ಲ. ಉಪ್ಪಿಗೆ ಅನ್ಯೋನ್ಯ ಬದಲಾವಣೆ ಇಲ್ಲ.

X ೧೦೨. ತೊಂದರೆಗೊಳಗಾದ ಬ್ರಾಹ್ಮಣ ಯಾರಿಂದಲಾದರೂ ದಾನ ಸ್ವೀಕರಿಸಬಹುದು. ಏಕೆಂದರೆ ಪಾವಿತ್ರ್ಯವನ್ನು ಯಾವುದೂ ಹಾಳು ಮಾಡಲಾರದು.

X ೧೦೩. ಅಪಾತ್ರರಿಗೆ ವೇದ ಬೋಧಿಸುವುದರಿಂದ, ಅವರಿಂದ ಯಜ್ಞ ಮಾಡಿಸುವುದರಿಂದ ಅಥವಾ ದಾನ ಸ್ವೀಕರಿಸುವುದರಿಂದ ಕಷ್ಟದಲ್ಲಿರುವ ವಿಪ್ರರು ಪಾಪವನ್ನು ಎಸಗಿದಂತೆ ಆಗುವುದಿಲ್ಲ. ಏಕೆಂದರೆ ಅವರು ಬೆಂಕಿಯಷ್ಟೇ ಅಥವಾ ನೀರಿನಷ್ಟೇ ಪರಿಶುದ್ಧರು.

ಕಷ್ಟದಲ್ಲಿ ಸಿಲುಕಿದಾಗ ಬೇರೆ ವರ್ಣದವರು ಏನು ಮಾಡಬೇಕೆಂದು ಮನು ಹೇಳುತ್ತಾನೆ ಎಂಬುದರ ಜೊತೆ ಇದನ್ನು ಹೋಲಿಸಿ ಮನು ಹೇಳುತ್ತಾನೆ:

X ೯೬. ದುರಾಸೆಯ ದೃಷ್ಟಿಯಿಂದ ಕೆಳಜಾತಿಯವನು ಮೇಲುಜಾತಿಯವನ ಕರ್ತವ್ಯಗಳನ್ನು ಮಾಡಿದರೆ ರಾಜನಾದವನು ಅವನ ಸಂಪತ್ತನ್ನೆಲ್ಲಾ ಮುಟ್ಟುಗೋಲು ಹಾಕಿಕೊಂಡು ಕೂಡಲೇ ಅವನನ್ನು ಗಡಿಪಾರು ಮಾಡಬೇಕು.

X ೯೭. ತನ್ನ ಕಸುಬನ್ನು ದೋಷಪೂರಿತವಾಗಿ ಆಚರಿಸಿದರೂ, ಅದು ಇನ್ನೊಂದು ಕಸುಬಿಗಿಂತ ಶ್ರೇಷ್ಠ.

X ೯೮. ವೈಶ್ಯನಿಗೆ ಶೂದ್ರ ಧರ್ಮ ಅಪದ್ಧರ್ಮವಾಗಿದೆ. ಅವನು ಅದನ್ನು ಗೌರವಯುತವಾಗಿ ನಡೆಸಿ ಸಾಧ್ಯವಾದರೆ ಅದನ್ನು ಬಿಡಬೇಕು.

X ೯೯. ತನ್ನ ಹೆಂಡತಿ ಮತ್ತು ಮಗ ಹಸಿವಿನಿಂದ ಬಳಲಿದರೆ ದ್ವಿಜನನ್ನು ಕಾದು ಕೆಲಸ ಸಿಗದಿದ್ದರೆ ಶೂದ್ರನು ಕರಕುಶಲ ಕೆಲಸ ಮಾಡಿ ಹೊಟ್ಟೆ ಹೊರೆದುಕೊಳ್ಳಬಹುದು.

X ೧೨೧. ಜೀವನೋಪಾಯಕ್ಕಾಗಿ ಶೂದ್ರನು ವಿಪ್ರನ ಸೇವೆಯನ್ನು ಮಾಡಲು ಸಾಧ್ಯವಿಲ್ಲದಿದ್ದರೆ ಕ್ಷತ್ರಿಯನ ಸೇವೆಯನ್ನು ಮಾಡಬಹುದು ಅಥವಾ ಕ್ಷತ್ರಿಯನ ಸೇವೆಯನ್ನು ಮಾಡಲು ಆಗದಿದ್ದರೆ ಶ್ರೀಮಂತ ವೈಶ್ಯನ ಸೇವೆ ಮಾಡಿ ಜೀವನೋಪಾಯ ಮಾಡಬಹುದು.

X ೧೨೨. ಸ್ವರ್ಗ ಲಾಭಕ್ಕಾಗಿ ಅಥವಾ ಇಹ ಪರಗಳ ಸುಖಕ್ಕಾಗಿ ಶೂದ್ರನು ಬ್ರಾಹ್ಮಣನ ಸೇವೆ ಮಾಡಬೇಕು. ಏಕೆಂದರೆ ಅವನು ಹುಟ್ಟಿನಿಂದಲೇ ಬ್ರಾಹ್ಮಣನ ಸೇವಕ. ಇದರಿಂದ ಅವನು ಪುಣ್ಯವಂತನಾಗುತ್ತಾನೆ.

X ೧೨೩. ಬ್ರಾಹ್ಮಣನ ಸೇವೆಯೇ ಶೂದ್ರನಿಗೆ ಅತ್ಯಂತ ಪವಿತ್ರವಾದ ಕೆಲಸವೆಂದು ಶಾಸ್ತ್ರಗಳು ಕೊಂಡಾಡುತ್ತವೆ. ಇದನ್ನು ಬಿಟ್ಟು ಅವನು ಬೇರೆ ಏನೇ ಕೆಲಸ ಮಾಡಿದರೂ ಅವನಿಗೆ ಫಲವಿಲ್ಲ.

X ೧೨೪. ಬ್ರಾಹ್ಮಣರು ತಮ್ಮ ಪರಿಸ್ಥಿತಿಗೆ ಅನುಗುಣವಾಗಿ ಶೂದ್ರರ ಸಾಮರ್ಥ್ಯ, ಶ್ರಮ, ಮತ್ತು ಅವರ ಸಂಖ್ಯೆಗೆ ಅನುಸಾರವಾಗಿ ಶೂದ್ರರ ಪೋಷಣೆಯನ್ನು ಮಾಡಬೇಕು.

X ೧೨೫. ತಿಂದುಳಿದ ಅನ್ನವನ್ನು, ಹರಿದ ಹಳೆ ಬಟ್ಟೆಯನ್ನು ಮತ್ತು ಹಳೆಯ ಹಾಸಿಗೆಯನ್ನು ಶೂದ್ರನಿಗೆ ಕೊಡಬೇಕು.

X ೧೨೬. ಪ್ರತಿಷೇಧಿಸದ ತರಕಾರಿಗಳನ್ನು ಶೂದ್ರ ತಿಂದರೆ ಪಾತಕವಿಲ್ಲ. ಅವನು ಉತ್ತಮ ಪದವಿಯನ್ನು ಪಡೆಯಬಾರದು. ಅಗ್ನಿಗೆ ಹವಿಸ್ಸು ಹಾಕುವ ಕರ್ತವ್ಯವನ್ನು ಅವನು ಮಾಡಬಾರದು. ಆದರೆ ತನ್ನ ಕರ್ಮವನ್ನು ಮಾಡುವ ಉದ್ದೇಶದಿಂದ ಸಿದ್ಧಾನ್ನವನ್ನು ಯಜ್ಞವಾಗಿ ನಿವೇದಿಸುವುದಕ್ಕೆ ನಿಷೇಧವಿಲ್ಲ.

X ೧೨. ತಮ್ಮ ಪೂರ್ಣ ಕರ್ತವ್ಯವನ್ನು ಮಾಡಬೇಕೆಂಬ ಆಕಾಂಕ್ಷೆಯಿಂದ ತಾವು ಏನು ಮಾಡಬೇಕೆಂದು ತಿಳಿದು ಗೃಹಕೃತ್ಯಗಳಲ್ಲಿ ಧರ್ಮಜ್ಞರನ್ನು ಅನುಕರಿಸುವ ಶೂದ್ರರೂ ಕೂಡ ಯಾವುದೇ ಮಂತ್ರೋಚ್ಚಾರಣೆ ಇಲ್ಲದೆ ಸ್ತುತಿಸ್ತವನಗಳನ್ನು ಹೇಳಿದರೆ ಪಾಪವಿಲ್ಲ. ಬದಲಿಗೆ ಅವರು ಮೆಚ್ಚುಗೆ ಗಳಿಸುತ್ತಾರೆ.

X ೧೨೮. ದ್ವಿಜನ ಕರ್ಮವನ್ನು ಇತರರಿಗೆ ನೋವಾಗದಂತೆ ಶೂದ್ರನು ನಿಂದೆಯಿಲ್ಲದೆ ಆಚರಿಸಿದರೆ ಅವನಿಗೆ ಇಹಲೋಕದಲ್ಲಿಯೂ ಪರಲೋಕದಲ್ಲಿಯೂ ಉನ್ನತಿಯುಂಟು.

X ೧೨೯. ಶೂದ್ರನಿಗೆ ಹಣ ಮಾಡುವ ಶಕ್ತಿಯಿದ್ದರೂ ಅವನು ಹಣ ಮಾಡಬಾರದು. ಏಕೆಂದರೆ ಗುಲಾಮನಾದ ಅವನು ಸಂಪತ್ತನ್ನು ಸಂಗ್ರಹಿಸಿದರೆ ಅಹಂಕಾರಿಯಾಗುತ್ತಾನೆ. ತನ್ನ ಗರ್ವ ಅಥವಾ ಉಪೇಕ್ಷೆಯಿಂದ ಅವನು ಬ್ರಾಹ್ಮಣನಿಗೆ ಬಾಧೆಯನ್ನುಂಟು ಮಾಡುತ್ತಾನೆ.

X ೧೩೦. ಈಗ ಹೇಳಿರುವುದು ಚತುರ್ವರ್ಣದವರ ಆಪದ್ಧರ್ಮವೆಂದು ಹೆಸರಾಗಿದೆ. ಯಾರು ಅನುಸರಿಸುತ್ತಾರೋ ಅವರಿಗೆ ಪರಮ ಶ್ರೇಯಸ್ಸಿದೆ.

ಈ ಸೌಕರ್ಯಗಳು ಕೆಲವರಿಗೆ ಸಾಮಾಜಿಕವಾಗಿಯಷ್ಟೇ ಅಲ್ಲ, ಆರ್ಥಿಕವಾಗಿಯೂ ಇವೆ ಎಂದು ಮನು ಹೇಳುತ್ತಾನೆ:

VIII ೩೫. ಎಲ್ಲಿಯಾದರೂ ನಿಧಿ ಸಿಕ್ಕಿದ್ದನ್ನು ಯಾರಾದರೂ ತನ್ನದೆಂದು ಪ್ರಮಾಣ ಮಾಡಿದರೆ ಅದರ ಆರನೇ ಒಂದು ಭಾಗವನ್ನು ಅಥವಾ ಹನ್ನೆರಡನೇ ಒಂದು ಅಂಶವನ್ನು ರಾಜನು ತೆಗೆದುಕೊಳ್ಳಬೇಕು. ಇಲ್ಲವಾದರೆ ಅದು ಪೂರ್ಣವಾಗಿ ರಾಜನಿಗೆ ಸೇರ ತಕ್ಕದ್ದು.

VIII ೩೬. ನಿಧಿಯ ಬಗ್ಗೆ ಸುಳ್ಳು ಹೇಳಿದ್ದು ದೃಢವಾದರೆ ಆ ನಿಧಿ ಹಣದ ಎಂಟನೇ ಒಂದು ಭಾಗ ಅಥವಾ ಎಣಿಕೆ ಮಾಡಿ ಸ್ವಲ್ಪ ದಂಡನೆ ವಿಧಿಸಬೇಕು. ಗುಣಹೀನನಿಗೆ ದಂಡನೆ ಹೆಚ್ಚು ಗುಣವಂತನಿಗೆ ಕಡಿಮೆ.

VIII ೩೭. ವಿದ್ವಾಂಸನಾದ ಬ್ರಾಹ್ಮಣನು ಪುರಾತನ ನಿಧಿಯನ್ನು ಕಂಡರೆ ಆ ನಿಧಿ ಪೂರಾ ಅವನಿಗೇ ಸೇರಬೇಕು. ರಾಜನು ತೆಗೆದುಕೊಳ್ಳಬಾರದು. ಏಕೆಂದರೆ ಬ್ರಾಹ್ಮಣನು ಎಲ್ಲದರ ಒಡೆಯ, ಪ್ರಭು.

VIII ೩೮. ಭೂಮಿಯೊಳಗೆ ನಿಧಿ ಸಿಕ್ಕಿದರೆ ಅದರ ಅರ್ಧ ಭಾಗವನ್ನು ಬ್ರಾಹ್ಮಣರಿಗೆ ಕೊಟ್ಟು ಉಳಿದ ಅರ್ಧ ಭಾಗವನ್ನು ಭಂಡಾರಕ್ಕೆ ತುಂಬಬೇಕು.

IX ೩೨೩. ದಂಡನೆಯಿಂದ ಲಭಿಸಿದ ಹಣವನ್ನು ಬ್ರಾಹ್ಮಣರಿಗೆ ದಾನ ಮಾಡಿ ರಾಜ್ಯವನ್ನು ಮಗನಿಗೆ ಒಪ್ಪಿಸಿ ರಾಜನು ತನ್ನ ವೀರ ಮರಣವನ್ನು ಬಯಸಬೇಕು.

VII ೧೨೭. ಸರಕುಗಳ ಮೂಲ ಬೆಲೆ, ದೂರದಿಂದ ತರುವ ಸಾಗಾಟದ ಕೂಲಿ, ಖರ್ಚು ವೆಚ್ಚ,

ಕಳ್ಳಕಾಕರರಿಂದ ರಕ್ಷಣೆ ಪಡೆಯುವುದಕ್ಕಾಗಿ ವೆಚ್ಚ, ವ್ಯಾಪಾರಿಗಳಿಂದ ಲಾಭದ ಮಿತಿ ಇವುಗಳೆಲ್ಲವನ್ನೂ ಪರಿಶೀಲಿಸಿ ರಾಜನು ಕರ ನಿರ್ಣಯ ಮಾಡಬೇಕು.

VII ೧೨೮. ತನ್ನ ಮತ್ತು ವ್ಯಾಪಾರಿಯ ಅನೇಕ ವಿಧವಾದ ಕಾರ್ಯಗಳಿಗೆ ಸರಿಯಾದ ಪರಿಹಾರ ಬರುವಂತೆ ತನ್ನ ರಾಜ್ಯಾಡಳಿತ ಪ್ರದೇಶಗಳ ಮೇಲೆ ರಾಜನು ತೆರಿಗೆಗಳನ್ನು ವಿಧಿಸ ತಕ್ಕದ್ದು.

VII ೧೨೯. ಜಿಗಣೆ ರಕ್ತವನ್ನು, ಕರು ಹಾಲನ್ನು, ದುಂಬಿ ಮಕರಂದವನ್ನು ಸ್ವಲ್ಪ ಸ್ವಲ್ಪವಾಗಿ ಕ್ರೋಢೀಕರಿಸುವಂತೆ ವಾರ್ಷಿಕ ತೆರಿಗೆಗಳನ್ನು ಕೊಂಚ ಕೊಂಚವಾಗಿ ಪ್ರಜೆಗಳಿಂದ ಎತ್ತಿ ರಾಜನು ತನ್ನ ರಾಜ್ಯಕೋಶಗಳನ್ನು ತುಂಬಬೇಕು.

VII ೧೩೦. ಉತ್ಪಾದನಾ ಶ್ರಮ, ತಾರತಮ್ಯದಿಂದ ಆಯಾ ಧಾನ್ಯಗಳಿಗೆ ಆರನೇ, ಎಂಟನೇ, ಹನ್ನೆರಡನೇ ಒಂದಂಶವನ್ನು ರಾಜಾದಾಯವೆಂದು ಪರಿಗಣಿಸಬೇಕು. ಚಿನ್ನ ಮತ್ತು ಪಶುಗಳಿಗೆ ಐವತ್ತನೇ ಒಂದಂಶ ತೆರಿಗೆ ವಿಧಿಸಬೇಕು.

VII ೧೩೧. ಮರಗಳು, ಮಾಂಸ, ಜೇನು, ತುಪ್ಪ, ಪರಿಮಳಗಳು, ಔಷಧಿಗಳು, ದ್ರವ್ಯಗಳು, ಹೂವುಗಳು, ಗೆಡ್ಡೆ ಗೆಣಸುಗಳು ಮತ್ತು ಹಣ್ಣುಹಂಪಲುಗಳು ವಾರ್ಷಿಕವಾಗಿ ಹೆಚ್ಚಿದಾಗ ಆರನೇ ಒಂದು ಭಾಗವನ್ನು ತೆರಿಗೆಯೆಂದು ಹಾಕಬೇಕು.

VII ೧೩೨. ಸಂಗ್ರಹಿಸಿದ ಎಲೆಗಳು, ಅಡಿಗೆ ಸೊಪ್ಪುಗಳು, ಹುಲ್ಲು, ಚರ್ಮ ಅಥವಾ ಬೆತ್ತದಿಂದ ತಯಾರಿಸಿದ ಸಾಮಾನುಗಳು, ಮಡಿಕೆ ಕುಡಿಕೆಗಳು, ಕಲ್ಲಿನ ಸಾಮಗ್ರಿ ಇವುಗಳಿಗೆ ಕರ ವಿಧಿಸಬೇಕು.

VII ೧೩೩. ಎಂತಹ ಆಪತ್ಕಾಲದಲ್ಲಿಯೂ ರಾಜನು ವೇದ ವಿದ್ಯಾಸಂಪನ್ನನಾದ ಬ್ರಾಹ್ಮಣನಿಂದ ಕಂದಾಯವನ್ನು ವಸೂಲಿಮಾಡಬಾರದು. ತನ್ನ ರಾಜ್ಯದಲ್ಲಿ ವಾಸಿಸುವ ಅಂತಹ ಬ್ರಾಹ್ಮಣನು ಹಸಿವಿನಿಂದ ನರಳಿದರೆ ರಾಜನಿಗೆ ಕ್ಷೇಮಕರವಲ್ಲ.

VII ೧೩೪. ವಿದ್ವಾಂಸನಾದ ಬ್ರಾಹ್ಮಣನು ಹಸಿವಿನಿಂದ ರಾಜನ ದೇಶದಲ್ಲಿ ನರಳಿದರೆ ಅವನ ಇಡಿ ರಾಜ್ಯವು ಅನತಿಕಾಲದಲ್ಲಿಯೇ ಕ್ಷಾಮಡಾಮರಗಳ ತೊಂದರೆಗೆ ಒಳಗಾಗು ವುದು.

VII ೧೩೭. ಚಿಲ್ಲರೆ ವ್ಯಾಪಾರ ಮಾಡಿ ಬದುಕುವ ತನ್ನ ರಾಜ್ಯದ ತೀರಾ ಬಡವರ ಮೇಲೆ ವಾರ್ಷಿಕ ತೆರಿಗೆಯೆಂದು ಅತ್ಯಲ್ಪ ಕರವನ್ನು ರಾಜ ವಿಧಿಸಬೇಕು.

VII ೧೩೮. ಶಿಲ್ಪಿ, ಬಡಗಿ, ಕಮ್ಮಾರ, ಕೂಲಿನಾಲಿ ಮಾಡುವವರಿಂದ ತಿಂಗಳಿನಲ್ಲಿ ಒಂದು ದಿನ ರಾಜನು ತನ್ನ ಕೆಲಸ ಮಾಡಿಸಿಕೊಂಡು ಕರ ಪಡೆಯಬಹುದು.

VII ೧೯೪. ಕುರುಡ, ಕಿವುಡ, ಹೆಳವ, ಎಪ್ಪತ್ತರ ಮುದುಕ ಮತ್ತು ವಿದ್ವಾಂಸರಾದ ಪುರೋಹಿತರಿಗೆ ಭಾರಿ ದಾನ ಕೊಡುವವರ ಮೇಲೆ ರಾಜನು ಯಾವುದೇ ಕರವನ್ನು ಹಾಕಬಾರದು.

X ೧೧೮. ರಾಜನು ಆಪತ್ಕಾಲದಲ್ಲಿ ನಾಲ್ಕನೆಯ ಒಂದು ಭಾಗ ಕರವನ್ನು ಎತ್ತಿ ಒಳ್ಳೆಯ ಆಡಳಿತ ಮಾಡಿದರೆ ಪಾಪವಿಲ್ಲ.

X ೧೯೯. ಯುದ್ಧದಲ್ಲಿ ಹಿಮ್ಮೆಟ್ಟದೆ ಮುನ್ನುಗ್ಗಿ ಜಯಿಸುವುದು ಕ್ಷತ್ರಿಯ ಧರ್ಮ. ವೈಶ್ಯರಿಗೆ, ರೈತರಿಗೆ ಕೊಡುವ ರಕ್ಷಣೆಗಾಗಿ ತೆರಿಗೆ ಎತ್ತಬಹುದು.

X ೧೨೦. ಸುಭಿಕ್ಷ ಕಾಲದಲ್ಲಿ ಬೆಳೆಯ ಹನ್ನೆರಡನೇ ಒಂದು ಭಾಗ ಕರವನ್ನು ವೈಶ್ಯರಿಗೆ ವಿಧಿಸಬೇಕು. ಆಪತ್ಕಾಲದಲ್ಲಿ ಎಂಟನೇ ಒಂದು ಭಾಗವನ್ನೂ, ಅವರ ವೈಯಕ್ತಿಕ ಲಾಭದ ಐವತ್ತನೇ ಒಂದು ಭಾಗವನ್ನು ಅಥವಾ ಮಧ್ಯಮ ತರದ ಆರನೇ ಒಂದು ಭಾಗವನ್ನು ಅಥವಾ ಸಾರ್ವಜನಿಕ ಸಂಕಷ್ಟ ಕಾಲದಲ್ಲಿ ನಾಲ್ಕನೇ ಒಂದು ಭಾಗವನ್ನು ಕೂಡ ವಿಧಿಸಬಹುದು. ಆದರೆ ಅವರ ಹಣದ ಆದಾಯದ ಮೇಲೆ ಇಪ್ಪತ್ತನೇ ಒಂದು ಭಾಗ ಮತ್ತು ಇತರೆ ಚರಾಸ್ತಿಗಳ ಮೇಲೆ ಅತ್ಯಂತ ಹೆಚ್ಚು ತೆರಿಗೆ ವಿಧಿಸಬೇಕು. ಸೇವಕರ ಮೇಲೆ, ಕರಕುಶಲ ಕೆಲಸಗಾರರ ಮೇಲೆ, ಇತರ ಕಸುಬುದಾರರ ಮೇಲೆ ಕರವನ್ನು ವಿಧಿಸದೆ ಅವರ ಶ್ರಮವನ್ನೇ ಕರವನ್ನಾಗಿ ಪಡೆಯತಕ್ಕದ್ದು.

XI ೧೮೭. ಸಪಿಂಡ ಪುರುಷ ಅಥವಾ ಸ್ತ್ರೀಗೆ ಅತ್ಯಂತ ಹತ್ತಿರನಾದ ಮೂರನೇ ಪೀಳಿಗೆಯ ವ್ಯಕ್ತಿಗೆ ಅವರ ಆಸ್ತಿ ಸೇರಬೇಕು. ಸಪಿಂಡರಿಲ್ಲದಿದ್ದರೆ ಮತ್ತು ಅವರ ಮಕ್ಕಳಿಲ್ಲದಿದ್ದರೆ ಅಥವಾ ದೂರದ ಸಂಬಂಧಿಗಳಿಲ್ಲದಿದ್ದರೆ ಅವನೇ ಉತ್ತರಾಧಿಕಾರಿ ಅಥವಾ ಮೃತನ ಧರ್ಮಗುರು ಅಥವಾ ಅವನ ಶಿಷ್ಯ ಅಥವಾ ಸಹಪಾಠಿಗೆ ಆಸ್ತಿ ಸೇರಬೇಕು.

೧೮೮. ಇವರಾರೂ ಇಲ್ಲದಿದ್ದರೆ ಮೂರು ವೇದಗಳಲ್ಲಿ ಪಾರಂಗತರಾದ, ದೇಹ ಮನಸ್ಸುಗಳಲ್ಲಿ ಪರಿಶುದ್ಧರಾದ, ಇಂದ್ರಿಯಗಳನ್ನು ಜಯಿಸಿದವರಾದ ಬ್ರಾಹ್ಮಣರು ಅವನ ಆಸ್ತಿಗೆ ನ್ಯಾಯಬದ್ಧ ಉತ್ತರಾಧಿಕಾರಿಗಳು. ಅವರು ತದನಂತರ ನೈವೇದ್ಯ ಸಲ್ಲಿಸಬೇಕು. ಹೀಗೆ ಮೃತರ ಉತ್ತರಕ್ರಿಯೆಗಳು ನಿಲ್ಲದೆ ಮುಂದುವರೆಯಬೇಕು.

೧೮೯. ಬ್ರಾಹ್ಮಣನ ಆಸ್ತಿಯನ್ನು ರಾಜ ಎಂದೂ ಮುಟ್ಟುಗೋಲು ಹಾಕಿಕೊಳ್ಳುವ ಆಸ್ತಿಯೆಂದು ಪರಿಗಣಿಸಬಾರದು. ಇದು ಅಚಲವಾದ ಧರ್ಮ. ಆದರೆ ಇತರ ವರ್ಣಗಳವರ ಆಸ್ತಿಪಾಸ್ತಿಯನ್ನು ಅವರ ಉತ್ತರಾಧಿಕಾರಿಗಳು ಇಲ್ಲದಿದ್ದರೆ ರಾಜ ವಶಪಡಿಸಿ ಕೊಳ್ಳಬಹುದು.

ವಿವಿಧ ಸಾಮಾಜಿಕ ಸ್ತರಗಳಿಗೆ ಸಂಬಂಧಿಸಿದ ಜನರು ತಮ್ಮ ಜೀವನ ವಿಧಾನವನ್ನು ಮುಂದುವರಿಸಿಕೊಂಡು ಹೋಗಬೇಕು ಎಂಬುದರ ಬಗ್ಗೆ ಮನು ಕಟ್ಟಳೆಗಳನ್ನು ವಿಧಿಸುತ್ತಾನೆ. ಅವು ಹಿಂದೂ ಗೃಹಸ್ಥ ಜೀವನದ ತುಂಬ ಪ್ರಧಾನವಾದ ನೀತಿ ನಿಯಮದ ಭಾಗಗಳಾಗಿವೆ.

ಮನು ವಿಧಿಸುತ್ತಾನೆ:

X ೩. ಹುಟ್ಟಿನ ಆದ್ಯತೆಯಿಂದಾಗಿ ವರ್ಣದ ಶ್ರೇಷ್ಠತೆಯಿಂದಾಗಿ ಧರ್ಮಶಾಸ್ತ್ರಗಳ ನಿಖರವಾದ ಜ್ಞಾನದಿಂದಾಗಿ ಜನಿವಾರ ಧಾರಣೆಯ ವಿಶಿಷ್ಟತೆಯಿಂದಾಗಿ ಎಲ್ಲ ವರ್ಣಗಳಿಗೂ ಬ್ರಾಹ್ಮಣ ಪ್ರಭುವಾಗಿದ್ದಾನೆ.

IX ೩೧೭. ಬ್ರಾಹ್ಮಣ ವಿದ್ಯಾವಂತನಾಗಿರಲಿ ಅವಿದ್ಯಾವಂತನಾಗಿರಲಿ ಅವನು ಪ್ರಬಲ ದೇವರು. ಅಗ್ನಿ ಜೋಪಡಿಯಲ್ಲಿರಲಿ ಅಥವಾ ಯಜ್ಞಕುಂಡದಲ್ಲಿರಲಿ ಅದು ಪ್ರಬಲವಾದ ದೇವತೆಯಾಗಿರುವಂತೆ ಬ್ರಾಹ್ಮಣ ಪಂಡಿತನಾಗಿರಲಿ ಅಥವಾ ಪಾಮರನಾಗಿರಲಿ ಅವನು ದೊಡ್ಡ ದೇವರು.

IX ೩೧೯. ಹೀಗೆ ಬ್ರಾಹ್ಮಣರು ನಾನಾ ವಿಧವಾದ ಕೀಳು ಕಸುಬುಗಳಲ್ಲಿ ನಿರತರಾಗಿದ್ದರೂ, ಅವರು ಪೂಜಾರ್ಹರು ಏಕೆಂದರೆ ಅವರು ದೈವಾತೀತರು.

VII ೩೫. ನಾನಾ ವರ್ಣಗಳ, ಆಶ್ರಮಗಳ ಜನರು ತಮ್ಮ ತಮ್ಮ ಕರ್ತವ್ಯಗಳನ್ನು ಈಡೇರಿಸುವಂತೆ ನೋಡಿಕೊಳ್ಳುವುದಕ್ಕಾಗಿ ಅವರನ್ನು ರಕ್ಷಿಸುವುದಕ್ಕಾಗಿ ರಾಜನು ಸೃಷ್ಟಿಯಾಗಿದ್ದಾನೆ.

VII ೩೬. ತನ್ನ ಒಳ್ಳೆಯ ಮಂತ್ರಿಗಳ ಸಹಾಯದಿಂದ ತನ್ನ ಪ್ರಜೆಗಳನ್ನು ರಕ್ಷಿಸಲು ರಾಜನಾದವನು ಮಾಡಬೇಕಾದ ಕರ್ತವ್ಯವನ್ನು ಧರ್ಮ ನಿರ್ದೇಶಿಸುವಂತೆ ನಾನು ಘೋಷಿಸುತ್ತೇನೆ.

VI ೩೭. ರಾಜನು ಪ್ರಾತಃಕಾಲದಲ್ಲಿ ಎದ್ದು ಮೂರು ವೇದಗಳನ್ನೂ ಬಲ್ಲ, ನೀತಿಶಾಸ್ತ್ರ ವಿಶಾರದರಾದ ಬ್ರಾಹ್ಮಣರ ಸೇವೆಯನ್ನು ಗೌರವಪೂರ್ವಕವಾಗಿ ಮಾಡಿ ಅವರ ಆದೇಶದಂತೆ ಅವನು ನಡೆದುಕೊಳ್ಳತಕ್ಕದ್ದು.

VII ೩೮. ವೃದ್ಧರೂ, ವೇದಕೋವಿದರೂ, ಶುಚಿವಂತರೂ ಆದ ಬ್ರಾಹ್ಮಣರಿಗೆ ಸದಾ ಅವನು ಗೌರವವನ್ನು ತೋರಿಸಬೇಕು. ಏಕೆಂದರೆ ಯಾರು ವೃದ್ಧರನ್ನು ಗೌರವಿಸುತ್ತಾರೋ ಅವನನ್ನು ಕ್ರೂರ ರಾಕ್ಷಸರೂ ಕೂಡ ಸದಾ ಗೌರವಿಸುತ್ತಾರೆ.

IX ೧೩. ಅತ್ಯಂತ ಕಷ್ಟ ಕಾಲದಲ್ಲಿಯೂ ಬ್ರಾಹ್ಮಣರ ಸಂಪತ್ತನ್ನು ವಶಪಡಿಸಿಕೊಂಡು ಅವರನ್ನು ಕ್ರೋಧೋನ್ಮತ್ತರನ್ನಾಗುವಂತೆ ರಾಜನು ಮಾಡದಿರಲಿ. ಏಕೆಂದರೆ ಅವರು ಒಮ್ಮೆ ಸಿಟ್ಟುಗೊಂಡರೆ ತಮ್ಮ ಯಜ್ಞಯಾಗಾದಿಗಳಿಂದ, ಶಾಪಗಳಿಂದ ರಾಜನ ಸೈನ್ಯಗಳನ್ನು, ಆನೆಗಳನ್ನು, ಕುದುರೆಗಳನ್ನು ಮತ್ತು ರಥಗಳನ್ನು ನಾಶಪಡಿಸುತ್ತಾರೆ.

ರಾಜಕೀಯ ಕ್ಷೇತ್ರದಲ್ಲಿ ಇದ್ದಂತಹ ಸಂಬಂಧ ಈ ಬಗೆಯದು. ಏಕೆಂದರೆ ವಿವಿಧ ವರ್ಣಗಳ ನಡುವೆ ಸಾಧಾರಣ ಸಾಮಾಜಿಕ ವ್ಯವಹಾರ ಹೇಗಿರಬೇಕು ಎಂಬುದರ ಬಗ್ಗೆ ಮನು ನಿಯಮಗಳನ್ನು ಕೆಳಕಂಡಂತೆ ವಿಧಿಸಿದ್ದಾನೆ:

III ೬೮. ಗೃಹಸ್ಥನಿಗೆ ಐದು ವಧಾ ಸಾಧನಗಳಿವೆ ಅಥವಾ ಅವನು ಸಣ್ಣ ಒಲೆ, ಗುಂಡುಕಲ್ಲು, ಪೊರಕೆ, ಒನಕೆ ಮತ್ತು ಒರಳು, ಜಲಪಾತ್ರೆ ಇವುಗಳನ್ನು ಉಪಯೋಗಿಸಿ ಸಣ್ಣ ಪ್ರಾಣಿಗಳನ್ನು ಕೊಲ್ಲಬಹುದು. ಆದರೂ ಇವುಗಳಿಂದ ಅವನಿಗೆ ಪಾಪ ಅಂಟುತ್ತದೆ.

III ೬೯. ಏಕೆಂದರೆ ಹಿಂದೆ ಹೇಳಿದ ಕ್ರಮದಲ್ಲಿ ತಿಳಿಯದೆ ಪಾಪ ಮಾಡಿದರೆ ಪಂಚ ಯಜ್ಞಗಳನ್ನು ಪ್ರತಿ ನಿತ್ಯ ಮಾಡಬೇಕೆಂದು ಮಹರ್ಷಿಗಳು ವಿಧಿಸಿದ್ದಾರೆ.

III ೭೦. ವೇದಾಧ್ಯಯನ ಮತ್ತು ಅಧ್ಯಾಪನ, ಪಿತೃತರ್ಪಣ, ದೇವತೆಗಳಿಗೆ ಯಜ್ಞದ ಮೂಲಕ ನೈವೇದ್ಯ, ಜೀವಸಂಕುಲಕ್ಕೆ ಅನ್ನಾಹಾರಗಳನ್ನು ನೀಡುವುದು, ಅತಿಥಿ ಸತ್ಕಾರ ಇವು ಪಾಪ ಪರಿಹಾರಕ್ಕಾಗಿ ಮಾಡಬೇಕಾದ ಪಂಚಯಜ್ಞಗಳು.

III ೭೧. ಅವನು ಸದಾ ಮನೆಯಲ್ಲಿದ್ದು ಈ ಪಂಚ ಮಹಾಯಜ್ಞಗಳನ್ನು ಮಾಡುವ ಸಾಮರ್ಥ್ಯವಿದ್ದರೆ ಈ ಐದು ವಧಾ ಸಾಧನಗಳಿಂದ ಅವನಿಗೆ ಯಾವ ಪಾಪವೂ ಅಂಟುವುದಿಲ್ಲ.

III ೮೪. ಎಲ್ಲಾ ದೇವತೆಗಳ ಹೋಮಕ್ಕಾಗಿ ಸಿದ್ಧವಾದ ಅನ್ನದಿಂದ ವಿಧಿ ಪೂರ್ವಕವಾಗಿ ಬ್ರಾಹ್ಮಣನು ಕೆಳಗೆ ಹೇಳುವ ದೇವತೆಗಳಿಗೆ ಎಡೆಯಿಡಬೇಕು.

ದೇವತೆಗಳಿಗೆ ಅರ್ಪಿಸಿದ ಮೇಲೆ ಮನು ಆದೇಶಿಸುತ್ತಾನೆ:

III ೯೨. ನಾಯಿಗಳ ಪಾಲು, ಪತಿತರ ಪಾಲು, ಶ್ವಪಚರ ಪಾಲು, ಪಾಪಿಗಳ ಪಾಲು, ಆನೆಕಾಲು ರೋಗ ಅಥವಾ ಕ್ಷಯರೋಗದಿಂದ ನರಳುವ ರೋಗಿಗಳ ಪಾಲು, ಹದ್ದು ಕಾಗೆಗಳ

ಪಾಲು ಮತ್ತು ಹಾವು ಹಲ್ಲಿಗಳ ಪಾಲು ಈ ಎಲ್ಲವನ್ನೂ ನೆಲದ ಮೇಲೆ ಸ್ವಲ್ಪ ಸ್ವಲ್ಪ ಇಡಬೇಕು.

ಅತಿಥಿ ಸತ್ಕಾರದ ನಿಯಮಗಳಿಗೆ ಸಂಬಂಧಿಸಿದಂತೆ ಗೃಹಸ್ಥನಿಗೆ ಮನು ಈ ರೀತಿ ಆದೇಶಿಸುತ್ತಾನೆ:

III ೧೦೨. ಬ್ರಾಹ್ಮಣನು ಒಂದು ರಾತ್ರಿ ಬೇರೆಯವರ ಮನೆಯಲ್ಲಿ ಅತಿಥಿಯಾಗಿದ್ದರೆ ಅವನನ್ನು ಅತಿಥಿಯೆಂದು ಕರೆಯುವರು. ಏಕೆಂದರೆ ಬಹಳ ಸ್ವಲ್ಪ ಕಾಲ ಅವನು ಇರುವುದರಿಂದ ಅವನು ಅತಿಥಿ.

III ೯೮. ಸತ್ಪಾತ್ರದಾನದಿಂದ ರೋಗ ರುಜಿನ, ಶತ್ರುರಾಜ, ಪಾಪ ಮತ್ತು ಪೀಡೆಗಳು ದಾನಿಯನ್ನು ಬಾಧಿಸುವುದಿಲ್ಲ.

III ೧೦೮. ಉತ್ತಮರಿಗೆ ಉತ್ತಮ ಸ್ಥಾನ, ಅಧಮರಿಗೆ ಅಧಮ ಸ್ಥಾನ, ಸಮಾನರಿಗೆ ಸಮಾನ ಸ್ಥಾನಗಳನ್ನು, ಆಮೇಲೆ ವಿಶ್ರಾಂತಿ ಸ್ಥಳಗಳನ್ನು, ಶಯ್ಯೆಗಳನ್ನು ಕೊಡತಕ್ಕದ್ದು. ಅವರು ಹೋಗುವಾಗ ಅವರ ಯೋಗ್ಯತಾನುಸಾರ ಅವರಿಗೆ ತಕ್ಕ ಗೌರವವನ್ನು ಸಲ್ಲಿಸತಕ್ಕದ್ದು. ಅವರು ತಂಗಿರುವಾಗ ಮರ್ಯಾದೆಯಿಂದ ನೋಡಿಕೊಳ್ಳತಕ್ಕದ್ದು.

III ೧೧೦. ಬ್ರಾಹ್ಮಣನ ಮನೆಯಲ್ಲಿ ಕ್ಷತ್ರಿಯನಾಗಲೀ, ವೈಶ್ಯನಾಗಲೀ, ಶೂದ್ರನಾಗಲೀ ಅತಿಥಿಗಳಲ್ಲ ಅಥವಾ ಅವನ ಮಿತ್ರನಾಗಲೀ, ಅವನ ಪಿತೃನಾಗಲೀ, ಅವನ ಪಿತೃ ಸಂಬಂಧಿಕನಾಗಲೀ ಅಥವಾ ಅವನ ಗುರುವಾಗಲೀ ಅತಿಥಿಗಳಲ್ಲ.

III ೧೧೧. ಆದರೆ ಅತಿಥಿಯ ರೂಪದಲ್ಲಿ ಕ್ಷತ್ರಿಯನು ಬ್ರಾಹ್ಮಣನು ಮನೆಗೆ ಬಂದರೆ ಅವನ ಇಚ್ಛಾನುಸಾರ ಬ್ರಾಹ್ಮಣರು ಊಟ ಮಾಡಿದ ಮೇಲೆ ಆಹಾರವನ್ನು ತಯಾರಿಸತಕ್ಕದ್ದು.

III ೧೧೨. ವೈಶ್ಯನಾಗಲೀ ಅಥವಾ ಶೂದ್ರನಾಗಲೀ ಅವನ ಮನೆಗೆ ಅತಿಥಿಗಳ ರೀತಿಯಲ್ಲಿ ಬಂದರೆ ಅವರಿಗೆ ಔದಾರ್ಯವನ್ನು ತೋರಿಸಿ ತನ್ನ ಮನೆಯ ಆಳುಕಾಳುಗಳ ಹಾಗೆ ಅನ್ನ ಹಾಕತಕ್ಕದ್ದು.

ಒಂದು ವರ್ಣಕ್ಕೂ ಇನ್ನೊಂದು ವರ್ಣಕ್ಕೂ ಸಾಮಾಜಿಕವಾಗಿ ಇರಬೇಕಾದ ಸಾಮಾಜಿಕ ಸಂಬಂಧದ ಬಗ್ಗೆ ಮನು ಕೆಲವು ಸ್ವಾರಸ್ಯಕರ ಆದೇಶಗಳನ್ನು ಹೇರಿದ್ದಾನೆ. ಸಾಮಾಜಿಕ ಅಂತಸ್ತನ್ನು ಕುರಿತು ಅವನ ಸಮೀಕರಣ ಹೀಗಿದೆ:

II ೧೩೫. ಬ್ರಾಹ್ಮಣನು ಹತ್ತು ವಯಸ್ಸಿನವನಾದರು ನೂರು ವರ್ಷ ವಯಸ್ಸಿನ ಮಹಾರಾಜನಿಗೆ ಪಿತೃ ಸಮಾನನಾಗಿದ್ದಾನೆ. ಅವರಿಬ್ಬರಲ್ಲಿ ಬ್ರಾಹ್ಮಣನೇ ತಂದೆ.

II ೧೩೬. ಸಂಪತ್ತು, ನೆಂಟಸ್ತಿಕೆ, ವಯಸ್ಸು, ನೀತಿ ನಡವಳಿಕೆ, ಅಧ್ಯಾತ್ಮ ವಿದ್ಯೆ ಇವು ಗೌರವಕ್ಕೆ ಅರ್ಹವಾದವು. ಆದರೆ ಇವುಗಳಲ್ಲಿ ಕೊನೆಯದಾಗಿ ಹೇಳಿದದ ಅಧ್ಯಾತ್ಮ ವಿದ್ಯೆಯೇ ಅತ್ಯಂತ ಪೂಜಾರ್ಹವಾದುದು.

II ೧೩೭. ಮೇಲಿನ ಮೂರು ವರ್ಣಗಳಲ್ಲಿ ಯಾವ ವ್ಯಕ್ತಿಯೇ ಆಗಲಿ ಈ ಐದು ಅಂಶಗಳನ್ನು ಹೊಂದಿದ್ದರೆ ಅವನು ಅತ್ಯಂತ ಗೌರವಾನ್ವಿತ ವ್ಯಕ್ತಿ. ಶೂದ್ರನಾದರೆ ತೊಂಬತ್ತು ವರ್ಷ ವಯಸ್ಸಾಗಿದ್ದರೆ ಮಾತ್ರ ಮಾನ್ಯನು.

II ೧೩೮. ವಾಹನಾರೂಢ ವ್ಯಕ್ತಿಗೆ, ತೊಂಬತ್ತು ವರ್ಷಕ್ಕೂ ಮೇಲ್ಪಟ್ಟ ಮುದುಕನಿಗೆ, ರೋಗದಿಂದ ನರಳುವವನಿಗೆ, ಭಾರ ಹೊರುವವನಿಗೆ, ಹೆಂಗಸಿಗೆ, ತನ್ನ ಗುರುವಿನ ಮನೆಯಿಂದ

ಆಗ ತಾನೇ ವಾಪಸ್ಸು ಬರುತ್ತಿರುವ ಪುರೋಹಿತನಿಗೆ, ರಾಜಕುಮಾರನಿಗೆ ಮತ್ತು ವರನಿಗೆ ದಾರಿಯನ್ನು ಬಿಡಬೇಕು.

ಸಾಮಾಜಿಕ ಸಂಬಂಧದ ನಿಯಮಗಳನ್ನು ಹೇಳುವಾಗ ನಮಸ್ಕಾರ ಮಾಡುವ ಬಗ್ಗೆ:

II ೧೨೧. ವೃದ್ಧರಿಗೆ ನಿತ್ಯ ಅಭಿವಾದನೆ ಮಾಡುವ ಯುವಕನಿಗೆ ಈ ನಾಲ್ಕು ವಸ್ತುಗಳು ಆಯಸ್ಸು, ಜ್ಞಾನ, ಕೀರ್ತಿ, ಬಲ ವರ್ಧಿಸುತ್ತವೆ.

II ೧೨೨. ಬ್ರಾಹ್ಮಣನಾದವನು ಅಭಿವಾದನೆ ಮಾಡಿದ ಮೇಲೆ "ನಾನು ಇಂಥವನು" ಎಂದು ಹೇಳಿಕೊಳ್ಳಬೇಕು.

II ೧೨೩. ಸಂಸ್ಕೃತ ಭಾಷೆಯ ಅಜ್ಞಾನದಿಂದಾಗಿ ಯಾವ ವ್ಯಕ್ತಿಯೇ ಆಗಲಿ ತನ್ನ ಹೆಸರಿನ ಪ್ರಾಮುಖ್ಯತೆಯನ್ನು ಅರಿತುಕೊಳ್ಳದಿದ್ದರೆ ವಿದ್ವಾಂಸನಾದವನು "ಅಹಂ" ಎಂದು ಅವನಿಗೆ ತಿಳಿಸಿಕೊಡಬೇಕು. ಅದೇ ರೀತಿಯಲ್ಲಿ ಎಲ್ಲಾ ವರ್ಗದ ಸ್ತ್ರೀಯರನ್ನೂ ಸಹ ಅವನು ಸಂಬೋಧಿಸಬೇಕು.

II ೧೨೪. ಅಭಿವಾದ ವಾಕ್ಯದಲ್ಲಿ ಕೊನೆಗೆ 'ಭೋಃ" ಶಬ್ದವು ನಿಲ್ಲಬೇಕು. "ಭೋ:" ಶಬ್ದವು ಮುಖ್ಯಾರ್ಥವುಳ್ಳದ್ದು.

II ೧೨೫. ಬ್ರಾಹ್ಮಣನು ಪ್ರತಿಯಾಗಿ ಹೀಗೆ ನಮಸ್ಕರಿಸಬೇಕು; "ಆಯುಷ್ಮಾನ್ ಭವ, ಸೌಮ್ಯ". ತನ್ನ ಹೆಸರಿನ ಕೊನೆಯಲ್ಲಿ ಸ್ವರ ಮತ್ತು ವ್ಯಂಜನಾಕ್ಷರಗಳನ್ನು ದೀರ್ಘವಾಗಿ ಹೇಳಬೇಕು.

II ೧೨೬. ಅಭಿವಾದನೆಯನ್ನು ಹೇಳಲು ಬಾರದ ಬ್ರಾಹ್ಮಣನಿಗೆ ವಿದ್ವಾಂಸನಾದವನು ನಮಸ್ಕರಿಸಬಾರದು. ಅವನು ಶೂದ್ರನಿಗೆ ಸಮಾನನಾದವನು.

II ೧೨೭. ಕ್ಷತ್ರಿಯನಿಗೆ ಭಕ್ತಿಯಿದ್ದರೆ ಅವನು ವರ್ಧಿಸುತ್ತಾನೆಯೇ, ವೈಶ್ಯನಿಗೆ ಸಂಪತ್ತಿದ್ದರೆ ಅವನು ಸುರಕ್ಷಿತವಾಗಿರುತ್ತಾನೆಯೇ, ಶೂದ್ರ ವರ್ಗಗಳಲ್ಲಿ ಒಬ್ಬನಾದರೆ ಅವನು ಆರೋಗ್ಯದಿಂದಿರುತ್ತಾನೆಯೇ ಎಂದು ಕ್ರಮವಾಗಿ ಕುಶಲ, ಅನಾಮಯ, ಕ್ಷೇಮ ಮತ್ತು ಆರೋಗ್ಯ ಈ ಶಬ್ದಗಳನ್ನು ಉಪಯೋಗಿಸಿ ವಿದ್ವಾಂಸನಾದವನು ಪುರೋಹಿತನನ್ನು ಭೇಟಿಯಾದಾಗ ಕೇಳತಕ್ಕದ್ದು.

ಧರ್ಮ, ಧಾರ್ಮಿಕ ಸಂಸ್ಕಾರಗಳು ಮತ್ತು ಯಜ್ಞಗಳಿಗೆ ಸಂಬಂಧಿಸಿದಂತೆ ಮನು ವಿಧಿಸಿರುವ ಕಟ್ಟಳೆಗಳು ಗಮನೀಯವಾಗಿವೆ.

ಸಂಸ್ಕಾರಗಳು ಮತ್ತು ಯಜ್ಞಯಾಗಾದಿಗಳನ್ನು ಕುರಿತು ಮನುವಿನ ಕಟ್ಟಳೆಗಳು ಈ ರೀತಿ ಇವೆ:

III ೬೮. ಗೃಹಸ್ಥನಿಗೆ ಐದು ವಧಾ ಸಾಧನಗಳಿವೆ ಅಥವಾ ಅವನು ಸಣ್ಣ ಒಲೆ, ಗುಂಡುಕಲ್ಲು, ಪೊರಕೆ, ಒನಕೆ ಮತ್ತು ಒರಳು, ಜಲ ಪಾತ್ರೆ ಇವುಗಳನ್ನು ಉಪಯೋಗಿಸಿ ಸಣ್ಣ ಪ್ರಾಣಿಗಳನ್ನು ಕೊಲ್ಲಬಹುದು. ಆದರೂ ಅವನಿಗೆ ಇದರಿಂದ ಪಾಪ ಅಂಟುತ್ತದೆ.

III ೬೯. ಅಜ್ಞಾನದಿಂದ ಮಾಡುವ ಹಿಂದೆ ಹೇಳಿದ ಐದು ಹಿಂಸಾಪರಾಧಗಳನ್ನು ಪರಿಹರಿಸುವುದಕ್ಕಾಗಿ ಗೃಹಸ್ಥರಿಗೆ ಪಂಚ ಯಜ್ಞಗಳನ್ನು ಜ್ಞಾನಿಗಳು ವಿಧಿಸಿದ್ದಾರೆ.

III ೭೦. ವೇದಾಧ್ಯಯನ ಮತ್ತು ಅಧ್ಯಾಪನ, ಪಿತೃತರ್ಪಣ, ವೈಶ್ವದೇವ, ಭೂತ ಬಲಿ ಮತ್ತು ಅತಿಥಿ ಸತ್ಕಾರಗಳು ಇವೇ ಹಿಂಸಾ ಪ್ರಾಯಶ್ಚಿತ್ತಗಳು.

III ೭೧. ಈ ಐದು ಯಜ್ಞಗಳನ್ನು ಕೈಬಿಡದೆ ತನ್ನ ಶಕ್ತ್ಯಾನುಸಾರ ಮಾಡುತ್ತಿದ್ದರೆ ಗೃಹವಾಸ ಮಾಡಿದ ಮತ್ತು ಸೂನಾದೋಷದ ಸಂಬಂಧವಿರುವುದಿಲ್ಲ.

ಇದಾದ ಮೇಲೆ ಈ ಅನುಕೂಲಗಳು ಎಲ್ಲರಿಗೂ ಇಲ್ಲ ಮತ್ತು ಎಲ್ಲರೂ ಈ ಆಚರಣೆಗಳನ್ನು ಮಾಡಲು ಹಕ್ಕಿಲ್ಲವೆಂದು ಮನು ಹೇಳುತ್ತಾನೆ.

ಆಚರಣೆಗಳು ಮತ್ತು ಯಜ್ಞ ಯಾಗಗಳ ವಿಷಯಗಳಲ್ಲಿ ಸ್ತ್ರೀಯರು ಮತ್ತು ಶೂದ್ರರ ಸ್ಥಾನವನ್ನು ಮನು ವ್ಯಾಖ್ಯಾನಿಸುತ್ತಾನೆ. ಸ್ತ್ರೀಯರನ್ನು ಕುರಿತು ಮನು ಹೀಗೆ ಹೇಳುತ್ತಾನೆ:

II ೬೬. ಯಜ್ಞೋಪವೀತವನ್ನು ಬಿಟ್ಟು ಉಳಿದ ಎಲ್ಲ ಆಚರಣೆಗಳನ್ನು ಬಾಲಕನಿಗೆ ಮಾಡುವ ವಯಸ್ಸಿನಲ್ಲಿ ಮತ್ತು ಈ ರೀತಿಯಲ್ಲಿ ಬಾಲಕಿಗೂ ಮಾಡಬೇಕು. ಅದರಿಂದ ದೇಹ ಪರಿಶುದ್ಧವಾಗುತ್ತದೆ. ಆದರೆ ವೇದದ ಯಾವ ಭಾಗವನ್ನೂ ಅವಳಿಗೆ ಬೋಧಿಸ ಬಾರದು.

ಶೂದ್ರರನ್ನು ಕುರಿತು ಮನು ಹೇಳುತ್ತಾನೆ:

X ೧೨೭. ಶೂದ್ರರೂ ಕೂಡ ಧರ್ಮಾಚರಣೆಯನ್ನು ಮಾಡಲು ಉತ್ಸುಕರಾಗಿದ್ದರೆ ಧರ್ಮಜ್ಞರನ್ನು ನೇಮಿಸಿಕೊಂಡು ಗೃಹಸಂಸ್ಕಾರಗಳನ್ನು ನೆರವೇರಿಸಬಹುದು. ಆದರೆ ವೇದವನ್ನು ಬಳಸಬಾರದು. ಕೀರ್ತನೆ ಮತ್ತು ಪೂಜನೆಗಳನ್ನು ಮಾತ್ರ ಹೇಳಬಹುದು. ಹೀಗೆ ಮಾಡುವುದರಿಂದ ಅವನು ಪಾಪವನ್ನು ಎಸಗದೆ ಪ್ರಶಂಸೆಯನ್ನು ಗಳಿಸುತ್ತಾರೆ. ಯಜ್ಞೋಪವೀತ ಧಾರಣೆ ಬಹಳ ಮುಖ್ಯವಾದ ಸಂಸ್ಕಾರ.

II ೩೬. ಬ್ರಾಹ್ಮಣನಿಗೆ ಎಂಟನೇ ವರ್ಷದಲ್ಲಿ, ಕ್ಷತ್ರಿಯನಿಗೆ ಹನ್ನೊಂದನೇ ವರ್ಷದಲ್ಲಿ, ವೈಶ್ಯನಿಗೆ ಹನ್ನೆರಡನೇ ವರ್ಷದಲ್ಲಿ ಕ್ರಮವಾಗಿ ತಂದೆಯಾದವನು ತನ್ನ ಜಾತಿಯ ಗುರುತಾದ ಉಪನಯನವನ್ನು ಮಾಡಬೇಕು.

II ೩೭. ಬ್ರಹ್ಮ ವರ್ಚಸ್ಸು ಸಾರ್ಥಕ ವೇದಶಾಸ್ತ್ರಗಳ ಅಧ್ಯಯನದಿಂದ ಬುದ್ಧಿ ಪ್ರಕಾಶವನ್ನು ಅಪೇಕ್ಷಿಸುವವರು ಬ್ರಾಹ್ಮಣನಿಗೆ ಐದನೇ ವರ್ಷದಲ್ಲಿ, ಕ್ಷತ್ರಿಯನಿಗೆ ಆರನೇ ವರ್ಷದಲ್ಲಿ, ವೈಶ್ಯನಿಗೆ ಎಂಟನೇ ವರ್ಷದಲ್ಲಿ ಉಪನಯನ ಮಾಡಬಹುದು.

II ೩೮. ಗಾಯತ್ರಿ ಮಂತ್ರೋಪದೇಶವನ್ನು ಬ್ರಾಹ್ಮಣನಿಗೆ ಹದಿನಾರನೇ ವರ್ಷಕ್ಕೆ ಮುನ್ನ ಮಾಡಬೇಕು. ಕ್ಷತ್ರಿಯನ ವಿಷಯದಲ್ಲಿ ಇಪ್ಪತ್ತೆರಡನೇ ವರ್ಷದಲ್ಲಿ ವೈಶ್ಯನಿಗೆ ಇಪ್ಪತ್ನಾಲ್ಕನೇ ವರ್ಷದಲ್ಲಿ ಮಾಡಬೇಕು.

II ೩೯. ಈ ಮೂರು ವರ್ಷಗಳ ಯುವಕರು ಸಕಾಲದಲ್ಲಿ ಯಜ್ಞೋಪವೀತ ಧಾರಣೆ ಮಾಡದಿದ್ದರೆ ವ್ರಾತ್ಯಾ (ಜಾತಿಭ್ರಷ್ಟ)ರಾಗುತ್ತಾರೆ, ಗಾಯತ್ರೀ ಮಂತ್ರೋಪದೇಶವಿಲ್ಲದೆ ಮತ್ತು ಆರ್ಯರು ಅನುಮೋದಿಸದೆ ಇರುವುದರಿಂದ.

'ಗಾಯತ್ರಿ' ಬಗ್ಗೆ ಹೇಳುವುದಾದರೆ ಅದೊಂದು ಮಂತ್ರ. ಅದರ ಪ್ರಾಮುಖ್ಯತೆಯನ್ನು ಮನು ಹೀಗೆ ವಿವರಿಸುತ್ತಾನೆ:–

II ೭೬. ಬ್ರಹ್ಮನು ಮೂರು ವೇದಗಳಿಂದ ಅ+ಉ+ಮ್ ಕಾರಗಳನ್ನು ಸಂಪಾದಿಸಿದನು. ಹಾಗೆಯೇ ಭೂಃ+ಭುವಃ+ಸ್ವಃ ಗಳನ್ನೂ ಸಹ ಸಂಪಾದಿಸಿದನು. (ಭೂಮಿ, ಆಕಾಶ, ಸ್ವರ್ಗ)

II ೭೭. ಮೂರು ವೇದಗಳಿಂದ ಬ್ರಹ್ಮನು ಅಗೋಚರವಾದ ಮೂರು ಶಬ್ದಗಳನ್ನು ಹೊರದೆಗೆದು ಅದನ್ನು ಗಾಯತ್ರಿ ಮಂತ್ರದ ತದ್ ಶಬ್ದದ ಆದಿಯನ್ನಾಗಿ ಮಾಡಿದನು.

II ೭೮. ಬ್ರಾಹ್ಮಣನು ಪ್ರಣವ (ಓಂ)ವನ್ನು, ಮೂರು ವ್ಯಾಹೃತಿಯನ್ನು, ಸಾವಿತ್ರಿಯನ್ನು ಸಂಧ್ಯಾಕಾಲದಲ್ಲಿ ಜಪಿಸಬೇಕು. ಇದರಿಂದ ಮೂರು ವೇದಗಳನ್ನು ಅಧ್ಯಯನ ಮಾಡಿದ ಪುಣ್ಯವು ಲಭಿಸುತ್ತದೆ.

II ೭೯. ಈ ಮೂರನ್ನು (ಪ್ರಣವ, ವ್ಯಾಹೃತಿ, ಸಾವಿತ್ರಿ) ಬ್ರಾಹ್ಮಣನು ಊರ ಹೊರಗೆ ಸಾವಿರ ಸಲ ಜಪಿಸಬೇಕು. ಆಗ ನಾವು ಪೊರೆ ಬಿಟ್ಟಂತೆ ಪಾಪವು ಬಿಡುಗಡೆಯಾಗುತ್ತದೆ.

II ೮೦. ಈ ನಿಗೂಢವಾದ ಗಾಯತ್ರೀ ಮಂತ್ರವನ್ನು ಕಡೆಗಣಿಸುವ ಬ್ರಾಹ್ಮಣ, ಕ್ಷತ್ರಿಯ, ವೈಶ್ಯರು ತಮ್ಮ ಪುಣ್ಯ ಕಾರ್ಯಗಳಿಂದ ವಿಮುಖರಾಗುತ್ತಾರೆ. ಅಂಥವರನ್ನು ಸಾಧುಗಳು ತುಚ್ಛವಾಗಿ ಕಾಣುತ್ತಾರೆ.

II ೮೧. ಈ ಹಿಂದೆ ವಿವರಿಸಿದ ಗಾಯತ್ರಿ ಮಂತ್ರವು ಬ್ರಹ್ಮನ ಮುಖವಾಗಿದೆ. ಪರಮಾತ್ಮನನ್ನು ಹೊಂದುವ ದ್ವಾರವಾಗಿದೆ.

II ೮೨. ಮೂರು ವರ್ಷ ತಪ್ಪದೆ ಪ್ರತಿ ದಿನ ಯಾರು ಈ ಮಂತ್ರವನ್ನು ಜಪಿಸುತ್ತಾನೋ ಅವನು ಪರಬ್ರಹ್ಮನನ್ನು ಪಡೆಯುತ್ತಾನೆ. ಆಮೇಲೆ ಅವನು ವಾಯುವಿನಂತೆ ಸ್ವತಂತ್ರನಾಗುತ್ತಾನೆ. ಆಮೇಲೆ ಶರೀರ ಸಂಬಂಧವನ್ನು ಕಡಿದುಕೊಂಡ ಆತ್ಮನಾಗುತ್ತಾನೆ.

II ೮೩. ಮೂರು ಏಕಾಕ್ಷರಗಳುಳ್ಳ ಓಂಕಾರವು ಪರಬ್ರಹ್ಮದ ಸಂಕೇತವಾಗಿದೆ. ಪ್ರಾಣಾಯಾಮವು ಪರಮ ತಪಸ್ಸಾಗಿದೆ. ಗಾಯತ್ರಿ ಮಂತ್ರಕ್ಕಿಂತ ಶ್ರೇಷ್ಠವಾದುದು ಬೇರಾವುದೂ ಇಲ್ಲ. ಮೌನಕ್ಕಿಂತ ಸತ್ಯವಚನವು ಹೆಚ್ಚು ಶ್ರೇಷ್ಠವಾದುದು.

II ೮೪. ಯಜ್ಞಯಾಗಗಳು ನಶಿಸಿಹೋಗುತ್ತವೆ. ಆದರೆ ಓಂಕಾರ ಮಾತ್ರ ಕ್ಷಯಿಸುವುದಿಲ್ಲ. ಆದ್ದರಿಂದಲೇ ಅದನ್ನು ಅಕ್ಷರವೆಂದು ಕರೆಯುತ್ತಾರೆ. ಅದು ಪರಬ್ರಹ್ಮದ ಸಂಕೇತವಾಗಿದೆ.

II ೮೫. ಅವನ ಪವಿತ್ರ ನಾಮಸ್ಮರಣೆಯನ್ನು ಹತ್ತು ಸಲ ಮಾಡುವುದು ಯಜ್ಞಕ್ಕಿಂತ ಪವಿತ್ರವಾದುದು. ಯಾವ ಮನುಷ್ಯನಿಗೂ ಕೇಳದಂತೆ ನೂರು ಸಲ ಹೇಳುವುದು ಇನ್ನೂ ಉತ್ತಮ. ಅದನ್ನು ಮನಸ್ಸಿನಲ್ಲೇ ಸಾವಿರ ಸಲ ಹೇಳಿಕೊಂಡರೆ ಮತ್ತೂ ಉತ್ತಮ.

II ೮೬. ವೈಶ್ವದೇವ ಹೋಮ, ಬಲಿ ಕರ್ಮ, ನಿತ್ಯ ಶ್ರಾದ್ಧ, ಅತಿಥಿ ಭೋಜನ ಇವು ನಾಲ್ಕು ಪಾಕ ಯಜ್ಞಗಳು. ಇವುಗಳೆಲ್ಲಾ ಸೇರಿದರೂ ಗಾಯತ್ರಿ ಮಂತ್ರೋಚ್ಚಾರಣೆ ಮಾಡುವುದಕ್ಕೆ ಹದಿನಾರನೇ ಒಂದು ಭಾಗವೂ ಆಗುವುದಿಲ್ಲ.

ಈ ಯಜ್ಞೋಪವೀತ ಧಾರಣೆಯು ಹೊಸ ಹುಟ್ಟಿಗೆ ಸಮಾನವಾದುದು.

II ೧೪೭. ತಂದೆತಾಯಿಗಳ ಪರಸ್ಪರ ಭೋಗಕ್ಕಾಗಿ ತಾನು ಹುಟ್ಟಿದವನೆಂದು ಆ ಕಾರಣದಿಂದ ಗರ್ಭವಾಸಿಯಾಗಿದ್ದೆನೆಂದು ವ್ಯಕ್ತಿ ತಿಳಿಯಬೇಕು.

II ೧೪೮. ವೇದಜ್ಞಾನಿಯಾದ ಪರಮ ಗುರುವು ದಿವ್ಯ ಗಾಯತ್ರಿದೇವಿಯ ಮಂತ್ರದಿಂದ ವ್ಯಕ್ತಿಯನ್ನು ಪಡೆದದ್ದರಿಂದ ಅದೇ ಅವನ ನಿಜವಾದ ಜನನ. ಆ ಜನನವು ಮುಪ್ಪು ಮರಣದಿಂದ ವಿಮುಕ್ತವಾಗಿರುತ್ತದೆ.

II ೧೪೯. ತಾಯಿಯ ಹೊಟ್ಟೆಯಿಂದ ಬಂದದ್ದು ಮೊದಲನೆಯ ಜನನ. ಮೌಂಜಿ ಬಂಧನದಿಂದ ಬಂದದ್ದು ಎರಡನೆಯ ಹುಟ್ಟು. ಯಜ್ಞದೀಕ್ಷೆಯಿಂದ ಮೂರನೆಯ ಹುಟ್ಟು. ಇವು ಶೃತಿ ಪ್ರಕಾರ ದ್ವಿಜನ ಜನ್ಮಗಳು.

II ೧೭೦. ಬ್ರಾಹ್ಮಣನ ಉಪನಯನದ ಜನ್ಮದಲ್ಲಿ ಗಾಯತ್ರಿಯು ತಾಯಿ. ಆಚಾರ್ಯನು ತಂದೆ. ಈ ವಿಧಿಯನ್ನು ಶೂದ್ರರಿಗೂ ಸ್ತ್ರೀಯರಿಗೂ ಮನು ನಿಷೇಧಿಸಿದ್ದಾನೆ.

II ೧೦೩. ಯಾರು ಮುಂಜಾನೆಯಲ್ಲಿಯೂ ಸಂಜೆಯಲ್ಲಿಯೂ ಸಂಧ್ಯಾವಂದನೆ ಮಾಡುವುದಿಲ್ಲವೋ ಅವನನ್ನು ಬ್ರಾಹ್ಮಣ ಜಾತಿಯಲ್ಲಿ ಹುಟ್ಟಿದ್ದರೂ ಶೂದ್ರನೆಂದು ಪರಿಗಣಿಸಬೇಕು.

ವಿದ್ಯೆ ಮತ್ತು ಶಿಕ್ಷಣವನ್ನು ಕುರಿತಂತೆ ಮನು ನಿಯಮಗಳನ್ನು ಹೇಳುವುದನ್ನು ಮರೆತಿಲ್ಲ. ಜನಸಾಮಾನ್ಯರ ಶಿಕ್ಷಣದ ಸಂಬಂಧವಾಗಿ ಮನು ಏನೂ ಹೇಳುವುದಿಲ್ಲ. ಅವನು ಅದರ ಉಪಯೋಗವನ್ನು ಕಾಣುವುದಿಲ್ಲ. ರಾಜ ಅಥವಾ ರಾಜ್ಯದ ಮೇಲೆ ಈ ವಿಧವಾಗಿ ಮನು ಯಾವುದೇ ನಿರ್ಬಂಧವನ್ನು ಹೇರುವುದಿಲ್ಲ. ಅವನು ಕೇವಲ ವೇದಾಧ್ಯಯನ ಕುರಿತು ಮಾತ್ರ ಕಾಳಜಿ ವಹಿಸುತ್ತಾನೆ.

ವೇದಾಧ್ಯಯನವನ್ನು ಗುರುವಿನ ಅನುಮತಿಯಿಂದ ಮಾಡಬೇಕಾಗುತ್ತದೆ. ಯಾರೂ ವೇದವನ್ನು ತನ್ನಷ್ಟಕ್ಕೆ ತಾನೆ ಅಧ್ಯಯನ ಮಾಡಲಾರ. ಹಾಗೊಂದು ಪಕ್ಷ ಮಾಡಿದಲ್ಲಿ ಅವನು ಕಳ್ಳತನ ಮಾಡಿದ ಪಾಪಕ್ಕೆ ಗುರಿಯಾಗುತ್ತಾನೆ

II ೧೧೬. ಗುರುವಿನ ಅನುಮತಿ ಇಲ್ಲದೆ ವೇದಜ್ಞಾನ ಪಡೆದವನು ವೇದವನ್ನು ಕಳ್ಳತನ ಮಾಡಿದ ಪಾಪವನ್ನು ಗಳಿಸುತ್ತಾನೆ ಹಾಗೂ ನರಕಕ್ಕೆ ಬೀಳುತ್ತಾನೆ. ಆದರೆ ಇತರರು ವೇದಾಧ್ಯಯನ ಮಾಡುವಂತಿಲ್ಲ.

IX ೧೮. ಸ್ತ್ರೀಯರಿಗೆ ವೇದಾಧ್ಯಯನದ ಹಕ್ಕಿಲ್ಲ. ಹಾಗೆಂದು ಧರ್ಮ ತೀರ್ಮಾನಿಸಿದೆ. ಆದ್ದರಿಂದ ಧರ್ಮಜ್ಞಾನವಿಲ್ಲದೆ ವೇದಜ್ಞಾನವಿಲ್ಲದೆ ಪಾಪಿಗಳಾದ ಸ್ತ್ರೀಯರು ಅನೃತರಷ್ಟೇ ಕೆಟ್ಟವರಾಗಿರುತ್ತಾರೆ. ಇದು ಸ್ಥಿರವಾದ ಧರ್ಮ.

IV ೯೯. ವೇದವನ್ನು ಅಸ್ಪಷ್ಟವಾಗಿ ಓದಬಾರದು. ಶೂದ್ರರ ಇದಿರಿನಲ್ಲಿ ಓದಬಾರದು. ಕೊನೆಯ ಜಾವದಲ್ಲಿ ಓದಿ ದಣಿವಾಗಿ ನಿದ್ರಿಸಬಾರದು.

ಈ ನಿಷೇಧ ವ್ರಾತ್ಯರು ಅಥವಾ ಮೇಲಿನ ಮೂರು ವರ್ಣದಿಂದ ಉಚ್ಚಾಟಿತರಾದ ಜಾತಿ ಹೀನರಿಗೆ ಅನ್ವಯಿಸುತ್ತದೆ. ಏಕೆಂದರೆ ಮನು ಹೇಳುತ್ತಾನೆ:

II ४೦. ಅಂಥ ಶುದ್ಧರಲ್ಲದ ಜನರ ಜೊತೆ ಯಾವ ಬ್ರಾಹ್ಮಣನೇ ಆಗಲಿ ಕಷ್ಟಕಾಲದಲ್ಲಿ ಹೊಟ್ಟೆಪಾಡಿಗೂ ಸಂಬಂಧವನ್ನು ಇಟ್ಟುಕೊಳ್ಳಬಾರದು. ವೇದಾಧ್ಯಯನ ಅವರ ಜೊತೆ ಮಾಡಬಾರದು.

ಅಯೋಗ್ಯರಿಗೆ ವೇದಾಧ್ಯಯನ ಅಥವಾ ಯಜ್ಞೋಪಾಸನೆಗಳನ್ನು ಮನು ನಿಷೇಧಿಸುತ್ತಾನೆ:

IV ೨೦೫. ವೇದೋಚ್ಚಾರಣೆ ಮಾಡದೆ ಪ್ರಾರಂಭಿಸಿದ ಯಜ್ಞದಲ್ಲಾಗಲೀ ಶೂದ್ರ ಮಾಡಿದ ಯಜ್ಞದಲ್ಲಾಗಲೀ ಸ್ತ್ರೀ ಅಥವಾ ನಪುಂಸಕ ಮಾಡಿದ ಯಜ್ಞದಲ್ಲಾಗಲಿ ಬ್ರಾಹ್ಮಣನು ಊಟ ಮಾಡಬಾರದು.

IV ೨೦೬. ಇಂಥ ಜನರು ಹವಿಸ್ಸನ್ನು ಅರ್ಪಿಸಿದರೆ ಪುಣ್ಯವಂತರಿಗೆ ಅಶ್ರೇಯಸ್ಸು ಉಂಟಾಗುತ್ತದೆ. ಅದರಿಂದ ಇಷ್ಟದೇವತೆಗಳು ಜಿಗುಪ್ಸೆಗೊಳ್ಳುತ್ತಾರೆ. ಇಂಥ ನೈವೇದ್ಯಗಳನ್ನು ಅವನು ಎಚ್ಚರಿಕೆಯಿಂದ ತ್ಯಜಿಸಬೇಕು.

IX ೧೯೮. ಶೂದ್ರರಿಗಾಗಿ ಯಜ್ಞ ಮಾಡಿದವನು ಅಥವಾ ಅಪರಿಚಿತನ ಶವವನ್ನು ಸುಟ್ಟವನ್ನು ಅಥವಾ ಅಮಾಯಕನನ್ನು ನಾಶಪಡಿಸಲು ಯಜ್ಞ ಮಾಡಿದವನು ಅಥವಾ ಅಹಿಂಸಾ

ಎಂಬ ಅಶುಚಿಯಾದ ಯಜ್ಞ ಮಾಡಿದವನು ಈ ಪಾಪಗಳನ್ನು ಪರಿಹರಿಸಲು ಅವನು ಮೂರು ಪ್ರಜಾಪತ್ಯ ವ್ರತಗಳನ್ನು ಮಾಡಬೇಕು.

ಧರ್ಮದಲ್ಲಿ ಸಮಾನತೆಯನ್ನು ತೆಗೆದುಕೊಳ್ಳೋಣ. ಸಾಕ್ಷಿದಾರರು ಮನುವಿನ ಪ್ರಕಾರ ಈ ರೀತಿ ಪ್ರತಿಜ್ಞೆ ಮಾಡಬೇಕು:

VIII ೮೭. ನ್ಯಾಯಾಧಿಪತಿಯು ಬೆಳಗ್ಗೆ ಶುಚಿಯಾಗಿ ದೇವತಾಮೂರ್ತಿಗಳ ಬ್ರಾಹ್ಮಣರ ಸಮ್ಮುಖದಲ್ಲಿ ಸಾಕ್ಷಿದಾರರನ್ನು ಅವರು ಉತ್ತರಕ್ಕೋ ಅಥವಾ ಪೂರ್ವಕ್ಕೋ ಮುಖ ಮಾಡಿಕೊಂಡಿದ್ದಾಗ ಸಾಕ್ಷಿ ವಿಷಯದಲ್ಲಿ ಪ್ರಶ್ನಿಸಬೇಕು.

VIII ೮೮. ಸಾಕ್ಷಿದಾರನಾಗಿ ಬ್ರಾಹ್ಮಣನು ನಿಂತಿದ್ದರೆ ನ್ಯಾಯಾಧಿಪತಿಯು "ಹೇಳು" ಎಂದರೆ ಸಾಕು. ಕ್ಷತ್ರಿಯನನ್ನು "ಸತ್ಯಹೇಳು" ಎನ್ನಬೇಕು. ವೈಶ್ಯನಿಗೆ "ಚಿನ್ನ ಬೀಜ ಗೋವುಗಳ ಸಾಕ್ಷಿಯಾಗಿ ಸತ್ಯ ಹೇಳು" ಎಂದೂ, ಶೂದ್ರನಿಗೆ "ಪಾಪವಿದೆ, ಸತ್ಯ ಹೇಳು" ಎಂದೂ ಹೇಳಬೇಕು.

VIII ೧೧೩. ಬ್ರಾಹ್ಮಣನನ್ನು ಸತ್ಯದಾಣೆಯಾಗಿ, ಕ್ಷತ್ರಿಯನನ್ನು ಅವನ ಕುದುರೆ, ಅಥವಾ ಆನೆ ಮತ್ತು ಅವನ ಆಯುಧಗಳ ಆಣೆಯಾಗಿ, ವೈಶ್ಯನನ್ನು ಅವನ ಗೋವು, ಅಥವಾ ದವಸಧಾನ್ಯ ಮತ್ತು ಚಿನ್ನದ ಆಣೆಯಾಗಿ, ಶೂದ್ರನನ್ನು ಅವನ ತಲೆಯಾಣೆಯಾಗಿ, ಅವನು ಸುಳ್ಳು ಹೇಳಿದರೆ ಎಲ್ಲ ಪಾಪಗಳ ಆಣೆಯಾಗಿ ನ್ಯಾಯಾಧಿಪತಿ ಶಪಥ ಮಾಡಿಸಬೇಕು.

ಸುಳ್ಳು ಸಾಕ್ಷಿ ಹೇಳುವ ಸಾಕ್ಷಿದಾರರನ್ನು ಕುರಿತು ಮನು ವಿವರಿಸುತ್ತಾನೆ. ಮನುವಿನ ಪ್ರಕಾರ ಸುಳ್ಳು ಸಾಕ್ಷಿ ಹೇಳುವುದು ಅಪರಾಧ. ಮನು ಹೇಳುತ್ತಾನೆ:

VIII ೧೨೨. ಅನ್ಯಾಯವನ್ನು ತಪ್ಪಿಸಲು, ಅಧರ್ಮವನ್ನು ತಡೆಗಟ್ಟಲು ಜ್ಞಾನಿಗಳಾದ ಧರ್ಮಕಾರರು ಈ ದಂಡನೆಗಳನ್ನು ವಿಧಿಸಿದ್ದಾರೆ.

VIII ೧೨೩. ಕೆಳಗಿನ ಮೂರು ವರ್ಣದವರು ಸುಳ್ಳು ಸಾಕ್ಷಿ ಹೇಳಿದರೆ ಅವರಿಗೆ ದಂಡ ವಿಧಿಸಿ ಧರ್ಮವಂತ ರಾಜನು ಗಡಿಪಾರು ಮಾಡಬೇಕು. ಆದರೆ ಬ್ರಾಹ್ಮಣನನ್ನು ಮಾತ್ರ ಸುಮ್ಮನೆ ಗಡಿಪಾರು ಮಾಡಬೇಕು.

ಆದರೆ ಮನು ಒಂದು ಅಪವಾದವನ್ನು ಹೇಳುತ್ತಾನೆ:

VIII ೧೧೨. ಕಾಮಿನಿಯರಲ್ಲಿ, ವಿವಾಹದಲ್ಲಿ, ಗೋವುಗಳಲ್ಲಿ, ಆಹಾರದಲ್ಲಿ, ಸಮಿತ್ತುಗಳಲ್ಲಿ, ಬ್ರಾಹ್ಮಣ ರಕ್ಷಣೆಯಲ್ಲಿ ವೃಥಾ ಶಪಥ ಮಾಡಿದರೆ ಪಾಪವಿಲ್ಲ. ಕಲಾಪಗಳಲ್ಲಿ ಭಾಗಿಗಳಾದರೆ ಮನು ವಿವರಿಸಿರುವ ಪ್ರಧಾನ ಅಪರಾಧಗಳ ಸಂಬಂಧವಾಗಿ ಅವನು ನಿಗದಿಪಡಿಸಿರುವ ಆದೇಶಗಳನ್ನು ಉದ್ಧರಿಸುವುದರ ಮೂಲಕ ಅವರ ಸ್ಥಾನವನ್ನು ಸ್ಪಷ್ಟಪಡಿಸಬಹುದು.

ಮಾನನಷ್ಟ ಅಪರಾಧವನ್ನು ತೆಗೆದುಕೊಳ್ಳಿ. ಮನು ಹೇಳುತ್ತಾನೆ.

VIII ೨೬೭. ಕ್ಷತ್ರಿಯನು ದ್ವಿಜನನ್ನು ಅವಮಾನಗೊಳಿಸಿದರೆ ಅವನಿಗೆ ಮೂರು ಹಣ ದಂಡ ಹಾಕಬೇಕು. ವೈಶ್ಯ ಅವಮಾನಗೊಳಿಸಿದರೆ ನೂರೈವತ್ತು ಅಥವಾ ಇನ್ನೂರು ವಿಧಿಸಬೇಕು. ಆದರೆ ಅಂತಹ ಅಪರಾಧಕ್ಕಾಗಿ ವೈಶ್ಯ ಅಥವಾ ಶೂದ್ರನನ್ನು ಥಳಿಸಬೇಕು.

VIII ೨೬೮. ಬ್ರಾಹ್ಮಣ ಕ್ಷತ್ರಿಯನನ್ನು ಬೈದರೆ ಐವತ್ತು ಹಣ. ವೈಶ್ಯನನ್ನು ಬೈದರೆ ಇಪ್ಪತ್ತೈದು ಹಣ. ಶೂದ್ರನನ್ನು ಬೈದರೆ ಹನ್ನೆರಡು ಹಣ ದಂಡ ಹಾಕಬೇಕು.

ಅವಮಾನಮಾಡಿದ ಅಪರಾಧವನ್ನು ತೆಗೆದುಕೊಳ್ಳಿ. ಮನು ಹೇಳುತ್ತಾನೆ:

VIII ೨೭೦. ಬ್ರಾಹ್ಮಣನನ್ನು ಶೂದ್ರ ಬೈದರೆ ಅವನ ನಾಲಗೆಯನ್ನು ಸೀಳಬೇಕು. ಏಕೆಂದರೆ ಶೂದ್ರ ಬ್ರಹ್ಮನ ಅತ್ಯಂತ ಕೆಳಭಾಗದಿಂದ ಹುಟ್ಟಿದವನು.

VIII ೨೭೧. ಜಾತಿಯ ಹೆಸರು ಹಿಡಿದು ಬೈಯ್ಯುವವನಿಗೆ ಕಾಯಿಸಿದ ಕಬ್ಬಿಣದ ಸರಳನ್ನು ಹತ್ತು ಅಂಗುಲ ತುರುಕಬೇಕು.

VIII ೨೭೨. ಶೂದ್ರನು ದರ್ಪದಿಂದ ಬ್ರಾಹ್ಮಣನಿಗೆ ಧರ್ಮೋಪದೇಶ ಮಾಡಲು ಹೊರಟರೆ ಅವನ ಕಿವಿ ಮೋರೆಗಳಿಗೆ ಕುದಿಯುವ ಎಣ್ಣೆಯನ್ನು ರಾಜ ಹುಯ್ಯಿಸಬೇಕು.

ನಿಂದನೆಯ ಅಪರಾಧವನ್ನು ತೆಗೆದುಕೊಳ್ಳಿ. ಮನು ಹೇಳುತ್ತಾನೆ:

VIII ೨೭೬. ಬ್ರಾಹ್ಮಣ ಮತ್ತು ಕ್ಷತ್ರಿಯರು ಪರಸ್ಪರ ಬೈದಾಡಿದರೆ ಜ್ಞಾನಿಯಾದ ರಾಜನು ಈ ರೀತಿ ದಂಡ ವಿಧಿಸಬೇಕು. ಬ್ರಾಹ್ಮಣನಿಗೆ ಅತ್ಯಂತ ಕಡಿಮೆ ದಂಡ, ಕ್ಷತ್ರಿಯನಿಗೆ ಅದಕ್ಕಿಂತ ಅಧಿಕ ದಂಡವನ್ನು ಹಾಕಬೇಕು.

VIII ೨೭೭. ವರ್ಣಗಳಿಗೆ ಅನುಸಾರವಾಗಿ ನಾಲಗೆ ಕತ್ತರಿಸುವುದನ್ನು ಬಿಟ್ಟು ವೈಶ್ಯ ಮತ್ತು ಶೂದ್ರನಿಗೆ ಮೇಲೆ ಹೇಳಿದ ಶಿಕ್ಷೆಗಳನ್ನು ವಿಧಿಸಬೇಕು. ಇದು ದಂಡನಾ ನಿಯಮ.

ಹಲ್ಲೆ ಮಾಡಿದ ಅಪರಾಧವನ್ನು ತೆಗೆದುಕೊಳ್ಳಿ. ಮನು ಹೇಳುತ್ತಾನೆ:

VIII ೨೭೯. ಮೇಲಿನ ವರ್ಣದವನನ್ನು ಕೆಳ ವರ್ಣದವನು ಹೊಡೆದರೆ ಅಥವಾ ಅವನ ಯಾವ ಅಂಗವನ್ನು ಗಾಯಗೊಳಿಸುತ್ತಾನೋ ಕೆಳ ವರ್ಣದವನ ಆ ಅಂಗವನ್ನು ಕತ್ತರಿಸಿ ಹಾಕಬೇಕು ಅಥವಾ ಹೆಚ್ಚುಕಡಿಮೆ ನೋವಿಗೆ ಅನುಸಾರವಾಗಿ ಆ ಅಂಗವನ್ನು ಛೇದಿಸಬೇಕು. ಇದು ಮನುವಿನ ಆದೇಶ.

VIII ೨೮೦. ಯಾರು ಇನ್ನೊಬ್ಬನ ಮೇಲೆ ತನ್ನ ಕೈಯನ್ನೋ ಅಥವಾ ದಂಡವನ್ನೋ ಎತ್ತಿದರೆ ಅವನ ಕೈಯನ್ನು ಕತ್ತರಿಸಿ ಹಾಕಬೇಕು. ಕೋಪದಲ್ಲಿ ಇನ್ನೊಬ್ಬನನ್ನು ಒದ್ದರೆ ಅವನ ಕಾಲನ್ನು ಕತ್ತರಿಸಿ ಹಾಕಬೇಕು.

ಉದ್ಧಟತನದ ಅಪರಾಧವನ್ನು ತೆಗೆದುಕೊಳ್ಳಿ. ಮನುವಿನ ಪ್ರಕಾರ:

VIII ೨೮೧. ಮೇಲು ವರ್ಣದವನ ಜೊತೆ ಕೆಳ ವರ್ಣದವನು ಸರಿಸಮಾನವಾಗಿ ಗರ್ವದಿಂದ ಕುಳಿತರೆ ಅವನ ಪೃಷ್ಠದ ಮೇಲೆ ಬರೆಯೆಳೆದು ಅವನನ್ನು ಗಡಿಪಾರು ಮಾಡಬೇಕು. ಅಥವಾ ಅವನ ಪೃಷ್ಠದ ಮೇಲೆ ಆಳವಾದ ಗಾಯವನ್ನು ರಾಜನು ಮಾಡಿಸಬೇಕು.

VIII ೨೮೨. ಗರ್ವದಿಂದ ಅವನ ಮೇಲೆ ಉಗುಳಿದರೆ ಅವನ ಎರಡೂ ತುಟಿಗಳನ್ನು ತೂತು ಮಾಡುವಂತೆ ರಾಜನು ಆಜ್ಞೆ ಮಾಡಬೇಕು. ಅವನ ಮೇಲೆ ಮೂತ್ರ ಮಾಡಿದರೆ ಅವನ ಲಿಂಗವನ್ನು ಕತ್ತರಿಸಿ ಹಾಕಬೇಕು. ಅವನ ಮೇಲೆ ಹೂಸಿದರೆ ಅವನ ಮಲದ್ವಾರವನ್ನು ಹರಿದುಹಾಕಿಸಬೇಕು.

VIII ೨೮೩. ಅವನು ಬ್ರಾಹ್ಮಣನ ಜುಟ್ಟನ್ನು ಅಥವಾ ಕಾಲನ್ನು ಅಥವಾ ಗಡ್ಡವನ್ನು ಹಿಡಿದು ಎಳೆದರೆ ಅಥವಾ ಕುತ್ತಿಗೆ ಅಥವಾ ವೃಷಣವನ್ನು ಹಿಸುಕಿದರೆ ರಾಜನು ಯಾವ ಸಂಕೋಚವೂ ಇಲ್ಲದೆ ಅವನ ಕೈಗಳನ್ನು ಕತ್ತರಿಸಿ ಗಾಯಮಾಡಬೇಕು.

ವ್ಯಭಿಚಾರದ ಅಪರಾಧವನ್ನು ತೆಗೆದುಕೊಳ್ಳಿ. ಮನು ಹೇಳುತ್ತಾನೆ:

VIII ೩೫೯. ಶೂದ್ರನು ಬ್ರಾಹ್ಮಣನ ಹೆಂಡತಿಯ ಜೊತೆ ವ್ಯಭಿಚಾರ ಮಾಡಿದರೆ ಅವನನ್ನು ಕೊಂದುಹಾಕಬೇಕು. ನಾಲ್ಕು ವರ್ಣಕ್ಕೂ ಸೇರಿದ ಹೆಂಡತಿಯನ್ನು ವಿಶೇಷ ಎಚ್ಚರಿಕೆಯಿಂದ ರಕ್ಷಣೆ ಮಾಡಬೇಕು.

VIII ೩೬೬. ಕೆಳಜಾತಿಯವನು ಮೇಲುಜಾತಿಯ ಹುಡುಗಿಯನ್ನು ಪ್ರೀತಿಸಿದರೆ ಅವನಿಗೆ ದೇಹ ದಂಡನೆ ವಿಧಿಸಬೇಕು. ಒಂದೇ ವರ್ಣದ ಹೆಣ್ಣನ್ನು ಪ್ರೀತಿಸಿದರೆ ಆಕೆಯ ತಂದೆ ಒಪ್ಪಿದರೆ ಅವಳಿಗೆ ಮದುವೆಯ ತೆರ ಕೊಟ್ಟು ಮದುವೆಯಾಗಬಹುದು.

VIII ೩೭೪. ಮನೆಯಲ್ಲಿ ರಕ್ಷಣೆಯಿರುವ ಅಥವಾ ಇಲ್ಲದ ದ್ವಿಜ ವರ್ಣದ ಹೆಂಗಸಿನ ಜೊತೆ ಶೂದ್ರನು ವ್ಯಭಿಚಾರಿ ಸಂಬಂಧವನ್ನು ಇಟ್ಟುಕೊಂಡರೆ ಅವನನ್ನು ಮೇಲಿನ ರೀತಿ ದಂಡಿಸಬೇಕು. ಅವಳಿಗೆ ರಕ್ಷಣೆ ಇಲ್ಲದಿದ್ದರೆ ಅವನ ಅಪರಾಧ ಮಾಡಿದ ಅಂಗವನ್ನೇ ಬುಡ ಸಮೇತ ಕತ್ತರಿಸಿ ಹಾಕಬೇಕು. ಅವಳಿಗೆ ರಕ್ಷಣೆ ಇದ್ದು ಪೌರೋಹಿತ್ಯರಹಿತವಾಗಿದ್ದರೆ ಅವನ ಪ್ರಾಣವೂ ಸೇರಿದಂತೆ ಎಲ್ಲವನ್ನು ದಂಡಿಸಬೇಕು.

VIII ೩೭೫. ರಕ್ಷಣೆ ಇರುವ ಬ್ರಾಹ್ಮಣ ಸ್ತ್ರೀಯನ್ನು ವೈಶ್ಯ ಭೋಗಿಸಿದರೆ ಅವನ ಸಂಪತ್ತನ್ನೆಲ್ಲವನ್ನೂ ಕಿತ್ತುಕೊಂಡು ಒಂದು ವರ್ಷ ಜೈಲುವಾಸ ವಿಧಿಸಬೇಕು. ಕ್ಷತ್ರಿಯ ಮಾಡಿದರೆ ಅವನಿಗೆ ಒಂದು  ಸಾವಿರ ಪಣ ದಂಡ ವಿಧಿಸಬೇಕು ಮತ್ತು ಕ್ಷತ್ರಿಯನಿಗೆ ಒಂದು ಸಾವಿರ ಹಣವನ್ನು ರಾಜನಾದವನು ದಂಡ ವಿಧಿಸಬೇಕು.

VIII ೩೭೭. ರಕ್ಷಿತಳಷ್ಟೇ ಅಲ್ಲದೆ ಸದ್ಗುಣಿಯೂ ಆಗಿರುವ ಬ್ರಾಹ್ಮಣಿಯ ಜೊತೆ ಇವರಿಬ್ಬರು ವ್ಯಭಿಚಾರ ಮಾಡಿದರೆ ಅವರನ್ನು ಶೂದ್ರರಂತೆ ದಂಡಿಸಬೇಕು ಅಥವಾ ಒಣ ಹುಲ್ಲು ಅಥವಾ ಜೊಂಡಿನ ಬೆಂಕಿಯಲ್ಲಿ ಸುಟ್ಟುಹಾಕಬೇಕು.

VIII ೩೮೨. ರಕ್ಷಣೆ ಇಲ್ಲದ ಕ್ಷತ್ರಿಯ ಹೆಂಗಸಿನ ಜೊತೆ ವೈಶ್ಯನು ಅಥವಾ ವೈಶ್ಯ ಹೆಂಗಸಿನ ಜೊತೆ ಕ್ಷತ್ರಿಯನು ಗುಪ್ತ ಸಂಬಂಧ ಇಟ್ಟುಕೊಂಡರೆ ಅವರಿಗೆ ರಕ್ಷಣೆಯಿಲ್ಲದ ಬ್ರಾಹ್ಮಣ ಸ್ತ್ರೀಯನ್ನು ಭೋಗಿಸಿದವರಿಗೆ ಕೊಡುವ ಶಿಕ್ಷೆಯನ್ನೇ ವಿಧಿಸಬೇಕು.

VIII ೩೮೩. ಆದರೆ ಈ ಎರಡೂ ವರ್ಣಗಳ ಹೆಂಗಸಿನ ಜೊತೆ ಬ್ರಾಹ್ಮಣನು ವ್ಯಭಿಚಾರ ಮಾಡಿದರೆ ಅವನಿಗೆ ಒಂದು ಸಾವಿರ ಪಣ ದಂಡ ಹಾಕಬೇಕು. ರಕ್ಷಣೆ ಇರುವ ಶೂದ್ರ ಹೆಂಗಸಿನ ಜೊತೆ ಅಂತಹದೇ ಅಪರಾಧ ಮಾಡಿದರೂ ವೈಶ್ಯ ಅಥವಾ ಕ್ಷತ್ರಿಯನಿಗೆ ಹಾಕುವಂತೆ ಒಂದು ಸಾವಿರ ದಂಡ ಹಾಕಬೇಕು.

VIII ೩೮೪. ರಕ್ಷಣೆ ಇಲ್ಲದಿರುವ ಕ್ಷತ್ರಿಯ ಹೆಂಗಸಿನ ಜೊತೆ ವ್ಯಭಿಚಾರ ಮಾಡಿದರೆ ವೈಶ್ಯನಿಗೆ ಐದುನೂರು ದಂಡ. ಆದರೆ ಕ್ಷತ್ರಿಯನು ವೈಶ್ಯ ಹೆಂಗಸಿನ ಜೊತೆ ಇಂತಹುದೇ ಅಪರಾಧ ಮಾಡಿದರೆ ಅವನಿಗೆ ಮೂತ್ರದಿಂದ ಕ್ಷೌರ ಮಾಡಿಸಬೇಕು ಅಥವಾ ಮೇಲೆ ಹೇಳಿದ ದಂಡವನ್ನು ವಿಧಿಸಬೇಕು.

VIII ೩೮೫. ರಕ್ಷಣೆ ಇಲ್ಲದ ಕ್ಷತ್ರಿಯ, ವೈಶ್ಯ ಅಥವಾ ಶೂದ್ರ ಹೆಂಗಸಿನ ಜೊತೆ ಬ್ರಾಹ್ಮಣ ಸಂಬಂಧ ಇಟ್ಟುಕೊಂಡರೆ ಐದು ನೂರು ಪಣ ದಂಡವನ್ನು ಅವನು ಕೊಡಬೇಕು. ಮಿಶ್ರ ಜಾತಿಯ ಹೆಂಗಸಿನ ಜೊತೆ ಅಂತಹುದೇ ಸಂಬಂಧಕ್ಕೆ ಒಂದು ಸಾವಿರ ಕೊಡಬೇಕು.

ಅಪರಾಧಗಳಿಗೆ ಕೊಡುವ ದಂಡನಾ ವ್ಯವಸ್ಥೆಯನ್ನು ನೋಡಿದರೆ ಈ ವಿಷಯವನ್ನು ಕುರಿತು ಮನುವಿನ ಯೋಜನೆ ಸ್ವಾರಸ್ಯಕರವಾದ ಬೆಳಕನ್ನು ಚೆಲ್ಲುತ್ತದೆ. ಮುಂದಿನ ಆಜ್ಞೆಗಳನ್ನು ಪರಿಗಣಿಸಿ:

VIII ೩೭೯. ಬ್ರಾಹ್ಮಣ ವ್ಯಭಿಚಾರ ಮಾಡಿದರೆ ಮರಣದಂಡನೆಗೆ ಬದಲಾಗಿ ತಲೆ ಬೋಳಿಸಿ ಅವಮಾನ ಮಾಡಬೇಕು. ಇತರ ವರ್ಣದವರಿಗೆ ಮರಣದಂಡನೆ ವಿಧಿಸಬಹುದು.

VIII ೩೮೦. ಮಹಾಪಾತಕಗಳನ್ನೇ ಮಾಡಿದರೂ ರಾಜನು ಬ್ರಾಹ್ಮಣನನ್ನು ವಧಿಸಬಾರದು. ತನ್ನ ರಾಜ್ಯದಿಂದ ಆ ಅಪರಾಧಿಯನ್ನು ಅವನ ದೇಹಕ್ಕೆ ಏನೂ ಬಾಧೆ ಕೊಡದೆ ಮತ್ತು ಅವನ ಆಸ್ತಿಪಾಸ್ತಿಗೆ ಧಕ್ಕೆ ಬರದಂತೆ ಗಡಿಪಾರು ಮಾಡಬೇಕು.

XI ೧೨೭. ಧರ್ಮವಂತನಾದ ಕ್ಷತ್ರಿಯನನ್ನು ಉದ್ದೇಶಪೂರ್ವಕವಾಗಿ ಕೊಂದರೆ ಬ್ರಾಹ್ಮಣನ ಕೊಲೆಗೆ ವಿಧಿಸುವ ಶಿಕ್ಷೆಯ ನಾಲ್ಕನೆಯ ಒಂದು ಭಾಗ ವ್ರತ ಮಾಡಬೇಕು. ವೈಶ್ಯನನ್ನು ಕೊಂದರೆ ಎಂಟನೇ ಭಾಗ. ಕರ್ತವ್ಯನಿಷ್ಠನಾದ ಶೂದ್ರನನ್ನು ಕೊಂದರೆ ಹದಿನಾರನೇ ಭಾಗ.

XI ೧೨೮. ಬ್ರಾಹ್ಮಣನು ದ್ವೇಷವಿಲ್ಲದೆ ಕ್ಷತ್ರಿಯನನ್ನು ಕೊಂದರೆ, ಎಲ್ಲಾ ವ್ರತಗಳನ್ನೂ ಆಚರಿಸಿದ ಮೇಲೆ ಅವನು ಪುರೋಹಿತರಿಗೆ ಒಂದು ಗೂಳಿಯನ್ನು ಮತ್ತು ಒಂದು ಸಾವಿರ ಹಸುಗಳನ್ನು ಕೊಡತಕ್ಕದ್ದು.

XI ೧೨೯. ಅಥವಾ ಬ್ರಾಹ್ಮಣನನ್ನು ಕೊಲೆ ಮಾಡಿದರೆ ಊರ ಹೊರಗಿದ್ದುಕೊಂಡು, ಮರದ ಪೊಟರೆಯನ್ನೇ ಸೌಧವನ್ನಾಗಿಸಿಕೊಂಡು, ಇಂದ್ರಿಯಗಳನ್ನು ನಿಗ್ರಹಿಸಿ, ದೇಹ ದಂಡನೆ ಮಾಡಿ ಮೂರು ವರ್ಷ ತಪಸ್ಸನ್ನಾಚರಿಸಬೇಕು.

XI ೧೩೦. ಧರ್ಮವಂತನಾದ ವೈಶ್ಯನನ್ನು ವಿನಾ ಕಾರಣ ಕೊಂದರೆ ಅವನು ಒಂದು ವರ್ಷ ಅದೇ ವ್ರತವನ್ನು ಆಚರಿಸಬೇಕು ಅಥವಾ ಪುರೋಹಿತರಿಗೆ ನೂರು ಗೋವುಗಳನ್ನೂ ಮತ್ತು ಒಂದು ಗೂಳಿಯನ್ನೂ ದಕ್ಷಿಣೆ ಕೊಡಬೇಕು.

XI ೧೩೧. ಶೂದ್ರನನ್ನು ವಿನಾ ಕಾರಣ ಕೊಂದರೆ ಅವನು ಆರು ತಿಂಗಳು ಪೂರ್ವವ್ರತ ಆಚರಿಸಬೇಕು ಅಥವಾ ಬ್ರಾಹ್ಮಣರಿಗೆ ಅವನು ಹತ್ತು ಬಿಳಿ ಹಸುಗಳನ್ನು ಮತ್ತು ಒಂದು ಗೂಳಿಯನ್ನು ಅವನು ದಾನ ಮಾಡಬೇಕು.

VIII ೩೮೧. ಬ್ರಾಹ್ಮಣನನ್ನು ಕೊಲ್ಲುವಂಥ ಘೋರ ಪಾತಕ ಮತ್ತೊಂದಿಲ್ಲ. ಆದ್ದರಿಂದ ರಾಜನಾದವನು ಬ್ರಾಹ್ಮಣನನ್ನು ಕೊಲ್ಲುವ ವಿಚಾರವನ್ನು ತಲೆಯಲ್ಲಿ ಕೂಡ ಸುಳಿಯಲು ಬಿಡಬಾರದು.

VIII ೧೨೬. ಅಪರಾಧದ ಪುನರಾವರ್ತನೆ, ಸ್ಥಳ, ಕಾಲ, ಅಪರಾಧಿಗೆ ದಂಡ ಕೊಡುವ ಅಥವಾ ಶಿಕ್ಷೆ ಅನುಭವಿಸುವ ಸಾಮರ್ಥ್ಯ ಹಾಗೂ ಅಪರಾಧ ಇವುಗಳನ್ನು ಗಣನೆಗೆ ತೆಗೆದುಕೊಂಡು ಮತ್ತು ಖಚಿತಪಡಿಸಿಕೊಂಡು ರಾಜನು ಅಪರಾಧಿಗಳಿಗೆ ಶಿಕ್ಷೆಯನ್ನು ವಿಧಿಸಬೇಕು.

VIII ೧೨೪. ಕೆಳಗಿನ ಮೂರು ವರ್ಣದವರಿಗೆ ಹತ್ತು ದಂಡನಾ ಸ್ಥಳಗಳನ್ನು ಮನು ಹೇಳುತ್ತಾನೆ. ಆದರೆ ಆ ಯಾವ ದಂಡನೆಗಳಿಂದಲೂ ನೋವಾಗದಂತೆ ಬ್ರಾಹ್ಮಣನನ್ನು ಗಡಿಪಾರು ಮಾಡಬೇಕು.

VIII ೧೨೫. ಜನನೇಂದ್ರಿಯ, ಹೊಟ್ಟೆ, ನಾಲಗೆ, ಎರಡು ಕೈಗಳು, ಐದನೆಯದಾಗಿ ಎರಡು ಕಾಲುಗಳು, ಕಣ್ಣು, ಮೂಗು, ಎರಡು ಕಿವಿಗಳು, ಆಸ್ತಿ ಮತ್ತು ಇಡಿ ದೇಹವನ್ನು ನೋಯಿಸಬಹುದು.

ಯಜ್ಞಯಾಗಾದಿಗಳಿಗೆ ಸಂಬಂಧಿಸಿದಂತಹ ಹಕ್ಕುಗಳು ಮತ್ತು ಕರ್ತವ್ಯಗಳ ಬಗ್ಗೆ ಮನುವಿನ ಅಭಿಪ್ರಾಯಗಳು ಗಮನೀಯವಾಗಿವೆ:

I ೨೮. ವೇದಾಧ್ಯಯನ, ಹೋಮ, ಅಗ್ನಿಕಾರ್ಯ, ದೇವರ್ಷಿ ಪಿತೃತರ್ಪಣ, ಪುತ್ರೋತ್ಪಾದನೆ, ಪಂಚಮಹಾಯಜ್ಞ, ಅಗ್ನಿಷ್ಟ ಹೋಮಾದಿ ಯಜ್ಞಗಳಿಂದ ಈ ಮಾನವ ದೇಹವು ಬ್ರಹ್ಮ ಪದವಿಗೆ ಅರ್ಹವಾಗುತ್ತದೆ.

II ೬೯. ಹಿಂದೆ ಹೇಳಿದ ಐದು ಹಿಂಸಾಪರಾಧಗಳ ನಿವೃತ್ತಿಗಾಗಿ ಗೃಹಸ್ಥರಿಗೆ ಪ್ರತಿದಿನ ಮಾಡಲು ಪಂಚ ಯಜ್ಞಗಳನ್ನು ವಿಧಿಸಿದ್ದಾರೆ.

III ೭೦. ವೇದಗಳ ಅಧ್ಯಯನ, ಅಧ್ಯಾಪನವೇ ಬ್ರಹ್ಮ ಯಜ್ಞ; ತರ್ಪಣ ಕೊಡುವುದೇ ಪಿತೃ ಯಜ್ಞ; ಹೋಮವೇ ದೈವಯಜ್ಞ; ಬಲಿಕೊಡುವುದು ಭೂತಯಜ್ಞ; ಅತಿಥಿ ಪೂಜನವೇ ನರಯಜ್ಞ.

III ೭೧. ಈ ಐದು ಯಜ್ಞಗಳನ್ನು ಲೋಪ ಮಾಡದೆ ಶಕ್ತನುಸಾರ ಆಚರಿಸುತ್ತಿದ್ದರೆ ಗೃಹವಾಸ ಮಾಡಿದ ಮತ್ತು ಸೂನಾದೋಷದ ಸಂಬಂಧವಿರುವುದಿಲ್ಲ.

ಇವು ಮನುವಿನ ಆದೇಶಗಳು. ಎಲ್ಲ ಅಂಶವನ್ನೂ ಒಳಗೊಳ್ಳುವ ಸಮಗ್ರ ರೀತಿಯಲ್ಲಿ ಕಾನೂನುಗಳು ಇರುವುದಿಲ್ಲ. ಮುಖ್ಯ ಸಮಸ್ಯೆಗಳು ಇದ್ದೇ ಇರುತ್ತವೆ. ಮನುವಿಗೆ ಇದು ಗೊತ್ತಿತ್ತು. ಅಂತಹವುಗಳಿಗೆ ಪರಿಹಾರ ಸೂಚಿಸುತ್ತಾನೆ:

XII ೧೦೮. ಇದರಲ್ಲಿ ಹೇಳದಿರುವ ಯಾವುದಾದರೂ ವಿಷಯದಲ್ಲಿ ಅನುಮಾನ ಬಂದರೆ ಗುರುಮುಖದಿಂದ ಅಧ್ಯಯನ ಮಾಡಿದ ಶಿಷ್ಟಾವಂತರು ಹೇಳಿದುದನ್ನೇ ಧರ್ಮವೆಂದು ತಿಳಿಯಬೇಕು.

XII ೧೦೯. ವೇದಾಂಗ, ಮೀಮಾಂಸ, ನ್ಯಾಯ, ಧರ್ಮ, ಶಾಸ್ತ್ರ, ಪುರಾಣಾದಿಗಳನ್ನು ಒಳಗೊಂಡಿರುವ ವೇದಗಳನ್ನು ಬ್ರಹ್ಮಚರ್ಯಾಶ್ರಮದಲ್ಲಿ, ಗುರುತಲದಲ್ಲಿ ಅಧ್ಯಯನ ಮಾಡಿದವರು ಉಪದೇಶ ಮಾಡಲು ಸಮರ್ಥರು. ಅವರು ಶಿಷ್ಟರು ಮತ್ತು ಧರ್ಮ ಪ್ರಮಾಣರು.

XII ೧೧೩. ಉತ್ತಮವಾದ ಒಬ್ಬ ವೇದಜ್ಞಾನಿಯ ಅನುಭವ ಕೂಡ ಧರ್ಮ ಪ್ರಮಾಣವಾಗ ಬಲ್ಲದು. ವಿದ್ಯಾಹೀನರಾದ ಹತ್ತು ಲಕ್ಷ ಜನರಿದ್ದರು ಕೂಡ ಧರ್ಮ ಸೂಕ್ಷ್ಮವನ್ನು ಹಿಡಿಯಲಾರರು.

ಮನು ಧರ್ಮ ಶಾಶ್ವತವಾದುದು. ಆದ್ದರಿಂದ ಅವುಗಳಲ್ಲಿ ಹೇಗೆ ಬದಲಾವಣೆ ತರಬೇಕೆಂಬ ಪ್ರಶ್ನೆ ಉದ್ಭವಿಸುವುದೇ ಇಲ್ಲ. ಮನುವಿನ ಮುಂದಿದ್ದ ಒಂದೇ ಒಂದು ಪ್ರಶ್ನೆಯೆಂದರೆ ಆ ವ್ಯವಸ್ಥೆಯನ್ನು ಎತ್ತಿ ಹಿಡಿಯುವುದು ಹಾಗೂ ಅದನ್ನು ಮುಂದುವರಿಸುವುದು. ಈ ಉದ್ದೇಶವನ್ನಿಟ್ಟುಕೊಂಡು ಮನು ಅನೇಕ ಅವಕಾಶಗಳನ್ನು ಮಾಡಿದ್ದಾನೆ. ಸಾಮಾಜಿಕ ನಿಯಮವನ್ನು ಎತ್ತಿ ಹಿಡಿದು ಮುಂದುವರಿಸುವುದು ರಾಜನ ಧರ್ಮವೆಂದು ಮನು ಹೇಳುತ್ತಾನೆ:

VIII ४१೧೦. ವೈಶ್ಯನನ್ನು ವಾಣಿಜ್ಯ, ಕೃಷಿ, ಪಶುಪಾಲನೆ, ಬಡ್ಡಿಗೆ ಹಣ ಕೊಡುವುದು ಮುಂತಾದ ಉದ್ಯೋಗಗಳನ್ನು ಮಾಡಲು ರಾಜನು ನೇಮಿಸಬೇಕು. ಶೂದ್ರ ಜಾತಿಯ ಪ್ರತಿಯೊಬ್ಬನು ಬ್ರಾಹ್ಮಣನ ಸೇವೆ ಮಾಡಬೇಕು.

VIII ४१೧೮. ವೈಶ್ಯ ಶೂದ್ರರು ತಮ್ಮ ತಮ್ಮ ಕರ್ತವ್ಯ ಮಾಡಲು ರಾಜನು ಅವರನ್ನು ಪ್ರೇರೇಪಿಸಬೇಕು. ಅವರು ಸ್ವಕರ್ಮ ಭ್ರಷ್ಟರಾದರೆ ದೇಶದಲ್ಲಿ ಕ್ಷೋಭೆಯುಂಟಾಗುತ್ತದೆ.

ಇದನ್ನು ಮುಂದುವರಿಸಿಕೊಂಡು ಹೋಗುವಂತೆ ಮಾಡಲು ರಾಜ ಸೋತರೆ ರಾಜನನ್ನೇ ಧರ್ಮದ ಪ್ರಕಾರ ಶಿಕ್ಷಿಸಬೇಕು.

VIII ೩೩೫. ತಂದೆ, ಗುರು, ಸ್ನೇಹಿತ, ತಾಯಿ, ಹೆಂಡತಿ, ಮಗ, ಆಳು ಯಾರೇ ಆಗಲಿ ಈ ಧರ್ಮವನ್ನು ಅನುಸರಿಸದಿದ್ದರೆ ಅವರನ್ನು ರಾಜ ಶಿಕ್ಷಿಸದೆ ಬಿಡಬಾರದು.

VIII ೩೩೬. ಶೂದ್ರನಿಗೆ ಒಂದು ಪಣ ದಂಡ ಹಾಕಿದರೆ ರಾಜನಿಗೆ ಸಾವಿರ ಪಣ ದಂಡ ಹಾಕಬೇಕು ಆ ದಂಡವನ್ನು ಅವನು ಬ್ರಾಹ್ಮಣರಿಗೆ ಕೊಡತಕ್ಕದ್ದು ಇಲ್ಲವೆ ನದಿಗೆ ಎಸೆಯತಕ್ಕದ್ದು. ಇದು ಪವಿತ್ರವಾದ ಧರ್ಮ.

ಈ ವ್ಯವಸ್ಥೆಯನ್ನು ಎತ್ತಿ ಹಿಡಿಯಲೂ, ಮುಂದುವರೆಸಲೂ ರಾಜ ಸೋತರೆ ಅವನು ಆಳುವ ಹಕ್ಕನ್ನು ಕಳೆದುಕೊಳ್ಳುತ್ತಾನೆ. ಏಕೆಂದರೆ ಅಂತಹ ರಾಜನ ವಿರುದ್ಧ ದಂಗೆಯೇಳಬೇಕೆಂದು ಮನು ಅನುಮತಿ ನೀಡುತ್ತಾನೆ.

VIII ೩४೮. ಬ್ರಾಹ್ಮಣರ ಧರ್ಮಕ್ಕೆ ಅಡ್ಡಿಯಾದರೆ ಅದನ್ನು ನಿವಾರಿಸಲು ಅವರು ಶಸ್ತ್ರ ಹಿಡಿಯಬಹುದು ಹಾಗೂ ವಿಪತ್ಕಾಲದಲ್ಲಿ ಸಹ ಅವರು ಶಸ್ತ್ರ ಹಿಡಿಯಬಹುದು.

ಮೇಲಿನ ಮೂರು ವರ್ಣದವರಿಗೆ ಬಂಡಾಯ ಮಾಡುವ ಹಕ್ಕುಂಟು, ಆದರೆ ಶೂದ್ರನಿಗಿಲ್ಲ. ಇದು ತುಂಬ ಸ್ವಾಭಾವಿಕ. ಏಕೆಂದರೆ, ಮೇಲಿನ ಮೂರು ವರ್ಣಗಳು ಮಾತ್ರ ಈ ವ್ಯವಸ್ಥೆಯ ಪೋಷಣೆಯಿಂದ ಲಾಭ ಪಡೆಯುತ್ತವೆ. ಆದರೆ ಈ ವ್ಯವಸ್ಥೆಯನ್ನು ನಿರ್ನಾಮ ಮಾಡಲು ರಾಜನ ಜೊತೆ ಕ್ಷತ್ರಿಯರು ಸೇರಿಕೊಂಡರೆ ಏನು ಮಾಡಬೇಕು? ಎಲ್ಲರನ್ನೂ, ವಿಶೇಷವಾಗಿ ಕ್ಷತ್ರಿಯರನ್ನು ಶಿಕ್ಷಿಸುವ ಅಧಿಕಾರ ಮನು ಬ್ರಾಹ್ಮಣರಿಗೆ ನೀಡುತ್ತಾನೆ.

XI ೩೧. ಎಂತಹ ತೊಂದರೆಯಾದರೂ ಧರ್ಮವನ್ನು ಬಲ್ಲ ಬ್ರಾಹ್ಮಣನು ರಾಜನಿಗೆ ದೂರು ಕೊಡಬಾರದು. ಏಕೆಂದರೆ ತನಗೆ ಉಪದ್ರವ ಕೊಡುವವರನ್ನು ಅವನು ತನ್ನ ಸ್ವಂತ ಶಕ್ತಿಯಿಂದಲೇ ಶಿಕ್ಷಿಸಬಹುದು.

XI ೩೨. ಇತರರನ್ನು ಆಶ್ರಯಿಸಿರುವ ರಾಜನ ಶಕ್ತಿಗಿಂತಲೂ, ತನ್ನನ್ನೇ ಆಶ್ರಯಿಸಿರುವ ಬ್ರಾಹ್ಮಣನ ಶಕ್ತಿ ದೊಡ್ಡದು. ಆದ್ದರಿಂದ ಬ್ರಾಹ್ಮಣನು ತನ್ನ ಸ್ವಂತ ಶಕ್ತಿಯಿಂದಲೇ ಶತ್ರುಗಳನ್ನು ಹತ ಮಾಡಬಹುದು.

XI ೩೩. ಅಂಗೀರಸನಿಗೆ ಅಥರ್ವನು ಹೇಳಿಕೊಟ್ಟ ಶಕ್ತಿಶಾಲಿ ಮಂತ್ರಗಳನ್ನು ಯಾವುದೇ ಸಂಕೋಚವಿಲ್ಲದೆ ಬ್ರಾಹ್ಮಣನು ಉಪಯೋಗಿಸಬಹುದು. ಏಕೆಂದರೆ ವಾಕ್ಕು ಬ್ರಾಹ್ಮಣನ ಆಯುಧ. ಆದ್ದರಿಂದ ಅವನು ತನ್ನ ಮಾತಿನ ಆಯುಧದಿಂದ ತನ್ನ ಶತ್ರುಗಳನ್ನು ನಾಶಪಡಿಸಬಹುದು.

IX ೩೨೦. ಎಲ್ಲ ಸಂದರ್ಭಗಳಲ್ಲಿ ಉಗ್ರನಾಗಿ ಕ್ಷತ್ರಿಯನು ಆಯುಧವನ್ನು ಬ್ರಾಹ್ಮಣನ ಮೇಲೆ ಎತ್ತಿದರೆ, ಬ್ರಾಹ್ಮಣನು ಅವನನ್ನು ತಹಬಂದಿಗೆ ತರಬಹುದು. ಏಕೆಂದರೆ ಕ್ಷತ್ರಿಯನು ಬ್ರಹ್ಮದಿಂದ ಜನಿಸಿದವನು.

ಶಸ್ತ್ರ ಹಿಡಿಯದೆ ಬ್ರಾಹ್ಮಣರು ಹೇಗೆ ಕ್ಷತ್ರಿಯರನ್ನು ಶಿಕ್ಷಿಸಬಲ್ಲರು? ಇದು ಮನುವಿಗೆ ಗೊತ್ತು. ಆದ್ದರಿಂದಲೇ ಕ್ಷತ್ರಿಯರನ್ನು ಶಿಕ್ಷಿಸಲು ಬ್ರಾಹ್ಮಣರು ಶಸ್ತ್ರ ಸಜ್ಜಿತರಾಗಬೇಕೆಂದು ಅವನು ಹೇಳುತ್ತಾನೆ:

XII ೧೦೦. ಸೇನಾಧಿಪತಿ, ರಾಜ್ಯ ಪ್ರಧಾನ, ದಂಡ ಪ್ರಧಾನ ಎಲ್ಲರೂ ವೇದಶಾಸ್ತ್ರಜ್ಞರಾಗಿದ್ದರೆ ಒಳ್ಳೆಯದು.

ಹೀಗೆ ಚಾತುರ್ವರ್ಣ ವ್ಯವಸ್ಥೆಯನ್ನು ಮುಂದುವರೆಸುವುದೇ ಮನುವಿನ ಉದ್ದೇಶ. ಅದರಲ್ಲಿ ಈ ಮೂಲಭೂತ ಬದಲಾವಣೆಯನ್ನು ಮಾಡಲು ಅವನು ಹಿಂಜರಿಯಲಿಲ್ಲ. ಏಕೆಂದರೆ ಮನುವಿಗಿಂತ ಮೊದಲು ಪ್ರಚಲಿತವಿದ್ದ ಕಾನೂನಿಗೆ ಹೋಲಿಸಿದರೆ ಬ್ರಾಹ್ಮಣನು ಶಸ್ತ್ರ ಹಿಡಿಯಬೇಕೆಂಬುದು ಮೂಲಭೂತ ಬದಲಾವಣೆ. ಬ್ರಾಹ್ಮಣನು ಶಸ್ತ್ರ ಹಿಡಿಯಬಾರದೆಂಬ ನಿಷೇಧ ಬಹಳ ಕಟ್ಟುನಿಟ್ಟಿನದಾಗಿತ್ತು. ಮನುವಿಗಿಂತ ಮೊದಲಿದ್ದ ಆಪಸ್ತಂಭ ಧರ್ಮಸೂತ್ರ ಆ ನಿಯಮವನ್ನು ಮುಂದಿನ ಮಾತುಗಳಲ್ಲಿ ಹೇಳುತ್ತದೆ:

I ೧೦,೨೯,೬ ಶಸ್ತ್ರವನ್ನು ಪರೀಕ್ಷಿಸಬೇಕೆಂಬ ಮನಸ್ಸಿದ್ದರೂ ಕೂಡ ಬ್ರಾಹ್ಮಣನು ಅದನ್ನು ಕೈಗೆತ್ತಿಕೊಳ್ಳಬಾರದು.

ಮನುವಿನ ನಂತರ ಬಂದ ಬೌಧಾಯನ ಮೇಲಿನ ಮಾತನ್ನು ಇನ್ನೂ ಉತ್ತಮಗೊಳಿಸಿ ತನ್ನ ಧರ್ಮಸೂತ್ರದಲ್ಲಿ ಹೀಗೆ ಹೇಳಿದ್ದಾನೆ:

II ೨೪,೧೮ ಗೋರಕ್ಷಣೆಗಾಗಿ, ಬ್ರಾಹ್ಮಣರನ್ನು ಕಾಪಾಡಲು ಅಥವಾ ವರ್ಣ ಸಂಕರವಾದಾಗ ಬ್ರಾಹ್ಮಣರು ಮತ್ತು ವೈಶ್ಯರೂ ಕೂಡ ಧರ್ಮಪರಿಪಾಲನೆಗಾಗಿ ಶಸ್ತ್ರಗಳನ್ನು ಹಿಡಿಯತಕ್ಕದ್ದು. ವ್ಯವಸ್ಥೆಯನ್ನು ಶತಾಯಗತಾಯ ಉಳಿಸತಕ್ಕದ್ದು.

* * * *

## ಅಧ್ಯಾಯ ೧೩

# ಭಗವದ್ಗೀತೆ ಕುರಿತ ಪ್ರಬಂಧಗಳು:
# ಪ್ರತಿಕ್ರಾಂತಿಯ ತಾತ್ವಿಕ ಸಮರ್ಥನೆ:
# ಕೃಷ್ಣ ಮತ್ತು ಅವನ ಗೀತೆ

*'ಭಗವದ್ಗೀತೆ ಮೇಲೆ ಪ್ರಬಂಧಗಳು' ಇದರ ಮೊದಲ ಪುಟದ ಮೇಲೆ ಡಾ. ಅಂಬೇಡ್ಕರ್ ಅವರ ಹಸ್ತಾಕ್ಷರವಿದೆ. ಮುಂದಿನ ನಲವತ್ತೆರಡು ಪುಟಗಳು ವಿರಾಟಪರ್ವ ಮತ್ತು ಉದ್ಯೋಗಪರ್ವಗಳನ್ನು ಕುರಿತ ವಿಶ್ಲೇಷಣಾತ್ಮಕ ಟಿಪ್ಪಣಿಗಳನ್ನು ಹಾಗೂ ಈ ವಿಷಯದ ಬಗ್ಗೆ ಪರಿವಿಡಿಯನ್ನು ಒಳಗೊಂಡಿವೆ. ಯೋಜನೆಗಳಲ್ಲಿ ಪರಿವಿಡಿಯನ್ನು ಮುದ್ರಿಸಲಾಗಿದೆ. ಈ ಕಡತದಲ್ಲಿ 'ಪ್ರತಿಕ್ರಾಂತಿಯ ತಾತ್ವಿಕ ಸಮರ್ಥನೆ – ಕೃಷ್ಣ ಮತ್ತು ಅವನ ಗೀತೆ' ಎಂಬ ಹೆಸರಿನ ಪ್ರಬಂಧದ ಎರಡು ಬೆರಳಚ್ಚಾದ ಪ್ರತಿಗಳಿವೆ. ಈ ಪ್ರಬಂಧದ ಕೊನೆಯ ವಾಕ್ಯ ಅಪೂರ್ಣವಾಗಿದೆ. ಈ ಪ್ರಬಂಧದ ಬೆರಳಚ್ಚಾದ ಪುಟಗಳ ಒಟ್ಟು ಸಂಖ್ಯೆ ನಲವತ್ತು ಮಾತ್ರ. ವಿರಾಟಪರ್ವ ಮತ್ತು ಉದ್ಯೋಗಪರ್ವಗಳನ್ನು ಕುರಿತ ಟಿಪ್ಪಣಿಗಳನ್ನು ಮುಂದಿನ ಅಧ್ಯಾಯಗಳಲ್ಲಿ ಅಚ್ಚಿಸಲಾಗಿದೆ.*

– ಸಂಪಾದಕರು

ಪ್ರಾಚೀನ ಭಾರತದ ಸಾಹಿತ್ಯದಲ್ಲಿ ಭಗವದ್ಗೀತೆಯ ಸ್ಥಾನ ಏನು? ಕ್ರೈಸ್ಥಧರ್ಮಕ್ಕೆ ಬೈಬಲ್ ಇರುವ ಹಾಗೆ ಹಿಂದೂ ಧರ್ಮಕ್ಕೆ ಅದು ಧರ್ಮಗ್ರಂಥವೇ? ಹಿಂದೂಗಳು ಅದನ್ನು ತಮ್ಮ ಧರ್ಮಗ್ರಂಥವೆಂದು ಆದರಿಸುತ್ತಾರೆ. ಅದು ಧರ್ಮಗ್ರಂಥವಾದರೆ ವಾಸ್ತವವಾಗಿ ಅದು ಏನನ್ನು ಬೋಧಿಸುತ್ತದೆ? ಯಾವ ತತ್ವವನ್ನು ಅದು ಪ್ರತಿನಿಧಿಸುತ್ತದೆ? ಈ ವಿಷಯದ ಬಗ್ಗೆ ಸಮರ್ಥ ವಿದ್ವಾಂಸರು ಕೊಟ್ಟಿರುವ ವೈವಿಧ್ಯಮಯ ಉತ್ತರಗಳು ನಿಜವಾಗಿಯೂ ದಿಗ್ಭ್ರಮೆಗೊಳಿಸುತ್ತವೆ. ಬೋಲ್ಟಿಂಗ್[೧] ಹೇಳುತ್ತಾನೆ:

> "ಅನೇಕ ಉದಾತ್ತ, ಸುಂದರ ಆಲೋಚನೆಗಳ ಜೊತೆಯಲ್ಲಿ ಕೆಲವು ದುರ್ಬಲ ಅಂಶಗಳನ್ನೂ ವೈರುಧ್ಯಗಳನ್ನೂ (ಇವುಗಳನ್ನು ಕ್ಷಮ್ಯವೆಂದು ವ್ಯಾಖ್ಯಾನಕಾರರು ನಿರ್ಲಕ್ಷಿಸಿದ್ದಾರೆ),

---

೧. ಬೋಲ್ಟಿಂಗ್, ಗಾರ್ನೆಯವರು ತಮ್ಮ "ಇಂಟ್ರೊಡಕ್ಷನ್ ಟು ದಿ ಭಗವದ್ ಗೀತೆ"ಯಲ್ಲಿ ಉಲ್ಲೇಖಿಸಿದ್ದಾರೆ. (ಇಂಡಿಯನ್ ಆ್ಯಂಟಿಕ್ವೆರಿ ೧೯೧೮ ಪುರವಣಿ)

ಪುನರುಕ್ತಿಗಳು, ಉತ್ಪ್ರೇಕ್ಷೆಗಳು, ಅಸಾಂಗತ್ಯಗಳು ಮತ್ತು ಹೇವರಿಕೆ ಅಂಶಗಳನ್ನೂ ಗೀತೆ ಒಳಗೊಂಡಿದೆ."

"ಹಿಂದೂ ಸಾಹಿತ್ಯದ ಪ್ರಾತಿನಿಧಿಕ ಗ್ರಂಥವಾದ ಭಗವದ್ಗೀತೆಯು ತನ್ನ ಭವ್ಯತೆ ಮತ್ತು ಬಾಲಿಶತೆಗಳಿಗೂ, ತರ್ಕ ಮತ್ತು ಅದರ ಅಭಾವಕ್ಕೂ.... ಪ್ರಾಚೀನ ತಾತ್ವಿಕ ಅಭಿಪ್ರಾಯಗಳ ಕಲಸುಮೇಲೊಗರದ ಸಂಪುಟವಾಗಿದೆಯೆಂದೂ ಹಾಪ್‌ಕಿನ್ಸ್[೧] ಅಭಿಪ್ರಾಯಪಡುತ್ತಾನೆ.

ಅವನ ತೀರ್ಪಿನಲ್ಲಿ:

"ಅಲ್ಲಲ್ಲಿ ಶಕ್ತಿ ಮತ್ತು ಸಂಗೀತದ ಔನ್ನತ್ಯವಿದ್ದರೂ, ಕಾವ್ಯಗ್ರಂಥವಾಗಿ ಭಗವದ್ಗೀತೆಯು ತನ್ನ ಈಗಿನ ಸ್ಥಿತಿಯಲ್ಲಿ ಅತೃಪ್ತಿಕರವಾಗಿದೆ. ಹೇಳಿದ್ದನ್ನೇ ಹೇಳಲಾಗಿದೆ. ಪುನರುಕ್ತಿಗಳು ಅಸಂಖ್ಯಾತವಾಗಿರುವಂತೆ ಶಬ್ದಾರ್ಥ ಪ್ರಯೋಗದಲ್ಲಿ ವೈರುಧ್ಯಗಳಿವೆ. ಆದ್ದರಿಂದ ಅದನ್ನು 'ರೋಮಾಂಚನಗೊಳಿಸುವ ಅದ್ಭುತ ಗೀತೆ' ಎಂದು ವರ್ಣಿಸಿದರೆ ಆಶ್ಚರ್ಯವಾಗುವುದಿಲ್ಲ."

ಹೋಲ್ಟ್‌ಜ್‌ಮನ್[೨] ಹೇಳುತ್ತಾನೆ:

"ಒಂದು ಸರ್ವ ದೇವೋಪಾಸನೆಯ ಕಾವ್ಯವನ್ನು ವಿಷ್ಣು ಪಂಥದವರು ಪುನರಾವರ್ತಿಸುವುದನ್ನು ನಾವು (ಭಗವದ್ಗೀತೆಯಲ್ಲಿ) ನೋಡುತ್ತೇವೆ."

ಗಾರ್ಬೆ[೩] ಅಭಿಪ್ರಾಯಪಡುತ್ತಾನೆ:

"ತನ್ನ ರಚನೆ ಮತ್ತು ನಿರ್ವಹಣೆಯಲ್ಲಿ ಈ ಇಡಿ ಕಾವ್ಯದ ಗುಣ ಅತ್ಯದ್ಭುತವಾಗಿ ದೈವೀಭೂತವಾಗಿದೆ. ಮಾನವ ವೀರನ ರೂಪದಲ್ಲಿ ಇಷ್ಟದೇವತೆಯಾದ ಕೃಷ್ಣ ನಿಂತಿದ್ದಾನೆ. ತನ್ನ ಸಿದ್ಧಾಂತವನ್ನು ಮಂಡಿಸುತ್ತಾನೆ. ಎಲ್ಲಕ್ಕಿಂತ ಹೆಚ್ಚಾಗಿ ತನ್ನ ಸ್ವಧರ್ಮವನ್ನು ನೆರವೇರಿಸುತ್ತಾ ಅವನಲ್ಲಿ (ಭಗವಂತನಾದ ಕೃಷ್ಣನಲ್ಲಿ) ಭಕ್ತಿಯಿಟ್ಟು ಶರಣಾಗತನಾಗಬೇಕೆಂದು ಆಜ್ಞಾಪಿಸುತ್ತಾನೆ... ಈ ಇಡಿ ಕಾವ್ಯವನ್ನು ಆವರಿಸಿರುವ, ಎಷ್ಟರಮಟ್ಟಿಗೆ ಮಾನವೀಕರಿಸಬಹುದೋ ಅಷ್ಟರ ಮಟ್ಟಿಗೆ ಚಿತ್ರಿತವಾಗಿರುವ ಈ ದೇವರ ಪಕ್ಕದಲ್ಲಿ ಅತ್ಯುನ್ನತ ತತ್ವವಾದ ನಿರಾಕಾರನೂ ನಿರ್ಗುಣನೂ ಆದ ಅಖಂಡ ಬ್ರಹ್ಮವು ಪದೇ ಪದೇ ವ್ಯಕ್ತವಾಗುತ್ತದೆ. ಈ ಪ್ರಪಂಚವನ್ನೂ ಎಲ್ಲ ಜೀವಿಗಳನ್ನೂ ಸೃಷ್ಟಿಸಿ ಎಲ್ಲವನ್ನೂ ಆಳುತ್ತಿರುವ ತಾನೊಬ್ಬ ಪರಮ ದೈವವೆಂದು ಕೃಷ್ಣ ಒಮ್ಮೆ ಹೇಳುತ್ತಾನೆ. ವೇದಾಂತ, ತತ್ವವಾದ ಬ್ರಹ್ಮ ಮತ್ತು ಮಾಯಾವಾದವನ್ನು ಇನ್ನೊಮ್ಮೆ ಪ್ರತಿಪಾದಿಸುತ್ತಾನೆ. ಈ ಜಗತ್ ಮಿಥ್ಯೆಯಿಂದ ಮುಕ್ತನಾಗಿ ಬ್ರಹ್ಮ ಆಗುವುದೇ ಮಾನವ ಜೀವಿಯ ಅತ್ಯುನ್ನತ ಗುರಿಯೆಂದು ಹೇಳುತ್ತಾನೆ. ಏಕ ದೇವೋಪಾಸನೆ ಮತ್ತು ಬಹು ದೇವೋಪಾಸನೆಯ ಈ ಎರಡು ತತ್ವಗಳು ಒಂದರೊಡನೊಂದು ಬೆರೆತುಹೋಗಿವೆ. ಕೆಲವೇಳೆ ಸಂಪೂರ್ಣವಾಗಿ ಸಂಬಂಧವೇ ಇಲ್ಲದಂತೆ, ಕೆಲವೇಳೆ ಅಷ್ಟಾಗಿ ಸಂಬಂಧವಿಲ್ಲದಂತೆ ಅವು ಒಂದನ್ನೊಂದು ಅನುಸರಿಸುತ್ತವೆ. ಒಂದು ಉತ್ತಮವೆಂದೂ ಇನ್ನೊಂದು ಅಧಮವೆಂದೂ ವಿಚಾರವನ್ನು ಅಲ್ಲಿ ಪ್ರತಿಪಾದಿಸಿಲ್ಲ. ಪರಬ್ರಹ್ಮದ ಅರಿವಿಗೆ ದೈವವಾದವು ಪ್ರಥಮ ಹಂತವೆಂದು ಎಲ್ಲಿಯೂ ಬೋಧಿಸಿಲ್ಲ ಅಥವಾ ದೈವವಾದವೇ ಅದರ ಸಂಕೇತವೆಂದೂ ವೇದಾಂತದ

---

೧. 'ರಿಲಿಜನ್ ಆಫ್ ಇಂಡಿಯಾ', ಪು. ೩೯೦–೪೦೦.
೨. ಹೋಲ್ಟ್‌ಜ್‌ಮನ್ ಗಾರ್ಬೆಯವರಿಂದ ಉಲ್ಲೇಖಿತ.
೩. ಗಾರ್ಬೆ: 'ಇಂಟ್ರೊಡಕ್ಷನ್ ಟು ಭಗವದ್ಗೀತಾ."

ಸರ್ವದೇವೋಪಾಸನೆಯೇ ಪರಮ ಸತ್ಯವೆಂದೂ ಎಲ್ಲೂ ಹೇಳುವುದಿಲ್ಲ. ಆದರೆ ಬಹುಮಟ್ಟಿಗೆ ಉದ್ದಕ್ಕೂ ಮಾತಿನಲ್ಲಾಗಲೀ ಆಚರಣೆಯಲ್ಲಾಗಲೀ ಯಾವುದೇ ಬಗೆಯ ಭೇದಭಾವನೆ ಇರಲಿಲ್ಲ ಎಂಬಂತೆ ಈ ಎರಡು ತತ್ವಗಳನ್ನು ಪರಿಗಣಿಸಲಾಗಿದೆ."

ತೆಲಾಂಗ್[೧] ಹೇಳುತ್ತಾನೆ:

"ಗೀತೆಯಲ್ಲಿ ಅನೇಕ ಭಾಗಗಳಿವೆ. ಅವುಗಳನ್ನು ಒಂದನ್ನೊಂದು ಹೊಂದಿಸುವುದು ಅಷ್ಟು ಸುಲಭವಲ್ಲ. ಅವುಗಳನ್ನು ಸಾಮರಸ್ಯಗೊಳಿಸುವ ಪ್ರಯತ್ನ ನಡೆದಿಲ್ಲ. ಉದಾಹರಣೆಗೆ, ಏಳನೇ ಅಧ್ಯಾಯದ ಹದಿನಾರನೇ ಶ್ಲೋಕದಲ್ಲಿ ಕೃಷ್ಣ ತನ್ನ ಭಕ್ತರನ್ನು ನಾಲ್ಕು ವಿಭಾಗ ಮಾಡುತ್ತಾನೆ. ಒಂದನೆಯವರು ಜ್ಞಾನಿಗಳು, ಇವರನ್ನು ಕೃಷ್ಣ "ತನ್ನ ಆತ್ಮವೆಂಬಂತೆ" ಪರಿಗಣಿಸುತ್ತೇನೆಂದು ಹೇಳುತ್ತಾನೆ. ಇದಕ್ಕಿಂತ ಉತ್ತಮ ಗೌರವ ಸೂಚಿಸುವ ಮಾತನ್ನು ಊಹಿಸುವುದು ಬಹುಶಃ ಕಷ್ಟವಾಗುತ್ತದೆ. ಆದರೂ ಆರನೇ ಅಧ್ಯಾಯದ ನಲವತ್ತಾರನೆಯ ಪದ್ಯದಲ್ಲಿ ಕರ್ಮಯೋಗಿಗಿಂತ ಭಕ್ತ ಶ್ರೇಷ್ಠನೆಂದು, ಜ್ಞಾನಿಗಳಿಗಿಂತಲೂ ಉತ್ತಮನೆಂದು ಹೇಳಲಾಗಿದೆ. ಜ್ಞಾನಿಗಳು ಎಂದರೆ ಶಾಸ್ತ್ರಗಳು ಮತ್ತು ಅವುಗಳ ಮಹತ್ವವನ್ನು ಬಲ್ಲವರೆಂದು ಅರ್ಥಮಾಡಬೇಕೆಂದು ವ್ಯಾಖ್ಯಾನಕಾರರು ತಮ್ಮ ಆಸ್ತಿಕ ಒಲವನ್ನು ತೋರ್ಪಡಿಸುತ್ತಾರೆ. ಈ ವ್ಯಾಖ್ಯಾನವನ್ನೇನೂ ತಿರಸ್ಕರಿಸಬೇಕಾಗಿಲ್ಲ. ಆದರೆ ಈ ಸಂದರ್ಭದಲ್ಲಿ ಪದಗಳನ್ನು ತಿರುಚಿ ಅರ್ಥ ಹೇಳುವುದನ್ನು ನಾನು ಒಪ್ಪಲಾರೆ. ೪ನೇ ಅಧ್ಯಾಯದ ೩೯ನೇ ಶ್ಲೋಕದಲ್ಲಿ ಹೇಳುವ ಭಕ್ತಿಗಿಂತ ಜ್ಞಾನ ದೊಡ್ಡದು ಎಂಬ ಅರ್ಥವನ್ನು ಮರೆಯಬಾರದು. ಇದು ಜ್ಞಾನದ ಮೂಲಕ ಉನ್ನತ ಸ್ತರವನ್ನು ತಲುಪುವ ಸೋಪಾನವಾಗಿದೆ. ಗೀತೆಯ ೧೨ನೇ ಅಧ್ಯಾಯದ ೧೨ನೇ ಶ್ಲೋಕದಲ್ಲಿ ಜ್ಞಾನಯೋಗಕ್ಕಿಂತ ಧ್ಯಾನ ಉತ್ತಮವೆನ್ನಲಾಗಿದೆ. ಇದೂ ಕೂಡ ೭ನೇ ಅಧ್ಯಾಯದ ೧೬ನೇ ಶ್ಲೋಕದ ಜೊತೆ ಹೊಂದುವುದಿಲ್ಲ. ಇನ್ನೂ ಒಂದು ಉದಾಹರಣೆ ತೆಗೆದುಕೊಳ್ಳಿ. ಗೀತೆಯ ೨ನೇ ಅಧ್ಯಾಯದ ೧೫ನೇ ಶ್ಲೋಕದಲ್ಲಿ 'ಯಾರ ಪುಣ್ಯವನ್ನಾಗಲೀ ಅಥವಾ ಪಾಪವನ್ನಾಗಲೀ ದೇವರು ಸ್ವೀಕರಿಸುವುದಿಲ್ಲ' ಎಂದು ಹೇಳಿದೆ. ಆದರೂ ೫ನೇ ಅಧ್ಯಾಯದ ೨೪ನೇ ಶ್ಲೋಕದಲ್ಲಿ ತಾನು ಸರ್ವಯಜ್ಞಗಳ, ವ್ರತಗಳ 'ಯಜಮಾನ ಮತ್ತು ಅನುಭೋಗಿ' ಎಂದು ಕೃಷ್ಣ ತನ್ನನ್ನೆ ಕರೆದುಕೊಳ್ಳುತ್ತಾನೆ. ಪುರುಷೋತ್ತಮನು ಸ್ವೀಕರಿಸದೆ ಹೋದರೆ ಹೇಗೆ ತಾನೆ ಅನುಭೋಗಿಸಬಲ್ಲ ಎಂದು ಕೇಳಬೇಕಾಗುತ್ತದೆ. ೧೦ನೇ ಅಧ್ಯಾಯದ ೨೯ನೇ ಶ್ಲೋಕದಲ್ಲಿ ಕೃಷ್ಣ 'ನನಗೆ ಯಾರೂ ಪ್ರಿಯರಲ್ಲ, ಯಾರೂ ಅಪ್ರಿಯರಲ್ಲ' ಎಂದು ಮತ್ತೊಮ್ಮೆ ಘೋಷಿಸುತ್ತಾನೆ. ಆದರೂ ೧೨ನೇ ಅಧ್ಯಾಯದ ಕೊನೆಯಲ್ಲಿ ಬರುವ ಅದ್ಭುತವಾದ ಶ್ಲೋಕ ಈ ಘೋಷಣೆಗೆ ಸಂಪೂರ್ಣವಾಗಿ ವಿರೋಧವಾಗಿದೆ. ಅಲ್ಲಿನ ಶ್ಲೋಕ ಸರಣಿಯಲ್ಲಿ 'ಅಂಥವರು ನನಗೆ ಪ್ರಿಯ' ಎಂದು ಕೃಷ್ಣ ಉದಾತ್ತ ವಾಣಿಯಲ್ಲಿ ಹೇಳುತ್ತಾನೆ. ಆ ಸೊಗಸಾದ ಪದ್ಯಗಳಲ್ಲಿ ಕೃಷ್ಣ ತನ್ನ ದಿವ್ಯ ಧರ್ಮವನ್ನು ಉಪಸಂಹಾರ ಮಾಡುತ್ತಾನೆ. ಹಾಗೆಯೇ ಅವನು ಅರ್ಜುನನಿಗೆ ಹೇಳುತ್ತಾನೆ, "ಅರ್ಜುನ, ನೀನು ನನಗೆ ತುಂಬ 'ಪ್ರಿಯ' ವಾದವನು." ಭಕ್ತ ತನಗೆ ಪ್ರಿಯವೆಂದು ಕೃಷ್ಣ ಮತ್ತೆ ಹೇಳುತ್ತಾನೆ. ಗೀತೆಯ ರಹಸ್ಯವನ್ನು ಪುರುಷೋತ್ತಮನಲ್ಲಿ

---

೧. ತೆಲಾಂಗ್: ಭಗವದ್ಗೀತಾ '(ಎಸ್.ಬಿ.ಈ)', ಇಂಟ್ರೊಡಕ್ಷನ್, ಪು. ೧೧.

ಭಕ್ತಿಯುಳ್ಳವರಿಗೆ ಹೇಳಬಹುದೆಂದು ಕೃಷ್ಣ ಅಪ್ಪಣೆ ಕೊಡಿಸುತ್ತಾನೆ[೧]. ಆದರೂ ೧೬ನೇ ಅಧ್ಯಾಯದ ೧೮ ಮತ್ತು ಅನಂತರದ ಶ್ಲೋಕಗಳಲ್ಲಿ ಕೃಷ್ಣನೇ ತನ್ನ ಮಾತುಗಳಲ್ಲಿ ಯಾರೂ 'ಅಪ್ರಿಯರಲ್ಲ ಅಥವಾ ಪ್ರಿಯರಲ್ಲ' ಎಂದು ಹೇಳುವುದನ್ನು ಹೇಗೆ ತಾನೆ ಮೇಲಿನ ಮಾತುಗಳ ಜೊತೆ ಸಾಮರಸ್ಯಗೊಳಿಸಲು ಸಾಧ್ಯ. ದಾನವರನ್ನು ಹೆಸರಿಸುವಾಗ ಉಪಯೋಗಿಸುವ ಭಾಷೆ ಮಧುರವಾಗಿಲ್ಲ. 'ಅವರನ್ನು ಪಾಪ ಯೋನಿಗೆ ಎಸೆಯುತ್ತೇನೆ'. ಈ ಜನರು ಕೃಷ್ಣನಿಗೆ 'ಪ್ರಿಯರೂ ಅಲ್ಲ ಅಪ್ರಿಯರೂ ಅಲ್ಲ' ಎಂದು ನಿಖರವಾಗಿ ಹೇಳುವುದು ಕಂಡುಬರುವುದಿಲ್ಲ. ಇವೆಲ್ಲ ನನ್ನ ದೃಷ್ಟಿಯಲ್ಲಿ ಗೀತೆಯಲ್ಲಿ ಕಂಡುಬರುವ ಅಸಾಂಗತ್ಯಗಳು. ಇದನ್ನು ವಿವರಿಸಲಾಗದಿದ್ದರೂ ಪ್ರಾಯಶಃ ಸತ್ಯವನ್ನು ಅರಸುವ ಒಂದು ಮನಸ್ಸನ್ನು ಸೂಚಿಸುತ್ತದೆ. ಪ್ರೊ. ಮ್ಯಾಕ್ಸ್‌ಮುಲ್ಲರ್ ಹೇಳುವಂತೆ ಸಮಗ್ರವೂ ಸುವ್ಯವಸ್ಥಿತವೂ ಆದ ತತ್ವಜ್ಞಾನವನ್ನು ಸವಿಸ್ತಾರವಾಗಿ ಪ್ರತಿಪಾದಿಸುವ ಒಂದು ಮನಸ್ಸನ್ನು ಇಲ್ಲಿ ಕಾಣುತ್ತೇವೆ. ಈ ಎಲ್ಲ ಅಸಾಂಗತ್ಯಗಳು ಇಡಿಕಿರಿದಿವೆ ಎಂಬ ಪ್ರಜ್ಞೆ ಕೂಡ ಲೇಖಕನಿಗೆ ಇದ್ದಂತಿಲ್ಲ. ಚರ್ಚಿತವಾಗುವ ವಿಶೇಷ ವಿಷಯಕ್ಕೆ ಸಂಬಂಧಿಸಿದಂತೆ ಇಲ್ಲಿ ಸ್ವಲ್ಪ ಅರೆಸತ್ಯ, ಅಲ್ಲಿ ಸ್ವಲ್ಪ ಅರೆಸತ್ಯ ನಾನಾ ಶ್ಲೋಕಗಳ ಸಂದರ್ಭಗಳಲ್ಲಿ ಕಾಣುತ್ತದೆಂದು ನನ್ನ ಅಭಿಮತ. ಆದರೆ ಮೇಲುನೋಟಕ್ಕೆ ಅಸಾಂಗತ್ಯಗಳಂತೆ ಕಾಣುವ ಈ ಎಲ್ಲ ಅರೆಸತ್ಯಗಳು ಒಂದು ಅಖಂಡ ಸಾಮರಸ್ಯದಲ್ಲಿ ಸಂಯೋಜನೆಯಾಗಿ ಅದರಲ್ಲಿ ಈ ಎಲ್ಲ ಅಸಾಂಗತ್ಯಗಳು ಸಂಪೂರ್ಣವಾಗಿ ಕರಗಿಹೋಗುವ ಮಟ್ಟಿಗೆ ಉನ್ನತತರವಾದ ಸಮನ್ವಯವನ್ನು ಉಂಟು ಮಾಡಲು ಪ್ರಯತ್ನ ನಡೆದಿಲ್ಲ."

ಇವು ಆಧುನಿಕ ವಿದ್ವಾಂಸರು ಎಂದು ಹೇಳಬಹುದಾದವರ ಅಭಿಪ್ರಾಯಗಳು. ಸಂಪ್ರದಾಯ ಶರಣ ಪಂಡಿತರ ಅಭಿಪ್ರಾಯ ನೋಡಿದರೆ ಅಲ್ಲಿಯೂ ನಮಗೆ ವೈವಿಧ್ಯ ಕಾಣುತ್ತದೆ. ಭಾಗವತ ಒಂದು ಪಂಥದ ಗ್ರಂಥವಲ್ಲ ಎಂದು ಒಂದು ದೃಷ್ಟಿಯಿದೆ. ಅದು ಮೂರು ವಿಧವಾದ ಮೋಕ್ಷಕ್ಕೆ ಸಮಾನ ಗೌರವವನ್ನು ತೋರಿಸುತ್ತದೆ: (೧) ಕರ್ಮಮಾರ್ಗ, (೨) ಭಕ್ತಿ ಮಾರ್ಗ, (೩) ಜ್ಞಾನ ಮಾರ್ಗ. ಈ ಮೂರೂ ಮೋಕ್ಷ ಸಾಧನೆಗೆ ಸಹಾಯಕವಾಗಿವೆ ಎಂದು ಬೋಧಿಸುತ್ತದೆ. ಈ ವಾದವನ್ನು ಗೀತೆ ಬೆಂಬಲಿಸಿ ಮೋಕ್ಷಸಾಧನೆಯ ಈ ಮೂರು ಮಾರ್ಗಗಳನ್ನು ಗೌರವಿಸುತ್ತದೆ. ಪ್ರತಿಯೊಂದು ಮಾರ್ಗವೂ ಪರಿಣಾಮಕಾರಿಯೆಂದು ಒಪ್ಪಿಕೊಳ್ಳುತ್ತದೆ. ಗೀತೆಯ ೧೮ ಅಧ್ಯಾಯಗಳಲ್ಲಿ ೧ ರಿಂದ ೬ ರವರೆಗಿನ ಅಧ್ಯಾಯಗಳು ಜ್ಞಾನಮಾರ್ಗದ ಬೋಧನೆಗೂ ೭ ರಿಂದ ೧೨ರ ವರೆಗಿನ ಅಧ್ಯಾಯಗಳು ಕರ್ಮಮಾರ್ಗದ ಬೋಧನೆಗೂ ಮತ್ತು ೧೨ರಿಂದ ೧೮ ರವರೆಗಿನ ಅಧ್ಯಾಯಗಳು ಭಕ್ತಿಮಾರ್ಗದ ಬೋಧನೆಗೂ ಮೀಸಲಾಗಿವೆ. ಗೀತೆಯ ಅಧ್ಯಾಯಗಳು ಈ ರೀತಿ ಸಮವಾಗಿ ವಿಂಗಡಣೆಯಾಗಿರುವುದು ಅದು ಎಲ್ಲಾ ಮೂರು ಮಾರ್ಗಗಳನ್ನೂ ಎತ್ತಿ ಹಿಡಿಯುತ್ತದೆಂದು ಪಂಡಿತರು ವಾದಿಸುತ್ತಾರೆ.

ಪಂಡಿತರ ಈ ವಾದಕ್ಕೆ ಸಂಪೂರ್ಣವಾಗಿ ಭಿನ್ನವಾಗಿದೆ ಶಂಕರಾಚಾರ್ಯ ಮತ್ತು ಶ್ರೀ ತಿಲಕರ ವಾದ. ಇವರಿಬ್ಬರನ್ನು ಸಂಪ್ರದಾಯ ಶರಣ ಲೇಖಕರ ಗುಂಪಿಗೆ ಸೇರಿಸಬೇಕು. ಜ್ಞಾನ ಮಾರ್ಗವೊಂದೇ ಮೋಕ್ಷಕ್ಕೆ ನಿಜವಾದ ದಾರಿಯೆಂದು ಭಗವದ್ಗೀತೆ ಹೇಳುತ್ತದೆ ಎಂಬುದಾಗಿ ಶಂಕರಾಚಾರ್ಯರು ವಾದಿಸುತ್ತಾರೆ. ಶ್ರೀ ತಿಲಕರು ಹಿಂದಿನ ಇತರ ವಿದ್ವಾಂಸರ ಯಾವ ವಾದವನ್ನೂ ಒಪ್ಪುವುದಿಲ್ಲ. ಗೀತೆ ಅಸಾಂಗತ್ಯಗಳ ಕಂತೆ

---

೧. ಅಧ್ಯಾಯ ೭, ಶ್ಲೋಕ ೧೭, ನೋಡಿ ಇಲ್ಲಿ ಜ್ಞಾನಯೋಗಿ ಕೃಷ್ಣನಿಗೆ 'ಪ್ರಿಯ'ವೆಂದು ಘೋಷಿಸಲಾಗಿದೆ.

ಎಂಬ ವಾದವನ್ನು ಅವರು ತಿರಸ್ಕರಿಸುತ್ತಾರೆ. ಮೋಕ್ಷದ ಎಲ್ಲ ಮೂರು ಮಾರ್ಗಗಳನ್ನೂ ಭಗವದ್ಗೀತೆ ಒಪ್ಪಿಕೊಳ್ಳುತ್ತದೆ, ಎಂದು ಹೇಳುವ ಪಂಡಿತರ ಅಭಿಪ್ರಾಯವನ್ನು ತಿಲಕರು ಒಪ್ಪುವುದಿಲ್ಲ. ಶಂಕರಾಚಾರ್ಯರಂತೆ ಅವರೂ ಕೂಡ ಭಗವದ್ಗೀತೆ ಒಂದು ನಿಶ್ಚಿತ ತತ್ವವನ್ನು ಬೋಧಿಸುತ್ತದೆ ಎಂದು ಒತ್ತಾಯಪೂರ್ವಕವಾಗಿ ಹೇಳುತ್ತಾರೆ. ಆದರೆ ಅವರು ಶಂಕರಾಚಾರ್ಯರ ವಾದವನ್ನು ಒಪ್ಪದೆ ಗೀತೆ ಕರ್ಮಯೋಗವನ್ನು ಬೋಧಿಸುತ್ತದೆ, ಜ್ಞಾನಯೋಗವನ್ನಲ್ಲ ಎನ್ನುತ್ತಾರೆ.

ಭಗವದ್ಗೀತೆ ಬೋಧಿಸುವ ಸಂದೇಶ ಏನು ಎಂಬುದರ ಬಗ್ಗೆ ಇಂತಹ ವೈವಿಧ್ಯಮಯವಾದ ಅಭಿಪ್ರಾಯ ಕಾಣುವುದು ದೊಡ್ಡ ಆಶ್ಚರ್ಯದ ಸಂಗತಿಯಲ್ಲ. ವಿದ್ವಾಂಸರು ದಾರಿ ತಪ್ಪಿದ್ದಾರೆಂಬುದದೇ ಇದಕ್ಕೆ ನನ್ನ ಉತ್ತರ. ಖುರಾನ್, ಬೈಬಲ್ ಅಥವಾ ಧಮ್ಮಪದದ ಹಾಗೆ ಭಗವದ್ಗೀತೆಯೂ ಕೂಡ ಒಂದು ಸಂದೇಶವನ್ನು ಕೊಡುತ್ತದೆ ಎಂಬ ಭಾವನೆಯಿಂದ ಅವರು ಹೊರಟಿದ್ದಾರೆ. ನನ್ನ ಅಭಿಪ್ರಾಯದಲ್ಲಿ ಈ ಭಾವನೆ ಸಂಪೂರ್ಣವಾಗಿ ತಪ್ಪು ಭಾವನೆಯಾಗಿದೆ. ಭಗವದ್ಗೀತೆಯು ದೇವವಾಣಿಯಲ್ಲ. ಆದ್ದರಿಂದ ಅದು ಯಾವ ಸಂದೇಶವನ್ನೂ ಕೊಡಲಾರದು. ಅದನ್ನು ಹುಡುಕುವುದು ವ್ಯರ್ಥ. ಭಗವದ್ಗೀತೆ ಧರ್ಮಗ್ರಂಥವೂ ಅಲ್ಲ ದರ್ಶನ ಗ್ರಂಥವೂ ಅಲ್ಲ ಎಂಬುದೇ ನನ್ನ ಉತ್ತರ. ತಾತ್ವಿಕ ನೆಲೆಗಟ್ಟಿನ ಮೇಲೆ ಕೆಲವು ಧಾರ್ಮಿಕ ನಂಬಿಕೆಗಳನ್ನು ಸಮರ್ಥಿಸುವುದೇ ಭಗವದ್ಗೀತೆಯ ಉದ್ದೇಶ. ಈ ಕಾರಣದಿಂದಾಗಿ ಅದನ್ನು ಯಾರಾದರೂ ಧರ್ಮಗ್ರಂಥ ಅಥವಾ ದರ್ಶನಗ್ರಂಥ ಎಂದು ಕರೆಯಲಿಚ್ಛಿಸಿದರೆ ಅವರು ಹಾಗೆಯೇ ಮಾಡಲಿ. ಆದರೆ ಅದು ಮೂಲಭೂತವಾಗಿ ಇದಾವುದೂ ಅಲ್ಲ. ಅದು ಧರ್ಮವನ್ನು ಸಮರ್ಥಿಸಲು ತತ್ವಜ್ಞಾನವನ್ನು ಬಳಸುತ್ತದೆ. ಈ ವಾದದ ಕೇವಲ ಹೇಳಿಕೆಯಿಂದ ನನ್ನ ವಿರೋಧಿಗಳು ತೃಪ್ತರಾಗುವುದಿಲ್ಲ. ನಿಶ್ಚಿತ ನಿದರ್ಶನಗಳಿಂದ ನನ್ನ ವಾದವನ್ನು ಸಾಬೀತುಪಡಿಸಬೇಕೆಂದು ಅವರು ಒತ್ತಾಯಪಡಿಸಿಯಾರು. ಅದು ನಿಜವಾಗಿ ಅತ್ಯಂತ ಸುಲಭದ ಕೆಲಸ.

ಭಗವದ್ಗೀತೆಯನ್ನು ಓದಿದರೆ ಮೊಟ್ಟಮೊದಲಿಗೆ ಗೊತ್ತಾಗುವ ವಿಷಯವೆಂದರೆ ಯುದ್ಧದ ಸಮರ್ಥನೆ. ರಾಜ್ಯಕ್ಕಾಗಿ ಸ್ವಜನರನ್ನು ಕೊಲ್ಲುವುದಿಲ್ಲವೆಂದೂ, ಯುದ್ಧ ಮಾಡುವುದಿಲ್ಲವೆಂದೂ ಅರ್ಜುನ ಘೋಷಿಸಿದ್ದ. ಯುದ್ಧದಲ್ಲಿ ಕೊಲ್ಲುವುದನ್ನೂ, ಯುದ್ಧದ ಸಮರ್ಥನೆಯನ್ನೂ ಕೃಷ್ಣ ಹೇಳುತ್ತಾನೆ. ಯುದ್ಧದ ಈ ತಾತ್ವಿಕ ಸಮರ್ಥನೆಯನ್ನು ೨ನೇ ಅಧ್ಯಾಯದ ೧೧ರಿಂದ ೨೮ರ ವರೆಗಿನ ಶ್ಲೋಕಗಳಲ್ಲಿ ನೋಡಬಹುದು. ಭಗವದ್ಗೀತೆ ಕೊಡುವ ಯುದ್ಧದ ತಾತ್ವಿಕ ಸಮರ್ಥನೆಯ ವಾದ ಎರಡು ಧಾಟಿಯಲ್ಲಿ ಸಾಗುತ್ತದೆ. ಒಂದನೆಯ ವಾದವೆಂದರೆ ಲೋಕ ನಶ್ವರ, ಮನುಷ್ಯ ಶಾಶ್ವತವಲ್ಲ. ಕೊನೆಗೆ ಎಲ್ಲವೂ ನಶಿಸಲೇಬೇಕು. ಮನುಷ್ಯ ಸಾಯುತ್ತಾನೆ. ಮನುಷ್ಯನ ಸ್ವಾಭಾವಿಕ ಸಾವಿಗೂ ಅಥವಾ ಅವನು ಹಿಂಸೆಗೀಡಾಗಿ ಸಾಯುವುದಕ್ಕೂ ಯಾವುದೇ ಭೇದವನ್ನೂ ವಿವೇಕಿಗಳು ಮಾಡುವುದಿಲ್ಲ. ಜೀವ ಅಶಾಶ್ವತ ಅದು ಕೊನೆಗೊಂಡಿತೆಂದು ಏತಕ್ಕೆ ಕಣ್ಣೀರು ಕರೆಯಬೇಕು? ಸಾವು ಅನಿವಾರ್ಯ. ಅದು ಹೇಗೆ ಉಂಟಾಯಿತು ಎಂದು ಏಕೆ ತಲೆಕೆಡಿಸಿಕೊಳ್ಳುವುದು? ಯುದ್ಧ ಸಮರ್ಥನವಾದದ ಎರಡನೆಯ ಧಾಟಿ ಎಂದರೆ ದೇಹ ಮತ್ತು ಆತ್ಮ ಎರಡೂ ಒಂದೇ ಎಂಬ ತಪ್ಪು ತಿಳುವಳಿಕೆ. ಅವೆರಡು ಬೇರೆ ಬೇರೆಯಾದವು. ಈ ಎರಡು ವಿಚಾರಗಳು ಎಷ್ಟು ಸ್ಪಷ್ಟವಾಗಿವೆಯೆಂದರೆ ದೇಹ ನಶ್ವರವಾದರೆ ಆತ್ಮ ಅಮರ. ಸಾವು ಬಂದರೆ ಶರೀರ ಸಾಯುತ್ತದೆ. ಆತ್ಮ ಸಾಯುವುದಿಲ್ಲ. ಅದು ಸಾಯದಿರುವುದಷ್ಟೇ ಅಲ್ಲ. ಅದನ್ನು ಗಾಳಿ ಒಣಗಿಸಲಾರದು, ಬೆಂಕಿ ಸುಡಲಾರದು, ಶಸ್ತ್ರ ಕತ್ತರಿಸಲಾರದು. ಆದ್ದರಿಂದ ಮನುಷ್ಯನನ್ನು ಕೊಂದಾಗ ಅವನ ಆತ್ಮ ಸತ್ತಿತೆಂದು ತಿಳಿಯುವುದು ತಪ್ಪು. ಆಗ ದೇಹ ಮಾತ್ರ ಸಾಯುತ್ತದೆ. ವ್ಯಕ್ತಿ ಹಳೆಯ ಬಟ್ಟೆಗಳನ್ನು ಬಿಸುಡುವಂತೆ ಆತ್ಮ ಸತ್ತ ದೇಹವನ್ನು ತ್ಯಜಿಸುತ್ತದೆ. ಅದು ಹೊಸ

ದೇಹಗಳನ್ನು ತೊಟ್ಟು ಮುಂದುವರೆಯುತ್ತದೆ. ಆತ್ಮ ಎಂದೂ ಕೊಲೆಯಾಗದಿರುವುದರಿಂದ ವ್ಯಕ್ತಿಯನ್ನು ಕೊಲ್ಲುವುದು ಯಾವುದೇ ಚಳವಳಿಯ ವಿಷಯವಾಗುವುದಿಲ್ಲ. ಆದ್ದರಿಂದ ಯುದ್ಧ ಮತ್ತು ಕೊಲೆ ಮಾಡಿದ್ದಕ್ಕಾಗಿ ಪಶ್ಚಾತ್ತಾಪ ಅಥವಾ ಲಜ್ಜೆ ಪಡಬೇಕಾಗಿಲ್ಲವೆಂದು ಭಗವದ್ಗೀತೆ ವಾದಿಸುತ್ತದೆ.

ಭಗವದ್ಗೀತೆ ಕೊಡುವ ಇನ್ನೊಂದು ಪ್ರಶ್ನಾತೀತ ನಂಬಿಕೆಯ ತಾತ್ವಿಕ ಸಮರ್ಥನೆಯೆಂದರೆ ಚಾತುರ್ವರ್ಣ. ಚಾತುರ್ವರ್ಣ ದೈವಸೃಷ್ಟಿಯೆಂದೂ ಆದ್ದರಿಂದ ಪವಿತ್ರವೆಂದೂ ಭಗವದ್ಗೀತೆ ನಿಸ್ಸಂದೇಹವಾಗಿ ಹೇಳುತ್ತದೆ. ಆದರೆ ಅದರ ಸಮಂಜಸತೆ ಅದನ್ನು ಅವಲಂಬಿಸಿಲ್ಲ. ಮಾನವರ ಅತಂರ್ಗತ ಆಜನ್ಮ ಗುಣಗಳ ತತ್ವದೊಂದಿಗೆ ಚಾತುರ್ವರ್ಣ ಸಿದ್ಧಾಂತವನ್ನು ತಳುಕು ಹಾಕಿ ಅದಕ್ಕೆ ಒಂದು ತಾತ್ವಿಕ ನೆಲೆಗಟ್ಟನ್ನು ಅದು ಒದಗಿಸುತ್ತದೆ. ಮನುಷ್ಯನ ವರ್ಣವನ್ನು ಮನಸೇಚ್ಛೆ ತೀರ್ಮಾನಿಸಲು ಸಾಧ್ಯವಿಲ್ಲ ಎಂದು ಭಗವದ್ಗೀತೆ ಹೇಳುತ್ತದೆ. ಆದರೆ ಅದನ್ನು ಅವನ ಗುಣ ಕರ್ಮ ವಿಭಾಗಗಳಿಗೆ ಅನುಸಾರವಾಗಿ ನಿರ್ಧರಿಸಲಾಗಿದೆ.[೧]

ಭಗವದ್ಗೀತೆ ನೀಡುವ ತಾತ್ವಿಕ ಸಮರ್ಥನೆಯ ಮೂರನೆಯ ಪ್ರಶ್ನಾತೀತ ನಂಬಿಕೆಯೆಂದರೆ ಕರ್ಮಮಾರ್ಗ. ಭಗವದ್ಗೀತೆಯ ಅರ್ಥದಲ್ಲಿ ಕರ್ಮಮಾರ್ಗ ಎಂದರೆ ಮೋಕ್ಷಕ್ಕಾಗಿ ಮಾಡುವ ಯಜ್ಞಯಾಗಾದಿಗಳಾಗಿವೆ. ಭಗವದ್ಗೀತೆ ಉದ್ದಕ್ಕೂ ಕರ್ಮಮಾರ್ಗವನ್ನು ಎತ್ತಿಹಿಡಿಯುತ್ತದೆ ಹಾಗೂ ಅದನ್ನು ದೊಡ್ಡದಾಗಿ ಪ್ರತಿಪಾದಿಸುತ್ತದೆ. ಕರ್ಮಮಾರ್ಗಕ್ಕೆ ಅಂಟಿಕೊಂಡು ಅದನ್ನು ಸಂಪೂರ್ಣವಾಗಿ ಕುರೂಪಗೊಳಿಸಿದ್ದ ಕೊಳೆಯನ್ನೆಲ್ಲ ತೊಳೆದು ಅದನ್ನು ಸಮರ್ಥಿಸುವ ವಿಧಾನವನ್ನು ಅದು ಅನುಸರಿಸುತ್ತದೆ. ಮೂಢ ನಂಬಿಕೆಯೇ ಅದರ ಹೊಲಸು. ಇದನ್ನು ಹೋಗಲಾಡಿಸಲು ಕರ್ಮಯೋಗದ ಅವಶ್ಯಕ ಷರತ್ತಾಗಿ ಬುದ್ಧಿಯೋಗದ[೨] ತತ್ವವನ್ನು ಗೀತೆ ಹೇಳುತ್ತದೆ. ಸ್ಥಿತಪ್ರಜ್ಞರಾಗಲು (ಸಮಬುದ್ಧಿ) ಕರ್ಮಕಾಂಡ ಆಚರಿಸುವುದರಲ್ಲಿ ಯಾವ ತಪ್ಪೂ ಇಲ್ಲ. ಕರ್ಮಕಾಂಡಕ್ಕೆ ಅಂಟಿದ ಎರಡನೆಯ ಹೊಲಸೆಂದರೆ ಕರ್ಮಾಚರಣೆಯ ಹಿಂದಿನ ಸ್ವಾರ್ಥಬುದ್ಧಿ. ಇದನ್ನು ಹೋಗಲಾಡಿಸಲು ಭಗವದ್ಗೀತೆಯು ಅನಾಸಕ್ತಿ ಯೋಗ. ಅಂದರೆ ಫಲಾಪೇಕ್ಷೆಯಿಲ್ಲದೆ ಕರ್ಮ ಮಾಡು ಎಂಬ ತತ್ವವನ್ನು ಗೀತೆ ಹೇಳುತ್ತದೆ[೩]. ಬುದ್ಧಿಯೋಗದಲ್ಲಿ ನೆಲೆಯೂರಿ ಅನಾಸಕ್ತಿ ಯೋಗವಾದರೆ ಕರ್ಮಕಾಂಡದಲ್ಲಿ ತಪ್ಪೇನು? ಈ ರೀತಿಯಾಗಿ ಕರ್ಮಯೋಗವನ್ನು ಭಗವದ್ಗೀತೆ ಸಮರ್ಥಿಸುತ್ತದೆ.[೪] ಮೊದಲು ಇರದಿದ್ದ ತಾತ್ವಿಕ ಸಮರ್ಥನೆಯನ್ನು ಇತರ ಸಿದ್ಧಾಂತಗಳಿಗೂ ಇದೇ ಧಾಟಿಯಲ್ಲಿ ಕೊಡುವುದು ಸಂಪೂರ್ಣ ಸಾಧ್ಯ ಎಂಬುದನ್ನು ಗೀತೆ ಈ ರೀತಿ ತೋರಿಸುತ್ತದೆ. ಭಗವದ್ಗೀತೆಯ ಮೇಲೆ ಭಾಷ್ಯ ಬರೆಯುವುದಾದರೆ ಈ ರೀತಿ ಮಾಡಬಹುದು. ಆದರೆ ಪ್ರಾಚೀನ ಭಾರತೀಯ ಸಾಹಿತ್ಯದಲ್ಲಿ ಭಗವದ್ಗೀತೆಗೆ ಯೋಗ್ಯ ಸ್ಥಾನವನ್ನು ಕೊಡುವ ಮುಖ್ಯ ಉದ್ದೇಶವುಳ್ಳ ಈ ಅಧ್ಯಾಯದ ವ್ಯಾಪ್ತಿಗೆ ಅದು ಮೀರಿದುದು. ಆದ್ದರಿಂದ ಅತ್ಯಂತ ಮುಖ್ಯವಾದ ಈ ಸಿದ್ಧಾಂತಗಳನ್ನು ಮಾತ್ರ ನನ್ನ ಪ್ರಬಂಧದಲ್ಲಿ ಪ್ರತಿಪಾದಿಸಲು ಆರಿಸಿಕೊಂಡಿದ್ದೇನೆ.

ನನ್ನ ಪ್ರಬಂಧದ ಸಂಬಂಧವಾಗಿ ಬೇರೆ ಎರಡು ಪ್ರಶ್ನೆಗಳನ್ನು ಖಂಡಿತವಾಗಿ ಕೇಳಬಹುದು. ಭಗವದ್ಗೀತೆ ನೀಡುವ ಇಂತಹ ತಾತ್ವಿಕ ಸಮರ್ಥನೆಯ ಈ ಸಿದ್ಧಾಂತಗಳು ಯಾರವು? ಈ ಸಿದ್ಧಾಂತಗಳನ್ನು ಸಮರ್ಥಿಸಲು ಭಗವದ್ಗೀತೆಗೆ ಬಂದ ಅವಶ್ಯಕತೆಯೇನು?

---

೧. 'ಭಗವದ್ಗೀತೆ', ಅಧ್ಯಾಯ ೪, ಶ್ಲೋಕ ೧೩.
೨. 'ಭಗವದ್ಗೀತೆ', ಅಧ್ಯಾಯ ೨, ಶ್ಲೋಕ ೩೯–೫೩.
೩. 'ಭಗವದ್ಗೀತೆ', ಅಧ್ಯಾಯ ೨, ಶ್ಲೋಕ ೪೭.
೪. 'ಭಗವದ್ಗೀತೆ', ಅಧ್ಯಾಯ ೨, ಶ್ಲೋಕ ೪೮ರಲ್ಲಿ ಇದು ಸಾರಭೂತವಾಗಿ ಬಂದಿದೆ.

ಮೊದಲ ಪ್ರಶ್ನೆಯನ್ನು ತೆಗೆದುಕೊಳ್ಳೋಣ: ಪ್ರತಿ ಕ್ರಾಂತಿಯ ಬೈಬಲ್ ಆದ ಜೈಮಿನಿಯ ಪೂರ್ವ ಮೀಮಾಂಸೆಯಲ್ಲಿ ಹೇಳಿರುವ ಪ್ರತಿ ಕ್ರಾಂತಿಯ ಸಿದ್ಧಾಂತಗಳೇ ಗೀತೆ ಸಮರ್ಥಿಸುವ ಸಿದ್ಧಾಂತಗಳು. ಈ ವಾದವನ್ನು ಒಪ್ಪಿಕೊಳ್ಳುವುದರಲ್ಲಿ ಯಾವ ತೊಂದರೆಯೂ ಇರಲಾರದು. ಇದ್ದರೆ ಅದು ಕರ್ಮಯೋಗ ಪದಕ್ಕೆ ಹಚ್ಚಿರುವ ತಪ್ಪು ಅರ್ಥ ಬಹುಮಟ್ಟಿಗೆ ಕಾರಣವಾಗಿದೆ. ಭಗವದ್ಗೀತೆಯ ಬಗ್ಗೆ ಬರೆದ ಬಹುಪಾಲು ಲೇಖಕರು ಕರ್ಮಯೋಗವನ್ನು 'ಕ್ರಿಯೆ' ಎಂದೂ, ಮತ್ತು ಜ್ಞಾನ ಯೋಗವನ್ನು 'ತಿಳುವಳಿಕೆ' ಎಂದೂ ಅನುವಾದಿಸಿ, ಸಾಮಾನ್ಯ ರೂಪದಲ್ಲಿ ಜ್ಞಾನ ಮತ್ತು ಕರ್ಮಗಳನ್ನು ಸಾದೃಶ್ಯವೈದೃಶ್ಯಗೊಳಿಸುತ್ತದೆಯೋ ಎಂಬಂತೆ ಭಗವದ್ಗೀತೆಯನ್ನು ಚರ್ಚಿಸುತ್ತಾರೆ. ಇದು ಸಂಪೂರ್ಣವಾಗಿ ತಪ್ಪು. ಜ್ಞಾನ ಮತ್ತು ಕರ್ಮಗಳ ಸಾಧಾರಣ ತಾತ್ವಿಕ ಚರ್ಚೆಯಲ್ಲಿ ಭಗವದ್ಗೀತೆ ತೊಡಗಿಲ್ಲ. ವಾಸ್ತವವಾಗಿ ಗೀತೆ ವ್ಯಷ್ಟಿಗೆ ಸಂಬಂಧಿಸಿದೆ, ಸಮಷ್ಟಿಗಲ್ಲ. ಗೀತೆಯ ಅರ್ಥದಲ್ಲಿ ಕರ್ಮಯೋಗ ಎಂದರೆ ಜೈಮಿನಿಯ ಕರ್ಮಕಾಂಡದಲ್ಲಿ ಸೇರಿರುವ ನಂಬಿಕೆಗಳು. ಜ್ಞಾನಯೋಗವೆಂದರೆ ಬಾದರಾಯಣನ ಬ್ರಹ್ಮಸೂತ್ರದಲ್ಲಿ ಸೇರಿರುವ ನಂಬಿಕೆಗಳು. ಕರ್ಮವನ್ನು ಕುರಿತು ಗೀತೆ ಮಾತನಾಡುವಾಗ ಕ್ರಿಯೆ ಅಥವಾ ನಿಷ್ಕ್ರಿಯೆ ಶಬ್ದಗಳನ್ನು ಸಾಮಾನ್ಯ ಅರ್ಥದಲ್ಲಿ ಬಳಸುತ್ತಿಲ್ಲ. ಆದರೆ ಕರ್ಮವೆಂದರೆ ಧಾರ್ಮಿಕ ವ್ರತಗಳು ಮತ್ತು ಆಚರಣೆಗಳು ಎಂಬ ಅರ್ಥದಲ್ಲಿ ಬದಲಾಗಿದೆ ಎಂಬುದನ್ನು ಗೀತೆಯನ್ನು ಓದಿದ ಯಾರೂ ಅಲ್ಲಗಳೆಯಲಾರರು. ಕ್ಷುಲ್ಲಕ ವಿಚಾರಗಳ ವಿವಾದದಲ್ಲಿ ತೊಡಗಿದ ಒಂದು ಪಕ್ಷದ ಕರಪತ್ರದ ಮಟ್ಟದಿಂದ ಉನ್ನತ ತತ್ವದರ್ಶನದ ವಿಷಯಗಳನ್ನು ಕುರಿತ ಒಂದು ಸಾರ್ವತ್ರಿಕ ವ್ಯಾಖ್ಯಾನವೆಂಬಂತೆ ತೋರಿಸಿ, ಕರ್ಮ ಮತ್ತು ಜ್ಞಾನ ಶಬ್ದಗಳಿಗೆ ವಿಪರೀತಾರ್ಥವನ್ನು ತುಂಬಿ ಅವು ಅರ್ಥಗೌರವದ ಶಬ್ದಗಳೆಂದು ಭಾಸವಾಗುವಂತೆ ಮಾಡಿ ಗೀತೆಗೆ ಜೀವ ತುಂಬುವ ಪ್ರಯತ್ನ ನಡೆದಿದೆ. ದೇಶಭಕ್ತಿ ಭಾರತೀಯರ ಈ ಸೋಗಿಗೆ ತಿಲಕರನ್ನು ಬಹುವಾಗಿ ನಿಂದಿಸಬೇಕಾಗುತ್ತದೆ. ಈ ತಪ್ಪು ಅರ್ಥಗಳ ಪರಿಣಾಮವೆಂದರೆ ಭಗವದ್ಗೀತೆಯು ಒಂದು ಸ್ವಯಂಪೂರ್ಣ ಸ್ವತಂತ್ರ ಗ್ರಂಥ. ಅದರ ಹಿಂದಿನ ಸಾಹಿತ್ಯಕ್ಕೂ ಅದಕ್ಕೂ ಏನೂ ಸಂಬಂಧವಿಲ್ಲ ಎಂಬ ನಂಬಿಕೆ ಬರುವಂತೆ ಜನರನ್ನು ದಾರಿ ತಪ್ಪಿಸಿದ್ದೇ ಆಗಿದೆ. ಆದರೆ ಭಗವದ್ಗೀತೆಯಲ್ಲಿ ಕರ್ಮಯೋಗವನ್ನು ಅದು ಬಳಕೆಯಾಗಿರುವಂತೆ ಅರ್ಥಮಾಡಿಕೊಂಡರೆ ಅದು ಜೈಮಿನಿ ಪ್ರತಿಪಾದಿಸಿರುವ ಕರ್ಮ ಸಿದ್ಧಾಂತಗಳನ್ನು ನವೀಕರಿಸಿ ಶಕ್ತಿಯುತಗೊಳಿಸುವುದಕ್ಕೆ ಅನ್ವಯಿಸುತ್ತದೆಯೇ ಹೊರತು ಬೇರಾವುದಕ್ಕೂ ಅಲ್ಲ ಎಂದು ಮನವರಿಕೆಯಾಗುತ್ತದೆ.

ಎರಡನೆಯ ಪ್ರಶ್ನೆಯನ್ನು ತೆಗೆದುಕೊಳ್ಳೋಣ: ಪ್ರತಿಕ್ರಾಂತಿಯ ಸಿದ್ಧಾಂತಗಳನ್ನು ಸಮರ್ಥಿಸುವ ಅಗತ್ಯ ಭಗವದ್ಗೀತೆಗೆ ಏಕೆ ಬಂತು? ನನ್ನ ದೃಷ್ಟಿಯಲ್ಲಿ ಉತ್ತರ ಬಹಳ ಸ್ಪಷ್ಟವಿದೆ. ಬೌದ್ಧಧರ್ಮದ ಪ್ರಹಾರದಿಂದ ಅವುಗಳನ್ನು ರಕ್ಷಿಸಲು ಭಗವದ್ಗೀತೆ ಅಸ್ತಿತ್ವಕ್ಕೆ ಬಂತು. ಬುದ್ಧ ಬೋಧಿಸಿದ್ದು ಅಹಿಂಸೆ. ಅದನ್ನು ಅವನು ಬೋಧನೆಯಷ್ಟೇ ಮಾಡಲಿಲ್ಲ. ಬ್ರಾಹ್ಮಣರನ್ನು ಬಿಟ್ಟರೆ ಉಳಿದೆಲ್ಲ ಜನರೂ ಅದನ್ನು ಜೀವನ ಮಾರ್ಗವೆಂದು ಅಂಗೀಕರಿಸಿದರು. ಅವರು ಹಿಂಸೆಯ ಬಗ್ಗೆ ಹೇವರಿಕೆ ತಾಳಿದರು. ಬುದ್ಧ ಚಾತುರ್ವರ್ಣದ ವಿರುದ್ಧ ಬೋಧಿಸಿದನು. ಚಾತುರ್ವರ್ಣ ಸಿದ್ಧಾಂತವನ್ನು ಖಂಡಿಸಲು ಕೆಲವು ಅತ್ಯಂತ ಖೇದಕಾರಿ ಹೋಲಿಕೆಗಳನ್ನು ಬಳಸಿದನು. ಚಾತುರ್ವರ್ಣದ ಚೌಕಟ್ಟು ಒಡೆದುಹೋಗಿತ್ತು. ಚಾತುರ್ವರ್ಣ ವ್ಯವಸ್ಥೆ ತಲೆಕೆಳಗಾಗಿತ್ತು. ಶೂದ್ರರು ಮತ್ತು ಸ್ತ್ರೀಯರು ಸನ್ಯಾಸಿಗಳಾಗಿದ್ದರು. ಈ ಸ್ಥಾನವನ್ನು ಪ್ರತಿಕ್ರಾಂತಿ ಅವರಿಗೆ ನಿರಾಕರಿಸಿತ್ತು. ಬುದ್ಧ ಕರ್ಮಕಾಂಡಗಳನ್ನೂ, ಯಜ್ಞಗಳನ್ನೂ, ಅವುಗಳು ಹಿಂಸಮಯವಾದ್ದರಿಂದ ಖಂಡಿಸಿದ್ದನು. ಫಲಾಪೇಕ್ಷೆಯ ಸ್ವಾರ್ಥ ಲಾಲಸೆ ಅವುಗಳಲ್ಲಿದ್ದುದರಿಂದಲೂ ಅವುಗಳನ್ನು ಖಂಡಿಸಿದನು. ಈ ಖಂಡನೆಗೆ ಪ್ರತಿ ಕ್ರಾಂತಿಕಾರಿಗಳ ಉತ್ತರವಾದರೂ ಏನು? ಇಷ್ಟೆ. ಇವುಗಳು ವೇದ ಸಮ್ಮತವಾಗಿದ್ದವು, ವೇದಗಳು ದೋಷಾತೀತವಾದವು. ಆದ್ದರಿಂದ ಈ ಸಿದ್ಧಾಂತಗಳನ್ನು ಪ್ರಶ್ನಿಸುವಂತಿರಲಿಲ್ಲ. ಭಾರತ ಕಂಡ

ಅತ್ಯಂತ ಜ್ಞಾನ ಪ್ರದೀಪಕವೂ ಬಹು ವೈಚಾರಿಕವೂ ಆದ ಬೌದ್ಧಯುಗದಲ್ಲಿ ಮೇಲಿನ ಸಿದ್ಧಾಂತಗಳು ಅಂತಹ ಮೂಢ, ನಿರಂಕುಶ, ಅವೈಚಾರಿಕ ಹಾಗೂ ದುರ್ಬಲ ತಳಪಾಯದ ಮೇಲೆ ನಿಲ್ಲುವುದು ಸಾಧ್ಯವಿರಲಿಲ್ಲ. ಅಹಿಂಸೆಯನ್ನು ಜೀವನ ತತ್ವವೆಂದು ನಂಬಿ, ಅದೇ ಜೀವನ ಮಾರ್ಗ ಎನ್ನುವವರೆಗೆ ಜನತೆ, ಕ್ಷತ್ರಿಯನ ಧರ್ಮ ಕೊಲ್ಲುವುದು ಹಾಗೆ ಕೊಲ್ಲುವುದರಿಂದ ಪಾಪವಿಲ್ಲ ಎಂದು ವೇದ ಹೇಳುವ ಸಿದ್ಧಾಂತವನ್ನು ಅಂಗೀಕರಿಸುತ್ತಾರೆಂದು ನಿರೀಕ್ಷಿಸುವುದಾದರೂ ಹೇಗೆ? ಸಾಮಾಜಿಕ ಸಮಾನತೆಯ ಸಂದೇಶವನ್ನು ಒಪ್ಪಿಕೊಂಡು ತಮ್ಮ ತಮ್ಮ ಯೋಗ್ಯತಾನುಸಾರ ಸಮಾಜವನ್ನು ಪುನರ್ನಿರ್ಮಾಣ ಮಾಡುತ್ತಿದ್ದ ಜನತೆ ವೇದ ಹೇಳುತ್ತದೆಂಬ ಕಾರಣಕ್ಕಾಗಿ ಮಾತ್ರ ಶ್ರೇಣೀಕೃತ ಚಾತುರ್ವರ್ಣ ಸಿದ್ಧಾಂತವನ್ನೂ, ಹುಟ್ಟಿನ ಆಧಾರದ ಮೇಲೆ ಮಾನವ ಪ್ರತ್ಯೇಕತೆಯನ್ನೂ ಹೇಗೆ ತಾನೆ ಒಪ್ಪುತ್ತಾರೆ? ಸಮಾಜದ ಸರ್ವ ದುಃಖಕ್ಕೂ ತೃಷ್ಣೆ ಅಥವಾ ಟಾನಿ ಹೇಳುವಂತೆ ಸಂಗ್ರಹ ಪ್ರವೃತ್ತಿ ಕಾರಣ ಎಂಬ ಬುದ್ಧನ ಉಪದೇಶವನ್ನು ಒಪ್ಪಿಕೊಂಡಿದ್ದ ಜನತೆ ಯಜ್ಞಯಾಗಾದಿಗಳ ಮೂಲಕ ವರಗಳನ್ನು ಪಡೆಯಬಹುದು ಎಂದು ಜನರಿಗೆ ಉದ್ದೇಶಪೂರ್ವಕವಾಗಿ ಹೇಳುತ್ತಿದ್ದ ಧರ್ಮವನ್ನು, ಅದಕ್ಕೆ ವೇದ ಪ್ರಾಮಾಣ್ಯವಿದೆ ಎಂಬ ಕಾರಣಕ್ಕೆ ಮಾತ್ರ, ಹೇಗೆ ಒಪ್ಪುತ್ತಾರೆ? ಬೌದ್ಧ ಧರ್ಮದ ಉಗ್ರಧಾಳಿಯಲ್ಲಿ ಜೈಮಿನಿಯ ಪ್ರತಿಕ್ರಾಂತಿಕಾರಿ ಸಿದ್ಧಾಂತಗಳು ತತ್ತರಿಸತೊಡಗಿದ್ದವು. ಅವುಗಳಿಗೆ ಭಗವದ್ಗೀತೆಯ ಬೆಂಬಲವಿಲ್ಲದಿದ್ದರೆ ಕುಸಿದುಬೀಳುತ್ತಿದ್ದವು ಎಂಬುದರಲ್ಲಿ ಅನುಮಾನವಿಲ್ಲ. ಭಗವದ್ಗೀತೆ ನೀಡಿದ ಪ್ರತಿಕ್ರಾಂತಿಯ ಸಿದ್ಧಾಂತಗಳ ತಾತ್ವಿಕ ಸಮರ್ಥನೆಯನ್ನು ಭೇದಿಸುವುದೇನೂ ಕಷ್ಟವಲ್ಲ. ಕೊಲ್ಲುವುದೇ ಕ್ಷತ್ರಿಯನ ಕರ್ತವ್ಯವೆಂದು ಹೇಳುವ ಭಗವದ್ಗೀತೆಯ ತಾತ್ವಿಕ ಸಮರ್ಥನೆ, ಅತ್ಯಂತ ಕನಿಷ್ಠವಾಗಿ ಹೇಳುವುದಾದರೆ, ಬಾಲಿಶವಾಗಿದೆ. ಕೊಂದರೆ ಕೊಲೆಯಲ್ಲ, ಏಕೆಂದರೆ ಕೊಲೆಯಾಗುವುದು ದೇಹ, ಆತ್ಮವಲ್ಲ ಎಂದು ಹೇಳುವುದು ಎಂದೂ ಕೇಳರಿಯದಂತಹ ಕೊಲೆಯ ಸಮರ್ಥನೆಯಾಗಿದೆ. ಸಿದ್ಧಾಂತಗಳು ಜನರನ್ನು ಭೀತಿಗೊಳಿಸುತ್ತವೆ ಎಂದು ಕೆಲವರು ಹೇಳುವ ಸಿದ್ಧಾಂತಗಳಲ್ಲಿ ಇದೂ ಒಂದು. ಕೊಲೆಗಾಗಿ ವಿಚಾರಣೆಯನ್ನು ಎದುರಿಸುತ್ತಿರುವ ಕಕ್ಷಿದಾರನ ಪರವಾಗಿ ಕೃಷ್ಣ ವಕಾಲತ್ತು ವಹಿಸಿ ಭಗವದ್ಗೀತೆಯಲ್ಲಿ ಅವನೇ ಹೇಳಿರುವ ಸಮರ್ಥನೆಯನ್ನು ಮುಂದಿಟ್ಟರೆ ಅವನನ್ನು ಹುಚ್ಚಾಸ್ಪತ್ರೆಗೆ ಕಳುಹಿಸುವುದರಲ್ಲಿ ತಿಲ ಮಾತ್ರವು ಅನುಮಾನವಿಲ್ಲ. ಅದೇ ರೀತಿಯಲ್ಲಿ ಚಾತುರ್ವರ್ಣ ಸಿದ್ಧಾಂತದ ಬಗೆಗಿನ ಭಗವದ್ಗೀತೆಯ ಸಮರ್ಥನೆ ಬಾಲಿಶವಾದದ್ದು. ಸಾಂಖ್ಯ ಗುಣತತ್ವದ ಆಧಾರದ ಮೇಲೆ ಕೃಷ್ಣ ಅದನ್ನು ಸಮರ್ಥಿಸುತ್ತಾನೆ. ಆದರೆ ತಾನೆಂಥ ಮೂರ್ಖನೆಂಬುದನ್ನು ಕೃಷ್ಣ ತಿಳಿದುಕೊಂಡಂತೆ ಕಾಣುವುದಿಲ್ಲ. ಚಾತುರ್ವರ್ಣದಲ್ಲಿ ನಾಲ್ಕು ವರ್ಣಗಳಿವೆ. ಆದರೆ ಸಾಂಖ್ಯರ ಪ್ರಕಾರ ಗುಣಗಳು ಮೂರು ಮಾತ್ರ. ಮೂರಕ್ಕಿಂತ ಹೆಚ್ಚು ಗುಣಗಳನ್ನು ಅಂಗೀಕರಿಸದ ತತ್ವದ ಆಧಾರದ ಮೇಲೆ ನಾಲ್ಕು ವರ್ಣಗಳ ವ್ಯವಸ್ಥೆಯನ್ನು ಸಮರ್ಥಿಸಲು ಹೇಗೆ ಸಾಧ್ಯ? ಪ್ರತಿಕ್ರಾಂತಿಯ ಸಿದ್ಧಾಂತಗಳಿಗೆ ತಾತ್ವಿಕ ಸಮರ್ಥನೆಯನ್ನು ಕೊಡುವ ಭಗವದ್ಗೀತೆಯ ಇಡಿ ಪ್ರಯತ್ನವೇ ಬಾಲಿಶವಾಗಿದೆ. ಇದು ಒಂದು ಕ್ಷಣದ ಗಂಭೀರ ಆಲೋಚನೆಗೂ ಸಹ ಅರ್ಹವಾಗಿಲ್ಲ. ಆದಾಗ್ಯೂ ಭಗವದ್ಗೀತೆಯ ನೆರವಿಲ್ಲದಿದ್ದರೆ ಪ್ರತಿಕ್ರಾಂತಿಯು ತನ್ನ ಸಿದ್ಧಾಂತಗಳ ಸಂಪೂರ್ಣ ಗುಗ್ಗುತನದಿಂದ ಸತ್ತುಹೋಗುತ್ತಿತ್ತು ಎಂಬುದರಲ್ಲಿ ಕೊಂಚವೂ ಅನುಮಾನವಿಲ್ಲ. ಭಗವದ್ಗೀತೆ ನಿರ್ವಹಿಸಿದ ಪಾತ್ರ ಕ್ರಾಂತಿಕಾರಿಗಳಿಗೆ ಕುಚೇಷ್ಟೆಯಂತೆ ಕಂಡರೂ ಅದು ಪ್ರತಿಕ್ರಾಂತಿಗೆ ಜೀವ ತುಂಬಿತು ಎನ್ನುವುದರಲ್ಲಿ ಯಾವ ಅನುಮಾನವೂ ಇಲ್ಲ. ಇವತ್ತಿಗೂ ಕೂಡ ಪ್ರತಿಕ್ರಾಂತಿಯು ಜೀವಂತವಾಗಿದ್ದರೆ ಅದು ಭಗವದ್ಗೀತೆಯಿಂದ ಪಡೆದ ವೇದವಿರೋಧ ಮತ್ತು ಯಜ್ಞವಿರೋಧದ ತಾತ್ವಿಕ ಸಮರ್ಥನೆಯ ಸಂಭಾವ್ಯತೆಯೇ ಸಂಪೂರ್ಣವಾಗಿ ಕಾರಣವಾಗಿದೆ. ಇದಕ್ಕಿಂತ ದೊಡ್ಡ ತಪ್ಪು ಬೇರೆ ಇಲ್ಲ. ಭಗವದ್ಗೀತೆಯ ಬೇರೆ ಭಾಗಗಳಲ್ಲಿ ಕಂಡುಬರುವಂತೆ ಅದು ವೇದ ಪ್ರಮಾಣಕ್ಕೂ ಶಾಸ್ತ್ರ ಪ್ರಮಾಣಕ್ಕೂ ವಿರೋಧಿಯಾಗಿಲ್ಲ. (ಗೀತೆ ೧೬, ೨೩–೨೪; ೧೭, ೧೧, ೧೩, ೨೪). ಯಜ್ಞ ಪಾವಿತ್ರ್ಯಕ್ಕೂ

ಅದು ವಿರೋಧವಲ್ಲ. ಎರಡರ ಶ್ರೇಷ್ಠತೆಯನ್ನೂ ಅದು ಎತ್ತಿ ಹಿಡಿಯುತ್ತದೆ. ಆದ್ದರಿಂದ ಜೈಮಿನಿಯ ಪೂರ್ವ ಮೀಮಾಂಸೆ ಮತ್ತು ಭಗವದ್ಗೀತೆಯ ನಡುವೆ ಯಾವ ವ್ಯತ್ಯಾಸವೂ ಇಲ್ಲ. ಹಾಗೇನಾದರೂ ಇದ್ದರೆ, ಜೈಮಿನಿಯ ಪೂರ್ವ ಮೀಮಾಂಸೆಗೆ ಎಂದಿಗೂ ಸಾಧ್ಯವಾಗುವುದಕ್ಕಿಂತ ಹೆಚ್ಚಾಗಿ ಭಗವದ್ಗೀತೆಯು ಪ್ರತಿಕ್ರಾಂತಿಯ ದುರ್ದಮ ಬೆಂಬಲಿಗನಾಗಿದೆ. ಅದು ದುರ್ದಮ ಏಕೆಂದರೆ ಪ್ರತಿಕ್ರಾಂತಿಯ ಸಿದ್ಧಾಂತಗಳಿಗೆ ತಾತ್ವಿಕ, ಆದ್ದರಿಂದ ಅವುಗಳಿಗೆ ಹಿಂದೆಂದೂ ಇಲ್ಲದಿದ್ದ, ಶಾಶ್ವತ ಬುನಾದಿಯನ್ನು ಕೊಡಲು ಅದು ಪ್ರಯತ್ನಿಸುತ್ತದೆ ಹಾಗೂ ಆ ಆಧಾರವಿಲ್ಲದಿದ್ದರೆ ಚಾತುರ್ವರ್ಣ್ಯಕ್ಕೆ ಭಗವದ್ಗೀತೆಯು ಜೈಮಿನಿಯ ಪೂರ್ವ ಮೀಮಾಂಸೆಗಿಂತ ತಾತ್ವಿಕ ಬೆಂಬಲವನ್ನು ಪ್ರಬಲವಾಗಿ ನೀಡುತ್ತದೆ. ಭಗವದ್ಗೀತೆಯ ಹೃದಯವೇ ಚಾತುರ್ವರ್ಣ್ಯದ ಸಮರ್ಥನೆ ಮತ್ತು ಅನುಷ್ಠಾನದಲ್ಲಿ ಅದರ ಆಚರಣೆಯನ್ನು ತರುವುದು. ಗುಣ ಕರ್ಮದ ಮೇಲೆ ಚಾತುರ್ವರ್ಣ್ಯ ನಿಂತಿದೆ ಎಂದು ಹೇಳುವಷ್ಟರಲ್ಲಿ ಕೃಷ್ಣ ತೃಪ್ತನಾಗುವುದಿಲ್ಲ, ಆದರೆ ಅವನು ಇನ್ನೂ ಮುಂದೆ ಹೋಗಿ ಎರಡು ಅನುಷ್ಠಾನ ಯೋಗ್ಯವಾದ ಕಟ್ಟಳೆಗಳನ್ನು ವಿಧಿಸುತ್ತಾನೆ. ಮೊದಲನೆಯ ಕಟ್ಟಳೆ ಅಧ್ಯಾಯ ೩, ಶ್ಲೋಕ ೨೬ರಲ್ಲಿ ಅಡಕವಾಗಿದೆ. ಇಲ್ಲಿ ಕೃಷ್ಣ ಹೇಳುತ್ತಾನೆ: ಚಾತುರ್ವರ್ಣ್ಯದ ನಿಯಮಗಳನ್ನು ಒಳಗೊಂಡಿರುವ ಕರ್ಮಕಾಂಡದ ಅನುಯಾಯಿಯಾದ ಅಜ್ಞಾನಿಯ ಮನಸ್ಸಿನಲ್ಲಿ ಅಪಪ್ರಚಾರ ಮಾಡುವ ಮೂಲಕ ಜ್ಞಾನಿಯಾದವನು ಅನುಮಾನವನ್ನು ಹುಟ್ಟಿಸಬಾರದು. ಬೇರೆ ಮಾತಿನಲ್ಲಿ ಹೇಳುವುದಾದರೆ, ಕರ್ಮಕಾಂಡ ಸಿದ್ಧಾಂತ ಮತ್ತು ಅದು ಒಳಗೊಳ್ಳುವ ಎಲ್ಲದರ ವಿರುದ್ಧ ದಂಗೆಯೇಳುವಂತೆ ಜನರನ್ನು ಪ್ರಚೋದಿಸಬಾರದು. ಎರಡನೆಯ ಕಟ್ಟಳೆ ಅಧ್ಯಾಯ ೧೮, ಶ್ಲೋಕ ೪೧ರಿಂದ ೪೮ರಲ್ಲಿ ಅಡಕವಾಗಿದೆ. ಕೃಷ್ಣ ಹೇಳುತ್ತಾನೆ: ಪ್ರತಿಯೊಬ್ಬರೂ ತಮ್ಮ ವರ್ಣಕ್ಕೆ ವಿಧಿಸಿರುವ ಕರ್ತವ್ಯವನ್ನು ಮಾಡಬೇಕು, ಬೇರೆಯದನ್ನಲ್ಲ. ಯಾರು ತನ್ನನ್ನು ಪೂಜಿಸುತ್ತಾರೊ, ಯಾರು ತನ್ನ ಭಕ್ತರಾಗಿರುವರೊ ಅವರಿಗೆ ಕೇವಲ ಭಕ್ತಿಯಿಂದ ಮೋಕ್ಷ ಸಿಗುವುದಿಲ್ಲ. ತಮ್ಮ ವರ್ಣದ ಕರ್ತವ್ಯವನ್ನು ಭಕ್ತಿಯಿಂದ ಆಚರಿಸಿದರೆ ಮಾತ್ರ ಮುಕ್ತಿ ಲಭಿಸುತ್ತದೆಂದು ಅವನು ಎಚ್ಚರಿಕೆ ನೀಡುತ್ತಾನೆ. ಒಟ್ಟಿನಲ್ಲಿ, ಶೂದ್ರನಾದವನು ಭಕ್ತನಾಗಿ ದೊಡ್ಡವನಿರಬಹುದು. ಆದರೆ ಶೂದ್ರ ವರ್ಣದ ಕರ್ತವ್ಯವನ್ನು ಉಲ್ಲಂಘಿಸಿದರೆ ಅವನಿಗೆ ಮೋಕ್ಷ ಸಿಗುವುದಿಲ್ಲ, ಅರ್ಥಾತ್ ಮೇಲಿನ ಮೂರು ವರ್ಣದವರ ಸೇವೆ ಮಾಡಿ ಅವರಿಗಾಗಿ ದುಡಿದು ಮಡಿಯುವುದರಿಂದ ಮಾತ್ರ ಮೋಕ್ಷ ಸಿಗುತ್ತದೆ. ನನ್ನ ವಾದದ ಎರಡನೆಯ ಭಾಗ ಏನೆಂದರೆ, ಜೈಮಿನಿಯ ಪೂರ್ವ ಮೀಮಾಂಸೆ ಪ್ರಚಾರಕ್ಕೆ ಬಂದ ಮೇಲೆ ಜೈಮಿನಿಯ ಸಿದ್ಧಾಂತಗಳಿಗೆ ತಾತ್ವಿಕ ಸಮರ್ಥನೆಯನ್ನು ಕೊಡುವ ಭಗವದ್ಗೀತೆಯ ಆ ಭಾಗಗಳು ಕೊನೇ ಪಕ್ಷ ಜೈಮಿನಿಗೆ ಹೊಸ ಬೆಂಬಲವನು ಕೊಡುವ ಮುಖ್ಯ ಉದ್ದೇಶದಿಂದ ರಚನೆಯಾದವು. ನನ್ನ ವಾದದ ಮೂರನೆಯ ಭಾಗ ಏನೆಂದರೆ ಬೌದ್ಧ ಧರ್ಮದ ಕ್ರಾಂತಿಕಾರಿ ಮತ್ತು ವೈಚಾರಿಕ ಆಲೋಚನೆಯ ಧಾಳಿಗೆ ಭಗವದ್ಗೀತೆ ಮತ್ತು ಪ್ರತಿಕ್ರಾಂತಿಯ ಈ ಸಿದ್ಧಾಂತಗಳು ತುತ್ತಾದುದರಿಂದ ಈ ತಾತ್ವಿಕ ಸಮರ್ಥನೆ ಅನಿವಾರ್ಯವಾಯಿತು.

ನನ್ನ ವಾದದ ಪ್ರಮಾಣಬದ್ಧತೆಯ ಎದುರು ಏಳಬಹುದಾದ ಪ್ರಶ್ನೆಗಳ ಕಡೆ ನಾನು ಗಮನ ಹರಿಸಬೇಕಾಗಿದೆ. ಒಂದು ಪ್ರಶ್ನೆ ಬೃಹತ್ ಪ್ರಮಾಣದಲ್ಲಿ ನನಗೆ ಎದುರಾಗುತ್ತಿದೆ. ಬೌದ್ಧ ಧರ್ಮ ಮತ್ತು ಜೈಮಿನಿಯ ಪೂರ್ವ ಮೀಮಾಂಸೆಯ ನಂತರ ಭಗವದ್ಗೀತೆ ಬಂದಿತೆಂದು ನಾನು ಊಹಿಸಿಕೊಳ್ಳುತ್ತಿದ್ದೇನೆಂದೂ, ಈ ಭಾವನೆಗೆ ಆಧಾರವಿಲ್ಲವೆಂದೂ ಹೇಳುತ್ತಾರೆ. ಭಗವದ್ಗೀತೆಯ ಸಂದೇಶವೇನು ಮತ್ತು ಮಾನವ ಜೀವನದ ಮಾರ್ಗದರ್ಶಿಯಾಗಿ ಅದರ ಮೌಲ್ಯವೇನು ಎಂದು ಅನ್ವೇಷಿಸುವುದಕ್ಕಿಂತ ಹೆಚ್ಚಾಗಿ ಭಗವದ್ಗೀತೆ ಬೌದ್ಧಧರ್ಮಕ್ಕೂ ಜೈಮಿನಿಗೂ ಮೊದಲು ರಚನೆಯಾಯಿತೆಂದು ಅದರ ತಾರೀಖನ್ನು ಅತ್ಯಂತ ಪ್ರಾಚೀನ

ಕಾಲಕ್ಕೆ ತಳ್ಳುವ ಎಲ್ಲ ಭಾರತೀಯ ವಿದ್ವಾಂಸರ ಪ್ರಿಯವಾದ ಭಾವನೆಗಳ ವಿರುದ್ಧವಾಗಿ ನನ್ನ ವಾದವಿದೆ ಎಂಬ ವಾಸ್ತವಿಕ ಎಚ್ಚರ ನನಗಿದೆ. ಇದು ತೆಲಾಂಗ್ ಮತ್ತು ತಿಲಕದಲ್ಲಿ ವಿಶೇಷವಾಗಿ ಕಾಣುವ ಸಂಗತಿ. ಆದರೆ ಗಾರ್ಬ್ ಹೇಳುವಂತೆ: "ಎಷ್ಟೇ ಜ್ಞಾನಿಯಾದರೂ ಪ್ರತಿಯೊಬ್ಬ ಹಿಂದೂವಿನ ಹಾಗೆ ತೆಲಾಂಗ್‌ಗೆ ಭಗವದ್ಗೀತೆಯ ಅತ್ಯಂತ ಪ್ರಾಚೀನತೆಯನ್ನು ನಂಬುವುದು ಧರ್ಮಶ್ರದ್ಧೆಯಾಗಿದೆ. ಅಂತಹ ಸಂದರ್ಭಗಳು ಪ್ರಬಲವಾಗಿರುವಾಗ ವಿಮರ್ಶಾ ಶಕ್ತಿ ಸತ್ತುಹೋಗುತ್ತದೆ."[೧]

ಪ್ರೊಫೆಸರ್ ಗಾರ್ಬ್ ಮಾತುಗಳಲ್ಲಿ:

> "ಗೀತೆಯ ತಾರೀಖನ್ನು ತೀರ್ಮಾನಿಸುವ ಕೆಲಸದಲ್ಲಿ ಗಂಭೀರವಾಗಿ ತೊಡಗಿರುವ ಪ್ರತಿಯೊಬ್ಬನಿಗೂ ಈ ಸಮಸ್ಯೆ ಕ್ಲಿಷ್ಟವೆಂದು ಗೊತ್ತು. ಈ ಸಮಸ್ಯೆಯನ್ನು ನಿರ್ಧರಿಸಲು ಮೂಲ ಗೀತೆಯ ಕಾಲ ಮತ್ತು ಅದರ ಪರಿಷ್ಕರಣ ಎಂದು ಇಮ್ಮಡಿಯಾಗಿ ಇಟ್ಟಾಗ ಕಷ್ಟಗಳು ಮತ್ತಷ್ಟು ಹೆಚ್ಚುತ್ತವೆ. ಸಾಮಾನ್ಯವಾಗಿ ಹೇಳುವುದಾದರೆ, ಈ ವಿಷಯದಲ್ಲಿ ನಾವು ಯಾವುದೇ ಖಚಿತತೆಗೆ ತಲುಪದೆ ಕೇವಲ ಸಂಭಾವ್ಯತೆಗಳನ್ನು ಕಾಣುವುದರಲ್ಲಿ ಯಶಸ್ವಿಯಾಗಬಹುದಷ್ಟೆ."

ಈ ಸಂಭಾವ್ಯತೆಗಳು ಯಾವುವು? ಈ ಸಂಭಾವ್ಯತೆಗಳು ನನ್ನ ವಾದದ ಪರವಾಗಿವೆ ಎನ್ನುವುದರಲ್ಲಿ ಸಂದೇಹವಿಲ್ಲ. ನಿಜವಾಗಿ ಅವುಗಳ ವಿರುದ್ಧ ಏನೂ ಇಲ್ಲವೆಂದು ನನಗೆ ತೋರುತ್ತದೆ. ಈ ಪ್ರಶ್ನೆಯನ್ನು ಅವಲೋಕಿಸುವಾಗ ಜೈಮಿನಿಯ ಪೂರ್ವಮೀಮಾಂಸೆ ಮತ್ತು ಬೌದ್ಧ ಧರ್ಮದ ನಂತರ ಗೀತೆ ರಚಿತವಾಯಿತು ಎಂಬುದಕ್ಕೆ ನೇರವಾದ ಆಧಾರಗಳನ್ನು ಗೀತೆಯಿಂದಲೇ ಮೊದಲು ಕೊಡುವುದಕ್ಕೆ ನಾನು ಇಚ್ಛಿಸುತ್ತೇನೆ.

ಭಗವದ್ಗೀತೆಯ ೩ನೇ ಅಧ್ಯಾಯದ ೯ರಿಂದ ೧೩ರವರೆಗಿನ ಶ್ಲೋಕಗಳಿಗೆ ವಿಶೇಷ ಅರ್ಥವಿದೆ. ಈ ಸಂದರ್ಭದಲ್ಲಿ ಭಗವದ್ಗೀತೆಯು ಜೈಮಿನಿಯನ್ನಾಗಲೀ ಪೂರ್ವ ಮೀಮಾಂಸೆಯನ್ನಾಗಲೀ ಹೆಸರಿಸುವುದಿಲ್ಲ ಎನ್ನುವುದು ನಿಜ. ಆದರೆ ಅಧ್ಯಾಯ ೩, ಶ್ಲೋಕ ೯ ರಿಂದ ೧೮ರಲ್ಲಿ ಭಗವದ್ಗೀತೆಯು ಜೈಮಿನಿ ತನ್ನ ಪೂರ್ವ ಮೀಮಾಂಸೆಯಲ್ಲಿ ಹೇಳುವ ಸಿದ್ಧಾಂತಗಳನ್ನು ಗೀತೆಯು ಪ್ರತಿಪಾದಿಸುತ್ತದೆ ಎನ್ನುವುದರಲ್ಲಿ ಅನುಮಾನವಿದೆಯೆ? ಗೀತೆಯ ಪ್ರಾಚೀನತೆಯಲ್ಲಿ ನಂಬಿಕೆಯಿಡುವ ತಿಲಕ್[೨] ಕೂಡ ಪೂರ್ವ ಮೀಮಾಂಸೆಯ ಸಿದ್ಧಾಂತಗಳ ಪರೀಕ್ಷೆಯಲ್ಲಿ ಗೀತೆ ನಿರತವಾಗಿದೆ ಎಂಬುದನ್ನು ಒಪ್ಪಲೇಬೇಕಾಗುತ್ತದೆ. ಈ ವಾದವನ್ನು ಇನ್ನೊಂದು ರೀತಿಯಲ್ಲಿ ಹೇಳಬಹುದು. ಜೈಮಿನಿಯು ಕರ್ಮಯೋಗವನ್ನು ಮಾತ್ರ ಬೋಧಿಸುತ್ತಾನೆ. ಆದರೆ ಭಗವದ್ಗೀತೆ ಅನಾಸಕ್ತಿ ಕರ್ಮವನ್ನು ಬೋಧಿಸುತ್ತದೆ. ಹೀಗೆ ಗೀತೆ ಮೂಲಭೂತವಾಗಿ ಮಾರ್ಪಡಿಸಲಾದ ಒಂದು ಸಿದ್ಧಾಂತವನ್ನು ಬೋಧಿಸುತ್ತದೆ. ಭಗವದ್ಗೀತೆ ಕರ್ಮಯೋಗವನ್ನು ಮಾರ್ಪಡಿಸುವುದಷ್ಟೇ ಅಲ್ಲದೆ ಕೇವಲ ಕರ್ಮಯೋಗ ಪ್ರತಿಪಾದಕರನ್ನು ಸ್ವಲ್ಪ ಉಗ್ರ ಮಾತುಗಳಲ್ಲಿ ಖಂಡಿಸುತ್ತದೆ.[೩] ಜೈಮಿನಿಗಿಂತ ಮೊದಲು ಗೀತೆ ಬಂದಿದ್ದರೆ ಭಗವದ್ಗೀತೆಯ ಈ ಖಂಡನೆಯನ್ನು ಜೈಮಿನಿ ಎತ್ತಿಕೊಂಡು ಉತ್ತರಿಸುತ್ತಿದ್ದನೆಂದು ನಿರೀಕ್ಷಿಸಬಹುದು. ಆದರೆ ಭಗವದ್ಗೀತೆಯ ಈ ಅನಾಸಕ್ತಿ ಕರ್ಮಯೋಗದ ಬಗ್ಗೆ ಜೈಮಿನಿಯಲ್ಲಿ ಯಾವುದೇ ಉಲ್ಲೇಖವನ್ನು ನಾವು ಕಾಣುವುದಿಲ್ಲ ಏಕೆ? ಅದಕ್ಕೆ ಒಂದೇ ಉತ್ತರ, ಈ ಮಾರ್ಪಾಡು ಜೈಮಿನಿಯ ನಂತರ ಬಂತು, ಹಿಂದೆಯಲ್ಲ. ಜೈಮಿನಿಯ ಪೂರ್ವ ಮೀಮಾಂಸೆಯ ನಂತರ ಭಗವದ್ಗೀತೆ ರಚಿತವಾಯಿತು ಎಂದು ಸರಳವಾಗಿ ಇನ್ನೊಂದು ರೀತಿಯಲ್ಲಿ ಹೇಳಿದಂತಾಯಿತು.

---

೧. ಇಂಟ್ರೊಡಕ್ಷನ್ (ಇಂಡಿಯನ್ ಆ್ಯಂಟಿಕ್ವೆರಿ ಸಪ್ಲಿಮೆಂಟ್), ಪು. ೩೦

೨. 'ಗೀತಾ ರಹಸ್ಯ' ಸಂ. II, ೯೧೬–೯೨೨.

೩. 'ಭಗವದ್ ಗೀತಾ' II, ೪೨–೪೬ ಮತ್ತು XVIII ೬೬.

ಭಗವದ್ಗೀತೆಯು ಪೂರ್ವ ಮೀಮಾಂಸೆಯ ಹೆಸರನ್ನು ಹೇಳದಿದ್ದರೂ ಬಾದರಾಯಣನ ಬ್ರಹ್ಮಸೂತ್ರವನ್ನು[೧] ಹೆಸರಿಸುತ್ತದೆ. ಬ್ರಹ್ಮಸೂತ್ರದ ಈ ಉಲ್ಲೇಖ ಬಹಳ ಮಹತ್ವದ ವಿಷಯವಾಗಿದೆ. ಏಕೆಂದರೆ ಬ್ರಾಹ್ಮಣ ಸೂತ್ರದ ನಂತರ ಗೀತೆ ರಚಿತವಾಯಿತು ಎಂದು ತೀರ್ಮಾನಿಸಲು ಇದು ನೇರ ಆಧಾರವನ್ನು ಒದಗಿಸುತ್ತದೆ.

ಬ್ರಹ್ಮಸೂತ್ರದ ಬಗೆಗಿನ ಸ್ಪಷ್ಟ ಮತ್ತು ಖಚಿತ ಉಲ್ಲೇಖ ಈಗಿರುವ ಅದೇ ಹೆಸರಿನ ಗ್ರಂಥಕ್ಕೆ ಸಂಬಂಧಿಸಿದ್ದೆಂದು ತಿಲಕ್ ಒಪ್ಪಿಕೊಳ್ಳುತ್ತಾರೆ.[೨] ಭಗವದ್ಗೀತೆಯಲ್ಲಿ ಹೇಳಿರುವ ಬ್ರಹ್ಮಸೂತ್ರ ಈಗಿರುವ ಬ್ರಹ್ಮಸೂತ್ರಕ್ಕಿಂತ ಭಿನ್ನವಾದುದೆಂದು ತೆಲಾಂಗ್ ಕೊಂಚ ಉಡಾಫೆಯಿಂದ ಈ ವಿಷಯವನ್ನು ಚರ್ಚಿಸುತ್ತಾರೆಂದು ಹೇಳಬೇಕಾಗುತ್ತದೆ.[೩] ಅವರು ಯಾವ ಆಧಾರವನ್ನೂ ಕೊಡದೆ ವೆಬರ್ ಅವರ ಊಹಾತ್ಮಕ ಹೇಳಿಕೆಯನ್ನೇ ನಂಬುತ್ತಾರೆ.[೪] ಇದನ್ನು ಅವರ ಭಾರತೀಯ ಸಾಹಿತ್ಯದ ಭಾಷ್ಯದ ಅಡಿ ಟಿಪ್ಪಣಿಯಲ್ಲಿ ಮತ್ತೆ ಯಾವುದೇ ಆಧಾರವಿಲ್ಲದೆ ಕೊಡುತ್ತಾರೆ. ಭಗವದ್ಗೀತೆಯಲ್ಲಿ ಹೇಳುವ ಬ್ರಹ್ಮಸೂತ್ರವು "ಅಂಕಿತ ನಾಮಕ್ಕಿಂತ ಹೆಚ್ಚಾಗಿ ರೂಢನಾಮವಾಗಿದೆ" ಎಂದು ಹೇಳುತ್ತಾರೆ. ಈ ವಿಷಯದಲ್ಲಿ ತೆಲಾಂಗ್ ತಾಳುವ ದೃಷ್ಟಿ ಯಾವುದೇ ವಿಶೇಷ ಅರ್ಥವನ್ನೂ ಆರೋಪಿಸುವುದು ಸರಿಯಲ್ಲ[೫]. ಆದರೆ ಬ್ರಹ್ಮಸೂತ್ರದ ಉಲ್ಲೇಖವನ್ನು ಒಪ್ಪಿಕೊಳ್ಳಲು ತೆಲಾಂಗ್ ಸಂಕೋಚಪಟ್ಟರೆಂದು ಹೇಳುವುದರಲ್ಲಿ ಏನೂ ತಪ್ಪಿಲ್ಲ. ಏಕೆಂದರೆ ಅವರು ವಿಂಟರ್‌ನಿಟ್ಜ್ ಆಧಾರದ ಮೇಲೆ ಬ್ರಹ್ಮಸೂತ್ರಗಳ ಕಾಲವನ್ನು ಕ್ರಿ.ಶ. ೫೦೦ ಎಂದು ವೆಬರ್ ಹೇಳಿದ್ದನ್ನೂ ಇದರಿಂದ ಭಗವದ್ಗೀತೆಯ ಬಗ್ಗೆ ಅವರು ಒಪ್ಪಿಕೊಂಡಿದ್ದ ಅತ್ಯಂತ ಪ್ರಾಚೀನತೆಯ ತತ್ವ ಹಾಳಾಗುತ್ತದೆಂದೂ ಮನಗಂಡಿದ್ದರು. ಹೀಗೆ ಜೈಮಿನಿಯ ಪೂರ್ವ ಮೀಮಾಂಸೆ ಮತ್ತು ಬಾದರಾಯಣನ ಬ್ರಹ್ಮಸೂತ್ರಗಳ ನಂತರ ಗೀತೆ ರಚನೆಯಾಯಿತೆಂಬ ತೀರ್ಮಾನವನ್ನು ಬೆಂಬಲಿಸಲು ಅಪಾರ ಆಂತರಿಕ ಆಧಾರವಿದೆ.

ಭಗವದ್ಗೀತೆ ಬೌದ್ಧಧರ್ಮಕ್ಕಿಂತ ಮುಂಚಿನದೇ? ಈ ಪ್ರಶ್ನೆಯನ್ನು ತೆಲಾಂಗ್ ಎತ್ತಿದ್ದಾರೆ:

"ನಾವೀಗ ಬೇರೊಂದು ಪ್ರಶ್ನೆಗೆ ಬರುತ್ತೇವೆ. ಶಾಕ್ಯಮುನಿಯ ಮಹಾ ಸುಧಾರಣೆಯ ಸಂಬಂಧದಲ್ಲಿ ಗೀತೆಯ ಸ್ಥಾನವೇನು? ಈ ಪ್ರಶ್ನೆ ತುಂಬ ಆಸಕ್ತಿಯುಳ್ಳದ್ದಾಗಿದೆ. ಏಕೆಂದರೆ ನಮ್ಮ ಅನುವಾದದ ಅಡಿ ಟಿಪ್ಪಣಿಗಳಲ್ಲಿ ನಾವು ಗಮನ ಸೆಳೆದಿರುವಂತೆ ಗೀತೆಯ ಸಿದ್ಧಾಂತಗಳಿಗೂ ಬೌದ್ಧಧರ್ಮದ ಸಿದ್ಧಾಂತಗಳಿಗೂ ಅದ್ಭುತವಾದ ಸಾಮ್ಯಗಳಿವೆ. ಆದರೆ ಈ ಪ್ರಶ್ನೆಯನ್ನು ತೀರ್ಮಾನಿಸಲು ಸಿಗುವ ಆಧಾರಗಳು ಹೊರಬರುತ್ತಿಲ್ಲ ಎಂಬುದು ಬೇಸರದ ಸಂಗತಿ. ಭಗವದ್ಗೀತೆಯಲ್ಲಿ ಬೌದ್ಧಧರ್ಮದ ಉಲ್ಲೇಖವಿದೆ ಎಂದು ಪ್ರೊ. ವಿಲ್ಸನ್ ನಿಜವಾಗಿಯೂ ಭಾವಿಸಿದ್ದರು[೬], ಆದರೆ ಅವರ ವಿಚಾರ ಬೌದ್ಧರು ಮತ್ತು ಚಾರ್ವಾಕರ ನಡುವಣ ಗೊಂದಲದ ಮೇಲೆ ಆಧಾರಿತವಾಗಿತ್ತು[೭]. ಈ ಪರೋಕ್ಷ ಸೂಚನೆಯನ್ನು ಬಿಟ್ಟರೆ ಗೀತೆಯಲ್ಲಿ ಬೌದ್ಧಧರ್ಮದ

---

೧. 'ಭಗವದ್ ಗೀತಾ', XIII ೪

೨. 'ಗೀತಾ ರಹಸ್ಯ.'

೩. 'ಭಗವದ್ ಗೀತಾ', ಪೀಠಿಕೆ, ಪು. ೩೧.

೪. 'ಹಿಸ್ಟರಿ ಆಫ್ ಇಂಡಿಯನ್ ಲಿಟರೇಚರ್' ಪು. ೨೪೨ f.n.

೫. 'ಎಸ್ಸೇಸ್ ಆಫ್ ಸ್ಯಾನ್‌ಸ್ಕ್ರಿಟ್ ಲಿಟರೇಟರ್', ಸಂ. III ೧೫೦.

೬. ನೋಡಿ 'ಗೀತಾ ರಹಸ್ಯ' ಸಂ. ೨, 'ಬ್ರಹ್ಮ ಸೂತ್ರ'ವು ಅತ್ಯಂತ ಪ್ರಾಚೀನ ಕೃತಿಯೆಂಬುದನ್ನು ತಿಲಕ್ ನಿಸ್ಸಂಕೋಚವಾಗಿ ಒಪ್ಪಿಕೊಂಡರೆಂಬುದನ್ನು ಹೇಳಬಹುದು. ಏಕೆಂದರೆ ಲಿಮ ಅವರದೇ ಅಭಿಪ್ರಾಯ.

೭. ನೋಡಿ: 'ಇಂಟ್ರೊಡಕ್ಟರಿ ಎಸ್ಸೇ ಟು ಅವರ್ ಗೀತಾ', ಪು. ೧೧.

ಬಗ್ಗೆ ಏನೂ ಹೇಳದೆ ಇರುವುದರ ಆಧಾರದ ಮೇಲೆ ನಮಗೆ ಅತೃಪ್ತಿಕರ 'ನೇತ್ಯಾತ್ಮವಾದ' ಸಿಗುತ್ತದೆಯೇ ಹೊರತು, ಮುಷ್ಟಿ ಗ್ರಾಹ್ಯವಾದುದೇನೂ ಸಿಗುವುದಿಲ್ಲ. ಗೀತೆಯಲ್ಲಿ ಹಿಂದಿನ ಆಲೋಚಕರನ್ನು ಪ್ರತ್ಯಕ್ಷವಾಗಿ ಅಥವಾ ಅಪ್ರತ್ಯಕ್ಷವಾಗಿ ಹೆಸರಿಸಿದ್ದರೂ ಬೌದ್ಧಧರ್ಮದ ಜೊತೆ ಅನೇಕ ಅಂಶಗಳಲ್ಲಿ ಗೀತೆಗೆ ಸಮಾನತೆಯಿದ್ದರೂ, ನಾನು ಬೇರೆಡೆ ಹೇಳಿರುವಂತೆ[೧] ಆ ವಾದಸರಣಿ ಅಷ್ಟು ತೃಪ್ತಿಕರವಾಗಿಲ್ಲವೆಂದು ನನಗನ್ನಿಸುತ್ತದೆ. ಇಲ್ಲಿ ಸೂಚಿಸಲಾದ ನೇತ್ಯಾತ್ಮಕವಾದದ ಮೂಲಕ ಈ ತೀರ್ಮಾನಕ್ಕೆ ಬರಲು ಈ ಪ್ರಶ್ನೆಗೆ ಸಂಬಂಧಿಸಿದ ಸಂಗತಿಗಳ ಒಂದು ದೃಷ್ಟಿಕೋನವು ಬೆಂಬಲಿಸುತ್ತದೆಂದು ನನಗೆ ತೋರುತ್ತದೆ. ಬ್ರಾಹ್ಮಣ ಧರ್ಮದ ವಿರುದ್ಧ ಬುದ್ಧನ ಪ್ರತಿಭಟನೆಯ ಪ್ರಧಾನಾಂಶಗಳ ವೇದ ಪ್ರಾಮಾಣ್ಯ ಮತ್ತು ಜಾತಿಯ ಭೇದಭಾವನೆಗಳ ನೈಜ ದೃಷ್ಟಿಯ ಮೇಲೆ ನಿಂತಿರುವಂತೆ ಕಾಣುತ್ತವೆ. ಸೈದ್ಧಾಂತಿಕ ಚಿಂತನೆಯ ಅನೇಕ ಅಂಶಗಳಲ್ಲಿ ಬೌದ್ಧಧರ್ಮ ಇನ್ನೂ ಹಿಂದಿನ ಬ್ರಾಹ್ಮಣ ಧರ್ಮದ ಒಂದು ಮುಖವಾಗಿದೆ.[೨] ಇದನ್ನು ತೋರಿಸುವ ಅಗತ್ಯವಿದೆ ಎಂದೇ ನಾವು ಅನೇಕ ಸಾಮ್ಯಗಳ ಕಡೆ ಗಮನ ಸೆಳೆದಿದ್ದೇವೆ. ಸರಿ, ಈ ಎರಡು ಅಂಶಗಳ ವಿಚಾರದಲ್ಲಿ, ಬುದ್ಧ ಹೋದಷ್ಟು ದೂರ ಗೀತೆ ಹೋಗದಿದ್ದರೂ, ಅದು ರಚನೆಯಾದ ಕಾಲದಲ್ಲಿ ಪ್ರಚಲಿತವಿದ್ದ ಅಭಿಪ್ರಾಯಗಳ ವಿರುದ್ಧದ ಪ್ರತಿಭಟನೆಯನ್ನು ಅದು ಒಳಗೊಂಡಿದೆ. ಬೌದ್ಧಧರ್ಮದ ಹಾಗೆ ಗೀತೆ ವೇದಗಳನ್ನು ಸಂಪೂರ್ಣವಾಗಿ ತಿರಸ್ಕರಿಸುವುದಿಲ್ಲ. ಆದರೆ ಅವುಗಳನ್ನು ಮೂಲೆಗಿಡುತ್ತದೆ. ಜಾತಿಯನ್ನು ಗೀತೆ ಬುಡಸಮೇತ ಕಿತ್ತು ಹಾಕುವುದಿಲ್ಲ. ಅದು ಜಾತಿಯನ್ನು ಸಮರ್ಥಿಸಲಾಗದಂತಹ ಆಧಾರದ ಮೇಲೇನೂ ಇಡುವುದಿಲ್ಲ. ಆದ್ದರಿಂದ ಈ ಎರಡು ಊಹೆಗಳಲ್ಲಿ ಒಂದು ಈ ಅಂಶಗಳ ಒಂದು ವೈಚಾರಿಕ ವಾದವಾಗಲು ತಾನೇ ಮುಂದಾಗುತ್ತದೆ. ಪ್ರಚಲಿತ ಧರ್ಮದ ಕೇಂದ್ರವನ್ನೇ ಅಲುಗಾಡಿಸುವುದರಲ್ಲಿ ನಿರತವಾದ ಆಧ್ಯಾತ್ಮಿಕ ವಿಪ್ಲವವನ್ನು ಜಗತ್ತಿಗೆ ತೋರಿಸುವುದರಲ್ಲಿ ಗೀತೆ ಮತ್ತು ಬೌದ್ಧಧರ್ಮ ಒಂದೇ ತೆರನಾಗಿದ್ದವು. ಗೀತೆ ಬೌದ್ಧಧರ್ಮಕ್ಕಿಂತ ಹಿಂದಿನದು ಆದರೆ ಕ್ರಾಂತಿಯ ವಿಷಯದಲ್ಲಿ ಬೌದ್ಧಧರ್ಮದಷ್ಟು ಗಂಭೀರವಾಗಿರಲಿಲ್ಲ ಅಥವಾ ಬ್ರಾಹ್ಮಣ ಧರ್ಮಕ್ಕೆ ಬೌದ್ಧಧರ್ಮದಿಂದ ಧಕ್ಕೆ ಉಂಟಾಗಿದ್ದರೂ ಗೀತೆ ಬ್ರಾಹ್ಮಣ ಧರ್ಮವನ್ನು ಎತ್ತಿ ಹಿಡಿಯಲು ಪ್ರಯತ್ನಿಸಿತು. ಬ್ರಾಹ್ಮಣ ಧರ್ಮದಲ್ಲಿ ಇದ್ದುದೆಲ್ಲ ದುರ್ಬಲಾಂಶಗಳೇ. ಆದುದರಿಂದ ತೀರಾ ದುರ್ಬಲವಾದ ಅಂಶಗಳನ್ನು ಬಿಟ್ಟು ಪರ್ಯಾಯವನ್ನು ನಾನು ಒಪ್ಪುವುದಿಲ್ಲ. ಹಳೆಯ ಹಿಂದೂ ವ್ಯವಸ್ಥೆಯ ಪ್ರಬಲ ಖಂಡನೆಯ ಜೊತೆ ಗೀತೆ ರಾಜಿ ಮಾಡಿಕೊಳ್ಳಲು ಪ್ರಯತ್ನಿಸಿತೆನ್ನುವ ಸೂಚನೆಯನ್ನು ನಾನು ಗೀತೆಯಲ್ಲಿ ಕಾಣಲಾರೆ. ಏಕೆಂದರೆ ಗೀತೆಯ ಕರ್ತೃ ಖಂಡಿತವಾಗಿ ಸನಾತನಿ ಆದರೂ ವಿವೇಕರಹಿತವಾಗಿ ಇನ್ನೂ ಗೌರವಿಸಲ್ಪಡುವ ವೇದದ ಅಪೌರುಷೇಯತ್ವವನ್ನು ಅವನು ಒಪ್ಪುವುದಿಲ್ಲ. ಅವನಿಗಿಂತ ಮುಂಚೆ ಅಥವಾ ಅವನ ಕಾಲದಲ್ಲಿ ಇತರರು ಹೇಳಿದುದನ್ನೇ ಅವನೂ ಹೇಳುತ್ತಿದ್ದಾನೆಂಬ ಸತ್ಯವನ್ನು ಹೇಳಬೇಕಾಗುತ್ತದೆ. ಇದು ಈಗಾಗಲೇ ಹೇಳಿರುವ ನೇತ್ಯಾತ್ಮಕ ವಾದದ ಪರಿಣಾಮಗಳನ್ನು ಭದ್ರಪಡಿಸಲು ಗಣನೀಯ ರೀತಿಯಲ್ಲಿ ನೆರವಾಗುತ್ತದೆಂದು ನನ್ನ ಅಭಿಪ್ರಾಯ. ಉನ್ನತ ಆಧ್ಯಾತ್ಮಿಕ ವಿಷಯಗಳಲ್ಲಿ ನಡೆದ ಆಲೋಚನಾ ವಿಹಾರದ ಫಲವೇ ಬೌದ್ಧಧರ್ಮವೆಂದು ಪೂರ್ತಿ ಅರ್ಥಮಾಡಿಕೊಳ್ಳಬಹುದೆಂದು ನನಗೆ ತೋರುತ್ತದೆ. ಅದರ ಕೊಂಚ

---

೧. 'ಇಂಟ್ರೊಡಕ್ಷನ್ ಟು ಗೀತಾ ಇನ್ ಇಂಗ್ಲಿಷ್ ವರ್ಕ್ಸ್', ಪು.V

೨. 'ಮ್ಯಾಕ್ಸ್‌ಮುಲ್ಲರ್ಸ್ ಹಿಬ್ಬರ್ಟ್ ಲೆಕ್ಚರ್ಸ್', ಪು. ೧೩೭, 'ವೆಬೆರ್ ಇಂಡಿಯನ್ ಲಿಟರೇಚರ್', ಪುಟಗಳು ೨೮೮–೨೮೯ ಮತ್ತು ರೈಸ್ ಡೇವಿಡ್‌ರವರ 'ಬುದ್ಧಿಸಂ', ಪು.೧೫೧, ಮತ್ತು ಮಿ.ಡೇವಿಡ್‌ರವರ ಪುಸ್ತಕದ ೮೩ನೆಯ ಪುಟವನ್ನು ನೋಡಿ.

ಅಪರಿಪೂರ್ಣ ಪ್ರಕಟಣೆಯನ್ನು ಬೇರೊಂದು ರೀತಿಯಲ್ಲಿ ನಾವು ಉಪನಿಷತ್ತುಗಳಲ್ಲಿಯೂ ಗೀತೆಯಲ್ಲಿಯೂ ನೋಡುತ್ತೇವೆ."[೧]

ಈ ವಾಕ್ಯವೃಂದವನ್ನು ನಾನು ಸಂಪೂರ್ಣವಾಗಿ ಉದ್ಧರಿಸಿದ್ದೇನೆ. ಏಕೆಂದರೆ ಅದು ಎಲ್ಲಾ ಹಿಂದೂ ವಿದ್ವಾಂಸರನ್ನು ಸಾಂಕೇತಿಕರಿಸುತ್ತದೆ. ಬೌದ್ಧಧರ್ಮದಿಂದ ಗೀತೆ ಪ್ರಭಾವಿತವಾಗಿದೆ ಎಂಬುದನ್ನು ಒಪ್ಪಿಕೊಳ್ಳಲು ಅವರಲ್ಲಿ ಬಹುಮಂದಿಗೆ ಮನಸ್ಸಿಲ್ಲ. ಬೌದ್ಧಧರ್ಮದಿಂದ ಗೀತೆ ಏನನ್ನಾದರೂ ಸ್ವೀಕರಿಸಿದೆಯೇ ಎಂದರೆ ಇಲ್ಲವೆಂದು ಹೇಳಲು ಅವರು ಸದಾ ಸಿದ್ಧರಾಗಿದ್ದಾರೆ. ಅದು ಪ್ರೊ॥ ರಾಧಾಕೃಷ್ಣನ್ ಮತ್ತು ತಿಲಕರ ಮನೋಭಾವವಾಗಿದೆ. ಭಗವದ್ಗೀತೆ ಮತ್ತು ಬೌದ್ಧಧರ್ಮದ ವಿಚಾರಧಾರೆಯಲ್ಲಿ ಸಾಮ್ಯತೆಯಿದ್ದರೆ ಅದು ತೀರಾ ಪ್ರಬಲವೂ ನಿಕಟವೂ ಆಗಿದ್ದರೆ ಅದನ್ನು ಉಪನಿಷತ್ತುಗಳಿಂದ ತೆಗೆದುಕೊಳ್ಳಲಾಗಿದೆ ಎಂಬ ವಾದವನ್ನು ಒಡ್ಡುತ್ತಾರೆ. ಯಾವುದೇ ಅಂಶದಲ್ಲಾಗಲೀ ಬೌದ್ಧಧರ್ಮಕ್ಕೆ ಏನೂ ಮಾನ್ಯತೆ ನೀಡದಿರುವ ಸಣ್ಣ ಮನಸ್ಸನ್ನು ಪ್ರತಿಕ್ರಾಂತಿಕಾರಿಗಳು ಪ್ರದರ್ಶಿಸುತ್ತಾರೆ.

ಈ ದೃಷ್ಟಿಕೋನಗಳ ಅಸಂಬದ್ಧತೆ ಭಗವದ್ಗೀತೆ ಮತ್ತು ಬೌದ್ಧ ಸುತ್ತಗಳನ್ನು ತೌಲನಿಕವಾಗಿ ಅಧ್ಯಯನ ಮಾಡಿರುವ ಎಲ್ಲರನ್ನೂ ದಿಗ್ಭ್ರಮೆಗೊಳಿಸುತ್ತವೆ. ಏಕೆಂದರೆ ಸಾಂಖ್ಯ ತತ್ವದಿಂದ ಭಗವದ್ಗೀತೆ ತುಂಬಿಹೋಗಿದೆ ಎಂದು ಹೇಳುವುದು ನಿಜವಾದರೆ ಗೀತೆಯು ಬೌದ್ಧಧರ್ಮದ ವಿಚಾರಗಳಿಂದ ತುಂಬಿಹೋಗಿದೆ ಎಂದು ಹೇಳುವುದು ಇನ್ನೂ ಹೆಚ್ಚು ನಿಜವಾಗಿದೆ[೨]. ಈ ಎರಡರ ನಡುವಣ ಸಾಮತ್ಯೆ ಕೇವಲ ವಿಚಾರದಲ್ಲಷ್ಟೇ ಅಲ್ಲ ಭಾಷೆಯಲ್ಲಿಯೂ ಇದೆ. ಇದೆಷ್ಟು ನಿಜ ಎಂಬುದನ್ನು ಒಂದೆರಡು ಉದಾಹರಣೆಗಳು ತೋರಿಸುತ್ತವೆ.

ಭಗವದ್ಗೀತೆ ಬ್ರಹ್ಮ ನಿರ್ವಾಣವನ್ನು ಚರ್ಚಿಸುತ್ತದೆ[೩]. ಬ್ರಹ್ಮ ನಿರ್ವಾಣವನ್ನು ಗಳಿಸಲು ಇವು ಸೋಪಾನಗಳು: (i) ಶ್ರದ್ಧೆ (ಆತ್ಮವಿಶ್ವಾಸ), (ii) ವ್ಯವಸಾಯ (ದೃಢನಿರ್ಧಾರ), (iii) ಸ್ಮೃ (ಗುರಿಯ ಸ್ಮರಣೆ), (iv) ಸಮಾಧಿ (ಗಂಭೀರ ಧ್ಯಾನ) ಮತ್ತು (v) ಪ್ರಜ್ಞೆ(ನೈಜ ಅರಿವು ಅಥವಾ ಅಂತರ್ ನೋಟ). ಈ ನಿರ್ವಾಣ ತತ್ವವನ್ನು ಗೀತೆ ಎಲ್ಲಿಂದ ತೆಗೆದುಕೊಂಡಿತು? ಅದು ಉಪನಿಷತ್ತುಗಳಿಂದಲ್ಲ ಎಂಬುದು ಖಚಿತ. 'ನಿರ್ವಾಣ' ಶಬ್ದವನ್ನು ಯಾವ ಉಪನಿಷತ್ತೂ ಕೂಡ ಬಳಸುವುದಿಲ್ಲ. ಈ ಇಡಿ ವಿಚಾರವೇ ವಿಶಿಷ್ಟವಾಗಿ ಬೌದ್ಧಧರ್ಮದ್ದು. ಅದನು ಬೌದ್ಧಧರ್ಮದಿಂದ ತೆಗೆದುಕೊಳ್ಳಲಾಗಿದೆ. ಈ ವಿಷಯದಲ್ಲಿ ಯಾರಿಗಾದರು ಏನೇ ಅನುಮಾನವಿದ್ದರೂ ಅವರು ಭಗವದ್ಗೀತೆಯ ಬ್ರಹ್ಮ ನಿರ್ವಾಣದ ಜೊತೆ ಮಹಾಪರಿ ನಿಬ್ಬಾಣ ಸುತ್ತದಲ್ಲಿ ಪ್ರತಿಪಾದಿಸಿರುವ ಬೌದ್ಧ ಕಲ್ಪನೆಯ ನಿರ್ವಾಣವನ್ನು ಹೋಲಿಸಿ ನೋಡಬಹುದು. ನಿರ್ವಾಣಕ್ಕೆ ಬದಲಾಗಿ ಇಡಿ ಬ್ರಹ್ಮ ನಿರ್ವಾಣ ಕಲ್ಪನೆಯನ್ನು ಗೀತೆ ತೆಗೆದುಕೊಂಡಿರುವುದು ಅದನ್ನು

---

೧. ಹೋಲಿಸಿ: ಪೀರ್‌ರವರ 'ಹಿಸ್ಟರಿ ಆಫ್ ಇಂಡಿಯನ್ ಲಿಟರೇಚರ್', ಪು. ೨೮೫; ಡೇವಿಡ್‌ರವರ 'ಬುದ್ಧಿಸಂ'. P. ೯೪; ಇಲ್ಲಿ ಆತ್ಮದ ಇರವನ್ನು ಕುರಿತಂತೆ ಬೌದ್ಧಧರ್ಮದ ಪ್ರಮಾಣಭರಿತ ಗ್ರಂಥದಿಂದ ಒಂದು ಗಮನಾರ್ಹ ಉಲ್ಲೇಖವಿದೆ. 'ಗೀತೆ'ಯಲ್ಲಿ ಇದಕ್ಕೆ ಅನುರೂಪವಾದ ತತ್ವದ ಜೊತೆ ಅದನ್ನು ಹೋಲಿಸಿ. ಇಂದ್ರಿಯ ಇತ್ಯಾದಿಗಳ ಜೊತೆ ಆತ್ಮದ ತಾದಾತ್ಮ್ಯವನ್ನು ತಿರಸ್ಕರಿಸುವಲ್ಲಿ ಈ ಎರಡು ತತ್ವಗಳು ಒಂದೇ ಆಗಿವೆ ಎಂಬುದನ್ನು ನೋಡಬಹುದು. ಆತ್ಮ ಇವುಗಳಿಂದ ಭಿನ್ನವಾಗಿದೆ ಎಂದು ಗೀತೆ ಮುಂದುವರಿದು ಹೇಳುತ್ತದೆ. ಬೌದ್ಧ ಧರ್ಮ ಅದನ್ನೂ ತಿರಸ್ಕರಿಸುತ್ತದೆ. ಅದು ಇಂದ್ರಿಯಗಳನ್ನಲ್ಲದೆ ಬೇರೇನನ್ನೂ ಕಾಣುವುದಿಲ್ಲ.

೨. ಈ ವಿಷಯದಲ್ಲಿ ಕಾಶ್ಮೀರದ ಮುಖ್ಯ ನ್ಯಾಯಾಧೀಶರಾದ ಎನ್.ಡಿ.ಬುದ್ಧಿರಾಜ ಎಂ.ಎ. ಎಲ್.ಎಲ್.ಬಿ ಅವರ 'ಭಗವದ್ಗೀತೆ'ಯನ್ನು ತುಲನೆಮಾಡಿ. ಪ್ರತಿಯೊಂದು ಅಂಶದಲ್ಲಿಯೂ ಈ ವಿದ್ವಾಂಸರು ಗೀತೆ ಮತ್ತು ಬೌದ್ಧಧರ್ಮದ ಮೂಲಗ್ರಂಥಗಳ ಸಾಮ್ಯತೆಗಳನ್ನು ತೋರಿಸಲು ಪ್ರಯತ್ನಿಸಿದ್ದಾರೆ.

೩. ಮ್ಯಾಕ್ಸ್ ಮುಲ್ಲರ್: 'ಮಹಾಪರಿನಿಬ್ಬಣ ಸುತ್ತ', ಪು. ೬೩.

ಬೌದ್ಧಧರ್ಮದಿಂದ ಹರಣ ಮಾಡಿರುವ ವಿಚಾರವನ್ನು ಭಗವದ್ಗೀತೆ ಮರೆ ಮಾಡುವುದಕ್ಕಾಗಿ ಎಂಬ ವಸ್ತುಸ್ಥಿತಿ ಸಾಬೀತಾಗುತ್ತದಲ್ಲವೆ?

ಇನ್ನೊಂದು ಉದಾಹರಣೆಯನ್ನು ತೆಗೆದುಕೊಳ್ಳಿ. ಅಧ್ಯಾಯ ೭ ಶ್ಲೋಕ ೧೩-೨೦ರಲ್ಲಿ ಕೃಷ್ಣನಿಗೆ ಯಾರು ಪ್ರಿಯ ಎಂಬ ಚರ್ಚೆಯಿದೆ. ಜ್ಞಾನಯೋಗಿಯೋ? ಕರ್ಮಯೋಗಿಯೋ? ಅಥವಾ ಭಕ್ತನೋ? ಭಕ್ತಿ ಪ್ರಿಯನೆಂದು ಕೃಷ್ಣ ಹೇಳುತ್ತಾನೆ. ಆದರೆ ಅವನಿಗೆ ಭಕ್ತನ ನೈಜ ಲಕ್ಷಣಗಳಿರಬೇಕು. ನಿಜ ಭಕ್ತನ ಲಕ್ಷಣವೇನು? ಕೃಷ್ಣನ ಪ್ರಕಾರ ಯಾರು ಮೈತ್ರಿ,ಕರುಣೆ, ಮುದಿತಾ ಮತ್ತು ಉಪೇಕ್ಷೆಯನ್ನು ಅನುಷ್ಠಾನ ಮಾಡುತ್ತಾನೋ ಅವನೇ ನಿಜವಾದ ಭಕ್ತ. ಪೂರ್ಣ ಭಕ್ತನ ಈ ಲಕ್ಷಣಗಳನ್ನು ಭಗವದ್ಗೀತೆ ಎಲ್ಲಿಂದ ತೆಗೆದುಕೊಂಡಿತು? ಮತ್ತೆ ಇದಕ್ಕೆ ಮೂಲ ಬೌದ್ಧ ಧರ್ಮ. ಇದಕ್ಕೆ ಆಧಾರ ಬೇಕೆನ್ನುವವರು ಹೃದಯ ಕೃಷಿಗೆ ಅಗತ್ಯವಾದ ಭಾವನೆಗಳನ್ನು ಬುದ್ಧ ಬೋಧಿಸಿರುವ ಮಹಾಪಾದನ ಸುತ್ತ ಮತ್ತು ತೇವಿಜ್ಜ ಸುತ್ತಗಳನ್ನು ಹೋಲಿಸಬಹುದು. ಈ ಇಡಿ ಸಿದ್ಧಾಂತವನ್ನು ಪದಶಃ ಬೌದ್ಧ ಧರ್ಮದಿಂದ ಎತ್ತಿಕೊಂಡಿರುವುದು ತೌಲನ ಕ್ರಮದಿಂದ ಗೊತ್ತಾಗುತ್ತದೆ.

ಮೂರನೆಯ ನಿದರ್ಶನವನ್ನು ತೆಗೆದುಕೊಳ್ಳಿ: ಕ್ಷೇತ್ರ ಕ್ಷೇತ್ರಜ್ಞನ ವಿಷಯವನ್ನು ಭಗವದ್ಗೀತೆ ೧೩ನೇ ಅಧ್ಯಾಯದಲ್ಲಿ ಚರ್ಚಿಸುತ್ತದೆ. ಮುಂದಿನ ಮಾತುಗಳಲ್ಲಿ ಕೃಷ್ಣನು ಜ್ಞಾನ ಮತ್ತು ಅಜ್ಞಾನವನ್ನು ಹೇಳುತ್ತಾನೆ:

> "ನಿರಹಂಕಾರ, ನಿರಾಡಂಬರತನ, ಅಹಿಂಸೆ, ಕ್ಷಮೆ, ಆರ್ಜವ, ಆಚಾರ್ಯೋಪಾಸನೆ, ಶೌಚ, ಸ್ಥೈರ್ಯ, ಆತ್ಮ ನಿಗ್ರಹ, ಇಂದ್ರಿಯಗಳ ವಿಷಯಗಳಲ್ಲಿ ವೈರಾಗ್ಯ, ಅನಹಂಕಾರ, ಜನ್ಮ, ಮೃತ್ಯು, ಜರೆ, ವ್ಯಾಧಿ, ದುಃಖ ಇವುಗಳಲ್ಲಿ ದೋಷವನ್ನು ನೋಡುವುದು, ಹೆಂಡತಿ, ಮನೆ, ಮಕ್ಕಳು ಮೊದಲಾದವುಗಳಲ್ಲಿ ಆಸಕ್ತಿ ಮತ್ತು ತನ್ಮಯತೆ ಇಲ್ಲದಿರುವುದು, ಇಷ್ಟಾನಿಷ್ಟಗಳು ಪ್ರಾಪ್ತವಾದಾಗ ಯಾವಾಗಲೂ ಸಮಚಿತ್ತತೆ, ಮತ್ತು ನನ್ನಲ್ಲಿ ಅನನ್ಯಯೋಗದ ಮೂಲಕ ಅವ್ಯಭಿಚಾರಿಯಾದ ಭಕ್ತಿ, ನಿರ್ಜನಪ್ರದೇಶವನ್ನು ಸೇವಿಸುವಿಕೆ ಮತ್ತು ಜನಸಮೂಹದಲ್ಲಿ ಪ್ರೀತಿಯಿಲ್ಲದಿರುವಿಕೆ, ಅಧ್ಯಾತ್ಮ ಜ್ಞಾನದಲ್ಲಿ ನಿಷ್ಠೆ, ತತ್ವಜ್ಞಾನಾರ್ಥದ ಆಲೋಚನೆ. ಇದು ಜ್ಞಾನವೆಂದು ಹೇಳಲ್ಪಟ್ಟಿದೆ. ಯಾವುದು ಇದಕ್ಕಿಂತ ಭಿನ್ನವಾಗಿರುವುದೋ ಅದು ಅಜ್ಞಾನ."

ಈ ಶ್ಲೋಕಗಳಲ್ಲಿ ಭಗವದ್ಗೀತೆಯು ಬೌದ್ಧಧರ್ಮದ ಮುಖ್ಯ ತತ್ವಗಳನ್ನು ಪದಶಃ ಪುನರುಕ್ತಿಸಿರುವುದನ್ನು ಬುದ್ಧನ ಉಪದೇಶದ ಪರಿಚಯ ಇರುವ ಯಾರಾದರೂ ನಿರಾಕರಿಸಲು ಸಾಧ್ಯವೆ?

ಭಗವದ್ಗೀತೆಯ ೧೩ನೇ ಅಧ್ಯಾಯದ ೫, ೬, ೧೮, ೧೯ನೇ ಶ್ಲೋಕಗಳಲ್ಲಿ ಕರ್ಮಗಳ ಸಾಂಕೇತಿಕಾರ್ಥವನ್ನು ನಾನಾ ಶೀರ್ಷಿಕೆಗಳಲ್ಲಿ ಹೊಸದಾಗಿ ನೀಡಲಾಗಿದೆ. ಅವು (೧) ಯಜ್ಞಗಳು; (೨) ದಾನ; (೩) ತಪಸ್ಸು; (೪) ಆಹಾರ; ಮತ್ತು (೫) ಸ್ವಾಧ್ಯಾಯ (ವೇದಾಧ್ಯಯನ). ಹಳೆಯ ವಿಚಾರಗಳಿಗೆ ನೀಡಿದ ಈ ಹೊಸ ವ್ಯಾಖ್ಯಾನಕ್ಕೆ ಮೂಲ ಯಾವುದು? ಇದರ ಜೊತೆ ಮಜ್ಜಿನ ನಿಕಾಯದ ೧೨೮೬ ಸುತ್ತ ೧೬ರಲ್ಲಿ ಬುದ್ಧ ಹೇಳಿರುವುದನ್ನು ಹೋಲಿಸಿ ನೋಡಿ. ೧೭ನೇ ಅಧ್ಯಾಯದ ೫, ೬, ೧೮, ೧೯ನೇ ಶ್ಲೋಕಗಳಲ್ಲಿ ಕೃಷ್ಣ ಹೇಳುವುದು ಬುದ್ಧ ಉಪದೇಶದ ಅಕ್ಷರಶಃ ನಕಲೆಂಬುದನ್ನು ಯಾರಾದರೂ ಅನುಮಾನಿಸಲು ಸಾಧ್ಯವೇ?

ತಾತ್ವಿಕ ಪ್ರಾಧಾನ್ಯತೆಯಲ್ಲಿ ಪ್ರಮುಖವಾದವುಗಳನ್ನು ಮಾತ್ರ ಆರಿಸಿ ನಿದರ್ಶನಗಳನ್ನಾಗಿ ಕೊಟ್ಟಿದ್ದೇನೆ. ಭಗವದ್ಗೀತೆಯ ತನ್ನ ಆವೃತ್ತಿಯ ಅಡಿ ಟಿಪ್ಪಣಿಗಳಲ್ಲಿ ತೆಲಾಂಗ್ ನೀಡಿರುವ ಉಲ್ಲೇಖಗಳಲ್ಲಿ ಗೀತೆ ಮತ್ತು ಬೌದ್ಧಧರ್ಮಗಳಲ್ಲಿ ಇರುವ ಸಾಮ್ಯತೆಗಳ ವಿಷಯವನ್ನು ಎತ್ತಿಕೊಂಡು ಆಸಕ್ತರು ಮುಂದುವರಿಸಬಹುದು ಹಾಗೂ ತಮ್ಮ ಕುತೂಹಲವನ್ನು ತಣಿಸಿಕೊಳ್ಳಬಹುದು. ಆದರೆ ಬೌದ್ಧವಾದದಿಂದ ಎಷ್ಟು ಬೃಹತ್ತಾಗಿ

ಭಗವದ್ಗೀತೆ ತುಂಬಿಹೋಗಿದೆ ಹಾಗೂ ಬೌದ್ಧ ಧರ್ಮದಿಂದ ಎಷ್ಟನ್ನು ಎತ್ತಿಕೊಂಡಿದೆಯೆಂದು ತೋರಿಸಲು ಈ ನಿದರ್ಶನಗಳು ಸಾಕು. ಸಂಕ್ಷಿಪ್ತವಾಗಿ ಹೇಳುವುದಾದರೆ ಬುದ್ಧ ಸುತ್ತಗಳ ಮೇಲೆಯೇ ಭಗವದ್ಗೀತೆ ಉದ್ದೇಶಪೂರ್ವಕವಾಗಿ ರೂಪಿತವಾಗಿದೆ. ಬುದ್ಧ ಸುತ್ತಗಳು ಸಂಭಾಷಣೆಗಳಾಗಿವೆ. ಭಗವದ್ಗೀತೆ ಕೂಡ ಹಾಗೆಯೆ ಇದೆ. ಬುದ್ಧನ ಧರ್ಮ ಸ್ತ್ರೀಯರಿಗೂ ಶೂದ್ರರಿಗೂ ಮೋಕ್ಷವನ್ನು ದಯಪಾಲಿಸಿತು. ಸ್ತ್ರೀಯರಿಗೆ ಮತ್ತು ಶೂದ್ರರಿಗೆ ಮೋಕ್ಷ ಕೊಡಲು ಕೃಷ್ಣ ಕೂಡ ಮುಂದೆ ಬರುತ್ತಾನೆ. ಬೌದ್ಧರು "ನಾನು ಬುದ್ಧನಿಗೆ ಶರಣು ಹೋಗುತ್ತೇನೆ. ಧಮ್ಮಕ್ಕೆ ಶರಣು ಹೋಗುತ್ತೇನೆ. ಸಂಘಕ್ಕೆ ಶರಣು ಹೋಗುತ್ತೇನೆ" ಎಂದು ಹೇಳುತ್ತಾರೆ. ಹಾಗೆ ಕೃಷ್ಣ ಕೂಡ ಹೇಳುತ್ತಾನೆ: "ಸರ್ವಧರ್ಮಗಳನ್ನು ಪರಿತ್ಯಾಗ ಮಾಡಿ ನನ್ನೊಬ್ಬನಿಗೇ ಶರಣು ಹೋಗು". ಬೌದ್ಧಧರ್ಮ ಮತ್ತು ಗೀತೆಗೂ ಇರುವಷ್ಟು ಸಾದೃಶ್ಯ ಬೇರಾವುದಕ್ಕೂ ಇಲ್ಲ.

## IV

ಪೂರ್ವ ಮೀಮಾಂಸೆ ಮತ್ತು ಬೌದ್ಧ ಧರ್ಮಕ್ಕಿಂತಲೂ ಕೂಡ ಗೀತೆ ಈಚಿನದೆಂದು ನಾನು ತೋರಿಸಿದ್ದೇನೆ. ನಾನು ಇಲ್ಲೆ ನಿಲ್ಲಿಸಬೇಕಾಗಿತ್ತು. ಆದರೆ ನಿಲ್ಲಸಬಾರದೆಂದು ನನಗೆ ಅನ್ನಿಸುತ್ತದೆ. ಏಕೆಂದರೆ ನನ್ನ ನಿಬಂಧದ ವಿರುದ್ಧ ಒಂದು ವಾದವಿದೆ, ಅದಕ್ಕೆ ಉತ್ತರ ನೀಡಬೇಕಾಗಿದೆ. ಅದು ತಿಲಕರ ವಾದ. ಅದು ಚಾತುರ್ಯಪೂರ್ಣ ವಾದ. ಗೀತೆಗೂ ಬೌದ್ಧ ಧರ್ಮಕ್ಕೂ ವಿಚಾರಗಳಲ್ಲೂ ಶಬ್ದಗಳಲ್ಲೂ ಅನೇಕ ಸಾಮ್ಯಗಳಿವೆಯೆಂದು ತಿಲಕ್ ಸ್ಥಿರಪಡಿಸಿಕೊಳ್ಳುತ್ತಾರೆ. ಗೀತೆಗಿಂತ ಬೌದ್ಧಧರ್ಮ ಹಿಂದಿನದಾದುದರಿಂದ ಗೀತೆ ಸಾಲಗಾರನೆಂತಲೂ ಬೌದ್ಧ ಧರ್ಮ ಲೇಣೆದಾರನೆಂತಲೂ ಸ್ಪಷ್ಟ ತೀರ್ಮಾನಕ್ಕೆ ಬರಬೇಕಾಗುತ್ತದೆ. ಈ ಸ್ಪಷ್ಟ ತೀರ್ಮಾನ ತಿಲಕರಿಗೆ ಹಿಡಿಸುವುದಿಲ್ಲ ಅಥವಾ ಹಾಗೆ ನೋಡಿದರೆ ಪ್ರತಿಕ್ರಾಂತಿಯು ಕ್ರಾಂತಿಗೆ ಋಣಿಯಾಗಿದೆ. ಈ ಸಮಸ್ಯೆಯನ್ನು ದಾಟಲು ತಿಲಕ್ ಹೊಸ ದಾರಿ ಹಿಡಿದಿದ್ದಾರೆ. ಮಹಾಯಾನ ಬೌದ್ಧಧರ್ಮಕ್ಕೂ ಹಾಗೂ ಹೀನಯಾನ ಬೌದ್ಧಧರ್ಮಕ್ಕೂ ಭೇದವನ್ನು ತೋರಿಸಿ ಮಹಾಯಾನ ಬೌದ್ಧಧರ್ಮ ಭಗವದ್ಗೀತೆಗಿಂತ ಈಚಿನದು ಎಂದು ಹೇಳಿ ಬೌದ್ಧಧರ್ಮ ಮತ್ತು ಭಗವದ್ಗೀತೆಗೆ ಸಾಮ್ಯಗಳಿದ್ದರೆ ಅದು ಮಹಾಯಾನಿಗಳು ಭಗವದ್ಗೀತೆಯಿಂದ ಎರವಲು ಪಡೆದದ್ದರಿಂದ ಉಂಟಾಗಿದೆ ಎಂದು ಹೇಳುತ್ತಾರೆ. ಇದರಿಂದ ಎರಡು ಪ್ರಶ್ನೆಗಳು ಉದ್ಭವವಾಗುತ್ತವೆ. ಮಹಾಯಾನ ಬೌದ್ಧಧರ್ಮದ ಉಗಮದ ಕಾಲ ಯಾವುದು? ಭಗವದ್ಗೀತೆಯ ರಚನೆಯ ಕಾಲ ಯಾವುದು? ತಿಲಕರ ವಾದ ದಕ್ಷ ನೈಪುಣ್ಯತೆಯಿಂದ ಕೂಡಿದೆ. ಆದರೆ ಅದರಲ್ಲಿ ಸತ್ವವಿಲ್ಲ. ಮೊದಲನೆಯದಾಗಿ, ಅದು ಸ್ವೋಪಜ್ಞವಲ್ಲ. ಅದು ಭಗವದ್ಗೀತೆ ಮತ್ತು ಮಹಾಯಾನ ಬೌದ್ಧಧರ್ಮದಲ್ಲಿ ಕೆಲವು ಸಾದೃಶ್ಯಗಳಿವೆ. ಭಗವದ್ಗೀತೆಯಿಂದ ಮಹಾಯಾನ ಬೌದ್ಧಧರ್ಮ ತೆಗೆದುಕೊಂಡದ್ದರಿಂದ ಈ ಸಾದೃಶ್ಯಗಳುಂಟಾಗಿವೆ ಎಂಬ ವಿಂಟರ್‌ನಿಟ್ಜ್[೧] ಮತ್ತು ಕರ್ನ್[೨] ಅವರ ಸಾಂದರ್ಭಿಕ ಟೀಕೆಗಳ ಮೇಲೆ ಆಧಾರಿತವಾಗಿದೆ. ಈ ಟೀಕೆಗಳ ಹಿಂದೆ ವಿಶೇಷ ಸಂಶೋಧನೆಯ ಆಧಾರ ವಿಂಟರ್‌ನೀಟ್ಸ್, ಕರ್ನ್ ಅಥವಾ ತಿಲಕರಲ್ಲಿ ಕಂಡುಬರುವುದಿಲ್ಲ. ಮಹಾಯಾನ ಬೌದ್ಧಧರ್ಮಕ್ಕಿಂತ ಭಗವದ್ಗೀತೆ ಹಿಂದಿನದು ಎಂಬ ಭಾವನೆಯಿಂದ ಅವರೆಲ್ಲರೂ ನಿರ್ದೇಶಿತರಾಗಿರುವಂತೆ ಕಾಣುತ್ತದೆ.

---

೧. 'ಹಿಸ್ಟರಿ ಆಫ್ ಇಂಡಿಯನ್ ಲಿಟರೇಚರ್', ಸಂ.II ಪು. ೨೯೯ ಅಡಿಟಿಪ್ಪಣಿ.

೨. 'ಮ್ಯಾನ್ಯುಯಲ್ ಆಫ್ ಇಂಡಿಯನ್ ಬುದ್ಧಿಸಮ್', ಪು. ೧೨೨, ಅಡಿಟಿಪ್ಪಣಿ.

ಇದು ಭಗವದ್ಗೀತೆಯ ಕಾಲವನ್ನು ವಿಶೇಷವಾಗಿ ಶ್ರೀ ತಿಲಕ್ ಇಟ್ಟಿರುವ ವಾದವನ್ನು ಪರಿಶೀಲಿಸಲು ನನ್ನನ್ನು ಕರೆದೊಯ್ಯುತ್ತದೆ. ಗೀತೆ ಮಹಾಭಾರತದ ಒಂದು ಭಾಗ, ಇವೆರಡೂ ವ್ಯಾಸನೆಂಬ ಹೆಸರಿನ ಒಬ್ಬನೇ ಲೇಖಕನಿಂದ ರಚಿತವಾಗಿರಬೇಕು. ತತ್ಪರಿಣಾಮವಾಗಿ, ಮಹಾಭಾರತದ ಕಾಲವೇ ಭಗವದ್ಗೀತೆಯ ಕಾಲವೆಂದು ತಿಲಕರ ಅಭಿಪ್ರಾಯ[೧]. ಚಂದ್ರಗುಪ್ತ ಮೌರ್ಯನ ಆಸ್ಥಾನಕ್ಕೆ ಗ್ರೀಕ್ ರಾಯಭಾರಿಯಾಗಿ ಸುಮಾರು ಕ್ರಿ.ಪೂ. ೩೦೦ರಲ್ಲಿ ಭಾರತಕ್ಕೆ ಬಂದಿದ್ದ ಮೆಗಾಸ್ತನೀಸನಿಗೆ ಮಹಾಭಾರತದಲ್ಲಿ ಸೇರಿರುವ ಕತೆಗಳು ಗೊತ್ತಿದ್ದರ ಆಧಾರದ ಮೇಲೆ ಶಕ ಯುಗಕ್ಕಿಂತ ೫೦೦ ವರ್ಷಗಳು ಮೊದಲೇ ಮಹಾಭಾರತ ರಚಿತವಾಗಿರಬೇಕೆಂದು ಶ್ರೀ ತಿಲಕ್ ವಾದಿಸುತ್ತಾರೆ. ಶಕ ಯುಗ ಕ್ರಿ.ಶ. ೭೮ರಲ್ಲಿ ಪ್ರಾರಂಭವಾಯಿತು. ಈ ಆಧಾರದ ಮೇಲೆ ಹೇಳುವುದಾದರೆ ಭಗವದ್ಗೀತೆ ಕ್ರಿ.ಪೂ. ೪೨೨ಕ್ಕಿಂತ ಮೊದಲು ರಚಿತವಾಗಿದ್ದಿರಬೇಕು. ಈಗಿನ ಗೀತೆ ರಚಿತವಾದ ಕಾಲದ ಬಗ್ಗೆ ಇದು ಅವರ ಅಭಿಪ್ರಾಯ. ಅವರ ಪ್ರಕಾರ ಮೂಲ ಗೀತೆ ಮಹಾಭಾರತಕ್ಕಿಂತ ಹಲವು ಶತಮಾನಗಳಷ್ಟು ಹಿಂದಿನದ್ದಿರಬೇಕು. ಅತ್ಯಂತ ಪ್ರಾಚೀನ ಕಾಲದಲ್ಲಿ ನರನು ನಾರಾಯಣನಿಗೆ ಭಗವದ್ಗೀತೆಯ ಧರ್ಮವನ್ನು ಬೋಧಿಸಿದನೆಂದು ಭಗವದ್ಗೀತೆಯಲ್ಲಿ ಉಲ್ಲೇಖಿತವಾಗಿರುವ ಸಂಪ್ರದಾಯವನ್ನು ನಂಬಿ ಹೇಳಬೇಕಾಗುತ್ತದೆ. ಮಹಾಭಾರತದ ರಚನೆಯ ಕಾಲದ ಬಗೆಗಿನ ತಿಲಕರ ವಾದ ನಿಲ್ಲುವುದಿಲ್ಲ. ಮೊದಲನೆಯದಾಗಿ, ಇಡಿ ಭಗವದ್ಗೀತೆ ಮತ್ತು ಇಡಿ ಮಹಾಭಾರತ ಒಂದೇ ನಿಟ್ಟಿನಲ್ಲಿ ಒಂದೇ ಕಾಲದಲ್ಲಿ ಒಬ್ಬನಿಂದಲೇ ರಚಿತವಾಯಿತೆಂದು ಅದು ಭಾವಿಸುತ್ತದೆ. ಆ ಭಾವನೆಗೆ ಪರಂಪರೆಯಲ್ಲಾಗಲೀ ಅಥವಾ ಈ ಎರಡು ಕೃತಿಗಳ ಆಂತರಿಕ ಸಾಕ್ಷ್ಯಾಧಾರದಲ್ಲಾಗಲೀ ಸಮರ್ಥನೆಯಿಲ್ಲ. ತಿಲಕರ ಕಲ್ಪನೆಯನ್ನು ಮಹಾಭಾರತದ ಚರ್ಚೆಗಷ್ಟೇ ಸೀಮಿತಗೊಳಿಸಿದರೆ ಅದು ಜನಜನಿತವಾದ ಭಾರತೀಯ ಪರಂಪರೆಗಳಿಗೆ ಸಂಪೂರ್ಣವಾಗಿ ವಿರುದ್ಧವಾಗಿದೆ. ಈ ಪರಂಪರೆ ಮಹಾಭಾರತದ ರಚನೆಯನ್ನು ಮೂರು ಹಂತಗಳಾಗಿ ವಿಭಜಿಸುತ್ತದೆ: (೧) ಜಯ, (೨) ಭಾರತ ಮತ್ತು (೩) ಮಹಾಭಾರತ. ಈ ಪ್ರತಿಯೊಂದು ಭಾಗವನ್ನು ಬೇರೆ ಬೇರೆ ಲೇಖಕರು ಬರೆದರೆಂದು ಅದು ಹೇಳುತ್ತದೆ. ಈ ಪರಂಪರೆಯ ಪ್ರಕಾರ ಮಹಾಭಾರತದ ಮೊದಲ ಆವೃತ್ತಿಯ ಕರ್ತೃ ವ್ಯಾಸ. ಇದನ್ನು 'ಜಯ' ಎಂದು ಕರೆಯುತ್ತಾರೆ. 'ಭಾರತ'ವೆಂದು ಕರೆಯುವ ಎರಡನೆಯ ಆವೃತ್ತಿಯ ಕರ್ತೃ ವೈಶಂಪಾಯನ ಎಂದು ಪರಂಪರೆ ಹೇಳುತ್ತದೆ. ಮಹಾಭಾರತದ ಮೂರನೆಯ ಆವೃತ್ತಿಯನ್ನು 'ಸೌತಿ' ಬರೆದ ಎನ್ನುತ್ತಾರೆ. ಮಹಾಭಾರತ ಒದಗಿಸುವ ಆಂತರಿಕ ಸಾಕ್ಷ್ಯಾಧಾರಗಳ ಮೇಲೆ ಪ್ರೊ. ಹಾಪ್ಕಿನ್ಸ್ ಅವರ ಸಂಶೋಧನೆಗಳು ಈ ಪರಂಪರೆ ಸಾಧಾರಿತವಾಗಿದೆಯೆಂದು ದೃಢಗೊಳಿಸುತ್ತವೆ. ಪ್ರೊ. ಹಾಪ್ಕಿನ್ಸ್‌ರ[೨] ಪ್ರಕಾರ ಮಹಾಭಾರತದ ರಚನೆಯಲ್ಲಿ ಹಲವು ಹಂತಗಳಿವೆ. ಪ್ರೊ. ಹಾಪ್ಕಿನ್ಸ್[೩] ಹೇಳುವಂತೆ ಮೊದಲನೆಯ ಹಂತದಲ್ಲಿ ಇದು ಕೇವಲ ಪಾಂಡು ಮಹಾಕಾವ್ಯ. ಮಹಾಭಾರತ ಯುದ್ಧದಲ್ಲಿ ಭಾಗವಹಿಸಿದ ವೀರರ ಕತೆಗಳನ್ನೂ ನಾಟಕಗಳನ್ನೂ ಒಳಗೊಂಡು ನೀತಿಬೋಧಕ ವಿಷಯಗಳಿಗಿಂತ ಹೊರತಾಗಿತ್ತು. ಅಂತಹ ಮಹಾಭಾರತ ಕ್ರಿ.ಪೂ.೪೦೦–೨೦೦ರ ಅವಧಿಯಲ್ಲಿ ಅಸ್ತಿತ್ವಕ್ಕೆ ಬಂದಿರಬಹುದೆಂದು ಪ್ರೊ. ಹಾಪ್ಕಿನ್ಸ್ ಹೇಳುತ್ತಾರೆ. ಎರಡನೆಯ ಹಂತದಲ್ಲಿ ನೀತಿಬೋಧಕ ವಿಷಯ ಮತ್ತು ಇತರ ಪೌರಾಣಿಕ ಸಂಗತಿಗಳನ್ನು ಸೇರಿಸಿ ಈ ಮಹಾಕಾವ್ಯದ ಪುನರ್‌ರಚನೆಯಾಯಿತು. ಇದು ಕ್ರಿ.ಪೂ. ೨೦೦ ಮತ್ತು ಕ್ರಿ.ಶ. ೨೦೦ರಲ್ಲಿ ನಡೆಯಿತು. ಪ್ರಥಮ ಕೃತಿಯ ಪೀಠಿಕೆಯೊಂದಿಗೆ ಎರಡನೆಯ ಹಂತದ ಕೊನೆಯಲ್ಲಿ ನಿಂತಿದ್ದಾಗ

೧. 'ಗೀತಾ ರಹಸ್ಯ', ಸಂ. II, ಪು. ೭೮೧–೮೦೦.
೨. 'ದಿ ಗ್ರೇಟ್ ಎಪಿಕ್ ಆಫ್ ಇಂಡಿಯಾ', ಪು. ೩೯೮.
೩. ಅದೇ.

ಅಂತಿಮ ಪರ್ವಗಳನ್ನು ಸೇರಿಸಿದಾಗ ಮೂರನೆಯ ಹಂತ ತಲುಪಿತು. ದೊಡ್ಡದಾಗಿದ್ದ ಅನುಶಾಸನ ಪರ್ವವನ್ನು ಶಾಂತಿ ಪರ್ವದಿಂದ ಪ್ರತ್ಯೇಕ ಮಾಡಿ ಅದನ್ನು ಒಂದು ಸ್ವತಂತ್ರ ಗ್ರಂಥವೆಂದು ಪರಿಗಣಿಸಲಾಯಿತು. ಇದು ಕ್ರಿ.ಪೂ.೨೦೦–೪೦೦ರ ಅವಧಿಯಲ್ಲಿ ನಡೆಯಿತು. ಈ ಮೂರು ಹಂತಗಳಲ್ಲಿ ಕ್ರಿ.ಪೂ. ೪೦೦ರ ನಂತರ ಪ್ರಾರಂಭವಾದ ಸಾಂದರ್ಭಿಕ ವಿಸ್ತರಣೆಯನ್ನು ೪ನೆಯ ಅಥವಾ ಕೊನೆಯ ಹಂತವೆಂದು ಹಾಪ್ಕಿನ್ಸ್ ಕರೆಯುತ್ತಾರೆ. ಈ ತೀರ್ಮಾನಕ್ಕೆ ಪ್ರೊ. ಹಾಪ್ಕಿನ್ಸ್ ಬರುವಾಗ ಪಾಣಿನಿಯಲ್ಲಿಯೂ[೧] ಗೃಹ್ಯಸೂತ್ರಗಳಲ್ಲಿಯೂ[೨] ಮಹಾಭಾರತದ ಉಲ್ಲೇಖವಿದೆ ಎಂದು ತಿಲಕರು ಮುಂದಿಟ್ಟ ವಾದಗಳನ್ನು ಮೊದಲೇ ಊಹಿಸಿ ಉತ್ತರಿಸಿದ್ದಾರೆ. ತಿಲಕರು ಮಂಡಿಸಿರುವ ಹೊಸ ಸಾಕ್ಷ್ಯಾಧಾರಗಳಲ್ಲಿ ಪ್ರೊ. ಹಾಪ್ಕಿನ್ಸ್ ಗಣನೆಗೆ ತೆಗೆದುಕೊಳ್ಳದಿರುವುದು ಕೇವಲ ಎರಡು. ಚಂದ್ರಗುಪ್ತ ಮೌರ್ಯನ ಆಸ್ಥಾನಕ್ಕೆ ಗ್ರೀಕ್ ರಾಯಭಾರಿಯಾಗಿದ್ದ ಮೆಗಾಸ್ತನೀಸ್[೩] ದಾಖಲಿಸಿದ್ದಾನೆಂದು ಹೇಳುವ ಹೇಳಿಕೆಗಳಲ್ಲಿ ಅಡಗಿರುವ ಸಾಕ್ಷ್ಯಾಧಾರ ಒಂದನೆಯದು. ಎರಡನೆಯ ಸಾಕ್ಷ್ಯಾಧಾರವೆಂದರೆ ಆದಿಪರ್ವದಲ್ಲಿ ಬರುವ ಖಗೋಳ ಶಾಸ್ತ್ರೀಯ ಸಾಕ್ಷ್ಯಾಧಾರ[೪]. ಇದು ಶ್ರಾವಣ ನಕ್ಷತ್ರದಲ್ಲಿ ಪ್ರಾರಂಭವಾಗುವ ಉತ್ತರಾಯಣ. ಮೆಗಾಸ್ತನೀಸನಿಂದ ತಿಲಕರು ಎತ್ತಿ ಹೇಳುವ ಸಂಗತಿಗಳನ್ನು ನಿರಾಕರಿಸಲಾಗದಿರಬಹುದು. ಈ ಸಂಗತಿಗಳು ಮೆಗಾಸ್ತನೀಸನ ಕಾಲದಲ್ಲಿ ಅಂದರೆ ಸುಮಾರು ಕ್ರಿ.ಪೂ. ೩೦೦ರಲ್ಲಿ ಸೌರಸೇನೆ ಜನಾಂಗದಲ್ಲಿ ಕೃಷ್ಣ ಭಕ್ತಿಪಂಥ ಅಸ್ತಿತ್ವಕ್ಕೆ ಬಂದಿತೆಂದು ಸಾಬೀತುಪಡಿಸಬಹುದು. ಆದರೆ ಇದು ಹೇಗೆ ಆಗ ಮಹಾಭಾರದ ಅಸ್ತಿತ್ವಕ್ಕೆ ಬಂದಿತ್ತು ಎಂದು ಸಾಬೀತುಪಡಿಸುತ್ತದೆ? ಸಾಧ್ಯವಿಲ್ಲ. ಮೆಗಾಸ್ತನೀಸ್ ಹೇಳುವ ಪುರಾಣ ಕಥೆಗಳು ಮಹಾಭಾರತದಿಂದಲೇ ತೆಗೆದುಕೊಂಡಂಥವು ಎಂದು ಅದು ಸಾಧಿಸಲಾರದು. ಈ ಪುರಾಣ ಕತೆಗಳು ಜನಜನಿತವಾಗಿದ್ದವು ಎಂಬ ಅಭಿಪ್ರಾಯವನ್ನು ವಿರೋಧಿಸಲು ಯಾವ ಅಧಿಕಾರವೂ ಇಲ್ಲ. ಈ ಕಥೆಗಳು ಮಹಾಭಾರತಕಾರನಿಗೂ, ಮತ್ತು ಗ್ರೀಕ್ ರಾಯಭಾರಿಗೂ ಮೂಲ ಸ್ರೋತವಾಗಿದ್ದವು.

ತಿಲಕರ ಖಗೋಳಶಾಸ್ತ್ರೀಯ ಸಾಕ್ಷ್ಯಾಧಾರ ಪೂರಾ ಸರಿಯಿರಬಹುದು[೫]. ಶ್ರಾವಣದಲ್ಲಿ (ಮ.ಭಾ. ಅಶ್ವ ೪೪೨ ಮತ್ತು ಆದಿ ೭೧.೩೪) ನಕ್ಷತ್ರ ಪುಂಜವನ್ನು ವಿಶ್ವಾಮಿತ್ರ ಎಣಿಸಲು ಪ್ರಾರಂಭಿಸಿದನೆಂದು ಅನುಗೀತೆಯಲ್ಲಿ ಹೇಳಲಾಗಿದೆ ಎಂಬ ಅವರ ಅಭಿಪ್ರಾಯ ಸರಿಯಾಗಿದೆ. ಶ್ರಾವಣ ನಕ್ಷತ್ರದಿಂದ ಉತ್ತರಾಯಣ ಪ್ರಾರಂಭವಾಯಿತು ಎಂದು ವ್ಯಾಖ್ಯಾನಕಾರರು ಹೇಳುತ್ತಾರೆ. ಬೇರೆ ಯಾವ ವ್ಯಾಖ್ಯಾನವೂ ಸರಿಯಲ್ಲ. ವೇದಾಂಗ–ಜ್ಯೋತಿಷ ಕಾಲದಲ್ಲಿ ಧನಿಷ್ಠ ನಕ್ಷತ್ರದಲ್ಲಿ ಸೂರ್ಯನೊಂದಿಗೆ ಉತ್ತರಾಯಣ ಪ್ರಾರಂಭವಾಗುತ್ತಿತ್ತು. ಖಗೋಳ ಶಾಸ್ತ್ರೀಯ ಲೆಕ್ಕಾಚಾರದ ಪ್ರಕಾರ ಉತ್ತರಾಯಣ ಯಾವಾಗ ಪ್ರಾರಂಭವಾಗಬೇಕೆಂದರೆ ಸೂರ್ಯನ ಜೊತೆ ಧನಿಷ್ಠ ನಕ್ಷತ್ರದಲ್ಲಿ ಶಕಯುಗಕ್ಕೆ ಸುಮಾರು ೧೫೦೦ ವರ್ಷಗಳಿಗಿಂತ ಮೊದಲು ಪ್ರಾರಂಭವಾಗಲು ಸುಮಾರು ೧೦೦೦ ವರ್ಷಗಳು ಬೇಕೆಂದು ಖಗೋಳ ಶಾಸ್ತ್ರೀಯ ಲೆಕ್ಕಾಚಾರ ಹೇಳುತ್ತದೆ. ಈ ಲೆಕ್ಕಾಚಾರದ ಪ್ರಕಾರ, ಶಕಯುಗಕ್ಕೆ ಸುಮಾರು ೫೦೦ ವರ್ಷಗಳಿಗೆ ಮುನ್ನ ಶ್ರಾವಣ ನಕ್ಷತ್ರದಲ್ಲಿ ಸೂರ್ಯನ ಜೊತೆ ಉತ್ತರಾಯಣ ಕಾಲ ಪ್ರಾರಂಭವಾಗಲೇಬೇಕು. ಒಬ್ಬನೇ ಲೇಖಕನಿಂದ ಒಂದೇ ಕಾಲದಲ್ಲಿ ರಚಿತವಾಗಿ

೧. ಅದೇ, ಪು. ೩೯೫.
೨. ಅದೇ, ೩೯೦.
೩. 'ಗೀತಾ ರಹಸ್ಯ', II, ಪು. ೭೯
೪. ಅದೇ. ಪು. ೭೮೯.
೫. ಅದೇ.

ಮಹಾಭಾರತ ಒಂದು ಅಖಂಡ ಕೃತಿಯೆಂಬುದು ನಿಜವಾಗಿದ್ದರೆ ಈ ತೀರ್ಮಾನ ಸಮಂಜಸವಾಗುತ್ತಿತ್ತು. ಆದರೆ ಅಂತಹ ಊಹೆಗೆ ಅಲ್ಲಿ ಆಧಾರವಿಲ್ಲ ಎಂದು ತೋರಿಸಲಾಗಿದೆ. ಮಹಾಭಾರತದ ಕಾಲವನ್ನು ನಿರ್ಧರಿಸಲು ತಿಲಕರ ಖಗೋಳಶಾಸ್ತ್ರೀಯ ಆಧಾರವನ್ನು ಉಪಯೋಗಿಸುವುದು ಈ ದೃಷ್ಟಿಯಿಂದ ಸಾಧ್ಯವಾಗುವುದಿಲ್ಲ. ಮಹಾಭಾರತದ ಆದಿಪರ್ವದಲ್ಲಿ ಖಗೋಳಶಾಸ್ತ್ರೀಯ ಸಾಕ್ಷ್ಯಾಧಾರ ಕಂಡುಬರುವುದರಿಂದ ಮಹಾಭಾರತದ ಈ ಪರ್ವದ ಕಾಲವನ್ನು ತೀರ್ಮಾನಿಸಲು ಮಾತ್ರ ಸಾಧ್ಯ. ಈ ಕಾರಣಗಳಿಗಾಗಿ ಮಹಾಭಾರತದ ರಚನೆಯ ಕಾಲದ ಬಗ್ಗೆ ತಿಲಕರ ವಾದ ಮಣ್ಣು ಮುಕ್ಕುತ್ತದೆ. ದೀರ್ಘ ಕಾಲಾವಧಿಯಲ್ಲಿ ಭಾಗ ಭಾಗವಾಗಿ ರಚಿತವಾದ ಮಹಾಭಾರತದಂಥ ಧಾರಾವಹಿ ಕಥೆಗೆ ಒಂದೇ ಒಂದು ಕಾಲವನ್ನು ನಿಗದಿಪಡಿಸುವ ಯಾವುದೇ ಪ್ರಯತ್ನವನ್ನು ವ್ಯರ್ಥವೆಂದು ನಿಜವಾಗಿ ಪರಿಗಣಿಸಬೇಕು. ಆದ್ದರಿಂದ ಇಷ್ಟನ್ನು ಹೇಳಬಹುದು, ಕ್ರಿ.ಪೂ. ೪೦೦–ಕ್ರಿ.ಶ. ೪೦೦ ಈ ನಡುವಣ ಅವಧಿಯಲ್ಲಿ ಮಹಾಭಾರತ ರಚಿತವಾಯಿತು. ತಿಲಕರ ವಾದದ ಉದ್ದೇಶಕ್ಕೆ ಈ ತೀರ್ಪನ್ನು ಬಳಸಲಾಗುವುದಿಲ್ಲ. ಕೆಲವು ವಿದ್ವಾಂಸರಿಗೆ ಈ ಕಾಲಮಾನ ಕೂಡ ತುಂಬ ಕಡಿಮೆ ಎನ್ನಿಸುತ್ತದೆ. ವನಪರ್ವದ ೧೯೦ನೇ ಅಧ್ಯಾಯದಲ್ಲಿ ಬರುವ ಈದುಕಗಳ ಬಗೆಗಿನ ಉಲ್ಲೇಖವನ್ನು[೧] ಬೌದ್ಧಸ್ತೂಪಗಳು ಎಂಬ ಅರ್ಥದಲ್ಲಿ ತಪ್ಪಾಗಿ ವ್ಯಾಖ್ಯಾನಿಸಲಾಗಿದೆ ಎಂದು ವಾದಿಸಲಾಗಿದೆ. ವಾಸ್ತವವಾಗಿ ಮುಸ್ಲಿಂ ಮತಾಂತರಿಗಳಿಗೆ ಮುಸ್ಲಿಂ ಆಕ್ರಮಣಕಾರರು ಕಟ್ಟಿಸಿದ ಈದ್ಗಾಗಳನ್ನು ಅವು ಸೂಚಿಸುತ್ತವೆ. ಈ ವ್ಯಾಖ್ಯಾನ ಸರಿಯಿದ್ದರೆ ಮಹಾಭಾರತದ ಆ ಪರ್ವಗಳು ಮಹಮ್ಮದ್ ಘೋರಿಯ ದಂಡಯಾತ್ರೆಗಳ ಸಮಯದಲ್ಲಿ ಅಥವಾ ಅನಂತರ ಬರೆದದ್ದವೆಂದು ಗೊತ್ತಾಗುತ್ತದೆ.

ಭಗವದ್ಗೀತೆಯ ರಚನೆಯ ಕಾಲದ ಬಗ್ಗೆ ತಿಲಕರ ವಾದವನ್ನು ಈಗ ಪರೀಕ್ಷಿಸೋಣ. ಅವರ ವಾದದ ಹಿಂದೆ ನಿಜವಾಗಿ ಎರಡು ಸೂಚನೆಗಳಿವೆ. ಮೊದಲನೆಯದು, ಗೀತೆ ಮಹಾಭಾರತದ ಒಂದು ಭಾಗ. ಅವೆರಡೂ ಒಂದೇ ಕಾಲದಲ್ಲಿ ರಚಿತವಾದವು ಹಾಗೂ ಏಕ ಕವಿಯ ರಚನೆ. ಅವರ ಎರಡನೆಯ ಸೂಚನೆ, ಭಗವದ್ಗೀತೆ ಈಗ ಯಾವ ರೂಪದಲ್ಲಿದೆಯೋ ಅದು ರಚಿತವಾದ ಆರಂಭಕಾಲದಿಂದಲೂ ಹಾಗೆಯೇ ಇದೆ ಎನ್ನುವುದು. ಗೊಂದಲವನ್ನು ತಪ್ಪಿಸುವುದಕ್ಕಾಗಿ ಇವುಗಳನ್ನು ಪ್ರತ್ಯೇಕವಾಗಿ ಚರ್ಚಿಸುತ್ತೇನೆ. ಮಹಾಭಾರತದ ರಚನೆಯ ವಿಷಯದಲ್ಲಿ ಗೀತೆಯನ್ನು ಜೋಡಿಸುವ ತಿಲಕರ ಉದ್ದೇಶ ಸ್ಪಷ್ಟವಿದೆ. ಅವರು ಭಾವಿಸುವಂತೆ ಮಹಾಭಾರತದ ಗೊತ್ತಿರುವ ಕಾಲವನ್ನು ಇಟ್ಟುಕೊಂಡು ಗೀತೆಯ ಗೊತ್ತಿಲ್ಲದಿರುವ ಕಾಲವನ್ನು ತೀರ್ಮಾನಿಸುವುದಾಗಿದೆ. ಮಹಾಭಾರತ ಮತ್ತು ಭಗವದ್ಗೀತೆಗಳ ಅವಿನಾಭಾವ ಸಂಬಂಧವನ್ನು ಸ್ಥಾಪಿಸಲು ತಿಲಕರು ಬಳಸಿರುವ ಆಧಾರವೇ ದುರದೃಷ್ಟವಶಾತ್ ಅವರ ವಾದದ ಅತ್ಯಂತ ದುರ್ಬಲ ಭಾಗವಾಗಿದೆ. ಗೀತೆ ಮಹಾಭಾರತದ ಒಂದು ಭಾಗ. ಇವೆರಡರ ಕರ್ತೃ ವ್ಯಾಸ. ಇದು ತಿಲಕರ ವಾದ. ಇದನ್ನು ಒಪ್ಪಿಕೊಂಡರೆ ಸತ್ಯಕ್ಕೆ ಬದಲಾಗಿ ಮಿಥ್ಯೆಯನ್ನು ಒಪ್ಪಿಕೊಂಡಂತಾಗುತ್ತದೆ. ವ್ಯಾಸ ಎನ್ನುವುದು ಗುರುತಿಸಲು ಸಾಧ್ಯವಾದ ಯಾವುದೋ ಒಬ್ಬ ವ್ಯಕ್ತಿಯ ಹೆಸರೆಂದು ಅದು ಭಾವಿಸುತ್ತದೆ. ಮಹಾಭಾರತದ ಕರ್ತೃವಿನ ಹೆಸರು ವ್ಯಾಸ. ಪುರಾಣಗಳ ಕರ್ತೃ ವ್ಯಾಸ. ಭಗವದ್ಗೀತೆಯ ಕರ್ತೃ ವ್ಯಾಸ ಮತ್ತು ಬ್ರಹ್ಮಸೂತ್ರಗಳ ಕರ್ತೃ ವ್ಯಾಸ ಎಂಬುದರಿಂದ ಇದು ಸ್ಪಷ್ಟವಾಗುತ್ತದೆ. ಆದ್ದರಿಂದ ಈ ಎಲ್ಲಾ ಕೃತಿಗಳ ಕರ್ತೃ ವ್ಯಾಸ ಎಂದು ಒಪ್ಪಿಕೊಳ್ಳಲು ಸಾಧ್ಯವಿಲ್ಲ. ಏಕೆಂದರೆ ಇವುಗಳಿಗೆ ಅನೇಕ ಶತಮಾನಗಳಷ್ಟು ದೀರ್ಘಕಾಲ ಒಂದಕ್ಕೊಂದು ಅಂತರವಿದೆ. ತಮ್ಮ ಕೃತಿಗಳಿಗೆ ಹೆಚ್ಚಿನ ಅಧಿಕೃತತೆಯನ್ನು ಒದಗಿಸುವುದಕ್ಕಾಗಿ ಸಂಪ್ರದಾಯ ಶರಣ ಲೇಖಕರು

---

೧. ಧರ್ಮಾನಂದ ಕೌಸಂಬಿ – 'ಹಿಂದಿ ಸಂಸ್ಕೃತಿ ಅಣಿ ಅಹಿಂಸಾ' (ಮರಾಠಿ) ಪು.೧೫೬.

ಪೂಜಾರ್ಹ ಹೆಸರುಗಳನ್ನು ಕಾವ್ಯನಾಮಗಳನ್ನಾಗಿ ಇಟ್ಟುಕೊಳ್ಳುವ ಹವ್ಯಾಸದಲ್ಲಿದ್ದುದು ಗೊತ್ತಿರುವ ವಿಚಾರ. ಗೀತೆಯ ಕರ್ತೃ ವ್ಯಾಸನಾದರೆ ಅವನು ಬೇರೊಬ್ಬ ವ್ಯಾಸನಿರಬೇಕು. ಗೀತೆ ಮತ್ತು ಮಹಾಭಾರತದ ರಚನೆ ಏಕಕಾಲಿಕ ಎನ್ನುವ ತಿಲಕರ ವಾದವನ್ನು ವಿರೋಧಿಸುವ ಇನ್ನೊಂದು ವಾದವಿರುವಂತೆ ಕಾಣುತ್ತದೆ. ಮಹಾಭಾರತದಲ್ಲಿ ಹದಿನೆಂಟು ಪರ್ವಗಳಿವೆ. ಪುರಾಣಗಳೂ ಕೂಡ ಹದಿನೆಂಟು ಇವೆ. ಭಗವದ್ಗೀತೆಯಲ್ಲಿಯೂ ಹದಿನೆಂಟು ಅಧ್ಯಾಯಗಳಿರುವುದೂ ಸಹ ಕುತೂಹಲಕರ. ಈ ಸಾಮ್ಯತೆ ಏಕೆ? ಎಂದು ಪ್ರಶ್ನೆ. ಪ್ರಾಚೀನ ಭಾರತೀಯ ಲೇಖಕರು ಕೆಲವು ಹೆಸರುಗಳು ಮತ್ತು ಕೆಲವು ಸಂಖ್ಯೆಗಳು ಪಾವಿತ್ರ್ಯತೆಯಿಂದ ಕೂಡಿವೆ ಎಂದು ಭಾವಿಸಿದ್ದರು ಎಂಬುದೇ ಉತ್ತರ. ವ್ಯಾಸನ ಹೆಸರು ಮತ್ತು ೧೮ನೇ ಸಂಖ್ಯೆ ಇದಕ್ಕೆ ಉದಾಹರಣೆಗಳು. ಭಗವದ್ಗೀತೆಯ ಅಧ್ಯಾಯಗಳು ೧೮ ಪವಿತ್ರವೆಂದು ಯಾರು ಹೇಳಿದ್ದು? ಮಹಾಭಾರತವೇ? ಗೀತೆಯೇ? ಮಹಾಭಾರತವಾದರೆ, ಗೀತೆ ಮಹಾಭಾರತದ ನಂತರ ರಚಿತವಾಗಿರಬೇಕು. ಗೀತೆಯಾದರೆ, ಮಹಾಭಾರತದ ಗೀತೆಯ ನಂತರ ರಚಿತವಾಗಿರಬೇಕು. ಒಟ್ಟಿನಲ್ಲಿ ಇವೆರಡೂ ಏಕಕಾಲದಲ್ಲಿ ರಚಿತವಾಗಿರಲು ಸಾಧ್ಯವಿಲ್ಲ.

ತಿಲಕರ ಮೊದಲನೆಯ ಸೂಚನೆಯ ವಿರುದ್ಧ ಈ ವಿಚಾರಗಳು ನಿರ್ಣಾಯಕವೆಂದು ಒಪ್ಪಿಕೊಳ್ಳಲಾಗದಿರಬಹುದು. ಆದರೆ ನಿರ್ಣಾಯಕವಾದದ್ದು ಬೇರೊಂದು ಇದೆ ಎಂದು ನನಗನ್ನಿಸುತ್ತದೆ. ಮಹಾಭಾರತ ಮತ್ತು ಭಗವದ್ಗೀತೆಯಲ್ಲಿ ಕೃಷ್ಣನ ಸಾಪೇಕ್ಷ ಸ್ಥಾನವನ್ನು ನಾನು ಉಲ್ಲೇಖಿಸುತ್ತೇನೆ. ಕೃಷ್ಣ ದೇವರೆಂದು ಎಲ್ಲರೂ ಒಪ್ಪಿಕೊಳ್ಳುವಂತೆ ಎಲ್ಲಿಯೂ ಚಿತ್ರಿಸಿಲ್ಲ. ಅವನಿಗೆ ಪ್ರಥಮ ಸ್ಥಾನ ಕೂಡ ನೀಡಲು ಜನರು ಸಿದ್ಧರಿರಲಿಲ್ಲವೆಂದು ಮಹಾಭಾರತವೇ ತೋರಿಸುತ್ತದೆ. ರಾಜಸೂಯ ಯಜ್ಞ ಕಾಲದಲ್ಲಿ ಅತಿಥಿಗಳಿಗೆ ಗೌರವಿಸುವಾಗ ಧರ್ಮರಾಯನು ಕೃಷ್ಣನಿಗೆ ಅಗ್ರಪೂಜೆ ಮಾಡಲು ಮುಂದಾದಾಗ ಕೃಷ್ಣನ ಹತ್ತಿರದ ಸಂಬಂಧಿಯಾದ ಶಿಶುಪಾಲನು ಕೃಷ್ಣನನ್ನು ವಿರೋಧಿಸಿ ನಿಂದಿಸುತ್ತಾನೆ. ಹೀನಕುಲದವನು ಎಂದು ದೂಷಿಸುವುದಲ್ಲದೆ, ನೀತಿಗೆಟ್ಟವನೆಂದೂ ಯುದ್ಧದಲ್ಲಿ ವಿಜಯಕ್ಕಾಗಿ ನಿಯಮಗಳನ್ನು ಉಲ್ಲಂಘಿಸಿದ ಕುತಂತ್ರಿ ಎಂದೂ ನಿಂದಿಸಿದನು. ಕೃಷ್ಣನ ದುಷ್ಟಕರ್ಮಗಳ ಯಾದಿ ಎಷ್ಟು ಅಸಹ್ಯವಾಗಿತ್ತೋ ಅಷ್ಟೇ ನಿಜವೂ ಆಗಿತ್ತು. ಮಹಾಭಾರತದ ಗದಾಪರ್ವದಲ್ಲಿ ಕೃಷ್ಣನ ಮುಖಕ್ಕೆ ದುರ್ಯೋಧನ ಅವುಗಳನ್ನು ಒಗೆದಾಗ ಆ ದೂಷಣೆಗಳನ್ನು ಕೇಳಲು ಸ್ವರ್ಗದಿಂದ ದೇವತೆಗಳು ಬಂದು ಕೇಳಿಯಾದ ಮೇಲೆ ಅದೆಲ್ಲ ನಿಜ, ನಿಜವಲ್ಲದೆ ಬೇರೇನೂ ಅಲ್ಲ ಎಂದು ಮೆಚ್ಚಿ ಪುಷ್ಪವೃಷ್ಟಿ ಮಾಡಿದರು. ಇದಕ್ಕೆ ಪ್ರತಿಯಾಗಿ ಕೃಷ್ಣನನ್ನು ಭಗವದ್ಗೀತೆಯು ಸರ್ವಶಕ್ತ, ಸರ್ವಜ್ಞ, ಸರ್ವಾಂತರ್ಯಾಮಿ, ಪರಿಶುದ್ಧ, ಪ್ರೇಮಮಯಿ ಮತ್ತು ಸದ್ಗುಣ ಸಂಪನ್ನನೆಂದು ಚಿತ್ರಿಸಿದೆ. ಒಂದೇ ವ್ಯಕ್ತಿತ್ವವನ್ನು ಕುರಿತು ಎರಡು ಕೃತಿಗಳಲ್ಲಿ ಎರಡು ತೀರಾ ತದ್ವಿರುದ್ಧವಾದ ಅಭಿಪ್ರಾಯಗಳನ್ನು ಒಬ್ಬನೇ ಲೇಖಕ ಏಕಕಾಲದಲ್ಲಿ ಕೊಡಲು ಸಾಧ್ಯವಿಲ್ಲ. ಭಗವದ್ಗೀತೆ ಬುದ್ಧಪೂರ್ವ ಯುಗದಲ್ಲಿ ರಚನೆಯಾಯಿತು ಎಂದು ನಿರ್ಣಯಿಸುವ ಆತಂಕದಲ್ಲಿ ಈ ಮುಖ್ಯವಾದ ವಿಚಾರವನ್ನು ತಿಲಕರು ಸಂಪೂರ್ಣವಾಗಿ ಮರೆತಿರುವುದು ಶೋಚನೀಯ.

ತಿಲಕರ ಎರಡನೆಯ ವಾದವೂ ಇಷ್ಟೇ ಅಸಮರ್ಪಕವಾಗಿದೆ. ಭಗವದ್ಗೀತೆಯ ರಚನೆಯ ಕಾಲವನ್ನು ನಿಗದಿಪಡಿಸುವ ಪ್ರಯತ್ನ ಮೃಗಜಲವನ್ನು ಹುಡುಕಿದಂತೆ ವ್ಯರ್ಥ. ಇದಕ್ಕೆ ಕಾರಣ ಭಗವದ್ಗೀತೆ ಏಕಕವಿಯ ಅಖಂಡ ಕೃತಿಯಲ್ಲ. ಭಿನ್ನ ಭಿನ್ನ ಕಾಲದಲ್ಲಿ ಬೇರೆ ಬೇರೆ ಲೇಖಕರು ಬರೆದ ವಿಭಿನ್ನ ಭಾಗಗಳನ್ನು ಅದು ಒಳಗೊಂಡಿದೆ.

ಈ ಜಿಜ್ಞಾಸೆಯ ಧಾಟಿಯ ಅಗತ್ಯವನ್ನು ಕಂಡುಕೊಂಡ ವಿದ್ವಾಂಸರಲ್ಲಿ ಪ್ರೊ. ಗಾರ್ಬ್ ಒಬ್ಬರೇ. ಭಗವದ್ಗೀತೆಯಲ್ಲಿ ಎರಡು ಭಾಗಗಳಿವೆ. ಒಂದು ಮೂಲ ಇನ್ನೊಂದು ಪ್ರಕ್ಷಿಪ್ತ. ಈ ಹೇಳಿಕೆ ನನಗೆ

ತೃಪ್ತಿಕರವಾಗಿಲ್ಲ. ಭಗವದ್ಗೀತೆಯನ್ನು ನಾನು ಅಧ್ಯಯನ ಮಾಡಿರುವ ಪ್ರಕಾರ ಅದರಲ್ಲಿ ನಾಲ್ಕು ಪ್ರತ್ಯೇಕ ಭಾಗಗಳಿವೆ. ಅವು ಎಷ್ಟು ಸ್ಪಷ್ಟವಾಗಿವೆಯೆಂದರೆ ಈಗಿರುವ ಕೃತಿಯನ್ನು ನೋಡಿದರೂ ಕೂಡ ಅವುಗಳನ್ನು ಸುಲಭವಾಗಿ ಗುರುತಿಸಬಹುದು.

(i) ಅರ್ಜುನ ಹೇಗೆ ಯುದ್ಧ ಮಾಡಲು ಸಿದ್ಧನಿರಲಿಲ್ಲ. ಕೃಷ್ಣ ಹೇಗೆ ಅವನನ್ನು ಯುದ್ಧ ಮಾಡಲು ಒತ್ತಾಯಿಸಿದ. ಅರ್ಜುನ ಹೇಗೆ ಶರಣಾಗತನಾದ ಇತ್ಯಾದಿ ವಿಷಯಗಳನ್ನು ಹೇಳುವ ಒಂದು ವೀರೋಚಿತ ಕಥೆ ಅಥವಾ ಕವಿಗಳು ಹಾಡಿದ ಗೀತೆಯಲ್ಲದೆ ಭಗವದ್ಗೀತೆ ಬೇರೇನು ಆಗಿರಲಿಲ್ಲ. ಅದು ಒಂದು ಅದ್ಭುತ ಕಥೆಯಾಗಿರಬಹುದು. ಆದರೆ ಅದರಲ್ಲಿ ಧಾರ್ಮಿಕಾಂಶವಾಗಲೀ ತಾತ್ವಿಕಾಂಶವಾಗಲೀ ಇರಲಿಲ್ಲ.

ಅಧ್ಯಾಯ ೧, ಅಧ್ಯಾಯ ೨, ಶ್ಲೋಕಗಳಲ್ಲಿ.... ಮತ್ತು ಅಧ್ಯಾಯ ೧೧ ಶ್ಲೋಕ ೩೨–೩೩ರಲ್ಲಿ ಕೃಷ್ಣ ತನ್ನ ವಾದಸರಣಿಯನ್ನು ಉಪಸಂಹಾರ ಮಾಡಿದನೆಂದು ಹೇಳುವ ಶ್ಲೋಕಗಳಲ್ಲಿ ಈ ಮೂಲಗಿಂತ ಅಡಕವಾಗಿರುವುದನ್ನು ಕಾಣಬಹುದು:

"ನೀನು ನಿಮಿತ್ತ ಮಾತ್ರನಾಗು, ನನ್ನ ಇಚ್ಛೆಯನ್ನು ಈಡೇರಿಸು, ಯುದ್ಧದಿಂದ ಬರುವ ಪಾಪ ಪುಣ್ಯದ ಬಗ್ಗೆ ಚಿಂತಿಸಬೇಡ, ನಾನು ಹೇಳಿದಂತೆ ಕೇಳು, ಉದ್ಧಟನಾಗಬೇಡ."

ಅರ್ಜುನ ಯುದ್ಧಮಾಡುವಂತೆ ಬಲವಂತಪಡಿಸಲು ಈ ವಾದಸರಣಿಯನ್ನು ಕೃಷ್ಣ ಪ್ರಯೋಗಿಸಿದ. ಬಲವಂತದ ಒತ್ತಾಯದ ಈ ವಾದಸರಣಿಗೆ ಅರ್ಜುನ ಮಣಿದನು. ವಾಸ್ತವವಾಗಿ ಕೃಷ್ಣ ಅರ್ಜುನನನ್ನು ಬಲಾತ್ಕರಿಸದಿದ್ದರೂ ಅವನಿಗೆ ಬಲಾತ್ಕಾರದ ಬೆದರಿಕೆ ಹಾಕಿರಬೇಕು. ಕೃಷ್ಣನ ವಿಶ್ವರೂಪ ದರ್ಶನ ಬಲಾತ್ಕಾರ ಪ್ರಯೋಗದ ಬೇರೊಂದು ರೀತಿಯ ವರ್ಣನೆಯಾಗಿದೆ. ಈ ವಾದದ ಪ್ರಕಾರ ಪ್ರಕೃತ ಭಗವದ್ಗೀತೆಯಲ್ಲಿ ಬರುವ ವಿಶ್ವರೂಪ ದರ್ಶನದ ಅಧ್ಯಾಯ ಮೂಲ ಭಗವದ್ಗೀತೆಯ ಒಂದು ಭಾಗವೇ ಆಗಿರಲು ಸಾಧ್ಯ.

(ii) ಮೂಲ ಭಗವದ್ಗೀತೆಯಲ್ಲಿ ಬರುವ ಮೊದಲ ಸೇರ್ಪಡೆಯೆಂದರೆ ಕೃಷ್ಣನನ್ನು ಈಶ್ವರ ಎಂದು ಕರೆದಿರುವ ಭಾಗವಾಗಿದೆ. ಈಗಿನ ಭಗವದ್ಗೀತೆಯಲ್ಲಿ ಭಕ್ತಿ ಯೋಗಕ್ಕೆ ಮೀಸಲಾಗಿರುವ ಶ್ಲೋಕಗಳಲ್ಲಿ ಗೀತೆಯ ಈ ಭಾಗ ಅಡಕವಾಗಿದೆ.

(iii) ಸಾಂಖ್ಯ ಮತ್ತು ವೇದಾಂತ ತತ್ವಗಳಲ್ಲಿ ಮೊದಲು ಇಲ್ಲದಿದ್ದ ಪೂರ್ವ ಮೀಮಾಂಸ ಸಿದ್ಧಾಂತಗಳನ್ನು ಸಮರ್ಥಿಸುವುದಕ್ಕಾಗಿ ಮೂಲ ಭಗವದ್ಗೀತೆಗೆ ಸೇರಿಸಿದ ಭಾಗವೇ ಎರಡನೆಯ ಸೇರ್ಪಡೆ. ಗೀತೆ ಮೂಲತಃ ಒಂದು ಐತಿಹಾಸಿಕ ಕತೆ. ಕೃಷ್ಣನ ಆರಾಧನೆಯಿಂದಾಗಿ ಪ್ರಕ್ಷಿಪ್ತಗಳು ಸೇರಿದವು. ಮೂಲ ಸಂವಾದ ಹಾಗೂ ಅದರ ಅನುಕ್ರಮದ ಸ್ವರೂಪದಿಂದ ಭಗವದ್ಗೀತೆಯ ತಾತ್ವಿಕ ಭಾಗವನ್ನು ಆಮೇಲೆ ಸೇರಿಸಿದ್ದೆಂದು ತುಂಬ ಸುಲಭವಾಗಿ ಸಾಧಿಸಬಹುದು.

ಅಧ್ಯಾಯ ೧ ಶ್ಲೋಕ ೨೦–೪೭ರಲ್ಲಿ ಅರ್ಜುನ ಆ ಸಂಕಷ್ಟಗಳನ್ನು ಹೆಸರಿಸುತ್ತಾನೆ. ಅಧ್ಯಾಯ ೨ರಲ್ಲಿ ಅರ್ಜುನನ ಪ್ರಶ್ನೆಗಳಿಗೆ ಕೃಷ್ಣ ಉತ್ತರಿಸಲು ಪ್ರಯತ್ನಿಸುತ್ತಾನೆ. ಅಲ್ಲಿ ವಾದ ಮತ್ತು ಪ್ರತಿವಾದಗಳಿವೆ. ಶ್ಲೋಕ ೨ ಮತ್ತು ೩ರಲ್ಲಿ ಕೃಷ್ಣನ ಮೊದಲನೆಯ ವಾದವಿದೆ. ಅಲ್ಲಿ ಅವನು ಅರ್ಜುನನಿಗೆ ಹೇಳುತ್ತಾನೆ: "ನಿನ್ನ ವರ್ತನೆ ಅಕೀರ್ತಿಕರವಾಗಿದೆ. ಆರ್ಯನಿಗೆ ಯೋಗ್ಯವಾದದ್ದಲ್ಲ. ಈ ಷಂಡತನ ನಿನಗೆ ತಕ್ಕುದಲ್ಲ." ಇದಕ್ಕೆ ಅರ್ಜುನನ ಉತ್ತರ ೪ ರಿಂದ ೯ನೇ ಶ್ಲೋಕಗಳಲ್ಲಿ ವ್ಯಕ್ತವಾಗಿದೆ. ೪ ಮತ್ತು ೫ರ ಶ್ಲೋಕಗಳಲ್ಲಿ ಅರ್ಜುನ ಹೀಗೆ ಹೇಳುತ್ತಾನೆ: "ಪೂಜಾ ಯೋಗ್ಯರಾದ ಭೀಷ್ಮ ದ್ರೋಣರನ್ನು ನಾನು ಹೇಗೆ ಕೊಲ್ಲುವುದು? ಮಹಾನುಭಾವರಾದ ಗುರುಗಳನ್ನು ಕೊಲ್ಲದೆ ಈ ಲೋಕದಲ್ಲಿ ಭಿಕ್ಷಾನ್ನವನ್ನಾದರೂ ತಿನ್ನುವುದು ಶ್ರೇಯಸ್ಕರವಾದದ್ದು. ಆದರೆ ಅರ್ಥಾಪೇಕ್ಷಿಗಳಾದ ಗುರುಗಳನ್ನು ಕೊಂದರೆ ರಕ್ತಲಿಪ್ತವಾದ ಭೋಗಗಳನ್ನು

ಈ ಲೋಕದಲ್ಲಿ ಮಾತ್ರ ಅನುಭವಿಸಬೇಕಾಗುತ್ತದೆ." ೬ರಿಂದ ೮ರವರೆಗಿನ ಶ್ಲೋಕಗಳಲ್ಲಿ ಅರ್ಜುನ ಹೇಳುತ್ತಾನೆ: "ಈ ಎರಡರಲ್ಲಿ ಯಾವುದು ಹೆಚ್ಚು ಪುಣ್ಯಕರವೋ ಗೊತ್ತಿಲ್ಲ. ನಾವು ಕೌರವರನ್ನು ಗೆಲ್ಲುತ್ತೇವೆಯೋ ಅಥವಾ ಕೌರವರು ನಮ್ಮನ್ನು ಸೋಲಿಸುತ್ತಾರೋ ತಿಳಿಯದು." ಇದಕ್ಕೆ ಕೃಷ್ಣನ ಉತ್ತರ ೧೧ ರಿಂದ ೩೯ರ ವರೆಗಿನ ಶ್ಲೋಕಗಳಲ್ಲಿ ಈ ರೀತಿ ಪ್ರತಿಪಾದಿತವಾಗಿದೆ: (i) ಎಲ್ಲವೂ ನಶ್ವರವಾದ್ದರಿಂದ ದುಃಖ ಅಸಮರ್ಥನೀಯ; (ii) ಆತ್ಮ ಅಮರವಾಗಿರುವುದರಿಂದ ಮನುಷ್ಯ ಕೊಲ್ಲಲ್ಪಡುತ್ತಾನೆಂಬುದು ಮಿಥ್ಯಾವಾದ; (iii) ಕಾದುವುದು ಕ್ಷತ್ರಿಯನ ಕರ್ತವ್ಯವಾದ್ದರಿಂದ ಅವನು ಯುದ್ಧ ಮಾಡಲೇಬೇಕು.

ಈ ವಾದವನ್ನು ಓದಿದರೆ ಈ ಮುಂದಿನಾಂಶಗಳು ತಿಳಿಯುತ್ತವೆ:

(೧) ಅರ್ಜುನ ಕೇಳುವ ಪ್ರಶ್ನೆಗಳು ತಾತ್ವಿಕ ಪ್ರಶ್ನೆಗಳಲ್ಲ. ಇವು ಲೌಕಿಕ ಮನುಷ್ಯ ಲೌಕಿಕ ಸಮಸ್ಯೆಗಳು ಎದುರಾದಾಗ ಕೇಳುವ ಸ್ವಾಭಾವಿಕ ಪ್ರಶ್ನೆಗಳು.

(೨) ಒಂದು ಹಂತದವರೆಗೆ ಕೃಷ್ಣ ಅವುಗಳನ್ನು ಸ್ವಾಭಾವಿಕ ಪ್ರಶ್ನೆಗಳೆಂದು ಪರಿಗಣಿಸಿ ಅವುಗಳಿಗೆ ಸ್ವಾಭಾವಿಕ ಉತ್ತರಗಳನ್ನು ಕೊಡುತ್ತಾನೆ.

(೩) ಸಂವಾದ ಹೊಸ ತಿರುವನ್ನು ಪಡೆದುಕೊಳ್ಳುತ್ತದೆ. ಖಡಾಖಂಡಿತವಾಗಿ ಯುದ್ಧ ಮಾಡುವುದಿಲ್ಲವೆಂದು ಅರ್ಜುನ ಕೃಷ್ಣನಿಗೆ ಹೇಳಿದ ಮೇಲೆ ಇದ್ದಕ್ಕಿದ್ದಂತೆ ಮನಸ್ಸು ಬದಲಾಯಿಸಿ ಕೌರವರನ್ನು ಕೊಲ್ಲುವುದು ಅಥವಾ ತಾವು ಅವರಿಂದ ಹತರಾಗುವುದು ಇವೆರಡರಲ್ಲಿ ಯಾವುದು ಶ್ರೇಷ್ಠ ಎಂಬ ಅನುಮಾನವನ್ನು ವ್ಯಕ್ತಪಡಿಸುತ್ತಾನೆ. ಯುದ್ಧದ ಬಗ್ಗೆ ತಾತ್ವಿಕ ಸಮರ್ಥನೆಯನ್ನು ನೀಡಲು ಕೃಷ್ಣನಿಗೆ ಅವಕಾಶ ಮಾಡಿಕೊಟ್ಟ ಈ ಮಾತು ಮುಖ್ಯ ಪ್ರಶ್ನೆಯಿಂದ ಉದ್ದೇಶಪೂರ್ವಕವಾಗಿ ದೂರ ಸರಿದಿದೆ ಹಾಗೂ ಅರ್ಜುನ ಹೇಳಿದ ಯಾವ ಮಾತಿಗೂ ಸಂಬಂಧಿಸಿಲ್ಲ.

(೪) ೩೧ ರಿಂದ ೩೮ರವರೆಗಿನ ಶ್ಲೋಕಗಳಲ್ಲಿ ಕೃಷ್ಣನ ದನಿ ಮತ್ತೆ ತಗ್ಗಿದೆ. ಆ ಪ್ರಶ್ನೆಯನ್ನು ಸ್ವಾಭಾವಿಕವೆಂದು ಪರಿಗಣಿಸಿ ಕ್ಷತ್ರಿಯನ ಧರ್ಮ ಯುದ್ಧ ಮಾಡುವುದು. ನೀನು ಯುದ್ಧಮಾಡು ಎಂದು ಹೇಳುತ್ತಾನೆ.

ಇದರಿಂದ ವೇದಾಂತ ತತ್ವದ ಪ್ರವೇಶ ಸಂಪೂರ್ಣವಾಗಿ ಅಸ್ವಾಭಾವಿಕವೆಂದೂ ಆದ್ದರಿಂದ ಅದು ಆಮೇಲಣ ಸೇರ್ಪಡೆಯೆಂದೂ ಯಾರಾದರೂ ತಿಳಿಯಬಹುದು. ಸಾಂಖ್ಯ ತತ್ವದ ಪ್ರವೇಶದ ಬಗ್ಗೆ ಹೇಳುವುದಾದರೆ ವಿಷಯ ಸ್ಪಷ್ಟವಿದೆ. ಅರ್ಜುನನಿಂದ ಯಾವ ಪ್ರಶ್ನೆಯಿಲ್ಲದಿದ್ದರೂ ಅದನ್ನು ಮತ್ತೆ ಮತ್ತೆ ಪ್ರತಿಪಾದಿಸಲಾಗಿದೆ. ಪ್ರಶ್ನೆಗೆ ಉತ್ತರಿಸುವಾಗಲೆಲ್ಲ ಅದನ್ನು ಪ್ರತಿಪಾದಿಸಿದ್ದರೂ ಆ ಪ್ರಶ್ನೆ ಯುದ್ಧಕ್ಕೆ ಏನೇನೂ ಸಂಬಂಧಿಸಿಲ್ಲ. ಭಗವದ್ಗೀತೆಯ ತಾತ್ವಿಕ ಭಾಗಗಳು ಮೂಲ ಗೀತೆಯ ಭಾಗಗಳಲ್ಲ. ಆದರೆ ಆಮೇಲೆ ಸೇರ್ಪಡೆಯಾದವು ಮತ್ತು ಅವುಗಳಿಗೆ ಸ್ಥಾನ ನೀಡಲು ಯುದ್ಧದ ಲೌಕಿಕ ಸಮಸ್ಯೆಗಳಿಗೆ ಯಾವ ರೀತಿಯಲ್ಲೂ ಸಂಬಂಧವಿಲ್ಲದಿದ್ದರೂ ಹೊಸ ಹೊಸ, ಸೂಕ್ತವಾದ, ಪ್ರಮುಖ ಪ್ರಶ್ನೆಗಳನ್ನು ಅರ್ಜುನ ಕೇಳುವಂತೆ ಮಾಡಿದ್ದಾರೆ ಎಂದು ತಿಳಿಯುತ್ತದೆ.

(iv) ಮೂಲ ಭಗವದ್ಗೀತೆಯ ಮೂರನೆಯ ಸೇರ್ಪಡೆಯು ಈಶ್ವರ ಸ್ಥಾನದಿಂದ ಪರಮೇಶ್ವರ ಸ್ಥಾನಕ್ಕೆ ಕೃಷ್ಣನನ್ನು ಎತ್ತಿರುವ ಶ್ಲೋಕಗಳಲ್ಲಿ ಅಡಕವಾಗಿದೆ. ೧೦ ಮತ್ತು ೧೫ನೆಯ ಅಧ್ಯಾಯಗಳೇ ಈ ಸೇರ್ಪಡೆಯೆಂದು ಸುಲಭವಾಗಿ ಪತ್ತೆ ಹಚ್ಚಬಹುದು. ಅಲ್ಲಿ ಕೃಷ್ಣ ಹೇಳುತ್ತಾನೆ:

(ಉದ್ಧರಣೆಯನ್ನು ಕೊಟ್ಟಿಲ್ಲ).....

"ನಾನು ಹೇಳಿರುವಂತೆ, ಭಗವದ್ಗೀತೆಯ ರಚನೆಯ ಸರಿಯಾದ ಕಾಲವನ್ನು ಹುಡುಕುವುದು

ಮೂರ್ಖನ ದಾರಿಯಲ್ಲಿ ಹೋದಂತೆ. ಆ ದಿಸೆಯಲ್ಲಿ ಮಾಡುವ ಪ್ರಯತ್ನ ಪ್ರಯೋಜನಕಾರಿಯಾದರೆ ಪ್ರತಿಯೊಂದು ಸೇರ್ಪಡೆಯ ಕಾಲವನ್ನೂ ನಿರ್ಧರಿಸಲು ಪ್ರಯತ್ನ ಮಾಡಬೇಕು. ಈ ದಿಸೆಯಲ್ಲಿ ಹೋದರೆ ಜಯ ಎಂದು ಕರೆಯುವ ಮಹಾಭಾರತದ ಪ್ರಥಮ ಆವೃತ್ತಿಯ ಭಾಗವೇ ನಾನು ಹೇಳುವ ಮೂಲ ಅತಾತ್ವಿಕ ಭಗವದ್ಗೀತೆಯೆಂದು ಹೇಳಲು ಸಾಧ್ಯವಿದೆ. ಕೃಷ್ಣನನ್ನು ಈಶ್ವರ ಎಂದು ಮೂಲ ಭಗವದ್ಗೀತೆಗೆ ಸೇರಿಸಿದ್ದು ಮೆಗಾಸ್ತನೀಸನ ನಂತರ ಆಗಿರಬೇಕು. ಆಗ ಕೃಷ್ಣ ಕೇವಲ ಒಂದು ಬುಡಕಟ್ಟಿನ ದೇವರಾಗಿದ್ದ.[೧] ನಂತರ ಅಂದರೆ ಯಾವಾಗ ಎಂದು ಹೇಳಲು ಸಾಧ್ಯವಿಲ್ಲ. ಆದರೆ ಅದು ತುಂಬಾ ಆಮೇಲಿನದು. ಏಕೆಂದರೆ ಪ್ರಾರಂಭದಲ್ಲಿ ಬ್ರಾಹ್ಮಣರು ಕೃಷ್ಣಮತದ ಪರವಾಗಿರಲಿಲ್ಲ ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ವಾಸ್ತವವಾಗಿ ಅವರು ಅದಕ್ಕೆ ವಿರೋಧಿಗಳಾಗಿದ್ದರು[೨]. ಬ್ರಾಹ್ಮಣರು ಕೃಷ್ಣ ಪೂಜೆಯನ್ನು ಒಪ್ಪಿಕೊಳ್ಳಲು ಸಾಕಷ್ಟು ಕಾಲ ತೆಗೆದುಕೊಂಡಿರಬೇಕು[೩].

ಈಗಾಗಲೇ ಕಾರಣ ಕೊಟ್ಟಿರುವಂತೆ ಮೂಲ ಭಗವದ್ಗೀತೆಯು ಸಾಂಖ್ಯ ಮತ್ತು ವೇದಾಂತಗಳಿಗೆ ಮಾಡುವ ಉಲ್ಲೇಖದ ಎರಡನೆಯ ಸೇರ್ಪಡೆಯನ್ನು ಜೈಮಿನಿ ಮತ್ತು ಬಾದರಾಯಣನ ಸೂತ್ರಗಳ ನಂತರ ಎಂದು ಹೇಳಬೇಕು. ಪ್ರೊ. ಜಾಕೊಬಿ ಈ ಸೂತ್ರಗಳ ಕಾಲದ ಪ್ರಶ್ನೆಯನ್ನು ಎಚ್ಚರಿಕೆಯಿಂದ ಪರಿಶೀಲಿಸಿದ್ದಾರೆ[೪]. ಕ್ರಿ.ಶ. ೨೦೦ ರಿಂದ ೪೫೦ ಎಂದು ಅವರು ಈ ಸೂತ್ರಗಳ ಕಾಲವನ್ನು ನಿರ್ಧರಿಸಿದ್ದಾರೆ.

ಕೃಷ್ಣನನ್ನು ಪರಮೇಶ್ವರನ ಸ್ಥಾನಕ್ಕೆ ಏರಿಸಿದ ಮೂರನೆಯ ಸೇರ್ಪಡೆ ಮೂಲ ಭಗವದ್ಗೀತೆಗೆ ಗುಪ್ತರ ಸಾಮ್ರಾಜ್ಯದ ಕಾಲದಲ್ಲಿ ನಡೆಯಿತು. ಕಾರಣ ಸ್ಪಷ್ಟವಿದೆ. ಗುಪ್ತರಾಜರ ವಿರೋಧಿಗಳಾದ ಶಕ ರಾಜರು ಮಹಾದೇವನನ್ನು ಅವರ ಮನೆ ದೇವರನ್ನಾಗಿ ಮಾಡಿಕೊಂಡರು. ಬ್ರಾಹ್ಮಣರಿಗೆ ಧರ್ಮ ಯಾವಾಗಲೂ ಒಂದು ವ್ಯಾಪಾರ. ಅವರ ಭಕ್ತಿ ಎಂದೂ ಒಂದೇ ದೇವರಿಗೆ ಸೀಮಿತವಲ್ಲ. ಆದರೆ ಆಳುವ ದೊರೆಗಳನ್ನು ಸಂತೃಪ್ತಗೊಳಿಸಲು ಅವರ ಮನೆದೇವರನ್ನು ಉನ್ನತವೂ ಪ್ರಬಲವೂ ಆದ ಪರಮೇಶ್ವರನ ಸ್ಥಾನಕ್ಕೆ ಏರಿಸಿ ಅವನನ್ನು ಪೂಜಿಸತೊಡಗಿದರು. ಈ ವಿವರಣೆ ಸರಿಯಾಗಿದ್ದರೆ ಮೂಲ ಭಗವದ್ಗೀತೆಗೆ ಈ ಸೇರ್ಪಡೆಯು ಕ್ರಿ.ಶ. ೪೦೦ ರಿಂದ ೪೬೪ರಲ್ಲಿ ಆಗಿರಬೇಕು. ಬೌದ್ಧಧರ್ಮಕ್ಕಿಂತ ಭಗವದ್ಗೀತೆ ಹಿಂದಿನದು ಎಂದು ಹೇಳುವ ಪ್ರಯತ್ನ ಸಫಲವಾಗುವುದಿಲ್ಲವೆಂದು ಈ ಎಲ್ಲದರಿಂದ ದೃಢವಾಗುತ್ತದೆ. ಬುದ್ಧ ಮತ್ತು ಅವನ ಕ್ರಾಂತಿಕಾರಿ ಉಪದೇಶದ ಬಗ್ಗೆ ದ್ವೇಷವನ್ನು ಬೆಳೆಸಿಕೊಂಡವರು ಮನಸೇಚ್ಛೆ ಚಿಂತಿಸುವ ಫಲವೇ ಇದು. ಇತಿಹಾಸ ಅದನ್ನು ಬೆಂಬಲಿಸುವುದಿಲ್ಲ. ತಾತ್ವಿಕ ಮೌಲ್ಯವುಳ್ಳ ಭಗವದ್ಗೀತೆಯ ಭಾಗಗಳಂತೂ ಕಾಲದ ದೃಷ್ಟಿಯಿಂದ ಬುದ್ಧನ ತತ್ವಗಳಿಗೂ ಮತ್ತು ಜೈಮಿನಿ ಮತ್ತು ಬಾದರಾಯಣನ ಸೂತ್ರಗಳಿಗೂ ಅನಂತರ ಬಂದುವೆಂದು ಇತಿಹಾಸ ಅಸಾಧಾರಣವಾಗಿ ಸಾಧಿಸುತ್ತದೆ.

---

೧. 'ಶೈವ ಧರ್ಮ ಮತ್ತು ವೈಷ್ಣವ ಧರ್ಮ' ಎಂಬ ತಮ್ಮ ಕೃತಿಯಲ್ಲಿ ಡಾ. ಭಂಡಾರ್ಕರ್ ಹೀಗೆ ಹೇಳುತ್ತಾರೆ: "ಒಂದನೇ ಮೌರ್ಯನ ಕಾಲದಲ್ಲಿ ವಾಸುದೇವ ಕೃಷ್ಣನ ಪೂಜೆ ಪ್ರಚಲಿತವಿದ್ದರೆ ಅದು ಮೌರ್ಯ ಸಂತತಿಯ ಸ್ಥಾಪನೆಗೆ ಮೊದಲೇ ಪ್ರಾರಂಭವಾಗಿರಬೇಕು." ಇದು ಆಕ್ಷೇಪಣೆಯಿಲ್ಲದ ಹೇಳಿಕೆ. ಆದರೆ ಬುಡಕಟ್ಟು ದೇವರಾದ ಕೃಷ್ಣನಿಗೂ ವಿಶ್ವವ್ಯಾಪಿ ಈಶ್ವರನಾದ ಕೃಷ್ಣನಿಗೂ ವ್ಯತ್ಯಾಸವನ್ನು ಮಾಡಬೇಕೆಂದು ನನಗನ್ನಿಸುತ್ತದೆ. ಮೊದಲನೆಯವರ ಕಾಲ ಡಾ. ಭಂಡಾರ್ಕರ್ ಸೂಚಿಸುವುದಾಗಬಹುದು. ಆದರೆ ಅದು ಎರಡನೆಯದಕ್ಕೆ ಆಗುವುದಿಲ್ಲ. ಗೀತೆಯಲ್ಲಿ ನಮಗೆ ಸಂಬಂಧಿಸಿದ್ದು ಎರಡನೆಯದು.

೨. ಶಾಮಾಶಾಸ್ತ್ರಿ ಸ್ಮಾರಕ ಸಂಪುಟ ನೋಡಿ.

೩. ಕೃಷ್ಣಮತಕ್ಕೆ ವಿರೋಧ ತೀರಾ ಇತ್ತೀಚಿನ ವ್ಯಕ್ತಿಯಾದ ಶಂಕಾರಾಚಾರ್ಯರಿಂದ ವ್ಯಕ್ತವಾಗಿದೆ.

೪. "ದಿ ಡೇಟ್ಸ್ ಆಫ್ ದಿ ಫಿಲಸಾಫಿಕಲ್ ಸೂತ್ರಾಸ್ ಆಫ್ ದಿ ಬ್ರಾಹ್ಮಣಾಸ್" (ಬ್ರಹ್ಮ ಸೂತ್ರಗಳ ಕಾಲ), ಜರ್ನಲ್ ಆಫ್ ದಿ ಅಮೆರಿಕನ್ ಓರಿಯಂಟಲ್ ಸೊಸೈಟಿ, ಸಂ. XXXI, ೧೯೧೧.

ಭಗವದ್ಗೀತೆ ಹೀನಯಾನ ಬೌದ್ಧಧರ್ಮ ನಂತರ ಅಷ್ಟೇ ಅಲ್ಲ ಮಹಾಯಾನ ಬೌದ್ಧ ಧರ್ಮಕ್ಕೂ ಆಮೇಲಿನದು ಎಂದು ಅವುಗಳ ಕಾಲದ ಬಗೆಗಿನ ಚರ್ಚೆ ತೋರಿಸುತ್ತದೆ. ಹುಟ್ಟಿನಲ್ಲಿ ಮಹಾಯಾನ ಬೌದ್ಧಧರ್ಮ ಆಮೇಲಿನದು ಎಂಬ ಭಾವನೆಯಿದೆ. ಬೌದ್ಧ ಸಂಘದಲ್ಲಿ ಉಂಟಾದ ಒಡಕನ್ನು ಸರಿಪಡಿಸಲು ಮೂರನೆಯ ಬೌದ್ಧರ ಮಹಾಸಭೆಯನ್ನು ಕಾನಿಷ್ಕ ಕ್ರಿ.ಶ. ೧೦೦ರಲ್ಲಿ ಸಮಾವೇಶಗೊಳಿಸಿದ ನಂತರ ಅದು ಉದ್ಭವಿಸಿತೆಂದು ಹೇಳುತ್ತಾರೆ. ಇದು ಸಂಪೂರ್ಣವಾಗಿ ತಪ್ಪು[೧]. ಈ ಮಹಾಸಭೆಯ ನಂತರ ಬೌದ್ಧಧರ್ಮದ ಹೊಸ ಸಿದ್ಧಾಂತ ಅಸ್ತಿತ್ವಕ್ಕೆ ಬಂತು ಎಂಬುದು ನಿಜವಲ್ಲ. ಏನಾಯಿತೆಂದರೆ ತುಂಬ ಹಳೆಯ ಪಕ್ಷಗಳ ಬಗ್ಗೆ ನಿಂದನೆಯ ಮಾತುಗಳು ಬಂದವು. ಶ್ರೀ ಕಿಮುರ ಹೇಳುವಂತೆ ಮಹಾಯಾನಿ ಎಂದರೆ ಮಹಾಸಾಂಘಿಕ ಎಂದು ಹೆಸರಾದ ಬೌದ್ಧ ಪಂಥದ ಇನ್ನೊಂದು ಹೆಸರಷ್ಟೆ. ಮಹಾಸಾಂಘಿಕರ ಪಂಥ ಈಗ ತಿಳಿದುಕೊಂಡಿರುವುದಕ್ಕಿಂತ ಬಹಳ ಹಿಂದೆಯೇ ಅಸ್ತಿತ್ವಕ್ಕೆ ಬಂದಿತ್ತು. ಪರಂಪರೆಯನ್ನು ನಂಬುವುದಾದರೆ ಬುದ್ಧನ ಸಾವಿನ ನಂತರ ೨೩೬ ವರ್ಷಗಳಾದ ಮೇಲೆ ಬುದ್ಧನ ತತ್ವಗಳನ್ನು ನಿಷ್ಕರ್ಷಿಸಲು ಪಾಟಲೀಪುತ್ರದಲ್ಲಿ ನಡೆದ ಅಥವಾ ಬೌದ್ಧ ಮಹಾಸಭೆಯಲ್ಲಿ (ಕ್ರಿ.ಪೂ. ೩೦೭) ಈ ಪಂಥ ಅಸ್ತಿತ್ವಕ್ಕೆ ಬಂತು. ಅದು ಬೌದ್ಧಧರ್ಮದ ಥೆರವಾಡ ಪಂಥವನ್ನು ವಿರೋಧಿಸಿತು. ಈ ಥೆರವಾಡ ಪಂಥವೇ ಮುಂದೆ ಹೀನಯಾನ (ಅಂದರೆ ಹೀನ ಪಂಥಾವಲಂಬಿಗಳು) ಎಂದು ಕೆಟ್ಟ ಹೆಸರು ಪಡೆಯಿತು[೨]. ಮಹಾಯಾನಿಗಳು ಎಂದು ಮುಂದೆ ಕರೆಯಲಾದ ಮಹಾಸಂಘಿಕರು ಅಸ್ತಿತ್ವಕ್ಕೆ ಬಂದಾಗ ಭಗವದ್ಗೀತೆಯ ಹೆಸರು ಕೂಡ ಇರಲಿಲ್ಲ.

ಇದರ ಹೊರತು ಮಹಾಯಾನಿಗಳು ಭಗವದ್ಗೀತೆಯಿಂದ ಏನನ್ನು ತೆಗೆದುಕೊಂಡಿದ್ದಾರೆ? ಭಗವದ್ಗೀತೆಯಿಂದ ಅವರು ನಿಜವಾಗಿಯೂ ಏನನ್ನು ತೆಗೆದುಕೊಳ್ಳಲು ಸಾಧ್ಯ? ಶ್ರೀ ಕಿಮೂರ ಹೇಳುವಂತೆ ಬೌದ್ಧಧರ್ಮದ ಪ್ರತಿಯೊಂದು ಶಾಖೆಯ ತತ್ವವೂ ಕೊನೇ ಪಕ್ಷ ಮುಖ್ಯವಾಗಿ ಮೂರು ಸಿದ್ಧಾಂತಗಳಿಗೆ ಸಂಬಂಧಿಸಿವೆ: (೧) ವಿಶ್ವಸೃಷ್ಟಿಗೆ ಸಂಬಂಧಿಸಿದ ತತ್ವಗಳು; (೨) ಬೌದ್ಧಜ್ಞಾನಕ್ಕೆ ಸಂಬಂಧಿಸಿದ ತತ್ವಗಳು ಮತ್ತು (೩) ಮಾನವ ಜೀವನದ ಕಲ್ಪನೆಗೆ ಸಂಬಂಧಿಸಿದ ತತ್ವಗಳು. ಮಹಾಯಾನ ಇದಕ್ಕೆ ಅಪವಾದವಲ್ಲ. ಬಹುಶಃ ಬುದ್ಧಜ್ಞಾನಕ್ಕೆ ಸಂಬಂಧಿಸಿದಂತೆ ಬಿಟ್ಟರೆ ಮಹಾಯಾನಿಗಳು ಭಗವದ್ಗೀತೆಯಿಂದ ಪಡೆಯುವಂಥದ್ದು ಏನೂ ಇರಲಿಲ್ಲ. ಇನ್ನುಳಿದ ತತ್ವಗಳ ಬಗ್ಗೆ ಈ ಎರಡರ ಮಾರ್ಗ ಪೂರ್ತಿ ಭಿನ್ನವಾಗಿದೆ. ಕಾಲದ ಪ್ರಶ್ನೆಯನ್ನು ತೆಗೆದುಕೊಂಡರೆ ಈ ಸಾಧ್ಯತೆಯನ್ನು ಕೂಡ ಹೊರಗಿಡಬೇಕಾಗುತ್ತದೆ.

ನನ್ನ ನಿಬಂಧದ ವಿರುದ್ಧ ಎತ್ತಬಹುದಾದ ಒಂದೇ ಒಂದು ವಾದವನ್ನು ಇದುವರೆಗೆ ನಡೆದ ಚರ್ಚೆ ನಿರ್ಮೂಲನ ಮಾಡುತ್ತದೆ. ಅದೇನೆಂದರೆ ಭಗವದ್ಗೀತೆ ಅತ್ಯಂತ ಪ್ರಾಚೀನವಾದುದು. ಬುದ್ಧಪೂರ್ವ ಯುಗದಲ್ಲಿ ಉಗಮವಾದುದು. ಆದ್ದರಿಂದ ಜೈಮಿನಿಯ ಪೂರ್ವ ಮೀಮಾಂಸೆಯ ಜೊತೆ ಸಂಬಂಧ ಏರ್ಪಡಿಸಬಾರದು. ಅವನ ಪ್ರತಿಕ್ರಾಂತಿಯ ಸಿದ್ಧಾಂತಗಳ ತಾತ್ವಿಕ ಸಮರ್ಥನೆ ಕೊಡಲು ಮಾಡಿದ ಪ್ರಯತ್ನವೆಂದು ಪರಿಗಣಿಸಬಾರದು.

---

೧. ಈ ಇಡಿ ವಿಷಯದ ಬಗ್ಗೆ ನೋಡಿ – 'ಎ ಹಿಸ್ಟಾರಿಕಲ್ ಸ್ಟಡಿ ಆಫ್ ದಿ ಟರ್ಮ್ಸ್ ಹೀನಯಾನ ಅಂಡ್ ಮಹಾಯಾನ ಅಂಡ್ ದಿ ಅರಿಜಿನ್ ಆಫ್ ಮಹಾಯಾನಾ ಬುದ್ಧಿಸಮ್', ರೂಕನ್ ಕಿಮುರಾ, ಕ್ಯಾಲಿಫೋರ್ನಿಯಾ ಯೂನಿವರ್ಸಿಟಿ, ೧೯೨೭.

೨. ಬುದ್ಧನ ಮಹಾಪರಿನಿರ್ವಾಣ ಕ್ರಿ.ಪೂ. ೫೪೩ರಲ್ಲಿ ಎಂದು ತೆಗೆದುಕೊಂಡರೆ ಇದು ಸರಿ. ಬುದ್ಧನ ಮಹಾಪರಿನಿರ್ವಾಣ ಕ್ರಿ.ಪೂ. ೪೫೩ ಎಂದು ತೆಗೆದುಕೊಂಡರೆ ಬೌದ್ಧ ಮಹಾಸಭೆಯು ಕ್ರಿ.ಪೂ. ೨೧೭ರಲ್ಲಿ ನಡೆದಿರಬೇಕು.

ಒಟ್ಟಿನಲ್ಲಿ ನನ್ನ ಪ್ರಬಂಧ ಮುಮ್ಮುಖವಾಗಿದೆ. ಬೇರೆ ಮಾತಿನಲ್ಲಿ ಹೇಳುವುದಾದರೆ ಅದಕ್ಕೆ ಮೂರು ಭಾಗಗಳಿವೆ. ಮೊದಲನೆಯದಾಗಿ, ಪ್ರತಿಕ್ರಾಂತಿಯ ಅಧಿಕೃತ ವೇದವಾಣಿಯಾದ ಜೈಮಿನಿಯ ಪೂರ್ವ ಮೀಮಾಂಸೆಯ ರೀತಿಯಲ್ಲೇ ಇರುವ ಭಗವದ್ಗೀತೆಯು ಮೂಲಭೂತವಾಗಿ ಒಂದು ಪ್ರತಿಕ್ರಾಂತಿಯ ಗ್ರಂಥ. ೨ನೇ ಅಧ್ಯಾಯದ ೪೦ ರಿಂದ ೪೬ನೇ ಶ್ಲೋಕಗಳ ಪ್ರಕಾರ ಕೆಲವು ಗ್ರಂಥಕರ್ತರ ದೃಷ್ಟಿಯಲ್ಲಿ ಭಗವದ್ಗೀತೆಯು.....

(ನಮಗೆ ಲಭ್ಯವಿರುವ ಎಲ್ಲ ಪ್ರತಿಗಳಲ್ಲಿಯೂ ಈ ಪ್ರಬಂಧ ಇಲ್ಲಿಗೆ ಮೇಲಿನ ವಾಕ್ಯದಲ್ಲಿ ಕಾಣುವಂತೆ, ಅಪೂರ್ಣವಾಗಿ ನಿಲ್ಲುತ್ತದೆ.)

– ಸಂಪಾದಕರು

* * * *

ಅಧ್ಯಾಯ ೧೪

# ವಿರಾಟ ಪರ್ವ ಮತ್ತು ಉದ್ಯೋಗ ಪರ್ವಗಳ ವಿಶ್ಲೇಷಣಾತ್ಮಕ ಟಿಪ್ಪಣಿಗಳು

## ವಿರಾಟ ಪರ್ವ

೧. ಕೌರವರು ಕಳುಹಿಸಿದ ಗೂಢಚಾರರು ಪಾಂಡವರ ಇರವನ್ನು ಪತ್ತೆ ಮಾಡಲಾಗದೆ ದುರ್ಯೋಧನನಲ್ಲಿಗೆ ವಾಪಸ್ಸು ಬಂದು ಪಾಂಡವರನ್ನು ಹುಡುಕುವುದು ಸಾಧ್ಯವಾಗಲಿಲ್ಲ ಎಂದು ಹೇಳುತ್ತಾರೆ. ಮುಂದೆ ಏನು ಮಾಡಬೇಕೆಂದು ಅವನು ಅಪ್ಪಣೆಯನ್ನು ಕೇಳುತ್ತಾರೆ.

*– ವಿರಾಟ ಪರ್ವ, ಅಧ್ಯಾಯ ೨೫.*

೨. ದುರ್ಯೋಧನ ತನ್ನ ಸಲಹೆಗಾರರ ಸಲಹೆ ಕೇಳುತ್ತಾನೆ. ಬೇರೆ ಗೂಢಚಾರರನ್ನು ಕಳುಹಿಸು ಎಂದು ಕರ್ಣ ಹೇಳುತ್ತಾನೆ. ಸಮುದ್ರದಾಚೆ ಅವರು ಹೋಗಿರಬೇಕೆಂದು ದುಶ್ಶಾಸನ ಹೇಳುತ್ತಾನೆ. ಏನೇ ಆಗಲಿ ಅವರನ್ನು ಹುಡುಕಬೇಕು.

*– ಅದೇ. ಅ. ೨೬*

೩. ಪಾಂಡವರನ್ನು ಸೋಲಿಸುವುದಾಗಲೀ ಕೊಲ್ಲುವುದಾಗಲೀ ಸಾಧ್ಯವಿಲ್ಲ. ಅವರು ತಾಪಸರಂತೆ ಬದುಕುತ್ತಿರಬಹುದು. ಅದರಿಂದ ಸಿದ್ಧರನ್ನೂ ಬ್ರಾಹ್ಮಣರನ್ನೂ ಗೂಢಚಾರರನ್ನೂ ಕಳುಹಿಸೆಂದು ದ್ರೋಣ ಹೇಳುತ್ತಾನೆ.

*– ಅದೇ. ಅ. ೨೭.*

೪. ಭೀಷ್ಮ ದ್ರೋಣನನ್ನು ಬೆಂಬಲಿಸುತ್ತಾನೆ. *– ಅದೇ. ಅ. ೨೮.*

೫. ಕೃಪಾಚಾರ್ಯ ಭೀಷ್ಮನನ್ನು ಬೆಂಬಲಿಸಿ ಹೇಳುತ್ತಾನೆ. "ಪಾಂಡವರು ಮಹಾಶತ್ರುಗಳು. ಆದರೆ ವಿವೇಕಿಗಳು ಸಣ್ಣ ಶತ್ರುಗಳನ್ನೂ ಕಡೆಗಣಿಸುವುದಿಲ್ಲ. ಅವರು ಅಜ್ಞಾತವಾಸದಲ್ಲಿರುವಾಗಲೇ ನೀನು ಈಗಿನಿಂದಲೇ ಸೈನ್ಯಗಳನ್ನು ಜಮಾಯಿಸಬೇಕು."

*– ಅದೇ. ಅ. ೨೯.*

೬. ಆಗ ತ್ರಿಗರ್ಥದ ರಾಜ್ಯನಾದ ಸುಶರ್ಮನು ಪೂರ್ತಿ ಭಿನ್ನವಾದ ಪ್ರಶ್ನೆಯನ್ನು ಎತ್ತುತ್ತಾನೆ. "ವಿರಾಟರಾಜನ ಸೇನಾಪತಿಯಾದ ಕೀಚಕ ಸತ್ತನೆಂದು ನಾನು ಕೇಳಿದೆ. ವಿರಾಟರಾಜನಿಂದ ನಮಗೆ ಬಹಳ ತೊಂದರೆ. ಕೀಚಕ ಸತ್ತದ್ದರಿಂದ ವಿರಾಟ ಬಹಳ ದುರ್ಬಲನಾಗಿರಬೇಕು. ವಿರಾಟನ ರಾಜ್ಯವನ್ನು ಏಕೆ ಆಕ್ರಮಣ ಮಾಡಬಾರದು? ಇದು ಅತ್ಯಂತ ಅನುಕೂಲವಾದ ಕಾಲ. ಕರ್ಣ ಕೂಡ ಸುಶರ್ಮನನ್ನು ಬೆಂಬಲಿಸುತ್ತಾನೆ. ಈ ಪಾಂಡವರ ಬಗ್ಗೆ ಏಕೆ ಚಿಂತೆ. ಅವರಿಗೆ ಸಂಪತ್ತಿಲ್ಲ, ಸೈನ್ಯವಿಲ್ಲ. ಅವರು ಪತಿತರಾಗಿದ್ದಾರೆ. ಅವರ ಬಗ್ಗೆ ಚಿಂತೆಯೇಕೆ? ಅವರು ಈಗಾಗಲೇ ಸತ್ತಿರಬೇಕು. ಅವರನ್ನು ಹುಡುಕುವುದು ಬಿಡು, ಸುಶರ್ಮನ ಯೋಜನೆಯನ್ನು ಕೈಗೆತ್ತಿಕೊ."

*– ಅದೇ.ಅ.೩೦.*

೭. ಸುಶರ್ಮನಿಂದ ವಿರಾಟರಾಜ್ಯದ ಆಕ್ರಮಣ. ಸುಶರ್ಮ ವಿರಾಟನ ಗೋವುಗಳನ್ನು ಅಪಹರಿಸುತ್ತಾನೆ. ತುರುಗಾಹಿಗಳು ಹೋಗಿ ಇದನ್ನು ವಿರಾಟನಿಗೆ ತಿಳಿಸುತ್ತಾರೆ. ಸುಶರ್ಮನ ಬೆನ್ನುಹತ್ತಿ, ಗೋವುಗಳನ್ನು ಬಿಡಿಸಿಕೊಳ್ಳಬೇಕೆಂದು ಬಿನ್ನವಿಸುತ್ತಾರೆ.

*– ಅದೇ. ಅ. ೩೧*

೮. ವಿರಾಟ ಯುದ್ಧಕ್ಕೆ ಸಿದ್ಧನಾಗುತ್ತಾನೆ. ವಿರಾಟನ ತಮ್ಮನಾದ ಶತಾನಿಕನು ಒಬ್ಬನೇ ಹೋಗುವುದು ಬೇಡ, ನಿನ್ನ ಜೊತೆ ಕಂಕ (ಸಹದೇವ), ಬಲ್ಲವ (ಯುಧಿಷ್ಠಿರ), ಶಾಂತಿಪಾಲ (ಭೀಮ) ಮತ್ತು ಗ್ರಂಥಿಕ (ನಕುಲ) ಇವರನ್ನು ಕರೆದುಕೊಂಡು ಸುಶರ್ಮನ ಜೊತೆ ಯುದ್ಧ ಮಾಡಲು ಹೋಗು ಎನ್ನುತ್ತಾನೆ. ವಿರಾಟ ಒಪ್ಪಿ ಎಲ್ಲರೂ ಹೋಗುತ್ತಾರೆ.

*– ಅದೇ.ಅ. ೩೧*

೯. ಸುಶರ್ಮ ಮತ್ತು ವಿರಾಟರ ಯುದ್ಧ *– ಅದೇ.ಅ. ೩೨.*

೧೦. ಯುಧಿಷ್ಠಿರ ವಿರಾಟನನ್ನು ರಕ್ಷಿಸುತ್ತಾನೆ *– ಅದೇ.ಅ. ೩೩.*

೧೧. ವಿರಾಟ ರಾಜನು ಕ್ಷೇಮವೆಂದು ವಿರಾಟ ನಗರಿಯಲ್ಲಿ ಘೋಷಣೆ. *– ಅದೇ.ಅ. ೩೪.*

## ಕೌರವರಿಂದ ವಿರಾಟ ನಗರಿಯ ಪ್ರವೇಶ

೧೨. ವಿರಾಟ ರಾಜನು ಸುಶರ್ಮನನ್ನು ಅಟ್ಟಿಸಿಕೊಂಡು ಹೋದಾಗ ದುರ್ಯೋಧನನ ಜೊತೆ ಭೀಷ್ಮ, ದ್ರೋಣ, ಕರ್ಣ, ಕೃಪ, ಅಶ್ವತ್ಥಾಮ, ಶಕುನಿ, ದುಶ್ಯಾಸನ, ವಿವಿಂಶತಿ, ವಿಕರ್ಣ, ಚಿತ್ರಸೇನ, ದುರ್ಮುಖ, ದುಶಾಲ ಮತ್ತು ಇತರ ಯೋಧರು ವಿರಾಟನಗರಿಯನ್ನು ಪ್ರವೇಶಿಸಿ ವಿರಾಟನ ಗೋವುಗಳನ್ನು ಸೆರೆ ಹಿಡಿದುಕೊಂಡು ಹೋಗುತ್ತಾರೆ. ತುರುಗಾಹಿಗಳು ವಿರಾಟರಾಜನ ಅರಮನೆಗೆ ಬಂದು ಸುದ್ದಿ ಕೊಡುತ್ತಾರೆ. ಅವರಿಗೆ ರಾಜ ಸಿಕ್ಕದೆ ಅವನ ಮಗ ಉತ್ತರನು ಸಿಗುತ್ತಾನೆ, ಅವನಿಗೆ ಸುದ್ದಿ ಮುಟ್ಟಿಸುತ್ತಾರೆ.

*– ಅದೇ. ಅ. ೩೫*

೧೩. ಉತ್ತರ ತಾನು ಅರ್ಜುನನಿಗಿಂತಲೂ ಶ್ರೇಷ್ಠನೆಂದು ಬಡಾಯಿ ಕೊಚ್ಚಿ ಗೋವುಗಳನ್ನು ಬಿಡಿಸಿಕೊಳ್ಳುತ್ತೇನೆನ್ನುತ್ತಾನೆ. ಆದರೆ ತನಗೆ ಸರಿಯಾದ ಸಾರಥಿ ಇಲ್ಲವೆಂದು ಪ್ರಲಾಪಿಸುತ್ತಾನೆ. ದ್ರೌಪದಿ ಹೋಗಿ ಬೃಹನ್ನಳೆ ಒಂದು ಕಾಲದಲ್ಲಿ ಅರ್ಜುನನ ಸಾರಥಿಯಾಗಿದ್ದನೆಂದು ಅವನಿಗೆ ಹೇಳುತ್ತಾಳೆ. ಅವನನ್ನು ಏಕೆ ಕೇಳಬಾರದು? 'ಅವನನ್ನು ಕೇಳಲು ನನಗೆ ಧೈರ್ಯವಿಲ್ಲ, ನೀನೇ ಕೇಳು' ಎಂದು ದ್ರೌಪದಿಗೆ ಹೇಳಿದನು. ನಿನ್ನ ತಂಗಿ ಮನೋರಮೆಯನ್ನು ಏಕೆ ಕೇಳಬಾರದು. ಹಾಗಾಗಿ ಅವನು ಬೃಹನ್ನಳೆಯನ್ನು ಕರೆತರಲು ಮನೋರಮೆಗೆ ತಿಳಿಸಿದಳು. *– ಅದೇ ಅ. ೩೬*

೧೪. ಮನೋರಮೆ ಬೃಹನ್ನಳೆಯನ್ನು ತನ್ನ ಅಣ್ಣನ ಬಳಿಗೆ ಕರೆದೊಯ್ಯುತ್ತಾಳೆ. ತನಗೆ ಸಾರಥಿಯಾಗೆಂದು ಉತ್ತರ ಅವನನ್ನು ಒತ್ತಾಯಿಸುತ್ತಾನೆ. ಬೃಹನ್ನಳೆ ಒಪ್ಪಿ ಉತ್ತರನ ರಥವನ್ನು ಕೌರವರ ಮುಂದೆ ನಿಲ್ಲಿಸುತ್ತಾನೆ.

– ಅದೇ ಅ. ೩೭

೧೫. ಕೌರವರ ರಥವನ್ನು ನೋಡಿದ ಕೂಡಲೇ ಉತ್ತರ ರಥದಿಂದ ಇಳಿದು ಓಡತೊಡಗಿದ. ಅರ್ಜುನ ಅವನನ್ನು ನಿಲ್ಲಿಸಿದ. ಇದನ್ನು ನೋಡಿದರೆ ಕೌರವರು ಅದು ಅರ್ಜುನನಿರಬೇಕೆಂದು ಅನುಮಾನಿಸತೊಡಗಿದರು. ಹೆದರಬೇಡವೆಂದು ಅರ್ಜುನ ಅವನಿಗೆ ಹೇಳಿದನು.

*– ಅದೇ. ಅ. ೩೮*

೧೬. ಅರ್ಜುನ ರಥವನ್ನು ತೆಗೆದುಕೊಂಡು ಶಮಿ ವೃಕ್ಷದ ಬಳಿ ಹೋಗುತ್ತಾನೆ. ಇದನ್ನು ನೋಡಿದ ದ್ರೋಣ ಅವನು ಅರ್ಜುನನೇ ಇರಬೇಕು ಎಂದು ಹೇಳುತ್ತಾನೆ. ಇದನ್ನು ಕೇಳಿದ ಕೌರವರು ತುಂಬಾ ಗಾಬರಿಗೊಳ್ಳುತ್ತಾರೆ. ಆದರೆ ದ್ರೋಣ ಹೇಳಿದ್ದು ನಿಜವಾದರೆ ಅದು ನಮಗೆ ಅನುಕೂಲ ಎಂದು ದುರ್ಯೋಧನ ಹೇಳುತ್ತಾನೆ. ಏಕೆಂದರೆ ಹದಿಮೂರು ವರ್ಷಗಳಿಗೆ ಮೊದಲೇ ಪಾಂಡವರ ಪತ್ತೆಯಾಗುತ್ತದೆ. ಅವರು ಮತ್ತೆ ಹನ್ನೆರಡು ವರ್ಷ ವನವಾಸ ಮಾಡಬೇಕಾಗುತ್ತದೆ. *– ಅದೇ. ಅ. ೩೯.*

೧೭. ಶಮಿ ವೃಕ್ಷವನ್ನು ಹತ್ತಿ ಆಯುಧಗಳನ್ನು ಕೆಳಗಿಳಿಸು ಎಂದು ಅರ್ಜುನ ಉತ್ತರನಿಗೆ ಹೇಳುತ್ತಾನೆ. *– ಅದೇ. ಅ. ೪೦.*

೧೮. ಶಮಿ ವೃಕ್ಷದ ಮೇಲಿರುವ ಶವವನ್ನು ನೋಡಿ ಉತ್ತರ ಶಂಕಿಸುತ್ತಾನೆ. *– ಅದೇ. ಅ. ೪೧.*

೧೯. ಆಯುಧಗಳನ್ನು ನೋಡಿದ ಮೇಲೆ ಉತ್ತರನ ಉದ್ವೇಗ. *– ಅದೇ. ಅ. ೪೨.*

೨೦. ಆಯುಧಗಳ ಬಗ್ಗೆ ಅರ್ಜುನನ ವರ್ಣನೆ. *– ಅದೇ ಅ. ೪೩.*

೨೧. ಪಾಂಡವರು ಎಲ್ಲಿದ್ದಾರೆಂದು ಉತ್ತರನ ಪ್ರಶ್ನೆ. *– ಅದೇ. ಅ. ೪೪.*

೨೨. ಮರದ ಮೇಲಿನಿಂದ ಉತ್ತರ ಇಳಿಯುತ್ತಾನೆ. *– ಅದೇ. ಅ. ೪೫.*

೨೩. ಕಪಿ ಧ್ವಜವಿರುವ ಆ ರಥ ಅರ್ಜುನನದೆಂದು ದ್ರೋಣನಿಗೆ ಖಾತರಿಯಾಗುತ್ತದೆ. ಕೌರವ ಸೇನೆಗೆ ಅಪಶಕುನಗಳು ಎದುರಾಗುತ್ತವೆ.

*– ಅದೇ. ಅ. ೪೬.*

೨೪. ಅವನು ಅರ್ಜುನ ಎಂದು ಹೇಳಿದ ದ್ರೋಣನ ಮಾತಿಗೆ ಭಯಭೀತರಾದ ಸೈನಿಕರನ್ನು ದುರ್ಯೋಧನ ಹುರಿದುಂಬಿಸುತ್ತಾನೆ. ಕರ್ಣನಿಂದ ದ್ರೋಣನ ನಿಂದೆ. ಸೇನಾಪತಿ ಪಟ್ಟದಿಂದ ದ್ರೋಣನನ್ನು ತೆಗೆ ಎಂದು ದುರ್ಯೋಧನನಿಗೆ ಕರ್ಣನ ಸೂಚನೆ.

*– ಅದೇ. ಅ. ೪೭.*

೨೫. ಕರ್ಣನ ಆತ್ಮ ಶ್ಲಾಘನೆ ಮತ್ತು ಅರ್ಜುನನನ್ನು ಸೋಲಿಸಲು ಪ್ರತಿಜ್ಞೆ.

*– ಅದೇ. ಅ. ೪೮.*

೨೬. ಜಂಬ ಕೊಚ್ಚಿಕೊಳ್ಳಬಾರದೆಂದು ಕರ್ಣನಿಗೆ ಕೃಪಾಚಾರ್ಯರ ಬುದ್ಧಿವಾದ. ಯುದ್ಧ ಒಳ್ಳೆಯದಲ್ಲವೆಂದು ಶಾಸ್ತ್ರಗಳು ಹೇಳುತ್ತವೆ.

*– ಅದೇ. ಅ. ೪೯.*

೨೭. ದ್ರೋಣನನ್ನು ನಿಂದಿಸಿದ್ದಕ್ಕಾಗಿ ಅಶ್ವತ್ಥಾಮನು ಕರ್ಣ ಮತ್ತು ದುರ್ಯೋಧನರನ್ನು ದೂಷಿಸುತ್ತಾನೆ. *– ಅದೇ. ಅ. ೫೦.*

೨೮. ದ್ರೋಣನಿಗೆ ಕೆಟ್ಟ ಮಾತಾಡಿದ್ದಕ್ಕೆ ಅಶ್ವತ್ಥಾಮನು ಕರ್ಣ ದುರ್ಯೋಧನರನ್ನು ದೂಷಿಸಿದನು. "ಎಷ್ಟೇ ಆದರೂ ನಾನು ಸೂತ" ಎಂದು ಕರ್ಣನ ಜವಾಬು. (ಆದರೆ ವಾಲಿಯ ಜೊತೆ ರಾಮ ವರ್ತಿಸಿದಷ್ಟೇ ಹೀನವಾಗಿ ಅರ್ಜುನ ವರ್ತಿಸಿದ್ದಾನೆ.)

*– ಅದೇ. ಅ. ೫೦.*

೨೯. ಭೀಷ್ಮ, ದ್ರೋಣ, ಕೃಪ ಸೇರಿ ಅಶ್ವತ್ಥಾಮನನ್ನು ಸಮಾಧಾನಪಡಿಸುತ್ತಾರೆ. ದುರ್ಯೋಧನ ಮತ್ತು ಕರ್ಣ ದ್ರೋಣನಿಗೆ ಕ್ಷಮಾಪಣೆ ಕೇಳುತ್ತಾರೆ.

*– ಅದೇ. ಅ. ೫೧.*

೩೦. ಪಾಂಡವರು ೧೩ ವರ್ಷಗಳನ್ನು ಪೂರೈಸಿದ್ದಾರೆ ಎಂದು ಭೀಷ್ಮನ ತೀರ್ಮಾನ.
*– ಅದೇ. ಅ. ೫೨.*

೩೧. ಕೌರವರ ಸೇನೆಯನ್ನು ಅರ್ಜುನ ಸೋಲಿಸಿದ್ದಾನೆ. *– ಅದೇ. ಅ. ೫೩.*

೩೨. ಅರ್ಜುನ ಕರ್ಣನ ವ್ರತಭಂಗ ಮಾಡುತ್ತಾನೆ. ಕರ್ಣನನ್ನು ಸೋಲಿಸುತ್ತಾನೆ. ಕರ್ಣ ಓಡಿ ಹೋಗುತ್ತಾನೆ. *– ಅದೇ. ಅ. ೫೪.*

೩೩. ಅರ್ಜುನ ಕೌರವರ ಸೇನೆಯನ್ನು ಧ್ವಂಸ ಮಾಡುತ್ತಾನೆ. ಕೃಪಾಚಾರ್ಯರ ರಥವನ್ನು ಮುರಿಯುತ್ತಾನೆ. *– ಅದೇ. ಅ. ೫೫.*

೩೪. ಅರ್ಜುನ ಮತ್ತು ಕೌರವರ ಸೇನೆ ನಡುವೆ ನಡೆಯುವ ಯುದ್ಧವನ್ನು ನೋಡಲು ಸ್ವರ್ಗದಿಂದ ದೇವತೆಗಳು ಬರುತ್ತಾರೆ. *– ಅದೇ. ಅ. ೫೬.*

೩೫. ಕೃಪ ಮತ್ತು ಅರ್ಜುನರ ನಡುವೆ ಕಾಳಗ. ಕೃಪನ ಪಲಾಯನ. *– ಅದೇ. ಅ. ೫೭.*

೩೬. ದ್ರೋಣ ಮತ್ತು ಅರ್ಜುನರ ನಡುವೆ ಕಾಳಗ. ದ್ರೋಣನ ಪಲಾಯನ. *– ಅದೇ. ಅ. ೫೮.*

೩೭. ಅಶ್ವತ್ಥಾಮ ಮತ್ತು ಅರ್ಜುನರ ನಡುವೆ ಕಾಳಗ. *– ಅದೇ. ಅ. ೫೯.*

೩೮. ಕರ್ಣಾರ್ಜುನರ ಕಾಳಗ. ಕರ್ಣನ ಸೋಲು. *– ಅದೇ. ಅ. ೬೦.*

೩೯. ಭೀಷ್ಮನ ಮೇಲೆ ಅರ್ಜುನನ ಧಾಳಿ. *– ಅದೇ. ಅ. ೬೧.*

೪೦. ಕೌರವ ಸೈನಿಕರನ್ನು ಅರ್ಜುನ ಹತ ಮಾಡುತ್ತಾನೆ. *– ಅದೇ. ಅ. ೬೨.*

೪೧. ಭೀಷ್ಮನ ಸೋಲು. ರಣರಂಗದಿಂದ ಅವನ ಪಲಾಯನ. *– ಅದೇ. ಅ. ೬೪*

೪೨. ಕೌರವ ಸೈನಿಕರ ಮೂರ್ಛೆ. ಊರಿಗೆ ಹಿಂದಿರುಗಲು ಭೀಷ್ಮನ ಆಜ್ಞೆ. *– ಅದೇ. ಅ. ೬೬.*

೪೩. ಅಭಯದಾನದಿಂದ ಅರ್ಜುನನಿಗೆ ಕೌರವ ಸೈನ್ಯದ ಶರಣಾಗತಿ. ಉತ್ತರ ಮತ್ತು ಅರ್ಜುನರು ವಿರಾಟ ನಗರಿಗೆ ವಾಪಸ್ಸು. *– ಅದೇ. ಅ. ೬೭.*

೪೪. ರಾಜಧಾನಿಗೆ ವಿರಾಟನ ಆಗಮನ. ಪ್ರಜೆಗಳಿಂದ ಅವರಿಗೆ ಗೌರವ ಸಮರ್ಪಣೆ.
*– ಅದೇ. ಅ. ೬೮.*

೪೫. ರಾಜನ ಆಸ್ಥಾನಕ್ಕೆ ಪಾಂಡವರ ಪ್ರವೇಶ. *– ಅದೇ. ಅ. ೬೯.*

೪೬. ತನ್ನ ಇತರ ಸಹೋದರರನ್ನು ಅರ್ಜುನ ವಿರಾಟ ನಗರಿಯಲ್ಲಿ ಪರಿಚಯಿಸುತ್ತಾನೆ.
*– ಅದೇ. ಅ. ೭೦.*

೪೭. ಅರ್ಜುನನ ಮಗನಿಗೂ ವಿರಾಟನ ಮಗಳಿಗೂ ವಿವಾಹ.
*– ಅದೇ. ಅ. ೭೨.*

೪೮. ಅದಾದ ಮೇಲೆ ಪಾಂಡವರು ವಿರಾಟ ನಗರಿಯನ್ನು ಬಿಟ್ಟು ಉಪಪ್ಲವ್ಯ ನಗರಿಯಲ್ಲಿ ತಂಗುತ್ತಾರೆ. *– ಅದೇ. ಅ. ೭೨.*

೪೯. ಆಮೇಲೆ ಅರ್ಜುನ ತನ್ನ ಮಗ ಅಭಿಮನ್ಯು, ವಾಸುದೇವ ಮತ್ತು ಯಾದವನನ್ನು ಅನ್ಯತ ದೇಶದಿಂದ ಕರೆತರುತ್ತಾನೆ. *– ಅದೇ. ಅ. ೭೨.*

೫೦. ಯುಧಿಷ್ಠಿರನ ಸ್ನೇಹಿತರಾದ ಕಾಶಿ ರಾಜ ಮತ್ತು ಶಲ್ಯ ರಾಜರು ಎರಡು ಅಕ್ಷೋಹಿಣಿ ಸೇನೆಯೊಂದಿಗೆ ಬಂದರು. ಹಾಗೆಯೇ ಯಾಜ್ಞಸೇನ ದ್ರುಪದ ರಾಜನು ಒಂದು ಅಕ್ಷೋಹಿಣಿ ಸೇನೆಯೊಂದಿಗೆ ಬಂದನು. ದ್ರೌಪದಿಯ ಎಲ್ಲ ಪುತ್ರರು ಮತ್ತು ಅಜಿಂಕ್ಯ, ಶಿಖಂಡಿ, ದ್ರುಷ್ಯದ್ಯುಮ್ನ ಕೂಡ ಬಂದರು.
*– ಅದೇ. ಅ. ೭೨.*

# ಉದ್ಯೋಗ ಪರ್ವ

೧. ಅಭಿಮನ್ಯುವಿನ ಮದುವೆಯಾದ ಮೇಲೆ ಯಾದವರು ಮತ್ತು ಪಾಂಡವರು ವಿರಾಟರಾಜನ ಸಭೆಯಲ್ಲಿ ಸೇರುತ್ತಾರೆ. ಮುಂದೆ ಏನು ಮಾಡಬೇಕೆಂದು ಕೃಷ್ಣ ಅವರಿಗೆ ಹೇಳುತ್ತಾನೆ. ಕೌರವರಿಗೂ ಪಾಂಡವರಿಗೂ ನಾವು ಒಳ್ಳೆಯದನ್ನೇ ಮಾಡಬೇಕು. ಧರ್ಮರಾಯ ಏನು ಕೊಟ್ಟರೂ ಕೊನೆಗೆ ಒಂದು ಗ್ರಾಮವನ್ನೇ ಕೊಟ್ಟರೂ ಧರ್ಮದಿಂದ ಒಪ್ಪಿಕೊಳ್ಳುತ್ತಾನೆ. ದುರ್ಯೋಧನ ಇಡಿ ಸಾಮ್ರಾಜವನ್ನೇ ಕೊಟ್ಟರೂ ಒಪ್ಪಿಕೊಳ್ಳುವುದಿಲ್ಲ. ಇದುವರೆಗೂ ಪಾಂಡವರು ನೀತಿಯನ್ನೇ ಅನುಸರಿಸಿದ್ದಾರೆ. ಆದರೆ ಕೌರವರು ಅನೀತಿಯನ್ನು ಅನುಸರಿಸಿದರೆ ಕೌರವರನ್ನು ಕೊಲ್ಲಲು ಪಾಂಡವರು ಹಿಂಜರಿಯುವುದಿಲ್ಲ. ಪಾಂಡವರು ಅಲ್ಪ ಸಂಖ್ಯಾತರು ಎಂಬ ಅಂಶದಿಂದ ಯಾರೂ ಹೆದರಬೇಕಾಗಿಲ್ಲ. ಅವರ ರಕ್ಷಣೆಗೆ ಬರಲು ಅವರಿಗೆ ಬಹುಮಂದಿ ಸ್ನೇಹಿತರಿದ್ದಾರೆ. ಕೌರವ ಇಚ್ಛೆಯೇನೆಂದು ನಾವು ತಿಳಿಯಬೇಕು. ದುರ್ಯೋಧನನ ಬಳಿ ಒಬ್ಬ ರಾಯಭಾರಿಯನ್ನು ಕಳುಹಿಸಿ ಪಾಂಡವರಿಗೆ ಬರಬೇಕಾದ ರಾಜ್ಯವನ್ನು ಕೊಡು ಎಂದು ನಾನು ಸೂಚಿಸುತ್ತೇನೆ."

– *ಉ.ಪ.ಅ. ೧*

೨. ಬಲರಾಮ ಕೃಷ್ಣನ ಸೂಚನೆಯನ್ನು ಬೆಂಬಲಿಸುತ್ತಾನೆ. ಆದರೆ ತಾನು ಶಕುನಿಯ ಜೊತೆ ಸೋಲುತ್ತೇನೆಂದು ಗೊತ್ತಿದ್ದರೂ ಪಗಡೆಯಾಡಿದ್ದು ಧರ್ಮರಾಯನ ತಪ್ಪು ಎಂದು ಹೇಳಿದನು. ಆದ್ದರಿಂದ ಕೌರವರ ಜೊತೆ ಯುದ್ಧ ಮಾಡುವುದಕ್ಕಿಂತ ರಾಜಿಯಿಂದ ಏನು ಬರುತ್ತದೋ ಅದನ್ನು ಸ್ವೀಕರಿಸು.

– *ಅದೇ. ಅ. ೨.*

೩. ಸಾತ್ಯಕಿ ಎದ್ದುನಿಂತು ಬಲರಾಮನ ಧೋರಣೆಯನ್ನು ಖಂಡಿಸಿದನು.

– *ಅದೇ. ಅ. ೩.*

೪. ಸಾತ್ಯಕಿಯನ್ನು ದ್ರುಪದ ಬೆಂಬಲಿಸುತ್ತಾನೆ. ರಾಯಭಾರಿಯಾಗಿ ತನ್ನ ಪರೋಹಿತನನ್ನು ಕಳುಹಿಸಲು ದ್ರುಪದನ ಸಮ್ಮತಿ.

– *ಅದೇ. ಅ. ೪*

೫. ಕೃಷ್ಣ ದ್ರುಪದನನ್ನು ಬೆಂಬಲಿಸುತ್ತಾನೆ. ದ್ವಾರಕೆಗೆ ಹೋಗುತ್ತಾನೆ. ದ್ರುಪದ ಮತ್ತು ವಿರಾಟರು ಆಹ್ವಾನಿಸಿದ ರಾಜ ಮಹಾರಾಜರು ಆಗಮಿಸುತ್ತಾರೆ. ಅದೇ ರೀತಿ ದುರ್ಯೋಧನ ಆಹ್ವಾನಿಸಿದ ರಾಜ ಮಹಾರಾಜರು ಬರುತ್ತಾರೆ.

– *ಅದೇ. ಅ. ೫.*

೬. ರಾಜಾಸ್ಥಾನದಲ್ಲಿ ಹೇಗೆ ಮಾತಾಡಬೇಕೆಂದೂ, ಸಮಸ್ಯೆಯನ್ನು ಹೇಗೆ ಎತ್ತಬೇಕೆಂದೂ ದ್ರುಪದ ತನ್ನ ಪುರೋಹಿತನಿಗೆ ತಿಳಿಸುತ್ತಾನೆ.

– *ಅದೇ. ಅ. ೬.*

೭. ಅರ್ಜುನ ಮತ್ತು ದುರ್ಯೋಧನ ಇಬ್ಬರೂ ಕೃಷ್ಣನ ಬೆಂಬಲ ಪಡೆಯಲು ದ್ವಾರಕೆಗೆ ಹೋಗುತ್ತಾರೆ. ನಿಮಗೆ ಸಹಾಯ ಮಾಡುತ್ತೇನೆ ಎಂದು ಇಬ್ಬರಿಗೂ ಹೇಳುತ್ತಾನೆ. ಒಬ್ಬನಿಗೆ ನನ್ನ ಸೈನ್ಯವನ್ನು ಕೊಡುತ್ತೇನೆ, ಇನ್ನೊಬ್ಬನ ಜೊತೆ ನಾನು ಸೇರಿಕೊಳ್ಳುತ್ತೇನೆ. ನಿಮಗೆ ಯಾವುದು ಬೇಕೋ ಆರಿಸಿಕೊಳ್ಳಿ. ದುರ್ಯೋಧನ ಸೈನ್ಯವನ್ನು ಆರಿಸಿಕೊಂಡನು. ಅರ್ಜುನ ಕೃಷ್ಣನನ್ನು ಆರಿಸಿಕೊಂಡನು.

– *ಅದೇ. ಅ. ೭*

೮. ದೊಡ್ಡ ಸೈನ್ಯವನ್ನು ಕೂಡಿಕೊಂಡು ಪಾಂಡವರಲ್ಲಿಗೆ ಶಲ್ಯ ಬರುತ್ತಾನೆ. ದುರ್ಯೋಧನ ಅವನನ್ನು ಕೀಳಾಗಿ ಕಾಣುತ್ತಾನೆ. ಶಲ್ಯ ಪಾಂಡವರ ಭೇಟಿ ಯುದ್ಧದಲ್ಲಿ ಕರ್ಣನನ್ನು ನಿರುತ್ಸಾಹಗೊಳಿಸುವಂತೆ ಪಾಂಡವರು ಶಲ್ಯನನ್ನು ಬೇಡಿಕೊಳ್ಳುತ್ತಾರೆ. ಶಲ್ಯನ ಸಮ್ಮತಿ.

– *ಅದೇ. ಅ. ೮.*

೯. ಅ. ೯. –ಅಪ್ರಕೃತ

೧೦. ಅ. ೧೦. –ಅಪ್ರಕೃತ

೧೧. ಅ. ೧೧. –ಅಪ್ರಕೃತ

೧೨. ಅ. ೧೨. –ಅಪ್ರಕೃತ

೧೩. ಅ. ೧೩. –ಅಪ್ರಕೃತ

೧೪. ಅ. ೧೪. –ಅಪ್ರಕೃತ

೧೫. ಅ. ೧೫. –ಅಪ್ರಕೃತ

೧೬. ಅ. ೧೬. –ಅಪ್ರಕೃತ

೧೭. ಅ. ೧೭. –ಅಪ್ರಕೃತ

೧೮. ಅ. ೧೮. –ಅಪ್ರಕೃತ

೧೯. ಅ. ೧೯ – ಸಾತ್ಯಕಿ ತನ್ನ ಸೇನೆಯೊಂದಿಗೆ ಪಾಂಡವರಲ್ಲಿಗೆ ಬರುತ್ತಾನೆ. ಭಗದತ್ತ ದುರ್ಯೋಧನನಲ್ಲಿಗೆ ಹೋಗುತ್ತಾನೆ.

೨೦. ಅ. ೨೦ – ಕೌರವ ಸಭೆಗೆ ದ್ರುಪದನ ಪುರೋಹಿತನ ಪ್ರವೇಶ. ಕೌರವರು ಮಾಡಿರುವ ಕೆಟ್ಟ ಕೆಲಸಗಳನ್ನೆಲ್ಲ ಮರೆತು ಅವರ ಜೊತೆ ರಾಜಿ ಮಾಡಿಕೊಳ್ಳಲು ಪಾಂಡವರು ತಯಾರಾಗಿದ್ದಾರೆಂದು ಪುರೋಹಿತ ಹೇಳಿದನು. ಪಾಂಡವರಿಗೆ ಬೃಹತ್ ಸೇನೆಯಿದ್ದರೂ ಅವರು ರಾಜಿಯನ್ನು ಬಯಸುತ್ತಾರೆ ಎಂದನು.

೨೧. ಅ. ೨೧ – ಭೀಷ್ಮ ಪುರೋಹಿತನನ್ನು ಬೆಂಬಲಿಸುತ್ತಾನೆ. ಕರ್ಣ ಆಕ್ಷೇಪಿಸುತ್ತಾನೆ. ಭೀಷ್ಮ ಕರ್ಣರ ವಾಗ್ವಾದ. ಸಂಜಯನನ್ನು ತಮ್ಮ ಪರವಾಗಿ ರಾಜಿಗೆ ಕಳುಹಿಸಬೇಕೆಂದು ಧೃತರಾಷ್ಟ್ರ ಸೂಚಿಸುತ್ತಾನೆ.

೨೨. ಅ. ೨೨ – ಪಾಂಡವರಲ್ಲಿಗೆ ಸಂಜಯ ಹೋಗಿ ತನ್ನ ಆಶೀರ್ವಾದಗಳನ್ನು ತಿಳಿಸಬೇಕೆಂದೂ, ಅವನಿಗೆ ಆ ಸಂದರ್ಭದಲ್ಲಿ ಯಾವುದು ಉತ್ತಮವೆಂದು ಕಾಣುತ್ತದೆಯೋ ಅದನ್ನು ಹೇಳಬೇಕೆಂದೂ, ನಮ್ಮಿಬ್ಬರಲ್ಲಿ ಯಾವ ದ್ವೇಷವೂ ಉಂಟಾಗಬಾರದೆಂದೂ ಸಂಜಯನಿಗೆ ಹೇಳಿ ಕಳುಹಿಸುತ್ತಾನೆ.

೨೩. ಅ. ೨೩ – ಪಾಂಡವರಲ್ಲಿಗೆ ಸಂಜಯನ ಪ್ರಯಾಣ.

೨೪. ಅ. ೨೪ – ಸಂಜಯ ಯುಧಿಷ್ಠಿರರ ಮಾತುಕತೆ.

೨೫. ಅ. ೨೫ – ಸಂಜಯ ಯುದ್ಧವನ್ನು ಖಂಡಿಸುತ್ತಾನೆ.

೨೬. ಅ. ೨೬ – ಕೌರವರು ನಮ್ಮ ಇಂದ್ರಪ್ರಸ್ಥ ರಾಜ್ಯವನ್ನು ಕೊಟ್ಟರೆ ನಾನು ರಾಜಿಗೆ ಸಿದ್ಧ ಎಂದು ಧರ್ಮರಾಯ ಹೇಳುತ್ತಾನೆ.

೨೭. ಅ. ೨೭ – ಗುರು ಜನರನ್ನು ಕೊಂದು ರಾಜ್ಯವನ್ನು ಪಡೆಯುವುದು ಅಧರ್ಮ. ಕೌರವರು ನಿನಗೆ ರಾಜ್ಯವನ್ನು ಕೊಡಲು ನಿರಾಕರಿಸಿದರೆ ವೃಷ್ಣಿ ಮತ್ತು ಅಂಧಕ ರಾಜ್ಯಗಳಲ್ಲಿ ನೀನು ಭಿಕ್ಷೆಯೆತ್ತಿ ಬದುಕುವುದು ಲೇಸು.

೨೮. ಅ. ೨೮ – ಸಂಜಯ, ನಾವು ಧರ್ಮಕ್ಕೆ ವಿರುದ್ಧವಾಗಿ ನಡೆದುಕೊಂಡಿದ್ದೇವೆ ಅಥವಾ ನಡೆದುಕೊಳ್ಳುತ್ತಿದ್ದೇವೆಂದು ನಿನಗನ್ನಿಸಿದರೆ ನಮ್ಮನ್ನು ನೀನು ನಿಂದಿಸು ಎಂದು ಧರ್ಮರಾಯ ಹೇಳುತ್ತಾನೆ. ನಾನು ಸ್ವಧರ್ಮ ಅಥವಾ ಸಾಮವನ್ನು ಬಯಸುತ್ತೇನೆಂದು ಸಂಜಯ ಹೇಳುತ್ತಾನೆ.

೨೯. ಅ. ೨೯ – ಯುದ್ಧ ಹೇಗೆ ನ್ಯಾಯೋಚಿತವಾದುದು ಎಂದು ಕೃಷ್ಣ ಸಂಜಯನಿಗೆ ಹೇಳುತ್ತಾನೆ ಹಾಗೂ ಅದನ್ನು ಧೃತರಾಷ್ಟ್ರನಿಗೆ ಹೋಗಿ ತಿಳಿಸೆಂದು ಹೇಳುತ್ತಾನೆ.

೩೦. ಅ. ೩೦ – ಕೌರವರಲ್ಲಿಗೆ ಸಂಜಯ ವಾಪಸ್ಸು ಬರುತ್ತಾನೆ. ಯುದ್ಧ ಮಾಡಲು ದುರ್ಯೋಧನನಿಗೆ ತಿಳಿಸುತ್ತಾನೆ. ಇಂದ್ರಪ್ರಸ್ಥವನ್ನು ಪಾಂಡವರಿಗೆ ದುರ್ಯೋಧನ ಹಿಂದಿರುಗಿಸಬೇಕು. ಇಲ್ಲವೆ ಯುದ್ಧಕ್ಕೆ ಸಿದ್ಧವಾಗಬೇಕು.

೩೧. ಅ. ೩೦ – ನೀನೂ ಬದುಕು, ಇತರರೂ ಬದುಕಲು ಅವಕಾಶಕೊಡು ಎಂದು ಸಂಜಯ ದುರ್ಯೋಧನನಿಗೆ ಬೋಧಿಸುತ್ತಾನೆ. ಅವರಿಗೆ ಇಂದ್ರಪ್ರಸ್ಥರನ್ನು ಕೊಡಲಾಗದಿದ್ದರೆ ಐದು ಗ್ರಾಮಗಳನ್ನಾದರೂ ಕೊಡು.

೩೨. ಅ. ೩೧ – ಧೃತರಾಷ್ಟ್ರನನ್ನು ರಾತ್ರಿ ಸಂಜಯ ಕಂಡು ಬೆಳಗ್ಗೆ ಧರ್ಮರಾಯ ಕಳಿಸಿರುವ ಸಂದೇಶವನ್ನು ಕೊಡುತ್ತೇನೆಂದು ಹೇಳುತ್ತಾನೆ.

೩೩. ಅ. ೩೨ – ಸಂಜಯ ತಂದಿರುವ ಸಂದೇಶವನ್ನು ತಿಳಿಯಲು ಧೃತರಾಷ್ಟ್ರ ಚಡಪಡಿಸುತ್ತಿದ್ದಾನೆ. ಆದ್ದರಿಂದ ಸಂಜಯನನ್ನು ಕೂಡಲೇ ಬರಹೇಳುತ್ತಾನೆ. ಸಂದೇಶವನ್ನು ಸಂಜಯ ನೀಡಿ, ಅವರಿಗೆ ಅವರ ರಾಜ್ಯವನ್ನು ಕೊಟ್ಟು ವಿವಾದವನ್ನು ಪರಿಹರಿಸಿಕೊಳ್ಳಲು ಸಂಜಯ ಹೇಳುತ್ತಾನೆ.

೩೪. ಅ. ೩೪ – ಧೃತರಾಷ್ಟ್ರ ವಿದುರನನ್ನು ಕರೆಸಿಕೊಂಡು ಅವನ ಸಲಹೆ ಕೇಳುತ್ತಾನೆ. ಪಾಂಡವರಿಗೆ ಅವರ ಭಾಗವನ್ನು ಕೊಡು ಎಂಬುದೇ ಅವನ ಸಲಹೆ.

೩೫. ಅ. ೩೫ – ಅಪ್ರಾಸಂಗಿಕ.

೩೬. ಅ. ೩೬ – ಅಪ್ರಾಸಂಗಿಕ. ಎರಡು ಪಕ್ಷದವರು ಸ್ನೇಹದಿಂದಿರಲಿ ಎಂದು ವಿದುರ ತಿಳಿಸುತ್ತಾನೆ.

೩೭. ಅ. ೩೭ – ಅಪ್ರಾಸಂಗಿಕ.

೩೮. ಅ. ೩೮ – ಅಪ್ರಾಸಂಗಿಕ.

೩೯. ಅ. ೩೯ – ದುರ್ಯೋಧನ ದುಷ್ಟನಾದರೂ ಅವನನ್ನು ತ್ಯಜಿಸಲಾರೆ ಎಂದು ಧೃತರಾಷ್ಟ್ರ ವಿದುರನಿಗೆ ಹೇಳುತ್ತಾನೆ.

೪೦. ಅ. ೪೦ – ವಿದುರನಿಂದ ಚಾತುರ್ವರ್ಣದ ವರ್ಣನೆ.

೪೧. ಅ. ೪೧ – ಬ್ರಹ್ಮವನ್ನು ಕುರಿತು ಧೃತರಾಷ್ಟ್ರ ವಿದುರನನ್ನು ಪ್ರಶ್ನಿಸುತ್ತಾನೆ. ನಾನು ಶೂದ್ರ ಆದ್ದರಿಂದ ನಾನು ಹೇಳಲಾರೆ ಎಂದು ಅವನು ಉತ್ತರಿಸುತ್ತಾನೆ. ಆಮೇಲೆ ಸನತ್ಸುಜಾತ ಬರುತ್ತಾನೆ.

೪೨. ಅ. ೪೨ – ಬ್ರಹ್ಮವಿದ್ಯೆಯ ಬಗ್ಗೆ ಧೃತರಾಷ್ಟ್ರ ಮತ್ತ ಸನತ್ಸುಜಾತರ ಸಂಭಾಷಣೆ.

೪೩. ಅ. ೪೩ – ಅದೇ ವಿಷಯದ ಮೇಲೆ ಸನತ್ಸುಜಾತ ಮತ್ತು ಧೃತರಾಷ್ಟ್ರರ ಸಂವಾದ.

೪೪. ಅ. ೪೪ – ಬ್ರಹ್ಮವಿದ್ಯೆಯ ಬಗ್ಗೆ ಸನತ್ಸುಜಾತ.

೪೫. ಅ. ೪೫ – ಸನತ್ಸುಜಾತ ಯೋಗವನ್ನು ಬೋಧಿಸುತ್ತಾನೆ.

೪೬. ಅ. ೪೬ – ಆತ್ಮದ ಬಗ್ಗೆ ಸನತ್ಸುಜಾತ.

೪೭. ಅ. ೪೭ – ಸಂಜಯ ತಂದಿರುವ ಸಂದೇಶ ಕೇಳಲು ಕೌರವರು ಸಭೆಗೆ ಬರುತ್ತಾರೆ.

೪೮. ಅ. ೪೮ – ಸಂಜಯ ಸಂದೇಶವನ್ನು ಹೇಳುತ್ತಾನೆ. (ಮುಖ್ಯವಾಗಿ ಅರ್ಜುನ ಕೊಟ್ಟ ಭಾಗವೇ?)

೪೯. ಅ. ೪೯ – ಭೀಷ್ಮನಿಂದ ಕೃಷ್ಣಾರ್ಜುನರ ಪ್ರಶಂಸೆ.

೫೦. ಅ. ೫೦ – ಪಾಂಡವರ ಮಿತ್ರರಾಜರು ಯಾರು, ಅವರ ಬಲಾಬಲ ಏನೆಂದು ಧೃತರಾಷ್ಟ್ರ ಸಂಜಯನನ್ನು ಕೇಳುತ್ತಾನೆ. ಸಂಜಯ ಮೂದಲಿಸುತ್ತಾನೆ. ಸಿಟ್ಟಿನಿಂದ ಉತ್ತರಿಸುತ್ತಾನೆ.

೫೧. ಅ. ೫೧ – ಭೀಷ್ಮನ ಪರಾಕ್ರಮವನ್ನು ನೆನೆಸಿಕೊಂಡು ಧೃತರಾಷ್ಟ್ರ ನಿಟ್ಟುಸಿರು ಬಿಡುತ್ತಾನೆ.

೫೨. ಅ. ೫೨ – ಅರ್ಜುನನ ಪರಾಕ್ರಮವನ್ನು ನೆನೆಸಿಕೊಂಡು ಧೃತರಾಷ್ಟ್ರ ನಿಟ್ಟುಸಿರು ಬಿಡುತ್ತಾನೆ.

೫೩. ಅ. ೫೩ – ಧರ್ಮರಾಯ ಮತ್ತು ಅವನ ಮಿತ್ರರ ಪರಾಕ್ರಮವನ್ನು ಧೃತರಾಷ್ಟ್ರ ನೆನೆಸಿಕೊಳ್ಳುತ್ತಾನೆ. ಪಾಂಡವರ ಜೊತೆ ರಾಜಿಮಾಡಿಕೊಳ್ಳಲು ಅವನು ತನ್ನ ಪುತ್ರರಿಗೆ ಹೇಳುತ್ತಾನೆ.

೫೪. ಅ. ೫೪ – ಕೌರವರ ಪರಾಜಯವನ್ನು ಸಂಜಯ ಮುನ್ನುಡಿಯುತ್ತಾನೆ.

೫೫. ಅ. ೫೫ – ನಮ್ಮ ಸೇನಾಬಲ ಹೆಚ್ಚಾಗಿರುವುದರಿಂದ ಪಾಂಡವರು ನಮ್ಮನ್ನು ಸೋಲಿಸಬಾರದು ಎಂದು ದುರ್ಯೋಧನ ನುಡಿಯುತ್ತಾನೆ.

೫೬. ಅ. ೫೬ – ಪಾಂಡವರು ಮಾಡಿರುವ ಸೇನೆಯ ಏರ್ಪಾಡನ್ನು ಸಂಜಯ ವಿವರಿಸುತ್ತಾನೆ.

೫೭. ಅ. ೫೭ – ಪಾಂಡವರು ಹೇಗೆ ಕೌರವರ ಸೈನಿಕರನ್ನು ಕೊಲ್ಲಲು ಯೋಜಿಸಿದ್ದಾರೆಂದು ಸಂಜಯ ವರ್ಣಿಸುತ್ತಾನೆ. ಕೌರವರಿಗೆ ಸೈನ್ಯ ದೊಡ್ಡದಾಗಿರುವುದರಿಂದ ಪಾಂಡವರ ಬಗ್ಗೆ ತನಗೆ ಭಯವಿಲ್ಲವೆಂದು ದುರ್ಯೋಧನ ಹೇಳುತ್ತಾನೆ.

೫೮. ಅ. ೫೮ – ಯುದ್ಧ ಬೇಡವೆಂದು ಧೃತರಾಷ್ಟ್ರ ದುರ್ಯೋಧನನಿಗೆ ಹೇಳುತ್ತಾನೆ. ಯುದ್ಧದಿಂದ ಹಿಂಜರಿಯುವುದಿಲ್ಲವೆಂದು ದುರ್ಯೋಧನ ಪ್ರತಿಜ್ಞೆ ಮಾಡುತ್ತಾನೆ. ಧೃತರಾಷ್ಟ್ರ ಅಳುತ್ತಾನೆ.

೫೯. ಅ. ೫೯ – ಕೃಷ್ಣಾರ್ಜುನರ ನಡುವೆ ಏನು ಮಾತುಕತೆ ನಡೆಯಿತು ಹೇಳೆಂದು ಧೃತರಾಷ್ಟ್ರ ಸಂಜಯನನ್ನು ಕೇಳುತ್ತಾನೆ.

೬೦. ಅ. ೬೦ – ಪಾಂಡವರಿಗೆ ದೇವತೆಗಳು ಸಹಾಯಮಾಡಿ ಕೌರವರನ್ನು ನಾಶಮಾಡುತ್ತಾರೆಂದು ಧೃತರಾಷ್ಟ್ರ ದುರ್ಯೋಧನನಿಗೆ ಹೇಳುತ್ತಾನೆ.

೬೧. ಅ. ೬೧ – ಅದಕ್ಕೆ ತಾನು ಹೆದರುವುದಿಲ್ಲವೆಂದು ದುರ್ಯೋಧನ ಹೇಳುತ್ತಾನೆ.

೬೨. ಅ. ೬೨ – ತಾನು ಮಾತ್ರ ಅರ್ಜುನನನ್ನು ಕೊಲ್ಲಬಲ್ಲೆನೆಂದು ಕರ್ಣ ನುಡಿಯುತ್ತಾನೆ.

೬೩. ಅ. ೬೩ – ತಾನು ಕರ್ಣನನ್ನು ನಂಬಿ ಯುದ್ಧ ಮಾಡುತ್ತೇನೆಯೇ ಹೊರತು ಭೀಷ್ಮ, ದ್ರೋಣ, ಮುಂತಾದವರನ್ನಲ್ಲ ಎಂದು ದುರ್ಯೋಧನ ಹೇಳುತ್ತಾನೆ.

೬೪. ಅ. ೬೪ – ದ್ವೇಷವನ್ನು ಬಿಡೆಂದು ವಿದುರ ದುರ್ಯೋಧನನಿಗೆ ಹೇಳುತ್ತಾನೆ.

೬೫. ಅ. ೬೫ – ಧೃತರಾಷ್ಟ್ರ ದುರ್ಯೋಧನನಿಗೆ ಎಚ್ಚರಿಕೆ ನೀಡುತ್ತಾನೆ.

೬೬. ಅ. ೬೬ – ಅರ್ಜುನನ ಸಂದೇಶವನ್ನು ಸಂಜಯ ಧೃತರಾಷ್ಟ್ರನಿಗೆ ನೀಡುತ್ತಾನೆ.

೬೭. ಅ. ೬೭ – ಕೌರವನ ಸಭೆಯಲ್ಲಿ ಸೇರಿದ್ದ ರಾಜರುಗಳು ತಮ್ಮ ತಮ್ಮ ಊರುಗಳಿಗೆ ಹಿಂದಿರುಗುತ್ತಾರೆ. ವ್ಯಾಸ, ಗಾಂಧಾರಿಯರು ವಿದುರನ ಜೊತೆ ಬರುತ್ತಾರೆ. ಕೃಷ್ಣಾರ್ಜುನರ ಬಗ್ಗೆ ತನಗೆ ಗೊತ್ತಿರುವುದನ್ನೆಲ್ಲ ವ್ಯಾಸ ಸಂಜಯನಿಗೆ ತಿಳಿಸಿ ಅದನ್ನು ಧೃತರಾಷ್ಟ್ರನಿಗೆ ಹೇಳಲು ಆಜ್ಞಾಪಿಸುತ್ತಾನೆ.

೬೮. ಅ. ೬೮ – ಕೃಷ್ಣನ ಬಗ್ಗೆ ಸಂಜಯ ಧೃತರಾಷ್ಟ್ರನಿಗೆ ಹೇಳುತ್ತಾನೆ.

೬೯. ಅ. ೬೯ – ಕೃಷ್ಣನಿಗೆ ಶರಣಾಗತನಾಗಲು ದುರ್ಯೋಧನನಿಗೆ ಧೃತರಾಷ್ಟ್ರ ಹೇಳುತ್ತಾನೆ. ದುರ್ಯೋಧನನ ನಿರಾಕರಣೆ, ಗಾಂಧಾರಿ ದುರ್ಯೋಧನನನ್ನು ಬೈಯ್ಯುತ್ತಾಳೆ.

೭೦. ಅ. ೭೦ – ಕೃಷ್ಣನ ನಾನಾ ಹೆಸರುಗಳು ಮತ್ತು ಅವುಗಳ ಉಗಮ.

೭೧. ಅ. ೭೧ – ಕೃಷ್ಣನಿಗೆ ಧೃತರಾಷ್ಟ್ರ ಶರಣಾಗುತ್ತಾನೆ.

೭೨. ಅ. ೭೨ – ಯುಧಿಷ್ಠಿರ ಮತ್ತು ಕೃಷ್ಣರ ಮಾತುಕತೆ. ಧೃತರಾಷ್ಟ್ರನನ್ನು ನಂಬಬೇಡವೆಂದು ತನಗೆ ಸಂಜಯ ಹೇಳಿದನೆಂದು ಯುಧಿಷ್ಠಿರ ಕೃಷ್ಣನಿಗೆ ತಿಳಿಸುತ್ತಾನೆ. ಆಸ್ತಿಯ ಪ್ರಾಮುಖ್ಯತೆಯನ್ನು ಯುಧಿಷ್ಠಿರ ಒತ್ತಿಹೇಳುತ್ತಾನೆ. ಕ್ಷಾತ್ರ ಧರ್ಮದ ಬಗ್ಗೆ ಮತ್ತು ಆಚರಣೆಯ ಅವಶ್ಯಕತೆಯನ್ನು ಹೇಳುತ್ತಾನೆ. ಕೌರವರಲ್ಲಿಗೆ ತಾನು ಹೋಗಿ ಬರುತ್ತೇನೆಂದು ಕೃಷ್ಣ ಸೂಚಿಸುತ್ತಾನೆ. ಈ ವಿಚಾರ ಯುಧಿಷ್ಠಿರನಿಗೆ ಹಿಡಿಸುವುದಿಲ್ಲ. ನಿನಗೆ ಉತ್ತಮವೆನಿಸಿದ್ದನ್ನು ಮಾಡು ಎಂದು ಹೇಳುತ್ತಾನೆ.

೭೩. ಅ. ೭೩ – ಕೃಷ್ಣ ತನ್ನ ಮನೋರಹಸ್ಯವನ್ನು ಧರ್ಮರಾಯನಿಗೆ ಹೇಳುತ್ತಾನೆ. ಕೌರವನೊಡನೆ ಮೃದುವಾಗಿ ಮಾತನಾಡಬೇಡ. ಕೌರವರ ಜೊತೆ ನೀನು ರಾಜಿಮಾಡಿಕೊಳ್ಳದಿರುವುದಕ್ಕೆ ಹಲವಾರು ಕಾರಣಗಳಿವೆ. ದ್ರೌಪದಿಯನ್ನು ಕೌರವರು ಹೇಗೆ ಅವಮಾನಿಸಿದರೆಂಬುದನ್ನು ಒತ್ತಿ ಹೇಳುತ್ತಾನೆ. ಆದ್ದರಿಂದ, ಓ ಧರ್ಮ, ಅವರನ್ನು ಕೊಲ್ಲುವುದಕ್ಕೆ ಹಿಂಜರಿಯಬೇಡ.

೭೪. ಅ. ೭೪ – ಕೌರವರ ಜೊತೆ ಮೃದುವಾಗಿ ಮಾತನಾಡುವಂತೆ ಕೃಷ್ಣನಿಗೆ ಭೀಷ್ಮ ಸೂಚಿಸುತ್ತಾನೆ.

೭೫. ಅ. ೭೫ – ಭೀಮನನ್ನು ಕೃಷ್ಣ ಗೇಲಿ ಮಾಡುತ್ತಾನೆ.

೭೬. ಅ. ೭೬ – ಭೀಮ ಯುದ್ಧ ಮಾಡಲು ನಿರ್ಧರಿಸುತ್ತಾನೆ.

೭೭. ಅ. ೭೭ – ದೈವ ಮತ್ತು ಪೌರುಷದ ವ್ಯತ್ಯಾಸವನ್ನು ಭೀಮನಿಗೆ ಕೃಷ್ಣ ಹೇಳುತ್ತಾನೆ.

೭೮. ಅ. ೭೮ – ಸಾಮವನ್ನು ಅನುಸರಿಸಲು ಕೃಷ್ಣನಿಗೆ ಅರ್ಜುನ ಹೇಳುತ್ತಾನೆ. ಅದಾಗದಿದ್ದರೆ ಯುದ್ಧವನ್ನು ಯೋಚಿಸಬೇಕಾಗುತ್ತದೆ.

೭೯. ಅ. ೭೯ – ಅರ್ಜುನನಿಗೆ ಕೃಷ್ಣನ ಮಾತು. ಶಾಂತಿ ಸಂಧಾನ ಮಾಡಲು ನಾನು ಪ್ರಯತ್ನಿಸುತ್ತೇನೆ. ಅದು ಸಾಧ್ಯವಾಗದಿದ್ದರೆ ಯುದ್ಧಕ್ಕೆ ಸಿದ್ಧರಾಗಿ. ಐದು ಗ್ರಾಮಗಳನ್ನಾದರೂ ಒಪ್ಪಿಕೊಳ್ಳುವ ಧರ್ಮನ ಇಚ್ಛೆಯನ್ನು ನಾನು ದುರ್ಯೋಧನನಿಗೆ ತಿಳಿಸುವುದಿಲ್ಲ.

೮೦. ಅ. ೮೦ – ಒಳ್ಳೆಯದು ಮಾಡೆಂದು ಕೃಷ್ಣನಿಗೆ ನಕುಲ ಹೇಳುತ್ತಾನೆ.

೮೧. ಅ. ೮೧ – ಸಹದೇವ ಕೃಷ್ಣನನ್ನು ಕಂಡು ಮಾತನಾಡಿ ಕೌರವರ ಜೊತೆ ಯುದ್ಧವನ್ನು ಏರ್ಪಡಿಸು ಎನ್ನುತ್ತಾನೆ. ಇಲ್ಲಿ ಸೇರಿರುವ ಎಲ್ಲಾ ಯೋಧರು ಸಹದೇವನ ಮಾತನ್ನು ಅನುಮೋದಿಸುತ್ತಾರೆಂದು ಸಾತ್ಯಕಿ ಹೇಳುತ್ತಾನೆ.

೮೨. ಅ. ೮೨ – ದ್ರೌಪದಿ ಕೃಷ್ಣನನ್ನು ಕಂಡು ಮಾತನಾಡಿ ದುರ್ಯೋಧನನನ್ನು ಶಿಕ್ಷಿಸಿದ ಹೊರತು ತನಗೆ ತೃಪ್ತಿಯಿಲ್ಲವೆನ್ನುತ್ತಾಳೆ. ಕೃಷ್ಣ ಅವಳಿಗೆ ಮಾತು ಕೊಡುತ್ತಾನೆ.

೮೩. ಅ. ೮೩ – ಕೃಷ್ಣಾರ್ಜುನರ ಕೊನೆಯ ಸಮಾಗಮ. ಸಾಮಕ್ಕಾಗಿ ಅರ್ಜುನ ಉತ್ತಮ ಪ್ರಯತ್ನ ಮಾಡುತ್ತಾನೆ. ಕುಂತಿಗೆ ಸಮಾಧಾನ ಮಾಡಲು ಯುಧಿಷ್ಠಿರ ಕೃಷ್ಣನಿಗೆ ಹೇಳುತ್ತಾನೆ. ಕೃಷ್ಣ ತನ್ನ ರಾಯಭಾರವನ್ನು ಪ್ರಾರಂಭಿಸುತ್ತಾನೆ.

೮೪. ಅ. ೮೪ – ಹಸ್ತಿನಾಪುರಕ್ಕೆ ಹೋಗುವ ಮಾರ್ಗದಲ್ಲಿ ಕೃಷ್ಣನಿಗೆ ಶುಭ ಮತ್ತು ಅಪಶಕುನಗಳಾಗುತ್ತವೆ.

೮೫. ಅ. ೮೫ – ಹಸ್ತಿನಾಪುರಕ್ಕೆ ಹೋಗುವ ಕೃಷ್ಣನಿಗೆ ದಾರಿಯಲ್ಲಿ ದುರ್ಯೋಧನ ವಿಶ್ರಾಮಧಾಮಗಳನ್ನು ಕಟ್ಟಿಸುತ್ತಾನೆ. ಕೃಷ್ಣ ಹಸ್ತಿನಾಪುರಕ್ಕೆ ಬರುತ್ತಾನೆ.

೮೬. ಅ. ೮೬ – ಕೃಷ್ಣನಿಗೆ ಏನು ಉಡುಗೊರೆ ಕೊಡಬೇಕೆಂದು ಧೃತರಾಷ್ಟ್ರ ವಿದುರನನ್ನು ಕೇಳುತ್ತಾನೆ.

೮೭. ಅ ೮೭ – ಕೃಷ್ಣನನ್ನು ಪಾಂಡವರಿಂದ ಪ್ರತ್ಯೇಕ ಮಾಡಲು ಸಾಧ್ಯವಿಲ್ಲವೆಂದು ವಿದುರ ಧೃತರಾಷ್ಟ್ರನಿಗೆ ಹೇಳುತ್ತಾನೆ.

೮೮. ಅ. ೮೮ – ಕೃಷ್ಣ ಪೂಜಾರ್ಹನೆಂದು ದುರ್ಯೋಧನ ಹೇಳುತ್ತಾನೆ. ಆದರೆ ಅವನನ್ನು ಪೂಜಿಸಲು ಇದು ಸಮಯವಲ್ಲ. ಪಾಂಡವರೊಡನೆ ರಾಜಿ ಮಾಡಿಕೊ ಎಂದು ಭೀಷ್ಮ ದುರ್ಯೋಧನನಿಗೆ ಹೇಳುತ್ತಾನೆ. ದುರ್ಯೋಧನ ಕೃಷ್ಣನನ್ನು ನೋಡಬೇಕೆಂದು ಬಯಸುತ್ತಾನೆ. ಭೀಷ್ಮ ದುರ್ಯೋಧನನನ್ನು ಪ್ರಬಲವಾಗಿ ವಿರೋಧಿಸುತ್ತಾನೆ.

೮೯. ಅ. ೮೯ – ಹಸ್ತಿನಾಪುರಕ್ಕೆ ಕೃಷ್ಣನ ಪ್ರವೇಶ. ಧೃತರಾಷ್ಟ್ರನ ಜೊತೆ ಸಮಾಗಮ. ವಿದುರನ ಮನೆಯಲ್ಲಿ ತಂಗುತ್ತಾನೆ.

೯೦. ಅ. ೯೦ – ಕುಂತಿ ಮತ್ತು ಕೃಷ್ಣರ ಸಮಾಗಮ ಕುಂತಿಯ ದುಃಖ. ಕೃಷ್ಣ ಅವಳನ್ನು ಸಮಾಧಾನಪಡಿಸುತ್ತಾನೆ. ಕುಂತಿ ಕೃಷ್ಣನಿಗೆ (೧) ರಾಜ್ಯಕ್ಕಾಗಿ ಯುದ್ಧ ಮಾಡಿ ಎಂದು ನನ್ನ ಪುತ್ರರಿಗೆ ಹೇಳು, (೨) ದ್ರೌಪದಿಯ ಬಗ್ಗೆ ನನಗೆ ವ್ಯಥೆಯಾಗುತ್ತದೆ ಎಂದು ಹೇಳುತ್ತಾಳೆ.

೯೧. ಅ. ೯೧ – ಕೃಷ್ಣನನ್ನು ಕೌರವರು ಭೋಜನಕ್ಕೆ ಆಹ್ವಾನಿಸುತ್ತಾರೆ. ಕೃಷ್ಣ ತಿರಸ್ಕರಿಸುತ್ತಾನೆ. ಅವನು ವಿದುರನ ಮನೆಗೆ ಊಟಕ್ಕೆ ಹೋಗುತ್ತಾನೆ.

೯೨. ಅ. ೯೨ – ನೀನು ಕೌರವರ ಜೊತೆ ಹೋಗುವುದು ನನಗೆ ಇಷ್ಟವಿಲ್ಲವೆಂದು ವಿದುರ ಕೃಷ್ಣನಿಗೆ ಹೇಳುತ್ತಾನೆ.

೯೩. ಅ. ೯೩ – ಕೌರವರೆಲ್ಲ ಸೇರಿದರೂ ತನಗೆ ತೊಂದರೆ ಮಾಡಲಾರರು ಎಂದು ವಿದುರನಿಗೆ ಕೃಷ್ಣ ಹೇಳುತ್ತಾನೆ. ಸಾಮ ಪುಣ್ಯವಾದುದರಿಂದ ನಾನು ಬಂದಿದ್ದೇನೆ.

೯೪. ಅ. ೯೪ – ಕೌರವರ ಒಡ್ಡೋಲಗಕ್ಕೆ ಕೃಷ್ಣನ ಪ್ರವೇಶ.

೯೫. ಅ. ೯೫ – ಸಭಾಸದರನ್ನು ಕುರಿತು ಕೃಷ್ಣನ ಭಾಷಣ. ಪಾಂಡವರು ಯುದ್ಧಕ್ಕಾಗಲೀ ಶಾಂತಿಗಾಗಲೀ ಸಿದ್ಧವಾಗಿದ್ದರೆಂದು ಹೇಳುತ್ತಾನೆ. ಅವರಿಗೆ ಅರ್ಧ ರಾಜ್ಯವನ್ನು ಕೊಡಿ.

೯೬. ಅ. ೯೬ – ಗರ್ವವನ್ನು ಕುರಿತು ಜಮದಗ್ನಿ ಒಂದು ಕತೆಯನ್ನು ಹೇಳುತ್ತಾನೆ.

೯೭. ಅ. ೯೭ – ೧೦೫ – ಮಾತಲಿ ಆಖ್ಯಾನ.

೯೮. ಅ. ೧೦೬ – ದುರ್ಯೋಧನನಿಗೆ ನಾರದನ ಬುದ್ಧಿವಾದ.

೯೯. ಅ. ೧೦೬–೧೨೩ – ಗಾಲವ ಅಖ್ಯಾನ.

೧೦೦. ಅ. ೧೨೪ – ದುರ್ಯೋಧನನಿಗೆ ಬುದ್ಧಿವಾದ ಹೇಳು ಎಂದು ಕೃಷ್ಣನನ್ನು ಧೃತರಾಷ್ಟ್ರ ಕೋರುತ್ತಾನೆ.

೧೦೧. ಅ. ೧೨೫ – ದುರ್ಯೋಧನನಿಗೆ ಭೀಷ್ಮನ ಬುದ್ಧಿವಾದ. ದ್ರೋಣನ ಅನುಮೋದನೆ. ದುರ್ಯೋಧನನಿಗೆ ವಿದುರನಿಂದ ಖಂಡನೆ. ಧೃತರಾಷ್ಟ್ರನ ಬುದ್ಧಿವಾದ.

೧೦೨. ಅ. ೧೨೬ – ಎರಡನೆಯ ಸಾರಿಗೆ ಭೀಷ್ಮ ದ್ರೋಣರಿಂದ ದುರ್ಯೋಧನನಿಗೆ ಬುದ್ಧಿವಾದ.

೧೦೨. ಅ. ೧೨೭ – ಪಾಂಡವರಿಗೆ ಏನನ್ನೂ ಕೊಡುವುದಿಲ್ಲವೆಂದು ದುರ್ಯೋಧನನ ಘೋಷಣೆ.

೧೦೪. ಅ. ೧೨೮ – ಕೃಷ್ಣ ದುರ್ಯೋಧನನನ್ನು ಖಂಡಿಸುತ್ತಾನೆ. ದುರ್ಯೋಧನನಿಂದ ಸಭಾತ್ಯಾಗ. ದುಶ್ಯಾಸನನಿಂದ ಭಾಷಣ. ಕೃಷ್ಣ ಭೀಷ್ಮನಿಗೆ ಎಚ್ಚರಿಕೆ ನೀಡುತ್ತಾನೆ.

೧೦೪. ಅ. ೧೨೯ – ಸಭೆಗೆ ಗಾಂಧಾರಿಯನ್ನು ಕರೆತರಲು ವಿದುರನಿಗೆ ಧೃತರಾಷ್ಟ್ರ ಸೂಚಿಸುತ್ತಾನೆ. ದುರ್ಯೋಧನ ಮರಳಿ ಸಭೆಗೆ ಬರುತ್ತಾನೆ. ಪಾಂಡವರಿಗೆ ಅರ್ಧ ರಾಜ್ಯವನ್ನು ಕೊಡು ಎಂದು ದುರ್ಯೋಧನನಿಗೆ ಹೇಳುತ್ತಾಳೆ.

೧೦೪. ಅ. ೧೩೦ – ದುರ್ಯೋಧನನಿಂದ ಸಭಾ ತ್ಯಾಗ. ಕೃಷ್ಣನನ್ನು ಕೊಲ್ಲಲು ಅವನ ಉದ್ದೇಶ. ಸಾತ್ಯಕಿ ಧೃತರಾಷ್ಟ್ರನಿಗೆ ಈ ಪಿತೂರಿಯನ್ನು ಹೇಳುತ್ತಾನೆ. ಶ್ರೀಕೃಷ್ಣನ ಉಪನ್ಯಾಸ. ಧೃತರಾಷ್ಟ್ರ ದುರ್ಯೋಧನನನ್ನು ಮತ್ತೆ ರಾಜಸಭೆಗೆ ಕರೆಸಿ ಎಚ್ಚರಿಕೆ ನೀಡುತ್ತಾನೆ. ವಿದುರನಿಂದ ಖಂಡನೆ.

೧೦೫. ಅ. ೧೩೧ – ಭಗವಂತನ ವಿಶ್ವರೂಪ ದರ್ಶನ. ಧೃತರಾಷ್ಟ್ರನಿಗೆ ದಿವ್ಯಚಕ್ಷು ದಾನ. ರಾಜಸಭೆ ಬಿಟ್ಟು ಕೃಷ್ಣ ಕುಂತಿಯ ಬಳಿಗೆ ಹೋಗುತ್ತಾನೆ.

೧೦೬ ಅ. ೧೩೨ – ರಾಜಸಭೆಯಲ್ಲಿ ನಡೆದದ್ದನ್ನು ಕೃಷ್ಣ ಕುಂತಿಗೆ ಹೇಳುತ್ತಾನೆ. ಯುದ್ಧ ಕ್ಷತ್ರಿಯರಿಗೆ ಸ್ವಾಭಾವಿಕವೆಂದು ಕುಂತಿ ಕೃಷ್ಣನಿಗೆ ಹೇಳುತ್ತಾಳೆ. ಅದಕ್ಕಿಂತ ಉತ್ತಮ ಧರ್ಮವಿಲ್ಲ.

೧೦೭. ಅ. ೧೩೩ – ತನ್ನ ಅಭಿಪ್ರಾಯ ಪುಷ್ಟಿಕೊಡಲು ವಿದುಲನ ಕತೆಯನ್ನು ಕೃಷ್ಣನಿಗೆ ಕುಂತಿ ಹೇಳುತ್ತಾಳೆ.

೧೦೮. ಅ. ೧೩೪ – ವಿದುಲನ ಕತೆ

೧೦೯. ಅ. ೧೩೫ – ವಿದುಲನ ಕತೆ

೧೧೦. ಅ. ೧೩೬ – ವಿದುಲನ ಕತೆ

೧೧೧. ಅ. ೧೩೭ – ತನ್ನ ಪುತ್ರರಿಗೆ ಕುಂತಿಯ ಉಪದೇಶ. ಕರ್ಣನಿಗೆ ಕೃಷ್ಣನ ಉಪದೇಶ. ಉಪಪ್ಲವ್ಯ ನಗರಿಗೆ ಕೃಷ್ಣನ ಪ್ರಯಾಣ.

೧೧೨. ಅ. ೧೩೮ – ಭೀಷ್ಮ ದ್ರೋಣರಿಂದ ದುರ್ಯೋಧನನಿಗೆ ಬುದ್ಧಿವಾದ.

೧೧೩. ಅ. ೧೩೯ – ಭೀಷ್ಮನ ದುಃಖ. ದ್ರೋಣ ಮತ್ತೆ ದುರ್ಯೋಧನನಿಗೆ ಬುದ್ಧಿ ಹೇಳುತ್ತಾನೆ.

೧೧೪. ಅ. ೧೪೦ – ಧೃತರಾಷ್ಟ್ರ ಸಂಜಯದ ಸಂಭಾಷಣೆ. ಕರ್ಣನಿಗೆ ಕೃಷ್ಣನ ಬುದ್ಧಿವಾದ.

೧೧೫. ಅ. ೧೪೧ – ಕೃಷ್ಣನಿಗೆ ಕರ್ಣನ ಉತ್ತರ.

೧೧೬. ಅ. ೧೪೨ – ಪಾಂಡವರು ಗೆಲ್ಲುತ್ತಾರೆಂದು ಕರ್ಣನಿಗೆ ಕೃಷ್ಣನ ಭರವಸೆ.

೧೧೭. ಅ. ೧೪೩ – ಕರ್ಣ ಅಪಶಕುನ ಕಾಣುತ್ತಾನೆ. ಪಾಂಡವರನ್ನು ಮುಗಿಸುತ್ತೇನೆಂಬ ಅವನ ನಿರ್ಧಾರ. ಅವನು ಮನೆಗೆ ತೆರಳುತ್ತಾನೆ.

೧೧೮. ಅ. ೧೪೪ – ವಿದುರ ಮತ್ತು ಪೃಥೆಯರ ಸಂಭಾಷಣೆ. ಯುದ್ಧ ಮಾಡಲು ದುರ್ಯೋಧನ ನಿರ್ಧರಿಸಿದ್ದಾನೆಂದು ತಿಳಿಯುತ್ತಾಳೆ. ಕುಂತಿಯ ದುಃಖ. ಕರ್ಣನ ಹುಟ್ಟಿನ ಬಗ್ಗೆ ಹೇಳಲು ಅವಳಿಗೆ ಆಸೆ. ಕುಂತಿ ನದೀ ತಟಕ್ಕೆ ಹೋಗುತ್ತಾಳೆ.

೧೧೯. ಅ. ೧೪೫ – ಕುಂತಿ ಕರ್ಣನನ್ನು ಭೇಟಿ ಮಾಡಿ ಅವನ ಹುಟ್ಟಿನ ವಿವರವನ್ನು ತಿಳಿಸಿ ಪಾಂಡವರನ್ನು ಸೇರಿಕೊ ಎಂದು ಪ್ರಾರ್ಥಿಸುತ್ತಾಳೆ.

೧೨೦. ಅ. ೧೪೬ – ಕುಂತಿಯ ಸಲಹೆಯನ್ನು ಸೂರ್ಯ ಅನುಮೋದಿಸುತ್ತಾನೆ. ಕರ್ಣ ಅದನ್ನು ತಿರಸ್ಕರಿಸುತ್ತಾನೆ. ಅರ್ಜುನನನ್ನು ಬಿಟ್ಟು ಉಳಿದ ಎಲ್ಲ ಪಾಂಡವರನ್ನು ಉಳಿಸುವುದಾಗಿ ಮಾತು ಕೊಡುತ್ತಾನೆ.

೧೨೧. ಅ. ೧೪೭ – ಪಾಂಡವರಲ್ಲಿಗೆ ಕೃಷ್ಣ ಹೋಗುತ್ತಾನೆ. ಕೌರವ ಸಭೆಯಲ್ಲಿ ಏನು ನಡೆಯಿತೆಂದು ಯುಧಿಷ್ಠಿರ ಕೇಳುತ್ತಾನೆ.

೧೨೨. ಅ. ೧೪೭, ೧೪೮, ೧೪೯, ೧೫೦ – ಕೃಷ್ಣ ಇಡಿ ಕತೆಯನ್ನು ಮತ್ತೆ ಹೇಳುತ್ತಾನೆ.

೧೨೩. ಅ. ೧೫೧ – ಪಾಂಡವರ ಸೈನ್ಯಕ್ಕೆ ಸೇನಾಪತಿಯ ನೇಮಕ. ಕುರುಕ್ಷೇತ್ರದಲ್ಲಿ ಪಾಂಡವ ಸೇನೆಯ ಪ್ರವೇಶ.

೧೨೪. ಅ. ೧೫೨ – ಸೇನೆಗೆ ಪಾಂಡವರು ಮಾಡಿದ ವ್ಯವಸ್ಥೆ ವಿವರಣೆ.

೧೨೫. ಅ. ೧೫೩ – ಕೌರವ ಸೇನೆಯ ವ್ಯವಸ್ಥೆ. ನಾಳೆ ಬೆಳಗ್ಗೆ ಬೇಗ ನಮ್ಮ ಸೈನ್ಯ ಕುರುಕ್ಷೇತ್ರ ಪ್ರವೇಶಿಸಬೇಕು.

೧೨೬. ಅ. ೧೫೪ – ಯುದ್ಧಕ್ಕೆ ಹೋಗುವುದರಿಂದ ನೈತಿಕ ಪತನವಾಗುತ್ತದೆಂದು ಧರ್ಮರಾಯನ ಭೀತಿ. ಅವನಿಗೆ ಕೃಷ್ಣನ ಸಮಾಧಾನ. ನೀನು ಯುದ್ಧ ಮಾಡಲೇಬೇಕೆಂದು ಅರ್ಜುನ ಹೇಳುತ್ತಾನೆ.

೧೨೭. ಅ. ೧೫೫ – ದುರ್ಯೋಧನ ಸೇನೆಯ ವರ್ಣನೆ.

೧೨೮. ಅ. ೧೫೬ – ಕೌರವ ಸೇನೆಗೆ ಭೀಷ್ಮನನ್ನು ಸೇನಾಪತಿ ಮಾಡಿದ್ದು. ಕರ್ಣನಿಗೆ ಅಸಂತೋಷ. ಭೀಷ್ಮ ಸಾಯುವವರೆಗೆ ತಾನು ಶಸ್ತ್ರ ಹಿಡಿಯುವುದಿಲ್ಲವೆಂದು ಕರ್ಣನ ನಿರ್ಧಾರ. ಕುರುಕ್ಷೇತ್ರಕ್ಕೆ ಕೌರವ ಸೇನೆಯ ಪ್ರವೇಶ.

೧೨೯. ಅ. ೧೫೭ – ಪಾಂಡವರ ಸೈನ್ಯಕ್ಕೆ ಕೃಷ್ಣ ಸೈನ್ಯಾಧಿಪತಿ ಆದುದು.

೧೩೦. ಕೌರವರ ನಾಶ ತನಗಿಷ್ಟವಿಲ್ಲವೆಂದು ಬಲರಾಮ ತೀರ್ಥಯಾತ್ರೆಗೆ ಹೋಗುತ್ತಾನೆ.

೧೩೧. ಅ. ೧೫೮ – ಅರ್ಜುನನಿಂದಾಗಲೀ ದುರ್ಯೋಧನನಿಂದಾಗಲೀ ಸ್ವೀಕೃತನಾಗದ ರುಕ್ಮಿ ವಾಪಸ್ಸು ಹೋಗುತ್ತಾನೆ.

೧೩೨. ಅ. ೧೫೯ – ಸಂಜಯ ಧೃತರಾಷ್ಟ್ರರ ಸಂಭಾಷಣೆ. ಅವನು ಧೃತರಾಷ್ಟ್ರನನ್ನು ನಿಂದಿಸುತ್ತಾನೆ.

೧೩೩. ಅ. ೧೬೦ – ಹಿರಣ್ಯವತೀ ನದಿಯ ದಡದ ಮೇಲೆ ಪಾಂಡವರ ಸೇನೆ. ಶಕ್ತಿಯಿದ್ದರೆ ಯುದ್ಧ ಮಾಡಿ ಎಂದು ಪಾಂಡವರು ಮತ್ತು ಕೃಷ್ಣನಿಗೆ ದುರ್ಯೋಧನ ರೇಗಿಸುವಂಥ ಸಂದೇಶ ಕಳಿಸುತ್ತಾನೆ.

೧೩೪. ಅ. ೧೬೧ – ಸಂದೇಶ ತೆಗೆದುಕೊಂಡು ಉಲೂಕಾ ಹೋಗುತ್ತಾನೆ.

೧೩೫. ಅ. ೧೬೨ – ಕೋಪಿಷ್ಟರಾದ ಪಾಂಡವರು ಕೋಪೋದ್ರಿಕ್ತ ಸಂದೇಶಗಳನ್ನು ಕಳಿಸುತ್ತಾರೆ. ನಾಳೆ ಯುದ್ಧ ಪ್ರಾರಂಭವಾಗುತ್ತದೆಂದು ಅವರು ಆಜ್ಞೆ ಕೊಡುತ್ತಾರೆ.

* * * *

## ಅಧ್ಯಾಯ ೧೫

# ಬ್ರಾಹ್ಮಣರು ಮತ್ತು ಕ್ಷತ್ರಿಯರು

*ಈ ಹಸ್ತಪ್ರತಿ ಬೆರಳಚ್ಚು ಮಾಡಿದ ಉದ್ದನೆಯ ೪೩ ಪುಟಗಳನ್ನು ಒಳಗೊಂಡಿದೆ. ಎಲ್ಲಾ ಬಿಡಿ ಪುಟಗಳನ್ನೂ ದಾರದಿಂದ ಕಟ್ಟಿದೆ. 'ಬ್ರಾಹ್ಮಣರು ಮತ್ತು ಕ್ಷತ್ರಿಯರು ಮತ್ತು ಪ್ರತಿಕ್ರಾಂತಿ' ಎಂಬ ಮೂಲ ಶೀರ್ಷಿಕೆಯನ್ನು ಡಾ. ಅಂಬೇಡ್ಕರ್ ಸ್ವಹಸ್ತಾಕ್ಷರದಿಂದ 'ಬ್ರಾಹ್ಮಣ ಕ್ಷತ್ರಿಯರ ಪರಸ್ಪರ ವೈರ' ಎಂದು ಶೀರ್ಷಿಕೆಯ ಪುಟದಲ್ಲಿ ಬದಲಾವಣೆ ಮಾಡಿದ್ದಾರೆ. ಈ ಪ್ರಬಂಧ ಪೂರ್ಣವಾಗಿರುವಂತೆ ಕಂಡುಬರುತ್ತದೆ.*

– ಸಂಪಾದಕರು

ಹಿಂದೂಗಳ ಧಾರ್ಮಿಕ ಸಾಹಿತ್ಯ ಬ್ರಾಹ್ಮಣ ಕ್ಷತ್ರಿಯರ ಸಂಘರ್ಷಗಳ ಅನೇಕ ಸಂಗತಿಗಳನ್ನೂ ಅವರಿಬ್ಬರಿಗೂ ನಡೆದ ರಕ್ತಪಾತದ ಯುದ್ಧಗಳನ್ನೂ ಒಳಗೊಂಡಿದೆ.

ಮಹಾರಾಜ ವೇಣನಿಗೆ ಸಂಬಂಧಿಸಿದ ಸಂಗತಿಯೇ ಮೊಟ್ಟ ಮೊದಲ ದಾಖಲೆ. ವೇಣ ಕ್ಷತ್ರಿಯ ಮಹಾರಾಜ. ಬ್ರಾಹ್ಮಣರ ಜೊತೆ ಅವನು ನಡೆಸಿದ ಸಂಘರ್ಷ ಅನೇಕ ಆಧಾರಭೂತ ಗ್ರಂಥಗಳಲ್ಲಿ ಉಲ್ಲೇಖಿತವಾಗಿದೆ. ಮುಂದಿನ ವಿವರಣೆಯನ್ನು ಹರಿವಂಶದಿಂದ ಎತ್ತಿಕೊಳ್ಳಲಾಗಿದೆ.

> "[೧]ಪ್ರಾರಂಭದಲ್ಲಿ ಪ್ರಜಾಪತಿ ಇದ್ದನು. ಅವನು ಧರ್ಮರಕ್ಷಕನಾಗಿದ್ದನು. ಅತ್ರೇಯಿ ವಂಶಕ್ಕೆ ಸೇರಿದ ಅವನ ಹೆಸರು ಅಂಗ. ಅಧಿಕಾರದಲ್ಲಿ ಅವನನ್ನು ಹೋಲುತ್ತಿದ್ದನು. ಅವನ ಮಗನೇ ಪ್ರಜಾಪತಿ ವೇಣ, ಇವನು ಕರ್ತವ್ಯ ಮುಖನಾಗಿದ್ದನು. ಮೃತ್ಯುವಿನ ಮಗಳಾದ ಸುನೀತಳ ಮಗ. ಮೃತ್ಯುವಿನ ಮಗಳ ಮಗನಾದ ಇವನು ತಾಯಿಯ ಕಡೆಯ ಅಜ್ಜನಿಂದ ಬಂದ ಕಳಂಕದಿಂದಾಗಿ ತನ್ನ ಕರ್ತವ್ಯಗಳನ್ನು ಮರೆತು ಕಾಮವಶನಾಗಿ ಲೋಭ ಜೀವನವನ್ನು ನಡೆಸುತ್ತಿದ್ದನು. ಈ ರಾಜನು ನಾಸ್ತಿಕ ಮತಾಚರಣೆಯನ್ನು ಸ್ಥಾಪಿಸಿದನು. ವೇದ ಪ್ರಮಾಣಗಳನ್ನು ಉಲ್ಲಂಘಿಸಿ ಅರಾಜಕತೆಯಲ್ಲಿ ತೊಡಗಿದ್ದನು. ಅವನ ಆಡಳಿತದಲ್ಲಿ ಜನರು ವೇದಾಧ್ಯಯನ ಮಾಡದೆ ವಶಟ್ಕಾರ ಮಾಡದೆ, ಯಜ್ಞಯಾಗಗಳಲ್ಲಿ ದೇವತೆಗಳಿಗೆ ಸೋಮರಸ ಅರ್ಪಿಸದೆ ಬದುಕುತ್ತಿದ್ದರು."

ಅವನ ವಿನಾಶಕಾಲ ಸಮೀಪಿಸಿದಾಗ ಪ್ರಜಾಪತಿಯು ಯಜ್ಞವಾಗಲೀ ಅಥವಾ ಹವಿಸ್ಸಿನ ನೈವೇದ್ಯವಾಗಲೀ ಕೂಡದು ಎಂದು ಕ್ರೂರವಾಗಿ ಕಟ್ಟಪ್ಪಣೆ ಮಾಡಿದನು. "ನಾನೇ ದೇವರು, ನಾನೇ ಯಜ್ಞೋಪಾಸಕ, ನಾನೇ

---

೧. ಮ್ಯೂರ್: ಸಂ. I, ಪು. ೩೦೨–೩೦೩.

ಯಜ್ಞ, ಯಜ್ಞ ಮಾಡಬೇಕಾದ್ದು ನನಗಾಗಿ. ನೈವೇದ್ಯ ಅರ್ಪಿಸಬೇಕಾದ್ದು ನನಗಾಗಿ" ಎಂದು ಘೋಷಿಸಿದನು. ಧರ್ಮವಿಮುಖನಾದ, ತನಗೆ ಸಲ್ಲದ್ದನ್ನು ಗರ್ವಾಂಧನಾಗಿ ಪಡೆದುಕೊಳ್ಳಲು ಹೊರಟ ಇವನಿಗೆ ಮಾರೀಚನ ನೇತೃತ್ವದಲ್ಲಿ ಮಹರ್ಷಿಗಳೆಲ್ಲರೂ ಈ ರೀತಿ ಹೇಳಿದರು: "ಅನೇಕ ವರ್ಷಗಳ ಕಾಲ ನಡೆಯುವ ಒಂದು ಯಜ್ಞವನ್ನು ನಾವೆಲ್ಲರೂ ಮಾಡಲು ಹೊರಟಿದ್ದೇವೆ. ಓ, ವೇಣ, ಅಧರ್ಮವನ್ನು ಆಚರಿಸಬೇಡ. ಇದು ಧರ್ಮದ ರೀತಿಯಲ್ಲ. ನೀನು ಎಲ್ಲ ಕಾರ್ಯದಲ್ಲಿಯೂ ಅತ್ರಿ ವಂಶಕ್ಕೆ ಸೇರಿದ ಪ್ರಜಾಪತಿಯೇ ಆಗಿದ್ದೀಯೆ. ನೀನು ನಿನ್ನ ಪ್ರಜೆಗಳನ್ನು ಪಾಲಿಸಲು ನಿರತನಾಗಿರುವೆ." ಈ ರೀತಿ ತನ್ನನ್ನು ಸಂಬೋಧಿಸಿದ ಮಹರ್ಷಿಗಳಿಗೆ ಯಾವುದು ಧರ್ಮವೆಂದು ತಿಳಿಯದೆ ಮೂರ್ಖನಾದ ವೇಣ ಗಹಗಹಿಸಿ ನಗುತ್ತಾ ಉತ್ತರಿಸಿದನು. "ನನ್ನನ್ನು ಬಿಟ್ಟರೆ ಧರ್ಮವನ್ನು ವಿಧಿಸುವವರು ಯಾರು? ಅಥವಾ ನಾನು ಯಾರಿಗೆ ವಿಧೇಯನಾಗಿರಬೇಕು? ಪವಿತ್ರಜ್ಞಾನದಲ್ಲಿ, ದಿವ್ಯಕಾರ್ಯದಲ್ಲಿ, ವ್ರತಿನಿಷ್ಠೆಯಲ್ಲಿ, ಸತ್ಯದಲ್ಲಿ ಈ ಭೂಮಿಯ ಮೇಲೆ ನನ್ನ ಸಮಾನ ಯಾರಿದ್ದಾರೆ? ಸರ್ವಜೀವಿಗಳ, ಧರ್ಮದ ಮೂಲ ನಾನೇ ಎಂದು ಮತಿಭ್ರಾಂತರಾದ, ತಿಳಿಗೇಡಿಗಳಾದ ನಿಮಗೆ ಗೊತ್ತಿಲ್ಲ. ನಾನು ಮನಸ್ಸು ಮಾಡಿದರೆ ಭೂಮಿಯನ್ನು ಅಡಿಮೇಲು ಮಾಡಬಲ್ಲೆ ಅಥವಾ ಅದನ್ನು ಜಲಪ್ರಳಯದಲ್ಲಿ ಮುಳುಗಿಸಬಲ್ಲೆ ಅಥವಾ ಸ್ವರ್ಗ ಭೂಮಿಗಳನ್ನು ಇಲ್ಲದಂತೆ ಮಾಡುತ್ತೇನೆ." ಮತಿಭ್ರಾಂತನು ಗರ್ವಾಂಧನೂ ಆದ ವೇಣನನ್ನು ಅಂಕೆಯಲ್ಲಿಡುವುದು ಅಸಾಧ್ಯವಾದಾಗ, ಮಹರ್ಷಿಗಳು ಕೋಪೋದ್ರಿಕ್ತರಾಗಿ ಬಲಿಷ್ಠ ರಾಜನನ್ನು ಹಿಡಿದು ಅವನ ಎಡತೊಡೆಯನ್ನು ಉಜ್ಜಿದರು. ಹೀಗೆ ಉಜ್ಜಿದಾಗ ಈ ತೊಡೆಯಿಂದ ತೀರ ಕುಳ್ಳಾದ ಒಬ್ಬ ಕರಿಯ ಪುರುಷ ಉದ್ಭವಿಸಿದನು. ಭಯಭೀತನಾದ ಅವನು ಕೈ ಜೋಡಿಸಿ ನಿಂತನು. ಅವನು ಗಾಬರಿಯಾಗಿರುವುದನ್ನು ಕಂಡು ಅತ್ರಿ ಅವನಿಗೆ 'ನಿಷೀದ' (ಕುಳಿತುಕೊ) ಎಂದನು. ಇವನೇ ನಿಷಾದ ಸಂತತಿಯ ಮೂಲ ಪುರುಷ ಹಾಗೂ ವೇಣನ ಭ್ರಷ್ಟತೆಯಿಂದ ಹುಟ್ಟಿದ ದೀವರ (ಬೆಸ್ತರು) ಜನಕನೂ ಆಗಿದ್ದಾನೆ.

ಎರಡನೆಯ ಘಟನೆ ಪುರೂರವನಿಗೆ ಸಂಬಂಧಿಸಿದೆ. ಪುರೂರವ ಮತ್ತೊಬ್ಬ ಕ್ಷತ್ರಿಯ ರಾಜ. ಇಳೆಯ ಮಗ. ಮನು ವೈವಸ್ವತನ ಮೊಮ್ಮಗ. ಅವನು ಬ್ರಾಹ್ಮಣರ ಜೊತೆ ಸಂಘರ್ಷಕ್ಕಿಳಿದ. ಅವರ ವರ್ಣನೆ ಮಹಾಭಾರತದ ಆದಿ ಪರ್ವದಲ್ಲಿ ಈ ರೀತಿಯಲ್ಲಿದೆ:

> "[೧]ತರುವಾಯ ಇಳೆಯಿಂದ ಜ್ಞಾನಿ ಪುರೂರವ ಜನಿಸಿದನು. ಆಕೆಯೇ ಅವನಿಗೆ ತಂದೆಯೂ ತಾಯಿಯೂ ಆಗಿದ್ದಳೆಂದು ಪ್ರತೀತಿ. ಸಾಗರದ ಹದಿಮೂರು ದ್ವೀಪಗಳನ್ನು ಆಳುತ್ತಾ, ಮಹಾಪ್ರಖ್ಯಾತನಾದ ಪುರೂರವನು ಅತಿಮಾನುಷ ವ್ಯಕ್ತಿಗಳಿಂದ ಸುತ್ತುವರಿಯಲ್ಪಟ್ಟು ತನ್ನ ಪರಾಕ್ರಮದಿಂದ ಪ್ರಮತ್ತನಾಗಿ ಬ್ರಾಹ್ಮಣರ ಜೊತೆ ಸಂಘರ್ಷದಲ್ಲಿ ಸಿಲುಕಿ, ಅವರ ಧನಕನಕ ವಜ್ರವೈಢೂರ್ಯಗಳನ್ನೆಲ್ಲಾ ಅವರು ಬಾಯಿ ಬಡಿದುಕೊಂಡರೂ ಬಿಡದೆ, ಕಿತ್ತುಕೊಂಡನು. ಬ್ರಹ್ಮನ ಸ್ವರ್ಗದಿಂದ ಬಂದ ಸನತ್‌ಕುಮಾರ ಅವನಿಗೆ ಎಚ್ಚರಿಕೆಯ ಮಾತುಗಳನ್ನಾಡಿದರು ಅವನು ಕೇಳಲಿಲ್ಲ. ಆಗ ಕೋಪೋದ್ರಿಕ್ತರಾದ ಋಷಿಗಳು ಅವನಿಗೆ ಹಿಂದು ಮುಂದು ನೋಡದೆ ಶಾಪವಿತ್ತಾಗ ಅವನು ನಾಶವಾದನು. ಈ ಲೋಭಿಯಾದ ರಾಜನು ಅಧಿಕಾರದಿಂದ ಮತ್ತನಾಗಿ ತನ್ನ ವಿವೇಕವನ್ನು ಕಳೆದುಕೊಂಡಿದ್ದನು."

ಮೂರನೆಯ ಹಾಗೂ ಇವಕ್ಕಿಂತ ಹೆಚ್ಚು ಗಂಭೀರವಾದ ಸಂಘರ್ಷ ಮಹಾರಾಜ ನಹುಷನಿಗೂ ಬ್ರಾಹ್ಮಣನಿಗೂ ನಡೆದಿದೆ. ನಹುಷ ಪುರೂರವನ ಮೊಮ್ಮಗ. ಈ ಕಥೆಯನ್ನು ಮಹಾಭಾರತದಲ್ಲಿ ಎರಡು

---

೧. ಮ್ಯೂರ್ : ಸ. I, ಪು. ೩೦೭.

ಕಡೆ ಒಮ್ಮೆ ವನ ಪರ್ವದಲ್ಲಿ ಇನ್ನೊಮ್ಮೆ ಉದ್ಯೋಗ ಪರ್ವದಲ್ಲಿ ಹೇಳಲಾಗಿದೆ. ಮಹಾಭಾರತದ ಉದ್ಯೋಗ ಪರ್ವದಿಂದ ತೆಗೆದುಕೊಂಡಿರುವ ಕತೆ ಈ ರೀತಿ ಇದೆ:

"[೧]ವೃತ್ರಾಸುರನನ್ನು ಕೊಂದ ಮೇಲೆ ಬ್ರಹ್ಮಹತ್ಯೆ ಮಾಡಿದೆನೆಂದು (ವೃತ್ರನನ್ನು ಬ್ರಾಹ್ಮಣನೆಂದು ಹೇಳುತ್ತಾರೆ) ಇಂದ್ರನು ಹೆದರಿಬಿಟ್ಟು ಸಮುದ್ರದಲ್ಲಿ ಅವಿತುಕೊಂಡಿದ್ದನು. ದೇವರಾಜನು ಕಣ್ಮರೆಯಾಗಿದ್ದರಿಂದ ಸ್ವರ್ಗಭೂಮಿಗಳ ಎಲ್ಲ ವ್ಯವಹಾರಗಳೂ ಅಸ್ತವ್ಯಸ್ತವಾದವು. ಆಗ ಋಷಿಗಳೂ ದೇವತೆಗಳೂ ನಹುಷನನ್ನು ತಮ್ಮ ರಾಜನಾಗಿರಬೇಕೆಂದು ಕೇಳಿಕೊಂಡರು. ಮೊದಮೊದಲು ತನಗೆ ಶಕ್ತಿಯಿಲ್ಲವೆಂದು ಹೇಳಿ, ಕೊನೆಗೆ ಅವರ ಒತ್ತಾಯ ಜಾಸ್ತಿಯಾದುದರಿಂದ, ಈ ಉನ್ನತಾಧಿಕಾರವನ್ನು ನಹುಷ ಒಪ್ಪಿಕೊಂಡನು. ಆ ಉನ್ನತಾಧಿಕಾರಕ್ಕೆ ಬರುವವರೆಗೆ ಅವನು ಧರ್ಮವಂತನಾಗಿದ್ದನು. ಆದರೆ ಈಗ ಭೋಗಾಸಕ್ತನಾದನು. ಇಂದ್ರನ ಪತ್ನಿಯಾದ ಇಂದ್ರಾಣಿ ಕಣ್ಣಿಗೆ ಬಿದ್ದುದರಿಂದ ಅವಳನ್ನು ಪಡೆಯಬೇಕೆಂದು ಆಸೆಪಟ್ಟನು. ದೇವಗುರುವಾದ ಅಂಗೀರಸ ಬೃಹಸ್ಪತಿಗೆ ಅವಳು ಮೊರೆಹೋದಳು. ಅವನು ಅವಳನ್ನು ರಕ್ಷಿಸಿದನು. ಇದನ್ನು ಕೇಳಿ ನಹುಷನಿಗೆ ಭಾರಿ ಸಿಟ್ಟು ಬಂತು. ಆದರೆ ದೇವತೆಗಳು ಅವನನ್ನು ಸಮಾಧಾನ ಪಡಿಸಲೆತ್ನಿಸಿದರು. ಇನ್ನೊಬ್ಬನ ಹೆಂಡತಿಯ ಜೊತೆ ಭೋಗ ನಿಷಿದ್ಧ ಮತ್ತು ಅನೈತಿಕ ಎಂದು ಹೇಳಿದರು. ಆದರೂ ನಹುಷ ಅವರ ಮಾತು ಕೇಳುವಂತಿರಲಿಲ್ಲ. ವ್ಯಭಿಚಾರದ ವಿಷಯಗಳಲ್ಲಿ ತಾನು ಇಂದ್ರನನ್ನು ಕೆಟ್ಟವನಲ್ಲ ಎಂದು ಹೇಳಿದನು."

"ಗಂಡ ಬದುಕಿದ್ದಾಗಲೇ ಋಷಿ ಪತ್ನಿಯಾದ ಸುಪ್ರಸಿದ್ಧಳಾದ ಅಹಲ್ಯೆಯನ್ನು ಹಿಂದೆ ಇಂದ್ರ ಭ್ರಷ್ಟಗೊಳಿಸಿದ. ಅವನನ್ನು ನೀವೇಕೆ ತಡೆಯಲಿಲ್ಲ? ಅನೇಕ ಬರ್ಬರ ಕೃತ್ಯಗಳು, ಅಧರ್ಮ ಕೆಲಸಗಳು, ವಂಚನೆಗಳನ್ನು ಹಿಂದೆ ಇಂದ್ರ ಎಸಗಿದನು. ಅವನನ್ನು ನೀವೇಕೆ ತಡೆಯಲಿಲ್ಲ?" ಆಗ ನಹುಷನ ಒತ್ತಾಯಕ್ಕಾಗಿ ದೇವತೆಗಳು ಇಂದ್ರಾಣಿಯನ್ನು ಕರೆತರಲು ಹೋದರು. ಆದರೆ ಬೃಹಸ್ಪತಿ ಅವಳನ್ನು ಕಳುಹಿಸಿಕೊಡಲು ಸಿದ್ಧನಿರಲಿಲ್ಲ. ಅವನ ಸೂಚನೆಯಂತೆ ತನ್ನ ಗಂಡನಿಗೆ ಏನಾಗಿದೆಯೆಂದು ತಿಳಿದುಕೊಳ್ಳುವ ತನಕ ಅವಳು ನಹುಷನಿಂದ ಸಮಯವನ್ನು ಬೇಡಿದಳು. ಈ ಬೇಡಿಕೆಗೆ ಅಸ್ತು ಎಂದನು. ಆಗ ಇಂದ್ರಾಣಿ ತನ್ನ ಪತಿಯನ್ನು ಹುಡುಕಿಕೊಂಡು ಹೊರಟಳು. ಉಪಶೃತಿಯ (ಈಕೆ ನಿಶಾದೇವಿ ಮತ್ತು ರಹಸ್ಯ ಪ್ರಕಾಶಿಣಿ) ನೆರವಿನಿಂದ ಹಿಮಗಿರಿಯ ಉತ್ತರದಲ್ಲಿದ್ದ ಸರೋವರದಲ್ಲಿ ಬೆಳೆದಿದ್ದ ಕಮಲ ದಂಟಿನಲ್ಲಿ ಸೂಕ್ಷ್ಮರೂಪದಲ್ಲಿದ್ದ ಅವನನ್ನು ಪತ್ತೆ ಹಚ್ಚಿದಳು. ನಹುಷನ ದುಷ್ಟ ಆಲೋಚನೆಗಳನ್ನು ಅವನಿಗೆ ತಿಳಿಯಪಡಿಸಿ ನಿನ್ನ ಅಧಿಕಾರವನ್ನು ಚಲಾಯಿಸಬೇಕೆಂದೂ, ಅಪಾಯದಿಂದ ತನ್ನನ್ನು ರಕ್ಷಿಸಬೇಕೆಂದೂ ಹಾಗೂ ನಿನ್ನ ರಾಜ್ಯವನ್ನು ಮರಳಿ ಪಡೆಯಬೇಕೆಂದೂ ಅವಳು ಬೇಡಿಕೊಂಡಳು. ನಹುಷನಿಗೆ ಉನ್ನತವಾದ ಶಕ್ತಿಯಿದೆ ಎಂಬ ನೆಪದ ಮೇಲೆ ತಕ್ಷಣ ತಾನು ಇದರಲ್ಲಿ ಕೈಹಾಕಲಾರೆ ಎಂದು ಅವಳ ಬೇಡಿಕೆಯನ್ನು ಕಡೆಗಣಿಸಿದ. ಆದರೆ ನಹುಷನು ಇಂದ್ರ ಪದವಿಯಿಂದ ತಾನೇ ಉರುಳಿಬೀಳುವಂತೆ ತಂತ್ರ ಹೂಡಬೇಕೆಂದು ಅವನ ಹೆಂಡತಿಗೆ ಸೂಚಿಸಿದನು. "ನೀನು ಕುಳಿತ ದೇವರಥವನ್ನು ಋಷಿಗಳಿಂದ ಹೊರಿಸಿಕೊಂಡು ನನ್ನ ಬಳಿ ಬಂದರೆ ಸಂತೋಷದಿಂದ

೧. ಮ್ಯೂರ್: ಸಂ. I, ಪು. ೩೧೦–೩೧೩.

ನನ್ನನ್ನು ನಿನಗೆ ಅರ್ಪಿಸಿಕೊಳ್ಳುತ್ತೇನೆ" ಎಂದು ಅವಳು ನಹುಷನಿಗೆ ಹೇಳುವಂತೆ ಸಲಹೆ ಕೊಟ್ಟನು.

"ದೇವರಾಜನೇ, ಇದುವರೆಗೆ ವಿಷ್ಣುವಾಗಲೀ, ರುದ್ರನಾಗಲೀ, ಅಸುರರಾಗಲೀ ಅಥವಾ ರಾಕ್ಷಸರಾಗಲೀ ಉಪಯೋಗಿಸಿರದಂತಹ ರಥವನ್ನು ನೀನು ಪಡೆಯಬೇಕೆಂದು ನನ್ನ ಆಸೆ. ಎಲ್ಲ ಮಹರ್ಷಿಗಳೂ ಸೇರಿ, ಪ್ರಭುವೇ, ನಿನ್ನನ್ನು ಪಲ್ಲಕ್ಕಿಯಲ್ಲಿ ಹೊತ್ತು ತರಲಿ. ಈ ಭಾವನೆ ನನಗೆ ತುಂಬ ಪ್ರಿಯವಾದುದು." ಗರ್ವಿಷ್ಠನಾದ ನಹುಷ ಈ ಮನವಿಯನ್ನು ಹೆಮ್ಮೆಯಿಂದ ಸ್ವೀಕರಿಸುತ್ತಾನೆ. ಆತ್ಮ ಸಂತುಷ್ಟನಾಗಿ ಈ ರೀತಿ ಉತ್ತರಿಸುತ್ತಾನೆ: "ಮುನಿಗಳು ತನ್ನನ್ನು ಹೊತ್ತು ತರುವಂತೆ ಮಾಡುವವನು ಸಾಮಾನ್ಯ ಪರಾಕ್ರಮಿಯಲ್ಲ. ತ್ರಿಕಾಲಜ್ಞಾನಿಯಾದ ಪರಮಾತ್ಮನ ಮಹಾಭಕ್ತ ನಾನು. ನಾನು ಸಿಟ್ಟಾದರೆ ಲೋಕ ನಿಲ್ಲುವುದಿಲ್ಲ. ಎಲ್ಲವೂ ನನ್ನನ್ನೇ ಅವಲಂಬಿಸಿದೆ..... ಆದ್ದರಿಂದ, ಎಲೈ ದೇವಿಯೇ, ನಿನ್ನ ಅಭಿಲಾಷೆಯನ್ನು ಈಡೇರಿಸುತ್ತೇನೆ. ಸಪ್ತರ್ಷಿಗಳು ಮತ್ತು ಎಲ್ಲ ಬ್ರಹ್ಮರ್ಷಿಗಲು ನನ್ನನ್ನು ಹೊತ್ತು ತರುವಂತೆ ಮಾಡುತ್ತೇನೆ. ಸುರಸುಂದರ ದೇವಿಯೇ, ನನ್ನ ವೈಭವವನ್ನೂ ನನ್ನ ಸಂಪತ್ತನ್ನೂ ನೋಡು." ಕತೆ ಮುಂದುವರೆಯುತ್ತದೆ: "ಅದರಂತೆ ದುಷ್ಟನೂ, ಅಧರ್ಮಿಯೂ, ಉಗ್ರನೂ, ಗರ್ವೋನ್ಮತ್ತನೂ, ನಿರಂಕುಶನೂ ಆದ ಈ ವ್ಯಕ್ತಿ ತನ್ನ ಆಜ್ಞಾಪಾಲಕರಾದ ಋಷಿಗಳನ್ನು ರಥಕ್ಕೆ ಕಟ್ಟಿ ತನ್ನನ್ನು ಹೊತ್ತೊಯ್ಯುವಂತೆ ಬಲವಂತಪಡಿಸಿದನು." ಆಗ ಇಂದ್ರಾಣಿ ಮತ್ತೆ ಬೃಹಸ್ಮತಿಯ ನೆರವು ಬಯಸುತ್ತಾಳೆ. ನಹುಷನ ಸೊಕ್ಕಿಗೆ ತಕ್ಕ ಶಾಸ್ತಿಯಾಗುತ್ತದೆಂದು ಅವಳಿಗೆ ಭರವಸೆಯಿತ್ತು. ಆ ದಮನಕಾರಿಯ ಸರ್ವನಾಶಕ್ಕಾಗಿ ಮತ್ತು ಇಂದ್ರ ಬಚ್ಚಿಟ್ಟುಕೊಂಡಿರುವ ಸ್ಥಳವನ್ನು ಪತ್ತೆ ಹಚ್ಚಲು ಯಾಗ ಮಾಡುತ್ತೇನೆಂದು ಆಶ್ವಾಸನೆ ಇತ್ತನು. ಇಂದ್ರನನ್ನು ಪತ್ತೆ ಮಾಡಿ ಬೃಹಸ್ಪತಿಯ ಬಳಿಗೆ ಕರೆತರಲು ಅಗ್ನಿಯನ್ನು ಆಗ ಕಳುಹಿಸುತ್ತಾರೆ. ಇಂದ್ರನಿಲ್ಲದಿದ್ದಾಗ ನಡೆದದ್ದೆಲ್ಲವನ್ನೂ ಬೃಹಸ್ಪತಿ ಇಂದ್ರನಿಗೆ ತಿಳಿಸುತ್ತಾನೆ. ಕುಬೇರ, ಯಮ, ಸೋಮ ಮತ್ತು ವರುಣರ ಜೊತೆ ಸೇರಿಕೊಂಡು ನಹುಷನ ನಾಶದ ಬಗ್ಗೆ ಇಂದ್ರ ಯೋಚಿಸುತ್ತಿದ್ದಾಗ ಮಹರ್ಷಿ ಅಗಸ್ತ್ಯ ಬಂದು ಇಂದ್ರನಿಗೆ ನಿನ್ನ ವೈರಿ ಹತನಾದ ಎಂದು ಹೇಳಿ ವಿವರಿಸುತ್ತಾನೆ:

"ದೇವರ್ಷಿಗಳೂ, ಬ್ರಹ್ಮರ್ಷಿಗಳೂ ಪಾಪಿ ನಹುಷನನ್ನು ಹೊತ್ತು ಸುಸ್ತಾದುದರಿಂದ ಆ ದಿವ್ಯ ಪುರುಷ ನಹುಷನನ್ನು ಸಮಸ್ಯೆಯನ್ನು ಪರಿಹರಿಸುವುದಕ್ಕಾಗಿ ಈ ರೀತಿ ಕೇಳಿದರು: "ಓ ವಾಸವ, ಮಹಾಂತ ದಿಗ್ವಿಜಯಿ, ಗೋಹತ್ಯಾ ಸಂದರ್ಭದಲ್ಲಿ ಪಠಿಸುವ ಬ್ರಾಹ್ಮಣಶಾಸ್ತ್ರಗಳು ಪ್ರಮಾಣಭೂತವೆಂದು ಪರಿಗಣಿಸುವೆಯೋ ಇಲ್ಲವೋ?" ವಿವೇಕಶೂನ್ಯನಾದ ನಹುಷ "ಇಲ್ಲ" ಎಂದು ಉತ್ತರಿಸುತ್ತಾನೆ. "ಅಧರ್ಮದಲ್ಲಿ ಮುಳುಗಿದ ನಿನಗೆ ಸದ್ಗತಿಯಿಲ್ಲ. ಮಹರ್ಷಿಪ್ರೋಕ್ತವಾದ ಈ ಶಾಸ್ತ್ರಗಳನ್ನು ಪ್ರಮಾಣಭೂತವೆಂದು ನಾವು ಗೌರವಿಸುತ್ತೇವೆ" ಎಂದು ಋಷಿಗಳು ಪ್ರತ್ಯುತ್ತರ ಕೊಟ್ಟರು. ಆಗ ಮುನಿಗಳ ಜೊತೆ ವಾದಿಸುತ್ತಾ ಈ ನಹುಷನು ಅಧರ್ಮದಿಂದ ಪ್ರಚೋದಿತನಾಗಿ ತನ್ನ ಪಾದದಿಂದ ನನ್ನ ಶಿರವನ್ನು ಮುಟ್ಟಿದನು ಎಂದು ಅಗಸ್ತ್ಯರು ಹೇಳಿದರು. ಇದರ ಪರಿಣಾಮವಾಗಿ ರಾಜನ ಕೀರ್ತಿ ನಾಶವಾಯಿತು. ಅವನ ಪುಣ್ಯ ಕ್ಷೀಣಿಸಿತು. ಅವನು ಭಯದಿಂದ ವಿಹ್ವಲನಾಗಿದ್ದಾಗ ನಾನು ಅವನಿಗೆ ಹೇಳಿದೆ : "ಎಲೈ, ಮೂರ್ಖನೇ, ಹಿಂದೆ ಮಹರ್ಷಿಗಳಿಂದ ರಚಿತವಾದ ಬ್ರಹ್ಮರ್ಷಿಗಳು ಬಳಸುತ್ತಿರುವ ಸದಾ

ಗೌರವಕ್ಕೆ ಪಾತ್ರರಾಗಿರುವ ಪವಿತ್ರ ಶಾಸ್ತ್ರಗಳನ್ನು ನೀನು ಖಂಡಿಸಿದ್ದರಿಂದ ಹಾಗೂ ನನ್ನ ತಲೆಯನ್ನು ನಿನ್ನ ಕಾಲಿನಿಂದ ಮುಟ್ಟಿದ್ದರಿಂದ ಬ್ರಹ್ಮ ಸಮಾನರಾದ ಋಷಿಗಳು ನಿನ್ನನ್ನು ಹೊರುವಂತೆ ಮಾಡಿದ್ದರಿಂದ ನೀನು ತೇಜೋಹೀನನಾಗು, ನಿನ್ನ ಪುಣ್ಯವೆಲ್ಲ ಹಾಳಾಗಲಿ. ಎಲೈ ಪಾಪಿಯೇ, ಪದಚ್ಯುತನಾಗಿ ಸ್ವರ್ಗದಿಂದ ಭೂಮಿಗೆ ಬಿದ್ದುಹೋಗು. ಹತ್ತು ಸಾವಿರ ವರ್ಷಗಳ ಕಾಲ ನೀನು ಘಟಸರ್ಪದಂತೆ ಹರಿದಾಡು. ಆ ಅವಧಿ ಮುಗಿದ ಮೇಲೆ 'ನೀನು ಮತ್ತೆ ಸ್ವರ್ಗಕ್ಕೆ ಏರುವೆ'. ಹೀಗೆ ಇಂದ್ರ ಪದವಿಯಿಂದ ಈ ಅಧಮನು ಕೆಳಗುರುಳಿದನು. ಎಲೈ ಇಂದ್ರ ಬ್ರಾಹ್ಮಣರ ವೈರಿ ನಿರ್ನಾಮವಾದುದರಿಂದ ಈಗ ನಾವು ಸಂತೋಷದಿಂದ ಬದುಕುತ್ತೇವೆ. ಮೂರು ಲೋಕಗಳ ಅಧಿಕಾರವನ್ನು ವಹಿಸಿಕೊ. ಅಲ್ಲಿನ ನಿವಾಸಿಗಳನ್ನು ರಕ್ಷಿಸು. ಓ ಇಂದ್ರನೇ, ನಿನ್ನ ಇಂದ್ರಿಯಗಳನ್ನು ನಿಗ್ರಹಿಸಿ, ಶತ್ರುಗಳನ್ನು ಹತಮಾಡು, ಮಹರ್ಷಿಗಳ ಸ್ತುತಿಗೆ ಪಾತ್ರನಾಗು."

ನಾಲ್ಕನೆಯ ಘಟನೆ ನಿಮಿ ರಾಜನದು. ನಿಮಿ ಇಕ್ಷ್ವಾಕುವಿನ ಪುತ್ರರಲ್ಲಿ ಒಬ್ಬ. ಬ್ರಾಹ್ಮಣರ ಜೊತೆ ಅವನ ಸಂಘರ್ಷದ ವಿವರಗಳನ್ನು ವಿಷ್ಣು ಪುರಾಣದಲ್ಲಿ ಹೀಗೆ ಹೇಳಲಾಗಿದೆ:

"[೧]ಒಂದು ಸಾವಿರ ವರ್ಷ ನಡೆಯಲಿದ್ದ ಯಾಗದಲ್ಲಿ ಪುರೋಹಿತರಾಗಬೇಕೆಂದು ಬ್ರಹ್ಮರ್ಷಿ ವಸಿಷ್ಠನನ್ನು ನಿಮಿ ಕೇಳಿಕೊಂಡನು. ಇಂದ್ರ ನಡೆಸುವ ಐನೂರು ವರ್ಷಗಳ ಯಜ್ಞದಲ್ಲಿ ತಾನು ಪಾಲುಗೊಳ್ಳಬೇಕೆಂದು ಮೊದಲೇ ವ್ಯವಸ್ಥೆಯಾಗಿರುವುದರಿಂದ ಆ ಅವಧಿ ಮುಗಿದ ನಂತರ ಬರುತ್ತೇನೆಂದು ವಸಿಷ್ಠ ಉತ್ತರಿಸಿದನು. ಮಹಾರಾಜ ಏನೂ ಮಾತಾಡಲಿಲ್ಲ, ಅದಕ್ಕೆ ಸಮ್ಮತಿಯಾಯಿತೆಂದು ವಸಿಷ್ಠ ಹೊರಟುಹೋದನು. ಆದರೆ ಅವನು ವಾಪಸ್ಸು ಬಂದಾಗ ವಸಿಷ್ಠನಿಗೆ ಸಮನಾದ ಬ್ರಹ್ಮರ್ಷಿ ಗೌತಮ ಮತ್ತು ಇತರರನ್ನು ನೇಮಿಸಿಕೊಂಡು ಯಾಗ ಮಾಡುತ್ತಿದ್ದುದನ್ನು ಕಂಡ ವಸಿಷ್ಠನು ಕ್ರೋಧೋನ್ಮತ್ತನಾಗಿ ತನ್ನನ್ನು ಕಡೆಗಣಿಸಿದ. ಆಗ ನಿದ್ರೆ ಮಾಡುತ್ತಿದ್ದ ಮಹಾರಾಜನಿಗೆ ಮಾನವ ಶರೀರವನ್ನು ಕಳೆದುಕೊಳ್ಳುವಂತೆ ಶಾಪವಿತ್ತನು. ನಿಮಿಯು ಎಚ್ಚತ್ತು ನಿದ್ದೆ ಮಾಡುತ್ತಿದ್ದ ತನಗೆ ಯಾವ ಮುನ್ಸೂಚನೆಯೂ ಇಲ್ಲದೆ ಶಾಪ ಕೊಟ್ಟಿದ್ದಕ್ಕಾಗಿ ಅವನೂ ಅಂಥದೇ ಶಾಪವನ್ನು ವಸಿಷ್ಠನಿಗೆ ಕೊಟ್ಟು ಮರಣ ಹೊಂದಿದನು. ನಿಮಿಯ ದೇಹವನ್ನು ಕೆಡದಂತೆ ಸುಗಂಧ ದ್ರವ್ಯಗಳಲ್ಲಿ ಸುರಕ್ಷಿತವಾಗಿ ಇಡಲಾಯಿತು. ಅವನು ಪ್ರಾರಂಭಿಸಿದ ಯಾಗ ಮುಗಿದಾಗ ಪುರೋಹಿತರ ಮಧ್ಯಸ್ಥಿಕೆಯಿಂದಾಗಿ ದೇವತೆಗಳು ಅವನಿಗೆ ಜೀವದಾನ ಮಾಡಲು ಇಚ್ಛಿಸಿದನು. ಆದರೆ ಅವನು ಅದಕ್ಕೆ ಒಪ್ಪಲಿಲ್ಲ. ಅವನ ಆಸೆಯಂತೆ ಎಲ್ಲ ಜೀವಿಗಳ ಕಣ್ಣುಗಳಲ್ಲಿಯೂ ಅವನನ್ನು ಇಡಲು ದೇವತೆಗಳು ಸಮ್ಮತಿಸಿದರು. ಈ ಕಾರಣದಿಂದಾಗಿ ಅವುಗಳೆಲ್ಲ ನಿಮಿಷರಾಗಿ ಅಂದರೆ ತಮ್ಮ ರೆಪ್ಪೆಗಳನ್ನು ಮುಚ್ಚಿ ತೆಗೆಯುವವರಾಗಿದ್ದಾರೆ."

ಐದನೆಯ ಪ್ರಸಂಗ ವಸಿಷ್ಠ ವಿಶ್ವಾಮಿತ್ರರ ಸಂಘರ್ಷಕ್ಕೆ ಸಂಬಂಧಿಸಿದೆ. ವಸಿಷ್ಠ ಬ್ರಾಹ್ಮಣ ಪುರೋಹಿತ. ವಿಶ್ವಾಮಿತ್ರ ಕ್ಷತ್ರಿಯ. ಬ್ರಾಹ್ಮಣನಾಗಬೇಕೆಂಬುದು ಅವನ ಮಹದಾಸೆ. ತಾನು ಬ್ರಾಹ್ಮಣ ಏಕೆ ಆಗಬೇಕೆಂದು ಅವನು ಆಸೆ ಪಟ್ಟದ್ದಕ್ಕೆ ರಾಮಾಯಣದ ಮುಂದಿನ ಉಪಾಖ್ಯಾನ ಕಾರಣಗಳನ್ನು ವಿವರಿಸುತ್ತದೆ:

---

೧. ಮ್ಯೂರ್: ಸಂ. I, ಪು. ೩೧೬

"[೧]ಹಿಂದೆ ಪ್ರಜಾಪತಿಯ ಮಗನಾದ ಕುಶನೆಂಬ ರಾಜನಿದ್ದನು. ಅವನ ಮಗನ ಹೆಸರು ಕುಶನಾಭ. ಅವನು ಗಾಧಿಯ ತಂದೆ. ಗಾಧಿ ವಿಶ್ವಾಮಿತ್ರನ ತಂದೆ. ವಿಶ್ವಾಮಿತ್ರ ಸಹಸ್ರಾರು ವರ್ಷಗಳ ಕಾಲ ಈ ಭೂಮಂಡಲವನ್ನು ಆಳುತ್ತಿದ್ದನು. ಒಮ್ಮೆ ಅವನು ಭೂಪರ್ಯಟನೆ ಮಾಡುತ್ತಿದ್ದಾಗ ವಸಿಷ್ಠನ ಆಶ್ರಮಕ್ಕೆ ಬಂದನು, ಅದು ಅನೇಕ ಸಂತರ, ಋಷಿಗಳ, ಭಗವದ್ಭಕ್ತರ, ಆನಂದಕರ ಆವಸಥವಾಗಿತ್ತು. ಮೊದಲು ಆತಿಥ್ಯವನ್ನು ಬೇಡವೆಂದವನು ಆಮೇಲೆ ತನಗೂ ತನ್ನ ಅನುಯಾಯಿಗಳಿಗೂ ಬ್ರಹ್ಮನ ಮಗ ಆದರೋಪಚಾರ ನೀಡಲು ಒಪ್ಪಿಗೆಯಿತ್ತನು. ಔತಣಕ್ಕೆ ಬೇಕಾದ ಎಲ್ಲ ತಿನಿಸುಗಳನ್ನೂ ಒದಗಿಸುತ್ತಿದ್ದ ನಂದಿನಿ ಧೇನು (ಶಬಲೆ)ವಿನ ಮೇಲೆ ವಿಶ್ವಾಮಿತ್ರ ಆಸೆಪಟ್ಟು ಒಂದು ಲಕ್ಷ ಹಸುಗಳಿಗೆ ವಿನಿಮಯವಾಗಿ ಅದನ್ನು ಕೇಳಿದನು. "ನಂದಿನಿಯು ರತ್ನ. ರತ್ನಗಳು ರಾಜನ ಆಸ್ತಿ. ಆದ್ದರಿಂದ ಈ ಧೇನುವಿನ ಮೇಲೆ ನನ್ನ ಹಕ್ಕಿದೆ" ಎಂದು ಹೇಳಿದನು. ಈ ವಿನಿಮಯವನ್ನು ತಿರಸ್ಕರಿಸಿದಾಗ ಇನ್ನೂ ಅಪಾರವಾದ ವಸ್ತುಗಳನ್ನು ಕೊಡುತ್ತೇನೆಂದು ರಾಜನು ಮುಂದೆ ಬಂದರೂ ಪ್ರಯೋಜನವಾಗಲಿಲ್ಲ. ಆಗ ಅವನು ಕೃತಘ್ನನಾಗಿ, ಕ್ರೂರನಾಗಿ, ಬಲವಂತದಿಂದ ಆ ಹಸುವನ್ನು ತೆಗೆದುಕೊಳ್ಳಲು ಹೊರಡುತ್ತಾನೆ. ಆದರೆ ವನ ಸೇವಕರಿಂದ ತಪ್ಪಿಸಿಕೊಂಡು ತನ್ನ ಯಜಮಾನನ ಬಳಿ ವಾಪಸ್ಸು ಬಂದು ನನ್ನನ್ನು ಕೈಬಿಡುತ್ತಿರುವೆಯಲ್ಲಾ ಎಂದು ಅದು ಹೇಳಿತು. "ನಾನು ನಿನ್ನನ್ನು ತ್ಯಜಿಸುತ್ತಿಲ್ಲ, ಆದರೆ ರಾಜ ನನಗಿಂತ ಬಲಶಾಲಿ" ಎಂದು ಪ್ರತ್ಯುತ್ತರ ಕೊಟ್ಟನು. 'ಜನರು ಕ್ಷತ್ರಿಯನ ಬಲವನ್ನು ಆರೋಪಿಸುವುದಿಲ್ಲ. ಬ್ರಾಹ್ಮಣರು ಹೆಚ್ಚು ಬಲಿಷ್ಠರು. ಬ್ರಾಹ್ಮಣರದು ದೈವೀಬಲ, ಕ್ಷತ್ರಿಯರ ಶಕ್ತಿಗಿಂತ ಶ್ರೇಷ್ಠವಾದುದು. ನಿನ್ನ ಶಕ್ತಿ ಅಪಾರವಾಗಿದೆ. ವಿಶ್ವಾಮಿತ್ರ ಮಹಾ ಬಲಿಷ್ಠನಾಗಿದ್ದರೂ ಅವನು ನಿನಗಿಂತ ಹೆಚ್ಚು ಬಲಶಾಲಿಯಲ್ಲ. ನಿನ್ನ ಶಕ್ತಿ ಅಜೇಯವಾದುದು. ನಿನ್ನ ಬ್ರಾಹ್ಮಣ ಶಕ್ತಿಯಿಂದ ಸಂಪಾದಿಸಿರುವುದರಿಂದ ನನಗೆ ಆದೇಶ ನೀಡು. ಈ ದುಷ್ಟ ರಾಜನ ಗರ್ವ, ಬಲ ಮತ್ತು ಪ್ರಯತ್ನಗಳನ್ನೆಲ್ಲಾ ನಾನು ನಿರ್ನಾಮ ಮಾಡುತ್ತೇನೆ' ಎಂದು ಹೇಳಿತು. ಅದಕ್ಕನುಸಾರವಾಗಿ ಅದು ತನ್ನ ಗುಟುರು ಹಾಕುವಿಕೆಯಿಂದ ನೂರು ಮಂದಿ ಪಪ್ಲವರನ್ನು ಸೃಷ್ಟಿಸಿತು. ಅವರು ವಿಶ್ವಾಮಿತ್ರನ ಪರಿವಾರವನ್ನೆಲ್ಲಾ ಧ್ವಂಸ ಮಾಡಿದರು. ಆಗ ವಿಶ್ವಾಮಿತ್ರ ಆ ಪಪ್ಲವರನ್ನು ಕೊಂದುಹಾಕಿದನು. ಅಪಾರ ಶಕ್ತಿ ಸಾಮರ್ಥ್ಯವುಳ್ಳ ಶಸ್ತ್ರಸಜ್ಜಿತರಾದ ಶಕರನ್ನು ಯವನರನ್ನೂ ಸೃಷ್ಟಿಸಿದಾಗ ಅವರು ರಾಜನ ಸೈನಿಕರನ್ನು ನುಂಗಿಹಾಕಿದರು. ಆದರೆ ಅವರೆಲ್ಲ ವಿಶ್ವಾಮಿತ್ರನಿಂದ ಹತರಾದರು. ಆಗ ಆ ಹಸು ತನ್ನ ಗುಟುರಿನಿಂದಲೂ ತನ್ನ ಶರೀರದ ಇತರ ಬೇರೆ ಬೇರೆ ಭಾಗಗಳಿಂದಲೂ ನಾನು ಬುಡಕಟ್ಟುಗಳ ಇತರ ಯೋಧರನ್ನು ಸೃಷ್ಟಿಸಿತು. ಅವರು ಮತ್ತೆ ವಿಶ್ವಾಮಿತ್ರನ ಸಮಸ್ತ ಸೈನ್ಯವನ್ನೂ, ಪದಾತಿಗಳನ್ನೂ, ಆನೆಗಳನ್ನೂ, ಕುದುರೆಗಳನ್ನೂ, ರಥಗಳನ್ನೂ ಸರ್ವಸ್ವವನ್ನೂ ಸಂಹರಿಸಿದರು. ಆಗ ನಾನಾ ಆಯುಧಪಾಣಿಗಳಾದ ಆ ಮಹಾರಾಜನ ನೂರು ಜನ ಪುತ್ರರು ರೊಚ್ಚಿನಿಂದ ವಸಿಷ್ಠನ ಮೇಲೆ ಧಾಳಿ ಮಾಡಿದರು. ಆದರೆ ಅವರೆಲ್ಲರೂ ಆ ಮಹರ್ಷಿಯ ಶಾಪದಿಂದ ಕ್ಷಣಮಾತ್ರದಲ್ಲಿ ಬೂದಿಯಾದರು. ಹೀಗೆ ವಿಶ್ವಾಮಿತ್ರನು ಸಂಪೂರ್ಣವಾಗಿ ಸೋತು ಸೊಕ್ಕುಮುರಿಯಲ್ಪಟ್ಟು ತನ್ನ ಮಗನನ್ನು ರಾಜನನ್ನಾಗಿ ನೇಮಿಸಿ

---

೧. ಮ್ಯೂರ್: ಸಂ. I, ಪು. ೩೯೭–೪೦೦

ಹಿಮಾಲಯಕ್ಕೆ ಪ್ರಯಾಣಿಸಿದರು. ಅಲ್ಲಿ ಅವನು ಉಗ್ರತಪಸ್ಸನ್ನು ಆಚರಿಸಿ ಮಹದೇವನ ದರ್ಶನವನ್ನು ಪಡೆದನು. ಅವನ ಅಭಿಲಾಷೆಯಂತೆ ಶಸ್ತ್ರವಿದ್ಯೆಯ ಎಲ್ಲ ಕಲೆಗಳನ್ನು ಅನುಗ್ರಹಿಸಿ, ದಿವ್ಯಾಸ್ತ್ರಗಳನ್ನು ದಯಪಾಲಿಸಿದನು. ಇದರಿಂದ ಅವನು ಉಬ್ಬಿಹೋಗಿ ವಸಿಷ್ಠನ ಆಶ್ರಮವನ್ನು ಭಸ್ಮಮಾಡಿದಾಗ ಅಲ್ಲಿನ ನಿವಾಸಿಗಳೆಲ್ಲ ಓಡಿಹೋದರು. ಆಗ ವಸಿಷ್ಠನು ವಿಶ್ವಾಮಿತ್ರನನ್ನು ಬೆದರಿಸಿ ತನ್ನ ಬ್ರಹ್ಮದಂಡವನ್ನು ಮೇಲೆತ್ತಿದನು. ವಿಶ್ವಾಮಿತ್ರನೂ ಕೂಡ ತನ್ನ ಆಗ್ನೇಯಾಸ್ತ್ರವನ್ನು ಎತ್ತಿ ಎದೆಗಾರಿಕೆಯಿದ್ದರೆ ಎದುರಿಸು ಎಂದು ತನ್ನ ಶತ್ರುವಿಗೆ ಹೇಳುತ್ತಾನೆ. ನಿನ್ನ ಶಕ್ತಿಯನ್ನು ತೋರಿಸು. ನಾನು ಕೂಡಲೇ ನಿನ್ನ ಗರ್ವಭಂಗ ಮಾಡುತ್ತೇನೆ ಎಂದು ವಸಿಷ್ಠ ಹೇಳಿದನು. "ಕ್ಷತ್ರಿಯನ ಶಕ್ತಿಗೂ ಬ್ರಾಹ್ಮಣನ ಬಲಕ್ಕೂ ಹೋಲಿಕೆ ಎಲ್ಲಿದೆ? ಎಲೈ, ನೀಚ ಕ್ಷತ್ರಿಯನೇ, ನನ್ನ ದಿವ್ಯ ಬ್ರಾಹ್ಮಣ ಶಕ್ತಿಯನ್ನು ನೋಡು" ಎಂದು ಹೇಳಿದನು. ಆಗ ಗಾದಿಪುತ್ರ ಎತ್ತಿದ್ದ ಭಯಂಕರ ಆಗ್ನೇಯಾಸ್ತ್ರವು ಬ್ರಹ್ಮದಂಡದಿಂದ ನೀರಿನಿಂದ ಬೆಂಕಿ ಆರಿಹೋಗುವಂತೆ ಶಮನವಾಯಿತು. ಬ್ರಹ್ಮಪಾಶ, ಕಾಲಪಾಶ, ವರುಣಪಾಶ, ವಿಷ್ಣುಚಕ್ರ, ಶಿವನ ತ್ರಿಶೂಲ ಮುಂತಾದ ನಾನಾಬಗೆಯ ದಿವ್ಯಾಸ್ತ್ರಗಳನ್ನು ವಿಶ್ವಾಮಿತ್ರ ತನ್ನ ಶತ್ರುವಿನ ಮೇಲೆ ಪ್ರಯೋಗಿಸಿದನು. ಆದರೆ ಬ್ರಹ್ಮನ ಮಗನಾದ ವಸಿಷ್ಠನ ಸರ್ವಭಕ್ಷಕ ಬ್ರಹ್ಮದಂಡವು ಅವುಗಳನ್ನೆಲ್ಲಾ ನುಂಗಿಹಾಕಿತು. ಕೊನೆಗೆ ಆ ಯೋಧನು ಭಯಂಕರವಾದ ಬ್ರಹ್ಮಾಸ್ತ್ರವನ್ನು ಪ್ರಯೋಗಿಸಿದಾಗ ದೇವಾನುದೇವತೆಗಳೆಲ್ಲ ಭಯಭೀತರಾದರು. ಆದರೆ ಆ ಬ್ರಹ್ಮರ್ಷಿಯ ಎದುರು ಅವೆಲ್ಲ ಅಷ್ಟೇ ನಿಷ್ಪ್ರಯೋಜಕವಾದವು. ಈಗ ವಸಿಷ್ಠ ಉಗ್ರರೂಪವನ್ನು ತಾಳಿದನು. "ಅವನ ದೇಹದ ರೋಮ ರಂಧ್ರಗಳಿಂದ ಧೂಮಾಗ್ನಿಗಳು ಕಾರಿದವು. ಅವನ ಕೈಯಲ್ಲಿದ್ದ ಬ್ರಹ್ಮದಂಡವು ಪ್ರಳಯಾಗ್ನಿಯಂತೆ ಅಥವಾ ಇದೇ ಯಮದಂಡವೋ ಎಂಬಂತೆ ಪ್ರಜ್ವಲಿಸಿತು." ನೀನು ನಿನ್ನ ಎದುರಾಳಿಗಿಂತ ಶ್ರೇಷ್ಠನಾಗಿರುವೆ ಎಂದು ಮುನಿಗಳು ಘೋಷಿಸಿದಾಗ ಮಹರ್ಷಿಯು ಸಂತುಷ್ಟನಾಗಿ ತನ್ನ ಪ್ರತೀಕಾರವನ್ನು ತಡೆಹಿಡಿದನು. ವಿಶ್ವಾಮಿತ್ರ ನೋವಿನಿಂದ ಉದ್ಗರಿಸಿದನು: "ಕ್ಷತ್ರಿಯ ಬಲಕ್ಕೆ ಧಿಕ್ಕಾರ. ಬ್ರಹ್ಮತೇಜದ ಬಲವೇ ಬಲ. ಕೇವಲ ಒಂದು ಬ್ರಹ್ಮದಂಡವೊಂದರಿಂದಲೇ ನನ್ನೆಲ್ಲ ಶಸ್ತ್ರಗಳು ನಿರ್ನಾಮವಾದವು."

ತನ್ನ ನಿಸ್ಸಹಾಯಕ ಕನಿಷ್ಠತೆಯನ್ನು ಒಪ್ಪಿಕೊಳ್ಳುವುದು ಅಥವಾ ಬ್ರಹ್ಮಪದವಿಗೇರಲು ಪ್ರಯತ್ನಿಸುವುದು ಇವನ್ನು ಬಿಟ್ಟರೆ ಆ ಅವಮಾನಿತ ಚಕ್ರವರ್ತಿಗೆ ಬೇರೆ ಯಾವ ಪರ್ಯಾಯವೂ ಉಳಿದಿಲ್ಲ. ಅವನು ಕೊನೆಯ ಪರ್ಯಾಯವನ್ನೇ ಆರಿಸಿಕೊಳ್ಳುತ್ತಾನೆ: "ಈ ಸೋಲನ್ನು ಚೆನ್ನಾಗಿ ಪರ್ಯಾಲೋಚಿಸಿದ ನಾನು ಪ್ರಶಾಂತ ಮನಸ್ಸು ಮತ್ತು ಇಂದ್ರಿಯಗಳಿಂದ ಉಗ್ರ ತಪಸ್ಸನ್ನು ಕೈಗೊಂಡು ಬ್ರಹ್ಮಪದವಿಗೇರುತ್ತೇನೆ." ತೀವ್ರ ಕ್ಷೋಭೆಗೊಂಡು ಜರ್ಜರಿತನಾಗಿ ವೇದನೆಯಿಂದ ತನ್ನ ವೈರಿಯ ಮೇಲಿನ ವಿದ್ವೇಷವನ್ನು ಬಿಡದೆ ತನ್ನ ನಿರ್ಧಾರವನ್ನು ಕಾರ್ಯರೂಪಕ್ಕಿಳಿಸಲು ಮಹಾರಾಣಿಯೊಡಗೂಡಿ ದಕ್ಷಿಣದ ಕಡೆಗೆ ಪ್ರಯಾಣ ಬೆಳೆಸಿದನು. ಒಂದು ಸಹಸ್ರ ವರ್ಷಗಳ ಕೊನೆಯಲ್ಲಿ ಬ್ರಹ್ಮ ಪ್ರತ್ಯಕ್ಷನಾಗಿ "ಸ್ವರ್ಗದಲ್ಲಿರುವ ರಾಜರ್ಷಿಗಳನ್ನು ನೀನು ಜಯಿಸಿರುವೆ. ನಿನ್ನ ಉಗ್ರ ತಪಸ್ಸಿನ ಫಲದಿಂದ ನೀನು ಬ್ರಹ್ಮ ಪದವಿಯನ್ನು ಪಡೆದಿರುವೆ ಎಂದು ಪ್ರಕಟಿಸಿದನು."

ಈ ಸಂಘರ್ಷ ಇಕ್ಷ್ವಾಕು ವಂಶಕ್ಕೆ ಸೇರಿದ ಸುದಾಸ ಮಹಾರಾಜನ ಆಳ್ವಿಕೆಯಲ್ಲಿ ನಡೆದಿರುವಂತೆ ಕಾಣುತ್ತದೆ. ವಸಿಷ್ಠನು ಸುದಾಸ ಮಹಾರಾಜನ ಕುಲ ಪುರೋಹಿತನಾಗಿದ್ದನು. ಸ್ಪಷ್ಟವಾಗಿ ತಿಳಿಯಪಡಿಸದೆ ಯಾವುದೋ ಕಾರಣಕ್ಕಾಗಿ ಸುದಾಸನು ವಿಶ್ವಾಮಿತ್ರನನ್ನು ತನ್ನ ಕುಲಪುರೋಹಿತನನ್ನಾಗಿ ನೇಮಿಸಿಕೊಂಡನು.

ಇದು ವಸಿಷ್ಠ ಮತ್ತು ವಿಶ್ವಾಮಿತ್ರನ ನಡುವೆ ಕಾಳಗವನ್ನು ತಂದೊಡ್ಡಿತು. ಒಮ್ಮೆ ಪ್ರಾರಂಭವಾದ ಈ ಸಂಘರ್ಷ ದೀರ್ಘಕಾಲದವರೆಗೆ ನಡೆಯಿತು.

ಈ ಇಬ್ಬರ ನಡುವಣ ಸಂಘರ್ಷ ಒಂದು ವಿಚಿತ್ರ ತಿರುವನ್ನು ಪಡೆಯಿತು. ವಿಶ್ವಾಮಿತ್ರ ಒಂದು ವಾಗ್ವಾದದಲ್ಲಿ ಸಿಲುಕಿದರೆ ವಸಿಷ್ಠ ಅವನ ವಿರೋಧಿಯನ್ನು ಬೆಂಬಲಿಸಿದನು. ಅದೇ ರೀತಿ ವಿಶ್ವಾಮಿತ್ರನೂ ನಡೆದುಕೊಂಡನು. ಅದು ಒಬ್ಬ ಇನ್ನೊಬ್ಬನನ್ನು ಹಿಂಸಿಸುವ ಪ್ರಸಂಗವಾಯಿತು.

ಅಂಥ ಮೊಟ್ಟಮೊದಲ ಉಪಾಖ್ಯಾನವೆಂದರೆ ತ್ರಿಶಂಕುವೆಂದು ಕರೆಯಲಾದ ಸತ್ಯವ್ರತನದು. ಹರಿವಂಶದಲ್ಲಿ ಹೇಳಲಾಗಿರುವ ಕತೆ ಕೆಳಕಂಡಂತೆ ಇದೆ:

> "[೧]ಏತನ್ಮಧ್ಯೆ ತನಗೂ ಮತ್ತು ರಾಜನಿಗೂ (ಸತ್ಯವ್ರತನ ತಂದೆ) ಇದ್ದ ಗುರು-ಶಿಷ್ಯ ಸಂಬಂಧದಿಂದಾಗಿ ವಸಿಷ್ಠನು ಅಯೋಧ್ಯಾನಗರಿಯನ್ನೂ, ರಾಜ್ಯವನ್ನೂ ಮತ್ತು ರಾಜನ ಅರಮನೆಯ ಅಂತಃಪುರವನ್ನೂ ನಿಯಂತ್ರಿಸುತ್ತಿದ್ದನು. ಆದರೆ ಸತ್ಯವ್ರತನು ಅವಿವೇಕದಿಂದಲೋ ಅಥವಾ ವಿಧಿಶಕ್ತಿಯಿಂದಲೋ ವಸಿಷ್ಠನ ಮೇಲೆ ಒಂದೇ ಸಮನೆ ಸಿಟ್ಟನ್ನು ತಾಳಿದನು. ವಸಿಷ್ಠನು ರಾಜಾಧಿಕಾರದಲ್ಲಿ ತಲೆಹಾಕುವುದನ್ನು ನಿಲ್ಲಸಲಿಲ್ಲ. "ವಿವಾಹ ವಿಧಿಗಳು ಸಪ್ತಪದಿ ಆದ ಮೇಲೆ ನಿರ್ಬಂಧವಾಗುತ್ತದೆ. ಆದರೆ ನಾನು ಪಾಣಿಗ್ರಹಣ ಮಾಡಿದಾಗ ಇದಾಗಲಿಲ್ಲ. ವಿವಾಹವಿಧಿಗಳನ್ನು ಬಲ್ಲ ವಸಿಷ್ಠನ ಬಗ್ಗೆ ಮನಸ್ಸಿನಲ್ಲೇ ಕೋಪಗೊಂಡನು. ಆದರೆ ವಸಿಷ್ಠ ನ್ಯಾಯಯುತನಾಗಿಯೇ ನಡೆದುಕೊಂಡಿದ್ದನು. ಅವನ ಮೇಲೆ ಅವನ ತಂದೆ ವಿಧಿಸಿದ್ದದ ಮೌನವ್ರತವನ್ನು ಸತ್ಯವ್ರತ ತಿಳಿದುಕೊಳ್ಳಲಿಲ್ಲ.... ಈ ಕಠಿಣ ವ್ರತವನ್ನು ಅವನು ಅನುಮೋದಿಸಿದಾಗ ತನ್ನ ಮನೆತನದ ಸ್ಥಾನವನ್ನು ಉಳಿಸಿದ್ದಾನೆಂದು ಅವನು ಭಾವಿಸಿದನು. ಆದರೆ ಆ ಪೂಜ್ಯ ಮುನಿ ಮಗನನ್ನು ದೂರವಿಡಬೇಕೆಂದು ಬಯಸಿದ ತಂದೆಯನ್ನು ತಡೆಯದೆ ಅವನ ಮಗನನ್ನು ರಾಜನನ್ನಾಗಿ ಪ್ರತಿಷ್ಠಾಪಿಸಲು ತೀರ್ಮಾನಿಸಿದನು. ಹನ್ನೆರಡು ವರ್ಷಗಳ ಕಾಲ ತಪಸ್ಸನ್ನು ಸಹಿಸಿದಾಗ ಶಕ್ತನಾದ ಸತ್ಯವ್ರತನಿಗೆ ತಿನ್ನಲು ಮಾಂಸವಿಲ್ಲದಾಗ ಅವನು ವಶಿಷ್ಠನ ಹಾಲು ಕೊಡುವ ಹಸುವನ್ನು ನೋಡಿದನು. ಅದು ಕಾಮಧೇನುವಾಗಿತ್ತು, ಹಸಿವಿನಿಂದ ಕಂಗಾಲಾಗಿ, ಕುಪಿತನಾಗಿ ಭ್ರಮೆಯಿಂದ ದಶ ನೀತಿಗಳನ್ನು ಮರೆತು ಆ ಹಸುವನ್ನು ಕೊಂದನು.... ಅದನ್ನು ತಾನು ತಿನ್ನುವುದಲ್ಲದೆ ವಿಶ್ವಾಮಿತ್ರನ ಪುತ್ರರಿಗೂ ಬಡಿಸಿದನು. ಇದನ್ನು ಕೇಳಿದ ವಶಿಷ್ಠನು ಕ್ರುದ್ಧನಾದನು. ಮೂರು ಪಾಪಗಳನ್ನು ಮಾಡಿದ್ದರಿಂದ ನಿನಗೆ 'ತ್ರಿಶಂಕು'ವೆಂದು ಹೆಸರಾಗಲಿ ಎಂದನು. ವಿಶ್ವಾಮಿತ್ರನು ಹಿಂದಿರುಗಿ ಬಂದ ಮೇಲೆ ತನ್ನ ಪತ್ನಿಗೆ ತ್ರಿಶಂಕು ನೆರವು ನೀಡಿದ್ದರಿಂದ ಸಂತುಷ್ಟನಾಗಿ ವಿಶ್ವಾಮಿತ್ರನು ತ್ರಿಶಂಕುವಿಕೆ ವರವನ್ನು ಕೇಳು ಎಂದನು. ತ್ರಿಶಂಕು ನಾನು ಸಶರೀರಿಯಾಗಿ ಸ್ವರ್ಗಕ್ಕೆ ಹೋಗಬೇಕೆಂಬ ಆಸೆಯನ್ನು ವ್ಯಕ್ತಪಡಿಸಿದನು. ಈಗ ಹನ್ನೆರಡು ವರ್ಷಗಳ ಕ್ಷಾಮದ ಭಯ ಹೊರಟುಹೋಗಿದ್ದರಿಂದ ವಿಶ್ವಾಮಿತ್ರ ಮುನಿ ತ್ರಿಶಂಕುವನ್ನು ಅವನ ತಂದೆಯ ರಾಜ್ಯಕ್ಕೆ ರಾಜನನ್ನಾಗಿ ಮಾಡಿದನು. ಅವನ ಪರವಾಗಿ ಯಾಗ ಮಾಡಲು ಮುಂದೆ ಬಂದನು. ದೇವಾನುದೇವತೆಗಳು ಮತ್ತು ವಸಿಷ್ಠನ[೨]

೧. ಮ್ಯೂರ್: ಸಂ.I, ಪು. ೩೭೭-೭೮.

೨. 'ಹರಿವಂಶ'ದಲ್ಲಿ ಇನ್ನೊಂದು ಕಡೆ ಹೇಳಿರುವಂತೆ, ಪ್ರಜೆಯೊಬ್ಬನ ಪ್ರಾಯದ ಹೆಂಡತಿಯನ್ನು ತ್ರಿಶಂಕು ಎತ್ತಿಕೊಂಡು ಹೋದ ಅಪರಾಧಕ್ಕಾಗಿ ಅವನ ತಂದೆ ಗಡಿಪಾರು ಮಾಡಿದ್ದನು. ವಸಿಷ್ಠ ಗಡಿಪಾರನ್ನು ತಡೆಗಟ್ಟಲು ಮುಂದೆ ಬರಲಿಲ್ಲ. ಇಲ್ಲಿನ ಉಲ್ಲೇಖ ಇದಕ್ಕೆ ಸಂಬಂಧಿಸಿದೆ.

ವಿರೋಧವಿದ್ದರೂ ಆಗ ಆ ರಾಜನನ್ನು (ತ್ರಿಶಂಕುವನ್ನು) ವಿಶ್ವಾಮಿತ್ರ ಸಶರೀರಿಯಾಗಿ ಸ್ವರ್ಗಕ್ಕೆ ಕಳುಹಿಸಿದನು."

೨. 'ಹರಿವಂಶ'ದಲ್ಲಿ ನಿರೂಪಿತವಾಗಿರುವಂತೆ:

"[೧]ಎಸಗಿದ ದುಷ್ಕೃತ್ಯಗಳ ಪರಿಣಾಮದಿಂದಾಗಿ ಇಂದ್ರ ಹನ್ನೆರಡು ವರ್ಷಗಳ ಕಾಲ ಮಳೆಯನ್ನೇ ಸುರಿಸಲಿಲ್ಲ. ಆ ಸಮಯದಲ್ಲಿ ವಿಶ್ವಾಮಿತ್ರ ತನ್ನ ಮಡದಿ ಮಕ್ಕಳನ್ನು ಬಿಟ್ಟು ತಪಸ್ಸನ್ನಾಚರಿಸಲು ಸಮುದ್ರ ತಟಗೆ ಹೋಗಿದ್ದನು. ದುಸ್ಥಿತಿಗೆ ಸಿಲುಕಿದ ಅವನ ಹೆಂಡತಿ ಇತರ ಮಕ್ಕಳನ್ನು ಸಾಕುವ ಸಲುವಾಗಿ ತನ್ನ ಎರಡನೆಯ ಮಗನನ್ನು ಒಂದು ಸಾವಿರ ಹಸುಗಳಿಗೆ ಮಾರಾಟ ಮಾಡಲು ಸಿದ್ಧವಾದಳು. ಆದರೆ ಮಧ್ಯೆ ಪ್ರವೇಶಿಸಿ ಸತ್ಯವ್ರತನು ಈ ವ್ಯವಸ್ಥೆಯನ್ನು ನಿಲ್ಲಿಸಿದನು. ಆ ಮಗನನ್ನು ಬಿಡಿಸಿದನು. ಕಾಡುಮೃಗಗಳ ಮಾಂಸದಿಂದ ಆ ಸಂಸಾರವನ್ನು ಸಾಕಿದನು. ತನ್ನ ತಂದೆಯ ಆಜ್ಞಾನುಸಾರ ಹನ್ನೆರಡು ವರ್ಷಗಳ ಕಾಲ ಮೌನವ್ರತವನ್ನು ಆಚರಿಸಿದನು."

ವಸಿಷ್ಠ ವಿಶ್ವಾಮಿತ್ರರು ಮತ್ತೆ ಎದುರಾಳಿಗಳಾಗಿ ನಿಲ್ಲುವ ಮುಂದಿನ ಕಥೆಯೆಂದರೆ ತ್ರಿಶಂಕುವಿನ ಮಗನಾದ ಹರಿಶ್ಚಂದ್ರನ ಆಖ್ಯಾನದಲ್ಲಿ ಈ ಕಡೆ ವಿಷ್ಣು ಪುರಾದಲ್ಲಿಯೂ ಮಾರ್ಕಂಡೇಯ ಪುರಾಣದಲ್ಲಿಯೂ ಬರುತ್ತದೆ. ಕಥೆ ಈ ರೀತಿ ಇದೆ:

"ಒಂದು ಸಂದರ್ಭದಲ್ಲಿ ಆ ರಾಜನು ಬೇಟೆ ಮಾಡುತ್ತಿದ್ದಾಗ ಸ್ತ್ರೀಯ ಆಕ್ರಂದನವನ್ನು ಕೇಳಿದನು. ಅದು ಉಗ್ರ ತಪಸ್ವಿಯಾದ ವಿಶ್ವಾಮಿತ್ರನು ಎಲ್ಲ ಕಲೆಗಳನ್ನೂ ಸ್ವಾಧೀನ ಮಾಡಿಕೊಳ್ಳುತ್ತಿದ್ದಾಗ ಹೊರಟಿತೆಂದು ಹೇಳುತ್ತಾರೆ. ಅದಕ್ಕೆ ಮುನ್ನ ಯಾರೂ ಆ ಕಲೆಗಳನ್ನು ಸ್ವಾಧೀನಪಡಿಸಿಕೊಂಡಿರಲಿಲ್ಲ. ತತ್ಪರಿಣಾಮವಾಗಿ ಅವು ಅವನ ಶ್ರೇಷ್ಠತೆಯ ಬಗ್ಗೆ ಗಾಬರಿಗೊಂಡು ಕಿರುಚುತ್ತಿದ್ದವು. ದುರ್ಬಲರನ್ನು ರಕ್ಷಿಸುವ ಕ್ಷತ್ರಿಯ ಧರ್ಮದ ಪೂರೈಕೆಗಾಗಿ ಹಾಗೂ ತನ್ನೊಳಗೆ ಸೇರಿದ್ದ ಗಣೇಶನ ಪ್ರೇರಣೆಯಿಂದ ಹರಿಶ್ಚಂದ್ರ ಉದ್ಗರಿಸಿದನು."

"ಶಕ್ತಿ ಸಾಮರ್ಥ್ಯಗಳಿಂದ ಪ್ರಜ್ವಲಿಸುವ ನಾನು ಅವನ ಅಧಿಪತಿ ಇಲ್ಲೇ ಇರುವಾಗ ತನ್ನ ಸೆರಗಿಗೆ ಕೆಂಡವನ್ನು ಕಟ್ಟಿಕೊಂಡಿರುವ ಈ ಪಾಪಿ ಯಾರು. ನನ್ನ ಬಿಲ್ಲಿನಿಂದ ಚಿಮ್ಮಿದ ಬಾಣಗಳು ನಭೋಮಂಡಲದ ದಿಕ್ಕು ದಿಸೆಗಳನ್ನೆಲ್ಲಾ ಬೆಳಗಿ ಅವನ ಅಂಗಾಂಗಳನ್ನೆಲ್ಲಾ ಜರ್ಝರಿತಗೊಳಿಸುತ್ತವೆ." ಈ ಸಂಬೋಧನೆಯಿಂದ ವಿಶ್ವಾಮಿತ್ರ ಉದ್ರೇಕಗೊಂಡನು. ಈ ಕ್ರೋಧದಿಂದ ಅವನ ತಪಸ್ಸಿನ ಪುಣ್ಯಫಲಗಳೆಲ್ಲಾ ಕೂಡಲೇ ನಾಶಹೊಂದಿದವು. ಅರಳಿ ಎಲೆಯ ಹಾಗೆ ಕಂಪಿಸುತ್ತಾ ಹರಿಶ್ಚಂದ್ರ ತಾನು ರಾಜನ ಕರ್ತವ್ಯವನ್ನು ಮಾತ್ರ ಮಾಡಿರುವೆನೆಂದು ಬಿನ್ನವಿಸಿದನು. ರಾಜಧರ್ಮವೆಂದರೆ ವಿಪ್ರೋತ್ತಮರಿಗೂ ಬಡಬಗ್ಗರಿಗೂ ದಾನದಕ್ಷಿಣೆ ಕೊಡುವುದು, ಆರ್ತರನ್ನು ರಕ್ಷಿಸುವುದು ಮತ್ತು ವೈರಿಗಳನ್ನು ಸದೆಬಡಿಯುವುದು. ಆಗ ವಿಶ್ವಾಮಿತ್ರನು ಬ್ರಾಹ್ಮಣನಾಗಿ ದಾನವನ್ನು ಬೇಡುತ್ತಾನೆ. ತಮಗೆ ಬೇಕಾದುದನ್ನು ಹೊನ್ನು, ಔರಸ ಪುತ್ರ, ಪತ್ನಿ, ಸ್ವಶರೀರ ಹಾಗೂ ರಾಜ್ಯಕೋಶಗಳನ್ನು ಪಡೆಯಬಹುದು ಎಂದು ರಾಜ ವಿನಂತಿಸುತ್ತಾನೆ. ರಾಜಸೂಯ ಯಾಗಕ್ಕೆ ದಕ್ಷಿಣೆ ಬೇಕೆಂದು ಮಹರ್ಷಿ ಕೇಳುತ್ತಾನೆ. ಈ ವಾಗ್ದಾನದ ಮೇಲೆ ಮತ್ತೆ ಇನ್ನೂ ಹೆಚ್ಚು ಕೊಡುತ್ತೇನೆಂದು ಹೇಳಿದುದರಿಂದ ಅವನ

---

೧. ಮ್ಯೂರ್: ಸಂ. I, ಪು. ೩೭೬–೭೭

ಇಡಿ ಸಾಮ್ರಾಜ್ಯವನ್ನು ಹರಿಶ್ಚಂದ್ರನು ಅವನ ಪತ್ನೀ ಪುತ್ರರು ಹಾಗೂ ಅವನನ್ನು ಅನುಸರಿಸಿ ಹೋಗುವ ಅವನ ಪುಣ್ಯವನ್ನು ಬಿಟ್ಟು ಸಮಸ್ತವನ್ನೂ ಕೇಳುತ್ತಾನೆ. ಹರಿಶ್ಚಂದ್ರ ಸಂತೋಷದಿಂದ ಒಪ್ಪಿಕೊಳ್ಳುತ್ತಾನೆ. ಆಗ ನಿನ್ನೆಲ್ಲ ಆಭರಣಗಳನ್ನೂ ತೆಗೆದು ಮರದ ತೊಗಟೆಗಳಿಂದ ಮೈಮುಚ್ಚಿಕೊಂಡು, ಹೆಂಡತಿ ತಾರಾಮತಿ ಮತ್ತು ಮಗನ ಜೊತೆ ರಾಜ್ಯವನ್ನು ತ್ಯಜಿಸಿ ಹೊರಡಬೇಕೆಂದೂ ವಿಶ್ವಾಮಿತ್ರ ಅವನಿಗೆ ಆಜ್ಞಾಪಿಸುತ್ತಾನೆ. ಅವನು ಹೋಗುವಾಗ ಅವನನ್ನು ತಡೆದು ನನ್ನ ರಾಜಸೂಯ ಯಾಗಕ್ಕೆ ಹಣ ಕೊಡುವೆನೆಂದು ಒಪ್ಪಿಕೊಂಡಿದ್ದೆಯಲ್ಲಾ ಅದಿನ್ನೂ ಸಂದಾಯವಾಗಿಲ್ಲ ಕೊಟ್ಟು ನಡೆ ಎಂದು ಆ ಮಹರ್ಷಿ ತಗಾದೆ ಮಾಡುತ್ತಾನೆ. ಈಗ ನನ್ನ, ನನ್ನ ಹೆಂಡತಿ ಮಕ್ಕಳ ದೇಹಗಳನ್ನು ಬಿಟ್ಟರೆ ನನಗೇನೂ ಉಳಿದಿಲ್ಲ ಎಂದು ರಾಜ ಉತ್ತರಿಸುತ್ತಾನೆ. ಅದು ನನಗೆ ಗೊತ್ತಿಲ್ಲ, ಕೊಟ್ಟು ನಡೆ. ಬ್ರಾಹ್ಮಣರಿಗೆ ಕೊಡುವೆನೆಂದು ಹೇಳಿದ ದಕ್ಷಿಣೆಗಳನ್ನು ಕೊಡದಿದ್ದರೆ ನಿನಗೆ ಏಳಿಗೆಯಿಲ್ಲ ಎಂದು ವಿಶ್ವಾಮಿತ್ರ ಒತ್ತಾಯ ಮಾಡಿದನು. ಶಾಪಕ್ಕೆ ಬೆದರಿದ ಆ ನತದೃಷ್ಟ ರಾಜನು ಇನ್ನು ತಿಂಗಳ ಒಳಗೆ ಋಣ ತೀರಿಸುತ್ತೇನೆಂದು ಹೇಳುತ್ತಾನೆ. ಆಯಾಸ ಬಳಲಿಕೆಗಳಿಗೆ ಅಪರಿಚಿತಳಾದ ಹೆಂಡತಿಯನ್ನು ಕಟ್ಟಿಕೊಂಡು ಅವನ ಪ್ರಜೆಗಳೆಲ್ಲ ಗೋಳುಗರೆಯುತ್ತಿದ್ದಂತೆ ಹರಿಶ್ಚಂದ್ರನು ಪ್ರಯಾಣ ಹೊರಟನು. ರಾಜ್ಯವನ್ನು ತೊರೆದು ಹೋಗುತ್ತಿರುವಿರಲ್ಲಾ ಎಂದು ಅಕ್ಕರೆಯಿಂದ ಜನರು ಹಲುಬುತ್ತಿದ್ದಾಗ ಅದನ್ನು ಕೇಳಿ ಅವನು ನಿಧಾನಿಸಿದಾಗ ವಿಶ್ವಾಮಿತ್ರನು ಸಿಟ್ಟುಗೊಂಡು ತನ್ನ ದಂಡದಿಂದ ಮಹಾರಾಣಿಯನ್ನು ಹೊಡೆದನು. ಅವಳ ಗಂಡ ಆಕೆಯನ್ನು ಕರೆದುಕೊಂಡು ಹೋದನು. ಆಗ ಹರಿಶ್ಚಂದ್ರನು ತನ್ನ ಪತ್ನಿ ಮತ್ತು ಬಾಲಕನಾದ ಮಗನನ್ನು ಕಟ್ಟಿಕೊಂಡು ಕಾಶಿಗೆ ಹೋದನು. ಶಿವನ ವಿಶೇಷ ಕ್ಷೇತ್ರವಾದ ಆ ದಿವ್ಯನಗರಿಯಲ್ಲಿ ಯಾವ ಮರ್ತ್ಯನೂ ಇರಲಾರನೆಂದು ಭಾವಿಸಿದನು. ಯಾಗದ ಹಣವನ್ನು ಅವಧಿ ತೀರುವ ಮುನ್ನವೇ ಕೊಡಬೇಕೆಂದು ಒತ್ತಾಯ ಮಾಡುವುದಕ್ಕಾಗಿ ಕಾಯುತ್ತಿದ್ದ ನಿರ್ದಯಿಯಾದ ವಿಶ್ವಾಮಿತ್ರನನ್ನು ಇಲ್ಲಿ ಕೂಡ ಕಂಡನು. ಇಂಥ ದುರವಸ್ಥೆಯಲ್ಲಿ ತನ್ನನ್ನು ಮಾರಾಟ ಮಾಡಬೇಕೆಂದು ಆ ಮಹಾರಾಣಿ ಅಳುತ್ತಾ ತನ್ನ ಗಂಡನಿಗೆ ಹೇಳಿದಳು. ಈ ಸೂಚನೆಯನ್ನು ಕೇಳಿ ಹರಿಶ್ಚಂದ್ರನು ಮೂರ್ಛೆಹೋದನು. ಪ್ರಜ್ಞೆ ಬಂದ ಮೇಲೆ ಗೋಳಾಡಿದನು. ಮತ್ತೆ ಮೂರ್ಛೆ ಹೋದನು. ತನ್ನ ಗಂಡನ ಆ ಸ್ಥಿತಿಯನ್ನು ಕಂಡು ಅವನ ಹೆಂಡತಿ ಕೂಡ ಮೂರ್ಛೆ ಹೋದಳು. ಅವರಿಬ್ಬರೂ ಪ್ರಜ್ಞಾಹೀನ ಸ್ಥಿತಿಯಲ್ಲಿದ್ದಾಗ ಹಸಿದು ಕಂಗಾಲಾಗಿದ್ದ ಅವರ ಮಗು ಸಂಕಟದಿಂದ ನರಳಿತು: "ಅಪ್ಪಾ, ಓ ಅಪ್ಪಾ, ಹಸಿವು ಅನ್ನ ಬೇಕು. ಅಮ್ಮ, ಓ, ಅಮ್ಮ ಹಸಿವು ಅನ್ನ ಕೊಡು. ಹಸಿವನ್ನು ತಡೆಯಲಾರೆ. ನಾಲಿಗೆ ಒಣಗಿದೆ." ಈ ಸಂದರ್ಭದಲ್ಲಿ ವಿಶ್ವಾಮಿತ್ರ ವಾಪಸ್ಸು ಬಂದು ಹರಿಶ್ಚಂದ್ರನ ಮೇಲೆ ನೀರು ಚಿಮುಕಿಸಿ ಪ್ರಜ್ಞೆ ಬರಿಸಿ ಯಾಗದ ಹಣವನ್ನು ಕೊಡು ಎಂದು ಒತ್ತಾಯಿಸುತ್ತಾನೆ. ರಾಜ ಮತ್ತೆ ಮೂರ್ಛೆ ಹೋಗುತ್ತಾನೆ. ಮತ್ತೆ ಪ್ರಜ್ಞೆ ಬರುತ್ತದೆ. ಸೂರ್ಯಾಸ್ತದೊಳಗೆ ವಾಗ್ದಾನ ನೆರವೇರದಿದ್ದರೆ ಶಪಿಸುತ್ತೇನೆಂದು ಮಹರ್ಷಿ ಹೆದರಿಸುತ್ತಾನೆ. ಈಗ ತನ್ನ ಹೆಂಡತಿಯ ಒತ್ತಾಯದಿಂದಾಗಿ ಅವಳನ್ನು ಮಾರಾಟ ಮಾಡಲು ಸಮ್ಮತಿಸಿ "ಅಂತಹ ಕೆಟ್ಟ ಮಾತನ್ನು ನನ್ನ ನಾಲಿಗೆ ಆಡುವುದಾದರೆ ಎಂಥ ದುರಾತ್ಮನೂ ಇದನ್ನು ಮಾಡದಿರಲಿ" ಎಂದು ಹೇಳಿದನು. ಆಗ ಅವನು ನಗರಕ್ಕೆ ಹೋಗಿ ಆತ್ಮದೂಷಣೆಯ ಭಾಷೆಯಲ್ಲಿ ತನ್ನ ಹೆಂಡತಿಯನ್ನು ಗುಲಾಮಳಂತೆ ಮಾರಲು ಮುಂದಾಗುತ್ತಾನೆ. ತನ್ನ

ಮನೆಗೆಲಸ ಮಾಡುವುದಕ್ಕಾಗಿ ಅವಳಿಗೆ ಅನುರೂಪವಾದ ಬೆಲೆಯನ್ನು ಕೊಟ್ಟು ಅವಳನ್ನು ಕೊಂಡುಕೊಳ್ಳಲು ಒಬ್ಬ ಶ್ರೀಮಂತ ಮುದಿ ಬ್ರಾಹ್ಮಣ ಮುಂದೆ ಬರುತ್ತಾನೆ. ತನ್ನ ತಾಯಿಯನ್ನು ಎಳೆದುಕೊಂಡು ಹೋಗುತ್ತಿರುವುದನ್ನು ನೋಡಿ ಆ ಮಗು ಕಣ್ಣಿನಲ್ಲಿ ನೀರು ತುಂಬಿಕೊಂಡು 'ಅಮ್ಮಾ', 'ಅಮ್ಮಾ', ಎಂದು ಅವಳ ಹಿಂದೆ ಓಡಿತು. ಅದು ಹತ್ತಿರ ಹೋದಾಗ ಆ ಬ್ರಾಹ್ಮಣ ಯಜಮಾನ ಅದನ್ನು ಒದ್ದನು. ಆದರೆ ಅದು 'ಅಮ್ಮಾ', 'ಅಮ್ಮಾ' ಎಂದು ಕಿರುಚುತ್ತಾ ತನ್ನ ತಾಯಿಯನ್ನು ಮುಂದೆ ಎಳೆದೊಯ್ಯಲು ಬಿಡಲಿಲ್ಲ. ಆಗ ಮಹಾರಾಣಿಯು ಆ ಬ್ರಾಹ್ಮಣನಿಗೆ ಹೇಳಿದಳು 'ದಯಮಾಡಿ ಕೃಪೆದೋರು ನನ್ನ ದಣಿ, ನನ್ನ ಮಗನ ಮೇಲೂ ಕೃಪೆದೋರು. ಅವನಿಲ್ಲದಿದ್ದರೆ ನನ್ನನ್ನು ನೀನು ಕೊಂಡುಕೊಂಡೂ ಪ್ರಯೋಜನವಿಲ್ಲ. ನನ್ನ ಹೀನ ಸ್ಥಿತಿಯಲ್ಲಿ ದಯವಿಟ್ಟು ನನಗೆ ಇಷ್ಟನ್ನು ಅನುಗ್ರಹಿಸು. ಹಸುವಿನ ಜೊತೆ ಕರು ಸೇರುವಂತೆ ನನ್ನ ಮಗ ನನ್ನನ್ನು ಸೇರಿಕೊಳ್ಳಿ" ಬ್ರಾಹ್ಮಣ ಒಪ್ಪಿಕೊಂಡು "ಈ ಹಣವನ್ನು ತೆಗೆದುಕೊ, ಈ ಹುಡುಗನನ್ನು ಕೊಡು" ಎಂದು ಕೊಳ್ಳುತ್ತಾನೆ. ತಾನು ಕೊಂಡುಕೊಂಡ ಮಾಲುಗಳ ಸಮೇತ ಆ ಬ್ರಾಹ್ಮಣನು ಹೊರಟುಹೋದ ಮೇಲೆ ವಿಶ್ವಾಮಿತ್ರ ಮತ್ತೆ ಕಾಣಿಸಿಕೊಂಡು ತನ್ನ ಹಣಕ್ಕಾಗಿ ಒತ್ತಾಯ ಮಾಡಿದನು. ತನ್ನ ಪತ್ನೀಪುತ್ರರ ಮಾರಾಟದಿಂದ ಬಂದ ಅಲ್ಪ ಮೊತ್ತವನ್ನು ಕೊಡಲು ಆ ದುಃಖತಪ್ತ ಹರಿಶ್ಚಂದ್ರನು ಹೋದಾಗ, ವಿಶ್ವಾಮಿತ್ರ ಸಿಟ್ಟಿನಿಂದ ಹೇಳುತ್ತಾನೆ: "ಎಲೈ ನೀಚ ಕ್ಷತ್ರಿಯನೇ, ನನ್ನ ಯೋಗ್ಯತೆಗೆ ಇದು ತಕ್ಕ ಯಾಗ ದಕ್ಷಿಣೆಯೆಂದು ನೀನು ಭಾವಿಸಿದರೆ ನೀನು ಬಹುಬೇಗನೆ ನನ್ನ ಉತ್ಕಟವೂ, ಕಠಿಣತರವೂ, ತೀವ್ರವಾದುದೂ ಆದ ಅತೀಂದ್ರಿಯ ಶಕ್ತಿಯ ಭಯಂಕರವಾದ ಹಾಗೂ ಬೃಹತ್ ಗಾಂಭೀರ್ಯದಿಂದ ಕೂಡಿದ ಕುಂದಿಲ್ಲದ ನನ್ನ ಬ್ರಾಹ್ಮಣ್ಯದ ಹಾಗೂ ನನ್ನ ವೇದಾಧ್ಯಯನದ ಪರಿಣಾಮವನ್ನು ಕಾಣಲಿದ್ದೀಯೆ." ಹರಿಶ್ಚಂದ್ರ ಇನ್ನಷ್ಟು ಕಾಣಿಕೆಯನ್ನು ಸಲ್ಲಿಸುವುದಾಗಿ ಭರವಸೆ ನೀಡುತ್ತಾನೆ. ಅದನ್ನು ಪೂರೈಸುವ ಸಲುವಾಗಿ ವಿಶ್ವಾಮಿತ್ರನು ದಿನದ ಉಳಿದ ಒಂದು ಯಾಮದ ಅವಧಿಯನ್ನು ಕೊಡುತ್ತಾನೆ. ಈ ಕ್ರೂರ ಬೇಡಿಕೆಯನ್ನು ಈಡೇರಿಸುವ ಕ್ರಮವಾಗಿ ತನ್ನನ್ನೇ ಮಾರಾಟಕ್ಕೆ ಒಡ್ಡಿಕೊಂಡ ಆ ತಲ್ಲಣಗೊಂಡಿದ್ದ ಹಾಗೂ ನೊಂದಿದ್ದ ರಾಜಕುಮಾರನನ್ನು ಕಂಡು ಧರ್ಮದೇವತೆ ಭೀಕರಾಕೃತಿಯ ಹಾಗೂ ಆಕ್ರಮಣಶೀಲ ಮನೋಧರ್ಮದ ಚಂಡಾಲನ ರೂಪದಲ್ಲಿ ಕಾಣಿಸಿಕೊಂಡು ಅವನು ಹೇಳಿದ ಹಿರಿದಾದ ಅಥವಾ ಕಡಿಮೆಯಾದ ಬೆಲೆಗೆ ಅವನನ್ನು ಕೊಂಡುಕೊಳ್ಳಲು ಒಪ್ಪುತ್ತಾನೆ. ಹೀನಾವಸ್ಥೆಯ ಗುಲಾಮಗಿರಿಯನ್ನು ಹರಿಶ್ಚಂದ್ರ ತಿರಸ್ಕರಿಸುತ್ತಾನೆ. ಇಂತಹ ದುರ್ವಿಧಿಗೆ ವಶವಾಗುವುದಕ್ಕಿಂತ ತನ್ನ ಪೀಡಕನ ಶಾಪಾಗ್ನಿಗೆ ತುತ್ತಾಗುವುದು ಒಳಿತೆಂದು ಘೋಷಿಸುತ್ತಾನೆ. ಈ ಚಂಡಾಲ ಕೊಡುವ ದೊಡ್ಡ ಮೊತ್ತವನ್ನು ಏಕೆ ಸ್ವೀಕರಿಸುವುದಿಲ್ಲ ಎಂದು ವಿಶ್ವಾಮಿತ್ರ ಮತ್ತೆ ಬಂದು ಪ್ರಶ್ನಿಸುತ್ತಾನೆ. ತಾನು ಸೂರ್ಯವಂಶಕ್ಕೆ ಸೇರಿದವನೆಂದು ಹರಿಶ್ಚಂದ್ರ ಹೇಳಿದಾಗ ನನ್ನ ಹಣವನ್ನು ಕೊಡದಿದ್ದರೆ ನಿನಗೆ ಶಾಪ ಕೊಡುತ್ತೇನೆಂದು ವಿಶ್ವಾಮಿತ್ರ ಗದರಿಸಿದನು. ಇಂತಹ ಅಧೋಗತಿಗೆ ಇಳಿಯುವುದಕ್ಕಿಂತ ತನ್ನ ಋಣದ ಉಳಿದ ಭಾಗಕ್ಕೆ ವಿಶ್ವಾಮಿತ್ರನ ಗುಲಾಮನಾಗಲು ಸಿದ್ಧ ಎಂದು ಹೇಳಿದನು. ಆಗ ಆ ಮಹರ್ಷಿ "ನೀನು ನನ್ನ ಗುಲಾಮನಾದರೆ ನಿನ್ನನ್ನು ಈ ಚಂಡಾಲನಿಗೆ ನೂರು ದಶಲಕ್ಷ ವರಹಗಳಿಗೆ ಮಾರಾಟಮಾಡುತ್ತೇನೆ" ಎಂದನು.

"ಚಂಡಾಲ ಸಂತುಷ್ಟನಾಗಿ ಹಣ ತೆತ್ತು, ದಿಗ್ಭ್ರಾಂತನು, ದುಃಖಪೀಡಿತನೂ ಆದ ಹರಿಶ್ಚಂದ್ರನನ್ನು ತನ್ನ ಸ್ಥಳಕ್ಕೆ ಕಟ್ಟಿ ಹೊಡೆದುಕೊಂಡು ಹೋದನು. ಸ್ಮಶಾನದಲ್ಲಿ ಶವವಸ್ತ್ರಗಳನ್ನು ಅಪಹರಿಸಲು ಹರಿಶ್ಚಂದ್ರನನ್ನು ಚಂಡಾಲ ಕಳುಹಿಸುತ್ತಾನೆ. ಅಲ್ಲಿ ಬರುವ ಹಣದಲ್ಲಿ ಆರನೇ ಎರಡು ಭಾಗವನ್ನು ತನ್ನ ದಣಿಗೂ ಆರನೇ ಒಂದು ಭಾಗವನ್ನು ರಾಜನಿಗೂ ಸಲ್ಲಿಸಬೇಕೆಂದು ತಾಕೀತು ಮಾಡುತ್ತಾನೆ. ಈ ಭಯಂಕರ ಸ್ಥಳದಲ್ಲಿ ಈ ಅವಮಾನಕರ ವೃತ್ತಿಯಲ್ಲಿ ಹನ್ನೆರಡು ತಿಂಗಳುಗಳನ್ನೂ ನೂರು ವರ್ಷಗಳೋಪಾದಿಯಲ್ಲಿ ತನ್ನ ಅಪಾರ ಕಷ್ಟದಲ್ಲಿ ಕಳೆದನು. ಆಗ ಅವನು ನಿದ್ರೆ ಹೋಗುತ್ತಾನೆ. ಕಳೆದ ಕಾಲದ ಜೀವನ ಕನಸಿನ ಮಾಲೆಯಾಗಿ ಅವನಿಗೆ ಕಾಣಿಸಿಕೊಳ್ಳುತ್ತದೆ. ಅವನು ಎಚ್ಚೆತ್ತಾಗ ಅವನ ಹೆಂಡತಿ ಹಾವು ಕಚ್ಚಿ ಸತ್ತುಹೋಗಿದ್ದ ತಮ್ಮ ಮಗನನ್ನು ಸಂಸ್ಕಾರ ಮಾಡಲು ಸ್ಮಶಾನಕ್ಕೆ ಬರುತ್ತಾಳೆ. ಮೊದಮೊದಲು ಗಂಡಹೆಂಡಿರಿಗೆ ತಮ್ಮ ತಮ್ಮ ಸಂಕಷ್ಟಗಳಿಂದ ಉಂಟಾದ ಬದಲಾವಣೆಯಿಂದಾಗಿ ಪರಸ್ಪರ ಗುರುತು ಹಚ್ಚಲು ಆಗುವುದಿಲ್ಲ. ಆದರೆ ಅವಳ ಗೋಳಾಟದ ದನಿಯಿಂದಾಗಿ ಅದು ನನ್ನ ಹೆಂಡತಿಯಿರಬೇಕೆಂದು ಹರಿಶ್ಚಂದ್ರ ಬೇಗ ಗುರುತುಹಿಡಿಯುತ್ತಾನೆ. ತಕ್ಷಣ ಮೂರ್ಛೆ ಬೀಳುತ್ತಾನೆ. ತನ್ನ ಪತಿಯನ್ನು ಗುರುತು ಹಚ್ಚಿದ ಆ ಸತಿಯು ಮೂರ್ಛಿತಳಾಗುತ್ತಾಳೆ. ಪ್ರಜ್ಞೆ ಬಂದಾಗ ಇಬ್ಬರೂ ಗೋಳಾಡುತ್ತಾರೆ. ತನ್ನ ಮಗನನ್ನು ಕಳೆದುಕೊಂಡೆ ಎಂದು ತಂದೆ ಅಳುವುದು ಹೃದಯ ವಿದ್ರಾವಕವಾಗಿದೆ. ರಾಜನ ಅಧೋಗತಿಗೆ ಸತಿ ಅಳುವುದು ಮನಕರಗುವಂತಿದೆ. ಆಗ ಆಕೆ ಅವನನ್ನು ಅಪ್ಪಿಕೊಂಡು "ಇದು ಕನಸೇ? ನನಸೇ?" ಎಂದು ದಿಗ್ಭ್ರಾಂತಳಾಗಿ ಕೇಳುತ್ತಾಳೆ. "ಇದು ನಿಜವಾದೆ ಧರ್ಮ ಮಾಡುವುದರಿಂದ ಏನೂ ಪ್ರಯೋಜನವಿಲ್ಲ" ಎಂದು ಹೇಳುತ್ತಾಳೆ. ತನ್ನ ದಣಿಯ ಅಪ್ಪಣೆಯಿಲ್ಲದೆ ತನ್ನ ಮಗನ ಶವ ಸಂಸ್ಕಾರಕ್ಕೆ ಅನುಮತಿ ನೀಡಲು ಹಿಂದುಮುಂದು ನೋಡುವ ಹರಿಶ್ಚಂದ್ರ ಕೊನೆಗೆ ಈ ರೀತಿ ನಿರ್ಧರಿಸುತ್ತಾನೆ: "ನಾನು ದಾನಧರ್ಮ ಮಾಡಿದ್ದೆ, ನನ್ನ ಧರ್ಮಗುರುಗಳನ್ನು ಯಜ್ಞಯಾಗಗಳಿಂದ ಸಂತೃಪ್ತಗೊಳಿಸಿದ್ದರೆ, ನಾನು ನನ್ನ ಪತ್ನೀಪುತ್ರರ ಜೊತೆ ಬೇರೊಂದು ಲೋಕದಲ್ಲಿ ಒಂದುಗೂಡುವಂತಾಗಲಿ." ಅದೇ ರೀತಿಯಲ್ಲಿ ಮಹಾರಾಣಿಯು ಸಾಯಲು ನಿರ್ಧರಿಸುತ್ತಾಳೆ. ತನ್ನ ಪುತ್ರನನ್ನು ಚಿತೆಯ ಮೇಲಿಟ್ಟು ಪರಮದೈವವಾದ ಶ್ರೀಮನ್ನಾರಾಯಣ ಕೃಷ್ಣನನ್ನು ಧ್ಯಾನಿಸುವಾಗ ಧರ್ಮನ ನೇತೃತ್ವದಲ್ಲಿ ವಿಶ್ವಾಮಿತ್ರನ ಜೊತೆ ಎಲ್ಲ ದೇವತೆಗಳೂ ಆಗಮಿಸುತ್ತಾರೆ. ನಿನ್ನ ಧ್ಯೇಯದಿಂದ ವಿಮುಖನಾಗಿ ಎಂದು ಧರ್ಮ ಮಹಾರಾಜನನ್ನು ಕೋರಿಕೊಳ್ಳುತ್ತಾನೆ. ನಿಮ್ಮ ಪುಣ್ಯಕಾರ್ಯಗಳಿಂದ ನೀನು, ನಿನ್ನ ಹೆಂಡತಿ ಮತುತ ಮಗ ಸ್ವರ್ಗವನ್ನು ಗೆದ್ದಿದ್ದೀರಿ ಎಂದು ಇಂದ್ರ ಘೋಷಿಸುತ್ತಾನೆ. ಆ ದೇವತೆಗಳಿಂದ ಅಮೃತ ಮತ್ತು ಪುಷ್ಪಗಳ ವೃಷ್ಟಿಯಾಗುತ್ತದೆ. ಆ ಮಹಾರಾಜನ ಮಗ ಜೀವಂತನಾಗಿ ಯೌವ್ವನಾವಸ್ಥನಾಗುತ್ತಾನೆ. ದಿವ್ಯಾಂಬರಗಳನ್ನು ತೊಟ್ಟ ಆ ರಾಜರಾಣಿಯರು ತಮ್ಮ ಪುತ್ರನನ್ನು ಅಲಂಗಿಸಿಕೊಳ್ಳುತ್ತಾರೆ. ಆದರೂ ತನ್ನ ಯಜಮಾನನಾದ ಚಂಡಾಲನ ಅನುಮತಿಯಿಲ್ಲದೆ ಹಾಗೂ ಅವನಿಗೆ ಕೊಡಬೇಕಾದ ಜೀವವಿಮುಕ್ತಿ ಹಣವನ್ನು ಕೊಡದೆ ತಾನು ಸ್ವರ್ಗಕ್ಕೆ ಬರಲಾರೆನೆಂದು ಹರಿಶ್ಚಂದ್ರ ಉದ್ಘೋಷಿಸುತ್ತಾನೆ. ಚಂಡಾಲನ ವೇಷದಲ್ಲಿ ಬಂದಿದ್ದವನು ತಾನೇ ಎಂದು ಧರ್ಮನು ರಾಜನಿಗೆ ತನ್ನ ನಿಜರೂಪವನ್ನು ತೋರಿಸುತ್ತಾನೆ. ತನ್ನ ಪುಣ್ಯದ ಪಾಲುದಾರರಾದ ನಿಷ್ಠಾವಂತ ಪ್ರಜೆಗಳಿಗೆ ಕೊನೆಪಕ್ಷ ಒಂದು ದಿನವಾದರೂ ತನ್ನೊಂದಿಗೆ ಸ್ವರ್ಗಾರೋಹಣ ಮಾಡಲು

ಅವಕಾಶ ಕೊಡಬೇಕೆಂದು ಆಮೇಲೆ ರಾಜ ಕೇಳುತ್ತಾನೆ. ಇಂದ್ರನು ತಥಾಸ್ತು ಎನ್ನುತ್ತಾನೆ. ರಾಜನ ಮಗನಾದ ಲೋಹಿತಾಶ್ವನನ್ನು ತನ್ನ ಉತ್ತರಾಧಿಕಾರಿಯಾಗಿ ವಿಶ್ವಾಮಿತ್ರನು ಪಟ್ಟಾಭಿಷೇಕ ಮಾಡಿದ ಮೇಲೆ ಹರಿಶ್ಚಂದ್ರ ಅವನ ಗೆಳೆಯರು ಮತ್ತು ಅನುಯಾಯಿಗಳೆಲ್ಲರೂ ಕೂಡಿ ಸ್ವರ್ಗಕ್ಕೆ ಹೋಗುತ್ತಾರೆ. ಇದೆಲ್ಲ ಸಾಂಗವಾಗಿ ನೆರವೇರಿದ ಮೇಲೆ ಹನ್ನೆರಡು ವರ್ಷಗಳ ಕಾಲ ಗಂಗೆಯಲ್ಲಿ ಜಲವಾಸವನ್ನು ಮುಗಿಸಿ ದೇವಾನುದೇವತೆಗಳಲ್ಲಿ ಬ್ರಾಹ್ಮಣರಲ್ಲಿ ಭಕ್ತಿಯುಳ್ಳವನೂ ಸದ್ಗುಣಸಂಪನ್ನನೂ ಆದ ಹರಿಶ್ಚಂದ್ರನಿಗೆ ಕುಲಪುರೋಹಿತನಾದ ವಸಿಷ್ಠನು ಬಂದಾಗ, ನಡೆದುದೆಲ್ಲವನ್ನೂ ಕೇಳಿ, ಅಂಥ ಉತ್ತಮೋತ್ತಮ ಚಕ್ರವರ್ತಿಗೆ ವಿಧಿಸಿದ ಕಡುಕಷ್ಟಗಳನ್ನು ತಿಳಿದು ತನ್ನ ನೂರು ಜನ ಪುತ್ರರು ವಿಶ್ವಾಮಿತ್ರನಿಂದ ವಧೆಯಾದಾಗಲು ಕೂಡ ಆಗದಿದ್ದಷ್ಟು ಕ್ರೋಧೋನ್ಮತ್ತನಾಗಿ, ವಿಶ್ವಾಮಿತ್ರನನ್ನು ಕೊಕ್ಕರೆಯಾಗೆಂದು ಈ ಮುಂದಿನ ಮಾತುಗಳಿಂದ ಶಪಿಸುತ್ತಾನೆ: "ಎಲೈ ದುಷ್ಟನೇ, ಬ್ರಾಹ್ಮಣರ ವೈರಿಯೇ, ನನ್ನಿಂದ ಶಾಪಗ್ರಸ್ತನಾಗಿ, ಜ್ಞಾನಿಗಳ ಸಮುದಾಯದಿಂದ ಬಹಿಷ್ಕೃತನಾಗಿ, ವಿವೇಕಹೀನನಾಗಿ ನೀನು ಬಕಪಕ್ಷಿಯಾಗು." ವಿಶ್ವಾಮಿತ್ರನೂ ಪ್ರತಿಶಾಪ ಕೊಟ್ಟು ವಸಿಷ್ಠನನ್ನು ಅರಿ ಎಂಬ ಪಕ್ಷಿ ಜಾತಿಗೆ ರೂಪಾಂತರಿಸುತ್ತಾನೆ. ಅರಿಪಕ್ಷಿ ಎರಡು ಸಾವಿರ ಯೋಜನೆಗಳ (೧೮,೦೦೦ ಮೈಲಿಗಳು) ಎತ್ತರದಲ್ಲಿಯೂ, ಬಕಪಕ್ಷಿಯು ೩೦೯೦ ಯೋಜನೆಗಳ ಭಾರಿ ಎತ್ತರದಲ್ಲಿಯೂ ನಿಂತು ತಮ್ಮ ಹೊಸರೂಪಗಳಲ್ಲಿ ಪ್ರಚಂಡ ರಭಸದಿಂದ ಹೋರಾಡಿದವು. ಮೊದಲು ಅವು ತಮ್ಮ ರೆಕ್ಕೆಗಳಿಂದ ಬಡಿದಾಡಿದವು. ಆಮೇಲೆ ಇದೇ ರೀತಿಯಲ್ಲಿ ಬಕನು ತನ್ನ ಎದುರಾಳಿಯನ್ನು ಹೊಡೆದರೆ, ಅರಿಯು ತನ್ನ ನಖಗಳಿಂದ ಅದನ್ನು ಹೊಡೆದನು. ಅವುಗಳ ರೆಕ್ಕೆ ಬಡಿತದಿಂದುಂಟಾದ ದೊಡ್ಡ ಬಿರುಗಾಳಿಗಳಿಂದ ಉರುಳಿದ ಪರ್ವತಗಳು ಇಡಿ ಭೂಮಂಡಲವನ್ನು ಅಲುಗಾಡಿಸುತ್ತವೆ, ಸಾಗರದ ನೀರು ಉಕ್ಕುತ್ತದೆ, ಭೂಮಿ ಪಾತಾಳದ ಕಡೆಗೆ ತೂರಿಹೋಗುತ್ತದೆ. ಈ ನಾನಾ ಅಲ್ಲೋಲಕಲ್ಲೋಲಗಳಿಂದ ಅನೇಕ ಜೀವರಾಶಿಗಳು ನಾಶವಾದವು. ಈ ಭಯಂಕರ ಅವ್ಯವಸ್ಥೆಯಿಂದ ಸೆಳೆಯಲ್ಪಟ್ಟ ದೇವಾನುದೇವತೆಗಳ ಜೊತೆಯಲ್ಲಿ ಬ್ರಹ್ಮನೇ ಬಂದು ಕದನವನ್ನು ನಿಲ್ಲಿಸುವಂತೆ ಅವುಗಳಿಗೆ ಆಜ್ಞಾಪಿಸುತ್ತಾನೆ. ಘೋರ ಭಯಂಕರ ಕೋಪದಲ್ಲಿದ್ದ ಅವು ಈ ಆಜ್ಞೆಯನ್ನು ಕೇಳುವ ಸ್ಥಿತಿಯಲ್ಲಿರಲಿಲ್ಲ. ಆದರೆ ಅವುಗಳನ್ನು ಅವರ ನಿಜರೂಪಕ್ಕೆ ಪರಿವರ್ತಿಸಿ ಆ ಕಾಳಗವನ್ನು ಬ್ರಹ್ಮ ನಿಲ್ಲಿಸಿದನು. ಹಾಗೂ ಅವುಗಳಿಗೆ ಬುದ್ಧಿವಾದ ಹೇಳಿ ಸಮಾಧಾನಪಡಿಸುತ್ತಾನೆ."

ಅವರು ಮತ್ತೆ ವಿರೋಧಿಗಳಾಗಿ ಕಾಣಿಸಿಕೊಳ್ಳುವುದು ಅಯೋಧ್ಯೆಯ ಮಹಾರಾಜನಾದ ಅಂಬರೀಶನ ಉಪಾಖ್ಯಾನದಲ್ಲಿ:

ಅಂಬರೀಶ[೧] ಯಜ್ಞದಲ್ಲಿ ತೊಡಗಿದ್ದಾಗ ಇಂದ್ರ ಯಜ್ಞಪಶುವನ್ನು ಅಪಹರಿಸಿದನೆಂಬ ಕಥೆಯಿದೆ. ರಾಜನ ದುರಾಡಳಿತದ ಸಲುವಾಗಿ ಇಂಥ ಅಪಶಕುನ ನಡೆಯಿತೆಂದೂ ಅದಕ್ಕೆ ಮಹಾಪರಿಹಾರ ನೀಡಬೇಕೆಂದೂ, ನರಬಲಿಯನ್ನು ಕೊಟ್ಟ ಹೊರತು ಆಗುವುದಿಲ್ಲವೆಂದೂ ಪುರೋಹಿತ ಹೇಳಿದನು. ದೀರ್ಘ ಹುಡುಕಾಟದ ನಂತರ ಮಹಾರಾಜ ಅಂಬರೀಷನು ಭೃಗುವಿನ ವಂಶಸ್ಥನಾದ ಬ್ರಹ್ಮರ್ಷಿ ಋಚೀಕನನ್ನು ಕಂಡು ಯಜ್ಞಪಶುವಾದ ಅವನ ಒಬ್ಬ

೧. ಮ್ಯೂರ್: ಸಂ. I, ಪುಟಗಳು ೪೦೫–೪೦೭

ಮಗನನ್ನು ತಾನು ಮಾರುವುದಿಲ್ಲವೆಂದು ತಂದೆಯೂ, ಕಿರಿಯ ಮಗನನ್ನು ವಿಕ್ರಯಿಸುವುದಿಲ್ಲವೆಂದು ತಾಯಿಯೂ ಹೇಳಿದರು. ಇವರು ಸಾಮಾನ್ಯವಾಗಿ ಅವನ ಮಾತಾಪಿತೃಗಳಿಗೆ ಪ್ರಿಯರಾದವರೆಂದು ಆಕೆ ಹೇಳಿದಳು. ಎರಡನೆಯ ಮಗನಾದ ಶುನಶ್ಶೇಪನು ತಾನು ತನ್ನ ತಾಯಿತಂದೆಗಳಿಗೆ ಬೇಡವಾದವನೆಂದೂ ತನ್ನನ್ನು ಕೊಂಡುಕೊಂಡು ಹೋಗಬಹುದೆಂದು ಹೇಳಿದನು. ನೂರು ಸಾವಿರ ಗೋವುಗಳನ್ನೂ, ಹತ್ತ ದಶಲಕ್ಷ ಚಿನ್ನದ ನಾಣ್ಯಗಳನ್ನೂ, ಆಭರಣಗಳ ರಾಶಿಯನ್ನೂ ತೆತ್ತು ಶುನಶ್ಶೇಪನನ್ನು ಕೊಂಡುಕೊಂಡನು. ಪುಷ್ಕರದ ಮೂಲಕ ಅವರು ಹೋಗುತ್ತಿದ್ದಾಗ ಶುನಶ್ಶೇಪನು ಇತರ ಋಷಿಗಳ ಜೊತೆ ತಪಸ್ಸಿನಲ್ಲಿ ತೊಡಗಿದ್ದ ತನ್ನ ಸೋದರಮಾವ ವಿಶ್ವಾಮಿತ್ರನನ್ನು ಕಂಡು ಅವನ ಮೊರೆ ಹೊಕ್ಕನು. ತನ್ನನ್ನು ಕಾಪಾಡಬೇಕೆಂದು ತನ್ನ ದುಸ್ಥಿತಿಯನ್ನು ಅವನಿಗೆ ಹೇಳಿಕೊಂಡನು.

"ಅವನನ್ನು ವಿಶ್ವಾಮಿತ್ರ ಸಮಾಧಾನಪಡಿಸಿದನು. ಶುನಶ್ಶೇಪನ ಜಾಗದಲ್ಲಿ ಯಜ್ಞಪಶುಗಳಾಗಿರೆಂದು ತನ್ನ ಪುತ್ರರಿಗೆ ಒತ್ತಾಯಪಡಿಸಿದನು. ಈ ಸೂಚನೆಯನ್ನು ಕೇಳಿ ಮಧುಶ್ಛಂದ ಮುಂತಾದ ಅವನ ಪುತ್ರರು ಅದನ್ನು ತಿರಸ್ಕರಿಸಿ ಈ ರೀತಿ ಗರ್ವದಿಂದ ಗೇಲಿಯಿಂದಲೂ ಹೇಳಿದರು: "ನೀನು ನಿನ್ನ ಪುತ್ರರನ್ನು ಬಲಿಕೊಟ್ಟು ಬೇರೆಯವರ ಪುತ್ರನನ್ನು ರಕ್ಷಿಸುತ್ತಿರುವೆಯಲ್ಲ? ತನ್ನ ಮೈಯ ಮಾಂಸವನ್ನು ತಾನೇ ತಿನ್ನುವಂತೆ. ಇದು ತಪ್ಪೆಂದೇ ನನಗನ್ನಿಸುತ್ತದೆ." ಇದರಿಂದ ಕುಪಿತನಾದ ಆ ಮಹರ್ಷಿ ಅತ್ಯಂತ ಕೀಳುಜಾತಿಯಲ್ಲಿ ವಸಿಷ್ಠನ ಮಕ್ಕಳಂತೆ ನೀವು ಹುಟ್ಟಿರಿ. ನಾಯಿ ಮಾಂಸವನ್ನು ತಿಂದು ಒಂದು ಸಾವಿರ ವರ್ಷಗಳವರೆಗೆ ಬದುಕಿರಿ ಎಂದು ಶಾಪವಿತ್ತನು. ಆಗ ಅವನು ಶುನಶ್ಶೇಪನಿಗೆ ಹೇಳಿದನು: "ನಿನ್ನನ್ನು ಪವಿತ್ರ ಪಾಶದಿಂದ ಬಂಧಿಸಿ ವಿಷ್ಣುವಿನ ಯೂಪಸ್ತಂಭಕ್ಕೆ ಕಟ್ಟಿದಾಗ ಅಗ್ನಿಯನ್ನು ಕುರಿತು ಈ ದಿವ್ಯ ಮಂತ್ರಗಳನ್ನು ಅಂಬರೀಷನ ಯಜ್ಞಕಾಲದಲ್ಲಿ ಜಪಿಸು. ಆಗ ನಿನಗೆ ನಿನ್ನ ಇಷ್ಟಾರ್ಥ ಸಿದ್ಧಿಸುತ್ತದೆ." ಎರಡು ಮಂತ್ರಗಳನ್ನು ಸ್ವೀಕರಿಸಿ, ಶುನಶ್ಶೇಪನು ಮಹಾರಾಜನಿಗೆ ನಡೆ ಹೋಗೋಣ ಎಂದನು. ಕೆಂಪು ವಸ್ತ್ರವನ್ನು ತೊಡಿಸಿ ಅವರನ್ನು ಬಲಿಕೊಡಲು ಸ್ತಂಭಕ್ಕೆ ಕಟ್ಟಿದಾಗ ಅವನು 'ಇಬ್ಬರು ದೇವತೆಗಳಾದ ಇಂದ್ರ ಮತ್ತು ಅವನ ಸೋದರ ವಿಷ್ಣುವನ್ನು ಆ ಎರಡು ಮಂತ್ರ (ಗಾಥೆಗಳಿಂದ) ಸ್ತುತಿಸಿದನು. ಸಹಸ್ರಾಕ್ಷನಾದ ಇಂದ್ರನು ರಹಸ್ಯ ಮಂತ್ರದಿಂದ ಸುಪ್ರೀತನಾಗಿ ಶುನಶ್ಶೇಪನಿಗೆ ದೀರ್ಘಾಯುಷ್ಯವನ್ನು ದಯಪಾಲಿಸಿದನು."

ಮಹಾರಾಜ ಕಲ್ಮಾಶಪಾದನ ಕಥೆಯಲ್ಲಿ ಈ ಇಬ್ಬರು ವೈರಿಗಳು ಬರುವುದೇ ಕೊನೆಯ ವೃತ್ತಾಂತ. ಈ ಕಥೆ ಮಹಾಭಾರತದ ಆದಿಪರ್ವದಲ್ಲಿ ದಾಖಲಾಗಿದೆ:

"[೧]ಕಲ್ಮಾಶಪಾದ ಇಕ್ಷ್ವಾಕು ವಂಶಕ್ಕೆ ಸೇರಿದ ಮಹಾರಾಜ. ವಿಶ್ವಾಮಿತ್ರ ಅವನ ಅಧಿಕೃತ ಪುರೋಹಿತನಾಗಲು ಇಚ್ಛೆಪಟ್ಟನು. ಆದರೆ ಆ ಮಹಾರಾಜ ವಸಿಷ್ಠನನ್ನು ನೇಮಿಸಿಕೊಂಡನು." ಒಮ್ಮೆ ಆ ರಾಜನು ಬೇಟೆಗೆ ಹೋಗಿ ಅನೇಕ ಮೃಗಗಳನ್ನು ಕೊಂದು ಹಸಿವು ನೀರಡಿಕೆಗಳಿಂದ ತುಂಬ ಬಳಲಿದನು. ದಾರಿಯಲ್ಲಿ ಸಿಕ್ಕಿದ ವಸಿಷ್ಠನ ನೂರು ಜನ ಪುತ್ರರಲ್ಲಿ ಜ್ಯೇಷ್ಠನಾದ ಶಕ್ತಿಗೆ ದಾರಿಯನ್ನು ಬಿಟ್ಟು ಅತ್ತ ತೊಲಗು ಎಂದು ಆಜ್ಞಾಪಿಸಿದನು. ಆ ಪುರೋಹಿತನು ಸಭ್ಯವಾಗಿ ಹೀಗೆಂದನು: "ಎಲೈ ರಾಜನೇ, ಈ ದಾರಿ ನನ್ನದು. ಇದು ಸನಾತನ ಧರ್ಮ.

೧. ಮ್ಯೂರ್: ಸಂ. I, ಪುಟಗಳು ೪೧೫–೧೭.

ಬ್ರಾಹ್ಮಣನಿಗೆ ರಾಜನು ದಾರಿಯನ್ನು ಬಿಟ್ಟುಕೊಡಬೇಕೆಂದು ಶಾಸ್ತ್ರಗಳು ಹೇಳುತ್ತವೆ." ಅವರಿಬ್ಬರಲ್ಲಿ ಒಬ್ಬರೂ ಜಗ್ಗದೇ ಇದ್ದಾಗ ವಾಗ್ವಾದ ಬಿಸಿಯಾಯಿತು. ರಾಜ ತನ್ನ ಚಾವಟಿಯಿಂದ ಆ ಮುನಿಗೆ ಹೊಡೆದನು. ಅವಮಾನಿತ ಋಷಿಗಳು ಸಾಮಾನ್ಯವಾಗಿ ಮಾಡುವ ರೀತಿಯಲ್ಲಿ ಆ ಮುನಿಯು ರಾಜನಿಗೆ ನರಭಕ್ಷಕನಾಗೆಂದು ಶಪಿಸಿದರು. ಆ ಸಮಯದಲ್ಲಿ ಕಲ್ಮಾಷಪಾದ ರಾಜನಿಗೆ ಪುರೋಹಿತನಾಗಬೇಕೆಂಬ ಇಬ್ಬರೂ ತಮ್ಮ ಹಕ್ಕನ್ನು ಚಲಾಯಿಸಿದ್ದರಿಂದ ಅವರಲ್ಲಿ ವೈರವಿತ್ತು. ವಿಶ್ವಾಮಿತ್ರ ಆ ರಾಜನನ್ನು ಹಿಂಬಾಲಿಸಿದನು. ಅವನು ಶಕ್ತಿಯ ಜೊತೆ ವಾಗ್ವಾದ ನಡೆಸುತ್ತಿದ್ದಾಗ ಅವನನ್ನು ಕಂಡನು. ತನ್ನ ಶತ್ರು ವಸಿಷ್ಠನ ಮಗನಿರುವುದನ್ನು ನೋಡಿ ವಿಶ್ವಾಮಿತ್ರ ಅಗೋಚರನಾಗಿ ಅವರನ್ನು ದಾಟಿ ತನ್ನ ಅವಕಾಶಕ್ಕಾಗಿ ಹೊಂಚುಹಾಕುತ್ತಿದ್ದನು. ಶಕ್ತಿಯ ಕ್ಷಮಾಪಣೆಯನ್ನು ರಾಜನು ಬೇಡಲು ಶುರು ಮಾಡಿದನು. ಆದರೆ ಅವರಲ್ಲಿ ಉಂಟಾಗುವ ಸೌಹಾರ್ದತೆಯನ್ನು ತಪ್ಪಿಸುವ ಆಸೆಯಿಂದ ನರಭಕ್ಷಕನಾದ ರಾಕ್ಷಸನನ್ನು ರಾಜನ ದೇಹವನ್ನು ಪ್ರವೇಶಿಸುವಂತೆ ಆಜ್ಞಾಪಿಸಿದನು. ಬ್ರಹ್ಮರ್ಷಿಯ ಶಾಪದ ಪ್ರಭಾವಕ್ಕೂ ವಿಶ್ವಾಮಿತ್ರನ ಆಜ್ಞೆಗೂ ಒಳಗಾಗಿ ಆ ರಾಕ್ಷಸ ಆಜ್ಞೆಯನ್ನು ವಿಧೇಯನಾಗಿ ಪಾಲಿಸಿದನು. ತನ್ನ ಉದ್ದೇಶ ಈಡೇರಿದ್ದುದನ್ನು ನೋಡಿ ಆದದ್ದಾಗಲೆಂದು ತನ್ನ ದೇಶದಿಂದ ದೂರ ಹೋದನು. ಹಸಿದ ಬ್ರಾಹ್ಮಣನನ್ನು ನೋಡಿದ ಆ ರಾಜನು ತನ್ನ ಅಡಿಗೆಯವನ ಮೂಲಕ (ಇವನಿಗೆ ಬೇರೇನು ಸಿಗದಿದ್ದರಿಂದ) ಉಣ್ಣಲು ನರಮಾಂಸವನ್ನು ಕಳುಹಿಸಿದ್ದರಿಂದ ಶಕ್ತಿಯು ಶಾಪಕೊಟ್ಟಂತೆ ಇವನಿಂದಲೂ ಶಾಪಕ್ಕೆ ಒಳಗಾದ. ಶಾಪದ ಬಲ ಹೆಚ್ಚಿದ್ದರಿಂದ ಮೊದಲ ಬಲಿಪಶುವಾದ ಶಕ್ತಿಯನ್ನು ರಾಜನು ತಿಂದನು. ವಿಶ್ವಾಮಿತ್ರನ ಪ್ರಚೋದನೆಯಿಂದಾಗಿ ವಸಿಷ್ಠನ ಇತರ ಪುತ್ರರಿಗೂ ಈ ಗತಿ ಒದಗಿತು. ಶಕ್ತಿ ಸತ್ತಿರುವನೆಂದು ಭಾವಿಸಿದ ವಿಶ್ವಾಮಿತ್ರ ಮತ್ತೆ ಆ ರಾಕ್ಷಸನನ್ನು ವಸಿಷ್ಠನ ಪುತ್ರರ ವಿರುದ್ಧ ಪ್ರಚೋದಿಸಿದನು. ಶಕ್ತಿಗಿಂತ ಕಿರಿಯವರಾದ ಆ ಎಲ್ಲ ಪುತ್ರರನ್ನೂ ಆ ಕ್ರೂರ ರಾಕ್ಷಸ ಕಾಡಿನಲ್ಲಿ ಜಿಂಕೆಗಳನ್ನು ಸಿಂಹವು ತಿನ್ನುವಂತೆ ತಿಂದುಹಾಕಿದನು. ತನ್ನ ಪುತ್ರರೆಲ್ಲ ವಿಶ್ವಾಮಿತ್ರನಿಂದ ನಾಶವಾದುದನ್ನು ಕೇಳಿ ಭೂಮಿಯು ಮಹಾಪರ್ವತವನ್ನು ಭರಿಸಿರುವಂತೆ ಅವನು ತನ್ನ ಶೋಕವನ್ನು ಸಹಿಸಿಕೊಂಡನು. ಅವನು ತನ್ನ ಮಕ್ಕಳ ನಾಶದ ಬಗ್ಗೆ ಯೋಚಿಸಿದನೇ ಹೊರತು ಕೌಶಿಕ ತನಯರನ್ನು ನಿರ್ನಾಮ ಮಾಡಬೇಕೆಂದು ಯೋಚಿಸಲಿಲ್ಲ. ಈ ಮಹರ್ಷಿಯು ಮೇರು ಪರ್ವತದಿಂದ ಕೆಳಗುರುಳಿದರೂ ಹತ್ತಿಯ ರಾಶಿಯ ಮೇಲೆ ಬೀಳುವಂತೆ ಬಂಡೆಗಳ ಮೇಲೆ ಬಿದ್ದನು. ಬಿದ್ದರೂ ಸಾವು ಬರದಿದ್ದನ್ನು ನೋಡಿ ಕಾಡಿನಲ್ಲಿ ಕಾಳ್ಗಿಚ್ಚನ್ನು ಪ್ರವೇಶಿಸಿದನು, ಆದರೆ ಧಗಧಗನೆ ಉರಿಯುತ್ತಿದ್ದ ಆ ಬೆಂಕಿಯು ಅವನನ್ನು ಸುಡದೆ ತಣ್ಣಗಾಯಿತು. ಅನಂತರ ತನ್ನ ಕುತ್ತಿಗೆಗೆ ದಪ್ಪನಾದ ಬಂಡೆಯನ್ನು ಕಟ್ಟಿಕೊಂಡು ಸಮುದ್ರಕ್ಕೆ ಹಾರಿದನು. ಆದರೆ ಸಮುದ್ರದ ಅಲೆಗಳು ಅವನನ್ನು ದಡಕ್ಕೆ ತಂದು ಹಾಕಿದವು. ಆಮೇಲೆ ಅವನು ತನ್ನ ಆಶ್ರಮಕ್ಕೆ ಹೋದನು. ಆದರೆ ಅದು ಖಾಲಿಯೂ ನಿರ್ಜನವೂ ಆಗಿದ್ದುದನ್ನು ಕಂಡು ಅವನಿಗೆ ದುಃಖ ಮತ್ತೆ ಒತ್ತರಿಸಿ ಬಂದು ಹೊರಹೊರಟನು. ಆಗತಾನೆ ಬಿದ್ದ ಮಳೆಯಿಂದ ವಿಪಾಸ ನದಿಯು ಪ್ರವಾಹದಿಂದ ಭೋರ್ಗರೆದು ಇಕ್ಕೆಲಗಳಲ್ಲೂ ಇದ್ದ ಅನೇಕ ವೃಕ್ಷಗಳನ್ನು ಕೊಚ್ಚಿಕೊಂಡು ಹೋಗುತ್ತಿದ್ದುದನ್ನು ನೋಡಿ ಮುಳುಗಿ ಸಾಯುವ ಉದ್ದೇಶದಿಂದ ತನ್ನ ಶರೀರವನ್ನು ಹಗ್ಗದಿಂದ ಕಟ್ಟಿಕೊಂಡು ಅದರಲ್ಲಿ ಧುಮುಕಿದನು. ಆದರೆ ಅವನ ಕಟ್ಟುಗಳನ್ನೆಲ್ಲ ಕಳಚಿ ವಿಪಾಸ ನದಿಯು ಅವನನ್ನು ದಡಕ್ಕೆ ತಂದು ಬಿಟ್ಟಿತು.

ಹಾಗಾಗಿ ಆ ನದಿಗೆ ಆ ಋಷಿಯ ಹೆಸರೇ ಪ್ರಾಪ್ತವಾಯಿತು. ಆಮೇಲೆ ಅವನು ಮೊಸಳೆಗಳಿಂದ ತುಂಬಿ ಹರಿಯುತ್ತಿದ್ದ ಭೀಕರ ಶತದ್ರು (ಸಟ್ಲೇಜ್) ನದಿಯನ್ನು ನೋಡಿ ಅದರೊಳಕ್ಕೆ ಧುಮುಕಿದನು. ಹೀಗೆ ಧುಮುಕಿದ ಆ ಬ್ರಾಹ್ಮಣನು ಅಗ್ನಿಯಂತೆ ಪ್ರಜ್ವಲಿಸುತ್ತಿರುವುದನ್ನು ಕಂಡು ನೂರಾರು ದಿಕ್ಕುಗಳಿಗೆ ಚಲ್ಲಾಪಿಲ್ಲಿಯಾಗಿ ಹರಿದುದರಿಂದ ಅದಕ್ಕೆ ಶತದ್ರು ಎಂದು ಹೆಸರು ಬಂದಿತು. ಇದರ ಪರಿಣಾಮವಾಗಿ ಅವನು ಮತ್ತೊಮ್ಮೆ ಬದುಕುಳಿದನು. ತಾನು ಸಾಯದೇ ಇರುವುದನ್ನು ಕಂಡು ಅವನು ಆಶ್ರಮಕ್ಕೆ ಮರಳಿದನು."

ಅವರಿಬ್ಬರ ನಡುವಣ ಸಾಮಾನ್ಯ ವೈರತ್ವದ ಬಗ್ಗೆ ಕೆಲವು ವಿಶಿಷ್ಟ ನಿದರ್ಶನಗಳು ಮಾತ್ರ ಇವೆ. ಈ ಸಾಮಾನ್ಯ ವೈರತ್ವ ಯಾವ ಮಟ್ಟಕ್ಕೆ ಇದ್ದಿತು ಎಂದರೆ ವಸಿಷ್ಠನನ್ನು ಕೊಲೆ ಮಾಡಲೂ ವಿಶ್ವಾಮಿತ್ರ ಇಷ್ಟಪಟ್ಟನು. ಇದು ಮಹಾಭಾರತದ ಶಲ್ಯ ಪರ್ವದಲ್ಲಿ ನಿರೂಪಿತವಾಗಿದೆ. ಮಹಾಭಾರತಕಾರ ಹೇಳುತ್ತಾನೆ:

"[೧]ವಿಶ್ವಾಮಿತ್ರ ಮತ್ತು ಬ್ರಹ್ಮರ್ಷಿ ವಸಿಷ್ಠರ ನಡುವಣ ತಪಸ್ಸಿನ ಸ್ಪರ್ಧೆಯಿಂದ ಅವರ ಮಹಾ ವೈರ ಬೆಳೆಯಿತು. ಸ್ಥಾಣು ತೀರ್ಥದ ಬಳಿ ವಸಿಷ್ಠನಿಗೆ ವಿಸ್ತಾರವಾದ ಆಶ್ರಮವಿತ್ತು. ಅದರ ಪೂರ್ವಕ್ಕೆ ವಿಶ್ವಾಮಿತ್ರನ ಆಶ್ರಮವಿತ್ತು... ಈ ಇಬ್ಬರು ಮಹರ್ಷಿಗಳೂ ಪ್ರತಿ ದಿನ ತಪಸ್ಸಿನಲ್ಲಿ ಒಬ್ಬರನ್ನೊಬ್ಬರು ಮೀರಿಸಬೇಕೆಂದು ಸ್ಪರ್ಧಿಸುತ್ತಿದ್ದರು. ಆದರೆ ವಸಿಷ್ಠನ ಪರಾಕ್ರಮವನ್ನು ಅರಿತ ವಿಶ್ವಾಮಿತ್ರನಿಗೆ ಅತ್ಯಂತ ಖೇದವಾಯಿತು. ಅವನು ತುಂಬಾ ಚಿಂತಾಕ್ರಾಂತನಾದನು. ನಿರಂತರವಾಗಿ ತಪಸ್ಸಿನಲ್ಲಿ ತೊಡಗುವ ಈ ಮಹರ್ಷಿಯ ಯೋಚನೆ ಈ ರೀತಿ ಇತ್ತು: "ಅತ್ಯಂತ ಶ್ರೇಷ್ಠ ಮಂತ್ರೋಚ್ಚಾರಕನಾದ ಕಠಿಣ ತಾಪಸಿ ವಸಿಷ್ಠನನ್ನು ಈ ಸರಸ್ವತಿ ನದಿಯು ವೇಗವಾಗಿ ನನ್ನ ಬಳಿ ತರುತ್ತದೆ. ಆ ಶ್ರೇಷ್ಠ ಬ್ರಾಹ್ಮಣ ಇಲ್ಲಿ ಬಂದಾಗ ಅವನನ್ನು ನಾನು ಕೊಲ್ಲುವುದು ಖಂಡಿತ." ಈ ರೀತಿ ನಿರ್ಧರಿಸಿ ಆ ದಿವ್ಯ ಋಷಿಯಾದ ವಿಶ್ವಾಮಿತ್ರನು ರಕ್ತಾರುಣ ನೇತ್ರನಾಗಿ ನದಿಗಳಲ್ಲೆಲ್ಲ ಶ್ರೇಷ್ಠವಾದ ಸರಸ್ವತಿಯನ್ನು ನೆನೆದನು. ಮಹಾ ಬಲಿಷ್ಠನೂ, ಶೀಘ್ರ ಕೋಪಿಷ್ಠನೂ ಆದ ಅವನ ಆಲೋಚನೆಯ ಕೇಂದ್ರವೇ ತಾನಾದುದನ್ನು ತಿಳಿದು ಸರಸ್ವತಿಯು ಆತಂಕಪಟ್ಟಳು. ಆಗ ಗಡಗಡನೆ ನಡುಗುತ್ತಾ ಬಿಳಿಚಿಕೊಂಡು ಕೈಜೋಡಿಸಿಕೊಂಡು ಮುನಿಗಳಲ್ಲೆಲ್ಲಾ ಶ್ರೇಷ್ಠನಾದ ಅವನ ಮುಂದೆ ನಿಂತಳು. ಪತಿಯನ್ನು ಕಳೆದುಕೊಂಡ ಸತಿಯಂತೆ ಅವಳು ಬಹಳ ವ್ಯಾಕುಲಳಾಗಿ ನಾನು ಏನು ಮಾಡಲಿ ಎಂದು ಅವನನ್ನು ಕೇಳಿದಳು. ಚಂಡ ಕೋಪಿಷ್ಠನಾದ ಮುನಿ ಹೇಳಿದನು: "ಕೂಡಲೇ ವಸಿಷ್ಠನನ್ನು ತೆಗೆದುಕೊಂಡು ಬಾ, ಅವನನ್ನು ಕೊಲ್ಲಬೇಕಾಗಿದೆ." ಕಮಲನೇತ್ರಳಾದ ಆ ದೇವಿಯು ತನ್ನ ಕೈ ಜೋಡಿಸಿ ಗಾಳಿಯಲ್ಲಿ ಬಳ್ಳಿಯು ಬಳುಕುವಂತೆ ಮಹಾ ಭಯದಿಂದ ನಡುಗಿದಳು.... ವಿಶ್ವಾಮಿತ್ರನು ಅವಳ ಪರಿಸ್ಥಿತಿಯನ್ನು ಅರಿತುಕೊಂಡರೂ ಕೂಡ ತನ್ನ ಆಜ್ಞೆಯನ್ನು ಪುನರುಚ್ಚರಿಸಿದನು. ಅವನ ಪಾಪಪೂರ್ಣ ಯೋಚನೆಯನ್ನೂ ವಸಿಷ್ಠನ ಪರಾಕ್ರಮದ ಅಸಮಾನ್ಯತೆಯನ್ನೂ ಅರಿತಿದ್ದ ಸರಸ್ವತಿಯು ಕಂಪಿಸುತ್ತಾ, ಇಬ್ಬರು ಮಹರ್ಷಿಗಳೂ ಎಲ್ಲಿ ಶಾಪಕೊಡುವರೋ ಎಂಬ ಮಹಾಭೀತಿಯಿಂದ ವಸಿಷ್ಠನ ಬಳಿಗೆ ಹೋಗಿ ಅವನ ವೈರಿಯ ಆದೇಶವನ್ನು ತಿಳಿಸಿದಳು. ಕೃಶಳಾಗಿ, ಬಿಳಚಿಕೊಂಡು, ಆತಂಕದಿಂದ ಬಂದ ಅವಳನ್ನು ನೋಡಿ ವಸಿಷ್ಠನು ಹೀಗೆ ಹೇಳಿದನು: "ಎಲೈ ನದಿಗಳ ರಾಜ್ಞಿಯೇ, ಚಿಂತೆ ಬಿಡು, ನನ್ನನ್ನು

---

೧. ಮ್ಯೂರ್: ಸಂ. I, ಪುಟಗಳು ೪೨೦–೨೨.

ವಿಶ್ವಾಮಿತ್ರನ ಬಳಿಗೆ ನಿಸ್ಸಂಕೋಚವಾಗಿ ಕರೆದೊಯ್ಯಿ. ಅವನು ನಿನ್ನನ್ನು ಶಪಿಸದಿರಲಿ." ದಯಮಯನಾದ ಆ ಋಷಿಯ ಈ ಮಾತುಗಳನ್ನು ಕೇಳಿ ತಾನು ಹೇಗೆ ವಿವೇಕಯುತವಾಗಿ ನಡೆದುಕೊಳ್ಳಬೇಕೆಂದು ಯೋಚಿಸಿದಳು: "ವಸಿಷ್ಠ ನನಗೆ ಸದಾ ಮಹಾಕರುಣೆಯನ್ನು ತೋರಿಸಿದ್ದಾನೆ, ನಾನು ಅವನ ಯೋಗಕ್ಷೇಮವನ್ನು ನೋಡಿಕೊಳ್ಳಬೇಕು." ಆಗ ಕೌಶಿಕ ಮಹರ್ಷಿಯು ಸರಸ್ವತಿ ನದಿಯಂಚಿನಲ್ಲಿ ನಿಂತು ಅರ್ಘ್ಯ ಕೊಡುತ್ತಿದ್ದುದನ್ನು ನೋಡಿ ಇದೇ ಸದಾವಕಾಶವೆಂದು ಭಾವಿಸಿ ದಡ ಸಮೇತ ಅವನನ್ನು ತನ್ನ ಪ್ರವಾಹದಲ್ಲಿ ಕೊಚ್ಚಿಕೊಂಡು ಹೋದಳು. ಈ ರೀತಿಯಲ್ಲಿ ಮಿತ್ರಾ ವರುಣರ ಮಗನಾದ ವಸಿಷ್ಠನು ಕೊಚ್ಚಿಹೋದನು. ಹೀಗೆ ಅವನು ಹೋಗುತ್ತಿದ್ದಾಗ ನದಿಯನ್ನು ಈ ರೀತಿಯಾಗಿ ಸ್ತುತಿಸಿದನು: "ಎಲೈ ಸರಸ್ವತಿಯೇ, ಬ್ರಹ್ಮಮಾನಸಸಂಭವೇ, ನಿನ್ನ ಅಕರ್ದಮವಾದ ಜಲರಾಶಿಯಿಂದ ಇಡಿ ಭೂಮಂಡಲವನ್ನೇ ವ್ಯಾಪಿಸಿರುವೆ. ನಭೋವಾಸಿಯಾದ ನೀನು, ಮೇಘಗಳಿಗೆ ಜಲಸಿಂಚನ ಮಾಡುವೆ. ಜಲ ಸರ್ವಸ್ವವೆಲ್ಲ ನೀನೇ, ನಿನ್ನಿಂದಲೇ ನಮಗೆ ಜ್ಞಾನ. ನೀನೇ ಸರ್ವಪೋಷಕಿ, ನೀನೇ ತೇಜಸ್ಸು, ನೀನೇ ಕೀರ್ತಿ, ನೀನೇ ಪರಿಪೂರ್ಣ, ನೀನೇ ಬುದ್ಧಿ. ನೀನೇ ಬೆಳಕು. ನೀನೇ ವಾಕ್ಕು, ನೀನೇ ಸ್ವಾಹಾ, ಈ ಜಗತ್ತು ನಿನ್ನಾಧೀನ. ಎಲ್ಲೈ ಚತುರ್ಮುಖ ರೂಪಿಯೇ ಸರ್ವ ಜೀವಿಗಳಲ್ಲಿ ನೀನು ಆವಾಸವಾಗಿರುವೆ"........

ಸರಸ್ವತಿಯು ವಸಿಷ್ಠನನ್ನು ಕರೆತಂದುದನ್ನು ನೋಡಿ ಅವನನ್ನು ಮುಗಿಸಿಬಿಡಲು ವಿಶ್ವಾಮಿತ್ರನು ಆಯುಧವನ್ನು ಹುಡುಕಿದನು. ಅವನ ಕೋಪವನ್ನು ಕಂಡು, ಬ್ರಹ್ಮಹತ್ಯೆಗೆ ಹೆದರಿ ಪೂರ್ವದಿಕ್ಕಿಗೆ ನದಿಯು ವಸಿಷ್ಠನನ್ನು ಕೊಚ್ಚಿಕೊಂಡು ಹೋಯಿತು. ಹೀಗೆ ಅವಳು ಇಬ್ಬರು ಮಹರ್ಷಿಗಳ ಆದೇಶವನ್ನು ಪರಿಪಾಲಿಸಿದವಳಾಗಿ ವಿಶ್ವಾಮಿತ್ರನನ್ನು ನಿವಾರಿಸಿದಳು. ಹೀಗೆ ವಸಿಷ್ಠ ಕೊಚ್ಚಿಹೋದದ್ದನ್ನು ನೋಡಿ, ತಾಳ್ಮೆಗೆಟ್ಟ, ಕೋಪೋದ್ರಿಕ್ತನಾದ ವಿಶ್ವಾಮಿತ್ರನು ಅವಳಿಗೆ ಹೇಳಿದನು: "ಎಲೌ, ಜಲರಾಶಿ ಶ್ರೇಷ್ಠಳೇ, ನನಗೆ ವಂಚಿಸಿ ಹಿಮ್ಮೆಟ್ಟಿದ್ದರಿಂದ ದಾನವ ಮುಖಂಡನಿಗೆ ಹಿತಕರವಾಗುವಂತೆ ರಕ್ತದಲೆಗಳಲ್ಲಿ ಹೊರಳಾಡು." ಹೀಗೆ ಶಪಿತಳಾದ ಸರಸ್ವತಿಯು ಒಂದು ವರ್ಷದ ತನಕ ರಕ್ತ ಮಿಶ್ರಿತ ಹೊಳೆಯಾಗಿ ಹರಿದಳು.... ವಸಿಷ್ಠನು ಕೊಚ್ಚಿಹೋದ ಆ ಪವಿತ್ರ ಸ್ಥಳಕ್ಕೆ ಆಗಮಿಸಿದ ರಾಕ್ಷಸರು ಆ ರಕ್ತಮಯ ಹೊಳೆಯ ನೀರನ್ನು ಮನಸ್ಸು ತೃಪ್ತಿಯಾಗುವವರೆಗೆ ಕುಡಿದು ಸ್ವರ್ಗವನ್ನೇ ಗೆದ್ದರೋ ಎಂಬಂತೆ ಕೇಕೆ ಹಾಕಿ ನಗುತ್ತಾ ಕುಣಿದಾಡಿದರು. ಆ ಸ್ಥಳಕ್ಕೆ ಸ್ವಲ್ಪ ಕಾಲದ ನಂತರ ಬಂದ ಕೆಲವು ಋಷಿಗಳು ಆ ಹೊಳೆ ರಕ್ತರಂಜಿತವಾಗಿರುವುದನ್ನೂ ರಾಕ್ಷಸರು ಆ ನೀರನ್ನು ಗಟಗಟನೆ ಕುಡಿಯುವುದನ್ನೂ ನೋಡಿ ಭಯಪಟ್ಟು ಸರಸ್ವತಿ ನದಿಯನ್ನು ರಕ್ಷಿಸಲು ಅತ್ಯಂತ ಪ್ರಯಾಸಕರವಾದ ಪ್ರಯತ್ನಗಳನ್ನು ಮಾಡಿದರು."

ಇದುವರೆಗೂ ಹೇಳಿದ ಪ್ರಸಂಗಗಳು ಒಬ್ಬ ಬ್ರಾಹ್ಮಣನಿಗೂ ಒಬ್ಬ ಕ್ಷತ್ರಿಯನಿಗೂ ನಡೆದ ವೈಯಕ್ತಿಕ ಸಂಘರ್ಷಗಳಿಗೆ ಸಂಬಂಧಿಸಿದವು. ಮುಂದೆ ಬರುವ ಪ್ರಸಂಗಗಳು ಒಂದು ಕಡೆ ಬ್ರಾಹ್ಮಣರು ಇನ್ನೊಂದು ಕಡೆ ಕ್ಷತ್ರಿಯರು ಇವರ ನಡುವೆ ನಡೆದ ವರ್ಗ ಅಥವಾ ಸಮುದಾಯ ಸಂಘರ್ಷಗಳಾಗಿವೆ. ಅವು ಕೇವಲ ಸಂಘರ್ಷಗಳಲ್ಲ. ಅವು ಕೋಮುಗಲಭೆಗಳಂತೆ ಇದ್ದುವೆಂದು ಹೇಳುವುದೂ ಸರಿಯಲ್ಲ. ಅವು ಒಂದು ಸಮುದಾಯ ಇನ್ನೊಂದು ಸಮುದಾಯವನ್ನು ಮೂಲೋಚ್ಚಾಟನೆ ಮಾಡಬೇಕೆಂದು ಹೊರಟ ವರ್ಗ ಸಂಘರ್ಷಗಳು. ಮಹಾಭಾರತ ಅಂತಹ ಎರಡು ಮೂಲೋಚ್ಚಾಟನಾ ವರ್ಗ ಸಂಘರ್ಷಗಳನ್ನು ದಾಖಲು

ಮಾಡಿದೆ. ಮೊದಲನೆಯದು, ಯುದ್ಧ ಭಾರ್ಗವ ಬ್ರಾಹ್ಮಣರ ಮೇಲೆ ಹೈಹಯ ಕ್ಷತ್ರಿಯರು ನಡೆಸಿದ್ದು. ಅದು ಹೈಹಯ ರಾಜನಾದ ಕೃತವೀರ್ಯನ ಆಳ್ವಿಕೆಯಲ್ಲಿ ನಡೆಯಿತು. ಮಹಾಭಾರತದ ಆದಿಪರ್ವದಲ್ಲಿ ಈ ಯುದ್ಧದ ವರ್ಣನೆ ಈ ರೀತಿ ಇದೆ:

> "ಕೃತವೀರ್ಯನೆಂಬ ರಾಜನಿದ್ದನು. ಅವನ ಔದಾರ್ಯದಿಂದ ವೇದಜ್ಞನಾದ ಭೃಗು ಪುರೋಹಿತನಾಗಿ ನೇಮಕಗೊಂಡು ದವಸಧಾನ್ಯಗಳಿಂದಲೂ ಸಂಪತ್ತಿನಿಂದಲೂ ತುಂಬ ಶ್ರೀಮಂತನಾಗಿದ್ದನು. ಆ ರಾಜನು ಸ್ವರ್ಗಸ್ಥನಾದ ಮೇಲೆ ಸಂಪತ್ತಿನ ಅಭಾವದಿಂದ ಅವನ ವಂಶಸ್ಥರು ಭೃಗು ವಂಶಸ್ಥರಲ್ಲಿ ಸಂಪತ್ತಿದೆಯೆಂದು ತಿಳಿದು ಅದಕ್ಕಾಗಿ ಅವರಲ್ಲಿಗೆ ಬಂದರು. ಆ ಕ್ಷತ್ರಿಯರಿಗೆ ಹೆದರಿ ಅವರಲ್ಲಿ ಕೆಲವರು ತಮ್ಮ ಹಣವನ್ನು ಭೂಮಿಯಲ್ಲಿ ಹೂತಿಟ್ಟರು. ಇನ್ನು ಕೆಲವರು ಬ್ರಾಹ್ಮಣರಿಗೆ ದಾನ ಮಾಡಿದರು. ಮತ್ತೆ ಕೆಲವರು ತಮಗೆ ಬೇಕಾದವರಿಗೆ ಕೊಟ್ಟರು. ಆದರೂ ಕ್ಷತ್ರಿಯರು ನೆಲವನ್ನು ಅಗೆಯುತ್ತಿದ್ದಾಗ ಭೃಗುವಿನ ಮನೆಯಲ್ಲಿ ಸ್ವಲ್ಪ ಹಣವನ್ನು ಪತ್ತೆ ಹಚ್ಚಿದರು. ಈ ನಿಧಿಯನ್ನು ನೋಡಿ ಆ ಕ್ಷತ್ರಿಯರೆಲ್ಲಾ ಕೆರಳಿ ಗರ್ಭಸ್ಥ ಮಗುವನ್ನೂ ಬಿಡದೆ ತಾವು ತುಂಬ ತುಚ್ಛವಾಗಿ ಕಾಣುತ್ತಿದ್ದ ಎಲ್ಲ ಭೃಗುಗಳನ್ನೂ ಕೊಂದರು. ಅವರ ವಿಧವೆಯರು ಹಿಮಾಲಯ ಪರ್ವತಕ್ಕೆ ಪಲಾಯನ ಮಾಡಿದರು. ಅವರಲ್ಲೊಬ್ಬಳು ಇನ್ನೂ ಹುಟ್ಟದ ತನ್ನ ಮಗುವನ್ನು ತೊಡೆಯಲ್ಲಿ ಬಚ್ಚಿಟ್ಟುಕೊಂಡಳು. ಬ್ರಾಹ್ಮಣನೊಬ್ಬ ಅದರ ಇರುವಿಕೆಯನ್ನು ತಿಳಿದಿದ್ದರಿಂದ ಆ ಕ್ಷತ್ರಿಯರು ಅದನ್ನು ಕೊಲ್ಲಲು ಹೊರಟರು, ಆದರೆ ತನ್ನ ತಾಯಿಯ ತೊಡೆಯಿಂದ ಚಿಮ್ಮಿದ ಆ ಮಗು ತನ್ನ ತೇಜಸ್ಸಿನಿಂದ ಹಿಂಸಕರನ್ನು ಕುರುಡು ಮಾಡಿತು. ಕೆಲಕಾಲ ಅವರು ಪರ್ವತದ ತಪ್ಪಲುಗಳಲ್ಲಿ ದಿಗ್ಭ್ರಾಂತರಾಗಿ ತಡಕಾಡುತ್ತಾ ತಮ್ಮ ದೃಷ್ಟಿಯನ್ನು ಮತ್ತೆ ಕೊಡಬೇಕೆಂದು ಆ ಮಗುವಿನ ತಾಯಿಯನ್ನು ವಿನಯಪೂರ್ವಕವಾಗಿ ಬೇಡಿದರು. ಆದರೆ ತನ್ನ ಬಂಧುಗಳನ್ನು ಹತ್ಯೆಮಾಡಿದ ಪ್ರತೀಕಾರಕ್ಕಾಗಿ ನಿಮ್ಮ ದೃಷ್ಟಿಯನ್ನು ಹಾಳುಮಾಡಿರುವ ಆ ವೇದವೇದಾಂಗ ಪಾರಂಗತನಾದ ನನ್ನ ಅದ್ಭುತ ಕಂದ ಔರ್ವ ಮಾತ್ರ ನಿಮಗೆ ಮರಳಿ ದೃಷ್ಟಿಯನ್ನು ಕೊಡಬಲ್ಲನು ಎಂದು ಸೂಚಿಸಿದಳು. ಆ ಪ್ರಕಾರವಾಗಿ ಅವರು ಅವನ ಬಳಿ ಹೋದಾಗ ಅವರಿಗೆ ಮರಳಿ ದೃಷ್ಟಿ ದೊರಕಿತು. ಆದರೆ ಭೃಗುಗಳನ್ನೆಲ್ಲ ವಧಿಸಿದ ಸೇಡಿಗಾಗಿ ಎಲ್ಲ ಜೀವಿಗಳನ್ನೂ ನಾಶಮಾಡಲು ಔರ್ವ ಯೋಚಿಸಿ ದೇವತೆಗಳು ಅಸುರರು ಮತ್ತು ಮಾನವರೆಲ್ಲ ಗಾಬರಿಗೊಳ್ಳುವಂಥ ತಪಸ್ಸನ್ನು ಆಚರಿಸಿದನು. ಆದರೆ ಅವನ ಪಿತೃಗಳು ಕಾಣಿಸಿಕೊಂಡು ಕ್ಷತ್ರಿಯರ ಮೇಲೆ ಸೇಡು ತೀರಿಸಿಕೊಳ್ಳುವ ಆಸೆ ತಮಗಿಲ್ಲವೆಂದು ಅವನ ಉದ್ದೇಶವನ್ನು ಬದಲಾಯಿಸಿದರು. ಹಂತಕರಾದ ಕ್ಷತ್ರಿಯರು ನಡೆಸಿದ ನರಹತ್ಯೆಯನ್ನು ಧರ್ಮಿಷ್ಠರಾದ ಭೃಗುಗಳು ಕ್ಷಮಿಸಿದ್ದು ಅವರ ದೌರ್ಬಲ್ಯದಿಂದಲ್ಲ. ನಾವು ಮುದಿತನದಿಂದ ಬಸವಳಿದಿದ್ದಾಗ ಅವರು ನಮ್ಮನ್ನು ಕೊಂದರೆ ಕೊಲ್ಲಲಿ ಎಂದು ಬಯಸಿದೆವು. ಕ್ಷತ್ರಿಯರನ್ನು ಕೆರಳಿಸುವ ಉದ್ದೇಶದಿಂದ ಭೃಗುವಿನ ಮನೆಯಲ್ಲಿ ಯಾರೋ ಹಣವನ್ನು ಬಚ್ಚಿಟ್ಟರು. "ಸ್ವರ್ಗದಾಸೆಯಿದ್ದ ನಮಗೆ ಹಣ ಏಕೆ ಬೇಕಿತ್ತು?" ತಾವು ಆತ್ಮಹತ್ಯೆಯ ಪಾಪಕ್ಕೆ ಗುರಿಯಾಗಬಾರದೆಂದು ಈ ಯೋಜನೆಯನ್ನು ಹುಡುಕಿದೆವು. ಆದ್ದರಿಂದ ನೀನು ನಿನ್ನ ಕ್ರೋಧವನ್ನು ಬಿಡು, ನೀನು ಮಾಡಹೊರಟಿರುವ ಪಾಪದಿಂದ ದೂರವಾಗು" ಎಂದು ಅವನಿಗೆ ಹೇಳಿದರು. "ಓ ಪುತ್ರನೇ, ಕ್ಷತ್ರಿಯರ ನಾಶ ಬೇಡ ಅಥವಾ ಏಳು ಲೋಕಗಳ ನಾಶವೂ ಬೇಡ. ಹತ್ತಿ ಉರಿಯುವ ನಿನ್ನ ಕೋಪವನ್ನು ಶಮನಗೊಳಿಸು. ಅಲ್ಲದಿದ್ದರೆ ಅದು

ನಿನ್ನ ತಪಶ್ಶಕ್ತಿಯನ್ನು ಕ್ಷಯಿಸುತ್ತದೆ." ಆದರೆ ತನ್ನ ಪ್ರತೀಕಾರ ನಿಲ್ಲದೆಂದು ಔರ್ವ ಉತ್ತರಿಸುತ್ತಾನೆ. ತನ್ನ ಕ್ರೋಧಾಗ್ನಿ ಬೇರೆಯ ವಸ್ತುವನ್ನು ಸುಡದಿದ್ದರೆ ಅದು ತನ್ನನ್ನೇ ಸುಡುತ್ತದೆ ಎಂದು ಹೇಳುತ್ತಾನೆ. ತನ್ನ ಪಿತೃಗಳು ಹೇಳಿದ ಕ್ಷಮಾಪಣೆಯ ವಿರುದ್ಧ ಅವನು ನ್ಯಾಯ, ಔಚಿತ್ಯ ಮತ್ತು ಕರ್ತವ್ಯದ ಆಧಾರದ ಮೇಲೆ ವಾದಿಸುತ್ತಾನೆ. ಆದರೂ ಅವನ ಕೋಪಾಗ್ನಿಯನ್ನು ಸಮುದ್ರಕ್ಕೆ ಎಸೆಯಬೇಕೆಂದು ಅವನ ಪಿತೃಗಳು ಅವನನ್ನು ಒತ್ತಾಯಿಸುತ್ತಾರೆ. ಹಾಗೆ ಎಸೆಯುವುದರಿಂದ ಅದು ಅಲ್ಲೇ ಜಲಶಕ್ತಿಯನ್ನು ಮರ್ದಿಸುತ್ತದೆ ಹಾಗೂ ಈ ರೀತಿಯಾಗಿ ನಿನ್ನ ಸೇಡು ಈಡೇರುತ್ತದೆ."

ಎರಡನೆಯ ವರ್ಗ ಸಂಘರ್ಷವೆಂದರೆ ಹೈಹಯ ಕ್ಷತ್ರಿಯರ ಮೇಲೆ ಬ್ರಾಹ್ಮಣರು ಮಾಡಿದ ವರ್ಗ ನಿರ್ಮೂಲನಾ ಯುದ್ಧ. ಈ ಯುದ್ಧದಲ್ಲಿ ಭಾರ್ಗವ ಬ್ರಾಹ್ಮಣರ ನಾಯಕನಾಗಿದ್ದವನು ಪರಶುರಾಮ. ಪರಶುರಾಮನ ಹುಟ್ಟಿನ ಕತೆಯನ್ನು ವಿಷ್ಣುಪುರಾಣದಲ್ಲಿ ಈ ರೀತಿಯಾಗಿ ಹೇಳಿದೆ:

"ಭೃಗು[೧] ವಂಶಸ್ಥನಾದ ಋಚೀಕ ಎಂಬ ಮುದಿ ಹಾರವನಿಗೆ ಗಾಧಿಯ ಮಗಳಾಗಿದ್ದ ಸತ್ಯವತಿಯನ್ನು ಕೊಟ್ಟು ಲಗ್ನವಾಗಿತ್ತು. ಬ್ರಾಹ್ಮಣ ಲಕ್ಷಣಗಳಿರುವ ಮಗನನ್ನು ತನ್ನ ಹೆಂಡತಿ ಪಡೆಯಲೆಂಬ ಆಸೆಯಿಂದ ಋಚೀಕನು (ಅಕ್ಕಿ, ಬಾರ್ಲಿ, ಬೇಳೆ, ಬೆಣ್ಣೆ ಮತ್ತು ಹಾಲಿನಿಂದ ಮಾಡಿದ) ಚರುಭಕ್ಷ್ಯವನ್ನು ತಯಾರಿಸಿ ತಿನ್ನಲು ಅದನ್ನು ಅವಳಿಗೆ ಕೊಟ್ಟನು. ಅಂಥದೇ ಭೋಜ್ಯವನ್ನು ಅವಳ ತಾಯಿಗೂ ಅವಳಿಗೆ ಕ್ಷತ್ರಿಯ ಪುತ್ರ ಜನಿಸಲೆಂದು ಕೊಟ್ಟನು. ಆದರೆ ಈ ಭೋಜ್ಯಗಳನ್ನು ಅದಲುಬದಲು ಮಾಡುವಂತೆ ಸತ್ಯವತಿಯ ತಾಯಿ ಒತ್ತಾಯಿಸಿದಳು. ಅವಳು ಹಾಗೆ ಮಾಡಿದ್ದಕ್ಕೆ ಅವಳ ಗಂಡ ಅವಳನ್ನು ನಿಂದಿಸಿದನು. ಮೂಲದ ಮಾತುಗಳನ್ನು ಉದ್ಧರಿಸುತ್ತೇನೆ:

"ಎಲೇ ಪಾಪ ಹೆಂಗಸೇ, ಎಂಥ ಆಯುಕ್ತ ಕೆಲಸ ಮಾಡಿದೆ? ಭಯಂಕರ ರೂಪದ ದೇಹವೊಂದು ನನಗೆ ಕಾಣುತ್ತಿದೆ. ನಿನ್ನ ತಾಯಿಗಾಗಿ ಸಿದ್ಧಪಡಿಸಿದ ಚರುವನ್ನು ನೀನು ಭುಜಿಸಿದೆಯಲ್ಲ. ಇದು ತಪ್ಪು. ಆ ಚರುವಿನೊಳಕ್ಕೆ ನಾನು ಶೌರ್ಯ, ಧೈರ್ಯ, ಸಾಹಸ, ಗುಣಗಳನ್ನು ಬೆರೆಸಿದ್ದೆ. ನಿನ್ನದಕ್ಕೆ ಶಾಂತಿ, ಜ್ಞಾನ, ಸಹನೆ ಮುಂತಾದ ಬ್ರಾಹ್ಮಣ ಸಹಜ ಗುಣಗಳನ್ನು ಸೇರಿಸಿದ್ದೆ. ನೀನು ನನ್ನ ಯೋಜನೆಗೆ ವಿರುದ್ಧವಾಗಿ ನಡೆದುಕೊಂಡಿದ್ದರಿಂದ ನಿನಗೆ ಭಯಂಕರನೂ ವೀರನೂ ಹಂತಕನೂ ಆದ ಕ್ಷತ್ರಿಯ ಹುಟ್ಟುತ್ತಾನೆ. ನಿನ್ನ ತಾಯಿಯ ಸಂತಾನ ಬ್ರಾಹ್ಮಣನ ಪ್ರಶಾಂತ ಸ್ವಭಾವವನ್ನು ವರ್ತನೆಯನ್ನೂ ಪ್ರದರ್ಶಿಸುತ್ತದೆ." ಅವನು ಈ ಮಾತುಗಳನ್ನು ಹೇಳಿದ ತಕ್ಷಣವೇ ಸತ್ಯವತಿ ಅಡ್ಡಬಿದ್ದು ತನ್ನ ಪತಿಯ ಪಾದಗಳನ್ನು ಹಿಡಿದುಕೊಂಡಳು. "ಓ ಪತಿದೇವ, ಅಜ್ಞಾನದಿಂದ ನಾನು ವರ್ತಿಸಿದೆ. ನನಗೆ ದಯೆ ತೋರು. ನೀನು ವರ್ಣಿಸಿದಂಥ ಪುತ್ರ ನನಗೆ ಜನಿಸದಿರಲಿ. ನೀನು ಇಚ್ಛಿಸುವೆಯಾದರೆ ಅಂಥ ಮೊಮ್ಮಗ ನನಗೆ ಹುಟ್ಟಲಿ" ಎಂದು ಬೇಡಿಕೊಂಡಳು. ಕಾಲಾನಂತರದಲ್ಲಿ ಅವಳು ಜಮದಗ್ನಿಯನ್ನು ಹಡೆದಳು. ಅವಳ ತಾಯಿ ವಿಶ್ವಾಮಿತ್ರನಿಗೆ ಜನ್ಮವಿತ್ತಳು. ಸತ್ಯವತಿ ಕೌಶಿಕೀ ಎಂಬ ಹೆಸರಿನ ನದಿಯಾದಳು. ಇಕ್ಷ್ವಾಕು ವಂಶದ ರೇಣುವಿನ ಮಗಳಾದ ರೇಣುಕೆಯನ್ನು ಜಮದಗ್ನಿ ಮದುವೆಯಾದನು. ಅವಳಿಂದ ಅವನಿಗೆ ಪರಶುರಾಮನೆಂಬ ಪುತ್ರ ಜನಿಸಿದನು."

೧. ಮ್ಯೂರ್: ಸಂ. I, ಪು. ೩೪೯–೫೦.

ಮಹಾಭಾರತದ ವನ ಪರ್ವದಲ್ಲಿ ಪರಶುರಾಮನ ಕುಲೇತಿಹಾಸಕ್ಕೆ ಸಂಬಂಧಿಸಿದಂತೆ ಅಧಿಕ ವಿವರಗಳು ಈ ರೀತಿಯಾಗಿವೆ:

> "ಜಮದಗ್ನಿ[೧] ಮತ್ತು ಸತ್ಯವತಿಗೆ ಐವರು ಪುತ್ರರಿದ್ದರು. ಅವರಲ್ಲಿ ಕೊನೆಯವನೇ ಹೆಸರಾಂತ ಪರಶುರಾಮ. ಮಾತೃಹತ್ಯೆಗೆ ಉಳಿದ ನಾಲ್ವರು ಪುತ್ರರು ಕೈಹಾಕಲು ತಿರಸ್ಕರಿಸಿದ ಮೇಲೆ (ತನ್ನ ಮುನ್ನಿನ ಪಾವಿತ್ರ್ಯವನ್ನು ಕಳೆದುಕೊಂಡು ಪತಿತಳಾಗಿದ್ದ) ತನ್ನ ಮಾತೆಯನ್ನು ಆತನ ತಂದೆಯ ಅಪ್ಪಣೆಯ ಮೇರೆಗೆ ಕೊಂದುಹಾಕುತ್ತಾನೆ. ಹಾಗೂ ಅವರು ತಮ್ಮ ತಂದೆಯ ಶಾಪದಿಂದ ವಿವೇಕಹೀನರಾಗುತ್ತಾರೆ. ಪರಶುರಾಮನ ಪ್ರಾರ್ಥನೆಯಂತೆ ಅವನ ತಾಯಿ ಜೀವಂತವಾಗುತ್ತಾಳೆ. ಅವನ ಅಣ್ಣಂದಿರಿಗೆ ವಿವೇಕ ಮತ್ತೆ ಬರುತ್ತದೆ. ಅವನು ತನ್ನ ತಂದೆಯ ವರಪ್ರಸಾದದಿಂದ ದೀರ್ಘ ಜೀವನವನ್ನೂ ಅಜೇಯತತ್ವವನ್ನೂ ಪಡೆಯುತ್ತಾನೆ."

ಈ ಎರಡನೆಯ ವರ್ಗ ಯುದ್ಧವು ಕಾರ್ತವೀರ್ಯ ಮಹಾರಾಜನ ಮಗನಾದ ಹೈಹಯ ರಾಜನ ಮಗನಾದ ಅರ್ಜುನನ ಆಳ್ವಿಕೆಯಲ್ಲಿ ನಡೆಯಿತು. ಅದನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಬೇಕಾದರೆ ಎರಡು ಭಾಗವಾಗಿ ವಿಂಗಡಿಸಿಕೊಳ್ಳಬೇಕು. ಕಾರಣ ಅದರಲ್ಲಿ ಎರಡು ಹಂತಗಳಿವೆ. ತಮಗೆ ಪ್ರತ್ಯೇಕವಾಗಿ ಕೆಲವು ಹಕ್ಕುಗಳು ಮತ್ತು ಅಧಿಕಾರಗಳು ಬೇಕೆಂದು ಬ್ರಾಹ್ಮಣರು ಕೇಳಿದ್ದರಿಂದಲೂ ತುಂಬ ತಿರಸ್ಕಾರ ಯೋಗ್ಯ ಮಾತುಗಳಲ್ಲಿ ಅವುಗಳನ್ನೆಲ್ಲ ರಾಜ ಅರ್ಜುನನು ತಳ್ಳಿಹಾಕಿದ್ದರಿಂದಲೂ ಸಂಘರ್ಷ ಶುರುವಾಯಿತು. ಮಹಾಭಾರತದ ಅನುಶಾಸನ ಪರ್ವ ಅದನ್ನು ಮುಂದಿನಂತೆ ವಿವರಿಸುತ್ತದೆ:

> "[೨]ಪ್ರಜ್ವಲಿಸುವ ಸೂರ್ಯನಂತೆ ಪ್ರಕಾಶಿಸುತ್ತಿದ್ದ ಅವನು ತನ್ನ ರಥವನ್ನು ಹತ್ತಿ "ಸ್ಥೈರ್ಯದಲ್ಲಿ, ಧೈರ್ಯದಲ್ಲಿ, ಕೀರ್ತಿಯಲ್ಲಿ, ಶೌರ್ಯದಲ್ಲಿ, ಶಕ್ತಿಯಲ್ಲಿ, ಪರಾಕ್ರಮದಲ್ಲಿ ನನಗೆ ಯಾರು ಸಮ?' ಎಂದು ತನ್ನ ಪರಾಕ್ರಮದ ಮತ್ತಿನಲ್ಲಿ ಉದ್ಗರಿಸಿದನು. ಅವನ ಮಾತು ಮುಗಿಯುತ್ತಿದ್ದಂತೆಯೇ ಆಕಾಶದಲ್ಲಿ ಅಶರೀರವಾಣಿ ಇಂತೆಂದು ನುಡಿಯಿತು: 'ಎಲೈ ಮೂರ್ಖನೇ, ಕ್ಷತ್ರಿಯನಿಗಿಂತ ಬ್ರಾಹ್ಮಣ ಶ್ರೇಷ್ಠ ಎಂಬುದನ್ನು ತಿಳಿದುಕೊ, ಬ್ರಾಹ್ಮಣನ ನೆರವಿನಿಂದ ಕ್ಷತ್ರಿಯ ರಾಜ್ಯಭಾರ ಮಾಡುತ್ತಾನೆ'. ಅದಕ್ಕೆ ಅರ್ಜುನ, 'ನನಗೆ ಇಷ್ಟವಾದರೆ ನಾನು ಜೀವರಾಶಿಯನ್ನು ಸೃಷ್ಟಿಸಬಲ್ಲೆ. ಇಲ್ಲವಾದರೆ ಅವುಗಳನ್ನು ನಾಶಮಾಡಬಲ್ಲೆ. ಕೃತಿಯಲ್ಲಾಗಲೀ, ಆಲೋಚನೆಯಲ್ಲಾಗಲೀ ಅಥವಾ ಮಾತಿನಲ್ಲಾಗಲೀ ಯಾವ ಬ್ರಾಹ್ಮಣನೂ ನನಗಿಂತ ಶ್ರೇಷ್ಠನಲ್ಲ. ಮೊದಲನೆಯ ವಾದ ಬ್ರಾಹ್ಮಣರು ಶ್ರೇಷ್ಠರು ಎಂಬುದು. ಎರಡನೆಯದು ಕ್ಷತ್ರಿಯರು ಶ್ರೇಷ್ಠ ಎಂಬುದು. ನೀನು ಅವರಿಬ್ಬರ ಸ್ಥಾನಮಾನವನ್ನು ಸೂಚಿಸಿರುವೆ. ಆದರೆ ಅವರಿಬ್ಬರಲ್ಲಿ ವ್ಯತ್ಯಾಸವಿದೆ. ಬ್ರಾಹ್ಮಣರು ಕ್ಷತ್ರಿಯರನ್ನು ಅವಲಂಬಿಸಿದ್ದಾರೆ. ಕ್ಷತ್ರಿಯರು ಬ್ರಾಹ್ಮಣರನ್ನು ಅವಲಂಬಿಸಿಲ್ಲ. ಕ್ಷತ್ರಿಯರಿಗೆ ಪೌರೋಹಿತ್ಯ ಮಾಡುವ ಬ್ರಾಹ್ಮಣರು ವೇದಗಳ ಸೋಗಿನಲ್ಲಿ ಅವರನ್ನೇ ನಿರ್ನಾಮ ಮಾಡುತ್ತಿದ್ದಾರೆ. ಪ್ರಜಾಪಾಲನೆಯಾದ ನ್ಯಾಯ ಕ್ಷತ್ರಿಯರ ಪೀಠದಲ್ಲಿದೆ. ಅವರಿಂದಲೇ ಬ್ರಾಹ್ಮಣರು ಹೊಟ್ಟೆ ಹೊರೆಯುತ್ತಿದ್ದಾರೆ. ಹೀಗಿರುವಾಗ ಬ್ರಾಹ್ಮಣರು ಕ್ಷತ್ರಿಯರಿಗಿಂತ ಹೇಗೆ ಮೇಲಾಗಿದ್ದಾರೆ? ತಾವು ಎಲ್ಲರಿಗಿಂತ ಶ್ರೇಷ್ಠವೆಂದು ಅಂದುಕೊಳ್ಳುವ ಭಿಕ್ಷಾವಲಂಬಿಗಳಾದ ಬ್ರಾಹ್ಮಣರನ್ನು ನಾನು ಸದಾ ನನ್ನ ಅಧೀನದಲ್ಲಿಟ್ಟುಕೊಂಡಿದ್ದೇನೆ. ಏಕೆಂದರೆ ಆಕಾಶವಾಸಿ ಗಾಯತ್ರಿದೇವಿಯು

---

೧. ಮ್ಯೂರ್: ಸಂ. I, ಪು. ೪೫೦.
೨. ಅದೇ. ಪು. ೪೫೪.

ಸತ್ಯವನ್ನು ನುಡಿದಿದ್ದಾಳೆ. ಮೃಗಾಜಿನ ತೊಟ್ಟ ಷಂಡ ಬ್ರಾಹ್ಮಣರನ್ನು ನಾನು ಅಡಗಿಸುತ್ತೇನೆ. ದೇವತೆಯಾಗಲೀ ಅಥವಾ ಮನುಷ್ಯನಾಗಲಿ ಈ ಮೂರು ಲೋಕಗಳಲ್ಲಿ ನನ್ನನ್ನು ರಾಜಾಧಿಕಾರದಿಂದ ಪದಚ್ಯುತನನ್ನಾಗಿ ಮಾಡಲು ಸಾಧ್ಯವಿಲ್ಲ. ಆದ್ದರಿಂದ ನಾನು ಬ್ರಾಹ್ಮಣರಿಗಿಂತ ಮೇಲು."

ಇದನ್ನು ಕೇಳಿದ ವಾಯು ಆಗಮಿಸಿ ಅರ್ಜುನನಿಗೆ ಹೇಳುತ್ತಾನೆ:

"[೧]ಬ್ರಾಹ್ಮಣರ ಬಗ್ಗೆ ಈ ಪಾಪಮಯ ದೃಷ್ಟಿಯನ್ನು ತ್ಯಜಿಸು. ಅವರಿಗೆ ನಮಸ್ಕರಿಸು. ನೀನು ಅವರಿಗೆ ಅನ್ಯಾಯ ಮಾಡಿದರೆ ನಿನ್ನ ರಾಜ್ಯ ಕ್ಷೋಭೆಗೊಳಗಾಗುತ್ತದೆ. ಅವರು ನಿನ್ನನ್ನು ನಿಗ್ರಹಿಸುತ್ತಾರೆ. ಆ ಬಲಿಷ್ಠರಾದ ಜನರು ನಿನ್ನ ತೇಜೋವಧೆ ಮಾಡುತ್ತಾರೆ. ನಿನ್ನನ್ನು ದೇಶದಿಂದ ಹೊರದೂಡುತ್ತಾರೆ." ಮಹಾರಾಜ ಅವನನ್ನು "ನೀನು ಯಾರು" ಎಂದು ಪ್ರಶ್ನಿಸುತ್ತಾನೆ. ವಾಯು ಉತ್ತರಿಸುತ್ತಾನೆ: "ನಾನು ವಾಯು, ದೇವತೆಗಳ ಸಂದೇಶವಾಹಕ, ನಿನ್ನ ಒಳ್ಳೆಯದಕ್ಕೇ ನಾನು ಹೇಳುತ್ತಿದ್ದೇನೆ." ಅರ್ಜುನ ಮರುನುಡಿಯುತ್ತಾನೆ "ಬ್ರಾಹ್ಮಣರ ಪರವಾಗಿ ಇಂದು ನೀನು ಮಹಾಭಕ್ತಿಯನ್ನು ತೋರಿಸುತ್ತಿರುವೆ. ಆದರೆ ಬ್ರಾಹ್ಮಣನೂ ಕೂಡ ಇತರ ಯಾವುದೇ ಭೂಚರರದಂತಿದ್ದಾನೆ ಅಥವಾ ಈ ಉತ್ತಮೋತ್ತಮ ಬ್ರಾಹ್ಮಣನು ಮಾರುತದಂತಿದ್ದಾನೆ. ಆದರೆ ಅಗ್ನಿ ಸಾಗರದಂತಿದೆ ಅಥವಾ ಸೂರ್ಯನಂತಿದೆ ಅಥವಾ ಆಕಾಶದಂತಿದೆ."

ಬ್ರಾಹ್ಮಣರ ಮಹಿಮೆಯನ್ನು ತೋರಿಸಲು ವಾಯು ಅನೇಕ ನಿದರ್ಶನಗಳನ್ನು ಕೊಡುತ್ತಾನೆ. ಆಗ ಅರ್ಜುನ ತನ್ನ ದ್ವೇಷವನ್ನು ತ್ಯಜಿಸಿ ಬ್ರಾಹ್ಮಣರ ಜೊತೆ ಸ್ನೇಹ ಬೆಳೆಸುತ್ತಾನೆ. ಅನುಶಾಸನ ಪರ್ವದಲ್ಲಿ ಅವನು ಈ ರೀತಿ ಹೇಳಿದ್ದಾನೆಂದು ನಿರೂಪಿತವಾಗಿದೆ:

"[೨]ನಾನು ಸಂಪೂರ್ಣವಾಗಿ ಸದಾಕಾಲದಲ್ಲಿಯೂ ಬ್ರಾಹ್ಮಣರ ಅನುಕೂಲಕ್ಕಾಗಿ ಇದ್ದೇನೆ. ನಾನು ಬ್ರಾಹ್ಮಣರಿಗೆ ನಿಷ್ಠನಾಗಿದ್ದೇನೆ. ಅವರಿಗೆ ನಾನು ನಿರಂತರವಾಗಿ ವಂದಿಸುತ್ತೇನೆ. ನನ್ನ ಈ ಎಲ್ಲ ಶಕ್ತಿ ಮತ್ತು ಉನ್ನತ ಕೀರ್ತಿ ದತ್ತಾತ್ರೇಯನ (ಒಬ್ಬ ಬ್ರಾಹ್ಮಣ) ಅನುಗ್ರಹದಿಂದ ಬಂದಿದೆ. ನಾನು ಧರ್ಮವನ್ನು ಪಾಲಿಸುತ್ತಿದ್ದೇನೆ."

ಎರಡನೆಯ ಹಂತದಲ್ಲಿ ಪರಶುರಾಮನ ಆಗಮನವಾಗಿ ಕ್ಷತ್ರಿಯರ ನಾಶವಾಗುತ್ತದೆ. ಈ ಕಥೆಯನ್ನು ಮಹಾಭಾರತದ ಶಾಂತಿ ಪರ್ವದಲ್ಲಿ ಈ ರೀತಿ ಹೇಳಲಾಗಿದೆ:

"[೩]ಸಾಧುವೂ, ಧರ್ಮಿಷ್ಠನೂ, ದಯಾಮಯಿಯೂ, ದಾನದಕ್ಷಿಣೆ ಕೊಡುವ ಮನಸ್ಸುಳ್ಳವನೂ ಆದ ವೀರಾಧಿವೀರ ಅರ್ಜುನನು ಶಾಪದ ಬಗ್ಗೆ ಯೋಚಿಸಲೇ ಇಲ್ಲ. ಆದರೆ ಗರ್ವಿಷ್ಠರೂ, ಅನಾಗರಿಕ ಸ್ವಭಾವವುಳ್ಳವರೂ ಆದ ಅವನ ಪುತ್ರರಿಂದ ಅವನಿಗೆ ಶಾಪ ತಗುಲಿ ಅವನ ಸಾವಿಗೆ ಕಾರಣರಾದರು. ಅವರ ತಂದೆಗೆ ಗೊತ್ತಿಲ್ಲದಂತೆ ಅವರು ಜಮದಗ್ನಿಯ ಕರುವನ್ನು ಅಪಹರಿಸಿದರು. ಅದರ ಪರಿಣಾಮವಾಗಿ ಪರಶುರಾಮನು

೧. ಮ್ಯೂರ್: ಸಂ. I, ಪು. ೪೫೪.
೨. ಅದೇ, ಪು. ೪೭೩.
೩. ಅದೇ, ಪು. ೪೫೪–೪೫೫

ಅರ್ಜುನನ ಮೇಲೆ ಆಕ್ರಮಣ ಮಾಡಿ ಅವನ ತೋಳುಗಳನ್ನು ಕತ್ತರಿಸಿದನು. ಅವನ ಮಗ ಜಮದಗ್ನಿಯನ್ನು ಕೊಲ್ಲುವುದರ ಮೂಲಕ ಸೇಡು ತೀರಿಸಿಕೊಂಡನು. ತನ್ನ ತಂದೆಯ ವಧೆಯಿಂದ ಕ್ರೋಧೋನ್ಮತ್ತನಾದ ಪರಶುರಾಮನು ಭೂಮಿಯ ಮೇಲೆ ಕ್ಷತ್ರಿಯರೇ ಇಲ್ಲದ ಹಾಗೆ ಮಾಡುತ್ತೇನೆ ಎಂದು ಪ್ರತಿಜ್ಞೆ ಮಾಡಿ ತನ್ನ ಆಯುಧಗಳನ್ನು ತೆಗೆದುಕೊಂಡನು. ಅರ್ಜುನನ ಎಲ್ಲ ಪುತ್ರ ಪೌತ್ರಾದಿಗಳನ್ನೂ, ಸಾವಿರಾರು ಹೈಹಯರನ್ನೂ ಅವನು ಕತ್ತರಿಸುತ್ತಾ ಇಡಿ ಭೂಮಂಡಲವನ್ನೇ ರಕ್ತಮಯವಾಗಿ ಮಾಡಿದನು. ಹೀಗೆ ಕ್ಷತ್ರಿಯರನ್ನೆಲ್ಲಾ ಸಂಹಾರ ಮಾಡಿದ ಮೇಲೆ ಭಾರಿ ಕರುಣೆ ಉಂಟಾಗಿ ಅರಣ್ಯಕ್ಕೆ ತೆರಳಿದನು. ಹಲವು ಸಹಸ್ರ ವರ್ಷಗಳ ನಂತರ ಸ್ವಭಾವತಃ ಮುಂಗೋಪಿಯಾದ ಈ ವೀರನನ್ನು ರೈಭ್ಯನ ಮಗನೂ ವಿಶ್ವಾಮಿತ್ರನ ಮೊಮ್ಮಗನೂ ಆದ ಪರಾವಸು ಸಾರ್ವಜನಿಕ ಸಭೆಯಲ್ಲಿ ಈ ಮಾತುಗಳಿಂದ ಛೇಡಿಸಿದನು: "ಯಯಾತಿ ನಗರದ ಈ ಯಜ್ಞದಲ್ಲಿ ಸೇರಿರುವ ಪ್ರತರ್ದನ ಮುಂತಾದ ಈ ಜನರೆಲ್ಲ ಧರ್ಮಿಷ್ಠರಲ್ಲವೇ? ಕ್ಷತ್ರಿಯರಲ್ಲವೇ? ನಿನ್ನ ಪ್ರತಿಜ್ಞೆಯನ್ನು ಈಡೇರಿಸಲು ನೀನು ಸೋತಿರುವೆ. ರಾಜಸಭೆಯಲ್ಲಿ ನೀನು ಸುಮ್ಮನೆ ಜಂಭ ಕೊಚ್ಚುವೆ. ಈ ವೀರಾಧಿವೀರ ಕ್ಷತ್ರಿಯರ ಭಯದಿಂದ ನೀನು ಪರ್ವತವಾಸಿಯಾಗಿದ್ದಾಗ ಈ ಭೂಮಂಡಲದ ಮೇಲೆ ಅವರ ಸಂತತಿ ನೂರ್ಮಡಿಯಾಗಿದೆ." ಈ ಮಾತುಗಳನ್ನು ಕೇಳಿದ ಕೂಡಲೇ ಪರಶುರಾಮನು ತನ್ನ ಆಯುಧಗಳನ್ನು ಎತ್ತಿಕೊಂಡನು. ಹಿಂದೆ ಅಳಿದು ಉಳಿದಿದ್ದ ನೂರಾರು ಕ್ಷತ್ರಿಯರು ಈಗ ಮಹಾಪರಾಕ್ರಮಶಾಲಿ ರಾಜರಾಗಿ ವರ್ಧಿಸಿದ್ದರು. ಈಗ ಪರಶುರಾಮನು ಅವರನ್ನು ಅವರ ಮಕ್ಕಳ ಸಮೇತ ಅಸಂಖ್ಯಾತ ಕಂದಮ್ಮಗಳ ಸಮೇತ ಇನ್ನೂ ಹುಟ್ಟದಿರುವ ಶಿಶುಗಳ ಸಮೇತ ಕತ್ತರಿಸಿದನು. ಆದರೂ ಕೆಲವು ಕಂದಮ್ಮಗಳನ್ನು ಅವರ ತಾಯಂದಿರು ರಕ್ಷಿಸಿದರು."

ಕ್ಷತ್ರಿಯರ ಅನಂತರದ ಇತಿಹಾಸವನ್ನು ತಿಳಿಯಲು ಕುತೂಹಲವುಳ್ಳವರಿಗೆ ಆದಿ ಪರ್ವದಿಂದ ಉದ್ಧರಿಸುವ ಮುಂದಿನ ಕಥಾಭಾಗ ಸ್ವಾರಸ್ಯಕರವಾಗಿದೆ:

"[೧]ಇಪ್ಪತ್ತೊಂದು ಸಾರಿ ಭೂಪರ್ಯಟನೆ ಮಾಡಿ ಕ್ಷತ್ರಿಯರನ್ನೆಲ್ಲಾ ಗುಡಿಸಿಹಾಕಿದ ಜಮದಗ್ನಿಯ ಮಗ ಅತ್ಯುನ್ನತವಾದ ಮಹೇಂದ್ರ ಪರ್ವತದಲ್ಲಿ ತಪೋನಿರತನಾದನು. ಅವನು ಕ್ಷತ್ರಿಯರನ್ನೆಲ್ಲ ಸಂಹಾರ ಮಾಡಿದ ಮೇಲೆ ಅವರ ವಿಧವೆಯರು ಬ್ರಾಹ್ಮಣರಲ್ಲಿಗೆ ಬಂದು ಸಂತಾನ ಭಿಕ್ಷೆ ಬೇಡಿದರು. ಧರ್ಮಿಷ್ಠರಾದ ಬ್ರಾಹ್ಮಣರು ಯಾವುದೇ ಕಾಮವಾಸನೆಯಿಲ್ಲದೆ ಈ ಸ್ತ್ರೀಯರ ಜೊತೆ ಸೂಕ್ತ ಋತುಮಾನಗಳಲ್ಲಿ ಕೂಡಿದಾಗ ಇವರು ಗರ್ಭವತಿಯರಾಗಿ ಕ್ಷತ್ರಿಯ ಸಂತತಿಯನ್ನು ಮುಂದುವರಿಸುವುದಕ್ಕಾಗಿ ಪರಾಕ್ರಮಶಾಲಿಗಳಾದ ಕ್ಷತ್ರಿಯ ಪುತ್ರರನ್ನೂ, ಪುತ್ರಿಯರನ್ನೂ ಪಡೆದರು. ಹೀಗೆ ಕ್ಷತ್ರಿಯ ಸ್ತ್ರೀಯರನ್ನು ಕೂಡಿ ಬ್ರಾಹ್ಮಣರು ಕ್ಷತ್ರಿಯ ಸಂತತಿಯನ್ನು ಧರ್ಮ ಪುರಸ್ಸರವಾಗಿ ಪಡೆದರು. ಅವರು ದ್ವಿಗುಣಗೊಂಡು ದೀರ್ಘಕಾಲ ಬದುಕಿದರು. ಅಲ್ಲಿಂದ ಬ್ರಾಹ್ಮಣರಿಗಿಂತ ಕೀಳಾದ ನಾಲ್ಕು ವರ್ಣಗಳು ಹುಟ್ಟಿಕೊಂಡವು."

೧. ಮ್ಯೂರ್: ಸಂ. I, ಪು. ೪೫೧–೪೫೨.

ಪರಸ್ಪರ ಸವಾಲಿನಿಂದ ಕೂಡಿದ ವೈರತ್ವದ ಈ ನಿದರ್ಶನಗಳು ಎರಡು ಪಕ್ಷಗಳಲ್ಲಿಯೂ ದ್ವೇಷ ಎಷ್ಟು ಪ್ರಖರವಾಗಿತ್ತೆಂದು ತೋರಿಸುತ್ತವೆ. ಕ್ಷತ್ರಿಯರು ಬ್ರಾಹ್ಮಣರನ್ನು ತೇಜೋವಧೆ ಮಾಡಬೇಕೆಂದು ಎಷ್ಟರಮಟ್ಟಿಗೆ ನಿರ್ಧರಿಸಿದ್ದರೆಂಬುದು ಬ್ರಾಹ್ಮಣರನ್ನು ತನ್ನ ರಥಕ್ಕೆ ಕುದುರೆಗಳಂತೆ ಕಟ್ಟಿ ಎಳೆಸುವ ನಿಮಿ ಚಕ್ರವರ್ತಿಯ ವರ್ತನೆಯಲ್ಲಿ ಕಾಣುತ್ತದೆ. ಬ್ರಾಹ್ಮಣರನ್ನು ಕೆಳಮಟ್ಟಕ್ಕೆ ತರಬೇಕೆಂದು ಕಾರ್ತವೀರ್ಯಾರ್ಜುನನು ಮಾಡಿದ ನಿರ್ಧಾರ ಅವನು ಬ್ರಾಹ್ಮಣರಿಗೆ ಎಸೆದ ಸವಾಲುಗಳಲ್ಲಿ ಕಂಡುಬರುತ್ತದೆ. ಬ್ರಾಹ್ಮಣರನ್ನು ಪ್ರಚೋದಿಸಬೇಡಿರಿ ಎಂದು ಕ್ಷತ್ರಿಯರಿಗೆ ಪ್ರತಿ ಸವಾಲುಗಳನ್ನು ಎಸೆಯುವುದರಲ್ಲಿ ಬ್ರಾಹ್ಮಣರು ವಿಳಂಬ ಮಾಡಲಿಲ್ಲ. ಕಾರ್ತವೀರ್ಯಾರ್ಜುನನು ಬ್ರಾಹ್ಮಣರಿಗೆ ಸವಾಲೆಸೆದ ನಂತರ ಬ್ರಾಹ್ಮಣರ ರಾಯಭಾರಿಯಾಗಿ ಬಂದಿದ್ದ ವಾಯುವಿನ ಮಾತುಗಳಲ್ಲಿ ಅದು ಸ್ಪಷ್ಟವಾಗಿ ಕಾಣುತ್ತದೆ. ಅತ್ರಿ ಬ್ರಾಹ್ಮಣನು ಮೂತ್ರ ವಿಸರ್ಜನೆ ಮಾಡಿ ಹೇಗೆ ಸಾಗರದ ನೀರನ್ನು ಕ್ಷಾರಮಯ ಮಾಡಿದ. ಬ್ರಾಹ್ಮಣನು ಹೇಗೆ ದಂಡಕಾದಿಗಳನ್ನು ನಿರ್ನಾಮ ಮಾಡಿದರು. ಔರ್ವ ಬ್ರಾಹ್ಮಣನು ಒಬ್ಬಂಟಿಗನಾಗಿ ಹೇಗೆ ತಾಲಜಙ್ಘರನ್ನು ಧ್ವಂಸ ಮಾಡಿದ ಎಂದು ವಾಯು ಅರ್ಜುನನಿಗೆ ಹೇಳುತ್ತಾನೆ. ಬ್ರಾಹ್ಮಣರು ಕ್ಷತ್ರಿಯರಿಗೆ ಮಾತ್ರ ಶ್ರೇಷ್ಠರಲ್ಲ, ಅವರು ದೇವತೆಗಳಿಗಿಂತಲೂ ಶ್ರೇಷ್ಠರು ಹಾಗೂ ಬ್ರಾಹ್ಮಣರು ದೇವತೆಗಳನ್ನು ಅನೇಕ ಸಂದರ್ಭಗಳಲ್ಲಿ ಜಯಿಸಿದ್ದಾರೆಂದು ವಾಯು ಹೇಳುತ್ತಾನೆ. ಸೋಮನ ಮಗಳೂ ಅಂಗೀರಸ ಗೋತ್ರದ ಬ್ರಾಹ್ಮಣ ಉತಥ್ಯನ ಪತ್ನಿಯೂ ಆದ ಭದ್ರೆಯನ್ನು ವರುಣ ಹಾರಿಸಿಕೊಂಡು ಹೋದದ್ದು ಹಾಗೂ ಹೇಗೆ ಉತಥ್ಯ ತನ್ನ ಶಾಪದಿಂದ ಭೂಮಂಡಲವನ್ನು ಕ್ಷಾಮ ಪೀಡಿತವನ್ನಾಗಿ ಮಾಡಿದ. ತತ್ಪರಿಣಾಮವಾಗಿ ಉತಥ್ಯನ ಹೆಂಡತಿಯನ್ನು ವರುಣನು ಹೇಗೆ ಹಿಂದಿರುಗಿಸಿದ ಎಂದು ವಾಯು ಹೇಳುತ್ತಾನೆ. ಅಸುರರೂ ದಾನವರೂ ಸೇರಿ ಒಮ್ಮೆ ದೇವತೆಗಳನ್ನು ಹೇಗೆ ಸೋಲಿಸಿದರು, ಹೇಗೆ ಅರ್ಘ್ಯಾದಿಗಳನ್ನೆಲ್ಲಾ ಅವರಿಗಿಲ್ಲದಂತೆ ಮಾಡಿದರು. ಅವರ ಮಾನ ಮರ್ಯಾದೆಯನ್ನೆಲ್ಲಾ ತೆಗೆದರು. ಆಗ ದೇವತೆಗಳು ಭೂಮಿಯಲ್ಲಿದ್ದ ಬ್ರಾಹ್ಮಣನಾದ ಅಗಸ್ತ್ಯನಲ್ಲಿಗೆ ಬಂದು ತಮಗೆ ರಕ್ಷಣೆ ಕೊಡಬೇಕೆಂದು ಹೇಗೆ ಕೋರುತ್ತಾರೆ, ಅಗಸ್ತ್ಯನು ಹೇಗೆ ಭೂಸ್ವರಲೋಕಗಳಲ್ಲಿದ್ದ ದಾನವರನ್ನೆಲ್ಲಾ ಸುಟ್ಟು ಅವರೆಲ್ಲಾ ದಕ್ಷಿಣಕ್ಕೆ ಓಡುವಂತೆ ಮಾಡಿ, ದೇವತೆಗಳನ್ನು ಅವರ ಸ್ವಸ್ಥಾನಗಳಲ್ಲಿ ಹೇಗೆ ಸ್ಥಾಪನೆ ಮಾಡಿದ ಎಂದು ಹೇಳಿದನು. ಒಮ್ಮೆ ಆದಿತ್ಯರು ಯಜ್ಞ ಕಾರ್ಯದಲ್ಲಿ ನಿರತರಾಗಿದ್ದಾಗ ಅವರನ್ನು ಕೊಲ್ಲಲು ಸಹಸ್ರ ಸಂಖ್ಯೆಯಲ್ಲಿ ಖಲೀಮರೆಂಬ ದಾನವರು ಅವರನ್ನು ಹೇಗೆ ಮುತ್ತಿದರು, ಹೇಗೆ ಆದಿತ್ಯರು ಇಂದ್ರನ ಬಳಿ ಹೋದರು, ಹೇಗೆ ಇಂದ್ರನು ಆದಿತ್ಯರಿಗೆ ನೆರವು ನೀಡಲಾಗದೆ ದೈತ್ಯರಿಂದ ಧಾಳಿಗೊಳಗಾದನು. ಆಮೇಲೆ ಅವನು ಹೇಗೆ ಸಹಾಯಕ್ಕಾಗಿ ಬ್ರಾಹ್ಮಣ ವಸಿಷ್ಠನ ಬಳಿ ಹೋದನು. ಆದಿತ್ಯರ ಮೇಲೆ ಕರುಣೆ ತಾಳಿ ಹೇಗೆ ವಸಿಷ್ಠ ದಾನವರಿಂದ ಭಸ್ಮವಾಗುವಂತೆ ಅವರನ್ನು ಜೀವಂತವಾಗಿ ಸಂರಕ್ಷಿಸಿದನು ಎಂದು ಅವನು ಅರ್ಜುನನಿಗೆ ಹೇಳಿದನು. ಆಮೇಲೆ ಅವನು ಅರ್ಜುನನಿಗೆ ಹೇಗೆ ದಾನವರು ಒಮ್ಮೆ ದೇವತೆಗಳ ಮೇಲೆ ಯುದ್ಧ ಮಾಡಿದರು, ಹೇಗೆ ದಾನವರು ಕಾರ್ಗತ್ತಲೆಯನ್ನುಂಟು ಮಾಡಿ ದೇವತೆಗಳನ್ನು ಕೊಂದುಹಾಕಿದರು. ಆಗ ಹೇಗೆ ದೇವತೆಗಳು ಬ್ರಾಹ್ಮಣನಾದ ಅತ್ರಿಯ ಬಳಿಗೆ ಬಂದು ನೀವೇ ಚಂದ್ರರಾಗಿ ಸೂರ್ಯನ ಸುತ್ತ ಇರುವ ಕಗ್ಗತ್ತಲೆಯನ್ನು ಹೋಗಲಾಡಿಸಬೇಕೆಂದು ಬೇಡಿಕೊಂಡರು ಹಾಗೂ ಹೇಗೆ ಅತ್ರಿ ಅದನ್ನು ಹೋಗಲಾಡಿಸಿ ದಾನವರಿಂದ ದೇವತೆಗಳನ್ನು ಉಳಿಸಿದನು ಎಂದು ಹೇಳಿದನು. ಹೇಗೆ ಬ್ರಾಹ್ಮಣನಾದ ಚ್ಯವನನು ಅಶ್ವಿನಿ ದೇವತೆಗಳಿಗೆ ಸಮಾನವಾದ ಸ್ಥಾನವನ್ನು ಕೊಟ್ಟು ಸಮಾನತೆಯ ಸಂಕೇತವಾಗಿ ಅವರ ಜೊತೆ ಸೋಮರಸವನ್ನು ಕುಡಿಯಬೇಕೆಂದು ಇಂದ್ರನನ್ನು ಬಲವಂತಪಡಿಸಿದ, ಇಂದ್ರನು ಅದನ್ನು ತಿರಸ್ಕರಿಸಿದಾಗ ಹೇಗೆ ಅವನು ಭೂಸ್ವರ್ಗಳೆರಡನ್ನೂ ಅವರಿಂದ ಅಪಹರಿಸಿದ, ಅವನು ಹೇಗೆ ಮದಾಸುರನನ್ನು ಸೃಷ್ಟಿಸಿ, ಅವನ ಬಾಯೊಳಕ್ಕೆ

ಇಂದ್ರಾದಿ ದೇವತೆಗಳನ್ನು ತುರುಕಿದ, ಅನಂತರ ಅವನು ಹೇಗೆ ಅಶ್ವಿನಿ ದೇವತೆಗಳಿಗೆ ಸಮಾನಸ್ಥಾನ ಕೊಟ್ಟು ಅವರ ಜೊತೆ ಸೋಮರಸವನ್ನು ಕುಡಿಯುವಂತೆ ಇಂದ್ರನನ್ನು ಬಲವಂತಪಡಿಸಿದ, ಹಾಗೂ ಹೇಗೆ ಅಂತಿಮವಾಗಿ ಇಂದ್ರನು ಚ್ಯವನನಿಗೆ ಶರಣಾಗತನಾದ ಎಂಬುದೇ ವಾಯು ಅರ್ಜುನನಿಗೆ ಹೇಳುವ ಈ ಬಗೆಯ ಕೊಟ್ಟಕೊನೆಯ ವೃತ್ತಾಂತವಾಗಿದೆ.

ಬ್ರಾಹ್ಮಣರ ಈ ಸಾಹಸಗಳನ್ನು ವಾಯು ಕೇವಲ ಪುನರುಚ್ಚರಿಸಲಿಲ್ಲ. ಅವನು ಅದಕ್ಕೂ ಸ್ವಲ್ಪ ಹೆಚ್ಚಿನದನ್ನು ಮಾಡಿದನು. ಅವನು ಪ್ರತಿಸಾರಿಯೂ ಬ್ರಾಹ್ಮಣರ ಶಕ್ತಿಯ ನಿದರ್ಶನವನ್ನು ಕೊಟ್ಟ ನಂತರ ಅರ್ಜುನನಿಗೆ ಈ ಮರ್ಮಭೇದಕ ಪ್ರಶ್ನೆಗಳನ್ನು ಅಂದರೆ "ಇಂಥ ಬ್ರಾಹ್ಮಣನಿಗಿಂತ ಶ್ರೇಷ್ಠನಾದ ಯಾರಾದರೂ ಕ್ಷತ್ರಿಯನನ್ನು ಹೆಸರಿಬಲ್ಲೆಯಾ?" "ಅವನಿಗಿಂತ ಶ್ರೇಷ್ಠನಾದ ಯಾರೇ ಕ್ಷತ್ರಿಯ ನಿಮ್ಮ ಪಕ್ಷದಲ್ಲಿದ್ದರೆ ಉದ್ಘೋಷಿಸು." "ಅತ್ರಿಗಿಂತ ಶ್ರೇಷ್ಠನಾದ ಕ್ಷತ್ರಿಯನನ್ನು ತೋರಿಸು." ಎಂದು ಕೇಳುತ್ತಿದ್ದನು.

ಕ್ಷತ್ರಿಯ ಬ್ರಾಹ್ಮಣರ ನಡುವಣ ಈ ವರ್ಗ ಸಂಘರ್ಷ ಶತ ಶತಮಾನಗಳವರೆಗೆ ನಡೆದಿರಬೇಕು. ಈ ದೃಷ್ಟಿಯಲ್ಲಿ ವರ್ಗ ಸಂಘರ್ಷದ ಬಗೆಗಿನ ಮನುವಿನ ಧೋರಣೆ ತುಂಬ ವಿಚಿತ್ರವಾಗಿದೆ. ಮನುಸ್ಮೃತಿಯ ಮುಂದಿನ ಶ್ಲೋಕಗಳನ್ನು ಪರ್ಯಾಲೋಚಿಸಿ:

IV ೧೩೫. "ಸಂಪತ್ತನ್ನು ಬಯಸುವ ಯಾರೇ ಆಗಲಿ ಕ್ಷತ್ರಿಯನನ್ನು, ಸರ್ಪವನ್ನು ಮತ್ತು ವೇದವಿದ ಬ್ರಾಹ್ಮಣನನ್ನು ಅವರು ಎಷ್ಟೇ ದುರ್ಬಲರಾಗಿದ್ದರೂ ಕೂಡ ತಿರಸ್ಕಾರದಿಂದ ಕಾಣಬಾರದು."

IV ೧೩೬. "ಏಕೆಂದರೆ ಈ ಮೂವರನ್ನು ಅಗೌರವದಿಂದ ಕಂಡರೆ ಅವರು ಅವನನ್ನು ಸಂಪೂರ್ಣವಾಗಿ ನಾಶಮಾಡಬಲ್ಲರು. ಆದ್ದರಿಂದ ವಿವೇಕಿಯಾದವನು ಅವರನ್ನು ಎಂದೂ ಅಗೌರವಿಸಬಾರದು."

X ೩೨೨. "ಬ್ರಾಹ್ಮಣರಿಲ್ಲದೆ ಕ್ಷತ್ರಿಯರು ವರ್ಧಿಸಲಾರರು. ಕ್ಷತ್ರಿಯರಿಲ್ಲದೆ ಬ್ರಾಹ್ಮಣರು ವರ್ಧಿಸಲಾರರು. ಬ್ರಾಹ್ಮಣರು ಮತ್ತು ಕ್ಷತ್ರಿಯರು ಪರಸ್ಪರ ಒಂದಾಗಿ ಇಹಲೋಕದಲ್ಲಿಯೂ ಪರಲೋಕದಲ್ಲಿಯೂ ಶ್ರೇಯಸ್ಸನ್ನು ಹೊಂದುವರು."

ಇಲ್ಲಿ ವರ್ಗಗಳನ್ನು ಸಮಾಪ್ತಿ ಮಾಡುವ ಮನುವಿನ ದೃಷ್ಟಿ ಸ್ಪಷ್ಟವಾಗಿದೆ. ಬ್ರಾಹ್ಮಣರು ಮತ್ತು ಕ್ಷತ್ರಿಯರು ಯಾರ ವಿರುದ್ಧ ಒಂದಾಗಬೇಕೆಂದು ಮನು ಆಶಿಸುತ್ತಾನೆ? ಇದು ಪರಸ್ಪರ ಕ್ಷಮಿಸಿ ಮರೆಯುವ ಪ್ರಯತ್ನವೋ ಅಥವಾ ಇನ್ನಾವುದೋ ಅಪವಿತ್ರ ಉದ್ದೇಶಕ್ಕಾಗಿ ಇಬ್ಬರೂ ಕೂಡಿ ಪಿತೂರಿ ಮಾಡುವುದೋ? ಕ್ಷತ್ರಿಯರ ಜೊತೆ ತಮ್ಮ ಶತ ಶತಮಾನಗಳ ವೈರತ್ವವನ್ನು ಮರೆತು ಅವರಿಗೆ ಸಹಾಯ ಹಸ್ತವನ್ನು ನೀಡಬೇಕೆಂದು ಮನು ಬ್ರಾಹ್ಮಣರಿಗೆ ಬುದ್ಧಿವಾದ ನೀಡಲು ಬಂದೊದಗಿದ ಸನ್ನಿವೇಶಗಳಾವುವು? ಆ ಸನ್ನಿವೇಶಗಳು ತುಂಬ ಕಠಿಣವಾಗಿದ್ದಿರಬೇಕು. ತುಂಬ ಅತ್ಯಗತ್ಯವಾಗಿರಬೇಕು. ಏಕೆಂದರೆ ಈ ಇಬ್ಬರಲ್ಲಿಯೂ ಯಾವುದೇ ಸೌಹಾರ್ದಕ್ಕೆ ಅವಕಾಶವಿರಲಿಲ್ಲ. ಕ್ಷತ್ರಿಯ ವಿಧವೆಯರಿಂದ ಬ್ರಾಹ್ಮಣರು ಪಡೆದ ಅನೌರಸ ಸಂತಾನವೆಂದು ಕ್ಷತ್ರಿಯರನ್ನು ಬ್ರಾಹ್ಮಣರು ಬಹಿರಂಗವಾಗಿ ಜರಿದು ಅವರ ಅಭಿಮಾನಕ್ಕೆ ಭಂಗ ಮಾಡಿದ್ದರು. ಬ್ರಾಹ್ಮಣರು ಕ್ಷತ್ರಿಯರಿಗೆ ನೋವುಂಟು ಮಾಡಿದ ಮುಂದಿನ ಸಂಗತಿಯೆಂದರೆ ಸೇನಾ ಪರಾಕ್ರಮದಲ್ಲಿ ಕ್ಷತ್ರಿಯರಿಗಿಂತ ಬ್ರಾಹ್ಮಣರು ಶ್ರೇಷ್ಠರು ಎಂದು ಒಪ್ಪಿಕೊಳ್ಳುವಂತೆ ಮಾಡಿದ್ದು ಹಾಗೂ ಅದನ್ನು ಭೀಷ್ಮನ ಬಾಯಿಯಲ್ಲಿ ಈ ರೀತಿ ಹೇಳಿಸಿದ್ದು:

"[೧]ಬ್ರಾಹ್ಮಣ ಶಕ್ತಿ ದೇವತೆಗಳನ್ನೂ ಕೂಡ ನಾಶಮಾಡಬಲ್ಲದು. ಈ ಜ್ಞಾನಿಗಳು ಲೋಕಲೋಕಾಂತಗಳನ್ನೆಲ್ಲ ನೋಡಬಲ್ಲರು. ಗಂಧಲೇಪನದಿಂದ ಸುವಾಸಿತರಾಗಿರಲಿ ಅಥವಾ ಕೆಸರಿನಿಂದ ವಿಕಾರವಾಗಿರಲಿ, ಅವರು ಉಂಡಿರಲಿ ಅಥವಾ ಉಪವಾಸವಿರಲಿ, ರೇಷ್ಮೆ ಉಟ್ಟಿರಲಿ ಅಥವಾ ಗೋಣಿ ತೊಟ್ಟಿರಲಿ ಅಥವಾ ಬೆತ್ತಲಿರಲಿ. ಇದಕ್ಕೆಲ್ಲ ಅವರು ಉದಾಸೀನರಾಗಿರುತ್ತಾರೆ. ಅವರು ದಿವ್ಯವಲ್ಲದುದನ್ನು ದಿವ್ಯವನ್ನಾಗಿಯೂ, ದಿವ್ಯವಾದುದನ್ನು ಅದಿವ್ಯವಾಗಿಯೂ ಮಾರ್ಪಡಿಸಬಲ್ಲರು, ಸಿಟ್ಟು ಬಂದರೆ ಅವರು ತಮ್ಮ ಪೋಷಕರ ನೆರವಿನಿಂದ ಬೇರೆ ಲೋಕಗಳನ್ನೇ ಸೃಷ್ಟಿಸಬಲ್ಲರು. ಅವರು ದೇವತೆಗಳಿಗೂ ದೇವರಾಗಿದ್ದಾರೆ. ಅವರೇ ಎಲ್ಲಕ್ಕೂ ನಿಮಿತ್ತವಾಗಿದ್ದಾರೆ. ಬ್ರಾಹ್ಮಣ ಅಜ್ಞಾನಿಯಾದರೂ ದೇವರು. ಸುಜ್ಞಾನಿಯಾದ ಬ್ರಾಹ್ಮಣ ತುಂಬಿದ ಸಾಗರದಂತೆ ಇನ್ನೂ ಮಿಗಿಲಾದ ದೇವರು."

ಈ ರೀತಿ ಬ್ರಾಹ್ಮಣರು ಸರ್ರನೆ ಕೆಳಗಿಳಿದದ್ದು ಕ್ಷತ್ರಿಯರ ಮನ ಒಲಿಸಿಕೊಳ್ಳಲು ಇಂಥ ಹೀನ ಸ್ಥಿತಿಗೆ ಬಿದ್ದದ್ದು ಇವೆಲ್ಲ ತುಂಬ ನಿಗೂಢವಾಗಿವೆ. ಈ ರಹಸ್ಯವನ್ನು ತೆರೆಯುವ ಕೀಲಿ ಕೈ ಯಾವುದು?

* * * *

---

೧. ಮ್ಯೂರ್: ಸಂ. I, ಪು. ೪೭೩–೪೭೪.

## ಅಧ್ಯಾಯ ೧೬

# ಶೂದ್ರರು ಮತ್ತು ಪ್ರತಿಕ್ರಾಂತಿ

*ಇದು ಬೆರಳಚ್ಚು ಮಾಡಿದ ೨೧ ಪುಟಗಳ ಹಸ್ತಪ್ರತಿ. ಇದರ ರಕ್ಷಾಪುಟದಲ್ಲಿ "ಶೂದ್ರರು ಮತ್ತು ಪ್ರತಿಕ್ರಾಂತಿ" ಎಂಬ ಶೀರ್ಷಿಕೆಯಿದ್ದು ಮುಂದಿನ ಪುಟವೂ ಅದೇ ಶೀರ್ಷಿಕೆಯಿಂದ ಪ್ರಾರಂಭವಾಗುತ್ತದೆ. ಇವೆಲ್ಲ ಬಿಡಿ ಹಾಳೆಗಳಾಗಿದ್ದು ಒಟ್ಟಿಗೆ ದಾರದಿಂದ ಕಟ್ಟಲ್ಪಟ್ಟಿವೆ. ದುರದೃಷ್ಟವೆಂದರೆ, ಕೇವಲ ೨೧ ಪುಟಗಳು ಲಭ್ಯವಾಗಿದ್ದು ಆಮೇಲಿನ ಪುಟಗಳು ಲುಪ್ತವಾಗಿವೆ.*

– ಸಂಪಾದಕರು

ಶೂದ್ರರ ಸ್ಥಾನಮಾನಗಳಿಗೆ ಸಂಬಂಧಿಸಿದಂತೆ "ಮನುಸ್ಮೃತಿ"ಯು ತುಂಬ ಸ್ವಾರಸ್ಯಕರವಾಗಿದೆ. ಕಾರಣ ಅದು ಹಿಂದೂಗಳ ಮನಸ್ಸನ್ನು ರೂಪಿಸಿದೆ. ಈಗಲೂ ಹಾಗೂ ಎಲ್ಲ ಕಾಲಗಳಲ್ಲಿಯೂ ಅದು ಹಿಂದೂ ಸಮಾಜದ ಅತ್ಯಂತ ದೊಡ್ಡ ಭಾಗವಾದ ಶೂದ್ರರ ಬಗ್ಗೆ ಹಿಂದೂಗಳ ಧೋರಣೆಯನ್ನು ನಿರ್ಧರಿಸಿದೆ. ಮುಂದೆ ಅವುಗಳನ್ನು ಪ್ರತ್ಯೇಕ ಶೀರ್ಷಿಕೆಯಲ್ಲಿ ಬರೆಯಲಾಗಿದೆ. ಏಕೆಂದರೆ ಅದರಿಂದ ಶೂದ್ರ ಸಮುದಾಯಕ್ಕೆ ಮನು ನೀಡಿರುವ ಸ್ಥಾನಮಾನದ ಬಗ್ಗೆ ಓದುಗರಿಗೆ ಒಂದು ಸಮಗ್ರ ಅಭಿಪ್ರಾಯ ಬರಲು ಸಾಧ್ಯವಿದೆ.

ಬ್ರಾಹ್ಮಣರು, ಕ್ಷತ್ರಿಯರು ಮತ್ತು ವೈಶ್ಯರಾದ ಗೃಹಸ್ಥರಿಗೆ ಮನು ಹೇಳುತ್ತಾನೆ:

IV ೬೧. ಶೂದ್ರರು ರಾಜರಾಗಿರುವ ದೇಶದಲ್ಲಿ ಅವರು ವಾಸಮಾಡಬಾರದು. ಶೂದ್ರನನ್ನು ಗೌರವಸ್ಥನೆಂದು ಭಾವಿಸಬಾರದು.

ಏಕೆಂದರೆ ಮನು ವಿಧಿಸುತ್ತಾನೆ:

XI ೨೪. ಯಜ್ಞ ಮಾಡಲು ಶೂದ್ರನಿಂದ ಬ್ರಾಹ್ಮಣ ಹಣವನ್ನು ಯಾಚಿಸಬಾರದು. ಶೂದ್ರನ ಜೊತೆ ಎಲ್ಲ ಮದುವೆಯ ಸಂಬಂಧಗಳನ್ನು ನಿಷೇಧಿಸಲಾಗಿತ್ತು. ಮೂರು ವರ್ಣಗಳ ಯಾವ ಹೆಂಗಸನ್ನೂ ಮದುವೆಯಾಗುವಂತಿರಲಿಲ್ಲ. ಮೇಲಿನ ಮೂರು ವರ್ಣಗಳ ಸ್ತ್ರೀಯ ಜೊತೆ ಶೂದ್ರ ಯಾವುದೇ ಸಂಬಂಧವನ್ನು ಇಟ್ಟುಕೊಳ್ಳಬಾರದು. ಅವಳ ಜೊತೆ ನಡೆಸಿದ ವ್ಯಭಿಚಾರಕ್ಕೆ ಶೂದ್ರನಿಗೆ ಮರಣದಂಡನೆಯನ್ನು ವಿಧಿಸಬೇಕೆಂದು ಮನು ಘೋಷಿಸುತ್ತಾನೆ.

ರಕ್ಷಣೆಯಿಂದ ಅಥವಾ ಇಲ್ಲದಿರುವ ಸ್ತ್ರೀಯ ಜೊತೆ ಶೂದ್ರ ಸಂಭೋಗ ಮಾಡಿದರೆ ಈ ರೀತಿ ಶಿಕ್ಷಿಸಬೇಕೆಂದು ಮನು ಹೇಳುತ್ತಾನೆ:

VIII ೩೭೪. ಅವಳು [೧]ಅರಕ್ಷಿತಳಾಗಿದ್ದರೆ, ಅವನ ಗುಪ್ತಾಂಗವನ್ನು ಕತ್ತರಿಸಿ ಹಾಕಬೇಕು. ಅವಳು ರಕ್ಷಿತಳಾಗಿದ್ದರೆ ಆಗ ಅವನನ್ನು ಮರಣ ದಂಡನೆಗೆ ಗುರಿಪಡಿಸಿ ಅವನ ಆಸ್ತಿಪಾಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳಬೇಕು.

VIII ೨೦. ಬ್ರಾಹ್ಮಣ ಕೇವಲ ಬ್ರಾಹ್ಮಣನಾಗಿದ್ದರೂ ಅಂದರೆ ವೇದಾಧ್ಯಯನ ಮಾಡದೆ ಅಥವಾ ವೇದಗಳು ವಿಧಿಸುವ ಕರ್ಮ ಮಾಡದೆ ಇದ್ದರೂ ರಾಜನು ಇಷ್ಟಪಟ್ಟರೆ ಅವನಿಗೆ ನ್ಯಾಯಾಧಿಪತಿಯಾಗಿ ಅವನು ಧರ್ಮವನ್ನೂ ವಿವರಿಸಬಹುದು. ಆದರೆ ಶೂದ್ರ ಎಷ್ಟೇ ವಿದ್ಯಾವಂತನಾದರೂ ಕೂಡ ಎಂದೂ ಮಾಡಕೂಡದು.

VIII ೨೪. ಶೂದ್ರನು ಧರ್ಮವನ್ನು ನಿಷ್ಕರ್ಷೆ ಮಾಡುವುದನ್ನು ನೋಡಿಯೂ ಸುಮ್ಮನಿರುವ ರಾಜನ ಚಕ್ರಾಧಿಪತ್ಯವು ಕೆಸರಿನಲ್ಲಿ ಹೂತು ಹೋಗುವ ಗೋವಿನಂತೆ ಹೂತು ಹೋಗುವುದು.

VIII ೨೭೨. ಶೂದ್ರನು ದರ್ಪದಿಂದ ಬ್ರಾಹ್ಮಣರಿಗೆ ಧರ್ಮ ಬೋಧನೆ ಮಾಡಿದರೆ ರಾಜನು ಅವನ ಬಾಯಿ ಮತ್ತು ಕಿವಿಗಳಿಗೆ ಕುದಿಯುವ ತೈಲವನ್ನು ಸುರಿಸಬೇಕು.

ಜ್ಞಾನಾರ್ಜನೆಯ ವಿಷಯದಲ್ಲಿ ಮನು ಹೀಗೆ ವಿಧಿಸುತ್ತಾನೆ:

III ೧೫೬. ಶೂದ್ರ ಶಿಷ್ಯರಿಗೆ ಪಾಠ ಹೇಳಿದರೆ, ಅವನು ಯಾರಿಗೆ ಶೂದ್ರ ಗುರುವಾಗಿರುವನೋ ಅವನು ಶೂದ್ರನ ಆಹ್ವಾನದಿಂದ ಅನರ್ಹನಾಗುತ್ತಾನೆ.

IV ೯೯. ಅವನು ವೇದಗಳನ್ನು.... ಶೂದ್ರರ ಸಮ್ಮುಖದಲ್ಲಿ ಎಂದೂ ಓದಬಾರದು.

ವೇದವನ್ನು ಓದುವ ಶೂದ್ರರಿಗೆ ಶಿಕ್ಷೆ ವಿಧಿಸುವ ಕ್ರೌರ್ಯದಲ್ಲಿ ಮನುವಿನ ಉತ್ತರಾಧಿಕಾರಿಗಳು ಅವನಿಗಿಂತ ತುಂಬ ಮುಂದೆ ಹೋಗಿದ್ದಾರೆ. ಉದಾಹರಣೆಗೆ, ಕಾತ್ಯಾಯನನು ಶೂದ್ರರು ವೇದವನ್ನು ಕದ್ದು ಕೇಳಿದರೆ ಅಥವಾ ವೇದೋಚ್ಚಾರಣೆಯನ್ನು ಮಾಡಲು ಹೊರಟರೆ, ರಾಜನು ಅವನ ನಾಲಗೆಯನ್ನು ಸೀಳಬೇಕು, ಕಿವಿಗೆ ಕಾದ ಸೀಸ ಹುಯ್ಯಬೇಕೆಂದು ಹೇಳುತ್ತಾನೆ.

ಆಸ್ತಿಯ ಹಕ್ಕಿನ ಬಗ್ಗೆ ಮನು ಹೀಗೆ ಆದೇಶಿಸುತ್ತಾನೆ:

X ೧೨೯. ಶೂದ್ರನಿಗೆ ಹಣ ಮಾಡುವ ಶಕ್ತಿಯಿದ್ದರೂ ಅವನು ಹಣ ಮಾಡಬಾರದು. ಏಕೆಂದರೆ ಗುಲಾಮನಾದ ಅವನು ಸಂಪತ್ತು ಗಳಿಸಿದರೆ ಹೆಮ್ಮೆ ಪಡುತ್ತಾನೆ. ತನ್ನ ಗರ್ವದಿಂದ ಅಥವಾ ತಿರಸ್ಕಾರದಿಂದ ಅವನು ಬ್ರಾಹ್ಮಣರಿಗೆ ಬಾಧೆಯುಂಟು ಮಾಡುತ್ತಾನೆ.

X ೪೧೭. ತಾನು ಸಂಕಷ್ಟಗಳಲ್ಲಿದ್ದಾಗ ಬ್ರಾಹ್ಮಣರು ನಿಸ್ಸಂಕೋಚವಾಗಿ ಶೂದ್ರನ ಸಂಪತ್ತನ್ನು ಕಿತ್ತುಕೊಳ್ಳಬಹುದು.

ಶೂದ್ರನಿಗೆ ಇರುವುದು ಒಂದೇ ಒಂದು ವೃತ್ತಿ. ಇದು ಮನುಸ್ಮೃತಿಯ ನಿಯಮ. ಮನು ಹೇಳುತ್ತಾನೆ:

I ೯೧. ದೇವರು ಶೂದ್ರನಿಗೆ ಒಂದೇ ಒಂದು ಕಸುಬನ್ನು ವಿಧಿಸಿದ್ದಾನೆ. ಅದು ಮೇಲಿನ ಮೂರು ವರ್ಣಗಳನ್ನು ಅಸೂಯೆ ಇಲ್ಲದೆ ಸೇವೆ ಮಾಡುವುದು.

---

೧. 'ರಕ್ಷಿತ' ಎಂದರೆ ಬಂಧುಗಳ ರಕ್ಷಣೆಯಲ್ಲಿರುವವಳು ಎಂದೂ, ಅರಕ್ಷಿಳು ಎಂದರೆ ಒಂಟಿಯಾಗಿ ವಾಸಿಸುವವಳು ಎಂದೂ ಅರ್ಥ.

X ೧೨೧. ಬ್ರಾಹ್ಮಣರ ಸೇವೆಯಿಂದ ಶೂದ್ರನಿಗೆ ಬದುಕುವುದು ಕಷ್ಟವಾದರೆ ಅವನು ಕ್ಷತ್ರಿಯರನ್ನಾಗಲೀ ಅಥವಾ ಶ್ರೀಮಂತ ವೈಶ್ಯನನ್ನಾಗಲೀ ಸೇವಿಸಿಕೊಂಡು ಬದುಕಬಹುದು.

X ೧೨೨. ಸ್ವರ್ಗ ಲಾಭದ ಆಸೆಯಿಂದ ಅಥವಾ ಇಹ ಪರ ಜೀವನ ದೃಷ್ಟಿಯಿಂದ ಶೂದ್ರ ಬ್ರಾಹ್ಮಣನ ಸೇವೆ ಮಾಡಬೇಕು. ಏಕೆಂದರೆ ಯಾರು ಬ್ರಾಹ್ಮಣನ ಸೇವೆ ಮಾಡುತ್ತಾನೋ ಅವನಿಗೆ ಅದರಿಂದಲೇ ಎಲ್ಲವೂ ಈಡೇರುತ್ತದೆ.

X ೧೨೩. ಬ್ರಾಹ್ಮಣನ ಸೇವೆಯೇ ಶೂದ್ರನಿಗೆ ಅತ್ಯುತ್ತಮವಾದ ಕೆಲಸ. ಇದನ್ನು ಬಿಟ್ಟು ಅವನು ಏನೇ ಮಾಡಿದರೂ ಅವನಿಗೆ ಫಲವಿಲ್ಲ.

ಸೇವೆ ಮಾಡುವುದು ಶೂದ್ರನಿಗೆ ಬಿಟ್ಟದ್ದು ಎಂದು ಮನು ಹೇಳುವುದಿಲ್ಲ. ಶೂದ್ರನು ಸೇವೆ ಮಾಡಲು ತಿರಸ್ಕರಿಸಿದರೆ ಅವನನ್ನು ಬಲಾತ್ಕರಿಸಬೇಕೆಂದು ಹೇಳುತ್ತಾನೆ.

VIII ೪೧೩. ಶೂದ್ರ ಜೀತಕ್ಕಿರಲಿ ಅಥವಾ ಇಲ್ಲದಿರಲಿ ಅವನನ್ನು ಸೇವಾ ಕಾರ್ಯ ಮಾಡಲು ಬಲವಂತಿಸಬೇಕು. ಅವನನ್ನು ಬ್ರಹ್ಮ ಸೃಷ್ಟಿಸಿರುವುದೇ ಬ್ರಾಹ್ಮಣನ ಜೀತಮಾಡಲು.

X ೧೨೪. ಅವನ ಶಕ್ತಿ ದಕ್ಷತೆ, ಅವನನ್ನು ಅವಲಂಬಿಸಿರುವ ಜನರನ್ನು ನೋಡಿಕೊಂಡು, ಅವನಿಗೆ ತಮ್ಮ ಆಸ್ತಿಯಲ್ಲಿ ಅವನ ಜೀವನೋಪಾಯಕ್ಕಾಗಿ ಒಂದು ಭಾಗವನ್ನು ಬಿಡತಕ್ಕದ್ದು.

X ೧೨೫. ತಾವು ಉಂಡು ಮಿಕ್ಕಿದ್ದನ್ನು ಅವನಿಗೆ ಕೊಡಬೇಕು. ಹಳೆ ಬಟ್ಟೆ ಹಳೆ ಹಾಸುಗೆ ಕೊಡಬೇಕು.

ಮೇಲಿನ ಮೂರು ವರ್ಣದವರ ಬಗ್ಗೆ ಮಾತಿನಲ್ಲೂ ನಡೆವಳಿಕೆಯಲ್ಲೂ ಶೂದ್ರ ಗುಲಾಮನಂತೆ ವರ್ತಿಸಬೇಕೆಂದು ಮನು ನುಡಿಯುತ್ತಾನೆ.

VIII ೨೭೦. ಶೂದ್ರ ದ್ವಿಜನನ್ನು ಹೀನವಾಗಿ ಬೈದರೆ ಅವನ ನಾಲಗೆಯನ್ನು ಕತ್ತರಿಸಿಹಾಕಬೇಕು. ಏಕೆಂದರೆ ಅವನು ಕೀಳು ಜಾತಿಯವನು.

VIII ೨೭೧. ಶೂದ್ರನು ದ್ವಿಜನನ್ನು ತಿರಸ್ಕಾರದಿಂದ ಮಾತನಾಡಿಸಿದರೆ ಹತ್ತು ಅಂಗುಲದ ಮೊಳೆಯನ್ನು ಕೆಂಪಗೆ ಕಾಯಿಸಿ ಅವನ ಬಾಯಿಗೆ ಜಡಿಯಬೇಕು.

ಮನು ಇಷ್ಟರಿಂದ ತೃಪ್ತನಾಗುವುದಿಲ್ಲ. ಶೂದ್ರರ ಸ್ಥಾನಮಾನ ಅವರ ಹೆಸರುಗಳಿಂದಲೇ ಸೂಚಿತವಾಗಲೆಂದು ನಿರ್ದೇಶಿಸುತ್ತಾನೆ:

II ೩೧. ಬ್ರಾಹ್ಮಣನ ಹೆಸರಿನ ಮೊದಲಿನ ಭಾಗ ಸಂತೋಷವನ್ನು ಕ್ಷತ್ರಿಯನ ಹೆಸರು ಬಲವನ್ನೂ ವೈಶ್ಯನ ಹೆಸರು ಸಂಪತ್ತನ್ನೂ ಸೂಚಿಸಬೇಕು. ಆದರೆ ಶೂದ್ರರ ಹೆಸರು ಜಿಗುಪ್ಸೆಯನ್ನು ಸೂಚಿಸಬೇಕು.

II ೩೨. ಬ್ರಾಹ್ಮಣನ ಹೆಸರಿನ ಕೊನೆಯ ಭಾಗ ಸಂತೋಷವನ್ನೂ ಕ್ಷತ್ರಿಯನ ಹೆಸರು ರಕ್ಷಣೆಯನ್ನು ವೈಶ್ಯನ ಹೆಸರು ವ್ಯಾಪಾರವನ್ನೂ ಶೂದ್ರನ ಹೆಸರು ದಾಸ್ಯವನ್ನೂ ಸೂಚಿಸಬೇಕು.

ಮನುವಿಗಿಂತ ಮೊದಲು ಶೂದ್ರನ ಸ್ಥಾನ ಏನಿತ್ತು? ಶೂದ್ರನನ್ನು ಅನಾರ್ಯನೆಂಬಂತೆ ಆರ್ಯರ ಸಾಮಾಜಿಕ ಮತ್ತು ಧಾರ್ಮಿಕ ಸವಲತ್ತುಗಳಿಗೆ ಹಕ್ಕುದಾರನಲ್ಲವೆಂಬಂತೆ ಮನು ನಡೆಸಿಕೊಳ್ಳುತ್ತಾನೆ.

ದುರದೃಷ್ಟವಶಾತ್, ಶೂದ್ರರು ಆರ್ಯರಲ್ಲ ಎಂಬ ಅಭಿಪ್ರಾಯವನ್ನು ಜನಸಂಖ್ಯೆಯ ಬಹುಮಂದಿ ಬಹಳ ಸುಲಭವಾಗಿ ಒಪ್ಪಿಕೊಂಡಿದ್ದಾರೆ. ಆದರೆ ಈ ಅಭಿಪ್ರಾಯಕ್ಕೆ ಪ್ರಾಚೀನ ಆರ್ಯರ ಸಾಹಿತ್ಯದಲ್ಲಿ ಕೊಂಚ ಕೂಡ ಆಧಾರವಿಲ್ಲ ಎಂಬುದರಲ್ಲಿ ಏನೂ ಸಂಶಯವಿಲ್ಲ.

ಪ್ರಾಚೀನ ಆರ್ಯರ ಧಾರ್ಮಿಕ ಸಾಹಿತ್ಯವನ್ನು ಓದಿದರೆ ಅಲ್ಲಿ ಅನೇಕ ಜನ ಸಮುದಾಯಗಳ ಪಂಗಡಗಳ ಹೆಸರುಗಳು ಕಂಡುಬರುತ್ತವೆ. ಅಲ್ಲಿ ಬ್ರಾಹ್ಮಣರು, ಕ್ಷತ್ರಿಯರು, ವೈಶ್ಯರು ಮತ್ತು ಶೂದ್ರರು ಎಂಬ ಆರ್ಯರ ಚಾತುರ್ವರ್ಣ ವಿಭಜನೆ ಇದೆ. ಇವರ ಜೊತೆಗೆ ಹಾಗೂ ಇವರಿಂದ ಹೊರತಾದ (i) ಅಸುರರು, (ii) ಸುರರು ಅಥವಾ ದೇವತೆಗಳು, (iii) ಯಕ್ಷರು, (iv) ಗಂಧರ್ವರು, (v) ಕಿನ್ನರರು, (vi) ಚಾರಣರು, (vii) ಅಶ್ವಿನಿಗಳು ಮತ್ತು (viii) ನಿಷಾದರು ಇದ್ದರು. ಅನಾಗರಿಕ ಆದಿ ಜನಾಂಗದವರೂ ಆದ ನಿಷಾದರು ಕಾಡು ಜನರಾಗಿದ್ದರು. ಗಂಧರ್ವರು, ಯಕ್ಷರು, ಕಿನ್ನರರು, ಚಾರಣರು ಮತ್ತು ಅಶ್ವಿನಿಗಳು ವೃತ್ತಿನಿರತ ವರ್ಗಗಳಾಗಿದ್ದವು, ಸಮುದಾಯಗಳಾಗಿರಲಿಲ್ಲ. ಅಸುರ ಎಂಬುದು ದೈತ್ಯರು, ದಾನವರು, ದಸ್ಯುಗಳು, ಕಾಲಾಂಜರು, ಕಾಲಕೇಯರು, ಕಾಲಿಯರು, ನಾಗಗಳು, ನಿವಾತಕವಚರು, ಪೌಲೋಮರು, ಪಿಶಾಚರು ಮತ್ತು ರಾಕ್ಷಸರು ಮುಂತಾದ ಬುಡಕಟ್ಟುಗಳಿಗೆ ದತ್ತವಾಗಿದ್ದ ಸಾಮಾನ್ಯವಾದ ಹೆಸರು. ಅಸುರರ ಹಾಗೆಯೇ ಸುರರು ಮತ್ತು ದೇವತೆಗಳು ನಾನಾ ಬುಡಕಟ್ಟುಗಳ ಸಂಮಿಶ್ರಣವೇ ಎಂಬುದು ನಮಗೆ ತಿಳಿದುಬಂದಿಲ್ಲ. ದೇವತೆಗಳ ಜನಾಂಗದ ನಾಯಕರು ಯಾರು ಎಂಬುದನ್ನು ಮಾತ್ರ ನಾವು ಬಲ್ಲೆವು; ಅವರಲ್ಲಿ ಪ್ರಖ್ಯಾತರಾದವರು ಬ್ರಹ್ಮ, ವಿಷ್ಣು, ರುದ್ರ, ಸೂರ್ಯ, ಇಂದ್ರ, ವರುಣ, ಸೋಮ, ಇತ್ಯಾದಿ.

ಈ ಆರ್ಯರು, ಅಸುರರು ಮತ್ತು ದೇವತೆಗಳು ಈ ಸಮುದಾಯಗಳ ಬಗ್ಗೆಯೂ ಅವರ ಪರಸ್ಪರ ಸಂಬಂಧ ಮತ್ತು ಸಗೋತ್ರದ ಬಗ್ಗೆಯೂ ಸಾಯಣಾಚಾರ್ಯನ ಅನೇಕ ತಪ್ಪು ವ್ಯಾಖ್ಯಾನಗಳಿಂದಾಗಿ ಬಹುಶ್ರುತರಾದ ವಿದ್ವಾಂಸರಲ್ಲಿಯೂ ಕೂಡ ವಿಚಿತ್ರ ನಂಬಿಕೆಗಳು ಪ್ರಚಲಿತವಿದೆ. ಅಸುರರು ಮಾನವ ಸಂತತಿಯೇ ಅಲ್ಲ ಎಂಬ ನಂಬಿಕೆಯಿದೆ. ಅವರು ರಾತ್ರಿ ವೇಳೆ ಆರ್ಯರನ್ನು ಪೀಡಿಸುತ್ತಿದ್ದ ಭೂತ ಪಿಶಾಚಿಗಳೆಂದು ನಂಬಲಾಗಿದೆ. ಸುರರು ಅಥವಾ ದೇವತೆಗಳು ನಿಸರ್ಗ ಶಕ್ತಿಗಳ ಕಾವ್ಯಮಯ ದೈವೀಕರಣಗಳೆಂದು ನಂಬುತ್ತಾರೆ. ಆರ್ಯರು ಚೂಪು ಮೂಗು ಸುಂದರ ಮುಖವಿದ್ದ ಅಪಾರ ವರ್ಣ ದ್ವೇಷದ ಜನರೆಂದು ಭಾವಿಸುತ್ತಾರೆ. ದಸ್ಯುಗಳ ವಿಷಯವಾಗಿ ಹೇಳುವುದಾದರೆ ದಸ್ಯು ಎಂಬುದು ಶೂದ್ರನ ಇನ್ನೊಂದು ಹೆಸರು ಮಾತ್ರವೆಂದು ಪ್ರತಿಪಾದಿಸಲಾಗಿದೆ. ಶೂದ್ರರೆಂದರೆ ಭಾರತದ ಆದಿವಾಸಿಗಳೆಂದು ಹೇಳುತ್ತಾರೆ. ಅವರು ಕಪ್ಪಾಗಿದ್ದ ಚಪ್ಪಟೆ ಮೂಗಿನ ಜನ. ಭಾರತವನ್ನು ಧಾಳಿ ಮಾಡಿ ಅದನ್ನು ಗೆದ್ದ ಆರ್ಯರು ಅವರನ್ನು ದಾಸರನ್ನಾಗಿ ಮಾಡಿಕೊಂಡರು. ಗುಲಾಮಗಿರಿಯ ಸಂಕೇತವಾಗಿ ಅವರಿಗೆ ದಸ್ಯು ಎಂಬ ಹೆಸರು ಕೊಟ್ಟರು; ಅದು[೧] 'ದಾಸ' ಪದದಿಂದ ಬಂದಿದೆ. ದಾಸನೆಂದರೆ ಗುಲಾಮ.

ಈ ಎಲ್ಲ ನಂಬಿಕೆಗಳೂ ಆಧಾರ ರಹಿತವಾಗಿವೆ. ಆರ್ಯರಂತೆ ಅಸುರರು ಮತ್ತು ಸುರರ ಸಮುದಾಯಗಳೂ ಕೂಡ ಮಾನವ ಜನಾಂಗಗಳೇ ಆಗಿದ್ದವು. ಅಸುರರು ಮತ್ತು ಸುರರು ಕಶ್ಯಪನೆಂಬ ಒಬ್ಬನೇ ತಂದೆಯ ಮಕ್ಕಳು. ದಕ್ಷ ಪ್ರಜಾಪತಿಗೆ ೬೦ ಜನ ಪುತ್ರಿಯರಿದ್ದರು. ಅವರಲ್ಲಿ ಹದಿಮೂರು ಪುತ್ರಿಯರನ್ನು ಕಶ್ಯಪನಿಗೆ ಮದುವೆ ಮಾಡಿಕೊಟ್ಟರು. ಈ ಹದಿಮೂರು ಜನ ಹೆಂಡತಿಯರಲ್ಲಿ ದಿತಿ ಮತ್ತು

೧. ನಿರುಕ್ತದ ಪ್ರಕಾರ 'ದಾಸ' ಎಂದರೆ 'ಧ್ವಂಸ ಮಾಡು' ಎಂದು ಅರ್ಥ.

ಅದಿತಿ ಎಂಬ ಇಬ್ಬರು ಸೇರಿದ್ದರು. ದಿತಿಗೆ ಹುಟ್ಟಿದವರನ್ನು ಅಸುರರೆಂದೂ, ಅದಿತಿಗೆ ಹುಟ್ಟಿದವರು ಸುರರು ಅಥವಾ ದೇವತೆಗಳೆಂದೂ ಹೆಸರಾದರು. ಈ ಲೋಕದ ಸಾರ್ವಭೌಮತ್ವಕ್ಕಾಗಿ ಈ ಈರ್ವರೂ ದೀರ್ಘಕಾಲದವರೆಗೆ ಕ್ರೂರ ಯುದ್ಧವನ್ನು ಮಾಡಿದರು. ಇದು ಪುರಾಣ ಎನ್ನುವುದರಲ್ಲಿ ಏನೂ ಅನುಮಾನವಿಲ್ಲ. ಪುರಾಣವೂ ಇತಿಹಾಸವೇ. ಆದರೂ ಅದು ಉತ್ಪ್ರೇಕ್ಷಿತವಾದ ಇತಿಹಾಸ.

ಆರ್ಯರು ಒಂದು ಜನಾಂಗವಲ್ಲ. ಆರ್ಯರು ಒಂದು ಜನಸಮೂಹವಾಗಿದ್ದರು. ಆರ್ಯ ಸಂಸ್ಕೃತಿ ಎಂದು ಕರೆಯಲಾದ ಒಂದು ಬಗೆಯ ಸಂಸ್ಕೃತಿಯನ್ನು ಉಳಿಸಿಕೊಳ್ಳಬೇಕೆಂಬ ಆಸಕ್ತಿಯೇ ಅವರೆಲ್ಲರನ್ನು ಒಟ್ಟಿಗೆ ಕೂಡಿಸಿದ್ದ ಸಿಮೆಂಟಾಗಿತ್ತು. ಯಾರ್‍ಯಾರು ಆರ್ಯ ಸಂಸ್ಕೃತಿಯನ್ನು ಸ್ವೀಕರಿಸಿದರೋ ಅವರೆಲ್ಲ ಆರ್ಯರಾದರು. ಅದು ಜನಾಂಗವಾಗಿಲ್ಲದುದರಿಂದ ಆರ್ಯರೆಂದು ಕರೆಯಲು ಬಣ್ಣ ಮತ್ತು ಮುಖ ಸಾಮುದ್ರಿಕಾರೂಪದ ಒಂದು ನಿರ್ದಿಷ್ಟ ಮಾದರಿ ಇರಲಿಲ್ಲ. ಆರ್ಯರು ತಮ್ಮನ್ನೇ ತಾವು ಪ್ರತ್ಯೇಕ ಮಾಡಿಕೊಳ್ಳಲು ಕಪ್ಪನೆಯ ಚಪ್ಪಟೆ ಮೂಗಿನ ಜನ ಇರಲಿಲ್ಲ.[೧] ಆರ್ಯರು ಮತ್ತು ದಸ್ಯಗಳ ನಡುವಣ ವಿಭಜನೆ ಮತ್ತು ವೈರದ ಅಂಶಗಳಾಗಿ ವರ್ಣ ದ್ವೇಷದ ಇಡಿ ಚೌಕಟ್ಟು, ದಸ್ಯುಗಳ ಸಂಬಂಧವಾಗಿ ಉಪಯೋಗಿಸಲಾದ 'ವರ್ಣ' ಮತ್ತು 'ಅನಸ್' ಎಂಬ ಎರಡು ಶಬ್ದಗಳಿಗೆ ಕೊಟ್ಟ ತಪ್ಪು ಅರ್ಥದ ಮೇಲೆ ಆಧಾರಿತವಾಗಿದೆ. ವರ್ಣ ಶಬ್ದಕ್ಕೆ ಬಣ್ಣ ಎಂದು ಅರ್ಥಕೊಡಲಾಗಿದೆ; 'ಅನಸ್' ಪದವನ್ನು ಮೂಗಿಲ್ಲದೆ ಇರುವುದು ಎಂದು ಅರ್ಥೈಸಲಾಗಿದೆ. ಈ ಎರಡು ಅರ್ಥಗಳೂ ದೋಷ ಪೂರಿತವಾಗಿವೆ. ವರ್ಣ ಎಂದರೆ ಜಾತಿ ಅಥವಾ ಪಂಗಡ ಎಂದು ಅರ್ಥ. 'ಅನಸ್' ಅನ್ನು ಅನ್+ಅಸ್ ಎಂದು ಓದಿದರೆ ಪರಿಷ್ಕೃತವಲ್ಲದ ಭಾಷೆ ಎಂದು ಅರ್ಥವಾಗುತ್ತದೆ. ತಮ್ಮ ಸಾಮಾಜಿಕ ವ್ಯವಸ್ಥೆಯನ್ನು ನಿರ್ಧರಿಸಿದಂಥ ವರ್ಣ ದ್ವೇಷ ಆರ್ಯನಿಗೆ ಇತ್ತು ಎಂದು ಹೇಳುವುದು ಸಂಪೂರ್ಣ ಅರ್ಥಹೀನವಾದುದು. ವರ್ಣ ದ್ವೇಷವಿಲ್ಲದ ಯಾರಾದರೂ ಜನರಿದ್ದರೆ ಅವರು ಆರ್ಯರು. ಏಕೆಂದರೆ ಅಲ್ಲಿ ತಮ್ಮ ತಮ್ಮನ್ನೇ ಬೇರ್ಪಡಿಸಿಕೊಳ್ಳುವಂತಹ ಪ್ರಮುಖ ಬಣ್ಣವಿರಲಿಲ್ಲ.

ಜನಾಂಗೀಯವಾಗಿ ದಸ್ಯುಗಳು ಆರ್ಯರಲ್ಲ ಎನ್ನುವುದು ತಪ್ಪು. ದಸ್ಯುಗಳು ಭಾರತದ ಆದಿವಾಸಿಗಳ ಆರ್ಯ ಪೂರ್ವ ಜನಾಂಗವಲ್ಲ. ಆರ್ಯ ಸಂಸ್ಕೃತಿಯ ಮೂಲಭೂತ ಭಾಗವಾದ ಯಾವುದೋ ನಂಬಿಕೆ ಅಥವಾ ಆಚರಣೆಯನ್ನು ವಿರೋಧಿಸಿದ್ದರಿಂದ ದಸ್ಯುಗಳಿಗೆ ಅವರು ಆರ್ಯ ಸಮುದಾಯದ ಸದಸ್ಯರಾದರೂ, ಆರ್ಯ ಎಂಬ ಹೆಸರು ಲಭ್ಯವಾಗಲಿಲ್ಲ. ದಸ್ಯುಗಳು ಜನಾಂಗೀಯವಾಗಿ ಅನಾರ್ಯರು ಎಂಬ ನಂಬಿಕೆ ಹೇಗೆ ಹುಟ್ಟಿತು ಎಂದು ತಿಳಿಯಲು ಕಷ್ಟವಾಗಿದೆ. ಋಗ್ವೇದದಲ್ಲಿ (೧೦.೪೯) ಇಂದ್ರ ಹೇಳುತ್ತಾನೆ: "ನನ್ನ ವಜ್ರಾಯುಧದಿಂದ ನಾನು ಕವಿ ಎಂಬ ಮನುಷ್ಯನನ್ನು ಅವನ ಒಳತಿಗಾಗಿಯೇ ವಧಿಸಿದ್ದೇನೆ. ರಕ್ಷಣೆಯ ವಿಧಾನಗಳನ್ನು ಅನುಸರಿಸಿ ನಾನು ಕುತ್ಸನನ್ನು ಸಂರಕ್ಷಿಸಿದ್ದೇನೆ. ಋಷಣನನ್ನು ಸಂಹರಿಸಲು ನಾನು ವಜ್ರಾಯುಧವನ್ನು ಎತ್ತಿದೆ. ದಸ್ಯುಗಳಿಗೆ ಆರ್ಯ ಎಂಬ ಬಿರುದನ್ನು ಇಲ್ಲದಂತೆ ಮಾಡಿದೆನು."

ದಸ್ಯುಗಳು ಆರ್ಯರೇ ಆಗಿದ್ದರು ಎಂಬುದಕ್ಕೆ ಇದಕ್ಕಿಂತ ಖಚಿತವೂ ಖಂಡಿತವೂ ಆದ ಬೇರೆ ಹೇಳಿಕೆ ಇರಲಾರದು. ದೌರ್ಜನ್ಯಗಳನ್ನು ಎಸಗಿದುದಕ್ಕಾಗಿ ಇಂದ್ರನಿಗೆ ಮಾಡಿದ ದೋಷಾರೋಪಣೆಯಲ್ಲಿ ಇದಕ್ಕಿಂತ ಉತ್ತಮ ಹಾಗೂ ಇನ್ನೂ ಹೆಚ್ಚಿನ ಪುರಾವೆಯನ್ನು ನೋಡಬಹುದು. ಇಂದ್ರನು ಎಸಗಿದ

೧. ಈ ಸಮಗ್ರ ವಿಷಯದ ಬಗ್ಗೆ ಶ್ರೀ ಸಾತವಳೇಕರ್ ಅವರ ಪ್ರೌಢ ಚರ್ಚೆಯನ್ನು 'ಪುರುಷಾರ್ಥ', ಸಂ. ೮ರಲ್ಲಿ ನೋಡಿ.

ದೌರ್ಜನ್ಯಗಳಿಗಾಗಿ ಮಾಡಿದ ಆಪಾದನಾ ಪಟ್ಟಿಯಲ್ಲಿ ವೃತ್ರ ಸಂಹಾರದ ಆಪಾದನೆಯೂ ಇತ್ತು. ವೃತ್ರ ದಸ್ಯುಗಳ ನಾಯಕನಾಗಿದ್ದನು. ದಸ್ಯುಗಳು ಆರ್ಯರಲ್ಲದಿದ್ದರೆ ಇಂದ್ರನ ವಿರುದ್ಧ ಅಂಥ ಆಪಾದನೆ ಮಾಡುವುದು ಊಹಿಸಲಸಾಧ್ಯವಾದುದು.

ಆರ್ಯ ಆಕ್ರಮಣಕಾರರು ಶೂದ್ರರನ್ನು ಜಯಿಸಿದರೆಂದು ನಂಬುವುದು ತಪ್ಪು. ಮೊದಲನೆಯದಾಗಿ, ಆರ್ಯರು ಭಾರತದ ಹೊರಗಿನಿಂದ ಬಂದು ಇಲ್ಲಿಯ ನಿವಾಸಿಗಳನ್ನು ಧಾಳಿ ಮಾಡಿದರೆಂಬ ಕಥೆಗೆ ಆಧಾರವಿಲ್ಲ. ಭಾರತವೇ ಆರ್ಯರ ಮೂಲ ನೆಲೆ ಎಂಬುದಕ್ಕೆ ಅಪಾರವಾದ ಸಾಕ್ಷ್ಯಾಧಾರಗಳಿವೆ. ಎರಡನೆಯದಾಗಿ, ಆರ್ಯರು ಮತ್ತು ದಸ್ಯುಗಳ ನಡುವೆ ಯುದ್ಧ ನಡೆಯಿತೆಂಬುದಕ್ಕೆ ಯಾವುದೇ ಆಧಾರವಿಲ್ಲ, ಆದರೆ ದಸ್ಯುಗಳಿಗೂ ಶೂದ್ರರಿಗೂ ಏನೇನು ಸಂಬಂಧವಿಲ್ಲ. ಮೂರನೆಯದಾಗಿ, ಆರ್ಯರು ಹೆಚ್ಚು ಸೈನಿಕ ಬಲವಿದ್ದ ಪ್ರಬಲ ಜನರೆಂದು ನಂಬುವುದು ಕಷ್ಟ. ಭಾರತದಲ್ಲಿ ಆರ್ಯರಿಗೂ ದೇವತೆಗಳಿಗೂ ಇದ್ದ ಸಂಬಂಧದ ಇತಿಹಾಸವನ್ನು ಓದುವ ಯಾರಿಗಾದರೂ ಊಳಿಗಮಾನ್ಯ ಪದ್ಧತಿಯ ಕಾಲದಲ್ಲಿ ರೋಮಿನಲ್ಲಿ ಜೀತದಾಳುಗಳಿಗೂ ಅವರ ದಣಿಗಳಿಗೂ ಇದ್ದ ಸಂಬಂಧ ನೆನಪಾಗುತ್ತದೆ. ದೇವತೆಗಳೇ ಊಳಿಗಮಾನ್ಯ ಒಡೆಯರು. ಆರ್ಯರೇ ಅವರಿಗೆ ಜೀತದಾಳುಗಳು. ಆರ್ಯರು ನಡೆಸಿದ ಅಸಂಖ್ಯಾತ ಯಜ್ಞಯಾಗಗಳು ದೇವತೆಗಳಿಗೆ ಸಲ್ಲಿಸಿದ ಊಳಿಗಮಾನ್ಯ ಕಾಣಿಕೆ. ಆರ್ಯರು ದೇವತೆಗಳಿಗೆ ಗುಲಾಮರಾಗಿದ್ದ ಸಂಗತಿಯನ್ನು ಇದು ತೋರಿಸುತ್ತದೆ. ಅಲ್ಲದಿದ್ದರೆ ಅಸುರರ ದಾಳಿಗಳನ್ನು ಅವರು ದೇವತೆಗಳ ಸಹಾಯ ರಕ್ಷಣೆಗಳಿಲ್ಲದಿದ್ದರೆ ಎದುರಿಸಲಾಗುತ್ತಿರಲಿಲ್ಲ. ಅಂಥ ದುರ್ಬಲ ಜನ ಶೂದ್ರರನ್ನು ಗೆದ್ದರೆಂದು ಭಾವಿಸುವುದು ವಿಪರೀತವಾಗುತ್ತದೆ. ಕೊನೆಯದಾಗಿ, ಶೂದ್ರರನ್ನು ಜಯಿಸುವ ಅಗತ್ಯವಿರಲಿಲ್ಲ. ಅವರು ಆರ್ಯ ಪದ ಪ್ರಯೋಗವಾಗುವ ಒಂದೇ ಒಂದು ಅರ್ಥದಲ್ಲಿ ಅವರೂ ಕೂಡ ಆರ್ಯರೇ ಆಗಿದ್ದರು, ಅಂದರೆ ಆರ್ಯ ಸಂಸ್ಕೃತಿಯ ಬೆಂಬಲಿಗರಾಗಿದ್ದರು. ಶೂದ್ರರ ಬಗ್ಗೆ ಎರಡು ವಿಷಯಗಳು ಸ್ಪಷ್ಟವಾಗಿವೆ. ಅವರು ಕಪ್ಪನೆಯ, ಚಪ್ಪಟೆಯ ಮೂಗಿನ ಜನರಾಗಿದ್ದರೆಂಬುದನ್ನು ಇದುವರೆಗೂ ಯಾರೂ ವಿರೋಧಿಸಿಲ್ಲ. ಆರ್ಯರು ಅವರನ್ನು ಸೋಲಿಸಿದರು ಅಥವಾ ಗುಲಾಮಗಿರಿಗೆ ತಳ್ಳಿದರೆಂಬುದನ್ನು ಯಾರೂ ವಿರೋಧಿಸಿಲ್ಲ. ದಸ್ಯುಗಳು ಮತ್ತು ಶೂದ್ರರು ಒಂದೇ ಎಂದು ತಿಳಿಯುವುದು ತಪ್ಪು. ಒಂದು ಜನಾಂಗವಾಗಿ ಅವರು ಒಂದೇ ಆಗಿರಬಹುದು. ಆದರೆ ಸಾಂಸ್ಕೃತಿಕವಾಗಿ ಅವರು ಸಂಪೂರ್ಣ ಭಿನ್ನವಾಗಿದ್ದರು. ದಸ್ಯುಗಳು ಅನಾರ್ಯರಾಗಿದ್ದರು. ಯಾವ ಅರ್ಥದಲ್ಲಿ ಎಂದರೆ ಅವರು ಆರ್ಯ ಸಂಸ್ಕೃತಿಯಿಂದ ಹೊರಬಿದ್ದು ಅದರ ವಿರುದ್ಧ ಬಂಡಾಯವೆದ್ದರು. ಬೇರೆ ಅರ್ಥದಲ್ಲಿ ಶೂದ್ರರೂ ಆರ್ಯರಾಗಿದ್ದಾರೆ ಅಂದರೆ ಅವರು ಆರ್ಯ ಜೀವನ ವಿಧಾನದಲ್ಲಿ ನಂಬಿಕೆಯುಳ್ಳವರಾಗಿದ್ದರು. ಶೂದ್ರನನ್ನು ಆರ್ಯನೆಂದೇ ಅಂಗೀಕರಿಸಲಾಗಿತ್ತು, ಕೌಟಿಲ್ಯನ ಅರ್ಥಶಾಸ್ತ್ರದ ಕಾಲದವರೆಗೂ ಅವನನ್ನು ಆರ್ಯ ಎಂದೇ ಕರೆಯುತ್ತಿದ್ದರು.

ಯಜುರ್ವೇದ[೧] ಪ್ರಾರ್ಥನೆಯಲ್ಲಿ ಶೂದ್ರ ಆರ್ಯ ಸಮಾಜದ ಒಂದು ಅವಿಭಾಜ್ಯ, ಸಹಜ ಮತ್ತು ಗೌರವಾನ್ವಿತ ಸದಸ್ಯನೆಂದು ಸಾಧಿತವಾಗಿರುವುದು ಕಾಣುತ್ತದೆ. ಅದನ್ನು ಯಾಜ್ಞಿಕ ಹೇಳುತ್ತಾನೆ. ಅದು ಈ ರೀತಿ ಇದೆ:

"....ಓ ದೇವತೆಗಳೇ, ನಮ್ಮ ಪೂಜ್ಯಪುರೋಹಿತರಿಗೆ ಕಾಂತಿಯನ್ನು ದಯಪಾಲಿಸಿ, ನಮ್ಮನ್ನಾಳುವ

---

೧. 'ಶುಕ್ಲ ಯಜುರ್ವೇದ', ಪು.೨೦೦.

ದೊರೆಗಳಿಗೆ ಕಾಂತಿಯನ್ನು ನೀಡಿ. ವೈಶ್ಯರಿಗೆ, ಶೂದ್ರರಿಗೆ ಕಾಂತಿಯನ್ನು ದಯಪಾಲಿಸಿ. ಕಾಂತಿಯ ಮೂಲಕ ಅನುಗ್ರಹಿಸಿ, ನನಗೂ ಕಾಂತಿಯನ್ನು ಅನುಗ್ರಹಿಸಿ."

ಇದೊಂದು ಅದ್ಭುತವಾದ ಪ್ರಾರ್ಥನೆ. ಅದ್ಭುತ ಏಕೆಂದರೆ ಶೂದ್ರನು ಆರ್ಯ ಸಮುದಾಯದ ಸದಸ್ಯನೆಂದೂ ಹಾಗೂ ಅದರ ಗೌರವಾನ್ವಿತ ಸದಸ್ಯನೆಂದೂ ಅದು ತೋರಿಸುತ್ತದೆ.

ರಾಜನ ಪಟ್ಟಾಭಿಷೇಕಕ್ಕೆ ಬ್ರಾಹ್ಮಣರು, ಕ್ಷತ್ರಿಯರು, ವೈಶ್ಯರ ಜೊತೆ ಶೂದ್ರರನ್ನೂ ಆಹ್ವಾನಿಸುತ್ತಿದ್ದರೆಂಬುದು ಮಹಾಭಾರತದಲ್ಲಿ ಬರುವ ಪಾಂಡವರ ಹಿರಿಯಣ್ಣನಾಧ ಯುಧಿಷ್ಠಿರನ ಪಟ್ಟಾಭಿಷೇಕೋತ್ಸವದ ವರ್ಣನೆಯಿಂದ ಗೊತ್ತಾಗುತ್ತದೆ. ರಾಜನ ಪಟ್ಟಾಭಿಷೇಕದಲ್ಲಿ ಶೂದ್ರ ಭಾಗವಹಿಸುತ್ತಿದ್ದನು. ಪ್ರಾಚೀನ ಲೇಖಕನಾದ ನೀಲಕಂಠನು ಪಟ್ಟಾಭಿಷೇಕೋತ್ಸವದ ಬಗ್ಗೆ ಹೀಗೆ ಹೇಳುತ್ತಾನೆ: "ನಾಲ್ವರು ಮುಖ್ಯಮಂತ್ರಿಗಳಾದ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರರು ಹೊಸ ರಾಜನನ್ನು ಸಿಂಹಾಸನಾಭಿಷಿಕ್ತನನ್ನಾಗಿ ಮಾಡಿದರು. ಆಮೇಲೆ ಪ್ರತಿಯೊಂದು ವರ್ಣದ ನಾಯಕನೂ ಅತ್ಯಂತ ಕೆಳಜಾತಿಯವರೂ ಪವಿತ್ರ ಜಲವನ್ನು ಅವನ ಮೇಲೆ ಪ್ರೋಕ್ಷಿಸುತ್ತಿದ್ದರು. ಆಮೇಲೆ ದ್ವಿಜನಿಂದ ಸ್ತುತಿ ಪ್ರಾರಂಭವಾಗುತ್ತಿತ್ತು. ಮನುವಿಗಿಂತ ಮುಂಚಿನ ವೇದೋತ್ತರ ಕಾಲದಲ್ಲಿ ರತ್ನಿಗಳೆಂದು ಕರೆಯಲಾದ ಪ್ರತಿನಿಧಿಗಳ ತಂಡವಿತ್ತು. ರಾಜನ ಪಟ್ಟಾಭಿಷೇಕದಲ್ಲಿ ರತ್ನಿಗಳು ಪ್ರಮುಖವಾದ ಪಾತ್ರ ವಹಿಸುತ್ತಿದ್ದರು. ಸಾರ್ವಭೌಮತ್ವದ ಸಂಕೇತವಾದ ರತ್ನವನ್ನು ಅವರು ಹಿಡಿದುಕೊಳ್ಳುತ್ತಿದ್ದುದರಿಂದ ಅವರನ್ನು ರತ್ನಿಗಳೆಂದು ಕರೆಯುತ್ತಿದ್ದರು. ಸಾರ್ವಭೌಮತ್ವದ ರತ್ನವನ್ನು ರಾಜನಿಗೆ ಕೊಟ್ಟ ಮೇಲೆ ಅವನು ತನ್ನ ಸಾರ್ವಭೌಮತ್ವವನ್ನು ಸ್ವೀಕರಿಸುತ್ತಿದ್ದನು. ಹೀಗೆ ಸಾರ್ವಭೌಮತ್ವವನ್ನು ಸ್ವೀಕರಿಸಿದ ನಂತರ ರಾಜನು ಪ್ರತಿಯೊಬ್ಬ ರತ್ನಿಯ ಮನೆಗೂ ದಯಮಾಡಿಸಿ ಅವರಿಗೆ ಉಡುಗೊರೆ ನೀಡುತ್ತಿದ್ದನು. ರತ್ನಿಗಳಲ್ಲಿ ಶೂದ್ರನು ಒಬ್ಬನಾಗಿರುತ್ತಿದ್ದುದು ತುಂಬ ಗಮನಾರ್ಹವಾದ ಅಂಶವಾಗಿದೆ.

ಪ್ರಾಚೀನ ಕಾಲದಲ್ಲಿ ಜನಪದ ಮತ್ತು ಪೌರ ಎಂಬ ಹೆಸರಿನ ಎರಡು ರಾಜಕೀಯ ಸಭೆಗಳಿಗೆ ಶೂದ್ರರು ಸದಸ್ಯರಾಗಿರುತ್ತಿದ್ದರು. ಇದರ ಸದಸ್ಯರಾಗಿ ಅವರು ವಿಶೇಷ ಗೌರವಕ್ಕೆ ಬ್ರಾಹ್ಮಣರಿಂದಲೂ ಕೂಡ ಪಾತ್ರರಾಗಿದ್ದರು.

ಪ್ರಾಚೀನ ಆರ್ಯ ಸಮಾಜದಲ್ಲಿ ಶೂದ್ರನು ಉನ್ನತ ರಾಜಕೀಯ ಸ್ಥಾನವನ್ನು ಪಡೆದಿದ್ದನು ಎಂಬುದು ನಿರ್ವಿವಾದವಾಗಿದೆ ಅವರು ರಾಜ್ಯದ ಮಂತ್ರಿಗಳಾಗುತ್ತಿದ್ದರು. ಇದಕ್ಕೆ ಮಹಾಭಾರತದಲ್ಲಿ ಆಧಾರವಿದೆ. ಮಹಾಭಾರತಕಾರ ನಾನಾ ವರ್ಣಗಳಿಂದ ಮಂತ್ರಿಗಳಾಗಿದ್ದವರ ಹೆಸರುಗಳನ್ನು ತನ್ನ ನೆನಪಿನಿಂದ ಪಟ್ಟಿ[೧] ಮಾಡುತ್ತಾ, ಬ್ರಾಹ್ಮಣರಿಂದ ನಾಲ್ವರು, ಕ್ಷತ್ರಿಯರಿಂದ ಎಂಟು ಜನ, ವೈಶ್ಯರಿಂದ ಇಪ್ಪತ್ತೊಂದು ಜನ, ಶೂದ್ರರಿಂದ ಮೂವರು ಮತ್ತು ಒಬ್ಬ ಸೂತ ಹೀಗೆ ಒಟ್ಟು ೩೭ ಜನ ಮಂತ್ರಿಗಳನ್ನು ಹೆಸರಿಸುತ್ತಾನೆ.

ಶೂದ್ರರು ರಾಜ್ಯದ ಮಂತ್ರಿಗಳಾಗುವಷ್ಟಕ್ಕೇ ನಿಲ್ಲಲಿಲ್ಲ. ಅವರು ರಾಜರು ಕೂಡ ಆದರು. ಋಗ್ವೇದದಲ್ಲಿ ಬರುವ ಶೂದ್ರರ ಕಥೆಗೂ ಶೂದ್ರನಿಗೆ ರಾಜನಾಗಲು ಅರ್ಹತೆಯಿಲ್ಲ ಎನ್ನುವ ಮನುವಿನ ದೃಷ್ಟಿಗೂ ಕಠೋರವಾದ ವ್ಯತ್ಯಾಸವಿದೆ. ಸುದಾಸನ ಆಳ್ವಿಕೆಯನ್ನು ಉಲ್ಲೇಖಿಸುವುದಾದರೆ ಸುದಾಸ ಮಹಾರಾಜನ ರಾಜಪುರೋಹಿತ ಯಾರಾಗಬೇಕೆಂದು ವಸಿಷ್ಠ ಮತ್ತು ವಿಶ್ವಾಮಿತ್ರರಲ್ಲಿ ನಡೆದ ಘೋರ ಪೈಪೋಟಿಯನ್ನು ಈ ಸಂಬಂಧದಲ್ಲಿ ಉಲ್ಲೇಖಿಸಬೇಕು. ಈ ಸ್ಪರ್ಧೆಯಲ್ಲಿ ಸಿಲುಕಿದ್ದ ಪ್ರಶ್ನೆಯೆಂದರೆ ರಾಜನ ಪುರೋಹಿತನಾಗಿ ಕೆಲಸ ನಡೆಸಲು ಯಾರಿಗೆ ಹಕ್ಕಿರಬೇಕೆಂಬುದು. ಬ್ರಾಹ್ಮಣನಾಗಿದ್ದ ವಸಿಷ್ಠ

---

೧. ಜಯಸ್ವಾಲ್ – 'ಹಿಂದು ಪಾಲಿಟಿ', ಭಾಗ II, ಪು. ೧೪೮

ಆಗಲೇ ಸುದಾಸನ ಪುರೋಹಿತನಾಗಿ ಕಾರ್ಯ ನಿರ್ವಹಿಸುತ್ತಿದ್ದವನು ರಾಜಪುರೋಹಿತನಾಗಲು ಬ್ರಾಹ್ಮಣನಿಗೆ ಮಾತ್ರ ಹಕ್ಕೆಂದು ವಾದಿಸಿದ. ಆದರೆ ಕ್ಷತ್ರಿಯನಾಗಿದ್ದ ವಿಶ್ವಾಮಿತ್ರ ಆ ಅಧಿಕಾರಕ್ಕೆ ಕ್ಷತ್ರಿಯನಿಗೂ ಹಕ್ಕುಂಟೆಂದು ಸ್ಪರ್ಧಿಸಿದನು. ವಿಶ್ವಾಮಿತ್ರ ಜಯಶೀಲನಾದನು. ಸುದಾಸನ ಪುರೋಹಿತನಾದನು. ಈ ಸ್ಪರ್ಧೆ ನಿಜವಾಗಿಯೂ ಸ್ಮರಣೀಯವಾಗಿದೆ. ಏಕೆಂದರೆ ಬ್ರಾಹ್ಮಣರನ್ನು ಶಾಶ್ವತವಾಗಿ ಪದಚ್ಯುತಿ ಮಾಡುವ ಫಲಶೃತಿಯಲ್ಲದಿದ್ದರೂ ಇಲ್ಲಿ ಸಿಲುಕಿರುವ ಪ್ರಶ್ನೆ ತುಂಬ ನಿರ್ಣಾಯಕವಾಗಿದೆ. ಆದರೆ ಈ ಕಥೆ ಪ್ರಾಚೀನ ಸಾಹಿತ್ಯದಲ್ಲಿ ಸಿಗುವ ಸಾಮಾಜಿಕ ಇತಿಹಾಸದ ಅತ್ಯುತ್ತಮ ದಾಖಲೆ ಎನ್ನುವುದರಲ್ಲಿ ಬಹುಶಃ ಯಾವ ಅನುಮಾನವೂ ಇಲ್ಲ. ದುರದೃಷ್ಟವಶಾತ್ ಯಾರೂ ಇದರಲ್ಲಿ ಗಂಭೀರ ಆಸಕ್ತಿಯನ್ನು ತಳೆದಿಲ್ಲ. ಈ ಸುದಾಸ ಮಹಾರಾಜ ಯಾರು ಎಂದು ಯಾರೂ ಸಹ ಪ್ರಶ್ನಿಸಿಯೇ ಇಲ್ಲ. ಸುದಾಸನು ಪೈಜವನನ ಪುತ್ರ. ಪೈಜವನು ಕಾಶಿಯ ಮಹಾರಾಜನಾದ ದಿವೋದಾಸನ ಮಗ. ಸುದಾಸನ ವರ್ಣ ಯಾವುದು? ಸುದಾಸ ಮಹಾರಾಜ ಶೂದ್ರನೆಂದರೆ ಯಾರೂ ನಂಬುವುದಿಲ್ಲ. ಆದರೆ ಅದು ನಿಜಸ್ಥಿತಿ. ಅದನ್ನು ಮಹಾಭಾರತದ[೧] ಆಧಾರದಿಂದ ಸಾಧಿಸಬಹುದು. ಶಾಂತಿಪರ್ವದಲ್ಲಿ ಈ ಪೈಜವನನ ಬಗ್ಗೆ ಉಲ್ಲೇಖವಿದೆ. ಪೈಜವನ ಶೂದ್ರನೆಂದು ಹೇಳಿದೆ. ಈ ಬೆಳಕಿನಲ್ಲಿ ನೋಡಿದರೆ ಆರ್ಯ ಸಮಾಜದಲ್ಲಿ ಶೂದ್ರನಿಗಿದ್ದ ಸ್ಥಾನಮಾನದ ಬಗ್ಗೆ ಸುದಾಸನ ಕಥೆ ಹೊಸ ಬೆಳಕು ಚೆಲ್ಲುತ್ತದೆ. ಶೂದ್ರನೊಬ್ಬ ಸಾಮ್ರಾಟನಾಗಿದ್ದ ಎಂಬುದನ್ನು ಇದು ತೋರಿಸುತ್ತದೆ. ಶೂದ್ರ ಚಕ್ರವರ್ತಿಗೆ ಸೇವೆಗೈಯುವುದು ಅವಮಾನಕರ ವಿಷಯವಲ್ಲವೆಂದು ಬ್ರಾಹ್ಮಣ ಕ್ಷತ್ರಿಯರಿಬ್ಬರೂ ಭಾವಿಸಿರಲಿಲ್ಲವೆಂದೂ ಕೂಡ ಇದು ತೋರಿಸುತ್ತದೆ. ಅಷ್ಟೇ ಅಲ್ಲದೆ ಅವನ ಆಶ್ರಯವನ್ನು ಪಡೆಯುವುದಕ್ಕಾಗಿ ಅವರಿಬ್ಬರೂ ತಮ್ಮ ತಮ್ಮ ಶ್ರೇಷ್ಠತೆಗೆ ಸ್ಪರ್ಧಿಸಿದರೆಂದೂ ಅವನ ಗೃಹದಲ್ಲಿ ವೈದಿಕ ಆಚರಣೆಗಳನ್ನು ಮಾಡಲು ಸಿದ್ಧರಿದ್ದರೆಂಬುದನ್ನೂ ಕೂಡ ಇದು ಪ್ರಕಟಿಸುತ್ತದೆ.

ಅನಂತರದ ಯುಗಗಳಲ್ಲಿ ಶೂದ್ರರಾಜರು ಇರಲಿಲ್ಲವೆಂದು ಹೇಳಲು ಸಾಧ್ಯವಿಲ್ಲ. ಬದಲಿಗೆ ಮನುವಿಗಿಂತ ಮೊದಲು ಬಂದ ಎರಡು ರಾಜವಂಶಗಳು ಶೂದ್ರರದೆಂದು ಇತಿಹಾಸ ತೋರಿಸುತ್ತದೆ. ಕ್ರಿ.ಪೂ. ೪೧೩ ರಿಂದ ಕ್ರಿ.ಪೂ. ೩೨೨[೨]ರವರೆಗೆ ಆಳಿದ ನಂದರು ಶೂದ್ರರಾಗಿದ್ದರು. ಅವರ ಉತ್ತರಾಧಿಕಾರಿಗಳಾಗಿ ಬಂದು ಕ್ರಿ.ಪೂ. ೩೨೨ ರಿಂದ ಕ್ರಿ.ಪೂ. ೧೮೩[೨] ರವರೆಗೆ ಆಳಿದ ಮೌರ್ಯರು ಸಹ ಶೂದ್ರರಾಗಿದ್ದರು. ಶೂದ್ರ ಉನ್ನತ ಗೌರವವನ್ನು ಪಡೆಯುತ್ತಿದ್ದನೆನ್ನುವುದಕ್ಕೆ ಅಶೋಕನ ವಿಷಯ ಹೇಳುವುದಕ್ಕಿಂತ ಹೆಚ್ಚಿನ ಪ್ರಕಾಶಮಾನವಾದ ಪ್ರಮಾಣ ಯಾವುದಿದೆ? ಅಶೋಕ ಭಾರತದ ಚಕ್ರವರ್ತಿ ಅಷ್ಟೇ ಅಲ್ಲ, ಅವನು ಶೂದ್ರನಾಗಿದ್ದ. ಅವನ ಚಕ್ರಾಧಿಪತ್ಯ ಶೂದ್ರರು ಕಟ್ಟಿದ ಚಕ್ರಾದಿಪತ್ಯವಾಗಿತ್ತು.

ವೇದಾಧ್ಯಯನ ಮಾಡಲು ಶೂದ್ರನಿಗೆ ಹಕ್ಕಿದೆಯೇ? ಎಂಬ ಪ್ರಶ್ನೆಯ ಸಂಬಂಧವಾಗಿ ಛಾಂದೋಗ್ಯೋಪನಿಷತ್ತಿನ ಕಡೆಗೆ (೪.೧.೨) ಗಮನ ಸೆಳೆಯಬಹುದು. ಜಾನಶ್ರುತಿಗೆ ಗುರು ರೈಕ್ವನು ವೇದ ವಿದ್ಯೆ ಹೇಳಿಕೊಟ್ಟ ಕಥೆ ಇಲ್ಲಿ ಬರುತ್ತದೆ. ಈ ಜಾನಶ್ರುತಿ ಶೂದ್ರನಾಗಿದ್ದನು. ಈ ಕಥೆಯು ನಿಜವಾದ ಕಥೆಯಾಗಿ ಆಗಿದ್ದರೆ ವೇದಾಧ್ಯಯನ ಮಾಡಲು ಶೂದ್ರನಿಗೆ ಅಡ್ಡಿಯಿರದಂಥ ಒಂದು ಕಾಲವಿತ್ತು ಎಂಬುದು ನಿಸ್ಸಂಶಯದ ವಿಷಯವಾಗುತ್ತದೆ. ವೇದಾಧ್ಯಯನ ಮಾಡಲು ಶೂದ್ರರು ಸ್ವತಂತ್ರರಾಗಿದ್ದುದಷ್ಟೇ ಅಲ್ಲದೆ ಅವರು ಋಷಿ ಪಟ್ಟಕ್ಕೂ ಏರಿದ್ದರು. ವೇದ ಸೂಕ್ತಗಳ ರಚನಾಕಾರರೂ ಆಗಿದ್ದರು. ಕಾವೇಷ ಐಲೂಷನ[೩]

೧. ಮ್ಯೂರ್: 'ಸ್ಯಾನ್ಸ್ಕ್ರಿಟ್ ಟೆಕ್ಸ್ಟ್ಸ್', ಸಂ. I P. ೩೬೬.
೨. ಹಸ್ತಪ್ರತಿಯಲ್ಲಿಲ್ಲದ ಈ ಇಸವಿಗಳನ್ನು ಸಂಪಾದಕರು ಸೇರಿಸಿದ್ದಾರೆ – ಸಂ.
೩. 'ಐತರೇಯ ಬ್ರಾಹ್ಮಣ,' ಸಂ. ೨, ಪು. ೧೧೨

ಕಥೆ ತುಂಬ ಉದ್ಬೋಧಕವಾಗಿದೆ. ಅವನು ಋಷಿಯೂ ಋಗ್ವೇದದ[೧] ಹತ್ತನೇ ಮಂಡಲದ ಅನೇಕ ಸೂಕ್ತಗಳ ಕರ್ತೃವೂ ಆಗಿದ್ದಾನೆ.

ವೈದಿಕ ಆಚರಣೆಗಳು ಮತ್ತು ಯಜ್ಞಯಾಗಗಳನ್ನು ಮಾಡಲು ಶೂದ್ರನಿಗೆ ಧಾರ್ಮಿಕ ಅರ್ಹತೆಯಿದೆಯೇ ಎಂಬ ವಿಷಯದ ಬಗ್ಗೆ ಮುಂದಿನ ವಿವರಗಳನ್ನು ಕೊಡಬಹುದು. ಶೂದ್ರರು ಕೂಡ ವೈದಿಕ ಯಜ್ಞಗಳನ್ನು ಮಾಡಬಹುದು ಎಂದು ಹೇಳುವ ಪ್ರಾಚೀನ ಗುರುವಾದ ಬದರಿಯನ್ನು (ಈತನ ಕೃತಿ ಉಪಲಬ್ಧವಿಲ್ಲ) ಪೂರ್ವ ಮೀಮಾಂಸಕಾರನಾದ ಜೈಮಿನಿ[೨] ಹೆಸರಿಸುತ್ತಾನೆ. ವೈದಿಕ ಯಜ್ಞದ ಆಚರಣೆಗೆ ಅತ್ಯಗತ್ಯವಾದ ಮೂರು ಪವಿತ್ರಾಗ್ನಿಗಳನ್ನು ಶೂದ್ರ ಉಂಟುಮಾಡಬಹುದೆಂದು ಹೇಳುವ ಇನ್ನೊಂದು ಪರಂಪರೆಯಿತ್ತೆಂದು ಭಾರದ್ವಾಜ ಶ್ರೌತಸೂತ್ರ (೫.೨೮) ಒಪ್ಪಿಕೊಳ್ಳುತ್ತದೆ. ಹಾಗೆಯೇ ವೈದಿಕ ಆಚರಣೆಗಳನ್ನು ನೆರವೇರಿಸಲು ಶೂದ್ರನಿಗೆ ಅರ್ಹತೆಯಿತ್ತೆಂದು ಕಾತ್ಯಾಯನ ಶ್ರೌತಸೂತ್ರದ (೧ ಮತ್ತು ೫) ವ್ಯಾಖ್ಯಾನಕಾರನು ಕೆಲವು ವೈದಿಕಶಾಸ್ತ್ರ ಗ್ರಂಥಗಳಿಂದ ಊಹಿಸಬಹುದೆಂದು ಹೇಳುತ್ತಾನೆ. ಯಜ್ಞ ಕಾರ್ಯದಲ್ಲಿ ನಿರತನಾದ ಪುರೋಹಿತನು ಸದಾಚಾರವನ್ನು ಅನುಸರಿಸಬೇಕೆಂದು 'ಶತಪಥ ಬ್ರಾಹ್ಮಣ'ದಲ್ಲಿ (I.೧.೪.೧೨) ನಿಯಮವಿದೆ. ಯಜ್ಞವನ್ನು ಪ್ರಾರಂಭಿಸಲು ಹವಿಷ್ಕುಟನನ್ನು (ಯಾಜ್ಞಿಕ) ಪುರೋಹಿತ ಹೇಗೆ ಸಂಬೋಧಿಸಬೇಕೆಂಬ ವಿಧಾನದ ಬಗ್ಗೆ ಅದು ಹೇಳುವ ನಿಯಮ ಹೀಗಿದೆ:

> "ಈ ಸಂಬೋಧನೆಯ ರೂಪ ನಾಲ್ಕು ಬಗೆಯಾಗಿವೆ. ಅವುಗಳೆಂದರೆ ಬ್ರಾಹ್ಮಣನನ್ನು ಸಂಬೋಧಿಸುವಾಗ 'ಏಹಿ' (ಇತ್ತ ದಯಮಾಡಿಸಿ), ವೈಶ್ಯನನ್ನು ಮತ್ತು ಕ್ಷತ್ರಿಯನನ್ನು ಕರೆಯುವಾಗ 'ಆಗಹಿ' (ಬನ್ನಿ) ಮತ್ತು 'ಅದರ್ವ' (ಕೂಡಲೇ ಬನ್ನಿ) ಎಂದೂ, ಶೂದ್ರನನ್ನು ಕರೆಯುವಾಗ 'ಅಧವ' (ಓಡಿ ಬಾ) ಎಂದೂ ಹೇಳಬೇಕು."

ಸೋಮಯಾಗವನ್ನು ಮಾಡಲು ಮತ್ತು ಸೋಮರಸವನ್ನು ಸೇವಿಸಲೂ ಶೂದ್ರ ಅರ್ಹನೆಂದು ಶತಪಥ ಬ್ರಾಹ್ಮಣ[೩]ದಲ್ಲಿ ಆಧಾರವಿದೆ. ಸೋಮಯಾಗದಲ್ಲಿ 'ಪಯೋವ್ರತ' (ಕ್ಷೀರವನ್ನು ಮಾತ್ರ ಸೇವಿಸುವ ವ್ರತ)ಕ್ಕೆ ಬದಲಾಗಿ ಮಸ್ತು (ಮಜ್ಜಿಗೆ)ವನ್ನು ಶೂದ್ರನಿಗೆ ಅದು ವಿಧಿಸುತ್ತದೆ. ಅದೇ ಶತಪಥ ಬ್ರಾಹ್ಮಣ[೪]ದಲ್ಲಿ ಇನ್ನೊಂದೆಡೆ ಹೀಗೆ ಹೇಳಿದೆ:

> "ಬ್ರಾಹ್ಮಣ, ರಾಜನ್ಯ, ವೈಶ್ಯ ಮತ್ತು ಶೂದ್ರರೆಂಬ ನಾಲ್ಕು ವರ್ಣಗಳಿವೆ. ಇವರಲ್ಲಿ ಯಾರೂ ಸೋಮರಸಕ್ಕೆ ವಿರೋಧಿಗಳಲ್ಲ. ಇವರಲ್ಲಿ ಯಾರಾದರೂ ಅದನ್ನು ಇಷ್ಟಪಡದಿದ್ದರೆ, ಅದಕ್ಕಾಗಿ ಅವರು ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕು."

ಅಂದರೆ ಸೋಮ ರಸ ಪಾನ ಶೂದ್ರರನ್ನು ಒಳಗೊಂಡಂತೆ ಎಲ್ಲರಿಗೂ ಸುಸಮ್ಮತವಾಗಿದ್ದುದಷ್ಟೇ ಅಲ್ಲದೆ ಕಡ್ಡಾಯವೂ ಆಗಿತ್ತು. ಆದರೆ ಸೋಮರಸ ಪಾನ ಮಾಡಲು ಶೂದ್ರನಿಗೆ ಹಕ್ಕಿತ್ತೆಂದು ಖಚಿತವಾದ ಆಧಾರ ಅಶ್ವಿನಿಗಳ ಕಥೆಯಲ್ಲಿ ಇದೆ. ಆ ಕಥೆ[೫] ಹೇಳುವಂತೆ ಆಗತಾನೆ ಮಿಂದು ಬೆತ್ತಲಾಗಿದ್ದ ಸುಕನ್ಯೆಯನ್ನು ಅಶ್ವಿನಿ ದೇವತೆಗಳು ನೋಡಿದರು. ಯೌವನಸ್ಥ ಹುಡುಗಿಯಾದ ಆಕೆಯನ್ನು ಚ್ಯವನ ಮಹರ್ಷಿಗೆ ಮದುವೆ

---

೧. ಮ್ಯಾಕ್ಸ್‌ಮುಲ್ಲರ್: 'ಏನ್ಷಿಯಂಟ್ ಸ್ಯಾನ್ಸ್ಕ್ರಿಟ್ ಲಿಟರೇಟರ್', ೧೮೬೦ ಪು. ೫೮.
೨. ಪಿ.ವಿ. ಕಾಣೇ: 'ಹಿಸ್ಟರಿ ಆಫ್ ಧರ್ಮಶಾಸ್ತ್ರ' ನೋಡಿ.
೩. ಕಾಣೆಯವರಿಂದ ಉಲ್ಲೇಖಿತ: 'ಹಿಸ್ಟರ ಆಫ್ ಧರ್ಮಶಾಸ್ತ್ರ'
೪. ಮ್ಯೂರ್‌ರವರಿಂದ ಉಲ್ಲೇಖಿತ: 'ಸ್ಯಾನ್ಸ್ಕ್ರಿಟ್ ಟೆಕ್ಸ್ಟ್ಸ್', ಸಂ. I, ಪುಟ ೩೬೭.
೫. ವಿ. ಪಾವಸ್ ಬಾಯಿಲ್: 'ಇಂಡಿಯನ್ ಮೈಥಾಲಜಿ', ಪು. ೧೨೮–೩೪.

ಮಾಡಿದ್ದರು. ಆ ಸಮಯದಲ್ಲಿ ಅವನು ಈಗಲೋ ಆಗಲೋ ಸಾಯುವಂತಹ ಮುದುಕನಾಗಿದ್ದನು. ಸುಕನ್ಯೆಯ ಸೌಂದರ್ಯಕ್ಕೆ ಮಾರುಹೋದ ಅಶ್ವಿನೀ ದೇವತೆಗಳು "ನಮ್ಮಲ್ಲಿ ಯಾರನ್ನಾದರೂ ಪತಿಯನ್ನಾಗಿ ಸ್ವೀಕರಿಸು. ನಿನ್ನ ಯೌವನವನ್ನು ನಿಷ್ಫಲಗೊಳಿಸುವುದು ಒಳಿತಲ್ಲ" ಎಂದರು.

ಅವಳು "ನಾನು ಪತಿವ್ರತೆ" ಎಂದು ಆ ಮಾತನ್ನು ತಿರಸ್ಕರಿಸಿದಳು. ಅವರು ಅವಳೊಂದಿಗೆ ಮತ್ತೆ ಮಾತನಾಡಿ "ನಾವಿಬ್ಬರೂ ಹೆಸರಾಂತ ದೇವ ವೈದ್ಯರು. ನಿನ್ನ ಪತಿಯನ್ನು ನಾವು ಯೌವ್ವನಿಗನನ್ನಾಗಿಯೂ ಸುಂದರನನ್ನಾಗಿಯೂ ಮಾಡುತ್ತೇವೆ. ಆದ್ದರಿಂದ ನಮ್ಮಲ್ಲಿ ಒಬ್ಬರನ್ನು ನಿನ್ನ ಪತಿಯನ್ನಾಗಿ ಆರಿಸಿಕೊ" ಎಂದು ಈ ಒಪ್ಪಂದಕ್ಕೆ ಬರುವಂತೆ ಸೂಚಿಸಿದರು. ಅವಳು ತನ್ನ ಗಂಡನ ಬಳಿಗೆ ಹೋಗಿ ಈ ಒಪ್ಪಂದದ ಬಗ್ಗೆ ಹೇಳಿದಳು. "ಹಾಗೇ ಮಾಡು" ಎಂದು ಚ್ಯವನ ಸುಕನ್ಯೆಗೆ ಹೇಳಿದನು. ಕರಾರು ಈಡೇರಿತು, ಅಶ್ವಿನಿ ದೇವತೆಗಳು ಚ್ಯವನನನ್ನು ಯೌವ್ವನಿಗನನ್ನಾಗಿ ಮಾಡಿದರು. ಆಮೇಲೆ ದೇವತೆಗಳ ಪಾನವಾದ ಸೋಮರಸಕ್ಕೆ ಅಶ್ವಿನಿ ದೇವತೆಗಳಿಗೆ ಹಕ್ಕಿದೆಯೆ ಎಂಬ ಪ್ರಶ್ನೆ ಉದ್ಭವವಾಯಿತು. ಅಶ್ವಿನಿಗಳು ಶೂದ್ರರು. ಆದ್ದರಿಂದ ಅವರಿಗೆ ಸೋಮರಸ ಪಾನ ಮಾಡಲು ಹಕ್ಕಿಲ್ಲ ಎಂದು ಇಂದ್ರನು ಆಕ್ಷೇಪಿಸಿದನು. ಅಶ್ವಿನಿ ದೇವತೆಗಳಿಂದ ಚಿರ ಯೌವ್ವನವನ್ನು ಪಡೆದ ಚ್ಯವನನು ಆ ವಾದವನ್ನು ತಳ್ಳಿಹಾಕಿ ಅವರಿಗೆ ಸೋಮರಸವನ್ನು ಕೊಡಬೇಕೆಂದು ಒತ್ತಾಯಪಡಿಸಿದನು.

ವೈದಿಕ ಯಜ್ಞಗಳನ್ನು ಶೂದ್ರ ಮಾಡುತ್ತಿದ್ದರೆಂಬ ಸಂಗತಿ ಇದ್ದ ಹೊರತು, ಈ ಎಲ್ಲ ನಿದರ್ಶನಗಳೂ ಅರ್ಥಹೀನವಾಗುತ್ತವೆ. ಅಶ್ವಮೇಧವೆಂದು ಹೆಸರಾದ ವೈದಿಕ ಯಜ್ಞದಲ್ಲಿ ಶೂದ್ರಸ್ತ್ರೀ ಪಾಲುದಾರಳಾಗಿದ್ದಳೆಂಬುದನ್ನು ತೋರಿಸಲು ಆಧಾರವಿದೆ.[೧]

ಉಪನಯನ ಮತ್ತು ಜನಿವಾರ ಧಾರಣೆ ಹಕ್ಕು ಶೂದ್ರರಿಗೆ ನಿಷಿದ್ಧವೆಂದು ಸ್ಪಷ್ಟವಾಗಿ ಎಲ್ಲಿಯೂ ಹೇಳಿಲ್ಲ. ಪ್ರತಿಯಾಗಿ ಉಪನಯನಕ್ಕೆ ಶೂದ್ರ ಅರ್ಹ ಎಂಬ ಸ್ಪಷ್ಟ ಅನುಮತಿ ಸಂಸ್ಕಾರ ಗಣಪತಿಯಲ್ಲಿ ಘೋಷಿತವಾಗಿದೆ.[೨]

ಶೂದ್ರ ಕೆಳ ವರ್ಣಕ್ಕೆ ಸೇರಿದವರನಾಗಿದ್ದರೂ ಮನುವಿಗಿಂತ ಹಿಂದೆ ಅವನು ಸ್ವತಂತ್ರ ಪ್ರಜೆಯಾಗಿದ್ದ ಎಂಬುದನ್ನು ಅಲ್ಲಗಳೆಯಲಾಗುವುದಿಲ್ಲ. ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಬರುವ ಈ ಮುಂದಿನ ಅವಕಾಶಗಳನ್ನು ಪರಿಶೀಲಿಸಿ:

> "ಹುಟ್ಟು ಗುಲಾಮನಲ್ಲದ, ಇನ್ನೂ ಪ್ರಾಪ್ತ ವಯಸ್ಕನಾಗದ, ಆದರೆ ಹುಟ್ಟಿನಿಂದ ಆರ್ಯನಾದ ಶೂದ್ರನನ್ನು ಅವನ ನೆಂಟರಿಷ್ಟರು ಮಾರಾಟ ಮಾಡಿದರೆ ಅಥವಾ ಜೀತಕ್ಕಿಟ್ಟರೆ ಎರಡು ಪಣ ದಂಡದ ಶಿಕ್ಷೆಗೆ ಗುರಿಪಡಿಸಬೇಕು."
>
> "ಗುಲಾಮನ ಹಣವನ್ನು ವಂಚಿಸಿದರೆ ಅಥವಾ ಆರ್ಯನಾಗಿ ಅವನು ಅನುಭವಿಸುವ ಸವಲತ್ತುಗಳನ್ನು ಕಿತ್ತುಕೊಂಡರೆ (ಆರ್ಯನನ್ನು ಗುಲಾಮನನ್ನಾಗಿ ಮಾಡಿದ್ದಕ್ಕಾಗಿ ವಿಧಿಸಿದ) ಅರ್ಧ ದಂಡದ ಶಿಕ್ಷೆಗೆ ಗುರಿಪಡಿಸಬೇಕು."
>
> "ಜೀತ ವಿಮುಕ್ತಿ ಹಣವನ್ನು ಕೊಟ್ಟರೂ ಗುಲಾಮನನ್ನು ಮುಕ್ತಗೊಳಿಸದಿದ್ದರೆ ೧೨

---

೧. ಜಯಸ್ವಾಲ್: 'ಇಂಡಿಯನ್ ಪಾಲಿಟಿ' ಭಾಗ II, ಪು. ೧೭.

೨. ಮ್ಯಾಕ್ಸ್‌ಮುಲ್ಲರ್ ಅವರಿಂದ ಉಲ್ಲೇಖಿತ 'ಏನ್ಷಿಯಂಟ್ ಸ್ಯಾನ್ಸ್‌ಕ್ರಿಟ್ ಲಿಟರೇಚರ್' (೧೮೬೦), ಪು. ೨೦೭.

ಪಣ ದಂಡದಿಂದ ಶಿಕ್ಷಿಸಬೇಕು. ವಿನಾಕಾರಣ ಗುಲಾಮನನ್ನು ಬಂಧನದಲ್ಲಿಟ್ಟರೆ (ಸಂರೋಧಶ್ಚಕರಣಾತ್) ಅದೇ ರೀತಿ ಶಿಕ್ಷಿಸಬೇಕು."

"ತನ್ನನ್ನೇ ತಾನು ಗುಲಾಮನನ್ನಾಗಿ ವಿಕ್ರಯಿಸಿಕೊಂಡ ಮನುಷ್ಯನ ಮಗ ಆರ್ಯನಾಗಿರುತ್ತಾನೆ. ತನ್ನ ದಣಿಯ ಕೆಲಸ ಮಾಡಿದ್ದಕ್ಕಾಗಿ ಜೀತಗಾರನಿಗೆ ಸಂಬಳದ ಹಕ್ಕು ಇದ್ದೇ ಇದೆ ಮತ್ತು ಪಿತ್ರಾರ್ಜಿತ ಆಸ್ತಿಗೂ ಅವನಿಗೆ ಹಕ್ಕಿದೆ."

ಮನು ಏಕೆ ಶೂದ್ರರನ್ನು ದಮನ ಮಾಡಿದ?

ಶೂದ್ರರ ಬಗೆಗಿನ ಈ ರಹಸ್ಯ ಸರಳವಾದ ರಹಸ್ಯವಲ್ಲ. ಅದು ಸಂಕೀರ್ಣವಾದುದು. ಅನಾರ್ಯರನ್ನು ಆರ್ಯೀಕರಣ ಮಾಡಲು ಅಂದರೆ ಆರ್ಯ ಸಂಸ್ಕೃತಿಯ ಚೌಕಟ್ಟಿನೊಳಗೆ ಅವರನ್ನು ತರಲು ಆರ್ಯರು ಸದಾ ಪ್ರಯತ್ನಿಸುತ್ತಿದ್ದರು. ಅನಾರ್ಯ ಜನಸಮೂಹಗಳನ್ನು ಮತಾಂತರಗೊಳಿಸುವುದಕ್ಕಾಗಿ ಧಾರ್ಮಿಕ ಮತಾಚರಣೆಗಳನ್ನು ಬೆಳೆಸುತ್ತಿದ್ದ ಆರ್ಯರು ಆರ್ಯೀಕರಣಗೊಳಿಸುವುದರಲ್ಲಿ ತುಂಬ ಆಸಕ್ತರಾಗಿದ್ದರು. ಈ ವ್ರಾತ್ಯಸ್ತೋಮವನ್ನು ಕುರಿತು ಮಹಾಮಹೋಪಾಧ್ಯಾಯ ಹರಿಪ್ರಸಾದ ಶಾಸ್ತ್ರಿ ಹೇಳುತ್ತಾರೆ:

ಈ ಆಚರಣೆಯಿಂದ ವ್ರಾತ್ಯರನ್ನು ಶುದ್ಧೀಕರಿಸಲಾಗುತ್ತಿತ್ತು. ಇದನ್ನು ಪಂಚವಿಂಶ ಬ್ರಾಹ್ಮಣದಲ್ಲಿ ವರ್ಣಿಸಲಾಗಿದೆ. ಅದು ವೈದಿಕ ಕಾಲದಲ್ಲಿದ್ದ ಇತರ ಭಾರಿ ಆಚರಣೆಗಳಿಗಿಂತ ಕೊನೇ ಪಕ್ಷ ಒಂದಂಶದಲ್ಲಿ ಭಿನ್ನವಾಗಿತ್ತು. ಅದೇನೆಂದರೆ ಇತರ ಆಚರಣೆಗಳಲ್ಲಿ ಒಬ್ಬನೇ ಯಾಜ್ಞಿಕ ಮತ್ತು ಅವನ ಪತ್ನಿ ಯಜ್ಞಶಾಲೆಯಲ್ಲಿ ಇರುತ್ತಿದ್ದರು. ಈ ವ್ರತದಲ್ಲಿ ಸಾವಿರಾರು ಯಾಜ್ಞಿಕರು ಇರುತ್ತಿದ್ದರು. ಅವರಲ್ಲಿ ಅತ್ಯಂತ ವಿವೇಕಿಯಾದ, ಅತ್ಯಂತ ಶ್ರೀಮಂತನಾದ ಅಥವಾ ಅತ್ಯಂತ ಪ್ರಬಲವಾದವನು ಗ್ರಾಹಪತಿಯಾಗಿ ನಡೆದುಕೊಳ್ಳುತ್ತಿದ್ದನು. ಉಳಿದವರು ಅವನನ್ನು ಅನುಸರಿಸುತ್ತಿದ್ದರು. ಉಳಿದವರಿಗಿಂತ ಗ್ರಾಹಪತಿ ಅತ್ಯಂತ ಹೆಚ್ಚಿನ ದಕ್ಷಿಣೆಯನ್ನು ಕೊಡಬೇಕಾಗಿತ್ತು."

"ಈ ಆಚರಣೆಯು ಋಷಿಗಳ ಸಮುದಾಯಕ್ಕೆ ಸಹಸ್ರ ಸಹಸ್ರ ಸಂಖ್ಯೆಯಲ್ಲಿ ವ್ರಾತ್ಯರನ್ನು ಬರಮಾಡಿಕೊಳ್ಳುವ ಒಂದು ತಂತ್ರವೆಂದು ನನಗನ್ನಿಸುತ್ತದೆ. ಅಂಥ ಆಚರಣೆಗಳು ಪದೇ ಪದೇ ನಡೆಯುತ್ತಿದ್ದವು. ಹಾಗೆ ಹಿಂಡುಹಿಂಡಾದ ಅಲೆಮಾರಿ ಆರ್ಯರನ್ನು ಸ್ವೀಕರಿಸಿ ಅಲ್ಲಲ್ಲಿ ನೆಲೆಗೊಳಿಸಿದರು. ಈ ರೀತಿ ಶುದ್ಧೀಕರಣಗೊಂಡ ವ್ರಾತ್ಯರು ತಮ್ಮ ವ್ರಾತ್ಯ ಜೀವನದ ಸರಕು ಸರಂಜಾಮುಗಳನ್ನು ನೆಲೆಗೊಂಡ ಬದುಕಿನ ಒಳಗೆ ತರದಂತೆ ನೋಡಿಕೊಂಡರು. ಅವರು ಅವುಗಳನ್ನು ಇನ್ನೂ ವ್ರಾತ್ಯರಾಗಿ ಉಳಿದಿದ್ದವರಿಗೆ ಬಿಟ್ಟು ಬರಬೇಕಾಗಿತ್ತು ಅಥವಾ ನಾನು ಬೇರೊಂದೆಡೆ ತೋರಿಸಿರುವಂತೆ ಋಷಿಗಳು ಕೀಳು ಭಾವನೆಯಿಂದ ಕಂಡ ಮಗಧ ದೇಶದ ಬ್ರಾಹ್ಮಣರೆಂದು ಹೇಳಲಾದ ಜನರ ಜೊತೆ ಸೇರಿಕೊಂಡು ಅವರು ಬದುಕಬೇಕಾಗಿತ್ತು.

"ಆದರೆ ವ್ರಾತ್ಯರು ನೆಲೆನಿಂತ ಬದುಕಿಗೆ ಸ್ವೀಕರಿಸಿದಾಗ ಅವರನ್ನು ಸಮಾನರೆಂದು ಸಂಪೂರ್ಣವಾಗಿ ಒಪ್ಪಿಕೊಳ್ಳಲಾಯಿತು. ಅವರು ಮಾಡಿದ ಅಡುಗೆಯನ್ನು ಋಷಿಗಳು ಊಟಮಾಡುತ್ತಿದ್ದರು. ಋಷಿಗಳು ಮಾಡುತ್ತಿದ್ದ ಅಡುಗೆಯನ್ನು ಅವರು ಊಟಮಾಡುತ್ತಿದ್ದರು. ಅವರಿಗೆ ಮೂರು ವೇದಗಳಾದ ಸಾಮ, ಋಕ್ ಮತ್ತು ಯಜುಸ್ ವಿದ್ಯೆಯನ್ನು ಹೇಳಿಕೊಡುತ್ತಿದ್ದರು. ವೇದಾಭ್ಯಾಸ, ವೇದಬೋಧನೆ ಮತ್ತು ತಮಗೂ ಮತ್ತು ಇತರರಿಗೂ ಯಜ್ಞಕಾರ್ಯಾಚರಣೆಗಳನ್ನು ಮಾಡಲು ಅವರಿಗೆ ಅವಕಾಶವಿತ್ತು. ಅವರನ್ನು ಸಂಪೂರ್ಣವಾಗಿ

ಸಮಾನರನ್ನಾಗಿ ಪರಿಗಣಿಸಿದರು. ಅವರು ಸಂಪೂರ್ಣವಾಗಿ ಸಮಾನರಾದುದಷ್ಟೇ ಅಲ್ಲದೆ ಋಷಿಯ ಅತ್ಯುನ್ನತ ಜಾಣ್ಮೆಯನ್ನು ಗಳಿಸಿದರು. ಸಾಮವೇದದ ಮಂತ್ರಗಳು ಮತ್ತು ಋಕ್‌ಗಳೂ ಕೂಡ ಅವರಿಗೆ ಸ್ಫುರಣಗೊಂಡವು. ಹೀಗೆ ಶುದ್ಧೀಕರಣಗೊಂಡ ವ್ರಾತ್ಯದಲ್ಲಿ ಒಬ್ಬನಾದ ಕೌಶೀತಕಿಗೆ ಋಗ್ವೇದದ ಬ್ರಾಹ್ಮಣಗಳನ್ನು ಸಂಗ್ರಹಿಸಲು ಅವಕಾಶವಾಯಿತು. ಆ ಸಂಹಿತೆಯನ್ನು ಕೌಶೀತುಕೀ ಸಂಹಿತೆಯೆಂದೇ ಕರೆಯುತ್ತಾರೆ."

ಇಷ್ಟವುಳ್ಳ ಅನಾರ್ಯರನ್ನು ತಮ್ಮ ಜೀವನ ವಿಧಾನಕ್ಕೆ ಮತಾಂತರಗೊಳಿಸುವುದಷ್ಟೇ ಅಲ್ಲದೆ ಇಷ್ಟವಿಲ್ಲದ ಅಸುರರನ್ನೂ ಆರ್ಯರು ಮತಾಂತರಗಳನ್ನು ಮಾಡುತ್ತಿದ್ದರು. ಈ ಅಸುರರು ಆರ್ಯರನ್ನೂ ಅವರ ಯಜ್ಞಗಳನ್ನೂ, ಅವರ ಚಾತುರ್ವರ್ಣವನ್ನೂ, ಅವರ ವೇದಗಳನ್ನೂ ಕೂಡ ವಿರೋಧಿಸುತ್ತಿದ್ದರು. ಪುರಾಣದ ಪ್ರಕಾರ ಅಸುರರು ಈ ವೇದಗಳನ್ನು ಆರ್ಯರಿಂದ ಅಪಹರಿಸಿದರು. ಅಸುರರಲ್ಲೇ ಕೆಲವರು ಆರ್ಯ ಸಂಸ್ಕೃತಿಗೆ ಮತಾಂತರಗೊಳ್ಳಲು ಇಚ್ಛೆಯುಳ್ಳವರಾಗಿದ್ದರು. ಮತ್ತೆ ಕೆಲವರು ಅದನ್ನು ತೀವ್ರವಾಗಿ ವಿರೋಧಿಸುತ್ತಿದ್ದರು; ಈ ಅಂಶವನ್ನು ಹಿರಣ್ಯ ಕಶಿಪುವನ್ನು ಸಂಹರಿಸಿ ಪ್ರಹ್ಲಾದನನ್ನು ಸಂರಕ್ಷಿಸಿದ ವಿಷ್ಣುವಿನ ಕಥೆಯಲ್ಲಿ ನೋಡಬಹುದು. ಅನಾರ್ಯರನ್ನು ದೇಶೀಯರೊಳಗೆ ಸೇರಿಸಿಕೊಂಡು ಅವರಿಗೆ ಪೌರ ಹಕ್ಕುಗಳನ್ನು ಕೊಟ್ಟ ನಿದರ್ಶನಗಳು ಇವು. ಶೂದ್ರರ ಬಗ್ಗೆ ವಿರೋಧಿ ಧೋರಣೆಯನ್ನು ಏಕೆ ತಾಳಿದರು? ಶೂದ್ರರನ್ನು ಸಂಪೂರ್ಣವಾಗಿ ದೇಶೀಯರನ್ನಾಗಿ ಮಾಡಿಕೊಂಡು ಎಲ್ಲ ಪೌರ ಹಕ್ಕುಗಳನ್ನು ನೀಡಿ, ಆಮೇಲೆ ಅವರ ಪೌರ ಹಕ್ಕುಗಳನ್ನೆಲ್ಲ ಕಿತ್ತುಕೊಂಡು ಅವರನ್ನು ಏಕೆ ಹೊರಗಿಟ್ಟರು?

ನಿಷಾದರನ್ನು ಕುರಿತ ವಿವರಣೆ ಈ ರಹಸ್ಯಕ್ಕೆ ಸಿಗುವ ಉತ್ತರವಾಗಿರುವುದನ್ನು ಕಡೆಗಣಿಸಬಾರದು. ಈ ಐದು ಬುಡಕಟ್ಟುಗಳಿಗೆ ಸಂಬಂಧಿಸಿದಂತೆ ಪ್ರಾಚೀನ ಸಂಸ್ಕೃತ ಸಾಹಿತ್ಯದಲ್ಲಿ ಅಪಾರ ಉಲ್ಲೇಖಗಳಿವೆ. ಅವುಗಳನ್ನು ನಾನಾ ಹೆಸರುಗಳಿಂದ ಅಂದರೆ ಪಂಚಕ್ರಿಸ್ತಯರು, ಪಂಚಾಕ್ಷೀತಯರು, ಪಂಚಜಾತರು ಎಂದು ವಿವರಿಸಲಾಗಿದೆ.[೧] ಈ ಹೆಸರುಗಳು ಏನನ್ನು ಸೂಚಿಸುತ್ತವೆ ಎನ್ನುವುದರ ಬಗ್ಗೆ ಭಿನ್ನಾಭಿಪ್ರಾಯವಿದೆ. ಋಗ್ವೇದದ ಭಾಷ್ಯಕಾರನಾದ ಸಾಯಣಾಚಾರ್ಯನು ಈ ಹೆಸರುಗಳು ನಾಲ್ಕು ವರ್ಣಗಳಿಗೂ ನಿಷಾದರಿಗೂ ಸಂಬಂಧಿಸಿವೆ ಎನ್ನುತ್ತಾನೆ. ನಿಷಾದರ ಬಗ್ಗೆ ವಿಷ್ಣುಪುರಾಣ ಈ ಮುಂದಿನ ಕಥೆಯನ್ನು ಕೊಡುತ್ತದೆ.

"೭. ಮೃತ್ಯುವಿಗೆ ಪ್ರಥಮ ಪುತ್ರಿಯಾದ ಸುನೀತಳೆಂಬ ಕನ್ಯೆಯನ್ನು ಅಂಗನಿಗೆ ಕೊಟ್ಟು ಲಗ್ನವಾಗಿತ್ತು. ಅವಳಿಂದ ವೇನ ಜನಿಸಿದನು.

೮. ಮೃತ್ಯುವಿನ ಮಗಳ ಮಗನಾದ ಇವನು ತನ್ನ ಮಾತೃ ಸಂಬಂಧಿ ಅಜ್ಜನ ದೋಷದಿಂದಾಗಿ ಆಜನ್ಮ ನಾಸ್ತಿಕನಾಗಿ ಜನಿಸಿದ.

೯. ವೇನನನ್ನು ರಾಜನನ್ನಾಗಿ ಸಿಂಹಾಸನದ ಮೇಲೆ ಮಹರ್ಷಿಗಳು ಪ್ರತಿಷ್ಠಾಪಿಸಿದಾಗ ಅವನು ತನ್ನ ರಾಜ್ಯದಲ್ಲಿ ಈ ಘೋಷಣೆ ಹೊರಡಿಸಿದನು: "ಜನರು ಯಜ್ಞ ಮಾಡಬಾರದು ಅಥವಾ ದಾನದಕ್ಷಿಣೆಗಳನ್ನು ಕೊಡಬಾರದು ಅಥವಾ ನೈವೇದ್ಯಗಳನ್ನು ಅರ್ಪಿಸಬಾರದು. ಈ ಎಲ್ಲ ಯಜ್ಞಗಳ ಭೋಕ್ತ ನನ್ನನ್ನು ಬಿಟ್ಟರೆ ಇನ್ನಾರಿದ್ದಾರೆ? ಅವಕ್ಕೆಲ್ಲ ನಾನೇ ಯಜಮಾನ."

೧೦. ಆಗ ಮಹರ್ಷಿಗಳೆಲ್ಲ ಮಹಾರಾಜನ ಬಳಿ ಬಂದು ವಿನಯದಿಂದ ಕೈ ಮುಗಿದುಕೊಂಡು ಸೌಮ್ಯವೂ ಸ್ನೇಹಮಯವೂ ಆದ ದನಿಯಲ್ಲಿ ಹೇಳಿದರು:

---

೧. (ಮೂಲ ಆಕರವನ್ನು ಉಲ್ಲೇಖಿಸಿಲ್ಲ – ಸಂಪಾದಕರು).

೧೧. ಎಲೈ ಮಹಾರಾಜನೇ, ನಾವು ಹೇಳುವುದನ್ನು ಆಲಿಸುವಂಥವನಾಗು:

೧೨. " ದೀರ್ಘಸತ್ತ (ದೀರ್ಘಯಜ್ಞ)ದ ಮೂಲಕ ದೇವಾಧಿದೇವನಾದ ಹರಿಯನ್ನು ನಾವು ಆರಾಧಿಸೋಣ. ಅದರಿಂದ, ನಿನಗೆ ನಿನ್ನ ರಾಜ್ಯಕ್ಕೆ, ನಿನ್ನ ಪ್ರಜೆಗಳಿಗೆ ದೊಡ್ಡ ಪುಣ್ಯ ಬರುತ್ತದೆ. ನಿನಗೆ ಆಶೀರ್ವಾದವಿರಲಿ, ಯಜ್ಞಾಚರಣೆಯಲ್ಲಿ ನಿನಗೂ ಪಾಲುಂಟು."

೧೩. " ಈ ಆಚರಣೆಯಿಂದ ಯಜ್ಞಪತಿಯಾದ ವಿಷ್ಣುವನ್ನು ನಾವು ಸುಪ್ರೀತಗೊಳಿಸಿದರೆ ಅವನು ನಮ್ಮ ಬಯಕೆಗಳನ್ನೆಲ್ಲ ಈಡೇರಿಸುತ್ತಾನೆ. ಹವಿಸ್ಸು ನೈವೇದ್ಯಗಳಿಂದ ಯಜ್ಞಪತಿಯಾದ ಹರಿಯನ್ನು ಆರಾಧಿಸಿದರೆ ಅವನು ಅದನ್ನು ಮಾಡಿದ ದೇಶದಲ್ಲಿ ಆ ರಾಜರುಗಳಿಗೆ ಬಯಸಿದ್ದನ್ನೆಲ್ಲ ಅನುಗ್ರಹಿಸುತ್ತಾನೆ". ವೇನ ಉತ್ತರಿಸಿದನು "ನನಗಿಂತ ಮೇಲಾದ ಶಕ್ತಿ ಯಾವುದಿದೆ? ನಾನಲ್ಲದೆ ಮತ್ಯಾರು ಆರಾಧನೆಗೊಳ್ಳಬೇಕು? ನೀವು ಯಜ್ಞಪತಿ ಎಂದು ಕರೆಯುವ ಈ ಹರಿ ಯಾರು? ಬ್ರಹ್ಮ, ಜನಾರ್ಧನ, ರುದ್ರ, ಇಂದ್ರ, ವಾಯು, ಯಮ, ರವಿ, ಅಗ್ನಿ, ವರುಣ, ಧಾತ್ರಿ, ಪೂಷನ್, ಭೂಮಿ, ಚಂದ್ರ – ಇವರೆಲ್ಲ ಮತ್ತು ಇತರ ದೇವತೆಗಳೆಲ್ಲ ಆಶೀರ್ವದಿಸುವ ಹರಸುವ ದೇವತೆಗಳೆಲ್ಲ ರಾಜನ ಶರೀರದಲ್ಲಿ ನೆಲೆಸಿದ್ದಾರೆ. ಏಕೆಂದರೆ ಅವನಲ್ಲಿ ಎಲ್ಲ ದೇವತೆಗಳೂ ಕೂಡಿ ಅವನು ಸೃಷ್ಟಿಯಾಗಿದ್ದಾನೆ. ಇದನ್ನು ತಿಳಿದು ನೀವು ನನ್ನ ಆಜ್ಞೆಗೆ ಅನುಸಾರವಾಗಿ ನಡೆದುಕೊಳ್ಳಬೇಕು. ಬ್ರಾಹ್ಮಣರೇ, ನೀವು ದಕ್ಷಿಣೆ ದಾನ ಕೊಡಬಾರದು. ನೈವೇದ್ಯ ಅರ್ಪಿಸಬಾರದು ಅಥವಾ ಯಜ್ಞಗಳನ್ನು ನಡೆಸಬಾರದು.

೧೪. ಸ್ತ್ರೀಯರಲ್ಲಿ ಪಾತಿವ್ರತ್ಯವನ್ನು ಗೌರವಿಸುವಂತೆ ನೀವು ನನ್ನ ಆಜ್ಞೆಗಳನ್ನು ಪಾಲಿಸಬೇಕಾದ್ದು ನಿಮ್ಮ ಕರ್ತವ್ಯ." ಋಷಿಗಳು ಉತ್ತರಿಸಿದರು: "ಅನುಮತಿಯನ್ನು ದಯಪಾಲಿಸಬೇಕು. ಮಹಾಪ್ರಭು. ಧರ್ಮ ಅಳಿಯಲು ಬಿಡಬೇಡಿ. ಈ ಜಗತ್ತೆಲ್ಲ ಹವಿಸ್ಸಿನಿಂದ ಮಾರ್ಪಾಟಾದ ರೂಪ."

೧೫. "ಧರ್ಮ ನಾಶವಾದಾಗ ಇಡಿ ಪ್ರಪಂಚವೇ ನಾಶವಾಗುತ್ತದೆ." ಹೀಗೆ ವೇನನಿಗೆ ಎಚ್ಚರಿಕೆಯನ್ನು ಮಹರ್ಷಿಗಳು ಪದೇ ಪದೇ ಹೇಳುತ್ತಿದ್ದರೂ ಅವನು ಅನುಮತಿ ನೀಡಲಿಲ್ಲ. ಆಗ ಎಲ್ಲ ಮುನಿಗಳು ಕ್ರೋಧಭರಿತರಾಗಿ "ಈ ಪಾಪಿಯನ್ನು ಕೊಲ್ಲಿ" ಎಂದು ಕಿರುಚಿದರು.

೧೬. "ಯಜ್ಞವನ್ನು ದೇವರನ್ನು, ನಿಂದಿಸುವ ಈ ಪತಿತನು ಭೂಪತಿಯಾಗಿರಲು ಅರ್ಹನಲ್ಲ" ಎಂದು ಹೇಳಿ ದೈವ ನಿಂದೆಯಿಂದ, ಇತರ ಅಪರಾಧಗಳಿಂದಲೂ ಆಗಲೇ ಛೇದವಾಗಿದ್ದ ಆ ರಾಜನನ್ನು ಆ ಮುನಿಗಳು ಮಂತ್ರಿಸಿದ ದರ್ಭೆ ಹುಲ್ಲಿನಿಂದ ಚುಚ್ಚಿ ಚುಚ್ಚಿ ಕೊಂದುಹಾಕಿದರು. ಆಮೇಲೆ ಋಷಿಗಳು ಮಣ್ಣನ್ನು ಗಾಳಿಗೆ ತೂರಿ ಹತ್ತಿರದಲ್ಲಿ ನಿಂತಿದ್ದವರಿಗೆ ಅದೇನೆಂದು ಕೇಳಿದರು.

೧೭. "ರಾಜನಿಲ್ಲದ ಈ ದೇಶದಲ್ಲಿ ಪ್ರಜೆಗಳು ವ್ಯಥಿತರಾಗಿ ಕಳ್ಳರಾಗಿದ್ದಾರೆ; ಇತರರ ಸಂಪತ್ತನ್ನು ಲೂಟಿಮಾಡುತ್ತಿದ್ದಾರೆ." ಎಂದು ಅವರಿಗೆ ಹೇಳಿದರು:

೧೮. ಇತರರ ಸಂಪತ್ತನ್ನು ಲೂಟಿಮಾಡಿಕೊಂಡು ಓಡಿ ಹೋಗುತ್ತಿರುವ ಕಳ್ಳರಿಂದ ಈ ಧೂಳು ಏಳುತ್ತಿದೆ. ಆಗ ಎಲ್ಲ ಮುನಿಗಳು ಒಬ್ಬ ಪುತ್ರನನ್ನು ಉತ್ಪತ್ತಿ ಮಾಡುವುದಕ್ಕಾಗಿ ಮಕ್ಕಳಿಲ್ಲದ ಆ ರಾಜನ ತೊಡೆಯನ್ನು ಬಲವಂತದಿಂದ ಕಿತ್ತುಕೊಂಡು ಅಪಹರಿಸುವುದರ ಬಗ್ಗೆ ಪರಸ್ಪರ ಮಾತನಾಡಿದರು. ಆ ತೊಡೆಯನ್ನು ಉಜ್ಜಿದಾಗ ಸುಟ್ಟು ಕರ್ರಗಾದ ಮರದ ತುಂಡಿನಂಥ ಗುಜ್ಜು ಮೂಗಿನ ತೀರಾ ಕುಬ್ಜನಾದ ಮನುಷ್ಯ ಉದ್ಭವವಾದನು.

೧೯. "ನಾನೇನು ಮಾಡಲಿ" ಎಂದು ಆ ಮನುಷ್ಯ ವ್ಯಸನದಿಂದ ಆ ಬ್ರಾಹ್ಮಣರನ್ನು ಕೇಳಿದನು. "ಕುಳಿತುಕೊ (ನಿಷೇಧ)" ಎಂದರು; ಅದರಿಂದ ಅವನು ನಿಷಾದನಾದನು.

೨೦. ತಮ್ಮ ಕುಕೃತ್ಯಗಳಿಗೆ ಹೆಸರಾಗಿ ವಿಂಧ್ಯ ಪರ್ವತದಲ್ಲಿ ವಾಸಿಸುವ ನಿಷಾದರು ಈ ಮನುಷ್ಯನಿಂದ ಜನಿಸಿದರು.

೨೧. ಹೀಗೆ ರಾಜನ ಪಾಪ ಅವನಿಂದ ತೊಲಗಿತು. ಹೀಗೆ ವೇನನ ದುಷ್ಟತನದ ಸಂತತಿಯಾದ ನಿಷಾದರು ಹುಟ್ಟಿದರು.

ಇದು ನಿಷಾದರ ಹುಟ್ಟಿನ ಪುರಾಣದ ಮೂಲವಾಗಿದೆ. ಆದರೆ ಅದರಲ್ಲಿ ಐತಿಹಾಸಿಕ ಅಂಶಗಳಿವೆ. ನಿಷಾದರು ಕೀಳಾದ, ವಿಂಧ್ಯ ಪರ್ವತದ ಕಾಡುಗಳಲ್ಲಿ ವಾಸಿಸುತ್ತಿದ್ದ, ದುಷ್ಟ ಜನರು ಅಂದರೆ ಆರ್ಯ ಸಂಸ್ಕೃತಿಯನ್ನು ವಿರೋಧಿಸುತ್ತಿದ್ದ ಪ್ರಾಚೀನ ಅರಣ್ಯವಾಸಿ ಬುಡಕಟ್ಟು ಎಂಬುದನ್ನು ಅದು ತೋರಿಸುತ್ತದೆ. ಅವರ ಹುಟ್ಟನ್ನು ವಿವರಿಸಲು ಆರ್ಯ ಸಮಾಜದ ಜೊತೆ ಅವರ ಸಂಪರ್ಕವನ್ನು ಏರ್ಪಡಿಸಲು ಅವರು ಪುರಾಣ ಸೃಷ್ಟಿಸಿದರು. ಆರ್ಯ ಸಮಾಜಕ್ಕೆ ಅಲ್ಲದಿದ್ದರೂ ಆರ್ಯ ನಂಬಿಕೆಯ ಒಳಕ್ಕೆ ಸೇರುವಿಕೆಯನ್ನು ಬೆಂಬಲಿಸಲು ಇದನ್ನೆಲ್ಲ ಮಾಡಿದ್ದಾರೆ. ಈಗ ಎಲ್ಲೂ ನಿಷಾದರು ಕೀಳು, ಅನಾಗರಿಕ ಮತ್ತು ವಿದೇಶಿ ಬುಡಕಟ್ಟು ಎಂದು ಹೇಳುವ ಅನರ್ಹತೆಗಳು ಇಲ್ಲ. ನಾಗರಿಕರೂ ಆರ್ಯರು ಆದ ಶೂದ್ರರ ಮೇಲೆ ಏಕೆ ಅನರ್ಹತೆಗಳನ್ನು ಹೇರಿದರು ಎಂಬುದೇ ಪ್ರಶ್ನೆ.

* * * *

## ಅಧ್ಯಾಯ ೧೭

# ಸ್ತ್ರೀ ಮತ್ತು ಪ್ರತಿಕ್ರಾಂತಿ

*'ಸ್ತ್ರೀ ಮತ್ತು ಪ್ರತಿಕ್ರಾಂತಿ' ಎಂಬ ಶೀರ್ಷಿಕೆಯ ಒಂದೇ ಒಂದು ಪ್ರತಿಯಿದೆ. 'ಸ್ತ್ರೀ ರಹಸ್ಯ' ಎಂಬ ಅದೇ ಮೂಲ ಪಾಠದ ಇನ್ನೊಂದು ಪ್ರತಿಯಿದೆ. ಈ ಪ್ರಬಂಧ 'ಹಿಂದೂ ಧರ್ಮದ ಒಗಟುಗಳು' ಎಂಬ ಸಂಪುಟದಲ್ಲಿ ಬರುವುದಕ್ಕಿಂತ ಈ ಸಂಪುಟದಲ್ಲಿ ಸೇರ್ಪಡೆಯಾಗುವುದು ಉಚಿತ ಎಂದು ಸಂಪಾದಕ ಮಂಡಳಿ ಭಾವಿಸಿತು.*

– ಸಂಪಾದಕರು

ಮನು ಶೂದ್ರರ ಮೇಲೆ ಮೃದುವಾಗಿದ್ದುದಕ್ಕಿಂತ ಸ್ತ್ರೀಯರ ಮೇಲೆ ಮೃದುವಾಗಿದ್ದನೆನ್ನುವುದು ಕಷ್ಟ. ಹೆಣ್ಣಿನ ಮೇಲೆ ಕೀಳು ಅಭಿಪ್ರಾಯದಿಂದಲೇ ಅವನು ಪ್ರಾರಂಭಿಸುತ್ತಾನೆ. ಮನು ಘೋಷಿಸುತ್ತಾನೆ:

II ೨೧೩. ಪುರುಷನನ್ನು ಮೋಹಗೊಳಿಸುವುದೇ ಸ್ತ್ರೀಯ ಸ್ವಭಾವ. ಆದ್ದರಿಂದಲೇ ವಿವೇಕಿಗಳು ಹೆಣ್ಣಿನ ಜೊತೆ ಏಕಾಂಗಿಗಳಾಗಿರುವುದಿಲ್ಲ.

II ೨೧೪. ಮೂರ್ಖನಷ್ಟೇ ಅಲ್ಲ, ವಿದ್ವಾಂಸರನ್ನೂ ಕೂಡ ಹೆಂಗಸರು ಅಡ್ಡ ದಾರಿಗೆಳೆಯಬಲ್ಲರು. ಕಾಮ ಕ್ರೋಧ ವಶನನ್ನಾಗಿ ಮಾಡಬಲ್ಲರು.

II ೨೧೫. ತನ್ನ ತಾಯಿ, ಸೋದರಿ, ಮಗಳು ಇವರ ಜೊತೆ ಗಂಡಸು ಒಂಟಿಯಾಗಿರಬಾರದು. ಏಕೆಂದರೆ ಇಂದ್ರಿಯಗಳು ಪ್ರಬಲವಾದುವು. ಅವು ವಿದ್ವಾಂಸನನ್ನೂ ಕೂಡ ತಮ್ಮ ಗುಲಾಮನನ್ನಾಗಿ ಮಾಡಿಕೊಳ್ಳುತ್ತವೆ.

IX ೧೪. ಸ್ತ್ರೀಯರ ಕಾಮುಕತನವು ಸೌಂದರ್ಯ, ವಯಸ್ಸು ಒಂದನ್ನೂ ಗಣಿಸುವುದಿಲ್ಲ. ಕುರೂಪಿಯಾಗಲೀ ಅಥವಾ ಸುರೂಪಿಯಾಗಲೀ ಅವರಿಗೆ ಎಲ್ಲರೂ ಒಂದೇ ಎಂದು ಒಲಿಯುತ್ತಾರೆ.

IX ೧೫. ಪುರುಷರ ಬಗೆಗಿರುವ ಅವರ ಕಾಮುಕತನದಿಂದ, ಅವರ ಚಂಚಲ ಸ್ವಭಾವದಿಂದ, ಸ್ವಾಭಾವಿಕ ಹೃದಯ ಹೀನತೆಯಿಂದ ಅವರನ್ನು ಎಷ್ಟೇ ಸುರಕ್ಷಿತವಾಗಿ ಇಟ್ಟರೂ ಅವರು ತಮ್ಮ ಗಂಡಂದಿರ ಮೇಲೆ ನಿಷ್ಠೆಯಿಲ್ಲದವರಾಗುತ್ತಾರೆ.

IX ೧೬. ಅವರಿಗೆ ಹುಟ್ಟಿನಿಂದಲೇ ಇಂಥ ಸ್ವಭಾವವನ್ನು ಬ್ರಹ್ಮ ನೀಡಿರುವುದನ್ನು ತಿಳಿದುಕೊಂಡು ಅವರನ್ನು ಜತನವಾಗಿಡುವುದನ್ನು ಗಂಡಸರು ಮಾಡಬೇಕು.

IX ೧೭. ಮಲಗುವುದು, ಕುಳಿತುಕೊಳ್ಳುವುದು, ಅಲಂಕಾರಗಳಲ್ಲಿ ಪ್ರೀತಿ, ಕಾಮ, ಕ್ರೋಧ, ಕಪಟ, ದ್ರೋಹ, ದುರ್ವರ್ತನೆ ಮನೋವಿಕಾರಗಳು ಸ್ತ್ರೀಯ ಜನ್ಮ ಸಿದ್ಧವುಗಳೆಂದು ಮನು ಹೇಳುತ್ತಾನೆ.

ಸ್ತ್ರೀಯರ ಬಗ್ಗೆ ಮನುಸ್ಮೃತಿಯ ಈ ಧೋರಣೆ ಒಂದು ಉದಾಹರಣೆ ಅಷ್ಟೆ. ಯಾವುದೇ ಸಂದರ್ಭಗಳಲ್ಲಿಯೂ ಸ್ತ್ರೀಯರು ಸ್ವತಂತ್ರರಾಗಿರಕೂಡದು. ಮನು ಹೇಳುತ್ತಾನೆ:

IX ೨. ಹಗಲು ರಾತ್ರಿ ತಮ್ಮ ಹೆಂಗಸರನ್ನು ಗಂಡಸರು ತಮ್ಮ ಅಧೀನದಲ್ಲಿಟ್ಟುಕೊಳ್ಳಬೇಕು; ಅವರು ಭೋಗಾಸಕ್ತರಾದರೆ ಅವರನ್ನು ಹದ್ದುಬಸ್ತಿನಲ್ಲಿಡಬೇಕು.

IX ೩. ಮಗುವಾಗಿದ್ದಾಗ ತಂದೆ ರಕ್ಷಿಸುತ್ತಾನೆ. ಯೌವ್ವನದಲ್ಲಿ ಗಂಡ ರಕ್ಷಿಸುತ್ತಾನೆ. ಮುದಿತನದಲ್ಲಿ ಪುತ್ರರು ರಕ್ಷಿಸುತ್ತಾರೆ. ಹೆಂಗಸು ಸ್ವಾತಂತ್ರ್ಯಕ್ಕೆ ಯೋಗ್ಯಳಲ್ಲ.

IX ೫. ದುಷ್ಟ ಭಾವನೆಗಳು ಎಷ್ಟೇ ಸಣ್ಣವಾದರೂ ಹೆಂಗಸರನ್ನು ಅವುಗಳಿಂದ ಎಚ್ಚರಿಕೆಯಿಂದ ರಕ್ಷಿಸಬೇಕು. ಏಕೆಂದರೆ ಅವರನ್ನು ರಕ್ಷಿಸದಿದ್ದರೆ ಅವರು ಎರಡು ಮನೆತನಗಳಿಗೂ ದುಃಖ ತಂದುಬಿಡುತ್ತಾರೆ.

IX ೬. ಎಲ್ಲಾ ವರ್ಣಗಳ ಪರಮ ಧರ್ಮವೆಂದರೆ (ದುರ್ಬಲ ಪತಿಯಾದವನೂ ಕೂಡ) ತಮ್ಮ ಹೆಂಡಂದಿರನ್ನು ರಕ್ಷಿಸುತ್ತಾನೆ.

IV ೧೪೭. ಹುಡುಗಿಯಾಗಲೀ, ಹೆಂಗಸಾಗಲಿ, ಮುದುಕಿಯಾಗಲಿ, ತನ್ನ ಮನೆಯಲ್ಲಾದರೂ ಏನನ್ನೂ ಸ್ವತಂತ್ರವಾಗಿ ಮಾಡಕೂಡದು.

V ೧೪೮. ಬಾಲ್ಯದಲ್ಲಿ ತಂದೆಯ, ಯೌವ್ವನದಲ್ಲಿ ಗಂಡನ, ಅವನು ಮೃತನಾಗಿದ್ದರೆ ಪುತ್ರರ ಅಧೀನದಲ್ಲಿ ಸ್ತ್ರೀ ಇರಬೇಕು. ಅವಳು ಸ್ವತಂತ್ರಳಾಗಿರಬಾರದು.

V ೧೪೯. ತನ್ನ ತಂದೆ, ಗಂಡ ಅಥವಾ ಪುತ್ರರಿಂದ ಅವಳು ಬೇರೆ ಇರಲು ಆಶಿಸಬಾರದು. ಹಾಗೆ ಮಾಡಿದರೆ ಅವಳು ಎರಡು ಕುಟುಂಬಗಳಿಗೂ ತಿರಸ್ಕಾರಾರ್ಹಳಾಗುತ್ತಾಳೆ.

ಸ್ತ್ರೀಗೆ ದಾಂಪತ್ಯ ವಿಚ್ಛೇದನದ ಹಕ್ಕು ಇರಬಾರದು.

IX ೪೫. ಗಂಡ ಹೆಂಡತಿ ಅವಿಭಾಜ್ಯವಾಗಿರತಕ್ಕದ್ದು. ಒಮ್ಮೆ ಮದುವೆ ಆದ ಮೇಲೆ ಹೆಣ್ಣಿಗೆ ವಿಚ್ಛೇದನವಿಲ್ಲ.

ವಿಚ್ಛೇದನ ಕುರಿತ ಕಾನೂನಿನ ಕಥೆ ಇಷ್ಟೆ ಎಂಬಂತೆ ಮದುವೆ ಧಾರ್ಮಿಕ ವಿಧಿಯೆಂದು ಮನು ಹೇಳಿದ್ದಾನೆಂಬುದಾಗಿ ತಮ್ಮ ಅಂತಃಸಾಕ್ಷಿಯನ್ನು ಸಾಂತ್ವನಗೊಳಿಸುತ್ತಾ ವಿಚ್ಛೇದನಕ್ಕೆ ಮನು ಅವಕಾಶವೀಯಲಿಲ್ಲ ಎಂದು ಮದುವೆಯನ್ನು ಆದರ್ಶೀಕರಿಸುತ್ತ ಅನೇಕ ಹಿಂದೂಗಳು ಇಲ್ಲಿಗೇ ನಿಲ್ಲಿಸುತ್ತಾರೆ. ವಾಸ್ತವವಾಗಿ ಇದು ಸತ್ಯಕ್ಕೆ ದೂರವಾಗಿದೆ. ಅವನ ವಿಚ್ಛೇದನ ವಿರೋಧಿ ಕಾನೂನಿಗೆ ತುಂಬ ಭಿನ್ನವಾದ ಉದ್ದೇಶವಿದೆ. ಅದು ಗಂಡನ್ನು ಹೆಣ್ಣಿಗೆ ಕಟ್ಟುವುದಾಗಿರಲಿಲ್ಲ. ಆದರೆ ಹೆಣ್ಣನ್ನು ಗಂಡಿಗೆ ಕಟ್ಟಿ, ಗಂಡನ್ನು ಸ್ವತಂತ್ರನನ್ನಾಗಿ ಬಿಡುವುದಾಗಿತ್ತು. ಏಕೆಂದರೆ ಮನು ಹೆಂಡತಿಯನ್ನು ತ್ಯಜಿಸುವ ಮನುಷ್ಯನನ್ನು ತಡೆಗಟ್ಟುವುದಿಲ್ಲ. ಅವನು ಹೆಂಡತಿಯನ್ನು ಬಿಡುವುದಕ್ಕೆ ಅಷ್ಟೇ ಅಲ್ಲ ಅವಳನ್ನು ಮಾರಾಟ ಮಾಡುವುದಕ್ಕೂ ಸಹ ಅನುಮತಿ ನೀಡುತ್ತಾನೆ. ಆದರೆ ಅವನು ಮಾಡುವುದೇನೆಂದರೆ ಹೆಂಡತಿ ಸ್ವತಂತ್ರಳಾಗುವುದನ್ನು ತಡೆಗಟ್ಟುತ್ತಾನೆ. ಮನು ಏನು ಹೇಳುತ್ತಾನೆಂದು ಗಮನಿಸಿ:

IX ೪೬. ಗಂಡ ಮಾರಾಟ ಮಾಡಿದರೂ ತ್ಯಜಿಸಿದರೂ ಹೆಂಡತಿಗೆ ವಿಮೋಚನೆಯಿಲ್ಲ.

ಇದರ ಅರ್ಥ ಗಂಡ ಹೆಂಡತಿಯನ್ನು ಮಾರಾಟ ಮಾಡಿದರೆ ಅಥವಾ ಪರಿತ್ಯಜಿಸಿದರೆ ಅವಳನ್ನು ಕೊಂಡುಕೊಂಡವನ ಅಥವಾ ಸ್ವೀಕರಿಸಿದವನ ನ್ಯಾಯಸಮ್ಮತ ಹೆಂಡತಿಯಾಗಲಾರಲು. ಇದು ಅತಿ ಘೋರವಲ್ಲದಿದ್ದರೆ ಬೇರಾವುದೂ ಆಗಲಾರದು. ಆದರೆ ಮನುವಿಗೆ ತನ್ನ ಕಾನೂನಿನ ನ್ಯಾಯಾನ್ಯಾಯದ ಬಗ್ಗೆ ಚಿಂತೆಯಿಲ್ಲ. ಬೌದ್ಧಯುಗ ಆಳ್ವಿಕೆಯಲ್ಲಿ ಸ್ತ್ರೀ ಪಡೆದಿದ್ದ ಸ್ವಾತಂತ್ರ್ಯವನ್ನು ಅಪಹರಿಸುವುದೇ ಅವನ ಆಸೆಯಾಗಿತ್ತು. ತನ್ನ ಸ್ವಾತಂತ್ರ್ಯವನ್ನು ಅವಳು ದುರುಪಯೋಗಪಡಿಸಿಕೊಳ್ಳುತ್ತಿದ್ದುದನ್ನು, ಶೂದ್ರನನ್ನು ಮದುವೆಯಾಗುವುದರ ಮೂಲಕ ವರ್ಣವ್ಯವಸ್ಥೆಯನ್ನು ನಾಶಪಡಿಸುತ್ತಿದ್ದುದನ್ನು ಮನು ಬಲ್ಲವನಾಗಿದ್ದನು. ಅವಳ ಸ್ವೇಚ್ಛಾಚಾರದಿಂದ ಮನು ರೋಸಿಹೋಗಿದ್ದನು. ಅವಳ ಸ್ವಾತಂತ್ರ್ಯವನ್ನು ಅಪಹರಿಸಿ ಅವನು ಅದಕ್ಕೆ ನಿಲುಗಡೆ ಹಾಕಿದನು.

ಹೆಂಡತಿಯನ್ನು ಆಸ್ತಿಯ ವಿಷಯದಲ್ಲಿ ಮನು ಗುಲಾಮಳ ಸ್ಥಾನಕ್ಕೆ ಇಳಿಸಿಬಿಟ್ಟನು.

VIII ೪೧೬. ಹೆಂಡತಿ, ಮಗ ಮತ್ತು ಆಳು ಈ ಮೂವರಿಗೆ ಆಸ್ತಿ ಇರಬಾರದು. ಅವರು ಸಂಪತ್ತನ್ನು ಗಳಿಸಿದರೆ ಅದು ಅವರ ಯಜಮಾನನಿಗೆ ಸೇರತಕ್ಕದ್ದು.

ಅವಿಭಕ್ತ ಕುಟುಂಬದಲ್ಲಿ ಅವಳ ಗಂಡನಿದ್ದರೆ ವಿಧವೆಗೆ ಮನು ಜೀವನಾಂಶಕ್ಕೆ ಸಮ್ಮತಿಸುತ್ತಾನೆ. ಪ್ರತ್ಯೇಕವಾಗಿದ್ದರೆ ಗಂಡನ ಆಸ್ತಿಯಲ್ಲಿ ವಿಧವೆಗೆ ಬರಬೇಕಾದ್ದನ್ನು ಕೊಡುತ್ತಾನೆ. ಆದರೆ ಮನು ಎಂದೂ ಅವಳಿಗೆ ಆಸ್ತಿಪಾಸ್ತಿಯ ಹಕ್ಕನ್ನು ಕೊಡುವುದಿಲ್ಲ.

ಮನುಸ್ಮೃತಿಯ ಪ್ರಕಾರ ಸ್ತ್ರೀಗೆ ದೇಹದಂಡನೆ ಕೊಡಬಹುದು. ಹೆಂಡತಿಯನ್ನು ಹೊಡೆಯುವ ಹಕ್ಕನ್ನು ಮನು ಅವಳ ಗಂಡನಿಗೆ ನೀಡುತ್ತಾನೆ.

VIII ೨೯೯. ಹೆಂಡತಿ, ಮಗ, ಸೇವಕ, ವಿದ್ಯಾರ್ಥಿ ಮತ್ತು ರಕ್ತ ಸಂಬಂಧಿಯಾದ ಕಿರಿಯ ತಮ್ಮ ಇವರು ತಪ್ಪು ಮಾಡಿದರೆ ಅವರನ್ನು ಚಾವಟಿಯಿಂದ ಅಥವಾ ಬೆತ್ತದಿಂದ ಹೊಡೆಯಬಹುದು.

ಬೇರೆ ಮಾತಿನಲ್ಲಿ ಹೇಳುವುದಾದರೆ ಸ್ತ್ರೀಯನ್ನು ಮನು ಶೂದ್ರನ ಸ್ಥಾನಕ್ಕೇ ತಳ್ಳಿಬಿಟ್ಟನು.

ಶೂದ್ರನಿಗೆ ಮಾಡಿದಂತೆಯೇ ಮನು ಸ್ತ್ರೀಗೂ ವೇದಾಧ್ಯಯನವನ್ನು ನಿಷಿದ್ಧಗೊಳಿಸಿದನು.

II ೬೬. ಸ್ತ್ರೀಗೂ ಸಹ ಸಂಸ್ಕಾರಗಳು ಅಗತ್ಯವಾಗಿವೆ. ಅವುಗಳನ್ನು ಮಾಡಲೇಬೇಕು. ಆದರೆ ಅವುಗಳನ್ನು ವೇದಮಂತ್ರೋಚ್ಚಾರಣೆಯಿಲ್ಲದೆ ಮಾಡಬೇಕು.

IX ೧೮. ಸ್ತ್ರೀಯರಿಗೆ ವೇದಾಧ್ಯಯನದ ಹಕ್ಕಿಲ್ಲ. ಆದ್ದರಿಂದಲೇ ಅವರಿಗೆ ವೇದಮಂತ್ರಗಳಿಲ್ಲದೆ ಸಂಸ್ಕಾರ ಮಾಡಲಾಗುತ್ತದೆ. ಸ್ತ್ರೀಯರಿಗೆ ವೇದಾಧ್ಯಯನದ ಹಕ್ಕಿಲ್ಲದಿರುವುದರಿಂದ ಅವರಿಗೆ ಧರ್ಮಜ್ಞಾನವಿಲ್ಲ. ಪಾಪ ನಿರ್ಮೂಲನೆಯಲ್ಲಿ ವೇದ ಮಂತ್ರೋಚ್ಚಾರಣೆ ಪ್ರಯೋಜನಕಾರಿಯಾಗಿದೆ. ಸ್ತ್ರೀಯರು ವೇದಮಂತ್ರಗಳನ್ನು ಉಚ್ಚರಿಸುವಂತಿಲ್ಲದಿರುವುದರಿಂದ ಅವರ ಸುಳ್ಳಿನಷ್ಟೆ ಅಶುದ್ಧರಾಗಿದ್ದಾರೆ.

ಬ್ರಾಹ್ಮಣಧರ್ಮದ ಪ್ರಕಾರ ಯಜ್ಞಯಾಗಾದಿಗಳ ಆಚರಣೆಯ ಧರ್ಮದ ಜೀವವಾಗಿದೆ. ಆದರೂ ಅವುಗಳನ್ನು ಆಚರಿಸಲು ಮನು ಸ್ತ್ರೀಯರಿಗೆ ಅವಕಾಶ ಕೊಡುವುದಿಲ್ಲ.

XI ೩೬. ವೇದಗಳು ವಿಧಿಸಿರುವ ನಿತ್ಯ ಯಜ್ಞಗಳನ್ನು ಸ್ತ್ರೀ ಮಾಡಬಾರದು.

XI ೩೭ ಅವಳು ಅದನ್ನು ಮಾಡಿದರೆ ಅವಳು ನರಕಕ್ಕೆ ಹೋಗುತ್ತಾಳೆ.

ಅಂಥ ಯಜ್ಞಗಳನ್ನು ಅವಳು ನೆರವೇರಿಸುವಂತೆ ಅವಳನ್ನು ಅನರ್ಹಳನ್ನಾಗಿ ಮಾಡುವುದಕ್ಕಾಗಿಯೇ ಅವಳು ಬ್ರಾಹ್ಮಣ ಪುರೋಹಿತ ನೆರವನ್ನು ಪಡೆಯದಂತೆ ಮಾಡುತ್ತಾನೆ.

IV ೨೦೫. ಸ್ತ್ರೀ ನೆರವೇರಿಸಿದ ಯಜ್ಞದಲ್ಲಿ ಬ್ರಾಹ್ಮಣನೆಂದೂ ಊಟ ಮಾಡಬಾರದು.

IV ೨೦೬. ಸ್ತ್ರೀಯರು ಆಚರಿಸಿದ ಯಜ್ಞಗಳು ಅಮಂಗಳಕಾರಿಯೂ ದೇವರಿಗೆ ಅಪ್ರಿಯವೂ ಆಗಿವೆ. ಆದ್ದರಿಂದ ಅವುಗಳನ್ನು ನಿವಾರಿಸಬೇಕು.

ಸ್ತ್ರೀಗೆ ಬೌದ್ಧಿಕ ಆಸಕ್ತಿಗಳಾಗಲೀ, ಸ್ವೇಚ್ಛೆಯಾಗಲೀ, ಸ್ವತಂತ್ರ ಆಲೋಚನೆಯಾಗಲೀ ಇರಬಾರದೆಂಬುದಿತ್ತು. ನಾಸ್ತಿಕ ಪಂಥವಾದಂಥ ಬೌದ್ಧಧರ್ಮಕ್ಕೆ ಅವಳು ಸೇರಬಾರದಿತ್ತು. ಅವಳು ಸೇರಿ ಮುಂದುವರಿದರೆ ಎಲ್ಲರೂ ಸತ್ತಾಗ ಕೊಡುವ ಅರ್ಘ್ಯವನ್ನು ಅವಳು ಸತ್ತಾಗ ಕೊಡಬಾರದು.

ಕೊನೆಯದಾಗಿ, ಜೀವನಾದರ್ಶದ ಬಗ್ಗೆ ಒಂದು ಮಾತು. ಮನು ಅದನ್ನು ಸ್ತ್ರೀಗೆ ಹೇಳುತ್ತಾನೆ. ಅದನ್ನು ಅವನ ಮಾತಿನಲ್ಲಿಯೇ ಹೇಳುವುದು ಉತ್ತಮ:

V ೧೫೧. ತಂದೆ ಅಥವಾ ತಂದೆಯ ಅನುಮತಿಯ ಮೇರೆಗೆ ಮದುವೆ ಮಾಡಿಕೊಟ್ಟವನಿಗೆ ಅವನು ಬದುಕಿರುವವರೆಗೂ ಅವನು ಸತ್ತಮೇಲೂ ಅವಳು ವಿಧೇಯಳಾಗಿರಬೇಕು. ಅವನ ನೆನಪನ್ನು ಅವಳು ಅಪಮಾನಗೊಳಿಸಬಾರದು.

V ೧೫೪. ಗಂಡನು ದರಿದ್ರ ಅಥವಾ ನೀತಿಹೀನ ಅಥವಾ ಬೇರೆಡೆ ಕಾಮಾಸಕ್ತ ಅಥವಾ ದುರ್ಗುಣಿ ಆಗಿದ್ದರು ಅವನನ್ನು ದೇವರೆಂದು ಸಾಧ್ವಿಯು ನಿರಂತರವಾಗಿ ಪೂಜಿಸಬೇಕು.

V ೧೫೫. ಗಂಡಂದಿರಿಲ್ಲದೆ ಯಜ್ಞ, ವ್ರತ, ಉಪವಾಸಗಳನ್ನು ಸ್ತ್ರೀಯರು ಆಚರಿಸಬಾರದು. ಹೆಂಡತಿಯು ಗಂಡನಿಗೆ ವಿಧೇಯಳಾಗಿದ್ದರೆ ಆ ಕಾರಣಕ್ಕಾಗಿಯೇ ಅವಳು ಉನ್ನತ ಸ್ವರ್ಗವನ್ನು ಪಡೆಯುತ್ತಾಳೆ.

V ೧೫೩. ವೇದೋಕ್ತವಾಗಿ ಮದುವೆಯಾದ ಪತಿಯು ಎಲ್ಲಾ ಕಾಲದಲ್ಲಿಯೂ ಇಹಲೋಕ ಮತ್ತು ಪರಲೋಕಗಳಲ್ಲಿಯೂ ತನ್ನ ಹೆಂಡತಿಗೆ ಸಂತೋಷದ ಮೂಲವಾಗಿದ್ದಾನೆ.

V ೧೫೧. ಅವಳು ಸದಾ ಸಂತೋಷದಿಂದಿರಬೇಕು. ಗೃಹಕೃತ್ಯಗಳನ್ನು ಜಾಣೆಯಾಗಿ ನಡೆಸಬೇಕು. ಪಾತ್ರೆ ಪದಾರ್ಥಗಳನ್ನು ಎಚ್ಚರಿಕೆಯಿಂದ ಶುದ್ಧವಾಗಿಡಬೇಕು. ಮಿತವ್ಯಯಿಯಾಗಿ ಇರಬೇಕು.

ಇದನ್ನೇ ಹಿಂದೂಗಳು ಸ್ತ್ರೀಯರ ಉನ್ನತ ಆದರ್ಶವೆಂದು ಪರಿಗಣಿಸುತ್ತಾರೆ! ಇದನ್ನು ಮನುವಿಗಿಂತ ಮೊದಲಿದ್ದ ಸ್ತ್ರೀಯ ಸ್ಥಾನದ ಜೊತೆ ಹೋಲಿಸಿ:

ಸ್ತ್ರೀಯರಿಗೂ ಉಪನಯನವಿತ್ತೆಂಬುದು ಅಥರ್ವವೇದದಿಂದ ಸ್ಪಷ್ಟವಾಗುತ್ತದೆ. ಬ್ರಹ್ಮಚರ್ಯವನ್ನು ಮುಗಿಸಿದ ಹುಡುಗಿ ಮದುವೆಗೆ ಅರ್ಹಳೆಂದು ಅಲ್ಲಿ ಹೇಳಲಾಗಿದೆ. ವೇದ ಮಂತ್ರಗಳನ್ನು ಸ್ತ್ರೀಯರು ಪುನರುಚ್ಚರಿಸಬಹುದು ಹಾಗೂ ಸ್ತ್ರೀಯರಿಗೆ ವೇದಗಳನ್ನು ಹೇಳಿ ಕೊಡುತ್ತಿದ್ದರೆಂಬುದು ಶ್ರೌತಸೂತ್ರ ದಿಂದ ಸ್ಪಷ್ಟವಾಗುತ್ತದೆ. ಸ್ತ್ರೀಯರು ಗುರುಕುಲದಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದರೆಂಬುದಕ್ಕೂ ಅವರು ವೇದದ ನಾನಾ ಶಾಖೆಗಳನ್ನು ಅಧ್ಯಯನ ಮಾಡುತ್ತಿದ್ದರೆಂಬುದಕ್ಕೂ ಅವರು ಮೀಮಾಂಸೆಯಲ್ಲಿ ನಿಪುಣರಾಗಿದ್ದರೆಂಬುದಕ್ಕೂ ಪಾಣಿನಿಯ ಅಷ್ಟಾಧ್ಯಾಯಿಯು ಪುರಾವೆ ಒದಗಿಸುತ್ತದೆ. ಸ್ತ್ರೀಯರು ಉಪಾಧ್ಯಾಯರಾಗಿದ್ದರೆಂಬುದನ್ನೂ ಅವರು ವಿದ್ಯಾರ್ಥಿನಿಯರಿಗೆ ವೇದಗಳನ್ನು ಬೋಧಿಸುತ್ತಿದರೆಂಬುದಕ್ಕೂ ಪತಂಜಲಿಯ ಮಹಾಭಾಷ್ಯ ಪ್ರಮಾಣವಾಗಿದೆ. ಅತ್ಯಂತ ಕ್ಲಿಷ್ಟವಾದ ವಿಷಯಗಳಾದ ಧರ್ಮ, ತತ್ವ ಮತ್ತು

ಆಧ್ಯಾತ್ಮಗಳನ್ನು ಕುರಿತ ಸಾರ್ವಜನಿಕ ಚರ್ಚೆಗಳಲ್ಲಿ ಸ್ತ್ರೀಯರು ಪುರುಷರ ಜೊತೆ ತೊಡಗಿದ್ದ ಕಥೆಗಳಿಗೇನೂ ಕಡಿಮೆಯಿಲ್ಲ. ಜನಕ ಮತ್ತು ಸುಲಭಾ, ಯಾಜ್ಞವಲ್ಕ್ಯ ಮತ್ತು ಗಾರ್ಗಿ, ಯಾಜ್ಞವಲ್ಕ್ಯ ಮತ್ತು ಮೈತ್ರೇಯಿ, ಹಾಗೂ ಶಂಕರಾಚಾರ್ಯ ಮತ್ತು ವಿದ್ಯಾರ್ಥಿ ನಡುವೆ ನಡೆದ ಬಹಿರಂಗ ಚರ್ಚೆಗಳು ಮನುಪೂರ್ವ ಯುಗಗಳಲ್ಲಿ ಭಾರತೀಯ ಸ್ತ್ರೀ ಜ್ಞಾನ ಮತ್ತು ವಿದ್ಯೆಯ ಅತ್ಯುನ್ನತ ಶಿಖರಗಳಿಗೆ ಏರಿದ್ದಳೆಂಬುದನ್ನು ತೋರಿಸುತ್ತವೆ.

ಮನುಪೂರ್ವ ಕಾಲದಲ್ಲಿ ಸ್ತ್ರೀಯರನ್ನು ಅಪಾರವಾಗಿ ಗೌರವಿಸಲಾಗುತ್ತಿತ್ತು ಎನ್ನುವುದು ವಿವಾದಾತೀತವಾಗಿದೆ. ಪ್ರಾಚೀನ ಭಾರತದಲ್ಲಿ ರಾಜನ ಪಟ್ಟಾಭಿಷೇಕೋತ್ಸವದಲ್ಲಿ ತುಂಬಾ ಪ್ರಧಾನ ಪಾತ್ರವನ್ನು ವಹಿಸುತ್ತಿದ್ದ ರತ್ನಿಗಳಲ್ಲಿ ಮಹಾರಾಣಿಯು ಸೇರಿರುತ್ತಿದ್ದಳು; ಇತರರಿಗೆ ಉಡುಗೊರೆಗಳನ್ನು[೧] ನೀಡಿದಂತೆ ಮಹಾರಾಜ ಅವಳಿಗೂ ನೀಡುತ್ತಿದ್ದನು. ಪಟ್ಟಾಭಿಷಿಕ್ತ ರಾಜ ಮಹಾರಾಣಿಗಷ್ಟೇ ಸನ್ಮಾನಿಸುತ್ತಿರಲಿಲ್ಲ. ಅವನು ತನ್ನ ಇತರ ಕೆಳ ವರ್ಣದ ಪತ್ನಿಯರನ್ನು[೨] ಪೂಜಿಸುತ್ತಿದ್ದನು. ಅದೇ ರೀತಿಯಲ್ಲಿ ಪಟ್ಟಾಭಿಷೇಕ ವಿಧಿಯಾದ ಮೇಲೆ ಮಹಾರಾಜನು ಮಂತ್ರಿ ಸೇನಾಧಿಪತಿಗಳ[೩] ಸತಿಯರಿಗೂ ಗೌರವಾರ್ಪಣೆ ಮಾಡುತ್ತಿದ್ದನು. ಕೌಟಿಲ್ಯನ ಕಾಲದಲ್ಲಿ[೪] ಹೆಂಗಸರು ೧೨ನೇ ವಯಸ್ಸಿಗೂ ಗಂಡಸರು ೧೬ನೇ ವಯಸ್ಸಿಗೂ ಪ್ರಾಪ್ತ ವಯಸ್ಕರಾಗುತ್ತಾರೆಂದು ನಂಬಲಾಗಿತ್ತು. ಪ್ರೌಢಾವಸ್ಥೆಯ ವಯಸ್ಸೇ ಮದುವೆಯ ವಯಸ್ಸು ಕೂಡ ಆಗಿತ್ತು. ಆ ಮದುವೆಗಳು ಮೈನೆರೆದ ನಂತರವಾದ ಮದುವೆಗಳೆಂದು ಬೌಧಾಯನನ ಗೃಹ್ಯ ಸೂತ್ರಗಳಿಂದ[೫] ಗೊತ್ತಾಗುತ್ತದೆ. ಮದುವೆಯ ಸಂದರ್ಭದಲ್ಲಿ ವಧು ಮುಟ್ಟಾದರೆ ಪ್ರಾಯಶ್ಚಿತ್ತ ವ್ರತವನ್ನು ಅವಳಿಗೆ ವಿಶೇಷವಾಗಿ ವಿಧಿಸಬೇಕೆಂದು ಅದು ಹೇಳುತ್ತದೆ.

ಕೌಟಿಲ್ಯನಲ್ಲಿ ಒಪ್ಪಿಗೆ ಕೊಡುವ ವಯಸ್ಸಿನ ಬಗ್ಗೆ ಕಾನೂನಿಲ್ಲ. ಅದೇಕೆಂದರೆ, ಮದುವೆಗಳು ಪ್ರಾಪ್ತ ವಯಸ್ಕರಾದ ಮೇಲೆ ನಡೆಯುತ್ತಿದ್ದವು. ಮದುವೆಯಾಗುವ ಮುನ್ನ ವಧು ಅಥವಾ ವರ ಬೇರೆ ವ್ಯಕ್ತಿಯ ಜೊತೆ ಲೈಂಗಿಕ ಸಂಬಂಧವನ್ನು ನಡೆಸಿ ಅದನ್ನು ಪ್ರಕಟಪಡಿಸದ ಅವನು ಅಥವಾ ಮುಟ್ಟಾದ ಅವಳ ಬಗ್ಗೆ ಕೌಟಿಲ್ಯ ಹೆಚ್ಚು ಕಾಳಜಿಯನ್ನು ವ್ಯಕ್ತಪಡಿಸುತ್ತಾನೆ.

ಮೊದಲನೆಯ ವಿಷಯದ ಬಗ್ಗೆ ಕೌಟಿಲ್ಯನು ಹೇಳುತ್ತಾನೆ[೬]:

"ಹುಡುಗಿ ಬೇರೊಬ್ಬನ ಜೊತೆ ಮಲಗಿದ್ದ ವಿಷಯವನ್ನು ತಿಳಿಸದೆ ಯಾರು ಮದುವೆ ಮಾಡಿಕೊಡುತ್ತಾನೋ ಅವನಿಗೆ ದಂಡ ಹಾಕಿ ಶಿಕ್ಷೆ ವಿಧಿಸಬೇಕು. ಅಷ್ಟೇ ಅಲ್ಲ, ಅವನು ಕನ್ಯಾಶುಲ್ಕ ಮತ್ತು ಸ್ತ್ರೀಧನ ವಾಪಸ್ಸು ಕೊಡಬೇಕು. ಗಂಡಿನ ದೋಷವನ್ನು ಹೇಳದೆ ಯಾರು ಹೆಣ್ಣನ್ನು ಮದುವೆ ಮಾಡಿಕೊಳ್ಳುತ್ತಾರೋ ಅವರು ಮೇಲೆ ಹೇಳಿದ ದಂಡಕ್ಕಿಂತ ಎರಡು ಪಟ್ಟು ಹೆಚ್ಚು ದಂಡ ಕೊಡಬೇಕು. ಅಷ್ಟೇ ಅಲ್ಲ, ಅವನು ಶುಲ್ಕವನ್ನೂ (ವಧುವಿಗೆ ತೆತ್ತಿದ್ದ) ಸ್ತ್ರೀಧನವನ್ನೂ ಕಳೆದುಕೊಳ್ಳುತ್ತಾನೆ.

ಕೊನೆಯ ವಿಷಯದ ಬಗ್ಗೆ ಕೌಟಿಲ್ಯನಲ್ಲಿ[೭] ನಿಯಮ ಈ ರೀತಿ ಇದೆ:

---

೧. ಜಯಸ್ವಾಲ್: 'ಇಂಡಿಯನ್ ಪಾಲಿಟಿ' ಭಾಗ, ಪು. ೧೬
೨. ಅದೇ, ಭಾಗ ೨, ಪು. ೧೭.
೩. ಅದೇ, ಪು. ೮೨.
೪. ಶಾಮಾಶಾಸ್ತ್ರಿ: 'ಕೌಟಿಲ್ಯಾಸ್ ಆರ್ಥಶಾಸ್ತ್ರ', ಪು. ೧೭೫
೫. ಬುದ್ಧಯಾನ, ೧.೭.೨೨.
೬. ಶಾಮಾಶಾಸ್ತ್ರಿ: 'ಕೌಟಿಲ್ಯಾಸ್ ಅರ್ಥಶಾಸ್ತ್ರ', ಪು. ೨೨೨.
೭. ಅದೇ, ಪು. ೨೪೯.

"ಋತುಮತಿಯಾಗಿ ಮೂರು ವರ್ಷವಾದರೂ ಮದುವೆಯಾಗದ ತನ್ನದೇ ಜಾತಿ ಮತ್ತು ವರ್ಗಕ್ಕೆ ಸೇರಿದ ಹೆಣ್ಣಿನೊಡನೆ ಗಂಡಸು ಸಂಬಂಧ ಇಟ್ಟುಕೊಂಡರೆ ಅದು ಅಪರಾಧವಲ್ಲ. ಮೊದಲ ಮುಟ್ಟಾಗಿ ಮೂರು ವರ್ಷಕ್ಕಿಂತ ಹೆಚ್ಚಾಗಿರುವ ದೇಹದ ಮೇಲೆ ಆಭರಣಗಳಿಲ್ಲದಿರುವ ಹೆಣ್ಣಿನೊಡನೆ ಬೇರೆ ಜಾತಿಯ ಗಂಡಸು ಸಂಬಂಧವಿಟ್ಟುಕೊಂಡರೂ ಕೂಡ ಅದು ಅಪರಾಧವಲ್ಲ."

ಮನುವಿನಂತಲ್ಲದೆ, ಕೌಟಿಲ್ಯನದು ಏಕ ವಿವಾಹ ವಿಚಾರ. ಕೆಲವು ಸಂದರ್ಭಗಳಲ್ಲಿ ಮಾತ್ರ ಒಬ್ಬಳಿಗಿಂತ ಹೆಚ್ಚು ಹೆಂಡತಿಯನ್ನು ಮನುಷ್ಯ ಮದುವೆಯಾಗಬಹುದು. ಮುಂದಿನ ಮಾತುಗಳಲ್ಲಿ ಅವುಗಳನ್ನು ಕೌಟಿಲ್ಯ ಹೇಳುತ್ತಾನೆ:

"ಒಂದು ಪಕ್ಷ ಹೆಂಗಸು (ಜೀವಂತ) ಮಕ್ಕಳನ್ನು ಹಡೆಯದಿದ್ದರೆ ಅಥವಾ ಗಂಡು ಸಂತಾವಿಲ್ಲದಿದ್ದರೆ ಅಥವಾ ಅವಳು ಬಂಜೆಯಾಗಿದ್ದರೆ (ಇನ್ನೊಬ್ಬಳನ್ನು ಮದುವೆಯಾಗಲು) ಅವಳ ಗಂಡ ಎಂಟು ವರ್ಷಗಳ ತನಕ ಕಾಯಬೇಕು. ಅವಳ ಸತ್ತ ಮಗುವನ್ನು ಹೆತ್ತರೆ ಅವನು ಹತ್ತು ವರ್ಷದವರೆಗೆ ಕಾಯಬೇಕು. ಆವಳಿಗೆ ಬರಿ ಹೆಣ್ಣುಮಕ್ಕಳೇ ಆದರೆ ಅವನು ಹನ್ನೆರಡು ವರ್ಷ ಕಾಯಬೇಕು. ಆಗ ಅವನಿಗೆ ಗಂಡು ಸಂತಾನದ ಅಪೇಕ್ಷೆಯಾದರೆ ಅವನು ಬೇರೊಬ್ಬಳನ್ನು ಮದುವೆಯಾಗಬಹುದು. ಈ ಕಾನೂನನ್ನು ಅವನು ಭಂಗ ಮಾಡಿದರೆ ಅವನು ಶುಲ್ಕ, ಸ್ತ್ರೀಧನ, ಸೂಕ್ತ ಧನ ಪರಿಹಾರ (ಅಧಿವೇದಾನಿಕ ಮಾರ್ತಂ) ಇವನ್ನಷ್ಟೇ ಅಲ್ಲದೆ ಸರ್ಕಾರಕ್ಕೆ ೨೪ ಪಣ ದಂಡ ಕೊಡಬೇಕು. ಅವನ ಜೊತೆ ಮದುವೆಯಾದಾಗ ಆ ಹೆಂಗಸರಿಗೆ ಶುಲ್ಕ ಮತ್ತು ಸ್ತ್ರೀಧನ ಅಗತ್ಯ ಮೊತ್ತವನ್ನು ಕೊಡದಿದ್ದರೆ ಅದನ್ನೂ ಕೊಟ್ಟು, ತನ್ನ ಹೆಂಡತಿಯರಿಗೆ ಸೂಕ್ತ ಪರಿಹಾರ ಮತ್ತು ಜೀವನಾಂಶ ನೀಡಿ, ಎಷ್ಟು ಜನ ಹೆಂಗಸರನ್ನಾದರೂ ಅವನು ಮದುವೆಯಾಗಬಹುದು. ಏಕೆಂದರೆ ಗಂಡು ಮಕ್ಕಳನ್ನು ಹೆರುವುದಕ್ಕಾಗಿಯೇ ಸ್ತ್ರೀಯರು ಸೃಷ್ಟಿಯಾಗಿದ್ದಾರೆ."

ಮನುವಿನ ಕಾಲದಲ್ಲಿ ಇದ್ದಂತೆ ಅಲ್ಲದೆ, ಕೌಟಿಲ್ಯನ ಕಾಲದಲ್ಲಿ ಸ್ತ್ರೀಯರು, ಪರಸ್ಪರ ದ್ವೇಷ ಮತ್ತು ವೈರತ್ವದ ಆಧಾರದ ಮೇಲೆ ವಿಚ್ಛೇದನವನ್ನು ಪಡೆಯಬಹುದಿತ್ತು.

"ಗಂಡನನ್ನು ದ್ವೇಷಿಸುವ ಹೆಂಗಸು ಅವನ ಇಚ್ಛೆಗೆ ವಿರುದ್ಧ ದಾಂಪತ್ಯ ವಿಚ್ಛೇದನ ಪಡೆಯಲು ಸಾಧ್ಯವಿಲ್ಲ. ಹೆಂಡತಿಯ ಇಚ್ಛೆಗೆ ವಿರುದ್ಧ ಗಂಡ ವಿಚ್ಛೇದನ ಪಡೆಯಲು ಸಾಧ್ಯವಿಲ್ಲ. ಆದರೆ ಪರಸ್ಪರ ವೈರತ್ವದಿಂದ ವಿಚ್ಛೇದನವನ್ನು ಪಡೆಯಬಹುದು (ಪರಸ್ಪರಂ ದ್ವೇಷಾನ್‌ಮೋಕ್ಷಃ). ತನ್ನ ಹೆಂಡತಿಯಿಂದ ಅಪಾಯವಿದೆ ಎಂದು ಕಂಡ ಮನುಷ್ಯ ವಿಚ್ಛೇದನ ಬಯಸಿದರೆ (ಮೋಕ್ಷಂ ಇಚ್ಛೇತ್) ಅವಳಿಗೆ (ಅವಳ ಮದುವೆ ಸಂದರ್ಭದಲ್ಲಿ) ನೀಡಿದ್ದ ಎಲ್ಲವನ್ನೂ ಹಿಂದಿರುಗಿಸತಕ್ಕದ್ದು. ತನ್ನ ಗಂಡನಿಂದ ತನಗೆ ಅಪಾಯವಿದೆ ಎಂದು ಕಂಡ ಹೆಂಗಸು ವಿಚ್ಛೇದನ ಬಯಸಿದರೆ ಅವಳು ತನ್ನ ಆಸ್ತಿಯ ಹಕ್ಕನ್ನು ಕಳೆದುಕೊಳ್ಳುತ್ತಾಳೆ. ತನ್ನ ಗಂಡ ದುಷ್ಟನಾಗಿದ್ದರೆ ಹೆಂಡತಿ ಅವನನ್ನು ತ್ಯಜಿಸಬಹುದು."

"ಅನಿರ್ದಿಷ್ಟ ಕಾಲದವರೆಗೆ ಅಗತ್ಯವಾದಷ್ಟು ಊಟ ಮತ್ತು ಬಟ್ಟೆಯನ್ನು ಪಡೆಯಲು ಹೆಂಗಸಿಗೆ ಹಕ್ಕಿದ್ದರೆ ಜೀವನಾಂಶಕ್ಕಾಗಿ ಅದನ್ನು ಅವಳಿಗೆ ಕೊಡತಕ್ಕದ್ದು ಅಥವಾ ಹೆಚ್ಚು ಅಗತ್ಯವಾದರೆ ಅದನ್ನು ಜೀವನಾಂಶ ಕೊಡುವವನ ಆದಾಯಕ್ಕನುಗುಣವಾಗಿ ಕೊಡತಕ್ಕದ್ದು.

ನಿರ್ದಿಷ್ಟ ಕಾಲವಾದರೆ (ಈ ಅವಧಿಗೆ ಅವಳಿಗೆ ಕೊಡುವಂಥ ವಸ್ತುಗಳ ಜೊತೆಗೆ ಮೊತ್ತದ ಹತ್ತನೇ ಒಂದು ಭಾಗ ಸೇರಿರುತ್ತದೆ), ಆಗ ಪೋಷಕನ ಆದಾಯಕ್ಕನುಸಾರವಾಗಿ ನಿಗದಿಪಡಿಸಿದ ಸ್ವಲ್ಪ ಹಣವನ್ನೂ ಹಾಗೆಯೇ ಅವಳ ಶುಲ್ಕವನ್ನು ಕೊಡದಿದ್ದರೆ ಆಸ್ತಿ, ಹಾಗೂ (ಅವಳ ಗಂಡ ಪುನರ್ವಿವಾಹವಾಗಲು ಅವಳು ಅನುಮತಿ ನೀಡಲು) ಪರಿಹಾರವನ್ನೂ ಕೊಡತಕ್ಕದ್ದು. ತನ್ನ ಮಾವನ ಕುಟುಂಬಕ್ಕೆ ಸೇರಿದ ಯಾರ ರಕ್ಷಣೆಯಲ್ಲಾದರೂ ಆಕೆ ಇದ್ದರೆ ಅಥವಾ ಆಕೆ ಸ್ವತಂತ್ರವಾಗಿ ಜೀವಿಸಿದರೆ ಆಗ ಆಕೆಯ ಗಂಡನ ಮೇಲೆ (ಆವಳ ಜೀವನಾಂಶಕ್ಕಾಗಿ) ಫಿರ್ಯಾದು ಹೂಡಬಾರದು. ಹೀಗೆ ಜೀವನಾಂಶದ ವಿಷಯವನ್ನು ನಿರ್ಣಯಿಸಲಾಗಿದೆ."

ಕೌಟಿಲ್ಯನ ಕಾಲದಲ್ಲಿ ಹೆಂಗಸು ಅಥವಾ ವಿಧವೆ ಪುನರ್ ವಿವಾಹವಾಗುವುದಕ್ಕೆ ಯಾವುದೇ ನಿಷೇಧವಿರಲಿಲ್ಲ.

"ತನ್ನ ಗಂಡ ಸತ್ತ ನಂತರ ಹೆಂಗಸು ಧಾರ್ಮಿಕ ಜೀವನವನ್ನು ನಡೆಸಲು ಇಷ್ಟಪಟ್ಟರೆ ಕೂಡಲೆ ಅವಳು ತನ್ನ ದತ್ತಿ ಮತ್ತು ಆಭರಣಗಳನ್ನಲ್ಲದೆ ತನಗೆ ಬರಬೇಕಾದ ಶುಲ್ಕದ ಬಾಕಿಯನ್ನೂ ಸ್ವೀಕರಿಸತಕ್ಕದ್ದು. ಇವೆರಡನ್ನು ಪಡೆದುಕೊಂಡ ನಂತರ ಆಕೆ ಬೇರೊಬ್ಬನನ್ನು ಮರು ಮದುವೆಯಾದರೆ ಅವಳೂ ಬಡ್ಡಿ ಸಹಿತ ಅವುಗಳನ್ನು ವಾಪಸ್ಸು ಮಾಡುವಂತೆ ಬಲವಂತಪಡಿಸಬೇಕು. ಆಕೆ ಎರಡನೆಯ ಮದುವೆಗೆ ಅಪೇಕ್ಷಿಪಟ್ಟರೆ ಅವಳ ಮಾವ ಅಥವಾ ಗಂಡ ಅಥವಾ ಇಬ್ಬರೂ ಅವಳಿಗೆ ನೀಡಿದ್ದನ್ನು ಅವಳ ಪುನರ್‌ವಿವಾಹದ ಸಂದರ್ಭದಲ್ಲಿ ಅವಳಿಗೆ ಕೊಡತಕ್ಕದ್ದು. ಗಂಡಂದಿರು ದೀರ್ಘಕಾಲ ದೂರವಿದ್ದಾಗ ಹೆಂಡಂದಿರು ಮರು ಮದುವೆಯಾಗುವ ಕಾಲವನ್ನು ಕುರಿತು ವಿವರಿಸಲಾಗುವುದು."

"ತನ್ನ ಮಾವ ಆರಿಸಿದ ವ್ಯಕ್ತಿಯಲ್ಲದೆ ಬೇರೆ ಯಾರನ್ನಾದರೂ ವಿಧವೆ ಮದುವೆಯಾದರೆ ತನಗೆ ತನ್ನ ಮಾವ ಕೊಟ್ಟದ್ದನ್ನೂ ಸತ್ತ ಗಂಡ ಕೊಟ್ಟದ್ದನ್ನೂ ಆಕೆ ಕಳೆದುಕೊಳ್ಳುವಳು."

"ಯಾರಾದರೂ ಜ್ಞಾತಿಯನ್ನು ಹೆಂಗಸು ಮರು ಮದುವೆ ಮಾಡಿಕೊಂಡರೆ ಜ್ಞಾತಿಗಳು ಅವಳು ತನ್ನದೆಂದು ತಂದಿದ್ದ ಅವಳ ಹಿಂದಿನ ಮಾವ ಕೊಟ್ಟಿದ್ದ ಸಂಪತ್ತನ್ನೆಲ್ಲ ಅವನಿಗೆ (ಹಿಂದಿನ ಮಾವನಿಗೆ) ಹಿಂದಿರುಗಿಸತಕ್ಕದ್ದು. ಯಾರು ನ್ಯಾಯಯುತವಾಗಿ ಹೆಂಗಸನ್ನು ತನ್ನ ರಕ್ಷಣೆಗೆ ತೆಗೆದುಕೊಳ್ಳುತ್ತಾನೋ ಅವನು ಅವಳ ಆಸ್ತಿಯನ್ನೂ ರಕ್ಷಿಸಬೇಕು. ಮರು ಮದುವೆಯಾದ ಮೇಲೆ ಯಾವ ಹೆಂಗಸೂ ತನ್ನ ಆಸ್ತಿಗೆ ಹಕ್ಕನ್ನು ಸ್ಥಾಪಿಸಲು ಪ್ರಯತ್ನಿಸ ಬಾರದು."

"ಆಕೆ ಧಾರ್ಮಿಕ ಜೀವನ ನಡೆಸಿದರೆ ತನ್ನ ಆಸ್ತಿಯನ್ನು ಅವಳು ಅನುಭವಿಸಬಹುದು. ಒಬ್ಬ ಪುತ್ರ ಅಥವಾ ಪುತ್ರರು ಆಕೆಗೆ ಇದ್ದರೆ ಆಕೆ ತನ್ನ ಸ್ತ್ರೀಧನವನ್ನು ನಿರ್ಬಂಧವಿಲ್ಲದೆ ಬಳಸಲು ಆಕೆ ಸ್ವತಂತ್ರಳಲ್ಲ. ಏಕೆಂದರೆ ಅವಳ ಆಸ್ತಿ ಅವಳ ಪುತ್ರರಿಗೆ ಹೋಗಬೇಕು."

"ತನ್ನ ಮೊದಲ ಗಂಡನಿಂದಾದ ತನ್ನ ಪುತ್ರರನ್ನು ಸಾಕಲು ತನ್ನ ಆಸ್ತಿಯನ್ನು ತೆಗೆದುಕೊಳ್ಳುತ್ತೇನೆಂದು ಮರು ಮದುವೆಯ ನಂತರ ಆಕೆ ಹೇಳಿದರೆ ಅದನ್ನು ಆಕೆ ತನ್ನ ಪುತ್ರರ ಹೆಸರಿನಲ್ಲೆ ಇಡತಕ್ಕದ್ದು. ಅನೇಕ ಪುತ್ರರನ್ನು ಒಬ್ಬ ಹೆಂಗಸು ಅನೇಕ ಗಂಡಂದಿರಿಂದ ಹಡೆದರೆ ತನಗೆ ಅವರಿಂದ ಬಂದ ಆಸ್ತಿಯನ್ನು ಹಾಗೆ ಹಾಗೆಯೇ ಅವಳು ಅವರವರ ಪುತ್ರರಿಗೆ ಕೊಡತಕ್ಕದ್ದು. ಪೂರ್ಣ ಅಧಿಕಾರದಿಂದ ಅನುಭೋಗಿಸಲು ವಿಕ್ರಯಿಸಲೂ ಕೊಟ್ಟ

ಆಸ್ತಿಯನ್ನೂ ಕೂಡ ಹೆಂಗಸು ಮರು ಮದುವೆಯಾದ ಮೇಲೆ ತನ್ನ ಪುತ್ರರ ಹೆಸರಿನಲ್ಲಿ ಇಡಬೇಕು."

"ಬಂಜೆಯು ತನ್ನ ಮೃತ ಪತಿಯ ಶಯ್ಯೆಗೆ ನಿಷ್ಠಳಾಗಿದ್ದರೆ ತನ್ನ ಗುರುವಿನ ರಕ್ಷಣೆಯಲ್ಲಿ ಅವಳು ಬದುಕಿರುವವರೆಗೆ ತನ್ನ ಆಸ್ತಿಯನ್ನು ಅನುಭೋಗಿಸಬಹುದು. ಏಕೆಂದರೆ ವಿಪತ್ತುಗಳನ್ನು ನಿವಾರಿಸಲು ಸ್ತ್ರೀಯರಿಗೆ ಆಸ್ತಿಯನ್ನು ದತ್ತಿ ಬಿಡಬೇಕು. ಅವಳ ಸಾವಿನ ನಂತರ ಅವಳ ಆಸ್ತಿ ಅವಳ ದಾಯಾದಿಗಳಿಗೆ ಹೋಗತಕ್ಕದಲ್ಲ. ಹೆಂಡತಿ ಸತ್ತು ಗಂಡ ಬದುಕಿದ್ದರೆ ಆಗ ಅವಳ ಪುತ್ರರು ಮತ್ತು ಪುತ್ರಿಯರು ಅವಳ ಆಸ್ತಿಯನ್ನು ತಮ್ಮ ತಮ್ಮಲ್ಲೇ ಹಂಚಿಕೊಳ್ಳಬೇಕು. ಅವಳಿಗೆ ಪುತ್ರರಿಲ್ಲದಿದ್ದರೆ ಅವಳ ಪುತ್ರಿಯರೇ ಅದನ್ನು ಪಡೆಯತಕ್ಕದ್ದು. ಅವರೂ ಇಲ್ಲದಿದ್ದರೆ ಅವಳ ಗಂಡ ಅವಳಿಗೆ ಕೊಟ್ಟಿದ್ದ ಶುಲ್ಕದ ಮೊತ್ತವನ್ನು ಅವನೇ ತೆಗೆದುಕೊಳ್ಳಬೇಕು ಹಾಗೂ ಅವಳ ಬಂಧುಗಳು ಅವಳಿಗೆ ನೀಡಿದ್ದ ಉಡುಗೊರೆ ಅಥವಾ ಬಳುವಳಿಯನ್ನು ಅವರು ವಾಪಸ್ಸು ತೆಗೆದುಕೊಳ್ಳಬೇಕು. ಹೀಗೆ ಸ್ತ್ರೀಧನ ವಿಷಯವನ್ನು ನಿರ್ಣಯಿಸಲಾಗಿದೆ."

"ಶೂದ್ರ, ವೈಶ್ಯ, ಕ್ಷತ್ರಿಯ ಅಥವಾ ಬ್ರಾಹ್ಮಣ ಜಾತಿಗೆ ಸೇರಿದ ಮಕ್ಕಳನ್ನು ಹಡೆಯದ ಹೆಂಡತಿಯರು ಅನುಕ್ರಮವಾಗಿ ಒಂದು, ಎರಡು, ಮೂರು ಮತ್ತು ನಾಲ್ಕು ವರ್ಷಗಳವರೆಗೆ ದೂರ ಹೋಗಿರುವ ತಮ್ಮ ಗಂಡಂದಿರಿಗಾಗಿ ಕಾಯಬೇಕು. ಆದರೆ ಅವರು ಮಕ್ಕಳಿಗೆ ಜನ್ಮವಿತ್ತಿದ್ದರೆ ಗೈರುಹಾಜರಾದ ತಮ್ಮ ಗಂಡಂದಿರಿಗಾಗಿ ಅವರು ಒಂದು ವರ್ಷದವರಗೆ ಕಾಯಲೇಬೇಕು. ಅವರಿಗೆ ಜೀವನ ಪೋಷಣೆಯನ್ನು ಒದಗಿಸಿದ್ದರೆ ಈಗ ತಾನೆ ಹೇಳಿದ ಅವಧಿಗೆ ಎರಡರಷ್ಟು ಕಾಲ ಅವರು ಕಾಯಲೇಬೇಕು. ಅವರಿಗೇನನ್ನೂ ಒದಗಿಸದಿದ್ದರೆ ಅವರ ಶ್ರೀಮಂತ ಜ್ಞಾತಿಗಳು ನಾಲ್ಕು ಅಥವಾ ಎಂಟು ವರ್ಷಗಳವರೆಗೆ ಅವರನ್ನು ಸಾಕತಕ್ಕದ್ದು. ಆಗ ಅವರ ಮದುವೆಯಲ್ಲಿ ಬಂದ ಉಡುಗೊರೆಗಳನ್ನು ತೆಗೆದುಕೊಂಡ ಜ್ಞಾತಿಗಳು ಅವರಿಗೆ ಮದುವೆಯಾಗಲು ಅನುಮತಿ ನೀಡತಕ್ಕದ್ದು. ಗಂಡ ಬ್ರಾಹ್ಮಣನಾಗಿದ್ದರೆ ಅಧ್ಯಯನಕ್ಕೆ ದೂರ ಹೋಗಿದ್ದರೆ ಮಕ್ಕಳಿಲ್ಲದ ಅವನ ಹೆಂಡತಿಯು ಹತ್ತು ವರ್ಷಗಳ ತನಕ ಅವನಿಗಾಗಿ ಕಾಯತಕ್ಕದ್ದು. ಆದರೆ ಅವಳಿಗೆ ಮಕ್ಕಳಾಗಿದ್ದರೆ ಹನ್ನೆರಡು ವರ್ಷಗಳವರೆಗೆ ಕಾಯಲೇಬೇಕು. ಗಂಡ ರಾಜಸೇವಕನಾಗಿದ್ದರೆ ಅವನ ಹೆಂಡತಿ ಅವಳ ಸಾವಿನವರೆಗೆ ಕಾಯಬೇಕು. ಆದರೆ ಅವಳು ಸಂತತಿ ಕೊನೆಗೊಳ್ಳಬಾರದೆಂಬ ಉದ್ದೇಶದಿಂದ ಸವರ್ಣ ಪತಿಗೆ (ಮೊದಲನೆಯ ಗಂಡನ ಗೋತ್ರಕ್ಕೆ ಸೇರಿದ ಎರಡನೆಯ ಪತಿಗೆ) ಮಕ್ಕಳನ್ನು ಹಡೆದರೂ ಕೂಡ ಅವಳನ್ನು ತಿರಸ್ಕಾರದಿಂದ ನೋಡಬಾರದು. ಗೈರು ಹಾಜರಾದವನ ಹೆಂಡತಿಗೆ ಪೋಷಣೆಯಿಲ್ಲದಿದ್ದರೆ ಅವಳನ್ನು ಜ್ಞಾತಿಗಳು ಕೈಬಿಟ್ಟರೆ ಅವಳು ತನಗಿಷ್ಟವಾದವನ್ನು ತನ್ನನ್ನು ಸಾಕಲು ಶಕ್ತಿಯಿರುವವನನ್ನು ತನ್ನ ಗೋಳನ್ನು ಹೋಗಲಾಡಿಸುವವನನ್ನು ಅವಳು ಪುನರ್ ವಿವಾಹವಾಗಬಹುದು.

ಮನುವಿನಂತಲ್ಲದೆ, ವಿವಾಹಿತ ಮಹಿಳೆಗೆ ಆರ್ಥಿಕ ಸ್ವಾತಂತ್ರ್ಯವನ್ನು ಕೊಡಲು ಪ್ರತಿಯೊಂದು ಎಚ್ಚರವನ್ನು ವಹಿಸಲಾಗಿದೆ. ಇದು ಪತ್ನಿಗೆ ಕೊಡುವ ದತ್ತಿ ಮತ್ತು ಪೋಷಣೆಗೆ ಸಂಬಂಧಿಸಿದ ಅವಕಾಶಗಳನ್ನು ಕೌಟಿಲ್ಯನ ಅರ್ಥಶಾಸ್ತ್ರದಿಂದ ಉದ್ಧರಿಸುವುದರಿಂದ ಸ್ಪಷ್ಟವಾಗುತ್ತದೆ:

"ಜೀವನಾಧಾರದ ಸಾಧನಗಳು ಅಥವಾ ಆಭರಣಗಳನ್ನು ಸ್ತ್ರೀಯರ ಆಸ್ತಿಯೆಂದು ಪರಿಗಣಿಸಬೇಕು. ಎರಡು ಸಾವಿರಕ್ಕಿಂತ ಹೆಚ್ಚು ಬೆಲೆ ಬಾಳುವ ಜೀವನಾಧಾರ ಸಾಧನಗಳನ್ನು

(ಅವಳ ಹೆಸರಿನಲ್ಲಿ) ದತ್ತಿ ಬಿಡತಕ್ಕದ್ದು. ಆಭರಣಗಳಿಗೆ ಮಿತಿಯಿಲ್ಲ. ಗೈರು ಹಾಜರಾದ ತನ್ನ ಗಂಡ ತನ್ನ ಪೋಷಣೆಗೆ ವ್ಯವಸ್ಥೆ ಮಾಡದಿರುವಾಗ ಹೆಂಡತಿಯು ತನ್ನ ಮಗ, ಸೊಸೆ ಅಥವಾ ತನ್ನ ಪೋಷಣೆಗೆ ಈ ಸ್ವತ್ತನ್ನು ಉಪಯೋಗಿಸುವುದು ಅಪರಾಧವಲ್ಲ. ವಿಪತ್ತುಗಳಲ್ಲಿ, ರೋಗರುಜಿನಗಳಲ್ಲಿ, ಕ್ಷಾಮ ಡಾಮರಗಳಲ್ಲಿ, ಅಪಾಯಗಳ ನಿವಾರಣೆಯಲ್ಲಿ ಹಾಗೂ ಧರ್ಮಕಾರ್ಯಗಳಲ್ಲಿ ಗಂಡ ಕೂಡ ಈ ಸ್ವತ್ತನ್ನು ಉಪಯೋಗಿಸಬಹುದು. ಅವಳಿಗಳನ್ನು ಹಡೆದಿರುವ ದಂಪತಿಗಳು ಪರಸ್ಪರ ಸಮ್ಮತಿಯಿಂದ ಈ ಸ್ವತ್ತನ್ನು ಅನುಭೋಗಿಸಿದರೆ ಯಾವ ಫಿರ್ಯಾದೂ ಇಲ್ಲ. ಮದುವೆಯ ಮೊದಲ ನಾಲ್ಕು ಬಗೆಯ ಆಚಾರಗಳಿಗನುಸಾರವಾಗಿ ವಿವಾಹವಾದವರು ಮೂರು ವರ್ಷಗಳವರೆಗೆ ಈ ಸ್ವತ್ತನ್ನು ಅನುಭೋಗಿಸಿದರೆ ಯಾವ ಫಿರ್ಯಾದೂ ಇಲ್ಲ. ಆದರೆ ಗಾಂಧರ್ವ ಮತ್ತು ಅಸುರ ವಿವಾಹಗಳಲ್ಲಿ ಈ ಸ್ವತ್ತನ್ನು ಅನುಭೋಗಿಸಿದರೆ ಅದನ್ನು ಬಡ್ಡಿ ಸಮೇತ ಹಿಂದಿರುಗಿಸತಕ್ಕದ್ದು. ರಾಕ್ಷಸ ಮತ್ತು ಪೈಶಾಚವೆಂದು ಕರೆಯಲಾಗುವ ಅಂಥ ಮದುವೆಗಳಲ್ಲಿ ಈ ಸ್ವತ್ತು ಬಳಕೆಯಾದರೆ ಅದನ್ನು ಕಳ್ಳತನವೆಂದು ಪರಿಗಣಿಸಬೇಕು. ಹೀಗೆ ಮದುವೆಯ ಕರವನ್ನು ವಿವರಿಸಲಾಗಿದೆ."

"ಅನಿರ್ದಿಷ್ಟ ಕಾಲದವರೆಗೆ ಪೋಷಣೆ ಕೇಳಲು ಹಕ್ಕಿರುವ ಸ್ತ್ರೀಗೆ ಅಗತ್ಯವಿರುವಷ್ಟು ಊಟ ಬಟ್ಟೆ ಕೊಡತಕ್ಕದ್ದು ಅಥವಾ ಹೆಚ್ಚಿಗೆ ಬೇಕಾದರೆ ಪೋಷಕನ ಆದಾಯಕ್ಕನುಸಾರವಾಗಿ ಕೊಡತಕ್ಕದ್ದು. ಅವಧಿಯನ್ನು (ಈ ಕಾಲಕ್ಕೆ ಅವಳಿಗೆ ಕೊಡುವಂಥ ವಸ್ತುಗಳ ಜೊತೆಗೆ ಮೊತ್ತದ ಹತ್ತನೇ ಒಂದು ಭಾಗ ಸೇರಿರುತ್ತದೆ) ಮಿತಿಗೊಳಿಸಿದರೆ, ಆಗ ಪೋಷಕನ ಆದಾಯಕ್ಕೆ ಅನುಪಾತವಾಗಿ ನಿಗದಿಪಡಿಸಿದ ಸ್ವಲ್ಪ ಹಣದ ಮೊತ್ತವನ್ನು ಆಕೆಗೆ ಕೊಡತಕ್ಕದ್ದು. ಹಾಗೆಯೇ ಅವಳ ಶುಲ್ಕ, ಸ್ವತ್ತು ಮತ್ತು (ಪುನರ್ ವಿವಾಹವಾಗಲು ಅವಳ ಗಂಡನಿಗೆ ಅನುಮತಿ ಕೊಟ್ಟಿದ್ದಕ್ಕಾಗಿ ಅವಳಿಗೆ ಕೊಡಬೇಕಾದ) ಪರಿಹಾರವನ್ನು ಆಕೆಗೆ ಕೊಡತಕ್ಕದ್ದು. ತನ್ನ ಮಾವನ ಕುಟುಂಬಕ್ಕೆ ಸೇರಿದ ಯಾರ ರಕ್ಷಣೆಯಲ್ಲಾದರೂ ಆಕೆ ಇದ್ದರೆ ಅಥವಾ ಆಕೆ ಸ್ವತಂತ್ರವಾಗಿ ಜೀವಿಸಿದರೆ, ಆಗ ಆಕೆಯ ಗಂಡನ ಮೇಲೆ (ಅವಳ ಜೀವನಾಂಶಕ್ಕಾಗಿ) ಫಿರ್ಯಾದು ಹೂಡಬಾರದು. ಹೀಗೆ ಜೀವನಾಂಶದ ವಿಷಯವನ್ನು ನಿರ್ಣಯಿಸಬೇಕಾಗಿದೆ."

ಗಂಡ ತನ್ನನ್ನು ಹೊಡೆದು ಅಪಮಾನಗೊಳಿಸಿದರೆ ಹೆಂಡತಿಯ ನ್ಯಾಯಾಲಯದಲ್ಲಿ ನ್ಯಾಯವನ್ನು ಕೌಟಿಲ್ಯನ ಕಾಲದಲ್ಲಿ ಪಡೆಯಬಹುದಿತ್ತೆನ್ನುವುದು ಆಶ್ಚರ್ಯವನ್ನುಂಟು ಮಾಡುತ್ತದೆ.

ಒಟ್ಟಿನಲ್ಲಿ ಮನು ಪೂರ್ವ ಯುಗದಲ್ಲಿ ಸ್ತ್ರೀ ಸ್ವತಂತ್ರಳಾಗಿದ್ದಳು ಹಾಗೂ ಪುರುಷನ ಸಮಾನ ಸಂಗಾತಿಯಾಗಿದ್ದಳು.

ಮನು ಏಕೆ ಅವಳನ್ನು ಅಧೋಗತಿಗಿಳಿಸಿದ?

* * * *

ಭಾಗ – ನಾಲ್ಕು

# ಬುದ್ಧ ಅಥವಾ ಕಾರ್ಲ್‌ಮಾರ್ಕ್ಸ್

*ಬುದ್ಧ ಮತ್ತು ಕಾರ್ಲ್‌ಮಾರ್ಕ್ಸ್ ಮೇಲಿನ ಪ್ರಬಂಧದ ಮೂರು ಬೆರಳಚ್ಚಿನ ಭಿನ್ನ ಪ್ರತಿಗಳು ಬಿಡಿ ಹಾಳೆಗಳಲ್ಲಿರುವುದನ್ನು ಸಂಪಾದನ ಸಮಿತಿ ನೋಡಿತು. ಎರಡು ಪ್ರತಿಗಳಲ್ಲಿ ಲೇಖಕರೇ ಸ್ವಹಸ್ತದಿಂದ ತಿದ್ದುಪಾಟುಗಳನ್ನು ಮಾಡಿದ್ದಾರೆ. ಇದನ್ನೆಲ್ಲ ಪರಿಶೀಲಿಸಿದ ಮೇಲೆ ಆ ತಿದ್ದುಪಾಟುಗಳನ್ನು ಸಂಯೋಜಿಸಿ ಈ ಪ್ರಬಂಧವನ್ನು ಸಂಗ್ರಹಿಸಲಾಗಿದೆ. ಕೆಳಗಡೆ ತೋರಿಸಿರುವಂತೆ ಪ್ರಬಂಧವನ್ನು ಉಪ ಪ್ರಕರಣಗಳನ್ನಾಗಿ ವಿಂಗಡಿಸಿದೆ:*

*ಪೀಠಿಕೆ*

*೧. ಬುದ್ಧನ ತತ್ವ*

*೨. ಕಾರ್ಲ್‌ಮಾರ್ಕ್ಸ್‌ನ ಮೂಲ ಸಿದ್ಧಾಂತ*

*೩. ಮಾರ್ಕ್ಸ್‌ನ ಸಿದ್ಧಾಂತದಲ್ಲಿ ಜೀವಂತವಾಗಿರುವುದೇನು?*

*೪. ಬುದ್ಧ ಮತ್ತು ಕಾರ್ಲ್‌ಮಾರ್ಕ್ಸ್‌ರ ಹೋಲಿಕೆ.*

*೫. ಸಾಧನಗಳು*

*೬. ಸಾಧನಗಳ ಮೌಲ್ವೀಕರಣ*

*೭. ಯಾರ ಸಾಧನಗಳು ಹೆಚ್ಚು ಫಲಕಾರಿಯಾಗಿವೆ?*

*೮. ರಾಜ್ಯ ಶಕ್ತಿ ನಶಿಸುತ್ತದೆ.*

– ಸಂಪಾದಕರು

## ಅಧ್ಯಾಯ ೧೮

# ಬುದ್ಧ ಅಥವಾ ಕಾರ್ಲ್‌ಮಾರ್ಕ್ಸ್

ಕಾರ್ಲ್‌ಮಾರ್ಕ್ಸ್ ಮತ್ತು ಬುದ್ಧರ ನಡುವಣ ಹೋಲಿಕೆ ತಮಾಷೆಯಾಗಿ ಕಾಣಬಹುದು. ಅದರಲ್ಲಿ ಏನೂ ಆಶ್ಚರ್ಯವಿಲ್ಲ. ಮಾರ್ಕ್ಸ್ ಮತ್ತು ಬುದ್ಧರ ಮಧ್ಯೆ ೨೩೮೧ ವರ್ಷಗಳ ಅಂತರವಿದೆ. ಬುದ್ಧ ಜನಿಸಿದ್ದು ಕ್ರಿ.ಪೂ. ೫೬೩ರಲ್ಲಿ, ಕಾರ್ಲ್‌ಮಾರ್ಕ್ಸ್ ಕ್ರಿ.ಶ. ೧೮೧೮ರಲ್ಲಿ. ಒಂದು ಹೊಸ ರಾಜಕೀಯ ಸಿದ್ಧಾಂತದ ಒಂದು ಹೊಸ ಆರ್ಥಿಕ ವ್ಯವಸ್ಥೆಯ ಶಿಲ್ಪಿ ಎಂದು ಕಾರ್ಲ್‌ಮಾರ್ಕ್ಸ್‌ನನ್ನು ಭಾವಿಸುತ್ತಾರೆ. ಇದಕ್ಕೆ ಪ್ರತಿಯಾಗಿ ರಾಜ್ಯಶಾಸ್ತ್ರ ಅಥವಾ ಅರ್ಥಶಾಸ್ತ್ರಕ್ಕೆ ಯಾವ ಸಂಬಂಧವೂ ಇಲ್ಲದ ಒಂದು ಧರ್ಮದ ಸಂಸ್ಥಾಪಕ ಎಂಬುದಕ್ಕಿಂತ ಬುದ್ಧ ಹೆಚ್ಚೇನು ಅಲ್ಲವೆಂದು ನಂಬುತ್ತಾರೆ. ಅಷ್ಟು ದೀರ್ಘ ಕಾಲಾವಧಿಯಿಂದ ಪ್ರತ್ಯೇಕವಾಗಿರುವ ಈ ಎರಡು ವ್ಯಕ್ತಿತ್ವಗಳ ಹಾಗೂ ಅವು ಆಕ್ರಮಿಸಿಕೊಂಡಿರುವ ವಿಚಾರಧಾರೆಯ ಭಿನ್ನಕ್ಷೇತ್ರಗಳ ಸಾಮ್ಯ ಅಥವಾ ವೈಷಮ್ಯವನ್ನು ಧ್ವನಿಸುವ 'ಈ ಬುದ್ಧ ಅಥವಾ ಕಾರ್ಲ್‌ಮಾರ್ಕ್ಸ್' ಪ್ರಬಂಧದ ಶಿರೋನಾಮೆ ಖಂಡಿತವಾಗಿಯೂ ವಿಚಿತ್ರವೆನ್ನಿಸುತ್ತದೆ. ಇದನ್ನು ಕಂಡು ಮಾರ್ಕ್ಸ್‌ವಾದಿಗಳು ಸುಲಭವಾಗಿ ನಗಬಹುದು ಹಾಗೂ ಒಂದೇ ಮಟ್ಟದಲ್ಲಿ ಮಾರ್ಕ್ಸ್ ಮತ್ತು ಬುದ್ಧರನ್ನು ಕಾಣುವ ವಿಚಾರವನ್ನೂ ಅವರು ಗೇಲಿಮಾಡಬಹುದು. ಮಾರ್ಕ್ಸ್ ತೀರಾ ಅರ್ವಾಚೀನನಾದರೆ ಬುದ್ಧ ತೀರಾ ಪ್ರಾಚೀನನಾಗಿದ್ದಾನೆ. ತಮ್ಮ ಗುರುವಿನ ಜೊತೆ ಹೋಲಿಸಿದರೆ ಬುದ್ಧ ಕೇವಲ ಆದಿಮಾನವನೆಂದು ಮಾರ್ಕ್ಸ್‌ವಾದಿಗಳು ಹೇಳಬಹುದು. ಅಂಥ ಇಬ್ಬರು ವ್ಯಕ್ತಿಗಳ ನಡುವೆ ಏನು ಹೋಲಿಕೆಯಿದ್ದೀತು? ಬುದ್ಧನಿಂದ ಮಾರ್ಕ್ಸ್‌ವಾದಿ ಏನನ್ನು ಕಲಿಯಬಲ್ಲ? ಮಾರ್ಕ್ಸ್‌ವಾದಿಗೆ ಬುದ್ಧ ಏನು ಬೋಧಿಸಲು ಸಾಧ್ಯ? ಆದರೂ ಈ ಇಬ್ಬರ ತುಲನೆ ಆಕರ್ಷಣೀಯವೂ ಬೋಧನೀಯವೂ ಆಗಿದೆ. ಇಬ್ಬರನ್ನೂ ಅಧ್ಯಯನ ಮಾಡಿರುವುದರಿಂದದ ಇಬ್ಬರ ವಿಚಾರಧಾರೆಯಲ್ಲಿಯೂ ಆಸಕ್ತನಾಗಿರುವುದರಿಂದ ಇವರಿಬ್ಬರನ್ನು ತುಲನೆ ಮಾಡಬೇಕೆಂಬ ಭಾವನೆ ನನ್ನಲ್ಲಿ ಬಲವತ್ತರವಾಗುತ್ತಿದೆ. ಮಾರ್ಕ್ಸ್‌ವಾದಿಗಳು ತಮ್ಮ ಪೂರ್ವಾನುಗ್ರಹಗಳನ್ನು ಒತ್ತಟ್ಟಿಗಿಟ್ಟು ಬುದ್ಧನನ್ನು ಅಧ್ಯಯನ ಮಾಡಿ, ಅವನು ಏನನ್ನು ಪ್ರತಿನಿಧಿಸಿದ ಎಂಬುದನ್ನು ಅರ್ಥ ಮಾಡಿಕೊಂಡರೆ ಅವರು ತಮ್ಮ ಧೋರಣೆಯನ್ನು ಬದಲಾಯಿಸುವುದರಲ್ಲಿ ನನಗೆ ಅನುಮಾನವಿಲ್ಲ. ಬುದ್ಧನನ್ನು ಲೇವಡಿ ಮಾಡಬೇಕೆಂದು ನಿರ್ಧರಿಸಿಕೊಂಡಿರುವ ಅವರು ಅವನ ಬಗ್ಗೆ ಗೌರವ ತಾಳುತ್ತಾರೆಂದು ನಿರೀಕ್ಷಿಸುವುದು ನಿಜವಾಗಿಯು ಅತಿಯಾಗುತ್ತದೆ. ಆದರೆ ಬುದ್ಧನ ಉಪದೇಶಾವಳಿಯಲ್ಲಿ ಮೌಲಿಕವಾದದ್ದು ಇದೆ ಎಂಬುದನ್ನು ಅವರು ಕಂಡುಕೊಳ್ಳುತ್ತಾರೆ ಎಂಬಷ್ಟನ್ನು ಹೇಳಲೇಬೇಕಾಗುತ್ತದೆ.

### ೧. ಬುದ್ಧನ ತತ್ವ

ಸಾಮಾನ್ಯವಾಗಿ ಅಹಿಂಸಾ ತತ್ವದ ಜೊತೆ ಬುದ್ಧನನ್ನು ಸಂಯೋಜಿಸಲಾಗಿದೆ. ಅದನ್ನೇ ಅವನ ಉಪದೇಶಾವಳಿಯ ಸಾರ ಸರ್ವಸ್ವವೆಂದು ಭಾವಿಸುತ್ತಾರೆ. ಬುದ್ಧ ಏನು ಬೋಧಿಸಿದನೋ ಅದು ಅಹಿಂಸೆಗೂ ಮೀರಿ ಬಹಳ ಅಪಾರವಾಗಿದೆ ಎಂದು ಅನೇಕರಿಗೆ ಗೊತ್ತಿಲ್ಲ. ಆದ್ದರಿಂದ ಅವನ ತತ್ವಗಳನ್ನು ವಿವರವಾಗಿ

ಪರಿಶೀಲಿಸುವ ಅಗತ್ಯವಿದೆ. ನಾನು ತ್ರಿಪೀಟಕಗಳನ್ನು ಓದಿ ಅರ್ಥ ಮಾಡಿಕೊಂಡಿರುವಂತೆ ಮುಂದೆ ಅವುಗಳನ್ನು ಮಂಡಿಸುತ್ತೇನೆ:

೧. ಮುಕ್ತ ಸಮಾಜಕ್ಕೆ ಧರ್ಮ ಅಗತ್ಯ.
೨. ಎಲ್ಲ ಧರ್ಮಗಳನ್ನೂ ಇಟ್ಟುಕೊಳ್ಳುವುದರಲ್ಲಿ ಅರ್ಥವಿಲ್ಲ.
೩. ಧರ್ಮ ಜೀವನ ಸಂಗತಿಗಳಿಗೆ ಸಂಬಂಧಿಸಿರಬೇಕು, ದೇವರು ಅಥವಾ ಆತ್ಮ ಅಥವಾ ಸ್ವರ್ಗ ಅಥವಾ ಭೂಮಿ ಬಗೆಗಿನ ಊಹೆಗಳು ಮತ್ತು ವಾದಗಳಿಗಲ್ಲ.
೪. ದೇವರನ್ನು ಧರ್ಮದ ಕೇಂದ್ರವನ್ನಾಗಿ ಮಾಡುವುದು ತಪ್ಪು.
೫. ಆತ್ಮೋದ್ಧಾರವನ್ನು ಧರ್ಮದ ಕೇಂದ್ರವನ್ನಾಗಿ ಮಾಡುವುದು ತಪ್ಪು.
೬. ಪ್ರಾಣಿಬಲಿಗಳನ್ನು ಧರ್ಮದ ಕೇಂದ್ರವನ್ನಾಗಿ ಮಾಡುವುದು ತಪ್ಪು.
೭. ನಿಜವಾದ ಧರ್ಮ ಮಾನವ ಹೃದಯದಲ್ಲಿದೆ, ಶಾಸ್ತ್ರಗಳಲ್ಲಲ್ಲ.
೮. ಮನುಷ್ಯ ಮತ್ತು ನೀತಿ ಧರ್ಮದ ಕೇಂದ್ರವಾಗಿರಬೇಕು. ಇಲ್ಲದಿದ್ದರೆ ಧರ್ಮವೆನ್ನುವುದು ಕ್ರೂರ ಮೌಢ್ಯವಾಗುತ್ತದೆ.
೯. ನೈತಿಕತೆ ಜೀವನದ ಆದರ್ಶವಾಗಿದ್ದರೆ ಸಾಲದು. ದೇವರು ಇಲ್ಲದೆ ಇರುವುದರಿಂದ ಅದೇ ಜೀವನ ಧರ್ಮವಾಗಬೇಕು.
೧೦. ಧರ್ಮದ ಕೆಲಸ ಪ್ರಪಂಚದ ಪುನರ್ರಚನೆ ಮತ್ತು ಸುಖ ಸಂವರ್ಧನೆ ಮಾಡುವುದು. ಅದರ ಆದಿ ಮತ್ತು ಅಂತ್ಯವನ್ನು ವಿವರಿಸುವುದಿಲ್ಲ.
೧೧. ಹಿತಾಸಕ್ತಿಗಳ ಸಂಘರ್ಷದಿಂದ ಲೋಕದಲ್ಲಿ ದುಃಖವಿದೆ. ಅದನು ಹೋಗಲಾಡಿಸಲು ಇರುವ ಒಂದೇ ದಾರಿ ಅಷ್ಟಾಂಗ ಮಾರ್ಗ.
೧೨. ಆಸ್ತಿಯ ಖಾಸಗಿ ಒಡೆತನದಿಂದ ಒಂದು ವರ್ಗಕ್ಕೆ ಅಧಿಕಾರವೂ ಇನ್ನೊಂದು ವರ್ಗಕ್ಕೆ ದುಃಖವೂ ಉಂಟಾಗುತ್ತದೆ.
೧೩. ಸಮಾಜದ ಒಳಿತಿಗಾಗಿ ಈ ದುಃಖವನ್ನು ಹೋಗಲಾಡಿಸಬೇಕಾದರೆ ಅದರ ಕಾರಣವನ್ನು ಹೋಗಲಾಡಿಸುವುದು ಅವಶ್ಯಕ.
೧೪. ಎಲ್ಲ ಮಾನವರೂ ಸಮಾನರು.
೧೫. ಮನುಷ್ಯನನ್ನು ಅರ್ಹತೆಯಿಂದ ಅಳೆಯಬೇಕೇ ಹೊರತು ಹುಟ್ಟಿನಿಂದಲ್ಲ.
೧೬. ಉನ್ನತ ಆದರ್ಶಗಳು ಮುಖ್ಯವಾಗಬೇಕು. ಶ್ರೇಷ್ಠ ಹುಟ್ಟಲ್ಲ.
೧೭. ಎಲ್ಲ ಬಗ್ಗೆಯೂ ಮೈತ್ರಿ ಇರಬೇಕು. ಶತ್ರುವಿನ ಬಗ್ಗೆಯೂ ಈ ಭಾವನೆ ಇರಬೇಕು.
೧೮. ಎಲ್ಲರಿಗೂ ಕಲಿಯುವ ಹಕ್ಕಿದೆ. ಮನುಷ್ಯ ಜೀವಿಸಲು ಆಹಾರ ಎಷ್ಟು ಅಗತ್ಯವೋ, ವಿದ್ಯೆಯೂ ಅಷ್ಟೇ ಅಗತ್ಯ.
೧೯. ಶೀಲವಿಲ್ಲದ ಜ್ಞಾನ ಅಪಾಯಕಾರಿ.
೨೦. ಯಾವುದೂ ನಿರ್ದೋಷವಲ್ಲ. ಯಾವುದೂ ಸದಾ ಬದ್ಧವಲ್ಲ. ಪ್ರತಿಯೊಂದೂ ವಿಚಾರಣೆಗೂ, ಪರಿಶೀಲನೆಗೂ ಅಧೀನವಾಗಿದೆ.
೨೧. ಯಾವುದೂ ಅಂತಿಮವಲ್ಲ.
೨೨. ಎಲ್ಲವೂ ಕಾರ್ಯಕಾರಣ ನಿಯಮಕ್ಕೆ ಅಧೀನವಾಗಿವೆ.

೨೩. ಯಾವುದೂ ಸನಾತನವಲ್ಲ ಅಥವಾ ಶಾಶ್ವತವಲ್ಲ. ಎಲ್ಲವೂ ಪರಿವರ್ತನಶೀಲವಾದುದು. ಇರುವಿಕೆಯೆಂದರೆ ಸದಾ ಆಗುವಿಕೆ.

೨೪. ಸತ್ಯ ಮತ್ತು ನ್ಯಾಯಕ್ಕಾಗಲ್ಲದಿದ್ದರೆ ಯುದ್ಧ ಕೆಟ್ಟದ್ದು.

೨೫. ಗೆದ್ದವನು ಸೋತವನನ್ನು ಧರ್ಮದಿಂದ ಕಾಣಬೇಕು.

ಸಂಕ್ಷಿಪ್ತ ರೂಪದಲ್ಲಿ ಇದು ಬುದ್ಧನ ತತ್ವ. ಎಷ್ಟು ಹಳತು, ಆದರೆ ಎಷ್ಟು ಹೊಸತು! ಅವನ ಉಪದೇಶಗಳು ಎಷ್ಟು ವಿಶಾಲವಾಗಿವೆ. ಎಷ್ಟು ಗಾಢವಾಗಿವೆ!

## ೨. ಕಾರ್ಲ್‌ಮಾರ್ಕ್ಸ್‌ನ ಮೂಲ ಸಿದ್ಧಾಂತ

ಕಾರ್ಲ್‌ಮಾರ್ಕ್ಸ್ ಮೂಲತಃ ಪ್ರತಿಪಾದಿಸಿದ ಅವನ ಸಿದ್ಧಾಂತದ ಕಡೆಗೆ ಈಗ ನಮ್ಮ ಗಮನ ಹರಿಸೋಣ. ಕಾರ್ಲ್‌ಮಾರ್ಕ್ಸ್ ಆಧುನಿಕ ಸಮಾಜವಾದ ಅಥವಾ ಸಾಮ್ಯವಾದದ ಜನಕ ಎನ್ನುವುದು ನಿಸ್ಸಂದೇಹವಾದುದು. ಆದರೆ ಅವನು ಸಮಾಜವಾದವನ್ನು ಕೇವಲ ಪ್ರತಿಪಾದಿಸುವುದರಲ್ಲಿ ಆಸಕ್ತನಾಗಿರಲಿಲ್ಲ. ಅದನ್ನು ಅವನಿಗಿಂತ ಮೊದಲೇ ಇತರರು ಮಾಡಿದ್ದರು. ಸಮಾಜವಾದ ವೈಜ್ಞಾನಿಕವಾದುದು ಎಂದು ಸಾಧಿಸುವುದರಲ್ಲಿ ಮಾರ್ಕ್ಸ್ ಹೆಚ್ಚು ಆಸಕ್ತನಾಗಿದ್ದನು. ಅವನ ಧರ್ಮಯುದ್ಧ ಬಂಡವಾಳಶಾಹಿಗಳ ವಿರುದ್ಧ ಇದ್ದಷ್ಟೇ ಅವನು ಯಾರನ್ನು ಕಲ್ಪನಾ ಸಮಾಜವಾದಿಗಳೆಂದು ಕರೆದನೋ ಅವರ ವಿರುದ್ಧವೂ ಇತ್ತು. ಅವನು ಇಬ್ಬರನ್ನೂ ದ್ವೇಷಿಸಿದನು. ಈ ಅಂಶವನ್ನು ಗಮನಿಸುವುದು ಅಗತ್ಯವಾಗಿದೆ. ಏಕೆಂದರೆ ಸಮಾಜವಾದದ ವೈಜ್ಞಾನಿಕ ಸ್ವಭಾವಕ್ಕೆ ಅತ್ಯಂತ ಪ್ರಾಮುಖ್ಯತೆಯನ್ನು ಮಾರ್ಕ್ಸ್ ನೀಡಿದನು. ತನ್ನ ಸಮಾಜವಾದವು ವೈಜ್ಞಾನಿಕವಾದುದು, ಕಾಲ್ಪನಿಕವಾದುದಲ್ಲ ಎಂಬ ವಾದವನ್ನು ಸ್ಥಾಪಿಸುವುದನ್ನು ಬಿಟ್ಟರೆ ಅವನು ಪ್ರತಿಪಾದಿಸಿದ ಎಲ್ಲ ವಾದಗಳಿಗೂ ಬೇರೆ ಗುರಿ ಇರಲಿಲ್ಲ.

ತನ್ನ ಸಮಾಜವಾದವು ಅನಿವಾರ್ಯವೂ, ಅಪರಿಹಾರ್ಯವೂ ಆದುದು, ಸಮಾಜ ಅದರತ್ತ ಚಲಿಸುತ್ತಿದೆ, ಅದರ ಮುನ್ನಡೆಯನ್ನು ಯಾವುದೂ ತಡೆಗಟ್ಟಲಾರದು ಎಂದು ಕಾರ್ಲ್ಸ್‌ಮಾರ್ಕ್ಸ್ ವೈಜ್ಞಾನಿಕ ಸಮಾಜವಾದಕ್ಕೆ ಅರ್ಥ ಕೊಟ್ಟನು. ತನ್ನ ಈ ವಾದವನ್ನು ಸ್ಥಾಪಿಸಲು ಮಾರ್ಕ್ಸ್ ಪ್ರಧಾನವಾಗಿ ಶ್ರಮಿಸಿದನು.

ಮುಂದಿನ ವಾದಗಳ ಮೇಲೆ ಮಾರ್ಕ್ಸ್‌ನ ಸಿದ್ಧಾಂತ ನಿಂತಿದೆ. ಅವುಗಳೆಂದರೆ:

೧. ತತ್ವಜ್ಞಾನದ ಉದ್ದೇಶ ಪ್ರಪಂಚವನ್ನು ಪುನರ್ರಚಿಸುವುದು, ವಿಶ್ವದ ಮೂಲವನ್ನು ವಿವರಿಸುವುದಲ್ಲ.

೨. ಇತಿಹಾಸದ ಗತಿಯನ್ನು ನಿರ್ಧರಿಸುವ ಶಕ್ತಿಗಳು ಮುಖ್ಯವಾಗಿ ಆರ್ಥಿಕವಾಗಿವೆ.

೩. ಒಡೆಯರು ಮತ್ತು ದುಡಿಮೆಗಾರರು ಎಂದು ಎರಡು ವರ್ಗಗಳಾಗಿ ಸಮಾಜವು ಇಬ್ಭಾಗವಾಗಿದೆ.

೪. ಈ ಎರಡು ವರ್ಗಗಳ ನಡುವೆ ವರ್ಗ ಸಂಘರ್ಷ ಸದಾ ನಡೆಯುತ್ತಿದೆ.

೫. ದುಡಿಮೆಗಾರರ ಶ್ರಮದ ಫಲವಾಗಿ ಬಂದ ಹೆಚ್ಚಿಗೆ ಮೌಲ್ಯವನ್ನು ದುರುಪಯೋಗ ಮಾಡುವ ಮಾಲೀಕರು ಶ್ರಮಜೀವಿಗಳನ್ನು ಶೋಷಣೆ ಮಾಡುತ್ತಾರೆ.

೬. ಉತ್ಪಾದನಾ ಸಾಧನಗಳನ್ನು ರಾಷ್ಟ್ರೀಕರಣಗೊಳಿಸುವುದರಿಂದ ಅಂದರೆ ಖಾಸಗಿ ಆಸ್ತಿಯನ್ನು ತೊಡೆದುಹಾಕುವುದರಿಂದ ಈ ಶೋಷಣೆಯನ್ನು ನಿಲ್ಲಿಸಬಹುದು.

೭. ಈ ಶೋಷಣೆಯ ದುಡಿಮೆಗಾರರ ಹೆಚ್ಚು ಹೆಚ್ಚು ದಾರಿದ್ರ್ಯಕ್ಕೆ ದಾರಿ ಮಾಡುತ್ತದೆ.

೮. ದುಡಿಮೆಗಾರರ ಹೆಚ್ಚುತ್ತಿರುವ ದಾರಿದ್ರ್ಯದಿಂದ ಅವರಲ್ಲಿ ಕ್ರಾಂತಿಕಾರಿ ಮನೋಭಾವ ಮೂಡುತ್ತದೆ. ವರ್ಗ ಸಂಘರ್ಷವು ವರ್ಗ ಹೋರಾಟವಾಗಿ ಮಾರ್ಪಡುತ್ತದೆ.

೯. ಕೂಲಿಗಾರರ ಸಂಖ್ಯೆ ಮಾಲೀಕರ ಸಂಖ್ಯೆಗಿಂತ ಹೆಚ್ಚಾಗಿರುವುದರಿಂದ ಕೂಲಿಕಾರರು ರಾಜ್ಯಶಕ್ತಿಯನ್ನು ವಶಪಡಿಸಿಕೊಂಡು ತಮ್ಮದೇ ಆಡಳಿತವನ್ನು ಸ್ಥಾಪಿಸುತ್ತಾರೆ. ಇದನ್ನು ಶ್ರಮ ಜೀವಿಗಳ ಪ್ರಭುತ್ವ ಎಂದು ಅವನು ಕರೆಯುತ್ತಾನೆ.

೧೦. ಈ ಅಂಶಗಳು ವಿರೋಧಿಸಲಾಗದವು. ಆದ್ದರಿಂದ ಸಮಾಜವಾದ ಅನಿವಾರ್ಯವಾಗುತ್ತದೆ. ಮಾರ್ಕ್ಸ್‌ನ ಸಮಾಜವಾದದ ಮೂಲ ಆಧಾರವನ್ನು ರೂಪಿಸಿದ ಈ ವಾದಗಳನ್ನು ನಾನು ಸರಿಯಾಗಿ ವರದಿ ಮಾಡಿದ್ದೇನೆಂದು ನಂಬುತ್ತೇನೆ.

## ೩. ಮಾರ್ಕ್ಸ್‌ನ ಸಿದ್ಧಾಂತದಲ್ಲಿ ಜೀವಂತವಾಗಿರುವುದೇನು?

ಬುದ್ಧ ಮತ್ತು ಕಾರ್ಲ್‌ಮಾರ್ಕ್ಸ್‌ರ ವಿಚಾರಧಾರೆಗಳನ್ನು ಹೋಲಿಸುವ ಮುನ್ನ ಮಾರ್ಕ್ಸ್‌ನ ಸಿದ್ಧಾಂತದ ಮೂಲ ಶರೀರ ಎಷ್ಟು ಉಳಿದಿದೆ, ಇತಿಹಾಸ ಎಷ್ಟನ್ನು ಸುಳ್ಳೆಂದು ತೋರಿಸಿದೆ, ಅವನ ವಿರೋಧಿಗಳು ಎಷ್ಟನ್ನು ನೆಲಸಮ ಮಾಡಿದ್ದಾರೆ ಎಂದು ತಿಳಿಯುವುದು ಅಗತ್ಯವಾಗಿದೆ.

ಮಾರ್ಕ್ಸ್‌ನ ಸಿದ್ಧಾಂತ ಹತ್ತೊಂಬತ್ತನೇ ಶತಮಾನದ ಮಧ್ಯಭಾಗದಲ್ಲಿ ಪ್ರತಿಪಾದಿತವಾಯಿತು. ಅಂದಿನಿಂದಲೂ ಅದು ತುಂಬ ಟೀಕೆಗೆ ಒಳಗಾಗಿದೆ. ಈ ಟೀಕೆಯ ಫಲವಾಗಿ ಕಾರ್ಲ್‌ಮಾರ್ಕ್ಸ್ ಕಟ್ಟಿದ ವಿಚಾರಧಾರೆಯ ಸೌಧ ಬಹುಪಾಲು ಛಿದ್ರವಾಗಿದೆ. ನನ್ನ ಸಮಾಜವಾದ ಅನಿವಾರ್ಯ ಎಂದು ಹೇಳಿದ ಮಾರ್ಕ್ಸ್‌ನ ಮಾತು ಸಂಪೂರ್ಣವಾಗಿ ಸುಳ್ಳಾಗಿದೆ ಎಂಬುದರಲ್ಲಿ ಯಾವ ಅನುಮಾನವೂ ಇಲ್ಲ. ಸಮಾಜವಾದದ ವೇದ ವಾಕ್ಯವಾದ ಅವನ 'ದಾಸ್ ಕ್ಯಾಪಿಟಲ್'ನ ಪ್ರಕಟಣೆಯಾದ ಸುಮಾರು ೭೦ ವರ್ಷಗಳ ಅವಧಿಯ ನಂತರ ೧೯೧೭ರಲ್ಲಿ ಒಂದೇ ಒಂದು ದೇಶದಲ್ಲಿ ಮೊಟ್ಟ ಮೊದಲಿಗೆ ಶ್ರಮಜೀವಿಗಳ ಪ್ರಭುತ್ವ ಸ್ಥಾಪನೆಯಾಯಿತು. ಶ್ರಮಜೀವಿಗಳ ಪ್ರಭುತ್ವಕ್ಕೆ ಇನ್ನೊಂದು ಹೆಸರಾದ ಸಾಮ್ಯವಾದ ರಷ್ಯಕ್ಕೆ ಬಂದಾಗಲೂ ಕೂಡ ಅದು ಏನೋ ಅನಿವಾರ್ಯವೆಂಬಂತೆ ಯಾವುದೇ ರೀತಿಯ ಮಾನವ ಪ್ರಯತ್ನವಿಲ್ಲದೆ ಬರಲಿಲ್ಲ. ವಿಪರೀತ ಹಿಂಸಾಚಾರ ಮತ್ತು ರಕ್ತಪಾತವನ್ನೊಳಗೊಂಡ ತುಂಬಾ ಉದ್ದೇಶಪೂರ್ವಕವಾದ ಯೋಜನೆಯಿಂದ ಮಹಾಕ್ರಾಂತಿಯಾಗಿ ಸಾಮ್ಯವಾದವು ರಷ್ಯದ ಒಳಗೆ ಕಾಲಿಟ್ಟಿತು. ಶ್ರಮಜೀವಿ ವರ್ಗದ ಸರ್ವಾಧಿಕಾರಕ್ಕಾಗಿ ಪ್ರಪಂಚದ ಉಳಿದ ದೇಶಗಳು ಇನ್ನೂ ಕಾಯುತ್ತಿವೆ. ಸಮಾಜವಾದ ಅನಿವಾರ್ಯ ಎಂಬ ಮಾರ್ಕ್ಸ್‌ವಾದ ಸಾಮಾನ್ಯವಾಗಿ ಸುಳ್ಳಾಗಿರುವುದು ಒತ್ತಟ್ಟಿಗಿರಲಿ, ಮೇಲಿನ ಪಟ್ಟಿಯಲ್ಲಿ ಹೇಳಿದ ಇತರ ಅನೇಕ ವಾದಗಳು ತರ್ಕ ಮತ್ತು ಅನುಭವಗಳೆರಡರಿಂದಲೂ ಕೂಡ ಧ್ವಂಸವಾಗಿವೆ. ಇತಿಹಾಸದ ಆರ್ಥಿಕ ವ್ಯಾಖ್ಯಾನವನ್ನು ಇತಿಹಾಸದ ಏಕೈಕ ವಿವರಣೆಯೆಂದು ಈಗ ಯಾರೂ ಒಪ್ಪುವುದಿಲ್ಲ. ಶ್ರಮಿಕ ವರ್ಗ ಒಂದೇ ಸಮನೆ ಉದ್ದಕ್ಕೂ ದಿವಾಳಿಯಾಗಿದೆ ಎಂಬುದನ್ನು ಯಾರೂ ಒಪ್ಪುವುದಿಲ್ಲ. ಅವನ ಉಳಿದ ವಾದಗಳ ಬಗ್ಗೆಯೂ ಇದೇ ಮಾತು ಸತ್ಯ.

ಕಾರ್ಲ್‌ಮಾರ್ಕ್ಸ್‌ನಲ್ಲಿ ಈಗ ಜೀವಂತ ಉಳಿದಿರುವುದೇನೆಂದರೆ ಒಂದು ಬೆಂಕಿ ಕೆಂಡ. ಅದು ಸಣ್ಣದಾದರೂ ತುಂಬಾ ಮಹತ್ವದ್ದಾಗಿದೆ. ನನ್ನ ಪ್ರಕಾರ ಆ ಶೇಷ ಭಾಗದಲ್ಲಿ ನಾಲ್ಕು ಅಂಶಗಳಿವೆ:

(i) ತತ್ವಜ್ಞಾನದ ಕೆಲಸ ಪ್ರಪಂಚವನ್ನು ಪುನರ್‌ರಚಿಸುವುದು. ಪ್ರಪಂಚದ ಮೂಲವನ್ನು ಕುರಿತು ವಿವರಿಸುವುದರಲ್ಲಿ ಕಾಲಹರಣ ಮಾಡುವುದಲ್ಲ.

(ii) ವರ್ಗ–ವರ್ಗದ ನಡುವೆ ಹಿತಾಸಕ್ತಿಗಳ ಸಂಘರ್ಷವಿದೆ.

(iii) ಆಸ್ತಿಯ ಖಾಸಗಿ ಒಡೆತನ ಒಂದು ವರ್ಗಕ್ಕೆ ಅಧಿಕಾರವನ್ನೂ ಇನ್ನೊಂದು ವರ್ಗಕ್ಕೆ ದುಃಖವನ್ನೂ ಶೋಷಣೆಯ ಮೂಲಕ ತರುತ್ತದೆ.

(iv) ಸಮಾಜದ ಒಳಿತಿಗಾಗಿ ದುಃಖವನ್ನು ನಿರ್ಮೂಲ ಮಾಡಲು ಖಾಸಗಿ ಆಸ್ತಿಯನ್ನು ತೊಡೆದುಹಾಕಬೇಕು.

## ೪. ಬುದ್ಧ ಮತ್ತು ಕಾರ್ಲ್‌ಮಾರ್ಕ್ಸ್‌ರ ಹೋಲಿಕೆ

ಮಾರ್ಕ್ಸ್‌ನ ಸಿದ್ಧಾಂತದಲ್ಲಿ ಜೀವಂತವಾಗಿ ಉಳಿದಿರುವ ಈ ಅಂಶಗಳನ್ನು ತೆಗೆದುಕೊಂಡು ಈಗ ಬುದ್ಧ ಮತ್ತು ಕಾರ್ಲ್‌ಮಾರ್ಕ್ಸ್‌ರ ತುಲನೆಯನ್ನು ಮಾಡಬಹುದು.

ಮೊದಲನೆಯ ಅಂಶವನ್ನು ಕುರಿತು ಬುದ್ಧ ಮತ್ತು ಕಾರ್ಲ್‌ಮಾರ್ಕ್ಸ್‌ರಲ್ಲಿ ಸಂಪೂರ್ಣ ಸಮ್ಮತಿಯಿದೆ. ಆ ಸಮ್ಮತಿ ಎಷ್ಟು ನಿಕಟವಾಗಿದೆ ಎಂಬುದನ್ನು ತೋರಿಸಲು ಬುದ್ಧ ಮತುತ ಬ್ರಾಹ್ಮಣನಾದ ಪೊಟ್ಟಪಾದನಿಗೆ ನಡೆದ ಸಂಭಾಷಣೆಯ ಒಂದು ಭಾಗವನ್ನು ಮುಂದೆ ಉದ್ಧರಿಸುತ್ತೇನೆ.

ಆಗ. ಇದೇ ಮಾತುಗಳಲ್ಲಿ ಮುಂದಿನ ಪ್ರಶ್ನೆಗಳ ಬಗ್ಗೆ ಪೊಟ್ಟಪಾದನು ಬುದ್ಧನನ್ನು ಕೇಳುತ್ತಾನೆ:

೧. ಈ ಪ್ರಪಂಚ ಶಾಶ್ವತವಲ್ಲವೆ?

೨. ಈ ಪ್ರಪಂಚ ಮಿತಿಯುಳ್ಳದ್ದೆ?

೩. ಈ ಪ್ರಪಂಚ ಅನಂತವಾದುದೆ?

೪. ಆತ್ಮವು ದೇಹದ ಹಾಗೆಯೇ ಇದೆಯೇ?

೫. ಆತ್ಮವೇ ಬೇರೆ, ದೇಹವೇ ಬೇರೆಯೇ?

೬. ಸತ್ಯ ಸಾಕ್ಷಾತ್ಕಾರ ಮಾಡಿಕೊಂಡ ವ್ಯಕ್ತಿ ಸಾವಿನ ನಂತರ ಬದುಕುತ್ತಾನೆಯೇ?

೭ ಸಾವಿನ ನಂತರ ಅವನು ಬದುಕುತ್ತಾನೆಯೇ ಅಥವಾ ಬದುಕುವುದಿಲ್ಲವೇ?

ಈ ಪ್ರತಿಯೊಂದು ಪ್ರಶ್ನೆಗೂ ಬುದ್ಧ ಒಂದೇ ಉತ್ತರವನ್ನು ನೀಡಿದನು. ಅದು ಈ ರೀತಿ ಇತ್ತು: "ಪೊಟ್ಟಪಾದನೆ, ಆ ಬಗ್ಗೆಯೂ ನಾನು ಯಾವ ಅಭಿಪ್ರಾಯವನ್ನೂ ಕೊಟ್ಟಿಲ್ಲ."

೨೮. "ಹಾಗಾದರೆ ಬುದ್ಧ ಆ ಬಗ್ಗೆ ಏಕೆ ಉತ್ತರ ನೀಡಿಲ್ಲ?"

(ಏಕೆಂದರೆ) "ಈ ಪ್ರಶ್ನೆ ಪ್ರಯೋಜನಕಾರಿಯೆಂದು ನಾನು ಪರಿಗಣಿಸಿಲ್ಲ. ಅದು ಧರ್ಮಕ್ಕೆ ಸಂಬಂಧಿಸಿಲ್ಲ. ಉತ್ತಮ ನಡತೆಯ ಅಂಶಗಳಿಗಾಗಲೀ ಅಥವಾ ಅನಾಸಕ್ತಿಗಾಗಲೀ ಅಥವಾ ಕಾಮಭಾವನೆಯ ಶುದ್ಧಿಗಾಗಲೀ ಅಥವಾ ಹೃದಯ ತುಷ್ಟಿಗಾಗಲೀ ಅಥವಾ ನಿಜವಾದ ಜ್ಞಾನಕ್ಕಾಗಲೀ ಅಥವಾ (ಸತ್ಪಥದ ಉನ್ನತಸ್ಥಿತಿಗಳ) ಒಳನೋಟಕ್ಕಾಗಲೀ ಅಥವಾ ನಿರ್ವಾಣಕ್ಕಾಗಲೀ ಅದು ನೆರವಾಗುವುದಿಲ್ಲ. ಆದ್ದರಿಂದ ಆ ಬಗ್ಗೆ ನಾನು ಅಭಿಪ್ರಾಯ ವ್ಯಕ್ತಪಡಿಸಿಲ್ಲ."

ಎರಡನೆಯ ಪ್ರಶ್ನೆಗೆ ಸಂಬಂಧಿಸಿದಂತೆ ಬುದ್ಧನಿಗೂ ಕೋಸಲದ ಪಸನದಿ ಮಹಾರಾಜನಿಗೂ ನಡೆದ ಸಂಭಾಷಣೆಯಿಂದ ಒಂದು ಉದ್ಧರಣೆಯನ್ನು ಮುಂದೆ ಕೊಡುತ್ತೇನೆ:

"ಮಿಗಿಲಾಗಿ, ರಾಜರಾಜರ ನಡುವೆ, ಶ್ರೀಮಂತ ಶ್ರೀಮಂತರ ನಡುವೆ, ಬ್ರಾಹ್ಮಣ ಬ್ರಾಹ್ಮಣರ ನಡುವೆ, ಗೃಹಸ್ಥ ಗೃಹಸ್ಥರ ನಡುವೆ, ತಾಯಿ ಮಗನ ನಡುವೆ, ತಂದೆ ಮಗನ ನಡುವೆ, ಸೋದರ ಸೋದರಿಯರ ನಡುವೆ, ಸೋದರಿ ಸೋದರರ ನಡುವೆ, ಒಡನಾಡಿ ಒಡನಾಡಿಗಳ ನಡುವೆ ಸದಾ ಘರ್ಷಣೆಯಿದೆ....."

ಇವು ಪಸನದಿಯ ಮಾತುಗಳಾದರೂ, ಸಮಾಜದ ಒಂದು ನೈಜ ಚಿತ್ರವನ್ನು ಕೊಡುವ ಅವುಗಳನ್ನು ಬುದ್ಧ ನಿರಾಕರಿಸಲಿಲ್ಲ.

ವರ್ಗ ಸಂಘರ್ಷದ ಬಗ್ಗೆ ಬುದ್ಧನ ವೈಯಕ್ತಿಕ ಧೋರಣೆ ಏನೆಂದರೆ ಅವನ ಅಷ್ಟಾಂಗ ಮಾರ್ಗ ತತ್ವವು ವರ್ಗ ಸಂಘರ್ಷ ಇದೆ ಎಂದೂ ಹಾಗೂ ಆ ವರ್ಗ ಸಂಘರ್ಷವೇ ದುಃಖದ ಮೂಲ ಎಂದೂ ಗುರುತಿಸುತ್ತದೆ.

ಮೂರನೆಯ ಪ್ರಶ್ನೆಯ ಬಗ್ಗೆ ಪೊಟ್ಟಪಾದನ ಜೊತೆ ನಡೆದ ಬುದ್ಧನ ಅದೇ ಸಂವಾದದಿಂದ ಉದ್ಧರಿಸುತ್ತೇನೆ:

"ಹಾಗಾದರೆ ಬುದ್ಧ ಏನನ್ನು ನಿರ್ಧರಿಸಿದ್ದಾರೆ?"

"ಪೊಟ್ಟಪಾದನೆ, ದುಃಖ ದುಮ್ಮಾನಗಳಿವೆಯೆಂದು ನಾನು ಪ್ರತಿಪಾದಿಸಿದ್ದೇನೆ."

"ದುಃಖದ ಮೂಲವೇನೆಂದು ನಾನು ವಿವರಿಸಿದ್ದೇನೆ. ದುಃಖದ ನಿರ್ಮೂಲನ ಹೇಗೆಂದು ನಾನು ವಿವರಿಸಿದ್ದೇನೆ. ದುಃಖವನ್ನು ನಿರ್ಮೂಲನ ಮಾಡುವ ವಿಧಾನ ಏನೆಂದು ನಾನು ವಿವರಿಸಿದ್ದೇನೆ."

೩೦. "ಹಾಗಾದರೆ ತಥಾಗತ ಆ ಬಗ್ಗೆ ಏಕೆ ವಿವರಣೆ ನೀಡಿದ್ದಾರೆ?"

"ಏಕೆಂದರೆ, ಈ ಪ್ರಶ್ನೆ ಪ್ರಯೋಜನಕಾರಿಯೆಂದು ನಾನು ಪರಿಗಣಿಸಿಲ್ಲ. ಅದು ಧರ್ಮಕ್ಕೆ ಸಂಬಂಧಿಸಿಲ್ಲ. ಉತ್ತಮ ನಡತೆಯ ಅಂಶಗಳಾಗಲೀ ಅಥವಾ ಅನಾಸಕ್ತಿಗಾಗಲೀ ಅಥವಾ ಕಾಮಭಾವನೆಯ ಶುದ್ಧಿಗಾಗಲೀ ಅಥವಾ ಹೃದಯ ತುಷ್ಟಿಗಾಗಲೀ ಅಥವಾ ನಿಜವಾದ ಜ್ಞಾನಕ್ಕಾಗಲೀ ಅಥವಾ ಸತ್ಪಥದ ಉನ್ನತ ಸ್ಥಿತಿಗಳ ಒಳನೋಟಕ್ಕಾಗಲೀ ಅಥವಾ ನಿರ್ವಾಣಕ್ಕಾಗಲೀ ಅದು ನೆರವಾಗುವುದಿಲ್ಲ. ಆದ್ದರಿಂದ, ಪೊಟ್ಟಪಾದನೆ, ನಾನು ಆ ಬಗ್ಗೆ ವಿವರಣೆಯನ್ನು ನೀಡಿದ್ದೇನೆ."

ಇಲ್ಲಿ ಭಾಷೆ ಭಿನ್ನವಾಗಿದೆ. ಆದರೆ ಅರ್ಥವೊಂದೇ. ದುಃಖವನ್ನು ಶೋಷಣೆಯೆಂದು ಓದಿಕೊಂಡರೆ ಮಾರ್ಕ್ಸ್‌ನಿಂದ ಬುದ್ಧ ದೂರ ಇಲ್ಲ.

ಖಾಸಗಿ ಆಸ್ತಿಗೆ ಸಂಬಂಧಿಸಿದ ಪ್ರಶ್ನೆಯ ಬಗ್ಗೆ ಬುದ್ಧ ಮತ್ತು ಆನಂದರ ನಡುವೆ ನಡೆದ ಸಂವಾದದ ಮುಂದಿನ ಉದ್ಧರಣೆ ತುಂಬ ಜ್ಞಾನದಾಯಕವಾಗಿದೆ. ಆನಂದನ ಪ್ರಶ್ನೆಗೆ ಬುದ್ಧನ ಉತ್ತರ ಈ ರೀತಿ ಇದೆ:

೩೧. "ಸಂಗ್ರಹಣೆಯೇ ಆಸ್ತಿಯ ಮೂಲ ಎಂದು ಹೇಳಿದ್ದೇನೆ. ಆನಂದ, ಈಗ ಅದು ಯಾವ ರೀತಿ ಉಂಟಾಗುತ್ತದೆಂದು ನಾವು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಯಾವುದರ ಬಗ್ಗೆಯಾಗಲೀ, ಯಾರಿಂದಲೂ ಯಾವುದೇ ರೀತಿಯ ಅಥವಾ ಯಾವುದೇ ವಿಧವಾದ ಆಸ್ತಿ ಇಲ್ಲದಿದ್ದರೆ, ಆಗ ಆಸ್ತಿಯ ನಿರ್ಮೂಲನೆಯಿಂದಾಗಿ, ಸಂಗ್ರಹಣೆಯು ಯಾವ ರೂಪದಲ್ಲಿ ತಾನೆ ಇದ್ದೀತು?"

"ಇರಲಾರದು. ತಂದೆ."

"ಆದ್ದರಿಂದ, ಆನಂದ, ಆಸ್ತಿಯೇ ಸಂಗ್ರಹಣೆಯ ಮೂಲ, ಮೂಲಕಾರಣ, ಮೂಲಾಧಾರ, ಮೂಲೋತ್ಪತ್ತಿಯಾಗಿದೆ."

ನಾಲ್ಕನೆಯ ಪ್ರಶ್ನೆಯ ಬಗ್ಗೆ ಯಾವುದೇ ಪುರಾವೆ ಅನಗತ್ಯ. ಆ ವಿಷಯಕ್ಕೆ ಸಂಬಂಧಿಸಿದಂತೆ ಭಿಕ್ಷು ಸಂಘದ ನಿಯಮಗಳು ಅತ್ಯುತ್ತಮ ಪ್ರಮಾಣವಾಗಿವೆ.

೧., ೨., ೩. } ನಿತ್ಯ ಬಳಕೆಗೆ ಮೂರು ಬಟ್ಟೆಗಳು

೪. ಸೊಂಟಕ್ಕೆ ಉಡಿದಾರ

೫. ಭಿಕ್ಷಾ ಪಾತ್ರೆ

೬. ಕತ್ರಿ

೭. ಸೂಜಿ

೮. ನೀರು ಸೋಸುವ ಬಟ್ಟಲು

ಇಷ್ಟೇ ಅಲ್ಲದೆ ಬೆಳ್ಳಿ ಅಥವಾ ಚಿನ್ನವನ್ನು ಅವನು ಸ್ವೀಕರಿಸಿದರೆ, ಅವನು ಇಟ್ಟುಕೊಳ್ಳಲು ಅನುಮತಿ ಕೊಟ್ಟಿರುವ ಈ ಎಂಟು ವಸ್ತುಗಳ ಜೊತೆಗೆ ಬೇರೆ ಏನನ್ನಾದರು ಕೊಂಡುಕೊಳ್ಳುತ್ತಾನೆಂಬ ಭಯದಿಂದ ಭಿಕ್ಷುವು ಚಿನ್ನ ಅಥವಾ ಬೆಳ್ಳಿಯನ್ನು ಸ್ವೀಕರಿಸಬಾರದೆಂದು ಸಂಪೂರ್ಣವಾಗಿ ನಿಷೇಧಿಸಲಾಗಿತ್ತು.

ಈ ನಿಯಮಗಳು ರಷ್ಯಾದ ಕಮ್ಯುನಿಸಂನಲ್ಲಿರುವ ನಿಯಮಗಳಿಗಿಂತಲೂ ಹೆಚ್ಚು ಕಠಿಣವಾಗಿವೆ.

## ೫. ಸಾಧನಗಳು

ಈಗ ಸಾಧನಗಳಿಗೆ ಬರೋಣ. ಸಾಮ್ಯವಾದವನ್ನು ತರಲು ಬುದ್ಧ ಪ್ರತಿಪಾದಿಸಿದ ಸಾಧನಗಳು ಸಂಪೂರ್ಣ ಭಿನ್ನವಾಗಿದ್ದವು. ಆ ಸಾಧನಗಳನ್ನು ಮೂರು ಭಾಗಗಳಾಗಿ ವಿಂಗಡಿಸಬಹುದು.

ಭಾಗ ೧: ಪಂಚಶೀಲಗಳ ಆಚರಣೆಗೆ ಸಂಬಂಧಿಸಿತ್ತು.

ಜ್ಞಾನೋದಯವು ಹೊಸ ಉಪದೇಶಕ್ಕೆ ಜನ್ಮ ಕೊಟ್ಟಿತು, ಅದು ಬುದ್ಧನನ್ನು ಕಾಡುತ್ತಿದ್ದ ಸಮಸ್ಯೆಗೆ ಪರಿಹಾರವನ್ನು ಒಳಗೊಂಡಿದ್ದ ಕೀಲಿಕೈ ಕೊಟ್ಟಿತು.

ಪ್ರಪಂಚದಲ್ಲಿ ದುಃಖ, ಅಶಾಂತಿ ತುಂಬಿವೆ ಎಂಬ ವಸ್ತುಸ್ಥಿತಿಯೇ ಹೊಸ ಉಪದೇಶಕ್ಕೆ ಅಸ್ತಿಭಾರವಾಗಿದೆ. ಇದು ಮೋಕ್ಷದ ಯಾವುದೇ ಬಗೆಯ ಯೋಜನೆಯಲ್ಲಿ ಅತ್ಯಂತ ಪ್ರಮುಖವಾದದ್ದೆಂದು ತಿಳಿಯುವುದೇ ಅಲ್ಲದೆ ಪರಿಗಣಿಸುವುದೂ ಆಗಿತ್ತು. ಈ ವಸ್ತುಸ್ಥಿತಿಯ ಅರಿವನ್ನೇ ಬುದ್ಧ ತನ್ನ ಉಪದೇಶದ ಆರಂಭ ಬಿಂದುವನ್ನಾಗಿ ಮಾಡಿದನು.

ಉದ್ದೇಶಿತ ಗುರಿಯನ್ನು ಸಾಧಿಸಲು ಈ ದುಃಖ ಮತ್ತು ಅಶಾಂತಿಯನ್ನು ನಿರ್ಮೂಲನೆ ಮಾಡಬೇಕು ಎನ್ನುವುದೇ ಅವನ ಉಪದೇಶದ ಏಕಮೇವ ಗುರಿಯಾಗಿತ್ತು.

ಈ ದುಃಖಕ್ಕೆ ಕಾರಣಗಳೇನಿರಬಹುದೆಂದು ಪ್ರಶ್ನಿಸಿ ಬುದ್ಧನು ಕೇವಲ ಎರಡು ಕಾರಣಗಳನ್ನು ಕಂಡುಕೊಂಡನು.

ಮನುಷ್ಯನ ದುರ್ನಡತೆಯೇ ಅವನ ದುಃಖ ಮತ್ತು ಅಶಾಂತಿಗಳಿಗೆ ಭಾಗಶಃ ಕಾರಣವಾಗಿವೆ. ದುಃಖದ ಮೂಲ ಕಾರಣವನ್ನು ನಿರ್ಮೂಲನೆ ಮಾಡಲು ಅವನು ಪಂಚಶೀಲದ ಅನುಷ್ಠಾನವನ್ನು ಬೋಧಿಸಿದನು.

ಪಂಚಶೀಲದಲ್ಲಿ ಮುಂದಿನ ಆಚರಣೆಗಳಿವೆ:

(೧) ಯಾವುದೇ ಜೀವಿಯನ್ನು ಕೊಲ್ಲುವುದು ಅಥವಾ ಕೊಲ್ಲಲು ಸಹಕರಿಸುವುದನ್ನು ಮಾಡಬಾರದು, (೨) ಇತರರ ಆಸ್ತಿಯನ್ನು ಕದಿಯುವುದು ಅಂದರೆ ವಶಪಡಿಸಿಕೊಳ್ಳುವುದು ಅಥವಾ ಮೋಸದಿಂದ ಅಥವಾ ಹಿಂಸೆಯಿಂದ ಸ್ವಾಧೀನಪಡಿಸಿಕೊಳ್ಳುವುದನ್ನು ಮಾಡಬಾರದು, (೩) ಸುಳ್ಳನ್ನು ಹೇಳಬಾರದು, (೪) ಕಾಮತೃಷೆಗೆ ಒಳಗಾಗಬಾರದು, (೫) ಮದ್ಯಪಾನ ಮಾಡಬಾರದು.

ಬುದ್ಧನ ಪ್ರಕಾರ ಪ್ರಪಂಚದ ದುಃಖ ಮತ್ತು ಅಶಾಂತಿಗಳಿಗೆ ಮನುಷ್ಯ ಮನುಷ್ಯನಿಗೆ ಮಾಡುವ ಅನ್ಯಾಯವೇ ಭಾಗಶಃ ಕಾರಣವಾಗಿದೆ. ಈ ಅನ್ಯಾಯವನ್ನು ಹೇಗೆ ಹೋಗಲಾಡಿಸುವುದು? ಮನುಷ್ಯ ಮನುಷ್ಯನಿಗೆ ಮಾಡುವ ಅನ್ಯಾಯವನ್ನು ಹೋಗಲಾಡಿಸಲು ಬುದ್ಧ ಆರ್ಯ ಅಷ್ಟಾಂಗ ಮಾರ್ಗವನ್ನು ವಿಧಿಸಿದನು. ಆರ್ಯ ಅಷ್ಟಾಂಗ ಮಾರ್ಗಗಳು ಯಾವುವೆಂದರೆ:

(೧) ಸಮ್ಯಕ್ ದೃಷ್ಟಿ, ಅಂದರೆ ಮೂಢನಂಬಿಕೆಗಳಿಂದ ವಿಮೋಚನೆ, (೨) ಸಮ್ಯಕ್ ಗುರಿ, ಧೀಮಂತರಿಗೂ ಶ್ರದ್ಧಾವಂತರಿಗೂ ಯೋಗ್ಯವಾದದ್ದು, (೩) ಸಮ್ಯಕ್ ವಚನ, ಅಂದರೆ ದಯಾವಂತ, ಸತ್ಯಪರವಾದ ಬಿಚ್ಚು ಮಾತು, (೪) ಸಮ್ಯಕ್ ನಡೆ, ಅಂದರೆ ಶಾಂತಿಯುತವಾದುದು, ಪ್ರಾಮಾಣಿಕವಾದುದು, ಪರಿಶುದ್ಧವಾದುದು, (೫) ಸಮ್ಯಕ್ ಜೀವನ, ಅಂದರೆ ಯಾವ ಜೀವಿಗೂ ನೋವುಂಟು ಮಾಡದಿರುವುದು, (೬) ಸಮ್ಯಕ್ ಸಾಧನೆ, ಈ ಎಲ್ಲ ಏಳು ವಿಷಯಗಳಲ್ಲಿ ಸಾಧನೆ, (೭) ಸಮ್ಯಕ್ ಮನಸ್ಸು, ಅಂದರೆ ಜಾಗೃತ ಮತ್ತು ಕ್ರಿಯಾಶೀಲ ಮನಸ್ಸು, (೮) ಸಮ್ಯಕ್ ಧ್ಯಾನ, ಅಂದರೆ ಜೀವನದ ಗಂಭೀರ ರಹಸ್ಯಗಳನ್ನು ಕುರಿತ ಗಾಢ ಚಿಂತನೆ.

ಭೂಮಿಯ ಮೇಲೆ ಧರ್ಮರಾಜ್ಯವನ್ನು ಸ್ಥಾಪಿಸುವುದೇ ಆರ್ಯ ಅಷ್ಟಾಂಗ ಮಾರ್ಗದ ಉದ್ದೇಶವಾಗಿದೆ. ತನ್ಮೂಲಕ ಪ್ರಪಂಚದಿಂದ ದುಃಖ ಮತ್ತು ಅಶಾಂತಿಗಳನ್ನು ತೊಲಗಿಸುವುದಾಗಿದೆ.

ಈ ಉಪದೇಶದ ಮೂರನೆಯ ಭಾಗವೇ ನಿರ್ವಾಣ ತತ್ವ. ಈ ನಿರ್ವಾಣ ತತ್ವವು ಆರ್ಯ ಅಷ್ಟಾಂಗ ಮಾರ್ಗ ತತ್ವದ ಅವಿಭಾಜ್ಯ ಅಂಗವಾಗಿದೆ. ನಿರ್ವಾಣವಿಲ್ಲದೆ ಅಷ್ಟಾಂಗ ಮಾರ್ಗದ ಸಾಕ್ಷಾತ್ಕಾರ ಸಾಧಿತವಾಗುವುದಿಲ್ಲ.

ಅಷ್ಟಾಂಗ ಮಾರ್ಗದ ಸಾಕ್ಷಾತ್ಕಾರದ ಹಾದಿಯಲ್ಲಿ ಏನೇನು ಕಷ್ಟಗಳಿವೆ ಎಂಬುದನ್ನು ನಿರ್ವಾಣ ತತ್ವ ಹೇಳುತ್ತದೆ.

ಈ ಕಷ್ಟಗಳು ಪ್ರಧಾನವಾಗಿ ಸಂಖ್ಯೆಯಲ್ಲಿ ಹತ್ತು. ಬುದ್ಧ ಅವುಗಳನ್ನು ಹತ್ತು ಆಸವಗಳು (ಅಡ್ಡಿ ಅಥವಾ ಬಂಧನಗಳು) ಎಂದು ಕರೆಯುತ್ತಾನೆ.

ಮೊದಲ ಬಂಧನವೇ ಸ್ವಭ್ರಾಂತಿ. ಎಲ್ಲಿಯವರೆಗೆ ಮನುಷ್ಯ ಸಂಪೂರ್ಣವಾಗಿ ಸ್ವಕೇಂದ್ರಿತನಾಗಿ ಪ್ರತಿಯೊಂದು ಥಳುಕಿನ ವಸ್ತುವೂ ತನ್ನ ಹೃದಯದ ಆಸೆಗಳನ್ನೆಲ್ಲಾ ಈಡೇರಿಸುತ್ತದೆಂದು ವ್ಯರ್ಥವಾಗಿ ಅದರ ಬೆನ್ನಟ್ಟುತ್ತಾನೆಯೋ ಅಲ್ಲಿಯವರೆಗೆ ಅವನಿಗೆ ಸತ್ಪಥವಿಲ್ಲ. ಈ ಅನಂತ ವಿಶ್ವದಲ್ಲಿ ತಾನು ಕೇವಲ ಒಂದು ಸಣ್ಣ ತುಣುಕು ಎಂಬ ವಸ್ತು ಸ್ಥಿತಿಗೆ ಆತನು ಕಣ್ಣು ತೆರೆದಾಗ, ತನ್ನದು ಎಷ್ಟು ನಶ್ವರವಾದ ವ್ಯಕ್ತಿತ್ವ ಎಂದು ಅರಿಯಲು ಪ್ರಾರಂಭಿಸಿದಾಗ ಮಾತ್ರ ಅವನು ಈ ಇಕ್ಕಟ್ಟಾದ ಪಥವನ್ನು ಪ್ರವೇಶಿಸಬಲ್ಲವನಾಗುತ್ತಾನೆ.

ಎರಡನೆಯದು, ಅನುಮಾನ ಮತ್ತು ಅಸ್ಥಿರತೆ. ಜೀವನದ ಮಹಾ ರಹಸ್ಯದ ಬಗ್ಗೆ, ಜೀವರಾಶಿಯ ಅಸ್ಥಿರತೆಯ ಬಗ್ಗೆ ಮನುಷ್ಯ ಕಣ್ಣು ತೆರೆದಾಗ ಅವನು ಏನು ಮಾಡಬೇಕೆಂದು ತೋಚದೆ ಅನುಮಾನ ಮತ್ತು ಅನಿರ್ಧಾರಗಳಿಂದ ಪೀಡಿತನಾಗುವ ಸಂಭವವುಂಟು. ಏನು ಮಾಡಲಿ, ಏನು ಬಿಡಲಿ, ಎಷ್ಟಾದರೂ ನಾನು ಅಶಾಶ್ವತ, ಏನನ್ನಾದರು ಏಕೆ ಮಾಡಬೇಕು ಎಂಬ ಈ ಪ್ರಶ್ನೆಗಳು ಅವನನ್ನು ನಿರ್ಧಾರರಹಿತನನ್ನಾಗಿ ಅಥವಾ ಕ್ರಿಯಾಶೀಲರಹಿತನನ್ನಾಗಿ ಮಾಡುತ್ತವೆ. ಆದರೆ ಇದು ಜೀವನದಲ್ಲಿ ನಡೆಯುವುದಲ್ಲ. ತನ್ನ ಗುರುವನ್ನು ಅನುಸರಿಸಲು, ಸತ್ಯವನ್ನು ಒಪ್ಪಿಕೊಳ್ಳಲು ಹಾಗೂ ಹೋರಾಟವನ್ನು ಪ್ರಾರಂಭಿಸಲು ಮನಸ್ಸು ಮಾಡಬೇಕು ಇಲ್ಲದಿದ್ದರೆ ಅವನಿಗೆ ಗತಿಯಿಲ್ಲ.

ಮೂರನೆಯದು, ವ್ರತಾಚರಣೆಗಳ ಸಫಲತ್ವದ ಅವಲಂಬನೆ. ಮನುಷ್ಯ ವ್ರತಾಚರಣೆ (ಕರ್ಮಕಾಂಡ)ಗಳನ್ನು ಬಿಟ್ಟ ಹೊರತು ಅವನ ಸತ್ ಸಂಕಲ್ಪಗಳೂ ಎಷ್ಟೇ ದೃಢವಾಗಿದ್ದರೂ ಅವನಿಗೆ ಮಾರ್ಗ ತೋರಲಾರವು. ಬಹಿರಾಚರಣೆಗಳಲ್ಲಿ ಪೌರೋಹಿತ್ಯ ಶಕ್ತಿಯಲ್ಲಿ ಮತ್ತು ಪೂಜೆ ಪುನಸ್ಕಾರಗಳಲ್ಲಿ ನಂಬಿಕೆ ಯಾವುದೇ ಬಗೆಯ ನೆರವನ್ನೂ ನೀಡುವುದಿಲ್ಲ. ಈ ಉಪಾಧಿಯನ್ನು ಮನುಷ್ಯ ದಾಟಿದಾಗ ಮಾತ್ರ ಅವನು ಶ್ರೋತವನ್ನು ನಿಜವಾಗಿಯೂ ಪ್ರವೇಶಿಸಿದನೆಂದು, ಶೀಘ್ರವಾಗಿಯೋ ಅಥವಾ ನಿಧಾನವಾಗಿಯೋ ಜಯಶೀಲನಾಗುತ್ತಾನೆಂದು ಹೇಳಬಹುದು.

ನಾಲ್ಕನೆಯದು, ಶರೀರದ ಅರಿಷಡ್ವರ್ಗಗಳಿಗೆ ಸಂಬಂಧಿಸಿದೆ.

ಐದನೆಯದು, ಬೇರೆಯವರ ಬಗ್ಗೆ ದ್ವೇಷಭಾವನೆಗೆ ಸಂಬಂಧಿಸಿದೆ.

ಆರನೆಯದು, ಬದುಕಿದ್ದಾಗಲೇ ಸಾವಿನಾಚೆಯ ಜೀವನವನ್ನು ಆಸೆಪಡುವ ಭಾವನೆಯನ್ನು ದಮನಗೊಳಿಸುವುದು ಹಾಗೂ,

ಏಳನೆಯದು, ಸತ್ತನಂತರ ಪರಲೋಕದಲ್ಲಿ ಬದುಕಬೇಕೆಂಬ ಆಸೆಯನ್ನು ದಮನಗೊಳಿಸುವುದು.

ಎಂಟನೆಯದು, ಉಪಾಧಿ ಗರ್ವ, ಒಂಬತ್ತನೆಯದು, ತಾನು ಧರ್ಮಿಷ್ಠನೆಂಬ ನಂಬಿಕೆ. ಈ ದೌರ್ಬಲ್ಯಗಳನ್ನು ಗೆಲ್ಲುವುದು ಮಾನವರಿಗೆ ಬಹಳ ಕಷ್ಟ ಹಾಗೂ ಇವುಗಳಿಗೆ ಶ್ರೇಷ್ಠ ವ್ಯಕ್ತಿಗಳೂ ವಿಶೇಷವಾಗಿ ಬಲಿಯಾಗುತ್ತಾರೆ. ಇವರಿಗೆ ತಾವು ಶ್ರೇಷ್ಠ ಉಳಿದವರೆಲ್ಲ ಕನಿಷ್ಠ ಎಂಬ ತಿರಸ್ಕಾರವಿರುತ್ತದೆ.

ಹತ್ತನೆಯದು, ಉಪಾಧಿ ಅಜ್ಞಾನ. ಉಳಿದ ಎಲ್ಲ ಉಪಾಧಿಗಳನ್ನು ಗೆದ್ದರೂ ಇದು ಉಳಿಯುತ್ತದೆ. ಇದು ವಿವೇಕಿ ಮತ್ತು ಸಜ್ಜನರ ಮೈಗಂಟಿದ ಮುಳ್ಳು, ಮಾನವನ ಪರಮ ವೈರಿ.

ಆರ್ಯ ಅಷ್ಟಾಂಗ ಮಾರ್ಗದ ಅನುಸರಣೆಯಲ್ಲಿ ಬರುವ ಈ ಎಲ್ಲ ಉಪಾಧಿಗಳನ್ನು ಗೆಲ್ಲುವುದರಿಂದ ನಿರ್ವಾಣ ಸಿದ್ಧಿಸುತ್ತದೆ.

ಮನುಷ್ಯ ಎಂಥ ಮನೋಭಾವವನ್ನು ತುಂಬ ಪರಿಶ್ರಮದಿಂದ ಬೆಳೆಸಿಕೊಳ್ಳಬೇಕೆಂದು ಆರ್ಯ ಅಷ್ಟಾಂಗ ಮಾರ್ಗ ತತ್ವವು ತಿಳಿಸುತ್ತದೆ. ಆರ್ಯ ಅಷ್ಟಾಂಗ ಮಾರ್ಗದಲ್ಲಿ ಹೋಗಲಿಚ್ಛಿಸುವ ವ್ಯಕ್ತಿಯು ಪ್ರಲೋಭನೆಗಳನ್ನು ತೀರಾ ನಿಷ್ಠೆಯಿಂದ ಗೆಲ್ಲಬೇಕೆಂದು ನಿರ್ವಾಣ ತತ್ವ ತಿಳಿಸುತ್ತದೆ.

ಈ ಹೊಸ ಉಪದೇಶದ ನಾಲ್ಕನೆಯ ಭಾಗವೇ ಪಾರಮಿತ ತತ್ವ.

ನಿತ್ಯ ಜೀವನದಲ್ಲಿ ವ್ಯಕ್ತಿಯು ಅನುಷ್ಠಾನ ಮಾಡಬೇಕಾದ ಹತ್ತು ಸದ್ಗುಣಗಳನ್ನು ಪಾರಮಿತ ತತ್ವವು ಒತ್ತಿ ಉಪದೇಶಿಸುತ್ತದೆ.

ಹತ್ತು ಸದ್ಗುಣಗಳು ಯಾವುವೆಂದರೆ (೧) ಪಜ್ಞ, (೨) ಶೀಲ, (೩) ನೆಖ್ಖಮ, (೪) ದಾನ, (೫) ವೀರ್ಯ, (೬) ಖಂತಿ, (೭) ಸಚ್ಚ, (೮) ಅಧಿತ್ಥಾನ, (೯) ಮೆತ್ತ ಮತ್ತು (೧೦) ಉಪೇಖ್ಖ.

ಪಜ್ಞ ಅಥವಾ ವಿವೇಕವು ಅಜ್ಞಾನದ ಕತ್ತಲನ್ನು ಹೋಗಲಾಡಿಸುವ ಬೆಳಕು. ತನಗಿಂತ ವಿವೇಕಿಗಳಾದವರನ್ನು ಪ್ರಶ್ನಿಸುವುದರ ಮೂಲಕ ತನ್ನ ಎಲ್ಲ ಅನುಮಾನಗಳನ್ನು ಪರಿಹರಿಸಿಕೊಳ್ಳಬೇಕು. ವಿವೇಕಿಗಳ ಸಹವಾಸದಲ್ಲಿರಬೇಕು ಮತ್ತು ಮನಸ್ಸನ್ನು ಬೆಳೆಸಲು ನೆರವಾಗುವ ನಾನಾ ಬಗೆಯ ಕಲೆಗಳು ಮತ್ತು ವಿಜ್ಞಾನಗಳನ್ನು ಬೆಳೆಸಿಕೊಳ್ಳಬೇಕೆಂದು ಪಜ್ಞ ಆದೇಶಿಸುತ್ತದೆ.

ಶೀಲ ಎಂದರೆ ನೈತಿಕ ಸ್ವಭಾವ. ಕೆಟ್ಟದ್ದನ್ನು ಮಾಡದ ಮನಸ್ಸು ಮತ್ತು ಒಳ್ಳೆಯದನ್ನೇ ಮಾಡುವ ಮನಸ್ಸು, ತಪ್ಪು ಮಾಡಲು ನಾಚಿಕೊಳ್ಳುವುದು. ಶಿಕ್ಷೆಯ ಭೀತಿಯಿಂದ ತಪ್ಪು ಮಾಡದಿರುವುದೇ ಶೀಲ. ಶೀಲ ಎಂದರೆ ತಪ್ಪನ್ನು ಮಾಡಲು ಹೆದರುವುದು.

ನೆಖ್ಖಮ ಎಂದರೆ ಲೋಕದ ಸುಖಭೋಗಗಳನ್ನು ಪರಿತ್ಯಜಿಸುವುದು.

ದಾನವೆಂದರೆ ಇತರರ ಒಳಿತಿಗಾಗಿ ಏನನ್ನೂ ಪ್ರತಿಯಾಗಿ ನಿರೀಕ್ಷಿಸದೆ ತನ್ನೆಲ್ಲ ಆಸ್ತಿಪಾಸ್ತಿಗಳನ್ನು, ರಕ್ತ ಮತ್ತು ಅಂಗಾಂಗಗಳನ್ನು ಹಾಗೂ ತನ್ನ ಪ್ರಾಣವನ್ನೇ ಕೊಡುವುದು.

ವೀರ್ಯವೆಂದರೆ ಸಮ್ಯಕ್ ಪ್ರಯತ್ನ. ಮನುಷ್ಯ ತಾನು ಕೈಗೊಂಡಿರುವ ಕಾರ್ಯವನ್ನು ಮಾಡಲು ಹಿಂಜರಿಯದೆ ತನ್ನೆಲ್ಲ ಮನೋಬಲವನ್ನು ಉಪಯೋಗಿಸುವುದು.

ಖಂತಿ ಎಂದರೆ ಸಹನೆ. ದ್ವೇಷವನ್ನು ದ್ವೇಷದಿಂದ ಎದುರಿಸಬಾರದು ಎಂಬುದೇ ಅದರ ಸಾರ. ಏಕೆಂದರೆ ದ್ವೇಷದಿಂದ ದ್ವೇಷ ಶಮನಗೊಳ್ಳುವುದಿಲ್ಲ. ಅದು ಸಹನೆಯಿಂದ ಮಾತ್ರ ಶಮನಗೊಳ್ಳುತ್ತದೆ.

ಸಚ್ಚ ಎಂದರೆ ಸತ್ಯ. ಬುದ್ಧನಾಗಲು ಇಚ್ಛಿಸುವ ವ್ಯಕ್ತಿ ಎಂದೂ ಸುಳ್ಳು ಹೇಳುವುದಿಲ್ಲ. ಅವನ ಮಾತೆಲ್ಲ ಸತ್ಯ, ಸತ್ಯವಲ್ಲದೆ ಬೇರೇನೂ ಅಲ್ಲ.

ಅಧಿತ್ಥಾನ ಎಂದರೆ ಗುರಿಯನ್ನು ಮುಟ್ಟಲು ದೃಢ ನಿರ್ಧಾರ.

ಮೆತ್ತ ಎಂದರೆ ಮೈತ್ರಿ. ಎಲ್ಲ ಜೀವಿಗಳನ್ನು, ಶತ್ರು ಮಿತ್ರರನ್ನು ಹಾಗೂ ಮೃಗ ಮಾನವರನ್ನೊಳಗೊಂಡಂತೆ ಎಲ್ಲರ ಬಗೆಗೂ ಇರಬೇಕಾದ ಸೋದರ ಭಾವನೆ.

ಉಪೇಖ್ಖ ಎಂದರೆ ಅನಾಸಕ್ತಿ. ಉಪೇಕ್ಷೆ ಅಲ್ಲದುದು. ಅದು ಇಷ್ಟ ಅನಿಷ್ಟಗಳು ಇಲ್ಲದ ಮನಃಸ್ಥಿತಿ. ಫಲಿತಾಂಶದಿಂದ ವಿಚಲಿತನಾಗದೆ ಕಾರ್ಯನಿರತನಾಗಿರುವುದು.

ಈ ಸದ್ಗುಣಗಳನ್ನು ಪ್ರತಿಯೊಬ್ಬನೂ ತನ್ನ ಶಕ್ತ್ಯಾನುಸಾರ ಅನುಷ್ಠಾನ ಮಾಡಬೇಕು. ಆದ್ದರಿಂದಲೇ ಅವುಗಳನ್ನು ಪಾರಮಿತಗಳೆಂದು ಅಂದರೆ ಪರಿಪೂರ್ಣ ಸ್ಥಿತಿಗಳೆಂದು ಕರೆಯಲಾಗಿದೆ.

ತನ್ನ ಜ್ಞಾನೋದಯದ ಫಲವಾಗಿ ಬಂದ ಬುದ್ಧನ ಈ ಉಪದೇಶ ಪ್ರಪಂಚದ ದುಃಖ ಮತ್ತು ನೋವನ್ನು ಅಳಿಸಲು ಪ್ರತಿಪಾದಿತವಾಯಿತು.

ಸತ್ಪಥವನ್ನು ಸ್ವೇಚ್ಛೆಯಿಂದ ಅನುಸರಿಸುವಂತೆ ಮನುಷ್ಯನ ನೈತಿಕ ಮನೋಭಾವನೆಯನ್ನು ಬದಲಾಯಿಸುವುದರ ಮೂಲಕ ಅವನನ್ನು ಪರಿವರ್ತಿಸಲು ಬುದ್ಧ ಈ ಸಾಧನಗಳನ್ನು ಆರಿಸಿಕೊಂಡನು ಎಂಬುದು ಸ್ಪಷ್ಟವಾಗಿದೆ.

ಕಮ್ಯುನಿಷ್ಟರು ಆರಿಸಿಕೊಂಡ ವಿಧಾನಗಳು ಅಷ್ಟೇ ಸ್ಪಷ್ಟ, ಹ್ರಸ್ವ ಮತ್ತು ಶೀಘ್ರವಾಗಿವೆ. ಅವೆಂದರೆ (೧) ಹಿಂಸಾಚಾರ ಮತ್ತು (೨) ಶ್ರಮಿಕರ ಸರ್ವಾಧಿಕಾರ.

ಸಾಮ್ಯವಾದವನ್ನು ಸ್ಥಾಪಿಸಲು ಇರುವುದು ಇವೆರಡೇ ಸಾಧನಗಳೆಂದು ಕಮ್ಯುನಿಷ್ಟರು ಹೇಳುತ್ತಾರೆ. ಮೊದಲನೆಯದು, ಹಿಂಸಾಚಾರ. ಇದನ್ನು ಬಿಟ್ಟರೆ ಹಾಲಿ ವ್ಯವಸ್ಥೆಯನ್ನು ಒಡೆಯಲು ಬೇರಾವುದೂ ಸಾಲದು. ಎರಡನೆಯದು, ಶ್ರಮಿಕರ ಸರ್ವಾಧಿಕಾರ. ಇದನ್ನು ಬಿಟ್ಟರೆ ಬೇರಾವುದರಿಂದಲೂ ಹೊಸ ವ್ಯವಸ್ಥೆಯನ್ನು ಮುಂದುವರೆಸಲು ಸಾಧ್ಯವಿಲ್ಲ.

ಕಾರ್ಲ್‌ಮಾರ್ಕ್ಸ್ ಮತ್ತು ಬುದ್ಧರ ನಡುವೆ ಇರುವ ಸಾಮ್ಯಗಳೇನು ಮತ್ತು ವ್ಯತ್ಯಾಸಗಳೇನು ಎಂಬುದು ಈಗ ಸ್ಪಷ್ಟವಾಯಿತು. ಸಾಧನೆಗಳ ಬಗ್ಗೆ ವ್ಯತ್ಯಾಸಗಳಿವೆ. ಆದರೆ ಗುರಿ ಇಬ್ಬರದೂ ಒಂದೇ.

## ೬. ಸಾಧನಗಳ ಮೌಲ್ವೀಕರಣ

ಈ ಸಾಧನಗಳ ಮೌಲ್ವೀಕರಣದತ್ತ ತಿರುಗೋಣ. ಅಂತಿಮವಾಗಿ ಯಾರ ಸಾಧನೆಗಳು ಹೆಚ್ಚು

ಉತ್ತಮವಾದವು ಮತ್ತು ಶಾಶ್ವತವಾದವು ಎಂದು ಪ್ರಶ್ನಿಸಬೇಕಾಗಿದೆ. ಆದಾಗ್ಯೂ ಎರಡು ಪಕ್ಷಗಳಲ್ಲಿಯೂ ಕೆಲವು ತಪ್ಪು ಗ್ರಹಿಕೆಗಳಿವೆ. ಅವುಗಳನ್ನು ಹೋಗಲಾಡಿಸುವುದು ಅಗತ್ಯ.

ಹಿಂಸಾಚಾರವನ್ನು ತೆಗೆದುಕೊಳ್ಳೋಣ. ಹಿಂಸೆಯೆಂದರೇನೇ ನಡುಗುವ ಅನೇಕ ಜನ ಇದ್ದಾರೆ. ಆದರೆ ಇದು ಕೇವಲ ಭಾವುಕವಾದುದು. ಹಿಂಸಾಚಾರವನ್ನು ಸಂಪೂರ್ಣವಾಗಿ ತೆಗೆದುಹಾಕಲು ಸಾಧ್ಯವಿಲ್ಲ. ಕಮ್ಯುನಿಷ್ಟೇತರ ದೇಶಗಳಲ್ಲಿಯೂ ಕೂಡ ಕೊಲೆಗಾರನನ್ನು ನೇಣು ಹಾಕುತ್ತಾರೆ. ನೇಣು ಹಾಕುವಿಕೆ ಹಿಂಸಾಚಾರವಲ್ಲವೆ? ಕಮ್ಯುನಿಷ್ಟೇತರ ರಾಷ್ಟ್ರಗಳು ಕಮ್ಯುನಿಷ್ಟೇತರ ರಾಷ್ಟ್ರಗಳ ಜೊತೆ ಯುದ್ಧ ಮಾಡುತ್ತವೆ. ಲಕ್ಷಾಂತರ ಜನಗಳ ಹತ್ಯೆಯಾಗುತ್ತದೆ. ಇದು ಹಿಂಸಾಚಾರ ಅಲ್ಲವೆ? ಒಬ್ಬ ವ್ಯಕ್ತಿಯನ್ನು ಕೊಂದಿದ್ದಕ್ಕಾಗಿ ಕೊಲೆಗಾರನನ್ನು ಕೊಲ್ಲುವುದಾದರೆ, ಶತ್ರು ರಾಷ್ಟ್ರಕ್ಕೆ ಸೇರಿದವನೆಂದು ಯುದ್ಧದಲ್ಲಿ ಒಬ್ಬ ಯೋಧನನ್ನು ಕೊಲ್ಲುವುದಾದರೆ, ಆಸ್ತಿಯ ಒಡೆತನ ಇತರರಿಗೆ ಕಡು ದುಃಖವನ್ನುಂಟು ಮಾಡುವುದಾದರೆ ಆ ಆಸ್ತಿವಂತನನ್ನು ಏಕೆ ಕೊಲ್ಲಬಾರದು? ಆಸ್ತಿವಂತನ ಬಗ್ಗೆ ವಿಶೇಷವಾದ ಒಲವನ್ನು ತೋರಿಸುವ ಕಾರಣವಿಲ್ಲ. ಹಾಗಿದ್ದ ಮೇಲೆ ಖಾಸಗಿ ಆಸ್ತಿಯನ್ನು ಏಕೆ ಪವಿತ್ರ ಎಂದು ಭಾವಿಸಬೇಕು?

ಬುದ್ಧ ಹಿಂಸಾಚಾರವನ್ನು ವಿರೋಧಿಸಿದ. ಆದರೆ ಅವನು ನ್ಯಾಯದ ಪರವಾಗಿಯೂ ಕೂಡ ಇದ್ದನು. ನ್ಯಾಯ ಸ್ಥಾಪಿಸಬೇಕಾದ ಕಡೆ ಅವನು ಬಲ ಪ್ರಯೋಗಕ್ಕೆ ಅನುಮತಿ ಇತ್ತನು. ಇದು ಅವನು ವೈಶಾಲಿಯ ಸೇನಾಧಿಪತಿ ಸಿಂಹ ಸೇನಾಪತಿಯ ಜೊತೆ ನಡೆಸಿದ ಸಂವಾದದಲ್ಲಿ ಸೊಗಸಾಗಿ ಬಂದಿದೆ. ಬುದ್ಧ ಅಹಿಂಸೆ ಬೋಧಿಸುವುದನ್ನು ತಿಳಿದ ಸಿಂಹ ಅವನ ಬಳಿ ಹೋಗಿ ಕೇಳಿದನು:

"ಬುದ್ಧ ಅಹಿಂಸೆಯನ್ನು ಬೋಧಿಸುತ್ತಾರೆ. ಅಪರಾಧಿಗೆ ಶಿಕ್ಷೆ ಕೊಡಬಾರದೆಂದು ಬುದ್ಧ ಬೋಧಿಸುತ್ತಾರೆಯೆ? ನಮ್ಮ ಮಡದಿ ಮಕ್ಕಳನ್ನು ನಮ್ಮ ಆಸ್ತಿಪಾಸ್ತಿಯನ್ನು ರಕ್ಷಿಸಲು ಯುದ್ಧ ಮಾಡಬಾರದೆಂದು ಬುದ್ಧ ಬೋಧಿಸುತ್ತಾರೆಯೆ? ಅಹಿಂಸೆಯ ಹೆಸರಿನಲ್ಲಿ ನಾವು ಅಪರಾಧಿಗಳ ಕೈಯಲ್ಲಿ ಹಿಂಸೆ ಅನುಭವಿಸಬೇಕೇ?"

"ಸತ್ಯ ಮತ್ತು ನ್ಯಾಯಗಳ ಹಿತದೃಷ್ಟಿಯಿಂದಲೂ ಕೂಡ ಬುದ್ಧ ಎಲ್ಲ ಯುದ್ಧವನ್ನೂ ನಿಷೇಧಿಸುತ್ತಾರೆಯೆ?"

"ನಾನು ಬೋಧಿಸುತ್ತಿರುವುದನ್ನು ನೀನು ತಪ್ಪಾಗಿ ತಿಳಿದುಕೊಂಡಿರುವೆ. ಅಪರಾಧಿಯನ್ನು ಶಿಕ್ಷಿಸಲೇ ಬೇಕು. ನಿರಪರಾಧಿಯನ್ನು ಬಿಡುಗಡೆ ಮಾಡಲೇ ಬೇಕು. ಅಪರಾಧಿಯನ್ನು ನ್ಯಾಯಾಧೀಶ ಶಿಕ್ಷಿಸುವುದು ದೋಷವಲ್ಲ. ಅಪರಾಧಿಯ ತಪ್ಪಿನಿಂದ ಶಿಕ್ಷೆಯುಂಟಾಗುತ್ತದೆ. ಶಿಕ್ಷೆಯನ್ನು ವಿಧಿಸುವ ನ್ಯಾಯಾಧೀಶ ಕಾನೂನನ್ನು ಮಾತ್ರ ಜಾರಿ ಮಾಡುತ್ತಿರುತ್ತಾನೆ. ಹಿಂಸಾಚರಣೆಯಿಂದ ಅವನು ಕಲುಷಿತನಾಗುವುದಿಲ್ಲ. ನ್ಯಾಯ ಮತ್ತು ರಕ್ಷಣೆಗಾಗಿ ಹೋರಾಡುವ ಮನುಷ್ಯನನ್ನು ಹಿಂಸಾವಾದಿಯೆಂದು ದೂಷಿಸಲು ಸಾಧ್ಯವಿಲ್ಲ. ಶಾಂತಿ ರಕ್ಷಣೆಯ ಎಲ್ಲಾ ಪ್ರಯತ್ನಗಳೂ ವಿಫಲವಾದಾಗ, ಯಾರು ಯುದ್ಧವನ್ನು ಪ್ರಾರಂಭಿಸಿದನೋ ಅವನ ಮೇಲೆ ಹಿಂಸೆಯ ಜವಾಬ್ದಾರಿ ಬೀಳುತ್ತದೆ. ಮನುಷ್ಯ ಎಂದೂ ದುಷ್ಟ ಶಕ್ತಿಗಳಿಗೆ ಶರಣಾಗತಬಾರದು. ಯುದ್ಧವಾಗಬಹುದು. ಆದರೆ ಅದು ಸ್ವಾರ್ಥ ಸಾಧನೆಗಾಗಿ ಆಗಬಾರದು....."

ಇಷ್ಟೇ ಅಲ್ಲದೆ ಹಿಂಸಾಚಾರಗಳ ವಿರುದ್ಧ ಬೇರೆ ಕಾರಣಗಳಿವೆ. ಪ್ರೊ. ಜಾನ್‌ಡೂಯಿ ಇಂತಹದೇ ಕಾರಣಗಳನ್ನು ಒತ್ತಾಯಪೂರ್ವಕವಾಗಿ ಹೇಳಿದ್ದಾನೆ. ಸಿದ್ಧಿಯೇ ಸಾಧನಗಳನ್ನು ಸಮರ್ಥಿಸುತ್ತದೆ ಎಂದು ಯಾರು ಹೇಳುತ್ತಾರೋ ಅವರದು ನೈತಿಕವಾಗಿ ತಲೆಕೆಟ್ಟ ಸಿದ್ಧಾಂತ. ಸಿದ್ಧಿಯನ್ನಲ್ಲದೆ ಸಾಧನಗಳು ಏನನ್ನು ತಾನೆ ಸಮರ್ಥಿಸಬಲ್ಲವು? ಎಂದು ಡ್ಯೂಯಿ ಸರಿಯಾಗಿಯೇ ಪ್ರಶ್ನಿಸಿದ್ದಾನೆ. ಸಿದ್ಧಿ ಮಾತ್ರ ಸಾಧನಗಳನ್ನು ಸಮರ್ಥಿಸುತ್ತದೆ.

ಸಿದ್ಧಿ ಮಾತ್ರ ಸಾಧನಗಳನ್ನು ಸಮರ್ಥಿಸುತ್ತದೆಂದು ಬುದ್ಧ ಬಹುಶಃ ಒಪ್ಪಿಕೊಳ್ಳುತ್ತಿದ್ದನು. ಅದಲ್ಲದೆ ಇನ್ನೇನು? ಗುರಿಯು ಹಿಂಸಾಚಾರವನ್ನು ಸಮರ್ಥಿಸಿದರೆ, ಹಿಂಸಾಚಾರದ ಗುರಿಯನ್ನು ದೃಷ್ಟಿಯಲ್ಲಿಟ್ಟುಕೊಂಡ ಹಿಂಸಾಚಾರ ನ್ಯಾಯಸಮ್ಮತವಾಗುತ್ತದೆ ಎಂದು ಅವನು ಹೇಳುತ್ತಿದ್ದನು. ಆ ಗುರಿ ಮುಟ್ಟಲು ಬಲ ಪ್ರಯೋಗವು ಏಕೈಕ ಸಾಧನವಾಗಿದ್ದರೆ, ಆ ಬಲ ಪ್ರಯೋಗದಿಂದ ಅವನು ಆಸ್ತಿವಂತರನ್ನು ಹೊರತು ಪಡಿಸುತ್ತಿರಲಿಲ್ಲ. ನಾವು ನೋಡಲಿರುವಂತೆ ಗುರಿಮುಟ್ಟಲು ಅವನ ಸಾಧನಗಳು ಬೇರೆಯಾಗಿದ್ದವು. ಹಿಂಸಾಚರಣೆಯು ಬಲ ಪ್ರಯೋಗಕ್ಕೆ ಇನ್ನೊಂದು ಹೆಸರು ಮಾತ್ರ. ಬಲಪ್ರಯೋಗವನ್ನು ಸೃಜನಶೀಲ ಉದ್ದೇಶಗಳಿಗಾಗಿ ಬಳಸಬೇಕಾದ್ದಾಗ್ಯೂ ಬಲ ಪ್ರಯೋಗವನ್ನು ಶಕ್ತಿಯಾಗಿಯೂ ಮತ್ತು ಬಲ ಪ್ರಯೋಗವನ್ನು ಹಿಂಸಾಚಾರವನ್ನಾಗಿಯೂ ಪ್ರತ್ಯೇಕಿಸಬೇಕಾದ ಅಗತ್ಯವಿದೆ ಎಂಬುದನ್ನು ಪ್ರೊ. ಡ್ಯೂಯಿ ತೋರಿಸಿದ್ದಾನೆ. ಒಂದು ಉದ್ದೇಶ ಸಾಧನೆಗೆ ಮತ್ತೊಂದು ಗುರಿಯನ್ನು ಬಲಿಕೊಡಬೇಕು. ಹೀಗೆ ಬಲಿಕೊಡುವಾಗ ಇದರೊಂದಿಗೆ ಬೆರೆತುಕೊಂಡಿರುವ ಹಲವಾರು ಗುರಿಗಳೂ ಬಲಿಯಾಗುತ್ತವೆ. ಒಂದು ದುಷ್ಟ ಗುರಿಯನ್ನು ನಿರ್ನಾಮ ಮಾಡುವಾಗ ಬೇರೆ ಅನೇಕ ಗುರಿಗಳನ್ನು ಉಳಿಸುವ ರೀತಿಯಲ್ಲಿ ಬಲಪ್ರಯೋಗವನ್ನು ನಿಯಂತ್ರಿಸಬೇಕು. ಜೈನ ಧರ್ಮದ ಸಂಸ್ಥಾಪಕನಾದ ಮಹಾವೀರ ಬೋಧಿಸಿದ ಅಹಿಂಸೆಯಷ್ಟು ಬುದ್ಧನ ಅಹಿಂಸೆ ಪರಿಪೂರ್ಣವಲ್ಲ. ಬಲವನ್ನು ಶಕ್ತಿಯಾಗಿ ಮಾತ್ರ ಬಳಸಲು ಅವನು ಅವಕಾಶ ಕೊಡುತ್ತಿದ್ದ. ಕಮ್ಯುನಿಷ್ಟರು ಹಿಂಸೆಯನ್ನು ಪರಿಪೂರ್ಣ ತತ್ವವೆಂದು ಹೇಳುತ್ತಾರೆ. ಬುದ್ಧ ಅದನ್ನು ಖಂಡತುಂಡವಾಗಿ ವಿರೋಧಿಸಿದ.

ಸರ್ವಾಧಿಕಾರದ ಬಗ್ಗೆ ಹೇಳುವುದಾದರೆ ಬುದ್ಧ ಅದನ್ನು ಒಪ್ಪುತ್ತಿರಲಿಲ್ಲ. ಅವನು ಪ್ರಜಾಪ್ರಭುತ್ವವಾದಿಯಾಗಿ ಹುಟ್ಟಿ ಪ್ರಜಾಪ್ರಭುತ್ವವಾದಿಯಾಗಿ ಸತ್ತನು. ಅವನು ಬದುಕಿದ್ದ ಸಮಯದಲ್ಲಿ ೧೪ ಚಕ್ರಾಧಿಪತ್ಯಗಳೂ ೪ ಪ್ರಜಾಧಿಪತ್ಯಗಳೂ ಇದ್ದವು. ಅವನು ಶಾಕ್ಯವಂಶಕ್ಕೆ ಸೇರಿದವನು. ಶಾಕ್ಯರದು ಪ್ರಜಾಧಿಪತ್ಯವಾದ ರಾಜ್ಯ. ಅವನಿಗೆ ತನ್ನ ಎರಡನೆಯ ತೌರಾದ ವೈಶಾಲಿಯ ಮೇಲೆ ಅಪಾರ ಪ್ರೀತಿಯಿತ್ತು. ಏಕೆಂದರೆ ಅದು ಪ್ರಜಾಧಿಪತ್ಯ ರಾಜ್ಯವಾಗಿತ್ತು. ಅವನು ಮಹಾ ಪರಿನಿರ್ವಾಣವನ್ನು ಹೊಂದುವ ಮೊದಲು ವೈಶಾಲಿಯಲ್ಲಿ ತನ್ನ ವರ್ಷಾವಾಸವನ್ನು ಕಳೆದನು. ವರ್ಷಾವಾಸವನ್ನು ಪೂರ್ಣವಾಗಿ ಮುಗಿಸಿದ ಮೇಲೆ ವೈಶಾಲಿಯನ್ನು ಬಿಟ್ಟು ತನ್ನ ಪದ್ಧತಿಯಂತೆ ಬೇರೆಡೆಗೆ ಹೋಗಲು ಅವನು ನಿರ್ಧರಿಸಿದನು. ಸ್ವಲ್ಪ ದೂರ ಹೋದ ಮೇಲೆ ಅವನು ವೈಶಾಲಿಯ ಕಡೆ ತಿರುಗಿ ಆನಂದನಿಗೆ ಹೇಳಿದನು: "ಇದು ತಥಾಗತ ಪಡೆಯುತ್ತಿರುವ ವೈಶಾಲಿಯ ಕೊನೆಯ ದರ್ಶನ." ಈ ಪ್ರಜಾಧಿಪತ್ಯದ ಬಗ್ಗೆ ಅವನಿಗೆ ಅಷ್ಟು ವ್ಯಾಮೋಹವಿತ್ತು.

ಅವನು ಶುದ್ಧಾಂಗವಾಗಿ ಸಮಾನತಾವಾದಿಯಾಗಿದ್ದನು. ಮೂಲತಃ ಭಿಕ್ಕುಗಳು, ಸ್ವತಃ ಬುದ್ಧನೂ ಸೇರಿದಂತೆ ಚಿಂದಿ ಬಟ್ಟೆಗಳಿಂದ ಮಾಡಿದ ಉಡುಪುಗಳನ್ನು ಧರಿಸುತ್ತಿದ್ದರು ಸಂಘಕ್ಕೆ ಶ್ರೀಮಂತ ವರ್ಗದವರು ಸೇರುವುದನ್ನು ತಡೆಗಟ್ಟಲು ಈ ನಿಯಮವನ್ನು ಜಾರಿಗೊಳಿಸಲಾಗಿತ್ತು. ಆಮೇಲೆ ಜೀವಕನೆಂಬ ಮಹಾವೈದ್ಯನು ಹೊಸ ಬಟ್ಟೆಯಿಂದ ಮಾಡಿದ ಒಂದು ಉಡುಪನ್ನು ಸ್ವೀಕರಿಸುವಂತೆ ಬುದ್ಧನನ್ನು ಒತ್ತಾಯ ಮಾಡಿದನು. ಬುದ್ಧ ಆಗ ಈ ನಿಯಮವನ್ನು ಬದಲಿಸಿದನು, ಅದನ್ನು ಎಲ್ಲ ಭಿಕ್ಕುಗಳಿಗೂ ಅನ್ವಯಿಸಿದನು. ಬುದ್ಧನ ಮಾತೆಯಾದ ಮಹಾ ಪ್ರಜಾಪತಿ ಗೌತಮಿಯು ಭಿಕ್ಕುಣಿ ಸಂಘಕ್ಕೆ ಸೇರಿದಾಗ ಬುದ್ಧನಿಗೆ ಶೀತವಾಗಿದೆ ಎಂಬುದನ್ನು ಕೇಳಿದಳು. ಅವಳು ಕೂಡಲೇ ಅವನಿಗಾಗಿ ಒಂದು ಶಲ್ಯವನ್ನು ತಯಾರಿಸಿದಳು. ಅದನ್ನು ಸಿದ್ಧ ಪಡಿಸಿದ ಮೇಲೆ ಬುದ್ಧನ ಬಳಿ ತೆಗೆದುಕೊಂಡು ಹೋಗಿ ಅದನ್ನು ಧರಿಸುವಂತೆ ಕೇಳಿಕೊಂಡಳು. ಆದರೆ ಬುದ್ಧ 'ಇದು ಉಡುಗೊರೆಯಾದರೆ ಇಡಿ ಸಂಘಕ್ಕೆ ಹೋಗಬೇಕು. ಸಂಘದ ಒಬ್ಬ ವ್ಯಕ್ತಿಗೆ

ಮಾತ್ರವಲ್ಲ' ಎಂದು ಹೇಳಿ ಅದನ್ನು ತಿರಸ್ಕರಿಸಿದನು. ಅವಳು ಅವನನ್ನು ಮತ್ತೆ ಮತ್ತೆ ಬೇಡಿಕೊಂಡಳು. ಅವನು ಮಣಿಯಲಿಲ್ಲ.

ಭಿಕ್ಕು ಸಂಘಕ್ಕೆ ಅತ್ಯಂತ ಪ್ರಜಾಸತ್ತಾತ್ಮಕವಾದ ಸಂವಿಧಾನವಿತ್ತು. ಭಿಕ್ಕುಗಳಲ್ಲಿ ಅವನೂ ಒಬ್ಬ ಭಿಕ್ಕುವಾಗಿದ್ದ. ಹೆಚ್ಚೆಂದರೆ ಅವನು ಸಂಪುಟದ ಸದಸ್ಯರಲ್ಲಿ ಪ್ರಧಾನ ಮಂತ್ರಿಯಂತಿದ್ದ. ಅವನೆಂದೂ ಸರ್ವಾಧಿಕಾರಿ ಆಗಿರಲಿಲ್ಲ. ಅವನ ಸಾವಿಗೆ ಮುನ್ನ ಸಂಘವನ್ನು ನಡೆಸಲು ಒಬ್ಬ ಮುಖಂಡನನ್ನು ನೇಮಿಸುವಂತೆ ಎರಡು ಬಾರಿ ಅವನನ್ನು ಕೇಳಿಕೊಳ್ಳಲಾಯಿತು. ಆದರೆ ಧಮ್ಮವೇ ಸಂಘದ ಪರಮ ನಾಯಕ ಎಂದು ಅವನು ಎರಡು ಬಾರಿಯೂ ತಿರಸ್ಕರಿಸಿದ. ಅವನು ಸರ್ವಾಧಿಕಾರಿಯಾಗಲು ನಿರಾಕರಿಸಿದ. ಸರ್ವಾಧಿಕಾರಿಯನ್ನು ನೇಮಿಸಲು ತಿರಸ್ಕರಿಸಿದ.

ಈ ಸಾಧನಗಳ ಮೌಲ್ಯದ ಬಗ್ಗೆ ಏನು? ಅಂತಿಮವಾಗಿ ಯಾರ ಸಾಧನಗಳು ಶ್ರೇಷ್ಠವಾಗಿವೆ ಮತ್ತು ಶಾಶ್ವತವಾಗಿವೆ?

ತಮ್ಮ ಅಮೂಲ್ಯ ಗುರಿಯನ್ನು ಈಡೇರಿಸುವಲ್ಲಿ ಇತರ ಅಮೂಲ್ಯ ಗುರಿಯನ್ನು ಈಡೇರಿಸುವಲ್ಲಿ ಇತರ ಅಮೂಲ್ಯ ಗುರಿಗಳನ್ನು ತಾವು ನಾಶಪಡಿಸಿಲ್ಲ ಎಂದು ಕಮ್ಯುನಿಷ್ಟರು ಹೇಳಬಲ್ಲರೆ? ಅವರು ಖಾಸಗಿ ಆಸ್ತಿಯನ್ನು ತೊಡೆದುಹಾಕಿದ್ದಾರೆ. ಇದು ಅಮೂಲ್ಯ ಗುರಿಯೆಂದು ಭಾವಿಸಿದರೆ, ಇದನ್ನು ಸಾಧಿಸುವ ಪ್ರಕ್ರಿಯೆಯಲ್ಲಿ ಇತರ ಅಮೂಲ್ಯ ಗುರಿಯನ್ನು ತಾವು ಹಾಳು ಮಾಡಿಲ್ಲವೆಂದು ಕಮ್ಯುನಿಷ್ಟರು ಹೇಳಬಲ್ಲರೆ? ತಮ್ಮ ಗುರಿಯನ್ನು ಸಾಧಿಸಲು ಅವರು ಎಷ್ಟೊಂದು ಜನರನ್ನು ಕೊಂದಿದ್ದಾರೆ. ಮಾನವ ಜೀವಕ್ಕೆ ಬೆಲೆಯಿಲ್ಲವೇ? ಒಡೆಯನ ಪ್ರಾಣವನ್ನು ತೆಗೆಯದೆ ಅವನ ಆಸ್ತಿಯನ್ನು ಅವರು ತೆಗೆದುಕೊಳ್ಳಲಾಗುತ್ತಿರಲಿಲ್ಲವೇ?

ಸರ್ವಾಧಿಕಾರವನ್ನು ತೆಗೆದುಕೊಳ್ಳೋಣ. ಸರ್ವಾಧಿಕಾರದ ಗುರಿ ಕ್ರಾಂತಿಯನ್ನು ನಿತ್ಯಕ್ರಾಂತಿಯನ್ನಾಗಿ ಮಾಡುವುದೇ ಆಗಿದೆ. ಇದು ಅಮೂಲ್ಯ ಗುರಿ. ಆದರೆ ಈ ಗುರಿಯನ್ನು ಸಾಧಿಸುವ ಭರದಲ್ಲಿ ತಾನು ಇತರ ಅಮೂಲ್ಯ ಗುರಿಗಳನ್ನು ನಾಶಪಡಿಸಿಲ್ಲವೆಂದು ಕಮ್ಯುನಿಷ್ಟರು ಹೇಳಬಲ್ಲರೆ? ಸರ್ವಾಧಿಕಾರವನ್ನು ಅನೇಕ ವೇಳೆ ಸ್ವಾತಂತ್ರ್ಯದ ಅಭಾವ ಅಥವಾ ಸಂಸದೀಯ ಸರ್ಕಾರದ ಅಭಾವ ಎಂದು ವ್ಯಾಖ್ಯಾನಿಸಲಾಗಿದೆ. ಈ ಎರಡೂ ವ್ಯಾಖ್ಯಾನಗಳು ಸಂಪೂರ್ಣ ಸ್ಪಷ್ಟವಾಗಿಲ್ಲ. ಸಂಸದೀಯ ಸರ್ಕಾರವಿದ್ದಾಗಲೂ ಕೂಡ ಸ್ವಾತಂತ್ರ್ಯ ಇರುವುದಿಲ್ಲ. ಏಕೆಂದರೆ ಕಾನೂನೆಂದರೆ ಸ್ವಾತಂತ್ರ್ಯದ ಅಭಾವ, ಸರ್ವಾಧಿಕಾರಕ್ಕೂ ಸಂಸದೀಯ ಸರ್ಕಾರಕ್ಕೂ ಇರುವ ವ್ಯತ್ಯಾಸವನ್ನು ಇದರಲ್ಲಿ ಕಾಣಬಹುದು. ಸಂಸದೀಯ ಸರ್ಕಾರದಲ್ಲಿ ಸ್ವಾತಂತ್ರ್ಯವನ್ನು ಮೊಟಕುಗೊಳಿಸುವ ಸರ್ಕಾರದ ನೀತಿಯನ್ನು ಟೀಕಿಸಲು ಪ್ರತಿಯೊಬ್ಬ ಪ್ರಜೆಗೂ ಹಕ್ಕಿದೆ. ಸಂಸದೀಯ ಸರ್ಕಾರದಲ್ಲಿ ನಿಮಗೆ ಕರ್ತವ್ಯವೂ ಉಂಟು, ಹಕ್ಕೂ ಉಂಟು. ಕಾನೂನಿಗೆ ವಿಧೇಯನಾಗಿರಬೇಕಾದ ಕರ್ತವ್ಯ ಮತ್ತು ಅದನ್ನು ಟೀಕಿಸುವ ಹಕ್ಕು ಸರ್ವಾಧಿಕಾರದಲ್ಲಿ ನಿಮಗೆ ಅದನ್ನು ವಿಧೇಯತೆಯಿಂದ ಅನುಸರಿಸುವ ಕರ್ತವ್ಯ ಮಾತ್ರ ಇದೆ. ಆದರೆ ಅದನ್ನು ಟೀಕಿಸುವ ಹಕ್ಕಿಲ್ಲ.

## ೭. ಯಾರ ಸಾಧನಗಳು ಹೆಚ್ಚು ಫಲಕಾರಿಯಾಗಿವೆ?

ಯಾರ ಸಾಧನಗಳು ಹೆಚ್ಚು ಕಾಲ ಬಾಳಬಲ್ಲವು ಎಂಬುದನ್ನು ಈಗ ಪರಿಶೀಲಿಸೋಣ. ಬಲಾಧಾರಿತ ಸರ್ಕಾರ ಮತ್ತು ನೀತಿಯಾಧಾರಿತ ಸರ್ಕಾರಗಳ ನಡುವೆ ಮನುಷ್ಯ ಆಯ್ಕೆ ಮಾಡಬೇಕಾಗಿದೆ.

ಬರ್ಕ್ ಹೇಳಿರುವಂತೆ ಬಲ ಶಾಶ್ವತವಾದ ಸಾಧನವಲ್ಲ. ಅಮೆರಿಕದೊಂದಿಗೆ ಮಾಡಿಕೊಂಡ ಸಂಧಾನ ಕುರಿತ ತನ್ನ ಭಾಷಣದಲ್ಲಿ ಈ ಅವಿಸ್ಮರಣೀಯ ಎಚ್ಚರಿಕೆಯನ್ನು ಅವನು ನೀಡಿದ್ದಾನೆ:

"ಮೊದಲನೆಯದಾಗಿ, ಸ್ವಾಮಿ, ಬಲಪ್ರಯೋಗ ಕೇವಲ ತಾತ್ಕಲಿಕವಾದುದು ಎಂದು ಹೇಳಲು ನನಗೆ ಅನುಮತಿ ಕೊಡಿ. ಅದು ಕ್ಷಣಕಾಲ ಜನರನ್ನು ನಿಗ್ರಹಿಸಬಹುದು. ಆದರೆ ಅವರನ್ನು ಮತ್ತೆ ಮತ್ತೆ ನಿಗ್ರಹಿಸುವ ಅಗತ್ಯವನ್ನು ಅದು ಹೋಗಲಾಡಿಸದು; ಹೀಗೆ ನಿರಂತರವಾಗಿ ನಿಗ್ರಹಿಸುತ್ತಲೇ ಹೋಗಬೇಕಾದಂಥ ರಾಷ್ಟ್ರದಲ್ಲಿ ಆಡಳಿತ ಇರಲು ಸಾಧ್ಯವಿಲ್ಲ."

"ನನ್ನ ಮುಂದಿನ ಆಕ್ಷೇಪಣೆ ಅದರ ಅನಿಶ್ಚಿತತೆಯನ್ನು ಕುರಿತದ್ದಾಗಿದೆ. ಭೀತಿ ಸದಾ ಬಲದ ಪರಿಣಾಮವಲ್ಲ. ಶಸ್ತ್ರಾಸ್ತ್ರಗಳೇ ವಿಜಯವಲ್ಲ. ನೀವು ಜಯಪ್ರದವಾಗದಿದ್ದರೆ ನಿಮಗೆ ಸಂಪನ್ಮೂಲಗಳಿಲ್ಲ ಎಂದು ಅರ್ಥ. ಏಕೆಂದರೆ ಸಂಧಾನ ವಿಫಲವಾದರೆ ಬಲ ಪ್ರಬಲವಾಗುತ್ತದೆ. ಆದರೆ ಬಲ ವಿಫಲವಾದರೆ, ಸಂಧಾನಕ್ಕೆ ಮುಂದೆ ಯಾವ ಆಸೆಯೂ ಉಳಿಯುವುದಿಲ್ಲ. ಕೆಲ ವೇಳೆ ಶಕ್ತಿ ಮತ್ತು ಅಧಿಕಾರಗಳನ್ನು ದಯೆಯಿಂದ ಕೊಳ್ಳಬೇಕಾಗುತ್ತದೆ. ಆದರೆ ನಿಶ್ಶಕ್ತವೂ ಪರಾಜಿತವೂ ಆದ ಹಿಂಸಾಚಾರ ಎಂದೂ ಅವುಗಳನ್ನು ಭಿಕ್ಷೆಯಂತೆ ಬೇಡಿ ಪಡೆಯಲಾರದು."

"ಬಲ ಪ್ರಯೋಗಕ್ಕೆ ಮತ್ತೂ ಆಕ್ಷೇಪಣೆ ಏನೆಂದರೆ, ಅದನ್ನು ಉಳಿಸುವ ನಿಮ್ಮ ಪ್ರಯತ್ನದಿಂದಾಗಿ ಆ ಉದ್ದೇಶವನ್ನೇ ನೀವು ಊನಗೊಳಿಸುತ್ತೀರಿ. ನೀವು ಯಾವುದಕ್ಕಾಗಿ ಹೋರಾಡುತ್ತೀರೋ ಅದನ್ನು ನೀವು ಪಡೆಯುತ್ತೀರಿ. ಆದರೆ ಈ ಸಂಗ್ರಾಮದಲ್ಲಿ ಅದು ಅಪಮೌಲ್ಯವಾಗುತ್ತದೆ, ಕುಸಿಯುತ್ತದೆ, ವ್ಯರ್ಥವಾಗುತ್ತದೆ ಹಾಗೂ ನಾಶವಾಗುತ್ತದೆ."

ಭಿಕ್ಕುಗಳನ್ನು ಉದ್ದೇಶಿಸಿ ನೀಡಿದ ಉಪದೇಶದಲ್ಲಿ ಬುದ್ಧ ಧರ್ಮದ ಆಳ್ವಿಕೆಗೂ ಕಾನೂನಿನ ಆಳ್ವಿಕೆ ಅಂದರೆ ಬಲದ ಆಳ್ವಿಕೆಗೂ ಇರುವ ವ್ಯತ್ಯಾಸವನ್ನು ತೋರಿಸಿದ್ದಾನೆ. ಆ ಭ್ರಾತೃಗಳನ್ನು ಉದ್ದೇಶಿಸಿ ಹೇಳಿದ್ದಾನೆ:

(೨) ಸೋದರರೇ, ಒಂದಾನೊಂದು ಕಾಲದಲ್ಲಿ ಡಲ್ಹಿನೇಮಿ ಎಂಬ ಚಕ್ರವರ್ತಿಯಾದ ಮಹಾ ರಾಜಾಧಿರಾಜನಿದ್ದನು. ಅವನು ಧರ್ಮದಿಂದ ಆಳ್ವಿಕೆ ನಡೆಸುತ್ತಿದ್ದನು. ಭೂಮಂಡಲದ ಚತುರ್ ದಿಕ್ಕುಗಳಿಗೂ ಪ್ರಭುವಾಗಿದ್ದನು. ಅವನು ಮಹಾ ದಿಗ್ವಿಜಯಿ, ಪ್ರಜಾಪಾಲಕ ಆಗಿದ್ದನು. ಅವನು ದಿವ್ಯ ಚಕ್ರದ ಒಡೆಯನಾಗಿದ್ದನು. ಸಮುದ್ರ ತೀರದವರೆಗೂ ಚಾಚಿಕೊಂಡಿರುವ ಭೂಮಂಡಲವನ್ನು ಧೈರ್ಯದಿಂದಾಗಲೀ ಖಡ್ಗದಿಂದಾಗಲೀ ಗೆಲ್ಲದೆ ಧರ್ಮದಿಂದ ಗೆದ್ದು ಅದರ ಏಕಾಧಿಪತಿಯಾಗಿದ್ದನು.

(೩) ಸೋದರರೇ, ಈಗ ಅನೇಕ ವರ್ಷಗಳ ನಂತರ, ಅನೇಕ ಶತಮಾನಗಳ ನಂತರ, ಅನೇಕ ಸಹಸ್ರ ವರ್ಷಗಳ ನಂತರ, ಮಹಾರಾಜ ಡಲ್ಹಿನೇಮಿ ತನ್ನ ಅಧಿಕಾರಿಯನ್ನು ಕರೆದು ಆಜ್ಞಾಪಿಸಿದನು:

"ನೋಡು, ದಿವ್ಯ ಚಕ್ರ ಕೊಂಚ ಕುಸಿದಿದೆ. ತನ್ನ ಜಾಗದಿಂದ ಜಾರಿದೆ. ಅದನ್ನು ನೋಡಿ ನನಗೆ ಹೇಳು."

ಅದು ಅನೇಕಾನೇಕ ಶತಮಾನಗಳ ನಂತರ ತನ್ನ ಜಾಗದಿಂದ ಈಗ ಜರುಗಿತ್ತು. ಅದನ್ನು ನೋಡಿ ಅವನು ಮಹಾರಾಜ ಡಲ್ಹಿನೇಮಿಗೆ ಹೇಳಿದನು: "ಮಹಾಪ್ರಭು, ದಿವ್ಯಚಕ್ರ ಜರುಗಿರುವುದೂ ತನ್ನ ಸ್ಥಳದಿಂದ ಕುಸಿದಿರುವುದೂ ಸತ್ಯ."

ಸೋದರರೇ, ಮಹಾರಾಜ ಡಲ್ಹಿನೇಮಿ ತನ್ನ ಹಿರಿಯ ಮಗ ಯುವರಾಜನನ್ನು ಕರೆಸಿ ಹೀಗೆ ಹೇಳಿದನು:

"ನೋಡು, ಮಗು, ದಿವ್ಯಚಕ್ರ ಸ್ವಲ್ಪ ಕುಸಿದಿದೆ. ತನ್ನ ಜಾಗದಿಂದ ಜರುಗಿದೆ. ನನಗೆ ಈ ವಿಷಯ

ಗೊತ್ತಾಯಿತು; ದಿವ್ಯಚಕ್ರ ಕುಸಿದರೆ, ತನ್ನ ಜಾಗದಿಂದ ಜರುಗಿದರೆ ಮಹಾರಾಜನು ಬಹಳ ಕಾಲ ಬದುಕುವಂತಿಲ್ಲ. ನಾನು ಮಾನವ ಸುಖಭೋಗಗಳನ್ನೆಲ್ಲಾ ಅನುಭವಿಸಿದ್ದೇನೆ. ಈಗ ದಿವ್ಯಾನಂದವನ್ನು ಪಡೆಯುವ ಕಾಲ ಬಂದಿದೆ. ಬಾ ಮಗು, ಆಸೇತುಸಾಗರಪರ್ಯಂತವಾದ ಈ ಭೂಮಂಡಲವನ್ನು ಆಳಲು ಅಧಿಕಾರವನ್ನು ವಹಿಸಿಕೊ. ಆದರೆ ನಾನು ರುಂಡ ಮುಂಡನ ಮಾಡಿಸಿಕೊಂಡು, ಕಾಷಾಯ ವಸ್ತ್ರಧಾರಿಯಾಗಿ ಈ ಅರಮನೆಯಿಂದ ಅನಿಕೇತನ ರಾಜ್ಯಕ್ಕೆ ತೆರಳುತ್ತೇನೆ."

ಸೋದರರೇ, ಹೀಗೆ ಮಹಾರಾಜ ಡಳ್ಹನೇಮಿ ತನ್ನ ಹಿರಿಯ ಮಗನನ್ನು ಸಿಂಹಾಸನದ ಮೇಲೆ ಸಂಪ್ರದಾಯಾನುಸಾರವಾಗಿ ಸ್ಥಾಪಿಸಿ, ಮುಂಡನ ಮಾಡಿಸಿಕೊಂಡು, ಕಾಷಾಯ ವಸ್ತ್ರಧಾರಿಯಾಗಿ ಅರಮನೆಯಿಂದ ಅನಿಕೇತನ ರಾಜ್ಯಕ್ಕೆ ತೆರಳಿದನು. ಆದರೆ ರಾಜ ಸನ್ಯಾಸಿಯು ಹೋದ ಏಳು ದಿನಗಳ ನಂತರ ದಿವ್ಯಚಕ್ರವು ಅದೃಶ್ಯವಾಯಿತು.

(೪) ಆಗ ಅಧಿಕಾರಿಯು ಮಹಾರಾಜನ ಬಳಿ ಹೋಗಿ ಹೀಗೆಂದು ವಿನಂತಿಸಿದನು: "ಓ ಪ್ರಭು, ದಿವ್ಯಚಕ್ರ ಅದೃಶ್ಯವಾಗಿದೆ. ಇದು ಸತ್ಯ. ಪರಾಂಬರಿಸಬೇಕು" ಎಂದನು.

ಸೋದರರೇ, ಆಗ ಆ ಮಹಾರಾಜನು ಅದರಿಂದ ದುಃಖಾರ್ತನಾಗಿ ಶೋಕಭರಿತನಾದನು. ಆಗ ಅವನು ರಾಜಸನ್ಯಾಸಿಯ ಬಳಿ ಹೋಗಿ ವಿನಂತಿಸಿದನು: 'ತಂದೆಯೇ, ದಿವ್ಯಚಕ್ರ ಅದೃಶ್ಯವಾಗಿದೆ, ಇದು ಸತ್ಯವಾದ ಮಾತು' ಎಂದನು.

ಹೀಗೆ ಅನಭಿಷಿಕ್ತ ದೊರೆಯು ಹೇಳಲಾಗಿ, ರಾಜಸನ್ಯಾಸಿ ಉತ್ತರಿಸಿದನು: "ಮಗು, ದಿವ್ಯಚಕ್ರ ಅದೃಶ್ಯವಾಗಿದೆ ಎಂದು ಚಿಂತಿಸದಿರು. ಏಕೆಂದರೆ ಮಗು, ದಿವ್ಯಚಕ್ರ ನಿನ್ನ ಪಿತ್ರಾರ್ಜಿತ ಆಸ್ತಿಯಲ್ಲ. ಆದರೆ, ಸತ್ಯವಾಗಿ ನೀನು ದಿವ್ಯ ಚಕ್ರ ಪಥದಲ್ಲಿ ನಡೆದ ಶ್ರೇಷ್ಠರ ಹಾದಿಯನ್ನು ಅನುಸರಿಸು. (ಪ್ರಪಂಚದ ಸತ್ಯಸಂಧ ಸಾಮ್ರಾಟರು ತಮಗೆ ತಾವೇ ಇಟ್ಟುಕೊಂಡ ಕರ್ತವ್ಯದ ಉದಾತ್ತ ಆದರ್ಶವನ್ನು ಪಾಲಿಸು). ದಿವ್ಯ ಚಕ್ರ ಪಥವನ್ನು ಅನುಸರಿಸುವ ಸಾಮ್ರಾಟನ ಶ್ರೇಷ್ಠ ಕರ್ತವ್ಯವನ್ನು ನೀನು ಪಾಲಿಸಿ, ಹುಣ್ಣಿಮೆಯ ದಿನ ಶುಚಿರ್ಭೂತನಾಗಿ ಮೇಲಿನ ಮುಖ್ಯ ಮಾಳಿಗೆಯಲ್ಲಿ ಧರ್ಮಚಕ್ರಕ್ಕೆ ನೈವೇದ್ಯ ಅರ್ಪಿಸಿದರೆ, ಆಗ ದಿವ್ಯಚಕ್ರವು ತನ್ನ ಸಹಸ್ರ ಹಾರೆ ಕಾಲುಗಳು, ಪಟ್ಟಿ, ಗುಂಭ ಮತ್ತೆ ಉಳಿದೆಲ್ಲ ಭಾಗಗಳಿಂದ ಪೂರ್ಣವಾಗಿ ಮೈದೋರುತ್ತದೆ."

(೫) "ಆದರೆ, ತಂದೆ, ದಿವ್ಯಚಕ್ರ ಪಥವನ್ನು ಅನುಸರಿಸುವ ಸಾಮ್ರಾಟನ ಶ್ರೇಷ್ಠ ಕರ್ತವ್ಯವೇನು?"

"ಮಗು, ಇದು ನೀನು ಈ ಆದರ್ಶವನ್ನು (ಸತ್ಯ ಮತ್ತು ಧರ್ಮ) ನಂಬಿಕೊಂಡು, ಅದನ್ನು ಗೌರವಿಸಿ, ಪೂಜಿಸಿ, ಆರಾಧಿಸಿ ಅದಕ್ಕೆ ನಮನ ಸಲ್ಲಿಸಿ, ಪವಿತ್ರಗೊಳಿಸಿ, ನೀನೇ ಆದರ್ಶ ಧ್ವಜವಾಗಿ, ಆದರ್ಶಲಾಂಛನವಾಗಿ, ಈ ಆದರ್ಶವನ್ನೇ ನಿನ್ನ ಗುರುವನ್ನಾಗಿಟ್ಟುಕೊಂಡು, ನಿನ್ನ ಪ್ರಜೆಗಳಿಗೆ, ನಿನ್ನ ಸೇನೆಗೆ, ನಿನ್ನ ಶ್ರೇಷ್ಠರಿಗೆ, ಕನಿಷ್ಠರಿಗೆ, ಬ್ರಾಹ್ಮಣರಿಗೆ ಮತ್ತು ಗೃಹಸ್ಥರಿಗೆ, ಗ್ರಾಮ ಮತ್ತು ಪಟ್ಟಣ ವಾಸಿಗಳಿಗೆ, ಧಾರ್ಮಿಕ ಜಗತ್ತಿಗೆ, ಪಶುಪಕ್ಷಿಗಳಿಗೆ ನೀನು ಪಹರೆಯಾಗಿ, ಕಾವಲಾಗಿ, ರಕ್ಷಣೆ ನೀಡು. ನಿನ್ನ ರಾಜ್ಯದ ಎಲ್ಲೆಡೆ ಯಾವುದೇ ಕೇಡು ನಡೆಯದಿರಲಿ. ನಿನ್ನ ರಾಜ್ಯದಲ್ಲಿ ಯಾರೇ ಗರೀಬನಿದ್ದರೂ ಅವನಿಗೆ ಸಂಪತ್ತನ್ನು ನೀಡು."

"ಮಗು, ಆಮೇಲೆ ನಿನ್ನ ರಾಜ್ಯದಲ್ಲಿ ಇಂದ್ರಿಯಗಳ ಮತ್ತಿನಿಂದ ಉಂಟಾಗುವ ಬೇಜಾವಾಬ್ದಾರಿಯನ್ನು ತೊರೆದು, ಸಹನಾಸಕ್ತರೂ ದಯಾವಂತರೂ ಆಗಿ, ಪ್ರತಿಯೊಬ್ಬರೂ ಆತ್ಮ ನಿಗ್ರಹ ಮಾಡಿಕೊಂಡು, ಪ್ರತಿಯೊಬ್ಬರೂ ಆತ್ಮವಂತರಾಗಿ, ಪ್ರತಿಯೊಬ್ಬರೂ ಆತ್ಮರಕ್ಷಕರಾಗಿರುವ ಧರ್ಮಿಷ್ಠರಾಗಿ, ಕಾಲಾಕಾಲಕ್ಕೆ ನಿನ್ನ ಬಳಿ ಬಂದು ಯಾವುದು ಒಳ್ಳೆಯದು, ಯಾವುದು ಕೆಟ್ಟದ್ದು, ಯಾವುದು ಅಪರಾಧ ಯಾವುದು ಅಲ್ಲ, ಏನು

ಮಾಡಬಾರದು, ಅಂತಿಮವಾಗಿ ಯಾವ ಕಾರ್ಯ ಕಲ್ಯಾಣವನ್ನುಂಟುಮಾಡುತ್ತದೆ ಅಥವಾ ದುಃಖವನ್ನುಂಟುಮಾಡುತ್ತದೆ ಎಂಬುದಾಗಿ ನಿನ್ನನ್ನು ಪ್ರಶ್ನಿಸಿದರೆ ಅವರು ಹೇಳುವುದನ್ನು ನೀನು ಆಲಿಸಿ, ಅವರು ಕೆಟ್ಟದ್ದನ್ನು ಮಾಡದಂತೆ ತಡೆದು ಯಾವುದು ಒಳ್ಳೆಯದೋ ಅದನ್ನು ಮಾಡಬೇಕೆಂದು ಅವರಿಗೆ ನೀನು ಹೇಳಬೇಕು. ಮಗು, ಇದೇ ದಿವ್ಯಚಕ್ರ ಪಥವನ್ನು ಅನುಸರಿಸುವ ಸಾಮ್ರಾಟರ ಶ್ರೇಷ್ಠ ಕರ್ತವ್ಯಗಳು."

'ಹಾಗೆಯೇ ಆಗಲಿ, ತಂದೆ' ಎಂದು ಅನಭಿಷಿಕ್ತ ರಾಜನು ವಿನಯಪೂರ್ವಕವಾಗಿ ಹೇಳಿ ಅಂಥ ಸಾಮ್ರಾಟನ ಶ್ರೇಷ್ಠ ಕರ್ತವ್ಯಗಳನ್ನು ಪಾಲಿಸಿದನು. ಈ ರೀತಿ ನಡೆದುಕೊಂಡು ಹುಣ್ಣಿಮೆಯ ದಿನ ಅವನು ಶುಚಿರ್ಭೂತನಾಗಿ ಮೇಲಿನ ಮುಖ್ಯ ಮಾಳಿಗೆಯಲ್ಲಿ ದಿವ್ಯಚಕ್ರಕ್ಕೆ ನೈವೇದ್ಯ ಅರ್ಪಿಸಿದಾಗ ದಿವ್ಯಚಕ್ರವು ತನ್ನ ಸಹಸ್ರ ಹಾರೆ ಕಾಲುಗಳು, ಪಟ್ಟಿ, ಗುಂಭ ಮತ್ತೆಲ್ಲ ಉಳಿದ ಭಾಗಗಳಿಂದ ಪೂರ್ಣವಾಗಿ ಮೈದೋರಿತು. ಇದನ್ನು ಕಂಡು ರಾಜನಿಗೆ ಈ ರೀತಿ ಅನ್ನಿಸಿತು: "ಇಂಥ ಸಂದರ್ಭದಲ್ಲಿ ದಿವ್ಯಚಕ್ರವು ಇಡಿಯಾಗಿ ಕಾಣಿಸಿಕೊಂಡರೆ ಅಂಥ ರಾಜನು ಧರ್ಮಚಕ್ರ ಪ್ರವರ್ತಕ ಸಾಮ್ರಾಟನಾಗುತ್ತಾನೆ. ನಾನೂ ಕೂಡ ಪ್ರಪಂಚದ ಸಾಮ್ರಾಟನಾಗಬಹುದು."

(೬) ಸೋದರರೇ, ಆಗ ಮಹಾರಾಜನು ತನ್ನ ಪೀಠದಿಂದ ಎದ್ದು ತನ್ನ ಭುಜದ ಮೇಲಿದ್ದ ವಸ್ತ್ರವನ್ನು ಸರಿಸಿ ತನ್ನ ಎಡಗೈಯಿಂದ ಒಂದು ಕೊಡವನ್ನು ತೆಗೆದುಕೊಂಡು ಅದರ ನೀರನ್ನು ತನ್ನ ಬಲಗೈಯಿಂದ ದಿವ್ಯಚಕ್ರದ ಮೇಲೆ 'ಓ, ಚಕ್ರ ಪ್ರಭುವೆ, ಉರುಳಿ! ಓ ಚಕ್ರ ಪ್ರಭುವೆ, ಮುಂದೆ ಉರುಳಿ ಜಯಿಸು!' ಎಂದು ಹೀಗೆ ಹೇಳುತ್ತಾ ನೀರನ್ನು ಚಿಮುಕಿಸಿದನು.

ಸೋದರರೇ, ಆಗ ದಿವ್ಯಚಕ್ರವು ಮುಂದಕ್ಕೆ ಚಲಿಸಿ ಪೂರ್ವ ದಿಕ್ಕಿಗೆ ಹೋಯಿತು, ಧರ್ಮಪ್ರವರ್ತಕ ರಾಜನು ಅದನ್ನು ಅನುಸರಿಸಿ ತನ್ನ ಸೈನ್ಯ, ಅಶ್ವದಳ, ರಥಗಳು, ಆನೆಗಳು ಮತ್ತು ಪದಾತಿಗಳ ಜೊತೆ ಹೊರಟನು. ಸೋದರರೇ, ಆಗ ಚಕ್ರವು ಎಲ್ಲೆಲ್ಲಿ ನಿಂತಿತೋ ಅಲ್ಲೇ ಯುದ್ಧ ವೀರನಾದ ಆ ಮಹಾರಾಜನು ಬೀಡು ಬಿಟ್ಟನು, ಅವನ ಚತುರಂಗ ಸೇನೆಯೂ ನಿಂತಿತು. ಆಗ ಪೂರ್ವ ಪ್ರದೇಶದಲ್ಲಿದ್ದ ಎಲ್ಲಾ ಎದುರಾಳಿ ರಾಜರುಗಳೂ ಆ ಸಾಮ್ರಾಟನಲ್ಲಿಗೆ ಬಂದು ಹೀಗೆ ವಿನಂತಿಸಿಕೊಂಡರು. "ಓ ಮಹಾಪ್ರಭುವೆ, ದಯಮಾಡಿಸಿ! ಮಹಾಪ್ರಭುವಿಗೆ ಸುಸ್ವಾಗತ! ಸರ್ವವೂ ನಿಮ್ಮದೇ. ಮಹಾಪ್ರಭು! ನಮಗೆ ತಿಳುವಳಿಕೆ ನೀಡಬೇಕು, ಮಹಾಪ್ರಭು!"

ಯುದ್ಧವೀರನಾದ ಸಾಮ್ರಾಟ ರಾಜನು ಇಂತೆಂದನು: "ನೀವು ಯಾವ ಜೀವಿಯನ್ನೂ ಕೊಲ್ಲಬಾರದು. ನಿಮಗೆ ಕೊಡದಿರುವಂಥ ಯಾವುದನ್ನೂ ನೀವು ತೆಗೆದುಕೊಳ್ಳಬಾರದು. ದೇಹದ ಆಸೆ ಆಕಾಂಕ್ಷೆಗಳಿಗೆ ವಶವಾಗಿ ಯಾವ ತಪ್ಪನ್ನೂ ಮಾಡಬಾರದು. ನೀವು ಸುಳ್ಳು ಹೇಳಕೂಡದು. ನೀವು ಮದ್ಯಪಾನ ಮಾಡಕೂಡದು. ಇದುವರೆಗೆ ನೀವು ಅನುಭವಿಸುತ್ತಾ ಬಂದಿರುವಂತೆ ನಿಮ್ಮ ಸಂಪತ್ತನ್ನು ಅನುಭವಿಸಿ."

(೭) ಸೋದರರೇ, ಆಗ ಪಶ್ಚಿಮ ಸಾಗರಕ್ಕೆ ಧುಮುಕಿದ್ದ ದಿವ್ಯಚಕ್ರವು ಮೇಲೆದ್ದು ಮತ್ತೆ ದಕ್ಷಿಣ ಭೂಭಾಗದ ಕೆಳಗೆ ಚಲಿಸಿತು..... (ಅಲ್ಲಿ ಪೂರ್ವದಲ್ಲಿ ನಡೆದಂತೆಯೇ ಎಲ್ಲವೂ ನಡೆಯಿತು). ಅದೇ ರೀತಿಯಲ್ಲಿ ದಿವ್ಯಚಕ್ರವು ದಕ್ಷಿಣ ಸಾಗರಕ್ಕೆ ಧುಮುಕಿ ಮೇಲೆದ್ದು ಮತ್ತೆ ಪಶ್ಚಿಮ ಪ್ರದೇಶದ ಕಡೆಗೆ ಉರುಳಿತು... ಆಮೇಲೆ ಉತ್ತರದ ಕಡೆಗೆ ಅಲ್ಲಿಯೂ ಕೂಡ ದಕ್ಷಿಣ ಮತ್ತು ಪಶ್ಚಿಮ ಪ್ರಾಂತ್ಯಗಳಲ್ಲಿ ನಡೆದಂತೆಯೇ ನಡೆಯಿತು.

ಆಗ ಆಸೇತುಪರ್ಯಂತ ಭೂಖಂಡವನ್ನೆಲ್ಲಾ ಜಯಿಸುತ್ತಾ ನಡೆದ ದಿವ್ಯಚಕ್ರವು ರಾಜಧಾನಿಗೆ ಹಿಂದಿರುಗಿತು. ಧರ್ಮಚಕ್ರಪ್ರವರ್ತನಾದ ಮಹಾರಾಜನ ಅಂತಃಪುರದ ಪ್ರವೇಶದ್ವಾರದಲ್ಲಿದ್ದ ನ್ಯಾಯಾಲಯದ ಮುಂದೆ ಅದು ಅಲ್ಲೇ ಸ್ಥಿರವಾಗಿ ನೆಟ್ಟಿದೆಯೋ ಎಂಬಂತೆ ನಿಂತು ಲೋಕ ಸಾಮ್ರಾಟನಾದ ಮಹಾರಾಜನ ಅಂತಃಪುರದ ಮುಂಭಾಗವನ್ನು ತನ್ನ ವೈಭವದಿಂದ ಬೆಳಗಿತು.

(೮) ಸೋದರರೇ, ಎರಡನೆಯ ಮಹಾರಾಜನೂ ಕೂಡ ಧರ್ಮಚಕ್ರ ಪರ್ವತಕನಾದ.... ಮತ್ತು ಮೂರನೆಯವನು... ಅನಂತರ ನಾಲ್ಕನೆಯವನು... ಆಮೇಲೆ ಐದನೆಯವನು..... ತದನಂತರ ಆರನೆಯವನು.... ಮತ್ತು ಸರ್ವ ಯುದ್ಧ ದಿಗ್ವಿಜಯಿಯಾದ ಏಳನೆಯ ಮಹಾರಾಜನು ಅನೇಕ ವರ್ಷಗಳಾದ ಮೇಲೆ, ಅನೇಕ ಶತಮಾನಗಳಾದ ಮೇಲೆ, ಅನೇಕ ಸಹಸ್ರ ವರ್ಷಗಳಾದ ಮೇಲೆ ತನ್ನ ಕಾವಲುಗಾರರನ್ನು ಕರೆದು ಹೀಗೆ ಆದೇಶಿಸಿದನು:

"ದಿವ್ಯಚಕ್ರ ಕುಸಿದಿದೆಯೇ ನೋಡು, ತನ್ನ ಜಾಗದಿಂದ ಜರುಗಿದೆಯೇ, ನೋಡಿ ಬಂದು ಹೇಳು."

"ಆಗಲಿ, ಮಹಾಪ್ರಭು, ಎಂದು ಅವನು ಉತ್ತರಿಸಿದನು."

ಹೀಗೆ ಅನೇಕ ವರ್ಷಗಳಾದ ಮೇಲೆ, ಅನೇಕ ಶತಮಾನಗಳಾದ ಮೇಲೆ, ಅನೇಕ ಸಹಸ್ರ ವರ್ಷಗಳಾದ ಮೇಲೆ ಅವನು ದಿವ್ಯಚಕ್ರವು ಕುಸಿದಿದ್ದನ್ನು ತನ್ನ ಜಾಗದಿಂದ ಜರುಗಿದ್ದನ್ನು ಕಂಡನು. ಹಾಗೆ ನೋಡಿ ಸರ್ವಯುದ್ಧ ದಿಗ್ವಿಜಯಿಯಾದ ಮಹಾರಾಜನ ಬಳಿಗೆ ಹೋಗಿ ಬಿನ್ನವಿಸಿದನು:

ಆಗ ಆ ರಾಜನು ಡೆಲ್ಹಿನೇಮಿ ಮಾಡಿದಂತೆಯೇ ಮಾಡಿದನು. ರಾಜ ಸನ್ಯಾಸಿ ಅಲ್ಲಿಂದ ತೆರಳಿದ ಏಳುದಿನಗಳ ನಂತರ ದಿವ್ಯಚಕ್ರವು ಕಣ್ಮರೆಯಾಯಿತು.

ಆಗ ಒಬ್ಬನು ಹೋಗಿ ರಾಜನಿಗೆ ತಿಳಿಸಿದನು. ಆಗ ಆ ಮಹಾರಾಜನು ದುಃಖಿತನಾಗಿ ಶೋಕಭರಿತನಾದನು. ಆದರೆ ಅವನು ರಾಜಸನ್ಯಾಸಿಯ ಬಳಿ ಹೋಗಿ ಸರ್ವ ಯುದ್ಧ ದಿಗ್ವಿಜಯಿಯಾದ ಸಾಮ್ರಾಟನ ಶ್ರೇಷ್ಠ ಕರ್ತವ್ಯವು ಏನೆಂದು ತಿಳಿದುಕೊಳ್ಳಲಿಲ್ಲ. ಆದರೆ ನಿಜವಾಗಿಯೂ ಅವನು ತನ್ನ ವಿಚಾರಗಳಿಂದ ತನ್ನ ಪ್ರಜೆಗಳನ್ನು ಆಳಿದನು. ಅವರು ಹಿಂದಿಗಿಂತ ಭಿನ್ನವಾಗಿ ಆಳಲ್ಪಟ್ಟರು. ಸಾಮ್ರಾಟ ಚಕ್ರವರ್ತಿಯ ಶ್ರೇಷ್ಠ ಕರ್ತವ್ಯಗಳನ್ನು ಪಾಲಿಸಿದ ಹಿಂದಿನ ಮಹಾರಾಜರುಗಳ ಕಾಲದಲ್ಲಿ ಅಭಿವೃದ್ಧಿ ಹೊಂದಿದಂತೆ ಈಗ ಹೊಂದಲಿಲ್ಲ.

ಸೋದರರೇ, ಆಗ ಮಂತ್ರಿಗಳು, ಆಸ್ಥಾನಿಕರು, ಹಣಕಾಸಿನ ಅಧಿಕಾರಿಗಳು, ಕಾವಲುಗಾರರು, ದ್ವಾರಪಾಲಕರು ಹಾಗೂ ಮಂತ್ರಪಠನದಿಂದ ಹೊಟ್ಟೆ ಹೊರೆದುಕೊಳ್ಳುತ್ತಿದ್ದವರು ಮಹಾರಾಜನಲ್ಲಿಗೆ ಬಂದು ಇಂತೆಂದು ನುಡಿದರು:

"ಓ, ಮಹಾಪ್ರಭು, ಶ್ರೇಷ್ಠ ಧರ್ಮವನ್ನು ಪಾಲಿಸಿದ ಹಿಂದಿನ ಮಹಾರಾಜರುಗಳಿಗಿಂತ ಭಿನ್ನವಾಗಿ ತಾವು ತಮ್ಮ ವಿಚಾರಗಳಿಂದಲೇ ತಮ್ಮ ಪ್ರಜೆಗಳನ್ನು ಪಾಲಿಸುತ್ತಿರುವುದರಿಂದ ಅವರು ಏಳಿಗೆ ಹೊಂದುತ್ತಿಲ್ಲ. ಈಗ ತಮ್ಮ ರಾಜ್ಯ ಮಂತ್ರಿಗಳು, ಆಸ್ಥಾನಿಕರು, ಹಣಕಾಸಿನ ಅಧಿಕಾರಿಗಳು, ಪಹರೆಯವರು ಮತ್ತು ರಕ್ಷಕರು ಹಾಗೂ ಮಂತ್ರ ಪಠನದಿಂದ ಬದುಕುವವ ನಾವೆಲ್ಲರೂ ಚಕ್ರವರ್ತಿ ಸಾಮ್ರಾಟನ ಶ್ರೇಷ್ಠ ಕರ್ತವ್ಯವನ್ನು ತಿಳಿದವರಾಗಿದ್ದೇವೆ. ಹೇ ಮಹಾಪ್ರಭು, ಆ ಬಗ್ಗೆ ಆಲಿಸುವುದಾದರೆ ಅದನ್ನು ತಮ್ಮ ಸನ್ನಿಧಿಗೆ ಒಪ್ಪಿಸುತ್ತೇವೆ."

(೯) ಆಗ, ಸೋದರರೇ, ಮಹಾರಾಜನು ಮಂತ್ರಿಗಳು ಮತ್ತು ಉಳಿದವರನ್ನೆಲ್ಲಾ ಕೂರುವಂತೆ ತಿಳಿಸಿದನು, ಸರ್ವ ಶಕ್ತ ಸಾಮ್ರಾಟನ ಶ್ರೇಷ್ಠ ಕರ್ತವ್ಯದ ಬಗ್ಗೆ ಅವರನ್ನು ಪ್ರಶ್ನಿಸಿದನು. ಅವರು ಅವನಿಗೆ ಅದನ್ನು ಸ್ಪಷ್ಟಪಡಿಸಿದರು. ಅವರ ಮಾತನ್ನು ಕೇಳಿ ಅವನು ಸೂಕ್ತ ರಕ್ಷಣೆಯನ್ನು ಒದಗಿಸಿದನು. ಆದರೆ ಅವನು ನಿರ್ಗತಿಕರಿಗೆ ಸಂಪತ್ತನ್ನು ಕೊಡಲಿಲ್ಲ. ಹಾಗಾಗಿ ಬಡತನ ವ್ಯಾಪಿಸಿತು.

ಹೀಗೆ ದಾರಿದ್ರ್ಯ ಹೆಚ್ಚಿದಾಗ, ಇತರರು ತನಗೆ ಕೊಡದುದನ್ನು ಯಾರೋ ಒಬ್ಬ ತಾನೇ ತೆಗೆದುಕೊಂಡನು. ಅದನ್ನೇ ಜನ ಕಳ್ಳತನ ಎನ್ನುತ್ತಾರೆ. ಅವರು ಅವನನ್ನು ಹಿಡಿದು ರಾಜನ ಮುಂದೆ ಎಳೆತಂದು ಹೇಳಿದರು. "ಮಹಾಪ್ರಭು, ಇವನು ತನಗೆ ಕೊಡದೇ ಇದ್ದುದನ್ನು ತೆಗೆದುಕೊಂಡಿದ್ದಾನೆ. ಅದು ಕಳ್ಳತನ."

ಆಗ ರಾಜನು ಆ ಮನುಷ್ಯನಿಗೆ ಇಂತೆಂದನು: "ಅಯ್ಯಾ, ನೀನು ಯಾರೂ ಕೊಡದಿದ್ದನ್ನು ತೆಗೆದುಕೊಂಡೆಯಾ? ಜನ ಹೇಳುವಂತೆ ನೀನು ಕಳ್ಳತನ ಮಾಡಿದೆಯಾ?"

"ನಿಜ, ಮಹಾಪ್ರಭು."

"ಏಕೆ ಮಾಡಿದೆ?"

"ಓ, ಮಹಾಪ್ರಭುವೆ, ಬದುಕಲು ನನಗೇನೂ ಇಲ್ಲ." ಆಗ ಮಹಾರಾಜನು ಅವನಿಗೆ ಸಂಪತ್ತನ್ನು ಕೊಟ್ಟು ಹೀಗೆ ಹೇಳಿದನು: "ಈ ಸಂಪತ್ತಿನಿಂದ ನೀನು ಜೀವನ ಮಾಡು. ನಿನ್ನ ತಂದೆತಾಯಿಗಳನ್ನು ಮಡದಿ ಮಕ್ಕಳನ್ನು ರಕ್ಷಿಸು. ನಿನ್ನ ವ್ಯವಹಾರ ಮಾಡು."

"ಹಾಗೆಯೇ ಆಗಲಿ. ಮಹಾಪ್ರಭು" ಆ ಮನುಷ್ಯ ಉತ್ತರಿಸಿದನು.

೧೦. ಸೋದರರೇ, ಈಗ ಇನ್ನೊಬ್ಬ ಮನುಷ್ಯ, ತನಗೆ ಕೊಡದಿದ್ದನ್ನು ಕಳ್ಳತನದಿಂದ ಎತ್ತಿಕೊಂಡನು. ಅವನನ್ನು ಹಿಡಿದು ರಾಜನ ಬಳಿ ಎಳೆತಂದು ಹೇಳಿದರು: "ಮಹಾಪ್ರಭು, ಇವನು ತನಗೆ ಕೊಡದಿದ್ದನ್ನು ಕಳ್ಳತನದಿಂದ ತೆಗೆದುಕೊಂಡಿದ್ದಾನೆ."

ಹಿಂದಿನ ಮನುಷ್ಯನಿಗೆ ಹೇಳಿದಂತೆಯೇ ಹಾಗೂ ಮಾಡಿದಂತೆಯೇ ಮಹಾರಾಜ ಇವನ ವಿಷಯದಲ್ಲೂ ನಡೆದುಕೊಂಡನು.

೧೧. ಸೋದರರೇ, ಆಗ, ಕೊಡದುದನ್ನು ಕಳ್ಳತನದಿಂದ ತೆಗೆದುಕೊಂಡವರಿಗೆ ರಾಜ ಸಂಪತ್ತು ಕೊಡುತ್ತಾನೆಂದು ಜನ ಕೇಳಿದರು. ನಮಗೆ ಕೊಡದುದನ್ನು ಕಳ್ಳತನದಿಂದ ನಾವೂ ತೆಗೆದುಕೊಳ್ಳೋಣ ಎಂದು ಅವರು ಆಲೋಚಿಸಿದರು.

ಈಗ ಯಾರೋ ಹಾಗೆ ಮಾಡಿದ. ಅವನನ್ನು ಹಿಡಿದುಕೊಂಡು ರಾಜನ ಬಳಿ ಕರೆತಂದಾಗ ರಾಜನು ಏತಕ್ಕಾಗಿ ಕದ್ದೆ ಎಂದು ಹಿಂದಿನಂತೆಯೇ ಪ್ರಶ್ನಿಸಿದನು.

"ಏಕೆಂದರೆ, ಮಹಾ ಪ್ರಭುವೆ, ನನ್ನನ್ನು ನಾನು ಸಾಕಿಕೊಳ್ಳಲಾರೆ."

"ಆಗ ದೊರೆ ಯೋಚಿಸಿದನು: ಕೊಡದುದನ್ನು ಕಳ್ಳತನದಿಂದ ತೆಗೆದುಕೊಂಡವರಿಗೆಲ್ಲಾ ನಾನು ಸಂಪತ್ತು ಕೊಡುತ್ತಾ ಹೋದರೆ ಕಳ್ಳತನ ಹೆಚ್ಚುತ್ತದೆ. ಈಗ ಇದನ್ನು ನಾನು ಅಂತಿಮವಾಗಿ ನಿಲ್ಲಿಸಿ ಅವನಿಗೆ ಶಿಕ್ಷೆ ವಿಧಿಸಿ, ಅವನ ಶಿರಶ್ಛೇದನ ಮಾಡಿಸುತ್ತೇನೆ."

ಆದ್ದರಿಂದ ಅವನು ತನ್ನ ಭಟ್ಟನಿಗೆ ಹೇಳಿದ: "ನೋಡೋ ಇಲ್ಲಿ! ಈ ಮನುಷ್ಯನ ಕೈಗಳನ್ನು ಹಿಂದಕ್ಕೆ ಗಟ್ಟಿಯಾದ ಹಗ್ಗದಿಂದ ಬಿಗಿಯಾಗಿ ಕಟ್ಟಿ ಅವನ ತಲೆಬೋಳಿಸಿ, ರಸ್ತೆ ರಸ್ತೆಗಳಲ್ಲಿ, ಬೀದಿಬೀದಿಗಳಲ್ಲಿ, ತಮಟೆ ಬಡಿಯುತ್ತಾ ಇವನನ್ನು ದಕ್ಷಿಣ ದ್ವಾರದ ಮೂಲಕ ಪಟ್ಟಣದ ದಕ್ಷಿಣ ದಿಕ್ಕಿಗೆ ಎಳೆದುಕೊಂಡು ಹೋಗಿ ಅವನಿಗೆ ಉಗ್ರ ಶಿಕ್ಷೆಯಾದ ಶಿರಶ್ಛೇದನವನ್ನು ಮಾಡಿ. ಕಳ್ಳತನವನ್ನು ಕೊನೆಗಾಣಿಸಿ."

"ಹಾಗೆಯೇ ಆಗಲಿ, ಮಹಾಪ್ರಭು" ಅವನ ಭಟರು ಉತ್ತರಿಸಿ ಅವನ ಆಜ್ಞೆಗಳನ್ನು ಕಾರ್ಯರೂಪಕ್ಕಿಳಿಸಿದರು.

೧೨. ಸೋದರರೇ, ಈಗ, ಕೊಡದುದನ್ನು ಕಳ್ಳತನದಿಂದ ತೆಗೆದುಕೊಂಡರೆ ಮರಣದಂಡನೆ ವಿಧಿಸುತ್ತಾನೆಂದು ಜನರಿಗೆ ಗೊತ್ತಾಯಿತು. ಇದನ್ನು ಕೇಳಿ ಅವರಂದುಕೊಂಡರು: "ಈಗ ನಾವು ಕೂಡ ಅವರಿಗಾಗಿ ಹರಿತವಾದ ಖಡ್ಗಗಳನ್ನು ಸಿದ್ಧಮಾಡಿ ಇಟ್ಟುಕೊಳ್ಳೋಣ. ನಮಗೆ ಕೊಡದೇ ಇರುವುದನ್ನು ಅವರಿಂದ ತೆಗೆದುಕೊಂಡರೆ ಅವರೇ ಹೇಳುವಂತೆ ಅವರಿಗೇ ಅತ್ಯಂತ ಉಗ್ರ ಶಿಕ್ಷೆಯಾದ ಮರಣದಂಡನೆಯನ್ನು ವಿಧಿಸಿ ಅವರಿಗೆ ಇತಿಶ್ರೀ ಹೇಳೋಣ."

ಅವರು ಹರಿತವಾದ ಖಡ್ಗಗಳನ್ನು ಮಾಡಿಕೊಂಡು ಗ್ರಾಮ, ಪಟ್ಟಣ, ನಗರಗಳನ್ನು ಕೊಳ್ಳೆ ಹೊಡೆಯುತ್ತಾ ದರೋಡೆ ಕೆಲಸಕ್ಕೆ ಇಳಿದರು. ಆಮೇಲೆ ಅವರು ಯಾರನ್ನೂ ಲೂಟಿ ಮಾಡಿದರೋ ಅವರ ತಲೆಗಳನ್ನು ಕತ್ತರಿಸಿ ಹಾಕಿದರು.

೧೩. ಸೋದರರೇ, ಹೀಗೆ, ನಿರ್ಗತಿಕರಿಗೆ ಅಗತ್ಯ ವಸ್ತುಗಳನ್ನು ಕೊಡದಿದ್ದರೆ ಕಡು ಬಡತನ, ದುಃಖ ವಿಪುಲವಾಗುತ್ತದೆ. ಬಡತನ ಹೆಚ್ಚಿದ್ದರಿಂದ ಕಳ್ಳತನ ಹೆಚ್ಚಿತು, ಕಳ್ಳತನ ಹೆಚ್ಚಿದ್ದರಿಂದ ಹಿಂಸಾಚಾರ ಹೆಚ್ಚಿತು. ಹಿಂಸಾಚಾರ ಹೆಚ್ಚಿದ್ದರಿಂದ ಜೀವನಾಶ ಸರ್ವೇಸಾಮಾನ್ಯವಾಯಿತು. ಕೊಲೆ ಹೆಚ್ಚಿದ್ದರಿಂದ ಆ ಜನರ ಆಯು ಪ್ರಮಾಣವೂ ಅವರ ಜೀವನ ಸೌಂದರ್ಯವೂ ಕುಗ್ಗಿತು.

ಸೋದರರೇ, ಈಗ ಆ ಆಯುಃ ಪ್ರಮಾಣ ಕಡಿಮೆಯಾದ ಜನರಲ್ಲಿ ಒಬ್ಬ ತನಗೆ ಕೊಡದುದನ್ನು ಕಳ್ಳತನದಿಂದ ತೆಗೆದುಕೊಂಡನು. ಹಿಂದೆ ಮಾಡಿದಂತೆ ಅವನನ್ನು ಕೂಡ ರಾಜನ ಮುಂದೆ ತಂದು ಅಪರಾಧಿಯಾಗಿ ನಿಲ್ಲಿಸಿದರು. "ನೀನು ಕದ್ದದ್ದು ನಿಜವೇ?" ಎಂದು ರಾಜ ಪ್ರಶ್ನಿಸಿದ.

"ಇಲ್ಲ, ಮಹಾಪ್ರಭೂ, ಇಲ್ಲ. ಅವರು ಬೇಕೆಂತಲೇ ಸುಳ್ಳು ಹೇಳುತ್ತಾರೆ."

೧೪. ಹೀಗೆ ಜೀವನಾವಶ್ಯಕ ವಸ್ತುಗಳನ್ನು ನಿರ್ಗತಿಕರಿಗೆ ಕೊಡದೆ ಹೋದುದರಿಂದ ಬಡತನ.... ಕಳ್ಳತನ.... ಹಿಂಸಾಚಾರ.... ಕೊಲೆ..... ಸುಳ್ಳು ಸಾಮಾನ್ಯವಾಗುವವರೆಗೂ ಹೆಚ್ಚಿತು.

ಮತ್ತೆ ಯಾರೋ ಒಬ್ಬ ರಾಜನ ಬಳಿ ಬಂದು ಹೀಗೆಂದು ಹೇಳಿದನು: "ಮಹಾಪ್ರಭು, ಯಾರೋ ಒಬ್ಬ ತನಗೆ ಕೊಡದುದನ್ನು ತೆಗೆದುಕೊಂಡಿದ್ದಾನೆ" ಎಂದು ಅವನ ಬಗ್ಗೆ ಕೆಟ್ಟದ್ದು ನುಡಿದನು.

೧೫. ಸೋದರರೇ, ಹೀಗೆ, ಜೀವನಾವಶ್ಯಕ ವಸ್ತುಗಳು ನಿರ್ಗತಿಕರಿಗೆ ಸಿಗದೇ ಹೋದುದರಿಂದ ಬಡತನ.... ಕಳ್ಳತನ.... ಹಿಂಸಾಚಾರ.... ಕೊಲೆ.... ಸುಳ್ಳು... ಕೆಟ್ಟದ್ದು ನುಡಿಯುವುದು ಹೆಚ್ಚಿತು.

೧೬. ಸುಳ್ಳು ಹೇಳುವುದರಿಂದ ವ್ಯಭಿಚಾರ ಬೆಳೆಯಿತು.

೧೭. ನಿರ್ಗತಿಕರಿಗೆ ಜೀವನಾವಶ್ಯಕ ವಸ್ತುಗಳನ್ನು ಕೊಡದೇ ಹೋದುದರಿಂದ ಬಡತನ...ಕಳ್ಳತನ.... ಹಿಂಸಾಚಾರ... ಕೊಲೆ... ಸುಳ್ಳು.... ಕೆಟ್ಟದ್ದು ನುಡಿಯುವುದು ಅನೈತಿಕತೆ ಹೆಚ್ಚಿತು.

೧೮. ಸೋದರರೇ, ಅವರಲ್ಲಿ, ಮೂರು ವಿಷಯಗಳು ಅಂದರೆ ಅಕ್ರಮ ಸಂಬಂಧ, ದುರಾಸೆ ಮತ್ತು ವಿಕೃತ ಕಾಮ ಹೆಚ್ಚಿತು.

ಆಗ ಈ ಸಂಗತಿಗಳೆಲ್ಲ ಹೆಚ್ಚಿದ್ದರಿಂದ ತಂದೆತಾಯಿಗಳ ಮೇಲಿನ ಪೂಜ್ಯಭಾವನೆ, ಸಾಧುಸಂತರ ಬಗ್ಗೆ ಭಕ್ತಿ, ಪಂಗಡದ ಮುಖಂಡನ ಬಗ್ಗೆ ಗೌರವ ಇಲ್ಲವಾಯಿತು.

೧೯. ಸೋದರರೇ, ಆ ಜನರ ಸಂತತಿಗೆ ಕೇವಲ ಹತ್ತು ವರ್ಷ ಆಯುಃ ಪ್ರಮಾಣ ಇರುವ ಕಾಲ ಬರುತ್ತದೆ. ಆ ಆಯುಃ ಪ್ರಮಾಣದ ಜನರಲ್ಲಿ ಐದು ವರ್ಷದ ಕನ್ಯೆಯರಿಗೆ ಮದುವೆ ಮಾಡಬೇಕಾಗುತ್ತದೆ. ಅಂಥ ಜನರಲ್ಲಿ ಈ ಬಗೆಯ ಅಭಿರುಚಿಗಳೆಲ್ಲ ಇಲ್ಲವಾಗುತ್ತದೆ. ತುಪ್ಪ, ಬೆಣ್ಣೆ, ಎಳ್ಳೆಣ್ಣೆ, ಸಕ್ಕರೆ, ಲವಣದ ರುಚಿ ಹೊರಟುಹೋಗುತ್ತದೆ. ಅಂಥ ಜನರಲ್ಲಿ ಕುದ್ರೂಸದ ಅಕ್ಕಿ ಪ್ರಧಾನ ಆಹಾರವಾಗುತ್ತದೆ. ಈಗ ಅನ್ನ ಮತ್ತು ಸಾಂಬಾರು ಹೇಗೆ ಪ್ರಧಾನ ಆಹಾರವಾಗಿದೆಯೋ ಹಾಗೆಯೇ ಆಗ ಕುದ್ರೂಸದ ಅಕ್ಕಿ ಪ್ರಧಾನ ಆಹಾರವಾಗಿರುತ್ತದೆ. ಅಂಥ ಜನರಲ್ಲಿ ನಡೆ ನುಡಿಯ ಹತ್ತು ನೈತಿಕ ಅಂಶಗಳು ಸಂಪೂರ್ಣವಾಗಿ ಕಾಣೆಯಾಗುತ್ತವೆ, ಚಟುವಟಿಕೆಯ ಹತ್ತು ಅನೈತಿಕ ಅಂಶಗಳು ವಿಪರೀತವಾಗಿ ವರ್ಧಿಸುತ್ತವೆ. ಅಂಥ ಜನರಲ್ಲಿ ನೀತಿಯ ಮಾತೇ ಇರುವುದಿಲ್ಲ. ನೀತಿಯ ನಿಯೋಗಿಗಳೂ ಇರುವುದಿಲ್ಲ. ಸೋದರರೇ, ಈ ಕಾಲದಲ್ಲಿ ಮಾತಾಪಿತೃಗಳು ಮತ್ತು ಗುರುಜನರ ಬಗ್ಗೆ ಭಕ್ತಿಯುಳ್ಳವರಿಗೂ, ಸಾಧುಸಂತರ ಬಗ್ಗೆ

ಶ್ರದ್ಧೆಯುಳ್ಳವರಿಗೂ, ಬುಡಕಟ್ಟುಗಳ ಮುಖಂಡರಿಗೆ ಗೌರವ ತೋರಿಸುವವರಿಗೂ ಸನ್ಮಾನ, ಸ್ತುತಿ ಲಭಿಸುವಂತೆ ಆ ಜನರಲ್ಲಿ ಮಾತಾಪಿತೃಗಳು ಮತ್ತು ಧಾರ್ಮಿಕ ಜನರ ಬಗ್ಗೆ ಗೌರವವಿಲ್ಲದವರಿಗೂ, ಬುಡಕಟ್ಟು ಮುಖಂಡನಿಗೆ ಗೌರವ ತೋರದವರಿಗೂ ಗೌರವ ಸ್ತುತಿಗಳು ಲಭ್ಯವಾಗುತ್ತವೆ.

೨೦. ಸೋದರರೇ, ಅಂಥ ಜನರಲ್ಲಿ ತಾಯಿಯ ಜೊತೆಯಾಗಲೀ ಅಥವಾ ತಾಯಿಯ ತಂಗಿಯ ಜೊತೆಯಾಗಲೀ ಅಥವಾ ತಾಯಿಯ ನಾದಿನಿಯ ಜೊತೆಯಾಗಲೀ ಅಥವಾ ಗುರುಪತ್ನಿಯರ ಜೊತೆಯಾಗಲೀ ಅಥವಾ ತಂದೆಯ ಅತ್ತಿಗೆಯ ಜೊತೆಯಾಗಲೀ, ಮದುವೆ ನಿಷಿದ್ಧವೆಂಬ ಗೌರವ ಭಾವನೆಗಳಿಗೆ ಆ ಜನರಲ್ಲಿ ಸ್ಥಾನವಿಲ್ಲ. ಆಡು, ಕುರಿ, ಕೋಳಿ, ಹಂದಿ, ನಾಯಿ, ನರಿಗಳಲ್ಲಿರುವಂತೆ ನೀತಿಗೆಟ್ಟ ಲೈಂಗಿಕತೆಗೆ ಪ್ರಪಂಚ ಗುರಿಯಾಗುತ್ತದೆ.

ಸೋದರರೇ, ಅಂಥ ಜನರಲ್ಲಿ ಪರಸ್ಪರ ಕಡು ದ್ವೇಷವೇ ನಿಯಮವಾಗುತ್ತದೆ, ತೀವ್ರ ಮತ್ಸರ, ತೀವ್ರ ವೈರತ್ವ, ತನ್ನ ಕಂದನನ್ನೇ ಕೊಲ್ಲಲು ತಾಯಿಗೆ, ತನ್ನ ತಂದೆಯನ್ನೇ ಕೊಲ್ಲಲು ಮಗುವಿಗೆ, ಸೋದರ ಸೋದರನನ್ನು ಕೊಲ್ಲಲು, ಸೋದರ ಸೋದರಿಯನ್ನು ಕೊಲ್ಲಲು, ಸೋದರಿ ಸೋದರನನ್ನು ಕೊಲ್ಲಲೂ ಕೂಡ ರಾಗೋಜ್ವಲ ಭಾವನೆಗಳುಂಟಾಗುತ್ತವೆ. ಆಟಗಾರನಿಗೆ ಆಟವನ್ನು ನೋಡಿ ಉಂಟಾಗುವ ಭಾವನೆಯಂತೆ ಅವರು ಭಾವಿಸುತ್ತಾರೆ.

ಇದು ಬಹುಶಃ ನೈತಿಕ ಬಲ ಅಳಿದು ಅದರ ಸ್ಥಾನವನ್ನು ಪಶು ಬಲ ಆವರಿಸಿದಾಗ ಏನಾಗುತ್ತದೆ ಎಂಬುದರ ಅತ್ಯುತ್ತಮ ಚಿತ್ರಣವಾಗಿದೆ. ಧರ್ಮರಾಜ್ಯದ ಕಾವಲುಗಾರ ತಾನೇ ಆಗುವಂತೆ ಪ್ರತಿಯೊಬ್ಬ ಮನುಷ್ಯನನ್ನೂ ನೈತಿಕವಾಗಿ ತರಬೇತುಗೊಳಿಸಬೇಕೆಂಬುದೇ ಬುದ್ಧನ ಆಸೆಯಾಗಿತ್ತು.

## ೮. ರಾಜ್ಯಶಕ್ತಿ ನಶಿಸುತ್ತದೆ

ತಮ್ಮ ರಾಜಕೀಯ ಸಿದ್ಧಾಂತದಲ್ಲಿರುವ ನಿರಂತರ ಸರ್ವಾಧಿಕಾರ ಎಂಬ ರಾಜ್ಯ ಶಕ್ತಿಯ ವಾದವೇ ದುರ್ಬಲವಾದುದು ಎಂಬುದನ್ನು ಕಮ್ಯುನಿಸ್ಟರೇ ಒಪ್ಪಿಕೊಳ್ಳುತ್ತಾರೆ. ರಾಜ್ಯಶಕ್ತಿ ಅಂತಿಮವಾಗಿ ನಶಿಸುತ್ತದೆ ಎಂಬ ನೆಪದಲ್ಲಿ ಅವರು ಆಶ್ರಯ ಪಡೆಯುತ್ತಾರೆ. ಅವರು ಉತ್ತರಿಸಬೇಕಾದ ಎರಡು ಪ್ರಶ್ನೆಗಳಿವೆ: ಅದು ಎಂದು ನಶಿಸುತ್ತದೆ? ಅದು ನಶಿಸಿದಾಗ ಅದರ ಜಾಗಕ್ಕೆ ಬೇರೆ ಯಾವುದು ಬರುತ್ತದೆ? ಮೊದಲನೆಯ ಪ್ರಶ್ನೆಯ ಬಗ್ಗೆ ಅವರು ಯಾವುದೇ ನಿಗದಿಯಾದ ಕಾಲವನ್ನು ಹೇಳುವುದಿಲ್ಲ. ತಾತ್ಕಾಲಿಕವಾಗಿ ಸರ್ವಾಧಿಕಾರ ಒಳ್ಳೆಯದಾಗಿರಬಹುದು. ಪ್ರಜಾಪ್ರಭುತ್ವವನ್ನು ಸುಭದ್ರಗೊಳಿಸಲು ಅದು ಸ್ವಾಗತಾರ್ಹ ವಿಷಯವೂ ಕೂಡ ಆಗಬಹುದು. ಸರ್ವಾಧಿಕಾರ ತನ್ನ ಕೆಲಸವನ್ನೆಲ್ಲ ಮುಗಿಸಿದ ಮೇಲೆ ಪ್ರಜಾಪ್ರಭುತ್ವದ ಹಾದಿಯಲ್ಲಿ ಬರುವ ಅಡೆತಡೆಗಳನ್ನೆಲ್ಲ ನಿವಾರಿಸಿದ ಮೇಲೆ ಪ್ರಜಾಪ್ರಭುತ್ವದ ಪಥವನ್ನು ಸುಭದ್ರಗೊಳಿಸಿದ ಮೇಲೆ ಅದು ಏಕೆ ತನಗೆ ತಾನೇ ಅಂತ್ಯವಾಗಬಾರದು? ಅಶೋಕ ಮಾದರಿಯನ್ನು ಹಾಕಿಕೊಟ್ಟಿಲ್ಲವೇ? ಅವನು ಕಳಿಂಗದ ವಿರುದ್ಧ ಹಿಂಸಾಚಾರವನ್ನು ಎಸಗಿದನು. ಆದರೆ ಆಮೇಲೆ ಅವನು ಹಿಂಸಾಚಾರವನ್ನು ಸಂಪೂರ್ಣವಾಗಿ ತ್ಯಜಿಸಿದನು. ಇಂದು ನಮ್ಮ ವಿಜಯಶಾಲಿಗಳು ತಮ್ಮಿಂದ ಪರಾಜಿತರಾದವರನ್ನು ನಿಶ್ಶಸ್ತ್ರಗೊಳಿಸುವುದಲ್ಲದೆ ತಮ್ಮನ್ನೇ ತಾವು ನಿಶ್ಶಸ್ತ್ರಗೊಳಿಸಿಕೊಂಡಾಗ ಮಾತ್ರ ಪ್ರಪಂಚದಲ್ಲಿ ಶಾಂತಿ ನೆಲಸುತ್ತದೆ.

ಕಮ್ಯುನಿಸ್ಟರು ಯಾವ ಉತ್ತರವನ್ನೂ ಕೊಟ್ಟಿಲ್ಲ. ರಾಜ್ಯ ಶಕ್ತಿ ಯಾವಾಗ ನಶಿಸುತ್ತದೆ ಎಂಬ ಪ್ರಶ್ನೆಗಿಂತ ಅದು ನಶಿಸಿದಾಗ ಆ ಸ್ಥಾನಕ್ಕೆ ಯಾವುದು ಬರುತ್ತದೆ ಎಂಬುದು ಹೆಚ್ಚು ಪ್ರಮುಖ ಪ್ರಶ್ನೆಯಾದರೂ ಇದಕ್ಕೆ

ಯಾವುದೇ ಸಮಾಧಾನಕರ ಉತ್ತರವೂ ಬಂದಿಲ್ಲ. ಆ ಸ್ಥಾನಕ್ಕೆ ಅರಾಜಕತೆ ಬರುತ್ತದೆಯೆ? ಹಾಗಾದರೆ ಕಮ್ಯುನಿಸ್ಟ್ ರಾಜ್ಯ ಸ್ಥಾಪನೆ ಅರ್ಥಹೀನ ಪ್ರಯತ್ನವಾಗುತ್ತದೆ. ಅದನ್ನು ಬಲಪ್ರಯೋಗದಿಂದಲ್ಲದೆ ಉಳಿಸಿಕೊಳ್ಳಲು ಸಾಧ್ಯವಿಲ್ಲದಿದ್ದರೆ ಅದನ್ನು ಬಂಧಿಸಿರುವ ಶಕ್ತಿ ಲುಪ್ತವಾದಾಗ ಅದು ಅರಾಜಕತೆಯಲ್ಲಿ ಪರ್ಯವಸಾನವಾದರೆ ಕಮ್ಯುನಿಸ್ಟ್ ರಾಜ್ಯದಿಂದ ಉಪಯೋಗವೇನು?

ಬಲಪ್ರಯೋಗವನ್ನು ವಜಾ ಮಾಡಿದರೆ ಆಗ ರಾಜ್ಯವನ್ನು ಉಳಿಸುವ ಏಕೈಕ ಶಕ್ತಿ ಎಂದರೆ ಧರ್ಮ. ಆದರೆ ಕಮ್ಯುನಿಸ್ಟರಿಗೆ ಧರ್ಮ ತಿರಸ್ಕರಣೀಯವಾಗಿದೆ. ಅವರ ಧರ್ಮದ್ವೇಷ ಎಷ್ಟೊಂದು ಆಳವಾಗಿದೆಯೆಂದರೆ ಯಾವ ಧರ್ಮಗಳು ಕಮ್ಯುನಿಸಂಗೆ ಸಹಾಯಕಾರಿಯಾಗಿವೆ, ಯಾವುವು ಅಲ್ಲ ಎಂಬುದನ್ನು ಕೂಡ ವಿವೇಚಿಸಲೂ ಅವರಿಗಾಗುವುದಿಲ್ಲ. ಕಮ್ಯುನಿಸ್ಟರು ತಮ್ಮ ಕ್ರೈಸ್ತಮತ ದ್ವೇಷವನ್ನು ಬೌದ್ಧಧರ್ಮಕ್ಕೂ ತಂದುಕೊಂಡು ಅವೆರಡರ ನಡುವಣ ವ್ಯತ್ಯಾಸವನ್ನೂ ಪರಿಶೀಲಿಸಲು ತಾಳ್ಮೆಯಿಲ್ಲದವರಾಗಿದ್ದಾರೆ. ಕಮ್ಯುನಿಸ್ಟರು ಕ್ರೈಸ್ತಮತದ ವಿರುದ್ಧ ಮಾಡಿದ ಆಪಾದನೆ ದ್ವಿಗುಣವಾಗಿತ್ತು. ಕ್ರೈಸ್ತಮತದ ವಿರುದ್ಧ ಅವರ ಮೊದಲನೆಯ ಅಪಾದನೆಯೆಂದರೆ ಅದು ಜನರನ್ನು ಪಾರಲೌಕಿಕ ದೃಷ್ಟಿಯುಳ್ಳವರನ್ನಾಗಿಯೂ ಮತ್ತು ಅವರು ಈ ಲೋಕದಲ್ಲಿ ಬಡತನದಿಂದ ನರಳುವಂತೆಯೂ ಮಾಡಿತು ಎಂಬುದಾಗಿತ್ತು. ಈ ನಿಬಂಧದ ಆರಂಭದ ಭಾಗದಲ್ಲಿ ಬೌದ್ಧಧರ್ಮದಿಂದ ಕೊಟ್ಟ ಉದ್ಧರಣೆಗಳಿಂದ ಅಂಥ ಆಪಾದನೆಯು ಬೌದ್ಧಧರ್ಮದ ಬಗ್ಗೆ ನಿಲ್ಲುವುದಿಲ್ಲ ಎಂಬುದು ತಿಳಿಯುತ್ತದೆ.

ಕಮ್ಯುನಿಸ್ಟರು ಕ್ರೈಸ್ತಮತದ ವಿರುದ್ಧ ಮಾಡಿದ ಎರಡನೆಯ ಆಪಾದನೆಯನ್ನು ಬೌದ್ಧಧರ್ಮದ ವಿರುದ್ಧ ಮಾಡಲು ಸಾಧ್ಯವಿಲ್ಲ. ಧರ್ಮವೇ ಜನರಿಗೆ ಅಫೀಮಾಗಿದೆ ಎಂಬ ಹೇಳಿಕೆಯಲ್ಲಿ ಈ ಆಪಾದನೆಯು ಸಂಗ್ರಹಿತವಾಗಿದೆ. ಬೈಬಲ್ಲಿನಲ್ಲಿ ಬರುವ 'ಪರ್ವತ ಪ್ರಸಂಗ' ಎಂಬುದರ ಮೇಲೆ ಈ ಆಪಾದನೆ ನಿಂತಿದೆ. 'ಪರ್ವತ ಪ್ರಸಂಗ'ವು ಬಡತನ ಮತ್ತು ದೌರ್ಬಲ್ಯಗಳನ್ನು ಉದಾತ್ತೀಕರಿಸುತ್ತದೆ. ಅದು ಸ್ವರ್ಗದ ಭರವಸೆಯನ್ನು ಬಡವರಿಗೂ, ದುರ್ಬಲರಿಗೂ ನೀಡುತ್ತದೆ. ಬುದ್ಧನ ಉಪದೇಶಾವಳಿಯಲ್ಲಿ ಅಂಥ ಪರ್ವತ ಪ್ರಸಂಗ ಇಲ್ಲ. ಸಂಪತ್ತನ್ನು ಗಳಿಸಬೇಕೆಂಬುದೇ ಅವನ ಉಪದೇಶ. ಅವನ ಶಿಷ್ಯರಲ್ಲಿ ಒಬ್ಬನಾದ ಅನಾಥಪಿಂಡಿಕನಿಗೆ ಕೊಟ್ಟ ಉಪದೇಶದಲ್ಲಿ ಅವನು ಈ ವಿಷಯದ ಬಗ್ಗೆ ಏನು ಹೇಳಿದ್ದಾನೆಂಬುದನ್ನು ಮುಂದೆ ಉದ್ಧರಿಸುತ್ತೇನೆ.

ಒಮ್ಮೆ ಅನಾಥಪಿಂಡಿಕನು ತಥಾಗತ ಇದ್ದಲ್ಲಿಗೆ ಬಂದನು. ಅವನು ತಥಾಗತನಿಗೆ ತಲೆಬಾಗಿ ನಮಸ್ಕರಿಸಿ ಪಕ್ಕದಲ್ಲಿ ಕುಳಿತು ಕೇಳಿದನು: "ತಥಾಗತರು ಗೃಹಸ್ಥರಿಗೆ ಯಾವ ವಸ್ತುಗಳು ಸ್ವಾಗತಾರ್ಹ, ಮನೋಹರ ಮತ್ತು ಒಪ್ಪಿತ, ಆದರೂ ಅವುಗಳನ್ನು ಗಳಿಸುವುದು ಕಷ್ಟವೆಂಬುದನ್ನು ತಿಳಿಸುತ್ತಾರೆಯೇ?"

ಕೇಳಿದ ಪ್ರಶ್ನೆಯನ್ನು ತಥಾಗತ ಆಲಿಸಿ ಹೀಗೆ ಹೇಳಿದನು: "ಅಂಥ ವಸ್ತುಗಳಲ್ಲಿ ಮೊಟ್ಟಮೊದಲನೆಯದಾಗಿ ಸಂಪತ್ತನ್ನು ನ್ಯಾಯಯುತವಾಗಿ ಗಳಿಸಬೇಕು."

"ಎರಡನೆಯದಾಗಿ, ನಿಮ್ಮ ಬಂಧುಗಳೂ ಕೂಡ ಸಂಪತ್ತನ್ನು ನ್ಯಾಯಯುತವಾಗಿ ಪಡೆಯುವಂತೆ ನೋಡಿಕೊಳ್ಳಬೇಕು." ಮೂರನೆಯದಾಗಿ, ದೀರ್ಘಕಾಲ ಮುಪ್ಪಿನವರೆಗೆ ಬದುಕುವುದು."

"ಗೃಹಸ್ಥನೇ, ನಿಜ ಹೇಳಬೇಕೆಂದರೆ ಪ್ರಪಂಚದಲ್ಲಿ ಪಡೆಯಲು ಕಷ್ಟವಾದ ಸ್ವಾಗತಾರ್ಹವೂ, ಮನೋಹರವೂ, ಅಂಗೀಕೃತವೂ ಆದ ಈ ನಾಲ್ಕು ವಸ್ತುಗಳನ್ನು ಪಡೆಯಲು ನಾಲ್ಕು ಷರತ್ತುಗಳೂ ಕೂಡ ಬರುತ್ತವೆ. ಅವೆಂದರೆ ಧರ್ಮಾನುಗ್ರಹ, ಶೀಲಾನುಗ್ರಹ, ಉದಾರ್ಯಾನುಗ್ರಹ ಮತ್ತು ವಿವೇಕಾನುಗ್ರಹ."

ಶೀಲಾನುಗ್ರಹವೆಂದರೆ ಜೀವಹಿಂಸೆ ಮಾಡದಿರುವುದು, ಕಳ್ಳತನ ಮಾಡದಿರುವುದು, ವ್ಯಭಿಚಾರ ಮಾಡದಿರುವುದು, ಸುಳ್ಳು ಹೇಳದಿರುವುದು ಮತ್ತು ಮದ್ಯಪಾನ ಮಾಡದಿರುವುದು.

ಉದಾರ್ಯಾನುಗ್ರಹವೆಂದರೆ ಗೃಹಸ್ಥನಾದವನು ದುರಾಸೆಯ ದೋಷದಿಂದ ಮುಕ್ತನಾಗಿ ಉದಾರಿಯಾಗಿ, ತೆರೆದ ಹಸ್ತವುಳ್ಳವನಾಗಿ ದಾನಧರ್ಮ ಮಾಡುವುದರಲ್ಲಿ ಸಂತೋಷಪಡುವವನಾಗಿ ಧರ್ಮಿಷ್ಠನೆನಿಸಿಕೊಂಡು ಉಡುಗೊರೆಗಳನ್ನು ನೀಡುವವನಾಗಿ ಇರುವುದು.

ಹಾಗಾದರೆ ವಿವೇಕಾನುಗ್ರಹ ಎಂದರೇನು? ಯಾವ ಗೃಹಸ್ಥನ ಮನಸ್ಸಿನಲ್ಲಿ ಲೋಭ, ದುರಾಸೆ, ದುರ್ಭಾವನೆ, ಆಲಸ್ಯ, ಜಡತೆ, ಚಂಚಲತೆ ಮತ್ತು ಉತ್ಸುಕತೆಯಿಲ್ಲವೋ, ಅವನು ದುಷ್ಕೃತ್ಯಗಳನ್ನು ಮಾಡದೆ, ಮಾಡಲೇಬೇಕಾದುದನ್ನು ಕಡೆಗಣಿಸದೆ ಹಾಗೆ ಮಾಡಿದರೆ ಗೌರವಾನಂದಗಳಿಂದ ವಂಚಿತನಾಗುತ್ತೇನೆಂದು ತಿಳಿದುಕೊಂಡಿರುತ್ತಾನೆಯೋ ಅವನು ವಿವೇಕಾನುಗ್ರಹವನ್ನು ಪಡೆದಿರುತ್ತಾನೆ.

ಲೋಭ, ದುರಾಸೆ, ದುರ್ಭಾವನೆ, ಆಲಸ್ಯ, ಜಡತೆ, ಚಂಚಲತೆ, ಉತ್ಸುಕತೆ ಮತ್ತು ಸಂಶಯ ಇವು ಮನಸ್ಸಿನ ದೋಷಗಳು. ಯಾವ ಗೃಹಸ್ಥನು ಇಂಥ ಮಾನಸಿಕ ದೋಷಗಳನ್ನು ಕಳೆದುಕೊಳ್ಳುತ್ತಾನೋ ಅವನು ಮಹಾ ವಿವೇಕ, ಅಪಾರ ವಿವೇಕ, ನಿರ್ಮಲ ದೃಷ್ಟಿ ಮತ್ತು ಪೂರ್ಣ ಜ್ಞಾನವನ್ನು ಪಡೆಯುತ್ತಾನೆ.

ಹೀಗೆ ಸಂಪತ್ತನ್ನು ನ್ಯಾಯದಿಂದಲೂ ಧರ್ಮದಿಂದಲೂ ಗಳಿಸಿ, ಅಪಾರ ಪರಿಶ್ರಮದಿಂದ ಸಂಪಾದಿಸಿ, ದೇಹ ಶ್ರಮದಿಂದ ಸಂಗ್ರಹಿಸಿ, ಬೆವರು ಸುರಿಸಿ ಕೂಡಿಸುವುದೇ ಮಹಾನುಗ್ರಹ. ಆ ಗೃಹಸ್ಥನು ಸಂತೋಷಿಯೂ, ಸುಖಿಯೂ ಆಗಿರುತ್ತಾನೆ. ಆನಂದವುಳ್ಳವನಾಗಿರುತ್ತಾನೆ. ತನ್ನ ತಂದೆ ತಾಯಿಗಳನ್ನು, ಹೆಂಡತಿ ಮಕ್ಕಳನ್ನು, ಸೇವಕರು ಮತ್ತು ಕೂಲಿಕಾರರನ್ನು, ಗೆಳೆಯರು ಮತ್ತು ಒಡನಾಡಿಗಳನ್ನು ಸಂತೋಷವಾಗಿಯೂ, ಸುಖವಾಗಿಯೂ ಇಟ್ಟಿರುತ್ತಾನೆ ಮತ್ತು ಅವರು ಆನಂದತುಂದಿಲರಾಗಿರುವಂತೆಯೂ ನೋಡಿಕೊಳ್ಳುತ್ತಾನೆ.

ಬಲವನ್ನು ನಿರ್ಮೂಲನ ಮಾಡಿದ ಮೇಲೆ ಕಮ್ಯುನಿಸಂ ಅನ್ನು ಉಳಿಸುವ ಅಂತಿಮ ಒತ್ತಾಸೆಯಾಗಿ ಬೌದ್ಧಧರ್ಮವನ್ನು ಬಳಸಿಕೊಳ್ಳಲು ರಷ್ಯನ್ನರು ಯಾವ ಗಮನವನ್ನೂ ನೀಡುತ್ತಿಲ್ಲ.

ರಷ್ಯನ್ನರು ತಮ್ಮ ಕಮ್ಯುನಿಸಂ ಬಗ್ಗೆ ಹೆಮ್ಮೆಪಡುತ್ತಾರೆ. ಆದರೆ ಬೌದ್ಧ ಸಂಘಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ ಬುದ್ಧನು ಕಮ್ಯುನಿಸಂ ಅನ್ನು ಸರ್ವಾಧಿಕಾರವಿಲ್ಲದೆ ಸ್ಥಾಪಿಸಿದನೆಂಬ ಆಶ್ಚರ್ಯಕರವಾದ ಸಂಗತಿಯನ್ನು ಅವರು ಮರೆಯುತ್ತಾರೆ. ಅದು ಅತ್ಯಂತ ಅಲ್ಪ ಪ್ರಮಾಣದ ಕಮ್ಯುನಿಸಂ ಆಗಿದ್ದಿರಬಹುದು. ಆದರೆ ಅದು ಸರ್ವಾಧಿಕಾರವಿಲ್ಲದ ಕಮ್ಯುನಿಸಂ ಆಗಿತ್ತು. ಈ ಪವಾಡವನ್ನು ಲೆನಿನ್ ಮಾಡಲಾಗಲಿಲ್ಲ.

ಬುದ್ಧನ ವಿಧಾನವೇ ಭಿನ್ನವಾಗಿತ್ತು. ಅವನ ವಿಧಾನ ಮಾನವ ಮನಸ್ಸನ್ನು ಬದಲಾಯಿಸುವುದು. ಅವನ ಸ್ವಭಾವವನ್ನು ಬದಲಾಯಿಸುವುದು ಅಂದರೆ ಮನುಷ್ಯ ಏನನ್ನೇ ಮಾಡಿದರೂ ಸ್ವೇಚ್ಛೆಯಿಂದ ಬಲ ಪ್ರಯೋಗವಿಲ್ಲದೆ ಅಥವಾ ಒತ್ತಾಯವಿಲ್ಲದೆ ಮಾಡುವುದಾಗಿತ್ತು. ಮನುಷ್ಯನ ಸ್ವಭಾವವನ್ನು ಬದಲಾಯಿಸಲು ಅವನಿಗಿದ್ದ ಮುಖ್ಯ ವಿಧಾನವೆಂದರೆ ಅವನ ಧಮ್ಮವೇ ಆಗಿತ್ತು. ಧಮ್ಮದ ನಿರಂತರ ಬೋಧನೆಯಾಗಿತ್ತು. ತಮಗೆ ಒಳ್ಳೆಯದೇ ಆಗಿದ್ದರೂ ಕೂಡ ಅದನ್ನು ಒತ್ತಾಯ ಮಾಡದೆ ಅವರು ಸ್ವೇಚ್ಛೆಯಿಂದ ಮಾಡುವುದೇ ಬುದ್ಧನ ಮಾರ್ಗವಾಗಿತ್ತು. ಬೇರಾವ ವಿಧದಿಂದಲೂ ಮಾಡದುದನ್ನು ಸ್ವೇಚ್ಛೆಯಿಂದ ಮಾಡುವಂತೆ ಮಾನವ ಸ್ವಭಾವವನ್ನು ಬದಲಾಯಿಸುವ ವಿಧಾನ ಅವನದು.

ರಷ್ಯದಲ್ಲಿ ಕಮ್ಯುನಿಸ್ಟ್ ಸರ್ವಾಧಿಕಾರ ಅದ್ಭುತ ಸಾಧನೆಗಳನ್ನು ಮಾಡಿದೆಯೆಂದು ಹೇಳುತ್ತಾರೆ. ಅದರಲ್ಲಿ ಯಾವ ನಿರಾಕರಣೆಯೂ ಇಲ್ಲ. ಆದ್ದರಿಂದಲೇ ನಾನು ಎಲ್ಲ ಹಿಂದುಳಿದ ದೇಶಗಳಿಗೂ ರಷ್ಯಾ ಮಾದರಿಯ ಸರ್ವಾಧಿಕಾರ ಒಳ್ಳೆಯದೆಂದು ಹೇಳುತ್ತಿರುವುದು. ಆದರೆ ಇದು ನಿರಂತರ ಸರ್ವಾಧಿಕಾರದ ಪರ ವಾದವಲ್ಲ. ಮಾನವ ಜನಾಂಗ ಕೇವಲ ಆರ್ಥಿಕ ಮೌಲ್ಯಗಳನ್ನು ಬಯಸುವುದಿಲ್ಲ. ಅದು ಆಧ್ಯಾತ್ಮಿಕ ಮೌಲ್ಯಗಳನ್ನು ಉಳಿಸಿಕೊಳ್ಳಲೂ ಕೂಡ ಇಚ್ಛಿಸುತ್ತದೆ. ನಿರಂತರ ಸರ್ವಾಧಿಕಾರ ಆಧ್ಯಾತ್ಮಿಕ ಮೌಲ್ಯಗಳಿಗೆ

ಯಾವ ಗಮನವನ್ನೂ ನೀಡಿಲ್ಲ, ನೀಡುವಂತೆ ಕಾಣುವುದೂ ಇಲ್ಲ. ರಾಜಕೀಯ ಅರ್ಥಶಾಸ್ತ್ರವನ್ನು ಹಂದಿ ಸಿದ್ಧಾಂತವೆಂದು ಕಾರ್ಲೈಲ್ ಕರೆದಿದ್ದಾನೆ. ವಾಸ್ತವವಾಗಿ ಕಾರ್ಲೈಲನ ಅಭಿಪ್ರಾಯ ಅಸಾಧು. ಏಕೆಂದರೆ ಮನುಷ್ಯ ಭೌತಿಕ ಸೌಲಭ್ಯಗಳನ್ನು ಬಯಸುತ್ತಾನೆ. ಆದರೆ ಕಮ್ಯುನಿಸ್ಟ್ ಸಿದ್ಧಾಂತವೂ ಕೂಡ ಅಷ್ಟೇ ಅಸಾಧುವಾಗಿದೆ, ಏಕೆಂದರೆ ಕಮ್ಯುನಿಸ್ಟ್ ತತ್ವ ಕೂಡ ಮನುಷ್ಯರು ಹಂದಿಗಳಿಗಿಂತ ಹೆಚ್ಚಲ್ಲ ಎಂದು ಮನುಷ್ಯರನ್ನು ಹಂದಿಗಳಂತೆ ಕೊಬ್ಬಿಸುವುದೇ ಆಗಿದೆ. ಮನುಷ್ಯ ಭೌತಿಕವಾಗಿಯೂ ಆಧ್ಯಾತ್ಮಿಕವಾಗಿಯೂ ಬೆಳೆಯಲೇ ಬೇಕು. ಸಮಾಜ ಹೊಸ ಅಸ್ತಿಭಾರವನ್ನು ಹಾಕಲು ಉದ್ದೇಶಿಸಿದೆ ಎಂಬುದು ಫ್ರಾನ್ಸಿನ ಮಹಾಕ್ರಾಂತಿಯ ಸಹೋದರತ್ವ, ಸಾತಂತ್ರ್ಯ ಮತ್ತು ಸಮಾನತೆ ಎಂಬ ಈ ಮೂರು ಮಂತ್ರಗಳಲ್ಲಿ ಅಡಕವಾಗಿದೆ. ಈ ಘೋಷಣೆಯಿಂದಾಗಿಯೇ ಫ್ರಾನ್ಸಿನ ಮಹಾಕ್ರಾಂತಿಗೆ ಸ್ವಾಗತ ಸಿಕ್ಕಿತು. ಆದರೆ ಸ್ವಾತಂತ್ರ್ಯವನ್ನು ತರಲು ಅದು ಸೋತಿತು. ಸಮಾನತೆಯನ್ನು ತರಲು ರಷ್ಯದ ಕ್ರಾಂತಿ ಉದ್ದೇಶಿಸಿರುವುದರಿಂದ ನಾವು ಅದನ್ನು ಸ್ವಾಗತಿಸುತ್ತೇವೆ. ಆದರೆ ಸಮಾನತೆಯ ಸ್ಥಾಪನೆಗಾಗಿ ಸಮಾಜವು ಸೋದರತ್ವ ಅಥವಾ ಸ್ವಾತಂತ್ರ್ಯವನ್ನು ಬಲಿಕೊಡಲಾಗುವುದಿಲ್ಲ. ಈ ಕಾರಣದಿಂದಾಗಿ ಸಮಾನತೆಗೆ ವಿಪರೀತ ಒತ್ತುಕೊಡಬಾರದು. ಸೋದರತ್ವ ಅಥವಾ ಸ್ವಾತಂತ್ರ್ಯ ಇಲ್ಲದಿದ್ದರೆ ಸಮಾನತೆಗೆ ಬೆಲೆಯಿಲ್ಲ. ಬುದ್ಧನ ಮಾರ್ಗವನ್ನು ಅನುಸರಿಸುವುದರಿಂದ ಮಾತ್ರ ಈ ಮೂರು ತತ್ವಗಳು ಜೊತೆಜೊತೆಯಾಗಿ ಬಾಳಬಲ್ಲವು. ಕಮ್ಯುನಿಸಂ ಯಾವುದಾದರೂ ಒಂದನ್ನು ಕೊಡುತ್ತದೆ. ಎಲ್ಲವನ್ನೂ ಅಲ್ಲ.

* * * *

## ಭಾಗ – ಐದು

# ಧಾರ್ಮಿಕ

## ಒಗಟು – ೧

# ಒಬ್ಬ ವ್ಯಕ್ತಿ ಏಕೆ ಹಿಂದೂ ಆಗಿದ್ದಾನೆ ಎಂಬುದನ್ನು ತಿಳಿದುಕೊಳ್ಳುವ ಸಮಸ್ಯೆ

ಭಾರತವು ಕೋಮುಗಳ ಒಂದು ಸಮೂಹ. ಅದರಲ್ಲಿ ಪಾರಸಿಗಳಿದ್ದಾರೆ, ಕ್ರೈಸ್ತರಿದ್ದಾರೆ, ಮುಸ್ಲಿಮರಿದ್ದಾರೆ ಮತ್ತು ಹಿಂದೂಗಳಿದ್ದಾರೆ. ಈ ಕೋಮುಗಳ ತಳಹದಿ ಜನಾಂಗೀಯವಲ್ಲ. ಆದರೆ ಧಾರ್ಮಿಕವಂತೂ ಹೌದು. ಹೀಗೆನ್ನುವುದು ಮೇಲ್ನೋಟದ ಅಭಿಪ್ರಾಯ. ಆದರೆ ಕುತೂಹಲದ ವಿಷಯವೆಂದರೆ ಪಾರಸಿಯು ಪಾರಸಿಯೇಕಾಗಿದ್ದಾನೆ, ಕ್ರೈಸ್ತ ಕ್ರೈಸ್ತನೇಕಾಗಿದ್ದಾನೆ, ಮುಸ್ಲಿಮನು ಮುಸ್ಲಿಮನೇಕಾಗಿದ್ದಾನೆ ಮತ್ತು ಹಿಂದೂ ಹಿಂದೂ ಏಕಾಗಿದ್ದಾನೆ? ಪಾರಸಿ, ಕ್ರೈಸ್ತ ಮತ್ತು ಮುಸ್ಲಿಮರ ಬಗೆಗಾದರೆ ಉತ್ತರ ಸುಲಭ. ಒಬ್ಬ ಪಾರಸಿಯನ್ನು ನಿನ್ನನ್ನೇಕೆ ಪಾರಸಿಯೆಂದು ಕರೆಯಲಾಗುತ್ತದೆ ಎಂದು ಕೇಳಿದರೆ ನಾನು ಪಾರಸಿ ಏಕೆಂದರೆ ನಾನು ಝರತುಷ್ಟ್ರನ ಅನುಯಾಯಿ ಎನ್ನುತ್ತಾನೆ. ಅದೇ ಪ್ರಶ್ನೆಯನ್ನು ಕ್ರೈಸ್ತನಿಗೆ ಕೇಳಿದರೆ ಅವನಿಗೂ ಉತ್ತರ ಹೇಳಲು ಏನೂ ತೊಂದರೆ ಇಲ್ಲ. ಅವನು ಕ್ರೈಸ್ತ, ಏಕೆಂದರೆ ಅವನಿಗೆ ಏಸುಕ್ರಿಸ್ತನಲ್ಲಿ ಅಪಾರ ನಂಬಿಕೆಯಿದೆ. ಅದೇ ಪ್ರಶ್ನೆಯನ್ನು ಮುಸ್ಲಿಮನಿಗೆ ಕೇಳಿ. ಅವನೂ ಉತ್ತರ ಹೇಳಲು ತಡವರಿಸುವುದಿಲ್ಲ. ನನಗೆ ಇಸ್ಲಾಂ ಧರ್ಮದಲ್ಲಿ ವಿಶ್ವಾಸವಿದೆ, ಆದ್ದರಿಂದ, ನಾನು ಮುಸ್ಲಿಂ ಎನ್ನುತ್ತಾನೆ ಅವನು. ಅದೇ ಪ್ರಶ್ನೆಯನ್ನು ಒಬ್ಬ ಹಿಂದೂವನ್ನು ಕೇಳಿ. ಅವನು ತಬ್ಬಿಬ್ಬಾನಾಗುತ್ತಾನೆ. ಅವನಿಗೆ ಏನು ಹೇಳಬೇಕೆಂದೇ ತೋಚುವುದಿಲ್ಲ.

ಒಂದು ವೇಳೆ ಅವನು "ನಾನು ಹಿಂದೂ, ಏಕೆಂದರೆ ಈ ಹಿಂದೂ ಧರ್ಮೀಯರು ಆರಾಧಿಸುವ ದೈವವನ್ನೇ ನಾನೂ ಆರಾಧಿಸುತ್ತೇನೆ" ಎಂದು ಹೇಳಿದರೆ ಅವನ ಉತ್ತರವು ಸತ್ಯವೆನಿಸುವುದಿಲ್ಲ. ಎಲ್ಲ ಹಿಂದೂಗಳು ಒಂದೇ ದೈವವನ್ನು ಪೂಜಿಸುವುದಿಲ್ಲ. ಕೆಲವು ಹಿಂದೂಗಳು ಏಕದೇವತಾರಾಧಕರು, ಕೆಲವರು ಬಹುದೇವತಾರಾಧಕರು, ಕೆಲವರು ಸರ್ವದೇವತಾರಾಧಕರು. ಏಕದೇವತಾರಾಧಕ ಹಿಂದೂಗಳೂ ಸಹ ಒಬ್ಬನೇ ದೇವರನ್ನು ಪೂಜಿಸುವುದಿಲ್ಲ. ಕೆಲವರು ವಿಷ್ಣುವನ್ನೂ, ಕೆಲವರು ಶಿವನನ್ನೂ, ಕೆಲವರು ರಾಮನನ್ನೂ, ಕೆಲವರು ಕೃಷ್ಣನನ್ನೂ ಆರಾಧಿಸುತ್ತಾರೆ. ಕೆಲವರು ಪುರುಷ ದೇವರನ್ನು ಆರಾಧಿಸುವುದಿಲ್ಲ. ಅವರು ಸ್ತ್ರೀ ದೇವತೆಗಳನ್ನು ಆರಾಧಿಸುತ್ತಾರೆ. ಆದರೆ, ಅವರೆಲ್ಲರೂ ಒಬ್ಬ ಸ್ತ್ರೀ ದೈವವನ್ನು ಆರಾಧಿಸುವುದಿಲ್ಲ. ಅವರು ಬೇರೆ ಬೇರೆ ಸ್ತ್ರೀ ದೇವತೆಯರನ್ನು ಆರಾಧಿಸುತ್ತಾರೆ. ಕೆಲವರು ಕಾಳಿಯನ್ನು ಆರಾಧಿಸುತ್ತಾರೆ. ಕೆಲವರು ಪಾರ್ವತಿಯನ್ನು ಆರಾಧಿಸುತ್ತಾರೆ. ಕೆಲವರು ಲಕ್ಷ್ಮಿಯನ್ನು ಆರಾಧಿಸುತ್ತಾರೆ.

ಬಹುದೇವತಾರಾಧಕರ ವಿಷಯಕ್ಕೆ ಬಂದರೆ ಅವರು ಎಲ್ಲ ದೇವರುಗಳನ್ನು ಪೂಜಿಸುತ್ತಾರೆ. ಅವರು ಶಿವ ಮತ್ತು ವಿಷ್ಣುವನ್ನೂ ಪೂಜಿಸುತ್ತಾರೆ, ರಾಮ ಮತ್ತು ಕೃಷ್ಣನನ್ನೂ ಪೂಜಿಸುತ್ತಾರೆ; ಅವರು ಕಾಳಿ, ಪಾರ್ವತಿ ಮತ್ತು ಲಕ್ಷ್ಮಿಯರನ್ನೂ ಪೂಜಿಸುತ್ತಾರೆ. ಹಿಂದೂ ಶಿವರಾತ್ರಿಯ ದಿನ

ಉಪವಾಸವಿರುತ್ತಾನೆ. ಏಕೆಂದರೆ ಆ ದಿನ ಶಿವನಿಗೆ ಪವಿತ್ರವಾದುದು. ಅವನು ಏಕಾದಶಿಯ ದಿನವೂ ಉಪವಾಸವಿರುತ್ತಾನೆ. ಏಕೆಂದರೆ ಏಕಾದಶಿ ವಿಷ್ಣುವಿಗೆ ಪವಿತ್ರವಾದ ದಿನ. ಅವನು ಬಿಲ್ವ ಗಿಡವನ್ನು ನೆಡುತ್ತಾನೆ, ಏಕೆಂದರೆ ಅದು ಶಿವನಿಗೆ ಪವಿತ್ರ. ಅವನು ತುಳಸಿಯ ಗಿಡವನ್ನೂ ಬೆಳೆಸುತ್ತಾನೆ. ಏಕೆಂದರೆ ಅದು ವಿಷ್ಣುವಿಗೆ ಪ್ರಿಯವಾದುದು.

ಹಿಂದೂಗಳಲ್ಲಿರುವ ಬಹುದೇವತಾರಾಧಕರು ತಮ್ಮ ಕಾಣಿಕೆಯನ್ನು ಕೇವಲ ಹಿಂದೂ ದೈವಗಳಿಗೆ ಸಲ್ಲಿಸುವುದಿಲ್ಲ. ಒಬ್ಬ ಮುಸ್ಲಿಂ ಪೀರನನ್ನಾಗಲಿ, ಕ್ರೈಸ್ತ ದೇವತೆಯನ್ನಾಗಲೀ ಪೂಜಿಸಲು ಯಾವ ಹಿಂದೂವೂ ಸಂಕೋಚಪಡುವುದಿಲ್ಲ. ಮುಸ್ಲಿಂ ಪೀರನ ಬಳಿಗೆ ಸಾವಿರಾರು ಹಿಂದೂಗಳೂ ಹೋಗಿ ಅರ್ಪಣೆ ಮಾಡುತ್ತಾರೆ. ವಾಸ್ತವವಾಗಿ, ಕೆಲವಡೆ ಮುಸ್ಲಿಂ ಪೀರನ ಅರ್ಚಕ ವೃತ್ತಿಯನ್ನು ವಂಶಪರಂಪರೆಯಿಂದ ಪಡೆದ ಬ್ರಾಹ್ಮಣರೂ ಇದ್ದಾರೆ. ಅವರು ಮುಸ್ಲಿಂ ಪೀರನ ಉಡುಪನ್ನೂ ಧರಿಸುತ್ತಾರೆ. ಮುಂಬಯಿ ಸಮೀಪದ ಕ್ರೈಸ್ತದೇವಿ ಮೌಂಟ್ ಮೌಲಿಗೆ ಅರ್ಪಣೆ ನೀಡಲು ಸಾವಿರಾರು ಹಿಂದೂಗಳು ಹೋಗುತ್ತಾರೆ.

ಕ್ರೈಸ್ತ ಅಥವಾ ಮುಸ್ಲಿಂ ದೈವಗಳ ಅರ್ಚನೆಯು ಕೆಲವು ಸಂದರ್ಭಗಳಿಗೆ ಸೀಮಿತವಾದುದು. ಆದರೆ ಹಿಂದೂಗಳು ತಮ್ಮ ಧಾರ್ಮಿಕ ನಿಷ್ಠೆಯನ್ನು ಶಾಶ್ವತವಾಗಿ ಬದಲಾಯಿಸಿದ ಉದಾಹರಣೆಗಳೂ ಉಂಟು. ತಮ್ಮನ್ನು ಹಿಂದೂಗಳೆಂದು ಕರೆದುಕೊಳ್ಳುವ ಅನೇಕರ ಧರ್ಮದಲ್ಲಿ ಕೆಲವು ಪ್ರಬಲವಾದ ಮುಸ್ಲಿಂ ಅಂಶಗಳೂ ಇವೆ. ಇವರಲ್ಲಿ ಮುಖ್ಯರಾದವರೆಂದರೆ ಪಂಚಪೀರೀಯ ಎಂಬ ವಿಚಿತ್ರ ಪಂಥದ ಅನುಯಾಯಿಗಳು. ಈ ಅನುಯಾಯಿಗಳು ಐದು ಜನ ಇಸ್ಲಾಂ ಪೀರರನ್ನು ಪೂಜಿಸುತ್ತಾರೆ (ಈ ಪೀರರ ಹಿಂದಿನ ಪೂರ್ವೇತಿಹಾಸಗಳು ಅಸ್ಪಷ್ಟ). ಅವರಿಗೆ ಹುಂಜಗಳನ್ನು ಬಲಿಕೊಡುತ್ತಾರೆ ಮತ್ತು ಕೇವಲ ಈ ಉದ್ದೇಶಕ್ಕಾಗಿ ಅವರು ಒಬ್ಬ ಮುಸ್ಲಿಂ ದಫಾಲಿ ಫಕೀರನನ್ನು ಅರ್ಚಕನೆಂದು ನೇಮಿಸಿಕೊಳ್ಳುತ್ತಾರೆ. ಪಂಜಾಬಿನಲ್ಲಿರುವ ಸಖಿ ಸರ್ವಾರ್‌ನಂತಹ ಮುಸ್ಲಿಂ ಪವಿತ್ರ ಸ್ಥಳಗಳಿಗೆ ಭಾರತದ ಎಲ್ಲ ಕಡೆಗಳಿಂದಲೂ ಹಿಂದೂಗಳು ಯಾತ್ರಾರ್ಥಿಗಳಾಗಿ ಬಂದು ಹೋಗುತ್ತಾರೆ.

ಮಲ್ಕಾನಾ ಎಂಬ ಜನರ ಬಗ್ಗೆ ಮಿ. ಬ್ಲಂಟ್ ಹೀಗೆನ್ನುತ್ತಾನೆ. ಇವರು ಮುಸ್ಲಿಮರಾಗಿ ಪರಿವರ್ತಿತರಾದ ಜಾತಿಗಳಿಗೆ ಸೇರಿದ ಹಿಂದೂಗಳು. ಅವರು ಆಗ್ರಾ ಮತ್ತು ಸುತ್ತಮುತ್ತಲಿನ, ಮುಖ್ಯವಾಗಿ, ಮುತ್ರಾ, ಎಟ್ಟಾ ಮತ್ತು ಮೇನ್‌ಪುರಿ ಜಿಲ್ಲೆಗಳಿಗೆ ಸೇರಿದವರು. ರಜಪೂತ, ಜಾಟ್ ಮತ್ತು ಬನಿಯಾ ವಂಶಸ್ಥರು. ತಮ್ಮನ್ನು ಮುಸಲ್ಮಾನರೆಂದು ಕರೆದುಕೊಳ್ಳಲು ಅವರಿಗೆ ಮನಸ್ಸಿಲ್ಲ ಮತ್ತು ಸಾಮಾನ್ಯವಾಗಿ ಅವರು ತಮ್ಮ ಮೊದಲಿನ ಜಾತಿಯ ಹೆಸರನ್ನೇ ಹೇಳಿಕೊಳ್ಳುತ್ತಾರೆ. ತಮ್ಮನ್ನು ಮಲ್ಕಾನಾ ಜಾತಿಯವರೆಂದು ಕರೆದುಕೊಳ್ಳುವುದು ತುಂಬಾ ಅಪರೂಪ. ಅವರಿಗೆ ಹಿಂದೂ ಹೆಸರುಗಳೇ ಇವೆ. ಅವರು ಸಾಮಾನ್ಯವಾಗಿ ಹಿಂದೂ ದೇವಾಲಯಗಳಿಗೆ ಹೋಗಿ ಪೂಜೆ ಸಲ್ಲಿಸುತ್ತಾರೆ. ('ಸಲಾಂ' ಎನ್ನುವುದರ ಬದಲು) 'ರಾಮ್ ರಾಮ್' ಎನ್ನುತ್ತಾರೆ. ತಮ್ಮ ತಮ್ಮಲ್ಲಿಯೇ ಮದುವೆಯಾಗುತ್ತಾರೆ. ಆದರೆ ಅವರು ಮಸೀದಿಗೂ ಸಾಕಷ್ಟು ಸಾರಿ ಹೋಗುತ್ತಾರೆ. ಮುಂಜಿ ಮಾಡಿಸಿಕೊಳ್ಳುತ್ತಾರೆ ಮತ್ತು ತಮ್ಮ ಶವಗಳನ್ನು ಹೂಳುತ್ತಾರೆ. ಮುಸ್ಲಿಮರು ತಮಗೆ ವಿಶೇಷ ಸ್ನೇಹಿತರಾಗಿದ್ದರೆ ಅವರೊಂದಿಗೆ ಊಟವನ್ನು ಮಾಡುತ್ತಾರೆ.

ಗುಜರಾತಿನಲ್ಲಿಯೂ ಇಂಥವೇ ಕೆಲವು ಕೋಮುಗಳಿವೆ. ಉದಾಹರಣೆಗೆ ಮತಿಯಾ ಕುಣಬಿ ಎಂಬ ಕೋಮಿನವರು ಮುಖ್ಯ ಸಮಾರಂಭಗಳಿಗೆ ಬ್ರಾಹ್ಮಣ ಪುರೋಹಿತರನ್ನು ಕರೆಸಿದರೂ

ಅವರು ಪಿರಾನ ಸಂತ ಇಮಾಮ್ ಷಾ ಮತ್ತು ಅವನ ಉತ್ತರಾಧಿಕಾರಿಗಳ ಅನುಯಾಯಿಗಳು. ಅವರು ಮುಸ್ಲಿಮರಂತೆ ತಮ್ಮ ಶವಗಳನ್ನು ಹೂಳುತ್ತಾರೆ. ಷೇಖಾದ ಎಂಬ ಮತ್ತೊಂದು ಪಂಗಡದವರು ತಮ್ಮ ಮದುವೆಗಳಿಗೆ ಹಿಂದೂ ಮತ್ತು ಮುಸ್ಲಿಂ ಪುರೋಹಿತರಿಬ್ಬರನ್ನೂ ಕರೆಸುತ್ತಾರೆ. ಮೋಮನ್ ಎಂಬ ಮತ್ತೊಂದು ಪಂಗಡದವರು ಸುನತಿ ಮಾಡಿಸಿಕೊಳ್ಳುತ್ತಾರೆ, ತಮ್ಮ ಶವಗಳನ್ನು ಹೂಳುತ್ತಾರೆ ಮತ್ತು ಗುಜರಾತಿ ಭಾಷೆಯ ಕುರಾನ್ ಪಠಿಸುತ್ತಾರೆ. ಆದರೆ ಉಳಿದ ವಿಷಯಗಳಲ್ಲಿ ಹಿಂದೂ ಸಂಸ್ಕಾರಗಳನ್ನೂ ಸಮಾರಂಭಗಳನ್ನೂ ಮಾಡುತ್ತಾರೆ.

ಒಂದು ವೇಳೆ ಅಂಥವನು "ನಾನು ಹಿಂದೂ, ಏಕೆಂದರೆ ನಾನು ಹಿಂದೂ ನಂಬಿಕೆಗಳನ್ನು ಒಪ್ಪಿಕೊಳ್ಳುತ್ತೇನೆ" ಎಂದರೆ ಅವನ ಉತ್ತರವು ಸಮಂಜಸವಾಗುವುದಿಲ್ಲ, ಏಕೆಂದರೆ ಹಿಂದೂ ಧರ್ಮಕ್ಕೆ ನಿರ್ದಿಷ್ಟ ನಂಬಿಕೆಗಳ ಸೀಮೆಯೇ ಇಲ್ಲ. ಆದುದರಿಂದ ನಮಗೆ ಅವನ ಉತ್ತರವು ಒಂದು ಸಮಸ್ಯೆಯಾಗುತ್ತದೆ. ಯಾರನ್ನು ನಾವು ಹಿಂದೂಗಳೆಂದು ಒಪ್ಪಿಕೊಳ್ಳುತ್ತೇವೆಯೋ ಅವರಲ್ಲೇ ಅನೇಕ ಸಲ ಭಿನ್ನಾಭಿಪ್ರಾಯಗಳಿರುತ್ತವೆ. ಆದರೆ ಕ್ರೈಸರಲ್ಲಾಗಲಿ ಮುಸ್ಲಿಮರಲ್ಲಾಗಲಿ ಹೀಗೆ ಭಿನ್ನಾಭಿಪ್ರಾಯಗಳಿರುವುದಿಲ್ಲ. ಮುಖ್ಯವಾದ ನಂಬಿಕೆಗಳಿಗೆ ಸಂಬಂಧಿಸಿದಂತೆಯೂ ಸಹ ಹಿಂದೂಗಳಲ್ಲಿ ಭಿನ್ನಾಭಿಪ್ರಾಯಗಳುಂಟು. ಕೆಲವರು ಎಲ್ಲ ಧರ್ಮಗ್ರಂಥಗಳನ್ನು ಒಪ್ಪಿಕೊಳ್ಳಬೇಕೆಂದರೆ ಕೆಲವರು ತಂತ್ರಗಳನ್ನು ಹೊರತು ಪಡಿಸಬೇಕೆನ್ನುತ್ತಾರೆ ಮತ್ತು ಕೆಲವರು ವೇದಗಳು ಮಾತ್ರ ಪ್ರಧಾನವೆಂದರೆ ಇನ್ನೂ ಕೆಲವರು ಕರ್ಮ ಮತ್ತು ಪುನರ್ಜನ್ಮ ಸಿದ್ಧಾಂತದಲ್ಲಿನ ನಂಬಿಕೆಯೇ ಜೀವಾಳ ಎನ್ನುತ್ತಾರೆ.

ಹಿಂದೂ ಧರ್ಮವೆಂದರೆ ಅನೇಕ ನಂಬಿಕೆ ಮತ್ತು ಸಿದ್ಧಾಂತಗಳ ಒಂದು ಸಂಕೀರ್ಣ ಸಮೂಹ. ಅದು ತನ್ನ ಮನೆಯಲ್ಲಿ ಏಕದೇವತಾರಾಧಕರಿಗೂ ಬಹುದೇವತಾರಾಧಕರಿಗೂ ಸರ್ವದೇವತಾರಾಧಕರಿಗೂ ಆಶ್ರಯಕೊಟ್ಟಿದೆ. ಮಹಾದೈವಗಳಾದ ಶಿವ ಮತ್ತು ವಿಷ್ಣುವಿನ ಅಥವಾ ದೇವಿಯರ ಆರಾಧಕರಿಗೂ ಆಶ್ರಯ ಕೊಟ್ಟಿದೆ. ದಿವ್ಯಮಾತೆಯ ಆರಾಧಕರಿಗೆ ಆಶ್ರಯ ಕೊಟ್ಟಂತೆ ಮರ, ಬಂಡೆ, ಹಳ್ಳಗಳಲ್ಲಿರುವ ದೈವಗಳ ಆರಾಧಕರಿಗೂ, ಗ್ರಾಮದೇವತೆಗಳ ಆರಾಧಕರಿಗೂ ಆಶ್ರಯ ಕೊಟ್ಟಿದೆ. ರಕ್ತ ಬಲಿಗಳನ್ನೊಳಗೊಂಡಂತೆ ಎಲ್ಲ ರೀತಿಯಲೂ ತಮ್ಮ ದೇವರುಗಳನ್ನು ತೃಪ್ತಿಪಡಿಸುವವರಿಗೆ ಆಶ್ರಯ ಕೊಟ್ಟಂತೆ ಯಾವುದೇ ಜೀವವನ್ನು ಕೊಲ್ಲದ ಅಷ್ಟೇಕೆ, 'ಕೊಲ್ಲು' ಎಂಬ ಶಬ್ದವನ್ನು ಬಳಸಬಾರದೆಂದು ನಿರ್ಧರಿಸಿದವರಿಗೂ ಆಶ್ರಯಕೊಟ್ಟಿದೆ. ಭಜನೆ ಮತ್ತು ಮಂತ್ರಗಳನ್ನು ಪಠಿಸುವುದಷ್ಟೇ ತಮ್ಮ ಕರ್ಮವನ್ನಾಗಿ ಮಾಡಿಕೊಂಡವರಿಗೆ ಆಶ್ರಯ ಕೊಟ್ಟಂತೆ, ಧರ್ಮದ ಹೆಸರಿನಲ್ಲಿ ಎಲ್ಲ ರೀತಿಯ ಅವಾಚ್ಯ, ಸ್ವೇಚ್ಛಾಚಾರದಲ್ಲಿ ತೊಡಗುವವರಿಗೂ ಆಶ್ರಯ ಕೊಟ್ಟಿದೆ. ಇವರಲ್ಲಿ ಕೆಲವರು ಬ್ರಾಹ್ಮಣರ ಸರ್ವಶ್ರೇಷ್ಠತೆಯನ್ನು ಒಪ್ಪಿಕೊಳ್ಳುವುದಿಲ್ಲ. ಕೊನೆಯಪಕ್ಷ ಅವರಿಗೆ ಬ್ರಾಹ್ಮಣೇತರ ಧಾರ್ಮಿಕ ಮುಂದಾಳುಗಳು ಇರುತ್ತಾರೆ.

ಅವನೇನಾದರೂ ತಾನು ಹಿಂದೂ, ಏಕೆಂದರೆ ಉಳಿದ ಹಿಂದೂಗಳಂತೆ ತಾನೂ ಹಿಂದೂ ಪದ್ಧತಿಗಳಂತೆ ನಡೆದುಕೊಳ್ಳುತ್ತೇನೆಂದು ಹೇಳಿದರೆ ಅವನ ಉತ್ತರ ಸತ್ಯವಾದುದಲ್ಲ. ಏಕೆಂದರೆ ಎಲ್ಲ ಹಿಂದೂಗಳೂ ಒಂದೇ ರೀತಿಯ ಪದ್ಧತಿಗಳನ್ನು ಅನುಸರಿಸುವುದಿಲ್ಲ.

ಉತ್ತರ ಭಾರತದಲ್ಲಿ ಹತ್ತಿರದ ಸಂಬಂಧಿಕರಲ್ಲಿ ಹಿಂದೂ ವಿವಾಹ ನಿಷೇಧ. ಆದರೆ ದಕ್ಷಿಣದಲ್ಲಿ ಸೋದರಮಾವನ ಅಥವಾ ಸೋದರತ್ತೆಯ ಮಕ್ಕಳಲ್ಲಿ ಮದುವೆ ಮಾಡಿಕೊಳ್ಳಬೇಕೆಂಬ ವಿಧಿ ಇದೆ. ಕೆಲವು ವೇಳೆ ತೀರಾ ನಿಕಟ ಸಂಬಂಧಗಳಲ್ಲೂ ಮದುವೆಯಾಗಲು ಅನುಮತಿ

ಉಂಟು. ಸಾಮಾನ್ಯವಾಗಿ ಹೆಂಗಸರ ಪರಿಶುದ್ಧತೆಗೆ ಬಹಳ ಬೆಲೆಯಿದೆ. ಆದರೆ ಕೆಲವು ಕೋಮುಗಳು ಅದಕ್ಕೆ, ಅದರಲ್ಲೂ ವಿವಾಹಪೂರ್ವ ಪರಿಶುದ್ಧತೆಗೆ ಕಡಿಮೆ ಬೆಲೆ ಕೊಡುತ್ತಾರೆ ಮತ್ತೆ ಕೆಲವರು ತಮ್ಮ ಹೆಣ್ಣುಮಕ್ಕಳಲ್ಲಿ ಒಬ್ಬಳನ್ನು ದೇವದಾಸಿಯನ್ನಾಗಿ ಬಿಡುತ್ತಾರೆ. ಕೆಲವು ಕಡೆಗಳಲ್ಲಿ ಅವರನ್ನು ಪ್ರತ್ಯೇಕವಾಗಿ ಮುಚ್ಚಿಟ್ಟಿರುತ್ತಾರೆ. ಕೆಲವು ಕಡೆಗಳಲ್ಲಿ ಅವರು ಲಂಗ ತೊಡುತ್ತಾರೆ. ಮತ್ತೆ ಕೆಲವು ಕಡೆಗಳಲ್ಲಿ ಚಣ್ಣ ತೊಡುತ್ತಾರೆ.

ಒಂದು ವೇಳೆ ಅವನು "ನಾನು ಹಿಂದೂ. ಏಕೆಂದರೆ ನನಗೆ ಜಾತಿ ಪದ್ಧತಿಯಲ್ಲಿ ನಂಬಿಕೆಯಿದೆ" ಎಂದರೆ ಆಗಲೂ ಅವನ ಉತ್ತರ ಸಮಾಧಾನಕರವೆಂದು ಒಪ್ಪಿಕೊಳ್ಳಲಾಗುವುದಿಲ್ಲ. ಪಕ್ಕದ ಮನೆಯವನು ಏನನ್ನು ನಂಬುತ್ತಾನೆಂಬುದರಲ್ಲಿ ಯಾವ ಹಿಂದೂವಿಗೂ ಆಸಕ್ತಿಯಿರುವುದಿಲ್ಲ. ಆದರೆ ಅವನ ಜೊತೆಯಲ್ಲಿ ಊಟ ಮಾಡಬಹುದೇ, ಅವನು ಮುಟ್ಟಿದ ನೀರನ್ನು ಕುಡಿಯಬಹುದೇ ಎಂಬುದನ್ನು ತಿಳಿದುಕೊಳ್ಳಲು ಅವನಿಗೆ ಆಸಕ್ತಿಯಿರುತ್ತದೆ. ಅಂದರೆ ಜಾತಿ ಪದ್ಧತಿಯು ಹಿಂದೂ ಧರ್ಮದ ಪ್ರಮುಖ ಲಕ್ಷಣ ಎಂಬುದೂ ಯಾವುದೇ ಒಂದು ಮಾನ್ಯತೆ ಪಡೆದ ಜಾತಿಗೆ ಸೇರದವನು ಹಿಂದೂವೇ ಅಲ್ಲ ಎಂಬುದೂ ಸ್ಪಷ್ಟವಾಗುತ್ತದೆ. ಇವೆಲ್ಲವೂ ಸತ್ಯವೇ ಆಗಿದ್ದರೂ, ಜಾತಿ ಪದ್ಧತಿಯೊಂದೇ ಸಾಲದು. ಅನೇಕ ಕ್ರೈಸ್ತರೂ ಮುಸಲ್ಮಾನರೂ ಸಹಭೋಜನದ ವಿಷಯದಲ್ಲಿಲ್ಲದಿದ್ದರೂ ವಿವಾಹದ ವಿಷಯದಲ್ಲಿ ಮಾತ್ರ ಖಂಡಿತ ಜಾತಿಯನ್ನು ನೋಡುತ್ತಾರೆ. ಆದರೆ ಆ ಕಾರಣಕ್ಕಾಗಿ ಅವರನ್ನು ಹಿಂದೂಗಳೆಂದು ಕರೆಯಲಾಗದು. ಎರಡೂ ವಿಷಯಗಳನ್ನು ಪರಿಗಣಿಸಬೇಕು. ಅವನು ಹಿಂದೂ ಧರ್ಮವೂ ಆಗಿರಬೇಕು. ಜಾತಿ ಪದ್ಧತಿಯನ್ನೂ ಅನುಸರಿಸಬೇಕು. ಈಗ ಇದು ಹಿಂದೂ ಎಂದರೆ ಯಾರು? ಎಂಬ ಹಳೆಯ ಪ್ರಶ್ನೆಯ ಕಡೆಗೇ ನಮ್ಮನ್ನು ಕರೆದೊಯ್ಯುತ್ತದೆ. ಅಂದರೆ ನಾವು ನಿಂತಲ್ಲಿಯೇ ಇದ್ದೇವೆ.

ತನ್ನ ಸ್ವಂತ ಧರ್ಮದಲ್ಲೇ ತನ್ನ ಸ್ಥಾನವು ಮನಸ್ಸಿಗೆ ಕಿರಿಕಿರಿಯನ್ನು, ಸಮಸ್ಯೆಯನ್ನು ಉಂಟುಮಾಡುತ್ತಿದೆ ಏಕೆ ಎಂಬ ಪ್ರಶ್ನೆಯನ್ನು ಪ್ರತಿಯೊಬ್ಬ ಹಿಂದೂವೂ ಪರಿಗಣಿಸಬಹುದಲ್ಲವೆ? ಅಂತಹ ಸರಳ ಪ್ರಶ್ನೆಗೆ ಪ್ರತಿಯೊಬ್ಬ ಪಾರಸಿಯೂ, ಪ್ರತಿಯೊಬ್ಬ ಕ್ರೈಸ್ತನೂ, ಪ್ರತಿಯೊಬ್ಬ ಮುಸ್ಲಿಮನೂ ಉತ್ತರ ಕೊಡುವಂತೆ ಹಿಂದೂ ಏಕೆ ಕೊಡಲಾರ? ಇಂತಹ ಧಾರ್ಮಿಕ ಗೊಂದಲಕ್ಕೆ ಕಾರಣಗಳೇನು ಎಂದು ತನ್ನನ್ನೇ ತಾನು ಕೇಳಿಕೊಳ್ಳಬೇಕಾದ ಕಾಲವಿದಲ್ಲವೇನು?

* * * *

# ಒಗಟು – ೨

## ವೇದಗಳ ಹುಟ್ಟು – ಬ್ರಾಹ್ಮಣರ ಸ್ಪಷ್ಟೀಕರಣ ಅಥವಾ ಲಂಬೋಕ್ತಿ ಕಲೆಯ ಕಸರತ್ತು

ವೇದಗಳನ್ನು ತನ್ನ ಧರ್ಮದ ಅತ್ಯಂತ ಪವಿತ್ರ ಗ್ರಂಥಗಳೆಂದು ಪರಿಗಣಿಸದ ಹಿಂದೂ ಪ್ರಾಯಶಃ ಎಲ್ಲೂ ಇರಲಾರ. ಆದರೂ ಯಾವ ಹಿಂದೂವನ್ನಾದರೂ ವೇದಗಳ ಮೂಲವೆಲ್ಲಿ ಎಂದು ಕೇಳಿದರೆ ಈ ಸರಳ ಪ್ರಶ್ನೆಗೆ ಒಂದು ಸ್ಪಷ್ಟ ಹಾಗೂ ಖಚಿತವಾದ ಉತ್ತರ ಹೇಳುವವನನ್ನು ಹುಡುಕುವುದು ಕಷ್ಟವಾಗುತ್ತದೆ. ಇದೇ ಪ್ರಶ್ನೆಯನ್ನು ಒಬ್ಬ ವೈದಿಕ ಬ್ರಾಹ್ಮಣನಿಗೆ ಕೇಳಿದರೆ ಅವನು ವೇದಗಳು ಸನಾತನವೆನ್ನುತ್ತಾನೆ. ಆದರೆ ಆ ಪ್ರಶ್ನೆಗೆ ಇದು ಉತ್ತರವಲ್ಲ. ಏಕೆಂದರೆ, 'ಸನಾತನ' ಎಂಬ ಪದದ ಅರ್ಥವೇನು?

ಸನಾತನ ಎಂಬ ಪದದ ಉತ್ತಮ ವಿವರಣೆಯು 'ಮನುಸ್ಮೃತಿ' ಅಧ್ಯಾಯ ಒಂದು, ಶ್ಲೋಕ ೨೨ ಮತ್ತು ೨೩ರ ಮೇಲೆ ಕಲ್ಲೂಕ ಭಟ್ಟ ಬರೆದಿರುವ ವ್ಯಾಖ್ಯಾನದಲ್ಲಿ ಸಿಕ್ಕುತ್ತದೆ. 'ಸನಾತನ' ಪದಕ್ಕೆ ಕಲ್ಲೂಕ ಭಟ್ಟನ ವ್ಯಾಖ್ಯೆ ಹೀಗಿದೆ[೧]:

---

*ನಮಗೆ 'ವೇದಗಳ ಮೂಲ'ದ ಬಗೆಗೆ ೭೨ ಪುಟಗಳು ಸಿಕ್ಕಿವೆ. ಆದರೆ ಬೆರಳಚ್ಚುಗಾರನಾಗಲಿ, ಲೇಖಕರಾಗಲಿ ಅವುಗಳಿಗೆ ಒಂದು ವ್ಯವಸ್ಥೆಯನ್ನಾಗಲೀ ಪುಟಸಂಖ್ಯೆಯನ್ನಾಗಲೀ ಕೊಟ್ಟಿರಲಿಲ್ಲ. ನಾವು ಅವುಗಳಿಗೆ ಒಂದು ವ್ಯವಸ್ಥೆಯನ್ನು ಕೊಡಲು ಪ್ರಯತ್ನಿಸಿದ್ದೇವೆ ಮತ್ತು ವಿಷಯಾನುಕ್ರಮಣಿಕೆಯ ಪ್ರಕಾರ ಅವುಗಳನ್ನು ಒಗಟು ೨ರಿಂದ ಒಗಟು ೬ ಎಂದು ವಿಂಗಡಿಸಿದ್ದೇವೆ. ಪ್ರತಿ ಅಧ್ಯಾಯದ ವಿಷಯದ ದೃಷ್ಟಿಯಿಂದ ನೋಡಿದಾಗ ಈ ಪುಟಗಳು ಪರಿಪೂರ್ಣವಾಗಿವೆ ಎಂದು ಹೇಳುವುದು ಕಷ್ಟ.*

*ಆದರೆ ೬೧ ಪುಟಗಳುಳ್ಳ 'ರಿಡ್ಲ್ ಆಫ್ ದಿ ವೇದಾಸ್' ಎಂಬ ಸ್ವತಂತ್ರ ಅಧ್ಯಾಯವಿದ್ದು, ಅದನ್ನು 'ಅನುಬಂಧ ೧'ರ ಅಡಿಯಲ್ಲಿ ಸೇರಿಸಲಾಗಿದೆ. ಈ ಲೇಖನವು ವಿಷಯಾನುಕ್ರಮಣಿಕೆಯ ಕ್ರಮಸಂಖ್ಯೆ ೨ರಿಂದ ಕ್ರಮಸಂಖ್ಯೆ ೬ರ ವರೆಗಿನ ಎಲ್ಲ ವಿಷಯಗಳನ್ನೂ ಸಂಗ್ರಹರೂಪದಲ್ಲಿ ಒಳಗೊಂಡಿದೆ. ಈ ಲೇಖನದಲ್ಲಿ ಅನೇಕ ಪ್ಯಾರಾಗಳು ಮತ್ತೆ ಮತ್ತೆ ಬರುತ್ತವೆ. ಇಲ್ಲಿ ಕೊಟ್ಟಿರುವ ಅಧ್ಯಾಯ ೨ರಿಂದ ೬ರ ವರೆಗಿನ ಮೂಲ ಹಸ್ತಪ್ರತಿಯಲ್ಲಿ ತಿದ್ದುಪಡಿ ಮತ್ತು ಮಾರ್ಪಾಟುಗಳು (ಲೇಖಕರ ಕೈಬರಹದಲ್ಲಿ) ಇವೆ. ಆದರೆ ಅನುಬಂಧ ೧ ಎಂಬ ಅಧ್ಯಾಯದ ಬೆರಳಚ್ಚಿನ ಎರಡನೇ ಪ್ರತಿ ಇದ್ದು ಅದರಲ್ಲಿ ಯಾವ ತಿದ್ದುಪಡಿಯೂ ಇಲ್ಲ. ನಾವು ಪರಿವಿಡಿಯ ಕಾಲಾನುಕ್ರಮಣಿಕೆಯನ್ನು ಅನುಸರಿಸಿದ್ದೇವೆ. ಅದಕ್ಕನುಸಾರವಾಗಿ ತಿದ್ದುಪಡಿಮಾಡಿದ ಹಸ್ತಪ್ರತಿಯ ಪುಟಗಳನ್ನು ಜೋಡಿಸಿರುತ್ತೇವೆ. – ಸಂಪಾದಕರು*

---

೧. ಮ್ಯೂರ್: 'ಸ್ಯಾನ್‌ಸ್ಕ್ರಿಟ್ ಟೆಕ್ಸ್ಟ್', ಸಂ. III ಪು. ೬

"'ಸನಾತನ'ಎಂಬ ಶಬ್ದಕ್ಕೆ ಆದಿಯಿಂದಲೂ ನಿತ್ಯವಾಗಿರುವುದು ಎಂದರ್ಥ. ವೇದಗಳು ಅಪೌರುಷೇಯ ಎಂಬ ಸಿದ್ಧಾಂತವನ್ನು ಮನು ಅನುಮೋದಿಸುತ್ತಾನೆ. ಈಗಿರುವ ವೇದಗಳೇ ಮೊದಲಿನ ಕಲ್ಪನೆಯಲ್ಲಿ ಪರಮಾತ್ಮನಾದ ಬ್ರಹ್ಮನ ಸ್ಮೃತಿಯಲ್ಲಿದ್ದವು. ಆಗ ಬ್ರಹ್ಮನು ಪರಮಾತ್ಮನೊಂದಿಗೆ ಐಕ್ಯನಾಗಿದ್ದನು. ಈ ವೇದಗಳನ್ನೇ ಬ್ರಹ್ಮನು ಈ ಕಲ್ಪದ ಆದಿಯಲ್ಲಿ ಅಗ್ನಿ, ವಾಯು ಮತ್ತು ಸೂರ್ಯರಿಂದ ಹೊರತೆಗೆದನು. ವೇದಗಳ ಮೇಲೆ ನಿಂತಿರುವ ಈ ನಂಬಿಕೆಯನ್ನು ನಾವು ಪ್ರಶ್ನಿಸುವಂತಿಲ್ಲ. ಏಕೆಂದರೆ ವೇದವು 'ಋಗ್ವೇದವು ಅಗ್ನಿಯಿಂದಲೂ ಯಜುರ್ವೇದವು ವಾಯುವಿನಿಂದಲೂ ಸಾಮವೇದವು ಸೂರ್ಯನಿಂದಲೂ ಬರುತ್ತವೆ' ಎಂದು ಹೇಳುತ್ತದೆ."

ಕಲ್ಲೂಕ ಭಟ್ಟನ ವಿವರಣೆಯನ್ನು ತಿಳಿದುಕೊಳ್ಳಬೇಕಾದರೆ ಕಲ್ಪವೆಂದರೇನೆಂಬುದನ್ನು ತಿಳಿದುಕೊಳ್ಳುವುದು ಆವಶ್ಯಕ.

ಕಲ್ಪವೆಂದರೆ ವೈದಿಕ ಬ್ರಾಹ್ಮಣರು ಕಾಲವನ್ನು ಅಳೆಯುವ ರೀತಿ. ಬ್ರಾಹ್ಮಣರು ಕಾಲವನ್ನು ಅಳೆಯಲು ೧. ವರ್ಷ ೨. ಯುಗ ೩. ಮಹಾಯುಗ ೪. ಮನ್ವಂತರ ಮತ್ತು ೫. ಕಲ್ಪ ಎಂದು ವಿಂಗಡಿಸುತ್ತಾರೆ.

ವರ್ಷವೆಂದರೇನೆಂಬುದನ್ನು ತಿಳಿದುಕೊಳ್ಳುವುದು ಸುಲಭ.

ಯುಗವು ಎಷ್ಟು ಕಾಲವನ್ನು ಒಳಗೊಳ್ಳುತ್ತದೆ ಎಂಬುದರಲ್ಲಿ ಏಕಾಭಿಪ್ರಾಯವಿಲ್ಲ.

ಮಹಾಯುಗವೆಂದರೆ ನಾಲ್ಕು ಯುಗಗಳು ೧. ಕೃತಯುಗ ೨. ತ್ರೇತಾಯುಗ ೩. ದ್ವಾಪರಯುಗ ಮತ್ತು ೪. ಕಲಿಯುಗ. ಈ ಯುಗಗಳು ಚಕ್ರಾಕಾರದಲ್ಲಿ ಒಂದನ್ನೊಂದು ಅನುಸರಿಸುತ್ತವೆ. ಮೊದಲನೆ ಯುಗ ಮುಗಿದ ಕೂಡಲೆ ಎರಡನೆ ಯುಗ ಬರುತ್ತದೆ, ಇತ್ಯಾದಿ. ಹೀಗೆ ನಾಲ್ಕು ಯುಗಗಳ ಚಕ್ರ ಒಂದು ಸುತ್ತು ತಿರುಗಿದಾಗ, ಒಂದು ಮಹಾಯುಗ ಮುಗಿಯುತ್ತದೆ. ಮತ್ತೊಂದು ಪ್ರಾರಂಭವಾಗುತ್ತದೆ. ಪ್ರತಿಯೊಂದು ಮಹಾಯುಗವು ಕೃತಯುಗದಿಂದ ಪ್ರಾರಂಭವಾಗಿ ಕಲಿಯುಗದೊಂದಿಗೆ ಮುಗಿಯುತ್ತದೆ.

ಕಲ್ಪಕ್ಕೂ ಮಹಾಯುಗಕ್ಕೂ ಇರುವ ಸಂಬಂಧದ ಬಗೆಗೆ ಯಾವುದೇ ಸಂದೇಹವಿಲ್ಲ. ೭೧ ಮಹಾಯುಗಗಳು ಒಂದು ಕಲ್ಪಕ್ಕೆ ಸಮ. ಆದರೆ ಮಹಾಯುಗ ಮತ್ತು ಮನ್ವಂತರಗಳ ನಡುವಿನ ಅಕಾಲಿಕ ಸಂಬಂಧ'ದ ಬಗ್ಗೆ ಸ್ವಲ್ಪ ಅಸ್ಪಷ್ಟತೆ ಇದೆ. ಮನ್ವಂತರವೆಂದರೆ ೭೧ ಮಹಾಯುಗಗಳಿಗಿಂತ "ಸ್ವಲ್ಪ ಹೆಚ್ಚು". "ಸ್ವಲ್ಪ ಹೆಚ್ಚು" ಎಷ್ಟು ಕಾಲವನ್ನು ಒಳಗೊಳ್ಳುತ್ತದೆ ಎಂಬುದಕ್ಕೆ ಖಂಡಿತವಾದ ಉತ್ತರವನ್ನು ಕೊಡಲು ಬ್ರಾಹ್ಮಣರು ಶಕ್ತರಾಗಿಲ್ಲ. ಇದರಿಂದಾಗಿ ಮನ್ವಂತರಕ್ಕೂ ಕಲ್ಪಕ್ಕೂ ಇರುವ ಕಾಲಿಕ ಸಂಬಂಧವು ಅಸ್ಪಷ್ಟವಾಗಿಯೇ ಉಳಿದಿದೆ.

ಆದರೆ ನಮ್ಮ ಪ್ರಸ್ತುತ ಉದ್ದೇಶಕ್ಕೆ ಇದರಿಂದ ಏನೂ ತೊಂದರೆಯಿಲ್ಲ, ಸದ್ಯಕ್ಕೆ ನಾವು ಕಲ್ಪದ ಅರ್ಥದ ಮೇಲೆ ನಮ್ಮ ಗಮನವನ್ನು ಕೇಂದ್ರೀಕರಿಸೋಣ.

ಕಲ್ಪದ ವಿಚಾರವು ವಿಶ್ವಸೃಷ್ಟಿ ಮತ್ತು ಸಂಹಾರಗಳಿಗೆ ನಿಕಟವಾಗಿ ಸಂಬಂಧಿಸಿದೆ. ಜಗತ್ತನ್ನು ರಚಿಸುವ ಕಾರ್ಯಕ್ಕೆ ಸೃಷ್ಟಿ ಎಂದು ಹೆಸರು. ಜಗತ್ತಿನ ನಾಶಕ್ಕೆ ಪ್ರಳಯ ಎಂದು ಹೆಸರು. ಸೃಷ್ಟಿ ಮತ್ತು ಪ್ರಳಯಗಳ ಮಧ್ಯದ ಕಾಲವೇ ಕಲ್ಪ. ಹೀಗೆ, ವೇದಗಳ ಮೂಲವು ಕಲ್ಪದ ವಿಚಾರದೊಂದಿಗೆ ನಿಕಟ ಸಂಬಂಧ ಹೊಂದಿದೆ.

ಪೂರ್ವ ನಿರ್ಧಾರದ ಮೇರೆಗೆ ಕಲ್ಪ ಪ್ರಾರಂಭವಾದಾಗ ಸೃಷ್ಟಿ ಪ್ರಾರಂಭವಾಗಬೇಕು. ಸೃಷ್ಟಿಯ

ಪ್ರಾರಂಭದಲ್ಲಿ ಹೊಸ ವೇದಗಳ ಸರಣಿಯು ಅಸ್ತಿತ್ವಕ್ಕೆ ಬರುತ್ತದೆ. ಕಲ್ಲೂಕ ಭಟ್ಟ ನಮಗೆ ತಿಳಿಸಲು ಇಚ್ಛಿಸುವುದೇನೆಂದರೆ ಒಂದರ್ಥದಲ್ಲಿ ಪ್ರತಿಯೊಂದು ಹೊಸ ಕಲ್ಪದಲ್ಲಿ ಹೊಸ ವೇದಗಳು ಇದ್ದರೂ ಬ್ರಹ್ಮನು ತನ್ನ ಸ್ಮೃತಿಯಿಂದ ಅದೇ ಹಳೆಯ ವೇದಗಳನ್ನೇ ವ್ಯಕ್ತಪಡಿಸುತ್ತಾನೆ. ಈ ಕಾರಣಕ್ಕಾಗಿಯೇ ಅವನು ವೇದಗಳನ್ನು ಸನಾತನ ಅಂದರೆ ಮೊದಲಿನಿಂದಲೂ ನಿತ್ಯವಾದುವು ಎಂದು ಕರೆಯುತ್ತಾನೆ.

ಕಲ್ಲೂಕ ಭಟ್ಟ ಹೇಳುವುದೇನೆಂದರೆ ವೇದಗಳನ್ನು ಸ್ಮೃತಿಯಿಂದ ಪುನರ್ರಚಿಸಲಾಗಿದೆ ಎಂದು. ಇಲ್ಲಿ ನಿಜವಾದ ಪ್ರಶ್ನೆ ಎಂದರೆ ಯಾರು ಅವುಗಳನ್ನು ಪುನರ್ರಚಿಸಿದರು ಎಂಬುದಲ್ಲ. ಯಾರು ಮೂಲತಃ ಅವುಗಳನ್ನು ರಚಿಸಿದರು ಎಂಬುದು? ಪ್ರತಿ ಕಲ್ಪದ ಆದಿಯಲ್ಲೂ ವೇದಗಳನ್ನು ಪುನರ್ರಚಿಸಲಾಗುತ್ತದೆ ಎಂಬ ಸಿದ್ಧಾಂತವನ್ನು ಒಪ್ಪಿಕೊಂಡರೂ, ಮೊದಲನೆ ಕಲ್ಪ ಪ್ರಾರಂಭವಾದಾಗ ವೇದಗಳನ್ನು ರಚಿಸಿದವರು ಯಾರು? ಎಂಬ ಪ್ರಶ್ನೆ ಹಾಗೇ ಉಳಿಯುತ್ತದೆ. ಏನೂ ಇಲ್ಲದೇ (ಶೂನ್ಯದಿಂದ)ವೇದಗಳು ಅಸ್ತಿತ್ವಕ್ಕೆ ಬಂದಿರಲಾರವು. ಅವುಗಳಿಗೆ ಅಂತ್ಯವಿಲ್ಲದಿದ್ದರೂ ಆದಿಯಂತೂ ಇರಲೇಬೇಕು. ಹಾಗೆಂದು ಬ್ರಾಹ್ಮಣರು ಬಹಿರಂಗವಾಗಿ ಏಕೆ ಹೇಳಬಾರದು? ಈ ಸುತ್ತುಬಳಸಿನ ಮಾತೇಕೆ?

* * * *

# ಒಗಟು – ೩

# ವೇದಗಳ ಮೂಲದ ಬಗ್ಗೆ ಉಳಿದ ಶಾಸ್ತ್ರಗಳ ಪ್ರಮಾಣ

## I

ವೇದಗಳ ಉಗಮದ ಬಗೆಗಿನ ಶೋಧವನ್ನು ನಾವು ವೇದಗಳಿಂದಲೇ ಪ್ರಾರಂಭಿಸಬಹುದು. ವೇದಗಳ ಉಗಮದ ಬಗ್ಗೆ 'ಋಗ್ವೇದ'ವು ಒಂದು ಸಿದ್ಧಾಂತವನ್ನು ಮಂಡಿಸುತ್ತದೆ. ಅದು ಈಗಾಗಲೇ ಎಲ್ಲರಿಗೂ ಗೊತ್ತಿರುವ 'ಪುರುಷ ಸೂಕ್ತ'ದಲ್ಲಿ ವಿವರಿಸಲ್ಪಟ್ಟಿದೆ. ಅದರ ಪ್ರಕಾರ ಪುರುಷ ಎಂಬ ಪೌರಾಣಿಕ (ಮಿಥ್ಯಾ) ವ್ಯಕ್ತಿಯನ್ನು ಒಂದು ವಿಚಿತ್ರ ಯಜ್ಞದಲ್ಲಿ ಬಲಿಕೊಡಲಾಯಿತು ಮತ್ತು ಆ ಯಜ್ಞದಿಂದ ಮೂರು ವೇದಗಳು ಅಂದರೆ, 'ಋಕ್', 'ಸಾಮ' ಮತ್ತು 'ಯಜುರ್' ವೇದಗಳು ಅಸ್ತಿತ್ವಕ್ಕೆ ಬಂದವು.

'ಸಾಮ' ಮತ್ತು 'ಯಜುರ್ವೇದ'ಗಳು ವೇದಗಳ ಉಗಮದ ಬಗ್ಗೆ ಏನೂ ಹೇಳುವುದಿಲ್ಲ. ಈ ಪ್ರಶ್ನೆಗೆ ಸಂಬಂಧಿಸಿದಂತೆ ಹೇಳುವ ಮತ್ತೊಂದು ವೇದವೆಂದರೆ 'ಅಥರ್ವವೇದ'. ಅದು ವೇದಗಳ ಉಗಮದ ಬಗ್ಗೆ ಅನೇಕ ವಿವರಣೆಗಳನ್ನು ಕೊಡುತ್ತದೆ. ಒಂದು ವಿವರಣೆ[೧] ಹೀಗಿದೆ:

"ಕಾಲದಿಂದ ಋತುಗಳು ಹುಟ್ಟಿದವು. ಕಾಲದಿಂದ ಯಜುಸ್ ಹುಟ್ಟಿದವು."

ಈ ವಿಷಯವಾಗಿ 'ಅಥರ್ವವೇದ' ಇನ್ನೂ ಎರಡು ಅಭಿಮತಗಳನ್ನು ತಿಳಿಸುತ್ತದೆ. ಮೊದಲನೆಯದು ಅರ್ಥವಾಗುವುದಿಲ್ಲ. ಅದನ್ನು ಅದರ ಭಾಷೆಯಲ್ಲಿಯೇ ಹೀಗೆ ವ್ಯಕ್ತಪಡಿಸಬಹುದು:[೨]

"ಯಾವ ಸ್ಕಂಬನಲ್ಲಿ ಪೂರ್ವದ ಋಷಿಗಳೂ, ಋತುಗಳೂ, ಸಾಮಗಳೂ,ಯಜುಸ್ಸುಗಳೂ, ಭೂಮಿ ಮತ್ತು ಋಷಿ ಆಶ್ರಯ ಪಡೆದಿದ್ದಾರೋ, ಆ ಸ್ಥಳ ಯಾವುದೆಂದು ತಿಳಿಸು......"

"ಯಾವ ಸ್ಕಂಬನಿಂದ ಋಕ್ಕುಗಳನ್ನು ಕತ್ತರಿಸಿ ಹಾಕಲಾಯಿತೋ, ಯಾರಿಂದ ಯಜುಸ್ಸುಗಳನ್ನು ಅಳಿಸಿಹಾಕಲಾಯಿತೋ, ಯಾರ ಕೂದಲುಗಳೇ ಸಾಮಗಳೋ, ಯಾರ ಬಾಯಿಯೇ ಅಥರ್ವಣ ಮತ್ತು ಆಂಗೀರಸ ಶ್ಲೋಕಗಳೋ, ಆ ಸ್ಕಂಬ ಯಾರೆಂದು ತಿಳಿಸು....."

'ಋಗ್', 'ಸಾಮ' ಮತ್ತು 'ಯಜುರ್ವೇದ'ಗಳು ಸ್ಕಂಬನಿಂದ ಹುಟ್ಟಿದವು ಎಂದು ಹೇಳುವವರೆಗೆ ಈ ವಾಕ್ಯಗಳು ಒಂದು ಕಠಿಣ ಸಮಸ್ಯೆಯಾಗುತ್ತದೆ ಎಂಬುದು ನಿಸ್ಸಂದೇಹ. 'ಅಥರ್ವವೇದ'ದ ಎರಡನೆಯ ವಿವರಣೆಯ ಪ್ರಕಾರ ವೇದಗಳು ಇಂದ್ರನಿಂದ ಹುಟ್ಟಿದವು.[೩]

---

೧. 'ಅಥರ್ವವೇದ', XIX ೫೪, ೩; ಮ್ಯೂರ್: 'ಸ್ಯಾನ್‌ಸ್ಕ್ರಿಟ್ ಟೆಕ್ಸ್ಟ್', III. ಪು. ೫ರಲ್ಲಿ ಉದ್ಧರಿಸಲಾಗಿದೆ.
೨. 'ಅಥರ್ವವೇದ' X ೭. ೧೪, ಮ್ಯೂರ್: 'ಸ್ಯಾನ್‌ಸ್ಕ್ರಿಟ್ ಟೆಕ್ಸ್ಟ್', III ಪು. ೩ರಲ್ಲಿ ಉದ್ಧರಿಸಲಾಗಿದೆ.
೩. ಮ್ಯೂರ್: 'ಸ್ಯಾನ್‌ಸ್ಕ್ರಿಟ್ ಟೆಕ್ಸ್ಟ್', III ಪು. ೪

## II

ವೇದಗಳು ತಮ್ಮ ಹುಟ್ಟಿನ ಬಗ್ಗೆ ಹೇಳುವುದು ಇಷ್ಟನ್ನೇ. ಮುಂದೆ ಬ್ರಾಹ್ಮಣಗಳು ಬರುತ್ತವೆ. ಆದುದರಿಂದ ಅವು ಈ ವಿಷಯವಾಗಿ ಏನು ಹೇಳುತ್ತವೆ ಎಂಬುದನ್ನು ವಿಚಾರಿಸೋಣ. ವೇದಗಳ ಉಗಮದ ಬಗ್ಗೆ ವಿವರಣೆ ನೀಡಲು ಪ್ರಯತ್ನಿಸುವ ನಾಲ್ಕೇ ಬ್ರಾಹ್ಮಣಗಳೆಂದರೆ 'ಶತಪಥ ಬ್ರಾಹ್ಮಣ', 'ತೈತ್ತಿರೀಯ ಬ್ರಾಹ್ಮಣ', 'ಐತರೇಯ ಬ್ರಾಹ್ಮಣ' ಮತ್ತು 'ಕೌಶೀತಕಿ ಬ್ರಾಹ್ಮಣ'.

'ಶತಪಥ ಬ್ರಾಹ್ಮಣ'ವು ಅನೇಕ ವಿವರಣೆಗಳನ್ನು ನೀಡುತ್ತದೆ. ಒಂದು ವೇದಗಳ ಉಗಮವನ್ನು ಪ್ರಜಾಪತಿಗೆ ಆರೋಪಿಸುತ್ತದೆ.[೧] ಅದರ ಪ್ರಕಾರ:

"ಪ್ರಜಾಪತಿ ಮೊದಲು ತಾನೊಬ್ಬನೇ ಇದ್ದು, ಅವನೇ ವಿಶ್ವವಾಗಿದ್ದು, ಅವನಿಗೆ ತಾನು ಅನೇಕವಾಗಬೇಕು ಎಂಬ ಬಯಕೆಯುಂಟಾಯಿತು. ಆಗ ಅವನು ಭಕ್ತಿಯಿಂದ ತಪಸ್ಸನ್ನಾಚರಿಸಿದನು. ಅವನು ಹಾಗೆ ತಪಸ್ಸನ್ನಾಚರಿಸಿದಾಗ ಅವನಿಂದ ಭೂಮಿ, ವಾಯು ಮತ್ತು ಆಕಾಶಗಳು ಉತ್ಪತ್ತಿಯಾದವು. ಅವನು ಅವುಗಳಿಗೆ ಉಷ್ಣವನ್ನು ತುಂಬಿದನು. ಹೀಗೆ ಉಷ್ಣವನ್ನು ಪಡೆದ ಅವುಗಳಿಂದ ಮೂರು ತೇಜಸ್ಸುಗಳು ಉತ್ಪತ್ತಿಯಾದವು. ಅವೆಂದರೆ ಅಗ್ನಿ, ಪಾವನಗೊಳಿಸುವ ಪವನ (ವಾಯು) ಮತ್ತು ಸೂರ್ಯ. ಅವುಗಳಿಗೂ ಅವನು ಉಷ್ಣವನ್ನು ತುಂಬಿದನು. ಹೀಗೆ ಉಷ್ಣಗೊಂಡ ಅವುಗಳಿಂದ ಮೂರು ವೇದಗಳು ಉತ್ಪತ್ತಿಯಾದವು. ಅಂದರೆ 'ಋಗ್ವೇದ'ವು ಅಗ್ನಿಯಿಂದಲೂ 'ಯಜುರ್ವೇದ'ವು ವಾಯುವಿನಿಂದಲೂ 'ಸಾಮವೇದ'ವು ಸೂರ್ಯನಿಂದಲೂ ಉತ್ಪತ್ತಿಯಾದವು. ಅವನು ಈ ಮೂರು ವೇದಗಳಿಗೂ ಉಷ್ಣವನ್ನು ತುಂಬಿದನು. ಹೀಗೆ ಉಷ್ಣಗೊಂಡ ಅವುಗಳಿಂದ ಮೂರು ಪ್ರಕಾಶಮಾನವಾದ ಸತ್ವಗಳು ಉತ್ಪತ್ತಿಯಾದವು. ಅಂದರೆ 'ಋಗ್ವೇದ'ದಿಂದ ಭೂಃ, 'ಯಜುರ್ವೇದ'ದಿಂದ ಭುವಃ ಮತ್ತು 'ಸಾಮವೇದ'ದಿಂದ ಸ್ವಾಃ ಉತ್ಪತ್ತಿಯಾದವು. ಹೀಗೆ 'ಋಗ್ವೇದ'ಕ್ಕೆ ಅಧ್ವರ್ಯುವಿನ ಅಧಿಕಾರವಿದೆ. 'ಸಾಮವೇದ'ಕ್ಕೆ ಉದ್ಗಾತೃವಿನ ಅಧಿಕಾರವಿದೆ. ಈ ಮೂರು ವಿಜ್ಞಾನಗಳ (ಮೂರು ವೇದಗಳ) ಪ್ರಕಾಶಮಾನ ತತ್ವದಿಂದ ಬ್ರಹ್ಮನ ಕಾರ್ಯ ಹುಟ್ಟಿತು."

ಪ್ರಜಾಪತಿಯೇ ವೇದಗಳ ಮೂಲ ಎಂಬ ಮೇಲಿನ ವಿವರಣೆಗಿಂತ ಸ್ವಲ್ಪ ಭಿನ್ನವಾದ ವಿವರಣೆಯೊಂದನ್ನು ಶತಪಥ ಬ್ರಾಹ್ಮಣವು ಕೊಡುತ್ತದೆ.[೨] ಪ್ರಜಾಪತಿಯು ನೀರಿನಿಂದ ವೇದಗಳನ್ನು ಸೃಷ್ಟಿಸಿದನು ಎಂಬುದೇ ಆ ವಿವರಣೆ. ಶತಪಥ ಬ್ರಾಹ್ಮಣವು ಹೀಗೆ ಹೇಳುತ್ತದೆ:

"ಪುರುಷನಾದ ಪ್ರಜಾಪತಿಗೆ 'ನಾನು ಅನೇಕವಾಗಬೇಕು, ವ್ಯಾಪಿಸಿಬೇಕು' ಎಂಬ ಆಸೆ ಯುಂಟಾಯಿತು. ಅವನು ಉಗ್ರ ಭಕ್ತಿಯಿಂದ ಉಗ್ರ ತಪಸ್ಸನ್ನು ಆಚರಿಸಿದನು. ಹೀಗೆ ಮಾಡಿದ ನಂತರ ಅವನು ಮೊದಲು ಪವಿತ್ರ ಜ್ಞಾನವನ್ನು ಅಂದರೆ ಮೂರು ವೇದಗಳನ್ನು ಸೃಷ್ಟಿಸಿದನು. ಇದೇ ಅವನಿಗೆ ಆಧಾರವಾಯಿತು. ಅದಕ್ಕೆ 'ಜಗತ್ತಿಗೆ ಪವಿತ್ರ ಜ್ಞಾನವೇ ಆಧಾರ' ಎಂಬ ಪ್ರತೀತಿ ಇರುವುದು. ಆದುದರಿಂದ ವೇದಗಳನ್ನು ಅಭ್ಯಸಿಸಿದವನಿಗೆ ಒಂದು ಆಧಾರವಿರುತ್ತದೆ. ಪವಿತ್ರ ಜ್ಞಾನವೇ ಅವನ ಆಧಾರ. ಈ ಆಧಾರದ ಮೇಲೆ ಪ್ರಜಾಪತಿಯು ಕಠಿಣ ತಪಸ್ಸನ್ನಾಚರಿಸಿದನು. ಅವನು

೧. ಅದೇ, ಪು. ೫

೨. ಮ್ಯೂರ್: 'ಸ್ಯಾನ್‌ಸ್ಕ್ರಿಟ್ ಟೆಕ್ಸ್ಟ್', ಪು. ೮

ವಾಚ(ವಾಕ್ಕು)ದಿಂದ ನೀರನ್ನು ಸೃಷ್ಟಿಸಿದ. ಆ ವಾಚವು ಅವನದೇ ಆಗಿತ್ತು. ನೀರು (ಹೀಗೆ) ಸೃಷ್ಟಿಯಾಯಿತು. ನೀರು ಪ್ರಪಂಚದಲ್ಲಿ ಹರಡಿಕೊಂಡಿದ್ದರಿಂದ ('ಆಪ್ನೋತ್') ಅದಕ್ಕೆ 'ಆಪಃ' ಎಂಬ ಹೆಸರು ಬಂತು. ಅದು (ಎಲ್ಲ ನೆಲವನ್ನು) ಆವರಿಸಿಕೊಂಡಿರುವುದರಿಂದ (ಆವೃಣೋತ್) ನೀರನ್ನು 'ವರ್' ಎಂದು ಕರೆಯಲಾಯಿತು. ಅವನಿಗೆ (ಪ್ರಜಾಪತಿಗೆ) ನಾನು ನೀರಿನಿಂದಾಗಿ ವ್ಯಾಪಿಸಬೇಕು ಎಂಬ ಆಸೆ ಬಂತು. ಅವನು ಈ ಮೂರು ವೇದಗಳ ಸಮೇತ ನೀರನ್ನು ಪ್ರವೇಶಿಸಿದನು. ಇದರಿಂದಾಗಿ ಒಂದು ಅಂಡ ಉಂಟಾಯಿತು. ಅದಕ್ಕೆ ಅವನು ಪ್ರಚೋದನೆ ಕೊಟ್ಟು 'ಇದು ಮತ್ತೆ ಮತ್ತೆ ಮತ್ತೆ ಉಂಟಾಗಲಿ' ಎಂದು ಹೇಳಿದನು. ಹೀಗೆ ಮೊದಲು ಪವಿತ್ರ ಜ್ಞಾನ ಅಂದರೆ ಮೂರು ವೇದಗಳು ಉಂಟಾದವು. ಅದಕ್ಕೆ 'ಪ್ರಪಂಚದಲ್ಲಿ ಮೊದಲು ಪವಿತ್ರ ಜ್ಞಾನ ಹುಟ್ಟಿತು' ಎಂದು ಹೇಳುವುದು. ಅಲ್ಲದೆ ಆ ಪವಿತ್ರಜ್ಞಾನವು ಪುರುಷನ ಮುಂಭಾಗದಿಂದ ಹುಟ್ಟಿದುದರಿಂದ ಅದು ಪುರುಷನ ಬಾಯಿಯಾಗಿ ಸೃಷ್ಟಿಯಾಯಿತು. ಅದಕ್ಕೆ ವೇದವನ್ನು ತಿಳಿದವನ ಬಗ್ಗೆ 'ಅವನು ಅಗ್ನಿಯಂತಿದ್ದಾನೆ. ಏಕೆಂದರೆ ಪವಿತ್ರ ಜ್ಞಾನವು ಅಗ್ನಿಯ ಬಾಯಿ' ಎನ್ನುತ್ತಾರೆ."

ಶತಪಥ ಬ್ರಾಹ್ಮಣದಲ್ಲಿ[೧] ಮೂರನೆಯ ವಿವರಣೆಯೂ ಇದೆ.

"ಸಾಗರವನ್ನೇ ನಿನ್ನ ಆಧಾರವನ್ನಾಗಿ ಮಾಡಿ, ಅಲ್ಲಿಯೇ ನಿನ್ನನ್ನು ನೆಲೆಗೊಳಿಸುತ್ತೇನೆ."

"ಮನಸ್ಸೇ ಸಾಗರ. ವಾಚವೆಂಬ ಸಲಿಕೆಯಿಂದ ಮನಸ್ಸೆಂಬ ಸಾಗರದ ತಳವನ್ನು ಅಗೆದ ಮೂರು ವೇದ ವಿದ್ಯೆಗಳನ್ನು ಹೊರತೆಗೆಯಲಾಯಿತು. ಆದ್ದರಿಂದಲೇ 'ದೇವತೆಗಳು ಚೂಪಾದ ಸಲಿಕೆಗಳಿಂದ ಅಗೆದು ತೆಗೆದ ಆ ಅರ್ಪಿತವನ್ನು ಎಲ್ಲಿಡಲಾಗಿತ್ತು ಎಂಬುದನ್ನು ಈ ದಿನ ಆ ತೇಜೋಮಯ ದೈವ ತಿಳಿದುಕೊಳ್ಳಲಿ' ಎಂಬ ಮಂತ್ರವನ್ನು ಪಠಿಸುವುದು. ಮನಸ್ಸೇ ಸಾಗರ. ವಾಚವೇ (ವಾಕ್ಕೇ) ಚೂಪಾದ ಸಲಿಕೆ. ತ್ರಿವೇದಗಳೇ ಆ ಅರ್ಪಿತ. ಇದಕ್ಕೆ ಸಂಬಂಧಿಸಿದಂತೆ ಆ ಮಂತ್ರವನ್ನು ಪಠಿಸಲಾಗಿದೆ. ಅವನು ಅದನ್ನು ತನ್ನ ಮನಸ್ಸಿನಲ್ಲಿ ನೆಲೆಗೊಳಿಸುತ್ತಾನೆ."

'ತೈತ್ತಿರೀಯ ಬ್ರಾಹ್ಮಣ'ವು ಮೂರು ವಿವರಣೆಗಳನ್ನು ಕೊಡುತ್ತದೆ. ಅದು ವೇದವನ್ನು ಪ್ರಜಾಪತಿಯಿಂದ ಪಡೆಯಲಾಯಿತೆಂದು ಹೇಳುತ್ತದೆ. ಅದು, ಪ್ರಜಾಪತಿಯು ಮೊದಲು ಸೋಮರಾಜನನ್ನು ಸೃಷ್ಟಿಸಿದನೆಂದೂ ಅನಂತರ ಮೂರು ವೇದಗಳು ಹುಟ್ಟಿದವೆಂದೂ ಹೇಳುತ್ತದೆ.[೨] ಈ 'ಬ್ರಾಹ್ಮಣ'ವು ಮತ್ತೊಂದು ವಿವರಣೆಯನ್ನು ಕೊಡುತ್ತದೆ.[೩] ಆದರೆ ಅದು ಪ್ರಜಾಪತಿಗೆ ಸಂಬಂಧಿಸಿದುದಲ್ಲ. ಅದರ ಪ್ರಕಾರ:

"ವಾಚವು ಅವಿನಾಶಿ. ವೇದಗಳ ತಾಯಿಯಾದ ಯಜ್ಞದಿಂದ ಹುಟ್ಟಿದ ಮೊದಲ ಶಿಶು ಮತ್ತು ಅಮರತ್ವದ ಕೇಂದ್ರ. ನಮ್ಮಿಂದ ಸಂತುಷ್ಟಗೊಂಡ ಆಕೆ ಯಜ್ಞಕ್ಕೆ ಬಂದಳು. ಯಾರನ್ನು ವಿವೇಕಿಗಳಾದ ಋಷಿಗಳೂ, ಋತುಗಳ ಕರ್ತೃಗಳೂ, ದೇವತೆಗಳೂ ತಮ್ಮ ಕಠಿಣ ತಪಸ್ಸುಗಳಿಂದ ಹಾಗೂ ಕಷ್ಟಕರವಾದ ಭಕ್ತಿಯಿಂದ ದರ್ಶಿಸಲು ಪ್ರಯತ್ನಿಸಿದರೋ ಆ ರಕ್ಷಿಸುವ ದೇವಿಯು ನನ್ನ ಪ್ರಾರ್ಥನೆಯನ್ನು ಕೇಳಲು ಸಿದ್ಧಳಾಗಲಿ."

---

೧. ಮ್ಯೂರ್: 'ಸ್ಯಾನ್‌ಸ್ಕ್ರಿಟ್ ಟೆಕ್ಸ್ಟ್', I, ಪು. ೯–೧೦
೨. ಅದೇ, ಪು. ೮
೩. ಅದೇ, ಪು. ೧೦

ಇದಕ್ಕೆ ಕಲಶವಿಟ್ಟಂತೆ 'ತೈತ್ತಿರೀಯ ಬ್ರಾಹ್ಮಣ'ವು ಮೂರನೆಯ ವಿವರಣೆಯನ್ನು ಕೊಡುತ್ತದೆ. ಅದು ವೇದಗಳು ಪ್ರಜಾಪತಿಯ ಗಡ್ಡದಿಂದ ಬಂದವು ಎಂದು ಹೇಳುತ್ತದೆ.[೧]

## III

ಉಪನಿಷತ್ತುಗಳು ಸಹ ವೇದಗಳ ಉಗಮವನ್ನು ವಿವರಿಸಲು ಪ್ರಯತ್ನಿಸಿವೆ.

'ಛಾಂದೋಗ್ಯ ಉಪನಿಷತ್ತು' ಕೊಡುವ ವಿವರಣೆಯೂ 'ಶತಪಥ ಬ್ರಾಹ್ಮಣ' ಕೊಡುವ ವಿವರಣೆಯೂ ಒಂದೇ ಆಗಿದೆ[೨]. ಅದೆಂದರೆ: 'ಋಗ್ವೇದ'ವು ಅಗ್ನಿಯಿಂದಲೂ, 'ಯಜುಸ್' ವಾಯುವಿನಿಂದಲೂ, 'ಸಾಮ'ವು ಸೂರ್ಯನಿಂದಲೂ ಹುಟ್ಟಿತು.

'ಬೃಹದಾರಣ್ಯಕ ಉಪನಿಷತ್ತು' ಎರಡು ವಿವರಣೆಗಳನ್ನು ಕೊಡುತ್ತದೆ. ಒಂದು ಕಡೆ ಅದು ಹೀಗೆ ಹೇಳುತ್ತದೆ:[೩]

"ಹಸಿಯಾದ ಸೌದೆಯನ್ನು ಉರಿಸಿದಾಗ, ಅದರಿಂದ ಹೊರಡುವ ಹೊಗೆಯ ನಾನಾ ರೂಪಗಳಂತೆ ಆ ಮಹಾ ಜೀವವು ಉಸಿರಿದ್ದರಿಂದ ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವವೇದ, ಆಂಗೀರಸ, ಇತಿಹಾಸಗಳು, ಪುರಾಣಗಳು, ವಿಜ್ಞಾನಗಳು, ಉಪನಿಷತ್ತುಗಳು, ಶ್ಲೋಕಗಳು, ಸೂತ್ರಗಳು, ವಿವಿಧ ರೀತಿಯ ಭಾಷ್ಯಗಳು ಹುಟ್ಟಿದವು. ಇವೆಲ್ಲಾ ಅವನ ಉಸಿರೇ."

ಮತ್ತೊಂದು ಕಡೆ ಅದು ಹೀಗೆ ಹೇಳುತ್ತದೆ:[೪]

(ಮೃತ್ಯು ದೇವತೆಯಾದ) ಪ್ರಜಾಪತಿಯು ಮೊದಲು ವಾಚವನ್ನು, ಅನಂತರ ಆಕೆಯಿಂದ ಆತ್ಮದೊಡಗೂಡಿ ಉಳಿದ ವಸ್ತುಗಳನ್ನೂ ವೇದಗಳನ್ನೂ ಸೃಷ್ಟಿಸಿದನೆಂದು ಹೇಳಲಾಗುತ್ತದೆ.

"ಆ ವಾಚ ಮತ್ತು ಆ ಆತ್ಮದಿಂದ ಏನೇನಿದೆಯೋ ಅದೆಲ್ಲವನ್ನು ಅಂದರೆ ಋಗ್, ಯಜುಸ್ಸು, ಸಾಮ, ಛಂದಸ್ಸು, ಯಜ್ಞಗಳನ್ನೂ, ಚರಾಚರ ವಸ್ತುಗಳನ್ನೂ ಸೃಷ್ಟಿಸಿದನು."

"ಈ ಮೂರು ವೇದಗಳೆಂದರೆ (ವಾಚ, ಮನಸ್ಸು ಮತ್ತು ಪ್ರಾಣ ಎಂಬ) ಮೂರು ವಸ್ತುಗಳು. ವಾಚವೆಂದರೆ 'ಋಗ್ವೇದ', ಮನಸ್ಸೆಂದರೆ 'ಯಜುರ್ವೇದ' ಮತ್ತು ಪ್ರಾಣ (ಉಸಿರು) ಎಂದರೆ 'ಸಾಮವೇದ'."

## IV

ವೇದದ ಉಗಮದ ಬಗ್ಗೆ 'ಮನುಸ್ಮೃತಿ'ಯಲ್ಲಿ ಎರಡು ಸಿದ್ಧಾಂತಗಳು ಕಾಣುತ್ತವೆ. ಒಂದು ಕಡೆ[೫] ಬ್ರಹ್ಮನೇ ವೇದಗಳನ್ನು ಸೃಷ್ಟಿಸಿದನೆಂದು ಹೇಳಿದೆ.

---

೧. ಮ್ಯೂರ್: 'ಸ್ಯಾನ್‌ಸ್ಕ್ರಿಟ್ ಟೆಕ್ಸ್ಟ್', ಪು.೧೦
೨. ಅದೇ, ಪು. ೫
೩. ಅದೇ, ಸಂ. I. ಪು. ೮
೪. ಅದೇ, ಪು. ೯
೫. ಅದೇ, ಪು. ೬

ಬ್ರಹ್ಮನು ಮೊದಲಿಗೆ ವೇದಗಳ ಶಬ್ದಗಳಿಂದ ಅನೇಕ ಹೆಸರುಗಳನ್ನೂ ಕಾರ್ಯಗಳನ್ನೂ (ಸೃಷ್ಟ) ವಸ್ತುಗಳ ಪ್ರತ್ಯೇಕ ನಿಯಮಗಳನ್ನೂ ಸೃಷ್ಟಿಸಿದ. ಆ ಪ್ರಭುವು ಅನೇಕ ಸೂಕ್ಷ್ಮ ಸಕ್ರಿಯ ಹಾಗೂ ಜೀವಂತ ದೈವಗಳನ್ನೂ ಸಾಧ್ಯರನ್ನೂ ನಿತ್ಯ ಯಜ್ಞಗಳನ್ನೂ ಸೃಷ್ಟಿಸಿದ. ಯಜ್ಞ ಮಾಡುವ ಸಲುವಾಗಿ ಅಗ್ನಿ, ವಾಯು ಮತ್ತು ಸೂರ್ಯರಿಂದ ಮೂರು ವೇದಗಳನ್ನು ಪಡೆದು 'ಋಕ್', 'ಯಜುಸ್ಸು' ಮತ್ತು 'ಸಾಮ'ಗಳನ್ನು ವಿಂಗಡಿಸಿದನು.

ಮತ್ತೊಂದು ಕಡೆ[1] ಮನು ಪ್ರಜಾಪತಿಯೇ ವೇದಗಳ ಮೂಲ ಎಂಬ ಕತೆಯನ್ನು ಒಪ್ಪಿಕೊಳ್ಳುವಂತೆ ತೋರುತ್ತದೆ. ಈ ವಿಷಯಕ್ಕೆ ಆಧಾರ ಹೀಗಿದೆ:

"ಪ್ರಜಾಪತಿಯು ಮೂರು ವೇದಗಳಿಂದ ಅ, ಉ, ಮ ಎಂಬ ಮೂರು ಅಕ್ಷರಗಳನ್ನು ಭುಃ ಭುವಃ ಮತ್ತು ಸ್ವಾಃ ಎಂಬ ಮೂರು ಪದಗಳನ್ನೂ ಹಿಂಡಿ ತೆಗೆದನು. ಇದೇ ಸರ್ವೇಶನು ಪ್ರತಿಯೊಂದು ವೇದದಿಂದಲೂ 'ತತ್.......' ಎಂದು ಪ್ರಾರಂಭವಾಗುವ ಸಾವಿತ್ರಿ (ಅಥವಾ ಗಾಯತ್ರೀ) ಮಂತ್ರದ ಮೂರು ಭಾಗಗಳನ್ನು ಹಿಂಡಿ ತೆಗೆದನು. ಓಂ ಕಾರದ ನಂತರ ಬರುವ ಶ್ರೇಷ್ಠವೂ ಅವಿನಾಶಿಯೂ ಆದ ಮೂರು ಭಾಗಗಳನ್ನೂ (ಭುಃ ಭುವಃ ಮತ್ತು ಸ್ವಾಃ) ಮತ್ತು ಗಾಯಿತ್ರೀ ಮಂತ್ರದ ಮೂರು ಸಾಲುಗಳನ್ನೂ ಬ್ರಹ್ಮನ ಬಾಯಿಯೆಂದು ಪರಿಗಣಿಸಬೇಕು."

## V

ವೇದಗಳ ಉಗಮದ ಬಗ್ಗೆ ಪುರಾಣಗಳು ಏನು ಹೇಳುತ್ತವೆ ಎಂಬುದನ್ನು ತಿಳಿದುಕೊಳ್ಳುವುದು ಆಸಕ್ತಿ ಹುಟ್ಟಿಸುವ ವಿಷಯ. 'ವಿಷ್ಣುಪುರಾಣ'[2] ಹೀಗೆ ಹೇಳುತ್ತದೆ:

"ಬ್ರಹ್ಮನ ಪೂರ್ವದ ಬಾಯಿಯಿಂದ ಗಾಯಿತ್ರೀ, ಋಕ್ಕುಗಳು, ತ್ರಿವೃತ, ಸೋಮ ರಥಾಂತರ, ಯಜ್ಞಗಳು, ಅಗ್ನಿಷ್ಟೋಮಗಳು ರೂಪುಗೊಂಡವು. ತನ್ನ ದಕ್ಷಿಣ ಬಾಯಿಯಿಂದ ಅವನು ಯಜುಸ್ಸುಗಳನ್ನೂ, ತ್ರಿಷ್ಟುಭ್ ಛಂದಸ್ಸನ್ನೂ, ಪಂಚದಶಷ್ಟೋಮನ್ನೂ, ವೃಹತ ಸಾಮಗಳನ್ನೂ ಮತ್ತು ಉಕ್ಥ್ಯವನ್ನೂ ಸೃಷ್ಟಿಸಿದನು. ತನ್ನ ಪಶ್ಚಿಮ ಬಾಯಿಯಿಂದ ಸಾಮಗಳನ್ನೂ, ಜಗತಿ ಛಂದಸ್ಸನ್ನೂ, ಸಪ್ತದಶಷ್ಟೋಮವನ್ನೂ, ವೈರೂಪ ಮತ್ತು ಅತಿರಾತ್ರಗಳನ್ನೂ ಸೃಷ್ಟಿಸಿದನು. ತನ್ನ ಉತ್ತರದ ಬಾಯಿಯಿಂದ ಅವನು ಏಕವಿಂಶ, ಅಥರ್ವಣ, ಆಪ್ತೋರ್ಯಮಾಣ್, ಅನುಷ್ಟುಭ್ ಮತ್ತು ವಿರಾಜ ಛಂದಸ್ಸನ್ನೂ ಸೃಷ್ಟಿಸಿದನು."

'ಭಾಗವತ ಪುರಾಣ'[3] ಹೀಗೆ ಹೇಳುತ್ತದೆ:

"ಒಮ್ಮೆ ಚತುರ್ಮುಖ ಬ್ರಹ್ಮನು 'ಸಮಸ್ತ ಲೋಕಗಳನ್ನು ಹೇಗೆ ಮೊದಲಿನಂತೆ ಸೃಷ್ಟಿಸಲಿ ಎಂದು ಯೋಚಿಸುತ್ತಿದ್ದಾಗ'.........ನಾಲ್ಕು ವೇದಗಳು ಹುಟ್ಟಿದವು. ತನ್ನ ಪೂರ್ವದ ಮತ್ತು ಇತರ ಮುಖಗಳಿಂದ 'ಋಗ್', 'ಯಜುಸ್', 'ಸಾಮ' ಮತ್ತು 'ಅಥರ್ವಕ್'ವೇದಗಳೆಂಬ ನಾಲ್ಕು ವೇದಗಳನ್ನೂ ಜೊತೆಯಲ್ಲಿ ಸ್ತೋತ್ರ, ಯಜ್ಞ, ಶ್ಲೋಕಗಳನ್ನೂ, ಪ್ರಾಯಶ್ಚಿತ್ತಗಳನ್ನೂ ರೂಪಿಸಿದನು.

---

೧. ಅದೇ, ಪು. ೭

೨. ಅದೇ, ಸಂ. I ಪು. ೧೧

೩. ಅದೇ, ಪು. ೧೧

*(ಇಲ್ಲಿ ಕೆಲವು ಉಲ್ಲೇಖಗಳು ತಪ್ಪಿಹೋಗಿರುವುದರಿಂದ, ಈ ಪ್ಯಾರಾಕ್ಕೂ ಮುಂದಿನ ಪ್ಯಾರಾಕ್ಕೂ ಸಂಬಂಧ ಕಡಿದಂತೆ ಕಾಣುತ್ತದೆ – ಸಂ)*

"ಅವಳ ಕಣ್ಣುಗಳ ಮಧ್ಯ ಪ್ರವೇಶಿಸಿತು. ಅವಳಿಂದ ಚತುರ್ಮುಖಿಯಾದ ಒಂದು ಗಂಡು ಶಿಶು ಜನಿಸಿತು. ಅದು ಬ್ರಹ್ಮನಷ್ಟು ತೇಜೋಮಯನಾಗಿಯೂ, ಅವರ್ಣೀಯನೂ, ನಿತ್ಯವೂ, ಅವಿನಾಶಿಯೂ, ದೇಹೇಂದ್ರಿಯ ಗುಣರಹಿತವಾಗಿಯೂ, ಉಜ್ವಲನೂ, ಚಂದ್ರನ ಕಿರಣಗಳಷ್ಟು ಶುದ್ಧವಾಗಿಯೂ, ತೇಜಸ್ವಿಯಾಗಿಯೂ, ಅಕ್ಷರದೇಹಿಯಾಗಿಯೂ ಇತ್ತು. ಈ ಪರಮಾತ್ಮನು ತನ್ನ ಕಣ್ಣುಗಳಿಂದ ಋಗ್ವೇದ ಮತ್ತು ಯಜುರ್ವೇದಗಳನ್ನೂ, ಅದರ ನಾಲಿಗೆಯ ತುದಿಯಿಂದ ಸಾಮವೇದವನ್ನೂ, ತಲೆಯಿಂದ ಅಥರ್ವಣ ವೇದವನ್ನೂ ಸೃಷ್ಟಿಸಿದನು. ಈ ವೇದಗಳು ಹುಟ್ಟಿದ ಕೂಡಲೇ ಅವುಗಳಿಗೆ ಕ್ಷೇತ್ರ ದೊರಕಿತು. ಅವುಗಳಿಗೆ ಆಶ್ರಯ(ವಿಂದಂತಿ) ಸಿಕ್ಕುತ್ತದೆ. ಆಮೇಲೆ ವೇದಗಳು ಪೂರ್ವದಲ್ಲಿದ್ದ ಹಾಗೂ ಬೌದ್ಧಿಕ ಗುಣಗಳನ್ನುಳ್ಳ ಬ್ರಹ್ಮನನ್ನು (ಪವಿತ್ರ ಜ್ಞಾನವನ್ನು) ದಿವ್ಯರೂಪದ ಪುರುಷನನ್ನಾಗಿ ಸೃಷ್ಟಿಸುತ್ತವೆ."

ಈ ಪುರಾಣವು ಪ್ರಜಾಪತಿಯೇ ಮೂಲವೆಂಬುದನ್ನೂ ಒಪ್ಪಿಕೊಳ್ಳುತ್ತದೆ. ಪರವಸ್ತುವು ವಿಶ್ವವನ್ನು ಸೃಷ್ಟಿಸಲು ಮನಸ್ಸು ಮಾಡಿದಾಗ ಹಿರಣ್ಯಗರ್ಭ ಅಥವಾ ಪ್ರಜಾಪತಿ ತನ್ನ ಬಾಯಿಂದ 'ಓಂ' ಎಂಬ ಶಬ್ದವನ್ನು ಹೊರಡಿಸಿದನು. ಅಲ್ಲದೆ ತನ್ನನ್ನೆ ಇಬ್ಭಾಗ ಮಾಡಿಕೊಳ್ಳಲೂ ಇಚ್ಛಿಸಿದನು. ಆದರೆ ಹೇಗೆ ಎಂಬುದು ಅವನಿಗೆ ಚಿಂತೆಯಾಯಿತು. ಹರಿವಂಶವು[೧] ಮುಂದುವರಿದು ಹೀಗೆ ಹೇಳುತ್ತದೆ:

"ಅವನು ಹೀಗೆ (ಸೃಷ್ಟಿಯ ಬಗ್ಗೆ) ಇಚ್ಛಿಸುತ್ತಿದ್ದಾಗ ಅವನ ಬಾಯಿಯಿಂದ 'ಓಂ' ಎಂಬ ಶಬ್ದ ಹೊರಟು ಭೂಮಿ, ಗಾಳಿ ಮತ್ತು ಆಕಾಶಗಳಲ್ಲಿ ಪ್ರತಿಧ್ವನಿಸಿತು. ದೇವಾಧಿದೇವನು ಇದನ್ನು ಮತ್ತೆ ಮತ್ತೆ ಉಚ್ಚರಿಸಿದಾಗ, ಮನಸ್ಸಿನ ತತ್ವವಾದ ವಶಟ್ಕಾರ ಅವನ ಹೃದಯದಿಂದ ಹೊರಹೊಮ್ಮಿತು. ಅನಂತರ ಸ್ಮೃತಿಯಿಂದ ಭೂಮಂಡಲ, ವಾಯುಮಂಡಲ ಮತ್ತು ಆಕಾಶಗಳಿಂದ, ಪವಿತ್ರ ಹಾಗೂ ಅತಿಶಯವಾದ ವ್ಯಾಹೃತಿಗಳು (ಭುಃ ಭುವಃ ಮತ್ತು ಸ್ವಾಃ) ಶಬ್ದದ ರೂಪದಲ್ಲಿ ಪ್ರಕಟವಾದವು. ಆಮೇಲೆ ದೇವಿಯೂ, ಅತಿಶ್ರೇಷ್ಠವಾದ ಛಂದಸ್ಸೂ, ಇಪ್ಪತ್ನಾಲ್ಕು ಮಾತ್ರೆಗಳುಳ್ಳ ಗಾಯತ್ರಿ ಮಂತ್ರ ಪ್ರಕಟವಾದವು. 'ತತ್' ಶಬ್ದದೊಂದಿಗೆ ಪ್ರಾರಂಭವಾಗುವ ದಿವ್ಯಮಂತ್ರದ ಬಗ್ಗೆ ಯೋಚಿಸಿ, ಈಶ್ವರನು ೨೪ ಅಕ್ಷರಗಳ ಸಾವಿತ್ರಿ (ಗಾಯತ್ರಿ) ಮಂತ್ರವನ್ನು ರೂಪಿಸಿದನು. ಅನಂತರ ಎಲ್ಲ ವೇದಗಳನ್ನೂ ಋಕ್ಕು, ಸಾಮ, ಅಥರ್ವಣ, ಯಜುಸ್ಸುಗಳನ್ನು ಅವುಗಳ ಮಂತ್ರ ಮತ್ತು ಕರ್ಮಗಳ ಸಮೇತ ಉತ್ಪತ್ತಿಮಾಡಿದನು."

## VI

ಇಲ್ಲಿ ವೇದಗಳ ಹುಟ್ಟಿನ ಬಗ್ಗೆ ನಮಗೆ ಹನ್ನೊಂದು ವಿವಿಧ ರೀತಿಯ ವಿವರಣೆ ಸಿಕ್ಕಿವೆ. ಅವೆಂದರೆ: ವೇದಗಳು ೧. ಪುರುಷನ ನಿಗೂಢ ರೀತಿಯ ಯಜ್ಞದಿಂದ ಹುಟ್ಟಿದವು,

---

೧. ಮ್ಯೂರ್: 'ಸ್ಯಾನ್ಸ್ಕ್ರಿಟ್ ಟೆಕ್ಸ್ಟ್', ಸಂ. I ಪು. ೧೪

೨. ಸ್ಕಂಬನಲ್ಲಿ ಆಶ್ರಯ ಪಡೆದಿದ್ದವು, ೩. ಸ್ಕಂಬನ ಕೂದಲು ಮತ್ತು ಬಾಯಿಗಳಿಂದ ಕತ್ತರಿಸಿ ತೆಗೆಯಲ್ಪಟ್ಟವು, ೪. ಇಂದ್ರನಿಂದ ಪ್ರಕಟವಾದವು, ೫. ಕಾಲನಿಂದ ಉತ್ಪತ್ತಿಯಾದವು, ೬. ಅಗ್ನಿ, ವಾಯು ಮತ್ತು ಸೂರ್ಯರಿಂದ ಸೃಷ್ಟಿಯಾದವು, ೭. ಪ್ರಜಾಪತಿ ಮತ್ತು ನೀರಿನಿಂದ ಉಂಟಾದವು, ೮. ಬ್ರಹ್ಮನ ಉಸಿರು, ೯. ಮಾನಸ ಸರೋವರದಿಂದ ದೇವದೇವತೆಗಳಿಂದ ಅಗೆದು ಹೊರತೆಗೆಯಲ್ಪಟ್ಟವು, ೧೦. ಪ್ರಜಾಪತಿಯ ಗಡ್ಡದ ಕೂದಲುಗಳು ಮತ್ತು ೧೧. ವಾಚದಿಂದ ಹುಟ್ಟಿದವು.

ಒಂದು ಸರಳ ಪ್ರಶ್ನೆಗೆ ಕೊಡಲಾಗಿರುವ ಈ ಉತ್ತರಗಳ ಕಂಗೆಡಸುವಂಥ ಅನೇಕತೆಯು ಒಂದು ಕಗ್ಗಂಟಾಗಿದೆ. ಈ ಉತ್ತರಗಳನ್ನು ಕೊಡಲು ಮುಂದೆ ಬಂದಿರುವ ಬರಹಗಾರರೆಲ್ಲ ಬ್ರಾಹ್ಮಣರು. ಅವರೆಲ್ಲರೂ ಒಂದೇ ವೈದಿಕ ಸಂಪ್ರದಾಯಕ್ಕೆ ಸೇರಿದವರು. ಅವರಷ್ಟೇ ಪುರಾತನ ಧಾರ್ಮಿಕ ಸಾಹಿತ್ಯದ ರಕ್ಷಕರಾಗಿದ್ದರು. ಇಂಥ ಒಂದು ಸರಳ ಪ್ರಶ್ನೆಗೆ ಅವರು ಪರಸ್ಪರ ಅಸಂಬದ್ಧವಾದ ಹಾಗೂ ಅವ್ಯವಸ್ಥಿತ ಉತ್ತರಗಳನ್ನು ಏಕೆ ಕೊಡಬೇಕು?

* * * *

## ಒಗಟು – ೪

# ಬ್ರಾಹ್ಮಣರು ಏಕಾಏಕಿ ವೇದಗಳು ದೋಷರಹಿತವೆಂದೂ ಪ್ರಶ್ನಾತೀತವೆಂದೂ ಏಕೆ ಘೋಷಿಸಿದರು?

ವೇದಗಳು ಹಿಂದೂಗಳ ಧಾರ್ಮಿಕ ಸಾಹಿತ್ಯದಲ್ಲಿ ಅತ್ಯುನ್ನತ ಸ್ಥಾನವನ್ನು ಪಡೆದಿವೆ ಎಂದು ಹೇಳಿದರೆ ಕಡಿಮೆ ಹೇಳಿದಂತಾಯಿತು. ವೇದಗಳು ಹಿಂದೂಗಳ ಪವಿತ್ರ ಸಾಹಿತ್ಯ ಎನ್ನುವುದು ಸಹ ಅಪೂರ್ಣ ಹೇಳಿಕೆಯೇ. ಏಕೆಂದರೆ, ವೇದಗಳು ಹಿಂದೂಗಳ ಪವಿತ್ರ ಸಾಹಿತ್ಯವಾಗಿರುವುದರ ಜೊತೆಗೆ ಯಾರೂ ಶಂಕಿಸಬಾರದ ಪ್ರಮಾಣ ಗ್ರಂಥಗಳೂ ಆಗಿವೆ. ವೇದಗಳು ದೋಷರಹಿತ. ವೇದಗಳನ್ನು ಆಧರಿಸಿ ಮಾಡುವ ಯಾವುದೇ ವಾದವು ಕೊನೆಯ ನಿರ್ಣಯ. ಅದಕ್ಕೆ ವಿರುದ್ಧವಾದ ಮಾತಿಲ್ಲ. ಇದು ವೈದಿಕ ಬ್ರಾಹ್ಮಣರ ಸಿದ್ಧಾಂತ ಮತ್ತು ಇದನ್ನು ಎಲ್ಲ ಹಿಂದೂಗಳು ಒಪ್ಪಿಕೊಂಡಿದ್ದಾರೆ.

## I

ಈ ಸಿದ್ಧಾಂತದ ಬುನಾದಿ ಯಾವುದು? ಈ ಸಿದ್ಧಾಂತವು ವೇದಗಳು ಅಪೌರುಷೇಯ ಎಂಬ ದೃಷ್ಟಿಯ ಮೇಲೆ ನಿಂತಿವೆ. ವೈದಿಕ ಬ್ರಾಹ್ಮಣರು ವೇದಗಳು ಅಪೌರುಷೇಯ ಎಂದು ಹೇಳುವಾಗ ಅವು ಮಾನವ ನಿರ್ಮಿತವಲ್ಲ ಎಂಬುದು ಅವರ ಅರ್ಥ. ಅವು ಮಾನವ ನಿರ್ಮಿತವಲ್ಲವೆಂದ ಮೇಲೆ ಅವುಗಳಲ್ಲಿ ಮಾನವ ಸಹಜವಾದ ತಪ್ಪುಗಳಾಗಲಿ, ವೈಫಲ್ಯಗಳಾಗಲಿ, ದೌರ್ಬಲ್ಯಗಳಾಗಲಿ ಇಲ್ಲ, ಆದ್ದರಿಂದ ಅವು ನಿಷ್ಕಳಂಕ.

## II

ವೈದಿಕ ಬ್ರಾಹ್ಮಣರು ಇಂತಹ ಸಿದ್ಧಾಂತವನ್ನು ಏಕೆ ಪ್ರತಿಪಾದಿಸಿದರು ಎಂಬುದನ್ನು ತಿಳಿದುಕೊಳ್ಳುವುದು ಕಷ್ಟ. ವೇದಗಳ ಪ್ರಮಾಣವು ಅಂತಿಮ ಹಾಗೂ ನಿರ್ಣಯಾತ್ಮಕವೇ ಅಲ್ಲವೇ ಎಂಬುದರ ಬಗ್ಗೆ ವೈದಿಕ ಬ್ರಾಹ್ಮಣರೇ ಬೇರೆಬೇರೆ ರೀತಿಯಲ್ಲಿ ಚಿಂತಿಸುತ್ತಿದ್ದ ಕಾಲವೊಂದಿತ್ತು. ಈ ವೈದಿಕ ಬ್ರಾಹ್ಮಣರು ವಿವಿಧ ಧರ್ಮಸೂತ್ರಗಳ ಕರ್ತೃಗಳಲ್ಲದೆ ಬೇರೆಯಲ್ಲ.

ವೇದಗಳ ಪ್ರಾಮಾಣ್ಯದ ಬಗ್ಗೆ ಧರ್ಮಸೂತ್ರಗಳು ಈ ಕೆಳಗಿನ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತವೆ:

'ಗೌತಮ ಧರ್ಮಸೂತ್ರ'ದೊಂದಿಗೆ ಪ್ರಾರಂಭಿಸೋಣ:

ವೇದಗಳ ದೋಷರಾಹಿತ್ಯದ ಬಗೆಗೆ ಅದು ಈ ಕೆಳಗಿನ ನಿಯಮವನ್ನು ರೂಪಿಸಿದೆ:

"ವೇದವು ಪವಿತ್ರ ಧರ್ಮದ ಆಕರ." I-೧

"ವೇದವು ಬಲ್ಲವರ ಸಂಪ್ರದಾಯ ಮತ್ತು ಆಚರಣೆಯ ಆಕರ." I-೨

"ಸಮಾನ ಬಲವುಳ್ಳ ಎರಡು ಪ್ರಮಾಣಗಳಲ್ಲಿ ಘರ್ಷಣೆ ಉಂಟಾದರೆ ಎರಡರಲ್ಲಿ ಯಾವುದನ್ನು ಬೇಕಾದರೂ ಅನುಸರಿಸಬಹುದು." I-೪

ವಸಿಷ್ಠ ಧರ್ಮಸೂತ್ರವು ಈ ಕೆಳಗಿನ ಅಭಿಪ್ರಾಯವನ್ನು ಪ್ರತಿಪಾದಿಸುತ್ತದೆ:

"ಪವಿತ್ರ ಧರ್ಮವು ಶ್ರುತಿ ವಾಕ್ಯಗಳಿಂದ ಅಂದರೆ ವೇದಗಳಿಂದಲೂ ಋಷಿ ಸಂಪ್ರದಾಯದಿಂದಲೂ ನಿರ್ಣಯಿಸಲ್ಪಟ್ಟಿದೆ." I-೪

"ಎರಡು ಆಕರಗಳಲ್ಲಿ ಪ್ರಣೀತವಾಗಿರುವ ನಿಯಮಗಳು ಘರ್ಷಣೆಯನ್ನು ಕೊನೆಗಾಣಿಸಲಾಗದಿದ್ದರೆ ಆಗ ಶಿಷ್ಟರ ಆಚರಣೆಯೇ ಪ್ರಮಾಣ." I-೫

ಬೌಧಾಯನ ಧರ್ಮಸೂತ್ರದ ಅಭಿಪ್ರಾಯಗಳು ಹೀಗಿವೆ:

ಪ್ರಶ್ನೆ I, ಅಧ್ಯಾಯ I, ಕಂಡಿಕಾ I

೧. ಪವಿತ್ರ ಧರ್ಮವನ್ನು ಪ್ರತಿಯೊಂದು ವೇದದಲ್ಲೂ ಬೋಧಿಸಲಾಗಿದೆ.

೨. ಅದರ ಪ್ರಕಾರವೇ ನಾವು ಅದನ್ನು ವಿವರಿಸುತ್ತಿದ್ದೇವೆ.

೩. ಸ್ಮೃತಿ ಬೋಧಿಸುವ ಪವಿತ್ರ ಧರ್ಮಕ್ಕೆ ಎರಡನೆಯ ಸ್ಥಾನವಿದೆ.

೪. ಶಿಷ್ಟರ ಆಚರಣೆಗೆ ಮೂರನೆಯ ಸ್ಥಾನ.

೫. ಇವುಗಳಿಂದ ನಿರ್ಣಯವಾಗದಿದ್ದರೆ ಕನಿಷ್ಠ ಹತ್ತು ಜನ ಸಭೆ ಸೇರಿ ವಿವಾದಕ್ಕೊಳಗಾದ ವಿಷಯಗಳನ್ನು ನಿರ್ಣಯಿಸಬೇಕು.

ಆಪಸ್ತಂಭ ಧರ್ಮಸೂತ್ರದ ಅಭಿಪ್ರಾಯವು ಹೆಚ್ಚು ಸ್ಪಷ್ಟವಿದೆ. ಅದು ಈ ಕೆಳಗಿನ ಅದರ ವಾಕ್ಯಗಳಿಂದ ಸಿದ್ಧವಾಗುತ್ತದೆ:

"ಆದ್ದರಿಂದ ಪದ್ಧತಿಗನುಸಾರವಾಗಿ ನಿತ್ಯಕರ್ಮಗಳನ್ನು ಪುಣ್ಯಕಾರ್ಯಗಳೆಂದು ಘೋಷಿಸೋಣ." – I-೧

"ಧರ್ಮವನ್ನು ತಿಳಿದವರಲ್ಲಿ ಏಕಾಭಿಪ್ರಾಯವಿರುವುದರಿಂದ (ಈ ಕರ್ಮಗಳಿಗೆ) ಅವರೇ ಪ್ರಮಾಣ." I-೨

"ಅವರಿಗೆ ವೇದಗಳೇ ಪ್ರಮಾಣ." I-೩

ಶಿಷ್ಟರು ಹೇಗಿರಬೇಕೆಂಬುದನ್ನು ನಿರ್ಧರಿಸಲು ವಸಿಷ್ಠ ಧರ್ಮಸೂತ್ರವೂ, ಬೌಧಾಯನ ಧರ್ಮಸೂತ್ರವೂ ಸಾಕಷ್ಟು ಎಚ್ಚರಿಕೆ ವಹಿಸಿವೆ.

ವಸಿಷ್ಠ ಧರ್ಮಸೂತ್ರ ಹೀಗೆನ್ನುತ್ತದೆ:

"ಯಾರ ಹೃದಯದಲ್ಲಿ ಆಸೆಗಳಿಲ್ಲವೋ ಅವನೇ ಶಿಷ್ಟ" 1-೬. ಶಿಷ್ಟನ ಲಕ್ಷಣಗಳ ಬಗೆಗೆ ಬೌಧಾಯನ ಇನ್ನೂ ಹೆಚ್ಚಿನ ವಿವರಗಳನ್ನು ನೀಡುತ್ತಾನೆ. ಅವನು ಹೀಗೆ ಹೇಳುತ್ತಾನೆ:

೫. "ದ್ವೇಷ ಮತ್ತು ಮದಗಳಿಂದ ಮುಕ್ತರಾಗಿರುವವರೂ, ಹತ್ತು ದಿವಸಕ್ಕಾಗುವಷ್ಟು ಆಹಾರ ಸಾಮಗ್ರಿಗಳಿದ್ದರೂ ಸಂತುಷ್ಟರಾಗಿರುವವರೂ, ಕಾಮ, ವಂಚನೆ, ಅಹಂಕಾರ, ಲೋಭ, ಭ್ರಮೆ ಮತ್ತು ಕ್ರೋಧಗಳಿಲ್ಲದವರೂ ನಿಜವಾಗಿಯೂ ಶಿಷ್ಟರು."

೬. "ಯಾರು ಪವಿತ್ರ ಧರ್ಮಕ್ಕನುಸಾರವಾಗಿ ವೇದಗಳನ್ನು ವೇದಾಂಗಗಳನ್ನು ಅಧ್ಯಯನಮಾಡಿದ್ದಾರೋ, ಯಾರು ಅವುಗಳಿಂದ ಅನುಮತಿ ಪಡೆಯುವ ವಿಧಾನವನ್ನು ಅರಿತಿದ್ದಾರೋ ಮತ್ತು ಯಾರು ಪ್ರತ್ಯಕ್ಷ ಮತ್ತು ಶ್ರುತಿ ಪ್ರಮಾಣಗಳನ್ನು ಬಲ್ಲರೋ ಅವರನ್ನು ಸಹ ಶಿಷ್ಟರೆಂದು ಕರೆಯಲಾಗುತ್ತದೆ."

ಯಾರ ಸಭೆಯನ್ನು ಬೌಧಾಯನನು ನಿರ್ಣಯ ತೆಗೆದುಕೊಳ್ಳುವ ಅಧಿಕಾರವಿದೆಯೆಂದು ಪರಿಗಣಿಸುತ್ತಾನೋ ಅವರ ಬಗ್ಗೆಯೂ ಅವನು ಒಂದು ಕುತೂಹಲಕಾರಿ ವಿಷಯ ಹೇಳಬಯಸುತ್ತಾನೆ. ಈ ಬಗ್ಗೆ ಅವನ ಅಭಿಪ್ರಾಯಗಳು ಈ ಕೆಳಗಿನಂತಿವೆ:

೮. "ಅವರು (ಶಿಷ್ಟರು) ಈ ಶ್ಲೋಕಗಳನ್ನು ಉದ್ಧರಿಸುತ್ತಾರೆ. ನಾಲ್ಕು ಜನ ವೇದಗಳನ್ನು ಬಲ್ಲವರು (ಒಬ್ಬೊಬ್ಬ ಒಂದೊಂದು ಪ್ರತ್ಯೇಕ ವೇದದಲ್ಲಿ ಪರಿಣತನಿರಬೇಕು), ಒಬ್ಬ ಮೀಮಾಂಸಕ, ಅಂಗ(ವೇದಾಂಗ)ಗಳನ್ನು ಬಲ್ಲವನೊಬ್ಬ, ಧರ್ಮಸೂತ್ರಗಳನ್ನು ಬಲ್ಲವನು, ಮೂರು ವಿವಿಧ ಗೋತ್ರಗಳಿಗೆ ಸೇರಿದ ಮೂವರು ಬ್ರಾಹ್ಮಣರು ಇವರೇ ಆ ಸಭೆಯಲ್ಲಿರಬೇಕಾದ ಹತ್ತು ಮಂದಿ."

೯. "ಧರ್ಮಕ್ಕೆ ಸಂಬಂಧಿಸಿದ ಪ್ರಶ್ನೆಗಳನ್ನು ನಿರ್ಣಯಿಸಲು ಕೆಲವು ವೇಳೆ ಐದು ಜನರು ಸಾಕು. ಕೆಲವು ಸಾರಿ ಮೂವರು. ಕನಿಷ್ಠ ಪಕ್ಷ ಒಬ್ಬ ನಿಷ್ಕಳಂಕ ವ್ಯಕ್ತಿಯಾದರೂ ಸಾಕು. ಆದರೆ ಸಾವಿರ ಜನ ಮೂರ್ಖರಿದ್ದರೂ ಆಗದು."

"ಮರದಿಂದ ಕೆತ್ತಿದ ಆನೆ, ಚರ್ಮದಿಂದ ಮಾಡಿದ ಜಿಂಕೆ ಹೇಗೋ ಹಾಗೆ ಅನಕ್ಷರಸ್ಥ ಬ್ರಾಹ್ಮಣ. ಅವರಿಗೆ (ತಮ್ಮ ಜಾತಿಯ) ಹೆಸರಷ್ಟೇ ಇದೆ."

ಧರ್ಮಸೂತ್ರಗಳ[೧] ಈ ಪುನರಾವಲೋಕನದಿಂದ ೧. ವೇದ ೨. ಸ್ಮೃತಿ ೩. ಶಿಷ್ಟಾಚಾರ ಮತ್ತು ೪. ಸಭೆಯ ಒಪ್ಪಿಗೆ, ಈ ನಾಲ್ಕು ವಿವಿಧ ಅಧಿಕಾರಯುತ ಪ್ರಮಾಣಗಳು ವಿವಾದಗ್ರಸ್ತ ವಿಷಯಗಳನ್ನು ನಿರ್ಣಯಿಸಲು ಬೇಕೇ ಬೇಕು ಎಂಬುದು ವ್ಯಕ್ತವಾಗುತ್ತದೆ. ಇದರಿಂದ ವೇದಗಳೊಂದೇ ದೋಷರಹಿತವಾದ ಪ್ರಮಾಣ ಎಂದು ಒಪ್ಪಿಕೊಳ್ಳದ ಕಾಲವೊಂದಿತ್ತು ಎಂಬ ಮತ್ತೊಂದು ಅಂಶವೂ ವ್ಯಕ್ತವಾಗುತ್ತದೆ. ಆ ಕಾಲವನ್ನೂ ವಸಿಷ್ಠ ಮತ್ತು ಬೌಧಾಯನರ ಧರ್ಮಸೂತ್ರಗಳು ಪ್ರತಿನಿಧಿಸಿದ್ದವು. ಆಪಸ್ತಂಭನಂತೂ ವೇದಗಳಿಗೆ ಯಾವ ಅಧಿಕಾರವನ್ನೂ ಕೊಡುವುದಿಲ್ಲ. ಯಾವ ಸಭೆಯು ತನ್ನ ಅಂತಿಮ ನಿರ್ಣಯವೇ ಧರ್ಮವೆಂದು ಪರಿಗಣಿಸುತ್ತಿತ್ತೋ ಅಂತಹ ಸಭೆಯ ಚುನಾಯಿತ ಸದಸ್ಯನಾಗಲು ವೇದದ ಜ್ಞಾನ ಆವಶ್ಯಕವೆಂದಷ್ಟೇ ಆತ ಪರಿಗಣಿಸಿದನು. ವೇದವು ಅಧಿಕಾರವುಳ್ಳ ಪುಸ್ತಕವೆಂದು ಪರಿಗಣಿಸಲಾಗಿರಲಿಲ್ಲ. ವಿದ್ವಜ್ಜನರು ಸಭೆಯಲ್ಲಿ ಕೈಕೊಂಡ ನಿರ್ಣಯವೇ ಅಧಿಕಾರ (ಪ್ರಮಾಣ). ಗೌತಮರ ಕಾಲದಲ್ಲಿ ಮಾತ್ರ ವೇದವೊಂದೇ ಪ್ರಮಾಣ ಎಂದು ಪರಿಗಣಿಸಲಾಯಿತು. (ವಿದ್ವಜ್ಜನರ) ಸಭೆಯಲ್ಲಿ ಕೈಕೊಂಡ ನಿರ್ಣಯವೂ ಪ್ರಮಾಣದ ಒಂದು ಆಕರ ಎಂದು ಪರಿಗಣಿಸಲಾಗುತ್ತಿದ್ದ ಕಾಲವೊಂದಿತ್ತು.ಆ ಕಾಲವನ್ನು ಬೌಧಾಯನ ಪ್ರತಿನಿಧಿಸುತ್ತಿದ್ದನು.

'ಶತಪಥ ಬ್ರಾಹ್ಮಣ'ದಿಂದ ಉದ್ಧೃತವಾಗಿರುವ ಈ ಕೆಳಗಿನ ಹೇಳಿಕೆಯು ಮೇಲಿನ ನಮ್ಮ ತೀರ್ಮಾನವನ್ನು ಪುಷ್ಟೀಕರಿಸುತ್ತದೆ:–

*[ಅಪೂರ್ಣವಾಗಿದೆ. 'ಶತಪಥ ಬ್ರಾಹ್ಮಣ'ದ ಹೇಳಿಕೆಯಾಗಲಿ ಮುಂದಿನ ಚರ್ಚೆಯಾಗಲಿ ಸಿಕ್ಕಿಲ್ಲ.]*

* * * *

---

೧. ಮ್ಯಾಕ್ಸ್‌ಮ್ಯುಲ್ಲರ್ ಪ್ರಕಾರ, ಧರ್ಮಸೂತ್ರಗಳ ಕಾಲವು ಸುಮಾರು ಕ್ರಿ.ಪೂ. ೬೦೦ರಿಂದ ಸುಮಾರು ಕ್ರಿ.ಪೂ. ೨೦೦.

# ಒಗಟು – ೫

# ಬ್ರಾಹ್ಮಣರು ಇನ್ನೂ ಮುಂದೆ ಹೋಗಿ, ವೇದಗಳನ್ನು ಮಾನವರಾಗಲಿ ದೇವರಾಗಲಿ ರಚಿಸಲಿಲ್ಲವೆಂದು ಏಕೆ ಘೋಷಿಸಿದರು?

ವೈದಿಕ ಬ್ರಾಹ್ಮಣರಿಗೆ ವೇದಗಳಿಗೆ ದೋಷರಾಹಿತ್ಯವನ್ನಷ್ಟೇ ಆರೋಪಿಸುವುದರಿಂದ ತೃಪ್ತಿಯಾಗಲಿಲ್ಲ. ಅವರು ಇನ್ನೂ ಮುಂದೆ ಹೋಗಿ ವೇದಗಳು ಅಪೌರುಷೇಯವೆಂದು ಪ್ರತಿಪಾದಿಸಿದರು. ವೇದಗಳನ್ನು ಮನುಷ್ಯ ರಚಿಸಲಿಲ್ಲ ಎಂದು ಅವರು ಇದನ್ನೂ ಅರ್ಥೈಸಿದರು. ಈ ಸಿದ್ಧಾಂತವು (ವೇದಗಳು) ದೋಷರಹಿತವೆಂಬ ಸಿದ್ಧಾಂತಕ್ಕೆಡೆ ಮಾಡಿಕೊಡುತ್ತದೆ ಎಂಬುದು ನಿಸ್ಸಂಶಯ. ಏಕೆಂದರೆ, ಮನುಷ್ಯ ಅವುಗಳನ್ನೂ ರಚಿಸಿಲಿಲ್ಲವೆಂದ ಮೇಲೆ, ಮನುಷ್ಯನಿಗೆ ಸಹಜವಾದ ಕೊರತೆ, ತಪ್ಪು ಮತ್ತು ಚಂಚಲತೆಗಳೂ ಅವುಗಳಲ್ಲಿಲ್ಲ. ಆದ್ದರಿಂದ ಅವು ದೋಷರಹಿತ. ಆದರೂ, ಈ ಸಿದ್ಧಾಂತವು ಒಂದು ಸ್ವತಂತ್ರ ಸಿದ್ಧಾಂತವಾದುದರಿಂದ, ಅದನ್ನು ಪ್ರತ್ಯೇಕವಾಗಿ ಪರೀಕ್ಷಿಸುವುದು ಆವಶ್ಯಕವಾಗಿದೆ.

ನಿಜವಾಗಿಯೂ ವೇದಗಳಿಗೆ ಮಾನುಷ ಕರ್ತೃಗಳಿಲ್ಲವೆ? ಅವು ನಿಜವಾಗಿಯೂ ಅಪೌರುಷೇಯವೇ? ಈ ವಿಷಯವಾಗಿ ದೊರೆಯುವ ಅತ್ಯುತ್ತಮ ಸಾಕ್ಷ್ಯಾಧಾರವೆಂದರೆ ಅನುಕ್ರಮಣಿಕೆಗಳ ಸಾಕ್ಷ್ಯಾಧಾರ. ಪುರಾತನ ಸಂಸ್ಕೃತ ಸಾಹಿತ್ಯದ ಒಂದು ಭಾಗವಾದ ಇವು ಒಂದು ವಿಶಿಷ್ಟ ವರ್ಗಕ್ಕೆ ಸೇರಿವೆ. ಅನುಕ್ರಮಣಿಕೆಗಳೆಂದು ಕರೆಯಲ್ಪಡುವ ಇವು ಪುರಾತನ ವೈದಿಕ ಸಾಹಿತ್ಯದ ವಿವಿಧ ಭಾಗಗಳಿಗೆ ಒಂದು ವ್ಯವಸ್ಥಿತವಾದ ಶಬ್ದಸೂಚಿ. ಪ್ರತಿಯೊಂದು ವೇದಕ್ಕೂ ಒಂದು ಅನುಕ್ರಮಣಿಕೆ, ಕೆಲವು ವೇಳೆ ಒಂದಕ್ಕಿಂತ ಹೆಚ್ಚು ಅನುಕ್ರಮಣಿಕೆಗಳು ಉಂಟು. ಋಗ್ವೇದಕ್ಕೆ ಏಳು ಅನುಕ್ರಮಣಿಕೆಗಳಿದ್ದು ಇವುಗಳಲ್ಲಿ ಐದನ್ನು ಶೌನಕ, ಒಂದನ್ನು ಕಾತ್ಯಾಯನ, ಮತ್ತೊಂದನ್ನು ಅಜ್ಞಾತ ಕರ್ತೃವೊಬ್ಬ ರಚಿಸಿರುವುದು ತಿಳಿದುಬಂದಿದೆ. 'ಯಜುರ್ವೇದ'ಕ್ಕೆ ಮೂರು ಅನುಕ್ರಮಣಿಕೆಗಳಿದ್ದು ಅಂದರೆ, ಅತ್ರೇಯಿ, ಚರಾಯನೀಯ ಮತ್ತು ಮಧ್ಯಂದಿನ – ಹೀಗೆ ಪ್ರತಿ ಶಾಖೆಗೆ ಒಂದೊಂದು ಅನುಕ್ರಮಣಿಕೆ ಇರುವುದು ತಿಳಿದುಬಂದಿದೆ. ಸಾಮವೇದಕ್ಕೆ ಎರಡು ಅನುಕ್ರಮಣಿಕೆಗಳಿದ್ದು ಒಂದಕ್ಕೆ ಆರ್ಷೇಯ ಬ್ರಾಹ್ಮಣ ಮತ್ತೊಂದಕ್ಕೆ ಪರಿಶಿಷ್ಟ ಎಂಬ ಹೆಸರಿದೆ. ಅಥರ್ವವೇದಕ್ಕೆ ಬೃಹತ್ ಸರ್ವಾನುಕ್ರಮಣಿಕೆ ಎಂಬ ಒಂದೇ ಅನುಕ್ರಮಣಿಕೆ ಇರುವುದು ತಿಳಿದು ಬಂದಿದೆ.

'ಋಗ್ವೇದ'ಕ್ಕೆ ಸೇರಿರುವ ಕಾತ್ಯಾಯನ ರಚಿತ ಸರ್ವಾನುಕ್ರಮಣಿಕೆಯೇ ಪ್ರೊ. ಮ್ಯಾಕ್ಸ್‌ಮ್ಯುಲ್ಲರ್ ಪ್ರಕಾರ, ಅತ್ಯಂತ ಪರಿಪೂರ್ಣವಾದ ಅನುಕ್ರಮಣಿಕೆ. ಅದು ೧. ಪ್ರತಿ ಶ್ಲೋಕದ ಮೊದಲನೆ ಪದ, ೨. ಶ್ಲೋಕಗಳ ಸಂಖ್ಯೆ, ೩. ಅದನ್ನು ರಚಿಸಿದ ಋಷಿಯ ಹೆಸರು ಮತ್ತು ಗೋತ್ರ, ೪. ದೇವದೇವತೆಗಳ ಹೆಸರುಗಳು ಮತ್ತು ೫. ಪ್ರತಿ ಶ್ಲೋಕದ ಛಂದಸ್ಸನ್ನು ತಿಳಿಸುವುದರಿಂದ, ಅದಕ್ಕೆ ಪ್ರಾಮುಖ್ಯತೆ ಇದೆ. ಸರ್ವಾನುಕ್ರಮಣಿಕೆಗಳ ಈ ಉಲ್ಲೇಖದಿಂದ ವ್ಯಕ್ತವಾಗುವ ಅಂಶವೆಂದರೆ 'ಋಗ್ವೇದ'ದ

ಋಕ್ಕುಗಳನ್ನು ರಚಿಸಿದವರು ಋಷಿಗಳು ಎಂಬ ವಿಷಯ. ಆದುದರಿಂದ, ಅನುಕ್ರಮಣಿಕೆಯ ಸಾಕ್ಷ್ಯಾಧಾರದ ಮೇಲೆ, ಉಳಿದ ವೇದಗಳ ವಿಷಯದಲ್ಲಿಯೂ ಅದೇ ತೀರ್ಮಾನಕ್ಕೆ ಬರಬಹುದಾಗಿದೆ.

'ಋಗ್ವೇದ'ದ ಅನೇಕ ಭಾಗಗಳಲ್ಲಿ ಋಷಿಗಳು ತಾವೇ ಋಕ್ಕುಗಳನ್ನು ರಚಿಸಿದವರೆಂದು ಹೇಳಿಕೊಂಡಿರುವ ಹೇಳಿಕೆಗಳಿಂದ, ಅನುಕ್ರಮಣಿಕೆಗಳು ವಾಸ್ತವವೆಂಬ ಮಾತು ಸಿದ್ಧವಾಗುತ್ತದೆ.

ಅಂತಹ ಕೆಲವು ಭಾಗಗಳನ್ನು ಈ ಕೆಳಗೆ ಕೊಡಲಾಗಿದೆ.

"ಕಣ್ವರು ನಿನಗೆ ಪ್ರಾರ್ಥನೆ ಸಲ್ಲಿಸುತ್ತಿದ್ದಾರೆ. ಅವರ ಪ್ರಾರ್ಥನೆಯನ್ನು ಸರಿಯಾಗಿ ಕೇಳಿಸಿಕೊ. ಹೀಗೆ ಓ, ಅಶ್ವನಿಯಂತ್ರಕನಾದ ಇಂದ್ರನೇ, ಗೌತಮರು ಇವರಿಗೋಸ್ಕರ ಪರಿಣಾಮಕಾರಿಯಾಗಿ ಋಕ್ಕುಗಳನ್ನು ರಚಿಸಿದರು."

"ಓ, ಶ್ರೀಮಂತರಾದ ಅಶ್ವಿನರೇ, ನಿಮಗಾಗಿ ಫಲಕಾರಿಯಾದ ಈ ಮಂತ್ರದ ಮಾನಸರಿಂದ ರಚಿತವಾಗಿದೆ."

"ಓ, ಅಶ್ವಿನರೇ, ನಿಮಗಾಗಿಯೇ ಗೃತ್ಸಮದರು ಈ ಮಹಾ ಪ್ರಾರ್ಥನೆಗಳನ್ನೂ ಈ ಋಕ್ಕನ್ನೂ ರಚಿಸಿದ್ದಾರೆ."

"ಓ, ಇಂದ್ರನೇ, ಕುಶಿಕ ಋಷಿಗಳು ಸ್ವರ್ಗ ಸಂಪಾದಿಸುವ ಉದ್ದೇಶದಿಂದ, ನಿನ್ನನ್ನು ಶ್ಲಾಘಿಸುವಂತಹ ಒಂದು ಋಕ್ಕನ್ನು ರಚಿಸಿದ್ದಾರೆ."

"ಅಶ್ವಗಳನ್ನು ನಿಯಂತ್ರಿಸುವ ಇಂದ್ರನೇ, ಗೌತಮ ವಂಶಜರಾದ ನೋಧರು ನಿನಗಾಗಿ ಈ ಹೊಸ ಶ್ಲೋಕವನ್ನು ರಚಿಸಿದ್ದಾರೆ."

"ಓ, ವೀರನೇ, ಮನುಷ್ಯರು ಕೆಲಸಗಳನ್ನು ಮಾಡುವಂತೆ, ಗೃತ್ಸಮದರು ಶಾಂತಿಯನ್ನು ಪಡೆಯುವುದಕ್ಕೋಸ್ಕರ ಈ ಪ್ರಾರ್ಥನೆಯನ್ನು ರಚಿಸಿದ್ದಾರೆ."

"ಋಷಿಗಳು ಇಂದ್ರನಿಗೋಸ್ಕರ ಒಂದು ಫಲದಾಯಕ ಉತ್ಪನ್ನವನ್ನೂ ಒಂದು ಪ್ರಾರ್ಥನೆಯನ್ನೂ ರಚಿಸಿದರು."

"ಓ, ಅಗ್ನಿಯೇ, ನಿನಗೋಸ್ಕರ ರಚಿಸಿದ ಪ್ರಾರ್ಥನೆಗಳು ನೀನು ಹಸುಗಳನ್ನೂ ಕುದುರೆಗಳನ್ನೂ ವೃದ್ಧಿಸಿದುದನ್ನು ಕೊಂಡಾಡುತ್ತವೆ."

"ಪವಿತ್ರ ಸತ್ಯದಿಂದ ಜನಿಸಿದ ಹಾಗೂ ಏಳು ತಲೆಗಳನ್ನುಳ್ಳ ಈ ಪ್ರಾರ್ಥನೆಯನ್ನು ನಮ್ಮ ತಂದೆಯು ಸಂಶೋಧಿಸಿದ್ದಾನೆ. ಇಂದ್ರನನ್ನು ಶ್ಲಾಘಿಸುವ ಮತ್ತು ಎಲ್ಲರಿಗೂ ಮಿತ್ರನಾದ ಅಯಸ್ಯನು ನಾಲ್ಕನೇ ಸ್ತುತಿ ಗೀತೆಯನ್ನು ರಚಿಸಿದ್ದಾನೆ."

"ನಾವು, ರಘುವಾನರು ಅಗ್ನಿಗೆ ಮಧುರವಾದ ಮಾತನ್ನಾಡಿದ್ದೇವೆ. ಸ್ತುತಿ ರೂಪದ ಮಾತುಗಳನ್ನು ನಾವು ನಿರಂತರವಾಗಿ ಉಚ್ಚರಿಸುತ್ತಲೇ ಇರುತ್ತೇವೆ."

"ಆದಿತ್ಯರೆ, ಅದಿತಿಯೇ ಹಾಗೂ ನಮ್ಮನ್ನಾಳುವ ಶಕ್ತಿಗಳೇ, ಪ್ಲತಿಯ ವಿವೇಕಿ ಮಗನು ನಿಮ್ಮನ್ನು ವಿಜೃಂಭಿಸಿದ್ದಾನೆ. ಅಮರ ಗಯನಿಂದ ಸ್ವರ್ಗಲೋಕದ ದೇವತೆಗಳೆಲ್ಲ ಸ್ತುತಿಸಲ್ಪಟ್ಟಿದ್ದಾರೆ."

"ಅಂಥವನನ್ನು ಋಷಿ, ಅರ್ಚಕ, ಯಾಗ ಮಾಡುವವನು, ಭಜಿಸುವವನು, ಮಂತ್ರವನ್ನು ಪಠಿಸುವವನು ಎಂದು ಕರೆಯುತ್ತಾರೆ. ಅವನಿಗೆ ತೇಜೋಮಯನಾದ ಅಗ್ನಿಯ ಮೂರು ಶರೀರಗಳು ಗೊತ್ತು. ಅವನು ದಾನಿಗಳಲ್ಲೇ ಅತ್ಯಂತ ಮುಖ್ಯನಾದವನು."

ಅನುಕ್ರಮಣಿಕೆಗಳ ಸಾಕ್ಷ್ಯವೂ ಅಲ್ಲದೆ ಮತ್ತೊಂದು ರೀತಿಯ ಸಾಕ್ಷ್ಯವೂ ಇದ್ದು, ಅದು

ವೇದವು ಅಪೌರುಷೇಯವೆಂಬ ಸಿದ್ಧಾಂತಕ್ಕೆ ಪ್ರತಿಕೂಲವಾಗಿದೆ. ಋಷಿಗಳು ತಾವೇ ವೇದಗಳನ್ನು ಮಾನವ ರಚಿತವೆಂದೂ ಐತಿಹಾಸಿಕವೆಂದೂ ಪರಿಗಣಿಸಿದ್ದಾರೆ. ಋಗ್ವೇದದ ಋಕ್ಕುಗಳು ಋಷಿಗಳನ್ನು ಪುರಾತನ ಮತ್ತು ಆಧುನಿಕ ಎಂದು ವಿಂಗಡಿಸಿವೆ. ಅಂಥವುಗಳಲ್ಲಿ ಇವು ಕೆಲವು:

"ಪುರಾತನ ಋಷಿಗಳಿಗೂ ಆಧುನಿಕ ಋಷಿಗಳಿಗೂ ಪೂಜ್ಯನಾದ ಅಗ್ನಿಯು ದೇವತೆಗಳನ್ನು ಇಲ್ಲಿಗೆ ಕರೆತರುತ್ತಾನೆ."

"ಪುರಾತನ ಋಷಿಗಳು ನಿನ್ನನ್ನು ಸಹಾಯಕ್ಕಾಗಿ ಪ್ರಾರ್ಥಿಸಿದರು."

"ಈ ಕಾಲದ ಆಧುನಿಕ ಋಷಿಯೇ, ಪ್ರಾರ್ಥನೆಯನ್ನು ಕೇಳಿಸಿಕೊ."

"ಓ, ಇಂದ್ರನೇ, ಬಾಯಾರಿದವರಿಗೆ ನೀರು ಹೇಗೋ ಹಾಗೆ ನಿನ್ನನ್ನು ಸ್ತುತಿಸಿದ ಪುರಾತನ ಪೂಜಕರಿಗೆ, ನೀನು ಆನಂದದಾಯಕನಾಗಿದ್ದೀಯೆ. ನಾನು ನಿನ್ನನ್ನು ಈ ಮಂತ್ರದ ಮೂಲಕ ಪದೇ ಪದೇ ಪ್ರಾರ್ಥಿಸುತ್ತಿದ್ದೇನೆ."

"ತೇಜೋಮಯರೂ, ಜ್ಞಾನಿಗಳೂ ಪುರಾತನ ಋಷಿಗಳೂ, ತಮ್ಮ ಮುಂದಿಟ್ಟುಕೊಂಡಿರುವ ಬೃಹಸ್ಪತಿಯನ್ನು ಸಂತೋಷದಾಯಕ ಮಾತುಗಳಿಂದ ಸ್ತುತಿಸುತ್ತಿದ್ದಾರೆ."

"ಓ, ಮಾಧವನ್, ಪುರಾತನರಾಗಲಿ, ಆಮೇಲಿನವರಾಗಲಿ, ಆಧುನಿಕ ಜನರಾಗಲಿ, ನಿನ್ನ ಶಕ್ತಿಯನ್ನು ಪಡೆದಿಲ್ಲ."

"(ಇಂದ್ರನ) ಪುರಾತನ ಪೂಜಕರನ್ನು ಹೇಗೋ ಹಾಗೆ (ನಮ್ಮನ್ನೂ ಸಹ) ನಿರ್ದೋಷಿಗಳೂ, ಅನಿಂದ್ಯರೂ, ಕಷ್ಟದಿಂದ ದೂರವಿರುವವರೂ ಆಗುವಂತೆ ಮಾಡು."

"ಹೇ ಶಕ್ತಿಶಾಲಿಯಾದ ದೇವನೇ, ಮಾನವರು ನಿನ್ನ ಆರಾಧಕರಾಗಿದ್ದಾರೆ. ಏಕೆಂದರೆ, ಹಿಂದಿನ ಕಾಲದ ಪುರಾತನರಂತೆ, ಮಧ್ಯಕಾಲದವರಂತೆ, ಹಾಗೂ ಆಮೇಲಿನವರಂತೆ ಎಲ್ಲರೂ ನಿನ್ನ ಸ್ನೇಹಿತರಾಗಿದ್ದಾರೆ, ಮತ್ತು ಬಹುಸ್ತುತ್ಯನೇ, ಇವರಲ್ಲಿ ಇತ್ತೀಚಿನವರಿಗೆ ಗಮನ ನೀಡು."

"ಅವನಿಗೆ (ಇಂದ್ರನಿಗೆ) ನಮ್ಮ ಪೂರ್ವಜರು, ಏಳು ಜನ ನವಗವ ಋಷಿಗಳು ಆಹಾರಕ್ಕೋಸ್ಕರ ಈ ಮಂತ್ರಗಳನ್ನು ಸಲ್ಲಿಸಿದರು."

"ನಮ್ಮ ಅತ್ಯಂತ ನವೀನವಾದ ಈ ಮಂತ್ರದಿಂದ ಸಂತುಷ್ಟಗೊಂಡು, ನಮಗೆ ಐಶ್ವರ್ಯವನ್ನೂ, ಅನ್ನವನ್ನೂ, ಸಂತಾನವನ್ನೂ ಕರುಣಿಸು."

'ಋಗ್ವೇದ'ದ ಸೂಕ್ಷ್ಮ ಅಧ್ಯಯನದಿಂದ 'ಋಗ್ವೇದ'ವೇ ಮಂತ್ರಗಳನ್ನು ಹಳೆಯ ಮತ್ತು ಹೊಸ ಮಂತ್ರಗಳೆಂದು ವಿಂಗಡಿಸುತ್ತದೆ ಎಂಬ ಮಾತು ವ್ಯಕ್ತವಾಗುತ್ತದೆ. ಅವುಗಳಲ್ಲಿ ಕೆಲವನ್ನು ಇಲ್ಲಿ ಕೊಡಲಾಗಿದೆ.

"ನಮ್ಮ ಅತ್ಯಂತ ನವೀನವಾದ ಈ ಮಂತ್ರದಿಂದ ಸಂತುಷ್ಟಗೊಂಡು, ನಮಗೆ ಐಶ್ವರ್ಯವನ್ನೂ, ಅನ್ನವನ್ನೂ, ಸಂತಾನವನ್ನೂ ಕರುಣಿಸು."

"ಅಗ್ನಿಯೇ ನಮ್ಮ ಈ ಅರ್ಪಣೆಯನ್ನು, ಅಂದರೆ ಈ ಹೊಸ ಮಂತ್ರವನ್ನು ದೇವ ದೇವತೆಗಳಿಗೆ ಸಾರಿ ಹೇಳು."

"ಕ್ರಿಯೆಗಳಲ್ಲಿ ಪ್ರಬಲನೂ, ಪುರಗಳನ್ನು ಸಂಹರಿಸುವವನೂ ಆದ ನೀನು, ನಮ್ಮ ಹೊಸ ಮಂತ್ರಗಳಿಂದ ಸಂತುಷ್ಟಗೊಂಡು, ಶಕ್ತಿದಾಯಕ ಆಶೀರ್ವಾದಗಳನ್ನು ಮಾಡಿ ಕಾಪಾಡು."

"ಅಗ್ನಿಯೇ, ಶಕ್ತಿಯ ಪುತ್ರನೇ, ನಾನು ನಿನಗಾಗಿ ಒಂದು ಹೊಸ ಹಾಗೂ ಪ್ರಬಲವಾದ

ಮಂತ್ರವೊಂದನ್ನು ತಂದಿದ್ದೇನೆ, ಅದು ನನ್ನ ಮನಸ್ಸಿನಲ್ಲಿ ಹುಟ್ಟಿದುದು ಹಾಗೂ ವಾಚದಿಂದ ಉಚ್ಚರಿಸಲ್ಪಡುವಂತಹುದು."

"ಶಕ್ತನಾದ ರಕ್ಷಕನಿಗೆ ಮನೋಜನ್ಯವಾದ, ಈಗ ತಾನೇ ಚಿಮ್ಮುತ್ತಿರುವ ಒಂದು ಮಂತ್ರವನ್ನು ಅರ್ಪಿಸುತ್ತೇನೆ."

"ಬಹುಸ್ತುತ್ಯನಾದ ವೀರನೇ ಭಾರೀ ಶಬ್ದದ ಗುಡುಗುಗಳನ್ನುಂಟು ಮಾಡುವವನೇ, ಈ ನಮ್ಮ ಹೊಸ ಮಂತ್ರವು ನಮಗೆ ಸಹಾಯಮಾಡುವಂತೆ ನಿನ್ನನ್ನು ಪ್ರೇರೇಪಿಸಲಿ."

"ನಮ್ಮ ಪುರಾತನರಂತೆ, ನಾನು ಸಹ ಈ ಹೊಸಮಂತ್ರದ ಮೂಲಕ ಪುರಾತನನಾದ ನಿನ್ನನ್ನು ಪ್ರಚೋದಿಸಲು ಪ್ರಯತ್ನಿಸುತ್ತೇನೆ."

"ನಿನ್ನನ್ನು ಸ್ತುತಿಸಲು ರಚಿಸಿರುವ ಈ ಹೊಸ ಮಂತ್ರಗಳು, ಈ ಪ್ರಾರ್ಥನೆಗಳು ನಿನ್ನನ್ನು ಸಂತುಷ್ಟಪಡಿಸಲಿ."

"ಓ, ಸೋಭರಿಯೇ, ಈ ಯೌವನಭರಿತ, ಶಕ್ತಿಶಾಲಿ ಮತ್ತು ತೇಜೋಮಯ ದೇವರುಗಳಿಗೆ ಹೊಸ ಗೀತೆಗಳನ್ನು ಹಾಡು."

"ವೃತ್ರಸಂಹಾರಿಯಾದ ಇಂದ್ರನೇ, ಗುಡುಗುಗಳನ್ನುಂಟುಮಾಡುವವನೇ, ಅನೇಕರಿಂದ ಸ್ತುತಿಸಲ್ಪಡುವವನೇ, ನಿನ್ನ ಆರಾಧಕರಾದ ನಾವು, ಹಿಂದೆ ಇಲ್ಲದಿದ್ದ, ಈ (ಹೊಸ) ಗೀತೆಗಳನ್ನು ಕಾಣಿಕೆಗಳಂತೆ (ನಿನಗೆ) ತಂದಿದ್ದೇವೆ."

"ಈ ಪುರಾತನ ದೇವನಿಗೆ ಮೆಚ್ಚುಗೆಯಾದ ನನ್ನ ಸ್ತುತಿಗಳನ್ನು ಅರ್ಪಿಸುತ್ತೇನೆ. ಅವನು ನಮ್ಮ ಪ್ರಾರ್ಥನೆಗಳನ್ನು ಕೇಳಿಸಿಕೊಳ್ಳಲಿ."

"ಅಶ್ವ, ದನಕರು ಮತ್ತು ಐಶ್ವರ್ಯವನ್ನು ಆಶಿಸುವ ನಾವು, ನಿನ್ನನ್ನು ನಮ್ಮಲ್ಲಿಗೆ ಬರಬೇಕೆಂದು ಪ್ರಾರ್ಥಿಸುತ್ತೇವೆ."

ವೇದಗಳಿಗೆ ಮಾನವ ಮೂಲವಿದೆಯೆಂದು ಸಾಧಿಸಲು ಇಷ್ಟೊಂದು ಸಾಕ್ಷ್ಯಾಧಾರಗಳಿದ್ದರೂ, ವೇದಗಳು ಅಪೌರುಷೇಯವೆಂಬ ಅಭಿಮತವನ್ನು ಪ್ರಚುರಪಡಿಸಲು ಬ್ರಾಹ್ಮಣರು ಅಷ್ಟೊಂದು ಕಷ್ಟಪಡುತ್ತಿರುವುದು ಒಂದು ಒಗಟಾಗಿದೆ. ಬ್ರಾಹ್ಮಣರು ಅಂಥ ಅಭಿಮತವನ್ನು ಪ್ರಚಾರ ಮಾಡಲು ಕಾರಣವಾದರೂ ಏನು?

ಇಷ್ಟೂ ಅಲ್ಲದೆ, ವೇದಗಳ ಅಧಿಕೃತತ್ವವನ್ನು ಒಪ್ಪಿಕೊಂಡ ಅನೇಕ ಶ್ರೇಷ್ಠ ತತ್ವಜ್ಞಾನಿಗಳಿದ್ದರೂ, ಅವರಾರೂ ವೇದಗಳು ಸನಾತನವೆಂಬುದನ್ನಾಗಲಿ ಅಪೌರುಷೇಯವೆಂಬುದನ್ನಾಗಲಿ ಒಪ್ಪಲು ಸಿದ್ಧರಿರಲಿಲ್ಲ.

ನ್ಯಾಯದರ್ಶನವೆಂದು ಕರೆಯಲಾಗುವ ತತ್ವಶಾಸ್ತ್ರದ ಸಂಸ್ಥಾಪಕರಾದ ಗೌತಮರು ಹೀಗೆ ಹೇಳಿದ್ದಾರೆ:

"ವೇದಗಳ ಪ್ರಾಮಾಣ್ಯವು, ಮಂತ್ರಗಳ ಮತ್ತು ಆರ್ಯವೇದದ ಪ್ರಾಮಾಣ್ಯದಂತೆ ಅವುಗಳನ್ನು ರಚಿಸಿದ ಸಮರ್ಥ ಕರ್ತೃಗಳ ಪ್ರಾಮಾಣ್ಯವನ್ನವಲಂಬಿಸುತ್ತದೆ. ವೇದಗಳ ಕರ್ತೃವಿಗೆ ಅಧಿಕಾರವಿರುವುದರಿಂದ ಮತ್ತು ಅವರು ಸತ್ಯವನ್ನು ಬೋಧಿಸುವುದರಿಂದ ಆ ಮಾತುಗಳು ಅಂಥ ಚಾರಿತ್ರ್ಯವುಳ್ಳ ವ್ಯಕ್ತಿಯಿಂದ ವೇದವು ಉಚ್ಚರಿಸಲ್ಪಟ್ಟಿತು ಎಂಬುದನ್ನು ತಿಳಿಸುತ್ತದೆ. ಅದೇ ವೇದಗಳ ಪ್ರಾಮಾಣ್ಯವು ಎಂಬುದು ಸಿದ್ಧವಾಗುತ್ತದೆ. ಇದನ್ನು ಅವನು ಮಂತ್ರಗಳ ಮತ್ತು ಆಯುರ್ವೇದಗಳ ಈ ಉದಾಹರಣೆಯ

ಮೂಲಕ ಸಿದ್ಧಪಡಿಸುತ್ತಾನೆ. ಮಂತ್ರಗಳೆಂದರೆ, ವಿಷ ಮುಂತಾದವುಗಳನ್ನು ನಿಷ್ಕ್ರಿಯಗೊಳಿಸುವಂಥ ವಾಕ್ಯಗಳು; ಮತ್ತು ಆಯುರ್ವೇದವು ವೇದದ ಒಂದು ಭಾಗ. ಈ ಎರಡು ವರ್ಗಗಳ ಪ್ರಾಮಾಣ್ಯವನ್ನು ಸಾಮಾನ್ಯವಾಗಿ ಎಲ್ಲರೂ ಒಪ್ಪುವುದರಿಂದ, ವೇದಗಳ ಗುಣಗಳುಳ್ಳ ಎಲ್ಲದರ ಪ್ರಾಮಾಣ್ಯವೂ ಇದರಿಂದ ಸಿದ್ಧವಾಗುತ್ತದೆ. ಆದರೆ, ಕೆಲವರು ಸೂತ್ರವನ್ನು ಹೀಗೆ ವ್ಯಾಖ್ಯಾನಿಸುತ್ತಾರೆ. ಯಾವುದರಲ್ಲಿ ಪ್ರಾಮಾಣ್ಯದ(ಅಧಿಕಾರ)ವಿದೆಯೋ ಮತ್ತು ಸ್ವೀಕಾರಾರ್ಹವೋ ಅದೇ ವೇದ. ಅಂತಹ ವೇದತ್ವವನ್ನುಳ್ಳ ಯಾವುದೇ ಕೃತಿಗೆ ಪ್ರಾಮಾಣ್ಯ (ಅಧಿಕಾರ)ವಿದೆಯೆಂದು ತರ್ಕಿಸಬಹುದು.''

ವೈಶೇಷಿಕ ದರ್ಶನವೂ ವೇದಗಳಿಗೆ ಪ್ರಾಮಾಣ್ಯವಿದೆಯೆಂಬುದನ್ನು ಒಪ್ಪಿಕೊಳ್ಳುತ್ತದೆ. ಆದರೆ ಅದು ತನ್ನ ಈ ತೀರ್ಮಾನವನ್ನು ಈ ಆಧಾರಗಳಿಂದ ಪಡೆಯುತ್ತದೆ:

೧. ವೇದಗಳು ವಿವೇಕವನ್ನುಳ್ಳ ಬುದ್ಧಿಯ ಉತ್ಪನ್ನ ಮತ್ತು

೨. ಅವುಗಳನ್ನು ಪರಮಾತ್ಮನೇ ತಿಳಿಸಿದ್ದಾನೆ. ಆದುದರಿಂದ ಅವುಗಳಿಗೆ ಪ್ರಾಮಾಣ್ಯವಿದೆ.

ಕಪಿಲನಿಂದ ಸ್ಥಾಪಿತವಾದ ಸಾಂಖ್ಯದರ್ಶನವು ವೇದಗಳಿಗೆ ಅನಾದಿತ್ವವನ್ನು ಆರೋಪಿಸಬಾರದೆಂದು ಹೇಳುತ್ತದೆ. ಏಕೆಂದರೆ ವೇದಗಳ ಕೆಲವು ವಾಕ್ಯಗಳೇ ತಾವು ಹುಟ್ಟಿದುದರ ಬಗ್ಗೆ ತಿಳಿಸುತ್ತವೆ. ವೇದಗಳು ದೇವನ ಪ್ರಜ್ಞಾಪೂರ್ವಕ ಪ್ರಯತ್ನದಿಂದ ಹುಟ್ಟಿದವು ಎಂಬ ಮಾತನ್ನು ಈ ದರ್ಶನವು ಸ್ಪಷ್ಟವಾಗಿ ಅಲ್ಲಗಳೆಯುತ್ತದೆ. ಸಾಂಖ್ಯರ ಪ್ರಕಾರ, ವೇದಗಳು ಸೂರ್ಯನಂತೆ ತಮ್ಮ ಬೆಳಕಿನಿಂದಾಗಿಯೇ ಪ್ರಕಾಶಿಸುತ್ತವೆ. ಅವು ತಮ್ಮ ಆಂತರಿಕ ಶಕ್ತಿಯಿಂದಾಗಿಯೇ. ತಮ್ಮ ಪರಿಪೂರ್ಣತೆಯನ್ನೂ, ಭೂತ–ಭವಿಷ್ಯ, ದೊಡ್ಡ ಮತ್ತು ಸಣ್ಣ, ಹತ್ತಿರದ ಮತ್ತು ದೂರದ ವಿಷಯಗಳನ್ನೂ ವ್ಯಕ್ತಪಡಿಸುತ್ತವೆ. ವೇದಾಂತವೆಂದು ಪ್ರಸಿದ್ಧವಾಗಿರುವ ದರ್ಶನವು ಎರಡು ಬೇರೆ ಬೇರೆ ಅಭಿಮತಗಳನ್ನು ಅನುಮೋದಿಸುವಂತೆ ಕಾಣುತ್ತದೆ. ಅದು ವೇದಗಳ ಜನನವು ಬ್ರಹ್ಮವೆಂಬ ಮೂಲ ಅಥವಾ ಮೂಲದ ಕಾರಣದಿಂದ ಉಂಟಾಯಿತೆಂದು ಹೇಳಿ ಇಲ್ಲಿ 'ಬ್ರಹ್ಮ' ಎಂಬ ಪದವು ಸೃಷ್ಟಿಕರ್ತನೆಂಬ ಅರ್ಥದಲ್ಲಿ ಪುಲ್ಲಿಂಗ ರೂಪದಲ್ಲಿ ಬಳಕೆಯಾಗಿಲ್ಲವೆಂದೂ ಪರಮ ಚೈತನ್ಯ ಎಂಬರ್ಥದಲ್ಲಿ ನಪುಂಸಕ ಲಿಂಗರೂಪದಲ್ಲಿ ಬಳಕೆಯಾಗಿದೆಯೆಂದೂ ಹೇಳುತ್ತದೆ. ಅದು ವೇದಗಳಿಗೆ ನಿತ್ಯತ್ವ ಇದೆಯೆಂದೂ, ಸ್ವತಂತ್ರ ಕರ್ತೃವೊಬ್ಬ ಇದ್ದಾನೆಂದೂ ತಿಳಿಸುತ್ತದೆ.

ವೇದಗಳು ಮನುಷ್ಯ ನಿರ್ಮಿತವಲ್ಲ ಎಂಬ ವಾದದಿಂದ ಬ್ರಾಹ್ಮಣರಿಗೆ ತೃಪ್ತಿಯಾಗಲಿಲ್ಲ. ಅವರು ಇನ್ನೂ ಮುಂದೆ ಹೋಗಿ, ವೇದಗಳನ್ನು ಪರಮಾತ್ಮನೂ ರಚಿಸಲಿಲ್ಲ ಎಂದು ವಾದಿಸಿದರು. ಈ ಸಿದ್ಧಾಂತವನ್ನು ಪೂರ್ವ ಮೀಮಾಂಸಾ ದರ್ಶನದ ಕರ್ತೃವಾದ ಜೈಮಿನಿಯು ಮಂಡಿಸಿದನು. ಈ ವಾದದ ಪರವಾಗಿ ಮಂಡಿಸಿದ ಜೈಮಿನಿಯ ವಾದಗಳು ಎಷ್ಟು ವಿಚಿತ್ರವೆಂದರೆ ಅವುಗಳ ವೈಚಿತ್ರ್ಯವನ್ನು ತಿಳಿದುಕೊಳ್ಳಲು ಆ ವಾದಗಳನ್ನು ತಿಳಿದುಕೊಳ್ಳಬೇಕಾಗುತ್ತದೆ.

ಬ್ರಾಹ್ಮಣರ ದರ್ಶನದ ಗ್ರಂಥವಾದ ಪೂರ್ವ ಮೀಮಾಂಸೆಯಲ್ಲಿ ವೇದಗಳು ಅಪೌರುಷೇಯವೆಂಬ ವಾದವು ಪ್ರಣೀತವಾಗಿರುವುದು. ಆ ಪುಸ್ತಕದಿಂದ ಆರಿಸಿಕೊಂಡ ಈ ಕೆಳಗಿನ ಉಲ್ಲೇಖಗಳು ಆ ವಾದಗಳ ಸ್ವರೂಪವನ್ನು ತಿಳಿಸುತ್ತವೆ.

ವೇದಗಳನ್ನು ಪರಮೇಶ್ವರನೇ ರಚಿಸಿದನು ಎಂಬ ನೈಯಾಯಿಕರ ವಾದವನ್ನು 'ಪೂರ್ವಮೀಮಾಂಸಾ' ಸೂತ್ರದ ಕರ್ತೃವಾದ ಜೈಮಿನಿಯು ಮೊದಲು ಪ್ರಸ್ತಾಪಿಸಿ ನೈಯಾಯಿಕರ ವಾದವನ್ನು ಮಂಡಿಸುತ್ತಾನೆ.

ಮೀಮಾಂಸಕರ ವಾದ ಹೀಗಿದೆ:

"ವೇದವು ಶರೀರವಿಲ್ಲದ ಪರಮೇಶ್ವರನಿಂದ ಹೇಳಲ್ಪಟ್ಟಿರಲು ಸಾಧ್ಯವಿಲ್ಲ. ಏಕೆಂದರೆ, ಅವನಿಗೆ ನಾಲಿಗೆಯಾಗಲಿ ಇತರ ವಾಗಿಂದ್ರಿಯಗಳಾಗಲಿ ಇಲ್ಲ. ಆದ್ದರಿಂದ ವೇದಗಳಲ್ಲಿ ಯಾವ ಅಕ್ಷರಗಳಿವೆಯೋ ಅವುಗಳನ್ನು ಅವನು ಉಚ್ಚರಿಸಿದನೆಂದು ಕಲ್ಪಿಸಿಕೊಳ್ಳಲು ಸಾಧ್ಯವಿಲ್ಲ. (ಮೀಮಾಂಸಕರ) ಈ ಆಕ್ಷೇಪ ಸಮಂಜಸವಾದುದಲ್ಲ (ಎನ್ನುತ್ತಾನೆ, ನೈಯಾಯಿಕ). ಏಕೆಂದರೆ ಪರಮೇಶ್ವರನು ಸ್ವಭಾವತಃ ನಿರ್ದೇಹಿಯಾದರೂ, ತನ್ನ ಪರಮಭಕ್ತರಿಗೆ ದಯೆ ತೋರಿಸಲು, ಲೀಲೆಗೋಸ್ಕರ ತಾನು ಯಾವ ದೇಹವನ್ನಾದರೂ ಧರಿಸಬಲ್ಲ. ಆದ್ದರಿಂದ ವೇದಗಳಿಗೆ ವ್ಯಕ್ತಿ ರೂಪನಾದ ಕರ್ತೃವಿಲ್ಲ ಎಂಬ ಸಿದ್ಧಾಂತದ ಪರವಾದ ವಾದಗಳು ಅಪೂರ್ಣ."

ಅನಂತರ ಮೀಮಾಂಸಕರ ಸಿದ್ಧಾಂತದ ಪರವಾದ ತನ್ನ ವಾದಗಳನ್ನು ಆತ ಮಂಡಿಸುತ್ತಾನೆ.

"ಈಗ ನಾನು ಈ ಎಲ್ಲ ಸಮಸ್ಯೆಗಳಿಗೆ ಸಮಾಧಾನ ನೀಡುತ್ತೇನೆ. ಈಗ ಸಿದ್ಧಪಡಿಸಬೇಕಾಗಿರುವ ಪೌರುಷೇಯತ್ವ ಎಂದರೇನು? ೧. ನಾವು ಪ್ರತಿದಿನ ವೇದವನ್ನು ಪಠಿಸಿದಾಗ, ವೇದವು ವ್ಯಕ್ತಿಯಿಂದ ಉತ್ಪನ್ನವಾಯಿತೆಂದು ಹೇಳುತ್ತೇವೆ. ಪೌರಷೇಯತ್ವವೆಂದರೆ, ಈ ರೀತಿಯ ಉತ್ಪನ್ನವೋ? ಅಥವಾ ೨. ನಾವು ಒಂದು ಗ್ರಂಥವನ್ನು ರಚಿಸಿದಾಗ, ನಾವು ಪಡೆದ ಜ್ಞಾನವನ್ನು ಬೇರೆಯವರಿಗೆ ವ್ಯಕ್ತಪಡಿಸುತ್ತಿದ್ದೇವೆಂದು ಹೇಳುತ್ತೇವೆ. ಪೌರುಷೇಯತ್ವವೆಂದರೆ, ಈ ರೀತಿ ಜ್ಞಾನವನ್ನು ವ್ಯಕ್ತಪಡಿಸುವ ಒಂದು ಮಾರ್ಗವೆ? ಪೌರುಷೇಯತ್ವಕ್ಕೆ ಮೊದಲನೆ ಅರ್ಥವಿರುವುದಾದರೆ, ನಮ್ಮ ಜಗಳವಿಲ್ಲ."

"ಒಂದು ವೇಳೆ ಅದಕ್ಕೆ ಎರಡನೆ ಅರ್ಥ ಕೊಟ್ಟರೆ ನಾವು ಕೇಳುತ್ತೇವೆ. ವೇದಕ್ಕೆ ಪ್ರಾಮಾಣ್ಯ (ಅಧಿಕೃತತ್ವ) ಬರುವುದು ೧. ಅದು ಅನುಮಾನದ ಮೇಲೆ ನಿಂತಿರುವುದರಿಂದಲೋ ಅಥವಾ ೨. ಆಗಮ ಬಲ(ಅತೀಂದ್ರಿಯಜ್ಞಾನ)ದ ಮೇಲೆ ನಿಂತಿರುವುದರಿಂದಲೋ?"

"ಮೊದಲನೆ ವಿಕಲ್ಪವು ಅಂದರೆ ೧. ವೇದವು ಅನುಮಾನದ ಮೇಲೆ ನಿಂತಿರುವುದರಿಂದ ಅದಕ್ಕೆ ಅಧಿಕಾರ ಪ್ರಾಪ್ತಿಯಾಗುತ್ತದೆ ಎಂಬುದು ಸಮಂಜಸವಲ್ಲ. ಏಕೆಂದರೆ ಈ ಸಿದ್ಧಾಂತವನ್ನು 'ಮಾಲತೀಮಾಧವ' ಮುಂತಾದ ಧರ್ಮ ನಿರಪೇಕ್ಷ ಕಾವ್ಯಗಳಿಗೆ ಅನ್ವಯಿಸಿದರೆ ಆಗ ಅದರಲ್ಲಿರುವ ಅನುಮಾನಗಳಿಗೆ ಅಧಿಕಾರ ಅಥವಾ ಪ್ರಾಮಾಣ್ಯವಿಲ್ಲದುದರಿಂದ ಈ ಸಿದ್ಧಾಂತವು ಕುಸಿದು ಬೀಳುತ್ತದೆ. ೨. ಒಂದು ವೇಳೆ, ಎರಡನೆಯ ವಿಕಲ್ಪವನ್ನು ನೀವು ಆರಿಸಿಕೊಂಡರೆ ಅಂದರೆ ಅಧಿಕಾರವನ್ನುಳ್ಳ ಬೇರೆ ಗ್ರಂಥಗಳ ವಿಷಯಗಳಿಂದ ವೇದಗಳ ವಿಷಯಗಳನ್ನು ಪ್ರತ್ಯೇಕಿಸಬಹುದೆಂದು ನೀವು ಹೇಳಿದರೆ, ನಿಮ್ಮ ಹೇಳಿಕೆಯು ಯಾವ ದಾರ್ಶನಿಕನಿಗೂ ಸಮಾಧಾನ ನೀಡುವುದಿಲ್ಲ. ಏಕೆಂದರೆ, ವೇದದ ಶಬ್ದವು ಬೇರೆ ಯಾವುದೇ ಸಾಕ್ಷ್ಯವು ಸಿದ್ಧ ಪಡಿಸಲಾಗದುದನ್ನು ಮಾತ್ರ ಸಿದ್ಧಪಡಿಸುತ್ತದೆ."

"ಬೇರೆ ಪ್ರಮಾಣಗಳು ಸಿದ್ಧಪಡಿಸಲಾಗದಂಥವುಗಳನ್ನು ವೇದದ ಶಬ್ದ ಸಿದ್ಧ ಪಡಿಸುವುದೇ ಆದಲ್ಲಿ, ಆಗ ಆ ಮಾತು 'ನನ್ನ ತಾಯಿ ಬಂಜೆ' ಎಂದು ಹೇಳುವವನ ಮಾತಿನಂತೆ ಸ್ವವಿರೋಧಕ್ಕೊಳಗಾಗುತ್ತದೆ."

"ಪರಮೇಶ್ವರನು ಲೀಲೆಗೋಸ್ಕರ ರೂಪವನ್ನು ಧರಿಸುತ್ತಾನೆಂಬ ಮಾತನ್ನು ಒಪ್ಪಿಕೊಂಡರೂ ಇಂದ್ರಿಯಗಳಿಗೆ ಮೀರಿದ ವಸ್ತುಗಳನ್ನು ಆತ ಗ್ರಹಿಸಬಲ್ಲ ಎಂಬುದನ್ನು ಮಾತ್ರ ಕಲ್ಪಿಸಿಕೊಳ್ಳಲು ಸಾಧ್ಯವಿಲ್ಲ. ಏಕೆಂದರೆ ದೇಶ, ಕಾಲ ಮತ್ತು ಪ್ರಕೃತಿಗಳಲ್ಲಿದ್ದು ತನ್ನಿಂದ ದೂರವಿರುವ ವಸ್ತುಗಳನ್ನು ಗ್ರಹಿಸಬಲ್ಲಂತಹ ಇಂದ್ರಿಯಗಳು ಅವನಲ್ಲಿಲ್ಲ ಅಥವಾ ಅವನ ಕಣ್ಣು ಮತ್ತು ಇತರ ಇಂದ್ರಿಯಗಳು

ಮಾತ್ರ ಅಂಥ ಜ್ಞಾನ ಕೊಡಬಲ್ಲವು ಎಂತಲೂ ಹೇಳುವಂತಿಲ್ಲ. ಏಕೆಂದರೆ ಮನುಷ್ಯರು ತಾವು ಇಂದ್ರಿಯಗಳಿಂದ ಗ್ರಹಿಸಿದುದನ್ನು ಮಾತ್ರ ಕಲ್ಪಿಸಿಕೊಳ್ಳಬಲ್ಲರು."

"ಸರ್ವಜ್ಞನಾದ ಕರ್ತೃವಿದ್ದಾನೆಂಬ ಕಲ್ಪನೆಯನ್ನು ಅಲ್ಲಗಳೆಯುವಾಗ ನಮ್ಮ ಗುರು (ಪ್ರಭಾಕರ) ಹೇಳಿದುದು ಹೀಗಿದೆ: "ಯಾವುದೇ ಒಂದು ವಸ್ತುವನ್ನು ಕಣ್ಣು ನೋಡಿದಾಗ ಮತ್ತು ಆ ನೋಟ ನಿರ್ದಿಷ್ಟವಾಗಿದ್ದರೆ ಆ ನೋಟವು ದೂರದ ವಸ್ತುವನ್ನು ಅಥವಾ (ಹತ್ತಿರದ) ಸೂಕ್ಷ್ಮ ವಸ್ತುವನ್ನು ಮಾತ್ರ ಗ್ರಹಿಸಬಲ್ಲದು. ಏಕೆಂದರೆ ಯಾವುದೇ ಇಂದ್ರಿಯವು ತನ್ನ ವಿಷಯದ ಪರಿಧಿಯನ್ನು ಮೀರಲಾರದು. ಉದಾಹರಣೆಗೆ, ಕಿವಿಯು ಎಂದಿಗೂ ರೂಪವನ್ನು ಗ್ರಹಿಸಲಾರದು."

"ಆದ್ದರಿಂದ, ಪರಮೇಶ್ವರನು ದೇಹ ಧರಿಸಿ ಪಡೆದ ಅತೀಂದ್ರಿಯ ಜ್ಞಾನದಿಂದಾಗಿ ವೇದಗಳಿಗೆ ಅಧಿಕಾರ ಬರುವುದಿಲ್ಲ."

ನೈಯಾಯಿಕರ ವಾದವನ್ನು ಖಂಡಿಸಲು ಜೈಮಿನಿಯು ಬಳಸಿರುವ ವಾದಗಳಿವು. ಅನಂತರ, ವೇದಗಳು ಪರಮೇಶ್ವರನ ಶಬ್ದಗಳಲ್ಲ. ಅದಕ್ಕಿಂತ ಶ್ರೇಷ್ಠತರವಾದವು ಎಂಬುದನ್ನು ತೋರಿಸಲು ತನ್ನ ಖಚಿತ ವಾದಗಳನ್ನು ಮಂಡಿಸುತ್ತಾನೆ. ಅವನ ವಾದ ಹೀಗಿದೆ:

"ಶಬ್ದ ಮತ್ತು ಅರ್ಥಗಳ ಸಂಬಂಧವು ನಿತ್ಯ ಎಂಬುದನ್ನು ಹಿಂದಿನ ಸೂತ್ರವು ತಿಳಿಸಿತು. ಈ ಸಂಬಂಧದ ನಿತ್ಯತ್ವವು ಶಬ್ದಗಳ (ಅಥವಾ ಪದಗಳ) ನಿತ್ಯತ್ವವನ್ನು ಅವಲಂಬಿಸುತ್ತದೆ ಎಂಬುದನ್ನು ತೋರಿಸುವ ಉದ್ದೇಶದಿಂದ ಅವನು ಸಮಸ್ಯೆಯ ಮೊದಲನೆ ಮಗ್ಗುಲನ್ನು ಅಂದರೆ ಪದಗಳು (ಶಬ್ದಗಳು) ನಿತ್ಯವಲ್ಲ ಎಂಬ ಸಿದ್ಧಾಂತವನ್ನು ವಿವರಿಸುತ್ತೇನೆ."

"ಕೆಲವರು ಅಂದರೆ ನ್ಯಾಯದರ್ಶನದ ಅನುಯಾಯಿಗಳು ಶಬ್ದವು ನಮ್ಮ ಪ್ರಯತ್ನದ ಪರಿಣಾಮವಾದುದರಿಂದ ಅದೊಂದು ಉತ್ಪನ್ನವೆಂದೂ ಅದು ನಿತ್ಯವಾಗಿದ್ದರೆ ನಮ್ಮ ಪ್ರಯತ್ನದ ಪರಿಣಾಮವಾಗಿರುತ್ತಿರಲಿಲ್ಲ ಎಂದೂ ವಾದಿಸುತ್ತಾರೆ."

"ಕೆಲವು ಕ್ಷಣಗಳ ನಂತರ ಶಬ್ದವು ಕೇಳಿಸುವುದಿಲ್ಲವಾದುದರಿಂದ ಅದು ಕ್ಷಣಿಕ, ಅಂದರೆ, ಅದು ನಿತ್ಯವಲ್ಲ (ಎಂದೂ ಅವರು ಹೇಳುತ್ತಾರೆ)."

"ಏಕೆಂದರೆ, ಶಬ್ದವನ್ನು 'ಮಾಡು'ವುದರ ಬಗ್ಗೆ ನಾವು ಮಾತನಾಡುತ್ತೇವೆ."

"ಏಕೆಂದರೆ, ಏಕಕಾಲದಲ್ಲಿ ಶಬ್ದವು ಬೇರೆ ಬೇರೆ ವ್ಯಕ್ತಿಗಳಿಗೆ ಕೇಳಿಸುತ್ತದೆ ಮತ್ತು ಹತ್ತಿರದವರಿರಲಿ ದೂರದವರಿರಲಿ, ಇಬ್ಬರ ಶ್ರವಣೇಂದ್ರಿಯಗಳ ನೇರ ಸಂಪರ್ಕಕ್ಕೆ ಶಬ್ದವು ಬರುತ್ತದೆ. ಆದರೆ ಶಬ್ದವು ಒಂದೇ ಮತ್ತು ನಿತ್ಯವಾಗಿದ್ದರೆ ಹಾಗಾಗಲು ಸಾಧ್ಯವಿರುತ್ತಿರಲಿಲ್ಲ."

"ಏಕೆಂದರೆ, ಶಬ್ದಗಳಿಗೆ ಮೂಲರೂಪ ಮತ್ತು ವಿಕೃತ ರೂಪಗಳೆರಡೂ ಉಂಟು. ಉದಾಹರಣೆಗೆ, 'ದಧಿ ಅತ್ರ' ಎಂಬುದು 'ದಧ್ಯತ್ರ' ಎಂದು ರೂಪಾಂತರ ಹೊಂದಿದಾಗ, 'ಇ'ಎಂಬ ಮೂಲಾಕ್ಷರವು ಸಂಧಿ ಸಮಾಸದ ನಿಯಮಗಳ ಪ್ರಕಾರ 'ಯ' ಎಂದು ರೂಪಾಂತರಗೊಳ್ಳುತ್ತದೆ. ಯಾವ ವಸ್ತುವು ರೂಪಾಂತರಗೊಳ್ಳುತ್ತದೆಯೋ ಅದು ನಿತ್ಯವಲ್ಲ."

"ಏಕೆಂದರೆ, ಬಹಳ ಜನರು ಪದವನ್ನು ಉಚ್ಚರಿಸಿದರೆ, ಅವುಗಳ ಶಬ್ದವು ಹೆಚ್ಚಾಗುತ್ತದೆ. ಆದ್ದರಿಂದ (ಅವ್ಯಕ್ತವಾಗಿದ್ದ) ಶಬ್ದವು ವ್ಯಕ್ತವಾಗುತ್ತದೆಯೇ ಹೊರತು, ಮಾನವ ಪ್ರಯತ್ನದಿಂದ ಸೃಷ್ಟಿಯಾಗುವುದಿಲ್ಲ ಎಂಬ ಮೀಮಾಂಸಕರ ಅಭಿಪ್ರಾಯವು ಸರಿಯಲ್ಲ. ಸಾವಿರ ದೀಪಗಳು ಒಂದು ಮಡಕೆಯನ್ನು ವ್ಯಕ್ತಪಡಿಸಿದಾಗ ಹೇಗೆ ಅದರ ಗಾತ್ರ ದೊಡ್ಡದಾಗುವುದಿಲ್ಲವೋ ಹಾಗೆ ಸಾವಿರಾರು

ಜನರು ತಾವು ವ್ಯಕ್ತಪಡಿಸುವ ಯಾವ ವಸ್ತುವನ್ನೂ ದೊಡ್ಡದು ಮಾಡಲಾರರು. (ಆದರೆ ಬಹಳ ಜನರು ಶಬ್ದವನ್ನು ಹೆಚ್ಚು ಮಾಡಬಲ್ಲರು. ಆದ್ದರಿಂದ ಶಬ್ದವೆಂದರೆ ಕೇವಲ ವ್ಯಕ್ತಪಡಿಸುವುದಲ್ಲ ಸೃಷ್ಟಿಸುವುದು)."

ಶಬ್ದವೆಂದರೆ ಕೇವಲ ವ್ಯಕ್ತಪಡಿಸುವುದೇ ಹೊರತು ಮಾನವರು ಹೊಸದಾಗಿ ಸೃಷ್ಟಿಸುವುದಲ್ಲ ಎಂಬ ಮೀಮಾಂಸಕರ ನಿಲುವಿಗೆ ವಿರುದ್ಧವಾಗಿ ಮಾಡಿದ ಈ ಆಕ್ಷೇಪಣೆಗಳಿಗೆ ಜೈಮಿನಿ ಈಗ ಸಮಾಧಾನ ನೀಡುತ್ತಾನೆ. ಜೈಮಿನಿಯು ಹೀಗೆ ಹೇಳುತ್ತಾನೆ:

"ಶಬ್ದವನ್ನು ಉತ್ಪಾದಿಸಬಹುದು ಮತ್ತು ಶಬ್ದವನ್ನು ಕೇವಲ ವ್ಯಕ್ತಪಡಿಸಬಹುದು ಎಂಬ ಈ ಎರಡು ವಾದಗಳ ಪ್ರಕಾರವೂ ಶಬ್ದಗ್ರಹಣ ಮಾತ್ರ ಅನಿತ್ಯ. ಆದರೆ ಇವೆರಡರಲ್ಲಿ ಶಬ್ದವು ವ್ಯಕ್ತವಾಗುತ್ತದೆ ಎಂಬ ಸಿದ್ಧಾಂತ ಮಾತ್ರ ಸರಿ ಎಂಬುದನ್ನು ಮುಂದಿನ ಸೂತ್ರದಲ್ಲಿ ತೋರಿಸಲಾಗುತ್ತದೆ."

"ಶಬ್ದವು ಶಾಶ್ವತವಾಗಿ ಅಸ್ತಿತ್ವದಲ್ಲಿದ್ದರೂ ಅದನ್ನು ಗ್ರಹಿಸಲಾಗುವುದಿಲ್ಲ. ಇದು ಶಬ್ದವನ್ನು ಉಚ್ಚರಿಸುವವನು ತನ್ನ ವಸ್ತು ಅಂದರೆ ಶಬ್ದದ ಸಂಪರ್ಕಕ್ಕೆ ಬಂದಿರುವುದಿಲ್ಲ ಎಂಬ ವಿಷಯದಿಂದ ಸ್ಪಷ್ಟವಾಗುತ್ತದೆ. ಶಬ್ದವು ನಿತ್ಯ. ಏಕೆಂದರೆ ನಾವು 'ಕ' ಎಂಬ ಅಕ್ಷರವನ್ನು ಯಾವಾಗಲೂ ಕೇಳಿರುವ ಅಕ್ಷರವೆಂದು ಗುರುತಿಸುತ್ತೇವೆ ಮತ್ತು ಅದು ಅದೇ ಅಕ್ಷರವೆಂದು ಗುರುತಿಸಲು ಅದು ಅತ್ಯಂತ ಸರಳ ವಿಧಾನ. ಶಬ್ದಗ್ರಹಣಕ್ಕೆ ಅಡ್ಡಿ ಉಂಟುಮಾಡುವ ನಿಶ್ಶಬ್ದ ವಾತಾವರಣವನ್ನು ಉಚ್ಚರಿಸುವವನ ಬಾಯಿಂದ ಹೊರಡುವ ಗಾಳಿಯ ಸಂಯೋಗ ವಿಯೋಗಗಳು ನಿವಾರಿಸುತ್ತವೆ. ಆಗ ಶಬ್ದವು (ಅಗ್ರಾಹ್ಯವಾಗಿದ್ದರೂ ನಿತ್ಯವಾಗಿರುವ) ಗ್ರಾಹ್ಯವಾಗುತ್ತದೆ. ಶಬ್ದವು ಅನಿತ್ಯ ಎಂದು ವಾದಿಸುವವರಿಗೆ ಉತ್ತರವಿದು."

"ಶಬ್ದವನ್ನು 'ಉಂಟುಮಾಡುವುದು' ಎಂದರೆ ಕೇವಲ ಶಬ್ದವನ್ನು ಬಳಸುವುದು ಅಥವಾ ಉಚ್ಚರಿಸುವುದು."

"ಒಂದೇ ಸೂರ್ಯನನ್ನು ಅನೇಕ ಜನರು ಏಕಕಾಲದಲ್ಲಿ ಹೇಗೆ ನೋಡಬಲ್ಲರೋ ಹಾಗೆಯೇ ಒಂದೇ ಶಬ್ದವನ್ನೂ ಅನೇಕ ಜನರು ಏಕಕಾಲದಲ್ಲಿ ಕೇಳಿಸಿಕೊಳ್ಳಬಲ್ಲರು. ಶಬ್ದವು ಸೂರ್ಯನಂತೆ ಒಂದು ದೊಡ್ಡ ವಸ್ತುವೇ ಹೊರತು ಸೂಕ್ಷ್ಮವಸ್ತುವಲ್ಲ. ಹೀಗಾಗಿ ಅನೇಕ ಜನರು ಪರಸ್ಪರ ದೂರವಿದ್ದರೂ ಅವರು ಶಬ್ದವನ್ನು ಗ್ರಹಿಸಬಲ್ಲರು."

"ಹತ್ತನೇ ಸೂತ್ರದಡಿಯಲ್ಲಿ ಪ್ರಸ್ತಾಪಿಸಲಾದ ಪ್ರಸಂಗದಲ್ಲಿ (ಅಂದರೆ 'ದಧಿ ಅತ್ರ' 'ದಧ್ಯತ್ರ'ವಾದಾಗ) 'ಇ' ಬದಲು 'ಯ' ಉಪಯೋಗವಾದಾಗ, 'ಯ' ಎಂಬುದು 'ಇ' ಎಂಬುದರ ವಿಕೃತ ರೂಪದಲ್ಲಿ ಅದು ಬೇರೆಯೇ ಆದ ಅಕ್ಷರ. ಆದ್ದರಿಂದ ಶಬ್ದವು ರೂಪಾಂತರವಾಗಲಾರದು."

"ಒಂದೇ ಶಬ್ದವನ್ನು ಏಕಕಾಲದಲ್ಲಿ ಅನೇಕರು ಉಚ್ಚರಿಸಿದಾಗ, ಶಬ್ದವು ಹೆಚ್ಚಾಗುವುದಿಲ್ಲ. ಧ್ವನಿವರ್ಧನೆಯಾಗುತ್ತದೆ. 'ಧ್ವನಿವರ್ಧನೆ' ಅಥವಾ 'ಗದ್ದಲ'ವೆಂದರೆ, ಸಂಯೋಗ–ವಿಯೋಗಗೊಂಡ ಗಾಳಿಯು (ಉಚ್ಚರಿಸುವವರ ಬಾಯಿಂದ ಹೊರಟ ಗಾಳಿಯು) ಬೇರೆ ಬೇರೆ ದಿಕ್ಕುಗಳಿಂದ ಕೇಳುಗನ ಕಿವಿಯನ್ನು ಏಕಕಾಲದಲ್ಲಿ ಪ್ರವೇಶಿಸುವುದು. ಇದು ಹೆಚ್ಚಾಗುತ್ತದೆಯೇ ಹೊರತು ಶಬ್ದ ಹೆಚ್ಚಾಗುವುದಿಲ್ಲ."

"ಶಬ್ದವು ನಿತ್ಯವಾಗಿರಲೇಬೇಕು. ಏಕೆಂದರೆ, ಅದರಲ್ಲಿ ಅಡಕವಾಗಿರುವ ಅರ್ಥವು ಬೇರೆಯವರಿಗೆ ತಿಳಿಯುತ್ತದೆ. ಒಂದು ವೇಳೆ ಅದು ನಿತ್ಯವಲ್ಲದಿದ್ದರೆ, ಕೇಳುಗನು ಅದರ ಅರ್ಥವನ್ನು ಅರಿಯುವವರೆಗೂ

ಅದು ಮುಂದುವರಿಯುತ್ತಿರಲಿಲ್ಲ. ಆಗ ಅವನಿಗೆ ಅದರ ಅರ್ಥ ಗೊತ್ತಾಗುತ್ತಿರಲಿಲ್ಲ. ಏಕೆಂದರೆ ಅದರ ಕಾರಣವಾದ ಶಬ್ದ ಅಷ್ಟು ಹೊತ್ತಿಗೆ ಅಂತ್ಯವಾಗಿರುತ್ತಿತ್ತು.''

''ಶಬ್ದವು ನಿತ್ಯ. ಏಕೆಂದರೆ, ಅನೇಕ ಜನರು ಅದನ್ನು ಏಕಕಾಲದಲ್ಲಿ ಸರಿಯಾಗಿ ಮತ್ತು ಸಮಾನವಾಗಿ ಗುರುತಿಸಬಲ್ಲರು. ಎಲ್ಲರೂ ಏಕಕಾಲದಲ್ಲಿ ಭ್ರಮೆಗೊಳಗಾಗುತ್ತಾರೆಂಬ ಮಾತನ್ನು ಕಲ್ಪಿಸಿಕೊಳ್ಳಲು ಸಾಧ್ಯವಿಲ್ಲ.''

''‘ಗೋವು’ ಎಂಬ ಪದವನ್ನು ಹತ್ತು ಸಾರಿ ಪುನಃ ಪುನಃ ಉಚ್ಚರಿಸಿದರೆ, ಅದನ್ನು ಕೇಳಿಸಿಕೊಂಡವರು ‘ಗೋವು’ ಎಂಬ ಪದವನ್ನು ಹತ್ತು ಸಾರಿ ಉಚ್ಚರಿಸಲಾಯಿತು ಎಂದು ಹೇಳುತ್ತಾರೆಯೇ ಹೊರತು ‘ಗೋವು’ ಎಂಬ ಶಬ್ದ(ದನಿ)ವನ್ನುಳ್ಳ ಹತ್ತು ಪದಗಳನ್ನು ಉಚ್ಚರಿಸಲಾಯಿತು ಎಂದು ಹೇಳುವುದಿಲ್ಲ. ಶಬ್ದವು ನಿತ್ಯ ಎಂಬುದಕ್ಕೆ ಈ ಸಂಗತಿಯೂ ಸಾಕ್ಷಿ.''

''ಶಬ್ದವು ನಿತ್ಯ. ಏಕೆಂದರೆ ಅದರ ನಾಶವನ್ನು ಊಹಿಸಲು ನಮಗೆ ಯಾವುದೇ ಆಧಾರವಿಲ್ಲ.''

''ಆದರೆ, ಶಬ್ದವು ವಾಯುವಿನ ಸಂಯೋಗದಿಂದ ಉಂಟಾಗುವುದರಿಂದ ಅದನ್ನು ವಾಯುವಿನ ರೂಪಾಂತರವೆಂದು ಕರೆಯಬಹುದು ಹಾಗೂ ಶಿಕ್ಷಾ ಅಥವಾ ವೇದಾಂಗವು (ಮಂತ್ರಗಳನ್ನು ಹೇಗೆ ಉಚ್ಚರಿಸಬೇಕೆಂದು ಬೋಧಿಸುವ ವೇದದ ಅಂಗವು) ‘ಶಬ್ದದ ಉಪಾಧಿಯಿಂದಾಗಿ ವಾಯುವು ಬರುತ್ತದೆ’ ಎಂದು ಹೇಳುವುದರಿಂದಲೂ ಶಬ್ದವು ವಾಯುವಿನಿಂದ ಉತ್ಪತ್ತಿಯಾಗುವುದರಿಂದಲೂ, ಅದು ನಿತ್ಯವಾಗಿರಲಾರದು ಎಂದು ಕೆಲವರು ಆಗ್ರಹಪಡಿಸಬಹುದು.''

ಈ ಆಕ್ಷೇಪಕ್ಕೆ ೨೨ನೇ ಸೂತ್ರದಲ್ಲಿ ಪರಿಹಾರವಿದೆ.

''ಶಬ್ದವು ವಾಯುವಿನ ರೂಪಾಂತರವಲ್ಲ. ಏಕೆಂದರೆ ಅದು ರೂಪಾಂತರವಾಗದಿದ್ದರೆ, ಶ್ರವಣೇಂದ್ರಿಯಕ್ಕೆ ಸರಿಯಾದ ವಿಷಯವೇ ಸಿಕ್ಕುತ್ತಿರಲಿಲ್ಲ. ವಾಯುವಿನ ರೂಪಾಂತರವನ್ನು (ಇದನ್ನು ಮುಟ್ಟಬಹುದು ಎಂಬುದು ನೈಯಾಯಿಕರ ಅಭಿಮತ) ಶ್ರವಣೇಂದ್ರಿಯವು ಗ್ರಹಿಸಲಾರದು. ಏಕೆಂದರೆ ಅದು ಮುಟ್ಟಲಾರದ ಶಬ್ದವನ್ನಷ್ಟೇ ಕೇಳಿಸಿಕೊಳ್ಳುತ್ತದೆ.''

''ಶಬ್ದದ ನಿತ್ಯತ್ವವು ‘ಓ, ವಿರೂಪನೆ, ಶಾಶ್ವತ ವಾಚದಿಂದ.....’ ಎಂಬ ವೇದದ ವಾಕ್ಯದಿಂದಲೂ ಸಿದ್ಧವಾಗುತ್ತದೆ. ಈ ವಾಕ್ಯದ ಉದ್ದೇಶ ಬೇರೆ ಇದ್ದರೂ ಅದು ಭಾಷೆಯ ನಿತ್ಯತ್ವವನ್ನಂತೂ ಪ್ರತಿಪಾದಿಸುತ್ತದೆ. ಆದ್ದರಿಂದ ಶಬ್ದವು ನಿತ್ಯ.''

ವೇದಗಳು ನಿತ್ಯ ಮತ್ತು ಅವು ಮಾನವ ರಚಿತವೂ ಅಲ್ಲ. ದೈವ ರಚಿತವೂ ಅಲ್ಲ ಎಂಬ ಸಿದ್ಧಾಂತದ ಪರವಾಗಿ ಜೈಮಿನಿಯು ಮಾಡಿದ ವಾದ ಹೀಗಿದೆ.

ಈ ಸಿದ್ಧಾಂತದ ತಳಹದಿ ಸರಳವಾಗಿದೆ.

ಮೊದಲನೆಯದಾಗಿ, ಪರಮಾತ್ಮನಿಗೆ ಶರೀರವಿಲ್ಲ ಹಾಗೂ ನಾಲಿಗೆಯಿಲ್ಲ. ಆದ್ದರಿಂದ ಅವನು ವೇದವನ್ನು ಉಚ್ಚರಿಸಲು ಸಾಧ್ಯವಿಲ್ಲ.

ಎರಡನೆಯದಾಗಿ, ಪರಮಾತ್ಮನಿಗೆ ಶರೀರವಿದೆಯೆಂದು ಊಹಿಸಿಕೊಂಡರೂ, ಇಂದ್ರಿಯಾತೀತ ವಸ್ತುಗಳನ್ನು ಪರಮಾತ್ಮನು ಗ್ರಹಿಸಲಾರ. ಆದರೆ ವೇದಗಳಲ್ಲಿ ಮಾನವನ ಇಂದ್ರಿಯಗಳಿಗೆ ಅತೀತವಾದ ವಿಷಯಗಳ ಪ್ರಸ್ತಾಪವಿದೆ.

ಮೂರನೆಯದಾಗಿ, ಪದ ಮತ್ತು ಅದರ ಅರ್ಥಗಳ ಸಂಬಂಧ ನಿತ್ಯವಾದುದು.

ನಾಲ್ಕನೆಯದಾಗಿ, ಶಬ್ದ ನಿತ್ಯವಾದುದು.

ಐದನೆಯದಾಗಿ, ಶಬ್ದವು ನಿತ್ಯವಾದುದರಿಂದ ಶಬ್ದಗಳಿಂದಾದ ಪದಗಳೂ ಸಹ ನಿತ್ಯವೇ.

ಆರನೆಯದಾಗಿ, ಪದಗಳು ನಿತ್ಯವಾದುದರಿಂದ ವೇದಗಳೂ ನಿತ್ಯ ಮತ್ತು ವೇದಗಳು ನಿತ್ಯವಾದುದರಿಂದ, ಅವುಗಳನ್ನು ಮಾನವರಾಗಲಿ ದೇವರಾಗಲಿ ರಚಿಸಿಲ್ಲ.

ಈ ಆಧಾರವಾಕ್ಯಗಳ ಬಗ್ಗೆ ಏನು ಹೇಳೋಣ? ಇದಕ್ಕಿಂತ ಅಸಂಗತವಾದುದು ಮತ್ತೇನಿದೆ? ಮಾನವನ ಇಂದ್ರಿಯಗಳಿಗೆ ಗ್ರಾಹ್ಯವಾಗದ ವಿಷಯಗಳು ವೇದಗಳಲ್ಲಿವೆ ಎಂಬುದನ್ನು ಯಾರು ಒಪ್ಪಿಕೊಳ್ಳಬಲ್ಲರು? ಪದಕ್ಕೂ ಅದರ ಅರ್ಥಕ್ಕೂ ಶಾಶ್ವತ ಸಂಬಂಧವಿದೆ ಎಂಬುದನ್ನು ಯಾರು ಒಪ್ಪಿಕೊಳ್ಳಬಲ್ಲರು? ಶಬ್ದವು ವ್ಯಕ್ತವಾದುದೂ ಅಲ್ಲ, ಸೃಷ್ಟಿಯಾದುದೂ ಅಲ್ಲ, ಅದು ನಿತ್ಯ ಎಂಬ ಮಾತನ್ನು ಯಾರು ಒಪ್ಪಿಕೊಳ್ಳಬಲ್ಲರು?

ಈ ಅಸಂಬದ್ಧ ಆಧಾರ ವಾಕ್ಯಗಳನ್ನು ನೋಡಿ. ಬ್ರಾಹ್ಮಣರು ಅಂತಹ ಹತಾಶ ತೀರ್ಮಾನವನ್ನು ಸ್ಥಾಪಿಸಲು ಈ ಹತಾಶ ಪ್ರಯತ್ನವನ್ನೇಕೆ ಮಾಡಿದರು ಎಂದು ಕೇಳಲೇಬೇಕಾಗುತ್ತದೆ. ಇದರಿಂದ ಅವರು ಏನನ್ನು ಸಾಧಿಸಲು ಇಚ್ಛಿಸಿದರು? ಚಾತುರ್ವರ್ಣಗಳನ್ನು ವೇದಗಳು ಪ್ರತಿಪಾದಿಸಿದ್ದು ಬ್ರಾಹ್ಮಣರು ಎಲ್ಲದರ ಅಧಿಪತಿಗಳು ಎಂದು ಸಾರುವ ಉದ್ದೇಶದಿಂದಲೆ?

* * * *

# ಒಗಟು – ೬

## ವೇದಗಳ ವಿಷಯಗಳು : ಅವುಗಳಿಗೆ ನೈತಿಕ ಅಥವಾ ಆಧ್ಯಾತ್ಮಿಕ ಮೌಲ್ಯವಿದೆಯೇ?

## I

ವೇದಗಳು ಅಧಿಕಾರಯುತ ಮತ್ತು ದೋಷ ರಹಿತ ಎಂದು ಒಪ್ಪಿಕೊಂಡರೆ ಅವುಗಳ ಬೋಧನೆಗೆ ನೈತಿಕ ಮತ್ತು ಆಧ್ಯಾತ್ಮಿಕ ಮೌಲ್ಯವಿರಬೇಕಾಗುತ್ತದೆ. ಜೈಮಿನಿಯಂತಹ ದಾರ್ಶನಿಕನೊಬ್ಬನು ಒಂದು ತುಂಡು ಚಿಂದಿಗೆ ಅಧಿಕಾರ ಕೊಡುತ್ತಾನೆಂಬ ಒಂದೇ ಕಾರಣದಿಂದ, ಆ ಚಿಂದಿಯನ್ನು ಅಧಿಕಾರಯುತ ಹಾಗೂ ದೋಷರಹಿತವೆಂದು ಯಾರೂ ಪರಿಗಣಿಸುವುದಿಲ್ಲ. ನಿಜವಾಗಿಯೂ ವೇದಗಳಿಗೆ ಏನಾದರೂ ನೈತಿಕ ಮತ್ತು ಆಧ್ಯಾತ್ಮಿಕ ಮೌಲ್ಯ ಇದೆಯೆ? ವೇದಗಳು ದೋಷ ರಹಿತವೆಂದು ಪರಿಗಣಿಸುವ ಪ್ರತಿಯೊಬ್ಬ ಹಿಂದೂವೂ ಈ ಪ್ರಶ್ನೆಯನ್ನು ಪರಿಶೀಲಿಸಬೇಕು.

ಆಧುನಿಕ ಲೇಖಕರು ವೇದಗಳಿಗೆ ಆಧ್ಯಾತ್ಮಿಕ ಮೌಲ್ಯವಿದೆ ಎಂಬ ಮಾತನ್ನು ಅಲ್ಲಗಳೆದಿದ್ದಾರೆ. ಉದಾಹರಣೆಗೆ ಪ್ರೊ. ಮ್ಯೂರ್ ಅವರ ದೃಷ್ಟಿಕೋನವನ್ನು ನೋಡೋಣ. ಪ್ರೊ. ಮ್ಯೂರ್ ಪ್ರಕಾರ:[೧]

"ಈ ರಚನೆಗಳನ್ನೂ ಅವು ರಚಿತವಾಗಿರಬಹುದಾದ ಸಂದರ್ಭಗಳನ್ನೂ ಆಂತರಿಕ ಸಾಕ್ಷ್ಯಾಧಾರದ ಮೇಲೆ ಪರಿಶೀಲಿಸಿದರೆ ಅವು ಪುರಾತನ ಕವಿಗಳು ತಮ್ಮ ಆಸೆ ಆಕಾಂಕ್ಷೆಗಳನ್ನೂ ವೇದನೆಗಳನ್ನೂ ಸ್ವಾಭಾವಿಕವಾಗಿ ವ್ಯಕ್ತಪಡಿಸಿದ ಮೊಟ್ಟ ಮೊದಲ ಕವಿತೆಗಳಿಗಿಂತ ಹೆಚ್ಚಿನದೇನೂ ಅಲ್ಲ ಎಂಬ ನಮ್ಮ ಊಹೆಗೆ ಸರಿಹೊಂದುತ್ತದೆ. ಈ ಕವಿತೆಗಳಲ್ಲಿ ಆರ್ಯ ಋಷಿಗಳು ತಮ್ಮ ಪುರಾತನ ದೇವರುಗಳನ್ನು ಶ್ಲಾಘಿಸಿ ಅವರಿಗೆ ಸ್ವೀಕಾರಾರ್ಹವೆನಿಸಬಹುದಾದ ವಿವಿಧ ರೀತಿಯ ಅರ್ಪಣೆಗಳನ್ನು ಮಾಡುವ ಮೂಲಕ ಅವರ ಒಲವನ್ನು ಪಡೆಯಲು ಪ್ರಯತ್ನಿಸಿದರು ಮತ್ತು ಅವರ ಅನುಗ್ರಹದ ಮೂಲಕ ಮನುಷ್ಯರು ಸಾಮಾನ್ಯವಾಗಿ ಏನನ್ನು ಅಪೇಕ್ಷಿಸುತ್ತಾರೋ ಅಂದರೆ, ಆರೋಗ್ಯ, ಐಶ್ವರ್ಯ, ಆಯುಸ್ಸು, ದನಕರುಗಳು, ಸಂತಾನ, ಶತ್ರುಗಳ ಮೇಲೆ ಜಯ, ತಮ್ಮ ಪಾಪಗಳಿಗೆ ಕ್ಷಮೆ ಮತ್ತು ಕೆಲವು ಸಾರಿ ದೇವಲೋಕದ ಸನ್ಮಾನ ಇವುಗಳನ್ನು ಅಪೇಕ್ಷಿಸಿದರು."

ಎಲ್ಲ ವಿದೇಶೀ ವಿದ್ವಾಂಸರೂ ಪೂರ್ವಾಗ್ರಹ ಪೀಡಿತರೆಂದೂ, ಅವರ ಅಭಿಪ್ರಾಯಗಳನ್ನು ಒಪ್ಪಿಕೊಳ್ಳಲಾಗದೆಂದೂ ಕೆಲವರು ಆಕ್ಷೇಪಿಸಬಹುದು. ಆದರೆ ಅದೃಷ್ಟವಶಾತ್ ನಾವು ಕೇವಲ ವಿದೇಶಿಯರ

---

೧. ಮ್ಯೂರ್: 'ಸ್ಯಾನ್‌ಸ್ಕ್ರಿಟ್ ಟೆಕ್ಸ್ಟ್', ಸಂ III. (ಪುಟಸಂಖ್ಯೆ ತಿಳಿಸಿಲ್ಲ.)

ಅಭಿಪ್ರಾಯಗಳನ್ನಷ್ಟೇ ಅವಲಂಬಿಸಿಲ್ಲ. ಅನೇಕ ಭಾರತೀಯ ದರ್ಶನಗಳ ಪ್ರವರ್ತಕರೂ ಸಹ ಇದೇ ನಿಲುವನ್ನು ತಳೆದಿದ್ದಾರೆ. ಇವರಲ್ಲಿ ಚಾರ್ವಾಕರದು ಅತ್ಯುತ್ತಮ ಉದಾಹರಣೆ.

ವೈದಿಕರ ವಿರುದ್ಧ ಮಾಡಿರುವ ಚಾರ್ವಾಕರ ವಾದವನ್ನು ಈ ಕೆಳಗಿನ ಉಲ್ಲೇಖದಿಂದ ತಿಳಿದುಕೊಳ್ಳಬಹುದು.[೧]

"ಒಂದು ವೇಳೆ ಪರಲೋಕದಲ್ಲಿ ಸುಖ ಸಿಗುವುದಿಲ್ಲವಾದರೆ, ಅನುಭವಸ್ಥ ಜ್ಞಾನಿಗಳು ಅಧಿಕ ಧನ ವ್ಯಯ ಮತ್ತು ದೈಹಿಕ ಶ್ರಮ ವ್ಯಯಮಾಡಿ ಅಗ್ನಿಹೋತ್ರ ಮುಂತಾದ ಯಜ್ಞಗಳಲ್ಲಿ ಏಕೆ ನಿರತರಾಗಬೇಕು ಎಂದು ನೀವು ಆಕ್ಷೇಪಿಸಬಹುದು. ಆದರೆ ನಿಮ್ಮ ಆಕ್ಷೇಪ ನಮ್ಮ ವಿರುದ್ಧ ಸಾಧಿಸುವ ಪ್ರಮಾಣವಾಗಲಾರದು. ಏಕೆಂದರೆ ಅಗ್ನಿಹೋತ್ರ ಮುಂತಾದ ಯಜ್ಞಗಳು ಜೀವನೋಪಾಯದ ಸಾಧನಗಳಷ್ಟೆ. ಅಲ್ಲದೆ ವೇದಗಳಲ್ಲಿ ಅಸತ್ಯ, ಸ್ವವಿರೋಧ (ವ್ಯಾಘಾತ) ಮತ್ತು ಪುನರುಕ್ತಿ ಎಂಬ ಮೂರು ದೋಷಗಳಿವೆ. ಅಲ್ಲದೆ ತಮ್ಮನ್ನು ವೈದಿಕ ಪಂಡಿತರೆಂದು ಕರೆದುಕೊಳ್ಳುವ ಕೆಲ ಧೂರ್ತರು ಪರಸ್ಪರ ಖಂಡನೆಯಲ್ಲಿ ತೊಡಗುತ್ತಾರೆ. ಏಕೆಂದರೆ, ಕರ್ಮಕಾಂಡ ಪ್ರಾಮಾಣ್ಯವಾದಿಗಳು ಜ್ಞಾನಕಾಂಡದ ಪ್ರಾಮಾಣ್ಯವನ್ನು ಖಂಡಿಸುತ್ತಾರೆ ಹಾಗೂ ಜ್ಞಾನಕಾಂಡ ಪ್ರಾಮಾಣ್ಯವಾದಿಗಳು ಕರ್ಮಕಾಂಡದ ಪ್ರಾಮಾಣ್ಯವನ್ನು ಅಲ್ಲಗಳೆಯುತ್ತಾರೆ. ಕೊನೆಯದಾಗಿ, ವೇದಗಳು ಧೂರ್ತರು ರಚಿಸಿದ ಅಸಂಬದ್ಧ ಪ್ರಲಾಪಗಳು." ಈ ಬಗ್ಗೆ ಸಾರ್ವಜನಿಕವಾದ ಹೇಳಿಕೆಯೊಂದು ಹೀಗಿದೆ:

"ಅಗ್ನಿಸ್ತೋತ್ರ, ಮೂರು ವೇದಗಳು, ಸನ್ಯಾಸಾದಿಗಳು, ತ್ರಿದಂಡಗಳು, ಭಸ್ಮಲೇಪನ, ಬೃಹಸ್ಪತಿಯ ಪ್ರಕಾರ, ಇವನ್ನು ಬುದ್ಧಿ ಮತ್ತು ಪೌರುಷಹೀನರು ತಮ್ಮ ಜೀವಿತಕ್ಕೋಸ್ಕರ ಸೃಷ್ಟಿಸಿಕೊಂಡಿದ್ದಾರೆ."

ಬೃಹಸ್ಪತಿ ಚಾರ್ವಾಕ ದರ್ಶನದ ಮತ್ತೊಂದು ಉದಾಹರಣೆ. ಅವನು ವೇದಗಳ ಬಗೆಗೆ ಚಾರ್ವಾಕರಿಗಿಂತ ಹೆಚ್ಚು ಧೈರ್ಯ ಹಾಗೂ ತೀವ್ರವಾದಿ ಮನೋಭಾವವನ್ನು ತಳೆದಿದ್ದಾನೆ. ಮಾಧವ ಆಚಾರ್ಯರು ಬೃಹಸ್ಪತಿಯ ಬಗೆಗೆ ಹೀಗೆನ್ನುತ್ತಾರೆ:[೨]

"ಸ್ವರ್ಗ, ಮೋಕ್ಷ, ಪರಲೋಕಕ್ಕೆ ಹೋಗುವ ಆತ್ಮ ಇಲ್ಲ. ವರ್ಣಾಶ್ರಮ ಧರ್ಮದ ಕರ್ಮಗಳಿಗೆ ತಕ್ಕ ಫಲಗಳೂ ಇಲ್ಲ. ಅಗ್ನಿಹೋತ್ರ, ಮೂರು ವೇದಗಳು, ಸನ್ಯಾಸಾದಿಗಳು, ಭಸ್ಮಲೇಪನ..... ಇವನ್ನು ಬುದ್ಧಿಹೀನರೂ ಪೌರುಷಹೀನರೂ ತಮ್ಮ ಜೀವಿಕೆಗೋಸ್ಕರ ಸೃಷ್ಟಿ ಮಾಡಿಕೊಂಡರು. ಜ್ಯೋತಿಷ್ಟೋಮಯಾಗದಲ್ಲಿ ಕೊಲ್ಲಲ್ಪಟ್ಟು ಸ್ವರ್ಗಕ್ಕೆ ಹೋಗುವುದಾದರೆ, ಯಜಮಾನನು ತನ್ನ ತಂದೆಯನ್ನೇ ಕೊಂದು ಆತನನ್ನು ಏಕೆ ಸ್ವರ್ಗಕ್ಕೆ ಕಳುಹಿಸಬಾರದು?

ಸತ್ತವರಿಗೆ ಶ್ರಾದ್ಧವು ತೃಪ್ತಿದಾಯಕವಾಗುವುದಾದರೆ ಪ್ರಯಾಣಿಕರಿಗೆ ಬುತ್ತಿ ಕಟ್ಟಿಕೊಡುವುದು ವ್ಯರ್ಥವೇ.

ಶ್ರಾದ್ಧದಲ್ಲಿ ಮಾಡಿದ ದಾನದಿಂದ ಸ್ವರ್ಗಸ್ಥರಾದವರು ತೃಪ್ತರಾಗುವುದಾದರೆ ಮಹಡಿಯ ಮೇಲಿರುವವರಿಗೆ ಕೆಳಗಡೆ ಇದ್ದವರು ದಾನಮಾಡಿದರೆ ಏಕೆ ಅದು ತಲುಪುವುದಿಲ್ಲ?

ಆದುದರಿಂದ ಮನುಷ್ಯ ಜೀವಿಸುವವರೆಗೂ ಅವನು ಸುಖದಿಂದಿರಬೇಕು. ಸಾಲ ಮಾಡಿಯಾದರೂ ಹಾಲು ತುಪ್ಪ ಕುಡಿಯಬೇಕು.

---

೧. 'ಸರ್ವದರ್ಶನ ಸಂಗ್ರಹ', ಪು. ೧೦

೨. 'ಸರ್ವದರ್ಶನ ಸಂಗ್ರಹ' (ಪುಟಸಂಖ್ಯೆ ನಮೂದಿಸಿಲ್ಲ)

ಸುಡಲ್ಪಟ್ಟ ಶರೀರವು ಹಿಂದಿರುಗಿ ಬರಲು ಸಾಧ್ಯವಿಲ್ಲ.

ದೇಹದಿಂದ ಹೊರಟ ಆತ್ಮನು ಪರಲೋಕಕ್ಕೆ ಹೋಗುವುದು ನಿಜವಾದರೆ, ಸ್ನೇಹ ಮತ್ತು ಬಾಂಧವ್ಯದ ಚಿಂತೆಯಿಂದಾಗಿ ಹಿಂತಿರುಗಿ ಬರುವುದಿಲ್ಲವೇಕೆ?

ಆದುದರಿಂದ, ಸತ್ತವರಿಗೆ ಪ್ರೇತ ಕರ್ಮಗಳನ್ನು ಮಾಡುವುದು ಬ್ರಾಹ್ಮಣರು ತಮ್ಮ ಜೀವಿಕೆಗೋಸ್ಕರ ಮಾಡಿಕೊಂಡಿರುವ ಉಪಾಯವಷ್ಟೇ ಹೊರತು ಅದರಿಂದ ಮತ್ತೇನೂ ಫಲವಿಲ್ಲ.

ಮೂರು ವೇದಗಳ ಕರ್ತೃಗಳು ಭಂಡರು, ಧೂರ್ತರು ಮತ್ತು ರಾಕ್ಷಸರು.

ಜರ್ಭರಿ, ತುರ್ಫರೀ ಮುಂತಾದ ಪ್ರಸಿದ್ಧ ಮಂತ್ರಗಳನ್ನೂ, ಅಶ್ವಮೇಧ ಯಾಗದಲ್ಲಿ ರಾಣಿಯರಿಗಾಗಿ ಮಾಡುವ ಅಶ್ಲೀಲ ಕಾರ್ಯಗಳನ್ನೂ ಪುರೋಹಿತರಿಗೆ ಮಾಡಬೇಕಾದ ದಾನಗಳನ್ನೂ ಧೂರ್ತ ಪಂಡಿತರು ಸೇರಿಸಿದ್ದಾರೆ.

ಅದೇ ರೀತಿ, ಯಜ್ಞದಲ್ಲಿ ಮಾಂಸ ತಿನ್ನಬೇಕೆಂಬ ವಿಧಿಯನ್ನು ಮಾಂಸ ಪ್ರಿಯರಾದ ರಾಕ್ಷಸರು ಸೇರಿಸಿದ್ದಾರೆ."

ಬೃಹಸ್ಪತಿ ಮತ್ತು ಚಾರ್ವಾಕರ ದೃಷ್ಟಿಗಳನ್ನು ಒಪ್ಪಿಕೊಳ್ಳದಿದ್ದರೂ ಬೇರೆ ಅನೇಕ ಸಾಕ್ಷ್ಯಗಳಿವೆ. ಈ ಸಾಕ್ಷ್ಯಗಳು ನ್ಯಾಯ, ವೈಶೇಷಿಕ, ಪೂರ್ವ ಮತ್ತು ಉತ್ತರ ಮೀಮಾಂಸಾದರ್ಶನಗಳ ಗ್ರಂಥಗಳಲ್ಲಿ ಉಕ್ತವಾಗಿವೆ. ವೇದಗಳ ಪ್ರಾಮಾಣ್ಯವನ್ನು ಅನುಮೋದಿಸುವ ಮೊದಲು ಈ ದರ್ಶನಗಳ ಗ್ರಂಥಕರ್ತರು, ವೇದಗಳ ಪ್ರಾಮಾಣ್ಯವನ್ನು ಅಲ್ಲಗಳೆಯುವ ತಮ್ಮ ವಿರೋಧಿಗಳ ವಾದವನ್ನು ಬಹಳ ಎಚ್ಚರಿಕೆಯಿಂದ ಮಂಡಿಸುತ್ತಿದ್ದರು ಎಂಬ ಗೌರವಪೂರ್ವಕ ಮಾತುಗಳನ್ನು ಇಲ್ಲಿ ಹೇಳಬೇಕಾಗುತ್ತದೆ. ಈ ಸಂಗತಿಯು ೧. ಆಗ ವೇದಗಳು ಪ್ರಮಾಣಗ್ರಂಥಗಳು ಎಂಬುದನ್ನು ವಿರೋಧಿಸುವ ದರ್ಶನವೊಂದಿತ್ತು ಮತ್ತು ೨. ವೇದಗಳ ಪ್ರಾಮಾಣ್ಯವನ್ನು ಅನುಮೋದಿಸುವವರು ಆ ವಿರೋಧಿಗಳ ಅಭಿಪ್ರಾಯವನ್ನು ಗೌರವಾನ್ವಿತ ವ್ಯಕ್ತಿಗಳ ಅಭಿಪ್ರಾಯವೆಂದು ಪರಿಗಣಿಸಬೇಕಾಗಿತ್ತು ಎಂಬ ಎರಡು ವಿಷಯಗಳನ್ನು ಸಿದ್ಧಪಡಿಸಲು ಸಹಾಯಕವಾಗುತ್ತದೆ. ಇಂತಹ ವಿರೋಧಿಗಳ ಬಗೆಗೆ ನ್ಯಾಯ ಮತ್ತು 'ಪೂರ್ವಮೀಮಾಂಸಾ'ದರ್ಶನಗಳಲ್ಲಿ ಉಕ್ತವಾಗಿರುವುದನ್ನು ಉದ್ಧರಿಸುತ್ತೇನೆ.

'ನ್ಯಾಯದರ್ಶನ'ದ ಕರ್ತೃವಾದ ಗೌತಮನು ವೇದ ಪ್ರಾಮಾಣ್ಯ ಸಿದ್ಧಾಂತವನ್ನು ಅನುಮೋದಿಸಿದವನು. ಅವನು ೫೭ನೇ ಸೂತ್ರದಲ್ಲಿ ತನ್ನ ವಿರೋಧಿಗಳ ವಾದಗಳ ಸಾರಾಂಶವನ್ನು ಹೀಗೆ ತಿಳಿಸಿದ್ದಾನೆ:[೧]

"ವೇದಕ್ಕೆ ಪ್ರಾಮಾಣ್ಯವಿಲ್ಲ. ಏಕೆಂದರೆ ಅದರಲ್ಲಿ ಅನೇಕ, ಸ್ವವಿರೋಧ (ವ್ಯಾಘಾತ) ಮತ್ತು ಪುನರುಕ್ತಿ ಎಂಬ ಮೂರು ದೋಷಗಳಿವೆ. ನೋಟದ ವಿಷಯಗಳಿಂದ ಭಿನ್ನವಾದ ಶಾಬ್ದಿಕ ಸಾಕ್ಷಿಗೆ ಅಂದರೆ ವೇದಕ್ಕೆ ಪ್ರಾಮಾಣ್ಯವಿಲ್ಲ. ಏಕೆಂದರೆ, ಅದಕ್ಕೆ ಅನೃತಾದಿ ತ್ರಿದೋಷಗಳಿವೆ."

"ಪುತ್ರಕಾಮೇಷ್ಟಿ ಮುಂತಾದ ಯಾಗ ಮಾಡುವುದರಿಂದ ಯಾವ ಫಲವೂ ಉಂಟಾಗುವುದಿಲ್ಲವೆಂದು ನಮಗೆ ತಿಳಿಯವುದರಿಂದ ವೇದಕ್ಕೆ ಅನೃತವೆಂಬ ದೋಷವಿದೆ ಎಂಬುದು ಸಿದ್ಧವಾಗುತ್ತದೆ. ಮೊದಲಿನ ಹೇಳಿಕೆಗೂ ಆಮೇಲಿನ ಹೇಳಿಕೆಗೂ ವಿರೋಧವುಂಟಾದರೆ, ಆಗ ವ್ಯಾಘಾತ (ಸ್ವವಿರೋಧ) ಪರಿಣಮಿಸುತ್ತದೆ. ಉದಾಹರಣೆಗೆ 'ಅವನು ಸೂರ್ಯೋದಯ ಕಾಲದಲ್ಲಿ ಯಾಗ ಮಾಡುತ್ತಾನೆ' ಮತ್ತು 'ಅವನು

೧. ಮ್ಯೂರ್; 'ಸ್ಯಾನ್‌ಸ್ಕ್ರಿಟ್ ಟೆಕ್ಸ್ಟ್', III. ಪು. ೧೧೩

ಸೂರ್ಯ ಇನ್ನೂ ಹುಟ್ಟದಿರುವಾಗ ಯಾಗ ಮಾಡುತ್ತಾನೆ' ಎಂದು ವೇದ ಹೇಳುತ್ತದೆ. ಅವನು ಯಾಗ ಮಾಡುತ್ತಾನೆ (ಮುಂದಿನ ಶಬ್ದಗಳನ್ನು ನಾನು ವಿವರಿಸಲಾರೆ ಎಂದು ಮ್ಯೂರ್ ಹೇಳುತ್ತಾನೆ). ಸೂರ್ಯೋದಯಕ್ಕಿಂತ ಮೊದಲು ಮಾಡಿದ ಯಜ್ಞದ ವಸ್ತುಗಳನ್ನು ನಾಯಿಯು ಕಚ್ಚಿಕೊಂಡು ಹೋಗುತ್ತದೆ. ಇವೆರಡೂ ಯಜಮಾನನ ಅರ್ಪಣೆಗಳನ್ನು ಕಚ್ಚಿಕೊಂಡು ಹೋಗುತ್ತವೆ. ಇಲ್ಲಿ ಯಜ್ಞ ಮಾಡಬೇಕೆಂದು ವಿಧಿಸುವ ಶಬ್ದಗಳಿಗೂ ಯಜ್ಞ ಮಾಡಿದರೆ ತೀವ್ರ ದುಷ್ಪರಿಣಾಮಗಳುಂಟಾಗುತ್ತವೆ ಎಂದು ನಿಷೇಧಾತ್ಮಕವಾಗಿ ತಿಳಿಸುವ ಶಬ್ದಗಳಿಗೂ ವಿರೋಧವಿದೆ. ಅದೇ ರೀತಿ ಪುನರುಕ್ತಿಯಿಂದಾಗಿ ವೇದಕ್ಕೆ ಪ್ರಾಮಾಣ್ಯವಿಲ್ಲ. ಯಜಮಾನನು ಮೊದಲಿನ ಶಬ್ದವನ್ನು ಮೂರು ಸಾರಿ ಕೊನೆಯದನ್ನು ಮೂರು ಸಾರಿ ಪುನಃ ಪುನಃ ಉಚ್ಚರಿಸುತ್ತಾನೆ. ಕೊನೆಯದು ಮತ್ತು ಮೊದಲಿನದು ಒಂದೇ ಆದುದರಿಂದ ಮತ್ತು ಒಂದೇ ಶಬ್ದವನ್ನು ಮೂರು ಸಾರಿ ಪುನರುಚ್ಚರಿಸುವುದರಿಂದ ಆ ವಾಕ್ಯದಲ್ಲಿ ಪುನರುಕ್ತಿ ದೋಷವಿದೆ. ಈ ಭಾಗಗಳಿಗೆ ಪ್ರಾಮಾಣ್ಯವಿಲ್ಲದುದರಿಂದ ಈ ಉದಾಹರಣೆಗಳಂತೆ ವೇದದ ಎಲ್ಲ ಭಾಗಗಳಿಗೆ ಅದೇ ಗತಿ ಒದಗುತ್ತದೆ. ಏಕೆಂದರೆ ಉಳಿದೆಲ್ಲ ಭಾಗಗಳಿಗೂ ಅದೇ ಕರ್ತೃವಿದ್ದಾನೆ ಅಥವಾ ಈ ಭಾಗಗಳಿಗಿರುವಂತಹ ಗುಣವೇ ಇದೆ.''

ಇನ್ನು ಜೈಮಿನಿಗೆ ಬರೋಣ. ಅವನು ತನ್ನ 'ಪೂರ್ವಮೀಮಾಂಸಾ ಸೂತ್ರ'ದ, ಮೊದಲನೆ ಭಾಗದ ೨೮ ಮತ್ತು ೩೨ನೇ ಸೂತ್ರಗಳಲ್ಲಿ ವೇದವಿರೋಧಿಗಳ ಅಭಿಪ್ರಾಯಗಳನ್ನು ಸಂಗ್ರಹ ರೂಪದಲ್ಲಿ ತಿಳಿಸುತ್ತಾನೆ. ೨೮ನೇ ಸೂತ್ರ ಹೀಗೆನ್ನುತ್ತದೆ.[೧]

''ವೇದಗಳು ನಿತ್ಯ ಇರಲಾರವು. ಏಕೆಂದರೆ ಅವುಗಳಲ್ಲಿ ಹುಟ್ಟು ಸಾವುಗಳಿಗೆ ಅಧೀನರಾದವರ ಬಗ್ಗೆ ತಿಳಿಸಲಾಗಿದೆ ಎಂದು ಆಕ್ಷೇಪಿಸಲಾಗಿದೆ. ಉದಾಹರಣೆಗೆ ಅದರಲ್ಲಿ 'ಬಬರ ಪ್ರವಾಹನಿ ಇಚ್ಛಿಸಿದನು,' 'ಕುಸುರವಿಂದ ಔದ್ದಾಲಕಿ ಇಚ್ಛಿಸಿದನು' ಎಂದು ಹೇಳಲಾಗಿದೆ. ಈ ವ್ಯಕ್ತಿಗಳು ಹುಟ್ಟುವ ಮುನ್ನ ಈ ವಾಕ್ಯಗಳು ಅಸ್ತಿತ್ವದಲ್ಲಿರಲಿಲ್ಲವಾದುದರಿಂದ, ಈ ವಾಕ್ಯಗಳಿಗೆ ಆದಿ ಇದೆ ಎಂದಾಗುತ್ತದೆ ಮತ್ತು ಅವು ಹೀಗೆ ಅನಿತ್ಯವಾದುದರಿಂದ ಅವು ಮಾನವ ರಚಿತವೆಂಬುದು ಸಿದ್ಧವಾಗುತ್ತದೆ.''

೩೨ನೇ ಸೂತ್ರ ಹೀಗೆ ಹೇಳುತ್ತದೆ:[೨]

''ಈ ಕೆಳಗಿನ ಅಸಂಬದ್ಧ ಪ್ರಲಾಪವು ವೇದದಲ್ಲಿರಬೇಕಾದರೆ, ಅದು ವೇದಗಳ ಪ್ರಮಾಣವೆಂದು ಏಕೆ ಪರಿಗಣಿಸಬೇಕು ಎಂದು ಕೇಳಲಾಗುತ್ತದೆ. ಕಂಬಳಿ ಹೊದ್ದುಕೊಂಡು, ಚಪ್ಪಲಿ ಮೆಟ್ಟಿಕೊಂಡು ಒಂದು ಮುದಿ ಎತ್ತು ಬಾಗಿಲಲ್ಲಿ ನಿಂತಿದೆ ಹಾಗೂ ಸ್ತುತಿಗಳನ್ನು ಹಾಡುತ್ತಿದೆ. ಸಂತಾನಾಪೇಕ್ಷಿಯಾದ ಬ್ರಾಹ್ಮಣ ಹೆಂಗಸೊಬ್ಬಳು, 'ಎಲೈ ರಾಜನೇ, ಅಮಾವಾಸ್ಯೆಯ ದಿನದ ಸಂಭೋಗವೆಂದರೇನು ತಿಳಿಸುವೆಯಾ?' ಎಂದು ಕೇಳುತ್ತಾಳೆ ಅಥವಾ ಹಸುಗಳು ಈ ಯಜ್ಞವನ್ನು ಮಾಡಿದವು''.

'ನಿರುಕ್ತ'ದ ಕರ್ತೃವಾದ ಯಾಸ್ಕನದೂ ಇದೇ ಅಭಿಪ್ರಾಯವಾಗಿದೆ. ಅವನು ಹೀಗೆನ್ನುತ್ತಾನೆ: (ಈ ಹಿಂದೆ ಹೇಳಿದ ನಾಲ್ಕು ಸೂತ್ರಗಳ ಪೈಕಿ ೧. ದೇವನನ್ನು ಅನುಪಸ್ಥಿತನಿರುವಂತೆ ಸಂಬೋಧಿಸುವ ಮಂತ್ರಗಳು ೨. ದೇವನನ್ನು ಉಪಸ್ಥಿತನಿರುವಂತೆ ಸಂಬೋಧಿಸುವುದು ೩. ಪಾಠಕರು ಉಪಸ್ಥಿತರಿರುವಂತೆ

---

೧. ಮ್ಯೂರ್: 'ಸ್ಯಾನ್ಸ್ಕ್ರಿಟ್ ಟೆಕ್ಸ್ಟ್', III. ಪು. ೭೭
೨. ಅದೇ, ಪು. ೮೦

ಹಾಗೂ ದೇವನನ್ನು ಅನುಪಸ್ಥಿತನಂತೆ ಸಂಬೋಧಿಸುವ ಮಂತ್ರಗಳು ಹೇರಳವಾಗಿವೆ. ೪. ಆದರೆ ಪಾಠಕನಿಗೆ ಅನ್ವಯಿಸುವಂತಹ ಮಂತ್ರಗಳು ಅಪರೂಪ. ಕೆಲವು ವೇಳೆ ಯಾವ ಬೇಡಿಕೆಯೂ ಇಲ್ಲದೆ ದೇವರನ್ನು ಶ್ಲಾಘಿಸುವ ಮಂತ್ರಗಳೂ ಉಂಟು. ಉದಾಹರಣೆಗೆ, "ನಾನು ಇಂದ್ರನ ಧೀರೋದಾತ್ತ ಕಾರ್ಯಗಳನ್ನು ಶ್ಲಾಘಿಸುತ್ತೇನೆ" (ಋಗ್ವೇದ, i, ೩೨). ಕೆಲವು ವೇಳೆ ಯಾವ ಶ್ಲಾಘನೆಯನ್ನೂ ಮಾಡದೆ, ವರಗಳನ್ನು ಕೇಳುವ ಮಂತ್ರಗಳೂ ಉಂಟು. ಉದಾಹರಣೆಗೆ "ನನ್ನ ಕಣ್ಣು ಚೆನ್ನಾಗಿ ನೋಡಲಿ, ನನ್ನ ಮುಖ ಕಾಂತಿಯುತವಾಗಿರಲಿ, ಕಿವಿ ಚೆನ್ನಾಗಿ ಕೇಳಿಸಲಿ." ಇದನ್ನು ಅಧ್ವರ್ಯುಯ (ಯಜುರ್ವೇದ)ದಲ್ಲಿ ಹಾಗೂ ಯಜ್ಞದ ಯಂತ್ರಗಳಲ್ಲಿ ಆಗಾಗ ಕಾಣುತ್ತೇವೆ. ಅಲ್ಲದೆ ಶಪಥ ಮತ್ತು ಶಾಪಗಳನ್ನೂ ಕಾಣುತ್ತೇವೆ. ಉದಾಹರಣೆಗೆ "ನಾನು ಯಾತುಧಾನನಾಗಿದ್ದರೆ ನಾನು ಈ ದಿನವೇ ಸಾಯಲಿ" (ಋಗ್ವೇದ, vii, ೧೦೪, ೧೫). ಇತ್ಯಾದಿ. ಕೆಲವು ಸಾರಿ ಕೆಲವೊಂದು ಸಂಗತಿಗಳನ್ನು ವರ್ಣಿಸುವ ಆಸೆಯನ್ನೂ ನಾವು ಕಾಣುತ್ತೇವೆ. ಉದಾಹರಣೆಗೆ, "ಆಗ ಮರಣವೂ ಇರಲಿಲ್ಲ, ಅಮರತ್ವವೂ ಇರಲಿಲ್ಲ" (ಋಗ್ವೇದ, X, ೧೨೯, ೨). ಕೆಲವು ಸಾರಿ ನಾವು ಕೆಲವೊಂದು ರೀತಿಯ ಅನುಭವದಿಂದಾಗುವ ಶೋಕವನ್ನು ಕಾಣುತ್ತೇವೆ. ಉದಾಹರಣೆಗೆ "ಈ ಸುಂದರವಾದ ದೇವನು ಅದೃಶ್ಯನಾಗುತ್ತಾನೆ. ಮತ್ತೆ ಎಂದೆಂದಿಗೂ ಹಿಂತಿರುಗುವುದಿಲ್ಲ" (ಋಗ್ವೇದ, X, ೯೫, ೧೪). ಕೆಲವು ವೇಳೆ ಬೈಗುಳ ಮತ್ತು ಶ್ಲಾಘನೆಗಳನ್ನೂ ಕಾಣುತ್ತೇವೆ. ಉದಾಹರಣೆಗೆ "ಒಬ್ಬನೇ ತಿನ್ನುವವನು ಒಬ್ಬನೇ ಪಾಪ ಮಾಡುತ್ತಾನೆ" (ಋಗ್ವೇದ, X, ೧೧೭, ೬). ಅದೇ ರೀತಿ ಪಗಡೆಯನ್ನು ಕುರಿತ ಮಂತ್ರವೊಂದರಲ್ಲಿ (ಋಗ್ವೇದ X, ೩೪, ೩) ಪಗಡೆಯಾಟದ ನಿಂದೆ ಮತ್ತು ವ್ಯವಸಾಯದ ಶ್ಲಾಘನೆಯಿದೆ. ಹೀಗೆ ಋಷಿಗಳು ರಚಿಸಿದ ಮಂತ್ರಗಳಿಗೆ ಅನೇಕ ರೀತಿಯ ವಿಷಯಗಳಿವೆ."

ಯಾಸ್ಕನ ಮಾತುಗಳನ್ನು ಮತ್ತೆ ಸ್ಮರಿಸೋಣ:

"ಪ್ರತಿಯೊಂದು ಮಂತ್ರಕ್ಕೂ ಒಬ್ಬ ದೇವನಿರುತ್ತಾನೆ, ಋಷಿಯು, ತಾನು ಇಚ್ಛಿಸಿದ ವಸ್ತುವನ್ನು (ಅವನಿಂದ) ಪಡೆಯುವುದಕ್ಕೋಸ್ಕರ. ಆ ದೇವನನ್ನು ಸಂಬೋಧಿಸಿ, ಮಂತ್ರವನ್ನು ಪಠಿಸುತ್ತಾನೆ."

ವೇದಗಳಿಗೆ ನೈತಿಕ ಮತ್ತು ಆಧ್ಯಾತ್ಮಿಕ ಮೌಲ್ಯಗಳಿಲ್ಲವೆಂದು ಸಾಧಿಸಲು ಇದು ಸಾಕಾಗದಿದ್ದರೆ, ಇನ್ನೂ ಹೆಚ್ಚಿನ ಸಾಕ್ಷ್ಯಗಳನ್ನು ಒದಗಿಸಬಹುದು.

ನೈತಿಕತೆಗೆ ಸಂಬಂಧಿಸಿದಂತೆ ಹೇಳುವುದಾದರೆ, ಋಗ್ವೇದದಲ್ಲಿ ಅದರ ಬಗ್ಗೆ ಯಾವ ಚರ್ಚೆಯೂ ಇಲ್ಲವೆಂದೇ ಹೇಳಬೇಕು. ಅಲ್ಲದೆ, ಋಗ್ವೇದದಲ್ಲಿ ನೈತಿಕ ಜೀವನವನ್ನು ಉದಾತ್ತೀಕರಿಸುವಂತಹ ಉದಾಹರಣೆಗಳ ಉಲ್ಲೇಖವು ಇಲ್ಲ. ಅದರ ಬದಲು ಅದರ ವಿರುದ್ಧದ ಮೂರು ಉದಾಹರಣೆಗಳನ್ನು ಕೊಡಬಹುದು.

ಮೊದಲನೆಯದೆಂದರೆ ಯಮ ಮತ್ತು ಯಮಿ ಎಂಬ ಅಣ್ಣ ತಂಗಿಯರ ಸಂಭಾಷಣೆ.

ಯಮಿ : "ನಾನು ನನ್ನ ಸ್ನೇಹಿತನನ್ನು ಸಖ್ಯಕ್ಕಾಗಿ ಆಹ್ವಾನಿಸುತ್ತೇನೆ. ವಿಶಾಲವಾದ ಮತ್ತು ಜೀವರಹಿತವಾದ ಸಾಗರವನ್ನು ದಾಟಿ ಬಂದ ವೇಧರು, ಸಾಕಷ್ಟು ಚಿಂತಿಸಿ, ಉತ್ಕೃಷ್ಟ ಗುಣವುಳ್ಳ ತಮ್ಮ ಬೀಜವನ್ನು ಕ್ಷೇತ್ರದಲ್ಲಿಡಲಿ."

ಯಮ : "ನಿನ್ನ ಸ್ನೇಹಿತನಿಗೆ ಈ ಸಖ್ಯ ಇಷ್ಟವಿಲ್ಲ. ಏಕೆಂದರೆ, ಅವಳು ಆಕಾರದಲ್ಲಿ ಬೇರೆಯಿದ್ದರೂ, ಅವರಿಬ್ಬರೂ ಒಂದೇ ಮೂಲದವರು. ಅಸುರನ ವೀರಪುತ್ರ, ಸ್ವರ್ಗವನ್ನು ಎತ್ತಿಹಿಡಿದಿದ್ದಾರೆ. ಯಶಸ್ಸನ್ನೂ ಪ್ರೇಯಸ್ಸನ್ನು ಹೊಂದಿದ್ದಾರೆ."

ಯಮಿ : "ಮಾನವರಿಗೆ ನಿಷೇಧಿತವಾದ ಈ ಸುಖವು (ಲೈಂಗಿಕ ಸಮಾಗಮ) ಅಮರರಾದ ದೇವತೆಗಳಿಗೆ ಪ್ರಿಯವಾದುದಾಗಿದೆ. ಆದ್ದರಿಂದ, ನಿನ್ನ ಮನಸ್ಸು ನನ್ನ ಮನಸ್ಸನ್ನು ಗೆಲ್ಲಲಿ. ಸೃಷ್ಟಿಕರ್ತನು (ತನ್ನ ಮಗಳ) ಗಂಡನಾದಂತೆ, ನೀನೂ ನನ್ನ ದೇಹವನ್ನು ಭೋಗಿಸು."

ಯಮ : "ಹಿಂದೆ ಮಾಡಿದುದನ್ನು ನಾವು ಇನ್ನೂ ಮಾಡಿಲ್ಲ. ಆದ್ದರಿಂದ, ಸತ್ಯವನ್ನು ಹೇಳುವ ನಾವು ಈಗ ಅಸತ್ಯವನ್ನು ಹೇಗೆ ಹೇಳುವುದು? ಗಂಧರ್ವ (ಸೂರ್ಯ) ಜಲದ ನೆಲೆಯಲ್ಲಿದ್ದ ಹಾಗೂ ಜಲವೇ ಅವನಿಗೆ ಕನ್ಯೆಯಾದಳು. ಅವಳು ನಮಗೆ ತಾಯಿ, ಆದುದರಿಂದ ನಾವು ಹತ್ತಿರ ಸಂಬಂಧಿಗಳು."

ಯಮಿ : "ಸರ್ವರೂಪಿಯೂ, ದಿವ್ಯಜನಕನೂ ಆದ ತ್ವಷ್ಟ್ರಿಯು, ನಾವು, ಗರ್ಭದಲ್ಲಿರುವಾಗಲೇ ನಮ್ಮನ್ನು ಗಂಡಹೆಂಡಿರನ್ನಾಗಿ ಮಾಡಿದನು. ಅವನ ಆಜ್ಞೆಯನ್ನು ಯಾರೂ ಮೀರಲು ಸಾಧ್ಯವಿಲ್ಲ. ನಮ್ಮ ಈ ಸಮಾಗಮಕ್ಕೆ ಪೃಥ್ವಿ ಮತ್ತು ಆಕಾಶಗಳೇ ಸಾಕ್ಷಿ."

ಯಮ : "ಅವನ ಮೊದಲನೆಯ ದಿನದ ಬಗೆಗೆ ಯಾರಿಗೆ ಗೊತ್ತು? ಅದನ್ನು ಯಾರು ನೋಡಿದ್ದಾರೆ? ಅದನ್ನು ಯಾರು ಇಲ್ಲಿ ತಿಳಿಸಿದ್ದಾರೆ? ಮಿತ್ರ ಮತ್ತು ವರುಣರ ಕ್ಷೇತ್ರ ಬಹಳ ದೊಡ್ಡದು. ಮನುಷ್ಯರಿಗೆ ನರಕ ಶಿಕ್ಷೆ ಕೊಡುವವರಾರು, ನೀನು ತಿಳಿಸುವೆಯಾ?"

ಯಮಿ : "ಯಮಿಯ ಜೊತೆ ಒಂದೇ ಹಾಸಿಗೆಯಲ್ಲಿ ಮಲಗಬೇಕೆಂಬ ಯಮನ ಆಸೆಯು ಯಮಿಯಾದ ನನ್ನ ಹತ್ತಿರ ಬರುತ್ತಿದೆ. ಹೆಂಡತಿಯು ತನ್ನ ದೇಹವನ್ನು ಗಂಡನಿಗೆ ಅರ್ಪಿಸುವಂತೆ ನಾನೂ ಅರ್ಪಿಸುತ್ತೇನೆ. ಒಂದೇ ಗಾಡಿಯ ಎರಡು ಚಕ್ರದಂತೆ ನಾವು ನಮ್ಮನ್ನು ಸಮಾಗಮದಲ್ಲಿ ತೊಡಗಿಸಿಕೊಳ್ಳೋಣ."

ಯಮ : "ದೇವತೆಗಳ ಗೂಡಚಾರರು ಭೂಲೋಕದಲ್ಲಿ ನಿರಂತರವಾಗಿ ಸಂಚರಿಸುತ್ತಾ ಇರುತ್ತಾರೆ. ಅವರೆಂದೂ ಕಣ್ಣು ಮುಚ್ಚುವುದಿಲ್ಲ. ಆದ್ದರಿಂದ, ವಿನಾಶಕಾರಣಿಯೇ, ನನ್ನನ್ನು ಬಿಟ್ಟು ಉಳಿದವರಾರೊಡನೆಯಾದರೂ ಬೇಗ ಬೇಗ ಜೊತೆಗೂಡಿ ಗಾಡಿಯ ಎರಡು ಚಕ್ರಗಳಂತೆ ನಿಮ್ಮನ್ನು ನೀವೇ ಸಮಾಗಮದಲ್ಲಿ ತೊಡಗಿಸಿಕೊಳ್ಳಿ."

ಯಮಿ : "ಪ್ರತಿಯೊಬ್ಬ ಪೂಜಕನೂ ಯಮನಿಗೆ ಹಗಲು ರಾತ್ರಿಗಳನ್ನು ಅರ್ಪಿಸಲಿ. ಅವನ ಮೇಲೆ ಸೂರ್ಯನ ಕಣ್ಣು ಯಾವಾಗಲೂ ಇರಲಿ; (ಅವನಿಗೋಸ್ಕರ) ಹಗಲು-ರಾತ್ರಿಗಳು ಆಕಾಶ-ಭೂಮಿಗಳೊಂದಿಗೆ ಒಂದಾಗಲಿ. ಯಮಿಯು ಯಮನೊಂದಿಗೆ ಆ ಸಂಬಂಧದ ಶಪಥ ಮಾಡುತ್ತಾಳೆ."

ಯಮ : "ಸೋದರಿಯರು ತಮ್ಮ ಸೋದರರಲ್ಲದವರನ್ನು ಗಂಡರನ್ನಾಗಿ ವರಿಸುವ ಕಾಲ (ಮುಂದೆ) ಬರುತ್ತದೆ. ಆದ್ದರಿಂದ, ಶುಭಾಂಗಿಯೇ, ನನ್ನನ್ನುಳಿದು ಬೇರೆಯವನನ್ನು ಗಂಡನನ್ನಾಗಿ ಮಾಡಿಕೊಂಡು. ನಿನ್ನ ತೋಳನ್ನು ಅವನಿಗೆ ದಿಂಬನ್ನಾಗಿ ಮಾಡು."

ಯಮಿ : "ತನ್ನ ತಂಗಿಗೆ ಗಂಡನಿಲ್ಲದುದನ್ನು ನೋಡಿಯೂ (ಸುಮ್ಮನಿರುವವನನ್ನು)ಅಣ್ಣ ಎನ್ನಲಾದೀತೆ? ದುರದೃಷ್ಟ ಒದಗಿದ ಅಣ್ಣನನ್ನುಳ್ಳ ತಂಗಿಯನ್ನು, ತಂಗಿಯೆಂದು ಕರೆಯಲಾದೀತೆ? ಕಾಮದಿಂದ ಸೋತ ನಾನು, ಬಲವಾದ ಹಾಗೂ ಒತ್ತಾಯಪೂರ್ವಕವಾದ ಈ ಬೇಡಿಕೆಯನ್ನು ಮಾಡುತ್ತಿದ್ದೇನೆ. ನಿನ್ನ ದೇಹವನ್ನು ನನ್ನ ದೇಹದೊಡನೆ ಒಂದುಗೂಡಿಸು."

ಯಮ : "ನಾನು ನನ್ನ ದೇಹವನ್ನು ನಿನ್ನ ದೇಹದೊಡನೆ ಒಂದುಗೂಡಿಸುವುದಿಲ್ಲ. ತನ್ನ

ತಂಗಿಯ ಬಳಿ ಹೋಗುವವನನ್ನು ಪಾಪಿಯೆನ್ನುತ್ತಾರೆ. ನನ್ನನ್ನು ಬಿಟ್ಟು ಬೇರೆಯವರಿಂದ ಸುಖವನ್ನು ಪಡೆ, ಮಂಗಳೆಯೇ, ನಿನ್ನ ಸೋದರನಿಗೆ ಆ ರೀತಿಯ ಆಸೆಯಿಲ್ಲ."

ಯಮಿ : "ಅಯ್ಯೋ! ಯಮನೇ, ನೀನು ದುರ್ಬಲನಿರುವೆ. ನಿನ್ನ ಮನಸ್ಸಾಗಲಿ ಹೃದಯವಾಗಲಿ ನನಗೆ ಅರ್ಥವಾಗದು. ಕುದುರೆಯನ್ನು ಜೀನುಪಟ್ಟಿ ಅಥವಾ ಬಳ್ಳಿಯು ಮರವನ್ನು ಅಪ್ಪಿಕೊಂಡಂತೆ, ಮತ್ತಾವಳೋ ಹೆಂಗಸು ನಿನ್ನನ್ನು ಅಪ್ಪಿಕೊಳ್ಳುತ್ತಾಳೆ."

ಯಮ : "ಯಮೀ, ನೀನು ಮತ್ತೊಬ್ಬನನ್ನು ಅಪ್ಪಿಕೋ–ಬಳ್ಳಿಯು ಮರವನ್ನು ಅಪ್ಪಿದಂತೆ, ಅವನು ನಿನ್ನನ್ನು ಅಪ್ಪಲಿ. ಅವನ ಪ್ರೀತಿಯನ್ನು ಗಳಿಸು. ಅವನು ನಿನ್ನ ಪ್ರೀತಿಯನ್ನು ಪಡೆಯಲಿ. ನಿಮ್ಮಿಬ್ಬರದು ಸುಖಕರವಾದ ಕೂಟವಾಗಲಿ."

"ರಾಕ್ಷಸರ ಸಂಹಾರಕನಾದ ಅಗ್ನಿಯು, ನಮ್ಮ ಪ್ರಾರ್ಥನೆಗೆ ಓಗೊಟ್ಟು ನಿನ್ನ ಭ್ರೂಣವನ್ನು ರೋಗಗಳ ರೂಪದಲ್ಲಿ ಹಾಗೂ ನಿನ್ನ ಗರ್ಭವನ್ನು ದುರ್ನಾಮನವೆಂಬ ರೋಗದ ರೂಪದಲ್ಲಿ ಕಾಡುವ ದುಷ್ಟ ಪ್ರೇತವನ್ನು ಓಡಿಸಲಿ."

"ನಮ್ಮ ಪ್ರಾರ್ಥನೆಗೆ ಓಗೊಡುವ ಅಗ್ನಿಯು, ನಿನ್ನ ಭ್ರೂಣವನ್ನು ರೋಗದ ರೂಪದಲ್ಲಿಯೂ ನಿನ್ನ ಗರ್ಭವನ್ನು ದುರ್ನಾಮನವೆಂಬ ರೋಗದ ರೂಪದಲ್ಲಿ ಕಾಡುವ ನರಭಕ್ಷಕರನ್ನು ನಾಶಮಾಡಲಿ."

"ಗರ್ಭಾಧಾನ ಮಾಡುವ ಶಕ್ತಿಯನ್ನೂ, (ಗರ್ಭದಲ್ಲಿ) ನೆಲೆಸಲು ಅಣಿಯಾಗುತ್ತಿರುವ ಬೀಜವನ್ನೂ, ಚಲಿಸುವ ಭ್ರೂಣವನ್ನೂ, ಆಗತಾನೆ ಹುಟ್ಟಿದ ಕೂಸನ್ನೂ ನಾಶಮಾಡುವ ದುಷ್ಟಪ್ರೇತಗಳನ್ನು ನಾವು ಇಲ್ಲಿಂದ ಉಚ್ಚಾಟಿಸೋಣ."

"ನಿನ್ನ ತೊಡೆಗಳನ್ನು ಅಗಲಿಸುವ, ಗಂಡಹೆಂಡಿರ ನಡುವೆ ಮಲಗುವ, ನಿನ್ನ ಗರ್ಭವನ್ನು ಪ್ರವೇಶಿಸಿ, ಅಲ್ಲಿರುವ ಬೀಜಗಳನ್ನು ನಾಶಮಾಡುವ ದುಷ್ಟಪ್ರೇತಗಳನ್ನು ನಾವು ಇಲ್ಲಿಂದ ಉಚ್ಚಾಟಿಸೋಣ. ನಿನ್ನ ಸಂತಾನವನ್ನು ನಾಶಮಾಡುವ ಉದ್ದೇಶದಿಂದ, ಸೋದರ, ಗಂಡ ಅಥವಾ ಪ್ರಿಯಕರನ ರೂಪದಲ್ಲಿ ನಿನ್ನ ಬಳಿಗೆ ಬರುವ ದುಷ್ಟ ಆತ್ಮಗಳನ್ನು ಇಲ್ಲಿಂದ ಉಚ್ಚಾಟಿಸೋಣ."

"ನೀನು ಮಲಗಿದ್ದಾಗ ಅಥವಾ ರಾತ್ರಿಯಾಗಿದ್ದಾಗ ನಿನ್ನನ್ನು ಭ್ರಮೆಗೊಳಿಸಿ ನಿನ್ನ ಸಂತಾನವನ್ನು ನಾಶಮಾಡುವ ಉದ್ದೇಶದಿಂದ ನಿನ್ನ ಬಳಿ ಇರುವ ದುಷ್ಟ ಆತ್ಮಗಳನ್ನು ನಿರ್ಮೂಲ ಮಾಡೋಣ."

'ಋಗ್ವೇದ'ದಲ್ಲಿ ಸಿಕ್ಕುವ ಕೆಲವು ಮಂತ್ರ ಅಥವಾ ಪ್ರಾರ್ಥನೆಗಳನ್ನು ನೋಡೋಣ. ಅವುಗಳಲ್ಲಿ ಕೆಲವು ಹೀಗಿವೆ:–

೧. "ಎಲೈ ವಾಯುದೇವನೆ, ನೀನು ಎಷ್ಟು ಸುಂದರನಿರುವೆ! ನಾವು ಸಾಂಬಾರ ಪದಾರ್ಥಗಳನ್ನು ಹಾಕಿದ ಸೋಮರಸವನ್ನು ಮಾಡಿದ್ದೇವೆ. ದಯವಿಟ್ಟು ಬಂದು ಅದನ್ನು ಕುಡಿ ಮತ್ತು ನಮ್ಮ ಪ್ರಾರ್ಥನೆಗಳಿಗೆ ತಕ್ಕಂತೆ ವರ ಕೊಡು." (ಋಗ್ವೇದ, I, ೧.೨.೧)

೨. "ಎಲೈ ಇಂದ್ರದೇವನೇ, ನಮ್ಮನ್ನು ರಕ್ಷಿಸಲು ನಮಗೆ ಸಂಪತ್ತನ್ನು ಕೊಡು. ನೀನು ತಂದ ಸಂಪತ್ತು ನಮ್ಮನ್ನು ಸಂತೋಷವಾಗಿಡಲಿ, ವೃದ್ಧಿಸುತ್ತಿರಲಿ, ಶಾಶ್ವತವಾಗಿರಲಿ ಮತ್ತು ನಮ್ಮ ಶತ್ರುಗಳನ್ನು ಸಂಹರಿಸುವಲ್ಲಿ ಸಹಾಯ ಮಾಡಲಿ." (I, ೧.೮.೧)

೩. "ಎಲೈ ಜನರೇ, ನೀವು ಯಜ್ಞ ಮಾಡುವಾಗಲೆಲ್ಲ, ಇಂದ್ರ ಮತ್ತು ಅಗ್ನಿದೇವರನ್ನು ಸ್ತುತಿಸಲು ಮರೆಯದಿರಿ. ಅವರ ಬಳಿ ಬನ್ನಿ, ಅವರನ್ನು ಗಾಯತ್ರಿ ಮಂತ್ರದಿಂದ ಸ್ತುತಿಸಿರಿ." (I, ೨೧.೨)

೪. "ಎಲೈ ಅಗ್ನಿದೇವನೆ, ದೇವತೆಗಳ ಹೆಂಡಂದಿರನ್ನೂ, ತ್ವಷ್ಟನನ್ನೂ ಕರೆದು ತಾ. ಅವರು ಬಂದು ಸೋಮರಸವನ್ನು ಕುಡಿಯಲು ಕಾತರ ತೋರಿಸಿದ್ದಾರೆ." (I, ೨೯.೯)

೫. "ದೇವತೆಗಳ ಹೆಂಡತಿಯರು ನಮ್ಮಲ್ಲಿಗೆ ತಮ್ಮ ರೆಕ್ಕೆಗಳೊಡನೆ, ತಮ್ಮ ಸಂತೋಷದೊಡನೆ ಬರಲಿ ಎಂದು ಪ್ರಾರ್ಥಿಸುತ್ತೇವೆ."

೬. "ಇಂದ್ರ, ವರುಣ ಮತ್ತು ಅಗ್ನಿಯರ ಪತ್ನಿಯರು ನನ್ನ ಬಳಿ ಬಂದು ಸೋಮರಸವನ್ನು ಕುಡಿಯಲಿ ಎಂದು ನಾನು ಪ್ರಾರ್ಥಿಸುತ್ತಿದ್ದೇನೆ."

೭. "ಎಲೈ ವರುಣನೇ, ಕೋಪವನ್ನು ಬಿಡು ಎಂದು ನಿನ್ನೆದುರು ದೈನ್ಯದಿಂದ ಪ್ರಾರ್ಥಿಸುತ್ತಿದ್ದೇನೆ. ಎಲೈ ಅಸುರರೇ, ನೀವೆಲ್ಲರೂ ವಿವೇಕಿಗಳು, ನಮ್ಮನ್ನು ಪಾಪಗಳಿಂದ ಬಿಡುಗಡೆ ಮಾಡಿ." (I, ೨೪-೧೪)

೮. "ನಮ್ಮ ಸೋಮರಸವನ್ನು ಹೆಂಗಸರು ಹಿಂದೆ-ಮುಂದೆ ಕಡೆಯುವ ಮೂಲಕ ತಯಾರಿಸಿದ್ದಾರೆ. ಎಲೇ ಇಂದ್ರನೇ, ಈ ಸೋಮವನ್ನು ನೀನು ಬಂದು ಕುಡಿ ಎಂದು ನಾವು ಪ್ರಾರ್ಥಿಸುತ್ತಿದ್ದೇವೆ." (I, ೨೮.೩)

೯. "ನಿನಗೆ ಯಾವುದೇ ರೀತಿಯ ಅರ್ಪಣೆ ಮಾಡದ ನಿನ್ನ ಶತ್ರುಗಳು ನಾಶವಾಗಲಿ. ನಿನಗೆ ಅರ್ಪಿಸುವ ನಿನ್ನ ಅನುಯಾಯಿಗಳು ಏಳ್ಗೆ ಹೊಂದಲಿ. ಇಂದ್ರನೇ, ನಮಗೆ ಉತ್ತಮ ಹಸುಗಳನ್ನೂ, ಉತ್ತಮ ಅಶ್ವಗಳನ್ನೂ ಕೊಡು. ಪ್ರಪಂಚದಲ್ಲಿ ನಮಗೆ ಕೀರ್ತಿ ಲಭಿಸಲಿ." (I, ೨೯.೪)

೧೦. "ಎಲೈ ಅಗ್ನಿಯೇ, ರಾಕ್ಷಸರಿಂದಲೂ, ಮೋಸಗಾರ ಶತ್ರುಗಳಿಂದಲೂ, ದ್ವೇಷ ಮಾಡುವವರಿಂದಲೂ, ನಮ್ಮನ್ನು ಕೊಲ್ಲಬೇಕೆನ್ನುವವರಿಂದಲೂ ನಮ್ಮನ್ನು ರಕ್ಷಿಸು." (I, ೩೬-೧೫)

೧೧. "ಎಲೈ ಇಂದ್ರನೇ, ನೀನು ವೀರ. ನಾವು ತಯಾರಿಸಿರುವ ಸೋಮರಸವನ್ನು ನೀನು ಬಂದು ಕುಡಿ. ನಮಗೆ ಐಶ್ವರ್ಯವನ್ನು ಕೊಡಲು ಸಿದ್ಧನಾಗಿರು. ನಿನಗೆ ಯಾರು ಏನನ್ನೂ ಅರ್ಪಿಸುವುದಿಲ್ಲವೋ ಅವರ ಸಂಪತ್ತೆಲ್ಲವನ್ನೂ ಕೊಳ್ಳೆಹೊಡೆದು, ನಮಗೆ ಕೊಡು." (I, ೮೧. ೮-೯)

೧೨. "ಓ, ಇಂದ್ರನೇ, ಈ ಸೋಮರಸವನ್ನು ಕುಡಿ, ಇದು ಅತ್ಯುತ್ತಮವಾದುದು. ಇದು ಅಮೃತತ್ವವನ್ನೂ, ಹೆಚ್ಚಿನ ಮದವನ್ನೂ ಕೊಡುತ್ತದೆ." (I, ೮೪-೪)

೧೩. "ಓ, ಆದಿತ್ಯರೆ! ನಮಗೆ ಆಶೀರ್ವದಿಸ ಬನ್ನಿ. ಯುದ್ಧದಲ್ಲಿ ನಮಗೆ ಜಯ ತನ್ನಿ. ನೀವು ಶ್ರೀಮಂತರು. ನೀವು ಉದಾರಿಗಳು. ಕಷ್ಟಕರವಾದ ದಾರಿಯಲ್ಲಿ ರಥವು ಹೇಗೆ ಎಳೆಯಲ್ಪಡುತ್ತದೆಯೋ, ಹಾಗೆಯೇ ನೀವು ನಮ್ಮನ್ನು ಅಪಾತದಿಂದ ಹೊರಕ್ಕೆ ಎಳೆಯಿರಿ." (I. ೧೦೬-೨೨)

೧೪. "ಓ, ಮರುತರೆ, ನಿಮ್ಮ ಅನುಯಾಯಿಗಳು ನಿಮ್ಮನ್ನು ಸ್ತುತಿಸುತ್ತಿದ್ದಾರೆ. ದಯವಿಟ್ಟು ಬಂದು ಸೋಮಪಾನಕ್ಕಾಗಿಯೇ ತಯಾರಿಸಿದ ದರ್ಭೆಯ ಆಸನದ ಮೇಲೆ ಕುಳಿತುಕೊಳ್ಳಿ." (VII. ೫೭-೧.೨)

೧೫. ಓ, ಮಿತ್ರ, ವರುಣರೇ, ಯಜ್ಞದಲ್ಲಿ ನಿಮಗೆ ಪೂಜೆಯನ್ನು ಸಲ್ಲಿಸಿದ್ದೇವೆ. ದಯವಿಟ್ಟು ಅದನ್ನು ಸ್ವೀಕರಿಸಿ, ಅಪಾಯಗಳಿಂದ ನಮ್ಮನ್ನು ಪಾರುಮಾಡಿ. (VII. ೬೦–೧೨)

ಇಂಥವೇ ಅನೇಕ ಭಾಗಗಳುಂಟು; ಋಗ್ವೇದದ ಕೇವಲ ಕೆಲವು ಮಂತ್ರಗಳಿವು. ಈ ಉದಾಹರಣೆಗಳ ಸಂಖ್ಯೆ ಸಣ್ಣದಾದರೂ, ಅವುಗಳ ಸತ್ವ ದೊಡ್ಡದು ಎಂಬುದು ನಿಸ್ಸಂದೇಹ. ಋಗ್ವೇದ ಮತ್ತು ಯರ್ಜುರ್ವೇದಗಳಲ್ಲಿ ಬರುವ ಅನೇಕ ಅಶ್ಲೀಲ ವಾಕ್ಯವೃಂದಗಳನ್ನು ಬೇಕೆಂದೇ ಕೈಬಿಟ್ಟಿದ್ದೇನೆ ಎಂಬುದನ್ನು ನಾನು ಇಲ್ಲಿ ಹೇಳಬಯಸುತ್ತೇನೆ. ಯಾರಿಗಾದರೂ ಈ ವಿಷಯವಾಗಿ ಕುತೂಹಲ ಉಂಟಾದರೆ 'ಋಗ್ವೇದ', ಮಂಡಲ X, ೮೫–೩೭ ರಲ್ಲಿ ಬರುವ ಸೂರ್ಯ ಮತ್ತು ಪೂಷನರ ನಡುವಿನ ಸಂಭಾಷಣೆ ಮತ್ತು 'ಋಗ್ವೇದ' ಮಂಡಲ X, ೮೬.೬ರಲ್ಲಿ ಬರುವ ಇಂದ್ರ ಮತ್ತು ಇಂದ್ರಾಣಿಯರ ನಡುವಿನ ಸಂಭಾಷಣೆಯನ್ನು ನೋಡಬಹುದು. 'ಯಜುರ್ವೇದ'ದ ಅಶ್ವಮೇಧ ವಿಭಾಗದಲ್ಲಿ ಇನ್ನೂ ಹೆಚ್ಚಿನ ಅಶ್ಲೀಲತೆಯನ್ನು ಕಾಣಬಹುದು.

ಅಶ್ಲೀಲತೆಯನ್ನು ಇಲ್ಲಿಗೇ ಕೈಬಿಟ್ಟು 'ಋಗ್ವೇದ'ದ ಪ್ರಾರ್ಥನೆಗಳ ಮೇಲೆ ಮಾತ್ರ ನಮ್ಮ ಗಮನವನ್ನು ಕೇಂದ್ರಿಕರಿಸಿದಾಗ, ಈ ಪ್ರಾರ್ಥನೆಗಳು ನೈತಿಕವಾಗಿ ಮತ್ತು ಆಧ್ಯಾತ್ಮಿಕವಾಗಿ ನಮ್ಮನ್ನು ಪ್ರಗತಿಯ ಕಡೆಗೆ ಒಯ್ಯುತ್ತವೆ ಎಂದು ಹೇಳಲು ಸಾಧ್ಯವಾದೀತೆ ಎಂಬ ಪ್ರಶ್ನೆ ಏಳುತ್ತದೆ.

'ಋಗ್ವೇದ'ದಲ್ಲಿ ತತ್ವಶಾಸ್ತ್ರವಂತೂ ಇಲ್ಲವೇ ಇಲ್ಲ. ಪ್ರೊ. ವಿಲ್ಸನ್ ಹೇಳುವಂತೆ ಪುರಾತನ ವೇದವಾದ 'ಋಗ್ವೇದ'ದಲ್ಲಿ, ಸೈದ್ಧಾಂತಿಕ ಅಥವಾ ದಾರ್ಶನಿಕ ಚಿಂತನೆಯ ಚಿಹ್ನೆಯೇ ಇಲ್ಲ. ಅನಂತರ ಹುಟ್ಟಿದ ಅನೇಕ (ದಾರ್ಶನಿಕ) ಪಂಥಗಳ ತತ್ವಗಳ ಪ್ರಸ್ತಾಪವೂ ಇಲ್ಲ. ಪುನರ್ಜನ್ಮದ ಬಗೆಗಿನ ಸೂಚನೆಯಾಗಲಿ, ಅದಕ್ಕೆ ಅನ್ಯೋನ್ಯವಾಗಿ ಅಂಟಿಕೊಂಡಿರುವ ಪುನರಾವರ್ತಿತ ಸೃಷ್ಟಿ ಸಿದ್ಧಾಂತವಾಗಲಿ ಪ್ರಸ್ತಾಪಿಸಲ್ಪಟ್ಟಿಲ್ಲ. ವೇದಗಳು ಆರ್ಯರ ಸಾಮಾಜಿಕ ಜೀವನದ ಬಗೆಗೆ ಮಾಹಿತಿ ಕೊಡುವ ಉಪಯುಕ್ತ ಆಕರ ಗ್ರಂಥಗಳಾಗಿರಬಹುದು. ಅದು ಹಿಂದಿನ ಜನಜೀವನದ ಚಿತ್ರಣವೆಂದು ನೋಡುವುದಾದರೆ ಅದರಲ್ಲಿ ತುಂಬಾ ಕುತೂಹಲಕಾರಿ ಅಂಶಗಳಿವೆ. ಆದರೆ ಉದಾತ್ತ ಅಂಶಗಳಾವುವೂ ಇಲ್ಲ. ಅದರಲ್ಲಿ ದುಷ್ಟ ಅಂಶಗಳು ಹೆಚ್ಚಿವೆ: ಶಿಷ್ಟ ಅಂಶಗಳು ಕಡಿಮೆ ಇವೆ.

## II

ಈಗ ನಾವು 'ಅಥರ್ವವೇದ'ದ ಕಡೆಗೆ ತಿರುಗಿ ಅದರ ವಿಷಯಗಳನ್ನು ಪರೀಕ್ಷಿಸೋಣ. 'ಅಥರ್ವವೇದ'ದ ವಿಷಯಾನುಕ್ರಮಣಿಕೆಯಿಂದ ಆಯ್ದ ಕೆಲವು ಉದ್ಧೃತ ಭಾಗಗಳನ್ನು ಈ ಕೆಳಗಿನಂತೆ ಕೊಡುವುದೇ ಉತ್ತಮವೆಂದು ತಿಳಿದಿದ್ದೇನೆ.

### ಪುಸ್ತಕ I

ರೋಗಗಳನ್ನು ನಿವಾರಿಸುವ ಮತ್ತು ರೋಗದ ದೆವ್ವಗಳನ್ನು ಉಚ್ಚಾಟಿಸುವ ಮಂತ್ರ (ಭೈಷಗ್ಯಾನಿ)

v, ೨೨ ಜ್ವರದ ಮತ್ತು ಅದಕ್ಕೆ ಸಂಬಂಧಿಸಿದ ರೋಗಗಳ ವಿರುದ್ಧ ಮಂತ್ರ

vi, ೨೦ ಜ್ವರದ ವಿರುದ್ಧ ಮಂತ್ರ

i, ೨೫ ಜ್ವರದ ವಿರುದ್ಧ ಮಂತ್ರ
vii, ೧೧೬ ಜ್ವರದ ವಿರುದ್ಧ ಮಂತ್ರ
v, ೪ ಜ್ವರವನ್ನು ನಿವಾರಿಸುವಂತೆ ಕುಷ್ಠ ಗಿಡಕ್ಕೆ ಮಾಡುವ ಪ್ರಾರ್ಥನೆ
xix, ೩೯ ಜ್ವರವನ್ನೂ ಇತರ ರೋಗಗಳನ್ನೂ ನಿವಾರಿಸುವಂತೆ, ಕುಷ್ಠ ಗಿಡಕ್ಕೆ ಮಾಡುವ ಪ್ರಾರ್ಥನೆ
i, ೧೨ ಜ್ವರ, ತಲೆನೋವು ಮತ್ತು ಕೆಮ್ಮಿಗೆ ಕಾರಣವಾದ ಮಿಂಚನ್ನು ಕುರಿತು ಪ್ರಾರ್ಥನೆ
i, ೨೨ ಕಾಮಾಲೆ ಮತ್ತು ಅದಕ್ಕೆ ಸಂಬಂಧಿಸಿದ ರೋಗಗಳ ವಿರುದ್ಧ ಮಂತ್ರ
vi, ೧೪ ಹಲಶ ರೋಗದ ವಿರುದ್ಧ ಮಂತ್ರ
vi, ೧೦೫ ಕೆಮ್ಮಿನ ವಿರುದ್ಧ ಮಂತ್ರ
i, ೨ ಅತಿಸ್ರಾವದ ವಿರುದ್ಧ ಮಂತ್ರ
ii, ೩ ಅತಿಸ್ರಾವದ ವಿರುದ್ಧ ಮಂತ್ರ – ಚಿಲುಮೆಯ ನೀರನ್ನು ಕುಡಿಯುವಾಗ ಹೇಳುವುದು
vi, ೪೪ ಅತಿಸ್ರಾವದ ವಿರುದ್ಧ ಮಂತ್ರ
i, ೩ ಮಲಬದ್ಧತೆ, ಮೂತ್ರಬದ್ಧತೆಯ ವಿರುದ್ಧ ಮಂತ್ರ
vi, ೯೦ ರುದ್ರಬಾಣದಿಂದುಂಟಾದ ಕರುಳುಬೇನೆಯ ವಿರುದ್ಧ ಮಂತ್ರ
i, ೧೦ ಜಲೋದರದ ವಿರುದ್ಧ ಮಂತ್ರ
vii, ೮೩ ಜಲೋದರದ ವಿರುದ್ಧ ಮಂತ್ರ
vi, ೨೪ ಹರಿಯುವ ನೀರಿನಿಂದ ಗುಣಪಡಿಸಲಾಗುವ ಜಲೋದರ, ಹೃದಯ ರೋಗ ಮತ್ತು ಅವಕ್ಕೆ ಸಂಬಂಧಿಸಿದ ರೋಗಗಳು
vi, ೮೦ ಇಬ್ಬರಲ್ಲಿ ಒಬ್ಬ ಕಾರಣನಾದ ಸೂರ್ಯನಿಗೆ ಮಾಡುವ ಅರ್ಪಣೆ
ii, ೮ ಕ್ಷೇತ್ರೀಯ ಎಂಬ ಆನುವಂಶಿಕ ರೋಗದ ವಿರುದ್ಧ ಮಂತ್ರ
ii, ೧೦ ಕ್ಷೇತ್ರೀಯ ಎಂಬ ಆನುವಂಶಿಕ ರೋಗದ ವಿರುದ್ಧ ಮಂತ್ರ
iii, ೭ ಕ್ಷೇತ್ರೀಯ ಎಂಬ ಆನುವಂಶಿಕ ರೋಗದ ವಿರುದ್ಧ ಮಂತ್ರ
i, ೨೩ ಕರೀಗಿಡದಿಂದ ಗುಣವಾಗುವ ಕುಷ್ಠರೋಗ
i, ೨೪ ಕರೀಗಿಡದಿಂದ ಗುಣವಾಗುವ ಕುಷ್ಠರೋಗ
vi, ೮೩ ಅಪಾಕಿತವೆಂಬ ಹೆಸರಿನ, ಗಂಡಮಾಲೆಯ ನೋವನ್ನು ನಿವಾರಿಸುವ ಮಂತ್ರ
vii, ೭೬ ಅ. ಅಪಾಕಿತವೆಂದು ಕರೆಯಲಾಗುವ ಗಂಡಮಾಲೆಯ ನೋವನ್ನು ನಿವಾರಿಸುವ ಮಂತ್ರ
ಆ. ಗಯನವೆಂಬ ಗಂಟನ್ನು ನಿವಾರಿಸುವ ಮಂತ್ರ
ಇ. ಸೋಮವನ್ನು ಕುರಿತು ಮಧ್ಯಾಹ್ನ ಹಾಡುವ ಹಾಡು
vii, ೭೪ ಅ. ಅಪಾಕಿತವೆಂಬ ಗಂಡಮಾಲೆಯ ನೋವನ್ನು ನಿವಾರಿಸಲು ಮಂತ್ರ
ಆ. ಈರ್ಷೆಯನ್ನು ಶಮನಗೊಳಿಸಲು ಮಂತ್ರ
ಇ. ವ್ರತಗಳ ಒಡೆಯನಾದ ಅಗ್ನಿಗೆ ಪ್ರಾರ್ಥನೆ
vi, ೨೫ ಕುತ್ತಿಗೆ ಮತ್ತು ಭುಜದ ಮೇಲೇಳುವ ಗಂಡಮಾಲೆಯ ನೋವನ್ನು ನಿವಾರಿಸಲು ಮಂತ್ರ

vi, ೫೭ ಗಂಡಮಾಲೆಗೆ ಔಷಧವೆಂಬಂತೆ ಮೂತ್ರ (ಗಲಷ)
iv, ೧೨ ಮೂಳೆ ಮುರಿತವನ್ನು ಸರಿಪಡಿಸಲು ಅರುಂಧತಿ (ಲಾಕ್ಷಾ) ಗಿಡದ ಜೊತೆಗೆ ಮಂತ್ರ
v, ೫ ಗಾಯಗಳನ್ನು ವಾಸಿಮಾಡಲು ಸಿಲಾಕಿ (ಲಾಕ್ಷಾ) ಅರುಂಧತಿ ಗಿಡದ ಜೊತೆಗೆ ಮಂತ್ರ
vi, ೧೦೯ ಗಾಯಗಳನ್ನು ಗುಣಪಡಿಸಲು ಕಾಳುಮೆಣಸು
i, ೧೭ ರಸ್ತಸ್ರಾವ ನಿಲ್ಲಿಸಲು ಮಂತ್ರ
ii, ೩೧ ಜಂತುಗಳ ವಿರುದ್ಧ ಮಂತ್ರ
ii, ೩೨ ದನಕರುಗಳಲ್ಲಿರುವ ಜಂತುಗಳ ವಿರುದ್ಧ ಮಂತ್ರ
v, ೨೩ ಮಕ್ಕಳಲ್ಲಿರುವ ಜಂತುಗಳ ವಿರುದ್ಧ ಮಂತ್ರ
iv, ೬ ವಿಷಪ್ರಾಶನದ ವಿರುದ್ಧ ಮಂತ್ರ
iv, ೭ ವಿಷಪ್ರಾಶನದ ವಿರುದ್ಧ ಮಂತ್ರ
vi, ೧೦೦ ವಿಷನಿವಾರಣೆಗೆ ಇರುವೆಗಳು
v, ೧೩ ಹಾವಿನ ವಿಷದ ವಿರುದ್ಧ ಮಂತ್ರ
vi, ೧೨ ಹಾವಿನ ವಿಷದ ವಿರುದ್ಧ ಮಂತ್ರ
vii, ೫೬ ಸರ್ಪ, ಚೇಳು ಮತ್ತು ಕೀಟಗಳ ವಿಷದ ವಿರುದ್ಧ ಮಂತ್ರ
vi, ೧೬ ಕಣ್ಣಿನ ಊತ ನಿವಾರಿಸಲು ಮಂತ್ರ
vi, ೨೧ ಕೇಶವರ್ಧನೆಗೆ ಮಂತ್ರ
vi, ೧೩೬ ಕೇಶವರ್ಧನೆಗೆ ನಿತ್ಥ್ನಿ ಸಸ್ಯದ ಮಂತ್ರ
vi, ೧೩೭ ಕೇಶವರ್ಧನೆಗೆ ಮಂತ್ರ
iv, ೪ ವೀರ್ಯವರ್ಧನೆಗೆ ಮಂತ್ರ
vi, ೧೧೧ ಸನ್ನಿಯ ವಿರುದ್ಧ ಮಂತ್ರ
iv, ೩೭ ರಾಕ್ಷಸ, ಅಪ್ಸರ ಮತ್ತು ಗಂಧರ್ವರನ್ನು ಉಚ್ಚಾಟಿಸಲು ಅಂಗಶೃಂಗಿ ಎಂಬ ಗಿಡದ ಜೊತೆಗೆ ಮಂತ್ರ
ii, ೯ ರೋಗದ ದೆವ್ವಗಳು ಹಿಡಿದಾಗ, ಹತ್ತು ರೀತಿಯ ಮರಗಳಿಂದ ಮಾಡಿದ ತಾಯತದಿಂದ ಗುಣಪಡಿಸುವುದು
iv, ೩೬ ರೋಗಗಳಿಗೆ ಪಿಶಾಚಿಗಳೇ ಕಾರಣವೆಂದು ಭಾವಿಸಿ, ಅವುಗಳ ವಿರುದ್ಧ ಮಂತ್ರ
ii, ೨೫ ಕಣ್ವ ಎಂಬ ರೋಗಕ್ಕೆ ಕಾರಣವಾದ ಪಿಶಾಚಿಯ ವಿರುದ್ಧ ಪೃಶ್ನಿಪರ್ಣಿ ಎಂಬ ಗಿಡದ ಜೊತೆಗೆ ಮಂತ್ರ
vi, ೩೨ ರಾಕ್ಷಸ ಮತ್ತು ಪಿಶಾಚಿಗಳನ್ನು ಉಚ್ಚಾಟಿಸಲು ಮಂತ್ರ
ii, ೪ ರೋಗಗಳು ಹಾಗೂ ಪಿಶಾಚಿಗಳ ವಿರುದ್ಧ, ಗಂಗಿಡಾ ಮರದಿಂದ ಪಡೆದ ತಾಯತದೊಡನೆ ಮಂತ್ರ
xix, ೩೪ ರೋಗಗಳು ಹಾಗೂ ಪಿಶಾಚಿಗಳ ವಿರುದ್ಧ, ಗಂಗಿಡಾ ಮರದಿಂದ ಮಾಡಿದ ತಾಯತದೊಡನೆ ಮಂತ್ರ

xix, ೩೫ ರೋಗಗಳು ಹಾಗೂ ಪಿಶಾಚಿಗಳ ವಿರುದ್ಧ, ಗಂಗಿಡಾ ಮರದಿಂದ ಮಾಡಿದ ತಾಯತದೊಡನೆ ಮಂತ್ರ
vi, ೮೫ ವಾರಣಾ ಮರದಿಂದ ಪಡೆದ ತಾಯತದ ಮೂಲಕ ರೋಗ ನಿವಾರಣೆ
vi, ೧೨೭ ಕಿಪುದ್ರು ಮರವು ಸರ್ವರೋಗ ನಿವಾರಕ
xix, ೩೮ ಗುಗ್ಗುಳ ಮರದ ಔಷಧೀಯ ಗುಣಗಳು
vi, ೯೧ ಬಾರ್ಲಿ ಮತ್ತು ನೀರು ಸರ್ವರೋಗನಿವಾರಕ
viii, ೭ ಸರ್ವರೋಗ ನಿವಾರಕಗಳಂತೆ ಬಳಸುವ ಮಾಟ ಮತ್ತು ಔಷಧ ಗಿಡಗಳಿಗೆ ಒಂದು ಗೀತೆ
vi, ೯೬ ಗಿಡಗಳು ಸರ್ವೌಷಧವೆಂಬಂತೆ
ii, ೩೩ ಸಂಪೂರ್ಣ ಆರೋಗ್ಯ ಪಡೆಯಲು ಮಂತ್ರ
ix, ೮ ರೋಗನಿರೋಧಕ ಶಕ್ತಿ ಪಡೆಯಲು ಮಂತ್ರ
ii, ೨೯ ರೋಗನಿರೋಧದಿಂದ ದೀರ್ಘ ಆಯುಸ್ಸನ್ನೂ ಏಳಿಗೆಯನ್ನೂ ಪಡೆಯಲು ಮಂತ್ರ

## ಪುಸ್ತಕ II
### ದೀರ್ಘಾಯುಷ್ಯ ಮತ್ತು ಆರೋಗ್ಯಕ್ಕಾಗಿ ಪ್ರಾರ್ಥನೆಗಳು (ಆಯುಷ್ಯಾಣಿ)

iii, ೧೧ ದೀರ್ಘಾಯುಷ್ಯ ಮತ್ತು ಆರೋಗ್ಯಕ್ಕಾಗಿ ಪ್ರಾರ್ಥನೆ
ii, ೨೮ ಒಂದು ಶರೀರವನ್ನು ಕುರಿತು ದೀರ್ಘಾಯುಸ್ಸಿಗಾಗಿ ಪ್ರಾರ್ಥನೆ
iii, ೩೧ ದೀರ್ಘಾಯುಸ್ಸು ಮತ್ತು ಆರೋಗ್ಯಕ್ಕಾಗಿ ಪ್ರಾರ್ಥನೆ
vii, ೫೩ ದೀರ್ಘಾಯುಸ್ಸಿಗಾಗಿ ಪ್ರಾರ್ಥನೆ
viii, ೧ ಸಾವಿನ ಅಪಾಯಗಳಿಂದ ವಿಮೋಚನೆ ಮಾಡಲು ಪ್ರಾರ್ಥನೆ
viii, ೨ ಸಾವಿನ ಅಪಾಯಗಳಿಂದ ವಿಮೋಚನೆಗಾಗಿ ಪ್ರಾರ್ಥನೆ
v, ೩೦ ರೋಗ ಮತ್ತು ಸಾವುಗಳಿಂದ ವಿಮೋಚನೆಗಾಗಿ ಪ್ರಾರ್ಥನೆ
iv, ೯ ಪ್ರಾಣ ಮತ್ತು ಅಂಗರಕ್ಷಣೆಗಾಗಿ ಅಂಜನ
iv, ೧೦ ದೀರ್ಘಾಯುಸ್ಸು ಮತ್ತು ಏಳಿಗೆಗಾಗಿ ಮುತ್ತು ಮತ್ತು ಅದರ ಚಿಪ್ಪನ್ನು ತಾಯತದಂತೆ ಧರಿಸುವುದು
xix, ೨೬ ದೀರ್ಘಾಯುಸ್ಸಿಗಾಗಿ ಚಿನ್ನವನ್ನು ತಾಯತದಂತೆ ಧರಿಸುವುದು

## ಪುಸ್ತಕ III
### ಪಿಶಾಚಿಗಳು, ಮಾಂತ್ರಿಕರು ಮತ್ತು ಶತ್ರುಗಳಿಗೆ ಶಾಪಹಾಕುವುದು (ಅಭಿಕಾರಿಕಾಣಿ ಮತ್ತು ಕೃತ್ಯಪ್ರತಿಹಾರಣಂ)

i, ೭ ಮಾಂತ್ರಿಕರ ಮತ್ತು ಪಿಶಾಚಿಗಳ ವಿರುದ್ಧ
i, ೮ ಮಾಂತ್ರಿಕರ ಮತ್ತು ಪಿಶಾಚಿಗಳ ವಿರುದ್ಧ

i, ೧೬ ಪಿಶಾಚಿಗಳ ಮತ್ತು ಮಾಂತ್ರಿಕರ ವಿರುದ್ಧ ಮಂತ್ರ–ಸೀಸದೊಡನೆ
vi, ೨ ರಾಕ್ಷಸರ ವಿರುದ್ಧ ಸೋಮದ ಅರ್ಪಣೆ
ii, ೧೪ ಗಂಡಸರಿಗೆ, ದನಕರುಗಳಿಗೆ, ಮನೆಗಳಿಗೆ ಕೇಡನ್ನು ಬಯಸುವವರೆಂದು ಭಾವಿಸಿ ಅನೇಕ ರೀತಿಯ ಹೆಣ್ಣು ಪಿಶಾಚಿಗಳ ವಿರುದ್ಧ ಮಂತ್ರ
iii, ೯ ವಿಷ್ಕಂಧ ಮತ್ತು ಕಬವ (ಎಂಬ ಕೇಡಿಗ, ಪಿಶಾಚಗಳ) ವಿರುದ್ಧ ಮಂತ್ರ
iv, ೨೦ ಪಿಶಾಚಿಗಳನ್ನೂ ವೈರಿಗಳನ್ನೂ ಓಡಿಸಲು ಸದಂಪುಶ್ನ ಎಂಬ ಗಿಡವನ್ನು ಬಳಸುತ್ತಾ ಹೇಳುವ ಮಂತ್ರ
iv, ೧೭ ಮಾಟ, ಪಿಶಾಚಿ ಮತ್ತು ಶತ್ರುಗಳ ವಿರುದ್ಧ ಅಪಮಾರ್ಗ ಎಂಬ ಗಿಡವನ್ನು ಬಳಸುತ್ತಾ ಪಠಿಸುವ ಮಂತ್ರ
iv, ೧೮ ಮಾಟ, ಪಿಶಾಚಿ ಮತ್ತು ಶತ್ರುಗಳ ವಿರುದ್ಧ ಅಪಮಾರ್ಗ ಎಂಬ ಗಿಡವನ್ನು ಬಳಸುತ್ತಾ ಹೇಳುವ ಮಂತ್ರ
iv, ೧೯ ಪಿಶಾಚಿ ಮತ್ತು ಮಾಂತ್ರಿಕರ ವಿರುದ್ಧ ಅಪಮಾರ್ಗ ಗಿಡದ ಅದ್ಭುತ ಶಕ್ತಿ
vii, ೬೫ ಶಾಪ ಮತ್ತು ಪಾಪಕಾರ್ಯಗಳ ಫಲಗಳ ವಿರುದ್ಧ ಗಿಡವನ್ನು ಬಳಸುತ್ತಾ ಹೇಳುವ ಮಂತ್ರ
x, ೧ ಮಾಟ ಮತ್ತು ಮಂತ್ರಗಳ ವಿರುದ್ಧ ಮಂತ್ರ
v, ೧೪ ಮಾಟ ಮತ್ತು ಮಂತ್ರಗಳ ವಿರುದ್ಧ ಮಂತ್ರ
v, ೩೧ ಮಾಟ ಮತ್ತು ಮಂತ್ರಗಳ ವಿರುದ್ಧ ಮಂತ್ರ
viii, ೫ ಶ್ರಾಕತ್ಯ ಮರದಿಂದ ಮಾಡಿದ ತಾಯತವನ್ನು ಉದ್ದೇಶಿಸಿ ಕಾಪಾಡಬೇಕೆಂದು ಮಾಡಿದ ಪ್ರಾರ್ಥನೆ.
x, ೩ ವಾರಣಾ ಮರದಿಂದ ಮಾಡಿದ ತಾಯತದ ಮಹಿಮೆಯನ್ನು ಸ್ತುತಿಸುವುದು
x, ೬ ಖದಿರಾ ಮರದಿಂದ ಮಾಡಿದ ನೇಗಿಲಿನ ಆಕಾರದ ತಾಯತದ ಮಹಿಮೆಯ ಸ್ತುತಿ
ix, ೧೬ ವಂಚಕರಿಂದ ರಕ್ಷಣೆ ಕೋರಿ, ವರುಣನಿಗೆ ಸಲ್ಲಿಸಿದ ಪ್ರಾರ್ಥನೆ
ii, ೧೨ ಪವಿತ್ರ ಕಾರ್ಯಗಳಿಗೆ ಅಡ್ಡಿಮಾಡುವ ಶತ್ರುಗಳಿಗೆ ಶಾಪ
vii, ೭೦ ಶತ್ರುಗಳ ಯಜ್ಞಗಳಿಗೆ ಭಂಗ ತರುವುದು
ii, ೭ ಒಂದು ವಿಶಿಷ್ಟ ಗಿಡದ ಮೂಲಕ ಶಾಪ ಹಾಕುವುದು ಮತ್ತು ದುಷ್ಟ ಹಂಚಿಕೆ ಹೂಡುವುದರ ವಿರುದ್ಧ ಮಂತ್ರ
iii, ೬ ಶತ್ರುನಾಶಕವಾಗಿ ಅಶ್ವತ್ಥ ಮರ
vi, ೭೫ ವೈರಿಗಳನ್ನು ದಮನ ಮಾಡಲು ಹವಿಸ್ಸನ್ನು ಅರ್ಪಿಸುವುದು (ನೈಬಾಧ್ಯಮ್ ಹವಿಃ)
vi. ೩೭ ದುಷ್ಟ ಮಾಟದಲ್ಲಿ ನಿರತನಾದವನಿಗೆ ಶಾಪ
vii. ೧೩ ಶತ್ರುಗಳ ಬಲವನ್ನು ಕಡಿಮೆ ಮಾಡಲು ಮಂತ್ರ

## ಪುಸ್ತಕ IV

### ಸ್ತ್ರೀ ಸಂಬಂಧ ಮಂತ್ರಗಳು (ಸ್ತ್ರೀಕರ್ಮಾಣಿ)

ii, ೩೬ ಗಂಡನನ್ನು ಪಡೆಯಲು ಮಂತ್ರ
vi, ೬೦ ಗಂಡನನ್ನು ಪಡೆಯಲು ಮಂತ್ರ
vi, ೮೨ ಹೆಂಡತಿಯನ್ನು ಪಡೆಯಲು ಮಂತ್ರ
vi, ೭೮ ನೂತನ ವಧೂವರರಿಗೆ ಆಶೀರ್ವಾದ
vii, ೩೬ ಪರಸ್ಪರರ ಪ್ರೀತಿಯನ್ನು ಪಡೆಯಲು ದಂಪತಿಗಳು ಪಠಿಸುವ ಮಂತ್ರ
vii, ೩೭ ವಧೂ ವರರನ್ನು ಕುರಿತು ಹೇಳುವ ಮಂತ್ರ
vi, ೮೧ ಗರ್ಭಧರಿಸಲು ಕಡಗವನ್ನು ತಾಯತದಂತೆ ಧರಿಸುವುದು
iii, ೨೩ ಪುತ್ರ ಸಂತಾನಕ್ಕಾಗಿ ಮಂತ್ರ (ಪುಂಸವನಮ್)
vi, ೧೧ ಪುತ್ರ ಸಂತಾನಕ್ಕಾಗಿ ಮಂತ್ರ (ಪುಂಸವನಮ್)
vii, ೩೫ ಹೆಂಗಸನ್ನು ಬಂಜೆಯನ್ನಾಗಿ ಮಾಡಲು ಮಂತ್ರ
vi, ೧೭ ಗರ್ಭಪಾತ ತಡೆಯಲು ಮಂತ್ರ
i, ೧೧ ಸುಲಭ ಹೆರಿಗೆಗಾಗಿ ಮಂತ್ರ
i, ೩೪ ಹೆಂಗಸಿನ ಪ್ರೀತಿಯನ್ನು ಪಡೆಯಲು, ಅತಿಮಧುರದ ಬೇರಿನ ಜೊತೆ ಮಂತ್ರ
ii, ೩೦ ಸ್ತ್ರೀಯ ಪ್ರೀತಿ ಗಳಿಸಲು ಮಂತ್ರ
vi, ೮ ಸ್ತ್ರೀಯ ಪ್ರೀತಿ ಗಳಿಸಲು ಮಂತ್ರ
vi, ೯ ಸ್ತ್ರೀಯ ಪ್ರೀತಿ ಗಳಿಸಲು ಮಂತ್ರ
vi, ೧೦೨ ಸ್ತ್ರೀಯ ಪ್ರೀತಿ ಗಳಿಸಲು ಮಂತ್ರ
iii, ೨೫ ಹೆಂಗಸಿನ ತೀವ್ರ ಪ್ರೇಮವನ್ನು ಗಳಿಸಲು ಮಂತ್ರ
vii, ೩೮ ಗಂಡಸಿನ ಪ್ರೀತಿ ಗಳಿಸಲು ಮಂತ್ರ
vi, ೧೩೦ ಗಂಡಸಿನಲ್ಲಿ ತೀವ್ರ ಪ್ರೇಮ ಹುಟ್ಟಿಸಲು ಮಂತ್ರ
vi, ೧೩೨ ಗಂಡಸಿನಲ್ಲಿ ತೀವ್ರ ಪ್ರೇಮ ಹುಟ್ಟಿಸಲು ಮಂತ್ರ
iv, ೫ ಗುಪ್ತ ಪ್ರಣಯಕ್ಕೆ ಕಾಲದಲ್ಲಿ ಮಂತ್ರ
vi, ೭೭ ವ್ಯಭಿಚಾರಿಣಿ ಹಿಂದಿರುಗಲು ಮಂತ್ರ
vi, ೧೮ ಈರ್ಷೆಯನ್ನು ತಡೆಯಲು ಮಂತ್ರ
i, ೧೪ ಒಬ್ಬ ಹೆಂಗಸು ತನ್ನ ಪ್ರತಿಸ್ಪರ್ಧಿ ಅಥವಾ ಸವತಿಯ ವಿರುದ್ಧ ಉಚ್ಚರಿಸುವ ಮಂತ್ರ
iii, ೧೮ ಒಬ್ಬ ಹೆಂಗಸು ತನ್ನ ಪ್ರತಿಸ್ಪರ್ಧಿ ಅಥವಾ ಸವತಿಯ ವಿರುದ್ಧ ಉಚ್ಚರಿಸುವ ಮಂತ್ರ
vi, ೧೩೮ ಒಬ್ಬ ಗಂಡಸು ತನ್ನ ಗಂಡಸುತನವನ್ನು ಕಳೆದುಕೊಳ್ಳುವಂತೆ ಮಾಡಲು ಮಂತ್ರ
i, ೧೮ ಹೆಂಗಸಿನ ಶಾರೀರಿಕ ಅನಿಷ್ಟಗಳನ್ನು ನಿವಾರಿಸಲು ಮಂತ್ರ
vi, ೧೧೦ ಅಶುಭ ನಕ್ಷತ್ರದಲ್ಲಿ ಜನಿಸಿದ ಮಗುವಿನ ಪರವಾಗಿ ಪ್ರಾಯಶ್ಚಿತ್ತ ಮಂತ್ರ
vi, ೧೪೦ ಮೊದಲು ವಿಷಮರೀತಿಯಲ್ಲಿ ಹಲ್ಲು ಹುಟ್ಟಿದರೆ ಪ್ರಾಯಶ್ಚಿತ್ರ ಮಂತ್ರ

## ಪುಸ್ತಕ V

### ರಾಜರಿಗೆ ಸಂಬಂಧಿಸಿದ ಮಂತ್ರಗಳು (ರಾಜಕರ್ಮಾಣಿ)

iv, ೮ ರಾಜನ ಪಟ್ಟಾಭಿಷೇಕ ಕಾಲದಲ್ಲಿ ಪ್ರಾರ್ಥನೆ
iii, ೩ ಗಡಿಪಾರಾದ ರಾಜನು ಮತ್ತೆ ರಾಜನಾಗಲು ಮಂತ್ರ
iii, ೪ ರಾಜನನ್ನು ಆರಿಸುವಾಗ ಪ್ರಾರ್ಥನೆ
iv, ೨೨ ರಾಜನಿಗೆ ಪರಮಾಧಿಕಾರ ಬರಲು ಮಂತ್ರ
iii, ೫ ರಾಜನ ಅಧಿಕಾರವು ಪ್ರಬಲವಾಗಲು ಪರ್ಣ ಮರದಿಂದ ಮಾಡಿದ ತಾಯತದ ಶ್ಲಾಘನೆ
i, ೯ ಐಹಿಕ ಮತ್ತು ಪರಲೌಕಿಕ ಯಶಸ್ಸಿಗೆ ಪ್ರಾರ್ಥನೆ
vi, ೩೮ ಶಾಂತಿ ಮತ್ತು ಅಧಿಕಾರಕ್ಕಾಗಿ ಪ್ರಾರ್ಥನೆ
vi, ೩೯ ಯುದ್ಧ–ಮಂತ್ರ
viii, ೮ ಬಾಣದಿಂದಾದ ಗಾಯಗಳ ವಿರುದ್ಧ ಯುದ್ಧ–ಮಂತ್ರ
i, ೧೯ ವೈರಿಗಳನ್ನು ಭ್ರಮೆಗೊಳಿಸಲು ಯುದ್ಧ–ಮಂತ್ರ
iii, ೧ ವೈರಿಗಳನ್ನು ಭ್ರಮೆಗೊಳಿಸಲು ಯುದ್ಧ–ಮಂತ್ರ
iii, ೨ ವೈರಿಗಳನ್ನು ಭ್ರಮೆಗೊಳಿಸಲು ಯುದ್ಧ–ಮಂತ್ರ
vi, ೯೭ ಯುದ್ಧದ ಮುನ್ನಾದಿನ ರಾಜನ ಯುದ್ಧ–ಮಂತ್ರ
vi, ೯೯ ಯುದ್ಧದ ಮುನ್ನಾದಿನ ರಾಜನ ಯುದ್ಧ–ಮಂತ್ರ
xi, ೯ ಯುದ್ಧದಲ್ಲಿ ಸಹಾಯ ಮಾಡುವಂತೆ ಅರ್ಬುದಿ ಮತ್ತು ನ್ಯೈರ್ಬುದಿ ದೇವತೆಗಳಿಗೆ ಪ್ರಾರ್ಥನೆ
xi, ೧೦ ಯುದ್ಧದಲ್ಲಿ ಸಹಾಯ ಮಾಡುವಂತೆ ತ್ರಿಷ್ಮಧಿಗೆ ಪ್ರಾರ್ಥನೆ
v, ೨೦ ರಣಭೇರಿ ಗೀತೆ
v, ೨೧ ಶತ್ರುಗಳನ್ನು ಹೆದರಿಸಲು ರಣಭೇರಿ ಗೀತೆ

## ಪುಸ್ತಕ VI

### ಸಾಮರಸ್ಯ, ಸಭೆಗಳಲ್ಲಿ ಪ್ರಭಾವ ಬೀರುವುದು ಇತ್ಯಾದಿಗಳನ್ನು ಪಡೆಯಲು ಮಂತ್ರಗಳು (ಸಮ್ಮಾನಸ್ಯಾಣಿ)

iii, ೩೦ ಸಾಮರಸ್ಯ ಸಾಧಿಸಲು ಮಂತ್ರ
vi, ೭೩ ವೈಷಮ್ಯವನ್ನು ತಡೆಗಟ್ಟಲು ಮಂತ್ರ
vi, ೭೪ ವೈಷಮ್ಯವನ್ನು ತಡೆಗಟ್ಟಲು ಮಂತ್ರ
vii, ೫೨ ವೈರ ಮತ್ತು ರಕ್ತಪಾತವನ್ನು ತಡೆಗಟ್ಟಲು ಮಂತ್ರ
vi, ೬೪ ವೈಷಮ್ಯವನ್ನು ತಡೆಗಟ್ಟಲು ಮಂತ್ರ
vi, ೪೨ ಕೋಪವನ್ನು ಶಮನಗೊಳಿಸಲು ಮಂತ್ರ
vi, ೪೩ ಕೋಪವನ್ನು ಶಮನಗೊಳಿಸಲು ಮಂತ್ರ

vii, ೧೨ ಸಭೆಯಲ್ಲಿ ಸಮ್ಮಾನಗೊಳಿಸಲು ಮಂತ್ರ
ii, ೨೭ ಪೂರ್ವಪಕ್ಷದವರ ವಿರುದ್ಧ ಚರ್ಚೆಯಲ್ಲಿ ಗೆಲ್ಲಲು ಪಟಗಿಡದ ಜೊತೆಗೆ ಮಂತ್ರ
vi, ೯೪ ವಶೀಕರಣ ಮಂತ್ರ

## ಪುಸ್ತಕ VII

### ಮನೆ, ಹೊಲ, ದನಕರುಗಳು, ವ್ಯಾಪಾರ ಮತ್ತು ಜೂಜು ಇತ್ಯಾದಿಗಳಲ್ಲಿ ಏಳಿಗೆ ಸಾಧಿಸಲು ಮಂತ್ರಗಳು

iii, ೧೨ ಮನೆ ಕಟ್ಟುವಾಗ ಪ್ರಾರ್ಥನೆ
vi, ೧೪೨ ಧಾನ್ಯ ಬಿತ್ತುವಾಗ ಹೇಳುವ ಪ್ರಾರ್ಥನೆ
vi, ೭೯ ಧಾನ್ಯ ವೃದ್ಧಿಗಾಗಿ ಪ್ರಾರ್ಥನೆ
vi, ೫೦ ಹೊಲದಲ್ಲಿ ಕೀಟಗಳನ್ನು ತಪ್ಪಿಸಲು ಉಚ್ಚಾಟನೆ ಮಾಡುವುದು
vii, ೧೧ ಮಿಂಚಿನಿಂದ ಧಾನ್ಯಗಳನ್ನು ರಕ್ಷಿಸಲು ಮಂತ್ರ
ii, ೨೬ ದನಕರುಗಳ ಏಳ್ಗೆಗಾಗಿ ಮಂತ್ರ
iii, ೧೪ ದನಕರುಗಳ ಏಳ್ಗೆಗಾಗಿ ಮಂತ್ರ
vi, ೫೯ ದನಕರುಗಳ ರಕ್ಷಣೆಗಾಗಿ ಅರುಂಧತಿ ಗಿಡಕ್ಕೆ ಪ್ರಾರ್ಥನೆ
vi, ೭೦ ಹಸು ತನ್ನ ಕರುವಿನ ಬಳಿಯಲ್ಲೇ ಇರಲಿ ಎಂಬುದಕ್ಕೆ ಮಂತ್ರ
iii, ೨೮ ಅವಳಿ ಕರುಗಳು ಹುಟ್ಟಿದಾಗ ಶಾಂತಿ ಮಂತ್ರ
vi, ೯೨ ಕುದುರೆಯು ವೇಗ ಸಾಧಿಸಲು ಮಂತ್ರ
iii, ೧೩ ನದಿಯ ನೀರು ಹೊಸ ಕಾಲುವೆಯಲ್ಲಿ ಹರಿಯಲು ಮಂತ್ರ
vi, ೧೦೬ ಅಗ್ನಿ ಅನಾಹುತ ನಿರೋಧಕ್ಕೆ ಮಂತ್ರ
vi, ೩ ವನ್ಯಪ್ರಾಣಿಗಳು ಹಾಗೂ ಕಳ್ಳರ ವಿರುದ್ಧ ಕುರುಬನ ಮಂತ್ರ
iii, ೧೫ ವರ್ತಕನ ಪ್ರಾರ್ಥನೆ
iv, ಅ. ಜೂಜಿನಲ್ಲಿ ಜಯಗಳಿಸಲು ಪ್ರಾರ್ಥನೆ
ಆ. ಅಲೆದಾಡುತ್ತಾ ತಪ್ಪಿಸಿಕೊಂಡ ಕರುಗಳು ಹಿಂತಿರುಗಿ ಬರುವಂತೆ ಮಾಡುವ ಪ್ರಾರ್ಥನೆ
vii, ೫೦ ಪಗಡೆಯಾಟದಲ್ಲಿ ಜಯಗಳಿಸಲು ಪ್ರಾರ್ಥನೆ
vi, ೫೬ ಮನೆಯಂಗಳದಿಂದ ಸರ್ಪಗಳ ಉಚ್ಚಾಟನೆ
x, ೪ ಪೆಡು–ಕುದುರೆಯು ಸರ್ಪವನ್ನು ಕೊಲ್ಲುವಂತೆ ಸರ್ಪಗಳ ವಿರುದ್ಧ ಮಂತ್ರ
xi, ೨ ಅಪಾಯಗಳಿಂದ ರಕ್ಷಣೆ ಪಡೆಯಲು ಭವ ಮತ್ತು ಸರ್ವರಿಗೆ ಪ್ರಾರ್ಥನೆ
ic, ೨೮ ಅಪಾಯಗಳಿಂದ ರಕ್ಷಣೆ ಪಡೆಯಲು ಭವ ಮತ್ತು ಸರ್ವರಿಗೆ ಪ್ರಾರ್ಥನೆ
vii, ೯ ಕಳೆದುಕೊಂಡ ಆಸ್ತಿಯನ್ನು ಪಡೆಯಲು ಮಂತ್ರ
vi, ೧೨೮ ಹವಾಮಾನದ ಶಾಂತಿ
xi, ೬ ಸರ್ವನಾಶದಿಂದ ರಕ್ಷಣೆ ಪಡೆಯಲು ಇಡಿ ದೇವ ಗಣಕ್ಕೆ ಸಲ್ಲಿಸುವ ಪ್ರಾರ್ಥನೆ

## ಪುಸ್ತಕ VIII

### ಪಾಪ ಮತ್ತು ಅಶುದ್ಧಿ ಮಾಡಿದುದಕ್ಕೆ ಪರಿಹಾರ ಮಂತ್ರಗಳು

iv, ೪೫ ಮಾನಸಿಕ ಅಪರಾಧದ ವಿರುದ್ಧ ಪ್ರಾರ್ಥನೆ
vi, ೨೬ ಅನಿಷ್ಟ ನಿವಾರಣೆಗೆ ಮಂತ್ರ
vi, ೧೧೪ ಯಜ್ಞದಲ್ಲಿ ಮಾಡಿದ ತಪ್ಪಿಗಾಗಿ ಪ್ರಾಯಶ್ಚಿತ್ತ ಮಂತ್ರ
vi, ೧೧೫ ಪಾಪಕ್ಕಾಗಿ ಪ್ರಾಯಶ್ಚಿತ್ತ ಮಂತ್ರ
vi, ೧೧೨ (ಯಾವುದಾದರೂ ಕೆಲಸವನ್ನು) ಅಣ್ಣನಿಗಿಂತ ಮೊದಲು ತಮ್ಮನು ಮಾಡಿದರೆ ಪ್ರಾಯಶ್ಚಿತ್ತ
vi, ೧೧೩ ನೀಚ ಅಪರಾಧಗಳಿಗೆ ಪ್ರಾಯಶ್ಚಿತ್ತ
vi, ೧೨೦ ಪಾಪಕಾರ್ಯಗಳ ಫಲ ತೀರಿದ ಮೇಲೆ ಸ್ವರ್ಗಕ್ಕಾಗಿ ಪ್ರಾರ್ಥನೆ
vi, ೨೭ ಪಾರಿವಾಳಗಳು (ದುಷ್ಟ) ಶಕುನದ ಹಕ್ಕಿಗಳೆಂದು ಭಾವಿಸಿ, ಅವುಗಳ ವಿರುದ್ಧ ಮಂತ್ರ
vi, ೨೯ ಪಾರಿವಾಳಗಳು (ದುಷ್ಟ) ಶಕುನದ ಹಕ್ಕಿಗಳೆಂದು ಭಾವಿಸಿ ಅವುಗಳ ವಿರುದ್ಧ ಮಂತ್ರ
vi, ೨೯ ಶಕುನದ ಹಕ್ಕಿಗಳಾದ ಪಾರಿವಾಳ ಮತ್ತು ಗೂಬೆಗಳ ವಿರುದ್ಧ ಮಂತ್ರ
vii, ೬೪ ಕರಿ ಶಕುನದ ಹಕ್ಕಿಯು ಅಶುದ್ಧಿ ಮಾಡಿದರೆ ಶುದ್ಧೀಕರಣ ಮಂತ್ರ
vi, ೪೬ ದುಃಸ್ವಪ್ನಗಳ ಉಚ್ಚಾಟನೆ
vii, ೧೧೫ ದುರ್ಗುಣಗಳಿಂದ ಮುಕ್ತನಾಗಿ ಸದ್ಗುಣಗಳನ್ನು ಪಡೆಯಲು ಮಂತ್ರ

## III

ಹೀಗೆ 'ಅಥರ್ವವೇದ'ವೆಂದರೆ ಬರೀ ಮಂತ್ರ–ಮಾಟ–ಔಷಧಗಳ ಬಗೆಗಿನ ಸಂಗ್ರಹ ಎಂಬುದು ಸಿದ್ಧವಾಗುತ್ತದೆ. ಅದರ ಮುಕ್ಕಾಲು ಭಾಗ ಮಂತ್ರ ಮಾಟಗಳಿಂದ ತುಂಬಿದೆ. ಮಂತ್ರ–ಮಾಟಗಳು 'ಅಥರ್ವವೇದ'ದಲ್ಲಿ ಮಾತ್ರವಿದೆ ಎಂದು ಯಾರೂ ತಿಳಿಯಬಾರದು. 'ಋಗ್ವೇದ'ವು ಇದರಿಂದ ಮುಕ್ತವಾಗಿಲ್ಲ. ಅದರಲ್ಲಿ ಮಂತ್ರ–ಮಾಟಗಳಿಗೆ ಸಂಬಂಧಿಸಿದ ಮಂತ್ರಗಳಿವೆ. ಈ ವಿಷಯಗಳನ್ನೊಳಗೊಂಡ ಮೂರು ಸೂಕ್ತಗಳನ್ನು ಈ ಕೆಳಗೆ ತಿಳಿಸಿದ್ದೇನೆ.

## ಸೂಕ್ತ XVII (CXLV)

ಸವತಿಯನ್ನು ಓಡಿಸುವುದು ಈ ಮಂತ್ರದ ಉದ್ದೇಶ. ಋಷಿಯು ಇಂದ್ರಾಣಿ : ಕೊನೆಯ ಶ್ಲೋಕದ ಛಂದಸ್ಸು ಪಂಕತಿ. ಉಳಿದವುಗಳ ಛಂದಸ್ಸು ಅನುಷ್ಟುಭ್.

೧. "ಈ ಶಕ್ತಿಶಾಲಿಯಾದ ಔಷಧದ ಬಳ್ಳಿಯನ್ನು ನಾನು ಅಗೆದು ತೆಗೆಯುತ್ತೇನೆ, ಇದರಿಂದ ಹೆಂಡತಿಯು ತನ್ನ ಸವತಿಯನ್ನು ಓಡಿಸಿ ತನ್ನ ಗಂಡನನ್ನು ಮರಳಿ ಪಡೆಯಬಹುದು."

೨. "ಓ ಮೇಲಕ್ಕೆ ತಿರುಗಿದ ಎಲೆಗಳುಳ್ಳ, ಶುಭಕರವಾದ, ದೇವರುಗಳು ಕಳುಹಿಸಿದ ಗಿಡವೇ, ನನ್ನ ಸವತಿಯನ್ನು ಓಡಿಸಿ, ನನ್ನ ಗಂಡನನ್ನು ನನಗೆ ಮಾತ್ರ ಸೇರುವಂತೆ ಮಾಡು."

೩. "ಉತ್ಕೃಷ್ಟ ಗಿಡವೇ, ಉತ್ಕೃಷ್ಟರಲ್ಲಿ ನಾನೂ ಉತ್ಕೃಷ್ಟಳಾಗಲಿ ಮತ್ತು ನನ್ನ ಸವತಿಯು ನಿಕೃಷ್ಟರಲ್ಲಿ ನಿಕೃಷ್ಟಳಾಗಲಿ."

೪. "ನಾನು ಅವಳ ಹೆಸರನ್ನು ಹೇಳುವುದಿಲ್ಲ. ಯಾವ ಹೆಂಗಸೂ ಅಂಥವಳನ್ನು ಸಹಿಸುವುದಿಲ್ಲ. ಆ ಪರಸ್ತ್ರೀಯನ್ನು ನಾವು ದೂರ ಓಡಿಸೋಣ."

೫. "ನಾನು ಗೆಲ್ಲುತ್ತೇನೆ, ನೀನೂ ಗೆಲ್ಲುತ್ತೀಯಾ, ನಾವಿಬ್ಬರೂ ಶಕ್ತಿಶಾಲಿಗಳಾದುದರಿಂದ ನಮ್ಮ ಸವತಿಯ ವಿರುದ್ಧ ಗೆಲ್ಲುತ್ತೇವೆ."

೬. "ವಿಜಯಿಯಾದ ಮೂಲಿಕೆಯೇ, ನಿನ್ನನ್ನು ತಲೆದಿಂಬು ಮಾಡುತ್ತೇನೆ. (ಪ್ರಿಯನಿಗೆ)ನಿನ್ನ ವಿಜಯಿಯಾದ ದಿಂಬಿನ ಆಶ್ರಯ ಕೊಡುತ್ತೇನೆ. ಹಸು ತನ್ನ ಕರುವಿನ ಕಡೆಗೆ ಓಡುವಂತೆ, ನೀರು ಹರಿಯುವಂತೆ, ನಿನ್ನ ಬುದ್ಧಿ ನನ್ನ ಕಡೆಗೆ ಓಡಲಿ."

## ಸೂಕ್ತ IV (CLV)

ಒಂದು ಮತ್ತು ನಾಲ್ಕನೇ ಶ್ಲೋಕಗಳ ದೇವತೆ ಅಲಕ್ಷವಿಗ್ನನ ದುರ್ದೈವವನ್ನು ತಪ್ಪಿಸುವುದು. ಎರಡು ಮತ್ತು ಮೂರನೇ ಶ್ಲೋಕಗಳು ಬ್ರಾಹ್ಮಣಸ್ಪತಿಯ ಮತ್ತು ಐದನೇ ಶ್ಲೋಕವು ವಿಶ್ವದೇವಸನ ದುರ್ದೈವವನ್ನು ಹೋಗಲಾಡಿಸುವುದು. ಭರದ್ವಾಜನ ಮಗನಾದ ಶಿರಿಂಬಿತನು ಋಷಿ. ಛಂದಸ್ಸು ಅನುಷ್ಟುಭ್.

೧. ದುಃಖತಪ್ತ, ಯಾವ ಅನುಗ್ರಹವನ್ನೂ ಹೊಂದಿರದ, ರೂಪುಗೆಟ್ಟ ದೇವತೆಯು ನಿನ್ನ ಬೆಟ್ಟಕ್ಕೆ ಹೋಗುತ್ತಾಳೆ, ಶಿರಿಂಬಿತನ ಈ ಸಾಹಸಕಾರ್ಯಗಳು ನಿನ್ನನ್ನು ಅಲ್ಲಿಂದ ಓಡಿಸುತ್ತವೆ.

೨. ಆಕೆಯು ಈ ಪ್ರಪಂಚದಿಂದ ಭಯಪಟ್ಟು ಓಡಿಹೋಗಲಿ. ಮುಂದಿನ ಪ್ರಪಂಚದಿಂದಲೂ ಓಡಿಹೋಗಲಿ. ಎಲ್ಲ ಭ್ರೂಣಗಳನ್ನು ನಾಶ ಮಾಡುವವಳು, ಹರಿತ ಕೋಡುಗಳನ್ನು ಹೊಂದಿರುವ ಬೃಹಸ್ಪತಿ ಬಂದು ಸಂಕಟವನ್ನು ಹೋಗಲಾಡಿಸಲಿ.

೩. ಮನುಷ್ಯನಿಂದ ದೂರದಲ್ಲಿ, ದೂರದ ಸಮುದ್ರತೀರದಲ್ಲಿ ತೇಲಾಡುವ ಕಟ್ಟಿಗೆ, ಅದನ್ನು ಸೆರೆಹಿಡಿಯಲಿ. (ಓ ದೇವತೆಯೇ) ಅದನ್ನು ನಾಶಮಾಡುವುದು ಕಷ್ಟ ಮತ್ತು ಅದರಿಂದಾಗಿ ಅದು ದೂರ ತೀರಕ್ಕೆ ಸಾಗುತ್ತದೆ.

೪. ಅಸಂಗತ ಧ್ವನಿಗಳನ್ನು ಮಾಡುವವರು, ನೀನು ವೇಗವಾಗಿ ಚಲಿಸುತ್ತಾ ಹೊರಟುಹೋದಾಗ ಇಂದ್ರನ ಎಲ್ಲ ಶತ್ರುಗಳು ಕೊಲ್ಲಲ್ಪಟ್ಟು ನೀರು ಗುಳ್ಳೆಯಂತೆ ಅದೃಶ್ಯವಾದರು.

೫. ಈ (ವಿಶ್ವದೇವರು) ಕದ್ದುಕೊಂಡು ಹೋಗಲಾಗಿದ್ದ ದನಕರುಗಳನ್ನು ವಾಪಸ್ಸು ತಂದರು. ಅವರು ಬೆಂಕಿಯನ್ನು ಹೊತ್ತಿಸಿ ದೇವತೆಗಳಿಗೆ ಅಹಾರವನ್ನು ಒದಗಿಸಿದರು. ಅವರನ್ನು ಯಾರು ತಾನೆ ಗೆಲ್ಲಲು ಸಾಧ್ಯ?

## ಸೂಕ್ತ XII (CLXII)

ದೈವವು ಕ್ಷಯರೋಗಕ್ಕೆ ಮದ್ದು. ಋಷಿಯು ವಿವೃಹನ್ (ಕಶ್ಯಪನ ಮಗ). ಛಂದಸ್ಸು ಅನುಷ್ಟುಭ್.

೧. ನಾನು ರೋಗವನ್ನು ನಿನ್ನ ಕಣ್ಣುಗಳಿಂದ, ನಿನ್ನ ತಲೆಯಿಂದ, ನಿನ್ನ ಮೂಗಿನಿಂದ, ನಿನ್ನ ಕಿವಿಗಳಿಂದ, ನಿನ್ನ ಗಲ್ಲದಿಂದ, ನಿನ್ನ ಮೆದುಳಿನಿಂದ, ನಿನ್ನ ನಾಲಿಗೆಯಿಂದ ಹೋಗಲಾಡಿಸುತ್ತೇನೆ.

೨. ನಾನು ರೋಗವನ್ನು ನಿನ್ನ ಕುತ್ತಿಗೆಯಿಂದ, ನಿನ್ನ ನರಗಳಿಂದ, ನಿನ್ನ ಅಸ್ಥಿಗಳಿಂದ, ನಿನ್ನ ಕೀಲುಗಳಿಂದ, ನಿನ್ನ ತೋಳುಗಳಿಂದ, ನಿನ್ನ ಭುಜಗಳಿಂದ, ನಿನ್ನ ಮುಂಗೈಗಳಿಂದ ಹೋಗಲಾಡಿಸುತ್ತೇನೆ.

೩. ನಾನು ರೋಗವನ್ನು ನಿನ್ನ ಕರುಳುಗಳಿಂದ, ನಿನ್ನ ಗುದದಿಂದ, ನಿನ್ನ ಹೊಟ್ಟೆಯಿಂದ, ನಿನ್ನ ಹೃದಯದಿಂದ, ನಿನ್ನ ಮೂತ್ರಪಿಂಡಗಳಿಂದ, ನಿನ್ನ ಪಿತ್ತಜನಕದಿಂದ, ಇನ್ನುಳಿದ ಆಂತರಿಕ ಅಂಗಗಳಿಂದ ಹೋಗಲಾಡಿಸುತ್ತೇನೆ.

೪. ನಾನು ನಿನ್ನ ತೊಡೆಗಳಿಂದ, ನಿನ್ನ ಮೊಣಕಾಲುಗಳಿಂದ, ನಿನ್ನ ಹಿಮ್ಮಡಿಗಳಿಂದ, ನಿನ್ನ ಕಾಲ್ಬೆರಳುಗಳಿಂದ, ನಿನ್ನ ಸೊಂಟದಿಂದ, ನಿನ್ನ ನಿತಂಬಗಳಿಂದ, ನಿನ್ನ ಗುಪ್ತಾಂಗಗಳಿಂದ ರೋಗವನ್ನು ಹೋಗಲಾಡಿಸುತ್ತೇನೆ.

೫. ನಾನು ನಿನ್ನ ಮೂತ್ರನಾಳದಿಂದ, ನಿನ್ನ ಮೂತ್ರಕೋಶದಿಂದ, ನಿನ್ನ ಕೂದಲಿನಿಂದ, ನಿನ್ನ ಉಗುರುಗಳಿಂದ, ನಿನ್ನ ಇಡಿ ದೇಹದಿಂದ ರೋಗವನ್ನು ಹೋಗಲಾಡಿಸುತ್ತೇನೆ.

೬. ನಾನು ರೋಗವನ್ನು ಪ್ರತಿ ಅಂಗದಿಂದ, ಪ್ರತಿ ಕೂದಲಿನಿಂದ, ಯಾವುದರಲ್ಲಿ ಹುಟ್ಟುತ್ತದೆಯೋ, ಆ ನಿನ್ನ ಪ್ರತಿ ಕೀಲಿನಿಂದ ನಿನ್ನ ಇಡಿ ದೇಹದಿಂದ ಹೋಗಲಾಡಿಸುತ್ತೇನೆ.

ವೇದದಲ್ಲಿ ಆಧ್ಯಾತ್ಮಿಕವಾಗಿಯಾಗಲಿ ನೈತಿಕವಾಗಿಯಾಗಲಿ ಉದಾತ್ತೀಕರಿಸುವಂತಹುದು ಏನೂ ಇಲ್ಲ ಎಂದು ತೋರಿಸಲು ಸಾಕಷ್ಟು ಉದ್ಧರಿಸಲಾಗಿದೆ. ವಸ್ತುವಿಷಯವಾಗಲಿ, ವಿಷಯಾನುಕ್ರಮಣಿಕೆ ಯಾಗಲಿ ವೇದಗಳಿಗೆ ಆರೋಪಿಸಲಾಗಿರುವ ದೋಷರಾಹಿತ್ಯವನ್ನು ಸಮರ್ಥಿಸುವುದಿಲ್ಲ. ಇಷ್ಟಾದರೂ ಬ್ರಾಹ್ಮಣರು ವೇದಗಳಿಗೆ ಪಾವಿತ್ರ್ಯವನ್ನೂ, ದೋಷರಾಹಿತ್ಯವನ್ನೂ ತೊಡಿಸಲು ಅಷ್ಟೇಕೆ ಶ್ರಮಪಟ್ಟರೋ?

* * * *

## ಒಗಟು – ೭

# ಉಬ್ಬರವಿಳಿತ ಅಥವಾ ಬ್ರಾಹ್ಮಣರು ವೇದಗಳನ್ನು ಹೇಗೆ ನಿಕೃಷ್ಟ ಶಾಸ್ತ್ರಗಳಲ್ಲಿ ಅತ್ಯಂತ ನಿಕೃಷ್ಟವೆಂದು ಸಾರಿದರು?

## I

ಹಿಂದೂಗಳ ಧಾರ್ಮಿಕ ಸಾಹಿತ್ಯವು ೧. ಸಂಹಿತೆಗಳು, ೨. ಬ್ರಾಹ್ಮಣಗಳು, ೩. ಆರಣ್ಯಕಗಳು, ೪. ಉಪನಿಷತ್ತುಗಳು, ೫. ಸೂತ್ರಗಳು, ೬. ಇತಿಹಾಸಗಳು, ೭. ಸ್ಮೃತಿಗಳು ಮತ್ತು ೮. ಪುರಾಣಗಳನ್ನು ಒಳಗೊಳ್ಳುತ್ತದೆ.

ಈಗಾಗಲೇ ತಿಳಿಸಿರುವಂತೆ, ಇವೆಲ್ಲವುಗಳಿಗೂ ಸಮಾನಸ್ಥಾನ ಇದ್ದ ಕಾಲವೊಂದಿತ್ತು. ಆಗ ಅವುಗಳಲ್ಲಿ ಮೇಲು–ಕೀಳುಗಳೆಂಬ ಪವಿತ್ರ–ಅಪವಿತ್ರ ಎಂಬ ದೋಷಸಹಿತ–ದೋಷರಹಿತ ಎಂಬ ಭೇದಗಳು ಇರಲಿಲ್ಲ.

ಆಮೇಲೆ ವೈದಿಕ ಬ್ರಾಹ್ಮಣರಿಗೆ ವೇದಗಳಿಗೂ ಇತರ ಧಾರ್ಮಿಕ ಸಾಹಿತ್ಯದ ವರ್ಗಗಳಿಗೂ ಭೇದವಿದೆಯೆಂದು ತೋರಿಸಬೇಕೆನ್ನಿಸಿತು. ಅವರು ವೇದಗಳು ಉಳಿದ ಸಾಹಿತ್ಯ ವರ್ಗಗಳಿಗಿಂತ ಉತ್ಕೃಷ್ಟವೆಂದು ಸಾರಿದ್ದಾರೆ. ಅಲ್ಲದೆ ಅವುಗಳಿಗೆ ಪವಿತ್ರ ಮತ್ತು ದೋಷರಹಿತ ಎಂಬ ಪಟ್ಟಿಯನ್ನೂ ಹಚ್ಚಿದರು. ವೇದಗಳ ದೋಷರಾಹಿತ್ಯ ತತ್ವವನ್ನು ಸ್ಥಾಪಿಸಲು ಅವರು ತಮ್ಮ ಪವಿತ್ರ ಕೃತಿಗಳನ್ನು ಶ್ರುತಿ ಮತ್ತು ಶ್ರುತ್ಯೇತರ ಎಂದು ಎರಡು ವರ್ಗಗಳಾಗಿ ವಿಂಗಡಿಸಿದರು. ಮೊದಲನೆ ವರ್ಗವು ಮೇಲೆ ಹೇಳಿದ ಎಂಟು ವರ್ಗಗಳ ಪೈಕಿ ೧. ಸಂಹಿತೆ ಮತ್ತು ೨. ಬ್ರಾಹ್ಮಣ ಎಂಬ ಎರಡು ವರ್ಗಗಳನ್ನಷ್ಟೇ ಒಳಗೊಳ್ಳುತ್ತದೆ. ಉಳಿದವುಗಳನ್ನು ಅವರು ಶ್ರುತ್ಯೇತರ ಎಂದು ಪರಿಗಣಿಸಿದರು.

## II

ಈ ವಿಭಜನೆಯನ್ನು ಮೊದಲು ಯಾವಾಗ ಮಾಡಲಾಯಿತು ಎಂಬುದನ್ನು ಹೇಳಲು ಸಾಧ್ಯವಿಲ್ಲ. ಆದರೆ, ಯಾವ ಆಧಾರದ ಮೇಲೆ ಈ ವಿಭಜನೆಯನ್ನು ಮಾಡಲಾಯಿತು ಎಂಬುದು ಹೆಚ್ಚು ಮುಖ್ಯ ಪ್ರಶ್ನೆ. ಇತಿಹಾಸ ಮತ್ತು ಪುರಾಣಗಳನ್ನು ಏಕೆ ಬಿಡಲಾಯಿತು? ಆರಣ್ಯಕಗಳನ್ನೂ ಉಪನಿಷತ್ತುಗಳನ್ನೂ

---

*'ಸೂಪರ್‌ಸೆಷನ್ ಆಫ್ ದಿ ವೇದಾಸ್' ಎಂಬ ೨೧ ಪುಟದ ಮೂಲ ಬೆರಳಚ್ಚಿನ ಹಸ್ತಪ್ರತಿಯಲ್ಲಿ ಲೇಖಕರೇ ಅನೇಕ ತಿದ್ದುಪಡಿಗಳನ್ನೂ ಬದಲಾವಣೆಗಳನ್ನೂ ಮಾಡಿದ್ದಾರೆ. ಈ ಅಧ್ಯಾಯವು ಪೂರ್ಣವಾಗಿರುವಂತೆ ಕಾಣುತ್ತದೆ. ಏಕೆಂದರೆ ಈ ಅಧ್ಯಾಯವು ಲೇಖಕರು ತಮ್ಮ ಕೈಯಲ್ಲಿ ಬರೆದ ಪ್ಯಾರಾದೊಂದಿಗೆ ಮುಕ್ತಾಯವಾಗುತ್ತದೆ. ಸಂ.*

ಏಕೆ ಹೊರಗಿಟ್ಟರು? ಸೂತ್ರಗಳನ್ನೇಕೆ ಹೊರಗಿಟ್ಟರು? ಶ್ರುತಿವರ್ಗದಿಂದ ಇತಿಹಾಸ, ಪುರಾಣಗಳನ್ನೇಕೆ ಹೊರಗಿಟ್ಟರು ಎಂಬುದು ನಮಗೆ ಅರ್ಥವಾಗುತ್ತದೆ. ಈ ವಿಭಜನೆ ನಡೆದ ಕಾಲದಲ್ಲಿ, ಅವು ತೀರ ಪ್ರಾಥಮಿಕ ಹಾಗೂ ಶೈಶವಾವಸ್ಥೆಯಲ್ಲಿದ್ದ ಕಾರಣ ಅವನ್ನು ಪ್ರಾಯಶಃ ಬ್ರಾಹ್ಮಣಗಳಲ್ಲಿ ಸೇರಿಸಿರಬೇಕು. ಆರಣ್ಯಕಗಳು ಶ್ರುತಿಯ ಭಾಗವಲ್ಲವೆಂದು ಪ್ರತ್ಯೇಕವಾಗಿ ಹೇಳಿದುದೇಕೆ ಎಂಬುದೂ ಸಹ ಸ್ಪಷ್ಟವಾಗಿ ಅರ್ಥವಾಗುವ ವಿಷಯ.

ಅವು ಬ್ರಾಹ್ಮಣಗಳ ಒಂದು ಭಾಗವಾದ್ದರಿಂದ ಅವು ಶ್ರುತಿಯ ಭಾಗವೆಂದು ಮತ್ತೊಮ್ಮೆ ಸಾರಿ ಹೇಳಬೇಕಾಗಿರಲಿಲ್ಲ. ಉಪನಿಷತ್ತು ಮತ್ತು ಸೂತ್ರಗಳ ಸಮಸ್ಯೆ ಮಾತ್ರ ಒಗಟಾಗಿಯೇ ಉಳಿದಿದೆ. ಅವನ್ನು ಶ್ರುತಿಯಿಂದ ಹೊರಗೇಕಿಡಲಾಯಿತು? ಉಪನಿಷತ್ತಿನ ಸಮಸ್ಯೆ ಮತ್ತೊಂದು ಅಧ್ಯಾಯದ ವಿಷಯವಾಗಿದೆ. ಇಲ್ಲಿ ಸೂತ್ರಗಳ ಸಮಸ್ಯೆಯನ್ನಷ್ಟೆ ಪ್ರಸ್ತಾಪಿಸಲಾಗಿದೆ. ಏಕೆಂದರೆ ಸೂತ್ರಗಳನ್ನು ಶ್ರುತಿಯಿಂದ ಹೊರಗಿಟ್ಟಿದುದರ ಕಾರಣ ತಿಳಿದುಕೊಳ್ಳುವುದು ಸಾಧ್ಯವಿಲ್ಲ. ಶ್ರುತಿಯ ವರ್ಗದಲ್ಲಿ ಬ್ರಾಹ್ಮಣಗಳನ್ನು ಸೇರಿಸಲು ಸಮಂಜಸ ಕಾರಣಗಳಿದ್ದಿದ್ದರೆ ಅದೇ ಕಾರಣಗಳು ಸೂತ್ರಗಳನ್ನೂ ಶ್ರುತಿವರ್ಗದಲ್ಲಿ ಸೇರಿಸಲು ಸಾಕಾಗುತ್ತಿದ್ದವು. ಮ್ಯಾಕ್ಸ್‌ಮ್ಯುಲ್ಲರ್ ಹೇಳುವಂತೆ "ಒಂದು ರಾಷ್ಟ್ರಕ್ಕೆ ತನ್ನ ಪುರಾತನ ರಾಷ್ಟ್ರೀಯ ಕಾವ್ಯಕ್ಕೆ ಮಾನವಾತೀತ ಮೂಲವನ್ನು ಆರೋಪಿಸುವುದು, ಅದರಲ್ಲೂ ಆ ಕಾವ್ಯದಲ್ಲಿ ಬಹಳಷ್ಟು ಆ ರಾಷ್ಟ್ರದ ದೇವರುಗಳನ್ನು ಉದ್ದೇಶಿಸಿ ಮಾಡಿದ ಪ್ರಾರ್ಥನೆಗಳು ಮತ್ತು ಮಂತ್ರಗಳೇ ಇದ್ದರೆ ಹೇಗೆ ಆವಶ್ಯಕವಾಯಿತು ಎಂಬುದನ್ನು ನಾವು ಅರ್ಥಮಾಡಿಕೊಳ್ಳಬಹುದು. ಆದರೆ ಬ್ರಾಹ್ಮಣಗಳ ಗದ್ಯರಚನೆಯ ಮಾತು ಬೇರೆ. ಮಂತ್ರಗಳಿಗಿಂತ ಖಂಡಿತವಾಗಿಯೂ ಬಹಳ ಇತ್ತೀಚಿನವಾದ ಬ್ರಾಹ್ಮಣಗಳಿಗೂ ಶ್ರುತಿಯೆಂಬ ಹೆಸರು ಬಂದಿರಲು ಕಾರಣವೇನೆಂದರೆ, ಈ ಈಶ್ವರಶಾಸ್ತ್ರೀಯ ರಚನೆಗಳಿಂದಲೇ (ಬ್ರಾಹ್ಮಣಗಳಿಂದಲೇ) ಮಂತ್ರಗಳ ಸರಳವಾದ ಹಳೆಯ ಕಾವ್ಯದಿಂದಲ್ಲ ಬ್ರಾಹ್ಮಣಗಳ ಅನೇಕ ಮಹತ್ವಾಕಾಂಕ್ಷೆಯ ಹೇಳಿಕೆಗಳಿಗೆ ಕಲ್ಪಿತವಾದ ದೈವೀಪ್ರಾಮಾಣ್ಯ ಬರುವುದು. ಮಂತ್ರ ಮತ್ತು ಬ್ರಾಹ್ಮಣಗಳು ಏಕಕಾಲದಲ್ಲಿ ಹುಟ್ಟಿದವು ಎಂದು ಬ್ರಾಹ್ಮಣರು ಮಾಡುವ ವಾದಕ್ಕೆ ನಾವು ಯಾವ ಮಹತ್ವವನ್ನು ಕೊಡಬೇಕಾಗಿಲ್ಲವಾದರೂ, ಬ್ರಾಹ್ಮಣ ಮತ್ತು ಮಂತ್ರಗಳ ಕಾಲವು ಸೂತ್ರ ಮತ್ತು ಲೌಕಿಕ ಸಾಹಿತ್ಯದ ಕಾಲಕ್ಕಿಂತ ಹೆಚ್ಚು ಹಳೆಯದು ಎಂಬ ಸಾಮಾನ್ಯ ಅಭಿಪ್ರಾಯವನ್ನು ನಾವು ಅಷ್ಟೇ ನಿಷ್ಪ್ರಯೋಜಕವೆಂದು ಪರಿಗಣಿಸಬೇಕಾಗಿಲ್ಲ. ಅನಂತರದ ರಚನೆಗಳನ್ನು ಮೂಲ ಪವಿತ್ರ ಗ್ರಂಥಗಳ ಮಾಲೆಯೇ ಇದ್ದಾಗ ಅಂಥ ಹಳೆಯ ಕೃತಿಗಳಲ್ಲಿ ಸೇರಿಸುವುದು ಬಹಳ ಸುಲಭ. ಬ್ರಾಹ್ಮಣಗಳನ್ನು ಹಾಗೇ ಮಾಡಲಾಯಿತು. ಆದರೆ ಪವಿತ್ರ ಗ್ರಂಥಗಳ ಒಡಲಿನಿಂದ ಹಳೆಯ ಮತ್ತು ನಿಜವಾದ ಭಾಗಗಳನ್ನು ತೆಗೆದುಹಾಕಿ ಅವುಗಳಿಗೆ ಹೊಸ ಕಾಲವನ್ನು ಆರೋಪಿಸುವುದನ್ನು ಊಹಿಸಿಕೊಳ್ಳಲೂ ಸಾಧ್ಯವಿಲ್ಲ. ಹಾಗೆ ಮಾಡಬೇಕಾದರೆ, ತೆಗೆದುಹಾಕಲಾದ ಭಾಗಗಳಲ್ಲಿರುವ ಕೆಲ ಸಿದ್ಧಾಂತಗಳಿಗೆ ಪ್ರಾಮಾಣ್ಯವಿಲ್ಲ ಎಂಬ ಉದ್ದೇಶವುಳ್ಳವರಿರಬೇಕು. ಆದರೆ ಅಂತಹ ಊಹೆಗೆ, ಅನಂತರದ ಸೂತ್ರ ಸಾಹಿತ್ಯದಲ್ಲಿ ಯಾವ ಸಾಕ್ಷ್ಯವೂ ಸಿಕ್ಕುವುದಿಲ್ಲ. ಸೂತ್ರಗಳನ್ನು ಶ್ರುತಿಯ ಮಟ್ಟಕ್ಕೆ ಏರಿಸದಿರಲು ಅವು ಬ್ರಾಹ್ಮಣ ಮತ್ತು ಮಂತ್ರಗಳಿಗಿಂತ ಇತ್ತೀಚಿನವು ಎಂಬ ಕಾರಣ ಬಿಟ್ಟರೆ ನಮಗೆ ಮತ್ತಾವ ಕಾರಣವೂ ಸಿಕ್ಕುವುದಿಲ್ಲ. ಋಷಿಗಳು ಮಂತ್ರಗಳನ್ನು ರಚಿಸಿದ ಕಾಲದಿಂದ ಹಿಡಿದು ಬ್ರಾಹ್ಮಣಗಳು ರಚನೆಯಾಗುವ ಕಾಲದವರೆಗೆ ಯುಗಗಳೇ ಕಳೆದಿರಬೇಕು ಎಂಬುದರ ಅರಿವು ಬ್ರಾಹ್ಮಣರಿಗಿತ್ತೆ?

ಎಂಬ ಪ್ರಶ್ನೆಗೆ ಹೌದೆಂದು ಹೇಳಲು ನಾವು ಸಂಕೋಚಪಡಬೇಕಾಗಿಲ್ಲ. ಆದರೆ ಭಾರತೀಯ ಈಶ್ವರಶಾಸ್ತ್ರಜ್ಞರು (Theologians), ಮಂತ್ರಗಳಿಗೆ ಕೊಡುವ ಮಾನ್ಯತೆ ಮತ್ತು ಕಾಲವನ್ನೇ ಬ್ರಾಹ್ಮಣಗಳಿಗೂ ಹೊಣೆಗೇಡಿತನದಿಂದ ಕೊಡುವುದು ವಿಚಿತ್ರವಾಗಿದೆ. ಸೂತ್ರಗಳಿಗೂ ಅದೇ ದೈವೀಪ್ರಾಮಾಣ್ಯವನ್ನು ಕೊಡದೇ ಇರಲು ಅವರ ಕಾರಣವು ಬಹಳ ಬಲವಾದದ್ದಿರಬೇಕೆಂಬುದನ್ನು ಇದು ತೋರಿಸುತ್ತದೆ.

ಸೂತ್ರಗಳನ್ನು ಶ್ರುತಿವರ್ಗದಿಂದ ಬೇರ್ಪಡಿಸಿದುದು ಒಂದು ಒಗಟೇ ಸರಿ. ಅದಕ್ಕೆ ಬಲವಾದ ಸ್ಪಷ್ಟೀಕರಣ ಬೇಕಾಗಿದೆ.

ಈ ವಿಷಯದ ಪರೀಕ್ಷೆ ಮಾಡಬೇಕೆನ್ನುವ ವಿದ್ಯಾರ್ಥಿಗೆ ಇನ್ನೂ ಅನೇಕ ಒಗಟುಗಳು ಎದುರಾಗುತ್ತವೆ. ಅವೆಲ್ಲ ಶ್ರುತಿ ಎಂಬ ಪದ ಯಾವ ಸಾಹಿತ್ಯಕ್ಕೆ ಅನ್ವಯಿಸುತ್ತದೆಯೋ ಅದರ ವಸ್ತುವಿಷಯಗಳಲ್ಲಿ ಆಗುವ ಬದಲಾವಣೆಗೆ, ಮತ್ತು ಅವುಗಳ ಪ್ರಾಮಾಣ್ಯಕ್ಕೆ ಸಂಬಂಧಿಸಿದವು.

ಅಂತಹ ಒಂದು ಒಗಟು ಬ್ರಾಹ್ಮಣಗಳೆಂದು ಕರೆಯಲಾಗುವ ಸಾಹಿತ್ಯ ವರ್ಗಕ್ಕೆ ಸಂಬಂಧಿಸಿದುದು. ಒಂದು ಕಾಲದಲ್ಲಿ ಬ್ರಾಹ್ಮಣಗಳು ಶ್ರುತಿಗಳಲ್ಲಿ ಸೇರ್ಪಡೆಯಾಗಿದ್ದವು. ಆದರೆ ಕಾಲಕ್ರಮೇಣ ಅವು ಈ ಸ್ಥಾನವನ್ನು ಕಳೆದುಕೊಂಡಂತೆ ಕಾಣುತ್ತದೆ. ಮನು ಬ್ರಾಹ್ಮಣಗಳನ್ನು ಶ್ರುತಿವರ್ಗದಿಂದ ಬೇರ್ಪಡಿಸಿದಂತೆ ಕಾಣುತ್ತದೆ. ಈ ಕೆಳಗಿನ ಮನುವಿನ ಹೇಳಿಕೆಯು ಇದನ್ನು ಸಮರ್ಥಿಸುತ್ತದೆ.[೧]

"ಶ್ರುತಿಯೆಂದರೆ ವೇದ ಮತ್ತು ಸ್ಮೃತಿ ಎಂದರೆ ಧರ್ಮಶಾಸ್ತ್ರಗಳು. ಇವುಗಳ ವಿಷಯಗಳನ್ನು ತರ್ಕವು ಪ್ರಶ್ನಿಸಕೂಡದು. ಏಕೆಂದರೆ, ಅವುಗಳಿಂದಾಗಿಯೇ ನಮ್ಮ ಕರ್ಮ (ಕರ್ತವ್ಯ)ಗಳ ಜ್ಞಾನವು ಉಂಟಾಗುವುದು. ತರ್ಕವನ್ನು ಆಧರಿಸಿದ ಗ್ರಂಥಗಳನ್ನು ಅವಲಂಬಿಸಿ ಒಂದು ವೇಳೆ ಯಾವ ಬ್ರಾಹ್ಮಣನಾದರೂ ಈ ಎರಡು ರೀತಿಯ ಮೂಲ ಪ್ರಮಾಣಗಳನ್ನು ಖಂಡಿಸಿದರೆ, ಶಿಷ್ಟರು ಅವನನ್ನು ಸಂದೇಹವಾದಿಯೆಂದೂ ವೇದನಿಂದಕನೆಂದೂ ಪರಿಗಣಿಸಿ, ಅವನಿಗೆ ಬಹಿಷ್ಕಾರ ಹಾಕಬೇಕು.... ಕರ್ಮದ ಬಗೆಗೆ ತಿಳಿದುಕೊಳ್ಳಬೇಕೆನ್ನುವವರಿಗೆ ಶ್ರುತಿಯು ಪರಮ ಪ್ರಮಾಣ."

ಹಾಗಾದರೆ, ಬ್ರಾಹ್ಮಣಗಳನ್ನು ಶ್ರುತಿಯಿಂದ ಹೊರಹಾಕಲಾಯಿತೇಕೆ?

## III

ಸ್ಮೃತಿಗಳೆಂದು ಕರೆಯಲಾಗುವ ಸಾಹಿತ್ಯವರ್ಗವನ್ನು ಈಗ ಪರಿಶೀಲಿಸೋಣ. ಇವುಗಳಲ್ಲಿ ಅತ್ಯಂತ ಮುಖ್ಯವಾದುವೆಂದರೆ ಮನುಸ್ಮೃತಿ ಮತ್ತು ಯಾಜ್ಞವಲ್ಕ್ಯ ಸ್ಮೃತಿ. ಸ್ಮೃತಿಗಳ ಸಂಖ್ಯೆ ಯಾವಾಗಲೂ ಹೆಚ್ಚುತ್ತಲೇ ಇತ್ತು ಮತ್ತು ಸ್ಮೃತಿಗಳ ರಚನೆ ಬ್ರಿಟಿಷರು ಬರುವವರೆಗೂ ನಡೆಯುತ್ತಲೇ ಇತ್ತು. ಮಿತ್ರಮಿಶ್ರನು ೫೭ ಸ್ಮೃತಿಗಳ ಬಗೆಗೆ ಹೇಳಿದರೆ, ನೀಲಕಂಠ ೯೭ ಮತ್ತು ಕಮಲಾಕರ ೧೩೧

೧. 'ವೇದ' ಎಂಬ ಪದವು 'ಬ್ರಾಹ್ಮಣ'ವನ್ನೂ ಒಳಗೊಳ್ಳುತ್ತದೆ ಎಂಬ ಆಧಾರದ ಮೇಲೆ ಕೆಲವರು ಇದನ್ನು ಅಲ್ಲಗಳೆಯಬಹುದು. ಆದರೆ ಮನು 'ಶ್ರುತಿ' ಎಂಬ ಪದವನ್ನು ವಿಶಿಷ್ಟಾರ್ಥದಲ್ಲಿ ಅಂದರೆ, 'ಬ್ರಾಹ್ಮಣಗಳನ್ನು ಹೊರತುಪಡಿಸಿ' ಎಂಬರ್ಥದಲ್ಲಿ ಬಳಸುತ್ತಾನೆ ಎಂದು ನನಗನ್ನಿಸುತ್ತದೆ. 'ಮನುಸ್ಮೃತಿ'ಯಲ್ಲಿ ಒಂದೇ ಒಂದು ಸ್ಥಳದಲ್ಲಿ (iv, ೧೦೦) ಬಿಟ್ಟರೆ – ಬೇರೆಲ್ಲಿಯೂ ಬ್ರಾಹ್ಮಣಗಳ ಪ್ರಸ್ತಾಪ ಬರುವುದಿಲ್ಲ ಎಂಬುದು ನನ್ನ ಅನಿಸಿಕೆಯನ್ನು ಪುಷ್ಟೀಕರಿಸುತ್ತದೆ. ಅಲ್ಲಿಯಾದರೂ ಅವನು ಮಂತ್ರ ಭಾಗವನ್ನು ಮಾತ್ರ ಅಧ್ಯಯನ ಮಾಡಬೇಕು ಎನ್ನುತ್ತಾನೆ.

ಸ್ಮೃತಿಗಳ ಬಗೆಗೆ ಹೇಳುತ್ತಾರೆ. ಹಿಂದೂಗಳಿಂದ ಪವಿತ್ರವೆಂದು ಪರಿಗಣಿಸಲಾಗಿರುವ ಯಾವುದೇ ವರ್ಗದ ಧಾರ್ಮಿಕ ಸಾಹಿತ್ಯಕ್ಕಿಂತ ಸ್ಮೃತಿ ಸಾಹಿತ್ಯವು ದೊಡ್ಡದು.

ವೇದಗಳಿಗೂ ಸ್ಮೃತಿಗಳಿಗೂ ಇರುವ ಸಂಬಂಧದ ಬಗೆಗೆ ಅನೇಕ ಅಂಶಗಳಿವೆ.

ಇದರಲ್ಲಿ ಮೊದಲನೆಯದೆಂದರೆ, ಸ್ಮೃತಿಯು ಬೌಧಾಯನ, ಗೌತಮ ಅಥವಾ ಆಪಸ್ತಂಭರ ಧರ್ಮಸೂತ್ರಗಳು ಪ್ರತಿನಿಧಿಸುವ ಧರ್ಮಶಾಸ್ತ್ರ ಸಾಹಿತ್ಯದ ಭಾಗವೆಂದು ಪರಿಗಣಿಸಿರಲಿಲ್ಲ.[೧] ಮೊದಲು ಸ್ಮೃತಿಯು ವಿವೇಕಿಗಳಾದ ಸಮಾಜ ಧುರೀಣರು ಒಪ್ಪಿದ ಮತ್ತು ಶಿಫಾರಸು ಮಾಡಿದ ಸಾಮಾಜಿಕ ಪದ್ಧತಿಗಳು ಮತ್ತು ರೂಢಿಗಳೊಡನೆ ವ್ಯವಹರಿಸುತ್ತಿತ್ತು. ಪ್ರೊ. ಅಲ್ತೇಕರರು ವಿಮರ್ಶಿಸುವಂತೆ:

"ಪೂರ್ವದಲ್ಲಿ ಸ್ಮೃತಿಗಳೂ ಸದಾಚಾರವೂ ಸ್ವರೂಪ ಮತ್ತು ವಿಷಯಗಳಲ್ಲಿ ಒಂದೇ ಆಗಿದ್ದವು ಹಾಗೂ ಸದಾಚಾರದ ಮೇಲೆಯೇ ನಿಂತಿದ್ದವು. ಸ್ಮೃತಿಗಳು ಅಸ್ತಿತ್ವಕ್ಕೆ ಬಂದಾಗ ಸದಾಚಾರದ ಪರಿಧಿ ಸ್ವಾಭಾವಿಕವಾಗಿಯೇ ಕಡಿಮೆಯಾಯಿತು. ಏಕೆಂದರೆ ಅದರಲ್ಲಿನ ಬಹಳಷ್ಟು ಭಾಗವನ್ನು, ಸ್ಮೃತಿಗಳು ಕಟ್ಟಳೆಗಳೆಂದು ಪಟ್ಟಿಮಾಡಿದ್ದವು. ಅನಂತರ, ಸದಾಚಾರವು ಸ್ಮೃತಿಗಳಲ್ಲಿ ಸೇರಿಲ್ಲದ ಹಳೆಯ ಪದ್ಧತಿಗಳಿಗೆ ಅಥವಾ ಹಳೆಯ ಧರ್ಮಶಾಸ್ತ್ರಗಳಲ್ಲಿ ಅಥವಾ ಸ್ಮೃತಿಗಳಲ್ಲಿ ಪಟ್ಟಿಯಾಗುವ ಮುನ್ನ ಸಾಮಾಜಿಕ ಮನ್ನಣೆ ಪಡೆದಿದ್ದ ಹೊಸ ಕಟ್ಟಳೆಗಳಿಗೆ ಅನ್ವಯವಾಗತೊಡಗಿತು."

ನಾವು ಗಮನಿಸಬೇಕಾದ ಎರಡನೆಯ ಅಂಶವೆಂದರೆ, ಸ್ಮೃತಿಗಳನ್ನು ವೇದ ಅಥವಾ ಶ್ರುತಿಗಳಿಂದ ಪೂರ್ಣಭಿನ್ನವೆಂದು ಪರಿಗಣಿಸಲಾಗುತ್ತಿತ್ತು. ಅವುಗಳ ಮನ್ನಣೆ ಮತ್ತು ಪ್ರಾಮಾಣ್ಯಗಳ ವಿಷಯವಾಗಿ ಹೇಳಬೇಕೆಂದರೆ ಅವುಗಳಿಗೆ ಸಂಪೂರ್ಣವಾಗಿ ಭಿನ್ನವಾದ ತಳಹದಿಯಿತ್ತು. ಶ್ರುತಿಗಳಿಗೆ ದೈವದ ಅನುಮತಿ ಇತ್ತು. ಆದರೆ ಸ್ಮೃತಿಗಳಿಗೆ ಸಮಾಜದ ಒಪ್ಪಿಗೆ ಇತ್ತು. ಅವುಗಳ ಪ್ರಾಮಾಣ್ಯಕ್ಕೆ ಸಂಬಂಧಿಸಿದಂತೆ ಪೂರ್ವಮೀಮಾಂಸೆ ಎರಡು ನಿಯಮಗಳನ್ನು ಹೇಳುತ್ತದೆ. ಶ್ರುತಿಯ ಎರಡು ವಾಕ್ಯಗಳಲ್ಲಿ ಪರಸ್ಪರ ವಿರೋಧವಿದ್ದರೆ ಎರಡೂ ಪ್ರಮಾಣಗಳೇ ಮತ್ತು ಎರಡರಲ್ಲಿ ನಮಗೆ ಬೇಕಾದುದನ್ನು ಆರಿಸಿಕೊಳ್ಳುವ ಸ್ವಾತಂತ್ರ್ಯವನ್ನು ವೇದಗಳು ನಮಗೆ ಕೊಟ್ಟಿವೆ ಎಂಬುದು ಮೊದಲನೆಯ ನಿಯಮ. ಒಂದು ವೇಳೆ ಸ್ಮೃತಿಯ ವಾಕ್ಯವು ಶ್ರುತಿಯ ವಾಕ್ಯಕ್ಕೆ ವಿರುದ್ಧವಾಗಿದ್ದರೆ ಸ್ಮೃತಿವಾಕ್ಯವನ್ನೇ ತಿರಸ್ಕರಿಸಬೇಕು ಎಂಬುದು ಎರಡನೆಯ ನಿಯಮ. ಈ ಎರಡು ನಿಯಮಗಳನ್ನೂ ಕಟ್ಟುನಿಟ್ಟಿನಿಂದ ಪಾಲಿಸಲಾಗುತ್ತಿತ್ತು. ಇದರ ಪರಿಣಾಮವಾಗಿ, ಸ್ಮೃತಿಗಳಿಗೆ ಶ್ರುತಿಗಳ ಸ್ಥಾನವಾಗಲಿ ಪ್ರಾಮಾಣ್ಯವಾಗಲಿ ಸಿಕ್ಕಲಿಲ್ಲ.

ಆದರೆ ಆಶ್ಚರ್ಯವೋ ಎಂಬಂತೆ, ಒಂದು ಕಾಲ ಬಂತು. ಆಗ ಬ್ರಾಹ್ಮಣರು ವೇದಗಳಿಗಿಂತ ಹೆಚ್ಚಿನ ಸ್ಥಾನವನ್ನು ಸ್ಮೃತಿಗಳಿಗೆ ಕೊಟ್ಟರು. ಅಲ್ತೇಕರರು ತಿಳಿಸುತ್ತಾರೆ:

"ಕೆಲವೊಂದು ಶ್ರುತಿವಾಕ್ಯಗಳು ಆಗಿನ ಕಾಲದ ಪದ್ಧತಿಯೊಡನೆ ಹೊಂದಿಕೊಳ್ಳದಿದ್ದರೆ ಅಥವಾ ಅದರೊಡನೆ ನೇರವಾಗಿ ಸಂಘರ್ಷಿಸಿದರೆ, ಅಂತಹ ವಾಕ್ಯಗಳನ್ನು ಸ್ಮೃತಿಗಳು ನಿಜವಾಗಿಯೂ ತಳ್ಳಿಹಾಕಿವೆ. ದೈವಕರ್ಮವನ್ನು ಬೆಳಿಗ್ಗೆ ಮಾಡುವುದು, ಪಿತೃಕರ್ಮವನ್ನು ಮಧ್ಯಾಹ್ನ ಮಾಡುವುದು ವೈದಿಕ ಪದ್ಧತಿ. ಕಾಲಕ್ರಮೇಣ ಈಗ ಪ್ರಚಲಿತವಿರುವ ಪಿತೃತರ್ಪಣ ರೂಢಿಗೆ ಬಂದಿತು ಮತ್ತು ಬೆಳಗಿನ ಸ್ನಾನ ನಿತ್ಯಕರ್ಮವಾದಾಗಿನಿಂದ ಪಿತೃತರ್ಪಣವನ್ನು ಬೆಳಿಗ್ಗೆಯೇ ಮಾಡುವುದು ರೂಢಿಗೆ

೧. ಈ ವಿಷಯವಾಗಿ 'ಕಾಣೆ ಮೆಮೋರಿಯಲ್ ವಾಲ್ಯೂಮ್' (ಪುಟ ೧೮-೨೫)ನಲ್ಲಿ ಪ್ರೊ. ಅಲ್ತೇಕರರ ಬೆಳಕು ಚೆಲ್ಲುವಂಥ "ದಿ ಪೊಸಿಷನ್ ಆಫ್ ಸ್ಮೃತೀಸ್ ಆ್ಯಸ್ ಎ ಸೋರ್ಸ್ ಆಫ್ ಧರ್ಮ" ಎಂಬ ಲೇಖನವನ್ನು ನೋಡಿ.

ಬಂದಿತು. ಈ ಪದ್ಧತಿಯು ಮೇಲೆ ತಿಳಿಸಿದ ನಿಯಮವು ವಿಧಿಸಿರುವ ಪದ್ಧತಿಯೊಡನೆ ನೇರವಾಗಿ ಘರ್ಷಿಸುತ್ತದೆ. ಆದರೆ, ಸ್ಮೃತಿಚಂದ್ರಿಕಾ ಗ್ರಂಥದ ಕರ್ತೃವಾದ ದೇವಮಭಟ್ಟನು ಇದರಲ್ಲೇನೂ ತಪ್ಪಿಲ್ಲವೆನ್ನುತ್ತಾನೆ. ಶ್ರುತಿಯ ವಿಧಿಯು ಪಿತೃ ತರ್ಪಣವನ್ನುಳಿದು ಬೇರೆಯ ಪಿತೃಕರ್ಮಗಳಿಗೆ ಅನ್ವಯಿಸುತ್ತದೆ ಎಂದು ನಾವು ತಿಳಿಯಬೇಕು. ವಿಶ್ವಾಮಿತ್ರನಿಗೆ ಬದುಕಿದ್ದ ನೂರು ಪುತ್ರರಿದ್ದರೂ ಶುನಶ್ಯೇಫನನ್ನೂ ದತ್ತು ತೆಗೆದುಕೊಂಡ ಎಂದು ಶ್ರುತಿ ಸಾರುತ್ತದೆ. ಇದು, ಒಬ್ಬ ವ್ಯಕ್ತಿ ತನ್ನ ಸ್ವಂತ ಹಲವಾರು ಪುತ್ರರು ಬದುಕಿದ್ದರೂ ಸಹ ಮತ್ತೂ ಒಬ್ಬನನ್ನು ದತ್ತುಪುತ್ರನೆಂದು ಸ್ವೀಕರಿಸಲು ಅನುಮತಿ ಕೊಟ್ಟಂತಾಯಿತು. ಆದರೆ ಮಿತ್ರಮಿಶ್ರನು ನಾವು ಆ ರೀತಿ ತರ್ಕಿಸುವುದು ತಪ್ಪು ಎನ್ನುತ್ತಾನೆ. ಈ ಸ್ಮೃತಿಯ ಪದ್ಧತಿಯೂ ಶ್ರುತಿವಾಕ್ಯವನ್ನೇ ಅವಲಂಬಿಸಿದೆ ಎಂದು ನಾವು ಊಹಿಸಬೇಕು. ಆ ಶ್ರುತಿವಾಕ್ಯ ನಮಗೆ ಸಿಕ್ಕದಿರಬಹುದು, ಆದರೆ ಅಂಥದೊಂದು ಶ್ರುತಿವಾಕ್ಯ ಇರಲೇಬೇಕು ಎಂದು ನಾವು ಊಹಿಸಬೇಕಾಗುತ್ತದೆ ಎನ್ನುತ್ತಾನೆ ಮಿತ್ರಮಿಶ್ರ."

" 'ನ ಶೇಷೋ ಜ್ಞೇಽ ನ್ಯಜಾತಮಸ್ತಿ' ಎಂಬ ವೇದವಾಕ್ಯವು ದತ್ತು ಪುತ್ರ ಸ್ವೀಕಾರ ಪದ್ಧತಿಯನ್ನು ಖಂಡಿತವಾಗಿ ನಿರಾಕರಿಸುತ್ತದೆ. ಆದರೆ ಆಮೇಲಿನ ಸ್ಮೃತಿ ಸಾಹಿತ್ಯವು ಇದನ್ನು ಸ್ಪಷ್ಟವಾಗಿ ಅನುಮೋದಿಸುತ್ತದೆ. ಶ್ರುತಿಯ ಅಭಿಪ್ರಾಯವನ್ನು ಸ್ಮೃತಿಯೊಂದು ತಳ್ಳಿಹಾಕಿರುವುದಕ್ಕೆ ಇದೊಂದು ಸ್ಪಷ್ಟ ಉದಾಹರಣೆ. ಆದರೆ ಮಿತ್ರಮಿಶ್ರನು ಇದರಲ್ಲಿ ತಪ್ಪೇನೂ ಇಲ್ಲವೆನ್ನುತ್ತಾನೆ. ಶ್ರುತಿವಾಕ್ಯವು ಕೇವಲ ಅರ್ಥ ವಾದ. ಅದು ಯಾವ ನಿಯಮವನ್ನೂ ವಿಧಿಸುವುದಿಲ್ಲ. ಆದರೆ ಸ್ಮೃತಿಗಳು ಹೋಮ ಇತ್ಯಾದಿಯನ್ನು ಸಮರ್ಪಕವಾಗಿ ಮಾಡುವ ಸಲುವಾಗಿ ದತ್ತುಸ್ವೀಕಾರವನ್ನು ವಿಧಿಸುತ್ತವೆ. ಹೀಗೆ, ಒಂದು ವಿಶಿಷ್ಟ ವಿಧಿಯನ್ನೇ ಉದ್ದೇಶವಾಗಿ ಉಳ್ಳ ಸ್ಮೃತಿವಾಕ್ಯವು ಅರ್ಥ ವಾದದ ಶ್ರುತಿಯನ್ನು ಸಮರ್ಥವಾಗಿ ತಿರಸ್ಕರಿಸುತ್ತದೆ."

"ತದನಂತರ ಕಾಲದ ಸತಿ ಪದ್ಧತಿಯು ಆತ್ಮಹತ್ಯೆಯನ್ನು ನಿಷೇಧಿಸುವ ವೈದಿಕ ನಿಯಮವನ್ನು ವಿರೋಧಿಸುತ್ತದೆ. ಆದರೆ ಅಪರಾರ್ಕನು ಶ್ರುತಿಯೊಡನೆ ಘರ್ಷಣೆಯು ರೂಢಿಯನ್ನು ಅಮಾನ್ಯ ಮಾಡಲಾರದು ಎಂದು ವಾದಿಸುತ್ತಾನೆ. ಏಕೆಂದರೆ, ಶ್ರುತಿವಾಕ್ಯವು ಆತ್ಮಹತ್ಯೆಯನ್ನು ತಿರಸ್ಕರಿಸುವ ಒಂದು ಸರ್ವಾನ್ವಯ ನಿಯಮವನ್ನು ವಿಧಿಸಿದರೆ ಸ್ಮೃತಿಗಳು ವಿಧವೆಗೆ ಸಂಬಂಧಿಸಿದಂತೆ ಒಂದು ವಿಶೇಷ ವಿನಾಯಿತಿ ಮಾಡಿದೆ."

ಸತಿ ಪದ್ಧತಿಯೂ ದತ್ತು ಸ್ವೀಕಾರವೂ ಒಳ್ಳೆಯ ಪದ್ಧತಿಗಳೇ ಅಲ್ಲವೇ ಎಂಬುದು ಬೇರೆ ಪ್ರಶ್ನೆ. ಹೇಗೋ ಸಮಾಜವು ಅವನ್ನು ಅನುಮೋದಿಸುತ್ತಾ ಬಂದಿದೆ. ಸ್ಮೃತಿಗಳು ಅವಕ್ಕೆ ವಿಧಿ ರೂಪದ ಸಮ್ಮತಿಯನ್ನು ಕೊಟ್ಟಿವೆ ಮತ್ತು ವೇದಪ್ರಾಮಾಣ್ಯದ ವಿರುದ್ಧವೂ ಸಹ ತಮ್ಮ ಸಮ್ಮತಿಯನ್ನು ಎತ್ತಿಹಿಡಿಯಲು ಪ್ರಯತ್ನಿಸಿವೆ.

ಇಲ್ಲಿ ಪ್ರಶ್ನೆಯೆಂದರೆ, ವೇದಗಳಿಗೆ ಪರಮಾಧಿಕಾರವಿದೆಯೆಂದು ಸಿದ್ಧಪಡಿಸಲು ಇಷ್ಟೆಲ್ಲ ಪ್ರಯತ್ನಪಟ್ಟ ಬ್ರಾಹ್ಮಣರು, ಕೊನೆಗೆ ವೇದಗಳನ್ನು ಕಡೆಗಣಿಸಲು ಹಾಗೂ ವೇದಗಳಿಗಿಂತ ಹೆಚ್ಚಿನ ಅಧಿಕಾರವನ್ನು ಸ್ಮೃತಿಗಳಿಗೆ ಕೊಡಲು ಕಾರಣವೇನು? ಮೊದಲು ಅವರು ವೇದಗಳಿಗೆ ದೈವಕ್ಕಿಂತಲೂ ಹೆಚ್ಚಿನ ಅಧಿಕಾರವನ್ನು ಕೊಡಲು ಹೆಣಗಾಡಿದರು. ಆದರೆ, ಆಮೇಲೆ ಅವುಗಳನ್ನು ಕೇವಲ ಸಾಮಾಜಿಕ ಒಪ್ಪಿಗೆ ಮಾತ್ರ ಪಡೆದಿದ್ದ ಸ್ಮೃತಿಗಳಿಗಿಂತ ಕೆಳಕ್ಕೆ ತಳ್ಳಿದರೇಕೆ?

ಅವರು ಕೈಗೊಂಡ ಕ್ರಮಗಳು ಎಷ್ಟು ಚತುರವೂ ಕೃತಕವೂ ಆಗಿದ್ದವೆಂದರೆ ವೇದಗಳಿಗಿಂತ ಶ್ರೇಷ್ಠತರವಾದ ಸ್ಥಾನವನ್ನು ಸ್ಮೃತಿಗಳಿಗೆ ಕೊಡುವಂತೆ ಬ್ರಾಹ್ಮಣರನ್ನು ಪ್ರೇರೇಪಿಸಲು ಏನೋ ಒಂದು ನಿರ್ದಿಷ್ಟ ಕಾರಣವಿದ್ದಿರಲೇಬೇಕು ಎಂದು ಯಾರಿಗಾದರೂ ಅನಿಸುತ್ತದೆ.

ಅವರ ವಾದಗಳು ಎಷ್ಟು ಕೃತಕ, ಚತುರ ಹಾಗೂ ಹತಾಶೆಯಿಂದ ಕೂಡಿದ್ದವೆಂಬುದರ ಅಲ್ಪ ಪರಿಚಯ ನಮಗಾಗಬೇಕಾದರೆ ಅವುಗಳ ಒಂದು ಸಂಕ್ಷಿಪ್ತರೂಪದ ವಿವರಣೆ ಕೊಡುವುದು ಉಪಯುಕ್ತ.

ಕೃತಕರೂಪದ ವಾದಕ್ಕೆ ಉದಾಹರಣೆಯೆಂಬಂತೆ ಬೃಹಸ್ಪತಿ ಸೃಷ್ಟಿಸಿರುವ ಒಂದು ಅಭಿಪ್ರಾಯವನ್ನು ನಾವು ಪ್ರಸ್ತಾಪಿಸಬಹುದು. ಅವನ ಪ್ರಕಾರ, ಶ್ರುತಿ ಮತ್ತು ಸ್ಮೃತಿ ಬ್ರಾಹ್ಮಣನ ಎರಡು ಕಣ್ಣುಗಳು. ಅವುಗಳಲ್ಲಿ ಒಂದು ಹೋದರೂ, ಅವನು ಒಕ್ಕಣ್ಣನಾಗುತ್ತಾನೆ.

ಚಾತುರ್ಯದಿಂದ ಕೂಡಿದ ವಾದಕ್ಕೆ ಉದಾಹರಣೆಯೆಂಬಂತೆ ನಾವು ಕುಮಾರಿಲಭಟ್ಟನ ವಾದವನ್ನು ಪ್ರಸ್ತಾಪಿಸಬಹುದು. ಅವನ ವಾದವು 'ಕಳೆದುಹೋದ ಶ್ರುತಿ' ಸಿದ್ಧಾಂತದ ಮೇಲೆ ನಿಂತಿದೆ. ಸ್ಮೃತಿಗಳ ಪರವಾಗಿ ವಾದಿಸುತ್ತಾ ಅವನು, ಅವುಗಳ ಅಭಿಪ್ರಾಯವು ಶ್ರುತಿಗಳನ್ನು ನೇರವಾಗಿ ವಿರೋಧಿಸಿದರೂ, ಅವನ್ನು ಕಡೆಗಾಣಿಸಬಾರದೆಂದೂ, ಅವು ಪ್ರಾಯಶಃ ಈಗಾಗಲೇ ಕಳೆದುಹೋಗಿರುವ ಯಾವುದೋ ಒಂದು ಶ್ರುತಿವಾಕ್ಯದ ಆಧಾರದ ಮೇಲೆ ನಿಂತಿವೆಯೆಂದೂ, ಆದ್ದರಿಂದ ವಿರೋಧವು ಶ್ರುತಿವಾಕ್ಯ ಮತ್ತು ಸ್ಮೃತಿವಾಕ್ಯಗಳ ನಡುವಿನ ವಿರೋಧವಲ್ಲವೆಂದೂ ಹೇಳುತ್ತಾನೆ. ವಾಸ್ತವವಾಗಿ ಅದು ಈಗಿರುವ ಮತ್ತು ಕಳೆದುಹೋಗಿರುವ ಶ್ರುತಿವಾಕ್ಯಗಳ ನಡುವಿನ ಘರ್ಷಣೆ. ಆದ್ದರಿಂದ, ಸ್ಮೃತಿಯು ಕಳೆದುಹೋದ ಶ್ರುತಿಯ ಪ್ರತಿನಿಧಿಯಾಯಿತು.

ಸ್ಮೃತಿಗಳು ವೇದಗಳಿಗಿಂತ ಶ್ರೇಷ್ಠವಲ್ಲದಿದ್ದರೂ ಸಮಾನವಂತೂ ಹೌದು ಎಂಬುದನ್ನು ತೋರಿಸಲು ಬ್ರಾಹ್ಮಣರು ಮೂರನೆಯ ವಿಧಾನವೊಂದನ್ನು ಅನುಸರಿಸಿದ್ದಾರೆ. ಅದು ಅತ್ರಿ ಸ್ಮೃತಿಯಲ್ಲಿ ಸಿಕ್ಕುತ್ತದೆ. ಅತ್ರಿಯು ಯಾರು ಸ್ಮೃತಿಗಳಿಗೆ ಮಾನ್ಯತೆ ನೀಡುವುದಿಲ್ಲವೋ ಅವರು ಶಾಪಗ್ರಸ್ತರಾಗುತ್ತಾರೆ ಎಂದು ಹೇಳುತ್ತಾನೆ. ಅವನ ವಾದ ಹೀಗಿದೆ: ಬ್ರಾಹ್ಮಣ್ಯ ಉಂಟಾಗುವುದೇ ಶ್ರುತಿ ಮತ್ತು ಸ್ಮೃತಿಗಳ ಸಂಯುಕ್ತ ಅಧ್ಯಯನದಿಂದ ಮತ್ತು ಒಬ್ಬ ವ್ಯಕ್ತಿ ವೇದಗಳನ್ನಷ್ಟೇ ಓದಿ, ಸ್ಮೃತಿಗಳನ್ನು ಕಡೆಗಣಿಸಿದರೆ, ಅವನು ತನ್ನ ಮುಂದಿನ ಇಪ್ಪತ್ತೊಂದು ಜನ್ಮಗಳಲ್ಲಿ ಪ್ರಾಣಿಯಾಗಿ ಹುಟ್ಟಬೇಕೆಂಬ ಶಾಪ ತಕ್ಷಣವೇ ಪ್ರಾಪ್ತಿಯಾಗುತ್ತದೆ.

ಬ್ರಾಹ್ಮಣರು ಸ್ಮೃತಿಗಳಿಗೆ ಶ್ರುತಿಯ ಸ್ಥಾನವನ್ನು ಕೊಡಲು ಆ ರೀತಿಯ ಹತಾಶ ವಿಧಾನವನ್ನು ಅನುಸರಿಸಿದರೇಕೆ? ಅವರ ಉದ್ದೇಶವೇನಿತ್ತು? ಅವರ ಗುರಿ ಏನಿತ್ತು?

ಸ್ಮೃತಿಗಳಿಗೆ ವೇದಗಳಿಗಿಂತ ಹೆಚ್ಚಿನ ಅಧಿಕಾರವನ್ನು ಕೊಡಲು ಕಾರಣವೇನೆಂದರೆ ಅವು ಹೊಸದಾಗಿ ರೂಢಿಗೆ ಬಂದ ನಿಯಮಗಳಿಗೆ ಕಾನೂನಿನ ಸಮರ್ಥನೆಯನ್ನು ಕೊಟ್ಟವು ಎಂಬ ಪ್ರೊ. ಅಲ್ತೇಕರರ ವಾದವು ಸ್ವೀಕಾರಾರ್ಹವಲ್ಲ. ಅದನ್ನು ಒಪ್ಪಿಕೊಂಡರೆ ವೇದಗಳ ಕಾಲದಲ್ಲಿಯೂ ಕಾನೂನು ಇತ್ತು. ಪದ್ಧತಿಯು ಆಮೇಲೆ ಬೆಳೆಯಿತು. ಅಂಥ ಸಂದರ್ಭದಲ್ಲಿ, ಇವೆರಡಕ್ಕೂ ಘರ್ಷಣೆಯಾದರೆ ಅವು ಪದ್ಧತಿಯ ಪ್ರಗತಿಪರ ಸಿದ್ಧಾಂತಗಳನ್ನು ಗಮನದಲ್ಲಿಟ್ಟುಕೊಂಡು ಸ್ಮೃತಿಗೇ ಹೆಚ್ಚು ಪ್ರಾಮುಖ್ಯತೆಯನ್ನು ಕೊಡುತ್ತಿದ್ದವು ಎಂಬ ವಾದವನ್ನು ನಾವು ಒಪ್ಪಿಕೊಳ್ಳಬಹುದಿತ್ತು. ಆದರೆ, ವಾಸ್ತವಿಕತೆ ಬೇರೆಯೇ ಇತ್ತು. ವೇದಗಳಲ್ಲಿ ಕಾನೂನು ಎಂಬುದೇ ಇರಲಿಲ್ಲ. ಪ್ರೊ. ಕಾಣೆ ತಿಳಿಸುವಂತೆ:

"ಕಾನೂನು ಎಲ್ಲವೂ ಸಾಂಪ್ರದಾಯಿಕ (ರೂಢಿಯಿಂದ ಬಂದದ್ದು) ಆಗಿತ್ತು. ಆಗ ರೂಢಿಗಳಿಗೆ ಮಾನ್ಯತೆ ನೀಡುವ ಆವಶ್ಯಕತೆ ಇರಲಿಲ್ಲ. ಏಕೆಂದರೆ ಅವುಗಳಿಗೆ ಜನರು ಆಗಲೇ ಮಾನ್ಯತೆ ನೀಡಿದ್ದರು.

ಎರಡನೆಯದಾಗಿ, ಸ್ಮೃತಿಗಳು ವೇದಗಳಿಗಿಂತ ಹೆಚ್ಚು ಪ್ರಗತಿಪರವಾಗಿದ್ದವು ಎಂದು ಹೇಳಲು ಬರುವುದಿಲ್ಲ. ಚಾತುರ್ವರ್ಣ ಪದ್ಧತಿಯನ್ನೂ, ಪೂಜಾ ಪದ್ಧತಿಗಳನ್ನೂ ಬಿಟ್ಟರೆ ವೇದಗಳು ಸಮಾಜವನ್ನು ಸ್ವತಂತ್ರವಾಗಿ ಬೆಳೆಯಲು ಬಿಟ್ಟಿದ್ದವು. ಸ್ಮೃತಿಗಳು ಮಾಡಿದ್ದೇನೆಂದರೆ ವೇದದಲ್ಲಿದ್ದ ಪ್ರಗತಿಪರವಲ್ಲದ ಅಂದರೆ ಚಾತುರ್ವರ್ಣ ಸಿದ್ಧಾಂತವನ್ನು ಪ್ರಚಾರಮಾಡಿ, ಜನರ ತಲೆಯೊಳಕ್ಕೆ ತಿಕ್ಕಿದವು.''

ಆದ್ದರಿಂದ, ಬ್ರಾಹ್ಮಣರು ಸ್ಮೃತಿಗಳಿಗೆ ವೇದಗಳಿಗಿಂತ ಹೆಚ್ಚಿನ ಅಧಿಕಾರವನ್ನು ಕೊಡಲು ಬೇರೇನೋ ಕಾರಣವಿರಲೇಬೇಕು.

ಬ್ರಾಹ್ಮಣರಿಗೆ ತಮ್ಮ ಮೊದಲಿನ ದೊಂಬರಾಟ ತೃಪ್ತಿಕೊಟ್ಟಿರಲಿಲ್ಲ. ಆದ್ದರಿಂದ ಅವರು ಮತ್ತೊಂದನ್ನು ಮಾಡಿದರು.

ಸ್ಮೃತಿಗಳು ಬಂದ ನಂತರ ಪುರಾಣಗಳು ಹುಟ್ಟಿಕೊಂಡವು. ಪುರಾಣಗಳು ೧೮, ಉಪಪುರಾಣಗಳು ೧೮, ಹೀಗೆ ಒಟ್ಟು ೩೬ ಇವೆ. ಒಂದರ್ಥದಲ್ಲಿ ಎಲ್ಲ ಪುರಾಣಗಳ ವಿಷಯವೂ ಒಂದೇ. ಅವು ಪ್ರಪಂಚದ ಸೃಷ್ಟಿ, ಸ್ಥಿತಿ ಮತ್ತು ಲಯಗಳೊಡನೆ ವ್ಯವಹರಿಸುತ್ತವೆ. ಆದರೆ, ಉಳಿದ ವಿಷಯಗಳಲ್ಲಿ ಅವು ಭಿನ್ನಭಿನ್ನವಾಗಿವೆ. ಕೆಲವು ಬ್ರಹ್ಮಪಂಥವನ್ನು ಪ್ರತಿಪಾದಿಸುತ್ತವೆ. ಕೆಲವು ಶೈವ ಪಂಥವನ್ನು ಪ್ರತಿಪಾದಿಸುತ್ತವೆ. ಕೆಲವು ವೈಷ್ಣವ ಪಂಥವನ್ನು ಕೆಲವು ಸೌರ ಪಂಥವನ್ನೂ ಕೆಲವು ಶಾಕ್ತ ಪಂಥವನ್ನೂ ಕೆಲವು ಬೇರೆ ದೈವಗಳ ಪಂಥಗಳನ್ನೂ ಪ್ರತಿಪಾದಿಸುತ್ತವೆ.

ಈಗಾಗಲೇ ತಿಳಿಸಿರುವಂತೆ, ಪುರಾಣಗಳು ಶ್ರುತಿಯಲ್ಲಿ ಸೇರ್ಪಡೆಯಾಗಿಲ್ಲದಿದ್ದ ಕಾಲವೊಂದಿತ್ತು. ಆದರೆ ಕಾಲಕ್ರಮೇಣ ಒಂದು ದೊಡ್ಡ ಬದಲಾವಣೆ ಆದಂತೆ ತೋರುತ್ತದೆ. ಪುರಾಣಗಳು ಬಹಳ ಲೌಕಿಕವಾದುದರಿಂದ ಅವುಗಳನ್ನು ಶ್ರುತಿಯಲ್ಲಿ ಸೇರಿಸಿರಲಿಲ್ಲ. ಆದರೆ ಅನಂತರ ಅವುಗಳಿಗೆ ವೇದಗಳಿಗಿಂತ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಲಾಯಿತು.

'ವಾಯುಪುರಾಣ' ಹೀಗೆ ಹೇಳುತ್ತದೆ;[೧]

"ಎಲ್ಲ ಶಾಸ್ತ್ರಗಳಿಗಿಂತ ಮೊದಲು ಪುರಾಣವನ್ನೇ ಬ್ರಹ್ಮನು ಉಚ್ಚರಿಸಿದನು. ತದನಂತರ ವೇದಗಳು ಅವನ ಬಾಯಿಂದ ವ್ಯಕ್ತವಾದವು.''

'ಮತ್ಸ್ಯಪುರಾಣ'ವು ವೇದಗಳಿಗಿಂತ ಮೊದಲು ಪುರಾಣವೇ ಹುಟ್ಟಿತು ಎಂದು ಸಾರುವುದೂ ಅಲ್ಲದೆ, ಪುರಾಣಗಳಿಗೆ ನಿತ್ಯತ್ವ ಮತ್ತು ಶಬ್ದದೊಡನೆ ತಾದಾತ್ಮ್ಯ ಎಂಬ ಮತ್ತೆರಡು ಗುಣಗಳನ್ನೂ (ಇದಕ್ಕೂ ಮೊದಲು ಈ ಎರಡು ಗುಣಗಳು ವೇದಗಳಲ್ಲಿ ಮಾತ್ರ ಇವೆ ಎಂದು ಹೇಳಲಾಗುತ್ತಿತ್ತು) ಹೇಳುತ್ತದೆ.

ಅದು ಹೇಳುತ್ತದೆ:[೨]

"ಪಿತಾಮಹ (ಬ್ರಹ್ಮನು) ಎಲ್ಲ ಅಮರರಿಗಿಂತ ಮೊದಲು ರೂಪತಳೆದನು. ಅನಂತರ ವೇದಗಳೂ, ಅಂಗ ಉಪಾಂಗಗಳೂ, ವೇದವಾಕ್ಯಗಳ ವಿವಿಧ ವ್ಯವಸ್ಥೆಗಳೂ ವ್ಯಕ್ತವಾದವು. ನಿತ್ಯವೂ, ಶಬ್ದಸಹಿತವೂ, ಶುದ್ಧವೂ, ನೂರು ಕೋಟಿ ಶ್ಲೋಕಗಳಷ್ಟು ವಿಸ್ತಾರವೂ ಆದ ಪುರಾಣವೂ ಎಲ್ಲ ಶಾಸ್ತ್ರಗಳಿಗಿಂತ

---

೧. ಮ್ಯೂರ್: 'ಸ್ಯಾನ್‌ಸ್ಕ್ರಿಟ್ ಟೆಕ್ಸ್ಟ್', ಸಂ. III, ಪು. ೨೭.
೨. ಅದೇ, ಪು. ೨೮.

ಮೊದಲು ಬ್ರಹ್ಮನಿಂದ ಉಚ್ಚರಿಸಲ್ಪಟ್ಟಿತು. ಆಮೇಲೆ, ವೇದಗಳೂ, ಮೀಮಾಂಸಾ ಮತ್ತು ಎಂಟು ರೀತಿಯ ಪ್ರಮಾಣ(Proof)ಗಳ ಸಹಿತವಾದ ನ್ಯಾಯ ಅವನ ಬಾಯಿಂದ ಬಂದವು."

'ಭಾಗವತ ಪುರಾಣ'ವು ತನಗೆ ವೇದದಷ್ಟೇ ಅಧಿಕಾರ ಇರುವುದಾಗಿ ಹೇಳಿಕೊಳ್ಳುತ್ತದೆ. ಅದು ಹೀಗೆ ಹೇಳುತ್ತದೆ:[೧]

"(ಬ್ರಹ್ಮರಾತ್ರನು) ವೇದಗಳಿಗೆ ಸಮಾನವಾದ 'ಭಾಗವತ' ಎಂಬ ಪುರಾಣವನ್ನು ಬೋಧಿಸಿದನು."

'ಬ್ರಹ್ಮವೈವರ್ತ ಪುರಾಣ'ವು ತಾನು ವೇದಗಳಿಗಿಂತ ಶ್ರೇಷ್ಠತರ ಎಂದು ಹೇಳುವಷ್ಟು ಧಾರ್ಷ್ಟ್ಯವನ್ನು ತೋರಿಸುತ್ತದೆ. ಅದು ಹೀಗೆ ಹೇಳುತ್ತದೆ:[೨]

"ಪೂಜ್ಯ ಋಷಿಯೇ, ನೀನು ಯಾವುದರ ಬಗ್ಗೆ ವಿಚಾರಿಸುತ್ತಿದ್ದೀಯೋ ಮತ್ತು ಇಚ್ಛಿಸುತ್ತಿದ್ದೀಯೋ ಅದೆಲ್ಲ ನನಗೆ ಗೊತ್ತು. ಎಲ್ಲ ಪುರಾಣಗಳ ಸಾರವಾದ ಹಾಗೂ ಸರ್ವೋತ್ಕೃಷ್ಟವಾದ ಬ್ರಹ್ಮವೈವರ್ತ ಪುರಾಣವು, ಪುರಾಣಗಳ, ಉಪಪುರಾಣಗಳ ಹಾಗೂ ವೇದಗಳ ದೋಷಗಳನ್ನೂ ಖಂಡಿಸುತ್ತದೆ."

ಬ್ರಾಹ್ಮಣರು ತಮ್ಮ ಪವಿತ್ರ ಗ್ರಂಥಗಳಿಗೆ ಅದ್ಯತೆ, ಅಗ್ರಸ್ಥಾನ ಮತ್ತು ಅಧಿಕಾರ (ಪ್ರಾಮಾಣ್ಯ)ವನ್ನು ಕೊಡಲು ಮಾಡಿದ ಎರಡನೆಯ ದೊಂಬರಾಟ ಇದು.

ವೇದಗಳನ್ನು ದಮನಮಾಡುವ ಕತೆ ಇಲ್ಲಿಗೇ ಮುಗಿಯಲಿಲ್ಲ. ಇನ್ನೂ ಹೆಚ್ಚಿನ ಕೇಡು ಬರುವುದಿತ್ತು. ಪುರಾಣಗಳ ನಂತರ ತಂತ್ರಗಳೆಂಬ ಮತ್ತೊಂದು ವರ್ಗದ ಸಾಹಿತ್ಯ ಸೃಷ್ಟಿಯಾಯಿತು. ಅವುಗಳ ಸಂಖ್ಯೆಯೂ ಸಾಕಷ್ಟು ದೊಡ್ಡದಿದೆ. ಶಂಕರಾಚಾರ್ಯರು ೬೪ ತಂತ್ರಗಳ ಬಗ್ಗೆ ಪ್ರಸ್ತಾಪಿಸುತ್ತಾರೆ. ಇನ್ನೂ ಅನೇಕ ತಂತ್ರಗಳಿಬಹುದು.

ಸಂಪ್ರದಾಯದ ಪ್ರಕಾರ, ಈ ಗ್ರಂಥಗಳ ಕರ್ತೃ ದತ್ತಾತ್ರೇಯ. ಅವನು ಹಿಂದೂ ತ್ರಿಮೂರ್ತಿಗಳಾದ ಬ್ರಹ್ಮ, ವಿಷ್ಣು ಮತ್ತು ಶಿವ ಇವರ ಅವತಾರ. ಆದುದರಿಂದ ಅವುಗಳು ಈ ಮೂರು ಪರಮ ದೈವಗಳು ವ್ಯಕ್ತಪಡಿಸಿದ ಗ್ರಂಥಗಳೆಂದು ನಾವು ಪರಿಗಣಿಸಬೇಕಾಗುತ್ತದೆ. ಆದರೆ, ಅವು ಔಪಚಾರಿಕವಾಗಿ ಶಿವನೊಬ್ಬನನ್ನೇ ಅವಲಂಬಿಸಿವೆ. ಅಂದರೆ ಶಿವನು ತನ್ನ ಹೆಂಡತಿ ದುರ್ಗಾ ಅಥವಾ ಕಾಳಿಗೆ ರಹಸ್ಯ ಸಿದ್ಧಾಂತಗಳನ್ನೂ, ಸಾಧಕರು ಮಾಡಬೇಕಾದ ಆಚರಣೆಗಳನ್ನೂ ವ್ಯಕ್ತಪಡಿಸಿದನು. ಈ ಅಧಿಕಾರಾತ್ಮಕ ಅಥವಾ 'ಉತ್ಕೃಷ್ಟ ಸಂಪ್ರದಾಯ'ವು ಶಿವನ ಐದನೆಯ ಅಥವಾ ಮಧ್ಯದ ಮುಖದಿಂದ ಹೇಳಲ್ಪಟ್ಟಿದೆ ಎಂದು ನಂಬಲಾಗಿದೆ. ಆದುದರಿಂದ ಅದು ಪರಮ ಪವಿತ್ರ ಮತ್ತು ಅತ್ಯಂತ ನಿಗೂಢ ಮತ್ತು ದೀಕ್ಷೆ ಪಡೆಯದವರಿಗೆ ಅದನ್ನು ತಿಳಿಸಲು ಬರುವುದಿಲ್ಲ. ಅವನ್ನು ಆಗಮ ಎಂಬ ಹೆಸರಿನಿಂದಲೂ ಕರೆಯಲಾಗುತ್ತದೆ ಹಾಗೂ ಈ ಕಾರಣದಿಂದ ಅವನ್ನು ನಿಗಮ, ವೇದವಾಕ್ಯಗಳು, ಧರ್ಮಶಾಸ್ತ್ರಗಳು ಮತ್ತು ಉಳಿದ ಪವಿತ್ರ ಗ್ರಂಥಗಳಿಂದ ಭಿನ್ನವೆಂದು ತಿಳಿಯಲಾಗುತ್ತದೆ.

ತಂತ್ರಗಳನ್ನು ವಿಶೇಷವಾಗಿ ಶಾಕ್ತರು ಹಾಗೂ ಅವರ ಪಂಥಗಳ ಧರ್ಮಗ್ರಂಥಗಳೆಂದು ಪರಿಗಣಿಸಲಾಗುತ್ತದೆ. ತಾಂತ್ರಿಕ ಪಂಥಗಳು ಅನೇಕವಿವೆ. ಅವುಗಳಿಗೆ ವಿವಿಧ ಸಂಪ್ರದಾಯಗಳಿದ್ದು,

---

೧. ಮ್ಯೂರ್: 'ಉದ್ಧೃತ' ಸಂ. III

೨. ಸ್ಮಾರ್ತ ಧರ್ಮ ಮತ್ತು ತಾಂತ್ರಿಕ ಧರ್ಮಗಳ ಮೇಲಿನ ಚರ್ಚೆಗಾಗಿ, ನೋಡಿ : ಈ ಪುಸ್ತಕದ ಅನುಬಂಧ IV ಮತ್ತು IV (ಸಂ)

ಅವುಗಳಲ್ಲಿರುವ ವ್ಯತ್ಯಾಸವು ಅವುಗಳ ತೀರ ಹತ್ತಿರದ ಅನುಯಾಯಿಗಳಿಗಲ್ಲದೆ ಬೇರೆಯವರಿಗೆ ಗೊತ್ತಿಲ್ಲ. ಆದರೆ, ದಕ್ಷಿಣಾಚಾರಿಗಳ ತಂತ್ರದ ಕರ್ಮಗಳು ಶುದ್ಧವೆಂದೂ, ವೇದಗಳೊಂದಿಗೆ ಹೊಂದಿಕೊಳ್ಳುತ್ತವೆಯೆಂದೂ, ವಾಮಾಚಾರಿಗಳ ತಂತ್ರದ ಕರ್ಮಗಳು ಕೇವಲ ಶೂದ್ರರಿಗೆಂದೂ ಹೇಳಲಾಗುತ್ತದೆ.

ತಂತ್ರಗಳ ಬೋಧನೆಯು, ಪುರಾಣಗಳ ಬೋಧನೆಯಂತೆ, ಮುಖ್ಯವಾಗಿ ಭಕ್ತಿಮಾರ್ಗವನ್ನು ಅವಲಂಬಿಸಿದೆ ಹಾಗೂ ಅವುಗಳ ಪ್ರಕಾರ, ಭಕ್ತಿಮಾರ್ಗವು ಬ್ರಾಹ್ಮಣ ಮತ್ತು ಉಪನಿಷತ್ತುಗಳು ಬೋಧಿಸುವ ಕರ್ಮಮಾರ್ಗ ಮತ್ತು ಜ್ಞಾನಮಾರ್ಗಗಳಿಗಿಂತ ಶ್ರೇಷ್ಠತರ. ಎಲ್ಲ ಪುನರುಜ್ಜೀವನ ಶಕ್ತಿಯ ಮೂಲವಾದ ಶಿವನ ಹೆಂಡತಿಯನ್ನು ಸಾಕಾರ ರೂಪದಲ್ಲಿ ಆರಾಧಿಸುವುದನ್ನು ಅದರಲ್ಲಿ ಪ್ರತಿಪಾದಿಸಲಾಗಿದೆ. ಈ ಗ್ರಂಥಗಳಲ್ಲಿ ಸ್ತ್ರೀತತ್ವವನ್ನು ಮೂರ್ತೀಕರಿಸಿ ಅದನ್ನೇ ಸರ್ವೋತ್ಕೃಷ್ಟವನ್ನಾಗಿ ಮಾಡಲಾಗಿದೆಯಲ್ಲದೆ, ಪುರುಷ ತತ್ವವನ್ನು ಹೆಚ್ಚೂ ಕಡಿಮೆ ಸಂಪೂರ್ಣವಾಗಿ ವರ್ಜಿಸಲಾಗಿದೆ.

ವೇದಗಳಿಗೆ ತಂತ್ರಗಳೊಡನೆ ಇರುವ ಸಂಬಂಧ ಎಂತಹುದು? ಮನುಸ್ಮೃತಿಯ ಮೇಲೆ ಸುವಿಖ್ಯಾತ ಭಾಷ್ಯ ಬರೆದಿರುವ ಕಲ್ಲೂಕ ಭಟ್ಟನಿಗೆ, ಶ್ರುತಿಯು ವೈದಿಕ ಮತ್ತು ತಾಂತ್ರಿಕ ಎಂದು ಎರಡು ವಿಧ ಎಂದು ಹೇಳಲು, ಅಂದರೆ, ವೇದಗಳೂ ತಂತ್ರಗಳೂ ಸಮಾನಸ್ಥಾನದಲ್ಲಿವೆ ಎಂದು ಹೇಳಲು ಏನೂ ಸಂಕೋಚವಿಲ್ಲ. ಕಲ್ಲೂಕ ಭಟ್ಟನಂಥ ವೈದಿಕ ಬ್ರಾಹ್ಮಣರು ತಂತ್ರ ಮತ್ತು ವೇದಗಳ ಸಮಾನತೆಯನ್ನು ಒಪ್ಪಿಕೊಂಡರೆ, ತಂತ್ರಗಳ ಲೇಖಕರು ಇನ್ನೂ ಬಹಳ ಮುಂದೆ ಹೋದರು. ಅವರು, ವೇದಗಳೂ ಶಾಸ್ತ್ರಗಳೂ ಪುರಾಣಗಳೂ ಸಾಮಾನ್ಯ ಹೆಂಗಸರಂತೆ, ಆದರೆ ತಂತ್ರಗಳು ಕುಲೀನ ಸ್ತ್ರೀ ಎಂದು ಘೋಷಿಸುವ ಮೂಲಕ, ತಂತ್ರಗಳು ವೇದಗಳಿಗಿಂತ ಶ್ರೇಷ್ಠತರವೆಂಬುದನ್ನು ಸಾರಿದವು.

ಈ ಪರಿವೀಕ್ಷಣೆಯಿಂದ ಒಂದು ಅಂಶ ಸ್ಪಷ್ಟವಾಗಿದೆ. ಬ್ರಾಹ್ಮಣರು, ತಮ್ಮ ಧರ್ಮಗ್ರಂಥಗಳೆಂದು ಪರಿಗಣಿಸಿದ ಬರಹಗಳಲ್ಲಿ ಪಾವಿತ್ರ್ಯವಿದೆ ಎಂಬ ತಮ್ಮ ನಂಬಿಕೆಗೆ ಬಲವಾಗಿ ಅಂಟಿಕೊಂಡವರೇನಲ್ಲ. ಮೊದಲೇನೋ ವೇದಗಳು ಕೇವಲ ಪವಿತ್ರವಷ್ಟೇ ಅಲ್ಲ, ಅವು ದೋಷರಹಿತ ಕೂಡ ಎಂದು ಸಾಧಿಸಲು ಬಹಳ ಹೋರಾಡಿದರು. ದೋಷರಹಿತವೆಂಬುದನ್ನು ಸಾಧಿಸಿದರು. ಅಷ್ಟೇ ಅಲ್ಲ, ದೋಷರಾಹಿತ್ಯ ಸಿದ್ಧಾಂತವನ್ನು ಪುಷ್ಟೀಕರಿಸಲು ಅಪೂರ್ವ ವಾದಗಳನ್ನು ಸೃಷ್ಟಿಸಲೂ ತಮ್ಮ ಚಾತುರ್ಯವನ್ನೆಲ್ಲಾ ವ್ಯಯಿಸಿದರು. ಆದರೂ, ವೇದಗಳನ್ನು ಮೇಲಿನ ಸ್ಥಾನದಿಂದ ಕೆಳಗಿಳಿಸಿ, ಅವುಗಳನ್ನು ಮೊದಲು ಸ್ಮೃತಿಗಳಿಗೂ, ಅನಂತರ ಪುರಾಣಗಳಿಗೂ, ಕೊನೆಗೆ ತಂತ್ರಗಳಿಗೂ ಅಧೀನ ಮಾಡಲು ಅವರಿಗೆ ಯಾವ ಅಳುಕೂ ಆಗಲಿಲ್ಲ.ಆದ್ದರಿಂದ, ಎಲ್ಲ ಪ್ರಶ್ನೆಗಳಿಗಿಂತ ಮುಖ್ಯವಾದ ಪ್ರಶ್ನೆಯೆಂದರೆ ವೇದಗಳನ್ನು ಪರಮ ಪವಿತ್ರವೆಂದು ಪರಿಗಣಿಸಿದ್ದ ಬ್ರಾಹ್ಮಣರು, ಅವುಗಳನ್ನು ಪದಚ್ಯುತಗೊಳಿಸಿ, ಸ್ಮೃತಿ, ಪುರಾಣ ಮತ್ತು ತಂತ್ರಗಳಿಗಿಂತ ಕಡಿಮೆ ಮಾಡಿದ್ದೇಕೆ?

* * * *

# ಒಗಟು – ೮

## ಉಪನಿಷತ್ತುಗಳು ವೇದಗಳ ಮೇಲೇಕೆ ಯುದ್ಧ ಸಾರಿದವು?

ವೇದಗಳಿಗೆ ಸಂಬಂಧಿಸಿದಂತೆ ಉಪನಿಷತ್ತುಗಳ ಸ್ಥಾನವೇನು? ಅವು ಪರಸ್ಪರ ಪೂರಕವೇ ಅಥವಾ ವಿರುದ್ಧವೆ? ಹೌದು, ಯಾವ ಹಿಂದೂವೂ ವೇದ ಮತ್ತು ಉಪನಿಷತ್ತುಗಳು ಪರಸ್ಪರ ವಿರುದ್ಧವೆಂಬುದನ್ನು ಒಪ್ಪಲಾರ. ಅದರ ಬದಲು, ಅವುಗಳಲ್ಲಿ ಪರಸ್ಪರ ವಿರೋಧವಿಲ್ಲ ಮತ್ತು ಅವೆರಡೂ ಒಂದೇ ಚಿಂತನ ವ್ಯವಸ್ಥೆಯ ಅವಿಭಾಜ್ಯ ಅಂಗಗಳಾಗಿವೆ ಎಂಬ ಸಾಮಾನ್ಯ ನಂಬಿಕೆಯಿದೆ. ಈ ನಂಬಿಕೆಗೆ ಸಮಂಜಸವಾದ ಆಧಾರವಿದೆಯೇ?

ಅಂತಹ ನಂಬಿಕೆ ಹುಟ್ಟಲು ಮುಖ್ಯ ಕಾರಣವೆಂದರೆ, ಉಪನಿಷತ್ತುಗಳಿಗೆ ವೇದಾಂತ ಎಂಬ ಮತ್ತೊಂದು ಹೆಸರಿರುವುದು. ವೇದಾಂತ ಎಂಬ ಪದಕ್ಕೆ ಎರಡು ಅರ್ಥಗಳಿವೆ. ಒಂದರ್ಥದಲ್ಲಿ ವೇದಾಂತವೆಂದರೆ ವೇದಗಳ ಕೊನೆಯ ಭಾಗ ಎಂದು. ಎರಡನೆಯ ಅರ್ಥದಲ್ಲಿ ವೇದಾಂತವು ವೇದಗಳ ಸಾರ. ವೇದಾಂತವು ಉಪನಿಷತ್ತುಗಳ ಮತ್ತೊಂದು ಹೆಸರಾದ್ದರಿಂದ, ಉಪನಿಷತ್ತುಗಳಿಗೆ ಈ ಎರಡು ಅರ್ಥಗಳೂ ಬಂದಿವೆ. ವೇದಗಳಿಗೂ ಉಪನಿಷತ್ತುಗಳಿಗೂ ವಿರೋಧವಿಲ್ಲ ಎಂಬ ನಂಬಿಕೆ ಹುಟ್ಟಲು ಈ ಅರ್ಥಗಳೇ ಕಾರಣ.

ಉಪನಿಷತ್ತುಗಳ ಈ ಅರ್ಥಗಳಿಗೆ ವಾಸ್ತವಿಕತೆಯ ಸಮರ್ಥನೆ ಎಷ್ಟರಮಟ್ಟಿಗೆ ಇದೆ? ಮೊದಲು, 'ವೇದಾಂತ' ಎಂಬ ಪದದ ಅರ್ಥವನ್ನು ಗಮನಿಸುವುದು ಒಳಿತು. 'ವೇದಾಂತ' ಪದದ ಮೂಲ ಅರ್ಥ ಏನು? ಅದಕ್ಕೆ ವೇದಗಳ ಕೊನೆಯ ಭಾಗ ಎಂಬ ಅರ್ಥ ಇತ್ತೆ?

ಪ್ರೊ. ಮ್ಯಾಕ್ಸ್‌ಮುಲ್ಲರ್[೧] ಗಮನಿಸಿರುವಂತೆ :

"ವೇದಾಂತವು ಪಾರಿಭಾಷಿಕ ಪದ. ಮೊತ್ತಮೊದಲು ಅದಕ್ಕೆ 'ವೇದದ ಕೊನೆಯ ಭಾಗ ಅಥವಾ ವೈದಿಕ ಸಾಹಿತ್ಯ ಸಂಪುಟದಲ್ಲಿ ಬರುವ ಕೊನೆಯ ಅಧ್ಯಾಯಗಳು' ಎಂಬರ್ಥವಿರಲಿಲ್ಲ; ಆದರೆ ವೇದಗಳ ಗುರಿ, ಧ್ಯೇಯ, ಪರಮ ಉದ್ದೇಶ ಎಂಬರ್ಥವಿತ್ತು. 'ತೈತ್ತಿರೀಯ ಆರಣ್ಯಕ' ದಲ್ಲಿ (ಸಂಪಾದಕ : ರಾಜೇಂದ್ರ ಮಿತ್ರ. ಪು. ೮೨೦) ಬರುವಂತಹ ಕೆಲವು ವಾಕ್ಯವೃಂದಗಳಿವೆ. ದೇಶೀಯ ಮತ್ತು ಯೂರೋಪಿಯನ್ ವಿದ್ವಾಂಸರಿಬ್ಬರಿಂದಲೂ ಅಪಾರ್ಥಕ್ಕೊಳಗಾದ ಈ ವಾಕ್ಯವೃಂದಗಳಲ್ಲಿ, ವೇದಾಂತವೆಂದರೆ ಕೇವಲ ವೇದಗಳ ಕೊನೆ ಎಂಬರ್ಥವಿದೆ: 'ಯೋ ವೇದದು ಸ್ವರಃ ಪ್ರೋಕ್ತೋ

---

೧. 'ದಿ ಉಪನಿಷದ್ಸ್' *(ಸೇಕ್ರೆಡ್ ಬುಕ್ಸ್ ಆಫ್ ದಿ ಈಸ್ಟ್)* ಸಂ. I ಪೀಠಿಕೆ LXXXVI

---

*ಈ ೧೫ ಪುಟದ ಬೆರಳಚ್ಚಿನ ಹಸ್ತಪ್ರತಿಯಲ್ಲಿ ಲೇಖಕರು ತಾವೇ ಕೈಬರಹದಲ್ಲಿ ಬದಲಾವಣೆಗಳನ್ನು ಮಾಡಿದ್ದು, ಅದಕ್ಕೆ ಮೊದಲು 'ವೇದಾಸ್ ವರ್ಸಸ್ ಉಪನಿಷದ್ಸ್' ಎಂಬ ಶೀರ್ಷಿಕೆ ಕೊಟ್ಟಿದ್ದರು. ಕೊನೆಯ ಎರಡು ಪ್ಯಾರಾಗಳನ್ನು ಲೇಖಕರು ತಾವೇ ಕೈಯಲ್ಲಿ ಬರೆದು ಸೇರಿಸಿದ್ದಾರೆ – ಸಂ.*

---

ವೇದಾಂತೇ ಚ ಪ್ರತಿಷ್ಠಿತಃ', 'ವೇದದ ಪ್ರಾರಂಭದಲ್ಲಿ ಉಚ್ಚರಿಸಲಾಗುವ 'ಓಂ' ವೇದದ ಕೊನೆಯಲ್ಲೂ ಇದೆ'. ಇಲ್ಲಿ ವೇದಾಂತವು 'ವೇದದು' ಎಂಬುದಕ್ಕೆ ವಿರುದ್ಧವಾಗಿದೆ. ಆದರೆ, ಅದನ್ನು ಸಾಯಣ ಅರ್ಥಮಾಡಿದಂತೆ ವೇದಾಂತ ಅಥವಾ ಉಪನಿಷತ್ ಎಂದು ಅರ್ಥೈಸಲು ಸಾಧ್ಯವಿಲ್ಲ. ದರ್ಶನ ಎಂಬರ್ಥದಲ್ಲಿ 'ವೇದಾಂತ' ಶಬ್ದವು ತೈತ್ತಿರೀಯ ಆರಣ್ಯಕದಲ್ಲಿ (ಪು. ೮೧೭) ನಾರಾಯಣೀಯ ಉಪನಿಷತ್ತಿನ ಒಂದು ಶ್ಲೋಕದಲ್ಲಿ ಬರುತ್ತದೆ. (ಅದೇ ಶ್ಲೋಕ ಮುಂಡಕೋಪನಿಷತ್ತಿನಲ್ಲಿ III, ೨, ೬ ಪುನರುಕ್ತವಾಗಿದೆ). ಕೆಲವು ಕಡೆ 'ವೇದಾಂತ ವಿಜ್ಞಂ ಸುನಿಶ್ಚಿತರಃ' ಅಂದರೆ ('ವೇದಾಂತಜನ್ಯವಾದ ಜ್ಞಾನದ ವಸ್ತುವನ್ನು ಸರಿಯಾಗಿ ತಿಳಿದುಕೊಂಡವರು') ಎಂಬರ್ಥದಲ್ಲಿಯೇ ವಿನಾ, 'ವೇದದ ಕೊನೆಯ ಕೊನೆಯ ಪುಸ್ತಕಗಳಿಂದ' ಎಂಬರ್ಥದಲ್ಲಿಲ್ಲ. ಅದೇ ರೀತಿ ಶ್ವೇತಾಶ್ವತರ ಉಪನಿಷತ್ತಿನಲ್ಲಿ (VI, ೨೨) 'ವೇದಾಂತೇ ಪರಮಂ ಗುಹ್ಯಂ' (= ವೇದಾಂತವು ಪರಮ ರಹಸ್ಯ) ಎಂಬ ಪ್ರಯೋಗದಲ್ಲಿ ಬರುತ್ತದೆ. ಆಮೇಲೆ ಆ ಪದವು ಬಹುವಚನದಲ್ಲಿ ಬಳಕೆಯಾಗಿದೆ. ಉದಾಹರಣೆಗೆ, ಕ್ಷುರಿಕೋಪನಿಷತ್, ೧೦ (ಬಿಬ್ಲಿಗ್ರಾಫಿಯಾ ಇಂಡಿಕಾ, ಪು. ೨೧೦)ರಲ್ಲಿ 'ಪುಂಡರೀಕೇತಿ ವೇದಾಂತೇಷು ನಿಗದ್ಯತೇ' (–ವೇದಾಂತಗಳಲ್ಲಿ ಅದನ್ನು ಪುಂಡರೀಕವೆಂದು ಕರೆಯಲಾಗುತ್ತದೆ). ಅದೇ ರೀತಿ, ಛಾಂದೋಗ್ಯ ಮತ್ತಿತರ ಉಪನಿಷತ್ತುಗಳಲ್ಲಿ 'ವೇದಾಂತ' ಪದವು ದರ್ಶನ ಎಂಬರ್ಥದಲ್ಲಿ ಪ್ರಯೋಗವಾಗಿದೆಯೇ ಹೊರತು, 'ಪ್ರತಿ ವೇದದ ಕೊನೆಯ ಪುಸ್ತಕಗಳಲ್ಲಿ' ಎಂಬರ್ಥದಲ್ಲಿ ಅಲ್ಲ.''

ಈ ವಿಷಯದಲ್ಲಿ ನೇರವಾದ ಮತ್ತೊಂದು ಸಾಕ್ಷ್ಯವು ಗೌತಮ ಧರ್ಮಸೂತ್ರಗಳಲ್ಲಿ ಸಿಕ್ಕುತ್ತದೆ. ಅಧ್ಯಾಯ ೧೯ ಶ್ಲೋಕ ೧೨ರಲ್ಲಿ ಗೌತಮ ಶುದ್ಧೀಕರಣದ ಬಗ್ಗೆ ಹೀಗೆನ್ನುತ್ತಾನೆ:

''ಶುದ್ಧಿಕಾರಕ ಗ್ರಂಥಗಳೆಂದರೆ ಉಪನಿಷತ್ತುಗಳು, ವೇದಾಂತಗಳು. ಸಂಹಿತೆಗಳು ಎಲ್ಲ ವೇದ ವಾಕ್ಯಗಳು'' ಇತ್ಯಾದಿ.

ಇದರಿಂದ, ಗೌತಮನ ಕಾಲದಲ್ಲಿ ಉಪನಿಷತ್ತುಗಳು ವೇದಾಂತಗಳಿಂದ ಭಿನ್ನವಾಗಿದ್ದವು ಮತ್ತು ವೈದಿಕ ಸಾಹಿತ್ಯದ ಭಾಗವೆಂದು ಪರಿಗಣಿತವಾಗಿರಲಿಲ್ಲ ಎಂಬ ವಿಷಯ ಸ್ಪಷ್ಟವಾಗುತ್ತದೆ. ಹರದತ್ತನು ತನ್ನ ವ್ಯಾಖ್ಯಾನದಲ್ಲಿ ಹೀಗೆ ಹೇಳುತ್ತಾನೆ. ''ಉಪನಿಷತ್ತುಗಳಲ್ಲದ ಆರಣ್ಯಕದ ಭಾಗಗಳನ್ನು ವೇದಾಂತಗಳೆಂದು ಕರೆಯುತ್ತಾರೆ''. ಉಪನಿಷತ್ತುಗಳು ವೈದಿಕ ಸಾಹಿತ್ಯದಲ್ಲಿ ಬರುವುದಿಲ್ಲ ಮತ್ತು ಅವು ಧರ್ಮಗ್ರಂಥಗಳ ಹೊರಗೇ ಇದ್ದವು ಎಂಬುದಕ್ಕೆ ಇದು ನಿರ್ವಿವಾದವಾದ ಸಾಕ್ಷಿ.

ಭಗವದ್ಗೀತೆಯಲ್ಲಿ 'ವೇದ' ಪದ ಪ್ರಯೋಗವು ಈ ನಮ್ಮ ಅಭಿಪ್ರಾಯಕ್ಕೆ ಪುಷ್ಟಿಕೊಡುತ್ತದೆ. ಭಗವದ್ಗೀತೆಯಲ್ಲಿ 'ವೇದ' ಪದವು ಅನೇಕ ಕಡೆಗಳಲ್ಲಿ ಪ್ರಯೋಗವಾಗಿದೆ. ಶ್ರೀ ಭಟ್ಟರ ಪ್ರಕಾರ,[೧] ಭಗವದ್ಗೀತೆಯ ಕರ್ತೃವು ಆ ಪದವನ್ನು 'ಉಪನಿಷತ್ತುಗಳನ್ನು ಒಳಗೊಳ್ಳುತ್ತದೆ' ಎಂಬರ್ಥದಲ್ಲಿ ಉಪಯೋಗಿಸಲಿಲ್ಲ.

ವೇದಗಳ ವಸ್ತುವಿಷಯವು ಮತ್ತು ಉಪನಿಷತ್ತುಗಳ ವಸ್ತುವಿಷಯ ಒಂದೇ ರೀತಿಯದಲ್ಲ. ಉಪನಿಷತ್ತುಗಳು ವೇದಗಳ ಭಾಗವಾಗದಿರುವುದಕ್ಕೆ ಇದೂ ಒಂದು ಕಾರಣ. 'ಉಪನಿಷತ್' ಪದದ ಉತ್ಪತ್ತಿ ಹೇಗಾಯಿತು? ಇದಕ್ಕೆ ಸಿಕ್ಕುವ ಉತ್ತರ ಅಸ್ಪಷ್ಟ. ಬಹಳಷ್ಟು ಯೂರೋಪಿಯನ್

---

೧. *ಸೇಕ್ರೇಡ್ ಬುಕ್ಸ್ ಆಫ್ ದಿ ಈಸ್ಟ್*, ಸಂ. II. ಪು. ೨೭೫.

ವಿದ್ವಾಂಸರು 'ಉಪನಿಷತ್' ಎಂಬ ಪದವನ್ನು 'ಸದ್' (ಕುಳಿತುಕೊಂಡು),'ನಿ' (=ಕೆಳಗೆ) ಮತ್ತು 'ಉಪ]' (=ಹತ್ತಿರ) ಎಂಬ ಮೂಲಗಳಿಂದ ಪಡೆಯಲು ಸಮ್ಮತಿಸುತ್ತಾರೆ. ಅಂದರೆ, 'ಉಪನಿಷತ್ತು' ಎಂಬ ಪದವು, ಸಾರ್ವಜನಿಕರು ಸಭೆಯಲ್ಲಿ ಅಥವಾ ಗೋಷ್ಠಿಯಲ್ಲಿ ಗುರುವಿನ ಬಳಿ (ಅವನ ಪಾದದ ಹತ್ತಿರ) ಕುಳಿತುಕೊಂಡು ಅವನ ಬೋಧನೆಯನ್ನು ಕೇಳುತ್ತಿದ್ದರು ಎಂಬ ಅರ್ಥವನ್ನು ನೀಡುತ್ತದೆ. ಏಕೆಂದರೆ, ತ್ರಿಕಾಂಡಕೇಷದಲ್ಲಿಯೂ ಸಹ 'ಉಪನಿಷತ್ತು' ಎಂಬುದಕ್ಕೆ 'ಸಮೀಪ ಸದಸ' (=ಒಬ್ಬ ವ್ಯಕ್ತಿಯ ಬಳಿ ಕುಳಿತುಕೊಳ್ಳುವುದು) ಎಂಬ ವಿವರಣೆ ಸಿಕ್ಕುತ್ತದೆ.

ಆದರೆ ಪ್ರೊ. ಮ್ಯಾಕ್ಸ್‌ಮುಲ್ಲರ್ ಹೇಳುವಂತೆ, ಈ ಉತ್ಪತ್ತಿಯನ್ನು ಒಪ್ಪಿಕೊಂಡರೆ ಎರಡು ಆಕ್ಷೇಪಗಳಿಗೆ ಎಡೆ ಉಂಟಾಗುತ್ತದೆ. ಮೊದಲನೆಯದೆಂದರೆ ಅಂತಹ ಪದವು ಉಪನಿಷತ್ತುಗಳೆಂಬ ಭಾಗಗಳಿಗೇ ಅಲ್ಲದೆ ವೇದದ ಯಾವ ಭಾಗಕ್ಕಾದರೂ ಅನ್ವಯಿಸಬಹುದಿತ್ತು ಎಂದೆನಿಸುತ್ತದೆ. ಅಲ್ಲದೇ, ಅದರ ಅರ್ಥವು ಹೇಗೆ ಸಂಕುಚಿತವಾಯಿತು ಎಂಬುದಕ್ಕೆ ವಿವರಣೆ ಇಲ್ಲ. ಎರಡನೆಯ ದೆಂದರೆ, ಉಪನಿಷತ್ತು ಎಂಬ ಪದ ಹತ್ತಿರ ಕುಳಿತುಕೊಳ್ಳುವುದು ಎಂಬ ಅರ್ಥದಲ್ಲಿ ಯಾವಾಗಲೂ ಪ್ರಯೋಗವಾಗಿಲ್ಲ. ಆ ಪದದ ಬಳಕೆಯಾದಾಗಲೆಲ್ಲ ಸಿದ್ಧಾಂತ ಅಥವಾ ರಹಸ್ಯ ಸಿದ್ಧಾಂತ ಎಂಬರ್ಥದಲ್ಲಿ ಅಥವಾ ರಹಸ್ಯ ಸಿದ್ಧಾಂತವನ್ನೊಳಗೊಂಡ ದಾರ್ಶನಿಕ ಗ್ರಂಥಗಳ ಶೀರ್ಷಿಕೆ ಎಂಬರ್ಥ ಕೊಡುತ್ತಾ ಬಂದಿದೆ.

ಪ್ರೊ. ಮ್ಯಾಕ್ಸ್‌ಮ್ಯುಲ್ಲರ್ ಅವರು, ತೈತ್ತಿರೀಯ ಉಪನಿಷತ್ತಿಗೆ (II. 9) ಶಂಕರಾಚಾರ್ಯರು ಬರೆದಿರುವ ಭಾಷ್ಯದಲ್ಲಿ ಸಿಗುವ ಒಂದು ವಿವರಣೆಯನ್ನು ಗಮನಿಸಿದ್ದಾರೆ. ಈ ವಿವರಣೆಯ ಪ್ರಕಾರ, ಉಪನಿಷತ್ತುಗಳಲ್ಲಿ ಪರಮಾನಂದವು ಅಡಕವಾಗಿದೆ (ಪರಂ ಶ್ರೇಯೋಽಸ್ಯಾಂ ನಿಶಾನ್ನಾಂ). ಈ ಕಾರಣಕ್ಕಾಗಿಯೇ ಅದಕ್ಕೆ ಉಪನಿಷತ್ತು ಎಂಬ ಹೆಸರು ಬಂದಿದೆ. ಇದರ ಬಗ್ಗೆ ಪ್ರೊ. ಮ್ಯಾಕ್ಸ್‌ಮ್ಯುಲ್ಲರ್ ಹೀಗೆ ಬರೆಯುತ್ತಾರೆ:

"ಆರಣ್ಯಕಗಳಲ್ಲಿ ಅಂತಹ ಉತ್ಪತ್ತಿಗಳು ಹೇರಳವಾಗಿವೆ. ಪ್ರಾಯಶಃ ಅವು ಮಾತಿನ ಆಟಗಳಿರಬಹುದೇ ಹೊರತು ಪದಗಳ ನಿಜವಾದ ಅರ್ಥಗಳನ್ನು ಹೊರಹೊಮ್ಮಿಸುವುದರಲ್ಲಿ ಅವು ಸಹಾಯಕಾರಿಯಲ್ಲ ಎನಿಸುತ್ತದೆ."

ಆದರೆ ಪ್ರೊ. ಮ್ಯಾಕ್ಸ್‌ಮ್ಯುಲ್ಲರ್ ಒಂದು ವ್ಯುತ್ಪತ್ತಿಯನ್ನು ಒಪ್ಪಿಕೊಳ್ಳುತ್ತಾರೆ. ಇದರ ಪ್ರಕಾರ, 'ಉಪನಿಷತ್ತು' ಎಂಬ ಪದವು 'ಸದ್' ('ನಾಶಮಾಡುವುದು') ಎಂಬ ಧಾತುದಿಂದ ಉತ್ಪತ್ತಿಯಾಗಿದ್ದು, 'ಸಂಸಾರಕ್ಕೆ ಕಾರಣವಾದ ಅಜ್ಞಾನವನ್ನು ನಾಶಮಾಡುವ ಜ್ಞಾನ', 'ಮೋಕ್ಷಕ್ಕೆ ಕಾರಣವಾದ ಬ್ರಹ್ಮಜ್ಞಾನ' ಎಂಬರ್ಥ ಕೊಡುತ್ತದೆ. ಪ್ರೊ. ಮ್ಯಾಕ್ಸ್‌ಮುಲ್ಲರ್ ಉಪನಿಷತ್ತಿಗೆ ಎಲ್ಲ ದೇಶೀ ವಿದ್ವಾಂಸರು ಸಾಮಾನ್ಯವಾಗಿ ಕೊಡುವ ಅರ್ಥ ಇದೇ ಎಂಬುದನ್ನು ಎತ್ತಿ ತೋರಿಸಿದ್ದಾರೆ.

ಉಪನಿಷತ್ತಿನ ನಿಜವಾದ ವ್ಯುತ್ಪತ್ತಿ ಇದೇ ಎಂಬ ಮ್ಯಾಕ್ಸ್‌ಮುಲ್ಲರರ ಅಭಿಪ್ರಾಯವನ್ನು ಒಪ್ಪಿಕೊಂಡರೆ, ಹಿಂದೂಗಳ ಸಾಮಾನ್ಯ ನಂಬಿಕೆಯಾದ ವೇದಗಳ ವಸ್ತುವಿಷಯವೂ ಉಪನಿಷತ್ತುಗಳ ವಸ್ತುವಿಷಯವೂ ಪರಸ್ಪರ ವಿರುದ್ಧವೇ ಹೊರತು ಪರಸ್ಪರ ಪೂರಕವಲ್ಲ ಎಂಬುದಕ್ಕೆ ಸಾಕ್ಷಿಯಾಗುತ್ತದೆ. ಉಪನಿಷತ್ತುಗಳಲ್ಲಿರುವ ಚಿಂತನವ್ಯವಸ್ಥೆಯು ವೇದಗಳಲ್ಲಿನ ಚಿಂತನವ್ಯವಸ್ಥೆಗೆ ವಿರುದ್ಧವಾಗಿದೆ ಎಂಬುದಕ್ಕೆ ಅವುಗಳಿಂದಲೇ ಆಯ್ದ ಕೆಲವು ವಾಕ್ಯಗಳನ್ನು ಉದ್ಧರಿಸಿದರೆ ಸಾಕು. ಮುಂಡಕ ಉಪನಿಷತ್ತು ಹೀಗೆ ಹೇಳುತ್ತದೆ:

"೧. ವಿಶ್ವದ ಸೃಷ್ಟಿ ಮತ್ತು ಸ್ಥಿತಿಗಳನ್ನು ಮಾಡುವ ಬ್ರಹ್ಮನನ್ನು ಉಳಿದ ದೇವರಿಗಿಂತ ಮೊದಲು ಸೃಷ್ಟಿಸಲಾಯಿತು. ಅವನು ಅಥರ್ವನೆಂಬ ತನ್ನ ಹಿರಿಯ ಮಗನಿಗೆ ಎಲ್ಲ ವಿದ್ಯೆಗಳಿಗೆ ಮೂಲವಾದ ಬ್ರಹ್ಮವಿದ್ಯೆಯನ್ನು ಬೋಧಿಸಿದನು. ೨. ಬ್ರಹ್ಮನಿಂದ ಪಡೆದ ಈ ವಿದ್ಯೆಯನ್ನು ಹಿರಿಯನಾದ ಅಥರ್ವನು ಅಂಗಿಗಳಿಗೆ ಬೋಧಿಸಿದನು; ಅಂಗಿಯು ಇದನ್ನು ಭಾರದ್ವಾಜ ವಂಶಜನಾದ ಸತ್ಯವಾಹನಿಗೆ ಬೋಧಿಸಿದನು; ಸತ್ಯವಾಹನು ಈ ಸಾಂಪ್ರದಾಯಿಕ ವಿದ್ಯೆಯನ್ನು ಆಂಗೀರಸನಿಗೆ ಬೋಧಿಸಿದನು. ೩. ಮಹಾಶಾಲ ಶೌನಕನು ಯೋಗ್ಯವಾದ ರೀತಿಯಲ್ಲಿ ಆಂಗೀರಸ ಋಷಿಯನ್ನು ಕಂಡು 'ಪೂಜ್ಯ ಋಷಿಗಳೇ, ಯಾವುದರಿಂದ ಇಡಿ ವಿಶ್ವವನ್ನು ತಿಳಿಯಬಹುದೋ, ಅಂತಹ ಜ್ಞಾನ ಯಾವುದು?' ಎಂದು ವಿನಂತಿಸಿಕೊಳ್ಳುತ್ತಾನೆ. ೪. ಆಗ ಆಂಗೀರಸ ಹೇಳುತ್ತಾನೆ: "ನಾವು ಎರಡು ವಿದ್ಯೆಗಳನ್ನು ಕಲಿಯಬೇಕು, ಒಂದು ಪರಾವಿದ್ಯೆ, ಮತ್ತೊಂದು ಅಪರಾವಿದ್ಯೆ. ಹೀಗೆಂದು ಪವಿತ್ರ ಜ್ಞಾನವನ್ನು ಪಡೆದವರು ಹೇಳುತ್ತಾರೆ." ೫. ಅಪರಾವಿದ್ಯೆಯೆಂದರೆ, ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವವೇದ, ಉಚ್ಚಾರಣೆ, ವ್ಯಾಕರಣ, ಭಾಷ್ಯ, ಛಂದಸ್ಸು ಮತ್ತು ಜ್ಯೋತಿಶಾಸ್ತ್ರ. ಪರಾವಿದ್ಯೆಯೆಂದರೆ ಅಕ್ಷರವಾದುದನ್ನು ತಿಳಿಯುವ ವಿದ್ಯೆ." ಅಂದರೆ ಉಪನಿಷತ್ತು ಎಂಬುದು ಅವನ ಅಭಿಪ್ರಾಯ.

'ಛಾಂದೋಗ್ಯ ಉಪನಿಷತ್ತು' ಹೀಗೆ ಹೇಳುತ್ತದೆ:

೧. ನಾರದನು ಸನತ್ಕುಮಾರನ ಬಳಿಗೆ ಬಂದು "ಪೂಜ್ಯ ಋಷಿಯೇ, ನನಗೆ ಬೋಧಿಸು" ಎಂದು ವಿನಂತಿಸಿಕೊಳ್ಳುತ್ತಾನೆ. ಅವನಿಗೆ ಸಿಕ್ಕಿದ ಉತ್ತರ : "ನಿನಗೆ ಈಗಾಗಲೇ ಏನು ಗೊತ್ತೋ ಅದನ್ನು ತಿಳಿಸು. ಉಳಿದ ಯಾವುದನ್ನು ನೀನು ತಿಳಿದುಕೊಳ್ಳಬೇಕಾಗಿದೆಯೋ ಅದನ್ನು ನಾನು ಬೋಧಿಸುತ್ತೇನೆ." ೨. ನಾರದ ಹೇಳಿದನು: "ಪೂಜ್ಯ ಋಷಿಯೇ, ನನಗೆ ಋಗ್ವೇದ, ಸಾಮವೇದ, ಯಜುರ್ವೇದ ಮತ್ತು ನಾಲ್ಕನೆಯದಾದ ಅಥರ್ವವೇದ, ಪಂಚಮವೇದವಾದ ಇತಿಹಾಸ ಮತ್ತು ಪುರಾಣಗಳು, ಪಿತೃಕರ್ಮಗಳು, ಗಣಿತ, ಭವಿಷ್ಯಶಾಸ್ತ್ರ, ಯುಗಶಾಸ್ತ್ರ, ತರ್ಕ, ನೀತಿಶಾಸ್ತ್ರ, ದೇವಶಾಸ್ತ್ರ, ಧರ್ಮಗ್ರಂಥ, ಪಿಶಾಚವಿದ್ಯೆ, ಯುದ್ಧವಿದ್ಯೆ, ನಕ್ಷತ್ರವಿದ್ಯೆ, ಸರ್ಪಶಾಸ್ತ್ರ, ದೈವವಿದ್ಯೆ" ಇವೆಲ್ಲ ಗೊತ್ತು. ೩. "ಪೂಜ್ಯನೇ, ನನಗೆ ಮಂತ್ರಗಳು ಗೊತ್ತೇ ವಿನಾ, ಆತ್ಮ ಗೊತ್ತಿಲ್ಲ. ಆದರೆ, 'ಆತ್ಮನನ್ನು ಬಲ್ಲವರು ಎಲ್ಲ ದುಃಖಗಳನ್ನೂ ಗೆಲ್ಲುತ್ತಾರೆ' ಎಂಬುದನ್ನೂ ನಿನ್ನಂತಹ ಪೂಜ್ಯ ಋಷಿಗಳಿಂದ ಕೇಳಿ ತಿಳಿದುಕೊಂಡಿದ್ದೇನೆ. ಪೂಜ್ಯ ಋಷಿಯೇ, ಈಗ ನಾನು ದುಃಖತಪ್ತನಾಗಿದ್ದೇನೆ. ನನ್ನನ್ನು ದುಃಖದಿಂದ ಪಾರು ಮಾಡು." ಇದಕ್ಕೆ ಸನತ್ಕುಮಾರನು "ಈಗ ನೀನು ಏನನ್ನು ತಿಳಿದುಕೊಂಡಿದ್ದೀಯೋ ಅದು ಕೇವಲ ಹೆಸರಷ್ಟೇ." ೪. "ಋಗ್ವೇದ ಎಂಬುದು ಒಂದು ಹೆಸರು. ಅದೇ ರೀತಿ ಸಾಮವೇದ, ಯಜುರ್ವೇದ, ನಾಲ್ಕನೆಯದಾದ ಅಥರ್ವವೇದ ಮತ್ತು ಇತಿಹಾಸ ಮತ್ತು ಪುರಾಣಗಳು. ಪಂಚಮವೇದವಾದ ಇತಿಹಾಸ ಮತ್ತು ಪುರಾಣಗಳು (ಮೇಲೆ ಹೇಳಲಾಗಿರುವ ಜ್ಞಾನದ ಇತರ ಪ್ರಕಾರಗಳು ಇಲ್ಲಿ ಹೇಳಲ್ಪಟ್ಟಿವೆ) ಇವೆಲ್ಲವೂ ಹೆಸರುಗಳೇ. ನೀನು ಹೆಸರುಗಳನ್ನು ಪೂಜಿಸು." ೫. "ಯಾರು ಆ ಹೆಸರನ್ನು ಬ್ರಹ್ಮನೆಂದು ತಿಳಿದು ಪೂಜಿಸುವವರೋ ಅವರ ಅಧಿಕಾರ ಅಷ್ಟು ಇರುತ್ತದೆ." ಆಗ ನಾರದನು "ಪೂಜ್ಯ ಋಷಿಯೇ, ಹೆಸರಿಗಿಂತ ಹೆಚ್ಚಿನದು ಇದೆಯೆ?" ಎಂದನು "ಇದೆ" ಎಂದು ಉತ್ತರಿಸಿದನು ಸನತ್ಕುಮಾರ. ಆಗ ನಾರದನು "ಹಾಗಾದರೆ, ನನಗೆ ಅದನ್ನು ತಿಳಿಸು" ಎಂದನು.

'ಬೃಹದಾರಣ್ಯಕ ಉಪನಿಷತ್ತು' ಹೀಗೆ ಹೇಳುತ್ತದೆ:

"ಆ ಸ್ಥಿತಿಯಲ್ಲಿ (ಗಾಢನಿದ್ರೆಯಲ್ಲಿದ್ದಾಗ) ತಂದೆಯು ತಂದೆಯಲ್ಲ, ತಾಯಿಯು ತಾಯಿಯಲ್ಲ, ಲೋಕಗಳು ಲೋಕಗಳಲ್ಲ, ದೇವರು ದೇವರಲ್ಲ. ವೇದಗಳು ವೇದಗಳಲ್ಲ, ಯಾಗಗಳು ಯಾಗಗಳಲ್ಲ. ಆ ಅವಸ್ಥೆಯಲ್ಲಿ ಕಳ್ಳನು ಕಳ್ಳನಲ್ಲ. ಭ್ರೂಣಹತ್ಯಾಕಾರನು ಭ್ರೂಣಹತ್ಯಾಕಾರನಲ್ಲ. ಪುಲ್ಕಶನು ಪುಲ್ಕಶನಲ್ಲ, ಚಂಡಾಲನು ಚಂಡಾಲನಲ್ಲ, ಶ್ರಮಣ ಶ್ರಮಣನಲ್ಲ, ಭಕ್ತನು ಭಕ್ತನಲ್ಲ, ಸನ್ಯಾಸಿಗೆ ಪುಣ್ಯ ಅಥವಾ ಪಾಪದೊಡನೆ ಅನುಕೂಲಕರವಾದ ಅಥವಾ ಅನಾನುಕೂಲಕರವಾದ ಸಂಬಂಧವಿಲ್ಲ. ಆಗ ಅವನು ಹೃದಯದ ಎಲ್ಲ ದುಃಖಗಳನ್ನೂ ದಾಟುತ್ತಾನೆ."

'ಕಠೋಪನಿಷತ್ತು' ಹೀಗೆ ಹೇಳುತ್ತದೆ:

"ಆತ್ಮ ಸಾಕ್ಷಾತ್ಕಾರವು ಬೋಧನೆಯಿಂದಾಗಲಿ, ಅರಿವಿನಿಂದಾಗಲಿ, ಧರ್ಮ ಗ್ರಂಥಗಳಿಂದಾಗಲಿ ಲಭಿಸುವುದಿಲ್ಲ. ಆತ್ಮನು ತನಗೆ ಬೇಕಾದವರಿಗೆ ಲಭ್ಯ. ಆತ್ಮನು ಅಂತಹವನ ದೇಹವನ್ನು ತನ್ನ ನಿವಾಸವನ್ನಾಗಿ ಮಾಡಿಕೊಳ್ಳುತ್ತಾನೆ."

"ಆತ್ಮವನ್ನು ಅರಿಯುವುದು ಬಹಳ ಕಷ್ಟವಾದರೂ, ಕೆಲವು ಯೋಗ್ಯವಾದ ಕ್ರಮಗಳಿಂದ ಅವನನ್ನು ಸುಲಭವಾಗಿ ತಿಳಿಯಬಹುದು. ಇದನ್ನೇ ಈ ಕರ್ತೃವು ತಿಳಿಸಲು ಹೊರಟಿದ್ದಾನೆ. ಆತ್ಮಸಿದ್ಧಿಯು ಜ್ಞಾನದಿಂದಾಗಲಿ, ಬೋಧನೆಯಿಂದಾಗಲಿ, ವೇದಗಳ ಅಧ್ಯಯನದಿಂದಾಗಲಿ ಲಭಿಸುವುದಿಲ್ಲ. ಅರಿವಿನಿಂದಾಗಲಿ, ಪುಸ್ತಕಗಳ ವಿಷಯಗಳನ್ನು ಜ್ಞಾಪಕದಲ್ಲಿಟ್ಟುಕೊಳ್ಳುವುದರಿಂದಾಗಲಿ, ಧರ್ಮಗ್ರಂಥಗಳಿಂದಾಗಲಿ ಲಭಿಸುವುದಿಲ್ಲ. ಹಾಗಾದರೆ, ಅದು ಹೇಗೆ ಲಭಿಸುತ್ತದೆ? ಅದನ್ನೇ ಗ್ರಂಥಕರ್ತೃ ಈಗ ತಿಳಿಸುತ್ತಾನೆ."

ಉಪನಿಷತ್ತುಗಳು ಹಾಗೂ ಅವುಗಳಲ್ಲಿನ ದರ್ಶನದ ಬಗ್ಗೆ (ವೇದಗಳಿಗಿದ್ದ) ತಿರಸ್ಕಾರವನ್ನು ನಾವು ತಿಳಿದುಕೊಳ್ಳಬೇಕಾದರೆ, ಹಿಂದೂ ವಿವಾಹ ಪದ್ಧತಿಯಲ್ಲಿ ಸಾಮಾನ್ಯವಾಗಿ ಪ್ರಯೋಗಿಸಲಾಗುವ ಅನುಲೋಮ ಮತ್ತು ಪ್ರತಿಲೋಮ ಎಂಬ ಪದಗಳ ವ್ಯುತ್ಪತ್ತಿಯನ್ನು ಗಮನಿಸಬೇಕಾಗುತ್ತದೆ.ಈ ಪದಗಳ ವ್ಯುತ್ಪತ್ತಿಯ ಬಗ್ಗೆ ಬರೆಯುತ್ತಾ ಶ್ರೀ ಕಾಣೆಯವರು ಹೀಗೆನ್ನುತ್ತಾರೆ:[೧]

"ಅನುಲೋಮ ಮತ್ತು ಪ್ರತಿಲೋಮ ಎಂಬ ಪದಗಳು (ವಿವಾಹ ಅಥವಾ ವಂಶಕ್ಕೆ ಅನ್ವಯಿಸಿದಂತೆ) ವೈದಿಕ ಸಾಹಿತ್ಯದಲ್ಲಿ ಎಲ್ಲೂ ಬರುವುದಿಲ್ಲ. 'ಬೃಹದಾರಣ್ಯಕ' ಉಪನಿಷತ್ತು (II. ೧.೫), 'ಕೌಶೀತಕಿ' ಉಪನಿಷತ್ತುಗಳಲ್ಲಿ (IV. ೮) 'ಪ್ರತಿಲೋಮ' ಎಂಬ ಪ್ರಯೋಗವಾಗಿದ್ದು, ಅಲ್ಲಿ ಅದು ಬ್ರಾಹ್ಮಣನೊಬ್ಬನು ಕ್ಷತ್ರಿಯನಿಂದ ಬ್ರಹ್ಮ ಜ್ಞಾನವನ್ನು ಯಾಚಿಸುವ ಪದ್ಧತಿಗೆ ಅನ್ವಯಿಸುತ್ತದೆ."

ಅನುಲೋಮವೆಂದರೆ 'ಸ್ವಾಭಾವಿಕ ಕ್ರಮಕ್ಕನುಗುಣವಾಗಿರುವ ಉತ್ತರಾಧಿಕಾರಿ' ಎಂದರ್ಥ. ಪ್ರತಿಲೋಮವೆಂದರೆ 'ಸ್ವಾಭಾವಿಕ ಕ್ರಮಕ್ಕೆ ವಿರುದ್ಧವಾಗಿರುವ ಉತ್ತರಾಧಿಕಾರಿ' ಎಂದರ್ಥ. 'ಪ್ರತಿಲೋಮ' ಎಂಬ ಪದದ ವ್ಯಾಖ್ಯೆಯ ಬೆಳಕಿನಲ್ಲಿ ಶ್ರೀ ಕಾಣೆಯವರು ಮಾಡಿರುವ ವಿಮರ್ಶೆಯನ್ನು ಓದಿದರೆ, ವೈದಿಕ ಬ್ರಾಹ್ಮಣರು ಉಪನಿಷತ್ತುಗಳನ್ನು ವೈದಿಕ ಸಾಹಿತ್ಯದ ಭಾಗವೆಂದು ಪರಿಗಣಿಸಲಿಲ್ಲವೆಂದೂ, ಅದರ ಬದಲು ಅವುಗಳನ್ನು ತಿರಸ್ಕರಿಸಲೂ ಇಲ್ಲ. ಹೌದು, ಅವುಗಳನ್ನು ಕೀಳುದೃಷ್ಟಿಯಿಂದ ನೋಡಿದರು ಎಂಬ ಅಂಶ ವ್ಯಕ್ತವಾಗುತ್ತದೆ. ವೇದಗಳಿಗೂ ಉಪನಿಷತ್ತುಗಳಿಗೂ ವಿರೋಧವಿದ್ದ ಕಾಲವೊಂದಿತ್ತು ಎಂದು ಹೇಳಲು ಇದು ಮತ್ತೊಂದು ಸಾಕ್ಷಿ.

---

೧. 'ಹಿಸ್ಟರಿ ಆಫ್ ಧರ್ಮಶಾಸ್ತ್ರ', ಸಂ II. ಭಾಗ ೧, ಪು. ೫೨

ಉಪನಿಷತ್ತುಗಳನ್ನು ಅಧ್ಯಯನ ಮಾಡಿದ ಬ್ರಾಹ್ಮಣರ ವಿಷಯವಾಗಿ ವೈದಿಕ ಬ್ರಾಹ್ಮಣರ ಧೋರಣೆಯನ್ನು ತೋರಿಸಲು ಮತ್ತೊಂದು ಉದಾಹರಣೆ ಕೊಡಬಹುದು. ಅದು ಬೌಧಾಯನನ ಧರ್ಮಸೂತ್ರಗಳಲ್ಲಿ ಸಿಕ್ಕುತ್ತದೆ. ಬೌಧಾಯನ ತನ್ನ ಧರ್ಮಸೂತ್ರಗಳಲ್ಲಿ (ii, ೮–೩) ಶ್ರಾದ್ಧಕರ್ಮ ಮಾಡಲು ವೈದಿಕ ಬ್ರಾಹ್ಮಣ ಸಿಗದಿದ್ದರೆ ಮಾತ್ರ ರಹಸ್ಯವಿದನನ್ನು ಆಮಂತ್ರಿಸಬಹುದು ಎಂದಿದ್ದಾನೆ. ರಹಸ್ಯವಿದನೆಂದರೆ ಉಪನಿಷತ್ತುಗಳನ್ನು ಚೆನ್ನಾಗಿ ಬಲ್ಲವನು ಎಂದರ್ಥ.

ಆದ್ದರಿಂದ, ವೇದಗಳು ಮತ್ತು ಉಪನಿಷತ್ತುಗಳು ಪರಸ್ಪರ ಪೂರಕ ಎಂಬ ನಂಬಿಕೆ ನಿಜವಾಗಿಯೂ ಒಂದು ಒಗಟೇ ಸರಿ.

* * * *

# ಒಗಟು – ೯

## ಉಪನಿಷತ್ತುಗಳನ್ನು ವೇದಗಳಿಗೆ ಹೇಗೆ ಅಧೀನವನ್ನಾಗಿ ಮಾಡಲಾಯಿತು?

ಮೂಲದಲ್ಲಿ ಉಪನಿಷತ್ತುಗಳು ವೇದಗಳ ಭಾಗಗಳಾಗಿರಲಿಲ್ಲ ಮತ್ತು ಸಿದ್ಧಾಂತದ ವಿಷಯಗಳಲ್ಲಿ ಅವು ಪರಸ್ಪರ ವಿರೋಧಿಗಳಾಗಿದ್ದವು ಎಂಬುದನ್ನು ನಾವು ಹಿಂದಿನ ಅಧ್ಯಾಯದಲ್ಲಿ ನೋಡಿದೆವು. ವೇದ ಮತ್ತು ಉಪನಿಷತ್ತುಗಳ ಅನಂತರದ ಸಂಬಂಧವನ್ನು ಈ ಹಳೆಯ ಸಂಬಂಧದೊಡನೆ ಹೋಲಿಸುವುದು ಬೋಧಪ್ರದವಾಗಿದೆ. ಜೈಮಿನಿ ಮತ್ತು ಬಾದರಾಯಣ ಎಂಬಿಬ್ಬರು ದಾರ್ಶನಿಕರ ನಡುವಿನ ವಾದ ವಿವಾದವು ಈ ಹೊಸ ಸಂಬಂಧವನ್ನು ಉದಾಹರಣೆ ಸಹಿತ ಸ್ಪಷ್ಟಪಡಿಸುತ್ತದೆ.*

ಜೈಮಿನಿಯು 'ಮೀಮಾಂಸಾ ಸೂತ್ರ'ಗಳು ಎಂಬ ಗ್ರಂಥದ ಕರ್ತೃ ಮತ್ತು ಬಾದರಾಯಣನು 'ಬ್ರಹ್ಮಸೂತ್ರ'ಗಳು ಎಂಬ ಗ್ರಂಥದ ಕರ್ತೃ ಜೈಮಿನಿಯು ವೇದಗಳನ್ನು ಅನುಮೋದಿಸಿದರೆ ಬಾದರಾಯಣನು ಉಪನಿಷತ್ತುಗಳನ್ನು ಅನುಮೋದಿಸುತ್ತಾನೆ.

ಇಲ್ಲಿ ಚರ್ಚೆಯ ವಿಷಯವೆಂದರೆ ಯಜ್ಞ (ಕರ್ಮ)ಗಳನ್ನು ಮಾಡುವುದು ಆವಶ್ಯಕವೇ? ವೇದಗಳು ಹೌದೆಂದರೆ, ಉಪನಿಷತ್ತುಗಳು ಅಲ್ಲವೆನ್ನುತ್ತವೆ.

ಬಾದರಾಯಣನು ಜೈಮಿನಿಯ ವಾದವನ್ನು ತನ್ನ ಸೂತ್ರಗಳಲ್ಲಿ (೨–೭) ತಿಳಿಸಿದ್ದಾನೆ. ಅದರ ಮೇಲೆ ಶಂಕರಾಚಾರ್ಯರು ಭಾಷ್ಯ ಬರೆದಿದ್ದಾರೆ.

ಜೈಮಿನಿಯು ಹೀಗೆ ವಾದಿಸುತ್ತಾನೆ:[೧]

"ತಾನು ದೇಹದಿಂದ ಭಿನ್ನವೆಂದೂ, ಸತ್ತ ನಂತರ ಸ್ವರ್ಗಕ್ಕೆ ಹೋಗಿ, ಅಲ್ಲಿ ಯಜ್ಞಫಲಗಳನ್ನು ಅನುಭವಿಸುತ್ತೇನೆಂದೂ ತಿಳಿಯದೆ ಯಾರೂ ಯಜ್ಞಗಳನ್ನು ಮಾಡಲು ಹೊರಡುವುದಿಲ್ಲ. ಆತ್ಮವಿದ್ಯೆಯನ್ನು ತಿಳಿಸುವ ವೇದಾಂತ ಕೇವಲ ಕರ್ತೃವಿಗೆ ಜ್ಞಾನವನ್ನು ಕೊಡುತ್ತವೆ. ಆದ್ದರಿಂದ ಅವು ಯಜ್ಞಕರ್ಮಗಳಿಗಿಂತ ಕೀಳು."

ಸಂಕ್ಷಿಪ್ತವಾಗಿ ಹೇಳಬೇಕೆಂದರೆ, ಜೈಮಿನಿಯ ಪ್ರಕಾರ ವೇದಾಂತ 'ಆತ್ಮವು ದೇಹದಿಂದ ಭಿನ್ನವೆಂದೂ ದೇಹ ಸತ್ತನಂತರವೂ ಅದು ಉಳಿಯುತ್ತದೆಯೆಂದೂ' ಹೇಳುತ್ತದೆ, ಅಷ್ಟೆ. ಆದರೆ ಜ್ಞಾನವಷ್ಟೇ ಸಾಲದು. ಆತ್ಮಕ್ಕೆ ಸ್ವರ್ಗಕ್ಕೆ ಹೋಗುವ ಆಕಾಂಕ್ಷೆ ಇರಬೇಕು. ಆದರೆ ಅವನು ಕರ್ಮಕಾಂಡ ಬೋಧಿಸುವ

---

* *ಮೊದಲು ಈ ಅಧ್ಯಾಯಕ್ಕೆ 'ಜೈಮಿನಿ ವರ್ಸಸ್ ಬಾದರಾಯಣ' ಎಂಬ ಶೀರ್ಷಿಕೆಯನ್ನು ಕೊಟ್ಟಿದ್ದು, ಅನಂತರ ಅದನ್ನು ಹೊಡೆದುಹಾಕಲಾಗಿದೆ. ಇದು ೯ ಪುಟದ, ಬೆರಳಚ್ಚಿನ ಹಸ್ತಪ್ರತಿ. ಮೊದಲೆರಡು ಪುಟಗಳಲ್ಲಿನ ತಿದ್ದುಪಡಿಗಳು ಲೇಖಕರೇ ಮಾಡಿದುದು – ಸಂ.*

೧. ನೋಡಿ, ಬಾದರಾಯಣ ಸೂತ್ರ ೨ ಮತ್ತು ಅದರ ಮೇಲಿನ ಶಂಕರ ಭಾಷ್ಯ.

ವೈದಿಕ ಯಜ್ಞಗಳನ್ನು ಮಾಡಲಾರದೆ ಅದು ಸ್ವರ್ಗಕ್ಕೆ ಹೋಗಲಾರದು. ಆದ್ದರಿಂದ ಆತ್ಮಸಾಯುಜ್ಯಕ್ಕೆ ಕರ್ಮಕಾಂಡವೊಂದೇ ದಾರಿ ಮತ್ತು ಈ ದೃಷ್ಟಿಯಿಂದ ನೋಡಿದಾಗ ಜ್ಞಾನಕಾಂಡವು ನಿರುಪಯೋಗಿ. ವೇದಾಂತವನ್ನೇ ನಂಬಿಕೊಂಡಿರುವವರನ್ನು ನೋಡಿ ಜೈಮಿನಿ ಹೀಗೆ ಹೇಳುತ್ತಾನೆ:[೧]

"ವಿದೇಹದ ಚಕ್ರವರ್ತಿಯಾದ ಜನಕನು ಯಾಗ ಮಾಡಿ ಅನೇಕ ದಾನಗಳನ್ನು ಮಾಡಿದನು (ಬೃಹ. ಉಪ ೩.೧.೧). ಮಹನೀಯರೇ, ಈಗ ನಾನೊಂದು ಯಜ್ಞ ಮಾಡಲು ಹೊರಟಿದ್ದೇನೆ. (ಛಾಂದೋ. ಉಪ. ೫.೧೧.೫). ಜನಕ ಮತ್ತು ಅಶ್ವಪತಿ ಇಬ್ಬರಿಗೂ ಆತ್ಮವಿದ್ಯೆ ಗೊತ್ತಿತ್ತು. ಈ ಆತ್ಮವಿದ್ಯೆಯಿಂದ ಅವರಿಗೆ ಆಗಲೇ ಮೋಕ್ಷ ಲಭಿಸಿದ್ದರೆ ಅವರು ಯಜ್ಞ ಮಾಡಬೇಕಾದ ಆವಶ್ಯಕತೆ ಇರಲಿಲ್ಲ. ಆದರೆ ಈಗ ಉಲ್ಲೇಖಿಸಿದ ಎರಡು ವಾಕ್ಯಗಳು ಅವರು ಯಜ್ಞವನ್ನು ಮಾಡಿದರೆಂದು ತೋರಿಸುತ್ತವೆ. ಇದರಿಂದ, ಯಜ್ಞಯಾಗಾದಿಗಳ ಮೂಲಕ ಮಾತ್ರ ಮೋಕ್ಷ ಪಡೆಯಬಹುದೇ ಹೊರತು ವೇದಾಂತಿಗಳು ಹೇಳುವಂತೆ ಆತ್ಮವಿದ್ಯೆಯ ಮೂಲಕವಲ್ಲ ಎಂಬ ಮಾತು ಸಿದ್ಧವಾಗುತ್ತದೆ."

ಧರ್ಮಗ್ರಂಥಗಳು[೨] "ಆತ್ಮ ವಿದ್ಯೆಯು ಯಾಜ್ಞಿಕ ಕರ್ಮಗಳಿಗಿಂತ ಕಡಿಮೆ" ಎಂಬ ಮಾತನ್ನು ಸಂಶಯಾತೀತವಾಗಿ ಸಾರಿ ಹೇಳುತ್ತವೆ ಎಂಬುದನ್ನು ಜೈಮಿನಿ ಒತ್ತಿ ಹೇಳುತ್ತಾನೆ. ಅಷ್ಟೇ ಅಲ್ಲ, ಅವನು ಅದನ್ನು ಸಮರ್ಥಿಸುತ್ತಾನೆ. ಏಕೆಂದರೆ ಅವನೇ "ಈ ಎರಡೂ (ಆತ್ಮ ವಿದ್ಯೆ ಮತ್ತು ವೈದಿಕ ಕರ್ಮಗಳು) (ದೇಹವನ್ನು ಬಿಟ್ಟುಹೋಗುವ ಆತ್ಮದೊಂದಿಗೆ) ಒಟ್ಟಿಗೇ ಹೋಗಿ, ಫಲವನ್ನುಂಟು ಮಾಡುತ್ತವೆ."[೩] ಎಂದು ಹೇಳುತ್ತಾನೆ. ಬಾದರಾಯಣನ ಜ್ಞಾನಕಾಂಡಕ್ಕೆ ಆತ ಸ್ವತಂತ್ರ ಸ್ಥಾನವನ್ನು ಕೊಡಲು ನಿರಾಕರಿಸುತ್ತಾನೆ. ಅವನ ಈ ನಿಲುವಿಗೆ ಎರಡು ಆಧಾರಗಳುಂಟು.

ಮೊದಲನೆಯದು[೪]: "ಆತ್ಮಜ್ಞಾನವು ತಾನೊಂದೇ ಯಾವುದೇ ಫಲವನ್ನೂ ಉಂಟು ಮಾಡಲಾರದು."

ಎರಡನೆಯದು[೫]: ವೇದ ಪ್ರಾಮಾಣ್ಯದ ಪ್ರಕಾರ "ಆತ್ಮಜ್ಞಾನವು ಕರ್ಮಕ್ಕಿಂತ ಕಡಿಮೆ."

ಇದು ಬಾದರಾಯಣನ ಜ್ಞಾನಕಾಂಡದ ಬಗೆಗೆ ಜೈಮಿನಿಯ ಧೋರಣೆ. ಜೈಮಿನಿಯ ಹಾಗೂ ಅವನ ಕರ್ಮಕಾಂಡದ ಬಗೆಗೆ ಬಾದರಾಯಣನ ಧೋರಣೆ ಏನಿತ್ತು? ಇದನ್ನು ಬಾದರಾಯಣನು ೮ ರಿಂದ ೧೭ ರವರೆಗಿನ ತನ್ನ ಸೂತ್ರಗಳಲ್ಲಿ ತಿಳಿಸುತ್ತಾನೆ.

ಬಾದರಾಯಣನ ಮೊದಲನೆ ವಾದ[೬] ಹೀಗಿದೆ: "ಜೈಮಿನಿ ಹೇಳುವ ಆತ್ಮ ಜೀವಾತ್ಮನಿಗೆ ಅನ್ವಯವಾಗುತ್ತದೆ. ನಾವು ಅದನ್ನು ಪರಮಾತ್ಮನಿಂದ ಪ್ರತ್ಯೇಕಿಸಬೇಕು. ಧರ್ಮಗ್ರಂಥಗಳು ಹೇಳುವುದು ಪರಮಾತ್ಮನ ಬಗೆಗೆ."

ಬಾದರಾಯಣನ ಎರಡನೆ ವಾದ[೭] ಹೀಗಿದೆ: "ವೇದವಾಕ್ಯಗಳು ಆತ್ಮವಿದ್ಯೆಯನ್ನೂ ಸಮರ್ಥಿಸುತ್ತವೆ, ಯಾಜ್ಞಿಕ ಕರ್ಮಗಳನ್ನೂ ಸಮರ್ಥಿಸುತ್ತವೆ."

---

೧. ನೋಡಿ, 'ಬಾದರಾಯಣ ಸೂತ್ರ'– ೩ ಮತ್ತು ಅದರ ಮೇಲಿನ ಶಂಕರಭಾಷ್ಯ
೨. ಅದೇ, ಸೂತ್ರ – ೪
೩ ಅದೇ, ಸೂತ್ರ – ೫
೪. ಅದೇ, ಸೂತ್ರ – ೬ ಮತ್ತು ಅದರ ಮೇಲಿನ ಶಂಕರ ಭಾಷ್ಯ
೫. ಅದೇ, ಸೂತ್ರ – ೭
೬. ಅದೇ, ಸೂತ್ರ – ೮
೭. ಅದೇ, ಸೂತ್ರ – ೯

ಬಾದರಾಯಣನ ಮೂರನೆಯ[೧] ವಾದ ಹೀಗಿದೆ: "ವೇದಗಳಲ್ಲಿ ವಿಶ್ವಾಸವುಳ್ಳವರಷ್ಟೇ ಯಜ್ಞಗಳನ್ನು ಮಾಡುವ ಅಗತ್ಯವಿದೆ. ಉಪನಿಷತ್ತುಗಳನ್ನು ಅನುಸರಿಸುವವರು ವಿಧಿಗೆ ಬದ್ಧರಲ್ಲ."

ಶಂಕರಾಚಾರ್ಯರು ಹೇಳುವಂತೆ: "ವೇದಗಳನ್ನು ಓದಿ, ಯಜ್ಞಗಳ ಬಗ್ಗೆ ತಿಳಿದುಕೊಂಡವರು ಯಜ್ಞ(ಕರ್ಮ) ಮಾಡಲು ಅರ್ಹರು. ಉಪನಿಷತ್ತುಗಳಿಂದ ಆತ್ಮಜ್ಞಾನ ಪಡೆದವರಿಗೆ ಯಾವ ಯಜ್ಞ(ಕರ್ಮ)ವನ್ನೂ ವಿಧಿಸುವುದಿಲ್ಲ. ಅಂತಹ ಜ್ಞಾನವು ಯಜ್ಞ(ಕರ್ಮ)ಗಳೊಂದಿಗೆ ಹೊಂದಿಕೊಳ್ಳುವುದಿಲ್ಲ."

ಬಾದರಾಯಣನ ನಾಲ್ಕನೆಯ[೨] ವಾದವು ಹೀಗಿದೆ. "ಬ್ರಹ್ಮಾನಂದ ಸಿದ್ಧಿಸಿದವರಿಗೆ ಕರ್ಮಕಾಂಡ ಐಚ್ಛಿಕ."

ಶಂಕರಾಚಾರ್ಯರು ವಿವರಿಸುವಂತೆ: "ಕೆಲವರು ತಮ್ಮ ಸ್ವಇಚ್ಛೆಯಿಂದ ಎಲ್ಲ ಕರ್ಮಗಳನ್ನೂ ಕೈಬಿಟ್ಟಿದ್ದಾರೆ. ಜ್ಞಾನ ಪಡೆದ ಮೇಲೆ ಕೆಲವರು ತಾವು ಬೇರೆಯವರಿಗೆ ನಿದರ್ಶನವೆಂದು ಕರ್ಮ ಮಾಡಲು ನಿರ್ಧರಿಸಬಹುದು. ಮತ್ತೆ ಕೆಲವರು ಎಲ್ಲ ಕರ್ಮಗಳನ್ನೂ ತೊರೆಯಬಹುದು. ಇದು ಗಮನಿಸಬೇಕಾದ ಅಂಶ. ಆತ್ಮಜ್ಞಾನಿಗಳು ಕರ್ಮಕ್ಕೆ ಬದ್ಧರಲ್ಲ."

ಅವನ ಐದನೆಯ ಹಾಗೂ ಕೊನೆಯ ವಾದ[೩] ಹೀಗಿದೆ:

"ಆತ್ಮಜ್ಞಾನವು ಎಲ್ಲ ಕರ್ಮಗಳಿಗೂ ವಿರುದ್ಧವಾಗಿದೆ. ಆದ್ದರಿಂದ ಅದು ಕರ್ಮಗಳಿಗೆ ಅಧೀನವಾಗಿರಲು ಸಾಧ್ಯವಿಲ್ಲ."

ಬಾದರಾಯಣನು ತನ್ನ ವಾದವನ್ನು ಸಮರ್ಥಿಸಿಕೊಳ್ಳಲು ಧರ್ಮ ಗ್ರಂಥಗಳನ್ನು[೪] ಆಶ್ರಯಿಸುತ್ತಾನೆ. ಆ ಗ್ರಂಥಗಳ ಪ್ರಕಾರ ನಾಲ್ಕನೆಯ ಮತ್ತು ಕೊನೆಯ ಆಶ್ರಮವೇ ಸನ್ಯಾಸ ಮತ್ತು ಸನ್ಯಾಸಿಯಾದವನು ಕರ್ಮಕಾಂಡ ವಿಧಿಸಿದ ಕರ್ಮಗಳನ್ನು ಮಾಡಬೇಕಾಗಿಲ್ಲ.

ಇಬ್ಬರು ವಿದ್ವಾಂಸರು ಪರಸ್ಪರರ ಬಗೆಗೆ ತೋರಿಸುವ ಧೋರಣೆಯನ್ನು ತಿಳಿಸುವ ಇಂತಹ ಸೂತ್ರಗಳು ಬಾದರಾಯಣನ ಸೂತ್ರಗಳಲ್ಲಿ ಹೇರಳವಾಗಿ ಸಿಕ್ಕುತ್ತವೆ. ಆದರೆ ಮೇಲೆ ಉದ್ಧರಿಸಿದ ಸೂತ್ರ ಒಂದೇ ಸಾಕು. ಏಕೆಂದರೆ ಅದು ವಿಶಿಷ್ಟವಾಗಿದೆ. ಸ್ವಲ್ಪ ಹೊತ್ತು ನಿಂತು ಯೋಚಿಸಿದರೆ ಈ ವಿಷಯಕ್ಕೆ ಒಂದು ಅಪರೂಪದ ರೂಪ ಸಿಕ್ಕುತ್ತದೆ. ಜೈಮಿನಿಯು ವೇದಾಂತವನ್ನು ಅದೊಂದು ಸುಳ್ಳುಶಾಸ್ತ್ರ, ಒಂದು ಕನಸು ಅಥವಾ ಭ್ರಮೆ, ಗಾಢವಾದದ್ದಲ್ಲ, ಅನಾವಶ್ಯಕವಾದದ್ದು, ನಿರಾಧಾರವಾದದ್ದು ಎಂದೆಲ್ಲಾ ಜರೆಯುತ್ತಾನೆ. ಜೈಮಿನಿಯು ಇಂತಹ ಆಕ್ರಮಣ ಮಾಡಿದಾಗ ಬಾದರಾಯಣ ಯಾವ ಪ್ರತಿಕ್ರಿಯೆ ತೋರಿಸುತ್ತಾನೆ? ಉಪನಿಷತ್ತುಗಳು ಹೇಗೆ ಕರ್ಮಕಾಂಡವನ್ನು ಅದೊಂದು ಸುಳ್ಳುಶಾಸ್ತ್ರ, ಕನಸು ಅಥವಾ ಭ್ರಮೆ, ಗಾಢವಲ್ಲದುದು, ಅನಾವಶ್ಯಕವಾದುದು, ನಿರಾಧಾರವಾದದ್ದು ಎಂದು ಜರೆದವೋ ಹಾಗೆ ಬಾದರಾಯಣನೂ ಜರೆಯುತ್ತಾನೆಯೇ? ಇಲ್ಲ. ಅವನು ತನ್ನ ವೇದಾಂತ ಶಾಸ್ತ್ರವನ್ನಷ್ಟೇ ಅನುಮೋದಿಸುತ್ತಾನೆ. ಅವನಿಂದ ಇನ್ನೂ ಹೆಚ್ಚಿನದನ್ನು ನಾವು ನಿರೀಕ್ಷಿಸಬಹುದಿತ್ತು. ಬಾದರಾಯಣನು ಜೈಮಿನಿಯ ಕರ್ಮಕಾಂಡವನ್ನು ಸುಳ್ಳು ಧರ್ಮವೆಂದು ಜರೆಯುತ್ತಾನೆಂದು ನಾವು ನಿರೀಕ್ಷಿಸುತ್ತೇವೆ. ಆದರೆ ಬಾದರಾಯಣ ಆ ಧೈರ್ಯವನ್ನು ತೋರಿಸುವುದಿಲ್ಲ. ಅದರ ಬದಲು ಅವನನ್ನು ಬಹಳವಾಗಿ

---

೧. ಅದೇ, ಸೂತ್ರ – ೧೨
೨. ಅದೇ, ಸೂತ್ರ – ೧೫
೩. ಅದೇ, ಸೂತ್ರ – ೧೬
೪. ಅದೇ, ಸೂತ್ರ – ೧೭

ಅನುಮೋದಿಸುತ್ತಾನೆ. ಅವನು ಜೈಮಿನಿಯ ಕರ್ಮಕಾಂಡಕ್ಕೆ ಧರ್ಮಗ್ರಂಥಗಳ ಆಧಾರವಿದೆ ಎಂಬುದನ್ನು ಒಪ್ಪಿಕೊಳ್ಳುತ್ತಾನೆ. ಅಲ್ಲದೆ, ಧರ್ಮಗ್ರಂಥಗಳಿಗಿರುವ ಪ್ರಾಮಾಣ್ಯ ಮತ್ತು ಪಾವಿತ್ರ್ಯವನ್ನು ಯಾರೂ ಅಲ್ಲಗಳೆಯುವಂತಿಲ್ಲ. ಅವನು ಹೇಳುವುದಿಷ್ಟೆ. ತನ್ನ ವೇದಾಂತ ಸಿದ್ಧಾಂತವೂ ನಿಜವಾದುದು. ಏಕೆಂದರೆ ಅದಕ್ಕೂ ಧರ್ಮಗ್ರಂಥಗಳ ಆಧಾರವಿದೆ.

ಅಷ್ಟೇ ಅಲ್ಲ, ಬಾದರಾಯಣನು ವೇದಾಂತ ಶಬ್ದವನ್ನು ಎರಡು ಅರ್ಥಗಳಲ್ಲಿ ಬಳಸುತ್ತಾನೆ. ಉಪನಿಷತ್ತುಗಳು ವೈದಿಕ ಸಾಹಿತ್ಯದ ಭಾಗ ಎಂಬುದನ್ನು ಒತ್ತಿ ಹೇಳಲೂ ಆ ಶಬ್ದವನ್ನು ಬಳಸುತ್ತಾನೆ. ಉಪನಿಷತ್ತುಗಳ ವೇದಾಂತ ಅಥವಾ ಜ್ಞಾನಕಾಂಡ ವೇದಗಳ ಕರ್ಮಕಾಂಡಕ್ಕೆ ವಿರೋಧವಾದುದಲ್ಲ, ಅವೆರಡೂ ಪರಸ್ಪರ ಪೂರಕ ಎಂಬುದನ್ನು ಒತ್ತಿಹೇಳಲೂ ಆ ಶಬ್ದವನ್ನು ಬಳಸುತ್ತಾನೆ. ವಾಸ್ತವವಾಗಿ ಬಾದರಾಯಣನು ತನ್ನ ಇಡಿ ವೇದಾಂತ ಸೂತ್ರಗಳನ್ನು ರಚಿಸಿರುವುದು ಈ ತಳಹದಿಯ ಮೇಲೆಯೇ.

ಉಪನಿಷತ್ತುಗಳು ವೇದಗಳ ಭಾಗಗಳೇ ಹೊರತು, ವೇದಗಳಿಗೂ ಉಪನಿಷತ್ತುಗಳಿಗೂ ವಿರೋಧವಿರುವುದಿಲ್ಲ ಎಂಬ ಬಾದರಾಯಣನ ಸಿದ್ಧಾಂತವು ವೇದಾಂತ ಸೂತ್ರಗಳ ತಳಹದಿ. ಆದರೆ ಈ ಸಿದ್ಧಾಂತವು ಉಪನಿಷತ್ತುಗಳ ಗತ್ತಿಗೂ, ವೇದಗಳೊಡನೆ ಇರುವ ತಮ್ಮ ಸಂಬಂಧಕ್ಕೂ ವಿರುದ್ಧವಾಗಿದೆ. ಬಾದರಾಯಣನ ನಿಲುವು ಸುಲಭವೇದ್ಯವಲ್ಲ. ಆದರೆ ಇಷ್ಟಂತೂ ಸ್ಪಷ್ಟ. ಬಾದರಾಯಣನು ತನ್ನ ವಿರೋಧಿಯ ಆಧಾರವಾಕ್ಯಗಳ ಸಾಮಂಜಸ್ಯವನ್ನು ಒಪ್ಪಿಕೊಂಡು ಯುದ್ಧ ಪ್ರಾರಂಭಿಸುವ ಒಬ್ಬ ವಿಚಿತ್ರ ಹಾಗೂ ಕರುಣಾಜನಕ ವಿರೋಧಿ. ಉಪನಿಷತ್ತುಗಳಿಗೆ ವಿರುದ್ಧವಿರುವ ವೇದಗಳು ದೋಷರಹಿತವೆಂಬ ಚರ್ಚೆಯಲ್ಲಿ ಬಾದರಾಯಣನು ಜೈಮಿನಿಗೆ ಸೋಲನ್ನೊಪ್ಪಿಕೊಂಡನೇಕೆ? ಉಪನಿಷತ್ತುಗಳು ವಿವರಿಸುವ ಸತ್ಯ, ಪೂರ್ಣಸತ್ಯ, ಮತ್ತೇನೂ ಅಲ್ಲದ ಸತ್ಯಕ್ಕಾಗಿ ಅವನು ಹೋರಾಡಲಿಲ್ಲವೇಕೆ? ಬಾದರಾಯಣನು ತನ್ನ ವೇದಾಂತ ಸೂತ್ರಗಳಲ್ಲಿ ಉಪನಿಷತ್ತುಗಳಿಗೆ ದ್ರೋಹ ಬಗೆದಿದ್ದಾನೆ. ಅವನು ಹೀಗೇಕೆ ಮಾಡಿದ?

* * * *

# ಒಗಟು – ೧೦

# ಬ್ರಾಹ್ಮಣರು ಹಿಂದೂ ದೈವಗಳನ್ನು ಪರಸ್ಪರ ಕಾದಾಡುವಂತೆ ಏಕೆ ಮಾಡಿದರು?

ವಿಶ್ವಕ್ಕೆ ಸಂಬಂಧಿಸಿದಂತೆ ಹಿಂದೂ ದೇವತಾಶಾಸ್ತ್ರವು ತ್ರಿಮೂರ್ತಿ ಸಿದ್ಧಾಂತವನ್ನು ಅವಲಂಬಿಸಿದೆ. ಈ ಸಿದ್ಧಾಂತದ ಪ್ರಕಾರ ಪ್ರಪಂಚವು ಮೂರು ಅವಸ್ಥೆಗಳಿಗೆ ಒಳಪಟ್ಟಿದೆ. ಸೃಷ್ಟಿ, ಸ್ಥಿತಿ ಮತ್ತು ಲಯಗಳೇ ಈ ಅವಸ್ಥೆಗಳು. ನಿರಂತರವಾಗಿ ಚಲಿಸುವ ಶಾಶ್ವತ ಚಕ್ರವಿದು. ಈ ಚಕ್ರದಲ್ಲಿರುವ ಮೂರು ಕರ್ತವ್ಯಗಳನ್ನು ಮೂರು ದೇವರುಗಳು ಅಂದರೆ ಬ್ರಹ್ಮ, ವಿಷ್ಣು ಮತ್ತು ಮಹೇಶ್ವರ ಮಾಡುತ್ತಾರೆ. ಬ್ರಹ್ಮನು ವಿಶ್ವವನ್ನು ಸೃಷ್ಟಿಸುತ್ತಾನೆ. ವಿಷ್ಣುವು ಅದನ್ನು ರಕ್ಷಿಸುತ್ತಾನೆ ಮತ್ತು ಮತ್ತೊಮ್ಮೆ ಸೃಷ್ಟಿಯಾಗಲಿ ಎಂಬ ಉದ್ದೇಶದಿಂದ ಮಹೇಶ್ವರನು ಅದನ್ನು ಸಂಹಾರ ಮಾಡುತ್ತಾನೆ. ತ್ರಿಮೂರ್ತಿ ಎಂದು ಹೇಳಲಾಗುವ ದೇವರುಗಳು ಇವರೇ. ತ್ರಿಮೂರ್ತಿ ಸಿದ್ಧಾಂತವು ಈ ಮೂರು ದೇವರುಗಳು ಸ್ಥಾನಮಾನಗಳಲ್ಲಿ ಸಮಾನರೆಂದೂ ಅವರ ಕಾರ್ಯಗಳೂ ಪರಸ್ಪರ ಪೂರಕವೇ ಹೊರತು ಸ್ಪರ್ಧಾತ್ಮಕವಲ್ಲ ಎಂಬ ಆಧಾರಕಲ್ಪನೆಯ ಮೇಲೆ ನಿಂತಿದೆ. ಅವರು ಸ್ನೇಹಿತರೇ ಹೊರತು ಸ್ಪರ್ಧಿಗಳಲ್ಲ. ಅವರು ಪರಸ್ಪರ ಸಹಕಾರಿಗಳೇ ಹೊರತು ವೈರಿಗಳಲ್ಲ.

ಆದರೆ ಈ ಮೂರು ದೇವರುಗಳ ಕಾರ್ಯಗಳನ್ನು ವರ್ಣಿಸುವ ಸಾಹಿತ್ಯವನ್ನು ನಾವು ಅಭ್ಯಸಿಸಿದರೆ ಆಚಾರಕ್ಕೂ ವಿಚಾರಕ್ಕೂ ಪೂರ್ಣ ವ್ಯತ್ಯಾಸವಿರುವುದನ್ನು ಕಾಣುತ್ತೇವೆ. ಈ ದೇವರುಗಳು ಪರಸ್ಪರ ಸ್ನೇಹಿತರಾಗಿರುವುದರ ಬದಲು, ಪರಸ್ಪರ ಕೆಟ್ಟ ಶತ್ರುಗಳಾಗಿದ್ದು, ಸರ್ವೋತ್ಕೃಷ್ಟತೆಗೂ, ಪರಮಾಧಿಕಾರಕ್ಕೂ ಕಚ್ಚಾಟ ನಡೆಸುವವರಂತೆ ಕಾಣುತ್ತದೆ.* ಪುರಾಣಗಳಿಂದ ಆಯ್ದ ಕೆಲವು ಉದಾಹರಣೆಗಳು ಈ ವಿಷಯವನ್ನು ದೃಢಪಡಿಸುತ್ತವೆ.

ಒಂದು ಕಾಲದಲ್ಲಿ ಬ್ರಹ್ಮನು ವಿಷ್ಣು ಮತ್ತು ಶಿವ ಇವರಿಬ್ಬರಿಗಿಂತ ಶ್ರೇಷ್ಠತರ ದೇವನಾಗಿರುವಂತೆ ಕಾಣುತ್ತದೆ. ಮೊದಲನೆಯ ಪ್ರಜಾಪತಿಯಾದ ಬ್ರಹ್ಮನು ವಿಶ್ವವನ್ನು ಸೃಷ್ಟಿಸಿದನೆಂದು ಹೇಳಲಾಗುತ್ತದೆ. ಅವನು ಶಿವನ ತಂದೆ[೧] ಮತ್ತು ವಿಷ್ಣುವಿನ ಸ್ವಾಮಿ. ಏಕೆಂದರೆ ವಿಷ್ಣು ಪ್ರಪಂಚದ ರಕ್ಷಕನಾಗಿರುವುದಕ್ಕೆ, ಬ್ರಹ್ಮನು ಅವನಿಗೆ ಆ ರೀತಿ ಮಾಡಲು ಆಜ್ಞೆ ಕೊಟ್ಟಿದ್ದೇ ಕಾರಣ. ಬ್ರಹ್ಮನು ಎಷ್ಟು ಸರ್ವೋತ್ಕೃಷ್ಟನಾಗಿದ್ದನೆಂದರೆ, ರುದ್ರ ಮತ್ತು ನಾರಾಯಣರಿಗೆ ಮತ್ತು ಕೃಷ್ಣ ಮತ್ತು ಶಿವ ಇವರಿಗೆ ಆದ ಘರ್ಷಣೆಗಳಲ್ಲಿ ಅವನೇ ತೀರ್ಪುಗಾರನಾಗಿರುತ್ತಿದ್ದ.

---

೧. 'ವಿಷ್ಣುಪುರಾಣ', 'ಮ್ಯೂರ್ ಸ್ಯಾನ್‌ಸ್ಕ್ರಿಟ್ ಟೆಕ್ಸ್ಟ್', ಪು. ೩೯೨

* *ಈ ಅಧ್ಯಾಯಕ್ಕೆ 'ಗಾಡ್ಸ್ ಅಟ್ ವಾರ್' ಎಂಬ ಮೂಲ ಶೀರ್ಷಿಕೆ ಇತ್ತು. ಇದರಲ್ಲಿ ೨೫ ಬೆರಳಚ್ಚು ಮಾಡಿದ ಪುಟಗಳಿದ್ದು, ಅವುಗಳನ್ನು ಕೈಯಲ್ಲಿ ತಿದ್ದುಪಡಿಮಾಡಲಾಗಿದೆ ಹಾಗೂ ಕೊನೆಯ ಮೂರು ಪುಟಗಳು ಲೇಖಕರ ಕೈಬರವಣಿಗೆಯಲ್ಲಿದೆ – ಸಂ.*

ಇಷ್ಟೇ ಖಚಿತವಾದ ಮತ್ತೊಂದು ವಿಷಯವೆಂದರೆ, ಇದೇ ಬ್ರಹ್ಮನು ಎಷ್ಟೋ ಕಾಲದ ನಂತರ ಶಿವ ಮತ್ತು ವಿಷ್ಣು ಇವರುಗಳೊಂದಿಗೆ ಘರ್ಷಣೆಗೆ ಇಳಿದನಲ್ಲದೆ ವಿಚಿತ್ರವೆಂಬಂತೆ ತನ್ನ ಸ್ಥಾನವನ್ನೂ ಪರಮಾಧಿಕಾರವನ್ನೂ ತನ್ನ ಪ್ರತಿಸ್ಪರ್ಧಿಗಳಿಗೆ ಬಿಟ್ಟುಕೊಟ್ಟನು. ವಿಷ್ಣುವಿನೊಂದಿಗೆ ನಡೆದ ಅವನ ಘರ್ಷಣೆಗೆ ಎರಡು ಉದಾಹರಣೆಗಳನ್ನು ಕೊಡಬಹುದು:

ಮೊದಲನೆಯ ಅವತಾರದ ಕತೆ. ಅವತಾರದ ವಿಷಯವಾಗಿ, ಬ್ರಹ್ಮ ಮತ್ತು ವಿಷ್ಣು ಇವರುಗಳ ಮಧ್ಯೆ ವೈಮನಸ್ಯವಿದೆ. ಮನುಕುಲವನ್ನು ಸರ್ವನಾಶದಿಂದ ರಕ್ಷಿಸಲೋಸ್ಕರ ಪರಮಾತ್ಮನು ಅವತಾರ ಮಾಡುತ್ತಾನೆಂಬ ಸಿದ್ಧಾಂತ ಬ್ರಹ್ಮನಿಂದ ಪ್ರಾರಂಭವಾಯಿತು. ಅವನು ಎರಡು ಅವತಾರಗಳನ್ನು ಮಾಡಿದನು (ಒಮ್ಮೆ ವರಾಹ ಅಥವಾ ಹಂದಿಯಾಗಿ, ಮತ್ತೊಮ್ಮೆ ಮತ್ಸ್ಯವಾಗಿ) ಎಂದು ಹೇಳಲಾಗಿದೆ. ಆದರೆ ವೈಷ್ಣವರು ಇದನ್ನು ಒಪ್ಪುವುದಿಲ್ಲ. ಅವರು ಈ ಅವತಾರಗಳು ಬ್ರಹ್ಮನ ಅವತಾರಗಳಲ್ಲವೆಂದೂ ಅವು ವಿಷ್ಣುವಿನ ಅವತಾರಗಳೆಂದೂ ವಾದಿಸುತ್ತಾರೆ. ಹೀಗೆ ಅವರು ವಿಷ್ಣುವಿಗೆ ಈ ಎರಡು ಅವತಾರಗಳೇ ಅಲ್ಲದೆ ಇನ್ನೂ ಅನೇಕ ಅವತಾರಗಳನ್ನೂ ಆರೋಪಿಸಿದರು.

ಪುರಾಣಗಳಲ್ಲಿ ವಿಷ್ಣುವಿನ ಅವತಾರಗಳ ಅತಿರಿಕ್ತ ವರ್ಣನೆಗಳಿವೆ. ಅಲ್ಲದೆ, ಬೇರೆ ಬೇರೆ ಪುರಾಣಗಳು ಬೇರೆ ಬೇರೆ ಅವತಾರಗಳ ಪಟ್ಟಿಯನ್ನು ನೀಡುತ್ತವೆ. ಅದನ್ನು ಈ ಕೆಳಗೆ ಕಾಣಬಹುದು:

## ವಿಷ್ಣುವಿನ ಅವತಾರಗಳು

| ಕ್ರ. ಸಂ ೧ | 'ಹರಿವಂಶ'ದ ಪ್ರಕಾರ ೨ | 'ನಾರಾಯಣೀಯ' ಆಖ್ಯಾಯನದ ಪ್ರಕಾರ ೩ | 'ವರಾಹ ಪುರಾಣ'ದ ಪ್ರಕಾರ ೪ | 'ವಾಯು ಪುರಾಣ'ದ ಪ್ರಕಾರ ೫ | 'ಭಾಗವತ ಪುರಾಣ'ದ ಪ್ರಕಾರ ೬ |
|---|---|---|---|---|---|
| ೧ | ವರಾಹ | ಹಂಸ | ಕೂರ್ಮ | ನರಸಿಂಹ | ಸನತ್ಕುಮಾರ |
| ೨ | ನರಸಿಂಹ | ಕೂರ್ಮ | ಮತ್ಸ್ಯ | ವಾಮನ | ವರಾಹ |
| ೩ | ವಾಮನ | ಮತ್ಸ್ಯ | ವರಾಹ | ವರಾಹ | – |
| ೪ | ಪರಶುರಾಮ | ವರಾಹ | ನರಸಿಂಹ | ಕೂರ್ಮ | ನರನಾರಾಯಣ |
| ೫ | ರಾಮ | ನರಸಿಂಹ | ವಾಮನ | ಸಂಗ್ರಾಮ | ಕಪಿಲ |
| ೬ | ಕೃಷ್ಣ | ವಾಮನ | ಪರಶುರಾಮ | ಆದಿವಾಕ | ದತ್ತಾತ್ರೇಯ |
| ೭ | | ಪರಶುರಾಮ | ರಾಮ | ತ್ರಿಪುರಾರಿ | ಜದ್ನ |
| ೮ | | ರಾಮ | ಕೃಷ್ಣ | ಅಂಧಕಾರಿ | ಋಷಭ |
| ೯ | | ಕೃಷ್ಣ | ಬುದ್ಧ | ಧ್ವಜ | ಪೃಥಿ |
| ೧೦ | | ಕಲ್ಕಿ | ಕಲ್ಕಿ | ವರ್ತ | ಮತ್ಸ್ಯ |
| ೧೧ | | | | ಹಾಲಾಹಲ | ಕೂರ್ಮ |
| ೧೨ | | | | ಕೋಲಾಹಲ | ಧನ್ವಂತರಿ |
| ೧೩ | | | | | ಮೋಹಿನಿ |
| ೧೪ | | | | | ನರಸಿಂಹ |
| ೧೫ | | | | | ವಾಮನ |
| ೧೬ | | | | | ಪರಶುರಾಮ |
| ೧೭ | | | | | ವೇದವ್ಯಾಸ |
| ೧೮ | | | | | ನರದೇವ |
| ೧೯ | | | | | ರಾಮ |
| ೨೦ | | | | | ಕೃಷ್ಣ |
| ೨೧ | | | | | ಬುದ್ಧ |
| ೨೨ | | | | | ಕಲ್ಕಿ |

ಎರಡನೆಯ ಕತೆಯು ಮೊದಲು ಹುಟ್ಟಿದವರಾರು ಎಂಬುದಕ್ಕೆ ಸಂಬಂಧಿಸಿದುದು. ಅದು ಸ್ಕಂದ ಪುರಾಣದಲ್ಲಿದೆ. ಆ ಕತೆಯ ಪ್ರಕಾರ, ಒಂದು ಸಾರಿ ವಿಷ್ಣುವು ದೇವಿಯ ವಕ್ಷಸ್ಥಲದ ಮೇಲೆ ಮಲಗಿ ನಿದ್ರಿಸುತ್ತಿದ್ದಾಗ, ಅವನ ನಾಭಿಯಿಂದ ಕಮಲದ ಮೂಲಕ ಬ್ರಹ್ಮನು ಹುಟ್ಟಿ, ತನ್ನ ಸುತ್ತ ಇದ್ದ ಕೊನೆಯೇ ಇಲ್ಲದ ವಿಸ್ತಾರವಾದ ಸಮುದ್ರದಲ್ಲಿ ಯಾವೊಂದು ಜೀವವೂ ಇಲ್ಲದುದನ್ನು ಗಮನಿಸಿ, ತಾನೇ ಮೊದಲು ಹುಟ್ಟಿದವನು ಎಂದೂ, ಮುಂದೆ ಹುಟ್ಟುವ ಎಲ್ಲ ಜೀವಿಗಳಿಗಿಂತ ತಾನೇ ಶ್ರೇಷ್ಠನೆಂದೂ ಊಹಿಸಿಕೊಂಡನು. ಆದರೂ ಈ ವಿಷಯವನ್ನು ಸ್ವಲ್ಪ ಕೂಲಂಕಷವಾಗಿ ಅಧ್ಯಯನ ಮಾಡಬೇಕೆಂದು ಹಾಗೂ ತನ್ನ ಆದ್ಯತೆಗೆ ಧಕ್ಕೆ ತರುವಂತಹ ಜೀವಿಯು ಪ್ರಪಂಚದಲ್ಲಿ ಎಲ್ಲಾದರೂ ಇದ್ದೀತೆ ಎಂಬುದನ್ನು ಖಚಿತಪಡಿಸಿಕೊಳ್ಳಲು, ಅವನು ಆ ಕಮಲಕಾಂಡದ ಮೇಲೆ ಕೆಳಮುಖವಾಗಿ ಜಾರಿಕೊಂಡು ಬಂದಾಗ, ಅಲ್ಲಿ ವಿಷ್ಣು ನಿದ್ರಿಸುತ್ತಿದ್ದುದನ್ನು ನೋಡಿ, ಅವನನ್ನು ನೀನು ಯಾರೆಂದು ವಿಚಾರಿಸಿದನು. ಅದಕ್ಕೆ ವಿಷ್ಣುವು 'ನಾನು ಮೊದಲು ಹುಟ್ಟಿದವನು' ಎಂದು ಉತ್ತರಿಸಿದನು. ಬ್ರಹ್ಮನು ವಿಷ್ಣುವಿನ ಆದ್ಯತೆಯನ್ನು ಅಲ್ಲಗಳೆದಾಗ ಅವರಲ್ಲಿ ಜಗಳ ಪ್ರಾರಂಭವಾಯಿತು. ಆಗ ಮಹಾದೇವನು ಕೋಪದಿಂದ ಮಧ್ಯೆ ಪ್ರವೇಶಿಸಿ, 'ನಿಜವಾಗಿಯೂ ಮೊದಲು ಹುಟ್ಟಿದವನು ನಾನೇ' ಎಂದು ಘೋಷಿಸಿದನು. ಅಷ್ಟೇ ಅಲ್ಲ, 'ನನ್ನ ನೆತ್ತಿಯನ್ನಾಗಲಿ ನನ್ನ ಅಂಗಾಲನ್ನಾಗಲಿ ಮೊದಲು ಮುಟ್ಟಿದವರಿಗೆ ನನ್ನ ಸ್ಥಾನವನ್ನು ಬಿಟ್ಟುಕೊಡಲು ಸಿದ್ಧನಿದ್ದೇನೆ' ಎಂದೂ ಘೋಷಿಸಿದನು. ಬ್ರಹ್ಮನು ತಕ್ಷಣವೇ ಶಿವನನ್ನು ಹತ್ತಿ ಮೇಲೇರತೊಡಗಿದನು. ಆದರೆ ಬಹಳ ವಿಸ್ತಾರವನ್ನು ಕ್ರಮಿಸಲಾಗದೆ ಮಾರ್ಗಮಧ್ಯದಲ್ಲೇ ಆಯಾಸಗೊಂಡು ಆದರೂ ತನ್ನ ಹಠವನ್ನು ಬಿಟ್ಟುಕೊಡದೆ ಮಹಾದೇವನ ಬಳಿಗೆ ಹಿಂತಿರುಗಿ ಬಂದನು ಹಾಗೂ ತಾನು ಶಿವನ ನೆತ್ತಿಯನ್ನು ತಲುಪಿದುದಾಗಿಯೂ, ಅದನ್ನು ನೋಡಿದುದಾಗಿಯೂ ಅದಕ್ಕೆ, ಮೊದಲೇ ಹುಟ್ಟಿದ ಒಂದು ಹಸು ಸಾಕ್ಷಿಯೆಂದೂ ಸಾರಿದನು.

ಈ ಅಹಂಕಾರವನ್ನೂ ಸುಳ್ಳನ್ನೂ ಗಮನಿಸಿದ ಶಿವನು ಬ್ರಹ್ಮನಿಗೆ ಯಾವುದೇ ರೀತಿಯ ಪವಿತ್ರಕರ್ಮಗಳನ್ನು ಯಾರೂ ಮಾಡದಿರಲಿ ಹಾಗೂ ಹಸುವಿನ ಬಾಯಿ ಮೈಲಿಗೆಯೆಂದಾಗಲಿ ಎಂದು ಶಪಿಸಿದನು. ಅದೇ ರೀತಿ ಕೆಳಮುಖವಾಗಿ ಹೊರಟಿದ್ದ ವಿಷ್ಣುವು ಹಿಂದಿರುಗಿ ಬಂದು ಮಹಾದೇವನ ಪಾದವನ್ನು ಕಾಣಲಿಲ್ಲವೆಂದು ಒಪ್ಪಿಕೊಂಡನು ಹಾಗೂ ಮಹಾದೇವನೇ ಎಲ್ಲರಿಗಿಂತ ಮೊದಲು ಹುಟ್ಟಿದವನು ಎಂದೂ ಅವನಿಗೇ ಎಲ್ಲರಿಗಿಂತ ಹೆಚ್ಚಿನ ಸ್ಥಾನ ಕೊಡಬೇಕೆಂದೂ ಸಾರಿದನು. ಇದಾದಮೇಲೆ ಮಹಾದೇವನು ಬ್ರಹ್ಮನ ಐದನೆಯ ತಲೆಯನ್ನು ಕತ್ತರಿಸಿದನು. ಇದರಿಂದಾಗಿ ಬ್ರಹ್ಮನು ತನ್ನ ಅಹಂಕಾರ, ಅಧಿಕಾರ ಮತ್ತು ಪ್ರಭಾವವನ್ನು ಕಳೆದುಕೊಂಡನು.

ಈ ಕತೆಯ ಪ್ರಕಾರ, ತಾನೇ ಮೊದಲು ಹುಟ್ಟಿದವನೆಂಬ ಬ್ರಹ್ಮನ ಹೇಳಿಕೆ ಸುಳ್ಳು. ಹಾಗೆ ಸುಳ್ಳನ್ನು ಹೇಳಿದುದಕ್ಕೆ ಅವನು ಶಿವನಿಂದ ಶಿಕ್ಷೆ ಅನುಭವಿಸಬೇಕಾಯಿತು. ವಿಷ್ಣುವು ತಾನೇ ಮೊದಲು ಹುಟ್ಟಿದವನೆಂದು ಹೇಳಿಕೊಳ್ಳುವ ಹಕ್ಕು ಪಡೆದಿದ್ದನಾದರೂ ಅದು ಶಿವನಿಂದ ಪಡೆದ ಅನುಗ್ರಹದಿಂದಾಗಿ ಮಾತ್ರ. ಬ್ರಹ್ಮನಿಗೆ ನ್ಯಾಯವಾಗಿ ಸೇರಬೇಕಾದುದನ್ನು ಶಿವನ ದೆಸೆಯಿಂದಾಗಿ ಅವನು ಕಳೆದುಕೊಂಡುದುದಕ್ಕಾಗಿ ಬ್ರಹ್ಮನ ಅನುಯಾಯಿಗಳು ವಿಷ್ಣುವಿನ ಮೇಲೆ ಸೇಡು ತೀರಿಸಿಕೊಂಡರು. ಅದಕ್ಕಾಗಿ ಅವರು ಮತ್ತೊಂದು ಕತೆಯನ್ನು ಹೆಣೆದರು. ಈ ಕತೆಯ ಪ್ರಕಾರ, ವಿಷ್ಣುವು ಬ್ರಹ್ಮನ ಹೊಳ್ಳೆಯಿಂದ ಹಂದಿಯ ರೂಪದಲ್ಲಿ ಹುಟ್ಟಿ, ಸ್ವಾಭಾವಿಕವಾಗೇ ಕಾಡುಹಂದಿಯಾಗಿ ಬೆಳೆದ. ವಿಷ್ಣು ಕಾಡುಹಂದಿಯಾಗಿ ಅವತರಿಸಿದ ಎಂದು ಹೇಳುವ ಒಂದು ಕೀಳುಮಟ್ಟದ ವಿವರಣೆ ಇದು.

ಬ್ರಹ್ಮನು ತನ್ನ ಸ್ಥಾನವನ್ನು ಹೆಚ್ಚಿಸಿಕೊಳ್ಳುವುದಕ್ಕಾಗಿ ಶಿವ ಮತ್ತು ವಿಷ್ಣು ಇವರುಗಳ ಮಧ್ಯೆ ವೈರವನ್ನುಂಟುಮಾಡಲು ಪ್ರಯತ್ನಿಸಿದ. ಈ ಕತೆ ರಾಮಾಯಣದಲ್ಲಿ ಉಕ್ತವಾಗಿದೆ. ಅದರ ಪ್ರಕಾರ, ಮಿಥಿಲೆಯ ರಾಜನೂ, ರಾಮನ ಹೆಂಡತಿಯ ತಂದೆಯೂ ಆದ ಜನಕನಿಂದ ಬೀಳ್ಕೊಂಡು ತನ್ನ ರಾಜಧಾನಿಗೆ ಹಿಂತಿರುಗುತ್ತಿದ್ದ ದರರಥನಿಗೆ ಶಕುನದ ಹಕ್ಕಿಗಳು ಅಶುಭ ನುಡಿಯುತ್ತಿದ್ದುದು ಕೇಳಿಸಿತು.ಆಗ ವಸಿಷ್ಠ ಮುನಿಯು ದಶರಥನಿಗೆ 'ನಿನಗೆ ಕಾಡುಪ್ರಾಣಿಗಳು ಪ್ರದಕ್ಷಿಣೆ ಮಾಡುತ್ತವೆ, ಅದೇ ಶುಭಸೂಚನೆ' ಎಂದು ಪರಿಹಾರ ಹೇಳಿದನು. ಆಗ ಪರಶುರಾಮನ ಆಗಮನವನ್ನು ಮುನ್ಸೂಚಿಸುವ, ಭೂಮಿಯನ್ನು ನಡುಗಿಸುವ ಪ್ರಚಂಡ ಬಿರುಗಾಳಿ ಬಂದು, ಮರಗಳನ್ನು ಕೆಡವಿತು ಹಾಗೂ ಸೂರ್ಯನನ್ನು ಮುಚ್ಚುವಂತಹ ಕತ್ತಲು ಆವರಿಸಿತು. ಪರಶುರಾಮನು ನೋಡಲು ಭಯಂಕರವಾಗಿದ್ದು ಬೆಂಕಿಯಂತೆ ತೇಜೋಮಯನಾಗಿದ್ದ, ಕೈಯಲ್ಲಿ ಕೊಡಲಿಯನ್ನು ಹಿಡಿದಿದ್ದ ಹಾಗೂ ಭುಜದಲ್ಲಿ ಧನುಸ್ಸನ್ನು ಧರಿಸಿದ್ದನು. ಆದರಾತಿಥ್ಯವನ್ನು ಸ್ವೀಕರಿಸಿದ ನಂತರ ಅವನು ದಶರಥನ ಮಗನಾದ ರಾಮನಿಗೆ ಈ ರೀತಿ ಹೇಳಿದನು: 'ಜನಕ ಮಾಡಿದ್ದ ಬಿಲ್ಲನ್ನು ಮುರಿಯುವಲ್ಲಿ ನೀನು ತೋರಿದ ಶಕ್ತಿಯ ಬಗ್ಗೆ ನಾನು ಕೇಳಿದ್ದೇನೆ. ನಾನು ಬೇರೊಂದು ಬಿಲ್ಲನ್ನು ತಂದಿದ್ದೇನೆ. ಅದನ್ನು ಬಗ್ಗಿಸಿ, ಅದರ ನಾರಿಯ ಮೇಲೆ ಬಾಣವನ್ನು ಇಡು. ಒಂದು ವೇಳೆ ನೀನು ಗೆದ್ದರೆ, ನನ್ನ ಜೊತೆ ಮಲ್ಲಯುದ್ಧ ಮಾಡಲು ಆಹ್ವಾನಿಸುತ್ತೇನೆ'. ಅವನ ಮಾತಿನಿಂದ ದಶರಥನಿಗೆ ಕಳವಳವುಂಟಾಗಿ ಪರಶುರಾಮನೊಡನೆ ದೀನಭಾವದಿಂದ ಮಾತನಾಡತೊಡಗಿದನು. ಆದರೆ ಪರಶುರಾಮನು ಮತ್ತೆ ರಾಮನನ್ನು ಸಂಬೋಧಿಸಿ 'ನೀನು ಮುರಿದ ಧನಸ್ಸು ಶಿವನದು. ಈಗ ನಾನು ತಂದಿರುವುದು ವಿಷ್ಣುವಿನದು. ವಿಶ್ವಕರ್ಮನು ಎರಡು ದಿವ್ಯ ಬಿಲ್ಲುಗಳನ್ನು ಮಾಡಿದಾಗ ದೇವತೆಗಳು ಒಂದನ್ನು ಮಹಾದೇವನಿಗೆ ಮತ್ತೊಂದನ್ನು ವಿಷ್ಣುವಿಗೆ ಕೊಟ್ಟರು' ಎಂದು ಹೇಳಿದನು.

ಕತೆ ಹೀಗೆ ಮುಂದುವರಿಯುತ್ತದೆ:

"ಆಗ ಎಲ್ಲ ದೇವತೆಗಳೂ ಶಿತಿಕಂಠ (ಮಹಾದೇವ) ಮತ್ತು ವಿಷ್ಣುವಿನ ಬಲಾಬಲಗಳನ್ನು ಪರೀಕ್ಷಿಸಬೇಕೆಂದು ಬ್ರಹ್ಮನನ್ನು ಬೇಡಿಕೊಂಡರು. ಈ ಮೂವರಲ್ಲಿ ಉತ್ತಮನಾದ ಬ್ರಹ್ಮನು ದೇವತೆಗಳ ಇಷ್ಟವನ್ನು ಅರಿತು ಶಿವ ಮತ್ತು ವಿಷ್ಣು ಇವರುಗಳ ಮಧ್ಯೆ ವೈರವನ್ನು ಸೃಷ್ಟಿಸಿದನು. ಈ ವೈರದಿಂದಾಗಿ ಶಿತಿಕಂಠ ಮತ್ತು ವಿಷ್ಣು ಇವರುಗಳಿಗೆ ಒಂದು ದೊಡ್ಡ ಹಾಗೂ ಭಯಂಕರ ಕಾಳಗ ನಡೆದು ಇಬ್ಬರಿಗೂ ಪರಸ್ಪರರನ್ನು ಗೆಲ್ಲಬೇಕೆಂಬ ಪ್ರಬಲ ಇಚ್ಛೆಯುಂಟಾಯಿತು. ಭಯಂಕರ ಶಕ್ತಿಯ ಶಿವಧನುಸ್ಸು ಸ್ವಲ್ಪ ಸಡಿಲವಾದಾಗ ಮುಕ್ಕಣ್ಣನಾದ ಶಿವನು ಒಂದು ಉಚ್ಚಾರಣೆಯಿಂದ ಸ್ತಬ್ಧನಾದನು. ಆಗ ಅಲ್ಲಿ ನೆರೆದಿದ್ದ ದೇವತೆಗಳೂ, ಋಷಿಗಳೂ, ಶರಣರೂ ಈ ದೇವದ್ವಯರನ್ನು ಪ್ರಾರ್ಥಿಸಿಕೊಂಡಾಗ ಅವರು ಶಾಂತರಾದರು. ವಿಷ್ಣುವಿನ ಶಕ್ತಿಯಿಂದ ಶಿವನ ಧನುಸ್ಸು ಸಡಿಲವಾದುದನ್ನು ನೋಡಿದ ದೇವತೆಗಳೂ ಋಷಿಗಳೂ ವಿಷ್ಣುವೇ ಶ್ರೇಷ್ಠತಮನೆಂದು ಕೊಂಡಾಡಿದರು."

ಹೀಗೆ ಬ್ರಹ್ಮನು ಮಹಾದೇವನಿಂದ ತನಗಾದ ಅನ್ಯಾಯಕ್ಕೆ ಸೇಡು ತೀರಿಸಿಕೊಂಡನು.

ಈ ಉಪಾಯದಿಂದಲೂ ಬ್ರಹ್ಮನು ವಿಷ್ಣುವಿನ ವಿರುದ್ಧ ತನ್ನ ಸ್ಥಾನವನ್ನು ಉಳಿಸಿಕೊಳ್ಳಲಿಲ್ಲ. ಬ್ರಹ್ಮನು ತನ್ನ ಸ್ಥಾನಮಾನಗಳನ್ನು ವಿಷ್ಣುವಿಗೆ ಎಷ್ಟು ಪೂರ್ತಿಯಾಗಿ ಒಪ್ಪಿಸಿದನೆಂದರೆ ಒಂದು ಕಾಲದಲ್ಲಿ ಬ್ರಹ್ಮನ ಆಜ್ಞಾಧಾರಕನಾಗಿದ್ದ ವಿಷ್ಣುವು ಬ್ರಹ್ಮನನ್ನು ಸೃಷ್ಟಿಸುವವಂತಾದ.

ಹೆಚ್ಚಿನ ಅಧಿಕಾರವನ್ನು ಪಡೆಯಲು ಶಿವನೊಡನೆ ಮಾಡಿದ ಸ್ಪರ್ಧೆಯಲ್ಲಿ ಬ್ರಹ್ಮನು ಬಹಳ ನಷ್ಟ ಅನುಭವಿಸಬೇಕಾಯಿತು. ಹೀಗೆ ಎಲ್ಲವೂ ತಲೆಕೆಳಗಾಯಿತು. ಶಿವನು ತಾನು ಬ್ರಹ್ಮನಿಂದ

ಸೃಷ್ಟಿಯಾಗುವ ಬದಲು ತಾನೇ ಬ್ರಹ್ಮನನ್ನು ಸೃಷ್ಟಿಮಾಡಿದ. ಬ್ರಹ್ಮನು ಮೋಕ್ಷವನ್ನು ದಯಪಾಲಿಸುವ ಶಕ್ತಿಯನ್ನು ಕಳೆದುಕೊಂಡ. ಮೋಕ್ಷವನ್ನು ಶಿವ ಮಾತ್ರ ಅನುಗ್ರಹಿಸಲ್ಲವನಾಗಿದ್ದ ಕಾರಣ ಅವನು ಮೋಕ್ಷಕ್ಕಾಗಿ ಶಿವನನ್ನೂ ಶಿವನ ಲಿಂಗವನ್ನೂ ಪೂಜಿಸುವ ಸಾಧಾರಣ ಭಕ್ತನಾದನು.[೧] ಕೊನೆಗೆ ಅವನಿಗೆ ಶಿವನ ಸೇವಕನ ಸ್ಥಾನ ಬಂದು, ಶಿವನ ಸಾರಥಿಯ[೨] ಕೆಲಸ ಮಾಡಬೇಕಾಗಿ ಬಂತು.

ಕೊನೆಗೆ, ತನ್ನ ಮಗಳ ಜೊತೆಯೇ ಹಾದರ ಮಾಡಿದನೆಂಬ ಆಪಾದನೆಯ ಮೇಲೆ ಬ್ರಹ್ಮನಿಗೆ ಪೂಜೆಯೇ ಸಲ್ಲದಂತಾಯಿತು. ಈ ಆಪಾದನೆಯು ಭಾಗವತ ಪುರಾಣದಲ್ಲಿ ಹೀಗೆ ವರ್ಣಿತವಾಗಿದೆ:

"ಓ, ಕ್ಷತ್ರಿಯನೇ, ಸ್ವಯಂಭುವಿಗೆ (ಬ್ರಹ್ಮನಿಗೆ) ಲತಾಂಗಿಯೂ ರೂಪಸಿಯೂ ಆದ ವಾಚ ಎಂಬ ತನ್ನ ಮಗಳ ಮೇಲೆ ಮೋಹವುಂಟಾಯಿತೆಂದೂ, ಆದರೆ ಅವಳಿಗೆ ಅವನ ಮೇಲೆ ಮೋಹವಿರಲಿಲ್ಲವೆಂದೂ ಕೇಳಿದ್ದೇವೆ. ತಮ್ಮ ತಂದೆ ಹೀಗೆ ದುಷ್ಟಕಾರ್ಯ ಮಾಡಬೇಕೆಂದು ತೀರ್ಮಾನಿಸಿರುವುದನ್ನು ಮನಗಂಡ ಅವನ ಮಕ್ಕಳಾದ ಮುನಿಗಳು, ಮರೀಚಿಯನ್ನು ಮುಂದುಮಾಡಿಕೊಂಡು ಪ್ರೀತಿಯಿಂದ ಅವನಿಗೆ ಈ ರೀತಿ ಬುದ್ಧಿಮಾತು ಹೇಳಿದರು: 'ನೀನು ಮಾಡ ಹೊರಟಿರುವ ಕಾರ್ಯವನ್ನು ಹಿಂದಿನವರೂ ಮಾಡಿಲ್ಲ, ಮುಂದಿನವರೂ ಮಾಡುವುದಿಲ್ಲ. ನೀನೇ ದೇವನಾಗಿ, ಆಸೆಯನ್ನು ನಿಗ್ರಹಿಸದೆ, ನಿನ್ನ ಸ್ವಂತ ಮಗಳನ್ನೇ ಲೈಂಗಿಕವಾಗಿ ಆಶಿಸುವುದು ಯುಕ್ತವಲ್ಲ. ಜಗದ್ಗುರುವೇ, ಯಾವ ಮಹಾತ್ಮರು ಮಾಡಿದ ಕೆಲಸಗಳನ್ನು ಅನುಕರಿಸುವುದರಿಂದ ಮಾನವರು ಆನಂದವನ್ನು ಪಡೆಯುತ್ತಾರೋ, ಅವರೂ ಸಹ ಈ ಕೆಲಸ ಮಾಡಬಾರದು. ಯಾವ ವಿಷ್ಣುವು ತನ್ನಲ್ಲಿಯೇ ಅವ್ಯಕ್ತವಾಗಿದ್ದ ವಿಶ್ವವನ್ನು ವ್ಯಕ್ತಪಡಿಸುತ್ತಾನೋ ಅವನು ಧರ್ಮವನ್ನು ರಕ್ಷಿಸಬೇಕು'. ಪ್ರಜಾಪತಿಗಳು ಈ ರೀತಿ ಮಾತನಾಡುವುದನ್ನು ಕೇಳಿಸಿಕೊಂಡ ಪ್ರಜಾಪತಿಗಳ ತಂದೆಗೆ (ಬ್ರಹ್ಮನಿಗೆ) ನಾಚಿಕೆಯಾಗಿ ತನ್ನ ದೇಹವನ್ನು ತೊರೆದನು. ಈ ಭಯಂಕರ ದೇಹವನ್ನು ಆಕಾಶವು ಸ್ವೀಕರಿಸಿತು. ಅದಕ್ಕೆ ಕಾಳರಾತ್ರಿಯೆಂದು ಹೆಸರು."

ಈ ರೀತಿ ಬ್ರಹ್ಮನ ಮೇಲೆ ಕೀಳುಮಟ್ಟದ ಅಪಮಾನಕರ ಆಕ್ರಮಣ ಮಾಡುವ ಉದ್ದೇಶ ಅವನನ್ನು ಸಂಪೂರ್ಣವಾಗಿ ನಿಕೃಷ್ಟಗೊಳಿಸುವುದೇ ಆಗಿತ್ತು. ಹೀಗೆ ಬ್ರಹ್ಮನು ನಾಮಮಾತ್ರದ ತ್ರಿಮೂರ್ತಿಯಲ್ಲೊಬ್ಬ. ಸೈದ್ಧಾಂತಿಕ ಸದಸ್ಯನಾಗಿರುವುದನ್ನುಳಿದು ಅವನ ಪಂಥವು ಭಾರತದಿಂದ ಸಂಪೂರ್ಣವಾಗಿ ಕಣ್ಮರೆಯಾಗಿರುವುದರಲ್ಲಿ ಆಶ್ಚರ್ಯವೇನಿಲ್ಲ.

ಈ ರೀತಿ ಬ್ರಹ್ಮನನ್ನು ತಿರಸ್ಕರಿಸಿದ ಮೇಲೆ ಕಣದಲ್ಲಿ ಶಿವ ಮತ್ತು ವಿಷ್ಣು ಇಬ್ಬರೇ ಉಳಿದರು. ಆದರೆ ಇವರೆಂದೂ ಶಾಂತಿಯಿಂದ ಬಾಳಲಿಲ್ಲ. ಅವರ ನಡುವಿನ ವೈರ ಮತ್ತು ವಿರೋಧ ಇನ್ನೂ ಮುಂದುವರಿಯುತ್ತಲೇ ಇದೆ.

ಪುರಾಣಗಳು, ಶಿವ ಮತ್ತು ವಿಷ್ಣುಚರಿತ್ರೆಗಳು ಬ್ರಾಹ್ಮಣ ಅನುಯಾಯಿಗಳು ನಡೆಸಿದ ಪ್ರಚಾರ ಮತ್ತು ಅಪಪ್ರಚಾರಗಳಿಂದ ತುಂಬಿ ಹೋಗಿವೆ. ಈ ಪ್ರಚಾರ ಅಪಪ್ರಚಾರಗಳು ಪರಸ್ಪರ ಹೇಗೆ ಸರಿಸಾಟಿಯಾಗಿದ್ದವು ಎಂಬುದನ್ನು ಈ ಕೆಲ ಉದಾಹರಣೆಗಳಿಂದ ತಿಳಿಯಬಹುದು:

ವಿಷ್ಣುವು ವೈದಿಕ ದೇವನಾದ ಸೂರ್ಯನೊಡನೆ ಸಂಬಂಧವುಳ್ಳವನಾಗಿದ್ದಾನೆ. ಶಿವನ ಭಕ್ತರು ಅವನನ್ನು ಅಗ್ನಿಯೊಂದಿಗೆ ಸಂಬಂಧಿಸುತ್ತಾರೆ. ವಿಷ್ಣುವಿಗೆ ವೇದದ ಮೂಲವಿದ್ದರೆ, ಶಿವನಿಗೂ ವೇದದ

೧. 'ಮಹಾಭಾರತ'–ಮ್ಯೂರ್, ಉದ್ಧೃತ IV. ಪು. ೧೯೨
೨. ಅದೇ, ಉದ್ಧೃತ IV. ಪು. ೧೯

ಮೂಲವಿದೆ ಎಂದು ಸಾಧಿಸುವುದೇ ಇದರ ಉದ್ದೇಶ. ಒಬ್ಬ ಇನ್ನೊಬ್ಬನಿಗಿಂತ ಮೂಲದಲ್ಲಾಗಲಿ, ಘನತೆಯಲ್ಲಾಗಲಿ ಕಡಿಮೆಯಾಗಬಾರದು.

ಶಿವನು ವಿಷ್ಣುಗಿಂತ ಶ್ರೇಷ್ಠನಾಗಿರಬೇಕು ಮತ್ತು ವಿಷ್ಣುವು ಶಿವನಿಗಿಂತ ಕಡಿಮೆ ಇರಬಾರದು. ವಿಷ್ಣುವಿಗೆ ಸಹಸ್ರನಾಮಗಳಿವೆ.[೧] ಅದೇ ರೀತಿ ಶಿವನಿಗೂ ಸಹಸ್ರನಾಮಗಳಿರಬೇಕು.[೨]

ವಿಷ್ಣುವಿಗೆ ತನ್ನವೇ ಆದ ಗುರುತುಗಳಿವೆ,[೩] ಅವು ನಾಲ್ಕು, ಅದರಂತೆ ಶಿವನಿಗೂ ನಾಲ್ಕು ಗುರುತುಗಳಿರಲೇಬೇಕು ಮತ್ತು ಅವು ಇವೆ. ಅವೆಂದರೆ ೧. ಹರಿಯುವ ಗಂಗೆ ೨. ಚಂದ್ರ ೩. ಹಾವು (ಶೇಷ) ಮತ್ತು ೪. ಜಡೆ (ಜಟಾ). ವಿಷ್ಣುವಿನೊಂದಿಗೆ ಶಿವ ಸ್ಪರ್ಧೆಗಿಳಿಯದ ಒಂದಂಶವೆಂದರೆ ಅದು ಅವತಾರ. ಅವನಿಗೆ ಸ್ಪರ್ಧಿಸಲು ಇಷ್ಟವಿರಲಿಲ್ಲವೆಂಬುದು ಇಲ್ಲಿ ಕಾರಣ ಅಲ್ಲ. ಶಿವ ಅವತಾರವೆತ್ತಲು ಕೆಲವು ದಾರ್ಶನಿಕ ಅಡ್ಡಿಗಳಿದ್ದುವು. ಅಮೃತಾನಂದದ ಬಗ್ಗೆ ಶೈವರಿಗೂ ವೈಷ್ಣವರಿಗೂ ಕೆಲವು ಮೂಲಭೂತ ಭೇದಗಳಿದ್ದುವು. ಶ್ರೀ ಅಯ್ಯರ್ ತೋರಿಸಿಕೊಟ್ಟಿರುವಂತೆ:

"ಶೈವನಿಗೆ ತನ್ನ ವೈಯಕ್ತಿಕತೆಯನ್ನು ಸಂಪೂರ್ಣವಾಗಿ ಇಲ್ಲವಾಗಿಸುವ ಮೂಲಕ, ಎಲ್ಲ ದೈಹಿಕ ಮತ್ತು ಮಾನಸಿಕ ಬಂಧನಗಳಿಂದ ಸಂಪೂರ್ಣ ಮುಕ್ತಿಯನ್ನು ಪಡೆಯುವುದೇ ಜೀವನದ ಧ್ಯೇಯವಾಗಿತ್ತು. ಆದುದರಿಂದ, ಅವನು ರುದ್ರನನ್ನು ಹರ (=ಯಾರಿಂದಲೂ ಸಂಹರಿಸಲ್ಪಡದವನು, ಆದರೆ ಉಳಿದುದನ್ನು ಹರಣ ಮಾಡುವವನು ಅಥವಾ ಸಂಹಾರ ಮಾಡುವವನು) ಎಂಬಂತೆ ಕಲ್ಪಿಸಿಕೊಂಡನು. ಆದುದರಿಂದಲೇ ರುದ್ರನಿಗೆ ಹರ ಅಥವಾ ಸಂಹಾರಿ ಎಂಬ ಹೆಸರು ಬಂತು. ಒಬ್ಬ ವ್ಯಕ್ತಿಯ ಆಧ್ಯಾತ್ಮಿಕ ಪ್ರಗತಿಯ ತುಟ್ಟತುದಿಯಲ್ಲಿ ಭಕ್ತನಿಗೂ ಶಿವನಿಗೂ ಮಧ್ಯೆ ತೆರವು ಇರಬಾರದು. ಅವನು ದೇಹ ಮತ್ತು ಮನಸ್ಸು, ಸುಖ ಮತ್ತು ದುಃಖ ಮುಂತಾದ ಎಲ್ಲ ದ್ವಂದ್ವಗಳನ್ನೂ ಮೀರಬೇಕು. ಅವನು ಶಿವಸಾಯುಜ್ಯವನ್ನು ಪಡೆದು, ಆ ಸ್ಥಿತಿಯಲ್ಲಿ ತಾನು ಶಿವನಿಂದ ಬೇರೆಯೆಂಬ ಭಾವನೆಯನ್ನಿಟ್ಟುಕೊಂಡಿರಬಾರದು. ಅವನು ಎಷ್ಟೇ ಶುದ್ಧನಾಗಿದ್ದರೂ, ಸಾಯುಜ್ಯ ಪಡೆಯಲು ಅರ್ಹನಾಗಿದ್ದರೂ, ಆ ಸ್ಥಿತಿಯನ್ನು ಮುಟ್ಟುವವರೆಗೂ, ಅವನು ಅಪರಿಪೂರ್ಣನಾಗಿರುತ್ತಿದ್ದ. ಏಕೆಂದರೆ, ಅರ್ಹರಾಗಿದ್ದವರು ಸಾಲೋಕ್ಯ, ಸಾಮೀಪ್ಯ ಮತ್ತು ಸಾರೂಪ್ಯ ಎಂಬ ಕೆಳಗಿನ ಮೂರು ಪದವಿಗಳನ್ನು ಮಾತ್ರ ಪಡೆದಿದ್ದರು. ಈ ಕಾರಣಕ್ಕಾಗಿಯೂ, ಶೈವರಿಗೂ ಅವತಾರ ಸಿದ್ಧಾಂತವು ಸ್ವೀಕಾರಾರ್ಹವಾಗಲಿಲ್ಲ. ಅವತಾರ ಎಂದರೆ ಬಂಧನ ಅಥವಾ ಮಿತಿಗಳುಳ್ಳ ಪರಮಾತ್ಮ ಎಂದರ್ಥ. ಅವನಿಗೆ ಮೋಕ್ಷ ಪಡೆಯುವ ಸಾಮರ್ಥ್ಯವಿರಬಹುದು. ಆದರೆ ಅವನಿಗೂ ಬಂಧನ ಉಂಟು. ಆದರೆ ವೈಷ್ಣವನು ಬೇರೆ ರೀತಿಯಾಗಿ ನಂಬಿದ್ದನು. ಅವನಿಗೂ ಸಹ ಮನುಷ್ಯ ಯಾವ ಅತ್ಯುತ್ಕೃಷ್ಟ ಸ್ಥಿತಿಯನ್ನು ಮುಟ್ಟಬಹುದು ಮತ್ತು ಮುಟ್ಟಬೇಕು ಎಂಬುದರ ಸ್ಪಷ್ಟ ಕಲ್ಪನೆ ಇತ್ತು. ಆದರೆ (ಮೋಕ್ಷಸ್ಥಿತಿಯಲ್ಲಿ) ತನ್ನ ವೈಯಕ್ತಿಕತೆಯನ್ನು ಪೂರ್ಣವಾಗಿ ಕಳೆದುಕೊಳ್ಳುವುದು ಅವನಿಗೆ ರುಚಿಸಲಿಲ್ಲ. ಪರಮಾತ್ಮನೊಂದಿಗೆ ಸಾಯುಜ್ಯ ಪಡೆಯಬೇಕು ಮತ್ತು ಸಾಯುಜ್ಯದ ಅರಿವೂ ಇರಬೇಕು ಪರವಸ್ತು. ಹಾಗೂ ಅಕ್ಷರದ ಒಂದಂಶವಾದ ವಿಶ್ವದೊಂದಿಗೂ ಒಂದಾಗಿರಬೇಕು. ವಿಶ್ವವು ಪರಮಾತ್ಮನಿಂದ ಭಿನ್ನವಾಗಲಿ, ಪ್ರತ್ಯೇಕವಾಗಲಿ

---

೧. ನೋಡಿ : 'ವಿಷ್ಣು ಸಹಸ್ರನಾಮ'
೨. ಇವುಪದ್ಮ ಪುರಾಣದಲ್ಲಿ ಉಕ್ತವಾಗಿವೆ
೩. ಅದೇ

ಅಲ್ಲ. ಆದುದರಿಂದ, ಅದು ಪೂರ್ಣ ಸಂಹಾರವಾಗುವುದಿಲ್ಲ. ವಿಶ್ವವು ಪರಮಾತ್ಮನ ವ್ಯಕ್ತರೂಪವೇ ಹೊರತು, ಅದಕ್ಕಿಂತ ಕಡಿಮೆ ಅಥವಾ ಹೆಚ್ಚಲ್ಲ. ಅಂತಹ ವಿಶ್ವವು ಸುರಕ್ಷಿತವಾಗಿರಬೇಕು ಎಂಬ ಸಿದ್ಧಾಂತದ ಕಡೆಗೇ ಅವನ ಒಲವು. ಆದ್ದರಿಂದಲೇ ವಿಷ್ಣುವಿಗೆ ರಕ್ಷಕ ಎಂಬ ಹೆಸರಿರುವುದು. ಇದು ಸತ್ಯವನ್ನು ಗ್ರಹಿಸುವ ಅಥವಾ ನೋಡುವ ಮತ್ತೊಂದು ದಾರಿ ಅಷ್ಟೇ. ಶೈವನು ಪ್ರಪಂಚವನ್ನು ಸುಖದುಃಖಗಳ ತಾಣ ಅಥವಾ ಬಂಧನ (ಪಾಶ)ವೆಂಬಂತೆಯೂ ಬಂದಿಯಾದ (ಪಶುವಾದ) ಮಾನವನು ಈ ಪಾಶವನ್ನು ಹರಿದು ನಾಶಮಾಡಬೇಕು ಎಂಬಂತೆಯೂ ಭಾವಿಸಿದನು. ವೈಷ್ಣವನು ಪ್ರಪಂಚವು ಪರಮಾತ್ಮನ ಮಹಿಮೆಗೆ ಸಾಕ್ಷಿ, ಆದುದರಿಂದ ಅದನ್ನು ರಕ್ಷಿಸಬೇಕಾದುದು ಆವಶ್ಯಕವೆಂಬಂತೆ ನೋಡಿದನು. ಪ್ರಪಂಚದ ಏಳ್ಗೆಗೆ ಆವಶ್ಯಕವಾದ ನ್ಯಾಯನೀತಿಗಳನ್ನು ರಕ್ಷಿಸಲೋಸ್ಕರ ರಚಿತವಾದ ಧರ್ಮಶಾಸ್ತ್ರ, ಅರ್ಥಶಾಸ್ತ್ರ ಮುಂತಾದ ಧರ್ಮಗ್ರಂಥಗಳಿಗೆ ಉನ್ನತ ನಿರಾಶಾವಾದದ (ಹಾಗೆಂದು ಕರೆಯಬಹುದಾದರೆ) ಶೈವನು ಮಾನ್ಯತೆ ನೀಡುವ ಸಂಭವವಿರಲಿಲ್ಲ. ಅವನು ಎಲ್ಲ ನಿಯಮಗಳನ್ನೂ ರೂಢಿಗಳನ್ನೂ ದ್ವೇಷಿಸುವ ಒಬ್ಬ ಅನಿರ್ಬಂಧಿತ ವ್ಯಕ್ತಿಯಾಗಿರಬೇಕಾದುದು ಅನಿವಾರ್ಯದ ಸಂಗತಿಯಾಗಿತ್ತು. ಜಾತಿ ಪದ್ಧತಿಯನ್ನು ಕಠಿಣವಾಗಿ ಪಾಲಿಸುತ್ತಿದ್ದುದು ಹೆಚ್ಚು ವಿಕಸಿತನಾದ ಶೈವನಿಗೆ ರುಚಿಸಲಿಲ್ಲ. ಹೆಚ್ಚೆಂದರೆ, ಅವನು ಆಧ್ಯಾತ್ಮಿಕ ಪ್ರಗತಿಯಲ್ಲಿ ತನ್ನ ಎತ್ತರಕ್ಕೆ ಬರದಿದ್ದವರಲ್ಲಿ ಅಂತಹ ಭಾವನೆಗಳಿದ್ದರೆ, ಅವನ್ನು ಸಹಿಸುತ್ತಿದ್ದ. ಶಿವನೊಂದಿಗೆ ಸಾಲೋಕ್ಯ, ಸಾಮೀಪ್ಯ, ಸಾರೂಪ್ಯ ಮತ್ತು ಸಾಯುಜ್ಯ ಪಡೆಯಲು ಅರ್ಹರಾಗಿದ್ದವರಿಗೆ ಅವರು ಯಾವುದೇ ಜಾತಿಗೆ ಸೇರಿರಲಿ ಅವನು ಗೌರವ ತೋರಿಸುತ್ತಿದ್ದ ಮತ್ತು ಅವರ ಸಮಾಜವನ್ನು ಬೆಳೆಸುತ್ತಿದ್ದ. ಆದರೆ ವೈಷ್ಣವನಿಗೆ, ಪ್ರಪಂಚದಲ್ಲಿ ಶಾಂತಿ, ಸುಖಗಳು ನೆಲೆಸುವಂತೆ ಮಾಡಲು ಅಗತ್ಯವಾದ ನೀತಿನಿಯಮಗಳ ರಕ್ಷಣೆಯಲ್ಲಿ ಹೆಚ್ಚು ಆಸಕ್ತಿ ಇತ್ತು. (ವೈಷ್ಣವನ ಪ್ರಕಾರ) ಧರ್ಮಗ್ಲಾನಿಯಾದರೆ ಪ್ರಪಂಚವೂ ನಶಿಸುತ್ತದೆ. ಪ್ರಪಂಚವು ಪುರುಷೋತ್ತಮನ ಮಹಿಮೆಯ ವ್ಯಕ್ತರೂಪವಾದುದರಿಂದ ಅದು ನಶಿಸಬಾರದು. ಆದುದರಿಂದ, ಧರ್ಮವನ್ನು ರಕ್ಷಿಸಲು ಅವನು ತನ್ನ ಕೈಲಾದುದೆಲ್ಲವನ್ನೂ ಮಾಡಬೇಕು. ಒಂದು ವೇಳೆ ಧರ್ಮಗ್ಲಾನಿ ಅವನ ಕೈಮೀರಿದರೆ ಆಗ ವಿಷ್ಣುವೇ ಎಲ್ಲವನ್ನೂ ಪರಿಶೀಲಿಸುತ್ತಾನೆಂದೂ ವಿಷ್ಣುವೇ ಭೂಮಿಯಲ್ಲಿ ಅವತರಿಸುತ್ತಾನೆಂದೂ ಅವನಿಗೆ ಖಚಿತವಾಗಿತ್ತು. ಆದರೆ ವಿಷ್ಣುವು ಭೂಮಿಗೆ ಬಂದುದು ದುಷ್ಟರನ್ನು ಅಂದರೆ ಧರ್ಮಗ್ಲಾನಿಗೆ ಕಾರಣರಾದವರನ್ನು ಸಂಹರಿಸಲೋಸ್ಕರ. ಆದುದರಿಂದ ವಿಷ್ಣುವಿನಿಂದ ಇಂತಹ ಘೋರ ಶಿಕ್ಷೆ ಪಡೆಯದಿರುವಂತೆ ಎಚ್ಚರಿಕೆ ಕೊಡುವುದು ಆವಶ್ಯಕವಾಗಿತ್ತು. ಹೀಗಾಗಿ, ಶಿವಭಕ್ತರ ಮಾರ್ಗದರ್ಶನಕ್ಕಾಗಿ ರಚಿತವಾದ ಆಗಮಗಳು ಅಥವಾ ನಿಯಮಗಳು ಜಾತಿಪದ್ಧತಿಯನ್ನು ಅನುಮೋದಿಸಲಿಲ್ಲ. ಅವು ಎಲ್ಲ ಭಕ್ತರೂ ಆಚರಿಸಬೇಕಾದ (ಧಾರ್ಮಿಕ ಅಥವಾ ಆಧ್ಯಾತ್ಮಿಕ) ಕರ್ತವ್ಯಗಳ ವಿಷಯವಾಗಿ ಮಾತ್ರ ಇದ್ದವು. ಇವುಗಳನ್ನು ಸರಿಯಾಗಿ ಆಚರಿಸಿದರೆ ಭಕ್ತರು ಶಿವದೃಷ್ಟಿ ಹಾಗೂ ಶಿವಸಾಯುಜ್ಯವನ್ನು ಪಡೆಯಲು ಅರ್ಹರಾಗುತ್ತಾರೆ. ಅವರು ಜಾತಿಪದ್ಧತಿಯನ್ನು ನಿರಾಕರಿಸುತ್ತಿದ್ದ ಕಾರಣ ಬೇರೆಯವರು ಅವರನ್ನು ಅಶುದ್ಧರೆಂದು ಬಗೆಯುತ್ತಿದ್ದರು. ಅಲ್ಲದೆ, ಹಿಂದೆ ಹೇಳಿರುವಂತೆ, ಆಸ್ತಿಕ ಧರ್ಮಗ್ರಂಥಗಳಲ್ಲಿ ಅವರ ಬಗ್ಗೆ ಪ್ರಸ್ತಾಪವಿಲ್ಲ.''

ಶಿವನ ಪರವಾಗಿ ಮಾಡಲಾಗಿರುವ ಮಹಾಕಾರ್ಯಗಳ ಪ್ರಚಾರವು ವಿಷ್ಣುವಿನ ಪರವಾಗಿ ಮಾಡಲಾಗಿರುವ ಪ್ರತಿಪ್ರಚಾರಕ್ಕೆ ಸರಿಸಾಟಿಯಾಗಿದೆ. ಪವಿತ್ರ ಗಂಗಾನದಿಯ ಹುಟ್ಟಿನ ಬಗೆಗಿನ

ಕತೆಯು ಇದಕ್ಕೆ ಒಂದು ನಿದರ್ಶನ.[೧] ಶಿವಭಕ್ತರು ಅದರ ಹುಟ್ಟನ್ನು ಶಿವನಿಗೆ ಆರೋಪಿಸುತ್ತಾರೆ. ಅವರ ಪ್ರಕಾರ, ಅದು ಶಿವನ ಜಡೆಯಿಂದ ಹುಟ್ಟಿತು. ಆದರೆ ವೈಷ್ಣವರು ಇದನ್ನು ಒಪ್ಪುವುದಿಲ್ಲ. ಅವರು ಮತ್ತೊಂದು ಕತೆಯನ್ನು ತಯಾರಿಸಿದ್ದಾರೆ. ಈ ವೈಷ್ಣವ ಕತೆಯ ಪ್ರಕಾರ, ಈ ಪವಿತ್ರ ಹಾಗೂ ಪಾವಿತ್ರ್ಯಕಾರಕ ಗಂಗೆಯು ಮೊದಲು ವಿಷ್ಣುವಿನ ಪಾದದಿಂದ ಹುಟ್ಟಿ ವೈಕುಂಠದಲ್ಲಿ ಹರಿದು ಕೈಲಾಸಕ್ಕಿಳಿದು ಕೊನೆಗೆ ಶಿವನ ತಲೆಯ ಮೇಲೆ ಬಿತ್ತು. ಈ ಕತೆಯಲ್ಲಿ ಎರಡು ಸೂಚನೆಗಳಿವೆ. ಮೊದಲನೆಯದೆಂದರೆ, ಶಿವನು ಗಂಗೆಯ ಮೂಲವಲ್ಲ; ಎರಡನೆಯದೆಂದರೆ, ಶಿವನು ವಿಷ್ಣುವಿಗಿಂತ ಕೀಳಾದುದರಿಂದ ವಿಷ್ಣುವಿನ ಪಾದದಿಂದ ಹರಿದ ನೀರನ್ನು ಅವನು ತಲೆಯ ಮೇಲೆ ಧರಿಸುತ್ತಾನೆ.

ದೇವತೆಗಳೂ ಅಸುರರೂ ಸಾಗರವನ್ನು ಮಂಥನ ಮಾಡಿದ ಕತೆಯು ಮತ್ತೊಂದು ನಿದರ್ಶನ. ಅವರು ಸಾಗರವನ್ನು ಕಡೆಯಲು ಮಂದರ ಪರ್ವತವನ್ನು ಕಡೆಗೋಲನ್ನಾಗಿಯೂ ಶೇಷನೆಂಬ ಮಹಾಸರ್ಪವನ್ನು ಹಗ್ಗವನ್ನಾಗಿಯೂ ಬಳಸಿದರು. ಇದರಿಂದ ಭೂಮಿಯು ನಡುಗತೊಡಗಿತು ಹಾಗೂ ವಿಶ್ವಪ್ರಳಯ ಸನ್ನಿಹಿತವಾಯಿತೆಂದು ಜನರು ಹೆದರಿದರು. ಆಗ ವಿಷ್ಣುವು ಕೂರ್ಮಾವತಾರ ಮಾಡಿ, ಭೂಮಿಯು ಮುಳುಗದಂತೆ ಅದನ್ನು ತನ್ನ ಬೆನ್ನ ಮೇಲಿರಿಸಿಕೊಂಡಾಗ, ಅದರ ಕಂಪನ ನಿಂತು ಕಡೆಯುವ ಕೆಲಸ ಮುಂದುವರಿಯುವಂತಾಯಿತು. ವಿಷ್ಣುವನ್ನು ವೈಭವೀಕರಿಸಲು ಈ ಕತೆಯನ್ನು ಹೇಳಲಾಗಿದೆ. ಇದಕ್ಕೆ ಶೈವರು ಒಂದು ಅನುಬಂಧವನ್ನು ಸೇರಿಸಿದ್ದಾರೆ. ಈ ಅನುಬಂಧದ ಪ್ರಕಾರ ಈ ಮಂಥನದಿಂದಾಗಿ ಸಾಗರದಾಳದಿಂದ ಹದಿನಾಲ್ಕು ವಸ್ತುಗಳು (ಇವುಗಳನ್ನು ಹದಿನಾಲ್ಕು ಆಭರಣಗಳೆಂದು ಕರೆಯಲಾಗುತ್ತದೆ) ಹುಟ್ಟಿದವು. ಅವುಗಳಲ್ಲಿ ಹಾಲಾಹಲವೆಂಬ ಘೋರ ವಿಷ ಸಹ ಒಂದು. ಈ ಘೋರ ವಿಷವನ್ನು ಯಾರೂ ಕುಡಿಯಲು ಸಿದ್ಧರಾಗದಿದ್ದರೆ ಅದು ಭೂಮಿಯನ್ನೇ ಸುಟ್ಟುಬಿಡುತ್ತಿತ್ತು. ಅದನ್ನು ಕುಡಿಯಲು ಮುಂದೆ ಬಂದವನೆಂದರೆ ಶಿವನೊಬ್ಬನೇ. ಇಲ್ಲಿ ದೇವ ದಾನವರಿಗೆ ಹಾಲಾಹಲವನ್ನು ಹುಟ್ಟಿಸಲು ಬಿಟ್ಟಿದ್ದು ವಿಷ್ಣುವಿನ ಮೂರ್ಖತನ ಎಂಬ ಸೂಚನೆ ಇದೆ. ಶಿವನಿಗೆ ಜಯವಾಗಲಿ! ಏಕೆಂದರೆ ಅವನು ಅದನ್ನು ಕುಡಿದು ವಿಷ್ಣುವಿನ ತಪ್ಪಿನಿಂದಾದ ದುಷ್ಪರಿಣಾಮಗಳಿಂದ ವಿಶ್ವವನ್ನು ಉಳಿಸಿದ.

ಮೂರನೆಯ ಉದಾಹರಣೆಯು, ವಿಷ್ಣುವು ಮೂರ್ಖನೆಂದೂ, ಶಿವನೇ ತನ್ನ ವಿವೇಕ ಮತ್ತು ಅತಿಶಯ ಶಕ್ತಿಯಿಂದ ವಿಷ್ಣುವನ್ನು ಅವನ ಅವಿವೇಕಿತನದಿಂದ ಕಾಪಾಡಿದನೆಂದೂ ತಿಳಿಸಲು ಪ್ರಯತ್ನಿಸುತ್ತದೆ. ಈ ಕತೆ ಅಕ್ರೂರಾಸುರನದು.[೨] ಅಕ್ರೂರಾಸುರನು ಒಬ್ಬ ಕರಡಿಯ ಮುಖವಿದ್ದ ರಾಕ್ಷಸನಾದರೂ, ಯಾವಾಗಲೂ ವೇದಗಳ ಅಧ್ಯಯನ ಮತ್ತು ಭಕ್ತಿ ಕ್ರಿಯೆಗಳನ್ನು ಮಾಡುತ್ತಿದ್ದ. ಇದರಿಂದ ತೃಪ್ತನಾದ ವಿಷ್ಣುವು ನೀನು ಯಾವ ವರ ಕೇಳಿದರೂ ಕೊಡುತ್ತೇನೆಂದು ಭರವಸೆ ಕೊಟ್ಟ. ಆಗ ಅಕ್ರೂರಾಸುರನು 'ಮೂರು ಲೋಕಗಳಲ್ಲಿ ಈಗಿರುವ ಯಾವ ಜೀವಿಯೂ ನನ್ನ ಜೀವ ತೆಗೆಯುವಷ್ಟು ಶಕ್ತನಾಗಿರಕೂಡದು' ಎಂಬ ವರವನ್ನು ಕೇಳಿದಾಗ ವಿಷ್ಣುವು ಅವನ ಬೇಡಿಕೆಯನ್ನು ಪೂರೈಸಿದನು. ಆದರೆ ಇದರಿಂದ ಆ ರಾಕ್ಷಸನಿಗೆ ಎಷ್ಟು ಜಂಭ ಬಂತೆಂದರೆ, ಅವನಿಂದ ದಮನರಾದ ದೇವತೆಗಳು ಬಚ್ಚಿಟ್ಟುಕೊಳ್ಳುವಂತಾಯಿತು.

---

೧. ಈ ಕತೆಯು 'ವಿಷ್ಣು ಆಗಮ'ದಲ್ಲಿ ಹೇಳಲ್ಪಟ್ಟಿದ್ದು, ಅದನ್ನು ಮ್ಯೂರ್‌ನ 'ಹಿಂದೂ ಪ್ಯಾಂಥಿಯನ್', ಪು. ೧೯–೨೦ರಿಂದ ಉದ್ಧರಿಸಲಾಗಿದೆ.

೨. ಮ್ಯೂರ್‌ನ 'ಹಿಂದೂ ಪ್ಯಾಂಥಿಯನ್', ಪು. ೪೦–೪೧

ಆಗ ಅವನು ಇಡಿ ವಿಶ್ವವನ್ನೇ ಆವರಿಸಿದನು. ಈ ರಾಕ್ಷಸನ ಕ್ರೂರ ಕೃತಘ್ನತೆಯಿಂದ ಬಹಳವಾಗಿ ಕೋಪಗೊಂಡಿದ್ದ ವಿಷ್ಣುವು ಆ ಸಮಯದಲ್ಲಿ ಕಾಳಿ ನದಿ ದಡದ ಮೇಲೆ ಕುಳಿತಿದ್ದ. ಆಗ ಅವನ ಕೋಪವು ಬೆಂಕಿಯಾಗಿ, ಅವನ ಕಣ್ಣಿನಿಂದ ಅದ್ಭುತ ರೂಪವೊಂದು ಜನಿಸಿತು. ಅವನೇ ಮಹಾದೇವ. ಸಕಲ ಸಂಹಾರಿಯಾದ ಮಹಾದೇವನು ಕ್ಷಣಮಾತ್ರದಲ್ಲಿ ವಿಷ್ಣುವಿನ ವ್ಯಾಕುಲವನ್ನು ಹೋಗಲಾಡಿಸಿದನು.

ಇದಕ್ಕೆ ಪ್ರತಿಯಾಗಿ, ಶಿವನೇ ಮೂರ್ಖನೆಂದೂ, ಅವನ ಮೂರ್ಖತನದಿಂದಾದ ಅನಾಹುತವನ್ನು ವಿಷ್ಣುವೇ ತಪ್ಪಿಸಿದನೆಂದೂ ಹೇಳುವ ಭಸ್ಮಾಸುರನ ಕತೆ ರಚಿತವಾಯಿತು. ಭಸ್ಮಾಸುರನು ಶಿವನನ್ನು ಪ್ರಸನ್ನಗೊಳಿಸಿ ಒಂದು ವರವನ್ನು ಕೇಳಿದನು. ತಾನು ಯಾರ ತಲೆಯ ಮೇಲೆ ಕೈಯಿಡುತ್ತಾನೋ ಅವನು ಸುಟ್ಟುಹೋಗಬೇಕು ಎಂಬುದೇ ಆ ವರ. ಶಿವನು ಈ ವರವನ್ನು ಅನುಗ್ರಹಿಸಿದನು. ಭಸ್ಮಾಸುರನು ತನ್ನ ವರದ ಶಕ್ತಿಯನ್ನು ಶಿವನ ಮೇಲೆಯೇ ಪ್ರಯೋಗಿಸಲು ಪ್ರಯತ್ನಿಸಿದನು. ಶಿವನು ಭಯಗ್ರಸ್ತನಾಗಿ ವಿಷ್ಣುವಿನ ಮೊರೆ ಹೊಕ್ಕನು. ವಿಷ್ಣುವು ಒಬ್ಬ ಸುಂದರ ಸ್ತ್ರೀಯ ರೂಪ ತಾಳಿ ಭಸ್ಮಾಸುರನ ಬಳಿ ಹೋದಾಗ ಅವನು ಅವಳಿಂದ ಪೂರ್ಣವಾಗಿ ಮೋಹಿತನಾದ. ಭಸ್ಮಾಸುರನು ತನ್ನ ಎಲ್ಲ ಮಾತನ್ನೂ ಕೇಳುವುದಾದರೆ ಆಕೆ ಅವನ ವಶವಾಗುವುದಾಗಿ ಹೇಳಿದಳು. ಭಸ್ಮಾಸುರ ಒಪ್ಪಿದ. ಆಗ ಭಸ್ಮಾಸುರನು ತನ್ನ ಕೈಯನ್ನು ತನ್ನ ತಲೆಯ ಮೇಲೆ ಇಟ್ಟುಕೊಳ್ಳಬೇಕೆಂದು ಆಕೆ ಸೂಚಿಸಿದಾಗ ಅವನು ಹಾಗೆಯೇ ಮಾಡಿದ. ಆಗ ಅವನು ಸುಟ್ಟುಹೋದನು. ಹೀಗೆ ಶಿವನನ್ನು ಅವನ ತಪ್ಪಿನಿಂದಾದ ದುಷ್ಪರಿಣಾಮಗಳಿಂದ ಕಾಪಾಡಿದ ಕೀರ್ತಿ ವಿಷ್ಣುವಿಗೆ ಸಂದಿತು.

"ಈಶನು (ಮಹಾದೇವನು) ಮತ್ತಾವುದೇ ಕಾರಣಕ್ಕೆ ಕಾರಣಗಳ ಕಾರಣವೇ? ದೇವತೆಗಳು ಮತ್ತಾವುದೇ ವ್ಯಕ್ತಿಯ ಲಿಂಗ ಪೂಜೆ ಮಾಡುವುದನ್ನು ನಾವು ಕೇಳಿಲ್ಲ. ನಿನಗೆ ಗೊತ್ತಿದ್ದರೆ ತಿಳಿಸು ದೇವದೇವತೆಗಳು ಮಹಾದೇವನ ಲಿಂಗವನ್ನಲ್ಲದೆ ಮತ್ತಾವುದೇ ವ್ಯಕ್ತಿಯ ಲಿಂಗವನ್ನು ಪೂಜಿಸುತ್ತಿದ್ದಾರೆಯೇ? ಅಥವಾ ಹಿಂದೆ ಪೂಜಿಸುತ್ತಿದ್ದರೆ? ಅದುದರಿಂದ, ಯಾರ ಲಿಂಗವನ್ನು, ಬ್ರಹ್ಮ ಮತ್ತು ವಿಷ್ಣು, ನೀನು (ಇಂದ್ರ) ಮತ್ತು ಇತರ ದೇವತೆಗಳು ಸದಾ ಪೂಜಿಸುತ್ತಾರೋ ಅವನೇ ಸರ್ವಶ್ರೇಷ್ಠ. ಹುಟ್ಟುವ ಮಕ್ಕಳಿಗೆ (ಬ್ರಹ್ಮನ) ಪದ್ಮದ ಗುರುತಾಗಲಿ, (ವಿಷ್ಣುವಿನ) ಚಕ್ರದ ಲಕ್ಷಣವಾಗಲಿ, (ಇಂದ್ರನ) ವಜ್ರಾಯುಧದ ಲಕ್ಷಣವಾಗಲಿ ಇರದೆ, ಗಂಡು ಅಥವಾ ಹೆಣ್ಣುಗಳ ಲಿಂಗಗಳಿರುವುದರಿಂದ, ನಾವು ಮಹೇಶ್ವರನಿಂದಲೇ ಮಕ್ಕಳನ್ನು ಪಡೆಯುತ್ತೇವೆಂದು ಅರ್ಥವಾಗುತ್ತದೆ. ಎಲ್ಲ ಸ್ತ್ರೀಯರೂ ಕಾರಣೀಭೂತಳಾದ ದೇವಿಯ ಪ್ರಕೃತಿಯಿಂದ ಜನಿಸಿರುವ ಕಾರಣ, ಅವರಿಗೆ ಸ್ತ್ರೀಯ ಅಂಗಗಳಿವೆ ಮತ್ತು ಎಲ್ಲ ಪುರುಷರಿಗೂ ಹರನ ಲಿಂಗದ ಲಕ್ಷಣಗಳಿವೆ. ಈಶ್ವರ (ಮಹಾದೇವ)ನಲ್ಲದೆ ಬೇರೆ ಕಾರಣ ಉಂಟು ಅಥವಾ ಚರಾಚರವಸ್ತುಗಳಲ್ಲಿ ದೇವಿಯ ಲಕ್ಷಣಗಳಿಲ್ಲದ ಸ್ತ್ರೀಯರು ಮೂರು ಲೋಕದಲ್ಲಿ ಎಲ್ಲಾದರೂ ಇದ್ದಾರೆ ಎಂದು ಯಾರಾದರೂ ವಾದಿಸಿದರೆ, ಅಂತಹ ಮೂರ್ಖನನ್ನು ಹೊರಹಾಕಬೇಕು. ಎಲ್ಲ ಗಂಡುಜೀವವೂ ಈಶ್ವರನೆಂದು ಎಲ್ಲ ಹೆಣ್ಣುಜೀವವೂ ಉಮೆ ಎಂದು ತಿಳಿ. ಈ ವಿಶ್ವದ ಸಕಲ ಚರಾಚರವಸ್ತುಗಳೂ ಈ ಎರಡು ರೀತಿಯ ಶರೀರಗಳಿಂದ ಸಮಾವಿಷ್ಟಗೊಂಡಿವೆ."

ಗ್ರೀಕ್ ದಾರ್ಶನಿಕ ಜೇನೋಫೇನೀಸನು ಬಹುದೇವತಾವಾದವು ಸರ್ವಸಮ್ಮತವಲ್ಲವೆಂದೂ ಸ್ವವಿರೋಧವೆಂದೂ ತೀರ್ಮಾನಿಸಿದ್ದಾನೆ. ಏಕೈಕ ದೇವವಾದವೇ ನಿಜವಾದ ಸಿದ್ಧಾಂತ. ದಾರ್ಶನಿಕವಾಗಿ ನೋಡಿದರೆ ಪ್ರಾಯಶಃ ಜೆನೋಫೇನೀಸನ ವಾದ ಸಮಂಜಸವಾಗಿ ಕಾಣಬಹುದು. ಆದರೆ ಐತಿಹಾಸಿಕವಾಗಿ ನೋಡಿದರೆ ಎರಡೂ ಸಹಜವಾಗಿ ಕಾಣುತ್ತವೆ. ಸಮಾಜದಲ್ಲಿ ಒಂದೇ ಜನಾಂಗದವರು ಇದ್ದರೆ,

ಅಲ್ಲಿ ಏಕೈಕದೇವವಾದ ಇರುವುದು ಸಹಜ. ಆದರೆ ಸಮಾಜವು ಎಲ್ಲಿ ಅನೇಕ ಜನಾಂಗಗಳ ಒಕ್ಕೂಟವಾಗಿರುತ್ತದೆಯೋ. ಅಲ್ಲಿ ಬಹುದೇವತಾವಾದವಿರುವುದು ಸಹಜವಷ್ಟೇ ಅಲ್ಲ, ಅನಿವಾರ್ಯ ಕೂಡ. ಏಕೆಂದರೆ ಪ್ರತಿಯೊಂದು ಪುರಾತನ ಸಮಾಜದಲ್ಲಿಯೂ ಕೇವಲ ಮನುಷ್ಯರಷ್ಟೇ ಇರದೆ ಅವರ ದೇವರುಗಳೂ ಇದ್ದರು. ಆಗ ಒಂದು ಜನಾಂಗದ ದೇವನನ್ನು ಉಳಿದ ಜನಾಂಗಗಳು ಒಪ್ಪಿಕೊಳ್ಳದೆ ವಿವಿಧ ಜನಾಂಗಗಳು ಒಂದಾಗಿ ಸಹಬಾಳ್ವೆ ನಡೆಸಲು ಸಾಧ್ಯವಿರಲಿಲ್ಲ. ಬಹುದೇವತಾವಾದ ಬೆಳೆದದ್ದು ಹೀಗೆಯೇ.

ಹೀಗೆ, ಹಿಂದೂ ಧರ್ಮದಲ್ಲಿ ಅನೇಕ ದೇವರುಗಳಿರುವುದು ಅರ್ಥವಾಗುವ ವಿಷಯವೇ. ಏಕೆಂದರೆ ಹಿಂದೂ ಸಮಾಜವು ಅನೇಕ ಬಣಗಳ, ಅನೇಕ ಜನಾಂಗಗಳ ಒಕ್ಕೂಟ. ಪ್ರತಿಯೊಂದು ಬಣಕ್ಕೂ ಪ್ರತಿಯೊಂದು ಜನಾಂಗಕ್ಕೂ ತನ್ನದೇ ಆದ ಒಬ್ಬ ದೇವನಿದ್ದಾನೆ. ಆದರೆ ಇದರಲ್ಲಿ ವಿಚಿತ್ರವಾದ ಹಾಗೂ ಎದ್ದುಕಾಣುವ ಅಂಶವೆಂದರೆ, ಹಿಂದೂ ದೈವಗಳು ತಮ್ಮತಮ್ಮಲ್ಲೆ ಜಗಳವಾಡುವುದು, ಅವರ ಪರಸ್ಪರ ವೈಮನಸ್ಯ ಹಾಗೂ ಪರಸ್ಪರರನ್ನು ದೂಷಿಸುವುದು. ಇವೆಲ್ಲ ಸಾಧಾರಣ ಮನುಷ್ಯರಿಗೇ ನಾಚಿಕೆಗೇಡಿತನ ಹಾಗೂ ಅಪಕೀರ್ತಿಯನ್ನುಂಟುಮಾಡುವ ಸಂಗತಿಗಳು. ಹೀಗೇಕಾಯಿತು ಎಂಬುದಕ್ಕೆ ಸ್ಪಷ್ಟೀಕರಣವಾಗಬೇಕು.

* * * *

# ಒಗಟು – ೧೧

# ಬ್ರಾಹ್ಮಣರು ಹಿಂದೂ ದೈವಗಳು ಏಳುಬೀಳುಗಳನ್ನು ಅನುಭವಿಸುವಂತೆ ಏಕೆ ಮಾಡಿದರು?

ಹಿಂದೂಗಳು ವಿಗ್ರಹಾರಾಧಕರು ಎಂದು ದೂಷಿಸಲಾಗಿದೆ. ಆದರೆ ವಿಗ್ರಹರಾಧನೆಯಲ್ಲಿ ಏನೂ ದೋಷವಿಲ್ಲ. ವಿಗ್ರಹವನ್ನು ಮಾಡುವುದು ಒಂದು ಛಾಯಾಚಿತ್ರವನ್ನು ಮಾಡುವುದಕ್ಕಿಂತ ಹೆಚ್ಚೇನೂ ಅಲ್ಲ ಮತ್ತು ಛಾಯಾಚಿತ್ರವನ್ನು ಇಟ್ಟುಕೊಳ್ಳುವುದರಲ್ಲೇನೂ ತಪ್ಪಿಲ್ಲ ಎಂದಾದರೆ, ವಿಗ್ರಹವನ್ನಿಟ್ಟುಕೊಳ್ಳುವುದರಲ್ಲೇನೂ ತಪ್ಪಿಲ್ಲ. ಹಿಂದೂ ವಿಗ್ರಹಾರಾಧನೆಯ ವಿರುದ್ಧ ಎತ್ತುವ ನಿಜವಾದ ಆಕ್ಷೇಪಣೆಯೆಂದರೆ, ಅದು ಕೇವಲ ಚಿತ್ರವಲ್ಲ, ಕೇವಲ ಬಿಂಬವನ್ನು ಮಾಡುವುದಲ್ಲ, ಅದು ಅದಕ್ಕೂ ಹೆಚ್ಚಿನದು. ಹಿಂದೂಗಳ ವಿಗ್ರಹವು ಒಂದು ಜೀವಂತ ವಸ್ತು ಮತ್ತು ಅದಕ್ಕೆ ಮಾನವರ ಎಲ್ಲ ಕಾರ್ಯಗಳನ್ನೂ ಆರೋಪಿಸಲಾಗುತ್ತದೆ. ಅದಕ್ಕೆ ಪ್ರಾಣ ಪ್ರತಿಷ್ಠಾಪನ ಎಂಬ ಕರ್ಮದ ಮೂಲಕ ಪ್ರಾಣವನ್ನು ಕೊಡಲಾಗುತ್ತದೆ. ಬೌದ್ಧರು ವಿಗ್ರಹವನ್ನು ಪೂಜಿಸುವುದರಿಂದ ಅವರೂ ವಿಗ್ರಹಾರಾಧಕರೇ. ಆದರೆ ಅವರು ಆರಾಧಿಸುವ ಬುದ್ಧನ ವಿಗ್ರಹ ಕೇವಲ ಒಂದು ಚಿತ್ರ ಅಥವಾ ಪ್ರತಿಮೆ. ಅದಕ್ಕೆ ಆತ್ಮವಿಲ್ಲ. ಬ್ರಾಹ್ಮಣರು ಹಿಂದೂ ದೈವಗಳಿಗೆ ಆತ್ಮವನ್ನಾರೋಪಿಸಿ ಅವರನ್ನು ಸಜೀವ ವ್ಯಕ್ತಿಗಳನ್ನಾಗಿ ಮಾಡಿದರೇಕೆ? ಎಂಬುದು ಒಂದು ಬೋಧಪ್ರದ ಸಂಶೋಧನೆಗೆ ಎಡೆಮಾಡಿಕೊಡುತ್ತದೆ. ಆದರೆ ಅಂಥ ಸಂಶೋಧನೆ ಈ ಅಧ್ಯಾಯದ ಪರಿಧಿಯ ಹೊರಗಿದೆ.

ಹಿಂದೂಗಳ ವಿರುದ್ಧ ಮಾಡಲಾಗಿರುವ ಎರಡನೆ ಆರೋಪವೆಂದರೆ, ಅವರು ಬಹುದೇವತಾರಾಧಕರು ಅಂದರೆ ಅನೇಕ ದೈವಗಳನ್ನು ಪೂಜಿಸುವವರು ಎಂಬುದು. ಆದರೆ ಬಹುದೇವತಾ ಆರಾಧನೆಯನ್ನು ರೂಢಿಯಲ್ಲಿಟ್ಟುಕೊಂಡಿರುವವರು ಬರೀ ಹಿಂದೂಗಳಷ್ಟೇ ಅಲ್ಲ. ಬೇರೆ ಧರ್ಮಗಳೂ ಬಹುದೇವತಾ ಆರಾಧನೆಯನ್ನು ಆಚರಿಸುವುದಕ್ಕೆ ಹೆಸರಾಗಿವೆ. ಅವುಗಳಲ್ಲಿ ಇಲ್ಲಿ ಎರಡನ್ನು ಹೆಸರಿಸಬಹುದು. ರೋಮನ್ನರೂ ಗ್ರೀಕರೂ ಮೂಲತಃ ಬಹುದೇವತಾರಾಧಕರೇ. ಅವರೂ ಅನೇಕ ದೈವಗಳನ್ನು ಪೂಜಿಸಿದರು. ಆದುದರಿಂದ ಮೇಲಿನ ಆರೋಪದಲ್ಲಿ ಹುರುಳಿಲ್ಲ.

ಆದರೆ ಹಿಂದೂಗಳ ವಿರುದ್ಧ ಮಾಡಬಹುದಾದ ಒಂದು ನಿಜವಾದ ಆಕ್ಷೇಪ ಬಹಳ ಜನರ ಗಮನಕ್ಕೆ ಬಂದಿಲ್ಲ. ಹಿಂದೂಗಳು ಆ ದೈವಗಳಿಗೆ ತೋರಿಸಿದ ಭಕ್ತಿಯಲ್ಲಿ ಎಂದೂ ಅಚಲರಾಗಿರಲಿಲ್ಲ

---

*ಇದು ಲೇಖಕರ ಕೈಯಿಂದಲೇ ತಿದ್ದುಪಡಿಗೂ ಪರಿಷ್ಕರಣಕ್ಕೂ ಒಳಗಾದ ೪೩ ಪುಟಗಳ ಬೆರಳಚ್ಚಿನ ಪ್ರತಿ. ಕೊನೆಯ ಪ್ಯಾರಾವನ್ನು ಲೇಖಕರು ಪೆನ್ನಿನಿಂದ ಬರೆದಿದ್ದಾರೆ. 'ದಿ ರೈಸ್ ಅಂಡ್ ಫಾಲ್ ಆಫ್ ಗಾಡ್ಸ್' ಎಂಬುದು ಈ ಅಧ್ಯಾಯದ ಮೊದಲ ಶೀರ್ಷಿಕೆಯಾಗಿತ್ತು. ಸಾಮಾನ್ಯವಾಗಿ ಲೇಖಕರು ಕಾಟು ಹಾಕಲು ಉಪಯೋಗಿಸುತ್ತಿದ್ದ ನೀಲಿ ಪೆನ್ಸಿಲ್ಲಿನಿಂದ ಈ ಶೀರ್ಷಿಕೆಯನ್ನು ಕಾಟು ಹಾಕಿದ್ದಾರೆ – ಸಂ.*

ಎಂಬುದೇ ಆ ಆಕ್ಷೇಪ. ಒಂದೇ ದೈವಕ್ಕೆ ನಿಷ್ಠೆ ಅಥವಾ ಶ್ರದ್ಧೆ ಅಥವಾ ವಿಶ್ವಾಸವನ್ನು ತೋರಿಸಬೇಕು ಎಂಬುದೇ ಅವರಿಗೆ ಗೊತ್ತಿರಲಿಲ್ಲ. ಹಿಂದೂ ದೈವಗಳ ಇತಿಹಾಸದಲ್ಲಿ ಸಾಮಾನ್ಯವಾಗಿ ಕಾಣುವ ಅಂಶವೆಂದರೆ, ಕೆಲವು ದೈವಗಳನ್ನು ಸ್ವಲ್ಪ ಕಾಲದವರೆಗೆ ಪೂಜಿಸಿ, ಅನಂತರ ಅವುಗಳ ಪೂಜೆಯನ್ನು ಬಿಟ್ಟು, ಕೊನೆಗೆ ಆ ದೈವಗಳನ್ನೇ ತಿಪ್ಪೆಗೆಸೆದುಬಿಸುಡುವುದು. ಅನಂತರ ಹೊಚ್ಚಹೊಸ ದೈವಗಳಿಗೆ ಅಂಟಿಕೊಳ್ಳುವುದು. ಅವುಗಳ ಪೂಜೆಯನ್ನು ಅತ್ಯಂತ ಗಾಢಭಕ್ತಿಯಿಂದ ಮಾಡುವುದು. ಅನಂತರ ಈ ಹೊಸ ದೈವಗಳನ್ನೂ ಕೈಬಿಡುವುದು. ಬೇರೆ ಹೊಸ ದೈವಗಳಿಗೆ ಅಂಟಿಕೊಳ್ಳುವುದು. ಈ ಚಕ್ರ ಹೀಗೇ ಉರುಳುತ್ತದೆ. ಹೀಗೆ ಹಿಂದೂ ದೈವಗಳು ಏಳುಬೀಳುಗಳನ್ನು ಅನುಭವಿಸುತ್ತಲೇ ಇರುತ್ತಾರೆ. ಪ್ರಪಂಚದ ಇತರ ಯಾವುದೇ ಕೋಮಿನಲ್ಲಿ ಕಾಣಸಿಗದ ಘಟನೆಯಿದು.

ಹಿಂದೂಗಳು ತಮ್ಮ ದೇವರುಗಳನ್ನು ಬಹಳ ಗೌರವದಿಂದ ಕಾಣುತ್ತಾರೆ ಎಂಬ ಹೇಳಿಕೆಯನ್ನು ಆಕ್ಷೇಪಣೆಯಿಲ್ಲದೆ ಒಪ್ಪಿಕೊಳ್ಳಲಾಗದು. ಆದುದರಿಂದ ಈ ವಿಚಾರದಲ್ಲಿ ಕೆಲವು ಆಧಾರಗಳ ಆವಶ್ಯಕತೆ ಇದೆ. ಅದೃಷ್ಟವಶಾತ್, ಆಧಾರಗಳು ಹೇರಳವಾಗಿವೆ. ಸದ್ಯಕ್ಕೆ ಹಿಂದೂಗಳು ನಾಲ್ಕು ದೇವರನ್ನು ಪೂಜಿಸುತ್ತಾರೆ – ಶಿವ, ವಿಷ್ಣು, ರಾಮ ಮತ್ತು ಕೃಷ್ಣ. ಇಲ್ಲಿ ನಾವು ಪರಿಶೀಲಿಸಬೇಕಾದ ಪ್ರಶ್ನೆ ಹೀಗಿದೆ: ಹಿಂದೂಗಳು ಮೊದಲಿನಿಂದಲೂ ಪೂಜಿಸುತ್ತಾ ಬಂದಿರುವುದು ಈ ನಾಲ್ಕು ದೇವರನ್ನು ಮಾತ್ರವೆ?

ಹಿಂದೂ ದೇವಗಣದಲ್ಲಿ ದೇವರ ಸಂಖ್ಯೆ ಅತ್ಯಂತ ದೊಡ್ಡದು. ಸಂಖ್ಯೆಯಲ್ಲಿ ಮತ್ತಾವುದೇ ಧರ್ಮದ ದೇವಗಣ ಸ್ಪರ್ಧಿಸಲಾರದು. ಋಗ್ವೇದದ ಕಾಲದಲ್ಲಿ ದೇವರ ಸಂಖ್ಯೆ ಬಹಳವಾಗಿತ್ತು. ಋಗ್ವೇದ ಎರಡು ಕಡೆಗಳಲ್ಲಿ ದೇವರ ಸಂಖ್ಯೆ ೩೩೩೯ ಎಂದು ಹೇಳಿದೆ. ನಮಗೆ ಈಗ ತಿಳಿಯಲು ಅಸಾಧ್ಯವಾದ ಯಾವುದೋ ಕಾರಣಕ್ಕಾಗಿ ಆ ಸಂಖ್ಯೆಯನ್ನು ೩೩ಕ್ಕೆ ಇಳಿಸಲಾಯಿತು.[1] ಇದು ನಿಜವಾಗಿಯೂ ಒಂದು ಭಾರಿ ಕಡಿತವೇ ಸರಿ. ಹಿಂದೂ ದೇವಗಣದಲ್ಲಿ ಮೂವತ್ಮೂರೇ ದೇವರಿದ್ದರೂ, ಅದೂ ಅತಿ ಹೆಚ್ಚಿನ ಸಂಖ್ಯೆಯಾಗಿದೆ.

'ಶತಪಥ ಬ್ರಾಹ್ಮಣ'ದಲ್ಲಿ[2] ದೇವಗಣದಲ್ಲಿರುವ ಮೂವತ್ಮೂರು ದೇವರು ಯಾರ್‍ಯಾರು ಎಂಬುದರ ವಿವರಣೆ ಇದೆ: ೮ ವಸುಗಳು, ೧೧ ರುದ್ರರು, ೧೨ ಆದಿತ್ಯರು, ದ್ಯಾಸ್ ಮತ್ತು ಪೃಥ್ವಿ (ಅಥವಾ ಸ್ವರ್ಗ ಮತ್ತು ಭೂಮಿ).

ಈ ಸಂಖ್ಯೆಯ ಪ್ರಶ್ನೆಗಿಂತ ಹೆಚ್ಚು ಮುಖ್ಯವಾದ ಪ್ರಶ್ನೆ ಅವರ ಸ್ಥಾನಮಾನಕ್ಕೆ ಸಂಬಂಧಿಸಿದುದು. ಈ ಮೂವತ್ಮೂರು ದೇವರಲ್ಲಿ ಸ್ಥಾನಮಾನಗಳಲ್ಲೇನಾದರೂ ತಾರತಮ್ಯವಿತ್ತೆ ಎಂಬುದು. ಋಗ್ವೇದದಲ್ಲಿರುವ ಒಂದು ಶ್ಲೋಕವು, ಈ ೩೩ ದೇವರನ್ನು ಪೂಜೆ ಪುನಸ್ಕಾರ ಮತ್ತು ಆದ್ಯತೆ ಸಲ್ಲಿಸುವ ದೃಷ್ಟಿಯಿಂದ ಎರಡು ವರ್ಗ ಮಾಡಲಾಗಿದೆಯೆಂದೂ, ಒಂದರಲ್ಲಿ ದೊಡ್ಡವರು ಮತ್ತು ಸಣ್ಣವರು, ಮತ್ತೊಂದರಲ್ಲಿ ಹಿರಿಯರು ಮತ್ತು ಕಿರಿಯರು ಇರುತ್ತಿದ್ದರೆಂದೂ ಸೂಚಿಸುತ್ತದೆ. ಈ ವರ್ಗೀಕರಣವು ಋಗ್ವೇದದಲ್ಲೇ ಇರುವ ಒಂದು ಹಿಂದಿನ ಅಭಿಪ್ರಾಯಕ್ಕೆ ವಿರುದ್ಧವಾಗಿದೆ. ಹಿಂದಿನ ನಿಯಮವೊಂದು ಹೀಗಿದೆ:

---

೧. 'ಋಗ್ವೇದ', III, ೯೯: X ೫೨, ೬; ವಾಜ. ಸೂ. ೩೩.೭. ಮ್ಯೂರ್, V. ಪು. ೧೨

೨. ಅದೇ, I, ೧೩೯, II, iii, ೬, ೯; VIII ೨೮.೧; VIII, ೩೦.೨; VIII ೩೫.೩ ಮ್ಯೂರ್, V. ಪು. ೧೦

೩. 'ಶತಪಥಬ್ರಾಹ್ಮಣ', IV ೫, ೭, ೨. ಮ್ಯೂರ್, V. ಪು. ೧೧

"ಎಲೈ ದೇವತೆಗಳೇ ನಿಮ್ಮಲ್ಲಿ ಹಿರಿಯರು ಕಿರಿಯರು
ಯಾರೂ ಇಲ್ಲ. ಇರುವವರೆಲ್ಲರೂ ಸಮಾನರು"

ಪ್ರೊ, ಮ್ಯಾಕ್ಸ್‌ಮುಲ್ಲರರ ತೀರ್ಮಾನವೂ ಸಹ ಇದೇ ಆಗಿದೆ:

"ದೇವರುಗಳನ್ನು ಪ್ರಾರ್ಥಿಸುವಾಗ ಪದವಿಯಲ್ಲಿ ಅವರು ಮೇಲು ಅಥವಾ ಕೀಳು ಎಂದು ಭಾವಿಸಲಾಗುವುದಿಲ್ಲ. ಪ್ರಾರ್ಥಿಸುವ ಮನಸ್ಸಿಗೆ ಒಬ್ಬ ದೇವ ಮತ್ತೊಬ್ಬ ದೇವರಷ್ಟೇ ಒಳ್ಳೆಯವನು. ಬಹುದೇವತಾರಾಧಕನ ದೇವನಿಗೆ ಇರಲೇಬೇಕಾದ ಎಲ್ಲ ಪರಿಮಿತಿಗಳೂ ಆ ದೇವನಿಗೆ ಇರುತ್ತವೆಯೆಂದು ನಮ್ಮ ಬುದ್ಧಿಗೆ ಅನ್ನಿಸಿದರೂ ಪ್ರಾರ್ಥಿಸುವಾತನಿಗೆ ಆ ದೇವನೇ ಆ ಸಮಯದಲ್ಲಿ ನಿಜವಾದ ದೇವನಾಗಿ ಅತ್ಯುತ್ಕೃಷ್ಟ ಮತ್ತು ಸ್ವತಂತ್ರನಾಗಿ ಕಾಣುತ್ತಾನೆ. ಆ ಸಮಯದಲ್ಲಿ ಪ್ರಾರ್ಥಿಸುವ ಕವಿಯ ಕಣ್ಣಿಗೆ ಮತ್ತೇನೂ ಕಾಣುವುದಿಲ್ಲ. ಭಕ್ತನ ಕಣ್ತುಂಬ ತನ್ನ ಇಷ್ಟಗಳನ್ನು ಪೂರೈಸುವ ದೇವನಷ್ಟೇ ಕಾಣಿಸುತ್ತಾನೆ."

"ದೇವನೊಬ್ಬ ಉಳಿದವರ ಸೇವಕನಾಗಿ
ಪ್ರತಿನಿಧಿಸಲ್ಪಟ್ಟಿರುವುದು ಮತ್ತೆಲ್ಲಿಯೂ ಕಾಣುವುದಿಲ್ಲ."

ಇದೊಂದು ತಾತ್ಕಾಲಿಕ ಸತ್ಯ, ಅಷ್ಟೇ. (ಮುಂದೆ) ದೇವರುಗಳನ್ನು ನೋಡುವ ದೃಷ್ಟಿಕೋನದಲ್ಲಿ ಬದಲಾವಣೆ ಆದಂತೆ ತೋರುತ್ತದೆ. ಏಕೆಂದರೆ ಕೇವಲ ಕೆಲವೇ ದೇವತೆಗಳನ್ನು ಸರ್ವೋತ್ಕೃಷ್ಟ ಮತ್ತು ಸರ್ವಸ್ವತಂತ್ರವೆಂದು ಹೊಗಳುವ ಅನೇಕ ಗೀತೆಗಳು ವೇದಗಳಲ್ಲಿ ಸಿಕ್ಕುತ್ತವೆ.

ಎರಡನೆ ಮಂಡಲದ ಮೊದಲನೆ ಗೀತೆಯಲ್ಲಿ ಅಗ್ನಿಯನ್ನು ಜಗನ್ನಿಯಾಮಕ, ಎಲ್ಲ ಮನುಷ್ಯರ ಪ್ರಭು, ವಿವೇಕಿಯಾದ ರಾಜ, ತಂದೆ, ಸಹೋದರ, ಮಗ, ಎಲ್ಲ ಮಾನವರ ಸೌಖ್ಯ ಎಂದು ಕರೆಯಲಾಗಿದೆ. ಉಳಿದವರೆಲ್ಲರ ಹೆಸರು ಮತ್ತು ಶಕ್ತಿಗಳನ್ನು ಅಗ್ನಿಗೆ ಸ್ಪಷ್ಟವಾಗಿ ಆರೋಪಿಸಲಾಗಿದೆ.

ಮತ್ತೊಬ್ಬ ದೇವ ಅಗ್ನಿಗಿಂತ ಮೇಲೇರಿಸಲ್ಪಟ್ಟವನು ಅವನೇ ಇಂದ್ರ. ಸಂಹಿತೆಗಳಲ್ಲಿಯೂ ಬ್ರಾಹ್ಮಣಗಳಲ್ಲಿಯೂ ಇಂದ್ರನನ್ನು ಸರ್ವಶಕ್ತ ದೇವನೆಂದು ಕೊಂಡಾಡಲಾಗಿದೆ. ಹತ್ತನೇ ಮಂಡಲದ ಒಂದು ಗೀತೆಯು 'ವಿಶ್ವಸ್ಮಾದ್ ಇಂದ್ರ ಉತ್ತರಾಃ (ಅಂದರೆ, 'ಇಂದ್ರನು ಉಳಿದವರಿಗಿಂತ ಶ್ರೇಷ್ಠ') ಎನ್ನುತ್ತದೆ.

ಮೂರನೆಯ ದೇವನೊಬ್ಬನನ್ನು ಅತ್ಯಂತ ಎತ್ತರಕ್ಕೇರಿಸಲಾಗಿದೆ. ಅವನೇ ಸೋಮ. ಸೋಮನು ಹುಟ್ಟಿನಿಂದಲೇ ಶ್ರೇಷ್ಠ ಮತ್ತು ಅವನು ಎಲ್ಲರನ್ನೂ ಗೆಲ್ಲುತ್ತಾ ಹೋಗುತ್ತಾನೆ ಎಂದು ಹೇಳಲಾಗಿದೆ. ಅವನು ಭೂಮಿಯ ಚಕ್ರವರ್ತಿ ಎಂದೂ, ಅವನಿಗೆ ಮನುಷ್ಯರ ಆಯಸ್ಸನ್ನು ಹೆಚ್ಚಿಸುವ ಶಕ್ತಿ ಇದೆಯೆಂದೂ ವರ್ಣಿಸಲಾಗಿದೆ. ಮತ್ತೊಂದು ಗೀತೆಯಲ್ಲಿ ಅವನೇ ಸ್ವರ್ಗ ಮತ್ತು ಭೂಮಿಗಳನ್ನೂ, ಅಗ್ನಿ ಮತ್ತು ಸೂರ್ಯರನ್ನೂ, ಇಂದ್ರ ಮತ್ತು ವಿಷ್ಣು– ಇವರುಗಳನ್ನೂ ಸೃಷ್ಟಿಸಿದನೆಂದು ಹೇಳಲಾಗಿದೆ. ಆಮೇಲೆ ಸೋಮನನ್ನೂ ನಿರ್ಲಕ್ಷಿಸಲಾಯಿತು ಮತ್ತು ನಾಲ್ಕನೆಯ ದೇವನೊಬ್ಬನನ್ನು ಮೇಲೇರಿಸಲಾಯಿತು. ಅವನೇ ವರುಣ. ವರುಣನನ್ನು ಎಲ್ಲ ದೇವರಿಗಿಂತ ಶ್ರೇಷ್ಠನೆಂದು ಪರಿಗಣಿಸಲಾಯಿತು. "ನೀನು ಎಲ್ಲ ಮನುಷ್ಯರ, ಸ್ವರ್ಗದ ಮತ್ತು ಭೂಮಿಯ ಪ್ರಭು" ಅಥವಾ ಮತ್ತೊಂದು ಗೀತೆಯಲ್ಲಿ (ii, ೨೭, ೧೦) ಹೇಳುವಂತೆ "ನೀನು ಎಲ್ಲರ ದೇವತೆಗಳ ಮತ್ತು ಮನುಷ್ಯರ ರಾಜ" ಎಂದು ವರುಣನ ಬಗ್ಗೆ ವೈದಿಕ ಕವಿ ಹೇಳಿರುವುದನ್ನು ನೋಡಿದರೆ, ದಿವ್ಯ ಮತ್ತು ಪರಮಾಧಿಕಾರವುಳ್ಳವನ ಬಗೆಗೆ ಮಾನುಷ ಭಾಷೆ ಇದಕ್ಕಿಂತ ಹೆಚ್ಚಿನದೇನೂ ಹೇಳಲಾರದು ಎನಿಸುತ್ತದೆ.

ಈ ಆಧಾರದಿಂದ, ೩೩ ವೈದಿಕ ದೇವತೆಗಳ ಪೈಕಿ ಅಗ್ನಿ, ಇಂದ್ರ, ಸೋಮ, ವರುಣ ಎಂಬ ನಾಲ್ಕು ದೇವತೆಗಳು ಪ್ರಮುಖ ಸ್ಥಾನಕ್ಕೇರಿದರು ಎಂದು ಸ್ಪಷ್ಟವಾಗಿ ಹೇಳಬಹುದು. ಉಳಿದ ದೇವತೆಗಳು ದೇವತೆಗಳಾಗಿ ಉಳಿಯಲಿಲ್ಲ ಎಂಬುದು ಇದರರ್ಥವಲ್ಲ. ಅವರು ಈ ಉಳಿದ ದೇವತೆಗಳಿಗಿಂತ ಮೇಲೇರಿದರು ಎಂದಷ್ಟೇ ಇದರ ಅರ್ಥ. ಆದರೆ ಆಮೇಲೆ ಅಂದರೆ ಶತಪಥ ಬ್ರಾಹ್ಮಣ ಕಾಲದಲ್ಲಿ ಬೇರೆಬೇರೆ ದೇವತೆಗಳ ಸ್ಥಾನಮಾನಗಳಲ್ಲಿ ಏರುಪೇರಾಗಿರುವಂತೆ ಕಾಣುತ್ತದೆ. ಸೋಮ ಮತ್ತು ವರುಣ ಪ್ರಮುಖ ದೇವತೆಗಳ ಸ್ಥಾನವನ್ನು ಕಳೆದುಕೊಂಡಿದ್ದರು. ಆದರೆ ಅಗ್ನಿ ಮತ್ತು ಇಂದ್ರ ತಮ್ಮ ಸ್ಥಾನವನ್ನು ಉಳಿಸಿಕೊಂಡಿದ್ದರು. ಆಗ ಮತ್ತೊಬ್ಬ ಹೊಸ ದೇವ ಉದ್ಭವಿಸಿದ. ಅವನೇ ಸೂರ್ಯ. ಇದರ ಪರಿಣಾಮವಾಗಿ ಇಂದ್ರ, ಅಗ್ನಿ, ಸೋಮ ಮತ್ತು ವರುಣ ಪ್ರಮುಖ ದೇವತೆಗಳಾಗಿರುವುದರ ಬದಲು, ಅಗ್ನಿ, ಇಂದ್ರ ಮತ್ತು ಸೂರ್ಯ ಪ್ರಮುಖ ದೇವತೆಗಳಾದರು. ಈ ವಿಷಯ ಈ ಕೆಳಗಿನ ಶತಪಥ ಬ್ರಾಹ್ಮಣದ ಹೇಳಿಕೆಯಿಂದ ಸ್ಪಷ್ಟವಾಗುತ್ತದೆ:

೧. "ಮೊದಲು ಎಲ್ಲ ದೇವತೆಗಳೂ ಒಂದೇ ತೆರನಾಗಿ ಶುದ್ಧವಾಗಿ ಇದ್ದರು. ಹೀಗೆ ಒಂದೇ ತೆರನಾಗಿ ಶುದ್ಧರಾಗಿದ್ದವರ ಪೈಕಿ, ಮೂವರು ಅಗ್ನಿ, ಇಂದ್ರ ಮತ್ತು ಸೂರ್ಯ 'ನಾವು ಶ್ರೇಷ್ಠರಾಗೋಣ' ಎಂದು ಇಚ್ಛಿಸಿದರು."

೨. ......

೩. "ಈಗ ಅಗ್ನಿಯಲ್ಲಿರುವ ಜ್ಯೋತಿ, ಮೊದಲು ಅವನಲ್ಲಿರಲಿಲ್ಲ. 'ಈ ಪ್ರಕಾಶ ನನ್ನಲ್ಲಿರಲಿ' ಎಂದು ಅವನು ಇಚ್ಛಿಸಿದನು. ಅವನು ಈ ಹುಲ್ಲನ್ನು ನೋಡಿದನು. ಅದನ್ನು ತೆಗೆದುಕೊಂಡನು (ಸ್ವೀಕರಿಸಿದನು). ಅಂದಿನಿಂದ ಅವನಲ್ಲಿ ಈ ಜ್ವಾಲೆ ಉಂಟಾಯಿತು."

೪. "ಈಗ ಇಂದ್ರನಲ್ಲಿರುವ ಶಕ್ತಿಯು ಮೊದಲು ಅವನಲ್ಲಿರಲಿಲ್ಲ. ಇತ್ಯಾದಿ (ಉಳಿದುದು ೩ನೇ ಶ್ಲೋಕದಂತೆ)"

೫. "ಈಗ ಸೂರ್ಯನಲ್ಲಿರುವ ಪ್ರಭೆ ಮೊದಲು ಅವನಲ್ಲಿರಲಿಲ್ಲ, ಇತ್ಯಾದಿ."

ಈ ಮೂವರು ದೇವತೆಗಳು ತಮ್ಮ ಸ್ಥಾನದ ಶ್ರೇಷ್ಠತೆಯನ್ನು ಎಷ್ಟು ಕಾಲದವರೆಗೆ ಕಾಯ್ದುಕೊಂಡಿದ್ದರೆಂಬುದನ್ನು ಹೇಳುವುದು ಕಷ್ಟ. ಆದರೆ ಈ ದೃಶ್ಯದಲ್ಲಿ ಅನಂತರ ಬದಲಾವಣೆಯಾಗಿದ್ದಂತೂ ಸಂಶಯಾತೀತ. ಚುಲ್ಲ–ನಿದ್ದೇಶವನ್ನು ಪ್ರಸ್ತಾಪಿಸಿರುವುದು ಇದನ್ನು ದೃಢಪಡಿಸುತ್ತದೆ. ಚುಲ್ಲ–ನಿದ್ದೇಶವು ಬೌದ್ಧ ಸಾಹಿತ್ಯಕ್ಕೆ ಸೇರಿದ ಗ್ರಂಥವಾಗಿದೆ. ಅದರ ಕಾಲ ಸುಮಾರು..... *(ಲೇಖಕರು ಇಲ್ಲಿಗೇ ಬಿಟ್ಟಿದ್ದಾರೆ).*

ಚುಲ್ಲ–ನಿದ್ದೇಶವು ತನ್ನ ಕಾಲದಲ್ಲಿ ಭಾರತದಲ್ಲಿ ಪ್ರಚಲಿತವಿದ್ದ ಪಂಥಗಳ ಪಟ್ಟಿಯನ್ನು ಕೊಡುತ್ತದೆ. ಆಚಾರ (ಪಂಥ) ಮತ್ತು ವಿಚಾರಗಳ ಆಧಾರದ ಮೇಲೆ, ಅವುಗಳನ್ನು ಹೀಗೆ ಪಟ್ಟಿ ಮಾಡಬಹುದು:

ವಿವಿಧ ದೈವಗಳಿಗೆ ಶತಪಥ ಬ್ರಾಹ್ಮಣ ಕಾಲದಲ್ಲಿದ್ದ ಸ್ಥಾನಗಳನ್ನು ಚುಲ್ಲ – ನಿದ್ದೇಶದಲ್ಲಿದ್ದ ಸ್ಥಾನಗಳೊಡನೆ ಹೋಲಿಸಿ, ಈ ಕೆಳಗಿನ ಸ್ಪಷ್ಟ ತೀರ್ಮಾನವನ್ನು ಪಡೆಯಬಹುದು: ೧. ಅಗ್ನಿ,

## I ಸಿದ್ಧಾಂತಗಳು

| ಕ್ರ.ಸಂ. | ಸಿದ್ಧಾಂತಗಳ ಹೆಸರು | |
|---|---|---|
| ೧ | ಆಜೀವಕ ಶ್ರಾವಕ[೧] | ಆಜೀವಕ[೨] |
| ೨ | ನಿಗಟ್ಟ ಶ್ರಾವಕರು | ನಿಗಟ್ಟ[೩] |
| ೩ | ಜಟಿಲ ಶ್ರಾವಕರು | ಜಟಿಲ[೪] |
| ೪ | ಪರಿವ್ರಾಜಕ ಶ್ರಾವಕರು | ಪರಿವ್ರಾಜಕ[೫] |
| ೫ | ಅವರೂಢ ಶ್ರಾವಕರು | ಅವರೂಢಕ |

## II ಪಂಥಗಳು

| ಕ್ರ.ಸಂ. | ಪಂಥಗಳ ಹೆಸರು | ಆರಾಧಿಸಲ್ಪಟ್ಟ ದೈವ |
|---|---|---|
| ೧ | ಹಸ್ತಿ ವ್ರತಿಕರು* | ಹಸ್ತಿ[೬] |
| ೨ | ಅಶ್ವ ವ್ರತಿಕರು | ಅಶ್ವ[೭] |
| ೩ | ಗೋ ವ್ರತಿಕರು | ಗೋ[೮] |
| ೪ | ಕುಕ್ಕುರ ವ್ರತಿಕರು | ಕುಕ್ಕುರ[೯] |
| ೫ | ಕಾಕ ವ್ರತಿಕರು | ಕಾಕ[೧೦] |
| ೬ | ವಾಸುದೇವ ವ್ರತಿಕರು | ವಾಸುದೇವ |
| ೭ | ಬಲದೇವ ವ್ರತಿಕರು | ಬಲದೇವ |
| ೮ | ಪೂರ್ಣಭದ್ರ ವ್ರತಿಕರು | ಪೂರ್ಣಭದ್ರ |
| ೯ | ಮಣಿಭದ್ರ ವ್ರತಿಕರು | ಮಣಿಭದ್ರ |
| ೧೦ | ಅಗ್ನಿ ವ್ರತಿಕರು | ಅಗ್ನಿ |

---

೧. ಶ್ರಾವಕನೆಂದರೆ ಶಿಷ್ಯ
೨. ಜೀವನ ನಡೆಸಲು ಕೆಲವು ವಿಶಿಷ್ಟ ನಿಯಮಗಳನ್ನು ರೂಪಿಸಿಕೊಂಡಿರುವ ಸನ್ಯಾಸಿಗಳು
೩. ಎಲ್ಲ ಕಟ್ಟಳೆಗಳಿಂದ ಮುಕ್ತರಾದ ಸನ್ಯಾಸಿಗಳು
೪. ತಮ್ಮ ಜಟೆಯನ್ನು ಸುತ್ತಿ ಕಟ್ಟಿಕೊಳ್ಳುವ ಸನ್ಯಾಸಿಗಳು
೫. ಸಮಾಜದಿಂದ ತಪ್ಪಿಸಿಕೊಂಡ ಸನ್ಯಾಸಿಗಳು
* ವ್ರತಿಕರೆಂದರೆ ಪೂಜಕರು, ಭಕ್ತರು ಎಂದರ್ಥ
೬ ಆನೆ
೭. ಕುದುರೆ
೮. ಹಸು
೯. ನಾಯಿ
೧೦. ಕಾಗೆ

| ಕ್ರ.ಸಂ. | ಪಂಥಗಳ ಹೆಸರು | ಆರಾಧಿಸಲ್ಪಟ್ಟ ದೈವ |
|---|---|---|
| ೧೧ | ನಾಗ ವ್ರತಿಕರು | ನಾಗ |
| ೧೨ | ಸುಪರ್ಣ ವ್ರತಿಕರು | ಸುಪರ್ಣ |
| ೧೩ | ಯಕ್ಷ ವ್ರತಿಕರು | ಯಕ್ಷ |
| ೧೪ | ಅಸುರ ವ್ರತಿಕರು | ಅಸುರ |
| ೧೫ | ಗಂಧರ್ವ ವ್ರತಿಕರು | ಗಂಧರ್ವ |
| ೧೬ | ಮಹಾರಾಜ ವ್ರತಿಕರು | ಮಹಾರಾಜ |
| ೧೭ | ಚಂದ್ರ ವ್ರತಿಕರು | ಚಂದ್ರ |
| ೧೮ | ಸೂರ್ಯ ವ್ರತಿಕರು | ಸೂರ್ಯ |
| ೧೯ | ಇಂದ್ರ ವ್ರತಿಕರು | ಇಂದ್ರ |
| ೨೦ | ಬ್ರಹ್ಮ ವ್ರತಿಕರು | ಬ್ರಹ್ಮ |
| ೨೧ | ದೇವ ವ್ರತಿಕರು | ದೇವ |
| ೨೨ | ದಿಶಾ ವ್ರತಿಕರು | ದಿಶಾ |

ಸೂರ್ಯ ಮತ್ತು ಇಂದ್ರರ ಆರಾಧನೆಯು ಚುಲ್ಲ-ನಿದ್ದೇಶದ ಕಾಲದವರೆಗೂ ಮುಂದುವರೆಯಿತು. ೨. ಅಗ್ನಿ, ಸೂರ್ಯ ಮತ್ತು ಇಂದ್ರರ ಪಂಥಗಳು ನಿಂತಿರಲಿಲ್ಲವಾದರೂ ಅವುಗಳ ಪ್ರಾಮುಖ್ಯತೆ ಕಡಿಮೆಯಾಗಿತ್ತು. ಇತರ ಮತ್ತು ಅಸಂಖ್ಯಾತ ಪಂಥಗಳು ಇವುಗಳ ವಿರುದ್ಧ ಅಸ್ತಿತ್ವಕ್ಕೆ ಬಂದಿದ್ದು ಜನತೆಯ ಆದರ ಗಳಿಸಿಕೊಂಡಿದ್ದುವು. ೩. ಹೊಸ ಪಂಥಗಳ ಪೈಕಿ ಎರಡು ಅನಂತರ ಬಹಳ ಪ್ರಾಮುಖ್ಯತೆ ಪಡೆದವು. ಅವೆಂದರೆ ವಾಸುದೇವ (ಕೃಷ್ಣ) ಮತ್ತು ಬ್ರಹ್ಮರ ಪಂಥಗಳು ಮತ್ತು ೪. ವಿಷ್ಣು, ಶಿವ ಮತ್ತು ರಾಮ ಇವರ ಪಂಥಗಳು ಇನ್ನೂ ಹುಟ್ಟಿರಲಿಲ್ಲ.

ಚುಲ್ಲ – ನಿದ್ದೇಶದಲ್ಲಿ ಕಾಣುವ ಸ್ಥಾನಕ್ಕೂ ಈಗಿನ ಸ್ಥಾನಕ್ಕೂ ಇರುವ ವ್ಯತ್ಯಾಸವೇನು? ಇಲ್ಲಿಯೂ ಸಹ ಮೂರು ಸ್ಪಷ್ಟ ನಿರ್ಣಯಗಳನ್ನು ಪ್ರತಿಪಾದಿಸಬಹುದು. ಮೊದಲನೆಯದು: ಅಗ್ನಿ, ಇಂದ್ರ, ಬ್ರಹ್ಮ ಮತ್ತು ಸೂರ್ಯರ ಪಂಥಗಳು ಕಣ್ಮರೆಯಾಗಿವೆ, ಎರಡನೆಯದು: ಕೃಷ್ಣನು ತನ್ನ ಸ್ಥಾನವನ್ನು ಉಳಿಸಿಕೊಂಡಿದ್ದಾನೆ, ಮೂರನೆಯದು: ವಿಷ್ಣು, ಶಿವ ಮತ್ತು ರಾಮರ ಪಂಥಗಳು ಚುಲ್ಲ – ನಿದ್ದೇಶದ ಕಾಲದ ನಂತರ ಅಸ್ತಿತ್ವಕ್ಕೆ ಬಂದಿವೆ. ಇದನ್ನು ಒಪ್ಪಿಕೊಂಡರೆ, ಮೂರು ಪರಿಶೀಲನಾರ್ಹ ಪ್ರಶ್ನೆಗಳು ಹುಟ್ಟುತ್ತವೆ. ಅಗ್ನಿ, ಇಂದ್ರ, ಬ್ರಹ್ಮ ಮತ್ತು ಸೂರ್ಯರ ಪಂಥಗಳು ಕಣ್ಮರೆಯಾದುವೇಕೆ? ಈ ದೇವತೆಗಳ ಆರಾಧನೆಯನ್ನು ಕೈಬಿಟ್ಟುದುದೇಕೆ? ಎಂಬುದು ಮೊದಲನೆಯ ಪ್ರಶ್ನೆ. ಕೃಷ್ಣ, ರಾಮ, ಶಿವ ಮತ್ತು ವಿಷ್ಣು ಇವರುಗಳ ಪಂಥಗಳಿಗೆ ಎಡೆಮಾಡಿಕೊಟ್ಟಂತಹ ಸಂದರ್ಭಗಳಾವುವು? ಎಂಬುದು ಎರಡನೆಯ ಪ್ರಶ್ನೆ. ಕೃಷ್ಣ, ರಾಮ, ಶಿವ ಮತ್ತು ವಿಷ್ಣು ಇವರುಗಳ ಸ್ಥಾನಮಾನಗಳಲ್ಲಿ ಏನಾದರೂ ತಾರತಮ್ಯವಿದೆಯೆ? ಎಂಬುದು ಮೂರನೆಯದು.

ಮೊದಲನೆಯ ಪ್ರಶ್ನೆಗೆ ನಮಗೆ ಉತ್ತರ ಸಿಗಲಾರದು. ಬ್ರಾಹ್ಮಣರು ಅಗ್ನಿ, ಇಂದ್ರ, ಸೂರ್ಯ

ಮತ್ತು ಬ್ರಹ್ಮರ ಆರಾಧನೆಯನ್ನು ತ್ಯಜಿಸಿದ್ದೇಕೆಂಬುದಕ್ಕೆ ಬ್ರಾಹ್ಮಣ ಸಾಹಿತ್ಯವು ಯಾವೊಂದು ಸುಳಿವನ್ನೂ ಕೊಡುವುದಿಲ್ಲ. ಬ್ರಹ್ಮನ ಪಂಥ ಕಣ್ಮರೆಯಾದುದಕ್ಕೇನೋ ಒಂದು ಸ್ಪಷ್ಟೀಕರಣ ಸಿಕ್ಕುತ್ತದೆ. ಬ್ರಹ್ಮನ ವಿರುದ್ಧ ಮಾಡಲಾಗಿರುವ ಆರೋಪದ ಮೇಲೆ ನಿಂತಿರುವ ಈ ಸ್ಪಷ್ಟೀಕರಣವು ಬ್ರಾಹ್ಮಣ ಸಾಹಿತ್ಯದಲ್ಲಿ ಲಭ್ಯವಾಗುತ್ತದೆ. ಈ ಆರೋಪದ ಪ್ರಕಾರ, ಬ್ರಹ್ಮನು ತನ್ನ ಮಗಳೊಂದಿಗೆ ಬಲಾತ್ಕಾರ ಸಂಭೋಗ ಮಾಡಿದ ಕಾರಣ ಅವನು ಪೂಜೆ ಮತ್ತು ಭಕ್ತಿಗೆ ಅಯೋಗ್ಯನಾದನು. ಈ ಆರೋಪದಲ್ಲಿರುವುದು ಸತ್ಯವೇ ಇರಲಿ, ಅಸತ್ಯವೇ ಇರಲಿ, ಬ್ರಹ್ಮನ ಆರಾಧನೆಯನ್ನು ಕೈಬಿಡಲು ಇದೊಂದೇ ಸಾಕಷ್ಟು ಪ್ರಬಲವಾದ ಕಾರಣವಾಗಿರಲಾರದು. ಹೀಗೆ ಹೇಳಲು ಎರಡು ಕಾರಣಗಳಿವೆ. ಮೊದಲನೆಯದಾಗಿ, ಆ ಕಾಲದಲ್ಲಿ ಅಂತಹ ವರ್ತನೆ ಅಪರೂಪದ್ದೇನಾಗಿರಲಿಲ್ಲ. ಎರಡನೆಯದಾಗಿ, ಬ್ರಹ್ಮನ ಮೇಲಿನ ಆಪಾದನೆಗಿಂತ ಕೃಷ್ಣನ ಮೇಲೆ ಹೊರಿಸಿರುವ ಆಪಾದನೆಗಳು ಇನ್ನೂ ಹೆಚ್ಚು ಅನೈತಿಕವಾಗಿವೆ. ಆದರೂ ಜನರು ಅವನನ್ನು ಆರಾಧಿಸುತ್ತಲೇ ಬಂದಿದ್ದಾರೆ.

ಬ್ರಹ್ಮನ ಆರಾಧನೆಯನ್ನು ಕೈಬಿಡಲು ಕೆಲವು ಕಾರಣಗಳನ್ನು ಊಹಿಸಬಹುದಾದರೂ ಉಳಿದವರ ಆರಾಧನೆಯನ್ನು ಕೈಬಿಡಲು ಯಾವ ಕಾರಣಗಳೂ ಹೇಳಲ್ಪಟ್ಟಿಲ್ಲ. ಹೀಗೆ ಅಗ್ನಿ, ಸೂರ್ಯ, ಇಂದ್ರ ಮತ್ತು ಬ್ರಹ್ಮರು ಕಾಣೆಯಾದುದು ಒಂದು ಒಗಟೇ ಸರಿ. ಈ ಒಗಟನ್ನು ಬಿಡಿಸಲು ಇದು ಸೂಕ್ತ ಸ್ಥಳವಲ್ಲ. ಇಷ್ಟು ಹೇಳಿದರೆ ಸಾಕು. ಹಿಂದೂ ದೈವಗಳು ದೈವಗಳಾಗಿ ಉಳಿಯಲಿಲ್ಲ. ಎಂಥ ದುರಾದೃಷ್ಟ!

ಎರಡನೆಯ ಸಮಸ್ಯೆಯೂ ನಿಗೂಢತೆಯಿಂದ ಆವರಿಸಿದೆ. ಕೃಷ್ಣ, ವಿಷ್ಣು, ಶಿವ ಮತ್ತು ರಾಮ ಈ ಹೊಸ ದೇವರುಗಳ ಪಂಥಗಳ ಪ್ರಾಮುಖ್ಯತೆಯನ್ನು ಸಾರುವ ವಿವರಣೆಗಳು ಬ್ರಾಹ್ಮಣರ ಸಾಹಿತ್ಯದಲ್ಲಿ ತುಂಬಿ ತುಳುಕುತ್ತವೆ. ಆದರೆ ಈ ಹೊಸ ದೈವಗಳು ಹೇಗೆ ಉದ್ಭವಿಸಿದವು ಎಂಬುದಕ್ಕೆ ಬ್ರಾಹ್ಮಣರ ಸಾಹಿತ್ಯದಲ್ಲಿ ಯಾವ ವಿವರಣೆಯೂ ಇಲ್ಲ. ಆದುದರಿಂದ ಈ ಹೊಸ ದೈವಗಳನ್ನು ಕ್ರಿಯಾಶೀಲರನ್ನಾಗಿ ಮಾಡಿದ್ದೇಕೆ ಎಂಬುದು ಒಂದು ರಹಸ್ಯವೇ ಸರಿ. ಈ ದೈವಗಳ ಪೈಕಿ ಕೆಲವರು ಖಂಡಿತವಾಗಿಯೂ ವೇದ ವಿರೋಧಿಗಳಾಗಿದ್ದರು ಎಂಬುದನ್ನು ತಿಳಿದರೆ ಈ ರಹಸ್ಯವು ಇನ್ನೂ ಗಾಢವಾಗುತ್ತವೆ.

ಶಿವನ ಉದಾಹರಣೆಯನ್ನೇ ತೆಗೆದುಕೊಳ್ಳೋಣ.

ಶಿವನ ಮೊದಲು ವೇದ ವಿರೋಧಿಯಾಗಿದ್ದನೆಂಬುದು ಸಾಕಷ್ಟು ಸ್ಪಷ್ಟವಿದೆ. ಭಾಗವತ ಪುರಾಣದಲ್ಲಿ (ಮತ್ತು ಮಹಾಭಾರತದಲ್ಲಿ) ಉಕ್ತವಾಗಿರುವ ಈ ಎರಡು ಘಟನೆಗಳು ಈ ವಿಷಯದ ಮೇಲೆ ಬೆಳಕನ್ನು ಚೆಲ್ಲುತ್ತವೆ. ಮೊದಲನೆ ಘಟನೆಯು ಶಿವ ಮತ್ತು ಅವನ ಮಾವ ದಕ್ಷ ಇವರ ಮಧ್ಯೆ ವೈರ ಹೇಗೆ ಬೆಳೆಯಿತು ಎಂಬುದನ್ನು ತೋರಿಸುತ್ತದೆ. ಪ್ರಜಾಪತಿಗಳು ಮಾಡುತ್ತಿದ್ದ ಯಜ್ಞವೊಂದರಲ್ಲಿ ದೇವತೆಗಳೂ ಋಷಿಗಳೂ ಉಪಸ್ಥಿತರಿದ್ದರು. ದಕ್ಷ ಪ್ರವೇಶಿಸಿದ ಕೂಡಲೇ ಅಲ್ಲಿ ನೆರೆದಿದ್ದ ಎಲ್ಲ ಮಹನೀಯರೂ ಅವನಿಗೆ ನಮಸ್ಕರಿಸಲು ಎದ್ದು ನಿಂತರು. ಆದರೆ ಬ್ರಹ್ಮ ಮತ್ತು ಶಿವ ಎದ್ದು ನಿಲ್ಲಲಿಲ್ಲ. ದಕ್ಷನು ಬ್ರಹ್ಮನಿಗೆ ಪ್ರಣಾಮಗಳನ್ನು ಸಲ್ಲಿಸಿದಾಗ, ಬ್ರಹ್ಮನು ಅವನಿಗೆ ಕುಳಿತುಕೊಳ್ಳುಂತೆ ಹೇಳಿದನು. ಆದರೆ ದಕ್ಷನು ಶಿವನ ವರ್ತನೆಯಿಂದ ಕುಪಿತನಾದನು. ಆಗ ಅವನು ಶಿವನನ್ನು ಸಂಬೋಧಿಸಿ ಹೇಗೆ ಹೇಳಿದನು.[೧]

---

೧. 'ಭಾಗವತ ಪುರಾಣ', ಅಧ್ಯಾಯ IV. ಪು. ೩೭೯–೮೦ರಿಂದ ಉದ್ಧೃತ

"ಮೃಡ(ಶಿವ)ನು ಇನ್ನೂ ಕುಳಿತೇ ಇದ್ದುದನ್ನು ನೋಡಿದ ದಕ್ಷನಿಗೆ ಈ ಅವಮಾನವನ್ನು ಸಹಿಸಲಾಗಲಿಲ್ಲ. ಕಡೆಗಣ್ಣಿನಿಂದಲೇ ಅವನನ್ನು ಸುಟ್ಟುಬಿಡುವಂತೆ ನೋಡುತ್ತಾ, ಅವನು (ದಕ್ಷನು) ಹೀಗೆ ಹೇಳಿದನು: 'ಇಲ್ಲಿ ಕೇಳಿ, ಬ್ರಾಹ್ಮಣ ಋಷಿಗಳೇ, ದೇವತೆಗಳೇ ಮತ್ತು ಅಗ್ನಿಗಳೇ! ನಾನು ಶಿಷ್ಟಾಚಾರವನ್ನು ವರ್ಣಿಸುತ್ತಿರುವುದು ಅಜ್ಞಾನದಿಂದಾಗಲಿ ಭಾವೋದ್ರೇಕದಿಂದಾಗಲಿ ಅಲ್ಲ. ವಿಶ್ವದ ಧರ್ಮರಕ್ಷಕರು ಹೇಳಿದ ಸರ್ವಸಮ್ಮತವಾದ ಆಚರಣೆಯಿಂದ ಈ ನಾಚಿಕೆಗೇಡಿ (ಶಿವ) ದೂರ ಹೋಗಿದ್ದಾನೆ. ಈ ಮೊಂಡುತನದ ಶಿವನು ಶಿಷ್ಟರ ಪಥವನ್ನು ಉಲ್ಲಂಘಿಸಿದ್ದಾನೆ. ಅವನು ಈ ಮೊದಲು ಶಿಷ್ಯನಂತೆ ವರ್ತಿಸಿ, ನನ್ನ ಶಿಷ್ಯನಾಗಿ, ಬ್ರಾಹ್ಮಣರ ಮತ್ತು ಅಗ್ನಿಸಾಕ್ಷಿಯಾಗಿ, ಸಾವಿತ್ರಿಯನ್ನು ಹೋಲುವ ನನ್ನ ಮಗಳ ಕೈಹಿಡಿದ. ಈ ಮಂಗನ ಕಣ್ಣಿನ ದೇವನು ಕಂದು ಬಣ್ಣದ ಕಣ್ಣಿನ ನನ್ನ ಮಗಳ ಕೈಹಿಡಿದ ಮೇಲೆ, ನನಗೆ ಸಲ್ಲಬೇಕಾದ ಸೂಕ್ತ ಮರ್ಯಾದೆಯನ್ನು ಸಲ್ಲಿಸಿಲ್ಲ. (ನಾನು ಇಲ್ಲಿ ಬಂದಾಗ) ಅವನು ಎದ್ದು ನಿಂತು ನಮಸ್ಕರಿಸಬೇಕಿತ್ತು. ನನಗೆ ಮನಸ್ಸಿಲ್ಲದಿದ್ದರೂ ಈ ಅಶುದ್ಧನಿಗೆ, ಕರ್ಮಗಳನ್ನು ಮಾಡದವನಿಗೆ, ಸಂಪ್ರದಾಯದ ಎಲ್ಲೆಯನ್ನು ಮೀರಿದವನಿಗೆ, ನನ್ನ ಮಗಳನ್ನು ಕೊಟ್ಟೆ, ಶೂದ್ರನಿಗೆ ವೇದಶಬ್ದವನ್ನು ಕೊಡುವಂತೆ. ಅವನು ದೆವ್ವ ಪಿಶಾಚಗಳ ಜೊತೆಯಲ್ಲಿ ಹುಚ್ಚನಂತೆ, ಬತ್ತಲೆಯಾಗಿ, ತಲೆ ಕೆದರಿಕೊಂಡು, ನಗುತ್ತಾ, ಅಳುತ್ತಾ, ಸ್ಮಶಾನದ ಬೂದಿಯನ್ನು ಬಳಿದುಕೊಂಡು, ರುಂಡಮಾಲೆಯನ್ನು ಧರಿಸಿ, ಮಾನವರ ಅಸ್ಥಿಯನ್ನೇ ಆಭರಣಗಳ ಮಾಲೆಯನ್ನಾಗಿ ಮಾಡಿಕೊಂಡು, ಶಿವ(ಶುಭ)ನೆಂದು ನಟಿಸುತ್ತಾ (ಆದರೆ ನಿಜವಾಗಿಯೂ ಅಶಿವನಾಗಿರುವ), ಹುಚ್ಚನಾಗಿರುವ, ಹುಚ್ಚರಿಂದ ಪ್ರೀತಿಸಲ್ಪಟ್ಟ, ಭೂತ ಗಣಾಧೀಶನಾದ, ಕರಿಯ ಬಣ್ಣದ ಈತ ಯಾವಾಗಲೂ ಭಯಂಕರ ಸುಡುಗಾಡುಗಳಲ್ಲೇ ತಿರುಗಾಡುತ್ತಿರುತ್ತಾನೆ. ಅಯ್ಯೋ, ಈ ದುಷ್ಟ ಹೃದಯಿಗೆ, ಮುಂಗೋಪಿಗೆ, ಶುದ್ಧತೆಯನ್ನು ಕಳೆದುಕೊಂಡವನಿಗೆ, ಬ್ರಹ್ಮನ ಮಾತು ಕೇಳಿ ನಾನು ನನ್ನ ಶಿಷ್ಟ ಮಗಳನ್ನು ಕೊಟ್ಟಿದ್ದೇನೆ. ಈ ರೀತಿ ಗಿರೀಶ(ಶಿವ)ನನ್ನು ಹೀಯಾಳಿಸಿದ ದಕ್ಷನು ಯಾವುದೇ ರೀತಿಯ ಪ್ರತಿಭಟನೆ ತೋರಿಸದ ಶಿವನ ಮೇಲೆ ನೀರನ್ನು ಎರಚಿ ಈ ರೀತಿ ಶಾಪ ಕೊಡಲು ಪ್ರಾರಂಭಿಸಿದ: 'ದೇವತೆಗಳಲ್ಲೇ ನಿಕೃಷ್ಟವಾದ ಈ ಭವ(ಶಿವ)ನಿಗೆ, ದೇವತಾರಾಧನೆಯಲ್ಲಿ, ಇಂದ್ರ, ಉಪೇಂದ್ರ (ವಿಷ್ಣು), ಮತ್ತಿತರರಿಗೆ ಸಲ್ಲುವ ಅರ್ಪಣೆಯ ಯಾವುದೇ ಭಾಗ ಸಿಗದಿರಲಿ'. ಹೀಗೆ ಶಾಪವನ್ನು ಕೊಟ್ಟ ದಕ್ಷನು ಅಲ್ಲಿಂದ ಹೊರಟುಹೋದನು."

ಆಗಿನಿಂದ ಮಾವ ಅಳಿಯರ ವೈರ ಮುಂದುವರಿಯಿತು. ಬ್ರಹ್ಮನು ದಕ್ಷನನ್ನು ಪ್ರಜಾಪತಿಗಳ ಮುಖಂಡನನ್ನಾಗಿ ಮಾಡಿದ ಮೇಲೆ, ಒಮ್ಮೆ ದಕ್ಷನು ಬೃಹಸ್ಪತಿಸವ ಎಂಬ ಮಹಾಯಜ್ಞವನ್ನು ಮಾಡಲು ನಿರ್ಧರಿಸಿದನು. ಉಳಿದ ದೇವತೆಗಳ ಪತ್ನಿಯರು ಆ ಯಜ್ಞಕ್ಕೆ ಹೋಗುತ್ತಿರುವುದನ್ನು ನೋಡಿದ ಪಾರ್ವತಿಯು ತನ್ನನ್ನೂ ಅಲ್ಲಿಗೆ ಕರೆದುಕೊಂಡು ಹೋಗಲು ತನ್ನ ಗಂಡ ಶಿವನನ್ನು ಒತ್ತಾಯಿಸತೊಡಗಿದಳು. ಆಗ ಶಿವನು ಅವಳ ತಂದೆ ಬೈದುದನ್ನು ಪ್ರಸ್ತಾಪಿಸಿ, ಅಲ್ಲಿಗೆ ಹೋಗದಿರುವಂತೆ ಅವಳಿಗೆ ಉಪದೇಶಿಸುತ್ತಾನೆ. ಆದರೂ ಆಕೆ ತನ್ನ ಸಂಬಂಧಿಗಳನ್ನು ನೋಡುವ ಸಡಗರದಿಂದ ಶಿವನ ಮಾತುಗಳನ್ನು ನಿರ್ಲಕ್ಷಿಸಿ ಅಲ್ಲಿಗೆ ಹೋಗುತ್ತಾಳೆ. ಆದರೆ ತಂದೆ ದಕ್ಷನನ್ನು ನೋಡಿದ ಆಕೆ ತನ್ನ ಗಂಡನನ್ನು ಅಪಮಾನಿಸಿದ್ದಕ್ಕಾಗಿ ತನ್ನ ತಂದೆಯನ್ನೇ ದೂಷಿಸುತ್ತಾಳೆ. ಅಷ್ಟೇ ಅಲ್ಲ. 'ನನಗೆ ದೇಹವನ್ನು ಕೊಟ್ಟಿದ್ದಕ್ಕಾಗಿ ನಾನೂ ನೀನೂ ಸಂಬಂಧಿಗಳಾಗಿದ್ದೇವೆ. ನಾನು ಈ ದೇಹವನ್ನೇ ತೊರೆಯುತ್ತೇನೆ' ಎಂದು ಹೆದರಿಸುತ್ತಾಳೆ. ಅದರಂತೆ ಆಕೆ ಪ್ರಾಣ ಬಿಡುತ್ತಾಳೆ. ಅವಳನ್ನು ಹಿಂಬಾಲಿಸಿಕೊಂಡು ಬಂದಿದ್ದ ಶಿವನ ಅನುಚರರು ಇದನ್ನು ನೋಡಿ ದಕ್ಷನನ್ನು ಕೊಲ್ಲಲು ಮುನ್ನುಗ್ಗುತ್ತಾರೆ. ಆದರೆ

ಭೃಗುವು ಯಜ್ಞನಾಶಕರನ್ನು ನಾಶಪಡಿಸಲು ಸೂಕ್ತವಾದ ಯಜುರ್ವೇದದ ಮಂತ್ರವನ್ನು ಪಠಿಸುತ್ತಾ ದಕ್ಷಿಣಾಗ್ನಿಗೆ ಹವಿಸ್ಸನ್ನರ್ಪಿಸಿದನು (ಯಜ್ಞಘ್ನೇನ ಯಜುಷಾ ದಕ್ಷಿಣಾಗೌ ಜುವಾವಃ). ಇದರಿಂದ ರಿಭುಗಳ ತಂಡ ಉದ್ಭವಿಸಿ ಶಿವನ ಅನುಚರರನ್ನು ಓಡಿಸಿದರು. ಶಿವನು ಸತಿಯು (ಪಾರ್ವತಿಯು) ಸತ್ತ ಸುದ್ದಿಯನ್ನು ಕೇಳಿ (ವಿಭಾಗ ೫) ಕುಪಿತನಾಗುತ್ತಾನೆ. ಅವನ ಜಡೆಯ ಒಂದು ಭಾಗವನ್ನು ಕಿತ್ತಾಗ, ಅದರಿಂದ ಅದ್ಭುತಾಕಾರದ ರಾಕ್ಷಸನೊಬ್ಬ ಪ್ರತ್ಯಕ್ಷನಾದ. ಶಿವನು ಅವನಿಗೆ ದಕ್ಷನನ್ನೂ ಅವನ ಯಜ್ಞವನ್ನೂ ನಾಶಮಾಡುವಂತೆ ಆಜ್ಞಾಪಿಸಿದ. ಆ ರಾಕ್ಷಸನು ಶಿವಗಣದೊಂದಿಗೆ ಮುನ್ನುಗ್ಗಿ ಶಿವನ ಆಜ್ಞೆಯನ್ನು ನೆರವೇರಿಸುತ್ತಾನೆ. ಅವರು ಹೇಗೆ ಶಿವನ ಆಜ್ಞೆಯನ್ನು ನೆರವೇರಿಸಿದರು ಎಂಬುದನ್ನು ಭಾಗವತ ಪುರಾಣದಲ್ಲಿ[೧] ಈ ಕೆಳಗಿನಂತೆ ವರ್ಣಿಸಲಾಗಿದೆ:

"ಕೆಲವರು ಯಜ್ಞದ ಮಡಕೆಗಳನ್ನು ಒಡೆದರು; ಕೆಲವರು ಬೆಂಕಿಯನ್ನು ಆರಿಸಿದರು; ಕೆಲವರು ಅಲ್ಲಿಯ ಕೊಳದಲ್ಲಿ ಮೂತ್ರ ವಿಸರ್ಜಿಸಿದರು; ಕೆಲವರು ಯಜ್ಞಕ್ಷೇತ್ರದ ಗಡಿನೂಲನ್ನು ಕತ್ತರಿಸಿದರು; ಕೆಲವರು ಮುನಿಗಳನ್ನು ಹೊಡೆದರು; ಕೆಲವರು ಅವರ ಹೆಂಡತಿಯರನ್ನು ಅಸಹ್ಯವಾಗಿ ಬೈದರು; ಕೆಲವರು ಅಲ್ಲಿದ್ದ ದೇವತೆಗಳನ್ನು ಬಂಧಿಸಿದರು; ಓಡಿಹೋದ ಕೆಲವರು.... ೧೯. ಭವ (ಶಿವ) ದೇವನು ಸೃಕ್ಕಿನಿಂದ ಅರ್ಘ್ಯವನ್ನು ಅರ್ಪಿಸುತ್ತಿದ್ದ ಹಾಗೂ ಸಭೆಯಲ್ಲಿ ತನ್ನ ಗಡ್ಡದ ಪ್ರದರ್ಶನ ಮಾಡಿ ನಕ್ಕಿದ್ದ ಭೃಗುವಿನ ಗಡ್ಡವನ್ನು ಕಿತ್ತನು; ಭಗ ಎಂಬುವನನ್ನು ನೆಲಕ್ಕೆ ಬೀಳಿಸಿ, ಅವನ ಕಣ್ಣನ್ನು ಕಿತ್ತನು (ಈ ಭಗನೇ ದಕ್ಷನು ಶಿವನನ್ನು ಶಪಿಸುತ್ತಿದ್ದಾಗ ದಕ್ಷನಿಗೆ ಏನೋ ಕಣ್ಸನ್ನೆ ಮಾಡಿದ್ದ). ಅಲ್ಲದೆ, ಬಲನು ಕಳಿಂಗ ರಾಜನ ಹಲ್ಲು ಮುರಿದಂತೆ, ಶಿವನು ಪೂಷನ್ನನ ಹಲ್ಲು ಮುರಿದನು. (ಏಕೆಂದರೆ, ದಕ್ಷನು ಮಹಾದೇವನನ್ನು ಶಪಿಸುತ್ತಿದ್ದಾಗ ಈ ಪೂಷನ್ ಹಲ್ಲು ಕಿರಿದು ನಕ್ಕಿದ್ದ). ತ್ರ್ಯಂಬಕನು (ಶಿವನು ಅಥವಾ ಭಾಷ್ಯಕಾರನು ಹೇಳುವಂತೆ, ವೀರಭದ್ರನು), ಬಹಳ ಸೆಣಸಾಟದ ನಂತರ ದಕ್ಷನ ತಲೆಯನ್ನು ಕಡಿದನು. ಇವೆಲ್ಲವನ್ನೂ ದೇವತೆಗಳು ಸ್ವಯಂಭುವಿಗೆ ವಿಷ್ಣುವಿನ ಜೊತೆ ಅನುಪಸ್ಥಿತನಿದ್ದ (ಬ್ರಹ್ಮನಿಗೆ) ತಿಳಿಸಿದರು (ವಿಭಾಗ ೬). ಯಜ್ಞದಲ್ಲಿ ಶಿವನಿಗೆ ಕೊಡಬೇಕಾದ ಪಾಲನ್ನು ದೇವತೆಗಳು ಅಜ್ಞಾನದಿಂದ ಕೊಟ್ಟಿರಲಿಲ್ಲ. ಆದ್ದರಿಂದ ಬ್ರಹ್ಮನು ಶಿವನನ್ನು ಪ್ರಸನ್ನಗೊಳಿಸಬೇಕೆಂದು ದೇವತೆಗಳಿಗೆ ಹೇಳುತ್ತಾನೆ. ಆಗ ದೇವತೆಗಳು ಅಜನನ್ನೆ (ಬ್ರಹ್ಮನನ್ನೆ) ಮುಂದುಮಾಡಿಕೊಂಡು ಕೈಲಾಸಕ್ಕೆ ಹೊರಡುತ್ತಾರೆ. 'ಭಕ್ತರಿಗೆ ಇಷ್ಟವಾದ ಲಿಂಗವನ್ನು ಧರಿಸಿ, ಭಸ್ಮವನ್ನು ಪೂಸಿಕೊಂಡು, ದಂಡಪಾಣಿಯಾಗಿ, ಜಟಾಧಾರಿಯಾಗಿ, ಜಿಂಕೆಯ ಚರ್ಮವನ್ನು ಧರಿಸಿ, ತಲೆಯಲ್ಲಿ ಅರ್ಧಚಂದ್ರ ಧರಿಸಿದ್ದ ಶಿವನ ದೇಹವು ಸಂಜೆಯ ಮೋಡದಂತೆ ಶಾಂತಿಯಿಂದ ಕೂಡಿತ್ತು'. ಬ್ರಹ್ಮನು ಮಹಾದೇವನನ್ನು ಹೀಗೆ ಸಂಬೋಧಿಸುತ್ತಾನೆ: 'ಅನಂತಬ್ರಹ್ಮನೇ, ಜಗಜ್ಜನನಿಯಾದ ಶಕ್ತಿಯ ಮತ್ತು ಜನಕನಾದ ಶಿವನ ಪ್ರಭುವೇ, ಯಾರಲ್ಲಿ ಶಿವ ಮತ್ತು ಶಕ್ತಿ ಒಂದಾಗಿ, ಜೇಡದೋಪಾದಿಯಲ್ಲಿ ಜಗತ್ತಿನ ಎಲ್ಲ ವಸ್ತುಗಳನ್ನೂ ಸೃಷ್ಟಿಸಿ, ಸ್ಥಿತಿ ಮತ್ತು ಲಯಗಳಿಗೆ ಒಳಪಡಿಸುತ್ತಾರೋ, ಅಂತಹ ಪರಶಿವನೇ! (ಇಂತಹ ಸಂಬೋಧನೆಯನ್ನು ವಿಭಾಗ ೭ರಲ್ಲಿ ವಿಷ್ಣುವಿಗೂ ಮಾಡಲಾಗಿದೆ.) ಬ್ರಹ್ಮನು ಮುಂದುವರಿದು ಹೀಗೆ ಹೇಳುತ್ತಾನೆ: ಈ ಮಹಾದೇವನೇ ಯಜ್ಞವನ್ನೂ, ಬ್ರಾಹ್ಮಣರು ಪಾಲಿಸುವ ನಿಯಮಗಳನ್ನೂ ಸ್ಥಾಪಿಸಿದ್ದಾನೆ. ಅವನು ಮಾಯೆಗೆ (ಭ್ರಮೆಗೆ) ಅತೀತನೆಂದೂ, ಆದರೆ ಭ್ರಮೆಗೆ ಒಳಗಾಗಿ, ಯಾಜ್ಞಿಕ ಕರ್ಮಗಳೇ ಮುಖ್ಯವೆಂದು ತಿಳಿದು ಆಚರಿಸುವವರಿಗೆ

---

೧. ಮ್ಯೂರ್, IV. ಪು. ೩೮೩–೮೪ರಿಂದ ಉದ್ಧೃತ

ದಯೆ ತೋರಿಸಬೇಕೆಂದೂ, ಯಾವ ದಕ್ಷನ ಯಜ್ಞದಲ್ಲಿ ಅವನಿಗೆ ಪಾಲನ್ನು ಕೊಡಲು ದುಷ್ಟ ಪುರೋಹಿತರು ನಿರಾಕರಿಸಿದ್ದರೋ ಆ ಯಜ್ಞವನ್ನು ಪುನಃ ಸ್ಥಾಪನೆ ಮಾಡಬೇಕೆಂದೂ ವಿನಂತಿಸಿಕೊಂಡರು. ಮಹಾದೇವನು ಅವರಿಗೆ ಆಂಶಿಕವಾಗಿ ದಯೆ ತೋರಿದನು (ವಿಭಾಗ ೭)."

ಶಿವನು ವೇದ ವಿರೋಧಿಯೆಂದು ಸಿದ್ಧಪಡಿಸಲು ಅವನ ದಕ್ಷಯಜ್ಞ ನಾಶಕ್ಕಿಂತ ಹೆಚ್ಚಿನ ಆಧಾರಗಳು ಇರಲಾರವು.

ಈಗ ಕೃಷ್ಣನ ಉದಾಹರಣೆಯನ್ನು ತೆಗೆದುಕೊಳ್ಳೋಣ.

ಕೃಷ್ಣ ಎಂಬ ಹೆಸರು ನಾಲ್ಕು ಜನಕ್ಕೆ ಅನ್ವಯಿಸುತ್ತದೆ. ಒಬ್ಬ ಕೃಷ್ಣನು ಸತ್ಯವತಿಯ ಮಗ ಮತ್ತು ಧೃತರಾಷ್ಟ್ರ, ಪಾಂಡು ಮತ್ತು ವಿದುರರ ತಂದೆ. ಎರಡನೆಯ ಕೃಷ್ಣ ಸುಭದ್ರಳ ಅಣ್ಣ ಮತ್ತು ಅರ್ಜುನನ ಸಖ. ಮಥುರಾವಾಸಿಯಾಗಿದ್ದ ಮೂರನೆಯ ಕೃಷ್ಣನು ದೇವಕಿ ಮತ್ತು ವಸುದೇವರ ಮಗನಾಗಿದ್ದ. ನಾಲ್ಕನೆಯ ಕೃಷ್ಣನೆಂದರೆ, ಗೋಕುಲದಲ್ಲಿ ನಂದ ಮತ್ತು ಯಶೋದೆಯರ ಪಾಲನೆಯಲ್ಲಿ ಬೆಳೆದು ದೊಡ್ಡವನಾದ ಮೇಲೆ ಶಿಶುಪಾಲನನ್ನು ಕೊಂದವನು. ಕೃಷ್ಣಪಂಥದ ಕೃಷ್ಣನೂ, ದೇವಕಿಯ ಮಗನಾದ ಕೃಷ್ಣನೂ ಒಂದೇ ಆಗಿದ್ದರೆ, ಕೃಷ್ಣನೂ ಸಹ ಮೊದಲು ಖಂಡಿತವಾಗಿಯೂ ವೇದ ವಿರೋಧಿಯಾಗಿದ್ದನೆಂದು ಹೇಳಬೇಕಾಗುತ್ತದೆ. ಪ್ರಾಯಶಃ ಅವನು ಘೋರ ಆಂಗೀರಸನ ಶಿಷ್ಯನಾಗಿದ್ದನೆಂಬುದು 'ಛಾಂದೋಗ್ಯ ಉಪನಿಷತ್ತಿ'ನಿಂದ ತಿಳಿಯುತ್ತದೆ. ಘೋರ ಆಂಗೀರಸನು ಅವನಿಗೆ ಏನನ್ನು ಉಪದೇಶಿಸಿದ? ಈ ವಿಷಯವಾಗಿ 'ಛಾಂದೋಗ್ಯ ಉಪನಿಷತ್ತು' ಹೀಗೆ ಹೇಳುತ್ತದೆ:

"ಆಂಗೀರಸ ವಂಶಜನಾದ ಘೋರನು ಇದನ್ನು (ಈ ಹಿಂದೆ ಪ್ರಸ್ತಾಪಿಸಿದ ಯಜ್ಞವಿದ್ಯೆಯನ್ನು) ದೇವಕಿಯ ಮಗನಾದ ಕೃಷ್ಣನಿಗೆ ತಿಳಿಸಿದ. ನಂತರ ಹೀಗೆ ಹೇಳಿದ: ಯಾವುದನ್ನು ಕೇಳಿ ನೀನು ಆಸೆಯಿಂದ ಮುಕ್ತನಾಗುತ್ತೀಯೋ ಅದು ಹೀಗಿದೆ: ಮನುಷ್ಯ ಸಾಯುವಾಗ ಈ ಮೂರು ಮಂತ್ರಗಳಿಗೆ ಶರಣು ಆಗಬೇಕು– 'ನೀನು ಅಕ್ಷಯವಾಗಿದ್ದೀಯೆ; ನೀನು ಅಚ್ಯುತನಾಗಿದ್ದೀಯೆ; ನೀನು ಪ್ರಾಣಸ್ವರೂಪವಾಗಿದ್ದೀಯೆ'.

ಉಪನಿಷತ್ತಿನ ಈ ಶ್ಲೋಕಗಳ ಮೇಲೆ, ಭಾಷ್ಯಕಾರ ಈ ವಿವರಣೆ ಕೊಡುತ್ತಾನೆ:

"ಆಂಗೀರಸ ಕುಲದ ಘೋರ ಎಂಬ ಹೆಸರಿನ ವ್ಯಕ್ತಿಯೊಬ್ಬ ದೇವಕೀ ಪುತ್ರನೂ, ತನ್ನ ಶಿಷ್ಯನೂ ಆದ ಕೃಷ್ಣನಿಗೆ ಯಜ್ಞವಿದ್ಯೆಯನ್ನು ಉಪದೇಶಿಸಿದ ನಂತರ, ಹೀಗೆ ಹೇಳುತ್ತಾನೆ, ಇತ್ಯಾದಿ. ಇಲ್ಲಿ 'ಹೇಳಿದನು' ಎಂಬುದು ಕೊನೆಯಲ್ಲಿ ಬರುವ 'ಈ ಮೂರು, ಇತ್ಯಾದಿ' ಎಂಬುದಕ್ಕೆ ಸಂಬಂಧಿಸಿದೆ. ಈ ವಿದ್ಯೆಯನ್ನು ಕೇಳಿದ ನಂತರ ಅವನು 'ಎಲ್ಲ ರೀತಿಯ ಆಸೆಗಳಿಂದ' ಮುಕ್ತನಾದನು. ಈ ರೀತಿಯಾಗಿ 'ಅದು ಎಷ್ಟು ವಿಶಿಷ್ಟವಾಗಿದೆಯೆಂದರೆ, ದೇವಕೀಪುತ್ರನಾದ ಕೃಷ್ಣನಲ್ಲಿ ಅದು ಬೇರೆ ಎಲ್ಲ ರೀತಿಯ ವಿದ್ಯೆಗಳ ಆಸೆಯನ್ನೂ ನಾಶಮಾಡಿತು' ಎಂದು ಹೇಳುವ ಮೂಲಕ, ಪುರುಷ ಯಜ್ಞವಿದ್ಯೆಯನ್ನು ಶ್ಲಾಘಿಸಿದನು. ಈಗ ಅವನು, 'ಘೋರ ಆಂಗೀರಸನು ಕೃಷ್ಣನಿಗೆ ಈ ವಿದ್ಯೆಯನ್ನು ಉಪದೇಶಿಸಿದ ನಂತರ ಹೇಳಿದನು' ಎಂದು ಹೇಳುತ್ತಾನೆ. ಅವನು ಹೇಳಿದುದೇನೆಂದರೆ: ಮೇಲೆ ಉಪದೇಶಿಸಲ್ಪಟ್ಟ ವಿದ್ಯೆಯನ್ನು ತಿಳಿದವನು ತನ್ನ ಮರಣಕಾಲದಲ್ಲಿ ಈ ಮೂರು ಮಂತ್ರಗಳಿಗೆ ಶರಣುಹೋಗಬೇಕು ಅಥವಾ ಅವನ್ನು ಪಠಿಸಬೇಕು'. 'ಪ್ರಾಣಸಂಶಿತಮಸೀತಂ' ಅಂದರೆ 'ನೀನು ಅತಿ ಸೂಕ್ಷ್ಮವಾದ ಅಣುರೂಪದ ಪ್ರಾಣ ಸ್ವರೂಪನಿದ್ದೀಯೆ' ಎಂದು".

ಇದರಿಂದ ಘೋರ ಆಂಗೀರಸನು ಕೃಷ್ಣನಿಗೆ ನೀಡಿದ ಮೋಕ್ಷ ಸಾಧನದ ಬಗೆಗಿನ ಉಪದೇಶವು ವೇದಗಳಿಗೂ ವೈದಿಕ ಯಜ್ಞಗಳಿಗೂ ವಿರುದ್ಧವಾಗಿತ್ತು ಎಂಬುದು ಸ್ಪಷ್ಟವಾಗುತ್ತದೆ. ಅಲ್ಲದೆ, ವಿಷ್ಣುವು ವೈದಿಕ ದೇವತೆ. ಆದರೂ ಅವನ ಪಂಥವು ಶೈವ ಪಂಥ ಸ್ಥಾಪಿತವಾದ ಎಷ್ಟೋ ಕಾಲದ ನಂತರ ಸ್ಥಾಪಿತವಾಯಿತು. ವಿಷ್ಣುವನ್ನು ಇಷ್ಟೊಂದು ನಿರ್ಲಕ್ಷಿಸಿದ್ದೇಕೆ ಎಂಬುದನ್ನು ತಿಳಿಯುವುದು ಕಷ್ಟ.

ಅದೇ ರೀತಿ ರಾಮನು ವೇದ ವಿರೋಧಿಯಲ್ಲದಿದ್ದರೂ ವೇದಗಳಿಗೆ ಅವನು ಅಪರಿಚಿತ. ಅವನ ಪಂಥವನ್ನು ಸ್ಥಾಪಿಸುವ ಅಗತ್ಯವೇನಿತ್ತು. ಅದರಲ್ಲೂ ಈ ದೇಶದ ಚರಿತ್ರೆಯಲ್ಲಿ ಅಷ್ಟೊಂದು ತಡವಾಗಿ?

ಈಗ ನಾವು ಮೂರನೆಯ ಪ್ರಶ್ನೆಯನ್ನು ಕೈಗೆತ್ತಿಕೊಳ್ಳಬಹುದು. ಅದೆಂದರೆ, ಹಳೆಯ ಪೌರಾಣಿಕ ದೇವರುಗಳಿಗೆ ಹೋಲಿಸಿದಂತೆ, ಈ ಹೊಸ ದೇವರುಗಳ ಸ್ಥಾನಮಾನಗಳೇನು?

'ಗಾಡ್ಸ್ ಅಟ್ ವಾರ್' ಎಂಬ ಹಿಂದಿನ ಅಧ್ಯಾಯದಲ್ಲಿ ಆಗಲೇ ಬ್ರಹ್ಮ, ವಿಷ್ಣು ಮತ್ತು ಶಿವ–ಇವರ ಏಳುಬೀಳುಗಳನ್ನು ಪ್ರಸ್ತಾಪಿಸಲಾಗಿದೆ. ಏನೇ ಆಗಲಿ, ಸ್ಥಾನ ಮತ್ತು ಅಧಿಕಾರಕ್ಕೆ ನಡೆದ ಹೋರಾಟವು ಈ ಮೂರು ದೇವರುಗಳಿಗಷ್ಟೇ ಸೀಮಿತವಾಗಿತ್ತು. ಅವರನ್ನು ಉಳಿದ(ಹಿಂದಿನ) ದೇವರುಗಳಿಗಿಂತ ಕೆಳಕ್ಕೆ ತಳ್ಳಲಿಲ್ಲ. ಆದರೆ ಅವರು ಶ್ರೀ ಎಂಬ ದೇವಿಗಿಂತ ಕಡಿಮೆ ಎಂದು ಪರಿಗಣಿಸಿದ ಕಾಲವೊಂದು ಬಂತು. ಇದು ಹೇಗಾಯಿತೆಂಬುದನ್ನು ದೇವೀಭಾಗವತದಲ್ಲಿ ವರ್ಣಿಸಲಾಗಿದೆ.[೧] ದೇವೀಭಾಗವತದ ಪ್ರಕಾರ ಶ್ರೀ ಎಂಬ ದೇವಿಯು ಪ್ರಪಂಚವನ್ನು ಸೃಷ್ಟಿಸಿದಳು. ಬ್ರಹ್ಮ, ವಿಷ್ಣು ಮತ್ತು ಶಿವ–ಇವರುಗಳನ್ನು ಸೃಷ್ಟಿಸಿದವಳೂ ಈಕೆಯೇ! ದೇವೀಭಾಗವತ ಮುಂದುವರಿದು ಹೀಗೆ ಹೇಳುತ್ತದೆ; ದೇವಿಗೆ ತನ್ನ ಅಂಗೈಗಳನ್ನು ಉಜ್ಜಬೇಕೆಂಬ ಇಚ್ಛೆಯಾಯಿತು. ಹಾಗೆ ಅವಳು ತನ್ನ ಅಂಗೈಯನ್ನು ಉಜ್ಜಿದ ರಭಸಕ್ಕೆ ಅವಳ ಅಂಗೈಯಲ್ಲಿ ಒಂದು ಗುಳ್ಳೆಯಾಯಿತು. ಈ ಗುಳ್ಳೆಯಿಂದ ಬ್ರಹ್ಮನು ಜನಿಸಿದನು. ಬ್ರಹ್ಮನು ಹುಟ್ಟಿದಾಗ ದೇವಿಯು ಅವನನ್ನು ತನ್ನನ್ನು ಮದುವೆಯಾಗುವಂತೆ ಕೇಳಿದಳು. ನೀನು ತಾಯಿಯಾದ ಕಾರಣ ಒಲ್ಲೆನೆಂದು ಬ್ರಹ್ಮ ಹೇಳಿದನು. ದೇವಿಗೆ ಕೋಪಬಂದು, ತನ್ನ ಕೋಪದಿಂದಲೇ ಅವನನ್ನು ಸುಟ್ಟು ಬೂದಿ ಮಾಡಿದಳು. ದೇವಿ ತನ್ನ ಅಂಗೈಯನ್ನು ಎರಡನೆಯ ಬಾರಿ ಉಜ್ಜಿದಳು ಹಾಗೂ ಎರಡನೆಯ ಗುಳ್ಳೆ ಪಡೆದಳು. ಅವರ ಎರಡನೆಯ ಗುಳ್ಳೆಯಿಂದ ಅವಳ ಎರಡನೆಯ ಮಗ ಹುಟ್ಟಿದ. ಇವನೇ ವಿಷ್ಣು. ದೇವಿ ವಿಷ್ಣುವನ್ನು ಮದುವೆಯಾಗಲು ಸೂಚಿಸಿದಾಗ, ಅವನೂ ಸಹ, ಅವಳು ತಾಯಿಯಾದ ಕಾರಣ ಆ ಸೂಚನೆಯನ್ನು ತಿರಸ್ಕರಿಸಿದ. ದೇವಿಗೆ ಸಿಟ್ಟು ಬಂದು, ವಿಷ್ಣುವನ್ನು ಸುಟ್ಟು ಬೂದಿ ಮಾಡಿದಳು. ದೇವಿಯು ಮೂರನೇ ಸಾರಿ ಅಂಗೈ ಉಜ್ಜಿ ಮೂರನೆಯ ಗುಳ್ಳೆಯನ್ನು ಪಡೆದಳು. ಆ ಮೂರನೆಯ ಗುಳ್ಳೆಯಿಂದ ಮೂರನೆಯ ಮಗ ಹುಟ್ಟಿದ. ಅವನೇ ಶಿವ. ದೇವಿಯು ತನ್ನನ್ನು ಮದುವೆಯಾಗಲು ಶಿವನನ್ನು ಕೇಳಿದಾಗ, ಶಿವ 'ಆಗುತ್ತೇನೆ, ಆದರೆ ನೀನು ಮತ್ತೊಂದು ದೇಹವನ್ನು ಧರಿಸಿದರೆ ಮಾತ್ರ' ಎಂದು ಉತ್ತರಿಸಿದನು. ದೇವಿ ಇದಕ್ಕೆ ಒಪ್ಪಿದಳು. ಆಗತಾನೇ ಶಿವನ ಕಣ್ಣುಗಳು ಬೂದಿಯ ಎರಡು ರಾಶಿಗಳ ಮೇಲೆ ಬಿದ್ದವು. ಆಗ

---

೧. 'ಸತ್ಯಾರ್ಥಪ್ರಕಾಶ'ದಲ್ಲಿ ಇದರ ತಾತ್ಪರ್ಯವಿದೆ.

ದೇವಿಯೇ ಹೇಳಿದಳು 'ಅವು ನಿನ್ನ ಸೋದರರ ಬೂದಿ. ಅವರು ನನ್ನನ್ನು ಮದುವೆಯಾಗಲು ಒಪ್ಪದಿದ್ದುದಕ್ಕೆ ನಾನು ಅವರನ್ನು ಸುಡಬೇಕಾಯಿತು'. ಆಗ ಶಿವ, 'ನಾನೊಬ್ಬನೇ ಹೇಗೆ ಮದುವೆಯಾಗಲಿ? ನೀನು ಮತ್ತಿಬ್ಬರು ಕನ್ಯೆಯರನ್ನು ಸೃಷ್ಟಿಸು. ಆಗ ನಾವು ಮೂವರೂ ಒಟ್ಟಿಗೆ ಮದುವೆಯಾಗಬಹುದು' ಎಂದನು. ದೇವಿ ಅದರಂತೆಯೇ ಮಾಡಿದಾಗ, ಆ ಮೂವರು ದೇವರುಗಳು ದೇವಿಯನ್ನೂ ಆಕೆ ಸೃಷ್ಟಿಸಿದ ಇಬ್ಬರು ಸ್ತ್ರೀಯರನ್ನೂ ಮದುವೆಯಾದರು. ಈ ಕತೆಯಲ್ಲಿ ಎರಡು ಅಂಶಗಳಿವೆ. ಮೊದಲನೆಯದೆಂದರೆ, ಕೇಡನ್ನು ಮಾಡುವಾಗಲೂ ಸಹ ಶಿವನು, ತಾನು ಬ್ರಹ್ಮ ಮತ್ತು ವಿಷ್ಣು – ಇವರುಗಳಿಗಿಂತ ಹೆಚ್ಚಿನ ಪಾಪ ಮಾಡುವವನಂತೆ ಕಾಣಲು ಇಷ್ಟಪಡುವುದಿಲ್ಲ; ಏಕೆಂದರೆ, ಅವನಿಗೆ ತಾನು ತನ್ನ ಪ್ರತಿಸ್ಪರ್ಧಿಗಳಿಗಿಂತ ಕೀಳಾಗಿ ಕಾಣಬಹುದೆಂಬ ಹೆದರಿಕೆಯಿತ್ತು. ಇದಕ್ಕಿಂತ ಹೆಚ್ಚಿನದೆಂದರೆ, ಬ್ರಹ್ಮ, ವಿಷ್ಣು ಮತ್ತು ಶಿವ ಈ ಮೂವರೂ ಸ್ಥಾನಮಾನಗಳಲ್ಲಿ ದೇವಿಗಿಂತ ಕಡಿಮೆಯಾಗಿದ್ದರಲ್ಲದೆ ಅವಳಿಂದ ಸೃಷ್ಟಿಸಲ್ಪಟ್ಟಿದ್ದರು.

ಬ್ರಹ್ಮ, ವಿಷ್ಣು ಮತ್ತು ಶಿವ ಇವರ ಪಂಥಗಳಿಗೆ ಹೋಲಿಸಿದರೆ, ಕೃಷ್ಣ ಪಂಥದಲ್ಲಿ ಸ್ವಲ್ಪ ಕೃತ್ರಿಮತೆ ಇರುವುದು ಸ್ಪಷ್ಟವಿದೆ. ಬ್ರಹ್ಮ, ವಿಷ್ಣು ಮತ್ತು ಮಹೇಶ್ವರರು ಮೂಲತಃ ದೈವಗಳು. ಆದರೆ ಕೃಷ್ಣ ಮೂಲದಲ್ಲಿ ಮಾನವನಾಗಿ ಅನಂತರ ಅವನನ್ನು ದೇವನ ಸ್ಥಾನಕ್ಕೇರಿಸಲಾಯಿತು. ಪ್ರಾಯಶಃ ಅವನಿಗೆ ದೈವದ ಸ್ಥಾನವನ್ನು ಕೊಡಲೋಸ್ಕರವೇ ಅವನು ವಿಷ್ಣುವಿನ ಅವತಾರವೆಂಬ ಸಿದ್ಧಾಂತವನ್ನು ಸೃಷ್ಟಿಸಲಾಯಿತು. ಆದರೂ ಅವನ ದೈವತ್ವ ಅಪರಿಪೂರ್ಣವಾಗೇ ಉಳಿದಿದೆ. ಏಕೆಂದರೆ ಕೃಷ್ಣನು ಗೋಪಿಯರೊಂದಿಗೆ ಮಾಡಿದ ವ್ಯಭಿಚಾರಕ್ಕಾಗಿ ಅವನನ್ನು ವಿಷ್ಣುವಿನ ಅಪೂರ್ಣ ಅವತಾರವೆಂದು ಪರಿಗಣಿಸಲಾಯಿತು.[೧] ಒಂದು ವೇಳೆ ಕೃಷ್ಣನು ವಿಷ್ಣುವಿನ ಪೂರ್ಣ ಅವತಾರವಾಗಿದ್ದರೆ ಅವನ ವ್ಯಭಿಚಾರವು ಅಕ್ಷಮ್ಯವಾಗುತ್ತಿತ್ತು.

ಅಂತೂ ಕೃಷ್ಣನ ಮೂಲ ಹೀಗೆ ನಿಕೃಷ್ಟವಾಗಿದ್ದರೂ ಅವನು ಎಲ್ಲರಿಗಿಂತ ಮೇಲೇರಿದ ಪರದೈವವಾದ. ಅವನು ಎಷ್ಟು ದೊಡ್ಡವನಾದ ಎಂಬುದನ್ನು ಭಗವದ್ಗೀತೆಯ ಹತ್ತು ಮತ್ತು ಹದಿನಾಲ್ಕನೇ* ಅಧ್ಯಾಯಗಳಿಂದ ತಿಳಿದುಕೊಳ್ಳಬಹುದು. ಈ ಅಧ್ಯಾಯಗಳಲ್ಲಿ ಕೃಷ್ಣನು ಹೀಗೆ ಹೇಳುತ್ತಾನೆ:

"ಹಾಗಾದರೆ ಕುರುಶ್ರೇಷ್ಠನೇ, ನನ್ನ ದಿವ್ಯ ವಿಭೂತಿಗಳ ಬಗೆಗೆ ಕೇಳು ಆದರೆ ಕೆಲವು ಮುಖ್ಯವಾದವುಗಳ ಬಗ್ಗೆ ಮಾತ್ರ. ಏಕೆಂದರೆ ನನ್ನ ವಿಭೂತಿಗಳಿಗೆ ಕೊನೆಯೇ ಇಲ್ಲ : ಓ, ಗುಡಾಕೇಶ, ಎಲ್ಲ ವಸ್ತುಗಳಲ್ಲಿ ಅಂತಸ್ಥವಾಗಿರುವ ಆತ್ಮವೆಂದರೆ ನಾನೇ; ಎಲ್ಲ ವಸ್ತುಗಳ ಆದಿ, ಮಧ್ಯ, ಅಂತ್ಯ ನಾನೇ; ಆದಿತ್ಯರಲ್ಲಿ ನಾನೇ ವಿಷ್ಣು, ಹೊಳೆಯುವ ವಸ್ತುಗಳಲ್ಲಿ ನಾನೇ ಸೂರ್ಯ; ಮರುತರಲ್ಲಿ ನಾನೇ ಮರೀಚಿ ಮತ್ತು ನಕ್ಷತ್ರಗಳ ಮಧ್ಯದಲ್ಲಿ ನಾನೇ ಚಂದ್ರ; ವೇದಗಳಲ್ಲಿ ನಾನೇ ಸಾಮವೇದ; ದೇವತೆಗಳಲ್ಲಿ ನಾನೇ ಇಂದ್ರ; ಇಂದ್ರಿಯಗಳಲ್ಲಿ ನಾನೇ ಮನಸ್ಸು; ಭೂತಗಳಲ್ಲಿ ನಾನೇ ಚೈತನ್ಯ; ರುದ್ರರಲ್ಲಿ ನಾನೇ ಶಂಕರ; ಯಕ್ಷ, ರಾಕ್ಷಸರಲ್ಲಿ ನಾನೇ ಕುಬೇರ; ವಸ್ತುಗಳಲ್ಲಿ ನಾನೇ ಅಗ್ನಿ; ಮತ್ತು ಉನ್ನತ ಶಿಖರಗಳಲ್ಲಿ ನಾನೇ ಮೇರು; ರಾಜಪುರೋಹಿತರಲ್ಲಿ ಮುಖ್ಯನಾದ ಬೃಹಸ್ಪತಿಯನ್ನು ನಾನೇ ಎಂದು ತಿಳಿ, ನಾನು

---

೧. ಈ ವಿಷಯವಾಗಿ ನೋಡಿ : ಮ್ಯೂರ್, IV, ಪು. ೪೯

*ವಾಸ್ತವವಾಗಿ ಇದು ಹದಿನೈದನೆಯ ಅಧ್ಯಾಯ.

ಮಹರ್ಷಿಗಳಲ್ಲಿ ಭೃಗು, ಶಬ್ದಗಳಲ್ಲಿ ಏಕಾಕ್ಷರನಾದ ಓಂಕಾರ; ಯಜ್ಞಗಳಲ್ಲಿ ಜಪಯಜ್ಞ, ಸ್ಥಾವರಗಳಲ್ಲಿ ಹಿಮಾಲಯ ನಾನೇ; ವೃಕ್ಷಗಳಲ್ಲಿ ಅಶ್ವತ್ಥ; ದೇವರ್ಷಿಗಳಲ್ಲಿ ನಾರದ; ಗಂಧರ್ವರಲ್ಲಿ ಚಿತ್ರರಥ; ಸಿದ್ಧರಲ್ಲಿ ಕಪಿಲ ಮುನಿ ನಾನೇ. ಅಶ್ವಗಳಲ್ಲಿ ಅಮೃತೋದ್ಭವವಾದ ಉಚ್ಚೈಶ್ರವಸ್ ಎಂದೂ, ಉತ್ತಮ ಆನೆಗಳಲ್ಲಿ ಐರಾವತವೆಂದೂ, ಮನುಷ್ಯರಲ್ಲಿ ರಾಜನೆಂದೂ ನನ್ನನ್ನು ತಿಳಿ. ನಾನು ಆಯುಧಗಳಲ್ಲಿ ವಜ್ರಾಯುಧ, ಗೋವುಗಳಲ್ಲಿ ಕಾಮಧೇನು, ಸಂತಾನಕ್ಕೆ ಕಾರಣನಾದ ಮನ್ಮಥ, ಹಾವುಗಳಲ್ಲಿ ವಾಸುಕಿ. ನಾನು ನಾಗಗಳಲ್ಲಿ ಅನಂತ, ಜಲವಾಸಿಗಳಲ್ಲಿ ವರುಣ, ಪಿತೃಗಳಲ್ಲಿ ಆರ್ಯ ಮತ್ತು ದಂಡಿಸುವವರಲ್ಲಿ ಯಮ. ನಾನು ರಾಕ್ಷಸರಲ್ಲಿ ಪ್ರಹ್ಲಾದ, ಗಣನೆ ಮಾಡುವವರಲ್ಲಿ ಕಾಲ(ಮೃತ್ಯುದೇವತೆ)."

"ನಾನು ಮೃಗಗಳಲ್ಲಿ ಸಿಂಹ, ಪಕ್ಷಿಗಳಲ್ಲಿ ವೈನತೇಯ (ಗರುಡ). ಪಾವನ ಮಾಡುವವರಲ್ಲಿ ವಾಯುವೂ, ಶಸ್ತ್ರಧಾರಿಗಳಲ್ಲಿ ರಾಮನೂ, ಜಲಚರಗಳಲ್ಲಿ ಮಕರನೂ, ನದಿಗಳಲ್ಲಿ ಜಾಹ್ನವಿ(ಗಂಗೆ)ಯೂ ನಾನೇ; ಸೃಷ್ಟಿವಸ್ತುಗಳ ಆದಿ ಮಧ್ಯ ಅಂತ್ಯ ನಾನೇ. ವಿದ್ಯೆಗಳಲ್ಲಿ ಆಧ್ಯಾತ್ಮ ವಿದ್ಯೆ, ಚರ್ಚಿಸುವವರಲ್ಲಿ ವಾದ ನಾನೇ; ಅಕ್ಷರಗಳಲ್ಲಿ ಆಕಾರ, ಸಮಾಸಗಳಲ್ಲಿ ದ್ವಂದ್ವ, ಅಕ್ಷಯವಾದ ಕಾಲ, ಸರ್ವತೋಮುಖವಾದ ಧಾತು ನಾನೇ. ಎಲ್ಲವನ್ನೂ ಹಿಡಿಯುವ ಮೃತ್ಯು, ಎಲ್ಲ ವಸ್ತುಗಳ ಉತ್ಪತ್ತಿ ನಾನೇ; ನಾರಿಯರಲ್ಲಿ ಕೀರ್ತಿ, ಶ್ರೀ, ವಾಕ್ಕು, ಸ್ಮೃತಿ, ಮೇದಸ್ಸು, ಧೈರ್ಯ ಮತ್ತು ಕ್ಷಮೆ ನಾನೇ. ನಾನು ಸಾಮಗಳಲ್ಲಿ ಬೃಹತ್ಸಾಮ, ಛಂದಸ್ಸುಗಳಲ್ಲಿ ಗಾಯತ್ರಿ, ಮಾಸಗಳಲ್ಲಿ ಮಾರ್ಗಶಿರ ಮತ್ತು ಋತುಗಳಲ್ಲಿ ವಸಂತ. ಮೋಸಗಾರರಲ್ಲಿ ದ್ಯೂತವೂ, ತೇಜಸ್ವಿಗಳಲ್ಲಿ ತೇಜಸ್ಸೂ ನಾನೇ ಆಗಿರುವೆ. ನಾನು (ವಿಜಯಿಗಳ) ಜಯ, (ವ್ಯವಸಾಯಿಗನ) ವ್ಯವಸಾಯ ಮತ್ತು ಸಾತ್ವಿಕರ ಸತ್ವ. ಸೃಷ್ಟಿಗಳಲ್ಲಿ (ಯಾದವರಲ್ಲಿ)ವಾಸುದೇವನೂ, ಪಾಂಡವರಲ್ಲಿ ಅರ್ಜುನನೂ, ಮುನಿಗಳಲ್ಲಿ ವೇದವ್ಯಾಸನೂ ಮತ್ತು ಕವಿಗಳಲ್ಲಿ (ದೂರದರ್ಶಿಗಳಲ್ಲಿ) ಉಶನಕವಿಯೂ ನಾನೇ. ದಮನ ಮಾಡುವವರಲ್ಲಿ ಶಿಕ್ಷೆ, ಜಯಾಭಿಲಾಷಿಗಳಲ್ಲಿ ನೀತಿ, ಗೌಪ್ಯ ವಾಗಿಡುವವರಲ್ಲಿ ಮೌನ ಮತ್ತು ಜ್ಞಾನಿಗಳಲ್ಲಿ ಜ್ಞಾನ, ಎಲ್ಲ ನಾನೇ. ಎಲೈ ಅರ್ಜುನನೇ, ಸರ್ವಭೂತಗಳ ಜನನಕ್ಕೆ ಕಾರಣನಾದ ಬೀಜ ನಾನೇ. ನಾನಿಲ್ಲದೆ ಯಾವ ಚರಾಚರ ವಸ್ತುವೂ ಇರಲಾರದು."

"ಜಗತ್ತೆಲ್ಲವನ್ನೂ ಬೆಳಗಿಸುವ ಆದಿತ್ಯನ ತೇಜಸ್ಸು, ಚಂದ್ರನಲ್ಲಿರುವ ತೇಜಸ್ಸು, ಅಗ್ನಿಯಲ್ಲಿರುವ ತೇಜಸ್ಸು ನನ್ನದೆಂದು ತಿಳಿ. ನಾನು ಭೂಮಿಯನ್ನು ಪ್ರವೇಶಿಸಿ, ನನ್ನ ತೇಜಸ್ಸಿನಿಂದ ಎಲ್ಲ ವಸ್ತುಗಳನ್ನೂ ಧರಿಸಿದ್ದೇನೆ ಮತ್ತು ರಸಸ್ವರೂಪನಾದ ಚಂದ್ರನಾಗಿ ಎಲ್ಲ ವನಸ್ಪತಿಗಳನ್ನೂ ಪೋಷಿಸುತ್ತೇನೆ. ನಾನು ಜಠರಾಗ್ನಿ ಸ್ವರೂಪನಾಗಿ ಪ್ರಾಣಿಗಳ ಶರೀರವನ್ನು ಆಶ್ರಯಿಸಿ, ಪ್ರಾಣಾಪಾನಗಳಿಂದ ಕೂಡಿದವನಾಗಿ ನಾಲ್ಕು ವಿಧವಾದ ಅನ್ನವನ್ನು ಜೀರ್ಣವಾಗುವಂತೆ ಮಾಡುತ್ತೇನೆ. ನಾನು ಎಲ್ಲರ ಹೃದಯಗಳಲ್ಲೂ ಅಂತಸ್ಥವಾಗಿದ್ದೇನೆ."

"ಸ್ಮೃತಿ ಮತ್ತು ಜ್ಞಾನ ನನ್ನಿಂದಲೇ ಉಂಟಾಗಿ, ನನ್ನಿಂದಲೇ ನಿವೃತ್ತಿಯಾಗುತ್ತವೆ; ಎಲ್ಲ ವೇದಗಳಿಂದ ತಿಳಿಯಲ್ಪಡುವವನು ನಾನೇ. ವೇದಾಂತದ ಕರ್ತೃ ನಾನೇ; ವೇದವನ್ನು ತಿಳಿದವನು ನಾನೇ. ಈ ಲೋಕದಲ್ಲಿ ಕ್ಷರ ಮತ್ತು ಅಕ್ಷರ ಎಂಬ ಇಬ್ಬರು ಪುರುಷರಿದ್ದಾರೆ. ಕ್ಷರನೆಂದರೆ ಎಲ್ಲ ವಸ್ತುಗಳು ಮತ್ತು ಅಕ್ಷರನೆಂದರೆ ಕೂಟಸ್ಥನೆಂದು ತಿಳಿಯಲ್ಪಟ್ಟಿರುವವನು. ಆದರೆ ಕ್ಷರಾಕ್ಷರಗಳನ್ನು ಮೀರುವ ಪುರುಷೋತ್ತಮನೆಂದು ಕರೆಯಲ್ಪಡುವ ಪರಮಾತ್ಮನಿದ್ದಾನೆ. ಆ ಈಶ್ವರನು ಮೂರು ಲೋಕಗಳನ್ನು

ಪ್ರವೇಶಿಸಿ, ಅವುಗಳಿಗೆ ಆಧಾರವಾಗಿದ್ದಾನೆ. ನಾನು ಕ್ಷರಾತೀತನೂ, ಅದಕ್ಕಿಂತ ಉತ್ತಮನೂ ಇರುವುದರಿಂದ, ಲೋಕದಲ್ಲಿಯೂ ವೇದಗಳಲ್ಲಿಯೂ ಪುರುಷೋತ್ತಮನೆಂದು ಪ್ರಸಿದ್ಧನಾಗಿದ್ದೇನೆ.''

ಆದುದರಿಂದ ಗೀತೆಗೆ ಸಂಬಂಧಿಸಿದಂತೆ ಹೇಳುವುದಾದರೆ, ಕೃಷ್ಣನಿಗಿಂತ ಹೆಚ್ಚಿನ ದೈವವಿಲ್ಲ. ಅವನೇ ಅಲ್ಲಾ ಹೋ ಅಕ್ಬರ್. ಅವನು ಉಳಿದೆಲ್ಲ ದೇವರಿಗಿಂತ ಮಹತ್ತರನಾದವನು.

ಈಗ ಮಹಾಭಾರತದ ಕಡೆಗೆ ತಿರುಗೋಣ. ನಾವು ಅಲ್ಲೇನು ನೋಡುತ್ತೇವೆ ? ಅಲ್ಲಿ ಕೃಷ್ಣನ ಸ್ಥಾನಮಾನಗಳಲ್ಲಿ ಬದಲಾವಣೆಗಳಾಗಿವೆ. ಅಲ್ಲಿ ಅವನ ಸ್ಥಾನಮಾನಗಳಲ್ಲಿ ಏಳುಬೀಳುಗಳಿವೆ. ಮೊದಲು ಅವನನ್ನು ಶಿವನಿಗಿಂತ ಮೇಲೇರಿಸಲಾಗಿದೆ. ಶಿವ ಅವನ ಘನತೆಯನ್ನು ಒಪ್ಪಿಕೊಳ್ಳುವಂತೆಯೂ ಮಾಡಲಾಗಿದೆ. ಆದರೆ ಕೆಲವು ಸಾರಿ ಅವನನ್ನು ಶಿವನಿಗಿಂತ ಕೀಳು ಮಾಡಲಾಗಿದೆಯಲ್ಲದೆ, ಶಿವನ ಘನತೆಯನ್ನು ಅವನು ಒಪ್ಪಿಕೊಳ್ಳುವಂತೆಯೂ ಮಾಡಲಾಗಿದೆ.

ಕೃಷ್ಣನನ್ನು ಶಿವನಿಗಿಂತ ಮೇಲೇರಿಸಿದ್ದಕ್ಕೆ ಅನುಶಾಸನ ಪರ್ವದ ಬೆಳಕು ಚೆಲ್ಲುವ ಈ ಭಾಗ ಸಾಕ್ಷಿಯಾಗಿದೆ:

''ಪಿತಾಮಹ (ಬ್ರಹ್ಮ)ನಿಗಿಂತ ಉತ್ತಮನಾದವನು ಹರಿ, ನಿತ್ಯಪುರುಷ ಅಥವಾ ಕೃಷ್ಣ. ಅವನು ಸ್ವರ್ಣದಂತೆ ತೇಜಸ್ಸುಳ್ಳ, ಮೋಡಗಳಿಲ್ಲದ ಆಕಾಶದಲ್ಲಿ ಹುಟ್ಟಿದ ಸೂರ್ಯನಂತೆ, ದಶಬಾಹುಗಳುಳ್ಳ, ಅತಿಶಯ ಶಕ್ತಿಯುಳ್ಳ ದೇವತೆಗಳ ವೈರಿಯ ಸಂಹಾರಿಯಾದ, ಶ್ರೀವತ್ಸ ಮತ್ತು ಹೃಷಿಕೇಶ ನಾಮಾಂಕಿತ ಕೃಷ್ಣನು ಸರ್ವದೇವತೆಗಳಿಗೆ ಆರಾಧ್ಯದೈವ. ಬ್ರಹ್ಮನು ಅವನ ನಾಭಿಯಿಂದಲೂ, ನಾನು (ಮಹಾದೇವ) ಅವನ ಶಿರಸ್ಸಿನಿಂದಲೂ, ನಕ್ಷತ್ರಗಳು ಅವನ ತಲೆ ಕೂದಲುಗಳಿಂದಲೂ, ಸುರಾಸುರರು ಅವನ ದೇಹದ ಕೂದಲುಗಳಿಂದಲೂ, ಋಷಿಗಳು ಮತ್ತು ಶಾಶ್ವತ ಲೋಕಗಳು ಅವನ ದೇಹದಿಂದಲೂ ಉತ್ಪತ್ತಿಯಾಗಿವೆ. ಅವನೇ ಪಿತಾಮಹನ ಮತ್ತು ಎಲ್ಲ ದೇವತೆಗಳ ವ್ಯಕ್ತ ಆವಾಸ. ಅವನೇ ಪೃಥ್ವಿಯ ಸೃಷ್ಟಿಕರ್ತ, ಮೂರು ಲೋಕದ ರಕ್ಷಕ ಮತ್ತು ಸಕಲ ಚರಾಚರವಸ್ತುಗಳ ಸಂಹಾರಿ. ಅವನೇ ಎಲ್ಲ ದೇವತೆಗಳಿಗಿಂತ ಉತ್ತಮ. ದೇವಾಧಿದೇವ ಮತ್ತು ವೈರಿಗಳ ಸಂಹಾರಿ. ಅವನು ಸರ್ವಜ್ಞ, ಎಲ್ಲ ಭೂತಗಳಲ್ಲಿಯೂ ಐಕ್ಯವಾಗಿರುವವನು. ಎಲ್ಲ ದಿಕ್ಕುಗಳಿಗೂ ಚಾಚಿಕೊಂಡಿರುವ ಸರ್ವಾಂತರ್ಯಾಮಿ, ಪರಮಾತ್ಮ, ಹೃಷಿಕೇಶ, ಎಲ್ಲೆಲ್ಲಿಯೂ ಇರುವವನು, ಸರ್ವಶಕ್ತ. ಮೂರು ಲೋಕಗಳಲ್ಲಿ ಅವನಿಗಿಂತ ಉತ್ತಮನಿಲ್ಲ. ಗೋವಿಂದನೆಂಬ ಹೆಸರಿನಿಂದ ಪ್ರಸಿದ್ಧನಾದ, ಮಧುಸಂಹಾರಿಯಾದ, ನಿತ್ಯ ಅವನು. ಅವನೇ ಎಲ್ಲರಿಗೂ ಶ್ರೇಯಸ್ಸನ್ನುಂಟು ಮಾಡುವವನು. ದೇವತೆಗಳ ಇಷ್ಟವನ್ನು ಪೂರೈಸುವವನು, ಮಾನವನಾಗಿ ಅವತರಿಸಿ ಎಲ್ಲ ರಾಜರನ್ನೂ ಯುದ್ಧದಲ್ಲಿ ಕೊಲ್ಲುವವನು. ಏಕೆಂದರೆ ತ್ರಿವಿಕ್ರಮನಿಲ್ಲದ ದೇವಗಣಕ್ಕೆ ಅನಾಥರಾದ ದೇವತೆಗಳ ಇಷ್ಟವನ್ನು ಪೂರೈಸಲು ಸಾಧ್ಯವಾಗುವುದಿಲ್ಲ. ಅವನೇ ಎಲ್ಲ ಭೂತಾದಿಗಳ ನಾಯಕ, ಎಲ್ಲ ಭೂತಾದಿಗಳ ಆರಾಧ್ಯ ದೈವ.''

''ದೇವಾಧಿದೇವನೂ ದೇವತೆಗಳ ಇಷ್ಟವನ್ನು ಪೂರೈಸುವವನೂ, ದೇವ ಮತ್ತು ಋಷಿಗಳಿಗೆ ಆಶ್ರಯದಾತನೂ ಆದ ಕೃಷ್ಣನ ದೇಹದಲ್ಲಿ ಬ್ರಹ್ಮನು ವಾಸವಾಗಿದ್ದಾನೆ. ಎಲ್ಲ ದೈವಗಳೂ ಅವನ

---

೧. ಮ್ಯೂರ್, IV, ಪು. ೨೭೩–೭೪

ಶರೀರದಲ್ಲೇ ಆಶ್ರಯ ಪಡೆದಿವೆ. ಕಮಲ ನಯನದ, ಶ್ರೀಯನ್ನುಂಟುಮಾಡುವವನು ಶ್ರೀಯೊಂದಿಗೆ ಇದ್ದಾನೆ. ಸುರರ ಕಲ್ಯಾಣಕ್ಕಾಗಿ ಗೋವಿಂದನು ಅತಿಶಯ ವಿವೇಕವುಳ್ಳ ಮಹಾಮನುವಿನ ಕುಲದಲ್ಲಿ ಹುಟ್ಟುತ್ತಾನೆ. ಪ್ರಜಾಪತಿ ಮನುವಿನ ಉತ್ಕೃಷ್ಟ ಪಥದಲ್ಲಿ ನಡೆಯುತ್ತಾ... (ಇಲ್ಲಿ ಗೋವಿಂದನ ಪೂರ್ವಜರ ವರ್ಣನೆಯಿದೆ). ಈ ಕುಲದಲ್ಲಿ ಹುಟ್ಟಿ, ಬ್ರಾಹ್ಮಣ ವಂದ್ಯನೂ, ಸನ್ನಡತೆಯುಳ್ಳವನೂ, ಸದ್ಗುಣಿಯೂ, ಸತ್ಯಶುದ್ಧ ಪುರೋಹಿತ ಪೂಜಿತನೂ ಆದ ಈ ಧೀರ ಕ್ಷತ್ರಿಯನು ಯಶೋಧರನೂ, ಶ್ರೇಯಸ್ಸನ್ನುಂಟು ಮಾಡುವವನೂ ಆಗಿದ್ದು ಅವನಿಗೆ ಅನೇಕ ದುಂದುಭಿ ಹುಟ್ಟುತ್ತಾನೆ. ವಂಶೋದ್ಧಾರಕನಾದ ಈ ವಸುದೇವನಿಗೆ ವಾಸುದೇವನೆಂಬ ಚತುರ್ಭುಜ ಪುತ್ರ ಹುಟ್ಟುತ್ತಾನೆ. ಅವನು ಉದಾರಿಯೂ, ಬ್ರಾಹ್ಮಣರಿಗೆ ಶ್ರೇಯಸ್ಸನ್ನುಂಟುಮಾಡುವವನೂ, ಬ್ರಹ್ಮನಾದವನೂ, ಬ್ರಾಹ್ಮಣರನ್ನು ಪ್ರೀತಿಸುವವನೂ ಆಗಿರುವವನು."

"ದೇವತೆಗಳೇ, ಈ ದೇವನನ್ನು ಅವನ ಘನತೆಗೆ ತಕ್ಕಂತೆ ನಿತ್ಯ ಬ್ರಹ್ಮನಂತೆ ಪೂಜಿಸಿ. ಸರ್ವೋತ್ಕೃಷ್ಟ ಸ್ತೋತ್ರಮಾಲೆಯೊಂದಿಗೆ ಅವನ ಬಳಿ ಹೋಗಿ. ಏಕೆಂದರೆ, ದಿವ್ಯ ಮತ್ತು ತೇಜೋಮಯನಾದ ವಾಸುದೇವನನ್ನೂ, ಪಿತಾಮಹನಾದ ಬ್ರಹ್ಮನನ್ನೂ ನೋಡಬೇಕೆನ್ನುವವರು ನನ್ನನ್ನು ನೋಡಬೇಕು. ಅವನನ್ನು ನೋಡಿದಾಗ ನನ್ನನ್ನು ನೋಡಿದಂತೆಯೇ. ದೇವಾಧಿದೇವನೂ ಪಿತಾಮಹನೂ ಆದ ಬ್ರಹ್ಮನನ್ನೂ ನೋಡಿದಂತೆಯೇ. ಇದರಲ್ಲಿ ಸಂಶಯವೇನೂ ಇಲ್ಲ. ಇದನ್ನು ವ್ರತ ಸಂಪತ್ತುಳ್ಳ ನೀನು ತಿಳಿ."

ಕೃಷ್ಣನನ್ನು ಹೀಗೆ ದೇವಾಧಿದೇವನ ಪದವಿಗೇರಿಸಲ್ಪಟ್ಟು, ಆಮೇಲೆ ಹೇಗೆ ಅವನನ್ನು ನಿಕೃಷ್ಟವಾಗಿ ಕಾಣಲಾಯಿತು ಎಂಬುದನ್ನು ಈಗ ನೋಡೋಣ.

ಕೃಷ್ಣನು ಶಿವನಿಗಿಂತ ಕಡಿಮೆ ಎಂದು ತೋರಿಸಲು ಮಹಾಭಾರತದಲ್ಲಿ ಎಷ್ಟೊಂದು ಘಟನೆಗಳು ಸಂದರ್ಭಗಳೂ ಇವೆಯೆಂದರೆ ಅವೆಲ್ಲವನ್ನೂ ಇಲ್ಲಿ ಪ್ರಸ್ತಾಪಿಸುವುದು ಕಷ್ಟ. ಕೆಲವಷ್ಟರಿಂದಲೇ ನಾವು ತೃಪ್ತಿಪಟ್ಟುಕೊಳ್ಳಬೇಕು.

ಮೊದಲನೆ ಘಟನೆಯು ಜಯದ್ರಥನನ್ನು ಮಾರನೆಯ ದಿನವೇ ಕೊಲ್ಲಬೇಕೆಂಬ ಅರ್ಜುನನ ಶಪಥಕ್ಕೆ ಸಂಬಂಧಿಸಿದೆ. ಆದರೆ ಈ ಶಪಥ ಕೈಕೊಂಡ ಮೇಲೆ, ಜಯದ್ರಥನ ಸ್ನೇಹಿತರು ಅವನನ್ನು ಕಾಪಾಡಲು ತಮ್ಮ ಕೈಲಾದಷ್ಟು ಸಹಾಯ ಮಾಡುವರೆಂದೂ, ಆಗ ಸಮರ್ಪಕವಾದ ಶಸ್ತ್ರಗಳನ್ನು ಬಳಸದಿದ್ದರೆ ತನ್ನ ಶಪಥವನ್ನು ನೆರವೇರಿಸಿಕೊಳ್ಳಲು ಸಾಧ್ಯವಾಗುವುದಿಲ್ಲವೆಂದೂ ಅರ್ಜುನನಿಗೆ ಅನಿಸಿತು. ಆಗ ಅವನು ಸಲಹೆ ಪಡೆಯಲು ಕೃಷ್ಣನ ಬಳಿ ಹೋಗುತ್ತಾನೆ. ಕೃಷ್ಣನು ಅವನಿಗೆ ಹೀಗೆ ಹೇಳುತ್ತಾನೆ: "ಯಾವ ಪಾಶುಪತಾಸ್ತ್ರದಿಂದ ಮಹಾದೇವನು ಹಿಂದೆ ದೈತ್ಯರನ್ನು ಸಂಹಾರ ಮಾಡಿದನೋ, ಆ ಪಾಶುಪತಾಸ್ತ್ರಕ್ಕಾಗಿ, ನೀನು ಮಹಾದೇವನನ್ನು ಕುರಿತು ತಪಸ್ಸು ಮಾಡಬೇಕು ಮತ್ತು ಅದನ್ನು ಪಡೆದರೆ ಮಾತ್ರ ಜಯದ್ರಥನನ್ನು ಕೊಲ್ಲಬಹುದು."

ಈ ಕತೆಯನ್ನೊಳಗೊಂಡ ದ್ರೋಣ ಪರ್ವವು ಹೀಗೆ ಹೇಳುತ್ತದೆ:

"ಶಿಷ್ಟನಾದ ವಾಸುದೇವನು (ಕೃಷ್ಣನು) ಪೃಥೆಯ ಮಗನೊಂದಿಗೆ (ಅರ್ಜುನನೊಂದಿಗೆ) ನಿತ್ಯವೇದಗಳನ್ನು ಪಠಿಸುತ್ತಾ, ನೆಲ ಮುಟ್ಟುವವರೆಗೂ ತಲೆಯನ್ನು ಬಗ್ಗಿಸಿ, ಸರ್ವಲೋಕಗಳ ಮೂಲವೂ, ಪ್ರಪಂಚದ ಸೃಷ್ಟಿಕರ್ತನೂ, ಅರ್ಜನೂ, ಅಕ್ಷಯ ಪ್ರಭುವೂ, ಬುದ್ಧಿ, ಆಕಾಶ, ವಾಯುಗಳ ಮೂಲವೂ, ನಕ್ಷತ್ರಗಳ ಆದಿಯೂ, ಸಾಗರಗಳ ಕರ್ತೃವೂ, ಪೃಥ್ವಿಯ ಅಂತಿಮ ಆಧಾರವೂ,

ದೇವ, ದಾನವ, ಯಕ್ಷ ಮತ್ತು ಮಾನವರ ಕರ್ತೃವೂ, ಧ್ಯಾನಯೋಗದ ಪರಬ್ರಹ್ಮನೂ, ನಿತ್ಯತೃಪ್ತನೂ, ಬ್ರಹ್ಮವಿದ್ಯೆಯನ್ನು ಬಲ್ಲವರ ಸಂಪತ್ತೂ, ವಿಶ್ವದ ಸೃಷ್ಟಿಕರ್ತ ಮತ್ತು ಸಂಹಾರಿಯೂ, ಮಹಾರೌದ್ರಾವತಾರಿಯೂ, ಇಂದ್ರ ಮತ್ತು ಸೂರ್ಯರ ಮೂಲಗುಣದವನೂ ಆದವನಿಗೆ ನಮಸ್ಕರಿಸುತ್ತಾರೆ. ಆಮೇಲೆ ಕೃಷ್ಣನು ಅವನನ್ನು ಕಾಯಾ ವಾಚಾ ಮನಸಾ ಸ್ತುತಿಸುತ್ತಾನೆ. ಈ ವೀರದ್ವಯರು, ಸೂಕ್ಷ್ಮಲೋಕಗಳನ್ನೂ ಪಡೆಯಲು ಇಚ್ಛಿಸುವವರ ಧ್ಯೇಯವಾದ, ಅರ್ಜನೂ, ಕಾರಣನೂ ಆದ ಭವ(ಮಹಾದೇವ)ನನ್ನು ಆಶ್ರಯಿಸುತ್ತಾರೆ. ಅನಂತರ ಅರ್ಜುನನು, ಅವನೇ ಎಲ್ಲದರ ಆದಿಯೆಂದೂ, ಭೂತ, ವರ್ತಮಾನ, ಭವಿಷ್ಯಗಳ ಮೂಲವೆಂದೂ ತಿಳಿದು, ಆ ದೇವನಿಗೆ ಪುನಃ ಪುನಃ ನಮಸ್ಕರಿಸುತ್ತಾನೆ. ಈ ನರ ಮತ್ತು ನಾರಾಯಣರನ್ನು ನೋಡಿ, ಪ್ರತ್ಯಕ್ಷನಾದ ಸರ್ವ(ಮಹಾದೇವ)ನು, ಸಂತುಷ್ಟನಾಗಿ, ಮಂದಹಾಸವನ್ನು ಬೀರುತ್ತಿರುವನೋ ಎಂಬಂತೆ ಹೀಗೆ ಹೇಳಿದನು: "ನರೋತ್ತಮರಿಗೆ ಸುಸ್ವಾಗತ, ಏಳಿ, ಆಯಾಸವನ್ನು ಪರಿಹರಿಸಿಕೊಳ್ಳಿ, ವೀರರೇ, ನಿಮ್ಮ ಇಷ್ಟವೇನೆಂಬುದನ್ನು ಶೀಘ್ರವಾಗಿ ತಿಳಿಸಿ. ನೀವು ಯಾವ ಉದ್ದೇಶಕ್ಕಾಗಿ ಇಲ್ಲಿಗೆ ಬಂದಿದ್ದೀರೋ ಆ ಉದ್ದೇಶವನ್ನು ನಾನು ಪೂರೈಸಲೇ? ನಿಮ್ಮ ಕಲ್ಯಾಣಕ್ಕೆ ಬೇಕಾದ ಉತ್ತಮವಾದುದನ್ನು ಕೇಳಿ. ಅದೆಲ್ಲವನ್ನೂ ನಾನು ಅನುಗ್ರಹಿಸುತ್ತೇನೆ."

"ಕೃಷ್ಣ ಮತ್ತು ಅರ್ಜುನರು ಮಹಾದೇವನನ್ನು ಕುರಿತು ಒಂದು ಮಂತ್ರ ಹೇಳುತ್ತಾರೆ. ಅದರಲ್ಲಿ ಅವನೇ ಎಲ್ಲದರ ಆತ್ಮವೆಂದೂ, ಎಲ್ಲದರ ಸೃಷ್ಟಿಕರ್ತನೆಂದೂ, ಸರ್ವಸಮಾನ ವಿಷ್ಣನೆಂದೂ, ವರ್ಣಿಸಲಾಗಿದೆ. ಆಗ ಅರ್ಜುನನು ಕೃಷ್ಣ ಮತ್ತು ಮಹಾದೇವ ಇಬ್ಬರನ್ನೂ ಶ್ಲಾಘಿಸಿ, ದಿವ್ಯಾಸ್ತ್ರವನ್ನು ಕರುಣಿಸುವಂತೆ ಮಹಾದೇವನನ್ನು ಕೇಳುತ್ತಾನೆ. ಮಹಾದೇವನು ತಾನು ಹಿಂದೆ ತನ್ನ ಬಿಲ್ಲು ಮತ್ತು ಬಾಣಗಳನ್ನು ಇಟ್ಟಿದ್ದ ಸರೋವರದ ಬಳಿಗೆ ಅವರಿಬ್ಬರನ್ನೂ ಕಳಿಸುತ್ತಾನೆ. ಅಲ್ಲಿ ಅವರು ಎರಡು ಸರ್ಪಗಳನ್ನು ನೋಡುತ್ತಾರೆ. ಅದರಲ್ಲಿ ಒಂದು ಬೆಂಕಿಯನ್ನು ಉಗುಳುತ್ತಾ ಅವರ ಕಡೆಯೇ ಮುನ್ನುಗ್ಗಿತು ಮತ್ತು ಮಹಾದೇವನಿಗೆ ವಂದಿಸಿ ಶತರುದ್ರೀಯವನ್ನು ಪಠಿಸಿತು. ಮಹಾದೇವನ ಮಾಯಾಶಕ್ತಿಯಿಂದಾಗಿ ಅವು ಬಿಲ್ಲು ಬಾಣಗಳಾಗಿ ರೂಪಾಂತರ ಹೊಂದಿದಾಗ ಅವನ್ನು ಕೃಷ್ಣ ಮತ್ತು ಅರ್ಜುನರು ಮಹಾದೇವನಲ್ಲಿಗೆ ತಂದರು. ಹೀಗೆ, ಅರ್ಜುನನು ಜಯದ್ರಥನನ್ನು ಕೊಲ್ಲಲು ಮಾಡಿದ ಶಪಥವನ್ನು ನೆರವೇರಿಸಿಕೊಳ್ಳಲು, ಮಹಾದೇವನಿಂದ ಈ ಪಾಶುಪತಾಸ್ತ್ರವನ್ನು ಪಡೆದ ನಂತರ, ಅವರಿಬ್ಬರೂ ತಮ್ಮ ಸ್ವಸ್ಥಾನಕ್ಕೆ ಹಿಂದಿರುಗಿದರು."

ಮಹಾಭಾರತದ ಅನುಶಾಸನ ಪರ್ವದಲ್ಲಿ ಯುಧಿಷ್ಠರ ಮತ್ತು ಭೀಷ್ಮರ ನಡುವೆ ನಡೆದ ಸಂಭಾಷಣೆ ಇದೆ. ಯುಧಿಷ್ಠಿರನು ಭೀಷ್ಮನನ್ನು ಮಹಾದೇವನ ಗುಣಗಳನ್ನು ತಿಳಿಸುವಂತೆ ಕೇಳಿಕೊಂಡಾಗ, ಭೀಷ್ಮನು ಹೀಗೆ ಉತ್ತರಿಸುತ್ತಾನೆ:

"ಜ್ಞಾನಿಯಾದ ಮಹಾದೇವನ ಗುಣಗಳನ್ನು ತಿಳಿಸುವುದು ನನಗೆ ಸಾಧ್ಯವಿಲ್ಲ. ಅವನು ಎಲ್ಲ ವಸ್ತುಗಳಲ್ಲಿಯೂ ಇದ್ದು, ಎಲ್ಲಿಯೂ ಕಾಣದವನಾಗಿದ್ದಾನೆ. ಅವನು, ಬ್ರಹ್ಮ, ವಿಷ್ಣು ಮತ್ತು ಇಂದ್ರರಿಗೆ ಸ್ವಾಮಿ. ಅವನನ್ನು ಬ್ರಹ್ಮನಿಂದ ಹಿಡಿದು ಪಿಶಾಚಗಳವರೆಗೆ ಎಲ್ಲರೂ ಪೂಜಿಸುತ್ತಾರೆ. ಅವನು ಪ್ರಕೃತಿ ಮತ್ತು ಪುರುಷ ಎರಡನ್ನೂ ಮೀರಿದವನು. ಯೋಗದಲ್ಲಿ ಪರಿಣತರಾದ ಋಷಿಗಳು ಮತ್ತು ಸತ್ಯದರ್ಶನ ಪಡೆದವರು ಧ್ಯಾನಿಸುವುದು ಇವನನ್ನೇ. ಪರಬ್ರಹ್ಮನೆಂದರೂ ಅಕ್ಷಯ ಬ್ರಹ್ಮನೆಂದರೂ ಇವನೇ. ಸತ್ತೆ ಎಂದರೂ ಸದಸತ್ತೆಂದರೂ ಇವನೇ. ತನ್ನ ಶಕ್ತಿಯಿಂದ ಪ್ರಕೃತಿ ಮತ್ತು ಪುರುಷರನ್ನು ವ್ಯಕ್ತಪಡಿಸಿದ

ಈ ದೇವಾಧಿದೇವನೂ ಪ್ರಜಾಪತಿಯೂ ಅನಂತರ ಬ್ರಹ್ಮನನ್ನು ಸೃಷ್ಟಿಸಿದನು. ಭ್ರೂಣವಾಸ, ಮುಪ್ಪು, ಹುಟ್ಟು ಮತ್ತು ಸಾವುಗಳಿಗೆ ಒಳಗಾದ ನನ್ನಂತಹ ಮಾನವರಿಗೆ ಆ ಪರಶಿವನ, ಆ ಭವನ ಗುಣಗಳನ್ನು ತಿಳಿಸಲು ಹೇಗೆ ಸಾಧ್ಯ? ಶಂಖಚಕ್ರ ಗಧಾಧಾರಿಯಾದ ನಾರಾಯಣನಿಗಲ್ಲದೆ ಇದು ಮತ್ತಾರಿಗೆ ಸಾಧ್ಯ? ಜ್ಞಾನಿಯೂ, ಕಲ್ಯಾಣ ಗುಣಗಳನ್ನುಳ್ಳವನೂ, ಅಜೇಯನೂ, ದಿವ್ಯ ದೃಷ್ಟಿಯುಳ್ಳವನೂ, ಅತಿಶಯ ಶಕ್ತಿಯುಳ್ಳವನೂ ಆದ ನಾರಾಯಣನು ಅವನನ್ನು ದಿವ್ಯಚಕ್ಷುಗಳಿಂದ ಗ್ರಹಿಸುತ್ತಾನೆ. ಕೃಷ್ಣನು ತನ್ನ ಶಿವಭಕ್ತಿಯ ಮೂಲಕವೇ ಪ್ರಪಂಚವನ್ನು ಪ್ರವೇಶಿಸಿದ್ದಾನೆ. ಕೃಷ್ಣನು ಬದರಿಯ ದೈವವನ್ನು (ಮಹಾದೇವನನ್ನು) ಪ್ರಸನ್ನಗೊಳಿಸಿ, ಸ್ವರ್ಣಾಕ್ಷ ಮಹಾದೇವನಿಂದ ಎಲ್ಲ ಸಂಪತ್ತಿಗಿಂತಲೂ ಶ್ರೇಷ್ಠವಾದ ಅಂತರ್ಯಾಮಿತ್ವವನ್ನು ಪಡೆದನು. ಈ ಮಾಧವನು (ಕೃಷ್ಣನು) ಒಂದು ಸಾವಿರ ವರ್ಷಗಳವರೆಗೆ, ವರವನ್ನು ಕೊಡುವ ಮತ್ತು ಜಗದ್ಗುರುವಾದ ಶಿವನನ್ನು ಸಂತುಷ್ಟಪಡಿಸಿದನು. ಪ್ರತಿಯುಗದಲ್ಲಿಯೂ ಮಹಾದೇವನು ಕೃಷ್ಣನಿಂದ ಆರಾಧಿಸಲ್ಪಡುತ್ತಾನೆ ಹಾಗೂ ಈ ಮಹಾತ್ಮನ ಮಹಾಭಕ್ತಿಯಿಂದ ಸಂತುಷ್ಟನಾಗಿದ್ದಾನೆ. ಈ ಅಚಲನಾದ ಹರಿಯು ವಂಶವೃದ್ಧಿಗಾಗಿ ಪರಿತಪಿಸುತ್ತಿದ್ದಾಗ ಆ ವಿಶ್ವದ ಪಿತಾಮಹನ ತೇಜಸ್ಸು ಎಷ್ಟು ದೊಡ್ಡದೆಂಬುದನ್ನು ಸ್ಪಷ್ಟವಾಗಿ ತಿಳಿದುಕೊಂಡಿದ್ದ. ಅವನಿಗಿಂತ ಉತ್ತಮನನ್ನು ನಾನು ಕಾಣೆ. ಈ ದೇವಾಧಿದೇವನ ಎಲ್ಲ ಹೆಸರುಗಳನ್ನೂ ಸ್ಮರಿಸಲು, ಆ ದಿವ್ಯ ಪುರುಷನ ಎಲ್ಲ ಗುಣಗಳನ್ನೂ ತಿಳಿಸಲು, ಆ ಮಹೇಶ್ವರನ ನಿಜವಾದ ಶಕ್ತಿಯ ವಿಸ್ತಾರಗಳನ್ನು ವರ್ಣಿಸಲು ಈ ವಿಶಾಲಬಾಹುವಿಗೆ (ಕೃಷ್ಣನಿಗೆ)ಮಾತ್ರ ಸಾಧ್ಯ."

ಯುಧಿಷ್ಠಿರ ಮತ್ತು ಭೀಷ್ಮರ ನಡುವಿನ ಈ ಸಂಭಾಷಣೆಯು ಕೃಷ್ಣನ ಎದುರಿನಲ್ಲೇ ನಡೆಯಿತು. ಏಕೆಂದರೆ, ಈ ಉತ್ತರವನ್ನು ಕೊಟ್ಟನಂತರ ಭೀಷ್ಮನು ಕೃಷ್ಣನನ್ನು ಸಂಬೋಧಿಸಿ, ಮಹಾದೇವನ ಮಹಿಮೆಯನ್ನು ಸ್ತುತಿಸುವಂತೆ ಹೇಳುತ್ತಾನೆ. ಪರದೈವವಾದ ಕೃಷ್ಣನು, ಇದರಿಂದ ಸ್ವಲ್ಪವೂ ಬೇಸರ ಪಟ್ಟುಕೊಳ್ಳದೆ, ಹಾಗೆಯೇ ಮಾಡಹೊರಟು, ಹೀಗೆ ಹೇಳುತ್ತಾನೆ:

"ಈಶ (ಮಹಾದೇವ)ನ ಕಾರ್ಯಗತಿಯನ್ನು ಅರಿಯಲು ಯಾರಿಗೂ ಅಸದಳವಲ್ಲ. ಅವನ ಸತ್ವವನ್ನು ಹಿರಣ್ಯಗರ್ಭರಾದಿಯಾಗಿ ಯಾವ ದೇವರಿಗಾಗಲೀ ಋಷಿ–ಇಂದ್ರರಿಗಾಗಲೀ, ಆದಿತ್ಯರು–ಸೂಕ್ಷ್ಮಾತಿಸೂಕ್ಷ್ಮಗಳನ್ನು ಗ್ರಹಿಸುವವರಿಗಾಗಲೀ ತಿಳಿಯಲು ಸಾಧ್ಯವಿಲ್ಲ. ಮುನಿಗಳಿಗೆ ಆಶ್ರಯದಾತನಾದ ಅವನನ್ನು ತಿಳಿಯಲು ಮಾನವರಿಗೆ ಹೇಗೆ ಸಾಧ್ಯ? ಅಸುರರನ್ನು ಸಂಹಾರ ಮಾಡುವ ಆ ದಿವ್ಯ ಪುರುಷನ, ಧರ್ಮ–ಕಾರ್ಯಗಳ ಪ್ರಭುವಿನ (ಮಹಾದೇವನ)ಕೆಲವು ಗುಣಗಳನ್ನು ಮಾತ್ರ ನಾನು ನಿನಗೆ ತಿಳಿಸಬಲ್ಲೆ."

ಇಲ್ಲಿ ನಮಗೆ ಕಾಣುವ ಅಂಶಗಳು ಎರಡು. ಕೃಷ್ಣನು ತಾನು ಶಿವನಿಗಿಂತ ಕೀಳು ಎಂಬುದನ್ನು ಒಪ್ಪಿಕೊಳ್ಳುತ್ತಾನೆ. ಅಲ್ಲದೆ ಶಿವನಿಗಿಂತ ಕೃಷ್ಣನನ್ನು ಕೆಳಕ್ಕೆ ತಳ್ಳಲಾಗಿದೆ. ಆದುದರಿಂದ ಅವನು ತನಗಿಂತ ಶ್ರೇಷ್ಠನಲ್ಲ ಅಷ್ಟೇಕೆ, ತನ್ನ ಸಮನೂ ಅಲ್ಲ ಎಂಬ ಅರಿವು ಇದೆ. ಈ ಅಂಶಗಳು ಸೌಪ್ತಿಕಾಪರ್ವದಲ್ಲಿ ಉಕ್ತವಾಗಿರುವ, ಮಹಾದೇವನು ಅಶ್ವತ್ಥಾಮನಿಗೆ ಹೇಳುವ ಮಾತುಗಳಿಂದ ಸ್ಪಷ್ಟವಾಗುತ್ತದೆ:[೧]

---

೧. ಮ್ಯೂರ್: 'ಉದ್ಧೃತ' : ಪುಟ ಸಂಖ್ಯೆ ತಿಳಿಸಿಲ್ಲ.

"ಕ್ರಿಯಾಶಕ್ತನಾಗಿರುವ ಕೃಷ್ಣನು ಸತ್ಯ, ಶುದ್ಧತೆ, ಪ್ರಾಮಾಣಿಕತೆ, ಔದಾರ್ಯ, ತಪಸ್ಸು, ಯಜ್ಞ, ಸಹನೆ, ವಿವೇಕ, ಇಂದ್ರಿಯನಿಗ್ರಹ, ಮನಸ್ಸು ಮತ್ತು ವಾಚಗಳಿಂದ ನನ್ನನ್ನು ಪೂಜಿಸಿದ್ದಾನೆ. ಆದುದರಿಂದ ನನಗೆ ಕೃಷ್ಣನಿಗಿಂತ ಪ್ರಿಯರಾದವರು ಯಾರೂ ಇಲ್ಲ."

ಹೀಗೆ ಶಿವನಿಗಿಂತ, ಎಲ್ಲ ದೇವರುಗಳಿಗಿಂತ ಮೇಲಕ್ಕೆ ಹೋಗಿದ್ದ ಅಷ್ಟೇಕೆ, ತಾನೇ ಪರಮೇಶ್ವರನಾಗಿದ್ದ ಕೃಷ್ಣನನ್ನು ಸಣ್ಣ ವರಗಳನ್ನು ಬೇಡುವ ಸಾಧಾರಣ ಶಿವಭಕ್ತನ ಮಟ್ಟಕ್ಕೆ ಇಳಿಸಲಾಯಿತು.

ಕೃಷ್ಣನನ್ನು ನಿಕೃಷ್ಟಸ್ಥಾನಕ್ಕೆ ಇಳಿಸಿದ ಕತೆ ಇಲ್ಲಿಗೇ ಮುಗಿಯಲಿಲ್ಲ. ಅವನಿಗೆ ಇನ್ನೂ ಹೆಚ್ಚಿನ ಅಪಮಾನ ಮಾಡಲಾಗಿದೆ. ಕೃಷ್ಣನು ತಾನು ಶಿವನಿಗಿಂತ ಕೀಳೆಂಬುದನ್ನು ಒಪ್ಪಿಕೊಂಡ. ಅಷ್ಟೇ ಅಲ್ಲ. ಅವನನ್ನು ಎಷ್ಟು ಕೆಳಮಟ್ಟಕ್ಕೆ ಇಳಿಸಲಾಯಿತೆಂದರೆ ಅವನು ಮಹಾಶಿವಭಕ್ತನಾದ ಉಪಮನ್ಯುವಿನ ಶಿಷ್ಯನಾಗಿ, ಅವನಿಂದ ಶಿವದೀಕ್ಷೆ ಪಡೆಯುವಂತಾಯಿತು. ಇದನ್ನು ಕೃಷ್ಣನೇ ಹೇಳುತ್ತಾನೆ:

"ಎಂಟನೆಯ ದಿನ ಶಾಸ್ತ್ರಾನುಸಾರ ಆ ಬ್ರಾಹ್ಮಣ (ಉಪಮನ್ಯು)ನಿಂದ ದೀಕ್ಷೆ ಪಡೆದೆ. ನನ್ನ ತಲೆಯನ್ನು ಪೂರ್ಣವಾಗಿ ಮುಂಡನ ಮಾಡಿಸಿ ಅದಕ್ಕೆ ತುಪ್ಪ ಬಳಿದು ದಂಡ ಮತ್ತು ಕುಶವನ್ನು ಕೈಯಲ್ಲಿ ಹಿಡಿದು ಮರದ ತೊಗಟೆಯನ್ನು ಧರಿಸಿ ಮೇಖಲೆಯಿಂದ ಅದನ್ನು ಬಂಧಿಸಿದೆನು." ಅನಂತರ ಕೃಷ್ಣನು ತಪಸ್ಸು ಮಾಡಿ, ಮಹಾದೇವನನ್ನು ಕಾಣುತ್ತಾನೆ.

ದೇವನೊಬ್ಬನನ್ನು ಇಷ್ಟೊಂದು ಎತ್ತರಕ್ಕೇರಿಸಿ, ಅಷ್ಟೊಂದು ಕೆಳಕ್ಕೆ ತಳ್ಳುವ ಇಂತಹ ಪ್ರಸಂಗ ಮತ್ತೊಂದಿರಲು ಸಾಧ್ಯವೇ ? ಕೇವಲ ಈಶ್ವರನಾಗಿದ್ದ ಶಿವನಿಗೆ ಹೋಲಿಸಿದರೆ, ಪರಮೇಶ್ವರನಾಗಿದ್ದ ಕೃಷ್ಣನು ಕೊನೆಗೆ ಈಶ್ವರನಾಗಿಯೂ ಉಳಿಯಲಿಲ್ಲ. ವಾಸ್ತವವಾಗಿ, ಅವನು ಶಿವಭಕ್ತನಾಗಿ, ಉಪಮನ್ಯುವಿನಂತಹ ಒಬ್ಬ ಸಾಧಾರಣ ಬ್ರಾಹ್ಮಣನಿಂದ ಶೈವಶಾಸ್ತ್ರಗಳನ್ನು ಕಲಿಯುವಂತಾಯಿತು.

ರಾಮನು ದೈವವಾದ ಪ್ರಸಂಗವು ಕೃಷ್ಣನು ದೈವವಾದ ಪ್ರಸಂಗಕ್ಕಿಂತ ಹೆಚ್ಚು ಕೃತ್ರಿಮವಾಗಿದೆ. ತಾನು ದೇವನೆಂಬ ವಿಷಯ ರಾಮನಿಗೇ ಗೊತ್ತಿರಲಿಲ್ಲ. ರಾವಣನನ್ನು ಸೋಲಿಸಿ ಕೊಂದು, ಸೀತೆಯನ್ನು ಪುನಃ ಪಡೆದ ನಂತರ, ಅವಳ ಚಾರಿತ್ರ್ಯವನ್ನು ಶಂಕಿಸಲಾಯಿತು. ಸೀತೆಯ ಬಗೆಗೆ ಆ ರೀತಿ ಆಡಿದ ಮಾತುಗಳನ್ನು ಕೇಳಿಸಿಕೊಂಡ ರಾಮನು ಖಿನ್ನನಾದನು. ರಾಮಾಯಣ ಹೀಗೆನ್ನುತ್ತದೆ:

"ಆಮೇಲೆ ಕುಬೇರ ಪ್ರಭುವೂ, ಯಮನೂ, ಪಿತೃಗಳು ಮತ್ತು ದೇವತೆಗಳ ಪ್ರಭುವಾದ ಇಂದ್ರನೊಂದಿಗೆ, ಸಮುದ್ರಗಳ ಒಡೆಯನಾದ ವರುಣನೂ ಮತ್ತು ತೇಜೋಮಯನೂ ಮುಕ್ಕಣ್ಣನೂ ನಂದಿವಾಹನನೂ ಆದ ಮಹಾದೇವನೊಂದಿಗೆ, ಸರ್ವಲೋಕವನ್ನು ಸೃಷ್ಟಿಸಿದ ಬ್ರಹ್ಮನೊಂದಿಗೆ, ವೇದವಿದರೊಂದಿಗೆ ಅಲ್ಲಿಗೆ ಬಂದರು: (ತೇಜಸ್ಸಿನಲ್ಲಿ ಇಂದ್ರನನ್ನು ಹೋಲುವ ದಶರಥ ರಾಜನೂ, ದಿವ್ಯರಥದಲ್ಲಿ ಕುಳಿತು, ವಾಯುವಿನಲ್ಲಿ ಸಂಚರಿಸುತ್ತಾ ಅಲ್ಲಿಗೆ ಬಂದನು): ಸೂರ್ಯಕಾಂತಿಯಿಂದ ಬೆಳಗುತ್ತಿದ್ದ ರಥಗಳಲ್ಲಿ ಪ್ರಯಾಣಿಸುತ್ತಿದ್ದ ಅವರು ಲಂಕೆಯಲ್ಲಿಳಿದು ರಾಘವರಾಮನ ಬಳಿ ಬಂದರು. ಅನಂತರ ಈ ಶ್ರೇಷ್ಠ ದೇವತೆಗಳು, ಆಭರಣಗಳಿಂದ ಅಲಂಕೃತವಾದ ರಾಮನ ವಿಶಾಲ ಬಾಹುಗಳನ್ನು ಹಿಡಿದು, ಕೈಮುಗಿದು ನಿಂತಿದ್ದ ಅವನನ್ನುದ್ದೇಶಿಸಿ ಹೀಗೆ ಹೇಳಿದರು: "ವಿಶ್ವದ ಸೃಷ್ಟಿಕರ್ತನೇ, ಜ್ಞಾನಿಗಳಲ್ಲಿ ಉತ್ತಮನೇ, ಸರ್ವಭೂತಗಳಲ್ಲಿ ಸಮಾವೇಶಗೊಂಡಿರುವವನೇ, ಸೀತೆಯ ಅಗ್ನಿಪ್ರವೇಶವನ್ನು ಏಕೆ ಕಡೆಗಣಿಸುತ್ತೀಯೆ? ನಿನ್ನನ್ನು ನೀನೇ ದೇವಗಣಾಧಿಪತಿಯೆಂದು ಏಕೆ ತಿಳಿಯುತ್ತಿಲ್ಲ? ನೀನೇ ಹಿಂದೆ

ಋತಧಾಮನೂ, ವಸುಗಳ ಅಧಿಪತಿಯಾಗಿದ್ದ ಪ್ರಜಾಪತಿಯೂ ಆಗಿದ್ದೆ. ಮೂರು ಲೋಕಗಳನ್ನು ಹಿಂದೆ ಸೃಷ್ಟಿಸಿದವನೂ, ಸ್ವತಂತ್ರ ದೇವನೂ, ರುದ್ರರಲ್ಲಿ ಎಂಟನೆಯ ರುದ್ರನೂ, ಸಾಧ್ಯರಲ್ಲಿ ಐದನೆಯ ಸಾಧ್ಯನೂ ನೀನೇ ; ಅಶ್ವಿನರು ನಿನ್ನ ಕಿವಿಗಳು, ಸೂರ್ಯಚಂದ್ರರು ನಿನ್ನ ಕಣ್ಣುಗಳು."

"ಅರಿಂಧಮನೆ, ನೀನು ಸರ್ವಭೂತಗಳ ಅಂತ್ಯದಲ್ಲಿಯೂ ಆದಿಯಲ್ಲಿಯೂ ಕಾಣಿಸುತ್ತೀಯ. ಆದರೂ ನೀನು ಸೀತೆಯನ್ನು ಸಾಧಾರಣ ಸ್ತ್ರೀಯಂತೆ ಕಾಣುತ್ತಿದ್ದೀಯ."

ದೇವತೆಗಳು ತನ್ನನ್ನು ಈ ರೀತಿ ಸಂಬೋಧಿಸುತ್ತಿರುವುದನ್ನು ಕೇಳಿ ಆಶ್ಚರ್ಯಚಕಿತನಾದ ರಾಮನು ಹೀಗೆ ಉತ್ತರಿಸಿದನು:

"ನಾನು ದಶರಥನ ಮಗನಾದ ರಾಮನೆಂದೂ, ಮಾನವನೆಂದೂ ತಿಳಿದಿದ್ದೇನೆ. ದೇವತೆಗಳೇ, ನಾನು ಯಾರು, ಎಲ್ಲಿಂದ ಬಂದೆ, ಎಂಬುದನ್ನು ತಿಳಿಸಿ."

ಇದಕ್ಕೆ ಉತ್ತರವಾಗಿ ಬ್ರಹ್ಮನು ಹೀಗೆ ಹೇಳಿದನು:

"ಓ ಶುದ್ಧಶಕ್ತಿಯುಳ್ಳವನೇ, ನನ್ನ ಸತ್ಯವಾಣಿಯನ್ನು ಕೇಳಿಸಿಕೊ. ತೇಜೋಮಯ ಪ್ರಭುವೂ, ಚಕ್ರಧಾರಿ ನಾರಾಯಣನೂ ಆದ ದೇವ ನೀನೇ: ಏಕ ಶೃಂಗಿ ವರಾಹನೂ, ಭೂತ ಮತ್ತು ಭವಿಷ್ಯತ್ತಿನ ವೈರಿಗಳನ್ನು ಜಯಿಸುವವನೂ, ಸತ್ಯವಾದ, ಅಕ್ಷಯವಾದ, ಮಧ್ಯಾಂತದಲ್ಲಿರುವ ಬ್ರಹ್ಮ ನೀನೇ. ಎಲ್ಲ ಲೋಕಗಳ ಪರಮಧರ್ಮನೂ, ಚತುರ್ಭುಜ ವಿಶ್ವಕ್ಸೇಣನೂ, ಧನುರ್ಧಾರಿ ಸಾರಂಗನೂ, ಇಂದ್ರಜಿತ್ ಹೃಷಿಕೇಶನೂ ನೀನೇ, ಪುರುಷನೂ ಪುರುಷೋತ್ತಮನೂ, ಅಜೇಯನೂ, ಖಡ್ಗಧಾರಿಯೂ ಆದ ವಿಷ್ಣುವು ನೀನೇ, ಅತಿಶಯ ಬಲವುಳ್ಳ ಅಧಿಪತಿಯೂ, ಮುಖ್ಯನೂ, ಸತ್ಯನೂ ಆದ ಕೃಷ್ಣ ಸಹ ನೀನೇ, ವಿವೇಕ, ಸಹನೆ ಮತ್ತು ಇಂದ್ರಿಯನಿಗ್ರಹ ನೀನೇ, ನೀನೇ ಸೃಷ್ಟಿಸ್ಥಿತಿಗಳ ಕಾರಣ; ಉಪೇಂದ್ರ ಮತ್ತು ಮಧುಸೂದನ ನೀನೇ, ಇಂದ್ರನ ಕಾರ್ಯಗಳನ್ನು ಮಾಡುವ ಮಹೇಂದ್ರನೂ, ಪದ್ಮನಾಭನೂ, ಯುದ್ಧಾಂತಿಕನೂ, ನೀನೇ, ದಿವ್ಯರ್ಷಿಗಳು ನಿನ್ನನ್ನು ಆಶ್ರಯನೆಂದೂ, ಭಕ್ತರಕ್ಷಕನೆಂದೂ ಕರೆಯುತ್ತಾರೆ. ಶತಶೃಂಗಿ, ವೇದಕರ್ತೃ, ಶಕ್ತಿಶಾಲಿಯಾದ ಸಹಸ್ರ ಶಿರಸ್ಸು ನೀನೇ, ಪ್ರಥಮದಲ್ಲಿ ಮೂರು ಲೋಕಗಳನ್ನು ಸೃಷ್ಟಿಸಿದವನೂ, ಸ್ವತಂತ್ರ ಪ್ರಭುವೂ, ಸಿದ್ಧ ಸಾಧ್ಯರ ರಕ್ಷಕನೂ ನೀನೇ, ಪ್ರಥಮದಲ್ಲಿ ಹುಟ್ಟಿದವನು ನೀನೇ, ನೀನೇ ಯಜ್ಞ, ವಷಟ್ಕಾರ, ಓಂಕಾರ, ಸರ್ವೋತ್ಕೃಷ್ಟ. ಸರ್ವದ ಮೂಲವೂ ಅಂತ್ಯವೂ ಆದ ನೀನು ಯಾರೆಂದು ಜನರಿಗೆ ಗೊತ್ತಿಲ್ಲ. ಸರ್ವಭೂತಗಳಲ್ಲಿ, ಬ್ರಾಹ್ಮಣರಲ್ಲಿ, ಗೋವುಗಳಲ್ಲಿ, ಎಲ್ಲ ಲೋಕಗಳಲ್ಲಿ ಪರ್ವತ ಮತ್ತು ನದಿಗಳಲ್ಲಿ ಕಾಣಿಸಿಕೊಳ್ಳುವನು ನೀನೇ, ಸಹಸ್ರಪದಿಯೂ ತೇಜೋಮಯನೂ, ಶತಶಿರಸ್ಸುಳ್ಳವನೂ ಸಹಸ್ರಾಕ್ಷನೂ ನೀನೇ, ಎಲ್ಲ ಭೂತಗಳನ್ನು, ಪರ್ವತಸಹಿತವಾದ ಭೂಮಿಯನ್ನು ರಕ್ಷಿಸುವವನು ನೀನೇ. ರಾಮನೇ, ಸಮುದ್ರದಾಳದಲ್ಲಿರುವವನೂ, ಮೂರು ಲೋಕಗಳನ್ನೂ, ದೇವತೆಗಳನ್ನೂ, ಗಂಧರ್ವರನ್ನೂ, ದಾನವರನ್ನೂ, ರಕ್ಷಿಸುವವನು ನೀನೇ ರಾಮನೇ, ನಾನೇ ನಿನ್ನ ಹೃದಯ, ಸರಸ್ವತಿ ದೇವಿಯೇ ನಿನ್ನ ನಾಲಿಗೆ. ನಿನ್ನ ಶರೀರದ ಮೇಲಿರುವ ಕೂದಲುಗಳಿಂದ ಬ್ರಹ್ಮನ ದೇವತೆಗಳನ್ನು ಸೃಷ್ಟಿಸಿದ್ದಾನೆ. ನೀನು ಕಣ್ಣನ್ನು ಮುಚ್ಚಿದರೆ ರಾತ್ರಿ, ತೆರೆದರೆ ಹಗಲು. ವೇದಗಳು ನಿನ್ನ ಆಲೋಚನೆಗಳು. ನೀನಿಲ್ಲದೆ, ಈ ವಿಶ್ವ ಇರಲಾರದು, ಇಡಿ ವಿಶ್ವವೇ ನಿನ್ನ ಶರೀರ. ಭೂಮಿಯೇ ನಿನ್ನ ಸ್ಥೈರ್ಯ. ಅಗ್ನಿಯೇ ನಿನ್ನ ಕೋಪ. ಸೋಮನೇ ನಿನ್ನ ಸುಖ. ಶ್ರೀವತ್ಸ ನಿನ್ನ ಕುರುಹು. ನಿನ್ನ ಮೂರು

ಹೆಜ್ಜೆಗಳು ಹಿಂದೆ ಮೂರು ಲೋಕಗಳನ್ನು ಆಕ್ರಮಿಸಿದವು. ಭಯಂಕರ ಬಲಿಯನ್ನು ಬಂಧಿಸಿದ ಮೇಲೆ ಮಹೇಂದ್ರನನ್ನು ಪ್ರಭುವನ್ನಾಗಿ ಮಾಡಲಾಯಿತು. ಪ್ರಮುಖವಾದ ಪ್ರಕಾಶವೆಂದು ಪ್ರಸಿದ್ಧವಾದ, ಪ್ರಮುಖ ರಾತ್ರಿಯೆಂದು ಪ್ರಸಿದ್ಧವಾದ, ಶ್ರೇಷ್ಠರಿಗಿಂತ ಅತಿಶ್ರೇಷ್ಠನೆಂದು ಪ್ರಸಿದ್ಧನಾದ ನೀನು ಪರಮಾತ್ಮನೆಂದು ಪ್ರಸಿದ್ಧನಾಗಿದ್ದೀಯ. ಮಂತ್ರಗಳಲ್ಲಿ ಸರ್ವಶ್ರೇಷ್ಠನೆಂದು ಹೇಳಲಾಗುವ ನೀನು ಸರ್ವ ಶ್ರೇಷ್ಠನೇ ಆಗಿದ್ದೀಯಾ. ಸೃಷ್ಟಿ, ಸ್ಥಿತಿ ಮತ್ತು ಲಯಗಳಿಗೆ ಮೂಲವೆಂದು ಜನರು ವರ್ಣಿಸುವುದು ನಿನ್ನನ್ನೇ."

ರಾಮನ ಪಂಥದಲ್ಲಿ ಅದೇ ಮಟ್ಟದ ಕೃತ್ರಿಮತೆ ಕಾಣುತ್ತಿರುವುದು ಸ್ಪಷ್ಟವಾಗಿದೆ. ಕೃಷ್ಣನಂತೆ ರಾಮನೂ ಸಹ ದೇವತ್ವಕ್ಕೇರಿಸಲ್ಪಟ್ಟ ಮಾನವ. ಬ್ರಹ್ಮ, ವಿಷ್ಣು ಮತ್ತು ಮಹೇಶರಂತೆ ರಾಮನು ಜನ್ಮತಃ ದೇವನಲ್ಲ. ಪ್ರಾಯಶಃ ಅವನ ದೇವತ್ವವನ್ನು ಪೂರ್ಣಗೊಳಿಸಲು, ಅವನು ವಿಷ್ಣುವಿನ ಅವತಾರವೆಂದೂ, ಅವನ ಹೆಂಡತಿ ಸೀತೆಯು ವಿಷ್ಣುವಿನ ಹೆಂಡತಿ ಲಕ್ಷ್ಮಿಯ ಅವತಾರವೆಂದೂ ಸಾರುವ ಸಿದ್ಧಾಂತವನ್ನು ಸೃಷ್ಟಿಸಲಾಯಿತು.

ಒಂದು ವಿಷಯದಲ್ಲಿ ರಾಮ ಅದೃಷ್ಟವಂತ. ಬ್ರಹ್ಮ, ವಿಷ್ಣು, ಕೃಷ್ಣ ಮುಂತಾದ ದೇವರುಗಳಿಗಾದ ದುರ್ಗತಿ ಅವನಿಗಾಗಲಿಲ್ಲ. ಆದರೆ ರಾಮನನ್ನು ಬ್ರಾಹ್ಮಣರ ವೀರನಾದ ಪರಶುರಾಮನಿಗಿಂತ ನಿಕೃಷ್ಟನನ್ನಾಗಿ ಮಾಡಲು ಒಂದು ಪ್ರಯತ್ನವಂತೂ ನಡೆಯಿತು. ರಾಮಾಯಣ ಈ ಕತೆಯನ್ನು ಹೀಗೆ ಹೇಳುತ್ತದೆ:

"ಮಿಥಿಲೆಯ ರಾಜನೂ, ರಾಮನ ಹೆಂಡತಿಯ ತಂದೆಯೂ ಆದ ಜನಕನಿಂದ ಬೀಳ್ಕೊಂಡು ತನ್ನ ರಾಜಧಾನಿಗೆ ಹಿಂದಿರುಗುತ್ತಿದ್ದ ದಶರಥನಿಗೆ ಶಕುನ ಹಕ್ಕಿಗಳು ಅಶುಭ ನುಡಿಯುತ್ತಿದ್ದುದು ಕೇಳಿಸಿತು. ಆಗ ವಸಿಷ್ಠ ಮುನಿಯು ದಶರಥನಿಗೆ 'ನಿನಗೆ ಕಾಡು ಪ್ರಾಣಿಗಳು ಪ್ರದಕ್ಷಿಣೆ ಮಾಡುತ್ತವೆ. ಅದೇ ಶುಭಸೂಚನೆ' ಎಂದು ಪರಿಹಾರ ಹೇಳಿದನು. ಆಗ ಪರಶುರಾಮನ ಆಗಮನವನ್ನು ಮುನ್ಸೂಚಿಸುವ, ಭೂಮಿಯನ್ನು ನಡುಗಿಸುವ, ಪ್ರಚಂಡ ಬಿರುಗಾಳಿ ಬಂದು ಮರಗಳನ್ನು ಕೆಡವಿತು. ಹಾಗೂ ಸೂರ್ಯನನ್ನು ಮುಚ್ಚುವಂಥ ಕತ್ತಲು ಆವರಿಸಿತು. ಪರಶುರಾಮನು ನೋಡಲು ಭಯಂಕರವಾಗಿದ್ದು. ಬೆಂಕಿಯಂತೆ ಪ್ರಜ್ವಲಿಸುತ್ತಿದ್ದ, ಕೈಯಲ್ಲಿ ಕೊಡಲಿಯನ್ನು ಹಿಡಿದಿದ್ದ ಹಾಗೂ ಭುಜದಲ್ಲಿ ಧನುಸ್ಸನ್ನು ಧರಿಸಿದ್ದ. ಆದರಾತಿಥ್ಯವನ್ನು ಸ್ವೀಕರಿಸಿದ ನಂತರ ಅವನು ದಶರಥನ ಮಗನಾದ ರಾಮನಿಗೆ ಈ ರೀತಿ ಹೇಳಿದನು: 'ಜನಕ ಮಾಡಿದ್ದ ಬಿಲ್ಲನ್ನು ಮುರಿಯುವಲ್ಲಿ  ನೀನು ತೋರಿದ ಶಕ್ತಿಯ ಬಗ್ಗೆ ನಾನು ಕೇಳಿದ್ದೇನೆ: ಈಗ ನಾನು ಬೇರೊಂದು ಬಿಲ್ಲನ್ನು ತಂದಿದ್ದೇನೆ: ಅದನ್ನು ಬಗ್ಗಿಸಿ, ಅದರ ನಾರಿಯ ಮೇಲೆ ಬಾಣವನ್ನಿಡು. ಒಂದು ವೇಳೆ ನೀನು ಇದರಲ್ಲಿ ಗೆದ್ದರೆ, ನನ್ನ ಜೊತೆ ಮಲ್ಲಯುದ್ಧ ಮಾಡಲು ಆಹ್ವಾನಿಸುತ್ತೇನೆ'. ರಾಮನು ತನ್ನ ವೀರಯೋಗ್ಯ ಗುಣಗಳನ್ನು ಪ್ರತಿಸ್ಪರ್ಧಿಯಾದ ಪರಶುರಾಮನು ನಿಂದಿಸಿದರೂ, ತನ್ನ ಶಕ್ತಿಯನ್ನು ಪ್ರಮಾಣೀಕರಿಸುತ್ತೇನೆಂದು ಉತ್ತರಿಸಿದನಲ್ಲದೆ, ಕೋಪದಿಂದ ಪರಶುರಾಮನ ಹೆಗಲಿನಲ್ಲಿದ್ದ ಬಿಲ್ಲನ್ನು ಕಿತ್ತುಕೊಂಡು, ಬಗ್ಗಿಸಿ, ಅದರ ನಾರಿಯಲ್ಲಿ ಒಂದು ಬಾಣವನ್ನು ಇರಿಸಿದನು; 'ಆದರೆ, ನೀನು ಬ್ರಾಹ್ಮಣನಾದುದರಿಂದಲೂ, ವಿಶ್ವಾಮಿತ್ರನ ಸಂಬಂಧದಿಂದಲೂ, ನಾನು ನಿನ್ನ ಮೇಲೆ ಇದನ್ನು ಪ್ರಯೋಗಿಸುವುದಿಲ್ಲ. ಆದರೂ ನಾನು ನಿನ್ನ ಅಣಿಮಾದಿ ಶಕ್ತಿಗಳನ್ನು ನಾಶಮಾಡುತ್ತೇನೆ; ನೀನು ತಪಸ್ಸಿನಿಂದ ಗಳಿಸಿರುವ ದಿವ್ಯಲೋಕಕ್ಕೆ ಹೋಗುವ ಶಕ್ತಿಯನ್ನು ನಾಶಮಾಡುತ್ತೇನೆ' ಎನ್ನುತ್ತಾನೆ. ದೇವದೇವತೆಗಳೆಲ್ಲ ಬಂದು, ಈ ದೃಶ್ಯವನ್ನು ಸಾಕ್ಷೀಭೂತರಾಗಿ ನೋಡುತ್ತಿದ್ದರು. ಆಗ ಎದೆಗುಂದಿದ

ಹಾಗು ಶಕ್ತಿಹೀನನಾದ ಪರಶುರಾಮನು ದೈನ್ಯದಿಂದ 'ನನ್ನ ಅಣಿಮಾದಿ ಶಕ್ತಿಗಳನ್ನು ನಾಶಮಾಡಬೇಡ; ಏಕೆಂದರೆ ನಾನು ಪ್ರತಿರಾತ್ರಿಯೂ ಭೂಮಿಯನ್ನು ಬಿಟ್ಟುಹೋಗುತ್ತೇನೆಂದು ಕಶ್ಯಪನಿಗೆ ವಚನವಿತ್ತಿರುವುದರಿಂದ, ಹಾಗೆ ಮಾಡಲು ನನಗೆ ಸಾಧ್ಯವಾಗುವುದಿಲ್ಲ' ಎನ್ನುತ್ತಾನೆ. ಆದರೆ ದಿವ್ಯಲೋಕಕ್ಕೆ ಒಯ್ಯುವ ಶಕ್ತಿಯನ್ನು ಬೇಕಾದರೆ ನಾಶಮಾಡಬಹುದು ಎಂದು ಹೇಳುತ್ತಾನೆ."

ಇದನ್ನು ಬಿಟ್ಟರೆ, ರಾಮನಿಗೆ ಯಾವ ದೇವನೂ ಪ್ರತಿಸ್ಪರ್ಧಿಯಿರಲಿಲ್ಲ. ಅವನು ತನ್ನ ಸ್ಥಾನವನ್ನು ಕಾಪಾಡಿಕೊಂಡ. ಆದರೆ ಉಳಿದ ದೇವರುಗಳ ಕತೆ ಬೇರೆ. ಪಾಪ, ಅವರು ಬ್ರಾಹ್ಮಣರ ಕೈಗೆ ಸಿಕ್ಕಿದ ಆಟದ ಗೊಂಬೆಗಳಾದರು. ಬ್ರಾಹ್ಮಣರು ಈ ದೇವರುಗಳನ್ನು ಅಷ್ಟೊಂದು ನಿಕೃಷ್ಟವಾಗಿ ಏಕೆ ಕಂಡರು?

* * * *

# ಒಗಟು – ೧೨

## ಬ್ರಾಹ್ಮಣರು ದೇವರುಗಳನ್ನು ಪದಚ್ಯುತಿಗೊಳಿಸಿ ದೇವಿಯರನ್ನೇಕೆ ಮೇಲೇರಿಸಿದರು?*

ದೇವರುಗಳನ್ನು ಆರಾಧಿಸುವುದು ಸಾಮಾನ್ಯ ಸಂಗತಿ. ಆದರೆ ದೇವಿಯರನ್ನು ಆರಾಧಿಸುವುದು ಸಾಮಾನ್ಯವೇನಲ್ಲ. ಕಾರಣವೇನೆಂದರೆ, ಸಾಮಾನ್ಯವಾಗಿ ದೇವರುಗಳು ಮದುವೆಯಾಗುವುದಿಲ್ಲ. ಆದುದರಿಂದ, ದೇವಿಯರ ಸ್ಥಾನಕ್ಕೇರಿಸಲ್ಪಡುವ ಹೆಂಡತಿಯರು ಅವರಿಗಿಲ್ಲ. ದೇವನು ಮದುವೆಯಾಗುತ್ತಾನೆಂಬ ತತ್ವವು ಎಷ್ಟೊಂದು ಅಸಹ್ಯಕರವೆಂದರೆ ಯೇಸುವು ದೇವನ ಮಗನೆಂಬ ಸಿದ್ಧಾಂತವನ್ನು ಯಹೂದಿಗಳಿಗೆ ಒಪ್ಪಿಸಲು ಆದಿ ಕ್ರೈಸ್ತರಿಗೆ ಸಾಧ್ಯವಾಗಲಿಲ್ಲ. "ದೇವನು ಮದುವೆಯಾಗಿಲ್ಲ, ಅವನಿಗೆ ಮಗನಿರಲು ಹೇಗೆ ಸಾಧ್ಯ" ಎಂದು ಯಹೂದಿಗಳು ಪ್ರಶ್ನಿಸುತ್ತಿದ್ದರು.'

ಆದರೆ ಹಿಂದೂಗಳ ವಿಷಯವೇ ಬೇರೆ. ಅವರು ದೇವರುಗಳನ್ನಷ್ಟೇ ಅಲ್ಲ ದೇವಿಯರನ್ನೂ ಪೂಜಿಸುತ್ತಾರೆ. ಇದು ಮೊದಲಿನಿಂದಲೂ ಇದೆ.

ಋಗ್ವೇದದಲ್ಲಿ ಪೃಥ್ವಿ, ಅದಿತಿ, ದಿತಿ, ನಿಷ್ಟಿಗ್ರಿ, ಇಂದ್ರಾಣಿ, ಪೃಷ್ಣ, ಉಷಾ, ಸೂರ್ಯ, ಆಗ್ನಾಯಿ, ವರುಣಾಣಿ, ರೋದಸಿ, ರಾಕ, ಸಿನಿವಲಿ, ಶ್ರದ್ಧಾ, ಅರಮತಿ, ಅಪ್ಸರ, ಸರಸ್ವತಿ ಮುಂತಾದ ಅನೇಕ ದೇವಿಯರ ಪ್ರಸ್ತಾಪವಿದೆ.

ಪೃಥ್ವಿಯು ಆರ್ಯರ ಅತ್ಯಂತ ಪುರಾತನ ದೇವಿ. ಆಕೆಯನ್ನು ದ್ಯೌಸ್‌ನ (ಸ್ವರ್ಗ) ಅಥವಾ ಪರ್ಜನ್ಯನ ಹೆಂಡತಿಯಂತೆ ಪ್ರತಿನಿಧಿಸಲಾಗಿದೆ. ಪೃಥ್ವಿಯು ಅನೇಕ ದೇವತೆಗಳ ತಾಯಿ ಎಂದು ಪರಿಗಣಿತವಾಗಿರುವುದರಿಂದ ಆಕೆ ಒಬ್ಬ ಪ್ರಮುಖ ದೇವತೆಯಾಗಿದ್ದಾಳೆ.

ಕಾಲಕ್ರಮದ ಪ್ರಕಾರ ಅದಿತಿಯು ವೇದದ ಪುರಾತನ ದೇವತೆಗಳಲ್ಲಿ ಒಬ್ಬಳು. ಆಕೆಯನ್ನು ದೇವಮಾತೆಯೆಂದು ವರ್ಣಿಸಲಾಗಿದೆ. ದೇವತೆಗಳಾದ ಮಿತ್ರ, ಆರ್ಯಮನ್ ಮತ್ತು ವರುಣ ಆಕೆಯ ಮಕ್ಕಳು. ಆದರೆ ಅದಿತಿಯನ್ನು ಮದುವೆಯಾಗಿದ್ದವರು ಯಾರು ಎಂಬುದು ಋಗ್ವೇದದಿಂದ ಗೊತ್ತಾಗುವುದಿಲ್ಲ. ದಿತಿಯನ್ನು ಅದಿತಿಯನ್ನು ಜೊತೆಯಲ್ಲಿ ಮತ್ತು ಅದಿತಿಗೆ ವಿರುದ್ಧವೆಂಬಂತೆ ವರ್ಣಿಸಲಾಗಿದ್ದು, ದೈತ್ಯರು

---

* *ಈ ಅಧ್ಯಾಯಕ್ಕೆ ಮೊದಲು 'ವೈದಿಕ ಮತ್ತು ಅವೈದಿಕ ದೇವಿಯರು' ಎಂಬ ಶೀರ್ಷಿಕೆ ಇತ್ತು. ಈ ಅಧ್ಯಾಯದಲ್ಲಿ ವ್ಯವಹರಿಸಲಾಗಿರುವ ವಿಷಯವನ್ನು ನೋಡಿ ಮತ್ತು ಅಧ್ಯಾಯದ ಕೊನೆಯ ಪ್ಯಾರಾವನ್ನು ಪರಿವೀಕ್ಷಿಸಿ, ಇದನ್ನು ಒಗಟು ೧೨ ಎಂದು ವಿಂಗಡಿಸಿದ್ದೇವೆ ಹಾಗೂ ಇದು ವಿಷಯಾನುಕ್ರಮಣಿಕೆಯ ವಿಷಯಕ್ಕನುಗುಣವಾಗಿದೆ. ಇದು ೨೧ ಪುಟಗಳ ಬೆರಳಚ್ಚಿನ ಪ್ರತಿಯಾಗಿದ್ದು, ಅದರಲ್ಲಿ ಕೆಲವು ಮಾರ್ಪಾಟುಗಳಾಗಿವೆ. ಅಲ್ಲದೆ ಕೊನೆಯ ಪ್ಯಾರಾವನ್ನು ಲೇಖಕರು ತಮ್ಮ ಕೈಯಿಂದಲೇ ಬರೆದಿದ್ದಾರೆ–ಸಂ.*

ಆಕೆಯ ಮಕ್ಕಳೆಂದೂ, ಅವರೇ ಆಮೇಲಿನ ಭಾರತೀಯ ಪುರಾಣಗಳಲ್ಲಿ ದೇವತೆಗಳ ವೈರಿಗಳಾದರೆಂದೂ ಹೇಳಲಾಗಿದೆ. ಇಷ್ಟು ಬಿಟ್ಟರೆ ದಿತಿಯ ಬಗೆಗೆ ಹೆಚ್ಚೇನೂ ನಮಗೆ ಗೊತ್ತಾಗುವುದಿಲ್ಲ.

ನಿಷ್ಟಿಗ್ರಿ ದೇವಿಯು ಇಂದ್ರನ ತಾಯಿ. ಇಂದ್ರಾಣಿ ದೇವಿಯು ಇಂದ್ರನ ಪತ್ನಿ. ಪೃಷ್ಣಿಯು ಮರುತನ ತಾಯಿ. ಉಷೆಯನ್ನು ಆಕಾಶದ ಮಗಳೆಂದೂ, ಭಗನ ಸೋದರಿಯೆಂದೂ, ವರುಣನ ರಕ್ತಸಂಬಂಧಿಯೆಂದೂ, ಸೂರ್ಯನ ಹೆಂಡತಿಯೆಂದೂ ವರ್ಣಿಸಲಾಗಿದೆ. ಸೂರ್ಯಾದೇವಿಯು ಸೂರ್ಯನ ಮಗಳು ಮತ್ತು ಅಶ್ವಿನಿ ದೇವತೆಗಳ ಅಥವಾ ಸೋಮನ ಪತ್ನಿ.

ಆಗ್ನಾಯಿ, ವರುಣಾಣಿ ಮತ್ತು ರೋದಸಿ ದೇವಿಯರು. ಕ್ರಮವಾಗಿ, ಅಗ್ನಿ, ವರುಣ ಮತ್ತು ರುದ್ರರ ಪತ್ನಿಯರು. ಉಳಿದ ದೇವಿಯರು ಕೇವಲ ನದಿಗಳ ವೈಯಕ್ತೀಕರಣ ಅಥವಾ ಅವರ ಬಗೆಗೆ ಯಾವುದೇ ವಿವರ ಇಲ್ಲ.

ಈ ವೀಕ್ಷಣೆಯಿಂದ ಎರಡು ವಿಷಯಗಳು ಸ್ಪಷ್ಟವಾಗುತ್ತವೆ. ಮೊದಲನೆಯದೆಂದರೆ, ಹಿಂದೂ ದೇವನು ಗೃಹಸ್ಥಾಶ್ರಮವನ್ನು ಪ್ರವೇಶಿಸಬಹುದು. ಹೀಗೆ ದೇವನು ಸಾಧಾರಣ ಮನುಷ್ಯನಂತೆ ವರ್ತಿಸಿದ್ದಕ್ಕಾಗಿ ಆ ದೇವನಿಗಾಗಲಿ ಅವನ ಭಕ್ತನಿಗಾಗಲಿ ಯಾವ ವಿಘ್ನವು ಆಗಬೇಕಾಗಿಲ್ಲ. ಎರಡನೆಯದೆಂದರೆ, ಸ್ವಾಭಾವಿಕವಾಗಿಯೇ ದೇವನ ಹೆಂಡತಿಯು ಅವನ ಭಕ್ತರಿಗೆ ಪೂಜೆಗೆ ಅರ್ಹಳಾದ ದೇವಿಯಾಗುತ್ತಾಳೆ.

ವೇದಗಳ ಕಾಲದಿಂದ ಪುರಾಣಗಳ ಕಾಲಕ್ಕೆ ಬಂದರೆ ಅಲ್ಲಿ ದೇವಿ, ಉಮಾ, ಸತೀ, ಅಂಬಿಕಾ, ಪಾರ್ವತಿ, ಹೇಮಾವತಿ, ಗೌರಿ, ಕಾಳಿ, ನಿರ್‌ತಿ, ಚಂಡಿ, ಕಾತ್ಯಾಯಿನಿ, ದುರ್ಗಾ, ದಶಭುಜಾ, ಸಿಂಹವಾಹಿನಿ, ಮಹಿಷಾಸುರಮರ್ದಿನಿ, ಜಗದ್ಧಾತ್ರಿ, ಮುಕ್ತಕೇಶಿ, ತಾರಾ, ಚಿನ್ನಮಸ್ತಕಾ, ಜಗದ್ಗೌರಿ, ಪ್ರತ್ಯಾಂಗೀರ, ಅನ್ನಪೂರ್ಣ ಗಣೇಶ ಜನನಿ, ಕೃಷ್ಣಕ್ರೋರ ಮತ್ತು ಲಕ್ಷ್ಮಿ ಮುಂತಾದ ಅನೇಕ ದೇವಿಯರ ಹೆಸರುಗಳು ಸಿಕ್ಕುತ್ತವೆ. ಈ ದೇವಿಯರು ಯಾರ್‍ಯಾರು ಎಂಬುದರ ಪಟ್ಟಿ ಮಾಡುವುದು ಬಹಳ ಕಷ್ಟವಾಗುತ್ತದೆ. ಮೊದಲನೆಯದಾಗಿ, ಪ್ರತಿಯೊಂದು ಹೆಸರೂ ಒಬ್ಬ ಪ್ರತ್ಯೇಕ ದೇವಿಗೆ ಸ್ಪಷ್ಟವಾಗಿ ಅನ್ವಯಿಸುತ್ತದೆಯೋ ಅಥವಾ ಅವೆಲ್ಲ ಒಬ್ಬಳೇ ದೇವಿಯ ಬೇರೆ ಬೇರೆ ಹೆಸರುಗಳೋ ಎಂದು ನಿರ್ಧರಿಸುವುದು ಕಷ್ಟ. ಅವರ ತಂದೆ–ತಾಯಿಗಳಾರು ಎಂಬುದನ್ನು ತಿಳಿಯುವುದೂ ಅಷ್ಟೇ ಕಷ್ಟದ ಕೆಲಸ. ಅವರಲ್ಲಿ ಯಾರ ಗಂಡ ಯಾರು ಎಂಬುದನ್ನೂ ಖಚಿತವಾಗಿ ಹೇಳಲು ಸಾಧ್ಯವಿಲ್ಲ.

ಒಂದು ವಿವರಣೆಯ ಪ್ರಕಾರ, ಉಮಾ, ದೇವಿ, ಸತೀ, ಪಾರ್ವತಿ ಮತ್ತು ಗೌರಿ ಒಬ್ಬಳೇ ದೇವಿಯ ಬೇರೆ ಬೇರೆ ಹೆಸರುಗಳು. ಆದರೆ ದೇವಿಯು ದಕ್ಷನ ಮಗಳೆಂದೂ ಅಂಬಿಕಾ ರುದ್ರನ ಸೋದರಿಯೆಂದೂ ಹೇಳಲಾಗಿದೆ. ಪಾರ್ವತಿಯ ಮೂಲದ ಬಗೆಗೆ ವರಾಹ ಪುರಾಣ ಹೀಗೆ ಹೇಳುತ್ತದೆ:[೧]

"ಬ್ರಹ್ಮನು ಕೈಲಾಸ ಪರ್ವತದ ಮೇಲಿದ್ದ ಶಿವನನ್ನು ಸಂಧಿಸಿದಾಗ, ಅವನನ್ನು ಹೀಗೆ ಕೇಳಲಾಯಿತು: 'ಬ್ರಹ್ಮನೇ, ನಿನ್ನನ್ನು ಇಲ್ಲಿಗೆ ಬರುವಂತೆ ಮಾಡಿದುದು ಏನು?' ಅದಕ್ಕೆ ಬ್ರಹ್ಮನು 'ಅಂಧಕ ನೆಂಬ ಅಸುರನಿದ್ದಾನೆ. ಅವನಿಂದ ಪೀಡಿತರಾದ ದೇವತೆಗಳು ರಕ್ಷಣೆಗಾಗಿ ನನ್ನ ಬಳಿ ಬಂದರು' ಎಂದು

೧. ವಿಲ್ಕಿನ್ಸರ 'ಹಿಂದೂ ಮೈಥಾಲಜಿ'ಯಲ್ಲಿ ಪು. ೨೯೦–೯೧.

ಹೇಳಿ ಶಿವನನ್ನೇ ತದೇಕ ದೃಷ್ಟಿಯಿಂದ ನೋಡಿದನು. ಆಗ ಶಿವನು ವಿಷ್ಣುವನ್ನು ಮಾನಸಿಕವಾಗೇ ಅಲ್ಲಿಗೆ ಕರೆಸಿದನು. ಆ ಮೂವರು ದೇವರುಗಳು ಪರಸ್ಪರರನ್ನು ನೋಡುತ್ತಿದ್ದಾಗ, ಅವರ ಪ್ರಕಾಶಮಯ ದೃಷ್ಟಿಗಳಿಂದ ಒಬ್ಬ ದಿವ್ಯ ಸುಂದರ ಕನ್ಯೆ ಹುಟ್ಟಿದಳು. ತಿಳಿನೀಲಿ ಬಣ್ಣ ಮೈಯುಳ್ಳ, ನೀಲಕಮಲದ ದಳದಂತಿರುವ, ಮಣಿಭೂಷಿತಳಾದ ಅವಳು ಲಜ್ಜೆಯಿಂದ ಬ್ರಹ್ಮ, ವಿಷ್ಣು ಮತ್ತು ಮಹೇಶ್ವರರಿಗೆ ವಂದಿಸಿದಳು. ನೀನಾರು? ಕಪ್ಪು, ಬಿಳುಪು ಮತ್ತು ಕೆಂಪು ನಿನ್ನ ವೈಶಿಷ್ಟ್ಯವೇಕೆ? ಎಂದು ಕೇಳಲಾಗಿ, ಆಕೆ, 'ನಿಮ್ಮ ದೃಷ್ಟಿಯಿಂದ ನಾನು ಹುಟ್ಟಿದ್ದೇನೆ. ನಿಮ್ಮ ಸರ್ವಶಕ್ತಿತ್ವದ ಬಗೆಗೆ ನಿಮಗೇ ಗೊತ್ತಿಲ್ಲವೇ?' ಎಂದು ಹೇಳಿದಳು. ಬ್ರಹ್ಮನು ಅವಳನ್ನು ಶ್ಲಾಘಿಸುತ್ತಾ ಹೀಗೆ ಹೇಳಿದ: 'ನಿನಗೆ ತ್ರಿಕಾಲಗಳ (ಭೂತ, ವರ್ತಮಾನ ಮತ್ತು ಭವಿಷ್ಯ) ದೇವಿ, ಜಗದ್ರಕ್ಷಕಿ ಎಂಬ ಹೆಸರು ಬರುತ್ತದೆ. ನಿನ್ನನ್ನು ಬೇರೆ ಬೇರೆ ಹೆಸರುಗಳಿಂದ ಪೂಜಿಸಲಾಗುತ್ತದೆ. ಏಕೆಂದರೆ, ನೀನು ನಿನ್ನ ಭಕ್ತರ ಆಸೆಗಳನ್ನು ಈಡೇರಿಸುವವಳು. ಆದರೆ, ಓ ದೇವಿಯೇ, ನಿನ್ನ ವೈಶಿಷ್ಟ್ಯಪೂರ್ಣವಾದ ಕಪ್ಪು, ಬಿಳುಪು ಮತ್ತು ಕೆಂಪುಗಳಿಗೆ ತಕ್ಕಂತೆ ನಿನ್ನನ್ನು ನೀನೇ ವಿಭಜಿಸಿಕೊ'. ಆಗ ಆಕೆ ಬ್ರಹ್ಮನ ಆಜ್ಞಾನುಸಾರ ಮೂರು ಭಾಗವಾದಳು–ಒಂದು ಭಾಗ ಕಪ್ಪು, ಒಂದು ಭಾಗ ಬಿಳುಪು, ಮತ್ತೊಂದು ಭಾಗ ಕೆಂಪು. ಬಿಳಿ ಭಾಗವೇ ಸುಂದರವಾದ, ಆನಂದಮಯಿಯಾದ ಸರಸ್ವತಿ. ಇವಳೇ ಸೃಷ್ಟಿಕಾರ್ಯದಲ್ಲಿ ಬ್ರಹ್ಮನೊಂದಿಗೆ ಸಹಕರಿಸಿದವಳು. ಕೆಂಪು ಭಾಗವೇ ಲಕ್ಷ್ಮೀ. ವಿಷ್ಣುವಿನ ಹೆಂಡತಿಯಾದ ಈಕೆ ಜಗದ್ರಕ್ಷಣಾಕಾರ್ಯದಲ್ಲಿ ಅವನೊಡನೆ ಸಹಕರಿಸಿದವಳು. ಶಿವನ ಅನೇಕ ಗುಣಗಳಿಂದಲೂ, ಶಕ್ತಿಯಿಂದಲೂ ಕೂಡಿದ ಪಾರ್ವತಿಯೇ ಕಪ್ಪು ಭಾಗ."

ಇಲ್ಲಿ ಸರಸ್ವತಿ, ಲಕ್ಷ್ಮೀ ಮತ್ತು ಪಾರ್ವತಿ ಒಬ್ಬಳೇ ದೇವಿಯ ಮೂರು ಬೇರೆ ಬೇರೆ ರೂಪಗಳೆಂದು ತೋರಿಸುವ ಒಂದು ಪ್ರಯತ್ನ ಮಾಡಲಾಗಿದೆ. ಆದರೆ ಸರಸ್ವತಿ ಬ್ರಹ್ಮನ ಪತ್ನಿ. ಲಕ್ಷ್ಮೀ ವಿಷ್ಣುವಿನ ಪತ್ನಿ ಮತ್ತು ಪಾರ್ವತಿ ಶಿವನ ಪತ್ನಿ ಎಂಬುದನ್ನೂ, ಬ್ರಹ್ಮ, ವಿಷ್ಣು ಮತ್ತು ಶಿವ ಪರಸ್ಪರ ಕಲಹಗಳಲ್ಲಿ ತೊಡಗಿದ್ದರೆಂಬುದನ್ನೂ ನಾವು ನೆನೆಸಿಕೊಂಡರೆ, ವರಾಹ ಪುರಾಣದ ಈ ವಿವರಣೆ ಬಹಳ ವಿಲಕ್ಷಣ ವೆನಿಸುತ್ತದೆ.

ಗೌರಿ ಯಾರು? ಪುರಾಣದ ಪ್ರಕಾರ ಗೌರಿ ಪಾರ್ವತಿಯ ಮತ್ತೊಂದು ಹೆಸರು. ಅವಳಿಗೆ ಗೌರಿ ಎಂಬ ಹೆಸರು ಬರಲು ಒಂದು ಕಾರಣವಿದೆ.[೧] ಶಿವ ಮತ್ತು ಪಾರ್ವತಿ ಕೈಲಾಸದಲ್ಲಿ ವಾಸ ಮಾಡುತ್ತಿದ್ದಾಗ ಅವರಿಬ್ಬರಲ್ಲಿ ಆಗಾಗ ಜಗಳಗಳಾಗುತ್ತಿದ್ದವು. ಒಂದು ಸಾರಿ ಶಿವನು ಅವಳ ಕಪ್ಪು ಬಣ್ಣವನ್ನು ಜರೆದನು. ಈ ನಿಂದೆಯಿಂದ ದುಃಖಿತಳಾದ ಆಕೆ ಅವನನ್ನು ಸ್ವಲ್ಪ ಕಾಲ ತ್ಯಜಿಸಿ, ಒಂದು ದಟ್ಟಡವಿಗೆ ಹೋಗಿ, ಕಠಿಣ ತಪಸ್ಸನ್ನಾಚರಿಸಿದಳು. ಆಗ ಬ್ರಹ್ಮನು ಪ್ರತ್ಯಕ್ಷವಾಗಿ ಅವಳಿಗೆ ಗೌರವ ವರ್ಣ ಬರಲಿ ಎಂದು ವರಕೊಟ್ಟನು. ಈ ಪ್ರಕಾರದಿಂದಾಗಿ ಅವಳನ್ನು ಗೌರಿ ಎಂದು ಕರೆಯಲಾಗುತ್ತಿದೆ.

ಉಳಿದಿಬ್ಬರು ದೇವಿಯರ ಹೆಸರುಗಳನ್ನು ತೆಗೆದುಕೊಂಡರೆ, ಅವರ ಹೆಸರುಗಳು ಒಬ್ಬಳೇ ದೇವಿಯ ಬೇರೆ ಬೇರೆ ಹೆಸರುಗಳೋ ಅಥವಾ ಅವರಿಬ್ಬರೂ ಬೇರೆ ಬೇರೆ ದೇವಿಯರೋ ಎಂದು ಸ್ಪಷ್ಟವಾಗಿ ಹೇಳಲಾರೆವು. ಮಹಾಭಾರತದ ಅರ್ಜುನನು ದುರ್ಗೆಯನ್ನು ಕುರಿತು ಹೇಳುವ

---

೧. ವಿಲ್ಕಿನ್ಸ್: ಪು ೨೮೯–೯೦

ಮಂತ್ರವೊಂದು ಹೀಗಿದೆ:[೧]

"ಸಿದ್ಧಸೇನಾನಿಯೇ, ಆರ್ಯಳೇ, ಮಂದರವಾಸಿಯೇ, ಕುಮಾರಿ, ಕಾಳಿ, ಕಪಾಲಿ, ಕಪಿಲಾ, ಕೃಷ್ಣಪಿಂಗಳೆಯೇ ನಿನಗೆ ನಮಸ್ಕಾರಗಳು; ಭದ್ರಕಾಳಿಯೇ ನಿನಗೆ ನಮಸ್ಕಾರಗಳು; ಮಹಾಕಾಳಿ, ಚಂಡಿ, ಚಂಡಾ, ತಾರಿಣಿ, ವರವರ್ಣಿ ನಿನಗೆ ನಮಸ್ಕಾರಗಳು; ಶುಭಮಂಗಳೆಯೇ, ಓ ಕರಾಳಿ, ಓ ವಿಜಯಾ, ಓ ಜಯಾ, ಕೃಷ್ಣನ ತಂಗಿಯೇ, ಮಹಿಷಾಸುರನ ರಕ್ತವನ್ನು ಹೀರಿದವಳೇ, ಓ ಉಮಾ, ಶಾಕಾಂಭರೀ, ಶ್ವೇತೆಯೇ, ಕೃಷ್ಣೆಯೇ, ಕೈಟಭ ಸಂಹಾರಿಯೇ, ನಿನಗೆ ನಮಸ್ಕಾರಗಳು; ವಿದ್ಯೆಗಳಲ್ಲಿ ನೀನು ಬ್ರಹ್ಮವಿದ್ಯೆ, ಭೂತಾದಿಗಳ ಚಿರನಿದ್ರೆ; ಸ್ಕಂದ (ಕಾರ್ತಿಕೇಯ)ನ ತಾಯಿಯೇ, ದಿವ್ಯದುರ್ಗೆಯೇ, ಅರಣ್ಯವಾಸಿಯೇ, ಮಹಾದೇವಿಯೇ ನಿನ್ನನ್ನು ಶುದ್ಧ ಹೃದಯದಿಂದ ಸ್ತುತಿಸುತ್ತಿದ್ದೇನೆ; ನಿನ್ನ ಅನುಗ್ರಹದಿಂದ ನಾನು ಯಾವಾಗಲೂ ಯುದ್ಧದಲ್ಲಿ ಜಯಗಳಿಸುವಂತಾಗಲಿ."

ಇದರಿಂದ, ಮೇಲೆ ಪಟ್ಟಿಮಾಡಿದ ದೇವಿಯರ ಹೆಸರುಗಳು ಕೇವಲ ದುರ್ಗೆಯ ಬೇರೆ ಬೇರೆ ಹೆಸರುಗಳಂತೆ ಕಾಣುತ್ತವೆ. ಅದೇ ರೀತಿ, ದಶಭುಜಾ, ಸಿಂಹವಾಹಿನಿ, ಮಹಿಷಾಸುರಮರ್ದಿನಿ, ಜಗದ್ಧಾತ್ರಿ, ಚಿನ್ನಮಸ್ತಕ, ಜಗದ್ಗೌರಿ, ಪ್ರತ್ಯಾಂಗೀರ, ಅನ್ನಪೂರ್ಣಾ ಇವರೂ ದುರ್ಗೆಯೂ ಒಂದೇ ಅಥವಾ ಅವರು ದುರ್ಗೆಯ ವಿವಿಧ ರೂಪಗಳು.

ಅಂತೂ ಇಬ್ಬರೂ ಮುಖ್ಯ ದೇವಿಯರಿದ್ದಾರೆ. ಒಬ್ಬಳು ಪಾರ್ವತಿ, ಮತ್ತೊಬ್ಬಳು ದುರ್ಗಾ. ಉಳಿದವೆಲ್ಲ ಕೇವಲ ಹೆಸರುಗಳು. ಪಾರ್ವತಿಯು ದಕ್ಷಪ್ರಜಾಪತಿಯ ಮಗಳು ಹಾಗೂ ಶಿವನ ಹೆಂಡತಿ, ದುರ್ಗೆಯು ಕೃಷ್ಣನ ತಂಗಿ ಮತ್ತು ಶಿವನ ಪತ್ನಿ; ದುರ್ಗಾ ಮತ್ತು ಕಾಳಿಯರ ನಡುವಿನ ಸಂಬಂಧ ಅಷ್ಟು ಸ್ಪಷ್ಟವಾಗಿ ಗೊತ್ತಿಲ್ಲ. ಅರ್ಜುನ ಪಠಿಸಿದ ಮಂತ್ರದ ಪ್ರಕಾರ, ದುರ್ಗೆ ಮತ್ತು ಕಾಳಿ ಒಬ್ಬಳೇ ಇರುವಂತೆ ಕಾಣುತ್ತದೆ. ಆದರೆ ಲಿಂಗಪುರಾಣ ಬೇರೊಂದು ಅಭಿಪ್ರಾಯವನ್ನು ವ್ಯಕ್ತಪಡಿಸುವಂತೆ ಕಾಣುತ್ತದೆ. ಆದರೆ ಪ್ರಕಾರ[೨] ಕಾಳಿಯು ದುರ್ಗೆಯಿಂದ ಭಿನ್ನಳು.

ಇತಿಹಾಸವನ್ನು ಬರೆಯುವುದಷ್ಟೇ ಅಲ್ಲ, ಅದನ್ನು ಅರ್ಥೈಸಲೂಬೇಕು ಎಂಬುದನ್ನು ಕಸುಬನ್ನಾಗಿ ಮಾಡಿಕೊಂಡಿರುವ ವಿದ್ಯಾರ್ಥಿಗೆ ವೈದಿಕ ದೇವಿಯರು ಮತ್ತು ಪೌರಾಣಿಕ ದೇವಿಯರ ನಡುವಿನ ವ್ಯತ್ಯಾಸವನ್ನು ಕೈಬಿಡಲು ಸಾಧ್ಯವಿಲ್ಲ. ಒಂದಂಶದಲ್ಲಿ ಅವರಿಬ್ಬರ ನಡುವೆ ಎದ್ದು ಕಾಣುವ ವ್ಯತ್ಯಾಸವಿದೆ. ವೈದಿಕ ದೇವಿಯರ ಪೂಜೆ ಕೇವಲ ಹೆಸರಿಗಷ್ಟೇ ಪೂಜೆ. ಅವರು ದೇವತೆಗಳ ಹೆಂಡಂದಿರು ಎಂಬ ಒಂದೇ ಕಾರಣದಿಂದ ಅವರನ್ನು ಪೂಜಿಸಲಾಗುತ್ತಿತ್ತು. ಆದರೆ ಪೌರಾಣಿಕ ದೇವಿಯರ ಪೂಜೆಗೆ ಬೇರೆಯೇ ಆದ ಕಾರಣವಿತ್ತು. ಅವರಿಗೆ ತಮ್ಮ ಸ್ವಂತ ಯೋಗ್ಯತೆಯಿಂದಾಗಿ ಪೂಜೆಯನ್ನು ಮಾಡಿಸಿಕೊಳ್ಳುವ ಹಕ್ಕಿತ್ತೇ ಹೊರತು, ಅವರು ದೇವರುಗಳ ಹೆಂಡಂದಿರು ಎಂಬ ಕಾರಣದಿಂದಲ್ಲ. ವೈದಿಕ ದೇವಿಯರು ಎಂದೂ ರಣರಂಗಕ್ಕೆ ಹೋಗಲಿಲ್ಲ ಮತ್ತು ಯಾವ ಶೌರ್ಯದ ಕೆಲಸವನ್ನೂ ಮಾಡಲಿಲ್ಲ ಎಂಬುದೇ ಈ ವ್ಯತ್ಯಾಸಕ್ಕೆ ಕಾರಣ. ಆದರೆ ಪೌರಾಣಿಕ ದೇವಿಯರು ರಣರಂಗಕ್ಕೆ ಹೋದರರಲ್ಲದೆ, ಮಹಾಶೌರ್ಯದ ಕೆಲಸಗಳನ್ನೂ ಮಾಡಿದರು. ಅವರಿಗೆ ಸಂದ ಪೂಜೆ ಹೆಸರಿಗಷ್ಟೇ ಮಾಡಿದ ಪೂಜೆ ಅಲ್ಲ. ಅವರ ಪೂಜೆಗೆ ಅವರ ಶೌರ್ಯದ ಮತ್ತು ಗಮನಾರ್ಹ ಕೆಲಸಗಳ ಆಧಾರವಿತ್ತು.

---

೧. ವಿಲ್ಕಿನ್ಸ್, ಪು. ೩೦೬–೩೦೭

೨. ಅದೇ, ಪು. ೩೧೩

ದುರ್ಗೆಗೂ ಇಬ್ಬರು ಅಸುರರಿಗೂ ನಡೆದ ಮಹಾಯುದ್ಧವು ದುರ್ಗೆಗೆ ಯಶಸ್ಸನ್ನು ತಂದಿತು. ಈ ಕತೆಯು ಮಾರ್ಕಂಡೇಯ ಪುರಾಣದಲ್ಲಿ ಸವಿಸ್ತಾರವಾಗಿ ಹೇಳಲ್ಪಟ್ಟಿದೆ. ಅದು ಹೀಗಿದೆ:[೧]

“ತ್ರೇತಾಯುಗದ ಕೊನೆಯಲ್ಲಿ ಶುಂಭ, ನಿಶುಂಭರೆಂಬ ಇಬ್ಬರು ಅಸುರರು ೧೦,೦೦೦ ವರ್ಷಗಳವರೆಗೆ ಕಠಿಣ ತಪಸ್ಸನ್ನಾಚರಿಸಿದರು. ಅದರ ಪುಣ್ಯದಿಂದಾಗಿ ಶಿವನು ಕೈಲಾಸದಿಂದ ಕೆಳಗಿಳಿದು ಬರುವಂತಾಯಿತು ಹಾಗೂ ಅವರು ತಮ್ಮ ಅಮೋಘ ಭಕ್ತಿಯ ಮೂಲಕ ಅಮೃತತ್ವದ ವರವನ್ನು ಕೇಳಲಿದ್ದಾರೆಂದು ಅವನಿಗೆ ಹೊಳೆಯಿತು. ಆದುದರಿಂದ ಶಿವನು ಅವರೊಡನೆ ದೀರ್ಘ ಚರ್ಚೆ ಮಾಡಿ ಬೇರೆ ಯಾವ ವರವನ್ನಾದರೂ ಕೇಳುವಂತೆ ಮನವೊಲಿಸಲು ಪ್ರಯತ್ನಿಸಿ ಸೋತನು. ತಮಗೆ ಬೇಕಾದ ವರದಿಂದ ವಂಚಿತರಾದ ಅವರು ಮತ್ತೊಂದು ಸಾವಿರ ವರ್ಷಗಳವರೆಗೆ ಇನ್ನೂ ಹೆಚ್ಚಿನ ಕಠಿಣ ತಪಸ್ಸನ್ನಾಚರಿಸಿದರು. ಶಿವ ಮತ್ತೆ ಪ್ರತ್ಯಕ್ಷನಾದರೂ, ಅವರು ಕೇಳಿದ ವರವನ್ನು ಕೊಡಲು ಒಪ್ಪಲಿಲ್ಲ. ಆಗ ಅವರು ನಿಧಾನವಾಗಿ ಉರಿಯುತ್ತಿದ್ದ ಬೆಂಕಿಯ ಮೇಲೆ ತಮ್ಮ ತಲೆ ನೇತಾಡುವಂತೆ ಮಾಡಿಕೊಂಡರು. ಅಲ್ಲದೆ, ತಮ್ಮ ಕತ್ತಿನಿಂದ ರಕ್ತ ಹರಿಯುವವರೆಗೂ ಈ ಸ್ಥಿತಿಯಲ್ಲಿದ್ದರು. ಅವರ ಈ ತಪಸ್ಸು ೮೦೦ ವರ್ಷಗಳವರೆಗೂ ಮುಂದುವರೆಯಿತು. ಈ ರೀತಿಯ ಕಠಿಣತಮವಾದ ಪವಿತ್ರ ಕರ್ಮಗಳ ಮೂಲಕ ಈ ದಾನವರು ಎಲ್ಲಿ ತಮ್ಮ ಸ್ಥಾನಗಳ ಮೇಲೆ ದುರಾಕ್ರಮಣ ಮಾಡುತ್ತಾರೋ ಎಂಬ ಭೀತಿಯಿಂದ ದೇವತೆಗಳು ನಡುಗಿದರು. ದೇವೇಂದ್ರನು ಒಂದು ಸಭೆಯನ್ನು ಕರೆದು, ಸಭಾ ಸದಸ್ಯರಿಗೆ ತನ್ನ ಹೆದರಿಕೆಯನ್ನು ತಿಳಿಸಿದನು. ಅವರು ಹೆದರಿಕೆಗೆ ಆಧಾರವಿದೆಯೆಂದು ಒಪ್ಪಿಕೊಂಡರೇನೋ ಹೌದು. ಆದರೆ ಇದಕ್ಕೆ ಪರಿಹಾರವೇನು? ಎಂದು ಕೇಳಿದರು.

“ಇಂದ್ರನ ಸಲಹೆಯ ಮೇರೆಗೆ ಕಾಮದೇವನಾದ ಕಂದರ್ಪನು ದೇವಲೋಕದಲ್ಲಿ ಅತ್ಯಂತ ಸುಂದರಿಯರಾದ ರಂಭೆ ಮತ್ತು ತಿಲೋತ್ತಮೆಯರನ್ನು ಕರೆದು ದಾನವರ ಮನಸ್ಸಿನಲ್ಲಿ ಕಾಮ ಹುಟ್ಟುವಂತೆ ಮಾಡಲು ಅವರನ್ನು ಕಳಿಸುತ್ತಾನೆ. ಕಂದರ್ಪನು ಆ ದಾನವದ್ವಯರನ್ನು ತನ್ನ ಬಾಣದಿಂದ ಗಾಯಗೊಳಿಸಿದನು. ಆಗ ತಪಸ್ಸಿನಿಂದ ಎಚ್ಚೆತ್ತ ಅವರು ಈ ಸುಂದರಿಯರನ್ನು ನೋಡಿ ಮೋಹಪಾಶದಲ್ಲಿ ಸಿಲುಕಿ, ತಮ್ಮ ಭಕ್ತಿಯನ್ನು ಕೈಬಿಟ್ಟರು. ಅವರು ಈ ಸ್ತ್ರೀಯರೊಡನೆ ೫೦೦೦ ವರ್ಷ ಬಾಳಿದರು. ಆಗ ಅವರಿಗೆ ಕಾಮತೃಪ್ತಿಗಾಗಿ ಅಮೃತ ತತ್ವದ ಧ್ಯೇಯವನ್ನು ತ್ಯಜಿಸಿದ ತಪ್ಪಿನ ಅರಿವಾಯಿತು; ಅಲ್ಲದೆ, ಈ ಮೋಹಪಾಶ ಇಂದ್ರನ ಮೋಸವಿರಬೇಕೆಂಬ ಶಂಕೆಯೂ ಅವರಿಗುಂಟಾಯಿತು. ಆದುದರಿಂದ, ಆ ಅಪ್ಸರೆಯರನ್ನು ಸ್ವರ್ಗಕ್ಕೆ ಅಟ್ಟಿ, ತಮ್ಮ ತಪಸ್ಸನ್ನು ಪುನರಾರಂಭಿಸಿದರು. ಆದರೆ ಈ ಸಾರಿ ಅವರು ತಮ್ಮ ಮಾಂಸಖಂಡಗಳನ್ನು ಎಲುಬಿನಿಂದ ಬೇರ್ಪಡಿಸಿ, ಅವನ್ನು ಸುಟ್ಟು ಶಿವನಿಗೆ ಅರ್ಪಿಸಲಾರಂಭಿಸಿದರು. ಈ ರೀತಿ ಅವರು ೧೦೦೦ ವರ್ಷಗಳವರೆಗೆ ಮುಂದುವರಿಸಿದಾಗ, ಅವರು ಕೇವಲ ಅಸ್ಥಿಪಂಜರವಾಗಿದ್ದರೂ ಈ ಸಾರಿ ಪ್ರತ್ಯಕ್ಷನಾದ ಶಿವನು ಅವರು ಸಂಪತ್ತಿನಲ್ಲಿಯೂ ಶಕ್ತಿಯಲ್ಲಿಯೂ ದೇವತೆಗಳನ್ನು ಮೀರಿಸಲಿ ಎಂದು ಆಶೀರ್ವದಿಸಿದನು. ಈ ರೀತಿ ದೇವತೆಗಳಿಗೂ ಮಿಗಿಲಾದ ದಾನವರು ಅವರ ಮೇಲೆ ಯುದ್ಧಕ್ಕೆ ಹೋದರು. ಜಯಾಪಜಯಗಳು ಎರಡೂ ಕಡೆ ಉಂಟಾದ ಮೇಲೆ, ದಾನವರು ಎಲ್ಲೆಲ್ಲೂ

---

೧. ವಿಲ್ಕಿನ್ಸ್, ಪು. ೩೦೨–೩೦೬

ಜಯಗಳಿಸತೊಡಗಿದರು. ಆಗ ಅತ್ಯಂತ ದುರ್ಗತಿಗೀಡಾದ ಇಂದ್ರನೂ, ದೇವತೆಗಳೂ ಬ್ರಹ್ಮ ಮತ್ತು ವಿಷ್ಣುವಿನ ಮಧ್ಯಸ್ಥಿಕೆ ಕೋರಿದರು. ಅವರು ಅವರನ್ನು ಶಿವನ ಬಳಿಗೆ ಕಳಿಸಿದಾಗ, ಶಿವನು ಅವರಿಗೆ ತಾನೇನೂ ಮಾಡಲು ಸಾಧ್ಯವಿಲ್ಲವೆಂದು ಘೋಷಿಸಿದನು. ಆಗ ಅವರು 'ದಾನವರಿಗಿತ್ತ ನಿನ್ನ ಆಶೀರ್ವಾದದಿಂದಲೇ ನಾವು ಈ ದುಃಸ್ಥಿತಿಗಿಳಿದಿರುವುದು' ಎಂದು ಜ್ಞಾಪಿಸಿದಾಗ, ಶಿವನು ಅವರಿಗೆ ದುರ್ಗೆಯನ್ನು ಕುರಿತು ವ್ರತಗಳನ್ನು ಆಚರಿಸಲು ಸಲಹೆಕೊಟ್ಟನು. ಅವರು ಅದರಂತೆಯೇ ಮಾಡಿದರು. ಕೆಲ ಸಮಯದ ನಂತರ ದೇವಿಯು ಪ್ರತ್ಯಕ್ಷಳಾಗಿ ಅವರನ್ನು ಆಶೀರ್ವದಿಸಿದಳು. ಅನಂತರ ಆಕೆ ನೀರಿನ ಗಡಿಗೆಯನ್ನು ಹೊತ್ತ ಸಾಧಾರಣ ಹೆಂಗಸಿನಂತೆ ವೇಷ ಮರೆಸಿಕೊಂಡು ದೇವತೆಗಳ ಸಭೆಯಲ್ಲಿ ಹಾಯ್ದು ಹೋದಳು. ಆಗ ಅವಳು ತನ್ನ ಮೂಲ ರೂಪವನ್ನು ಅವರಿಗೆ ತೋರಿಸಿ 'ಅವರು ನನ್ನನ್ನೇ ಸ್ತುತಿಸುತ್ತಿದ್ದಾರೆ' ಎಂದಳು.

"ಈ ಹೊಸ ದೇವಿಯು ಶುಂಭ ಮತ್ತು ನಿಶುಂಭರ ದೂತರಾದ ಚಂಡ ಮತ್ತು ಮುಂಡರು ವಾಸವಾಗಿದ್ದ ಹಿಮಾಲಯ ಪರ್ವತವನ್ನೇರಿದಳು. ಈ ರಾಕ್ಷಸರು ಪರ್ವತದಲ್ಲಿ ಅಲೆದಾಡುತ್ತಿದ್ದಾಗ, ದೇವಿಯನ್ನು ನೋಡಿ, ಅವಳ ರೂಪಕ್ಕೆ ಮರುಳಾದರಲ್ಲದೆ, ಅದನ್ನು ತಮ್ಮ ಪ್ರಭುಗಳಿಗೆ ವರ್ಣಿಸಿದರು; ಅಲ್ಲದೆ 'ನೀವು ದೇವಲೋಕದ ದೇವತೆಗಳಿಂದ ಲೂಟಿ ಮಾಡಿ ತಂದಿರುವ ವೈಭವಪೂರ್ಣ ವಸ್ತುಗಳನ್ನೆಲ್ಲಾ ಆಕೆಗೆ ಕೊಟ್ಟರೂ ಚಿಂತೆಯಿಲ್ಲ, ಅವಳ ಪ್ರೇಮವನ್ನಂತೂ ಗಳಿಸಿ' ಎಂದೂ ಸೂಚಿಸಿದರು.

"ಶುಂಭನು ಸುಗ್ರೀವನನ್ನು ದೂತನನ್ನಾಗಿ ದೇವಿಯ ಬಳಿ ಕಳಿಸಿ, ಆಕೆಗೆ ದೂತನನ್ನಾಗಿ ದೇವಿಯ ಬಳಿ ಕಳಿಸಿ, ಆಕೆಗೆ ಈ ರೀತಿ ಹೇಳಲು ಸೂಚಿಸಿದನು: 'ಮೂರು ಲೋಕಗಳ ಐಶ್ವರ್ಯವೆಲ್ಲವೂ ಶುಂಭನ ಅರಮನೆಯಲ್ಲಿದೆ: ದೇವತೆಗಳಿಗೆ ಈ ಹಿಂದೆ ಅರ್ಪಿಸಲಾಗುತ್ತಿದ್ದುದೆಲ್ಲವನ್ನೂ ಇನ್ನು ಮುಂದೆ ದೇವಿಗೆ ಅರ್ಪಿಸಲಾಗುವುದು. ದೇವಿ ಶುಂಭನ ಬಳಿಗೆ ಬಂದರೆ, ಕಾಣಿಕೆ, ಐಶ್ವರ್ಯ ಎಲ್ಲ ಅವಳದಾಗುವುದು.' ಇದಕ್ಕೆ ಉತ್ತರವಾಗಿ ದೇವಿಯು 'ಈ ಕೊಡುಗೆ ಬಹಳ ಉದಾರವಾದುದಾದರೂ ನನ್ನನ್ನು ಮದುವೆ ಆಗುವವನು ಮೊದಲು ನನ್ನನ್ನು ಯುದ್ಧದಲ್ಲಿ ಗೆಲ್ಲಬೇಕು ಹಾಗೂ ನನ್ನ ಜಂಭವನ್ನು ನಾಶಮಾಡಬೇಕು ಎಂದು ನಾನು ತೀರ್ಮಾನಿಸಿದ್ದೇನೆ' ಎಂದಳು. ಈ ರೀತಿಯ ಸೋಲಿನಿಂದ ಹಿಂತಿರುಗಲು ಮನಸ್ಸಿಲ್ಲದ ಸುಗ್ರೀವನು, ತನ್ನ ಪ್ರಭುವು ಅವಳನ್ನು ಯುದ್ಧದಲ್ಲಿ ಗೆಲ್ಲುತ್ತಾನೆಂದೂ, ಅವಳ ಅಹಂಕಾರವನ್ನು ಮುರಿಯುತ್ತಾನೆಂದೂ ಭರವಸೆ ಕೊಟ್ಟು, ಅವಳ ಒಪ್ಪಿಗೆಗಾಗಿ ಕಾಯ್ದನು. ಅಲ್ಲದೆ ಅವನು ಅಧಿಕಾರವಾಣಿಯಿಂದ 'ಪ್ರಪಂಚದಲ್ಲಿ ಸುರರಾಗಲಿ, ಅಸುರರಾಗಲಿ, ಮಾನವರಾಗಲಿ ಯಾರೂ ನನ್ನ ಯಜಮಾನನನ್ನು ತಡೆಯಲಾರರೆಂಬುದು ನಿನಗೆ ಗೊತ್ತೆ? ಹೀಗಿರುವಲ್ಲಿ, ಕೇವಲ ಹೆಂಗಸಾದ ನಿನಗೆ ಅವನ ಇಚ್ಛೆಯನ್ನು ಹೇಗೆ ತಿರಸ್ಕರಿಸಲಾದೀತು? ನನ್ನ ಯಜಮಾನನ ಅಪ್ಪಣೆ ಇದ್ದಿದ್ದರೆ, ಈ ಕ್ಷಣವೇ ನಿನ್ನನ್ನು ಬಲತ್ಕಾರವಾಗಿ ಅವನ ಬಳಿ ಕರೆದೊಯ್ಯುತ್ತಿದ್ದೆ' ಎಂದು ಹೇಳಿದನು. ಇದನ್ನು ಸರಿಯೆಂದು ಒಪ್ಪಿಕೊಂಡ ಆಕೆ, ತಾನು ಶಪಥ ಮಾಡಿರುವುದಾಗಿಯೂ, ಆದ್ದರಿಂದ ತನ್ನೊಡನೆ ಶಕ್ತಿಪರೀಕ್ಷೆ ಮಾಡಲು ಅವನು ತನ್ನ ಸ್ವಾಮಿಯನ್ನು ಮನವೊಲಿಸಿ ಕಳುಹಿಸಿಕೊಡುವಂತೆಯೂ ಹೇಳಿದಳು.

"ದೂತನು ತಾನು ಕೇಳಿಸಿಕೊಂಡಿದ್ದೆಲ್ಲವನ್ನೂ ತನ್ನ ಪ್ರಭುವಿಗೆ ತಿಳಿಸಿದನು. ಈ ವಿವರಣೆಯಿಂದ ಕುಪಿತಗೊಂಡ ಶುಂಭನು, ಏನೂ ಪ್ರತ್ಯುತ್ತರವನ್ನು ಕೊಡದೆ, ಧೂಮಲೋಚನನೆಂಬ ತನ್ನ ಸೇನಾಧಿಪತಿಯನ್ನು ಕರೆಸಿ, ಅವನಿಗೆ ಹಿಮಾಲಯಕ್ಕೆ ಹೋಗಿ ದೇವಿಯನ್ನು ಹಿಡಿದು ತರಬೇಕೆಂದು

ಆಜ್ಞಾಪಿಸಿದನು. ಯಾರಾದರೂ ಅವಳ ರಕ್ಷಣೆಗೆ ಬಂದರೆ, ಅವರನ್ನು ಸಂಪೂರ್ಣವಾಗಿ ನಾಶಮಾಡಬೇಕೆಂದೂ ಆಜ್ಞಾಪಿಸಿದನು.

"ಸೇನಾಧಿಪತಿಯು ಹಿಮಾಲಯಕ್ಕೆ ಹೋಗಿ ತನ್ನ ಸ್ವಾಮಿಯ ಆಜ್ಞೆಯನ್ನು ದೇವಿಗೆ ತಿಳಿಸಿದನು. ಆಕೆ ನಗುತ್ತಾ ಆ ಆಜ್ಞೆಯನ್ನು ನೆರವೇರಿಸುವಂತೆ ಕೇಳಿಕೊಂಡಳು. ಆ ವೀರನು ಅವಳನ್ನು ಸಮೀಪಿಸುತ್ತಿರುವಾಗ ಆಕೆ ಭಯಂಕರವಾಗಿ ಘರ್ಜಿಸಿದ ಕಾರಣ, ಅವನು ಸುಟ್ಟು ಬೂದಿಯಾದನು. ಅನಂತರ ಆಕೆ ತನ್ನ ವೈರಿಯ ಸೈನ್ಯವನ್ನೆಲ್ಲಾ ನಾಶ ಮಾಡಿದಳು ಹಾಗೂ ಸುದ್ದಿ ಮುಟ್ಟಿಸಲು ಕೆಲವರನ್ನಷ್ಟೆ ಉಳಿಸಿದಳು. ಇದನ್ನು ಕೇಳಿ ಕುಪಿತರಾದ ಶುಂಭ ಮತ್ತು ನಿಶುಂಭರು ಚಂಡ ಮತ್ತು ಮುಂಡರನ್ನು ಕಳಿಸಿದರು. ಅವರು ಪರ್ವತವನ್ನೇರಿ ಕೆಳಗೆ ನೋಡಿದಾಗ, ಅಲ್ಲಿ ಒಂದು ಕತ್ತೆಯ ಮೇಲೆ ಕುಳಿತು ನಗುತ್ತಿದ್ದ ಹೆಂಗಸೊಬ್ಬಳನ್ನು ನೋಡಿದರು. ಅವರನ್ನು ನೋಡಿದ ಆಕೆಗೆ ಕೋಪ ಬಂದು, ಒಂದೊಂದು ಸಾರಿಗೇ ಹತ್ತು, ಇಪ್ಪತ್ತು, ಮೂವತ್ತು ಜನ ಶತ್ರು ಸೈನಿಕರನ್ನು ಬಾಚಿಕೊಂಡು ಹಣ್ಣಿನಂತೆ ತಿನ್ನತೊಡಗಿದಳು. ಅನಂತರ ಮುಂಡನನ್ನು ಅವನ ಕೂದಲು ಸಹಿತ ಹಿಡಿದು ಮೇಲೆತ್ತಿ ಅವನ ತಲೆಯನ್ನು ಬೇರ್ಪಡಿಸಿ, ಅದರಿಂದ ಬರುತ್ತಿದ್ದ ರಕ್ತವನ್ನು ಹೀರಿದಳು. ಇನ್ನೊಬ್ಬ ಸೇನಾನಿ ಈ ರೀತಿ ಕೊಲ್ಲಲ್ಪಡುತ್ತಿರುವುದನ್ನು ನೋಡಿದ ಚಂಡನು ದೇವಿಯ ಬಳಿಗೆ ಬಂದನು. ಸಿಂಹದ ಮೇಲೆ ಕುಳಿತಿದ್ದ ಆಕೆ ಅವನನ್ನು ನೋಡಿದ ಕೂಡಲೆ, ಅವನ ಮೇಲೆ ನೆಗೆದಳು ಹಾಗೂ ಮುಂಡನನ್ನು ಮುಗಿಸಿದಂತೆ ಅವನನ್ನೂ ಮುಗಿಸಿದಳು. ಆಮೇಲೆ ಅವನ ಸೈನ್ಯದ ಕೆಲವು ಭಾಗಗಳನ್ನು ಭಕ್ಷಿಸಿ ಅವರ ರಕ್ತವನ್ನು ಕುಡಿದಳು.

"ದೈತ್ಯದ್ವಯರು ಈ ಆತಂಕಕಾರಿ ಸುದ್ದಿಯನ್ನು ಕೇಳಿದ ತಕ್ಷಣವೇ, ತಾವೇ ಯುದ್ಧಕ್ಕೆ ಹೋಗಲು ನಿರ್ಧರಿಸಿ ಅಸಂಖ್ಯಾತ ರಾಕ್ಷಸರನ್ನು ಕಲೆ ಹಾಕಿ, ಅವರನ್ನು ಕರೆದುಕೊಂಡು ಹಿಮಾಲಯದ ಕಡೆಗೆ ಧಾವಿಸಿದರು. ದೇವತೆಗಳು ಇಷ್ಟೊಂದು ದೊಡ್ಡ ರಾಕ್ಷಸ ಸೈನ್ಯವನ್ನು ನೋಡಿ ಚಕಿತರಾದರು. ಅವರ ದೇವಿಯರು ಮಹಾಮಾಯೆಗೆ (ದುರ್ಗೆಗೆ) ಸಹಾಯ ಮಾಡಲು ಇಳಿದು ಬಂದರು. ಆದರೆ ದುರ್ಗೆಯು ಬೇಗ ಬೇಗ ವೈರಿಗಳನ್ನು ಸಂಹರಿಸತೊಡಗಿದಳು. ಶುಂಭ ನಿಶುಂಭರ ಮುಖ್ಯ ಸೇನಾಧಿಪತಿಯಾದ ರಕ್ತಬೀಜಾಸುರನು ತನ್ನ ಜನರು ಹೀಗೆ ಸಾಯುತ್ತಿರುವುದನ್ನು ನೋಡಿ, ದೇವಿಯನ್ನು ತಾನೇ ಸ್ವತಃ ಎದುರಿಸಿದನು. ಆದರೆ ಅವನ ಮೈಕೈಯೆಲ್ಲಾ ದೇವಿ ಮಾಡಿದ ಗಾಯಗಳಿಂದ ತುಂಬಿ ಹೋದರೂ, ನೆಲಕ್ಕೆ ಬಿದ್ದ ಅವನ ರಕ್ತದ ಪ್ರತಿ ಹನಿಯಿಂದ, ಶಕ್ತಿಯಲ್ಲಿ ರಕ್ತಬೀಜನಿಗೆ ಸಮನಾದ ಸಾವಿರಾರು ರಾಕ್ಷಸರು ಹುಟ್ಟತೊಡಗಿದರು. ಹೀಗಾಗಿ, ಅಸಂಖ್ಯಾತ ಶತ್ರುಗಳು ದುರ್ಗೆಯನ್ನು ಸುತ್ತುವರಿದರು. ಈ ಅದ್ಭುತ ದೃಶ್ಯವನ್ನು ನೋಡಿದ ದೇವತೆಗಳಿಗೆ ಕಳವಳವುಂಟಾಯಿತು. ಕೊನೆಗೆ ಕಾಳಿಗೆ (ದುರ್ಗೆಗೆ) ಸಹಾಯ ಮಾಡಲು ಬಂದಿದ್ದ ಚಂಡಿ ಎಂಬ ದೇವಿಯು 'ಕಾಳಿಯೇ, ಈ ರಕ್ತಬೀಜಾಸುರನ ರಕ್ತ ನೆಲಕ್ಕೆ ಬೀಳುವ ಮುನ್ನ ನೀನು ಅದನ್ನು ಕುಡಿಯುವುದಾದರೆ, ನಾನು ಅವನನ್ನು ಯುದ್ಧದಲ್ಲಿ ಸೆಣಸಿ, ಅದ್ಭುತ ರೀತಿಯಲ್ಲಿ ಹುಟ್ಟಿದ ಅವನ ಸೈನ್ಯವೆಲ್ಲವನ್ನೂ ನಾಶ ಮಾಡುತ್ತೇನೆ' ಎಂದು ಭರವಸೆಯಿತ್ತಳು. ಕಾಳಿ ಇದಕ್ಕೆ ಒಪ್ಪಿದಾಗ ಆ ಸೇನಾನಿ ಮತ್ತು ಅವನ ಸೈನ್ಯವನ್ನು ನಾಶಪಡಿಸಲಾಯಿತು.

"ಕೊನೆಗೆ, ಏನೂ ತೋಚದೆ, ಶುಂಭ ಮತ್ತು ನಿಶುಂಭರು ಒಬ್ಬೊಬ್ಬರೇ ದೇವಿಯೊಡನೆ

ಸೆಣಸಿದರು. ಶುಂಭನೇ ಮೊದಲು ದಾಳಿ ಮಾಡಿದನು. ಯುದ್ಧವು ಊಹಿಸಲು ಸಾಧ್ಯವಿಲ್ಲದಷ್ಟು ಭಯಂಕರವಾಗಿತ್ತು. ಕೊನೆಗೆ ದೈತ್ಯದ್ವಯರು ಕೊಲ್ಲಲ್ಪಟ್ಟರು. ಆಗ ಕಾಳಿಯು ಸಂಹೃತರಾದವರ ಮಾಂಸವನ್ನು ತಿನ್ನತೊಡಗಿದಳು. ದೇವದೇವಿಯರು ಈ ದಿವ್ಯ ವೀರವನಿತೆಯ ಸ್ತುತಿ ಮಾಡಿದಾಗ, ಆಕೆ ಪ್ರತಿಯೊಬ್ಬರನ್ನೂ ಆಶೀರ್ವದಿಸಿದಳು."

ಅದೇ ರೀತಿ ಮಾರ್ಕಂಡೇಯ ಪುರಾಣವೂ ದುರ್ಗೆಯು ಅನೇಕ ರೂಪಗಳಲ್ಲಿ ಮಾಡಿದ ಶೌರ್ಯಕಾರ್ಯಗಳ ಸಂಕ್ಷಿಪ್ತ ವಿವರಣೆ ನೀಡುತ್ತದೆ. ಅದು ಹೀಗಿದೆ:

"ಆಕೆ ದುರ್ಗೆಯಾಗಿ ಅಸುರರು ಕಳಿಸಿದ ಸಂದೇಶವನ್ನು ಪಡೆದಳು; ದಶಭುಜಗಳಾಗಿ (ಹತ್ತು ಕೈಯುಳ್ಳವಳಾಗಿ) ಅವರ ಸೈನ್ಯದ ಕೆಲವು ಭಾಗಗಳನ್ನು ಕೊಂದಳು; ಸಿಂಹವಾಹಿನಿಯಾಗಿ ರಕ್ತಬೀಜನೊಡನೆ ಹೋರಾಡಿದಳು; ಮಹಿಷಾಸುರಮರ್ದಿನಿಯಾಗಿ ಕೋಣನ ರೂಪದಲ್ಲಿದ್ದ ಶುಂಭಾಸುರನನ್ನು ಕೊಂದಳು; ಜಗದ್ಧಾತ್ರಿ (ಜಗನ್ಮಾತೆ)ಯಾಗಿ ರಾಕ್ಷಸರ ಸೈನ್ಯವನ್ನು ಗೆದ್ದಳು; ಕಾಳಿಯಾಗಿ ರಕ್ತಬೀಜನನ್ನು ಕೊಂದಳು; ಮುಕ್ತಕೇಶಿಯಾಗಿ ಮತ್ತೊಂದು ಅಸುರರ ಸೈನ್ಯವನ್ನು ಗೆದ್ದಳು; ತಾರೆಯಾಗಿ ಶುಂಭನನ್ನು ಅವನ ನಿಜರೂಪದಲ್ಲೇ ಕೊಂದಳು; ಚಿನ್ನಮಸ್ತಕಳಾಗಿ ನಿಶುಂಭನನ್ನು ಕೊಂದಳು; ಜಗದ್ಗೌರಿಯಗಿ ಎಲ್ಲ ದೇವತೆಗಳ ಶ್ಲಾಘನೆಯನ್ನೂ ವಂದನೆಗಳನ್ನೂ ಸ್ವೀಕರಿಸಿದಳು."

ಹೀಗೆ ವೈದಿಕ ಮತ್ತು ಪೌರಾಣಿಕ ದೇವಿಯರನ್ನು ತೂಗಿ ನೋಡುವಾಗ, ಕೆಲವು ಕುತೂಹಲಕಾರಿ ಪ್ರಶ್ನೆಗಳು ಏಳುತ್ತವೆ. ಒಂದಂತೂ ಸುಸ್ಪಷ್ಟ. ವೈದಿಕ ಸಾಹಿತ್ಯದ ತುಂಬೆಲ್ಲ ಅದೇ ಇದೆ. ಆದರೆ ರಾಕ್ಷಸರೊಡನೆ ಮಾಡಿದ ಯುದ್ಧಗಳಲ್ಲೆಲ್ಲ ಕೇವಲ ದೇವತೆಗಳೇ ಇದ್ದರು. ವೈದಿಕ ದೇವಿಯರು ಅವುಗಳಲ್ಲಿ ಯಾವೊಂದರಲ್ಲೂ ಭಾಗವಹಿಸಿರಲಿಲ್ಲ. ಈ ವಿಷಯದಲ್ಲಿ ಪೌರಾಣಿಕ ದೇವಿಯರಲ್ಲಿ ಸಂಪೂರ್ಣ ಬದಲಾವಣೆಯಾಗಿದೆ. ವೈದಿಕ ಕಾಲಗಳಲ್ಲಿದ್ದಂತೆ ಪೌರಾಣಿಕ ಕಾಲಗಳಲ್ಲೂ ಅಸುರರೊಡನೆ ಯುದ್ಧಗಳಾದವು. ಆದರೆ ಒಂದು ವ್ಯತ್ಯಾಸವಿದೆ. ವೈದಿಕ ಕಾಲದಲ್ಲಾದ ಯುದ್ಧಗಳಲ್ಲಿ ಸೆಣಸಲು ದೇವರುಗಳನ್ನು ಬಿಟ್ಟರೆ, ಪೌರಾಣಿಕ ಕಾಲದಲ್ಲಾದ ಯುದ್ಧಗಳಲ್ಲಿ ಸೆಣಸಲು ದೇವಿಯರನ್ನು ಬಿಡಲಾಯಿತು. ವೈದಿಕ ಕಾಲದಲ್ಲಿ ದೇವರುಗಳು ಮಾಡಿದುದನ್ನು ಪೌರಾಣಿಕ ದೇವಿಯರೇಕೆ ಮಾಡಬೇಕಾಯಿತು? ಬ್ರಹ್ಮ, ವಿಷ್ಣು, ಮಹೇಶ್ವರರೆಂಬ ದೇವರುಗಳು ಪೌರಾಣಿಕ ಕಾಲದಲ್ಲೂ ಇದ್ದರು, ರಾಕ್ಷಸರನ್ನು ಎದುರಿಸಲು ಅವರಿದ್ದರೂ, ದೇವಿಯರನ್ನೇ ಈ ಕೆಲಸಕ್ಕೆ ಏಕೆ ನೇಮಿಸಲಾಯಿತು? ಇದೂ ಒಂದು ಒಗಟೇ, ಇದಕ್ಕೂ ಒಂದು ಸ್ಪಷ್ಟೀಕರಣ ಬೇಕು.

ಎರಡನೆಯ ಪ್ರಶ್ನೆಯೆಂದರೆ, ವೈದಿಕ ದೇವಿಯರಲ್ಲಿಲ್ಲದ, ಆದರೆ ಪೌರಾಣಿಕ ದೇವಿಯರಲ್ಲಿದ್ದ ಶಕ್ತಿಯ ಮೂಲ ಯಾವುದು? ಪೌರಾಣಿಕ ದೇವರುಗಳ ಶಕ್ತಿಯೇ ದೇವಿಯರಲ್ಲಿತ್ತು ಎಂಬುದು ಪುರಾಣಗಳ ಕರ್ತೃಗಳು ಈ ಪ್ರಶ್ನೆಗೆ ಕೊಡುವ ಉತ್ತರ. ಒಂದು ಸುಪರಿಚಿತ ಸಿದ್ಧಾಂತದ ಪ್ರಕಾರ, ಪ್ರತಿಯೊಬ್ಬ ದೇವನಿಗೂ ಶಕ್ತಿ ಇತ್ತು; ಆ ಶಕ್ತಿ ಅವನ ಹೆಂಡತಿ ದೇವಿಯಲ್ಲಿ ನೆಲೆಸಿತ್ತು. ಈ ಸಿದ್ಧಾಂತ ಎಷ್ಟು ಸರ್ವಸಮ್ಮತವಾಯಿತೆಂದರೆ, ಪ್ರತಿಯೊಬ್ಬ ದೇವಿಯೂ ಶಕ್ತಿಯೆಂದೇ ಕರೆಯಲ್ಪಡುತ್ತಿದ್ದಾಳೆ ಹಾಗೂ ಆಕೆಯ ಭಕ್ತರನ್ನು ಶಾಕ್ತರೆಂದು ಕರೆಯಲಾಗುತ್ತಿದೆ.

ಈ ಸಿದ್ಧಾಂತಕ್ಕೆ ಸಂಬಂಧಿಸಿದಂತೆ ಎರಡು ಸಮಸ್ಯೆಗಳು ಏಳುತ್ತವೆ ಮತ್ತು ಅವೆರಡಕ್ಕೂ ಸಮರ್ಪಕ ಉತ್ತರ ಬೇಕು.

ಮೊದಲನೆಯದು ಹೀಗಿದೆ: ಪುರಾಣಗಳಲ್ಲಿ ಉಕ್ತವಾಗಿರುವ ದೇವಿಯರ ಹೆಸರುಗಳು ಹಲವಾರಿದ್ದರೂ, ನಿಜವಾಗಿಯೂ ಇರುವ ದೇವಿಯರ ಸಂಖ್ಯೆ ಐದೇ–ಅವರೆಂದರೆ, ಸರಸ್ವತಿ, ಲಕ್ಷ್ಮೀ, ಪಾರ್ವತಿ,

ದುರ್ಗಾ ಮತ್ತು ಕಾಳಿ, ಸರಸ್ವತಿ ಮತ್ತು ಲಕ್ಷ್ಮೀ, ಬ್ರಹ್ಮ ಮತ್ತು ವಿಷ್ಣು ಇವರುಗಳ ಪತ್ನಿಯರು: ಬ್ರಹ್ಮ ಮತ್ತು ವಿಷ್ಣು ಇಬ್ಬರನ್ನೂ ಶಿವನೊಡಗೂಡಿ ಪೌರಾಣಿಕ ದೇವರುಗಳು ಎಂದು ಪರಿಗಣಿಸಲಾಗಿದೆ. ಪಾರ್ವತಿ, ದುರ್ಗಾ ಮತ್ತು ಕಾಳಿ ಶಿವನ ಹೆಂಡತಿಯರು. ಆದರೆ ಸರಸ್ವತಿ, ಲಕ್ಷ್ಮೀಯರು ಯಾವ ಅಸುರರನ್ನೂ ಕೊಂದಿಲ್ಲ. ಅವರ ಬಗೆಗೆ ಯಾವ ಶೌರ್ಯಕೃತಿಯನ್ನೂ ಹೇಳಲಾಗಿಲ್ಲ. ಏಕೆ? ಎಂಬುದೇ ಪ್ರಶ್ನೆ. ಈ ಸಿದ್ಧಾಂತದ ಪ್ರಕಾರ, ಬ್ರಹ್ಮ ಮತ್ತು ವಿಷ್ಣು ಇವರುಗಳಲ್ಲಿರುವ ಶಕ್ತಿ ಅವರ ಹೆಂಡತಿಯರಲ್ಲಿ ನೆಲೆಸಿರಬೇಕಾಗಿತ್ತು. ಆದರೆ ಸರಸ್ವತಿ, ಲಕ್ಷ್ಮೀಯರು ಏಕೆ ರಾಕ್ಷಸರ ವಿರುದ್ಧ ಮಾಡಿದ ಯಾವ ಯುದ್ಧದಲ್ಲೂ ಭಾಗವಹಿಸಲಿಲ್ಲ? ಈ ಕೆಲಸವನ್ನು ಶಿವನ ಹೆಂಡತಿಯರಿಗೇ ಮೀಸಲಿಡಲಾಯಿತು. ಆದರೂ ಪಾರ್ವತಿ ಮತ್ತು ದುರ್ಗೆಯರು ವಹಿಸಿದ ಪಾತ್ರಗಳಲ್ಲಿ ಬಹಳ ವ್ಯತ್ಯಾಸವಿದೆ. ಪಾರ್ವತಿಯನ್ನು ಒಬ್ಬ ಸರಳ ಹೆಂಗಸಿನಂತೆ ಪ್ರತಿನಿಧಿಸಲಾಗಿದೆ. ದುರ್ಗೆ ಮಾಡಿದಂತಹ ಯಾವ ಶೌರ್ಯದ ಕೀರ್ತಿಯೂ ಆಕೆಗಿಲ್ಲ. ಆದರೆ ದುರ್ಗೆಯಂತೆ ಪಾರ್ವತಿಯೂ ಶಿವನ ಶಕ್ತಿಯೇ. ಪಾರ್ವತಿಯಲ್ಲಿ ನೆಲೆಸಿದ್ದ ಶಿವಶಕ್ತಿ ಅಸ್ತಿತ್ವದಲ್ಲಿಲ್ಲವೇನೋ ಎಂಬಂತೆ ಏಕೆ ಅಷ್ಟೊಂದು ಮಂಕಾಗಿ, ಸುಪ್ತವಾಗಿ ನಿಷ್ಕ್ರಿಯವಾಗಿತ್ತು?

ಎರಡನೆಯ ಪ್ರಶ್ನೆಯೆಂದರೆ, ದೇವರುಗಳನ್ನು ಬೇರ್ಪಡಿಸಿ, ದೇವಿಯರ ಪೂಜೆಯನ್ನು ಏಕೆ ಪ್ರಾರಂಭಿಸಲಾಯಿತು ಎಂಬುದಕ್ಕೆ ಈ ಸಿದ್ಧಾಂತ ಒಳ್ಳೆಯ ಸಮರ್ಥನೆಯಾದರೂ, ಈ ಸಿದ್ಧಾಂತದ ತಾರ್ಕಿಕ ಆಧಾರವನ್ನಾಗಲೀ, ಐತಿಹಾಸಿಕ ಆಧಾರವನ್ನಾಗಲಿ ಒಪ್ಪಿಕೊಳ್ಳುವುದು ಕಷ್ಟವಾಗುತ್ತದೆ. ಮೊದಲು, ಕೇವಲ ತಾರ್ಕಿಕ ದೃಷ್ಟಿಯಿಂದಲೇ ನೋಡೋಣ; ಪ್ರತಿಯೊಬ್ಬ ದೇವನಿಗೂ ಶಕ್ತಿಯಿರುವುದಾದರೆ, ವೈದಿಕ ದೇವರೆಲ್ಲರಿಗೂ ಶಕ್ತಿ ಇರಬೇಕಾಗಿತ್ತು. ಆದರೆ ಈ ಸಿದ್ಧಾಂತವನ್ನು ವೈದಿಕ ದೇವರುಗಳು ತಮ್ಮ ಹೆಂಡರಿಯರಿಗೇಕೆ ಅನ್ವಯಿಸಲಿಲ್ಲ? ಐತಿಹಾಸಿಕ ದೃಷ್ಟಿಯಿಂದ ನೋಡಿದರೆ, ಪೌರಾಣಿಕ ದೇವರುಗಳಿಗೆ ಶಕ್ತಿ ಇತ್ತು ಎಂಬುದಕ್ಕೆ ಯಾವ ಸಮರ್ಥನೆಯೂ ಇಲ್ಲ.

ದುರ್ಗೆ ಮಾತ್ರ ವೀರಳು, ಅವಳಿಗೆ ಮಾತ್ರ ರಾಕ್ಷಸರನ್ನು ನಾಶಮಾಡುವ ಸಾಮರ್ಥ್ಯವಿತ್ತು ಎಂದು ಹೇಳುವ ಮೂಲಕ, ತಮ್ಮ ದೇವರುಗಳನ್ನು ಹೇಡಿಗಳ ಗುಂಪನ್ನಾಗಿ ಮಾಡುತ್ತಿದ್ದೇವೆಂದು ಬ್ರಾಹ್ಮಣರಿಗೆ ಅನಿಸಲಿಲ್ಲವೆಂದು ಕಾಣುತ್ತದೆ. ಪ್ರಾಯಶಃ ದೇವರುಗಳು ರಾಕ್ಷಸರಿಂದ ತಮ್ಮನ್ನೂ ತಾವೇ ರಕ್ಷಿಸಿಕೊಳ್ಳಲಿಲ್ಲವೆಂದು ಕಾಣುತ್ತದೆ. ಅದರಿಂದಲೇ ಅವರು ತಮ್ಮ ಹೆಂಡತಿಯರನ್ನು ರಕ್ಷಣೆಗಾಗಿ ಯಾಚಿಸಬೇಕಾಯಿತು. ಬ್ರಾಹ್ಮಣರ ಪ್ರಕಾರ, ಅಸುರರ ಎದುರಿನಲ್ಲಿ ಪೌರಾಣಿಕ ದೇವರುಗಳು ಬಹಳ ಅಶಕ್ತರಿದ್ದರು ಎಂಬುದನ್ನು ತೋರಿಸಲು ಮಾರ್ಕಂಡೇಯ ಪುರಾಣದಿಂದ ಆಯ್ದ ಒಂದು ಉದಾಹರಣೆ ಸಾಕು. ಮಾರ್ಕಂಡೇಯ ಪುರಾಣ ಹೀಗೆ ಹೇಳುತ್ತದೆ:

"ಒಂದು ಕಾಲದಲ್ಲಿ ರಾಕ್ಷಸರ ಒಡೆಯನಾದ ಮಹಿಷನು ಯುದ್ಧದಲ್ಲಿ ದೇವತೆಗಳನ್ನು ಗೆದ್ದು, ಅವರನ್ನು ಯಾವ ಅಧೋಗತಿಗೆ ಇಳಿಸಿದನೆಂದರೆ, ಅವರು ಭೂಮಿಯ ಮೇಲೆ ಭಿಕ್ಷುಕರಂತೆ ಅಲೆದಾಡಬೇಕಾಯಿತು. ಆಗ ಇಂದ್ರನು, ಅವರನ್ನು ಮೊದಲು ಬ್ರಹ್ಮನ ಬಳಿಗೂ, ಅನಂತರ ಶಿವನ ಬಳಿಗೂ ಕರೆದುಕೊಂಡು ಹೋದನು. ಈ ದೇವರುಗಳು ಯಾವ ಸಹಾಯವನ್ನೂ ಮಾಡದಿದ್ದಾಗ ಅವರು ವಿಷ್ಣುವಿನ ಬಳಿ ಹೋದರು. ಅವರ ಹೀನಾಯ ಸ್ಥಿತಿಯನ್ನು ನೋಡಿ ಅವನಿಗೆ ಎಷ್ಟು ಮರುಕ ಉಂಟಾಯಿತೆಂದರೆ, ಅವನ ಮುಖದ ಪ್ರಕಾಶದಿಂದ ಮಹಾಮಾಯೆ (ದುರ್ಗೆಯ ಮತ್ತೊಂದು ಹೆಸರು) ಎಂಬ ಸ್ತ್ರೀರೂಪ ಹುಟ್ಟಿತು. ಉಳಿದ ದೇವರುಗಳ ಮುಖಗಳಿಂದಲೂ ಪ್ರಭಾ ಪ್ರವಾಹ ಹರಿದು ಮಹಾಮಾಯೆಯನ್ನು ಪ್ರವೇಶಿಸಿತು. ಇದರಿಂದಾಗಿ ಅವಳು ಬೆಂಕಿಯ ಪರ್ವತದಂತಹ ಜ್ವಾಲಾಮೂರ್ತಿಯಾದಳು. ಈ ಭಯಂಕರ ಮೂರ್ತಿಗೆ ದೇವರುಗಳೆಲ್ಲ ತಂತಮ್ಮ ಆಯುಧಗಳನ್ನು

ಕೊಟ್ಟರು. ಆಕೆ ಮೈ ನಡುಗಿಸುವಂತಹ ಕೇಕೆ ಹಾಕಿ, ಗಾಳಿಯಲ್ಲಿ ಮೇಲೇರಿ, ರಾಕ್ಷಸರನ್ನು ಕೊಂದು ದೇವತೆಗಳಿಗೆ ಪರಿಹಾರ ನೀಡಿದಳು."

ಇಂತಹ ಹೇಡಿ ದೇವರುಗಳಿಗೆ ಶಕ್ತಿಯಿರಲು ಹೇಗೆ ಸಾಧ್ಯ? ಅವರಲ್ಲಿಯೇ ಅದು ಇಲ್ಲದಿದ್ದಾಗ ಅದನ್ನು ತಮ್ಮ ಹೆಂಡತಿಯರಿಗೆ ಕೊಡಲು ಹೇಗೆ ಸಾಧ್ಯ? ದೇವಿಯರಿಗೆ ಶಕ್ತಿಯಿರುವ ಕಾರಣ ಅವರನ್ನು ಪೂಜಿಸಬೇಕು ಎಂದು ಹೇಳುವುದು ಕೇವಲ ಒಂದು ಒಗಟಷ್ಟೇ ಅಲ್ಲ. ಒಂದು ವಿರೋಧಾಭಾಸವೂ ಹೌದು. ಈ ಶಕ್ತಿ ಸಿದ್ಧಾಂತವನ್ನು ಏಕೆ ಸೃಷ್ಟಿಸಲಾಯಿತು ಎಂಬುದಕ್ಕೆ ಒಂದು ಸ್ಪಷ್ಟೀಕರಣ ಬೇಕು. ಹೊಸ ವಸ್ತುವೊಂದನ್ನು ಮಾರುಕಟ್ಟೆಗೆ ತರಲೋಸ್ಕರ ಬ್ರಾಹ್ಮಣರು ದೇವಿಯರ ಪೂಜೆಯನ್ನು ಪ್ರಾರಂಭಿಸಿ, ದೇವರುಗಳನ್ನು ನಿಕೃಷ್ಟಗೊಳಿಸಿರಬಹುದೇ?

* * * *

# ಒಗಟು – ೧೩

## ಅಹಿಂಸೆಯ ಒಗಟು

ಪ್ರಾಚೀನ ಭಾರತದ ಆರ್ಯರ ಹಾಗೂ ಅನಂತರದ ಹಿಂದೂಗಳ ಸಾಮಾಜಿಕ ಆಚರಣೆಗಳನ್ನೂ ರೂಢಿಗಳನ್ನೂ ಪರಸ್ಪರ ಹೋಲಿಸಿ ನೋಡಿದವರಿಗೆ ಒಂದು ಸಾಮಾಜಿಕ ಕ್ರಾಂತಿಯೇ ಆಗಿದೆಯೆನಿಸುವಂಥ ಬದಲಾವಣೆಗಳಾಗಿರುವುದು ಗೊತ್ತಾಗುತ್ತದೆ.

ಆರ್ಯರು ಜೂಜುಕೋರ ಜನಾಂಗ. ಆರ್ಯರ ಆರಂಭದ ಘಟ್ಟದಿಂದಲೇ ಜೂಜು ಒಂದು ಶಾಸ್ತ್ರವಾಗಿ ಬೆಳೆದುಬಂದಿದೆ. ಆರ್ಯರು ಆ ಬಗೆಗೆ ತಾಂತ್ರಿಕ ಪರಿಕಲ್ಪನೆಗಳನ್ನು ಹುಟ್ಟು ಹಾಕಿದ್ದರು. ಅವರು ಇತಿಹಾಸವನ್ನು ಕೃತ, ತ್ರೇತ, ದ್ವಾಪರ ಮತ್ತು ಕಲಿ ಎಂದು ನಾಲ್ಕು ಯುಗಗಳನ್ನಾಗಿ ವಿಂಗಡಿಸಿದ್ದರು. ಆದರೆ, ಇವು ವಾಸ್ತವವಾಗಿ ಆರ್ಯರು ಜೂಜಿನಲ್ಲಿ ಬಳಸುತ್ತಿದ್ದ ದಾಳಗಳ ಹೆಸರುಗಳು. ಅತ್ಯಂತ ಅದೃಷ್ಟದಾಯಕವಾದ ದಾಳವೆಂದರೆ ಕೃತ. ದುರದೃಷ್ಟ ತರುವ ದಾಳವೇ ಕಲಿ. ತ್ರೇತ ಮತ್ತು ದ್ವಾಪರ ಇವೆರಡರ ನಡುವಿನ ದಾಳಗಳು. ಆರ್ಯರ ಕಾಲದಲ್ಲಿ ಜೂಜಿಗೆ ಒಡ್ಡುತ್ತಿದ್ದ ಪಣ ಕೂಡ ತೀರಾ ದೊಡ್ಡದು. ರಾಜ್ಯಗಳನ್ನೂ ತಮ್ಮ ಪತ್ನಿಯರನ್ನೂ ಅವರು ಪಣಕ್ಕಿಡುತ್ತಿದ್ದುದುಂಟು. ನಳ ಮಹಾರಾಜ ರಾಜ್ಯವನ್ನೇ ಪಣಕ್ಕಿಟ್ಟು ಸೋತ. ಪಾಂಡವರು ಮತ್ತೂ ಮುಂದೆ ಹೋದರು. ಅವರು ತಮ್ಮ ರಾಜ್ಯದ ಜೊತೆಗೆ ಪತ್ನಿ ದ್ರೌಪದಿಯನ್ನೂ ಪಣಕ್ಕಿಟ್ಟು, ಎರಡನ್ನು ಸೋತರು. ಆರ್ಯರಲ್ಲಿ ಜೂಜು ಕೇವಲ ಸಿರಿವಂತರ ಕ್ರೀಡೆಯೇನಾಗಿರಲಿಲ್ಲ. ಇದು ಬಹುತೇಕ ಎಲ್ಲ ಜನರ ದೌರ್ಬಲ್ಯವಾಗಿತ್ತು. ಈ ವ್ಯಸನ ಅದೆಷ್ಟು ತೀವ್ರವಾಗಿ ಹಬ್ಬಿತ್ತೆಂದರೆ ಧರ್ಮಶಾಸ್ತ್ರದ ಕರ್ತೃಗಳೆಲ್ಲ ಇದನ್ನು ರಾಜ್ಯದ ಕಾನೂನುಗಳ ಮೂಲಕ ಮಟ್ಟಹಾಕಬೇಕೆಂದು ರಾಜರುಗಳಿಗೆ ಒತ್ತಿ ಒತ್ತಿ ಹೇಳಿದ್ದರು.

ಆರ್ಯರ ಗಂಡು ಹೆಣ್ಣಿನ ಸಂಬಂಧಗಳಲ್ಲಿ ಕೂಡ ಸ್ವೇಚ್ಛಾಪ್ರವೃತ್ತಿಯಿತ್ತು. ಒಂದು ಕಾಲಕ್ಕಂತೂ ಮದುವೆ ಎನ್ನುವುದು ಗಂಡು ಹೆಣ್ಣಿನ ನಡುವ ಶಾಶ್ವತ ಸಂಬಂಧದ ವ್ಯವಸ್ಥೆಯೆಂಬುದೇ ಅವರಿಗೆ ಗೊತ್ತಿರಲಿಲ್ಲ. ಮಹಾಭಾರತದಲ್ಲಿ ಬೇರೊಬ್ಬರಿಂದ ಸಂತಾನ ಪಡೆಯುವ ಕುರಿತು ಕುಂತಿ ಪಾಂಡುವಿಗೆ ಹೇಳುವ ಮಾತಿನಲ್ಲಿ ಇದು ಸ್ಪಷ್ಟವಾಗುತ್ತದೆ. ಆರ್ಯರ ಕಾಲಕ್ಕೆ ಗಂಡು ಹೆಣ್ಣಿನ ಸಂಬಂಧದ ಗಡಿ ಗೆರೆಗಳೂ ಕೂಡ ಸ್ಪಷ್ಟವಾಗಿರಲಿಲ್ಲ. ಅಣ್ಣನು ತಂಗಿಯೊಡನೆ, ತಾಯಿ ಮಗನೊಡನೆ, ತಂದೆ ಮಗಳೊಡನೆ, ತಾತ ತನ್ನ ಮೊಮ್ಮಗಳೊಡನೆ ಸಂಸಾರ ಹೂಡಿದ ಉದಾಹರಣೆಗಳೂ ಹೇರಳವಾಗಿದ್ದವು. ಹೆಣ್ಣಿಗೆ ಸಂಬಂಧಪಟ್ಟಂತೆ ಒಂದು ಬಗೆಯ ಸಮತಾವಾದವಿತ್ತು. ಅದೊಂದು ಸರಳ ಸಮತಾವಾದ. ಹಲವು ಗಂಡುಗಳು ಒಂದು ಹೆಣ್ಣನ್ನು ಹಂಚಿಕೊಳ್ಳುತ್ತಿದ್ದರು. ಹೆಣ್ಣೊಬ್ಬಳು ತನಗೆ ಮಾತ್ರ ಸೇರಿದವಳೆಂದು ಗಂಡೊಬ್ಬ ಹಕ್ಕು ಚಲಾಯಿಸುವಂತಿರಲಿಲ್ಲ. ಈ ಬಗೆಯ ಸಮತಾವಾದದಲ್ಲಿ ಹೆಣ್ಣನ್ನು ಗಣಿಕಾ ಎಂದರೆ ಹಲವರಿಗೆ ಸೇರಿದವಳು ಎಂದು ಕರೆಯಲಾಗುತ್ತಿತ್ತು. ಆರ್ಯರಲ್ಲಿ ಇನ್ನೊಂದು ಬಗೆಯ ನಿಯಂತ್ರಿತ ಸಮತಾವಾದ ಕೂಡ ಇತ್ತು ಈ ಪದ್ಧತಿಯಂತೆ ಗಂಡಸರ ಒಂದು ಸಮೂಹ ಹೆಣ್ಣನ್ನು ಹಂಚಿಕೊಳ್ಳುವ ದಿನ ಕೂಡ ನಿರ್ಧರಿತವಾಗಿರುತ್ತಿತ್ತು. ಅಂಥ ಹೆಣ್ಣನ್ನು ವಾರಾಂಗನೆಯೆಂದು ಕರೆಯುತ್ತಿದ್ದರು.

ವೇಶ್ಯಾವಾಟಿಕೆ ಬೆಳೆದು ತನ್ನ ವಿಕೃತ ಘಟ್ಟವನ್ನು ಮುಟ್ಟಿತ್ತು. ಬೇರೆಲ್ಲೂ ವೇಶ್ಯೆಯರು ಬಹಿರಂಗವಾಗಿ ಸಂಭೋಗಕ್ಕೆ ಸಮ್ಮತಿಸಿದ ಉದಾಹರಣೆಗಳಿಲ್ಲ. ಆದರೆ ಆರ್ಯರ ಕಾಲದಲ್ಲಿ ಈ ಪದ್ಧತಿಯಿತ್ತು. ಆರ್ಯರಲ್ಲಿ ಈ ಬಗೆಯ ಮೃಗತ್ವ ಕೂಡ ಕಾಣಬರುತ್ತಿತ್ತು. ಇಂಥವರ ಪಟ್ಟಿಯಲ್ಲಿ ಗೌರವಾನ್ವಿತ ಋಷಿಗಳು ಇದ್ದರು.

ಆರ್ಯರು ಮದ್ಯಪಾನದ ಜನಾಂಗ ಕೂಡ. ಮದ್ಯ ಅವರ ಧರ್ಮದ ಬಹುಮುಖ್ಯ ಭಾಗವಾಗಿತ್ತು. ವೇದಕಾಲದ ದೇವರುಗಳೂ ಮದ್ಯ ಸೇವಿಸುತ್ತಿದ್ದರು. ಆ ದೈವೀ ಮದ್ಯವೇ ಸೋಮರಸ. ತಮ್ಮ ದೇವರುಗಳೇ ಮದ್ಯಪಾನ ಮಾಡಿದ ಮೇಲೆ ಆರ್ಯರಿಗೆ ಮದ್ಯಪಾನದ ಬಗೆಗೆ ಸಂಕೋಚವೆಲ್ಲಿರುತ್ತದೆ? ಮದ್ಯಪಾನ ಅವರ ಧಾರ್ಮಿಕ ಆಚರಣೆಯ ಒಂದು ಭಾಗವೇ ಆಗಿಬಿಟ್ಟಿತ್ತು. ಪ್ರಾಚೀನ ಆರ್ಯರಲ್ಲಿ ಪ್ರತಿದಿನವು ಹಲವು ವಿಧಿಗಳು ಹಾಗೂ ಬಲಿಗಳು ನಡೆಯುತ್ತಲೇ ಇದ್ದುದರಿಂದ ಸೋಮರಸ ಸೇವಿಸದ ದಿನವೇ ಇರುತ್ತಿರಲಿಲ್ಲವೆಂದರೆ ತಪ್ಪಾಗಲಾರದು. ಆದರೆ ಸೋಮರಸವನ್ನು ಬ್ರಾಹ್ಮಣರು, ಕ್ಷತ್ರಿಯರು ಮತ್ತು ವೈಶ್ಯರು ಮಾತ್ರ ಕುಡಿಯಬಹುದಾಗಿತ್ತು. ಇದರರ್ಥ ಶೂದ್ರರು ಮದ್ಯಪಾನ ಮಾಡುವಂತಿರಲಿಲ್ಲವೆಂದಲ್ಲ. ಮಾರುಕಟ್ಟೆಯಲ್ಲಿ ಸಿಗುವ 'ಸುರಾ' ಎಂಬ ಪವಿತ್ರೀಕರಿಸದ ಮದ್ಯವನ್ನು ಅವರು ಕುಡಿಯುತ್ತಿದ್ದರು. ಕೇವಲ ಆರ್ಯ ಗಂಡಸರು ಮಾತ್ರವೇ ಮದ್ಯಪಾನ ವ್ಯಸನಿಗಳಾಗಿರಲಿಲ್ಲ. ಆರ್ಯ ಹೆಂಗಸರೂ ಮದ್ಯಪಾನ ವ್ಯಸನಿಗಳಾಗಿದ್ದರು. "ಕೌಶೀತಕಿ ಗೃಹ್ಯಸೂತ್ರ'ದ I, ೧೧–೧೨ರಲ್ಲಿ ವಿಧವೆಯರಲ್ಲದ, ನಾಲ್ಕರಿಂದ ಎಂಟು ಜನ ಹೆಂಗಸರನ್ನು ಭಕ್ಷ್ಯಭೋಜನ ಹಾಗೂ ಮದ್ಯಪಾನದಿಂದ ಸಂಪ್ರೀತಗೊಳಿಸಿ ವಿವಾಹ ಮಹೋತ್ಸವಗಳ ಹಿಂದಿನ ರಾತ್ರಿ ನೃತ್ಯಕ್ಕೆ ಆಹ್ವಾನಿಸಬೇಕೆಂದು ಹೇಳಲಾಗಿದೆ. ಕೇವಲ ಅಬ್ರಾಹ್ಮಣ ಹೆಂಗಸರಲ್ಲದೆ ಬ್ರಾಹ್ಮಣ ಹೆಂಗಸರೂ ಮದ್ಯಪಾನ ವ್ಯಸನಿಗಳಾಗಿದ್ದರು. ಮದ್ಯಪಾನವನ್ನು ಪಾಪವೆಂದು ಪರಿಗಣಿಸಲಾಗಿರಲಿಲ್ಲ. ಅದೊಂದು ದೌರ್ಬಲ್ಯ ಕೂಡ ಆಗಿರಲಿಲ್ಲ. ಅದೊಂದು ಗೌರವಾನ್ವಿತವಾದ ಅಭ್ಯಾಸವಾಗಿತ್ತು. 'ಋಗ್ವೇದ'ವೇ 'ಮದಿರೆ ಕುಡಿಯುವ ಮುನ್ನ ಸೂರ್ಯನನ್ನು ಪ್ರಾರ್ಥಿಸುವ' ಕುರಿತು ಹೇಳುತ್ತದೆ.

'ಯಜುರ್ವೇದ' ಹೇಳುತ್ತದೆ:

"ಓ ಸೋಮದೇವನೇ! ಸುರೆಯಿಂದ ಶಕ್ತನಾಗಿ ಮೈದುಂಬಿ ನಿನ್ನ ಶುದ್ಧ ಚೇತನದಿಂದ ದೇವತೆಗಳನ್ನೂ ಸಂಪ್ರೀತಗೊಳಿಸು. ಈ ನೈವೇದ್ಯವನ್ನರ್ಪಿಸುವವನಿಗೆ ತೇಜಸ್ಸನ್ನೂ ಬ್ರಾಹ್ಮಣ ಕ್ಷತ್ರಿಯರಿಗೆ ಶಕ್ತಿಯನ್ನೂ ಅನುಗ್ರಹಿಸು."

'ಮಂತ್ರ ಬ್ರಾಹ್ಮಣ'ವು 'ಯಾವ ಮದಿರೆಯನ್ನು ಹೆಣ್ಣನ್ನು ಸುಖಿಸುವ ಶಕ್ತಿಯನ್ನು ಗಂಡಿಗೆ ನೀಡಿತೋ ಅಂಥ ಮದಿರೆಯನ್ನು' ಕುರಿತು ಮಾನವರ ಸುಖಕ್ಕಾಗಿ ನೀರು ಮದ್ಯವಾಗಿ ಪರಿವರ್ತಿತವಾಗುವುದನ್ನು ಕುರಿತು ಹೇಳುತ್ತದೆ.

'ರಾಮಾಯಣ'ದ ಉತ್ತರ ಕಾಂಡದಲ್ಲಿ ರಾಮನೂ ಸೀತೆಯೂ ಒಟ್ಟಿಗೆ ಕುಳಿತು ಮದ್ಯಪಾನ ಮಾಡುತ್ತಿದ್ದುದರ ಉಲ್ಲೇಖವಿದೆ: "ಶಚೀದೇವಿಯೊಡನೆ ಕುಳಿತ ಇಂದ್ರನಂತೆ, ರಾಮಚಂದ್ರ ಜೇನಿನಿಂದ ಮಾಡಿದ ಮದ್ಯವನ್ನು ಸೀತೆಗೂ ನೀಡಿ ತಾನು ಸೇವಿಸುತ್ತಿದ್ದ. ರಾಮಚಂದ್ರನಿಗೆ ಸೇವಕರು ಮಾಂಸವನ್ನು ಸಿಹಿಯನ್ನು ಹಣ್ಣುಗಳನ್ನೂ ತರುತ್ತಿದ್ದರು."

'ಮಹಾಭಾರತ'ದ ಉದ್ಯೋಗ ಪರ್ವದಲ್ಲಿ 'ಮದ್ಯ ಸೇವಿಸಿದ ಶ್ರೀಕೃಷ್ಣಾರ್ಜುನರು ಸುಗಂಧಭರಿತರಾಗಿಯೂ ಸಾಲಂಕೃತರಾಗಿಯೂ ಚಿನ್ನದ ಮಂಚದ ಮೇಲೆ ಕುಳಿತಿದ್ದರು. ಶ್ರೀ

ಕೃಷ್ಣನ ಪಾದ ಅರ್ಜುನನ ತೊಡೆಯ ಮೇಲೆ ಹಾಗೂ ಅರ್ಜುನನ ಪಾದವು ದ್ರೌಪದಿ ಹಾಗೂ ಸತ್ಯಭಾಮೆಯರ ತೊಡೆಯ ಮೇಲಿದ್ದುದನ್ನು ಕಂಡೆ....' ಎಂಬ ಉಲ್ಲೇಖವಿದೆ.

ಈ ದೃಷ್ಟಿಯಿಂದ, ಕಾಲಾನುಕ್ರಮದಲ್ಲಿ ನಾವು ಕಾಣುವ ಅತ್ಯಂತ ಮುಖ್ಯ ಬದಲಾವಣೆಯೆಂದರೆ ಆಹಾರ ಪದ್ಧತಿಯದು. ಇಂದಿನ ಹಿಂದೂಗಳಲ್ಲಿರುವ ಆಹಾರ ಪದ್ಧತಿಯ ಬಗೆಗಿನ ಕಟ್ಟುನಿಟ್ಟನ್ನು ನೋಡಿದರೆ ಈ ಬದಲಾವಣೆಯ ಅರಿವಾಗುತ್ತದೆ. ಈ ಆಹಾರ ಪದ್ಧತಿಗಳಲ್ಲಿ ಎರಡು ಬಗೆಗಳಿವೆ. ಒಬ್ಬ ಹಿಂದೂ, ಹಿಂದೂ ಅಲ್ಲದವನು ಬೇಯಿಸಿದ್ದನ್ನು ತಿನ್ನುವುದಿಲ್ಲ. ಹಿಂದೂ ಒಬ್ಬ ಮತ್ತೊಬ್ಬ ಹಿಂದೂ ಬೇಯಿಸಿದ ಆಹಾರವನ್ನು ತಿನ್ನುವುದೇನಿದ್ದರೂ ಆಹಾರ ತಯಾರಿಸಿದವನು ಬ್ರಾಹ್ಮಣನಾಗಿದ್ದರೆ ಅಥವಾ ತನ್ನ ಜಾತಿಯವನಾಗಿದ್ದಾಗ ಮಾತ್ರ. ಸೇವಿಸುವ ಆಹಾರದ ಕುರಿತಂತೆಯೂ ಹಲವು ಕಟ್ಟುನಿಟ್ಟುಗಳಿವೆ. ಇದರಲ್ಲಿ ಎರಡು ವರ್ಗಗಳು: ಸಸ್ಯಾಹಾರಿಗಳು ಮತ್ತು ಮಾಂಸಾಹಾರಿಗಳು. ಮಾಂಸಾಹಾರಿಗಳಲ್ಲೂ ಎರಡು ವಿಧ: ಎಲ್ಲ ಬಗೆಯ ಮಾಂಸ ಹಾಗೂ ಮೀನನ್ನು ತಿನ್ನುವವರು ಮತ್ತು ಕೇವಲ ಮೀನನ್ನು ತಿನ್ನುವರು.....

ಮಾಂಸಾಹಾರಿಗಳಲ್ಲಿ ಇನ್ನೂ ಮೂರು ಬಗೆಗಳಿವೆ:

೧. ಗೋವನ್ನು ಬಿಟ್ಟು ಎಲ್ಲ ಬಗೆಯ ಮಾಂಸ ತಿನ್ನುವವರು.

೨. ಗೋವೂ ಸೇರಿದಂತೆ ಎಲ್ಲ ಪ್ರಾಣಿಗಳ ಮಾಂಸ ತಿನ್ನುವವರು.

೩. ಗೋವು ಮತ್ತು ಕೋಳಿಯನ್ನು ಬಿಟ್ಟು ಉಳಿದೆಲ್ಲದರ ಮಾಂಸ ತಿನ್ನುವವರು.

ಆಹಾರ ಪದ್ಧತಿಯ ದೃಷ್ಟಿಯಿಂದ ಬ್ರಾಹ್ಮಣರನ್ನು ಎರಡು ವರ್ಗಗಳನ್ನಾಗಿ ವಿಂಗಡಿಸಬಹುದು:

೧. ಪಂಚಗೌಡ ೨. ಪಂಚದ್ರಾವಿಡ.

ಈ ಇಬ್ಬರಲ್ಲಿ ಪಂಚದ್ರಾವಿಡರು ಸಂಪೂರ್ಣ ಸಸ್ಯಾಹಾರಿಗಳು. ಪಂಚಗೌಡರಲ್ಲಿ ಗೌಡಸಾರಸ್ವತರನ್ನು ಬಿಟ್ಟರೆ ಉಳಿದವರು ಸಂಪೂರ್ಣ ಸಸ್ಯಾಹಾರಿಗಳು. ಹಿಂದೂ ಸಮಾಜದ ಕೊನೆಯ ಶ್ರೇಣಿಗೆ ಸೇರುವ ಅಸ್ಪೃಶ್ಯರು ಕೇವಲ ಕುರಿಕೋಳಿಗಳನ್ನು ಮಾತ್ರವಲ್ಲ, ಸತ್ತ ಅಥವಾ ಸಾಯಿಸಿದ ಗೋವನ್ನು ಕೂಡ ತಿನ್ನುವವರು. ಬ್ರಾಹ್ಮಣ ಮತ್ತು ಅಸ್ಪೃಶ್ಯರ ನಡುವಣ ವರ್ಗಗಳಾದ ಅಬ್ರಾಹ್ಮಣರಲ್ಲಿ ವಿಧವಿಧವಾದ ಆಹಾರ ಪದ್ಧತಿಗಳಿವೆ. ಕೆಲವರು ಬ್ರಾಹ್ಮಣರಂತೆ ಸಸ್ಯಾಹಾರಿಗಳು. ಉಳಿದವರು ಮಾಂಸಾಹಾರಿಗಳು. ಆದರೆ ಗೋಭಕ್ಷಣೆಯ ವಿಷಯದಲ್ಲಿ ಮಾತ್ರ ಅವರು ಬ್ರಾಹ್ಮಣರನ್ನು ಅನುಸರಿಸುವರು.

ಈ ಹಿನ್ನೆಲೆಯಲ್ಲಿ ಹಿಂದೂ ಸಮಾಜದ ಮತ್ತೊಂದು ಗಮನಾರ್ಹ ಅಂಶವೊಂದನ್ನು ನೋಡಬೇಕು. ಅದು ಆಹಾರಕ್ಕಾಗಿ ಪ್ರಾಣಿಯನ್ನು ಕೊಲ್ಲುವುದನ್ನು ಕುರಿತದ್ದು. ಈ ದೃಷ್ಟಿಯಿಂದ ಎಲ್ಲ ಹಿಂದೂಗಳೂ ಒಂದೇ. ಆಹಾರಕ್ಕಾಗಿ ಕೂಡ ಅವರು ಯಾವ ಪ್ರಾಣಿಯನ್ನೂ ತಾವೇ ಕೊಲ್ಲಲಾರರು. ಸಣ್ಣ ಜಾತಿಯಾದ ಕಟುಕರ ಜಾತಿಯೊಂದನ್ನು ಬಿಟ್ಟರೆ ಉಳಿದ ಹಿಂದೂಗಳಲ್ಲಿ ಪ್ರಾಣಿಗಳನ್ನು ಕೊಲ್ಲಬಲ್ಲ ಕಟುಕರೇ ಇಲ್ಲ. ಅಸ್ಪೃಶ್ಯರು ಕೂಡ ಕೊಲ್ಲುವುದಿಲ್ಲ. ಸತ್ತ ಗೋವನ್ನು ಮಾತ್ರ ಅವರು ತಿನ್ನುವವರಷ್ಟೇ ಹೊರತು ಅದನ್ನು ಕೊಲ್ಲುವವರಲ್ಲ. ಇಂದಿನ ಭಾರತದಲ್ಲಿ ಹಿಂದೂಗಳು ಮಾಂಸ ತಿನ್ನಬೇಕೆಂದರೆ ಮುಸಲ್ಮಾನರಲ್ಲಿಗೇ ಹೋಗಬೇಕೆಂದು ಕಾಣುತ್ತದೆ. ಅಂದರೆ ಪ್ರತಿಯೊಬ್ಬ ಹಿಂದೂವು ಅಹಿಂಸಾವಾದಿ.

ಈ ಸಸ್ಯಾಹಾರತ್ವ ಎಂದಿನಿಂದ ಭಾರತಕ್ಕೆ ಬಂತು? ಅಹಿಂಸೆ ಹಿಂದೂಗಳ ನಂಬಿಕೆಯಾಗಿ ಬೇರೂರಿದ್ದು ಎಂದಿನಿಂದ? ಎಷ್ಟೋ ಹಿಂದೂಗಳಿಗೆ ಈ ಪ್ರಶ್ನೆಯ ಔಚಿತ್ಯವೇ ಅರ್ಥವಾಗುವುದಿಲ್ಲ.

ಅಹಿಂಸೆ ಮತ್ತು ಸಸ್ಯಾಹಾರ ಪದ್ಧತಿ ಇವೆರಡೂ ಭಾರತಕ್ಕೆ ಹೊಸತೇನಲ್ಲ ಎಂಬುದು ಅವರ ವಾದ. ಆದರೆ, ಇಂದಿನ ಹಿಂದೂಗಳ ಪೂರ್ವಜರಾದ ಪ್ರಾಚೀನ ಆರ್ಯರು ಮಾಂಸಾಹಾರಿಗಳು ಮಾತ್ರವಲ್ಲದೆ ಗೋಭಕ್ಷಕರೂ ಆಗಿದ್ದರು. ಉದಾಹರಣೆಯಾಗಿ, ಮಧುಪರ್ಕ ಪದ್ಧತಿಯನ್ನು ನೋಡಿ:

ಪ್ರಾಚೀನ ಆರ್ಯರಲ್ಲಿ ಅತಿಥಿಯೊಬ್ಬನನ್ನು ಆದರಿಸುವಾಗ ನೀಡುತ್ತಿದ್ದ ಮಧುಪರ್ಕದ ಬಗೆಗೆ ಹಲವು ಗೃಹ್ಯಸೂತ್ರಗಳಲ್ಲಿ ಉಲ್ಲೇಖವಿದೆ. ಬಹುತೇಕ ಗೃಹ್ಯಸೂತ್ರಗಳ ಪ್ರಕಾರ ಮಧುಪರ್ಕಕ್ಕೆ ಅರ್ಹರಾದ ಆರು ಬಗೆಯ ಜನರಿದ್ದಾರೆ. ೧. ಯಜ್ಞ ನಡೆಸುವ ಋತ್ವಿಜ ಅಥವಾ ಬ್ರಾಹ್ಮಣ, ೨. ಆಚಾರ್ಯ ಅಂದರೆ ಗುರು, ೩. ಮದುವಣಿಗ, ೪. ರಾಜ, ೫. ಗುರುಕುಲದಲ್ಲಿ ಆಗತಾನೇ ವಿದ್ಯಾಭ್ಯಾಸ ಮುಗಿಸಿ ಬಂದ ಸ್ನಾತಕ ಮತ್ತು ೬. ಅತಿಥೇಯನಿಗೆ ಪ್ರಿಯನಾದ ಯಾವುದೇ ವ್ಯಕ್ತಿ.

ಋತ್ವಿಜ, ರಾಜ ಮತ್ತು ಆಚಾರ್ಯರಿಗೆ ಅವರು ಆಗಮಿಸಿದಾಗಲೆಲ್ಲ ಮಧುಪರ್ಕ ನೀಡಬಹುದಾದರೆ, ಉಳಿದವರಿಗೆಲ್ಲ ವರ್ಷದಲ್ಲಿ ಒಮ್ಮೆ ಮಂತ್ರ ಮಧುಪರ್ಕ ನೀಡಬಹುದು. ಈ ಆಚರಣೆಯ ಮೊದಲ ಹಂತವೆಂದರೆ ಅತಿಥಿಯ ಪಾದ ತೊಳೆಯುವುದು. ನಂತರ ಆತನಿಗೆ ಮಧುಪರ್ಕ ಕುಡಿಯಲು ಕೊಡಲಾಗುವುದು. ಜೊತೆಗೇ ಕೆಲವು ನಿರ್ದಿಷ್ಟ ಮಂತ್ರಗಳನ್ನೂ ಪಠಿಸಲಾಗುವುದು.

ಮಧುಪರ್ಕವೆಂದರೆ ಮಧುವನ್ನು ವ್ಯಕ್ತಿಯೊಬ್ಬನ ಕೈಗೆ ಸುರಿಯುವುದು ಎಂಬರ್ಥ. ಆರಂಭದಲ್ಲಿ ಮಧುಪರ್ಕಕ್ಕೆ ಇದೇ ಅರ್ಥವಿತ್ತು. ಆದರೆ ಬರುಬರುತ್ತ ಮಧುವಿಗೆ ಬೆರೆಸುವ ಪದಾರ್ಥಗಳು ಹೆಚ್ಚಾಗಲಾರಂಭಿಸಿದವು. ಆರಂಭದಲ್ಲಿ ಮೊಸರು, ಜೇನು ಮತ್ತು ಬೆಣ್ಣೆ ಮಾತ್ರ ಅದರೊಳಗೆ ಬೆರೆತಿದ್ದರೆ, ನಂತರ ಮೊಸರು, ಜೇನು, ತುಪ್ಪ, ಯವ (ಒಂದು ಬಗೆಯ ಧಾನ್ಯ) ಮತ್ತು ಬಾರ್ಲಿ ಕೂಡ ಬೆರೆಯಲಾರಂಭಿಸಿದವು. ಅನಂತರ ಒಂಬತ್ತು ವಿವಿಧ ಬಗೆಯ ವಸ್ತುಗಳು ಇದರಲ್ಲಿ ಬೆರೆಯಲಾರಂಭಿಸಿದವು. ಕೌಶಿಕ ಸೂತ್ರ ಒಂಬತ್ತು ವಸ್ತುಗಳ ಮಿಶ್ರಣವನ್ನು ಕುರಿತು ಹೇಳುತ್ತದೆ. ಅವೆಂದರೆ ಬ್ರಹ್ಮ (ಜೇನು ಮತ್ತು ಮೊಸರು), ಐಂದ್ರ (ಪಾಯಸ), ಸೌಮ್ಯ (ಮೊಸರು ಮತ್ತು ತುಪ್ಪ), ಮೌಸಲ (ರಾಜಸೂಯ ಯಾಗದಲ್ಲಿ ಮಾತ್ರ), ವರುಣ (ನೀರು ಮತ್ತು ತುಪ್ಪ), ಶ್ರವಣ (ಸಾಸುವೆ ಎಣ್ಣೆ ಮತ್ತು ತುಪ್ಪ) ಮತ್ತು ಪರಿವ್ರಾಜಕ (ಸಾಸುವೆ ಎಣ್ಣೆ ಮತ್ತು ಎಣ್ಣೆಯ ರೊಟ್ಟಿ). ಆದರೆ ಮಾನವ ಗೃಹ್ಯಸೂತ್ರವು ಮಾಂಸವಿಲ್ಲದ ಮಧುಪರ್ಕವಿರಬಾರದೆಂದು ವೇದವು ಹೇಳಿದೆಯೆಂದು ಸಾರುತ್ತದೆ. ಒಂದು ವೇಳೆ ಗೋವಿಲ್ಲದಿದ್ದರೆ, ಕುರಿಯ ಮಾಂಸ ಅಥವಾ ಪಾಯಸವನ್ನು ಕೊಡಬೇಕೆಂದು ಅದು ಹೇಳುತ್ತದೆ. ಬೌಧಾಯನ ಗೃಹ್ಯಸೂತ್ರವು ಗೋವಿಲ್ಲದಿದ್ದಾಗ, ಕುರಿ ಅಥವಾ ಟಗರಿನ ಅಥವಾ ಜಿಂಕೆ ಮುಂತಾದ ಕಾಡುಪ್ರಾಣಿಗಳು ಮಧುಪರ್ಕದ ಭಾಗವಾಗಿರಬೇಕೆಂದು ಸೂಚಿಸುತ್ತದೆ. (I–೨. ೫೧–೫೪)

ಹೀಗೆ ಬರುಬರುತ್ತಾ ಮಧುಪರ್ಕದ ಬಹುಮುಖ್ಯ ವಸ್ತುವೆಂದರೆ ಮಾಂಸವೇ ಆಗಿಬಿಟ್ಟಿತು. ಅದರಲ್ಲೂ ಕೆಲವು ಗೃಹ್ಯಸೂತ್ರಗಳು ಮಾಂಸವಿಲ್ಲದೆ ಮಧುಪರ್ಕವೇ ಇಲ್ಲ ಎನ್ನುತ್ತವೆ. ಇದಕ್ಕೆ ಋಗ್ವೇದದ VIII, ೧೦೧.೫ನೇ ಸೂತ್ರದ 'ಮಧುಪರ್ಕದಲ್ಲಿ ಮಾಂಸವಿರಲಿ' ಎಂಬ ಸಾಲನ್ನು ಸಮರ್ಥನೆಯಾಗಿ ನೀಡಲಾಗಿದೆ.

ಹೀಗೆ ಒಂದಾನೊಂದು ಕಾಲಕ್ಕೆ ಮಾಂಸಾಹಾರ ತೀರ ಸಾಮಾನ್ಯವಾಗಿತ್ತು. ಬ್ರಾಹ್ಮಣರಿಂದ ಮೊದಲುಗೊಂಡು ಶೂದ್ರರವರೆಗೆ ಎಲ್ಲರೂ ಮಾಂಸಾಹಾರ ಸೇವಿಸುತ್ತಿದ್ದರು. ಧರ್ಮಸೂತ್ರಗಳಲ್ಲಿ ಮೃಗ, ಪಕ್ಷಿ, ಮೀನು ಆಹಾರಗಳ ಬಗೆಗೆ ಹಲವಾರು ನಿಯಮಗಳೇ ಇವೆ.

ರಾಮಾಯಣ (ಕಿಷ್ಕಿಂಧಾಕಾಂಡ ೧೭.೩೯). ಮಾರ್ಕಂಡೇಯ ಪುರಾಣಗಳಲ್ಲಿ ಮುಳ್ಳುಹಂದಿ, ಮೊಲ, ಕಾಡುಹಂದಿ, ಉಡ, ಘೇಂಡಾಮೃಗ, ಆಮೆ ಮೊದಲಾದ ಪ್ರಾಣಿಗಳನ್ನು ಬಿಟ್ಟರೆ ಉಳಿದ ಐದು ಉಗುರುಳ್ಳ ಪ್ರಾಣಿಗಳನ್ನು ತಿನ್ನಬಾರದೆಂದು ಸೂಚಿಸಲಾಗಿದೆ. ಎರಡೂ ದವಡೆಗಳಲ್ಲಿ ಎರಡು ಪಂಕ್ತಿ ಹಲ್ಲುಗಳನ್ನುಳ್ಳ ಪ್ರಾಣಿಗಳನ್ನು, ರೋಮಮಯ ಪ್ರಾಣಿಗಳನ್ನು, ರೋಮವಿಲ್ಲದ ಹಾವಿನಂಥ ಪ್ರಾಣಿಗಳನ್ನು, ಊರುಕೋಳಿ, ಹಂದಿ ಮತ್ತು ಎತ್ತುಗಳನ್ನು ತಿನ್ನಬಾರದೆಂದು ಗೌತಮ ಸೂತ್ರದಲ್ಲಿ ಹೇಳಲಾಗಿದೆ. ಆಪಸ್ತಂಭ ಧರ್ಮಸೂತ್ರ (೧.೫.೧೭.೨೯-೩೧), ಗೌತಮ (೧೭-೨೭-೩೧), ವಾಸಿಷ್ಠ ಧರ್ಮಸೂತ್ರ ೧೪-೩೯-೪೦, ಯಜು I, ೧೭೭, ವಿಷ್ಣು ಧರ್ಮಸೂತ್ರ ೫೧-೧೬ ಇತ್ಯಾದಿಗಳು ಒಂದು ಗೊರಸುಳ್ಳ ಒಂಟೆ ಇತ್ಯಾದಿ ಪ್ರಾಣಿಗಳನ್ನು ತಿನ್ನಬಾರದೆಂದು ಸೂಚಿಸುತ್ತವೆ. ಆದರೆ, ಹಾಲು ಕರೆಯುವ ಹಸು, ಒಂಟೆಗಳು, ಗವಯ, ಊರುಹಂದಿಗಳ ಮಾಂಸವು ಪವಿತ್ರವೆಂದು ವಾಜಸನೇಯಕ ಹೇಳಿರುವುದರಿಂದ ಅವನ್ನು ತಿನ್ನಬಹುದೆಂದು ತಿಳಿಯುತ್ತದೆ.

ಆಪಸ್ತಂಭ ಧರ್ಮಸೂತ್ರ (I.೨.೫.೧೫) ವೇದವನ್ನು ಹೇಳಿಕೊಡುವ ಉಪಾಧ್ಯಾಯರುಗಳು ಮಾಂಸ ತಿನ್ನಬಾರದೆಂದು ಹೇಳುತ್ತದೆ.

*(ಈ ಅಧ್ಯಾಯದ ಮುಂದಿನ ಭಾಗಗಳು ಕಾಣೆಯಾಗಿವೆ - ಸಂ.)*

* * * *

# ಒಗಟು – ೧೪

## ಅಹಿಂಸೆಯಿಂದ ಹಿಂಸೆಗೆ*

'ಹಿಂಸೆಯಿಂದ ಅಹಿಂಸೆಗೆ' ಎನ್ನುವುದು ಹಿಂದೂ ಅಹಿಂಸಾ ಗಾಥೆಯ ಮೊದಲ ಭಾಗವಾದರೆ 'ಅಹಿಂಸೆಯಿಂದ ಹಿಂಸೆಗೆ' ಎಂಬ ಶೀರ್ಷಿಕೆಯಡಿಯಲ್ಲಿ ಅದರ ಎರಡನೆಯ ಭಾಗವನ್ನು ವಿವರಿಸಬಹುದು. ಈ ಎರಡನೆಯ ಭಾಗವನ್ನು ವಿವರಿಸಬಹುದು. ಈ ಎರಡನೆಯ ಭಾಗವನ್ನು ಅರ್ಥಮಾಡಿಕೊಳ್ಳಲು ತಂತ್ರ ಮತ್ತು ತಾಂತ್ರಿಕವಾದದ ಧಾರ್ಮಿಕ ಆಚರಣೆಗಳನ್ನು ನಾವು ಗಮನಿಸಬೇಕು.

ತಾಂತ್ರಿಕ ಆರಾಧನೆಯ ತಿರುಳು ಪಂಚ 'ಮ' ಕಾರಗಳಲ್ಲಿದೆ:

೧. ಮದ್ಯ – ಹಲವು ಬಗೆಯ ಮದ್ಯಗಳ ಸೇವನೆ
೨. ಮಾಂಸ – ಮಾಂಸಾಹಾರ
೩. ಮತ್ಸ್ಯ – ಮೀನಿನ ಆಹಾರ
೪. ಮುದ್ರಾ – ಬೇಯಿಸಿದ ಬೇಳೆಗಳ ಆಹಾರ
೫. ಮೈಥುನ – ಸಂಭೋಗ

ಈ ಘಟ್ಟದಲ್ಲಿ, ಮೈಥುನವನ್ನು ಧಾರ್ಮಿಕ ಪೂಜೆಯ ಅಂಗವನ್ನಾಗಿ ಮಾಡಿದ್ದನ್ನು ಕುರಿತ ಚರ್ಚೆಯನ್ನು ಬಿಟ್ಟು ಮದ್ಯ, ಮಾಂಸಗಳನ್ನು ಕುರಿತ ಚರ್ಚೆಯನ್ನು ಗಮನಿಸಬೇಕು. ಆ ಮೇಲೆ ಕಾಣಿಸಿದ ಮೊದಲ ನಾಲ್ಕು ಅಂಶಗಳಿಗೆ ತಾಂತ್ರಿಕ ವಾದದಲ್ಲಿ ಹನ್ನೆರಡು ಬಗೆಯ ಮದ್ಯಗಳು, ಮೂರು ಬಗೆಯ ಮಧು ಮತ್ತು ಮೂರು ವಿಧದ ಮಾಂಸಗಳನ್ನೂ ಗೊತ್ತುಮಾಡಲಾಗಿದೆ. ಕೆಲವೊಂದು ಕಾನೂನು ಗ್ರಂಥಗಳ ಲೇಖಕರಾದ ಪೌಲಸ್ತ್ಯ ಋಷಿಯು ಪನಸಾ, ದ್ರಾಕ್ಷಿ, ಖರ್ಜೂರ, ನಾರಿಕೇಳ, ಇಕ್ಷು, ಮಾಧವಿಕಾ, ಸಾಯಿರಾ, ಅರಿಷ್ಟ, ಜೇನು, ಕಾಕಂಬಿಗಳಿಂದ ಮಾಡಿದ ಗೌಡಿ ಅಥವಾ ಮೈರೇಯ, ಅರ್ಕ ಹಾಗೂ ಇತರ ಆಹಾರ ಧಾನ್ಯಗಳಿಂದ ಮಾಡಿದ ಸುರಾ ಅಥವಾ ವಾರುಣಿ ಅಥವಾ ಪೈಷ್ಟಿ ಇತ್ಯಾದಿಗಳಿಂದ ಮಾಡಿದ ಸುಮಾರು ಹನ್ನೆರಡು ಬಗೆಯ ಮದ್ಯವನ್ನು ಗುರುತಿಸುತ್ತಾನೆ. ಈ ಹನ್ನೆರಡು ಬಗೆಯ ಮದ್ಯಗಳ ಜೊತೆಗೆ ಮರಸೇಬಿನಿಂದ ಮಾಡಿದ ತಂಕಾ, ಬೋರೆ ಹಣ್ಣಿನಿಂದ ಮಾಡಿದ ಕೋಲಿ, ಬಲರಾಮನಿಗೆ ಪ್ರಿಯವಾದ ಮದ್ಯವಾದ ಕಾದಂಬರಿ ಮುಂತಾದ ಮದ್ಯಗಳೂ ಸೇರಿವೆ. ಮಾಂಸವು ಪಕ್ಷಿ, ಪ್ರಾಣಿ ಅಥವಾ ಮೀನಿನದಾಗಬಹುದಿತ್ತು. ಒಣಗಿದ ಕಾಳುಗಳನ್ನು ಮದ್ಯ ಮತ್ತು ಮದ್ಯ ಪಾನೀಯಗಳೊಂದಿಗೆ ನಂಚಿಕೊಂಡು ತಿನ್ನುತ್ತಿದ್ದರು. ಪ್ರತಿಯೊಂದು ಬಗೆಯ ಮದ್ಯಪಾನಕ್ಕೂ ಒಂದೊಂದು ಉದ್ದೇಶವಿತ್ತು. ಉದಾಹರಣೆಗೆ, ಮಕ್ತಿಗಾಗಿ ಒಂದು ಬಗೆಯ ಮದ್ಯಪಾನವಿದ್ದರೆ, ಮತ್ತೊಂದು ವಿದ್ಯಾರ್ಜನೆಗೆ. ಹೀಗೆಯೇ ಅಧಿಕಾರಕ್ಕಾಗಿ, ಐಶ್ವರ್ಯಕ್ಕಾಗಿ, ವೈರಿಗಳ

---

* ಈ ಅಧ್ಯಾಯದ ಶೀರ್ಷಿಕೆಯನ್ನು ಸ್ವತಃ ಅಂಬೇಡ್ಕರರೇ ಕೊಟ್ಟಿದ್ದಾರೆ. ಈ ಅಧ್ಯಾಯ 'ಅಹಿಂಸೆ' ಕುರಿತ ಹಿಂದಿನ ಅಧ್ಯಾಯದ ಮುಂದುವರಿಕೆಯಂತಿದೆ. – ಸಂ.

ನಾಶಕ್ಕಾಗಿ, ರೋಗ ನಿವಾರಣೆಗಾಗಿ, ಪಾಪ ಪರಿಹಾರಕ್ಕಾಗಿ ಹಾಗೂ ಆತ್ಮ ಶುದ್ಧಿಗಾಗಿ ಕೂಡ ಒಂದೊಂದು ಬಗೆಯ ಮದ್ಯವಿತ್ತು.

ತಾಂತ್ರಿಕ ಆರಾಧನೆ ಬಂಗಾಳದಲ್ಲಿ ಆಳವಾಗಿ ಬೇರೂರಿತ್ತು. ಈ ಕುರಿತ ತಮ್ಮ ಅನುಭವವನ್ನು ರಾಜೇಂದ್ರಲಾಲ್ ಮಿತ್ರ ಬರೆಯುತ್ತಾರೆ[೧]: "ಕಲ್ಕತ್ತಾದ ಅತ್ಯಂತ ಕುಲೀನ ಮನೆತನಕ್ಕೆ ಸೇರಿದ ವಿಧವೆಯೊಬ್ಬಳಿದ್ದಳು. ಕೌಲ ಜನಾಂಗಕ್ಕೆ ಸೇರಿದ ಆಕೆಗೆ ಎಪ್ಪತ್ತೈದು ವರ್ಷವಾಗಿತ್ತು. ಪ್ರತಿ ಬೆಳಿಗ್ಗೆ ಹಾಗೂ ಸಂಜೆ ಅವಳು ಪ್ರಾರ್ಥನೆಗೆ ಮುನ್ನ ಸಾರಾಯಿಯ ಬಟ್ಟಲೊಳಗೆ ಅದ್ದಿದ ಕಡ್ಡಿಯನ್ನು ತನ್ನ ನಾಲಿಗೆಗೆ ಸೋಕಿಸಿ ನಂತರ ದೇವರಿಗೆ ಅರ್ಪಿಸುವ ಹೂಗಳ ಮೇಲೆ ಸಾರಾಯಿ ಹನಿಗಳನ್ನು ಉದುರಿಸುತ್ತಿದ್ದಳು. ಅವಳಿಡೀ ಜೀವಮಾನದಲ್ಲಿ ಒಂದು ಗ್ಲಾಸು ಮದ್ಯ ಕೂಡ ಕುಡಿದಿರಲಾರಳೇನೋ. ಕುಡಿತದ ಆನಂದವನ್ನು ಅವಳು ಬಲ್ಲವಳಲ್ಲವೆಂಬುದಂತೂ ಖಾತ್ರಿ. ಆದರೆ ತನ್ನ ಧರ್ಮದ ಆದೇಶದಂತೆ ಅವಳು ನಡೆದುಕೊಳ್ಳುತ್ತಿದ್ದಳು. ಇವಳಂಥ ಸಾವಿರಾರು ಜನರಿರಬಹುದು. ಬಂಗಾಳದ ಕೆಲಭಾಗಗಳಲ್ಲಿ ಸಾರಾಯಿ ದೊರೆಯುತ್ತಿರಲಿಲ್ಲವಾದ್ದರಿಂದ ಇಂಥ ಕೆಲ ಹೆಂಗಸರು ಕಾಯಿಹಾಲನ್ನು ತಾಮ್ರದ ಪಾತ್ರೆಗೆ ಸುರಿದು ಅದರ ಒಂದೆರಡು ಹನಿಗಳನ್ನು ಸೇವಿಸಿ ತಮ್ಮ ಪೂಜೆ ಸಲ್ಲಿಸುತ್ತಿದ್ದರು. ಗಂಡಸರಿಗೆ ಇಷ್ಟೊಂದು ಕಟ್ಟುನಿಟ್ಟುಗಳಿರುತ್ತಿರಲಿಲ್ಲ. ಐದು ಗ್ಲಾಸುಗಳಷ್ಟು ಮದ್ಯವನ್ನು ಅಥವಾ ಒಂದು ಚೆಂಬಿನಷ್ಟು ಸಾರಾಯಿಯನ್ನು ಅವರು ಕುಡಿಯಬಹುದೆಂದು ತಂತ್ರದ ನಿಯಮಗಳು ಹೇಳುತ್ತಿದ್ದವು."

ತಾಂತಿರಕ ಆರಾಧನೆ ಕೇವಲ ಬಂಗಾಳಕ್ಕಷ್ಟೇ ಸೀಮಿತವಾಗಿರಲಿಲ್ಲ. ಈ ಅಂಶವನ್ನು ಮಹಾಮಹೋಪಾಧ್ಯಾಯ ಜಾದವೇಶ್ವರ ತರ್ಕರತ್ನ[೨] ಅವರು ಗುರುತಿಸುತ್ತಾರೆ:

"ಮೇಲು ಜಾತಿಯ ಬಂಗಾಳಿಗಳಲ್ಲಿ ಶಾಕ್ತರು, ವೈಷ್ಣವರು ಮತ್ತು ಶೈವರು ಎಂಬ ಪಂಗಡಗಳಿರುವಂತೆ, ಕಾಮರೂಪ, ಮಿಥಿಲಾ, ಉತ್ಕಲ, ಕಳಿಂಗ, ಕಾಶ್ಮೀರಿ ಪಂಡಿತರಲ್ಲಿ ಕೂಡ ಇಂಥ ಪಂಗಡಗಳಿವೆ. ಶಕ್ತಿ ಮಂತ್ರ, ವಿಷ್ಣು ಮಂತ್ರ ಈ ಮೂರೂ ತಾಂತ್ರಿಕವಾದಕ್ಕೆ ಸಂಬಂಧಪಟ್ಟವು. ದಾಕ್ಷಿಣಾತ್ಯರಲ್ಲಿ ಮಹಾಮಹೋಪಾಧ್ಯಾಯ ಸುಬ್ರಹ್ಮಣ್ಯ ಶಾಸ್ತ್ರಿ ಮುಂತಾದವರು ಶಾಕ್ತರು. ಮಹಾಮಹೋಪಾಧ್ಯಾಯ ರಮಾಮಿಶ್ರ ಶಾಸ್ತ್ರಿ ಮೊದಲಾದವರು ವೈಷ್ಣವರು. ಮಹಾಮಹೋಪಾಧ್ಯಾಯ ಶಿವಕುಮಾರ್ ಶಾಸ್ತ್ರಿ ಮುಂತಾದವರು ಶೈವರು. ಬೃಂದಾವನದಲ್ಲಿ ಹಲವರು ಶಾಕ್ತರೂ, ವೈಷ್ಣವ ಬ್ರಾಹ್ಮಣರೂ ಇದ್ದಾರೆ. ಮಹಾರಾಷ್ಟ್ರ ಮತ್ತು ದಕ್ಷಿಣ ಭಾರತದ ಮೇಲುಜಾತಿಗಳಲ್ಲಿ ಶಾಕ್ತರಿಗಿಂತ ಶೈವರು ಮತ್ತು ವೈಷ್ಣವರು ಹೆಚ್ಚಿದ್ದಾರೆ. ಪಾಶುಪತ ಹಾಗೂ ಜಂಗಮ ಪಂಥದ ಅನುಯಾಯಿಗಳು ಶೈವವಾದರೆ, ಮಧ್ವಾಚಾರ್ಯ ಹಾಗೂ ರಾಮಾನುಜಾಚಾರ್ಯರ ಅನುಯಾಯಿಗಳು ವೈಷ್ಣವರು. ವಾಯುವ್ಯದ ಹಲವು ಪಂಗಡಗಳಲ್ಲಿ ಹೇಳಿಕೊಡಲಾಗುವ ರಾಮಮಂತ್ರ ತಾಂತ್ರಿಕ ಆರಾಧನೆಯಲ್ಲಿ ಮಾತ್ರ ಕಾಣುವಂತಹುದು." ಮತ್ತೂ ಮುಖ್ಯವಾದ ಅಂಶವೆಂದರೆ ಶ್ರೀ ಪುರುಷೋತ್ತಮನ ಪಂಡರೆಲ್ಲ ಶಾಕ್ತರು. ಕಾಮಾಕ್ಯದೇವಿಯ ಅರ್ಚಕರು ವೈಷ್ಣವರು.

ತಂತ್ರ ಹಾಗೂ ತಾಂತ್ರಿಕ ಆರಾಧನೆಯ ಉಗಮದ ಕುರಿತು ಕರಾರುವಕ್ಕಾದ ಕಾಲವನ್ನು ಗುರುತಿಸಲಾಗದಿದ್ದರೂ, ಮನುವಿನ ನಂತರ ಅವುಗಳ ಉಗಮವಾಯಿತೆಂಬುದಂತೂ ಖಾತ್ರಿಯಾಗಿದೆ. ಇದೊಂದು ಆಶ್ಚರ್ಯಕರ ಬೆಳವಣಿಗೆ. ಕಾರಣ, ಮಾಂಸ ಹಾಗೂ ಮದ್ಯ ಕುರಿತು ಮನು ವಿಧಿಸಿದ್ದ ಕಟ್ಟಳೆಗಳನ್ನೆಲ್ಲ ತಂತ್ರ ತೆಗೆದುಹಾಕಿಬಿಟ್ಟಿತು.

---

೧. 'ಇಂಡೋ ಆರ್ಯನ್ಸ್', ರಾಜೇಂದ್ರಲಾಲ್ ಮಿತ್ರ. ಪು. ೪೦೫–೬.

೨. 'ಪ್ರಿನ್ಸಿಪಲ್ಸ್ ಆಫ್ ತಂತ್ರ', ಅವಲೋಕನ –ಭಾಗ I, ಪ್ರಸ್ತಾವನೆ, ಪು: XXXVIII

ಮತ್ತೊಂದು ಅಚ್ಚರಿಯ ಅಂಶವೆಂದರೆ, ತಂತ್ರ ಹಾಗೂ ತಾಂತ್ರಿಕ ಆರಾಧನೆಯ ಬೆಳವಣಿಗೆಯಲ್ಲಿ ಬ್ರಾಹ್ಮಣರೂ ಪಾತ್ರವಹಿಸಿರುವುದು. ಹಾಗೆ ನೋಡಿದರೆ ತಂತ್ರದಲ್ಲಿ ವೇದಗಳ ಬಗೆಗೆ ಗೌರವವಿರಲಿಲ್ಲ. "ವೇದಗಳೆಂದರೆ ಎಲ್ಲರಿಗೂ ದೊರೆಯಬಲ್ಲ ಸಾಮಾನ್ಯ ಹೆಣ್ಣಿದ್ದಂತೆ. ಆದರೆ ತಂತ್ರ ಮಾತ್ರ ಮೇಲ್ವರ್ಗದ ಹೆಣ್ಣಿನಂತೆ ಪ್ರತ್ಯೇಕತೆಯನ್ನುಳಿಸಿಕೊಂಡಿರುತ್ತದೆ' ಎಂದು ತಾಂತ್ರಿಕರು ಹೇಳುತ್ತಿದ್ದರು. ತಂತ್ರವನ್ನು ಬ್ರಾಹ್ಮಣರು ಎಂದೂ ತಿರಸ್ಕರಿಸಲಿಲ್ಲ. ಅವರು ಅದನ್ನು ಐದನೆಯ ವೇದವೆಂದು ಕರೆದರು. ಮನುಧರ್ಮಶಾಸ್ತ್ರದ ವಾಖ್ಯಾನಕಾರನಾದ ಕಲ್ಲೂಕಭಟ್ಟನಂಥ ಕಟ್ಟಾ ಸಂಪ್ರದಾಯವಾದಿ ಕೂಡ "ವೈದಿಕ ಮತ್ತು ತಾಂತ್ರಿಕ" ಎಂಬ ಎರಡು ಬಗೆಯ ಶ್ರುತಿಗಳಿವೆಯೆಂದು ಹೇಳುತ್ತಾನೆ. ಮಾಂತ್ರಿಕ ಭೇದ ತಂತ್ರ[೧] ಎಂಬ ಕೃತಿಯಲ್ಲಿ ಶಿವ ಪಾರ್ವತಿಯನ್ನು ಕುರಿತು ಹೀಗೆನ್ನುತ್ತಾನೆ:

"ಸವಿ ಮಾತನ್ನಾಡುವ ದೇವಿಯೇ, ಬ್ರಾಹ್ಮಣರ ಮುಕ್ತಿಯು ಮದ್ಯಪಾನವನ್ನಲಂಬಿಸಿದೆ. ಗಿರಿಜೆ, ನಾನು ನಿನಗೊಂದು ಮಹಾಸೂತ್ರವನ್ನು ಹೇಳುತ್ತಿರುವೆನು, ಆಲಿಸು, ಮದ್ಯಕ್ಕೆ ತನ್ನನ್ನು ತಾನು ಅರ್ಪಿಸಿಕೊಂಡ ಬ್ರಾಹ್ಮಣನು ಕಾಲಾನುಕ್ರಮದಲ್ಲಿ ಶಿವನಾಗುವನು. ನೀರು ನೀರಿನೊಡನೆ ಬೆರೆತಂತೆ, ಲೋಹ ಲೋಹದೊಡನೆ ಬೆರೆತಂತೆ, ಗಾಳಿ ಗಾಳಿಯೊಡನೆ ಬೆರೆತಂತೆ, ಬ್ರಾಹ್ಮಣನು ಪರಮಾತ್ಮನಾದ ಬ್ರಹ್ಮನೊಡನೆ ಬೆರೆಯುವನು. ಈ ಕುರಿತು ಎಳ್ಳಷ್ಟೂ ಸಂದೇಹವಿಲ್ಲ...... ದೈವೀ ಕತೆಯ ಸಾದೃಶ್ಯ ಮತ್ತು ದಿವ್ಯಾನಂದದ ಇತರ ರೂಪಗಳನ್ನು ಕ್ಷತ್ರಿಯ ಮತ್ತಿತರರಿಗೆಂದು ರೂಪಿಸಲಾಗಿದೆ. ಆದರೆ ನಿಜವಾದ ಜ್ಞಾನವು ಮತ್ತೇರಿಸುವ ಮದ್ಯದ ನೆರವಿಲ್ಲದೆ ದಕ್ಕುವುದಿಲ್ಲ. ಆದ್ದರಿಂದ ಬ್ರಾಹ್ಮಣನೊಬ್ಬ ಆಗಾಗ್ಗೆ ಮದ್ಯಪಾನ ಮಾಡಬೇಕು....."

"ವೇದಗಳ ಮಾತೆಯಾದ ಗಾಯತ್ರಿ ಮಂತ್ರವನ್ನು ಪಠಿಸದೆ ಯಾರೂ ನಿಜವಾದ ಬ್ರಾಹ್ಮಣರಾಗುವುದಿಲ್ಲ. ಬ್ರಹ್ಮಜ್ಞಾನ ಪಡೆದವನು ಮಾತ್ರ ಬ್ರಾಹ್ಮಣನಾಗಬಲ್ಲ. ದೇವತೆಗಳ ಅಮೃತವೇ ಭೂಮಿಯ ಮೇಲೆ ಸುರೆಯಾಗುತ್ತದೆ. ಅದರ ಮೂಲಕ ಮಾನವ ದೈವೀಸ್ಥಿತಿಯ (ಸುರತ್ವವನ್ನು) ಪಡೆಯುವುದರಿಂದ ಮದ್ಯವನ್ನು ಸುರೆ ಎಂದು ಕರೆಯಲಾಗುತ್ತದೆ."

ಹಾಗಾದರೆ ಬ್ರಾಹ್ಮಣರು ತಮ್ಮ ಮೂಲ ಪುರುಷನಾದ ಮನುವನ್ನು ಧಿಕ್ಕರಿಸಿ ಮತ್ತೆ ಮದ್ಯ ಮಾಂಸಗಳಿಗೆ ಮರಳಿದ್ದೇಕೆ ಎಂಬುದು ಮಾತ್ರ ಒಗಟಾಗಿಯೇ ಉಳಿದಿದೆ.

* * * *

---

೧. 'ಇಂಡೋ ಆರ್ಯನ್ಸ್' ರಾಜೇಂದ್ರಲಾಲ್ ಮಿತ್ರ..

## ಒಗಟು – ೧೫

# ಅಹಿಂಸೆಯ ದೇವರಿಗೆ ರಕ್ತಪಿಪಾಸು ದೇವತೆಯನ್ನು ಮದುವೆ ಮಾಡಿದ ಕಥೆ*

ಮದ್ಯಪಾನ ಹಾಗೂ ಮಾಂಸಾಹಾರವನ್ನಾರಂಭಿಸಿದ ನಂತರ ಬ್ರಾಹ್ಮಣರು ಪ್ರಾಣಬಲಿಯನ್ನು ಸಮರ್ಥಿಸುವ ಪುರಾಣಗಳನ್ನೂ ಬರೆಯಲು ಹಿಂದೆ ಮುಂದೆ ನೋಡಲಿಲ್ಲ. ಆ ಪುರಾಣಗಳಲ್ಲೆಲ್ಲ ಕಾಳಿ ಪುರಾಣ ಎಂಬ ಪುರಾಣವನ್ನು ಮುಖ್ಯವಾಗಿ ಗಮನಿಸಬೇಕು. ಕಾಳಿಯ ಪೂಜೆಯನ್ನು ಕುರಿತು ಪುರಾಣವಿದು. ಈ ಪುರಾಣದಲ್ಲಿ 'ರುಧಿರ ಅಧ್ಯಾಯ' ಅಂದರೆ ನೆತ್ತರಿನ ಅಧ್ಯಾಯ ಎಂಬ ಒಂದು ಅಧ್ಯಾಯವಿದೆ.[೧]

'ರುಧಿರ ಅಧ್ಯಾಯ'ದ ಸಾರಾಂಶವನ್ನಿಲ್ಲಿ ಕೊಡುತ್ತೇನೆ. ತನ್ನ ಮೂವರು ಮಕ್ಕಳಾದ ಭೇತಾಳ, ಭೈರವರ ಮತ್ತು ಭೈರವ ಇವರನ್ನು ಕರೆದು ಶಿವ ಹೀಗೆನ್ನುತ್ತಾರೆ:

"ಮಕ್ಕಳೇ, ದೈವೀಶಕ್ತಿಯನ್ನು ಗಳಿಸಲು ನೀಡಬೇಕಾದ ಬಲಿಗಳಲ್ಲಿ ಅನುಸರಿಸಬೇಕಾದ ವಿಧಿವಿಧಾನಗಳನ್ನು ನಾನು ನಿಮಗೆ ಹೇಳಿಕೊಡುತ್ತಿದ್ದೇನೆ. ವೈಷ್ಣವ ತಂತ್ರದಲ್ಲಿ ಹೇಳಿದ ವಿಧಾನಗಳನ್ನೇ ಎಲ್ಲ ದೇವತೆಗಳಿಗೆ ಸಲ್ಲಿಸುವ ಬಲಿಗಳ ಸಂದರ್ಭದಲ್ಲೂ ಅನುಸರಿಸಬೇಕು."

"ಹಕ್ಕಿಗಳು, ಆಮೆ, ಮೊಸಳೆ, ಮೀನು, ಕ್ರೂರಪ್ರಾಣಿಗಳ ಒಂಬತ್ತು ಜಾತಿಗಳು, ಕೋಣ, ಎತ್ತು, ಟಗರು, ಘೇಂಡಾಮೃಗ, ಉಡ, ಕಾಡುಹಂದಿ, ಜಿಂಕೆ, ಸಿಂಹ, ಹುಲಿ, ನರ ಮತ್ತು ಬಲಿ ನೀಡುವವನ ಮೈಯಿಂದ ಬಸಿದ ನೆತ್ತರು ಇವುಗಳು ಚಂಡಿಕಾದೇವಿ ಹಾಗೂ ಭೈರವರಿಗೆ ಸೂಕ್ತವಾದ ಬಲಿಗಳು."

"ಬಲಿಗಳಿಂದಾಗಿಯೇ ರಾಜಕುಮಾರರಿಗೆ ಸಂತೋಷವೂ, ಸ್ವರ್ಗವೂ ಮತ್ತು ಶತ್ರು ಪಂಗಡದ ವಿರುದ್ಧ ಜಯವೂ ಸಿದ್ಧಿಸುವುದು."

"ಮೀನು ಮತ್ತು ಆಮೆಯ ಬಲಿಯಿಂದ ದೇವಿಗೆ ಉಂಟಾಗುವ ಸಂತೋಷದ ಒಂದು ತಿಂಗಳ ಕಾಲ ಉಳಿದರೆ, ಮೊಸಳೆಯ ಬಲಿಯಿಂದ ಉಂಟಾಗುವ ಆನಂದ ಮೂರು ತಿಂಗಳ ಕಾಲ ಇರುತ್ತದೆ. ಕ್ರೂರಪ್ರಾಣಿಗಳ ಬಲಿ ಒಂಬತ್ತು ತಿಂಗಳ ಕಾಲ ದೇವಿಯನ್ನು ಪ್ರಸನ್ನಗೊಳಿಸಿದರೆ, ಸೊಕ್ಕೇರಿದ ಎತ್ತು ಹಾಗು ಉಡದ ನೆತ್ತರು ಒಂದು ವರ್ಷಕಾಲ ಆಕೆಗೆ ಸಂತೋಷ ನೀಡಬಲ್ಲದು.

---

* *ಸ್ವತಃ ಲೇಖಕರ ತಿದ್ದುಪಡಿಯುಳ್ಳ ಈ ಅಧ್ಯಾಯದ ಎಲ್ಲ ಪುಟಗಳೂ ಸರಿಯಾದ ಕ್ರಮದಲ್ಲಿವೆ. ವಸ್ತುವಿನ ಪೂರ್ಣ ಚರ್ಚೆಯಿದೆ – ಸಂ.*

೧. ಈ ಅಧ್ಯಾಯವನ್ನು ಡಬ್ಲ್ಯೂ.ಸಿ. ಬ್ಲಾಕ್ವಿರ ಅವರು ಇಂಗ್ಲಿಷ್‌ಗೆ ಅನುವಾದಿಸಿದ್ದು, 'ಏಷ್ಯಾಟಿಕ್ ರಿಸರ್ಚ್ಸ್' ಸಂಪುಟದಲ್ಲಿ ಲಭ್ಯವಿದೆ.

ಜಿಂಕೆ ಮತ್ತು ಕಾಡುಹಂದಿಗಳ ಬಲಿ ಹನ್ನೆರಡು ವರ್ಷಗಳ ಕಾಲವೂ, ಸಿಂಹ ಹಾಗೂ ನರಬಲಿಯು ಸಾವಿರ ವರ್ಷಗಳೂ ಆಕೆಯನ್ನು ತಣಿಸುವುದು. ಇನ್ನು ಮುಂದೆ ಈ ಬಲಿಗಳಿಂದ ಸಿಗುವ ಫಲವನ್ನು ನೋಡೋಣ.''

"ಜಿಂಕೆ ಮತ್ತು ಘೇಂಡಾಮೃಗದ ಮಾಂಸ ದೇವಿಯನ್ನು ಐನೂರು ವರ್ಷಕಾಲ ಸಂಪ್ರೀತಗೊಳಿಸುತ್ತದೆ. ನನ್ನ ಪ್ರಿಯೆಯನ್ನು (ಅಂದರೆ ಕಾಳಿಕಾ ದೇವಿಯನ್ನು) ರೋಹಿತಾ ಎಂಬ ಮೀನು ಮತ್ತು ಬಾರ್ಧ್ರೀನಸ ಮುನ್ನೂರು ವರ್ಷಗಳ ಕಾಲ ಪ್ರಸನ್ನವಾಗಿರುವಂತೆ ಮಾಡಬಲ್ಲದು. ಮಂದೆಯಲ್ಲಿ ಎದ್ದು ಕಾಣುವ ಬಲಿಷ್ಠವಾದ ಹಾಗೂ ಒಂದೂ ಕಲೆಯಿಲ್ಲದ ಟಗರು ದೇವತೆಗಳಿಗೆ ಸಲ್ಲಿಸುವ ಹವ್ಯ ಮತ್ತು ಕವ್ಯಕ್ಕೆ ಹೇಳಿ ಮಾಡಿಸಿದಂತಿರುತ್ತದೆ.''

"ನೀಲಿ ಗಂಟಲಿನ, ಕೆಂಪು ತಲೆಯ, ಕಪ್ಪು ಕಾಲಿನ, ಬಿಳಿ ರೆಕ್ಕೆಯ, ಹಕ್ಕಿಗಳ ರಾಜನಾದ 'ಬಾರ್ಧ್ರಿನಸ'ವೆಂಬ ಹಕ್ಕಿ (ಬಕ) ನನಗೆ ಹಾಗೂ ವಿಷ್ಣುವಿಗೆ ಪ್ರಿಯವಾದ ಹಕ್ಕಿ.''

"ಒಂದು ನರಬಲಿಯಿಂದ ದೇವಿ ಸಹಸ್ರ ವರ್ಷ ಸಂತುಷ್ಟಳಾದರೆ, ಮೂವರು ಮಾನವರ ಬಲಿಯಿಂದ ಒಂದು ಲಕ್ಷ ವರ್ಷಗಳವರೆಗೂ ಸಂತೃಪ್ತಿಯಿಂದ ಇರುವಳು. ನನ್ನದೇ ರೂಪವನ್ನು ತಳೆಯುವ ಭೈರವ, ಕಾಮಾಖ್ಯ, ಚಂಡಿಕಾ ಇವರುಗಳು ನರಮಾಂಸದಿಂದ ಸಹಸ್ರ ವರ್ಷಗಳು ಸಂತೃಪ್ತರಾಗುವರು. ಪೂಜ್ಯ ಗ್ರಂಥಗಳಲ್ಲಿ ಪವಿತ್ರವೆಂದು ಕರೆಯಲ್ಪಟ್ಟ ರಕ್ತದ ನೈವೇದ್ಯ ಅಮೃತಕ್ಕೆ ಸಮನಾದದ್ದು. ಆದ್ದರಿಂದ ಜ್ಞಾನಿಗಳಾದವರು ದೇವಿಯನ್ನು ಸ್ತುತಿಸುವಾಗ ರಕ್ತವನ್ನೂ ಶಿರವನ್ನೂ ಅರ್ಪಿಸಿ ಪೂಜಿಸಿವರು.''

"ಬಲಿಕೊಡುವವನು ಎಂದೂ ಕೆಟ್ಟ ಮಾಂಸವನ್ನು ಕೊಡಬಾರದು. ಕಾರಣ ಶಿರ ಮತ್ತು ನೆತ್ತರು ಅಮೃತಕ್ಕೆ ಸಮಾನವಾದವು.''

"ಕಬ್ಬು, ಮದ್ಯ, ಕುಂಬಳಕಾಯಿಗಳು ಉಳಿದ ಬಲಿಗಳಂತೆಯೇ ದೇವಿಯನ್ನು ಸಂಪ್ರೀತಗೊಳಿಸುತ್ತವೆ ಹಾಗೂ ಈ ಬಲಿ ಕುರಿಯ ಬಲಿಗೆ ಸಮಾನವಾಗಿರುತ್ತದೆ.''

"ರಾಜರು ಬಳಸುವ ಚಂದ್ರಹಾಸವೆಂಬ ಆಯುಧ ಅಥವಾ ಕತ್ತಿಯಿಂದ ಬಲಿಕೊಡುವುದು ಶ್ರೇಷ್ಠವಾದದ್ದು. ಇವು ಸಿಕ್ಕದಿದ್ದಾಗ ಖಡ್ಗ ಅಥವಾ ಕೊಡಲಿಯನ್ನು ಬಳಸಬಹುದು. ಭಲ್ಲಕದಿಂದ ಬಲಿ ಕೊಡುವುದು ತೀರಾ ಕನಿಷ್ಠ ದರ್ಜೆಯ ಬಲಿಯೆನಿಸಿಕೊಳ್ಳುವುದು. ಈ ಆಯುಧಗಳನ್ನು ಬಿಟ್ಟು ಬೇರೆಯದನ್ನು ಬಳಸಿದರೆ ದೇವಿಯು ಅಂಥದನ್ನು ಒಪ್ಪಲಾರಳು ಮತ್ತು ಬಲಿ ಕೊಡುವವನೇ ಮರಣವನ್ನಪ್ಪುವನು. ತನ್ನ ಕೈಗಳಿಂದ ಪ್ರಾಣಿಪಕ್ಷಿಗಳನ್ನು ಸೀಳಿ ಬಲಿಕೊಡುವುದು ಬ್ರಾಹ್ಮಣನನ್ನು ಕೊಂದಷ್ಟೇ ಪಾಪಕರವಾದದ್ದು. ಅಂಥವನು ಕಡುಕಷ್ಟಗಳನ್ನು ಎದುರಿಸಬೇಕಾಗುವುದು.''

"ಪವಿತ್ರ ಮಂತ್ರಗಳನ್ನು ಜಪಿಸದೆ ಕೊಡಲಿಯನ್ನು ಬಳಸಬಾರದು. ಅದರಲ್ಲೂ ದುರ್ಗಾ ಹಾಗೂ ಕಾಮಾಖ್ಯ ದೇವತೆಗಳಿಗೆ ಬಲಿನೀಡುವಾಗ ಈ ಸಂದರ್ಭಕ್ಕೆ ಸೂಕ್ತವಾದ ಮಂತ್ರಗಳನ್ನು ಪಠಿಸದೆ ಕೊಡಲಿಯನ್ನು ಬಳಸಲಾಗುವುದು.''

"ಬಲಿಕೊಡುವವನು 'ಕಾಳಿ' ಎಂದು ಎರಡು ಬಾರಿ ಉಚ್ಚರಿಸಿ 'ದೇವಿ ವಜ್ರೇಶ್ವರಿ ಲಾವಾ ದಂಡಯೈ ನಮಃ' ಎಂದು ಹಾಗೂ 'ಓಂ ಕಾಳಿ! ಗುಡುಗಿನ ದೇವಿಯೇ, ಓಂ, ಕಬ್ಬಿಣದ ದಂಡಪಾಣಿಯಾದ ದೇವಿಯೇ' ಎಂದೂ ಪ್ರಾರ್ಥಿಸುತ್ತಾ, ತನ್ನ ಕೈಗೆ ಕೊಡಲಿಯನ್ನೆತ್ತಿಕೊಳ್ಳಲಿ. ಕಾಳ ರಾತ್ರಿಯ ಗ್ರಂಥದ ಈ ಮಂತ್ರವನ್ನು ಬಲಿಕೊಡುವವನು ಪಠಿಸಲಿ: 'ಓಂ ಕಾಳಿ, ಕಾಳಿ! ಕೋರೆ ಹಲ್ಲುಳ್ಳವಳೇ, ಕಬಳಿಸು.

ಕತ್ತರಿಸಿ ಹಾಕು, ಎಲ್ಲ ಕೆಡುಕನ್ನು ಈ ಕೊಡಲಿಯಿಂದ ನಾಶಮಾಡು. ಈ ನೆತ್ತರನ್ನು ಕುಡಿ' ಹೀಗೆ ಕಾಳರಾತ್ರೀ ಮಂತ್ರ ಪಠಿಸಲ್ಪಟ್ಟ ನಂತರ ಆ ಕೊಡಲಿಯನ್ನು ಪ್ರವೇಶಿಸುವ ಕಾಳರಾತ್ರಿಯ ದೇವತೆಯು ಮೈದುಂಬಿ ಬಲಿಕೊಡುವವನ ಶತ್ರುಗಳನ್ನು ಕೊಚ್ಚಿ ಹಾಕುವಳು."

"ಬಲಿಕೊಡುವಾತನು ಕಾಳರಾತ್ರಿಯ ಗ್ರಂಥದ ಎಲ್ಲ ಮಂತ್ರಗಳನ್ನು ಪಠಿಸಿದ ನಂತರ ಬಲಿಯಾಗಬೇಕಾದುದನ್ನು ಈ ರೀತಿ ಸಂಬೋಧಿಸುವನು: ಪಶುಗಳನ್ನು ಸೃಷ್ಟಿಸಲಾಗಿರುವುದೇ ಬಲಿಗಾಗಿ. ಆದ್ದರಿಂದ ನಿನ್ನ ಪ್ರಾಣವನ್ನು ನಾನು ತೆಗೆದರೂ ಯಾವ ಪಾಪವೂ ನನ್ನನ್ನು ಸುತ್ತಿಕೊಳ್ಳಲಾರದು."

"ನಂತರ ಬಲಿಕೊಡುವಾತನು ಬಲಿಯ ಉದ್ದೇಶವನ್ನು ಘೋಷಿಸಲಿ. ಬಲಿಪಶುವಿನ ಮುಖ ಉತ್ತರಕ್ಕಿರಬೇಕು. ಇಲ್ಲದಿದ್ದರೆ ಬಲಿಕೊಡುವವನೇ ತನ್ನ ಮುಖವನ್ನು ಉತ್ತರಕ್ಕೆ ತಿರುಗಿಸಲಿ ಹಾಗೂ ಬಲಿಯಾಗುವವನು ಮುಖವನ್ನು ಪೂರ್ವಕ್ಕೆ ತಿರುಗಿಸಲಿ, ಬಲಿಕೊಟ್ಟ ತಕ್ಷಣ ಈ ಹಿಂದೆ ಹೇಳಿದಂತೆ ರಕ್ತದೊಂದಿಗೆ ಉಪ್ಪು ಇತ್ಯಾದಿಗಳನ್ನು ಬೆರೆಸಲಿ. ಆ ರಕ್ತವನ್ನು ದೇವಿಗೆ ಅರ್ಪಿಸಲು ಚಿನ್ನದ ಅಥವಾ ಬೆಳ್ಳಿಯ ಅಥವಾ ತಾಮ್ರದ ಪಾತ್ರೆ ಅಥವಾ ಎಲೆಯ ದೊನ್ನೆಯನ್ನು ಬಳಸಬಹುದು."

"ಆದರೆ ಆ ಪಾತ್ರೆ ಕಬ್ಬಿಣದ್ದಾಗಲೀ ಪ್ರಾಣಿಯ ಚರ್ಮದಿಂದ ಮಾಡಿದ್ದಾಗಲೀ, ಮರದ ತೊಗಟೆಯದಾಗಲೀ ಆಗಿರಕೂಡದು. ಆ ರಕ್ತವನ್ನು ಘಟದಲ್ಲಾಗಲೀ, 'ಶ್ರಬ್ ಮತ್ತು ಸ್ರಕ್'ವೆಂಬ ಪವಿತ್ರ ಪಾತ್ರೆಯಲ್ಲಾಗಲೀ ಇಡಲಾಗದು ಮತ್ತು ಇತರ ಧಾರ್ಮಿಕ ವಿಧಿಗಳಲ್ಲಿ ಬಳಸಲಾಗುವ ಮಣ್ಣಿನ ಪಾತ್ರೆ ಘಟದಲ್ಲಾಗಲೀ ಅರ್ಪಿಸಬಾರದು. ಹಾಗೂ ಅದನ್ನು ನೆಲದ ಮೇಲಿಡಕೂಡದು. ಒಮ್ಮೆ ದೈವಗಳ ನೈವೇದ್ಯಕ್ಕೆ ಬಳಸಿದ ಪಾತ್ರೆಯನ್ನೂ ಬಳಸುವಂತಿಲ್ಲ. ಸಮೃದ್ಧಿಯನ್ನು ಇಚ್ಛಿಸುವ ಸಜ್ಜನ ಈ ಪಾತ್ರೆಗಳನ್ನು ಬಳಸಬಾರದು. ರಕ್ತ ನರರಕ್ತವಾದರೆ ಲೋಹದ ಪಾತ್ರೆ ಅಥವಾ ಮಣ್ಣಿನ ಮಡಕೆಯನ್ನು ಮಾತ್ರ ಬಳಸಬೇಕು. ಯಾವ ಕಾರಣಕ್ಕು ಎಲೆಗಳಿಂದ ಮಾಡಲಾದ ಪಾತ್ರೆಗಳನ್ನು ಬಳಸಲೇಬಾರದು."

"ಕುದುರೆಯ ಬಲಿಯನ್ನು ಅಶ್ವಮೇಧ ಯಾಗದಲ್ಲಿ ಮಾತ್ರ ಕೊಡಬೇಕು. ಆನೆಯನ್ನು ಗಜಮೇಧದಲ್ಲಿ ಮಾತ್ರ ಬಲಿ ಕೊಡಲಾಗುವುದು. ಇವೆರಡನ್ನೂ ಇತರೆ ಸಂದರ್ಭಗಳಲ್ಲಿ ಬಲಿಕೊಡದಂತೆ ಹಾಗೂ ಚನ್ರಾರವೆಂಬ ಗೂಳಿಯನ್ನು ಬಲಿಕೊಡದಂತೆ ಎಚ್ಚರ ವಹಿಸಬೇಕು."

"ಬ್ರಾಹ್ಮಣನೆಂದೂ ಸಿಂಹ ಅಥವ ಹುಲಿಯನ್ನು ಬಲಿಕೊಡಬಾರದು. ಅವನು ತನ್ನ ರಕ್ತವನ್ನಾಗಲಿ, ಮಾದಕ ಪಾನೀಯವನ್ನಾಗಲೀ, ದೇವಿಗೆ ಅರ್ಪಿಸಕೂಡದು. ಒಂದು ವೇಳೆ ಬ್ರಾಹ್ಮಣನೊಬ್ಬ ಹುಲಿ, ಸಿಂಹ, ಅಥವಾ ನರಬಲಿಯನ್ನು ಕೊಟ್ಟರೆ ಕೆಲಕಾಲ ನರಕವನ್ನು ಹಾಯ್ದು ಹೋಗಬೇಕಾಗುತ್ತದೆ."

"ಬ್ರಾಹ್ಮಣನೊಬ್ಬ ತನ್ನ ರಕ್ತವನ್ನೇ ಅರ್ಪಿಸಿದರೆ ಬ್ರಾಹ್ಮಣನೊಬ್ಬನನ್ನು ಕೊಂದ ಪಾಪ ಅವನಿಗೆ ಅಂಟಿಕೊಳ್ಳುತ್ತದೆ. ಮಾದಕ ಪಾನೀಯವನ್ನು ಅರ್ಪಿಸಿದರೆ ಅವನು ಬ್ರಾಹ್ಮಣನೇ ಅಲ್ಲ."

"ಬಹುಸಂಖ್ಯೆಯ ಪ್ರಾಣಿಗಳನ್ನು ಬಲಿಕೊಡುವ ಸಂದರ್ಭದಲ್ಲಿ ಒಂದೆರಡು ಪ್ರಾಣಿಗಳ ದೇಹಗಳನ್ನು ದೇವಿಯೆದುರು ಅರ್ಪಿಸಿದರೆ ಸಾಕು."

"ಓ, ಭೈರವ, ವಿವಿಧ ಸಂದರ್ಭಗಳಲ್ಲಿ ಹೇರಳವಾಗಿರುವ ವಿವಿಧ ಬಲಿಗಳನ್ನು ಕುರಿತು ನಾನು ವಿವರಿಸಿದ್ದೇನೆ."

ಕೋಣವೊಂದನ್ನು ದೇವಿ ಭೈರವಿಗೆ ಅಥವಾ ಭೈರವನಿಗೆ ಅರ್ಪಿಸುವಾಗ ಭಕ್ತನು ಈ ಮಂತ್ರವನ್ನು ಪಠಿಸುವನು.

"ನನ್ನ ಶತ್ರುಗಳನ್ನು ಕೊಲ್ಲಲು ನನಗೆ ಸಿರಿಯನ್ನೂ ದೀರ್ಘಾಯುಷ್ಯವನ್ನೂ ಕರುಣಿಸು."

"ಇನ್ನು ಮುಂದೆ ನರಬಲಿಯ ವಿವರಗಳನ್ನು ನೋಡು. "ನರಬಲಿಗಾಗಿ ಪೂಜಾಸ್ಥಾನ ಅಥವಾ ರುದ್ರಭೂಮಿಯನ್ನು ಆರಿಸಬೇಕು. ಕಾಮಾಖ್ಯ ದೇವಸ್ಥಾನದಲ್ಲಿ ಅಥವಾ ಪರ್ವತದ ಮೇಲಾದರೂ ಆ ಬಲಿ ನೀಡಲ್ಪಡಲಿ. ಇನ್ನು ಮುಂದೆ ಅದನ್ನು ಮಾಡುವ ಕ್ರಮವನ್ನು ನೋಡು."

"ರುದ್ರಭೂಮಿ ನನ್ನನ್ನು ಪ್ರತಿನಿಧಿಸುತ್ತದೆ. ಈ ರುದ್ರಭೂಮಿಯಲ್ಲಿ ತಂತರಂಗೆ, ಹೆರೂಕಾ ಎಂಬ ಭಾಗಗಳೂ ಇವೆ."

"ಬಲಿಗಾಗಿ ತಂದ ಮನುಷ್ಯನನ್ನು ಪೂರ್ವದಲ್ಲಿ ಕೊಲ್ಲಬೇಕು. ಇದು ಭೈರವನಿಗೆ ಪ್ರಿಯವಾದದ್ದು. ತಲೆ ದಕ್ಷಿಣಕ್ಕಿರಲಿ, ಇದು ಭೈರವಿಗೆ ಪವಿತ್ರವಾದದ್ದು. ರಕ್ತವನ್ನು ಪಶ್ಚಿಮದಲ್ಲಿ ಚೆಲ್ಲಲಿ. ಅದನ್ನು ಹೆರೂಕಾ ಭಾಗವೆಂದೂ ಕರೆಯುತ್ತಾರೆ. ಆನಂತರ ಭಕ್ತನ ಕಣ್ಣು ಬಲಿಯ ಮೇಲೆ ಬೀಳದಿರಲಿ."

"ಬಲಿಯಾಗುವವನು ನೋಡಲು ಸುಂದರನಾಗಿರಬೇಕು. ಬಲಿಯ ಮುನ್ನಾದಿನ ಮಡಿಯಾದ ಆಹಾರ ಮಾತ್ರ ಸೇವಿಸಿರಬೇಕು. ಮಾಂಸ ತಿಂದಿರಬಾರದು. ಹೂಗಳಿಂದ ಅಲಂಕೃತನಾಗಿ ಗಂಧ ಪೂಸಿರಬೇಕು."

"ನಂತರ ಬಲಿಯಾಗುವವನನ್ನು ಉತ್ತರಕ್ಕೆ ಮುಖ ಮಾಡಿ ನಿಲ್ಲಿಸಿ ಬಲಿಕೊಡುವವನು ಆ ಬಲಿಯ ದೇಹದ ವಿವಿಧ ಭಾಗಗಳಲ್ಲಿರುವ ದೇವತೆಗಳನ್ನು ಧ್ಯಾನಿಸಲಿ. ಆನಂತರ ಬಲಿಯಾಗುವಾತನನ್ನು ಪೂಜಿಸಲಿ."

"ಎಂದೂ ಸ್ತ್ರೀಯನ್ನಾಗಲೀ ಅಥವಾ ಹೆಣ್ಣು ಪಕ್ಷಿ ಅಥವಾ ಪ್ರಾಣಿಯನ್ನಾಗಲಿ ಬಲಿಕೊಡಲಾಗದು. ಕೊಟ್ಟಲ್ಲಿ ಬಲಿಕೊಡುವವನಿಗೆ ನರಕ ಪ್ರಾಪ್ತಿಯಾಗುವುದು. ಪ್ರಾಣಿ ಅಥವಾ ಪಕ್ಷಿಗಳ ವಿಷಯದಲ್ಲಿ ಒಂದು ವೇಳೆ ಇದು ಕ್ಷಮಾರ್ಹವಾದರೂ ಮನುಕುಲಕ್ಕೆ ಮಾತ್ರ ಈ ಕ್ಷಮೆ ಅನ್ವಯಿಸುವುದಿಲ್ಲ."

"ಬ್ರಾಹ್ಮಣ, ಚಂಡಾಲ, ರಾಜ, ರಾಜಕುಮಾರರು, ಬ್ರಾಹ್ಮಣ ಪುತ್ರ, ಮಕ್ಕಳಿಲ್ಲದ ಸೋದರ, ತಂದೆ, ಜ್ಞಾನಿ, ಒಲ್ಲದವನು ಅಥವಾ ಬಲಿಕೊಡುವವನ ಸೋದರ ಮಾವ ಇವರಲ್ಲಿ ಯಾರನ್ನೂ ಬಲಿಕೊಡಲಾಗದು. ಇಲ್ಲಿ ಹೆಸರಿಸಿದ ಪ್ರಾಣಿಗಳು ಹಾಗೂ ಅಪರಿಚಿತ ಪಕ್ಷಿಗಳು ಬಲಿಗೆ ಅರ್ಹವಲ್ಲ. ಅಂಥ ಬಲಿಯ ಸಂದರ್ಭದಲ್ಲಿ ಮೇಲೆ ಹೆಸರಿಸಲಾದ ಬಲಿಗಳು ಅಲಭ್ಯವಾಗಿದ್ದಾಗ ಹೇಸರಗತ್ತೆ ಅಥವಾ ಒಂಟೆಯ ಬಲಿಯನ್ನು ನೀಡಬಹುದಾದರೂ ಸಾಧ್ಯವಾದಷ್ಟೂ ಇವುಗಳ ಬಲಿ ನೀಡುವುದನ್ನು ತಡೆಯಬೇಕು."

"ಬಲಿಯನ್ನು ಪೂಜಿಸಿದ ನಂತರ ಮಂತ್ರವನ್ನುಚ್ಚರಿಸುತ್ತಾ ದೇವಿಯ ಬಲಭಾಗದಲ್ಲಿ ಬಲಿಪಶುವಿನ ಶಿರ ಹಾಗೂ ರಕ್ತವನ್ನಿಡಬೇಕು. ಬಲಿ ನೀಡುವ ಭಕ್ತ ದೇವಿಯೆದುರು ನಿಂತು ಆಕೆಯನ್ನು ಸಂಬೋಧಿಸಬೇಕು. ಮನುಷ್ಯನ ತಲೆ ಅಥವಾ ರಕ್ತವನ್ನು ಆಕೆಯ ಬಲಗಡೆ ಇಡಬೇಕು. ಆಮೆ ಅಥವಾ ಮೊಸಳೆಯಾದರೆ ಆಕೆಯೆದುರು ಇಡಬೇಕು. ಸಿಂಹದ ಹಾಗೂ ಘೇಂಡಾಮೃಗದ ಶಿರ ಮತ್ತು ರಕ್ತವನ್ನು ಬಲಭಾಗದಲ್ಲಿಡಬೇಕು. ಬಲಕ್ಕೆ ಅಥವಾ ಎದುರಿಗೆ ದೀಪ ಉರಿಯಲಿ. ಗಂಧ, ಹೂವು, ಆಭರಣಗಳನ್ನು ಅವಳ ಎದುರು ಇಟ್ಟಿರಲಿ. ಮದಿರೆಯ ಪಾತ್ರೆ ಎಡಭಾಗಕ್ಕಿರಲಿ."

"ಆರತಿಯನ್ನು ಬಲಗಡೆ ಅಥವಾ ಎದುರಿಗೆ ಇಡಲಿ. ಎಡಕ್ಕಿಡಬಾರದು. ಧೂಪವನ್ನು ಎಡಗಡೆ ಅಥವಾ ಮುಂದೆ ಉರಿಸಬೇಕು. ಬಲದಲ್ಲಿರಬಾರದು. ಸುಗಂಧ, ಹೂವು, ಆಭರಣಗಳನ್ನು ಮುಂದೆ ಇರಿಸಬೇಕು. ಮಂಡಲದ ವಿವಿಧ ಭಾಗಗಳಲ್ಲಿ ಇರಿಸಬೇಕಾದ ವಸ್ತುಗಳನ್ನು ಕುರಿತು ಈಗಾಗಲೇ

ಹೇಳಿರುವ ಕ್ರಮವನ್ನು ಅನುಸರಿಸುವುದು. ಮದಿರೆಯನ್ನು ಎಡಗಡೆ ಇರಿಸಿದ ಇತರ ದ್ರವ ಹಿಂದೆ ಇರಿಸಬೇಕು.''

''ಮೊದಲ ಮೂರು ವರ್ಗಗಳಿಗೆ ಸೇರಿದ ಮನುಷ್ಯರು ಮದ್ಯವನ್ನು ನೈವೇದ್ಯವನ್ನಾಗಿ ಅರ್ಪಿಸುವ ಸಂದರ್ಭ ಬಂದಾಗ ಎಳನೀರು, ಹೂವಿನ ರಸಗಳನ್ನು ಮಾತ್ರ ಅರ್ಪಿಸಬೇಕು.''

''ರಾಜರು, ಮಂತ್ರಿಗಳು, ಶಾಸಕರು, ಮದ್ಯದ ವ್ಯಾಪಾರಿಗಳು ತಂತಮ್ಮ ಏಳಿಗೆಗಾಗಿ ನರಬಲಿ ಕೊಡಬಹುದು. ರಾಜನ ಸಮ್ಮತಿಯಿಲ್ಲದೆ ನರಬಲಿ ಕೊಡುವವನಿಗೆ ಪಾಪವು ಸುತ್ತಿಕೊಳ್ಳುವುದು. ಯುದ್ಧ ಅಥವಾ ಇನ್ನಿತರ ಅಪಾಯಕರ ಸಂದರ್ಭಗಳಲ್ಲಿ ರಾಜರು ಅಥವಾ ಮಂತ್ರಿಗಳು ಮಾತ್ರ ನರಬಲಿ ಕೊಡಲು ಅರ್ಹರು.''

''ಬಲಿಯ ಹಿಂದಿನ ರಾತ್ರಿ ಬಲಿಯಾಗುವಾತನು ಮಾನಾಷ್ಟಕ ಹಾಗೂ ಮೂರು ದೇವಿ ಗಂಧ ಸೂಕ್ತಗಳಿಂದ ಗಂಧ, ಸುಗಂಧಗಳನ್ನು ಸವರಿದ ಕೊಡಲಿಯಿಂದ ಗಂಧವನ್ನು ಬಲಿಯ ಕುತ್ತಿಗೆಗೆ ಸವರಿ ಬಲಿಯ ಹಿಂದಿನ ರಾತ್ರಿ ಬಲಿಯಾಗುವಾತನನ್ನು ಸಿದ್ಧಪಡಿಸಿರಬೇಕು.''

''ನಂತರ ಅಂಬೆ, ಅಂಬಿಕಾ, ಭೈರವ ಮಂತ್ರಗಳನ್ನು ಪಠಿಸಬೇಕು ಹಾಗೂ ಹೀಗೆ ಶುದ್ಧನಾಗಿ ಬಲಿಯಾಗುವವನನ್ನು ದೇವಿಯೇ ಕಾಯುವಳು ಹಾಗೂ ಅವನನ್ನು ಯಾವ ದುಃಖವೂ ಬಾಧಿಸಲಾರದು ಹಾಗೂ ಯಾವುದೇ ಬಂಧುಬಾಂಧವರ ಜೀವನ್ಮರಣಗಳು ಅವನನ್ನು ಅಶುದ್ಧಗೊಳಿಸಲಾರವು.''

* * * * *

''ಹೀಗೆ ಮಂತ್ರ ಪಠನದೊಂದಿಗೆ ನರಮಾನವನ ಶಿರವನ್ನು ಕತ್ತರಿಸಿ ಎಚ್ಚರಿಕೆಯಿಂದ ದೇವಿಗೆ ಅರ್ಪಿಸಬೇಕು. ದೇಹ ಮನಸ್ಸುಗಳೆರಡರಲ್ಲೂ ಶುದ್ಧನಾದ ಹಾಗೂ ನಿರ್ಭೀತನಾದವನ ರಕ್ತವನ್ನು ತಾವರೆಯ ದಳಗಳಲ್ಲಿ ತುಂಬಿ ದೇವಿಗೆ ಅರ್ಪಿಸಲಿ. ಚಿನ್ನ, ಬೆಳ್ಳಿ, ಹಿತ್ತಾಳೆಯ ಬಟ್ಟಲುಗಳಲ್ಲೂ ಅದನ್ನು ಕೊಡಬಹುದು.''

''ಚೂರಿ, ಕೊಡಲಿ ಮುಂತಾದವುಗಳಿಂದ ಪಡೆಯಲಾದ ರಕ್ತ ಆಯಾ ಆಯುಧದ ಗಾತ್ರಕ್ಕನುಗುಣವಾಗಿ ಆನಂದವನ್ನು ನೀಡುವುದು.''

''ತಾವರೆಯ ಎಲೆಗಳ ಕಾಲು ಭಾಗದಷ್ಟು ಮಾತ್ರ ರಕ್ತವನ್ನು ಅರ್ಪಿಸಬೇಕು ಹಾಗು ಅದಕ್ಕಿಂತ ಹೆಚ್ಚಿಗೆ ಅರ್ಪಿಸುವುದಾಗಲೀ, ತನ್ನ ದೇಹವನ್ನು ಅಗತ್ಯಕ್ಕಿಂತ ಹೆಚ್ಚು ಕತ್ತರಿಸುವುದಾಗಲೀ ಕೂಡದು. ಯಾವನು ತನ್ನ ದೇಹದ ತಿಲದಷ್ಟಾದರೂ ರಕ್ತ ಹಾಗೂ ಮಾಂಸವನ್ನು ಸ್ವ ಇಚ್ಛೆಯಿಂದಲೂ, ಉತ್ಸಾಹದಿಂದಲು ನೀಡುವನೋ ಆತನ ಇಷ್ಟಾರ್ಥವು ಆರು ತಿಂಗಳಲ್ಲಿ ಈಡೇರುವುದು.''

''ಈ ಎಲ್ಲ ನಿಯಮಗಳಿಗನುಸಾರವಾಗಿ ಬಲಿ ಕೊಟ್ಟವನ ಆಸೆಗಳು ಕೈಗೂಡುವುವು.''

* * * * *

ಇದು 'ಕಾಳಿ ಪುರಾಣ' ಹೇಳುವ ಧರ್ಮ.

ಮನು ಅಹಿಂಸೆಯ ಪಾಠಗಳನ್ನು ಹೇಳಿಕೊಟ್ಟ ಕೆಲಕಾಲಾನಂತರ ತಂತ್ರವು ಎತ್ತಿ ಹಿಡಿದ ಹಿಂಸೆಯ ವಿಕೃತ ರೂಪವಿದು. ಕಾಳಿ ಪುರಾಣದ ಈ ಅಧ್ಯಾಯದಲ್ಲಿ ಕಾಣಬರುವ ಈ ಹಿಂಸಾಮಯ ಆಚರಣೆ ಎಷ್ಟೋ ಪ್ರಾಂತ್ಯಗಳಿಗೆ ಹಬ್ಬಿಬಿಟ್ಟಿತು. ಕಲ್ಕತ್ತಾದ ಕಾಳಿ ದೇವಸ್ಥಾನದಲ್ಲಿ ನಡೆಯುವ ಪ್ರಾಣಿ

ಬಲಿಗಳೇ ಇದಕ್ಕೆ ಪುರಾವೆ ನೀಡುತ್ತವೆ. ಈ ದೇವಸ್ಥಾನವು ಪ್ರತಿದಿನ ನೂರಾರು ಕುರಿ, ಮೇಕೆಯನ್ನು ಕೊಲ್ಲುವ ಕಟುಕರ ಅಂಗಡಿಯಾಗಿಬಿಟ್ಟಿರುವುದರ ಮೂಲ ಕಾಳಿ ಪುರಾಣದಲ್ಲಿದೆ. ಕಾಳಿ ದೇವಸ್ಥಾನದಲ್ಲಿ ಇಂದು ನರಬಲಿ ಕಾಣುವುದಿಲ್ಲವೆಂಬುದೇನೋ ನಿಜ. ಆದರೆ ಇತಿಹಾಸದಲ್ಲಿ ಕಾಳಿ ಪುರಾಣದಲ್ಲಿ ಕಾಣುವ ಮಾದರಿಯ ನರಬಲಿ ನಡೆಯುತ್ತಿದ್ದುದಂತೂ ನಿಜ. ಡಾ. ರಾಜೇಂದ್ರ ಮಿತ್ರ[೧] ಹೇಳುತ್ತಾರೆ:

"ಇಡಿ ಹಿಂದೂಸ್ಥಾನದಲ್ಲಿ ನರಬಲಿಯ ಪದ್ಧತಿ ಬಹಳ ವರ್ಷಗಳ ಕಾಲ ಇದ್ದದ್ದು ಸರ್ವವಿದಿತವಾದದ್ದು. ಇಂದಿಗೂ ಇಂಡಿಯಾದ ಕೆಲವು ಭಾಗಗಳಲ್ಲಿ ದೇವಿಯನ್ನು ಒಲಿಸಲು ನರಬಲಿ ಕೊಡಲಾಗುತ್ತದೆಂದು ಜನ ನಂಬುತ್ತಾರೆ. ಈಗಲೂ ವಾಮಾಚಾರಿಗಳ ವಂಶಸ್ಥರು ದುರ್ಗಾ ಅಥವಾ ಕಾಳಿಪೂಜೆಯ ಸಂದರ್ಭದಲ್ಲಿ ಮಾನವನ ಪ್ರತಿಕೃತಿಯನ್ನು ಬಲಿಕೊಡುತ್ತಿರುವುದುಂಟು. ಬತ್ತಿಸಿದ ಹಾಲಿನಿಂದ ಮಾಡಿದ ಒಂದು ಅಡಿಯ ಮಾನವಾಕೃತಿಯನ್ನು ಕಾಳಿ ಪುರಾಣದಲ್ಲಿ ಹೇಳಿರುವ ರೀತಿಯಲ್ಲಿಯೇ ಬಲಿ ಕೊಡಲಾಗುವುದು. ೨೪ ಪರಗಣ ಜಿಲ್ಲೆಯ ಉಪ ಮ್ಯಾಜಿಸ್ಟ್ರೇಟರೂ ಬಂಗಾಳದ ಸೆಣಬು ಸಂಸ್ಕೃತಿಯನ್ನು ಕುರಿತು ಉತ್ತಮ ಗ್ರಂಥವನ್ನು ಬರೆದಿರುವ ಬಾಬು ಹೇಮಚಂದ್ರ ಕೇರ್ ಎಂಬ ನನ್ನ ಗೆಳೆಯ ಹೇಳುವಂತೆ ಬಂಗಾಳದ ಪೂರ್ವಭಾಗದ ಜಿಲ್ಲೆಗಳಲ್ಲಿ ಇದು ಇನ್ನೂ ಆಚರಣೆಯಲ್ಲಿದೆ. ಆದರೆ ಈ ಮಾನವಾಕೃತಿಯನ್ನು ಕುಟುಂಬದ ಸದಸ್ಯರೆಲ್ಲರೂ ಹಲವು ಬಗೆಯ ಆಯುಧಗಳಿಂದ ಚುಚ್ಚುವರು. ಇದನ್ನು ಶತ್ರು ಸಂಹಾರ ಎನ್ನುತ್ತಾರೆ. ಇದನ್ನು ಗುಟ್ಟಾಗಿ ನಡುರಾತ್ರಿ ಮಾಡಲಾಗುತ್ತದೆ. ಶತ್ರುಬಲಿ ಆಚರಣೆಗೆ ಆಧಾರ 'ಬೃಹನ್ನಳ ತಂತ್ರ'ವೆಂಬ ಗ್ರಂಥ. ಈ ಗ್ರಂಥದಲ್ಲಿ ಹೇಳಿದಂತೆ 'ಬತ್ತಿಸಿದ ಹಾಲಿನಿಂದ ಮಾಡಿದ ಪ್ರತಿಕೃತಿಯನ್ನು ರಾಜನು ಒಮ್ಮೆ ಕ್ರೂರವಾಗಿ ದಿಟ್ಟಿಸಿ ಕತ್ತಿಯಿಂದ ಎರಡು ಹೋಳಾಗಿಸಬೇಕು. ಇದಕ್ಕೆ ಮುನ್ನ ಪ್ರಾಣ ಪ್ರತಿಷ್ಠಾಪನೆಯ ಮಂತ್ರೋಚ್ಚಾರಣೆಯ ಮೂಲಕ ಪ್ರತಿಕೃತಿಗೆ ಪ್ರಾಣ ಕೊಟ್ಟಿರಬೇಕು. ನಂತರ ಕೊಲ್ಲಬೇಕಾದವನ ಹೆಸರನ್ನುಚ್ಚರಿಸುತ್ತಾ ಪ್ರತಿಕೃತಿಯನ್ನು ಕತ್ತರಿಸಬೇಕು. ಅನಂತರ ಶತ್ರುಗಳು ನಾಶವಾಗುವರು.' "

ಈ ಹಿನ್ನೆಲೆಯಲ್ಲಿ ನಾವು ಗಮನಿಸಬೇಕಾದ ಬಹುಮುಖ್ಯ ಅಂಶವೊಂದಿದೆ. ಅದೆಂದರೆ, ಕಾಳಿ ಶಿವನ ಹೆಂಡತಿ. ಹಾಗಾದರೆ, ಶಿವ ನರಬಲಿಯನ್ನು ಒಪ್ಪಿಕೊಂಡಿದ್ದನೆ? ಈ ಪ್ರಶ್ನೆಗೆ ಒಂದೆಡೆ ಉತ್ತರವಿದೆ. ಒಂದಾನೊಂದು ಕಾಲಕ್ಕೆ ಶಿವ ಪ್ರಾಣಿಯ ಬಲಿಯನ್ನು ಒಪ್ಪಿಕೊಂಡಿದ್ದ. ಶಿವಭಕ್ತರಿಗೆ ಇದನ್ನು ಕೇಳಿ ಅಚ್ಚರಿಯಾಗಬಹುದು. ಅಶ್ವಲಾಯನ ಗೃಹ್ಯಸೂತ್ರದಲ್ಲಿ[೨] ಶಿವನಿಗೆ ತೃಪ್ತಿ ತರುವ ಎತ್ತುಗಳ ಬಲಿಯ ವರ್ಣನೆಯಿದೆ:

೧. ಕೊಬ್ಬಿದ ಗೂಳಿಯನ್ನು ರುದ್ರನಿಗೆ ಬಲಿಕೊಡಲಾಗುವುದು
೨. ಶಿಶಿರ ಅಥವಾ ವಸಂತದಲ್ಲಿ; ಆರ್ದ್ರ ನಕ್ಷತ್ರದಲ್ಲಿ
೩. ಅದು ಇಡಿ ಗುಂಪಿನಲ್ಲಿಯೇ ಶ್ರೇಷ್ಠವಾದ ಎತ್ತಾಗಿರಬೇಕು
೪. ತೊನ್ನು ಅಥವಾ ಕಲೆಯಿಲ್ಲದ ಎತ್ತು ಅದಾಗಿರಬೇಕು
೫. ಕೆಲವರ ಪ್ರಕಾರ ಕಪ್ಪು ಮಚ್ಚೆಯ ಎತ್ತಾಗಿರಬೇಕು

೧. 'ಇಂಡೋ ಆರ್ಯನ್ಸ್', ಸಂ. II, ಪುಟಗಳು: ೧೦೯–೧೧೧
೨. 'ಸೇಕ್ರೆಡ್ ಬುಕ್ಸ್ ಆಫ್ ದಿ ಈಸ್ಟ್', ಸಂ. XXIX, ಪು. ೨೨೫–೨೫೯

೬. ಅದು ತಾಮ್ರವನ್ನು ಹೋಲುವಂತಿದ್ದರೆ ಕಪ್ಪು ಬಣ್ಣದ್ದೂ ಆಗಬಹುದು
೭. ಅಕ್ಕಿ ಮತ್ತು ಬಾರ್ಲಿಯ ನೀರನ್ನು ಅದರ ಮೇಲೆ ಚಿಮುಕಿಸಬೇಕು
೮. ತಲೆಯಿಂದ ಬಾಲದವರೆಗೂ ಚಿಮುಕಿಸಬೇಕು
೯. ಸೂತ್ರ ಪಠನ, 'ವೃದ್ಧಿಸು, ರುದ್ರದೇವರಿಗೆ ಪ್ರಿಯರಾಗುವಂತೆ'
೧೦. ಅದು ಎತ್ತಾಗುವವರೆಗೂ ಅಥವಾ ಹಲ್ಲು ಮುರಿಯುವವರೆಗೂ ಅದನ್ನು ಬೆಳೆಯಲು ಬಿಡಬೇಕು
೧೧. ಪವಿತ್ರವಾದ ಜಾಗವೊಂದರಲ್ಲಿ ಬಿಡಬೇಕು
೧೨. ಊರಿನಿಂದ ದೂರದ ಸ್ಥಳವೊಂದರಲ್ಲಿ
೧೩. ಮಧ್ಯರಾತ್ರಿಯ ನಂತರ ಬಲಿಕೊಡಬೇಕು
೧೪. ಕೆಲವರ ಪ್ರಕಾರ, ಸೂರ್ಯೋದಯದ ನಂತರ
೧೫. ಜ್ಞಾನಿಯಾದ, ಯಜ್ಞಯಾಗಾದಿಗಳಲ್ಲಿ ಪರಿಣತನಾದ ಬ್ರಾಹ್ಮಣನನ್ನು ಕೂರಿಸಿ, ಆಗ ತಾನೇ ಕತ್ತರಿಸಿದ ಕೊಂಬೆಯನ್ನು ಬಲಿಗಂಬವನ್ನಾಗಿಟ್ಟು, ಬಳ್ಳಿಗಳ ಒಂದು ಭಾಗವನ್ನು ಬಲಿಯಾಗಲಿರುವ ಪ್ರಾಣಿಗೂ, ಮತ್ತೊಂದು ಭಾಗವನ್ನು ವಧಾಸ್ಥಾನಕ್ಕೂ ಕಟ್ಟಬೇಕು.
೧೬. ಉಳಿದಂತೆ, ಪ್ರಾಣಿಬಲಿಯ ವಿಧಿಗಳು ಇಲ್ಲಿಯೂ ಅನ್ವಯಿಸುವವು
೧೭. ಇದಕ್ಕಿಂತ ಭಿನ್ನವಾದ ವಿಧಿಗಳೇನು ಎಂಬುದನ್ನು ಮುಂದೆ ನೋಡೋಣ
೧೮. ಜಠರದ ಚರ್ಮವನ್ನು, ಶ್ರುತಿಯಲ್ಲಿ ಸೂಚಿಸಲಾದ ಪತ್ರ ಅಥವಾ ಎಲೆಯಲ್ಲಿಟ್ಟು ನೈವೇದ್ಯಯ ಮಾಡಬೇಕು
೧೯. ಹರ, ಮೃಡ, ಶಿವ, ಭವ, ಮಹದೇವ, ಉಗ್ರ, ಪಶುಪತಿ, ಶಂಕರ ಎಂಬ ಮಂತ್ರಗಳ ಮೂಲಕ
೨೦. ಅಥವಾ ಈ ಮಂತ್ರದ ಕೊನೆಯ ಆರು ಭಾಗಗಳನ್ನು ಪಠಿಸುವ ಮೂಲಕ
೨೧. ಅಥವಾ 'ರುದ್ರ ಸ್ವಾಹಾ' ಎಂಬ ಮಂತ್ರದ ಮೂಲಕ
೨೨. ಬಲಿಯ ನೈವೇದ್ಯವನ್ನು ನಾಲ್ಕೂ ದಿಕ್ಕುಗಳಿಗೆ ಎರಚಬೇಕು
೨೩. 'ಈ ಪ್ರಾರ್ಥನೆ ರುದ್ರನಿಗಾಗಿ', 'ಓ ಪಿತನೇ, ನಿನಗಾಗಿ', 'ಶಕ್ತಿಶಾಲಿಯಾದ ರುದ್ರನಿಗೆ ಎಂಬ ಸ್ತೋತ್ರಗಳನ್ನು ಅರ್ಪಿಸಬೇಕು. (ಋಗ್ವೇದ ೧.೪೩, ೧೧೪, II ೩೩, VII ೪೬)
೨೪. ರುದ್ರನಿಗೆ ಸಂಬಂಧಿಸಿದ ಎಲ್ಲ ಯಜ್ಞಗಳಲ್ಲೂ ಅನುಸರಿಸಬೇಕಾದ ವಿಧಾನವಿದು
೨೫. ಭತ್ತದ ಹೊಟ್ಟು, ಬಾಲ, ಚರ್ಮ, ತಲೆ ಮತ್ತು ಪಾದಗಳನ್ನು ಅವನು ಬೆಂಕಿಗೆ ಎಸೆಯುವನು
೨೬. ಸಾಂವತ್ಯನ ಪ್ರಕಾರ ಚರ್ಮವನ್ನು ಬೇರಾವುದಾದರೂ ಉದ್ದೇಶಕ್ಕೆ ಬಳಸಬೇಕು
೨೭. ಬೆಂಕಿಯ ಉತ್ತರಕ್ಕೆ ಬಲಿಯಾದ ಪ್ರಾಣಿಯ ರಕ್ತ ಸುರಿದು ಹೀಗೆನ್ನುವರು: 'ಭಗಗಳೇ, ಮೃಗಗಳೇ, ಘಟಸರ್ಪಗಳೇ ಈ ನೈವೇದ್ಯ ನಿಮಗಾಗಿ, ಸ್ವೀಕರಿಸಿರಿ'
೨೮. ಉತ್ತರಕ್ಕೆ ತಿರುಗಿ 'ಭುಸುಗುಡುವ ಸರ್ಪಗಳೇ ಈ ಎಡೆ ನಿಮಗಾಗಿ' ಎಂದು ಅರ್ಪಿಸ ಬೇಕು
೨೯. ಅಂಥ ಯಾಜಿಗೆ ಎಲ್ಲ ಸುಖಗಳೂ ಪ್ರಾಪ್ತವಾಗುವುವು

೩೦. ಶ್ರುತಿ ಸೂಚಿಸುವ ಪ್ರಕಾರ ಕೇವಲ ಈ ಶಬ್ದಗಳನ್ನು ಉಚ್ಚರಿಸಿದ ಮನುಷ್ಯನಿಗೆ ಕೂಡ ಯಾವ ಬಾಧಕವೂ ಬರಲಾರದು
೩೧. ಯಜ್ಞದ ಯಾವ ಪದಾರ್ಥವನ್ನೂ ಯಾಜಿಯು ಬಳಸಲಾಗದು
೩೨. ಬಲಿಯ ಯಾವುದೇ ಭಾಗವನ್ನು ತನ್ನ ಊರಿಗೆ ಮರಳಿ ಒಯ್ಯಬಾರದು
೩೩. ಬಲಿಯ ಸ್ಥಳದಿಂದ ಇತರ ಜನರನ್ನು ದೂರವಿರಿಸಬೇಕು
೩೪. ವಿಶಿಷ್ಟ ಸಂದರ್ಭಗಳಲ್ಲಿ ಮಾತ್ರ ಬಲಿಯ ಆಹಾರವನ್ನು ಸೇವಿಸಿದರೆ ಅದೃಷ್ಟಪ್ರಾಪ್ತಿಯಾಗುವುದು
೩೫. ಈ ಯಜ್ಞವು ಧನಧಾನ್ಯ, ಭೂಮಿ, ಪುತ್ರರು, ಆಯುಷ್ಯವನ್ನು ಕರುಣಿಸುವುದು
೩೬. ಬಲಿಯ ನಂತರ ಮತ್ತೊಂದು ಪ್ರಾಣಿಯನ್ನು ಬಿಡುಗಡೆಗೊಳಿಸಬೇಕು
೩೭. ಅಂಥ ಪ್ರಾಣಿಯೊಂದು ಜೊತೆಯಲ್ಲಿರದೇ ಯಜ್ಞ ಮಾಡಬಾರದು
೩೮. ಇಲ್ಲದಿದ್ದರೆ ಶ್ರುತಿ ಹೇಳುವಂತೆ ಅವನಿಗೆ ಗೋ ಪ್ರಾಪ್ತಿಯಾಗುವುದಿಲ್ಲ
೩೯. ಸಂತತೀಯ ಸ್ತೋತ್ರ ಪಠಿಸುತ್ತಾ ಅವನು ಮನೆಗೆ ಮರಳಬೇಕು
೪೦. ತನ್ನ ಹಸು ಅಥವಾ ಎತ್ತಿಗೆ ಕಾಯಿಲೆಯಾದರೆ ಅದನ್ನು ತನ್ನ ಕೊಟ್ಟಿಗೆಯಲ್ಲೇ ಅದೇ ದೇವರಿಗೆ ಬಲಿ ನೀಡಬಹುದು
೪೧. ನಂತರ ಬಲಿಗೆ ಬಳಸಲಾದ ಆಹಾರದ ಉಳಿದ ಭಾಗವನ್ನು ಸಂತರ್ಪಣೆ ಮಾಡಬೇಕು
೪೨. ದರ್ಭೆಯನ್ನು ಬೆಂಕಿಗೆಸೆದು ಹಸುಗಳನ್ನು ಆ ಧೂಮದ ಮೂಲಕ ಹಾದುಹೋಗುವಂತೆ ಮಾಡಬೇಕು
೪೩. ಸಂತತೀಯ ಸ್ತೋತ್ರವನ್ನು ಪಠಿಸುತ್ತಾ ದನಕರುಗಳ ನಡುವೆ ನಿಲ್ಲಬೇಕು
೪೪. 'ಶೌನಕ ನಮೋಸ್ತುತೇ, ಶೌನಕ ನಮೋಸ್ತುತೇ'

ಆದರೆ ಪ್ರಾಣಿಬಲಿ ಇಂದು ಶಿವನನ್ನು ಸಂಪ್ರೀತಗೊಳಿಸುವುದಿಲ್ಲ. ಅಂದರೆ, ಶಿವಪೂಜೆಯಲ್ಲಿ ಕಾಲಾನುಕ್ರಮದಲ್ಲಿ ಉಂಟಾದ ಈ ಬದಲಾವಣೆಗೆ ಕಾರಣ ಅಹಿಂಸೆಯ ತತ್ವವನ್ನು ಒಪ್ಪಿಕೊಂಡಿದ್ದು. ಹಿಂಸೆಯಿಂದ ಅಹಿಂಸೆಗೆ ಬದಲಾದ ಬ್ರಾಹ್ಮಣರು ಹಿಂಸಕನಾಗಿದ್ದ ಶಿವನನ್ನು ಅಹಿಂಸಾವಾದಿಯನ್ನಾಗಿಸಿದರು. ಶಿವ ಅಹಿಂಸಾವಾದಿ ದೇವನಾದ ನಂತರ ಕಾಳಿಯ ಪೂಜಾಪದ್ಧತಿ ಅಸ್ತಿತ್ವಕ್ಕೆ ಬಂದದ್ದು. ಆದರೆ ಶಿವನ ಪತ್ನಿಯಾದ ಕಾಳಿ ಹಿಂಸೆಯ ದೇವತೆ. ರಕ್ತವನ್ನೊಲ್ಲದ ದೇವರು ರಕ್ತಪಿಪಾಸು ದೇವತೆಯನ್ನು ಪತ್ನಿಯನ್ನಾಗಿ ಪಡೆದದ್ದೊಂದು ವಿರೋಧಾಭಾಸದ ಸಂಗತಿ. ಇದೊಂದು ಒಗಟಲ್ಲವೆ?

ಬ್ರಾಹ್ಮಣರೇಕೆ ಇಂಥದೊಂದು ಒಗಟನ್ನು ಸೃಷ್ಟಿಸಿದರು?

* * * *

# ಅನುಬಂಧ – I

## ವೇದಗಳ ಒಗಟು*

ವೇದಗಳು ಹಿಂದೂಗಳ ಪವಿತ್ರ ಗ್ರಂಥಗಳು. ಈ ಗ್ರಂಥಗಳಿಗೆ ಸಂಬಂಧಪಟ್ಟಂತೆ ಹಲವು ಪ್ರಶ್ನೆಗಳೇಳುತ್ತವೆ. ಅವುಗಳ ಮೂಲವೇನು? ಅವುಗಳ ಕರ್ತೃ ಯಾರು? ಅವುಗಳ ಪರಮಾಧಿಕಾರದ ಮೂಲವೇನು? ಇವು ಆ ಪ್ರಶ್ನೆಗಳಲ್ಲಿ ಕೆಲವು.

ಮೊದಲ ಪ್ರಶ್ನೆಗೆ ಬರೋಣ. ಅದಕ್ಕೆ ಹಿಂದೂಗಳ ಉತ್ತರವೆಂದರೆ ಅವು ಸನಾತನವಾದವು. ಅಂದರೆ ಆದಿಯಿಂದ ನಿರಂತರವಾಗಿ ಇರುವಂಥವು. ಈ ನಂಬಿಕೆಗೆ ಅಥರ್ವಣ ವೇದದ ಒಂದು ಹೇಳಿಕೆಯ ಆಧಾರವನ್ನು ಬಿಟ್ಟು ಇನ್ಯಾವ ಆಧಾರವೂ ಇಲ್ಲ. ಅಥರ್ವಣ ವೇದ[೧] ಹೇಳುತ್ತದೆ. (XIX, 54.3):

"ಋಗ್ವೇದ ಮಂತ್ರಗಳು ಕಾಲದಿಂದ ಹುಟ್ಟಿದವು. ಯಜುಸ್ ಕಾಲದಿಂದ ಹುಟ್ಟಿತು". ಆದರೆ, ಇದಕ್ಕೆ ವಿರುದ್ಧವಾದ ಅಭಿಪ್ರಾಯಗಳೂ ಇವೆ. ಅಥರ್ವಣ ವೇದದಲ್ಲೇ ಇನ್ನೆರಡು ದೃಷ್ಟಿಕೋನಗಳೂ ಇವೆ. ಅವುಗಳಲ್ಲಿ ಮೊದಲನೆಯದು[೨] ಹೀಗಿದೆ:

"ಯಾವ ಸ್ಕಂಬನಲ್ಲಿ ಸನಾತನ ಋಷಿಗಳೂ, ಋಕ್ಕುಗಳೂ, ಯಜುಸ್ಸಗಳೂ, ಭೂಮಿ ಮತ್ತು ಋಷಿ ಆಶ್ರಯ ಪಡೆದಿದ್ದಾರೋ ಆ ಸ್ಕಂಬ ಯಾರೆಂದು ತಿಳಿಸು...."

"ಯಾವ ಸ್ಕಂಬನಿಂದ ಋಕ್ಕುಗಳನ್ನು ಕತ್ತರಿಸಿ ಹಾಕಲಾಯಿತೋ ಯಾರಿಂದ ಯಜಸ್ಸುಗಳನ್ನು ಅಳಿಸಿಹಾಕಲಾಯಿತೊ, ಯಾರ ಕೂದಲುಗಳೇ ಸಾಮಗಳೋ, ಯಾರ ಬಾಯಿಯೇ ಅಥರ್ವಣ ಮತ್ತು ಅಂಗಿರಸ ಶ್ಲೋಕಗಳೋ, ಆ ಸ್ಕಂಬ ಯಾರೆಂದು ತಿಳಿಸು....."

ಇಂದ್ರನಿಂದ ವೇದಗಳು ಸೃಷ್ಟಿಯಾದವೆಂಬ ಸೂಚನೆಯೂ ಅಥರ್ವಣದ ವೇದದಲ್ಲಿದೆ.[೩]

'ಋಗ್ವೇದ' ಕೊಡುವ ವಿವರಣೆ ಪುರುಷಸೂಕ್ತದಲ್ಲಿದೆ. 'ವಿಶ್ವ' ಯಜ್ಞದಲ್ಲಿ ಪುರುಷನೆಂಬ ಮಾಯಾಪುರುಷನನ್ನು ಬಲಿನೀಡಿದ್ದರೆ ಫಲವಾಗಿ ಋಕ್, ಸಾಮ ಮತ್ತು ಯಜುಸ್ ಎಂಬ ಮೂರು ವೇದಗಳು ಅಸ್ತಿತ್ವಕ್ಕೆ ಬಂದವು.'

ಆದರೆ ಸಾಮವೇದ, ಯಜುರ್ವೇದಗಳು ವೇದಗಳ ಹುಟ್ಟಿನ ಬಗೆಗೆ ಏನನ್ನೂ ಹೇಳುವುದಿಲ್ಲ.

'ಶತಪಥ ಬ್ರಾಹ್ಮಣ', 'ತೈತ್ತಿರೀಯ ಬ್ರಾಹ್ಮಣ'[೪], 'ಐತರೇಯ ಬ್ರಾಹ್ಮಣ' ಮತ್ತು 'ಕೌಶೀತಕೀ ಬ್ರಾಹ್ಮಣ'ಗಳು ವೇದಗಳ ಹುಟ್ಟಿನ ಬಗೆಗೆ ಹಲವು ವಿವರಣೆಗಳನ್ನು ನೀಡುತ್ತವೆ.

---

* *ಈ ಹಿಂದೆ ಅಧ್ಯಾಯ ೨ ರಿಂದ ೬ ರ ವರೆಗೆ ಚರ್ಚಿಸಿದ ವೇದಗಳ ಒಗಟಿನ ಚರ್ಚೆಗೆ ಅಂತಿಮರೂಪ ಕೊಡುವ ಈ ಅಧ್ಯಾಯದ ಬೆರಳಚ್ಚಿನ ಪ್ರತಿಯಲ್ಲಿ ತಿದ್ದುಪಡಿಗಳಿಲ್ಲ.–ಸಂ.*

೧. 'ಅಥರ್ವವೇದ', XIX, ೫೪.೩

೨. ಮ್ಯೂರ್: 'ಸ್ಯಾನ್ಸ್ಕ್ರಿಟ್ ಟೆಕ್ಸ್ಟ್', ಸಂ. III, ಪು. ೩

೩. ಅದೇ, ಸಂ. III, ಪು. ೩

೪. ಅದೇ, ಪು. ೮

'ಶತಪಥ ಬ್ರಾಹ್ಮಣ' ಹೇಳುವ ಪ್ರಕಾರ ಪ್ರಜಾಪತಿ ತನ್ನ ತಪಃಶಕ್ತಿಯಿಂದ ಭೂಮಿ, ವಾಯು, ಆಕಾಶ ಎಂಬ ಮೂರು ಲೋಕಗಳನ್ನು ಸೃಷ್ಟಿಸಿದ. ಈ ಮೂರೂ ಜಗತ್ತುಗಳಿಗೆ ಶಾಖವನ್ನು ಕೊಟ್ಟ. ಅವುಗಳ ಬಿಸಿಯಿಂದ ಮೂರು ಬೆಳಕುಗಳು ಹುಟ್ಟಿದವು: ಅವೇ ಅಗ್ನಿ, ವಾಯು, ಸೂರ್ಯ ಅಗ್ನಿಯಿಂದ ಋಗ್ವೇದವೂ, ವಾಯುವಿನಿಂದ ಯಜುರ್ವೇದವೂ, ಸೂರ್ಯನಿಂದ ಸಾಮವೇದವೂ ಹುಟ್ಟಿದವು. 'ಐತರೇಯ' ಮತ್ತು 'ಕೌಶೀತಕೀ' ಬ್ರಾಹ್ಮಣದಲ್ಲೂ ಇದೇ ವಿವರಣೆಯಿದೆ.

'ಶತಪಥ ಬ್ರಾಹ್ಮಣ'[೧]ದ ಇನ್ನೊಂದು ವಿವರಣೆಯಂತೆ ಪ್ರಜಾಪತಿ ಜಲದಿಂದ ವೇದಗಳನ್ನು ಸೃಷ್ಟಿಸಿದ:

"ನಾನು ದ್ವಿಗುಣಿಸಲಿ, ನಾನು ವಿಸ್ತರಿಸಲಿ" ಎಂದು ಪ್ರಜಾಪತಿಯು ಬಯಸಿದ ಹಾಗೂ ಭಕ್ತಿಯಿಂದ ಕಠಿಣ ತಪಸ್ಸನ್ನು ಮಾಡಿದ. ತನ್ನ ತಪಃಶಕ್ತಿಯಿಂದ ಮೊಟ್ಟಮೊದಲನೆಯದಾಗಿ ಪವಿತ್ರ ಜ್ಞಾನವನ್ನು ಸೃಷ್ಟಿಸಿದ. ಅದೇ ವೇದಶಾಸ್ತ್ರ ತ್ರಿವಳಿ. ಅದು ಅವನ ತಳಹದಿಯಾಯಿತು. ಆದ್ದರಿಂದಲೇ 'ಪವಿತ್ರವಾದ ಜ್ಞಾನವೇ ಜಗತ್ತಿನ ತಳಹದಿ' ಎನ್ನುವರು. ಆದ್ದರಿಂದ ವೇದವನ್ನೋದಿದ ಮೇಲೆಯೇ ಮಾನವರಿಗೆ ನಿಲ್ಲಲೊಂದು ಸುಭದ್ರವಾದ ಸ್ಥಾನ. ಈ ತಳಹದಿಯ ಮೇಲೆ ನಿಂತ ಪ್ರಜಾಪತಿ ವಾಕ್‌ನಿಂದ ಜಲವನ್ನು ಸೃಷ್ಟಿಸಿದನು. ವಾಕ್ ಜಗತ್ತಿನ ಚರಾಚರಗಳನ್ನು ಆಕ್ರಮಿಸಿದಳು. ಹಾಗೆ ಆಕ್ರಮಿಸುತ್ತಲೇ ಜಲವನ್ನು 'ಆಪಃ' ಎಂದು ಕರೆಯಲಾಯಿತು. ಆಗ ಪ್ರಜಾಪತಿಯು ಈ ಜಲದ ಮೂಲಕ ತಾನು ಎಲ್ಲೆಡೆ ಹಬ್ಬಲೆಂದು ಆಶಿಸಿದನು ಹಾಗೂ ವೇದ ತ್ರಿವಳಿಯೊಂದಿಗೆ ಜಲವನ್ನು ಪ್ರವೇಶಿಸಿದನು. ಆಗ ಅಂಡವೊಂದು ಸೃಷ್ಟಿಯಾಯಿತು. ಅದಕ್ಕೆ ಜೀವ ಕೊಟ್ಟ ಅವನು 'ತತ್‌ಸೃಷ್ಟ್ವಾ...... ತತ್ರೈವಾಸ್ತು...... ತತ್ರೈವಾಸ್ತು' ಎಂದನು. ಆಗ ಪವಿತ್ರಜ್ಞಾನವಾದ ವೇದಶಾಸ್ತ್ರ ಸೃಷ್ಟಿಯಾಯಿತು. ಆದ್ದರಿಂದ ಈ ಜಗತ್ತಿನಲ್ಲಿ ಸೃಷ್ಟಿಯಾದ ಮೊದಲ ವಸ್ತು ಈ ಪವಿತ್ರಜ್ಞಾನವೇ. 'ವೇದವನ್ನು ಕಲಿತವನು ಅಗ್ನಿಯಂತೆ' ಎನ್ನಲು ಕಾರಣ ಪವಿತ್ರಜ್ಞಾನವು ಅಗ್ನಿಯ ಬಾಯಿಯಾಗಿರುವುದು."

"ಹಸಿಯಾದ ಸೌದೆಯನ್ನು ಉರಿಸಿದಾಗ, ಅದರಿಂದ ಹೊರಡುವ ಹೊಗೆಯ ನಾನಾ ರೂಪಗಳಂತೆ ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವಣ, ಅಂಗೀರಸಗಳು, ಇತಿಹಾಸಗಳು, ಪುರಾಣಗಳು, ವಿಜ್ಞಾನ, ಉಪನಿಷತ್ತುಗಳು, ಶ್ಲೋಕಗಳು, ಭಾಷ್ಯಗಳು ಪರಮಾತ್ಮನ ಉಸಿರಿನಿಂದ ಸೃಷ್ಟಿಯಾದವು."

'ಶತಪಥ ಬ್ರಾಹ್ಮಣ'[೨]ದ ಮತ್ತೊಂದು ವಿವರಣೆ ಹೀಗಿದೆ: "ಮಾನಸ ಸಮುದ್ರದಿಂದ ವಾಕ್ ಎಂಬ ಗುದ್ದಲಿಯ ಮೂಲಕ ದೇವರುಗಳು ಮೂರು ವೇದಗಳನ್ನು ಅಗೆದು ಹೊರತೆಗೆದರು."

ಆದರೆ 'ತೈತ್ತೀರಿಯ ಬ್ರಾಹ್ಮಣ'ದಲ್ಲಿ ಮೂರು ವಿವರಣೆಗಳಿವೆ. ಮೊದಲ ವಿವರಣೆಯ ಪ್ರಕಾರ ವೇದಗಳು ಪ್ರಜಾಪತಿಯಿಂದ ಸೃಷ್ಟಿಯಾದವು. ಪ್ರಜಾಪತಿಯು ರಾಜ ಸೋಮನನ್ನೂ[೩], ನಂತರ ಮೂರು ವೇದಗಳನ್ನೂ ಸೃಷ್ಟಿಸಿದನೆಂದೂ ತೈತ್ತೀರಿಯ ಬ್ರಾಹ್ಮಣ ಹೇಳುತ್ತದೆ. ಅದರ ಮತ್ತೊಂದು ವಿವರಣೆಯಲ್ಲಿ ಪ್ರಜಾಪತಿಗೂ ವೇದಗಳಿಗೂ ಸಂಬಂಧವಿಲ್ಲ:

---

೧. ಅದೇ, ಪು. ೮

೨. ಅದೇ. ಸಂ. III, ಪು. ೯–೧೦

೩. ಅದೇ, ಪು. ೧೦

"ಅಕ್ಷರವಾದ, ಎಲ್ಲಕ್ಕಿಂತ ಮೊದಲು ಹುಟ್ಟಿದ ವಾಕ್, ವೇದಗಳ ಮಾತೆ ಹಾಗೂ ಅಮರತ್ವದ ಕೇಂದ್ರ ಋಷಿಗಳು, ಕವಿಗಳು, ದೇವತೆಗಳೆಲ್ಲ ಕಠಿಣ ತಪಸ್ಸು ಮಾಡಿ ಒಲಿಸಿಕೊಳ್ಳಬಯಸುವ ಮಾತೆ ನನ್ನ ಪ್ರಾರ್ಥನೆಯನ್ನು ಆಲಿಸಲಿ."

ಇದಕ್ಕೆ ಕಲಶವಿಟ್ಟಂತೆ 'ತ್ರೈತ್ತೀರಿಯ ಬ್ರಾಹ್ಮಣ'ವು ವೇದಗಳು ಪ್ರಜಾಪತಿಯ ಗಡ್ಡದಿಂದ ಹುಟ್ಟಿದವೆಂದು ಹೇಳುತ್ತದೆ. ಉಪನಿಷತ್ತುಗಳಲ್ಲಿ ಕೂಡ ವೇದಗಳ ಹುಟ್ಟಿನ ಬಗೆಗೆ ಹಲವು ಕಥೆಗಳಿವೆ. 'ಛಾಂದೋಗ್ಯೋಪನಿಷತ್'ನ ಪುರಾಣಗಳು, 'ಶತಪಥ ಬ್ರಾಹ್ಮಣ'ದಂತೆ 'ಋಗ್ವೇದ'ವು ಅಗ್ನಿಯಿಂದ, ಯಜುಸ್ ವಾಯುವಿನಿಂದ, ಸಾಮನ್ ಸೂರ್ಯನಿಂದ ಹುಟ್ಟಿದವೆಂದು ಹೇಳುತ್ತವೆ.

'ಶತಪಥ ಬ್ರಾಹ್ಮಣ'ದ ಒಂದು ಭಾಗದಿಂದ 'ಬೃಹದಾರಣ್ಯಕೋಪನಿಷತ್' ಭಿನ್ನವಾದ ಕಥೆ ಹೇಳುತ್ತದೆ:

"ಲಯಕರ್ತನಾದ ಪ್ರಜಾಪತಿಯು ವಾಕ್‌ಅನ್ನು ಸೃಷ್ಟಿಸಿದ. ಅವಳ ಮೂಲಕ ಹಾಗೂ ಆತ್ಮದೊಡಗೂಡಿ, ವೇದಗಳೂ ಸೇರಿದಂತೆ ಸಕಲ ವಸ್ತುಗಳನ್ನೂ ಸೃಷ್ಟಿಸಿದ. ವಾಕ್ ಹಾಗೂ ಆತ್ಮದ ಮೂಲಕ ಋಕ್, ಯಜುಸ್, ಸಾಮನ್, ಛಂದಸ್ಸು, ಜೀವಿಗಳು ಸೃಷ್ಟಿಯಾದವು. ಋಗ್ವೇದವು ವಾಕ್, ಯಜುರ್ವೇದವು ಬುದ್ಧಿ, ಸಾಮವೇದವು ಉಸಿರು."

ಇನ್ನು ಸ್ಮೃತಿಗಳಿಗೆ ಬಂದರೆ ವೇದಗಳ ಹುಟ್ಟನ್ನು ಕುರಿತಂತೆ ಮನುಸ್ಮೃತಿಯಲ್ಲಿ ಎರಡು ವಿವರಣೆಗಳಿವೆ. ಅದರಲ್ಲಿ ಒಂದೆಡೆ ಬ್ರಹ್ಮನೇ ವೇದಗಳನ್ನು ಸೃಷ್ಟಿಸಿದ ಎಂದಿದೆ:

"ಆದಿಯಲ್ಲಿ ಬ್ರಹ್ಮನು.... ದೇವತೆಗಳನ್ನೂ.... ಅಗ್ನಿ, ವಾಯು, ಸೂರ್ಯರಿಂದ ಮೂರು ಅಮರ ವೇದಗಳನ್ನೂ ಸೃಷ್ಟಿಸಿದನು. ಅವುಗಳನ್ನು ಋಕ್, ಯಜುಸ್ ಹಾಗೂ ಸಾಮನ್ ಎಂದು ವಿಂಗಡಿಸಿದನು."

ಮತ್ತೊಂದೆಡೆ ಪ್ರಜಾಪತಿಯೇ ವೇದಗಳ ಸೃಷ್ಟಿಕರ್ತ ಎಂಬುದನ್ನು ಮನು ಒಪ್ಪಿಕೊಂಡಿರುವಂತೆ ಕಾಣುತ್ತದೆ:

"ಪ್ರಜಾಪತಿಯು ಮೂರು ವೇದಗಳಿಂದ 'ಅ' 'ಉ' 'ಮ' (ಓಂ) ಎಂಬ ಮೂರು ಅಕ್ಷರಗಳನ್ನು 'ಭೂಃ', 'ಭುವಃ' ಹಾಗೂ 'ಸ್ವರ್'ಗಳ ಜೊತೆಗೆ ಹಿಂಡಿ ಕರೆದ. ಪ್ರಜಾಪತಿಯು ಮೂರು ವೇದಗಳಿಂದ ಗಾಯತ್ರಿಯ ಕೆಲಭಾಗಗಳನ್ನೂ ಹಿಂಡಿ ಕರೆದ...... ಪ್ರಜಾಪತಿಯು ಇದೇ ವೇದಗಳಿಂದ ಸಾವಿತ್ರಿ (ಅಥವಾ ಗಾಯತ್ರಿ) ಪಠ್ಯದ ಒಂದು ಭಾಗವನ್ನು ಹಿಂಡಿ ಕರೆದ. ಓಂನ ನಂತರ ಬಂದ ಭೂಃ ಭುವಃ ಸ್ವರ್‌ಗಳು ಮತ್ತು ಮೂರು ಸಾಲುಗಳ ಗಾಯತ್ರಿ ಮಂತ್ರವನ್ನು ಬ್ರಹ್ಮನ ಬಾಯಿಯೆಂದು ಪರಿಗಣಿಸಲಾಗುತ್ತದೆ."

'ವಿಷ್ಣುಪುರಾಣ'ದ ಪ್ರಕಾರ, 'ಬ್ರಹ್ಮನ ಪೂರ್ವಮುಖದ ಬಾಯಿಯಿಂದ ಗಾಯತ್ರಿ ಋಕ್ ಶ್ಲೋಕಗಳೂ, ಯಜ್ಞಗಳು ಅಗ್ನಿಷ್ಟೋಮವೂ, ದಕ್ಷಿಣದ ಬಾಯಿಯಿಂದ ಯಜುಸ್ ಶ್ಲೋಕಗಳೂ, ತ್ರಿಷ್ಟುಭ್, ಛಂದಸ್ಸು, ಪಂಚದಶಷ್ಟೋಮ, ಬೃಹತ್ ಸಾಮ ಹಾಗೂ ಉಕ್ತ್ಯಗಳೂ, ಪಶ್ಚಿಮದ ಬಾಯಿಯಿಂದ ಸಾಮದ ಶ್ಲೋಕಗಳೂ, ಜಗತಿ, ಛಂದಸ್ಸು, ಸಪ್ತದಶಷ್ಟೋಮ, ವೈರೂಪ, ಅತಿರಾತ್ರ ಹಾಗೂ ಉತ್ತರದ ಬಾಯಿಯಿಂದ ಏಕವಿಂಶ, ಅಪ್ತೋರ್ಯಮಾನ್, ಅನಿಷ್ಟುಭ್, ವಿರಾಜ ಛಂದಸ್ಸುಗಳು ಹಾಗೂ ಅಥರ್ವಣವೂ ಹುಟ್ಟಿದವು."

'ಭಾಗವತ ಪುರಾಣ'ವು ಹೀಗೆನ್ನುತ್ತದೆ:

"ಜಗತ್ತಿನ ಸೃಷ್ಟಿಯನ್ನು ಕುರಿತು ಧ್ಯಾನಸ್ಥನಾಗಿದ್ದ ಚತುರ್ಮುಖನಾದ ಸೃಷ್ಟಿಕರ್ತನಿಂದ ವೇದಗಳು

ಹುಟ್ಟಿದವು. ತನ್ನ ಪೂರ್ವದ ಹಾಗೂ ಇತರ ಮುಖಗಳಿಂದ ಅವನು ಋಕ್, ಯಜುಸ್, ಸಾಮನ್ ಹಾಗೂ ಅಥರ್ವಣವೆಂಬ ವೇದಗಳನ್ನೂ, ಯಜ್ಞ, ಪ್ರಾಯಶ್ಚಿತ್ತ, ಶ್ಲೋಕ, ಸ್ತೋತ್ರಗಳನ್ನೂ ಸೃಷ್ಟಿಸಿದನು.''

'ಮಾರ್ಕಂಡೇಯ ಪುರಾಣ' ಹೇಳುತ್ತದೆ:

'' ೧. ಅಂಡದಿಂದ ಮೇಲೆದ್ದ ಬ್ರಹ್ಮನ ಪೂರ್ವದ ಬಾಯಿಯಿಂದ ಋಕ್ ಶ್ಲೋಕಗಳು ಹೊರಬಿದ್ದವು. ೨. ಗುಲಾಬಿಯನ್ನು ಹೋಲುವ, ಹೊಳೆಯುವ, ಬೇರೆಯಿರುವಂತೆ ಕಂಡರೂ ಬೆರೆತಿರುವ, ರಜೋಗುಣವುಳ್ಳವು. ೩. ಅವನ ದಕ್ಷಿಣದ ಬಾಯಿಯಿಂದ ಚಿನ್ನದ ಬಣ್ಣದ ಬಿಡಿಬಿಡಿಯಾದ ಯಜುಸ್ ಶ್ಲೋಕಗಳು ಅಡೆತಡೆಯಿಲ್ಲದೆ ಹೊರಬಿದ್ದವು. ೪. ಪರಬ್ರಹ್ಮನ ಪಶ್ಚಿಮದ ಬಾಯಿಯಿಂದ ಸಾಮ ಶ್ಲೋಕಗಳು ಹಾಗೂ ಛಂದಸ್ಸುಗಳು ಹೊರಬಿದ್ದವು. ೫. ಮತ್ತು ೬. ಬ್ರಹ್ಮನ ಉತ್ತರ ಮುಖದಿಂದ ಕಪ್ಪು ದುಂಬಿಗಳಂಥ, ಕಾಡಿಗೆಯಂಥ, ಭಯಂಕರ ಒಮ್ಮೆ ಭಯಂಕರವಲ್ಲದ್ದೂ, ಸತ್ವ ಹಾಗೂ ಕತ್ತಲು ಸೌಂದರ್ಯ ಹಾಗೂ ಕೌರೂಪ್ಯಗಳೆರಡನ್ನೂ ಹೊಂದಿದ ಅಥರ್ವಣವು ಹೊರಬಿದ್ದಿತು. ೭. ಋಕ್ ಶ್ಲೋಕಗಳು ರಜೋಗುಣವನ್ನು, ಯಜುಸ್ ಸತ್ವವನ್ನು, ಸಾಮನ್ ತಮಸ್ಸನ್ನು, ಅಥರ್ವಣವು ಸತ್ವ ಹಾಗೂ ತಮೋಗುಣಗಳೆರಡನ್ನು ಹೊಂದಿವೆ.''

'ಹರಿವಂಶ'ವು ವೇದಗಳ ಸೃಷ್ಟಿಕರ್ತರನ್ನಾಗಿ ಬ್ರಹ್ಮ ಹಾಗೂ ಪ್ರಜಾಪತಿಗಳಿಬ್ಬರನ್ನೂ ಒಪ್ಪಿಕೊಳ್ಳುತ್ತದೆ:

''ಜಗತ್ತಿನ ವಿಮೋಚನೆಯನ್ನು ಕುರಿತು ಧ್ಯಾನಿಸುತ್ತಿದ್ದ ಬ್ರಹ್ಮನು ಚಂದ್ರಲೋಕದಿಂದ ಹುಟ್ಟಿದ ಜಾಜ್ವಲ್ಯಮಾನವಾದ ಪ್ರಕಾಶವಾಗಿ ಗಾಯತ್ರಿಯ ಕಣ್ಣುಗಳ ಮೂಲಕ ಅವಳ ಹೃದಯವನ್ನು ಹೊಕ್ಕನು. ಅವಳಿಂದ ನಾಲ್ಕು ಭಾಗಗಳುಳ್ಳ ಒಂದು ಗಂಡು ಶಿಶು ಜನಸಿತು. ಅದು ಬ್ರಹ್ಮನಷ್ಟು ತೇಜೋಮಯನಾಗಿಯೂ ಅಸ್ಪಷ್ಟವೂ ನಿತ್ಯವೂ ಅವಿನಾಶಿಯೂ ದೇಹೇಂದ್ರಿಯ ಗುಣ ರಹಿತವಾಗಿಯೂ ಪ್ರಕಾಶಮಾನವೂ ಚಂದ್ರನ ಕಿರಣಗಳಂತೆ ಪರಿಶುದ್ಧವೂ ತೇಜಸ್ವಿಯೂ ಅಕ್ಷರದೇಹಿಯೂ ಆಗಿತ್ತು. ಪರಮಾತ್ಮನು ಅದರ ಕಣ್ಣುಗಳಿಂದ 'ಋಗ್ವೇದ' ಮತ್ತು 'ಯಜುರ್ವೇದ'ಗಳನ್ನು, ನಾಲಿಗೆಯ ತುದಿಯಿಂದ 'ಸಾಮವೇದ'ವನ್ನೂ, ಶಿರದಿಂದ 'ಅಥರ್ವಣ ವೇದ'ವನ್ನು ಸೃಷ್ಟಿಸಿದನು. ಈ ವೇದಗಳು ಜನಿಸಿದ ತಕ್ಷಣ ತಮ್ಮ ಕ್ಷೇತ್ರವನ್ನು ಹುಡುಕಿಕೊಳ್ಳುತ್ತವೆ. ಆದ್ದರಿಂದಲೇ ಅವುಗಳಿಗೆ ವೇದಗಳ ಗುಣಗಳು ಬರುವುದು. ಏಕೆಂದರೆ ಅವುಗಳಿಗೆ ವಿಂದಂತಿ (ಆಶ್ರಯ) ಸಿಕ್ಕುತ್ತದೆ. ಅನಂತರ, ವೇದಗಳು ಪೂರ್ವದಲ್ಲಿದ್ದ ಹಾಗೂ ಬೌದ್ಧಿಕ ಗುಣಗಳುಳ್ಳ ಬ್ರಹ್ಮನನ್ನು (ಪವಿತ್ರ ಜ್ಞಾನವನ್ನು) ದಿವ್ಯರೂಪದ ಪುರುಷನನ್ನು ತ್ಯಜಿಸುತ್ತವೆ.''

ಇದೇ 'ಹರಿವಂಶ'ವು ಪ್ರಜಾಪತಿಯೇ ಮೂಲವೆಂಬುದನ್ನು ಒಪ್ಪಿಕೊಳ್ಳುತ್ತದೆ. ಪರಮಾತ್ಮನು ವಿಶ್ವವನ್ನು ಸೃಷ್ಟಿಸಲು ಇಚ್ಛೆಸಿದಾಗ, ಹಿರಣ್ಯಗರ್ಭ ಅಥವಾ ಪ್ರಜಾಪತಿ ತನ್ನ ಬಾಯಿಂದ 'ಓಂ' ಎಂಬ ಶಬ್ದವನ್ನು ಹೊರಡಿಸಿದನು. ಅಲ್ಲದೆ, ತನ್ನನ್ನೇ ಇಬ್ಭಾಗ ಮಾಡಿಕೊಳ್ಳಲು ಇಚ್ಛೆಸಿದನು. ಆದರೆ ಹೇಗೆ ಎಂಬುದು ಅವನಿಗೆ ತಿಳಿಯದಾಯಿತು. ಹರಿವಂಶವು ಮುಂದುವರಿದು ಹೀಗೆ ಹೇಳುತ್ತದೆ:–

''ಅವನು ಹೀಗೆ ಇಚ್ಛೆಸುತ್ತಿದ್ದಾಗ ಅವನ ಬಾಯಿಂದ ಹೊರಟ 'ಓಂ' ಶಬ್ದವು, ಭೂಮಿ, ಆಕಾಶ, ವಾಯುಗಳಲ್ಲಿ ಪ್ರತಿಧ್ವನಿಸಿತು. ದೇವರುಗಳ ದೇವನು 'ಓಂ' ಎಂಬ ಮಂತ್ರವನ್ನು ಪುನರುಚ್ಚರಿಸುತ್ತಿದ್ದಾಗ 'ವಷಟ್ಕಾರ'ವು ಅವನ ಹೃದಯದಿಂದ ಹೊರಬಿದ್ದಿತು.... ನಂತರ ಪವಿತ್ರವಾದ ವ್ಯಾಹೃತಿಗಳು (ಭೂಃ,

ಭುವಃ, ಸ್ವರ್) ಶಬ್ದಗಳ ರೂಪದಲ್ಲಿ ಭೂಮಿ, ವಾಯು, ಆಕಾಶಗಳಿಂದ ಸೃಷ್ಟಿಯಾದವು. ಆಗ ಅತಿಶ್ರೇಷ್ಠ ಛಂದಸ್ಸೂ, ಇಪ್ಪತ್ನಾಲ್ಕು ಮಾತ್ರೆಗಳುಳ್ಳ ದೇವಿ ಗಾಯತ್ರಿಯು ಸೃಷ್ಟಿಯಾದಳು. ತತ್ ಶಬ್ದದೊಂದಿಗೆ ಪ್ರಾರಂಭವಾಗುವ ದಿವ್ಯಮಂತ್ರದ ಬಗ್ಗೆ ಯೋಚಿಸಿ, ಈಶನು ಸಾವಿತ್ರಿ ಮಂತ್ರವನ್ನು ಸೃಜಿಸಿದನು. ನಂತರ ಅವನು ವೇದಗಳು, ಋಕ್, ಸಾಮನ್, ಅಥರ್ವಣ ಹಾಗೂ ಯಜುಸ್ ಮತ್ತು ಉಳಿದ ಪ್ರಾರ್ಥನೆಗಳು, ವಿಧಿವಿಧಾನಗಳನ್ನು ಸೃಷ್ಟಿಸಿದನು."

ವೇದಗಳ ಹುಟ್ಟನ್ನು ಕುರಿತು ಹನ್ನೊಂದು ಭಿನ್ನವಾದ ವಿವರಣೆಗಳನ್ನು ನಾವು ಇಲ್ಲಿಯವರೆಗೆ ನೋಡಿದ್ದೇವೆ.

೧. ಪುರುಷರನ್ನು ಬಲಿಯಾಗಿ ಸಲ್ಲಿಸಿದ್ದರಿಂದ
೨. ಸ್ಕಂಬನನ್ನು ಆಶ್ರಯಿಸಿ
೩. ಸ್ಕಂಬನ ಮೈಯ ಕತ್ತರಿಸಲ್ಪಟ್ಟ ಭಾಗಗಳಾಗಿ; ಅವನ ಉಚ್ಛ್ವಾಸ ನಿಶ್ವಾಸಗಳಾಗಿ; ಅವನ ಕೂದಲಾಗಿ ಹಾಗೂ ಅವನ ಬಾಯಿಯಾಗಿ
೪. ಇಂದ್ರನಿಂದ
೫. ಕಾಲನಿಂದ
೬. ಅಗ್ನಿ, ವಾಯು ಹಾಗೂ ಸೂರ್ಯರಿಂದ
೭. ಪ್ರಜಾಪತಿ ಹಾಗೂ ಜಲದಿಂದ
೮. ಬ್ರಹ್ಮನ ಉಸಿರಿನಿಂದ
೯. ಮಾನಸ ಸಮುದ್ರವನ್ನು ದೇವತೆಗಳು ಅಗೆದು ತೆಗೆದದ್ದರಿಂದ
೧೦. ಪ್ರಜಾಪತಿಯ ಗಡ್ಡದ ಕೂದಲಿನಿಂದ
೧೧. ವಾಕ್‌ಳ ಮಕ್ಕಳಾಗಿ

ಒಂದು ಸರಳ ಪ್ರಶ್ನೆಗೆ ಇಷ್ಟೊಂದು ಬಗೆಯ ಉತ್ತರಗಳಿರುವುದೇ ವೇದಗಳ ಹುಟ್ಟನ್ನು ಒಗಟಾಗಿಸುತ್ತದೆ. ಈ ಉತ್ತರಗಳನ್ನು ಕೊಟ್ಟವರೆಲ್ಲ ಒಂದೇ ವೈದಿಕ ಚಿಂತನಾಕ್ರಮಕ್ಕೆ ಸೇರಿದ ಬ್ರಾಹ್ಮಣರು. ಸನಾತನ ಧರ್ಮ ವಿದ್ಯೆಯ ಪೋಷಕರು ಅವರೇ. ಹಾಗಾದರೆ ಇಂಥ ಜ್ಞಾನಿಗಳ ಸಮೂಹ ಸರಳವಾದೊಂದು ಪ್ರಶ್ನೆಗೆ ಇಷ್ಟೊಂದು ಗೊಂದಲಮಯ ಉತ್ತರಗಳನ್ನು ಸೃಷ್ಟಿಸಿದ್ದೇಕೆ?

## II

ವೇದಗಳ ಕರ್ತೃ ಯಾರು? ಹಿಂದೂ ನಂಬಿಕೆಯ ಪ್ರಕಾರ ವೇದಗಳು ಅತಿಮಾನುಷ ಸೃಷ್ಟಿಗಳು; ವೇದಗಳು 'ಅಪೌರುಷೇಯ'ವಾಧವು; ಅಂದರೆ, ಮಾನವತೀತ ಶಕ್ತಿಯಿಂದ ಸೃಷ್ಟಿ ಯಾದಂಥವು.

ಈ ಸಿದ್ಧಾಂತಕ್ಕೆ ಯಾವ ಆಧಾರವಿದೆ? ಪ್ರಾಚೀನ ಸಂಸ್ಕೃತ ಸಾಹಿತ್ಯದಲ್ಲಿ ಅನುಕ್ರಮಣಿಕೆಗಳೆಂಬ ಒಂದು ವರ್ಗವಿದೆ. ವೈದಿಕ ಸಾಹಿತ್ಯದ ಅನುಸೂಚಿಗಳಿವು. ಪ್ರತಿ ವೇದಕ್ಕೂ ಒಂದು ಅಥವಾ ಹೆಚ್ಚು ಅನುಕ್ರಮಣಿಕೆಗಳಿರುತ್ತವೆ. 'ಋಗ್ವೇದ'ಕ್ಕೆ ಏಳು ಅನುಕ್ರಮಣಿಕೆಗಳಿವೆ. ಶೌನಕನಿಂದ ಐದು ಮತ್ತು ಕಾತ್ಯಾಯನ ಹಾಗೂ ಅಜ್ಞಾತ ಕರ್ತೃವಿನಿಂದ ತಲಾ ಒಂದು. 'ಯಜುರ್ವೇದ'ಕ್ಕೆ ಆತ್ರೇಯಿ, ಚರಾಯನೀಯ

ಹಾಗೂ ಮಧ್ಯಂದಿನ ಎಂಬ ಮೂರು, ಹಾಗೂ 'ಸಾಮವೇದ'ಕ್ಕೆ ಆರ್ಷೇಯ ಹಾಗೂ ಪರಿಶಿಷ್ಟಾ ಎಂಬ ಎರಡು ಅನುಕ್ರಮಣಿಕೆಗಳಿವೆ. 'ಅಥರ್ವಣ ವೇದ'ದ ಒಂದು ಅನುಕ್ರಮಣಿಕೆ ದೊರೆತಿದ್ದು ಬೃಹತ್ ಸರ್ವಾನುಕ್ರಮಣಿಕೆ ಎಂದು ಇದನ್ನು ಕರೆಯಲಾಗಿದೆ.

ಮ್ಯಾಕ್ಸ್‌ಮುಲ್ಲರ್ ಅವರ ಪ್ರಕಾರ 'ಋಗ್ವೇದ'ಕ್ಕೆ ಕಾತ್ಯಾಯನ ಸರ್ವಾನುಕ್ರಮಣಿಕೆಯೇ ಅತ್ಯಂತ ಸೂಕ್ತವಾದದ್ದು. ಈ ಕೆಳಕಂಡ ವಿಂಗಡಣೆಯೇ ಅದರ ವೈಶಿಷ್ಟ್ಯಗಳು : ೧. ಪ್ರತಿ ಶ್ಲೋಕಗಳ ಮೊದಲ ಪದಗಳು, ೨. ಪದ್ಯಗಳ ಸಂಖ್ಯೆ, ೩. ಅದನ್ನು ರಚಿಸಿದ ಋಷಿ, ೪. ದೇವತೆಗಳ ಹೆಸರು ಮತ್ತು ೫. ಶ್ಲೋಕದ ಪ್ರತಿ ಛಂದಸ್ಸು ಇವುಗಳನ್ನು ಪಟ್ಟಿ ಮಾಡಲಾಗಿದೆ. ಸರ್ವಾನುಕ್ರಮಣಿಕೆಯಿಂದ ತಿಳಿದುಬರುವ ಅಂಶವೆಂದರೆ ಋಗ್ವೇದವನ್ನು ರೂಪಿಸಿರುವ ಶ್ಲೋಕಗಳ ಕರ್ತೃಗಳ ಋಷಿಗಳು. ಆದ್ದರಿಂದ ಅನುಕ್ರಮಣಿಕೆಯಾಧಾರದ ಮೇಲೆ ಹೇಳುವುದಾದರೆ ಋಗ್ವೇದ ಮಾನವ ನಿರ್ಮಿತವಾದದ್ದು. ಇತರ ವೇದಗಳ ಬಗ್ಗೆಯೂ ಇಂಥದೇ ನಿರ್ಧಾರಕ್ಕೆ ಬರಬಹುದು.

ಋಗ್ವೇದದ ಹಲವು ಪಂಕ್ತಿಗಳಲ್ಲಿ ಆ ಶ್ಲೋಕಗಳ ಕರ್ತೃ ತಾವೇ ಎಂದು ಋಷಿಗಳೇ ಹೇಳಿಕೊಳ್ಳುತ್ತಾರೆ. ಅಂಥ ಕೆಲವು ಪಂಕ್ತಿಗಳು ಇಲ್ಲಿವೆ:

"ಇದು ಕಣ್ವರು ಸಲ್ಲಿಸುವ ಪ್ರಾರ್ಥನೆ; ಚಿತ್ತವಿಟ್ಟು ಆಲಿಸು."

"ಓ ಅಶ್ವನಿಯಂತ್ರಕನಾದ ಇಂದ್ರನೇ, ಗೌತಮರು ನಿನಗಾಗಿ ರಚಿಸಿದ ಸ್ತೋತ್ರಗಳನ್ನು ಆಲಿಸು."

"ಈ ಸ್ತೋತ್ರ ನಿನಗಾಗಿಯೇ ಮಾನಸರಿಂದ ರಚಿತವಾದದ್ದು, ಓ ಅಶ್ವಿನಿಯೇ."

"ಅಶ್ವಿನಿ ದೇವತೆಗಳೇ, ಈ ಉಜ್ವಲ ಸ್ತೋತ್ರಗಳನ್ನು ಗೃತ್ಸಮದರು ನಿಮಗಾಗಿ ರಚಿಸಿದರು."

"ಇಂದ್ರನೇ, ಸ್ವರ್ಗ ಸಂಪಾದನೆಗಾಗಿ ಕೌಶಿಕರು ಸಲ್ಲಿಸಿದ ಸ್ತೋತ್ರವಿದು."

"ಇದು ಗೌತಮ ವಂಶಜರಾದ ನೋಧರು ಇಂದ್ರನಿಗಾಗಿ ರೂಪಿಸಿದ ಸ್ತೋತ್ರ."

"ಅಗ್ನಿಯೇ ಈ ಸ್ತೋತ್ರಗಳು ನಿನ್ನ ಗೋ, ಅಶ್ವಗಳ ಸಂಪತ್ತನ್ನು ಸ್ತುತಿಸುತ್ತದೆ."

"ಪವಿತ್ರ ಸತ್ಯದಿಂದ ಜನಿಸಿದ ಹಾಗೂ ಏಳು ಖಂಡಗಳನ್ನುಳ್ಳ ಈ ಪ್ರಾರ್ಥನೆಯನ್ನು ನನ್ನ ತಂದೆಯು ಸೃಜಿಸಿದ್ದಾನೆ. ಇಂದ್ರನನ್ನು ಸ್ತುತಿಸುವ ಹಾಗೂ ಎಲ್ಲರಿಗೂ ಮಿತ್ರನಾದ ಅಯಸ್ಯ ನಾಲ್ಕನೆಯ ಸ್ತುತಿಯನ್ನು ರಚಿಸಿದ್ದಾನೆ."

"ರಾಹುಗಣಗಳಾದ ನಾವು ಅಗ್ನಿಗಾಗಿ ಈ ಸ್ತೋತ್ರಗಳನ್ನು ಅರ್ಪಿಸಿದ್ದೇವೆ."

"ಋಷಿ, ಅರ್ಚಕ, ಯಾಜಿ, ಮಂತ್ರಗಳನ್ನು ಪಠಿಸುವವನು ಎಂದು ಕರೆಯಲಾಗುವವನು ದಿವ್ಯವಾದ ಅಗ್ನಿಯ ಮೂರು ಅಂಗಗಳನ್ನು ಬಲ್ಲವನು" ಅವನು ದಾನಿಗಳಲ್ಲೇ ಪ್ರಮುಖನು.

ಅನುಕ್ರಮಣಿಕೆಗಳ ಈ ಆಧಾರದ ಜೊತೆಗೆ ಇನ್ನೊಂದು ಆಧಾರ ಕೂಡ ವೇದಗಳು ಅಪೌರುಷೇಯವಲ್ಲವೆಂದು ಹೇಳುತ್ತದೆ. ಸ್ವಯಂ ಋಷಿಗಳೇ ವೇದಗಳು ಚಾರಿತ್ರಿಕ ಸೃಷ್ಟಿ ಎಂದು ಕರೆದಿದ್ದಾರೆ. ಋಗ್ವೇದದ ಸ್ತೋತ್ರಗಳು ಹೊಸ ಹಾಗೂ ಪ್ರಾಚೀನ ಋಷಿಗಳ ನಡುವಣ ಭೇದವನ್ನು ಹೇಳುತ್ತವೆ. ಅಂಥ ಕೆಲವು ಇಲ್ಲಿವೆ:

"ಪ್ರಾಚೀನ ಹಾಗೂ ಇಂದಿನ ಋಷಿಗಳಿಬ್ಬರಿಂದಲೂ ಪೂಜಿತವಾದ ಅಗ್ನಿಯು ದೇವರನ್ನು ಇಲ್ಲಿಗೆ ಕರೆತರುತ್ತಾನೆ."

"ನಿನ್ನನ್ನು ಮಾಂತ್ರಿಕ ವಿದ್ಯೆಗೆ ಪ್ರಚೋದಿಸಿದ ಪ್ರಾಚೀನ ಋಷಿಗಳು."

"ಈ ಹೊಸ ಕಾಲದ ಋಷಿಯ ಪ್ರಾರ್ಥನೆಯನ್ನು ಕೇಳು."

"ಓ, ಇಂದ್ರನೆ, ಬಾಯಾರಿದವರಿಗೆ ನೀರು ಹೇಗೋ ಹಾಗೆ, ನಿನ್ನ ಪುರಾತನ ಭಕ್ತರಿಗೆ ನೀನು ಆನಂದದಾಯಕವಾಗಿದ್ದೀಯಾ. ನಾವು ಈ ಸ್ತೋತ್ರದಿಂದ ನಿನ್ನನ್ನು ಮತ್ತೆ ಮತ್ತೆ ಪೂಜಿಸುತ್ತೇವೆ."

"ಓ ಮಾಧವನ್, ಪುರಾತನವಾಗಲಿ, ಅನಂತರದವರಾಗಲಿ, ಆಧುನಿಕರಾಗಲಿ, ಯಾರೂ ನಿನ್ನ ಶಕ್ತಿಯನ್ನು ಪಡೆದಿಲ್ಲ."

"ಪುರಾತನ ಋಷಿಗಳು, ಸಂತರು, ಬೃಹಸ್ಪತಿಯೆದುರು ತಮ್ಮ ಮಂತ್ರಗಳನ್ನು ಸಲ್ಲಿಸಿದರು."

"ಇಂದ್ರನ ಪೂಜಕರಾದ ನಮಗೆ ದೋಷದಿಂದ ಅಪಾಯಗಳೊದಗದಿರಲಿ."

"ಓ ಸರ್ವಶಕ್ತ ದೇವನೇ, ಪ್ರಾಚೀನ ಯುಗದ, ಮಧ್ಯಯುಗದ ಮಾವನರೆಲ್ಲ ನಿನ್ನ ಪ್ರೀತಿಪಾತ್ರರು. ಹಾಗೆಯೇ ಈ ಕಾಲದ ನಮ್ಮನ್ನೂ ಹರಸು."

"ಇಂದ್ರನಿಗೆ ನಮ್ಮ ಪೂರ್ವಜರಾದ ಏಳು ಜನ ನವಗತ ಋಷಿಗಳು ಅನ್ನವನ್ನು ಬಯಸಿ ಈ ಮಂತ್ರಗಳನ್ನು ಸಲ್ಲಿಸಿದರು."

ಋಗ್ವೇದವನ್ನು ಸೂಕ್ಷ್ಮವಾಗಿ ವಿಶ್ಲೇಷಿಸಿದರೆ ಹಳೆಯ ಹಾಗೂ ಹೊಸ ಸ್ತೋತ್ರಗಳ ವಿಂಗಡಣೆಗಳು ಅಲ್ಲಿ ಕಾಣುತ್ತೇವೆ. ಅವುಗಳಲ್ಲಿ ಕೆಲವು;

"ನಮ್ಮೀ ಹೊಸ ಸ್ತೋತ್ರದಿಂದ ಅಲಂಕರಿಸಲ್ಪಡುವ ನೀನು ಅನ್ನ, ಐಶ್ವರ್ಯ ಹಾಗೂ ಸಂತಾನವನ್ನು ದಯಪಾಲಿಸು."

"ಅಗ್ನಿಯೇ, ದೇವತೆಗಳೆದುರು ನಮ್ಮೀ ಹೊಸ ಸ್ತೋತ್ರವನ್ನು ನಿವೇದಿಸು."

"ಪ್ರಬಲ ಕ್ರಿಯಾಶಾಲಿಯೇ, ಪುರಗಳ ಸಂಹಾರಕನೇ ನಮ್ಮೀ ಹೊಸ ಸ್ತೋತ್ರಗಳಿಂದ ಸಂತುಷ್ಟಗೊಂಡು ಶಕ್ತಿದಾಯಕ ಆಶೀರ್ವಾದಗಳನ್ನು ಮಾಡು."

"ಅಗ್ನಿಯೇ, ನಿನಗಾಗಿ ರಚಿತವಾದ ಹೊಸದಾದ, ಶಕ್ತಿಯುತವಾದ ಸ್ತೋತ್ರವನ್ನು ಅರ್ಪಿಸುತ್ತೇನೆ."

"ಸರ್ವಶಕ್ತನಿಗಾಗಿ ಇದೀಗ ಮನಸ್ಸಿನಿಂದ ಚಿಮ್ಮಿ ಬರುತ್ತಿರುವ ಹೊಸ ಸ್ತೋತ್ರವನ್ನು ಅರ್ಪಿಸುವೆ."

"ಬಹುಸ್ತುತ್ಯನಾದ ವೀರನೇ, ಭಾರಿ ಶಬ್ದದ ಗುಡುಗುಗಳನ್ನುಂಟು ಮಾಡುವವನೇ ಈ ಹೊಸ ಸ್ತೋತ್ರಗಳು, ಹೊಸ ಪ್ರಾರ್ಥನೆಗಳು ನಿನ್ನನ್ನು ಸಂಪ್ರೀತಗೊಳಿಸಲಿ."

"ಪೂರ್ವಜರೇ, ನಿಮಗಾಗಿ ಈ ಹೊಸ ಸ್ತೋತ್ರ."

"ಓ ಸೋಭರಿಯೇ, ಹಾಡು, ಈ ಹೊಸ ಸ್ತೋತ್ರವನ್ನು ಸರ್ವಶಕ್ತ ದೇವತೆಗಳಿಗಾಗಿ."

"ವೃತ್ತ ಸಂಹಾರಕನೇ ಗುಡುಗಿನ ಅಧಿದೇವತೆ ಇಂದ್ರನೇ, ಹಿಂದೆಂದೂ ಹುಟ್ಟಿರದ ನಾನು ಅರ್ಪಿಸುತ್ತಿದ್ದೇನೆ. ಅದನ್ನು ಅವನು ಆಲಿಸಲಿ."

"ಧನ, ಪಶುಸಂಪತ್ತುಗಳನ್ನು ಕರುಣಿಸಲೆಂದು ಈ ಸ್ತೋತ್ರಗಳನ್ನು ಸಲ್ಲಿಸುವೆವು."

ಇಷ್ಟೆಲ್ಲಾ ಆಧಾರಗಳು ವೇದಗಳು ಮಾನವನ ಸೃಷ್ಟಿಯೆಂಬುದನ್ನು ಹೇಳುವಾಗ ವೇದಗಳು ಅತಿಮಾನುಷ ಸೃಷ್ಟಿಗಳೆಂದು ಬ್ರಾಹ್ಮಣರು ಕೈಗೊಂಡ ಪ್ರಚಾರ ಇಂದಿಗೂ ಒಂದು ಒಗಟಾಗಿ ಉಳಿಯುತ್ತದೆ. ಹೀಗೆ ಬ್ರಾಹ್ಮಣರು ಪ್ರಚಾರ ಮಾಡಲು ಇದ್ದ ಕಾರಣಗಳೇನು?

## III

ವೇದಗಳು ಪರಮ ಸತ್ಯವೆಂಬ ಅಧಿಕೃತೆಯೂ ಹಾಗೂ ವೇದಗಳಿಗೆ ಪರಮಾಧಿಕಾರವೂ ಹೇಗೆ ಪ್ರಾಪ್ತವಾದವು? ಈ ಕುರಿತು ಹಿಂದೂಗಳಲ್ಲಿ ಎರಡು ನಂಬಿಕೆಗಳಿವೆ. ಮೊದಲನೆಯದೆಂದರೆ

ವೇದಗಳು ಅಮರ ಹಾಗೂ ನಿರಂತರ ಎಂಬುದು. ಈ ನಂಬಿಕೆಗೆ ಆಧಾರವೇನು? ಒಂದು ವೇಳೆ ವೇದಗಳು ಜಗತ್ತಿನ ಅತ್ಯಂತ ಪ್ರಾಚೀನ ಕೃತಿಗಳೆಂದು ಹಿಂದೂಗಳು ನಂಬಿದರೆ ಅದು ಬೇರೆ ಮಾತು. ಆದರೆ ಅವು ನಿರಂತರವಾದವು ಹಾಗೂ ಅವು ಕಾಲಘಟ್ಟದಲ್ಲಿ ಸೃಷ್ಟಿಯಾದವಲ್ಲ ಎಂಬ ವಾದಕ್ಕೆ ಆಧಾರವಿಲ್ಲ. ಋಷಿಗಳು ವೇದಗಳ ಕರ್ತೃಗಳು ಎಂದಾದ ಮೇಲೆ, ಅವು ಒಂದು ಕಾಲಘಟ್ಟದಲ್ಲಿ ಆರಂಭವಾದಂಥದಲ್ಲ ಎಂಬ ವಾದವೇ ಅಸಂಗತ.

ಆದರೆ ಈ ತತ್ವವನ್ನು ಕಾಯ್ದಿಟ್ಟುಕೊಳ್ಳಲು ಅಸಂಗತವಾದ ವಾದಗಳ ಸರಣಿಯೇ ಇದೆ.

ಮೊದಲನೆಯದಾಗಿ, ವೇದಗಳು ಕಾಲಾತೀತವಾದವು ಎಂಬ ನಂಬಿಕೆಯು, ವೇದಗಳು ದೇವರಿಂದ ಸೃಷ್ಟಿಯಾದವು ಎಂಬ ತಳಹದಿಯ ಮೇಲೆ ನಿಂತದ್ದಲ್ಲ ಎಂಬುದನ್ನು ನಾವು ಗಮನಿಸಬೇಕು. ನೈಯಾಯಿಕರೆಂಬ ತತ್ವಜ್ಞಾನಿಗಳ ನಂಬಿಕೆಯಿದು. ವಿಚಿತ್ರವೆಂದರೆ, 'ಪೂರ್ವಮೀಮಾಂಸೆ'ಯ ಕರ್ತೃ ಜೈಮಿನಿ (ವೇದಗಳನ್ನು ಕುರಿತ ಜೈಮಿನಿಯ ನಿಲುವುಗಳನ್ನು ಹಿಂದೂಗಳು ತತ್ವಗಳೆಂಬಂತೆ ನಂಬಿ ಅನುಸರಿಸುತ್ತಾರೆ) ಈ ವಾದದ ಭೂಮಿಕೆಯನ್ನು ಒಪ್ಪಲು ಸಿದ್ಧವಿರಲಿಲ್ಲ. ಕೆಳಗೆ ಕೊಟ್ಟಿರುವ ಮೀಮಾಂಸಕರ ಸಂಭಾಷಣೆ ಈ ದೃಷ್ಟಿಯಿಂದ ಅತ್ಯಂತ ಗಮನಾರ್ಹವಾದ್ದು:

"ಹಾಗಾದರೆ, (ಮೀಮಾಂಸಕ ಪ್ರಶ್ನಿಸುತ್ತಾನೆ) ಅಶರೀರಿಯಾದ, ಹಾಗೂ ನಾಲಿಗೆಯಾಗಲೀ, ಮಾತಾಡುವ ಅಂಗಗಳಾಗಲೀ ಇಲ್ಲದೆ ಪರಮೇಶ್ವನು ವೇದಗಳನ್ನು ಉಚ್ಚರಿಸುವುದು ಹೇಗೆ ಸಾಧ್ಯ?" ಇದಕ್ಕೆ ನೈಯಾಯಿಕರ ಉತ್ತರ: "ಈ ಆಕ್ಷೇಪಣೆ ಸಿಂಧುವಾದುದಲ್ಲ. ಏಕೆಂದರೆ ಪರಮೇಶ್ವರನು ಮೂಲತಃ ಅಶರೀರಯಾದರೂ ಆಟಕ್ಕಾಗಿ ದೇಹವನ್ನು ತಳೆದು, ತನಗೆ ಬೇಕಾದಾಗ ಬೇಕಾದಂಥ ರೂಪ ಪಡೆದು ತನ್ನ ಭಕ್ತರಿಗೆ ಕರುಣೆ ತೋರಬಲ್ಲ. ಆದ್ದರಿಂದಲೇ ವೇದಗಳಿಗೆ ಕರ್ತೃವಿಲ್ಲವೆಂದು ವಾದಿಸುವುದು ಅಸಂಬದ್ಧವಾದದ್ದು."

ಆಗ ಮೀಮಾಂಸಕನು ಹೇಳುತ್ತಾನೆ: "ಈ ಪ್ರಶ್ನೆಗಳೆಲ್ಲವನ್ನೂ ಇನ್ನು ಮುಂದೆ ಬಗೆಹರಿಸೋಣ. ಮೊದಲು 'ಪೌರುಷೇಯತ್ವ' (ಒಬ್ಬ ಕರ್ತೃವಿನಿಂದ ಹುಟ್ಟಿದ್ದು) ಎಂದರೇನೆಂದು ಚರ್ಚಿಸೋಣ. ನಮ್ಮಂಥವರು ಪ್ರತಿದಿನ ವೇದಗಳನ್ನು ಪಠಿಸಿ ವ್ಯಕ್ತಗೊಳಿಸುವಂತೆ, ಪ್ರಚುರಗೊಳಿಸುವಂತೆ, ಪುರುಷನೊಬ್ಬನು ಅವನ್ನು ವ್ಯಕ್ತಪಡಿಸಿದನೆಂದು ಇದರ ಅರ್ಥವೇ? ಅಥವಾ ನಾವು ಗ್ರಂಥಗಳನ್ನು ರಚಿಸಿದಂತೆ ಇದೂ ಕೂಡ ವಿವಿಧ ಮೂಲಗಳಿಂದ ಪಡೆದ ಜ್ಞಾನವನ್ನು ಅದರ ಪ್ರಸಾರದ ಉದ್ದೇಶದಿಂದ ವ್ಯವಸ್ಥಿತವಾಗಿ ಒಟ್ಟುಗೂಡಿಸುವ ಕ್ರಮವೇ? ಪೌರುಷೇಯತ್ವ ಎಂಬುದನ್ನು ಮೊದಲ ಅರ್ಥದಲ್ಲಿ ಬಳಸಿದ್ದರೆ ನಮ್ಮದೇನೂ ಅಭ್ಯಂತರವಿಲ್ಲ. ಆದರೆ, ಎರಡನೆಯ ಅರ್ಥದಲ್ಲಿ ಬಳಸಿದಾಗ ಕೆಲವು ಪ್ರಶ್ನೆಗಳು ಹುಟ್ಟುತ್ತವೆ: ೧. ವೇದಗಳು ಕಲ್ಪನೆ ಅಥವಾ ತರ್ಕದಿಂದ ಹುಟ್ಟಿದ್ದರಿಂದಾಗಿ ಪರಮಸತ್ಯವೆಂಬ ಅಧಿಕಾರ ಪಡೆದುಕೊಳ್ಳುತ್ತವೆಯೇ ಅಥವಾ ೨. ಅತಿಮಾನುಷ ಸಂದೇಶಗಳ ಆಧಾರದಿಂದ ಹುಟ್ಟಿದ್ದರಿಂದಾಗಿ ಈ ಪರಮಾಧಿಕಾರವನ್ನು ಪಡೆಯುತ್ತವೆಯೇ? ಇವೆರಡು ವಾದಗಳಲ್ಲಿ ವೇದಗಳು ಕಲ್ಪನೆಯಿಂದ ಹುಟ್ಟಿದ್ದರಿಂದ ಪರಮಾಧಿಕಾರವನ್ನು ಪಡೆಯುತ್ತವೆಂಬ ವಾದ ಅಸಮಂಜಸವಾಗಿ ತೋರುತ್ತದೆ. ಏಕೆಂದರೆ ಇದೇ ವಾದವನ್ನು ಪರಮ ಸತ್ಯವೆಂಬ ಅಧಿಕಾರ ಮುದ್ರೆಯನ್ನೇನೂ ಪಡೆಯದೆ, ಆದರೆ ಕಲ್ಪನೆಯಿಂದಲೇ ಹುಟ್ಟಿದ 'ಮಾಲತೀಮಾಧವ'ದಂಥ ಕಾವ್ಯಕ್ಕೆ ಅಥವಾ ಇನ್ನಾವುದೇ ಧಾರ್ಮಿಕ ಉದ್ದೇಶವಿಲ್ಲದ ಕಾವ್ಯಕ್ಕೆ ಅನ್ವಯಿಸಿದರೆ ಈ ವಾದ ಕುಸಿದುಬೀಳುತ್ತದೆ."

"ಇದೇ ಸಂದರ್ಭದಲ್ಲಿ 'ವೇದಗಳು ಹೇಳುವ ಮಾತು ಇನ್ನಾವುದೇ ಅಧಿಕಾರಯುತವಾದ ಗ್ರಂಥಗಳಿಗಿಂತ ವಿಭಿನ್ನವಾದದ್ದು ಹಾಗೂ ಹೆಚ್ಚು ಅಧಿಕಾರವುಳ್ಳದ್ದು' ಎಂಬ ವಿವರಣೆ ಕೂಡ ತಾತ್ವಿಕನಿಗೆ ಸಮಾಧಾನ ನೀಡದು. ಏಕೆಂದರೆ 'ವೇದವಾಕ್ಯವು ಇನ್ನಾವುದೇ ಆಧಾರಗಳಿಂದಲೂ ಸಿದ್ಧವಾಗದ ಅಂಶಗಳನ್ನು ಸಿದ್ಧಮಾಡಿ ತೋರಿಸುತ್ತದೆ' ಎನ್ನುತ್ತಾರೆ. ಈಗ ವೇದವಾಕ್ಯವು ಉಳಿದೆಲ್ಲ ಆಧಾರಗಳು ಸಿದ್ಧಮಾಡುವುದನ್ನೇ ತಾನೂ ಸಿದ್ಧಮಾಡುತ್ತದೆಂದು ತೋರಿಸುತ್ತೇವೆಂದು ಇಟ್ಟುಕೊಳ್ಳಿ. ಆಗ ಮೇಲೆ ಹೇಳಿದ ವೇದಗಳ ಅನನ್ಯತೆಯ ಕುರಿತ ವಾದವು ಮಾನವನೊಬ್ಬ ತನ್ನ ತಾಯಿ ಬಂಜೆಯೆಂದು ಹೇಳುವಂಥ ವಿರೋಧಭಾಸದ ವಾದವಾಗಿಯೇ ಕಾಣುತ್ತದೆ. ಅಂಥ ಮನುಷ್ಯನೊಬ್ಬ ಹುಟ್ಟಿದನೆಂದಿಟ್ಟುಕೊಂಡರೆ ಆತ ತನ್ನ ಇಂದ್ರಿಯಗಳಿಗೆ ಅಗೋಚರವಾಧ ವಸ್ತುವನ್ನು, ಕಾಲ, ದೇಶ, ಪ್ರಕೃತಿಗಳಲ್ಲಿ ತನ್ನಿಂದ ಬೇರ್ಪಟ್ಟ ಪದಾರ್ಥವನ್ನು ಯಾವುದೇ ಸಾಧನದ ಸಹಾಯವಿಲ್ಲದೇ ನೋಡಬಲ್ಲನೆಂದು ಒಪ್ಪಿಕೊಳ್ಳಬೇಕಾಗುತ್ತದೆ. ಮನುಷ್ಯರು ಪರಿಕಲ್ಪನೆಗಳನ್ನು ಹುಟ್ಟುಹಾಕುವುದೇ ತಾವು ಕಂಡದ್ದರ ಆಧಾರದ ಮೇಲೆ. ಅದರ ಮೇಲಿನ ವಾದವನ್ನು ಒಪ್ಪಿಕೊಂಡರೆ, ಮನುಷ್ಯನ ಕಣ್ಣು ಮತ್ತು ಇತರ ಇಂದ್ರಿಯಗಳು ಮಾತ್ರವೇ ಅಂಥ ಜ್ಞಾನವನ್ನು ಸೃಷ್ಟಿಸಬಲ್ಲ ಶಕ್ತಿಯನ್ನು ಪಡೆಯಬಲ್ಲವೆಂಬ ಮಾತನ್ನು ಒಪ್ಪಿಕೊಳ್ಳುವಂತಿಲ್ಲ. ವೇದಗಳು ಸರ್ವಜ್ಞನಾದ ಕರ್ತೃವಿನಿಂದ ಹುಟ್ಟಿದವೆಂಬ ವಾದವನ್ನು ನಿರಾಕರಿಸುತ್ತಾ ಗುರು ಪ್ರಭಾಕರರು ಹೇಳಿದ್ದು ಇದನ್ನೇ; ಯಾವುದೇ ಪದಾರ್ಥವನ್ನು ಕರಾರುವಕ್ಕಾದ ದೃಷ್ಟಿಯಿಟ್ಟು (ಕಣ್ಣಿನ ಮೂಲಕ) ನೋಡುವಾಗ ಅಂಥ ದೃಷ್ಟಿಯು ಅತ್ಯಂತ ದೂರದಲ್ಲಿದ್ದುದನ್ನು ಅತ್ಯಂತ ಸೂಕ್ಷ್ಮವಾದುದನ್ನು ಕಾಣಬಲ್ಲದು. ಆದರೆ, ಯಾವ ಇಂದ್ರಿಯವೂ ತನ್ನ ಗುರಿಯನ್ನು ಮೀರಿ ಹೋಗಲಾರದು. ಉದಾಹರಣೆಗೆ, ಕಿವಿಯೆಂದೂ ರೂಪ ಅಥವಾ ಆಕಾರವನ್ನು ಅರಿಯಲಾರದು. ಆದ್ದರಿಂದ ಅಶರೀರಯಾದ ದೇವರು ಶರೀರವನ್ನು ತಳೆದು ನೀಡಿದ ಅತಿಮಾನುಷ ಸಂದೇಶದಿಂದ ವೇದವು ಹುಟ್ಟಿದೆಯೆಂಬ ವಾದವನ್ನು ಮುಂದೊಡ್ಡಿ ವೇದಕ್ಕೆ ಪರಮಸತ್ಯವೆಂಬ ಅಧಿಕಾರ ಮುದ್ರೆಯನ್ನು ನೀಡುವ ಪ್ರಶ್ನೆಯೇ ಹುಟ್ಟುವುದಿಲ್ಲ."

ಹಾಗಾದರೆ ವೇದಗಳ ಕಾಲಾತೀತತೆಯ ಬಗ್ಗೆ ಇರುವ ನಂಬಿಕೆಗೆ ಆಧಾರವೇನು? ಈ ಹಿನ್ನೆಲೆಯಲ್ಲಿ ಜೈಮಿನಿಯ 'ಪೂರ್ವಮೀಮಾಂಸೆ'ಯ ಭಾಗವೊಂದನ್ನು ನೋಡೋಣ:

"ಮುಂದಿನ ಸೂತ್ರದಲ್ಲಿ ಪದ ಮತ್ತು ಅದರ ಅರ್ಥದ ಸಂಬಂಧವು ಶಾಶ್ವತವಾದುದೆಂದು ಸಾರಲಾಗಿದೆ. ಈ ಸಂಬಂಧದ ಶಾಶ್ವತತೆಯು ಪದದ ಅಥವಾ ಶಬ್ದದ ಶಾಶ್ವತತೆಯನ್ನು ಅವಲಂಬಿಸಿದೆ ಯೆಂದು ಸಿದ್ಧಮಾಡಲು ಅವನು ಶಬ್ದವು ಶಾಶ್ವತವಲ್ಲ ಎನ್ನುವವರ ಪ್ರಶ್ನೆಯನ್ನು ಮೊದಲು ಕೈಗೆತ್ತಿಕೊಳ್ಳುತ್ತಾನೆ."

"ಕೆಲವರು, ಉದಾಹರಣೆಗೆ ನ್ಯಾಯತತ್ತ್ವದ ಅನುಯಾಯಿಗಳು, ಶಬ್ದವು ಒಂದು ಉತ್ಪನ್ನ ವಾದ್ದರಿಂದ ಹಾಗೂ ಒಂದು ನಿರ್ದಿಷ್ಟ ಕ್ರಿಯೆಯ ಪ್ರತಿಫಲವಾದ್ದರಿಂದ ಅದು ನಿತ್ಯವಾದದ್ದಲ್ಲ ಎನ್ನುತ್ತಾರೆ."

"ಅದು ನಿತ್ಯವಾದದ್ದಲ್ಲ ಎನ್ನಲು ಕಾರಣ ಅದರ ಕ್ಷಣಿಕತೆ, ಅಂದರೆ, ಒಂದು ಕ್ಷಣದ ನಂತರ ಅದು ಕಾಣುವುದಿಲ್ಲ."

"ಇದಕ್ಕೆ ಇನ್ನೊಂದು ಕಾರಣ ಶಬ್ದವನ್ನು ಉಂಟುಮಾಡುವ ಕುರಿತು ನಾವು ಹೇಳುವ ಮಾತು......"

"ಶಬ್ದಗಳು ಮೂಲ ರೂಪ ಹಾಗೂ ಪರಿಷ್ಕೃತ ರೂಪಗಳೆರಡನ್ನೂ ಪಡೆದಿವೆ. ಉದಾಹರಣೆಗೆ, 'ದಧಿ ಅತ್ರ' ಎಂಬುದು 'ದಧ್ಯತ್ರ' ಎಂದು ಬದಲಾಗುತ್ತದೆ. ಹೀಗೆ ಬದಲಾಗುವ ಯಾವ ವಸ್ತುವನ್ನೂ ಶಾಶ್ವತ ಎನ್ನಲಾಗುವುದಿಲ್ಲ. ಏಕೆಂದರೆ 'ಶಬ್ದವು ಅದನ್ನು ಬಳಸುವವರಿಂದ ವೃದ್ಧಿಯಾಗುತ್ತಲೇ ಇರುತ್ತದೆ. ಪರಿಣಾಮವಾಗಿ ಶಬ್ದವು ಕೇವಲ ವ್ಯಕ್ತವಾಗುವಂಥದ್ದು ಅಥವಾ ಪ್ರಕಟವಾಗುವಂಥದ್ದು; ಮಾನವ ಪ್ರಯತ್ನದಿಂದ ಸೃಷ್ಟಿಯಾದದ್ದಲ್ಲ' ಎಂಬ ಮೀಮಾಂಸಕನ ಮಾತು ತಪ್ಪು. ಏಕೆಂದರೆ, ಸಾವಿರ ದೀಪಗಳನ್ನು ಹಚ್ಚಿಟ್ಟರೂ ಹೇಗೆ ಪಾತ್ರೆಯ ಗಾತ್ರ ವೃದ್ಧಿಸುವುದಿಲ್ಲವೋ ಹಾಗೆಯೇ ಪದವೊಂದು ಸಾವಿರ ಜನರಿಂದ ಬಳಸಲ್ಪಟ್ಟರೂ ವೃದ್ಧಿಯಾಗುವುದಿಲ್ಲ."

ಶಬ್ದವು ಪ್ರಕಟವಾದದ್ದೇ ಹೊರತು, ಉಚ್ಚರಿಸುವವರಿಂದ ಸೃಷ್ಟಿಯಾದದ್ದಲ್ಲ ಎಂಬ ಮೀಮಾಂಸಕರ ಸಿದ್ಧಾಂತಗಳನ್ನು ಕುರಿತು ಎತ್ತಿದ್ದ ಆಕ್ಷೇಪಗಳಿಗೆ ಉತ್ತರ ಮುಂದಿನ ಸೂತ್ರಗಳಲ್ಲಿದೆ:

"ಶಬ್ದವು ಜನ್ಯವಾದದ್ದು ಹಾಗೂ ಶಬ್ದವು ಕೇವಲ ಪ್ರಕಟವಾದದ್ದು ಎಂಬ ಎರಡೂ ನಿಲುವುಗಳು ಮೇಲ್ನೋಟಕ್ಕೆ ಒಂದೇ ಎಂಬಂತೆ ಕಾಣುತ್ತವೆ. ಆದರೆ ಶಬ್ದವು ಪ್ರಕಟವಾದದ್ದು ಅಥವಾ ಸಾಕ್ಷಾತ್ಕಾರವಾದದ್ದು ಎಂಬ ಸಿದ್ಧಾಂತವೇ ಸರಿಯಾದದ್ದೆಂದು ಮುಂದಿನ ಸೂತ್ರದಲ್ಲಿ ತೋರಿಸಲಾಗಿದೆ."

"ವಾಸ್ತವವಾಗಿ, ನಿರಂತರವಾದ ಅಸ್ತಿತ್ವವನ್ನು ಪಡೆದಿರುವ ಶಬ್ದವು ಯಾವುದೋ ಒಂದು ಸಂದರ್ಭದಲ್ಲಿ ಒಬ್ಬನಿಗೆ ಅಗೋಚರವಾಗಿದೆಯೆಂದರೆ, ಆಗ ಆತ ತನ್ನ ವಸ್ತುವಿನೊಂದಿಗೆ, ಅಂದರೆ ಶಬ್ದದೊಂದಿಗೆ ಸಂಪರ್ಕ ಕಳೆದುಕೊಂಡಿದ್ದಾನೆಂದು ಮಾತ್ರ ಅರ್ಥ. ಶಬ್ದವು ನಿರಂತರವಾದದ್ದು. ಏಕೆಂದರೆ 'ಕ' ಎಂಬ ಅಕ್ಷರವನ್ನು ನಾವು ತಕ್ಷಣ ಗುರುತಿಸುವುದೇ ಅದನ್ನು ನಾವು ಈಗಾಗಲೇ ಕೇಳಿಸಿಕೊಂಡಿರುವುದರಿಂದ. ಶಬ್ದವು ಗೋಚರವಾಗುವಲ್ಲಿ ಅಡ್ಡಬರುವ ಮೌನ ವಾತಾವರಣವು ಮಾತುಗಾರನ ಬಾಯಿಯಿಂದ ಹೊರಬೀಳುವ ಶ್ವಾಸದ ಸಂಯೋಗ ಅಥವಾ ವಿಯೋಗಗಳಿಂದ ನಿವಾರಿಸಲ್ಪಟ್ಟು, (ಅಸ್ತಿತ್ವದಲ್ಲಿದ್ದರೂ ಅಗೋಚರವಾಗಿದ್ದ) ಶಬ್ದ ಗೋಚರವಾಗುತ್ತದೆ. ಈ ಹಿಂದೆ ಶಬ್ದದ 'ಕ್ಷಣಿಕತೆ' ಕುರಿತು ಎತ್ತಿದ ಆಕ್ಷೇಪಕ್ಕೆ ಇದು ಉತ್ತರ."

"ಶಬ್ದಗಳನ್ನು 'ಸೃಷ್ಟಿ'ಸುವುದೆಂದರೆ ಅವನ್ನು ಉಚ್ಚರಿಸುವುದು ಅಥವಾ ಧ್ವನಿಸುವುದು ಎಂದೇ ಅರ್ಥ."

"ಒಬ್ಬ ಸೂರ್ಯನನ್ನು ಏಕಕಾಲಕ್ಕೆ ಹಲವರು ನೋಡುವಂತೆ ಒಂದು ಶಬ್ದವನ್ನು ಹಲವರು ಏಕಕಾಲದಲ್ಲಿ ಕೇಳಿಸಿಕೊಳ್ಳುತ್ತಾರೆ. ಶಬ್ದವು ಸೂರ್ಯನಂತೆ ವಿಶಾಲವಾದ್ದರಿಂದ, ಸೂಕ್ಷ್ಮವಸ್ತುವಲ್ಲದಿರುವುದರಿಂದ ಪರಸ್ಪರ ದೂರದಲ್ಲಿರುವ ಹಲವರಿಗೆ ಅದು ಏಕಕಾಲಕ್ಕೆ ಸಂವೇದ್ಯವಾಗುತ್ತದೆ."

"ಸೂತ್ರ ಹತ್ತರಲ್ಲಿ ಹೇಳಲಾಗುವಂತೆ 'ಐ' ಎಂಬ ಅಕ್ಷರಕ್ಕೆ ಬದಲಿಯಾಗಿ ಉಪಯೋಗಿಸಲಾಗದ 'ಯ' ಎಂಬ ಅಕ್ಷರವು 'ಐ' ಅಕ್ಷರದ ರೂಪಾಂತರವಲ್ಲ: ಅದಕ್ಕಿಂತ ಭಿನ್ನವಾದ ಅಕ್ಷರ. ಪರಿಣಾಮವಾಗಿ ಶಬ್ದವು ರೂಪಾಂತರಗೊಳ್ಳುವುದಿಲ್ಲ."

"ಹಲವು ಜನ ಮಾತುಗಾರರಿದ್ದಾಗ ವೃದ್ಧಿಯಾಗುವುದು 'ಸದ್ದು'; ಶಬ್ದವಲ್ಲ. ಇಲ್ಲಿ 'ಸದ್ದು' ಎಂಬ ಪದ ಶ್ರೋತೃವಿನ ಕಿವಿಗೆ ಏಕಕಾಲಕ್ಕೆ ಹಲವು ದಿಕ್ಕುಗಳಿಂದ ಪ್ರವೇಶಿಸುವ ವಾಯುವಿನ ಸಂಯೋಗ ಹಾಗೂ ವಿಯೋಗಗಳಿಗೆ ಸಂಬಂಧಿಸಿದ್ದು. ವೃದ್ಧಿಯಾಗುವುದು ಈ 'ಸದ್ದು' ಮಾತ್ರ."

"ಶಬ್ದವನ್ನು ಉಚ್ಚರಿಸಿದಾಗ ಅದು ಇತರರಿಗೆ ಅರ್ಥವನ್ನು ತಲುಪಿಸುವುದರಿಂದ ಅದು ನಿತ್ಯವಾದದ್ದಾಗಿರಲೇಬೇಕು. ಹಾಗಿಲ್ಲದಿದ್ದರೆ ಶ್ರೋತೃವು ಅದರ ಅರ್ಥವನ್ನು ತಿಳಿಯುವ ಮುಂಚೆಯೇ ಅದು ಮಾಯವಾಗಿ ಬಿಡಬಹುದಿತ್ತು."

"ಹಲವರಿಂದ ಏಕಕಾಲಕ್ಕೆ ಹಾಗೂ ಸರಿಯಾಗಿ ಗುರುತಿಸಲ್ಪಡುವುದರಿಂದ ಶಬ್ದ ನಿತ್ಯವಾದದ್ದು."

" 'ಗೋ' ಎಂಬ ಪದವನ್ನು ಹತ್ತು ಸಲ ಉಚ್ಚರಿಸಿದರೆ ಶ್ರೋತೃವು 'ಗೋ' ಎಂಬ ಪದವು ಹತ್ತು ಸಲ ಉಚ್ಚರಿಸಲ್ಪಟ್ಟಿದೆ ಎನ್ನುತ್ತಾನೆಯೇ ಹೊರತು 'ಗೋ' ಎಂಬ ಶಬ್ದವನ್ನುಳ್ಳ ಹತ್ತು ಪದಗಳು ಉಚ್ಚಾರಣೆಯಾದವೆಂದು ಹೇಳುವುದಿಲ್ಲ. ಸೂತ್ರ ೨೦ರಲ್ಲಿ ಹೇಳಲಾಗುವ ಶಬ್ದದ ಶಾಶ್ವತತೆಗೆ ಇದು ಒಂದು ಉದಾಹರಣೆ."

"ಶಬ್ದವು ನಿತ್ಯವಾದದ್ದು; ಕಾರಣ ಅದು ನಾಶವಾಗುವ ಯಾವ ಸೂಚನೆಗಳೂ ಇಲ್ಲ."

"ಶಬ್ದವು ವಾಯುವಿನ ರೂಪಾಂತರವಾಗಿರುವುದರಿಂದ ಅದು ಶಾಶ್ವತವಾಗಿರಲು ಸಾಧ್ಯವಿಲ್ಲ ಎಂಬ ವಾದಕ್ಕೆ ಸೂತ್ರ ೨೨ರಲ್ಲಿ ಉತ್ತರವಿದೆ; 'ಶಬ್ದ'ವು ವಾಯುವಿನ ರೂಪಾಂತರವಾಗಿದ್ದರೆ ಶ್ರವಣಾಂಗಕ್ಕೆ ವೇದ್ಯವಾಗುವ ಸೂಕ್ತವಾದ ವಸ್ತುವೇ ಇರುತ್ತಿರಲಿಲ್ಲ."

"ಯಾವುದೇ ವಾಯುವಿನ ರೂಪಾಂತರವೂ (ನೈಯಾಯಿಕರ ಪ್ರಕಾರ ಇದು ಸ್ಪರ್ಶಿಸಬಹುದಾದದ್ದು) ಶ್ರವಣಾಂಗಕ್ಕೆ ವೇದ್ಯವಾಗುವುದು ಸಾಧ್ಯವಿಲ್ಲ. ಏಕೆಂದರೆ ಮುಟ್ಟಲಾರದ ಶಬ್ದದೊಂದಿಗೆ ಮಾತ್ರ ಶ್ರವಣಾಂಗವು ಸಂಬಂಧವಿರಿಸಿಕೊಂಡಿರುತ್ತದೆ."

"ವೈದಿಕ ಗ್ರಂಥಗಳಲ್ಲಿ ಕಾಣುವ ವಾದಗಳಲ್ಲಿ ಕೂಡ ಶಬ್ದದ ಶಾಶ್ವತತೆಯು ಸಾಬೀತಾಗುತ್ತದೆ. 'ಶಾಶ್ವತ ಸ್ವರದೊಂದಿಗೆ, ಓ ವಿರೂಪ' ಎಂಬ ಈ ವಾಕ್ಯವು ಬೇರೊಂದು ವಸ್ತುವನ್ನು ದೃಷ್ಟಿಯಲ್ಲಿಟ್ಟುಕೊಂಡಿದ್ದರೂ ಅದು ಭಾಷೆಯ ಅಮರತ್ವವನ್ನೇ ಸಾರುತ್ತದೆ. ಆದ್ದರಿಂದ ಶಬ್ದವು ನಿತ್ಯವಾದದ್ದು."

ಈ ಮೇಲಿನ ವಾದಗಳ ಅಂಶಗಳನ್ನು ಸರಳವಾದ ತರ್ಕಸರಣಿಗೆ ಇಳಿಸಿ ನೋಡುವುದಾದರೆ ಶಬ್ದವು ಶಾಶ್ವತ ಎಂಬ ಅರ್ಥ ಹುಟ್ಟುತ್ತದೆ. ಈ ಅಸಂಗತ ವಾದವನ್ನು ಮತ್ತಷ್ಟು ಮುಂದುವರಿಸಲು ಸಾಧ್ಯವಿಲ್ಲ. ಇಲ್ಲಿ ಹುಟ್ಟುವ ಪ್ರಶ್ನೆಯೆಂದರೆ ವೇದಗಳ ಅಮರತ್ವವನ್ನು ಕುರಿತು ಬ್ರಾಹ್ಮಣರು ಇಂಥ ಸಿದ್ಧಾಂತವನ್ನು ಹುಟ್ಟು ಹಾಕಿದ್ದೇಕೆ? ಈ ಸಿದ್ಧಾಂತವನ್ನು ಸಮರ್ಥಿಸಲು ಇಂಥ ಅಸಂಗತ ಕಾರಣಗಳನ್ನು ಕಂಡುಕೊಂಡಿದ್ದೇಕೆ? ವೇದಗಳು ದೈವವಾಣಿ ಎಂಬ ದೃಷ್ಟಿಕೋನವನ್ನು ಏಕೆ ಅವರು ನಿರಾಕರಿಸಿದರು?

ವೇದಗಳ ಅಧಿಕೃತತೆಯನ್ನು ಕುರಿತು ಮತ್ತೊಂದು ಸಿದ್ಧಾಂತವೆಂದರೆ ವೇದಗಳನ್ನು ಕೇವಲ ಪವಿತ್ರವಷ್ಟೇ ಅಲ್ಲ, ಅವು "ಪರಮಸತ್ಯ" ಎಂಬುದು. ವೇದಗಳಿಗೆ ಈ ಸತ್ಯಸ್ವರೂಪವನ್ನು ಬ್ರಾಹ್ಮಣರು ಆರೋಪಿಸಿದ್ದೇಕೆ? ಎಂಬುದು ಒಗಟಾಗಿಯೇ ಉಳಿಯುತ್ತದೆ.

ಹಾಗೆ ನೋಡಿದರೆ ವೇದಗಳಲ್ಲಿ ಕರಾರುವಕ್ಕಾದ ನಿಯಮಗಳೂ ಕಾನೂನುಗಳೂ ಇಲ್ಲ. ನೀತಿಯನ್ನು ಸಾರುವ ಧರ್ಮವನ್ನು ಅವು ಸದಾ ಬೋಧಿಸಿದ್ದಿಲ್ಲ. ಈ ಕೆಳಗೆ ನೀಡಲಾಗಿರುವ ವೇದಗಳ ಕೆಲವು ಭಾಗಗಳನ್ನು ನೋಡಿದರೆ ನೈತಿಕತೆಗೂ ವೇದಗಳಿಗೂ ಇರುವ ಸಂಬಂಧ ಎಂಥದೆಂಬುದರ ಅರಿವಾಗುತ್ತದೆ.

ಯಮಿ: ನಾನು ನನ್ನ ಸಖನನ್ನು ಸಖ್ಯಕ್ಕಾಗಿ ಆಹ್ವಾನಿಸುತ್ತೇನೆ. ವಿಶಾಲವಾದ ಮತ್ತು ನಿರ್ಜನವಾದ ಸಾಗರವನ್ನು ದಾಟಿ ಬಂದ ವೇಧರು ಮನನ ಮಾಡಿ, ಉತ್ಕೃಷ್ಟ ಗುಣವುಳ್ಳ ಪಿತೃ ಬೀಜವನ್ನು ಕ್ಷೇತ್ರದಲ್ಲಿಡಲಿ.

ಯಮ: ನಿನ್ನ ಸಖನಿಗೆ ಈ ಸಖ್ಯ ಇಷ್ಟವಿಲ್ಲ. ಅವಳು ಆಕಾರದಲ್ಲಿ ಬೇರೆಯಾದರೂ ಅವರಿಬ್ಬರೂ ಒಂದೇ ಮೂಲ. ಅಸುರನ ವೀರಪುತ್ರರು ಸ್ವರ್ಗವನ್ನು ಎತ್ತಿಹಿಡಿದು, ಯಶಸ್ಸು ಪಡೆದಿದ್ದಾರೆ.

ಯಮಿ: ಮಾನವರಿಗೆ ನಿಷಿದ್ಧವಾಗಿರುವ ಇಂಥ ಸಂಯೋಗದಲ್ಲಿ ದೇವತೆಗಳು ಸುಖಿಸಲು ಹರ್ಷಿಸುವರು; ನಿನ್ನ ಮನಸ್ಸು ನನ್ನ ಮನಸ್ಸಿನೊಂದಿಗೆ ಬೆರೆಯಲಿ; ಪ್ರಜಾಪತಿಯು ತನ್ನ ಮಗಳ ಗಂಡನಾದಂತೆ ನೀನು ನನ್ನನ್ನು ಸುಖಿಸು.

ಯಮ : ಸತ್ಯವನ್ನಾಡುವ ನಮ್ಮ ನಾಲಿಗೆಯಿಂದ ಮಿಥ್ಯವು ಬರಬಾರದು. ಜಲವೇ ಗಂಧರ್ವನ ವಧು. ಅವಳೇ ನಮ್ಮಿಬ್ಬರ ತಾಯಿ.

ಯಮಿ : ಸರ್ವರೂಪಿಯೂ, ಸೃಷ್ಟಿಕರ್ತನೂ ಆದ ತ್ವಷ್ಟ್ರಿಯು ನಾವಿಬ್ಬರೂ ಗರ್ಭದಲ್ಲಿದ್ದಾಗಲೇ ನಮ್ಮನ್ನು ಗಂಡಹೆಂಡಿರನ್ನಾಗಿ ಮಾಡಿದನು. ಅವನ ಅಣತಿಯನ್ನು ಯಾರೂ ಮೀರುವಂತಿಲ್ಲ. ಈ ಸಂಯೋಗಕ್ಕೆ ಭೂಮ್ಯಾಕಾಶಗಳೇ ಸಾಕ್ಷಿಯಾಗಿ ನಿಲ್ಲಲಿ.

ಯಮ : ಅವನ ಈ ಮೊದಲನೆಯ ದಿನದ ಬಗ್ಗೆ ಯಾರಿಗೆ ಗೊತ್ತು? ಅದನ್ನು ಯಾರು ನೋಡಿದ್ದಾರೆ? ಮಿತ್ರಾವರುಣರ ಕ್ಷೇತ್ರ ಬಹಳ ವಿಶಾಲ, ಮಾನವರಿಗೆ ನರಕ ಶಿಕ್ಷೆ ನೀಡುವರಾರು, ತಿಳಿಸುವೆಯಾ?

ಯಮಿ : ಯಮನನ್ನು ಕೂಡುವ ಬಯಕೆ ಯಮಿಯಲ್ಲಿ ಮೂಡಿದೆ. ಪತ್ನಿಯು ಪತಿಗೆ ತನ್ನ ಸರ್ವಸ್ವವನ್ನು ಧಾರೆಯೆರೆಯುವಂತೆ ನಾನೂ ಧಾರೆಯೆರೆಯುತ್ತೇನೆ. ಒಂದು ರಥದ ಎರಡು ಗಾಲಿಗಳಂತೆ ನಾವು ಕೂಡಿ ದಣಿಯೋಣ.

ಯಮ : ದೇವದೂತರು ತಮ್ಮ ತೆರೆದ ಕಣ್ಣುಗಳಿಂದ ಎಲ್ಲವನ್ನೂ ಗಮನಿಸುತ್ತಿರುವರು. ಚಂಚಲೆಯಾದ ಹೆಣ್ಣೇ, ನೀನು ಕೂಡಿ ದಣಿಯಲು ಇನ್ನಾರನ್ನಾದರೂ ಆರಿಸಿಕೊ.

ಯಮಿ : ಪ್ರತಿ ಹಗಲು ರಾತ್ರಿ, ಪ್ರತಿ ಭಕ್ತನೂ ಯಮನನ್ನು ಪೂಜಿಸಲಿ. ಸೂರ್ಯನ ಕಣ್ಣು ಅವನನ್ನು ಸದಾ ಪ್ರಕಾಶಿಸುವಂತೆ ಮಾಡಲಿ. ನಿಸ್ಸಂಗಿಯಾದ ಯಮನನ್ನು ಮಾತ್ರ ಯಮಿ ಬಯಸುವಳು.

ಯಮ : ಮುಂಬರುವ ಯುಗಗಳಲ್ಲಿ ಸೋದರಿಯರು ತನ್ನ ಸೋದರನಲ್ಲದವನನ್ನು ಮಾತ್ರ ಪತಿಯಾಗಿ ಪಡೆಯುವರು; ಆ ಕಾರಣ ಬೇರೆ ಯಾರನ್ನಾದರೂ ಪತಿಯನ್ನಾಗಿ ಪಡೆದು ನಿನ್ನ ತೋಳನ್ನು ಅವನ ತಲೆದಿಂಬಾಗಿಸು.

ಯಮಿ : ತಂಗಿಗೆ ಒಡೆಯನನ್ನು ನೀಡದ ಸೋದರ ಅದೆಂಥವನು! ಬಯಕೆ ತುಂಬಿ ನಾನು ಬೇಡುತ್ತೇನೆ ; ನನ್ನನ್ನು ಸೇರು.

ಯಮ : ನಾನು ಸೇರಲಾರೆ; ಸೋದರಿಯನ್ನು ಕೂಡಿದವನನ್ನು ಪಾಪಿಯೆನ್ನುವರು. ಶ್ರೇಷ್ಠನಾದ ನಿನ್ನ ಸೋದರನಿಗೆ ಆ ಬಯಕೆಗಳಿಲ್ಲ.

ಯಮಿ : ಅಯ್ಯೋ, ಯಮ ನೀನು ದುರ್ಬಲ. ನಿನ್ನ ಹೃದಯದಲ್ಲೇನಿದೆ ಎಂಬುದು ನನಗೆ ಅರ್ಥವಾಗುತ್ತಿಲ್ಲ. ಯಾವ ಹೆಣ್ಣಾದರೂ ನಿನ್ನನ್ನು ಕುದುರೆಯು ಜೀನುಪಟ್ಟಿಯನ್ನು, ಬಳ್ಳಿಯು ಮರವನ್ನಾಶ್ರಯಿಸುವಂತೆ ಆಶ್ರಯಿಸುವಳು.

ಯಮ : ಯಮಿ, ನೀನು ಬೇರೊಬ್ಬನನ್ನು ಅಪ್ಪಿಕೊ. ಅವನೂ ನಿನ್ನನ್ನು ಬಳ್ಳಿ ಮರವನ್ನಪ್ಪಿಕೊಳ್ಳುವಂತೆ ಅಪ್ಪಿಕೊಳ್ಳಲಿ; ಅವನು ನಿನ್ನ ಅನುರಾಗವನ್ನೂ ನೀನು ಅವನ ಅನುರಾಗವನ್ನೂ ಗಳಿಸು ಹಾಗೂ ಸಂಭ್ರಮದಿಂದ ಇಬ್ಬರೂ ಒಂದಾಗಿರಿ.... ಅಸುರ ಸಂಹಾರಿಯಾದ ಅಗ್ನಿಯು ನಿನ್ನೆದೆಯನ್ನು ಹೊಕ್ಕಿರುವ ಈ ರಾಕ್ಷಸ ಬಯಕೆಯನ್ನು ಸಂಹರಿಸಲಿ.....ನಿನ್ನ ಗರ್ಭವನ್ನು ಪ್ರವೇಶಿಸಿ ಭ್ರೂಣವನ್ನು ಕಬಳಿಸುವ ಆ ರಾಕ್ಷಸನ ಸಂಹಾರವಾಗಲಿ; ಗರ್ಭದಾನ ಶಕ್ತಿಯನ್ನೂ ಗರ್ಭದಲ್ಲಿ ನೆಲೆಸಲು ಅಣಿಯಾಗುತ್ತಿರುವ ಬೀಜವನ್ನೂ, ಚಲಿಸುವ ಭ್ರೂಣವನ್ನೂ ಹುಟ್ಟಿದ ಮಗುವನ್ನು ನಾಶಪಡಿಸುವ ದುಷ್ಟ ಶಕ್ತಿಯನ್ನು ನಾವು ಇಲ್ಲಿಂದ ಉಚ್ಚಾಟಿಸೋಣ.

"ನಿನ್ನ ತೊಡೆಗಳನ್ನು ಅಗಲಿಸಿ, ಗಂಡಹೆಂಡತಿ ನಡುವೆ ಮಲಗಿ ನಿನ್ನ ಗರ್ಭವನ್ನೂ ಪ್ರವೇಶಿಸಿ, ಅಲ್ಲಿನ ಬೀಜವನ್ನು ನಾಶಪಡಿಸುವ ದುಷ್ಟ ಶಕ್ತಿಯನ್ನು ಉಚ್ಚಾಟಿಸೋಣ. ಪತಿ, ಸೋದರ ಅಥವಾ ಸಖನ ರೂಪದಲ್ಲಿ ನಿನ್ನನ್ನು ಪ್ರವೇಶಿಸಿ ನಿನ್ನ ಸಂತಾನವನ್ನು ನಾಶಮಾಡಬಲ್ಲ ಆ ದುಷ್ಟ ಆತ್ಮಗಳನ್ನು ಉಚ್ಚಾಟಿಸೋಣ."

"ನಿದ್ದೆ ಅಥವಾ ಕತ್ತಲೆ ಮೂಲಕ ನಿನ್ನನ್ನು ಭ್ರಮೆಗೊಳಿಸಿ ನಿನ್ನ ಸಂತಾನವನ್ನು ನಾಶಮಾಡುವ ಉದ್ದೇಶದಿಂದ ನಿನ್ನಲ್ಲಿಗೆ ಬರುವ ದುಷ್ಟ ಶಕ್ತಿಗಳನ್ನು ನಾಶಪಡಿಸೋಣ."

* * * * *

ವೇದಗಳಲ್ಲಿ ಎರಡು ಮುಖ್ಯವಾದ ಸಂಗತಿಗಳು ಅಡಕವಾಗಿವೆ. ಅವುಗಳಲ್ಲಿ ಮೊದಲನೆಯದೆಂದರೆ, ಋಷಿಗಳಿಂದ ಅಭಿವ್ಯಕ್ತವಾಗುವ ಆರ್ಯರ ಆಸೆ ಭರವಸೆಗಳು. ಮ್ಯೂರ್ ಹೇಳುತ್ತಾರೆ : 'ಅವುಗಳ ರಚನೆ ಹಾಗೂ ಹುಟ್ಟಿದ ಸಂದರ್ಭಗಳನ್ನು ನೋಡಿದರೆ ಅವುಗಳನ್ನು ಮೊದಲಬಾರಿಗೆ ಉಚ್ಚರಿಸಿದ ಪ್ರಾಚೀನ ಕವಿಗಳ ಆಶಯಗಳ, ಭಾವನೆಗಳ ಅಭಿವ್ಯಕ್ತಿಯಂತೆಯೇ ವೇದಗಳು ಕಾಣುತ್ತವೆ. ಆರ್ಯ ಋಷಿಗಳ ಈ ಶ್ಲೋಕಗಳಲ್ಲಿ ದೇವತೆಗಳ ಪ್ರಾರ್ಥನೆಯೂ ಹಾಗೂ ಉಳಿದ ವರಗಳನ್ನು ಆಯುರಾರೋಗ್ಯ, ಐಶ್ವರ್ಯ, ಸಂತಾನ, ಪಾಪ ನಿವಾರಣೆ, ಶತ್ರು ಸಂಹಾರ ಮುಂತಾದವುಗಳನ್ನು ಈಡೇರಿಸಿಕೊಳ್ಳುವ ಬಯಕೆಯೂ ಕಾಣುತ್ತದೆ.'

'ನಿರುಕ್ತ'ದ ಕೃತಿಕಾರನಾದ ಯಕ್ಷನೂ ಈ ಮಾತನ್ನೇ ಹೇಳುತ್ತಾನೆ:"ಮುಂದಿನ ಭಾಗದಲ್ಲಿ ಹೇಳಲಾಗುವ ನಾಲ್ಕು ವಿಧವಾದ ಪ್ರಾರ್ಥನೆಗಳೆಂದರೆ ೧. ದೇವರು ಅಪ್ರತ್ಯಕ್ಷ ಎಂದು ಸಲ್ಲಿಸುವ ಪ್ರಾರ್ಥನೆ. ೨. ದೇವರು ಪ್ರತ್ಯಕ್ಷನಿರುವನೆಂದು ಸಲ್ಲಿಸುವ ಪ್ರಾರ್ಥನೆ. ೩. ಭಕ್ತನು ಪ್ರತ್ಯಕ್ಷವಾಗಿ ದೇವರು ಅಪ್ರತ್ಯಕ್ಷ ಎಂದು ಸಲ್ಲಿಸುವ ಪ್ರಾರ್ಥನೆಗಳು, ಅವೇ ಹೆಚ್ಚು. ಹಾಗೂ ೪. ಭಕ್ತನು ತನ್ನನ್ನು ತಾನೇ ಉದ್ದೇಶಿಸಿ ಹೇಳುವ ಶ್ಲೋಕಗಳು. ಈ ಶ್ಲೋಕಗಳು ಸ್ವಲ್ಪ ವಿರಳ. ಸ್ತೋತ್ರವಿಲ್ಲದ ಪ್ರಾರ್ಥನೆಗಳೂ ಉಂಟು ಅಥವಾ ಯಾವ ವರವನ್ನೂ ಬೇಡದ 'ಇಂದ್ರದೇವನ ಪರಾಕ್ರಮವನ್ನು ನಾನು ಬಣ್ಣಿಸುವೆನು' ಎಂಬ ರೀತಿಯ (ಋಗ್ವೇದ i, ೩೨) ಪ್ರಾರ್ಥನೆಗಳೂ ಇವೆ. ಅದೇ ರೀತಿ ನಾನು 'ಯಾತುಧಾನ'ನಾಗಿದ್ದರೆ ನನ್ನ ಪ್ರಾಣ ಇಂದೇ ಹಾರಿ ಹೋಗಲಿ' ಎಂಬ ರೀತಿಯ ಶಾಪಗಳು (ಋಗ್ವೇದi, ೧೦೪, ೧೫) ಕೂಡ ಕಾಣುತ್ತವೆ. ಹಾಗೆಯೇ 'ಸುಂದರನಾದ ದೇವರು ಮಾಯವಾಗಿದ್ದಾನೆ ; ಅವನು ಮರಳುವುದಿಲ್ಲ' (ಋಗ್ವೇದ. x, 95, 14) ಎಂಬ ರೀತಿಯ ಶ್ಲೋಕ ರೂಪದ ಪ್ರಾರ್ಥನೆಗಳು ಇವೆ. (ಋಗ್ವೇದ

೧೧೭, ೬) ರಲ್ಲಿನಂತೆ ಒಬ್ಬನೇ ಊಟ ಮಾಡುವವನು ತಾನೊಬ್ಬನೇ ಪಾಪ ಮಾಡಿದಂತೆ ಮೊದಲಾದವು. ಅದಲ್ಲದೆ ಋಗ್ವೇದ x,೩೪, ೧೩ರ ಶ್ಲೋಕದಲ್ಲಿ ಕಾಣುವಂತೆ ಪಗಡೆಯಾಟದ ಟೀಕೆ ಹಾಗೂ ವ್ಯವಸಾಯ ವೃತ್ತಿಯ ಆರಾಧನೆಯೂ ಇದೆ. ಹೀಗೆ ಋಷಿಗಳು ರಚಿಸಿದ ಪ್ರಾರ್ಥನೆಗಳು ಹಲವು ಬಗೆಯ ಆಶಯಗಳನ್ನು ಉದ್ದೇಶಗಳನ್ನು ಹೊಂದಿವೆ.''

## ಸೂಕ್ತ XII(CLXIII)

ಕ್ಷಯಕ್ಕೆ ಮದ್ದು ನೀಡುವ ದೇವತೆ; ಋಷಿ ವಿವೃಹನ್, ಕಶ್ಯಪ ಪುತ್ರ, ಅನುಷ್ಟುಭ್ ಛಂದಸ್ಸು.

೧. ನಿನ್ನ ಕಣ್ಣುಗಳಿಗೆ, ನಿನ್ನ ಶಿರಕ್ಕೆ, ನಿನ್ನ ಮೂಗು ಕಿವಿಗಳಿಗೆ, ನಿನ್ನ ಗಲ್ಲಕ್ಕೆ, ನಿನ್ನ ಮಿದುಳಿಗೆ, ನಿನ್ನ ನಾಲಿಗೆಗೆ ಯಾವ ರೋಗವು ಬಾರದಂತೆ ನಾನು ಪ್ರತಿಬಂಧಿಸಿದ್ದೇನೆ.

೨. ನಿನ್ನ ಕೊರಳು, ಮೂಳೆ, ತೋಳು, ಅಂಗೈ, ಮುಂಗೈಗಳಿಗೆ ರೋಗ ತಗಲದಂತೆ ನಾನು ಪ್ರತಿಬಂಧಿಸಿದ್ದೇನೆ.

೩. ನಿನ್ನ ಹೃದಯ, ವೃಷಣ, ಹೊಟ್ಟೆ, ಗುದಗಳಿಗೆ ರೋಗ ಬಾರದಂತೆ ನಾನು ಪ್ರತಿಬಂಧಿಸಿದ್ದೇನೆ.

೪. ನಿನ್ನ ತೊಡೆ, ಮೊಣಕಾಲು, ಹಿಮ್ಮಡಿ, ಬೆರಳು ಹಾಗು ಗುಪ್ತಾಂಗಗಳಿಗೆ ರೋಗ ತಗಲದಂತೆ ನಾನು ಪ್ರತಿಬಂಧಿಸಿದ್ದೇನೆ.

೫. ನಿನ್ನ ಕೂದಲು, ಉಗುರು, ಮೂತ್ರದ್ವಾರ ಹಾಗೂ ನಿನ್ನ ಇಡಿ ವ್ಯಕ್ತಿತ್ವಕ್ಕೆ ರೋಗ ತಗಲದಂತೆ ನಾನು ಪ್ರತಿಬಂಧಿಸಿದ್ದೇನೆ.

೬. ನಿನ್ನೆಲ್ಲ ಅಂಗಾಂಗಗಳು, ಎಲ್ಲ ಕೂದಲುಗಳು ಹಾಗೂ ರೋಗ ಹುಟ್ಟಬಲ್ಲ ಪ್ರತಿ ಸಂದುಗಳು ಹಾಗೂ ನಿನ್ನ ಇಡಿ ದೇಹಕ್ಕೆ ರೋಗ ಬಾರದಂತೆ ನಾನು ಪ್ರತಿಬಂಧಿಸಿದ್ದೇನೆ.

ಪ್ರೊ. ವಿಲ್ಸನ್‌ರವರು ಹೇಳುವಂತೆ ಯಾವುದೇ ತತ್ವವಾಗಲೀ, ಸಿದ್ಧಾಂತವಾಗಲೀ, ಜನ್ಮಾಂತರಗಳ ಸೂಚನೆಯಾಗಲೀ ಅಥವಾ ಜಗತ್ತಿನ ಶುದ್ಧಿಯ ಪುನರಾವರ್ತನೆಯ ಸೂಚನೆಯಾಗಲೀ, ವೇದಗಳಲ್ಲೆಲ್ಲ ಬಹುಮುಖ್ಯವಾದ ವೇದವಾದ 'ಋಗ್ವೇದ'ದಲ್ಲಿ ಕೂಡ ಕಾಣುವುದಿಲ್ಲ. ಆರ್ಯರ ಸಾಮಾಜಿಕ ಜೀವನವನ್ನು ಅರಿಯಲು ವೇದಗಳು ಸಹಾಯಕವಾಗಬಲ್ಲವೆಂಬುದು ನಿಜ. ಮೂಲವಾಸಿಗಳ ಚಿತ್ರ ಕುರಿತಂತೆ ಅಲ್ಲಿ ಕುತೂಹಲವೇ ಹೆಚ್ಚು ತುಂಬಿದೆಯೇ ಹೊರತು ಅವರನ್ನು ಕುರಿತು ಹೆಚ್ಚು ಬೆಳಕು ಚೆಲ್ಲುವ ಪ್ರಯತ್ನಗಳಿಲ್ಲ. ಅಲ್ಲಿ ಸದ್ಗುಣಗಳಿಗಿಂತ ಅವಗುಣಗಳೇ ಹೆಚ್ಚು.

ವೇದಗಳ ಶ್ಲೋಕಗಳನ್ನು ರಚಿಸಿದ ಋಷಿಗಳು ತಂತಮ್ಮ ರಚನೆಗಳ ಕರ್ತೃಗಳು ತಾವೇ ಎಂದು ಘೋಷಿಸಿಕೊಂಡಿದ್ದರೆ ವೇದಗಳ ಸತ್ಯಸ್ವರೂಪಕ್ಕೆ ಸ್ವಲ್ಪವಾದರೂ ಸಮರ್ಥನೆಯಿರುತ್ತಿತ್ತು. ವೇದಗಳಂಥ ಮೂಢನಂಬಿಕೆಯ ರಚನೆಗಳಿಗೆ ಬ್ರಾಹ್ಮಣರು ಸತ್ಯಸ್ವರೂಪದ ಖಚಿತತೆಯನ್ನು ಆರೋಪಿಸಿದ್ದೇಕೆ ಎಂಬುದು ಒಗಟಾಗಿಯೇ ಉಳಿಯುತ್ತದೆ. ಹಾಗೆ ನೋಡಿದರೆ ಸ್ವತಃ ಋಷಿಗಳೇ ಅಂಥ ಘೋಷಣೆಗಳನ್ನು ಮಾಡಿಕೊಂಡಿಲ್ಲ. ತದ್ವಿರುದ್ಧವಾಗಿ ಎಷ್ಟೋ ವಿಷಯಗಳ ಬಗೆಗಿನ ತಮ್ಮ ಅಜ್ಞಾನವನ್ನು ಸ್ವತಃ ತಾವೇ ನಿವೇದಿಸಿಕೊಂಡಿದ್ದಾರೆ. ಉದಾಹರಣೆಗೆ ಋಗ್ವೇದದ ಈ ಭಾಗಗಳನ್ನು ನೋಡಿ:

"ಅಜ್ಞಾನಿಯಾದ ನಾನು, ದೇವರುಗಳ ಎಳೆಗರುವಿನ ಗೊರಸಿಗೆ (ಅಥವಾ ಎಲ್ಲ ವಸ್ತುಗಳ ಆವಾಸಸ್ಥಾನವಾಗಿರುವ ಸೂರ್ಯನ ಮೇಲೆ) ಏಳೆಳೆಯ ದಾರವನ್ನು ಸುತ್ತಿರುವ ಋಷಿಗಳ ಆ ಅದೃಶ್ಯ ನೆಲೆಗಳ ಬಗೆ, ಕೇಳುತ್ತಿದ್ದೇನೆ."

೬. "ಅರಿಯದವನಾದ ನಾನು ಅರಿತಂತಹ ಋಷಿಗಳಲ್ಲಿ ಕೇಳುತ್ತೇನೆ. ಈ ಆರು ಲೋಕಗಳನ್ನು ಎತ್ತಿ ಹಿಡಿದಿರುವ ಸೃಜನೆಯಾಗದ ಆ ವಸ್ತು ಯಾವುದು?"

೩೭. "ನಾನು ಹೀಗೇ ಇದ್ದರೆ ನಾನು ಗುರುತಿಸಲಾರೆ; ಮನಸ್ಸು ಅಲ್ಲೋಲಕಲ್ಲೋಲವಾಗಿ ನಿರ್ಬಂಧಿತವಾಗುತ್ತದೆ. ಯಜ್ಞದಿಂದ (ಅಥವಾ ಸತ್ವದಿಂದ) ಮೊದಲು ಹುಟ್ಟಿದ ಪುತ್ರರು ನನ್ನಲ್ಲಿಗೆ ಬಂದರೆ, ನಾನು ಆ ಪದದ ಸಂತಸವನ್ನು ಅನುಭವಿಸಬಲ್ಲೆ. ಸ್ವರ್ಗ, ಭೂಮಿಗಳು ಅಮರವಾಗಿರುವಂತೆ, ಎಂದೆಂದೂ ಕೊಳೆಯದಂತೆ ರೂಪಿಸಿರುವ ಆ ಮರಗಳು, ಕಾಡುಗಳು ಯಾವುವು?"

"ಸ್ವರ್ಗ ಹಾಗೂ ಭೂಮಿಗಳಲ್ಲಿ ಮೊದಲು ಸೃಷ್ಟಿಯಾದದ್ದು ಯಾವುದು? ಅದು ಸೃಷ್ಟಿಯಾದದ್ದು ಹೇಗೆ? ಹೇಳಿ ಜ್ಞಾನಿಗಳಾದ ಋಷಿಗಳೇ"

"ಅಗ್ನಿಗಳೆಷ್ಟು? ಸೂರ್ಯರೆಷ್ಟು? ಪ್ರಾತಃಕಾಲಗಳೆಷ್ಟು? ಜಲಗಳೆಷ್ಟು? ಪಿತೃಪಿತಾಮಹರೇ, ನಾನು ಇದನ್ನು ವಿನೋದಕ್ಕಾಗಿ ಕೇಳುತ್ತಿಲ್ಲ; ನಿಮ್ಮಿಂದ ಇದನ್ನು ಅರಿಯಲು ಕೇಳುತ್ತಿದ್ದೇನೆ; ಈ ಸೃಷ್ಟಿಯು ಅಸ್ತಿತ್ವಕ್ಕೆ ಬಂದದ್ದು ಯಾವಾಗ? ಈ ಜಗತ್ತಿನ ಸೃಷ್ಟಿಯಾಯಿತೆಂದು ಬಲ್ಲವರಾರು?....... ೭. ಈ ಜಗತ್ತನ್ನು ಯಾರಾದರೂ ಸೃಷ್ಟಿಸಿದರೇ ಅಥವಾ ಇಲ್ಲವೇ? ಸರ್ವಾಂತರ್ಯಾಮಿಯಾದ ಅವನಿಗೂ ಇದು ಅರಿವಿದೆಯೆ ಇಲ್ಲವೇ?"

ಈ ಮೇಲೆ ತೋರಿಸಿದ ಅಂಶಗಳಲ್ಲದೆ ವೇದಗಳು ಸತ್ಯಸ್ವರೂಪವೆಂಬ ವಾದವನ್ನು ಕುರಿತಂತೆ ನಾವು ಗಮನಿಸಬೇಕಾದ ಇನ್ನೂ ಕೆಲವು ಅಂಶಗಳಿವೆ. ಅವುಗಳನ್ನು ಇನ್ನು ಮುಂದೆ ನೋಡೋಣ.

## IV

ಮೊದಲನೆಯ ಅಂಶವೆಂದರೆ, ಈ ಸಿದ್ಧಾಂತವು ಆದಿಯಲ್ಲಿಯೇ ಹುಟ್ಟಿದ್ದೇ ಅಥವಾ ಭಾರತೀಯ ಇತಿಹಾಸದ ಯಾವುದೋ ಒಂದು ಕಾಲಘಟ್ಟದಲ್ಲಿ ಹುಟ್ಟಿದ್ದೇ ಎಂಬುದು. ಸಾಮಾನ್ಯವಾಗಿ ಇದು ಮೂಲ ಸಿದ್ಧಾಂತವೆಂದೇ ಎಲ್ಲರ ನಂಬಿಕೆ ಆದರೆ, ಧರ್ಮಸೂತ್ರಗಳನ್ನೂ ಪರಿಶೀಲಿಸಿದರೆ ಆ ನಂಬಿಕೆ ಆಧಾರ ರಹಿತವಾದದ್ದೆನಿಸುತ್ತದೆ. ವೇದಗಳ ಸತ್ಯಸ್ವರೂಪ ಕುರಿತಂತೆ ಗೌತಮ ಧರ್ಮಸೂತ್ರವು ಈ ಕೆಳಗಿನ ಮಾತನ್ನು ಹೇಳುತ್ತದೆ : (ಗೌತಮನ ಕಾಲದಲ್ಲಿ ಮಾತ್ರ ವೇದಗಳು ಮಾತ್ರ ಪರಮಸತ್ಯವೆಂಬ ನಂಬಿಕೆಯಿದ್ದದ್ದು.)

'ಪವಿತ್ರ ಶಾಸ್ತ್ರಗಳ ಮೂಲವು ವೇದವೇ. ೧.೧.'

'ವೇದವನ್ನು ಬಲ್ಲವರ ಸಂಪ್ರದಾಯ ಹಾಗೂ ಆಚರಣೆ' ೧.೨

'ಎರಡು ಸಮಾನ ಶಕ್ತಿಯ ಪ್ರಮಾಣಗಳು ಮುಖಾಮುಖಿಯಾದಾಗ ಸ್ವ ಇಚ್ಛೆಯಂತೆ ಎರಡರಲ್ಲೊಂದನ್ನು ಅನುಸರಿಸಬಹುದು' ೧.೪

ವಸಿಷ್ಠ ಧರ್ಮಸೂತ್ರದ ನಿಲುವು ಹೀಗಿದೆ:

'ಪವಿತ್ರ ನಿಯಮವು ಋಷಿಪರಂಪರೆಯಿಂದಲೂ ದೈವೀಪ್ರೇರಣೆಯಿಂದ ರಚಿತವಾದ ಕೃತಿಗಳಿಂದಲೂ ಅನುಷ್ಠಾನಕ್ಕೆ ಬಂದಿದೆ'. ೧.೪ 'ಈ ಎರಡೂ ಮೂಲಗಳ ನಿಯಮಗಳು ನಿಸ್ಸಹಾಯಕವಾದಾಗ ಶಿಷ್ಟಾಚರಣೆಯ ನಿಯಮಗಳು ಅಧಿಕೃತವಾಗಿರುತ್ತವೆ.' ೧.೫ 'ಯಾರ ಹೃದಯವು ಬಯಕೆಗಳಿಂದ ಮುಕ್ತವಾಗಿರುತ್ತದೆಯೋ ಅವನೇ ಶಿಷ್ಟ'. ೧.೬

ಬೌಧಾಯನದ ದೃಷ್ಟಿಕೋನವು ಈ ಕೆಳಕಂಡಂತಿದೆ:

ಪ್ರಶ್ನೆ ೧. ಅಧ್ಯಾಯ ೧, ಖಂಡಿಕೆ ೧

೧. ಪ್ರತಿ ವೇದದಲ್ಲೂ ಪವಿತ್ರ ಶಾಸ್ತ್ರಗಳನ್ನು ಬೋಧಿಸಲಾಗಿದೆ.

೨. ನಮ್ಮ ವ್ಯಾಖ್ಯಾನ ಅದಕ್ಕೆ ಅನುಗುಣವಾಗಿರುತ್ತದೆ.

೩. ಪರಂಪರೆಗಳಲ್ಲಿ (ಸ್ಮೃತಿ) ಬೋಧಿಸಲಾಗುವ ಪವಿತ್ರ ಶಾಸ್ತ್ರಗಳಿಗೆ ಎರಡನೆಯ ಸ್ಥಾನ.

೪. ಶಿಷ್ಟಾಚರಣೆಗೆ ಮೂರನೆಯ ಸ್ಥಾನ.

೫. ದ್ವೇಷ, ಅಹಂಕಾರಗಳಿಂದ ಮುಕ್ತರಾದ, ಹತ್ತು ದಿನಗಳಿಗೆ ಸಾಲುವಷ್ಟು ಧಾನ್ಯವನ್ನು ಮಾತ್ರ ಸಂಗ್ರಹಿಸಿ ಇಟ್ಟುಕೊಂಡು ತೃಪ್ತರಾದ, ದುರಾಸೆ, ಕೋಪ ಇತ್ಯಾದಿಗಳಿಂದ ಮುಕ್ತರಾದವರೇ ಶಿಷ್ಟರು.

೬. ವೇದಶಾಸ್ತ್ರ ಪಾರಂಗತರಾಗಿ ಅವುಗಳನ್ನು ವ್ಯಾಖ್ಯಾನಿಸುವ ಶಕ್ತಿಯುಳ್ಳವರೇ ಶಿಷ್ಟರು.

೭. ಒಂದು ವೇಳೆ ಅವರೂ ವಿಫಲರಾದರೆ ಕಡೆಯ ಪಕ್ಷ ಹತ್ತು ಜನರನ್ನುಳ್ಳ ಸಭೆಯು ನಿಯಮಕ್ಕೆ ಸಂಬಂಧಪಟ್ಟ ತೀರ್ಪನ್ನು ನೀಡುತ್ತದೆ.

೮. ನಾಲ್ಕು ವೇದಗಳನ್ನು ಬಲ್ಲ ನಾಲ್ವರು, ಒಬ್ಬ ಮೀಮಾಂಸಕ, ಶಾಸ್ತ್ರಪಾರಂಗತ ಹಾಗೂ ಮೂವರು ವಿವಿಧ ಅಂತಸ್ತಿನ ಬ್ರಾಹ್ಮಣರು ಸೇರಿ ಕಡೆಯಪಕ್ಷ ಹತ್ತು ಜನರ ಸಭೆ ಅದಾಗಿರಬೇಕು.

೯. ಅವರಲ್ಲಿ ಐದು ಅಥವಾ ಮೂರು ಅಥವಾ ಒಬ್ಬನಾದರೂ ನಿಷ್ಕಳಂಕನಾದ ಮನುಷ್ಯನಿದ್ದರೂ ಸಾಕು, ಅವನು ನ್ಯಾಯಾನ್ಯಾಯಗಳನ್ನು ನಿರ್ಧರಿಸಬಲ್ಲ. ಆದರೆ ಸಾವಿರ ಮೂರ್ಖರು ಇದನ್ನು ಮಾಡಲಾರರು.

೧೦. ಮರದ ಆನೆ ಹಾಗೂ ತೊಗಲಿನಿಂದ ಮಾಡಿದ ಜಿಂಕೆಯಂತೆ ಅಜ್ಞಾನಿಯಾದ ಬ್ರಾಹ್ಮಣ. ಈ ಮೂವರೂ ಹೆಸರಿಗಷ್ಟೇ ತಮ್ಮ ವರ್ಗವನ್ನು ಪ್ರತಿನಿಧಿಸಬಲ್ಲರು.

ಆಪಸ್ತಂಭ ಧರ್ಮಸೂತ್ರವು ಹೇಳುತ್ತದೆ: "ಈಗ, ಆದ್ದರಿಂದ, ನಾವು ದಿನ ನಿತ್ಯದ ಸಂಪ್ರದಾಯಗಳ ಭಾಗವಾಗಿರುವ ಶ್ರೇಷ್ಠತೆಯಿಂದ ಹುಟ್ಟುವ ಕರ್ತವ್ಯಗಳನ್ನು ಘೋಷಿಸುತ್ತೇವೆ." ೧.೧. "ಈ ಕರ್ತವ್ಯಗಳನ್ನು ಸರ್ವಸಮ್ಮತಿಯಿಂದ ನಿರ್ಧರಿಸುವವರು ಶಾಸ್ತ್ರಗಳನ್ನು ಬಲ್ಲವರು (೧.೨)"; ಅಂಥ ಅಧಿಕಾರವುಳ್ಳವರು ವೇದಗಳನ್ನು ಬಲ್ಲವರು.

ಧರ್ಮಸೂತ್ರಗಳ ಈವರೆಗಿನ ಅವಲೋಕನವು ವೇದಗಳ ಸತ್ಯಸ್ವರೂಪದ ಬಗೆಗಿನ ನಂಬಿಕೆಯು ಒಂದು ಚಾರಿತ್ರಿಕ ಬೆಳವಣಿಗೆಯೆಂಬುದನ್ನು ತೋರಿಸುತ್ತದೆ. ವೇದ, ಪರಂಪರೆ (ಸ್ಮೃತಿ), ಶಿಷ್ಟಾಚಾರ ಮತ್ತು ಸಭೆಯ ತೀರ್ಮಾನ ಎಂಬ ನಾಲ್ಕು ವಿಭಿನ್ನ ಕೇಂದ್ರಗಳು ಇದ್ದಾಗ ಇವುಗಳಲ್ಲಿ ಖಚಿತವಾಗಿ ಅನುಸರಿಸಲೇಬೇಕಾದ ಕೇಂದ್ರದ ಬಗೆಗೆ ಗೊಂದಲವೇಳುವುದು ಸಹಜ. ಅಲ್ಲದೆ, ಒಂದಾನೊಂದು

ಕಾಲಕ್ಕೆ ವೇದಗಳು ಮಾತ್ರವಲ್ಲದೆ ಇತರೆ ಸತ್ಯಸ್ವರೂಪದ ಹಾಗೂ ನ್ಯಾಯಾನ್ಯಾಯಗಳನ್ನು ನಿರ್ಧರಿಸುವ ಕೇಂದ್ರಗಳೂ ಇದ್ದವು. ವಸಿಷ್ಠ ಮತ್ತು ಬೌಧಾಯನ ಸೂತ್ರಗಳು ಹುಟ್ಟಿದ ಕಾಲವು ಈ ಅಂಶವನ್ನು ಶ್ರುತಪಡಿಸುತ್ತವೆ.

'ಗೌತಮ ಧರ್ಮಸೂತ್ರ'ದ ಕಾಲದಲ್ಲಿ ಮಾತ್ರ ವೇದಗಳು ಹೇಳಿದ್ದೇ ಅಧಿಕೃತ ಎಂಬ ಅಭಿಪ್ರಾಯ ಹುಟ್ಟಿದ್ದು. 'ಆಪಸ್ತಂಭ ಸೂತ್ರ'ದಲ್ಲಿಂತೂ ವೇದವನ್ನು ಅಧಿಕೃತ ಕೇಂದ್ರವೆಂದು ಪರಿಗಣಿಸದೆ ಜ್ಞಾನಿಗಳ ಸಭೆಯ ತೀರ್ಮಾನವೇ ಅಂತಿಮ ತೀರ್ಮಾನ ಎಂಬ ನಿಲುವು ತಾಳಲಾಗಿದೆ. ಬೌಧಾಯನನ ಕಾಲದಲ್ಲಿ ಮಾತ್ರ ಈ ಸಭೆಯ ತೀರ್ಮಾನವೂ ಅಧಿಕೃತ ತೀರ್ಮಾನಗಳಲ್ಲಿ ಒಂದು ಎಂಬ ನಿಲುವಿತ್ತು. ಆಪಸ್ತಂಭನು ಆ ಸಭೆಯ ಗಣ್ಯರಿಗೆ ವೇದ ಜ್ಞಾನವನ್ನು ಅರ್ಹತೆಯನ್ನಾಗಿ ಸೂಚಿಸಿದ್ದರೂ, ಆ ಗಣ್ಯರು ತಳೆಯುವ ತೀರ್ಮಾನವೇ ಅಂತಿಮವಾಗಿತ್ತೇ ವಿನಾ ವೇದಗಳು ತಳೆಯುವ ತೀರ್ಮಾನಗಳಲ್ಲ ಎಂಬುದನ್ನು ಇಲ್ಲಿ ಸೂಚಿಸಬೇಕು. ಆಪಸ್ತಂಭ ತನ್ನ ಧರ್ಮಸೂತ್ರಗಳನ್ನು ರಚಿಸಿದ್ದು ಕ್ರಿ. ಪೂ. ೬೦೦ ರಿಂದ ೨೦೦[೧]ರ ನಡುವೆ.

ಈ ಎಲ್ಲ ಅಂಶಗಳಿಂದ ಸ್ಪಷ್ಟವಾಗುವ ಸಂಗತಿಯೆಂದರೆ ವೇದಗಳಿಗೆ ಒಂದು ಕಾಲಕ್ಕೆ ಇರದಿದ್ದ ಅಧಿಕೃತತೆಯನ್ನೂ ಅಧಿಕಾರವನ್ನೂ ಆರೋಪಿಸುವ ಉದ್ದೇಶಪೂರ್ವಕವಾದ ಪ್ರಯತ್ನವೊಂದು ಒಂದಾನೊಂದು ಕಾಲಕ್ಕೆ ನಡೆದಿದೆಯೆಂಬುದು.

ಹಾಗಿದ್ದರೆ ವೇದಗಳನ್ನು ಏಕಮಾತ್ರ ಹಾಗೂ ಅಂತಿಮವಾದ ನ್ಯಾಯಾನ್ಯಾಯ ವಿವೇಚನೆಗಳಿಗೆ ಅಧಿಕೃತ ದಾಖಲೆಗಳನ್ನಾಗಿಸುವುದರ ಹಿಂದಿನ ಉದ್ದೇಶವೇನು?

ಇದರ ಜೊತೆಗೆ, ಕೆಲವು ಆಯ್ದ ವೇದಸಾಹಿತ್ಯವನ್ನು ಮಾತ್ರ ಅಧಿಕೃತವೆಂದು ಬ್ರಾಹ್ಮಣರು ಪರಿಗಣಿಸಿದ್ದೇಕೆ? ಇದನ್ನರಿಯಲು ವೈದಿಕ ಸಾಹಿತ್ಯ ಎಂದರೇನೆಂಬುದನ್ನು ಮೊದಲು ತಿಳಿಯಬೇಕು.

ವೈದಿಕ ಸಾಹಿತ್ಯವೆಂಬುದು ಎರಡು ಅರ್ಥಗಳಲ್ಲಿ ಬಳಸಲ್ಪಡುತ್ತದೆ. ಸೀಮಿತ ಅರ್ಥದಲ್ಲಿ ಅದು ಸಂಹಿತೆ, ಆರಣ್ಯಕಗಳು, ಬ್ರಾಹ್ಮಣಗಳು, ಉಪನಿಷತ್ತು ಹಾಗೂ ಸೂತ್ರಗಳನ್ನು ಒಳಗೊಳ್ಳುತ್ತದೆ. ವಿಶಾಲ ಅರ್ಥದಲ್ಲಿ ಬಳಸಿದಾಗ ಅದು ಇತಿಹಾಸ ಹಾಗೂ ಪುರಾಣಗಳನ್ನೂ ಒಳಗೊಳ್ಳುತ್ತದೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಈ ಎಲ್ಲಾ ಪ್ರಕಾರಗಳು ವೈದಿಕ ಸಾಹಿತ್ಯವೆಂಬ ಒಂದೇ ವರ್ಗಕ್ಕೆ ಸೇರಿದ್ದ ಘಟ್ಟದಲ್ಲಿ ಅವುಗಳ ನಡುವೆ ಮಾನುಷ, ಅತಿಮಾನುಷ ಅಥವಾ ಅಧಿಕೃತ–ಅನಧಿಕೃತ ಎಂಬ ಭೇದಗಳಿರಲಿಲ್ಲ. 'ಶತಪಥ ಬ್ರಾಹ್ಮಣ'ದಲ್ಲಿ ಇದು ಸ್ಪಷ್ಟವಾಗಿ ವ್ಯಕ್ತವಾಗಿದೆ:

" 'ನಾನು ದ್ವಿಗುಣಿಸಲಿ; ನಾನು ವಿಸ್ತರಿಸಲಿ' ಎಂದ ಪ್ರಜಾಪತಿಯು ಮೊಟ್ಟಮೊದಲು ಪವಿತ್ರಜ್ಞಾನವಾದ ವೇದಶಾಸ್ತ್ರ ತ್ರಿವಳಿಯನ್ನು ಸೃಷ್ಟಿಸಿದ. ಅದೇ ಅವನ ಸೃಷ್ಟಿಯ ನೆಲೆಯಾಯಿತು. ಆದ್ದರಿಂದಲೇ ವೇದಶಾಸ್ತ್ರ ಪಾರಂಗತನಾದವನಿಗೆ ಸುಭದ್ರವಾದ ನೆಲೆಯಿರಲು ಕಾರಣ. ಪವಿತ್ರ ಜ್ಞಾನವೇ ಅವನ ಭೂಮಿಕೆಯಾಗಿರುವುದು. ಇಂಥ ನೆಲೆಯಲ್ಲಿ ನಿಂತೇ ಪ್ರಜಾಪತಿಯು ವಾಕ್‌ನಿಂದ ಜಲವನ್ನು ಸೃಷ್ಟಿಸಿದನು. ವಾಕ್ ಜಗತ್ತಿನ ಚರಾಚರಗಳನ್ನು ಆಕ್ರಮಿಸಿದಳು. ಆಗ ಪ್ರಜಾಪತಿಯು ಈ ಜಲದ ಮೂಲಕ ತಾನು

೧. ಇದು ಮ್ಯಾಕ್ಸ್‌ಮುಲ್ಲರರು ಸೂತ್ರಗಳಿಗೆ ಸೂಚಿಸಿರುವ ಕಾಲ. ಆಪಸ್ತಂಭ ಸೂತ್ರವೇ ಅವುಗಳಲ್ಲಿ ಮೊದಲನೆಯದು.

ಎಲ್ಲೆಡೆ ಹಬ್ಬಲೆಂದು ಬಯಸಿ ವೇದ ತ್ರಿವಳಿಯೊಂದಿಗೆ ಜಲವನ್ನು ಪ್ರವೇಶಿಸಿದನು. ಆಗ ಅಂಡವೊಂದು ಸೃಷ್ಟಿಯಾಯಿತು ಹಾಗೂ ಅದಕ್ಕೆ ಜೀವ ಕೊಡಲಾಯಿತು. ಆಗ ಪವಿತ್ರ ಜ್ಞಾನವಾದ ವೇದಶಾಸ್ತ್ರ ಸೃಷ್ಟಿಯಾಯಿತು. ಆದ್ದರಿಂದ ಈ ಜಗತ್ತಿನಲ್ಲಿ ಸೃಷ್ಟಿಯಾದ ಮೊದಲ ವಸ್ತು ಈ ಪವಿತ್ರ ಜ್ಞಾನವೇ. ವೇದವನ್ನು ಕಲಿತವನು ಅಗ್ನಿಯಂತೆ; ಕಾರಣ, ಪವಿತ್ರ ಜ್ಞಾನವು ಅಗ್ನಿಯ ಬಾಯಿ.''

''ಹಸಿಯಾದ ಕಾಷ್ಠಕ್ಕೆ ಹತ್ತಿದ ಬೆಂಕಿಯಿಂದ ಹೊಗೆಯ ವಿವಿಧ ರೂಪಗಳು ಹೊರಡುವಂತೆ, ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವಣ, ಆಂಗೀರಸಗಳು, ಇತಿಹಾಸಗಳು, ಪುರಾಣಗಳು, ವಿಜ್ಞಾನ, ಉಪನಿಷತ್ತುಗಳು, ಶ್ಲೋಕಗಳು, ವಿವರಣೆಗಳು ಇವೆಲ್ಲ ಪರಮಾತ್ಮನ ಉಸಿರಿನಿಂದ ಸೃಷ್ಟಿಯಾದವು.''

ಆದರೆ ಅಧಿಕೃತತೆಯ ಹಾಗೂ ಪರಮಸತ್ಯದ ಪ್ರಶ್ನೆ ಬಂದಾಗ ಬ್ರಾಹ್ಮಣರು ವೈದಿಕ ಸಾಹಿತ್ಯವನ್ನು ಶ್ರುತಿ ಹಾಗೂ ಶ್ರುತಿಯೇತರ ಎಂಬ ಎರಡು ವರ್ಗಗಳಾಗಿ ವಿಂಗಡಿಸಿದರು. ಮೊದಲನೆಯ ವರ್ಗಕ್ಕೆ ಸಂಹಿತೆಗಳು ಹಾಗೂ ಬ್ರಾಹ್ಮಣಗಳನ್ನು ಸೇರಿಸಿ ಅವಕ್ಕೆ ಅಧಿಕಾರವನ್ನೂ ಅಧಿಕೃತತೆಯನ್ನೂ ನೀಡಿದರು. ಉಳಿದವು ಶ್ರುತಿಯೇತರ ಎಂದು ಕರೆಯಲ್ಪಟ್ಟಿದ್ದರಿಂದ ಅಂಥ ಅಧಿಕೃತತೆಯನ್ನು ಕಳೆದುಕೊಂಡವು. ಈ ವಿಂಗಡನೆಯನ್ನು ಯಾವಾಗ ಆರಂಭಿಸಲಾಯಿತು ಎಂಬುದನ್ನು ಹೇಳುವುದು ಕಷ್ಟ. ಈ ಹಿಂದೆ ಕೊಡಲಾದ ವೈದಿಕ ಸಾಹಿತ್ಯದ ಪಟ್ಟಿಯಲ್ಲಿ ಕೊನೆಯ ಎರಡು ವರ್ಗಗಳು ಇನ್ನೂ ಪೌಢವಾಗಿಲ್ಲದಿದ್ದರಿಂದ ಹಾಗೂ ಬ್ರಾಹ್ಮಣಗಳಲ್ಲಿ ಸೇರಿದ್ದರಿಂದ ಅವು ಶ್ರುತಿಗಳ ಪಟ್ಟಿಗೆ ಸೇರದೆ ಹೋದವೆಂದು ಕಾಣುತ್ತದೆ.

ಆರಣ್ಯಕಗಳು ಬ್ರಾಹ್ಮಣದ ಒಂದು ಭಾಗವಾದ್ದರಿಂದ ಅವನ್ನು ಶ್ರುತಿಯ ಪಟ್ಟಿಯಲ್ಲಿ ಮತ್ತೆ ನಿರ್ದಿಷ್ಟವಾಗಿ ಸೂಚಿಸಿಲ್ಲವೆಂದು ಕಾಣುತ್ತದೆ. ಆದರೆ ಉಪನಿಷತ್ತುಗಳ ಸ್ಥಾನ ಅಸ್ಪಷ್ಟವಾಗಿದೆ. ಆದರೆ 'ಸೂತ್ರಗಳನ್ನು' ಶ್ರುತಿಯ ಪಟ್ಟಿಯಿಂದ ಹೊರಗಿಟ್ಟದ್ದೇಕೆ ಎಂಬುದು ಮಾತ್ರ ಅರ್ಥವಾಗುವುದಿಲ್ಲ. ಬ್ರಾಹ್ಮಣಗಳು ಶ್ರುತಿಯ ಪಟ್ಟಿಯಲ್ಲಿ ಸೇರುವುದಾದರೆ ಸೂತ್ರಗಳೂ ಸೇರಬೇಕಾಗಿತ್ತು. ಮ್ಯಾಕ್ಸ್‌ಮುಲ್ಲರ್ ಬರೆಯುತ್ತಾರೆ:

''ದೇವರಿಗೆ ಸಲ್ಲಿಸಲಾಗುವ ಶ್ಲೋಕಗಳು ಹಾಗೂ ಪ್ರಾರ್ಥನೆಗಳನ್ನೊಳಗೊಂಡ ಕಾವ್ಯಕ್ಕೆ ಜನಾಂಗವೊಂದು ಅತಿಮಾನುಷತೆಯನ್ನು ಆರೋಪಿಸಿದರೆ ಅದನ್ನು ಹೇಗೆ ಅರ್ಥಮಾಡಿಕೊಳ್ಳಬಹುದು. ಆದರೆ ಬ್ರಾಹ್ಮಣಗಳೆಂಬ ಗದ್ಯ ರಚನೆಗಳ ಮಾತು ಬೇರೆ. ಮಂತ್ರಗಳಿಗೆ ಹೋಲಿಸಿದರೆ ತೀರಾ ನವೀನವಾಗಿ ಕಾಣುವ ಬ್ರಾಹ್ಮಣಗಳನ್ನು ಶ್ರುತಿಯ ಪಟ್ಟಿಗೆ ಸೇರಿಸಲು ಪ್ರಾಯಶಃ ಇದ್ದ ಕಾರಣವೆಂದರೆ, ತಾವು ಶ್ರೇಷ್ಠರೆಂಬ ಘೋಷಣೆಗಳಿಗೆ 'ಬ್ರಾಹ್ಮಣ'ಗಳೆಂಬ ಈ ಆಧ್ಯಾತ್ಮಿಕ ರಚನೆಗಳ ಮೂಲಕವೇ ದೈವೀ ಮುದ್ರೆಯನ್ನು ಪಡೆಯುವ ಬ್ರಾಹ್ಮಣರ ಹಂಬಲವಿರಬಹುದು. ಮಂತ್ರಗಳು ಹಾಗೂ ಬ್ರಾಹ್ಮಣಗಳ ಸಮಕಾಲೀನತೆಯನ್ನು ಸ್ಥಾಪಿಸಲು ಬ್ರಾಹ್ಮಣರು ಮುಂದಿಟ್ಟಿರುವ ವಾದಕ್ಕೆ ನಾವು ಹೆಚ್ಚು ಮಹತ್ವಕೊಡುವ ಅಗತ್ಯವಿಲ್ಲವಾದರೂ ಸೂತ್ರಗಳು ಹಾಗೂ ಉಳಿದ ಲೌಕಿಕ ಭಾರತೀಯ ಸಾಹಿತ್ಯಕ್ಕಿಂತ ಮಂತ್ರಗಳು ಹಾಗೂ ಬ್ರಾಹ್ಮಣಗಳು ಹಿಂದಿನವು ಎಂಬ ಸಾಮಾನ್ಯಾಭಿಪ್ರಾಯಗಳನ್ನು ನಾವು ತಿರಸ್ಕರಿಸಲು ಯಾವ ಕಾರಣವೂ ಇಲ್ಲ. ಧಾರ್ಮಿಕ ಗ್ರಂಥಗಳ ಸಂದರ್ಭದಲ್ಲಿ ಹೊಸ ರಚನೆಗಳು ಹಳೆಯ ರಚನೆಗಳೊಂದಿಗೆ ಬೆರೆತುಹೋಗುವುದು ಸಹಜ. ಆದರೆ ಪ್ರಾಚೀನವಾದ ಭಾಗಗಳೇ ಅಧಿಕೃತವಲ್ಲವೆಂದು ಘೋಷಣೆಯಾಗಬೇಕಾದರೆ ಅವುಗಳಲ್ಲಿದ್ದ ತತ್ವಗಳ ಅಧಿಕೃತತೆಯನ್ನು ಅಲ್ಲಗಳೆಯುವವರ ಕೈವಾಡ ಇರುವುದು ಸ್ಪಷ್ಟ. ಸೂತ್ರಗಳು ಬ್ರಾಹ್ಮಣಗಳಿಗಿಂತ ತಡವಾಗಿ ರಚಿತವಾದವೆಂಬ ಅಂಶವನ್ನು ಬಿಟ್ಟರೆ ಅವು ಶ್ರುತಿಯ ಪಟ್ಟಿಗೆ ಸೇರದಿರಲು ಇನ್ನಾವ ಕಾರಣವೂ ಇಲ್ಲ. ಆದರೆ ಬ್ರಾಹ್ಮಣಗಳು ಹಾಗು ಮಂತ್ರಗಳೆರಡೂ ಒಂದೇ ಕಾಲಕ್ಕೆ ಸೇರಿದಂಥವು

ಹಾಗೂ ಸಮಾನ ಮಹತ್ವವನ್ನುಳ್ಳವು ಎಂದು ಹೇಳಹೊರಡುವ ಭಾರತೀಯ ವೇದಾಂತಿಗಳ ಉತ್ಸಾಹವನ್ನು ಗಮನಿಸಿದರೆ, ಸೂತ್ರಗಳಿಗೆ ದೈವಿ ಮುದ್ರೆಯನ್ನು ಕೊಡದೇ ಇರಲು ಇದ್ದ ಕಾರಣಗಳ ಹಿನ್ನೆಲೆಯನ್ನೂ ಅರ್ಥಮಾಡಿಕೊಳ್ಳಬಹುದಾಗಿದೆ.''

ಇನ್ನು ಮುಂದಿನ ಅಂಶ 'ಶ್ರುತಿ' ಎಂಬ ಪದದ ವಿಸ್ತಾರ ಹಾಗೂ ಅದರ ಅಧಿಕೃತತೆಯಲ್ಲಿ ಉಂಟಾದ ಬದಲಾವಣೆಗೆ ಸಂಬಂಧಿಸಿದೆ. ಮನು ಬ್ರಾಹ್ಮಣಗಳನ್ನು ಶ್ರುತಿಯ ಪಟ್ಟಿಯಿಂದ ಹೊರಗಿಟ್ಟಿದ್ದಾನೆಂಬುದನ್ನೂ[೧] 'ಸ್ಮೃತಿ'ಯ ಭಾಗವೊಂದರಲ್ಲಿ ಕಾಣಬಹುದು:

''ಶ್ರುತಿಗಳಲ್ಲಿ ವೇದಗಳೂ, ಹಾಗೂ ಸ್ಮೃತಿಗಳಲ್ಲಿ ನಿಯಮಗಳನ್ನು ಕುರಿತ ನಿರ್ದೇಶನಗಳೂ ಇರುವದರಿಂದ ಇವುಗಳು ಹೇಳಿದ್ದನ್ನು ಯಾರೂ ಪ್ರಶ್ನಿಸಲಾಗದು. ಕಾರಣ ಕರ್ತವ್ಯಗಳ ಬಗೆಗೆ ಅವು ತಿಳುವಳಿಕೆ ನೀಡುತ್ತವೆ. ಈ ಜ್ಞಾನದ ಎರಡೂ ಪ್ರಾಥಮಿಕ ಮೂಲಗಳನ್ನು ವೈಚಾರಿಕ ಆಧಾರದ ಮೇಲೆ ಪ್ರಶ್ನಿಸುವ ಬ್ರಾಹ್ಮಣನನ್ನು ವೇದನಿಂದಕನೆಂದು ಬಹಿಷ್ಕರಿಸಬೇಕು. ..... ೧೩. ಕರ್ತವ್ಯಗಳ ಬಗೆಗೆ ತಿಳಿಯಬಯಸುವವನಿಗೆ ಶ್ರುತಿ ಹೇಳುವ ಮಾತೇ ಅಂತಿಮ.''

ನಾಲ್ಕನೆಯ ಅಂಶವು ಪುರಾಣಗಳು ವೇದಗಳಿಗಿಂತ ಮೊದಲು ಸೃಷ್ಟಿಯಾದವೆಂಬ ನಿಲುವನ್ನು ಕುರಿತದ್ದು. ವಾಯುಪುರಾಣ[೨] ಹೀಗೆನ್ನುತ್ತದೆ: ''ಎಲ್ಲ ಶಾಸ್ತ್ರಗಳಿಗಿಂತ ಮೊದಲು ಪುರಾಣವು ಬ್ರಹ್ಮನಿಂದ ಉಚ್ಚರಿಸಲ್ಪಟ್ಟಿತು. ಅನಂತರ ವೇದಗಳು ಉಚ್ಚರಿಸಲ್ಪಟ್ಟವು.''

ಮತ್ಸ್ಯಪುರಾಣವು[೩] ವೇದಗಳಿಗಿಂತ ಪುರಾಣಗಳು ಮೊದಲು ಹುಟ್ಟಿದವೆಂದು ಹೇಳುವುದರ ಜೊತೆಗೆ ಅವು ಅಮರವೆಂದೂ ಸಾರುತ್ತದೆ. '.....ಮೊಟ್ಟಮೊದಲು ಪಿತಾಮಹ ಬ್ರಹ್ಮನೂ, ನಂತರ ಅಂಗೋಪಾಂಗಗಳೊಂದಿಗೆ ವೇದಗಳು ಹುಟ್ಟಿದವು. ನೂರಾರು ಕೋಟಿ ಶ್ಲೋಕಗಳಲ್ಲಿ ಹರಿದ, ಅಮರ ಹಾಗು ಪವಿತ್ರವಾದ ಪುರಾಣವು ಬ್ರಹ್ಮನ ಬಾಯಿಯಿಂದ ಹೊರಬಿದ್ದ ಶಾಸ್ತ್ರಗಳಲ್ಲಿ ಮೊದಲನೆಯದು; ಅನಂತರ ವೇದ, ಆ ಬಳಿಕ ಮೀಮಾಂಸೆ ಹಾಗೂ ನ್ಯಾಯ.... ವೇದಾಧ್ಯಯನ ನಿರತನಾದ ಬ್ರಹ್ಮನ ಮನಸ್ಸಿನಿಂದ ಜ್ಞಾನಿಗಳಾದ ಪುತ್ರರು ಹುಟ್ಟಿದರು.'

ಭಾಗವತ ಪುರಾಣವು ವೇದಕ್ಕೆ ಸಮಾನವಾದ ಅಧಿಕೃತತೆಯನ್ನು ತಾನೂ ಘೋಷಿಸಿಕೊಳ್ಳುತ್ತದೆ: 'ಭಾಗವತವೆಂದು ಕರೆಯಲಾಗುವ ಪುರಾಣವು ವೇದಕ್ಕೆ ಸಮಾನವಾಗಿದೆ ಎಂದು ಬ್ರಹ್ಮರಾತ್ರನು ಘೋಷಿಸಿದನು'. ಬ್ರಹ್ಮವೈವರ್ತ ಪುರಾಣವೂ ತಾನು ವೇದಗಳಿಗಿಂತ ಶ್ರೇಷ್ಠವೆಂದು ಹೇಳಿಕೊಳ್ಳುತ್ತದೆ. 'ಪುರಾಣಗಳ ಸಾರ, ಪುರಾಣ, ಉಪಪುರಾಣ, ವೇದಗಳ ತಪ್ಪುಗಳನ್ನು ಸರಿಪಡಿಸುವ ಬ್ರಹ್ಮವೈವರ್ತಗಳೆಲ್ಲವನ್ನೂ ನಾನು ಬಲ್ಲೆ'ನೆಂದು ಅದು ಹೇಳಿಕೊಳ್ಳುತ್ತದೆ.

ಈ ಸಮೀಕ್ಷೆಯು ವೇದಗಳಿಗೆ ಸಂಬಂಧಪಟ್ಟ ಅನೇಕ ಒಗಟುಗಳನ್ನು ಹೊರಗೆಡಹುತ್ತದೆ. ವೇದಗಳು ನಿರಂತರವಾದವು ಹಾಗೂ ಕಾಲಕ್ಕಿಂತ ಮೊದಲೇ ಹುಟ್ಟಿದವು; ಅವು ಮಾನವಾತೀತ

---

೧. ವೇದ ಎಂಬ ಪದವೇ 'ಬ್ರಾಹ್ಮಣ'ವನ್ನು ಒಳಗೊಂಡಿದೆ ಎಂಬ ಆಧಾರದ ಮೇಲೆ ಈ ಅಂಶವನ್ನು ಕೆಲವರು ನಿರಾಕರಿಸಬಹುದು. ಆದರೆ, ಮನುಸ್ಮೃತಿಯ ಒಂದು ಭಾಗದಲ್ಲಿ (iv. ೧೦೦) ಬಿಟ್ಟರೆ ಉಳಿದೆಲ್ಲೂ 'ಬ್ರಾಹ್ಮಣ'ಗಳ ಉಲ್ಲೇಖವಿಲ್ಲ.

೨. ಮ್ಯೂರ್: 'ಸ್ಯಾನ್‌ಸ್ಕ್ರಿಟ್ ಟೆಕ್ಸ್ಟ್', ಸಂ. III, ಪು. ೨೭

೩. ಅದೇ, ಸಂ. III, ಪು. ೨೮

ಹಾಗೂ ದೈವೇತರ ಸೃಷ್ಟಿ; ಅವು ಪರಮ ಸತ್ಯ ಹಾಗೂ ಅಧಿಕೃತವಾದವು ಎಂಬ ಬ್ರಾಹ್ಮಣರ ಘೋಷಣೆಗಳಲ್ಲಿ ಕಾಣುವ ಒಗಟುಗಳ ಜೊತೆಗೆ ಇನ್ನೂ ಹಲವು ಒಗಟುಗಳಿವೆ. ಒಂದಾನೊಂದು ಕಾಲಕ್ಕೆ ವೇದಗಳಿಗೆ ಅಧಿಕೃತತೆಯೂ, ಪರಮೋಚ್ಚವೆಂಬ ಅಧಿಕಾರವೂ ಇರಲಿಲ್ಲ. ಹಾಗಿದ್ದಲ್ಲಿ ಆ ಗುಣಗಳನ್ನು ವೇದಗಳಿಗೆ ಆರೋಪಿಸಬೇಕಾದ ಅಗತ್ಯ ಬ್ರಾಹ್ಮಣರಿಗೆ ಬಂದದ್ದೇಕೆ? ಶ್ರುತಿ ಪಟ್ಟಿಯಿಂದ ಸೂತ್ರಗಳನ್ನೇಕೆ ಬ್ರಾಹ್ಮಣರು ಹೊರಗಿಟ್ಟರು? ವೇದಗಳು ಅಧಿಕೃತ ಹಾಗೂ ಪರಮೋಚ್ಚ ಹಾಗೂ ಪರಮ ಸತ್ಯ ಎಂಬ ನಿಲುವಿನ ಬದಲಾಗಿ ಪುರಾಣಗಳಿಗೆ ಆ ಅಧಿಕಾರವನ್ನು ಕೊಡಲು ಬ್ರಾಹ್ಮಣರು ನಿರ್ಧರಿಸಿದ್ದೇಕೆ?

* * * *

# ಅನುಬಂಧ – II

## ವೇದಾಂತದ ಒಗಟು*

ಭಾರತದ ಪ್ರಾಚೀನ ತತ್ತ್ವಶಾಸ್ತ್ರಜ್ಞರು ಪ್ರತಿಪಾದಿಸಿದ ಆರು ಮುಖ್ಯ ತತ್ವ ಪ್ರಕಾರಗಳಲ್ಲಿ ಅತ್ಯಂತ ಪ್ರಧಾನವಾದದ್ದೆಂದರೆ ವೇದಾಂತ ತತ್ವಶಾಸ್ತ್ರ. ಹಿಂದೂಗಳ ಮೇಲೆ ವೇದಾಂತದ ಪ್ರಭಾವವನ್ನು ಇನ್ನಾವುದೂ ಸರಿಗಟ್ಟಲಾರದು. ವೇದಗಳನ್ನು ಅನುಸರಿಸುವವರಿಗೆಲ್ಲ ವೇದಾಂತದ ಬಗ್ಗೆ ಹೆಮ್ಮೆ. ಅದನ್ನು ಸತ್ಯವೆಂದು ಅಂಗೀಕರಿಸುವುದರ ಜೊತೆಗೆ ಅದು ವಿಶ್ವದ ತತ್ತ್ವಶಾಸ್ತ್ರೀಯ ಚಿಂತನೆಗೆ ಭಾರತ ನೀಡಿದ ಅತ್ಯಂತ ಮೌಲಿಕ ಕೊಡುಗೆ ಎಂದೂ ಪರಿಗಣಿಸಿದ್ದಾರೆ. ವೇದಗಳ ಬೋಧನೆಯ ಉದ್ದೇಶಗಳ ಮೂರ್ತರೂಪವಾಗಿ ವೇದಾಂತ ತತ್ವಜ್ಞಾನವನ್ನು ಕಾಣಲಾಗುತ್ತದೆ. ಆದರೆ ಇತಿಹಾಸದ ಒಂದು ಘಟ್ಟದಲ್ಲಿ ವೇದಾಂತದ ತತ್ವಶಾಸ್ತ್ರವು ವೇದಗಳನ್ನು ವಿರೋಧಿಸಿತ್ತು ಎಂಬುದನ್ನಾಗಲಿ, ವೇದಾಂತ ಎಂಬ ಪದಕ್ಕೆ ಇಂದು ಇರುವ ಅರ್ಥಕ್ಕಿಂತ ಭಿನ್ನವಾದ ಅರ್ಥವಿತ್ತು ಎಂದಾಗಲಿ, ವೇದದ ಅನುಯಾಯಿಗಳಿಗೆ ಗೊತ್ತಿರಲಿಕ್ಕಿಲ್ಲ. ವೇದಾಂತವು ವೈದಿಕ ಚಿಂತನೆಗಳ ಸಾರಸಂಗ್ರಹ ಎಂಬ ಪ್ರಚಲಿತ ಅಭಿಪ್ರಾಯಕ್ಕಿಂತ ಭಿನ್ನವಾಗಿ ವೇದಾಂತವು ವೈದಿಕ ಸಾಹಿತ್ಯದ ಪರಿಧಿಯ ಆಚೆಗಿನ ಆಲೋಚನಾಕ್ರಮವನ್ನೂ ಪ್ರತಿನಿಧಿಸುತ್ತಿತ್ತು ಎಂಬುದು ವಾಸ್ತವ.

ವೇದಗಳು ಮತ್ತು ವೇದಾಂತದ ನಡುವಿನ ಈ ವೈರುಧ್ಯ ಉಪನಿಷತ್ ಎಂಬ ಪದದಿಂದ ಹುಟ್ಟಿದ್ದಲ್ಲವೆಂಬ ಮಾತು ನಿಜ. ಅದೊಂದು ಸಾಹಿತ್ಯದ ಸಾರ್ವತ್ರಿಕ ಹೆಸರಾಗಿದ್ದು, ಅದರ ಮೇಲೆ ವೇದಾಂತ ತತ್ತ್ವಶಾಸ್ತ್ರ ನಿರ್ಮಾಣವಾಯಿತು; ಅಲ್ಲದೆ, ಅದರ ವ್ಯುತ್ಪತ್ತಿ ಕುರಿತು ಸಾಕಷ್ಟು ಭಿನ್ನಾಭಿಪ್ರಾಯಗಳಿವೆ. ಬಹುತೇಕ ಯೂರೋಪಿಯನ್ ಚಿಂತಕರು ಉಪನಿಷತ್ ಎಂಬ ಪದಕ್ಕೆ ಒಬ್ಬ ವ್ಯಕ್ತಿಯೆದುರು ಕುಳಿತ ಸಾರ್ವಜನಿಕರು ಅಥವಾ ಒಂದು ಸಭೆ ಎಂಬ ಅರ್ಥ ಇರುವುದನ್ನು ಒಪ್ಪಿದ್ದಾರೆ. ಈ ವಾದದ ಪ್ರಕಾರ 'ಸದ್' ಎಂದರೆ ಕುಳಿತುಕೊಂಡು, 'ನಿ' ಎಂದರೆ ಕೆಳಗೆ, 'ಉಪ' ಎಂದರೆ ಹತ್ತಿರ ಎಂದರ್ಥ. ಆದರೆ ಮ್ಯಾಕ್ಸ್‌ಮುಲ್ಲರ್ ಪ್ರಕಾರ ಈ ವ್ಯುತ್ಪತ್ತಿಯನ್ನು ಒಪ್ಪಲು ಎರಡು ಆಕ್ಷೇಪಣೆಗಳಿವೆ. ಮೊದಲನೆಯದಾಗಿ, ಅಂಥ ಪದವನ್ನು ವೇದದ ಯಾವುದೇ ಭಾಗಕ್ಕೆ ಅಂತೆಯೇ ಉಪನಿಷತ್ ಅಧ್ಯಾಯಗಳಿಗೆ ಅನ್ವಯಿಸ ಬಹುದಾಗಿದೆ. ಮತ್ತು ಅದರ ಅರ್ಥವನ್ನು ಹೀಗೆ ಸೀಮಿತಗೊಳಿಸಿಲಾಯಿತೆಂಬುದನ್ನು ಎಂದೂ ವಿವರಿಸಲಾಗಿಲ್ಲ. ಎರಡನೆಯದಾಗಿ, ಉಪನಿಷದ್ ಎಂಬ ಪದ ಸಭೆ ಅಥವಾ ಸಮಾವೇಶ ಎಂಬ ಅರ್ಥದಲ್ಲಿ ಬಳಕೆಯಾದಂತಿಲ್ಲ. ಆ ಪದ ಬಳಕೆಯಾದಾಗಲೆಲ್ಲ ಈ ಪದಕ್ಕೆ ಧರ್ಮತತ್ತ್ವ ಅಥವಾ ರಹಸ್ಯ ಧರ್ಮತತ್ವಗಳಿರುವ ಗ್ರಂಥದ ಶೀರ್ಷಿಕೆ ಎಂದು ಅರ್ಥವಿದೆ. ಮ್ಯಾಕ್ಸ್‌ಮುಲ್ಲರ್ ಅವರು

---

* *ಇಪ್ಪತ್ತೊಂದು ಪುಟಗಳಲ್ಲಿ ಬೆರಳಚ್ಚಾಗಿರುವ ಈ ಅಧ್ಯಾಯಕ್ಕೆ ಲೇಖಕರು ಯಾವ ತಿದ್ದುಪಡಿಗಳನ್ನೂ ಮಾಡಿಲ್ಲ. ಇದೊಂದು ಸಂಪೂರ್ಣ ಅಧ್ಯಾಯ – ಸಂ.*

‘ತೈತ್ತಿರೀಯ ಉಪನಿಷತ್ತಿ’ನ (II, ೯) ವ್ಯಾಖ್ಯಾನ ಮಾಡುತ್ತ ಶಂಕರರು ಹೇಳಿದಂತೆ ಉಪನಿಷತ್ತಿನಲ್ಲಿ ಅಡಗಿರುವ ಪರಮೋಚ್ಚ ಆನಂದ ಎಂಬ ಅರ್ಥವೂ ಇದೆಯೆಂದಿದ್ದಾರೆ. ಅಲ್ಲದೆ, ಇಂಥ ಶಬ್ದ ವ್ಯುತ್ಪತ್ತಿ ಆರಣ್ಯಕಗಳಲ್ಲಿ ಹೆಚ್ಚು ಕಾಣುತ್ತದಾದರೂ ಅಲ್ಲಿ ಶಬ್ದಾರ್ಥಕ್ಕಿಂತ ಶ್ಲೇಷಾರ್ಥಕ್ಕೇ ಹೆಚ್ಚು ಪ್ರಾಧಾನ್ಯ ಎನ್ನುತ್ತಾರೆ ಮ್ಯಾಕ್ಸ್‌ಮುಲ್ಲರ್.

ಉಪನಿಷತ್ ಪದದ ಮೂಲವನ್ನು ‘ಸದ್’ ಎಂಬ ಪದದಲ್ಲಿ ಹುಡುಕುವ ಪ್ರಯತ್ನವನ್ನು ಮ್ಯಾಕ್ಸ್‌ಮುಲ್ಲರ್ ಮಾಡುತ್ತಾರೆ. ಸದ್ ಎಂಬ ಪದಕ್ಕಿರುವ ವಿನಾಶ ಎಂಬ ಪದವನ್ನು ಆಧರಿಸಿ ಅಜ್ಞಾನವನ್ನು ನಾಶಮಾಡುವ ಬ್ರಹ್ಮಜ್ಞಾನವನ್ನು ದೊರಕಿಸಿ ಮೋಕ್ಷದ ಹಾದಿಯನ್ನು ಹುಡುಕುವ ಬಗೆ ಎಂದು ಅರ್ಥೈಸುತ್ತಾರೆ. ಇದು ಭಾರತೀಯ ಚಿಂತಕರ ಅಭಿಪ್ರಾಯ ಕೂಡ ಎಂದು ಮ್ಯಾಕ್ಸ್‌ಮುಲ್ಲರರ ವಾದ.

ಈ ವಾದವನ್ನು ಒಪ್ಪಿಕೊಳ್ಳುವುದಾದರೆ ಇತಿಹಾಸದ ಒಂದು ಘಟ್ಟದಲ್ಲಿ ವೇದಗಳಿಗೆ ವಿರೋಧವಾದ ಚಿಂತನಾಕ್ರಮ ವೇದಾಂತವಾಗಿತ್ತು ಎಂಬ ವಾದಕ್ಕೆ ಆಧಾರ ಸಿಗುತ್ತದೆ. ಈ ಸಿದ್ಧಾಂತದ ಬೆಂಬಲಕ್ಕೆ ವ್ಯುತ್ಪತ್ತಿಯ ಅವಲಂಬಿಸುವ ಅಗತ್ಯವಿಲ್ಲ. ಇತರ ಅನೇಕ ಉತ್ತಮವೂ, ಪ್ರತ್ಯಕ್ಷವೂ ಆದ ಆಧಾರಗಳಿವೆ. ಮೊದಲನೆಯದಾಗಿ, ವೇದಾಂತ ಎಂಬುದು ‘ವೇದಗಳ ಕೊನೆಯ ಗ್ರಂಥಗಳು’ ಎಂಬರ್ಥದಲ್ಲಿ ಎಂದೂ ಬಳಕೆಯಾಗಿಲ್ಲ.

“ಪ್ರೊ. ಮ್ಯಾಕ್ಸ್‌ಮುಲ್ಲರರು[೧] ಹೇಳುವಂತೆ ವೇದಾಂತ ಎಂಬ ಪದಕ್ಕೆ ವೈದಿಕ ಸಾಹಿತ್ಯದ ಕಡೆಯ ಭಾಗ ಅಥವಾ ಕಡೆಯ ಅಧ್ಯಾಯಗಳು ಎಂಬ ಅರ್ಥ ಮೂಲದಲ್ಲಿರಲಿಲ್ಲ. ಬದಲಿಗೆ ವೇದಗಳ ಪರಮೋಚ್ಚ ಉದ್ದೇಶ ಎಂಬ ಅರ್ಥವಿತ್ತು. ತೈತ್ತಿರೀಯ ಆರಣ್ಯಕಗಳ (ಸಂ. ರಾಜೇಂದ್ರ ಮಿತ್ರ ಪು. ೮೨೦) ಹಲವು ಭಾಗಗಳನ್ನು ಸರಿಯಾಗಿ ಗ್ರಹಿಸದೆ ಯೂರೋಪಿನ ಹಾಗೂ ದೇಶೀಯ ವಿದ್ವಾಂಸರಿಬ್ಬರೂ ವೇದಾಂತವನ್ನು ವೇದದ ಕಡೆಯ ಭಾಗವೆಂದು ಕರೆದಿದ್ದಾರೆ. ‘ಯೋ ವೇದದು ಸ್ವರಃ ಪ್ರೋಕ್ತೋ ವೇದಾಂತೇ ಚ ಪ್ರತಿಷ್ಠಿತಃ’ ವೇದದ ಆರಂಭದಲ್ಲಿ ಉಚ್ಚರಿಸಲಾಗುವ ‘ಓಂ’ ವೇದದ ಕೊನೆಯಲ್ಲೂ ಇದೆ. ಇಲ್ಲಿ ವೇದಾಂತವು ‘ವೇದವು’ ಎಂಬುದಕ್ಕೆ ವಿರುದ್ಧವಾಗಿದೆ. ಆದರೆ, ಅದನ್ನು ಸಾಯಣರು ಅರ್ಥಮಾಡಿದಂತೆ ವೇದಾಂತ ಅಥವಾ ಉಪನಿಷದ್ ಎಂದು ಅರ್ಥೈಸಲು ಸಾಧ್ಯವಿಲ್ಲ. ತತ್ವಶಾಸ್ತ್ರ ಎಂಬ ಅರ್ಥದಲ್ಲಿ ವೇದಾಂತವು ನಾರಾಯಣೀಯ ಉಪನಿಷತ್ತಿನಲ್ಲಿ (ತೈತ್ತೀರಿಯ–ಅರಣ್ಯಕ ಪು. ೮೧೭) ಕಾಣಿಸಿಕೊಳ್ಳುತ್ತದೆ. ಇದು ಮುಂಡಕೋಪನಿಷತ್ತಿನಲ್ಲಿ (III,೨.೬) ಪುನರಾವರ್ತನೆಗೊಳ್ಳುತ್ತದೆ. ಮತ್ತೊಂದೆಡೆ (Vedantavignana Suniskitarah)’ ವೇದಾಂತದ ಗುರಿ ಹಾಗೂ ಜ್ಞಾನವನ್ನು ಸರಿಯಾಗಿ ಅರಿತವರು’ ಎಂಬ ಮಾತಿದೆಯೇ ಹೊರತು ವೇದದ ಕಡೆಯ ಭಾಗವನ್ನು ಅರಿತವರು ಎಂದಿಲ್ಲ. ಅದೇ ರೀತಿ, ಶ್ವೇತಾಶ್ವತರ ಉಪನಿಷತ್ತಿನಲ್ಲಿ (VI.೨೨) ‘ವೇದಾಂತೇ ಪರಮಂ ಗುಹ್ಯಂ’ ವೇದಾಂತವು ಪರಮ ರಹಸ್ಯ ಎಂಬ ಅರ್ಥದಲ್ಲಿ ಪ್ರಯೋಗವಾಗಿದೆ. ಕ್ಷುರಿಕೋಪನಿಷತ್ ಹಾಗೂ ಛಾಂದೋಗ್ಯೋಪನಿಷತ್ತುಗಳ ವ್ಯಾಖ್ಯಾನಕಾರರು ಹೇಳುವಂತೆ ವೇದದ ಕಡೆಯ ಭಾಗ ವೇದಾಂತ ಎಂದಿಲ್ಲ. ಗೌತಮ ಧರ್ಮಸೂತ್ರದ ಹತ್ತೊಂಬತ್ತನೇ ಅಧ್ಯಾಯದ ಹನ್ನೆರಡನೆಯ ಶ್ಲೋಕ ಈ ಕುರಿತು ನೇರವಾದ ಪುರಾವೆಯನ್ನು ಒದಗಿಸುತ್ತದೆ. ಅದರಲ್ಲಿ ವೇದಾಂತಗಳು ವೇದಗಳ

೧. ‘ದಿ ಉಪನಿಷದ್ಸ್’ (ಎಸ್.ಬಿ.ಇ) ಸಂ. I, ಪ್ರಸ್ತಾವನೆ ಪು. IXXXVI.

ಸಂಹಿತ ರೂಪ ಎಂಬ ಮಾತಿದೆ. ಇದರ ಅರ್ಥ, ಗೌತಮನ ಕಾಲದಲ್ಲಿ ಉಪನಿಷತ್ತುಗಳು ವೇದಾಂತ ಗಳಿಗಿಂತ ಭಿನ್ನವಾಗಿದ್ದವು ಮತ್ತು ಅವು ವೈದಿಕ ಸಾಹಿತ್ಯದ ಭಾಗವಾಗಿರಲಿಲ್ಲ. ಹರದತ್ತನ ವ್ಯಾಖ್ಯಾನ ಗಳಲ್ಲಿ 'ಆರಣ್ಯಕದಲ್ಲಿ ಉಪನಿಷತ್ ಅಲ್ಲದ ಭಾಗಗಳು ವೇದಾಂತಗಳು' ಎಂದಿದೆ. ಉಪನಿಷತ್ತುಗಳು ವೈದಿಕ ಸಾಹಿತ್ಯದ ಚೌಕಟ್ಟಿನೊಳಗಿರಲಿಲ್ಲವೆಂಬುದಕ್ಕೆ ಇದು ಸಮರ್ಥವಾದ ಪುರಾವೆಯನ್ನೊದಗಿಸು ತ್ತದೆ.

ಇದೇ ದೃಷ್ಟಿಕೋನವನ್ನು ಭಗವದ್ಗೀತೆಯಲ್ಲಿ ವೇದ ಎಂಬ ಪದ ಬಳಕೆಯಾಗುವಲ್ಲಿಯೂ ಕಾಣಬಹುದು.

ಶ್ರೀ ಭಟ್[೧] ಅವರು ವೇದ ಎಂಬ ಪದದಲ್ಲಿ ಉಪನಿಷತ್ ಎಂಬುದು ಸೇರಿಲ್ಲ ಎಂದು ಹೇಳುತ್ತಾರೆ. ಉಪನಿಷತ್ತುಗಳು ವೇದಶಾಸ್ತ್ರದ ಪರಿಧಿಯಿಂದ ಹೊರಗಿದ್ದವು ಎಂಬ ಅಂಶ ವೇದಗಳ ದೃಷ್ಟಿಕೋನಕ್ಕೆ ಉಪನಿಷತ್ತುಗಳು ತೋರಿರುವ ಪ್ರತಿರೋಧದಿಂದ ವ್ಯಕ್ತವಾಗುತ್ತದೆ.

ಉದಾಹರಣೆಗೆ ಮುಂಡಕೋಪನಿಷತ್ತಿನಲ್ಲಿ ಬರುವ ಈ ಸಾಲುಗಳನ್ನು ನೋಡಿ:

"ಸೃಷ್ಟಿಕರ್ತನಾದ ಬ್ರಹ್ಮ ತನ್ನ ಹಿರಿಯ ಮಗನಾದ ಅಥರ್ವಣನಿಗೆ ಎಲ್ಲ ಜ್ಞಾನಗಳ ಮೂಲವಾದ ಬ್ರಹ್ಮ ಜ್ಞಾನವನ್ನು ಬೋಧಿಸಿದ. ೨. ಅಥರ್ವಣ ಇದನ್ನು ಅಂಗೀರಸ ಮತ್ತು ಅಂಗೀರಸನು ಸತ್ಯವಾಹನಿಗೆ, ಸತ್ಯವಾಹನನು ಭಾರದ್ವಾಜನಿಗೆ ಹಾಗೂ ಭಾರದ್ವಾಜ ಅಂಗೀರಸನಿಗೆ ಈ ಜ್ಞಾನವನ್ನು ಬೋಧಿಸಿದನು. ೩. ಶೌನಕ ಅಂಗೀರಸವನ್ನು ಕೇಳಿದ: 'ಓ ಋಷಿಯೇ, ಇಡಿ ಬ್ರಹ್ಮಾಂಡವನ್ನು ಅರಿಯುವ ಜ್ಞಾನ ಯಾವುದು?' ೪. ಅಂಗೀರಸ ಉತ್ತರಿಸಿದ: 'ಋಷಿಗಳು ಶ್ಲೋಕದ ಮೂಲಕ ಹೇಳಿದ ಪವಿತ್ರ ಜ್ಞಾನವು ಎರಡು ಜ್ಞಾನ ಶಾಖೆಗಳಲ್ಲಿದೆ. ಒಂದು ಪರಾವಿದ್ಯೆ. ಮತ್ತೊಂದು ಅಪಾರವಿದ್ಯೆ. ೫. ಈ ಎರಡನೆಯ ವರ್ಗದಲ್ಲಿ ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವಣ ವೇದ, ಉಚ್ಚಾರಣೆ, ವ್ಯಾಕರಣ, ವ್ಯಾಖ್ಯಾನ, ಛಂದಸ್ಸು, ಖಗೋಳ ಶಾಸ್ತ್ರ ಇವುಗಳು ಸೇರುತ್ತವೆ. ಮೊದಲನೆಯ ವರ್ಗಕ್ಕೆ ಸೇರಿದ ಪರಾವಿದ್ಯೆಯಿಂದ ಮಾತ್ರ ಅನಂತವಾದದ್ದನ್ನು ಅರ್ಥೈಸಿಕೊಳ್ಳಬಹುದು.'

ಛಾಂದೋಗ್ಯೋಪನಿಷತ್ ಹೇಳುತ್ತದೆ:

೧. ನಾರದರು ಸನತ್ಕುಮಾರನನ್ನು ಕೇಳಿದರು 'ನನಗೆ ಬೋಧಿಸು, ಪೂಜ್ಯ ಋಷಿಯೇ'. ಋಷಿ ಉತ್ತರಿಸಿದರು: 'ನೀನು ಇದುವರೆಗೆ ಸಂಪಾದಿಸಿದ ಜ್ಞಾನವನ್ನು ಕುರಿತು ಹೇಳು; ನಾನು ಮುಂದೆ ನೀನೇನು ಕಲಿಯಬೇಕಾಗಿದೆ ಎಂಬುದನ್ನು ಹೇಳುತ್ತೇನೆ.'

೨. ನಾರದರು ಉತ್ತರಿಸಿದರು: 'ಋಗ್ವೇದ, ಸಾಮವೇದ, ಯಜುರ್ವೇದ, ಅಥರ್ವಣ ವೇದ, ಇತಿಹಾಸ ಮತ್ತು ಪುರಾಣಗಳು, ಗಣಿತ, ವಿಚಾರ, ನೀತಿ, ದೈವಜ್ಞಾನ, ಯುದ್ಧಕಲೆ, ತಾರೆಗಳ ಜ್ಞಾನ ಇವೆಲ್ಲವನ್ನೂ ಕಲಿತಿದ್ದೇನೆ'.

೩. 'ಪೂಜ್ಯನಾದ ಋಷಿಯೇ, ನನಗೆ ಮಂತ್ರಗಳು ಮಾತ್ರ ಗೊತ್ತು. ಆದರೆ ಆತ್ಮದ ಜ್ಞಾನವಿಲ್ಲ. ಇದೀಗ ನಾನು ದುಃಖಿಯಾಗಿದ್ದೇನೆ ಆ ದುಃಖವನ್ನು ಮೀರುವ ಜ್ಞಾನವನ್ನು ನನಗೆ ಕರುಣಿಸು'. ಸನತ್ಕುಮಾರರು ಹೇಳಿದರು: 'ನೀನು ಇದುವರೆಗೂ ಕಲಿತಿದ್ದೆಲ್ಲಾ ನಾಮಮಾತ್ರ,

೧. 'ಸೇಕ್ರೇಡ್ ಬುಕ್ಸ್ ಆಫ್ ದಿ ಈಸ್ಟ್', ಸಂಪುಟ II, ಪು. ೨೭೫.

ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವಣ ವೇದ, ಇತಿಹಾಸ ಮತ್ತು ಪುರಾಣಗಳು ಹಾಗೂ ನೀನು ಮೇಲೆ ಹೇಳಿದ ಎಲ್ಲ ಜ್ಞಾನಶಾಖೆಗಳೂ ಕೇವಲ ನಾಮಗಳು'. 'ಹಾಗಾದರೆ ನಾಮಮಾತ್ರವನ್ನು ಮೀರಿದ್ದು ಏನಾದರೂ ಇದೆಯೇ? ಎಂದು ನಾರದರು ಕೇಳಿದರು. 'ಇದೆ' ಎಂದು ಸನತ್ಕುಮಾರರು ಉತ್ತರಿಸಿದರು. 'ಹಾಗಾದರೆ ಅದನ್ನು ನನಗೆ ತಿಳಿಸಿ' ಎಂದರು ನಾರದರು.

'ಬೃಹದಾರಣ್ಯಕ ಉಪನಿಷತ್' ಹೇಳುತ್ತದೆ:

"ಆ ಆಳವಾದ ನಿದ್ರಾವಸ್ಥೆಯಲ್ಲಿ ತಂದೆ ತಂದೆಯಲ್ಲ, ತಾಯಿ ತಾಯಿಯಲ್ಲ. ಪದಗಳು ಪದಗಳಲ್ಲ, ದೇವರುಗಳು ದೇವರುಗಳಲ್ಲ, ವೇದಗಳು ವೇದಗಳಲ್ಲ, ಯಜ್ಞಗಳು ಯಜ್ಞಗಳಲ್ಲ. ಇಂಥ ಸ್ಥಿತಿಯಲ್ಲಿ ಕಳ್ಳನು ಕಳ್ಳನಲ್ಲ, ಭ್ರೂಣ ಹತ್ಯೆ ಮಾಡಿದವನೂ ಕೊಲೆಗಾರನಲ್ಲ, ಚಂಡಾಲ ಚಂಡಾನಲ್ಲ, ಶ್ರಮಣ ಶ್ರಮಣನಲ್ಲ. ಭಕ್ತ ಭಕ್ತನಲ್ಲ; ಆಗ ಅನುಭಾವಿಗೆ ಯಾವ ಸಂಬಂಧಗಳೂ ಇರುವುದಿಲ್ಲ. ಪಾಪದ ಲಾಭನಷ್ಟಗಳು ಅವನನ್ನು ಭಾದಿಸುವುದಿಲ್ಲ. ಕಾರಣ ಅವನು ತನ್ನೆದೆಯ ದುಃಖಗಳನ್ನೆಲ್ಲಾ ಆಗ ಮೀರಿರುತ್ತಾನೆ."

'ಕಠೋಪನಿಷತ್' ಹೇಳುತ್ತದೆ:

"ಆತ್ಮವನ್ನರಿಯುವುದು ಕಷ್ಟವಾದರೂ ಸರಿಯಾದ ಮಾರ್ಗದಿಂದ ಅದನ್ನು ಅರಿಯಬಹುದು. ಆತ್ಮವನ್ನು ಅಧ್ಯಯನದಿಂದಾಗಲಿ, ಅರಿವಿನಿಂದಾಗಲಿ ಅಥವಾ ನಿರ್ದೇಶನದಿಂದಾಗಲಿ ಗಳಿಸಲು ಸಾಧ್ಯವಿಲ್ಲ. ಆತ್ಮವೇ ತನ್ನಿಚ್ಛೆಯಂತೆ ಮಾನವ ದೇಹವನ್ನು ಆಯ್ದುಕೊಳ್ಳಬಲ್ಲದು."

"ಆತ್ಮವನ್ನರಿಯುವುದು ಕಷ್ಟದ ಕೆಲಸವಾದರೂ, ಕೆಲವು ಯೋಗ್ಯ ಕ್ರಮಗಳಿಂದ ಅವನನ್ನು ಸುಲಭವಾಗಿ ತಿಳಿಬಹುದು. ಇದನ್ನೇಲ್ಲವನ್ನೂ ಕರ್ತೃವು ಬಳಸಲು ಹೊರಟಿದ್ದಾನೆ. ಆತ್ಮ ಸಾಕ್ಷಾತ್ಕಾರವು ಹೇಳಲು ಬೋಧನೆಯಿಂದಾಗಲಿ, ವೇದಗಳ ಅಧ್ಯಯನದಿಂದಾಗಲಿ, ಅರಿವಿನಿಂದಾಗಲಿ, ಗ್ರಂಥ ವಿಷಯಗಳನ್ನು ಜ್ಞಾಪಕದಲ್ಲಿಟ್ಟುಕೊಳ್ಳುವುದರಿಂದಾಗಲಿ, ಧರ್ಮ ಗ್ರಂಥಗಳಿಂದಾಗಲಿ, ವೇದಗಳಿಂದಾಗಲಿ, ಅಧ್ಯಯನದಿಂದಾಗಲಿ ಅದನ್ನು ಅರಿಯಲಾಗದು. ಹಾಗಾದರೆ ಅದನ್ನು ಅರಿಯುವ ಬಗೆ ಹೇಗೆ?" ಅದನ್ನೇ ಗಂಥಕರ್ತೃ ತಿಳಿಸುತ್ತಾನೆ.

ಅನುಲೋಮ ಮತ್ತು ಪ್ರತಿಲೋಮ ಎಂಬ ಎರಡು ಪದಗಳ ಮೂಲವನ್ನು ಗಮನಿಸಿದರೆ ಉಪನಿಷತ್ ಹಾಗೂ ವೈದಿಕ ತತ್ವಜ್ಞಾನದ ನಡುವೆ ಇರುವ ಭಿನ್ನತೆ ಸರಿಯಾಗಿ ಅರ್ಥವಾಗುತ್ತದೆ. ಕಾಣೆ[೧] ಎಂಬ ಸಮಾಜಶಾಸ್ತ್ರಜ್ಞರು ಹೇಳುವಂತೆ 'ವಿವಾಹ ಮತ್ತು ಸಂತಾನ ಕುರಿತ ಅನುಲೋಮ ಮತ್ತು ಪ್ರತಿಲೋಮ ಎಂಬ ಎರಡೂ ಪದಗಳು ವೈದಿಕ ಸಾಹಿತ್ಯದಲ್ಲಿ ಕಾಣುವುದಿಲ್ಲ. 'ಬೃಹದಾರಣ್ಯಕೋಪನಿಷತ್ತಿ'ನಲ್ಲಿ (೧೧.೧.೫) 'ಕೌಶೀತಕಿ' 'ಉಪನಿಷತ್ತಿ'ನಲ್ಲಿ (IV.೮) ಪ್ರತಿಲೋಮ ಎಂಬ ಪದವು ಬ್ರಾಹ್ಮಣನೊಬ್ಬ ಬ್ರಹ್ಮಜ್ಞಾನಕ್ಕಾಗಿ ಕ್ಷತ್ರಿಯನ ಬಳಿ ಹೋಗುವಾಗ ಅನುಸರಿಸಬೇಕಾದ ನಿಯಮಗಳನ್ನು ಕುರಿತಂತೆ ಬಳಕೆಯಾಗುತ್ತದೆ.

ಅನುಲೋಮವೆಂದರೆ ಸಹಜವಾದ ಶ್ರೇಣೀಕರಣಕ್ಕೆ ಅನುಗುಣವಾಗಿ ಎಂತಲೋ, ಪ್ರತಿಲೋಮ ಎಂದರೆ ಈ ಸಹಜ ಶ್ರೇಣೀಕರಣಕ್ಕೆ ವಿರೋಧವಾದದ್ದು ಎಂದೂ ಅರ್ಥವಿದೆ. ಕಾಣೆಯವರ ವಾದದ

೧. 'ಹಿಸ್ಟರಿ ಆಫ್ ಧರ್ಮಶಾಸ್ತ್ರ', ಸಂ. II, ಭಾಗ I, ಪು. ೫೨.

ಬೆಳಕಿನಲ್ಲಿ ಪ್ರತಿಲೋಮ ಪದದ ವಿವರಣೆಯನ್ನು ಗಮನಿಸಿದರೆ, ಉಪನಿಷತ್ತುಗಳನ್ನು ವೈದಿಕ ಸಾಹಿತ್ಯದ ಭಾಗವಾಗಿ ಪರಿಗಣಿಸುವುದಿರಲಿ, ಅವುಗಳ ಬಗೆಗೆ ವೈದಿಕ ಬ್ರಾಹ್ಮಣರಿಗೆ ಅಂಥ ಗೌರವವೇನೂ ಇರಲಿಲ್ಲ ಎಂಬುದು ವ್ಯಕ್ತವಾಗುತ್ತದೆ.

ಆದ್ದರಿಂದಲೇ ವೇದಾಂತದ ವಿರೋಧಿಗಳಾದ ಬ್ರಾಹ್ಮಣರು ಕಾಲಾನುಕ್ರಮದಲ್ಲಿ ವೇದಾಂತದ ಪ್ರತಿಪಾದಕರೂ, ಅನುಯಾಯಿಗಳೂ ಆಗಿದ್ದು ಒಂದು ಒಗಟಾಗಿಯೇ ಕಾಣುತ್ತದೆ.

## II

ಇದು ವೇದಾಂತದ ಒಂದು ಒಗಟಾದರೆ ಮತ್ತೊಂದು ಹೀಗಿದೆ: ವೇದಗಳು ಮತ್ತು ಅದರ ಆಚಾರಗಳನ್ನು ಮೋಕ್ಷದ ಮಾರ್ಗವನ್ನಾಗಿ ಕಾಣುವ ಕ್ರಮಕ್ಕೆ ವೇದಾಂತವಾದಿಗಳು ಮಾತ್ರವೇ ವಿರೋಧಿಗಳಾಗಿರಲಿಲ್ಲ : ಅವರ ಜೊತೆಗೆ ಸರ್ವದರ್ಶನ ಸಂಗ್ರಹದ ಕರ್ತೃ ಮಾಧವ ಆಚಾರ್ಯರು ಹೇಳುವಂತೆ, ಚಾರ್ವಾಕ ಮತ್ತು ಬೃಹಸ್ಪತಿ ಕೂಡ ವೈದಿಕರ ವಿರೋಧಿಗಳಾಗಿದ್ದರು. ವೈದಿಕರ ಮೇಲಿನ ಅವರ ದಾಳಿ ಕೂಡ ತಾರ್ಕಿಕವಾದದ್ದು. ಚಾರ್ವಾಕ ಪ್ರಶ್ನಿಸುತ್ತಾನೆ:

"ಪರಲೋಕದಲ್ಲಿ ಆನಂದ ಎಂಬುದು ಇಲ್ಲವೆಂದಾದರೆ ಇಷ್ಟೊಂದು ಧನವನ್ನು ವ್ಯಯಿಸಿ ಮತ್ತು ದೇಹವನ್ನು ದಂಡಿಸಿ ಮಾಡಲಾಗುವ ಅಗ್ನಿಹೋತ್ರ ಮತ್ತು ಇತರ ಯಜ್ಞಗಳಲ್ಲಿ ಜ್ಞಾನಿಗಳೇಕೆ ಭಾಗವಹಿಸುತ್ತಾರೆ? ಅಗ್ನಿಹೋತ್ರ ಮತ್ತು ಇತರೆ ಯಜ್ಞಗಳು ಕೇವಲ ಜೀವನಾಧಾರಕ್ಕಾಗಿ ಮಾತ್ರ. ಏಕೆಂದರೆ, ವೇದವು ಅಸತ್ಯ, ಸ್ವ–ವಿರೋಧಾಭಾಸ ಹಾಗೂ ಪುನರುಕ್ತಿ ಎಂಬ ಮೂರು ದೋಷಗಳನ್ನು ಹೊಂದಿದೆ. ಅಲ್ಲದೆ ವೇದಶಾಸ್ತ್ರ ಪಾರಂಗತರೆಂದು ಕರೆದುಕೊಳ್ಳುವ ಕಪಟಿಗಳು ಪರಸ್ಪರ ವಿನಾಶದಲ್ಲಿ ತೊಡಗಿರುವವರು. ಏಕೆಂದರೆ, ಕರ್ಮಕಾಂಡ ಪ್ರಾಮಾಣ್ಯವಾದಿಗಳು ಜ್ಞಾನಕಾಂಡದ ಪ್ರಾಮಾಣ್ಯವನ್ನು ಚಿಂತಿಸುತ್ತಾರೆ ಮತ್ತು ಜ್ಞಾನಕಾಂಡದ ಪ್ರಾಮಾಣ್ಯವಾದಿಗಳು ಕರ್ಮಕಾಂಡದ ಪ್ರಾಮಾಣ್ಯವನ್ನೂ ಅಲ್ಲಗಳೆಯುತ್ತಾರೆ. ಕಡೆಯದಾಗಿ, ಮೂರೂ ವೇದಗಳು ವಂಚಕರ ಅಸಂಬದ್ಧ ಪ್ರಲಾಪಗಳಂತಿವೆ....."
ಟೀಕೆ ಇನ್ನೂ ಹೀಗೆ ಮುಂದುವರಿಯುತ್ತದೆ :

"ಅಗ್ನಿಹೋತ್ರ, ಮೂರು ವೇದಗಳ ಪಠನ, ಮತ್ತು ತ್ರಿದಂಡಗಳು, ಬೂದಿ ಬಳಿದುಕೊಳ್ಳುವುದು ಇವೆಲ್ಲ ಬುದ್ಧಿ ಹಾಗೂ ಪುರುಷತ್ವವಿಲ್ಲದವರು ಹೊಟ್ಟೆಪಾಡಿಗಾಗಿ ಅನುಸರಿಸುವ ಮಾರ್ಗಗಳು" ಎಂಬುದು ಬೃಹಸ್ಪತಿಯ ವಾದ. ಮಾಧವ ಆಚಾರ್ಯ[೧] ಗುರುತಿಸುವಂತೆ ಬೃಹಸ್ಪತಿಯ ವಾದ ಹೀಗೆ ಮುಂದುವರಿಯುತ್ತದೆ:

"ಸ್ವರ್ಗವಿಲ್ಲ, ಮೋಕ್ಷ ಎಂಬುದೂ ಇಲ್ಲ ಮತ್ತು ಪರಲೋಕದಲ್ಲಿ ಯಾವ ಆತ್ಮವೂ ಇಲ್ಲ. ನಾಲ್ಕು ವರ್ಣಗಳ ವಿಭಜನೆಗೆ ಯಾವ ಅರ್ಥವೂ ಇಲ್ಲ."

"ಜ್ಯೋತಿಷ್ಟೋಮ ಯಜ್ಞದಲ್ಲಿ ಕೊಲ್ಲಲ್ಪಟ್ಟ ಪ್ರಾಣಿಯು ಸ್ವರ್ಗವನ್ನು ಸೇರುವುದಾದಲ್ಲಿ, ಬಲಿ ಕೊಡುವಾತ ತನ್ನ ತಂದೆಯನ್ನೇ ಏಕೆ ಬಲಿಕೊಡಬಾರದು? ಸತ್ತವರಿಗೆ ಶ್ರಾದ್ಧವು ತೃಪ್ತಿದಾಯಕ

೧. 'ಸರ್ವದರ್ಶನ ಸಂಗ್ರಹ', ಪು. ೧೦.

ವಾಗುವುದಾದರೆ, ಪ್ರಯಾಣಿಕರಿಗೆ ಬುತ್ತಿ ಕಟ್ಟಿಕೊಡುವುದು ವ್ಯರ್ಥವೇ. ಬದುಕಿರುವತನಕ ಮನುಷ್ಯ ಸುಖವಾಗಿ ಬಾಳಲಿ, ಸಾಲ ಮಾಡಿಯಾದರೂ ತುಪ್ಪ ತಿಂದು ಬದುಕಲಿ. ದೇಹ ಬೂದಿಯಾದ ಮೇಲೆ ಅದು ಹೇಗೆ ಮರಳಿ ಬರುತ್ತದೆ?"

"ದೇಹವನ್ನು ತ್ಯಜಿಸಿದವನು ಇನ್ನೊಂದು ಲೋಕಕ್ಕೆ ಹೋಗುವುದಾದರೆ, ತನ್ನ ಪ್ರೀತಿಪಾತ್ರರಿಗಾಗಿ ಹಂಬಲಿಸಿ ಅವನು ಏಕೆ ಮರಳಿ ಬರುವುದಿಲ್ಲ?"

"ಇವೆಲ್ಲವೂ ಬ್ರಾಹ್ಮಣರು ಕೇವಲ ತಮ್ಮ ಹೊಟ್ಟೆಪಾಡಿಗಾಗಿ ಕಂಡುಕೊಂಡ ಮಾರ್ಗಗಳು. ಸತ್ತವರಿಗಾಗಿ ನಡೆಸುವ ಕರ್ಮಗಳೂ ಅಷ್ಟೆ. ಅವುಗಳಿಂದಾಗುವ ಲಾಭವೆಂದರೆ ಇವರ ಜೀವನಾಧಾರ ಮಾತ್ರ."

"ಸತ್ತವರಿಗೆ ಮಾಡುವ ಎಲ್ಲ ಈ ಕರ್ಮಗಳು ನಿಷ್ಫಲವಾದವು."

"ವೇದಗಳೂ ಮೂವರು ಸೃಷ್ಟಿಕರ್ತರೂ ನಕಲೀಶ್ಯಾಮರು, ಧೂರ್ತರು ಮತ್ತು ರಾಕ್ಷಸರು."

"ಜರ್ಭರೀ, ತುರ್ಫರೀ ಮುಂತಾದ ಮಂತ್ರಗಳನ್ನೂ ಹಾಗೂ ಅಶ್ವಮೇಧದಲ್ಲಿ ರಾಣಿಗಾಗಿ ಮಾಡಲಾಗುವ ಅಶ್ಲೀಲ ಸಂಸ್ಕಾರಗಳು ಈ ನಕಲೀಶ್ಯಾಮರಿಂದ ಕಂಡುಹಿಡಿಯಲ್ಪಟ್ಟವು. ಹಾಗೆಯೇ ಈ ಪುರೋಹಿತರುಗಳಿಗೆ ನೀಡಬೇಕಾದ ಕಾಣಿಕೆಗಳು ಕೂಡ. ಮಾಂಸ ತಿನ್ನಬೇಕೆಂಬ ವಿಧಿಯನ್ನು ನಿಶಾಚರರಾದ ರಾಕ್ಷಸರು ಸೇರಿಸಿದ್ದಾರೆ."

ಈ ಹಿನ್ನೆಲೆಯಲ್ಲಿ ಒಗಟಾಗಿ ಕಾಣುವ ಸಂಗತಿ ಎಂದರೆ ವೇದಾಂತಿಗಳೊಂದಿಗೆ ರಾಜಿ ಮಾಡಿಕೊಂಡ ವೈದಿಕ ಬ್ರಾಹ್ಮಣರು ಚಾರ್ವಾಕ ಮತ್ತು ಬೃಹಸ್ಪತಿ ಇವರೊಂದಿಗೆ ಏಕೆ ರಾಜಿ ಮಾಡಿಕೊಳ್ಳಲಿಲ್ಲ?

## III

ಈಗ ಮೂರನೆಯ ಒಗಟನ್ನು ಪರಿಶೀಲಿಸೋಣ. ಈ ಒಗಟಿಗೂ ನಾನು ಮುಂದೆ ಚರ್ಚಿಸಲಿರುವ ವೇದ ವೇದಾಂತಗಳಿಗು ತಾತ್ವಿಕ ಸಂಬಂಧವಿರುವುದರಿಂದ ಇದು ಮುಖ್ಯವಾದದ್ದಾಗಿದೆ. ಮೀಮಾಂಸೆಯ ಕರ್ತೃವಾದ ಜೈಮಿನಿ ಹಾಗೂ ಬ್ರಹ್ಮಸೂತ್ರದ ಕರ್ತೃವಾದ ಬಾದರಾಯಣ ಇವರೇ ವೇದ ಮತ್ತು ವೇದಾಂತಗಳಿಗೆ ತಾತ್ವಿಕ ಲೇಪನವನ್ನು ಕೊಟ್ಟವರು. ಇವರಿಬ್ಬರ ಧೋರಣೆಗಳನ್ನು ಕೊಂಚ ಹೋಲಿಸಿ ನೋಡಬೇಕು.

ಪ್ರೊಫೆಸರ್ ಬೆಳವಲಕರ್ ಅವರು ತೋರಿಸಿರುವಂತೆ ವೇದಾಂತ ಸೂತ್ರಗಳು ಕರ್ಮಸೂತ್ರಗಳ ಮಾದರಿಯನ್ನೇ ಆಧರಿಸಿವೆ. ಅಧ್ಯಯನ ವಿಧಾನ ಹಾಗೂ ಪರಿಭಾಷೆಗಳೆರಡರಲ್ಲೂ ಬಾದರಾಯಣ ಜೈಮಿನಿಯನ್ನು ಅನುಸರಿಸುತ್ತಾನೆ. ಶ್ರುತಿಯ ವ್ಯಾಖ್ಯಾನದಲ್ಲಿ ಅವನು ಜೈಮಿನಿಯ ಪದ್ಧತಿಯನ್ನೇ ಅನುಸರಿಸುತ್ತಾನೆ. ಜೈಮಿನಿ ಬಳಸಿಕೊಳ್ಳುವ ಉದಾಹರಣೆಗಳನ್ನು ಅವನೂ ಬಳಸಿಕೊಳ್ಳುತ್ತಾನೆ. ಈ ಹೋಲಿಕೆಯೇ ಬಾದರಾಯಣ ಜೈಮಿನಿಗೆ ವಿರುದ್ಧವಾದ ತತ್ತ್ವವೊಂದನ್ನು ಪ್ರತಿಪಾದಿಸುತ್ತಿದ್ದನೆಂದೂ, ಅದನ್ನು ಜೈಮಿನಿ ಪ್ರಶ್ನಿಸಿದಾಗಲೆಲ್ಲ ಜೈಮಿನಿಯ ತಂತ್ರವನ್ನೇ ಆಧರಿಸಿ ಉತ್ತರಿಸುತ್ತಿದ್ದನೆಂದೂ ಸಾಬೀತು ಮಾಡುತ್ತದೆ. ಈಗ ಹುಟ್ಟುವ ಪ್ರಶ್ನೆ ಎಂದರೆ ಬಾದರಾಯಣ ಜೈಮಿನಿಯನ್ನು ವಿರೋಧಿಸುವ ನಿಲುವನ್ನು ನಿಜವಾಗಿಯೂ ತಳೆದಿದ್ದನೇ?

ಬಾದರಾಯಣ ತಾನೇ ಒಪ್ಪಿಕೊಳ್ಳುವಂತೆ, ವೇದಾಂತ ಕುರಿತ ಜೈಮಿನಿಯ ಅಭಿಪ್ರಾಯಕ್ಕೆ

ತಾನು ವಿರೋಧಿ. ಇದನ್ನು ಬಾದರಾಯಣ ಸೂತ್ರ ೨–೭ರಲ್ಲಿ ಹೇಳಿದ್ದು, ಶಂಕರಾಚಾರ್ಯರು ತಮ್ಮ ಭಾಷ್ಯದಲ್ಲಿ ವಿವರಿಸಿದ್ದಾರೆ.

ವೇದಾಂತ ಕುರಿತಂತೆ ಜೈಮಿನಿಯ ನಿಲುವನ್ನು ನೋಡೋಣ:

"ಮರಣಾನಂತರ ಸ್ವರ್ಗಕ್ಕೆ ಹೋಗಿ, ಹಿಂದೆ ಭೂಲೋಕದಲ್ಲಿ ಮಾಡಿದ ಯಜ್ಞದ ಫಲವನ್ನು ಅನುಭವಿಸುವ ಮತ್ತು ನಾನು ದೇಹದಿಂದ ಬೇರೆ ಎಂಬ ಬಗ್ಗೆ ಖಾತ್ರಿ ಇರದಿದ್ದರೆ ಯಾರೂ ಯಜ್ಞ ಯಾಗಾದಿಗಳನ್ನು ಮಾಡುವುದಿಲ್ಲ. ಆತ್ಮ–ಜ್ಞಾನ ಕುರಿತ ಗ್ರಂಥಗಳಿಗೆ ಯಜ್ಞಯಾಗಾದಿಗಳ ನಂತರದ ಸ್ಥಾನ."

ಒಟ್ಟಿನಲ್ಲಿ 'ಆತ್ಮ' ಎಂಬುದು ದೇಹದಿಂದ ಭಿನ್ನವಾದದ್ದು ಮತ್ತು ದೇಹದ ಅಳಿವಿನ ನಂತರವೂ ಇರುವಂಥದ್ದು ಎಂಬುದನ್ನು ಮಾತ್ರ ವೇದಾಂತ ಹೇಳುತ್ತದಷ್ಟೆ, ಎನ್ನುತ್ತಾನೆ ಜೈಮಿನಿ. ಆದರೆ ಅವನ ಪ್ರಕಾರ ಅಂಥ ಜ್ಞಾನವಷ್ಟೇ ಸಾಲದು. 'ಆತ್ಮ' ತಾನೂ ಸ್ವರ್ಗಕ್ಕೆ ಹೋಗುವ ತುಡಿತವನ್ನು ಹೊಂದಿರಬೇಕು ಎಂಬುದು ಅವನ ನಿಲುವು. ಆದ್ದರಿಂದ ತಾನು (ಜೈಮಿನಿ) ಪ್ರತಿಪಾದಿಸುವ ಕರ್ಮಕಾಂಡ ಹೇಳುವಂತೆ ವೈದಿಕ ಯಜ್ಞಗಳನ್ನು ಮಾಡದೆ ಹೋದರೆ 'ಅದು' ಸ್ವರ್ಗವನ್ನು ತಲುಪಬಾರದು. ಆದ್ದರಿಂದ ತನ್ನ ಕರ್ಮಕಾಂಡವೇ ಮುಕ್ತಿಯ ಮಾರ್ಗ. ಈ ದೃಷ್ಟಿಯಿಂದ ಜ್ಞಾನಕಾಂಡ ಅರ್ಥಹೀನ. ಇದು ಅವನ ವಾದ. ಇದನ್ನು ಸಿದ್ಧಮಾಡಲು ವೇದಾಂತದಲ್ಲಿ[೧] ನಂಬಿಕೆಯಿಟ್ಟ ಜನಗಳ ಉದಾಹರಣೆಯನ್ನು ಜೈಮಿನಿ ಕೊಡುತ್ತಾನೆ:

"ವಿದೇಹದ ರಾಜ ಜನಕನು ಯಜ್ಞವನ್ನು ಮಾಡಿ ದಾನಗಳನ್ನು ಕೊಟ್ಟನು." (ಬೃಹದಾರಣ್ಯಕೋಪನಿಷತ್ ೩,೧,೧) ಮಹನೀಯರೇ, ಈಗ ನಾನೊಂದು ಯಜ್ಞವನ್ನೂ ಮಾಡಲು ಹೊರಟಿದ್ದೇನೆ. (ಛಾಂದೋ, ಉಪ ೫.೧೧.೫) ಜನಕ ಮತ್ತು ಅಶ್ವಪತಿ ಇಬ್ಬರೂ 'ಆತ್ಮ' ಜ್ಞಾನವನ್ನು ಪಡೆದಿದ್ದರು. 'ಆತ್ಮ' ಜ್ಞಾನವೇ ಮುಕ್ತಿಯನ್ನು ನೀಡುವುದಾದರೆ ಯಜ್ಞಗಲ ಅಗತ್ಯವೇ ಅವರಿಗೆ ಇರುತ್ತಿರಲಿಲ್ಲ. ಬೃಹದಾರಣ್ಯಕೋಪನಿಷತ್ ಮತ್ತು ಛಾಂದೋಗ್ಯೋಪನಿಷತ್ ಎರಡೂ ಸೂಚಿಸುವಂತೆ ಅವರಿಬ್ಬರೂ ಯಜ್ಞಗಳನ್ನು ಮಾಡಿದ್ದರು. ಆದ್ದರಿಂದ ವೇದಾಂತಗಳು ಹೇಳುವಂತೆ ಆತ್ಮಜ್ಞಾನದಿಂದ ಮುಕ್ತಿ ಸಿಗುವುದಿಲ್ಲ; ಬದಲಿಗೆ ಯಜ್ಞಗಳಿಂದ ಮಾತ್ರ ಸಿಗುತ್ತದೆಂಬುದನ್ನು ಇದು ಸಿದ್ಧ ಮಾಡುತ್ತದೆ.

ಅಲ್ಲದೆ, ಧರ್ಮಶಾಸ್ತ್ರಗಳು[೨] ಕೂಡ 'ಆತ್ಮ' ಕುರಿತ ಜ್ಞಾನಕ್ಕೆ ಯಜ್ಞಯಾಗಾದಿಗಳ ನಂತರದ ಸ್ಥಾನ ಕೊಟ್ಟಿವೆ ಎನ್ನುವ ಜೈಮಿನ 'ಜ್ಞಾನ ಮತ್ತು ಕರ್ಮಗಳೆರಡೂ ದೇಹ ತೊರೆದ ಆತ್ಮದ ಜೊತೆಗೆ ತೆರಳಿ ಫಲವನ್ನು ನೀಡುತ್ತವೆ' ಎನ್ನುತ್ತಾನೆ.

ಆದ್ದರಿಂದ ಬಾದರಾಯಣನ 'ಜ್ಞಾನಕಾಂಡ'ಕ್ಕೆ ಸ್ವತಂತ್ರ ಅಸ್ತಿತ್ವ ಕೊಡಲು ಜೈಮಿನಿ ನಿರಾಕರಿಸುತ್ತಾನರೆ. ಅದಕ್ಕೆ ಅವನು ಎರಡು ಕಾರಣಗಳನ್ನು ಕೊಡುತ್ತಾನೆ.

ಒಂದು "ಆತ್ಮಜ್ಞಾನ ತನ್ನಿಂದ ತಾನೇ ಯಾವ ಫಲವನ್ನೂ ನೀಡಲಾರದು."[೩]

ಎರಡು "ವೇದ ಪ್ರಾಮಾಣ್ಯದ ಪ್ರಕಾರ ಆತ್ಮಜ್ಞಾನಕ್ಕೆ ಕರ್ಮದ ನಂತರದ ಸ್ಥಾನ"[೪]

---

೧. ಬಾದರಾಯಣ ಸೂತ್ರ ೩ ಮತ್ತು ಶಂಕರಭಾಷ್ಯ

೨. ಅದೇ, ೪

೩. ಅದೇ, ೬

೪. ಅದೇ, ೭

ಬಾದರಾಯಣನ ಜ್ಞಾನಕಾಂಡ ಕುರಿತಂತೆ ಜೈಮಿನಿಯ ದೃಷ್ಟಿಕೋನ ಇದು.

ಹಾಗಾದರೆ ಈ ಕುರಿತ ಬಾದರಾಯಣನ ನಿಲುವೇನು? ಜೈಮಿನಿ ಮತ್ತು ಅವನ ಕರ್ಮಕಾಂಡದ ಬಗೆಗೆ ಬಾದರಾಯಣನ ದೃಷ್ಟಿಕೋನವನ್ನು ಬಾದರಾಯಣ ಸೂತ್ರ ಎಂಟರಿಂದ ಹದಿನೇಳರವರೆಗೆ ನೋಡಬಹುದು.

ಬಾದರಾಯಣನ ಮೊದಲನೆಯ ನಿಲುವೆಂದರೆ ಜೈಮಿನಿ ಹೇಳುವ ಆತ್ಮವು ಜೀವಾತ್ಮವಾಗಿದೆ. ಅದನ್ನು ಪರಮಾತ್ಮನಿಂದ ಪ್ರತ್ಯೇಕಿಸಬೇಕು. ಧರ್ಮಗ್ರಂಥಗಳು ಪರಮಾತ್ಮನ ಅಸ್ತಿತ್ವವನ್ನು ಒಪ್ಪಿಕೊಳ್ಳುತ್ತವೆ.[೧]

ಬಾದರಾಯಣನ ಎರಡನೆಯ ನಿಲುವೆಂದರೆ 'ವೇದಗಳು, ಆತ್ಮಜ್ಞಾನ ಹಾಗೂ ಯಜ್ಞ ಎರಡನ್ನೂ ಬೆಂಬಲಿಸುತ್ತವೆ'.[೨]

ಬಾದರಾಯಣನ ಮೂರನೆಯ ನಿಲುವೆಂದರೆ, 'ವೇದಗಳಲ್ಲಿ ನಂಬಿಕೆಯಿರುವವರು ಮಾತ್ರ ಯಜ್ಞಗಳನ್ನು ಮಾಡುವವರು. ಉಪನಿಷತ್ತಿನಿಂದ ಆತ್ಮಜ್ಞಾನ ಪಡೆದವರು ಹೀಗೆ ಯಜ್ಞಗಳನ್ನು ಮಾಡಬೇಕೆಂಬ ನಿರ್ದೇಶನವಿಲ್ಲ'. ಶಂಕರಾಚಾರ್ಯರು ವಿವರಿಸುವಂತೆ 'ವೇದಪಾರಾಯಣ ಮಾಡಿ ಯಜ್ಞಗಳ ಬಗೆಗೆ ಅರಿತವರು ಕರ್ಮವನ್ನು (ಯಜ್ಞವನ್ನು) ಮಾಡಲರ್ಹರು. ಉಪನಿಷತ್ತಿನಿಂದ ಆತ್ಮಜ್ಞಾನವನ್ನು ಪಡೆದವರಿಗೆ ಯಾವುದೇ ಕರ್ಮವನ್ನು ಮಾಡಬೇಕೆಂಬ ನಿರ್ಬಂಧವಿಲ್ಲ'.[೩]

ಬಾದರಾಯಣನ ನಾಲ್ಕನೆಯ ನಿಲುವೆಂದರೆ 'ಬ್ರಹ್ಮಜ್ಞಾನ ಪಡೆದವರಿಗೆ ಕರ್ಮಕಾಂಡವು ಐಚ್ಛಿಕವಾದದ್ದು' ಎಂಬುದು. ಶಂಕರರು ವಿವರಿಸುವಂತೆ, 'ಜ್ಞಾನಾರ್ಜನೆಯ ನಂತರ ಇತರರಿಗೆ ಮಾದರಿಯಾಗ ಬಯಸುವ ಕೆಲವರು ಕರ್ಮವನ್ನು ಕೈಗೆತ್ತಿಕೊಳ್ಳಬಹುದು. ಉಳಿದವರು ಎಲ್ಲ ಕರ್ಮವನ್ನೂ ಕೈಬಿಡಬಹುದು. ಉಪನಿಷತ್ತಿನಿಂದ ಆತ್ಮಜ್ಞಾನವನ್ನು ಪಡೆದವರಿಗೆ ಯಾವುದೇ ಕರ್ಮವನ್ನು (ಯಜ್ಞ) ಮಾಡಬೇಕೆಂಬ ನಿರ್ಬಂಧವಿಲ್ಲ.'[೪]

ಬಾದರಾಯಣ ಕಟ್ಟಕಡೆಯ[೫] ನಿಲುವೆಂದರೆ 'ಆತ್ಮಜ್ಞಾನವು ಎಲ್ಲ ಕರ್ಮಕ್ಕೆ ವಿರೋಧಿಯಾದ್ದರಿಂದ ಅದು ಕರ್ಮಕ್ಕೆ ಅಧೀನವಾಗಿರುವುದು ಪ್ರಾಯಶಃ ಸಾಧ್ಯವಿಲ್ಲ' ಎಂಬುದು. ಧರ್ಮಶಾಸ್ತ್ರಗಳು ಹೇಳುವ ನಾಲ್ಕನೆಯ ಆಶ್ರಮವಾದ ಸನ್ಯಾಸದಲ್ಲಿ ಸನ್ಯಾಸಿಯು ಕರ್ಮಕಾಂಡದ ಎಲ್ಲ ನಿರ್ದೇಶನಗಳಿಂದ ಬಿಡುಗಡೆ ಪಡೆಯುವುದನ್ನು[೬] ಬಾದರಾಯಣ ಈ ವಾದಕ್ಕೆ ಆಧಾರವಾಗಿ ನೀಡುತ್ತಾನೆ.

ಈ ಇಬ್ಬರು ಪರಸ್ಪರರ ಪಂಥಗಳ ಬಗ್ಗೆ ತೋರಿಸುವ ಧೋರಣೆಯನ್ನು ತಿಳಿಸುವ ಇಂತಹ ಸೂತ್ರಗಳು ಬಾದರಾಯಣದ ಸೂತ್ರಗಳಲ್ಲಿ ಹೇರಳವಾಗಿ ಸಿಕ್ಕುತ್ತವೆ. ಆದರೆ ಮೇಲೆ ಉದ್ಧರಿಸದ ವಿಶಿಷ್ಟ ಸೂತ್ರ ಒಂದೇ ಸಾಕು. ಸ್ವಲ್ಪ ಹೊತ್ತುನಿಂತು ಯೋಚಿಸಿದರೆ ಈ ವಿಷಯಕ್ಕೆ ಒಂದು ವಿಚಿತ್ರ ರೂಪ ದೊರೆಯುತ್ತದೆ. ಆದರೆ ಜೈಮಿನಿ ವೇದಾಂತವನ್ನು ಸುಳ್ಳುಶಾಸ್ತ್ರವೆಂದೂ, ಭ್ರಾಂತಿ, ಭ್ರಮೆ ಹಾಗೂ ತೋರಿಕೆಯೆಂದೂ ಅನಾವಶ್ಯಕವೆಂದೂ, ನಿರಾಧಾರವೆಂದೂ ಜರೆಯುತ್ತಾನೆ.

---

೧. ಬಾದರಾಯಣ ಸೂತ್ರ ೮ ಮತ್ತು ಶಂಕರ ಭಾಷ್ಯ

೨. ಅದೇ ೯

೩. ಅದೇ ೧೨

೪. ಅದೇ ೧೫

೫. ಅದೇ ೧೬

೬. ಅದೇ ೧೭

ಹಾಗಾದರೆ ಬಾದರಾಯಣ ಈ ಧಾಳಿಯನ್ನು ಹೇಗೆ ಎದುರಿಸಿದ? ಅವನು ಜೈಮಿನಿಯ ಕರ್ಮಕಾಂಡವನ್ನು ಸುಳ್ಳು ಅಥವಾ ಭ್ರಾಂತಿ ಎಂದು ಕರೆಯುತ್ತಾನೆಯೇ? ಇಲ್ಲ. ಅವನು ತನ್ನ ವೇದಾಂತಶಾಸ್ತ್ರವನ್ನು ಮಾತ್ರ ಸಮರ್ಥಿಸಿಕೊಳ್ಳುತ್ತಾನೆ. ಆದರೆ ಜೈಮಿನಿಯ ಕರ್ಮಕಾಂಡವನ್ನು ಸುಳ್ಳು ಧರ್ಮ ಎನ್ನುವ ಧೈರ್ಯವನ್ನು ತೋರುವುದಿಲ್ಲ. ವಿಚಿತ್ರವೆಂದರೆ ಜೈಮಿನಿಯ ಕರ್ಮಕಾಂಡಕ್ಕೂ ಧರ್ಮಗ್ರಂಥಗಳ ಆಧಾರವಿದೆ ಎಂದು ಅದನ್ನು ವಿರೋಧಿಸಲು ಹಿಂಜರಿಯುತ್ತಾನೆ. ವೇದಾಂತಕ್ಕೂ ಧರ್ಮಶಾಸ್ತ್ರಗಳ ಬೆಂಬಲ ಇದೆಯಾದ್ದರಿಂದ ವೇದಾಂತವು ನಿಜ ಎಂದು ಮಾತ್ರ ಅವನು ಹೇಳಬಲ್ಲ.

ಇಷ್ಟೇ ಅಲ್ಲ, ವೇದಾಂತ ಪದವನ್ನು ವಿವರಿಸುವಾಗ ಉಪನಿಷತ್ತುಗಳೂ ವೈದಿಕ ಸಾಹಿತ್ಯದ ಒಂದು ಭಾಗವೇ ಎಂಬುದನ್ನು ಒತ್ತಿ ಹೇಳುತ್ತಾನೆ. ಜೊತೆಗೆ ಉಪನಿಷತ್ತುಗಳು ಜ್ಞಾನಕಾಂಡ ಅಥವಾ ವೇದಾಂತವು ವೇದಗಳ ಕರ್ಮಕಾಂಡಕ್ಕೆ ವಿರುದ್ಧವಾದದ್ದಲ್ಲ. ಬದಲಿಗೆ ಅವು ಪರಸ್ಪರ ಪೂರಕ ಎಂದು ಒತ್ತಿ ಹೇಳುತ್ತಾನೆ. ಈ ತಳಹದಿಯ ಮೇಲೆ ಇಡಿ ವೇದಾಂತಸೂತ್ರಗಳನ್ನು ಬಾದರಾಯಣ ರೂಪಿಸುತ್ತಾನೆ.

ಉಪನಿಷತ್ತುಗಳು ವೇದಗಳ ಒಂದು ಭಾಗ ಹಾಗೂ ವೇದ ಮತ್ತು ಉಪನಿಷತ್ತುಗಳ ನಡುವೆ ಯಾವ ತಾಕಲಾಟವೂ ಇಲ್ಲ ಎಂಬ ಬಾದರಾಯಣನ ವೇದಾಂತಸೂತ್ರಗಳ ನಿಲುವು. ಉಪನಿಷತ್ತುಗಳ ಗುಣಲಕ್ಷಣಗಳು ಹಾಗೂ ವೇದಗಳ ಜೊತೆಗಿನ ಅವುಗಳ ಸಂಬಂಧವನ್ನು ಗಮನಿಸಿದರೆ ತೀರಾ ವಿರೋಧಾಭಾಸದ ನಿಲುವಾಗಿ ಕಾಣುತ್ತದೆ. ಬಾದರಾಯಣನ ಈ ನಿಲುವನ್ನು ಅರ್ಥಮಾಡಿಕೊಳ್ಳುವುದು ಕೊಂಚ ಕಷ್ಟದ ಕೆಲಸ. ತನ್ನ ಎದುರಾಳಿಯ ಪ್ರಮೇಯದ ಸಿಂಧುತ್ವವನ್ನು ಒಪ್ಪಿಕೊಂಡು ಯುದ್ಧವನ್ನಾರಂಭಿಸುವ ಕರುಣಾಜನಕ ಪಾತ್ರವಾಗಿ ಬಾದರಾಯಣ ಇಲ್ಲಿ ಕಾಣುತ್ತಾನೆ. ಉಪನಿಷತ್ತುಗಳಿಗೆ ಎದುರಾಳಿಯಾದ ವೇದಗಳ ಅಧಿಕೃತತೆ ಹಾಗೂ ಪರಮಾಧಿಕಾರದ ಪ್ರಶ್ನೆ ಬಂದಾಗ ಬಾದರಾಯಣ ಜೈಮಿನಿಗೆ ಏಕೆ ಶರಣಾದ? ಸತ್ಯದ ಪ್ರತಿಪಾದನೆಗಾಗಿ ಅವನೇಕೆ ಗಡುಸಾದ ನಿಲುವನ್ನು ತಾಳಲಿಲ್ಲ? ಈ ಒಗಟಿಗೆ ಕೂಡ ಉತ್ತರವನ್ನು ಹುಡುಕಬೇಕಾಗಿದೆ.

* * * *

# ಅನುಬಂಧ – III

## ತ್ರಿಮೂರ್ತಿಗಳ ಒಗಟು*

ಹಿಂದೂ ಸಮಾಜವು ಜಾತಿಗಳ ಆಧಾರದ ಮೇಲೆ ರೂಪುಗೊಂಡಿರುವಂತೆ ಮತಧರ್ಮಗಳ ಆಧಾರದ ಮೇಲೆಯೂ ರೂಪುಗೊಂಡಿದೆ ಎಂಬ ಮಾತೂ ಅಷ್ಟೇ ನಿಜ. ಆದರೆ ಜಾತಿಗಳ ಅಧ್ಯಯನಕ್ಕೆ ಸಿಕ್ಕ ಒತ್ತು ಮತಧರ್ಮಗಳ ಅಧ್ಯಯನಕ್ಕೆ ಸಿಕ್ಕದೇ ಹೋಗಿರುವುದು ಸೋಜಿಗದ ವಿಚಾರ. ಭಾರತದ ಇತಿಹಾಸದಲ್ಲಿ ಜಾತಿಗಳು ಮಹತ್ವದ ಪಾತ್ರ ವಹಿಸಿರುವಂತೆಯೇ ಮತಧರ್ಮಗಳೂ ವಹಿಸಿವೆ. ನಿಜಕ್ಕೂ ಕೆಲವು ಮತಧರ್ಮಗಳು ಕೆಲವೊಂದು ಜಾತಿಗಳಂತೆಯೇ ಭಾರತದ ಇತಿಹಾಸವನ್ನು ನಿರ್ಮಿಸಿವೆ.

ಈ ಮತಧರ್ಮಗಳ ಮೂಲಗಳನ್ನು ಹುಡುಕುವುದು ಮತ್ತು ಅವುಗಳ ಶಾಖೆಗಳನ್ನು ಪರಸ್ಪರ ಹೋಲಿಸುವುದು ಈ ಅಧ್ಯಾಯದ ಪುಟಮಿತಿಯಲ್ಲಿ ಅಸಾಧ್ಯ. ಆದ್ದರಿಂದ ಭಾರತದ ಇತಿಹಾಸದ ಮೂರು ಮುಖ್ಯ ಮತಗಳನ್ನು ಮಾತ್ರ ಇಲ್ಲಿ ಚರ್ಚಿಸಬಹುದು. ಬ್ರಹ್ಮ, ವಿಷ್ಣು ಹಾಗೂ ಮಹೇಶ್ವರ ಎಂಬ ದೇವರುಗಳ ಮೂಲದಿಂದ ಹುಟ್ಟಿದ ಈ ಮೂರು ಮತಗಳನ್ನು ಅಭ್ಯಸಿಸಿದಾಗ ಹಲವು ಪ್ರಶ್ನೆಗಳೇಳುತ್ತವೆ.

'ಚುಲ್ಲ ನಿದ್ದೇಶ' ಎಂಬ ಬೌದ್ಧಗ್ರಂಥಗಳ ಅಂದಿನ ಭಾರತದಲ್ಲಿ ಪ್ರಚಲಿತವಿದ್ದ ಹಲವು ಮತಧರ್ಮಗಳನ್ನು ಅವುಗಳ ಶಾಸ್ತ್ರ ಹಾಗೂ ಆಚಾರಗಳ ಆಧಾರದಿಂದ ಗುರುತಿಸುತ್ತದೆ.

### I ಮತಗಳು

| ಮತಗಳು | ಗುಣಲಕ್ಷಣಗಳು |
|---|---|
| ಆಜೀವಕ ಶ್ರಾವಕ (ಶಿಷ್ಯ) | ಆಜೀವಕ (ಜೀವನೋಪಾಯಕ್ಕಾಗಿ ವಿಶೇಷ ನಿಯಮಗಳನ್ನು ಅನುಸರಿಸಬೇಕಾದ ಭಿಕ್ಷು) |
| ನಿಗತ್ತ ಶ್ರಾವಕರು | ನಿಗೌತ (ಎಲ್ಲಾ ಬಂಧನಗಳಿಂದ ಮುಕ್ತರಾದ ಭಿಕ್ಷುಗಳು) |
| ಜಟಿಲ ಶ್ರಾವಕರು | ಜಟಿಲ (ತಮ್ಮ ಜಡೆಯನ್ನು ಗಂಟು ಹಾಕಿಕೊಂಡ ಭಿಕ್ಷುಗಳು) |
| ಪರಿವ್ರಾಜಕ ಶ್ರಾವಕರು | ಪರಿವ್ರಾಜಕ (ಸಮಾಜದಿಂದ ದೂರವಿರುವ ಭಿಕ್ಷುಗಳು) |
| ಅವರುದ್ಧ ಶ್ರಾವಕರು | ಅವರುದ್ಧಕ |

* *ಈ ಒಗಟನ್ನು ಒಗಟು ೧೧ರ ಜೊತೆಗೆ ಓದಿಕೊಳ್ಳಬಹುದು. 'ತ್ರಿಮೂರ್ತಿಗಳ ಒಗಟು' ಎಂಬ ಶೀರ್ಷಿಕೆಯು ಮೂಲ ಪರಿವಿಡಿಲ್ಲಿಲ್ಲ. ಸರ್ಕಾರವು ಪಡೆದುಕೊಂಡ ಹಸ್ತಪ್ರತಿಯಲ್ಲೂ ಇಲ್ಲ. ಇದರ ಪ್ರತಿಯನ್ನು ಶ್ರೀ ಎಸ್.ಎಸ್. ಢೇಗೆ ಅವರು ನೀಡಿದ್ದಾರೆ – ಸಂ.*

## II. ಪಂಥಗಳು

| ಪಂಥದ ಹೆಸರು | ಪೂಜಿಸಲಾಗುವ ದೇವತೆ |
|---|---|
| ಹಸ್ತಿ ವ್ರತಿಕರು | ಹಸ್ತಿ (ಆನೆ) |
| ಅಶ್ವ ವ್ರತಿಕರು | ಅಶ್ವ |
| ಗೋ ವ್ರತಿಕರು | ಗೋವು |
| ಕುಕ್ಕುರ ವ್ರತಿಕರು | ಕುಕ್ಕು (ನಾಯಿ) |
| ವಾಸುವೇವ ವ್ರತಿಕರು | ವಾಸುದೇವ |
| ಬಲದೇವ ವ್ರತಿಕರು | ಬಲದೇವ |
| ಕಾಕ ವ್ರತಿಕರು | ಕಾಕ |
| ಪೂರ್ಣಭದ್ರ ವ್ರತಿಕರು | ಪೂರ್ಣಭದ್ರ |
| ಮಣಿಭದ್ರ ವ್ರತಿಕರು | ಮಣಿಭದ್ರ |
| ಅಗ್ನಿ ವ್ರತಿಕರು | ಅಗ್ನಿ |
| ನಾಗ ವ್ರತಿಕರು | ನಾಗ |
| ಸುಪರ್ಣ ವ್ರತಿಕರು | ಸುಪರ್ಣ |
| ಯಕ್ಷ ವ್ರತಿಕರು | ಯಕ್ಷ |
| ಅಸುರ ವ್ರತಿಕರು | ಅಸುರ |
| ಗಂಧರ್ವ ವ್ರತಿಕರು | ಗಂಧರ್ವ |
| ಮಹಾರಾಜ ವ್ರತಿಕರು | ಮಹಾರಾಜ |
| ಚಂದ್ರ ವ್ರತಿಕರು | ಚಂದ್ರ |
| ಸೂರ್ಯ ವ್ರತಿಕರು | ಸೂರ್ಯ |
| ಇಂದ್ರ ವ್ರತಿಕರು | ಇಂದ್ರ |
| ಬ್ರಹ್ಮ ವ್ರತಿಕರು | ಬ್ರಹ್ಮ |
| ದೇವ ವ್ರತಿಕರು | ದೇವ |
| ದೀಷ ವ್ರತಿಕರು | ದೀಷ |

ಮೇಲೆ ಹೇಳಿದ ದೇವರುಗಳ ಹಾಗೂ ಪೂಜಾಪದ್ಧತಿಗಳ ಜೊತೆಗೆ ತ್ರಿಮೂರ್ತಿಗಳನ್ನು ಹೋಲಿಸಿದರೆ ಎರಡು ನಿರ್ಣಯಗಳು ಹುಟ್ಟುತ್ತವೆ. ಒಂದು, ವಿಷ್ಣು ಮತ್ತು ಮಹೇಶ್ವರ ಪಂಥಗಳು 'ಚುಲ್ಲ ನಿದ್ದೇಶ'ದಲ್ಲಿ ಹೇಳಿದ ಪಂಥಗಳಿಗಿಂತ ತಡವಾಗಿ ಹುಟ್ಟಿದವು. ಎರಡು, ಹಳೆಯ ಧರ್ಮ ಪಂಥಗಳು ಮಾಯವಾಗಿರುವುದು. ಈ ವೈಚಿತ್ರ್ಯಕ್ಕೆ ಕಾರಣಗಳನ್ನು ಹುಡುಕುವಾಗ ಒಂದು ಅಂಶ ಸ್ಪಷ್ಟವಾಗುತ್ತದೆ. ಅದೇಂದರೆ, ಹೊಸ ಧರ್ಮಪಂಥಗಳನ್ನು ಬ್ರಾಹ್ಮಣರು ಪ್ರಚುರಪಡಿಸದಿದ್ದರೆ ಅವು ಅಸ್ತಿತ್ವಕ್ಕೆ ಬರುತ್ತಿರಲಿಲ್ಲ. ಹಾಗೆಯೇ ಬ್ರಾಹ್ಮಣರ ಅವಜ್ಞೆಗೊಳಗಾಗದಿದ್ದರೆ ಹಳೆಯ ಧರ್ಮಪಂಥಗಳು ಮಾಯವಾಗುತ್ತಿರಲಿಲ್ಲ. ಹಾಗಿದ್ದರೆ ಬ್ರಾಹ್ಮಣರೇಕೆ ಈ ಹೊಸ ಧರ್ಮಪಂಥಗಳನ್ನು ಹುಟ್ಟುಹಾಕಿದರು?

ಹಳೆಯ ಧರ್ಮಪಂಥಗಳನ್ನು ಏಕೆ ತೊರೆದರು? ಈ ಪ್ರಶ್ನೆ ಏಕೆ ತೀರಾ ಮುಖ್ಯವಾದುದೆಂದರೆ ಈ ಬದಲಾವಣೆಯಿಂದಾಗಿ ಹಿನ್ನೆಲೆಗೆ ಸರಿದವನು ಇಂದ್ರ. ವೈದಿಕ ದೇವತೆಗಳಲ್ಲೆಲ್ಲ ಶ್ರೇಷ್ಠವಾದ ಇಂದ್ರನನ್ನು ನೂರಾರು ವರ್ಷಗಳ ಕಾಲ ಪರಮ ದೇವತೆ ಎಂದು ಆರಾಧಿಸುತ್ತಿದ್ದ ಬ್ರಾಹ್ಮಣರು ಇದ್ದಕ್ಕಿದ್ದಂತೆ ಇಂದ್ರನನ್ನು ಬಿಟ್ಟು ಬ್ರಹ್ಮ, ವಿಷ್ಣು ಮತ್ತು ಮಹೇಶ್ವರರ ಭಕ್ತರಾಗಿದ್ದಕ್ಕೆ ಕಾರಣಗಳೇನು? ಈ ಪಕ್ಷಾಂತರಕ್ಕೆ ಆಧ್ಯಾತ್ಮಿಕ ಕಾರಣಗಳು ಇದ್ದವೇ? ಅಥವಾ ಅವು ಕೇವಲ ವ್ಯಾವಹಾರಿಕ ಕಾರಣಗಳೇ?

ಇಂದ್ರನಿಗೆ ಬದಲಾಗಿ ಬ್ರಾಹ್ಮಣರು ಸ್ವೀಕರಿಸಿದ ಈ ಶಿವ ಯಾರು? ಉತ್ತರಕ್ಕಾಗಿ, ದಕ್ಷ ಪ್ರಜಾಪತಿಯ ಯಜ್ಞಕ್ಕೆ ಶಿವನ ಪ್ರತಿಕ್ರಿಯೆಯ ಕಥೆಯನ್ನು ನೋಡಬೇಕು. ಆ ಕಥೆ ಹೀಗಿದೆ: ಹಿಮಾಲಯದ ತಪ್ಪಲಲ್ಲಿ ದಕ್ಷನೆಂಬ ರಾಜ ಯಜ್ಞವೊಂದನ್ನು ಮಾಡುತ್ತಿದ್ದ. ದೇವ ದಾನವರು, ಪಿಶಾಚಿಗಳು, ನಾಗ, ರಾಕ್ಷಸ ಮತ್ತು ಋಷಿಗಳು ಯಜ್ಞಕ್ಕೆ ಆಗಮಿಸಿದ್ದರು. ಆದರೆ ಶಿವನಿಗೆ ದಕ್ಷನ ಆಹ್ವಾನವಿರದಿದ್ದರಿಂದ ಶಿವ ಗೈರುಹಾಜರಾದ. ಇದನ್ನು ಕುರಿತು ದಧೀಚಿ ದಕ್ಷನನ್ನು ಹೀಗಳೆಯುತ್ತಾ, ಶಿವನನ್ನು ಆಹ್ವಾನಿಸುವಂತೆ ಹೇಳಿದ. ಒಲ್ಲೆನೆಂದ ದಕ್ಷ 'ಇಂಥ ಎಷ್ಟೋ ರುದ್ರರನ್ನು ನೋಡಿದ್ದೇನೆ. ಆ ಶಿವನನ್ನು ನಾನು ಕರೆಯುವುದಿಲ್ಲ' ಎಂದ. ದಧೀಚಿ ಉತ್ತರಿಸಿದ: 'ನೀವೆಲ್ಲ ಶಿವನ ವಿರುದ್ಧ ಸಂಚು ಮಾಡಿದ್ದೀರಿ. ನೆನಪಿರಲಿ, ನಿನ್ನ ಯಜ್ಞ ಫಲಪ್ರದವಾಗಲಾರದು'. ಇದನ್ನರಿತ ಮಹಾದೇವ ತನ್ನ ಬಾಯಿಂದ ಒಬ್ಬ ರಾಕ್ಷಸನನ್ನು ಸೃಷ್ಟಿಸಿದ. ಆ ರಾಕ್ಷಸ ದಕ್ಷಯಜ್ಞವನ್ನು ಧ್ವಂಸ ಮಾಡಿದ. ಇದರಿಂದ ಎರಡು ಅಂಶಗಳು ಸ್ಪಷ್ಟವಾಗುತ್ತವೆ; ಒಂದು, ಶಿವನನ್ನು ಪೂಜಾರ್ಹನಾದ ದೇವರೆಂದು ಒಪ್ಪಿಕೊಳ್ಳಲು ಬ್ರಾಹ್ಮಣರು ಒಂದು ಘಟ್ಟದಲ್ಲಿ ನಿರಾಕರಿಸಿದ್ದರು. ಎರಡು, ಬ್ರಾಹ್ಮಣರ ಯಜ್ಞಪದ್ಧತಿಗೆ ಶಿವ ವಿರೋಧಿಯಾಗಿದ್ದ.

ಆರ್ಯರು ಮತ್ತು ಆರ್ಯೇತರರ ನಡುವಣ ವ್ಯತ್ಯಾಸ ಜನಾಂಗೀಯವಾದದ್ದಾಗಿರಲಿಲ್ಲ; ಬದಲಿಗೆ ಸಾಂಸ್ಕೃತಿಕವಾದುದಾಗಿತ್ತು. ಈ ಸಾಂಸ್ಕೃತಿಕ ಭಿನ್ನತೆಗೆ ಎರಡು ಕೇಂದ್ರಗಳಿದ್ದವು. ಆರ್ಯರು ಚಾತುರ್ವರ್ಣ್ಯ ಪದ್ಧತಿಯಲ್ಲಿ ನಂಬಿಕೆಯಿಟ್ಟರೆ ಆರ್ಯೇತರರು ಅದಕ್ಕೆ ವಿರೋಧಿಯಾಗಿದ್ದರು. ಆರ್ಯರು ಯಜ್ಞವನ್ನು ತಮ್ಮ ಧರ್ಮದ ಮುಖ್ಯ ಅಂಗವೆಂದು ನಂಬಿದ್ದರೆ, ಆರ್ಯೇತರರು ಅದಕ್ಕೆ ವಿರೋಧಿಯಾಗಿದ್ದರು. ಈ ಹಿನ್ನೆಲೆಯಲ್ಲಿ ದಕ್ಷಯಜ್ಞದ ಕತೆಯನ್ನು ಓದಿದರೆ ಶಿವ ಅವೈದಿಕ ಹಾಗೂ ಆರ್ಯೇತರ ದೇವರೆಂದು ಗೊತ್ತಾಗುತ್ತದೆ. ಹಾಗಾದರೆ, ವೇದ ಸಂಸ್ಕೃತಿಯ ಆಧಾರಸ್ತಂಭಗಳಾದ ಬ್ರಾಹ್ಮಣರು ಶಿವನನ್ನು ತಮ್ಮ ದೇವರನ್ನಾಗಿ ಏಕೆ ಸ್ವೀಕರಿಸಿದರು?

ಅಷ್ಟೇ ಕುತೂಹಲಕಾರಿಯಾದ ಒಗಟಿನ ಪ್ರಶ್ನೆ ಏನೆಂದರೆ ವಿಷ್ಣು ಹಾಗೂ ಶಿವ ಇವರುಗಳ ಮೂಲ ಸ್ವರೂಪದಲ್ಲಿ ಬ್ರಾಹ್ಮಣರು ಮಾಡಿದ ಬದಲಾವಣೆಗಳು.

ಶಿವನೊಬ್ಬ ಅವೈದಿಕ ಹಾಗೂ ಆರ್ಯೇತರ ದೇವರೆಂಬುದು ಹಿಂದೂಗಳ ಅರಿವಿಗೆ ಬಂದಂತಿಲ್ಲ. ವೇದಗಳಲ್ಲಿ ಬರುವ ರುದ್ರನೊಂದಿಗೆ ಅವರು ಶಿವನನ್ನು ಸಮೀಕರಿಸುತ್ತಾರೆ. ತೈತ್ತೀರಿಯ ಸಂಹಿತೆಯಲ್ಲಿ ರುದ್ರನನ್ನು ಆರಾಧಿಸುವ ಶ್ಲೋಕವೊಂದಿದೆ. ಈ ಪ್ರಾರ್ಥನೆಯಲ್ಲಿ ರುದ್ರ (ಅಂದರೆ ಶಿವ) ಕಳ್ಳರ ಹಾಗೂ ಡಕಾಯಿತರ ದೇವರೆಂದೂ ಕಮ್ಮಾರ, ಕುಂಬಾರರಂತಹ ಕೆಳವರ್ಗದವರ ಚಕ್ರವರ್ತಿಯೆಂದೂ ವರ್ಣಿಸಲಾಗಿದೆ. ಹೀಗಿರುವಾಗ ಕಳ್ಳಕಾಕರ ದೊರೆಯನ್ನು ಬ್ರಾಹ್ಮಣರು ತಮ್ಮ ಪರಮಾತ್ಮನನ್ನಾಗಿ ಹೇಗೆ ಸ್ವೀಕರಿಸಿದರು?

ರುದ್ರನನ್ನು ಶಿವನನ್ನಾಗಿಸುವಾಗ ಬ್ರಾಹ್ಮಣರು ಮಾಡಿದ ಇನ್ನೊಂದು ಬದಲಾವಣೆಯನ್ನು ಗಮನಿಸೋಣ. ಅಶ್ವಲಾಯನ ಗೃಹ್ಯಸೂತ್ರದಲ್ಲಿ ರುದ್ರನನ್ನು ಪೂಜಿಸುವ ಬಗೆಯನ್ನು ವರ್ಣಿಸಲಾಗಿದೆ. ಅದರ ಪ್ರಕಾರ ರುದ್ರನ ಪೂಜೆಗೆ ಒಂದು ಎತ್ತಿನ ಬಲಿಯಾಗಬೇಕು. ತನ್ನ ಕೊಟ್ಟಿಗೆಯ ಅತ್ಯುತ್ತಮವಾದ ಎತ್ತೊಂದನ್ನು ಇದಕ್ಕಾಗಿ ಆರಿಸಬೇಕೆಂದು ಅಲ್ಲಿ ಹೇಳಲಾಗಿದೆ. ಒಂದು ನಿರ್ದಿಷ್ಟ ಬಣ್ಣದ, ಕೊಬ್ಬಿದ ಈ ಬಲಿಯನ್ನು ರುದ್ರನನ್ನು ಪೂಜಿಸುತ್ತಾ ಕತ್ತರಿಸಿ ಅದರ ಒಂದೊಂದೇ ಭಾಗವನ್ನು ಅಗ್ನಿಗೆ ಅರ್ಪಿಸಬೇಕು. ರುದ್ರ, 'ಹಿಂಸೆ'ಯ ದೇವತೆಯಾದ್ದರಿಂದ ಪಶುಬಲಿ ಅಗತ್ಯವಾಗಿತ್ತು. ಇದಕ್ಕೆ ತದ್ವಿರುದ್ಧವಾಗಿ ಶಿವ 'ಅಹಿಂಸೆ'ಯ ದೇವರಾದ್ದರಿಂದ ಆತನಿಗೆ ಪಶುಬಲಿ ಕೊಡುವಂತಿಲ್ಲ. ಇದರಿಂದ ಹುಟ್ಟುವ ಪ್ರಶ್ನೆ ಎಂದರೆ, ಶಿವನನ್ನು ಮಾಂಸಾಹಾರದಿಂದ ಬಿಡಿಸಿ ಸಸ್ಯಾಹಾರಿಯನ್ನಾಗಿ ಮಾಡುವ ಒತ್ತಡಗಳು ಬ್ರಾಹ್ಮಣರಿಗೆ ಏಕೆ ಹುಟ್ಟಿದವು?

ಭಾರತದುದ್ದಕ್ಕೂ ಹಿಂದೂಗಳು ಯಾವುದೇ ಸಂಕೋಚ ಅಥವಾ ನಾಚಿಕೆಯಿಲ್ಲದೆ ಲಿಂಗಪೂಜೆಯನ್ನು ಒಪ್ಪಿಕೊಂಡಿದ್ದಾರೆ. ಈ ಲಿಂಗವು ಶಿವನನ್ನು ಪ್ರತಿನಿಧಿಸುವುದರಿಂದ ಶಿವನನ್ನು ಪೂಜಿಸುವ ಸರಿಯಾದ ಮಾರ್ಗವೆಂದರೆ ಶಿವಲಿಂಗದ ಪೂಜೆ ಎಂದೇ ಸಾಮಾನ್ಯ ನಂಬಿಕೆ. ಲಿಂಗಪೂಜೆ ಹಾಗೂ ಶಿವ ಇವರ ನಡುವಣ ಸಂಬಂಧ ಆರಂಭವಾದುದು ಯಾವಾಗ? ಪ್ರೊ. ದಾಂಡೇಕರ್ ತಮ್ಮ "ವೇದದಲ್ಲಿ ವಿಷ್ಣು' ಎಂಬ ಪ್ರಬಂಧದಲ್ಲಿ ಕೆಲವು ಕುತೂಹಲಕರ ಮಾಹಿತಿಗಳನ್ನು ನೀಡುತ್ತಾರೆ:

"ವಿಷ್ಣುವಿಗೆ ಸಂಬಂಧಿಸಿದಂತೆ ವೇದದಲ್ಲಿ ಬಳಸಲಾಗುವ 'ಶಿಪಿವಿಷ್ಟ' ಎಂಬ ಪದ ತುಂಬಾ ಸಾಂಕೇತಿಕವಾದದ್ದು. 'ಋಗ್ವೇದ'ದ (VII .೯೯, ೭; VII. ೧೦೦. ೫–೬) ಕೆಲವು ಭಾಗಗಳಲ್ಲಿ ಈ ಪದ ಕಾಣಿಸಿಕೊಂಡಾಗಲೆಲ್ಲ ಒಂದು ಬಗೆಯ ಉದ್ದೇಶಪೂರ್ವಕ ಅಸ್ಪಷ್ಟತೆಯಿರುವುದನ್ನು ಗುರುತಿಸಬಹುದು. ಶಿಪಿವಿಷ್ಟ ಎಂಬ ಪದ ಸೂಚಿಸುವ ವಿಷ್ಣುವಿನ ವ್ಯಕ್ತಿತ್ವದ ಒಂದು ಅಂಶವನ್ನು ವೇದರ್ಷಿಗಳು ಬೇಕೆಂತಲೇ ಅಸ್ಪಷ್ಟಗೊಳಿಸಿದ್ದಾರೆಂದು ಕಾಣುತ್ತದೆ. ಈ ಪದವನ್ನು ವಿವರಿಸುವ ಎಷ್ಟೋ ಪ್ರಯತ್ನಗಳು ನಡೆದಿದ್ದರೂ ಅವುಗಳಿಗೆ ವಿಷ್ಣುವಿನ ನಿಜ ಸ್ವರೂಪವನ್ನು ಬಿಚ್ಚಿಡಲಾಗಿಲ್ಲ. ಭಾಷಾಶಾಸ್ತ್ರದ ದೃಷ್ಟಿಯಿಂದ 'ಶೇಫ'(ಶಿಶ್ನ) ಎಂಬ ಪದವನ್ನು 'ಶಿಪಿ' ಎಂಬ ಪದದಿಂದ ಬೇರ್ಪಡಿಲಾಗದು. ಈ ಪದದ ಉಳಿದ ರೂಪಗಳೆಂದರೆ ಶಿಫಾ (ಬೇರು). ನಿರುಕ್ತ (V.೭) ಕೂಡ ಈ ಅರ್ಥವನ್ನೇ ಜೋಡಿಸಿ ಓದಿದರೆ 'ಬದಲಾಗುವ ಲಿಂಗ; ಊದಿಕೊಂಡ ಲಿಂಗ' ಎಂಬ ಅರ್ಥವೂ ಬರುತ್ತದೆ. ವೇದರ್ಷಿಗಳು ವಿಷ್ಣುವಿನ ಈ ರೂಪದ ಬಗ್ಗೆ ಯಾಕೆ ಇಷ್ಟು ಅಸ್ಪಷ್ಟವಾಗಿ ಮಾತಾಡುತ್ತಾರೆಂಬುದು ಇದರಿಂದ ಅರ್ಥವಾಗುತ್ತದೆ. ಈ ಹಿನ್ನೆಲೆಯಲ್ಲಿ ನಿರುಕ್ತ (V. ೮–೯) ವಿಷ್ಣುವನ್ನು ಕುರಿತು ಹೇಳಿದ ಮಾತುಗಳು ಮುಖ್ಯವಾಗಿ ಕಾಣುತ್ತವೆ. ಶಿಪಿವಿಷ್ಟ ಎಂಬ ಪದ ನಿಸ್ಸಂಶಯವಾಗಿ ವಿಷ್ಣುವಿನ ಪ್ರಾಚೀನವಾದ ಲಿಂಗದ (phallic) ಸ್ವರೂಪವನ್ನು ಕುರಿತು ಹೇಳುತ್ತದೆ. ವೇದಗಳಲ್ಲಿ, ಸಂಸ್ಕಾರಗಳಲ್ಲಿ ವಿಷ್ಣುವನ್ನು ಕುರಿತು ಹೇಳುವಾಗೆಲ್ಲಾ ಫಲವಂತಿಕೆ ಹಾಗೂ ಸಂತಾನೋತ್ಪತ್ತಿ ಇವುಗಳ ಮಾತೂ ಬರುತ್ತದೆ."

"ವೇದಶಾಸ್ತ್ರದ ಶ್ರಾದ್ಧ ಸಂಸ್ಕಾರದ ಕುತೂಹಲಕರ ಅಂಶಗಳಲ್ಲೊಂದೆಂದರೆ, ಉಗುರಿಲ್ಲದ ಅಂಗುಷ್ಟವೊಂದನ್ನು ಪಿತೃವಿಗೆ ಸಲ್ಲಿಸಲಾದ ಪಿಂಡದಲ್ಲಿ ಇಡುವ ಪದ್ಧತಿ. ವಿಷ್ಣುವಿಗೆ ಸಲ್ಲಿಸಲಾದ ಪ್ರಾರ್ಥನೆಯೊಂದಿಗೆ ಈ ಕ್ರಿಯೆ ನಡೆಯುತ್ತದೆ. ಈ ಅಂಗುಷ್ಠ ನಿಸ್ಸಂದೇಹವಾಗಿ ಲಿಂಗದ ಸಂಕೇತ. ಈ ವಿಧಿಯಲ್ಲಿ ವಿಷ್ಣು ಹಾಗೂ ವೇದ ವಿಧಿಗಳ ಲಿಂಗದ (phallic) ಅಂಶಗಳ ನಡುವಣ ಸಂಬಂಧ

ಅರ್ಥವಾಗುತ್ತದೆ. ಅನಂತರದ ಗ್ರಂಥಗಳಲ್ಲಿ ವಿಷ್ಣುವನ್ನು ಅಂಗುಷ್ಠದೊಂದಿಗೆ ಗುರುತಿಸಲಾಗಿದೆ. ವಿಷ್ಣು ಭೂತಾಯಿಯನ್ನು ಪ್ರವೇಶಿಸುವ ಕ್ರಿಯೆ ಕೂಡ ಗರ್ಭದಾನ ಸಂಸ್ಕಾರದ ಸಾಂಕೇತಿಕ ನಿರೂಪಣೆಯಾಗಿದೆ. ತನ್ವರ್ಧನಃ ಎಂಬ ಪದವನ್ನು ವಿಷ್ಣುವನ್ನು ಕುರಿತು ಬಳಸಲಾಗಿರುವುದು (ಐ.ಎಸ್. ಪ್ಯಾಸೇಜ್ VII .೯೯.೧; VII.೧೦೦.೨) ಕೂಡ ವಿಷ್ಣುವಿನ ಲಿಂಗದ ಸಂಕೇತಗಳೊಂದಿಗೆ ಗುರುತಿಸಲಾಗಿರುವುದರ ಸೂಚನೆ. ವಿಷ್ಣುವನ್ನು ಹಿರಣ್ಯಗರ್ಭ ಮತ್ತು ನಾರಾಯಣನೊಂದಿಗೆ ಕೂಡ ಗುರುತಿಸಲಾಗಿದೆ. ಅಥರ್ವಣ ವೇದದಲ್ಲಿ (VII.೪೬.೩) ಸಿನಿವಾಲಿ ಎಂಬ ಸ್ತ್ರೀ ಲೈಂಗಿಕ ಕ್ರಿಯೆಗಳನ್ನು ಸಂರಕ್ಷಿಸುವ ನಿತಂಬಿನೀ ದೇವತೆಯ ಜೊತೆ ವಿಷ್ಣುವಿನ ಸಂಬಂಧವನ್ನು ಕೂಡ ಇದೇ ಬೆಳಕಿನಲ್ಲಿ ಗಮನಿಸಬೇಕು.

'ಸಾಂಖ್ಯಾಯನ ಗೃಹ್ಯಸೂತ್ರ' (I.೨೨.೧೩), ಮಂತ್ರ (X೧೮೪.೧) ವನ್ನು ಗರ್ಭಸಂಸ್ಕಾರದ ಸಮಯದಲ್ಲಿ ಪಠಿಸಲಾಗುತ್ತದೆ. ಈ ಮಂತ್ರ ವಿಷ್ಣುವನ್ನು ಭ್ರೂಣರಕ್ಷಕ ಎಂದು ಕರೆಯುತ್ತದೆ. ಅಥರ್ವಣ ವೇದದಲ್ಲಿ (VII.೧೭.೪) ಲೈಂಗಿಕ ಕ್ರಿಯೆಗಳಿಗೂ ವಿಷ್ಣುವಿಗೂ ಸಂಬಂಧವಿದೆ. ಎರಡು ವಿಶೇಷಣಗಳಾದ 'ವಿಷ್ಣು ನಿಷಿಕ್ತಪ' (ವೀರ್ಯ ರಕ್ಷಕ) ಮತ್ತು 'ಸುಮಜ್ಜನಿ' (ಸುಸೂತ್ರವಾಗಿ ಜನಿಸುವಂತೆ ಮಾಡುವ) ಎಂಬ ಪದಗಳೇ ಈ ಅಂಶವನ್ನು ಸ್ಪಷ್ಟಪಡಿಸುತ್ತವೆ. ಇನ್ನೊಂದು ವೃಷಕಪಿ ಪ್ರಾರ್ಥನೆಯಲ್ಲಿ (X.೮೬) ಇಂದ್ರ ಪೌರುಷಹೀನನಾದಾಗ ಮರ್ಕಟವೊಂದು ಔಷಧಿಯನ್ನು ಕೊಟ್ಟು ಇಂದ್ರ ತನ್ನ ಪುರುಷತ್ವವನ್ನು ಪಡೆಯುವಂತೆ ಮಾಡುತ್ತದೆ. ಈ ವೃಷಕಪಿ ವಿಷ್ಣು ಸಹಸ್ರನಾಮದಲ್ಲಿ ವಿಷ್ಣುವಿನ ಹೆಸರುಗಳಲ್ಲೊಂದಾಗಿರುವುದು ಸಾಂಕೇತಿಕವಾಗಿದೆ. ಋಗ್ವೇದದಲ್ಲೂ (ಇ ೧೫೫.೩–೪) ಪೌಂಸ್ಯ–ಪೌರುಷ ಶಕ್ತಿ ಎಂಬ ಶಬ್ದವನ್ನು ವಿಷ್ಣುವನ್ನು ವರ್ಣಿಸಲು ಬಳಸಲಾಗಿದೆ.

ಪ್ರೊ. ದಾಂಡೇಕರರ ಸಂಶೋಧನೆಯ ಪ್ರಕಾರ ಆರಂಭದಲ್ಲಿ ಲಿಂಗಪೂಜೆ ವಿಷ್ಣುವಿಗೆ ಸಂಬಂಧಿಸಿದ್ದಾಗಿತ್ತು. ಆದರೆ ಪುರಾಣಗಳಲ್ಲಿ ಅದು ಶಿವನಿಗೆ ಸಂಬಂಧಿಸಿತ್ತು. ಅದು ಅಚ್ಚರಿಗೊಳಿಸುವ ಬದಲಾವಣೆ. ವಿಷ್ಣುವಿಗೆ ಸಂಬಂಧಿಸಿದ್ದ ಲಿಂಗಪೂಜೆಯನ್ನು ಶಿವನಿಗೆ ವರ್ಗಾಯಿಸಿದ್ದು ಒಂದು ಒಗಟಾಗಿಯೇ ಉಳಿಯುತ್ತದೆ.

ಇನ್ನು ಮುಂದೆ ಕಡೆಯ ಹಾಗೂ ಮುಖ್ಯ ಪ್ರಶ್ನೆಯನ್ನು ಚರ್ಚಿಸೋಣ. ಈ ಪ್ರಶ್ನೆ ಬ್ರಹ್ಮ, ವಿಷ್ಣು ಹಾಗೂ ಮಹೇಶ್ವರರ ಸಂಬಂಧಗಳನ್ನು ಕುರಿತದ್ದು. ದತ್ತಾತ್ರೇಯನ ಹುಟ್ಟನ್ನು ಕುರಿತ ಕಥೆ ಈ ಸಂಬಂಧವನ್ನು ಚೆನ್ನಾಗಿ ನಿರೂಪಿಸುತ್ತದೆ. ಈ ಕಥೆ ಸ್ಥೂಲವಾಗಿ ಹೀಗಿದೆ. ಒಂದು ಮಧ್ಯಾಹ್ನ ಈ ತ್ರಿಮೂರ್ತಿಗಳ ಪತ್ನಿಯರಾದ ಸರಸ್ವತಿ, ಲಕ್ಷ್ಮಿ ಮತ್ತು ಪಾರ್ವತಿಯರು ಹರಟುತ್ತಾ ಕುಳಿತಿದ್ದಾಗ ನಾರದ ಬರುತ್ತಾನೆ. ಮಾತಿನ ನಡುವೆ ಅತ್ಯಂತ ಪವಿತ್ರಳಾದ ಹಾಗೂ ಪತಿವ್ರತೆಯಾದ ಹೆಂಗಸು ಯಾರು ಎಂಬ ಪ್ರಶ್ನೆ ಏಳುತ್ತದೆ. ಆಗ ನಾರದ ಅತ್ರಿ ಋಷಿಯ ಪತ್ನಿ ಅನಸೂಯೆ ಅಂಥ ಹೆಣ್ಣೆನ್ನುತ್ತಾನೆ. ಆದರೆ ಉಳಿದ ಮೂವರು ಇದನ್ನು ತೀವ್ರವಾಗಿ ನಿರಾಕರಿಸಿ ಆ ಮೂವರಲ್ಲಿ ಪ್ರತಿಯೊಬ್ಬಳು ತಾನೇ ಅತ್ಯಂತ ಪವಿತ್ರಳೆಂದು ಘೋಷಿಸಿಕೊಳ್ಳುತ್ತಾಳೆ. ಆದರೆ ನಾರದ ಈ ಮೂವರ ಅನೈತಿಕ ಲೈಂಗಿಕ ಸಂಬಂಧಗಳನ್ನು ಕುರಿತು ಮಾತನಾಡುತ್ತಾ ಅವರನ್ನು ಸುಮ್ಮನಾಗಿಸುತ್ತಾನೆ. ಆದರೆ ಅವರ ಕೋಪ ಆರುವುದಿಲ್ಲ. ತಮ್ಮ ಕಳೆದುಹೋದ ಮಾನವನ್ನು ಮರಳಿ ಪಡೆಯುವ ಒಂದೇ ಒಂದು ಮಾರ್ಗವೆಂದರೆ ಅನಸೂಯೆಯನ್ನು ಅನೈತಿಕ ಸಂಬಂಧ ಬೆಳೆಸುವಂತೆ ಪ್ರಚೋದಿಸುವುದು ಎಂದು ನಿರ್ಧರಿಸಿದ

ಆ ಮೂವರು, ಅಂದು ರಾತ್ರಿ ತಂತಮ್ಮ ಪತಿಗಳಿಗೆ ನಾರದ ತಮ್ಮ ಬಗ್ಗೆ ಆಡಿದ್ದನ್ನು ತಿಳಿಸುತ್ತಾ ತಮ್ಮ ಅವಮಾನಗಳಿಗೆ ತಮ್ಮ ಪತಿಯೇ ಕಾರಣ ಎನ್ನುತ್ತಾರೆ. ಅನಸೂಯೆಯೊಂದಿಗೆ ಅನೈತಿಕ ಸಂಬಂಧವನ್ನು ಅವರು ಬೆಳೆಸಿದ್ದರೆ ಅನಸೂಯೆಯೂ ತಮ್ಮ ಮಟ್ಟಕ್ಕೇ ಇರುತ್ತಿದ್ದು, ನಾರದ ತಮ್ಮನ್ನು ಅವಮಾನಿಸುತ್ತಿರಲಿಲ್ಲ ಎಂದು ದೂರುತ್ತಾರೆ. ತಮ್ಮ ಪತ್ನಿಯರ ವಾದದಲ್ಲಿ ಹುರುಳಿದ್ದದ್ದು ತ್ರಿಮೂರ್ತಿಗಳಿಗೆ ಖಾತ್ರಿಯಾಗುತ್ತದೆ. ಅವರು ಬ್ರಾಹ್ಮಣ ಭಿಕ್ಷುಗಳ ವೇಷದಲ್ಲಿ ಅತ್ರಿ ಋಷಿಯ ಪರ್ಣಕುಟೀರಕ್ಕೆ ಬರುತ್ತಾರೆ.

ಅವರು ಬಂದಾಗ ಅತ್ರಿ ಆಶ್ರಮದಲ್ಲಿರುವುದಿಲ್ಲ. ಅವರನ್ನು ಸ್ವಾಗತಿಸಿದ ಅನಸೂಯೆ ಅವರಿಗಾಗಿ ಆಹಾರವನ್ನು ಸಿದ್ಧಪಡಿಸುತ್ತಾಳೆ. ಆಹಾರ ಸಿದ್ಧವಾದಾಗ ಅವಳು ಅವರನ್ನು ಊಟಕ್ಕೆ ಆಹ್ವಾನಿಸುತ್ತಾಳೆ. ಆಗ ಅನಸೂಯೆ ನಗ್ನಳಾಗಿ ಆಹಾರವನ್ನು ಬಡಿಸಿದರೆ ಮಾತ್ರ ತಾವು ಆಹಾರವನ್ನು ಸ್ವೀಕರಿಸುತ್ತೇವೆಂದು ತ್ರಿಮೂರ್ತಿಗಳೂ ಹೇಳುತ್ತಾರೆ. ಪ್ರಾಚೀನ ಭಾರತದಲ್ಲಿ ಬ್ರಾಹ್ಮನ ಅತಿಥಿಯೊಬ್ಬ ಅತೃಪ್ತಿಯಿಂದ ಹಿಂದಿರುಗುವಂತಿರಲಿಲ್ಲ. ಅವನು ಕೇಳಿದ್ದನ್ನೆಲ್ಲ ಅವನಿಗೆ ನೀಡಬೇಕಾಗಿತ್ತು. ಈ ನಿಯಮಕ್ಕನುಗುಣವಾಗಿ ಅನಸೂಯೆ ಅವರಿಗೆ ಬೆತ್ತಲಾಗಿ ಬಡಿಸಲು ಒಪ್ಪುತ್ತಾಳೆ. ಹೀಗೆ ಅವಳು ಬಡಿಸುತ್ತಿರುವಾಗ ಅತ್ರಿ ಆಗಮಿಸುತ್ತಾನೆ. ಅತ್ರಿಯನ್ನು ನೋಡಿದ ತ್ರಿಮೂರ್ತಿಗಳು ತಕ್ಷಣ ಆಗ ತಾನೇ ಹುಟ್ಟಿದ ಮಕ್ಕಳಾಗಿ ಬದಲಾಗುತ್ತಾರೆ. ಮಕ್ಕಳ ರೂಪದಲ್ಲಿದ್ದ ತ್ರಿಮೂರ್ತಿಗಳನ್ನು ಅತ್ರಿ ತೊಟ್ಟಿಲಿಗೆ ಹಾಕುತ್ತಾನೆ. ತೊಟ್ಟಿಲಿನಲ್ಲಿ ಮೂರೂ ದೇಹಗಳು ಒಂದಾಗಿ ತಲೆಗಳು ಮಾತ್ರ ಬೇರೆ ಬೇರೆಯಾಗಿ ಉಳಿದು ಬ್ರಹ್ಮ, ವಿಷ್ಣು, ಮಹೇಶ್ವರರ ತಲೆಗಳನ್ನುಳ್ಳ ದತ್ತಾತ್ರೇಯ ಹುಟ್ಟುತ್ತಾನೆ. ಈ ಕಥೆ ಎಷ್ಟು ಅನೈತಿಕವಾದುದೆಂದರೆ ತ್ರಿಮೂರ್ತಿಗಳ ಉದ್ದೇಶವನ್ನು ಮರೆಮಾಚಲೆಂದೇ ಕೊನೆಯ ಭಾಗವನ್ನು ರೂಪಿಸಿದಂತಿದೆ. ಆದರೂ ಈ ಕಥೆ ಒಂದು ಅಂಶವನ್ನು ಶ್ರುತಪಡಿಸುತ್ತದೆ. ಅದೆಂದರೆ ಒಂದು ಹಂತದಲ್ಲಿ ಹಿಂದೂ ನಂಬಿಕೆಯ ಪ್ರಕಾರ ಬ್ರಹ್ಮ, ವಿಷ್ಣು ಮಹೇಶ್ವರರ ಅಂತಸ್ತುಗಳು ಒಂದೇ ಆಗಿದ್ದವು. ಜಗತ್ತನ್ನು ನಡೆಸಿಕೊಂಡು ಹೋಗುವ ಜವಾಬ್ದಾರಿ ಮೂವರಿಗೂ ಸಮಾನವಾಗಿತ್ತು. ಬ್ರಹ್ಮ ಸೃಷ್ಟಿಸುತ್ತಿದ್ದ, ವಿಷ್ಣು ಕಾಪಾಡುತ್ತಿದ್ದ ಮತ್ತು ಶಿವ ಅದನ್ನು ಲಯವಾಗಿಸುತ್ತಿದ್ದ.

ಈ ಸಾಮರಸ್ಯ ಬಹಳ ಕಾಲ ಉಳಿಯಲಿಲ್ಲ. ಈ ಮೂರು ದೇವತೆಗಳನ್ನು ಪೂಜಿಸುತ್ತಿದ್ದ ಬ್ರಾಹ್ಮಣರು ಒಬ್ಬೊಬ್ಬ ದೇವರ ಹೆಸರಿನಲ್ಲಿ ಒಂದೊಂದು ಗುಂಪಾಗಿ ಉಳಿದ ಗುಂಪಿನ ವಿರುದ್ಧ ಧಾಳಿಯನ್ನಾರಂಭಿಸಿದರು. ಈ ಘಟ್ಟದಲ್ಲಿ ಬ್ರಹ್ಮನನ್ನು ಬ್ರಾಹ್ಮಣರು ನಡೆಸಿಕೊಂಡ ರೀತಿ ಕುತೂಹಲಕಾರಿಯಾಗಿದೆ. ಒಂದಾನೊಂದು ಕಾಲಕ್ಕೆ ಬ್ರಹ್ಮನನ್ನು ಸೃಷ್ಟಿಕರ್ತನೆಂದೂ ಪ್ರಥಮ ಪ್ರಜಾಪತಿಯೆಂದೂ ತಮ್ಮ ಏಕಮಾತ್ರ ಪರಮಾತ್ಮನೆಂದೂ ಬ್ರಾಹ್ಮಣರು ಆರಾಧಿಸುತ್ತಿದ್ದರು. ಬ್ರಾಹ್ಮಣರು ಹುಟ್ಟುಹಾಕಿದ ಅವತಾರದ ಕಲ್ಪನೆಯಲ್ಲಿ ದೇವರು ಯಾವ ರೂಪವನ್ನಾದರೂ–ಮಾನವ ಅಥವಾ ಪಶು–ತಳೆಯಬಲ್ಲವನಾಗಿದ್ದ. ಈ ಸಿದ್ಧಾಂತ ಮುಖ್ಯವಾಗಿ ಒಬ್ಬ ದೇವರನ್ನು ಪರಮೋಚ್ಚ ಸ್ಥಾನಕ್ಕೆ ಏರಿಸುವುದಕ್ಕೂ ಹಲವು ದೇವರುಗಳ ನಡುವಣ ಘರ್ಷಣೆಯನ್ನು ಅರ್ಥೈಸುವುದಕ್ಕೂ ಬಳಕೆಯಾಗುತ್ತಿತ್ತು.

ಈ ಅವತಾರಗಳನ್ನು ಕುರಿತು ಬ್ರಾಹ್ಮಣರು ಇತಿಹಾಸದುದ್ದಕ್ಕೂ ಜಗಳವಾಡಿದ್ದಾರೆ. ಹಲವಾರು ಪುರಾಣಗಳು ಕೊಡುವ ಅವತಾರಗಳ ಪಟ್ಟಿ ಹೀಗಿದೆ:

| **ಹರಿವಂಶ** | **ನಾರಾಯಣೀ ಆಖ್ಯಾನ** | **ವರಾಹ ಪುರಾಣ** | **ವಾಯು ಪುರಾಣ** | **ಭಾಗವತ ಪುರಾಣ** |
|---|---|---|---|---|
| ವರಾಹ | ಹಂಸ | ಕೂರ್ಮ | ನರಸಿಂಹ | ಸನತ್ಕುಮಾರ |
| ನರಸಿಂಹ | ಕೂರ್ಮ | ಮತ್ಸ್ಯ | ವಾಮನ | ವರಾಹ |
| ವಾಮನ | ಮತ್ಸ್ಯ | ವರಾಹ | ವರಾಹ | ನರ–ನಾರಾಯಣ |
| ಪರಶುರಾಮ | ವರಾಹ | ನರಸಿಂಹ | ಕೂರ್ಮ | ಕಪಿಲ |
| ರಾಮ | ನರಸಿಂಹ | ವಾಮನ | ಸಂಗ್ರಾಮ | ದತ್ತಾತ್ರೇಯ |
| ಕೃಷ್ಣ | ವಾಮನ | ಪರಶುರಾಮ | ಆದೀಪಕ | ಜಡ್ನಾ |
| | ಪರಶುರಾಮ | ರಾಮ | ತ್ರಿಪುರಾರಿ | ವೃಷಭ |
| | ರಾಮ | ಕೃಷ್ಣ | ಅಂಧಕಾರ | ಪೃಥ್ವಿ |
| | ಕೃಷ್ಣ | ಬುದ್ಧ | ಧ್ವಜ | ಮತ್ಸ್ಯ |
| | ಕಲ್ಕಿ | ಕಲ್ಕಿ | ವರ್ತ | ಕೂರ್ಮ |
| | | | ಹಾಲಾಹಲ | ಧನ್ವಂತರಿ |
| | | | ಕೋಲಾಹಲ | ಮೋಹಿನಿ |
| | | | | ನರಸಿಂಹ |
| | | | | ವಾಮನ |
| | | | | ಪರಶುರಾಮ |
| | | | | ವೇದವ್ಯಾಸ |
| | | | | ನರದೇವ |
| | | | | ರಾಮ |
| | | | | ಕೃಷ್ಣ |
| | | | | ಬುದ್ಧ |
| | | | | ಕಲ್ಕಿ |

ಈ ಅವತಾರಗಳೆಲ್ಲ, ಈ ಪುರಾಣಗಳ ಪ್ರಕಾರ, ವಿಷ್ಣುವಿನ ಅವತಾರಗಳು. ಆದರೆ ವರಾಹ ಮತ್ತು ಮತ್ಸ್ಯ ಎಂಬ ವಿಷ್ಣುವಿನ ಅವತಾರಗಳು ಹುಟ್ಟುವ ಆರಂಭ ಘಟ್ಟದಲ್ಲಿ ಬ್ರಹ್ಮನಿಗೆ ಕೊಡಲಾಗಿದ್ದವು. ಶಿವ ಮತ್ತು ವಿಷ್ಣು ಇಬ್ಬರೂ ಬ್ರಹ್ಮನಿಗೆ ಸಮಾನರು ಎಂದು ಹೇಳುತ್ತಲೇ ಬ್ರಾಹ್ಮಣರು ಅವರಿಬ್ಬರಿಗಿಂತ ಬ್ರಹ್ಮನೇ ಶ್ರೇಷ್ಠನೆಂದು ಸಾಧಿಸಲು ಯತ್ನಿಸುತ್ತಿದ್ದರು. ಶಿವನ ಮೂಲ ಪುರುಷನನ್ನಾಗಿ[೧] ಬ್ರಹ್ಮನನ್ನು ಪ್ರತಿಷ್ಠಾಪಿಸಿದ ಬ್ರಾಹ್ಮಣರು ಬ್ರಹ್ಮನ ಆದೇಶದ ಮೇರೆಗೆ ವಿಷ್ಣು[೨] ಜಗತ್ತಿನ ರಕ್ಷಣೆಯಲ್ಲಿ ತೊಡಗಿದ್ದಾನೆಂದು

---

೧. ವಿಷ್ಣು ಪುರಾಣ, ಮ್ಯೂರ್ : ಸ್ಯಾನ್‌ಸ್ಕ್ರಿಟ್ ಟೆಕ್ಸ್ಟ್ ಪು. ೩೯೨

೨. ರಾಮಾಯಣ, ಮ್ಯೂರ್. ಪು. ೪೭೭.

ಪ್ರಚುರಪಡಿಸತೊಡಗಿದರು. ದೇವರುಗಳು ಹೆಚ್ಚಿದಂತೆಲ್ಲಾ ಅವರ ನಡುವಿನ ಘರ್ಷಣೆಗಳು ಹೆಚ್ಚಿದವು ಹಾಗೂ ಅವನ್ನು ಇತ್ಯರ್ಥಪಡಿಸಲು ಒಬ್ಬ ದೇವರಿರುವುದು ಮಾಮೂಲಾಯಿತು. ಉದಾಹರಣೆಗೆ, ರುದ್ರ ಮತ್ತು ನಾರಾಯಣರ[೧] ಹಾಗೂ ಕೃಷ್ಣ ಮತ್ತು ಶಿವ[೨] ಇವರುಗಳ ನಡುವಣ ಕದನವನ್ನು ಇತ್ಯರ್ಥಗೊಳಿಸಲು ಬ್ರಹ್ಮ ಪ್ರವೇಶಿಸುವ ಕಥೆಗಳನ್ನು ಬ್ರಾಹ್ಮಣರು ಪ್ರಚುರಗೊಳಿಸಿದರು.

ಬ್ರಹ್ಮನನ್ನು ಇಂಥ ಸ್ಥಾನದಲ್ಲಿಟ್ಟ ಬ್ರಾಹ್ಮಣರೇ ಕಾಲಾನುಕ್ರಮದಲ್ಲಿ ಅವನನ್ನು ಹೀಗಳೆಯುವ ಕೆಲಸವನ್ನು ಆರಂಭಿಸಿದರು. ವಿಷ್ಣು ಹಾಗೂ ಶಿವ ಇವರಿಗಿಂತ ಬ್ರಹ್ಮ ಕನಿಷ್ಠನೆಂದು ಹಾಗೂ ಬ್ರಹ್ಮ ಶಿವನಿಂದ ಸೃಷ್ಟಿಯಾದನೆಂದು[೩] ಕೆಲವರು, ಅವನು ವಿಷ್ಣುವಿನಿಂದ ಸೃಷ್ಟಿಯಾದನೆಂದು[೪] ಇನ್ನೂ ಕೆಲವರು ಸಾಧಿಸತೊಡಗಿದರು.

ಬ್ರಹ್ಮ ಮತ್ತು ಶಿವ ಇವರ ನಡುವಿನ ಸಂಬಂಧವನ್ನು ಬ್ರಾಹ್ಮಣರು ಸಂಪೂರ್ಣವಾಗಿ ತಿರುಗುಮುರುಗಾಗಿಸಿಬಿಟ್ಟರು. ಆಗ ಮುಕ್ತಿ ಕೊಡುವವನು ಬ್ರಹ್ಮನಾಗಿರದೆ ಶಿವನಾಗುತ್ತಾನೆ. ಬ್ರಹ್ಮ ಕೂಡ ಶಿವ ಮತ್ತು ಲಿಂಗವನ್ನು ಪೂಜಿಸಿ ಮುಕ್ತಿ ಪಡೆಯುವ ಒಬ್ಬ ಸಾಮಾನ್ಯ ಭಕ್ತನ ಮಟ್ಟಕ್ಕಿಳಿಯುತ್ತಾನೆ.[೫] ಬ್ರಹ್ಮನನ್ನು ಶಿವನ ಸಾರಥಿಯನ್ನಾಗಿಸುವ ಮೂಲಕ ಅವನನ್ನು ಶಿವನ ಸೇವಕನ ಮಟ್ಟಕ್ಕೂ ಇಳಿಸಿ ಬಿಡುತ್ತಾರೆ. ಈ ಅಪಪ್ರಚಾರ ಇಷ್ಟಕ್ಕೇ ನಿಲ್ಲುವುದಿಲ್ಲ. ತನ್ನ ಮಗಳಾದ ಸರಸ್ವತಿಯ ಮೇಲೆ ಬ್ರಹ್ಮ ಅತ್ಯಾಚಾರವೆಸಗಿದನೆಂಬ ಕಥೆಯನ್ನು ಬ್ರಾಹ್ಮಣರು ಚಾಲ್ತಿಗೆ ತರುತ್ತಾರೆ. ಭಾಗವತ ಪುರಾಣದ[೬] ಒಂದು ಭಾಗ ಹೀಗಿದೆ:

"ಓ ಕ್ಷತ್ರಿಯನೆ, ಸ್ವಯಂಭೂ (ಬ್ರಹ್ಮ) ತನ್ನ ಮಗಳಾದ ವಾಕ್‌ಳನ್ನು ಮೋಹಿಸಿದ. ಅವನ ಮಕ್ಕಳಾದ ಮುನಿಗಳೂ ತಂದೆಯ ಈ ದುರ್ಮಾರ್ಗವನ್ನು ಕಂಡು ಹೀಗೆಂದರು: 'ಇಂಥ ಕೃತ್ಯವೊಂದು ಈ ಹಿಂದೆ ನಡೆದಿಲ್ಲ ಮುಂದೆ ನಡೆಯುವುದೂ ಇಲ್ಲ. ಸೃಷ್ಟಿಕರ್ತನೇ, ಯಾರ ನಡವಳಿಕೆಗಳನ್ನು ಮನುಷ್ಯರು ಅನುಸರಿಸುತ್ತಾರೋ ಅಂತಹವನಿಗೆ ತನ್ನ ಮಗಳನ್ನೇ ಕೂಡುವ ಈ ತವಕ ತಕ್ಕದ್ದಲ್ಲ. ಜಗನ್ನಿಯಾಮಕನಾದ ವಿಷ್ಣುವೇ ಈ ಜಗತ್ತನ್ನು ಸರಿಯಾದ ಹಾದಿಯಲ್ಲಿಡಲಿ." ತನ್ನ ಮಕ್ಕಳು ತನ್ನನ್ನು ಕುರಿತು ಆಡಿದ್ದನ್ನು ಕೇಳಿ ತಲೆ ತಗ್ಗಿಸಿದ ಬ್ರಹ್ಮ ತನ್ನ ದೇಹವನ್ನು ತೊರೆದ. ಅದೇ ಮುಂದೆ ಘೋರಾಂಧಕಾರವಾಯಿತು.

ಈ ಬಗೆಯ ಧಾಳಿಗಳಿಂದ ಬ್ರಹ್ಮನ ಪೂಜಾ ಪದ್ಧತಿಯೇ ಕ್ರಮೇಣ ಹಿನ್ನೆಲೆಗೆ ಸರಿದಿದ್ದು ಹಾಗೂ ತ್ರಿಮೂರ್ತಿಗಳಲ್ಲಿ ಅವನಿಗೆ ನಾಮಮಾತ್ರವಾದ ಸ್ಥಾನ ದೊರೆತದ್ದು ಆಶ್ಚರ್ಯವೇನಲ್ಲ.

ಬ್ರಹ್ಮನ ನಿರ್ಗಮನಾನಂತರ ವಿಷ್ಣು ಹಾಗೂ ಶಿವನ ಅನುಯಾಯಿಗಳಾದ ಬ್ರಾಹ್ಮಣರ ಎರಡು ಪಕ್ಷಗಳು ಉಳಿದವು. ಆದರೆ ವಿರೋಧಪಕ್ಷದ ದೇವರನ್ನು ಇಲ್ಲವಾಗಿಸುವುದು ಎರಡು ಪಕ್ಷಗಳಿಗೆ

---

೧. ಮಹಾಭಾರತ, ಶಾಂತಿಪರ್ವ, ಮ್ಯೂರ್, IV ಪು. ೨೪೦
೨. ಅದೇ, ಪುಟ. ೨೭೯
೩. ಮಹಾಭಾರತ, ಅನುಶಾಸನ ಪರ್ವ, ಮ್ಯೂರ್ ಪು. ೧೮೮
೪. ಭಾಗವತ ಪುರಾಣ ಅದೇ. ಪು. ೪೩
೫. ಮಹಾಭಾರತ, ಮ್ಯೂರ್, IV. ಪು. ೧೯೨
೬. ಅದೇ ಪು. ೧೯೩

ಸಾಧ್ಯವಾಗಲಿಲ್ಲ. ಇದಕ್ಕೆ ತಂತಮ್ಮ ದೇವರುಗಳ ಬಗ್ಗೆ ಬ್ರಾಹ್ಮಣರು ನಡೆಸಿದ ಪ್ರಚಾರಗಳೇ ಕಾರಣ. ಈ ಪ್ರಚಾರ ಹಾಗೂ ಪ್ರತಿ ಪ್ರಚಾರಗಳ ಕೆಲವು ಮಾದರಿಗಳನ್ನು ನೋಡಿ:

ವೇದದೇವತೆ ಸೂರ್ಯನೊಂದಿಗೆ ವಿಷ್ಣುವಿನ ಒಂದು ಗುಂಪು ಸಮೀಕರಿಸಿದರೆ ಶಿವಭಕ್ತರು ಶಿವನನ್ನು ಅಗ್ನಿಯ ಜೊತೆಗೆ ಗುರುತಿಸುತ್ತಾರೆ. ಒಬ್ಬನಿಗೆ ವೇದ ಮೂಲವಿದ್ದರೆ ಇನ್ನೊಬ್ಬನಿಗೂ ಅದೇ ಮೂಲವನ್ನು ಆರೋಪಿಸುವ ತವಕ ಪ್ರತಿಪಕ್ಷದ್ದು. ವಿಷ್ಣುವಿಗೆ ಸಹಸ್ರನಾಮಗಳಿದ್ದರೆ[೧] ಶಿವನಿಗೂ[೨] ಸಹಸ್ರನಾಮಗಳಿರಲೇಬೇಕು. ವಿಷ್ಣುವಿಗೊಂದು ಲಾಂಛನವಿದ್ದರೆ, ಶಿವನಿಗೂ ಅದು ಬೇಕು.[೩]

ಇವರಿಬ್ಬರ ಹಿರಿಮೆಗಳನ್ನು ಕುರಿತ ಕಥೆಗಳಲ್ಲಿ ಒಂದು ಗಂಗಾನದಿಯ ಹುಟ್ಟಿಗೆ ಸಂಬಂಧಿಸಿದ್ದು. ಶಿವಭಕ್ತರು ಗಂಗೆಯು ಶಿವನ ಜಟೆಯಿಂದ ಹುಟ್ಟಿದಳೆಂದು ಹೇಳಿದರೆ, ವೈಷ್ಣವರು ಮತ್ತೊಂದು ಪುರಾಣವನ್ನು ತೇಲಿ ಬಿಡುತ್ತಾರೆ. ಈ ಪುರಾಣದ ಪ್ರಕಾರ ಇ ಪವಿತ್ರ ನದಿ ವೈಕುಂಠದಲ್ಲಿ ವಿಷ್ಣುವಿನ ಪಾದದಿಂದ ಹುಟ್ಟಿ ಕೈಲಾಸದ ಮೂಲಕ ಹರಿಯುವಾಗ ಶಿವನ ತಲೆಯ ಮೇಲೆ ಬಿತ್ತು. ಇಲ್ಲಿ ಎರಡು ಸೂಚನೆಗಳಿವೆ. ಒಂದು, ವಿಷ್ಣುವಿಗೆ ಶಿವನಿಗಿಂತ ಶ್ರೇಷ್ಠ ಸ್ಥಾನ ಹಾಗು ವಿಷ್ಣುವಿಗೆ ಪಾದದಿಂದ ಹರಿಯುವ ನೀರನ್ನು ಶಿವ ತನ್ನ ಶಿರದಿಂದ ಸ್ವೀಕರಿಸುತ್ತಾನೆ. ಎರಡು, ಗಂಗೆ, ಶಿವನಿಂದ ಹುಟ್ಟಿದವಳಲ್ಲ.

ಮತ್ತೊಂದು ಕತೆ ದೇವದಾನವರ ಸಮುದ್ರಮಥನದ್ದು. ಮಂದರ ಪರ್ವತವನ್ನು ಕಡೆಗೋಲನ್ನಾಗಿಸಿ ಆದಿಶೇಷನನ್ನು ಹಗ್ಗವನ್ನಾಗಿಸಿ ದೇವ ದಾನವರು ಸಮುದ್ರವನ್ನು ಕಡೆಯತೊಡಗಿದಾಗ ಭೂಮಿ ನಡುಗಲಾರಂಭಿಸಿ ಜಗತ್ಪ್ರಳಯವಾಗುವುದೆಂದು ಜನ ಕಂಗಾಲಾದರು. ಆಗ ವಿಷ್ಣು ಕೂರ್ಮಾವತಾರ ತಳೆದು ಭೂಮಿಯನ್ನು ಬೆನ್ನಮೇಲೆ ಹೊತ್ತು ರಕ್ಷಿಸಿದ. ಈ ಕಥೆಯ ಉದ್ದೇಶ ವಿಷ್ಣುವಿನ ವೈಭವೀಕರಣ. ಆದರೆ ಶೈವರು ಇನ್ನೊಂದು ಕಥೆಯನ್ನು ಹೇಳುತ್ತಾರೆ. ಈ ಕಥೆಯ ಪ್ರಕಾರ, ಈ ಮಥನದಲ್ಲಿ ಹದಿನಾಲ್ಕು ಆಭರಣಗಳು ಸಮುದ್ರದ ತಳದಿಂದ ಮೇಲೆದ್ದವು. ಅವುಗಳಲ್ಲೊಂದು ಮರಣಾಂತಕ ವಿಷವೂ ಇತ್ತು. ಯಾರಾದರೂ ಅದನ್ನು ಕುಡಿಯದಿದ್ದರೆ ಅದು ಜಗತ್ತನ್ನು ನಾಶ ಮಾಡಿಬಿಡುತ್ತಿತ್ತು. ಆಗ ಅದನ್ನು ಕುಡಿಯಲು ಮುಂದೆ ಬಂದವನು ಶಿವನೊಬ್ಬನೇ. ಇದರರ್ಥ ದೇವದಾನವರ ಜಗಳವನ್ನು ಮುಂದುವರಿಯಲು ಬಿಟ್ಟು ಆ ವಿಷ ಹೊರಬರುವಂತೆ ಮಾಡಿದ್ದು ವಿಷ್ಣುವಿನ ಮೂರ್ಖತನ. ಆ ಮೂರ್ಖತನದ ಪರಿಣಾಮಗಳಿಂದ ಜಗತ್ತನ್ನು ರಕ್ಷಿಸಿದವನು ಶಿವ.

ವಿಷ್ಣುವೊಬ್ಬ ಅಜ್ಞಾನಿ ಹಾಗೂ ಶಿವನೇ ಜ್ಞಾನಿ ಹಾಗೂ ಶಕ್ತನೆಂಬುದನ್ನು ಸಾರುವ ಅಕ್ರೂರಾಸುರನ ಕತೆಯೊಂದಿದೆ:

ಕರಡಿ ಮುಖದ ಅಕ್ರೂರನೆಂಬ ರಾಕ್ಷಸನು ವೇದ ಶಾಸ್ತ್ರ ಪರಾಂಗತನಾಗಿ ಭಕ್ತಿಮಾರ್ಗದಲ್ಲಿ ನಡೆಯುತ್ತಿದ್ದ. ಇದರಿಂದ ಸುಪ್ರೀತನಾದ ವಿಷ್ಣು ಏನಾದರೂ ವರ ಕೇಳುವಂತೆ ಹೇಳಿದ. ಆಗ ಮೂರು ಲೋಕಗಳ ಯಾವ ಶಕ್ತಿಯೂ ತನ್ನ ಪ್ರಾಣಹರಣ ಮಾಡದಂತಹ ವರವನ್ನು ಅಕ್ರೂರಾಸುರ ಬೇಡಿದ. ವಿಷ್ಣು 'ತಥಾಸ್ತು' ಎಂದ. ಈ ವರದಿಂದಾಗಿ ಆ ರಾಕ್ಷಸನು ದೇವತೆಗಳನ್ನೆಲ್ಲ ಹಿಂಸಿಸಿ ಜಗತ್ತನ್ನು ತನ್ನ ಕಪಿಮುಷ್ಠಿಯಲ್ಲಿಟ್ಟುಕೊಂಡ. ಆ ಕ್ರೂರನ ಕೃತಘ್ನತೆಯಿಂದ ಕ್ರುದ್ಧನಾದ ವಿಷ್ಣು

---

೧. ವಿಷ್ಣು ಸಹಸ್ರನಾಮ

೨. ಪದ್ಮಪುರಾಣ

೩. ಅವುಗಳೆಂದರೆ ೧. ಹರಿವ ಗಂಗೆ ೨. ಚಂದ್ರ ೩. ಶೇಷ ೪. ಜಟೆ.

ಕಾಳಿನದಿಯ ದಂಡೆಯ ಮೇಲೆ ಕುಳಿತಿದ್ದಾಗ ಅವನ ಕಣ್ಣುಗಳಿಂದ ಹಿಂದೆಂದು ಕಾಣದ ರೂಪವೊಂದು ಮೂಡಿ ಬಂತು. ಆಗ ಮೂಡಿದ ರೌದ್ರರೂಪದ ಮಹದೇವ ವಿಷ್ಣುವಿನ ಕಳವಳವನ್ನು ಕ್ಷಣ ಮಾತ್ರದಲ್ಲಿ ನಿವಾರಿಸಿದ.

ಈ ಕಥೆಗೆ ಪ್ರತಿಯಾಗಿ ಶಿವನ ಮೂರ್ಖತನವನ್ನು ತೋರಿಸುವ ಭಸ್ಮಾಸುರನ ಕಥೆಯಲ್ಲಿ ವಿಷ್ಣು ಶಿವನನ್ನು ಉಳಿಸುತ್ತಾನೆ. ಶಿವನ ವರದಿಂದ ಯಾರ ತಲೆಯ ಮೇಲಾದರೂ ಕೈಯಿಟ್ಟು ಸುಡಬಲ್ಲ ಶಕ್ತಿಯನ್ನು ಗಳಿಸಿದ ಭಸ್ಮಾಸುರ ಶಿವನನ್ನೇ ಬೆನ್ನುಹತ್ತುತ್ತಾನೆ. ಹೆದರಿದ ಶಿವ ವಿಷ್ಣುವಿನ ಮೊರೆ ಹೋಗುತ್ತಾನೆ. ವಿಷ್ಣು ಮೋಹಿನಿಯ ರೂಪ ತಾಳಿ ಭಸ್ಮಾಸುರನನ್ನು ಸಮ್ಮೋಹನಗೊಳಿಸಿ, ಭಸ್ಮಾಸುರ ತನ್ನ ತಲೆಯ ಮೇಲೆ ಕೈಯಿಟ್ಟು ಭಸ್ಮವಾಗುವಂತೆ ಮಾಡಿ ಶಿವನ ಮೂರ್ಖತನದಿಂದ ಉಂಟಾಗಿದ್ದ ವಿಪತ್ತನ್ನು ನಿವಾರಿಸುತ್ತಾನೆ.

ವಿಷ್ಣು ಹಾಗೂ ಶಿವ ಇವರ ನಡುವಣ ಸ್ಪರ್ಧೆಯು ಅವರಲ್ಲಿ ಯಾರು ಮೊದಲು ಹುಟ್ಟಿದ್ದರೆಂಬುದನ್ನು ಹೇಳುವ ಪುರಾಣದಲ್ಲಿ ಸ್ಪಷ್ಟವಾಗಿ ಗೊತ್ತಾಗುತ್ತದೆ. ಸ್ಕಂದ ಪುರಾಣದಲ್ಲಿ ಬರುವ ಈ ಕಥೆ ಹೀಗಿದೆ : ಒಮ್ಮೆ ದೇವಿಯ ಎದೆಯ ಮೇಲೆ ತಲೆಯಿಟ್ಟು ನಿದ್ರಿಸುತ್ತಿದ್ದ ವಿಷ್ಣುವಿನ ಹೊಕ್ಕಳಿನಿಂದ ಕಮಲವೊಂದು ಮೂಡಿ ಬಂತು. ಈ ಕಮಲದಲ್ಲಿ ಮೂಡಿದ ಬ್ರಹ್ಮ ಸುತ್ತಲಿನ ವಿಶಾಲ ಜಗತ್ತಿನಲ್ಲಿ ಯಾವ ಪ್ರಾಣಿಯೂ ಇರದಿದ್ದುದನ್ನು ಕಂಡು ತಾನೇ ಮೊದಲು ಹುಟ್ಟಿದವನೆಂದು ತಿಳಿದ. ಆದರೂ ತನ್ನ ಸ್ಥಾನವನ್ನು ಕಸಿಯಲು ಯಾರಾದರೂ ಹುಟ್ಟಿರುವರೇ ಎಂಬ ಅನುಮಾನದಿಂದ ಕಮಲದ ದಳಗಳ ಕೆಳಗೆ ಬಾಗಿ ನೋಡಿದರೆ ವಿಷ್ಣು ಮಲಗಿದ್ದು ಕಂಡು ಗಟ್ಟಿಯಾಗಿ 'ಯಾರು ನೀನು?' ಎಂದ. 'ನಾನು ಪ್ರಥಮ ಸಂಜಾತ' ಎಂದು ವಿಷ್ಣು ಉತ್ತರಿಸಿದ. ಇದನ್ನು ಅಲ್ಲಗಳೆದ ಬ್ರಹ್ಮ ವಿಷ್ಣುವಿನೊಂದಿಗೆ ಭೀಕರ ಕದನಕ್ಕಿಳಿದ. ಈ ಕದನದ ನಡುವೆ ಪ್ರವೇಸಿಸಿದ ಮಹದೇವ ಕ್ರುದ್ಧನಾಗಿ ಹೇಳಿದ : 'ನಾನು ಪ್ರಥಮ ಸಂಜಾತ. ಆದರೆ ನಿಮ್ಮಿಬ್ಬರಲ್ಲಿ ಯಾರಾದರೂ ನನ್ನ ತಲೆ ಅಥವಾ ಪಾದದಾಚೆಗಿನ ಸ್ಥಳವನ್ನು ಮುಟ್ಟಬಲ್ಲವರಾದರೆ ನನ್ನ ಸ್ಥಾನವನ್ನು ನಿಮಗೆ ಬಿಟ್ಟುಕೊಡುತ್ತೇನೆ.' ತಕ್ಷಣ ಬ್ರಹ್ಮ ಮೇಲೇರಿ ಶಿವನ ಶಿರವನ್ನು ಹುಡುಕಲಾಗದೆ ಸುಸ್ತಾದರೂ ಮರಳಿ ಬಂದು ಮಹದೇವನೆದುರು ನಿಂತು ಅವನ ಶಿರದ ತುದಿಯನ್ನು ತಲುಪಿ ಬಂದೆನೆಂದು ಹೇಳಿ, ಅದಕ್ಕೆ ಸಾಕ್ಷಿಯಾಗಿ ಮೊದಲು ಹುಟ್ಟಿದ್ದ ಗೋವನ್ನು ತೋರಿಸುತ್ತಾನೆ. ಈ ಅಹಂಕಾರ ಹಾಗೂ ಸುಳ್ಳಿನಿಂದ ಸಿಟ್ಟಾದ ಶಿವ ಇನ್ನು ಮುಂದೆ ಬ್ರಹ್ಮನಿಗೆ ಯಾವ ಪೂಜಾವಿಧಿಗಳೂ ಸಲ್ಲಕೂಡದೆಂದು ಶಾಪ ಕೊಡುತ್ತಾನೆ. ಆದರೆ ಶಿವನ ಪಾದವನ್ನು ಹುಡುಕಲಾರದೆ ಮರಳಿದ ವಿಷ್ಣು ತನ್ನ ಸೋಲೊಪ್ಪಿಕೊಂಡು ಶಿವನನ್ನು ಪರಮೋಚ್ಚ ದೇವತೆಯೆಂದು ಒಪ್ಪಿಕೊಳ್ಳುತ್ತಾನೆ. ಅನಂತರ ಮಹದೇವ ಬ್ರಹ್ಮನ ಐದನೆಯ ಶಿರವನ್ನು ಕಡಿದುಹಾಕಲು ಬ್ರಹ್ಮನ ಅಹಂ ಹಾಗೂ ಶಕ್ತಿಗಳು ಕರಗಿಹೋಗುತ್ತವೆ.

ಈ ಕಥೆಯ ಪ್ರಕಾರ ವಿಷ್ಣುವಿಗೆ ಪ್ರಥಮ ಸಂಜಾತನೆಂದು ಕರೆದುಕೊಳ್ಳುವ ಅವಕಾಶ ಸಿಕ್ಕುವುದು ಶಿವನ ಕೃಪೆಯಿಂದಾಗಿ. ಆದರೆ ಬ್ರಹ್ಮನ ಭಕ್ತರು ವಿಷ್ಣುವು ಶಿವನ ಸಹಾಯದಿಂದ ಬ್ರಹ್ಮನ ಸ್ಥಾನವನ್ನು ಕದ್ದುಕೊಂಡಿದ್ದಕ್ಕೆ ಪ್ರತಿಯಾಗಿ ಇನ್ನೊಂದು ಪುರಾಣವನ್ನು ತೇಲಿಬಿಟ್ಟರು. ಅದರ ಪ್ರಕಾರ ಬ್ರಹ್ಮನ ಮೂಗಿನ ಹೊಳ್ಳೆಗಳಿಂದ ವಿಷ್ಣು ವರಾಹ ರೂಪದಲ್ಲಿ ಹುಟ್ಟಿದ. ಈ ದೇವರುಗಳ ನಡುವಣ ಪೈಪೋಟಿ ವ್ಯಾಪಾರಿಗಳ ಜಗಳದ ಮಟ್ಟ ಮುಟ್ಟಿ ಶಿವ ವಿಷ್ಣುವನ್ನೂ ವಿಷ್ಣು ಶಿವನನ್ನೂ ಅಸಹ್ಯವಾಗಿ ನಿಂದಿಸುವುದರಲ್ಲಿ ಪರ್ಯವಸಾನವಾಗುತ್ತದೆ. ಇದು ತ್ರಿಮೂರ್ತಿಗಳ ಇತಿಹಾಸ.

ತ್ರಿಮೂರ್ತಿ ಕಲ್ಪನೆ ಇನ್ನೂ ಪ್ರಾಚೀನವಾದದ್ದು. ನೂರಾರು ದೇವರುಗಳ ಗೊಂದಲವನ್ನು ನಿವಾರಿಸಲು ಬ್ರಾಹ್ಮಣರು ಮೂರು ಮುಖ್ಯ ದೇವರುಗಳ ಕಲ್ಪನೆಯನ್ನು ಹುಟ್ಟುಹಾಕಿದರು. ಮೊದಲ ಇಬ್ಬರೆಂದರೆ ಅಗ್ನಿ ಮತ್ತು ಸೂರ್ಯ. ಮೂರನೆಯ ಸ್ಥಾನಕ್ಕಾಗಿ ವಾಯು ಮತ್ತು ಇಂದ್ರರ ನಡುವೆ ಪೈಪೋಟಿ ಶುರುವಾಯಿತು. ಇದರ ಫಲವಾಗಿ ಅಗ್ನಿ, ಇಂದ್ರ ಮತ್ತು ಸೂರ್ಯ ಅಥವಾ ಅಗ್ನಿ, ವಾಯು ಮತ್ತು ಸೂರ್ಯ ಈ ಜೋಡಣೆಯನ್ನು ಕಾಣುತ್ತೇವೆ. ಈ ಹೊಸ ತ್ರಿಮೂರ್ತಿ ಪರಿಕಲ್ಪನೆ ಹಳೆಯ ಕಲ್ಪನೆಯಂತೇ ಕಂಡರೂ ಪಾತ್ರಗಳು ಬದಲಾಗಿದ್ದವು. ಈ ತ್ರಿಮೂರ್ತಿ ಕಲ್ಪನೆಯ ಪ್ರತಿ ಸದಸ್ಯನೂ ಹೊಸಬನು. ಮೊದಲ ತ್ರಿಮೂರ್ತಿ ಕಲ್ಪನೆ ಹಿನ್ನೆಲೆಗೆ ಸರಿದ ಎಷ್ಟೋ ಕಾಲದವರೆಗೆ ಹೊಸ ತ್ರಿಮೂರ್ತಿ ವರ್ಗ ಅಸ್ತಿತ್ವಕ್ಕೆ ಬಂದಿರಲಿಲ್ಲ. 'ಚುಲ್ಲ ನಿದ್ದೇಶ'ದಲ್ಲಿ ಬ್ರಹ್ಮ ಪ್ರತಿಕರ ಉಲ್ಲೇಖವಿದೆಯೇ ಹೊರತು ವಿಷ್ಣು ಅಥವಾ ಶಿವ ಇವರ ಪಂಥ ಅಸ್ತಿತ್ವಕ್ಕೆ ಬಂದಿರಲಿಲ್ಲ. ಎಷ್ಟೋ ವರ್ಷಗಳ ನಂತರ ಬ್ರಹ್ಮನೊಂದಿಗೆ ಇವರಿಬ್ಬರನ್ನು ಸೇರಿಸಿ ತ್ರಿಮೂರ್ತಿಗಳನ್ನು ಪ್ರತಿಷ್ಠಾಪಿಸಲಾಯಿತು. ಈ ತ್ರಿಮೂರ್ತಿ ಪ್ರತಿಷ್ಠಾಪನೆಯಲ್ಲಿ ಬ್ರಾಹ್ಮಣರ ಪಾತ್ರವನ್ನು ಗಮನಿಸಿದರೆ ಸಹಜವಾಗಿಯೇ ಹಲವು ಪ್ರಶ್ನೆಗಳೇಳುತ್ತವೆ.

ಮೊದಲನೆ ಪ್ರಶ್ನೆ ಎಂದರೆ, ತಂತಮ್ಮ ದೇವರುಗಳನ್ನು ಕುರಿತಂತೆ ಬ್ರಾಹ್ಮಣರಲ್ಲಿ ಕಾಣುವ ವಿಶ್ವಾಸರಾಹಿತ್ಯ ಹಾಗೂ ಸುಲಭವಾಗಿ ಒಂದು ದೇವರಿಂದ ಮತ್ತೊಂದು ದೇವರಿಗೆ ನಿಷ್ಠೆ ಬದಲಾಯಿಸುವ ಅವರ ಪ್ರವೃತ್ತಿ. ಈ ಸಂದರ್ಭದಲ್ಲಿ ಯೆಹೂದಿ ಪಾದ್ರಿಗಳು ಹಾಗೂ ರಾಜ ನೆಬೂಚದ್ನೆಝೂರ್‌ನ ಪ್ರಸಂಗ ನೆನಪಾಗುತ್ತದೆ :

೧. "...ರಾಜನಾದ ನೆಬೂಚದ್ನೆಝೂರ್‌ನು[೧] ಅರವತ್ತು ಮೊಳ ಎತ್ತರದ ಆರು ಮೊಳ ಅಗಲದ ಒಂದು ಬಂಗಾರದ ಪ್ರತಿಮೆಯನ್ನು ಮಾಡಿಸಿ ಬಾಬಿಲೋನಿಯನ್ ಸಂಸ್ಥಾನದ ದೂರಾ ಎಂಬ ಬಯಲಿನಲ್ಲಿ ನಿಲ್ಲಿಸಿದನು.

೨. ಆಗ ರಾಜನಾದ ನೆಬೂಚದ್ನೆಝೂರ್‌ನು ತಾನು ನಿಲ್ಲಿಸಿದ ಪ್ರತಿಮೆಯ ಪ್ರತಿಷ್ಠೋತ್ಸವಕ್ಕೆ ಉಪರಾಜ, ನಾಯಕ, ದೇಶಾಧಿಪತಿ, ಮಂತ್ರಿ, ಕೋಶಾಧ್ಯಕ್ಷ, ನ್ಯಾಯಾಧಿಪತಿ, ಷರೀಫರು ಇವರನ್ನೂ ಸಮಸ್ತ ಸಂಸ್ಥಾನಾಧಿಕಾರಿಗಳನ್ನೂ ಒಟ್ಟುಗೂಡಿಸುವಂತೆ ದೂತರನ್ನು ಕಳುಹಿಸಿದ.

೩. ಆ ಉಪರಾಜ, ನಾಯಕ, ದೇಶಾಧಿಪತಿ, ಮಂತ್ರಿ, ಕೋಶಾಧ್ಯಕ್ಷ, ನ್ಯಾಯಾಧಿಪತಿ, ಷರೀಫರು ಇವರೂ ಸಮಸ್ತ ಸಂಸ್ಥಾನಾಧಿಕಾರಿಗಳೂ ರಾಜನಾದ ನೆಬೂಚದ್ನೆಝೂರನು ನಿಲ್ಲಿಸಿದ ಪ್ರತಿಮೆಯ ಪ್ರತಿಷ್ಠೋತ್ಸವಕ್ಕೆ ನೆರೆದು ನೆಬೂಚದ್ನೆಝೂರ್‌ನು ನಿಲ್ಲಿಸಿದ ಪ್ರತಿಮೆಯ ಮುಂದೆ ನಿಂತುಕೊಂಡರು.

೪. ಆಗ ಸಾರುವವನು ಗಟ್ಟಿಯಾಗಿ ಕೂಗಿ–ವಿವಿಧ ಜನಾಂಗ, ಕುಲ ಭಾಷೆಗಳವರೇ. ನಿಮಗೆ ರಾಜಾಜ್ಞೆಯಾಗಿದೆ.

೫. ನೀವು ತುತ್ತೂರಿ, ಕೊಳಲು, ಕಿನ್ನರಿ, ತಂಬೂರಿ, ವೀಣೆ, ವಾಲಗ ಮುಂತಾದ ಸಕಲ ವಾದ್ಯಗಳ ಧ್ವನಿಯನ್ನು ಕೇಳಿದ ಕೂಡಲೇ ನೀವು ಅಡ್ಡಬಿದ್ದು ರಾಜನಾದ ನೆಬೂಚದ್ನೆಝೂರ್‌ನು ನಿಲ್ಲಿಸಿರುವ ಬಂಗಾರದ ಪ್ರತಿಮೆಯನ್ನು ಪೂಜಿಸಬೇಕು.

೬. ಯಾವನು ಅಡ್ಡಬಿದ್ದು ಪೂಜಿಸುವುದಿಲ್ಲವೋ ಅವನು ತಕ್ಷಣವೇ ಧಗಧಗನೆ ಉರಿಯುವ ಆವಿಗೆಯೊಳಗೆ ಹಾಕಲ್ಪಡುವನು ಎಂದು ಸಾರಿದನು.

---

೧. ಹಳೆಯ ಒಡಂಬಡಿಕೆ ಡೇನಿಯಲ್ ಅ. ೩ ಉಕ್ತ – ೧–೨೩

೭. ಆದಕಾರಣ ಅದೇ ಕಾಲದಲ್ಲಿ ಸಮಸ್ತ, ಜನಾಂಗ, ಕುಲ ಭಾಷೆಗಳವರು ತುತ್ತೂರಿ, ಕೊಳಲು, ಕಿನ್ನರಿ, ವೀಣೆ ಮುಂತಾದ ಸಕಲ ವಾದ್ಯಗಳ ಧ್ವನಿಯನ್ನು ಕೇಳಿದ ಕೂಡಲೇ ಎಲ್ಲರೂ ಅಡ್ಡಬಿದ್ದು ರಾಜನಾದ ನೆಬೂಚದ್ನೆಝಾರ್‌ನ್ನು ನಿಲ್ಲಿಸಿದ ಬಂಗಾರದ ಪ್ರತಿಮೆಯನ್ನು ಪೂಜಿಸಿದರು.

೮. ಹೀಗಿರಲು ಆ ಸಮಯದಲ್ಲಿ ಕೆಲವು ಮಂದಿ ಪಂಡಿತರು ಯೆಹೂದ್ಯರ ಮೇಲೆ ದೂರು ಹೊರಿಸುವುದಕ್ಕೆ ಸನ್ನಿಧಿಗೆ ಬಂದು

೯. ರಾಜನಾದ ನೆಬೂಚದ್ನೆಝಾರ್‌ನಿಗೆ – ಅರಸೇ, ಚಿರಂಜೀವಿಯಾಗಿರು!

೧೦. ಪ್ರಭುವೇ, ತುತ್ತೂರಿ, ಕೊಳಲು, ಕಿನ್ನರಿ, ತಂಬೂರಿ, ವೀಣೆ, ವಾಲಗ ಮುಂತಾದ ಸಕಲ ವಾದ್ಯಗಳ ಧ್ವನಿಯನ್ನು ಕೇಳಿದ ಪ್ರತಿಯೊಬ್ಬನೂ ಅಡ್ಡಬಿದ್ದು ಬಂಗಾರದ ಪ್ರತಿಮೆಯನ್ನು ಪೂಜಿಸಲಿ;

೧೧. ಯಾವನು ಅಡ್ಡಬಿದ್ದು ಪೂಜಿಸುವುದಿಲ್ಲವೋ ಅವನು ಧಗಧಗಿಸುವ ಆವಿಗೆಯೊಳಗೆ ಹಾಕಲ್ಪಡಲಿ ಎಂದು ಆಜ್ಞೆ ಮಾಡಿದ್ದೀಯಲ್ಲಾ.

೧೨. ನೀನು ಬಾಬಿಲೋನಿಯನ್ ಸಂಸ್ಥಾನದ ಕಾರ್ಯಭಾರವನ್ನು ವಹಿಸಿಕೊಟ್ಟ ಶದ್ರಕ್, ಮೇಶಕ್, ಅಬೆದ್‌ನೆಗೋ ಎಂಬ ಕೆಲವು ಮಂದಿ ಯೆಹೂದ್ಯರೂ ಇದ್ದಾರೆ; ರಾಜನೇ, ಇವರು ನಿನ್ನನ್ನು ಲಕ್ಷಿಸುವುದಿಲ್ಲ. ನಿನ್ನ ದೇವರುಗಳನ್ನು ಸೇವಿಸುವುದಿಲ್ಲ. ನೀನು ನಿಲ್ಲಿಸಿದ ಬಂಗಾರದ ಪ್ರತಿಮೆಯನ್ನು ಪೂಜಿಸುವುದಿಲ್ಲ ಎಂದು ಅರಿಕೆ ಮಾಡಲು

೧೩. ನೆಬೂಚದ್ನೆಝಾರ್‌ನು ಉಗ್ರ ರೋಷವುಳ್ಳವನಾಗಿ ಶದ್ರಕ್, ಮೇಶಕ್, ಅಬೇದ್‌ನೆಗೋ ಎಂಬುವರನ್ನು ಹಿಡಿದು ತರಬೇಕೆಂದು ಆಜ್ಞಾಪಿಸಿದನು.

೧೪. ಹಾಗೆ ಅವರನ್ನು ಹಿಡಿದ ತರಲು ನೆಬೂಚದ್ನೆಝಾರ್‌ನ್ನು ಅವರಿಗೆ ಶದ್ರಕ್, ಮೇಶಕ್, ಅಬೇದ್‌ನೆಗೋ ಎಂಬುವರೇ, ನೀವು ನನ್ನ ದೇವರನ್ನು ಸೇವಿಸದೆ ನಾನು ನಿಲ್ಲಿಸಿದ ಬಂಗಾರದ ಪ್ರತಿಮೆಯನ್ನು ಪೂಜಿಸದೆ ಇರುವುದು ಬೇಕೆಂದೇ ಮಾಡಿದ್ದೋ?

೧೫. ಈಗಲಾದರು ನೀವು ಸಿದ್ಧವಾಗಿದ್ದು ತುತ್ತೂರಿ, ಕೊಳಲು, ಕಿನ್ನರಿ, ತಂಬೂರಿ, ವೀಣೆ, ವಾಲಗ, ಮುಂತಾದ ಸಕಲ ವಾದ್ಯಗಳ ಧ್ವನಿಯನ್ನು ಕೇಳಿದ ಕೂಡಲೇ ಅಡ್ಡಬಿದ್ದು ನಾನು ನಿಲ್ಲಿಸಿದ ಪ್ರತಿಮೆಯನ್ನು ಪೂಜಿಸಿದರೆ ಸರಿ; ಇಲ್ಲವಾದರೆ ತಕ್ಷಣವೇ ಧಗಧಗನೆ ಉರಿಯುವ ಆವಿಗೆಯೊಳಗೆ ಹಾಕಲ್ಪಡುವಿರಿ; ನಿಮ್ಮನ್ನು ನನ್ನ ಕೈಯೊಳಗಿನಿಂದ ಬಿಡಿಸಬಲ್ಲ ದೇವರು ಯಾರು? ಎಂದು ಹೇಳಿದನು.

೧೬. ಇದನ್ನು ಕೇಳಿ ಶದ್ರಕ್, ಮೇಶಕ್, ಅಬೇದ್‌ನೆಗೋ ಎಂಬುವರು ರಾಜನಿಗೆ ನೆಬೂಚದ್ನೆಝಾರ್‌ನೇ, ಈ ವಿಷಯದಲ್ಲಿ ನಾವು ನಿನಗೆ ಏನೂ ಹೇಳಬೇಕಾಗಿಲ್ಲ.

೧೭. ಅರಸನೇ, ನಾವು ಸೇವಿಸುವ ದೇವರಿಗೆ ಚಿತ್ತವಿದ್ದರೆ ಆತನು ಧಗಧಗನೆ ಉರಿಯುವ ಆವಿಗೆಯೊಳಗಿಂದ ನಮ್ಮನ್ನು ಬಿಡಿಸಬಲ್ಲನು.

೧೮. ಚಿತ್ತವಿಲ್ಲದಿದ್ದರೂ ರಾಜನೇ, ಇದು ನಿನಗೆ ತಿಳಿದಿರಲಿ, ನಾವು ನಿನ್ನ ದೇವರುಗಳನ್ನು ಸೇವಿಸುವುದಿಲ್ಲ. ನೀನು ನಿಲ್ಲಿಸಿದ ಬಂಗಾರದ ಪ್ರತಿಮೆಯನ್ನು ಪೂಜಿಸುವುದಿಲ್ಲ ಎಂದುತ್ತರ ಕೊಟ್ಟನು.

೧೯. ಆಗ ನೆಬೂಚದ್ನೆಝಾರ್‌ನು ಕೋಪೋದ್ರೇಕ ಮುಖಭಾವದಿಂದ ಶದ್ರಕ್, ಮೇಶಕ್, ಅಬೇದ್‌ಗೋ ಎಂಬುವವರ ಕಡೆಗೆ ತಿರುಗಿ ಆವಿಗೆಯನ್ನು ನಿತ್ಯಕ್ಕಿಂತ ಏಳರಷ್ಟು ಹೆಚ್ಚಾಗಿ ಉರಿಸಬೇಕೆಂದು ಆಜ್ಞಾಪಿಸಿದನು.

೨೦. ಇದಲ್ಲದೆ ತನ್ನ ಸೈನ್ಯದ ಕೆಲವು ಮಂದಿ ಶೂರರಿಗೆ ಶದ್ರಕ್, ಮೇಶಕ್, ಅಬೇದ್‌ನೆಗೋ ಎಂಬುವವರನ್ನು ಕಟ್ಟಿ ಧಗಧಗನೆ ಉರಿಯುವ ಆವಿಗೆಯೊಳಗೆ ಎತ್ತಿ ಹಾಕಬೇಕೆಂದು ಅಪ್ಪಣೆ ಕೊಟ್ಟನು.

೨೧. ಅದರಂತೆ ಶಲ್ಯ, ಇಜಾರು, ಮುಂಡಾಸ್ ಮೊದಲಾದ ಉಡುಪನ್ನು ಧರಿಸಿಕೊಂಡಿದ್ದ ಹಾಗೆಯೇ ಅವರನ್ನು ಕಟ್ಟಿ ಧಗಧಗನೆ ಉರಿಯುವ ಆವಿಗೆಯೊಳಗೆ ಹಾಕಿಬಿಟ್ಟರು.

೨೨. ರಾಜಾಜ್ಞೆಯು ಖಂಡಿತವಾಗಿದ್ದುದರಿಂದಲೂ, ಆವಿಗೆಯ ತಾವು ಅತೀ ತೀಕ್ಷ್ಣವಾಗಿದ್ದುದರಿಂದಲೂ, ಅಗ್ನಿಜ್ವಾಲೆಯು ಶದ್ರಕ್, ಮೇಶಕ್, ಅಬೇದ್‌ನೆಗೋ ಎಂಬುವರನ್ನು ಎತ್ತಿಹಾಕಿದವರನ್ನೇ ಸಂಹರಿಸಿತು.

೨೩. ಶದ್ರಕ್, ಮೇಶಕ್, ಅಬೇದ್‌ನೆಗೋ ಈ ಮೂವರು ಕಟ್ಟಲ್ಪಟ್ಟವರಾಗಿ ಧಗಧಗನೆ ಉರಿಯುವ ಆವಿಗೆಯ ಮಧ್ಯದಲ್ಲಿ ಬಿದ್ದುಬಿಟ್ಟರು......"

ಈ ಹಿನ್ನೆಲೆಯಲ್ಲಿ ಒಂದು ಪ್ರಶ್ನೆ ಹುಟ್ಟುತ್ತದೆ. ಬ್ರಾಹ್ಮಣರು ಮೊದಲು ತ್ರಿಮೂರ್ತಿಗಳನ್ನು ತೊರೆದಿದ್ದೇಕೆ? ಆ ದೇವರುಗಳನ್ನು ತೊರೆಯಲು ಯಾವ ಒತ್ತಡಗಳೂ ಅವರಿಗಿದ್ದಂತಿರಲಿಲ್ಲ. ಇದಕ್ಕೆ ಲಾಭದ ಆಸೆಯೇ ಕಾರಣವಿರಬಹುದೇ?

ಎರಡನೆಯ ಪ್ರಶ್ನೆಯೆಂದರೆ, ತ್ರಿಮೂರ್ತಿಗಳ ಅನುಯಾಯಿಗಳಾಗಿದ್ದ ಬ್ರಾಹ್ಮಣರು ಒಬ್ಬೊಬ್ಬ ದೇವರನ್ನು ಆರಿಸಿಕೊಂಡು ಪ್ರತಿಪಕ್ಷದ ದೇವರ ಮೇಲೆ ಧಾಳಿಯನ್ನೇಕೆ ಆರಂಭಿಸಿದರು? ಹಾಗೆ ನೋಡಿದರೆ, ಈ ಗುಂಪುಗಳ ನಡುವೆ ಅಂಥ ತಾತ್ತ್ವಿಕ ಭೇದವೇನೂ ಇದ್ದಂತಿರಲಿಲ್ಲ. ಅವರ ಪಾರಮಾರ್ಥಿಕ ಜ್ಞಾನ ಹಾಗು ತತ್ತ್ವಶಾಸ್ತ್ರಗಳು ಕೂಡ ಒಂದೇ ಆಗಿದ್ದವು. ಈ ಹಿನ್ನೆಲೆಯಲ್ಲಿ ಒಗಟು ಮತ್ತಷ್ಟು ನಿಗೂಢವಾಗುತ್ತಾ ಹೋಗುತ್ತದೆ. ಈ ಗುಂಪುಗಾರಿಕೆ ಹಾಗೂ ಜಗಳ ರಾಜಕೀಯ ವಾದದ್ದೇ? ಬ್ರಾಹ್ಮಣರು ಧರ್ಮವನ್ನು ರಾಜಕೀಕರಣಗೊಳಿಸಿಬಿಟ್ಟರೆ? ಹಾಗಿದ್ದಲ್ಲಿ ಈ ಜಗಳದ ಅರ್ಥವೇನು?

* * * *

# ಅನುಬಂಧ – IV

## II ಸ್ಮಾರ್ತ ಧರ್ಮ*

ಸ್ಮಾರ್ತ ಧರ್ಮದ ಪವಿತ್ರ ಗ್ರಂಥಗಳು ಸ್ಮೃತಿಗಳು ಅಥವಾ ಶಾಸ್ತ್ರಗಳು ಹಾಗೂ ನಿಯಮಗಳನ್ನು ಒಳಗೊಂಡಿವೆ. ಇವು ನಾವು ಅನುಸರಿಸಬೇಕಾದ ವಿಧಿವಿಧಾನಗಳನ್ನೂ ಶಾಸ್ತ್ರಗಳನ್ನೂ ಒಳಗೊಂಡಿವೆ. ಆಡಳಿತ, ಕಾನೂನು, ನಾಗರಿಕ ಹಕ್ಕುಗಳು ಮತ್ತು ಕರ್ತವ್ಯಗಳು, ಪಾಪ, ಪ್ರಾಯಶ್ಚಿತ್ತ ಮುಂತಾದ ಅಂಶಗಳನ್ನೂ ಇವು ಒಳಗೊಂಡಿವೆ. ಹೇಗೂ ಇರಲಿ, ನಾವೀಗ ಧರ್ಮಕ್ಕೆ ಸಂಬಂಧಿಸಿದ ಭಾಗವನ್ನು ಮಾತ್ರ ಪರಿಶೀಲಿಸೋಣ.

ಸ್ಮೃತಿಗಳ ಆಧಾರದ ಮೇಲೆ ನಿಂತ ಸ್ಮಾರ್ತ ಧರ್ಮವು ಐದು ತತ್ವಗಳನ್ನಾಧರಿಸಿದೆ. ಅವುಗಳಲ್ಲಿ ಮೊದಲನೆಯದು, ತ್ರಿಮೂರ್ತಿಗಳಲ್ಲಿ ನಂಬಿಕೆ. ಈ ಪರಿಕಲ್ಪನೆಯಲ್ಲಿ ಬ್ರಹ್ಮ ಸೃಷ್ಟಿಕರ್ತ, ವಿಷ್ಣು ಪಾಲಕ ಹಾಗೂ ಶಿವ ಲಯವಾಗಿಸುವವನು. ಶ್ರೌತ ಧರ್ಮದ ಮೂವತ್ಮೂರು ದೇವತೆಗಳಿಗೆ ಬದಲಾಗಿ ಸ್ಮಾರ್ತ ಧರ್ಮ ಮೂರು ದೇವತೆಗಳ ಪರಿಕಲ್ಪನೆಯನ್ನು ಮುಂದಿಟ್ಟಿದೆ.

ಸ್ಮಾರ್ತ ಧರ್ಮದ ಎರಡನೆಯ ಮುಖ್ಯ ತತ್ವವೆಂದರೆ ದಿವ್ಯ ಸಂಸ್ಕಾರಗಳು ಸ್ಮಾರ್ತ ಧರ್ಮದ ಪ್ರಕಾರ ಪ್ರತಿ ಗೃಹಸ್ಥನು ಸಂಸ್ಕಾರಗಳನ್ನು ಮಾಡಬೇಕು. ತಪ್ಪಿದಲ್ಲಿ ಅವನು ಪತಿತನಾಗುವನು..... ಅಂದರೆ, ತನ್ನ ಹಿರಿಮೆಗಳನ್ನೆಲ್ಲ ಕಳೆದುಕೊಳ್ಳುವನು.... ( ಈ ಮೇಲಿನ ಭಾಗದ ಉಳಿದ ಪುಟಗಳು ಕಾಣೆಯಾಗಿವೆ. ಮುಂದಿನ ಬಿಡಿ ಪುಟಗಳಲ್ಲಿ ಲೇಖಕರ ಕೈಬರಹದಲ್ಲಿ ತಿದ್ದುಪಡಿಗಳಾಗಿವೆ, –ಸಂ)

ಶಿಕ್ಷೆ ಹಾಗು ಪ್ರಾಯಶ್ಚಿತ್ತಗಳಿಗೆ ಪೌರಾಣಿಕ ಧರ್ಮದಲ್ಲಿ ಬಹುಮುಖ್ಯ ಸ್ಥಾನವಿದೆ. ಶ್ರೌತ ಧರ್ಮದಲ್ಲಿ ಪಾಪಿಯ ಶಿಕ್ಷೆಗೂ ಯಮನಿಗೂ ಸಂಬಂಧವಿಲ್ಲ. ಆದರೆ ಪುರಾಣಗಳು ಯಮನಿಗೆ ಹಲವು ಅಧಿಕಾರಗಳನ್ನು ಕೊಡುತ್ತವೆ.

"ಸತ್ತವರನ್ನು ಶಿಕ್ಷಿಸುವ ಅಧಿಕಾರ ಯಮನಿಗೆ ಸೇರಿದ್ದು, ಚಿತ್ರಗುಪ್ತನ ದಾಖಲೆಗಳಲ್ಲಿ ಸತ್ತವರ ಬದುಕಿನ ಎಲ್ಲ ದಾಖಲೆಗಳೂ ಇದ್ದು ಸಜ್ಜನರನ್ನು ಸ್ವರ್ಗಕ್ಕೂ, ಪಾಪಿಗಳನ್ನು ನರಕಕ್ಕೂ ಕಳಿಸಲಾಗುತ್ತದೆ."

"ಮೇಘನಾದದಂತೆ ಘರ್ಜಿಸುವ, ಮಿಂಚಿನಂತೆ ಹೊಳೆಯುವ ಮೂವತ್ತೆರಡು ಆಯುಧಗಳನ್ನು ಕ್ರೂರವಾಗಿ ಝಳಪಿಸುವ, ಮೂವತ್ತೆರಡು ಕೈಗಳ, ಮೂರು ಯೋಜನದಷ್ಟು ಗಾತ್ರದ, ಕೆಂಗಣ್ಣಿನ, ಉದ್ದನೆಯ ಮೂಗಿನ, ಕೋರೆ ದಾಡೆಗಳುಳ್ಳ, ಆಳವಾದ ಕೊಳವನ್ನು ಹೋಲುವ ಕಣ್ಣಿನಲ್ಲಿ ಸಾವು, ರೋಗಗಳನ್ನು ಹೊತ್ತು ತರುವ ಚಿತ್ರಗುಪ್ತ."

ಜೀವಿತದಲ್ಲಿ ಮಾಡಿದ ಪಾಪಕ್ಕೆ ಈ ಧರ್ಮಗಳ ಪ್ರಕಾರ ಸಾವಿನ ನಂತರ ಶಿಕ್ಷೆಯಾಗುತ್ತದೆ.

---

* *ಅನುಬಂಧ–IV ರಲ್ಲಿ ಎರಡನೆಯ ಹಾಗೂ ಮೂರನೆಯ ಭಾಗಗಳು ಮಾತ್ರ ದೊರೆತಿವೆ. ಮೊದಲನೆಯ ಭಾಗ ಪ್ರಾಯಶಃ ಶ್ರೌತ ಧರ್ಮವನ್ನು ಕುರಿತಿದ್ದಿರಬಹುದು. –ಸಂ*

ಇದರ ಜೊತೆಗೆ ಪಾಪಕ್ಕೆ ಪ್ರಾಯಶ್ಚಿತ್ತವೂ ಇದ್ದು ಪಾಪವನ್ನು ಹೋಗಲಾಡಿಸಿಕೊಳ್ಳಲೂಬಹುದು. ಹಾಗಾದರೆ ಪಾಪವೆಂದರೇನು? ಪೌರಾಣಿಕ ಧರ್ಮದ ಪ್ರಕಾರ ಅನೈತಿಕವಾದುದನ್ನು ಮಾಡುವುದು ಪಾಪವಲ್ಲ. ಅದರ ಪ್ರಕಾರ ಪುರಾಣಗಳು ಹೇಳಿದಂತೆ ನಡೆದುಕೊಳ್ಳದಿರುವುದು ಮಾತ್ರ ಪಾಪ. ಇದು ಪೌರಾಣಿಕ ಧರ್ಮದ ಪರಿ.

## III ತಾಂತ್ರಿಕ ಧರ್ಮ

ತಾಂತ್ರಿಕ ಧರ್ಮದ ಕೇಂದ್ರ ಶಕ್ತಿಪೂಜೆ. ಈ ಧರ್ಮದ ಪ್ರಕಾರ 'ಶಕ್ತಿ' ಎಂದರೆ ನಾವು ಸಾಮಾನ್ಯ ಅರ್ಥದಲ್ಲಿ ಬಳಸುವ ಶಕ್ತಿಯಲ್ಲ. ಪುರುಷ ದೇವತೆಯೊಂದರ ಸಂಗಾತಿಯೇ ಈ ಶಕ್ತಿ. ಹಿಂದೂ ಧರ್ಮದ ಒಂದು ಪ್ರತ್ಯೇಕ ಅಂಗವೇ ಆಗಿರುವ ಶಾಕ್ತ ಪ್ರಕಾರವು ತನ್ನದೇ ಆದ ಪೌರಾಣಿಕ ಜಗತ್ತನ್ನೂ ನೂರಾರು ಹೆಣ್ಣು ದೇವತೆಗಳನ್ನೂ ಒಳಗೊಂಡು ನಮ್ಮ ಗಮನ ಸೆಳೆಯುತ್ತದೆ.

ಮೂಲದಲ್ಲಿ ತಾಂತ್ರಿಕ ಧರ್ಮವು ಪೌರಾಣಿಕ ಧರ್ಮದ ವಿಸ್ತೃತ ರೂಪವಷ್ಟೆ. ಕನ್ಯೆಯರಾದ ದೇವತೆಗಳ ಪೂಜೆಯನ್ನು ಮೊದಲು ಆರಂಭಿಸಿದ್ದು ಪೌರಾಣಿಕ ಧರ್ಮ. ಅನಂತರ ದೇವರುಗಳ ಪತ್ನಿಯರನ್ನು ಪೂಜಿಸುವ ಪದ್ಧತಿ ಆರಂಭವಾಯಿತು. ಶಾಕ್ತ ಧರ್ಮ ಹುಟ್ಟಿದ್ದೇ ದೇವರುಗಳ ಪತ್ನಿಯರನ್ನು ಪೂಜಿಸುವ ಹೊಸ ತತ್ತ್ವದ ಆಧಾರದ ಮೇಲೆ. ಪುರಾಣದ ಪ್ರಕಾರ ಒಂದು ದೇವತೆಗೆ ಎರಡು ಮುಖಗಳಿರುತ್ತವೆ. ಒಂದು ಮೌನದ್ದಾದರೆ ಮತ್ತೊಂದು ಕ್ರಿಯಾ ಮುಖ. ಈ ಎರಡನೆಯ ಮುಖವೇ ಆತನ ಶಕ್ತಿ. ದೇವತೆಯ ಈ ಶಕ್ತಿಯನ್ನೇ ಪುರಾಣಗಳಲ್ಲಿ ಆ ದೇವತೆಯ ಪತ್ನಿ ಎಂದು ಕರೆಯಲಾಗಿದೆ. ಇದು ಶಾಕ್ತ ಧರ್ಮದ ಮೂಲ.

ಶಾಕ್ತ ಧರ್ಮದ ಮುಖ್ಯ ಲಕ್ಷಣವೆಂದರೆ ದೇವತೆಯನ್ನು ಶಕ್ತಿಯಾಗಿ, ಜಗನ್ಮಾತೆಯಾಗಿ, ಜಗದಂಬೆಯಾಗಿ ಕಾಣುವುದು. ಈ ಶಕ್ತಿಯು ಎರಡು ವಿಭಿನ್ನ ಕೆಲಸಗಳನ್ನು ನಿರ್ವಹಿಸುತ್ತದೆ. ಒಂದು, ಪ್ರಾಣಿ ಸಹಜವಾದ ಕಾಮನೆಗಳ ತೃಪ್ತಿ. ಎರಡು, ಮಾನವನ ಸ್ವಂತದ ಉನ್ನತಿಗಾಗಿ ಅಥವಾ ಅವನ ಎದುರಾಳಿಯ ವಿನಾಶಕ್ಕಾಗಿ ಮಾಂತ್ರಿಕ ಶಕ್ತಿಯ ವಶೀಕರಣ. ಶಾಕ್ತ ಧರ್ಮವು ಸ್ತ್ರೀ ದೇವತೆಗಳ ಹಿಂಡನ್ನೇ ಒಳಗೊಂಡು ಹಿಂದೂ ಧರ್ಮದ ವಿಶಿಷ್ಟ ಅಂಗವಾಗಿರುವುದನ್ನು ಇಲ್ಲಿ ಮುಖ್ಯವಾಗಿ ಗಮನಿಸಬೇಕು.

ಶಿವನ ಪತ್ನಿಯೇ ಶಾಕ್ತ ಧರ್ಮದ ಮೂಲ. ಸರ್ವಸಮ್ಮತ ಅಭಿಪ್ರಾಯದಂತೆ ಸ್ತ್ರೀ ಪೌರಾಣಿಕ ಜಗತ್ತಿನ ಆರಂಭ ಬಿಂದು ಆಕೆ. ಹೀಗಾಗಿ ಆಕೆ ಆ ಜಗತ್ತಿನ ಕೇಂದ್ರವೂ ಹೌದು. ಈ ಹಿಂದೆ ಸೂಚಿಸಲಾದಂತೆ ಉಳಿದೆಲ್ಲ ದೇವತೆಗಳ ಗುಣಗಳನ್ನು ಪಡೆದ 'ಮಹಾದೇವ'ನಂತೆ ಅವನ ಅರ್ಧಾಂಗಿ ಶಾಕ್ತ ಸಂಪ್ರದಾಯದ ಮಹಾದೇವಿಯಾಗಿ ಮಹಾದೇವನ ಗುಣಗಳನ್ನು ಮತ್ತಷ್ಟು ತೀವ್ರರೂಪದಲ್ಲಿ ಪಡೆದು ಪ್ರತಿಷ್ಠಾಪಿತಳಾದಳು. ಶಿವನು ಉಳಿದೆಲ್ಲ ದೇವತೆಗಳ ವ್ಯಕ್ತಿಗಳ ಗುಣಗಳನ್ನು ಒಳಗೊಳ್ಳುವುದರ ಮೂಲಕ ಮಹಾದೇವನಾದಂತೆ ಅವನ ಅರ್ಧಾಂಗಿಯು ಬ್ರಹ್ಮ, ವಿಷ್ಣು ಹಾಗೂ ಶಿವ ಈ ದೇವರುಗಳ ಸ್ತ್ರೀ ಗುಣಗಳ ಪ್ರತಿನಿಧಿಯಾಗಿ, ಶಾಕ್ತ ಧರ್ಮದ ಅಧಿದೇವತೆ ಮಹಾದೇವಿಯಾಗಿ ಪ್ರತಿಷ್ಠಾಪಿತಗೊಳ್ಳುತ್ತಾಳೆ. ಈ ಕಾರಣದಿಂದಾಗಿ ಬ್ರಹ್ಮ ಹಾಗೂ ವಿಷ್ಣುವಿನ ಮಡದಿಯರನ್ನು ಕೂಡ ಶಕ್ತಿಯ ಮಕ್ಕಳಂತೆ ಕಾಣಲಾಗುತ್ತದೆ. ಎಲ್ಲ ದೃಷ್ಟಿಗಳಿಂದಲೂ ಶಿವನ ನೆರಳಾದ ಶಕ್ತಿಯನ್ನು ಮತ್ತಷ್ಟು ವರ್ಣಮಯವಾದ ದೇವತೆಯನ್ನಾಗಿ ಹಿಂದೂಗಳು ಸ್ವೀಕರಿಸಿದ್ದಾರೆ.

ಶಿವ ಕೆಲವೊಮ್ಮೆ ತನ್ನ ಒಳ ಹಾಗೂ ಹೊರ ಸ್ವರೂಪಗಳೆರಡರಲ್ಲೂ ಶ್ವೇತ ಅಥವಾ ಶುಕ್ಲ ಆಗಿರುವಂತೆ ಕೆಲವೊಮ್ಮೆ ಕಪ್ಪಾಗಿ, ಕಾಳನಾಗುತ್ತನೆ. ಹಾಗೆಯೇ ಶಕ್ತಿಯ ಶ್ವೇತ ಸ್ವರೂಪವನ್ನು ಗೌರಿಯೆಂದು, ಕಾಳ ಸ್ವರೂಪವನ್ನು ಕಾಳಿ ಎಂದು ಕರೆಯಲಾಗುತ್ತದೆ.

ಈ ಎರಡೂ ವಿಭಿನ್ನ ಸ್ವರೂಪಗಳು ಮತ್ತಷ್ಟು ರೂಪಗಳನ್ನು ಪಡೆದುಕೊಳ್ಳುತ್ತವೆ. ಉದಾಹರಣೆಗೆ ಶಕ್ತಿಯ ಸೌಮ್ಯ ರೂಪಗಳನ್ನು ಉಮೆ, ಗೌರಿ, ಲಕ್ಷ್ಮಿ, ಸರಸ್ವತಿ ಎಂದು ಕರೆಯಲಾದರೆ, ಅವಳ ಉಗ್ರಸ್ವರೂಪವನ್ನು ಕಾಳಿ, ದುರ್ಗಾ, ಚಂಡಿ, ಚಾಮುಂಡಿ ಎಂದು ಕರೆಯಲಾಗಿದೆ. ಶಿವನಿಗೆ ೧೦೦೮ ಹೆಸರುಗಳಿರುವಂತೆ ಆ ಹೆಸರುಗಳ ಸ್ತ್ರೀರೂಪಗಳೆಲ್ಲವೂ ಶಕ್ತಿಗೆ ಅನ್ವಯಿಸುತ್ತವೆ. ಅವುಗಳಲ್ಲಿ ಕೆಲವು ಅವಳ ಸೌಮ್ಯ ಗುಣವನ್ನು ಎತ್ತಿ ಹಿಡಿದರೆ, ಇನ್ನು ಹಲವು ಉಗ್ರ ಮುಖವನ್ನು ಪ್ರತಿಬಿಂಬಿಸುತ್ತವೆ. 'ಮ' ಕಾರವಿರುವ ಅವಳ ಎಂಟು ಹೆಸರುಗಳನ್ನು ಪಠಿಸಿದರೆ, ರಾಜರು ಕೂಡ ಹಾಗೆ ಪಠಿಸಿದವನ ಸೇವಕರಾಗುತ್ತಾರೆ ಹಾಗೂ ಅವನು ಜನಾನುರಾಗಿಯಾಗಿ ಅವನ ಕಷ್ಟಗಲು ನಿವಾರಣೆಯಾಗುತ್ತವೆ ಎಂದು ತಂತ್ರಗಳು ಹೇಳುತ್ತವೆ.

ಒಟ್ಟಿನಲ್ಲಿ ಶಿವನ ಸ್ತ್ರೀರೂಪವಾದ ಶಕ್ತಿಯಲ್ಲಿ ಉಳಿದೆಲ್ಲಾ ಶಕ್ತಿಗಳು ಸೇರಿ ನಂತರ ಹಲವು ರೂಪಗಳನ್ನು ಪಡೆದುಕೊಂಡವು. ಶಿವನೊಂದಿಗೆ ದುರ್ಗಿಯನ್ನು, ವಿಷ್ಣುವಿನೊಂದಿಗೆ ಲಕ್ಷ್ಮಿಯನ್ನು, ಕೃಷ್ಣನೊಂದಿಗೆ ರಾಧೆಯನ್ನು, ರಾಮನೊಂದಿಗೆ ಸೀತೆಯನ್ನು ಪೂಜಿಸುವ ಪರಿಪಾಠ ಆಗ ಆರಂಭವಾಯಿತು. ಆದರೆ, ಶಕ್ತಿಯ ವಿವಿಧ ರೂಪಗಳ ಸಂಖ್ಯೆಯೇನೂ ನಿರ್ದಿಷ್ಟವಾಗಿರಲಿಲ್ಲ.

ಕೆಲವೊಮ್ಮೆ ಎಂಟು ಹಾಗೂ ಹಲವೊಮ್ಮೆ ಒಂಬತ್ತು ಶಕ್ತಿಯ ರೂಪಗಳನ್ನು ಗಣನೆಗೆ ತೆಗೆದುಕೊಳ್ಳಲಾಗುತ್ತಿತ್ತು. ಉದಾಹರಣೆಗೆ, ವೈಷ್ಣವಿ, ಬ್ರಹ್ಮಾಣಿ, ರೌದ್ರಿ, ಮಹೇಶ್ವರಿ, ನಾರಸಿಂಹಿ, ವರಾಹಿ, ಕಾರ್ತೀಕಿ, ಇಂದ್ರಾಣಿ ಮುಂತಾದವು. ಉಳಿದವರು ಲಕ್ಷ್ಮಿಯ ಜೊತೆಗೆ ವಿಷ್ಣುವಿನ ಐವತ್ತು ಶಕ್ತಿ ರೂಪಗಳನ್ನು, ದುರ್ಗಾ ಅಥವಾ ಗೌರಿಯ ಜೊತೆಗೆ ರುದ್ರನ ಐವತ್ತು ಶಕ್ತಿ ರೂಪಗಳನ್ನು ಗುರುತಿಸುತ್ತಾರೆ. ವಿಷ್ಣು, ರುದ್ರ ಹಾಗೂ ಬ್ರಹ್ಮರ ಶಕ್ತಿ ರೂಪವಾಗಿ ಸರಸ್ವತಿಯನ್ನು ಗುರುತಿಸುತ್ತಾರೆ. ವಾಯುಪುರಾಣದ ಪ್ರಕಾರ ಶಿವನ ನಾರಿತ್ವ ಎರಡು ಬಗೆಯದಾಗಿತ್ತು. ಒಂದು ಅಸಿತ ಎಂದರೆ ಶ್ವೇತವಾದರೆ, ಮತ್ತೊಂದು ಸಿತ ಅಂದರೆ ಕಾಳ. ಈ ಸೌಮ್ಯ ಮತ್ತು ಉಗ್ರ ರೂಪಗಳನ್ನು ಪ್ರತಿನಿಧಿಸುವ ದೇವತೆಗಳ ಪಟ್ಟಿಯನ್ನು ಈ ಹಿಂದೆ ಕೊಟ್ಟಿದೆ. ಆ ನಂತರ ಈ ರೂಪಗಳು ನೂರಾರು ಉಪರೂಪಗಳನ್ನು ಪಡೆದುಕೊಂಡವು.

ಇವುಗಳಲ್ಲಿ ಕೆಲವನ್ನು ಪೂರ್ಣಶಕ್ತಿ, ಅಂಶರೂಪಿಣಿ, ಕಾಲರೂಪಿಣಿ ಹಾಗೂ ಕಾಲಾಂಶ ರೂಪಿಣಿ ಎಂದು ವಿಂಗಡಿಸಲಾಗಿದೆ. ಕಡೆಯ ವರ್ಗವಾದ ಕಾಲಾಂಶ ರೂಪಿಣಿ ವರ್ಗದಲ್ಲಿ ಸ್ತ್ರೀಯರು ಶಕ್ತಿಯ ಭೂಲೋಕದ ರೂಪಗಳೆಂಬಂತೆ ಪೂಜಿಸಲ್ಪಡುತ್ತಾರೆ. ಈ ಹಿನ್ನೆಲೆಯಲ್ಲಿ ಶಾಕ್ತ ಧರ್ಮವು ಪ್ರತಿ ಸ್ತ್ರೀಯನ್ನು ದೈವೀಶಕ್ತಿಯಾಗಿ ಪರಿಗಣಿಸುತ್ತದೆಂಬುದನ್ನು ಗಮನಿಸಬಹುದು.

ಇದಕ್ಕಿಂತ ಸಾಮಾನ್ಯವಾದ ವರ್ಗೀಕರಣ ಮಹಾವಿದ್ಯೆಗಳೊಂದಿಗೆ ಆರಂಭವಾಗುತ್ತದೆ. ಈ ಹತ್ತು ಮಹಾವಿದ್ಯೆಗಳನ್ನು ಶಕ್ತಿ ಕುರಿತ ಜ್ಞಾನ ಮೂಲವನ್ನಾಗಿ ಪರಿಗಣಿಸಲಾಗಿದೆ. ಈ ವಿದ್ಯೆಗಳಿಂದ ಅತಿಮಾನುಷ ಶಕ್ತಿಗಳ ವಶೀಕರಣ ಸಾಧ್ಯವೆಂಬ ನಂಬಿಕೆಯಿದೆ. ಈ ಹತ್ತೂ ವಿದ್ಯೆಗಳು ಒಬ್ಬೊಬ್ಬ ಶಕ್ತಿಯ ರೂಪಗಳಿಗೆ ಸಂಬಂಧಿಸಿದವುಗಳಾಗಿವೆ: ೧. ಕಾಳಿ, ಭೀಭತ್ಸ ರೂಪ, ೨. ತಾರಾ, ಸೌಮ್ಯ; ಕಾಶ್ಮೀರದಲ್ಲಿ ಪೂಜಿಸಲ್ಪಡುವ ದೇವತೆ, ೩. ಷೋಡಶಿ, ಹದಿನಾರು ವರುಷದ ಸುಂದರ ಕನ್ಯೆ

(ತ್ರಿಪುರ ಎಂಬ ಹೆಸರಿನಲ್ಲಿ ಮಲಬಾರಿನಲ್ಲಿ ಪೂಜಿಸುವವರು), ೪. ಭುವನೇಶ್ವರಿ, ೫. ಭೈರವಿ, ೬, ಚಿನ್ನಮಸ್ತಕ, ಒಂದು ಕೈಯಲ್ಲಿ ರಕ್ತಸಿಕ್ತ ಖಡ್ಗ, ಮತ್ತೊಂದು ಕೈಯಲ್ಲಿ ತನ್ನದೇ ಕತ್ತರಿಸಿದ ರುಂಡ ಹಿಡಿದು ತನ್ನ ಮುಂಡದಿಂದ ಹರಿಯುವ ರಕ್ತ ಕುಡಿಯಲು ಬೆತ್ತಲೆ ದೇವತೆ, ೭. ಧೂಮವತಿ, ಹೊಗೆಯ ರೂಪ, ೮. ವಾಗಲ ಅಥವಾ ಬಾಗಲ, ಕೊಕ್ಕರೆಯ ಮುಖವುಳ್ಳ ದೇವತೆ, ೯. ಮಾತಂಗಿ, ಭಂಗಿ ಜಾತಿಯ ಹೆಣ್ಣು ಮತ್ತು ೧೦. ಕಮಲಾತ್ಮಿಕ.

ಈ ಮೇಲಿನ ಪಟ್ಟಿಯಲ್ಲಿ ಮೊದಲ ಎರಡು ಮಹಾವಿದ್ಯಾ, ಮುಂದಿನ ಐದು ವಿದ್ಯಾ ಹಾಗೂ ಕಡೆಯ ಮೂರು ಸಿದ್ಧ ವಿದ್ಯಾ ಎಂದು ಗುರುತಿಸಲ್ಪಟ್ಟಿರುವುವು.

ದೇವಿಯ ಮತ್ತೊಂದು ಬಗೆಯ ಸ್ವರೂಪ ಮಹಾಮಾತೃಗಳು ಎಂಬ ಕಲ್ಪನೆಯಲ್ಲಿದೆ. ಈ ರೂಪಗಳು ಮಹಾವಿದ್ಯೆಗಳಿಗಿಂತ ಮುಖ್ಯವಾಗಿರುವುದಕ್ಕೆ ಕಾರಣ ಇದು ಮಾತೃಪೂಜೆಯ ಹೆಸರಿನಲ್ಲಿ ಭಾರತೀಯ ರೈತ ಸಮುದಾಯದಲ್ಲಿ ಮುಖ್ಯವಾಗಿ ಕಾಣುವ ಧಾರ್ಮಿಕ ರೂಪವಾಗಿರುವುದು. ಈ ಮಾತೃಗಳೆಂದರೆ : ೧. ವೈಷ್ಣವಿ, ೨. ಬ್ರಹ್ಮಾಣಿ, ಬ್ರಹ್ಮನಂತೆ ಚತುರ್ಮುಖಿ, ೩. ಕಾರ್ತಿಕೇಯಿ (ಮಯೂರಿ), ೪. ಇಂದ್ರಾಣಿ, ೫. ಯಮಿ, ೬. ವರಾಹಿ, ವಿಷ್ಣುವಿನ ವರಾಹ ಅವತಾರಕ್ಕೆ ಸಂಬಂಧಿಸಿದೆ. ೭. ದೇವಿ ಅಥವಾ ಈಶಾನಿ, ಶಿವನ ಪತ್ನಿಯಾಗಿ ತ್ರಿಶೂಲಧಾರಿ ಮತ್ತು ೮. ಲಕ್ಷ್ಮಿ. ಈ ಎಲ್ಲ ಮಾತೃದೇವತೆಗಳ ತೊಡೆಯ ಮೇಲೂ ಒಂದು ಮಗುವಿರುವುದನ್ನು ಕಾಣಬಹುದು.

ಈ ಮಾತೃವರ್ಗಕ್ಕೆ ಸಂಬಂಧಿಸಿದಂತೆ ಇನ್ನೊಂದು ವರ್ಗವಿದೆ. ಇವರು ನಾಯಿಕೆಯರು. ಇವರು ಮಾತೃಗಳೇ ಆಗಿರಬೇಕಿಲ್ಲ. ಹಾಗೆ ನೋಡಿದರೆ ಅನೈತಿಕ ಸಂಬಂಧದೊಂದಿಗೆ ಇವರನ್ನು ಹೆಚ್ಚು ಗುರುತಿಸಲಾಗುತ್ತದೆ. ಅವರುಗಳೆಂದರೆ, ಬಾಲಿನಿ, ಕಾಮೇಶ್ವರಿ, ವಿಮಲ, ಅರುಣ, ಮೇದಿನಿ, ಜಯನಿ, ಸರ್ವೇಶ್ವರಿ, ಕೌಲೇಶಿ.

ಇನ್ನೊಂದು ರೂಪವೆಂದರೆ ಯೋಗಿನಿಯರದು. ದುರ್ಗಿಯ ಆಜ್ಞಾಪಾಲಕರಾದ ಮಾಯಾವಿನಿಯರು ಎನ್ನಲಾಗುವ ಅರವತ್ತೈದು ಜನರ ಈ ಗುಂಪು ಕೋಟಿಗಟ್ಟಲೆ ಮಾಯಾವಿನಿಯರಾಗುವ ಸಾಮರ್ಥ್ಯ ಹೊಂದಿದೆ. ಇನ್ನುಳಿದ ರೂಪಗಳಾದ ಶಾಕಿನಿ, ಡಾಕಿನಿಯರನ್ನು ದೇವಿಯ ಪರಿಚಾರಿಕೆಯರೆಂದು ಮಾತ್ರ ಹೇಳಬಹುದು.

ಆದರೆ ಕಲ್ಕತ್ತಾದಲ್ಲಿ ಪೂಜಿಸುವ ಕಾಳಿಯ ರೂಪವೇ ಭಯಾನಕವಾದುದು. ತಂತ್ರಗಳಲ್ಲಿ ವರ್ಣಿಸಿರುವ ಕಾಳಿಯ ರೂಪ ಹೀಗಿದೆ:

'ಕೆದರಿದ ಕೂದಲು, ತೆರೆದ ಬಾಯಿಯ ಕಾಳಿಯನ್ನು ಮದ್ಯ ಹಾಗೂ ಬಲಿಗಳ ಮೂಲಕ ಆರಾಧಿಸಬೇಕು. ಅವಳಿಗೆ ನಾಲ್ಕು ಕೈಗಳು. ಅವಳ ಕೊರಳ ಸುತ್ತ ಅವಳೇ ತರಿದ ರಾಕ್ಷಸರ ರುಂಡಗಳು. ಅವಳ ಕಮಲದಂತಹ ಕೈಯಲ್ಲಿ ಬಿಚ್ಚುಗತ್ತಿ. ನಿರ್ಭಯಿ ಮೋಡಗಳಂತೆ ಕಡುಗಪ್ಪು. ಆಕಾಶವೇ ಅವಳ ಉಡುಪು. ಅವಳ ಕಿವಿಯ ಆಭರಣದಲ್ಲಿ ತೂಗುವ ಮುಂಡಗಳು. ಹೆಣಗಳನ್ನು ತಿನ್ನಲು ಸ್ಮಶಾನದಲ್ಲಿ ಅಲೆಯುವವಳು ಮತ್ತು ಮಹಾದೇವನ ಎದೆಯ ಮೇಲೆ ನಿಂತವಳು.'

*(ಅಂಬೇಡ್ಕರರ ಬರವಣಿಗೆಯ ಮುಂದಿನ ಎರಡು ಪುಟಗಳು ಅಲಭ್ಯವಾಗಿವೆ. ಈ ಪ್ರಬಂಧದ ಮುಕ್ತಾಯದ ಭಾಗವನ್ನು ಮಾತ್ರ ಈ ಕೆಳಗೆ ಕೊಡಲಾಗಿದೆ)*

ತಾಂತ್ರಿಕ ಆರಾಧನೆ ಶ್ರೌತ ಅಥವಾ ಪೌರಾಣಿಕ ಆರಾಧನೆಗಿಂತ ತೀರಾ ಭಿನ್ನವಾದುದು. ಅದರ ಮೂಲತತ್ವವೆಂದರೆ 'ಮಾನವ ಮೂಲಭೂತ ಕಾಮನೆಗಳನ್ನು ಸಂಪೂರ್ಣವಾಗಿ ತಣಿಸುವುದೇ

ಶ್ರೇಷ್ಠವಾದ ಆರಾಧನೆ'. ತಾಂತ್ರಿಕ ಆರಾಧನೆಯನ್ನು ಐದು 'ಮ'ಕಾರಗಳ ಮೂಲಕ ಅರ್ಥೈಸಬಹುದಾಗಿದೆ. ಅವುಗಳೆಂದರೆ ೧. ಮದ್ಯಪಾನ, ೨. ಮಾಂಸಾಹಾರ, ೩. ಮತ್ಸ್ಯಾಹಾರ, ೪. ಮುದ್ರಾಹಾರ (ಒಣಗಿದ ಅಥವಾ ಹುರಿದ ಕಾಳು) ಮತ್ತು ೫. ಮೈಥುನ.

ಇವೆಲ್ಲದರ ಆಚರಣೆಯನ್ನು ತಾಂತ್ರಿಕ ಪೂಜೆ ಒಳಗೊಳ್ಳುತ್ತದೆ. ಯಾವುದನ್ನು ನಿಷಿದ್ಧವೆಂದು ಸಾರಲಾಗಿತ್ತೋ ಆ ಕ್ರಿಯೆಗಳೆಲ್ಲ ತಾಂತ್ರಿಕ ಆರಾಧನೆಯಲ್ಲಿ ಅಂಗೀಕೃತವಾಗಿರುವುದನ್ನು ಗಮನಿಸಬೇಕು. ಸ್ತ್ರೀಯೊಂದಿಗೆ ಸಂಭೋಗ ಕೂಡ ಪೂಜೆಯ ಭಾಗವಾಗಿದೆ. ಇದು ಹಿಂದೂ ಧರ್ಮ ಬೆಳೆದು ಬಂದ ಬಗೆ. ಈ ಧರ್ಮದ ಇತಿಹಾಸವನ್ನು ಅಭ್ಯಸಿಸುವ ವಿದ್ಯಾರ್ಥಿಗೆ ಸಹಜವಾಗಿಯೋ ಹಿಂದೂ ಧರ್ಮದಲ್ಲಿ ನೈತಿಕತೆಗೆ ಸ್ಥಾನವೆಲ್ಲಿದೆ? ಎಂಬ ಪ್ರಶ್ನೆ ಹುಟ್ಟುವುದು ಸಹಜ.

ಧರ್ಮ ಹುಟ್ಟಿದ್ದೇ ಹಲವು ಪ್ರಶ್ನೆಗಳನ್ನು ಎತ್ತುವುದರ ಮೂಲಕ; ನಾನು ಯಾರು? ಈ ಜಗತ್ತಿನ ಸೃಷ್ಟಿಕರ್ತನಾರು? ಜಗತ್ತಿನ ಸೃಷ್ಟಿಕರ್ತ ದೇವರೇ ಆಗಿದ್ದಲ್ಲಿ ದೇವರಿಗೂ 'ಅಹಂ'ಗೂ ಇರುವ ಸಂಬಂಧವೇನು? ದೇವರನ್ನು ಒಲಿಸುವ ಋಜುವಾದ ಮಾರ್ಗ ಯಾವುದು? ಮಾನವ ಮತ್ತು ಪ್ರಪಂಚದ ನಡುವಣ ಸಂಬಂಧವೇನು? ಉತ್ತಮವಾದ ಬದುಕು ಯಾವುದರಿಂದ ದೊರಕುತ್ತದೆ? ಇವೇ ಮೊದಲಾದ ಪ್ರಶ್ನೆಗಳನ್ನು ಧರ್ಮದ ಅಂಗವಾದ ಪಾರಮಾರ್ಥಿಕ ಶಾಸ್ತ್ರ ಅಥವಾ ತತ್ವಶಾಸ್ತ್ರಗಳು ಪರಿಶೀಲಿಸುತ್ತವೆ. ಆದ್ದರಿಂದ ಧರ್ಮದ ಮೂಲ ಉದ್ದೇಶ ಉತ್ತಮವಾದ ಬದುಕನ್ನು ದಕ್ಕಿಸಿಕೊಳ್ಳುವ ಮಾರ್ಗವನ್ನು ಜನತೆಗೆ ತಿಳಿಸುವುದು. ಇಂಥ ಉದ್ದೇಶವಿಲ್ಲದ ಧರ್ಮ ಧರ್ಮವೇ ಅಲ್ಲ.

ಹಾಗಾದರೆ ಹಿಂದೂ ಧರ್ಮವನ್ನು ನೈತಿಕತೆಯೊಂದಿಗೆ ಬೆಸೆಯಲು ಬ್ರಾಹ್ಮಣರೇಕೆ ಯತ್ನಿಸಲಿಲ್ಲ? ಹಿಂದೂ ಧರ್ಮವೆಂದರೆ ನೂರಾರು ದೇವರುಗಳನ್ನು, ದೇವತೆಗಳನ್ನು, ವೃಕ್ಷಗಳನ್ನು ಪೂಜಿಸುವುದು, ಯಾತ್ರಾಸ್ಥಳಗಳನ್ನು ಸಂದರ್ಶಿಸುವುದು ಹಾಗೂ ಬ್ರಾಹ್ಮಣರಿಗೆ ಕಾಣಿಕೆಗಳನ್ನು ನೀಡುವುದು. ಹಾಗಾದರೆ, ಬ್ರಾಹ್ಮಣರ ಜೀವನೋಪಾಯಕ್ಕಾಗಿಯೇ ಧರ್ಮವನ್ನು ರೂಪಿಸಲಾಯಿತೇ? ನೈತಿಕತೆಯೇ ಸಮಾಜದ ತಳಹದಿಯೆಂದೂ ಧರ್ಮವೊಂದಕ್ಕೆ ನೈತಿಕ (ಉದ್ದೇಶವಿಲ್ಲದಿದ್ದರೆ)* ಅದು ಅರ್ಥಹೀನವೆಂದೂ ಅವರು ಎಂದಾದರೂ ಯೋಚಿಸಿದ್ದಾರೆಯೇ? ಈ ಪ್ರಶ್ನೆಗಳಿಗೆ ಬ್ರಾಹ್ಮಣರು ಉತ್ತರಿಸಲೇಬೇಕು.

* * * *

* ಪುಟದ ಈ ಭಾಗ ತ್ರುಟಿತವಾಗಿರುವುದರಿಂದ ಈ ಪದವನ್ನು ಸೇರ್ಪಡೆ ಮಾಡಲಾಗಿದೆ.

# ಅನುಬಂಧ – V

## ವೇದಗಳ ಸತ್ಯಸ್ವರೂಪ*

ಹಿಂದೂಗಳು ಪ್ರತಿದಿನ ವೇದಗಳನ್ನು ಪಠನ ಮಾಡಬೇಕು. ಶತಪಥ ಬ್ರಾಹ್ಮಣ ಅದಕ್ಕೆ ಕೆಲವು ಕಾರಣಗಳನ್ನು ಕೊಡುತ್ತದೆ. ಅವು ಹೀಗಿವೆ:

ಕೇವಲ ಐದು ಶ್ರೇಷ್ಠವಾದ ವಿಧಿಗಳಿವೆ. ಅವುಗಳೆಂದರೆ, ೧. ಪ್ರಾಣಿ ಪಕ್ಷಿಗಳಿಗೆ ಮಾಡುವ ಅರ್ಪಣೆ[೧] (ಪಕ್ಷಿ ಪ್ರಾಣಿಗಳಿಗೆ ಧಾನ್ಯವನ್ನು ಹಾಕುವ ಪದ್ಧತಿ). ಮನುಷ್ಯರಿಗೆ ಮಾಡುವ ಅರ್ಪಣೆ[೨] ಪಿತೃಗಳು ಹಾಗೂ ದೇವತೆಗಳಿಗೆ ಸಲ್ಲಿಸುವ ನೈವೇದ್ಯ ಹಾಗೂ ಬ್ರಹ್ಮಯಜ್ಞ, ೨. ಪಕ್ಷಿ ಪ್ರಾಣಿಗಳಿಗೆ ನಿತ್ಯವೂ ನೈವೇದ್ಯ ಅರ್ಪಣೆಯಾಗಲಿ. ಆ ಮೂಲಕ ಅವುಗಳಿಗೆ ಅರ್ಪಣೆ ಸಮರ್ಪಿತವಾಗಲಿ. ಈ ಆತಿಥ್ಯ ನೀರಿನ ಬಟ್ಟಲವರೆಗೂ ಸಲ್ಲಲಿ. ಹೀಗೆ ಮಾನವರಿಂದ ಅರ್ಪಣೆ ಸಮರ್ಪಿತವಾಗಲಿ. ದೇವತೆಗಳಿಗೆ ನಿತ್ಯವೂ ಕಾಷ್ಠದ ಕಡ್ಡಿಯೂ[೩] ಸೇರಿದಂತೆ ನೈವೇದ್ಯ ಸಲ್ಲಲಿ. ಹೀಗೆ ದೇವತೆಗಳಿಗೆ ಅರ್ಪಣೆ ಸಮರ್ಪಿತವಾಗಲಿ ನೈವೇದ್ಯ. ೩. ಮುಂದಿನದು ವೇದಪಠನ. ಇದು ಪವಿತ್ರ ಗ್ರಂಥಗಳ ಮನನವನ್ನು ಒಳಗೊಳ್ಳುತ್ತದೆ. ಈ ವೇದ ಯಜ್ಞದಲ್ಲಿ ವಾಕ್ 'ಜುಹು'ವಾದರೆ, ಆತ್ಮವು 'ಉಪಭೃತ'ವಾಗುತ್ತದೆ. ಕಣ್ಣು ಧ್ರುವವಾದರೆ ಬುದ್ಧಿ ಸ್ರುವವಾಗುತ್ತದೆ.[೪] ಈ ಬಗೆಯ ವೇದ ಪಠನದಲ್ಲಿ ಪ್ರತಿದಿನ ನಿರತನಾಗುವವನು ಜಗತ್ತನ್ನು ಮೂರು ಸಲಕ್ಕಿಂತ ಹೆಚ್ಚು ಬಾರಿ ಆಳಬಲ್ಲನು ಹಾಗೂ ಜಗತ್ತಿಗೆ ಸಮೃದ್ಧಿ ತರಬಲ್ಲನು. ಆದ್ದರಿಂದ, ವೇದಗಳನ್ನು ಪಠಿಸಬೇಕು. ೪. ಋಗ್ವೇದ ಪಠನವೆಂದರೆ, ದೇವತೆಗಳಿಗೆ ಕ್ಷೀರ ನೈವೇದ್ಯ. ಇದನ್ನು ಬಲ್ಲ ಭಕ್ತನು ದೇವತೆಗಳಿಗೆ ಋಗ್ವೇದದ ಕ್ಷೀರವನ್ನು ನೈವೇದ್ಯ ಮಾಡುವನು. ಇದರಿಂದ ತೃಪ್ತರಾದ ದೇವತೆಗಳು ಆ ಭಕ್ತನಿಗೆ ಐಶ್ವರ್ಯ, ಆಯುಷ್ಯ, ಆರೋಗ್ಯ, ಸಂತಾನ ಮುಂತಾದ ಭಾಗ್ಯಗಳನ್ನು ಕರುಣಿಸುವರು. ೫. ಯಜುರ್ವೇದದ ಶ್ಲೋಕಗಳು ದೇವತೆಗಳಿಗೆ ನವನೀತ ನೈವೇದ್ಯ. ಇದರಿಂದ ತೃಪ್ತರಾದ ದೇವತೆಗಳು ಆ ಭಕ್ತನಿಗೆ ಐಶ್ವರ್ಯ, ಆಯುಷ್ಯ, ಆರೋಗ್ಯ, ಸಂತಾನ ಮುಂತಾದ ಭಾಗ್ಯಗಳನ್ನು ಕರುಣಿಸುವರು. ೬. ಸಾಮವೇದದ ಶ್ಲೋಕಗಳು ಸೋಮ ನೈವೇದ್ಯದಂತೆ. ಇದರಿಂದ ತೃಪ್ತರಾದ

---

೧. ಪ್ರೊ. ಆಫ್ರೆಕ್ಟ್ ಅವರು ಸೂಚಿಸುವಂತೆ ಈ ವಿಧಿ ಪಕ್ಷಿಗಳ ಮೇಲಿನ ಕರುಣೆಯಿಂದ ಹುಟ್ಟಿದ್ದು. ಇತರ ನೈವೇದ್ಯಗಳಿಗಾಗಿ ನೋಡಿ: ಕೋಲ್ ಬ್ರೂಕ್‌ರವರ 'ಎಸ್ಸೇಸ್', I, ಪು. ೧೫೦, ೧೮೨, ೨೦೩.

೨. ಇದರ ವಿವರಣೆಗಾಗಿ ಪ್ರೊ. ಆಫ್ರೆಕ್ಟ್ ಅವರು ಕಾತ್ಯಾಯನನ 'ಶ್ರೌತ ಸೂತ್ರ'. IV, I ೧೦ ಹಾಗೂ 'ಮನುಸ್ಮೃತಿ' iii, ೨೧೦, ೨೧೪, ೨೧೮ ಉಲ್ಲೇಖಿಸುತ್ತಾರೆ.

೩. ಸ್ವಾಧ್ಯಾಯ – ತಮ್ಮ ಶಾಖೆಯ ವೇದಗಳ ಪಠನ.

೪. ವಿವಿಧ ಬಗೆಯ ಮರದಿಂದ ಮಾಡಿದ ಸ್ರುಕ್‌ಗಳು ಬ್ರಾಹ್ಮಣರ ಶವಸಂಸ್ಕಾರ ಕುರಿತ ಮುಲ್ಲರ್ ಅವರ ಲೇಖನದಲ್ಲಿ ಇವುಗಳ ಚಿತ್ರವನ್ನು ನೋಡಬಹುದಾಗಿದೆ.

* *ಈ ಪ್ರಬಂಧದ ಉಳಿದ ಭಾಗಗಳು ಕಾಣೆಯಾಗಿವೆ. ದೊರೆತಿರುವ ಆರು ಪುಟಗಳು ಬೆರಳಚ್ಚಾದ ಪ್ರತಿಯಲ್ಲಿ ಯಾವುದೇ ತಿದ್ದುಪಡಿಗಳನ್ನು ಲೇಖಕರು ಮಾಡಿಲ್ಲ. –ಸಂ*

ದೇವತೆಗಳು ಆ ಭಕ್ತನಿಗೆ ಐಶ್ವರ್ಯ, ಆಯುಷ್ಯ, ಆರೋಗ್ಯ, ಸಂತಾನ ಮುಂತಾದ ಭಾಗ್ಯಗಳನ್ನು ಕರುಣಿಸುವರು. ೭. ಅಥರ್ವಣ ಮತ್ತು ಆಂಗೀರಸಗಳ (ಅಥರ್ವಾಂಗಿರಸಃ)[೧] ಶ್ಲೋಕಪಠನವೂ ಮೇದಸ್ಸಿನ ನೈವೇದ್ಯವೇ. ೮. ಉಳಿದ ಗ್ರಂಥಗಳು, ಕಥಾನಕಗಳು, ಕಾವ್ಯ, ಸಂವಾದ ಇತ್ಯಾದಿಗಳ ಪಠನ ಜೇನಿನ ನೈವೇದ್ಯದಂತೆ. ಈ ನೈವೇದ್ಯಗಳಿಂದ ಭಕ್ತನು ಆಯುರಾರೋಗ್ಯ, ಐಶ್ವರ್ಯ ಇತ್ಯಾದಿಗಳನ್ನು ಪಡೆಯುವನು. ೯. ಈ ವೇದಪಠನದಲ್ಲಿ ಮಳೆ, ಮಿಂಚು, ಗಾಳಿಗಳಿಗೆ ಸಂಬಂಧಿಸಿದ 'ವಷಟ್ಕಾರ' ಸೂತ್ರಗಳನ್ನು ಪಠಿಸಬೇಕು. ಇವುಗಳನ್ನು ಪಠಿಸಿದ ಭಕ್ತನು ಪುನರ್ಜನ್ಮವೆತ್ತುವುದಿಲ್ಲ. "ಇಂಥ ಪಠನದಿಂದ ಭಕ್ತನು ಬ್ರಹ್ಮೈಕ್ಯವನ್ನು ಪಡೆಯುವನು. ಆಳವಾಗಿ ಇವುಗಳನ್ನು ಅಧ್ಯಯನ ಮಾಡಲಾರದವನು ಕಡೆಯ ಪಕ್ಷ ದೇವರಿಗೆ ಸಂಬಂಧಿಸಿದ ಒಂದು ಭಾಗವನ್ನಾದರೂ ಪಠಿಸಲಿ."

"ix೫,೭,೧ : ಇನ್ನು ಮುಂದೆ ವೇದಾಭ್ಯಾಸದ ಗುಣಗಾನ. ವೇದದ ಬೋಧನೆ ಹಾಗೂ ವಿದ್ಯಾಭ್ಯಾಸಗಳೆರಡೂ ಪ್ರಿಯವಾದ ಕಾರ್ಯಗಳು."

"ಪ್ರತಿದಿನ ವೇದಗಳನ್ನು ಪಠಿಸುವವನು ಸಮಚಿತ್ತನೂ, ಸ್ವತಂತ್ರನೂ ಆಗುವನು. ಅವನು ಸದಾ ತನ್ನ ಗುರಿಯನ್ನು ಸಾಧಿಸುವನು. ಸುಖವಾಗಿ ನಿದ್ರಿಸುವನು. ಪಂಚೇಂದ್ರಿಯಗಳ ಮೇಲೆ ಹತೋಟಿ, ಏಕಾಗ್ರತೆ, ಬುದ್ಧಿ, ಕೀರ್ತಿ ಹಾಗೂ ಮನುಕುಲವನ್ನು ತಿದ್ದುವ ಶಕ್ತಿಗಳು ಇದರಿಂದ ಪ್ರಾಪ್ತವಾಗುತ್ತವೆ. ಹೀಗೆ ಬುದ್ಧಿಶಕ್ತಿಯನ್ನು ಹೆಚ್ಚಿಸಿಕೊಳ್ಳುವ ಬ್ರಾಹ್ಮಣನಿಗೆ ಸಂತನ ಸ್ಥಾನವೂ, ಅನುಕರಣಯೋಗ್ಯ ನಡವಳಿಕೆಯೂ, ಕೀರ್ತಿಯೂ, ಮನುಕುಲವನ್ನು ಮುನ್ನಡೆಸುವ ಹಕ್ಕುಗಳೂ ಪ್ರಾಪ್ತವಾಗುತ್ತವೆ. ಹಾಗೆ ವೇದಾಧ್ಯಯನ ಮಾಡಿದವನಿಗೆ ಸಲ್ಲಬೇಕಾದ ನಾಲ್ಕು ವಿಶೇಷಾಧಿಕಾರಗಳು ಎಂದರೆ ಗೌರವ, ದಾನಗಳ ಸ್ವೀಕಾರ, ಶೋಷಣೆಯಿಂದ ಸ್ವಾತಂತ್ರ್ಯ ಮತ್ತು ಹಿಂಸೆಯಿಂದ ಮರಣವಿಲ್ಲದಿರುವಿಕೆ ಲಭ್ಯವಾಗುತ್ತವೆ. ೨. ಸ್ವರ್ಗ ಹಾಗೂ ಮರ್ತ್ಯಲೋಕಗಳ ಎಲ್ಲ ಕ್ರಿಯೆಗಳಲ್ಲಿ ವೇದಪಠನಕ್ಕೆ ಉಚ್ಚಸ್ಥಾನ. ೩. ವೇದಗಳ ಪಠನ ಒಂದು ಸಂಪೂರ್ಣ ಯಜ್ಞ. ೪. ಸರ್ವಾಲಂಕಾರ ಭೂಷಿತನಾಗಿ, ಸುಗಂಧ ಪೂಸಿಕೊಂಡು ಭಕ್ಷ್ಯಭೋಜ್ಯಗಳಿಂದ ತೃಪ್ತನಾಗಿ ವೇದಗಳನ್ನು ಪಠಿಸಿದವನು ಕೂಡ ತನ್ನ ಉಗುರ ತುದಿಯವರೆಗೆ[೨] ತೀವ್ರ ಪ್ರಾಯಶ್ಚಿತ್ತ ಮಾಡಿಕೊಂಡವನು ಪಡೆಯುವಷ್ಟೇ ಪುಣ್ಯವನ್ನು ಪಡೆಯುವನು. ೫. ಋಗ್ವೇದ ಶ್ಲೋಕಗಳು ಜೇನಿನಂತೆ ಸಾಮನ್ ಶ್ಲೋಕಗಳು ಬೆಣ್ಣೆಯಂತೆ, ಯಜುಸ್ ಶ್ಲೋಕಗಳು ಅಮೃತದಂತೆ. ವಾಕೋವಾಕ್ಯ ಹಾಗೂ ಪುರಾಣಗಳ ಪಠನಗಳು ಕ್ರಮವಾಗಿ ಹಾಲಿನ ಹಾಗು ಮಾಂಸದಡಿಗೆಯ ನೈವೇದ್ಯದಂತೆ. ೬. ಇದನ್ನರಿತು ವೇದಗಳನ್ನು ಪಠಿಸುವವನು ಆಯುಷ್ಯ, ಆರೋಗ್ಯ, ಸಂತಾನ ಐಶ್ವರ್ಯಗಳನ್ನು ಪಡೆಯುವನು. ೭. ಇದನ್ನೂ ತಿಳಿದು ಯಾರು ನಿತ್ಯವೂ ವಿವಿಧ ವರ್ಗಗಳ ಪ್ರಾಚೀನ ಕಥೆಗಳನ್ನೂ, ಸಂವಾದಗಳನ್ನೂ ಅಧ್ಯಯನ ಮಾಡಿ, ಹಾಲು ಮತ್ತು ಮಾಂಸದ ನೈವೇದ್ಯಗಳಿಂದ

---

೧. ಅಥರ್ವಣ ಸಂಹಿತೆಯನ್ನು ಹೀಗೆ ಕರೆಯಲಾಗುತ್ತದೆ.

೨. ಈ ವಾಕ್ಯವನ್ನು ಪ್ರೊ. ವೇಬರ್ ಅವರು ಇಂಡಿಸ್ ಸ್ಟಡಿ x ಪು ೧೧೨ರಲ್ಲಿ ಭಿನ್ನವಾಗಿ ವ್ಯಾಖ್ಯಾನಿಸಿದ್ದಾರೆ: 'ಅವನು ನನ್ನ ಉಗುರ ತುದಿಯವರೆಗೆ ಪವಿತ್ರಾಗ್ನಿಯಿಂದ ಸುಟ್ಟುಕೊಂದ' ಅದೇ ಲೇಖನದ ಮುಂದಿನ ಪುಟಗಳಲ್ಲಿ ತೈತ್ತೀರಿಯಕ ಅರಣ್ಯದಲ್ಲಿ ಹೇಳಿರುವಂತೆ, ನಾಕ ಮೌದ್ಗಲಿ ಎಂಬ ಗುರುವಿನ ಸಿದ್ಧಾಂತದ ಪ್ರಕಾರ, ವೇದಗಳ ಅಧ್ಯಯನ ಮತ್ತು ಪ್ರವಚನವೇ ನಿಜವಾದ ತಪಸ್ಸು. ಅರಣ್ಯಕದಲ್ಲಿ VII. ೮ ಅಧ್ಯಾಯ ಮತ್ತು ಪ್ರವಚನಗಳು ಸತ್ಯ, ತಪಸ್ಸು, ದಮ, ಶಮ, ಅಗ್ನಿಹೋತ್ರದಂಥ ಆಧ್ಯಾತ್ಮಿಕ ಅಥವಾ ಆಚರಣೆ ಕ್ರಿಯೆಗಳೊಂದಿಗೆ ಮಿಳಿತವಾಗಿರಬೇಕೆಂದು ಹೇಳಲಾಗಿದೆ.

ದೇವರುಗಳನ್ನು ಸಂತುಷ್ಟಿ ಪಡೆಸುವಲ್ಲಿ, ಅವನ ಸರ್ವೇಚ್ಛೆಗಳೂ ಈಡೇರುತ್ತವೆ. ೧೦. ಜಲ ಚಲಿಸುತ್ತಾನೆ. ಚಂದ್ರ ಚಲಿಸುತ್ತದೆ. ನಕ್ಷತ್ರಪುಂಜಗಳು ಚಲಿಸುತ್ತವೆ. ಬ್ರಾಹ್ಮಣ ವೇದಗಳನ್ನು ಅಧ್ಯಯನ ಮಾಡದ ಒಂದು ದಿನವು ವಿವಿಧ ಚರಾಚರಗಳು ಚಲಿಸದ ದಿನಕ್ಕೆ ಸಮನಾಗಿರುತ್ತದೆ. ಆದ್ದರಿಂದ ಋಗ್ವೇದದ ಅಥವಾ ಸಾಮವೇದದ ಅಥವಾ ಯಜುರ್ವೇದದ ಶ್ಲೋಕವನ್ನು ಅಥವಾ ಸಾಮವೇದದ ಅಥವಾ ಯಜುರ್ವೇದದ ಶ್ಲೋಕವನ್ನು ಅಥವಾ ಗಾಥೆಯನ್ನು ಭಕ್ತನು ನಿವೇದಿಸುವುದರಿಂದ ಅವನ ಆಚರಣೆಗಳಿಗೆ ಯಾವು ವಿಘ್ನವು ಬಾರದು.''

'ಶತಪಥ ಬ್ರಾಹ್ಮಣ'ವನ್ನು ಮನು ಬೆಂಬಲಿಸುತ್ತಾನೆ: ''ವೇದವು ಪಿತೃ, ದೇವತೆಗಳ ಅಮರವಾದ ಕಣ್ಣು. ಅದು ಮಾನವನ ಅರಿವಿನ ಅಳತೆಯನ್ನು ಮೀರಿದ್ದು. ವೇದಗಳನ್ನು ಹೊರತುಪಡಿಸಿದ ಯಾವುದೇ ಪರಂಪರೆಗಳು ಅಂಧಕಾರದ ತಳಹದಿಯ ಮೇಲೆ ನಿಂತಿರುವ ಕಾರಣ ಅವು ಪರಲೋಕದಲ್ಲಿ ಫಲ ನೀಡಲಾರವು. ವೇದಗಳನ್ನು ಬಿಟ್ಟರೆ ಉಳಿದೆಲ್ಲ ಸಾಹಿತ್ಯವೂ ಅರ್ಥಹೀನ ಹಾಗೂ ನಶ್ವರ. ಚಾತುರ್ವರ್ಣ್ಯ, ತ್ರಿಲೋಕಗಳು, ಜೀವನದ ನಾಲ್ಕು ಅವಸ್ಥೆಗಳು. ಇವುಗಳನ್ನು ಹಿಂದೆ ಪ್ರಚುರಪಡಿಸಿದ್ದು ಹಾಗೂ ಮುಂದೆ ಪ್ರಚುರಪಡಿಸುವುದೂ ವೇದವೇ. ಸ್ಪರ್ಶ, ರುಚಿ, ಶಬ್ದ, ಆಕಾರ, ವಾಸನೆ ಇತ್ಯಾದಿಗಳು ನಮ್ಮ ಅರಿವಿಗೆ ಬಂದದ್ದು ವೇದದಿಂದ. ಸೈನ್ಯದ ಒಡೆಯನೂ, ಚಕ್ರವರ್ತಿಯೂ ಆಗಬಲ್ಲವನು ವೇದಪಾರಂಗತ ಮಾತ್ರ. ಅಮರವಾದ ವೇದವು ಸರ್ವರ ಆಧಾರವಾದ್ದರಿಂದ ಮಾನವ ಕಲ್ಯಾಣದ ಕೇಂದ್ರಬಿಂದುವಾಗುತ್ತದೆ. ತೀವ್ರವಾದ ಬೆಂಕಿಯು ಹಸಿರು ಮರಗಳನ್ನೂ ದಹಿಸುವಂತೆ ವೇದಪಾರಂಗತನು ಇತರೇ ಕರ್ಮಗಳಿಂದ ಆತ್ಮಕ್ಕೆ ಅಂಟಿದ ಕಲೆಯನ್ನು ನಿವಾರಿಸಿಕೊಳ್ಳುವನು. ವೇದ ಸಾರವನ್ನರಿತವನು ಬದುಕಿನ ಯಾವುದೇ ಹಂತದಲ್ಲಿದ್ದರೂ ಬ್ರಹ್ಮನೊಂದಿಗೆ ಒಂದಾಗಬಲ್ಲನು.''

ಇಷ್ಟಕ್ಕೇ ತೃಪ್ತನಾಗದ ಮನು ಇನ್ನೂ ಮುಂದೆ ಹೋಗಿ ಹೊಸ ಸಿದ್ಧಾಂತವನ್ನೇ ಮಂಡಿಸುತ್ತಾನೆ:

''ಶ್ರುತಿಗಳೆಂದರೆ ವೇದಗಳು ಹಾಗೂ ಸ್ಮೃತಿಗಳೆಂದರೆ ವಿಧಗಳು, ಹಾಗೂ ಕರ್ತವ್ಯಗಳನ್ನು ಕುರಿತ ತಿಳಿವಳಿಕೆಯನ್ನು ಇವೆರಡೂ ನೀಡುವುದರಿಂದ ಇವುಗಳ ಮಾತುಗಳನ್ನು ಯಾರೂ ಪ್ರಶ್ನಿಸಲಾಗದು. ವೈಚಾರಿಕ ಗ್ರಂಥಗಳನ್ನು[೧] ಆಧರಿಸಿ ಜ್ಞಾನದ ಈ ಎರಡೂ ಮೂಲಗಳನ್ನು ಪ್ರಶ್ನಿಸುವ ಬ್ರಾಹ್ಮಣನನ್ನು ವೇದನಿಂದಕನೆಂದೂ, ಸಂದೇಹಿಯೆಂದೂ ಪರಿಗಣಿಸಿ ಜಾತಿಯಿಂದ ಬಹಿಷ್ಕರಿಸಬೇಕು.....೧೩. ಕರ್ತವ್ಯಗಳನ್ನು ಕುರಿತು ತಿಳಿಯಲು ಶ್ರುತಿಯೇ ಪರಮೋಚ್ಚ ಆಧಾರ.''

* * * *

೧. ಇದನ್ನು xii ೧೦೬ ಸೂತ್ರದೊಂದಿಗೆ ಓದಿಕೊಳ್ಳಬೇಕು. ಆರ್ಷಂ ಧರ್ಮೋಪದೇಶಂ ಚ ವೇದಶಾಸ್ತ್ರಾಽ ವಿರೋಧಿನಾ ಯಸ್ತರ್ಕೇಣಾನುಸಂಧತ್ತೇ ಸ । ಧರ್ಮಂ ವೇದ ನೇತರಃ । ಋಷಿಗಳಿಂದ ಉಪದೇಶಿಸಲ್ಪಟ್ಟ, ವೇದ ಶಾಸ್ತ್ರಗಳನ್ನು ಅನುಸರಿಸುವ ಸ್ಮೃತಿಗಳನ್ನು ತನ್ನ ವಿವೇಕಯುಕ್ತ ತರ್ಕದಿಂದ ಅರಿತುಕೊಂಡವನಿಗೆ ಮಾತ್ರ ಧರ್ಮದ ರಹಸ್ಯವು ತಿಳಿಯುತ್ತದೆ: ಇತರರಿಗಲ್ಲ.

# ಭಾಗ – ಆರು

# ಸಾಮಾಜಿಕ

ಲೇಖಕರು ನೀಡಿರುವ ಮೂಲ ಪರಿವಿಡಿಯಲ್ಲಿ ಭಾಗ: I ಹಾಗೂ ಭಾಗ: III, ಇವುಗಳನ್ನು ಅನುಕ್ರಮವಾಗಿ ಧಾರ್ಮಿಕ ಹಾಗೂ ರಾಜಕೀಯ ಎಂದು ವಿಂಗಡಿಸಲಾಗಿದೆ. ಭಾಗ: IIಕ್ಕೆ ಯಾವುದೇ ಶೀರ್ಷಿಕೆ ನೀಡಿಲ್ಲವಾದರೂ ಒಗಟು ೨೧ರ ಪುಟವೊಂದರಲ್ಲಿ ಈ ಭಾಗವನ್ನು 'ಸಾಮಾಜಿಕ'ವೆಂದು ಸೂಚಿಸಲಾಗಿದೆ. ಈ ಭಾಗದಲ್ಲಿ 'ಸ್ತ್ರೀಯರ ಒಗಟು' ('ಭಾರತೀಯ ಸ್ತ್ರೀಯನ್ನು ಬ್ರಾಹ್ಮಣರು ಕೀಳಾಗಿ ಕಂಡದ್ದೇಕೆ?' ಎಂಬ ಶೀರ್ಷಿಕೆಯಡಿ) ಎಂಬ ಲೇಖನವೂ ಸೇರಿದಂತೆ ಆರು ಒಗಟುಗಳಿವೆ. 'ಕ್ರಾಂತಿ ಮತ್ತು ಪ್ರತಿಕ್ರಾಂತಿ' ಎಂಬ ಶೀರ್ಷಿಕೆಯಡಿ ಈ ಅಧ್ಯಾಯವನ್ನು ಮೂರನೆಯ ಸಂಪುಟದಲ್ಲಿ (ಅಧ್ಯಾಯ: ೧೭) ಸೇರಿಸಲಾಗಿರುವುದರಿಂದ ಅದು ಈ ಸಂಪುಟದಲ್ಲಿಲ್ಲ.

# ಒಗಟು – ೧೬

## ಚಾತುರ್ವರ್ಣಗಳ ಹುಟ್ಟು ಮತ್ತು ಬ್ರಾಹ್ಮಣರು

ಹಿಂದೂ ಸಾಮಾಜಿಕ ವ್ಯವಸ್ಥೆ ದೈವ ನಿರ್ಮಿತವಾದದ್ದು ಎಂಬುದು ಹಿಂದೂಗಳ ನಂಬಿಕೆ. ಈ ದೈವ ನಿರ್ಮಿತಿಯಲ್ಲಿ ಮೂರು ಮುಖ್ಯ ಅಂಶಗಳಿವೆ. ೧. ಸಮಾಜವನ್ನು ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂಬ ನಾಲ್ಕು ವರ್ಣಗಳನ್ನಾಗಿ ಶಾಶ್ವತವಾಗಿ ವಿಭಜಿಸಲಾಗಿದೆ. ೨. ಈ ವರ್ಗಗಳ ಸ್ಥಾನಮಾನಗಳಲ್ಲಿ ಅಸಮಾನತೆಯಿರುತ್ತವೆ. ಬ್ರಾಹ್ಮಣರು ಉಚ್ಚ ಸ್ಥಾನವನ್ನು ಆಕ್ರಮಿಸಿದರೆ ಶೂದ್ರರಿಗೆ ಕನಿಷ್ಠ ಸ್ಥಾನ. ೩. ಈ ವರ್ಗಗಳ ಕಸುಬು ಕೂಡ ನಿಗದಿಯಾಗಿರುತ್ತದೆ. ಬ್ರಾಹ್ಮಣರು ಕಲಿಯುವವರು ಮತ್ತು ಕಲಿಸುವವರು. ಕ್ಷತ್ರಿಯರು ಹೋರಾಡುವವರು. ವೈಶ್ಯರು ವ್ಯಾಪಾರಿಗಳು. ಈ ಮೂರೂ ವರ್ಗಗಳ ಸೇವೆ ಶೂದ್ರರ ಪಾಲಿಗೆ. ಇದು ಹಿಂದೂ ವರ್ಣ ವ್ಯವಸ್ಥೆ. ಇದೇ ಹಿಂದೂ ಧರ್ಮದ ಆತ್ಮ. ವರ್ಣ ವ್ಯವಸ್ಥೆಯೊಂದೇ ಹಿಂದೂ ಧರ್ಮವನ್ನು ಇತರ ಧರ್ಮಗಳಿಗಿಂತ ಭಿನ್ನವಾಗಿಸುತ್ತದೆ. ಈ ವರ್ಣ ವ್ಯವಸ್ಥೆಯ ಮೂಲವನ್ನು ಕುರಿತು ಪ್ರಾಚೀನ ಹಿಂದೂ ಗ್ರಂಥಗಳು ಏನು ಹೇಳುತ್ತವೆಂಬುದನ್ನು ನೋಡೋಣ.

### I

ಮೊದಲಿಗೆ ವೇದಗಳಲ್ಲಿ ಕಾಣುವ ಅಭಿಪ್ರಾಯಗಳು. ಋಗ್ವೇದದ ಹತ್ತನೆಯ ಭಾಗದ ತೊಂಬತ್ತನೆಯ ಶ್ಲೋಕದಲ್ಲಿ ಇದರ ಉಲ್ಲೇಖವಿದೆ:

"೧. ಪುರುಷನಿಗೆ ಸಾವಿರ ತಲೆಗಳು, ಸಾವಿರ ಕಣ್ಣುಗಳು, ಸಾವಿರ ಕಾಲುಗಳು, ಇಡಿ ಭೂಮಂಡಲವನ್ನು ಅವನು ಎಲ್ಲ ಬಗೆಯಿಂದಲೂ ವ್ಯಾಪಿಸಿ, ಹತ್ತಾರು ಪಟ್ಟು ಮೀರಿ ನಿಂತಿದ್ದಾನೆ. ೨. ಪುರುಷನೇ ಸರ್ವವೂ ಆಗಿದ್ದಾನೆ. ಭೂತವು ಭವಿಷ್ಯತ್ತೂ ಅವನೇ ಆಗಿದ್ದಾನೆ. ಅಮರತ್ವಕ್ಕೂ ಅವನೇ ಒಡೆಯ. ಏಕೆಂದರೆ, ಅಮುಕ್ತ ವರ್ಗವನ್ನು ಮೀರಿ ನಿಂತು ನಿಯಮ ಮಾಡುತ್ತಿದ್ದಾನೆ. ೩. ಇಷ್ಟೆಲ್ಲ ಹಿರಿಮೆ ಇರುವುದರಿಂದ ಅವನೇ ಸರ್ವೋತ್ತಮ. ಎಲ್ಲ ಜೀವರಾಶಿಯೂ ಆತನ ಒಂದು ಭಾಗವಾದರೆ, ಉಳಿದ ಮೂರು ಭಾಗ ಅಮೃತವಾಗಿದ್ದು ದಿವ್ಯಲೋಕದಲ್ಲಿದೆ. ೪. ಮೇಲೆ ಮೂರು ಅಡಿಗಳೂ, ಕೆಳಗೆ ಒಂದು ಅಡಿ ಇರುವವನೂ ಆದ, ಅವನು, ಎಲ್ಲೆಡೆ ತುಂಬಿ, ಉಣ್ಣುವ, ಉಣ್ಣದ ಎಲ್ಲರನ್ನೂ ಮೀರಿ ನಿಂತಿದ್ದಾನೆ. ೫. ಅವನಿಂದ ಹುಟ್ಟಿದವನು ವಿರಜ. ವಿರಜನಿಂದ ಪುರುಷ ಹುಟ್ಟಿದ. ಹುಟ್ಟಿದವನು ಭೂಮಿ ಆಕಾಶಗಳನ್ನು ಮೀರಿ ಬೆಳೆದ. ೬. ಪುರುಷನನ್ನು

---

*೩೩ ಪುಟಗಳ ಬೆರಳಚ್ಚಾದ ಈ ಪ್ರತಿಯು ಲೇಖಕರ ತಿದ್ದುಪಡಿಗಳನ್ನು ಒಳಗೊಂಡಿದೆ. ಕಡೆಯ ಎರಡು ಪುಟಗಳು ಲೇಖಕರ ಕೈಬರಹದಲ್ಲಿವೆ. –ಸಂ*

ದೇವತೆಗಳು ಬಲಿಯಾಗಿ ಅರ್ಪಿಸಿದಾಗ ವಸಂತವೇ ತುಪ್ಪವಾಯಿತು. ಗ್ರೀಷ್ಮ ಋತುವು ಕಟ್ಟಿಗೆಯಾಯಿತು. ಶರದೃತುವು ಹವಿಸ್ಸಾಯಿತು. ೭. ಪುರುಷನನ್ನು ಬಲಿ ನೀಡುವುದರೊಂದಿಗೆ ದೇವತೆಗಳ, ಸಾಧುಗಳ, ಋಷಿಗಳ ಯಜ್ಞವೂ ಆಯಿತು. ೮. ಈ ಲೋಕ ಯಜ್ಞದಿಂದ ಮೊಸರು ಮತ್ತು ತುಪ್ಪ ಹುಟ್ಟಿದವು. ಸಾಧು ಹಾಗೂ ಕ್ರೂರ ಪ್ರಾಣಿಗಳು ಹುಟ್ಟಿದವು. ೯. ಈ ಯಜ್ಞದಿಂದಲೇ ಋಗ್, ಸಾಮನ್, ಛಂದಸ್ಸು ಹಾಗೂ ಯಜುಸ್ ಹುಟ್ಟಿದವು. ೧೦. ಅದರಿಂದಲೇ ಕುದುರೆಗಳು, ಗೋವು, ಕುರಿಗಳು, ಮೇಕೆಗಳು, ಹುಟ್ಟಿದವು. ೧೧. ದೇವತೆಗಳು ಪುರುಷನನ್ನು ಎಷ್ಟು ಭಾಗಗಳನ್ನಾಗಿ ವಿಭಜಿಸಿದರು? ಅವನ ಮುಖ ಯಾವುದು; ಅವನ ತೋಳುಗಳು ಎಂಥವು. ಅವನ ತೊಡೆ ಹಾಗೂ ಪಾದಗಳು ಎಂಥವು? ೧೨. ಬ್ರಾಹ್ಮಣ ಅವನ ಬಾಯಿ; ಕ್ಷತ್ರಿಯ ಅವನ ತೋಳುಗಳು; ವೈಶ್ಯ ಅವನ ತೊಡೆಗಳು; ಶೂದ್ರ ಅವನ ಪಾದಗಳಿಂದ ಹುಟ್ಟಿದ. ೧೩. ಅವನ ಮನಸ್ಸಿನಿಂದ ಚಂದ್ರನೂ, ಕಣ್ಣಿನಿಂದ ಸೂರ್ಯನೂ, ಬಾಯಿಯಿಂದ ಇಂದ್ರ ಹಾಗೂ ಅಗ್ನಿ ಮತ್ತು ಉಸಿರಿನಿಂದ ವಾಯುವೂ ಹುಟ್ಟಿದರು. ೧೪. ಅವನ ಹೊಕ್ಕಳಿಂದ ಗಾಳಿ, ತಲೆಯಿಂದ ಸ್ವರ್ಗವೂ ಪಾದದಿಂದ ಭೂಮಿ, ಕಿವಿಯಿಂದ ನಾಲ್ಕು ದಿಕ್ಕುಗಳು ಹೀಗೆ ದೇವತೆಗಳು ಜಗತ್ತನ್ನು ಸೃಷ್ಟಿಸಿದರು. ೧೫. ಪುರುಷನನ್ನು ಬಲಿಪಶುವಾಗಿ ನೀಡಿ ದೇವತೆಗಳು ಯಜ್ಞವನ್ನು ಮಾಡುವಾಗ ಏಳು ಬಗೆಯ ಕಾಷ್ಠಗಳಿದ್ದವು. ಅವುಗಳನ್ನೂ ಸೀಳಿ ಇಪ್ಪತ್ತೊಂದು ಸಮಿಧಗಳನ್ನಾಗಿ ಮಾಡಲಾಯಿತು. ೧೬. ಬಲಿಯೊಂದಿಗೆ ದೇವತೆಗಳು ಈ ಯಜ್ಞವನ್ನು ಮಾಡಿದರು. ಇವೇ ಮೊದಲ ಧರ್ಮಗಳಾದವು; ಈ ಮಹಿಮವಂತರು ಮೊದಲ ಸಾಧಕರಾದ, ದೇವತೆಗಳು ಇರುವ ಸ್ವರ್ಗ (ಮೋಕ್ಷ)ವನ್ನು ಹೊಂದುವರು.

ಪುರುಷಸೂಕ್ತವೆಂದು ಕರೆಯಲಾಗುವ ಈ ಪ್ರಾರ್ಥನೆಯಲ್ಲಿ ವರ್ಣ ಹಾಗೂ ಜಾತಿಗಳು ಹುಟ್ಟಿದ ಬಗೆಗೆ ಮಾಹಿತಿ ಇದೆ. ಇದನ್ನು ಇತರೆ ವೇದಗಳು ಎಷ್ಟರಮಟ್ಟಿಗೆ ಸಮರ್ಥಿಸುತ್ತವೆ?

ಸಾಮವೇದದ ಸೂಕ್ತಗಳಲ್ಲಿ ಪುರುಷಸೂಕ್ತವಾಗಲೀ ವರ್ಣಗಳ ವಿವರಣೆಯಾಗಲೀ ಇಲ್ಲ.

ಯಜುರ್ವೇದ ಸೂಕ್ತಗಳಲ್ಲಿ ('ಶ್ವೇತ ಯಜುರ್ವೇದ' ಮತ್ತು 'ಕಾಳ ಯಜುರ್ವೇದ') ಕಾಳ ಯಜುರ್ವೇದದಲ್ಲಿ ಮೂರೂ ಸಂಹಿತೆಗಳಿವೆ. ಅವುಗಳೆಂದರೆ ಕಥಕ ಸಂಹಿತೆ. ಮೈತ್ರೇಯಾನಿ ಸಂಹಿತೆ ಮತ್ತು ತೈತ್ತಿರೀಯ ಸಂಹಿತೆ. ಶ್ವೇತ ಯಜುರ್ವೇದದಲ್ಲಿ ವಾಜಸನೇಯ ಸಂಹಿತೆಯೆಂಬ ಒಂದೇ ಒಂದು ಸಂಹಿತೆ ಇದೆ.

ಕಾಳ ಯಜುರ್ವೇದದ ಮೊದಲೆರಡು ಸಂಹಿತೆಗಳು ಋಗ್ವೇದದ ಪುರುಷ ಸೂಕ್ತದ ಬಗೆಗಾಗಲೀ ವರ್ಣಾಶ್ರಮದ ಹುಟ್ಟಿನ ಬಗೆಗಾಗಲೀ ಏನೂ ಹೇಳುವುದಿಲ್ಲ.

ಆದರೆ ತೈತ್ತಿರೀಯ ಸಂಹಿತೆ ಹಾಗೂ ವಾಜಸನೇಯ ಸಂಹಿತೆಗಳು ವರ್ಣಾಶ್ರಮದ ಬಗೆಗೆ ಕೆಲವು ಅಂಶಗಳನ್ನು ಹೇಳುತ್ತವೆ.

ವಾಜಸನೇಯ ಸಂಹಿತೆಯಲ್ಲಿ ವರ್ಣಾಶ್ರಮದ ಬಗೆಗೆ ಒಂದು ವಿವರಣೆ ಇದ್ದರೆ, ತೈತ್ತಿರೀಯದಲ್ಲಿ ಎರಡು ವಿವರಣೆಗಳಿವೆ. ಆದರೆ ತೈತ್ತಿರೀಯ ಸಂಹಿತೆಯ ಎರಡು ವಿವರಣೆಗಳು ಒಂದಕ್ಕಿಂತ ಒಂದು ಭಿನ್ನವಾಗಿವೆ. ಅದರಲ್ಲೊಂದು ವಿವರಣೆಯು ವಾಜಸನೇಯ ಸಂಹಿತೆದಯ ವಿವರಣೆಯನ್ನು ಪೂರ್ಣವಾಗಿ ಅನುಮೋದಿಸುತ್ತದೆ. ತೈತ್ತಿರೀಯ ಸಂಹಿತೆಯ ವಿವರಣೆ ಹೀಗಿದೆ:

"ಅವನು (ವ್ರಾತ್ಯ) ಕಾಮನೆಗಳಿಂದ ತುಂಬಿದಾಗ ರಾಜನ್ಯ ಹುಟ್ಟಿದ."

"......ಅವನಿಂದ ಬ್ರಾಹ್ಮಣ ಮತ್ತು ಕ್ಷತ್ರಿಯರು ಹುಟ್ಟಿದರು. ನಾವು ಯಾರನ್ನು ಪ್ರವೇಶಿಸಬೇಕು? ಎಂದು ಅವರು ಕೇಳಿದರು."

'ತೈತ್ತಿರೀಯ ಸಂಹಿತೆ'ಯ ವಿವರಣೆ ಹೀಗಿದೆ:

"ಅವನು ಒಂದು ಪ್ರಾರ್ಥನೆಯನ್ನು ಸಲ್ಲಿಸಿದ. ಪ್ರಾಣಿಗಳು ಹುಟ್ಟಿದವು. ಆಗ ಪ್ರಜಾಪತಿ ಒಡೆಯನಾಗಿದ್ದ. ಅವನು ಮೂರು ಸ್ತೋತ್ರಗಳನ್ನು ಸಲ್ಲಿಸಿದ: ಬ್ರಾಹ್ಮಣ ಸೃಷ್ಟಿಯಾದ: ಬ್ರಹ್ಮಣಸ್ಪತಿ ಒಡೆಯನಾಗಿದ್ದ. ಅವನು ಐದು ಸ್ತೋತ್ರಗಳನ್ನು ಸಲ್ಲಿಸಿದ: ಚರಾಚರಗಳು ಹುಟ್ಟಿದವು.... ಅವನು ಏಳು ಸ್ತೋತ್ರಗಳನ್ನು ಸಲ್ಲಿಸಿದ; ಸಪ್ತ ಋಷಿಗಳು ಹುಟ್ಟಿದರು; ಧಾತ್ರಿ ಒಡೆಯನಾಗಿದ್ದ....ಅವನು ಒಂಬತ್ತು ಸ್ತೋತ್ರಗಳನ್ನು ಸಲ್ಲಿಸಿದ; ಪಿತರು ಹುಟ್ಟಿದರು; ಅದಿತಿ ಒಡತಿಯಾಗಿದ್ದಳು. ಹನ್ನೊಂದು ಸ್ತೋತ್ರಗಳನ್ನು ಸಲ್ಲಿಸಿದ; ಋತುಗಳು ಸೃಷ್ಟಿಯಾದವು; ಅರ್ಥರ್ವರು ಒಡೆಯರಾಗಿದ್ದರು. ಅವನು ಹದಿಮೂರು ಸ್ತೋತ್ರಗಳನ್ನು ಸಲ್ಲಿಸಿದ; ಮಾಸಗಳು ಸೃಷ್ಟಿಯಾದವು; ವರ್ಷ ಒಡೆಯನಾಗಿದ್ದ. ಹದಿನೈದು ಸ್ತೋತ್ರಗಳನ್ನು ಅವನು ಸಲ್ಲಿಸಿದ; ಆಗ ಕ್ಷತ್ರಿಯ ಸೃಷ್ಟಿಯಾದ. ಇಂದ್ರ ಒಡೆಯನಾಗಿದ್ದ. ಅವನು ಹದಿನೇಳು ಸ್ತೋತ್ರಗಳನ್ನು ಸಲ್ಲಿಸಿದ; ಪ್ರಾಣಿಗಳು ಸೃಷ್ಟಿಯಾದವು; ಬೃಹಸ್ಪತಿ ಒಡೆಯನಾಗಿದ್ದ. ಅವನು ಹತ್ತೊಂಬತ್ತು ಸ್ತೋತ್ರಗಳನ್ನು ಸಲ್ಲಿಸಿದ; ಶೂದ್ರ ಹಾಗೂ ವೈಶ್ಯರು ಸೃಷ್ಟಿಯಾದರು; ಹಗಲು ರಾತ್ರಿಗಳು ಒಡೆಯರಾಗಿದ್ದರು. ಅವನು ಇಪ್ಪತ್ತೊಂದು ಸ್ತೋತ್ರಗಳನ್ನು ಸಲ್ಲಿಸಿದ; ಗೊರಸಿನ ಪ್ರಾಣಿಗಳು ಸೃಷ್ಟಿಯಾದವು; ವರುಣ ಒಡೆಯನಾಗಿದ್ದ; ಅವನು ಇಪ್ಪತ್ತಮೂರು ಪ್ರಾರ್ಥನೆಗಳನ್ನು ಸಲ್ಲಿಸಿದ; ಸಣ್ಣಪುಟ್ಟ ಪ್ರಾಣಿಗಳು ಸೃಷ್ಟಿಯಾದವು; ಪೂಷನ್ ಒಡೆಯನಾಗಿದ್ದ.... ಇಪ್ಪತ್ತೈದು ಸ್ತೋತ್ರಗಳನ್ನು ಸಲ್ಲಿಸಿದ; ಕ್ರೂರಪ್ರಾಣಿಗಳು ಸೃಷ್ಟಿಯಾದವು; ವಾಯು ಒಡೆಯನಾಗಿದ್ದ..... ಅವನು ಇಪ್ಪತ್ತೇಳು ಸ್ತೋತ್ರಗಳನ್ನು ಸಲ್ಲಿಸಿದ; ಸ್ವರ್ಗ ಹಾಗೂ ಮರ್ತ್ಯಲೋಕಗಳು ಬೇರಾದವು; ವಸುಗಳೂ, ರುದ್ರರೂ, ಆದಿತ್ಯರೂ ಒಡೆಯರಾಗಿದ್ದರು..... ಅವನು ಇಪ್ಪತ್ತೊಂಬತ್ತು ಸ್ತೋತ್ರಗಳನ್ನು ಸಲ್ಲಿಸಿದ; ವೃಕ್ಷಗಳು ಸೃಷ್ಟಿಯಾದವು; ಸೋಮ ಒಡೆಯನಾಗಿದ್ದ..... ಅವನು ಮೂವತ್ತೊಂದು ಪ್ರಾರ್ಥನೆಗಳನ್ನು ಸಲ್ಲಿಸಿದ; ಜೀವಿಗಳು ಹುಟ್ಟಿದವು. ಮಾಸದ ಮೊದಲರ್ಧ ಹಾಗೂ ಉತ್ತರಾರ್ಧಗಳು ಒಡೆಯರಾಗಿದ್ದವು. ಅವನು ಮೂವತ್ಮೂರು ಪ್ರಾರ್ಥನೆಗಳನ್ನು ಸಲ್ಲಿಸಿದ ಅಸ್ತಿತ್ವದಲ್ಲಿದ್ದ ವಸ್ತುಗಳು ಪ್ರಶಾಂತವಾದವು; ಪ್ರಜಾಪತಿ ಪರಮೇಷ್ಠಿಯು ಒಡೆಯನಾಗಿದ್ದ."

ಇಲ್ಲಿ ಗಮನಿಸಬೇಕಾದ ಮುಖ್ಯ ಅಂಶವೆಂದರೆ 'ಋಗ್ವೇದ' ಮತ್ತು 'ಯಜುರ್ವೇದ'ಗಳಲ್ಲಿ ಏಕಾಭಿಪ್ರಾಯವಿಲ್ಲ ಹಾಗೂ ವರ್ಣದಂತಹ ಮುಖ್ಯ ವಸ್ತುವನ್ನು ಕುರಿತು ಯಜುರ್ವೇದದ ಎರಡು ಸಂಹಿತೆಗಳಲ್ಲಿ ಭಿನ್ನಾಭಿಪ್ರಾಯವಿದೆ ಎಂಬುದು.

ಇನ್ನು ಅಥರ್ವಣ ವೇದದಲ್ಲಾದರೋ ಎರಡು ವಿವರಣೆಗಳಿವೆ. 'ಅಥರ್ವ'ಣ ವೇದದಲ್ಲಿ ಪುರುಷಸೂಕ್ತದ ಶ್ಲೋಕಗಳು 'ಋಗ್ವೇದ'ಕ್ಕಿಂತ ಭಿನ್ನವಾದ ಅನುಕ್ರಮದಲ್ಲಿದ್ದರೂ 'ಅಥರ್ವ' ವೇದವು ಪುರುಷಸೂಕ್ತವನ್ನೊಳಗೊಂಡಿದೆ. ಅದಕ್ಕಿಂತ ಮುಖ್ಯವಾದ ಅಂಶವೆಂದರೆ ಪುರುಷಸೂಕ್ತಕ್ಕಿಂತ ಕೊಂಚ ಭಿನ್ನವಾದ ವಿವರಣೆ[೧]ಯನ್ನು ಅಥರ್ವಣ ವೇದ ನೀಡುತ್ತದೆ:

---

೧. ಮ್ಯೂರ್; 'ಸ್ಯಾನ್‌ಸ್ಕ್ರಿಟ್ ಟೆಕ್ಸ್ಟ್', ಸಂ I, ಪು. ೨೧-೨೨

"ಹತ್ತು ತಲೆಗಳು ಹಾಗೂ ಹತ್ತು ಮುಖಗಳ ಬ್ರಾಹ್ಮಣನು ಮೊದಲು ಹುಟ್ಟಿದವನು. ಅವನು ಮೊದಲು ಸೋಮವನ್ನು ಕುಡಿದ; ವಿಷವನ್ನು ಶಕ್ತಿಹೀನವಾಗಿಸಿದ."

"ರಾಜನ್ಯನು ಗರ್ಭದಲ್ಲಿದ್ದಾಗಲೇ ಅವನನ್ನು ಕಂಡು ಹೆದರಿದ ದೇವತೆಗಳು ಅಲ್ಲಿಯೇ ಅವನನ್ನು ಕಟ್ಟುಗಳಿಂದ ಬಂಧಿಸಿದರು. ಹೀಗಾಗಿ ಅವನು ಹುಟ್ಟಿದಾಗಲೇ ಬಂಧನದಲ್ಲಿದ್ದ. ಇಲ್ಲದಿದ್ದರೆ ಶತ್ರುಗಳನ್ನು ಅವನು ನಿರಂತರವಾಗಿ ಸಂಹರಿಸುತ್ತಲೇ ಇರುತ್ತಿದ್ದ. ರಾಜನ್ಯನಿಗೆ ಇಂದ್ರನ ಗುಣವಿದ್ದರೆ ಬ್ರಾಹ್ಮಣನಿಗೆ ಬೃಹಸ್ಪತಿಯ ಗುಣವಿರುವುದು. ರಾಜನ್ಯನು ಬಂಧ ವಿಮುಕ್ತನಾಗುವುದೇನಿದ್ದರೂ ಬ್ರಾಹ್ಮಣನ ಮೂಲಕವೇ."

ಈ ಕೆಳಕಂಡ ಭಾಗಗಳಲ್ಲಿ ಕಾಣುವ ವಿವರಣೆಗಳು ಮಾನವಕುಲದ ಪಿತೃ ಮನು ಎಂದು ಸೂಚಿಸಲೆತ್ನಿಸುತ್ತವೆ.[೨]

"ಅಥರ್ವ, ಪಿತನಾದ ಮನು ಮತ್ತು ದಧ್ಯಂಚರು ನಡೆಸಿದ ವಿಧಿಗಳಲ್ಲಿ ಸಲ್ಲಿಸಲಾದ ಸ್ತೋತ್ರಗಳು, ಪ್ರಾರ್ಥನೆಗಳು ಇಂದ್ರನಿಗೆ ಅರ್ಪಿತವಾಗುತ್ತಿದ್ದವು."

"ಪಿತನಾದ ಮನು ಯಜ್ಞಗಳ ಮೂಲಕ ಗಳಿಸಿದ ನೆರವು ಹಾಗೂ ಸಂಪತ್ತು ನಿನ್ನ ಮಾರ್ಗದರ್ಶನದಲ್ಲಿ ನಮಗೂ ಲಭಿಸಲಿ, ಓ ರುದ್ರದೇವ."

"ಮರುತ್ ದೇವತೆಗಳೇ, ಪಿತನಾದ ಮನು ಆರಿಸಿಕೊಂಡ ನಿಮ್ಮ ಔಷಧಗಳ ಹಾಗೂ ರುದ್ರನ ಮಾಂತ್ರಿಕ ಶಕ್ತಿ ಹಾಗೂ ಆಶೀರ್ವಾದ ನಮಗೆ ಲಭಿಸಲಿ."

"ಮನು, ನಮ್ಮ ರಕ್ಷಕನಾದ ಪಿತನು."

"ನಮ್ಮನ್ನು ಕಾಯುವ ದೇವತೆಗಳೇ, ಪಿತನಾದ ಮನುವಿನ ಹಾದಿಯಿಂದ ನಮ್ಮನ್ನು ದೂರಮಾಡದಿರಿ."

"ದೇವತೆಗಳನ್ನು ಪ್ರಾರ್ಥಿಸುವ, ಮಾನವ ಸಂತತಿಯನ್ನೂ ಒಂದುಗೂಡಿಸುವ ಈ ಅಗ್ನಿಯು ಸಂಪತ್ತಿನ ಒಡೆಯನೂ ಹೌದು."

"ಅಗ್ನಿಯು ಇತರ ದೇವತೆಗಳ ಹಾಗೂ ಮನುಜರು ಜೊತೆಗೂಡಿ ನಡೆಸುವ ಬಹುರೂಪೀ ಯಜ್ಞ..."

"ದೇವತೆಗಳಾದ ವಾಜಸ್ ಮತ್ತು ರಿಭುಕ್ಷಣರು ದೇವತೆಗಳು ಕ್ರಮಿಸಿದ ಹಾದಿಯಲ್ಲಿಯೇ ನಮ್ಮ ಯಜ್ಞಕ್ಕೆ ಬಂದು, ದೈವಗಳನ್ನು ಸಂಪ್ರೀತಗೊಳಿಸಿ, ಮಂಗಳಕರವಾದ ದಿನಗಳಂದು ಮನುಜರಲ್ಲಿ ಒಂದು ಯಜ್ಞವನ್ನು ನೆಲೆಗೊಳಿಸಲಿ."

"ಮನುಜರು ಅಗ್ನಿಯನ್ನು ಸ್ತುತಿಸುವರು.... ಮಾನುಷನ ಜನರಿಂದ ತೃಪ್ತನಾದ ಅಗ್ನಿ ರಾಕ್ಷಸರನ್ನು ನಿವಾರಿಸುವನು."

ಇಲ್ಲಿ ಒಂದು ಕ್ಷಣ ನಿಂತು ನಾವು ಗಮನಿಸಬೇಕಾದ ಅಂಶವೆಂದರೆ ವೇದಗಳಲ್ಲಿ ವರ್ಣಾಶ್ರಮದ ಹುಟ್ಟನ್ನು ಕುರಿತು ಸರ್ವಸಮ್ಮತವಾದ ಅಭಿಪ್ರಾಯವಿಲ್ಲ. ಋಗ್ವೇದವನ್ನು ಬಿಟ್ಟರೆ ಉಳಿದ ಯಾವ ವೇದಗಳೂ ಪ್ರಜಾಪತಿಯ ಬಾಯಿ, ತೋಳು, ತೊಡೆ ಹಾಗೂ ಪಾದಗಳಿಂದ ಕ್ರಮವಾಗಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಹಾಗೂ ಶೂದ್ರರು ಹುಟ್ಟಿದರೆಂಬ ಅಭಿಪ್ರಾಯವನ್ನು ಅನುಮೋದಿಸುವುದಿಲ್ಲ.

---

೨. ಮ್ಯೂರ್: 'ಸ್ಯಾನ್‌ಸ್ಕ್ರಿಟ್ ಟೆಕ್ಸ್ಟ್', ಸಂ I, ಪು. ೧೬೨–೧೬೫.

# II

ಈಗ 'ಶತಪಥ ಬ್ರಾಹ್ಮಣ'ದ ಒಂದು ವಿವರಣೆಯನ್ನು[೧] ನೋಡೋಣ:

ಪ್ರಜಾಪತಿಯು 'ಭುಃ' ಎಂದು ಉಚ್ಚರಿಸಿದಾಗ ಭೂಮಿ ಸೃಷ್ಟಿಯಾಯಿತು. ಅವನು 'ಭುವಃ' ಎಂದಾಗ ಗಾಳಿ ಹುಟ್ಟಿತು. 'ಸ್ವಾಃ' ಎಂದಾಗ ಆಕಾಶ ಹುಟ್ಟಿತು.... ಪ್ರಜಾಪತಿಯು 'ಭುಃ' ಎಂದಾಗ ಬ್ರಾಹ್ಮಣನೂ 'ಭೂವಃ' ಎಂದಾಗ ಕ್ಷಾತ್ರನೂ ಸೃಷ್ಟಿಯಾದರು; ಅವನು 'ಸ್ವಾಃ' ಎಂದು ಉಚ್ಚರಿಸಿದಾಗ ವೈಶ್ಯ ಹುಟ್ಟಿದ್ದ.....' " 'ಭುಃ' ಎಂದ ಪ್ರಜಾಪತಿಯು ತನ್ನನ್ನು ತಾನು ಸೃಷ್ಟಿಸಿಕೊಂಡನು; 'ಭುವಃ' ಎಂದ ಅವನು ತನ್ನ ಸಂತತಿಯನ್ನೂ, 'ಸ್ವಾಃ' ಎಂದು ಪ್ರಾಣಿಗಳನ್ನೂ ಸೃಷ್ಟಿಸಿದನು."

ಶತಪಥ ಬ್ರಾಹ್ಮಣ ಇನ್ನೊಂದು ವಿವರಣೆಯನ್ನೂ ಕೊಡುತ್ತದೆ.[೨]

"ಬ್ರಹ್ಮ (ಇಲ್ಲಿ ವ್ಯಾಖ್ಯಾನಕಾರನ ಪ್ರಕಾರ ಬ್ರಹ್ಮ ಅಗ್ನಿರೂಪದಲ್ಲಿದ್ದು ಬ್ರಾಹ್ಮಣ ಜಾತಿಯನ್ನು ಪ್ರತಿನಿಧಿಸುತ್ತದೆ) ಮೊದಲಿಗೆ ಈ ಜಗತ್ತಿನಲ್ಲಿ ಏಕಮಾತ್ರವಾಗಿದ್ದರಿಂದ ಅದು ಬೆಳೆಯಲಿಲ್ಲ. ಲದು ಶ್ರೇಷ್ಠ ರೂಪವಾದ ಕ್ಷಾತ್ರವನ್ನು (ಅಂದರೆ ಕ್ಷಾತ್ರತೇಜವುಳ್ಳ ಇಂದ್ರ, ವರುಣ, ಸೋಮ, ರುದ್ರ, ಪರ್ಜನ್ಯ, ಯಮ, ಮೃತ್ಯು, ಈಶಾನ್ ಮುಂತಾದವರನ್ನು) ಸೃಷ್ಟಿಸಿತು. ಆದ್ದರಿಂದ ಕ್ಷಾತ್ರಕ್ಕಿಂತ ಮಿಗಿಲಾದದ್ದು ಯಾವುದೂ ಇಲ್ಲ. ಆದಕಾರಣ ರಾಜಸೂಯಯಾಗದಲ್ಲಿ ಬ್ರಾಹ್ಮಣನು ಕ್ಷತ್ರಿಯನಿಗಿಂತ ಕೆಳಗೆ ಕೂರುವನು. ಆದರೆ ಬ್ರಹ್ಮನೇ ಕ್ಷಾತ್ರದ ಮೂಲವಾದ್ದರಿಂದ ರಾಜನು ಪರಮಾಧಿಕಾರವನ್ನು ಪಡೆದರೂ ಬ್ರಹ್ಮನಿಗೆ ಶರಣಾಗಬೇಕಾಗುತ್ತದೆ. ಬ್ರಾಹ್ಮಣನನ್ನು ನಾಶ ಮಾಡುವವನು ತನ್ನ ಮೂಲವನ್ನೇ ನಾಶ ಮಾಡಿಕೊಳ್ಳುತ್ತಾನೆ ಹಾಗೂ ತನಗಿಂತ ಶ್ರೇಷ್ಠವಾದವನನ್ನು ನೋಯಿಸಿದ್ದರಿಂದ ಕಡುಕಷ್ಟಕ್ಕೀಡಾಗುತ್ತಾನೆ."

"ವಸು, ರುದ್ರರು, ಆದಿತ್ಯರು, ಮರುತರು ಈ ವರ್ಗಕ್ಕೆ ಸೇರುವ ವೈಶ್ಯನನ್ನು ಅವನು ಸೃಷ್ಟಿಸಿದ. ಅವನು ಶೂದ್ರ ಎಂಬ ಜಾತಿಯನ್ನು ಸೃಷ್ಟಿಸಿದ. ಈ ವರ್ಗಕ್ಕೆ ಪೂಷನ್ ಎಂದು ಹೆಸರು. ಅಸ್ತಿತ್ವದಲ್ಲಿರುವುದನ್ನೆಲ್ಲ ಪಾಲಿಸುವ ಭೂಮಿಯೇ ಪೂಷನ್.....೨೬. ಅವನು ವೃದ್ಧಿಸಲಿಲ್ಲ. ಆಗ ಅತ್ಯಂತ ಶಕ್ತವಾದ ರೂಪವನ್ನು ಸೃಷ್ಟಿಸಿದ. ಅದೇ ಧರ್ಮ, ಇದು ಕ್ಷಾತ್ರದ ಒಡೆಯನಾದ್ದರಿಂದ ಧರ್ಮಕ್ಕಿಂತ ಶ್ರೇಷ್ಠವಾದದ್ದು ಯಾವುದೂ ಇಲ್ಲ. ಧರ್ಮವೇ ಸತ್ಯ. ಆದ್ದರಿಂದಲೇ ಸತ್ಯವನ್ನಾಡುವವನು ಧರ್ಮವನ್ನು ನುಡಿಯುತ್ತಾನೆಂದು ಅರ್ಥ. ೨೭. ಇವೇ ಬ್ರಹ್ಮ, ಕ್ಷಾತ್ರ, ವೈಶ್ಯ ಮತ್ತು ಶೂದ್ರ ಎಂಬ ನಾಲ್ಕು ವಿಂಗಡನೆಗಳು. ದೇವತೆಗಳಲ್ಲಿ ಬ್ರಹ್ಮನಾದರೆ, ಮಾನವರಲ್ಲಿ ಬ್ರಾಹ್ಮಣನೂ, ದೈವೀ ಶೂದ್ರನಿಂದ ಮಾನವ ಶೂದ್ರನೂ ಉಂಟಾದರು. ಈ ಕಾರಣವಾಗಿ ದೇವತೆಗಳು ಅಗ್ನಿಯಲ್ಲೂ ಮಾನವರು ಬ್ರಾಹ್ಮಣನಲ್ಲೂ ಆಶ್ರಯವನ್ನು ಹುಡುಕುವರು."

ತೈತ್ತಿರೀಯ ಬ್ರಾಹ್ಮಣರಲ್ಲಿ ಮೂರು ವಿವರಣೆಗಳಿವೆ ಮೊದಲನೆಯ ವಿವರಣೆ:[೩] "ಈ ವಿಶ್ವವು ಬ್ರಹ್ಮನಿಂದ ಸೃಷ್ಟಿಯಾಯಿತು. ಋಕ್ ಶ್ಲೋಕಗಳಿಂದ ವೈಶ್ಯ ವರ್ಗವು ಹುಟ್ಟಿತೆಂದು ಹೇಳಲಾಗಿದೆ.

---

೧. ಮ್ಯೂರ್: 'ಸ್ಯಾನ್‌ಸ್ಕ್ರಿಟ್ ಟೆಕ್ಸ್ಟ್', ಸಂ I, ಪು. ೧೭
೨. ಅದೇ, ಸಂ I, ಪು. ೨೦
೩. ಅದೇ, ಸಂ I, ಪು. ೧೭-೨೧

ಯಜುರ್ವೇದದ ಗರ್ಭದಿಂದ ಕ್ಷತ್ರಿಯನೂ ಸಾಮವೇದದಿಂದ ಬ್ರಾಹ್ಮಣರೂ ಉದಯಿಸಿದರೆಂದು ನಮ್ಮ ಪುರಾತನರು ಹೇಳಿದರು."

ಇನ್ನೊಂದು ವಿವರಣೆ ಹೀಗಿದೆ : "ಬ್ರಾಹ್ಮಣ ಜಾತಿಯ ದೇವತೆಗಳಿಂದ ಹುಟ್ಟಿದರೆ, ಶೂದ್ರ ಜಾತಿಯ ಅಸುರರಿಂದ ಹುಟ್ಟಿತು."

ಮೂರನೆಯ ವಿವರಣೆ ಇದು:[೧]

"ಅವನು ತನ್ನಿಚ್ಛೆಯಂತೆ ಮರದ ಪಾತ್ರೆಯಲ್ಲಿ ಹಾಲು ಕರೆಯಲಿ. ಆದರೆ ಶೂದ್ರರು ಹಾಲು ಕರೆಯದಿರಲಿ. ಏಕೆಂದರೆ, ಶೂದ್ರನು ನಿರಸ್ತಿತ್ವದಿಂದ (non-existence) ಹುಟ್ಟಿದವನಾದ್ದರಿಂದ ಶೂದ್ರನು ಕರೆದ ಹಾಲು ನೈವೇದ್ಯವಲ್ಲ. ಶೂದ್ರನು ಅಗ್ನಿಹೋತ್ರನನ್ನು ಹಿಂಡಿ ಕರೆಯಬಾರದೆಂದು ಹೇಳಲಾಗಿದೆ. ಕಾರಣ ಅವನು ಅದನ್ನು ಶುದ್ಧೀಕರಿಸುವುದಿಲ್ಲ..... ಅದನ್ನು ಶೋಧಿಸಿದ ನಂತರವೇ ಅದು ನೈವೇದ್ಯವಾಗಬಲ್ಲದು."

ಅಂದರೆ ಪುರಾತನ ಗ್ರಂಥಗಳಾದ ಬ್ರಾಹ್ಮಣಗಳು ಪುರುಷಸೂಕ್ತದ ಅಭಿಪ್ರಾಯವನ್ನು ಅನುಮೋದಿಸುವುದಿಲ್ಲವೆಂದಾಯಿತು.

## III

ಇನ್ನು ಮುಂದೆ ವರ್ಣಾಶ್ರಮದ ಹುಟ್ಟನ್ನು ಕುರಿತು ಸ್ಮೃತಿಗಳು ಏನು ಹೇಳುತ್ತವೆಂಬುದನ್ನು ನೋಡೋಣ. ಮನು ಈ ಕುರಿತು ಹೀಗೆ ಹೇಳುತ್ತಾನೆ;[೨] "ತನ್ನ ದೇಹದಿಂದ ಹಲವಾರು ಜೀವರಾಶಿ ಗಳನ್ನು ಸೃಷ್ಟಿಸಲು ಬಯಸಿದ ಸ್ವಯಂಭು ಮೊದಲು ಜಲರಾಶಿಯನ್ನು ಸೃಷ್ಟಿಸಿ ಆ ನೀರಿನಲ್ಲಿ ಸೃಷ್ಟಿ ಬೀಜವನ್ನಿರಿಸಿದನು. ಆ ಬೀಜ ಸೂರ್ಯನಷ್ಟು ಪ್ರಕಾಶಮಾನವಾದ ಚಿನ್ನದ ಮೊಟ್ಟೆಯಾಯಿತು. ಅದರಿಂದ ಸರ್ವಲೋಕ ಪಿತಾಮಹನಾದ ಬ್ರಹ್ಮನು ಜನಿಸಿದನು. ೧೦. ನರನಿಂದ ಹುಟ್ಟಿದ ಕಾರಣ ಜಲಕ್ಕೆ ನಾರಾ ಎಂದು ಹೆಸರು. ಜಲವು ಅವನ ಮೊದಲ ಆಶ್ರಯ ಸ್ಥಾನವಾದ್ದರಿಂದ ಅವನಿಗೆ ನಾರಾಯಣನೆಂಬ ಹೆಸರು ಬಂದಿತು. ೧೧. ಅಸ್ತಿತ್ವ ನಿರಸ್ತಿತ್ವಗಳಿಂದ, ಅಗೋಚರವಾದ ಅಮರತ್ವದಿಂದ ಹುಟ್ಟಿದ ಪುರುಷ ಪ್ರಜಾಪತಿಯನ್ನು ಜಗತ್ತು ಬ್ರಹ್ಮನೆಂದು ಆರಾಧಿಸುತ್ತದೆ. ೧೨. ಒಂದು ವರ್ಷ ಕಾಲ ಅಂಡದಲ್ಲಿದ್ದ ಈ ಉಜ್ವಲ ಜೀವಿಯು ಧ್ಯಾನಾಸಕ್ತನಾಗಿ ಆ ಅಂಡವನ್ನು ಇಬ್ಭಾಗವಾಗಿಸಿದ."

"ಲೋಕಗಳು ಮಾನವಕುಲದಿಂದ ತುಂಬಿ ಹೋಗಲೆಂದು ತನ್ನ ಬಾಯಿ, ತೋಳು, ತೊಡೆ, ಪಾದಗಳಿಂದ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರನ್ನು ಸೃಷ್ಟಿಸಿದ. ೩೨. ತನ್ನ ದೇಹವನ್ನು ಎರಡು ಭಾಗಗಳನ್ನಾಗಿಸಿದ ದೇವನು (ಬ್ರಹ್ಮ) ಅರ್ಧ ಪುರುಷನೂ ಅರ್ಧ ನಾರಿಯೂ ಆಗಿ ವಿರಜನನ್ನು ಸೃಷ್ಟಿಸಿದ. ೩೩. ಕೇಳಿ, ಓ ಶ್ರೇಷ್ಠರಾದ ದ್ವಿಜರೇ, ಆ ಪುರುಷನಾದ ನಾನೇ ಈ ಜಗತ್ತಿನ ಸೃಷ್ಟಿಕರ್ತ..... ೩೪. ಜೀವಿಗಳನ್ನು ಸೃಜಿಸಲು ಬಯಸಿ ಧ್ಯಾನಾಸಕ್ತನಾದ ನಾನು ದಶಮಹರ್ಷಿಗಳನ್ನು ಸೃಷ್ಟಿಸಿದೆ. ೩೫. ಅವರೆಂದರೆ, ಮರೀಚಿ, ಅತ್ರಿ, ಅಂಗೀರಸ, ಪುಲಸ್ತ್ಯ, ಪುಲಹ, ಕ್ರತು, ಪ್ರಚೇತಸ್, ವಶಿಷ್ಠ, ಭೃಗು ಮತ್ತು ನಾರದ, ೩೬. ಅವರು ಉಳಿದ ಏಳು ಜನ ಮನುಗಳನ್ನೂ ದೇವತೆಗಳನ್ನೂ, ದೇವತಾ

೧. ಮ್ಯೂರ್: 'ಸ್ಯಾನ್‌ಸ್ಕ್ರಿಟ್ ಟೆಕ್ಸ್ಟ್'., ಸಂ I, ಪು. ೨೧

೨. ಅದೇ, ಪು. ೩೬–೩೭

ಸಮೂಹಗಳನ್ನೂ, ಮಹರ್ಷಿಗಳನ್ನೂ; ೩೭. ಯಕ್ಷ, ರಾಕ್ಷಸ, ಪಿಶಾಚ, ಗಂಧರ್ವ, ಅಪ್ಸರಾ, ಅಸುರ, ನಾಗ, ಸರ್ಪ, ಬೃಹತ್ ಪಕ್ಷಿಗಳನ್ನೂ ಪಿತೃಗಣಗಳನ್ನೂ; ೩೮. ಮಿಂಚು, ಗುಡುಗು, ಮೋಡ, ಧೂಮಕೇತು ಹಾಗೂ ಜ್ಯೋತಿರ್ಮಂಡಲವನ್ನೂ; ೩೯. ಕಿನ್ನರ, ವಾನರ, ಮತ್ಸ್ಯ, ಹಕ್ಕಿ, ದನಕರುಗಳು, ಜಿಂಕೆ, ಮಾನವರನ್ನೂ ಎರಡು ಸಾಲುದಂತಗಳುಳ್ಳ ಹಿಂಸ್ರ ಪಶುಗಳನ್ನು; ೪೦. ಸರೀಸೃಪಗಳು, ಹೇನು, ನೊಣ ಹಾಗೂ ಅನೇಕ ಚರಾಚರಗಳನ್ನೂ ಸೃಷ್ಟಿಸಿದನು. ೪೧. ಹೀಗೆ ನನ್ನ ನಿರ್ದೇಶನದ ಮೇರೆಗೆ ಸಕಲ ಚರಾಚರಗಲ ಭೂತಕಾಲದ ಕ್ರಿಯೆಗನುಗುಣವಾಗಿ ಈ ಜಗತ್ತು ಸೃಷ್ಟಿಯಾಯಿತು.''

ಮಾನವಕುಲವನ್ನು ನಾಲ್ಕು ವರ್ಣಗಳಾಗಿ ವಿಂಗಡಿಸಲು ಮನು ತನ್ನ ಸ್ಮೃತಿಯಲ್ಲಿ ಕೆಲವು ಪ್ರಧಾನ ಕಾರಣಗಳನ್ನು[೧] ನೀಡುತ್ತಾನೆ:

"ಆತ್ಮವು ಈ ಕೆಳಕಂಡ ಗುಣಗಳ ಫಲವಾಗಿ ಪಡೆಯುವ ಸ್ಥಿತಿಯನ್ನು ಕುರಿತು ಇನ್ನು ಮುಂದೆ ಹೇಳುತ್ತೇನೆ. ೪೦. ಸತ್ವ ಗುಣವಿರುವ ಆತ್ಮಗಳು ದೈವತ್ವವನ್ನು ಪಡೆಯುತ್ತವೆ; ರಜೋಗುಣಗಳುಳ್ಳವು ಮನುಷ್ಯರಾಗುತ್ತವೆ; ತಾಮಸ ಗುಣವುಳ್ಳವು ಮೃಗವಾಗುತ್ತವೆ. ೪೩. ಆನೆಗಳು, ಕುದುರೆಗಳು, ಶೂದ್ರರು ಮತ್ತು ಹೀನರಾದ ಮ್ಲೇಚ್ಛರು, ಸಿಂಹ, ಹುಲಿ, ಕರಡಿಗಳು ಇವೆರಡರ ನಡುವಣ ಕತ್ತಲೆಯ ಸ್ಥಿತಿಗೆ ಸೇರುತ್ತವೆ. ೪೬. ಭಕ್ತರು, ಸನ್ಯಾಸಿಗಳು, ಬ್ರಾಹ್ಮಣರು, ವಾಯುರಥದ ದೇವತೆಗಳು ಯೋಗ್ಯ ವರ್ಗದ ಕೆಳಸ್ತರಕ್ಕೆ ಸೇರುತ್ತಾರೆ. ೪೯. ಋಷಿಗಳು, ದೇವತೆಗಳು, ಯಜ್ಞ ಮಾಡುವ ಪುರೋಹಿತರು, ವೇದಗಳು, ಪಿತೃಗಳು, ವರ್ಷಗಳು ಇದೇ ವರ್ಗದ ಎರಡನೆಯ ಹಂತಕ್ಕೆ ಸೇರುತ್ತವೆ, ೫೦. ಬ್ರಹ್ಮ. ಸೃಷ್ಟಿಕರ್ತರು, ಮಹತ್ ಹಾಗೂ ಅವ್ಯಕ್ತ ಈ ವರ್ಗದ ಶ್ರೇಷ್ಠ ಪ್ರತಿನಿಧಿಗಳಾಗುತ್ತಾರೆ.''

ಋಗ್ವೇದದ ಅಭಿಪ್ರಾಯಗಳನ್ನು ಮನು ಅನುಮೋದಿಸುತ್ತಾನೆ. ಆದರೆ, ಅವನ ಬಹುತೇಕ ಅಭಿಪ್ರಾಯಗಳು ಋಗ್ವೇದದಲ್ಲಿ ಹೇಳಿದ್ದನ್ನು ಪುನರುಚ್ಚರಿಸುವುದರಿಂದ ಅವನ ನಿಲುವುಗಳಲ್ಲಿ ಹೊಸ ವಿಚಾರಗಳೇನೂ ಕಾಣುವುದಿಲ್ಲ.

## IV

ರಾಮಾಯಣ ಹಾಗೂ ಮಹಾಭಾರತಗಳಲ್ಲಿನ ದೃಷ್ಟಿಕೋನಗಳೊಂದಿಗೆ ಈ ಮೇಲೆ ಹೇಳಿದ ಅಭಿಪ್ರಾಯಗಳನ್ನು ಹೋಲಿಸಿ ನೋಡುವುದು ಕುತೂಹಲಕಾರಿಯಾಗಬಲ್ಲದರು.

ನಾಲ್ಕು ವರ್ಣಗಳು ದಕ್ಷನ ಮಗಳೂ ಹಾಗೂ ಕಶ್ಯಪನ ಪತ್ನಿಯೂ ಆದ ಮನುವಿನಿಂದ ಹುಟ್ಟಿದವೆಂದು ರಾಮಾಯಣವು ಹೇಳುತ್ತದೆ:[೨]

"ಎಲ್ಲ ಪ್ರಜಾಪತಿಗಳ ಹುಟ್ಟನ್ನು ಕುರಿತು ನಾನು ಹೇಳುವುದನ್ನು ಕೇಳುವಂತವನಾಗು. ಮೊದಲು ಹುಟ್ಟಿದವನು ಕರ್ದಮ. ಆ ನಂತರ, ವಕ್ರಿತ, ಶೇಷ, ಸಂಶ್ರಯ, ಬಾಹುಪುತ್ರ, ಸ್ಥಾಣ, ಮರೀಚಿ, ಪ್ರಚೇತಸ್, ಅತ್ರಿ, ಕ್ರತು, ಪುಲಸ್ತ್ಯ, ಅಂಗೀರಸ, ಪುಲಹ, ದಕ್ಷ, ವೈವಸ್ವತ, ಅರಿಷ್ಟನೇಮಿ ಮತ್ತು ಕಡೆಯವನೇ ಕಶ್ಯಪ. ಪ್ರಜಾಪತಿ ದಕ್ಷನಿಗೆ ಅರವತ್ತು ಹೆಣ್ಣುಮಕ್ಕಳು, ಅವರಲ್ಲಿ ಲಾವಣ್ಯವತಿಯರಾದ

೧. ಮ್ಯೂರ್: 'ಸ್ಯಾನ್‌ಸ್ಕ್ರಿಟ್ ಟೆಕ್ಸ್ಟ್', ಸಂ I, ಪು. ೪೧
೨. ಅದೇ, ಸಂ I, ಪು. ೧೧೬–೧೧೭

ಎಂಟು ಜನರನ್ನು ಕಶ್ಯಪ ವಿವಾಹವಾದ. ಅದಿತಿ, ದಿತಿ, ಧನು, ಕಲಕ, ತಾಮ್ರ, ಕ್ರೋಧವಶ, ಮನು ಮತ್ತು ಅನಲ ಇವರೇ ಆ ಕನ್ಯೆಯರು. ತೃಪ್ತನಾದ ಕಶ್ಯಪ ಅವರನ್ನು ಕುರಿತು ಹೇಳಿದ: 'ತ್ರಿಲೋಕವನ್ನು ಪಾಲಿಸಬಲ್ಲ ನನ್ನಂತಹ ಮಕ್ಕಳಿಗೆ ಜನ್ಮನೀಡಿ'. ಅದಿತಿ, ದಿತಿ, ಧನು ಮತ್ತು ಕಲಕ ಸಮ್ಮತಿಸಿದರು. ಆದರೆ ಉಳಿದವರು ಒಪ್ಪಲಿಲ್ಲ. ಅದಿತಿ ಮೂವತ್ತ ಮೂರು ದೇವತೆಗಳಿಗೆ ಜನ್ಮವಿತ್ತಳು. ಅವರೇ ಆದಿತ್ಯರು, ವಸುಗಳು, ರುದ್ರರು ಮತ್ತು ಇಬ್ಬರು ಅಶ್ವಿನಿ ದೇವತೆಗಳು. ಮನು ಮಾನವರಿಗೆ ಜನ್ಮವಿತ್ತಳು ಅವರೇ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಹಾಗೂ ಶೂದ್ರರು. 'ಬ್ರಾಹ್ಮಣರು ಬಾಯಿಂದಲೂ ಕ್ಷತ್ರಿಯರು ಎದೆಯಿಂದಲೂ ವೈಶ್ಯರು ತೊಡೆಯಿಂದಲೂ ಶೂದ್ರರು ಪಾದಗಳಿಂದಲೂ ಹುಟ್ಟಿದವರೆಂದು ವೇದಗಳು ಹೇಳುತ್ತವೆ. ಅನಲಳು ಶುದ್ಧ ಫಲಗಳನ್ನು ನೀಡುವ ವೃಕ್ಷಗಳಿಗೆ ಜನ್ಮವಿತ್ತಳು'....."

ಇದನ್ನು ಓದುವಾಗ ಕಂಡುಬರುವ ವಿಚಿತ್ರ ಅಂಶವೆಂದರೆ ಪ್ರಜಾಪತಿಗೆ ಬದಲಾಗಿ ನಾಲ್ಕು ವರ್ಣಗಳನ್ನು ಸೃಷ್ಟಿಸಿದವನು ಕಶ್ಯಪನೆಂದು ವಾಲ್ಮೀಕಿ ಹೇಳುವ ಮಾತು. ಅವನ ತಿಳಿವಳಿಕೆ ಕೇಳಿಕೆಯ ಮಾತಿನ ಮೇಲೆ ಆಧರಿತವಾಗಿರುವುದು ಸ್ಪಷ್ಟ. ಅವನಿಗೆ ಈ ಕುರಿತು ವೇದಗಳು ಏನನ್ನು ಹೇಳಿವೆ ಎಂಬುದನ್ನು ತಿಳಿದಿಲ್ಲದಿರುವುದು ಸ್ಪಷ್ಟ.

ಮಹಾಭಾರತವು ನಾಲ್ಕು ಕಡೆಗಳಲ್ಲಿ ನಾಲ್ಕು ಭಿನ್ನವಾದ ಅಭಿಪ್ರಾಯಗಳನ್ನು ಈ ಕುರಿತು ನೀಡುತ್ತದೆ. ಮೊದಲನೆಯದು ಹೀಗಿದೆ:

"ಮಹಾಋಷಿಗಳಂತೆ ಶ್ರೇಷ್ಠರಾದ ಪ್ರಚೇತಸನ ಹತ್ತು ಮಕ್ಕಳು ಹುಟ್ಟಿದರು. ಶ್ರೇಷ್ಠರೂ ಪವಿತ್ರರೂ ಆದ ಅವರಿಂದ ಹುಟ್ಟಿದವನೇ ದಕ್ಷ ಪ್ರಚೇತಸ್ ; ಜಗದ ತಂದೆಯಾದ ದಕ್ಷನಿಂದ ಉಳಿದ ಎಲ್ಲ ಚರಾಚರಗಳು ಹುಟ್ಟಿದವು. ವಾರುಣಿಯೊಡನೆ ಸಂಯೋಗದಿಂದ ಮುನಿ ದಕ್ಷ ತನ್ನಂಥ ಸಾವಿರ ಮಕ್ಕಳನ್ನು ಪಡೆದ. ನಾರದನು ಅವರಿಗೆ ಮುಕ್ತತತ್ವವಾದ ಸಾಂಖ್ಯವನ್ನು ಕಲಿಸಿದ. ಪ್ರಜಾಪತಿ ದಕ್ಷನು ತನ್ನ ಮುಂದಿನ ತಲೆಮಾರನ್ನು ಸೃಷ್ಟಿಸಲು ರೂಪಿಸಿದ ಐವತ್ತು ಹೆಣ್ಣು ಮಕ್ಕಳಲ್ಲಿ ಹತ್ತನ್ನು ಧರ್ಮನಿಗೂ, ಹದಿಮೂರನ್ನು ಕಶ್ಯಪನಿಗೂ ಮತ್ತು ಇಪ್ಪತ್ತೇಳನ್ನು ಸೋಮನಿಗೆ ಕೊಟ್ಟು ವಿವಾಹ ಮಾಡಿದ. ತನ್ನ ಹದಿಮೂರು ಪತ್ನಿಯರಲ್ಲಿ ಶ್ರೇಷ್ಠಳಾದ ದಾಕ್ಷಾಯಣಿಯಿಂದ ಅದಿತ್ರಯರನ್ನು, ವೈವಸ್ವತರನ್ನು ಪಡೆದ. ವೈವಸ್ವತನ ಮಗನೇ ಯಮ ವೈವಸ್ವತ, ಮಾರ್ತಾಂಡನೂ (ಸೂರ್ಯ) ಬುದ್ಧಿಶಾಲಿಯೂ ಪರಾಕ್ರಮಿಯೂ ಆದ ಮನುವಿಗೂ, ಯಮನಿಗೂ ಜನ್ಮನೀಡಿದ. ಮನುವಿನಿಂದ ಹುಟ್ಟಿದ ಮಾನವರಿಗೆ ಮನುಕುಲ ಎಂಬ ಹೆಸರಾಯಿತು. ಹೀಗೆ ಬ್ರಾಹ್ಮಣ, ಕ್ಷತ್ರಿಯ ಮುಂತಾದವರು ಮನುವಿನಿಂದ ಹುಟ್ಟಿದವರು."

ರಾಮಾಯಣದ ಅಭಿಪ್ರಾಯವನ್ನೇ ಹೋಲುವ ಈ ಸಿದ್ಧಾಂತದಲ್ಲಿ ಒಂದು ವ್ಯತ್ಯಾಸ ಮಾತ್ರ ಇದೆ. ಅದೆಂದರೆ ಮಹಾಭಾರತವು ಮನುವಿನ ದೇಹದ ನಾಲ್ಕು ಭಾಗಗಳಿಂದ ಚಾತುರ್ವರ್ಣಗಳು ಹುಟ್ಟಿದವೆಂದು ಹೇಳುವುದಿಲ್ಲ.

ಮಹಾಭಾರತದಲ್ಲಿ ನೀಡಲಾಗಿರುವ ಇನ್ನೊಂದು ವಿವರಣೆ ಋಗ್ವೇದದ ಪುರುಷಸೂಕ್ತದ ವಿವರಣೆಯನ್ನೇ ಹೋಲುತ್ತದೆ. ಅದು ಹೀಗಿದೆ:[೧]

---

೧. ಮ್ಯೂರ್: 'ಸ್ಯಾನ್‌ಸ್ಕ್ರಿಟ್ ಟೆಕ್ಸ್ಟ್', ಸಂ I.

"ಶಿಷ್ಯರನ್ನು ರಕ್ಷಿಸುವ ಹಾಗೂ ದುಷ್ಟರನ್ನು ನಿಯಂತ್ರಿಸಬಲ್ಲ ಶಕ್ತಿಯುಳ್ಳವರನ್ನು ರಾಜನು ತನ್ನ ರಾಜಪುರೋಹಿತನನ್ನಾಗಿ ನೇಮಿಸಬೇಕು. ಈ ಸಂಬಂಧದಲ್ಲಿ ಪುರೂರವನಿಗೂ, ವಾಯುವಿಗೂ ನಡೆದ ಸಂಭಾಷಣೆ ಹೀಗಿದೆ. ಪುರೂರಸ್ ಕೇಳಿದ: 'ಯಾವಾಗ ಬ್ರಾಹ್ಮಣ ಹಾಗೂ ಇತರ ಮೂರು ಜಾತಿಗಳು ಸೃಷ್ಟಿಯಾದವು ಹಾಗೂ ಅವರಲ್ಲಿ ಶ್ರೇಷ್ಠರು ಯಾರೆಂಬುದು ಯಾವಾಗ ಉದ್ಭವವಾಯಿತು?' ವಾಯು ಉತ್ತರಿಸಿದ: 'ಬ್ರಹ್ಮನ ಬಾಯಿಯಿಂದ ಬ್ರಾಹ್ಮಣನೂ ತೋಳುಗಳಿಂದ ಕ್ಷತ್ರಿಯನೂ ಹಾಗೂ ತೊಡೆಗಳಿಂದ ವೈಶ್ಯನೂ ಹುಟ್ಟಿದರು. ಇವರೆಲ್ಲರ ಸೇವೆಗಾಗಿ ಶೂದ್ರರು ಬ್ರಹ್ಮನ ಪಾದದಿಂದ ಹುಟ್ಟಿದರು. ಬ್ರಾಹ್ಮಣನು ಹುಟ್ಟಿದ ತಕ್ಷಣ ಧರ್ಮಶೀಲತೆಯನ್ನು ರಕ್ಷಿಸುವ ಸಲುವಾಗಿ ಭೂಲೋಕದ ಎಲ್ಲ ಜೀವಿಗಳ ಒಡೆಯನಾದ. ಆಗ ಸೃಷ್ಟಿಕರ್ತನು ಭೂಮಿಯನ್ನು ನಿಯಂತ್ರಿಸುವ ಕ್ಷತ್ರಿಯನನ್ನು ಜನರ ರಕ್ಷಣೆಗಾಗಿ ದಂಡವನ್ನು ಹೊರುವ ಸಲುವಾಗಿ ಎರಡನೆಯ ಯಮನೆಂಬಂತೆ ಸೃಷ್ಟಿಸಿದ. ಬ್ರಹ್ಮನ ಆಜ್ಞಾನುಸಾರವಾಗಿ ವೈಶ್ಯನು ಉಳಿದ ಮೂರು ವರ್ಗಗಳಿಗೆ ಧನಧಾನ್ಯಗಳನ್ನು ಒದಗಿಸಬೇಕು; ಶೂದ್ರನು ಅವರೆಲ್ಲರ ಸೇವೆ ಮಾಡಬೇಕು. ಆಗ ಇಳಾಪುತ್ರನು ಪ್ರಶ್ನಿಸಿದನು: 'ಹಾಗಾದರೆ ವಾಯುವೇ, ಈ ಭೂಲೋಕವು ನ್ಯಾಯಯುತವಾಗಿ ಯಾರಿಗೆ ಸೇರುತ್ತದೆ – ಬ್ರಾಹ್ಮಣನಿಗೋ, ಕ್ಷತ್ರಿಯನಿಗೋ?' ವಾಯು ಉತ್ತರಿಸಿದ: 'ಚೊಚ್ಚಲತನದ ಆಧಾರದ ಮೇಲೆ ಜಗತ್ತಿನಲ್ಲಿ ಇರುವುದೆಲ್ಲವೂ ಬ್ರಾಹ್ಮಣನ ಆಸ್ತಿ. ಇದು ಕರ್ತವ್ಯ ವಿಧಿಗಳನ್ನು ಬಲ್ಲ ಎಲ್ಲರಿಗೂ ಗೊತ್ತು. ಬ್ರಾಹ್ಮಣನು ತನ್ನ ಸ್ವಂತವಾದದ್ದನ್ನೇ ತಿನ್ನುತ್ತಾನೆ, ಧಾರಣ ಮಾಡುತ್ತಾನೆ ಮತ್ತು ನೀಡುತ್ತಾನೆ. ಎಲ್ಲ ಜಾತಿಗಳಿಗೂ ಪ್ರಥಮ ಸಂಜಾತನೂ ಶ್ರೇಷ್ಠನೂ ಆದ ಬ್ರಾಹ್ಮಣನೇ ಒಡೆಯ. ಸ್ತ್ರೀಯು ತನ್ನ (ಮೊದಲ) ಗಂಡನನ್ನೂ ಕಳೆದುಕೊಂಡಾಗ, ತನ್ನ ಮೈದುನನನ್ನು.... ಗಂಡನನ್ನಾಗಿ ಸ್ವೀಕರಿಸುವಂತೆ, ಬ್ರಾಹ್ಮಣನು ವಿಪತ್ತಿನಲ್ಲೂ ಮೊದಲ ಸಂಪನ್ಮೂಲ; ಅನಂತರ ಇತರರು ಉದ್ಭವಿಸಿರಬಹುದು.'

ಈ ಕುರಿತಾದ ಮೂರನೆಯ ವ್ಯಾಖ್ಯಾನ ಮಹಾಭಾರತದ ಶಾಂತಿ ಪರ್ವದಲ್ಲಿದೆ.[೧]

"ಭೃಗು ಉತ್ತರಿಸಿದ: 'ಸೂರ್ಯ ಹಾಗೂ ಅಗ್ನಿಯಂತೆ ಪ್ರಕಾಶಮಾನರಾದ ಪ್ರಜಾಪತಿಗಳನ್ನು ಬ್ರಹ್ಮನು ಮೊದಲು ಸೃಷ್ಟಿಸಿದನು.... ಅವನು ಮೊದಲು ಸತ್ಯ, ವೇದ, ಸ್ವರ್ಗ ವಿಧಿವಿಧಾನಗಳನ್ನೂ ನಂತರ ದೇವ, ದಾನವ, ಗಂಧರ್ವ, ಅಸುರ, ಯಕ್ಷ, ರಾಕ್ಷಸ, ನಾಗ, ಪಿಶಾಚಿಗಳನ್ನೂ ಹಾಗೂ ಮನುಷ್ಯರಾದ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಮುಂತಾದ ಎಲ್ಲ ವರ್ಣಗಳನ್ನೂ ಸೃಷ್ಟಿಸಿದನು. ಬ್ರಾಹ್ಮಣರ ವರ್ಣ ಶ್ವೇತ; ಕ್ಷತ್ರಿಯ ಕೆಂಪು; ವೈಶ್ಯ ಕಂದು; ಹಾಗೂ ಶೂದ್ರರು ಕಪ್ಪು ಬಣ್ಣವುಳ್ಳವರಾಗಿರುತ್ತಾರೆ'. ಭಾರದ್ವಾಜ ಒಂದು ಪ್ರಶ್ನೆಯನ್ನೆತ್ತುತ್ತಾನೆ: 'ವರ್ಣದ ಆಧಾರದ ಮೇಲೆ ನಾಲ್ಕು ವರ್ಗಗಳನ್ನು ವಿಂಗಡಿಸಿದರೆ ಒಂದು ಗೊಂದಲ ಎದುರಾಗುತ್ತದೆ. ಆಸೆ, ಕೋಪ, ಭಯ, ದುಃಖ, ಹಸಿವು, ಬಳಲಿಕೆಗಳು ನಮ್ಮೆಲ್ಲರನ್ನೂ ಸಮಾನವಾಗಿರುವಾಗ ಜಾತಿಯನ್ನು ನಿರ್ಧರಿಸಿರುವುದು ಹೇಗೆ? ಬೆವರು, ಮಲಮೂತ್ರ, ರಕ್ತಗಳು ಎಲ್ಲರ ಮೈಯಲ್ಲೂ ಹರಿಯುತ್ತವೆ; ಎಲ್ಲ ದೇಹಗಳೂ ಕೊಳೆಯುತ್ತವೆ; ಹೀಗಿರುವಾಗ ಜಾತಿ ಜಾತಿಯ ನಡುವೆ ಗೆರೆ ಎಳೆಯುವುದು ಹೇಗೆ? 'ಸಹಸ್ರಾರು ವಿಧದ ಚರಾಚರಗಳ ವರ್ಣಗಳನ್ನು ನಿರ್ಧರಿಸುವುದು ಹೇಗೆ?' ಆಗ ಭೃಗು ಉತ್ತರಿಸುತ್ತಾನೆ: 'ಜಾತಿಗಳೆಂಬ ಭೇದಗಳಿಲ್ಲ.'.

---

೧. ಮ್ಯೂರ್: 'ಸ್ಯಾನ್‌ಸ್ಕ್ರಿಟ್ ಟೆಕ್ಸ್ಟ್'. ಸಂ I, ಪು. ೧೩೯–೪೦

ಶಾಂತಿಪರ್ವದಲ್ಲೇ ಮತ್ತೊಂದು ವ್ಯಾಖ್ಯಾನವೂ ಇದೆ. ಅದು ಹೀಗಿದೆ: "ಭಾರದ್ವಾಜ ಮತ್ತೆ ಪ್ರಶ್ನಿಸುತ್ತಾನೆ: 'ಹಾಗಾದರೆ ಬ್ರಾಹ್ಮಣ, ಕ್ಷತ್ರಿಯ ವೈಶ್ಯ, ಶೂದ್ರ ಇವರನ್ನು ಗುರುತಿಸಲು ಇರುವ ಲಕ್ಷಣಗಳೇನು?' ಭೃಗು ಉತ್ತರಿಸುತ್ತಾನೆ: 'ಪರಿಶುದ್ಧನೂ, ಜಾತಕರ್ಮವೇ ಮೊದಲಾದ ಇತರ ಕರ್ಮಗಳಿಂದ ಪವಿತ್ರನಾದ, ವೇದಪಾರಂಗತನಾದ, ಷಟ್ಕರ್ಮಗಳನ್ನು ನೇರವೇರಿಸಬಲ್ಲ ಶುದ್ಧಿಯ ವಿಧಿಗಳನ್ನು ಕರಾರುವಕ್ಕಾಗಿ ಮಾಡಬಲ್ಲ. ನೈವೇದ್ಯದಲ್ಲಿ ಉಳಿದದ್ದನ್ನು ಸ್ವೀಕರಿಸುವ, ತನ್ನ ಧಾರ್ಮಿಕ ಗುರುವಿನ ಗೌರವಾದರ ಗಳಿಸಿರುವ, ಧಾರ್ಮಿಕ ವಿಧಿಗಳನ್ನು ಅನುಸರಿಸುವ ಹಾಗೂ ಸತ್ಯಶೀಲನಾಗಿರುವವನೇ ಬ್ರಾಹ್ಮಣ. ಸತ್ಯ, ಕರುಣೆ, ವಿನಯ, ಕೆಡುಕನ್ನು ಬಯಸದಿರುವುದು, ಔದಾರ್ಯ, ಅನುಕಂಪ, ಸಂಯಮ – ಈ ಮುಂತಾದ ಗುಣಗಳು ಯಾರಲ್ಲಿ ಕಾಣುತ್ತವೆಯೋ ಅವನೇ ಬ್ರಾಹ್ಮಣ. ರಾಜ್ಯಭಾರದ ಕರ್ತವ್ಯವನ್ನು ನಿರ್ವಹಿಸುವವನೂ ವೇದಾಧ್ಯಯನದಲ್ಲಿ ಆಸಕ್ತಿಯುಳ್ಳವನೂ ಹಾಗೂ ದಾನ ಧರ್ಮಗಳಲ್ಲಿ ನಿರತನಾಗಿರುವವನೇ ಕ್ಷತ್ರಿಯ. ಗೋಪಾಲ ವೃತ್ತಿಯನ್ನು ಕೈಗೊಳ್ಳುವ, ವ್ಯವಸಾಯ ಸಂಪತ್ತುಗಳಲ್ಲಿ ಮುಳುಗಿದರೂ ಶುದ್ಧನೂ ವೇದಗಳನ್ನು ಮನನ ಮಾಡಿಕೊಂಡಿರುವವನೂ ವೈಶ್ಯನೆಂದು ಕರೆಯಲ್ಪಡುವವನು. ಎಲ್ಲ ಬಗೆಯ ಆಹಾರವನ್ನೂ ಸೇವಿಸುವವನೂ ಎಲ್ಲ ಬಗೆಯ ಕೆಲಸಗಳನ್ನು ಮಾಡುವವನೂ ಅಶುದ್ಧನಾದವನು ವೇದಗಳಿಂದ ದೂರವಿರುವವನೂ ಶುದ್ಧವಾದ ಕೆಲಸಗಳನ್ನು ಮಾಡದವನೂ ಶೂದ್ರನೆಂದು ಕರೆಯಲ್ಪಡುವವನು. ಶೂದ್ರನಲ್ಲಿ ಕಾಣುವ ಈ ಲಕ್ಷಣಗಳು ಬ್ರಾಹ್ಮಣನಲ್ಲಿ ಕಾಣುವುದಿಲ್ಲ. ಶೂದ್ರನಂತೆ ವರ್ತಿಸುವ ಬ್ರಾಹ್ಮಣನು ಬ್ರಾಹ್ಮಣನೇ ಅಲ್ಲ."

ಈ ಮೇಲಿನ ಅಧ್ಯಯನದಿಂದ ಒಂದು ಅಂಶ ಸ್ಪಷ್ಟವಾಗುತ್ತದೆ. ಅದೆಂದರೆ, ಒಂದೆಡೆ ಬಿಟ್ಟರೆ ಇನ್ನೆಲ್ಲೂ ಮಹಾಭಾರತವು ಋಗ್ವೇದ ಪ್ರತಿಪಾದಿಸುವ ರೀತಿಯಲ್ಲಿ ವರ್ಣಾಶ್ರಮವನ್ನು ಎತ್ತಿಹಿಡಿಯುವುದಿಲ್ಲ.

## V

ಇನ್ನು ಮುಂದೆ ವರ್ಣಾಶ್ರಮದ ಹುಟ್ಟನ್ನು ಕುರಿತು ಪುರಾಣಗಳು ಏನು ಹೇಳುತ್ತವೆಂಬುದನ್ನು ನೋಡೋಣ.

ಮೊದಲಿಗೆ ವಿಷ್ಣು ಪುರಾಣ: ಚಾತುರ್ವರ್ಣ ವಿಭಜನೆಯನ್ನು ಕುರಿತು ವಿಷ್ಣುಪುರಾಣದಲ್ಲಿ ಮೂರು ವ್ಯಾಖ್ಯಾನಗಳಿವೆ. ಒಂದು ವ್ಯಾಖ್ಯಾನದ ಪ್ರಕಾರ[೧] ವರ್ಣಾಶ್ರಮದ ಮೂಲ ಮನುವಿನಲ್ಲಿದೆ: "ಬ್ರಹ್ಮಾಂಡಕ್ಕೆ ಮೊದಲು ಹಿರಣ್ಯಗರ್ಭನಾದ, ಸಕಲ ಜಗತ್ತುಗಳ ಸೃಷ್ಟಿಕರ್ತನಾದ, ದೈವೀ ವಿಷ್ಣುವಿನ ಅಂಶಗಳನ್ನು ಒಳಗೊಂಡ ಋಕ್, ಯಜುಸ್, ಸಾಮನ್ ಮತ್ತು ಅಥರ್ವ ವೇದಗಳ ತದ್ರೂಪನಾದ ಬ್ರಹ್ಮನು ಆದಿಯಲ್ಲಿ ಅಸ್ತಿತ್ವದಲ್ಲಿದ್ದ. ಬ್ರಹ್ಮನ ಬಲಹೆಬ್ಬೆರಳಿನಿಂದ ಪ್ರಜಾಪತಿ ದಕ್ಷನು ಹುಟ್ಟಿದನು; ದಕ್ಷನ ಮಗಳು ಅದಿತಿ; ಅದಿತಿಯ ಮಗ ವೈವಸ್ವತ; ಅವನ ಮಗ ಮನು. ಮನುವಿನ ಮಕ್ಕಳೆಂದರೆ ಇಕ್ಷ್ವಾಕು, ನೃಗ, ದೃಷ್ಟ, ಶರ್ಯಾತಿ, ನರಶಾಂತ, ಪ್ರಾಂಶು, ನಾಭಗಂಧಿಷ್ಠ, ಪೃಶಾದರ, ಕರುಷ. ಕರುಷನಿಂದ ಕರುಷರು–ಕ್ಷತ್ರಿಯರು ಹುಟ್ಟಿದರು. ನೇದಿಷ್ಟನ ಮಗ ನಭಗನು ವೈಶ್ಯನಾದ."

೧. ಮ್ಯೂರ್: 'ಸ್ಯಾನ್‌ಸ್ಕ್ರಿಟ್ ಟೆಕ್ಸ್ಟ್', ಸಂ I, ಪು.೨೨೦–೨೨೧

ಈ ವಿವರಣೆ ಅಪೂರ್ಣವಾಗಿದೆ. ಕ್ಷತ್ರಿಯ ಹಾಗೂ ವೈಶ್ಯರ ಹುಟ್ಟನ್ನು ಮಾತ್ರ ಅದು ವಿವರಿಸುತ್ತದೆಯೇ ಹೊರತು ಬ್ರಾಹ್ಮಣ ಹಾಗೂ ಶೂದ್ರರ ಹುಟ್ಟನ್ನಲ್ಲ. ವಿಷ್ಣುಪುರಾಣದಲ್ಲೇ ಇನ್ನೊಂದು ವ್ಯಾಖ್ಯಾನವೂ ಇದೆ:

"ಪುತ್ರಸಂತಾನವನ್ನು ಬಯಸಿದ ಮನು, ಮೈತ್ರ ಹಾಗು ವರುಣರನ್ನು ಸಂತುಷ್ಟಿಗೊಳಿಸಲು ಯಜ್ಞವೊಂದನ್ನು ಮಾಡುವಾಗ, ಹೋತ್ರಿಯ ತಪ್ಪು ಪ್ರಾರ್ಥನೆಯಿಂದಾಗಿ ಇಳಾ ಎಂಬ ಮಗಳು ಹುಟ್ಟಿದಳು. ನಂತರ ಮೈತ್ರ ಹಾಗೂ ವರುಣರ ಕೃಪೆಯಿಂದ ಸುದ್ಯುಮ್ನನೆಂಬ ಮಗನಾದ. ಆದರೆ ಶಿವನ ಸಿಟ್ಟಿಗೆ ತುತ್ತಾಗಿ ಹೆಣ್ಣಾದ ಆ ಮಗು ಬುಧನ ಆಶ್ರಮದ ಬಳಿ ಸುಳಿದಾಗ ಮೋಹಗೊಂಡ ಬುಧನು ಅವಳನ್ನು ಕೂಡಿದ್ದರಿಂದ ಪುರೂರವನೆಂಬ ಮಗ ಹುಟ್ಟಿದ. ಅವನು ಹುಟ್ಟಿನ ಯಜ್ಞ ಸ್ವರೂಪಿಯೂ, 'ಋಕ್', 'ಯಜುಸ್', 'ಸಾಮನ್' ಮತ್ತು 'ಅಥರ್ವ' ವೇದಗಳ, ಸರ್ವವಸ್ತುಗಳ, ಮನೋಶೂನ್ಯ ಸ್ವರೂಪಿಯೂ ಆದ ಯಜ್ಞ ಪುರುಷ ದೇವರನ್ನು ಅನಂತ ತೇಜಸ್ವಿಗಳಾದ ಮಹರ್ಷಿಗಳು ಪೂಜಿಸಿ, ಸುದ್ಯುಮ್ನನು ತನ್ನ ಪುರುಷತ್ವವನ್ನು ಮರಳಿ ಪಡೆಯಲೆಂದು ಬಯಸಿದರು. ಆ ದೇವರ ಕೃಪೆಯಿಂದಾಗಿ ಇಳಾ ಮತ್ತೆ ಸುದ್ಯುಮ್ನನಾದಳು"

"ವಿಷ್ಣು ಪುರಾಣದ ಪ್ರಕಾರ ಅತ್ರಿಯು ಬ್ರಹ್ಮನ ಮಗ ಹಾಗೂ ಸೋಮ(ಚಂದ್ರ)ನ ತಂದೆ; ಅವನನ್ನು ಬ್ರಹ್ಮನು ಸಸ್ಯಗಳು, ಬ್ರಾಹ್ಮಣರು ಮತ್ತು ನಕ್ಷತ್ರಗಳ ಅಧಿಪತಿಯನ್ನಾಗಿ ನೇಮಿಸಿದನು. ರಾಜಸೂಯ ಯಾಗದ ನಂತರ ಗರ್ವಿಷ್ಠನಾದ ಸೋಮ ಬೃಹಸ್ಪತಿಯ ಪತ್ನಿ ತಾರೆಯನ್ನು ಕದ್ದೊಯ್ದ. ಬ್ರಹ್ಮ ಹಾಗೂ ದೇವತೆಗಳು, ಋಷಿಗಳು ಹೇಳಿದಾಗಲೂ ಅವನು ತಾರೆಯನ್ನು ಮರಳಿಸಲಿಲ್ಲ. ಸೋಮನ ಬೆಂಬಲಿಗರಿಗೂ ಬೃಹಸ್ಪತಿಯ ಬೆಂಬಲಕ್ಕೆ ನಿಂತ ಅಂಗೀರಸನ ಶಿಷ್ಯ ರುದ್ರನಿಗೂ ಭೀಕರ ಕದನ ಆರಂಭವಾಯಿತು. ದೇವ ದಾನವರು ಒಂದೊಂದು ಗುಂಪಿನ ಪರವಾಗಿ ನಿಂತರು. ಮಧ್ಯೆ ಪ್ರವೇಶಿಸಿದ ಬ್ರಹ್ಮ ತಾರೆಯನ್ನು ಬೃಹಸ್ಪತಿಗೆ ಒಪ್ಪಿಸುವಂತೆ ಸೋಮನನ್ನು ಒತ್ತಾಯಿಸಿದ. ಈ ನಡುವೆ ಗರ್ಭಿಣಿಯಾದ ತಾರಾ ಬುಧನನ್ನು ಹಡೆದಳು. ತೀವ್ರವಾಗಿ ಪ್ರಶ್ನಿಸಿದಾಗ ಸೋಮ ಆ ಮಗುವಿನ ತಂದೆ ಎಂದು ಒಪ್ಪಿಕೊಂಡಳು. ಈಗಾಗಲೇ ಹೇಳಿದಂತೆ ಪುರೂರವನು ಮನುವಿನ ಮಗಳು ಇಳಾಳಿಂದ ಈ ಬುಧನು ಪಡೆದ ಮಗ."

"ಪುರೂರವನಿಗೆ ಆರು ಗಂಡು ಮಕ್ಕಳು. ಅವರಲ್ಲಿ ಹಿರಿಯ ಆಯುಷ್. ಆಯುಷ್‌ಗೆ ಐವರು ಗಂಡು ಮಕ್ಕಳು; ನಹುಷ, ಕ್ಷಾತ್ರವೃದ್ಧ, ರಂಭಾ, ರಜ, ಅನೇನಸ, ಕ್ಷಾತ್ರವೃದ್ಧನಿಗೆ ಸುನಹೋತ್ರನೆಂಬ ಮಗನಿದ್ದ. ಅವನಿಗೆ ಮೂವರು ಗಂಡು ಮಕ್ಕಳು; ಕಾಶ, ಲೇಶ, ಗೃತ್ಸಮದ. ಸುನಹೋತ್ರನ ಕೊನೆಯ ಮಗ ಗೃತ್ಸಮದನಿಂದ ಹುಟ್ಟಿದವನೇ ಶೌನಕ. ಶೌನಕನೇ ಚಾತುರ್ವರ್ಣ ಪದ್ಧತಿಯನ್ನು ಹುಟ್ಟು ಹಾಕಿದವನು."

ಮೂರನೆಯ ವ್ಯಾಖ್ಯಾನದ ಪ್ರಕಾರ ವರ್ಣಾಶ್ರಮದ ಸೃಷ್ಟಿಕರ್ತ ಬ್ರಹ್ಮ.[೧]

"ಮೈತ್ರೇಯ ಹೇಳಿದ: ಓ ಬ್ರಹ್ಮನೇ, ಆರ್ವಕಸ್ರೋತಸ್ ಅಥವಾ ಮಾನವ ಸೃಷ್ಟಿಯನ್ನು ಕುರಿತು ನನಗೆ ವಿವರಿಸಿದ್ದೀಯೊ; ಬ್ರಹ್ಮನು ಅದನ್ನು ಯಾವ ರೀತಿಯಲ್ಲಿ ಸೃಜಿಸಿದ ಎಂದು ತಿಳಿಸು. ಅವನು ಹೇಗೆ ಮತ್ತು ಯಾವ ಗುಣಗಳಿಂದ ಜಾತಿಗಳನ್ನು ಸೃಜಿಸಿದ ಮತ್ತು ಬ್ರಾಹ್ಮಣರು ಮತ್ತಿತರರ

---

೧. ಮ್ಯೂರ್: 'ಸ್ಯಾನ್‌ಸ್ಕ್ರಿಟ್ ಟೆಕ್ಸ್ಟ್', ಸಂ I, ಪು. ೬೧–೬೨

ಸಾಂಪ್ರದಾಯಿಕ ಕರ್ತವ್ಯಗಳೇನು ಎಂದು ತಿಳಿಸು. ಪರಾಶರ ಉತ್ತರಿಸಿದ: 'ಬ್ರಹ್ಮನು ಸೃಷ್ಟಿಕ್ರಿಯೆಯಲ್ಲಿ ತೊಡಗಿದಾಗ ಸಾತ್ವಿಕ ಗುಣದ ಜೀವಿಗಳು ಅವನ ಬಾಯಿಯಿಂದ ಹುಟ್ಟಿದವು. ರಜೋಗುಣದ ಜೀವಿಗಳು ಅವನ ಎದೆಯಿಂದಲೂ, ಕಾಮನೆ ಹಾಗೂ ತಮಸ್ಸೇ ಪ್ರಧಾನ ಲಕ್ಷಣವಾಗಿರುವ ಜೀವಿಗಳನ್ನು ಅವನು ಪಾದದಿಂದ ಸೃಷ್ಟಿಸಿದ. ಈ ನಾಲ್ಕು ವಿಧದ ಗುಂಪುಗಳೇ ನಂತರ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಜಾತಿಗಳಾದವು."

ಇಲ್ಲಿ ವಿಷ್ಣುಪುರಾಣವು ಸಾಂಖ್ಯತತ್ವವನ್ನಾಧರಿಸಿದ ಋಗ್ವೇದದ ಸಿದ್ಧಾಂತವನ್ನೇ ಮಂಡಿಸಿದೆ.

ಹರಿವಂಶದಲ್ಲಿ ಎರಡು ವ್ಯಾಖ್ಯಾನಗಳಿವೆ. ಅದರಲ್ಲೊಂದು ವ್ಯಾಖ್ಯಾನ[೧] ಮನುವಿನ ಸಂತಾನದಿಂದ ಈ ಜಾತಿಗಳು ಹುಟ್ಟಿದವೆಂದು ಸೂಚಿಸುತ್ತದೆ. "ಗೃತ್ಸಮದನ ಮಗ ಶುನಕ. ಶುನಕನ ಮಕ್ಕಳೇ ಶೌನಕ. ಬ್ರಾಹ್ಮಣ, ಕ್ಷತ್ರಿಯ ವೈಶ್ಯ, ಶೂದ್ರರು ಶೌನಕನ ಮಕ್ಕಳು."

"ವಿಧಾತನಿಗೆ ಐದು ಜನ ಮಕ್ಕಳು. ಸುಹೋತ್ರ, ಸಹೋತ್ರಿ, ಗಯಾ, ಗರ್ಗ ಮತ್ತು ಕಪಿಲ. ಸುಹೋತ್ರನಿಗೆ ಕಷಕ ಹಾಗೂ ಗೃತ್ಸಮತಿ ಎಂಬ ಇಬ್ಬರು ಮಕ್ಕಳು. ಎರಡನೆಯವನ ಮಕ್ಕಳೇ ಬ್ರಾಹ್ಮಣ, ಕ್ಷತ್ರಿಯ ಹಾಗು ವೈಶ್ಯರು."

ಹರಿವಂಶದ ಇನ್ನೊಂದು ವ್ಯಾಖ್ಯಾನ ಹೀಗಿದೆ: 'ಜನಮೇಜಯನು ಕೇಳಿದನು[೨]: ಬ್ರಹ್ಮಯುಗ ಕುರಿತು ನಾನೀಗಲೇ ಕೇಳಿರುವೆ. ಇದೀಗ ಕ್ಷತ್ರಿಯ ಯುಗ ಕುರಿತು ವಿವರವಾಗಿ ಕೇಳಬೇಕೆಂಬ ಬಯಕೆಯಾಗಿದೆ'. ಆಗ ವೈಶಂಪಾಯನನು ಉತ್ತರಿಸಿದನು: 'ನಾನೀಗ ಯಜ್ಞಯಾಗಾದಿಗಳು ಹಾಗೂ ಔದಾರ್ಯಕ್ಕೆ ಹೆಸರಾದ ಆ ಯುಗದ ಚರಿತ್ರೆಯನ್ನು ಹೇಳುವೆನು. ಮುಕ್ತಿಮಾರ್ಗದಲ್ಲಿ, ಯಜ್ಞಯಾಗಾದಿಗಳು ಹಾಗೂ ಬ್ರಹ್ಮಜ್ಞಾನದಲ್ಲಿ ನಿರತರಾಗಿ ನಡೆನುಡಿಗಳಲ್ಲಿ ಶುದ್ಧರಾಗಿ ಬದುಕಿದ ಬ್ರಾಹ್ಮಣರು ಜ್ಞಾನಿಗಳಾಗಿ ಧ್ಯಾನಾಸಕ್ತರಾಗಿ ತುಂಬು ಬಾಳನ್ನು ಬಾಳಿದ ಈ ಮುನಿಗಳು ಸಹಸ್ರ ಯುಗಗಳ ನಂತರ ಜಗತ್ತಿನ ವಿಸರ್ಜನೆಯಲ್ಲಿ ತೊಡಗಿದರು. ಆಗ ವಿಷ್ಣುವಿನಿಂದ ಜನಿಸಿದ ಬ್ರಹ್ಮನು ಪ್ರಜಾಪತಿ ದಕ್ಷನಾಗಿ ನೂರಾರು ಜೀವಿಗಳನ್ನು ಸೃಷ್ಟಿಸಿದ. ಅಕ್ಷರದಿಂದ ಸೋಮನಿಗೆ ಪ್ರಿಯರಾದ ಬ್ರಾಹ್ಮಣರನ್ನು, ಕ್ಷರದಿಂದ ಕ್ಷತ್ರಿಯರನ್ನು, ಹೊಂದಾಣಿಕೆಯಿಂದ ವೈಶ್ಯರನ್ನು, ಧೂಮದಿಂದ ಶೂದ್ರರನ್ನು ಸೃಷ್ಟಿಸಿದನು. ವಿಷ್ಣು ಜಾತಿಗಳನ್ನು ಸೃಷ್ಟಿಸುವಾಗ ವರ್ಣವನ್ನು ದೃಷ್ಟಿಯಲ್ಲಿಸಿಕೊಂಡಿದ್ದರಿಂದ ವರ್ಣಗಳಾಗಿ ನಾಲ್ಕು ಜಾತಿಗಳು ಸೃಷ್ಟಿಯಾದವು. ಅವರಿಗೆ ಒಂದೇ ರೂಪ, ವಿಭಿನ್ನ ಕರ್ತವ್ಯಗಳು, ಎರಡು ಕಾಲು, ವಿಸ್ಮಯಕಾರೀ ಶಕ್ತಿಶಾಲಿಗಳು, ತಮ್ಮ ವೃತ್ತಿಗಳಲ್ಲಿ ಪರಿಣತರು. ವೇದಗಳಲ್ಲಿ ಮೂರು ಉಚ್ಚಜಾತಿಗಳಿಗೆ ಮಾತ್ರ ಹಲವು ಸಂಸ್ಕಾರಗಳಿವೆ. ಆದರೆ ನಿರ್ಮೂಲನದಿಂದ ಹುಟ್ಟಿದ ಶೂದ್ರರಿಗೆ ಯಜ್ಞಯಾಗಗಳಿಗೆ ಪ್ರವೇಶವಾಗಲೀ ಪವಿತ್ರ ವೇದದ ಅಧ್ಯಯನವಾಗಲೀ ಸಲ್ಲದು. ಬೆಂಕಿಯಿಂದ ಮೇಲೆದ್ದ ಹೊಗೆಯು ಹೇಗೆ ಪ್ರಯೋಜನವಿಲ್ಲದೆ ಅಲೆಯುತ್ತದೆಯೋ ಹಾಗೆಯೇ ಶೂದ್ರರು ತಮ್ಮ ಹುಟ್ಟಿನಿಂದಾಗಿ ಎಲ್ಲ ಪವಿತ್ರ ಹಕ್ಕುಗಳನ್ನು ಕಳೆದುಕೊಂಡು ಭೂಮಿಯ ತುಂಬಾ ಅಲೆಯುವುದು."

ಭಾಗವತ ಪುರಾಣದಲ್ಲೂ[೩] ವರ್ಣದ ಹುಟ್ಟನ್ನು ಕುರಿತು ಒಂದು ವಿವರಣೆ ಇದೆ:

---

೧. ಅದೇ. ಪುಟ. ೨೨೩

೨. ಅದೇ, ಪುಟ. ೧೫೨–೧೫೩

೩. ಅದೇ, ಸಂ I, ಪು.೧೫೬

"ಸಹಸ್ರಾರು ವರ್ಷಗಳ ಬದುಕಿನ ನಂತರ ಕಾಲ, ಕ್ರಿಯೆ ಮತ್ತು ಸಹಜಗುಣಗಳಲ್ಲಿರುವ ಜೀವಾತ್ಮನು ಜೀವವಿಲ್ಲದ ಅಂಡಕ್ಕೆ ಜನ್ಮ ಕೊಟ್ಟನು. ನೀರಿನಲ್ಲಿ ತೇಲತೊಡಗಿದ ಆ ಅಂಡದಿಂದ ಹೊರ ಬಂದ ಪುರುಷನಿಗೆ ಸಾವಿರ ತೋಳು, ತೊಡೆ, ಮುಖ, ಪಾದ ಹಾಗೂ ಶಿರಗಳು, ಅವನ ಸೊಂಟದಿಂದ ಸಪ್ತ ಪಾತಾಳಲೋಕಗಳು, ತೊಡೆಯ ಸಂದುಗಳಿಂದ ಸಪ್ತ ದೇವಲೋಕಗಳು ಸೃಷ್ಟಿಯಾದವು. ಪುರುಷನ ಬಾಯಿಯಾಗಿ ಬ್ರಾಹ್ಮಣನೂ ತೋಳುಗಳಾಗಿ ಕ್ಷತ್ರಿಯನೂ ಇದ್ದರು. ವೈಶ್ಯನು ಅವನ ತೊಡೆಗಳಿಂದಲೂ ಶೂದ್ರನು ಅವನ ಪಾದಗಳಿಂದಲೂ ಹುಟ್ಟಿದರು. ಅವನ ಪಾದದಿಂದ ಭೂಮಿಯೂ ಹೊಕ್ಕಳಿನಿಂದ ವಾಯುವೂ ಹೃದಯದಿಂದ ಸ್ವರ್ಗವೂ ಎದೆಯಿಂದ ಮಹಾಲೋಕವು ಸೃಷ್ಟಿಯಾದವು."

ಕಡೆಯದಾಗಿ ವಾಯುಪುರಾಣ, ಅದೂ ಕೂಡ ಮನುವೇ ವರ್ಣಾಶ್ರಮದ ಸೃಷ್ಟಿಕರ್ತನೆಂಬ ಅಭಿಪ್ರಾಯವನ್ನೇ ಎತ್ತಿಹಿಡಿಯುತ್ತದೆ: "ಶೌನಕನ ಮಕ್ಕಳೇ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಹಾಗೂ ಶೂದ್ರರು – ಹಲವು ಕೆಲಸಗಳನ್ನು ನಿರ್ವಹಿಸಬೇಕಾದ ದ್ವಿಜರು."

## VI

ಇದೆಂಥ ಗೊಂದಲ? ನಾಲ್ಕು ವರ್ಣಗಳ ಹುಟ್ಟನ್ನು ಕುರಿತು ಏಕರೂಪದ ಮತ್ತು ಸುಸಂಗತ ಅಭಿಪ್ರಾಯವನ್ನು ಸೂಚಿಸಲು ಬ್ರಾಹ್ಮಣರಿಗೇಕೆ ಸಾಧ್ಯವಾಗಲಿಲ್ಲ?

ಋಗ್ವೇದವು ಚಾತುರ್ವರ್ಣಗಳನ್ನು ಸೃಷ್ಟಿಸಿದವನು ಪ್ರಜಾಪತಿ ಎನ್ನುತ್ತದೆ. ಆದರೆ ಯಾವ ಪ್ರಜಾಪತಿ ಎಂಬುದನ್ನು ಅದು ಹೇಳುವುದಿಲ್ಲ. ಹಲವಾರು ಪ್ರಜಾಪತಿಗಳಿರುವಾಗ ವರ್ಣಗಳ ಸೃಷ್ಟಿಕರ್ತನಾದ ಪ್ರಜಾಪತಿ ಯಾರೆಂಬುದಕ್ಕೆ ಸೂಕ್ತ ಉತ್ತರವಿಲ್ಲ. ಅಲ್ಲದೆ, ಪ್ರಜಾಪತಿಯೇ ವರ್ಣಗಳನ್ನು ಸೃಷ್ಟಿಸಿದನೆಂಬ ಅಂಶವನ್ನು ಕುರಿತೂ ಏಕಾಭಿಪ್ರಾಯವಿಲ್ಲ. ಒಂದು ಮೂಲವು ವರ್ಣಗಳನ್ನು ಸೃಷ್ಟಿಸಿದವನು ಬ್ರಹ್ಮನೆಂದರೆ, ಇನ್ನೊಂದು ಕಶ್ಯಪನೆನ್ನುತ್ತದೆ. ಮತ್ತೊಂದು ಮನು ಎನ್ನುತ್ತದೆ.

ಸೃಷ್ಟಿಕರ್ತ ಯಾರಾದರೂ ಆಗಿರಲಿ, ಕಡೆಯಪಕ್ಷ ವರ್ಣಗಳ ಸಂಖ್ಯೆಯನ್ನು ಕುರಿತು ಕೂಡ ಏಕಾಭಿಪ್ರಾಯವಿಲ್ಲ. ಋಗ್ವೇದದ ಪ್ರಕಾರ ನಾಲ್ಕು ವರ್ಣಗಳಿದ್ದರೆ, ಉಳಿದ ಮೂಲಗಳು ಎರಡು ವರ್ಣಗಳನ್ನು ಕುರಿತು ಹೇಳುತ್ತವೆ. ಕೆಲವು ಮೂಲಗಳು ಆ ಎರಡು ವರ್ಣಗಳು ಬ್ರಾಹ್ಮಣ ಮತ್ತು ಕ್ಷತ್ರಿಯರೆಂದರೆ, ಇನ್ನು ಕೆಲವು ಮೂಲಗಳು ಬ್ರಾಹ್ಮಣ ಮತ್ತು ಶೂದ್ರರೆನ್ನುತ್ತವೆ.

ಋಗ್ವೇದವು ವರ್ಣಗಳ ಹುಟ್ಟಿನ ಆಧಾರದ ಮೇಲೆ ಅಸಮಾನತೆಯನ್ನು ಪ್ರತಿಪಾದಿಸುತ್ತದೆ. ಆದರೆ ಶ್ವೇತ ಯಜುರ್ವೇದವು ಋಗ್ವೇದದ ಸಿದ್ಧಾಂತವನ್ನು ಅಲ್ಲಗಳೆಯುತ್ತದೆ. ಉಪನಿಷತ್ತು, ರಾಮಾಯಣ, ಮಹಾಭಾರತ ಹಾಗೂ ಪುರಾಣಗಳ ವ್ಯಾಖ್ಯಾನಗಳು ಭಿನ್ನವಾಗಿವೆ. ಅದರಲ್ಲೂ ವಾಯುಪುರಾಣವು ಶೂದ್ರರು ದ್ವಿಜರೆನ್ನುವ ಮಟ್ಟಕ್ಕೂ ಹೋಗುತ್ತದೆ.

ಈ ಗೊಂದಲಗಳಿಗೆ ಮೂಲ ಕಾರಣ ಪ್ರಾಯಶಃ ಬ್ರಾಹ್ಮಣರು, ತಾವು ಕಲ್ಪಿಸಿ ಹುಟ್ಟುಹಾಕಿದ ಚಾತುರ್ವರ್ಣ ಸಿದ್ಧಾಂತವನ್ನು ಸ್ಥಾಪಿತ ಪರಂಪರೆಗೆ ವಿರೋಧವಾಗಿ ಋಗ್ವೇದದೊಳಕ್ಕೆ ಸೇರಿಸಲೆತ್ನಿಸಿದ್ದೇ ಇರಬಹುದೆನಿಸುತ್ತದೆ.

ಹಾಗಾದರೆ, ಇಂಥ ಸಿದ್ಧಾಂತವನ್ನು ಹುಟ್ಟುಹಾಕಿದ ಬ್ರಾಹ್ಮಣರ ಉದ್ದೇಶವೇನು?

* * * *

# ಒಗಟು – ೧೭

## ಆಶ್ರಮಧರ್ಮದ ಹಿನ್ನೆಲೆ

ಚಾತುರ್ವರ್ಣ ಪದ್ಧತಿಯಂತೆಯೇ ಆಶ್ರಮಧರ್ಮವೂ ಹಿಂದೂ ಧರ್ಮದ ವಿಶಿಷ್ಟ ಲಕ್ಷಣ. ವರ್ಣಧರ್ಮವು ಸಾಮಾಜಿಕ ವ್ಯವಸ್ಥೆಯಾದರೆ, ಆಶ್ರಮಧರ್ಮವು ವ್ಯಕ್ತಿಯ ಜೀವನವನ್ನು ನಿಯಂತ್ರಿಸುವ ಒಂದು ಸಿದ್ಧಾಂತ. ಆಶ್ರಮಧರ್ಮ ವ್ಯಕ್ತಿಯ ಬದುಕನ್ನು ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥ ಹಾಗು ಸನ್ಯಾಸಗಳೆಂದು ನಾಲ್ಕು ಹಂತಗಳಾಗಿ ವಿಂಗಡಿಸುತ್ತದೆ.

ಈ ಆಶ್ರಮಗಳಲ್ಲಿ ಮೊದಲನೆಯದಾದ ಬ್ರಹ್ಮಚರ್ಯಾಶ್ರಮಕ್ಕೆ ಗುರುವೊಬ್ಬನಿಂದ ವಿದ್ಯಾಭ್ಯಾಸ ಪಡೆಯುವ ಹಂತವೆಂಬ ತಾತ್ವಿಕ ಅರ್ಥವಿದ್ದರೂ, ವಿವಾಹಪೂರ್ವದ ಜೀವನ ಎಂಬ ಅರ್ಥವೂ ಅದರಲ್ಲಿದೆ. ಗೃಹಸ್ಥಾಶ್ರಮವು ಸಂಸಾರಿಯಾಗುವ ಹಾಗೂ ಕುಟುಂಬವನ್ನು ನಿರ್ವಹಿಸುವ ಹಂತ. ವಾನಪ್ರಸ್ಥಾಶ್ರಮ ಸಮಾಜದ ಜೊತೆಗೆ ಸಂಬಂಧವನ್ನಿರಿಸಿಕೊಂಡೂ, ಸಮಾಜದಿಂದ ದೂರವಾಗಿ ಬದುಕುವುದು; ಅದರ ಹೆಸರೇ ಸೂಚಿಸುವಂತೆ ವನದಲ್ಲಿ ಬದುಕುವುದು. ಸನ್ಯಾಸಾಶ್ರಮವು ನಾಗರಿಕ ಹಕ್ಕು, ಜವಾಬ್ದಾರಿಗಳನ್ನು ತೊರೆಯುವ ಹಂತ. ವರ್ಣಧರ್ಮದಂತೆ ಆಶ್ರಮಧರ್ಮವೂ ಉತ್ತಮ ಸಮಾಜಕ್ಕೆ ಅಗತ್ಯವೆಂದು ನಂಬುವ ಹಿಂದೂಗಳು ಇವೆರಡೂ ಒಂದೇ ಎಂಬಂತೆ ವರ್ಣಾಶ್ರಮಧರ್ಮವೆಂದೂ ಕರೆಯುತ್ತಾರೆ. ಇವೆರಡೂ ಸೇರಿ ಹಿಂದೂ ಸಮಾಜದ ಉಕ್ಕಿನ ಚೌಕಟ್ಟುಗಳನ್ನು ಸೃಷ್ಟಿಸುತ್ತವೆ.

ಆಶ್ರಮಧರ್ಮದ ಉದ್ದೇಶ, ವೈಚಿತ್ರ್ಯಗಳನ್ನು ಪ್ರಶ್ನಿಸುವ ಮುನ್ನ ಮನುಸ್ಮೃತಿಯು ಆಶ್ರಮ ಪದ್ಧತಿಯನ್ನು ಕುರಿತು ಹೇಳುವುದನ್ನು ನೋಡೋಣ:

"ಬ್ರಾಹ್ಮಣನಿಗೆ ಎಂಟನೆಯ ವಯಸ್ಸಿನಲ್ಲೂ, ಕ್ಷತ್ರಿಯನಿಗೆ ಹನ್ನೊಂದನೆಯ ವಯಸ್ಸಿನಲ್ಲೂ, ವೈಶ್ಯನಿಗೆ ಹನ್ನೆರಡನೆಯ ವಯಸ್ಸಿನಲ್ಲೂ ಉಪನಯನವಾಗಬೇಕು."[೧]

"ವೇದಾಧ್ಯಯನ ಮಾಡದೆ ಇತರೆ ಪ್ರಾಪಂಚಿಕವಾದದ್ದರಲ್ಲಿ ತೊಡಗುವ ದ್ವಿಜನು ಹಾಗೂ ಅವನ ನಂತರ ಸಂತತಿ ಜೀವಿಸಿರುವಾಗಲೇ ಶೂದ್ರನ ಸ್ಥಾನಕ್ಕಿಳಿಯುವರು."[೨]

"ಗುರುವಿನ ಮಾರ್ಗದರ್ಶನದಲ್ಲಿ ತ್ರಿವೇದಗಳ ಕಲಿಕೆಯ ದೀಕ್ಷೆ ಮೂವತ್ತಾರು ವರ್ಷಗಳವರೆಗೆ ಅಥವಾ ಅದರ ಅರ್ಧ ಅಥವಾ ಕಾಲುಭಾಗದಷ್ಟು ವರ್ಷಗಳವರೆಗೆ ಅಥವಾ ವಿದ್ಯಾರ್ಥಿಯು ಅವನ್ನು ಸಂಪೂರ್ಣವಾಗಿ ಕಲಿಯುವವರೆಗೆ ಮುಂದುವರಿಯುತ್ತದೆ."

---

೧. 'ಮನುಸ್ಮೃತಿ', ಅಧ್ಯಾಯ II, ಪು. ೩೬

೨. ಅದೇ, ಅಧ್ಯಾಯ II, ೧೬೮

---

*ಹದಿನೆಂಟು ಪುಟಗಳ ಬೆರಳಚ್ಚಾದ ಈ ಅಧ್ಯಾಯಕ್ಕೆ ಸ್ವತಃ ಅಂಬೇಡ್ಕರರ ಕೈಬರಹದಲ್ಲಿ ಶೀರ್ಷಿಕೆಯಿದೆ – ಸಂ*

"ಮೂರು ವೇದಗಳನ್ನು, ಎರಡು ಅಥವಾ ಕಡೆಯಪಕ್ಷ ಒಂದು ವೇದವನ್ನಾದರೂ ವಿಧಿಪ್ರಕಾರವಾಗಿ ಅಧ್ಯಯನ ಮಾಡಿ ಗೃಹಸ್ಥಾಶ್ರಮ ಧರ್ಮವನ್ನು ಪ್ರವೇಶಿಸಬೇಕು."[೧]

"ಬ್ರಹ್ಮಚರ್ಯಾಶ್ರಮ, ಗೃಹಸ್ಥಾಶ್ರಮ, ವಾನಪ್ರಸ್ಥಾಶ್ರಮ ಹಾಗೂ ಸನ್ಯಾಸಾಶ್ರಮ – ಇವು ನಾಲ್ಕು ಆಶ್ರಮಗಳು ಗೃಹಸ್ಥಾಶ್ರಮದಿಂದಲೇ ಹುಟ್ಟಿದ ಪ್ರತ್ಯೇಕ ಆಶ್ರಮಗಳು."

"ಈ ನಾಲ್ಕು ಆಶ್ರಮಗಳನ್ನೂ ವಿಧಿವತ್ತಾಗಿ ಪಾಲಿಸುತ್ತಾ ಸದಾಚಾರದಿಂದ ನಡೆದುಕೊಳ್ಳುವ ಬ್ರಾಹ್ಮಣನು ಪರಮಪದವನ್ನು ಪಡೆಯುತ್ತಾನೆ."

"ವೇದ–ಸ್ಮೃತಿಗಳ ಪ್ರಕಾರ ಗೃಹಸ್ಥಾಶ್ರಮವೇ ಶ್ರೇಷ್ಠವಾದುದು. ಏಕೆಂದರೆ ಗೃಹಸ್ಥನು ಉಳಿದ ಮೂರು ಆಶ್ರಮಗಳನ್ನು ಪೋಷಣೆ ಮಾಡುತ್ತಾನೆ."[೨]

"ದ್ವಿಜನಾದ ಸ್ನಾತಕನು ನಿಯಮಬದ್ಧನಾಗಿ ಸಂಸಾರವನ್ನು ಸಾಗಿಸಿದ ಮೇಲೆ ಈ ಕೆಳಗಿನ ನಿಬಂಧನೆಗಳನ್ನನುಸರಿಸಿ ವಾನಪ್ರಸ್ಥಾಶ್ರಮವನ್ನು ಸೇರುತ್ತಾನೆ; ಸಂಸಾರಿಯು ತನ್ನ ಸುಕ್ಕಾದ ಚರ್ಮವನ್ನೂ ನರೆಗೂದಲನ್ನೂ ಮೊಮ್ಮಕ್ಕಳನ್ನೂ ಕಂಡ ಬಳಿಕ ವಾನಪ್ರಸ್ಥಾಶ್ರಮಿಯಾಗಬೇಕು."[೩]

"ಈ ರೀತಿ ಆಯುಷ್ಯದ ಮೂರನೆಯ ಭಾಗವನ್ನು ವಾನಪ್ರಸ್ಥಾಶ್ರಮದಲ್ಲೂ ಕಳೆದು ನಾಲ್ಕನೆಯ ಭಾಗದಲ್ಲಿ ಸರ್ವಸಂಗ ಪರಿತ್ಯಾಗ ಮಾಡಿ ಸನ್ಯಾಸವನ್ನು ಸ್ವೀಕರಿಸಬೇಕು."

"ಒಂದು ಆಶ್ರಮದಿಂದ, ಇನ್ನೊಂದು ಆಶ್ರಮವನ್ನು ಪ್ರವೇಶಿಸುತ್ತ, ಅವುಗಳನ್ನು ವಿಧ್ಯುಕ್ತ ಹೋಮ ಹವನಗಳಿಂದ ಸಂಪನ್ನಗೊಳಿಸಿ, ಜಿತೇಂದ್ರಿಯನಾಗಿ, ಭಿಕ್ಷೆ, ಬಲಿ ಆಹಾರಾದಿಗಳನ್ನು ನೀಡಿ, ಸಾಕೆನ್ನಿಸಿದ ನಂತರ ಸನ್ಯಾಸವನ್ನೂ ಸ್ವೀಕರಿಸಿ, ಮೃತಹೊಂದಿದರೆ, ಆನಂದವನ್ನು ಹೊಂದುವನು."

"ತನ್ನ ಮೂರು ಋಣಗಳನ್ನು ತೀರಿಸಿ ಮನಸ್ಸನ್ನು ಮೋಕ್ಷದ ಕಡೆಗೆ ಹೊರಳಿಸಬೇಕು. ಹಾಗೇ ಋಣ ತೀರಿಸದೆ ಮುಕ್ತಿಯತ್ತ ತಿರುಗುವವನು ಅಧೋಗತಿಯನ್ನು ಹೊಂದುವನು."

"ವಿಧಿಪ್ರಕಾರವಾಗಿ ವೇದಾಧ್ಯಯನವನ್ನು ಮಾಡಿ ಧರ್ಮವು ಹೇಳುವಂತೆ ಮಕ್ಕಳನ್ನು ಪಡೆದು ಶಕ್ತ್ಯಾನುಸಾರ ಯಜ್ಞಾದಿಗಳನ್ನು ಆಚರಿಸಿದ ನಂತರ ಅವನು ಮುಕ್ತಿಯತ್ತ ತನ್ನ ಗಮನವನ್ನು ಹರಿಸಬೇಕು."

"ವೇದಗಳನ್ನು ಓದದೆ, ಮಕ್ಕಳನ್ನು ಪಡೆಯದೆ, ಯಜ್ಞಯಾಗಗಳನ್ನು ಮಾಡದೆ ಮುಕ್ತಿಮಾರ್ಗವನ್ನು ಪಡೆಯಬಯಸುವ ದ್ವಿಜನು ಅಧೋಗತಿಯನ್ನು ಹೊಂದುವನು."[೪]

ಈ ಮೇಲಿನ ಭಾಗಗಳನ್ನು ಓದಿದರೆ ಮನುವಿನ ಆಶ್ರಮಧರ್ಮದಲ್ಲಿ ಮೂರು ಲಕ್ಷಣಗಳು ಎದ್ದು ಕಾಣುತ್ತವೆ. ಒಂದು, ಆಶ್ರಮಧರ್ಮ ಶೂದ್ರರಿಗೆ ಹಾಗೂ ಮಹಿಳೆಯರಿಗೆ ಅನ್ವಯಿಸುವುದಿಲ್ಲ. ಎರಡು, ಬ್ರಹ್ಮಚರ್ಯ ಹಾಗೂ ಗೃಹಾಸ್ಥಾಶ್ರಮಗಳು ಕಡ್ಡಾಯ ಹಾಗೂ ಉಳಿದೆರಡು ಆಶ್ರಮಗಳು ಅಷ್ಟು ಕಡ್ಡಾಯವಲ್ಲ. ಮೂರು, ಈ ನಾಲ್ಕು ಆಶ್ರಮಗಳನ್ನು ಒಂದಾದ ಮೇಲೊಂದರಂತೆ ಪ್ರವೇಶಿಸಬಹುದೇ ಹೊರತು, ಯಾವುದಾದರೊಂದನ್ನು ಬಿಟ್ಟು ಮುಂದಿನ ಹಂತಕ್ಕೆ ಪ್ರವೇಶಿಸುವಂತಿಲ್ಲ. ವ್ಯಕ್ತಿಯ

---

೧. 'ಮನುಸ್ಮೃತಿ', ಅಧ್ಯಾಯ III, ೧–೨

೨. ಅದೇ, ಅಧ್ಯಾಯ VI, ೩೩–೩೭

೩. ಅದೇ, ಅಧ್ಯಾಯ VI, ೧–೨

೪. ಅದೇ, ಅ. VI ಪು. ೩೩–೩೭

ಯೋಜಿತ ಜೀವನದ ಆರ್ಥಿಕ ಪದ್ಧತಿ ಎಂದೇ ಕರೆಯಬಹುದಾದ ಈ ಅವಲೋಕನದಿಂದ ಅನೇಕ ಪ್ರಶ್ನೆಗಳು ಹುಟ್ಟುತ್ತವೆ. ಅಂಥ ಯೋಜಿತ ಅರ್ಥ ವ್ಯವಸ್ಥೆಯನ್ನು ಹುಟ್ಟುಹಾಕಲು ಮನುವಿಗಿದ್ದ ಒತ್ತಡವೇನು? ವೇದಗಳಲ್ಲಿ ಈ ನಾಲ್ಕು ಹಂತಗಳ ವಿಂಗಡಣೆಯಿಲ್ಲ. ವೇದಗಳು ಬ್ರಹ್ಮಚಾರಿಯನ್ನು ಕುರಿತು ಹೇಳುತ್ತವೆಯಾದರೂ, ಬ್ರಹ್ಮಚರ್ಯವು ಮೊದಲನೆಯ ಹಾಗೂ ಕಡ್ಡಾಯವಾದ ಹಂತವೆಂದೇನೂ ಹೇಳುವುದಿಲ್ಲ. ಹಾಗಾದರೆ ವ್ಯಕ್ತಿಯ ಜೀವನದಲ್ಲಿ ಬ್ರಹ್ಮಚರ್ಯವನ್ನು ಬ್ರಾಹ್ಮಣರು ಕಡ್ಡಾಯ ಹಂತವನ್ನಾಗಿ ಏಕೆ ಮಾಡಿದರು? ಇದು ಆಶ್ರಮಧರ್ಮದ ಮೊದಲ ಒಗಟು.

ಎರಡನೆಯ ಪ್ರಶ್ನೆಯೆಂದರೆ, ಈ ಹಂತಗಳನ್ನು ಒಂದಾದ ಮೇಲೊಂದರಂತೆ ಪ್ರವೇಶಿಸಬೇಕೆಂದು ಮನು ಕಡ್ಡಾಯ ಮಾಡಿದ್ದೇಕೆ? ಒಂದಾನೊಂದು ಕಾಲದಲ್ಲಿ, ಬ್ರಹ್ಮಚಾರಿಯು ಈ ಮೂರು ಆಶ್ರಮಗಳಲ್ಲಿ ಯಾವುದನ್ನಾದರೂ ಆಯ್ದುಕೊಳ್ಳಬಲ್ಲ ಸ್ವತಂತ್ರವಿತ್ತು. ಧರ್ಮಸೂತ್ರದ ಕರ್ತವ್ಯಗಳು ಹೇಳುವುದನ್ನು ಮನುಸ್ಮೃತಿಯೊಂದಿಗೆ ಹೋಲಿಸಿ ನೋಡೋಣ:

ವಿದ್ಯಾರ್ಥಿ, ಗೃಹಸ್ಥ, ವಾನಪ್ರಸ್ಥ, ಸನ್ಯಾಸಗಳೆಂಬ ನಾಲ್ಕು ಆಶ್ರಮಗಳಿವೆಯೆನ್ನುವ ವಸಿಷ್ಠ ಧರ್ಮಸೂತ್ರ[೧] ಹೀಗೆ ಹೇಳುತ್ತದೆ: "ಒಂದು, ಎರಡು ಅಥವಾ ಮೂರು ವೇದಗಳನ್ನು ಕ್ರಮಬದ್ಧವಾಗಿ ಅಧ್ಯಯನ ಮಾಡಿದವನು ಈ ಮೂರು ಆಶ್ರಮಗಳಲ್ಲಿ ಯಾವುದೊಂದನ್ನಾದರೂ ಆರಿಸಿಕೊಳ್ಳಬಹುದು."

ಗೌತಮ ಧರ್ಮಸೂತ್ರದ[೨] ಪ್ರಕಾರ "ವೇದಗಳನ್ನು ಅಧ್ಯಯಿಸಿದವನು ಮುಂದೆ ತಾನು ಪ್ರವೇಶಿಸಬೇಕಾದ ಆಶ್ರಮಗಳಲ್ಲಿ ಒಂದನ್ನು ತಾನೇ ಆರಿಸಿಕೊಳ್ಳಬಹುದು. ವಿದ್ಯಾರ್ಥಿ, ಗೃಹಸ್ಥ, ಭಿಕ್ಷು, ಸನ್ಯಾಸ ಇವೇ ಆ ನಾಲ್ಕು ಆಶ್ರಮಗಳು."

ಧರ್ಮಸೂತ್ರಗಳು ಹೇಳುವುದನ್ನು ನೋಡಿದರೆ ಗೃಹಸ್ಥಾಶ್ರಮವು ಐಚ್ಛಿಕವಾಗಿತ್ತೆಂಬುದು ತಿಳಿಯುತ್ತದೆ. ಬ್ರಹ್ಮಚರ್ಯದ ನಂತರ ವಾನಪ್ರಸ್ಥ ಅಥವಾ ಸನ್ಯಾಸಾಶ್ರಮಗಳನ್ನು ಆಯ್ದುಕೊಳ್ಳುವ ಸ್ವಾತಂತ್ರ್ಯವಿತ್ತು. ಹಾಗಾದರೆ ಗೃಹಸ್ಥಾಶ್ರಮವನ್ನು ಮನು ಕಡ್ಡಾಯಗೊಳಿಸಿ ಅದರ ಮೂಲಕವೇ ವಾನಪ್ರಸ್ಥಾಶ್ರಮವನ್ನೂ ನಂತರ ಸನ್ಯಾಸಾಶ್ರಮವನ್ನೂ, ತಲುಪುವ ಕ್ರಮವನ್ನು ಜಾರಿಗೊಳಿಸಿದ್ದೇಕೆ?

ಗೃಹಸ್ಥಾಶ್ರಮದ ನಂತರ ಜೀವನಚಕ್ರಗಳನ್ನು ಪೂರ್ತಿಗೊಳಿಸಲು ವಾನಪ್ರಸ್ಥ ಹಾಗೂ ಸನ್ಯಾಸಾಶ್ರಮಗಳೆಂಬ ಎರಡು ಹಂತಗಳನ್ನು ಸೂಚಿಸುವ ಅಗತ್ಯ ಮನುವಿಗೆ ಏಕೆ ಬಂತು? ಸನ್ಯಾಸಾಶ್ರಮವೊಂದೇ ಏಕೆ ಸಾಕಾಗಲಿಲ್ಲ? ವಾನಪ್ರಸ್ಥ ಹಾಗೂ ಸನ್ಯಾಸಾಶ್ರಮಗಳನ್ನು ಕುರಿತು ಮನು ಹೇಳುವ ನಿಯಮಗಳು ಹೆಚ್ಚೂ ಕಡಿಮೆ ಒಂದೇ ಆಗಿವೆ.

ಇನ್ನು ಮುಂದೆ ವಾನಪ್ರಸ್ಥ ಹಾಗೂ ಸನ್ಯಾಸಾಶ್ರಮಗಳನ್ನು ಕುರಿತು ಮನು ಹೇಳುವ ನಿಯಮಗಳನ್ನು ಹೋಲಿಸಿ ನೋಡೋಣ:

---

೧. 'ಮನುಸ್ಮೃತಿ', ಅಧ್ಯಾಯ VII, ಶ್ಲೋಕ ೧,೨,೩.

೨. ಅದೇ, ಅಧ್ಯಾಯ III, ಶ್ಲೋಕ ೧,೨.

## ವಾನಪ್ರಸ್ಥಾಶ್ರಮದ ನಿಯಮಗಳು

'ತಾನು ಸಂಪಾದಿಸಿದ ಧನಧಾನ್ಯಗಳನ್ನು ಬಿಟ್ಟು ತನ್ನ ಪತ್ನಿಯನ್ನು ಮಕ್ಕಳ ವಶದಲ್ಲಿ ಬಿಟ್ಟು ಅಥವಾ ಅವಳ ಜೊತೆಗೂಡಿ ಕಾಡಿಗೆ ತೆರಳಬಹುದು'. (ಅಧ್ಯಾಯ VI–೩)

'ಅಗ್ನಿಹೋತ್ರದ ಅಗ್ನಿಯನ್ನೂ ದೈನಂದಿನ ಯಜ್ಞಗಳಿಗೆ ಬೇಕಾದ ವಸ್ತುಗಳನ್ನೂ ತೆಗೆದುಕೊಂಡು ಗ್ರಾಮದಿಂದ ಕಾಡಿಗೆ ಹೊರಡಬೇಕು. ಇಂದ್ರಿಯಗಳನ್ನು ನಿಗ್ರಹಿಸುತ್ತಾ ಅಲ್ಲಿ ನೆಲೆಸಬೇಕು'. (VI–೪)

ಮುನಿಗಳಿಗೆ ಸೂಕ್ತವಾದ ವಿವಿಧ ಬಗೆಯ ಶುದ್ಧಾಹಾರವನ್ನೂ ಅಥವಾ ಕಂದಮೂಲಾದಿ ಫಲಗಳಿಂದ ಜೀವನ ಮಾಡುತ್ತ ವಿಧಿಪೂರ್ವಕವಾಗಿ ಪಂಚಯಜ್ಞಗಳನ್ನು ಮಾಡಬೇಕು. (VI–೫)

'ಚರ್ಮವನ್ನಾಗಲಿ ಅಥವಾ ನಾರುಮಡಿಯನ್ನಾಗಲಿ ಉಡಬೇಕು. ಬೆಳಿಗ್ಗೆ ಹಾಗೂ ಸಾಯಂಕಾಲ ಎರಡು ಹೊತ್ತು ಸ್ನಾನ ಮಾಡಬೇಕು. ಜಟೆ ಬಿಡಬೇಕು. ಕೂದಲು, ಗಡ್ಡ ಮತ್ತು ಉಗುರುಗಳನ್ನೂ ತೆಗೆಯಬಾರದು.' (VI–೬)

'ತಾನು ತಿನ್ನುವ ಆಹಾರವನ್ನೇ ಅವನು ನೈವೇದ್ಯವಾಗಿ ನೀಡಬೇಕು. ಶಕ್ತ್ಯಾನುಸಾರ ದಾನ ಮಾಡಬೇಕು ಹಾಗೂ ತನ್ನ ಪರ್ಣಕುಟಿಗೆ ಬಂದವರಿಗೆ ಕಂದಮೂಲ ಫಲಗಳನ್ನು ನೀಡಬೇಕು.' (VI–೭)

'ಸದಾ ವೇದಾಧ್ಯಯನದಲ್ಲಿ ನಿರತನಾಗಿರಬೇಕು. ಕಷ್ಟಸಹಿಷ್ಣುವಾಗಿ, ಮೈತ್ರೀಭಾವದಿಂದ, ಸದಾ ದಾನ ಮಾಡುತ್ತಾ, ತಾನು ಏನನ್ನೂ ದಾನವಾಗಿ ಪಡೆಯದೆ, ಸರ್ವಜೀವಿಗಳಲ್ಲಿ ಅನುಕಂಪವನ್ನು ಹೊಂದಿರಬೇಕು.'. (VI –೮)

'ಮೂರು ಅಗ್ನಿಗಳೊಂದಿಗೆ ವಿಧಿವತ್ತಾಗಿ ಅಗ್ನಿ ಹೋತ್ರಗಳನ್ನು ಅವನು ಆಚರಿಸಬೇಕು. ಪರ್ವಕಾಲದ ಅಮಾವಾಸ್ಯೆ ಮತ್ತು ಪೌರ್ಣಿಮೆ ಯಜ್ಞಗಳನ್ನೂ ತಪ್ಪದೆ ಮಾಡಬೇಕು'. (VI–೯)

## ಸನ್ಯಾಸಾಶ್ರಮದ ನಿಯಮಗಳು

'ಪ್ರಜಾಪತಿಗೆ ಪವಿತ್ರವಾದ 'ಇಷ್ಟಿ' ಯಜ್ಞವನ್ನು ಮಾಡಿ, ಅದರಲ್ಲಿ ಸರ್ವಸ್ವವನ್ನು ದಕ್ಷಿಣೆಯಾಗಿ ಸಮರ್ಪಿಸಿ, ಯಜ್ಞೀಯ ಅಗ್ನಿಗಳನ್ನೂ ತನ್ನೊಳಗೆ ಸಾಕ್ಷಾತ್ಕರಿಸಿಕೊಂಡು ಬ್ರಾಹ್ಮಣನು ತನ್ನ ಗೃಹವನ್ನು ತ್ಯಜಿಸಿ ಸನ್ಯಾಸಿಯಾಗಿ ಹೊರಡಬೇಕು'. (VI–೩೮)

'ಸಮಸ್ತ ಜೀವರಾಶಿಗಳಿಗೂ ಅಭಯವನ್ನು ನೀಡಿದ ನಂತರ ಯಾವ ಬ್ರಾಹ್ಮಣನು ಸನ್ಯಾಸವನ್ನು ಸ್ವೀಕರಿಸಿ ಮನೆ ಬಿಟ್ಟು ಹೊರಡುವನೋ ಅವನಿಗೆ ತೇಜೋಮಯವಾದ ಲೋಕಗಳು ಪ್ರಾಪ್ತವಾಗುವವು'. (VI–೩೯)

'ಯಾವುದೇ ಜೀವಿಗೆ ಸಣ್ಣ ಹಾನಿಯೂ ಆಗದಂತೆ ನಡೆದುಕೊಳ್ಳುವ ದ್ವಿಜನಿಗೆ, ದೇಹ ಮುಕ್ತನಾದ ನಂತರ ಯಾವ ಅಪಾಯವೂ ಉಂಟಾಗಲಾರದು'. (VI–೪೦)

'ಪವಿತ್ರನಾಗಿ ಮನೆಯನ್ನು ಬಿಟ್ಟ ಅವನು ಮೌನವಾಗಿ ಅಲೆದಾಡಬೇಕು; ಎಲ್ಲ ಬಗೆಯ ಸಂತೋಷಗಳನ್ನೂ ಉಪೇಕ್ಷೆಯಿಂದ ಕಾಣಬೇಕು.' (VI–೪೧).

'ಅವನು ಸಂಗಾತಿಯಿಲ್ಲದೆ ಸದಾ ಏಕಾಂಗಿಯಾಗಿ ಅಲೆಯುತ್ತ, ಮೋಕ್ಷಸಾಧನೆಗೆ ತೊಡಗಬೇಕು. ಮೋಕ್ಷವನ್ನು ಅಪೇಕ್ಷಿಸುವವರಿಗೆ ಯಾರೂ ಬೇಕಾಗಿಲ್ಲ, ಯಾರಿಗೂ ಅವರು ಬೇಕಾಗಿಲ್ಲ'. (VI–೪೨).

'ಭಿಕ್ಷಾಪಾತ್ರೆಯ ಬದಲು ಒಂದು ಬೋಕಿ, ವಾಸಿಸಲು ಮರದ ಬೊಡ್ಡೆ, ಒರಟಾದ ಬಟ್ಟೆ, ವಿರಕ್ತ, ಏಕಾಂತ– ಇವು ಎಲ್ಲದರಿಂದಲೂ ಬಿಡುಗಡೆಗೊಂಡವನ ಲಕ್ಷಣಗಳು'. (VI–೪೪).

'ಅವನು ಸಾವಿಗಾಗಿ ಕಾಯದಿರಲಿ, ಬದುಕಲು ಬಯಸದಿರಲಿ, ಸೇವಕನೊಬ್ಬ ತನ್ನ ಸಂಬಳಕ್ಕಾಗಿ ನಿಗದಿತ ದಿನವನ್ನು ಕಾಯುವಂತೆ ಅವನು ಕೂಡ ತನ್ನ (ನಿಗದಿತ) ಕಾಲಕ್ಕಾಗಿ ಕಾಯಲಿ'. (VI–೪೫).

'ಆಧ್ಯಾತ್ಮದಲ್ಲಿ ಮನಸ್ಸನ್ನು ತೊಡಗಿಸಿ, ಪದ್ಮಾಸನದಲ್ಲಿ ಕುಳಿತು, ಆಸೆ ಆಮಿಷಗಳ ಗೊಡವೆಯನ್ನು ಬಿಟ್ಟು, ತನ್ನನ್ನೇ ತಾನು ಅವಲಂಬಿಸಿ, ಬ್ರಹ್ಮಾನಂದವನ್ನೂ ಹುಡುಕಬೇಕು'. (VI–೪೯).

'ಅವನು ನಕ್ಷತ್ರೇಷ್ಟ, ಅಗ್ರಯಣೇಷ್ಟ, ಚಾತುರ್ಮಾಸ್ಯ, ಉತ್ತರಾಯಣ ಹಾಗೂ ದಕ್ಷಿಣಾಯಣಗಳಲ್ಲಿ ಮಾಡುವ ಯಾಗಾದಿಗಳನ್ನು ವಿಧಿವತ್ತಾಗಿ ಮಾಡಬೇಕು'. (VI–೧೦).

'ವಸಂತ ಋತು ಮತ್ತು ಶರದ್ರುತುಗಳಲ್ಲಿ ಬೆಳೆಯುವ ಹಾಗೂ ತಾನೇ ಆಯ್ದು ತಂದಿರುವ ಸನ್ಯಾಸಿಗಳಿಗೆ ಸೂಕ್ತವಾದ ಶುದ್ಧಧಾನ್ಯಗಳಿಂದ ಪುರೋಡಾಷ ಚರುಗಳನ್ನು ಯಜ್ಞಕ್ಕೆಂದು ಮಾಡಬೇಕು'. (VI–೧೧).

'ವನದಲ್ಲಿ ತಾನಾಗಿ ಬೆಳೆದ ಉತ್ಪನ್ನಗಳಿಂದ ಮಾಡಿದ ಹವಿಸ್ಸನ್ನು ದೇವತೆಗಳಿಗೆ ಅರ್ಪಿಸಿ, ಉಳಿದ ಶೇಷವನ್ನು ಲವಣದೊಂದಿಗೆ ಸೇವಿಸಬೇಕು'. (VI–೧೨).

'ನೆಲಜಲಗಳಲ್ಲಿ ಬೆಳೆಯುವ ತರಕಾರಿ, ಕಂದಮೂಲ ಹಣ್ಣು ಹಂಪಲಗಳನ್ನು ಪವಿತ್ರ ವೃಕ್ಷದ ಹಣ್ಣಿನಿಂದ ತೆಗೆಯಲಾದ ತೈಲವನ್ನು ಮಾತ್ರ ಊಟ ಮಾಡಬೇಕು'. (VI–೧೩).

'ಜೇನು, ಮಾಂಸ, ಅಣಬೆ ಹಾಗೂ ಭೂಸ್ತೃಣ, ಶೀಗ್ರುಕ, ಶ್ಲೇಷ್ಮಾಂತಕ ಮುಂತಾದ ಹಣ್ಣುಗಳನ್ನು ಅವನು ವರ್ಜಿಸಬೇಕು'. (VI–೧೪).

'ಅಶ್ವಯುಜ ಮಾಸದಲ್ಲಿ ಈ ಮೊದಲಿಗೆ ಸಂಗ್ರಹಿಸಿದ್ದ ಮುನಿಗಳಿಗೆ ಯುಕ್ತವಾದ ಧಾನ್ಯ, ಗೆಡ್ಡೆ–ಗೆಣಸು, ಹಳೆಯ ವಸ್ತ್ರಗಳನ್ನು ವರ್ಜಿಸಬೇಕು. (VI–೧೫).

'ಉಳಲ್ಪಟ್ಟ ಭೂಮಿಯಲ್ಲಿ ಬೆಳೆದದ್ದನ್ನಾಗಲೀ, ಗ್ರಾಮದಲ್ಲಿ ಬೆಳೆದ ಗೆಡ್ಡೆಗೆಣಸು, ಹಣ್ಣುಗಳನ್ನಾಗಲೀ ಅವನು ತೀವ್ರ ಹಸಿವಿನಿಂದ ಬಳಲುತ್ತಿದ್ದಾಗಲೂ ತಿನ್ನಬಾರದು.' (VI–೧೬)

'ಶುಭಾಶುಭಶಕುನಗಳ ಫಲಗಳನ್ನು ಹೇಳುತ್ತ, ನಕ್ಷತ್ರಗಳ ಸಹಾಯದಿಂದ ಹಸ್ತರೇಖೆಗಳನ್ನು ನೋಡಿ ಭವಿಷ್ಯಹೇಳುತ್ತ, ನೀತಿಶಾಸ್ತ್ರಗಳನ್ನು ಉಪದೇಶಿಸುತ್ತ, ಭಿಕ್ಷೆಯನ್ನೆಂದಿಗೂ ಬೇಡಬಾರದು'. (VI–೫೦).

'ತಪಸ್ವಿಗಳು, ಬ್ರಾಹ್ಮಣರು, ನಾಯಿಗಳು, ಪಕ್ಷಿಗಳು ಮತ್ತು ಭಿಕ್ಷುಕರಿಂದ ತುಂಬಿರುವ ಮನೆಗೆ ಭಿಕ್ಷೆ ಕೇಳಲು ಹೋಗಬಾರದು'. (VI–೫೧).

'ತನ್ನ ಉಗುರು, ಕೂದಲು ಗಡ್ಡಗಳನ್ನು ಕತ್ತರಿಸಿಕೊಂಡು ಭಿಕ್ಷಾಪಾತ್ರೆ, ಜಲಪಾತ್ರೆ, ದಂಡಗಳನ್ನು ಹಿಡಿದು, ಯಾವ ಜೀವಿಯನ್ನೂ ನೋಯಿಸದಂತೆ ನಿಯಮ ಪಾಲಿಸುತ್ತ ಸಂಚರಿಸಬೇಕು'. (VI–೫೨).

'ಅವನು ಲೋಹದಿಂದ ಮಾಡಿದ ಪಾತ್ರೆಯನ್ನು ಬಳಸಬಾರದು. ಅವು ಒಡೆದಿರಬಾರದು. ಯಜ್ಞದಲ್ಲಿ ಉಪಯೋಗಿಸುವ ಚಮಸ ಇತ್ಯಾದಿಗಳಂತೆ ಈ ಪಾತ್ರೆಗಳನ್ನೂ ನೀರಿನಿಂದಲೇ ತೊಳೆಯಬೇಕು'. (VI–೫೩).

'ಮರದ ಪಾತ್ರೆ, ಮಣ್ಣಿನ ಪಾತ್ರೆ, ಸೋರೆ ಬುರುಡೆ ಅಥವಾ ಬಿದಿರಿನ ಪಾತ್ರೆಯನ್ನು ಸ್ವಯಂಭೂವಿನ ಪುತ್ರನಾದ ಮನು ಸನ್ಯಾಸಿಗೆ ಸೂಕ್ತವಾದ ಪಾತ್ರೆಗಳೆಂದು ಸೂಚಿಸಿರುವನು'. (VI–೫೪).

'ದಿನದಲ್ಲಿ ಒಮ್ಮೆ ಮಾತ್ರ ಅವನು ಭಿಕ್ಷಾಟನೆಗೆ ಹೊರಡಬೇಕು; ಅತಿಯಾದ ಭಿಕ್ಷೆ ಮತ್ತೆ ಪ್ರಾಪಂಚಿಕ ಸುಖಗಳತ್ತ ಮನಸ್ಸನ್ನು ತಿರುಗಿಸುವುದೆಂಬ ಕಾರಣದಿಂದ ಅವನು ಹೆಚ್ಚು ಭಿಕ್ಷೆಯನ್ನು ಬೇಡಬಾರದು'. (VI–೫೫).

'ಅಡುಗೆ ಮನೆಯಿಂದ ಹೊಗೆಯೇಳುವುದು ನಿಂತಾಗ, ಒನಕೆ ಸ್ತಬ್ಧವಾದಾಗ, ಒಲೆ ಆರಿದಾಗ ಜನ ತಮ್ಮ ಊಟ ಮುಗಿಸಿ ಪಾತ್ರೆಗಳಲ್ಲಿ ಉಳಿದ ಆಹಾರವನ್ನು ತೊಳೆದಿಟ್ಟ ನಂತರ ಸನ್ಯಾಸಿ ಭಿಕ್ಷೆಗೆ ಹೊರಡಬೇಕು'. (VI–೫೬).

'ಬೆಂಕಿಯಲ್ಲಿ ಬೇಯಿಸಿದ್ದನ್ನು ಅಥವಾ ತಾನೇ ತಾನಾಗಿ ಮಾಗಿದ್ದನ್ನು ಅವನು ಸೇವಿಸಬೇಕು. ಕಲ್ಲಿನಿಂದ ಜಜ್ಜಿ ತಿನ್ನಬಹುದು ಅಥವಾ ಹಲ್ಲಿನಿಂದ ಜಗಿದು ತಿನ್ನಬಹುದು.' (VI–೧೭).

'ತನ್ನ ಭಿಕ್ಷಾಪಾತ್ರೆಯನ್ನು ದಿನದ ಊಟದ ನಂತರ ತೊಳೆಯಬೇಕು ಅಥವಾ ತಿಂಗಳಿಗೆ ಅಥವಾ ಆರು ತಿಂಗಳಿಗೆ, ವರ್ಷಕ್ಕೆ ಸಾಕಾಗುವಷ್ಟು ಆಹಾರವನ್ನು ಸಂಗ್ರಹಿಸಿಡಬಹುದು'. (VI–೧೮)

'ತನ್ನ ಶಕ್ತ್ಯಾನುಸಾರವಾಗಿ ಸಂಗ್ರಹಿಸಿದ್ದನ್ನು ರಾತ್ರಿ ಅಥವಾ ಹಗಲು, ಒಂದು ಹೊತ್ತು ಮಾತ್ರ ಅಥವಾ ಒಂದು ದಿನ ಉಪವಾಸವಿದ್ದು ಎರಡನೆಯ ದಿನ ರಾತ್ರಿ ಅಥವಾ ಮೂರು ದಿನ ಉಪವಾಸವಿದ್ದು ನಾಲ್ಕನೆಯ ದಿನ ಊಟ ಮಾಡಬೇಕು'. (VI–೧೯)

ಚಾಂದ್ರಾಯಣ ವ್ರತದ ನಿಯಮದಂತೆ ಶುಕ್ಲ ಪಕ್ಷ ಹಾಗೂ ಕೃಷ್ಣಪಕ್ಷಗಳಲ್ಲಿ ಊಟ ಮಾಡಬೇಕು. ಪಕ್ಷಗಳ ಕೊನೆಯ ದಿನಗಳಂದು ಒಂದು ಹೊತ್ತು ಗಂಜಿಯನ್ನು ಸೇವಿಸಬೇಕು'. (VI–೨೦)

'ಹೂವು, ಗೆಡ್ಡೆಗೆಣಸುಗಳು ಅಥವಾ ತಾವಾಗಿ ಉದುರಿ ಬಿದ್ದ ಫಲಗಳನ್ನು ತಿಂದು, ವೈಖಾನಸ ಶಾಸ್ತ್ರಾನುಸಾರ ವಾಗಿ ಜೀವಿಸಬೇಕು'. (VI–೨೧).

'ನೆಲದ ಮೇಲೆ ಉರುಳಿ ಅಥವಾ ತುದಿಗಾಲ ಮೇಲೆ ನಿಂತು ಅಥವಾ ಧ್ಯಾನಸ್ಥನಾಗಿ ಅವನು ದಿನವನ್ನು ಕಳೆಯಬೇಕು; ಮೂರು ಹೊತ್ತು ಸ್ನಾನ ಮಾಡಬೇಕು.' (VI–೨೨).

'ಬೇಸಿಗೆಯಲ್ಲಿ ಪಂಚಾಗ್ನಿಯೆದುರು, ಮಳೆಗಾಲದಲ್ಲಿ ಆಕಾಶದಡಿ, ಚಳಿಗಾಲದಲ್ಲಿ ಒದ್ದೆಬಟ್ಟೆಯುಟ್ಟು ಅವನು ತನ್ನ ಬದುಕಿನ ಕಾಠಿಣ್ಯವನ್ನು ಹೆಚ್ಚಿಸಿಕೊಳ್ಳಬೇಕು'. (VI–೨೩).

'ಪ್ರಾತಃಕಾಲ, ಮಧ್ಯಾಹ್ನ ಹಾಗೂ ಸಂಜೆಗಳಲ್ಲಿ ಮಿಂದು ಪಿತೃಗಳಿಗೂ ದೇವತೆಗಳಿಗೂ ತರ್ಪಣ ಅರ್ಪಿಸಬೇಕು. ಉಗ್ರವಾದ ತಪಸ್ಸನ್ನಾಚರಿಸಿ ತನ್ನ ದೇಹವನ್ನು ದಂಡಿಸಬೇಕು'. (VI–೨೪).

'ಅವನು ಭಿಕ್ಷೆ ಸಿಗದಿದ್ದಾಗ ವಿಷಾದವನ್ನಾಗಲೀ, ಸಿಕ್ಕಾಗ ಸಂತೋಷವನ್ನಾಗಲೀ ಪಡಬಾರದು. ಬದುಕಲು ಎಷ್ಟು ಬೇಕೋ ಅಷ್ಟನ್ನು ಮಾತ್ರ ಸ್ವೀಕರಿಸಬೇಕು. ದಂಡಕಮಂಡಲಾದಿಗಳ ಬಗೆಗೂ ತಲೆಕೆಡಿಸಿಕೊಳ್ಳ ಬಾರದು'. (VI–೫೭).

'ಅವನಿಗೆ ಪೂಜೆ ಮಾಡಿ ಸತ್ಕರಿಸಿಕೊಟ್ಟ ಭಿಕ್ಷೆಯನ್ನೂ ಸಹ ತಿರಸ್ಕರಿಸಬೇಕು. ಇದರಿಂದ ಸನ್ಯಾಸಿಯ ಮನಸ್ಸಿನಲ್ಲಿಯೂ ಮೋಹ ಹುಟ್ಟಬಹುದಾದ್ದರಿಂದ ಹೀಗೆ ದೊರೆತ ಭಿಕ್ಷೆಯನ್ನು ಸ್ವೀಕರಿಸಬಾರದು'. (VI–೫೮).

'ಕಡಿಮೆ ಆಹಾರ ಹಾಗೂ ಏಕಾಂತದಲ್ಲಿರುವ ಮೂಲಕ ವಿಷಯಾಸಕ್ತಿಗೆಳೆಯುವ ಪಂಚೇಂದ್ರಿಯಗಳನ್ನು ಅವನು ನಿಗ್ರಹಿಸಬೇಕು'. (VI–೫೯).

'ಪಂಚೇಂದ್ರಿಯಗಳನ್ನು ನಿಗ್ರಹಿಸುವ ಮೂಲಕ, ಪ್ರೇಮ ದ್ವೇಷಗಳನ್ನು ಮೀರುವ ಮೂಲಕ ಹಾಗೂ ಅಹಿಂಸೆಯಿಂದ ಅವನು ಅಮರತ್ವ ಪಡೆಯಲು ಅರ್ಹನಾಗುವನು'. (VI–೬೦).

'ಸರ್ವೇಂದ್ರಿಯ ಭಾವಗಳನ್ನು ತ್ಯಜಿಸಿ ನಿಸ್ಪೃಹನಾದಾಗ, ಇಹಪರಗಳೆರಡರಲ್ಲೂ ಶಾಶ್ವತವಾದ ಸುಖವನ್ನು ಪಡೆಯುತ್ತಾನೆ'. (VI–೮೦)

'ಈ ರೀತಿಯಾಗಿ ಎಲ್ಲ ಬಂಧನಗಳಿಂದ ಮುಕ್ತನಾಗುವವನು ಬ್ರಹ್ಮನಲ್ಲಿ ಲೀನವಾಗುವನು'. (VI–೮೧).

'ಮೇಲೆ ಹೇಳಿದ ಎಲ್ಲ ಸಾಧನೆಗಳೂ ಧ್ಯಾನದಿಂದ ಮಾತ್ರ ದಕ್ಕುವಂಥವು; ಆತ್ಮಜ್ಞಾನವಿಲ್ಲದವನು ತಾನು ಆಚರಿಸುವ ವಿಧಿಗಳ ಪೂರ್ಣಫಲವನ್ನು ಪಡೆಯಲಾರನು'. (VI–೮೨).

'ಯಜ್ಞಯಾಗಗಳಿಗೆ ಸಂಬಂಧಿಸಿದ, ಆತ್ಮ ಹಾಗೂ ದೈವಜ್ಞಾನವನ್ನು ಕುರಿತ ವೇದಾಂತದ ಭಾಗಗಳನ್ನು ಅವನು ಸದಾ ಪಠಿಸಬೇಕು'. (VI–೮೩).

'ನಿಯಮಾನುಸಾರವಾಗಿ ಮೂರು ಪವಿತ್ರ ಅಗ್ನಿಗಳನ್ನು ತನ್ನಲ್ಲೇ ಇರಿಸಿಕೊಂಡ ಅವನು ಬೆಂಕಿಯಿಲ್ಲದೆ, ಮನೆಯಿಲ್ಲದೆ, ಕಂದಮೂಲ ಫಲಗಳನ್ನು ಸೇವಿಸುತ್ತಾ ಶಾಂತಚಿತ್ತದಿಂದಿರಬೇಕು'. (VI–೨೫).

'ಸಂತೋಷವನ್ನು ಪಡೆಯಲು ಯಾವ ಪ್ರಯತ್ನವನ್ನೂ ಮಾಡದೆ, ಸ್ತ್ರೀ ಸುಖತೊರೆದು ನೆಲದ ಮೇಲೆ ಮಲಗುತ್ತಾ, ವಾಸಸ್ಥಾನಕ್ಕಾಗಿ ಹಂಬಲಿಸದೆ, ಮರಗಳ ಬುಡದಲ್ಲಿ ವಾಸಮಾಡಬೇಕು'. (VI–೨೬).

'ಸನ್ಯಾಸಿಗಳಂತೆ ಬದುಕುವ ಬ್ರಾಹ್ಮಣರಿಂದ ಅಥವಾ ಕಾಡಿನಲ್ಲಿ ವಾಸಿಸುವ ಇತರ ದ್ವಿಜರ ಮನೆಗಳಿಂದ, ತಾನು ಬದುಕಲು ಅಗತ್ಯವಿರುವಷ್ಟು ಆಹಾರವನ್ನು ಮಾತ್ರ ಅವನು ಸ್ವೀಕರಿಸಬೇಕು'. (VI–೨೭).

'ಅಥವಾ, ಅರಣ್ಯವಾಸಿ ಸನ್ಯಾಸಿಯು ಗ್ರಾಮದಿಂದ ದೊನ್ನೆಯಲ್ಲಿ, ಬೊಗಸೆಯಲ್ಲಿ ಅಥವಾ ಒಡಕು ಮಣ್ಣಿನ ಪಾತ್ರೆಯಲ್ಲಿ ಭಿಕ್ಷೆ ಹಾಕಿಸಿಕೊಂಡು ಬಂದು ಎಂಟು ತುತ್ತುಗಳನ್ನು ಸೇವಿಸಬೇಕು'. (VI–೨೮).

'ಅರಣ್ಯ ವಾಸಿ ಬ್ರಾಹ್ಮಣನು ಇವೇ ಮುಂತಾದ ವಿಧಿಗಳನ್ನು ಕಾಡಿನಲ್ಲಿದ್ದು ನಿಯಮಬದ್ಧವಾಗಿ ಅನುಸರಿಸಬೇಕು. ಪರಮಾತ್ಮನಲ್ಲಿ ಐಕ್ಯವಾಗಲು ಉಪನಿಷತ್ತುಗಳ ಅಧ್ಯಯನವನ್ನೂ ಆತ್ಮಸಿದ್ಧಿಗಾಗಿ ಮಾಡಬೇಕು'. (VI–೨೯).

'ವೇದವೇ ಅಜ್ಞಾನಿಗಳಿಗೂ ಆಶ್ರಯ ಹಾಗೂ ವೇದ ಬಲ್ಲ ಜ್ಞಾನಿಗಳಿಗೂ ಆಶ್ರಯ; ಸ್ವರ್ಗವನ್ನೂ ಮೋಕ್ಷವನ್ನೂ ಬಯಸುವವರಿಗೆ ಅದೇ ಶ್ರೀರಕ್ಷೆ'. (VI–೮೪).

ಮೇಲೆ ಹೇಳಿದ ಕ್ರಿಯೆಗಳನ್ನೆಲ್ಲಾ ಹಂತಹಂತವಾಗಿ ನೆರವೇರಿಸಿದ ಸನ್ಯಾಸಿಯಾದ ದ್ವಿಜನು ಇಹದ ಪಾಪಗಳಿಂದ ಮುಕ್ತನಾಗಿ ಪರಬ್ರಹ್ಮವನ್ನು ಸೇರುವನು'. (VI–೮೫).

ವಾನಪ್ರಸ್ಥ ಹಾಗೂ ಸನ್ಯಾಸಾಶ್ರಮ ಹಾಗೂ ಗೃಹಸ್ಥಾಶ್ರಮ ಮತ್ತು ವಾನಪ್ರಸ್ಥಾಶ್ರಮಗಳ ನಡುವೆ ಹಲವು ಎದ್ದು ಕಾಣುವ ಹೋಲಿಕೆಗಳಿವೆ. ಒಂದು, ವಾನಪ್ರಸ್ಥ ಹಾಗೂ ಸನ್ಯಾಸಾಶ್ರಮವನ್ನು ಸ್ವೀಕರಿಸುವವನು ತನ್ನ ಪತ್ನಿಯನ್ನು ಹಾಗೂ ಆಸ್ತಿಯ ಮೇಲಿನ ಹಕ್ಕನ್ನು ತೊರೆಯುವುದಿಲ್ಲ. ಆದರೆ, ಸನ್ಯಾಸಿಯು ಎರಡನ್ನೂ ತೊರೆಯುವನು. ಎರಡು, ವಾನಪ್ರಸ್ಥನಿಗೆ ಕಾಡಿನಲ್ಲಿ ಕುಟೀರವಿರುವುದು. ಆದರೆ ಸನ್ಯಾಸಿಗೆ ಕಾಡಿನಲ್ಲಿ ನಿಶ್ಚಿತವಾದ ವಾಸಸ್ಥಳವಿರುವುದಿಲ್ಲ. ಮೂರು, ಸನ್ಯಾಸಿಗೆ ಶಾಸ್ತ್ರಗಳನ್ನು ವ್ಯಾಖ್ಯಾನಿಸಲು ಅವಕಾಶವಿಲ್ಲ. ಆದರೆ ವಾನಪ್ರಸ್ಥನಿಗೆ ಈ ನಿರ್ಬಂಧನೆಯಿಲ್ಲ. ಈ ವ್ಯತ್ಯಾಸಗಳನ್ನು ಬಿಟ್ಟರೆ ಉಳಿದಂತೆ ಈ ಇಬ್ಬರ ಜೀವನಕ್ರಮಗಳು ಒಂದೇ ಆಗಿರುತ್ತವೆ.

ಗೃಹಸ್ಥಾಶ್ರಮ ಹಾಗೂ ವಾನಪ್ರಸ್ಥಾಶ್ರಮಗಳು ಪರಸ್ಪರ ಹತ್ತಿರವಾಗಿವೆ. ಗೃಹಸ್ಥಾಶ್ರಮಿಯಂತೆಯೇ ವಾನಪ್ರಸ್ಥಿಯೂ ವಿವಾಹಿತನಾಗಿಯೇ ಇರುವನು; ಆಸ್ತಿಯ ಹಕ್ಕನ್ನು ಉಳಿಸಿಕೊಂಡಿರುವನು. ಗೃಹಸ್ಥಾಶ್ರಮಿಯಂತೆ ಅವನು ಜಗತ್ತನ್ನು ತೊರೆಯುವುದಿಲ್ಲ ಹಾಗೂ ವೇದಧರ್ಮವನ್ನು ಅನುಸರಿಸುವನು.

ಈ ಇಬ್ಬರ ನಡುವೆ ಮೂರು ವ್ಯತ್ಯಾಸಗಳು ಮಾತ್ರ ಕಾಣುತ್ತವೆ; ಒಂದು ವಾನಪ್ರಸ್ಥಿಯಂತೆ ಗೃಹಸ್ಥಾಶ್ರಮಿಯು ಆಹಾರ ಹಾಗೂ ಉಡುಪು ಇತ್ಯಾದಿಗಳಲ್ಲಿ ಕಠಿಣವಾದ ಶಿಸ್ತನ್ನು ಅನುಸರಿಸಬೇಕಾಗಿಲ್ಲ. ಎರಡು, ಗೃಹಸ್ಥಾಶ್ರಮಿಯು ಸಮಾಜದಲ್ಲಿದ್ದರೆ, ವಾನಪ್ರಸ್ಥಿಯು ಕಾಡಿನಲ್ಲಿ ವಾಸಿಸುವನು. ಮೂರು, ವಾನಪ್ರಸ್ಥಿಯು ವೇದಾಂತವನ್ನು ಅಭ್ಯಸಿಸುವ ಅವಕಾಶ ಪಡೆದಿದ್ದರೆ, ಗೃಹಸ್ಥನು ವೇದಗಳ ಅಧ್ಯಯನವನ್ನು ಮಾತ್ರ ಮಾಡಬಲ್ಲವನಾಗಿರುತ್ತಾನೆ. ಉಳಿದಂತೆ ಅವನ ಜೀವನಕ್ರಮಗಳು ಒಂದೇ ಆಗಿವೆ.

ಹೀಗೆ ಗೃಹಸ್ಥಾಶ್ರಮ ಹಾಗೂ ವಾನಪ್ರಸ್ಥಾಶ್ರಮ ಹಾಗೂ ವಾನಪ್ರಸ್ಥ ಹಾಗೂ ಸನ್ಯಾಸಾಶ್ರಮಗಳ ಹೋಲಿಕೆಯನ್ನು ನೋಡಿದರೆ ಗೃಹಸ್ಥಾಶ್ರಮ ಮತ್ತು ಸನ್ಯಾಸಾಶ್ರಮಗಳ ನಡುವೆ ವಾನಪ್ರಸ್ಥಾಶ್ರಮವನ್ನು ಮನು ಸೂಚಿಸಿದ್ದೇಕೆಂಬ ಪ್ರಶ್ನೆಗೆ ಉತ್ತರವಿಲ್ಲ. ಹಾಗೆ ನೋಡಿದರೆ ಬ್ರಹ್ಮಚರ್ಯ, ಗೃಹಸ್ಥಾಶ್ರಮ ಹಾಗೂ ಸನ್ಯಾಸಾಶ್ರಮಗಳೆಂಬ ಮೂರು ಆಶ್ರಮಗಳಷ್ಟೇ ಇರಬೇಕಿತ್ತು. ಶಂಕರಾಚಾರ್ಯರು ಪೂರ್ವಮೀಮಾಂಸೆಯ ಪ್ರಶ್ನೆಗಳಿಗೆ ಉತ್ತರವಾಗಿ ತಮ್ಮ ಬ್ರಹ್ಮಸೂತ್ರದಲ್ಲಿ ಸನ್ಯಾಸಾಶ್ರಮವನ್ನು ಸಮರ್ಥಿಸಿಕೊಳ್ಳುವಾಗ ಮೂರು ಆಶ್ರಮಗಳನ್ನು ಕುರಿತು ಮಾತಾಡುವುದನ್ನು ನೋಡಿದರೆ ಶಂಕರರ ಅಭಿಪ್ರಾಯವೂ ಇದೇ ಆಗಿತ್ತೆಂಬುದು ತಿಳಿಯುತ್ತದೆ.

ಹಾಗಾದರೆ ವಾನಪ್ರಸ್ಥಾಶ್ರಮದ ಕಲ್ಪನೆ ಮನುವಿಗೆ ಹೇಗೆ ಹುಟ್ಟಿತು? ಆ ಕಲ್ಪನೆಗೆ ಇದ್ದ ಆಧಾರಗಳೇನು? ಈಗಾಗಲೇ ನಾವು ನೋಡಿರುವಂತೆ ಬ್ರಹ್ಮಚರ್ಯದ ನಂತರ ಗೃಹಸ್ಥಾಶ್ರಮವೇನೂ ಕಡ್ಡಾಯವಾಗಿರಲಿಲ್ಲ. ಬ್ರಹ್ಮಚಾರಿಯೊಬ್ಬ ಗೃಹಸ್ಥಾಶ್ರಮವನ್ನು ಸ್ವೀಕರಿಸದೆ ಸನ್ಯಾಸಿಯಾಗಬಹುದಿತ್ತು. ಅಲ್ಲದೇ, ಬ್ರಹ್ಮಚಾರಿಯಾಗಿಯೇ ಉಳಿಯ ಬಯಸುವವನೊಬ್ಬ 'ಅರಣಮಾನಸ'[೧] ನಾಗಿ ಉಳಿಯಲು ಅವಕಾಶವಿತ್ತು. ಇಂಥ ಬ್ರಹ್ಮಚಾರಿಗಳು ತಮ್ಮ ಇಡಿ ಬದುಕನ್ನು ಅಧ್ಯಯನದಲ್ಲಿಯೇ ಕಳೆಯಬಹುದಿತ್ತು. ಈ ಅರಣರು ಊರಿನಿಂದ ದೂರವಾದ ಅರಣ್ಯದಲ್ಲಿ ಬದುಕುತ್ತಿದ್ದರು. ಅವರು ರಚಿಸಿದ ಗ್ರಂಥಗಳೇ ಅರಣ್ಯಕಗಳು. ಮನುವಿನ ವಾನಪ್ರಸ್ಥಾಶ್ರಮ ಈ ಅರಣಕ್ಕೆ ಎರಡು ತಿದ್ದುಪಡಿಗಳನ್ನು ಮಾಡಿದಂತಿದೆ: ೧. ಅರಣನೊಬ್ಬ ಮದುವೆಯಾಗುವುದನ್ನು ಕಡ್ಡಾಯಗೊಳಿಸಿದ್ದು, ೨. ಅರಣ ಹಂತವನ್ನು ಎರಡನೆಯ ಹಂತಕ್ಕೆ ಬದಲಾಗಿ ಮೂರನೆಯ ಹಂತವನ್ನಾಗಿ ಮಾಡಿದ್ದು. ಮನುವಿನ ಈ ಯೋಜನೆಯ ಮುಖ್ಯ ಉದ್ದೇಶವೆಂದರೆ ವಿವಾಹವನ್ನು ಕಡ್ಡಾಯಗೊಳಿಸುವುದು. ಬ್ರಹ್ಮಚಾರಿಯೊಬ್ಬ ಸನ್ಯಾಸಿಯಾಗಬೇಕಾದರೆ ವಾನಪ್ರಸ್ಥಾಶ್ರಮಿಯಾಗುವುದು ಈ ಕಾರಣದಿಂದಾಗಿ ಅನಿವಾರ್ಯವಾಯಿತು. ಹೀಗಾಗಿ ವಾನಪ್ರಸ್ಥಾಶ್ರಮಿಯಾಗ ಬಯಸುವವನು ಗೃಹಸ್ಥಾಶ್ರಮಿಯಾಗುವುದೂ ಅನಿವಾರ್ಯವಾಯಿತು. ಮನು ಹೀಗೆ ಮಾಡಿದ್ದೇಕೆ?

* * * *

---

೧. ರಾಧಾ ಕುಮುದ್ ಮುಖರ್ಜಿ: 'ಏನ್ಷಿಯಂಟ್ ಇಂಡಿಯನ್ ಎಜುಕೇಷನ್', ಪು.೬

# ಒಗಟು – ೧೮

## ಮನುವಿನ ಹುಚ್ಚುತನ ಅಥವಾ ಮಿಶ್ರಜಾತಿಗಳ ಉಗಮದ ಬಗ್ಗೆ ಬ್ರಾಹ್ಮಣರ ವಿವರಣೆ

ಮನುವು ಚರ್ಚೆಯ ಉದ್ದೇಶಕ್ಕಾಗಿ ವಿವಿಧ ಜಾತಿಗಳನ್ನು ೧. ಆರ್ಯ ಜಾತಿಗಳು, ೨. ಅನಾರ್ಯಜಾತಿಗಳು, ೩. ವ್ರಾತ್ಯ ಜಾತಿಗಳು. ೪. ಪತಿತ ಜಾತಿಗಳು ಮತ್ತು ೫. ಸಂಕರ ಜಾತಿಗಳು ಎಂಬ ನಿರ್ದಿಷ್ಟ ಶಿರೋನಾಮೆಯಡಿ ವಿಂಗಡಿಸಿದ್ದಾನೆಂಬುದನ್ನು ಮನುಸ್ಮೃತಿ ಓದುಗನು ಕಾಣಬಹುದಾಗಿದೆ.

ಆರ್ಯ ಜಾತಿಗಳೆಂದರೆ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಎಂಬ ನಾಲ್ಕು ವರ್ಣಗಳೆಂಬುದು ಮನುವಿನ ಕಲ್ಪನೆ. ಅಂದರೆ, ಚಾತುರ್ವರ್ಣವು ಆರ್ಯ ಮತ ಸಿದ್ಧಾಂತದ ತಿರುಳು ಎಂಬುದು ಅವನ ಎಣಿಕೆ. ಚಾತುರ್ವರ್ಣ ಪದ್ಧತಿಯನ್ನು ಒಪ್ಪದ ಕೋಮುಗಳನ್ನು ಅನಾರ್ಯ ಜಾತಿಗಳೆಂದು[೧] ಪರಿಗಣಿಸಿರುವ ಮನುವು ದಸ್ಯು ಎಂಬ ಜಾತಿಯನ್ನು ಹೆಸರಿಸಿ ಅನಾರ್ಯರೆಂದು ಪರಿಗಣಿಸಿರುವ ಜಾತಿಗಳಲ್ಲಿ ಇದೂ ಒಂದು ಎಂದು ಉದಾಹರಿಸಿದ್ದಾನೆ. ವ್ರಾತ್ಯರೆಂದರೆ ಮೊದಲಿಗೆ ವರ್ಣಾಶ್ರಮ ಧರ್ಮದಲ್ಲಿ ಮನುವು ವ್ರಾತ್ಯರ ಪಟ್ಟಿಯಲ್ಲಿ ಈ ಕೆಳಗಿನ ಜಾತಿಗಳನ್ನು ಸೇರಿಸಿದ್ದಾನೆ.

| **ವ್ರಾತ್ಯ ಬ್ರಾಹ್ಮಣರು** | **ವ್ರಾತ್ಯ ಕ್ಷತ್ರಿಯರು** | **ವ್ರಾತ್ಯ ವೈಶ್ಯರು** |
|---|---|---|
| ೧. ಭೃಗಕಂಟಕ | ೧. ಝುಲ್ಲ | ೧. ಸುಧನ್ವನ |
| ೨. ಆವಂತ್ಯ | ೨. ಮಲ್ಲ | ೨. ಆಚಾರ್ಯ |
| ೩. ವಾತಧಾನ | ೩. ಲಿಚ್ಛಾವೀ | ೩. ಕರುಷ |
| ೪. ಪುಷ್ಪದ | ೪. ನಟ | ೪. ವಿಜನ್ಮನ್ |
| ೫. ಶೈಖ | ೫. ಕರಣ | ೫. ಮೈತ್ರ |
| | ೬. ಖಾಸ | ೬. ಸಾತ್ವತ |
| | ೭. ದ್ರಾವಿಡ | |

---

*ಇದು 'ಮಿಶ್ರಜಾತಿಗಳ ಉಗಮ'ದ ಮೇಲಿರುವ ಸುಮಾರು ೨೦ ಪುಟಗಳ ಕೈಬರವಣಿಗೆ. ಬೆರಳಚ್ಚಿನ ಮೂಲ ಕೃತಿಯ ಮಧ್ಯೆ ಮಧ್ಯೆ ಕೆಲವು ಪುಟಗಳು ಗ್ರಂಥಕರ್ತನಿಂದ ಸೇರಿಸಲ್ಪಟ್ಟಿರುವುದಲ್ಲದೆ, ಅನೇಕ ತಿದ್ದುಪಡಿಗಳನ್ನು ಈ ಪುಟಗಳಲ್ಲಿ ಅಂಟಿಸುವ ಮೂಲಕ ಮೂಲ ಪಠ್ಯವನ್ನು ಮಾರ್ಪಡಿಸಲಾಗಿದೆ. – ಸಂ.*

---

೧. ಮನು X, ೪೫ ಈ ಶ್ಲೋಕ ಎರಡು ಕಾರಣಗಳಿಂದಾಗಿ ಪ್ರಮುಖವಾದುದು. ಮೊದಲನೆಯದಾಗಿ ಇದು, ಶೂದ್ರನು ದಸ್ಯುವಿಗಿಂತ ವಿಭಿನ್ನ ಎಂದು ತೋರಿಸುತ್ತದೆ. ಎರಡನೆಯದಾಗಿ ಇದು ಶೂದ್ರನನ್ನು ಆರ್ಯನೆಂದು ತೋರಿಸಿದೆ.

ಮನುವು ಪತಿತ ಜಾತಿಗಳ ಪಟ್ಟಿಯಲ್ಲಿ ಆರ್ಯರ ಸಂಸ್ಕಾರ ಮತ್ತು ಆಚಾರ ವಿಧಿಗಳನ್ನು ಬಿಟ್ಟು ಬ್ರಾಹ್ಮನ ವೈದಿಕರ ಸೇವೆಯನ್ನು ಕಳೆದುಕೊಂಡು ಶೂದ್ರರಾದ ಕ್ಷತ್ರಿಯರನ್ನು ಸೇರಿಸಿದ್ದಾನೆ.

ಅವು ಈ ಕೆಳಗೆ ಪಟ್ಟಿ ಮಾಡಲ್ಪಟ್ಟಿವೆ;

೧. ಪೌಂಡ್ರರು
೨. ಚೋಳರು
೩. ದ್ರಾವಿಡರು
೪. ಕಾಂಭೋಜರು
೫. ಯವನರು
೬. ಶಕರು
೭. ಪಾರದರು
೮. ಪಾಹ್ಲವರು
೯. ಚೀನರು
೧೦. ಕಿರಾತರು
೧೧. ದರದರು.....

ಸಂಕರಜಾತಿಯವರೆಂದರೆ, ಒಂದೇ ಜಾತಿಗೆ ಸೇರದ ಮಾತಾಪಿತೃಗಳಿಗೆ ಜನಿಸಿದ ಜನರೆಂಬುದು ಮನುವಿನ ಅರ್ಥ. ಈ ಮಿಶ್ರಜಾತಿಗಳನ್ನು ಆತ ವಿವಿಧ ಗುಂಪುಗಳಾಗಿ ಈ ರೀತಿ ವಿಂಗಡಿಸಿದ್ದಾನೆ. ೧. ಬೇರೆ ಬೇರೆ ಆರ್ಯವರ್ಗದ ಜಾತಿಗಳ ಪೀಳಿಗೆಯನ್ನು ಅನುಲೋಮ ಮತ್ತು ಪ್ರತಿಲೋಮ ಎಂಬ ಎರಡು ಒಳ ಪಂಗಡಗಳಾಗಿ ವಿಂಗಡಿಸಿದ್ದಾನೆ. ೨. ಅನಾರ್ಯ ಮತ್ತು ಆರ್ಯರ ಅನುಲೋಮ ಜಾತಿಗಳ ಪೀಳಿಗೆ ಮತ್ತು ೩. ಅನಾರ್ಯ ಮತ್ತು ಆರ್ಯರ ಅನುಲೋಮ, ಪ್ರತಿಲೋಮ ಜಾತಿಗಳ ಪೀಳಿಗೆ, ಮನುವು ಮಿಶ್ರಜಾತಿಗಳೆಂಬ ಶಿರೋನಾಮೆಯಡಿ ಸೇರಿಸಿರುವ ಜಾತಿಗಳು ಇವೆಲ್ಲವುಗಳನ್ನು ಬೇರೆ ಬೇರೆ ವರ್ಗಗಳಾಗಿ ಈ ಕೆಳಗೆ ನಮೂದಿಸಲಾಗಿದೆ.

೧. ಮಿಶ್ರ ಆರ್ಯವರ್ಗದ ಜಾತಿಗಳ ಪೀಳಿಗೆ

| **ತಂದೆ** | **ತಾಯಿ** | **ಪೀಳಿಗೆಯ ಹೆಸರು** | **ಅನುಲೋಮ ಅಥವಾ ಪ್ರತಿಲೋಮ** |
|---|---|---|---|
| ಬ್ರಾಹ್ಮಣ | ಕ್ಷತ್ರಿಯ | ? | |
| ಬ್ರಾಹ್ಮಣ | ವೈಶ್ಯ | ಅಂಬಷ್ಟ | ಅನುಲೋಮ |
| | | ನಿಷಾದ | |
| ಬ್ರಾಹ್ಮಣ | ಶೂದ್ರ | (ಪರಾಸವ) | ಅನುಲೋಮ |
| ಕ್ಷತ್ರಿಯ | ಬ್ರಾಹ್ಮಣ | ಸೂತ | ಪ್ರತಿಲೋಮ |
| ಕ್ಷತ್ರಿಯ | ವೈಶ್ಯ | ? | |
| ಕ್ಷತ್ರಿಯ | ಶೂದ್ರ | ಉಗ್ರ | ಅನುಲೋಮ |

| | | | |
|---|---|---|---|
| ವೈಶ್ಯ | ಬ್ರಾಹ್ಮಣ | ವೈದೇಹಕ | ಪ್ರತಿಲೋಮ |
| ವೈಶ್ಯ | ಕ್ಷತ್ರಿಯ | ಮಗಧ | ಪ್ರತಿಲೋಮ |
| ವೈಶ್ಯ | ಶೂದ್ರ | ಕರಣ | ಅನುಲೋಮ |
| ಶೂದ್ರ | ಬ್ರಾಹ್ಮಣ | ಚಂಡಾಲ | ಪ್ರತಿಲೋಮ |
| ಶೂದ್ರ | ಕ್ಷತ್ರಿಯ | ಕ್ಷತ್ರಿ | ಪ್ರತಿಲೋಮ |
| ಶೂದ್ರ | ವೈಶ್ಯ | ಆಯೋಗವ | ಪ್ರತಿಲೋಮ |

## ೨. ಅನುಲೋಮ ಮತ್ತು ಪ್ರತಿಲೋಮ ಜಾತಿಗಳೊಡನೆ ಆರ್ಯವರ್ಗ ಜಾತಿಗಳ ಪೀಳಿಗೆ

| ತಂದೆ | ತಾಯಿ | ಪೀಳಿಗೆ |
|---|---|---|
| ಬ್ರಾಹ್ಮಣ | ಉಗ್ರ | ಅವ್ರಿತ |
| ಬ್ರಾಹ್ಮಣ | ಅಂಬಷ್ಟ | ಅಭಿರ |
| ಬ್ರಾಹ್ಮಣ | ಅಭಿರ | ಧಿಗ್ವನ |
| ಶೂದ್ರ | ನಿಷಾದ | ಕುಕುಟಕ |

## ೩. ಅನುಲೋಮ ಮತ್ತು ಪ್ರತಿಲೋಮ ಜಾತಿಗಳ ನಡುವಿನ ಮಿಶ್ರವಿವಾಹಗಳ ಸಂತತಿ

| | ತಂದೆ | ತಾಯಿ | ಸಂತತಿ |
|---|---|---|---|
| ೧. | ವೈದೇಹ | ಆಯೋಗವ | ಮೈತ್ರೇಯಕ |
| ೨. | ನಿಷಾದ | ಆಯೋಗವ | ಮಾರ್ಗವ (ದಾಸ)<br>ಕೈವರ್ತ |
| ೩. | ನಿಷಾದ | ವೈದೇಹ | ಕರವರ |
| ೪. | ವೈದೇಹಕ | ಅಂಬಷ್ಟ | ವೇಣ |
| ೫. | ವೈದೇಹಕ | ಕರವರ | ಆಂಧ್ರ |
| ೬. | ವೈದೇಹಕ | ನಿಷಾದ | ಮೇದ |
| ೭. | ಚಂಡಾಲ | ವೈದೇಹ | ಪಾಂಡುಸೋಪಕ |
| ೮. | ನಿಷಾದ | ವೈದೇಹ | ಅಹಿಂಡಕ |
| ೯. | ಚಂಡಾಲ | ಪುಕ್ಕಸ | ಸೋಪಕ |
| ೧೦. | ಚಂಡಾಲ | ನಿಷಾದ | ಅಂತ್ಯವಾಸಿನ್ |
| ೧೧. | ಕ್ಷತ್ರರಿ | ಉಗ್ರ | ಶ್ವಪಚ |

ಮನುವಿನ ಸಂಕರ (ಮಿಶ್ರ) ಜಾತಿಗಳ ಪಟ್ಟಿಗೆ ಆತನ ಉತ್ತರಾಧಿಕಾರಿಗಳಿಂದ ಮತ್ತೆ ಕೆಲವು ಸೇರಿಸಲ್ಪಟ್ಟಿವೆ. ಔಷಾನಸ ಸ್ಮೃತಿ, ಬೌಧಾಯನ ಸ್ಮೃತಿ, ವಾಸಿಷ್ಠ ಸ್ಮೃತಿ, ಯಾಜ್ಞವಲ್ಕ್ಯ ಸ್ಮೃತಿ ಮತ್ತು ಸೂತ ಸಂಹಿತೆ ಇವುಗಳನ್ನು ರಚಿಸಿದವರು ಈ ಗುಂಪಿಗೆ ಸೇರಿರುತ್ತಾರೆ.

ಈ ರೀತಿಯ ಸೇರ್ಪಡೆಗಳಲ್ಲೂ ನಾಲ್ಕು ಔಷಾನಸ ಸ್ಮೃತಿಯಿಂದ ಸೇರಿಸಲ್ಪಟ್ಟವುಗಳು. ಅವುಗಳನ್ನು ಕೆಳಗೆ ನಮೂದಿಸಲಾಗಿದೆ.

| **ಮಿಶ್ರಜಾತಿಯ ಹೆಸರು** | **ತಂದೆಯ ಜಾತಿ** | **ತಾಯಿಯ ಜಾತಿ** |
|---|---|---|
| ೧. ಪುಲಕ್ಸ | ಶೂದ್ರ | ಕ್ಷತ್ರಿಯ |
| ೨. ಏಕಜ್ | ಪುಲಕ್ಸ | ವೈಶ್ಯ |
| ೩. ಚರ್ಮಕಾರಕ | ಆಯೋಗವ | ಬ್ರಾಹ್ಮಣ |
| ೪. ವೇಣುಕ | ಸೂತ | ಬ್ರಾಹ್ಮಣ |

ಈ ಕೆಳಗಿನ ನಾಲ್ಕು ಬೌಧಾಯನ ಸ್ಮೃತಿಯಿಂದ ಸೇರ್ಪಡೆಯಾದವುಗಳು.

| **ಮಿಶ್ರಜಾತಿಯ ಹೆಸರು** | **ತಂದೆಯ ಜಾತಿ** | **ತಾಯಿಯ ಜಾತಿ** |
|---|---|---|
| ೧. ಕ್ಷತ್ರಿಯ | ಕ್ಷತ್ರಿಯ | ವೈಶ್ಯ |
| ೨. ಬ್ರಾಹ್ಮಣ | ಬ್ರಾಹ್ಮಣ | ಕ್ಷತ್ರಿಯ |
| ೩. ವೈನ | ವೈದೇಹಕ | ಅಂಬಷ್ಟ |
| ೪. ಶ್ವಪಚ | ಉಗ್ರ | ಕ್ಷತ್ರಿಯ |

ಮನುವಿನ ಪಟ್ಟಿಗೆ ವಾಸಿಷ್ಠ ಸ್ಮೃತಿ ಇನ್ನೊಂದನ್ನು ಸೇರಿಸಿದೆ. ಅದಾವುದೆಂದರೆ:

| **ಮಿಶ್ರಜಾತಿಯ ಹೆಸರು** | **ತಂದೆಯ ಜಾತಿ** | **ತಾಯಿಯ ಜಾತಿ** |
|---|---|---|
| ವೈನ | ಶೂದ್ರ | ಕ್ಷತ್ರಿಯ |

ಯಾಜ್ಞವಲ್ಕ್ಯ ಸ್ಮೃತಿ ಇನ್ನೆರಡು ಹೊಸ ಜಾತಿಗಳನ್ನು ಮನುವಿನ ಮಿಶ್ರ ಜಾತಿಗಳ ಪಟ್ಟಿಗೆ ಸೇರಿಸುತ್ತದೆ.

| ಮಿಶ್ರಜಾತಿಯ ಹೆಸರು | ತಂದೆಯ ಜಾತಿ | ತಾಯಿಯ ಜಾತಿ |
|---|---|---|
| ೧. ಮೂರ್ಧಾವಶಿಕ | ಬ್ರಾಹ್ಮಣ | ಕ್ಷತ್ರಿಯ |
| ೨. ಮಹಿಷ್ಯ | ಕ್ಷತ್ರಿಯ | ವೈಶ್ಯ |

ಸೂತ ಸಂಹಿತೆಯು ಸೇರಿಸಿದ ಹೆಸರುಗಳು ವ್ಯಾಪಕವಾಗಿವೆ. ಅವುಗಳ ಸಂಖ್ಯೆ ಅರವತ್ತೊಮ್ರು.

| ಮಿಶ್ರಜಾತಿಯ ಹೆಸರು | ತಂದೆಯ ಜಾತಿ | ತಾಯಿಯ ಜಾತಿ |
|---|---|---|
| ೧. ಅಂಬಷ್ಠೇಯ | ಕ್ಷತ್ರಿಯ | ವೈಶ್ಯ |
| ೨. ಊರ್ಧವನಪಿತ | ಬ್ರಾಹ್ಮಣ | ವೈಶ್ಯ |
| ೩. ಕಾತ್ಕರ | ವೈಶ್ಯ | ಶೂದ್ರ |
| ೪. ಕುಂಭ್ಕರ | ಬ್ರಾಹ್ಮಣ | ವೈಶ್ಯ |
| ೫. ಕುಂದ | ಬ್ರಾಹ್ಮಣ | ವಿವಾಹಿತ ಬ್ರಾಹ್ಮಣ |
| ೬. ಗೋಲಕ | ಬ್ರಾಹ್ಮಣ | ಬ್ರಾಹ್ಮಣ ವಿಧವೆ |
| ೭. ಚಕ್ರಿ | ಶೂದ್ರ | ವೈಶ್ಯ |
| ೮. ದೌಷ್ಯಂತ | ಕ್ಷತ್ರಿಯ | ಶೂದ್ರ |
| ೯. ದೌಷ್ಯಂತೀ | ಕ್ಷತ್ರಿಯ | ಶೂದ್ರ |
| ೧೦. ಪಟ್ಟನ ಶಾಲಿ | ಶೂದ್ರ | ವೈಶ್ಯ |
| ೧೧. ಪುಲಿಂದ | ವೈಶ್ಯ | ಕ್ಷತ್ರಿಯ |
| ೧೨. ಬಾಹ್ಯದಾಸ | ಶೂದ್ರ | ಬ್ರಾಹ್ಮಣ |
| ೧೩. ಭೋಜ | ವೈಶ್ಯ | ಕ್ಷತ್ರಿಯ |
| ೧೪. ಮಹಿಕಾರ | ವೈಶ್ಯ | ವೈಶ್ಯ |
| ೧೫. ಮಾನವಿಕ | ಶೂದ್ರ | ಶೂದ್ರ |
| ೧೬. ಮ್ಲೇಚ್ಛ | ವೈಶ್ಯ | ಕ್ಷತ್ರಿಯ |
| ೧೭. ಶಾಲಿಕ | ವೈಶ್ಯ | ಕ್ಷತ್ರಿಯ |
| ೧೮. ಶುಂಡಿಕ | ಬ್ರಾಹ್ಮಣ | ಶೂದ್ರ |
| ೧೯. ಶುಲಿಕ | ಕ್ಷತ್ರಿಯ | ಶೂದ್ರ |
| ೨೦. ಸಪರ್ಣ | ಬ್ರಾಹ್ಮಣ | ಕ್ಷತ್ರಿಯ |
| ೨೧. ಆಗ್ನೇಯ ನರ್ತಕ | ಅಂಬಷ್ಟ | ಅಂಬಷ್ಟ |
| ೨೨. ಅಪಿತರ | ಬ್ರಾಹ್ಮಣ | ದೌಷಂತೀ |
| ೨೩. ಆಶ್ರಮಕ | ದಂತಕೇವಲ | ಶೂದ್ರ |

| | | |
|---|---|---|
| ೨೪. ಉದಬಂಧ | ಸನಕ | ಕ್ಷತ್ರಿಯ |
| ೨೫. ಕರಣ | ನಟ | ಕ್ಷತ್ರಿಯ |
| ೨೬. ಕರ್ಮ | ಕರಣ | ಕ್ಷತ್ರಿಯ |
| ೨೭. ಕರ್ಮಕಾರ | ರೇಣುಕ | ಕ್ಷತ್ರಿಯ |
| ೨೮. ಕರ್ಮಾರ | ಮಹಿಷ್ಯ | ಕರಣ |
| ೨೯. ಕುಕ್ಕುಂದ | ಮಗಧ | ಶೂದ್ರ |
| ೩೦. ಗುಹಕ | ಶ್ವಪಚ | ಬ್ರಾಹ್ಮಣ |
| ೩೧. ಚರ್ಮೋಪಜೀವನ | ವೈದೇಹಿಕ | ಬ್ರಾಹ್ಮಣ |
| ೩೨. ಚರ್ಮಕಾರಕ | ಆಯೋಗವ | ಬ್ರಾಹ್ಮಣಿ |
| ೩೩. ಚರ್ಮಜೀವಿ | ನಿಷಾದ | ಕರುಷಿ |
| ೩೪. ತಕ್ಷ | ಮಹಿಷ್ಯ | ಕರಣ |
| ೩೫. ತಕ್ಷವೃತಿ | ಉಗ್ರ | ಬ್ರಾಹ್ಮಣ |
| ೩೬. ದಂತಕವೇಲಕ | ಚಂಡಾಲ | ವೈಶ್ಯ |
| ೩೭. ದಸ್ಯು | ನಿಷಾದ | ಆಯೋಗವ |
| ೩೮. ದ್ರುಮಿಳ | ನಿಷಾದ | ಕ್ಷತ್ರಿಯ |
| ೩೯. ನಟ | ಪಿಚ್ಚಲ | ಕ್ಷತ್ರಿಯ |
| ೪೦. ನಾಪಿತ | ನಿಷಾದ | ಕ್ಷತ್ರಿಯ |
| ೪೧. ನಿಲಾದಿವರ್ಣವಿಕ್ರಿತ | ಆಯೋಗವ | ಚಿರ್ಕಾರಿ |
| ೪೨. ಪಿಚ್ಚಲ | ಮಲ್ಲ | ಕ್ಷತ್ರಿಯ |
| ೪೩. ಪಿಂಗಳ | ಬ್ರಾಹ್ಮಣ | ಆಯೋಗವ |
| ೪೪. ಭಾಗಲಬ್ಧ | ದೌಷ್ಯಂತ | ಬ್ರಾಹ್ಮಣಿ |
| ೪೫. ಭರೂಷ | ಸುಧನ್ವ | ವೈಶ್ಯ |
| ೪೬. ಭೈರವ | ನಿಷಾಧ | ಶೂದ್ರ |
| ೪೭. ಮಾತಂಗ | ವಿಜನ್ಮ | ವೈಶ್ಯ |
| ೪೮. ಮಧುಕ | ವೈದೇಹಿಕ | ಆಯೋಗವ |
| ೪೯. ಮಟಕರ | ದಸ್ಯು | ವೈಶ್ಯ |
| ೫೦. ಮೈತ್ರ | ವಿಜನ್ಮ | ವೈಶ್ಯ |
| ೫೧. ರಜಕ | ವೈದೇಹ | ಬ್ರಾಹ್ಮಣ |
| ೫೨. ರಥಕರ | ಮಹಿಷ್ಯ | ಕರಣ |
| ೫೩. ರೇಣುಕ | ನಾಪಿತ | ಬ್ರಾಹ್ಮಣ |
| ೫೪. ಲೋಹಕಾರ | ಮಹಿಷ್ಯ | ಬ್ರಾಹ್ಮಣ |
| ೫೫. ವರ್ಧಕಿ | ಮಹಿಷ್ಯ | ಬ್ರಾಹ್ಮಣ |

| | | |
|---|---|---|
| ೫೬. ವರ್ಯ | ಸುಧನ್ವ | ವೈಶ್ಯ |
| ೫೭. ವಿಜನ್ಮ | ಭರೂಷ | ವೈಶ್ಯ |
| ೫೮. ಶಿಲ್ಪ | ಮಹಿಷ್ಯ | ಕರಣ |
| ೫೯. ಶ್ವಪಚ | ಚಂಡಾಲ | ಬ್ರಾಹ್ಮಣಿ |
| ೬೦. ಸನಕ | ಮಗಧ | ಕ್ಷತ್ರಿಯ |
| ೬೧. ಸಮುದ್ರ | ತಕ್ಷವ್ರತಿ | ವೈಶ್ಯ |
| ೬೨. ಸತ್ವತ | ವಿಜನ್ಮ | ವೈಶ್ಯ |
| ೬೩. ಸುನಿಷಾದ | ನಿಷಾದ | ವೈಶ್ಯ |

ಐದು ಬಗೆಯ ಜಾತಿಗಳಲ್ಲಿ ಮೊದಲ ನಾಲ್ಕರ ಬಗ್ಗೆ, ಮನುವು ಕೊಟ್ಟಿರುವ ವಿವರಣೆಯನ್ನು ಸುಲಭವಾಗಿ ಅರ್ಥಮಾಡಿಕೊಳ್ಳಬಹುದು. ಆದರೆ ಐದನೆಯ ವರ್ಗವಾದ ಸಂಕರ (ಮಿಶ್ರ)ಜಾತಿಯನ್ನು ಆತ ನಿರೂಪಿಸಿರುವ ರೀತಿಯ ಬಗ್ಗೆ ಅದೇ ಅಭಿಪ್ರಾಯ ಹೊಂದಲಾಗದು. ಇಲ್ಲಿ ಮನಸ್ಸನ್ನು ಕಲಕುವ ಅನೇಕ ಪ್ರಶ್ನೆಗಳಿವೆ. ಮೊದಲನೆಯದಾಗಿ ಮನುವಿನ ಮಿಶ್ರಜಾತಿಗಳ ಪಟ್ಟಿ ಕಾಟಾಚಾರದ ಪಟ್ಟಿ. ಅದು ಸಂಕರ ಜಾತಿಯಲ್ಲಿರಬಹುದಾದ ಎಲ್ಲವನ್ನೂ ಹೇಳುವ ಪಟ್ಟಿಯಲ್ಲ.

ಆರ್ಯವರ್ಗದ ಜಾತಿಗಳು ಮತ್ತು ಅನುಲೋಮ – ಪ್ರತಿಲೋಮ ಜಾತಿಗಳ ಮಿಶ್ರಣದಿಂದ ಉದಯಿಸಿದ ಮಿಶ್ರಜಾತಿಗಳನ್ನು ಕುರಿತು ಚರ್ಚಿಸುವಾಗ ಮನುವು ಪ್ರತಿ ನಾಲ್ಕು ಆರ್ಯವರ್ಗದ ಜಾತಿಗಳ ಪೀಳಿಗೆಯ ಜಾತಿಗಳ ಹೆಸರುಗಳನ್ನೂ ಪ್ರತಿ ೧೨ ಅನುಲೋಮ – ಪ್ರತಿಲೋಮ ಜಾತಿಗಳೊಡನೆ ನಮೂದಿಸಬೇಕಿತ್ತು. ಅವನು ಹಾಗೆ ಮಾಡಿದ್ದರೆ, ಈಗ ನಮ್ಮಲ್ಲಿ ೪೮ ಜಾತಿಗಳು ಲಭ್ಯವಿರುತ್ತಿದ್ದವು; ವಾಸ್ತವವಾಗಿ ಆತ ಈ ವರ್ಗದ ನಾಲ್ಕು ಮಿಶ್ರಜಾತಿಯ ಹೆಸರುಗಳನ್ನು ಮಾತ್ರ ಹೇಳಿದ್ದಾನೆ.

ಅನುಲೋಮ – ಪ್ರತಿಲೋಮ ಜಾತಿಗಳ ಮಿಶ್ರ ವಿವಾಹದ ಪೀಳಿಗೆಯ ಬಗ್ಗೆ ಚರ್ಚಿಸುವಾಗ, ಒಂದು ಪಕ್ಷ ನಮಗೆ ಅವುಗಳಲ್ಲಿ ೧೨ ದೊರೆತಿವೆ. ಅಂದುಕೊಂಡರೆ ಇವುಗಳಿಂದ ಉಂಟಾಗಬಹುದಾದ ೧೪೪ ಜಾತಿಗಳ ಹೆಸರುಗಳನ್ನು ಮಾತ್ರ ಕೊಡಲೇಬೇಕಿತ್ತು. ನಿಜವಾಗಿಯೂ ಮನುವು ಕೊಟ್ಟಿರುವುದು ೧೧ ಜಾತಿಗಳ ಪಟ್ಟಿಯನ್ನು ಮಾತ್ರ. ಈ ಹನ್ನೊಂದು ಜಾತಿಗಳನ್ನು ರಚಿಸುವಲ್ಲಿ, ಮನುವು ೫ ಜಾತಿಗಳನ್ನು, ೫ ಸಂಭವನೀಯ ಸಂಯೋಜನೆಗಳನ್ನು ಮಾತ್ರ ಕೊಡುತ್ತಾನೆ. ಇವುಗಳಲ್ಲಿ ವೈದೇಹವೆಂಬ ಹಿಂದೂ ಜಾತಿ ಅನುಲೋಮ, ಪ್ರತಿಲೋಮ ಪಟ್ಟಿಯ ಹೊರಗಿದೆ. ಎಂಟು ಜಾತಿಗಳ ವಿಷಯ ಪರಿಗಣಿಸಲ್ಪಟ್ಟೇ ಇಲ್ಲ.

ಅನಾರ್ಯವರ್ಗ ಮತ್ತು ಆರ್ಯವರ್ಗ ಜಾತಿಗಳಿಂದ ಉದ್ಭವಿಸಿದ ಸಂಕರ ಜಾತಿಗಳ ಬಗ್ಗೆ ಮನು ನೀಡಿರುವ ವಿವರಣೆ ಅಷ್ಟೇ ಅಸಂಬದ್ಧವಾಗಿದೆ. ಮೊದಲು ಅನಾರ್ಯ ವರ್ಗ ಮತ್ತು ಆರ್ಯವರ್ಗದ ನಾಲ್ಕೂ ಜಾತಿಗಳ ಮಿಳಿತದಿಂದ ಲಬ್ಧವಾದ ಜಾತಿಗಳ ಪಟ್ಟಿಯೊಂದು ನಮಗೆ ದೊರೆಯಬೇಕಿತ್ತು. ಅವುಗಳಲ್ಲಿ ಒಂದೂ ನಮ್ಮಲ್ಲಿಲ್ಲ. ದಸ್ಯು ಎಂಬ ಒಂದೇ ಒಂದು ಅನಾರ್ಯಜಾತಿ ಇತ್ತಂದು ಭಾವಿಸುವುದಾದರೆ, ದಸ್ಯುಗಳ ಮತ್ತು ಪ್ರತಿಯೊಂದು ಅನುಲೋಮ ಮತ್ತು ಪ್ರತಿಲೋಮ ಜಾತಿಗಳ ಸಂಪರ್ಕದಿಂದ ಲಭ್ಯವಾದ ೧೨ ಜಾತಿಗಳ ಪಟ್ಟಿ ನಮಗೆ ದೊರೆಯಬೇಕಿತ್ತು. ವಸ್ತುಸ್ಥಿತಿಯೇನೆಂದರೆ, ಮನುವಿನ ಪ್ರಕಾರ ಇರುವುದು ಒಂದೇ ಒಂದು ಸಂಯೋಗ.

ಈ ಮಿಶ್ರಜಾತಿಗಳ ವಿಷಯದ ಪ್ರಸ್ತಾವನೆಯಲ್ಲಿ ಮನುವು ವ್ರಾತ್ಯರು ಮತ್ತು ಆರ್ಯಜಾತಿಗಳು, ವ್ರಾತ್ಯರು ಮತ್ತು ಅನುಲೋಮ–ಪ್ರತಿಲೋಮ ಜಾತಿಗಳ, ವ್ರಾತ್ಯರು ಮತ್ತು ಅನಾರ್ಯ ಜಾತಿಗಳ ನಡುವಿನ ಸಂಯೋಗವನ್ನು ಗಣನೆಗೆ ತಂದುಕೊಂಡಿಲ್ಲ.

ಮನುವಿನ ಇಂತಹ ಲೋಪಗಳಲ್ಲಿ ಕೆಲವು ಗಮನ ಸೆಳೆಯುವಂತಹವು ಮತ್ತು ಅರ್ಥಗರ್ಭಿತವಾದವುಗಳು. ಬ್ರಾಹ್ಮಣ ಮತ್ತು ಕ್ಷತ್ರಿಯರ ನಡುವಿನ ಸಂಕರದ ವಿಷಯವನ್ನು ತೆಗೆದುಕೊಳ್ಳಿ. ಆತ ಈ ಎರಡು ಜಾತಿಗಳ ಸಂಕರದಿಂದ ಹುಟ್ಟಿದ ಜಾತಿಯನ್ನು ಹೇಳುವುದಿಲ್ಲ. ಈ ಎರಡು ಜಾತಿಗಳಿಂದ ಜನಿಸಿದ ಸಂಕರ ಜಾತಿ ಪ್ರತಿಲೋಮವೋ ಅಥವಾ ಅನುಲೋಮವೋ ಎಂಬುದನ್ನೂ ಹೇಳುವುದಿಲ್ಲ. ಮನುವು ಈ ಪ್ರಶ್ನೆಯನ್ನು ವಿಚಾರ ಮಾಡದೆ ಬಿಟ್ಟುದೇಕೆ? ಆತನ ಕಾಲದಲ್ಲಿ ಈ ಸಂಕರವು ಸಂಭವಿಸಲಿಲ್ಲವೆಂದು ಭಾವಿಸೋಣವೇ? ಅಥವಾ ಅದನ್ನು ಹೇಳುವುದಕ್ಕೆ ಭಯಪಟ್ಟನೇ? ಹಾಗಿದ್ದರೆ, ಅವನು ಭಯಪಟ್ಟದ್ದು ಯಾರಿಗೆ?

ಮನು ಮತ್ತು ಇತರೆ ಸ್ಮೃತಿಕಾರರು ಹೇಳಿರುವ ಕೆಲವು ಮಿಶ್ರಜಾತಿಗಳ ಹೆಸರುಗಳು ಕೇವಲ ಕಾಲ್ಪನಿಕವೆಂದು ತೋರುತ್ತದೆ.

ಯಾಕೆಂದರೆ, ಜಾರಜ ಮೂಲದವರೆಂದು ಹೇಳಲ್ಪಟ್ಟಿರುವ ಕೆಲವು ಜಾತಿಗಳ ಬಗ್ಗೆ ಮನುವಿಗೆ ಮುಂಚೆ ಕೇಳಿಯೇ ಇರಲಿಲ್ಲ. ಆಮೇಲೆ ಅವುಗಳಿಗೆ ಸಂಭವಿಸಿದ್ದೇನು ಎಂಬುದೂ ಯಾರಿಗೂ ತಿಳಿಯದು. ಅವುಗಳು ಈಗ ತಮ್ಮ ಯಾವ ಗುರುತನ್ನೂ ಬಿಟ್ಟಿಲ್ಲ. ಜಾತಿ ಎಂಬುದು ಒಂದು ಕರಗದಿರುವ ವಸ್ತು ಮತ್ತು ಅದು ಒಂದು ಸಾರಿ ಅಸ್ತಿತ್ವಕ್ಕೆ ಬಂದರೆ, ಯಾವುದಾದರೂ ವಿಶೇಷ ಕಾರಣಗಳಿಗಾಗಿ ನಿರ್ನಾಮವಾಗುವ ಹೊರತು, ತನ್ನ ಪ್ರತ್ಯೇಕತೆಯನ್ನೂ, ಇರುವಿಕೆಯನ್ನೂ ಹಾಗೆಯೇ ಉಳಿಸಿಕೊಳ್ಳುತ್ತದೆ. ಈ ಸ್ಥಿತಿ ಕೆಲವಕ್ಕೆ ಮಾತ್ರ ಸಂಭವಿಸಬಹುದು.

ಕೆಲವನ್ನು ಹೆಸರಿಸುವುದಾದರೆ, ಆಯೋಗವ, ಧಿಗ್ವನ, ಉಗ್ರ, ಪುಕ್ಕಸ, ಶ್ವಪಚ, ಪಾಂಡುಸೋಪಕ, ಅಹಿಂಡಕ, ಬಂಡಿಕ, ಮಟ್ಟ, ಮಹಿಕಾರ್, ಶಲಿಕ, ಶುಂಡಿಕ, ಶುಲಿಕ, ಯೇಕಜ, ಕುಕುಂದ ಎನ್ನುವವರ್ಯಾರು? ಅವರು ಎಲ್ಲಿದ್ದಾರೆ? ಅವರಿಗೆ ಏನಾಯಿತು?

ಈಗ ಮನುವನ್ನು ಇತರ ಸ್ಮೃತಿಕಾರರೊಡನೆ ಹೋಲಿಸೋಣ. ಅವರು ಉಲ್ಲೇಖಿಸಿರುವ ವಿವಿಧ ಮಿಶ್ರಜಾತಿಗಳ ಉಗಮದ ವಿಚಾರದಲ್ಲಿ ಅವರ ಒಮ್ಮತವಿದೆಯೇ? ಅದನ್ನು ಬಿಟ್ಟು, ಈ ಕೆಳಗಿನ ಪ್ರಕರಣಗಳನ್ನು ಹೋಲಿಸೋಣ.

| | ಸ್ಮೃತಿ | ತಂದೆಯ ಜಾತಿ | ತಾಯಿಯ ಜಾತಿ |
|---|---|---|---|
| | | **I. ಆಯೋಗವ** | |
| ೧. | ಮನು | ಶೂದ್ರ | ವೈಶ್ಯ |
| ೨. | ಔಷಾನಸ | ವೈಶ್ಯ | ಕ್ಷತ್ರಿಯ |
| ೩. | ಯಾಜ್ಞವಲ್ಕ್ಯ | ಶೂದ್ರ | ವೈಶ್ಯ |
| ೪. | ಬೌಧಾಯನ | ವೈಶ್ಯ | ಕ್ಷತ್ರಿಯ |
| ೫. | ಅಗ್ನಿಪುರಾಣ | ಶೂದ್ರ | ಕ್ಷತ್ರಿಯ |

**II.ಉಗ್ರ**

| | | | |
|---|---|---|---|
| ೧. | ಮನು | ಕ್ಷತ್ರಿಯ | ವೈಶ್ಯ |
| ೨. | ಔಷಾನಸ | ಬ್ರಾಹ್ಮಣ | ಶೂದ್ರ |
| ೩. | ಯಾಜ್ಞವಲ್ಕ್ಯ | ಕ್ಷತ್ರಿಯ | ವೈಶ್ಯ |
| ೪. | ವಾಸಿಷ್ಠ | ಕ್ಷತ್ರಿಯ | ವೈಶ್ಯ |
| ೫. | ಸೂತ | ವೈಶ್ಯ | ಶೂದ್ರ |

**III.ನಿಷಾದ**

| | | | |
|---|---|---|---|
| ೧. | ಮನು | ಬ್ರಾಹ್ಮಣ | ಶೂದ್ರ |
| ೨. | ಔಷಾನಸ | ಬ್ರಾಹ್ಮಣ | ಶೂದ್ರ |
| ೩. | ಬೌಧಾಯನ | ಬ್ರಾಹ್ಮಣ | ಶೂದ್ರ |
| ೪. | ಯಾಜ್ಞವಲ್ಕ್ಯ | ಬ್ರಾಹ್ಮಣ | ಶೂದ್ರ |
| ೫. | ಸೂತ ಸಂಹಿತೆ | ಬ್ರಾಹ್ಮಣ | ವೈಶ್ಯ |
| ೬. | ಸೂತ ಸಂಹಿತೆ | ಬ್ರಾಹ್ಮಣ | ಶೂದ್ರ |
| ೭. | ವಾಸಿಷ್ಠ | ವೈಶ್ಯ | ಶೂದ್ರ |

**IV.ಪುಕ್ಕಸ**

| | | | |
|---|---|---|---|
| ೧. | ಮನು | ನಿಷಾದ | ಶೂದ್ರ |
| ೨. | ಬೃಹದ್ ವಿಷ್ಣು | ಶೂದ್ರ | ಕ್ಷತ್ರಿಯ |
| ೩. | ಬೃಹದ್ ವಿಷ್ಣು | ವೈಶ್ಯ | ಕ್ಷತ್ರಿಯ |

**V.ಮಾಗಧ**

| | | | |
|---|---|---|---|
| ೧. | ಮನು | ವೈಶ್ಯ | ಕ್ಷತ್ರಿಯ |
| ೨. | ಸೂತ | ವೈಶ್ಯ | ಕ್ಷತ್ರಿಯ |
| ೩. | ಬೌಧಾಯನ | ಶೂದ್ರ | ವೈಶ್ಯ |
| ೪. | ಯಾಜ್ಞವಲ್ಕ್ಯ | ವೈಶ್ಯ | ಕ್ಷತ್ರಿಯ |
| ೫. | ಬೃಹದ್ ವಿಷ್ಣು | ವೈಶ್ಯ | ಕ್ಷತ್ರಿಯ |
| ೬. | ಬೃಹದ್ ವಿಷ್ಣು | ಶೂದ್ರ | ಕ್ಷತ್ರಿಯ |
| ೭. | ಬೃಹದ್ ವಿಷ್ಣು | ವೈಶ್ಯ | ಬ್ರಾಹ್ಮಣ |

**VI.ರಥಕರ**

| | | | |
|---|---|---|---|
| ೧. | ಔಷಾನಸ | ಕ್ಷತ್ರಿಯ | ಬ್ರಾಹ್ಮಣ |
| ೨. | ಬೌಧಾಯನ | ವೈಶ್ಯ | ಶೂದ್ರ |
| ೩. | ಸೂತ | ಕ್ಷತ್ರಿಯ | ಬ್ರಾಹ್ಮಣ |

**VII.ವೈದೇಹಕ**

| | | |
|---|---|---|
| ೧. ಮನು | ಶೂದ್ರ | ವೈಶ್ಯ |
| ೨. ಮನು | ವೈಶ್ಯ | ಬ್ರಾಹ್ಮಣ |
| ೩. ಯಾಜ್ಞವಲ್ಕ್ಯ | ವೈಶ್ಯ | ಬ್ರಾಹ್ಮಣ |

ಈ ವಿವಿಧ ಸ್ಮೃತಿಕಾರರು ಮೇಲೆ ಹೇಳಿದ ಮಿಶ್ರಜಾತಿಗಳ ಮೂಲ ಮತ್ತು ಹುಟ್ಟಿಗೆ ಸಂಬಂಧಪಟ್ಟ ವಾಸ್ತವ ವಿಷಯಗಳನ್ನು ವಿಚಾರ ಮಾಡುವಾಗ ಅವರವರ ಅಭಿಪ್ರಾಯದಲ್ಲಿ ಅಷ್ಟೊಂದು ವ್ಯಾಪಕ ವ್ಯತ್ಯಾಸವಿರಲು ಹೇಗೆ ಸಾಧ್ಯ? ಎರಡು ಜಾತಿಗಳ ಸಂಯೋಗದಿಂದ ನ್ಯಾಯವಾಗಿ ಮೂರನೇ ಜಾತಿಯೊಂದು ಅಸ್ತಿತ್ವಕ್ಕೆ ಬರಬೇಕು. ಆದರೆ ಅದೇ ಎರಡು ಜಾತಿಗಳ ಸಂಯೋಗದಿಂದ ಅನೇಕ ಬೇರೆ ಬೇರೆ ಜಾತಿಗಳು ಉತ್ಪತ್ತಿಯಾಗುವುದು ಹೇಗೆ ಸಾಧ್ಯ? ಆದರೆ ಮನು ಮತ್ತು ಅವನ ಅನುಚರರು ಸಾಧಿಸಿ ಹೇಳುತ್ತಿರುವುದು ಅದನ್ನೇ ಎಂದು ಕಾಣುತ್ತದೆ.

ಈ ಕೆಳಗಿನ ಪ್ರಕರಣಗಳನ್ನು ವಿಚಾರ ಮಾಡಿರಿ.

**I. ಕ್ಷತ್ರಿಯ ತಂದೆ ಮತ್ತು ವೈಶ್ಯ ತಾಯಿಯ ಸಂಯೋಗ**

೧. ಈ ಸಂತತಿಯು ಜಾತಿ ಕ್ಷತ್ರಿಯ ಎಂದು ಬೌಧಾಯನ ಹೇಳುತ್ತದೆ.
೨. ಯಾಜ್ಞವಲ್ಕ್ಯ ಹೇಳುವುದು ಇದು ಮಹಿಷ್ಯ ಎಂದು.
೩. ಇದು ಅಂಬಷ್ಟ ಎಂದು ಸೂತ ಹೇಳುತ್ತಾನೆ.

**II. ಶೂದ್ರ ತಂದೆ ಮತ್ತು ಕ್ಷತ್ರಿಯ ತಾಯಿಯ ಸಂಯೋಗ**

೧. ಇಲ್ಲಿ ಹುಟ್ಟುವ ಪೀಳಿಗೆ ಕ್ಷತ್ರಿಯ ಎಂದು ಮನು ಹೇಳುತ್ತಾನೆ.
೨. ಪುಲಕ್ಸ ಎಂದು ಔಷಾನಸ ಹೇಳುತ್ತಾನೆ.
೩. ವಾಸಿಷ್ಠ ಹೇಳುವುದು ಇದು ವೈನ ಎಂದು.

**III. ಬ್ರಾಹ್ಮಣ ತಂದೆ ಮತ್ತು ವೈಶ್ಯ ತಾಯಿಯ ಸಂಯೋಗ**

೧. ಇಲ್ಲಿಯ ಪೀಳಿಗೆ ಅಂಬಷ್ಟ ಎಂದು ಕರೆಯಲ್ಪಟ್ಟಿದೆ ಎಂದು ಮನು ಹೇಳುತ್ತಾನೆ.
೨. ಸೂತನು ಇದು ಊರ್ಧವನಾಪಿತ ಎಂದು ಒಂದು ಸಾರಿ ಹೇಳಿ, ಮತ್ತೊಂದು ಸಾರಿ ಇದು ಕುಂಭಕತರ ಎಂದು ಕರೆಯಲ್ಪಟ್ಟಿದೆ ಎಂದಿದ್ದಾನೆ.

**IV. ವೈಶ್ಯ ತಂದೆ ಮತ್ತು ಕ್ಷತ್ರಿಯ ತಾಯಿಯ ಸಂಯೋಗ**

೧. ಇಲ್ಲಿ ಹುಟ್ಟುವ ಪೀಳಿಗೆ ಮಗಧ ಎಂದು ಕರೆಯಲ್ಪಟ್ಟಿದೆ ಎಂದು ಮನು ಹೇಳುತ್ತಾನೆ.
೨. ಸೂತ ಹೇಳುವುದು. ಈ ಒಂದು ಸಂಯೋಗದ ಪೀಳಿಗೆಗಳು–
i.ಭೋಜ, ii. ಮ್ಲೇಚ್ಛ, iii. ಶಾಲಿಕ ಮತ್ತು iv. ಪುಲಿಂದ ಎಂದು.

**V. ಕ್ಷತ್ರಿಯ ತಂದೆ ಮತ್ತು ಶೂದ್ರ ತಾಯಿಯ ಸಂಯೋಗ**

ಅ. ಈ ಪೀಳಿಗೆ ಉಗ್ರ ಎಂದು ಕರೆಯಲ್ಪಟ್ಟಿದೆ ಎಂದು ಮನು ಹೇಳುತ್ತಾನೆ.
ಆ. ಸೂತ ಹೇಳುವುದು ಈ ಒಂದು ಸಂಯೋಗದ ಪೀಳಿಗೆಗಳು.

೧. ದೌಷ್ಯಂತ, ೨. ದೌಷ್ಯಂತೀ ಮತ್ತು ೩. ಶುಲಿಕ ಎಂದು.

**VI. ಶೂದ್ರ ತಂದೆ ಮತ್ತು ವೈಶ್ಯ ತಾಯಿಯ ಸಂಯೋಗ**

ಅ. ಈ ಪೀಳಿಗೆ ಅಯೋಗವ ಎಂದು ಕರೆಯಲ್ಪಟ್ಟಿದೆ ಎಂದು ಮನು ಹೇಳುತ್ತಾನೆ.

ಆ. ಸೂತ ಹೇಳುವುದು ಈ ಪೀಳಿಗೆ –

೧. ಪಟ್ಟಣಶಾಲಿ ಮತ್ತು ೨. ಚಕ್ರಿ ಎಂದು.

ಮತ್ತೊಂದು ಪ್ರಶ್ನೆಯನ್ನು ಎತ್ತಿಕೊಳ್ಳೋಣ. ಮಿಶ್ರಜಾತಿಗಳ ಉತ್ಪತ್ತಿ ಬಗೆಗಿನ ಮನುವಿನ ವಿವರಣೆ ಐತಿಹಾಸಿಕವಾಗಿ ನಿಜವೇ?

ಅಭಿರರಿಂದ ಪ್ರಾರಂಭಿಸೋಣ. ಮನುವಿನ ದೃಷ್ಟಿಯಲ್ಲಿ ಅಭಿರರು ಬ್ರಾಹ್ಮಣ ಗಂಡಸು ಮತ್ತು ಅಂಬಷ್ಟ ಸ್ತ್ರೀಯರಿಗೆ ಜನಿಸಿದ ಜಾರಜರು. ಅವರ ಬಗ್ಗೆ ಇತಿಹಾಸ ಏನು ಹೇಳುತ್ತದೆ? ಅಭಿರರು (ಇದರ ಅಪಭ್ರಂಶರೂಪ ಅಹಿರ) ಸಿಂಧ್ ಪ್ರಾಂತ್ಯದವರೆಗಿನ ವಾಯುವ್ಯದ ಕೆಲ ಜಿಲ್ಲೆಗಳಲ್ಲಿ ವಾಸಿಸುತ್ತಿದ್ದ ಹುಲ್ಲುಗಾವಲು ಸುತ್ತುವ ಬುಡಕಟ್ಟು ಜನ ಎಂದು ಇತಿಹಾಸ ಹೇಳುತ್ತದೆ. ಅವರು ಸ್ವತಂತ್ರವಾಗಿ ರಾಜ್ಯಭಾರ ಮಾಡುವ ಬುಡಕಟ್ಟು ಜನರಿದ್ದು, ವಿಷ್ಣುಪುರಾಣದಂತೆ[೧] ಮಗಧ ಪ್ರಾಂತ್ಯವನ್ನು ಗೆದ್ದು ಅಲ್ಲಿ ಅನೇಕ ವರ್ಷಗಳು ಅಧಿಕಾರ ನಡೆಸಿದರು.

ಅಂಬಷ್ಟರು ಬ್ರಾಹ್ಮಣ ಗಂಡಸಿಗೂ ವೈಶ್ಯ ಹೆಂಗಸಿಗೂ ಹುಟ್ಟಿದ ಜಾರಜರೆಂದು ಮನು ಹೇಳುತ್ತಾನೆ.[೨] ಪತಂಜಲಿ ಅಂಬಷ್ಟರ ಬಗ್ಗೆ ಹೇಳುವುದು ಅವರು ಅಂಬಷ್ಟ ಎಂಬ ದೇಶದ ನಿವಾಸಿಗಳೆಂದು. ಅಂಬಷ್ಟರು ಒಂದು ಸ್ವತಂತ್ರ ಬುಡಕಟ್ಟು ಜನರೆಂಬುದರಲ್ಲಿ ಸಂದೇಹವಿಲ್ಲ. ಗ್ರೀಕ್ ರಾಯಭಾರಿ ಮೆಗಾಸ್ತನೀಸ್ ಚಂದ್ರಗುಪ್ತ ಮೌರ್ಯನ ಆಸ್ಥಾನದಲ್ಲಿ ಅಂಬಷ್ಟರು ಪಂಜಾಬಿನಲ್ಲಿ ವಾಸವಿದ್ದ ಒಂದು ಬುಡಕಟ್ಟು ಪಂಗಡದವರೆಲ್ಲರೂ, ಅಲೆಗ್ಸಾಂಡರನು ಭಾರತದ ಮೇಲೆ ದಂಡೆತ್ತಿ ಬಂದಾಗ ಅವರೊಡನೆ ಯುದ್ಧ ಮಾಡಿದನೆಂದೂ ಹೇಳಿದ್ದಾನೆ. ಅಂಬಷ್ಟರು ಮಹಾಭಾರತದಲ್ಲೂ ಹೆಸರಿಸಲ್ಪಟ್ಟಿದ್ದಾರೆ. ಅವರು ತಮ್ಮ ರಾಜಕೀಯ ವ್ಯವಸ್ಥೆ ಮತ್ತು ಧೈರ್ಯಕ್ಕೆ ಪ್ರಖ್ಯಾತರಾಗಿದ್ದರು.

ವೈದೇಹಕ ಗಂಡಸರು ಮತ್ತು ಕರವರ ಹೆಂಗಸರು, ಇಬ್ಬರೂ ಜಾರಜ ಜಾತಿಯವರಾದ್ದರಿಂದ ಅವರ ಪೀಳಿಗೆಯ ಆಂಧ್ರರು[೩] ಎರಡನೇ ದರ್ಜೆಯ ಜಾರಜರು ಎಂದು ಮನು ಹೇಳುತ್ತಾನೆ. ಈ ಬಗ್ಗೆ ಐತಿಹಾಸಿಕ ಪ್ರಮಾಣ ತೀರಾ ವಿಭಿನ್ನವಾಗಿದೆ. ಆಂಧ್ರರು ದಖಿನ್ ಪ್ರಸ್ಥಭೂಮಿಯ ಪೂರ್ವಭಾಗದಲ್ಲಿರುವ ದೇಶದ ಒಂದು ಭಾಗದಲ್ಲಿ ನೆಲೆಸಿದ ಜನಾಂಗ, ಆಂಧ್ರರು ಮೆಗಾಸ್ತನೀಸ್‌ನಿಂದ ಹೆಸರಿಸಲ್ಪಟ್ಟಿದ್ದಾರೆ. ಹಿರಿಯ ಪ್ಲೈನಿ (ಕ್ರಿ.ಶ. ೭೭)ಯು ಅವರು ದಖಿನ್ನಿನ ಪ್ರದೇಶದ ಮೇಲೆ ಸಾರ್ವಭೌಮತ್ವವನ್ನು ಅನುಭವಿಸುತ್ತಾ, ಅನೇಕ ಗ್ರಾಮಗಳನ್ನು, ಕೋಟೆಗಳಿಂದ ಸುತ್ತುವರಿದ ಮತ್ತು ಕಂದಕ ಹಾಗೂ ನಾವೆಗಳಿಂದ ರಕ್ಷಿಸಲ್ಪಟ್ಟ ಮೂವತ್ತು ಪಟ್ಟಣಗಳನ್ನು ಹೊಂದಿ, ತಮ್ಮ ದೊರೆಗೆ ೧,೦೦,೦೦೦ ಕಾಲ್ದಳ, ೨೦೦೦ ಅಶ್ವದಳ ಮತ್ತು ೧೦೦೦೦ ಆನೆಗಳ ದೊಡ್ಡ ಸೈನ್ಯವನ್ನು ಸರಬರಾಜು ಮಾಡುತ್ತಿದ್ದರು ಎಂದು ಉಲ್ಲೇಖಿಸಿದ್ದಾನೆ.

---

೧. ಪುಸ್ತಕ IV, ಪರಿಚ್ಛೇದ ೨೪.

೨. ಅಂಬಷ್ಟರಿಗಾಗಿ ಜೈಸ್ವಾಲರ 'ಹಿಂದೂ ಪಾಲಿಟಿ' – (ಭಾಗ I), ಪು.೭೩–೭೩ ನೋಡಿ.

೩. ಆಂಧ್ರರಿಗಾಗಿ, ಭಾವರಾಜು ವೆಂಕಟಕೃಷ್ಣರಾಯರ, 'ಅರ್ಲಿ ಡೈನಾಸ್ಟೀಸ್ ಆಫ್ ಆಂಧ್ರ ದೇಶ' ನೋಡಿ. ಅವರು ಸಾತವಾಹನರು ಅಂತಲೂ ಕರೆಯಲ್ಪಟ್ಟಿದ್ದಾರೆ.

ಮನುವಿನ ಪ್ರಕಾರ ಮಗಧರು[೧] ವೈಶ್ಯ ಗಂಡಸು ಮತ್ತು ಕ್ಷತ್ರಿಯ ಹೆಂಗಸಿಗೆ ಜನಿಸಿದ ಜಾರಜರು. ವ್ಯಾಕರಣಕಾರ ಪಾಣಿನಿ ಮಗಧರ ಬಗ್ಗೆ ತೀರಾ ವಿಭಿನ್ನವಾದ ಮೂಲವನ್ನು ನೀಡುತ್ತಾನೆ. ಆತನ ಪ್ರಕಾರ ಮಗಧ ಎಂಬುವನು ಮಗಧ ಎಂದು ಕರೆಯಲಾಗುತ್ತಿದ್ದ ದೇಶದಿಂದ ಬಂದವನು. ಮಗಧವು ಈಗಿನ ಬಿಹಾರ ಪ್ರಾಂತ್ಯದ ಗಯಾ ಮತ್ತು ಪಾಟ್ನ ಜಿಲ್ಲೆಗಳಿಗೆ ಹೆಚ್ಚು ಕಮ್ಮಿ ಹೋಲುತ್ತದೆ. ಪುರಾತನ ಕಾಲದಿಂದಲೂ, ಮಗಧರು ಪರಮಾಧಿಕಾರವುಳ್ಳ ಸ್ವತಂತ್ರ ಜನಾಂಗವೆಂದು ಹೆಸರಿಸಲ್ಪಟ್ಟಿದ್ದಾರೆ. ಪಾಂಡವರ ಸಮಕಾಲೀನನೂ ಪ್ರಖ್ಯಾತನೂ ಆಗಿದ್ದ ಜರಾಸಂಧನು ಮಗಧ ದೇಶದ ರಾಜನಾಗಿದ್ದನು.

ಮನುವಿನ ಪ್ರಕಾರ ನಿಷಾದರು ಬ್ರಾಹ್ಮಣ ಗಂಡಸರು ಮತ್ತು ಶೂದ್ರ ಹೆಂಗಸರಿಗೆ ಜನಿಸಿದ ಜಾರಜರ ಜಾತಿ. ಇತಿಹಾಸ ಹೇಳುವ ಕಥೆಯೇ ಬೇರೆ. ನಿಷಾದರು, ಅವರದೇ ಸ್ವತಂತ್ರ ನಾಡನ್ನೂ, ರಾಜನನ್ನು ಹೊಂದಿದ್ದ ಸ್ಥಳೀಯ ಬುಡಕಟ್ಟು ಮಂದಿ, ಅವರು ಬಹು ಪುರಾತನ ಬುಡಕಟ್ಟು ಜನರು. ಶ್ರೀರಾಮನು ವನವಾಸದಲ್ಲಿದ್ದಾಗ ಆತನಿಗೆ ಸತ್ಕಾರ ನೀಡಿದ ಗುಹನು ರಾಜನಾಗಿ ಶೃಂಗವೇರಪುರವನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡಿದ್ದನೆಂದು ರಾಮಾಯಣ ಹೇಳುತ್ತದೆ.

ವೈದೇಹಕರ ಬಗ್ಗೆ ಮನು ಹೇಳುವುದು ಅವರು ವೈಶ್ಯ ಜಾತಿಯ ಗಂಡಸು ಮತ್ತು ಬ್ರಾಹ್ಮಣ ಹೆಂಗಸಿಗೆ ಜನಿಸಿದ ಜಾರಜರೆಂದು. ಶಬ್ದ ವ್ಯುತ್ಪತ್ತಿಗನುಗುಣವಾಗಿ, ವೈದೇಹಕ ಎಂದರೆ ವಿದೇಹ[೨] ಎಂಬ ದೇಶದ ಸ್ಥಳೀಯ ಎಂದರ್ಥ. ಪುರಾತನ ವಿದೇಹ ಈಗಿನ ಬಿಹಾರ್ ಪ್ರಾಂತ್ಯದ ಚಂಪಾರಣ್ಯ ಮತ್ತು ದರ್ಭಾಂಗ ಎಂಬ ಆಧುನಿಕ ಜಿಲ್ಲೆಗಳಿಗೆ ಸರಿ ಹೊಂದುತ್ತದೆ ಈ ದೇಶ ಮತ್ತು ಅದರ ಜನಾಂಗ ಬಹು ಹಿಂದಿನ ಕಾಲದಿಂದಲೂ ಪುರಾತನ ಸಂಪ್ರದಾಯಸ್ಥರೆಂದು ಇತಿಹಾಸದಿಂದ ತಿಳಿದಿದೆ. ಯಜುರ್ವೇದವೂ ಇವರನ್ನು ಹೆಸರಿಸಿದೆ. ರಾಮಾಯಣ ಇವರನ್ನು ಗಮನಿಸಿದೆ. ರಾಮನ ಹೆಂಡತಿ ಸೀತೆಯು ಮಿಥಿಲೆಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡಿದ್ದ ವಿದೇಹದ ರಾಜ ಜನಕನ ಮಗಳು.

ಇನ್ನೂ ಅನೇಕ ಪ್ರಕರಣಗಳನ್ನು ಶೋಧಿಸಬಹುದು. ಮನುವು ಹೀಗೆ ಇತಿಹಾಸವನ್ನು ತಿರುವು–ಮುರುವು ಮಾಡಿ, ಗೌರವಾನ್ವಿತ ಮತ್ತು ಬಲಿಷ್ಠ ಬುಡಕಟ್ಟನ್ನು ಜಾರಜರೆಂದು ಕರೆದು ಅವಮಾನಿಸಿದ್ದಾನೆಂಬುದನ್ನು ತೋರಿಸುವುದಕ್ಕೆ ಈಗ ಶೋಧಿಸಿರುವ ವಿಷಯಗಳೇ ಸಾಕು. ದೊಡ್ಡ ಸಮಾಜಗಳಿಗೆ ಹೊರಿಸಿದ ಸಾರಾಸಗಟಾದ ಜಾರಜತ್ವವನ್ನು ಮನುವು ವ್ರಾತ್ಯರಿಗೆ ಅನ್ವಯಿಸಲಿಲ್ಲ. ಆದರೆ ಇವನ ತರುವಾಯ ಬಂದವರು ಈ ಯೋಜನೆಯನ್ನು ಇನ್ನೂ ಮುಂದೆ ಕೊಂಡುಹೋಗಿ ವ್ರಾತ್ಯರನ್ನೂ ಜಾರಜರನ್ನಾಗಿ ಮಾಡಿದರು. ಮನುವಿನಂತೆ ಕರ್ಣ ವ್ರಾತ್ಯ. ಆದರೆ ಬ್ರಹ್ಮವೈವರ್ತ ಪುರಾಣ ಅವರನ್ನು ಜಾರಜರನ್ನಾಗಿ ಮಾಡಿ, ಅವರು ವೈಶ್ಯ ತಂದೆ ಮತ್ತು ಶೂದ್ರ ತಾಯಿಯ ಪೀಳಿಗೆ ಎಂದು ಹೇಳುತ್ತದೆ. ಮನುವಿನ ಪ್ರಕಾರ ಪೌಂಡ್ರಕನು ವ್ರಾತ್ಯ. ಆದರೆ ಬ್ರಹ್ಮವೈವರ್ತ ಪುರಾಣದಲ್ಲಿ ಆತ ವೈಶ್ಯ ತಂದೆ ಮತ್ತು ಚುಂಡಿ ತಾಯಿಗೆ ಹುಟ್ಟಿದ ಜಾರಜ. ಮನುವಿನ ಪ್ರಕಾರ ಮಲ್ಲನು ವ್ರಾತ್ಯ. ಆದರೆ ಬ್ರಹ್ಮವೈವರ್ತ ಪುರಾಣದಲ್ಲಿ, ಅವನು ಲೆಟ್ಟಾ ತಂದೆ ಮತ್ತು ತಿಬರ ತಾಯಿಗೆ ಹುಟ್ಟಿದ ಜಾರಜ.

---

೧. ಮಗಧರ ಇತಿಹಾಸಕ್ಕಾಗಿ ಬಿ.ಸಿ. ಲಾ ಅವರ 'ಏನ್ಷಿಯಂಟ್ ಇಂಡಿಯನ್ ಟ್ರೈಬ್ಸ್' ಎಂಬ ಪುಸ್ತಕದ ನಾಲ್ಕನೇ ಪರಿಚ್ಛೇದ ನೋಡಿ.

೨. ವಿದೇಹರ ಇತಿಹಾಸಕ್ಕಾಗಿ, ಬಿ.ಸಿ.ಲಾ ಅವರ 'ಕ್ಷತ್ರಿಯ ಕ್ಲ್ಯಾನ್ಸ್ ಇನ್ ಬುದ್ಧಿಸ್ಟ್ ಇಂಡಿಯಾ' ಎಂಬ ಪುಸ್ತಕದ ಪರಿಚ್ಛೇದ I, ಭಾಗ II ನೋಡಿ.

ಮನುವಿನ ಪ್ರಕಾರ ವ್ಹಾರಜ್ಜಕೌತುಕರ ವ್ರಾತ್ಯ ಬ್ರಾಹ್ಮಣರು. ಆದರೆ ಗೌತಮ ಸಂಹಿತೆಯಲ್ಲಿ ಅವರು ಬ್ರಾಹ್ಮನ ತಂದೆ ಮತ್ತು ವೈಶ್ಯ ತಾಯಿಗೆ ಜನಿಸಿದ ಜಾರಜರು. ಯವನರು ವ್ರಾತ್ಯ ಕ್ಷತ್ರಿಯರೆಂದು ಮನುವಿನಿಂದ ಸಾರಲ್ಪಟಿದ್ದಾರೆ. ಆದರೆ ಗೌತಮ ಸಂಹಿತೆಯಲ್ಲಿ ಅವರು ಕ್ಷತ್ರಿಯ ತಂದೆ, ಶೂದ್ರ ತಾಯಿಗೆ ಜನಿಸಿದ ಜಾರಜರೆಂದು ಪರಿಗಣಿಸಲ್ಪಟ್ಟಿದ್ದಾರೆ. ಮನುವಿನ ಪ್ರಕಾರ ಕಿರಾತರು ವ್ರಾತ್ಯ ಕ್ಷತ್ರಿಯರು. ಆದರೆ ಬಲ್ಲಾಳ ಚರಿತವು ಇವರನ್ನು ವೈಶ್ಯ ತಂದೆ ಮತ್ತು ಬ್ರಾಹ್ಮನ ತಾಯಿಯ ಜಾರಜರನ್ನಾಗಿ ಮಾಡುತ್ತದೆ.

ಮನುವಿನಿಂದ ಜಾರಜರೆಂದು ಹೆಸರಿಸಲ್ಪಟ್ಟಿರುವ ಕೆಲವು ಸಮುದಾಯಗಳು ಹುಟ್ಟಿನಿಂದ ಜಾರಜರಿಂದ ಬಹು ದೂರದವರಾದರೂ ಮನು ಮತ್ತು ಇತರೆ ಸ್ಮೃತಿಕಾರರು ಅವರನ್ನು ಜಾರಜರೆಂದು ಕರೆದಿರುವುದು ಸ್ಫುಟವಾಗಿ ಗೋಚರಿಸುತ್ತದೆ. ಅವರ ಈ ಹುಚ್ಚು ವರ್ತನೆ ಏಕೆ? ಅವರ ಹುಚ್ಚುತನದಲ್ಲಿ ಒಂದು ಕ್ರಮವಿದೆಯೇ?

ಈ ಎಲ್ಲಾ ವಿಚಾರಗಳನ್ನು ಗಮನಿಸಿದರೆ, ಮನುವು ಮಿಶ್ರಜಾತಿಗಳ ಪ್ರಶ್ನೆಯನ್ನು ಎತ್ತಿದ್ದಾದರೂ ಏಕೆ ಮತ್ತು ಅವುಗಳ ಬಗ್ಗೆ ಆತ ಏನು ಹೇಳಲು ಬಯಸಿದ ಎಂಬುದೇ ಒಂದು ನಿಗೂಢ ಒಗಟು.

ಚಾತುರ್ವರ್ಣವೂ ವಿಫಲವಾಯಿತೆಂದು ಮನುವು ಗ್ರಹಿಸಿರುವ ಸಾಧ್ಯತೆ ಇದೆ. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರರಾಗಿ ವರ್ಣಿಸಲ್ಪಡದಿರುವ ಹೆಚ್ಚಿನ ಸಂಖ್ಯೆಯ ಜಾತಿಗಳಿರುವುದು. ಚಾತುರ್ವರ್ಣ ಕುಸಿದುಹೋದುದಕ್ಕೆ ಅತ್ಯುತ್ತಮ ಸಾಕ್ಷಿ ಮತ್ತು ಚಾತುರ್ವರ್ಣ ನಿಯಮ ಜಾರಿಯಲ್ಲಿದ್ದರೂ, ಚಾತುರ್ವರ್ಣದ ಹೊರಗಿರುವ ಈ ಜಾತಿಗಳು ಹೇಗೆ ಅಸ್ತಿತ್ವಕ್ಕೆ ಬಂದವೆಂದು ವಿವರಣೆ ನೀಡಬೇಕೆಂದು ಮನುವನ್ನು ಕೇಳಿಕೊಳ್ಳಲಾಯ್ತು. ತಾನು ನೀಡಿರುವ ವಿವರಣೆ ಎಷ್ಟು ಭಯಂಕರವಾಗಿದೆ ಎಂದು ಮನು ವಿವೇಚಿಸಲಿಲ್ಲವೇ? ಅವನ ವಿವರಣೆಯ ಫಲಿತಾರ್ಥವೇನು?

ಮನುಷ್ಯರ, ಅದರಲ್ಲೂ ಹೆಂಗಸರ ಶೀಲದ ಮೇಲೆ ಅದೆಷ್ಟು ಆಕ್ಷೇಪಣೆ? ಚಾತುರ್ವರ್ಣ ನಿಯಮದ ನಿರ್ಬಂಧದ ಕಾರಣ, ಹೆಂಗಸು-ಗಂಡಸಿನ ಸಂಯೋಗ ಕಳ್ಳತನದಿಂದ ನಡೆದಿರಬಹುದೆಂಬುದು ಸಂಶಯಾತೀತ. ಅಂತಹ ರಹಸ್ಯ ಸಂಯೋಗಗಳು ದೊಡ್ಡ ಪ್ರಮಾಣದಲ್ಲಿ ನಡೆದಿರಲಿಕ್ಕಿಲ್ಲ. ಆದರೆ ಹೆಣ್ಣು-ಗಂಡಿನ ಸ್ವೇಚ್ಛಾ ಸಂಪರ್ಕ ಸ್ಥಿತಿ ಇತ್ತೆಂದು ಭಾವಿಸದ ಹೊರತು ಮನು ಹೇಳಿರುವ ಚಂಡಾಲರ ಮತ್ತು ಅಸ್ಪೃಶ್ಯರ ಮೂಲವನ್ನು ಸಮರ್ಥಿಸಲು ಹೇಗೆ ಸಾಧ್ಯ?

ಚಂಡಾಲ ಎಂಬ ಜಾತಿ, ಶೂದ್ರ ಗಂಡಸು ಮತ್ತು ಬ್ರಾಹ್ಮಣ ಹೆಂಗಸಿನ ನಡುವಣ ನ್ಯಾಯಬದ್ಧವಲ್ಲದ ಸಂಯೋಗದಿಂದ ಜನಿಸಿದ ಪೀಳಿಗೆ ಎಂದು ಮನು ಹೇಳಿದ್ದಾನೆ. ಇದು ನಿಜವಿರಬಹುದೇ? ಬ್ರಾಹ್ಮಣ ಹೆಂಗಸರು ತಮ್ಮ ಶೀಲದ ಬಗ್ಗೆ ಬಹಳ ಸಡಿಲ ವರ್ತನೆಯಿಂದಿದ್ದಿರಬಹುದೆಂದೂ, ಶೂದ್ರರ ಬಗ್ಗೆ ವಿಶೇಷ ಲೈಂಗಿಕ ಆಕರ್ಷಣೆ ಹೊಂದಿದ್ದರೆಂದೂ ಇದರರ್ಥ.[೧] ಇದು ನಂಬಲರ್ಹವಲ್ಲ.

---

೧. ಮೆಗಾಸ್ತನೀಸನು, ಪುರಾತನ ಕಾಲದ ಬ್ರಾಹ್ಮಣರು ತಮ್ಮ ಹೆಂಡತಿಯರು ನಂಬಿಕೆಗೆ ಅರ್ಹರಲ್ಲವೆಂದು ತಿಳಿದು, ಅವರು ಮಾತುಗಾತಿಯರಾಗಿದ್ದು, ತಮ್ಮ ತಿಳಿವಳಿಕೆಗೆ ಬಂದ ವಿಷಯಗಳನ್ನು, ಅವುಗಳನ್ನು ತಿಳಿಯುವ ಹಕ್ಕಿಲ್ಲದವರಿಗೆ ತಿಳಿಸಿಬಿಡುತ್ತಾರೆಂದು (ಬಹುಶಃ ಶೂದ್ರರಿಗೆ ಎಂದು ಅವನು ಎಣಿಸಿರಬೇಕು) ತಮ್ಮ ಆಧ್ಯಾತ್ಮಿಕ ಸಿದ್ಧಾಂತಗಳನ್ನು ಅವರ ಹೆಂಡತಿಯರಿಗೆ ಅವರು ತಿಳಿಸುತ್ತಿರಲಿಲ್ಲವೆಂದು ದಾಖಲಿಸಿದ್ದಾನೆ.

ದೇಶದಲ್ಲಿ ಚಂಡಾಲರ ಜನಸಂಖ್ಯೆ ಎಷ್ಟು ಅಪಾರವೆಂದರೆ, ಪ್ರತಿ ಬ್ರಾಹ್ಮಣ ಹೆಂಗಸೂ ಒಬ್ಬ ಶೂದ್ರನ ಮಡದಿಯಾಗಿದ್ದರೂ, ಚಂಡಾಲರು ಇಷ್ಟೊಂದು ಅಧಿಕ ಸಂಖ್ಯೆಯಲ್ಲಿರುತ್ತಿರಲಿಲ್ಲ.

ಮಿಶ್ರಜಾತಿಗಳ ಉತ್ಪತ್ತಿಯ ತತ್ವನ್ನು ಪ್ರತಿಪಾದಿಸುವಾಗ, ತಾನು ದೇಶದ ಅಪಾರ ಸಂಖ್ಯೆ ಜನಗಳಿಗೆ ತುಚ್ಛ ಮೂಲವನ್ನು ನಿಯೋಗಿಸಿ, ಅವರ ಸಾಮಾಜಿಕ ಮತ್ತು ನೈತಿಕ ಅವನತಿಗೆ ಕಾರಣನಾದೆನೆಂಬುದನ್ನು ಮನುವು ಗ್ರಹಿಸಿದನೇ? ಜಾತಿಗಳು ತಮ್ಮ ಅಸ್ತಿತ್ವದಲ್ಲಿ ಸ್ವತಂತ್ರವಾಗಿದ್ದಾಗ್ಯೂ ಮನುವು ಜಾತಿಗಳೂ ಮೂಲದಲ್ಲಿ ಕಲಬೆರಕೆ ಎಂದು ಏಕೆ ಹೇಳಿದ?

* * * *

# ಒಗಟು – ೧೯

## ಪಿತೃತ್ವದಿಂದ ಮಾತೃತ್ವಕ್ಕೆ ಬದಲಾವಣೆ – ಇದರಿಂದ ಬ್ರಾಹ್ಮಣರು ಗಳಿಸಲು ಬಯಸಿದ್ದೇನು?

ಶ್ರೀಯುತ ಮೆಯಿನ್ ಹಿಂದೂ ಕಾನೂನಿನ ಬಗ್ಗೆ ಬರೆದಿರುವ ಪ್ರಾರಂಭದಲ್ಲಿ ರಕ್ತಸಂಬಂಧದ ನಿಯಮದಲ್ಲಿ ಅನೇಕ ಅಸಂಬದ್ಧ ವೈಶಿಷ್ಟ್ಯಗಳನ್ನು ಎತ್ತಿ ತೋರಿಸಿದ್ದಾನೆ.

"ಹಿಂದೂ ಕಾನೂನಿನ ಇನ್ನಾವ ಭಾಗವೂ ಸಾಂಸಾರಿಕ ಸಂಬಂಧಗಳನ್ನು ನಿಯಂತ್ರಿಸುವ ಭಾಗಕ್ಕಿಂತ ಹೆಚ್ಚು ಅಸಂಬದ್ಧವಾಗಿಲ್ಲ. ಪುರಾತನ ಪದ್ಧತಿಗೂ ಪ್ರಸ್ತುತ ಪದ್ಧತಿಗೂ ಇರುವ ಅವಿಚ್ಛಿನ್ನತೆ ಸಂಪೂರ್ಣವಾಗಿ ಕಡಿದು ಹೋಗಿರುವುದು ಕಂಡುಬರುವುದಲ್ಲದೆ, ಪುರಾತನ ಪದ್ಧತಿಯ ವಿವಿಧ ಭಾಗಗಳು ಒಂದರೊಡನೊಂದು ನೇರ ಘರ್ಷಣೆಯಿಂದಿವೆ ಎಂದು ಗೋಚರವಾಗುತ್ತದೆ. ಹದಿನಾಲ್ಕು ತಲೆಮಾರುಗಳಿಂದಲೂ ನಿರಾತಂಕ ಮೂಲಪುರುಷರನ್ನು ಪತ್ತೆ ಹಚ್ಚುವ ಸಾಧ್ಯತೆಯನ್ನು ಸ್ವೀಕರಿಸುವ ಉತ್ತರಾಧಿಕಾರ ನಿಯಮವನ್ನು ಕಾಣುತ್ತೇವೆ. ಇದರ ಜತೆಗೆ ಒಂದು ಸಾಂಸಾರಿಕ ನಿಯಮವಿದೆ. ಅದರಂತೆ, ಪಾತಿವ್ರತ್ಯಾಭಂಗ ಮತ್ತು ಅತ್ಯಾಚಾರಗಳಿಗೆ ಅನೇಕ ಬಗೆಯ ಅಂಗೀಕಾರಾರ್ಹ ಮದುವೆಗಳು ಎಂಬ ನಯವಾದ ಹೆಸರಿದ್ದು ಇಲ್ಲಿ ೧೨ ರೀತಿಯ ಪುತ್ರರು ಗುರುತಿಸಲ್ಪಟ್ಟು ಅವರಲ್ಲಿ ಬಹುಸಂಖ್ಯಾತರಿಗೆ ತಮ್ಮ ಸ್ವಂತ ತಂದೆಯ ಜೊತೆ ರಕ್ತಸಂಬಂಧವಿರುವುದಿಲ್ಲ".

ಈ ಅಸಂಬದ್ಧತೆಯ ಇರವು ಒಂದು ನಿಜಸ್ಥಿತಿ ಎಂಬುದು ಪಿತೃತ್ವ ಮತ್ತು ವಿವಾಹಕ್ಕೆ ಸಂಬಂಧಪಟ್ಟ ಹಿಂದೂ ಕಾನೂನನ್ನು ಅಭ್ಯಸಿಸಲು ಪ್ರಯತ್ನಿಸುವ ಯಾರಿಗಾದರೂ ಅರಿವಾಗುತ್ತದೆ.

ಹಿಂದೂ ಕಾಯಿದೆ ಈ ಕೆಳಗಿನ ಎಂಟು ವಿವಿಧ ರೀತಿಯ ವಿವಾಹಗಳನ್ನು ಗಮನಕ್ಕೆ ತೆಗೆದುಕೊಂಡಿದೆ:

| | |
|---|---|
| ೧. ಬ್ರಹ್ಮ | ೨. ದೈವ |
| ೩. ಆರ್ಷ | ೪. ಪ್ರಜಾಪತ್ಯ |
| ೫. ಅಸುರ | ೬. ಗಾಂಧರ್ವ |
| ೭. ರಾಕ್ಷಸ ಮತ್ತು | ೮. ಪೈಶಾಚ |

ಬ್ರಹ್ಮ ವಿವಾಹದಲ್ಲಿ ವೇದಪಾರಂಗತನಾದ ವ್ಯಕ್ತಿಯನ್ನು ಹುಡುಗಿಯ ತಂದೆ ಇಚ್ಛಾಪೂರ್ವಕವಾಗಿ ಆಹ್ವಾನಿಸಿ ಗೌರವಯುತವಾಗಿ ಬರಮಾಡಿಕೊಂಡು ಒಡವೆ ವಸ್ತುಗಳಿಂದ ಸಿಂಗರಿಸಿದ ಮಗಳನ್ನು ದಾನ ಮಾಡಲಾಗುವುದು.

---

*ಈ ಅಧ್ಯಾಯ ಬೆರಳಚ್ಚಿನಲ್ಲಿ ೧೧ ಪುಟಗಳಷ್ಟಿದೆ. ಅಧ್ಯಾಯದ ಶಿರೋನಾಮೆಯೊಂದನ್ನು ಬಿಟ್ಟರೆ ಉಳಿದ ಯಾವ ಸೇರ್ಪಡೆಯೂ ಗ್ರಂಥಕರ್ತನ ಕೈಬರಹದಲ್ಲಿಲ್ಲ. – ಸಂ.*

ದೈವ ವಿವಾಹದಲ್ಲಿ, ಮನೆಯ ಪುರೋಹಿತ ಪೂಜೆ ಪುನಸ್ಕಾರಕ್ಕೆ ಮನೆಗೆ ಬಂದಾಗ ಆತನಿಗೆ ಪೂಜಾ ಶುಲ್ಕದ ಬದಲು, ಹುಡುಗಿಯ ತಂದೆ ತನ್ನ ಮಗಳನ್ನು ಪುರೋಹಿತನಿಗೆ ದಾನ ಮಾಡುತ್ತಾನೆ.

ಮದುವಣಿಗನು ಮದುವಣಿಗಿತ್ತಿಯ ತಂದೆಗೆ ಹುಡುಗಿಯ ಬೆಲೆಯನ್ನು ಕೊಟ್ಟು ನಡೆಯುವ ವಿವಾಹವನ್ನು ಆರ್ಷ ವಿವಾಹವೆಂದು ವರ್ಣಿಸಲಾಗಿದೆ.

ಪ್ರಜಾಪತ್ಯ ರೀತಿಯ ಮದುವೆಯಲ್ಲಿ ಒಬ್ಬ ವ್ಯಕ್ತಿ ಒಂದು ಹುಡುಗಿಯನ್ನು ಹೆಂಡತಿಯನ್ನಾಗಿ ಸ್ವೀಕರಿಸುತ್ತೇನೆಂದು ಒಂದು ಬೇಡಿಕೆ ಮಂಡಿಸುವುದು ಮತ್ತು ಹುಡುಗಿಯ ತಂದೆ ಆ ಬೇಡಿಕೆಯನ್ನು ಮಂಜೂರು ಮಾಡುವುದು.

ಪ್ರಜಾಪತ್ಯ ಮತ್ತು ಬ್ರಹ್ಮ ವಿಧಾನದ ವಿವಾಹಗಳಲ್ಲಿ ವ್ಯತ್ಯಾಸವಿರುವುದು ಎಲ್ಲಿ ಅಂದರೆ ಬ್ರಹ್ಮ ವಿವಾಹದಲ್ಲಿ ಮಗಳ ದಾನವನ್ನು ತಂದೆ ಸ್ವ ಇಚ್ಛೆಯಿಂದ ಮಾಡುವುದು. ಪ್ರಜಾಪತ್ಯದಲ್ಲಿ ಬೇಡಿಕೆ ಮಂಡಿಸಬೇಕು. ಐದನೆಯ ಅಥವಾ ಅಸುರ ವಿಧಾನ ವಿವಾಹದಲ್ಲಿ ಮದುವಣಿಗ ತನ್ನ ಕೈಲಾದಷ್ಟು ದ್ರವ್ಯವನ್ನು ಹುಡುಗಿಯ ತಂದೆಗೆ, ಸಂಬಂಧಿಗಳಿಗೆ ಮತ್ತು ಹುಡುಗಿಗೂ ಕೊಟ್ಟು ಆಕೆಯನ್ನು ಹೆಂಡತಿಯನ್ನಾಗಿ ಸ್ವೀಕರಿಸುವುದು. ಆರ್ಷ ಮತ್ತು ಅಸುರ ವಿಧಾನಗಳಲ್ಲಿ ಅಷ್ಟೇನೂ ವ್ಯತ್ಯಾಸವಿಲ್ಲ. ಎರಡು ವಿಧಾನಗಳೂ ಹುಡುಗಿಯ ಮಾರಾಟವನ್ನೊಳಗೊಂಡಿದೆ. ಇವೆರಡರಲ್ಲಿ ಇರುವ ವ್ಯತ್ಯಾಸವೆಂದರೆ, ಆರ್ಷ ವಿಧಾನದಲ್ಲಿ ಹೆಣ್ಣಿನ ಬೆಲೆ ನಿರ್ಧರಿಸಲ್ಪಡುತ್ತದೆ, ಅಸುರ ವಿಧಾನದಲ್ಲಿ ಹಾಗಿಲ್ಲ.

ಅಧರ್ಮೀಯ ಮತ್ತು ಭೋಗಾಸಕ್ತಿಯ ಪ್ರೇರಣೆಯಿಂದ ನಿಶ್ಚಯಿಸಲ್ಪಟ್ಟ ಸಮ್ಮತಿಯ ಮದುವೆ ಗಾಂಧರ್ವ ವಿಧಾನದ ವಿವಾಹ. ಹುಡುಗಿಯ ರಕ್ತ ಸಂಬಂಧಿಗಳು ಮತ್ತು ಗೆಳೆಯರು ಯುದ್ಧದಲ್ಲಿ ಕೊಲ್ಲಲ್ಪಟ್ಟು ಅಥವಾ ಗಾಯಗೊಳಿಸಲ್ಪಟ್ಟು ಅವರ ಮನೆಗಳನ್ನು ಭಗ್ನಗೊಳಿಸಿದಾಗ ಅವಿವಾಹಿತೆಯು ಅಳುತ್ತಾ ಸಹಾಯಕ್ಕಾಗಿ ಕೂಗಿಕೊಳ್ಳುವಾಗ ಅವರ ಮನೆಯಿಂದ ಬಲಾತ್ಕಾರವಾಗಿ ಸೆರೆಹಿಡಿಯುವುದು ರಾಕ್ಷಸ ಮದುವೆ.

ಮಲಗಿರುವ ಅಥವಾ ಶಕ್ತಿಯುತ ಮದ್ಯಪಾನೀಯದ ಮತ್ತಿನಲ್ಲಿರುವ ಅಥವಾ ಬುದ್ಧಿಭ್ರಮಣೆಯಾಗಿರುವ ಹುಡುಗಿಯ ಜತೆ ಅನೈತಿಕ ಸಂಭೋಗ ಮಾಡಿ ಆಗುವ ಮದುವೆ ಪೈಶಾಚ ಮದುವೆ.

ಹಿಂದೂ ನ್ಯಾಯಶಾಸ್ತ್ರ ಈ ಕೆಳಕಂಡ ಹದಿಮೂರು ವಿಧದ ಪುತ್ರರನ್ನು ಗುರ್ತಿಸಿದೆ.

| | |
|---|---|
| ೧. ಔರಸ | ೨. ಕ್ಷೇತ್ರಜ |
| ೩. ಪುತ್ರಿಕಾಪುತ್ರ | ೪. ಕಾನೀನ |
| ೫. ಗುಧಜ | ೬. ಪುನರ್ಭವ |
| ೭. ಸಹೋಧಜ | ೮. ದತ್ತಕ |
| ೯. ಕೃತ್ರಿಮ | ೧೦. ಕೃತಕ |
| ೧೧. ಅಪವಿದ್ಧ | ೧೨. ಸ್ವಯಂದತ್ತ |
| ೧೩. ನಿಷಾದ | |

ಒಬ್ಬ ವ್ಯಕ್ತಿ ನ್ಯಾಯಬದ್ಧವಾಗಿ ಮದುವೆಯಾದ ಹೆಂಡತಿಯಾದ ಹುಟ್ಟಿದ ಮಗ ಔರಸ.

ಪುತ್ರಿಕಾಪುತ್ರ ಅಂದರೆ ಮಗಳಿಗೆ ಹುಟ್ಟಿದ ಮಗ. ಇಲ್ಲಿ ಗಮನಾರ್ಹ ವಿಷಯವೇನೆಂದರೆ, ಒಬ್ಬ ಮಗಳನ್ನು ಹೊಂದಿದ ತಂದೆಗೆ ಗಂಡು ಮಕ್ಕಳಿಲ್ಲದಿದ್ದರೆ ಆತ ಗೊತ್ತು ಮಾಡಿದ ಪುರುಷನೊಡನೆ ತನ್ನ ಮಗಳು ಸಂಭೋಗಿಸಲು ಅನುಮತಿ ಇತ್ತು, ಆ ಸಂಭೋಗದಿಂದ ಮಗಳು ಒಂದು ಗಂಡು ಮಗುವನ್ನು ಹಡೆದರೆ ಆ ಗಂಡು ಮಗು ಮಗಳ ತಂದೆಯ ಮಗನಾಗುತ್ತಾನೆ. ಈ ಕಾರಣದಿಂದ, ಆ ಮಗ, ಪುತ್ರಿಕಾಪುತ್ರನೆಂದು ಕರೆಯಲ್ಪಟ್ಟನು. ಒಬ್ಬ ಪುತ್ರನನ್ನು ಪಡೆಯುವ ದೃಷ್ಟಿಯಿಂದ ತಾನು ಗೊತ್ತುಮಾಡಿದ ಪುರುಷನೊಡನೆ ತನ್ನ ಮಗಳು ಸಂಭೋಗ ಮಾಡುವಂತೆ ಬಲವಂತಪಡಿಸುವ ಅಧಿಕಾರ ಆಕೆಯ ಮದುವೆಯಾದ ಮೇಲೂ ಮುಂದುವರಿಯುತ್ತಿತ್ತು. ಈ ಕಾರಣದಿಂದ ಸಹೋದರರಿಲ್ಲದ ಹುಡುಗಿಯನ್ನು ಮದುವೆಯಾಗಬಾರದೆಂದು ಎಚ್ಚರಿಸಲಾಗುತ್ತಿತ್ತು.

ಕ್ಷೇತ್ರಜ ಎಂಬುದರ ಅರ್ಥ ಕ್ಷೇತ್ರದ ಪುತ್ರ. ಅಂದರೆ ಹೆಂಡತಿಯ ಮಗ. ಹಿಂದೂ ತತ್ತ್ವದ ಪ್ರಕಾರ ಹೆಂಡತಿಯನ್ನು ಭೂಮಿಗೂ, ಗಂಡನನ್ನು ಭೂ ಒಡೆಯನಿಗೂ ಹೋಲಿಸಲಾಗಿದೆ. ಗಂಡ ಸತ್ತರೆ ಅಥವಾ ಬದುಕಿದ್ದರೂ ನಪುಂಸಕ ಅಥವಾ ಗುಣಪಡಿಸಲಾಗದ ಖಾಯಿಲೆಗೆ ತುತ್ತಾದರೆ ಆ ಕುಟುಂಬದವರು ಆತನ ಹೆಂಡತಿಯಿಂದ ಒಂದು ಗಂಡು ಮಗುವನ್ನು ಪಡೆಯುವ ಸಲುವಾಗಿ ಸತ್ತವನ ಸಹೋದರ ಅಥವಾ ಬೇರೆ ಸಪಿಂಡದವನೊಬ್ಬನನ್ನು ನಿಯಮಿಸುತ್ತಿದ್ದರು. ಈ ಪದ್ಧತಿಯನ್ನು ನಿಯೋಗ ಅಂತಲೂ ಹಾಗೆ ಹುಟ್ಟಿದ ಮಗನನ್ನು ಕ್ಷೇತ್ರಜ ಅಂತಲೂ ಕರೆಯಲಾಗುತ್ತಿತ್ತು.

ತಂದೆಯ ಮನೆಯಲ್ಲಿ ವಾಸಿಸುವ ಅವಿವಾಹಿತ ಮಗಳು ನ್ಯಾಯಬಾಹಿರ ಸಂಭೋಗದ ಫಲವಾಗಿ ಒಂದು ಗಂಡು ಮಗುವನ್ನು ಹಡೆದು ತದನಂತರ ಮದುವೆಯಾದರೆ ಮದುವೆಗೆ ಮುಂಚೆ ಹುಟ್ಟಿದ ಮಗನನ್ನು ಮದುವೆಯಾದಾತ ತನ್ನ ಮಗನೆಂದೇ ಹೇಳಿಕೊಳ್ಳುತ್ತಿದ್ದ. ಅಂತಹ ಮಗ ಕಾನೀನ ಎಂದು ಕರೆಯಲ್ಪಡುತ್ತಿದ್ದ.

ಒಬ್ಬ ಹೆಂಗಸಿನೊಡನೆ ಆಕೆಯ ಗಂಡನ ಸಂಪರ್ಕವಿದ್ದಾಗ್ಯೂ ಆಕೆ ಸಂಶಯಾಸ್ಪದ ವ್ಯಭಿಚಾರದ ಫಲವಾಗಿ ಹಡೆದ ಮಗನು ಗುಧಜನೆನಿಸಿಕೊಂಡನು. ಯಾವ ರೀತಿ ಹುಟ್ಟಿದನೆಂಬುದಕ್ಕೆ ಆಧಾರಸಹಿತ ಸಾಕ್ಷಿ ಇಲ್ಲದ್ದರಿಂದ ಆ ಮಗ ತನ್ನ ಮಗನೆಂದೇ ಸಾಧಿಸಲು ಆಕೆಯ ಗಂಡನಿಗೆ ಹಕ್ಕುಂಟು. ಅಂತಹ ಮಗನ ಹುಟ್ಟಿನ ಸುತ್ತ ಸಂಶಯ ಮೋಡ ಕವಿದಿರುವುದರಿಂದ ಅವನು ಗುಧಜ ಎನಿಸಿಕೊಂಡಿದ್ದಾನೆ. ಗುಧ ಅಂದರೆ ಸಂಶಯ.

ತನ್ನ ಮದುವೆಯ ಸಮಯದಲ್ಲಿ ಗರ್ಭಿಣಿಯಾಗಿದ್ದ ಸ್ತ್ರೀ ಹಡೆದ ಮಗ ಸಹೋಧಜ. ಈತ ಮದುವೆಗೆ ಮುಂಚೆ ಆತನ ತಾಯಿಯೊಡನೆ ಸಂಪರ್ಕ ಹೊಂದಿದ ಗಂಡನ ಮಗನೋ ಅಥವಾ ಗಂಡನಲ್ಲದವನೊಬ್ಬನಿಗೆ ಹುಟ್ಟಿದ ಮಗನೋ ನಿರ್ದಿಷ್ಟವಾಗಿ ಹೇಳಲಿಕ್ಕಾಗದು. ಆದರೆ ಇಷ್ಟು ಮಾತ್ರ ನಿಜ. ಸಹೋಧಜನು ಅವಿವಾಹಿತ ಗರ್ಭಿಣಿಯ ಮಗ ಎಂಬುದು ಖಚಿತ ಮತ್ತು ಮದುವೆಯಾದವನಿಂದ ಆತನು ತನ್ನ ಮಗನೆಂದೇ ಸಾಧಿಸಲ್ಪಟ್ಟವನು.

ಗಂಡನಿಂದ ತ್ಯಜಿಸಲ್ಪಟ್ಟು, ಬೇರೆಯವರ ಜತೆ ವಾಸಿಸುತ್ತಿದ್ದು, ಮತ್ತೆ ಮೊದಲ ಗಂಡನ ಕುಟುಂಬಕ್ಕೆ ಹಿಂದಿರುಗಿದವಳ ಮಗ ಪುನರ್ಭವ. ನಪುಂಸಕ, ಜಾತಿಗೆಟ್ಟ, ಮತಿಗೆಟ್ಟ ಅಥವಾ ರೋಗಗ್ರಸ್ತ ಗಂಡನನ್ನು ತ್ಯಜಿಸಿ ಮತ್ತೊಬ್ಬ ಗಂಡನನ್ನು ಬರಮಾಡಿಕೊಳ್ಳುವ ಹೆಂಗಸಿನ ಮಗನನ್ನು ಗುರುತಿಸುವುದೂ ಇದೇ ಹೆಸರಿನಿಂದ.

ಪರಾಸವ[೧] ಒಬ್ಬ ಬ್ರಾಹ್ಮಣನು ಶೂದ್ರ ಹೆಂಗಸಿನಿಂದ ಪಡೆದ ಮಗ.

ಉಳಿದ ಪುತ್ರರೆಲ್ಲಾ ಸ್ವಂತ ಮಕ್ಕಳೆಂದು ಸಾಧಿಸಲ್ಪಟ್ಟವರಂತಲ್ಲದೆ ದತ್ತುಪುತ್ರರು. ಯಾವ ಮಗನನ್ನು ಅವನ ತಂದೆ–ತಾಯಿಗಳು ಬೇರೆಯವನಿಗೆ ದತ್ತು ಕೊಟ್ಟು ದತ್ತು ತೆಗೆದುಕೊಂಡವನ ಮಗನಾಗುತ್ತಾನೋ ಅವನು ದತ್ತಕ. ದತ್ತು ಹೋದವನು ಒಪ್ಪಿಗೆಯಿಂದ ಮಾತ್ರ ದತ್ತು ತೆಗೆದುಕೊಳ್ಳಲ್ಪಟ್ಟ ಮಗನು ಕೃತಿಮ.

ಆತನ ತಂದೆ ತಾಯಿಗಳಿಂದ ಕೊಂಡುಕೊಂಡ ಮಗ ಕೃತ. ತಂದೆ ತಾಯಿಗಳಿಂದ ತ್ಯಜಿಸಲ್ಪಟ್ಟು ಆಮೇಲೆ ದತ್ತು ತೆಗೆದಕೊಳ್ಳಲ್ಪಟ್ಟ ಮಗನಾಗಿ ಪರಿಗಣಿಸಲ್ಪಡುವ ಹುಡುಗ ಅಪವಿದ್ಧ.

ಅನಾಥವಾಗಿ ಅಥವಾ ತಂದೆ ತಾಯಿಗಳಿಂದ ತ್ಯಜಿಸಲ್ಪಟ್ಟು, ಆಶ್ರಯದಾತರನ್ನು ಹುಡುಕುತ್ತಾ ಅವರೆದುರು ಹಾಜರಾಗಿ 'ನಾನು ನಿಮ್ಮ ಮಗನಾಗಲು ಅವಕಾಶ ನೀಡಿ' ಎಂದು ಕೇಳಿಕೊಂಡು ದತ್ತು ತೆಗೆದುಕೊಳ್ಳಲ್ಪಟ್ಟ ಹುಡುಗನು ಸ್ವಯಂದತ್ತ.

ವಿವಿಧ ರೀತಿಯ ವಿವಾಹಗಳು, ಅತ್ಯಾಚಾರ ಮತ್ತು ಪಾತಿವ್ರತ್ಯಭಂಗಗಳಿಗೆ ಕೊಟ್ಟಿರುವ ನಯವಾದ ಹೆಸರುಗಳೆಂಬುದೂ ಮತ್ತು ಎಷ್ಟು ಮಂದಿ ಪುತ್ರರು ಅವರ ತಂದೆಯ ಜತೆ ರಕ್ತ ಸಂಬಂಧವಿಲ್ಲದವರೆಂಬುದೂ ಎಷ್ಟರಮಟ್ಟಿಗೆ ನಿಜ ಎಂಬುದನ್ನು ಗಮನಿಸಬಹುದು. ಈ ವಿವಿಧ ರೀತಿಯ ವಿವಾಹಗಳು ಮತ್ತು ವಿವಿಧ ಬಗೆಯ ಪುತ್ರರು ಮನುವಿನ ಕಾಲದವರೆಗೂ ನ್ಯಾಯಬದ್ಧವಾಗಿದವುಗಳೆಂದು ಪರಿಗಣಿಸಲ್ಪಟ್ಟಿದ್ದವು ಮತ್ತು ಮನು ಮಾಡಿದ ಬದಲಾವಣೆಗಳು ಕೂಡಾ ತೀರಾ ಅಲ್ಪಪ್ರಮಾಣವು. ವಿವಿಧ ರೀತಿಯ ವಿವಾಹಗಳನ್ನು[೨] ಮನುವು ನ್ಯಾಯಬದ್ಧವಲ್ಲ ಎಂದು ಪ್ರಸಿದ್ಧಪಡಿಸಿಲ್ಲ. ಅವನು ಹೇಳುವುದೆಲ್ಲಾ ಏನೆಂದರೆ, ಬ್ರಹ್ಮ, ದೈವ, ಆರ್ಷ, ಪ್ರಜಾಪತ್ಯ, ಅಸುರ, ಗಾಂಧರ್ವ, ರಾಕ್ಷಸ ಮತ್ತು ಪೈಶಾಚ ಎಂಬ ಎಂಟು ಬಗೆಯ ವಿವಾಹಗಳಲ್ಲಿ ಆರು ಬಗೆಯ ವಿವಾಹಗಳು ಕ್ಷತ್ರಿಯರಿಗೆ ನ್ಯಾಯಬದ್ಧವಾದವುಗಳು. ಮತ್ತೆ ಮೂರು ಅಂದರೆ ಅಸುರ, ಗಾಂಧರ್ವ ಮತ್ತು ಪೈಶಾಚ ಎಂಬುವು ವೈಶ್ಯರಿಗೆ ಮತ್ತು ಶೂದ್ರರಿಗೆ ನ್ಯಾಯಬದ್ಧವಾದವುಗಳು ಎಂದು.

ಇದೇ ರೀತಿ ಅವನು ಹನ್ನೆರಡು ಬಗೆಯ ಪುತ್ರರಲ್ಲಿ ಯಾರ ಸಂಬಂಧವನ್ನೂ ಕಡಿದುಹಾಕಿಲ್ಲ. ಹಾಗೆ ಮಾಡದೆ ಅವರ ರಕ್ತಸಂಬಂಧವನ್ನು ಗುರುತಿಸುತ್ತಾನೆ. ಅವನು ಮಾಡಿರುವ ಒಂದೇ ಬದಲಾವಣೆ ಎಂದರೆ, ಉತ್ತರಾಧಿಕಾರಿ ನಿಯಮಗಳನ್ನು ಬದಲಿಸಿ ಅವುಗಳನ್ನು (೧) ಉತ್ತರಾಧಿಕಾರಿಗಳು ಮತ್ತು ಸಂಬಂಧಿಗಳು ಮತ್ತು (೨) ರಕ್ತಸಂಬಂಧಿಗಳು ಆದರೆ ಉತ್ತರಾಧಿಕಾರಿಗಳಲ್ಲದವರು ಎಂದು ಎರಡು ವಿಭಾಗಗಳಾಗಿ ವಿಂಗಡಿಸಿರುವುದು. ಅವನು ಹೇಳುವುದಿದು:[೩]

---

೧. ಆತನು ನಿಷಾದನೆಂದೂ ಕರೆಯಲ್ಪಟ್ಟನು. ಜೀವಮೂತವಾಹನನು, ಪರಾಸವ ಮತ್ತು ನಿಷಾದರ ನಡುವೆ ಒಂದು ವ್ಯತ್ಯಾಸ ಮಾಡಿದ್ದಾನೆಂದು ಕಾಣುತ್ತದೆ. ಅವಳು ಹೇಳುವಂತೆ ಪರಾಸವ ಅವಿವಾಹಿತ ಶೂದ್ರ ಹೆಂಗಸಿನಿಂದ, ಬ್ರಾಹ್ಮಣ ಪಡೆದ ಮಗನಾದರೆ, ನಿಷಾದನು ಒಬ್ಬ ಬ್ರಾಹ್ಮಣನು ಶೂದ್ರ ಹೆಂಡತಿಯಿಂದ ಪಡೆದ ಮಗ.

೨. ಮನು, III. ೨೩

೩. ಮನು IX, ೧೫೯ ರಿಂದ ೧೬೦, ೧೬೨ ರಿಂದ ೧೬೩, ಪು. ೩೫೯–೬೦

೧೫೬ "ಔರಸ, ಕ್ಷೇತ್ರಜ, ದತ್ತ, ಕೃತ್ರಿಮ, ಗೂಢೋತ್ಪನ್ನ ಹಾಗೂ ಅಪವಿದ್ಧ ಎಂಬ ಅದು ವಿಧದ ಪುತ್ರರು ಉತ್ತರಾಧಿಕಾರಿಗಳು ಮತ್ತು ರಕ್ತಸಂಬಂಧಿಗಳು."

೧೬೦ ಕಾನೀನ, ಸಹೋಢ, ಕ್ರೀತ, ಪುನರ್ಭವ, ಸ್ವಯಂದತ್ತ ಹಾಗೂ ಶೌದ್ರ – ಈ ಆರು ಬಗೆಯ ಮಕ್ಕಳು ಉತ್ತರಾಧಿಕಾರಿಗಳಲ್ಲ, ಆದರೆ ರಕ್ತ ಸಂಬಂಧಿಗಳು".

೧೬೨ "ಕ್ಷೇತ್ರದ ಪುತ್ರನು ಹುಟ್ಟಿದ ಮೇಲೆ ಆ ಕ್ಷೇತ್ರದ ಪತಿಗೆ ಔರಸಪುತ್ರನು ಹುಟ್ಟಿದರೆ, ಇಬ್ಬರೂ ಆಕ್ಷೇತ್ರ ಪತಿ ತಂದೆಯ ಆಸ್ತಿಗೆ ಪಾಲುದಾರರಾಗುತ್ತಾರೆ."

೧೬೩ "ಔರಸ ಪುತ್ರ ಮಾತ್ರ ತಂದೆಯ ಆಸ್ತಿಗೆ ಹಕ್ಕುದಾರನಾದರೂ, ತೊಂದರೆಯ ನಿವಾರಣೆಗಾಗಿ ಉಳಿದವರಿಗೆ ಜೀವನಾಂಶ ಕೊಡಬೇಕು."

ಯಾರಿಗೂ ಗೋಚರವಾಗದ ಮತ್ತೊಂದು ಪ್ರಬಲವಾದ ಬದಲಾವಣೆಯನ್ನು ಹೊಂದಿರುವ ರಕ್ತಸಂಬಂಧದ ನಿಯಮದ ಇನ್ನೊಂದು ಭಾಗವಿದೆ. ಅದು ಮಗುವಿನ ವರ್ಣವನ್ನು ನಿರ್ಣಯಿಸುವುದಕ್ಕೂ ಸಂಬಂಧಪಟ್ಟದ್ದು. ಮಗುವಿನ ವರ್ಣವು ಯಾವುದಿರಬೇಕು? ಅದು ತಂದೆಯ ವರ್ಣವೋ, ತಾಯಿಯ ವರ್ಣವೋ? ಮನುವಿಗಿಂತ ಮುಂಚೆ ರೂಢಿಯಲ್ಲಿದ್ದ ನಿಯಮದಂತೆ. ಮಗುವಿನ ವರ್ಣವನ್ನು ತಂದೆಯ ವರ್ಣದ ಆಧಾರದ ಮೇಲೆ ನಿರ್ಣಯಿಸಲಾಗುತ್ತಿತ್ತು. ತಾಯಿಯ ವರ್ಣ ಗಣನೆಗೆ ಬರುತ್ತಿರಲಿಲ್ಲ. ಈ ವಿಷಯ ಸಾಧಿಸಲು ಈ ಕೆಲವು ನಿದರ್ಶನಗಳು ಸಾಕು.

| ತಂದೆ | | ತಾಯಿ | | ಮಗು | |
|---|---|---|---|---|---|
| **ಹೆಸರು** | **ವರ್ಣ** | **ಹೆಸರು** | **ವರ್ಣ** | **ಹೆಸರು** | **ವರ್ಣ** |
| ೧. ಶಂತನು | ಕ್ಷತ್ರಿಯ | ಗಂಗ | ತಿಳಿಯದು | ಭೀಷ್ಮ | ಕ್ಷತ್ರಿಯ |
| ೨. ಪರಾಶರ | ಬ್ರಾಹ್ಮಣ | ಮತ್ಸ್ಯಗಂಧ | ಬೆಸ್ತ | ಕೃಷ್ಣದ್ವೈಪಾಯನ | ಬ್ರಾಹ್ಮಣ |
| ೩. ವಸಿಷ್ಠ | ಬ್ರಾಹ್ಮಣ | ಅಕ್ಷಮಾಲ | – | ಪಾಯನ | – |
| ೪. ಶಂತನು | ಕ್ಷತ್ರಿಯ | ಮತ್ಸ್ಯಗಂಧ | ಬೆಸ್ತ | ವಿಚಿತ್ರವೀರ್ಯ | ಕ್ಷತ್ರಿಯ |
| ೫. ವಿಶ್ವಾಮಿತ್ರ | ಕ್ಷತ್ರಿಯ | ಮೇನಕ | ಅಪ್ಸರ | ಶಕುಂತಲ | ಕ್ಷತ್ರಿಯ |
| ೬. ಯಯಾತಿ | ಕ್ಷತ್ರಿಯ | ದೇವಯಾನಿ | ಬ್ರಾಹ್ಮಣ | ಯದು | ಕ್ಷತ್ರಿಯ |
| ೭. ಯಯಾತಿ | ಕ್ಷತ್ರಿಯ | ಶರ್ಮಿಷ್ಠ | ಅಸುರಿ | ದೃಹ್ಯ | ಕ್ಷತ್ರಿಯ |
| ೮. ಜರತ್ಕಾರು | ಬ್ರಾಹ್ಮಣ | ಜರತ್ಕಾರಿ | ನಾಗ | ಆಸ್ತಿಕ | ಬ್ರಾಹ್ಮಣ |

ಮನು ಏನು ಮಾಡಿದ್ದಾನೆ? ಮಗುವಿನ ವರ್ಣದ ನಿಯಮದಲ್ಲಿ ಮನುವು ಮಾಡಿರುವ ಬದಲಾವಣೆಗಳು ಬಹಳ ಕ್ರಾಂತಿಕಾರಕ ರೀತಿಯವು ಮನುವು[೧] ಈ ಕೆಳಗಿನ ನಿಯಮಗಳನ್ನು ನಿರ್ಣಯಿಸಿದ್ದಾನೆ.

೧. ಮನು, ಪರಿಚ್ಛೇದ X. ೫,೬,೧೪ ಮತ್ತು ೪೧ ಶ್ಲೋಕಗಳು, ಪುಟಗಳು ೪೦೨, ೪೦೩, ೪೦೪ ಮತ್ತು ೪೧೨.

೫. "ನಾಲ್ಕು ವರ್ಣಗಳ ಪುರುಷರು ಅಕ್ಷತಯೋನಿಯರಾದ ತಮ್ಮ ಜಾತಿಯ ಪತ್ನಿಯರಲ್ಲಿ ಹುಟ್ಟಿದ ಮಕ್ಕಳು ಮಾತ್ರ ಅವರ ತಂದೆಯ ಜಾತಿಯವರೇ ಆಗುತ್ತಾರೆ."

೬. "ತಮ್ಮ ಕೆಳಗಿನ ಜಾತಿಯ ಹೆಂಡತಿಯರಿಂದ ದ್ವಿಜರು ಪಡೆದ ಪುತ್ರರು, ತಮ್ಮ ತಂದೆಯವರಿಗೆ ಸಮಾನರೆಂದು ಪರಿಗಣಿಸಲ್ಪಟ್ಟರೂ ತಮ್ಮ ತಾಯಂದಿರ ಅಂತರ್ಗತ ತಪ್ಪಿಗಾಗಿ, ದೋಷಪೂರಿತರೆನಿಸಿಕೊಳ್ಳುತ್ತಾರೆ."

೧೪. "ಕ್ರಮಾನುಸಾರವಾಗಿ ಪಟ್ಟಿಮಾಡಲ್ಪಟ್ಟ ತಮ್ಮ ಕೆಳಗಿನ ಜಾತಿಯ ಹೆಂಡತಿಯರಿಂದ ದ್ವಿಜರು ಪಡೆದ ಪುತ್ರರು, ಅವರ ತಾಯಂದಿರ ಅಂತರ್ಗತ ಕಳಂಕದ ಕಾರಣ, ಅನಂತರರು (ನಂತರದ ಕೆಳಜಾತಿಗೆ ಸೇರಿದವರು) ಎಂಬ ಹೆಸರಿನಿಂದ ಕರೆಯಲ್ಪಡುತ್ತಾರೆ."

೪೧. "ತಮ್ಮ ಸಮಾನ ಜಾತಿಯ ಮತ್ತು ನಂತರದ ಕೆಳಜಾತಿಯ ಹೆಂಗಸರಿಂದ ಆರ್ಯರು ಪಡೆದ ಆರು ಮಂದಿ ಪುತ್ರರಿಗೆ ದ್ವಿಜರ ಕರ್ತವ್ಯಗಳುಂಟು. ಆದರೆ ನಿಯಮೋಲ್ಲಂಘನಾ ಕಾರಣದಿಂದ ಜನಿಸಿದವರೆಲ್ಲಾ ತಮ್ಮ ಕರ್ತವ್ಯದ ದೃಷ್ಟಿಯಿಂದ ಶೂದ್ರರಿಗೆ ಸಮಾನರು." ಮನುವು ಈ ಕೆಳಗಿನ ನಿದರ್ಶನಗಳಿಂದ ವ್ಯತ್ಯಾಸವೇನೆಂಬುದನ್ನು ತೋರಿಸುತ್ತಾನೆ.

೧. ತಂದೆ ಮತ್ತು ತಾಯಿ ಒಂದೇ ವರ್ಣಕ್ಕೆ ಸೇರಿದ್ದಾಗ.

೨. ತಾಯಿಯು ತನ್ನ ನಂತರದ ಕೆಳವರ್ಣಕ್ಕೆ ಸೇರಿದವಳಾದಾಗ, ಉದಾ: ಬ್ರಾಹ್ಮಣ ತಂದೆ ಮತ್ತು ಕ್ಷತ್ರಿಯ ತಾಯಿ, ಕ್ಷತ್ರಿಯ ತಂದೆ ಮತ್ತು ವೈಶ್ಯ ತಾಯಿ, ವೈಶ್ಯ ತಂದೆ ಶೂದ್ರ ತಾಯಿ.

೩. ತಾಯಿಯು, ತಂದೆಯ ವರ್ಣಕ್ಕಿಂತ, ಒಂದಕ್ಕಿಂತ ಹೆಚ್ಚು ದರ್ಜೆಯ ಕೀಳು ವರ್ಣದವಳಾದಾಗ, ಉದಾ: ಬ್ರಾಹ್ಮಣ ತಂದೆ ಮತ್ತು ವೈಶ್ಯ ಅಥವಾ ಶೂದ್ರ ತಾಯಿ, ಕ್ಷತ್ರಿಯ ತಂದೆ ಮತ್ತು ಶೂದ್ರ ತಾಯಿ.

ಮೊದಲನೆಯ ವಿಷಯದಲ್ಲಿ ಮಗುವಿನ ವರ್ಣ ತಂದೆಯ ವರ್ಣವೇ ಆಗಿರುತ್ತದೆ. ಎರಡನೇ ಸಂದರ್ಭದಲ್ಲಿಯೂ, ಮಗುವಿನ ವರ್ಣ ತಂದೆಯ ವರ್ಣವೇ ಆಗಿರಬೇಕು. ಆದರೆ ಮೂರನೇ ಸಂದರ್ಭದಲ್ಲಿ ಮಗುವು ತಂದೆಯ ವರ್ಣವನ್ನು ಪಡೆಯುವ ಹಾಗಿಲ್ಲ. ಮಗುವಿನ ವರ್ಣ ತಂದೆಯದಾಗದಿದ್ದರೆ, ಆ ಮಗುವಿನ ವರ್ಣ ಯಾವುದು ಎಂದು ಮನು ಖಚಿತವಾಗಿ ಹೇಳಿಲ್ಲ. ಆದರೆ ಮನುವಿನ ವ್ಯಾಖ್ಯಾನಕಾರರಾದ ಮೇದಾತಿಥಿ, ಕಲ್ಲೂಕ ಭಟ್ಟ, ನಾರದ ಮತ್ತು ನಂದಪಂಡಿತರಾದಿಯಾಗಿ ಎಲ್ಲರೂ ಅಂತಹ ಪ್ರಕರಣಗಳಲ್ಲಿ ಮಗುವಿನ ವರ್ಣ ತಾಯಿಯ ವರ್ಣ ಆಗಿರಲೇಬೇಕೆಂಬುದು ನಿಸ್ಸಂಶಯ ಎಂದು ಒಪ್ಪಿ ಹೇಳಿದ್ದಾರೆ. ಸ್ವಲ್ಪದರಲ್ಲಿ ಹೇಳಬೇಕಾದರೆ, ಮನುವು ಮಗುವಿನ ವರ್ಣದ ನಿಯಮವನ್ನು ತಂದೆಯ ವರ್ಣಕ್ಕನುಸಾರವಾಗಿ ಪಿತೃಸವರ್ಣದಿಂದ, ತಾಯಿಯ ವರ್ಣಕ್ಕನುಸಾರವಾಗಿ ಮಾತೃಸವರ್ಣಕ್ಕೆ ಬದಲಿಸಿದ್ದಾನೆ.

ಇದು ಬಹಳ ಕ್ರಾಂತಿಕಾರಕ ಬದಲಾವಣೆ. ಹಲವು ಬಗೆಯ ಮದುವೆಗಳು, ತೆರತೆರನ ಪುತ್ರರು ಅನುಲೋಮ ವಿವಾಹಗಳಿಗೆ ದೊರೆತ ಅನುಮತಿ ಮತ್ತು ಪಿತೃಸವರ್ಣದ ತತ್ತ್ವ ನಿರೂಪಣೆ ಎಲ್ಲವನ್ನೂ ಗಣನೆಗೆ ತೆಗೆದುಕೊಂಡು, ವರ್ಣ ಪದ್ಧತಿಯನ್ನು ಒಂದು ಗೋಪ್ಯ ಪದ್ಧತಿಯನ್ನಾಗಿ ಉಳಿಸಿಕೊಳ್ಳಬೇಕೆಂದು ಬ್ರಾಹ್ಮಣರು ಬಯಸಿದರೂ ಅದು ಬಹಿರಂಗ ಪದ್ಧತಿಯಾಗೇ ಉಳಿದದ್ದನ್ನು

ಕೇವಲ ಕೆಲವೇ ಮಂದಿ ಮನಗಂಡದ್ದು ಶೋಚನೀಯ. ವರ್ಣಪದ್ಧತಿಯಲ್ಲಿ ಅನೇಕ ಹುಳುಕುಗಳಿದ್ದವು ಎಂದು ಹೇಳಬೇಕು.

ಕೆಲವು ಸ್ವರೂಪದ ಮದುವೆಗಳಿಗೂ, ವರ್ಣವಾದಕ್ಕೂ ಏನೂ ಸಂಬಂಧವಿರಲಿಲ್ಲ. ನಿಜವಾಗಿಯೂ ಅದು ಸಾಧ್ಯವಿರಲಿಲ್ಲ. ರಾಕ್ಷಸ ಮತ್ತು ಪೈಶಾಚ ವಿವಾಹಗಳು ಬಹುಶಃ ಗಂಡಸರು ಕೀಳು ವರ್ಣಕ್ಕೂ ಹೆಂಗಸರು ಉತ್ತಮ ವರ್ಣಕ್ಕೂ ಸೇರಿದವರ ವಿವಾಹಗಳು. ಪುತ್ರತ್ವಕ್ಕೆ ಸಂಬಂಧಿಸಿದ ಕಾನೂನು, ಶೂದ್ರರ ಪುತ್ರರು ಬ್ರಾಹ್ಮಣರ ಪುತ್ರರಾಗಿ ಪರಿಗಣಿಸಲ್ಪಡಲು ಅವಕಾಶವಿಲ್ಲದಂತೆ ಮಾಡಿದೆ. ಉದಾಹರಣೆಗೆ ಗುಧಜರು, ಸಹೋಧಜರು, ಕಾನೀನ ಮುಂತಾದ ಪುತ್ರರನ್ನು ತೆಗೆದುಕೊಳ್ಳಿ; ಅವರು ಶೂದ್ರ ಅಥವಾ ಬ್ರಾಹ್ಮಣರಿಂದ, ಕ್ಷತ್ರಿಯ ಅಥವಾ ವೈಶ್ಯರಿಂದ ಹುಟ್ಟಿದವರಲ್ಲ ಎಂದು ಯಾರು ಹೇಳಲು ಸಾಧ್ಯ? ಈ ವಿಷಯಗಳಲ್ಲಿ ಏನೇ ಅನುಮಾನವಿದ್ದರೂ, ಕಾನೂನಿನ ಒಪ್ಪಿಗೆ ಪಡೆದಿರುವ ಅನುಲೋಮ ಪದ್ಧತಿಯ ವಿವಾಹವು, ಪಿತೃಸವರ್ಣ್ಯ ನಿಯಮದೊಡನೆ ಸೇರಿಕೊಂಡು, ಕೀಳು ವರ್ಣಗಳೂ ಮೇಲಿನ ವರ್ಣಗಳಿಗೆ ಹಾದುಹೋಗುವುದಕ್ಕೆ ಅವಕಾಶ ಕೊಡುವ, ವರ್ಣಪದ್ಧತಿಯನ್ನು ಹಾಗೆಯೇ ಉಳಿಸಿಕೊಳ್ಳುವ ಧನಾತ್ಮಕ ಪರಿಣಾಮವನ್ನೂ ಹೊಂದಿತ್ತು. ಒಬ್ಬ ಶೂದ್ರ, ಬ್ರಾಹ್ಮಣ, ಕ್ಷತ್ರಿಯ ಅಥವಾ ವೈಶ್ಯನಾಗಲಿಕ್ಕಾಗಲಿಲ್ಲ. ಆದರೆ ಒಬ್ಬ ಶೂದ್ರ ಹೆಂಗಸಿನ ಮಗ ಆಕೆ ವೈಶ್ಯನೊಂದಿಗೆ ಮದುವೆಯಾದರೆ ವೈಶ್ಯನಾಗಬಹುದು, ಕ್ಷತ್ರಿಯನೊಂದಿಗೆ ಮದುವೆಯಾದರೆ ಬ್ರಾಹ್ಮಣನೂ ಆಗಬಹುದು. ಅದನ್ನು ಮಾಡುವ ವಿಧಾನ ನೇರವಾಗಿಲ್ಲದಿದ್ದರೂ ಕೆಳವರ್ಗದ ಮೇಲೇರುವಿಕೆ ಮತ್ತು ಉಚ್ಚವರ್ಗದಲ್ಲಿ ಅದರ ಸೇರ್ಪಡೆ, ಸ್ಪಷ್ಟವು ಮತ್ತು ನಿಶ್ಚಯವೂ ಆಗಿತ್ತು. ಇದು ಹಳೇ ಪದ್ಧತಿಯ ಒಂದು ಪರಿಣಾಮ. ಇನ್ನೊಂದು ಪರಿಣಾಮವೆಂದರೆ, ಒಂದು ವರ್ಣದ ಜನಾಂಗ ಯಾವಾಗಲೂ ಒಂದು ಮಿಶ್ರ ಮತ್ತು ಸಂಘಟಿತ ಜನಾಂಗವಾಗಿದ್ದುದು. ಬ್ರಾಹ್ಮಣ ಸಮಾಜವು ತನಗೆ ಸೇರಿರುವ ಎಲ್ಲಾ ಹಕ್ಕು ಮತ್ತು ಸೌಲಭ್ಯಗಳಿಗೂ ಅರ್ಹರಾಗುವ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಹೆಂಗಸರಿಗೆ ಜನಿಸಿದ ಮಕ್ಕಳನ್ನು ಸಂಭಾವ್ಯವಾಗಿ ಒಳಗೊಂಡಿರಲು ಸಾಧ್ಯ. ಒಂದು ಕ್ಷತ್ರಿಯ ಸಮಾಜವು ತನಗೆ ಸೇರಿದ ಎಲ್ಲಾ ಹಕ್ಕು ಮತ್ತು ಸೌಲಭ್ಯಗಳಿಗೂ ಅರ್ಹರಾಗುವ ಕ್ಷತ್ರಿಯರೆಂದೇ ಪರಿಗಣಿಸಲ್ಪಡುವ ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಸ್ತ್ರೀಯರಿಗೆ ಜನಿಸಿದ ಮಕ್ಕಳನ್ನು ಸಂಭಾವ್ಯವಾಗಿ ಒಳಗೊಂಡಿರಲು ಸಾಧ್ಯ. ಹಾಗೆಯೇ ವೈಶ್ಯ ಸಮಾಜವು ತನ್ನ ಎಲ್ಲಾ ಹಕ್ಕು ಮತ್ತು ಸೌಲಭ್ಯಗಳಿಗೂ ಅರ್ಹರಾಗುವ ಮತ್ತು ವೈಶ್ಯರೆಂದೇ ಪರಿಗಣಿಸಲ್ಪಡುವ ವೈಶ್ಯ ಮತ್ತು ಶೂದ್ರ ಹೆಂಗಸರಿಗೆ ಜನಿಸಿದ ಮಕ್ಕಳನ್ನು ಸಂಭಾವ್ಯವಾಗಿ ಒಳಗೊಂಡಿರಲು ಸಾಧ್ಯ.

ಮನು ಮಾಡಿರುವ ಮಾರ್ಪಾಟು ಹಿಂದೂ ಧರ್ಮದ ಮೂಲಭೂತ ಭಾವನೆಗಳಿಗೆ ವಿರುದ್ಧವಾಗಿದೆ. ಮೊದಲನೆಯದಾಗಿ, ಅದು ಹಿಂದೂ ಧರ್ಮದ ಕ್ಷೇತ್ರ – ಕ್ಷೇತ್ರಜ ನಿಯಮಕ್ಕೆ ವಿರುದ್ಧವಾಗಿದೆ. ಮಗುವಿನ ಆಸ್ತಿಯ ಪ್ರಶ್ನೆಯನ್ನು ಪರಿಗಣಿಸುವ ಈ ನಿಯಮದಂತೆ, ಮಗುವಿನ ಒಡೆಯನು, ಮಗುವಿನ ತಾಯಿಯ ನ್ಯಾಯಬದ್ಧ ಪತಿಯೇ ಹೊರತು, ಮಗುವಿನ ವಾಸ್ತವಿಕ ತಂದೆಯಲ್ಲ. ಮನುವಿಗೆ ಈ ವಾದದ ಅರಿವಿದೆ. ಆತ್ಮ, ಅದನ್ನು ಈ ಕೆಳಗಿನಂತೆ ವಿವರಿಸುತ್ತಾನೆ.[೧]

---

೧. ಮೆಯಿನ್: 'ಹಿಂದೂ ಲಾ'. ಪು. ೮೩.

"ಹೀಗೆ ವಿವಾಹಸಂಬಂಧದ ಆಸ್ತಿಯನ್ನು ಹೆಂಡತಿಯಿಂದ ಪಡೆಯದ ಪುರುಷರು, ಬೇರೆಯವರಿಗೆ ಸೇರಿದ ಭೂಮಿಯಲ್ಲಿ ಬೀಜ ಬಿತ್ತಿ ಗಂಡಂದಿರಿಗಾಗಿ ಫಲವನ್ನು ಪಡೆಯಬಹುದು. ಆದರೆ ಫಲವನ್ನು ಉತ್ಪತ್ತಿ ಮಾಡಿದವನಿಗೆ ಅದರಿಂದ ಏನೂ ಪ್ರಯೋಜನವಿಲ್ಲ. ಭೂ ಒಡೆಯ ಮತ್ತು ಬೀಜದ ನಡುವೆ ಒಂದು ವಿಶೇಷ ಒಪ್ಪಂದವಿಲ್ಲದ ಹೊರತು; ಆಶ್ರಯ ಸ್ಥಾನ, ಬೀಜಕ್ಕಿಂತ ಹೆಚ್ಚು ಪ್ರಮುಖವಾದ್ದರಿಂದ ಫಲವು ನಿರ್ವಿವಾದವಾಗಿ ಭೂಒಡೆಯನಿಗೆ ಸೇರತಕ್ಕದು."

ಹನ್ನೆರಡು ಬಗೆಯ ಪುತ್ರರ ಹಕ್ಕು ಆಧಾರಿತವಾಗಿರುವುದು ಈ ವಾದದ ಮೇಲೆಯೇ. ಈ ಬದಲಾವಣೆ ಕೂಡ 'ಪಾಟ್ನ ಪೊಟೆಸ್ಟಾಸ್' ನಿಯಮಕ್ಕೂ ವಿರುದ್ಧವಾಗಿತ್ತು. ಹಿಂದೂ ಕುಟುಂಬ ರೋಮನ್ ಕುಟುಂಬದಂತೆ ಪಿತೃಪ್ರಧಾನವಾದುದು. ಎರಡರಲ್ಲೂ ಪಿತೃವು ಕುಟುಂಬದ ಇತರ ಸದಸ್ಯರ ಮೇಲೆ ಕೆಲವು ಅಧಿಕಾರವುಳ್ಳವನು. ಮನುವಿಗೆ ಇದರ ಅರಿವಿದ್ದು, ಅದನ್ನು ವಿಪುಲ ಪದಗಳಿಂದ ಮಾನ್ಯ ಮಾಡಿದ್ದಾನೆ. ಹಿಂದೂ ಪಿತೃವಿನ ಹಕ್ಕನ್ನು ನಿರೂಪಿಸುತ್ತಾ ಮನು ಹೀಗೆ ಹೇಳಿದ್ದಾನೆ:

"ಒಬ್ಬ ಹೆಂಡತಿ, ಒಬ್ಬ ಮಗ ಮತ್ತು ಸೇವಕ ಈ ಮೂರು ವ್ಯಕ್ತಿಗಳೂ ಅವರ ಸ್ವಂತ ಆಸ್ತಿಯನ್ನು ಹೊಂದಿರಲಾರರೆಂದು ನಿಯಮ ಸಾರುತ್ತದೆ. ಅವರು ಗಳಿಸಬಹುದಾದ ಸಂಪತ್ತು, ತಾವು ಯಾರಿಗೆ ಸೇರಿರುತ್ತಾರೋ ಅವರಿಗೆ ಕ್ರಮವಾಗಿ ಸೇರಿದ್ದು."

ಅವರು ಕುಟುಂಬದ ಮುಖ್ಯಸ್ಥನಿಗೆ ಅಂದರೆ ತಂದೆಗೆ ಸೇರಿದವರು. 'ಪಾಟ್ನ ಪೊಟೆಸ್ಟಾಸ್' ನಿಯಮದಂತೆ, ಮಗನ ಸಂಪಾದನೆ ತಂದೆಯ ಆಸ್ತಿ. ಪಿತೃ ಸಂಬಂಧದ ನಿಯಮ ಬದಲಾವಣೆ ಅಂದರೆ ತಂದೆಗೆ ನಿರ್ದಿಷ್ಟವಾದ ನಷ್ಟ.

ಮನುವು ನಿಯಮವನ್ನು ಪಿತೃಸವರ್ಣ್ಯದಿಂದ ಮಾತೃಸವರ್ಣ್ಯಕ್ಕೆ ಬದಲಾಯಿಸಿದ್ದೇಕೆ?

* * * *

# ಒಗಟು – ೨೦

## ಕಲಿವರ್ಜ್ಯ ಅಥವಾ ಪಾಪವನ್ನು ಪಾಪವೆಂದು ಕರೆಯದೆ ಅದರ ಕಾರ್ಯಾಚರಣೆಯನ್ನು ತಡೆಹಿಡಿಯುವ ಬ್ರಾಹ್ಮಣೀಯ ಕೌಶಲ್ಯ

ಕಲಿವರ್ಜ್ಯ ಎಂಬ ಬ್ರಾಹ್ಮಣೀಯ ಸಿದ್ಧಾಂತವನ್ನು ಕೇಳಿರುವವರು ವಿರಳ. ಇದನ್ನು ಇನ್ನೊಂದು ಬ್ರಾಹ್ಮಣೀಯ ಸಿದ್ಧಾಂತವಾದ ಕಲಿಯುಗದೊಡನೆ ಗೊಂದಲಕ್ಕೀಡುಮಾಡಬೇಕಿಲ್ಲ. ಕಲಿವರ್ಜ್ಯ ಸಿದ್ಧಾಂತವು ಬೇರೆ ಯುಗಗಳಲ್ಲಿ ಕ್ರಮಬದ್ಧವೂ, ಒಳ್ಳೆಯದೂ ಆಗಿದ್ದ ಪದ್ಧತಿಗಳು ಮತ್ತು ವ್ಯವಹಾರಗಳನ್ನು ಕಲಿಯುಗದಲ್ಲಿ ಅನುಸರಿಸಬೇಕಿಲ್ಲ ಎಂದು ವಿಧಿಸುತ್ತದೆ. ಈ ಸೂಚನೆಗಳಿಗೆ ಸಂಬಂಧಪಟ್ಟ ಉಲ್ಲೇಖಗಳು ಬೇರೆ ಬೇರೆ ಪುರಾಣಗಳಲ್ಲಿ ಹರಡಿ ಹೋಗಿವೆ. ಆದರೆ ಆದಿತ್ಯ ಪುರಾಣವು, ಇವುಗಳನ್ನೆಲ್ಲಾ ಸಂಗ್ರಹಿಸಿ, ಒಂದು ಕಡೆ ಒಟ್ಟಿಗೆ[೧] ಸೇರಿಸಿದೆ.

ಕಲಿವರ್ಜ್ಯ ನಡವಳಿಕೆಗಳನ್ನು ಈ ಕೆಳಗೆ ಕೊಡಲಾಗಿದೆ;

೧. ವಿಧವೆಯಿಂದ ಮಗನನ್ನು ಪಡೆಯುವುದಕ್ಕೆ ಆಕೆಯ ಗಂಡನ ಸೋದರನನ್ನು ನಿಯಮಿಸುವುದು.
೨. ಮದುವೆಯಾದ ಹುಡುಗಿಯ ನಿಷೇಕಕ್ಕೆ ಮುಂಚೆ ಮತ್ತು ನಿಷೇಕವಾದ ಇನ್ನೊಬ್ಬಳ ಮೊದಲನೆ ಗಂಡನ ಮರಣಾನಂತರ, ಇನ್ನೊಬ್ಬ ಗಂಡನೊಡನೆ ಮರುವಿವಾಹ.
೩. ಮೂರು ವಿಧದ ದ್ವಿಜರೊಡನೆ ವಿವಿಧ ವರ್ಣದ ಹುಡುಗಿಯರ ವಿವಾಹ.
೪. ನೇರಹೋರಾಟದಲ್ಲಿ ಕೂಡ, ಹತಾಶರಾದ ಬ್ರಾಹ್ಮಣರನ್ನು ಕೊಲ್ಲುವಿಕೆ.
೫. ಪ್ರಾಯಶ್ಚಿತ್ತ ಮಾಡಿಕೊಂಡ ಮೇಲೂ, ಸಮುದ್ರಯಾನ ಮಾಡುವ ಪರಿಪಾಠ ಬೆಳೆಸಿಕೊಂಡಿರುವ ದ್ವಿಜನನ್ನು ಸಹಪಂಕ್ತಿಭೋಜನ ಮೊದಲಾದ ಸಾಮಾಜಿಕ ವ್ಯವಹಾರಗಳಿಗಾಗಿ ಅಂಗೀಕಾರ.
೬. ಸತ್ರಕ್ಕಾಗಿ ಉಪಕ್ರಮಣ.
೭. ಕಮಂಡಲವನ್ನು ಸ್ವೀಕರಿಸುವುದು.
೮. ಬೃಹತ್ ಪ್ರಯಾಣವನ್ನು ಪ್ರಾರಂಭಿಸುವುದು.
೯. ಗೋಮೇಧ ಎಂಬ ಯಜ್ಞದಲ್ಲಿ ಗೋವನ್ನು ಕೊಲ್ಲುವುದು.
೧೦. ಶ್ರೌತಮುನಿ ಯಜ್ಞದಲ್ಲೂ ಮದ್ಯಪಾನ ಸ್ವೀಕರಿಸುವುದು.

---

*ಇದು ಗ್ರಂಥಕರ್ತನ ಅನೇಕ ತಿದ್ದುಪಡಿಗಳುಳ್ಳ ಒಂಬತ್ತು ಪುಟಗಳ ಬೆರಳಚ್ಚು ಪ್ರತಿ. ಎಲ್ಲಾ ೪೩ ಕಲಿವರ್ಜ್ಯಗಳ ಮೇಲಿನ ಟಿಪ್ಪಣಿಗಾಗಿ, ಈ ವಿಭಾಗದ ಒಂದನೇ ಅನುಬಂಧದ ಟಿಪ್ಪಣಿಯನ್ನು ನೋಡಿ – ಸಂ.*

---

೧. ಇವುಗಳನ್ನು ನಾನು ಮಹಾಮಹೋಪಾಧ್ಯಾಯ ಕಾಣೆಯವರ ಬರವಣಿಗೆಯಿಂದ ತೆಗೆದುಕೊಂಡಿದ್ದೇನೆ.

೧೧-೧೨. ಅಗ್ನಿಹೋತ್ರಕ್ಕೆ ಅರ್ಪಿಸಿದ ನೈವೇದ್ಯವನ್ನು ಚೂರೂ ಉಳಿಯದಂತೆ ಸೌಟನ್ನು ನೆಕ್ಕುವುದು ಮತ್ತು ಆ ಸೌಟನ್ನು ಮತ್ತೆ ಅಗ್ನಿಹೋತ್ರದಲ್ಲಿ ಉಪಯೋಗಿಸುವುದು.

೧೩. ಶಾಸ್ತ್ರನಿಯಮದಂತೆ ವಾನಪ್ರಸ್ಥಾಶ್ರಮವನ್ನು ಪ್ರವೇಶಿಸುವುದು.

೧೪. ಒಬ್ಬ ಮನುಷ್ಯನ ನಡತೆ ಮತ್ತು ವೇದಪಾರಂಗತೆಯ ಆಧಾರದ ಮೇಲೆ ಜನನ ಮರಣದ ಮೈಲಿಗೆಯ ಕಾಲವನ್ನು ಕಡಿಮೆ ಮಾಡುವುದು.

೧೫. ಪ್ರಾಯಶ್ಚಿತ್ತವಾಗಿ ಬ್ರಾಹ್ಮಣರಿಗೆ ಮರಣ ವಿಧಿಸುವುದು.

೧೬. ಚಿನ್ನ ಕಳ್ಳತನ ಮತ್ತು ಮಹಾಪಾತಕ ಅಪರಾಧಕ್ಕೆ ಗುರಿಯಾದವರೊಡನೆ ಸಂಪರ್ಕವಿಟ್ಟುಕೊಂಡ ಪಾಪಗಳನ್ನುಳಿದು ಇತರೆ ಪ್ರಾಣಹರಣ ಪಾಪಗಳನ್ನು ರಹಸ್ಯವಾಗಿ ಮಾಡಿಕೊಂಡ ಪ್ರಾಯಶ್ಚಿತ್ತದ ಮೂಲಕ ಪರಿಹರಿಸುವುದು.

೧೭. ಮಂತ್ರೋಚ್ಚಾರಣೆಯೊಡನೆ ಪ್ರಾಣಿಗಳ ಮಾಂಸವನ್ನು ಮದುವಣಿಗನಿಗೆ, ಅತಿಥಿಗೆ ಮತ್ತು ಪಿತೃಗಳಿಗೆ ಅರ್ಪಿಸುವುದು.

೧೮. ಔರಸ ಮತ್ತು ದತ್ತುಪುತ್ರರಲ್ಲದೆ ಇತರರನ್ನು ಪುತ್ರರೆಂದು ಒಪ್ಪಿಕೊಳ್ಳುವುದು.

೧೯. ಉಚ್ಚಜಾತಿಯ ಹೆಂಗಸರೊಡನೆ ಸಂಭೋಗ ಮಾಡಿದ ಪಾಪಕ್ಕೆ ಗುರಿಯಾದವರೊಡನೆ ಅಂತಹ ಪಾಪಕ್ಕೆ ಪ್ರಾಯಶ್ಚಿತ್ತ ಮಾಡಿಕೊಂಡರೂ, ಅವರೊಡನೆ ಸಾಮಾನ್ಯ ವ್ಯವಹಾರ.

೨೦. ತೀವ್ರ ನಿಷಿದ್ಧಕ್ಕೊಳಗಾದವನ ಜತೆಯಲ್ಲಿ ಸಂಭೋಗಿಸಿದ ಒಬ್ಬ ವ್ಯಕ್ತಿ ಅಥವಾ ಗೌರವಕ್ಕೆ ಪಾತ್ರನಾದವನ ಹೆಂಡತಿಯನ್ನು ತೊರೆಯುವುದು.

೨೧. ಬೇರೊಬ್ಬನಿಗಾಗಿ ತಾನು ಆತ್ಮಹತ್ಯೆ ಮಾಡಿಕೊಳ್ಳುವುದು.

೨೨. ಒಬ್ಬನು ಉಪಯೋಗಿಸಿ ಬಿಟ್ಟ ಆಹಾರವನ್ನು ತ್ಯಜಿಸುವುದು.

೨೩. ಹಣ ತೆಗೆದುಕೊಂಡು ಜೀವನಪರ್ಯಂತ ಒಂದು ನಿರ್ದಿಷ್ಟ ಮೂರ್ತಿಯನ್ನು ಪೂಜಿಸಲು ನಿರ್ಧರಿಸುವುದು.

೨೪. ಸುಟ್ಟು ಕರಕಲಾದ ಮೂಳೆಗಳನ್ನು ಶೇಖರಿಸಿದ ಮೇಲೆ ಸಾವಿನ ಮೈಲಿಗೆಯಲ್ಲಿರುವ ವ್ಯಕ್ತಿಗಳ ದೇಹವನ್ನು ಸ್ಪರ್ಶಿಸುವುದು.

೨೫. ಅಹುತಿಯಾಗಿ ಅರ್ಪಿಸುವ ಪ್ರಾಣಿಗಳನ್ನು ಬ್ರಾಹ್ಮಣರು ತಾವೇ ವಧಿಸುವುದು.

೨೬. ಮೂರು ದಿನಗಳವರೆಗೆ, ಆರು ಸಾರಿ ಊಟವಿಲ್ಲದೆ ಬ್ರಾಹ್ಮಣ ಶೂದ್ರನಿಂದಲಾದರೂ ಊಟ ಪಡೆಯಬಹುದು.

೨೭. ಬ್ರಾಹ್ಮಣನಿಂದ ಸೋಮಸಸ್ಯದ ಮಾರಾಟ.

೨೮. ಒಬ್ಬ ಬ್ರಾಹ್ಮಣ ಗೃಹಸ್ಥರು, ತನ್ನ ಸೇವಕರು, ದನ ಕಾಯುವವರು, ವಂಶಪಾರಂಪರ್ಯವಾಗಿ ಬಂದ ಸ್ನೇಹಿತರು, ಬೆಳೆದು ಒಂದು ಭಾಗವನ್ನು ಕೊಡಲು ಒಪ್ಪಿ ಆತನ ಜಮೀನು ಸಾಗುವಳಿ ಮಾಡುವವರು ಶೂದ್ರರಾದವರೂ, ಅವರು ತಯಾರಿಸಿದ ಊಟವನ್ನು ಸ್ವೀಕರಿಸಲು ಅನುಮತಿ.

೨೯. ಬಹುದೂರದ ಯಾತ್ರೆ ಕೈಗೊಳ್ಳುವುದು.

೩೦. ಸ್ಮೃತಿಯಲ್ಲಿ ನಿರ್ದೇಶಿಸಿರುವಂತೆ, ಒಬ್ಬ ಶಿಷ್ಯನು ತನ್ನ ಗುರುವಿನೊಡನೆ ವರ್ತಿಸುವಂತೆಯೇ ಗುರುವಿನ ಪತ್ನಿಯೊಡನೆಯೂ ವರ್ತಿಸುವುದು.

೩೧. ಆಪತ್ಕಾಲದಲ್ಲಿ ಬ್ರಾಹ್ಮಣರು ನಿಕೃಷ್ಟ ಉದ್ಯೋಗಗಳನ್ನು ಕೈಗೊಂಡು ಜೀವನ ಸಾಗಿಸುವುದು ಮತ್ತೆ ನಾಳೆಗಾಗಿ ಕೂಡಿಡುವುದಕ್ಕೆ ಲಕ್ಷ್ಯ ನೀಡಲಿಚ್ಛಿಸದ ಬ್ರಾಹ್ಮಣನ ಜೀವನೋಪಾಯ ವಿಧಾನ.

೩೨. ಒಂದು ಮಗುವಿನ ಜಾತಕರ್ಮದಿಂದ ಹಿಡಿದು ಆತನ ವಿವಾಹದವರೆಗಿನ ಎಲ್ಲಾ ಸಂಪ್ರದಾಯಗಳನ್ನು ನೆರವೇರಿಸುವ ಸಲುವಾಗಿ, ಜಾತಕರ್ಮದಲ್ಲಿ ನಡೆಯುವ ಹೋಮದಲ್ಲಿ ಅರಣಿ (ಬೆಂಕಿ ಉತ್ಪತ್ತಿ) ಮಾಡಲು ಉಪಯೋಗಿಸುವ ಎರಡು ಮರದ ಪಟ್ಟಿಗಳನ್ನು ಬ್ರಾಹ್ಮಣರು ಸ್ವೀಕರಿಸುವುದು.

೩೩. ಬ್ರಾಹ್ಮಣರಿಂದ ನಿರಂತರ ಪ್ರಯಾಣ.

೩೪. ಬೆಂಕಿಯನ್ನು ಬಾಯಿಂದ ಊದುವುದು (ಬೊಂಬಿನ ಕೊಳವೆಯನ್ನು ಉಪಯೋಗಿಸದೆ).

೩೫. ಬಲಾತ್ಕಾರ ಸಂಭೋಗದಿಂದ ಅಶುದ್ಧರಾದ ಸ್ತ್ರೀಯರು (ಪ್ರಾಯಶ್ಚಿತ್ತ ಮಾಡಿಕೊಂಡ ಮೇಲೆ) ಶಾಸ್ತ್ರೀಯ ಗ್ರಂಥಗಳಲ್ಲಿ ಪ್ರಸಿದ್ಧಪಡಿಸಿರುವಂತೆ ಸ್ವತಂತ್ರವಾಗಿ ಬೇರೆ ಜಾತಿಗಳಲ್ಲಿ ಬೆರೆಯಲು ಅನುಮತಿ ನೀಡುವುದು.

೩೬. ಒಬ್ಬ ಸನ್ಯಾಸಿಯು, ಶೂದ್ರರೂ ಸೇರಿದಂತೆ, ಎಲ್ಲರಿಂದಲೂ ಆಹಾರ ಬೇಡುವುದು.

೩೭. ಹೊಸದಾಗಿ ಭೂಮಿಯನ್ನು ಅಗೆದು ತೆಗೆದ ನೀರನ್ನು ಉಪಯೋಗಿಸದೆ ಹತ್ತು ದಿನಗಳವರೆಗೆ ಕಾಯುವುದು.

೩೮. ಶಾಸ್ತ್ರದಲ್ಲಿ ನಿಗದಿ ಮಾಡಿರುವಂತೆ, ಅಭ್ಯಾಸ ಮುಗಿದಮೇಲೆ, ಉಪಾಧ್ಯಾಯರು ಕೇಳಿದ ಶುಲ್ಕ ನೀಡುವುದು.

೩೯. ಬ್ರಾಹ್ಮಣರು ಮತ್ತು ಉಳಿದವರ ಅಡಿಗೆಯವರಾಗಿ ಶೂದ್ರರನ್ನು ನೇಮಿಸುವುದು.

೪೦. ವೃದ್ಧರು ಪ್ರಪಾತದಿಂದ ಬೆಂಕಿಗೆ ಬಿದ್ದು ಆತ್ಮಹತ್ಯೆ ಮಾಡಿಕೊಳ್ಳುವುದು.

೪೧. ಒಂದು ಹಸುವು ಕಂಠಪೂರ್ತಿ ಕುಡಿದುಳಿದ ನೀರಿನಿಂದ, ಗೌರವಾನ್ವಿತರು ಆಚಮನವನ್ನು ನೆರವೇರಿಸುವುದು.

೪೨. ತಂದೆ ಮತ್ತು ಮಗನ ಮಧ್ಯದ ವಿವಾದದಲ್ಲಿ ಸಾಕ್ಷಿ ಹೇಳುವವನಿಗೆ ದಂಡಹಾಕುವುದು.

೪೩. ಸನ್ಯಾಸಿಯು ಸಂಧ್ಯಾಕಾಲದಲ್ಲಿ ಯಾವ ಸ್ಥಳದಲ್ಲಿರುವನೋ ಅಲ್ಲೇ ತಂಗಬೇಕು.

ಈ ಕಲಿವರ್ಜ್ಯ ನಿಯಮದ ವಿಚಿತ್ರವೇನೆಂದರೆ, ಅದರ ಮಹತ್ವವು ಪೂರ್ಣವಾಗಿ ಪ್ರಶಂಸಿಸಲ್ಪಟ್ಟಿಲ್ಲ. ಇದನ್ನು ಕಲಿಯುಗದಲ್ಲಿ ನಿಷೇಧಿಸಲ್ಪಟ್ಟ, ಕೆಲವು ವಿಷಯಗಳ ಪಟ್ಟಿ ಎಂದು ಉಲ್ಲೇಖಿಸಲಾಗಿದೆ. ಆದರೆ ನಿಷೇಧಿಸಲ್ಪಟ್ಟ ಕೆಲಸಗಳ ಈ ಪಟ್ಟಿಯ ಹಿಂದೆ ಇದಕ್ಕಿಂತಲೂ ಹೆಚ್ಚು ಅರ್ಥವಿದೆ. ಅಂತೂ, ಕಲಿವರ್ಜ್ಯ ನಿಯಮದಲ್ಲಿ ಸೇರಿಸಿರುವ ಸಂಪ್ರಧಾಯಗಳನ್ನು ಜನತೆ ಅನುಸರಿಸಲು ನಿಷೇಧವಂತೂ ಇದೆ. ಹೇಗಾದರೂ, ಪ್ರಶ್ನೆ ಹೀಗಿದೆ:

ಈ ಸಂಪ್ರದಾಯಗಳು ಅನೀತಿಯುತ, ಪಾಪಯುಕ್ತ ಅಥವಾ ಬೇರೆ ರೀತಿಯಲ್ಲಿ ಸಮಾಜಕ್ಕೆ ಹಾನಿಕಾರಕ ಎಂಬ ಕಾರಣದಿಂದ ಖಂಡನಾರ್ಹವಾಗಿವೆಯೇನು? ಇದಕ್ಕೆ ಉತ್ತರ ಇಲ್ಲ. ಈ ಸಂಪ್ರದಾಯಗಳು ನಿಷೇಧಿಸಲ್ಪಟ್ಟಿದ್ದರೆ, ಖಂಡನೆಗೊಳಪಟ್ಟಿಲ್ಲವೇಕೆ? ಎಂಬುದನ್ನು ಜನಸಾಮಾನ್ಯ ತಿಳಿಯಬಯಸುತ್ತಾನೆ. ಕಲಿವರ್ಜ್ಯ ನಿಯಮದ ಒಗಟು ಹುದುಗಿರುವುದು ಇಲ್ಲೇ. ಒಂದು ವ್ಯವಹಾರವನ್ನು ನಿಷೇಧಿಸಿಯೂ,

ಅದನ್ನು ತೆಗಳದ ತಂತ್ರವು, ಹಿಂದಿನ ಕಾಲದಲ್ಲಿ ಅನುಸರಿಸಿದ ವಿಧಾನಕ್ಕೆ ತೀರಾ ವಿರುದ್ಧವಾಗಿ ನಿಂತಿದೆ. ಒಂದು ಉದಾಹರಣೆ ತೆಗೆದುಕೊಳ್ಳೋಣ. ಆಪಸ್ತಂಭ ಧರ್ಮಸೂತ್ರವು, ಎಲ್ಲಾ ಆಸ್ತಿಯನ್ನೂ ಜ್ಯೇಷ್ಠಪುತ್ರನಿಗೆ ಕೊಡುವ ಪದ್ಧತಿಯನ್ನು ನಿಷೇಧಿಸುತ್ತದೆ. ಆದರೆ ಆತ ಅದನ್ನು ತೆಗಳಿದ್ದಾನೆ. ನಿಷೇಧಿಸಲ್ಪಟ್ಟ ಆದರೆ ಖಂಡನೆಗೊಳಪಡದ ಈ ನವತಂತ್ರವನ್ನು ಬ್ರಾಹ್ಮಣರು ಏಕೆ ನಿರ್ಮಿಸಿದರು? ಈ ಅಪಗಮನಕ್ಕೆ ಯಾವುದೋ ವಿಶೇಷ ಕಾರಣವಿರಲೇಬೇಕು. ಆ ಕಾರಣವಾದರೂ ಏನು?

* * * *

# ಅನುಬಂಧ – I

## ವರ್ಣಾಶ್ರಮ ಧರ್ಮದ ಒಗಟು*

ಹಿಂದೂಧರ್ಮದ ಪ್ರಧಾನ ಭಾಗವಾಗಿ, ವರ್ಣಾಶ್ರಮ ಧರ್ಮವೆಂದು ಒಟ್ಟು ಹೆಸರಿನಲ್ಲಿ ಕರೆಯಲ್ಪಡುವ ಹಿಂದೂ ಧರ್ಮದ ಎರಡು ಸಿದ್ಧಾಂತಗಳಾದ ವರ್ಣಧರ್ಮ ಮತ್ತು ಆಶ್ರಮಧರ್ಮಗಳ ಬಗ್ಗೆ ಮೊದಲೇ ಉಲ್ಲೇಖಿಸಲಾಗಿದೆ. ಈ ವಿಚಿತ್ರವಾದ ಸಿದ್ಧಾಂತಗಳ ಬಗ್ಗೆ ಪುರಾತನ ವ್ಯಾಖ್ಯಾನಕಾರರು ಏನು ಅಭಿಪ್ರಾಯ ನೀಡಿದ್ದಾರೆಂಬುದರ ಬಗ್ಗೆ ಇಲ್ಲಿ ತಿಳಿವಳಿಕೆ ನೀಡುವುದನ್ನು ಬಿಟ್ಟರೆ ಮತ್ತೇನೂ ಉದ್ದೇಶವಿಲ್ಲ.

## I

ವರ್ಣ ಧರ್ಮದಿಂದ ಪ್ರಾರಂಭಿಸೋಣ. ಮೊದಲಿಗೆ ವೇದಗಳಲ್ಲಿ ಹೇಳಿರುವ ಅಭಿಪ್ರಾಯಗಳನ್ನು ಒಟ್ಟಿಗೆ ಸೇರಿಸುವುದು ಒಳ್ಳೆಯದು.

ಈ ವಿಷಯ ಋಗ್ವೇದದ ೧೦ನೇ ಪುಸ್ತಕದ ೯೦ನೇ ಶ್ಲೋಕದಲ್ಲಿ ಉಲ್ಲೇಖಿಸಲ್ಪಟ್ಟಿದೆ. ಅದು ಹೀಗಿದೆ:

೧. ಪುರುಷನಿಗೆ ಸಾವಿರ ತಲೆಗಳು, ಸಾವಿರ ಕಣ್ಣುಗಳು, ಸಾವಿರ ಕಾಲುಗಳು ಇಡಿ ಭೂಮಂಡಲವನ್ನು ಅವನು ಎಲ್ಲಾ ಬಗೆಯಿಂದಲೂ ವ್ಯಾಪಿಸಿ, ಹತ್ತಾರುಪಟ್ಟು ಮೀರಿ ನಿಂತಿದ್ದಾನೆ.

೨. ಪುರುಷನೇ ಸರ್ವವೂ ಆಗಿದ್ದಾನೆ. ಭೂತವೂ, ಭವಿಷ್ಯತ್ತೂ ಅವನೇ ಆಗಿದ್ದಾನೆ. ಅಮರತ್ವಕ್ಕೂ ಅವನೇ ಒಡೆಯ. ಏಕೆಂದರೆ, ಆಮುಕ್ತ ವರ್ಗವನ್ನು ಮೀರಿನಿಂತು ನಿಯಮಿಸುತ್ತಿದ್ದಾನೆ.

೩. ಇಷ್ಟೆಲ್ಲ ಹಿರಿಮೆ ಇರುವುದರಿಂದ ಅವನೇ ಸರ್ವೋತ್ತಮ. ಎಲ್ಲ ಜೀವರಾಶಿಯೂ ಅವನ ಒಂದು ಭಾಗವಾದರೆ, ಉಳಿದ ಮೂರು ಭಾಗ ಅಮೃತವಾಗಿದ್ದು, ದಿವ್ಯಲೋಕದಲ್ಲಿದೆ.

೪. ಮೇಲೆ ಮೂರು ಅಡಿಗಳೂ, ಕೆಳಗೆ ಒಂದು ಅಡಿ ಇರುವವನೂ ಆದ ಅವನು ಎಲ್ಲೆಡೆ ತುಂಬಿ, ತಿನ್ನುವ ತಿನ್ನದ ಎಲ್ಲರನ್ನೂ ಮೀರಿನಿಂತಿದ್ದಾನೆ.

---

* *ಇದು ವರ್ಣಾಶ್ರಮ ಧರ್ಮವೆಂದು ಹೆಸರಿಸಲ್ಪಟ್ಟ ೧೬ ಮತ್ತು ೧೭ನೇ ಒಗಟುಗಳನ್ನು ಕ್ರೋಢೀಕರಿಸಿದ ಕಥನ. ಈ ಶಿರೋನಾಮೆ ಮೂಲ ಪರಿವಿಡಿಗಳ ಪಟ್ಟಿಯಲ್ಲಿ ಕಾಣಿಸಿಕೊಂಡಿಲ್ಲ. ಆದ್ದರಿಂದ ಇದನ್ನು ಅನುಬಂಧವಾಗಿ ಇಲ್ಲಿರಿಸಿದೆ. ಎರಡು ಕಥನಗಳಲ್ಲಿ ಯಾವುದು ತದನಂತರದ್ದು ಎಂದು ಹೇಳುವುದೂ ಕಷ್ಟ. ಎರಡು ಪಾಠಗ್ರಂಥಗಳಲ್ಲೂ ಉದ್ಧರಣಗಳು ಹಾಗೆಯೇ ಉಳಿಸಲ್ಪಟ್ಟಿವೆಯಾದರೂ, ಅವುಗಳ ವಿವರಣೆ ಅನೇಕ ಕಡೆ ಬದಲಾವಣೆ ಮಾಡಲ್ಪಟ್ಟಿವೆ ಎಂದೂ ಕಾಣುತ್ತದೆ. ಇದು ಗ್ರಂಥಕರ್ತನ ಯಾವ ತಿದ್ದುಪಡಿಯೂ ಇಲ್ಲದ ೫೫ ಪುಟಗಳ ಬೆರಳಚ್ಚು ಪ್ರತಿ – ಸಂ.*

೫. ಅವನಿಂದ ವಿರಜ, ವಿರಜನಿಂದ ಪುರುಷ ಸೃಷ್ಟಿಯಾದ. ಸೃಷ್ಟಿಯಾದ ಮೇಲೆ ಭೂಮಿ ಆಕಾಶಗಳನ್ನು ಮೀರಿ ಬೆಳೆದ.

೬. ದೇವತೆಗಳು ಯಜ್ಞ ಮಾಡಿ ಪುರುಷನಿಗೆ ನೈವೇದ್ಯ ಅರ್ಪಿಸಿದಾಗ, ವಸಂತ ಋತುವೇ ತುಪ್ಪವಾಯಿತು. ಬೇಸಿಗೆಯು ಅದರ ಬೆಂಕಿಯಾಯಿತು ಮತ್ತು ಶರತ್ಕಾಲವು ಅದರ ಹವಿಸ್ಸಾಯಿತು.

೭. ಮೊದಲೇ ಹುಟ್ಟಿದ ಈ ಬಲಿಪಶು ಪುರುಷನನ್ನು ಬಲಿಕೊಟ್ಟರು. ಅವನೊಡನೆ ದೇವತೆಗಳು ಸಾಧುಗಳು ಮತ್ತು ಋಷಿಗಳನ್ನು ಬಲಿಕೊಡಲಾಯಿತು.

೮. ಈ ಲೋಕಯಜ್ಞದಿಂದ ಮೊಸರು ಮತ್ತು ತುಪ್ಪ ಉತ್ಪತ್ತಿಯಾದವು. ಅದು ಪಕ್ಷಿಗಳನ್ನೂ ಕಾಡುಪ್ರಾಣಿಗಳನ್ನೂ ಸಾಧು ಪ್ರಾಣಿಗಳನ್ನೂ ಸೃಷ್ಟಿಸಿತು.

೯. ಈ ಯಜ್ಞರಿಂದಲೇ ಋಗ್ ಮತ್ತು ಸಾಮನ್ ಸ್ತೋತ್ರಗಳು, ಛಂದಸ್ಸು ಮತ್ತು ಯಜುಸ್ ಹುಟ್ಟಿದವು.

೧೦. ಅದರಿಂದಲೇ ಕುದುರೆಗಳು ಮತ್ತು ಎರಡು ಸಾಲು ಹಲ್ಲಿನ ಎಲ್ಲಾ ಪ್ರಾಣಿಗಳೂ ಹುಟ್ಟಿದವು. ಆಕಳು ಹುಟ್ಟಿದವು; ಆಡೂ, ಕುರಿಗಳೂ.

೧೧. ದೇವತೆಗಳು ಪುರುಷನನ್ನು ವಿಭಾಗಿಸಿದಾಗ, ಅವನನ್ನು ಎಷ್ಟು ಭಾಗಗಳಾಗಿ ಕೊಯ್ದರು? ಅವನ ಮುಖ ಯಾವುದಿತ್ತು? ಯಾವುದನ್ನು ತೋಳುಗಳಾಗಿ ಪಡೆದ? ತೊಡೆಗಳು ಮತ್ತು ಪಾದಗಳೂ ಎಂಥವು?

೧೨. ಬ್ರಾಹ್ಮಣ ಅವನ ಬಾಯಿ, ರಾಜನ್ಯ ಅವನ ತೋಳುಗಳಾದವು, ವೈಶ್ಯನೇ ಅವನ ತೊಡೆಗಳು, ಶೂದ್ರನು ಅವನ ಪಾದಗಳಿಂದ ಹುಟ್ಟಿದ.

೧೩. ಚಂದ್ರನು ಅವನ ಆತ್ಮ(ಮನಸ್ಸು)ದಿಂದ ಚಿಮ್ಮಿದ, ಸೂರ್ಯ ಅವನ ಕಣ್ಣಿನಿಂದ, ಇಂದ್ರ ಮತ್ತು ಅಗ್ನಿ ಅವನ ಬಾಯಿಯಿಂದ ಮತ್ತು ವಾಯು ಅವನ ಉಸಿರಿನಿಂದ ಹುಟ್ಟಿದರು.

೧೪. ಅವನ ನಾಭಿಯಿಂದ ಅಂತರಿಕ್ಷವೂ, ಅವನ ಶಿರದಿಂದ ಸ್ವರ್ಗವೂ ಅವನ ಚರಣದಿಂದ ಪೃಥ್ವಿ, ಕಿವಿಯಿಂದ ನಾಲ್ಕು ದಿಕ್ಕುಗಳು ಈ ರೀತಿಯಾಗಿ ದೇವತೆಗಳು ಪ್ರಪಂಚಗಳನ್ನು ಸೃಷ್ಟಿಸಿದರು.

೧೫. ಪರುಷನನ್ನು ಬಲಿಪಶುವಾಗಿ ಬಿಗಿದು, ದೇವತೆಗಳು ಯಜ್ಞವನ್ನು ಮಾಡುವಾಗ ಏಳು ಬಗೆಯ ಕಾಷ್ಠಗಳಿದ್ದವು. ಅವುಗಳನ್ನು ಸೀಳಿ ಇಪ್ಪತ್ತೊಂದು ಸಮಿಧಗಳಾನ್ನಾಗಿ ಮಾಡಲಾಯಿತು.

೧೬. ಬಲಿಯೊಡನೆ ದೇವತೆಗಳು ಯಾಗವನ್ನು ನೆರವೇರಿಸಿದರು. ಇವು ಮೊಟ್ಟ ಮೊದಲ ಧರ್ಮಗಳು. ಈ ಮಹಾಶಕ್ತಿಗಳು ಮೊದಲ ಸಾಧ್ಯರು, ದೇವತೆಗಳು ಇರುವ ಸ್ವರ್ಗವನ್ನು ಹೊಂದುವರು. ಪುರುಷ ಸೂಕ್ತವೆಂದು ಕರೆಯಲಾಗುವ ಈ ಸ್ತೋತ್ರವು ವರ್ಣ ಮತ್ತು ಜಾತಿಗಳ ಹುಟ್ಟಿನ ಸಿದ್ಧಾಂತವನ್ನು ಒಳಗೊಂಡಿದೆ.

'ಋಗ್ವೇದ'ದ ಪುರುಷಸೂಕ್ತದಲ್ಲಿ ಪ್ರತಿಪಾದಿಸಲ್ಪಟ್ಟಿರುವ ವರ್ಣ ಪದ್ಧತಿಯ ಉಗಮದ ತತ್ವವನ್ನು ಉಳಿದ ಯಾವ ವೇದಗಳು ಒಪ್ಪಿಕೊಂಡಿವೆ ಎಂಬುದನ್ನು ವಿಚಾರಮಾಡಬೇಕಾದುದು ಮೊದಲನೇ ಕೆಲಸ. ಈ ದೃಷ್ಟಿಯಿಂದ ಬೇರೆ ವೇದಗಳನ್ನು ಪರೀಕ್ಷಿಸಿದುದರಿಂದ ಕಂಡುಬಂದ ಫಲ ಬಹಳ ಆಶ್ಚರ್ಯಕರವಾಗಿ ಕಾಣುತ್ತದೆ. ಸಾಮವೇದವು ತನ್ನ ಸ್ತೋತ್ರಗಳಲ್ಲಿ ಪುರುಷ ಸೂಕ್ತವನ್ನು ಸೇರಿಸಿಲ್ಲ. ವರ್ಣಧರ್ಮದ ಬಗ್ಗೆ ಬೇರೆ ಯಾವ ವಿವರಣೆಯನ್ನೂ ಕೊಟ್ಟಿಲ್ಲ.

ಯಜುರ್ವೇದವು ಈ ವಿಷಯದಲ್ಲಿ ಬಹಳ ಹೆಚ್ಚಿನ ಅಭಿಪ್ರಾಯ ಭೇದವನ್ನು ಪ್ರಕಟಿಸುತ್ತದೆ. ಕೃಷ್ಣ ಯಜುರ್ವೇದದಿಂದ ಶುಕ್ಲ ಯಜುರ್ವೇದವನ್ನು ಪ್ರತ್ಯೇಕವಾಗಿ ತೆಗೆದುಕೊಂಡರೆ, ಲಭ್ಯವಿರುವ ಮೂರು ಸಂಹಿತೆಗಳ ಹೋಲಿಕೆಯಿಂದ ತಿಳಿದುಬಂದ ಪರಿಸ್ಥಿತಿ ಹೀಗಿದೆ. ಈ ಮೂರು ಸಂಹಿತೆಗಳಲ್ಲಿ ಕಥಕ ಮತ್ತು ಮೈತ್ರೇಯಾನಿ ಸಂಹಿತೆಗಳು ಋಗ್ವೇದದ ಪುರುಷ ಸೂಕ್ತದ ಬಗ್ಗೆ ಯಾವ ಉಲ್ಲೇಖವನ್ನೂ ಮಾಡದಿಲ್ಲದಿರುವುದಲ್ಲದೆ, ವರ್ಣಪದ್ಧತಿಯ ವಿಷಯದಲ್ಲಿ ಬೇರೆ ಯಾವ ವಿವರಣೆ ನೀಡಲೂ ಪ್ರಯತ್ನ ಮಾಡಿಲ್ಲ. ಋಗ್ವೇದದ ವಾಜಸನೇಯ ಸಂಹಿತೆ ಮತ್ತು ಪದಪಂಕ್ತಿಗಳನ್ನು ಸ್ಥಳಪಲ್ಲಟ ಮಾಡಿ ಪುರುಷಸೂಕ್ತವನ್ನು ಅಳವಡಿಸಿದೆ. ಆದರೆ ವಾಜಸನೇಯ ಸಂಹಿತೆಯು, ಪುರುಷಸೂಕ್ತದಲ್ಲಿ ಕೊಟ್ಟಿರುವ ವರ್ಣಪದ್ಧತಿಗೆ ತೀರಾ ವಿರುದ್ಧವಾದ ನವೀನವೂ, ಮೂಲಭೂತವೂ ಆದ ವಿವರಣೆಯನ್ನು ನೀಡುತ್ತದೆ.[೧]

"ಆತ ಒಂದು ಸ್ತೋತ್ರಮಾಡಿದ; ಜೀವರಾಶಿ ರೂಪುಗೊಂಡವು; ಪ್ರಜಾಪತಿಯು ದೊರೆಯಾಗಿದ್ದ. ಆತ ಮೂರು ಸ್ತೋತ್ರ ಮಾಡಿದ; ಬ್ರಹ್ಮನು ಸೃಷ್ಟಿಸಲ್ಪಟ್ಟ; ಬ್ರಾಹ್ಮಣಾಸ್ಪತಿ ದೊರೆಯಾಗಿದ್ದ. ಆತ ಐದು ಸ್ತೋತ್ರ ಮಾಡಿದ; ಚರಾಚರಗಳು ಸೃಷ್ಟಿಯಾದವು; ಭೂತನಾಂಪತಿ ದೊರೆಯಾಗಿದ್ದ. ಆತ ಏಳು ಸ್ತೋತ್ರ ಮಾಡಿದ; ಆಗ ಸಪ್ತ ಋಷಿಗಳು ಸೃಷ್ಟಿಸಲ್ಪಟ್ಟರು; ಧಾತ್ರಿಯು ದೊರೆಯಾಗಿದ್ದ. ಆತ ಒಂಬತ್ತು ಸ್ತೋತ್ರ ಮಾಡಿದ; ಪಿತೃಗಳು ಸೃಷ್ಟಿಸಲ್ಪಟ್ಟರು; ಅದಿತಿ ರಾಜನಾಗಿದ್ದ. ಆತ ಹನ್ನೊಂದು ಸ್ತೋತ್ರ ಮಾಡಿದ; ಕ್ಷಾತ್ರ (ಕ್ಷತ್ರಿಯ) ಸೃಷ್ಟಿಸಲ್ಪಟ್ಟನು; ಇಂದ್ರನು ರಾಜನಾಗಿದ್ದ. ಆತ ಹದಿನೇಳು ಸ್ತೋತ್ರ ಮಾಡಿದ; ಪ್ರಾಣಿಗಳು ಸೃಷ್ಟಿಸಲ್ಪಟ್ಟವು; ಬೃಹಸ್ಪತಿಯು ರಾಜನಾಗಿದ್ದ. ಆತ ಹತ್ತೊಂಬತ್ತು ಸ್ತೋತ್ರ ಮಾಡಿದ; ಶೂದ್ರ ಮತ್ತು ವೈಶ್ಯರು ಸೃಷ್ಟಿಸಲ್ಪಟ್ಟರು; ಹಗಲು ರಾತ್ರಿಗಳು ರಾಜರಾಗಿದ್ದವು. ಆತ ಇಪ್ಪತ್ತೊಂದು ಸ್ತೋತ್ರ  ಮಾಡಿದ. ಗೊರಸುಸೀಳದ ಪ್ರಾಣಿಗಳು ಸೃಷ್ಟಿಸಲ್ಪಟ್ಟವು; ವರುಣನು ರಾಜನಾಗಿದ್ದ. ಆತ ಇಪ್ಪತ್ಮೂರು ಮಾಡಿದ; ಸಣ್ಣ ಪ್ರಾಣಿಗಳು ಸೃಷ್ಟಿಸಲ್ಪಟ್ಟವು; ಪೂಷನ್ ರಾಜನಾಗಿದ್ದ. ಆತ ಇಪ್ಪತ್ತೈದು ಸ್ತೋತ್ರ ಮಾಡಿದ; ಕಾಡುಪ್ರಾಣಿಗಳು ಸೃಷ್ಟಿಸಲ್ಪಟ್ಟವು; ವಾಯು ರಾಜನಾಗಿದ್ದ. (ಋ. ವೇ. X, ೯೦.೮ ರೊಡನೆ ಹೋಲಿಸಿ) ಆತ ಇಪ್ಪತ್ತೇಳು ಸ್ತೋತ್ರ ಮಾಡಿದ; ಸ್ವರ್ಗ ಮತ್ತು ಭೂಲೋಕ ಬೇರೆಯಾದವು; ವಸುಗಳು, ರುದ್ರರು ಮತ್ತು ಆದಿತ್ಯರು ಪರಸ್ಪರ ಬೇರೆಯಾದರು; ಅವರು ರಾಜರುಗಳಾಗಿದ್ದರು. ಆತ ಇಪ್ಪತ್ತೊಂಬತ್ತು ಸ್ತೋತ್ರ ಮಾಡಿದ; ವೃಕ್ಷಗಳು ಸೃಷ್ಟಿಸಲ್ಪಟ್ಟವು; ಸೋಮನು ರಾಜನಾಗಿದ್ದ. ಆತ ಮೂವತ್ತೊಂದು ಸ್ತೋತ್ರ ಮಾಡಿದ; ಜೀವರಾಶಿಗಳು ಸೃಷ್ಟಿಸಲ್ಪಟ್ಟವು; ಮಾಸದ ಮೊದಲನೆಯ ಮತ್ತು ಎರಡನೆಯ ಅರ್ಧಗಳು ರಾಜರಾಗಿದ್ದುವು. ಆತ ಮೂವತ್ಮೂರು ಸ್ತೋತ್ರ ಮಾಡಿದ; ಅಸ್ತಿತ್ವದಲ್ಲಿರುವ ಪದಾರ್ಥಗಳು ಶಾಂತಿಗೊಳಿಸಲ್ಪಟ್ಟವು; ಪ್ರಜಾಪತಿ ಪರಮೇಷ್ಠಿಯು ರಾಜನಾಗಿದ್ದನು".

ಕೃಷ್ಣ ಯಜುರ್ವೇದದ ಕಡೆ ನೋಡಿದರೆ, ಅಲ್ಲಿ ಲಭ್ಯವಿರುವ ಒಂದೇ ಒಂದು ಸಂಹಿತೆ ಇದೆ. ಅದು ತೈತ್ತಿರೀಯ ಸಂಹಿತೆ ಎಂದು ಕರೆಯಲ್ಪಟ್ಟಿದೆ. ಈ ಸಂಹಿತೆಯ ಎರಡು ವಿವರಣೆಗಳನ್ನು

---

೧. ಮ್ಯೂರ್: 'ಸ್ಯಾನ್‌ಸ್ಕ್ರಿಟ್ ಟೆಕ್ಸ್ಟ್', ಸಂ. I. ಪು. ೧೮.

ನೀಡುತ್ತದೆ. ಮೊದಲನೆ[1] ವಿವರಣೆಯು ವಾಜಸನೇಯ ಸಂಹಿತೆಯಲ್ಲಿರುವ ಅದರ ಮೂಲ ವಿವರಣೆಯಂತೆಯೇ ಇದೆ. ಎರಡನೇ ವಿವರಣೆಯು ವಾಜಸನೇಯ ಸಂಹಿತೆಯಲ್ಲಿ ಕಾಣದ ಅದರದೇ ಸ್ವಂತ ವಿವರಣೆ. ಅದು ಈ ಕೆಳಕಂಡಂತೆ ಇದೆ[2] "ಆತ (ವ್ರಾತ್ಯ)ನು ಭಾವೋದ್ರೇಕದಿಂದ ಪುಳಕಿತವಾದ. ಅಲ್ಲಿಂದ ರಾಜನ್ಯ ಉದ್ಭವಿಸಿದ."

ಇದನ್ನು ಬಲ್ಲ ವ್ರಾತ್ಯನು ದೊರೆಯ ಮನೆಗೆ ಅತಿಥಿಯಾಗಿ ಬಂದಾಗ, ಆತನನ್ನು ತನಗಿಂತ ಉತ್ತಮನೆಂದು ದೊರೆ ಗೌರವಿಸಬೇಕು. ಹಾಗೆ ಮಾಡುವಾಗ ಆತನ ರಾಜಯೋಗ್ಯ ದರ್ಜೆಗಾಗಲಿ ಅಥವಾ ಅವನ ಸಾಮ್ರಾಜ್ಯಕ್ಕಾಗಲಿ ಘಾಸಿಯಾಗುವುದಿಲ್ಲ. ಅವನಿಂದ ಬ್ರಾಹ್ಮಣ ಮತ್ತು ಕ್ಷತ್ರಿಯರು ಹುಟ್ಟಿದರು. 'ಯಾರೊಳಗೆ ನಾವು ಪ್ರವೇಶಿಸಬೇಕು' ಮುಂತಾಗಿ ಅವರು ಹೇಳಿದರು. ಇಲ್ಲಿ ಮುಖ್ಯವಾದ ವಿಷಯವೆಂದರೆ, ವಾಜಸನೇಯ ಸಂಹಿತೆಯು ಋಗ್ವೇದದ ಪುರುಷಸೂಕ್ತವನ್ನು ಗಣನೆಗೆ ತಂದುಕೊಂಡಿದ್ದರೆ, ತೈತ್ತಿರೀಯ ಸಂಹಿತೆಯು ಅದನ್ನೂ ಗಣನೆಗೆ ತಂದುಕೊಳ್ಳದೆ ಪೂರ್ಣವಾಗಿ ಬಿಟ್ಟುಬಿಟ್ಟಿದೆ.

ಅಥರ್ವವೇದವು ಪುರುಷಸೂಕ್ತವನ್ನು ಒಳಗೊಂಡಿದೆ. ಆದರೆ ಶ್ಲೋಕಗಳ ಅನುಕ್ರಮವು ಅವುಗಳು ಋಗ್ವೇದದಲ್ಲಿ ಇರುವ ಅನುಕ್ರಮಕ್ಕಿಂತ ಭಿನ್ನವಾಗಿದೆ. ಆದರೆ, ಯಜುರ್ವೇದದ ವಾಜಸನೇಯ ಮತ್ತು ತೈತ್ತಿರೀಯ ಸಂಹಿತೆಗಳಂತೆ ಅಥರ್ವವೇದವು ಪುರುಷಸೂಕ್ತದಷ್ಟು ಸಮಾಧಾನಹೊಂದಿಲ್ಲ. ಅದು ಬೇರೆ ವಿವರಣೆಗಳನ್ನು ನೀಡುತ್ತದೆ. ಅವುಗಳು ಪುರುಷಸೂಕ್ತದಷ್ಟು ಪೂರ್ಣ ಮತ್ತು ಸಾರ್ವತ್ರಿಕವಾಗಿಲ್ಲ. ಆದರೆ ಅವು ಅದಕ್ಕೆ ವಿಶೇಷತೆ ನೀಡಿವೆ.[3]

"ಬ್ರಾಹ್ಮಣನು ಹತ್ತು ತಲೆ ಮತ್ತು ಹತ್ತು ಮುಖಗಳೊಡನೆ ಪ್ರಥಮವಾಗಿ ಹುಟ್ಟಿದ. ಆತ ಸೋಮರಸವನ್ನು ಕುಡಿದು, ವಿಷವನ್ನು ಶಕ್ತಿಹೀನವನ್ನಾಗಿ ಮಾಡಿದ."

"ರಾಜನ್ಯ ಗರ್ಭದಲ್ಲಿದ್ದಾಗ ದೇವತೆಗಳು ಅವನಿಗೆ ಅಂಜುತ್ತಿದ್ದರು. ಗರ್ಭದಲ್ಲಿರುವಾಗ ಆತನನ್ನು ಕಟ್ಟುಗಳಿಂದ ಬಂಧಿಸಿದ್ದರು. ಈ ಕಾರಣದಿಂದ ರಾಜನ್ಯ ಬಂಧಿತನಾಗಿಯೇ ಜನಿಸಿದ. ಆತ ಅಬಂಧಿತನಾಗಿ ಹುಟ್ಟಿರದಿದ್ದರೆ, ತನ್ನ ಶತ್ರುಗಳನ್ನು ವಧಿಸುತ್ತಾ ಸಾಗುತ್ತಿದ್ದ. ರಾಜನ್ಯನ ವಿಷಯ ಏನಾದರೂ ಆಗಲಿ, ಆತ ಬಂಧಿತನಾಗಿ ಹುಟ್ಟಬೇಕು ಮತ್ತು ಆತನ ಶತ್ರುಗಳನ್ನು ಕೊಲ್ಲುತ್ತಾ ಹೋಗಲಿ ಎಂದು ಯಾರಾದರೂ ಇಚ್ಛಿಸಿದರೆ, ಆತನು ರಾಜನ್ಯನಿಗೆ ಐಂದ್ರಬೃಹಸ್ಪತ್ಯ ನೈವೇದ್ಯವನ್ನು ಅರ್ಪಿಸಲಿ. ರಾಜನ್ಯ ಇಂದ್ರನ ಗುಣವನ್ನು ಹೊಂದಿದ್ದಾನೆ ಮತ್ತು ಬ್ರಾಹ್ಮಣ ಬೃಹಸ್ಪತಿಯಾಗಿದ್ದಾನೆ. ಬ್ರಾಹ್ಮನ ಮೂಲಕವೇ ಯಾರಾದರೂ ರಾಜನ್ಯನನ್ನು ಆತನ ಬಂಧನದಿಂದ ಬಿಡುಗಡೆ ಮಾಡುವುದು. ಬಂಗಾರದ ಬಂಧನ, ಒಂದು ದಾನ, ಆತನನ್ನು ಬಂಧಿಸಿರುವ ಸಂಕೋಲೆಗಳಿಂದ ಸ್ಪಷ್ಟವಾಗಿ ಬಿಡುಗಡೆ ಮಾಡುವುದು". ವೇದಗಳಲ್ಲಿ ಕಂಡುಬರುವ ವರ್ಣಪದ್ಧತಿಯ ಉಗಮಕ್ಕೆ ಚಾತುರ್ವರ್ಣದ ಮೂಲವಾದ ಪುರುಷವೊಂದೇ ವಿವರಣೆಯಲ್ಲ. ಮತ್ತೊಂದು ವಿವರಣೆ ಉಂಟು. ಅದು ಮನುವಿನ ವಂಶಸ್ಥರ ಬಗ್ಗೆ ಹೇಳುತ್ತದೆ. ಮತ್ತು ಈ ಕೆಳಗಿನ ವಿಷಯಾವಳಿಗಳಲ್ಲಿ[4] ಉಲ್ಲೇಖಿಸಲ್ಪಟ್ಟಿರುವುದು ಕಂಡುಬರುತ್ತದೆ.

---

೧. ಮ್ಯೂರ್ ಸ್ಯಾನ್‌ಸ್ಕ್ರಿಟ್ ಟೆಕ್ಸ್ಟ್', ಖಂಡ VI, ಪ್ರಪಾತಕ III, ಸ್ತೋತ್ರಗಳು X ಮುಂದಕ್ಕೆ
೨. ಅದೇ. I, ಪು. ೨೨
೩. ಅದೇ. ಸಂ. I, ಪು. ೨೧–೨೨.
೪. ಮ್ಯೂರ್: 'ಸ್ಯಾನ್‌ಸ್ಕ್ರಿಟ್ ಟೆಕ್ಸ್ಟ್', ಸಂ. , ಪುಟ. ೧೬೨–೧೬೫

"ಅಥರ್ವಣ, ಪಿತೃ–ಮನು ಮತ್ತು ದಧ್ಯಂಚ ನೆರವೇರಿಸಿದ ಯಜ್ಞದಲ್ಲಿ ಪ್ರಾರ್ಥನೆಗಳು ಮತ್ತು ಸ್ತೋತ್ರಗಳು ಮೊದಲು ಇಂದ್ರನಿಗೆ ಅರ್ಪಿತವಾಗುತ್ತಿದ್ದವು."

"ಯಜ್ಞದಿಂದ ಪಿತೃ–ಮನುವು ಪಡೆದ ಸಂಪತ್ತು ಮತ್ತು ನೆರವು ಇವೆಲ್ಲಾ ಓ ರುದ್ರ, ನಿನ್ನ ಮಾರ್ಗದರ್ಶನದಲ್ಲಿ ನಮಗೂ ಲಭಿಸಲಿ?."

"ಓ ಮರುತರೇ, ಆ ನಿಮ್ಮ ಔಷಧಗಳನ್ನೂ ಹೇ ಹುರುಪುಳ್ಳ ದೇವತೆಗಳೇ, ಅತೀವ ಶುಭಸೂಚಕವಾದವೂ, ಉಪಕಾರ ಮಾಡುವಂತಹವೂ ನಮ್ಮ ಪಿತೃ–ಮನುವು ಆರಿಸಿರುವಂತಹವುಗಳನ್ನು ಮತ್ತು ರುದ್ರನ ಆಶೀರ್ವಾದ ಮತ್ತು ಆಸರೆಯನ್ನು ನಾನು ಬಯಸುವೆನು."

"ಆ ಪುರಾತನಕಾಲದ ಗೆಳೆಯ, ಶಕ್ತಿಶಾಲಿ ದೇವತೆಗಳ ಶಕ್ತಿಯಿಂದ ಸುಸಜ್ಜಿತನಾಗಿದ್ದಾನೆ. ಪಿತೃ ಮನುವು ದೇವರುಗಳ ಸನ್ನಿಧಿಗೆ ತಲುಪಲು, ಸ್ತೋತ್ರಗಳನ್ನು ತಯಾರಿಸಿ, ದಾರಿಯನ್ನು ಸುಗಮ ನಡೆಸಿದ್ದಾನೆ."

"ನಮ್ಮನ್ನು ಕಾಪಾಡುವ ಪಿತೃ–ಮನುವೇ ಯಜ್ಞ."

"ಹೇ, ದೇವರುಗಳೇ, ನಮ್ಮನ್ನು ರಕ್ಷಿಸಿ, ಕಾಪಾಡಿ ಮತ್ತು ನಮಗಾಗಿ ಮಧ್ಯಸ್ಥಿಕೆ ವಹಿಸಿ. ನಮ್ಮ ಪಿತೃ–ಮನುವಿನ ದಾರಿಯಿಂದ ನಮ್ಮನ್ನು ದೂರಮಾಡದಿರಿ."

"ಮನುವಿನ ಸಂತತಿಯಲ್ಲಿ ನೆಲೆಸಿ ದೇವರನ್ನು ಪ್ರಾರ್ಥಿಸುವ ಅಗ್ನಿಯು ಈ ಸಂಪತ್ತಿನ ಒಡೆಯನೂ ಆಗಿದ್ದಾನೆ."

"ಅಗ್ನಿಯು, ದೇವತೆಗಳು ಮತ್ತು ಮನುಜರೊಡನೆ ನಡೆಸುವ ಬಹು ರೂಪಿಯಜ್ಞ."

"ಹೇ ದೇವತೆಗಳಾದ ವಾಜಸ್ ಮತ್ತು ರಿಭುಕ್ಷಣರು ನಮ್ಮ ಯಜ್ಞಕ್ಕೆ ದೇವತೆಗಳು ಪ್ರಯಾಣ ಮಾಡಿದ ದಾರಿಯಲ್ಲಿ ಬನ್ನಿ, ದೇವತೆಗಳನ್ನೂ ತೃಪ್ತಿಗೊಳಿಸಿ, ಪ್ರಶಸ್ತವಾದ ದಿನಗಳಲ್ಲಿ ಮನುಜರಲ್ಲಿ ಯಜ್ಞವನ್ನು ನೆಲೆಗೊಳಿಸಲಿ."

"ಮನುಜರು ಯಜ್ಞಗಳಲ್ಲಿ ಅಗ್ನಿಯನ್ನು ಸ್ತುತಿಸುವರು."

"ಪ್ರಜೆಗಳ ರಾಜ ಅಗ್ನಿಯನ್ನು ಮನುಜರು ಸ್ತುತಿಸುವರು. ಮನುಜರಿಂದ ತೃಪ್ತನಾದ ಅಗ್ನಿ ರಾಕ್ಷಸರನ್ನು ನಿವಾರಿಸುವನು."

ಈಗ ಬ್ರಾಹ್ಮಣಗಳ ಕಡೆ ತಿರುಗೋಣ ಮತ್ತು ಅವು ಈ ಪ್ರಶ್ನೆಯ ಬಗ್ಗೆ ಏನು ಹೇಳಿವೆ ನೋಡೋಣ.

ಶತಪಥ ಬ್ರಾಹ್ಮಣ ನೀಡಿರುವ ವಿವರಣೆ[೧] ಈ ಕೆಳಕಂಡಂತಿದೆ:

"ಪ್ರಜಾಪತಿಯು ಭುಃ ಎಂದು ಉಚ್ಚರಿಸಿ ಪೃಥ್ವಿಯನ್ನು ಸೃಷ್ಟಿಸಿದ. ಭುವಃ ಎಂದು ಉಚ್ಚರಿಸಿ ವಾಯುವನ್ನು ಉತ್ಪತ್ತಿ ಮಾಡಿದ. ಸ್ವಾಃ ಎಂದು ನಭೋಮಂಡಲವನ್ನು ಉತ್ಪತ್ತಿ ಮಾಡಿದ. ಈ ಬ್ರಹ್ಮಾಂಡವು ಈ ಸರ್ವಸ್ವಗಳೊಡನೆ ಸಮವ್ಯಾಪಕವಾಗಿದೆ. ಅಗ್ನಿಯು ಸರ್ವವ್ಯಾಪಕವಾಗಿ ಇರಿಸಲ್ಪಟ್ಟಿದೆ. ಪ್ರಜಾಪತಿ ಭುಃ ಎಂದು ಉಚ್ಚರಿಸಿ ಬ್ರಾಹ್ಮಣನನ್ನು ಉತ್ಪತ್ತಿಸಿದ, ಭುವಃ ಎಂದು ಉಚ್ಚರಿಸಿ ಆತ ಕ್ಷಾತ್ರ ಉತ್ಪತ್ತಿಸಿದ, ಸ್ವಾಃ ಎಂದು ಹೇಳುತ್ತಾ, ಆತ ವೈಶ್ಯರನ್ನು ಉತ್ಪತ್ತಿಸಿದ. ಅಗ್ನಿಯು ಸರ್ವವ್ಯಾಪಕವಾಗಿದೆ

೧. ಮ್ಯೂರ್: 'ಸ್ಯಾನ್‌ಸ್ಕ್ರಿಟ್ ಟೆಕ್ಸ್ಟ್', ಸಂ. I, ೧೭.

ಎಂದು ಹೇಳುತ್ತಾ ಪ್ರಜಾಪತಿಯು ತನ್ನನ್ನೇ ಉತ್ಪತ್ತಿ ಮಾಡಿಕೊಂಡ. ಭುವಃ ಎಂದು ಹೇಳಿ ಸಂತತಿ ಮತ್ತು ಪ್ರಾಣಿವರ್ಗವನ್ನು ಸೃಷ್ಟಿಸಿದ. ಈ ಭೂಮಂಡಲವು ತನ್ನತನ, ಸಂತತಿ ಮತ್ತು ಪ್ರಾಣಿಗಳ ರೂಪದಲ್ಲಿದೆ. ಅಗ್ನಿಯು ಸರ್ವಾವ್ಯಾಪಕವಾಗಿದೆ."

ಇದರ ಜೊತೆಗೆ ಈ ಬ್ರಾಹ್ಮಣಗಳಲ್ಲಿ ಮತ್ತೊಂದು ವಿವರಣೆಯು ಕಾಣಸಿಗುತ್ತದೆ.[೧] "ಬ್ರಹ್ಮನು (ಇಲ್ಲಿ, ವ್ಯಾಖ್ಯಾನಕಾರನ ಪ್ರಕಾರ, ಅಗ್ನಿಯ ರೂಪದಲ್ಲಿದ್ದು ಮತ್ತು ಬ್ರಾಹ್ಮನ ಜಾತಿಯನ್ನು ಪ್ರತಿನಿಧಿಸುತ್ತದೆ) ಪೂರ್ವದಲ್ಲಿ ಈ ಬ್ರಹ್ಮಾಂಡವೇ ಆಗಿದ್ದ. ಇದು ಏಕವಾಗಿದ್ದು ವೃದ್ಧಿಯಾಗಲಿಲ್ಲ. ಅದು ಕ್ಷಾತ್ರ ಎಂದರೆ, ದೇವತೆಗಳಲ್ಲಿ ಶಕ್ತಿ (ಕ್ಷತ್ರಾನಿ)ಯೇ ಆಗಿರುವ ಇಂದ್ರ, ವರುಣ, ಸೋಮ, ರುದ್ರ, ಪರ್ಜನ್ಯ, ಯಮ, ಮೃತ್ಯು, ಈಶಾನ್ ಇವರನ್ನು ಶಕ್ತಿಯುತವಾಗಿ ಅತ್ಯುತ್ತಮ ರೀತಿಯಲ್ಲಿ ಸೃಷ್ಟಿಸಿತು. ಆದ್ದರಿಂದ ಕ್ಷಾತ್ರಕ್ಕಿಂತ ಉತ್ತಮವಾದದ್ದು ಇನ್ನೊಂದಿಲ್ಲ. ಆದ್ದರಿಂದ ರಾಜಸೂಯಯಾಗದಲ್ಲಿ, ಬ್ರಾಹ್ಮಣನು ಕ್ಷತ್ರಿಯನ ಕೆಳಗೆ ಕುಳಿತುಕೊಳ್ಳುತ್ತಾನೆ. ಈ ಮಹಿಮೆಯನ್ನು ಆತ ಕ್ಷಾತ್ರದ (ರಾಜವೈಭವಶಕ್ತಿಯ) ಮೇಲೆ ಅನುಗ್ರಹಿಸುತ್ತಾನೆ. ಈ ಬ್ರಹ್ಮ ಕ್ಷಾತ್ರದ ಆಕರ. ಆದ್ದರಿಂದ ರಾಜ ಶ್ರೇಷ್ಠತೆ ಪಡೆದರೂ, ಆತ ಕೊನೆಯಲ್ಲಿ ತನ್ನ ಆಕರಕ್ಕಾಗಿ ಬ್ರಹ್ಮನನ್ನೇ ಆಶ್ರಯಿಸುತ್ತಾನೆ. ಬ್ರಹ್ಮನನ್ನು ನಾಶಮಾಡುವವನು ತನ್ನ ಆಕರವನ್ನೇ ನಾಶಮಾಡಿಕೊಳ್ಳುತ್ತಾನೆ. ತನಗಿಂತ ಉತ್ತಮನಾದವನನ್ನು ನೋಯಿಸಿದವನಂತೆ ಆತ ಅತಿ ಸಂಕಟಕ್ಕೆ ಗುರಿಯಾಗುತ್ತಾನೆ.

೨೪. ಆತ ವೃದ್ಧಿಯಾಗಲಿಲ್ಲ; ಆತ ವಸುಗಳು, ರುದ್ರರು, ಆದಿತ್ಯರು, ಮರುತರು ಈ ವರ್ಗಕ್ಕೆ ಸೇರುವ ವರ್ಗಗಳನ್ನು ಸೃಷ್ಟಿಸಿದ.

೨೫. ಆತ ವೃದ್ಧಿಯಾಗಲಿಲ್ಲ; ಆತ ಪೂಷನ್ ಎಂಬ ಶೂದ್ರ ವರ್ಗವನ್ನು ಸೃಷ್ಟಿಸಿದ. ಅಸ್ತಿತ್ವದಲ್ಲಿರುವುದನ್ನೆಲ್ಲಾ ಕಾಪಾಡುವುದರಿಂದ, ಭೂದೇವಿ ಪೂಷನ್ ಆಗಿದ್ದಾಳೆ.

೨೬. ಆತ ವೃದ್ಧಿಯಾಗಲಿಲ್ಲ; ಆತ ಅತ್ಯುತ್ತಮವಾದ ಧರ್ಮವನ್ನು ಶಕ್ತಿಯುತವಾಗಿ ಸೃಷ್ಟಿಸಿದ. ಈ ಧರ್ಮ ರಾಜ (ಕ್ಷಾತ್ರ)ನ ರಾಜ (ಕ್ಷಾತ್ರ). ಈ ಕಾರಣದಿಂದ, ಧರ್ಮಕ್ಕಿಂತ ಹೆಚ್ಚಿನದಿಲ್ಲ. ಆದ್ದರಿಂದ ಶಕ್ತಿಹೀನರು ರಾಜನ ಮೂಲಕ ಹೇಗೋ, ಹಾಗೆ ಧರ್ಮದ ಮೂಲಕ ಬಲಿಷ್ಠರನ್ನು ಗೆಲ್ಲಲು ಪ್ರಯತ್ನಿಸುತ್ತಾರೆ. ಈ ಧರ್ಮವೇ ಸತ್ಯವಾಗಿದೆ. ಈ ಕಾರಣದಿಂದ ಸತ್ಯವನ್ನು ನುಡಿಯುವ ಒಬ್ಬ ಮನುಷ್ಯನ ಬಗ್ಗೆ 'ಆತ ಧರ್ಮವನ್ನು ನುಡಿಯುತ್ತಾನೆ' ಎಂದೂ ಹೇಳುತ್ತಾರೆ. ಯಾಕೆಂದರೆ ಇದು ಆ ಎರಡೂ ಆಗಿದೆ.

೨೭. ಇವೇ ಬ್ರಹ್ಮ, ಕ್ಷಾತ್ರ, ವೈಶ್ಯ ಮತ್ತು ಶೂದ್ರ ಆಗಿದೆ. 'ನ್ಯಾಯವು, ಅಗ್ನಿಯ ಮೂಲಕ ದೇವತೆಗಳ ಮಧ್ಯೆ ಬ್ರಹ್ಮನಾಗಿ, ಮನುಜರ ಮಧ್ಯೆ ಬ್ರಾಹ್ಮಣನಾಗಿ, ದೈವಿಕ ಕ್ಷತ್ರಿಯನ ಮೂಲಕ ಒಬ್ಬ ಮಾನವ ಕ್ಷತ್ರಿಯನಾಗಿ, ದೈವಿಕ ವೈಶ್ಯನ ಮೂಲಕ ಮಾನವ ವೈಶ್ಯನಾಗಿ, ದೈವಿಕ ಶೂದ್ರನ ಮೂಲಕ ಮಾನವ ಶೂದ್ರನಾಗಿ ಸಂಭವಿಸಿತು. ದೇವತೆಗಳೂ ಅಗ್ನಿಯಲ್ಲೂ, ಮಾನವರು ಬ್ರಾಹ್ಮಣನಲ್ಲೂ ಆಶ್ರಯ ಹುಡುಕುವರು'

ತೈತ್ತಿರೀಯ ಬ್ರಾಹ್ಮಣವು ಈ ಕೆಳಗಿನ ವಿವರಣೆ ನೀಡುತ್ತದೆ.[೨]

---

೧. ಮ್ಯೂರ್: 'ಸ್ಯಾನ್‌ಸ್ಕ್ರಿಟ್ ಟೆಕ್ಸ್ಟ್', ಸಂ. I, ಪು. ೨೦

೨. ಅದೇ, I, ಪು. ೧೭

ಮೊದಲನೆಯದು, ಈ ಕೆಳಗಿನಂತಿದೆ.

"ಈ ಬ್ರಹ್ಮಾಂಡವೆಲ್ಲಾ ಬ್ರಹ್ಮನಿಂದ ಸೃಷ್ಟಿಸಲ್ಪಟ್ಟಿದೆ. ವೈಶ್ಯವರ್ಗವು ಋಕ್ ಶ್ಲೋಕಗಳಿಂದ ಹುಟ್ಟಿತೆಂದು ಹೇಳುತ್ತಾರೆ. ಯಜುರ್ವೇದ ಗರ್ಭದಿಂದ ಕ್ಷತ್ರಿಯನೂ ಸಾಮವೇದದಿಂದ ಬ್ರಾಹ್ಮಣರೂ ಉದಯಿಸಿದರೆಂದೂ ನಮ್ಮ ಪುರಾತನರು ಹೇಳಿದರು". ಇನ್ನೊಂದು ವಿವರಣೆ ಬ್ರಾಹ್ಮಣ ಮತ್ತು ಶೂದ್ರ ಎಂಬ ಎರಡು ವರ್ಣಗಳನ್ನು ಮಾತ್ರ ಗಮನಕ್ಕೆ ತೆಗೆದುಕೊಂಡು ಹೀಗೆ ಹೇಳುತ್ತದೆ:[೧]

"ಬ್ರಾಹ್ಮಣ ಜಾತಿ, ದೇವತೆಗಳಿಂದ ಉದ್ಭವಿಸಿತು. ಶೂದ್ರ ಅಸುರರಿಂದ."

ಮೂರನೆಯದು, ಶೂದ್ರರ ಉಗಮವನ್ನು ಈ ಕೆಳಗಿನಂತೆ[೨] ವಿವರಿಸುತ್ತದೆ.

"ಆತ ತನ್ನ ಇಚ್ಛೆಯನುಸಾರ ಒಂದು ಮರದ ಪಾತ್ರೆಯಲ್ಲಿ ಹಾಲು ಹಿಂಡಲಿ. ಆದರೆ ಒಬ್ಬ ಶೂದ್ರ ಹಾಲು ಹಿಂಡದಿರಲಿ. ಏಕೆಂದರೆ ಈ ಶೂದ್ರ ನಿರಸ್ತಿತ್ವದಿಂದ ಉದ್ಭವಿಸಿದವನು. ಶೂದ್ರನು ಹಿಂಡಿದ ಕ್ಷೀರ ನೈವೇದ್ಯವಾಗುವುದಿಲ್ಲ. ಅವರು ಅದನ್ನು ಸ್ವಚ್ಛಗೊಳಿಸದಿರುವುದಿಂದ ಶೂದ್ರರು ಅಗ್ನಿಹೋತ್ರಕ್ಕೆ ಹಾಲು ಹಿಂಡದಿರಲಿ. ಅದನ್ನು ಶೋಧಿಸಿದ ನಂತರವೇ ನೈವೇದ್ಯವಾಗಬಲ್ಲದು."

ಇನ್ನು ಮುಂದೆ ವರ್ಣ ಪದ್ಧತಿಯ ಉಗಮದ ವಿಷಯದಲ್ಲಿ ಸ್ಮೃತಿಗಳು ಏನು ವಿವರಣೆ ನೀಡುತ್ತವೆಂಬುದನ್ನು ನೋಡೋಣ. "ಮನುವು ತನ್ನ ಸ್ಮೃತಿಯಲ್ಲಿ ಹೇಳುವುದಿದು; ಸ್ವಯಂಭೂ ತನ್ನ ಸ್ವಂತ ಶರೀರದಿಂದ ಅನೇಕ ಜೀವರಾಶಿಗಳನ್ನು ಸೃಷ್ಟಿಸುವ ಬಯಕೆಯನ್ನು ಹೊಂದಿ ಮೊದಲು ಜಲರಾಶಿಯನ್ನು ಸೃಷ್ಟಿಸಿ, ಆ ನೀರಿನಲ್ಲಿ ಸೃಷ್ಟಿ ಬೀಜವನ್ನಿರಿಸಿದನು. ೯. ಆ ಬೀಜ ಸೂರ್ಯನಷ್ಟು ಪ್ರಕಾಶಮಾನವಾದ ಚಿನ್ನದ ಅಂಡವಾಯ್ತು. ಅದರಿಂದ ಬ್ರಹ್ಮಾಂಡದ ಪಿತನಾದ ಬ್ರಹ್ಮನು ಉದಿಸಿದ. ೧೦. ನರನಿಂದ ಹುಟ್ಟಿದ ಕಾರಣ ಜಲಕ್ಕೆ ನಾರಾ ಎಂದು ಹೆಸರು. ಜಲವು ಅವನ ಮೊದಲ ಆಶ್ರಯ ಸ್ಥಾನವಾದ್ದರಿಂದ ಅವನಿಗೆ ನಾರಾಯಣ ಎಂಬ ಹೆಸರು ಬಂತು. ೧೧. ಅಸ್ತಿತ್ವ – ನಿರಸ್ತಿತ್ವಗಳಿಂದ ಅಗೋಚರವಾದ, ಅಮರತ್ವದಿಂದ ಹುಟ್ಟದ ಪುರುಷ ಪ್ರಪಂಚದಲ್ಲಿ ಬ್ರಹ್ಮನೆಂದು ಪೂಜಿಸಲ್ಪಡುತ್ತಾನೆ. ೧೨. ಒಂದು ವರ್ಷ ಆ ಅಂಡದಲ್ಲಿ ವಾಸಿಸಿ, ಆ ದಿವ್ಯಾತ್ಮ ತಾನಾಗಿ, ತನ್ನ ಧ್ಯಾನಶಕ್ತಿಯಿಂದ ಅದನ್ನು ಎರಡಾಗಿ ಸೀಳಿದ. ಪ್ರಪಂಚ ಮಾನವಕುಲದಿಂದ ತುಂಬಿ ಹೋಗಲೆಂದು ಆತ ತನ್ನ ಬಾಯಿಯಿಂದ ಬ್ರಾಹ್ಮಣ, ತೋಳುಗಳಿಂದ ಕ್ಷತ್ರಿಯ, ತೊಡೆಗಳಿಂದ ವೈಶ್ಯ, ಪಾದಗಳಿಂದ ಶೂದ್ರನನ್ನೂ ಸೃಷ್ಟಿಸಿದ. ೩೨. ತನ್ನ ಶರೀರವನ್ನು ಎರಡು ಭಾಗ ಮಾಡಿಕೊಂಡು, ಒಡೆಯ ಬ್ರಹ್ಮನು ಅರ್ಧ ಭಾಗ ಪುರುಷನಾಗಿ ಇನ್ನರ್ಧ ಸ್ತ್ರೀಯಾಗಿ ವಿರಜನನ್ನು ಸೃಷ್ಟಿಸಿದ. ೩೩. ಓ ಅತ್ಯುತ್ತಮರಾದ ದ್ವಿಜರೇ, ಆ ಪುರುಷ ವಿರಜ ಸೃಷ್ಟಿಸಿದ ನಾನೇ ಈ ಭೂಮಂಡಲವನ್ನು ಸೃಷ್ಟಿಸಿದವನು ಎಂಬುದನ್ನು ತಿಳಿಯಿರಿ. ೩೪. ಜೀವರಾಶಿಗಳನ್ನು ಸೃಷ್ಟಿಸಲು ಇಚ್ಛಿಸಿ, ನಾನು ಪ್ರಯಾಸಕರ ಉಪಾಸನೆ ಮಾಡಿ ಮೊದಲಿಗೆ ಜೀವರಾಶಿಗಳ ದೊರೆಗಳಾದ ದಶ ಮಹರ್ಷಿಗಳನ್ನೂ ಸೃಷ್ಟಿಸಿದೆ. ೩೫. ಅವರೆಂದರೆ ಮರೀಚಿ, ಅತ್ರಿ, ಅಂಗೀರಸ, ಪುಲಸ್ತ್ಯ, ಪುಲಹ, ಕ್ರತು, ಪ್ರಚೇತಸ್, ವಸಿಷ್ಠ, ಭೃಗು ಮತ್ತು ನಾರದ ಮಹರ್ಷಿ. ಮಹಾನ್ ಶಕ್ತಿಶಾಲಿಗಳಾದ ಅವರು ಏಳು ಮನುಗಳನ್ನು, ದೇವತೆಗಳನ್ನು, ದೇವತೆಗಳ ವಾಸಸ್ಥಾನಗಳನ್ನು ಮತ್ತು ಮಿತಿಯಿಲ್ಲದ

---

೧. ಮ್ಯೂರ್: 'ಸ್ಯಾನ್‌ಸ್ಕ್ರಿಟ್ ಟೆಕ್ಸ್ಟ್', ಸಂ. I, ಪು. ೨೧

೨. ಅದೇ. ಸಂ. I, ಪು. ೩೬ ಮತ್ತು ೩೭

ಶಕ್ತಿಯುಳ್ಳ ಮಹರ್ಷಿಗಳು; ೩೭. ಯಕ್ಷರು, ರಾಕ್ಷಸರು, ಪಿಶಾಚಿಗಳು, ಗಂಧರ್ವರು, ಅಪ್ಸರೆಯರು, ಅಸುರರು, ನಾಗರು, ಸರ್ಪಗಳು, ದೊಡ್ಡ ಪಕ್ಷಿಗಳು ಮತ್ತು ಬೇರೆ ಬೇರೆ ವರ್ಗದ ಪಿತೃಗಳು; ೩೮. ಮಿಂಚುಗಳು, ಸಿಡಿಲುಗಳು, ಮೋಡಗಳು. ಅದ್ಭುತವಾದ ವಾಯುಮಂಡಲ, ಶಬ್ದಗಳು, ಧೂಮಕೇತುಗಳು ಮತ್ತು ವಿಧವಿಧವಾದ ಬೆಳಗುವ ಜ್ಯೋತಿಗಳು; ೩೯. ಕಿನ್ನರರು, ವಾನರರು, ಮೀನುಗಳು, ಬೇರೆ ಬೇರೆ ಜಾತಿ ಪಕ್ಷಿಗಳು, ದನಕರು, ಜಿಂಕೆ, ಮನುಷ್ಯರು, ಎರಡು ಸಾಲು ಹಲ್ಲುಗಳುಳ್ಳ ಕಾಡುಪ್ರಾಣಿಗಳು; ೪೦. ಸಣ್ಣ ಮತ್ತು ದೊಡ್ಡ ಉರಗಗಳು, ಚಿಟ್ಟೆಗಳು, ಹೇನುಗಳು, ನೊಣಗಳು, ಚಿಗಟಗಳು, ತೊಣಚಿಗಳು ಹೀಗೆ ನನ್ನ ನಿರ್ದೇಶನ ನಿಷ್ಠೆಯಿಂದಾಗಿ ಎಲ್ಲವೂ ಸೃಷ್ಟಿಯಾಯಿತು. ಸಕಲ ಚರಾಚರಗಳ ಭೂತಕಾಲದ ಕ್ರಿಯೆಗನುಗುಣವಾಗಿ ಈ ಜಗತ್ತು ಸೃಷ್ಟಿಸಲ್ಪಟ್ಟಿತು."

ಮನುವು ಮಾನವರನ್ನು ನಾಲ್ಕು ವರ್ಗಗಳಾಗಿ ವಿಂಗಡಿಸಿರುವುದಕ್ಕೆ ಇರುವ ಮೂಲ ಕಾರಣದ ಬಗ್ಗೆ ತನ್ನ ಸ್ಮೃತಿಯಲ್ಲಿ ಹೇಳಿರುವ ಇನ್ನೊಂದು ದೃಷ್ಟಿಕೋನವಿದೆ.[೧]

"ಈಗ ನಾನು, ಒಂದು ಆತ್ಮವು ಪ್ರತಿಯೊಂದು ಗುಣದ ಮುಖೇನ, ಏನೇನು ಅವಸ್ಥೆಗಳನ್ನು ಪಡೆಯುತ್ತದೆಂಬುದನ್ನು ಇಲ್ಲಿ ಹೇಳುತ್ತೇನೆ. ೪೦. ಸತ್ವಗುಣಪೂರಿತ ಆತ್ಮಗಳು ದೈವತ್ವವನ್ನು ಪಡೆಯುತ್ತವೆ. ರಜಸ್ ಗುಣದ ಆತ್ಮಗಳು ಮನುಷ್ಯರಾಗುತ್ತವೆ. ತಮಸ್ ಗುಣದ ಆತ್ಮಗಳು ಕಾಡು ಮೃಗಗಳಾಗುತ್ತವೆ. ಆನೆಗಳು, ಕುದುರೆಗಳು, ಶೂದ್ರರು, ತಿರಸ್ಕಾರಾರ್ಹರಾದ ಮ್ಲೇಚ್ಛರು, ಸಿಂಹಗಳು, ಹುಲಿಗಳು ಮತ್ತು ಕಾಡುಹಂದಿಗಳು, ಇವೆರಡರ ನಡುವಣ ಕತ್ತಲೆಯ ಸ್ಥಿತಿಗೆ ಸೇರುತ್ತವೆ. ೪೬. ರಾಜರುಗಳು, ಕ್ಷತ್ರಿಯರು, ರಾಜರ ಪುರೋಹಿತರು ಮತ್ತು ವಾಗ್ಯುದ್ಧವೇ ಮುಖ್ಯ ಉದ್ದೇಶವಾಗಿರುವ ಜನರು, ಕಾಮನೆಗಳ ವರ್ಗಕ್ಕೆ ಸೇರುವರು. ೪೮. ಭಕ್ತರುಗಳು, ಸನ್ಯಾಸಿಗಳು, ಬ್ರಾಹ್ಮಣರು, ಆಕಾಶಗಾಮಿಗಳಾದ ದೇವತೆಗಳು, ಸ್ಥಿರ ನಕ್ಷತ್ರ ಪುಂಜಗಳು ಮತ್ತು ದೈತ್ಯರು, ಸದ್ಗುಣದ ಕೆಳವರ್ಗಕ್ಕೆ ಸೇರುವರು. ೪೯. ಯಾಗ ಮಾಡುವ ಪುರೋಹಿತರು, ಋಷಿಗಳು, ದೇವರುಗಳು, ವೇದಗಳು, ಸ್ವರ್ಗೀಯ ಜ್ಯೋತಿಗಳು, ಸಂವತ್ಸರಗಳು, ವೇದ ಪಿತೃಗಳು, ಸಾಧ್ಯರು ಸದ್ಗುಣದ ಎರಡನೆಯ ವರ್ಗಕ್ಕೆ ಸೇರುವರು. ೫೦. ಬ್ರಹ್ಮ, ಸೃಷ್ಟಿಕರ್ತರು, ಧರ್ಮಶೀಲತೆ, ಸರ್ವೋತ್ತಮ ನಿರಾಕಾರ (ಅವ್ಯಕ್ತ) ಇವರೆಲ್ಲರೂ ಸದ್ಗುಣದ ಅತ್ಯುತ್ತಮ ವರ್ಗಕ್ಕೆ ಸೇರುವರು."

ಈ ಅಭಿಪ್ರಾಯಗಳನ್ನು ರಾಮಾಯಣ, ಮಹಾಭಾರತದಲ್ಲಿರುವ ಅಭಿಪ್ರಾಯಗಳೊಡನೆ ಹೋಲಿಸುವುದು ಸ್ವಾರಸ್ಯಕರವಾಗಿದೆ. ರಾಮಾಯಣವು ಚಾತುರ್ವರ್ಣಗಳು ದಕ್ಷನ ಮಗಳಾದ ಮತ್ತು ಕಶ್ಯಪನ ಹೆಂಡತಿಯಾದ ಮನು ಎಂಬಾಕೆಯ ಸಂತತಿಯವು ಎಂದು ಹೇಳುತ್ತದೆ.[೨]

"ಕೇಳು, ಎಲ್ಲರಿಗಿಂತಲೂ ಮುಂಚೆ ಅಸ್ತಿತ್ವಕ್ಕೆ ಬಂದ ಪ್ರಜಾಪತಿಗಳಲ್ಲಿ ಕರ್ದಮ ಮೊದಲನೆಯವನು. ನಂತರ, ವಕ್ರಿತ, ಶೇಷ, ಸಂಶ್ರಯ, ಶಕ್ತಿಯುತ ಬಾಹುಪುತ್ರ, ಸ್ಥಾಣು, ಮರೀಚಿ, ಅತ್ರಿ, ಬಲಯುತ ಕ್ರತು, ಪುಲಸ್ತ್ಯ, ಆಂಗೀರಸ, ಪ್ರಚೇತಸ್, ಪುಲಹ, ದಕ್ಷ, ನಂತರ ವಿವಸ್ವತ್, ಅರಿಷ್ಟನೇಮಿ ಮತ್ತು ಕೊನೆಯವನಾದ ಪ್ರಭಾವಿತ ಕಶ್ಯಪ. ಪ್ರಜಾಪತಿ ದಕ್ಷನಿಗೆ ಅರವತ್ತು ಹೆಣ್ಣು ಮಕ್ಕಳು. ಈ ಅರವತ್ತು ಮಂದಿಯಲ್ಲಿ ಅದಿತಿ, ದಿತಿ, ಧನು, ಕಲಕ, ತಾಮ್ರಾ, ಕ್ರೋಧವಶಾ, ಮನು ಮತ್ತು ಅನಲ ಎಂಬ

---

೧. ಮ್ಯೂರ್: 'ಸ್ಯಾನ್‌ಸ್ಕ್ರಿಟ್ ಟೆಕ್ಸ್ಟ್', ಪು. ೪೧

೨. ಅದೇ. ಸಂ. I, ಪು. ೧೧೬–೧೧೭

ಎಂಟು ಮಂದಿ ರೂಪವತಿ ಕನ್ಯೆಯರನ್ನು ಕಶ್ಯಪ ವಿವಾಹ ಮಾಡಿಕೊಂಡನು. ಈ ಕನ್ಯೆಯರನ್ನು ಕುರಿತು 'ನೀವುಗಳು ಮೂರು ಲೋಕದಲ್ಲಿ ಪ್ರಶಸ್ತರಾದ ನನ್ನಂಥ ಪುತ್ರರನ್ನು ಹಡೆಯಬೇಕು' ಎಂದನು. ಇದಕ್ಕೆ ಅದಿತಿ, ದಿತಿ, ಧನು ಮತ್ತು ಕಲಕ ಒಪ್ಪಿಕೊಂಡರು. ಬೇರೆಯವರು ಒಪ್ಪಲಿಲ್ಲ. ಆದಿತ್ಯರು, ವಸುಗಳು, ರುದ್ರರು ಮತ್ತು ಇಬ್ಬರು ಆಶ್ವಿನರು ಸೇರಿ ಮೂವತ್ತಮೂರು ದೇವತೆಗಳಿಗೆ ಅದಿತಿಯು ಜನ್ಮವಿತ್ತಳು. ಕಶ್ಯಪನ ಹೆಂಡತಿ ಮನುವು ಬ್ರಾಹ್ಮಣರು, ಕ್ಷತ್ರಿಯರು, ವೈಶ್ಯರು ಮತ್ತು ಶೂದ್ರರೆಂಬ ಮಾನವರಿಗೆ ಜನ್ಮವಿತ್ತಳು. ಬ್ರಾಹ್ಮಣರು ಬಾಯಿಯಿಂದಲೂ, ಕ್ಷತ್ರಿಯರು ಎದೆಯಿಂದಲೂ, ವೈಶ್ಯರು ತೊಡೆಗಳಿಂದಲೂ, ಶೂದ್ರರು ಪಾದಗಳಿಂದಲೂ ಜನಿಸಿದರು ಎಂದು ವೇದ ಹೇಳುತ್ತದೆ. ಅನಲಳು ಶುದ್ಧ ಹಣ್ಣುಗಳನ್ನು ಕೊಡುವ ಎಲ್ಲಾ ವೃಕ್ಷಗಳಿಗೆ ಜನ್ಮವಿತ್ತಳು."

'ಮಹಾಭಾರತ'ವು ಈ ಕೆಳಗಿನ ವಿವರಣೆಯನ್ನು ನೀಡುತ್ತದೆ:[೧] "ಶ್ರೇಷ್ಠ ಋಷಿಗಳಂತೆ, ಎಲ್ಲಾ ವೈಭವದೊಡನೆ ಜನಿಸಿದ, ಪ್ರಚೇತಸ್‌ನ ಹತ್ತು ಮಂದಿ ಪುತ್ರರೂ ಸದ್ಗುಣಶೀಲರು ಮತ್ತು ಪವಿತ್ರರು ಎಂದು ಪ್ರಸಿದ್ಧಿ ಪಡೆದಿದ್ದಾರೆ. ಅವರ ಬಾಯಿಂದ ಚಿಮ್ಮಿದ ಬೆಂಕಿಯಿಂದ ಮಹತ್ ಜೀವರಾಶಿ ಮೊದಲು ಸುಡಲ್ಪಟ್ಟಿತು. ಅದರಿಂದ ದಕ್ಷಪ್ರಚೇತಸ್ ಹುಟ್ಟಿದ ಮತ್ತು ಪ್ರಪಂಚದ ಮಾತಾ–ಪಿತೃ ಎನಿಸಿದ ದಕ್ಷನಿಂದ ಜೀವರಾಶಿ ಉತ್ಪತ್ತಿಯಾದವು. ವಾರುಣಿಯನ್ನು ಕೂಡಿ, ದಕ್ಷಮುನಿಯು ತನ್ನಂತೆಯೇ ಇದ್ದ ಧರ್ಮಿಣಿಯ ಸಾವಿರ ಮಕ್ಕಳನ್ನೂ ಪಡೆದ. ನಾರದನು ಅವರಿಗೆ ಮುಕ್ತತತ್ವವಾದ ಸಾಂಖ್ಯವನ್ನೂ ಕಲಿಸಿದ. ಸಂತತಿಯನ್ನು ಸೃಷ್ಟಿಸುವ ಅಭಿಲಾಷೆಯಿಂದ, ಪ್ರಜಾಪತಿಯಾದ ದಕ್ಷನು ನಂತರ ಐವತ್ತು ಪುತ್ರಿಯರನ್ನು ಪಡೆದು, ಅವರಲ್ಲಿ ಹತ್ತು ಮಂದಿಯನ್ನು ಧರ್ಮನಿಗೂ, ಹದಿಮೂರು ಮಂದಿಯನ್ನು ಕಶ್ಯಪನಿಗೂ ಮತ್ತು ಇಪ್ಪತ್ತೇಳು ಮಂದಿಯನ್ನು ಕಾಲನಿಗದಿ ಮಾಡುವ ಇಂದು (ಸೋಮ)ವಿಗೂ ಕೊಟ್ಟು ವಿವಾಹ ಮಾಡಿದ. ತನ್ನ ಹದಿಮೂರು ಹೆಂಡತಿಯರಲ್ಲೆಲ್ಲಾ ಶ್ರೇಷ್ಠಳಾದ ದಾಕ್ಷಾಯಿಣಿಯಿಂದ ಮರೀಚಿಯ ಮಗನಾದ ಕಶ್ಯಪನು ಇಂದ್ರನ ಅಧಿಪತ್ಯದಲ್ಲಿ ಅವರ ಶಕ್ತಿಗಾಗಿ ಪ್ರಖ್ಯಾತರಾದ ಆದಿತ್ಯನನ್ನೂ ವಿವಸ್ವತನನ್ನೂ ಪಡೆದನು. ವಿವಸತ್ವನಿಂದ ಪ್ರಬಲನಾದ ಯಮ (ವೈವಸ್ವತ) ಹುಟ್ಟಿದನು. ಮಾರ್ತಾಂಡನಿಗೆ (ಅಂದರೆ ವಿವಸ್ವತ ಸೂರ್ಯ) ಬುದ್ಧಿವಂತನೂ ಪ್ರಬಲನೂ ಆದ ಮನು ಮತ್ತು ಹೆಸರಾಂತ ಆತನ ತಮ್ಮ ಯಮನೂ ಜನಿಸಿದರು. ಬುದ್ಧಿವಂತನಾದ ಮನುವು ಧರ್ಮಶೀಲನಿದ್ದು ಆತನ ಮೂಲಕ ಒಂದು ಜನಾಂಗ ಸ್ಥಾಪಿಸಲ್ಪಟ್ಟಿತು. ಆದಕಾರಣ ಈ ಮಾನವ ಕುಟುಂಬ ಮನುವಿನ ಕುಲ (ಜನಾಂಗ)ವೆಂದು ಗುರುತಿಸಲ್ಪಟ್ಟಿತು. ಬ್ರಾಹ್ಮಣರು, ಕ್ಷತ್ರಿಯರು ಮತ್ತು ಇತರೆ ಮಾನವರು ಈ ಮನುವಿನಿಂದ ಹುಟ್ಟಿದವರು. 'ಓ, ರಾಜನೇ, ಅವನಿಂದಲೇ ಕ್ಷತ್ರಿಯನೊಡಗೂಡಿದ ಬ್ರಾಹ್ಮಣ ಕೂಡ ಬಂದ.'

ಇನ್ನೊಂದು ಸಂದರ್ಭದಲ್ಲಿ 'ಮಹಾಭಾರತ'ವು, ಚಾತುರ್ವರ್ಣದ ಮೂಲವನ್ನು ಪುರುಷಸೂಕ್ತದಲ್ಲಿ ನಿರೂಪಿತವಾಗಿರುವಂತೆಯೇ ನಿರೂಪಿಸಿದೆ.

"ರಾಜನು ಶಿಷ್ಟರನ್ನು ಪಾಲಿಸಿ ದುಷ್ಟರನ್ನು ನಿಗ್ರಹಿಸುವ ಶಕ್ತಿಯುಳ್ಳವನನ್ನು ತನ್ನ ಪುರೋಹಿತನನ್ನಾಗಿ ನೇಮಿಸಿಕೊಳ್ಳಬೇಕು. ಈ ವಿಷಯದಲ್ಲಿ ಇಳಾಪುತ್ರನು ಪುರೂರವಸ್ ಮತ್ತು ಮಾತರಿಶ್ವನ (ವಾಯು) ಮಧ್ಯೆ ನಡೆದ ಪುರಾತನ ಸಂವಾದ ಹೀಗಿದೆ. ಪುರೂರವಸ್ ಹೇಳಿದ:

೧. ಮ್ಯೂರ್: 'ಸ್ಯಾನ್‌ಸ್ಕ್ರಿಟ್ ಟೆಕ್ಸ್ಟ್', ಸಂ. I, ಪು. ೧೨೫

ಯಾವಾಗ ಬ್ರಾಹ್ಮಣ ಮತ್ತು ಉಳಿದ ಮೂರು ಜಾತಿಗಳು ಸೃಷ್ಟಿಯಾದವು ಮತ್ತು ಶ್ರೇಷ್ಠರು ಯಾರೆಂಬುದು ಯಾವಾಗ ಉದ್ಭವವಾಯಿತು? ಮಾತರಿಶ್ವರನು ಹೀಗೆ ಉತ್ತರಿಸಿದ: 'ಬ್ರಾಹ್ಮಣನು ಬ್ರಹ್ಮನ ಬಾಯಿಯಿಂದ, ಕ್ಷತ್ರಿಯ ಅವನ ತೋಳುಗಳಿಂದ, ವೈಶ್ಯ ಆತನ ತೊಡೆಗಳಿಂದ ಸೃಷ್ಟಿಸಲ್ಪಟ್ಟರು. ಈ ಮೂರು ವರ್ಗಗಳನ್ನು ಸೇವೆಮಾಡುವ ಉದ್ದೇಶದಿಂದ ನಾಲ್ಕನೆ ವರ್ಗವಾದ ಶೂದ್ರ, ಆತನ ಪಾದಗಳಿಂದ ಸೃಷ್ಟಿಸಲ್ಪಟ್ಟ. ಬ್ರಾಹ್ಮಣ ಹುಟ್ಟಿದ ಕೂಡಲೇ ಧರ್ಮಶೀಲತೆಯನ್ನು ಕಾಪಾಡಲು ಭೂಮಿಯ ಮೇಲಿನ ಎಲ್ಲಾ ಜೀವರಾಶಿಗೂ ಒಡೆಯನಾದ. ನಂತರ ಸೃಷ್ಟಿಕರ್ತನು, ಭೂಮಂಡಲವನ್ನು ನಿಯಂತ್ರಿಸುವುದಕ್ಕಾಗಿ ಜನಗಳ ತೃಪ್ತಿಗಾಗಿ ದಂಡವನ್ನು ಹೊರುವ ಎರಡನೆಯ ಯಮನಾಗಿ ಕ್ಷತ್ರಿಯನನ್ನು ಸೃಷ್ಟಿಸಿದ. ಉಳಿದ ಮೂರು ವರ್ಗಗಳನ್ನು ವೈಶ್ಯನು, ಧನಧಾನ್ಯಗಳಿಂದ ಕಾಪಾಡಬೇಕೆಂಬುದು ಮತ್ತು ಶೂದ್ರ ಉಳಿದವರ ಸೇವಗೈಯಬೇಕೆಂಬುದು ಬ್ರಹ್ಮನ ಅನುಜ್ಞೆಯಾಗಿತ್ತು.' ಇಳಾಪುತ್ರನು ನಂತರ ಹೀಗೆ ಕೇಳಿದ : 'ವಾಯುವೇ, ಭೂಮಂಡಲವು ಅದರ ಸಂಪತ್ತಿನೊಡನೆ, ನ್ಯಾಯವಾಗಿ ಯಾರಿಗೆ ಸೇರತಕ್ಕದ್ದು? ಬ್ರಾಹ್ಮಣನಿಗೋ, ಕ್ಷತ್ರಿಯನಿಗೋ?' ವಾಯು ಉತ್ತರಿಸಿದ: 'ಭೂಮಿಯ ಮೇಲೆ ಇರುವುದೆಲ್ಲಾ ಜ್ಯೇಷ್ಠತ್ವದ ಹಕ್ಕಿನ ಆಧಾರದ ಮೇಲೆ ಬ್ರಾಹ್ಮಣನ ಆಸ್ತಿ, ಕರ್ತವ್ಯ ನಿಯಮದಲ್ಲಿ ನಿಪುಣರಾದ ಎಲ್ಲರಿಗೂ ಇದರ ಅರಿವಿದೆ. ಬ್ರಾಹ್ಮಣ ಭುಂಜಿಸುವುದು, ಧರಿಸುವುದು ಮತ್ತು ನೀಡುವುದು ಎಲ್ಲಾ ಅವನದೇ. ಆತ ಎಲ್ಲಾ ಜಾತಿಗಳ ಮುಖ್ಯಸ್ಥ, ಜ್ಯೇಷ್ಠ ಮತ್ತು ಶ್ರೇಷ್ಠ. ಒಬ್ಬ ಹೆಂಗಸು ತನ್ನ ಮೊದಲ ಗಂಡನನ್ನು ಕಳೆದುಕೊಂಡಮೇಲೆ ಆಕೆಯ ಮೈದುನನನ್ನು ಎರಡನೆಯ ಗಂಡನಾಗಿ ತೆಗೆದುಕೊಳ್ಳುವಂತೆ, ಬ್ರಾಹ್ಮಣನು ಆಪತ್ಕಾಲದಲ್ಲಿ ಮೊದಲ ಸಂಪನ್ಮೂಲ ನಂತರ ಮತ್ತೊಬ್ಬ ಉದಯಿಸಬಹುದು."

'ಮಹಾಭಾರತ'ದ ಶಾಂತಿಪರ್ವದಲ್ಲಿ ಮೂರನೇ ಅಭಿಪ್ರಾಯವಿದೆ:

"ಭೃಗು ಹೀಗೆ ಮಾರ್ನುಡಿದ: ಹೀಗೆ ಬ್ರಹ್ಮನು ತನ್ನ ಸ್ವಂತ ಶಕ್ತಿಯಿಂದ ವ್ಯಾಪಿಸಿ, ಸೂರ್ಯ ಮತ್ತು ಅಗ್ನಿಗಳಷ್ಟು ಉಜ್ವಲ ಪ್ರಕಾಶವುಳ್ಳ ಬ್ರಾಹ್ಮಣೀಯ ಪ್ರಜಾಪತಿಗಳನ್ನು ಮೊದಲು ಸೃಷ್ಟಿಸಿದ. ಆಮೇಲೆ ಪರಮಾತ್ಮನು ಮೋಕ್ಷಸಾಧನೆಗಾಗಿ ಸತ್ಯ, ಧರ್ಮಶೀಲತೆ, ಆತ್ಮಸಂಯಮ ಮತ್ತು ವೇದ ಧರ್ಮಾಚರಣೆ ಮತ್ತು ಪಾವಿತ್ರ್ಯತೆಯನ್ನು ನಿರ್ಮಿಸಿದ. ಆತ ದೇವರುಗಳು, ದಾನವರು, ಗಂಧರ್ವರು, ದೈತ್ಯರು, ಅಸುರರು, ಮಹೋರಗರು, ಯಕ್ಷರು, ರಾಕ್ಷಸರು, ನಾಗರುಗಳು, ಪಿಶಾಚಿಗಳು ಮತ್ತು ಮಾನವರು, ಬ್ರಾಹ್ಮಣರು, ಕ್ಷತ್ರಿಯರು, ವೈಶ್ಯರು ಮತ್ತು ಶೂದ್ರರ ಜೊತೆ ಇತರೆ ವರ್ಗಗಳ (ವರ್ಣಗಳ) ಜೀವರಾಶಿಗಳನ್ನು ಸೃಷ್ಟಿಸಿದ. ಬ್ರಾಹ್ಮಣರ ವರ್ಣ ಬೆಳ್ಳಗಿತ್ತು. ಕ್ಷತ್ರಿಯರ ಬಣ್ಣ ಕೆಂಪು, ವೈಶ್ಯರದು ಕಂದು ಮತ್ತು ಶೂದ್ರ ಬಣ್ಣ ಕಪ್ಪು. ಇಲ್ಲಿ ಭಾರದ್ವಾಜ ಮುಂದುವರಿದು ಹೇಳುವುದೇನೆಂದರೆ, ನಾಲ್ಕು ಜಾತಿಯನ್ನು ಬಣ್ಣದಿಂದ ನಿರ್ಣಯಿಸುವುದಾದರೆ ಎಲ್ಲಾ ಜಾತಿಗಳ ಗೊಂದಲವೂ ಗೋಚರವಾಗುತ್ತದೆ. ಆಶೆ, ಕೋಪ, ಭಯ, ಲೋಭ, ವ್ಯಸನ, ಶಂಕೆ, ಹಸಿವು, ಬಳಲಿಕೆ ನಮ್ಮೆಲ್ಲರ ಮೇಲೂ ಪ್ರಭಾವ ಬೀರುತ್ತವೆಯಾದ್ದರಿಂದ ಜಾತಿಗಳ ಭೇದಭಾವವನ್ನು ಯಾವುದರಿಂದ ಗುರುತಿಸಬಹುದು? ಬೆವರು, ಮೂತ್ರ, ಮಲ, ಕಫ, ಪಿತ್ತರಸ ಮತ್ತು ರಕ್ತ – ಇವು ಕೊಳೆತುಹೋಗುವ ಎಲ್ಲಾ ಶರೀರಗಳಿಗೂ ಒಂದೇ ಆಗಿರುವಾಗ ಜಾತಿಯಲ್ಲಿ ಭೇದವೆನಿಸುವುದು ಏತರಿಂದ? ಇಲ್ಲಿ ಅಸಂಖ್ಯಾತ ಚರಾಚರ ವಸ್ತುಗಳಿರುವಾಗ ಅನೇಕ ವಿಧವಾದ ಈ ವಸ್ತುಗಳ ಬಣ್ಣವನ್ನು ಕಂಡುಹಿಡಿಯುವ ಬಗೆ ಹೇಗೆ?"

"ಭೃಗು ಹೇಳುತ್ತಾನೆ.: 'ಜಾತಿಗಳಲ್ಲಿ ಭೇದವಿಲ್ಲ'."

ಇದೇ ಶಾಂತಿಪರ್ವದಲ್ಲಿ ನಾಲ್ಕನೆಯ ಸಿದ್ಧಾಂತವೊಂದಿದೆ.[೧]

ಭಾರದ್ವಾಜನು ಮತ್ತೆ ಪ್ರಶ್ನಿಸುತ್ತಾನೆ: 'ಮಹಾನ್‌ವಾಗ್ಮಿ ಬ್ರಾಹ್ಮಣ ಋಷಿಯೇ, ಹಾಗಾದರೆ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಇವರನ್ನು ಗುರುತಿಸಲು ಇರುವ ಲಕ್ಷಣಗಳೇನು?"

"ಅದಕ್ಕೆ ಭೃಗು ಉತ್ತರಿಸುತ್ತಾನೆ: 'ಪರಿಶುದ್ಧನೂ, ಜಾತಕರ್ಮವೇ ಮೊದಲಾದ ಇತರ ಕರ್ಮಗಳಿಂದ ಪವಿತ್ರನಾದ, ವೇದ ಪಾರಂಗತನಾದ, ಷಟ್ಕರ್ಮಗಳನ್ನು ನೇರವೇರಿಸಬಲ್ಲ, ಶುದ್ಧಿಯ ವಿಧಿಗಳನ್ನು ಕರಾರುವಕ್ಕಾಗಿ ಮಾಡಬಲ್ಲ ನೈವೇದ್ಯದಲ್ಲಿ ಉಳಿದದ್ದನ್ನು ಸ್ವೀಕರಿಸುವ, ತನ್ನ ಧಾರ್ಮಿಕ ಗುರುವಿನ ಗೌರವಾದರ ಗಳಿಸಿರುವ, ಧಾರ್ಮಿಕ ವಿಧಿಗಳನ್ನು ಅನುಸರಿಸುವ ಹಾಗು ಸತ್ಯಶೀಲನಾಗಿರುವವನೇ ಬ್ರಾಹ್ಮಣ. ಯಾರಲ್ಲಿ ಸತ್ಯ, ಧಾರಾಳತನ, ಅಹಿಂಸೆ, ತೊಂದರೆ ಕೊಡದ ಬುದ್ಧಿ, ವಿನಯಶೀಲತೆ, ಕರುಣೆ ಮತ್ತು ವ್ರತಶೀಲತೆ ಮೈದೋರಿರುವುದೋ ಅವನೇ ಬ್ರಾಹ್ಮಣ. ರಾಜ್ಯಭಾರದ ಕರ್ತವ್ಯವನ್ನು ನಿರ್ವಹಿಸುವವನೂ ವೇದಾಧ್ಯಯನದಲ್ಲಿ ಆಸಕ್ತಿಯುಳ್ಳವನೂ ದಾನಧರ್ಮಗಳಲ್ಲಿ ನಿರತನಾಗಿರುವವನೇ ಕ್ಷತ್ರಿಯ. ಪಶುಪಾಲನೆಯಲ್ಲಿ ನಿರತನು, ವ್ಯವಸಾಯ ಮತ್ತು ಸಂಗ್ರಹಣೆಯಲ್ಲಿ ನಿರತನಾದವನು, ಪವಿತ್ರನಾದವನು ಮತ್ತು ವೇದಾಭ್ಯಾಸದಲ್ಲಿ ಪರಿಣತನಾದವನು ವೈಶ್ಯ. ರೂಢಿಮೂಲವಾಗಿ ಎಲ್ಲಾ ರೀತಿಯ ಆಹಾರಗಳಿಗೂ ಒಗ್ಗಿ ಹೋಗಿರುವವನು, ಎಲ್ಲಾ ವಿಧವಾದ ಕೆಲಸಗಳನ್ನು ಮಾಡುವವನು, ಅಶುಚಿಯಾಗಿರುವವನು, ವೇದಗಳನ್ನು ತ್ಯಜಿಸಿ, ಪವಿತ್ರ ಸಂಪ್ರದಾಯಗಳನ್ನು ಆಚರಿಸದವನು ಸಂಪ್ರದಾಯದಂತೆ ಶೂದ್ರನೆನಿಸಿಕೊಂಡ. ಶೂದ್ರನಲ್ಲಿ ಕಾಣುವ ಈ ಲಕ್ಷಣಗಳು ಬ್ರಾಹ್ಮಣನಲ್ಲಿ ಕಾಣಿಸುವುದಿಲ್ಲ. ಶೂದ್ರನಂತೆ ವರ್ತಿಸುವ ಬ್ರಾಹ್ಮಣನು ಬ್ರಾಹ್ಮಣನೇ ಅಲ್ಲ'."

ಪುರಾಣಗಳು ವರ್ಣಪದ್ಧತಿಯ ಉಗಮದ ಬಗ್ಗೆ ಏನು ಹೇಳುತ್ತವೆ ಎಂಬುದನ್ನು ಅನ್ವೇಷಿಸೋಣ.

'ವಿಷ್ಣುಪುರಾಣ'ದಿಂದ ಪ್ರಾರಂಭಿಸೋಣ.

ಚಾತುರ್ವರ್ಣದ ಉಗಮದ ಮೇಲೆ ವಿಷ್ಣುಪುರಾಣದಲ್ಲಿ ಎರಡು ಸಿದ್ಧಾಂತಗಳಿವೆ. ಒಂದು ವ್ಯಾಖ್ಯಾನದ ಪ್ರಕಾರ ವರ್ಣಾಶ್ರಮದ ಮೂಲ ಮನುವಿನಲ್ಲಿದೆ?.[೨]

"ಬ್ರಹ್ಮಾಂಡಕ್ಕೆ ಮೊದಲು, ಹಿರಣ್ಯಗರ್ಭನಾದ, ಸಕಲ ಜಗತ್ತುಗಳ ಸೃಷ್ಟಿಕರ್ತನಾದ, ದೈವಿ ವಿಷ್ಣುವಿನ ಅಂಶವನ್ನು ಒಳಗೊಂಡ ಋಕ್, ಯಜುಸ್, ಸಾಮ ಮತ್ತು ಅಥರ್ವ ವೇದಗಳ ತದ್ರೂಪನಾದ ಬ್ರಹ್ಮನು ಆದಿಯಲ್ಲಿ ಅಸ್ತಿತ್ವದಲ್ಲಿದ್ದ. ಬ್ರಹ್ಮನ ಬಲ ಉಂಗುಷ್ಠದಿಂದ ಪ್ರಜಾಪತಿ ದಕ್ಷ ಜನಿಸಿದ. ದಕ್ಷನಿಗೆ ಅದಿತಿ ಎಂಬ ಮಗಳೊಬ್ಬಳಿದ್ದಳು. ಅವಳಿಂದ ವಿವಸ್ವತ್ ಜನಿಸಿದ ಮತ್ತು ಅವನ ಮಗ ಮನು. ಮನುವಿಗೆ ಇಕ್ಷ್ವಾಕು, ನೃಗ, ದೃಷ್ಟ, ಶರ್ಯಾತಿ, ನರಶಾಂತ, ಪ್ರಾಂಶು, ನಾಭಗಂಧಿಷ್ಟ, ಕರುಷ ಮತ್ತು ಪೃಶಾದರ ಎಂಬ ಪುತ್ರರಿದ್ದರು."

"ಕರುಷನಿಂದ ಕರುಷರು, ಹೆಚ್ಚು ಶಕ್ತಿಯುತರಾದ ಕ್ಷತ್ರಿಯರು ಉದಯಿಸಿದರು. ನೇದಿಷ್ಟನ ಮಗನಾದ ನಭಗ ವೈಶ್ಯನಾದ."

೧. ಮ್ಯೂರ್: 'ಸ್ಯಾನ್‌ಸ್ಕ್ರಿಟ್ ಟೆಕ್ಸ್ಟ್', ಸಂ. I, ಪು. ೧೪೧–೧೪೨

೨. ಅದೇ, ಸಂ. I, ಪು. ೨೨೦–೨೨೧.

ಮೂಲವು ಮನುವಿಗೆ ಸೇರಿದುದೆಂದು ನೀಡುವ ವಿವರಣೆಯಲ್ಲಿ ಮತ್ತೊಂದು ಬೇರೆಯ ಪ್ರತಿಪಾದನೆಯೂ ವಿಷ್ಣುಪುರಾಣದಲ್ಲಿದೆ.

"ಒಬ್ಬ ಪುತ್ರನನ್ನು ಬಯಸಿ, ಬ್ರಹ್ಮನು ಮೈತ್ರ ಮತ್ತು ವರುಣರನ್ನು ಸಂತುಷ್ಟಗೊಳಿಸಲು ಯಜ್ಞ ಮಾಡಿದ. ಆದರೆ ಹೋತ್ರಿ ಪುರೋಹಿತನ ಕ್ರಮ ತಪ್ಪಿದ ತಪ್ಪು ಪ್ರಾರ್ಥನೆಯ ಕಾರಣ, ಇಳಾ ಎಂಬ ಮಗಳು ಜನಿಸಿದಳು. ಮೈತ್ರ ವರುಣರ ಕೃಪೆಯಿಂದ ಸುದ್ಯುಮ್ನನೆಂಬ ಮಗನಾದ. ಈಶ್ವರನ (ಮಹಾದೇವ) ಕೋಪದ ಕಾರಣ ಪುನಃ ಸ್ತ್ರೀಯಾಗಿ ಬದಲಾವಣೆಗೊಂಡ. ಆಕೆ ಸೋಮನ (ಚಂದ್ರ) ಮಗನಾದ ಬುಧನ ಆಶ್ರಮದ ಹತ್ತಿರ ಅಲೆದಾಡುವಾಗ ಆಕೆಯಲ್ಲಿ ಅನುರಾಗಗೊಂಡ ಬುಧನಿಗೆ ಆಕೆಯಿಂದ ಪುರೂರವಸ್ ಎಂಬ ಒಬ್ಬ ಮಗ ಹುಟ್ಟಿದ. ಆತನ ಜನನವಾದ ಮೇಲೆ ಯಜ್ಞ ಸ್ವರೂಪಿಯೂ ಋಗ್, ಯಜುರ್, ಸಾಮ ಮತ್ತು ಅಥರ್ವವೇದಗಳು, ಸಮಸ್ತ ವಸ್ತುಗಳ ಮನಸ್ಸಿನ ಮತ್ತು ಶೂನ್ಯ ಸ್ವರೂಪಿಯೂ ಆದ ಯಜ್ಞರೂಪದ ಪುರುಷ ದೇವರನ್ನು ಅನಂತ ತೇಜಸ್ಸಿನ ಋಷಿಗಳು ಪೂಜಿಸಿ, ಸುದ್ಯುಮ್ನನು ಮತ್ತೆ ಪುರುಷತ್ವ ಪಡೆಯಬೇಕೆಂದು ಇಚ್ಛಿಸಿದನು. ಈ ದೇವರ ಕೃಪೆಯಿಂದ ಇಳಾ ಮತ್ತೆ ಸುದ್ಯುಮ್ನನಾದನು".

" 'ವಿಷ್ಣುಪುರಾಣ'ದ ಪ್ರಕಾರ ಬ್ರಹ್ಮನ ಮಗನಾಗಿದ್ದ ಮತ್ತು ಸೋಮ (ಚಂದ್ರ)ನ ತಂದೆಯಾಗಿದ್ದ, ಅತ್ರಿಯು ಗಿಡಗಳು, ಬ್ರಾಹ್ಮಣರು ಮತ್ತು ನಕ್ಷತ್ರಗಳ ಅಧಿಪತಿಯಾಗಿ ನೇಮಿಸಲ್ಪಟ್ಟ, ರಾಜಸೂಯಯಾಗವನ್ನು ನೆರವೇರಿಸಿದ ಮೇಲೆ ಸೋಮನು ಧರ್ಮಿಷ್ಠನಾದ ದೇವಗುರುವಾದ ಬೃಹಸ್ಪತಿಯ ಪತ್ನಿ ತಾರೆಯನ್ನು ಕದ್ದೊಯ್ದ. ಆತನಿಗೆ ಬ್ರಹ್ಮ, ದೇವತೆಗಳು ಮತ್ತು ಋಷಿಗಳು ಎಚ್ಚರಿಕೆ ನೀಡಿದರೂ, ಬೇಡಿಕೊಂಡರೂ ಆತ ಬಿಟ್ಟುಕೊಡಲು ನಿರಾಕರಿಸಿದ. ಸೋಮನ ಬೆಂಬಲಿಗ ಉಸಾಣರಿಗೂ ಬೃಹಸ್ಪತಿಯ ಬೆಂಬಲಕ್ಕೆ ನಿಂತ ಆಂಗೀರಸನ ಶಿಷ್ಯ ರುದ್ರನಿಗೂ ಭೀಕರ ಕದನ ಆರಂಭವಾಯಿತು. ದೇವತೆಗಳು ಮತ್ತು ದೈತ್ಯರ ಬೆಂಬಲದಿಂದ ಎರಡು ಗುಂಪುಗಳ ನಡುವೆ ಭಯಂಕರ ಕದನ ಸಂಭವಿಸಿತು. ಬ್ರಹ್ಮನು ಮಧ್ಯೆ ಪ್ರವೇಶಿಸಿ ತಾರೆಯನ್ನು ಆಕೆಯ ಗಂಡನಿಗೆ ಬಿಟ್ಟುಕೊಡುವಂತೆ ಬಲವಂತಪಡಿಸಿದ. ಈ ಮಧ್ಯೆ ಆಕೆ ಗರ್ಭಿಣಿಯಾಗಿದ್ದು, ಬುಧನೆಂಬ (ಬುಧಗ್ರಹ) ಮಗನನ್ನು ಹಡೆದಳು. ಆಕೆಯನ್ನು ಬಲವಾಗಿ ಒತ್ತಾಯ ಮಾಡಿದ ಮೇಲೆ ಸೋಮನೇ ತನ್ನ ಮಗನ ತಂದೆಯೆಂದು ಒಪ್ಪಿಕೊಂಡಳು. ಮೊದಲೇ ಹೇಳಿರುವಂತೆ ಪುರೂರವಸ್, ಮನುವಿನ ಮಗಳಾದ ಇಳಾ ಎಂಬುವಳಿಂದ ಈ ಬುಧನು ಪಡೆದ ಮಗನಾಗಿದ್ದನು. ಪುರೂರವಸ್ ಮತ್ತು ಅಪ್ಸರೆ ಊರ್ವಶಿಯ ಪ್ರೇಮಗಳು, ಶತಪಥ ಬ್ರಾಹ್ಮಣದಲ್ಲಿ xi. ೫,೧,೧ ವಿಷ್ಣು ಪುರಾಣದಲ್ಲಿ iv, ೬, ೧೯; ಭಾಗವತ ಪುರಾಣದಲ್ಲಿ ix. ೧೪; ಮತ್ತು ಹರಿವಂಶದ ವಿಭಾಗ ೨೬ರಲ್ಲಿ ವಿವರವಾಗಿ ಹೇಳಲ್ಪಟ್ಟಿವೆ. 'ಮಹಾಭಾರತ'ದ ಆದಿಪರ್ವ ೭೫, ಪುರೂರವಸನು, ಬ್ರಾಹ್ಮಣರ ಜೊತೆ ಹೋರಾಟಕ್ಕಿಳಿದ ವಿಷಯವನ್ನು ಪ್ರಸ್ತಾಪಿಸುತ್ತದೆ. ಈ ಭಾಗವನ್ನೂ ಈ ಮುಂದೆ ಉಲ್ಲೇಖಿಸಲಾಗಿದೆ. 'ವಿಷ್ಣುಪುರಾಣ'ದ ಪ್ರಕಾರ iv, ೭,೧, ಪುರೂರವಸ್‌ನಿಗೆ ಆರು ಮಂದಿ ಪುತ್ರರಿದ್ದರು. ಅವರಲ್ಲಿ ಆಯುಷ್ ಜ್ಯೇಷ್ಠನಿದ್ದ. ಅಯುಷ್‌ನಿಗೆ ನಹುಷ, ಕ್ಷಾತ್ರವೃದ್ಧ, ರಂಭ, ರಾಜಿ ಮತ್ತು ಅನೇನಸ ಎಂಬ ಐದು ಮಂದಿ ಪುತ್ರರಿದ್ದರು."

"ಕ್ಷಾತ್ರವೃದ್ಧನಿಗೆ ಸುನಹೋತ್ರ ಎಂಬ ಮಗನಿದ್ದ. ಅವನಿಗೆ ಕಾವೇಶ, ಲೇಶ ಮತ್ತು ಗೃತ್ಸಮದ ಎಂಬ ಮೂವರು ಮಕ್ಕಳಿದ್ದರು. ಕೊನೆಯವನಿಂದ ನಾಲ್ಕು ಜಾತಿಗಳ ಪದ್ಧತಿಯ ಜನಕವಾದ

ಶೌನಕ ಹುಟ್ಟಿದ, ಕಾಶನಿಗೆ ಕಾಶಿರಾಜನೆಂಬ ಮಗನೂ, ಕಾಶಿರಾಜನಿಗೆ ದೀರ್ಘತಮಸ್ ಎಂಬ ಮಗನೂ, ದೀರ್ಘತಮಸ್‌ಗೆ ಧನ್ವಂತ್ರಿ ಎಂಬ ಮಗನೂ ಇದ್ದರು''.

ವಿಷ್ಣು ಪುರಾಣದ ಈ ಕೆಳಗಿನ ಭಾಗ ಸೂಚಿಸುವಂತೆ,[೧] ಎರಡನೆಯದು, ವರ್ಣದ ಉಗಮವು ಬ್ರಹ್ಮನಿಗೆ ಸೇರಿದುದೆಂದು ಹೇಳುತ್ತದೆ: ಮೈತ್ರೇಯ ಹೇಳುತ್ತಾನೆ:[೨] ''ನೀನು ನನಗೆ ಆರ್ವಕಸ್ರೋತಸ್ ಅಥವಾ ಮಾನವ ಸೃಷ್ಟಿಯ ಬಗ್ಗೆ ವಿವರಿಸಿದ್ದೀಯೆ. ಓ ಬ್ರಹ್ಮನ್, ಬ್ರಹ್ಮನು ಅದನ್ನು ಹೇಗೆ ರೂಪಿಸಿದ ಎಂಬುದನ್ನು ನನಗೆ ವಿಷದವಾಗಿ ದೃಢಪಡಿಸು. ಅವನು ಹೇಗೆ ಮತ್ತು ಯಾವ ಗುಣಗಳ ಆಧಾರದ ಮೇಲೆ ಜಾತಿಗಳನ್ನು ಸೃಷ್ಟಿಸಿದ ಮತ್ತು ಬ್ರಾಹ್ಮಣರ ಮತ್ತು ಉಳಿದವರ ಸಾಂಪ್ರದಾಯಿಕ ಕರ್ತವ್ಯಗಳೇನೆಂಬುದನ್ನು ನನಗೆ ತಿಳಿಸು''. ಪರಾಶರ ಉತ್ತರಿಸಿದ: ''೩. ಅವನ ಆಶಯದಂತೆ ಭೂಮಂಡಲವನ್ನು ಸೃಷ್ಟಿಸಲು ಇಚ್ಛಿಸಿದಾಗ ಸಾತ್ವಿಕ ಜೀವರಾಶಿಗಳು ಅವನ ಬಾಯಿಯಿಂದ ಹೊರಬಂದವು. ೪. ರಜೋಗುಣವನ್ನು ಅಧಿಕವಾಗುಳ್ಳ ಜೀವರಾಶಿ ಆತನ ಎದೆಯಿಂದ ಬಂದವು. ರಜೋಗುಣ ಮತ್ತು ತಾಮಸ ಗುಣ ಪ್ರಬಲವಾಗಿದ್ದವುಗಳು ಆತನ ತೊಡೆಯಿಂದ; ೫. ತಾಮಸ ಗುಣವೇ ಪ್ರಮುಖವಾಗಿದ್ದ ಉಳಿದವುಗಳನ್ನು ತನ್ನ ಪಾದಗಳಿಂದ ಸೃಷ್ಟಿಸಿದ. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಎಂಬ ನಾಲ್ಕು ಜಾತಿಗಳು ಕ್ರಮವಾಗಿ ಸೃಷ್ಟಿಯಾದವು. ಜಾತಿಗಳಿಂದ ಚಾತುರ್ವರ್ಣ ಪದ್ಧತಿ ರಚಿಸಲ್ಪಟ್ಟಿತು. ೬. ಯಜ್ಞಯಾಗಾದಿಗಳ ಆಚರಣೆಗಾಗಿ ಬ್ರಹ್ಮನು ಈ ನಾಲ್ಕು ವರ್ಗಗಳ ಸಂಪ್ರದಾಯವನ್ನು ರಚಿಸಿದ. ದೇವತೆಗಳು ಮಳೆಯನ್ನು ಸುರಿಸಿ ಮಾನವ ವರ್ಗವನ್ನು ಸಂರಕ್ಷಿಸುತ್ತಾರೆ. ೮. ಅಭ್ಯುದಯಕ್ಕೆ ಕಾರಣೀಭೂತವಾದ ಯಜ್ಞಯಾಗಾದಿಗಳು, ತಮ್ಮ ಕರ್ತವ್ಯಗಳಿಗೆ ತಮ್ಮನ್ನೇ ಅರ್ಪಿಸಿಕೊಂಡಿರುವ, ಅಪಮಾರ್ಗದಲ್ಲಿ ನಡೆಯುವ ಸನ್ಮಾರ್ಗದಲ್ಲಿ ನಡೆಯುವ ಸಾತ್ವಿಕ ವ್ಯಕ್ತಿಗಳಿಂದ ತಪ್ಪದೇ ನಡೆಸಲ್ಪಡುತ್ತವೆ. ೯. ಮನುಷ್ಯರು ತಮ್ಮ ಮಾನವೀಯ ಗುಣದ ಫಲವಾಗಿ ಸ್ವರ್ಗ ಮತ್ತು ಮೋಕ್ಷವನ್ನು ಪಡೆಯುತ್ತಾರೆ ಮತ್ತು ಅವರು ಇಚ್ಛಿಸಿದ ಪ್ರಪಂಚಕ್ಕೆ ಹೋಗುತ್ತಾರೆ.''

ಹರಿವಂಶದಲ್ಲಿ ಎರಡು ಸಿದ್ಧಾಂತಗಳು ಕಾಣಸಿಗುತ್ತವೆ. ವಿಷ್ಣು ಪುರಾಣದಲ್ಲಿ[೩] ಹೇಳಿರುವಂತಲ್ಲದೆ, ವರ್ಣಗಳ ಮೂಲವು ಸಂತತಿಯ ಬುಡವಾದ ಮನುವಿನ ಸಂತತಿಯವರಲ್ಲೊಬ್ಬನಿಂದ ಜನಿಸಿದ ಸೂತ್ರವನ್ನು ಎತ್ತಿ ಹಿಡಿಯುತ್ತದೆ.

''ಗೃತ್ಸಮದನ ಮಗ ಶುನಕನಿಂದ ಶೌನಕರು, ಬ್ರಾಹ್ಮಣರು, ಕ್ಷತ್ರಿಯರು, ವೈಶ್ಯರು ಮತ್ತು ಶೂದ್ರರು ಹುಟ್ಟಿದರು.''

''ವಿಧಾತನು ಸುಹೋತ್ರ, ಸುಹೋತ್ರಿ, ಗಯ, ಗರ್ಗ ಮತ್ತು ಪ್ರಬಲನಾದ ಕಪಿಲ ಎಂಬ ಐದು ಮಂದಿ ಪುತ್ರರ ತಂದೆ. ಸಹೋತ್ರನಿಗೆ ಪ್ರಸಿದ್ಧಿ ಪಡೆದಿದ್ದ ಕಾಕ್ಷಕ ಮತ್ತು ದೊರೆ ಗೃತ್ಸಮತಿ ಎಂಬ ಇಬ್ಬರು ಪುತ್ರರು. ಗೃತ್ಸಮತಿಯ ಮಕ್ಕಳು ಬ್ರಾಹ್ಮಣರು, ಕ್ಷತ್ರಿಯರು ಮತ್ತು ವೈಶ್ಯರು.''

---

೧. ಮ್ಯೂರ್: 'ಸ್ಯಾನಸ್ಕ್ರಿಟ್ ಟೆಕ್ಸ್ಟ್', ಸಂ. I, ಪು. ೬೧–೬೨

೨. 'ವಿಷ್ಣುಪುರಾಣ'ದಲ್ಲಿ ಪ್ರಶ್ನೆ ಹಾಕುವ ಶಿಷ್ಯ ಮೈತ್ರೇಯ ಮತ್ತು ಉತ್ತರ ನೀಡುವ ಪರಾವಶರರ ಸಂವಾದದ ರೂಪದಲ್ಲಿ ಪ್ರಸ್ತಾಪಿಸಲ್ಪಟ್ಟಿದೆ.

೩. ಮ್ಯೂರ್: 'ಸ್ಯಾನ್‌ಸ್ಕ್ರಿಟ್ ಟೆಕ್ಸ್ಟ್', ಸಂ. I, ಪು. ೨೨೭

ಅವರು ಬ್ರಹ್ಮನಿಂದ ಹೊರಹೊಮ್ಮಿ ಪ್ರಜಾಪತಿ ದಕ್ಷನಾಗಿ ಬಂದ ವಿಷ್ಣುವಿನಿಂದ ರೂಪುಗೊಂಡರೆಂದು ಹೇಳುವ ಇನ್ನೊಂದು ವ್ಯಾಖ್ಯಾನ ಈ ಕೆಳಕಂಡಂತಿದೆ.[೧]

ಜನಮೇಜಯ ಹೇಳುತ್ತಾನೆ:[೨] "ಹೇ ಬ್ರಹ್ಮನೇ, ಯುಗಗಳಲ್ಲಿ ಮೊದಲನೆಯದಾದ ಬ್ರಹ್ಮಯುಗದ ವರ್ಣನೆಯನ್ನು ಕೇಳಿದ್ದೇನೆ. ಅಸಂಖ್ಯಾತ ಬ್ರಹ್ಮಯುಗದ ವರ್ಣನೆಯನ್ನು ಕೇಳಿದ್ದೇನೆ. ಲೆಕ್ಕವಿಲ್ಲದಷ್ಟು ಯಜ್ಞಯಾಗಾದಿಗಳಿಂದ, ಬಲಿದಾನಗಳಿಂದ ಉದಾಹರಿಸಲ್ಪಟ್ಟು ಕಥನದಲ್ಲಿ ಪರಿಣತರಾದವರಿಂದ ವಿವರಿಸಲ್ಪಟ್ಟಿರುವ ಕ್ಷತ್ರಿಯ ಯುಗದ ವಿಷಯವನ್ನು ನಾನು ಹ್ರಸ್ವವಾಗಿ, ದೀರ್ಘವಾಗಿ ಮತ್ತು ಕರಾರುವಕ್ಕಾಗಿ ತಿಳಿಯಲಿಚ್ಛಿಸುತ್ತೇನೆ. ವೈಶಂಪಾಯನ ಉತ್ತರಿಸಿದ: ಯಜ್ಞಯಾಗಾದಿಗಳು ಹಾಗೂ ಔದಾರ್ಯಕ್ಕೆ ಹೆಸರಾದ ಆ ಯುಗವನ್ನು ನಿನಗೆ ವಿವರಿಸುತ್ತೇನೆ. ಒಂದು ಹೆಬ್ಬೆರಳು ಗಾತ್ರದ ಆ ಮುನಿಗಳು ಸೂರ್ಯನ ಕಿರಣಗಳಲ್ಲಿ ಲೀನವಾಗಿದ್ದರು. ಮುಕ್ತಮಾರ್ಗದ ಜೀವನಕ್ರಮವನ್ನು ಅನುಸರಿಸುತ್ತಾ ನಿರಂತರ ಬ್ರಹ್ಮನಲ್ಲಿ ಶ್ರದ್ಧೆಯುಳ್ಳವರಾಗಿ, ಕ್ರಿಯೆ ಮತ್ತು ನಿಷ್ಕ್ರಿಯೆಗಳೆರಡರಲ್ಲೂ ತಪ್ಪದೆ ಯಜ್ಞಯಾಗಾದಿಗಳನ್ನು ಆಚರಿಸುತ್ತಾ ಉತ್ಕೃಷ್ಟ ಗುರಿಯಾದ ಬ್ರಹ್ಮನಲ್ಲಿ ಐಕ್ಯವಾದ ನಡೆನುಡಿಗಳಲ್ಲಿ ಶುದ್ಧರಾಗಿ ಸಂಯಮ ಜೀವನವನ್ನು ಸಾಗಿಸುತ್ತಾ ಬ್ರಹ್ಮಜ್ಞಾನದಿಂದ ಶಿಸ್ತು ಪಡೆದ ಬ್ರಾಹ್ಮಣರು ತಮ್ಮ ಆಚರಣೆಗಳಲ್ಲಿ ಪರಿಪೂರ್ಣರಾಗಿ, ಜ್ಞಾನದಲ್ಲಿ ಪರಿಣಿತರಾಗಿ ಮತ್ತು ಧ್ಯಾನಾಸಕ್ತರಾಗಿ, ಸಾವಿರ ಯುಗಗಳ ಅಂತ್ಯದಲ್ಲಿ ಅವರ ಘನತೆ, ಸಮೃದ್ಧವಾದಾಗ, ಈ ಮುನಿಗಳು ತಮ್ಮನ್ನು ಪ್ರಪಂಚದ ವಿಸರ್ಜನೆಯಲ್ಲಿ ತೊಡಗಿಸಿಕೊಂಡರು. ನಂತರ ಬ್ರಹ್ಮನಿಂದ ಹೊರಬಂದ ವಿಷ್ಣುವು ಧ್ಯಾನಸಕ್ತಿಯಲ್ಲಿ ಲೀನನಾಗಿ, ಪ್ರಜಾಪತಿ ದಕ್ಷನಾಗಿ ಬಹುಸಂಖ್ಯೆಯ ಜೀವರಾಶಿಗಳನ್ನು ರೂಪಿಸಿದ. ಅವಿನಾಶಕ ಅಕ್ಷರದಿಂದ ಸ್ಫುರದ್ರೂಪಿಗಳು ಅಥವಾ ಸೋಮನ ಪ್ರೀತಿಪಾತ್ರರಾದ ಬ್ರಾಹ್ಮಣರು, ಕ್ಷತ್ರಿಯರು ನಶ್ವರವಾದ (ಕ್ಷರದಿಂದ) ವೈಶ್ಯರು ಹೊಂದಾಣಿಕೆಯಿಂದ ಶೂದ್ರರು ಧೂಮದಿಂದ ಸೃಷ್ಟಿಸಲ್ಪಟ್ಟರು. ವಿಷ್ಣುವು ಜಾತಿಗಳ (ವರ್ಣ) ಬಗ್ಗೆ ಯೋಚಿಸುತ್ತಿರುವಾಗ ಬ್ರಾಹ್ಮಣಾದಿಗಳು ಬಿಳುಪು, ಕೆಂಪು, ಹಳದಿ ಮತ್ತು ನೀಲಿ ಬಣ್ಣಗಳಿಂದ ರೂಪಿಸಲ್ಪಟ್ಟರು. ಆದ್ದರಿಂದ ಸ್ವರೂಪದಲ್ಲಿ ಒಂದಾಗಿ ಕರ್ತವ್ಯಗಳಲ್ಲಿ ವಿಭಿನ್ನರಾಗಿ, ದ್ವಿಪಾದಿಗಳಾಗಿ, ಅತಿ ಆಶ್ಚರ್ಯಕರವಾಗಿ, ಅತುಳ ಶಕ್ತಿಯುತರಾಗಿ ಅವರ ಎಲ್ಲಾ ಉದ್ಯೋಗ ಸಾಧನಗಳಲ್ಲಿ ನಿಪುಣರಾಗಿರುವ ಈ ಪ್ರಪಂಚದ ಮಾನವರು ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರರೆಂಬ ನಾಲ್ಕು ಜಾತಿಗಳಾಗಿ ವಿಂಗಡಿಸಲ್ಪಟ್ಟರು. ಮೂರು ಉಚ್ಚ ಜಾತಿಗಳ ವ್ರತ ನಿಯಮಗಳು ವೇದಗಳಿಂದ ನಿರ್ಣಯಿಸಲ್ಪಟ್ಟಿವೆ ಎಂದು ಸಾರಲಾಗಿದೆ. ಬ್ರಹ್ಮನಿಂದ ಜನಿಸಿದ ಈ ವಿಷ್ಣುವು, ಒಡೆಯ ಪ್ರಚೇತಸ, ಅಂದರೆ ಮಹಾ ಯೋಗಿಯಾದ ವಿಷ್ಣುವು ತನ್ನ ಬುದ್ಧಿಶಕ್ತಿಗಳಿಂದ ಧ್ಯಾನಸ್ಥಿತಿಯಿಂದ ಕಾಯಕ ಕ್ಷೇತ್ರಕ್ಕೆ ಪ್ರವೇಶಿಸಿದ. ನಂತರ ನಿರ್ಮೂಲದಿಂದ ಹುಟ್ಟಿದ ಶೂದ್ರರು, ಆಚರಣರಹಿತರಾದರು. ಆದ್ದರಿಂದ ಅವರಿಗೆ ಶುದ್ಧೀಕರಣ ವ್ರತಾಚರಣೆಗಳಲ್ಲಿ ಪ್ರವೇಶವಿಲ್ಲ ಮತ್ತು ಪವಿತ್ರ ವೇದದ ಅಧ್ಯಯನ ಸಲ್ಲದು. ಕಟ್ಟಿಗೆಯ ಮಸೆತದಿಂದ ಉಂಟಾಗುವ ಬೆಂಕಿಯ ಮೇಲಿಂದ ಏಳುವ ಹೊಗೆಯ ಮೋಡ ಚದುರಿಹೋಗಿ, ಯಜ್ಞಾಚರಣೆಯಲ್ಲಿ ಯಾವ ಉಪಯೋಗಕ್ಕೂ ಬಾರದಿರುವಂತೆ, ಶೂದ್ರರು ಭೂಮಂಡಲದ ಮೇಲೆ ಅಲೆದಾಡುತ್ತಾ, ಅವರ

೧. ಮ್ಯೂರ್ ಸಂ. I, ಪು. ೧೫೨–೧೫೩.

೨. ಹರಿವಂಶವು ಜನಮೇಜಯ ಮತ್ತು ವೈಶಂಪಾಯನನ ನಡುವಿನ ಸಂವಾದ.

ಹುಟ್ಟು, ಪರಿಶುದ್ಧತೆಯಿಲ್ಲದ ಜೀವನಕ್ರಮ, ವೇದದಲ್ಲಿ ಗೊತ್ತುಪಡಿಸಿರುವ ವ್ರತಾಚರಣೆಗಳನ್ನು ಮಾಡದಿರುವ ಅವರು ಯಜ್ಞಗಳ ಉದ್ದೇಶಕ್ಕಾಗಿ ಸಂಪೂರ್ಣವಾಗಿ ಕೆಲಸಕ್ಕೆ ಬಾರದವರು."

ಕೊನೆಯದಾಗಿ ಭಾಗವತ ಪುರಾಣ:[೧]

"ಸಾವಿರಾರು ವರ್ಷಗಳ ಕೊನೆಯಲ್ಲಿ, ಕಾಲ, ಕ್ರಿಯೆ ಮತ್ತು ಸ್ವಾಭಾವಿಕ ಗುಣದಲ್ಲಿ ನೆಲೆಸಿರುವ ಜೀವಾತ್ಮ, ನೀರಿನಲ್ಲಿ ತೇಲುವ ಆ ಅಂಡದಿಂದ ಹೊರಬಂದ ಪುರುಷನಿಗೆ ಸಾವಿರ ತೊಡೆಗಳು, ಪಾದಗಳು, ತೋಳುಗಳು, ನಯನಗಳು, ಮುಖಗಳು ಮತ್ತು ಶಿರಗಳು ಏಳು ಪಾತಾಳ ಲೋಕಗಳನ್ನು ತನ್ನ ಟೊಂಕದಿಂದಲೂ, ಮೇಲಿನ ಏಳು ಲೋಕಗಳನ್ನು ತನ್ನ ತೊಡೆಸಂದುಗಳಿಂದಲೂ ಸೃಷ್ಟಿಸಿದನು. ಬ್ರಾಹ್ಮಣನು ಪುರುಷನ ಬಾಯಿಯಾಗಿದ್ದು, ಕ್ಷತ್ರಿಯನು ಆತನ ತೋಳುಗಳು, ವೈಶ್ಯನು ಆತನ ತೊಡೆಗಳಿಂದ, ಶೂದ್ರನು ದೈವಿಕ ಜೀವಿಯ ಪಾದಗಳಿಂದ ಜನಿಸಿದನು. ಭೂಮಂಡಲವು ಅವನ ಪಾದಗಳಿಂದ, ಗಾಳಿ ಆತನ ನಾಭಿಯಿಂದ, ಸ್ವರ್ಗವು ಆತನ ಹೃದಯದಿಂದ ಮತ್ತು ಮಹಾಲೋಕವು ಪರಾಕ್ರಮಿಯಾದ ಆತನ ಎದೆಯಿಂದ ರೂಪಿಸಲ್ಪಟ್ಟಿತು."

ವಾಯುಪುರಾಣವು ಮನುವಿನ ಸಿದ್ಧಾಂತವನ್ನು ಕೈಗೆತ್ತಿಕೊಳ್ಳುತ್ತದೆ. ಅದು ಹೀಗೆ ಹೇಳುತ್ತದೆ:

"ಶುನಕನು ಗೃತ್ಸಮದನ ಮಗನಾಗಿದ್ದು ಶುನಕನಿಂದ ಶೌನಕ ಜನಿಸಿದ. ಶೌನಕದ ಮಕ್ಕಳೇ ಬ್ರಾಹ್ಮಣರು, ಕ್ಷತ್ರಿಯರು, ವೈಶ್ಯರು ಮತ್ತು ಶೂದ್ರರು, ವಿವಿಧ ಕರ್ತವ್ಯಗಳನ್ನು ನಿರ್ವಹಿಸಬೇಕಾದ ದ್ವಿಜರು ಜನಿಸಿದರು."

ಈ ಸಮೀಕ್ಷೆಯು ತೋರುವುದೇನನ್ನು?

ಅದು ಏನನ್ನಾದರೂ ತೋರುವುದಿದ್ದರೆ, ವರ್ಣಪದ್ಧತಿಯ ಮೂಲವನ್ನು ವಿವರಿಸುವುದಕ್ಕೆ ಪ್ರಯತ್ನಿಸುವಲ್ಲಿ ಬ್ರಾಹ್ಮಣರಿಂದ ಎಂತಹ ಗೊಂದಲ ಕಲ್ಪಿಸಲ್ಪಟ್ಟಿದೆ ಎಂಬುದನ್ನು ತೋರುತ್ತದೆ. ಅವರು ನೀಡಿರುವ ವಿವರಣೆಯಲ್ಲಿ ಏಕರೂಪತೆಯಾಗಲೀ, ಸಾಮರಸ್ಯವಾಗಲೀ ಇಲ್ಲ. ಒಂದೇ ಪ್ರಮಾಣಗ್ರಂಥವು ವಿವಿಧ ವಿವರಣೆಗಳನ್ನು ನೀಡುತ್ತದೆ. ವರ್ಣಪದ್ಧತಿಯ ಉಗಮವನ್ನು ವಿವರಿಸುವ ಒಂದೇ ಉದ್ದೇಶದಿಂದ, ಒಂದೇ ಗ್ರಂಥವು ಕೆಲವು ಪೌರಾಣಿಕ, ಕೆಲವು ಕಾಲ್ಪನಿಕ ಮತ್ತು ವೈಚಾರಿಕ ವಿವರಣೆಯನ್ನೀಯುತ್ತದೆ.

ವರ್ಣಗಳು ಪುರುಷನಿಂದ, ಮನುವಿನಿಂದ, ಪ್ರಜಾಪತಿಯಿಂದ, ವ್ರಾತ್ಯನಿಂದ ಮತ್ತು ಸೋಮನಿಂದ ಉದ್ಭವಿಸಿದವೆಂದು ವಿವರಿಸಲು ವೇದಗಳು ಪ್ರಯತ್ನಿಸುತ್ತವೆ. ಬ್ರಾಹ್ಮಣಗಳು ವೇದಗಳಿಗಿಂತ ಗಮನಾರ್ಹ ವ್ಯತ್ಯಾಸ ತೋರುತ್ತವೆ. ಅವುಗಳು ಪುರುಷ, ಮನು, ವ್ರಾತ್ಯ ಅಥವಾ ಸೋಮ ಇವರುಗಳನ್ನು ನಾಲ್ಕು ವರ್ಣಗಳ ಜನ್ಮದಾತರೆಂದು ಅಂಗೀಕರಿಸುವುದಿಲ್ಲ. ಅವು ಪ್ರಜಾಪತಿ ಮತ್ತು ಬ್ರಹ್ಮನ ಮಧ್ಯೆ ಹೊಯ್ದಾಡುವ ಹೊಸ ಕಲ್ಪನೆಗೆ ಎಡೆಮಾಡಿಕೊಟ್ಟಿವೆ.

ತೈತ್ತಿರೀಯ ಬ್ರಾಹ್ಮಣವು ಒಂದು ತೀರಾ ಹೊಸ ತತ್ವವನ್ನೂ ಪ್ರತಿಪಾದಿಸುತ್ತದೆ. ಬ್ರಾಹ್ಮಣರು ದೇವತೆಗಳಿಂದ, ಶೂದ್ರರು ಅಸುರರಿಂದ ಜನಿಸಿದರೆಂದು ಹೇಳುತ್ತದೆ.

ಮನುಸ್ಮೃತಿಯ ಪೌರಾಣಿಕ ಮತ್ತು ತರ್ಕಬದ್ಧ ಎಂಬ ಎರಡು ವಿವರಣೆಗಳನ್ನು ನೀಡುತ್ತದೆ. ಪೌರಾಣಿಕ ವಿವರಣೆಯು ವರ್ಣದ ಮೂಲ ಬ್ರಹ್ಮನೆಂದು ಬೊಟ್ಟು ಮಾಡಿದರೆ, ತರ್ಕಬದ್ಧ ವಿವರಣೆಯು

---

೧. ಮ್ಯೂರ್: 'ಸ್ಯಾನಸ್ಕ್ರಿಟ್ ಟೆಕ್ಸ್ಟ್', ಸಂ. I, ಪು. ೧೫೬.

ವರ್ಣದ ಮೂಲವು ಒಂದು ವ್ಯಕ್ತಿಯ ದೇಹಪ್ರಕೃತಿಗೆ ಸೇರಿದುದೆಂದು ಎಣಿಸುತ್ತದೆ. ರಾಮಾಯಣ, ಮಹಾಭಾರತ ಮತ್ತು ಪುರಾಣಗಳು ಮನುವು ನಾಲ್ಕು ವರ್ಣಗಳ ಜನ್ಮದಾತನೆಂಬ ತತ್ತ್ವವನ್ನು ಎತ್ತಿ ಹಿಡಿಯುತ್ತವೆ. ಮನುವಿನ ತತ್ತ್ವವನ್ನು ಪ್ರತಿಪಾದಿಸುವಲ್ಲಿ, ಅವನನ್ನು ಪೂರ್ಣವಾಗಿ ಅವ್ಯವಸ್ಥೆಗೀಡುಮಾಡಿವೆ. ರಾಮಾಯಣದಲ್ಲಿ ಈ ಮನುವು ದಕ್ಷನ ಮಗಳು ಮತ್ತು ಕಶ್ಯಪನ ಹೆಂಡತಿ; ಮಹಾಭಾರತದಲ್ಲಿ ಮನುವು ಸ್ತ್ರೀಯಲ್ಲ, ಒಬ್ಬ ಪುರುಷ. ಅವನು ಕಶ್ಯಪನ ಮಗನಾದ ವಿವಸ್ವತನ ಮಗ. ಮಹಾಭಾರತದಲ್ಲಿ ಕಶ್ಯಪನ ಹೆಂಡತಿ ಮನುವಲ್ಲ. ದಕ್ಷನ ಮಗಳೆಂದು ಹೇಳಲಾದ ದಾಕ್ಷಾಯಿಣಿ. ಪುರಾಣಗಳು ಮನುವನ್ನು ನಾಲ್ಕು ವರ್ಣಗಳ ಜನಕನೆಂದು ವಿವರಿಸುವಾಗ, ಅದರಲ್ಲಿ ಅನೇಕ ವ್ಯತ್ಯಾಸವುಳ್ಳ ಅಂಶಗಳು ಒಳಸೇರಿವೆ. ವಿಷ್ಣುಪುರಾಣವು ವರ್ಣದ ಮೂಲವು ಮನುವಿಗೆ ಸೇರಿದ್ದೆಂದು ಹೇಳುವ ಬದಲು, ಆತನ ಮಕ್ಕಳಿಗೆ ಸೇರಿದ್ದೆಂದು ಹೇಳಲು ಹೊರಡುತ್ತದೆ. ಆದರೆ ಅದು ಆತುರಾತುರವಾಗಿ, ಮನುವಿನ ಎಂಟು ಮಕ್ಕಳಲ್ಲಿ ಇಬ್ಬರಿಂದ, ಬ್ರಾಹ್ಮಣ ಮತ್ತು ಶೂದ್ರರೆಂಬ ಎರಡು ವರ್ಣಗಳ ಮೂಲವನ್ನು ಮಾತ್ರ ವಿವರಿಸಿ, ಉಳಿದೆರಡು ವರ್ಣಗಳನ್ನು ವಿವರಿಸುವುದನ್ನು ಮರೆತಿದೆ. ಇದೇ ವಿಷ್ಣು ಪುರಾಣವು ಇನ್ನೊಂದು ಸ್ಥಳದಲ್ಲಿ ಮನುವಿನ ಮೂಲಕ ಆತನ ಮಗಳಾದ ಇಳಾ ಸ್ತ್ರೀ ಸಾಲಿನಲ್ಲಿ, ಚಾತುರ್ವರ್ಣದ ಮೂಲವಿರುವ ಬಗ್ಗೆ ಇನ್ನೊಂದು ಸೂತ್ರವನ್ನು ವಿವರಿಸುತ್ತದೆ. ಈ ಎರಡನೆಯ ಸೂತ್ರದಂತೆ, ಇಳಾ ಪುರೂರವಸ್ ಎಂಬುವವನನ್ನು ಮದುವೆಯಾಗಿ, ಆತನಿಗೆ ಆರು ಮಂದಿ ಮಕ್ಕಳಿದ್ದು, ಅವರಲ್ಲಿ ಅಯುಸ್ ಎಂಬುವವನು ಜ್ಯೇಷ್ಠನಿದ್ದನು. ಅಯುಸ್‌ನಿಂದ ಕ್ಷಾತ್ರವೃದ್ಧ, ಅವನಿಂದ ಸುನಹೋತ್ರ, ಅವನಿಂದ ಗೃತ್ಸಮದ. ನಾಲ್ಕು ವರ್ಣಗಳು ಗೃತ್ಸಮದನಿಂದ ಉದಯಿಸಿದವು. ವಾಯುಪುರಾಣವು ಇದನ್ನು ಒಪ್ಪುವುದಿಲ್ಲ. ಅದು ಹೇಳುವುದು ಗೃತ್ಸಮದನ ಮೊಮ್ಮಗ ಶುನಕನಿಂದ ನಾಲ್ಕು ವರ್ಣಗಳು ಹುಟ್ಟಿದವೆಂದು, ಹರಿವಂಶವು ಒಂದು ಕಡೆ ಚಾತುರ್ವರ್ಣದ ಜನಕ ಗೃತ್ಸಮದ ಎಂದು ಹೇಳುವ ವಿಷ್ಣುಪುರಾಣವನ್ನು ಶೂದ್ರರು ಯಾರಿಂದಲೂ ಹೊಮ್ಮಿ ಬರಲಿಲ್ಲ ಎಂಬ ಒಂದು ವ್ಯತ್ಯಾಸದೊಡನೆ ಒಪ್ಪುತ್ತದೆ. ಇನ್ನೊಂದು ಕಡೆ ಹರಿವಂಶವು, ವಿಷ್ಣುಪುರಾಣ ಮತ್ತು ವಾಯುಪುರಾಣಗಳಿಂದ, ತನ್ನ ಸ್ವಂತ ನಿಲುವಿಗೆ ತೀರಾ ವಿರುದ್ಧವಾಗಿ ನಾಲ್ಕು ವರ್ಣಗಳು, ಗೃತ್ಸಮದನ ಮಗ ಶುನಕನಿಂದ ಜನಿಸಿದವು ಎಂದು ಹೇಳುತ್ತದೆ. ಈ ವಿವರಣೆಗಳು ಮನೋದೌರ್ಬಲ್ಯರ ವಾಕ್‌ಪ್ರವಾಹಗಳಾಗಿವೆ. ವರ್ಣಪದ್ಧತಿಯನ್ನು ಸಮರ್ಥಿಸಿಕೊಳ್ಳುವುದಕ್ಕಾಗಿ, ಬ್ರಾಹ್ಮಣರು ಎಷ್ಟು ಕಷ್ಟಪಡಬೇಕಾಯ್ತು ಎಂಬುದನ್ನು ಅವು ತೋರುತ್ತವೆ.

ವರ್ಣಪದ್ಧತಿಯ ಶಕ್ತಿಯುತ ಅಗ್ರೇಸರರಾದ ಬ್ರಾಹ್ಮಣರು ಸಮಂಜಸವಾದ, ಏಕರೀತಿಯ, ಅನಪೇಕ್ಷಿತವಾದ, ಮನವೊಪ್ಪುವ ಮತ್ತು ವಿವೇಚನಾಯುತವಾದ ವಿವರಣೆಯನ್ನು ನೀಡಲು ಅಶಕ್ತರಾದರೇಕೇ ಎಂಬ ಪ್ರಶ್ನೆ ಏಳುತ್ತದೆ. ಇಂತಹ ಅನೇಕ ವಿವರಣೆಗಳ ಪೈಕಿ ಇಂದಿನ ಬ್ರಾಹ್ಮಣರಿಂದ ವರ್ಣಪದ್ಧತಿಯ ಸಮರ್ಥಿಸಲ್ಪಟ್ಟಿರುವುದು ಎರಡು ವಿವರಣೆಗಳ ಮೇಲೆ. ಮೊದಲನೆಯದು, ಋಗ್ವೇದದ ಪುರುಷಸೂಕ್ತದಲ್ಲಿ ಪರ್ಯಾಲೋಚಿಸಲ್ಪಟ್ಟಿರುವ ತತ್ವದಂತೆ ನಾಲ್ಕು ವರ್ಣಗಳ ಉಗಮ ಪುರುಷನಿಂದ. ಅದು ಐತಿಹಾಸಿಕ ವಿವರಣೆಯಲ್ಲ. ಅದು ಪೌರಾಣಿಕವಾಗಿದ್ದರೂ ಸಾಕಾಗಿತ್ತು. ಆದರೆ ಅದು ಹಾಗಿಲ್ಲ. ವಿವರಣೆಯು ಪೂರಾ ನಿಗೂಢ. ಅದು ಕ್ಲೇಶಗೊಂಡ ಚಿತ್ತದ ಒಂದು ವಿಲಕ್ಷಣ ಕನಸು. ಅದಕ್ಕಾಗಿಯೇ ಅದು ಯಾವತ್ತೂ ವಿವರಣೆಯೆಂದು ಪರಿಗಣಿಸಲ್ಪಡಲಿಲ್ಲ ಮತ್ತು ಆ ಕಾರಣದಿಂದಲೇ ಅನೇಕ ಪ್ರತಿಸ್ಪರ್ಧಿ

ವಿವರಣೆಗಳು ಹುಟ್ಟಿರುವುದು. ಈ ವಿವರಣೆಯು ವೇದಗಳಿಗೆ ಸಂಬಂಧಪಟ್ಟ ಬರೆಹಗಾರರಿಂದಲೂ ತೃಣಪ್ರಾಯವಾಗಿ ಗಣಿಸಲ್ಪಟ್ಟಿತ್ತೆಂಬುದು ಎರಡು ಸಂದರ್ಭಗಳಲ್ಲಿ ವಿಶದವಾಗಿದೆ. ಮೊದಲನೆಯ ಸಂದರ್ಭ, ಇದು ಋಗ್ವೇದದ ಸಂಕೀರ್ಣ ಭಾಗದಲ್ಲಿರುವುದು. ಎರಡನೆಯದಾಗಿ, ಇದು ಕಥಕ ಮತ್ತು ಶ್ವೇತ ಯಜುರ್ವೇದದ ಮೈತ್ರೇಯಾನಿ. ಸಂಹಿತೆಯಲ್ಲಿ ಕಂಡುಬರುವುದಿಲ್ಲ ಮತ್ತು ಕೃಷ್ಣ ಯಜುರ್ವೇದದ ತೈತ್ತಿರೀಯ ಸಂಹಿತೆಗಳು ಇದನ್ನು ಸ್ವೀಕರಿಸುವುದಿಲ್ಲ. ಸಾಮವೇದವು, ಋಗ್ವೇದದಿಂದ ಪುರುಷಸೂಕ್ತದ ಐದು ಮಂತ್ರಗಳನ್ನು ಮಾತ್ರ ಸೇರಿಸುತ್ತದೆ. ಮತ್ತು ಇಲ್ಲಿ ಮುಖ್ಯವಾದುದೇನೆಂದರೆ, ಆ ಐದು ಯಂತ್ರಗಳನ್ನು ಸ್ವೀಕರಿಸುವಾಗ ನಾಲ್ಕು ವರ್ಣಗಳು ಪುರುಷನ ಶರೀರದ ನಾಲ್ಕು ಭಾಗಗಳಿಂದ ಹೊರಬಂದವು ಎಂದು ಹೇಳುವುದನ್ನು ಬಿಟ್ಟುಬಿಡಲಾಗಿದೆ. ಇದು ನಾಲ್ಕು ವೇದಗಳು ಈಗಿನ ಸ್ಥಿತಿಗೆ ಬಂದ ಮೇಲೆ ಅವುಗಳ ಮಧ್ಯೆ ಮಧ್ಯೆ ಸೇರಿಸಲ್ಪಟ್ಟಿರುವ ಬಹಳ ತಡವಾದ ರಚನೆ ಎಂಬುದಂತೂ ನಿಜ. ಅದಲ್ಲದೆ ಅದರ ರಚನಕಾರರು ತಮ್ಮ ವಿವರಣೆಗಳ ಬಗ್ಗೆ ನಿಶ್ಚಿತಾಭಿಪ್ರಾಯ ಹೊಂದಿ ಪೂರಾ ದೃಢವಾಗಿರಲಿಲ್ಲವೆಂಬುದನ್ನು ತೋರುವುದಕ್ಕೆ ಸಾಕಷ್ಟು ನಿದರ್ಶನಗಳಿವೆ. ಬಹುಶಃ ಇದು ಬ್ರಾಹ್ಮಣರು ವಾಸ್ತವಿಕ ಲಿಖಿತ ಹೇಳಿಕೆಯಾಗಿ ಪರಿವರ್ತಿಸಲು ಪ್ರಯತ್ನಿಸಿದರೋ, ಅದು ಬಹುಶಃ ಒಂದು ರೂಪಕ, ವರ್ಣನಾತ್ಮಕ ವಿವರಣೆಯೋ. ಅದು ಈ ಒಗಟನ್ನು ಬಿಡಿಸಲು ವಿಫಲವಾಗಿದೆ. ಅದಕ್ಕೆ ತದ್ವಿರುದ್ಧವಾಗಿ ಅದು ಬ್ರಾಹ್ಮಣರು ಚಾತುರ್ವರ್ಣ ತತ್ವವನ್ನು ಬೆಂಬಲಿಸಲು ಆಸಕ್ತಿ ವಹಿಸಿದ್ದೇಕೆ ಎಂಬ ಮತ್ತೊಂದು ಒಗಟನ್ನು ಸೃಷ್ಟಿಸಿದೆ.

ಈ ತರ್ಕಬದ್ಧ ವಿವರಣೆಯ ಹಿಂದೆ ಭಗವದ್ಗೀತೆಯ ಪ್ರಭಾವವಿದೆ. ಹಿಂದೂಗಳ ದೇವರು ಕೃಷ್ಣ. ಚಾತುರ್ವರ್ಣ ಪದ್ಧತಿಯನ್ನು ಆತನೇ ಸೃಷ್ಟಿಸಿದನೆಂದು ಹೇಳುವುದಲ್ಲದೆ, ಅದು ಗುಣದ ಅಂದರೆ ಸ್ವಭಾವಸಿದ್ಧವಾದ ಶ್ರೇಷ್ಠತೆಯ ಭಿನ್ನತೆಯ ಪದ್ಧತಿ ಎಂದು ಅವನು ಪ್ರತಿಪಾದಿಸುತ್ತಾನೆ. ಗುಣದ ಭಿನ್ನತೆಯ ಸಿದ್ಧಾಂತವು ಕಪಿಲನ ಸಾಂಖ್ಯವೇದಾಂತದಿಂದ ಪಡೆದುದಾಗಿದೆ. ಕೃಷ್ಣನು ಈ ಚಾತುರ್ವರ್ಣದ ವಿವರಣೆಯನ್ನು ವಿವಾದಕ್ಕೆಡೆಯಿಲ್ಲವೆಂಬಂತೆ ಅಧಿಕಾರವಾಣಿಯಿಂದ ನೀಡುತ್ತಾನೆ. ಸಾಂಖ್ಯವೇದಾಂತವು ನಿಸ್ಸಂಶಯವಾಗಿಯೂ ಮೂಲಭೂತ ಪ್ರಸ್ತಾಪವಾಗಿ ದೃಢಪಡಿಸುವುದೇನೆಂದರೆ, ವಸ್ತುವು, ರಜ, ತಮ ಮತ್ತು ಸತ್ವ ಎಂಬ ಮೂರು ಗುಣಗಳೂ ತಮ್ಮ ಶಕ್ತಿಯಲ್ಲಿ ಪರಸ್ಪರ ಸಮವಾಗಿರುವಾಗ ವಸ್ತುವು ನಿಶ್ಚಲವಲ್ಲದ ಸಮಸ್ಥಿತಿ. ಒಂದು ಗುಣವು ಉಳಿದ ಗುಣಗಳ ಬಗ್ಗೆ ಮನಸ್ಸು ಬಂದಂತೆ ನಡೆದಾಗ, ಸಮಸ್ಥಿತಿ ಕ್ಷೋಭೆಗೊಂಡಾಗ, ವಸ್ತುವು ಚಲನಾತ್ಮಕವಾಗುತ್ತದೆ. ಗುಣಧರ್ಮಕ್ಕೆ ಸಂಬಂಧಪಟ್ಟ ಸಾಂಖ್ಯತತ್ವದ ಆಧಾರದ ಮೇಲೆ, ಕೃಷ್ಣನು ವರ್ಣಪದ್ಧತಿಗೆ ವೈಜ್ಞಾನಿಕ ವಿವರಣೆ ನೀಡಲು ಪ್ರಯತ್ನಿಸುವುದರಲ್ಲಿ ಬಹಳ ಚತುರನಾಗಿದ್ದ. ಹಾಗೆ ಮಾಡಿರುವುದರಿಂದ ಕೃಷ್ಣನು ನಿಜವಾಗಿಯೂ ತಿಳಿಗೇಡಿಯಾಗಿದ್ದಾನೆ. ನಾಲ್ಕು ವರ್ಣಗಳು ಮತ್ತು ಮೂರು ಗುಣಗಳಿರುವುದನ್ನು ಆತ ವಿವೇಚಿಸಲಿಲ್ಲ ಮತ್ತು ತನಗೆ ಏನೆಲ್ಲಾ ಚಾತುರ್ಯವಿದೆ ಎಂದು ಸಾಧಿಸಬಹುದಾದರೂ ಮೂರು ಗುಣಗಳಿಗಿಂತ ಹೆಚ್ಚು ಬೇಕಿಲ್ಲದ ತತ್ವದ ಜತೆ ನಾಲ್ಕು ವರ್ಣಗಳಿರಬೇಕಾದ ಅಗತ್ಯದ ಬಗ್ಗೆ ಕಾರಣ ಕೊಡದಾದ. ಇಲ್ಲಿಯೂ ಕೂಡ ಯಾವುದು ವಿವೇಚನಾಯುತ ವಿವರಣೆಯಂತೆ ಕಾಣುವುದೋ ಅದು ಅಸಂಬದ್ಧ ವಿವರಣೆಯಾಗಿದೆ. ಅದು ಒಗಟನ್ನು ಬಿಡಿಸುವುದಿಲ್ಲ. ಇನ್ನೊಂದನ್ನು ಸೃಜಿಸುತ್ತದೆ. ಬ್ರಾಹ್ಮಣರು, ಚಾತುರ್ವರ್ಣವನ್ನು ಸಮರ್ಥಿಸಿಕೊಳ್ಳುವುದಕ್ಕೆ ಇಷ್ಟೊಂದು ಶ್ರಮಪಟ್ಟು ಕಾದಾಡಿದ್ದೇಕೆ?

# II

ಆಶ್ರಮ ಧರ್ಮವು ಒಬ್ಬ ವ್ಯಕ್ತಿಯ ಜೀವಮಾನವನ್ನು ೧. ಬ್ರಹ್ಮಚರ್ಯ, ೨. ಗೃಹಸ್ಥಾಶ್ರಮ, ೩. ವಾನಪ್ರಸ್ಥ ಮತ್ತು ೪. ಸನ್ಯಾಸ ಎಂಬ ನಾಲ್ಕು ಹಂತಗಳಾಗಿ ವಿಂಗಡಿಸಿದೆ. ಬ್ರಹ್ಮಚರ್ಯ ಹಂತವು ವಾಸ್ತವಿಕವಾದ ಮತ್ತು ನ್ಯಾಯವಾದ ಈ ಎರಡೂ ಒಳಾರ್ಥಗಳನ್ನು ಒಳಗೊಂಡಿದೆ. ಅದರ ವಾಸ್ತವಿಕವಾದ ಒಳಾರ್ಥವೇನೆಂದರೆ, ಅವಿವಾಹಿತ ಸ್ಥಿತಿಯ ಜೀವನ. ನ್ಯಾಯವಾದ ಒಳಾರ್ಥ ಒಬ್ಬ ಗುರುವಿನ ಕೈಕೆಳಗೆ ಅಭ್ಯಾಸ ಮಾಡುವ ಹಂತ. ಗೃಹಸ್ಥಾಶ್ರಮವು ಗೃಹಸ್ಥನಾಗಿರುವ ಹಂತ – ವೈವಾಹಿಕ ಸಾಂಸಾರಿಕ ಜೀವನದ ಹಂತ. ಸನ್ಯಾಸವು ಹಕ್ಕುಬಾದ್ಯತೆಗಳನ್ನು ತ್ಯಜಿಸುವ ಹಂತ. ಅದು ಒಂದು ಪೌರ ಅವಸಾನದ ಹಂತ. ವಾನಪ್ರಸ್ಥ ಹಂತವು, ಗೃಹಸ್ಥಾಶ್ರಮ ಮತ್ತು ಸನ್ಯಾಸಾಶ್ರಮಗಳ ನಡುವಿನದು. ಈ ಹಂತದಲ್ಲಿರುವವನು ಸಮಾಜಕ್ಕೆ ಸೇರಿದವನಾದರೂ, ಸಮಾಜದಿಂದ ದೂರದಲ್ಲಿ ಜೀವಿಸಲೇಬೇಕು. ಇದರ ಹೆಸರೇ ಸೂಚಿಸುವಂತೆ, ಇದು ಅರಣ್ಯವಾಸವನ್ನು ವಿಧಿಸುತ್ತದೆ.

ಆಶ್ರಮಧರ್ಮವು ಸಂಪ್ರದಾಯದ ವರ್ಣಧರ್ಮದಷ್ಟೇ ಹಳೆಯದೆಂದು ಹಿಂದೂಗಳು ನಂಬುತ್ತಾರೆ. ಇವೆರಡೂ ಒಂದೇ ಮತ್ತು ಸಮಗ್ರ ಎಂಬಂತೆ ಇವೆರಡೂ ಒಟ್ಟಿಗೆ ಹಿಂದೂ ಸಮಾಜದ ಬಿಗಿ ವ್ಯವಸ್ಥೆಯನ್ನು ರೂಪಿಸುತ್ತವೆ.

ಪ್ರಾರಂಭದಲ್ಲಿ, ಅದರ ಉಗಮ, ಉದ್ದೇಶ ಮತ್ತು ವೈಶಿಷ್ಟ್ಯವನ್ನು ಪರಿಶೀಲಿಸುವುದಕ್ಕೆ ಮುಂಚೆ ಆಶ್ರಮಧರ್ಮವನ್ನು ಸಂಪೂರ್ಣವಾಗಿ ಅರ್ಥಮಾಡಿಕೊಳ್ಳುವುದು ಉತ್ತಮ. ಆಶ್ರಮಧರ್ಮದ ಪ್ರತಿಪಾದನೆಗೆ ಮನುಸ್ಮೃತಿಯೇ ಮೂಲ. ಅಲ್ಲಿನ ಈ ಸಂಬಂಧಪಟ್ಟ ಉದ್ಧೃತ ಭಾಗಗಳನ್ನು ಕೆಳಗೆ ಕೊಡಲಾಗಿದೆ.

ಅ. II–೩೬ ಬ್ರಾಹ್ಮಣನಿಗೆ ಎಂಟನೇ ವಯಸ್ಸಿನಲ್ಲಿ, ಕ್ಷತ್ರಿಯನಿಗೆ ಹನ್ನೊಂದನೇ ವಯಸ್ಸಿನಲ್ಲಿ ವೈಶ್ಯನಿಗೆ ಹನ್ನೆರಡನೇ ವಯಸ್ಸಿನಲ್ಲಿ ಉಪನಯನ ನೆರವೇರಿಸಬೇಕು.

ಅ. II–೧೬೮ ವೇದಾಭ್ಯಾಸ ಮಾಡದೆ ಇತರೆ ಪ್ರಾಪಂಚಿಕ ವಿಷಯಗಳಲ್ಲಿ ಆಸಕ್ತಿ ತೋರುವ ದ್ವಿಜನು ಹಾಗೂ ಅವನ ನಂತರದ ಸಂತತಿ ಜೀವಿಸಿರುವಾಗಲೇ ಶೂದ್ರನ ಸ್ಥಾನಕ್ಕಿಳಿಯುವರು.

ಅ. III–೧ ಒಬ್ಬ ಗುರುವಿನ ಕೈಕೆಳಗೆ ಮೂರು ವೇದಗಳ ಕಲಿಕೆ ದೀಕ್ಷೆಯು ಮೂವತ್ತಾರು ವರ್ಷಗಳ ಕಾಲ ಅಥವಾ ಅದರ ಕಾಲುಭಾಗದಷ್ಟು ಕಾಲ, ಇಲ್ಲವೇ ವಿದ್ಯಾರ್ಥಿಯು ಅವುಗಳನ್ನು ಪರಿಪೂರ್ಣವಾಗಿ ಕಲಿಯುವ ತನಕ ಮುಂದುವರಿಯುತ್ತದೆ.

ಅ. III–೨ ಬ್ರಹ್ಮಚರ್ಯದ ನಿಯಮವನ್ನು ಮುರಿಯದೆ, ಮೂರು ವೇದಗಳನ್ನು ಅಥವಾ ಎರಡನ್ನೂ ಅಥವಾ ಒಂದನ್ನಾದರೂ ಕ್ರಮವಾಗಿ ಅಭ್ಯಾಸ ಮಾಡಿದವನು, ಗೃಹಸ್ಥಾಶ್ರಮವನ್ನು ಪ್ರವೇಶಿಸಬೇಕು.

ಅ. VI–೮ ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥ ಮತ್ತು ಸನ್ಯಾಸ ಇವೆಲ್ಲವೂ ಗೃಹಸ್ಥಾಶ್ರಮದಿಂದ ಹೊರಹೊಮ್ಮುವ ಪ್ರತ್ಯೇಕ ಆಶ್ರಮಗಳಾಗಿವೆ.

ಅ. VI–೮೮ ಈ ನಾಲ್ಕು ಆಶ್ರಮಗಳನ್ನು ವಿಧಿವತ್ತಾಗಿ ಪಾಲಿಸುತ್ತಾ ಸದಾಚಾರದಿಂದ ನಡೆದುಕೊಳ್ಳುವ ಬ್ರಾಹ್ಮಣನು ಪರಮಪದವನ್ನು ಪಡೆಯುತ್ತಾನೆ.

ಅ. VI–೮೯ ವೇದ ಮತ್ತು ಸ್ಮೃತಿಗಳ ಪ್ರಕಾರ ಉಳಿದ ಮೂರು ಹಂತಗಳಿಗೂ ಆಸರೆ ನೀಡುವುದರಿಂದ ಗೃಹಸ್ಥನು ಅವರೆಲ್ಲರಿಗಿಂತ ಉತ್ಕೃಷ್ಟನು.

ಅ. VI–೧ ನಿಯಮದಂತೆ ಗೃಹಸ್ಥ ಸ್ಥಿತಿಯಲ್ಲಿ ಜೀವಿಸಿದ ಸ್ನಾತಕನೆಂಬ ದ್ವಿಜ ಒಂದು ದೃಢವಾದ ನಿರ್ಧಾರ ತೆಗೆದುಕೊಂಡು ಮತ್ತು ತನ್ನ ಇಂದ್ರಿಯಗಳನ್ನು ಹತೋಟಿಯಲ್ಲಿಟ್ಟುಕೊಂಡು ಕೆಳಗೆ ಕೊಟ್ಟಿರುವ ನಿಯಮಗಳನ್ನನುಸರಿಸಿಕೊಂಡು ಅರಣ್ಯದಲ್ಲಿ ವಾಸಿಸಬೇಕು.

ಅ. VI–೨ ಒಬ್ಬ ಗೃಹಸ್ಥನು ತನ್ನ ಚರ್ಮ ಸುಕ್ಕು ಹಿಡಿದುದನ್ನು ಕಂಡಾಗ, ತನ್ನ ಕೂದಲು ಬೆಳ್ಳಗಾದಾಗ ಮತ್ತು ಮೊಮ್ಮಕ್ಕಳನ್ನು ಪಡೆದ ಬಳಿಕ ಅರಣ್ಯವಾಸಕ್ಕೆ ತೆರಳಬೇಕು.

ಅ. VI–೩೩ ಆದರೆ, ಒಬ್ಬ ವ್ಯಕ್ತಿಯು ಸ್ವಾಭಾವಿಕವಾದ ತನ್ನ ಜೀವನದ ಮೂರನೇ ಭಾಗವನ್ನು ಕಾಡಿನಲ್ಲಿ ಮುಗಿಸಿ, ಐಹಿಕ ಸಂಬಂಧವನ್ನು ತ್ಯಜಿಸಿದ ಮೇಲೆ ಜೀವನದ ನಾಲ್ಕನೇ ಭಾಗದಲ್ಲಿ ಸನ್ಯಾಸಿಯಾಗಿ ಜೀವಿಸಬೇಕು.

ಅ. VI–೩೪ ಒಂದು ಸ್ಥಿತಿಯಿಂದ ಮತ್ತೊಂದು ಸ್ಥಿತಿಗೆ ಸಾಗಿ, ಯಜ್ಞಗಳನ್ನು ಮಾಡಿ ಇಂದ್ರಿಯನಿಗ್ರಹ ಮಾಡಿಕೊಂಡ ಮೇಲೆ ಭಿಕ್ಷೆ ಆಹಾರಗಳನ್ನು ನೀಡಿ, ಸಾಕೆನ್ನಿಸಿದ ನಂತರ ಸನ್ಯಾಸ ಸ್ವೀಕರಿಸಿ, ಮೃತಿ ಹೊಂದಿದರೆ, ಆನಂದವನ್ನು ಹೊಂದುವನು.

ಅ. VI–೩೫ ಆತ ತನ್ನ ಮೂರು ಋಣಗಳನ್ನೂ ತೀರಿಸಿದ ಮೇಲೆ, ಅಂತಿಮ ವಿಮೋಚನೆ ಹೊಂದುವ ಕಡೆ ತನ್ನ ಮನಸ್ಸನ್ನು ನಿಯೋಗಿಸಬೇಕು. ತನ್ನ ಋಣ ತೀರಿಸದೆ, ಮೋಕ್ಷವನ್ನರಸುವಾತ ಅಧೋಗತಿಗಿಳಿಯುತ್ತಾನೆ.

ಅ. VI–೩೬ ನಿಯಮದಂತೆ ವೇದಗಳನ್ನು ಅಭ್ಯಸಿಸಿ ಧರ್ಮವು ಹೇಳುವಂತೆ ಪುತ್ರರನ್ನು ಪಡೆದ ಮೇಲೆ ಮತ್ತು ತನ್ನ ಕೈಲಾದ ಮಟ್ಟಿಗೆ ಯಜ್ಞಯಾಗಾದಿಗಳನ್ನು ಅರ್ಪಿಸಿದ ಮೇಲೆ ಅಂತಿಮ ವಿಮೋಚನೆಯತ್ತ ತನ್ನ ಮನವನ್ನು ತಿರುಗಿಸಬೇಕು.

ಅ. VI–೩೭ ಒಬ್ಬ ದ್ವಿಜನು ವೇದಗಳನ್ನೂ ಓದದೆ, ಪುತ್ರನನ್ನೂ ಪಡೆಯದೆ, ಯಜ್ಞಯಾಗಾದಿಗಳನ್ನೂ ಅರ್ಪಿಸದೆ ಮೋಕ್ಷವನ್ನು ಅರಿಸಿದರೆ ಆತ ಅಧೋಗತಿಗಿಳಿಯುತ್ತಾನೆ.

ಮನುವಿನ ಪ್ರಕಾರ ಆಶ್ರಮಧರ್ಮದಲ್ಲಿ ಮೂರು ಲಕ್ಷಣಗಳಿವೆ ಎಂಬುದು ಈ ನಿಯಮಗಳಿಂದ ವಿಶದವಾಗಿದೆ. ಮೊದಲನೆಯದಾಗಿ, ಇದು ಶೂದ್ರರಿಗೆ ಮತ್ತು ಸ್ತ್ರೀಯರಿಗೆ ಅನ್ವಯಿಸುವುದಿಲ್ಲ. ಎರಡನೆಯದು, ಕಡ್ಡಾಯಗೊಳಿಸಲ್ಪಟ್ಟಿರುವ ಬ್ರಹ್ಮಚರ್ಯ ಮತ್ತು ಗೃಹಸ್ಥಾಶ್ರಮ ಕೂಡ. ವಾನಪ್ರಸ್ಥ ಮತ್ತು ಸನ್ಯಾಸಗಳಿಗೆ ನಿರ್ಬಂಧವಿಲ್ಲ. ಮೂರನೆಯದು, ಒಬ್ಬ ವ್ಯಕ್ತಿ ಒಂದು ಹಂತದಿಂದ ಇನ್ನೊಂದಕ್ಕೆ ಅನುಕ್ರಮವಾಗಿ ಮೊದಲು ಬ್ರಹ್ಮಚರ್ಯ, ಆಮೇಲೆ ಗೃಹಸ್ಥಾಶ್ರಮ, ತದನಂತರ ವಾನಪ್ರಸ್ಥ, ಕೊನೆಯದಾಗಿ ಸನ್ಯಾಸಾಶ್ರಮಗಳಿರುವ ಕ್ರಮದಲ್ಲಿ ಅನುಕ್ರಮವಾಗಿ ಸಾಗಬೇಕು. ಯಾವೊಬ್ಬನೂ ಒಂದನ್ನು ಬಿಟ್ಟು ಮುಂದಿನ ಹಂತವನ್ನು ಪ್ರವೇಶಿಸಲಾರ.

ಮನು ಹೇಳುವುದನ್ನು ಇತಿಹಾಸದ ಬೆಳಕಿನಲ್ಲಿ ಪರೀಕ್ಷಿಸುವುದಾದರೆ ಅನೇಕ ಪ್ರಶ್ನೆಗಳು

ಎದುರಾಗುತ್ತವೆ. ಜೀವನದ ಹಂತಗಳ ಈ ತತ್ತ್ವ ವೇದಗಳಿಗೆ ತೀರಾ ಗೊತ್ತಿರದ ವಿಷಯ. ವೇದಗಳು ಬ್ರಹ್ಮಚಾರಿಯ ಬಗ್ಗೆ ಹೇಳುತ್ತವೆ. ಆದರೆ, ಬ್ರಹ್ಮಚರ್ಯೆಯು ಜೀವನದಲ್ಲಿ ತಪ್ಪಿಕೊಳ್ಳಲಾಗದ ಹಂತವೆಂದು ಪರಿಗಣಿಸಲ್ಪಟ್ಟಿತ್ತೆಂದು ತೋರಲು ಏನೂ ಮಾಹಿತಿ ಇಲ್ಲ. ಋಗ್ವೇದದಲ್ಲಿ ಯತಿಗಳ ಬಗ್ಗೆ ಉಲ್ಲೇಖವಿದೆ. ಅದೂ ಕೂಡ ಜೀವನದ ಒಂದು ಹಂತವೆಂದು ಪರಿಗಣಿಸಲ್ಪಟ್ಟಿಲ್ಲ. ಸನ್ಯಾಸಿಯಂತಲ್ಲದೆ, ಋಗ್ವೇದ ಕಾಲದ ಯತಿಯು ಒಂದು ದ್ವೇಷಿಸಲ್ಪಟ್ಟ ವ್ಯವಸ್ಥೆಯಾಗಿದ್ದಿತು. ಋಗ್ವೇದದಲ್ಲಿ ಇಂದ್ರನು ಯತಿಗಳನ್ನು ತೋಳಗಳಿಗೆ ಎಸೆದನೆಂದು ಹೇಳುವ ಅನೇಕ ಶ್ಲೋಕಗಳಿವೆ. ಬ್ರಾಹ್ಮಣರು ನಾಲ್ಕು ಆಶ್ರಮಗಳೆಂಬ ತತ್ತ್ವವನ್ನು ರೂಪಿಸಿದರೇಕೆ? ಆಶ್ರಮಧರ್ಮದ ವಿಷಯದಲ್ಲಿ ಇದು ಮೊದಲನೆಯ ಒಗಟು.

ಎರಡನೇ ಒಗಟು ನಾಲ್ಕು ಆಶ್ರಮಗಳ ಅನುಕ್ರಮದ ವ್ಯವಸ್ಥೆಗೆ ಸಂಬಂಧಪಟ್ಟದ್ದು. ಬ್ರಹ್ಮಚಾರಿಯು ಮೂರರಲ್ಲಿ ಯಾವ ಆಶ್ರಮವನ್ನಾದರೂ ಪ್ರವೇಶಿಸುವ ಅವಕಾಶವಿದ್ದ ಕಾಲವೊಂದಿತ್ತು ಎಂಬುದು ನಿರ್ವಿವಾದ. ಆತ ಗೃಹಸ್ಥಾಶ್ರಮಿಯಾಗಬಹುದು ಅಥವಾ ಆತ ಗೃಹಸ್ಥಾಶ್ರಮಿಯಾಗದೆ ಸನ್ಯಾಸಿಯಾಗಬಹುದು. ಧರ್ಮಸೂತ್ರದ ಕರ್ತೃಗಳು ಈ ವಿಷಯದಲ್ಲಿ ಏನು ಹೇಳುತ್ತಾರೆಂಬುದನ್ನು ಹೋಲಿಸಿ ನೋಡೋಣ.

ವಾಸಿಷ್ಠ ಧರ್ಮಸೂತ್ರ ಹೇಳುವುದೇನೆಂದರೆ[೧] "ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥ ಮತ್ತು ಸನ್ಯಾಸ ಎಂಬುವ ನಾಲ್ಕು ಹಂತಗಳಿವೆ."

"ಬ್ರಹ್ಮಚರ್ಯದ ನಿಯಮಗಳನ್ನು ಮುರಿಯದೆ ಒಂದು, ಎರಡು ಅಥವಾ ಮೂರು ವೇದಗಳನ್ನು ಅಭ್ಯಸಿಸಿರುವ ಒಬ್ಬ ವ್ಯಕ್ತಿಯು ತಾನು ಇಚ್ಛಿಸಿದ ಯಾವುದಾದರೊಂದು ಹಂತವನ್ನು ಪ್ರವೇಶಿಸಬಹುದು."

ಗೌತಮ ಧರ್ಮಸೂತ್ರ ಹೇಳುವುದೇನೆಂದರೆ,[೨] "ವೇದವನ್ನು ಅಭ್ಯಸಿಸಿರುವಾತ ಯಾವ ಹಂತವನ್ನು ಪ್ರವೇಶಿಸಬೇಕೆಂಬುದನ್ನು ತಾನೇ ಆಯ್ದುಕೊಳ್ಳಬಹುದೆಂದು ಕೆಲವರು ಸಾರಿದ್ದಾರೆ. ನಾಲ್ಕು ಹಂತಗಳಾವುವೆಂದರೆ, ಬ್ರಹ್ಮಚರ್ಯ, ಗೃಹಸ್ಥ, ಸನ್ಯಾಸ, (ಭಿಕ್ಷು) ಮತ್ತು ವಾನಪ್ರಸ್ಥ (ವೈಖಾನಸ)."

ಮನುವು ಆಯ್ಕೆಯ ಸ್ವಾತಂತ್ರ್ಯವನ್ನು ತೆಗೆದು ಗೃಹಸ್ಥಾಶ್ರಮವನ್ನು ಕಡ್ಡಾಯಗೊಳಿಸಿದ್ದೇಕೆ? ಗೃಹಸ್ಥಾಶ್ರಮ, ವಾನಪ್ರಸ್ಥ ಸ್ಥಿತಿಯ ಹಿಂದಿನ ಸ್ಥಿತಿಯಾಗಿರಬೇಕೆಂದೂ ವಾನಪ್ರಸ್ಥವು ಸನ್ಯಾಸ ಸ್ಥಿತಿಯ ಹಿಂದಿನ ಸ್ಥಿತಿಯಾಗಿರಬೇಕೆಂದೂ ಷರತ್ತು ಹಾಕಿದ್ದೇಕೆ?

ಜೀವನದ ಈ ನಾಲ್ಕು ಹಂತಗಳನ್ನು ಯಾವುದಾದರೂ ಮಹತ್ವದ ಉದ್ದೇಶಕ್ಕಾಗಿ ಯೋಜಿಸಲ್ಪಟ್ಟಿದ್ದರೆ, ಶೂದ್ರರು ಮತ್ತು ಸ್ತ್ರೀಯರು, ಈ ಹಂತಗಳಿಂದ ಹೊರಗೆ ಹಾಕಲ್ಪಟ್ಟರೇಕೆ ಎಂಬುದನ್ನೂ ಗ್ರಹಿಸುವುದು ಕಷ್ಟ. ಮನುವಿನ ಯೋಜನೆಯಂತೆ ಶೂದ್ರರು ಮತ್ತು ಸ್ತ್ರೀಯರು  ಗೃಹಸ್ಥರಾಗಿರಬಹುದಷ್ಟೆ. ಅವರು ಬ್ರಹ್ಮಚಾರಿ, ವಾನಪ್ರಸ್ಥ ಅಥವಾ ಸನ್ಯಾಸಿಗಳಾಗಿರಬಾರದೇಕೆ? ಆಶ್ರಮಧರ್ಮದಲ್ಲಿ ಅವರಿಗೂ ಅವಕಾಶವಿದ್ದರೆ ಅವರಿಗಾಗಲಿ ಅಥವಾ ಸಮಾಜಕ್ಕಾಗಲಿ ಆಗುತ್ತಿದ್ದ ಹಾನಿಯೇನು? ಆಶ್ರಮಧರ್ಮ ಪದ್ಧತಿಯಲ್ಲಿ ಇನ್ನೂ ಅನೇಕ ಬದಲಾವಣೆಗಳಿವೆ.

ಮೊದಲನೆಯದು, ಬ್ರಹ್ಮಚಾರಿಗಳಲ್ಲಿ ಮನುವು ಮಾಡಿರುವ ಭೇದಭಾವ[೩].

---

೧. 'ಎಸ್.ಬಿ.ಇ.' ಸಂ. XIV ಪು. ೪೦, ಪರಿಚ್ಛೇದ VII, ಶ್ಲೋಕಗಳು ೧.೨.೩

೨. ಅದೇ, ಸಂ. II, ಪು. ೧೯೨ ಪರಿಚ್ಛೇದ III, ಶ್ಲೋಕಗಳು ೧.೨

೩. ಅದೇ, ಸಂ. XXV, ಮನು ಪು. ೩೭–೩೯.

ಪ. II–೪೧ ಬ್ರಹ್ಮಚಾರಿಗಳು, ಅವರ ಜಾತಿಗಳ ಆಧಾರದ ಮೇಲೆ ಕಪ್ಪು ಚಿಗರಿ, ಜಿಂಕೆ ಮತ್ತು ಹೋತನ ಚರ್ಮಗಳನ್ನು ಮೇಲಿನ ಉಡುಪುಗಳಾಗಿಯೂ ಸೆಣಬು ಮತ್ತು ಉಣ್ಣೆಯಿಂದ ಮಾಡಿದ ಕೆಳಗಿನ ಉಡುಪುಗಳನ್ನು ಧರಿಸಬೇಕು.

ಪ. II–೪೨ ಬ್ರಾಹ್ಮಣನು ನಡುಕಟ್ಟಿಗೆ ಮೂಂಗಾ ಹುಲ್ಲಿನ ಮೃದು ಮತ್ತು ನವಿರಾದ ಮೂರೆಳೆಯ ಉಡುದಾರವನ್ನು, ಕ್ಷತ್ರಿಯನು ಮುರ್ವಾ ದಾರದಿಂದ ಮಾಡಿದ ಉಡುದಾರವನ್ನು ವೈಶ್ಯನು ಸೆಣಬಿನಿಂದ ಮಾಡಿದ ಉಡುದಾರವನ್ನು ಧರಿಸಬೇಕು.

ಪ. II–೪೩ ಮೂಂಗಾ ಹುಲ್ಲು ದೊರೆಯದಿದ್ದರೆ, ನಡುಕಟ್ಟನ್ನು ಕುಶ, ಅಸ್ಮಂತಕ ಮತ್ತು ಬಲ್ವಜ ಎಳೆಗಳಿಂದ ಒಂದೇ ಒಂದು ಮುಮ್ಮಡಿ ಗಂಟು ಹಾಕಿ ಅಥವಾ ಕುಟುಂಬದ ಪದ್ಧತಿಯಂತೆ ಐದು ಗಂಟು ಹಾಕಿ ತಯಾರು ಮಾಡಬಹುದು.

ಪ. II–೪೪ ಬ್ರಾಹ್ಮಣನು ಹತ್ತಿಯ, ಕ್ಷತ್ರಿಯ ಸೆಣಬಿನ ಹಾಗೂ ವೈಶ್ಯನು ಉಣ್ಣೆಯ ಯಜ್ಞೋಪವೀತವನ್ನು ಧರಿಸಬೇಕು. ಆ ಜನಿವಾರವು ಮೂರು ಎಳೆಯುಳ್ಳದ್ದಾಗಿರಬೇಕು ಹಾಗೂ ಬಲಕ್ಕೆ ಹುರಿ ಮಾಡಿದುದೂ ಆಗಿರಬೇಕು.

ಪ. II–೪೫ ಪವಿತ್ರ ನಿಯಮದಂತೆ ಬ್ರಾಹ್ಮಣನು ಬಿಲ್ವ ಅಥವಾ ಪಲಾಶ ಮರದ ದಂಡವನ್ನು ಕ್ಷತ್ರಿಯನು ವಟ ಅಥವಾ ಖದಿರಾ ಮರದ ದಂಡವನ್ನು ವೈಶ್ಯನು ಪಿಲೂ ಅಥವಾ ಔದುಂಬರ ಮರದ ದಂಡವನ್ನು ಧರಿಸಬೇಕು.

ಪ. II–೪೬ ಬ್ರಾಹ್ಮಣನು ಹಿಡಿಯುವ ದಂಡವು ಅವನ ತಲೆಕೂದಲಿನ ತನಕ, ಕ್ಷತ್ರಿಯನ ದಂಡ ಆತನ ಹಣೆಯ ತನಕ ಮತ್ತು ವೈಶ್ಯನದು ಆತನ ಮೂಗಿನ ತುದಿಯ ತನಕ ಉದ್ದವಾಗಿರಬೇಕು.

ಪ. II–೪೭ ಎಲ್ಲಾ ದಂಡಗಳೂ ಡೊಂಕಿಲ್ಲದೆ ನೇರವಾಗಿ, ನೋಡುವುದಕ್ಕೆ ಅಂದವಾಗಿ, ಅವುಗಳ ತೊಗಟೆ ಪರಿಪೂರ್ಣವಾಗಿದ್ದು, ಬೆಂಕಿಯಿಂದ ಸುಟ್ಟಿರದೆ, ಜನರಿಗೆ ಭಯವುಂಟು ಮಾಡದಂತಿರಬೇಕು.

ಪ. II–೪೮ ಬ್ರಹ್ಮಚಾರಿಯೂ ತನ್ನ ಆಯ್ಕೆಯಂತೆ ಒಂದು ದಂಡವನ್ನು ತೆಗೆದುಕೊಂಡು, ಸೂರ್ಯನನ್ನು ಪೂಜಿಸಿ ಮತ್ತು ತನ್ನ ಬಲಗೈಯನ್ನು ಅಗ್ನಿಯ ಕಡೆ ತಿರುಗಿಸಿ ಪ್ರದಕ್ಷಿಣೆ ಮಾಡಿ, ನಿಯಮವು ಗೊತ್ತುಮಾಡಿರುವ ರೀತಿಯಲ್ಲಿ ಭಿಕ್ಷೆ ಬೇಡಬೇಕು.

ಪ. II–೪೯ ಹೊಸದಾಗಿ ದೀಕ್ಷೆ ಪಡೆದ ಬ್ರಾಹ್ಮಣ ತನ್ನ ಬೇಡಿಕೆಯನ್ನು ಭವತಿ ಎಂಬ ಪದದಿಂದ ಪ್ರಾರಂಭಿಸಿ, ಕ್ಷತ್ರಿಯನು ಭವತಿ ಎಂಬ ಪದವನ್ನು ಬೇಡಿಕೆಯ ಮಧ್ಯದಲ್ಲಿ ಸೇರಿಸಿ, ವೈಶ್ಯನು ಆ ಪದವನ್ನು ಸೂತ್ರದ ಕೊನೆಯಲ್ಲಿಟ್ಟು ಭಿಕ್ಷೆ ಬೇಡಬೇಕು.

ಬ್ರಹ್ಮಚಾರಿಗಳೆಲ್ಲಾ ದ್ವಿಜರಾಗಿ ಒಂದೇ ವರ್ಗಕ್ಕೆ ಸೇರಿದವನಾಗಿರುತ್ತಾರೆ. ಅವರ ಮೇಲಿನ ಉಡುಪಿನ ಪದಾರ್ಥದಲ್ಲಿ ಭಿನ್ನತೆ ಇರಬೇಕಾದ ಅಗತ್ಯವೇನು? ಅವರ ಪವಿತ್ರ ದಾರದ ಪದಾರ್ಥದಲ್ಲಿ ಭಿನ್ನತೆಯ ಅಗತ್ಯವೇನು? ಅವರು ಹಿಡಿಯುವ ದಂಡದಲ್ಲಿ ವ್ಯತ್ಯಾಸಮಾಡುವ ಅಗತ್ಯವೇನು?

ಭಿಕ್ಷೆ ಬೇಡುವಾಗ ಉಚ್ಚರಿಸುವ ಸೂತ್ರದ ರಚನೆಯಲ್ಲಿ ಭಿನ್ನತೆ ಮಾಡುವ ಅಗತ್ಯವೇನು? ಬ್ರಾಹ್ಮಣ ಬ್ರಹ್ಮಚಾರಿಯು 'ಭವತಿ ಭಿಕ್ಷಾಂದೇಹಿ' ಎನ್ನಬೇಕೇಕೆ? ಒಬ್ಬ ಕ್ಷತ್ರಿಯ ಬ್ರಹ್ಮಚಾರಿಯು

'ಭಿಕ್ಷಾಂ ಭವತಿ ದೇಹಿ' ಎಂದು ಏಕೆ ಹೇಳಬೇಕು? ವೈಶ್ಯ ಬ್ರಹ್ಮಚಾರಿಯು 'ಭಿಕ್ಷಾಂ ದೇಹಿ ಭವತಿ' ಎಂದು ಏಕೆ ಹೇಳಬೇಕು?

ಆಶ್ರಮಧರ್ಮವು ಹಿಂದೂಗಳ ಒಂದು ವಿಚಿತ್ರವಾದ ಸಂಪ್ರದಾಯವಾಗಿದ್ದು ಅವರು ಆ ಬಗ್ಗೆ ಅಭಿಮಾನವುಳ್ಳವರಾಗಿದ್ದಾರೆ. ಇದಕ್ಕೆ ಸಮಾನಾಂತರ ಪದ್ಧತಿ ಎಲ್ಲೂ ಇಲ್ಲ ಎಂಬುದು ಸತ್ಯ. ಆದರೆ ಇದರಲ್ಲಿ ಯಾವ ಶ್ರೇಷ್ಠತೆಯೂ ಇಲ್ಲ ಅನ್ನುವುದೂ ಅಷ್ಟೇ ಸತ್ಯ. ಬಲಾತ್ಕಾರ ಬ್ರಹ್ಮಚರ್ಯವು ಮಕ್ಕಳಿಗೆ ಬಲಾತ್ಕಾರ ವಿದ್ಯಾಭ್ಯಾಸದಂತೆ ಕಾಣುವುದರಿಂದ ಅದು ಬಹಳ ಆಕರ್ಷಣೀಯವಾಗಿ ತೋರುತ್ತದೆ. ನಿಜವಾಗಿಯೂ ಈ ವ್ಯವಸ್ಥೆ ಸಾರ್ವತ್ರಿಕವಲ್ಲ. ಶೂದ್ರರು ಮತ್ತು ಸ್ತ್ರೀಯರು ಇದರಿಂದ ಹೊರಹಾಕಲ್ಪಟ್ಟಿದ್ದರು. ಶೂದ್ರರು ಮತ್ತು ಸ್ತ್ರೀಯರು ಹಿಂದೂ ಸಮಾಜದ ಹೆಚ್ಚು ಕಮ್ಮಿ ಹತ್ತನೇ ಒಂಬತ್ತು (೯/೧೦) ಭಾಗವಿರುವುದರಿಂದ, ಈ ಯೋಜನೆಯು ಬುದ್ಧಿವಂತಿಕೆಗಿಂತ ಕಪಟದ ಕಡ್ಡಾಯ ಫಲವೆನ್ನಬೇಕು. ಖಂಡಿತವಾಗಿಯೂ ಅದು ಸಮುದಾಯದ ವಿರುದ್ಧ ಎಸಗಿದ ಕಳಂಕಪೂರಿತ ಪಕ್ಷಪಾತ. ಅದು ಆಳುವ ವರ್ಗದವರ ವಿದ್ಯಾಭ್ಯಾಸಕ್ಕಾಗಿ ಹೂಡಿದ್ದ ಯೋಜನೆ. ವಿವಾಹವೊಂದು ಪ್ರತಿಯೊಬ್ಬ ವ್ಯಕ್ತಿಗೂ ಜೀವನಾಧಾರ ಕಲ್ಪಿಸದ ಹೊರತು, ಐಶ್ವರ್ಯ ಮತ್ತು ಆರೋಗ್ಯಗಳನ್ನು ಲೆಕ್ಕಿಸದೆ ಪ್ರತಿಯೊಬ್ಬನೂ ವಿವಾಹವಾಗಬೇಕೆಂದು ಬಲಾತ್ಕರಿಸಿದರೆ, ಅದು ವ್ಯಕ್ತಿ ಮತ್ತು ರಾಷ್ಟ್ರ ಎರಡಕ್ಕೂ ಹಾಳಾಗುವ ದಾರಿಯನ್ನು ತೋರಿದಂತೆಯೇ. ವಾನಪ್ರಸ್ಥ ಮತ್ತು ಸನ್ಯಾಸಗಳು ತುಂಬಾ ಅವಿವೇಕಪೂರಿತ ಹಂತಗಳು. ಈ ಎರಡಕ್ಕೂ ಸಂಬಂಧಪಟ್ಟ ನಿಯಮಗಳನ್ನು ನೋಡೋಣ.

ವಾನಪ್ರಸ್ಥಕ್ಕೆ ಮನುವು ವಿಧಿಸಿರುವ ನ್ಯಾಯ ಸೂತ್ರ ಈ ಕೆಳಕಂಡಂತಿದೆ.[೧]

ಪ. VI–೩ ಸಾಗುವಳಿಯಿಂದ ಪಡೆದ ಎಲ್ಲ ಆಹಾರ ಮತ್ತು ಆತನ ಸರ್ವಸ್ವವನ್ನು ತ್ಯಜಿಸಿ, ತನ್ನ ಹೆಂಡತಿಯನ್ನು ಮಗನ ಆಶ್ರಯದಲ್ಲಿ ಬಿಟ್ಟು ಅಥವಾ ಆಕೆಯನ್ನೊಡಗೂಡಿ ಅರಣ್ಯಕ್ಕೆ ತೆರಳಬಹುದು.

ಪ. VI–೪ ಅಗ್ನಿಹೋತ್ರದ ಅಗ್ನಿಯನ್ನೂ, ದೈನಂದಿನ ಯಜ್ಞಗಳಿಗೆ ಬೇಕಾದ ಸರಕುಗಳನ್ನು ತೆಗೆದುಕೊಂಡು ಗ್ರಾಮದಿಂದ ಹೊರಟು ಇಂದ್ರಿಯನಿಗ್ರಹ ಮಾಡಿಕೊಂಡು ಅರಣ್ಯದಲ್ಲಿ ವಾಸಿಸಬೇಕು.

ಪ. VI–೫ ಸನ್ಯಾಸಿಗಳಿಗೆ ತಕ್ಕುದಾದ ವಿವಿಧ ರೀತಿಯ ಪರಿಶುದ್ಧ ಆಹಾರಗಳಿಂದ ಅಥವಾ ಕಂದಮೂಲಾದಿ ಫಲಗಳಿಂದ ನಿಯಮದಂತೆ ಆ ಐದು ಪವಿತ್ರ ಯಜ್ಞಗಳನ್ನು ಮಾಡಬೇಕು.

ಪ. VI–೬ ಚರ್ಮವನ್ನಾಗಲಿ ಅಥವಾ ನಾರು ಮಡಿಯನ್ನಾಗಲಿ ಉಡಬೇಕು. ಬೆಳಿಗ್ಗೆ ಹಾಗೂ ಸಾಯಂಕಾಲ ಸ್ನಾನ ಮಾಡಬೇಕು. ಜಟಾಧಾರಿಯಾಗಿರಬೇಕು. ದೇಹದ ಮೇಲಿನ ಕೂದಲು, ಗಡ್ಡ ಮತ್ತು ಉಗುರುಗಳನ್ನು ಕತ್ತರಿಸಬಾರದು.

ಪ. VI–೭ ತಾನು ತಿನ್ನುವ ಆಹಾರವನ್ನೇ ನೈವೇದ್ಯವನ್ನಾಗಿ ನೀಡಬೇಕು ಮತ್ತು ಶಕ್ತ್ಯಾನುಸಾರ ದಾನ ನೀಡಬೇಕು. ತನ್ನ ಆಶ್ರಮಕ್ಕೆ ಬರುವವರಿಗೆ ನೀರು, ಗೆಡ್ಡೆ ಗೆಣಸು ಮತ್ತು ಹಣ್ಣುಗಳನ್ನು ನೀಡಬೇಕು.

---

೧. ಎಸ್. ಬಿ. ಇ. ಸಂ. XXV ಪು. ಪ. ೧೯೯–೨೦೩.

ಪ. VI–೮ ಸದಾ ವೇದಾಧ್ಯಯನದಲ್ಲಿ ನಿರತನಾಗಿರಬೇಕು. ಕಷ್ಟಕಾರ್ಪಣ್ಯಗಳ ಬಗ್ಗೆ ತಾಳ್ಮೆಯಿಂದಿರಬೇಕು. ಎಲ್ಲರೊಡನೆ ಗೆಳೆತನವಿರಬೇಕು. ಸ್ಥಿರಚಿತ್ತನಾಗಿ, ಸರ್ವಕಾಲದಲ್ಲೂ ಧಾರಾಳಿಯಾಗಿ, ಯಾರಿಂದಲೂ ದಾನ ಸ್ವೀಕರಿಸದೆ, ಸಮಸ್ತ ಪ್ರಾಣಿವರ್ಗದಲ್ಲೂ ಅನುಕಂಪದಿಂದಿರಬೇಕು.

ಪ. VI–೯ ಅಮಾವಾಸ್ಯೆ ಮತ್ತು ಹುಣ್ಣಿಮೆ ದಿನಗಳ ಯಜ್ಞಗಳನ್ನು ಸಕಾಲದಲ್ಲಿ ತಪ್ಪದೇ ಮಾಡಬೇಕು. ನಿಯಮದಂತೆ ಮೂರು ಪವಿತ್ರ ಅಗ್ನಿಗಳಿಂದ ಅಗ್ನಿಹೋತ್ರ ಅರ್ಪಿಸಬೇಕು.

ಪ. VI–೧೦ ಆತ ಕ್ರಮವಾಗಿ ನಕ್ಷತ್ರೇಷ್ಟಿ, ಅಗ್ರಯಾನ ಮತ್ತು ಚಾತುರ್ಮಾಸ್ಯ ಯಜ್ಞಗಳನ್ನೂ ಮತ್ತು ಉತ್ತರಾಯಣ ಮತ್ತು ದಕ್ಷಿಣಾಯಣಗಳಲ್ಲಿ ಮಾಡುವ ಯಾಗಾದಿಗಳನ್ನು ವಿಧಿವತ್ತಾಗಿ ಮಾಡಬೇಕು.

ಪ. VI–೧೧ ವಸಂತ ಮತ್ತು ಶರತ್ಕಾಲದಲ್ಲಿ ಬೆಳೆಯುವ, ಸನ್ಯಾಸಿಗಳಿಗೆ ತಕ್ಕ, ಪರಿಶುದ್ಧವಾದ ಧಾನ್ಯಗಳನ್ನು ತಾನೇ ಸಂಗ್ರಹಿಸಿ ಯಜ್ಞಕ್ಕೆ ಬೇಕಾದ ಪುರೋಡಾಶ ಚರುಗಳನ್ನು ಮಾಡಬೇಕು.

ಪ. VI–೧೨ ಅರಣ್ಯದಲ್ಲಿ ತಾನಾಗಿ ಬೆಳೆದ ಉತ್ಪನ್ನಗಳಿಂದ ಮಾಡಿದ ಹವಿಸ್ಸನ್ನು ದೇವತೆಗಳಿಗೆ ಅರ್ಪಿಸಿ, ಉಳಿದ ಶೇಷವನ್ನು ಲವಣದೊಂದಿಗೆ ಸೇವಿಸಬೇಕು.

ಪ. VI–೧೩ ಜನ ನೆಲಗಳಲ್ಲಿ ಬೆಳೆದ ಕಾಯಿಪಲ್ಲೆಗಳನ್ನು, ಗೆಡ್ಡೆ ಗೆಣಸುಗಳನ್ನು, ಹಣ್ಣುಗಳನ್ನು, ಪರಿಶುದ್ಧವಾದ ಮರಗಳ ಉತ್ಪನ್ನಗಳನ್ನು ಮತ್ತು ಅರಣ್ಯದ ಹಣ್ಣುಗಳಿಂದ ತೆಗೆದ ಎಣ್ಣೆಗಳನ್ನು ಸೇವಿಸಬೇಕು.

ಪ. VI–೧೪ ಆತ ಜೇನುತುಪ್ಪ, ಮಾಂಸ ಮತ್ತು ನೆಲದ ಮೇಲೆ ಬೆಳೆದ ಅಣಬೆಯನ್ನು, ಭೂಸ್ತೃಣ ಮತ್ತು ಶೀಗ್ರುಕ ಎಂಬ ಕಾಯಿಪಲ್ಲೆಯನ್ನು ಮತ್ತು ಶ್ಲೇಷ್ಮಾಂತಕ ಹಣ್ಣನ್ನು ತ್ಯಜಿಸಬೇಕು.

ಪ. VI–೧೫ ಅಶ್ವಯುಜ ಮಾಸದಲ್ಲಿ ಈ ಮೊದಲಿಗೆ ಸಂಗ್ರಹಿಸಿದ್ದ ಮುನಿಗಳಿಗೆ ಯುಕ್ತವಾದ ಧಾನ್ಯ ಹಾಗೂ ಗೆಡ್ಡೆಗೆಣಸು, ಹಳೆಯ ವಸ್ತ್ರಗಳನ್ನು ವರ್ಜಿಸಬೇಕು.

ಪ. VI–೧೬ ನೇಗಿಲಿನಿಂದ ಉತ್ತ ಭೂಮಿಯಲ್ಲಿ ಬೆಳೆದ ಗೆಡ್ಡೆಗೆಣಸು ಅಥವಾ ಹಣ್ಣನ್ನಾಗಲಿ ತಾನು ಹಸಿವಿನಿಂದ ಬಳಲುತ್ತಿದ್ದರೂ ತಿನ್ನಬಾರದು.

ಪ. VI–೧೭ ಬೆಂಕಿಯಿಂದ ಬೇಯಿಸಿದ ಆಹಾರವನ್ನು ಅಥವಾ ತಾನೇ ತಾನಾಗಿ ಪಕ್ವವಾದುದನ್ನು ತಿನ್ನಬೇಕು. ಕಲ್ಲಿನಿಂದ ಜಜ್ಜಿ ತಿನ್ನಬಹುದು ಅಥವಾ ಹಲ್ಲಿನಿಂದ ಜಗಿದು ತಿನ್ನಬಹುದು.

ಪ. VI–೧೮ ಆತನ ದಿನದ ಊಟ ಮುಗಿದ ಕೂಡಲೇ, ಭಿಕ್ಷಾ ಪಾತ್ರೆಗಳನ್ನು ಚೊಕ್ಕಟಮಾಡಬೇಕು. ಅಥವಾ ಒಂದು ತಿಂಗಳಿಗೆ ಅಥವಾ ಆರು ತಿಂಗಳಿಗೆ ಅಥವಾ ಒಂದು ವರ್ಷಕ್ಕೆ ಬೇಕಾಗುವಷ್ಟು ಆಹಾರವನ್ನು ಕೂಡಿಡಬಹುದು.

ಪ. VI–೧೯ ತನ್ನ ಶಕ್ತ್ಯಾನುಸಾರವಾಗಿ ಸಂಗ್ರಹಿಸಿದ್ದನ್ನು ರಾತ್ರಿ ಅಥವಾ ಹಗಲು, ಒಂದು ಹೊತ್ತು ಮಾತ್ರ, ಅಥವಾ ಒಂದು ದಿನ ಉಪವಾಸವಿದ್ದು ಎರಡನೆಯ ದಿನ

ರಾತ್ರಿ ಅಥವಾ ಮೂರು ದಿನ ಉಪವಾಸವಿದ್ದು, ನಾಲ್ಕನೆಯ ದಿನ ರಾತ್ರಿ ಊಟ ಮಾಡಬೇಕು.

ಪ. VI–೨೦ ಆತ ಚಾಂದ್ರಮಾನ ತಪಸ್ಸಿನ ನಿಯಮದಂತೆ, ಶುಕ್ಲ ಪಕ್ಷದಲ್ಲಿ ಪ್ರತಿದಿನವೂ ಆಹಾರದ ಪ್ರಮಾಣವನ್ನು ಕಡಿಮೆ ಮಾಡುತ್ತಾ, ಕೃಷ್ಣಪಕ್ಷದಲ್ಲಿ ಹೆಚ್ಚಿಸುತ್ತಾ ಊಟ ಮಾಡಬೇಕು. ಪ್ರತಿ ಪಕ್ಷದ ಕೊನೆಯ ದಿನಗಳಲ್ಲಿ ದಿನಕ್ಕೊಂದು ಸಾರಿ ಗಂಜಿಯನ್ನು ಊಟ ಮಾಡಬಹುದು.

ಪ. VI–೨೧ (ವೈಖಾನಸ ಸಂಪ್ರದಾಯದ ನಿಯಮಗಳನ್ನು ಪಾಲಿಸುತ್ತಾ) ಹೂವುಗಳು ಮತ್ತು ಗೆಡ್ಡೆ ಗೆಣಸು ಮತ್ತು ಕಾಲಕ್ಕನುಗುಣವಾಗಿ ಪಕ್ವವಾಗಿ ತಾವಾಗಿಯೇ ಬಿದ್ದ ಹಣ್ಣುಗಳ ಮೇಲೆ ಮಾತ್ರ ಜೀವಿಸಬೇಕು.

ಪ. VI–೨೨ ನೆಲದ ಮೇಲೆ ಉರುಳಿ ಅಥವಾ ನಿಂತು ತುದಿಗಾಲ ಮೇಲೆ ಧ್ಯಾನಸ್ಥನಾಗಿ ಅವನು ದಿನವನ್ನು ಕಳೆಯಬೇಕು. ಸೂರ್ಯೋದಯ, ಮಧ್ಯಾಹ್ನ ಮತ್ತು ಸೂರ್ಯಾಸ್ತ ಸಮಯದಲ್ಲಿ ಸ್ನಾನ ಮಾಡಬೇಕು.

ಪ. VI–೨೩ ಬೇಸಿಗೆಯಲ್ಲಿ ಪಂಚಾಗ್ನಿಯ ಶಾಖಕ್ಕೆ ತನ್ನ ಶರೀರವನ್ನು ಒಡ್ಡಲಿ. ಮಳೆಗಾಲದಲ್ಲಿ ಆಕಾಶದಡಿಯಲ್ಲಿ ಜೀವಿಸಲಿ ಮತ್ತು ಚಳಿಗಾಲದಲ್ಲಿ ಒದ್ದೆ ಬಟ್ಟೆ ಧರಿಸಿ, ತನ್ನ ವ್ರತಶೀಲತೆಯ ಉಗ್ರತೆಯನ್ನು ಹೆಚ್ಚಿಸುತ್ತಾ ಹೋಗಬೇಕು.

ಪ. VI–೨೪ ಸೂರ್ಯೋದಯ, ಅಪರಾಹ್ನ ಮತ್ತು ಸೂರ್ಯಾಸ್ತ ಸಮಯಗಳಲ್ಲಿ ಸ್ನಾನಮಾಡಿದ ಮೇಲೆ ಪಿತೃಗಳಿಗೂ ದೇವತೆಗಳಿಗೂ ತರ್ಪಣ ಕೊಡಬೇಕು. ಕಠಿಣತರ ತಪಸ್ಸನ್ನಾಚರಿಸಿ ದೇಹವನ್ನು ದಂಡಿಸಬೇಕು.

ಪ. VI–೨೫ ವಿಧಿವತ್ತಾದ ನಿಯಮದಂತೆ ಮೂರು ಪವಿತ್ರ ಅಗ್ನಿಗಳನ್ನೂ ತನ್ನೊಳಗೆ ಅಡಗಿಸಿಕೊಂಡು ಗೆಡ್ಡೆಗೆಣಸು ಮತ್ತು ಹಣ್ಣುಗಳನ್ನು ಸೇವಿಸುತ್ತಾ, ಅಗ್ನಿ ಇಲ್ಲದೆ, ಗೃಹವಿಲ್ಲದೆ, ಶಾಂತಚಿತ್ತದಿಂದಿರಬೇಕು.

ಪ. VI–೨೬ ಆಹ್ಲಾದವನ್ನೀಯುವ ಯಾವ ಪದಾರ್ಥವನ್ನೂ ಪಡೆಯಲು ಪ್ರಯತ್ನಿಸದೆ, ಸ್ತ್ರೀಸುಖ ತೊರೆದು ಬರಿಯ ನೆಲದ ಮೇಲೆ ನಿದ್ರಿಸುತ್ತಾ ಯಾವ ಆಶ್ರಯಕ್ಕೂ ಹಂಬಲಿಸದೆ ಮರಗಳ ಬುಡದಲ್ಲಿ ವಾಸಮಾಡಬೇಕು.

ಪ. VI–೨೭ ಸನ್ಯಾಸಿಗಳಿಗಾಗಿ ಜೀವಿಸುವ ಬ್ರಾಹ್ಮಣರಿಂದ ಅಥವಾ ಅರಣ್ಯದಲ್ಲಿ ವಾಸಿಸುವ ದ್ವಿಜ ಜಾತಿಯ ಗೃಹಸ್ಥರಿಂದ ತನ್ನ ಜೀವನಾಧಾರಕ್ಕೆ ಅವಶ್ಯವಿದ್ದಷ್ಟು ಭಿಕ್ಷೆಯನ್ನು ಮಾತ್ರ ಸ್ವೀಕರಿಸಬೇಕು.

ಪ. VI–೨೮ ಅರಣ್ಯದಲ್ಲಿ ವಾಸಿಸುವ ಸನ್ಯಾಸಿಯು ಗ್ರಾಮದಿಂದ ತನ್ನ ಹಿಡಿಯಲ್ಲಿ, ದೊನ್ನೆಯಲ್ಲಿ ಅಥವಾ ಒಡೆದ ಮಣ್ಣಿನ ಬೋಗುಣಿಯಲ್ಲಿ ಆಹಾರ ತಿರಿದು ತಂದು ಎಂಟು ತುತ್ತುಗಳನ್ನು ತಿನ್ನಬೇಕು.

ಪ. VI–೨೯ ಅರಣ್ಯದಲ್ಲಿ ವಾಸಿಸುವ ಬ್ರಾಹ್ಮಣನು ಇವು ಮತ್ತು ಇತರೆ ಆಚರಣೆಗಳನ್ನು ಶ್ರದ್ಧೆಯಿಂದ ಆಚರಿಸಬೇಕು ಮತ್ತು ಆತ್ಮ ಸಿದ್ಧಿಗಾಗಿ ಉಪನಿಷತ್ತುಗಳನ್ನು ಅಭ್ಯಸಿಸಬೇಕು.

ಮನುಸ್ಮೃತಿಯಲ್ಲಿ ಸನ್ಯಾಸಿಗಾಗಿ ನಿಗದಿಮಾಡಿರುವ ನಿಯಮಗಳು ಈ ಕೆಳಗಿನಂತಿವೆ:[೧]

ಪ. VI–೩೮ ಪ್ರಜಾಪತಿಗೆ ಪವಿತ್ರವಾದ ಇಷ್ಟಿ ಯಜ್ಞವನ್ನು ಮಾಡಿ, ಅದರಲ್ಲಿ ಸರ್ವಸ್ವವನ್ನು ದಕ್ಷಿಣೆಯಾಗಿ ಸಮರ್ಪಿಸಿ, ಯಜ್ಞೇಯ ಅಗ್ನಿಗಳನ್ನು ತನ್ನೊಳಗೆ ಸಾಕ್ಷಾತ್ಕರಿಸಿಕೊಂಡು ಬ್ರಾಹ್ಮಣನು ತನ್ನ ಗೃಹವನ್ನು ತ್ಯಜಿಸಿ, ಸನ್ಯಾಸಿಯಾಗಿ ಹೊರಡಬೇಕು.

ಪ. VI–೩೯ ಸಮಸ್ತ ಜೀವರಾಶಿಗಳಿಗೂ ಅಭಯವನ್ನು ನೀಡಿದ ನಂತರ, ಯಾವ ಬ್ರಾಹ್ಮಣನು ಸನ್ಯಾಸವನ್ನು ಸ್ವೀಕರಿಸಿ, ಮನೆಬಿಟ್ಟು ಹೊರಡುವನೋ ಅವನಿಗೆ ತೇಜೋಮಯವಾದ ಲೋಕಗಳು ಪ್ರಾಪ್ತವಾಗುವವು.

ಪ. VI–೪೦ ಪ್ರಾಣಿವರ್ಗಕ್ಕೆ ಕಿಂಚಿತ್ತೂ ಅಪಾಯ ಉಂಟುಮಾಡದ ಆ ದ್ವಿಜನಿಗೆ, ತನ್ನ ಶರೀರದಿಂದ ಬಿಡುಗಡೆ ಹೊಂದಿದ ಮೇಲೆ ಯಾವ ದಿಶೆಯಿಂದಲೂ ಅಪಾಯವಿರುವುದಿಲ್ಲ.

ಪ. VI–೪೧ ಪವಿತ್ರನಾಗಿ ಗೃಹದಿಂದ ಹೊರಟು ಕಟ್ಟಾ ಮೌನಿಯಾಗಿ ಅಲೆದಾಡಬೇಕು. ಎಲ್ಲ ಬಗೆಯ ಸಂತೋಷಗಳನ್ನು ಉಪೇಕ್ಷೆಯಿಂದ ಕಾಣಬೇಕು.

ಪ. VI–೪೨ ಅವನು ಸಂಗಾತಿಯಿಲ್ಲದೆ, ಸದಾ ಏಕಾಂಗಿಯಾಗಿ ಅಲೆಯುತ್ತ, ಮೋಕ್ಷ ಸಾಧನೆಗೆ ತೊಡಗಬೇಕು. ಮೋಕ್ಷ ಅಪೇಕ್ಷಿಸುವವನಿಗೆ ಯಾರೂ ಬೇಕಾಗಿಲ್ಲ; ಯಾರಿಗೂ ಅವನು ಬೇಕಾಗಿಲ್ಲ.

ಪ. VI–೪೩ ಅವನು ಬೆಂಕಿಯನ್ನಾಗಲಿ, ವಸತಿಯನ್ನಾಗಲಿ ಹೊಂದಿರಬಾರದು; ಆತ ತನ್ನ ಆಹಾರಕ್ಕಾಗಿ ಹಳ್ಳಿಗೆ ಹೋಗಬೇಕು. ಉದ್ದೇಶದಲ್ಲಿ ದೃಢನಾಗಿದ್ದು ಎಲ್ಲಾ ವಿಷಯಗಳಲ್ಲಿಯೂ ನಿರಾಸಕ್ತನಾಗಿ, ಧ್ಯಾನಾಸಕ್ತನಾಗಿ, ಪರಮಾತ್ಮನಲ್ಲಿ ತನ್ನ ಚಿತ್ತವನ್ನು ಕೇಂದ್ರೀಕರಿಸಬೇಕು.

ಪ. VI–೪೪ ಭಿಕ್ಷಾಪಾತ್ರೆಗೆ ಬದಲು ಒಂದು ಬೋಕಿ, ವಾಸಕ್ಕೆ ಮರದ ಬೊಡ್ಡೆ, ಒರಟು ಉಡುಪು, ಏಕಾಂತ ಜೀವನ ಮತ್ತು ವಿರಕ್ತಿ ಇವು ಬಂಧ ವಿಮೋಚನೆಗೊಂಡವನ ಗುರುತುಗಳು.

ಪ. VI–೪೫ ಆತ ಸಾಯುವುದಕ್ಕೆ ಇಚ್ಛಿಸದಿರಲಿ, ಬದುಕುವುದಕ್ಕೆ ಇಚ್ಛಿಸದಿರಲಿ, ಒಬ್ಬ ಸೇವಕ ತನ್ನ ಕೂಲಿಗಾಗಿ ಕಾಯುವಂತೆ ಅವನು ನಿಯಮಿತ ಕಾಲಕ್ಕಾಗಿ ಕಾಯಲಿ.

ಪ. VI–೪೯ ಆಧ್ಯಾತ್ಮದಲ್ಲಿ ಮನಸ್ಸನ್ನು ತೊಡಗಿಸಿ, ಪದ್ಮಾಸನದಲ್ಲಿ ಕುಳಿತು, ಆಸೆ ಆಮಿಷಗಳ ಗೊಡವೆಗಳನ್ನು ಬಿಟ್ಟು, ತನ್ನನ್ನೇ ತಾನು ಅವಲಂಬಿಸಿ ಬ್ರಹ್ಮಾನಂದನನ್ನು ಹುಡುಕಬೇಕು.

ಪ. VI–೫೦ ಶುಭಾಶುಭ ಶಕುನಗಳನ್ನೂ ಹೇಳುತ್ತಾ, ಜ್ಯೋತಿಷ್ಯ ಮತ್ತು ಹಸ್ತ ಸಾಮುದ್ರಿಕಾಶಾಸ್ತ್ರಗಳ ನೈಪುಣ್ಯತೆ ತೋರಿಸುತ್ತಾ, ನೀತಿ ಶಾಸ್ತ್ರಗಳನ್ನು ಉಪದೇಶಿಸುತ್ತಾ ಭಿಕ್ಷೆಯನ್ನೆಂದಿಗೂ ಬೇಡಬಾರದು.

ಪ. VI–೫೧ ಆತ ಭಿಕ್ಷೆ ಬೇಡಲು ಸನ್ಯಾಸಿಗಳು, ಬ್ರಾಹ್ಮಣರು, ಪಕ್ಷಿಗಳು, ನಾಯಿಗಳು ಅಥವಾ ಇತರೆ ಭಿಕ್ಷುಕರು ತುಂಬಿರುವ ಮನೆಗೆ ಹೋಗಬಾರದು.

---

೧. 'ಎಸ್.ಬಿ.ಇ.' ಸಂ. IIV, ಪರಿಚ್ಛೇದ VI, ಶ್ಲೋಕಗಳು ೩೮–೪೫, ಪು. ೨೦೫–೨೦೬

ಪ. VI–೫೨ ತನ್ನ ಕೂದಲು, ಉಗುರುಗಳು ಮತ್ತು ಗಡ್ಡವನ್ನು ಕತ್ತರಿಸಿಕೊಂಡು, ಭಿಕ್ಷಾಪಾತ್ರೆಯನ್ನು, ದಂಡವನ್ನು ಮತ್ತು ನೀರಿನ ಮಡಕೆಯನ್ನು ಹಿಡಿದುಕೊಂಡು ತನ್ನನ್ನು ತಾನು ನಿಯಂತ್ರಿಸಿಕೊಂಡು ಯಾವ ಪ್ರಾಣಿಗೂ ತೊಂದರೆ ಕೊಡದೆ ನಿರಂತರವಾಗಿ ಸಂಚರಿಸಬೇಕು.

ಪ. VI–೫೩ ಲೋಹದಿಂದ ಮಾಡಿದ ಪಾತ್ರೆಯನ್ನು ಬಳಸಬಾರದು. ಅದು ಒಡೆದಿರಬಾರದು. ಯಜ್ಞದಲ್ಲಿ ಚಮಸ ಎಂಬ ಬಟ್ಟಲುಗಳನ್ನು ತೊಳೆಯುವಂತೆ ಅದನ್ನು ನೀರಿನಿಂದ ತೊಳೆಯಬೇಕು.

ಪ. VI–೫೪ ಸೋರೆ ಬುರುಡೆ, ಮರದ ಬೋಗುಣಿ, ಮಣ್ಣಿನ ತಟ್ಟೆ ಅಥವಾ ಬಿದಿರಿನ ಬಟ್ಟಲು ಇವು ಸನ್ಯಾಸಿಗೆ ತಕ್ಕ ಪಾತ್ರೆಗಳೆಂದು ಸ್ವಯಂಭುವಿನ ಮಗನಾದ ಮನುವು ಸಾರಿದ್ದಾನೆ.

ಪ. VI–೫೫ ದಿನಕ್ಕೊಂದು ಬಾರಿ ಭಿಕ್ಷೆಗೆ ಹೋಗಬೇಕು, ಹೆಚ್ಚು ಪ್ರಮಾಣದಲ್ಲಿ ಆಹಾರ ಪಡೆಯುವ ಆಕಾಂಕ್ಷೆ ಮತ್ತೆ ಪ್ರಾಪಂಚಿಕ ಸುಖಗಳಗತ್ತ ಮನಸ್ಸನ್ನು ತಿರುಗಿಸುವುದೆಂಬ ಕಾರಣದಿಂದ ಅವನು ಹೆಚ್ಚು ಭಿಕ್ಷೆಯನ್ನು ಬೇಡಬಾರದು.

ಪ. VI–೫೬ ಅಡಿಗೆ ಮನೆಯಿಂದ ಹೊಗೆ ಮೇಲೇಳದಿದ್ದಾಗ, ಒನಕೆ ಅಚಲವಾಗಿ ಬಿದ್ದಿರುವಾಗ, ಬೆಂಕಿ, ಕೆಂಡ ಆರಿಸಲ್ಪಟ್ಟಿರುವಾಗ, ಮನುಷ್ಯರು ತಮ್ಮ ಊಟವನ್ನು ಮುಗಿಸಿರುವಾಗ, ಬಟ್ಟಲಿನಲ್ಲಿ ಉಳಿದಿದ್ದುದನ್ನು ತೆಗೆದಿಟ್ಟ ಮೇಲೆ ಸನ್ಯಾಸಿಯು ಬೇಡುವುದಕ್ಕೆ ಹೋಗಬೇಕು.

ಪ. VI–೫೭ ಏನೂ ಭಿಕ್ಷೆ ದೊರೆಯದಿದ್ದಾಗ ಅವನು ವ್ಯಸನಪಡಬಾರದು, ಏನಾದರೂ ದೊರೆತಾಗ ಸಂತೋಷಪಡಬಾರದು, ಜೀವದಿಂದುಳಿದಿರಲು ಬೇಕಾದಷ್ಟು ಮಾತ್ರ ಸ್ವೀಕರಿಸಬೇಕು; ದಂಡಕಮಂಡಲಾದಿಗಳ ಬಗೆಗೂ ತಲೆಕೆಡಿಸಿಕೊಳ್ಳಬಾರದು.

ಪ. VI–೫೮ ಅವನಿಗೆ ಪೂಜೆ ಮಾಡಿ ಸತ್ಕರಿಸಿಕೊಟ್ಟ ಭಿಕ್ಷೆಯನ್ನೂ ಸಹ ತಿರಸ್ಕರಿಸಬೇಕು. ಇದರಿಂದ ಸನ್ಯಾಸಿಯ ಮನಸ್ಸಿನಲ್ಲಿಯೂ ಮೋಹ ಹುಟ್ಟಬಹುದಾದ್ದರಿಂದ ಹೀಗೆ ದೊರೆತ ಭಿಕ್ಷೆಯನ್ನು ಸ್ವೀಕರಿಸಬಾರದು.

ಪ. VI–೫೯ ಕಡಿಮೆ ಆಹಾರ ಹಾಗೂ ಏಕಾಂತದಲ್ಲಿರುವ ಮೂಲಕ ವಿಷಯಾಸಕ್ತಿಗೆಳೆಯುವ ತನ್ನ ಪಂಚೇಂದ್ರಿಯಗಳನ್ನು ಅವನು ನಿಗ್ರಹಿಸಬೇಕು.

ಪ. VI–೬೦ ಇಂದ್ರಿಯನಿಗ್ರಹದ ಮೂಲಕ ಪ್ರೀತಿ ಮತ್ತು ದ್ವೇಷಗಳನ್ನು ಮೀರುವ ಮತ್ತು ಪ್ರಾಣಿಹಿಂಸೆಯಿಂದ ವಿಮುಖನಾದವನು ಅಮರತ್ವ ಪಡೆಯಲು ಯೋಗ್ಯನಾಗುತ್ತಾನೆ.

ಪ. VI–೮೦ ಸರ್ವೇಂದ್ರಿಯ ಭಾವಗಳನ್ನು ತ್ಯಜಿಸಿ ನಿಸ್ಪೃಹನಾದಾಗ, ಇಹಪರಗಳೆರಡರಲ್ಲೂ ಶಾಶ್ವತವಾದ ಸುಖವನ್ನು ಪಡೆಯುತ್ತಾನೆ.

ಪ. VI–೮೧ ಈ ರೀತಿ, ಕ್ರಮೇಣ ಎಲ್ಲ ಬಂಧನಗಳಿಂದ ಬಿಡುಗಡೆ ಹೊಂದಿದವನು ಬ್ರಹ್ಮನ್ (ಪರಮಾತ್ಮ)ನಲ್ಲಿ ಐಕ್ಯನಾಗುತ್ತಾನೆ.

ಪ. VI–೮೨ ಮೇಲೆ ಹೇಳಿದ ಎಲ್ಲ ಸಾಧನೆಗಳೂ ಧ್ಯಾನದಿಂದ ಮಾತ್ರ ದಕ್ಕುವಂಥವು, ಆತ್ಮಜ್ಞಾನವಿಲ್ಲದವನು ತಾನು ಆಚರಿಸುವ ವಿಧಿಗಳ ಪೂರ್ಣಫಲವನ್ನು ಪಡೆಯಲಾರನು.

ಪ. VI–೮೩ ಯಜ್ಞಯಾಗಗಳಿಗೆ ಸಂಬಂಧಿಸಿದ ಆತ್ಮ ಹಾಗೂ ದೈವ ಜ್ಞಾನವನ್ನು ಕುರಿತ ವೇದಾಂತದ ಭಾಗಗಳನ್ನು ಅವನು ಸದಾ ಪಠಿಸಬೇಕು.

ಪ. VI–೮೪ ವೇದವೇ ಅಜ್ಞಾನಿಗಳ ರಕ್ಷಣಾಸ್ಥಾನ, ವೇದದ ಅರ್ಥವನ್ನು ತಿಳಿದವರಿಗೂ ಅದೇ ಆಶ್ರಯ. ಸ್ವರ್ಗದಲ್ಲಿ ಪರಮ ಸುಖ ಹುಡುಕುವವರಿಗೆ, ಅಂತ್ಯವಿಲ್ಲದ ದಿವ್ಯಾನಂದವನ್ನು ಅರಸುವವರಿಗೆ ಅದೇ ಶ್ರೀರಕ್ಷೆ.

ಪ. VI–೮೫ ಮೇಲೆ ಹೇಳಿದ ಕ್ರಿಯೆಗಳನ್ನು ಅನುಕ್ರಮವಾಗಿ ನಿರ್ವಹಿಸಿದ ಮೇಲೆ ಸನ್ಯಾಸಿಯಾದ ದ್ವಿಜನು, ಇಹಲೋಕದಲ್ಲಿ ತನ್ನ ಪಾಪಗಳಿಂದ ಮುಕ್ತನಾಗಿ ಅತ್ಯುಚ್ಚ ಬ್ರಹ್ಮತ್ವವನ್ನು ಪಡೆಯುತ್ತಾನೆ.

ವಾನಪ್ರಸ್ಥವನ್ನು ಸನ್ಯಾಸದ ಜೊತೆ ಹೋಲಿಸಿದರೆ, ಈ ಆಚರಣೆಗಳಲ್ಲಿರುವ ಸಾಮ್ಯ ಎಷ್ಟು ಹತ್ತಿರವಿದೆ ಎಂದರೆ ಈ ಎರಡು ಹಂತಗಳನ್ನು ಪ್ರತ್ಯೇಕ ಹಂತಗಳನ್ನಾಗಿ ಏಕೆ ನಿರ್ಮಿಸಿದರೆಂದು ಯಾರಾದರೂ ಕೇಳುವಂತಿದೆ.

ಅಲ್ಲಿ ಕೇವಲ ಕೆಲವೇ ವ್ಯತ್ಯಾಸಗಳಿರುವುದು ಗೋಚರವಾಗುತ್ತದೆ. ಮೊದಲನೆಯದಾಗಿ, ವಾನಪ್ರಸ್ಥಿಯು ತನ್ನ ಹೆಂಡತಿಯನ್ನು ಜೊತೆಯಲ್ಲಿ ಕರೆದುಕೊಂಡು ಹೋಗಬಹುದು. ಆದರೆ, ಸನ್ಯಾಸಿಯು ಹಾಗೆ ಮಾಡಕೂಡದು. ಎರಡನೆಯದಾಗಿ, ವಾನಪ್ರಸ್ಥಿಯು ತನ್ನ ಆಸ್ತಿಯನ್ನು ಹಿಂದೆ ಬಿಟ್ಟು ಹೋಗಬೇಕು. ಆದರೆ, ಸನ್ಯಾಸಿಯು ಆಸ್ತಿಯ ಮೇಲಿನ ಹಕ್ಕು ತ್ಯಜಿಸಬೇಕು. ವಾನಪ್ರಸ್ಥಿಯು ಅರಣ್ಯದಲ್ಲಿ ವಾಸಸ್ಥಾನವನ್ನು ಕಲ್ಪಿಸಿಕೊಳ್ಳಬೇಕು ಮತ್ತು ಒಬ್ಬ ಸನ್ಯಾಸಿಯು ಒಂದು ಸ್ಥಿರವಾದ ವಾಸಸ್ಥಾನ ಹೊಂದಿರಕೂಡದು ಮತ್ತು ಸ್ಥಳದಿಂದ ಸ್ಥಳಕ್ಕೆ ಅಲೆದಾಡುತ್ತಿರಬೇಕು. ಉಳಿದ ವಿಚಾರಗಳಲ್ಲಿ ಅವರ ಜೀವನ ಕ್ರಮ ಒಂದೇ ವಿಧವಾಗಿದೆ. ಸನ್ಯಾಸಾಶ್ರಮ ಹಂತವು ಎರಡು ಹಂತಕ್ಕೂ ಸಾಕಾಗಿರುವಾಗ, ಬ್ರಾಹ್ಮಣರು, ವಾನಪ್ರಸ್ಥವೆಂಬ ಮತ್ತೊಂದು ಹಂತವನ್ನು ಮಾನ್ಯ ಮಾಡಿದ್ದೇಕೆ? ಈ ಎರಡು ಹಂತಗಳೂ ಒಳ್ಳೆಯದೇನನ್ನು ಸಾಧಿಸುತ್ತವೆಂಬ ಪ್ರಶ್ನೆಯಂತೂ ಉಳಿಯುತ್ತದೆ. ಅವುಗಳನ್ನು ಸ್ವಾರ್ಥತ್ಯಾಗದ ದೃಷ್ಟಾಂತಗಳನ್ನಾಗಿಯೂ ಉದಾಹರಿಸಲಾಗುವುದಿಲ್ಲ. ಏಕೆಂದರೆ, ವಾನಪ್ರಸ್ಥಿ ಮತ್ತು ಸನ್ಯಾಸಿ ವೃದ್ಧರೇ ಆಗಿರಬೇಕು.

ಒಬ್ಬ ವ್ಯಕ್ತಿ ಯಾವಾಗ ವಾನಪ್ರಸ್ಥನಾಗಬೇಕೆಂಬ ಕಾಲದ ಬಗ್ಗೆ ಮನುವು ಬಹಳ ಸ್ಪಷ್ಟವಾಗಿ ಹೇಳಿದ್ದಾನೆ. ಅದಕ್ಕೆ ಪಕ್ವವಾದ ಕಾಲ, ಮೈ ಸುಕ್ಕು ಹಿಡಿದಾಗ ಅಂದರೆ, ತುಂಬಾ ವಯಸ್ಸಾದಾಗ. ಸನ್ಯಾಸಿಯು ಇನ್ನೂ ಹೆಚ್ಚಿನ ವಯಸ್ಸಿನವನಾಗಿರಲೇಬೇಕು. ಜೀವನದ ಎಲ್ಲ ಆಹ್ಲಾದಗಳನ್ನೂ ಅನುಭವಿಸಿ, ಅವುಗಳನ್ನು ಅನುಭವಿಸಲು ಕೈಲಾಗದ ಹಂತದಲ್ಲಿ ತಮ್ಮ ಆಹ್ಲಾದವನ್ನು ತ್ಯಜಿಸಲು ಮುಂದೆ ಬರುವವರನ್ನು, ಸ್ವಾರ್ಥತ್ಯಾಗಿಗಳೆಂದು ಉದಾಹರಿಸಿ, ಅವರನ್ನು ಸ್ವಾರ್ಥತ್ಯಾಗಿಗಳೆಂದು ಪ್ರದರ್ಶಿಸುವುದು ಮೋಸವಲ್ಲದೆ ಮತ್ತೇನಲ್ಲ. ಈ ಗೃಹ ಮತ್ತು ಕುಟುಂಬ ತ್ಯಾಜ್ಯವು ಮಾನವಕುಲಕ್ಕೆ ಸೇವೆ ಸಲ್ಲಿಸುವ ಉದ್ದೇಶಕ್ಕಂತೂ ಅಲ್ಲ. ತಮ್ಮ ವ್ರತಗಳನ್ನು ನೆರವೇರಿಸಿ ಶಾಂತಿಯುತ ಸಾವಿಗಾಗಿ ಕಾಯುವುದು ಅವರ ಉದ್ದೇಶ. ಇಂತಹ ನಿಕೃಷ್ಟ ಮತ್ತು ಅಲ್ಪ ಉದ್ದೇಶಕ್ಕಾಗಿ ವಯೋವೃದ್ಧನನ್ನು ಅವನ ಸಂಸಾರದಿಂದ ಬೇರ್ಪಡಿಸಿ ಕಾಡಿನಲ್ಲಿ ನಿರ್ಲಕ್ಷಿಸಲ್ಪಟ್ಟು ಶೋಕಿಸಲ್ಪಟ್ಟು ಸಾವನ್ನಪ್ಪುವಂತೆ ಮಾಡುವುದು ಮೂರ್ಖತನದ ಪರಮಾವಧಿ.

ಆಶ್ರಮ ಪದ್ಧತಿಯು ಬ್ರಾಹ್ಮಣದಿಂದ ರೂಪಿಸಲ್ಪಟ್ಟ, ಪುರಾತನ ಕಾಲದ ಯೋಜಿತ ಆರ್ಥಿಕ ವ್ಯವಸ್ಥೆಯ ಪ್ರಯತ್ನ. ಬ್ರಾಹ್ಮಣರು ಈ ಪದ್ಧತಿಯನ್ನು ಯೋಜಿಸಿದ ಕಾರಣಗಳು ಮತ್ತು ಪ್ರೇರಣೆಗಳನ್ನು ಅರ್ಥಮಾಡಿಕೊಳ್ಳುವುದು ಒಂದು ಒಗಟಾಗಿರುವುದು ತೀರಾ ಅವಿವೇಕತನ.

* * * *

# ಅನುಬಂಧ – II

## ಬಲಾತ್ಕಾರದ ವಿವಾಹ*

ಒಬ್ಬ ವ್ಯಕ್ತಿಯ ಲೌಕಿಕ ಜೀವನವನ್ನು ನಾಲ್ಕು ಹಂತಗಳಾಗಿ ಮನುವು ವರ್ಗೀಕರಿಸಿದ್ದಾನೆ. ಆ ನಾಲ್ಕು ಹಂತಗಳೆಂದರೆ:

೧. ಬ್ರಹ್ಮಚರ್ಯ     ೨. ಗೃಹಸ್ಥಾಶ್ರಮ

೩. ವಾನಪ್ರಸ್ಥ ಮತ್ತು     ೪. ಸನ್ಯಾಸ

ಬ್ರಹ್ಮಚರ್ಯ ಹಂತ ಅಂದರೆ ವಿದ್ಯಾರ್ಥಿದೆಶೆ: ವೇದಾಭ್ಯಾಸಕ್ಕೆ ಮೀಸಲಿಟ್ಟ ಕಾಲ. ಗೃಹಸ್ಥಾಶ್ರಮ ಹಂತವು ವಿವಾಹವಾದ ಅವಸ್ಥೆ ಅಥವಾ ಮನುವು ಕರೆಯುವಂತೆ ಗೃಹಸ್ಥನಾಗಿ ವಿವಾಹ ಮಾಡಿಕೊಂಡು, ಒಂದು ಕುಟುಂಬವನ್ನು ಬೆಳೆಸುವ ಸ್ಥಿತಿ. ವಾನಪ್ರಸ್ಥ ಹಂತದಲ್ಲಿ ವಾನಪ್ರಸ್ಥನು ತನ್ನ ಗೃಹತ್ಯಾಗ ಮಾಡುವ ಮೂಲಕ ಸಾಂಸಾರಿಕನಾಗಿರುವುದನ್ನು ನಿಲ್ಲಿಸುತ್ತಾನೆ. ಅವನಂತೂ ತನ್ನ ಹೆಂಡತಿಯನ್ನು ತ್ಯಜಿಸುವುದಿಲ್ಲ. ಆತ ಕಾಡಿನಲ್ಲಿ ವಾಸಿಸುತ್ತಾನೆ. ಆದರೆ ತನ್ನ ಆಸ್ತಿಯ ಮೇಲಣ ಹಕ್ಕನ್ನು ಬಿಟ್ಟುಕೊಡುವುದಿಲ್ಲ. ಒಬ್ಬ ಸಾಂಸಾರಿಕನ ಮತ ಸಂಬಂಧದ ಕರ್ತವ್ಯಗಳ ಸಂಬಂಧವಾಗಿ ಆತ ಸತ್ತಂತೆಯೇ. ಆದರೂ, ಆತ ಸಮಾಜದ ದೃಷ್ಟಿಯಲ್ಲಿ ಸತ್ತವನಲ್ಲ. ಸನ್ಯಾಸ ಅವಸ್ಥೆಯ ಹಂತದಲ್ಲಿ ಒಬ್ಬ ವ್ಯಕ್ತಿ ತನ್ನ ಸಾಂಸಾರಿಕ ಬಂಧನವನ್ನು ಹರಿದು, ಹೆಂಡತಿಯನ್ನು ತೊರೆದು, ಐಹಿಕ ವಸ್ತುಗಳನ್ನು ಬಿಟ್ಟು, ಗೃಹತ್ಯಾಗ ಮಾಡಿ, ಗೃಹಸ್ಥ ಧರ್ಮಕ್ಕೆ ವಿಧಿಸಿದ ಧಾರ್ಮಿಕ ಕಟ್ಟಳೆಗಳನ್ನು ಅನುಸರಿಸದೆ, ಪರಮಾತ್ಮನನ್ನು ನೆನೆದು ತಪವನ್ನಾಚರಿಸಲು ಅರಣ್ಯಕ್ಕೆ ಹೋಗಿ ನೆಲೆಸುತ್ತಾನೆ. ಆತ ಲೌಕಿಕವಾಗಿ ಮರಣವವನ್ನೈದಿದನೆಂದೇ ಪರಿಗಣಿಸಲ್ಪಡುತ್ತಾನೆ. ಮನುಷ್ಯನ ಜೀವನಕ್ರಮವನ್ನು ಹಂತಗಳನ್ನಾಗಿ ವಿಂಗಡಿಸುವ ಅಭಿಪ್ರಾಯ ಮನುವಿಗಿಂತ ಬಹಳ ಹಿಂದಿನದು. ಇಲ್ಲಿ ಮುಖ್ಯವಾದುದೇನೆಂದರೆ, ಈ ರಚನೆಯಲ್ಲಿ ಮನು ಮಾಡಿರುವ ಬದಲಾವಣೆಗಳು.

ಮನು ಮಾಡಿರುವ ಮೊದಲನೇ ಬದಲಾವಣೆಯೇನೆಂದರೆ, ವಿವಾಹವನ್ನು ಕಡ್ಡಾಯ ಮಾಡಿರುವುದು. ಒಬ್ಬ ಬ್ರಹ್ಮಚಾರಿಯು ತನ್ನ ವಿದ್ಯಾಭ್ಯಾಸವನ್ನು ಮುಗಿಸಿದ ಮೇಲೆ ವಿವಾಹ ಮಾಡಿಕೊಳ್ಳಬೇಕು. ಈ ನಿಯಮವು ಮನುವಿನಿಂದ ವಿಧಿಸಲ್ಪಟ್ಟಿದ್ದೆಂದು ಈ ಕೆಳಗಿನ ಉಲ್ಲೇಖಗಳಿಂದ ಗೋಚರವಾಗುತ್ತದೆ.

III ೨. ಒಬ್ಬ ವಿದ್ಯಾರ್ಥಿ ಕ್ರಮವಾಗಿ ಮೂರು ವೇದಗಳನ್ನು ಅಥವಾ ಎರಡನ್ನು ಇಲ್ಲವೇ ಒಂದನ್ನಾದರೂ, ವಿಧಿಪ್ರಕಾರವಾಗಿ ಅಭ್ಯಾಸ ಮಾಡಿದ ಮೇಲೆ ಗ್ರಹಸ್ಥಾಶ್ರಮ ಪ್ರವೇಶಿಸಬೇಕು.

---

* ಈ ಪರಿಚ್ಛೇದವನ್ನು 'ವರ್ಣಾಶ್ರಮ ಧರ್ಮದ ಒಗಟು' ಜೊತೆಯಲ್ಲಿ ಓದಬಹುದು.

III ೪. ಗುರುವಾಜ್ಞೆಯಂತೆ, ಗೃಹಕ್ಕೆ ಹಿಂದಿರುಗಿ ಸಮವರ್ತನ ವಿಧಿಯನ್ನು ನೆರವೇರಿಸಿ, ಸ್ನಾನ ಮಾಡಿ, ಒಬ್ಬ ದ್ವಿಜನು, ಶುಭಚಿಹ್ನೆಗಳುಳ್ಳ ತನ್ನ ಸಮಾನ ಜಾತಿಯ ಹೆಂಡತಿಯನ್ನು ಮದುವೆಯಾಗಬೇಕು.

ಮನು ಮಾಡಿರುವ ಎರಡನೆಯ ಬದಲಾವಣೆ ಏನೆಂದರೆ, ಮದುವೆಯಾಗದ ಬ್ರಹ್ಮಚಾರಿಯು ಸನ್ಯಾಸಾಶ್ರಮಕ್ಕೆ ಪ್ರವೇಶಿಸುವುದನ್ನು ಪ್ರತಿಬಂಧಿಸಿರುವುದು. ಮನುವು, ಸನ್ಯಾಸಕ್ಕೆ ಮುಂಚೆ ವಿವಾಹವನ್ನು ಒಂದು ಷರತ್ತನ್ನಾಗಿಸಿದ್ದಾನೆ. ಗೃಹಸ್ಥಾಶ್ರಮಕ್ಕೆ ಒಳಗಾಗದೆ ಸನ್ಯಾಸ ಪ್ರವೇಶಿಸುವುದು ಪಾಪಕೃತ್ಯವೆಂದು ಮನುವು ಸಾರಿದ್ದಾನೆ.

ಪ. VI–೩೫ ಆತ ಮೂರು ಋಣಗಳನ್ನು ತೀರಿಸಿದ ಮೇಲೆ, ಅಂತ್ಯ ಸಾಕ್ಷಾತ್ಕಾರವನ್ನು ಪಡೆಯುವತ್ತ ತನ್ನ ಮನವನ್ನು ನಿಯೋಗಿಸಬೇಕು; ತನ್ನ ಋಣವನ್ನು ತೀರಿಸದೆ, ಸಾಕ್ಷಾತ್ಕಾರ ಅರಸಿದರೆ, ಅಧೋಗತಿಗಿಳಿಯುತ್ತಾನೆ.

ಪ. VI–೩೬ ವೇದಗಳನ್ನು ಅಭ್ಯಸಿಸಿ (ನಿಯಮದಂತೆ) ಪವಿತ್ರ ನಿಯಮದಂತೆ ಮಕ್ಕಳನ್ನು ಪಡೆದು, ತನ್ನ ಸಾಮರ್ಥ್ಯಕ್ಕನುಸಾರವಾಗಿ, ಯಜ್ಞ ವಿಧಿಗಳನ್ನು ಅರ್ಪಿಸಿ, ತನ್ನ ಮನಸ್ಸನ್ನು ಅಂತ್ಯ ಸಾಕ್ಷಾತ್ಕಾರದತ್ತ ನಿರ್ದೇಶಿಸಬೇಕು.

ಪ. VI–೩೭ ವೇದಗಳನ್ನು ಓದಿರದ, ಮಕ್ಕಳನ್ನು ಹಡೆಯದ ಮತ್ತು ಯಜ್ಞ ವಿಧಿಗಳನ್ನೂ ಪೂರೈಸದ ದ್ವಿಜನು ಅಂತಿಮ ಸಾಕ್ಷಾತ್ಕಾರವನ್ನು ಪಡೆಯಲು ಪ್ರಯತ್ನಪಟ್ಟರೆ ಅವನು ಅಧೋಗತಿಗಿಳಿಯುತ್ತಾನೆ.

ಪ. VI–೩೮ ಸೃಷ್ಟಿಕರ್ತ (ಪ್ರಜಾಪತಿಯ)ನ ಪವಿತ್ರ ಪೂಜೆಯಾದ ಇಷ್ಟಿಯನ್ನು ನೆರವೇರಿಸಿ, ತನ್ನ ಆಸ್ತಿಯನ್ನೆಲ್ಲಾ ಸಮರ್ಪಣಾ ಶುಲ್ಕವಾಗಿ ಕೊಟ್ಟು ಪವಿತ್ರ ಅಗ್ನಿಯನ್ನು ತನ್ನಲ್ಲೇ ಅಡಗಿಸಿಕೊಂಡು, ಒಬ್ಬ ಬ್ರಾಹ್ಮಣನು ಗೃಹತ್ಯಾಗ ಮಾಡಿ, ಸನ್ಯಾಸಿಯಾಗಿ ಹೊರಡಬೇಕು.

ಮನುವು ಮಾಡಿರುವ ಮೂರನೇ ಬದಲಾವಣೆ ಏನೆಂದರೆ, ಒಬ್ಬ ಗೃಹಸ್ಥನು ವಾನಪ್ರಸ್ಥ ಹಂತವನ್ನು ತಲುಪದೆ, ಸನ್ಯಾಸಿಯಾಗಲು ಪ್ರತಿಬಂಧಿಸಿರುವುದು.

ಪ. VI–೧ ನಿಯಮದಂತೆ ಗೃಹಸ್ಥಾಶ್ರಮ ಶ್ರೇಣಿಯಲ್ಲಿ ಜೀವಿಸಿದ ಸ್ನಾತಕನಾದ ದ್ವಿಜನು ದಿಟ್ಟ ತೀರ್ಮಾನ ತೆಗೆದುಕೊಂಡು, ಇಂದ್ರಿಯ ನಿಗ್ರಹ ಮಾಡಿಕೊಂಡು, ಈ ಕೆಳಗಿನ ನಿಯಮಗಳನ್ನು ಪಾಲಿಸುತ್ತಾ ಅರಣ್ಯದಲ್ಲಿ ವಾಸಿಸಬೇಕು.

ಪ. VI–೨ ಒಬ್ಬ ಗೃಹಸ್ಥನ ಚರ್ಮ ಸುಕ್ಕು ಹಿಡಿದಾಗ, ಕೂದಲು ನರೆತಾಗ ಮತ್ತು ಪುತ್ರನು ಪುತ್ರನನ್ನು ಪಡೆದಾಗ, ಆತ ಅರಣ್ಯಕ್ಕೆ ತೆರಳಬೇಕು.

ಪ. VI–೩ ಕೃಷಿಯಿಂದ ಪಡೆದ ಎಲ್ಲ ಆಹಾರವನ್ನೂ ಮತ್ತು ತನ್ನ ಸರ್ವಸ್ವವನ್ನೂ ತ್ಯಜಿಸಿ ತನ್ನ ಹೆಂಡತಿಯನ್ನು ಪುತ್ರರ ವಶಕ್ಕೆ ಒಪ್ಪಿಸಿ ಅಥವಾ ಆಕೆಯೊಡನೆ ಅರಣ್ಯಕ್ಕೆ ಹೊರಡಬೇಕು.

ಮನುವು ಮಾಡಿದ ಈ ಬದಲಾವಣೆಗಳನ್ನು ಅವನ ಕಾಲಕ್ಕೆ ಮುಂಚೆ ಈ ವಿಷಯಗಳನ್ನು ನಿಯಂತ್ರಿಸುತ್ತಿದ್ದ ನಿಯಮಗಳಿಗೆ ಹೋಲಿಸಿದರೆ, ಬಹು ಕ್ರಾಂತಿಕಾರಕವಾದವುಗಳಾಗಿರುವುದಂತೂ ನಿಜ. ಈ ಅಂಶದ ಮೇಲೆ, ವಾಸಿಷ್ಠ ಧರ್ಮಸೂತ್ರ ಮತ್ತು ಗೌತಮ ಧರ್ಮಸೂತ್ರ ಎಂಬ ಎರಡು ಧರ್ಮಸೂತ್ರಗಳಲ್ಲಿ ಅಡಕವಾಗಿರುವ ನಿಯಮಗಳನ್ನು ಉದ್ಧರಿಸುತ್ತೇನೆ ಮಾತ್ರ.

ವಾಸಿಷ್ಠ ಧರ್ಮಸೂತ್ರ[೧] ಹೀಗೆ ಹೇಳುತ್ತದೆ:

"ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥ ಮತ್ತು ಸನ್ಯಾಸ ಎಂಬ ನಾಲ್ಕು ವರ್ಗಗಳಿವೆ.

ಬ್ರಹ್ಮಚರ್ಯದ ನಿಯಮಗಳನ್ನು ಉಲ್ಲಂಘಿಸದೆ ಒಂದು, ಎರಡು ಅಥವಾ ಮೂರು ವೇದಗಳನ್ನು ಅಭ್ಯಸಿಸಿರುವವ ಒಬ್ಬ ವ್ಯಕ್ತಿ. ಈ ಮೂರು ವರ್ಗಗಳಲ್ಲಿ ತಾನು ಒಪ್ಪುವ ಯಾವುದನ್ನಾದರೂ ಅನುಸರಿಸಬಹುದು."

ಗೌತಮ ಧರ್ಮಸೂತ್ರ ಹೇಳುವುದಿದು:[೨]

"ವೇದವನ್ನು ಓದಿರುವವನು, ತಾನು ಯಾವ ವರ್ಗಕ್ಕೆ ಪ್ರವೇಶಿಸಲಿಚ್ಛಿಸುವನೋ, ಅದನ್ನು ಆಯ್ಕೆ ಮಾಡಬಹುದು ಎಂದು ಕೆಲವರು ಪ್ರಸಿದ್ಧಪಡಿಸಿದ್ದಾರೆ."

ನಾಲ್ಕು ವರ್ಗಗಳು ಇವು : ಬ್ರಹ್ಮಚರ್ಯ, ಗೃಹಸ್ಥ, ಸನ್ಯಾಸ ಮತ್ತು ಕಾಡಿನಲ್ಲಿ ವಾನಪ್ರಸ್ಥ (ವೈಖಾನಸ)."

ಧರ್ಮಸೂತ್ರಗಳು ವಿಶದೀಕರಿಸಿರುವಂತೆ, ಬ್ರಹ್ಮಚರ್ಯ ಹಂತವನ್ನು ಪೂರೈಸಿದ ಮೇಲೆ ಯಾವ ಒಬ್ಬ ಮನುಷ್ಯನು ಯಾವ ವರ್ಗಕ್ಕೆ ಪ್ರವೇಶಿಸಬೇಕೆಂಬ ವಿಷಯ ಅವನ ಆಯ್ಕೆಗೇ ಬಿಟ್ಟದ್ದು. ಆತ ಇಷ್ಟಪಟ್ಟರೆ ಮದುವೆ ಮಾಡಿಕೊಂಡು ಗೃಹಸ್ಥನಾಗಬಹುದು ಅಥವಾ ಸಾಂಸಾರಿಕ ಜೀವನವನ್ನು ಪ್ರವೇಶಿಸದೆ ತಾನು ಇಷ್ಟಪಟ್ಟರೆ ನೇರವಾಗಿ ಸನ್ಯಾಸಾಶ್ರಮವನ್ನು ಪ್ರವೇಶಿಸಬಹುದು. ವೈವಾಹಿಕ ಜೀವನವು ವಾನಪ್ರಸ್ಥ ಮತ್ತು ಸನ್ಯಾಸ ಹಂತಗಳಿಗಿಂತ ಮುಂಚೆ ಬರಬೇಕೆಂಬುದು ಮನುವು ಮಾಡಿರುವ ಕ್ರಾಂತಿಕಾರಕ ಬದಲಾವಣೆ ಎಂಬುದು ತೀರಾ ಸ್ಪಷ್ಟವಾಗಿದೆ.

ಮನುವು ಮಾಡಿರಬಹುದಾದ ಇನ್ನೊಂದು ಬದಲಾವಣೆ ಇದೆ. ವೈವಾಹಿಕ ಹಂತವಾದ ಮೇಲೆ ಸನ್ಯಾಸ ಹಂತಕ್ಕೆ ಪ್ರವೇಶಿಸಬೇಕಾದರೆ, ವಾನಪ್ರಸ್ಥದ ಮುಖೇನ ಹೋಗಬೇಕಾದ ಅಗತ್ಯವೇನೆಂಬುದು ಅರ್ಥವಾಗದು. ಒಬ್ಬ ವ್ಯಕ್ತಿ ನೇರವಾಗಿ ಸನ್ಯಾಸಿಯಾಗಬಾರದೇಕೆ? ಮೂಲಭೂತವಾದದ್ದೆಂದು ಕರೆಯಬಹುದಾದ ಸನ್ಯಾಸಕ್ಕೂ ವಾನಪ್ರಸ್ಥಕ್ಕೂ ಇರುವ ವ್ಯತ್ಯಾಸವಾದರೂ ಏನು? ಈ ಪರಿಚ್ಛೇದದ ಪ್ರಾಸಂಗಿಕ ಚರ್ಚೆಯಲ್ಲಿ, ವಾನಪ್ರಸ್ಥ ಮತ್ತು ಸನ್ಯಾಸಿಗಳ ನಡತೆಯ ಬಗ್ಗೆ ಅಧ್ಯಾಯದ ಮನುವು ಮಾಡಿರುವ ನಿಯಮಗಳನ್ನು ಒಟ್ಟಾಗಿ ಸಂಗ್ರಹಿಸಿದ್ದೇನೆ. ಈ ನಿಯಮಗಳನ್ನು ಸೂಕ್ಷ್ಮವಾಗಿ ಪರೀಕ್ಷಿಸಿದರೆ, ಅವುಗಳಲ್ಲಿ ಏನೂ ವ್ಯತ್ಯಾಸವಿಲ್ಲವೆಂದು ಗೋಚರವಾಗುತ್ತದೆ. ಗೃಹಸ್ಥಾಶ್ರಮಿಗಳಿಗೆ ವಿಧಿಸಲಾದ ಕೆಲವು ಧಾರ್ಮಿಕ ಕರ್ತವ್ಯಗಳನ್ನು ಮತ್ತು ಸಂಪ್ರದಾಯಗಳನ್ನು ವಾನಪ್ರಸ್ಥನೂ ನೆರವೇರಿಸಬೇಕೆಂಬ ವಿಷಯವನ್ನು ಬಿಟ್ಟರೆ, ವಾಸ್ತವವಾಗಿ, ಈ ಎರಡು ವರ್ಗಗಳನ್ನು ಪ್ರವೇಶಿಸುವ ವ್ಯಕ್ತಿಗಳಲ್ಲಿ ಏನೂ ವ್ಯತ್ಯಾಸವಿಲ್ಲ. ವಾನಪ್ರಸ್ಥಿ ಮತ್ತು ಸನ್ಯಾಸಿ ಅಂತಿಮವಾಗಿ ಸಾಧಿಸಬೇಕಾದದ್ದು ಒಂದೇ ಎಂಬುದು ನಿಜ. ಇಬ್ಬರ ಅಂತಿಮ ಸಾಧನೆಗಳೂ ಎಷ್ಟು ಸಾಮ್ಯ ಹೊಂದಿವೆ ಎಂಬುದನ್ನು ಮುಂದೆ ಹೇಳುವ ಮನುವಿನ ಗ್ರಂಥದಿಂದ ಕಾಣಬಹುದು.

ಹಾಗಾದರೆ ಮನುವು ವಾನಪ್ರಸ್ಥವನ್ನು ಗೃಹಸ್ಥಾಶ್ರಮ ಮತ್ತು ಸನ್ಯಾಸದಿಂದ ಬೇರ್ಪಡಿಸಿ, ಪ್ರತ್ಯೇಕ ಹಂತವನ್ನಾಗಿ ಏಕೆ ರೂಪಿಸಿದ? ವಾನಪ್ರಸ್ಥದ ಬಗ್ಗೆ ಹೇಳುವುದಾದರೆ, ಅಂತಹ ವರ್ಗ ಮನುವಿಗಿಂತ ಮುಂಚೆ ಅಸ್ತಿತ್ವದಲ್ಲಿತ್ತು. ಅವರು ಅರಣರೆಂದು ಕರೆಯಲ್ಪಡುತ್ತಿದ್ದರು.

---

೧. ಅ VII ಶ್ಲೋಕಗಳು ೧,೨,೩

೨. ಅ III ಶ್ಲೋಕಗಳು ೧ ಮತ್ತು ೨

## ಅಂತಿಮ ಸಾಧನೆಗಳು

| ವಾನಪ್ರಸ್ಥ | ಸನ್ಯಾಸಿ |
|---|---|
| VI–೨೯ ಅರಣ್ಯದಲ್ಲಿ ವಾಸಿಸುವ ಬ್ರಾಹ್ಮಣ, ಇವುಗಳು ಮತ್ತು ಇತರೆ ಸಂಪ್ರದಾಯಗಳನ್ನು ಶ್ರದ್ಧೆಯಿಂದ ಆಚರಿಸಬೇಕು ಮತ್ತು ಪರಮಾತ್ಮನ ಸಾಕ್ಷಾತ್ಕಾರ ಪಡೆಯಲು ಉಪನಿಷತ್ತುಗಳನ್ನು ಅಭ್ಯಸಿಸಬೇಕು. | VI–೮೫ ಒಬ್ಬ ದ್ವಿಜನು ಮೇಲೆ ಹೇಳಿದ ಕ್ರಮಗಳನ್ನು ಅನುಕ್ರಮವಾಗಿ ಆಚರಿಸಿದ ಮೇಲೆ, ಇಹದಲ್ಲಿ ತನ್ನ ಪಾಪಗಳಿಂದ ಮುಕ್ತನಾಗಿ, ಅತ್ಯುಚ್ಚ ಬ್ರಹ್ಮತ್ವವನ್ನು ಪಡೆಯುತ್ತಾನೆ. |

ಪ್ರೊ. ರಾಧಾಕುಮುದ್ ಮುಖರ್ಜಿಯವರ ಪ್ರಕಾರ[೧] 'ಬ್ರಹ್ಮಚಾರಿಗಳು, ಹಾಗೆಯೇ ಉಳಿಯಲು ಇಷ್ಟಪಟ್ಟು, ಮದುವೆಯಾಗದೆ, ಜ್ಞಾನಾರ್ಜನೆಯನ್ನೇ ಬೆನ್ನಟ್ಟಿಕೊಂಡು ಹೋದವರು ಅರಣರು ಅಥವಾ ಅರಣಮಣರು ಎಂದು ಕರೆಯಲ್ಪಟ್ಟರು. ಈ ಅರಣರು ಗ್ರಾಮಗಳ ಅಥವಾ ಜನನಿಬಿಡ ಕೇಂದ್ರಗಳ ಹೊರಗೆ ಕಾಡಿನ ಗುಡಿಸಲುಗಳಲ್ಲಿ ವಾಸಿಸುತ್ತಿದ್ದರು. ಈ ಅರಣ ಸನ್ಯಾಸಿಗಳು ವಾಸಿಸುತ್ತಿದ್ದ ಕಾಡುಗಳನ್ನು ಅರಣ್ಯಗಳೆಂದು ಕರೆಯಲಾಗುತ್ತಿತ್ತು. ಪಾಂಡಿತ್ಯ ಪಡೆದ ಈ ಸನ್ಯಾಸಿಗಳು ಅಂತಿಮ ಸಮಸ್ಯೆಗಳಾದ ಬ್ರಹ್ಮ, ಸೃಷ್ಟಿ, ಆತ್ಮ ಅಥವಾ ಅಮರತ್ವಗಳ ಬಗ್ಗೆ ನೀಡಿರುವ ತಾತ್ವಿಕ ಚಿಂತನೆಗಳು ಅರಣ್ಯಕಗಳು ಎಂಬ ಕೃತಿಗಳಲ್ಲಿ ಅಡಕವಾಗಿವೆ.

ಈ ಪುರಾತನ ಅರಣರಿಗೆ ಮನುವು ಅರಣರೆಂಬ ಅರ್ಥವನ್ನೇ ಉಳ್ಳ ವಾನಪ್ರಸ್ಥರು ಎಂಬ ಹೆಸರನ್ನಿತ್ತನು. ಮನುವು ಹೆಸರುಗಳಲ್ಲಿ ಒಂದು ಬದಲಾವಣೆಯನ್ನು ಮಾಡಿದ್ದಲ್ಲದೆ, ಇನ್ನೊಂದು ಗಣನೀಯ ಮತ್ತು ಮಹತ್ವಪೂರ್ಣ ಬದಲಾವಣೆಯನ್ನು ಆಚರಣೆಗೆ ತಂದಿದ್ದಾನೆ. ಬ್ರಹ್ಮಚರ್ಯ ಮತ್ತು ವಾನಪ್ರಸ್ಥದ ನಡುವೆ ಆತ ವೈವಾಹಿಕ ಸ್ಥಿತಿಯನ್ನು ಸೇರಿಸಿದ್ದಾನೆ. ಮೂಲ ವಾನಪ್ರಸ್ಥ ಅಥವಾ ಅರಣ ಒಬ್ಬ ಅವಿವಾಹಿತ ವ್ಯಕ್ತಿಯಾದರೆ, ಮನುವಿನ ಪ್ರಕಾರ ವಾನಪ್ರಸ್ಥ ಅನಿವಾರ್ಯವಾಗಿ ಒಬ್ಬ ವಿವಾಹಿತ ವ್ಯಕ್ತಿಯಾಗಿದ್ದ. ಹಳೆಯ ವ್ಯವಸ್ಥೆಗಳಲ್ಲಿ ಬ್ರಹ್ಮಚರ್ಯವು, ಒಬ್ಬನ ಆಯ್ಕೆಯನ್ನನುಸರಿಸಿ, ವಾನಪ್ರಸ್ಥ ಅಥವಾ ಗೃಹಸ್ಥಾಶ್ರಮಗಳಿಂದ ಹಿಂಬಾಲಿಸಲ್ಪಡುತ್ತಿತ್ತು. ಮನುವು ಯಾವೊಬ್ಬನೂ ವಿವಾಹಿತನಾಗದೆ ವಾನಪ್ರಸ್ಥನಾಗಬಾರದೆಂದು ಆ ಶ್ರೇಣಿಯನ್ನೇ ಬದಲಿಸಿದ.

ಹಳೆಯ ವ್ಯವಸ್ಥೆಯ ಎರಡು ಹಂತಗಳಾದ ವಾನಪ್ರಸ್ಥ ಅಥವಾ ಸನ್ಯಾಸಾಶ್ರಮಗಳು ಪತ್ನಿಯರಿಗೆ ಮತ್ತು ಮಕ್ಕಳಿಗೆ ಯಾವ ಯಾತನೆಯನ್ನೂ ನೀಡುತ್ತಿರಲಿಲ್ಲ. ಮನುವು ಆಚರಣೆಗೆ ತಂದ ಹೊಸ ಪದ್ಧತಿಯಲ್ಲಿ ಯಾತನೆ ಉಂಟು. ಹೇಗೆಂದರೆ, ಒಬ್ಬ ವ್ಯಕ್ತಿಯನ್ನು ಮದುವೆಯಾಗಲು ಬಲವಂತ ಮಾಡಿ, ನಂತರ ಹೆಂಡತಿಯನ್ನು ತ್ಯಜಿಸಲು ಅನುಮತಿ ನೀಡಿದರೆ ಅದು ಪಾತಕಿತನವಾಗದಿದ್ದರೂ, ಕ್ರೂರತನಕ್ಕಿಂಥ ಕಡಿಮೆಯಿಲ್ಲ. ಆದರೆ ಮನುವು ಅಂತಹ ಆಲೋಚನೆಗಳಿಗೆ ಗಮನವೀಯಲೇ ಇಲ್ಲ. ಆತ ವೈವಾಹಿಕ ಜೀವನವನ್ನು ಎಲ್ಲರಿಗೂ ಕಡ್ಡಾಯ ಮಾಡಿದ.

ಮನುವು ಇದನ್ನೇಕೆ ಮಾಡಿದ? ಆತ ವಾನಪ್ರಸ್ಥ ಅಥವಾ ಸನ್ಯಾಸಿಗೆ, ಗೃಹಸ್ಥಾಶ್ರಮವನ್ನು

---

೧. ಎಜುಕೇಷನ್ ಇನ್ ಏನ್ಷಿಯಂಟ್ ಇಂಡಿಯಾ ಪು. ೬

ಕಡ್ಡಾಯ ಮಾಡಿದ್ದೇಕೆ? ಎಲ್ಲಾ ಹಂತಗಳಿಗೂ ಅಡಿಪಾಯವಾದ (ಗೃಹಸ್ಥಾಶ್ರಮವನ್ನು) ವೈವಾಹಿಕ ಸ್ಥಿತಿಯನ್ನು ಮನುವು ಉತ್ಕೃಷ್ಟ ಹಂತವೆಂದು ಮಾನ್ಯ ಮಾಡುತ್ತಾನೆ. ಅವನು ಹೇಳುವಂತೆ,

ಪ. VI–೮೭ ಬ್ರಹ್ಮಚರ್ಯಾಶ್ರಮ, ಗೃಹಸ್ಥಾಶ್ರಮ, ವಾನಪ್ರಸ್ಥಾಶ್ರಮ, ಹಾಗೂ ಸನ್ಯಾಸಾಶ್ರಮ ಇವು ನಾಲ್ಕು ಆಶ್ರಮಗಳು. ಗೃಹಸ್ಥಾಶ್ರಮದಿಂದಲೇ ಹುಟ್ಟಿದ ಪ್ರತ್ಯೇಕ ಆಶ್ರಮಗಳು.

ಪ. VI–೮೮ ಈ ನಾಲ್ಕು ಆಶ್ರಮಗಳನ್ನು ವಿಧಿವತ್ತಾಗಿ ಪಾಲಿಸುತ್ತ ಸದಾಚಾರದಿಂದ ನಡೆದುಕೊಳ್ಳುವ ಬ್ರಾಹ್ಮಣನು ಪರಮಪದವನ್ನು ಪಡೆಯುತ್ತಾನೆ.

ಪ. VI–೮೯ ಈ ಎಲ್ಲ ಆಶ್ರಮಗಳಲ್ಲಿ ಗೃಹಸ್ಥಾಶ್ರಮವೇ ಶ್ರೇಷ್ಠವಾದುದು. ಏಕೆಂದರೆ, ಗೃಹಸ್ಥನು ವೇದಸ್ಮೃತಿಗಳ ಆಣತಿಯಂತೆ ನಡೆದು, ಉಳಿದ ಮೂರು ಆಶ್ರಮಗಳನ್ನೂ ಪೂರ್ತಿ ಮಾಡುತ್ತಾನೆ.

ಪ. VI–೯೦ ಎಲ್ಲ ನದಿವನಗಳು ಸಮುದ್ರವನ್ನು ಆಶ್ರಯಿಸುವಂತೆ, ಕಂಡುಕೊಳ್ಳುವಂತೆ, ಎಲ್ಲ ವರ್ಗದ ಜನಗಳೂ ಗೃಹಸ್ಥನಲ್ಲಿ ಆಶ್ರಯ ಕಂಡುಕೊಳ್ಳುತ್ತಾರೆ.

ಈ ಹೇಳಿಕೆಯ ಸತ್ಯವನ್ನು ಒಪ್ಪಿಕೊಂಡದ್ದೇ ಆದರೂ, ಮನುವು ವಿವಾಹವನ್ನು ವಾನಪ್ರಸ್ಥ ಅಥವಾ ಸನ್ಯಾಸಕ್ಕೆ ಪೂರ್ವಭಾವಿ ಷರತ್ತನ್ನಾಗಿ ಒತ್ತಾಯ ಮಾಡಿದ್ದೇಕೆ ಎಂಬ ಪ್ರಶ್ನೆ ಇನ್ನೂ ಉಳಿಯುತ್ತದೆ. ಆತ ಜನರು ಸನ್ಯಾಸಿಗಳಾಗುವುದನ್ನು ತಡೆಯಲು ಇಚ್ಛಿಸಿದ ಎಂಬುದೊಂದೇ ಉತ್ತರ. ಮನುವು ವಾನಪ್ರಸ್ಥ ಅಥವಾ ಸನ್ಯಾಸ ಹಂತಗಳನ್ನು ಇಷ್ಟಪಡಲಿಲ್ಲವೇಕೆ? ಬೌದ್ಧ ಮತವು ಭಿಕ್ಷುಗಳೆಂಬ ಸನ್ಯಾಸಿಗಳಿಂದ ಹೆಚ್ಚು ಹೆಚ್ಚಾಗಿ ಬೆಂಬಲಿಸಲ್ಪಟ್ಟು ಪ್ರಚಾರ ಮಾಡಲ್ಪಡುತ್ತಿತ್ತೆಂಬುದೇ ಇದಕ್ಕೆ ಉತ್ತರ. ಅವಿವಾಹಿತರು ಭಿಕ್ಷುಗಳಾಗುವುದು ಬಹಳ ಸುಲಭವಿತ್ತು. ಇದನ್ನು ನಿಲ್ಲಿಸುವುದಕ್ಕೆ ಮನುವು ಕಾತುರನಾಗಿದ್ದ. ಈ ಕಾರಣದಿಂದ ಮದುವೆಯ ಷರತ್ತು.

## ವಿಶದವಾದ ಚರ್ಚೆ
## ವಾನಪ್ರಸ್ಥ ಮತ್ತು ಸನ್ಯಾಸಾಶ್ರಮಗಳ ಸಾದೃಶ್ಯ ನಿಯಮ

I. ಈ ಹಂತಗಳಿಗೆ ಪ್ರವೇಶ ಮಾಡಿದ ಮೇಲೆ ಗೃಹಸ್ಥನೊಡನೆ ಸಂಬಂಧ:

| **ವಾನಪ್ರಸ್ಥ** | **ಸನ್ಯಾಸಿ** |
|---|---|
| VI–೩ ಕೃಷಿಯಿಂದ ಪಡೆದ ಎಲ್ಲ ಆಹಾರವನ್ನು ಮತ್ತು ಆತನ ಸರ್ವಸ್ವವನ್ನೂ ತ್ಯಜಿಸಿ, ಪತ್ನಿಯನ್ನು ಪುತ್ರರಿಗೆ ಒಪ್ಪಿಸಿ ಅಥವಾ ಆಕೆಯೊಡನೆ ಅರಣ್ಯಕ್ಕೆ ತೆರಳಬೇಕು. | VI–೩೮ ಸೃಷ್ಟಿಕರ್ತನಿಗೆ ಪ್ರಿಯವಾದ ಇಷ್ಟಿ ಯಜ್ಞವನ್ನು ನೆರವೇರಿಸಿ, ಅಲ್ಲಿ ತನ್ನ ಆಸ್ತಿಯನ್ನೆಲ್ಲಾ ಯಜ್ಞಶುಲ್ಕವನ್ನಾಗಿತ್ತು. ಪವಿತ್ರ ಅಗ್ನಿಯನ್ನು ತನ್ನೊಳಗೆ ಅಡಗಿಸಿಕೊಂಡ ಬ್ರಾಹ್ಮಣ ತನ್ನ ಗೃಹವನ್ನೂ ತ್ಯಜಿಸಿ ಸನ್ಯಾಸಿಯಾಗಿ ಹೊರಟು ಹೋಗಬೇಕು. |

## II ವಾಸದ ಬಗೆಗಿನ ನಿಯಮಗಳು:

| | ವಾನಪ್ರಸ್ಥ | | ಸನ್ಯಾಸಿ |
|---|---|---|---|
| VI–೪ | ಅಗ್ನಿಹೋತ್ರದ ಅಗ್ನಿಯನ್ನು, ಯಜ್ಞಗಳಿಗೆ ಬೇಕಾದ ಸಾಮಗ್ರಿಗಳನ್ನು ತೆಗೆದುಕೊಂಡು ಗ್ರಾಮದಿಂದ ಹೊರಟು ಇಂದ್ರಿಯ ನಿಗ್ರಹ ಮಾಡಿಕೊಂಡು ಅರಣ್ಯದಲ್ಲಿ ವಾಸಿಸಬೇಕು. | VI–೪೧ | ಪವಿತ್ರ ಜೀವನಕ್ಕಾಗಿ ಸಂಪೂರ್ಣ ಸಿದ್ಧತೆ ಮಾಡಿಕೊಂಡು, ಮನೆಯಿಂದ ಹೊರಟು, ಮೌನವಾಗಿ ಅಲೆದಾಡಬೇಕು. ತನಗೆ ಅರ್ಪಿಸಿದ ಎಲ್ಲ ಬಗೆಯ ಸಂತೋಷಗಳನ್ನು ಉಪೇಕ್ಷೆಯಿಂದ ಕಾಣಬೇಕು. |

| | ವಾನಪ್ರಸ್ಥ | | ಸನ್ಯಾಸಿ |
|---|---|---|---|
| | | VI–೪೨ | ಅವನು ಸಂಗಾತಿಯಿಲ್ಲದೆ, ಸದಾ ಏಕಾಂಗಿಯಾಗಿ ಅಲೆಯುತ್ತಾ ಮೋಕ್ಷ ಸಾಧನೆಗೆ ತೊಡಗಬೇಕು. ಮೋಕ್ಷ ಅಪೇಕ್ಷಿಸಬೇಕು. ಮೋಕ್ಷ ಅಪೇಕ್ಷಿಸುವವನಿಗೆ ಯಾರೂ ಬೇಕಾಗಿಲ್ಲ. ಯಾರಿಗೂ ಅವನು ಬೇಕಾಗಿಲ್ಲ. |
| | | VI–೪೩ | ಆತ ಬೆಂಕಿಯನ್ನಾಗಲಿ, ವಾಸಸ್ಥಾನವನ್ನಾಗಲಿ ಹೊಂದಿರಲೇಬಾರದು. ಆತ ಆಹಾರಕ್ಕಾಗಿ ಹಳ್ಳಿಗೆ ಹೋಗಬಹುದು. ಆತ ಎಲ್ಲ ವಿಷಯಗಳಲ್ಲೂ ನಿರಾಸಕ್ತನಾಗಿ ಉದ್ದೇಶದಲ್ಲಿ ಗಟ್ಟಿಮನಸ್ಸಿಟ್ಟು, ಧ್ಯಾನಸಕ್ತನಾಗಿ ಮನಸ್ಸನ್ನು ಬ್ರಹ್ಮನಲ್ಲಿ ಕೇಂದ್ರೀಕರಿಸಬೇಕು. |

## III ವಾಸದ ಬಗೆಗಿನ ನಿಯಮಗಳು (ಮುಂದುವರೆದುದು)

| | ವಾನಪ್ರಸ್ಥ | | ಸನ್ಯಾಸಿ |
|---|---|---|---|
| VI–೬ | ಅವನು ಚರ್ಮವನ್ನಾಗಲಿ ಅಥವಾ ನಾರುಮುಡಿಯನ್ನಾಗಲಿ ಉಡಬೇಕು. ಬೆಳಿಗ್ಗೆ ಹಾಗೂ ಸಾಯಂಕಾಲ ಸ್ನಾನ ಮಾಡಬೇಕು. ಜಟಾಧಾರಿಯಾಗಿರಬೇಕು. ದೇಹದ ಮೇಲಿನ ಕೂದಲು, ಗಡ್ಡ ಮತ್ತು ಉಗುರುಗಳನ್ನು ಕತ್ತರಿಸಬಾರದು. | VI–೪೪ | ಭಿಕ್ಷಾಪಾತ್ರೆಯ ಬದಲು ಒಂದು ಮಣ್ಣಿನ ಮಡಕೆ, ವಾಸಕ್ಕೆ ಮರದ ಬೊಡ್ಡೆ, ಸವೆದ ಒರಟು ಉಡುಪು, ಏಕಾಂತವಾಸ, ಪ್ರತಿ ವಿಷಯದಲ್ಲೂ ನಿರಾಸಕ್ತಿ ಇವು ಬಂಧ ವಿಮೋಚನೆ ಪಡೆದವನ ಗುರುತುಗಳು. |
| | | VI–೫೨ | ಶಿಖೆ, ನಖ ಮತ್ತು ಗಡ್ಡವನ್ನು ಕತ್ತರಿಸಿಕೊಂಡು, ಭಿಕ್ಷಾಪಾತ್ರೆ, ದಂಡ ಮತ್ತು ಕಮಂಡಲ ಧರಿಸಿ ತನ್ನನ್ನು ತಾನು ಸಂಯಮಿಸಿಕೊಂಡು ಪ್ರಾಣಿಹಿಂಸೆ ಮಾಡದೆ ಯಾವಾಗಲೂ ಪರ್ಯಟನೆ ಮಾಡುತ್ತಿರಬೇಕು. |

VI–೫೩ ಆತನು ಲೋಹದಿಂದ ಮಾಡಿದ ಪಾತ್ರೆಯನ್ನು ಬಳಸಬಾರದು. ಅದು ಒಡೆದಿರಬಾರದು. ಯಜ್ಞದಲ್ಲಿ ಚಮಸ ಎಂಬ ಬಟ್ಟಲುಗಳನ್ನು ತೊಳೆಯುವಂತೆ ಅವುಗಳನ್ನು ನೀರಿನಿಂದ ತೊಳೆಯಬೇಕು.

VI–೫೪ ಸೋರೆ ಬುರುಡೆ, ಮರದ ಬೋಗುಣಿ, ಮಣ್ಣಿನ ಅಥವಾ ಬಿದಿರಿನ ಬಟ್ಟಲು ಇವುಗಳು ಸನ್ಯಾಸಿಯ ಪಾತ್ರೆಗಳೆಂದು ಸ್ವಯಂಭುವಿನ ಮಗ ಮನುವು ದೃಢಪಡಿಸಿದ್ದಾನೆ.

## IV ಜೀವನಾಧಾರ ಮಾರ್ಗಕ್ಕೆ ಸಂಬಂಧಿಸಿದ ನಿಯಮಗಳು:

**ವಾನಪ್ರಸ್ಥ**

VI–೧೧ ವಸಂತ ಮತ್ತು ಶರತ್ಕಾಲಗಳಲ್ಲಿ ಬೆಳೆಯುವ, ಸನ್ಯಾಸಿಗಳಿಗೆ ಯೋಗ್ಯವಾದ, ಶುದ್ಧಧಾನ್ಯಗಳನ್ನು ತಾನೇ ಸಂಗ್ರಹಿಸಿ ಯಜ್ಞಕ್ಕೆ ಬೇಕಾದ ಪುರೋಡಾಶ ಚರುಗಳನ್ನು ಮಾಡಬೇಕು.

VI–೧೨ ಅರಣ್ಯದಲ್ಲಿ ತಾನಾಗಿ ಬೆಳೆದ ಉತ್ಪನ್ನಗಳಿಂದ ಮಾಡಿದ ಹವಿಸ್ಸನ್ನು ದೇವತೆಗಳಿಗೆ ಅರ್ಪಿಸಿ ಉಳಿದ ಶೇಷವನ್ನು ಉಪ್ಪನ್ನು ಬೆರೆಸಿ ಸೇವಿಸಬೇಕು.

VI–೨೬ ಅಮೋದವನ್ನೀಯುವ ಸಾಮಗ್ರಿಗಳನ್ನು ಅರ್ಜಿಸಲು ಯಾವ ಪ್ರಯತ್ನವನ್ನು ಮಾಡದೆ, ಬರಿಯ ನೆಲದ ಮೇಲೆ ನಿದ್ರಿಸಿ, ಯಾವ ಆಶ್ರಯವನ್ನು ಲೆಕ್ಕಿಸದೆ, ಮರಗಳ ಬುಡದಲ್ಲಿ ವಾಸಿಸಬೇಕು.

VI–೨೭ ಸನ್ಯಾಸಿಗಳಾಗಿ ಜೀವಿಸುವ ಬ್ರಾಹ್ಮಣರಿಂದ ಅಥವಾ ಅರಣ್ಯದಲ್ಲಿ ಗೃಹಸ್ಥರಾಗಿ ವಾಸಿಸುವ ದ್ವಿಜ ಜಾತಿಯವರಿಂದ ತಾನು ಜೀವದಿಂದಿರಲು ಎಷ್ಟು ಬೇಕೋ ಅಷ್ಟು ಭಿಕ್ಷೆಯನ್ನು ಮಾತ್ರ ಸ್ವೀಕರಿಸಬೇಕು.

VI–೨೮ ಅಥವಾ ಕಾಡಿನಲ್ಲಿ ವಾಸಿಸುವ ಸನ್ಯಾಸಿಯು ಹಳ್ಳಿಯಿಂದ ತನ್ನ ಹಿಡಿಯಲ್ಲಿ ಅಥವಾ ದೊನ್ನೆಯಲ್ಲಿ, ಅಥವಾ ಒಂದು ಒಡೆದ ಮಣ್ಣಿನ ಪಾತ್ರೆಯಲ್ಲಿ ತಂದು, ಎಂಟು ತುತ್ತುಗಳನ್ನು ತಿನ್ನಬೇಕು.

**ಸನ್ಯಾಸಿ**

VI–೪೯ ಆಧ್ಯಾತ್ಮದಲ್ಲಿ ಮನಸ್ಸನ್ನು ತೊಡಗಿಸಿ, ಪದ್ಮಾಸನದಲ್ಲಿ ಕುಳಿತು, ಆಸೆ ಆಮಿಷಗಳ ಕೋಟಲೆಗಳನ್ನು ಬಿಟ್ಟು ತನ್ನನ್ನೇ ತಾನು ಅವಲಂಬಿಸಿ, ಬ್ರಹ್ಮಾನಂದವನ್ನು ಹುಡುಕಬೇಕು.

VI–೫೦ ಶುಭಾಶುಭ ಶಕುನಗಳನ್ನು ಹೇಳುತ್ತಾ ಜ್ಯೋತಿಶಾಸ್ತ್ರ ಮತ್ತು ಹಸ್ತ ಸಾಮುದ್ರಿಕ ಶಾಸ್ತ್ರದಲ್ಲಿ ನಿಪುಣತೆ ತೋರಿಸುತ್ತಾ ನೀತಿಶಾಸ್ತ್ರಗಳನ್ನು ಉಪದೇಶಿಸುತ್ತಾ ಭಿಕ್ಷೆಯನ್ನೆಂದಿಗೂ ಬೇಡಬಾರದು.

VI–೫೧ ಆತ ಭಿಕ್ಷೆ ಬೇಡಲು, ಆಶ್ರಮವಾಸಿಗಳು, ಬ್ರಾಹ್ಮಣರು, ಪಕ್ಷಿಗಳು, ನಾಯಿಗಳು ಅಥವಾ ಇತರ ಭಿಕ್ಷುಕರು ತುಂಬಿರುವ ಮನೆಗೆ ಹೋಗಬಾರದು.

## V ಆಹಾರಕ್ಕೆ ಸಂಬಂಧಪಟ್ಟ ನಿಯಮಗಳು:

**ವಾನಪ್ರಸ್ಥ**

VI–೧೩ ಆತ ನೆಲ ಜಲಗಳಲ್ಲಿ ಬೆಳೆದ ಕಾಯಿಪಲ್ಲೆಗಳನ್ನು, ಹೂವು ಮತ್ತು ಹಣ್ಣುಗಳನ್ನು, ಪರಿಶುದ್ಧವಾದ ಮರಗಳ ಫಲವನ್ನು ಮತ್ತು ಅರಣ್ಯದ ಹಣ್ಣುಗಳಿಂದ ತೆಗೆದ ಎಣ್ಣೆಯನ್ನು ಸೇವಿಸಬೇಕು.

VI–೧೪ ಆತ ಜೇನುತುಪ್ಪ, ಮಾಂಸ ಮತ್ತು ಭೂಮಿಯ ಮೇಲಿನ ಅಣಬೆಯನ್ನು, ಭೂಸ್ತೃಣ, ಶೀಗ್ರುಕ ಎಂಬ ತರಕಾರಿಯನ್ನೂ ಮತ್ತು ಶ್ಲೇಷ್ಮಾಂತಕ ಹಣ್ಣನ್ನು ವರ್ಜಿಸಬೇಕು.

VI–೧೫ ಆತ ಈ ಮೊದಲೇ ಸಂಗ್ರಹಿಸಿದ್ದ ಮುನಿಗಳಿಗೆ ಯುಕ್ತವಾದ ಧಾನ್ಯ, ಹಣ್ಣು, ಗೆಡ್ಡೆಗೆಣಸು, ಹಳೆಯ ವಸ್ತ್ರಗಳನ್ನು ಆಶ್ವಯುಜ ಮಾಸದಲ್ಲಿ ವರ್ಜಿಸಬೇಕು.

VI–೧೬ ಉಳುಮೆ ಮಾಡಿದ ಭೂಮಿ ಮೇಲೆ ಬೆಳೆದ ಯಾವ ಪದಾರ್ಥವನ್ನಾಗಲಿ ಅಥವಾ ಹಳ್ಳಿಗಳಲ್ಲಿ ಬೆಳೆದ ಗೆಡ್ಡೆಗೆಣಸು ಮತ್ತು ಹಣ್ಣುಗಳನ್ನು ಹಸಿವಿನ ಬಾಧೆಯಿಂದ ಬಳಲುತ್ತಿದ್ದರೂ ಆತ ಸೇವಿಸಬಾರದು.

VI–೧೭ ಬೆಂಕಿಯಲ್ಲಿ ಬೇಯಿಸಿದ ಯಾವ ಪದಾರ್ಥವನ್ನಾಗಲಿ ಅಥವಾ ತಾನಾಗಿ ಪಕ್ವವಾದ ಹಣ್ಣನ್ನಾಗಲಿ ಆತ ತಿನ್ನಬಹುದು: ಕಲ್ಲಿನಿಂದ ಜಜ್ಜಿ ತಿನ್ನಬಹುದು ಅಥವಾ ಹಲ್ಲಿನಿಂದ ಜಗಿದು ತಿನ್ನಬಹುದು.

VI–೧೮ ಆತ ತನ್ನ ಅನುದಿನದ ಊಟವಾದ ಕೂಡಲೇ ಭಿಕ್ಷಾಪಾತ್ರೆಗಳನ್ನು ತೊಳೆಯಬೇಕು ಅಥವಾ ಒಂದು ತಿಂಗಳಿಗೆ ಸಾಕಾಗುವಷ್ಟನ್ನು ಸಂಗ್ರಹಿಸಿಡಬಹುದು ಅಥವಾ ಆರು ತಿಂಗಳಿಗೆ ಅಥವಾ ಒಂದು ವರ್ಷಕ್ಕೆ ಬೇಕಾಗುವಷ್ಟು ಶೇಖರಿಸಬಹುದು.

VI–೧೯ ತನ್ನ ಶಕ್ತಿಗನುಸಾರವಾಗಿ ಶೇಖರಿಸಿದ ಆಹಾರವನ್ನು ರಾತ್ರಿ ಅಥವಾ ಹಗಲು, ಒಂದು ಹೊತ್ತು ಮಾತ್ರ ಅಥವಾ ಒಂದು ದಿನ ಉಪವಾಸವಿದ್ದು, ಎರಡನೆಯ

**ಸನ್ಯಾಸಿ**

VI-೫೫ ದಿನಕ್ಕೊಂದು ಸಾರಿ ಭಿಕ್ಷೆಗೆ ಹೋಗಬೇಕು. ಹೆಚ್ಚು ಪ್ರಮಾಣದ ಭಿಕ್ಷೆಯು ಆಕಾಂಕ್ಷೆ ಮತ್ತು ಪ್ರಾಪಂಚಿಕ ಸುಖಗಳತ್ತ ಮನಸ್ಸನ್ನು ತಿರುಗಿಸುವುದೆಂಬ ಕಾರಣದಿಂದ ಅವನು ಹೆಚ್ಚು ಭಿಕ್ಷೆಯನ್ನು ಬೇಡಬಾರದು.

VI-೫೬ ಅಡಿಗೆ ಮನೆಯಿಂದ ಹೊಗೆ ಮೇಲೇಳದಿದ್ದಾಗ, ಒನಕೆಯು ಚಲಿಸದೆ ಬಿದ್ದಿರುವಾಗ, ಕೆಂಡ ಆರಿಸಲ್ಪಟ್ಟ ಮೇಲೆ, ಜನರು ತಮ್ಮ ಊಟವನ್ನು ಮುಗಿಸಿದ ಮೇಲೆ ಬಟ್ಟಲಿನಲ್ಲುಳಿದಿದ್ದುದನ್ನು ತೆಗೆದಿಟ್ಟ ಮೇಲೆ, ಆತ ಬೇಡುವುದಕ್ಕೆ ಹೋಗಬೇಕು.

VI-೫೭ ತನಗೆ ಏನೂ ಸಿಕ್ಕದಿದ್ದಾಗ ವ್ಯಸನಪಡಬಾರದು. ಏನಾದರೂ ಸ್ವಲ್ಪ ಸಿಕ್ಕಿದಾಗ ಸಂತೋಷಪಡಬಾರದು. ತನ್ನ ಜೀವವನ್ನು ಕಾಪಾಡಿಕೊಳ್ಳುವುದಕ್ಕೆ ಬೇಕಾದಷ್ಟನ್ನು ಮಾತ್ರ ಸ್ವೀಕರಿಸಬೇಕು. ದಂಡಕಮಂಡಲಾದಿಗಳ ಬಗ್ಗೆ ತಲೆಕೆಡಿಸಿಕೊಳ್ಳಬಾರದು.

VI-೫೮ ಅವನಿಗೆ ಪೂಜೆ ಮಾಡಿ ಸತ್ಕರಿಸಿಕೊಟ್ಟ ಭಿಕ್ಷೆಯನ್ನು ಸಹ ತಿರಸ್ಕರಿಸಬೇಕು. ಇದರಿಂದ ಸನ್ಯಾಸಿಯ ಮನಸ್ಸಿನಲ್ಲಿಯೂ ಮೋಹ ಹುಟ್ಟಬಹುದಾದ್ದರಿಂದ ಹೀಗೆ ದೊರೆತ ಭಿಕ್ಷೆಯನ್ನು ಸ್ವೀಕರಿಸಬಾರದು.

ದಿನ ರಾತ್ರಿ ಅಥವಾ ಮೂರು ದಿನ ಉಪವಾಸ ವಿದ್ದು, ನಾಲ್ಕನೆಯ ದಿನ ರಾತ್ರಿ ಊಟ ಮಾಡಬೇಕು.

VI–೨೦ ಅಥವಾ ಅವನು ಚಾಂದ್ರಮಾನ ವ್ರತದ ನಿಯಮದಂತೆ ಜೀವಿಸುತ್ತ, ಪ್ರತಿದಿನವೂ ತಾನು ಸೇವಿಸುವ ಆಹಾರಪ್ರಮಾಣವನ್ನು ಶುಕ್ಲಪಕ್ಷದಲ್ಲಿ ಕಡಿಮೆ ಮಾಡುತ್ತಾ ಹೋಗಬೇಕು ಮತ್ತು ಕೃಷ್ಣಪಕ್ಷದಲ್ಲಿ ಹೆಚ್ಚಿಸುತ್ತಾ ಪ್ರತಿ ಪಕ್ಷದ ಕೊನೆಯ ದಿನಗಳಲ್ಲಿ ದಿನಕ್ಕೊಂದು ಬಾರಿ ಗಂಜಿಯನ್ನು ಸೇವಿಸಬೇಕು.

VI–೨೧ ಅಥವಾ ಆತ ವೈಖಾನಸ ನಿಯಮದ ತತ್ವವನ್ನು ಅನುಸರಿಸಿ, ಹೂವು, ಬೇರುಗಳು ಮತ್ತು ಕಾಲಕ್ಕನುಗುಣವಾಗಿ ಪಕ್ವವಾಗಿ, ತಾನಾಗಿ ಕೆಳಗೆ ಬಿದ್ದ ಹಣ್ಣುಗಳನ್ನು ಸೇವಿಸಿ ಜೀವಿಸಬೇಕು.

VI–೨೨ ನೆಲದ ಮೇಲೆ ಉರುಳಿ ಅಥವಾ ತುದಿಗಾಲ ಮೇಲೆ ನಿಂತು. ಧ್ಯಾನಸ್ಥನಾಗಿ, ಅವನು ದಿನವನ್ನು ಕಳೆಯಬೇಕು. ಸೂರ್ಯೋದಯ, ಮಧ್ಯಾಹ್ನ ಮತ್ತು ಸೂರ್ಯಾಸ್ತ ಸಮಯದಲ್ಲಿ ಅರಣ್ಯದಲ್ಲಿ ಸ್ನಾನ ಮಾಡಬೇಕು.

## VI ಕರ್ತವ್ಯಪಾಲನೆ

### ವಾನಪ್ರಸ್ಥ

VI–೫ ಸನ್ಯಾಸಿಗಳಿಗೆ ತಕ್ಕ ವಿವಿಧ ರೀತಿಯ ಸ್ವಚ್ಛ ಆಹಾರ ಅಥವಾ ಗೆಡ್ಡೆಗೆಣಸು (ಬೇರು) ಮತ್ತು ಹಣ್ಣುಗಳೊಡನೆ, ಆ ಐದು ಪವಿತ್ರ ಯಜ್ಞಗಳನ್ನು ನಿಯಮಕ್ಕನುಸಾರವಾಗಿ ಮಾಡಬೇಕು.

VI–೭ ತಾನು ತಿನ್ನುವ ಆಹಾರವನ್ನು ನೈವೇದ್ಯವಾಗಿ ಅರ್ಪಿಸಬೇಕು. ತನ್ನ ಶಕ್ತ್ಯಾನುಸಾರ ದಾನ ನೀಡಬೇಕು. ತನ್ನ ಆಶ್ರಮಕ್ಕೆ ಬರುವವರಿಗೆ ನೀರು, ಹಣ್ಣು ಮತ್ತು ಗೆಡ್ಡೆ ಗೆಣಸು ನೀಡಿ ಗೌರವಿಸಬೇಕು.

### ಸನ್ಯಾಸಿ

VI–೬೫ ಗಾಢ ಧ್ಯಾನಾಸಕ್ತಿಯಿಂದ ಪರಮಾತ್ಮನ ಸೂಕ್ಷ್ಮ ಪ್ರಕೃತಿಯನ್ನೂ ಉತ್ತಮ ಮತ್ತು ಅಧಮ, ಜೀವರಾಶಿಗಳಲ್ಲಿ ಅವನ ಇರವನ್ನು ಕುರಿತು ಆಲೋಚಿಸಬೇಕು.

VI–೮೩ ಯಜ್ಞ ಯಾಗಾದಿಗಳ ಸಂಬಂಧಿಸಿದ, ಆತ್ಮ ಮತ್ತು ದೈವ ಜ್ಞಾನವನ್ನು ಕುರಿತ ವೇದಾಂತದ ಭಾಗಗಳನ್ನು ಅವನು ಸದಾ ಪಠಿಸಬೇಕು.

VI–೮ ಸದಾ ವೇದಾಧ್ಯಯನದಲ್ಲಿ ನಿರತನಾಗಿರಬೇಕು. ಕಷ್ಟ ಕಾರ್ಪಣ್ಯಗಳ ಬಗ್ಗೆ ತಾಳ್ಮೆಯಿಂದಿರಬೇಕು. ಎಲ್ಲರೊಡನೆ ಸ್ನೇಹದಿಂದಿರಬೇಕು. ಸ್ಥಿರಚಿತ್ತನಾಗಿ ಸರ್ವಕಾಲದಲ್ಲೂ ಧಾರಾಳಿಯಾಗಿ ಯಾರಿಂದಲೂ ದಾನ ಸ್ವೀಕರಿಸದೆ, ಸಮಸ್ತ ಪ್ರಾಣಿವರ್ಗದಲ್ಲಿ ಅನುಕಂಪದಿಂದಿರಬೇಕು.

VI–೯ ನಿಯಮದಂತೆ ಮೂರು ಪವಿತ್ರ ಅಗ್ನಿಗಳ ಜೊತೆ ಅಗ್ನಿಹೋತ್ರವನ್ನು ಅರ್ಪಿಸಬೇಕು. ಅಮಾವಾಸ್ಯೆ, ಹುಣ್ಣಿಮೆಯ ಯಜ್ಞಗಳನ್ನು ತಪ್ಪದೇ ಮಾಡಬೇಕು.

VI–೧೦ ಆತ ನಕ್ಷತ್ರೇಷ್ಟಿ, ಅಗ್ರಯಣೇಷ್ಟ, ಮತ್ತು ಚಾತುರ್ಮಾಸ್ಯ ಯಜ್ಞಗಳನ್ನು ಮತ್ತು ಉತ್ತರಾಯಣ ಹಾಗೂ ದಕ್ಷಿಣಾಯನಗಳಲ್ಲಿ ಮಾಡುವ ಯುಗಾದಿಗಳನ್ನೂ ವಿಧಿವತ್ತಾಗಿ ಮಾಡಬೇಕು.

VI–೨೩ ಬೇಸಿಗೆಯಲ್ಲಿ ಅವನು ಪಂಚಾಗ್ನಿಗಳ ಶಾಖಕ್ಕೆ ದೇಹವನ್ನು ಒಡ್ಡಲಿ; ಮಳೆಗಾಲದಲ್ಲಿ ಆಕಾಶದಡಿ ಜೀವಿಸಲಿ ಮತ್ತು ಚಳಿಗಾಲದಲ್ಲಿ ಒದ್ದೆ ಬಟ್ಟೆಗಳನ್ನು ಧರಿಸಲಿ; ಹೀಗೆ ಆತ ತನ್ನ ವ್ರತಶೀಲತೆಯನ್ನು ಕಾಠಿಣ್ಯ ಮಾಡುತ್ತಾ ಹೋಗಬೇಕು.

VI–೨೪ ಆತ ಸೂರ್ಯೋದಯ, ಮಧ್ಯಾಹ್ನ ಮತ್ತು ಸೂರ್ಯಾಸ್ತ – ಈ ಮೂರು ಸಮಯಗಳಲ್ಲಿ ಸ್ನಾನ ಮಾಡಿದ ಮೇಲೆ ದೇವತೆಗಳಿಗೆ ಮತ್ತು ಪಿತೃದೇವತೆಗಳಿಗೆ ಜಲತರ್ಪಣ ನೀಡಬೇಕು ಮತ್ತು ಕಠಿಣತರ ವ್ರತಾಚರಣೆಯಿಂದ ದೇಹವನ್ನು ದಂಡಿಸಬೇಕು.

VI–೨೫ ವಿಧಿವತ್ತಾಗಿ ನಿಯಮದಂತೆ ಮೂರು ಪವಿತ್ರ ಅಗ್ನಿಗಳನ್ನು ತನ್ನೊಳಗೆ ಅಡಗಿಸಿಕೊಂಡು, ಗೆಡ್ಡೆಗೆಣಸು ಮತ್ತು ಹಣ್ಣುಹಂಪಲು ಸೇವಿಸುತ್ತಾ ಆತ ಅಗ್ನಿ ಇಲ್ಲದೆ, ಗೃಹವಿಲ್ಲದೆ, ಶಾಂತಚಿತ್ತದಿಂದ ಜೀವಿಸಬೇಕು.

* * * *

ಭಾಗ – ಏಳು

# ರಾಜಕೀಯ

# ಒಗಟು – ೨೧

## ಮನ್ವಂತರದ ಸಿದ್ಧಾಂತ

ಮನ್ವಂತರದ ಕಲ್ಪನೆಯ ತಳದಲ್ಲಿರುವುದು ನಮ್ಮ ದೇಶದ ಸರ್ಕಾರವು ಸ್ವರ್ಗದಿಂದ ನಿಯೋಜಿತವಾದದ್ದು ಎಂಬ ಬ್ರಾಹ್ಮಣರ ನಂಬಿಕೆ. ಎಂದರೆ ಮನ್ವಂತರದ ಪರಿಕಲ್ಪನೆಗೂ ದೇಶದ ರಾಜಕೀಯ ವ್ಯವಸ್ಥೆಗೂ ಸಂಬಂಧವಿದೆ ಎಂದಾಯಿತು. ಒಂದು ನಿರ್ದಿಷ್ಟ ಅವಧಿಯವರೆಗೆ ಒಂದು ನಿಗಮದ ಕೈಯಲ್ಲಿ ಪ್ರಭುತ್ವವಿರುತ್ತದೆ. ಈ ನಿಗಮಕ್ಕೆ ಮನು ಎಂಬುವವನು ಅಧಿಕಾರಿ. ಜೊತೆಗೆ ಏಳು ಮಂದಿ ಋಷಿಗಳು. ಒಬ್ಬ ಇಂದ್ರ. ಇವರೆಲ್ಲ ಸ್ವರ್ಗದ ತಮ್ಮ ಅಧಿಕಾರ ಪೀಠದಲ್ಲಿ ಕುಳಿತು ಜನರ ಆಶೋತ್ತರಗಳನ್ನು ಕೇಳದೆ, ನೋಡದೆ ದೇಶದ ವಹಿವಾಟು ನಡೆಸುತ್ತಾರೆ. ಈ ನಿಯೋಗದ ಆಳ್ವಿಕೆಯ ಅವಧಿಯನ್ನು ಮನ್ವಂತರ ಎಂದು ಕರೆಯುತ್ತಾರೆ. ಮನ್ವಂತರದ ಪ್ರಧಾನ ಅಧಿಕಾರಿ ಮನುವಾದ್ದರಿಂದ ಮನ್ವಂತರ ಎಂದು ಈ ಅವಧಿಗೆ ಹೆಸರು. ಒಬ್ಬ ಮನುವಿನ ಅವಧಿ ಮುಗಿದ ಮೇಲೆ ಮತ್ತೊಬ್ಬ ಮನು ಬರುತ್ತಾನೆ. ಯುಗಗಳಂತೆಯೇ ಮನ್ವಂತರದ್ದೂ ಆವರ್ತ ಚಲನೆ. ಹದಿನಾಲ್ಕು ಮನ್ವಂತರಗಳಿಗೆ ಒಂದು ಚಕ್ರ ಮುಗಿಯುತ್ತದೆ.

ವಿಷ್ಣುಪುರಾಣದಲ್ಲಿ ಬರುವ ಮನ್ವಂತರದ ವಿವರ ಈ ಕೆಳಕಂಡಂತಿವೆ.

"ನಂತರ ಬ್ರಹ್ಮನು ತಾನೇ ಸ್ವಾಯಂಭುವ ಮನುವನ್ನು ಸೃಷ್ಟಿಸಿದನು. ಅವನು ಬ್ರಹ್ಮನಿಂದ ಉದ್ಭವನಾದರೂ ಮೂಲ ಬ್ರಹ್ಮನಿಗೆ ಸದೃಶನಾದವನೂ ಆಗಿದ್ದನು. ಈ ಮನುವು ಸಕಲ ಜೀವಿಗಳ ರಕ್ಷಣೆಗಾಗಿ ಸೃಷ್ಟಿಯಾದವನು. ಆ ಬ್ರಹ್ಮನ ಸ್ತ್ರೀ ಅಂಶದಲ್ಲಿ ಶತರೂಪೆಯು ಸೃಷ್ಟಿಯಾದವಳು. ಅವಳು ತಪಸ್ಸಿನಿಂದ ಶುದ್ಧಳೂ ಪಾಪರಹಿತಳೂ ಆಗಿದ್ದಳು. ಅವಳನ್ನು ಪೂಜ್ಯನಾದ ಮನು ಸ್ವಾಯಂಭುವನು ಪತ್ನಿಯಾಗಿ ಸ್ವೀಕರಿಸಿದನು."

ಈ ಸಾಲುಗಳನ್ನು ಓದುವ ಯಾರೇ ಆಗಲಿ ಒಂದು ಕ್ಷಣ ತಡೆದು, ಇದೇನಿದು? ಬ್ರಹ್ಮನು ದ್ವಿಲಿಂಗಿಯಾಗಿದ್ದನೆಂಬುದು ಇದರರ್ಥವೇ? ಸ್ವಾಯಂಭುವ ಮನುವು ತನ್ನ ಸ್ವಂತ ಸೋದರಿಯನ್ನೇ ಮದುವೆಯಾಗಿಬಿಟ್ಟನೇ? ವಿಷ್ಣುಪುರಾಣದಂತೆ ಇದು ನಿಜವೇ ಆಗಿದ್ದ ಪಕ್ಷದಲ್ಲಿ ಎಲ್ಲವೂ ವಿಚಿತ್ರವಲ್ಲವೇ?

ಆದರೆ ವಿಷ್ಣುಪುರಾಣದ ಕಥೆ ಇಲ್ಲಿಗೇ ನಿಲ್ಲುವುದಿಲ್ಲ.

"ಈ ಇಬ್ಬರಿಂದ ಪ್ರಿಯವ್ರತ ಮತ್ತು ಉತ್ಥಾನಪಾದರೆಂಬ ಇಬ್ಬರು ಪುತ್ರರಾದರು. ಪ್ರಸೂತಿ ಮತ್ತು ಆಕೂತಿಯರೆಂಬ ಇಬ್ಬರು ಪುತ್ರಿಯರೂ ಜನಿಸಿದರು. ಆ ಪುತ್ರಿಯರಿಬ್ಬರೂ ಸುಲಕ್ಷಣ ಗುಣಸಂಪನ್ನೆಯರು. ಪ್ರಸೂತಿಯನ್ನು ಮನುವು ದಕ್ಷನಿಗೂ ಆಕೂತಿಯನ್ನು ಮಹಾರಾಜನಾದ ರುಚಿಗೂ ಮದುವೆ ಮಾಡಿದನು. ಆಕೂತಿಯಲ್ಲಿ ರುಚಿಗೆ ಯಜ್ಞ ಮತ್ತು ದಕ್ಷಿಣಾ ಎಂಬ ಅವಳಿ

---

*ಇದು ೧೧ ಪುಟಗಳ ಹಸ್ತಪ್ರತಿ ಕೊನೆಯ ೪ ಪುಟಗಳು ಗ್ರಂಥಕರ್ತರ ಕೈಬರಹದಲ್ಲಿವೆ. – ಸಂ.*

ಮಕ್ಕಳಾದರು. ಈ ಅವಳಿಗಳು ಮುಂದೆ ಪತಿ ಪತ್ನಿಯರಾದರು (ಸೋದರನು ಸೋದರಿಯನ್ನು ವಿವಾಹವಾಗುವ ಮತ್ತೊಂದು ಪ್ರಸಂಗವಿದು) ಇವರಿಬ್ಬರಲ್ಲದೆ ಮತ್ತೆ ಹನ್ನೆರಡು ಮಂದಿ ಪುತ್ರರನ್ನು ಆಕೂತಿಯು ಹಡೆದಳು. ಮನು ಸ್ವಾಯಂಭುವನ ಮನ್ವಂತರದಲ್ಲಿ ಈ ಹನ್ನೆರಡು ಮಂದಿಯೂ ದ್ವಾದಶ ಯಮರೆಂಬ ದೇವತೆಗಳಾದರು."

"ಮೊದಲ ಮನುವೇ ಸ್ವಾಯಂಭುವ ಮನು. ಅವನ ನಂತರ ಬಂದವನು ಸ್ವಾರೋಚಿಷ. ಆಮೇಲೆ ಬಂದವನು ಔತ್ತಮಿ ನಂತರ ತಮಸ. ತದನಂತರ ಬಂದ ಮನುವು ರೈವತ. ರೈವತನಾದ ಮೇಲೆ ಬಂದವನು ಚಾಕ್ಷುಷ. ಹೀಗೆ ಈವರೆಗೆ ಆರು ಜನ ಮನುಗಳು ಸಂದು ಹೋಗಿದ್ದಾರೆ. ಏಳನೆಯ ಮನ್ವಂತರದ ಎಂದರೆ ಆದ್ಯ ಮನ್ವಂತರದ ಅಧಿಪತಿಯಾದ ಮನುವು ಸೂರ್ಯ ಪುತ್ರನಾದ ವೈವಸ್ವತನು."

ವಿಷ್ಣುಪುರಾಣಕಾರನು ಮತ್ತೆ ಮುಂದುವರೆಸುತ್ತಾನೆ: "ಈಗ ಸ್ವಾರೋಚಿಷ ಮನುವಿನ ಮಕ್ಕಳನ್ನೂ ಆ ಮನ್ವಂತರದ ದೇವವರ್ಗವನ್ನೂ ಋಷಿಗಳನ್ನೂ ವಿವರಿಸುತ್ತೇನೆ ಕೇಳು. ಆ ದ್ವಿತೀಯ ಮನ್ವಂತರದ ದೇವತೆಗಳು ಪರಾವತರು ಮತ್ತು ತುಷಿತರು. ಇಂದ್ರನು ಮಹಾ ಪರಾಕ್ರಮಿಯಾದ ವಿಪಶ್ಚಿತನು. ಊರ್ಜ, ಸ್ತಂಬ, ಪ್ರಾಣ, ದತ್ತೋಲಿ, ಋಷಭ, ನಿಶ್ಚರ ಮತ್ತು ಅರ್ವರಿವತ್ ಎಂಬುವರು ಸಪ್ತರ್ಷಿಗಳು, ಚೈತ್ರ, ಕಿಂಪುರುಷ ಮುಂತಾದವರು ಮನುವಿನ ಮಕ್ಕಳು."

"ಮೂರನೆಯ ಮನ್ವಂತರ ಔತ್ತಮೀಯ ಮನ್ವಂತರ. ಸುಶಾಂತಿಯು ಇಂದ್ರನು. ದೇವತೆಗಳಿಗೆ ಒಡೆಯ. ಸುಧಾಮರು, ಸತ್ಯರು, ಶಿವರು, ಪ್ರದರ್ಶನರು, ವಶವರ್ತಿಗಳು, ದೇವವರ್ಗಗಳು. ವಸಿಷ್ಠನ ಏಳು ಮಕ್ಕಳು ಸಪ್ತರ್ಷಿಗಳು. ಅಜ, ಪರಶು, ದಿವ್ಯ ಮುಂತಾದವರು ಮನುವಿನ ಮಕ್ಕಳು."

"ನಾಲ್ಕನೆಯ ತಮಸ ಮನ್ವಂತರದಲ್ಲಿ ಸುರೂಪರು, ಹರಿಗಳು, ಸತ್ಯರು ಮತ್ತು ಸುಧಿಗಳು ದೇವವರ್ಗ. ಪ್ರತಿ ವರ್ಗದಲ್ಲೂ ಇಪ್ಪತ್ತೇಳು ಮಂದಿ ದೇವತೆಗಳು. ಸಿವಿ ಎಂಬುವನು ಇಂದ್ರ. ಈತನು ನೂರು ಯಜ್ಞಗಳನ್ನು ಮಾಡಿದ ಶತಕ್ರತು ಎಂದೂ ಹೆಸರಾದವನು. ಜ್ಯೋತಿಧರ್ಮ, ಪೃಥು, ಕವ್ಯ, ಚೈತ್ರ, ಅಗ್ನಿ, ಮಾನಕ ಮತ್ತು ಪೀವರ ಎಂಬುವರು ಸಪ್ತರ್ಷಿಗಳು. ತಮಸನ ಮಕ್ಕಳು ಪರಾಕ್ರಮಿಗಳಾದ ನರ, ಖ್ಯಾತಿ, ಶಾಂತಯ, ಜಾನುಜಂಘ ಮುಂತಾದವರು."

"ಐದನೆಯ ಮನ್ವಂತರದ ಮನು ರೈವತನು. ವಿಭುವೆಂಬಾತ ಈ ಮನ್ವಂತರದ ಇಂದ್ರನು ಅಮಿತಾಭರು, ಅಭೂತರಸರು, ವೈಕುಂಠರು ಮತ್ತು ಸುಮೇಧರು ಎಂಬುವರು ದೇವವರ್ಗಗಳು. ಈ ಪ್ರತಿಯೊಂದು ವರ್ಗದಲ್ಲೂ ಹದಿನಾಲ್ಕು ದೇವತೆಗಳು, ಹಿರಣ್ಯರೋಮ, ವೇದಶ್ರೀ, ಊರ್ಧ್ವಬಾಹು, ವೇದ ಬಾಹು, ಸುಧಾಮ, ಪರ್ಜನ್ಯ ಮತ್ತು ಮಹಾಮುನಿ ಎಂಬುವರೇ ಸಪ್ತರ್ಷಿಗಳು. ಬಲಬಂಧು, ಸುಸಂಭಾವ್ಯ, ಸಾತ್ಯಕ ಮುಂತಾದ ಶೂರರಾದ ಪ್ರಭುಗಳು ರೈವತನ ಮಕ್ಕಳು."

"ಸ್ವಾರೋಚಿಷ, ಔತ್ತಮಿ ಮತ್ತು ತಮಸರೆಂಬ ಈ ನಾಲ್ವರು ಮನುಗಳು ಪ್ರಿಯವ್ರತನಿಂದ ಬಂದವರು. ಪ್ರಿಯವ್ರತನು ತಪಸ್ಸಿನಿಂದ ವಿಷ್ಣುವನ್ನು ಸಂಪ್ರೀತಗೊಳಿಸಿ ತನ್ನ ಪೀಳಿಗೆಗೆ ಮನ್ವಂತರಗಳ ಪ್ರಭುತ್ವ ನಿಲ್ಲುವ ಹಾಗೆ ವರವನ್ನು ಪಡೆದನು."

"ಚಾಕ್ಷುಷನೆಂಬುವನು ಆರನೆಯ ಮನ್ವಂತರದ ಮನುವಾದನು. ಆ ಮನ್ವಂತರದ ಇಂದ್ರನ ಹೆಸರು ಮನೋಜವ. ಆದ್ಯರು, ಪ್ರಸ್ತುತರು, ಭವ್ಯರು, ಪ್ರಥುಗರು ಮತ್ತು ಮಹಾತ್ಮರಾದ ಲೇಖರು ಈ ಮನ್ವಂತರದ ದೇವಗಣ. ಪ್ರತಿಗಣದಲ್ಲೂ ಎಂಟೆಂಟು ಜನದೇವತೆಗಳು. ಈ ಮನ್ವಂತರದಲ್ಲಿ ಸುಮೇಧ, ವಿರಜರು, ಹವಿಷ್ಮಂತ, ಉತ್ತಮ, ಮಧು, ಅಭಿನಾಮ ಮತ್ತು ಸಹಿಷ್ಣು ಎಂಬುವರು ಸಪ್ತರ್ಷಿಗಳು. ಮಹಾ ಪರಾಕ್ರಮಶಾಲಿಗಳಾದ ಉರು, ಪುರು, ಶತಧುಮ ಮುಂತಾದ ಮಹೀಪಾಲರು ಚಾಕ್ಷುಷನ ಮಕ್ಕಳು."

"ಈಗ ನಡೆಯುತ್ತಿರುವ ಮನ್ವಂತರದ ಮನುವಾದರೋ ಯಜ್ಞಪತಿಯೂ ರವಿಪುತ್ರನೂ ಆದ ವೈವಸ್ವತನು. ಈ ಮನ್ವಂತರದ ದೇವಗಣವಾಗಿ ಆದಿತ್ಯರೂ, ವಸುಗಳು ಮತ್ತು ರುದ್ರರು ಇದ್ದಾರೆ. ಈ ದೇವತೆಗಳ ಅಧಿಪತಿಯಾಗಿ ಪರಂದರನೆಂಬ ಇಂದ್ರನಿದ್ದಾನೆ. ವಸಿಷ್ಠ, ಕಶ್ಯಪ, ಅತ್ರಿ, ಜಮದಗ್ನಿ, ಗೌತಮ, ವಿಶ್ವಾಮಿತ್ರ, ಭಾರದ್ವಾಜ ಈ ಮಹರ್ಷಿಗಳು ಆದ್ಯ ಮನ್ವಂತರದ ಸಪ್ತರ್ಷಿಗಳು. ವಿನೀತರಾದ ಇಕ್ಷ್ವಾಕು, ನಭನಿದಿಷ್ಟ, ಕರೂಷ, ಪೃಷಧರ ಮತ್ತು ವಿಖ್ಯಾತನಾದ ವಸುಮತ ಇವರುಗಳು ವೈವಸ್ವತ ಮನುವಿನ ಮಕ್ಕಳು."

ಈವರೆಗೆ ವಿಷ್ಣು ಪುರಾಣ ವಿವರಿಸಿದ ಮನ್ವಂತರಗಳು ವಿಷ್ಣುಪುರಾಣದ ರಚನೆಯ ಕಾಲಕ್ಕೆ ಸಂದುಹೋಗಿದ್ದ ಮನ್ವಂತರಗಳು. ಈ ಮನ್ವಂತರಗಳ ನಿಯಮಗಳು ಬಾಹ್ಯವಾದದ್ದೇ ಅಥವಾ ಆಂತರಿಕವಾಗಿ ಸೃಷ್ಟಿಯಾದದ್ದೇ ಎಂಬ ವಿಷಯಕ್ಕೆ ಬ್ರಾಹ್ಮಣರು ಮೌನವಹಿಸುತ್ತಾರೆ. ಆದರೆ ವಿಷ್ಣುಪುರಾಣಕಾರನಿಗೆ ಮತ್ತೆ ಏಳು ಮನ್ವಂತರಗಳು ಬರಲಿವೆ ಎಂಬುದು ಗೊತ್ತಿತ್ತು. ಇದೋ, ಬರಲಿರುವ ಮನ್ವಂತರಗಳ ವಿವರಗಳನ್ನು ವಿಷ್ಣುಪುರಾಣದಿಂದಲೇ ಉದ್ಧರಿಸುತ್ತಿದ್ದೇನೆ:

"ಸೂರ್ಯಪತ್ನಿಯಾದ ಸಂಜ್ಞೆ ವಿಶ್ವಕರ್ಮನ ಮಗಳು. ಸಂಜ್ಞೆಯಿಂದ ಸೂರ್ಯನಿಗೆ ವೈವಸ್ವತ ಮನು, ಯಮ ಹಾಗೂ ದೇವಿಯಾದ ಯಮಿ ಎಂಬ ಮಕ್ಕಳಾದರು. ಭಗವಂತನಾದ ಸೂರ್ಯನ ತೇಜಸ್ಸನ್ನು ತಡೆಯಲಾರದವಳಾದ ಸಂಜ್ಞೆಯು ತನ್ನ ಸೇವಕಿಯಾದ ಛಾಯೆಯನ್ನು ಸೂರ್ಯನ ಬಳಿ ಕಳುಹಿಸಿ ತಪಸ್ಸಿಗಾಗಿ ಅರಣ್ಯಕ್ಕೆ ಹೊರಟುಹೋದಳು. ಸೂರ್ಯನಾದರೋ ಛಾಯೆಯನ್ನೇ ತನ್ನ ಪತ್ನಿಯಾದ ಸಂಜ್ಞೆಯೆಂದು ಭಾವಿಸಿ ಅವಳಿಂದ ಶನೈಶ್ಚರ, ಸಾವರ್ಣಿ ಮನು ಮತ್ತು ತಪತಿ ಎಂಬ ಮತ್ತೆ ಮೂವರು ಮಕ್ಕಳನ್ನು ಪಡೆದನು. ಒಮ್ಮೆ ಛಾಯೆಯು ಸಂಜ್ಞೆಯ ಮಗನಾದ ಯಮನ ಮೇಲೆ ಕೋಪ ಹೊಂದಿದವಳಾಗಿ ಅವನನ್ನು ಶಪಿಸಿದಳು. ಈ ಪ್ರಸಂಗದಿಂದಾಗಿ ಯಮನಿಗೂ ಸೂರ್ಯ ಭಗವಂತನಿಗೂ ಛಾಯೆಯು ನಿಜವಾದ ಸಂಜ್ಞೆಯಲ್ಲವೆಂಬುದು ತಿಳಿಯಿತು. ಛಾಯೆಯಿಂದ ಸಂಜ್ಞೆಯು ಕಾಡಿಗೆ ಹೊರಟುಹೋದದ್ದನ್ನು ತಿಳಿದ ಸೂರ್ಯನು ತನ್ನ ದಿವ್ಯದೃಷ್ಟಿಯಿಂದ ಆಕೆಯು ಉತ್ತರ ಕುರುವಿನಲ್ಲಿ ಅಶ್ವರೂಪಿಯಾಗಿ ತಪಸ್ಸನ್ನಾಚರಿಸುತ್ತಿರುವುದನ್ನು ಕಂಡನು. ಆಗ ಸೂರ್ಯನೂ ಅಶ್ವರೂಪವನ್ನು ಧರಿಸಿದವನಾಗಿ ತನ್ನ ಪತ್ನಿಯನ್ನು ಕೂಡಿ ಅಶ್ವಿನಿ ದೇವತೆಗಳನ್ನೂ ರೇವಂತನನ್ನೂ ಮಕ್ಕಳಾಗಿ ಪಡೆದನು. ಇದಾದ ನಂತರ ಸಂಜ್ಞೆಯನ್ನು ಮತ್ತೆ ತನ್ನ ಲೋಕಕ್ಕೆ ಕರೆದುಕೊಂಡು ಬಂದನು. ಆತನ ತೇಜಸ್ಸಿನ ಪ್ರಖರತೆಯನ್ನು ಕಡಿಮೆ ಮಾಡಲು ಪ್ರಖರ ಕಿರಣನಾದ ಆ ಸೂರ್ಯನನ್ನು ವಿಶ್ವಕರ್ಮನು ತನ್ನ ಸಾಣೆಯಂತ್ರದ ಮೇಲಿಟ್ಟು ಅವನ ತೇಜೋಂಶದ ಎಂಟನೇ ಒಂದರಷ್ಟನ್ನು ಇಳಿಸಿದನು. ಅದಕ್ಕಿಂತ ಹೆಚ್ಚಿನ ಪ್ರಕಾಶವನ್ನು ಸೂರ್ಯನಿಂದ ತೆಗೆಯುವುದು ಅವನಿಗೂ

ಅಸಾಧ್ಯವಾಯಿತು. ಸೂರ್ಯನಲ್ಲಿ ನೆಲೆಗೊಂಡಿದ್ದ ದಿವ್ಯ ವೈಷ್ಣವ ತೇಜಸ್ಸಿನ ಅಂಶವು ವಿಶ್ವಕರ್ಮನಿಂದ ಸಾಣೆಹಿಡಿಯಲ್ಪಟ್ಟು ಭೂಮಿಯ ಮೇಲೆ ಹೊಳೆಯುತ್ತಾ ಬಿದ್ದಿತು. ಆ ತೇಜಸ್ಸಿನಲ್ಲೇ ದೇವಶಿಲ್ಪಿಯಾದ ವಿಶ್ವಕರ್ಮನು ವಿಷ್ಣುವಿನ ಚಕ್ರಾಯುಧವನ್ನೂ ಮಹೇಶ್ವರನ ತ್ರಿಶೂಲವನ್ನೂ ಕುಬೇರನ ಆಯುಧ ವಿಶೇಷವನ್ನೂ ಕಾರ್ತಿಕೇಯನ ವೇಲಾಯುಧವನ್ನೂ ಮಾಡಿಕೊಟ್ಟನು. ಹೀಗೆ ಈ ಸೂರ್ಯ ತೇಜಾಂಶದಲ್ಲಿ ಉಳಿದ ದೇವತೆಗಳಿಗೂ ಆಯುಧಗಳನ್ನು ನಿರ್ಮಿಸಿಕೊಟ್ಟನು. ಹೀಗೆ ಈ ಸೂರ್ಯ ತೇಜಾಂಶದಲ್ಲಿ ಉಳಿದ ದೇವತೆಗಳಿಗೂ ಆಯುಧಗಳನ್ನು ನಿರ್ಮಿಸಿಕೊಟ್ಟನು. ಈ ಸಮಸ್ತ ದಿವ್ಯಾಯುಧಗಳೂ ವಿಶ್ವಕರ್ಮನು ಉಜ್ಜಿತೆಗೆದ ಸೂರ್ಯ ಕಿರಣಗಳಿಂದ ನಿರ್ಮಿತವಾದಂಥವು."

"ಛಾಯಾಪುತ್ರನಾದ ಮನುವು ತನ್ನ ಅಣ್ಣನಾದ ವೈವಸ್ವತ ಮನುವಿನ ವಂಶಕ್ಕೆ ಸೇರಿದವನಾದ ಕಾರಣದಿಂದ ಅವನು ಸಾವರ್ಣಿ ಮನುವೆಂದು ಖ್ಯಾತನಾಗಿದ್ದಾನೆ. ಆತನು ಬರಲಿರುವ ಅಷ್ಟಮ ಮನ್ವಂತರದ ಅಧಿಪತಿ. ಆ ಮನ್ವಂತರದ ವಿವರಗಳು ಹೀಗಿವೆ. ಸಾವರ್ಣಿಯ ಮನುವಾಗಿ ಬರಲಿರುವ ಮನ್ವಂತರದಲ್ಲಿ ಸುತಪರು, ಅಮಿತಾಭರು ಮತ್ತು ಮುಖ್ಯರು ಎಂಬ ದೇವವರ್ಗಗಳಿರುತ್ತವೆ. ಪ್ರತಿ ಗಣದಲ್ಲಿಯೂ ಇಪ್ಪತ್ತೊಂದು ಮಂದಿ ದೇವತೆಗಳಿರುತ್ತಾರೆ. ದೀಪ್ತಿಮಂತೆ, ಗಾಲವ, ರಾಮ, ಕೃಪ, ದ್ರೌಣಿ ಇವರೊಂದಿಗೆ ನನ್ನ ಪುತ್ರನಾದ ವ್ಯಾಸನನ್ನು ಆರನೆಯವನಾಗಿಯೂ, ಋಷ್ಯಶೃಂಗನನ್ನು ಏಳನೆಯವನಾಗಿಯೂ ಉಳ್ಳ ಸಪ್ತರ್ಷಿ ಗಣವಿರುತ್ತದೆ. ವಿರೋಚನನ ಮಗನೂ ಪಾಪರಹಿತನೂ ಪಾತಾಳಲೋಕದ ಸಾರ್ವಭೌಮನೂ ಆದ ಬಲಿ ಚಕ್ರವರ್ತಿಯು ಇಂದ್ರನಾಗುತ್ತಾನೆ. ವಿರಜ, ಆರ್ವರಿವ, ನಿರ್ಮೋಹ ಮುಂತಾದವರು ಸಾವರ್ಣಿಯ ಮಕ್ಕಳಾಗುತ್ತಾರೆ."

"ನವಮ ಮನ್ವಂತರದ ಮನುವಾಗಿ ದಕ್ಷಸಾವರ್ಣಿಯು ಬರುತ್ತಾನೆ. ಅಲ್ಲಿ ಪರರು, ಮರೀಚಿಗರ್ಭರು ಮತ್ತು ಸುಧರ್ಮರು ಎಂಬ ಮೂರು ದೇವವರ್ಗಗಳಿರುತ್ತವೆ. ಪ್ರತಿಯೊಂದು ವರ್ಗದಲ್ಲೂ ಹನ್ನೆರಡು ಮಂದಿ ದೇವತೆಗಳಿರುತ್ತಾರೆ. ಅಭೂತಪವನನೆಂಬ ಪರಾಕ್ರಮಿಯು ಇಂದ್ರನಾಗುತ್ತಾನೆ. ಭವ್ಯ, ವಸು, ಮೇಧಾತಿಥಿ, ಜ್ಯೋತಿಷ್ಯನ್, ದ್ಯುಮತಿ ಮತ್ತು ಸತ್ಯ ಎಂಬುವರು ಸಪ್ತರ್ಷಿಗಳಾಗಿರುತ್ತಾರೆ. ಧೃತಿಕೇತು, ದೃಪ್ತಿಕೇತು, ಪಂಚಹಸ್ತ, ನಿರ್ಮಾಯ, ಪೃಥುಸ್ರವ ಮುಂತಾದವರು ಮನುವಿನ ಮಕ್ಕಳಾಗಿ ಜನಿಸುತ್ತಾರೆ."

"ದಶಮ ಮನ್ವಂತರದಲ್ಲಿ ಬ್ರಹ್ಮಸಾವರ್ಣಿ ಎಂಬಾತನು ಮನುವಾಗುತ್ತಾನೆ, ಸುಧಾಮರು, ವಿರುದ್ಧರು ಮತ್ತು ಶತಸಂಖ್ಯರು ದೇವತೆಗಳಾಗುತ್ತಾರೆ. ಅತಿಬಲನಾದ ಶಾಂತಿಯು ಇಂದ್ರನಾಗುತ್ತಾನೆ. ಹವಿಷ್ಮಂತ, ಸುಕೃತಿ, ಸತ್ಯ, ಅಪಾಮ್ಮೃತಿ, ನಭಗ, ಅಪ್ರತಿಮೌಜಸ್, ಸತ್ಯಕೇತು ಎಂಬುವರು ಸಪ್ತರ್ಷಿಗಳು, ಸುಕ್ಷೇತ್ರ, ಉತ್ತಮೌಜಸ್, ಹರಿಷೇಣ ಮುಂತಾದ ಹತ್ತು ಮಂದಿ ಆ ಮನುವಿನ ಮಕ್ಕಳು."

"ಹನ್ನೊಂದನೆಯ ಮನ್ವಂತರದ ಮನುವು ಧರ್ಮಸಾವರ್ಣಿ ಎಂಬಾತನು. ವಿಹಂಗಮರು, ಕಾಮಗಮರು, ನಿರ್ಮಣರತಿಗಳು ಪ್ರಮುಖ ದೇವಗಣ. ಪ್ರತಿ ಗಣದಲ್ಲೂ ಮೂವತ್ತು ದೇವತೆಗಳಿರುತ್ತಾರೆ. ಅವರಲ್ಲಿ ವೃಷನೆಂಬುವನು ಇಂದ್ರನಾಗುತ್ತಾನೆ. ನಿಶ್ಚರ, ಅಗ್ನಿತೇಜ, ವಪುಷ್ಮಾನ್, ವಿಷ್ಣು ಅರುಣಿ, ಹವಿಷ್ಮಂತ ಮತ್ತು ಅನಘರೆಂಬ ಸಪ್ತರ್ಷಿಗಳಿರುತ್ತಾರೆ. ಸರ್ವಗ, ಸರ್ವಧರ್ಮ, ದೇವಾನೀಕ ಮುಂತಾದ ಮನುವಿನ ಮಕ್ಕಳು ಪೃಥ್ವಿಯನ್ನಾಳುತ್ತಾರೆ."

"ದ್ವಾದಶ ಮನ್ವಂತರದಲ್ಲಿ ರುದ್ರಸಾವರ್ಣಿಯು ಮನುವು, ಋತುಧಾಮನೆಂಬುವನು ಇಂದ್ರನು, ಹಾರೀತರು, ಲೋಹಿತರು, ಸುಮನಸರು, ಸುಕ್ರಮರು ಎಂಬುವರು ದೇವಗಣ. ಪ್ರತಿ ಗಣದಲ್ಲೂ

ಹದಿನೈದು ದೇವತೆಗಳು, ಸುತಪ, ತಪೋಮೂರ್ತಿ, ತಪೋಕೀರ್ತಿ, ತಪೋಧೃತಿ, ತಪೋದ್ಯುತಿ ಮತ್ತು ತಪೋಧನರೆಂಬುವರು ಸಪ್ತರ್ಷಿಗಳು. ದೇವಸ, ಉಪದೇವ, ದೇವಶ್ರೇಷ್ಠ ಮುಂತಾದ ಮನುಪುತ್ರರು ಪರಾಕ್ರಮಶಾಲಿಗಳಾದ ಚಕ್ರವರ್ತಿಗಳಾಗಿ ಈ ಪೃಥ್ವಿಯನ್ನಾಳುವವರಾಗುತ್ತಾರೆ."

"ಹದಿಮೂರನೆಯ ಮನ್ವಂತರದಲ್ಲಿ ರೌಚ್ಯನೆಂಬಾತ ಮನು. ಸುಧಾಮನರು, ಸುಧರ್ಮನರು, ಸುಕರ್ಮನರು ಎಂಬ ದೇವಗಣ, ಪ್ರತಿಯೊಂದು ಗಣದಲ್ಲೂ ಮೂವತ್ತಮೂರು ದೇವತೆಗಳು. ಈ ದೇವಗಣದ ಅಧಿಪತಿಯಾಗಿ ದಿವಸ್ಪತಿ ಎಂಬಾತನು ಇಂದ್ರ. ನಿರ್ಮೋಹ, ತತ್ವದರ್ಶಿ, ನಿಷ್ಪ್ರಕಂಪ, ನಿರುತ್ಸುಕ, ಧೃತಿಮತ್, ಅವ್ಯಯ ಮತ್ತು ಸುತಾಪರೆಂಬುವರು ಸಪ್ತರ್ಷಿಗಳು, ಚಿತ್ರಸೇನ, ವಿಚಿತ್ರ ಮುಂತಾದವರು ರಾಜರಾಗುತ್ತಾರೆ."

"ಹದಿನಾಲ್ಕನೆಯ ಮನ್ವಂತರದ ಮನುವು ಭೌತ್ಯನೆಂಬುವನು. ಶುಚಿ ಎಂಬಾತನು ಇಂದ್ರನು. ಚಾಕ್ಷುಷರು, ಪವಿತ್ರರು, ಕನಿಷ್ಠರು, ಭ್ರಾಜೀರರು ಮತ್ತು ವಾವೃದ್ಧರು ದೇವವರ್ಗಗಳು, ಅಗ್ನಿಬಾಹು, ಶುಚಿ, ಶಿಖರ, ಮಗಧ, ಗೃಧ್ರ, ಯುಕ್ತ ಮತ್ತು ಅಜಿತರೆಂಬುವರು ಸಪ್ತರ್ಷಿಗಳಾಗುತ್ತಾರೆ. ಉರು, ಗಭೀರ, ಬ್ರಧ್ನ ಮುಂತಾದವರು ದೊರೆಗಳಾಗುತ್ತಾರೆ."

ಇದು ಮನ್ವಂತರದ ಸಿದ್ಧಾಂತ. ನಾವು ಈಗಿನ ಕಾಲದಲ್ಲಿ ಕಾರ್ಮಿಕ ಸರ್ವಾಧಿಕಾರ ಮಾತು ಕೇಳುತ್ತಿದ್ದೇವೆಯಲ್ಲವೆ? ಬ್ರಾಹ್ಮಣರ ಈ ಸಿದ್ಧಾಂತವು ಆ ಕಾರ್ಮಿಕ ಸರ್ವಾಧಿಕಾರಕ್ಕೆ ತದ್ವತ್ ವಿರುದ್ಧವಾದ ಪರಿಕಲ್ಪನೆ. ಕಾರ್ಮಿಕ ವರ್ಗದ ಮೇಲೆ ಸ್ವರ್ಗೀಯ ಪಿತೃಗಳ ಸರ್ವಾಧಿಕಾರದ ಸಿದ್ಧಾಂತವಿದು.

ಈ ವಿವರಗಳನ್ನು ಗಮನಿಸಿದ ಯಾರಿಗಾದರೂ ಕೆಲವು ಪ್ರಮುಖ ಪ್ರಶ್ನೆಗಳು ಮೇಲುನೋಟಕ್ಕೆ ಎದುರಾಗುತ್ತವೆ. ಒಬ್ಬನಾದ ಮೇಲೆ ಒಬ್ಬನಂತೆ ಅಧಿಕಾರಕ್ಕೆ ಬಂದ ಈ ಮನುಗಳು ಜನತೆಯ ಮೇಲೆ ಆಳ್ವಿಕೆ ನಡೆಸಿದ ರೀತಿ ಎಂತಹದು? ಜನರನ್ನಾಳಲು ಇವರು ಯಾವ ಬಗೆಯ ಶಾಸನಗಳನ್ನು ರಚಿಸಿದ್ದರು? ಈ ಪ್ರಶ್ನೆಗಳಿಗೆ ಉತ್ತರ ದೊರೆಯುವ ಒಂದೇ ಕೃತಿಯೆಂದರೆ ಮನುಸ್ಮೃತಿ.

ಮನುಸ್ಮೃತಿಯ ಮೊದಲ ಅಧ್ಯಾಯದಲ್ಲಿ ಕೆಳಗಿನ ವಿವರಗಳು ದೊರಕುತ್ತವೆ:

ಅಧ್ಯಾಯ I.೧. ಸಮಾಧಿಸ್ಥನಾದ ಮನುವಿನ ಬಳಿಗೆ ಮಹರ್ಷಿಗಳು ಬಂದು ಅವನನ್ನು ಅರ್ಚಿಸಿ ನಂತರ ಹೀಗೆಂದರು:

೨. ಪ್ರಭುವೇ, ದೇವಸದೃಶನಾದ ನೀನು ಚಾತುರ್ವರ್ಣಗಳ ಪವಿತ್ರವಾದ ಧರ್ಮವನ್ನು ನಮಗೆ ಕ್ರಮವಾಗಿ ಅನುಗ್ರಹಿಸುವಂಥನಾಗಬೇಕು.

೩. ಪೂಜ್ಯನೇ, ಯಜ್ಞಗಳ ಕ್ರಮವನ್ನೂ, ಆತ್ಮವಿಜ್ಞಾನವನ್ನೂ ಈ ಸ್ವಾಯಂಭುವ ಮನ್ವಂತರದಲ್ಲಿ ಬಲ್ಲವನು ನೀನೊಬ್ಬನೇ ಆಗಿದ್ದೀಯೆ. ಹಾಗಾಗಿ ಅದನ್ನು ಅನುಗ್ರಹಿಸು.

ಅದಕ್ಕೆ ಮನುವು ಹೀಗೆಂದನು:

೫. ಆದಿಯಲ್ಲಿ ಈ ವಿಶ್ವವು ಗ್ರಹಿಕೆಗೆ ನಿಲುಕದ್ದೂ, ವಿಚಾರಕ್ಕೆ ಅತೀತವೂ, ವಿಶಿಷ್ಟ ಲಕ್ಷಣವಿಲ್ಲದ್ದೂ ಆಗಿ ತಮೋರೂಪದಲ್ಲಿದ್ದು ಸುಷುಪ್ತಿಯಲ್ಲಿ ಮುಳುಗಿಹೋಗಿತ್ತು.

೮. ಆಗ ಸ್ವಾಯಂಭುವ ಮನುವು ಬಗೆಬಗೆಯಾದ ಜೀವಿಗಳನ್ನು ಸೃಷ್ಟಿಸುವ ಬಯಕೆಯುಳ್ಳವನಾದನು. ಮೊದಲಿಗೆ ನೀರನ್ನು ಸೃಷ್ಟಿಸಿದನು. ಆ ಆಪೋರೂಪದಲ್ಲಿ ಸೃಷ್ಟಿಬೀಜವನ್ನು ಇರಿಸಿದನು.

೯. ಬ್ರಹ್ಮನ ಆ ಸೃಷ್ಟಿಬೀಜವು ಒಂದು ಬಂಗಾರದ ಮೊಟ್ಟೆಯಾಯಿತು. ಆ ಅಂಡವು ಸೂರ್ಯಪ್ರಕಾಶ ಸದೃಶವಾಗಿ ಬೆಳಗುತ್ತಿತ್ತು. ಆ ಅಂಡದಲ್ಲಿ ಸ್ವಾಯಂಭುವವೇ ಬ್ರಹ್ಮನಾಗಿ ಹುಟ್ಟಿದನು. ಅವನೇ ಇಡಿ ವಿಶ್ವ ಸೃಷ್ಟಿಕರ್ತನು.

೩೪. ನಂತರ, ನಾನು ಜೀವಿಗಳನ್ನು ಸೃಷ್ಟಿಮಾಡಲು ಬಯಸಿ ಅತಿ ಕಷ್ಟಕರವಾದ ತಪಸ್ಸನ್ನು ಆಚರಿಸಿದೆನು. ನಂತರ ಹತ್ತು ಜನ ತಪೋಧನರಾದ ಮಹರ್ಷಿಗಳನ್ನು ಸೃಷ್ಟಿಸಿದೆನು. ಅವರು ಸಕಲ ಜೀವಿಗಳಿಗೂ ಪ್ರಭುಗಳಾದರು.

೩೫. ಮರೀಚಿ, ಅತ್ರಿ, ಅಂಗೀರಸ, ಪುಲಸ್ತ್ಯ, ಪುಲಹ, ಕ್ರತು, ಪ್ರಚೇತಸ, ವಸಿಷ್ಠ, ಭೃಗು ಮತ್ತು ನಾರದರೇ ಆ ಮಹರ್ಷಿಗಳು.

೫೮. ಸ್ವಾಯಂಭುವನು ತಾನೇ ಧರ್ಮವನ್ನು ರಚಿಸಿದವನಾದ್ದರಿಂದ, ಅವನೇ ನನಗೆ ಧರ್ಮವನ್ನು ಮೊದಲಿಗೆ ಕ್ರಮವಾಗಿ ಬೋಧಿಸಿದನು. ನಂತರ ನಾನು ಅದನ್ನು ಮರೀಚಿ ಮುಂತಾದವರಿಗೆ ಬೋಧಿಸಿದೆನು.

೫೯. ಭೃಗುವು ಈ ಸೂತ್ರಗಳನ್ನು ನಿಮಗೆ ಅಮೂಲಾಗ್ರವಾಗಿ ಪಠಿಸಿ ಹೇಳುತ್ತಾನೆ. ಇವನು ನನ್ನಿಂದ ಅವನ್ನು ಸಮಗ್ರವಾಗಿಯೂ ಅಖಂಡವಾಗಿಯೂ ಕಲಿತಿದ್ದಾನೆ.

ಇದರಿಂದ ನಮಗೆ ತಿಳಿದುಬರುವುದೇನೆಂದರೆ ಧರ್ಮಸೂತ್ರಗಳನ್ನು ರಚಿಸಿದ ಮನು ಸ್ವಾಯಂಭುವ ಮನುವೊಬ್ಬನೇ. ವಿಷ್ಣುಪುರಾಣದ ರೀತ್ಯಾ ಪ್ರತಿಯೊಂದು ಮನ್ವಂತರಕ್ಕೂ ಅದರದೇ ಆದ ಮನುವೊಬ್ಬನಿರುತ್ತಾನೆ. ಆದರೆ ಉಳಿದ ಮನುಗಳು ತಂತಮ್ಮ ಮನ್ವಂತರಕ್ಕೆ ತಮ್ಮದೇ ಆದ ಶಾಸನಗಳನ್ನು ಏಕೆ ರಚಿಸಲಿಲ್ಲ? ಸ್ವಾಯಂಭುವನ ಮನುವಿನ ಧರ್ಮಸೂತ್ರಗಳು ಶಾಶ್ವತವೆಂದು ಪರಿಗಣಿತವಾದವೇ? ಸ್ವಾಯಂಭುವ ಮನುವಿನ ಶಾಸನಗಳೇ ಸಾರ್ವಕಾಲಿಕವೆಂದಾದ ಪಕ್ಷದಲ್ಲಿ ಬ್ರಾಹ್ಮಣರು ಬೇರೆ ಬೇರೆ ಮನ್ವಂತರಗಳನ್ನು ಏಕೆ ಕಲ್ಪಿಸಿದರು?

* * * *

# ಒಗಟು – ೨೨

## ಬ್ರಹ್ಮ ಧರ್ಮವಲ್ಲ ಹಾಗಾದರೆ ಬ್ರಹ್ಮದಿಂದ ಪ್ರಯೋಜನವೇನು?

ಇತಿಹಾಸ ಬಲ್ಲಂತೆ ಬಗೆ ಬಗೆಯ ಸರ್ಕಾರಗಳು ಸಂದುಹೋಗಿವೆ. ಸಾರ್ವಭೌಮತ್ವ, ಶ್ರೀಮಂತರ ಆಳ್ವಿಕೆ, ಪ್ರಜಾಪ್ರಭುತ್ವ ಜೊತೆಗೆ ನಿರಂಕುಶ ಪ್ರಭುತ್ವವನ್ನೂ ಸೇರಿಸಬಹುದು.

ಈಗ ಹೆಚ್ಚು ಪ್ರಚುರವಾಗಿರುವ ಸರ್ಕಾರ ಪ್ರಜಾಪ್ರಭುತ್ವ ಸರ್ಕಾರ. ಆದರೆ ಪ್ರಜಾಪ್ರಭುತ್ವದ ಸ್ವರೂಪವೇನು ಎಂಬುದರ ಬಗ್ಗೆ ಏಕಾಭಿಪ್ರಾಯವೇನೂ ಇಲ್ಲ. ಈ ಸಮಸ್ಯೆಯನ್ನು ಸೂಕ್ಷ್ಮವಾಗಿ ಪರಿಶೀಲಿಸಿದವರಿಗೆ ಪ್ರಜಾಪ್ರಭುತ್ವದ ಸ್ವರೂಪವನ್ನು ಕುರಿತು ಎರಡು ಬಗೆಯ ಅಭಿಪ್ರಾಯಗಳು ಚಾಲ್ತಿಯಲ್ಲಿರುವುದು ಕಾಣುತ್ತದೆ. ಒಂದು ದೃಷ್ಟಿಕೋನದ ಪ್ರಕಾರ, ಪ್ರಜಾಪ್ರಭುತ್ವ ಜನತೆಯಿಂದಲೇ ಆಯ್ಕೆಗೊಂಡ ಜನರ ಪ್ರತಿನಿಧಿಯಾದ ಸರ್ಕಾರ. ಅಂದರೆ, ಈ ದೃಷ್ಟಿಕೋನದ ರೀತ್ಯಾ ಪ್ರಜಾಪ್ರಭುತ್ವವೆನ್ನುವುದು ಆಗಾಗ್ಗೆ ಚುನಾವಣೆಗಳು ನಡೆಯುವ ವಯಸ್ಕ ಮತದಾರರಿಂದ ಆಯ್ಕೆಯಾದ ಪ್ರತಿನಿಧಿ ಸರ್ಕಾರಕ್ಕೆ ಇನ್ನೊಂದು ಹೆಸರಷ್ಟೇ.

ಆದರೆ ಮತ್ತೊಂದು ನಿರ್ವಚನದ ಪ್ರಕಾರ ಪ್ರಜಾಪ್ರಭುತ್ವವು ಕೇವಲ ಸರ್ಕಾರದ ಒಂದು ಬಗೆ ಮಾತ್ರವಲ್ಲ. ಅದು ಸಮಾಜದ ಸಂಘಟನೆಯ ಒಂದು ಸ್ವರೂಪ. ಪ್ರಜಾಪ್ರಭುತ್ವ ರೀತ್ಯಾ ಸಂಘಟಿತವಾದ ಸಮಾಜಕ್ಕೆ ಎರಡು ವಿಶಿಷ್ಟ ಲಕ್ಷಣಗಳಿರುತ್ತವೆ. ಮೊದಲನೆಯದಾಗಿ, ಸಮಾಜವು ವರ್ಗಗಳಾಗಿ ಸ್ತರೀಕರಣಗೊಂಡಿರುವುದಿಲ್ಲ. ಸದಾ ಆ ಸಮಾಜದ ಪ್ರತಿ ವ್ಯಕ್ತಿಯೂ ಉಳಿದವರ ಹಿತಾಸಕ್ತಿಗನುಗುಣವಾಗಿ ಹೊಂದಾಣಿಕೆಗೆ ಸಹಕಾರಕ್ಕೆ ಸಿದ್ಧನಾಗಿರುತ್ತಾನೆ. ಇದು ಪ್ರಜಾಪ್ರಭುತ್ವದ ಎರಡನೆಯ ಲಕ್ಷಣ. ಮೊದಲ ಲಕ್ಷಣವಂತೂ ಪ್ರಜಾಪ್ರಭುತ್ವದ ಅನಿವಾರ್ಯ ಅಂಶ ಎಂಬುದಕ್ಕೆ ಎರಡು ಮಾತಿಲ್ಲ. ಪ್ರೊ. ಡ್ಯೂಯಿ ಅವರು ಹೇಳುವಂತೆ : (ಡ್ಯೂಯಿ ಅವರ ಅಭಿಪ್ರಾಯದ ಉದ್ಧರಣೆಗಳು ಅಂಬೇಡ್ಕರರ ಮೂಲಪ್ರತಿಯಲ್ಲಿ ಇಲ್ಲ.)

ಎರಡನೆಯ ಲಕ್ಷಣವೂ ಕೂಡ ಪ್ರಜಾಪ್ರಭುತ್ವದ ರೀತ್ಯಾ ಸಂಘಟಿತವಾದ ಸಮಾಜಕ್ಕೆ ಅಷ್ಟೇ ಅವಶ್ಯವಾದದ್ದು. ವ್ಯಕ್ತಿಗಳ ಹಾಗೂ ಗುಂಪುಗಳ ಹಿತಾಸಕ್ತಿಗಳು ಪರಸ್ಪರ ಪೂರಕವಲ್ಲದಿದ್ದರೆ ಪ್ರಜಾಪ್ರಭುತ್ವ ವಿರೋಧಿ ಫಲಿತಾಂಶಗಳು ಸೃಷ್ಟಿಯಾಗುತ್ತವೆ. ಈ ಪರಿಸ್ಥಿತಿಯನ್ನು ಪ್ರೊ. ಡ್ಯೂಯಿ[೧] ಬಹು ಸಮರ್ಪಕವಾಗಿ ವಿವರಿಸಿದ್ದಾನೆ. (ಡ್ಯೂಯಿ ಅವರ ಕೃತಿಯ ಈ ಭಾಗಗಳನ್ನು ಮೂಲ ಹಸ್ತಪ್ರತಿಯಲ್ಲೂ ಉದ್ಧರಿಸಿಲ್ಲ.)

---

*ಇದು ೨೦ ಪುಟಗಳ ಅಧ್ಯಾಯ. ಮೊದಲನೆಯ ೨ ಮತ್ತು ಕೊನೆಯ ೬ ಪುಟಗಳು ಗ್ರಂಥಕರ್ತರ ಕೈಬರಹದಲ್ಲಿವೆ. ಉಳಿದವು ಬೆರಳಚ್ಚು ಪುಟಗಳಾಗಿದ್ದು ಡಾ. ಅಂಬೇಡ್ಕರರು ಅವಶ್ಯಕ ಕಂಡ ತಿದ್ದುಪಡಿ ಮಾಡಿದ್ದಾರೆ – ಸಂ.*

೧. ಡೆಮಾಕ್ರಸಿ ಅಂಡ್ ಏಜುಕೇಷನ್

ಈ ಎರಡು ದೃಷ್ಟಿಕೋನಗಳಲ್ಲಿ ಮೊದಲನೆಯದು ತಪ್ಪಲ್ಲದಿದ್ದರೂ, ತೀರಾ ಮೇಲುಮೇಲಿನ ಗ್ರಹಿಕೆಯೆಂಬುದರಲ್ಲಿ ಅನುಮಾನವಿಲ್ಲ. ಏಕೆಂದರೆ ಒಂದು ಸಮಾಜ ತನ್ನ ಸ್ವರೂಪದಲ್ಲಿ, ಸ್ವಭಾವದಲ್ಲಿ ಪ್ರಜಾಪ್ರಭುತ್ವ ರೀತ್ಯಾ ವರ್ತಿಸದಿದ್ದಲ್ಲಿ ಪ್ರಜಾಪ್ರಭುತ್ವ ಸರ್ಕಾರ ಸಾಧ್ಯವೇ ಇಲ್ಲ. ಪ್ರಜಾಪ್ರಭುತ್ವವೆಂದರೆ ಕೇವಲ ಚುನಾವಣೆಯೆಂದು ಗ್ರಹಿಸುವವರೆಲ್ಲಾ ಮೂರು ತಪ್ಪುಗಳನ್ನು ಮಾಡುತ್ತಾರೆ.

ಸರ್ಕಾರವನ್ನು ಸಮಾಜದಿಂದ ಪ್ರತ್ಯೇಕವೆಂದು ಭಾವಿಸುವುದು ಮೊದಲ ತಪ್ಪು. ವಾಸ್ತವವಾಗಿ ಸರ್ಕಾರವು ಸಮಾಜಕ್ಕಿಂತ ಭಿನ್ನವೂ ಅಲ್ಲ. ಅದರಿಂದ ಪ್ರತ್ಯೇಕವೂ ಅಲ್ಲ. ಸಮಾಜ ಬೆಳೆಸುವ ಉಳಿದ ಅನೇಕ ಸಂಸ್ಥೆಗಳಂತೆ ಸರ್ಕಾರವೂ ಒಂದು ಸಂಸ್ಥೆ. ಸಮಾಜವೇ ಅದಕ್ಕೆ ತನ್ನ ಸಾಂಘಿಕ ಜೀವನಕ್ಕೆ ಅಗತ್ಯವಾದ ಕೆಲವು ಕರ್ತವ್ಯಗಳನ್ನು ನಿರ್ವಹಿಸುವ ಹೊಣೆಯನ್ನು ಕೊಟ್ಟಿರುತ್ತದೆ.

ಸರ್ಕಾರವು ಸಮಾಜದ ಅಂತಿಮ ಉದ್ದೇಶಗಳನ್ನು ಮುಟ್ಟಬೇಕಾದರೆ, ಸಮಾಜದ ಆಶೋತ್ತರಗಳನ್ನು ಈಡೇರಿಸಬೇಕಾದರೆ ಆ ಸರ್ಕಾರವಿರುವ ಸಮಾಜದಲ್ಲಿ ಪ್ರಜಾಪ್ರಭುತ್ವ ತತ್ವ ಆಳವಾಗಿ ಬೇರು ಬಿಟ್ಟಿರಬೇಕು. ಈ ವಿಷಯವು ಮನದಟ್ಟಾಗದೇ ಹೋಗುವುದು ಎರಡನೆಯ ತಪ್ಪು. ಸಮಾಜವೇ ಪ್ರಜಾಪ್ರಭುತ್ವದ ಸರ್ಕಾರವಾಗಲಾರದು. ಆಳುವವರು ಮತ್ತು ಆಳಿಸಿಕೊಳ್ಳುವವರು ಎಂದು ಸಮಾಜವು ಎಲ್ಲೆಲ್ಲಿ ಇಬ್ಭಾಗವಾಗಿರುತ್ತದೋ ಅಲ್ಲೆಲ್ಲಾ ಸರ್ಕಾರವು ಆಳುವ ವರ್ಗದ ಸರ್ಕಾರವಷ್ಟೇ ಆಗಿರುತ್ತದೆ.

ಯಾವುದೇ ಸರ್ಕಾರವಾಗಲಿ, ಅದು ಒಳ್ಳೆಯ ಸರ್ಕಾರವೋ, ಕೆಟ್ಟ ಸರ್ಕಾರವೋ, ಪ್ರಜಾಪ್ರಭುತ್ವದ ಸರ್ಕಾರವೋ, ಪ್ರಜಾಪ್ರಭುತ್ವ ವಿರೋಧಿ ಸರ್ಕಾರವೋ ಎಂಥದೇ ಆಗಿದ್ದರೂ ಅದರ ಆಡಳಿತ ಬಹುಪಾಲು ಚಟುವಟಿಕೆ ಹಾಗೂ ಕಾನೂನು ಪಾಲನೆಗೆ ಆಡಳಿತಯಂತ್ರದ ಮೇಲೆ, ಅದರಲ್ಲೂ ನಾಗರಿಕ ಸೇವೆಯ ಮೇಲೆ ಅವಲಂಬಿತವಾಗಿರುತ್ತದೆ ಎಂಬ ಅಂಶವನ್ನು ಮರೆಯುವುದು. ಮೂರನೆಯ ತಪ್ಪು. ನಾಗರಿಕ ಸೇವೆಯ ಅಧಿಕಾರಿಗಳು ಸಮಾಜದ ಯಾವ ವರ್ಗದಿಂದ ಬಂದವರು ಎಂಬುದರ ಮೇಲೆ ಎಲ್ಲವೂ ನಿರ್ಧಾರವಾಗಿ ಬಿಡಬಹುದು. ಅವರು ಬಂದ ಸಮಾಜದ ಭಾಗವು ಪ್ರಜಾಪ್ರಭುತ್ವ ವಿರೋಧಿಯಾದದ್ದಾದರೆ ಸರ್ಕಾರವು ಖಂಡಿತವಾಗಿ ಪ್ರಜಾಪ್ರಭುತ್ವ ವಿರೋಧಿಯೇ ಆಗುತ್ತದೆ.

ಪ್ರಜಾಪ್ರಭುತ್ವ ಸ್ವರೂಪದ ಸರ್ಕಾರವಿದ್ದರೆ ಸಾಕು, ಪ್ರಜಾಪ್ರಭುತ್ವ ಚಾಲೂ ಆಗುತ್ತದೆ ಎಂಬ ಅಭಿಪ್ರಾಯಕ್ಕೆ ಕಾರಣವಾದ ಇನ್ನೊಂದು ತಪ್ಪುಗ್ರಹಿಕೆ ಕೂಡಾ ಇದೆ. ಈ ತಪ್ಪುಗ್ರಹಿಕೆಯನ್ನು ಅರ್ಥ ಮಾಡಿಕೊಳ್ಳಲು ಒಳ್ಳೆಯ ಸರ್ಕಾರ ಎಂದರೇನು ಎಂಬುದು ಮನದಟ್ಟಾಗಬೇಕು.

ಒಳ್ಳೆಯ ಸರ್ಕಾರವೆಂದರೆ ಒಳ್ಳೆಯ ಕಾನೂನು ಮತ್ತು ಒಳ್ಳೆಯ ಆಡಳಿತ. ಇವೆರಡೂ ಒಳ್ಳೆಯ ಸರ್ಕಾರದ ಸಾರಸರ್ವಸ್ವ. ಇವೆರಡಲ್ಲದೆ ಬೇರೇನೂ ಖಂಡಿತ ಅಲ್ಲ. ಆದರೆ, ಆಡಳಿತ ಹೊಣೆಯನ್ನು ಪಡೆದ ಜನ ಇಡಿ ಸಮಾಜದ ಹಿತವನ್ನು, ಶೋಷಿತರ ಹಿತವನ್ನು ಮರೆತು ತಮ್ಮ ವರ್ಗದ ಹಿತಾಸಕ್ತಿಯನ್ನೇ ಪೂರೈಸುವ ಅವಕಾಶವನ್ನು ಕಲ್ಪಿಸಿಕೊಂಡರೆ ಮೇಲೆ ಹೇಳಿದ ಅರ್ಥದ ಒಳ್ಳೆಯ ಸರ್ಕಾರವಾಗಲಾರದು.

ಪ್ರಜಾಪ್ರಭುತ್ವವಾದಿ ಸರ್ಕಾರವು ಒಳಿತಿನಲ್ಲಿ ಪರ್ಯವಸಾನವಾಗುವುದೋ ಇಲ್ಲವೋ ಎಂಬುದು ಆ ಸಮಾಜದ ಅಂತಿಮ ಘಟಕಗಳಾದ ವ್ಯಕ್ತಿಗಳ ಸ್ವಭಾವವನ್ನು ಅಂತಿಮವಾಗಿ ಅವಲಂಬಿಸಿದೆ. ಆ ಸಮಾಜದ ವ್ಯಕ್ತಿಗಳ ಮನಸ್ಸು ಪ್ರಜಾಪ್ರಭುತ್ವ ಸ್ವಭಾವದ್ದಾಗಿದ್ದ ಪಕ್ಷದಲ್ಲಿ ಆ ಸಮಾಜದ ಪ್ರಜಾಪ್ರಭುತ್ವವಾದಿ

ಸರ್ಕಾರವು ಒಳಿತನ್ನು ಮಾಡೀತೆಂದು ನಂಬಬಹುದು. ಹಾಗಿಲ್ಲದಿದ್ದ ಪಕ್ಷದಲ್ಲಿ ಅಂಥ ಸಮಾಜದ ಪ್ರಜಾಪ್ರಭುತ್ವವಾದಿ ಸರ್ಕಾರವು ಅಪಾಯಕಾರಿ ಸ್ವರೂಪದ್ದಾಗಿ ಪರಿವರ್ತನೆ ಹೊಂದುವುದು ಬಹು ಸುಲಭ. ಒಂದು ಸಮಾಜದ ಸದಸ್ಯರಾದ ವ್ಯಕ್ತಿಗಳು ವರ್ಗಗಳಾಗಿ ಪ್ರತ್ಯೇಕಗೊಂಡಿದ್ದರೆ, ಪ್ರತಿಯೊಬ್ಬನೂ ತನ್ನ ವರ್ಗದ ಹಿತಕ್ಕೆ ನಿಷ್ಠನಾಗಿದ್ದರೆ, ಹಾಗೂ ಈ ವರ್ಗಹಿತಕ್ಕೆ ತೋರುವ ನಿಷ್ಠೆಗೇ ಅವನು ಆದ್ಯತೆ ನೀಡುವುದಾದರೆ ವರ್ಗದ ಚೌಕಟ್ಟಿಗೇ ಸಿಕ್ಕಿಕೊಂಡು ಅವನು ವರ್ಗ ಜಾಗೃತನಾಗುತ್ತಾನೆ. ಇಂಥವನು ತನ್ನ ವರ್ಗದ ಹಿತಕ್ಕೆ ಉಳಿದೆಲ್ಲರ ಹಿತಕ್ಕಿಂತ ಹೆಚ್ಚಿನ ಮಹತ್ವ ಕೊಡುತ್ತಾನೆ. ಆ ಹಿತವನ್ನು ಸಾಧಿಸಲು ತನ್ನ ಅಧಿಕಾರವನ್ನು ಬಳಸಿ ನ್ಯಾಯ ಕಾನೂನುಗಳನ್ನೂ ತನಗೆ ಹಿತಕಾರಿಯಂತೆ ತಿರುಗಿಸಿಕೊಳ್ಳುತ್ತಾನೆ. ಈ ಉದ್ದೇಶಕ್ಕಾಗಿಯೇ ತನ್ನ ವರ್ಗಕ್ಕೆ ಸೇರಿದವನ ವಿರುದ್ಧ ಪ್ರತಿಯೊಂದು ವಲಯದಲ್ಲೂ ತಾರತಮ್ಯವನ್ನು ಅನುಸರಿಸುತ್ತಾನೆ. ವರ್ಗಗಳ ತಾಕಲಾಟವಿದ್ದು, ಮೇಲೆ ಬೀಳುವ ಪ್ರವೃತ್ತಿಯಿರುವ ಯಾವ ಸಮಾಜದಲ್ಲೂ ಸರ್ಕಾರ ನ್ಯಾಯಯುತವಾಗಿ ಸಮತೋಲನದಲ್ಲಿ ಆಡಳಿತ ನಡೆಸುವುದು ದುಸ್ಸಾಧ್ಯವೇ ಸರಿ. ಅಂಥ ಸಮಾಜದಲ್ಲಿ ಅದು ಜನರಿಂದ ಜನರಿಗಾಗಿ ಆರಿಸಿದ ಸರ್ಕಾರವೇ ಆದರೂ ಅದು ಜನತೆಯ ಸರ್ಕಾರವಾಗಲಾರದು. ಅಂಥ ಕಡೆ ಅದು ಒಂದು ವರ್ಗದ, ಆ ವರ್ಗಕ್ಕೋಸ್ಕರವಾಗಿ ಇರುವ ಸರ್ಕಾರ ಮಾತ್ರವಾಗುತ್ತದೆ. ಜನತೆಗಾಗಿಯೇ ಇರುವ ಸರ್ಕಾರ ಸಾಧ್ಯವಾಗಬೇಕಾದರೆ ಆ ಸಮಾಜದ ಪ್ರತಿ ವ್ಯಕ್ತಿಯೂ ಪ್ರಜಾಪ್ರಭುತ್ವವಾದಿಯಾಗಿರಬೇಕು. ಅಂದರೆ ಆ ಸಮಾಜದ ಪ್ರತಿಯೊಬ್ಬ ವ್ಯಕ್ತಿಯೂ ಇನ್ನೊಬ್ಬನನ್ನು ತನಗೆ ಸಮಾನವೆಂದು ಭಾವಿಸಿ ತನಗಾಗಿ ಬಯಸುವ ಸ್ವಾತಂತ್ರ್ಯದ ಅವಕಾಶಗಳನ್ನು ಅವನಿಗೂ ಕೊಡಲು ಸಿದ್ಧನಾಗಿರಬೇಕು. ಇಂಥ ಪ್ರಜಾಪ್ರಭುತ್ವವಾದಿ ಸ್ವಭಾವವು ಎಲ್ಲರ ಮನಸ್ಸಿನಲ್ಲೂ ಮೂಡಬೇಕಾದರೆ ವ್ಯಕ್ತಿಯ ಸಾಮಾಜೀಕರಣವಾಗಬೇಕು. ಅಂದರೆ ಪ್ರಜಾಪ್ರಭುತ್ವವಾದಿ ಸಮಾಜವಿಲ್ಲದೆ ಪ್ರಜಾಪ್ರಭುತ್ವಾತ್ಮಕ ಸರ್ಕಾರ ಸಾಧ್ಯವಿಲ್ಲ ಎಂದಾಯಿತು. ಪ್ರಜಾಪ್ರಭುತ್ವಾತ್ಮಕ ಸರ್ಕಾರಗಳು ಕುಸಿದುಬಿದ್ದದ್ದಕ್ಕೆ ಅವು ಮಾಡಿಕೊಂಡ ಸಮಾಜಗಳು ಪ್ರಜಾಪ್ರಭುತ್ವವಾದಿಯಾಗದಿದ್ದುದೇ ಕಾರಣ.

ಒಂದು ಒಳ್ಳೆಯ ಸರ್ಕಾರದ ಆಡಳಿತ ತನ್ನ ಪ್ರಜೆಗಳ ಮಾನಸಿಕ ಹಾಗೂ ನೈತಿಕ ಸ್ವಭಾವವನ್ನು ಅವಲಂಬಿಸಿದೆ ಎಂಬುದನ್ನು ಗಮನಿಸದೆ ಇರುವುದು ದುರ್ದೈವದ ಸಂಗತಿ. ಪ್ರಜಾಪ್ರಭುತ್ವವೆಂಬುದು ಕೇವಲ ರಾಜಕೀಯ ಯಂತ್ರವಲ್ಲ. ಅದು ಸಾಮಾಜಿಕ ವ್ಯವಸ್ಥೆಗಿಂತ ಹೆಚ್ಚಿನದು. ಅದು ಒಂದು ಮಾನಸಿಕ ಪ್ರವೃತ್ತಿ ಅಥವಾ ಜೀವನ ತತ್ತ್ವ.

ಕೆಲವರು ಪ್ರಜಾಪ್ರಭುತ್ವವನ್ನು ಸಮಾನತೆ ಮತ್ತು ಸ್ವಾತಂತ್ರ್ಯದ ಜೊತೆ ಸಮೀಕರಿಸುತ್ತಾರೆ. ನಿಜ, ಪ್ರಜಾಪ್ರಭುತ್ವದ ಅತ್ಯಂತ ತೀವ್ರ ಕಾಳಜಿ ಎಂದರೆ ಸಮಾನತೆ ಮತ್ತು ಸ್ವಾತಂತ್ರ್ಯವೇ. ಆದರೆ ಈ ಸ್ವಾತಂತ್ರ್ಯ ಮತ್ತು ಸಮಾನತೆಯನ್ನು ಶಾಶ್ವತವಾಗಿ ಉಳಿಸುವುದು ಯಾವುದು ಎಂಬುದು ಮುಖ್ಯವಾದ ಪ್ರಶ್ನೆ. ಕೆಲವರ ಪ್ರಕಾರ ಪ್ರಭುತ್ವದ ಕಾನೂನು ಸ್ವಾತಂತ್ರ್ಯ ಮತ್ತು ಸಮಾನತೆಯನ್ನು ರಕ್ಷಿಸುತ್ತದೆ. ಆದರೆ ಇದು ಸತ್ಯದ ಸಂಗತಿಯಲ್ಲ. ಸ್ವಾತಂತ್ರ್ಯ ಸಮಾನತೆಯನ್ನುಳಿಸುವುದು ಸಹಜೀವನ. ಫ್ರೆಂಚ್ ಕ್ರಾಂತಿಕಾರರು ಯಾವುದನ್ನು ಸಹೋದರ ಭಾವ (fraternity) ಎಂದು ಕರೆದರೋ ಅದು. ಈ ಸಹಭ್ರಾತೃತ್ವ ಎಂಬ ಪದ ಸಮರ್ಪಕವಾದ ಪದವಲ್ಲ. ಬುದ್ಧನು ಹೇಳಿದ ಮೈತ್ರಿ ಎಂಬ ಪದವೇ ಅದಕ್ಕಿಂತ ಹೆಚ್ಚು ಸಮರ್ಪಕವಾದದ್ದು. ಈ ಸಹಭ್ರಾತೃತ್ವವಿಲ್ಲದ ಸ್ವಾತಂತ್ರ್ಯವು ಸಮಾನತೆಯನ್ನು ನಾಶಮಾಡಿಬಿಡುತ್ತದೆ ಅಥವಾ ಸಹಭ್ರಾತೃತ್ವವಿಲ್ಲದ ಸ್ವಾತಂತ್ರ್ಯವು ಸಮಾನತೆಯನ್ನು ನಾಶಮಾಡಿಬಿಡುತ್ತದೆ

ಅಥವಾ ಸಹಭ್ರಾತೃತ್ವವಿಲ್ಲದ ಸಮಾನತೆಯು ಸ್ವಾತಂತ್ರ್ಯವನ್ನು ನಾಶಮಾಡಿಬಿಡುತ್ತದೆ. ಪ್ರಜಾಪ್ರಭುತ್ವದಲ್ಲಿ ಸಮಾನತೆಯಿಂದ ಸ್ವಾತಂತ್ರ್ಯವೂ ಸ್ವಾತಂತ್ರದಿಂದ ಸಮಾನತೆಯೂ ನಾಶವಾಗದಿರಲು ಈ ಎರಡು ಮೂಲದಲ್ಲಿರುವ ಸಹಭ್ರಾತೃತ್ವವೇ ಕಾರಣ, ಆದುದರಿಂದ ಸಹಭ್ರಾತೃತ್ವವು ಪ್ರಜಾಪ್ರಭುತ್ವದ ಮೂಲ.

ಈವರೆಗೆ ನಾವು ನಡೆಸಿದ ಚರ್ಚೆಯು ಮುಖ್ಯ ಪ್ರಶ್ನೆಯೊಂದಕ್ಕೆ ಪ್ರವೇಶಿಕೆಯಷ್ಟೆ. ಯಾವುದಿಲ್ಲದೆ ಪ್ರಜಾಪ್ರಭುತ್ವ ಸಾಧ್ಯವಿಲ್ಲವೋ ಆ ಸಹ ಭ್ರಾತೃತ್ವದ ಮೂಲ ಇರುವುದು ಎಲ್ಲಿ ಎಂಬುದೇ ಆ ಪ್ರಶ್ನೆ. ಸಹಭ್ರಾತೃತ್ವದ ಮೂಲವು ಧರ್ಮದಲ್ಲಿದೆ ಎಂಬುದು ನಿರ್ವಿವಾದ.

ಪ್ರಜಾಪ್ರಭುತ್ವದ ಮೂಲ ಪ್ರೇರಣೆಗಳನ್ನು ಅಥವಾ ಪ್ರಜಾಪ್ರಭುತ್ವದ ಕಾರ್ಯ ಸ್ವರೂಪವನ್ನು ಪರಿಶೀಲಿಸಿದಾಗ ಆ ಜನರ ಧರ್ಮವನ್ನು ಗಮನಿಸಬೇಕು. ಆ ಧರ್ಮವು ಸೋದರತೆಯನ್ನು ಬೋಧಿಸುತ್ತದೆಯೇ ಇಲ್ಲವೇ? ಅದು ಸೋದರತೆಯನ್ನು ಬೋಧಿಸುವುದಾದಲ್ಲಿ ಅಲ್ಲಿ ಪ್ರಜಾಪ್ರಭುತ್ವ ಸರ್ಕಾರದ ಸಾಧ್ಯತೆಗಳು ಅಗಾಧವಾಗಿರುತ್ತವೆ. ಆದರೆ ಆ ಧರ್ಮದಲ್ಲಿ ಸಹಭ್ರಾತೃತ್ವವಿಲ್ಲದಿದ್ದಲ್ಲಿ ಅಲ್ಲಿ ಪ್ರಜಾಪ್ರಭುತ್ವವನ್ನು ಕಟ್ಟಲು ಮೂಲ ವಸ್ತುವೇ ಇಲ್ಲ ಎಂದಾಗುತ್ತದೆ. ಭಾರತದಲ್ಲಿ ಪ್ರಜಾಪ್ರಭುತ್ವ ಏಕೆ ಬೆಳೆಯಲಿಲ್ಲ? ಇದು ಮುಖ್ಯ ಪ್ರಶ್ನೆ. ಇದಕ್ಕೆ ಉತ್ತರವೂ ತುಂಬಾ ಸರಳ. ಹಿಂದೂ ಧರ್ಮ ಸೋದರತೆಯನ್ನು ಬೋಧಿಸುವ ಧರ್ಮವಲ್ಲ. ಐಕ್ಯವನ್ನು ಬೋಧಿಸುವ ಧರ್ಮವಲ್ಲ. ಬದಲಿಗೆ ಅದು ಭಿನ್ನತೆಯನ್ನು, ವರ್ಣಾಶ್ರಮಗಳನ್ನು ಬೋಧಿಸಿ ಬೇರೆ ಬೇರೆ ವರ್ಗಪ್ರಜ್ಞೆಯನ್ನು ರೂಢಿಸುವ ಧರ್ಮ. ಇಂಥದೊಂದು ವ್ಯವಸ್ಥೆಯಲ್ಲಿ ಪ್ರಜಾಪ್ರಭುತ್ವಕ್ಕೆ ಸ್ಥಳವೆಲ್ಲಿದೆ?

ಹಿಂದೂ ಸಾಮಾಜಿಕ ವ್ಯವಸ್ಥೆಯು ಪ್ರಜಾಪ್ರಭುತ್ವ ವಿರೋಧಿಯಾದದ್ದು ಕೇವಲ ಆಕಸ್ಮಿಕವಲ್ಲ. ಅದನ್ನು ಅಪ್ರಜಾಸತ್ತಾತ್ಮಕವಾಗಿಯೇ ರೂಪಿಸಲಾಗಿದೆ. ಸಮಾಜವನ್ನು ವರ್ಣಗಳಾಗಿ, ಜಾತಿಗಳಾಗಿ ವಿಂಗಡಿಸಿದ್ದು, ಜಾತಿಗಳು, ಬಹಿಷ್ಕೃತ ಜಾತಿಗಳು ಇವೆಲ್ಲಾ ಕೇವಲ ಸಿದ್ಧಾಂತಗಳಲ್ಲ, ಇವು ಶಾಸನಗಳು. ಪ್ರಜಾಸತ್ತೆಯ ವಿರುದ್ಧ ಎತ್ತಿದ ಬಡಿಗೋಲುಗಳು.

ಮೇಲಿನ ಮಾತುಗಳಿಂದ ಹಿಂದೂ ಧರ್ಮ ಹಾಗೂ ಹಿಂದೂ ತತ್ತ್ವಶಾಸ್ತ್ರಕ್ಕೆ ಸೋದರತ್ವದ ಸಿದ್ಧಾಂತ ಅಪರಿಚಿತ ಎಂಬಂತೆ ತೋರಬಹುದು. ಆದರೆ ಇತಿಹಾಸವನ್ನು ಗಮನಿಸಿದಾಗ ಈ ನಿರ್ಣಯ ಸರಿಯೆನಿಸುವುದಿಲ್ಲ. ಸಹಭ್ರಾತೃತ್ವದ ಪರಿಕಲ್ಪನೆಗಿಂತ ಮಹತ್ವದ ಸಾಮಾಜಿಕ ಪ್ರಜಾಸತ್ತೆಯ ಕಲ್ಪನೆಯನ್ನು ಕೊಡಬಲ್ಲ ಸತ್ವವನ್ನು ಹಿಂದೂ ಧಾರ್ಮಿಕ ಹಾಗೂ ತಾತ್ತ್ವಿಕ ಸಿದ್ಧಾಂತವು ಪಡೆದಿತ್ತು. ಅದೇ ಬ್ರಹ್ಮತ್ವದ[೧] (ಬ್ರಹ್ಮವಾದ) ಸಿದ್ಧಾಂತ.

ಬ್ರಹ್ಮತ್ವ ಎಂದರೇನು? ಎಂದು ಯಾರಾದರೂ ಕೇಳಿದರೆ ಅಚ್ಚರಿಯೇನೂ ಇಲ್ಲ. ಅದು ಹಿಂದುಗಳಿಗೂ ಅಪರಿಚಿತವಾದದ್ದೇ. ಅವರಿಗೆ ವೇದಾಂತ ಗೊತ್ತಿದೆ. ಬ್ರಹ್ಮತ್ವ ಗೊತ್ತಿದೆ. ಆದರೆ ಬ್ರಹ್ಮವಾದ ಅವರಿಗೆ ಖಂಡಿತವಾಗಿ ಅಪರಿಚಿತ. ಹಾಗಾಗಿ ನಾವು ಮುಂದುವರೆಯುವುದಕ್ಕೆ ಮುಂಚೆ ಬ್ರಹ್ಮತ್ವವನ್ನು ಕುರಿತು ನಾಲ್ಕು ಮಾತು ಹೇಳುವುದು ಸೂಕ್ತ.

ಹಿಂದೂಗಳ ಧಾರ್ಮಿಕ ಹಾಗೂ ತಾತ್ವಿಕ ವಿಚಾರಗಳಲ್ಲಿ ಮೂರು ಪ್ರಸ್ಥಾನಗಳಿವೆ. ೧. ಬ್ರಹ್ಮ ವಾದ ೨. ವೇದಾಂತ ೩. ಬ್ರಾಹ್ಮಣತ್ವ. ಇವು ಪರಸ್ಪರ ಬೆರೆತಂತೆ ಕಂಡರೂ ಈ ಮೂರರ ಸಿದ್ಧಾಂತಗಳೂ ಪರಸ್ಪರ ವಿಭಿನ್ನವೂ ಪ್ರತ್ಯೇಕವೂ ಆಗಿವೆ.

---

೧. ನಾನು ಈ ಪದವನ್ನು ಪ್ರೊ. ಹಾಪ್‌ಕಿನ್ಸ್‌ರವರ "ದಿ ಎಪಿಕ್ಸ್ ಆಫ್ ಇಂಡಿಯಾ"ದಿಂದ ತೆಗೆದುಕೊಂಡಿದ್ದೇನೆ.

ಬ್ರಹ್ಮತ್ವ ಸಾರವನ್ನು ಈ ಮೂರು ಮಹಾವಾಕ್ಯಗಳಲ್ಲಿ ಬೇರೆ ಬೇರೆ ರೀತಿಯಲ್ಲಿ ಹೇಳಲಾಗಿದೆ.

| | | |
|---|---|---|
| ೧. ಸರ್ವಂ ಖಲ್ವಿದಂ ಬ್ರಹ್ಮ | : | ಇದೆಲ್ಲವೂ ನಿಜವಾಗಿಯೂ ಬ್ರಹ್ಮವೇ. |
| ೨. ಅಹಂ ಬ್ರಹ್ಮಾಸ್ಮಿ | : | (ಆತ್ಮನು ಬ್ರಹ್ಮವಂಶವೇ ಆದುದರಿಂದ) ನಾನು ಬ್ರಹ್ಮನೇ ಆಗಿದ್ದೇನೆ. |
| ೩. ತತ್ವಮಸಿ | : | (ಆತ್ಮನು ಬ್ರಹ್ಮದಂಶವೇ ಆದುದರಿಂದ) ನೀನು ಅದೇ ಆಗಿದ್ದೀಯೆ. |

ಮಹಾಕಾವ್ಯಗಳು ಎಂದು ಕರೆಯಲ್ಪಡುವ ಈ ಮಾತುಗಳು ಬ್ರಹ್ಮವಾದವನ್ನು ಸಂಗ್ರಹವಾಗಿ ತಿಳಿಸುತ್ತವೆ.

ಈಗ ವೇದಾಂತದ ಸೂತ್ರಗಳನ್ನು ನೋಡೋಣ.

೧. ಬ್ರಹ್ಮವೊಂದೇ ಸತ್ಯ.
೨. ಜಗತ್ತು ಮಿಥ್ಯೆ ಅಥವಾ ಮಾಯೆ.
೩. ಜೀವ ಮತ್ತು ಬ್ರಹ್ಮರು–
    ಎ. ಒಂದು ಮತದ ಪ್ರಕಾರ ಬೇರೆ ಬೇರೆಯಲ್ಲ.
    ಬಿ. ಇನ್ನೊಂದರ ಪ್ರಕಾರ. ಒಂದೇ ಅಲ್ಲ. ಆದರೂ ಜೀವಗಳು ಬ್ರಹ್ಮನ ಅಂಶಗಳು. ಅವನಿಂದ ಪ್ರತ್ಯೇಕವಾದವಲ್ಲ.
    ಸಿ. ಮೂರನೆಯ ಮತದ ಪ್ರಕಾರ ಜೀವ ಬೇರೆ, ಬ್ರಹ್ಮ ಬೇರೆ.

ಇನ್ನು ಬ್ರಾಹ್ಮಣವಾದದ ಸಾರವನ್ನು ಈ ಕೆಳಗಿನ ಲಕ್ಷಣಗಳಿಂದ ಗ್ರಹಿಸಬಹುದು.

೧. ಚಾತುರ್ವರ್ಣ್ಯದಲ್ಲಿ ನಂಬಿಕೆ
೨. ವೇದಗಳು ಪವಿತ್ರ ಹಾಗೂ ನಿರ್ದುಷ್ಟ
೩. ಮುಕ್ತಿಗೆ ದೇವಯಜ್ಞವೊಂದೇ ಮಾರ್ಗ

ಅನೇಕರಿಗೆ ವೇದಾಂತ ಮತ್ತು ಬ್ರಾಹ್ಮಣವಾದದ ನಡುವಿನ ವ್ಯತ್ಯಾಸ ಗೊತ್ತಿದೆ. ಅವೆರಡರ ನಡುವಿನ ವಿವಾದಗಳನ್ನು ಅನೇಕರು ಬಲ್ಲರು. ಆದರೆ ಬ್ರಹ್ಮವಾದ ಮತ್ತು ವೇದಾಂತದ ನಡುವಿನ ವ್ಯತ್ಯಾಸಗಳು ಬಹಳ ಮಂದಿಗೆ ಪರಿಚಿತವಿಲ್ಲ. ಆದರೆ ಅವೆರಡರ ನಡುವಿನ ವ್ಯತ್ಯಾಸಗಳು ಸ್ಪಷ್ಟವಾಗಿಯೇ ಇವೆ. ಬ್ರಹ್ಮವಾದವೂ ವೇದಾಂತವೂ ಆತ್ಮನನ್ನು ಬ್ರಹ್ಮವೆಂದೇ ಒಪ್ಪಿಕೊಳ್ಳುತ್ತವೆ. ಆದರೆ ಬ್ರಹ್ಮವಾದವು ವೇದಾಂತದಂತೆ ಜಗತ್ತನ್ನು ಮಿಥ್ಯೆಯೆಂದು ಪರಿಗಣಿಸುವುದಿಲ್ಲ. ಇದು ಈ ಎರಡರ ನಡುವಿನ ಬಹುಮುಖ್ಯ ವ್ಯತ್ಯಾಸ.

ಬ್ರಹ್ಮವಾದದ ಸಾರವೆಂದರೆ ಈ ಜಗತ್ತು ಸತ್ಯ ಹಾಗು ಬ್ರಹ್ಮವು ಈ ಜಗತ್ತಿನಾಚೆಗೂ ಇರುವ ಸತ್ಯವಾಗಿದೆ ಎಂಬುದು. ಹಾಗಾಗಿ ಸರ್ವವೂ ಬ್ರಹ್ಮದ ಸಾರವೇ ಆಗಿದೆ.

ಬ್ರಹ್ಮವಾದಕ್ಕೆ ವಿರುದ್ಧವಾಗಿ ಎರಡು ಟೀಕೆಗಳು ಇವೆ. ಬ್ರಹ್ಮವಾದವು ದುರಹಂಕಾರದ ತತ್ವ ಎನ್ನುವವರಿದ್ದಾರೆ. ಏಕೆಂದರೆ ನಾನೇ ಬ್ರಹ್ಮನೆನ್ನುವುದು ದಾರ್ಷ್ಟ್ಯದ ಒಂದು ಬಗೆ ಎಂಬುದು ಇವರ ವಾದ. ಇನ್ನೊಂದು ಟೀಕೆಯ ಪ್ರಕಾರ ಬ್ರಹ್ಮವಾದ ಹೇಳುವ ಬ್ರಹ್ಮವನ್ನು ಮನುಷ್ಯನು ಅರಿತುಕೊಳ್ಳುವುದು ದುಸ್ಸಾಧ್ಯ ಎಂಬುದು. 'ನಾನು ಬ್ರಹ್ಮ' ಎಂಬ ಮಾತು ಧಾರ್ಷ್ಟ್ಯದ ಮಾತಾಗಿ ಕಾಣಬಹುದು ನಿಜ.

ಆದರೆ ಈ ಹೇಳಿಕೆಯು ತನ್ನ ಯೋಗ್ಯತೆಯನ್ನು ದೃಢೀಕರಿಸಿಕೊಳ್ಳುವ ರೀತಿಯೆಂದೂ ನೋಡಬಹುದು. ಮನುಕುಲವು ಕೀಳರಿಮೆಯಿಂದ ಬಹುವಾಗಿ ಬಳಲುತ್ತಿರುವಾಗ ಇಂಥ ಆತ್ಮ ಸಮರ್ಥನೆ ನಿಜವಾಗಿ ಸ್ವಾಗತಾರ್ಹ. ಪ್ರಜಾಸತ್ತೆಯಲ್ಲಿ ಪ್ರತಿಯೊಬ್ಬ ವ್ಯಕ್ತಿಗೂ ಅವನ ಸತ್ವವನ್ನು ಸಂಪೂರ್ಣವಾಗಿ ತಿಳಿಯುವ ಅವಕಾಶದ ಹಕ್ಕಿದೆ. ಪ್ರತಿಯೊಬ್ಬನೂ ಇನ್ನೊಬ್ಬನಷ್ಟೇ ಯೋಗ್ಯತೆಯುಳ್ಳವನು ಎಂಬುದೂ ಪರಸ್ಪರ ಅರಿವಿಗೆ ಬರಬೇಕಾದದ್ದು ಪ್ರಜಾಸತ್ತಾತ್ಮಕ ಸಮಾಜದ ಅಗತ್ಯವಾಗಿದೆ. 'ಅಹಂಬ್ರಹ್ಮಾಸ್ಮಿ'ಯು ಧಾರ್ಷ್ಟ್ಯದ ಮಾತೆಂದು ಬ್ರಹ್ಮವಾದದತ್ತ ಹಲ್ಲು ಕಡಿಯುವವರು ಈ ವಾದದ ಮತ್ತೊಂದು ಮಹಾವಾಕ್ಯವಾದ 'ತತ್ವಮಸಿ' ಎಂಬುದನ್ನು ಮರೆತೇಬಿಡುತ್ತಾರೆ. 'ತತ್ವಮಸಿ'ಯೆಂಬ ಪೂರಕವಾಕ್ಯವಿಲ್ಲದೆ ಕೇವಲ 'ಅಹಂಬ್ರಹ್ಮಾಸ್ಮಿ' ಎಂಬ ಸೂತ್ರವೊಂದೇ ಇದ್ದ ಪಕ್ಷದಲ್ಲಿ ಅವರು ಕ್ರುದ್ಧರಾಗಬಹುದಿತ್ತೋ ಏನೋ. ಆದರೆ 'ತತ್ವಮಸಿ' ಎಂಬ ಪೂರಕ ವಾಕ್ಯದಿಂದಾಗಿ ಬ್ರಹ್ಮವಾದವು ಸ್ವಾರ್ಥವೂ ದುರಹಂಕಾರಪೂರಿತವೂ ಆಗಿದೆಯೆಂಬ ಆರೋಪ ನಿಲ್ಲುವುದಿಲ್ಲ.

ಬ್ರಹ್ಮವೆಂಬುದು ಅಗ್ರಾಹ್ಯವೆಂಬ ಟೀಕೆ ನಿಜವಾಗಿರಬಹುದು. ಏನೇ ಆದರೂ ಬ್ರಹ್ಮ ಸಿದ್ಧಾಂತದಲ್ಲಿ ಕೆಲವು ಸಾಮಾಜಿಕ ಪರಿಣಾಮಗಳಿದ್ದು ಅವು ಪ್ರಜಾಪತ್ತೆಗೆ ಅಮೂಲ್ಯವಾದವುಗಳಾಗಿವೆ. ಪ್ರತಿಯೊಂದು ವ್ಯಕ್ತಿಯೂ ಬ್ರಹ್ಮದ ಅಂಶವೇ ಆದಲ್ಲಿ ಪ್ರತಿಯೊಬ್ಬರೂ ಸಮಾನರೇ ಆಗುತ್ತಾರೆ. ಹಾಗಾಗಿ ಪ್ರತಿಯೊಬ್ಬರಿಗೂ ಸಮಾನವಾದ ಅವಕಾಶಗಳನ್ನು ಪಡೆಯುವ ಸ್ವಾತಂತ್ರ್ಯವಿರುತ್ತದೆ. ಇದನ್ನೇ ತಾನೇ ಪ್ರಜಾಸತ್ತೆಯು ನಿರೀಕ್ಷಿಸುವುದು? ಬ್ರಹ್ಮನು ಗ್ರಹಿಕೆಗೆ ಅತೀತ ಎಂದು ಕಾಣುವುದು ನಿಜವಿದ್ದೀತು. ಆದರೆ ಬ್ರಹ್ಮವಾದವು ಪ್ರಜಾಸತ್ತೆಗೆ ಹಾಕಿಕೊಡುವ ತಳಹದಿಗಿಂತ ಬಲವಾದ ತಳಹದಿಯನ್ನು ಮತ್ತಾವ ಸಿದ್ಧಾಂತವೂ ಹಾಕಿಕೊಡಲಾರದು ಎಂಬ ವಿಷಯದಲ್ಲಿ ಅನುಮಾನ ಸಾಧ್ಯವಿಲ್ಲ.

ನಾವೆಲ್ಲರೂ ದೇವರ ಮಕ್ಕಳು ಎಂಬ ಕಾರಣಕ್ಕೆ ಪ್ರಜಾಸತ್ತೆಯನ್ನು ಅನುಸರಿಸುವುದು ತೀರಾ ದುರ್ಬಲವಾದ ಪ್ರಜಾಸತ್ತೆಯ ತಳಹದಿಯಾಗುತ್ತದೆ. ಇಂಥ ಅಭಿಪ್ರಾಯದ ಮೇಲೆ ನಿಂತ ಪ್ರಜಾಸತ್ತೆಯು ಅನಿಶ್ಚಿತವಾಗಿರುವುದು ಈ ಕಾರಣದಿಂದಲೇ. ಆದರೆ ನಾನು ಮತ್ತು ನೀನು ಒಂದೇ ವಿಶ್ವ ತತ್ವದ ಅಂಶಗಳು ಎಂದು ಗುರುತಿಸಿಕೊಂಡಾಗ ಪ್ರಜಾಸತ್ತೆಯಿಲ್ಲದೆ ಬೇರಾವ ಸಿದ್ಧಾಂತವೂ ಸಾಧ್ಯವಿಲ್ಲ. ಆ ಸಿದ್ಧಾಂತವು ಪ್ರಜಾಸತ್ತೆಯನ್ನು ಕೇವಲ ಬೋಧಿಸುವುದಿಲ್ಲ. ಪ್ರಜಾಸತ್ತೆ ಪ್ರತಿಯೊಬ್ಬರ ಹೊಣೆಯಾಗಿಬಿಡುತ್ತದೆ.

ಪ್ರಜಾಸತ್ತೆಯು ಕ್ರೈಸ್ತಧರ್ಮದಿಂದಲೋ ಪ್ಲೇಟೋನ ಸಿದ್ಧಾಂತಗಳಿಂದಲೋ ಕವಲೊಡೆದು ಬಂದದ್ದು ಎಂದು ಪಾಶ್ಚಿಮಾತ್ಯ ಪ್ರಜಾಪ್ರಭುತ್ವದ ವಿದ್ಯಾರ್ಥಿಗಳು ಪ್ರಚಾರ ಮಾಡಿದ್ದಾರೆ. ಆದರೆ ಭಾರತದಲ್ಲಿನ ಬ್ರಹ್ಮವಾದವು ಪ್ರಜಾಸತ್ತೆಗೆ ಇನ್ನೂ ಉತ್ತಮವಾದ ತಳಹದಿಯನ್ನು ನಿರ್ಮಿಸಬಲ್ಲದು ಎಂಬುದು ಅವರಿಗೆ ಗೊತ್ತಿದ್ದರೆ ಅವರು ಇಷ್ಟೊಂದು ಅಂಧಶ್ರದ್ಧೆಯವರಾಗುತ್ತಿರಲಿಲ್ಲ. ಪ್ರಜಾಸತ್ತೆಯ ಸೈದ್ಧಾಂತಿಕ ತಳಹದಿಯ ನಿರ್ಮಾಣದಲ್ಲಿ ಭಾರತದ ಪಾಲೂ ಇದೆ ಎಂಬುದನ್ನು ಕಡ್ಡಾಯವಾಗಿ ಒಪ್ಪಿಕೊಳ್ಳಬೇಕು.

ಆದರೆ ಈ ಬ್ರಹ್ಮವಾದ ಏನಾಗಿ ಹೋಯಿತು? ಎಂಬುದು ಸಮಸ್ಯೆ. ಬ್ರಹ್ಮವಾದಕ್ಕೆ ಸಾಮಾಜಿಕ ಪರಿಣಾಮವೇನು ಇರಲಿಲ್ಲ. ಈ ವಾದವು ಧರ್ಮಕ್ಕೆ ಆಧಾರವಾಗಲಿಲ್ಲ. ಹೀಗೇಕಾಯಿತು ಎಂದರೆ ಬ್ರಹ್ಮವಾದವು ಕೇವಲ ದರ್ಶನ ಎಂಬ ಉತ್ತರ ಬರುತ್ತದೆ. ಯಾವುದೇ ದರ್ಶನಕ್ಕೆ ಸಾಮಾಜಿಕ ಆಧಾರವೇನೂ ಇರದೆ ಶೂನ್ಯದಿಂದ ಬಂದು ಶೂನ್ಯದಲ್ಲಿ ಲಯವಾಗಿಬಿಡುತ್ತದೆ ಎನ್ನುವ ಹಾಗೆ. ಆದರೆ ತತ್ತ್ವಶಾಸ್ತ್ರ ಕೇವಲ ಸಿದ್ಧಾಂತವಲ್ಲ. ಅದಕ್ಕೆ ಕ್ರಿಯಾಸತ್ವವೂ ಇರುತ್ತದೆ. ತತ್ತ್ವಶಾಸ್ತ್ರದ ಬೇರು

ಜೀವನದ ಸಮಸ್ಯೆಗಳಲ್ಲಿದೆ. ತತ್ತ್ವಶಾಸ್ತ್ರದ ಯಾವುದೇ ಸಿದ್ಧಾಂತವೂ ಮರಳಿ ಸಮಾಜಕ್ಕೆ ಬಂದು ಸಮಾಜದ ಪುನರ್ನಿರ್ಮಾಣಕ್ಕೆ ಸಾಧನವಾಗಬೇಕು. ಕೇವಲ ಅರಿತರೆ ಸಾಲದು. ಅರಿತವರು ಈಡೇರಿಸಲು ತೊಡಗಬೇಕು.

ಹಾಗಾದರೆ ಬ್ರಹ್ಮವಾದವು ಹೊಸ ಸಮಾಜವನ್ನು ನಿರ್ಮಿಸಲು ಸೋತದ್ದೇಕೆ? ಇದೊಂದು ದೊಡ್ಡ ಒಗಟಾಗಿದೆ. ಬ್ರಾಹ್ಮಣರು ಬ್ರಹ್ಮವಾದವನ್ನು ಅಂಗೀಕರಿಸಲಿಲ್ಲವೇನು? ಇಲ್ಲ, ಅವರು ಅಂಗೀಕರಿಸಿದರು. ಆದರೆ ಅದನ್ನು ಒಪ್ಪಿಕೊಂಡೂ ಶೂದ್ರ ಮತ್ತು ಬ್ರಾಹ್ಮಣನ ನಡುವಿನ ಅಸಮಾನತೆಯನ್ನು ಹೇಗೆ ಬೆಂಬಲಿಸಬಹುದು ಎಂಬ ಪ್ರಶ್ನೆಯನ್ನು ಅವರು ಕೇಳಿಕೊಳ್ಳಲೇ ಇಲ್ಲ. ಇದರ ಫಲದಿಂದ ಈಗ ಒಂದು ಕಡೆ ಅತ್ಯಂತ ಪ್ರಜಾಸತ್ತಾತ್ಮಕ ಸಿದ್ಧಾಂತವಾದ ಬ್ರಹ್ಮವಾದವಿದ್ದರೆ ಇನ್ನೊಂದು ಕಡೆ ಜಾತಿ, ಉಪಜಾತಿ, ಬಹಿಷ್ಕೃತ ಜಾತಿ, ಬುಡಕಟ್ಟು ಪೀಡಿತವಾದ ಸಾಮಾಜಿಕ ವಾಸ್ತವತೆ. ಇದಕ್ಕಿಂತ ವಿಪರ್ಯಾಸ ಎಲ್ಲಾದರೂ ಉಂಟೇನು? ಶಂರಾಚಾರ್ಯರ ಬೋಧನೆಗಳೂ ಇದಕ್ಕಿಂತ ಹಾಸ್ಯಾಸ್ಪದವಾಗಿವೆ. ಏಕೆಂದರೆ ಇದೇ ಶಂಕರಾಚಾರ್ಯರೇ ಬ್ರಹ್ಮವು ಇದೆಯೆಂದೂ ಅದೊಂದೇ ಸತ್ಯವೆಂದೂ ಅದೊಂದರಿಂದಲೇ ಸಕಲವೂ ವ್ಯಾಪ್ತವಾಗಿದೆಯೆಂದೂ ಬೋಧಿಸುತ್ತಲೇ ಬ್ರಾಹ್ಮಣವಾದದ ಸಾಮಾಜಿಕ ಅಸಮಾನತೆ ಯನ್ನೂ ಎತ್ತಿ ಹಿಡಿದರು. ಇಂಥ ದ್ವಂದ್ವದ ಸಿದ್ಧಾಂತವನ್ನು ರಚಿಸಿದ್ದಕ್ಕಾಗಿ ಹುಚ್ಚನು ಮಾತ್ರ ಹೆಮ್ಮೆಪಟ್ಟಾನು.

ಬ್ರಾಹ್ಮಣನು ನಿಜವಾಗಿ ಗೋ ಸಮಾನನು. ದನವು ಎಲ್ಲವನ್ನು ತಿಂದೂ ದನವಾಗೇ ಉಳಿಯುವ ಹಾಗೆ ಇವನೂ ಏನೆಲ್ಲ ತಿಂದೂ ಸಿದ್ಧಾಂತವನ್ನು ಸ್ವೀಕರಿಸಿಯೂ ಬ್ರಾಹ್ಮಣನಾಗೇ ಉಳಿಯು ತ್ತಾನೆ.

* * * *

# ಒಗಟು – ೨೩

## ಕಲಿಯುಗ – ಬ್ರಾಹ್ಮಣರು ಏತಕ್ಕಾಗಿ ಇದನ್ನು ಅನಂತವಾಗಿಸಿದ್ದಾರೆ?

ಹಿಂದೂಗಳಲ್ಲಿ ಜನಜನಿತವಾಗಿರುವ ಕಲ್ಪನೆಯೆಂದರೆ 'ಕಲಿಯುಗ'. ಪ್ರತಿಯೊಬ್ಬ ಗಂಡು–ಹೆಣ್ಣು, ಯುವಕರು–ಮುದುಕರು, ಪ್ರಬುದ್ಧರು–ಅಪ್ರಬುದ್ಧರೂ ಇದನ್ನು ಅರ್ಥಮಾಡಿಕೊಂಡಿದ್ದಾರೆ. ಅವರೆಲ್ಲರಿಗೂ ಈಗ ನಡೆಯುತ್ತಿರುವ ಯುಗ ಕಲಿಯುಗವೆಂದೂ, ಈ ಕಲಿಯುಗದಲ್ಲಿ ತಾವು ಬದುಕುತ್ತಿದ್ದೇವೆಂದೂ ಗೊತ್ತಿದೆ. ಕಲಿಯುಗ ಸಿದ್ಧಾಂತವು ಈ ಜನಗಳ ಮನಸ್ಸಿನಲ್ಲಿ ಮನೋವೈಜ್ಞಾನಿಕ ಪರಿಣಾಮವನ್ನು ಬೀರಿದೆ. ಅಂದರೆ ಇದೊಂದು ಪಾಪಕಾರೀ ಯುಗ. ಅನೀತಿಯ ಯುಗ. ಆದ್ದರಿಂದ ಈ ಯುಗದಲ್ಲಿ ಮಾನವನ ಯಾವುದೇ ಪ್ರಯತ್ನವೂ ಫಲಪ್ರದವಲ್ಲ. ಆದ್ದರಿಂದ ಈ ಪರಿಕಲ್ಪನೆ ಹೇಗೆ ಉಂಟಾಯಿತೆಂದು ವಿಚಾರಿಸುವ ಅಗತ್ಯವಿದೆ. ಇದರ ಬಗ್ಗೆ ನಾಲ್ಕು ಅಂಶಗಳು ವಿವರಣೆಯನ್ನು ಬಯಸುತ್ತವೆ. ೧. ಕಲಿಯುಗ ಅಂದರೇನು? ೨. ಕಲಿಯುಗ ಯಾವಾಗ ಪ್ರಾರಂಭವಾಯಿತು? ೩. ಕಲಿಯುಗ ಕೊನೆಗೊಳ್ಳುವುದು ಯಾವಾಗ? ಮತ್ತು ೪. ಏತಕ್ಕಾಗಿ ಈ ಕಲ್ಪನೆ ಜನರಲ್ಲಿ ಹರಡಿತು?

### I

ಮೊದಲನೆಯ ಅಂಶದಿಂದ ಪ್ರಾರಂಭಿಸೋಣ. ಈ ಕಾರಣಕ್ಕಾಗಿ 'ಕಲಿಯುಗ' ಎಂಬ ಪದವನ್ನು ಬಿಡಿಸಿ ಪ್ರತ್ಯೇಕವಾಗಿ ನೋಡೋಣ. ಯುಗ ಎಂದರೇನು? 'ಯುಗ' ಎನ್ನುವ ಪದ 'ಕಾಲ', ತಲೆಮಾರು, ಬುಡಕಟ್ಟು ಎಂಬ ಅರ್ಥದಲ್ಲಿ ಯುಗೇ ಯುಗೇ (ಪ್ರತಿಯೊಂದು ಕಾಲ), ಉತ್ತರ ಯುಗಾನಿ (ಭವಿಷ್ಯತ್ ಕಾಲ), ಉತ್ತರೆ ಯುಗೇ (ಸಂಭವ ಕಾಲ) ಮತ್ತು ಪೂರ್ವಾನಿ ಯುಗಾನಿ (ಗತ ಕಾಲ) ಇತ್ಯಾದಿ ಪದಗಳು ಋಗ್ವೇದದಲ್ಲಿ ಕಂಡುಬರುತ್ತದೆ. ಮನಷಿ, ಮಾನುಷ, ಮಾನುಷಃ ಇವು ಮನುಷ್ಯನ ತಲೆಮಾರುಗಳನ್ನು ಸೂಚಿಸುವ ಸಂದರ್ಭಗಳಲ್ಲಿ ಪ್ರಯೋಗವಾಗಿದೆ. 'ಕಾಲ' ಎನ್ನುವುದಷ್ಟೇ ಅದರ ಅರ್ಥ. 'ಯುಗ' ಎನ್ನುವ ಪದ ಎಷ್ಟು ಕಾಲಮಾನವನ್ನು ಒಳಗೊಂಡಿದೆ ಎಂಬುದರ ಬಗ್ಗೆ ನಿರ್ಧರಿಸಲು ವೈದಿಕರಲ್ಲಿ ಅನೇಕ ಚರ್ಚೆಗಳು ನಡೆದಿವೆ. 'ಯುಗ' ಎನ್ನುವ ಪದ 'ಯುಜ್' ಎಂಬ ಧಾತುವಿನಿಂದ ಸಾಧಿತವಾಗಿದೆ. 'ಯುಜ್' ಎಂದರೆ 'ಕೂಡಿಸು' ಎಂಬ ಅರ್ಥವಿದೆ.

---

*ಈ ಅಧ್ಯಾಯ ೪೫ ಟೈಪ್ ಪುಟಗಳನ್ನೊಳಗೊಂಡಿದೆ. ಈ ಅಧ್ಯಾಯದ ೯ ಪುಟಗಳಿಗೆ ಮಾತ್ರ ಸಂಖ್ಯೆ ಹಾಕಲಾಗಿದೆ. ಉಳಿದ ಪುಟಗಳಿಗೆ ಸಂಖ್ಯೆಯನ್ನು ಹಾಕಿಲ್ಲ. ಈ ಅಧ್ಯಾಯವು ಸಂಪೂರ್ಣವಾಗಿ ಸಿಕ್ಕಿದೆ. ಯಾವುದೇ ಭಾಗವೂ ನಷ್ಟವಾಗಿಲ್ಲ.*

ಖಗೋಳ ಶಾಸ್ತ್ರದಲ್ಲಿ ಬರುವ 'ಕೂಟ' ಎಂಬ ಅರ್ಥವನ್ನೇ ಅದು ಹೊಂದಿರಬಹುದು. ಪ್ರೊ॥ ವೆಬರ್ 'ಯುಗ' ಎಂಬ ಕಾಲ ಪರಿಮಾಣವು ಸೌರಘಟ್ಟಗಳಿಗೆ ಸಂಬಂಧಿಸಿದೆ ಎಂದು ತಿಳಿಸುತ್ತಾರೆ.

ಈ ಸೂಚನೆಗೆ ಅನುಸಾರವಾಗಿ ಶ್ರೀ ರಂಗಾಚಾರ್ಯರು[೧] ಈ ಸಿದ್ಧಾಂತವನ್ನು ಮುಂದುವರೆಸುತ್ತಾ "ಪ್ರಾಯಶಃ ಯುಗದ ಮೂಲ ಪರಿಕಲ್ಪನೆ ಸೂರ್ಯ–ಚಂದ್ರರು ಒಬ್ಬರನ್ನೊಬ್ಬರು ನೋಡುವ, ಅಂದರೆ ಸಂಧಿಸುವ ಒಂದು ತಿಂಗಳ ಕಾಲವಿರಬೇಕು" ಎಂದು ಹೇಳುತ್ತಾರೆ. ಈ ದೃಷ್ಟಿಕೋನವನ್ನು ಉಳಿದವರು ಒಪ್ಪುವುದಿಲ್ಲ. ಉದಾಹರಣೆಗೆ, ಶಾಮಾಶಾಸ್ತ್ರಿಯವರ ಪ್ರಕಾರ[೨] ಸ್ಕಂದ ಪುರಾಣದ ಭಾಗವಾಗಿ ಬರುವ ಸೇತು ಮಹಾತ್ಮ್ಯದಲ್ಲಿ ಒಬ್ಬ ಮನುಷ್ಯನ ಆಯುಷ್ಯ ಕಾಲ ಎಂಬ ಅರ್ಥದಲ್ಲಿ 'ಯುಗ'ವನ್ನು ಬಳಸಲಾಗಿದೆ. ಇದೇ ಆಧಾರದ ಮೇಲೆ 'ಪರ್ವ' ಅಥವಾ ಪಕ್ಷ, ಚಾಂದ್ರ ಮಾಹೆಯ ಕೃಷ್ಣಪಕ್ಷ, ಶುಕ್ಲಪಕ್ಷ ಎಂಬ ಅರ್ಥದಲ್ಲೂ ಬಳಸಲಾಗಿದೆ.

ಈ ಯಾವ ಪ್ರಯತ್ನಗಳೂ 'ಯುಗ'ದ ಕಾಲನಿರ್ಣಯ ಮಾಡಲು ವೈದಿಕರು ಅಪೇಕ್ಷಿಸಿದ ಅರ್ಥ ಏನು ಎಂಬುದನ್ನೂ ತಿಳಿಯಲು ಸಹಾಯ ಮಾಡುವುದಿಲ್ಲ.

ವೈದಿಕರು ಅಥವಾ ವೇದಾಂತಿಗಳ ಬರೆವಣಿಗೆಯಲ್ಲಿ 'ಯುಗ' ಎಂಬ ಪದ ಪ್ರಯೋಗದ ಸರಿಯಾದ ಅರ್ಥ ತಿಳಿಯುವುದಿಲ್ಲ. ವೈದಿಕರಿಗಿಂತ ವೇದಾಂಗ ಜ್ಯೋತಿಷಿಗಳಲ್ಲಿ 'ಯುಗ' ಎಂಬ ಪದವು ನಿರ್ದಿಷ್ಟ ಕಾಲವನ್ನು ಸೂಚಿಸುತ್ತದೆ. ಇವರ ಪ್ರಕಾರ ಯುಗವೆಂದರೆ ಐದು ವರ್ಷಗಳ ಒಂದು ಕಾಲಚಕ್ರ. ಇದನ್ನೇ ಅವರು ೧. ಸಂವತ್ಸರ ೨. ಪರಿವತ್ಸರ ೩. ಇದ್‌ವತ್ಸರ ೪. ಅನುವತ್ಸರ ೫. ವತ್ಸರ ಎಂದು ಕರೆಯುತ್ತಾರೆ.

'ಕಲಿ' ಪದಕ್ಕೆ ಬಂದರೆ, ಅದು ಕೃತ, ತ್ರೇತಾ, ದ್ವಾಪರ ಮತ್ತು ಕಲಿ ಎಂಬ ನಾಲ್ಕು ಯುಗಗಳಿಂದಾದ ಒಂದ ಕಾಲಚಕ್ರ, 'ಕಲಿ' ಪದದ ಮೂಲವೇನು? ಕೃತ, ತ್ರೇತಾ, ದ್ವಾಪರ, ಕಲಿ ಈ ಪದಗಳು ಬೇರೆ ಬೇರೆ ಸಂದರ್ಭಗಳಲ್ಲೂ ಪ್ರಯೋಗಿಸಲ್ಪಟ್ಟಿವೆ ಎಂದು ತಿಳಿದುಬರುತ್ತದೆ. 'ಕಲಿ' ಮತ್ತು ಇತರ ಪದಗಳು ದಾಳದ ಆಟದ ಸಂದರ್ಭದಲ್ಲೂ ಪ್ರಯೋಗಿಸಲ್ಪಟ್ಟಿವೆ.

ಆಟವಾಡುವ ದಾಳದ ತುಂಡುಗಳು ವಿಭಟಕ ಮರದ ಕಂದು ಬಣ್ಣದ ಹಣ್ಣಿನಿಂದ ಮಾಡಲ್ಪಟ್ಟಿರುವುದು ಎಂದು ಋಗ್ವೇದದಿಂದ ತಿಳಿದುಬರುತ್ತದೆ. ಇದು ಜಾಯಿಕಾಯಿ ಗಾತ್ರದ ಒಂದು ಕಾಯಿ. ಹೆಚ್ಚು ಕಮ್ಮಿ ದುಂಡಗೆ ಐದು ಸಮತಟ್ಟಾದ ಮೂಲೆಗಳನ್ನು ಹೊಂದಿರುತ್ತದೆ. ನಂತರ ದಾಳಗಳು ಐದು ಮೂಲೆಗಳದ್ದಾಗಿರದೆ ನಾಲ್ಕು ಮೂಲೆಗಳುಳ್ಳದ್ದಾದವು. ದಾಳದ ಪ್ರತಿ ಮಗ್ಗುಲಲ್ಲೂ, ೪,೨,೩,೧ ಸಂಖ್ಯೆಗಳನ್ನು ಗುರುತುಹಾಕಲಾಯಿತು. ೪ ಸಂಖ್ಯೆಯಿಂದ ಗುರುತಿಸಿದ ಮಗ್ಗುಲನ್ನು ಕೃತವೆಂದೂ, ೩ ಸಂಖ್ಯೆಯಿಂದ ಗುರುತಿಸಿದ ಮಗ್ಗುಲನ್ನು ತ್ರೇತವೆಂದೂ, ೨ನ್ನು ದ್ವಾಪರವೆಂದೂ ೧ನ್ನು ಕಲಿಯೆಂದೂ ಕರೆಯಲಾಯಿತು. ಶಾಮಾಶಾಸ್ತ್ರಿಗಳು ದಾಳದಾಟವು ಯಾಗದ ಒಂದು ಭಾಗವಾಯಿತೆಂದೂ, ಅದನ್ನು ಹೇಗೆ ಆಡುವುದೆಂದೂ ವಿವರವನ್ನಿತ್ತಿದ್ದಾರೆ. ಅದು ಹೀಗಿದೆ:

"ಯಾಗ ಮಾಡುವವನಿಗೆ ಸೇರಿದ ಗೋವನ್ನು ಹೊಡೆದುಕೊಂಡು ಕೆಲವು ಆಟಗಾರರು ಪಟ್ಟಣದ ಅಥವಾ ಹಳ್ಳಿಯ ಬೀದಿಗಳಲ್ಲಿ ಹೋಗುತ್ತಿದ್ದರು. ಗೋವನ್ನು ಪಣಕ್ಕೆ ಒಡ್ಡಿ ಬೇರೆ ಬೇರೆ

---

೧. ದಿ ಯುಗಾಸ್ : ಎ ಕ್ವೆಶ್ಚನ್ ಆಫ್ ಹಿಂದೂ ಕ್ರಾನಾಲಜಿ ಅಂಡ್ ಹಿಸ್ಟರಿ, ಪು.೧೯

೨. ದ್ರಾಪ್ಸಾ : ದಿ ವೇದಿಕ್ ಸೈಕಲ್ ಆಫ್ ಎಕ್ಲಿಪ್ಸಸ್ (೧೯೩೮), ಪು. ೮೮

ಗುಂಪುಗಳಾಗಿ ದಾಳದಾಟವನ್ನು ಆಡುತ್ತಿದ್ದರು. ಎದುರಾಳಿಗಳು ಪಣಕ್ಕೆ ದವಸಧಾನ್ಯಗಳನ್ನು ಒಡ್ಡುತ್ತಿದ್ದರು. ಪ್ರತಿಯೊಬ್ಬ ಆಟಗಾರನೂ ನೂರು ಅಥವಾ ಅದಕ್ಕಿಂತ ಹೆಚ್ಚಿನ ಕವಡೆಗಳನ್ನು ನೆಲದಮೇಲೆ ಬಿಡುತ್ತಿದ್ದನು. ಹೀಗೆ ಬಿಟ್ಟ ಕವಡೆಗಳಲ್ಲಿ ಮೇಲ್ಮುಖವಾಗಿ ಬಿದ್ದವೆಷ್ಟು, ಮಗುಚಿ ಬಿದ್ದವೆಷ್ಟು ಎಂಬುದನ್ನು ಲೆಕ್ಕಹಾಕಿ ನಾಲ್ಕರಿಂದ ಅವು ಸರಿಯಾಗಿ ಭಾಗಿಸಲ್ಪಟ್ಟರೆ ಯಾಗ ಮಾಡುವವನು ಗೆದ್ದಂತೆ. ಇಲ್ಲದಿದ್ದರೆ ಸೋತಂತೆ. ಹೀಗೆ ಗೆದ್ದ ಧಾನ್ಯದಿಂದ ನಾಲ್ಕು ಜನ ಬ್ರಾಹ್ಮಣರಿಗೆ ಯಾಗದ ದಿನ ಭೋಜನವನ್ನು ಮಾಡಿಸುತ್ತಿದ್ದರು.''

ವೇದ ಕೃತಿಗಳಿಗೆ ಸಂಬಂಧಪಟ್ಟಂತೆ ಪ್ರೊ. ಎಗ್‌ಲಿಂಗ್ಸ್[೧] ಅವರು ಉದ್ಧರಿಸಿರುವ ಹಾಗೆ ಪ್ರಾಚೀನ ಕಾಲದಿಂದಲೂ ದಾಳದ ಆಟ ಆಡುತ್ತಿದ್ದುದರ ಬಗ್ಗೆ ಯಾವ ಸಂಶಯವೂ ಇಲ್ಲ. ಈ ಉದ್ಧೃತದಿಂದ ಮತ್ತೊಂದು ಅಂಶವೂ ಸ್ಪಷ್ಟವಾಗುತ್ತದೆ. ಅದೇನೆಂದರೆ, ಈ ಆಟವು ಐದು ದಾಳಗಳಿಂದ ಆಡಲ್ಪಡುತ್ತಿತ್ತು. ಅವುಗಳಲ್ಲಿ ನಾಲ್ಕನ್ನು ಕೃತವೆಂದೂ ಐದನೆಯದನ್ನು ಕಲಿಯೆಂದೂ ಕರೆಯುತ್ತಿದ್ದರು. ಈ ಆಟಗಳನ್ನು ಬೇರೆ ಬೇರೆ ರೀತಿಯಲ್ಲೂ ಆಡುತ್ತಿದ್ದರು. ಪ್ರಾರಂಭದಲ್ಲಿ ಪ್ರತಿ ದಾಳದ ಮಗ್ಗುಲೂ ಮೇಲ್ಮುಖವಾಗಿ ಬಿದ್ದಾಗಲೂ ಮಗಚಿ ಬಿದ್ದಾಗಲೂ ಒಂದೇ ಸಂಖ್ಯೆಯನ್ನು ತೋರಿಸಿದರೆ ಆಟ ಗೆದ್ದಂತೆ ಆಗುತ್ತಿತ್ತು. ದಾಳದಾಟ ರಾಜಸೂಯಯಾಗದ ಒಂದು ಭಾಗವಾಗಿ ಯಾಗದ ಅಗ್ನಿಯನ್ನು ಸ್ಥಾಪಿಸುವ ಸಲುವಾಗಿಯೂ ಆಡಲ್ಪಡುತ್ತಿತ್ತು.

ಕೃತ, ತ್ರೇತಾ, ದ್ವಾಪರ ಮತ್ತು ಕಲಿ ಎಂಬ ಪದಗಳು ಗಣಿತ ಶಾಸ್ತ್ರದಲ್ಲೂ ಪ್ರಯೋಗಿಸಲ್ಪಡುತ್ತಿದ್ದವು. ಜೈನಧರ್ಮದ ಬೃಹತ್ ಕೃತಿಯಾದ 'ಭಗವತಿ ಸೂತ್ರ'ದ ಮೇಲೆ ಅಭಯ ದೇವಸೂರಿ ಬರೆದ ಈ ಕೆಳಕಂಡ ಪಠ್ಯದ ಭಾಗದಿಂದ ಇದು ಸ್ಪಷ್ಟವಾಗಿ ಗೋಚರಿಸುತ್ತದೆ.

''ಗಣಿತಶಾಸ್ತ್ರದ ಪ್ರಕಾರ ಸಮಸಂಖ್ಯೆಯನ್ನು 'ಯುಗ್ಮ' ಎಂದು ಕರೆಯುತ್ತಾರೆ. ಬೆಸಸಂಖ್ಯೆಯನ್ನು 'ಓಜಾಃ' ಎಂದು ಕರೆಯುತ್ತಾರೆ. ಇಲ್ಲಿ ಎರಡು ಸಂಖ್ಯೆಗಳು 'ಓಜಾಃ' ಎಂದು ಹೆಸರಿಸಲು ಯೋಗ್ಯವಾಗಿವೆ. ಆದರೂ ಇಲ್ಲಿ 'ಯುಗ್ಮ' ಅನ್ನುವ ಪದ 'ನಾಲ್ಕು ಯುಗ್ಮಗಳು' ಅಂದರೆ ನಾಲ್ಕು ಸಂಖ್ಯೆಗಳೆಂದು ಅರ್ಥವಾಗುತ್ತದೆ. ಅವುಗಳಲ್ಲಿ ಕೃತ–ಯುಗ್ಮ: ಕೃತ ಅಂದರೆ ಪರಿಪೂರ್ಣವಾದದ್ದು, ಸಂಪೂರ್ಣವಾದದ್ದು ಎಂದರ್ಥ. ಅಂದರೆ ನಾಲ್ಕಾದ ಮೇಲೆ ಇನ್ನು ಯಾವ ಸಂಖ್ಯೆಯೂ ಇಲ್ಲ ಎಂದು. ಅದಕ್ಕೆ ಬೇರೆ ಹೆಸರೇ ಇದೆ (ಅಂದರೆ, ಕೃತ ಮತ್ತಿತರ ಹೆಸರುಗಳಿಗಿಂತ ಬೇರೆಯಾದದ್ದೆಂದು). ಅಪರಿಪೂರ್ಣವಲ್ಲದ 'ತ್ರೈಯೋಜ' ಮುಂತಾದ ಸಂಖ್ಯೆಗಳು. ವಿಶೇಷವಾದ ಬೆಸಸಂಖ್ಯೆಯು ಕೃತಯುಗ್ಮ, 'ತ್ರೈಯೋಜ' ಇದ್ದಂತೆ ಆ ನಿರ್ದಿಷ್ಟವಾದ ಬೆಸಸಂಖ್ಯೆ. ಕೃತಯುಗ್ಮಕ್ಕಿಂತ ಮೇಲಿನ ಬೆಸಸಂಖ್ಯೆಯೇ ತ್ರೈಯೋಜ. ದ್ವಾಪರ ಯುಗವು ಕೃತಯುಗ್ಮದಂತೆ ಮತ್ತೊಂದು ಸಮಸಂಖ್ಯೆ. ಆದರೆ ಅದಕ್ಕಿಂತ ಬೇರೆಯಾದ ಸಮಸಂಖ್ಯೆ. ಇದನ್ನು ಎರಡು ಸಂಖ್ಯೆಗಳಿಂದ ಪ್ರಾರಂಭಿಸಿದ್ದು ಅಥವಾ ಕೃತಯುಗ್ಮಕ್ಕಿಂತ ಹೆಚ್ಚಿನದ್ದು ದ್ವಾಪರಯುಗ್ಮ. ದ್ವಾಪರ ಎನ್ನುವುದು ವಿಶೇಷವಾದ ವ್ಯಾಕರಣಕ್ಕೆ ಸಂಬಂಧಿಸಿದ ಪದ. 'ಕಲ್ಯೋಜ' ಇದ್ದಂತೆ. ವಿಶೇಷವಾದ ಸಮಸಂಖ್ಯೆ. ಅದು ಕಲಿಯಲ್ಲಿ ಬೆಸವಾಗಿರುತ್ತದೆ. ಅಂದರೆ ಕೃತಯುಗ್ಮ ಕಲ್ಯೋಜವೆಂದು ಕರೆಯಲ್ಪಡುತ್ತದೆ. ಈ ಸಂಖ್ಯಾಮಾಲೆಯಲ್ಲಿ ಸಂಖ್ಯೆ ನಾಲ್ಕು, ಅದು ನಾಲ್ಕರಿಂದ ಭಾಗವಾಗಬೇಕಾಗಿಲ್ಲ. ಏಕೆಂದರೆ ಅದೇ ನಾಲ್ಕು ಆಗಿರುವುದರಿಂದ ಅದನ್ನು 'ಕೃತಯುಗ್ಮ'ವೆಂದು ಕರೆಯುತ್ತಾರೆ.''

---

೧. 'ಶತಪಥ ಬ್ರಾಹ್ಮಣ', ಸಂಪುಟ IV ಪು. ೧೦೬ರ ಪ್ರಸ್ತಾವನೆಯಲ್ಲಿ ಈ ವಿಷಯವನ್ನು ಕುರಿತು ಅವರು ಬರೆದ ಟಿಪ್ಪಣಿ ನೋಡಿರಿ.

ಶಾಮಾಶಾಸ್ತ್ರಿ[೧] ಅವರು ಈ ಪದಗಳು ಬೇರೆಯ ಅರ್ಥದಲ್ಲೂ ಬಳಕೆಯಾಗಿರುವುದನ್ನು ತಿಳಿಸುತ್ತಾರೆ. ಅವುಗಳೆಂದರೆ ಕೃತಪರ್ವ, ತ್ರೇತಾಪರ್ವ, ದ್ವಾಪರ ಪರ್ವ ಮತ್ತು ಕಲಿಪರ್ವ. ಪರ್ವ ಎಂದರೆ ೧೫ ತಿಥಿಗಳ ಅಥವಾ ದಿವಸಗಳ ಒಂದು ಕಾಲ ಅಥವಾ ಪಕ್ಷ. ಧಾರ್ಮಿಕ ಕಾರಣಕ್ಕೆ ಸಂಬಂಧಿಸಿದಂತೆ ಒಂದು ಪರ್ವವು ಮುಕ್ತಾಯವಾಗುತ್ತದೆ ಎಂಬುದು ಬಹಳ ಮುಖ್ಯ. ಪರ್ವಗಳು ಅವುಗಳ ಮುಗಿತಾಯಕ್ಕೆ ತಕ್ಕಂತೆ ನಾಲ್ಕು ವರ್ಗಗಳಾಗಿ ವಿಂಗಡಿಸಲ್ಪಟ್ಟಿವೆ. ಅವು ೧. ಸುರ್ಯೋದಯ, ೨. ದಿನದ ನಾಲ್ಕನೇ ಒಂದು ಭಾಗ ಅಥವಾ ಪಾದಗಳು, ೩. ದಿನದ ಎರಡು ಕಾಲುಭಾಗಗಳು ಅಥವಾ ಒಂದು ದಿನದ ಪಾದಗಳು ಮತ್ತು ೪. ಮೂರು ಕಾಲುಭಾಗಗಳು ಅಥವಾ ಅದಕ್ಕಿಂತ ಹೆಚ್ಚಿನದು ಅಥವಾ ದಿನದ ಪಾದ. ಮೊದಲನೆಯದನ್ನು ಕೃತಪರ್ವವೆಂದೂ, ಎರಡನೆಯದನ್ನು ತ್ರೇತಾಪರ್ವವೆಂದು, ಮೂರನೆಯದನ್ನು ದ್ವಾಪರಪರ್ವವೆಂದೂ, ನಾಲ್ಕನೆಯದನ್ನು ಕಲಿಪರ್ವವೆಂದೂ ಕರೆಯಬಹುದು.

'ಕಲಿ' ಮತ್ತು 'ಯುಗ' ಎಂಬ ಪದಗಳನ್ನು ಒಂದು ಕಾಲದಲ್ಲಿ ಯಾವುದೇ ಅರ್ಥದಿಂದ ಬಳಸಿದ್ದರೂ, 'ಕಲಿಯುಗ' ಎಂಬ ಪದವನ್ನು ಹಿಂದೂ ವ್ಯವಸ್ಥೆಯಲ್ಲಿ ಕಾಲದ ಲೆಕ್ಕಾಚಾರಕ್ಕೆ ಹಿಂದಿನಿಂದಲೂ ಬಳಸುತ್ತಿದ್ದರು. ಹಿಂದೂಗಳ ಪ್ರಕಾರ ನಾಲ್ಕು ಯುಗಗಳ ಕಾಲಚಕ್ರವಿದೆ. ಅವುಗಳಲ್ಲಿ ಕಲಿಯುಗವೂ ಒಂದು. ಉಳಿದವುಗಳನ್ನು ಕೃತ, ತ್ರೇತಾ, ದ್ವಾಪರವೆಂದು ಕರೆಯುತ್ತಾರೆ.

## II

ಇಂದಿನ ಕಲಿಯುಗ ಯಾವಾಗ ಪ್ರಾರಂಭವಾಯಿತು? ಈ ಪ್ರಶ್ನೆಗೆ ಎರಡು ವಿಭಿನ್ನ ಉತ್ತರಗಳಿವೆ.

ಐತರೇಯ ಬ್ರಾಹ್ಮಣದ ಪ್ರಕಾರ ವೈವಸ್ವತ ಮನುವಿನ ಮಗ ನಭನೇದಿಷ್ಟನಿಂದ ಈ ಕಲಿಯುಗ ಪ್ರಾರಂಭವಾಯಿತು. ಪುರಾಣಗಳ ಪ್ರಕಾರ ಮಹಾಭಾರತ ಯುದ್ಧವಾದ ನಂತರ ಕೃಷ್ಣನ ಸಾವಿನ ನಂತರ ಪ್ರಾರಂಭವಾಗುತ್ತದೆ.

ಡಾ॥ ಶಾಮಾಶಾಸ್ತ್ರಿಗಳ ಪ್ರಕಾರ ಮೊದಲನೆಯದನ್ನು ಕ್ರಿಸ್ತಪೂರ್ವ ೩೧೦೧ಕ್ಕೆ ಇಳಿಸಲಾಗಿದೆ ಎಂದು ಹೇಳುತ್ತಾರೆ. ಎರಡನೆಯದನ್ನು ಶ್ರೀ ಗೋಪಾಲ ಅಯ್ಯರ್‌ರವರು ಬಹಳ ಎಚ್ಚರಿಕೆಯಿಂದ ಲೆಕ್ಕಾಚಾರ ಹಾಕಿದ್ದಾರೆ. ಅವರ ದೃಷ್ಟಿಕೋನದಿದ ಮಹಾಭಾರತ ಯುದ್ಧವು ಕ್ರಿ. ಪೂ. ಅಕ್ಟೋಬರ್ ೧೪ರಂದು ಪ್ರಾರಂಭವಾಗಿ ೩೧ನೇ ಅಕ್ಟೋಬರ್ ೧೧೯೪ರ ರಾತ್ರಿ ಕೊನೆಗೊಂಡಿತು. ಅವರು ಕೃಷ್ಣನ ಸಾವು ಯುದ್ಧ ಮುಗಿದ ೧೬ ವರ್ಷಗಳ ನಂತರ ಆಯಿತು ಎನ್ನುತ್ತಾರೆ. ಪರೀಕ್ಷಿತ ಪಟ್ಟಕ್ಕೆ ಬರುವಾಗ ಅವನಿಗೆ ೧೬ ವರ್ಷಗಳಾಗಿದ್ದವು ಎನ್ನುವ ಹಿನ್ನೆಲೆಯನ್ನು ಆಧಾರವಾಗಿಟ್ಟುಕೊಂಡಿದ್ದಾರೆ. ಇದಕ್ಕೆ ಸಂಬಂಧಪಟ್ಟ ಹಾಗೆ ಪಾಂಡವರು ಪರೀಕ್ಷಿತನಿಗೆ ಪಟ್ಟಕಟ್ಟಿದ ತಕ್ಷಣ ಮಹಾಪ್ರಸ್ಥಾನಕ್ಕೆ ಹೋದರು. ಆ ದಿನವೇ ಕೃಷ್ಣನೂ ಸತ್ತದ್ದು ಎಂಬ ಆಧಾರದ ಮೇಲೆ ಲೆಕ್ಕಹಾಕಿದ್ದಾರೆ. ಕ್ರಿ.ಪೂ. ೧೧೭೭ರಿಂದ ಕಲಿಯುಗ ಪ್ರಾರಂಭವಾಗುತ್ತದೆ ಎಂದು ತಿಳಿಯುತ್ತದೆ.

ಕ್ರಿ.ಪೂ. ೩೧೦೧ ಮತ್ತು ಕ್ರಿ.ಪೂ. ೧೧೭೭ ಹೀಗೆ ಎರಡು ಬೇರೆ ಬೇರೆ ದಿನಾಂಕಗಳಂದು

---

೧. ಶಾಮಾಶಾಸ್ತ್ರಿ, 'ದ್ರಾಪ್ಸಾ', ಪು.೯೨–೯೩

ಕಲಿಯುಗ ಪ್ರಾರಂಭವಾಗುತ್ತದೆ. ಇದು ಕಲಿಯುಗದ ಬಗ್ಗೆ ಮೊದಲು ಒಗಟು. ಹೀಗೆ ಬಹಳ ವ್ಯತ್ಯಾಸವಿರುವ ಒಂದೇ ಯುಗದ ಪ್ರಾರಂಭದ ದಿನಾಂಕಗಳಿಗೆ ಎರಡು ಬೇರೆ ಬೇರೆ ವಿವರಣೆಗಳಿವೆ. ಒಂದು ವಿವರಣೆ ಕ್ರಿ.ಪೂ. ೩೧೦೧. ಇದು ಕಲ್ಪದ ಪ್ರಾರಂಭ, ಕಲಿಯದಲ್ಲ. 'ಕಲ್ಪ' ಎನ್ನುವದಕ್ಕೆ ಬದಲಾಗಿ 'ಕಲಿ' ಎಂದು ಪ್ರತಿ ಮಾಡುವವನು ತಪ್ಪಾಗಿ ಓದಿಕೊಂಡಿರುವುದೇ ಈ ಗಲಿಬಿಲಿಗೆ ಕಾರಣ. ಇನ್ನೊಂದು ವಿವರಣೆ ಡಾ. ಶಾಮಾಶಾಸ್ತ್ರಿಯವರು ಕೊಟ್ಟಿರುವುದು. ಅವರ ಪ್ರಕಾರ ಎರಡು ಕಲಿಯುಗಗಳನ್ನು ಭಿನ್ನವಾಗಿ ನೋಡಬೇಕೆನ್ನುವುದು. ಮೊದಲನೆಯದು ಕ್ರಿ.ಪೂ. ೩೧೦೧ ರಿಂದ ಪ್ರಾರಂಭವಾಗುವುದು. ಮತ್ತೊಂದು ಕ್ರಿ.ಪೂ. ೧೨೬೦ ಅಥವಾ ೧೨೪೦ರಲ್ಲಿ ಪ್ರಾರಂಭವಾಗುವುದು. ಮೊದಲನೆಯದು ಕ್ರಿ.ಪೂ. ೧೮೪೦ ಅಥವಾ ೧೮೬೦ರಲ್ಲಿ ಕೊನೆಗೊಳ್ಳುತ್ತದೆ.

## III

ಕಲಿಯುಗ ಕೊನೆಗೊಳ್ಳುವುದು ಯಾವಾಗ? ಈ ಪ್ರಶ್ನೆಗೆ ಸಂಬಂಧಿಸಿದಂತೆ ಗರ್ಗಾಚಾರ್ಯ ಎಂಬ ಬಹಳ ದೊಡ್ಡ ಖಗೋಳಶಾಸ್ತ್ರಜ್ಞನ ಪ್ರಕಾರ ಅಶೋಕನ ನಂತರ ನಾಲ್ಕನೆ ತಲೆಮಾರಿನ ಶಾಲಿಶುಕ ಮೌರ್ಯನ ಬಗ್ಗೆ ತನ್ನ 'ಸಿದ್ಧಾಂತ'ದಲ್ಲಿ ಈ ರೀತಿ ಹೇಳಿದ್ದಾನೆ:[೧]

"ಆಗ ದುಷ್ಟ ಧೈರ್ಯಶಾಲಿಗಳಾದ ಗ್ರೀಕರು ಸಾಕೇತ, ಪಾಂಚಾಲ ದೇಶದಿಂದ ಮಥುರಾವರೆಗೆ ಧ್ವಂಸಗೊಳಿಸಿ ಕುಸುಮಧ್ವಜವನ್ನು (ಪಾಟ್ನ) ಮುಟ್ಟಿದರು: ಪುಷ್ಪಪುರ ಎಲ್ಲ ಪ್ರಾಂತ್ಯಗಳನ್ನು ತನ್ನ ತೆಕ್ಕೆಗೆ ತೆಗೆದುಕೊಂಡಾಗ ಎಲ್ಲವೂ ಅಸ್ತವ್ಯಸ್ತವಾಗಿದ್ದವು. ಗೆಲ್ಲಲಸಾಧ್ಯವಾದ ಯವನರು ಮಧ್ಯದೇಶದಲ್ಲಿ ಉಳಿಯುವುದಿಲ್ಲ. ಅವರಲ್ಲೇ ಕ್ರೂರ ಯಾದವೀ ಕಲಹವಾಗುತ್ತದೆ. ಗ್ರೀಕರ ನಾಶದ ನಂತರ ಯುಗದ ಕೊನೆಯಲ್ಲಿ ಔಧದಲ್ಲಿ ಏಳು ಶಕ್ತಶಾಲಿ ರಾಜರು ಆಳುತ್ತಾರೆ."

ಇಲ್ಲಿ ಮುಖ್ಯವಾದ ಪದಗಳೆಂದರೆ "ಗ್ರೀಕರ ನಾಶದ ನಂತರ ಯುಗದ ಕೊನೆಯಲ್ಲಿ" ಎಂಬುದು. ಈ ಪದಗಳು ಎರಡು ಪ್ರಶ್ನೆಗಳಿಗೆ ಅವಕಾಶ ಮಾಡಿಕೊಡುತ್ತವೆ. ೧. ಗರ್ಗನ ಮನಸ್ಸಿನಲ್ಲಿರುವುದು ಯಾವ ಯುಗ? ೨. ಯಾವಾಗ ಗ್ರೀಕರ ಸೋಲು ಮತ್ತು ನಾಶ ಭಾರತದಲ್ಲಿ ಆಯಿತು? ಈಗ ಈ ಪ್ರಶ್ನೆಗಳಿಗೆ ಉತ್ತರಕ್ಕೆ ಯಾವ ಸಂಶಯವೂ ಇಲ್ಲ. : 'ಯುಗ' ಎಂದರೆ ಅವನಿಗೆ ಕಲಿಯುಗ ಎಂಬ ಅರ್ಥ. ಗ್ರೀಕರ ಸೋಲು ಮತ್ತು ನಾಶ ಕ್ರಿ.ಪೂ. ೧೬೫ರಲ್ಲಿ ಆಯಿತು. ಇದು ವಾಸ್ತವಾಂಶಗಳಿಂದ ಮಹಾಭಾರತದ ವನಪರ್ವದ ೧೮೮ ಮತ್ತು ೧೯೦ನೇ ಅಧ್ಯಾಯಗಳಲ್ಲಿ ನೇರವಾದ ಹೇಳಿಕೆಗಳೇ ಇವೆ. ಅವೇನೆಂದರೆ "ಬರ್ಬರ ಶಕರು, ಯವನರು, ಬಾಹ್ಲಿಕರು ಮತ್ತು ಅನೇಕರು ಭರತವರ್ಷವನ್ನು 'ಕಲಿಯುಗದ ಕೊನೆಗೆ' ಹಾಳುಗೆಡುವುತ್ತಾರೆ" ಎಂಬುದು.

ಈ ಎರಡು ಹೇಳಿಕೆಗಳನ್ನೂ ಒಟ್ಟಿಗೆ ಇಟ್ಟರೆ ಕಲಿಯುಗವು ಕ್ರಿ.ಪೂ.೧೬೫ರಲ್ಲಿ ಕೊನೆಗೊಳ್ಳುತ್ತದೆ. ಈ ನಿರ್ಣಯವನ್ನು ಸಮರ್ಥಿಸಲು ಇನ್ನೂ ಒಂದು ವಾದವಿದೆ. ಮಹಾಭಾರತದ ಪ್ರಕಾರ, ಕಲಿಯುಗವು ಒಂದು ಸಾವಿರ ವರ್ಷಗಳನ್ನು ಒಳಗೊಂಡಿರುತ್ತದೆ.[೨] ಯುಗವು ಕ್ರಿ.ಪೂ.೧೧೭೧ರಲ್ಲಿ ಪ್ರಾರಂಭವಾಯಿತೆಂಬ

---

೧. ಆರ್.ಸಿ. ದತ್ತರ 'ಸಿವಿಲೈಜೇಶನ್ ಇನ್ ಏನ್ಷಿಯಂಟ್ ಇಂಡಿಯಾ' ಗ್ರಂಥದಲ್ಲಿ ಉದ್ಧೃತವಾಗಿದೆ.
೨. 'ಕ್ರಾನಾಲಜಿ ಆಫ್ ಏನ್ಷಿಯಂಟ್ ಇಂಡಿಯಾ', ಪು. ೧೧೭

ಹೇಳಿಕೆಯನ್ನು ಒಪ್ಪಿಕೊಂಡು ಒಂದು ಸಾವಿರ ವರ್ಷಗಳನ್ನು ಕಳೆದರೆ ಕ್ರಿ.ಪೂ.೧೭೧ರಲ್ಲೇ ಕಲಿಯುಗ ಮುಗಿದು ಹೋಯಿತೆಂಬುದರಿಂದ ಅಂದರೆ, ತಪ್ಪಿಸಿಕೊಳ್ಳುವುದು ಸಾಧ್ಯವೇ ಇಲ್ಲ. ಪ್ರಮುಖ ಖಗೋಳಶಾಸ್ತ್ರಜ್ಞನ[೧] ಅಭಿಮತದಂತೆ ಕಲಿಯುಗ ಕ್ರಿ.ಪೂ. ೧೬೫ರಲ್ಲಿ ಕೊನೆಗೊಂಡಿತೆಂದು ಹೇಳುವುದಕ್ಕೂ ಸಂಶಯಬೇಕಾಗಿಲ್ಲ. ಅಷ್ಟಾದರೂ ಈ ನಿರ್ಣಯವಾದರೂ ಏನು? ವೈದಿಕ ಬ್ರಾಹ್ಮಣರ ನಿರ್ಣಯದ ಪ್ರಕಾರ ಕಲಿಯುಗ ಕೊನೆಗೊಂಡಿಲ್ಲ. ಅದು ಇನ್ನೂ ಮುಂದುವರೆಯುತ್ತದೆ. 'ಸಂಕಲ್ಪ' ಎಂಬ ಪದದ ಮೂಲಕ ಪ್ರತಿಯೊಬ್ಬ ಹಿಂದುವೂ ಇವತ್ತಿಗೂ ಪ್ರತಿ ಧಾರ್ಮಿಕ ಕಾರ್ಯಗಳಲ್ಲಿ ತೊಡಗುವಾಗಲೂ ಘೋಷಣೆಯನ್ನು ಮಾಡುತ್ತಾನೆ.

"ಈ ಜಂಬೂದ್ವೀಪದಲ್ಲಿ ಭರತವರ್ಷದಲ್ಲಿ ದ್ವಿತೀಯ ಪರಾರ್ಥದ ಶ್ರೀ ವರಾಹಕಲ್ಪದ ಕಲಿಯುಗದಲ್ಲಿ ಪ್ರಭವಾದಿ ಸಂವತ್ಸರಗಳ ಮಧ್ಯೆ..... ಸಂವತ್ಸರದಲ್ಲಿ ದಕ್ಷಿಣಾ/ಉತ್ತರಾಯಣದಲ್ಲಿ ಶುಕ್ಲ/ಕೃಷ್ಣಪಕ್ಷದಲ್ಲಿ.... ತಿಥಿಯಂದು ಇಂಥ ವಾರದಲ್ಲಿ .... ಭಗವಂತನ ಪ್ರೀತ್ಯರ್ಥವಾಗಿ.... ಇಂಥ ಕರ್ಮವನ್ನು ಮಾಡಲು ಉದ್ಯುಕ್ತನಾಗುತ್ತಿದ್ದೇನೆ."

ಖಗೋಳಶಾಸ್ತ್ರಜ್ಞರು ಕಲಿಯುಗ ಮುಗಿದುಹೋಗಿದೆಯೆಂದು ಹೇಳಿದರೂ ಇಲ್ಲಿ ಗಮನಾರ್ಹ ಪ್ರಶ್ನೆಯೆಂದರೆ ವೈದಿಕ ಬ್ರಾಹ್ಮಣರು ಏಕೆ ಮತ್ತು ಹೇಗೆ ಕಲಿಯುಗವನ್ನು ಮುಂದೆ ಹಾಕುತ್ತಾರೆಂಬುದು. ಇಲ್ಲಿ ನಾವು ಮೊದಲು ನಿರ್ಧಾರ ಮಾಡಬೇಕಾದದ್ದೇನೆಂದರೆ ಕಲಿಯುಗದ ನಿಜವಾದ ಕಾಲವೇನು? ವಿಷ್ಣು ಪುರಾಣದ ಪ್ರಕಾರ:

"ಕೃತಯುಗವು ೪೦೦೦, ತ್ರೇತವು ೩೦೦೦, ದ್ವಾಪರ ೨೦೦೦ ಮತ್ತು ಕಲಿ ೧೦೦೦ ವರ್ಷಗಳನ್ನೊಳಗೊಂಡಿವೆ. ಹೀಗೆ ಹಿಂದಿನದನ್ನು ತಿಳಿದವರು ಘೋಷಿಸಿದ್ದಾರೆ."

ಹೀಗೆ ಕಲಿಯುಗವು ಮೂಲತಃ ೧೦೦೦ ವರ್ಷಗಳನ್ನು ಮಾತ್ರ ಒಳಗೊಂಡಿತ್ತು. ಈ ಲೆಕ್ಕದ ಪ್ರಕಾರ ಕಲಿಯುಗ ಯಾವಾಗಲೋ ಕೊನೆಗೊಳ್ಳಬೇಕಾಗಿತ್ತು. ವೈದಿಕ ಬ್ರಾಹ್ಮಣರ ಲೆಕ್ಕಾಚಾರದ ಪ್ರಕಾರವೂ ಯಾವಾಗಲೋ ಕೊನೆಗೊಳ್ಳಬೇಕಾಗಿತ್ತು. ಆದರೆ ಅದಿನ್ನೂ ಆಗಿಲ್ಲ. ಇದಕ್ಕೆ ಕಾರಣವೇನು? ಈ ಕಾರಣಕ್ಕಾಗಿ, ಖಂಡಿತವಾಗಿ ಮೂಲತಃ ಕಲಿಯುಗ ಇನ್ನೂ ದೀರ್ಘವಾಯಿತು. ಇದನ್ನು ಎರಡು ರೀತಿಯಲ್ಲಿ ಮಾಡಲಾಗಿದೆ.

ಮೊದಲನೆಯದಾಗಿ, ಸಂಧ್ಯಾ ಮತ್ತು ಸಂಧ್ಯಾಂಶ ಇವೆರಡು ಕಾಲಗಳನ್ನೂ ಯುಗದ ಮೊದಲು ಮತ್ತು ನಂತರ ಸೇರಿಸಿ ಮಾಡಿದ್ದಾರೆ. ವಿಷ್ಣುಪುರಾಣದ ಅದೇ ವಾಕ್ಯಸರಣಿಯಲ್ಲೇ ಹೇಳಿದಂತೆ:

"ಯುಗದ ಹಿಂದಿನ ಕಾಲವೇ ಸಂಧ್ಯಾ.... ಮತ್ತು ಈ ಕಾಲವೇ ಯುಗದ ನಂತರ ಬರುತ್ತದೆ. ಇದನ್ನೇ ಸಂಧ್ಯಾಂಶ ಎಂದು ಕರೆಯುವುದು. ಅಷ್ಟೇ ಕಾಲಕ್ಕೆ ಅದು ಕೊನೆಗೊಳ್ಳುತ್ತದೆ. ಈ ಸಂಧ್ಯೆಗಳ ಸಂಧ್ಯಾಂಶಗಳ ಮಧ್ಯಂತರವೇ ಕೃತ, ತ್ರೇತಾ ಮುಂತಾಗಿ ಕರೆಯಲ್ಪಡುತ್ತವೆ".

ಸಂಧ್ಯಾ ಮತ್ತು ಸಂಧ್ಯಾಂಶಗಳ ನಡುವಿನ ಕಾಲವೆಷ್ಟು? ಅವು ಎಲ್ಲ ಯುಗಗಳಿಗೂ ಸಮಾನವಾಗಿದ್ದವೆ? ಅಥವಾ ಯುಗಯುಗಗಳಿಗೂ ವ್ಯತ್ಯಾಸವಿತ್ತೆ? ಸಂಧ್ಯಾ ಮತ್ತು ಸಂಧ್ಯಾಂಶಗಳ ಕಾಲಮಾನ ಒಂದೇ

---

೧. 'ಮಹಾಭಾರತ'ದಲ್ಲಿ ಹೇಳಿರುವಂತೆ ಕಲಿಯುಗದ ಅವಧಿ ೧೦೦೦ ವರ್ಷಗಳು ಎಂಬುದು ಗರ್ಗರವರ ಹೇಳಿಕೆಯನ್ನು ಸಮರ್ಥಿಸುತ್ತದೆ. ಏಕೆಂದರೆ ೧೦೦೦ಕ್ಕೆ ೧೭೧ನ್ನು ಸೇರಿಸಿದಾಗ ಕಲಿಯುಗದ ಆರಂಭ ಎಂದು ಹೇಳಲಾದ ೧೧೭೧ರ ಸಂಖ್ಯೆ ದೊರೆಯುತ್ತದೆ.

ಸಮನಾಗಿರಲಿಲ್ಲ. ಪ್ರತಿಯೊಂದು ಯುಗದಲ್ಲೂ ಬೇರೆ ಬೇರೆಯಾಗಿತ್ತು. ಈ ಕೆಳಗಿನ ಕೋಷ್ಟಕವು ನಾಲ್ಕು ಯುಗಗಳು ಮತ್ತು ಅವುಗಳ ಸಂಧ್ಯಾ ಮತ್ತು ಸಂಧ್ಯಾಂಶಗಳ ಬಗ್ಗೆ ಕೆಲ ವಿವರ ನೀಡುತ್ತದೆ.

| **ಮಹಾಯುಗದ ಘಟಕ** | **ಕಾಲ** | **ಬೆಳಗು** | **ಸಂಧ್ಯಾ** | **ಮೊತ್ತ** |
|---|---|---|---|---|
| ಕೃತಯುಗ | ೪೦೦೦ | ೪೦೦ | ೪೦೦ | ೪೮೦೦ |
| ತ್ರೇತಾಯುಗ | ೩೦೦೦ | ೩೦೦ | ೩೦೦ | ೩೬೦೦ |
| ದ್ವಾಪರಯುಗ | ೨೦೦೦ | ೨೦೦ | ೨೦೦ | ೨೪೦೦ |
| ಕಲಿಯುಗ | ೧೦೦೦ | ೧೦೦ | ೧೦೦ | ೧೨೦೦ |
| ಮಹಾಯುಗ | | | | ೧೨೦೦೦ |

ಹೀಗೆ ಕಲಿಯುಗವು ಮೊದಲಿನಂತೆ ೧೦೦೦ ವರ್ಷಗಳಾಗೇ ಉಳಿಯದೆ ಸಂಧ್ಯಾ ಮತ್ತು ಸಂಧ್ಯಾಂಶಗಳನ್ನು ಸೇರಿಸಿ ೧೨೦೦ ವರ್ಷಗಳಷ್ಟು ದೀರ್ಘಮಾಡಲ್ಪಟ್ಟಿತು.

ಎರಡನೆಯದಾಗಿ, ಒಂದು ಹೊಸ ಆವಿಷ್ಕಾರವನ್ನೇ ಮಾಡಲಾಯಿತು. ಯುಗಗಳನ್ನು ನಿರ್ಧರಿಸಲು ಮಾನವ ವರ್ಷಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳದೆ ದೈವಿಕ ವರ್ಷಗಳನ್ನು ಪರಿಗಣಿಸುವಂತೆ ನಿರ್ಧರಿಸಲಾಯಿತು. ವೈದಿಕ ಬ್ರಾಹ್ಮಣರ ಪ್ರಕಾರ ಒಂದು ದೈವಿಕ ದಿನ ಒಂದು ಮಾನವ ವರ್ಷಕ್ಕೆ ಸಮ. ಇದರ ಪ್ರಕಾರ ಕಲಿಯುಗದ ಕಾಲ ೧೦೦೦ ಮತ್ತು ೨೦೦ ವರ್ಷಗಳ ಸಂಧ್ಯಾ ಮತ್ತು ಸಂಧ್ಯಾಂಶ ಕಾಲ, ಅಂದರೆ ೧೨೦೦ ವರ್ಷಗಳು ೧೨೦೦X೩೬೦ ಆಗಿ ೪,೩೨,೦೦೦ ವರ್ಷಗಳಿಗೆ ಸಮನಾಯಿತು. ಈ ಎರಡು ಪ್ರಕಾರವಾಗಿ ಕ್ರಿ.ಪೂ. ೧೭೬ರಲ್ಲೇ ಕಲಿಯುಗ ಮುಗಿಯಿತೆಂದು ಘೋಷಿಸುವ ಬದಲು, ಖಗೋಳಶಾಸ್ತ್ರಜ್ಞರು ಹೇಳಿದ್ದಂತೆ ಅದರ ಜೀವಿತವನ್ನು ೪,೩೨,೦೦೦ ವರ್ಷಗಳವರೆಗೆ ವಿಸ್ತೃತಗೊಳಿಸಲಾಯಿತು. ಆದ್ದರಿಂದ ಕಲಿಯುಗ ಇಂದೂ ಮುಂದುವರಿಯುತ್ತಲೇ ಇದೆ ಮತ್ತು ಇನ್ನೂ ಲಕ್ಷಾಂತರ ವರ್ಷಗಳ ಕಾಲ ಮುಂದುವರೆಯುತ್ತಲೇ ಇರುತ್ತದೆ.

## IV

ಕಲಿಯುಗ ಅಂದರೇನು? ಕಲಿಯುಗವೆಂದರೆ ಅನೀತಿಯ ಕಾಲ. ರಾಜರು ಮಾಡಿದ ನಿಯಮಗಳನ್ನು ಅನುಸರಿಸದೇ ಇರುವ ಕಾಲ. ತಕ್ಷಣವೇ ಒಂದು ಪ್ರಶ್ನೆ ಏಳುತ್ತದೆ. ಹಿಂದಿನ ಯುಗಗಳಿಗಿಂತ ಕಲಿಯುಗ ಏಕೆ ಅನೀತಿಯುತವಾಗಿದೆ? ಈಗಿನ ಕಲಿಯುಗದ ಹಿಂದೆ ಇದ್ದ ಯುಗ ಅಥವಾ ಯುಗಗಳಲ್ಲಿ ಆರ್ಯರಿಗಿದ್ದ ನೀತಿಯ ಸ್ಥಿತಿ ಹೇಗಿದ್ದಿತು? ಪ್ರಾಚೀನ ಆರ್ಯರ ಜೊತೆ ನಂತರದ ಆರ್ಯರ ಅಭ್ಯಾಸಗಳು ಸಾಮಾಜಿಕ ನಡಾವಳಿಗಳನ್ನು ಯಾರಾದರೂ ಹೋಲಿಸಿದಾಗ ಅವರ ರೀತಿನೀತಿಗಳಲ್ಲಿ ಅಗಾಧವಾದ, ಸರಿಸುಮಾರು ಸಾಮಾಜಿಕ ಕ್ರಾಂತಿಯಷ್ಟೇ ಪ್ರಮಾಣದ ಸುಧಾರಣೆಯನ್ನು ಕಾಣಬಹುದು.

ವೇದ ಕಾಲದ ಆರ್ಯರ ಧರ್ಮ ಬರ್ಬರತೆಯಿಂದಲೂ, ಅಶ್ಲೀಲ ಆಚರಣೆಗಳಿಂದಲೂ ತುಂಬಿತ್ತು. ನರಮೇಧವು ಧರ್ಮದ ಒಂದು ಭಾಗವಾಗಿತ್ತು. ಈ ಆಚರಣೆಯ ಅತ್ಯಂತ ವಿಶದವಾದ ವಿವರಣೆಗಳನ್ನು ಯಜುರ್ವೇದ ಸಂಹಿತೆ, ಯಜುರ್ವೇದ ಬ್ರಾಹ್ಮಣಗಳು, ಸಾಂಖ್ಯಿನ ಮತ್ತು ವೈತನ ಸೂತ್ರಗಳಲ್ಲಿ ಕಾಣಬಹುದು. ಜನನಾಂಗದ ಪೂಜೆ ಅಂದರೆ ಲಿಂಗಪೂಜೆಯ ಪುರಾತನ ಆರ್ಯರಲ್ಲಿ ಪ್ರಚಲಿತವಿತ್ತು. ಲಿಂಗಪೂಜಾ ವಿಧಾನ ಸ್ಕಂಬ ಎಂದು ಕರೆಯಲ್ಪಟ್ಟಿತು; ಅಥರ್ವವೇದದ X.೭ರ ಮಂತ್ರದಲ್ಲಿ ಕಂಡುಬರುವಂತೆ ಆರ್ಯಧರ್ಮದ ಒಂದು ಭಾಗವಾಗಿ ಗುರುತಿಸಲ್ಪಟ್ಟಿತು,. ಪುರಾತನ ಆರ್ಯರ ಧರ್ಮವನ್ನು ವಿರೂಪಗೊಳಿಸಿದ ಅಶ್ಲೀಲತೆಗೆ ಇನ್ನೊಂದು ನಿದರ್ಶನವನ್ನು ಅಶ್ವಮೇಧ ಯಜ್ಞಕ್ಕೆ ಸಂಬಂಧಿಸಿದಂತೆ ನೋಡಬಹುದು. ಅಶ್ವಮೇಧದ ಆವಶ್ಯಕವಾದ ಅಂಶವೆಂದರೆ ಸತ್ತ ಕುದುರೆಯ ಲಿಂಗವನ್ನು ಯಜಮಾನ (ಯಾಗ ಮಾಡುವವನ) ಹೆಂಡತಿಯ ಯೋನಿಗೆ ಬ್ರಾಹ್ಮಣ ಪೂಜಾರಿಗಳ ದೀರ್ಘ ಮಂತ್ರ ಘೋಷಗಳೊಂದಿಗೆ ಸೇರಿಸುವುದು. ವಾಜಸನೇಯ ಸಂಹಿತೆ (xxiii.೧೮)ಯ ಒಂದು ಮಂತ್ರವು ತೋರಿಸುವಂತೆ, ರಾಣಿಯರ ಮಧ್ಯೆ ಈ ಕುದುರೆಯಿಂದ ಸೇವೆ ಪಡೆಯಲು ಸ್ಪರ್ಧೆ ಇರುತ್ತಿತ್ತು. ಹೆಚ್ಚಿಗೆ ತಿಳಿಯಬಯಸುವವರು ಮಹೀಧರನ ಯಜುರ್ವೇದದ ಮೇಲೆ ರಚಿತವಾಗಿರುವ ಭಾಷ್ಯದಲ್ಲಿ ಈ ಅಶ್ಲೀಲ ಆಚರಣೆಯ ವಿವರಣೆಯನ್ನು ಆರ್ಯಧರ್ಮದ ಅಂಗವಾಗಿ ಹೇಗೆ ಬಂದಿದೆ ಎಂದು ನೋಡಬಹುದು.

ಸನಾತನ ಆರ್ಯರ ನೀತಿ ಅವರ ಧರ್ಮಕ್ಕಿಂತ ಭಿನ್ನವಾಗಿರಲಿಲ್ಲ. ಆರ್ಯರು ಜೂಜುಕೋರರ ಸಂತಾನವಾಗಿದ್ದರು. ಆರ್ಯರ ನಾಗರಿಕತೆಯ ಮೊದಲ ದಿನಗಳಲ್ಲಿ ಜೂಜನ್ನು ವಿಜ್ಞಾನದ ಮಟ್ಟಕ್ಕೆ ಏರಿಸಲಾಗಿತ್ತು. ಅಷ್ಟಲ್ಲದೆ ದಾಳಗಳನ್ನು ಮಾಡಿಕೊಂಡು ಅವುಗಳಿಗೆ ತಾಂತ್ರಿಕ ಹೆಸರುಗಳನ್ನು ಕೊಟ್ಟಿದ್ದರು. ಅತ್ಯಂತ ಅದೃಷ್ಟಶಾಲಿ ದಾಳಕ್ಕೆ 'ಕೃತ್' ಎಂದೂ, ಅತ್ಯಂತ ದುರದೃಷ್ಟಶಾಲಿ ದಾಳಕ್ಕೆ 'ಕಲಿ' ಎಂದೂ ಕರೆಯುತ್ತಿದ್ದರು. ತ್ರೇತಾ ಮತ್ತು ದ್ವಾಪರಗಳು ಅವುಗಳ ಮಧ್ಯೆ ಇರುತ್ತಿದ್ದವು. ಪುರಾತನ ಆರ್ಯರಲ್ಲಿ ಜೂಜು ಬಹಳ ಅಭಿವೃದ್ಧಿ ಪಡೆದುದೇ ಅಲ್ಲದೆ ಪಣವಿಲ್ಲದೇ ಜೂಜಾಡುತ್ತಿರಲೇ ಇಲ್ಲ. ಅವರು ಎಷ್ಟೊಂದು ಬೀಡಾಡಿಗಳಾಗಿ ಜೂಜಾಡುತ್ತಿದ್ದರೆಂದರೆ ಜೂಜಾಟದ ಹುರುಪು ಹೋಲಿಕೆಗೆ ಅಸಾಧ್ಯವಾಗಿತ್ತು. ಜೂಜಿನಲ್ಲಿ ರಾಜ್ಯಗಳು, ಅಲ್ಲದೆ ಹೆಂಡಂದಿರನ್ನು ಪಣವಾಗಿ ಒಡ್ಡುತ್ತಿದ್ದರು. ನಳಮಹಾರಾಜ ಅವನ ರಾಜ್ಯವನ್ನೇ ಪಣಕ್ಕಿಟ್ಟು ಸೋತ. ಪಾಂಡವರು ಇದಕ್ಕಿಂತ ಮುಂದುವರೆದರು. ಅವರು ತಮ್ಮ ರಾಜ್ಯವನ್ನು ಮಾತ್ರವಲ್ಲದೆ ಅವರ ಹೆಂಡತಿಯಾದ ದ್ರೌಪದಿಯನ್ನೂ ಪಣಕ್ಕೆ ಒಡ್ಡಿದರು. ಎರಡನ್ನೂ ಕಳೆದುಕೊಂಡರು. ಆರ್ಯರಲ್ಲಿ ಜೂಜು ಸಿರಿವಂತರ ಆಟ ಮಾತ್ರವಾಗಿರಲಿಲ್ಲ. ಅನೇಕರ ದುಶ್ಚಟವಾಗಿತ್ತು.

ಪುರಾತನ ಆರ್ಯರು ಕುಡುಕರ ಕುಲದವರಾಗಿದ್ದರು. ದ್ರಾಕ್ಷಾರಸ ಅವರ ಧರ್ಮದ ಅನಿವಾರ್ಯ ಅಂಗವಾಗಿತ್ತು. ವೇದದ ದೇವರುಗಳು ಹೆಂಡವನ್ನು ಸೇವಿಸುತ್ತಿದ್ದರು. ಈ ಪವಿತ್ರ ದ್ರಾಕ್ಷಾರಸವನ್ನು ಸೋಮವೆಂದು ಕರೆದರು. ಆರ್ಯದೇವತೆಗಳು ಸೋಮವನ್ನು ಕುಡಿಯುತ್ತಿದ್ದುದರಿಂದ ಆರ್ಯರಿಗೆ ಕುಡಿತದ ಬಗ್ಗೆ ಲವಲೇಶವೂ ಹಿಂಜರಿಕೆ ಇರಲಿಲ್ಲ. ಕುಡಿತ ಆರ್ಯರ ಧಾರ್ಮಿಕ ಕರ್ತವ್ಯದ ಒಂದು ಭಾಗವಾಗಿತ್ತು. ಪುರಾತನ ಆರ್ಯರಲ್ಲಿ ಅನೇಕ ರೀತಿಯ ಸೋಮ ಯಜ್ಞಗಳಿದ್ದವು. ಸೋಮವು ಬ್ರಾಹ್ಮಣ, ಕ್ಷತ್ರಿಯ ಮತ್ತು ವೈಶ್ಯ ಈ ಮೂರು ಮೇಲ್ವರ್ಗದ ಜಾತಿಗಳಿಗೆ ಮಾತ್ರ ಸೀಮಿತವಾಗಿತ್ತು. ಹೀಗೆಂದಾಕ್ಷಣ ಶೂದ್ರರು ಮಾತ್ರ ಇದರಿಂದ ಹೊರಗುಳಿದಿದ್ದರೆಂದಲ್ಲ. ಸೋಮ ಸಿಗದಿದ್ದವರು ಸಾಮಾನ್ಯ ಸುರೆಯನ್ನು ಮಾರುಕಟ್ಟೆಯಲ್ಲಿ ಸಿಗುವ ಅಪವಿತ್ರ ದ್ರಾಕ್ಷಾರಸವನ್ನು ಕುಡಿಯುತ್ತಿದ್ದರು.

ಪುರುಷ ಆರ್ಯರು ಮಾತ್ರ ಕುಡುಕರಾಗಿರಲಿಲ್ಲ. ಸ್ತ್ರೀಯರೂ ಕುಡಿಯುತ್ತಿದ್ದರು. ಕೌಷೀತಕಿ ಗೃಹ್ಯ ಸೂತ್ರ ೧. ೧೧. ೧೨ ನಾಲ್ಕರಿಂದ ಎಂಟು ಜನ ಸುಮಂಗಲಿಯರನ್ನು ಮದುವೆಗೆ ಹಿಂದಿನ ದಿನ ನಾಲ್ಕು ಬಾರಿ ನೃತ್ಯಮಾಡಲು ದ್ರಾಕ್ಷಾರಸ ಮತ್ತು ಆಹಾರಗಳಿಂದ ಸಂತೃಪ್ತಿಗೊಳಿಸಲಾಗುತ್ತಿತ್ತು. ಹೀಗೆ ನಶೆಯಿಂದ ಕೂಡಿದ ದ್ರಾಕ್ಷಾರಸ ಅಬ್ರಾಹ್ಮಣ ಹೆಂಗಸರಿಗೆ ಮಾತ್ರ ಸೀಮಿತವಾಗಿರಲಿಲ್ಲ. ಬ್ರಾಹ್ಮಣ ಹೆಂಗಸರೂ ಇದನ್ನು ಚಟವಾಗಿಸಿಕೊಂಡಿದ್ದರು. ಕುಡಿತ ಪಾಪವೆಂದು ಪರಿಗಣಿಸಲ್ಪಟ್ಟಿರಲಿಲ್ಲ. ಅದು ಕೆಟ್ಟದ್ದೂ ಆಗಿರಲಿಲ್ಲ. ಅದು ಗೌರವಾನ್ವಿತ ಅಭ್ಯಾಸವಾಗಿತ್ತು. ಋಗ್ವೇದ ಹೇಳುತ್ತದೆ.:

"ಮದಿರೆ ಕುಡಿಯುವ ಮುನ್ನ ಸೂರ್ಯನನ್ನು ಉಪಾಸಿಸು."

ಯಜುರ್ವೇದ ಹೇಳುತ್ತದೆ:

"ಓ ಸೋಮದೇವ! ಸುರೆಯಿಂದ ಬಲಪಡೆದು, ಪುಷ್ಟಿಹೊಂದಿ, ಶುದ್ಧ ಸಂತಸದಿಂದ ದೈವವನ್ನು ಸಂತೃಪ್ತಿಪಡಿಸು. ಯಾಗ ಮಾಡುವವನಿಗೆ ರಸಭರಿತ ಆಹಾರವನ್ನು ಬ್ರಾಹ್ಮಣ ಮತ್ತು ಕ್ಷತ್ರಿಯನಿಗೆ ಶಕ್ತಿಯನ್ನು ಕೊಡು."

ಬ್ರಾಹ್ಮಣ ಮಂತ್ರ ಹೇಳುತ್ತದೆ:

"ಯಾವ ಹೆಂಗಸಿನಿಂದ ಗಂಡಸನ್ನು ಖುಷಿಗೊಳಿಸಿದೆಯೋ, ಯಾವ ನೀರನ್ನು ಸೋಮವಾಗಿಸಿದೆಯೋ (ಗಂಡಸರ ಖುಷಿಗೆ), ಇತ್ಯಾದಿ."

ರಾಮ ಮತ್ತು ಸೀತೆ ಇಬ್ಬರೂ ಮದಿರೆಯನ್ನು ಸೇವಿಸಿದರು ಎಂದು ರಾಮಾಯಣ ಒಪ್ಪಿಕೊಳ್ಳುತ್ತದೆ.

ಉತ್ತರ ಕಾಂಡ ಹೀಗೆ ಹೇಳುತ್ತದೆ:

"ಶಚಿಯೊಡನೆ ಇಂದ್ರನಂತೆ ರಾಮಚಂದ್ರ ಸೀತೆಗೆ ಮಧುವನ್ನೂ ಮದಿರೆಯನ್ನೂ ಕುಡಿಸಿದ. ಸೇವಕರು ರಾಮಚಂದ್ರನಿಗೆ ಮಾಂಸ ಮತ್ತು ಹಣ್ಣುಗಳನ್ನು ತಂದರು."

ಕೃಷ್ಣ ಮತ್ತು ಅರ್ಜುನರೂ ಇದೇ ಮಾಡಿದರು. ಮಹಾಭಾರತದ ಉದ್ಯೋಗಪರ್ವದಲ್ಲಿ ಸಂಜಯ ಹೀಗೆ ಹೇಳುತ್ತನೆ:

"ಮಧುವಿನಿಂದ ಮಾಡಿದ ಮದಿರೆಯನ್ನು ಕುಡಿಯುತ್ತಾ, ಸುಗಂಧಪೂಸಿತ ಹೂವಿನಹಾರವನ್ನೂ, ಬೆಲೆ ಬಾಳುವ ಬಟ್ಟೆಯನ್ನೂ ಆಭರಣಗಳನ್ನೂ ಧರಿಸಿ, ವಿವಿಧ ಆಭರಣಗಳನ್ನು ಮೆಟ್ಟಿದ ಚಿನ್ನದ ಸಿಂಹಾಸನದ ಮೇಲೆ ಕುಳಿತರು. ಶ್ರೀ ಕೃಷ್ಣನ ಕಾಲು ಅರ್ಜುನನ ತೊಡೆಯ ಮೇಲಿದ್ದುದನ್ನು ಅರ್ಜುನನ ಕಾಲು ದ್ರೌಪದಿ, ಸತ್ಯಭಾಮರ ತೊಡೆಯ ಮೇಲೂ ಇರುವುದನ್ನು ನಾನು ನೋಡಿದೆ."

ಇನ್ನು ಮುಂದೆ ಗಂಡಸರು ಹೆಂಗಸರ ವೈವಾಹಿಕ ಸಂಬಂಧವನ್ನು ನೋಡಬಹುದು. ಚರಿತ್ರೆ ಏನನ್ನು ಹೇಳುತ್ತದೆ? ಪ್ರಾರಂಭದಲ್ಲಿ ಆರ್ಯರಲ್ಲಿ ಮದುವೆಯ ನಿಯಮವಿರಲಿಲ್ಲ. ಆ ಸಮಾಜದ ಮೇಲು ಮತ್ತು ಕೆಳವರ್ಗಗಳಲ್ಲಿ ಸಂಪೂರ್ಣ ತಾರತಮ್ಯವಿರಲಿಲ್ಲ. ಈ ಕೆಳಕಂಡ ನಿದರ್ಶನಗಳು ತೋರಿಸುವಂತೆ ಯಾವುದೇ ನಿಷೇಧಗಳಿರಲಿಲ್ಲ.

ಬ್ರಹ್ಮ ತನ್ನ ಮಗಳಾದ ಶತರೂಪೆಯನ್ನು ಮದುವೆಯಾದ. ಅವರ ಮಗನೇ ಪೃಥು ವಂಶದ ಮೊದಲಿಗ. ಇದೇ ಐಕ್ಷವಾಕ ಮತ್ತು ಐಲಸ ವಂಶಕ್ಕೆ ಮುಂಚಿನವು.

ಹಿರಣ್ಯಕಶಿಪು ಅವನ ಮಗಳು ರೋಹಿಣಿಯನ್ನೇ ಮದುವೆಯಾದ. ತಂದೆ ಮಗಳನ್ನು ಮದುವೆಯಾಗಿರುವ ಬೇರೆ ಪ್ರಕರಣಗಳೆಂದರೆ ವಸಿಷ್ಠ ಮತ್ತು ಶತರೂಪ, ಜಹ್ನು ಮತ್ತು ಜಾಹ್ನವಿ, ಸೂರ್ಯ ಮತ್ತು ಉಷಾ. ಕಾನೀನ ಪುತ್ರರು ಎಂಬ ಪ್ರಯೋಗದಿಂದ ತಂದೆ–ಮಗಳ ಮದುವೆ

ಸಾಮಾನ್ಯವಾಗಿತ್ತು ಎಂದು ಸೂಚಿತವಾಗುತ್ತದೆ. ಕಾನೀನ ಪುತ್ರ ಎಂದರೆ ಮದುವೆಯಾಗದ ಮಗಳಿಗೆ ಹುಟ್ಟಿದವನು ಎಂದರ್ಥ. ಕಾನೂನು ಪ್ರಕಾರ ಅವರು ಕನ್ಯೆಯ ತಂದೆಯ ಮಕ್ಕಳು. ಖಂಡಿತವಾಗಿ ಇವರು ತನ್ನ ತಂದೆಯಿಂದಲೇ ಮಗಳಿಗೆ ಹುಟ್ಟಿದ ಮಕ್ಕಳಿರಬೇಕು.

ತಂದೆ ಮತ್ತು ಮಗ ಇಬ್ಬರೂ ಒಂದೇ ಹೆಣ್ಣಿನ ಜೊತೆ ಒಗೆತನ ಮಾಡುವ ಸಂದರ್ಭಗಳೂ ಇವೆ. ಬ್ರಹ್ಮ ಮನುವಿನ ತಂದೆ, ಶತರೂಪೆ ಅವನ ತಾಯಿ. ಈ ಶತರೂಪೆ ಮನುವಿನ ಹೆಂಡತಿಯೂ ಸಹ. ಇನ್ನೊಂದು ಉದಾಹರಣೆ ಶ್ರದ್ಧಾ. ಅವಳು ವೈವಸ್ವನ ಹೆಂಡತಿ. ಅವರ ಮಗ ಮನು. ಆದರೆ ಶ್ರದ್ಧೆಯು ಮನುವಿನ ಹೆಂಡತಿಯೂ ಆಗಿದ್ದಳು. ಹೀಗೆ ತಂದೆ–ಮಕ್ಕಳು ಒಂದೇ ಹೆಂಡತಿಯನ್ನು ಪಡೆದಿದ್ದರು. ಅಣ್ಣನ ಮಗಳನ್ನು ಮದುವೆಯಾಗುವುದು ಬಹಳ ಸಾಮಾನ್ಯವಾಗಿತ್ತು. ದಕ್ಷ ಮತ್ತು ಧರ್ಮರು ಅಣ್ಣ ತಮ್ಮಂದಿರಾಗಿದ್ದರೂ ಧರ್ಮ, ದಕ್ಷನು ೧೦ ಹೆಣ್ಣುಮಕ್ಕಳನ್ನು ಮದುವೆಯಾಗಿದ್ದ. ಚಿಕ್ಕಪ್ಪನ ಮಗಳನ್ನು ಮದುವೆಯಾಗಬಹುದಿತ್ತು. ಕಶ್ಯಪ ೧೩ ಜನ ಹೆಂಡತಿಯರನ್ನು ಹೊಂದಿದ್ದ. ಅವರೆಲ್ಲ ದಕ್ಷನ ಮಕ್ಕಳು. ದಕ್ಷ, ಕಶ್ಯಪನ ತಂದೆ ಮರೀಚಿಯ ಸಹೋದರನಾಗಿದ್ದ.

ಋಗ್ವೇದದಲ್ಲಿ ಹೇಳಿರುವ ಯಮ ಮತ್ತು ಯಮಿಯರದ್ದು ಕುಪ್ರಸಿದ್ಧ ಸಂಬಂಧ. ಅಣ್ಣ–ತಂಗಿಯರ ಮದುವೆಯ ಬಗ್ಗೆ ಇದು ಬೆಳಕು ಬೀರುತ್ತದೆ. ಏಕೆಂದರೆ, ಯಮ, ಯಮಿಯ ಜೊತೆ ಸೇರಲು ತಿರಸ್ಕರಿಸುತ್ತಾನೆ. ಇದರಿಂದ ಇಂಥ ಮದುವೆಗಳು ಇರಲಿಲ್ಲ ಎಂದು ಭಾವಿಸಬಾರದು.

ಮಹಾಭಾರತದ ಆದಿಪರ್ವ ಬ್ರಹ್ಮದೇವನಿಂದ ಪ್ರಾರಂಭವಾಗುವ ವಂಶಾವಳಿಯನ್ನು ಕೊಡುತ್ತದೆ. ಇದರ ಪ್ರಕಾರ ಬ್ರಹ್ಮನಿಗೆ ಮೂರು ಜನ ಗಂಡು ಮಕ್ಕಳಿದ್ದರು. ಮರೀಚಿ, ದಕ್ಷ ಮತ್ತು ಧರ್ಮ ಮತ್ತು ಒಬ್ಬ ಮಗಳು. ದುರದೃಷ್ಟವಶಾತ್ ಅವಳ ಹೆಸರನ್ನು ಆ ವಂಶಾವಳಿ ಕೊಡುವುದಿಲ್ಲ. ಇದೇ ವಂಶಾವಳಿಯಲ್ಲಿ ದಕ್ಷ ಬ್ರಹ್ಮನ ಮಗಳನ್ನು ಮದುವೆಯಾದ ಎಂದು ಹೇಳಿದೆ. ಅವಳು ಅವನ ಸಹೋದರಿ. ಅವಳಿಗೆ ೫೦ರಿಂದ ೬೦ ಮಕ್ಕಳಿದ್ದವು ಎಂದು ಅಂದಾಜು ಮಾಡಲಾಗಿದೆ. ಸಹೋದರ ಸಹೋದರಿಯರು ಮದುವೆಯಾಗಿರುವ ಇನ್ನೂ ಉದಾಹರಣೆಗಳನ್ನು ಕೊಡಬಹುದು. ಅವರೆಂದರೆ, ಪೂಷನ್ ಮತ್ತು ಅವನ ತಂಗಿ ಅಚ್ಚೋದ, ಅಮಾವಸು, ಪುರುಕುತ್ಸ ಮತ್ತು ನರ್ಮದಾ, ವಿಪ್ರಚಿತ್ತಿ ಮತ್ತು ಸಂಹಿಕಾ, ನಹುಷ, ಮತ್ತು ವಿರಜ, ಶುಕ್ರ–ಉಶನ ಮತ್ತು ಗೊ, ಅಂಶುಮಂತ ಮತ್ತು ಯಶೋದಾ. ದಶರಥ ಮತ್ತು ಕೌಸಲ್ಯ, ರಾಮ ಮತ್ತು ಸೀತ, ಶುಕ ಮತ್ತು ಪೀವರಿ, ದ್ರೌಪದಿ ಮತ್ತು ಪ್ರಶ್ತಿ–ಇವೆಲ್ಲವೂ ಸಹೋದರ ಸಹೋದರಿಯರ ಮದುವೆಗಳು.

ಈ ಕೆಳಗಿನ ಉದಾಹರಣೆಗಳು ಮಗ ಮತ್ತು ತಾಯಿಯರ ನಡುವೆ ಲೈಂಗಿಕ ಸಂಬಂಧಕ್ಕೆ ನಿಷೇಧವಿರಲಿಲ್ಲ ಎಂಬುದನ್ನು ತೋರಿಸುತ್ತದೆ. ಪೂಷನ್ ಮತ್ತು ಅವನ ತಾಯಿ, ಮನು ಮತ್ತು ಶತರೂಪೆ, ಮನು ಮತ್ತು ಶ್ರದ್ಧಾ, ಅರ್ಜುನ–ಊರ್ವಶಿ, ಅರ್ಜುನ–ಉತ್ತರಾ ಇವರ ಉದಾಹರಣೆಗಳೂ ಇವೆ. ಉತ್ತರೆಯನ್ನು ಅರ್ಜುನನ ಮಗ ಅಭಿಮನ್ಯುವಿಗೆ ಕೊಟ್ಟು ಮದುವೆಯಾಗಿತ್ತು. ಅವನಿಗೆ ಆಗ ಕೇವಲ ೧೬ ವರ್ಷಗಳು. ಉತ್ತರೆಗೆ ಅರ್ಜುನನೊಡನೆ ಸಂಬಂಧವಿತ್ತು. ಅವನು ಅವಳಿಗೆ ಸಂಗೀತ ಮತ್ತು ನೃತ್ಯವನ್ನು ಹೇಳಿಕೊಡುತ್ತಿದ್ದ. ಉತ್ತರೆಯು ಅರ್ಜುನನನ್ನು ಪ್ರೀತಿಸುತ್ತಿದ್ದಳು. ಮಹಾಭಾರತದಲ್ಲಿ ತಮ್ಮ ಪ್ರೀತಿ ವ್ಯವಹಾರದಲ್ಲಿ ಸಿಕ್ಕಿ ಸ್ವಾಭಾವಿಕವಾಗಿ ಮದುವೆಯಾಗಿದ್ದನ್ನು ಹೇಳುತ್ತದೆ. ಮಹಾಭಾರತ ನಿಜವಾಗಿಯೂ ಅವರು ಮದುವೆಯಾಗಿದ್ದರು ಎಂದು ಹೇಳುವುದಿಲ್ಲ. ಅವರು ಆಗಿದ್ದೇ ಆದರೆ ಅಭಿಮನ್ಯು ತನ್ನ ತಾಯಿಯನ್ನೇ ಮದುವೆಯಾಗಿದ್ದ ಎಂದು ಹೇಳಬಹುದು.

ಅರ್ಜುನ ಮತ್ತು ಊರ್ವಶಿಯ ಪ್ರಸಂಗ ಹೆಚ್ಚು ಧನಾತ್ಮಕವಾಗಿ ಇದನ್ನು ಸೂಚಿಸುತ್ತದೆ.

ಇಂದ್ರ ಅರ್ಜುನನ ನಿಜವಾದ ತಂದೆ, ಊರ್ವಶಿ ಇಂದ್ರನನ್ನು ಕೂಡಿದವಳು. ಆದ್ದರಿಂದ ಅವಳು ಅರ್ಜುನನಿಗೆ ತಾಯಿಯ ಸ್ಥಾನದಲ್ಲಿದ್ದವಳು. ಅವಳು ಅರ್ಜುನನಿಗೆ ಗುರು. ಸಂಗೀತ ನೃತ್ಯಗಳನ್ನು ಹೇಳಿಕೊಟ್ಟವಳು. ಊರ್ವಶಿ ಅರ್ಜುನನಿಗೆ ಮನಸೋತು, ಅವನ ತಂದೆಯಾದ ಇಂದ್ರನ ಒಪ್ಪಿಗೆಯ ಮೇರೆಗೆ ಲೈಂಗಿಕ ಸಂಪರ್ಕಕ್ಕಾಗಿ ಯಾಚಿಸಿದಳು. ಅರ್ಜುನನು ಅವಳು ತನ್ನ ತಾಯಿಗೆ ಸಮಾನಳೆಂದು ಅವಳನ್ನು ತಿರಸ್ಕರಿಸಿದನು. ಊರ್ವಶಿಯ ನಡವಳಿಕೆ ಅರ್ಜುನನ ತಿರಸ್ಕಾರಕ್ಕಿಂತ ಚಾರಿತ್ರಿಕವಾಗಿ ಎರಡು ಕಾರಣಗಳಿಗಾಗಿ ಮಹತ್ವಪೂರ್ಣವಾಗಿದೆ. ಊರ್ವಶಿಯು ಅರ್ಜುನನನ್ನು ಬೇಡಿದ್ದು ಮತ್ತು ಇಂದ್ರನು ತನ್ನ ಒಪ್ಪಿಗೆಯನ್ನು ಕೊಟ್ಟದ್ದು ಆಗಲೇ ಚೆನ್ನಾಗಿ ಸ್ಥಾಪಿತವಾಗಿದ್ದ ಪದ್ಧತಿಯನ್ನು ತಿಳಿಸುತ್ತದೆ. ಎರಡನೆಯದಾಗಿ, ಊರ್ವಶಿ ಅರ್ಜುನನಿಗೆ ಕೊಟ್ಟ ಜವಾಬಿನಲ್ಲಿ ಬಹಳ ಮೊನಚಾಗಿ ಹೇಳುತ್ತಾಳೆ. ಬಹಳ ಚೆನ್ನಾಗಿ ನಡೆಯುತ್ತಿರುವ ಈ ಸಂಪ್ರದಾಯದಂತೆ ತಾತ ಮುತ್ತಾತಂದಿರು ಇಂಥದ್ದೇ ಆದ ಅಚರಣೆಗೆ ಕೊಟ್ಟ ಆಹ್ವಾನವನ್ನು ತಮ್ಮೊಳಗೆ ಯಾವ ದೋಷವನ್ನು ಕಾಣದೆ ಒಪ್ಪಿಕೊಂಡಿದ್ದರು ಎನ್ನುತ್ತಾಳೆ.

ಸ್ವಂತ ರಕ್ತ ಹಂಚಿಕೊಂಡು ಹುಟ್ಟಿದವರೊಡನೆ ಪುರಾತನ ಭಾರತದಲ್ಲಿ ಲೈಂಗಿಕ ಸಂಬಂಧ ಹೊಂದಿರುವುದನ್ನು ಹರಿವಂಶದ ಎರಡನೆಯ ಅಧ್ಯಾಯ ಚೆನ್ನಾಗಿ ಹೇಳುತ್ತದೆ. ಇದರ ಪ್ರಕಾರ ಸೋಮ ಹತ್ತು ಜನ ತಂದೆಯರ ಮಗ. ಪ್ರತಿಯೊಬ್ಬನನ್ನು ಪ್ರಶ್ಚೇತ ಎಂದು ಕರೆಯಲಾಗಿದೆ. ಬಹುಪತ್ನಿತ್ವಕ್ಕೆ ಇದೊಂದು ಒಳ್ಳೆಯ ಉದಾಹರಣೆ. ಸೋಮನಿಗೆ ಮರೀಶಳೆಂಬ ಒಬ್ಬ ಮಗಳಿದ್ದಳು. ಸೋಮನೂ ಸೇರಿ ಅವನ ಹತ್ತು ಜನ ತಂದೆಗಳೂ ಅವಳೊಡನೆ ಲೈಂಗಿಕ ಸಂಪರ್ಕ ಹೊಂದಿದ್ದರು. ತಂದೆಯೂ ಸೇರಿದಂತೆ ಹತ್ತು ಜನ ತಾತಂದಿರು ಮೊಮ್ಮಗಳು ಮತ್ತು ಮಗಳನ್ನು ಮದುವೆಯಾಗಿ ಗಂಡಂದಿರಾಗಿದ್ದಕ್ಕೆ ಒಳ್ಳೆಯ ಉದಾಹರಣೆ. ಇದೇ ಅಧ್ಯಾಯದಲ್ಲಿ ದಕ್ಷಪ್ರಜಾಪತಿಯ ಕಥೆಯನ್ನು ಹೇಳಲಾಗಿದೆ. ಸೋಮನ ಮಗನಾದ ದಕ್ಷಪ್ರಜಾಪತಿ ಅವನ ೨೭ ಹೆಣ್ಣುಮಕ್ಕಳನ್ನು ಸೋಮನಿಗೇ ಸಂತಾನಾಭಿವೃದ್ಧಿಗೆ ಕೊಟ್ಟ ಉದಾಹರಣೆ ಇದೆ. ಹರಿವಂಶದ ಮೂರನೇ ಅಧ್ಯಾಯದಲ್ಲಿ ದಕ್ಷ ತನ್ನ ಮಗಳನ್ನು ತನ್ನ ಸ್ವಂತ ತಂದೆಗೇ ಧಾರೆ ಎರೆದುಕೊಟ್ಟ. ಅವಳಿಂದ ಬ್ರಹ್ಮನಿಗೆ ನಾರದನು ಹುಟ್ಟಿ ಲೋಕ ವಿಖ್ಯಾತನಾದ. ಈ ಎಲ್ಲವೂ ಸಪಿಂಡ ಗಂಡಸರಿಂದ ಸಪಿಂಡ ಹೆಂಗಸಿನೊಡನೆ ಲೈಂಗಿಕ ಸಂಬಂಧ ಹೊಂದಿರುವ ಉದಾಹರಣೆಗಳು.

ಪುರಾತನ ಆರ್ಯ ಹೆಣ್ಣುಗಳು ಮಾರಲ್ಪಡುತ್ತಿದ್ದರು. ಮಗಳನ್ನು ಮಾರಾಟ ಮಾಡುವುದಕ್ಕೆ ಆರ್ಷ ರೀತಿಯ ಮದುವೆಯೇ ಆಧಾರ. ತಾಂತ್ರಿಕ ಪದದ ಆಧಾರದ ಮೇಲೆ ಹುಡುಗನ ತಂದೆ ಗೋ ಮಿಥುನಗಳನ್ನು ಕೊಟ್ಟು ಹುಡುಗಿಯನ್ನು ತೆಗೆದುಕೊಳ್ಳುತ್ತಿದ್ದ. ಗೋ ಮಿಥುನ ಅಂದರೆ ಒಂದು ಹಸು ಒಂದು ಹೋರಿ. ಇವು ಒಂದು ಹೆಣ್ಣಿಗೆ ಸಮಬೆಲೆ ಎಂದು ಪರಿಗಣಿಸಲಾಗಿತ್ತು. ತಂದೆ ಹೆಣ್ಣು ಮಗಳನ್ನು ಮಾರಾಟಮಾಡುವುದೇ ಅಲ್ಲದೆ ಗಂಡನು ಹೆಂಡತಿಯನ್ನು ಮಾರಾಟ ಮಾಡುತ್ತಿದ್ದನು. ಹರಿವಂಶದ ೨೯ನೇ ಅಧ್ಯಾಯದಲ್ಲಿ ಪುಣ್ಯಕ ವ್ರತ ಎಂಬ ಧಾರ್ಮಿಕ ವಿಧಿಯಲ್ಲಿ ಆ ಪುರೋಹಿತನಿಗೆ ಹೇಗೆ ಕಾಣಿಕೆಯನ್ನು ಅರ್ಪಿಸಬೇಕೆಂಬ ವಿವರವಿದೆ. ಬ್ರಾಹ್ಮಣರ ಹೆಂಡತಿಯನ್ನು ಅವರ ಗಂಡಂದಿರಿಂದ ಕೊಂಡುಕೊಂಡು ಪುರೋಹಿತನಿಗೆ ಹೇಗೆ ಕಾಣಿಕೆಯಾಗಿ ಕೊಡಬೇಕೆಂದು ಹೇಳುತ್ತದೆ. ಪರ ಹಿತಾಲೋಚನೆಗಾಗಿ ಬ್ರಾಹ್ಮಣರು ಸರಾಗವಾಗಿ ತಮ್ಮ ಹೆಂಡಂದಿರನ್ನು ಮಾರುತ್ತಿದ್ದರೆಂಬುದು ವಿದಿತವಾಗುತ್ತದೆ.

ಪುರಾತನ ಆರ್ಯರು ತಮ್ಮ ಹೆಂಗಸರನ್ನು ಬೇರೆಯವರೊಡನೆ ಲೈಂಗಿಕ ಸಂಪರ್ಕಕ್ಕೆ ಬಾಡಿಗೆಗೆ ಕೊಡುತ್ತಿದ್ದರು ಎಂಬುದೂ ವಸ್ತುಸ್ಥಿತಿ. ಮಹಾಭಾರತದ ೧೧೩ ಮತ್ತು ೧೨೩ನೇ ಅಧ್ಯಾಯಗಳಲ್ಲಿ ಮಾಧವಿ ಜೀವನಚರಿತ್ರೆ ಇದೆ. ಇದರ ಪ್ರಕಾರ ಮಾಧವಿಯು ಯಯಾತಿ ಎಂಬ ರಾಜನ ಮಗಳು. ಯಯಾತಿ ಅವಳನ್ನು ಗಾಲವನಿಗೆ ಉಡುಗೊರೆಯಾಗಿತ್ತ. ಋಷಿಯಾಗಿದ್ದ ಗಾಲವ ಅವಳನ್ನು ಒಬ್ಬರಾದ ಮೇಲೆ ಒಬ್ಬರಂತೆ ಮೂರು ಜನ ರಾಜರುಗಳಿಗೆ ಅವಳಿಂದ ಮಗ ಹುಟ್ಟುವವರೆಗೆ ಬಾಡಿಗೆಗಾಗಿ ಕೊಟ್ಟ. ಮೂರನೆ ರಾಜನ ಭೋಗ್ಯ ಮುಗಿದ ಮೇಲೆ ಮಾಧವಿಯನ್ನು ಗಾಲವನಿಗೆ ಒಪ್ಪಿಸಿದ. ಅವಳನ್ನು ವಿಶ್ವಾಮಿತ್ರ ತನ್ನ ಹೆಂಡತಿಯನ್ನಾಗಿ ಮಾಡಿಕೊಂಡ. ವಿಶ್ವಾಮಿತ್ರ ಅವಳಿಂದ ಮಗನನ್ನು ಪಡೆಯುವವರೆಗೆ ಇಟ್ಟುಕೊಂಡು ಅವಳನ್ನು ಗಾಲವನಿಗೆ ವಾಪಸ್ಸು ಮಾಡಿದ. ಗಾಲವ ಅವಳನ್ನು ಅವಳ ತಂದೆಗೆ ಹಿಂದಿರುಗಿಸಿದ.

ಪುರಾತನ ಆರ್ಯಸಮಾಜದಲ್ಲಿ ಬಹುಪತಿತ್ವ ಮತ್ತು ಬಹುಪತ್ನಿತ್ವ ವಿಪರೀತವಾಗಿಯೇ ಇತ್ತು. ಈ ವಿಷಯ ಚೆನ್ನಾಗಿ ಗೊತ್ತಿರುವುದರಿಂದ ಅವುಗಳ ಇರುವಿಕೆಯನ್ನು ದಾಖಲಿಸುವುದು ಅನಾವಶ್ಯಕ. ಚೆನ್ನಾಗಿ ಗೊತ್ತಿಲ್ಲದಿರುವುದೆಂದರೆ ಲೈಂಗಿಕ ಸಂಬಂಧ. ಲೈಂಗಿಕ ಸಂಬಂಧದಲ್ಲಿ ತರತಮ ವಿವೇಚನೆ ಇಲ್ಲದಿರುವುದು ನಿಯೋಗದ ನಿಯಮಾವಳಿಗಳನ್ನು ಪರೀಕ್ಷಿಸಿದಾಗ ಅದು ಕಣ್ಣಿಗೆ ಹೊಡೆಯುವಷ್ಟು ಢಾಳಾಗಿ ಕಾಣುತ್ತದೆ. ನಿಯೋಗವೆನ್ನುವುದು ಮದುವೆಯಾದ ಒಂದು ಹೆಣ್ಣು ತನ್ನ ವಂಶೋದ್ಧಾರಕನನ್ನು ತನ್ನ ಗಂಡನಲ್ಲದ ಪರಪುರುಷನಿಂದ ಪಡೆಯುವ ವ್ಯವಸ್ಥೆ. ಈ ವ್ಯವಸ್ಥೆ ಸಂಪೂರ್ಣ ಹತೋಟಿಗೆ ತಾರತಮ್ಯವಿಲ್ಲದಷ್ಟು ಬೆಳೆಯಿತು. ಮೊದಲನೆಯದಾಗಿ, ಹೆಣ್ಣು ನಿಯೋಗ ಹೊಂದುವ ಸಂಖ್ಯೆಗಳಿಗೆ ಅಡೆತಡೆಯೇ ಇರಲಿಲ್ಲ. ಮಾಧುತಿಗೆ ಒಂದು ನಿಯೋಗದ ಜೊತೆಗೆ ಇನ್ನೊಂದನ್ನು ಸೂಚಿಸಲಾಗಿತ್ತು. ಶರದಂಡಾಯಿನಿಗೆ ಮೂರು. ಪಾಂಡು ತನ್ನ ಹೆಂಡತಿ ಕುಂತಿಗೆ ನಿಯೋಗಕ್ಕೆ ಅನುಮತಿಸಿದ್ದ. ವ್ಯುಶಿಷ್ಟಶ್ವಳಿಗೆ ೭ ಮತ್ತು ವಾಲಿ ೧೭ ನಿಯೋಗಕ್ಕೆ ಪರವಾನಗಿ ಕೊಟ್ಟಿದ್ದ. ೧೧ ಬಾರಿ ತನ್ನ ಮೊದಲ ಹೆಂಡತಿಯನ್ನು, ೬ ಬಾರಿ ತನ್ನ ಎರಡನೆಯ ಹೆಂಡತಿಯನ್ನು ಬಿಟ್ಟಿದ್ದ. ನಿಯೋಗಕ್ಕೆ ಹೇಗೆ ಮಿತಿ ಇರಲಿಲ್ಲವೋ ಅಂತೆಯೇ ಯಾವ ಸಂದರ್ಭದಲ್ಲಿ ನಿಯೋಗ ಸಾಧು ಎಂಬುದನ್ನೂ ಹೇಳಿಲ್ಲ. ಗಂಡನ ಜೀವಿತ ಕಾಲದಲ್ಲೇ ಅದೂ ಅವನು ಸೃಷ್ಟಿಗೆ ಲೈಂಗಿಕವಾಗಿ ಅರ್ಹನಾಗಿದ್ದರೂ ನಿಯೋಗ ಪದ್ಧತಿ ಇತ್ತು. ಇದಕ್ಕೆ ಮುಂದೆ ಬರುವವಳು ಪ್ರಾಯಶಃ ಹೆಂಡತಿಯೇ ಆಗಿದ್ದಳು. ಗಂಡನ್ನು ಆಯ್ದುಕೊಳ್ಳುವುದನ್ನು ಅವಳಿಗೇ ಬಿಟ್ಟಿತ್ತು. ನಿಯೋಗಕ್ಕೆ ಗಂಡನ್ನು ಆಯ್ದುಕೊಳ್ಳಲು ಮತ್ತು ಅದೇ ಗಂಡನ್ನು ಎಷ್ಟು ಬಾರಿ ಆಯ್ದುಕೊಳ್ಳಬಹುದು ಎಂಬುದನ್ನು ನಿರ್ಧರಿಸಲು ಅವಳು ಸ್ವತಂತ್ರಳಿದ್ದಳು. ನಿಯೋಗ ಎಂಬುದು ಹೆಣ್ಣು ಮತ್ತು ಗಂಡಿನೊಡನೆ ಅನೈತಿಕ ಲೈಂಗಿಕ ಸಂಪರ್ಕಕ್ಕೆ ಇನ್ನೊಂದು ಹೆಸರು. ಲೈಂಗಿಕ ಸಂಬಂಧ ಒಂದು ರಾತ್ರಿಯಾಗಿರಬಹುದು ಅಥವಾ ಹನ್ನೆರಡು ವರ್ಷ ಅಥವಾ ಅದಕ್ಕಿಂತ ಹೆಚ್ಚಿನ ಕಾಲದ್ದೂ ಆಗಿರಬಹುದು; ಗಂಡ ಮತ್ತು ಅವಳ ಪಾಲುದಾರ ಈ ವ್ಯಭಿಚಾರಕ್ಕೆ ಒಪ್ಪಿದ್ದಲ್ಲಿ.

ಇವೇ ಪುರಾತನ ಆರ್ಯ ಸಮಾಜದಲ್ಲಿದ್ದ ಸಾಮಾನ್ಯ ನೀತಿ ನಿಯಮಗಳು. ಬ್ರಾಹ್ಮಣರ ನೀತಿಗಳೇನಾಗಿದ್ದವು? ನಿಜ ಹೇಳಬೇಕೆಂದರೆ ಸಾಮಾನ್ಯ ಮನುಷ್ಯರಿಗಿಂತ ಉತ್ತಮವಾಗಿರಲಿಲ್ಲ. ಬ್ರಾಹ್ಮಣರ ನೀತಿಯೂ ಸಡಿಲವಾಗಿತ್ತೆಂಬುದಕ್ಕೆ ಅನೇಕ ಆಧಾರಗಳಿವೆ. ಇಲ್ಲಿ ಕೆಲವು ಮಾತ್ರ ಸಾಕು. ಬ್ರಾಹ್ಮಣರು ತಮ್ಮ ಹೆಂಡತಿಯರನ್ನು ಮಾರಾಟ ಮಾಡುತ್ತಿದ್ದರೆಂಬುದು ಆಗಲೇ ಹೇಳಿಯಾಗಿದೆ. ಸಡಿಲತೆಯ ಕೆಲವು ದೃಷ್ಟಾಂತಗಳನ್ನು ಕೊಡುವೆ. ಉತ್ತಂಕ ವೇದನ (ಜನಮೇಜಯ 'III' ನ

ಪುರೋಹಿತ) ಶಿಷ್ಯ. ವೇದನ ಹೆಂಡತಿ ಶಾಂತಚಿತ್ತದಿಂದಲೇ ಉತ್ತಂಕನನ್ನು ತನ್ನ ಗಂಡನ ಸ್ಥಾನವನ್ನು ಶಕ್ತಿಯ ಕಾರಣಕ್ಕಾಗಿ ತೆಗೆದುಕೊಳ್ಳಲು, ಹಾಗಾಗಿ ತನ್ನನ್ನು 'ಸಮಾಗಮ' ಹೊಂದಲು ಕೇಳಿಕೊಳ್ಳುತ್ತಾಳೆ. ಉದ್ದಾಲಕನ ಹೆಂಡತಿಯದು ಈ ಸಂದರ್ಭದಲ್ಲಿ ಮತ್ತೊಂದು ಉದಾಹರಣೆಯೆಂದು ಹೇಳಬಹುದು. ಅವಳು ತಾನು ಇಷ್ಟಪಟ್ಟ ಬ್ರಾಹ್ಮಣನ ಜೊತೆ ತನ್ನ ಸ್ವ ಇಚ್ಛೆಯ ಮೇರೆಗೆ ಅಥವಾ ಆಹ್ವಾನದ ಮೇರೆಗೆ ಹೋಗಬಹುದಾಗಿತ್ತು. ಅವಳ ಮಗ ಶ್ವೇತಕೇತುವು ಅವಳ ಗಂಡನ ಶಿಷ್ಯನಿಂದ ಹುಟ್ಟಿದವನು. ಇವು ಕೇವಲ ನಿಯಮದ ಸಡಿಲತೆ ಅಥವಾ ಅನೈತಿಕತೆಯ ವಿಷಯವಲ್ಲ. ಇವೆಲ್ಲ ಬ್ರಾಹ್ಮಣ ಹೆಂಗಸಿಗೆ ಗುರುತಿಸಿ ಅನುಮತಿಯಿತ್ತ ಸ್ವಾತಂತ್ರ್ಯಗಳು. ಜಟಿಲ ಗೌತಮಿ ಒಬ್ಬ ಬ್ರಾಹ್ಮಣ ಹೆಣ್ಣಾಗಿದ್ದು ೭ ಜನ ಋಷಿ ಪತಿಗಳನ್ನು ಹೊಂದಿದ್ದಳು. ಮಹಾಭಾರತದಲ್ಲಿ ಪ್ರಜೆಗಳ ಹೆಂಡತಿಯರು ದ್ರೌಪದಿ ತನ್ನ ಐವರು ಪತಿಗಳೊಡನೆ ಇರುವುದನ್ನು ಮೆಚ್ಚುಕೊಳ್ಳುತ್ತಾರೆಂದು ಹೇಳಿದೆ. ಅವಳನ್ನು ೭ ಜನ ಗಂಡಂದಿರನ್ನು ಹೊಂದಿದ ಜಟಿಲಗೌತಮಿಯೊಡನೆ ಹೋಲಿಸುತ್ತಿದ್ದರು. ಮಮತಾ ಉತಥ್ಯನ ಹೆಂಡತಿ. ಆದರೆ ಉತಥ್ಯನ ಸಹೋದರ ಬೃಹಸ್ಪತಿಗೆ ಉತಥ್ಯನ ಜೀವತಿಕಾಲದಲ್ಲಿಯೇ ಮಮತಾ ಸುಲಭವಾಗಿ ಸಿಗುವವಳಾಗಿದ್ದಳು. ಒಮ್ಮೆ ಮಾತ್ರ ಮಮತಾ ಅವನನ್ನು ಕಾಯಲು ಹೇಳುತ್ತಾಳೆ. ಏಕೆಂದರೆ ಅವಳು ಗರ್ಭಿಣಿಯಾಗಿರುತ್ತಾಳೆ. ಆದರೆ ಯಾವಾಗಲೂ ಅವಳನ್ನು ಸಂಧಿಸುವುದು ಸರಿಯಲ್ಲವೆಂದಾಗಲೀ ಕಾನೂನುಬಾಹಿರವೆಂದಾಗಲೀ ಹೇಳುವುದಿಲ್ಲ.

ಇಂತಹ ಅನೈತಿಕತೆ ಬ್ರಾಹ್ಮಣರಲ್ಲಿ ಸಾಮಾನ್ಯವಾಗಿತ್ತು. ದುರ್ಯೋಧನ ಒಮ್ಮೆ ದ್ರೌಪದಿಯನ್ನು ಬಹುಪತಿತ್ವವನ್ನು ಹೊಂದಿದ್ದಕ್ಕಾಗಿ 'ಹಸು' ಎಂದು ಕರೆದಾಗ 'ಕ್ಷಮಿಸು, ತನ್ನ ಗಂಡಂದಿರೇನೂ ಬ್ರಾಹ್ಮಣರಾಗಿ ಹುಟ್ಟಿಲ್ಲ' ಎಂದು ಹೇಳುತ್ತಾಳೆ.

ಈಗ ಋಷಿಗಳ ನೈತಿಕತೆಯನ್ನು ಪರೀಕ್ಷಿಸೋಣ. ಅಲ್ಲಿ ನಾವು ಕಾಣುವುದೇನು? ಋಷಿಗಳಲ್ಲಿ ಮೊದಲು ನಾವು ಕಾಣುವುದು ಮೃಗತ್ವ. ವಿಭಾಂಡಕನನ್ನೇ ತೆಗೆದುಕೊಳ್ಳೋಣ. ಮಹಾಭಾರತದ ವನಪರ್ವದ ೧೦೦ನೇ ಅಧ್ಯಾಯದಲ್ಲಿ ಅವನು ಒಂದು ಹೆಣ್ಣು ಜಿಂಕೆಯೊಡನೆ ಸಂಭೋಗಿಸಿದ ಎಂದಿದೆ. ಆ ಹೆಣ್ಣು ಜಿಂಕೆಗೆ ಒಬ್ಬ ಮಗ ಹುಟ್ಟುತ್ತಾನೆ. ಅವನೇ ಮುಂದೆ ಋಷ್ಯಶೃಂಗನೆಂದು ತಿಳಿದುಬರುತ್ತದೆ. ಮಹಾಭಾರತದ ಆದಿಪರ್ವದ ೧ನೇ ಮತ್ತು ೧೧೮ನೇ ಅಧ್ಯಾಯದಲ್ಲಿ ಪಾಂಡವರ ತಂದೆ ಪಾಂಡು ಹೇಗೆ ಕಿಂದಮ ಋಷಿಯ ಶಾಪಕ್ಕೆ ಒಳಗಾದನೆಂಬ ಕಥೆಯೊಂದಿದೆ. ವ್ಯಾಸ ಹೇಳುವುದೇನೆಂದರೆ ಒಮ್ಮೆ ಕಿಂದಮ ಋಷಿಯು ಕಾಡಿನಲ್ಲಿ ಒಂದು ಹೆಣ್ಣು ಜಿಂಕೆಯೊಡನೆ ಲೈಂಗಿಕ ಕ್ರಿಯೆಯಲ್ಲಿ ತೊಡಗಿದ್ದ. ಹೀಗೆ ತೊಡಗಿದ್ದಾಗ ಪಾಂಡು ಅವನನ್ನು ಬಾಣದಿಂದ ಹೊಡೆದ. ಅದರ ಪರಿಣಾಮವಾಗಿ ಆ ಋಷಿ ಸತ್ತ. ಆದರೆ ಸಾಯುವ ಮುನ್ನ ಪಾಂಡುವು ತನ್ನ ಹೆಂಡತಿಯೊಡನೆ ಭೋಗಿಸುವ ಅಪೇಕ್ಷೆಪಟ್ಟರೆ ತಕ್ಷಣ ಸಾವು ಬರಲಿ ಎಂದು ಶಾಪ ಕೊಟ್ಟ. ಈ ಋಷಿಯ ಮೃಗತ್ವವನ್ನು, ಆ ಋಷಿ ಮತ್ತು ಅವನ ಹೆಂಡತಿ ಖುಷಿಗಾಗಿ ಇಬ್ಬರೂ ಜಿಂಕೆಯ ರೂಪವನ್ನು ತಾಳಿದ್ದರು ಎಂದು ಹೇಳಲು ಪ್ರಯತ್ನಿಸುತ್ತಾನೆ. ಇಂಥ ಮೃಗತ್ವ ಹೊಂದಿದ ಋಷಿಗಳನ್ನು ಸೂಕ್ಷ್ಮವಾಗಿ ಹುಡುಕಿ ಗ್ರಹಿಸಿದರೆ ಭಾರತದ ಪುರಾತನ ಧಾರ್ಮಿಕ ಸಾಹಿತ್ಯದಲ್ಲಿ ಇನ್ನೂ ಕೆಲವು ಉದಾಹರಣೆಗಳು ಸಿಗುತ್ತವೆ.

ಋಷಿಗಳೊಡನೆ ಬರುವ ಮತ್ತೊಂದು ಹೀನ ಆಚರಣೆಯೆಂದರೆ ಎಲ್ಲ ಜನರೆದುರು ಬಟ್ಟಬಯಲಿನಲ್ಲಿ ಹೆಂಗಸರೊಡನೆ ಸಂಭೋಗ ನಡೆಸುವುದು. ಮಹಾಭಾರತದ ಆದಿಪರ್ವದ ೬೩ನೇ ಅಧ್ಯಾಯದಲ್ಲಿ

ಪರಾಶರ ಮುನಿಯು ಬೆಸ್ತರ ಹುಡುಗಿ ಸತ್ಯವತಿ ಅಥವಾ ಮತ್ಸ್ಯಗಂಧಿಯೊಡನೆ ಹೇಗೆ ಲೈಂಗಿಕ ಸಂಪರ್ಕ ಪಡೆದ ಎಂಬ ವಿವರಣೆಯನ್ನು ವ್ಯಾಸ ಹೇಳುತ್ತಾನೆ. ಆದಿಪರ್ವದ ೧೦೪ನೇ ಅಧ್ಯಾಯದಲ್ಲಿ ಇಂಥದ್ದೇ ಘಟನೆಯನ್ನು ಕಾಣಬಹುದು. ಅಲ್ಲಿ ದೀರ್ಘತಮನೆಂಬ ಋಷಿ ಸಮಸ್ತ ಜನರೆದುರು ಹೇಗೆ ಒಂದು ಹೆಣ್ಣನ್ನು ಸಂಭೋಗಿಸಿದ ಎಂದು ಹೇಳಿದೆ. ಇಂಥ ಅನೇಕ ದೃಷ್ಟಾಂತಗಳು ಮಹಾಭಾರತದಲ್ಲಿ ಹೇಳಲ್ಪಟ್ಟಿವೆ. ಅವೆಲ್ಲವನ್ನೂ ಪಟ್ಟಿಮಾಡಿ ತೋರಿಸಿಕೊಡಬೇಕಾಗಿಲ್ಲ. 'ಅಯೋನಿಜ' ಎಂಬ ಪದವೇ ಈ ಆಚರಣೆ ಇತ್ತೆಂದು ಸಾಧಿಸಲು ಸಾಕು. ಸೀತೆ, ದ್ರೌಪದಿ ಇನ್ನೂ ಮುಂತಾದ ಮಹಾ ಮಹಿಳೆಯರು 'ಅಯೋನಿಜ'ರೆಂದು ಹೇಳಲಾಗಿದೆ ಎಂದು ಹೆಚ್ಚು ಜನ ಹಿಂದೂಗಳಿಗೆ ಗೊತ್ತಿಲ್ಲ. ಅವರ ಅರ್ಥದಲ್ಲಿ 'ಅಯೋನಿಜ' ಎಂದರೆ ಪವಿತ್ರ ಸಂಬಂಧದಿಂದ ಜನಿಸಿದ ಮಗು ಎಂಬುದು. ಆದರೆ ಪದ ಮೂಲಾರ್ಥ ದೃಷ್ಟಿಯಿಂದ ನೋಡಿದಾಗ 'ಅಯೋನಿ'ಗೆ ಆ ಅರ್ಥವನ್ನು ಕೊಡಲು ಆಸ್ಪದವಿಲ್ಲ. 'ಯೋನಿ'ಯ ಮೂಲ ಅರ್ಥ ಮನೆ, 'ಯೋನಿಜ' ಎಂದರೆ ಮನೆಯಲ್ಲಿ ಹುಟ್ಟಿದ ಅಥವಾ ಗರ್ಭಧರಿಸಿದ ಮಗು ಎಂದರ್ಥ. 'ಅಯೋನಿಜ' ಎಂದರೆ ಮನೆಯ ಹೊರಗಡೆ ಗರ್ಭಧಾರಣೆಯಾಗಿ ಹುಟ್ಟಿದ ಮಗು ಎಂದರ್ಥ. ಇದು 'ಅಯೋನಿಜ'ಕ್ಕೆ ಸರಿಯಾದ ಪದ ಮೂಲಾರ್ಥವೆಂದಾದರೆ ಸಾರ್ವಜನಿಕರೆದುರು ಸಾರ್ವಜನಿಕ ಸ್ಥಳದಲ್ಲೇ ಲೈಂಗಿಕ ಕ್ರಿಯೆಯಲ್ಲಿ ತೊಡಗುತ್ತಿದ್ದರು ಎಂಬುದಕ್ಕೆ ಪ್ರಮಾಣ ಸಿಗುತ್ತದೆ.

ಋಷಿಗಳು ಅನೈತಿಕತೆಯನ್ನು ಅನುಸರಿಸುತ್ತಿದ್ದರೆನ್ನುವುದಕ್ಕೆ ಛಾಂದೋಗ್ಯ ಉಪನಿಷತ್ತಿನಲ್ಲಿ ಮತ್ತೊಂದು ಆಧಾರವಿದೆ. ಈ ಉಪನಿಷತ್ತಿನ ಪ್ರಕಾರ ಗೊತ್ತಾಗುವುದೇನೆಂದರೆ ಋಷಿಗಳು ಒಂದು ನಿಯಮವನ್ನು ಮಾಡಿದ್ದರು. ಅದೇನೆಂದರೆ, ಅವರು ಯಜ್ಞದಲ್ಲಿ ತೊಡಗಿದ್ದಾಗ ಯಾರಾದರೂ ಹೆಂಗಸು ಋಷಿಯೊಡನೆ ಲೈಂಗಿಕ ಸಂಪರ್ಕಕ್ಕಾಗಿ ಆಸೆ ವ್ಯಕ್ತಪಡಿಸಿದರೆ ಯಜ್ಞ ಮಂಟಪದಲ್ಲಿಯೇ ಎಲ್ಲರೆದುರು ಲೈಂಗಿಕ ಕ್ರಿಯೆಯನ್ನು ನಡೆಸಬಹುದಾಗಿತ್ತು. ಋಷಿಗಳ ಈ ಅನೈತಿಕ ಚಟುವಟಿಕೆಯನ್ನು ಧಾರ್ಮಿಕ ಆಚರಣೆಯ ಮಟ್ಟಕ್ಕೆ ಏರಿಸಲಾಯಿತು. ಇದಕ್ಕೊಂದು ತಾಂತ್ರಿಕ ಪದವನ್ನು ಸೃಷ್ಟಿಸಿ ವಾಮದೇವ ವ್ರತ ಎಂದು ಕರೆಯಲಾಯಿತು. ನಂತರ ಇದನ್ನು ವಾಮಮಾರ್ಗವೆಂದು ಬದಲಾಯಿಸಲಾಯಿತು.

ಋಷಿಗಳ ನೈತಿಕತೆಯ ಬಗ್ಗೆ ಆರ್ಯರ ಪುರಾತನ ಧರ್ಮಗ್ರಂಥಗಳಲ್ಲಿ ಎಲ್ಲವನ್ನೂ ಹೇಳಿ ಮುಗಿಸಿದಂತಾಗಲಿಲ್ಲ. ಅವರ ನೈತಿಕತೆಯ ಮತ್ತೊಂದು ಮುಖವನ್ನು ಹೇಳಬೇಕಾಗುತ್ತದೆ.

ಪುರಾತನ ಆರ್ಯರು ಉತ್ತಮ ಸಂತಾನ ಪಡೆಯಬೇಕೆಂಬ ಆಸೆಯನ್ನು ಹೊಂದಿದ್ದರು. ಅದಕ್ಕಾಗಿ ತಮ್ಮ ಹೆಂಡತಿಯರನ್ನು ಬೇರೆಯವರ ಹತ್ತಿರ, ಮುಕ್ಕಾಲು ಪಾಲು ಋಷಿಗಳ ಹತ್ತಿರ ಕಳುಹಿಸುತ್ತಿದ್ದರು. ಅಂಥ ಋಷಿಗಳನ್ನು ಒಳ್ಳೆಯ ಬೀಜದ ಹೋರಿಗಳೆಂದು ಭಾವಿಸಿದ್ದರು. ಇಂತಹ ಸಂದರ್ಭಗಳಲ್ಲಿ ಬರುವ ಋಷಿಗಳ ಸಂಖ್ಯೆ ಭಯಂಕರವಾಗಿದೆ. ಅಲ್ಲದೆ ಋಷಿಗಳು ಇಂಥ ಅನೈತಿಕತೆಯನ್ನು ಒಂದು ವ್ಯಾಪಾರವನ್ನಾಗಿ ಮಾಡಿಕೊಂಡಂತೆ ಕಾಣುತ್ತದೆ. ಅವರೆಷ್ಟು ಅದೃಷ್ಟಶಾಲಿಗಳಾಗಿದ್ದರೆಂದರೆ ರಾಜರೂ ಕೂಡ ತಮ್ಮ ರಾಣಿಯರಿಗೆ ಗರ್ಭದಾನ ಮಾಡಲು ಕೇಳುತ್ತಿದ್ದರು. ಈಗ ದೇವರುಗಳ[೧] ವಿಚಾರವನ್ನು ನೋಡೋಣ.

೧. ಸಂಸ್ಕೃತದ ದೇವ ಶಬ್ದವನ್ನು ದೇವರು ಎಂದು ಮೊದಲು ಭಾಷಾಂತರ ಮಾಡಿದ ವಿದ್ವಾಂಸನ ಬಗ್ಗೆ ಏನು ಹೇಳಬೇಕೋ ತಿಳಿಯದಾಗಿದೆ. ವೇದಪ್ರಣೀತವಾದ ಆರ್ಯರ ಸಾಮಾಜಿಕ ಜೀವನವನ್ನು ಸರಿಯಾಗಿ ತಿಳಿದುಕೊಳ್ಳಲಾರದ ರೀತಿಯಲ್ಲಿ ಈ ಪದದ ಭಾಷಾಂತರ ದೊಡ್ಡ ಅನಾಹುತ ಮಾಡಿದೆ. ದೇವ ಎಂಬುದು ಒಂದು ಸಮುದಾಯದ ಹೆಸರು ಎಂಬುದು ಪ್ರಶ್ನಾತೀತ. ಆರ್ಯ ಮತ್ತು ದಸ್ಯುಗಳಂತೆ ರಾಕ್ಷಸರು, ದೈತ್ಯರು ದಾನವರುಗಳೂ ಕೂಡ ವಿವಿಧ ಸಮುದಾಯದವರಾಗಿದ್ದಾರೆ ಎಂಬುದನ್ನು ನಿಸ್ಸಂಶಯವಾಗಿ ಒಪ್ಪಿಕೊಳ್ಳಬೇಕಾಗುತ್ತದೆ.

ದೇವರುಗಳು ಹೆಚ್ಚು ಶಕ್ತಿಶಾಲಿಗಳಾಗಿದ್ದರಲ್ಲದೇ ಲೈಂಗಿಕತೆಯಲ್ಲಿ ಅನೈತಿಕ ಸಮುದಾಯವಾಗಿದ್ದರು. ಅವರು ಋಷಿಪತ್ನಿಯರನ್ನು ಕೆಡಿಸಿಯೂ ಇದ್ದರು. ಇಂದ್ರನು ಗೌತಮ ಋಷಿಯ ಪತ್ನಿ ಅಹಲ್ಯೆಯನ್ನು ಸಂಭೋಗಿಸಿದ್ದು ಎಲ್ಲರಿಗೂ ಗೊತ್ತಿದೆ. ಆದರೆ ಅವರು ಆರ್ಯರ ಹೆಣ್ಣುಮಕ್ಕಳ ಮೇಲೆ ನಡೆಸಿದ ಅನೈತಿಕತೆ ಹೇಳಲಸಾಧ್ಯ. ಬಹಳ ಪುರಾತನ ಕಾಲದಲ್ಲೇ ದೇವರುಗಳು ಆರ್ಯಜನಾಂಗದ ಮೇಲೆ ತಮ್ಮ ಪರಮಸ್ವಾಮಿತ್ವವನ್ನು ಸ್ಥಾಪಿಸಿದ್ದರು. ಈ ಪರಮಸ್ವಾಮಿತ್ವ ಎಷ್ಟು ಕೀಳಾಗಿತ್ತೆಂದರೆ ಆರ್ಯ ಹೆಣ್ಣುಮಕ್ಕಳು ದೇವತೆಗಳ ಕಾಮವನ್ನು ತಣಿಸಲು ಸೂಳೆಗಾರಿಕೆ ಮಾಡಬೇಕಾಯಿತು. ಆರ್ಯರು ತಮ್ಮ ಹೆಂಡಂದಿರು ದೇವತೆಗಳ ಜೊತೆ ಇರುವುದನ್ನು, ಅವರಿಂದ ಬಸುರಾಗುವುದನ್ನು ಬಹಳ ಹೆಮ್ಮೆಯಿಂದ ಸ್ವೀಕರಿಸುತ್ತಿದ್ದರು. ಮಹಾಭಾರತ ಮತ್ತು ಹರಿವಂಶಗಳಲ್ಲಿ ಆರ್ಯ ಹೆಂಗಸರಿಗೆ ಇಂದ್ರ, ಯಮ, ನಸತ್ಯ, ಅಗ್ನಿ, ವಾಯು ಮುಂತಾದ ದೇವತೆಗಳಿಂದ ಹುಟ್ಟಿದ ಮಕ್ಕಳನ್ನು ಹೆಸರಿಸಲಾಗಿದೆ. ಅಂದರೆ ದೇವತೆಗಳು ಮತ್ತು ಆರ್ಯ ಹೆಂಗಸರ ನಡುವೆ ಈ ಲೈಂಗಿಕ ಸಂಬಂಧ ಆಶ್ಚರ್ಯ ತರುವಷ್ಟು ಹೆಚ್ಚಿತ್ತು.

ಕಾಲಾನಂತರ ದೇವತೆಗಳ ಮತ್ತು ಆರ್ಯರ ಸಂಬಂಧ ನಿರ್ದಿಷ್ಟ ಸ್ಥಿತಿಗೆ ಬಂದು ಯಜಮಾನೀ ಪದ್ಧತಿ ರೂಪ ತಳೆದಿರಬಹುದು. ದೇವತೆಗಳು ಆರ್ಯರಿಂದ ಎರಡು ವರಗಳನ್ನು[೧] ಕಿತ್ತು ಕೊಂಡರು.

ಮೊದಲನೆಯದು, ಯಜ್ಞ, ಆರ್ಯರು ದೇವತೆಗಳಿಗೆ ಕಾಲಕಾಲಕ್ಕೆ ಅರ್ಪಿಸುತ್ತಿದ್ದ ಔತಣಗಳು. ಇದು ದೇವತೆಗಳು ರಾಕ್ಷಸರೊಡನೆ, ದೈತ್ಯರೊಡನೆ, ದಾನವರೊಡನೆ ಹೋರಾಡುವಾಗ ಕೊಡುತ್ತಿದ್ದ ರಕ್ಷಣೆಯ ಫಲವಾಗಿತ್ತು. ಯಜ್ಞಗಳು ದೇವತೆಗಳ ಊಳಿಗಮಾನ್ಯ ಸುಲಿಗೆಯೇ ಆಗಿತ್ತು. ಇದನ್ನು ಅವರು ಹೀಗೆ ಅರ್ಥಮಾಡಿಕೊಳ್ಳದೇ ಇರುವುದಕ್ಕೆ ಕಾರಣವೇನೆಂದರೆ, 'ದೇವ' ಎಂದರೆ ಒಂದು ಸಮುದಾಯವೆಂದು ಅರ್ಥಮಾಡಿಕೊಳ್ಳದೆ 'ದೇವತೆ' ಎಂದು ತಿಳಿದುಕೊಂಡಿದ್ದೇ ಆಗಿತ್ತು. ಆರಂಭಿಕ ಹಂತದ ಆರ್ಯಸಮಾಜದಲ್ಲಿ ಈ ಅರ್ಥ ಸಾಧ್ಯವಿರಲಿಲ್ಲ.

'ದೇವ'ರುಗಳಿಂದ ಆರ್ಯರ ವಿರುದ್ಧ ಪಡೆದುಕೊಂಡಿದ್ದ ವರವೆಂದರೆ ಆರ್ಯ ಹೆಣ್ಣುಗಳನ್ನು ಭೋಗಿಸುವುದು. ಬಹಳ ಪೂರ್ವಕಾಲದಲ್ಲೇ ಇದು ಒಂದು ವ್ಯವಸ್ಥೆಗೆ ಒಳಪಟ್ಟಿತ್ತು. ಇದರ ಬಗ್ಗೆ ಋಗ್ವೇದದ X ೮೫, ೪೦ರಲ್ಲೇ ಉಲ್ಲೇಖವಿದೆ. ಆರ್ಯ ಹೆಣ್ಣುಗಳ ಮೇಲೆ ಮೊದಲನೇ ಹಕ್ಕು ಸೋಮನದು, ಎರಡನೆಯದು ಗಂಧರ್ವರದು, ಮೂರನೆಯದಾಗಿ ಅಗ್ನಿಯದು ಮತ್ತು ಕೊನೆಯದಾಗಿ ಆರ್ಯರದು. ಪ್ರತಿಯೊಬ್ಬ ಆರ್ಯ ಹೆಣ್ಣೂ ಋತುವಾದ ತಕ್ಷಣವೇ ದೇವತೆಗಳಿಗೆ ಅಡವಿಡಲ್ಪಡುತ್ತಿದ್ದಳು ಮತ್ತು ಅವಳೊಡನೆ ಸಂಭೋಗದ ಹಕ್ಕು ದೇವರುಗಳಿಗಿತ್ತು. ಆರ್ಯನು ಆ ಹೆಣ್ಣನ್ನು ಮದುವೆಯಾಗುವ ಮುನ್ನ ದೇವರಿಗೆ ಸರಿಯಾದ ರೀತಿಯಲ್ಲಿ ಕಾಣಿಕೆ ಸಲ್ಲಿಸಿ ಹಕ್ಕನ್ನು ಪಡೆದು ಬಿಡಿಸಿಕೊಳ್ಳಬೇಕಾಗಿತ್ತು. ಈ ಮದುವೆಯ ವ್ಯವಸ್ಥೆ ಇತ್ತೆಂಬುದನ್ನು ಅಶ್ವಲಾಯನ ಗೃಹ್ಯಸೂತ್ರ ಮೊದಲ ಅಧ್ಯಾಯದ ೭ನೇ

೧. ದೇವತೆಗಳು ಮತ್ತು ಆರ್ಯರ ನಡುವಣ ಸಂಬಂಧಗಳು, ಯಜಮಾನ ಮತ್ತು ವೆಲೆಯನರ ನಡುವಣ ಊಳಿಗಮಾನ್ಯ ಪದ್ಧತಿಯದಾಗಿತ್ತೋ ಹೇಗೆ ಎಂಬುದನ್ನು ಪರೀಕ್ಷಿಸಲಾಗಿಲ್ಲ. ಏಕೆಂದರೆ ಬಹುಮಟ್ಟಿಗೆ ದೇವರುಗಳನ್ನು ಒಂದು ಮಾನವ ಸಮುದಾಯ ಎಂದು ಪರಿಗಣಿಸಲಾಗಿಲ್ಲ. ದೇವತೆಗಳು ಆರ್ಯರಿಂದ ಕೇಳಿದ ವರಗಳು ಯಜಮಾನನು ತನ್ನ ವೆಲೆಯನರಿಂದ ಬೇಡಿದ ವರಗಳೇ ಆಗಿವೆ. ೧, ಮೊದಲ ಹಣ್ಣುಗಳು ೨. ಪ್ರೈಮಾನಾಕ್ಟಿಸ್

ಕಂಡಿಕೆಯಲ್ಲಿ ಆಧಾರ ವಿವರವಾಗಿ ಸಿಗುತ್ತದೆ. ಸೂಕ್ಷ್ಮವಾದ ಮತ್ತು ವಿಮರ್ಶಾತ್ಮಕ ದೃಷ್ಟಿಯಿಂದ ಈ ಸೂತ್ರವನ್ನು ನೋಡಿದರೆ ಮದುವೆಯ ಸಂದರ್ಭದಲ್ಲಿ ಆರ್ಯಮಾನ್, ವರುಣ, ಪೂಷನ್, ಈ ಮೂವರೂ ಹಾಜರಿರುತ್ತಾರೆ. ಏಕೆಂದರೆ ಖಂಡಿತವಾಗಿ ಅವರು ಧಾರೆ ಎರೆಯುವ ಹಕ್ಕನ್ನು ಪಡೆದಿದ್ದರು. ಮದುವೆಯ ಗಂಡು ಮೊದಲು ಮಾಡುವುದೆಂದರೆ ಹೆಣ್ಣನ್ನು ಕಲ್ಲುಚಪ್ಪಡಿಯ ಮೇಲೆ ನಿಲ್ಲಿಸಿ ಅವಳಿಗೆ "ಈ ಕಲ್ಲನ್ನು ತುಳಿ, ಕಲ್ಲಿನಂತೆ ನಿಶ್ಚಲವಾಗಿರು; ವೈರಿಗಳನ್ನು ಜಯಿಸು, ವೈರಿಗಳನ್ನು ತುಳಿದುಹಾಕು" ಎಂದು ಹೇಳುವುದು. ಇದರರ್ಥ ಗಂಡು ಹೆಣ್ಣನ್ನು ಈ ಮೂರು ದೇವತೆಗಳ ದೈಹಿಕ ನಿಯಂತ್ರಣದಿಂದ ಬಿಡಿಸುವುದು. ಏಕೆಂದರೆ ಅವನು ಅವರನ್ನು ವೈರಿಯೆಂದೇ ಬಗೆಯುತ್ತಾನೆ. ದೇವರುಗಳ ಕೋಪಗೊಂಡು ಮದುವೆ ಗಂಡಿನ ಮೇಲೆ ಹಾಯುತ್ತಾರೆ. ಹೆಣ್ಣಿನ ಸಹೋದರ ಮಧ್ಯ ಪ್ರವೇಶಿಸಿ ಈ ಕಲಹವನ್ನು ಬಿಡಿಸುತ್ತಾನೆ. ಮದುವೆ ಹೆಣ್ಣಿನಿಂದ ಮೇಲಿನ ಹಕ್ಕುಗಳನ್ನು ಪಡೆಯಲು ಕೋಪಗೊಂಡ ದೇವತೆಗಳಿಗೆ ನೆನಸಿದ ಕಾಳುಗಳನ್ನು ಕೊಡುತ್ತಾನೆ. ನಂತರ ಮದುವೆ ಹೆಣ್ಣಿನ ಹಸ್ತಗಳನ್ನು ಸೇರಿಸಿ ಬೊಗಸೆ ಮಾಡಿಸುತ್ತಾನೆ. ಬೊಗಸೆಯೊಳಗೆ ನೆನೆಸಿದ ಕಾಳುಗಳನ್ನು ತುಂಬಿ ಅದರ ಮೇಲೆ ಮಜ್ಜಿಗೆಯನ್ನು ಸುರಿದು ಪ್ರತಿಯೊಬ್ಬ ದೇವರಿಗೂ ಮೂರು ಬಾರಿ ಅರ್ಪಿಸಲು ಹೇಳುತ್ತಾನೆ. ಈ ಅರ್ಪಣೆಯನ್ನು 'ಅವದಾನ'ವೆಂದು ಕರೆಯುತ್ತಾರೆ. ಹೀಗೆ ಹೆಣ್ಣು ಅರ್ಪಣೆಯನ್ನು ಮಾಡುತ್ತಿರುವಾಗ ಅವಳ ಸಹೋದರ ಕೆಲವು ಹೇಳಿಕೆಗಳನ್ನು ಮಾಡುವುದು ಬಹಳ ಪ್ರಮುಖವಾದುದು: "ಈ ಹೆಣ್ಣು ಅಗ್ನಿಯ ಮೂಲಕ ಆರ್ಯಮಾನ್ ದೇವನಿಗೆ ಅವದಾನ ಮಾಡುತ್ತಿದ್ದಾಳೆ. ಆರ್ಯಮಾನನು ಆ ಹೆಣ್ಣಿನ ಮೇಲಿನ ಹಕ್ಕನ್ನು ಹಿಂತೆಗೆದುಕೊಳ್ಳುತ್ತಾನೆ ಮತ್ತು ಅವನು ಹೆಣ್ಣನ್ನು ಹೊಂದುವುದಕ್ಕೆ ಧಕ್ಕೆ ತರಬಾರದು". ಉಳಿದ ಇಬ್ಬರು ದೇವತೆಗಳಿಗು ಹೆಣ್ಣು ಬೇರೆ ಬೇರೆ ಅವದಾನಗಳನ್ನು ಮಾಡುತ್ತಾಳೆ. ಇದೇ ಸೂತ್ರವನ್ನು ಅವಳ ಸಹೋದರ ಬದಲಿಸಿ ಹೇಳುತ್ತಾನೆ. ಅವದಾನದ ನಂತರ ಅಗ್ನಿಗೆ ಪ್ರದಕ್ಷಿಣೆ ಮಾಡುತ್ತಾಳೆ. ಇದೇ 'ಸಪ್ತಪದಿ'. ಇದಾದ ನಂತರ ಗಂಡು–ಹೆಣ್ಣಿನ ಮದುವೆ ಪೂರ್ಣವಾಗುತ್ತದೆ, ಬೆಲೆ ಬರುತ್ತದೆ ಮತ್ತು ಸರಿಯಾಗುತ್ತದೆ. ಇವೆಲ್ಲವೂ ಆರ್ಯರ ಮೇಲೆ ದೇವತೆಗಳ ಹಿಡಿತವನ್ನೂ ದೇವರ ಮತ್ತು ಆರ್ಯರ ನೈತಿಕ ಅಧಃಪತನವನ್ನೂ ಸೂಚಿಸುತ್ತವೆ.

ಹಿಂದೂ ಮದುವೆಯ ಪದ್ಧತಿಯಲ್ಲಿ ಸಪ್ತಪದಿ ಬಹಳ ಪ್ರಮುಖವಾದ ಕಾರ್ಯವೆಂದು ಲಾಯರುಗಳಿಗೆ ಗೊತ್ತು. ಇದಿಲ್ಲದೆ ಕಾನೂನಿನ ರೀತಿ ಮದುವೆ ಆಗುವುದಿಲ್ಲ. ಆದರೆ ಸಪ್ತಪದಿಗೇಕೆ ಇಷ್ಟು ಪ್ರಾಮುಖ್ಯತೆ ಎಂಬುದು ಕೆಲವರಿಗೆ ಮಾತ್ರ ಗೊತ್ತಿಲ್ಲ. ಇದಕ್ಕೆ ಕಾರಣ ನಿಖರವಾಗಿಯೇ ಇದೆ. ಹೆಣ್ಣಿನ ಮೇಲೆ ಹಕ್ಕು ಹೊಂದಿದ ದೇವರು ಈ ಅವದಾನದಿಂದ ಸಂತೃಪ್ತಿ ಹೊಂದಿ ಹೆಣ್ಣನ್ನು ಬಿಟ್ಟುಕೊಡಲು ಸಿದ್ಧನಿರುವನೇ ಎಂಬುದು. ದೇವರು ಗಂಡಿಗೆ ಹೆಣ್ಣನ್ನು ತನ್ನ ಜೊತೆ ಸಪ್ತಪದಿಯಷ್ಟು ದೂರ ಕರೆದುಕೊಂಡು ಹೋಗಲು ಅನುಮತಿ ಇತ್ತರೆ ದೇವನು ಅವನಿಗೆ ಕೊಟ್ಟ ದಾನದಿಂದ ಸಂತೃಪ್ತನಾಗಿ ಅವಳ ಮೇಲಿನ ತನ್ನ ಹಕ್ಕನ್ನು ಬಿಟ್ಟುಕೊಟ್ಟು ಇನ್ನೊಬ್ಬನ ಹೆಂಡತಿಯಾಗಲು ಒಪ್ಪಿಗೆ ಇದೆ ಎಂದರ್ಥ. ಸಪ್ತಪದಿಗೆ ಬೇರಾವ ಅರ್ಥವೂ ಇಲ್ಲ. ಮದುವೆಯಲ್ಲಿ ಸಪ್ತಪದಿ ಇರಲೇಬೇಕೆಂಬುದು ದೇವ ಮತ್ತು ಆರ್ಯರಲ್ಲಿ ಅನೈತಿಕತೆ ಎಂಬುದು ಎಷ್ಟರಮಟ್ಟಿಗೆ ಇತ್ತೆನ್ನುವುದು ಸಾರ್ವತ್ರಿಕ ವಿಚಾರ.

ಈ ಪರಿವೀಕ್ಷಣೆಯು ಕೃಷ್ಣನ ನೈತಿಕತೆಯ ಬಗ್ಗೆ ಹೇಳದಿದ್ದರೆ ಸಂಪೂರ್ಣವಾಗುವುದಿಲ್ಲ. ಕಲಿಯುಗದ ಪ್ರಾರಂಭದಿಂದ, ಇದೇ ಕೃಷ್ಣನ ಸಾವಿಗೆ ಕಾಲವೂ ಆಗುವುದರಿಂದ ಅವನ ನೈತಿಕತೆಗೆ

ಪ್ರಾಮುಖ್ಯತೆ ಬರುತ್ತದೆ. ಬೇರೆಯವರೊಡನೆ ಹೋಲಿಸಿದರೆ ಕೃಷ್ಣನ ನೈತಿಕತೆ ಹೇಗಿದೆ? ಕೃಷ್ಣನ ಬದುಕಿನ ಬಗ್ಗೆ ಸಂಪೂರ್ಣ ವಿವರವನ್ನು ಬೇರೆ ಕಡೆಗೆ ಕೊಡಲಾಗಿದೆ. ಅದಕ್ಕೆ ಇಲ್ಲಿ ಕೆಲವನ್ನು ಸೇರಿಸುತ್ತೇನೆ. ಕೃಷ್ಣ ವೃಷ್ಣಿಕುಲಕ್ಕೆ (ಯಾದವ) ಸೇರಿದವನು. ಯಾದವರು ಬಹುಪತ್ನಿತ್ವವನ್ನು ಹೊಂದಿದ್ದರು. ಯಾದವ ರಾಜರು ಅಸಂಖ್ಯಾತ ಹೆಂಡಂದಿರನ್ನೂ ಮಕ್ಕಳನ್ನು ಹೊಂದಿದ್ದರು. ಈ ಅಪವಾದಕ್ಕೆ ಕೃಷ್ಣನೂ ಹೊರತಾಗಿರಲಿಲ್ಲ. ಈ ಯಾದವ ಕುಲ ಮತ್ತು ಕೃಷ್ಣನ ಸ್ವಂತ ಮನೆಯೇ ತಂದೆ ತಾಯಿಗಳ ಹಾದರದ ಅಪವಾದದಿಂದ ಮುಕ್ತವಾಗಿರಲಿಲ್ಲ. ಯಾದವ ಸಂಸಾರದಲ್ಲಿ ತಂದೆ ಮಗಳನ್ನು ಮದುವೆಯಾಗುವುದು ಮತ್ಸ್ಯಪುರಾಣದಲ್ಲಿ ಬರುತ್ತದೆ. ಕೃಷ್ಣನ ಪೂರ್ವಜನಾದ ತೈತ್ತಿರೀರಾಜ ತನ್ನ ಮಗಳನ್ನೇ ಮದುವೆಯಾಗಿ ನಳನೆಂಬ ಮಗನನ್ನು ಪಡೆದ. ಮಗ ತಾಯಿಯೊಡನೆ ಲೈಂಗಿಕ ಸಂಬಂಧ ಹೊಂದಿದ್ದನ್ನು ಕೃಷ್ಣನ ಮಗ ಶಂಬನಲ್ಲಿ ಕಾಣಬಹುದು. ಕೃಷ್ಣನ ಹೆಂಡತಿಯರೊಡನೆ ಅವನ ಮಗ ಶಂಬ ಎಂತಹ ಅನೈತಿಕ ಜೀವನವನ್ನು ನಡೆಸುತ್ತಿದ್ದ ಎಂಬುದನ್ನು ಮತ್ಸ್ಯಪುರಾಣವೇ ಹೇಳುತ್ತದೆ. ಇದಕ್ಕಾಗಿ ಕೃಷ್ಣ ಕೋಪಗೊಂಡು ಶಂಬನಿಗೂ ಮತ್ತು ತಪ್ಪಿತಸ್ಥರಾದ ಹೆಂಡತಿಯರಿಗೂ ಶಾಪಕೊಟ್ಟನು. ಇದಕ್ಕೆ ಸಂಬಂಧಿಸಿದಂತೆ ಮಹಾಭಾರತದಲ್ಲೂ ಉಲ್ಲೇಖವಿದೆ. ಸತ್ಯಭಾಮೆ ದ್ರೌಪದಿಯನ್ನು ತನ್ನ ಐವರು ಗಂಡಂದಿರೊಡನೆ ಇರುವ ಶಕ್ತಿಯ ಗುಟ್ಟನ್ನು ಕೇಳುತ್ತಾಳೆ. ಮಹಾಭಾರತದ ಪ್ರಕಾರ ದ್ರೌಪದಿಯು ಅವಳಿಗೆ ತನ್ನ ಮಲಮಕ್ಕಳೊಡನೆ ಮಾತನಾಡುವುದಕ್ಕಾಗಲೀ, ಇರುವುದಕ್ಕಾಗಲೀ ಅದರ ವಿರುದ್ಧ ಎಚ್ಚರಿಕೆ ನೀಡುತ್ತಾಳೆ. ಇದು ಮತ್ಸ್ಯಪುರಾಣದಲ್ಲಿ ಬರುವ ಶಂಬನ ವಿಷಯವನ್ನೇ ಹೋಲುತ್ತದೆ. ಶಂಬನದೊಂದೇ ಉದಾಹರಣೆಯಲ್ಲ. ಅವನ ಸಹೋದರ ಪ್ರದ್ಯುಮ್ನ ಅವನ ಸಾಕುತಾಯಿ ಶಂಬನ ಹೆಂಡತಿ ಮಾಯಾವತಿಯನ್ನು ಮದುವೆಯಾಗುತ್ತಾನೆ.

ಕೃಷ್ಣನ ಸಾವಿಗೆ ಮೊದಲಿನ ಆರ್ಯಸಮಾಜದ ನೈತಿಕ ಸ್ಥಿತಿ ಹೀಗಿದೆ. ಈ ಚರಿತ್ರೆಯನ್ನು ನಿರ್ದಿಷ್ಟ ಯುಗಗಳಾಗಿ ವಿಭಾಗಿಸಲು ಸಾಧ್ಯವಿಲ್ಲ ಮತ್ತು ಯಾವ ರೀತಿಯ ನೈತಿಕತೆ, ಕೃತ, ತ್ರೇತ, ದ್ವಾಪರಯುಗ, ಕೃಷ್ಣನ ಸಾವಿನ ತನಕ ಇತ್ತು ಎಂಬುದನ್ನು ಹೇಳಲಾಗುವುದಿಲ್ಲ. ಆರ್ಯರ ಪ್ರಗತಿಪರ ಪರಿವರ್ತನೆಯನ್ನು ಗಮನಿಸಿದರೆ ಅನೈತಿಕತೆಯ ಪರಮಾವಧಿಯು, ಅತ್ಯಂತ ಪೂರ್ವದಲ್ಲಿ, ಅಂದರೆ, ಕೃತಯುಗದಲ್ಲಿ ಇತ್ತು. ತ್ರೇತಾಯುಗದಲ್ಲಿ ಕಡಿಮೆಯಾಗಿ ದ್ವಾಪರದಲ್ಲಿ ಅತ್ಯಂತ ಕಡಿಮೆಯಾಯಿತು. ಕಲಿಯುಗದಲ್ಲಿ ಉತ್ತಮವಾಯಿತು.

ಈ ಆಲೋಚನಾಧಾರೆಯು ಪ್ರಪಂಚದಲ್ಲೆಲ್ಲ ಕಂಡುಬರುವಂತೆ, ಕೇವಲ ಮಾನವ ಸಮಾಜದ ಅಭಿವೃದ್ಧಿಯ ಮೇಲೆ ಮಾತ್ರ ನಿಲ್ಲುವುದಿಲ್ಲ. ಪುರಾತನ ಆರ್ಯಸಮಾಜವು ನೈತಿಕ ಅಧಃಪತನಕ್ಕೆ ಇಳಿಯುವುದಕ್ಕೆ ಬದಲಾಗಿ ಸಾಮಾಜಿಕ ಪಿಡುಗುಗಳನ್ನು ನಿರ್ಮೂಲಗೊಳಿಸಿ ದಿಟ್ಟ ಸುಧಾರಣೆಗಳನ್ನು ಕೈಗೊಂಡಿರುವುದನ್ನೂ ಅದರ ಚರಿತ್ರೆಯಿಂದ ತಿಳಿಯಬಹುದು.

ಸಾಮಾನ್ಯ ಆರ್ಯರ ದೃಷ್ಟಿಯಲ್ಲಿ ದೇವರು ಮತ್ತು ಋಷಿಗಳು ಉನ್ನತ ಸ್ಥಾನಗಳನ್ನು ಪಡೆದಿದ್ದರು. ಕೀಳು ಜನರು ಮೇಲು ಜನರನ್ನು ಅನುಸರಿಸುವುದು ಹೇಗೆ ಸಾಮಾನ್ಯವೋ, ಹಾಗೆ ಮೇಲುವರ್ಗ ಮಾಡುವುದು ಕೀಳುವರ್ಗಕ್ಕೆ ಮಾದರಿಯಾಗುತ್ತದೆ. ಆರ್ಯಸಮಾಜದಲ್ಲಿದ್ದ ಸಾಮಾನ್ಯ ಜನರ ಅನೈತಿಕತೆಯು ದೇವರು ಮತ್ತು ಋಷಿಗಳಲ್ಲಿದ್ದ ಅನೈತಿಕ ನಡತೆಗಳ ಅನುಕರಣೆಯಾಗಿತ್ತು. ಈ ಅನೈತಿಕತೆ ಹರಡುವುದನ್ನು ತಡೆಯಲು ಆರ್ಯ ಸಮಾಜದ ಮುಖಂಡರು ಬಹಳ ಅರ್ಥಪೂರ್ಣ

ಸುಧಾರಣೆಗಳನ್ನು ತಂದರು. ದೇವರು ಅಥವಾ ಋಷಿಗಳ ನಡತೆಯನ್ನು ಉದಾಹರಣೆಯಾಗಿ ಹೇಳಬಾರದು[೧] ಅಥವಾ ಪ್ರಸ್ತಾಪಿಸಬಾರದೆಂದು ಘೋಷಿಸಿದರು. ಈ ರೀತಿಯಾಗಿ ಅನೈತಿಕತೆಯ ಕಾರಣ ಮತ್ತು ಮೂಲವನ್ನು ಧೈರ್ಯವಾದ ಬಲಿಷ್ಠವಾದ ಹೊಡೆತದಿಂದ ನಿರ್ಮೂಲನ ಮಾಡಲಾಗಿದೆ.

ಉಳಿದ ಸುಧಾರಣೆಗಳೂ ಇಷ್ಟೇ ಮೂಲಭೂತವಾದವು. ಮಹಾಭಾರತದಲ್ಲಿ ದೀರ್ಘತಮ ಮತ್ತು ಶ್ವೇತಕೇತು ಎಂಬ ಇಬ್ಬರು ಸುಧಾರಣಾವಾದಿಗಳನ್ನು ಉಲ್ಲೇಖಿಸಲಾಗಿದೆ. ಮದುವೆ ಎನ್ನುವುದು ಸ್ಥಿರವಾದದ್ದು, ವಿಚ್ಛೇದನಕ್ಕೆ ಇಲ್ಲಿ ಅವಕಾಶವಿಲ್ಲವೆಂದು ಶ್ವೇತಕೇತು ಒಂದು ನಿಯಮವನ್ನು ಮಾಡಿದ. ದೀರ್ಘತಮ ಮಾಡಿದನು ಎಂಬ ಎರಡು ಸುಧಾರಣೆಗಳಿವೆ. ಅವನು ಬಹುಪತಿತ್ವವನ್ನು ನಿಲ್ಲಿಸಿದ. ಏಕಕಾಲದಲ್ಲಿ ಒಬ್ಬ ಹೆಂಗಸು ಒಬ್ಬನೇ ಗಂಡನನ್ನು ಪಡೆದಿರಬೇಕು. ಅವನು ಮಾಡಿರಬಹುದಾದ ಎರಡನೇ ಸುಧಾರಣೆ ನಿಯೋಗವನ್ನು ಕ್ರಮಬದ್ಧಗೊಳಿಸಿದ್ದು. ಈ ಕೆಳಗಿನ ಕರಾರುಗಳು ಬಹಳ ಮುಖ್ಯವಾದುವು.

(i) ವಿಧವೆಯ ತಂದೆ ಅಥವಾ ಸಹೋದರ, ಸತ್ತ ಗಂಡನ ಅಥವಾ ಸಂಬಂಧಿಗಳ ಗುರುಗಳನ್ನು ಸೇರಿಸಿ ಅವಳನ್ನು ಸತ್ತ ಗಂಡನಿಗಾಗಿ ಸಂತಾನಾಭಿವೃದ್ಧಿ ಮಾಡಲು ನೇಮಿಸುವುದು.[೨]

(ii) ೧. ಗಂಡನಿಗೆ ಬದುಕಿರಲಿ ಅಥವಾ ಸತ್ತಿರಲಿ, ಮಕ್ಕಳಿರಬಾರದು.

೨. ಆ ವಂಶದ ಗುರುಗಳು ಆ ವಿಧವೆ ತನ್ನ ಗಂಡನಿಗಾಗಿ ಮಕ್ಕಳನ್ನು ಪಡೆಯುವುದನ್ನು ನಿರ್ಧರಿಸಬೇಕು. ೩. ಇದಕ್ಕೆ ನೇಮಿಸಿದ ವ್ಯಕ್ತಿ ಗಂಡನ ಸಹೋದರನಾಗಲೀ ಅಥವಾ ಸಪಿಂಡನಾಗಲೀ ಅಥವಾ ಸಗೋತ್ರದವನಾಗಲೀ ಅಥವಾ (ಗೌತಮನ ಪ್ರಕಾರ) ಸಪ್ರವರ ಅಥವಾ ಒಂದೇ ಜಾತಿಯವನಾಗಿರಬೇಕು. ೪. ಹೀಗೆ ನೇಮಿಸಿದ ವ್ಯಕ್ತಿ ಮತ್ತು ವಿಧವೆ ಕಾಮುಕತೆಯಿಂದ ವರ್ತಿಸಬಾರದು. ಕರ್ತವ್ಯದ ದೃಷ್ಟಿಯಿಂದ ಮಾತ್ರ ವರ್ತಿಸಬೇಕು. ೫. ನೇಮಿಸಿದ ವ್ಯಕ್ತಿಗೆ ತುಪ್ಪ ಅಥವಾ ಎಣ್ಣೆಯನ್ನು ಹಚ್ಚಿರಬೇಕು (ನಾರದ ಸ್ತ್ರೀಪುಂಸ ೮೨). ಅವಳ ಜೊತೆ ಮಾತನಾಡಬಾರದು, ಮುತ್ತು ಕೊಡಬಾರದು ಅಥವಾ ಆ ಹೆಂಗಸಿನೊಡನೆ ಕಾಮಕೇಳಿಯನ್ನು ನಡೆಸಬಾರದು. ೬. ಈ ಸಂಬಂಧ ಒಬ್ಬ ಮಗ ಹುಟ್ಟುವ ತನಕ ಮಾತ್ರ ಇರಬೇಕು (ಅಥವಾ ಕೆಲವರ ಪ್ರಕಾರ ಎರಡು ಮಕ್ಕಳು). ೭. ಆ ವಿಧವೆ ಯುವತಿಯಾಗಿರಬೇಕು. ಅವಳು ಮುದುಕಿ ಅಥವಾ ಬಂಜೆಯಾಗಿರಬಾರದು. ಮುಟ್ಟು ನಿಂತವಳಾಗಲೀ, ಕಾಯಿಲೆಯವಳಾಗಲೀ, ಸಮ್ಮತವಿಲ್ಲದವಳಾಗಲೀ, ಬಸುರಿಯಾಗಲೀ ಆಗಿರಬಾರದು (ಬೌಧಾಯನ ಧರ್ಮ ಸೂ. II, ೨. ೭೦. ನಾರದ ಸ್ತ್ರೀಪುಂಸ ೮೩. ೮೪) ಮತ್ತು ೮. ಮಗ ಹುಟ್ಟಿದ ಮೇಲೆ

೧. ಕಾಣೆ ಸಂಪುಟ, II, ಭಾಗ I, ಪು. ೬೦೧

೨. ಋಷಿಗಳ ಗುಣವನ್ನು ಹೇಳಬಾರದು ಅಥವಾ ಪ್ರಸ್ತಾಪಿಸಬಾರದು ಎಂಬ ನಿಯಮ ಗೌತಮ ಧರ್ಮಸೂತ್ರದ 'ನ ದೇವ ಚರಿತಮಾ ಚರೇತ' ಎಂಬುದು ದೇವರನ್ನು ಉದಾಹರಣೆಯಾಗಿ ಕೊಡುವುದರ ವಿರುದ್ಧ ಕಾನೂನಿನ ಉಲ್ಲೇಖವಾಗಿದೆ. ಇದೊಂದು ಬಾಯಿಮಾತಿನಲ್ಲಿ ಹರಡಿರುವ ಶ್ಲೋಕ. ಇದರ ಮೂಲವನ್ನು ಗುರುತಿಸಲು ಸಾಧ್ಯವಾಗಿಲ್ಲ.

ಅವರು ತಮ್ಮೊಳಗೆ ಮಾವ ಮತ್ತು ಸೊಸೆಯಂತೆ ನಡೆದುಕೊಳ್ಳಬೇಕು (ಮನು IX ೬೨). ಈ ಪಠ್ಯಗಳಲ್ಲಿ ಇನ್ನೂ ಸ್ಪಷ್ಟ ಪಡಿಸಿರುವುದೇನೆಂದರೆ ಭಾವ ಮೈದುನ – ಅತ್ತಿಗೆ ಅಥವಾ ನಾದಿನಿಯೊಡನೆ ಸಂಭೋಗ ನಡೆಸಲು ಹಿರಿಯರು ನೇಮಿಸಿದರೆ ಅಥವಾ ಅವನು ಹಾಗೆ ಮಾಡಿದರೆ ಉಳಿದ ಪರಿಸ್ಥಿತಿಗಳು ಲೆಕ್ಕಕ್ಕೇ ಬರುವುದಿಲ್ಲ. (ಉದಾ: ಗಂಡನಿಗೆ ಮಗನಿದ್ದರೆ), ಅವನು ಲೈಂಗಿಕ ನಿಯಮವನ್ನು ಮುರಿದು ಪಾಪಕ್ಕೆ ಗುರಿಯಾಗುತ್ತಾನೆ.

ಪುರಾತನ ಆರ್ಯಸಮಾಜದಲ್ಲಿ ನೈತಿಕತೆಯನ್ನು ಹೆಚ್ಚಿಸಲು ಇನ್ನೂ ಕೆಲವು ಸುಧಾರಣೆಗಳಿವೆ. ಅದರಲ್ಲಿ ಒಂದು ತಂದೆ–ಮಗಳು, ಸಹೋದರ–ಸಹೋದರಿ, ತಾಯಿ–ಮಗ, ಅಜ್ಜ–ಮೊಮ್ಮಗಳು ಇವರ ಮದುವೆಗಳಾಗದ ಹಾಗೆ ಮದುವೆಯ ನಿಯಮಗಳನ್ನು ಸ್ಥಾಪಿಸಿದ್ದು. ಗುರುಪತ್ನಿ ಮತ್ತು ಶಿಷ್ಯರ ನಡುವಿನ ಲೈಂಗಿಕ ಸಂಪರ್ಕವನ್ನು ಭಯಂಕರ ಪಾಪವೆಂದು ಘೋಷಿಸಿದ್ದು. ಜೂಜಾಟವನ್ನು ನಿಯಂತ್ರಿಸುವುದಕ್ಕೆ ಸಮ್ಮತಿಸಿದ್ದು ಇನ್ನೊಂದು ಮುಖ್ಯ ಆಧಾರ. ಧರ್ಮಸೂತ್ರಗಳು ಎಂದು ಕರೆಯಲ್ಪಡುವ ಗ್ರಂಥಗಳು ರಾಜನು ಮಾಡಿದ ನಿಯಮಗಳೆಂದು ಜೂಜಾಟವನ್ನು ನಿಯಂತ್ರಿಸುವ ಬಗ್ಗೆ ಇರುವ ಕರ್ತವ್ಯ ತುರ್ತನ್ನು ಪ್ರಭುತ್ವದ ಕಟ್ಟುನಿಟ್ಟಾದ ನಿಯಮಗಳನ್ನು ಒಳಗೊಂಡಿವೆ.

ಈ ಎಲ್ಲ ಸುಧಾರಣೆಗಳೂ ಕಲಿಯುಗ ಪ್ರಾರಂಭವಾಗುವ ಬಹಳ ಮೊದಲೇ ಜಾರಿಗೆ ಬಂದಿದ್ದವು. ನೈತಿಕತೆಯ ದೃಷ್ಟಿಯಿಂದ ಕಲಿಯುಗವೇ ಉತ್ತಮ ಎಂದು ಸ್ವಾಭಾವಿಕವಾಗಿಯೇ ಹೇಳಬಹುದು. ಈ ಯುಗದಲ್ಲಿ ನೀತಿ ನಿಯಮಗಳು ನಾಶಗೊಳ್ಳುತ್ತಿವೆ ಎಂದು ಹೇಳುವುದಕ್ಕೆ ಯಾವ ಆಧಾರವೂ ಇಲ್ಲ ಮಾತ್ರವಲ್ಲ ಅದು ಮೂರ್ಖತನದಿಂದ ಕೂಡಿದೆ.

## V

ಕಲಿಯುಗದ ಬಗ್ಗೆ ನಡೆಸಿದ ಈ ಚರ್ಚೆ ಮೊದಲಬಾರಿಗೆ ಅನೇಕ ಒಗಟುಗಳನ್ನೂ ಹುಟ್ಟುಹಾಕಿದೆ. ಮಹಾಯುಗದ ಆಲೋಚನೆ ಹೇಗೆ ಮತ್ತು ಯಾವಾಗ ಬಂತು? ಪ್ರಪಂಚದಾದ್ಯಂತ ಈ ಹಿಂದೆ ಸುವರ್ಣಯುಗವು ಇತ್ತು ಎಂಬ ಕಲ್ಪನೆ ಇರುವುದು ಸತ್ಯ. ಭಾರತದ ಎಲ್ಲೆಡೆ ಸುವರ್ಣ ಯುಗ ಯಾವುದು ಇದ್ದಿತೆಂಬ ಕಲ್ಪನೆಯು ಈ ಮಹಾಯುಗದ ಕಲ್ಪನೆಯ ಅರ್ಥವನ್ನು ಪೂರೈಸುತ್ತದೆ. ಉಳಿದೆಡೆ ಈ ಹಿಂದಿನ ಸುವರ್ಣ ಕಾಲ ಮರಳಿ ಬರುವುದು ಎಂದು ನಂಬಲಾಗಿದೆ. ಅದು ಶಾಶ್ವತವಾಗಿ ಹೊರಟುಹೋಗಿದೆ. ಆದರೆ ಮಹಾಯುಗದ ಕಲ್ಪನೆಯಲ್ಲಿ ಸುವರ್ಣ ಗತಕಾಲವೂ ಶಾಶ್ವತವಾಗಿ ಅಳಿಸಿಹೋಗಿಲ್ಲ. ಅದು ಈ ಚಕ್ರ ಪೂರ್ಣಗೊಂಡಾಗ ಮತ್ತೆ ಬರುತ್ತದೆ.

ಎರಡನೆಯ ಒಗಟೆಂದರೆ ಕಲಿಯುಗ ಏಕೆ ಕ್ರಿ. ಪೂ. ೧೬೫೮ರಕ್ಕೂ ಕೊನೆಗೊಳ್ಳಲಿಲ್ಲ? ಖಗೋಳಶಾಸ್ತ್ರಜ್ಞರ ಪ್ರಕಾರ ಅದು ಕೊನೆಗೊಳ್ಳಬೇಕಿತ್ತು. ಆದರೆ ಏಕೆ ಅದು ಮುಂದುವರೆಯಿತು? ಮೂರನೆಯ, ಒಗಟೆಂದರೆ ಸಂಧ್ಯಾ ಮತ್ತು ಸಂಧ್ಯಾಂಶ ಕಾಲಗಳನ್ನು ಕಲಿಯುಗಕ್ಕೆ ಸೇರಿಸಿದ್ದೇಕೆ? ಇವು ನಂತರ ಸೇರಿ ಕೊಂಡವೆಂಬುದು ವೇದ್ಯವಾಗುತ್ತದೆ. ವಿಷ್ಣುಪುರಾಣ ಇದನ್ನು ಬೇರೆಯಾಗಿಯೇ ಹೇಳುತ್ತದೆ. ಅವು ಕಲಿಯುಗದ ಮೂಲ ಭಾಗವಾಗಿದ್ದರೆ ಅವುಗಳನ್ನು ಪ್ರತ್ಯೇಕವಾಗಿ ಹೇಳಲಾಗುತ್ತಿರಲಿಲ್ಲ. ಏತಕ್ಕಾಗಿ ಅವುಗಳನ್ನು ಸೇರಿಸಿದ್ದು? ನಾಲ್ಕನೆಯ ಒಗಟೆಂದರೆ ಕಾಲದ ಎಣಿಕೆಯಲ್ಲಿ ಆದ ಬದಲಾವಣೆ.

ಮೊದಲು ಕಲಿಯುಗವನ್ನು ಮಾನವ ವರ್ಷಗಳ ಯುಗವೆಂದು ಹೇಳಲಾಗುತ್ತಿತ್ತು. ಕಾಲಾನಂತರದಲ್ಲಿ ಅದು ದೈವಿಕ ವರ್ಷಗಳಾಯಿತು. ಇದರ ಪರಿಣಾಮದಿಂದಾಗಿ ಕಲಿಯುಗ ೧೨೦೦ ವರ್ಷಗಳಿಗೆ ನಿಗದಿಯಾಗಿದೆ ೪,೩೨,೦೦೦ ವರ್ಷಗಳವರೆಗೆ ಮುಂದುವರೆಯುವಂತಾಯಿತು. ಇದು ಒಂದು ಆವಿಷ್ಕಾರವೆಂದೇ ಹೇಳಬಹುದು. ಈ ಆವಿಷ್ಕಾರ ಏಕಾಯಿತು? ಕಲಿಯುಗದ ಕಾಲಮಾನವನ್ನು ಅನಂತವಾಗಿ ವಿಸ್ತರಿಸುವುದರ ಹಿಂದಿರುವ ಬ್ರಾಹ್ಮಣರ ಉದ್ದೇಶವೇನು? ಕೆಲವು ಶೂದ್ರರಾಜರನ್ನು ಬೆದರಿಸಲು ಈ ಕಲಿಯುಗ ಸಿದ್ಧಾಂತವನ್ನು ಆವಿಷ್ಕಾರ ಮಾಡಿ ಅದಕ್ಕೆ ಕೊನೆಯಿಲ್ಲದಂತೆ ಮಾಡಿರುವುದು ಅವನ ಪ್ರಜೆಗಳಿಗೆ ರಾಜನ ಆಳ್ವಿಕೆಯಲ್ಲಿ ನಂಬಿಕೆ ಇಲ್ಲದಂತೆ ಮಾಡುವುದಕ್ಕಾಗಿಯೇ?

* * * *

# ಒಗಟು – ೨೪

## ಕಲಿಯುಗದ ಒಗಟು

ಕಾಲವನ್ನು ನಿರ್ಣಯಿಸುವುದಕ್ಕೆ ಹಿಂದೂಗಳು ಅದನ್ನು ಒಡೆದು ಬೇರೆ ಬೇರೆ ಘಟಕಗಳಾಗಿ ಮಾಡಿರುವುದರಲ್ಲಿ ಕೆಲವು ವಿಶೇಷವುಂಟು. ಈ ಕಾಲ ವಿಂಗಡನೆಯೇ ಪುರಾಣಗಳ ಮುಖ್ಯ ವಿಷಯ. ಅದರ ಕಡೆ ಹರಿಸಬೇಕಾದಷ್ಟು ಗಮನ ಹರಿಸಿಲ್ಲ ನಾವು. ಹಿಂದೂ ಪುರಾಣಗಳ ಕಾಲವನ್ನು ಐದು ಬಗೆಯಲ್ಲಿ ವಿಂಗಡಿಸಿವೆ. ೧. ವರ್ಷ. ೨. ಯುಗ ೩. ಮಹಾಯುಗ, ೪. ಮನ್ವಂತರ ೫. ಕಲ್ಪ. ಇವುಗಳ ನಿರ್ವಚನಕ್ಕೆ ನಾನು ವಿಷ್ಣುಪುರಾಣವನ್ನೇ ಬಳಸಿಕೊಳ್ಳುತ್ತೇನೆ.

ಮೊದಲನೆಯದಾಗಿ, ವರ್ಷವನ್ನು ನೋಡೋಣ. ವರ್ಷವನ್ನು ವಿಷ್ಣು ಪುರಾಣವು ವಿವರಿಸುವುದು ಹೀಗೆ[೧]: "ಓ ಮುನಿಶ್ರೇಷ್ಠ, ಹದಿನೈದು ಬಾರಿ ರೆಪ್ಪೆ ಬಡಿದರೆ ಅದು ಒಂದು ಕಾಷ್ಠ. ಇಂಥ ಮೂವತ್ತು ಕಾಷ್ಠ ಸೇರಿ ಒಂದು ಕಾಲ. ಮೂವತ್ತು ಕಾಲಗಳಿಗೆ ಒಂದು ಮುಹೂರ್ತ. ಮೂವತ್ತು ಮುಹೂರ್ತಕ್ಕೆ ಹಗಲು ರಾತ್ರಿಗಳುಳ್ಳ ಮರ್ತ್ಯಲೋಕದ ಒಂದು ದಿನ. ಇಂಥ ಮೂವತ್ತು ದಿನಗಳಿಗೆ ಒಂದು ಮಾಸ (ಈ ಮಾಸದಲ್ಲಿ ಪಕ್ಷಗಳು ಸೇರಿವೆ). ಇಂಥ ಆರು ಮಾಸಗಳು ಕೂಡಿ ಒಂದು ಆಯನ. ಎರಡು ಆಯನಗಳಿಗೆ ಒಂದು ವರ್ಷ."

ಇದೇ ವಿಷಯವನ್ನು ಕುರಿತು ಇನ್ನಷ್ಟು ವಿವರಗಳು ವಿಷ್ಣುಪುರಾಣದ ಮತ್ತೊಂದು ಕಡೆಯಲ್ಲಿ ಬರುತ್ತವೆ.[೨] "ಹದಿನೈದು ರೆಪ್ಪೆ ಮಿಡಿತಕ್ಕೆ (ನಿಮೇಷ) ಒಂದು ಕಾಷ್ಠ. ಮೂವತ್ತು ಕಾಷ್ಠಕ್ಕೆ ಒಂದು ಕಾಲ. ಮೂವತ್ತು ಕಾಲಗಳಿಗೆ ಒಂದು ಮುಹೂರ್ತ. ಮೂವತ್ತು ಮುಹೂರ್ತಕ್ಕೆ ಹಗಲು ರಾತ್ರಿಗಳುಳ್ಳ ಒಂದು ದಿನ. ಈ ಹಗಲು ರಾತ್ರಿಯ ಪ್ರಮಾಣ ಹೆಚ್ಚುಕಡಿಮೆಯಾಗಬಹುದಾದರೂ ಸಂಧ್ಯೆಗಳು ಮಾತ್ರ ಒಂದು ಮುಹೂರ್ತ ಪ್ರಮಾಣದವು. ಇನ್ನು ಸುರ್ಯೋದಯದ ಕಾಲದಲ್ಲಿ ಸೂರ್ಯನನ್ನು ವೃತ್ತವೆಂದು ಭಾವಿಸಿದರೆ ಆ ವೃತ್ತದ ಅರ್ಧ ಕಾಣುವ ಹೊತ್ತಿನಿಂದ (ದಿಗಂತದಲ್ಲಿ ಅರ್ಧದಷ್ಟು ಸೂರ್ಯ ಕಾಣುವ ಹೊತ್ತಿನಿಂದ) ಮೂರು ಮುಹೂರ್ತಗಳವರೆಗಿನ (ಅಂದರೆ ಎರಡು ಗಂಟೆ ಇಪ್ಪತ್ತನಾಲ್ಕು ನಿಮಿಷಗಳವರೆಗಿರುವ) ಅವಧಿ ಪ್ರಾತಃಕಾಲವೆನಿಸುವುದು. ಇದು ಹಗಲಿನ ಐದನೇ ಒಂದು ಭಾಗ. ನಂತರದ ಮೂರು ಮುಹೂರ್ತಗಳಿಗೆ ಸಂಗವವೆಂದೂ ಸಂಗವದ ನಂತರದ ಮೂರು ಮುಹೂರ್ತಗಳಿಗೆ ಮಧ್ಯಾಹ್ನವೆಂದೂ ಮಧ್ಯಾಹ್ನದ ನಂತರದ ಮೂರು ಮುಹೂರ್ತಗಳಿಗೆ ಅಪರಾಹ್ನವೆಂದೂ ಸಂಜ್ಞೆ, ಅಪರಾಹ್ನದ ನಂತರದ ಮೂರು

*ಇದು 'ರಿಡ್ಲ್ಸ್ ಆಫ್ ದಿ ಕಲಿಯುಗ'ದ ಇನ್ನೊಂದು ರೂಪಾಂತರ. ನಮ್ಮಲ್ಲಿರುವ ಪ್ರತಿ ಕಾರ್ಬನ್ ಪ್ರತಿಯಾಗಿದ್ದು ಇದರಲ್ಲಿ ಗ್ರಂಥಕರ್ತರ ಯಾವ ತಿದ್ದುಪಡಿಯೂ ಇರುವುದಿಲ್ಲ. ಈ ಅಧ್ಯಾಯದಲ್ಲಿ ೪೦ ಪುಟಗಳಿವೆ. ಸಂ.*

೧. ವಿಲ್ಸನ್‌ರವರ 'ವಿಷ್ಣು ಪುರಾಣ'. ಪು.೨೨–೨೩

೨. ಅದೇ.

ಮುಹೂರ್ತಗಳೇ ಸಾಯಂಕಾಲವು. ಹೀಗೆ ಹದಿನೈದು ಮುಹೂರ್ತಗಳ ಹಗಲನ್ನು ಮೂರು ಮುಹೂರ್ತಗಳ ಎರಡು ಭಾಗಗಳಾಗಿ ವಿಂಗಡಿಸಲಾಗಿರುವುದು.

ಇಂತಹ ಮೂವತ್ತು ಮುಹೂರ್ತಗಳ ಹದಿನೈದು ದಿನಗಳು ಸೇರಿ ಒಂದು ಪಕ್ಷ. ಇಂಥ ಎರಡು ಪಕ್ಷಗಳು ಸೇರಿ ಒಂದು ಮಾಸ. ಎರಡೆರಡು ಮಾಸಕ್ಕೆ ಒಂದು ಋತು. ಮೂರು ಋತು ಗಳಿಗೆ ಒಂದು ಅಯನ (ದಕ್ಷಿಣಾಯನ ಮತ್ತು ಉತ್ತರಾಯಣ). ಎರಡು ಅಯನಗಳು ಸೇರಿ ಒಂದು ವರ್ಷ."

ಇಲ್ಲಿ ಯುಗದ ಕಲ್ಪನೆಯನ್ನು ವಿಷ್ಣುಪುರಾಣ ವಿವರಿಸುವ ರೀತಿ ಹೀಗಿದೆ[೧]: "ಮುನ್ನೂರ ಅರವತ್ತು ದಿನಗಳುಳ್ಳ ಹನ್ನೆರಡು ಸಾವಿರ ದಿವ್ಯ ಸಂವತ್ಸರಗಳಾದರೆ ನಾಲ್ಕು ಯುಗ ಕಳೆದಂತೆ. ಆ ಯುಗಗಳ ಅವಧಿ ಹೀಗಿದೆ. ಕೃತಯುಗಕ್ಕೆ ನಾಲ್ಕು ಸಾವಿರ ದಿವ್ಯ ಸಂವತ್ಸರಗಳು. ಕಲಿಯುಗದ ಕಾಲಮಾನ ಒಂದು ಸಾವಿರ ವರ್ಷ. ಹೀಗೆಂದು ಕಾಲಜ್ಞರು ನಿರ್ಣಯಿಸಿದ್ದಾರೆ. ಅಲ್ಲದೆ ತ್ರೇತಾಯುಗದ ಅವಧಿ ಮೂರು ಸಾವಿರ ಸಂವತ್ಸರಗಳು. ದ್ವಾಪರದ ಅವಧಿ ಎರಡು ಸಾವಿರ ದಿವ್ಯ ಸಂವತ್ಸರಗಳು ಎಂದು ನಿರ್ಣೀತವಾಗಿದೆ."

"ಪ್ರತಿ ಯುಗದ ಪೂರ್ವಕ್ಕೆ ಬರುವ ಅವಧಿ ಸಂಧ್ಯಾ ಇದರ ಕಾಲಮಾನವೂ ಆಯಾ ಯುಗದ ಕಾಲಮಾನದ ಹತ್ತನೇ ಒಂದರಷ್ಟು ಹಾಗೂ ಪ್ರತಿಯೊಂದು ಯುಗದ ನಂತರ ಬರುವ ಅವಧಿಯನ್ನು ಸಂಧ್ಯಾಂಶವೆಂದು ಕರೆಯುತ್ತಾರೆ. ಇದರ ಅವಧಿಯೂ ಯುಗಸಂಧ್ಯೆಯ ಪರಿಮಾಣದ್ದೇ. ಸಂಧ್ಯೆ ಮತ್ತು ಸಂಧ್ಯಾಂಶದ ನಡುವಿನ ಅವಧಿಯೇ ಯುಗ. ಇವುಗಳನ್ನು ಕೃತ, ತ್ರೇತಾ ಮುಂತಾಗಿ ಹೆಸರಿಸಲಾಗಿದೆ."

ಈ ಯುಗದ ಪರಿಕಲ್ಪನೆಯನ್ನು ವಿಷ್ಣುಪುರಾಣದಲ್ಲೇ ಬೇರೊಂದು ಅರ್ಥದಲ್ಲೂ ಬಳಸಿದ್ದುಂಟು[೨] "ನಾಲ್ಕು ಬಗೆಯ ಮಾಸಗಳುಳ್ಳ ವರ್ಷಗಳನ್ನು ಐದು ರೀತಿಯಲ್ಲಿ ವಿಂಗಡಿಸಲಾಗಿದೆ. ಈ ಎಲ್ಲ ಬಗೆಗಳ ಮೊತ್ತ ಒಂದು ಯುಗ ಅಥವಾ ಆವರ್ತ. ವರ್ಷಗಳ ಸಂವತ್ಸರ, ಇಡ್ವತ್ಸರ, ಅನುವತ್ಸರ, ಪರಿವತ್ಸರ ಹಾಗೂ ವತ್ಸರ ಎಂದು ಐದು ಬಗೆ. ಈ ಅವಧಿಗೆ ಒಂದು ಯುಗ ಎಂದು ಸಂಜ್ಞೆ."

ಮಹಾಯುಗ ಎನ್ನುವ ಕಾಲಮಾನವು ಯುಗದ ಕಲ್ಪನೆಯ ವಿಸ್ತರಣೆ. ವಿಷ್ಣುಪುರಾಣವೇ[೩] ಹೇಳುವ ಹಾಗೆ "ಕೃತ, ತ್ರೇತಾ, ದ್ವಾಪರ ಮತ್ತು ಕಲಿಯುಗಗಳು ಕೂಡಿ ಒಂದು ಮಹಾಯುಗವಾಗುತ್ತದೆ. ಇಂಥ ಸಾವಿರ ಮಹಾಯುಗಗಳು ಸೇರಿದರೆ ಬ್ರಹ್ಮನ ಒಂದು ದಿನ."

ವಿಷ್ಣುಪುರಾಣದ ಪ್ರಕಾರ ನಾಲ್ಕು ಯುಗಗಳಲ್ಲಿ ಬರುವ ಒಟ್ಟು ವರ್ಷಗಳ ಎಪ್ಪತ್ತೊಂದು ಪಟ್ಟು ಅವಧಿಯೇ ಮನ್ವಂತರ.[೪] ಇನ್ನು ಕಲ್ಪವನ್ನು ಬ್ರಹ್ಮನ ಒಂದು ದಿನ ಎಂದು ಚುಟುಕಿನಲ್ಲಿ ವಿವರಿಸಿ ಬಿಡುತ್ತದೆ ವಿಷ್ಣುಪುರಾಣ. ಕಾಲವನ್ನು ವಿಂಗಡಿಸಿ ನೋಡಿದ್ದಾಯಿತು. ಈ ಅವಧಿಗಳ ಪ್ರಮಾಣವನ್ನು ಗಮನಿಸೋಣ.

---

೧. ವಿಲ್ಸನ್ ರವರ 'ವಿಷ್ಣುಪುರಾಣ', ಪು. ೨೩

೨. ಅದೇ. ಪು. ೨೩

೩. ಅದೇ. ಪು. ೨೩

೪. ಅದೇ. ಪು. ೨೪

ಸಂವತ್ಸರದ ಕಲ್ಪನೆಯೇನೊ ಸರಳವಾಗಿಯೇ ಇದೆ. ಅದು ೩೬೫ ದಿನಗಳ ನಮ್ಮ ವರ್ಷದ ಕಲ್ಪನೆಗೆ ಹತ್ತಿರವಾಗಿದೆ. ಆದರೆ ಯುಗ, ಮಹಾಯುಗ, ಮನ್ವಂತರ ಮತ್ತು ಕಲ್ಪ ಇವುಗಳ ಗಣನೆ ಅಷ್ಟು ಸುಲಭವಾಗಿಲ್ಲ. ನಾವು ಕಲ್ಪವನ್ನು ಯುಗ, ಮಹಾಯುಗಗಳ ಅವಧಿಯ ಒಟ್ಟು ಮೊತ್ತ ಎಂದುಕೊಳ್ಳುವುದಕ್ಕಿಂತ ಯುಗ ಮತ್ತು ಮಹಾಯುಗಗಳನ್ನು ಕಲ್ಪದ ವಿಭಾಗಗಳು ಎಂದುಕೊಂಡರೆ ಲೆಕ್ಕಾಚಾರ ಸುಲಭವಾಗುತ್ತದೆ. ಹಾಗೆ ನೋಡಿದರೆ ಕಲ್ಪದಲ್ಲಿ ಎಪ್ಪತ್ತೊಂದು ಮಹಾಯುಗಗಳೂ ಮಹಾಯುಗದಲ್ಲಿ ನಾಲ್ಕು ಯುಗಗಳೂ ಸೇರುತ್ತವೆ. ಮನ್ವಂತರ ಎಂದರೆ ಎಪ್ಪತ್ತೊಂದು ಮಹಾಯುಗಗಳ ಜತೆಗೆ ಹೆಚ್ಚುವರಿ ವರ್ಷಗಳೂ ಸೇರಿದ ಒಂದು ಕಾಲಮಾನ.

ಈ ಕಾಲಘಟಕವನ್ನು ಲೆಕ್ಕ ಹಾಕುವಾಗ ಯುಗವನ್ನು ಮೂಲಘಟಕವಾಗಿ ತೆಗೆದುಕೊಳ್ಳುವುದು ಸಾಧ್ಯವಿಲ್ಲ. ಯುಗ ಎನ್ನುವುದು ನಿಶ್ಚಿತ ಅವಧಿಯಾದರೂ ಅದು ಏಕಸ್ವರೂಪಿಯಲ್ಲ. ಹಾಗಾಗಿ ನಿಶ್ಚಿತ ಕಾಲಪ್ರಮಾಣದ ಮಹಾಯುಗವನ್ನೇ ನಮ್ಮ ಗಣನೆಯ ಮೂಲಘಟಕವಾಗಿ ತೆಗೆದುಕೊಳ್ಳಬೇಕು.

ಒಂದು ಮಹಾಯುಗವೆಂದರೆ ಕೃತ, ದ್ವಾಪರ, ತ್ರೇತಾ ಮತ್ತು ಕಲಿಯುಗವೆಂಬ ನಾಲ್ಕು ಯುಗಗಳೊಂದುಗೂಡಿ ಆಗುವ ಮೊತ್ತ. ಪ್ರತಿ ಯುಗಕ್ಕೂ ಅದರದೇ ಆದ ನಿಶ್ಚಿತ ಅವಧಿ ಉಂಟು. ಪ್ರತಿ ಯುಗಕ್ಕೂ ಅದರದೇ ಆದ ಅವಧಿಯ ಜೊತೆಗೆ ಪ್ರಾತಃಕಾಲ, ಸಂಧ್ಯಾ ಸಮಯಗಳೂ ಇವೆ. ಇವುಗಳ ಅವಧಿಯು ಆಯಾ ಯುಗಕ್ಕೆ ತಕ್ಕಂತೆ ಬೇರೆ ಬೇರೆ ಪ್ರಮಾಣದಲ್ಲಿರುತ್ತದೆ.

| **ಯುಗ** | **ಅವಧಿ** | **ಉದಯ** | **ಸಂಧ್ಯಾಕಾಲ** | **ಒಟ್ಟು** |
|---|---|---|---|---|
| ಕೃತ | ೪೦೦೦ | ೪೦೦ | ೪೦೦ | ೪೮೦೦ |
| ತ್ರೇತಾ | ೩೦೦೦ | ೩೦೦ | ೩೦೦ | ೩೬೦೦ |
| ದ್ವಾಪರ | ೨೦೦೦ | ೨೦೦ | ೨೦೦ | ೨೪೦೦ |
| ಕಲಿ | ೧೦೦೦ | ೧೦೦ | ೧೦೦ | ೧೨೦೦ |
| ಮಹಾಯುಗ | | | | **೧೨೦೦೦** |

ಮಹಾಯುಗದ ಗಣನೆ ದಿವ್ಯಸಂವತ್ಸರದ ಆಧಾರದ ಮೇಲೆ ಆಗುವಂತಹದು. ೨೦೦೦ ದಿವ್ಯ ಸಂವತ್ಸರ ಅಥವಾ ಬ್ರಹ್ಮಮಾನದ ಸಂವತ್ಸರಗಳಿಗೆ ಒಂದು ಮಹಾಯುಗ. ಮನುಷ್ಯ ಮಾನದ ಒಂದು ವರ್ಷ ಬ್ರಹ್ಮಮಾನದ ಒಂದು ದಿನಕ್ಕೆ ಸಮಾನ. ಈ ಲೆಕ್ಕದಲ್ಲಿ ಮಹಾಯುಗವೆಂದರೆ ಮನುಷ್ಯಮಾನದಲ್ಲಿ (೨೬೦X೧೨೦೦೦) ೪೩,೨೦,೦೦೦ ವರ್ಷಗಳಿರುತ್ತವೆ. ಇಂಥ ಎಪ್ಪತ್ತೊಂದು ಮಹಾಯುಗಗಳು ಸೇರಿದರೆ ಒಂದು ಕಲ್ಪ. ಅಂದರೆ ಒಂದು ಕಲ್ಪವೆಂದರೆ (೪೩,೨೦,೦೦೦X೭೧) ೩,೦೬,೭೨,೦೦೦ ವರ್ಷಗಳು.

ಇನ್ನು ಮನ್ವಂತರ: ಮನ್ವಂತರವೆಂದರೆ ೭೧ ಮಹಾಯುಗದ ಜೊತೆಗೆ ಹೆಚ್ಚುವರಿ ಒಂದಿಷ್ಟು ವರ್ಷಗಳು ಸೇರುತ್ತವೆ. ಎಂದರೆ ಮನ್ವಂತರದ ಅವಧಿಗೆ ಕಾಲದ ೩,೦೬,೭೨,೦೦೦ ವರ್ಷಗಳ ಜೊತೆಗೆ ಇನ್ನಷ್ಟು ವರ್ಷಗಳನ್ನು ಸೇರಿಸಬೇಕಾಗುತ್ತದೆ. ಕಲ್ಪದ ಪ್ರಮಾಣಕ್ಕಿಂತ ಮನ್ವಂತರದ ಅವಧಿ ಹೆಚ್ಚು.

ಈ ವರ್ಷದ ಕಲ್ಪನೆ ಖಗೋಳಶಾಸ್ತ್ರಕ್ಕೆ ಸಮ್ಮತವಾಗಿದೆ. ಕಾಲಗಣನೆಗೆ ಈ ಕಲ್ಪನೆ ಉಪಯುಕ್ತ ಎನ್ನುವುದು ನಿಜ. ಆದರೆ ಕಲ್ಪದ ಕಲ್ಪನೆ ಪೌರಾಣಿಕವಾದದ್ದು ಮತ್ತು ಬ್ರಹ್ಮಾಂಡದ ಕಲ್ಪನೆಗೆ ಸೇರಿಕೊಂಡದ್ದು ಅದರ ಪ್ರಮಾಣ. ಈ ವಿಶ್ವವು ಸೃಷ್ಟಿ ಮತ್ತು ಪ್ರಳಯಕ್ಕೆ ಪಕ್ಕಾಗುವಂಥದು. ಬ್ರಹ್ಮನಿಂದ ಸೃಷ್ಟಿಯಾಗಿ ಅವನಿಂದಲೇ ಪ್ರಳಯವೂ ಆಗುವ ಅವಧಿಯನ್ನು ಒಂದು ಕಲ್ಪವೆಂದು ಕರೆಯುತ್ತಾರೆ. ವಿಷ್ಣುಪುರಾಣದ ಒಂದು ಪರಿಚ್ಛೇದವೇ ಈ ವಿಷಯವನ್ನು ಕುರಿತದ್ದು. ಈ ಭಾಗ ಶುರುವಾಗುವುದೇ ಸೃಷ್ಟಿಯ ವಿವರಗಳಿಂದ. ಸೃಷ್ಟಿಗೆ ಎರಡು ಸ್ವರೂಪ. ಮೊದಲನೆಯದು ಸರ್ಗ. ಎರಡನೆಯದು ಪ್ರತಿಸರ್ಗ. ಸರ್ಗದಲ್ಲಿ ಮೂಲಪ್ರಕೃತಿ ಅದರ ಸ್ಥೂಲ ಸ್ವರೂಪದಲ್ಲಿ ಗೋಚರವಾಗುವುದು. ಪ್ರತಿಸರ್ಗದಲ್ಲಿ ಈ ಮೂಲ ಪ್ರಕೃತಿಯಿಂದ ಜೀವಜಗತ್ತು ಅಭಿವ್ಯಕ್ತವಾಗುವುದು. ಇವು ಹಿಂದೆಯೇ ವಿಕಾಸಗೊಂಡು ಪ್ರಳಯಕಾಲದಲ್ಲಿ ಕರಗಿಹೋಗುವಂತಹವು. ಈ ಎರಡು ಬಗೆಯ ಸೃಷ್ಟಿ ಆಗಾಗ್ಗೆ ಆಗುತ್ತಲೇ ಇರುವಂಥದು. ಆದರೆ ಸರ್ಗದಲ್ಲಿ ಅಭಿವ್ಯಕ್ತವಾದದ್ದು ಪ್ರಳಯಕ್ಕೆ ಒಳಗಾಗುವುದು ಬ್ರಹ್ಮನ ಆಯಸ್ಸು ತೀರಿದ ಮೇಲೆಯೇ. ಆಗ ದೇವತೆಗಳು ಸೇರಿದಂತೆ ಸಕಲ ಚರಾಚರ ಜಗತ್ತೂ ಲಯವಾಗಿ ಆತ್ಮವೊಂದು ಮಾತ್ರ ಉಳಿದಿರುತ್ತದೆ. ಆದರೆ ಪ್ರತಿಸರ್ಗದ ಪ್ರಳಯ ಬೇರೆ ತೆರನಾದದ್ದು. ಬ್ರಹ್ಮಮಾನದ ಒಂದು ದಿನಕ ಕೊನೆಯಲ್ಲಿ ಇಂಥ ಪ್ರಳಯ ಉಂಟಾಗುತ್ತದೆ. ಈ ಪ್ರಳಯಕ್ಕೆ ಕೇವಲ ನೀಚ ಲೋಕಗಳೂ ಜೀವಿಗಳೂ ಪಕ್ಕಾಗುತ್ತವೆ. ಆದರೆ ಋಷಿಗಳಿಗೆ ದೇವರುಗಳಿಗೆ ಹಾನಿಯಾಗುವುದಿಲ್ಲ. ಇದು ಕಲ್ಪದ ಕಲ್ಪನೆ.

ಇನ್ನು ಮನ್ವಂತರದ ಪರಿಕಲ್ಪನೆ ಚಾರಿತ್ರಿಕ ಎನ್ನುವುದಕ್ಕಿಂತ ಪೌರಾಣಿಕವಾದದ್ದು. ಸಕಲ ಚರಾಚರ ಜಗತ್ತೂ ಬ್ರಹ್ಮನಿಂದ ಸೃಷ್ಟಿಯಾಯಿತು ಎಂಬ ನಂಬಿಕೆಯಿಂದಲೇ ಮನ್ವಂತರದ ಕಲ್ಪನೆ ಶುರುವಾಗುತ್ತದೆ. ಆದರೆ ಜೀವಗಳ ಸಂಖ್ಯೆ ತಮ್ಮಷ್ಟಕ್ಕೆ ತಾವೇ ಹೆಚ್ಚಲಿಲ್ಲ. ಆದ್ದರಿಂದ ಬ್ರಹ್ಮನು ಒಂಬತ್ತು ಜನ ಮಾನಸಪುತ್ರರನ್ನು ಸೃಷ್ಟಿಸಿದ. ಆದರೆ ಆ ಮಾನಸಪುತ್ರರೋ ನಿಷ್ಕಾಮಿಗಳೂ ನಿರ್ಮೋಹಿಗಳೂ ಆದವರು. ದಿವ್ಯಜ್ಞಾನಿಗಳೂ ಸಂಸಾರ ವಿರಕ್ತರೂ ಆದ ಅವರು ಸಂತಾನವನ್ನು ಬಯಸುವವರಾಗಲಿಲ್ಲ. ಬ್ರಹ್ಮನಿಗೆ ಇದನ್ನು ಕಂಡು ಕ್ರೋಧವುಂಟಾಯಿತು. ತನ್ನನ್ನೇ ಎರಡಾಗಿ ಮಾಡಿಕೊಂಡ. ಒಂದು ರೂಪದಲ್ಲಿ ಶತರೂಪೆ ಎಂಬ ಹೆಣ್ಣಾದ. ಇನ್ನೊಂದು ರೂಪದಲ್ಲಿ ಮನುಸ್ವಾಯಂಭುವ ಎಂಬ ಗಂಡಾದ. ಮನುಸ್ವಾಯಂಭುವನು ಶತರೂಪೆಯನ್ನು ಕೂಡಿದ. ಹೀಗೆ ಮೊದಲ ಮನ್ವಂತರ ಮೊದಲಾಯಿತು. ಈ ಮನ್ವಂತರಕ್ಕೆ ಸ್ವಾಯಂಭುವ ಮನ್ವಂತರ ಎಂದು ಹೆಸರು. ಹದಿನಾಲ್ಕು ಮನ್ವಂತರಗಳನ್ನೂ ವಿಷ್ಣುಪುರಾಣ ಈ ಮುಂದಿನಂತೆ ವಿವರಿಸುತ್ತದೆ.[೧]

"ನಂತರ ಬ್ರಹ್ಮನು ಲೋಕಕಲ್ಯಾಣಕ್ಕಾಗಿ ತನ್ನ ಮೂಲ ಸ್ವರೂಪಕ್ಕೆ ಸದೃಶವಾಗಿ ಮನುಸ್ವಾಯಂಭುವನ್ನು ಸೃಷ್ಟಿಸಿದನು. ಅದರ ಸ್ತ್ರೀ ಅಂಶವು ಶತರೂಪೆಯಾಯಿತು. ಅವಳು ತಪಸ್ವಿನಿಯೂ ಪಾಪರಹಿತಳೂ ಆದವಳು. ಮನುಸ್ವಾಯಂಭುವನು ಶತರೂಪೆಯನ್ನು ವರಿಸಿದನು. ಇವರಿಬ್ಬರಿಗೆ ರೂಪವಂತರೂ ಗುಣವಂತರೂ ಆದ ಪ್ರಿಯವ್ರತ ಮತ್ತು ಉತ್ತಾನಪಾದ ಎಂಬ ಪುತ್ರರೂ. ಪ್ರಸೂತಿ ಮತ್ತು ಅಕೂತಿ ಎಂಬ ಪುತ್ರಿಯರೂ ಹುಟ್ಟಿದರು. ಸ್ವಾಯಂಭುವನು ಪ್ರಸೂತಿಯನ್ನು ದಕ್ಷನಿಗೂ ಅಕೂತಿಯನ್ನು ರುಚಿಗೂ ಕೊಟ್ಟು ಮದುವೆ ಮಾಡಿದನು. ರುಚಿಗೆ ಅಕೂತಿಯಿಂದ ಯಜ್ಞ ಮತ್ತು ದಕ್ಷಿಣಾ ಎಂಬ ಅವಳಿಜವಳಿ ಮಕ್ಕಳು ಹುಟ್ಟಿದರು.

---

೧. ವಿಲ್ಸನ್‌ರವರ 'ವಿಷ್ಣುಪುರಾಣ', ಪು. ೧೫೯–೨೬೪.

ಮುಂದೆ ಈ ಅವಳಿಜವಳಿಗಳೇ ಪತಿಪತ್ನಿಯರಾದರು. ಅವರಿಗೆ ಹನ್ನೆರಡು ಮಂದಿ ಮಕ್ಕಳಾದರು. ಈ ಹನ್ನೆರಡು ಜನರೂ ಸ್ವಾಯಂಭುವ ಮನ್ವಂತರದಲ್ಲಿ ದ್ವಾದಶ ಯಮರೆಂದು ಖ್ಯಾತರಾದರು."

"ಮನುಸ್ವಾಯಂಭುವನು ಮೊದಲ ಮನುವಾದನು. ನಂತರ ಬಂದವನು ಸ್ವಾರೋಚಿಷ. ಅವನ ಹತ್ತಿರ ಕ್ರಮವಾಗಿ ಔತ್ತಮಿ, ತಮಸ, ರೈವತ, ಚಾಕ್ಷುಷ ಹೀಗೆ ಒಟ್ಟು ಆರು ಮಂದಿ ಮನುಗಳು ಆಗಿಹೋಗಿದ್ದಾರೆ. ಈ ಏಳನೆಯ ಮನ್ವಂತರದ ಮನು ಭಗವಾನ್ ಸೂರ್ಯನ ಮಗನಾದ ವೈವಸ್ವತನು."

"ವತ್ಸ, ಸ್ವಾಯಂಭುವ ಮನ್ವಂತರವನ್ನು ಕುರಿತು ಅದರ ದೇವತೆಗಳು, ಋಷಿಗಳು ಇತ್ಯಾದಿ ವಿವರಗಳೊಂದಿಗೆ ಈಗಾಗಲೇ ವಿವರಿಸಿದ್ದೇನೆ. ಈಗ ಸ್ವಾರೋಚಿಷ ಮನ್ವಂತರದ ವಿವರಗಳನ್ನು ಹೇಳುತ್ತೇನೆ ಕೇಳು. ಈ ಎರಡನೆಯ ಮನ್ವಂತರದ ದೇವತೆಗಳು ಪರಾವತರು ಮತ್ತು ತುಷಿತರು. ಈ ಮನ್ವಂತರದ ಇಂದ್ರ ವಿಪಶ್ಚಿತ್. ಈ ಕಾಲದ ಸಪ್ತರ್ಷಿಗಳು ಊರ್ಜ, ಸ್ತಂಬ, ಪ್ರಾಣ, ದತ್ತೋಲಿ, ರಿಷಭ, ನಿಶ್ಚರ ಮತ್ತು ಅರ್ವರಿವತ್. ಈ ಮನುವಿನ ಪುತ್ರರು ಚೈತ್ರ, ಕಿಂಪುರುಷ ಮೊದಲಾದವರು."

"ಇನ್ನು ಮೂರನೆಯ ಮನ್ವಂತರ ಅಥವಾ ಔತ್ತಮೀಯ ಮನ್ವಂತರದಲ್ಲಿ ಸುಶಾಂತಿಯು ಇಂದ್ರನಾದನು. ಸುಧಾಮರು, ಸತ್ಯರು, ಪ್ರದರ್ಶನರು ಮತ್ತು ವಶವರ್ತಿಗಳು ದೇವವರ್ಗಗಳಾದರು. ವಸಿಷ್ಠನ ಏಳು ಮಕ್ಕಳೂ ಸಪ್ತರ್ಷಿಗಳಾದರು. ಈ ಮನುವಿಗೆ ಅಜ, ಪರಶು, ದಿವ್ಯ ಮುಂತಾದವರು ಮಕ್ಕಳು."

"ಇನ್ನು ನಾಲ್ಕನೆಯದಾದ ತಮಸ ಮನ್ವಂತರದಲ್ಲಿ ಸುರೂಪರು, ಹರಿಗಳು, ಸತ್ಯರು, ಸುಧಿಗಳು ದೇವವರ್ಗಗಳು. ಒಂದೊಂದು ವರ್ಗದಲ್ಲೂ ಇಪ್ಪತ್ತೇಳು ದೇವತೆಗಳು. ಸಿವಿ ಎನ್ನುವವನು ಈ ಯುಗದ ಇಂದ್ರ. ಈತನು ನೂರು ಯಜ್ಞಗಳನ್ನು ಮಾಡಿ ಶತಕ್ರತು ಎಂದು ಹೆಸರಾದನು. ಜ್ಯೋತಿರ್ದಮ, ಪೃಥು, ಕಾವ್ಯ, ಚೈತ್ರ, ಅಗ್ನಿ, ವಾನಕ ಮತ್ತು ಪೀವರ ಎಂಬುವರು ಸಪ್ತರ್ಷಿಗಳು. ನರ, ಖ್ಯಾತಿ, ಶಾಂತಯ, ಜಾನುಜಂಘ ಮುಂತಾದ ಪ್ರಬಲ ದೊರೆಗಳು ಮನುವಾದ ತಮಸನ ಮಕ್ಕಳು."

"ಐದನೆಯದಾದ ರೈವತ ಮನ್ವಂತರದಲ್ಲಿ ವಿಭುವೆನ್ನುವವನು ಇಂದ್ರನಾದನು. ಅಮಿತಾಭರು, ಅಭೂತರಜಸರು, ವೈಕುಂಠರು ಮತ್ತು ಸುಮೇಧಸರು ಎಂಬ ದೇವವರ್ಗಗಳಿದ್ದವು. ಒಂದೊಂದು ವರ್ಗದಲ್ಲೂ ಹದಿನಾಲ್ಕು ದೇವತೆಗಳು ಹಿರಣ್ಯರೋಮ, ವೇದಶ್ರೀ, ಊರ್ಧ್ವಬಾಹು, ವೇದಬಾಹು, ಸುಧಾಮನ, ಪರ್ಜನ್ಯ, ಮತ್ತು ಮಹಾಮುನಿ ಎಂಬ ಸಪ್ತರ್ಷಿಗಳು, ಬಲಬಂಧು, ಸುಸಂಭಾವ್ಯ, ಸಾತ್ಯಕ ಮುಂತಾದ ಪರಾಕ್ರಮಿಗಳು ಮನುವಾದ ರೈವತನ ಮಕ್ಕಳು."

"ಸ್ವಾರೋಚಿಷ, ಔತ್ತಮಿ, ತಾಮಸ ಮತ್ತು ರೈವತರೆಂಬ ಈ ನಾಲ್ವರು ಮನುಗಳು ಪ್ರಿಯವ್ರತನು ವಿಷ್ಣುವನ್ನು ಕುರಿತು ಭಕ್ತಿಯಿಂದ ಮಾಡಿದ ತಪ್ಪಸಿನಿಂದ ಜನಿಸಿದವರು."

"ಚಾಕ್ಷುಷನು ಆರನೆಯ ಮನ್ವಂತರದ ಮನು. ಚಾಕ್ಷುಷ ಮನ್ವಂತರದ ಇಂದ್ರನು ಮನೋಜವನು. ಆದ್ಯರು, ಪ್ರಸ್ತುತರು, ಭವ್ಯರು, ಪೃಥುಗರು ಮತ್ತು ಮಹಾತ್ಮರಾದ ಲೇಖರು ಅಂದಿನ ದೇವವರ್ಗಗಳು. ಸುಮೇಧಸ, ವಿರಜ, ಹವಿಷ್ಮಂತ, ಉತ್ತಮ, ಮಧು, ಅಭಿನಾಮ ಮತ್ತು ಸಹಿಷ್ಣು ಎಂಬುವರು ಸಪ್ತರ್ಷಿಗಳು. ಈ ಚಾಕ್ಷುಷನ ಮಕ್ಕಳೇ ಪರಾಕ್ರಮಿಗಳಾದ, ಊರು, ಪುರು, ಶತಧುಮ್ನ ಮೊದಲಾದವರು."

"ಈಗಿನ ಮನ್ವಂತರದಲ್ಲಿ ಸೂರ್ಯಪುತ್ರನಾದ ವೈವಸತ್ವನು ಮನುವು. ಆದಿತ್ಯರು ವಸುಗಳು ಮತ್ತು ರುದ್ರರು ಈ ಮನ್ವಂತರದ ದೇವಗಣ. ಈ ದೇವಗಣಕ್ಕೆ ಅಧಿಪತಿಯಾದ ಇಂದ್ರನ ಹೆಸರು ಪುರಂದ್ರ. ವಸಿಷ್ಠ, ಕಶ್ಯಪ, ಅತ್ರಿ, ಜಮದಗ್ನಿ, ಗೌತಮ, ವಿಶ್ವಾಮಿತ್ರ ಮತ್ತು ಭಾರದ್ವಾಜರು ಸಪ್ತರ್ಷಿಗಳು. ಇಕ್ವಾಕು, ನಭಗ, ದೃಷ್ಟ, ಸಂಯತಿ, ನರಿಶ್ಯಾಂತ, ನಭನಿದಿಷ್ಟ, ಕರೂಷ ಮತ್ತು ಮಹಾತ್ಮನಾದ ವಸುಮತ್ ಈ ಒಂಬತ್ತು ಮಂದಿ ತೇಜಸ್ವಿಗಳಾದ ಮಹಾರಾಜರುಗಳು ವೈವಸ್ವತ ಮನುವಿನ ಮಕ್ಕಳು". ಈವರೆಗೆ ವಿಷ್ಣುಪುರಾಣದಲ್ಲಿ ನಮೂದಾಗಿರುವಂತೆ ಏಳು ಪ್ರಾಚೀನ ಮನ್ವಂತರಗಳ ವಿವರಗಳನ್ನು ಕೊಟ್ಟಿದ್ದಾಯಿತು. ಆದರೆ ಮನ್ವಂತರಗಳು ಇನ್ನೂ ಏಳು ಇವೆ.[೧]

"ವಿಶ್ವಕರ್ಮನ ಮಗಳು ಸಂಜ್ಞಾ, ಆಕೆ ಸೂರ್ಯನ ಮಡದಿ. ಅವಳಿಂದ ಸೂರ್ಯನಿಗೆ ವೈವಸ್ವತ ಮನು, ಯಮ ಮತ್ತು ದೇವತೆ ಯಮಿ (ಅಥವಾ ಯಮುನಾ ನದಿ) ಎಂಬ ಮೂರು ಮಕ್ಕಳಾದರು. ತನ್ನ ಪತಿಯ ತೇಜಸ್ಸನ್ನು ತಡೆದುಕೊಳ್ಳಲಾರದೆ ತನ್ನ ಸೇವಕಿಯಾದ ಛಾಯೆಯನ್ನು ಸೂರ್ಯನ ಬಳಿಯಲ್ಲಿ ಬಿಟ್ಟು ಸಂಜ್ಞೆಯು ತಪಸ್ಸಿಗೆಂದು ಕಾಡಿಗೆ ಹೊರಟುಹೋದಳು. ಸೂರ್ಯನಾದರೋ ಛಾಯೆಯನ್ನು ತನ್ನ ಪತ್ನಿಯಾದ ಸಂಜ್ಞೆಯೆಂದೇ ಭಾವಿಸಿ ಅವಳಿಂದ ಶನೈಶ್ಚರ, ಸಾವರ್ಣಿ ಮನು ಮತ್ತು ತಪತೀ (ತಪತೀ ನದಿ) ಎಂಬ ಮೂವರು ಮಕ್ಕಳನ್ನು ಪಡೆದನು. ಒಮ್ಮೆ ಛಾಯೆಯು ಸಂಜ್ಞೆಯ ಮಗನಾದ ಯಮನ ಮೇಲೆ ಕೋಪಗೊಂಡು ಅವನಿಗೆ ಶಾಪ ಕೊಡಲಾಗಿ ಸೂರ್ಯನಿಗೆ ಛಾಯೆಯ ಸಂಜ್ಞೆಯಲ್ಲವೆಂದೂ ಆಕೆ ಯಮನ ತಾಯಿಯಲ್ಲವೆಂದೂ ಗೊತ್ತಾಯಿತು. ಛಾಯೆಯಿಂದ ಸಂಜ್ಞೆಯು ವನವಾಸಕ್ಕೆ ಹೋಗಿರುವುದನ್ನರಿತು ಸೂರ್ಯನು ಅವಳನ್ನರಸುತ್ತಾ ಉತ್ತರ ಕುರುವಿಗೆ ಬಂದನು. ಆಗ ಸಂಜ್ಞೆಯು ಹೆಣ್ಣು ಕುದುರೆಯ ರೂಪದಲ್ಲಿ ತಪೋನಿರತಳಾಗಿರುವುದನ್ನು ದಿವ್ಯದೃಷ್ಟಿಯಿಂದ ಕಂಡು ಸೂರ್ಯನು ತಾನೂ ಗಂಡು ಕುದುರೆಯ ರೂಪವನ್ನು ತಾಳಿ ತನ್ನ ಪತ್ನಿಯನ್ನು ಕೂಡಿದನು. ಅವನಿಗೆ ಸಂಜ್ಞೆಯಿಂದ ಯಮಳರಾದ ಅಶ್ವಿನಿಗಳು ಮತ್ತು ರೇವಂತನೆಂಬುವನೂ ಜನಿಸಿದರು. ನಂತರ ಸೂರ್ಯನು ತನ್ನ ಮಡದಿಯನ್ನು ಮರಳಿ ಮನೆಗೆ ಕರೆದುಕೊಂಡು ಬಂದನು. ಸೂರ್ಯನ ತೇಜಸ್ಸಿನ ಪ್ರಖರತೆಯನ್ನು ಕಡಿಮೆ ಮಾಡಲು ದೇವಶಿಲ್ಪಿಯಾದ ವಿಶ್ವಕರ್ಮನು ಆ ತೇಜಸ್ವಿಯಾದ ಭಾನುವನ್ನು ಅರದ ಮೇಲಿಟ್ಟು ಉಜ್ಜಿದನು. ಹೀಗೆ ಸೂರ್ಯನ ಪ್ರಭೆಯ ಎಂಟನೆಯ ಒಂದು ಭಾಗವನ್ನು ಕಡಿಮೆ ಮಾಡಿದನು. ಹೀಗೆ ಉಜ್ಜಿ ತೆಗೆದ ಸೂರ್ಯ ಪ್ರಭೆಯಿಂದ ವಿಶ್ವಕರ್ಮನು ವಿಷ್ಣುವಿಗೆ ಚಕ್ರವನ್ನೂ ಶಿವನಿಗೆ ತ್ರಿಶೂಲವನ್ನು ಕುಬೇರನಿಗೆ ಅವನ ಆಯುಧವನ್ನೂ ಕಾರ್ತಿಕೇಯನಿಗೆ ವೇಲಾಯುಧವನ್ನೂ ಉಳಿದ ದೇವತೆಗಳಿಗೂ ಅವರವರ ಆಯುಧಗಳನ್ನೂ ಮಾಡಿಕೊಟ್ಟನು. ಹೀಗೆ ದೇವತೆಗಳ ಆಯಧಗಳೆಲ್ಲವೂ ವಿಶ್ವಕರ್ಮನು ಸೂರ್ಯಪ್ರಭೆಯನ್ನು ಉಜ್ಜಿ ತೆಗೆದು ಚೂರುಗಳಿಂದ ಮಾಡಿಕೊಟ್ಟಂತಹವು."

ಛಾಯಾಪುತ್ರನಾದ ಮತ್ತೊಬ್ಬ ಮನುವನ್ನು ಸಾವರ್ಣಿಮನು ಎಂದು ಕರೆದರು. ಅವನು ಬರಲಿರುವ ಎಂಟನೆಯ ಮನ್ವಂತರದ ಅಧಿಪತಿಯು. ಆ ಎಂಟನೆಯ ಮನ್ವಂತರದ ವಿವರಗಳು ಹೀಗಿವೆ. "ಈ ಮನ್ವಂತರದ ಅಧಿಪತಿ ಸಾವರ್ಣಿಮನು. ಈ ಮನ್ವಂತರದ ದೇವವರ್ಗದಲ್ಲಿ ಸುತಪರು, ಅಮಿತಾಭರು ಮತ್ತು ಮುಖ್ಯರು ಇದ್ದಾರೆ. ಆಗ ಬರುವ ಸಪ್ತರ್ಷಿಗಳು ದೀಪ್ತಿಮತ್, ಗಾಲವ, ರಾಮ, ಕೃಷ್ಣ, ದ್ರೌಣಿ ಹಾಗೂ ಆರನೆಯವನಾಗಿ ನನ್ನ ಮಗನಾದ ವ್ಯಾಸನೂ ಮತ್ತು ಏಳನೆಯ ಋಷಿಯಾಗಿ ಮಹಾತ್ಮನಾದ

೧. ವಿಲ್ಸನ್‌ರವರ 'ವಿಷ್ಣು ಪುರಾಣ' ಪು. ೨೬೬–೬೯

ಋಷ್ಯಶೃಂಗನೂ ಇರುತ್ತಾರೆ. ಆಗಿನ ಇಂದ್ರನು ವಿರೋಚನನ ಪುತ್ರನೂ ಪಾಪರಹಿತನೂ ಆದ ಬಲಿ ಚಕ್ರವರ್ತಿ. ಈಗ ಅವನು ವಿಷ್ಣುವಿನ ಕೃಪೆಯಿಂದ ಪಾತಾಳದ ಸಾರ್ವಭೌಮನಾಗಿದ್ದಾನೆ. ಸಾವರ್ಣಿಯಿಂದ ಹುಟ್ಟುವ ರಾಜರು ವಿರಾಜ, ಅರ್ವರಿವ, ನಿರ್ಮೋಹ ಮತ್ತಿತರು."

"ಒಂಬತ್ತನೆಯ ಮನುವಾಗಿ ದಕ್ಷಸಾವರ್ಣಿ ಎಂಬುವನು ಬರುತ್ತಾನೆ. ಆಗ ಪರರು, ಮರೀಚಿಗರ್ಭರು, ಸುಧರ್ಮರು ಎಂದು ಮೂರು ದೇವ ವರ್ಗಗಳಿರುತ್ತವೆ. ಒಂದೊಂದು ವರ್ಗದಲ್ಲೂ ಹನ್ನೆರಡು ದೇವತೆಗಳು. ಅವರ ಅಧಿಪತಿಯಾಗಿ ಅಭೂತನೆಂಬುವನು ಇಂದ್ರ ಪದವಿಗೆ ಬರುತ್ತಾನೆ. ಸವನ, ದ್ಯುತಿಮತ್, ಭವ್ಯ, ವಸು, ಮೇಧಾತಿಥಿ, ಜ್ಯೋತಿಷ್ಯನ್ ಮತ್ತು ಸತ್ಯರೆಂಬುವರು ಸಪ್ತರ್ಷಿಗಳಾಗುತ್ತಾನೆ. ಧೃತಿಕೇತು, ತೃಪ್ತಿಕೇತು, ಪಂಚಹಸ್ತ, ನಿರ್ಮಾಯ, ಪೃಥುಶ್ರಯ ಮುಂತಾದವರು ಈ ದಕ್ಷ ಸಾವರ್ಣಿಯ ಮಕ್ಕಳು."

"ಹತ್ತನೆಯ ಮನ್ವಂತರದಲ್ಲಿ ಬ್ರಹ್ಮಸಾವರ್ಣಿ ಎಂಬುವವನು ಮನುವಾಗುತ್ತಾನೆ. ಸುಧಾಮರು, ವಿರುದ್ಧರು, ಶತಸಂಖ್ಯರು ದೇವವರ್ಗಗಳಾಗುತ್ತಾರೆ. ಪರಾಕ್ರಮಿಯಾದ ಶಾಂತಿ ಎಂಬುವವನು ಇಂದ್ರ ನಾಗುತ್ತಾನೆ, ಹವಿಷ್ಯಾನ್, ಸುಕೃತಿ, ಸತ್ಯ, ಅಪಾಂಮೃತಿ, ನಭಗ, ಅಪ್ರತಿಮೌಜಸ ಮತ್ತು ಸತ್ಯಕೇತು ಎಂಬುವವರು ಸಪ್ತರ್ಷಿಗಳು. ಬ್ರಹ್ಮಸಾವರ್ಣಿಗೆ ಸುಕ್ಷೇತ್ರ, ಉತ್ತಮೌಜಸ, ಹರಿಷೇಣ ಮುಂತಾದ ಹತ್ತು ಮಕ್ಕಳು ಹುಟ್ಟುತ್ತಾರೆ."

"ಹನ್ನೊಂದನೆಯ ಮನ್ವಂತರದಲ್ಲಿ ಧರ್ಮಸಾವರ್ಣಿ ಎಂಬುವವನು ಮನುವಾಗುತ್ತಾನೆ. ವಿಹಂಗಮರು, ಕಾಮಗಮರು ಮತ್ತು ನಿರ್ಮನರತಿಗಳು ದೇವವರ್ಗವಾಗಿ ಬರುತ್ತಾರೆ. ಪ್ರತಿಯೊಂದು ವರ್ಗದಲ್ಲೂ ಮೂವತ್ತು ದೇವತೆಗಳು ಇವರಿಗೆ ವೃಷನೆಂಬ ಇಂದ್ರನು ಅಧಿಪತಿಯಾಗುತ್ತಾನೆ. ನಿಶ್ಚರ, ಅಗ್ನಿತೇಜಸ್, ವಪುಷಮನ, ವಿಷ್ಣು, ಅರುಣ, ಹವಿಷ್ಮಾನ್ ಮತ್ತು ಅನಘನೆಂಬುವರು ಸಪ್ತರ್ಷಿಗಳು. ಆಗ ಧರೆಯನ್ನಾಳುವ ಮನುವಿನ ಮಕ್ಕಳು ಸವರ್ಗ, ಸರ್ವಧರ್ಮ, ದೇವಾನೀಕ ಮೊದಲಾದವರು."

"ಹನ್ನೆರಡನೆಯ ಮನ್ವಂತರದಲ್ಲಿ ರುದ್ರನ ಮಗನಾದ ಸಾವರ್ಣಿಯು ಮನುವಾಗುತ್ತಾನೆ. ಋತುಧಾಮನು ಇಂದ್ರನಾಗುತ್ತಾನೆ. ಹಾರೀತರು, ಲೋಹಿತರು, ಸುಮನಸರು ಮತ್ತು ಸುಕರ್ಮರು ದೇವವರ್ಗವಾಗುತ್ತಾರೆ. ತಪಸ್ವಿ, ಸುತಪಸ, ತಪೋಮೂರ್ತಿ, ತಪೋರತಿ, ತಪೋಧೃತಿ ಮತ್ತು ತಪೋಧನರೆಂಬುವರು ಸಪ್ತರ್ಷಿಗಳಾಗುತ್ತಾರೆ. ಈ ಮನ್ವಂತರದ ಮನುವಿನ ಮಕ್ಕಳಾದ ದೇವವಾನ್, ಉಪದೇವ, ದೇವಶ್ರೇಷ್ಠ ಮುಂತಾದವರು ಚಕ್ರವರ್ತಿಗಳಾಗುತ್ತಾರೆ."

"ಹದಿಮೂರನೆಯ ಮನ್ವಂತರದಲ್ಲಿ ರೌಚ್ಯನು ಮನುವಾಗಿ ಬರುತ್ತಾನೆ. ಸುಧಾಮನಸರು, ಸುಧರ್ಮನಸರು, ಸಕರ್ಮನಸರು ಎಂಬ ದೇವವರ್ಗಗಳು ಬರುತ್ತವೆ. ಪ್ರತಿಯೊಂದು ವರ್ಗದಲ್ಲೂ ಮೂವತ್ತು ಮೂರು ದೇವತೆಗಳು ದಿವಸ್ಪತಿ ಎಂಬ ಇಂದ್ರನು ಇವರಿಗೆ ಅಧಿಪತಿ. ನಿರ್ಮೋಹ, ತತ್ವದರ್ಶಿ, ನಿಷ್ಪ್ರಕಂಪ, ನಿರುತ್ಸುಕ, ಧೃತಿಮತ್, ಅವ್ಯಯ ಮತ್ತು ಸುತಪಸ ಎಂಬುವರು ಸಪ್ತರ್ಷಿಗಳು. ಚಿತ್ರಸೇನ, ವಿಚಿತ್ರ ಮುಂತಾದವರು ರಾಜರುಗಳಾಗುತ್ತಾರೆ."

"ಹದಿನಾಲ್ಕನೆಯ ಮನ್ವಂತರದಲ್ಲಿ ಭೌತ್ಯನು ಮನುವಾಗುತ್ತಾನೆ. ಶುಚಿಯು ಇಂದ್ರನಾಗುತ್ತಾನೆ. ಚಾಕ್ಷುಷರು, ಪವಿತ್ರರು, ಕನಿಷ್ಠರು, ಭ್ರಾಜೀರರು ಮತ್ತು ವಿವೃದ್ಧರೆಂಬ ದೇವವರ್ಗಗಳಿರುತ್ತವೆ. ಅಗ್ನಿಬಾಹು, ಶುಚಿ, ಶುಕ್ರ, ಮಗಧ, ಗೃಧ್ರ, ಯುಕ್ತ ಮತ್ತು ಅಜಿತರೆಂಬ ಸಪ್ತರ್ಷಿಗಳಿರುತ್ತಾರೆ. ಊರು, ಗಭೀರ, ಬ್ರಧ್ನ ಮುಂತಾದವರು ಮನುವಿನ ಮಕ್ಕಳು. ಇವರು ರಾಜರಾಗಿ ಪೃಥ್ವಿಯನ್ನು ಆಳುತ್ತಾರೆ."

ಪ್ರತಿ ಮನ್ವಂತರದಲ್ಲೂ ವಿಶ್ವದ ಚಟುವಟಿಕೆಯನ್ನು ನಿಯಂತ್ರಿಸುವಂಥ ವ್ಯವಸ್ಥೆಯೊಂದನ್ನು ಇಲ್ಲಿ ಯೋಜಿಸಿದಂತಿದೆ. ಪ್ರತಿ ಮನ್ವಂತರಕ್ಕೂ ಶಾಸಕನಾಗಿ ಒಬ್ಬ ಮನುವಿನ ಅಧಿಪತ್ಯವಿರುತ್ತದೆ. ಹವಿರ್ಭಾಗಿಗಳಾದ ಒಂದಿಷ್ಟು ದೇವಗುಣಗಳು ಇದರ ಜೊತೆಗೆ ನಿಯಂತ್ರಣಕ್ಕಾಗಿ ಸಪ್ತ ಋಷಿಗಳು ಮತ್ತು ರಾಜರು ಇರುತ್ತಾರೆ. ವಿಷ್ಣುಪುರಾಣವೇ ಹೇಳುವಂತೆ[೧]:

"ಬೇರೆ ಬೇರೆ ವರ್ಗಗಳ ದೇವತೆಗಳು ಅವರು ಸೇರಿದ ಬೇರೆ ಬೇರೆ ಮನ್ವಂತರಗಳಲ್ಲಿ ಹವಿರ್ಭಾಗವನ್ನು ಪಡೆಯುತ್ತಾರೆ. ಪ್ರತಿ ಮನ್ವಂತರದ ಮನುವಿನ ಸಂತಾನವು ಆ ಮನ್ವಂತರದ ಕೊನೆಯವರೆಗೂ ಪೃಥ್ವಿಯ ಮೇಲೆ ರಾಜ್ಯಭಾರ ಮಾಡುತ್ತದೆ. ಮನು, ಇಂದ್ರ, ಸಪ್ತರ್ಷಿಗಳು ಹಾಗೂ ಮನುವಿನ ಮಕ್ಕಳಾದ ರಾಜರು – ಇವರು ಆಯಾ ಮನ್ವಂತರದಲ್ಲಿ ಅಧಿಪತ್ಯ ನಡೆಸುತ್ತಾರೆ."

ಇದು ಮನ್ವಂತರದ ಮಾತಾಯಿತು. ಆದರೆ ಮಹಾಯುಗದ ಪಟ್ಟಿ ನೋಡಿದರೆ ಇನ್ನೂ ಕಕ್ಕಾಬಿಕ್ಕಿಯಾಗಿ ಬಿಡುತ್ತದೆ. ಕಲ್ಪವನ್ನು ಮಹಾಯುಗಗಳಾಗಿ ವಿಂಗಡಿಸಿದ್ದು ಏಕೆ? ಹಾಗೂ ಮಹಾಯುಗವನ್ನು ಮತ್ತೆ ನಾಲ್ಕು ಯುಗಗಳಾಗಿ ಪುನರ್ವಿಂಗಡನೆ ಮಾಡಿದ್ದಾದರೂ ಏಕೆ? ಈ ಒಗಟಿಗೆ ಉತ್ತರ ಕಂಡುಹಿಡಿಯಬೇಕಾಗಿದೆ. ಒಂದಂತೂ ನಿಜ. ಈ ವಿಂಗಡನೆಯು ಪೌರಾಣಿಕ ಆಧಾರದಿಂದ ಆದುದಂತೂ ಅಲ್ಲ ಅಥವಾ ನಿಜವಾದ ಚಾರಿತ್ರಿಕ ಹಿನ್ನೆಲೆಯು ಹಿಂದೂಗಳ ಈ ವರ್ಗೀಕರಣಕ್ಕೆ ಇದ್ದಂತಿಲ್ಲ. ಆದರೆ ಈ ಜನರು ಯುಗದ ಅವಧಿಯನ್ನು ಅಷ್ಟೊಂದು ವಿಸ್ತರಿಸಿ ಇದೇ ಕಾಲಗಣನೆಯನ್ನು ಹುಸಿಯೆನಿಸುವಂತೆ ಕಟ್ಟುಕತೆಯೆಂಬಂತೆ ಕಾಣುವ ಹಾಗೆ ಮಾಡಿದ್ದಾದರೂ ಏಕೆ?

ಋಗ್ವೇದದಲ್ಲಿ ಯುಗವೆನ್ನುವ ಪದ ಕನಿಷ್ಠ ಪಕ್ಷ ಮೂವತ್ತೆಂಟು ಬಾರಿಯಾದರೂ ಬರುತ್ತದೆ. ಅಲ್ಲಿ ಈ ಪದ ಕಲ್ಪ, ಪೀಳಿಗೆ, ನೊಗ, ಕುಲ ಈ ಬಗೆಯ ಅರ್ಥಗಳಲ್ಲಿ ಪ್ರಯೋಗವಾಗಿದೆ. ಕೆಲವು ಕಡೆ ಯುಗ ಎನ್ನುವುದು ತೀರಾ ಕಡಿಮೆ ಅವಧಿಯ ಕಾಲಪ್ರಮಾಣ. ಸಾಯಣ ಇದಕ್ಕೆ 'ಪ್ರತಿದಿನೇ' (ದಿನೇ ದಿನೇ) ಎನ್ನುವ ಅರ್ಥ ಕೊಡುವವರೆಗೂ ಹೋಗಿದ್ದಾನೆ.

ಇನ್ನೊಂದೆಡೆ ನಾಲ್ಕು ಯುಗದ ಪರಿಕಲ್ಪನೆ ಸಿಗುತ್ತದೆ. ಅದರಲ್ಲಿ ಸಮಾಜದ ನೈತಿಕ ವ್ಯವಸ್ಥೆಯ ಅಧಃಪತನವನ್ನು ಈ ಮೂಲಕ ಸೂಚಿಸುವಂತಿದೆ. ಈ ಪರಿಕಲ್ಪನೆಯನ್ನು ಮಹಾಭಾರತದ ಈ ಭಾಗ ಚೆನ್ನಾಗಿ ವಿವರಿಸುತ್ತದೆ.[೨]

"ಕೃತಯುಗದಲ್ಲಿ ಧರ್ಮವು ಶಾಶ್ವತವಾಗಿತ್ತು. ಈ ಯುಗದಲ್ಲಿ ಎಲ್ಲವೂ ಸಿದ್ಧವಾಗಿತ್ತು. (ಕೃತ) ಮಾಡಬೇಕಾದದ್ದು ಯಾವುದೂ ಇರಲಿಲ್ಲ. ಕರ್ಮಗಳು ಶಿಥಿಲವಾಗಿರಲಿಲ್ಲ. ಜನರು ಪತಿತ ರಾಗಿರಲಿಲ್ಲ. ಅನಂತರ ಕಾಲಪ್ರಭಾವದಿಂದಾಗಿ ಈ ಯುಗವು ಪತನಗೊಂಡಿತು. ಆ ಯುಗದಲ್ಲಿ ದೇವತಗಳಿರಲಿಲ್ಲ. ದಾನವರಿರಲಿಲ್ಲ. ಗಂಧರ್ವರಾಗಲಿ, ಯಕ್ಷರಾಗಲಿ, ರಾಕ್ಷಸರಾಗಲಿ, ಪನ್ನಗರಾಗಲಿ ಇರಲಿಲ್ಲ. ಮಾರುವುದಾಗಲಿ, ಕೊಳ್ಳುವುದಾಗಲಿ ಆ ಯುಗದಲ್ಲಿ ಕೇಳರಿಯರು. ವೇದಗಳನ್ನು ಋಕ್, ಯಜುಸ್‌ಗಳೆಂದೂ ಯಾರೂ ಭಾಗ ಮಾಡಿರಲಿಲ್ಲ. ಮನುಷ್ಯರು ಶ್ರಮವನ್ನೇ ಪಡುತ್ತಿರಲಿಲ್ಲ. ಕೇವಲ ಬಯಕೆಯಿಂದಲೇ ಫಲವು ಲಭ್ಯವಾಗುತ್ತಿತ್ತು. ರೋಗಗಳಾಗಲಿ, ವಯೋಗುಣ ಸಹಜವಾದ ಇಂದ್ರಿಯ ಶೈಥಿಲ್ಯವಾಗಲಿ ಇರಲಿಲ್ಲ. ಅಸೂಯೆಯಾಗಲಿ, ರೋದನವಾಗಲಿ, ಗರ್ವವಾಗಲಿ, ಮೋಸವಾಗಲಿ ಇರಲಿಲ್ಲ.

---

೧. ವಿಲ್ಸನ್‌ರವರ 'ವಿಷ್ಣುಪುರಾಣ', ಪು. ೨೬೯–೭೦

೨. ಮ್ಯೂರ್ ಸ್ಯಾನ್‌ಸ್ಕ್ರಿಟ್ ಟೆಕ್ಸ್ಟ್ ಸಂ. I, ಪು. ೧೪೪–೧೪೬

ಇನ್ನು ಜಡತ್ವದ ಮಾತೆಲ್ಲಿಂದ ಬಂತು? ವೈರ್ಯ, ಕ್ರೌರ್ಯ, ಭಯ, ದುಃಖ, ಅಸೂಯೆ ಮತ್ಸರ್ಯಗಳಾವುವೂ ಆ ಯುಗದಲ್ಲಿ ಇರಲಿಲ್ಲ. ಹೀಗೆ ಕೇವಲ ಬ್ರಹ್ಮವೊಂದೇ ಆ ಯೋಗಿಗಳ ಅಂತಿಮ ಆಶ್ರಯವಾಗಿತ್ತು. ಆಗ ಸರ್ವಾತ್ಮಕನಾದ ನಾರಾಯಣನು ಶ್ವೇತವರ್ಣದವನಾಗಿದ್ದನು. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರರು ಕೃತಯುಗದ ಸ್ವಭಾವವನ್ನು ಹೊಂದಿದ್ದರು. ಆ ಯುಗದಲ್ಲಿ ಹುಟ್ಟಿದ ಜೀವಗಳು ಕರ್ಮನಿರತವಾಗಿದ್ದುವು. ಶ್ರದ್ಧೆ, ಆಚರಣೆ ಮತ್ತು ಜ್ಞಾನದಲ್ಲಿ ಅವರೆಲ್ಲರೂ ಸಮಾನರಾಗಿದ್ದರು. ಯಾರೂ ಕರ್ತವ್ಯಲೋಪ ಮಾಡುತ್ತಿರಲಿಲ್ಲ. ಎಲ್ಲರೂ ಒಂದೇ ದೈವದಲ್ಲಿ ಅವಿರತ ಶ್ರದ್ಧೆಯನ್ನು ಹೊಂದಿದ್ದರು. ಒಂದೇ ಮಂತ್ರವನ್ನು ಬಳಸುತ್ತಿದ್ದರು. ಅವರೆಲ್ಲರೂ ಬೇರೆ ಬೇರೆ ವರ್ಣಾಶ್ರಮಗಳಿಗೆ ಸೇರಿದ್ದರೂ ಎಲ್ಲರೂ ಒಂದೇ ವೇದವನ್ನು ಅನುಸರಿಸುತ್ತಿದ್ದರು. ಒಂದೇ ಕರ್ಮವನ್ನು ಮಾಡುತ್ತಿದ್ದರು. ಎಲ್ಲರೂ ನಾಲ್ಕು ಆಶ್ರಮಗಳ ಕರ್ತವ್ಯಗಳನ್ನು ಅನುಸರಿಸುತ್ತಿದ್ದರೂ ಫಲಾಕಾಂಕ್ಷಿಗಳಾಗಿರಲಿಲ್ಲ. ಎಲ್ಲರೂ ಕೈವಲ್ಯ ಸುಖಿಗಳಾಗಿದ್ದರು. ಎಲ್ಲ ವರ್ಣಗಳ ಚಟುವಟಿಕೆಯೂ ಆ ಯುಗದ ಸ್ವಭಾವಕ್ಕೆ ತಕ್ಕಂತಿತ್ತು. ಕೃತಯುಗವು ತ್ರಿಗುಣಗಳಿಂದಲೂ ಮುಕ್ತವಾದುದಾಗಿತ್ತು. ವತ್ಸ, ಈಗ ತ್ರೇತಾಯುಗವನ್ನು ಅರಿತುಕೊಳ್ಳಬೇಕು. ತ್ರೇತಾಯುಗದಲ್ಲಿ ಯಜ್ಞಗಳು ಹುಟ್ಟಿಕೊಂಡವು. ಒಂದು ಪಾದದಷ್ಟು ಧರ್ಮವು ಕಡಿಮೆಯಾಯಿತು. ವಿಷ್ಣುವು ತಾಮ್ರವರ್ಣದವನಾದ. ಮನುಷ್ಯರು ಸತ್ಯನಿಷ್ಠರಾದರು. ಯಜ್ಞವನ್ನು ಆಧರಿಸಿದ ಧರ್ಮವನ್ನು ಮಾನವರು ಅವಲಂಬಿಸಿದರು. ಪವಿತ್ರ ಕರ್ಮಗಳೂ, ನಾನಾ ಪ್ರಕಾರವಾದ ಕಲ್ಪಗಳೂ ಪ್ರಾರಂಭವಾದವು. ಯಜ್ಞವೇ ಎಲ್ಲೆಡೆಯೂ ಪ್ರಚುರವಾಯಿತು. ಮಾನವರು ತಮ್ಮ ಕರ್ಮದಿಂದ, ಯುದ್ಧಗಳಿಂದ ಫಲವನ್ನು ಬಯಸುವವರಾದರು. ತಪಸ್ಸಿನಿಂದಲೂ, ಸೌಮನಸ್ಯದ ಕರ್ಮದಿಂದಲೂ ದೂರಸರಿದರು. ಆದರೂ ಈ ಯುಗದಲ್ಲಿ ಮನುಷ್ಯನು ಸ್ವಕರ್ಮವನ್ನು ಪಾಲಿಸುತ್ತಿದ್ದನು. ತನ್ನ ಧಾರ್ಮಿಕ ಕರ್ಮದಲ್ಲಿ ನಿಷ್ಠೆಯುಳ್ಳವನಾಗಿದ್ದನು. ದ್ವಾಪರಯುಗದಲ್ಲಿ ಧರ್ಮವು ಎರಡು ಪಾದಗಳಷ್ಟು ಕುಂಠಿತವಾಯಿತು. ವಿಷ್ಣುವು ಪೀತವರ್ಣದವನಾದನು. ವೇದಗಳು ನಾಲ್ಕಾದವು. ಕೆಲವರು ನಾಲ್ಕು ವೇದಗಳನ್ನು, ಕೆಲವರು ಮೂರು ವೇದಗಳನ್ನು, ಕೆಲವರು ಎರಡನ್ನು, ಕೆಲವರು ಒಂದನ್ನು ಅಧ್ಯಯನ ಮಾಡಿದರು. ಕೆಲವರು ಯಾವ ವೇದವನ್ನೂ ಅಧ್ಯಯನ ಮಾಡುತ್ತಲೇ ಇರಲಿಲ್ಲ. ಹೀಗೆ ವೇದಗಳು ವಿಭಾಗಗೊಂಡ ಮೇಲೆ ಯಜ್ಞಗಳೂ ಬಹುಪ್ರಕಾರವಾಗಿಬಿಟ್ಟವು. ಜನರು ಉಡುಗೊರೆಗಳನ್ನು ಕೊಡುವ ಸ್ವಭಾವದವರಾಗಿ ರಾಜಸಿಗಳಾಗಿಬಿಟ್ಟರು. ಈ ಬಗೆಗಿನ ಅಜ್ಞಾನದಿಂದಾಗಿ ವೇದಗಳು ಅಸಂಖ್ಯವಾದವು. ಸತ್ಯಗುಣವು ಕುಂಠಿತವಾಗಿ ಕೆಲವು ಮಂದಿ ಮಾತ್ರ ಸತ್ಯದಲ್ಲಿ ನಿಷ್ಠೆಯುಳ್ಳವರಾದರು. ಮನುಷ್ಯನು ಸದ್ಗುಣತ್ಯಕ್ತನಾದ್ದರಿಂದ ಜಾಡ್ಯಗಳೂ ಕಾಮಗಳೂ ಪೀಡೆಗಳೂ ವಿಧಿ ನಿರ್ದೇಶನದಂತೆ ಅಸಂಖ್ಯವಾಗಿ ಉಲ್ಬಣಗೊಂಡವು. ಈ ಕಂಟಕಗಳಿಂದ ಪೀಡೆಗೊಳಗಾದವರು ಸತ್ಕರ್ಮಗಳಲ್ಲಿ ತೊಡಗಿದರು. ಹೀಗೆ ದ್ವಾಪರಯುಗವು ಬರುವ ಹೊತ್ತಿಗೆ ಮನುಷ್ಯರು ಅಧರ್ಮಿಗಳಾಗಿದ್ದರು. ಕಲಿಯುಗದ ಕಾಲಕ್ಕಾದರೋ ಧರ್ಮವು ಒಂದು ಪಾದದಷ್ಟು ಮಾತ್ರ ಉಳಿಯಿತು. ಆ ಕರಾಳಯುಗದಲ್ಲಿ ವಿಷ್ಣುವು ಕೃಷ್ಣವರ್ಣದವನಾದನು. ವೈದಿಕ ಕರ್ಮಗಳು, ಧಾರ್ಮಿಕ ಕರ್ಮಗಳು, ಯಜ್ಞಕಲ್ಪಗಳು ನಿಂತುಹೋದವು. ಉತ್ಪಾತಗಳು, ರೋಗಗಳು, ಕೋಪಾದಿ ಅರಿಷಡ್ವರ್ಗಗಳು, ಚಿಂತೆ, ಆತಂಕ, ಮೂರ್ಛೆ, ಭಯ, ಕ್ಷುತ್ಪಿಪಾಸಾದಿಗಳು ವ್ಯಾಪಕವಾದವು. ಕಾಲ ಚಲಿಸಿದಂತೆ ಧರ್ಮವೂ ಅಧಃ ಪತನಗೊಳ್ಳುತ್ತದೆ. ಹೀಗಾಗುತ್ತಲೇ ಮನುಷ್ಯರೂ ಅಧಃಪತನಗೊಳ್ಳುತ್ತಾರೆ. ಹೀಗೆ ಈ ಯುಗದ ಆಚರಣೆಗಳಿಂದ ಮನುಷ್ಯ ತನ್ನ ಸಂಕಲ್ಪನಿಷ್ಠೆಯನ್ನು ಕಳೆದುಕೊಳ್ಳುತ್ತಾನೆ. ಅದು ಅತ್ಯಲ್ಪ ಕಾಲದ ಕಲಿಯುಗದ ಲಕ್ಷಣವು. ದೀರ್ಘಾಯುಷಿಗಳಾದವರೂ ಆಯಾ ಯುಗದ ಸ್ವಭಾವಕ್ಕೆ ತಕ್ಕಂತೆ ವರ್ತಿಸುತ್ತಾರೆ."

ಈ ವಿವರಣೆ ವಿಚಿತ್ರವಾಗಿರುತ್ತದೆ. ಇಲ್ಲಿನ ಪರಿಭಾಷೆಗಳನ್ನು ಪ್ರಾಚೀನ ವೈದಿಕ ಸಾಹಿತ್ಯದಲ್ಲಿ ಕಾಣುತ್ತೇವೆ. ಕೃತ, ತ್ರೇತ, ದ್ವಾಪರ ಮತ್ತು ಅಸ್ಕಂದ ಎಂಬ ಪದಗಳು ತೈತ್ತಿರೀಯ ಸಂಹಿತೆಯಲ್ಲೂ ವಾಜಸನೇಯ ಸಂಹಿತೆಯಲ್ಲೂ ಬಳಕೆಯಾಗಿವೆ. ಅದಲ್ಲದೆ ಐತರೇಯ ಬ್ರಾಹ್ಮಣ ಮತ್ತು ಶತಪಥ ಬ್ರಾಹ್ಮಣಗಳಲ್ಲೂ ಈ ಪದಗಳ ಬಳಕೆ ಇದೆ. ಶತಪಥ ಬ್ರಾಹ್ಮಣದಲ್ಲಿ ಕೃತವೆಂದರೆ ಎದುರಾಳಿ ಆಟದ ತಪ್ಪುಗಳನ್ನು ತನ್ನ ಲಾಭಕ್ಕೆ ಬಳಸಿಕೊಳ್ಳುವಾತ, ತ್ರೇತಾ ಎಂದರೆ ವ್ಯವಸ್ಥಿತ ಯೋಜನೆಯಿಂದ ಆಡುವಾತ, ದ್ವಾಪರವೆಂದರೆ ಅಸ್ಕಂಧವೆಂಬ ಆಟದ ಸ್ಥಾನವನ್ನು ಗೆದ್ದುಕೊಳ್ಳಲು ತನ್ನ ಜೊತೆಯಾಟಗಾರನನ್ನು ಸೋಲಿಸಲು ಉದ್ಯುಕ್ತನಾದಾತ ಎಂದು ಹೇಳಿದೆ. ಐತರೇಯ ಬ್ರಾಹ್ಮಣ ಮತ್ತು ತೈತ್ತಿರೀಯ ಬ್ರಾಹ್ಮಣಗಳಲ್ಲಿ ಕಲಿ ಎಂಬ ಪದವನ್ನು ಅಸ್ಕಂಧದ ಸ್ಥಾನದಲ್ಲಿ ಸಮಾನಾರ್ಥಕವಾಗಿ ಬಳಸಿದೆ. ತೈತ್ತಿರೀಯ ಬ್ರಾಹ್ಮಣದಲ್ಲಿ ಕೃತ ಎಂದರೆ ಕ್ರೀಡಾಂಗಣದ ಯಜಮಾನ. ತ್ರೇತ ಎಂದರೆ ಎದುರಾಳಿಯ ತಪ್ಪುಗಳ ಸದವಕಾಶವನ್ನು ತನ್ನ ಗೆಲುವಿಗೆ ಬಳಸಿಕೊಳ್ಳುವ ಆಟಗಾರ. ದ್ವಾಪರನೆಂದರೆ ಆಟದಿಂದ ಹೊರಗೆ ಕೂತವನು. ಕಲಿ ಎನ್ನುವವನು ಕ್ರೀಡಾಗೃಹದ ಸಿಬ್ಬಂದಿಯ ಹಾಗೆ ಎಂದೂ ಆ ಗೃಹವನ್ನು ಬಿಡದವನು. ಐತರೇಯ ಬ್ರಾಹ್ಮಣ ಹೀಗೆ ಹೇಳುತ್ತದೆ:

"ಗೆಲುವನ್ನೆಲ್ಲ ಆಶಿಸೋಣ. ದುರದೃಷ್ಟರ ದಾಳದಲ್ಲಿ ಕಲಿ ಕುಳಿತಿದ್ದಾನೆ. ಉಳಿದೆರಡು ದಾಳಗಳೂ ನಿಧಾನವಾಗಿ ಚಲಿಸುತ್ತಿವೆ. ಆದರೆ ಅದೃಷ್ಟಶಾಲಿಯಾದ ಕೃತವು ವೇಗವಾಗಿ ಬೀಳುತ್ತಿದ್ದೆ." ಈ ಎಲ್ಲ ಸಂದರ್ಭಗಳಲ್ಲೂ ಈ ಪದಗಳನ್ನು ಜೂಜಾಟದ ಪರಿಭಾಷೆಯ ಪದಗಳಾಗೇ ಬಳಸಿರುವುದು ಎಂಬುದು ಸುಸ್ಪಷ್ಟ.

ಮನುವು ಈ ಪದಗಳನ್ನು ಯಾವ ಅರ್ಥದಲ್ಲಿ ಬಳಸಿದ್ದಾನೆ ಎಂಬುದನ್ನೂ ಗಮನಿಸೋಣ. "ಕೃತ, ತ್ರೇತ, ದ್ವಾಪರ ಮತ್ತು ಕಲಿಯುಗಗಳು ರಾಜನ ಕಾರ್ಯ ವಿಧಾನಗಳ ಮಾದರಿಗಳು. ಏಕೆಂದರೆ ರಾಜನು ಯುಗವೆಂದು ಕರೆಯಲ್ಪಡುತ್ತಾನೆ. ಅವನು ನಿದ್ರಿಸುತ್ತಿದ್ದರೆ ಆಗ ಅವನು ಕಲಿಯು. ಜಾಗೃತನಾಗಿದ್ದರೆ ಆತನು ದ್ವಾಪರನು. ಕಾರ್ಯ ಸಂಕಲ್ಪನಾಗಿದ್ದರೆ ಅರಸು ತ್ರೇತನು. ಅವನು ಕಾರ್ಯಪ್ರವೃತ್ತನಾಗಿದ್ದರೆ ಕೃತನು."

ಮನುವಿನೊಂದಿಗೆ ಅವನ ಪೂರ್ವಿಕರನ್ನು ಹೋಲಿಸಿದರೆ ಈ ಪದಗಳ ಅರ್ಥದ ವ್ಯಾಪ್ತಿ ಮನುವಿನ ಕಾಲಕ್ಕೇ ಬದಲಾಗಿರುವುದು ವೇದ್ಯವಾಗುತ್ತದೆ. ದ್ಯೂತದ ಅರ್ಥವನ್ನು ಬಿಟ್ಟು ಈ ಪದಗಳಿಗೆ ರಾಜಕೀಯದ ಅರ್ಥವು ಬಂದುಬಿಟ್ಟಿದೆ. ಜೂಜಾಟಗಳ ಮಾತುಗಳು ರಾಜಕೀಯಕ್ಕೆ ಬಂದು ರಾಜರಲ್ಲಿ ಎಚ್ಚರದವರು, ಕಾರ್ಯಪ್ರವೃತ್ತರು, ಕಾರ್ಯಸಂಕಲ್ಪರು, ತನ್ನ ರಾಜ್ಯವನ್ನು ನಾಯಿಪಾಲು ಮಾಡಿ ನಿದ್ದೆಹೋದವರು ಎಂಬೆಲ್ಲ ಅರ್ಥಗಳು ಈ ಪದಗಳಿಗೆ ಬಂದುಬಿಟ್ಟಿವೆ.

ಈಗಿರುವ ಸಮಸ್ಯೆ ಬೇರೆ. ಬ್ರಾಹ್ಮಣರಿಗೆ ಈ ಕಲಿಯುಗದ ಸಿದ್ಧಾಂತವನ್ನು ಸೃಷ್ಟಿಮಾಡುವ ಒತ್ತಡ ಬಂದದ್ದು ಯಾವ ಕಾರಣಕ್ಕೆ? ಕಲಿಯುಗವನ್ನು ವಿನಷ್ಟಗೊಂಡ ಸಮಾಜದ ಸಮಾನಾರ್ಥಕವಾಗಿ ಈ ಬ್ರಾಹ್ಮಣರು ಬಳಸಲು ಶುರು ಮಾಡಿದ್ದೇಕೆ? ಮನುವಿನ ಕಾಲದಲ್ಲಿ ಆಳಿದ ರಾಜ ಯಾರು? ಅವನನ್ನು ನಿದ್ರಾವಶನಾದ ರಾಜನೆಂದು ಕರೆದದ್ದೇಕೆ? ಈ ಕಲಿಯುಗದ ಸಿದ್ಧಾಂತ ಇಂಥ ಕಗ್ಗಂಟುಗಳನ್ನು ನಮ್ಮೆದುರು ಇಡುತ್ತದೆ.

ಇದಲ್ಲದೆ ಇನ್ನಷ್ಟು ಒಗಟುಗಳೂ ಇವೆ ಎನ್ನಿ. ಉದಾಹರಣೆಗೆ ಕಲಿಯುಗ ನಿಖರವಾಗಿ ಪ್ರಾರಂಭಗೊಂಡಿದ್ದು ಯಾವಾಗ?

ಕಲಿಯುಗದ ಆರಂಭಕಾಲದ ಬಗೆಗೆ ಅನೇಕ ಸಿದ್ಧಾಂತಗಳಿವೆ. ಪುರಾಣಗಳು ಎರಡು ಕಾಲಗಳನ್ನು ಕೊಡುತ್ತದೆ. ಕೆಲವರ ಪ್ರಕಾರ ಕಲಿಯುಗ ಪ್ರಾರಂಭವಾದದ್ದು ಕ್ರಿ.ಪೂ. ೧೪ನೆಯ ಶತಮಾನದ ಆದಿಯಲ್ಲಿ, ಇತರರು ಹೇಳುವಂತೆ ಅದು ಕ್ರಿ.ಪೂ. ೩೧೦೨ನೇ ಫೆಬ್ರವರಿ ೧೮ರಂದು ಆರಂಭವಾಯಿತು. ಇದು ಪಾಂಡವ ಕೌರವರ ಯುದ್ಧ ಈ ಕಾಲದಲ್ಲೇ ನಡೆದದ್ದು ಎಂದು ವಾದಿಸುವವರ ಪ್ರಕಾರ. ಆದರೆ ಪ್ರೊ. ಅಯ್ಯಂಗಾರರು ಹೇಳುವಂತೆ ಕಲಿಯುಗದ ಕಲ್ಪನೆ ಕ್ರಿ.ಪೂ. ಏಳನೆಯ ಶತಮಾನಕ್ಕಿಂತ ಹಿಂದೆ ಇದ್ದಿರುವುದು ಸಾಧ್ಯವಿಲ್ಲ. ಬಾದಾಮಿಯನ್ನಾಳಿದ ಇಮ್ಮಡಿ ಪುಲಿಕೇಶಿಯ ಶಾಸನದಲ್ಲೇ ಕಲಿಯುಗವು ಮೊದಲ ಬಾರಿಗೆ ನಮೂದಾಗಿರುವುದು. ಈತ ರಾಜ್ಯಭಾರ ಮಾಡಿದ್ದು ಕ್ರಿ.ಶ. ೬೧೦ರಿಂದ ೬೪೨. ಮೇಲೆ ಹೇಳಿದ ಈತನ ಶಾಸನದಲ್ಲಿ ಎರಡು ತೇದಿಗಳು ಇವೆ. ಒಂದು ಶಕೆ ತೇದಿ ೫೫೬ ಇನ್ನೊಂದು ಕಲಿ ತೇದಿ ೩೭೩೫. ಈ ಗಣನೆಯ ಪ್ರಕಾರ ಕಲಿಯುಗ ಶುರುವಾದದ್ದು ಕ್ರಿ.ಪೂ. ೩೧೦೨ರಲ್ಲಿ. ಇದು ತಪ್ಪು. ಕ್ರಿ.ಪೂ. ೩೧೦೨ ಮಹಾಭಾರತ ಯುದ್ಧದ ಕಾಲವೂ ಅಲ್ಲ. ಕಲಿಯುಗದ ಪ್ರಾರಂಭದ ವರ್ಷವೂ ಅಲ್ಲ. ಈ ವಿಷಯವನ್ನು ಶ್ರೀ ಕಾಣೆಯವರು ನಿರ್ವಿವಾದವಾಗಿ ನಿಶ್ಚಯಿಸಿದ್ದಾರೆ. ಹೆಚ್ಚು ವಿಶ್ವಸನೀಯ ನಿರ್ಣಯವೆನ್ನಬಹುದಾದ ಈ ತೀರ್ಮಾನದ ಪ್ರಕಾರ ಮಹಾಭಾರತ ಯುದ್ಧದ ಕಾಲ ಕ್ರಿ.ಪೂ. ೧೨೮೩ ಆಗಬಹುದೇ ವಿನಾ ಕ್ರಿ.ಪೂ. ೩೧೦೨ ಆಗುವುದು ಸಾಧ್ಯವಿಲ್ಲ. ಶ್ರೀ ಕಾಣೆಯವರು ತೋರಿಸಿಕೊಟ್ಟಿರುವುದು ಹಾಗೆ ಕ್ರಿ.ಪೂ. ೩೧೦೨ನೆಯ ಇಸವಿಯ ಕಲ್ಪದ ಪ್ರಾರಂಭವಾಗಬಹುದೇ ವಿನಾ ಕಲಿಯುಗದ ಪ್ರಾರಂಭವಲ್ಲ. ಕಲ್ಪಾದಿ ಎಂಬ ಮಾತನ್ನು ಕಲ್ಯಾದಿ ಎಂದು ತಪ್ಪಾಗಿ ಓದಿಕೊಂಡಿದ್ದರ ಫಲವಾಗಿಯೇ ಕ್ರಿ.ಪೂ. ೩೧೦೨ನೆಯ ಇಸವಿಯನ್ನು ಕಲಿಯುಗದ ಪ್ರಾರಂಭವೆಂದು ಭಾವಿಸುವ ಪರಂಪರೆಯಿಂದ ಸೃಷ್ಟಿಯಾದುದು ಎಂಬುದನ್ನು ಕಾಣೆಯವರೇ ತೋರಿಸಿಕೊಟ್ಟಿದ್ದಾರೆ. ಹೀಗಾಗಿ ಕಲಿಯುಗದ ಪ್ರಾರಂಭ ಯಾವತ್ತಿನಿಂದ ಆಯಿತು ಎನ್ನುವುದಕ್ಕೆ ಬ್ರಾಹ್ಮಣರು ಕೊಡಬಹುದಾದ ಕರಾರುವಾಕ್ಕು ಅವಧಿ ಯಾವುದೂ ಇಲ್ಲ. ಈ ಕಾಲದ ಕಗ್ಗಂಟು ಶುರುವಾದದ್ದಕ್ಕೆ ಒಂದು ನಿರ್ದಿಷ್ಟ ಅವಧಿ ಇದ್ದಿರಬೇಕಲ್ಲ?

ಇದಲ್ಲದೆ ಇನ್ನೂ ಸಾಕಷ್ಟು ಕಗ್ಗಂಟುಗಳು ಇರುತ್ತವೆ.

ಕಲಿಯುಗದ ಬಗ್ಗೆ ಎರಡು ಸಿದ್ದಾಂತಗಳಿರುತ್ತವೆ. ಕಲಿಯುಗದಲ್ಲಿ ಆದಿ ಮತ್ತು ಅಂತ್ಯವರ್ಣಗಳು ಮಾತ್ರ ಇರುವುದೆಂದೂ, ಬ್ರಾಹ್ಮಣ ಮತ್ತು ಶೂದ್ರ ವರ್ಣಗಳ ವಿನಾ ಕ್ಷತ್ರಿಯ – ವೈಶ್ಯರೆಂಬ ಮಧ್ಯದ ವರ್ಣಗಳು ಅಸ್ತಿತ್ವದಲ್ಲಿರುವುದಿಲ್ಲವೆಂದೂ ಬ್ರಾಹ್ಮಣರು ಹೇಳುತ್ತಾರೆ. ಈ ಸಿದ್ಧಾಂತಕ್ಕೆ ಆಧಾರವೇನು? ಈ ಸಿದ್ಧಾಂತದ ಅರ್ಥವೇನು? ಉಳಿದ ವರ್ಣಗಳು ಬ್ರಾಹ್ಮಣ ವರ್ಗಕ್ಕೆ ಸೇರಿಕೊಂಡುಬಿಟ್ಟವು ಎಂತಲೇ? ಅವು ಅಸ್ತಿತ್ವವನ್ನು ಕಳೆದುಕೊಂಡವು ಎಂದರೆ ಏನು ತಾನೇ ಅರ್ಥ?

ಭಾರತದ ಇತಿಹಾಸದಲ್ಲಿ ಈ ಕಲ್ಪನೆಗೆ ಸಂವಾದಿಯಾಗಬಹುದಾದ ಕಾಲವು ತಾನೆ ಯಾವುದು?

ಬ್ರಾಹ್ಮಣವಾದಕ್ಕೆ ಎರಡು ವರ್ಣಗಳ ನಷ್ಟವೇ ಕಲಿಯುಗದ ಆರಂಭದ ಸಂಕೇತ ವಾಯಿತು?

ಕಲಿಯುಗದ ಬಗ್ಗೆ ಎರಡನೆಯ ನಂಬಿಕೆಯು ಕಲಿವರ್ಜ್ಯ ಸಿದ್ಧಾಂತಕ್ಕೆ ಸಂವಾದಿಯಾಗಿ ಬಂದದ್ದು. ಕಲಿವರ್ಜ್ಯವೆಂದರೆ ಕಲಿಯುಗದಲ್ಲಿ ಆಚರಿಸಬೇಕಿಲ್ಲದೆ ಸಂಪ್ರದಾಯ ಮತ್ತು

ಆಚರಣೆಗಳು. ಈ ಕಲಿವರ್ಜ್ಯದ ವಿವರಗಳು ಪುರಾಣಗಳಲ್ಲಿ ಚದುರಿಹೋಗಿವೆ. ಆದರೆ ಆದಿತ್ಯ ಪುರಾಣವು ಈ ವಿವರಗಳನ್ನು ಸರಳಗೊಳಿಸಿ ಒಂದೆಡೆ ತಂದಿದೆ. ಈ ಕೆಳಕಂಡ ಆಚರಣೆಗಳು ಕಲಿವರ್ಜ್ಯಗಳು.[೧]

೧. ಪುತ್ರಾರ್ಥವಾಗಿ ವಿಧವೆಯಾದವಳ ಗಂಡನ ಸೋದರರನನ್ನು ನಿಯೋಜಿಸುವುದು.[೨]

೨. ವಿವಾಹಿತ ಕುಮಾರಿಯ ಮತ್ತು ನಿಷೇಕವಾದ ಇನ್ನೊಬ್ಬಳ ಮೊದಲನೆಯ ಗಂಡನ ಮರಣಾ ನಂತರ, ಇನ್ನೊಬ್ಬ ಗಂಡನೊಡನೆ ಮರು ವಿವಾಹ.[೩]

೩. [೪]ಬೇರೆ ಬೇರೆ ವರ್ಣಗಳಿಗೆ ಸೇರಿದ ಹೆಣ್ಣುಮಕ್ಕಳನ್ನು ಮೊದಲ ಮೂರು ವರ್ಣಗಳ ಪುರುಷರಿಗೆ ವಿವಾಹ ಮಾಡಿಕೊಡುವುದು.[೫]

೪. [೬]ಪ್ರತ್ಯಕ್ಷ ಯುದ್ಧದಲ್ಲಾದರೂ ದುಷ್ಕರ್ಮಿಯಾದ ಬ್ರಾಹ್ಮಣನನ್ನು ಕೊಲ್ಲುವುದು[೭]

---

೧. ಕಲಿವರ್ಜ್ಯ : ಪಿ.ವಿ. ಕಾಣೆ, ಪು. ೮–೧೬

೨. ಇದು ನಿಯೋಗದ ಆಚರಣೆಯನ್ನು ಕುರಿತದ್ದು ಗೌತಮನಿಗೆ ಆ ಆಚರಣೆ ಸಮ್ಮತ (೧೮–೯–೧೪.) ನಾರದ ಸ್ತ್ರೀಪುಂಸ ಶ್ಲೋಕ ೫೮) ಯಾಜ್ಞವಲ್ಕ್ಯ (I, ೬೮–೬೯), ಮನು (೯.೬೪–೬೮) ಮತ್ತು ಬೃಹಸ್ಪತಿ – ಇವರು ಈ ಆಚರಣೆಯನ್ನು ತಿರಸ್ಕರಿರುವರು.

೩. ಇದು ವಿಧವಾ ಪುನರ್ವಿವಾಹಕ್ಕೆ ಸಂಬಂಧಿಸಿದ್ದು. ನಾರದನು (೯೮–೧೦೦) ಬ್ರಾಹ್ಮಣ ವಿಧವೆಯರಿಗೆ ಅಪದ್ಧರ್ಮವಾಗಿ ಪುನರ್ವಿವಾಹವನ್ನು ಅನುಮೋದಿಸಿದ್ದನು. ಪರಾಶರನೂ ಇದಕ್ಕೆ ಸಮ್ಮತಿಸುತ್ತಾನೆ. ವಾಸಿಷ್ಠ (೧೭.೭೪) ಮತ್ತು ಬೌಧಾಯನ ಧರ್ಮಸೂತ್ರಗಳು ಕನ್ಯೆಯಾದ ಕುಮಾರಿಯ ಪುನರ್ವಿವಾಹವನ್ನು ಮಾತ್ರ ಸಮ್ಮತಿಸುತ್ತವೆ. 'ಅಕ್ಷತಯೋನಿಯಾದ ಬಾಲಿಕೆ' ಎಂಬ ಮಾತಿಗೆ ಎರಡು ರೀತಿಯ ಅರ್ಥಗಳನ್ನು ಹೇಳುತ್ತಾರೆ.

೪. ಕಲಿವರ್ಜ್ಯ, ಪಿ.ವಿ. ಕಾಣೆ, ಪು. ೮–೧೬.

೫. ಅತಿ ಪ್ರಾಚೀನ ಸ್ಮೃತಿಗಳು ಅನುಲೋಮ ವಿವಾಹವನ್ನು ಅನುಮೋದಿಸುತ್ತವೆ. ಉದಾ: ಬೌಧಾಯನ ಧರ್ಮಸೂತ್ರ I. ೨೪–೨೭ ಮನು III ೧೪–೧೯ ಯಾಜ್ಞವಲ್ಕ್ಯ I, ೫೬–೫೭.

೬. ಕಲಿವರ್ಜ್ಯ, ಪಿ.ವಿ. ಕಾಣೆ, ಪು. ೮–೧೬

೭. ಈ ವಿಷಯವು ಧರ್ಮಸೂತ್ರಕಾರರಿಗೆ ಸಾಕಷ್ಟು ಸಮಸ್ಯೆಗಳನ್ನು ತಂದುಹಾಕಿದೆ. ಮನು (೮–೨೫೦–೨೫೧) ವಿಷ್ಣು V, ೧೮೦–೮೦ ವಾಸಿಷ್ಠ (III, ೧೫–೧೮) ಇವರು ಆತತಾಯಿ (ಘಾತುಕಶತ್ರು) ಹತ್ಯೆಯನ್ನು ಆತನು ಗೋ ಅಥವಾ ಬ್ರಾಹ್ಮಣನಾಗಿರದ ಪಕ್ಷದಲ್ಲಿ ಪಾಪವಿಲ್ಲ – ಎಂದರೆ ಸುಮಂತುವು ಆತತಾಯಿಯಾದ ಬ್ರಾಹ್ಮಣನನ್ನು ಕೊಲ್ಲುವುದನ್ನು ನಿಷೇಧಿಸುತ್ತಾನೆ. ಇದರ ವಿವರವಾದ ಚರ್ಚೆಗೆ ಯಾಜ್ಞವಲ್ಕ್ಯ ಸ್ಮೃತಿಗೆ II, ೨೧ ಬರೆದಿರುವ ಮಿತಾಕ್ಷರ ಭಾಷ್ಯವನ್ನು ನೋಡಿ.

೫. ಸಮುದ್ರಯಾನ ಮಾಡುವ ಹವ್ಯಾಸ ಹೊಂದಿರುವ ದ್ವಿಜನೊಂದಿಗೆ (ಪ್ರಾಯಶ್ಚಿತ್ತದ ನಂತರವು ಸಹಪಂಕ್ತಿ ಭೋಜನ)[೧]

೬. ಸತ್ರಾರಂಭ

೭. ಕಮಂಡಲು ಪರಿಗ್ರಹ[೨]

೮. ಮಹಾಯಾತ್ರೆಯನ್ನು ಕೈಗೊಳ್ಳುವುದು[೩]

೯. ಗೋಮೇಧ ಎನ್ನುವ ಯಜ್ಞದಲ್ಲಿ ಗೋವನ್ನು ಕೊಲ್ಲವುದು[೪]

೧೦. ಶ್ರೌತಮುನಿ ಯಜ್ಞದಲ್ಲಿ ಸೋಮಪಾನ (ಮಾಡದಿರುವುದು)[೫]

೧೧–೧೨. ಅಗ್ನಿಹೋತ್ರ ಹೋಮದ ನಂತರ ಯಜ್ಞಶೇಷವನ್ನು ತೆಗೆಯುವಲ್ಲಿ ಸ್ರುಕ್ಕನ್ನು ನೆಕ್ಕುವುದು ಮತ್ತು ಹಾಗೆ ನೆಕ್ಕಿದ ಸ್ರುಕ್ಕನ್ನು ಮತ್ತೆ ಯಜ್ಞದಲ್ಲಿ ಬಳಸುವುದು.[೬]

೧೩. ಶಾಸ್ತ್ರೋಕ್ತವಾದಂತೆ ವಾನಪ್ರಸ್ಥವನ್ನು ಕೈಗೊಳ್ಳುವುದು.[೭]

---

೧. ಬೌಧಾಯನ ಧರ್ಮಸೂತ್ರವು (೧.೧.೨೦) ಸಮುದ್ರಯಾನವನ್ನು ಉತ್ತರಭಾರತದ ಬ್ರಾಹ್ಮಣರಿಗೆ ವಿಶಿಷ್ಟವೆಂದು ಹೇಳಿ ಈ ಪ್ರವೃತ್ತಿಯನ್ನು ಪತನೀಯಗಳ (II, ೧.೪೧) ಸಾಲಿನಲ್ಲಿ ಸೇರಿಸಿ ಅದನ್ನು ಟೀಕಿಸುತ್ತದೆ. ಔಷಾನಸನು ಸಮುದ್ರಯಾನವನ್ನು ಪತಿತವೆಂದೇ ಹೇಳುತ್ತಾನೆ. (ಪು. ೫೨೫, ಜೀವನನಾದ)

೨. ಸ್ನಾತಕರು (ಅಂದರೆ ಗುರುಕುಲವಾಸ ಮುಗಿಸಿ ಮದುವೆಯಾದವರು ಅಥವಾ ಆಗಲಿರುವವರು) ನೀರು ತುಂಬಿದ ಮಣ್ಣಿನ ಅಥವಾ ಮರದ ಪಾತ್ರೆಯನ್ನು ಜತೆಯಲ್ಲಿ ಒಯ್ಯಬೇಕು ಎಂದು ಬೌಧಾಯನ ಧರ್ಮಸೂತ್ರವು (I , ೩, ೪) ವಿಧಿಸುತ್ತದೆ. ವಾಸಿಷ್ಠ ೧೨.೧೪ ಮತ್ತು ಮನು ೪.೩೬ ಮತ್ತು ಯಾಜ್ಞವಲ್ಕ್ಯ ೧,೧೩೨. ಇವರೂ ಈ ವಿಧಿಯನ್ನು ಅನುಮೋದಿಸುತ್ತಾರೆ. ಮದನಪಾರಿಜಾತವು (ಪು. ೧೫–೧೬) ಈ ಕೆಲವು ಸೂಕ್ತಗಳನ್ನು ಉದ್ಧರಿಸಿ ಅದು ನಿರಂತರ ಛಾತ್ರವೃತ್ತಿಗೆ ಸಂಬಂಧಿಸಿದ್ದೆಂದೂ ಹೇಳುತ್ತಾನೆ. ಆದರೆ ಇದು ತಪ್ಪುಗ್ರಹಿಕೆ. ಏಕೆಂದರೆ ಮೇಲೆ ಹೇಳಿದ ನಾರದೀಯ ಪುರಾಣದಲ್ಲಿ (ನೋಡಿ ಉದ್ಧರಣೆ ೫) ಇವೆರಡನ್ನೂ ಪ್ರತ್ಯೇಕವಾಗಿ ಹೇಳಲಾಗಿದೆ.

೩. ಈಶಾನ್ಯಾಭಿಮುಖವಾಗಿ ವಾನಪ್ರಸ್ಥರು ಹೋಗುವ ಪದ್ಧತಿಯನ್ನು ಸೂಚಿಸುವ ವಿಧಿಯನ್ನು ಕುರಿತದ್ದು. (ಮನು VI, ೩೧ ಮತ್ತು ಯಾಜ್ಞ III, ೫೫) ವೃದ್ಧರಾದವರು ಅಮರಣಾಂತ ಯಾತ್ರೆಯನ್ನು ಕೈಗೊಂಡು ಮರಣವನ್ನಪ್ಪುವುದನ್ನೂ ಪ್ರಯಾಗದಂಥ ಪುಣ್ಯಕ್ಷೇತ್ರಗಳಲ್ಲಿ ಜಲಸಮಾಧಿ ಹೊಂದುವುದನ್ನೂ ಕಮರಿಗೆ ನೆಗೆದು ಅಥವಾ ಅಗ್ನಿಪ್ರವೇಶ ಮಾಡಿ ವೃದ್ಧರು ಸಾವನ್ನಪ್ಪುವ ಪದ್ಧತಿಗಳಿಗೂ ಇದು ಅನ್ವಯವಾಗುತ್ತದೆ. ನೋಡಿ: ಅಪರಾರ್ಕ ಪು. ೫೩೬, ಇದರಲ್ಲಿ ಈ ಪದ್ಧತಿಯನ್ನು ಅನುಮೋದಿಸುವ ಸ್ಮೃತಿಯ ಭಾಗವನ್ನು ಉದ್ಧರಿಸಲಾಗಿದೆ. ಮೃಚ್ಛಕಟಿಕದ ರಚಕನಾದ ವಿಖ್ಯಾತ ಶೂದ್ರಕನು ಅಗ್ನಿಪ್ರವೇಶ ಮಾಡಿದನೆಂದು ಹೇಳುವುದನ್ನು ಗಮನಿಸಿ. ಹಾಗೆಯೇ ರಘುವಂಶ ೮–೯೪; ಅತ್ರಿ, ಶ್ಲೋಕ ೨೧೮–೨೧೯ನ್ನು ಗಮನಿಸಿ. ಈ ಶ್ಲೋಕಗಳನ್ನು ಮೇಧಾತಿಥಿ ಮತ್ತು ಮನುಗಳೂ V, ೮೮. ಈ ವಿಶೇಷವಾಗಿ ರಾಜರುಗಳು ತಮ್ಮನ್ನು ಗಂಗೆಗೆ ಸಮರ್ಪಿಸಿಕೊಳ್ಳುವುದರ ಬಗ್ಗೆ ಉದ್ಧರಿಸುತ್ತಾರೆ.

೪. ಸಾಂಖ್ಯಾಯನ ಶ್ರೌತ ಸೂತ್ರ ೧೪, ೧೫, ೧ ಕಾತ್ಯಾಯನ ಸೂತ್ರ XXII ೧೧.೩.೪ ಮತ್ತು ಮನು XI, ೭೪

೫. ಇದು ಸುತ್ರಾಮನ (ಇಂದ್ರ) ಪ್ರೀತ್ಯರ್ಥ ನಡೆಯುವ ಯಜ್ಞ, ಇದರಲ್ಲಿ ಮೂರು ಬಟ್ಟಲು ಸೋಮವನ್ನು ಅಶ್ವಿನಿ, ಸರಸ್ವತಿ ಮತ್ತು ಇಂದ್ರನಿಗೆ ಅರ್ಪಿಸುತ್ತಾರೆ. ಈ ಅರ್ಪಿತ ಶೇಷವನ್ನು ಭುಜಿಸಲು ಒಬ್ಬ ಬ್ರಾಹ್ಮಣನನ್ನು ದಕ್ಷಿಣೆ ಕೊಟ್ಟು ಆಹ್ವಾನಿಸುತ್ತಾರೆ ನೋಡಿ. ತೈತ್ತಿರೀಯ ಬ್ರಾಹ್ಮಣ ೧.೮.೬.೨. ಸಂಖ್ಯಾಯನ ಶ್ರೌತ ೧೫. ೧೫–೧.೧೪ ಹಾಗೂ ಪೂರ್ವಮೀಮಾಂಸೆಯ ಮೇಲಿನ ಶಬರ ಭಾಷ್ಯ III, ೫. ೧೪–೧೫.

೬. ತೈತ್ತಿರೀಯ ಬ್ರಾಹ್ಮಣ II, ೧.೪ ಸತ್ಯಸದಾಶ್ರೌತ.

೭. ಆಪಸ್ತಂಭ ಧರ್ಮಸೂತ್ರ II, ೯.೨೧.೧೮. II.೯–೧೩–೨ ಮನು VI. ೧.೩.೨, ವಾಸಿಷ್ಠ IX ೧–೧೧ ಈ ಆಶ್ರಮದ ವಿಧಿಗಳನ್ನು ಇವು ಪ್ರಸ್ತಾಪಿಸುತ್ತವೆ.

೧೪. ವ್ಯಕ್ತಿಯ ಗುಣ ಹಾಗೂ ವೇದಜ್ಞಾನಕ್ಕನುಗುಣವಾಗಿ ಸೂತಕ ಮತ್ತು ಪುರುಡಿನ ಅವಧಿಯಲ್ಲಿ ಕಡಿತ[೧]

೧೫. ಮರಣವನ್ನು ಪ್ರಾಯಶ್ಚಿತ್ತವಾಗಿ ಬ್ರಾಹ್ಮಣನಿಗೆ ವಿಧಿಸುವುದು[೨]

೧೬. (ಸುವರ್ಣ ಮುಂತಾದವುಗಳ) ಚೌರ್ಯದಂಥ ಪಾತಕಗಳು ಮತ್ತು (ಮಹಾಪಾತಕಿಗಳ) ಸ್ಪರ್ಶಾದಿ ಪಾತಕಗಳಿಗೆ ಗುಪ್ತ ಪ್ರಾಯಶ್ಚಿತ್ತ ವಿಧಿ[೩]

೧೭. ವರನಿಗೆ, ಅತಿಥಿಗೆ ಹಾಗೂ ಪಿತೃಗಳಿಗೆ ಮಾಂಸವನ್ನು ಮಂತ್ರೋಚ್ಚಾರಣೆಯೊಡನೆ ಅರ್ಪಿಸುವುದು.[೪]

೧೮. [೫]ಔರಸ ಮತ್ತು ದತ್ತುಪುತ್ರರಲ್ಲದ ಇತರರನ್ನು ಪುತ್ರರೆಂದು ಒಪ್ಪಿಕೊಳ್ಳುವುದು[೬]

೧೯. ಉತ್ತಮ ವರ್ಣದ ಸ್ತ್ರೀಯೊಂದಿಗೆ ಸಂಭೋಗಿಸಿದವನ ಜತೆ ( ಅವನು ಅದಕ್ಕಾಗಿ ಪ್ರಾಯಶ್ಚಿತ್ತ ಮಾಡಿಕೊಂಡಿದ್ದರೂ) ಸಾಮಾನ್ಯ ಸಂಭೋಗ.[೭]

೨೦. ನಿಷಿದ್ಧನ ಜತೆ ಸಂಭೋಗಿಸಿದ ಗುರುಸ್ಥಾನೀಯನ ಪತ್ನಿಯ ತ್ಯಾಜ್ಯ.[೮]

---

೧. ವೇದಜ್ಞನೂ, ಅಗ್ನಿಹೋತ್ರಿಯೂ ಆದ ಬ್ರಾಹ್ಮಣನು ಅಶೌಚ (ಸೂತಕ)ವನ್ನು ಒಂದು ದಿನ ಆಚರಿಸಬೇಕೆಂದೂ ಕೇವಲ ವೇದಜ್ಞನಾದವನು ಎರಡು ದಿನ ಆಚರಿಸಬೇಕೆಂದೂ ಮೇಲೆ ಉದ್ಧರಿಸಿದ ಪರಾಶರ ಸೂತ್ರದಲ್ಲಿ ವಿಧಿಸಿದೆ. ಹರದತ್ತ ಗೌತಮ ಸೂತ್ರಕ್ಕೆ ಬರೆದ ಭಾಷ್ಯವನ್ನು ಬೃಹಸ್ಪತಿ ಉದ್ಧರಿಸುವುದನ್ನು ಗಮನಿಸಿ ೧೪.೧ ಆದರೆ ಕಲಿಯುಗದಲ್ಲಿ ಹತ್ತು ದಿನ ಸೂತಕದ ಸಾರ್ವತ್ರಿಕ ವಿಧಿ ಜಾರಿಗೆ ಬಂದಿತು. ವಿಶ್ವರೂಪನು ಯಾಜ್ಞವಲ್ಕ್ಯದ III. ೩೦ ಮೇಲೆ ಭಾಷ್ಯ ಬರೆಯುತ್ತಾ ಲೋಭ ವಿವರ್ಜ್ಯತವಾದ ಸದ್ಗುಣದ ಸ್ತುತಿಯಷ್ಟೇ ಈ ವಿಧಿಯ ಉದ್ದೇಶವೆಂದು ಹೇಳಿ ಈ ವಿಧಿಯನ್ನು ನಿರಾಕರಿಸುತ್ತಾನೆ. ಈ ಶ್ಲೋಕಗಳಿಗೆ ವಿಶ್ವರೂಪನು ಅಂಥ ಮಹತ್ವವೇನೂ ಕೊಟ್ಟಿರಲಿಲ್ಲ ಎಂದು ಯೋಚಿಸುವುದು ಸಕಾರಣವಾಗೇ ತೋರುತ್ತದೆ. ಅಷ್ಟೇ ಅಲ್ಲ. ಈ ಕಲಿವರ್ಜ್ಯಗಳು ವಿಶ್ವರೂಪನಿಗೆ ಪರಿಚಿತವಿದ್ದಿದ್ದರೆ ಪರಾಶರ ವಿಧಿಯನ್ನು ನಿರಾಕರಿಸಲು, ಅವನ್ನು ಬಳಸಿಕೊಳ್ಳದೇ ಹೋಗುತ್ತಿರಲಿಲ್ಲ.

೨. ಉದ್ದೇಶಪೂರ್ವಕ ಬ್ರಹ್ಮಹತ್ಯೆಗೂ ಸುರಪಾನಕ್ಕೂ ಮರಣವೇ ಪ್ರಾಯಶ್ಚಿತ್ತ ಎನ್ನುತ್ತಾನೆ ಮನು (II ೮೯ ಮತ್ತು ೧೪೬) ಗೌತಮ ಮತವೂ ಅದೇ ೨೧.೭

೩. ನಾಲ್ಕು ಮಹಾಪಾತಕಗಳನ್ನು ಮಾಡಿವನು ಜೊತೆ ಸಂಸರ್ಗವು ಪಂಚಮ ಮಹಾಪಾತಕವೆಂದು ಮನು ಹೇಳುತ್ತಾನೆ. ಗೌತಮ ೨೪, ವಾಸಿಷ್ಠ ೨೫ರಲ್ಲಿ ಬ್ರಹ್ಮಹತ್ಯೆಯಂಥ ಮಹಾಪಾತಕಗಳಿಗೆ ಕೂಡ ರಹಸ್ಯ ಪ್ರಾಯಶ್ಚಿತ್ತಗಳನ್ನು ಹೇಳಲಾಗಿದೆ. ಆದರೆ ಈ ವಿಧಿಯ ಪ್ರಕಾರ ಬ್ರಹ್ಮಹತ್ಯೆ ಸುರಾಪಾನಾದಿಗಳಿಗೆ ರಹಸ್ಯ ಪ್ರಾಯಶ್ಚಿತ್ತಗಳನ್ನು ನಿಷೇಧಿಸಲಾಗಿದೆ. ರಹಸ್ಯ ಪ್ರಾಯಶ್ಚಿತ್ತಗಳಿಗೆ ಅಧಿಕಾರಿಗಳಾರು ಎಂಬ ವಿವರಕ್ಕೆ ಅಪರಾರ್ಕ ಪುಟ. ೧೨೧೧ ನೋಡಿ.

೪. ಮದುಮಗನೂ ಸೇರಿದಂತೆ ಗೌರವಾನ್ವಿತ ಅತಿಥಿಗಳಿಗೆ ಮಧುಪರ್ಕವನ್ನು ಸಮರ್ಪಿಸಬಹುದಿತ್ತು. ಗೌತಮ V ೨೫-೩೫. ಯಾಜ್ಞ, ೧.೧೦೯. ವಿವಿಧ ಮೃಗಗಳ ಮಾಂಸಗಳನ್ನು ಅರ್ಪಿಸುವುದರಿಂದ ಪಿತೃಗಳು ಸಂಪ್ರೀತರಾಗುತ್ತಾರೆ ಎಂದು ನಂಬಿದ್ದರು. ನೋಡಿ : ಯಾಜ್ಞ ೧. ೨೫೮-೨೬೦ ಮನು III ೧೨೩. ಆಶ್ವಲಾಯನ ಗೃಹ್ಯಸೂತ್ರದ ಪ್ರಕಾರ ೧.೨೪-೨೬ ಮಧುಪರ್ಕವನ್ನು ಮಾಂಸದೊಂದಿಗೆ ಮಾತ್ರ ಸಮರ್ಪಿಸಬೇಕು. (ವಾಸಿಷ್ಠ IV ೫-೬)

೫. ಕಾಣೆಯವರ ಕಲಿವರ್ಜ್ಯ ಪುಟ. ೮-೧೬.

೬. ಮನು ೯. ೧೬೫-೮೦ ಯಾಜ್ಞ II ೧೨೮-೧೩೨ ಮನ್ವಾದಿಗಳ ಹನ್ನೆರಡು ಬಗೆಯ ಪುತ್ರರನ್ನು ಹೇಳುತ್ತಾರೆ.

೭. ನೀಚವರ್ಣದ ಪುರುಷನು ಉಚ್ಚವರ್ಣದ ಸ್ತ್ರೀಯೊಂದಿಗೆ ಸಮಾಗಮ ಮಾಡುವುದನ್ನು ಗೌತಮನು (IV ೨೦ ಮತ್ತು ೨೨೦೨೩) ತೀವ್ರವಾಗಿ ನಿಷೇಧಿಸುತ್ತಾ ಅಂಥವರಲ್ಲಿ ಹುಟ್ಟಿದವರನ್ನು ಧರ್ಮಹೀನರು ಎಂದು ಕರೆಯುತ್ತಾನೆ.

೮. ಛಾತ್ರನೊಂದಿಗೆ ಸಂಭೋಗಿಸಿದವಳು, ಪತಿಯ ಗುರುವಿನೊಂದಿಗೆ ಸಂಭೋಗಿಸಿದವಳು, ಪತಿಯನ್ನು ಕೊಂದವಳು ಹಾಗೂ ನೀಚ ವರ್ಣದವನೊಂದಿಗೆ ಸಮಾಗಮ ಹೊಂದಿದವಳು ಎಂದು ನಾಲ್ಕು ಬಗೆಯ ಸ್ತ್ರೀಯರನ್ನು ವಾಸಿಷ್ಠ ೨೧-೧೦ ಈ ಪ್ರಸಂಗದಲ್ಲಿ ಪಟ್ಟಿ ಮಾಡುತ್ತದೆ. ಯಾಜ್ಞವಲ್ಕ್ಯನು (III ೯೬-೨೯೭) ಇದನ್ನು ವಿರೋಧಿಸುತ್ತಾ ಅಂಥ ಸ್ತ್ರೀಯನ್ನು ಗೃಹದ ಸಮೀಪದಲ್ಲೇ ಇಟ್ಟು ಅರೆಹೊಟ್ಟೆ ಹಾಕಬೇಕೆನ್ನುತ್ತಾನೆ. ನೋಡಿ ಅತ್ರಿ V ೧೧.-೫

೨೧. [೧]ಅನ್ಯಾರ್ಥವಾಗಿ ಆತ್ಮಹತ್ಯೆ[೨]

೨೨. ಒಬ್ಬನು ಬಳಸಿದ ಅನ್ನಶೇಷವನ್ನು ತ್ಯಜಿಸುವುದು[೨]

೨೩. ಧನಾರ್ಥವಾಗಿ ದೇವತಾರ್ಚನೆಯನ್ನು ಒಪ್ಪುವುದು[೩]

೨೪. ಅಸ್ಥಿಸಂಚಯನ ಮಾಡಿ ಅಶುಚಿಯಾದವರನ್ನು ಮುಟ್ಟುವುದು[೪]

೨೫. ಬ್ರಾಹ್ಮಣರಿಂದ ಯಜ್ಞಪಶುವಿನ ವಧೆ

೨೬. [೫]ಬ್ರಾಹ್ಮಣರು ಸೊಮ ಸಸ್ಯವನ್ನು ಮಾರುವುದು[೬]

೨೭. ಆರು ಹೊತ್ತು (ಅಂದರೆ ಮೂರು ದಿನ) ಹಸಿದಿದ್ದಾಗ ಶೂದ್ರನಿಂದ ಬೇಕಾದಕೂ ಬ್ರಾಹ್ಮಣನೂ ಅನ್ನವನ್ನು ಪಡೆಯುವುದು.[೭]

೨೮. ಒಬ್ಬ ಬ್ರಾಹ್ಮಣ ಗೃಹಸ್ಥನು ತನ್ನ ದಾಸರು, ದನಗಾಹಿಗಳು, ವಂಶ ಪಾರಂಪರ್ಯವಾಗಿ ಬಂದ ಮಿತ್ರನಿಂದ, ಬೆಳೆಯ ಒಂದು ಭಾಗ ಕೊಡಲು ಒಪ್ಪಿ, ಆತನ ಗುತ್ತಿಗೆದಾರನಿಂದ, ಅವರು ಶೂದ್ರರಾದರೂ ಅವರಿಂದ ಆಹಾರವನ್ನು ಸ್ವೀಕರಿಸುವುದು.

---

೧. ಕಲಿವರ್ಜ್ಯ ಪು. ೮–೧೨

೨. ಅಂಥವನು ಗೋಬ್ರಾಹ್ಮಣರ ಜೀವರಕ್ಷಣೆ ಮಾಡಬೇಕು ಎನ್ನುತ್ತದೆ. ಸ್ಮೃತಿ. ಮನು XI.೭೯ ಮತ್ತು ವಿಷ್ಣು ಪುರಾಣ III. ೪೫

೨. ವಾಸಿಷ್ಠ (೧೪.೨೦–೨೧) ಉಚ್ಚಿಷ್ಟವನ್ನಾಗಲೀ ಭುಕ್ತಶೇಷವನ್ನಾಗಲೀ ಬೇರೆಯವರಿಗೆ ಕೊಡಬಾರದು ಎನ್ನುತ್ತದೆ. ಆದರೆ ಕೆಲವು ಸ್ಮೃತಿಗಳು ಶೂದ್ರನಿಗೆ ಉಚ್ಚಿಷ್ಟವನ್ನು ಕೊಡಬಹುದು ಎನ್ನುತ್ತದೆ. ಆದರೆ ಇಲ್ಲಿ ಅದನ್ನು ನಿಷೇಧಿಸಿದೆ ನೋಡಿ : ಗೌತಮ X.೬೧ ಮತ್ತು ಮನು X.೧೨೫.

೩. ಹಣಕ್ಕಾಗಿ ದೇವತಾರ್ಚನೆಯನ್ನು ಮಾಡುವ ಬ್ರಾಹ್ಮಣನನ್ನು ಶ್ರಾದ್ಧಗಳಿಗೆ ಮತ್ತು ದೇವ ಕೃತ್ಯಗಳಿಗೆ ಆಹ್ವಾನಿಸಬಾರದು ಎಂದು ಮನು (III–೧೫೨) ವಿಧಿಸುತ್ತಾನೆ.

೪. ಶವದಹನದ ನಾಲ್ಕನೆಯ ದಿನ ಅಸ್ಥಿಸಂಚಯನವು ನಡೆಯುತ್ತಿತ್ತು. ನೋಡಿ: ವಿಷ್ಣು. ೧೯.೧೦.–೧೨: ವೈಖಾನಸ –ಸ್ಮಾತ್ರಸೂತ್ರ V.೭ : ಸಂವರ್ತ ಶ್ಲೋಕ ೩೮–೩೯.

೫. ಕಾಣೆಯವರ ಕಲಿವರ್ಜ್ಯ ಪು. ೧೩

೬. ಕಾತ್ಯಾಯನ ಶ್ರೌತ (VII ೬.೨–೪)ದ ಪ್ರಕಾರ ಸೋಮವನ್ನು ಕೌತ್ಸಗೋತ್ರದ ಬ್ರಾಹ್ಮಣನಿಂದ ಅಥವಾ ಶೂದ್ರನಿಂದ ಕೊಂಡುಕೊಳ್ಳಬೇಕು. ಆದರೆ ಮನು (X ೮೮) ಬ್ರಾಹ್ಮಣನು ಕೃಷಿಯನ್ನು, ವೈಶ್ಯವೃತ್ತಿಯನ್ನು ಅವಲಂಬಿಸುವುದನ್ನು ನಿಷೇಧಿಸುವುದರ ಜೊತೆಗೆ ಸೋಮರಸ ವ್ಯಾಪಾರವನ್ನೂ (III. ೧೫೮ ಮತ್ತು ೧೭೦) ನಿಷೇಧಿಸುತ್ತಾನೆ. ಸೋಮರಸವನ್ನು ಮಾರುವ ಬ್ರಾಹ್ಮಣನು ಶ್ರಾದ್ಧಕ್ಕೆ ಪಾತ್ರನಲ್ಲವೆನ್ನುತ್ತಾನೆ.

೭. ಮೂರುದಿನಗಳ ಕಾಲ ಹಸಿದ ಬ್ರಾಹ್ಮಣನು ಹೀನಕರ್ಮಿಯಿಂದಲೂ ಅನ್ನವನ್ನು ಪಡೆಯಬಹುದೆಂದೂ (ಒಂದು ದಿನದ ಮಟ್ಟಿಗೆ) ಮನು XI.೧೬ ಹೇಳುತ್ತಾನೆ. ಯಾಜ್ಞವಲ್ಕ್ಯನೂ ಇದನ್ನು ಅನುಮೋದಿಸುತ್ತಾನೆ. ಹೀನಕರ್ಮಗಳೆಂದರೆ ನೀಚಕರ್ಮಗಳೆಂದೂ ಯಾಜ್ಞವಲ್ಕ್ಯನು III೪೩ (ಅಂದರೆ ಭಿಕ್ಷೆ ಅಥವಾ ಚೌರ್ಯ ಅಥವಾ ತತ್ಸಮಾನ ಕರ್ಮಗಳು. ನಾರದ ಸೂತ್ರದಲ್ಲಿ ವರ್ಣಿಸಿರುವಂತೆ ಅಭ್ಯುಪೇತ್ಯ ಶುಶ್ರೂಷಾ. VV ೫–೭) ಹೇಳುತ್ತಾನೆ.

೮. ಶೂದ್ರನು ಆ ಬ್ರಾಹ್ಮಣನ ದಾಸನೋ, ನಾಪಿತನೋ, ಗೋಪಾಲಕನೋ, ಅವನ ಕ್ಷೇತ್ರದ ಕೃಷಿಕನೋ, ವಂಶಮಿತ್ರನೋ ಆಗಿದ್ದರೆ ಮನುಸ್ಮೃತಿಯಲ್ಲಿ ಅಂಥವನಿಂದ ಆ ಬ್ರಾಹ್ಮಣನು ಅನ್ನವನ್ನು ಪಕ್ವ ಮಾಡಿಸಿಕೊಂಡು ತಿನ್ನಬಹುದು ಎಂದಿದೆ (ಗೌತಮ ೧೭–೬, ಮನು IV ೨೫೩ ಯಾಜ್ಞವಲ್ಕ್ಯ I.೧೬೬. ಅಂಗೀರಸ ೧೨೦ ಪರಾಶರ XI)

೨೯. [೧]ಬಹುರೂಪದ ತೀರ್ಥಯಾತ್ರೆ
೩೦. ಸ್ಮೃತಿ ವಿಧಿಸಿರುವ ನಿಯಮಗಳಂತೆ ಗುರುವಿನಂತೆಯೇ ಗುರುಪತ್ನಿಯನ್ನು ಗೌರವಿಸುವುದು[೨]
೩೧. ಆಪತ್ಕಾಲದಲ್ಲಿ ಬ್ರಾಹ್ಮಣರು ನಿಕೃಷ್ಟ ಉದ್ಯೋಗಗಳನ್ನು ಕೈಗೊಂಡು ಜೀವನ ಸಾಗಿಸುವುದು ಮತ್ತು ನಾಳೆಗಾಗಿ ಕೂಡಿಡುವುದಕ್ಕೆ ಲಕ್ಷ್ಯ ನೀಡದ ಬ್ರಾಹ್ಮಣನ ಜೀವನೋಪಾಯ ವಿಧಾನ[೩]
೩೨. [೪]ಜಾತಕರ್ಮದ ಸಮಯದಲ್ಲಿ ಮಾಡುವ ಹೋಮಕ್ಕಾಗಿ ಬ್ರಾಹ್ಮಣರಿಂದ ಅರಣಿಯ (ಬೆಂಕಿಯನ್ನು ಉತ್ಪತ್ತಿ ಮಾಡಲು ಉಪಯೋಗಿಸುವ ಎರಡು ಕಟ್ಟಿಗೆ ತುಂಡುಗಳು) ಸ್ವೀಕಾರ. ಮಗುವಿನ ಜಾತಕರ್ಮದಿಂದ ಮದುವೆಯವರೆಗಿನ ಎಲ್ಲ ಕರ್ಮಗಳನ್ನೂ ಅದರಲ್ಲಿ ಮಾಡುವುದು[೫]
೩೩. ಬ್ರಾಹ್ಮಣರು ಸದಾ ಪ್ರಯಾಣ ಮಾಡುವುದು
೩೪. ಊದುಕೊಳವೆಯಿಲ್ಲದೆ ಬೆಂಕಿಯೂದುವುದು[೬]
೩೫. ಶಾಸ್ತ್ರ ಗ್ರಂಥಗಳಲ್ಲಿ ಹೇಳಲಾಗಿರುವ ಪ್ರಕಾರ (ಪ್ರಾಯಶ್ಚಿತ್ತವನ್ನು ಮಾಡಿಕೊಂಡ ಮೇಲೆ) ಅತ್ಯಾಚಾರಕ್ಕೊಳಗಾದ ಹೆಣ್ಣನ್ನು ಜಾತಿಯಲ್ಲಿ ಅನಿರ್ಬಂಧಿತವಾಗಿರಲು ಬಿಡುವುದು.[೭]
೩೬. [೮]ಎಲ್ಲ ವರ್ಣಗಳಿಂದಲೂ ಸನ್ಯಾಸಿಯು ಭಿಕ್ಷೆ ಪಡೆಯುವುದು[೯]
೩೭. ಹೊಸದಾಗಿ ತೋಡಿದ ಜಾಗದ ನೀರನ್ನು ಹತ್ತು ದಿನಗಳವರೆಗೆ ಬಳಸದೆ ಕಾಯುವುದು.
೩೮. ಗುರು ವಿಧಿಸುವಷ್ಟೇ ಗುರುದಕ್ಷಿಣೆಯನ್ನು ಕೊಡಬೇಕೆಂಬ ಶಾಸ್ತ್ರನಿಯಮ[೧೦]

---

೧. ಕಾಣೆಯವರ ಕಲಿವರ್ಜ್ಯ ಪು. ೧೪
೨. ಗುರುಪತ್ನಿಯರು ಗುರುವಿನ ವರ್ಣದವರೇ ಆದರೆ ಗುರುವಂತೆಯೇ ಅವರನ್ನೂ ಗೌರವಿಸಬೇಕೆಂದೂ ಇತರ ವರ್ಣದವರಾಗಿದ್ದರೆ ಮೇಲೆದ್ದು ಸ್ವಾಗತಿಸಿ ನಮಸ್ಕರಿಸಬೇಕೆಂದು ಮನು ಹೇಳುತ್ತಾನೆ. ( II. ೨೧೦)
೩. ಬ್ರಾಹ್ಮಣನು ಕ್ಷತ್ರಿಯ ಅಥವಾ ವೈಶ್ಯವೃತ್ತಿಯನ್ನು ಆಪತ್ತಿನ ಕಾಲದಲ್ಲಿ ಅವಲಂಬಿಸಬಹುದೆಂದು ಗೌತಮ VII. ೧–೧ ಆಪಸ್ತಂಭ ಸೂತ್ರ I. ೭–೨೦, ೧೧–೧೭.೨೧.೪ ಯಾಜ್ಞ III.೩೫.೪೪ ಇತ್ಯಾದಿಗಳು ಹೇಳುತ್ತವೆ. ಆದರೆ ಬ್ರಾಹ್ಮಣನು ಆಯಾದಿನಕ್ಕೆ ಹೆಚ್ಚೆಂದರೆ ಮೂರು ದಿನಗಳಿಗಿಂತ ಹೆಚ್ಚು ಅವಧಿಗೆ ಬೇಕಾದ ಕಾಳನ್ನು ಸಂಗ್ರಹಿಸಿಟ್ಟುಕೊಳ್ಳಬಾರದೆಂಬ ಆದರ್ಶವನ್ನು ಮನು ಮುಂದಿಡುತ್ತಾನೆ. ಈ ಅತಿಗಳೆರಡೂ ಇಲ್ಲಿ ನಿಷಿದ್ಧ.
೪. ಕಾಣೆಯವರ ಕಲಿವರ್ಜ್ಯ ಪು. ೧೪.
೫. ಸಾಂಸ್ಕಾರ್ಯ – ಕೌಸ್ತುಭ ಗೃಹ್ಯಪ್ರಶಿಷ್ಟವನ್ನು ಉದ್ಧರಿಸುತ್ತದೆ.
೬. ಮನುವಿನಲ್ಲೂ VI.೫೩. ಈ ನಿಷೇಧವಿದೆ. ವೇದಸೂಕ್ತಗಳಲ್ಲಿ ಬಾಯಿಯಿಂದ ಗಾಳಿಯೂದಿ ಬೆಂಕಿ ಆರಿಸುವುದಕ್ಕೆ ಅವಕಾಶವಿತ್ತು. ನೋಡಿ: ಹರದತ್ತನ ಆಪಸ್ತಂಭ ಸೂತ್ರ ಭಾಷ್ಯ ೧.೫.೧೫.೨೦
೭. ಮ್ಲೇಚ್ಛರಿಂದ ಅತ್ಯಾಚಾರಕ್ಕೊಳಗಾದವಳಾದರೂ ಸ್ತ್ರೀಯು ಮೂರು ದಿನದ ಪ್ರಾಯಶ್ಚಿತ್ತದ ನಂತರ ಶುದ್ಧಳಾಗುತ್ತಾಳೆ. ಎಂಬುದು ದೇವಲ ಸ್ಮೃತಿಯ (ಶ್ಲೋಕ ೪೭) ಮತ. ಆದರೆ ಆದಿತ್ಯ ಪುರಾಣವು ಮುಗ್ಧರೂ ದುರ್ದೈವಿಗಳೂ ಆದ ಸ್ತ್ರೀಯರ ಬಗ್ಗೆ ಕ್ರೂರವಾಗಿದೆ.
೮. ಕಾಣೆಯವರ ಕಲಿವರ್ಜ್ಯ ಪು. ೧೫
೯. ಬೌಧಾಯನ ಧರ್ಮಸೂತ್ರ II.೧೦ವು ಸನ್ಯಾಸಿ ಎಲ್ಲ ವರ್ಣಗಳವರಿಂದಲೂ ಭಿಕ್ಷೆ ಬೇಡಬಹುದು. ಮನುವು (VI.೪೩) ಯಜುರ್ವೇದ III.೫೯ ಹಳ್ಳಿಗಳಲ್ಲಿ ಸಾಯಂಕಾಲವೂ, ವಸಿಷ್ಠನೂ ಸಹ (X.೭) ಮೊದಲೇ ಆರಿಸಿಕೊಂಡಿರುವ ಏಳು ಮನೆಗಳಲ್ಲಿ ಬೇಡಬಹುದು. ಮುಂದೆ ಅವನು ಬ್ರಾಹ್ಮಣರ ಮನೆಗಳಲ್ಲಿ ಸಿಕ್ಕಿದ ಭಿಕ್ಷೆಯ ಮೇಲೆ ಬದುಕಬೇಕು ಎಂದು ವಸಿಷ್ಠರು ಹೇಳುತ್ತಾರೆ.
೧೦. ಯಜುರ್ವೇದ ೧.೫೧ರ ಪ್ರಕಾರ ಶಿಷ್ಯನು ವೇದಾಭ್ಯಾಸದ ನಂತರ ವ್ರತಗಳನ್ನು ಮಾಡಿ ಗುರುವಿಗೆ ಇಷ್ಟವಿದ್ದರೆ ದಕ್ಷಿಣೆ ನೀಡಬೇಕೆಂದು, ವಿಧಿಪೂರ್ವಕವಾಗಿ ಸ್ನಾತಕನಾಗತಕ್ಕದ್ದೆಂದು ನಿರ್ದೇಶಿಸುತ್ತದೆ.

೩೯. [1]ಬ್ರಾಹ್ಮಣಾದಿಗಳು ಶೂದ್ರನನ್ನು ಅಡುಗೆಗೆ ನೇಮಿಸಿಕೊಳ್ಳುವುದು[2]

೪೦. ವೃದ್ಧರು ಬೆಂಕಿಗೆ ಅಥವಾ ಕಮರಿಗೆ ಬಿದ್ದು ಮಾಡಿಕೊಳ್ಳುವ ಆತ್ಮಹತ್ಯೆ[3]

೪೧. ಗೋವಿನ ಬಾಯಾರಿಕೆಯನ್ನು ತಣಿಸಿ ಉಳಿಯುವ ನೀರಿನಲ್ಲೇ ಆಚಮನ ಮಾಡುವುದು[4]

೪೨. ತಂದೆ–ಮಗನ ಮಧ್ಯೆ ವಿವಾದದಲ್ಲಿ ಸಾಕ್ಷಿ ಹೇಳುವವನಿಗೆ ದಂಡ ಹಾಕುವುದು[5]

೪೩. ಸನ್ಯಾಸಿಯು ಸಂಜೆ ಇದ್ದ ಜಾಗದಲ್ಲೇ ರಾತ್ರಿಯೆಲ್ಲಾ ಉಳಿಯಬೇಕು[6]

ಇವಿಷ್ಟೂ ಆದಿತ್ಯ ಪುರಾಣದ ರೀತ್ಯ ಕಲಿವರ್ಜ್ಯಗಳು.

ವಿಚಿತ್ರವೆಂದರೆ ಈ ಕಲಿವರ್ಜ್ಯಗಳ ಮಹತ್ವವೇನೆಂಬುದು ಇನ್ನೂ ಅರ್ಥವಾಗಿಲ್ಲ. ಇವು ಕಲಿಯುಗದಲ್ಲಿ ಬಿಡಬೇಕಾದ ಸಂಗತಿಗಳ ಪಟ್ಟಿ ಎಂಬಂತೆ ಪ್ರಸ್ತಾಪಿತವಾಗಿದೆ. ಆದರೆ ಇವು ವಿಧಿ ನಿಷೇಧಗಳ ಪಟ್ಟಿಯಷ್ಟು ಮಾತ್ರವಲ್ಲ. ನಿಜ, ಈ ಆಚರಣೆಗಳನ್ನು ಬಿಟ್ಟುಬಿಡಬೇಕು ಎಂದೇನೋ ಹೇಳಿದೆ. ಹಾಗಾದರೆ ಅವು ಅನೈತಿಕವಾದ ಸಂಪ್ರದಾಯಗಳು, ಪಾಪಪೂರಿತವಾದವು, ಸಮಾಜಘಾತುಕ ಆಚರಣೆಗಳು ಎಂದು ಇವನ್ನು ತಿರಸ್ಕರಿಸಿದ್ದರೇ ಎಂದರೆ ಅಲ್ಲ. ಹೀಗೆ ನಿಷೇಧಕ್ಕೊಳಗಾಗಿದ್ದ ಆಚರಣೆಗಳನ್ನು ಏಕೆ ಖಂಡಿಸಬಹುದೆಂದು ಕೇಳಬಹುದಲ್ಲವೇ? ಕಲಿವರ್ಜ್ಯ ನಿಯಮದ ಕಗ್ಗಂಟು ಇರುವುದು ಇಲ್ಲೇ. ಒಂದು ಆಚರಣೆಯನ್ನು ತಿರಸ್ಕರಿಸಿದೆ, ಅದನ್ನು ನಿಷೇಧಿಸಿದ್ದ ಈ ಕ್ರಮ ಹಿಂದಿನ ಯುಗಗಳ ಸಂಪ್ರದಾಯಕ್ಕೆ ಸಂಪೂರ್ಣ ವಿರುದ್ಧವಾಗಿದೆ. ಒಂದು ನಿದರ್ಶನದ ಮುಖೇನ ಹೇಳುವುದಾದಲ್ಲಿ ಆಪಸ್ತಂಭ ಧರ್ಮಸೂತ್ರವು ಎಲ್ಲ ಆಸ್ತಿಯನ್ನು ಹಿರಿಯ ಮಗನಿಗೆ ಕೊಡುವ ಸಂಪ್ರದಾಯವನ್ನು ನಿಷೇಧಿಸುತ್ತದೆ. ಜತೆಗೆ ಆ ಸಂಪ್ರದಾಯವನ್ನು ಅವಹೇಳನ ಮಾಡುತ್ತದೆ ಕೂಡ. ಆದರೆ ಈ ಬ್ರಾಹ್ಮಣರು ಕಲಿವರ್ಜ್ಯದ ಯಾದಿಯಲ್ಲಿ ಕೇವಲ ನಿಷೇಧಿಸುವ ಆದರೆ ತಿರಸ್ಕರಿಸದ ಹೊಸ ತಂತ್ರವನ್ನು ಬಳಸಿದ್ದು ಏಕೆ? ಈ ಹೊಸ ವಿಧಾನಕ್ಕೆ ವಿಶಿಷ್ಟವಾದ ಕಾರಣ ಇದ್ದಿರಲೇಬೇಕು. ಆದರೆ ಆ ಕಾರಣ ಯಾವುದು?

* * * *

---

೧. ಕಾಣೆಯವರ 'ಕಲಿವರ್ಜ್ಯ' ಪುಟ. ೧೫.

೨. 'ಆಪಸ್ತಂಭ ಧರ್ಮಸೂತ್ರ' II.೨.೩.೪ ಆರ್ಯರ ಪರಿವೀಕ್ಷಣೆಯಲ್ಲಿ ಮೇಲಿನ ಮೂರು ವರ್ಣಗಳಿಗೂ ಅಡಿಗೆ ಮಾಡಿಹಾಕಬಹುದೆಂದು ಹೇಳುತ್ತದೆ.

೩. ಅದೇ, ಮೇಲಿನ ೨ನೇ ಸಂಖ್ಯೆಯಂತೆ.

೪. 'ವಾಸಿಷ್ಠ' III.೩೫ರ ಪ್ರಕಾರ ಭೂಮಿಯ ಗುಂಡಿಯಲ್ಲಿ ಇರುವ ನೀರನ್ನು ಆಚಮನಕ್ಕೆ ಉಪಯೋಗಿಸಬಹುದು. ಇದು ಒಂದು ಗೋವಿನ ಬಾಯಾರಿಕೆಯನ್ನು ತಣಿಸುವಷ್ಟಿದ್ದರೆ ಮಾತ್ರ. 'ಮನು' V–೧೨೮ ಮತ್ತು 'ಯಜುರ್ವೇದ' I.೧೯೨.

೫. 'ಯಜುರ್ವೇದ' II–೨೩೯ ತಂದೆ ಮತ್ತು ಮಗನ ಮಧ್ಯದ ವ್ಯಾಜ್ಯಕ್ಕೆ ಸಾಕ್ಷಿಯಾಗಿದ್ದರೆ ಮೂರು ಪಣ ದಂಡ ತೆರಬೇಕು.

೬. ಹೇಗೆಂದರೆ "ಒಬ್ಬ ಸನ್ಯಾಸಿ ಸಾಯಂಕಾಲ ಮನೆಯಲ್ಲೇ ಇರಬೇಕು" ಅಂತಲೂ ಆಗುತ್ತದೆ.

# ಅನುಬಂಧ – I

## ರಾಮ ಮತ್ತು ಕೃಷ್ಣರ ಒಗಟು

ರಾಮನು ವಾಲ್ಮೀಕಿ ರಚಿತ ರಾಮಾಯಣದ ಕಥಾ ನಾಯಕ. ರಾಮಾಯಣದ ಕಥೆ ತುಂಬಾ ಚಿಕ್ಕದು. ಜೊತೆಗೆ ಅದು ಸರಳವಾದ ಕತೆ ಹಾಗೂ ಅದರಲ್ಲಿ ಭಾವೋದ್ರೇಕಕಾರಿಯಾದುದೇನೂ ಇಲ್ಲ.

ರಾಮನು ಅಯೋಧ್ಯೆಯ ಅರಸು ದಶರಥನ ಮಗ. ಇಂದಿನ ಬನಾರಸ್ ಅಂದಿನ ಅಯೋಧ್ಯಾನಗರ. ದಶರಥನಿಗೆ ಮೂವರು ಮಡದಿಯರು; ಕೌಸಲ್ಯಾ, ಕೈಕೇಯಿ, ಮತ್ತು ಸುಮಿತ್ರಾ. ಇವರಲ್ಲದೆ ನೂರಾರು ಉಪಪತ್ನಿಯರು. ಕೈಕೇಯಿ ದಶರಥನನ್ನು ಮದುವೆಯಾಗುವಾಗ ಕೆಲವು ಷರತ್ತುಗಳನ್ನು ವಿಧಿಸಿದ್ದು, ಮದುವೆ ಸಮಯದಲ್ಲಿ ಅದೇನೆಂದು ಹೇಳದಿದ್ದರೂ ಅಕೆ ಕೇಳಿದಾಗ ಅವನು ಆ ಷರತ್ತುಗಳನ್ನು ಪೂರೈಸಬೇಕಾಗಿತ್ತು. ದಶರಥನಿಗೆ ಬಹುಕಾಲದವರೆಗೆ ಮಕ್ಕಳಾಗಲಿಲ್ಲ. ಸಿಂಹಾಸನಕ್ಕೆ ಉತ್ತರಾಧಿಕಾರಿಯ ಹಂಬಲ ದಶರಥನನ್ನು ಕಾಡುತ್ತಿತ್ತು. ತನ್ನ ಮೂವರು ಮಡದಿಯರಿಗೂ ಮಕ್ಕಳಾಗುವ ಸೂಚನೆ ಕಾಣದಾಗದಿರಲು ದಶರಥನು ಪುತ್ರೇಷ್ಠಿ ಯಜ್ಞ ಮಾಡಲು ನಿಶ್ಚಯಿಸಿ ಶೃಂಗಮುನಿಯನ್ನು ಕರೆಸಲು, ಆ ಮುನಿಯು ಯಜ್ಞದಲ್ಲಿ ಮೂರು ಪಿಂಡಗಳನ್ನು ತಯಾರಿಸಿ ದಶರಥನ ಮೂವರು ಪತ್ನಿಯರಿಗೆ ತಿನ್ನಲು ಕೊಡುತ್ತಾನೆ. ಆ ಪಿಂಡಗಳನ್ನು ತಿಂದ ಮೇಲೆ ಆ ಮೂವರೂ ಗರ್ಭವತಿಯರಾಗಿ ಗಂಡು ಮಕ್ಕಳನ್ನು ಹೆರುತ್ತಾರೆ. ಕೌಸಲ್ಯೆಗೆ, ರಾಮ, ಕೈಕೇಯಿಗೆ, ಭರತ, ಸುಮಿತ್ರೆಗೆ ಲಕ್ಷ್ಮಣ, ಶತ್ರುಘ್ನರು ಜನಿಸುತ್ತಾರೆ. ಕಾಲಾನುಕ್ರಮದಲ್ಲಿ ರಾಮ ಸೀತೆಯನ್ನು ವಿವಾಹವಾಗುತ್ತಾನೆ. ರಾಜನು ಪ್ರಾಪ್ತ ವಯಸ್ಕನಾಗಲು, ದಶರಥ ರಾಮನಿಗೆ ಪಟ್ಟಕಟ್ಟಿ ತಾನು ಸಿಂಹಾಸನ ತ್ಯಾಗ ಮಾಡಿ ವಿಶ್ರಾಂತಿ ಪಡೆಯಲು ಬಯಸುತ್ತಾನೆ. ಆ ಪಟ್ಟಾಭಿಷೇಕಕ್ಕೆ ಸಿದ್ಧತೆಗಳು ನಡೆಯುತ್ತಿರುವಾಗ ಕೈಕೇಯಿಯು ತನ್ನ ಮದುವೆಯ ಸಂದರ್ಭದ ಷರತ್ತುಗಳನ್ನು ನೆರವೇರಿಸುವಂತೆ ದಶರಥನನ್ನು ಕೇಳುತ್ತಾಳೆ. ಆಕೆಯ ಷರತ್ತುಗಳೇನೆಂದು ಕೇಳಿದಾಗ, ಕೈಕೇಯಿಯು ರಾಮನ ಬದಲಿಗೆ ತನ್ನ ಭರತನಿಗೆ ಪಟ್ಟಕಟ್ಟಬೇಕೆಂದೂ, ರಾಮ ಹನ್ನೆರಡು ವರ್ಷ ವನವಾಸ ಮಾಡಬೇಕೆಂದೂ ಕೇಳುತ್ತಾಳೆ. ದಶರಥ ಅದಕ್ಕೆ ಒಲ್ಲದ ಮನಸ್ಸಿನಿಂದ ಸಮ್ಮತಿಸಲೇಬೇಕಾಗುತ್ತದೆ. ಭರತ ಅಯೋಧ್ಯೆಯ ರಾಜನಾದರೆ, ರಾಮನು ತನ್ನ ಪತ್ನಿ ಸೀತೆ ಹಾಗೂ ತಮ್ಮ ಲಕ್ಷ್ಮಣನೊಡನೆ ಕಾಡಲ್ಲಿ ವಾಸಿಸಲು ಹೋಗುತ್ತಾನೆ. ಹೀಗೆ ಕಾಡಲ್ಲಿ ಈ ಮೂವರೂ ಇರುತಿರಲಾಗಿ, ಲಂಕಾದ ದೊರೆ ರಾವಣ ಸೀತೆಯನ್ನು

---

*ಇದು ೪೯ ಪುಟಗಳ ಬೆರಳಚ್ಚು ಪ್ರತಿಯಾಗಿದ್ದು ಇದನ್ನು 'ಸಿಂಬಲ್ಸ್ ಆಫ್ ಹಿಂದೂಯಿಸಂ' ಎಂಬ ಹಸ್ತಪ್ರತಿಯೊಂದಿಗೆ ಅಚ್ಚುಕಟ್ಟಾಗಿ ಒಂದು ಕಡತದಲ್ಲಿಡಲಾಗಿದೆ. ಇದನ್ನು ಮೂಲ ವಿಷಯಾನುಕ್ರಮಣಿಕೆಯಲ್ಲಿ ಸೇರಿಸಿಲ್ಲ. ಆದ್ದರಿಂದ ಇದನ್ನು ಆ ಭಾಗಕ್ಕೆ ಅನುಬಂಧವಾಗಿ ಸೇರಿಸಲಾಗಿದೆ. ಸಂ.*

ಅಪಹರಿಸಿ ತನ್ನ ಪತ್ನಿಯರಲ್ಲಿ ಇವಳನ್ನೂ ಒಬ್ಬಳನ್ನಾಗಿಸಿಕೊಳ್ಳುವ ಉದ್ದೇಶದಿಂದ ತನ್ನ ಅರಮನೆಗೆ ಕೊಂಡೊಯ್ಯುತ್ತಾನೆ. ಅನಂತರ ರಾಮ ಲಕ್ಷ್ಮಣರು ಸೀತೆಯ ಅನ್ವೇಷಣೆಗೆ ತೊಡಗುತ್ತಾರೆ. ಆ ಹಾದಿಯಲ್ಲಿ ಅವರಿಗೆ ವಾನರಕುಲ ಪ್ರಮುಖರಾದ ಸುಗ್ರೀವ ಹಾಗೂ ಹನುಮಂತರ ಪರಿಚಯವಾಗಿ ಅವರಲ್ಲಿ ಸ್ನೇಹ ಉಂಟಾಗುತ್ತದೆ. ಇವರ ಸಹಾಯದಿಂದಲೇ ಸೀತೆಯನ್ನು ಬಚ್ಚಿಟ್ಟಿದ್ದ ಸ್ಥಳ ಪತ್ತೆಯಾದುದಲ್ಲದೆ ಮತ್ತೆ ಇವರ ನೆರವಿನಿಂದಲೇ ಲಂಕಾಕ್ಕೆ ದಂಡೆತ್ತಿ ಹೋಗಿ ಯುದ್ಧದಲ್ಲಿ ರಾವಣನನ್ನು ಸಂಹರಿಸಿ ಸೀತೆಯನ್ನು ಪಾರುಮಾಡುತ್ತಾರೆ. ನಂತರ ರಾಮನು ಲಕ್ಷ್ಮಣ, ಸೀತೆಯೊಡಗೂಡಿ ಅಯೋಧ್ಯೆಗೆ ಮರಳುತ್ತಾನೆ. ಆ ವೇಳೆಗಾಗಲೇ ಹನ್ನೆರಡು ವರ್ಷಗಳಾಗಿ ಕೈಕೇಯಿಯ ಷರತ್ತುಗಳು ಪೂರ್ಣಗೊಂಡಿದ್ದರಿಂದ ಭರತನು ಸಿಂಹಾಸನ ಬಿಟ್ಟುಕೊಡಲು ರಾಮನು ಅಯೋಧ್ಯೆಯ ದೊರೆಯಾಗುತ್ತಾನೆ. ಹೀಗಿದೆ ವಾಲ್ಮೀಕಿ ವಿರಚಿತ ರಾಮಾಯಣದ ಕತೆಯ ಸಂಕ್ಷಿಪ್ತ ರೂಪುರೇಷೆ.

ಈ ಕಥೆಯಲ್ಲಿ ರಾಮನನ್ನು ಆರಾಧಿಸಲು ಪ್ರೇರೇಪಿಸುವಂಥ ಯಾವ ಅಂಶಗಳೂ ಕಾಣವು. ಅವನೊಬ್ಬ ಕರ್ತವ್ಯಪಾಲಕ ಮಗ, ಅಷ್ಟೇ. ಆದರೆ ವಾಲ್ಮೀಕಿಗೆ ರಾಮನಲ್ಲಿ ಅಸಾಧಾರಣವಾದುದೇನೋ ಕಾಣಿಸಿದ್ದರಿಂದಲೇ ಆತ ರಾಮಾಯಣ ಸೃಷ್ಟಿಸಿದ. ವಾಲ್ಮೀಕಿ ನಾರದನಿಗೆ ಹೀಗೆ ಕೇಳುತ್ತಾನೆ:

"ಹೇಳು ಓ ನಾರದ! ಈ ನಮ್ಮ ಕಾಲದಲ್ಲಿ ಭೂಮಿಯ ಮೇಲೆ ಇರುವ ಪರಿಪೂರ್ಣ ಮಾನವನಾರು?" ಹೀಗೆ ಪ್ರಶ್ನಿಸಿ, ವಾಲ್ಮೀಕಿಯು ತನ್ನ ಪ್ರಕಾರ ಪರಿಪೂರ್ಣ ವ್ಯಕ್ತಿ ಹೇಗಿರುತ್ತಾನೆ ಎಂಬುದನ್ನು ವಿವರಿಸುತ್ತಾನೆ. ಅವನ ವ್ಯಾಖ್ಯಾನದಂತೆ ಪರಿಪೂರ್ಣ ಮಾನವನೆಂದರೆ:

"ಬಲಿಷ್ಠನೂ, ಧರ್ಮದ ಮರ್ಮವನ್ನರಿತವನೂ, ವಿನಯಸಂಪನ್ನನೂ, ಸತ್ಯಸಂಧನೂ ಆಗಿರಬೇಕು. ತನ್ನ ಸಂಕಷ್ಟದ ಸಮಯದಲ್ಲೂ ಧಾರ್ಮಿಕ ಅನುಷ್ಠಾನಕ್ಕಾಗಿ ಸ್ವಹಿತ ತ್ಯಾಗಮಾಡಬಲ್ಲವನೂ ಆಗಿರಬೇಕು. ಸರ್ವರ ಹಿತ ಕಾಯಲು ಉತ್ಸುಕನೂ ಸಂಯಮ ಉಳ್ಳವನಾಗಿ ಮನೋಹರನೂ ಕೋಪತಾಪಗಳನ್ನು ತಾಳಿಕೊಳ್ಳಬಲ್ಲಂಥವನೂ ಅಲ್ಲದೆ ಅನ್ಯರ ಸಮೃದ್ಧಿಗೆ ಕರುಬದಂಥವನಾಗಿ ಶೋಭಿತನೂ ಆಗಿರಬೇಕು. ಇವುಗಳೊಡನೆ ರಣರಂಗದಲ್ಲಿ ದೇವತೆಗಳಿಗೂ ಎದೆನಡುಕವನ್ನುಂಟುಮಾಡುವಂಥ ಶೂರನಾಗಿರುವವನೇ ಪರಿಪೂರ್ಣ ಮಾನವ."

ಇದಕ್ಕೆ ನಾರದನು ಕಾಲಾವಕಾಶ ಪಡೆದು ಚಿಂತಿಸಿ, ತುಲನೆ ಮಾಡಿ ಈ ಎಲ್ಲಾ ಸದ್ಗುಣಸಂಪನ್ನನಾಗಿರುವವನು ಒಬ್ಬನೇ ದಶರಥನ ಮಗ ರಾಮ ಎಂಬುದಾಗಿ ಹೇಳುತ್ತಾನೆ.

ಈ ಗುಣಗಳ ಕಾರಣವಾಗಿಯೇ ರಾಮನನ್ನು ದೈವೀಕರಿಸಲಾಗಿದೆ.

ಆದರೆ ರಾಮನು ಆರಾಧಿಸಲು ಸೂಕ್ತ ವ್ಯಕ್ತಿಯೇ? ಆತನನ್ನು ದೇವತಾ ಸ್ವರೂಪನೆಂದು ಭಾವಿಸಿ ಪೂಜಿಸುವವರು ಈ ಕೆಳಕಂಡ ಸಂಗತಿಗಳನ್ನು ಗಮನಿಸಲಿ.

ರಾಮನ ಹುಟ್ಟೇ ಒಂದು ಪವಾಡಸದೃಶ. ಶೃಂಗಮುನಿ ಸಿದ್ಧಪಡಿಸಿದ ಪಿಂಡದಿಂದ ರಾಮನು ಜನಿಸಿದನೆಂಬುದು ಗಂಡ–ಹೆಂಡತಿಯರಲ್ಲದ ಶೃಂಗಮುನಿ – ಕೌಸಲ್ಯರ ಸಂಬಂಧದಿಂದಾಗಿಯೇ ರಾಮ ಜನಿಸಿದನೆಂಬ ಸತ್ಯಸಂಗತಿಯನ್ನು ಮರೆಮಾಚುವ ಮುಸುಕಾಗಿರಬಹುದು. ಅದೇನೇ ಇದ್ದರೂ ರಾಮನ ಹುಟ್ಟು ಅಪಖ್ಯಾತಿಕರಲ್ಲದಿದ್ದರೆ, ಅಸ್ವಾಭಾವಿಕವಂತೂ ಹೌದು.

ಇದರೊಡನೆ ರಾಮನ ಹುಟ್ಟಿನ ಬಗ್ಗೆ ಇನ್ನೂ ಹಲವಾರು ಕತೆಗಳಿದ್ದು ಅವುಗಳ ಅಸಹ್ಯಕರ ಸ್ವರೂಪವನ್ನು ಮರೆಮಾಚುವುದು ಕಷ್ಟವಾಗುತ್ತದೆ.

ವಾಲ್ಮೀಕಿ ತನ್ನ ರಾಮಾಯಣವನ್ನು ರಾಮನು ವಿಷ್ಣುವಿನ ಅವತಾರ ಎಂಬುದಕ್ಕೆ ಒತ್ತುಕೊಟ್ಟು ಆರಂಭಿಸುತ್ತಾನೆ. ಸ್ವತಃ ವಿಷ್ಣುವೇ ದಶರಥನ ಮಗ ರಾಮನಾಗಿ ಹುಟ್ಟುವುದಕ್ಕೆ ಸಮ್ಮತಿಸಿದ್ದಾಗಿ ಹೇಳಲಾಗಿದೆ. ಇದನ್ನು ಅರಿತ ಬ್ರಹ್ಮನು ವಿಷ್ಣುವಿನ ಈ ರಾಮಾವತಾರವು ಯಶಸ್ವಿಯಾಗಿ ಪೂರ್ಣಗೊಳ್ಳಲು ರಾಮನೊಡನೆ ಬಲಶಾಲಿ ಸಹಚರರಿದ್ದು ಸಹಕಾರ ನೀಡುವ ವ್ಯವಸ್ಥೆಯಾಗಬೇಕೆಂದು ಅಪೇಕ್ಷಿಸುತ್ತಾನೆ. ಆ ಮೊದಲು ಅಂಥ ವ್ಯವಸ್ಥೆಯೇನೂ ಇರಲಿಲ್ಲ.

ಬ್ರಹ್ಮನ ಈ ಆದೇಶವನ್ನು ಪರಿಪಾಲಿಸಲು ಮುಂದಾಗುವ ದೇವತೆಗಳು ಸಾಮೂಹಿಕವಾಗಿ ಸುರತಕ್ರಿಯೆಯಲ್ಲಿ ನಿರತರಾಗುತ್ತಾರೆ. ಅವರ ಈ ಕ್ರಿಯೆ ವೇಶ್ಯೆರಾದ ಅಪ್ಸರೆಯರ ಮೇಲೆ ಮಾತ್ರವಲ್ಲ, ಯಕ್ಷ, ನಾಗರ ಅವಿವಾಹಿತ ಪುತ್ರಿಯರ ಮೇಲೆ ಮಾತ್ರವಲ್ಲ. ಯಕ್ಷ, ವಿಧ್ಯಾದರ, ಗಂಧರ್ವ ಕಿನ್ನರ ಮತ್ತು ವಾನರರ ಶಾಸ್ತ್ರೋಕ್ತ ಪತ್ನಿಯರೊಡನೆಯೂ ಸಂಭೋಗ ಜರುಗಿ ರಾಮನ ಅನುಚರರಾಗುವ ವಾನರ ಸಂತತಿ ಹುಟ್ಟಿಸುತ್ತಾರೆ. ರಾಮನ ಹುಟ್ಟಿನಲ್ಲಿ ಲಂಪಟತೆ ಇಲ್ಲ ಎಂದು ಅಂದುಕೊಂಡರೂ ಅವನ ಅನುಚರರ ಹುಟ್ಟಿನಲ್ಲಂತೂ ಲಂಪಟತೆಯೂ ಮಿತಿಮೀರಿ ರಾಮನ ಜನ್ಮದೊಡನೆ ಜೊತೆಗೂಡಿ ಬರುತ್ತದೆ. ಸೀತೆಯೊಡನೆ ಆತನ ಮದುವೆಯೂ ಟೀಕಾತೀತವಾಗಿಲ್ಲ. ಬೌದ್ಧ ರಾಮಾಯಣದ ಪ್ರಕಾರ ಸೀತೆಯು ರಾಮನ ತಂಗಿಯಾಗಿದ್ದು ಅವರಿಬ್ಬರೂ ದಶರಥನ ಮಕ್ಕಳು. ಆದರೆ ವಾಲ್ಮೀಕಿ ರಾಮಾಯಣವು ಬೌದ್ಧ ರಾಮಾಯಣದಲ್ಲಿ ತಿಳಿಸುವ ಈ ಸಂಬಂಧವನ್ನು ಒಪ್ಪುವುದಿಲ್ಲ. ವಾಲ್ಮೀಕಿ ರಾಮಾಯಣದ ಪ್ರಕಾರ ಸೀತೆಯು ವಿದೇಹ ರಾಜನಾದ ಜನಕಳ ಮಗಳು. ಹಾಗಾಗಿ ರಾಮನ ತಂಗಿಯಲ್ಲ. ಇದೂ ಕೂಡ ಸಮಂಜಸವಲ್ಲ. ಏಕೆಂದರೆ ವಾಲ್ಮೀಕಿಯ ಪ್ರಕಾರವೇ ಸೀತೆಯು ಜನಕನಿಗೆ ಹುಟ್ಟಿದ ಮಗಳಲ್ಲ. ಭೂಮಿ ಉಳುವಾಗ ಸಿಕ್ಕಿದ ಮಗು ಸೀತೆಯು ರೈತನೊಬ್ಬ ಜನಕರಾಜನಿಗೆ ಕಾಣಿಕೆಯಾಗಿ ಒಪ್ಪಿಸಲು ರಾಜ ಅವಳನ್ನು ಸಾಕುತ್ತಾನೆ. ಹೀಗಾಗಿ ಸೀತೆಯನ್ನು ಜನಕರಾಜನ ಮಗಳು ಎಂಬುದೂ ಅವಾಸ್ತವ ಭಾವನೆ ಅಷ್ಟೆ. ಆದರೆ ಬೌದ್ಧ ರಾಮಾಯಣದ ಕತೆ ಸಹಜವಾಗಿರುವುದಲ್ಲದೆ ಆರ್ಯ ವಿವಾಹ ಪದ್ಧತಿಗೆ ಅನುಗುಣವಾಗಿದೆ. ಈ ಕತೆ ನಿಜವಾದುದಾದರೆ ಸೀತೆಯೊಡನೆ ಆಗುವ ರಾಮನ ವಿವಾಹವು ಅನುಕರಣೀಯ ಆದರ್ಶವಾಗುವುದಿಲ್ಲ. ಬೇರೆ ರೀತಿ ಭಾವಿಸಿ ನೋಡಿದರೂ ಇದು ಆದರ್ಶದ ವಿವಾಹವೂ ಆಗುವುದಿಲ್ಲ. ರಾಮನಿಗೆ ಆರೋಪಿಸಲಾದ ಸದ್ಗುಣಗಳಲ್ಲೊಂದು ಆತ ಏಕಪತ್ನೀ ವ್ರತಸ್ಥ ಎಂಬುದು. ಈ ಭಾವನೆ ಹೇಗೆ ಜನಜನಿತವಾಯ್ತು ಎಂಬುದನ್ನು ಅರ್ಥಮಾಡಿಕೊಳ್ಳಲು ಕಷ್ಟವಾಗುತ್ತದೆ. ಇದಕ್ಕೆ ಯಾವ ವಾಸ್ತವಿಕ ನೆಲೆಗಟ್ಟೂ ಇಲ್ಲ. ವಾಲ್ಮೀಕಿಯೇ ರಾಮನ ಅನೇಕ ಮಡದಿಯರ ಬಗ್ಗೆ ಉಲ್ಲೇಖಿಸುತ್ತಾನೆ. ಇವರೊಡನೆ ಅವನು ಇಟ್ಟುಕೊಂಡಿದ್ದವರೂ ಅನೇಕರು. ಈ ವಿಚಾರದಲ್ಲಿ ರಾಮನು ತನ್ನ ನಾಮಕಾವಸ್ತೆ ತಂದೆಯ ನಿಜವಾದ ಮಗನು. ಏಕೆಂದರೆ ದಶರಥನಿಗೆ ಮೂವರು ಮಡದಿಯರೊಡನೆ ಅನೇಕ ಉಪಪತ್ನಿಯರೂ ಇದ್ದುದು ತಿಳಿದೇ ಇದೆ.

ಈಗ, ರಾಮ ಒಬ್ಬ ವ್ಯಕ್ತಿಯಾಗಿ ಒಬ್ಬ ರಾಜನಾಗಿ ಆತನ ವ್ಯಕ್ತಿತ್ವ ಹೇಗಿತ್ತು ಎಂಬುದನ್ನು ಪರಿಶೀಲಿಸೋಣ. ಒಬ್ಬ ವ್ಯಕ್ತಿಯನ್ನಾಗಿ ಅವನನ್ನು ನೋಡುವಾಗ ಎರಡು ಪ್ರಸಂಗಗಳನ್ನು ಮಾತ್ರ ಮುಂದಿಡುವೆ. ಒಂದು ವಾಲಿ ಬಗ್ಗೆ ಅವನು ನಡೆದುಕೊಂಡ ರೀತಿಯಾದರೆ ಇನ್ನೊಂದು ತನ್ನ ಸ್ವಂತ ಪತ್ನಿ ಸೀತೆಯನ್ನು ನಡೆಸಿಕೊಂಡ ಆತನ ಪರಿ. ಮೊದಲನೆಯದಾಗಿ, ವಾಲಿಯ ಪ್ರಸಂಗವನ್ನು ನೋಡುವ.

ವಾಲಿ ಮತ್ತು ಸುಗ್ರೀವರಿಬ್ಬರೂ ಸಹೋದರರು. ಅವರಿಬ್ಬರು ಕಿಷ್ಕಿಂಧೆಯನ್ನು ರಾಜಧಾನಿಯಾಗಿ ಮಾಡಿಕೊಂಡು ಆಳ್ವಿಕೆ ನಡೆಸುತ್ತಿದ್ದ ವಾನರ ಕುಲದ ಆಳರಸ ಮನೆತನಕ್ಕೆ ಸೇರಿದವರು. ಸೀತೆಯನ್ನು ರಾವಣ ಅಪಹರಿಸಿದ ಕಾಲದಲ್ಲಿ ಕಿಷ್ಕಿಂಧೆಯನ್ನು ವಾಲಿ ಆಳುತ್ತಿದ್ದನು. ವಾಲಿ ಸಿಂಹಾಸನರೂಢನಾಗಿದ್ದ ಆ ಸಮಯದಲ್ಲಿ ಮಾಯಾವಿ ಎಂಬ ರಾಕ್ಷಸನೊಡನೆ ಯುದ್ಧಮಾಡುವ ಪ್ರಸಂಗ ಬರುತ್ತದೆ. ಅವರಿಬ್ಬರ ನಡುವ ಜರುಗುವ ಮಲ್ಲಯುದ್ಧದಲ್ಲಿ ಮಾಯವಿ ಜೀವ ಉಳಿಸಿಕೊಳ್ಳಲು ಪಲಾಯನ ಮಾಡುತ್ತಾನೆ. ವಾಲಿ ಸುಗ್ರೀವರಿಬ್ಬರೂ ಅವನ ಬೆನ್ನಟ್ಟುತ್ತಾರೆ. ಮಾಯಾವಿ ಒಂದು ಆಳವಾದ ಗುಹೆ ಹೊಕ್ಕುಬಿಡುತ್ತಾನೆ. ಗುಹೆಯ ಬಾಗಿಲಿನ ಹತ್ತಿರ ಕಾಯುವಂತೆ ಸುಗ್ರೀವನಿಗೆ ಹೇಳಿ ವಾಲಿ ತಾನೂ ಗುಹೆ ಒಳಕ್ಕೆ ನುಗ್ಗುತ್ತಾನೆ. ಕೆಲಕಾಲದ ನಂತರ ಗುಹೆಯ ಒಳಗಿನಿಂದ ರಕ್ತದ ಪ್ರವಾಹವೇ ಹರಿದುಬರುತ್ತದೆ. ಮಾಯಾವಿಯಿಂದ ವಾಲಿಯೇ ಹತನಾಗಿರಬೇಕೆಂದು ನಿಶ್ಚಯಿಸಿಕೊಂಡ ಸುಗ್ರೀವನು ಕಿಷ್ಕಿಂಧೆಗೆ ಬಂದು ವಾಲಿಯ ಸ್ಥಾನಕ್ಕೆ ತಾನೇ ರಾಜನೆಂದು ಘೋಷಿಸಿಕೊಂಡು ಹನುಮಂತನನ್ನು ತನ್ನ ಪ್ರಧಾನಮಂತ್ರಿಯನ್ನಾಗಿ ನೇಮಿಸಿಕೊಳ್ಳುತ್ತಾನೆ.

ವಾಸ್ತವವಾಗಿ ವಾಲಿ ಹತನಾಗಿರುವುದಿಲ್ಲ. ಮಾಯಾವಿಯೇ ವಾಲಿಯಿಂದ ಹತನಾಗಿರುತ್ತಾನೆ. ಗುಹೆಯಿಂದ ಹೊರಬಂದ ವಾಲಿಗೆ ಅಲ್ಲಿ ಸುಗ್ರೀವ ಕಂಡುಬರುವುದಿಲ್ಲ. ಚಕಿತನಾಗಿ ಕಿಷ್ಕಿಂಧೆಗೆ ಬಂದ ವಾಲಿಯ ದಿಗ್ಭ್ರಮೆಗೆ ಸುಗ್ರೀವ ತಾನೇ ರಾಜನೆಂದು ಸ್ವಯಂ ಘೋಷಿಸಿಕೊಂಡಿರುವುದು ಕಂಡು ಬರುತ್ತದೆ. ತನ್ನ ಸೋದರನ ಈ ದ್ರೋಹಕ್ಕೆ ಸಹಜವಾಗೇ ವಾಲಿ ಕುಪಿತನಾಗುತ್ತಾನೆ. ಇದು ಸಕಾರಣವಾಗಿಯೇ ಇದೆ. ಸುಗ್ರೀವನು ವಾಲಿ ಹತನಾದದೆಂದು ಸುಮ್ಮನೆ ಅಂದಾಜಿಸಿ ಕೊಳ್ಳದೆ ಖಚಿತಪಡಿಸಿಕೊಳ್ಳಬೇಕಿತ್ತು. ಜೊತೆಗೆ ವಾಲಿಯ ಉತ್ತರಾಧಿಕಾರಿಯಾದ ಅವನ ಮಗ ಅಂಗದನನ್ನು ಸುಗ್ರೀವ ಪಟ್ಟಕ್ಕೇರಿಸಬೇಕಾಗಿತ್ತು. ಆದರೆ ಸುಗ್ರೀವ ಈ ಎರಡನ್ನೂ ಮಾಡಲಿಲ್ಲ. ಹಾಗಾಗಿ ಸುಗ್ರೀವನದು ದುರಾಕ್ರಮಣವೆಂದು ನಿಚ್ಚಳವಾಗಿ ಕಾಣುತ್ತಿತ್ತು. ವಾಲಿ ಸುಗ್ರೀವನನ್ನು ಒದ್ದೋಡಿಸಿ ರಾಜ್ಯಾಧಿಕಾರವನ್ನು ಮತ್ತೆ ಪಡೆಯುತ್ತಾನೆ. ಈ ಇಬ್ಬರೂ ಸೋದರರೂ ಬದ್ಧವೈರಿಗಳಾಗಿ ಪರಿಣಮಿಸುತ್ತಾರೆ.

ಈ ಘಟನೆ ರಾವಣ ಸೀತೆಯನ್ನು ಅಪಹರಿಸಿದ್ದ ಆ ಸಂದರ್ಭದಲ್ಲೇ ಸಂಭವಿಸಿತ್ತು. ರಾಮಲಕ್ಷ್ಮಣರಿಬ್ಬರೂ ಸೀತೆಯನ್ನು ಹುಡುಕುತ್ತ ಅಲೆಯುತ್ತಿದ್ದರು. ಇತ್ತ ಸುಗ್ರೀವ ಹನುಮಂತರು ವಾಲಿಯಿಂದ ಮತ್ತೆ ಸಿಂಹಾಸನವನ್ನು ಪಡೆಯಲು ನೆರವಾಗುವ ಗೆಳೆಯರಿಗಾಗಿ ಹುಡುಕುತ್ತ ಅಲೆಯುತ್ತಿದ್ದರು. ಈ ಸ್ಥಿತಿಯಲ್ಲಿ ಈ ಇಬ್ಬರೂ ಆಕಸ್ಮಿಕವಾಗಿ ಭೇಟಿಯಾಗುತ್ತಾರೆ. ಪರಸ್ಪರ ತಂತಮ್ಮ ಕಷ್ಟಸುಖಗಳನ್ನು ಹೇಳಿಕೊಂಡಾದ ಮೇಲೆ ಒಂದು ಒಪ್ಪಂದಕ್ಕೆ ಬರುತ್ತಾರೆ. ಅದರಂತೆ ಸುಗ್ರೀವ ವಾಲಿಯನ್ನು ಕೊಂದು ಕಿಷ್ಕಿಂಧೆಯ ಸಿಂಹಾಸನವೇರಲು ರಾಮನು ಸಹಾಯ ಮಾಡಬೇಕು. ಹಾಗೆಯೇ ಸುಗ್ರೀವ ಹನುಮಂತರು ಸೀತೆಯನ್ನು ಹುಡುಕಿ ಮರಳಿ ಪಡೆಯಲು ರಾಮನಿಗೆ ನೆರವಾಗಬೇಕು ಎಂದು ಪರಸ್ಪರ ಒಪ್ಪಂದಕ್ಕೆ ಬರುತ್ತಾರೆ. ಈ ಒಪ್ಪಂದದಂತೆ ತನ್ನ ಕಾರ್ಯವನ್ನು ನೆರವೇರಿಸಲು ರಾಮನು ಒಂದೇ ರೀತಿಯಾಗಿದ್ದ ವಾಲಿ ಸುಗ್ರೀವರನ್ನು ಗುರುತಿಸಲು ಸುಗ್ರೀವನು ಒಂದು ಹಾರವನ್ನೂ ಹಾಕಿಕೊಳ್ಳಬೇಕೆಂದನು. ವಾಲಿಯೊಡನೆ ದ್ವಂದ್ವಯುದ್ಧ ಏರ್ಪಟ್ಟು ಯೋಜನೆಯಂತೆ ಸುಗ್ರೀವ ಹಾರ ಹಾಕಿಕೊಂಡು ಯುದ್ಧ ಮಾಡುತ್ತಿದ್ದಾಗ ಮರದ ಮರೆಯಲ್ಲಿದ್ದ ರಾಮನು ತನ್ನ ಬಾಣದಿಂದ ವಾಲಿಯನ್ನು ಕೊಂದು ಸುಗ್ರೀವನು ಕಿಷ್ಕಿಂಧೆಯ ರಾಜನಾಗಲು ದಾರಿಯನ್ನು ಸುಗಮಮಾಡುತ್ತಾನೆ. ವಾಲಿಯ ಈ ಕೊಲೆ ರಾಮನ

ವ್ಯಕ್ತಿತ್ವಕ್ಕೆ ಅಂಟಿದ ದೊಡ್ಡ ಕಳಂಕ. ವಾಲಿಗೆ ರಾಮನೊಡನೆ ಯಾವ ವೈರವೂ ಇಲ್ಲದಿದ್ದರೂ ಯಾವ ಪ್ರಚೋದನೆಯೂ ಇಲ್ಲದಿದ್ದರೂ ಈ ಕೊಲೆ ನಡೆಯುತ್ತದೆ. ನಿರಾಯುಧನಾದ ವಾಲಿಯ ಮೇಲೆ ಬಚ್ಚಿಟ್ಟುಕೊಂಡು ಬಾಣಪ್ರಯೋಗ ಮಾಡಿದ್ದು ಹೇಡಿ ಕೆಲಸ. ಇದೊಂದು ಸಂಚಿನ ಕೊಲೆ.

ಇನ್ನು ತನ್ನ ಧರ್ಮಪತ್ನಿ ಸೀತೆಯನ್ನು ಸ್ವತಃ ರಾಮನೇ ಹೇಗೆ ನಡೆಸಿಕೊಂಡ ಎಂಬುದನ್ನು ನೋಡುವ. ಸುಗ್ರೀವ ಹನುಮಂತರು ಸಂಘಟಿಸಿದ ಸೇನೆಯ ನೆರವಿನಿಂದ ರಾಮ ಲಂಕೆಗೆ ದಾಳಿ ಮಾಡುತ್ತಾನೆ. ಇಲ್ಲಿ ಕೂಡ ರಾಮನು ಹಿಂದೆ ವಾಲಿ ಸುಗ್ರೀವರ ನಡುವೆ ಎಸಗುವ ಹೀನ ಕೃತ್ಯವನ್ನೇ ಮತ್ತೆ ಎಸಗುತ್ತಾನೆ. ರಾವಣ ಮತ್ತು ಅವನ ಮಗನನ್ನು ಕೊಂದು ಪಟ್ಟ ಕಟ್ಟುವುದಾಗಿ ರಾವಣನ ಸೋದರ ವಿಭೀಷಣನ ಸಹಕಾರವನ್ನು ಪಡೆಯುತ್ತಾನೆ. ರಾಮನು ರಾವಣನನ್ನು ಮತ್ತು ಅವನ ಮಗ ಇಂದ್ರಜಿತ್‌ನನ್ನೂ ಕೊಲ್ಲುತ್ತಾನೆ. ಯುದ್ಧ ಮುಗಿದಾಗ ತನ್ನ ಪ್ರಥಮ ಕೆಲಸವಾಗಿ ರಾಮನು ರಾವಣನ ಶವಸಂಸ್ಕಾರವನ್ನು ಸಕಲ ಗೌರವಗಳೊಡನೆ ನೆರವೇರಿಸುತ್ತಾನೆ. ಇದಾದ ಮೇಲೆ ರಾಮನು ವಿಭೀಷಣನ ಪಟ್ಟಾಭಿಷೇಕದಲ್ಲಿ ಮಗ್ನನಾಗಿದ್ದು ಅದು ಮುಗಿದ ಮೇಲೆಯೇ ಹನುಮಂತನನ್ನು ಸೀತೆಯ ಬಳಿಗೆ ಕಳಿಸಿ ತಾನೂ ಲಕ್ಷ್ಮಣ, ಸುಗ್ರೀವರು ರಾವಣನನ್ನು ಹತಮಾಡಿ ತಾವು ಆರೋಗ್ಯವಾಗಿ ಗಟ್ಟಿಮುಟ್ಟಾಗಿರುವ ಸಮಾಚಾರವನ್ನು ತಲುಪಿಸುತ್ತಾನೆ.

ರಾವಣ ಕತೆ ಮುಗಿಸಿದ ಮೇಲೆ ರಾಮನ ಮೊದಲ ಕೆಲಸ ಸೀತೆಯ ಬಳಿಗೆ ಧಾವಿಸುವುದಾಗಬೇಕಿತ್ತು. ಆದರೆ ಅವನು ಹಾಗೆ ಮಾಡುವುದಿಲ್ಲ. ಸೀತೆಗಿಂತ ಪಟ್ಟಾಭಿಷೇಕದ ಮೇಲೇ ಅವನ ಆಸಕ್ತಿ ಹೆಚ್ಚಾಗಿತ್ತು. ಪಟ್ಟಾಭಿಷೇಕ ಮುಗಿದ ಮೇಲಾದರೂ ಸ್ವತಃ ತಾನೇ ಹೋಗದೆ ಹನುಮಂತನನ್ನು ಕಳಿಸುತ್ತಾನೆ. ಜೊತೆಗೆ ಅವನು ಹೇಳಿಕಳುಹಿಸುವ ಸಂದೇಶವಾದರೂ ಏನು? ಆತ ಹನುಮಂತನಿಗೆ ಸೀತೆಯನ್ನು ಕರೆತರುವಂತೆ ಹೇಳಿಕಳುಹಿಸುವುದಿಲ್ಲ. ಬದಲಾಗಿ ತಾನು ಆರೋಗ್ಯವಾಗಿ ಗಟ್ಟಿಮುಟ್ಟಾಗಿರುವ ಸಮಾಚಾರವನ್ನು ಸೀತೆಗೆ ತಿಳಿಸಲು ಹೇಳಿ ಕಳುಹಿಸುತ್ತಾನೆ. ಸೀತೆಯೇ ರಾಮನನ್ನು ನೋಡಬೇಕೆಂಬ ಬಯಕೆಯನ್ನು ಹನುಮಂತನಲ್ಲಿ ನಿವೇದಿಸುತ್ತಾಳೆ. ರಾವಣನಿಂದ ಅಪಹರಿಸಲ್ಪಟ್ಟು ಹತ್ತು ತಿಂಗಳಿಗೂ ಹೆಚ್ಚುಕಾಲ ಸೆರೆ ಅನುಭವಿಸಿದ ತನ್ನ ಸ್ವಂತ ಹೆಂಡತಿಯನ್ನೇ ನೋಡಲು ಹೋಗುವುದಿಲ್ಲ. ಸೀತೆಯನ್ನು ರಾಮನ ಬಳಿಗೆ ಕರೆತಂದಾಗ ರಾಮನು ಆಡುವ ಮಾತುಗಳಾದರು ಏನು? ಸ್ವತಃ ವಾಲ್ಮೀಕಿಯೇ ಬರೆಯದಿದ್ದ ಪಕ್ಷದಲ್ಲಿ, ಸಾಧಾರಣ ಮಾನವೀಯತೆಯುಳ್ಳ ಯಾವ ಮನುಷ್ಯನೂ ರಾಮನಷ್ಟು ಕಠೋರವಾಗಿ ತನ್ನ ಹೆಂಡತಿಗೆ ಹೇಳಿರಲಾರನೆಂದು ಅಂದುಕೊಳ್ಳಬಹುದಿತ್ತು. ರಾಮನು ಸೀತೆಗೆ ಸಂಬೋಧಿಸಿದ ಪರಿ ಹೀಗಿದೆ:

"ನಿನ್ನನ್ನು ಸೆರೆಯಾಗಿಟ್ಟುಕೊಂಡಿದ್ದ ನನ್ನ ಶತ್ರುವನ್ನು ರಣರಂಗದಲ್ಲಿ ಕೊಂದು ನಿನ್ನನ್ನು ದ್ವಿಗಿಜಯದ ಬಹುಮಾನವಾಗಿ ಪಡೆದಿದ್ದೇನೆ. ನನ್ನ ಶತ್ರುವನ್ನು ಶಿಕ್ಷಿಸಿ ನನ್ನ ಗೌರವವನ್ನು ಮರಳಿ ಪಡೆದಿದ್ದೇನೆ. ಜನರು ನನ್ನ ಸೈನ್ಯದ ಸಾಮರ್ಥ್ಯವನ್ನು ನೋಡಿದ್ದಾರೆ. ನನ್ನ ಶ್ರಮ ಸಾರ್ಥಕವಾದುದು ನನಗೆ ಸಂತೋಷ ತಂದಿದೆ. ನನಗಂಟಿದ ಅಗೌರವ ಕಳಂಕವನ್ನು ತೊಳೆಯುವ ಸಲುವಾಗಿ ರಾವಣನನ್ನು ಕೊಲ್ಲಲು ಲಂಕೆಗೆ ಬಂದೆ. ಈ ಕಷ್ಟಕಾರ್ಪಣ್ಯ ಅನುಭವಿಸಿದ್ದೆಲ್ಲಾ ನಿನಗೋಸ್ಕರ ಅಲ್ಲ."

ಹೀಗೆ ರಾಮ ಸೀತೆಯೊಡನೆ ನಡೆದುಕೊಳ್ಳುತ್ತಾನೆ. ಇದಕ್ಕಿಂತಲೂ ಕ್ರೌರ್ಯ ಮತ್ತೊಂದು ಇರಬಲ್ಲುದೆ? ಆತ ಇಲ್ಲಿಗು ನಿಲ್ಲಿಸುವುದಿಲ್ಲ. ಮತ್ತೆ ಮುಂದುವರಿದು ರಾಮ ಹೇಳುತ್ತಾನೆ:

"ನಿನ್ನ ಶೀಲದ ಬಗ್ಗೆ ನನಗೆ ಅನುಮಾನವಿದೆ. ರಾವಣನಿಂದ ನೀನು ಕೆಡಿಸಲ್ಪಟ್ಟವಳಾಗಿರಲೇಬೇಕು. ನಿನ್ನನ್ನು ನೋಡುವುದಕ್ಕೂ ನನಗೆ ಹಿಂಸೆಯಾಗುತ್ತಿದೆ. ಓ ಜನಕನ ಪುತ್ರಿಯೇ, ನಿನ್ನ ಇಷ್ಟ ಬಂದಕಡೆ ನೀನು ಹೋಗಲು ನಾನು ಅನುಮತಿಸುತ್ತೇನೆ. ಈಗ ನಿನ್ನೊಡನೆ ನನಗಾವ ಸಂಬಂಧವೂ ಇಲ್ಲ. ನಾನು ನಿನ್ನನ್ನು ಮರಳಿ ಗೆದ್ದಿದ್ದೇನೆ. ಅದಷ್ಟೇ ನನ್ನ ಉದ್ದೇಶವಾದ್ದರಿಂದ ನನಗೀಗ ತೃಪ್ತಿಯಾಗಿದೆ. ನಿನ್ನಂಥ ಓರ್ವ ಸುಂದರಿಯನ್ನು ರಾವಣ ಅನುಭೋಗಿಸದೆ ಬಿಟ್ಟಿರುತ್ತಾನೆಂದು ನಂಬಲು ನನಗೆ ಸಾಧ್ಯವಾಗುತ್ತಿಲ್ಲ."

ಸೀತೆ ಸಹಜವಾಗಿಯೇ ರಾಮನನ್ನು ನೀಚ, ಕ್ಷುದ್ರಜೀವಿ ಎಂದು ಜರೆಯುತ್ತಾಳೆ. ಅಪಹೃತ ಹೆಣ್ಣು ಎಂಬ ಕಾರಣದಿಂದ ತನ್ನನ್ನು ತ್ಯಜಿಸಿರುವುದಾಗಿ ಹನುಮಂತ ಮೊದಲ ಭೇಟಿಯಲ್ಲೇ ರಾಮ ಹೇಳಿಸಿಬಿಟ್ಟಿದ್ದರೆ ಆಗಲೇ ತಾನು ಆತ್ಮಹತ್ಯೆ ಮಾಡಿಕೊಂಡು ರಾಮನಿಗೆ ಇಷ್ಟೆಲ್ಲಾ ಕಷ್ಟಕೋಟಲೆಗಳು ಬಾರದಂತೆ ಮಾಡುತ್ತಿದ್ದೆನೆಂದು ಸೀತೆ ಸರಳವಾಗಿ ನುಡಿಯುತ್ತಾಳೆ. ಆತನಿಗೆ ಯಾವ ಸಬೂಬನ್ನೂ ಹೇಳಲು ಅವಕಾಶ ಕೊಡದೆ ಸೀತೆ ತನ್ನ ಪಾವಿತ್ರ್ಯವನ್ನು ಸಾಬೀತುಪಡಿಸಲು ಸಿದ್ಧಳಾಗುತ್ತಾಳೆ. ಅಗ್ನಿಪರೀಕ್ಷೆಗೊಳಗಾಗಿ ಕೂದಲು ಕೊಂಕದೆ ಹೊರಬರುತ್ತಾಳೆ. ದೇವತೆಗಳು ಇದರಿಂದ ಸಂತೃಪ್ತರಾಗಿ ಸೀತೆ ಪರಿಶುದ್ಧಳೆಂದು ಸಾರುತ್ತಾರೆ. ಇದಾದ ಮೇಲೆಯೇ ರಾಮನು ಒಪ್ಪಿ ಅವಳನ್ನು ಅಯೋಧ್ಯೆಗೆ ಕರೆದೊಯ್ಯುತ್ತಾನೆ.

ಇನ್ನು ಹಾಗೆ ಅವಳನ್ನು ಅಯೋಧ್ಯೆಗೆ ಕರೆತಂದ ಮೇಲೆ ರಾಮ ಮಾಡಿದ್ದಾದರೂ ಏನು? ಅಂತೂ ಅವನು ರಾಜನಾಗುತ್ತಾನೆ. ಸೀತೆಯೂ ರಾಣಿಯಾಗುತ್ತಾಳೆ. ಈ ಪ್ರಸಂಗ ರಾಮನ ಅಪಖ್ಯಾತಿಯನ್ನು ಹೆಚ್ಚಿಸುತ್ತದೆ. ರಾಮ ಸೀತೆಯ ಪಟ್ಟಾಭಿಷೇಕವಾದ ಕೆಲ ಕಾಲದ ನಂತರ ಸೀತೆ ಗರ್ಭವತಿಯಾಗುತ್ತಾಳೆಂದು ವಾಲ್ಮೀಕಿ ತನ್ನ ರಾಮಾಯಣದಲ್ಲಿ ಉಲ್ಲೇಖಿಸುತ್ತಾನೆ. ಸೀತೆ ಗರ್ಭವತಿಯಾಗಲು ಕೆಲವು ಹುಳಿಹಿಂಡುವ ಅಯೋಧ್ಯಾ ನಿವಾಸಿಗಳು ಸೀತೆ ಲಂಕೆಯಲ್ಲೇ ರಾವಣನಿಂದ ಗರ್ಭಿಣಿಯಾಗಿರಬೇಕೆಂದೂ ಅಂಥವಳನ್ನು ಮತ್ತೆ ಸ್ವೀಕರಿಸಿದ ರಾಮನನ್ನು ದೂಷಿಸತೊಡಗುತ್ತಾರೆ. ಪಟ್ಟಣದಲ್ಲಿ ಹರಡಿದ ಈ ಕೆಟ್ಟ ವದಂತಿಯನ್ನು ಆಸ್ಥಾನ ವಿದೂಷಕ ಭದ್ರ ರಾಮನಿಗೆ ಮುಟ್ಟಿಸುತ್ತಾನೆ. ಈ ಅಪವಾದಕ್ಕೆ ರಾಮ ಪ್ರಕ್ಷುಬ್ಧನಾಗುತ್ತಾನೆ. ಈ ಅಗೌರವ ಅವನನ್ನು ಆವರಿಸಿಕೊಳ್ಳುತ್ತದೆ. ಇದು ಸಹಜವೇ. ಆದರೆ ಈ ಅಗೌರವದಿಂದ ತಪ್ಪಿಸಿಕೊಳ್ಳಲು ಅವನು ತುಳಿಯುವ ಹಾದಿ ಮಾತ್ರ ಸಹಜವಾದುದಲ್ಲ. ಈ ಅಪವಾದದಿಂದ ಮುಕ್ತನಾಗಲು ಆತ ಅನುಸರಿಸುವ ಮಾರ್ಗವಂತೂ ದೂರದೃಷ್ಟಿಯಿಂದ, ವಿವೇಕದಿಂದ ಕೂಡಿದುದಲ್ಲ. ಈ ಅಪಮಾನವನ್ನು ಪರಿಹರಿಸಿಕೊಳ್ಳಲು ಅವನು ಅಡ್ಡದಾರಿಯನ್ನು ಮತ್ತು ಸುಲಭ ವಿಧಾನವನ್ನು (ಮಾರ್ಗವನ್ನು) ಅನುಸರಿಸುತ್ತಾನೆ. ಅಂದರೆ ಅವಳನ್ನು ತುಂಬುಗರ್ಭಿಣಿಯನ್ನು, ಒಬ್ಬಂಟಿಯಾಗಿ, ಅನ್ನಾಹಾರಗಳಿಲ್ಲದಂತೆ, ಅವಳಿಗೆ ಗೊತ್ತಾಗದಂತೆ ಮೋಸದಿಂದ ಪರಿತ್ಯಜಿಸಿ ಕಾಡಿಗಟ್ಟುತ್ತಾನೆ. ಸೀತೆಯನ್ನು ಹೀಗೆ ಪರಿತ್ಯಜಿಸುವ ಯೋಚನೆಯು ರಾಮನಿಗೆ ತತ್‌ಕ್ಷಣದಲ್ಲಿ ದಿಢೀರನೆ ಹುಟ್ಟಿದ್ದಲ್ಲ ಎಂಬುದರಲ್ಲಿ ಅನುಮಾನವಿಲ್ಲ. ಈ ಆಲೋಚನೆಯ ಮೂಲ, ಅದರ ಬೆಳವಣಿಗೆ ಮತ್ತು ಅದನ್ನು ಕಾರ್ಯಗತಗೊಳಿಸಿದ ಉಪಾಯಗಳು ವಿವರವಾದ ಮಂಡನೆಗೆ ಯೋಗ್ಯವಾಗಿದೆ. ಪಟ್ಟಣದಲ್ಲಿ ಪ್ರಜೆಗಳು ಸೀತೆಯ ಬಗ್ಗೆ ಮಾತನಾಡಿಕೊಳ್ಳುತ್ತಿರುವ

ವಿಷಯವನ್ನು ಭದ್ರನು ವರದಿ ಒಪ್ಪಿಸಿದಾಗ ರಾಮನು ತನ್ನ ತಮ್ಮಂದಿರನ್ನು ಕರೆಸಿ ಅವರೊಡನೆ ತನ್ನ ಅನಿಸಿಕೆಗಳನ್ನು ತಿಳಿಸುತ್ತಾನೆ. ಲಂಕೆಯಲ್ಲಿ ಸೀತೆಯ ಪಾವಿತ್ರ್ಯ ಮತ್ತು ಪರಿಶುದ್ಧತೆಯು ಸಾಬೀತಾಗಿತ್ತು. ಅದಕ್ಕೆ ದೇವತೆಗಳು ಸಾಕ್ಷಿ ನೀಡಿದ್ದರು. ಮತ್ತು ತನಗೆ ಅವಳ ಮುಗ್ಧತೆ, ಪರಿಶುದ್ಧತೆ ಮತ್ತು ಪಾವಿತ್ರ್ಯಗಳಲ್ಲಿ ಸಂಪೂರ್ಣ ನಂಬಿಕೆ ಇದೆ ಎಂದು ಹೇಳುತ್ತಾನೆ. "ಆದರೂ ಪ್ರಜೆಗಳು ಸೀತೆಯ ಬಗ್ಗೆ ಆಡಿಕೊಳ್ಳುತ್ತಿದ್ದಾರೆ. ನನ್ನನ್ನು ದೂಷಿಸುತ್ತಿದ್ದಾರೆ ಮತ್ತು ಅಪಮಾನಕ್ಕೀಡುಮಾಡುತ್ತಿದ್ದಾರೆ. ಇಂಥ ಅಪಮಾನವನ್ನು ಯಾರೂ ಸಹಿಸಿಕೊಳ್ಳುವುದಿಲ್ಲ. ಮರ್ಯಾದೆ ಎನ್ನುವುದು ಬಹಳ ದೊಡ್ಡ ಆಸ್ತಿ. ದೇವತೆಗಳು ಮತ್ತು ದೊಡ್ಡ ಮನುಷ್ಯರು ಅದನ್ನುಳಿಸಿಕೊಳ್ಳಲು ಹೆಣಗುತ್ತಾರೆ. ಈ ಅಪಮಾನ ಮತ್ತು ಅಪಕೀರ್ತಿಯನ್ನು ನಾನು ಸಹಿಸಲಾರೆ. ಇಂಥ ಅಪಮಾನ ಮತ್ತು ಅಪಕೀರ್ತಿಗಳನ್ನು ಪರಿಹರಿಸಲು ಬೇಕಾದರೆ ನಾನು ನಿಮ್ಮನ್ನು ಬಿಟ್ಟುಬಿಡಬಲ್ಲೆ (ಪರಿತ್ಯಜಿಸಬಲ್ಲೆ). ಸೀತೆಯನ್ನು ಪರಿತ್ಯಜಿಸಲು ನಾನು ಹಿಂಜರಿಯುತ್ತೇನೆಂದು ಭಾವಿಸಬೇಡಿ."

ಸಾರ್ವಜನಿಕ ಅಪನಿಂದೆಯಿಂದ ತಪ್ಪಿಸಿಕೊಳ್ಳಲು ರಾಮನು ತಾನು ಹಿಡಿಯುತ್ತಿರುವ ದಾರಿ ಸರಿಯೋ ಅಲ್ಲವೋ ಎಂಬುದನ್ನು ತಿಳಿಯಲೂ ಪ್ರಯತ್ನಿಸದೆ ಸೀತೆಯನ್ನು ಪರಿತ್ಯಜಿಸಲು ಆಗಲೇ ಮನಸ್ಸು ಮಾಡಿದ್ದ ಎಂಬುದನ್ನು ಈ ಮಾತುಗಳು ಸೂಚಿಸುತ್ತವೆ. ಸೀತೆಯ ಬದುಕು ಲೆಕ್ಕಕ್ಕೆ ಬರಲಿಲ್ಲ. ಅವನ ವೈಯಕ್ತಿಕ ಹೆಸರು ಮತ್ತು ಪ್ರಸಿದ್ಧಿ ಮಾತ್ರ ಮುಖ್ಯವಾಯಿತು. ಆ ಗಾಳಿ ಮಾತನ್ನು ತಡೆಗಟ್ಟುವ ಧೈರ್ಯ ಅವನು ಮಾಡುವುದಿಲ್ಲ. ರಾಜನಾಗಿ ಅದು ಅವನಿಗೆ ಸಾಧ್ಯವಿತ್ತು. ಮತ್ತು ಗಂಡನಾಗಿ ತನ್ನ ಹೆಂಡತಿಯ ಮುಗ್ಧತೆಯನ್ನು ತಿಳಿದಿದ್ದವನಾಗಿ ಆ ಕೆಲಸ ಅವನು ಮಾಡಬೇಕಿತ್ತು. ಅವನು ಜನರ ಗಾಳಿ ಮಾತಿಗೆ ಶರಣಾದ. ಇದನ್ನು ಆಧಾರವಾಗಿಟ್ಟುಕೊಂಡು ರಾಮನು ಒಬ್ಬ ಪ್ರಜಾಪ್ರಭುತ್ವವಾದಿ ರಾಜನಾಗಿದ್ದ ಎಂದು ನಿರೂಪಿಸುವ ಹಿಂದೂಗಳಿಗೇನು ಕೊರತೆಯಿಲ್ಲ. ಆದರೆ ಇದರಿಂದಲೇ ಅವನೊಬ್ಬ ದುರ್ಬಲ ಮತ್ತು ಹೇಡಿ ರಾಜನಾಗಿದ್ದನೆಂದು ತೋರಿಸಬಹುದು. ಇರಲಿ, ತನ್ನ ಮರ್ಯಾದೆಯನ್ನು ಕಾಪಾಡಿಕೊಳ್ಳುವ ಇಂಥ ಕ್ರೂರ ಉಪಾಯವನ್ನು ರಾಮನು ತಮ್ಮಂದಿರಿಗೆ ತಿಳಿಸುತ್ತಾನೆಯೇ ಹೊರತು ಆ ಗಾಳಿ ಮಾತಿಗೆ ಗುರಿಯಾದ ಸೀತೆಗೆ, "ಯಾರಿಗೆ ತಿಳಿಸಲೇಬೇಕಾಗಿತ್ತೋ ಅಂಥ ಸೀತೆಯನ್ನು ಸಂಪೂರ್ಣ ಕತ್ತಲಲ್ಲಿಡುತ್ತಾನೆ. ಈ ವಿಷಯವನ್ನು ಸೀತೆಯಿಂದ ರಾಮನು ಗೌಪ್ಯವಾಗಿಟ್ಟು ತನ್ನ ಉಪಾಯವನ್ನು ಕಾರ್ಯಗತಗೊಳಿಸುವ ಅವಕಾಶಕ್ಕಾಗಿ ಕಾಯುತ್ತಾನೆ. ಕೊನೆಗೆ ಸೀತೆಯ ಕ್ರೂರ ವಿಧಿಯೇ ಅವನು ಕಾಯುತ್ತಿದ್ದ ಅವಕಾಶವನ್ನು ಒದಗಿಸುತ್ತದೆ. ಬಸುರಿಯರಾದ ಹೆಂಗಸರು ಎಲ್ಲ ತರದ ವಸ್ತುಗಳ ಬಗ್ಗೆ ಎಲ್ಲ ತರದ ಬಯಕೆಗಳನ್ನು ವ್ಯಕ್ತಪಡಿಸುತ್ತಾರೆ. ರಾಮನಿಗೆ ಈ ವಿಷಯ ತಿಳಿದಿತ್ತು. ಒಂದು ದಿನ ರಾಮ, ಸೀತೆಗೆ ಏನಾದರೂ ಬಯಕೆ ಇದೆಯೇ ಎಂದು ಕೇಳುತ್ತಾನೆ. ಅವಳು ಹೌದು ಎನ್ನುತ್ತಾಳೆ. ಅದೇನೆಂದು ರಾಮ ಕೇಳುತ್ತಾನೆ. ಅದಕ್ಕವಳು ಗಂಗಾನದಿಯ ತೀರದಲ್ಲಿರುವ ಆಶ್ರಮದಲ್ಲಿ ಹಣ್ಣು ಮತ್ತು ಗೆಡ್ಡೆಗೆಣಸುಗಳನ್ನು ಸೇವಿಸಿಕೊಂಡು ಒಂದು ರಾತ್ರಿಯ ಮಟ್ಟಿಗಾದರೂ ಇರಬೇಕೆಂಬ ಆಸೆಯನ್ನು ವ್ಯಕ್ತಪಡಿಸುತ್ತಾಳೆ. ಇದನ್ನು ಕೇಳಿದವನೇ ರಾಮ ತಕ್ಷಣ "ಯೋಚಿಸಬೇಡ ಪ್ರಿಯೆ, ನಾಳೆಯೇ ನಿನ್ನನ್ನು ಅಲ್ಲಿಗೆ ಕಳುಹಿಸುವ ಏರ್ಪಾಡು ಮಾಡುತ್ತೇನೆ" ಎನ್ನುತ್ತಾನೆ. ಇದನ್ನು ಪ್ರೀತಿಸುವ ಗಂಡನ ಒಂದು ಪ್ರಾಮಾಣಿಕ ಭರವಸೆ ಎಂದು ಭಾವಿಸುತ್ತಾಳೆ. ಆದರೆ ರಾಮ ಏನು ಮಾಡುತ್ತಾನೆ! ಸೀತೆಯನ್ನು ಕಾಡಿಗಟ್ಟಲು ತನ್ನ ಯೋಚನೆಯನ್ನು ಕಾರ್ಯಗತಗೊಳಿಸಲು

ಈ ಸಂದರ್ಭವನ್ನು ಬಳಸಿಕೊಳ್ಳುವುದಕ್ಕಾಗಿ ತಿಳಿಸುತ್ತಾನೆ. ಸೀತೆಯ ಪರವಾಗಿ ಅವರು ಯಾರೂ ಅಡ್ಡಿ ಮಾಡಬಾರದೆಂದು ಹೇಳುತ್ತಾನೆ. ಮತ್ತು ಈ ವಿಷಯದಲ್ಲಿ ಅವರು ಯಾರಾದರೂ ಅಡ್ಡಿ ಬಂದರೆ ಅಂಥವರನ್ನು ತನ್ನ ಶತ್ರುಗಳೆಂದು ಭಾವಿಸುವುದಾಗಿ ಎಚ್ಚರಿಸುತ್ತಾನೆ. ನಂತರ ಲಕ್ಷ್ಮಣನಿಗೆ ಮಾರನೆಯ ದಿನ ಒಂದು ರಥವನ್ನು ಹೂಡಿಕೊಂಡು ಸೀತೆಯನ್ನು ಕರೆದುಕೊಂಡು ಹೋಗಿ ಗಂಗಾನದಿಯ ತಟದಲ್ಲಿ ಅವಳನ್ನು ಬಿಟ್ಟುಬರುವಂತೆ ಆದೇಶಿಸುತ್ತಾನೆ. ರಾಮನು ಸೀತೆಯ ಬಗ್ಗೆ ತೆಗೆದುಕೊಂಡಿರುವ ನಿರ್ಧಾರವನ್ನು ಅವಳಿಗೆ ತಿಳಿಸುವ ಧೈರ್ಯ ತಂದುಕೊಳ್ಳುವುದು ಹೇಗೆಂದು ಲಕ್ಷ್ಮಣನಿಗೆ ಗೊತ್ತಿರಲಿಲ್ಲ. ಇದನ್ನು ಅರಿತ ರಾಮ ಈಗಾಗಲೇ ಸೀತೆಯು ಗಂಗಾನದಿಯ ತಟದಲ್ಲಿ ಕೆಲಕಾಲ ಕಳೆಯುವ ಬಯಕೆಯನ್ನು ವ್ಯಕ್ತಪಡಿಸಿದ್ದಾಳೆಂದು ಹೇಳುವ ಮೂಲಕ ಲಕ್ಷ್ಮಣನ ಮನಸ್ಸಿನ ಹೊರೆಯನ್ನು ಸ್ವಲ್ಪ ಕಡಿಮೆ ಮಾಡುತ್ತಾನೆ. ಈ ಮಾತುಕತೆಗಳು ರಾತ್ರಿ ನಡೆಯುತ್ತದೆ. ಮರುದಿನ ಬೆಳಿಗ್ಗೆ ಲಕ್ಷ್ಮಣನು ಸುಮಂತನಿಗೆ ರಥಕ್ಕೆ ಕುದುರೆಗಳನ್ನು ಹೂಡುವಂತೆ ಹೇಳುತ್ತಾನೆ. ಸುಮಂತನು ಅದನ್ನಾಗಲೇ ತಾನು ಮಾಡಿರುವುದಾಗಿ ತಿಳಿಸುತ್ತಾನೆ. ಲಕ್ಷ್ಮಣನು ಅರಮನೆಗೆ ಹೋಗಿ ಸೀತೆಯನ್ನು ಭೇಟಿಮಾಡಿ ರಾಮನೊಂದಿಗೆ ಅವಳು ಗಂಗಾನದಿಯ ದಡದಲ್ಲಿ ಆಶ್ರಮವೊಂದರಲ್ಲಿ ಕೆಲವು ದಿನ ಕಾಲ ಕಳೆಯಬೇಕೆಂದು ಆಸೆ ಪಟ್ಟಿದ್ದನ್ನು ನೆನಪಿಸಿ ಮಾತುಕೊಟ್ಟಂತೆ ರಾಮನು ಆ ಆಸೆಯನ್ನು ಈಡೇರಿಸುವ ಜವಾಬ್ದಾರಿಯನ್ನು ತನಗೆ ವಹಿಸಿದ್ದಾನೆಂದು ತಿಳಿಸುತ್ತಾನೆ. ಅಲ್ಲಿ ಕಾಯುತ್ತಿರುವ ರಥವನ್ನು ತೋರಿಸಿ 'ಹೊರಡೋಣ' ಎನ್ನುತ್ತಾನೆ. ಸೀತೆಯು ರಾಮನ ಬಗ್ಗೆ ಹೃದಯದಲ್ಲಿ ಕೃತಜ್ಞತೆಯನ್ನು ತುಂಬಿಕೊಂಡು ರಥವನ್ನೇರುತ್ತಾಳೆ. ಲಕ್ಷ್ಮಣನ ಜೊತೆಯಲ್ಲಿ ಸುಮಂತನ ಸಾರಥ್ಯದಲ್ಲಿ ರಥವು ಗುರಿಯೆಡೆಗೆ ಸಾಗುತ್ತದೆ. ಕೊನೆಗೆ ಅವರು ಗಂಗಾತೀರಕ್ಕೆ ಬರುತ್ತಾರೆ. ದೋಣಿಯಲ್ಲಿ ಆಚೆ ದಡವನ್ನು ಸೇರುತ್ತಾರೆ. ಲಕ್ಷ್ಮಣ ಸೀತೆಯ ಕಾಲಿಗೆರಗುತ್ತಾನೆ. ಕಣ್ಣುಗಳಿಂದ ಬಿಸಿ ಕಂಬನಿಗಳನ್ನು ಹರಿಸುತ್ತಾ ಹೇಳುತ್ತಾನೆ : "ನನ್ನನ್ನು ಕ್ಷಮಿಸು, ಓ, ನಿಂದಾರಹಿತ ರಾಣಿಯೇ, ನಾನೇನನ್ನು ಎಸಗುತ್ತಿದ್ದೇನೆಯೋ ಅದಕ್ಕಾಗಿ ನನ್ನನ್ನು ಕ್ಷಮಿಸು. ನಿನ್ನನ್ನು ಇಲ್ಲಿ ಬಿಟ್ಟುಬಿಡಲು ನನಗೆ ಅಪ್ಪಣೆಯಾಗಿದೆ. ಏಕೆಂದರೆ ನಿನ್ನನ್ನು ಮನೆಯಲ್ಲಿಟ್ಟುಕೊಂಡಿದ್ದಕ್ಕಾಗಿ ಜನರು ರಾಮನನ್ನು ನಿಂದಿಸುತ್ತಾರೆ."

ರಾಮನಿಂದ ಪರಿತ್ಯಜಿಸಲ್ಪಟ್ಟ, ಕಾಡಿನಲ್ಲಿ ಸಾಯಲೆಂದು ಬಿಟ್ಟ ಸೀತೆಯು ಹತ್ತಿರವೇ ಇದ್ದ ವಾಲ್ಮೀಕಿಯ ಆಶ್ರಮಕ್ಕೆ ಹೋಗುತ್ತಾಳೆ. ವಾಲ್ಮೀಕಿಯು ಅವಳಿಗೆ ರಕ್ಷಣೆ ನೀಡಿ ಆಶ್ರಮದಲ್ಲಿರಿಸಿಕೊಳ್ಳುತ್ತಾನೆ. ಅಲ್ಲಿ ಸೀತೆಯು ಲವ ಮತ್ತು ಕುಶ ಎಂಬ ಅವಳಿ ಮಕ್ಕಳಿಗೆ ಜನ್ಮನೀಡುತ್ತಾಳೆ. ಮೂವರೂ ವಾಲ್ಮೀಕಿಯೊಂದಿಗೆ ಬದುಕುತ್ತಾರೆ. ವಾಲ್ಮೀಕಿಯು ಆ ಹುಡುಗರನ್ನು ಸಾಕಿ ಬೆಳೆಸುತ್ತಾನೆ. ತಾನು ರಚಿಸಿದ ರಾಮಾಯಣ ಹಾಡುವುದನ್ನು ಅವರಿಗೆ ಕಲಿಸುತ್ತಾನೆ. ಆ ಬಾಲಕರು ೧೨ ವರ್ಷಗಳ ಕಾಲ ರಾಮನು ಆಳುತ್ತಿದ್ದ ಅಯೋಧ್ಯೆಗೆ ಅಷ್ಟೇನೂ ದೂರವಲ್ಲದ ಕಾಡಿನ ಆಶ್ರಮದಲ್ಲಿ ಬೆಳೆಯುತ್ತಾರೆ. ಈ ಹನ್ನೆರಡು ವರ್ಷಗಳಲ್ಲಿ ಈ ಆದರ್ಶಪುರುಷ ಮತ್ತು ಪ್ರೇಮದ ತಂದೆ ರಾಮನು ಸೀತೆಗೆ ಏನಾಯಿತು? ಬದುಕಿದ್ದಾಳೋ ಸತ್ತಿದ್ದಾಳೋ ಎಂದು ವಿಚಾರಿಸುವುದಿಲ್ಲ. ಹನ್ನೆರಡು ವರ್ಷಗಳ ನಂತರ ರಾಮನು ವಿಚಿತ್ರ ಸನ್ನಿವೇಶದಲ್ಲಿ ಸೀತೆಯನ್ನು ಭೇಟಿಮಾಡುತ್ತಾನೆ. ರಾಮನು ಯಜ್ಞವೊಂದನ್ನು ನಡೆಸಲು ನಿರ್ಧರಿಸಿ ಎಲ್ಲ ಋಷಿಗಳೂ ಅದರಲ್ಲಿ ಭಾಗವಹಿಸಬೇಕೆಂದು ಅಹ್ವಾನಿಸುತ್ತಾನೆ. ರಾಮನಿಗೇ ತಿಳಿದ ಕಾರಣಗಳಿಂದ ಅಯೋಧ್ಯೆಗೆ ಹತ್ತಿರವೇ ಇದ್ದ ವಾಲ್ಮೀಕಿಗೆ ಆಹ್ವಾನ ಇರುವುದಿಲ್ಲ. ಆದರೆ ವಾಲ್ಮೀಕಿಯು ತಾನೇ ಯಜ್ಞಕ್ಕೆ ಬಂದು

ಸೀತೆಯ ಇಬ್ಬರ ಮಕ್ಕಳನ್ನು ತನ್ನ ಶಿಷ್ಯರೆಂದು ಪರಿಚಯಿಸುತ್ತಾನೆ. ಯಜ್ಞ ಸಾಗುತ್ತಿದ್ದಂತೆ ನೆರೆದವರ ಮುಂದೆ ಹುಡುಗರು ರಾಮಾಯಾಣದ ಹಾಡುಗಾರಿಕೆಯನ್ನು ಮಾಡುತ್ತಾರೆ. ಅದನ್ನು ಕಂಡು ರಾಮನು ಬಹಳ ಸಂತಸಪಡುತ್ತಾನೆ ಮತ್ತು ಆ ಬಾಲಕರು ಯಾರೆಂದು ವಿಚಾರಿಸುತ್ತಾನೆ. ಅವರು ಸೀತೆಯ ಮಕ್ಕಳೆಂದು ತಿಳಿದುಬರುತ್ತದೆ. ಆಗ ಅವನಿಗೆ ಸೀತೆಯ ನೆನಪಾಗುತ್ತದೆ. ಅವನು ಮಾಡಿದ್ದಾದರೂ ಏನು? ಅವನು ಸೀತೆಗೆ ಹೇಳಿ ಕಳಿಸುವುದಿಲ್ಲ. ತಮ್ಮ ಮಾತಾಪಿತೃಗಳ ಪಾಪದ ಬಗ್ಗೆ ಏನೂ ತಿಳಿಯದ, ಕ್ರೂರವಿಧಿಯ ಬಲಿಪಶುಗಳಾದ ಆ ಮುಗ್ಧ ಬಾಲಕರನ್ನು ಕರೆದು ವಾಲ್ಮೀಕಿಗೆ ಸೀತೆಯು ಪರಿಶುದ್ಧಳೂ ಪವಿತ್ರಳೂ ಆಗಿದ್ದರೆ ಸಭೆಗೆ ಬಂದು ಪ್ರತಿಜ್ಞೆ ಮಾಡುವುದರ ಮೂಲಕ ಅವಳ ಮತ್ತು ತನ್ನ ಬಗ್ಗೆ ಬಂದಿರುವ ಅಪಖ್ಯಾತಿಯನ್ನು ಪರಿಹರಿಸಬೇಕೆಂದು ಹೇಳಿಕಳುಹಿಸುತ್ತಾನೆ. ಅದನ್ನು ಅವಳು ಲಂಕೆಯಲ್ಲಿ ಆಗಲೇ ಒಂದು ಸಾರಿ ಮಾಡಿದ್ದಳು. ಇದನ್ನೇ ಕಾಡಿಗಟ್ಟುವ ಮೊದಲು ಪುನಃ ಮಾಡೆಂದು ಕೇಳಬಹುದಿತ್ತು. ತನ್ನ ಚಾರಿತ್ರ್ಯವನ್ನು ನಿರೂಪಿಸಿದ ನಂತರ ರಾಮನು ಅವಳನ್ನು ಸ್ವೀಕರಿಸುತ್ತಾನೆಂಬುದರ ಬಗ್ಗೆ ಯಾವ ಆಶ್ವಾಸನೆಯೂ ಇಲ್ಲ. ವಾಲ್ಮೀಕಿಯು ಅವಳನ್ನು ಸಭೆಗೆ ಕರೆತರುತ್ತಾನೆ. ಅವಳು ರಾಮನ ಮುಂದೆ ನಿಂತಾಗ ಅವನು ಹೇಳುತ್ತಾನೆ; "ಓ ದಶರಥ ಪುತ್ರನೇ, ನೀನು ಜನಾಪವಾದದ ದೆಸೆಯಿಂದಾಗಿ ಬಿಟ್ಟ ಸೀತೆ ಇವಳು. ನೀನು ಅನುಮತಿ ನೀಡಿದರೆ ಇವಳು ತನ್ನ ಪರಿಶುದ್ಧತೆಯ ಬಗ್ಗೆ ಪ್ರತಿಜ್ಞೆ ಮಾಡುತ್ತಾಳೆ. ಇವರಿಬ್ಬರು ನನ್ನ ಆಶ್ರಮದಲ್ಲಿ ನಾನು ಬೆಳೆಸಿದ್ದ ನಿನ್ನ ಅವಳಿ ಮಕ್ಕಳು." "ನನಗೆ ಗೊತ್ತು" ರಾಮ ಹೇಳುತ್ತಾನೆ. "ಸೀತೆ ಪರಿಶುದ್ಧಳು, ಮತ್ತಿವರಿಬ್ಬರು ನನ್ನ ಮಕ್ಕಳೆಂಬುದು. ಸೀತೆ ಲಂಕೆಯಲ್ಲಿ ತನ್ನ ಪರಿಶುದ್ಧತೆಯ ಪುರಾವೆಯಾಗಿ ಅಗ್ನಿಪರೀಕ್ಷೆಗೊಳಗಾದವಳು. ಆದ್ದರಿಂದ ನಾನವಳನ್ನು ಸ್ವೀಕರಿಸಿದೆ. ಆದರೆ ಇಲ್ಲಿ ಜನರಿಗೆ ಇನ್ನೂ ಅನುಮಾನಗಳಿವೆ. ಪುನಃ ಸೀತೆ ಪರೀಕ್ಷೆಗೊಳಗಾಗಲಿ. ಅದನ್ನು ಈ ಎಲ್ಲ ಋಷಿಗಳು ಮತ್ತು ಪ್ರಜೆಗಳು ನೋಡಲಿ."

ಕೈಗಳನ್ನು ಜೋಡಿಸಿ ಕಣ್ಣುಗಳನ್ನು ನೆಲಕ್ಕೆ ಹಾಕಿ ಸೀತೆ ಪ್ರತಿಜ್ಞೆ ಮಾಡುತ್ತಾಳೆ. "ನಾನು ರಾಮನನ್ನು ಬಿಟ್ಟು ನನ್ನ ಮನದಲ್ಲೂ ಬೇರೆ ಗಂಡಸರನ್ನು ಕುರಿತು ಯೋಚಿಸಿಲ್ಲವಾದ್ದರಿಂದ ಭೂಮಿತಾಯಿಯು ಬಾಯ್ತೆರೆದು ನನ್ನನ್ನು ನುಂಗಲಿ. ತಾನು ಯಾವಾಗಲೂ ಮಾತಿನಲ್ಲಿ, ಯೋಚನೆಯಲ್ಲಿ ಮತ್ತು ಕೆಲಸದಲ್ಲಿ ರಾಮನನ್ನೇ ಪ್ರೀತಿಸಿದ್ದರಿಂದ ಭೂಮಿತಾಯಿಯು ಬಾಯ್ತೆರೆದು ನನ್ನನ್ನು ನುಂಗಲಿ." ಈ ಪ್ರತಿಜ್ಞೆಯನ್ನು ಅವಳು ಮಾಡುತ್ತಿದ್ದ ಹಾಗೇ ನಿಜವಾಗಿಯೂ ಭೂಮಿಯು ಬಾಯ್ತೆರೆಯುತ್ತದೆ ಮತ್ತು ಸೀತೆ ಚಿನ್ನದ ಸಿಂಹಾಸನದಲ್ಲಿ ಕುಳಿತಂತೆ ಒಳಕ್ಕೆ ಸಾಗಿಸಲ್ಪಡುತ್ತಾಳೆ. ಮಂತ್ರಮುಗ್ಧರಂತೆ ಎಲ್ಲರೂ ನೋಡುತ್ತಿರುವಾಗ ಆಕಾಶದಿಂದ ಸೀತೆಯ ತಲೆಯ ಮೇಲೆ ಸ್ವರ್ಗದ ಹೂಗಳು ಬೀಳುತ್ತವೆ.

ಇದರ ಅರ್ಥ ಸೀತೆಯು ಪಶುವಿಗಿಂತಲೂ ಉತ್ತಮನೇನಲ್ಲದ ರಾಮನ ಬಳಿಗೆ ಹಿಂದಿರುಗುವ ಬದಲು ಸಾಯುವುದಕ್ಕೆ ಸಿದ್ಧಳಾಗಿದ್ದಳು.

ಇದು ಸೀತೆಯ ದುರಂತ ಮತ್ತು ರಾಮನೆಂಬ ದೇವರ ಅಪರಾಧ. ರಾಮನೆಂಬ ರಾಜನ ಮೇಲೆ ಸ್ವಲ್ಪ ಬೆಳಕು ಹರಿಸೋಣ.

ರಾಮ ಒಬ್ಬ ಆದರ್ಶ ರಾಜ ಎಂದು ಹೇಳಲಾಗುತ್ತದೆ. ಈ ತೀರ್ಮಾನವು ನಿಜವನ್ನು ಆಧರಿಸಿಯೇ?

ನಿಜಕ್ಕೂ ರಾಮನು ರಾಜನಾಗಿ ಕೆಲಸ ಮಾಡುವುದೇ ಇಲ್ಲ. ಆಡಳಿತವು ವಾಲ್ಮೀಕಿಯು ಹೇಳುವಂತೆ ಭರತನಿಗೆ ವಹಿಸಲ್ಪಟ್ಟಿತ್ತು. ಅವನು ತನ್ನ ಪ್ರಜೆಗಳ ಮತ್ತು ರಾಜ್ಯದ ಯೋಗಕ್ಷೇಮ ಮತ್ತು ಚಿಂತೆಗಳಿಂದ

ಮುಕ್ತನಾಗಿದ್ದ. ಅವನು ರಾಜನಾದ ಮೇಲಿನ ದಿನನಿತ್ಯದ ಬದುಕನ್ನು ವಾಲ್ಮೀಕಿಯು ಬಹಳ ವಿವರವಾಗಿ ವಿವರಿಸಿದ್ದಾನೆ[೧]. ರಾಮನು ಬೆಳಿಗ್ಗೆಯಿಂದ ಮಧ್ಯಾಹ್ನದವರೆಗೆ ಧಾರ್ಮಿಕ ವಿಧಿವಿಧಾನಗಳನ್ನು ಆಚರಿಸುತ್ತಾ ಭಕ್ತಿಯನ್ನು ಅರ್ಪಿಸುವಲ್ಲಿ ನಿರತನಾಗಿರುತ್ತಿದ್ದ. ಮಧ್ಯಾಹ್ನದ ನಂತರ ವಿದೂಷಕರೊಂದಿಗೆ ಮತ್ತು ಅಂತಃಪುರದಲ್ಲಿ ಕಾಲಕಳೆಯುತ್ತಿದ್ದ. ಅಂತಃಪುರದಲ್ಲಿ ಬೇಸರವಾದಾಗ ವಿದೂಷಕರೊಂದಿಗೆ, ವಿದೂಷಕರೊಂದಿಗೆ ಬೇಸರವಾದಾಗ ಅಂತಃಪುರದಲ್ಲಿ ಕಾಲಕಳೆಯುತ್ತಿದ್ದ[೨]. ಅವನು ಅಂತಃಪುರದಲ್ಲಿ ಹೇಗೆ ಕಾಲಕಳೆಯುತ್ತಿದ್ದ ಎಂಬ ವಿವರವನ್ನು ವಾಲ್ಮೀಕಿ ವರ್ಣಿಸಿದ್ದಾನೆ. ಈ ಅಂತಃಪುರದಲ್ಲಿ ಅಶೋಕವನವೆಂದು ಕರೆಯುವ ಉದ್ಯಾನವನವಿತ್ತು. ಅಲ್ಲಿ ರಾಮ ಊಟ ಮಾಡುತ್ತಿದ್ದ. ಊಟದಲ್ಲಿ ವಾಲ್ಮೀಕಿಯ ಪ್ರಕಾರ ಎಲ್ಲ ಭಕ್ಷ್ಯ ಭೋಜ್ಯಗಳಿದ್ದವು. ಅದರಲ್ಲಿ ಮಾಂಸ, ಹಣ್ಣು ಮತ್ತು ಮದ್ಯವಿರುತ್ತಿತ್ತು. ರಾಮನೇನು ಪಾನವಿರೋಧಿಯಾಗಿಲಿಲ್ಲ. ರಾಮನು ಯಥೇಚ್ಛವಾಗಿ ಕುಡಿಯುತ್ತಿದ್ದ. ತಾನು ಕುಡಿಯುವಾಗ ಸೀತೆಯೂ ಜೊತೆ ಸೇರುವಂತೆ ನೋಡಿಕೊಳ್ಳುತ್ತಿದ್ದ ಎಂದು ವಾಲ್ಮೀಕಿ ದಾಖಲಿಸುತ್ತಾನೆ[೩]. ವಾಲ್ಮೀಕಿಯು ಕೊಡುವ ಅಂತಃಪುರದ ಚಿತ್ರಣದಂತೆ ಹಾಗೆ ಕುಡಿಯುವುದು ಯಾವ ರೀತಿಯಲ್ಲೂ ಅಪರಾಧವಾಗಿರಲಿಲ್ಲ. ಅಲ್ಲಿ ಅಪ್ಸರೆಯರು, ನಾಗರು ಮತ್ತು ಕಿನ್ನರರು ಹಾಡಿ ಕುಣಿಯುತ್ತಿದ್ದರು. ಬೇರೆ ಬೇರೆ ಸ್ಥಳಗಳಿಂದ ಕರೆತಂದ ಸುಂದರ ಹೆಣ್ಣುಗಳು ಇದ್ದರು. ಇವರ ನಡುವೆ ಕುಳಿತು ರಾಮ ಕುಡಿದು ಕುಣಿಯುತ್ತಿದ್ದ. ಅವರು ರಾಮನನ್ನು ಖುಷಿಪಡಿಸುತ್ತಿದ್ದರು. ರಾಮ ಅವರಿಗೆ ಮಾಲೆ ಹಾಕುತ್ತಿದ್ದ. ವಾಲ್ಮೀಕಿಯು ರಾಮನನ್ನು 'ಸ್ತ್ರೀಲೋಲರಲ್ಲೇ ರಾಜ' ಎಂದು ಕರೆಯುತ್ತಾನೆ. ಇದು ಒಂದು ದಿನದ ಕತೆಯಲ್ಲ. ಇದು ಅವನ ಜೀವನದ ವ್ಯವಸ್ಥಿತ ಭಾಗವಾಗಿತ್ತು.

ಮೊದಲೇ ಹೇಳಿದ ಹಾಗೆ ರಾಮ ಸಾರ್ವಜನಿಕ ವ್ಯವಹಾರದಲ್ಲಿ ಭಾಗವಹಿಸುತ್ತಿರಲಿಲ್ಲ. ಅವನು ಭಾರತದ ಪ್ರಾಚೀನ ರಾಜರಂತೆ ಪ್ರಜೆಗಳ ಕಷ್ಟಸುಖಗಳನ್ನು ಕೇಳಿ ಪರಿಹಾರೋಪಾಯಗಳನ್ನು ಕೈಗೊಳ್ಳುತ್ತಿರಲಿಲ್ಲ. ವಾಲ್ಮೀಕಿಯು ಒಂದೇ ಒಂದು ಇಂಥ ಘಟನೆಯನ್ನು ದಾಖಲಿಸಿದ್ದಾನೆ. ಆದರೆ ದುರಾದೃಷ್ಟವಶಾತ್ ಆ ಪ್ರಕರಣವು ದುಃಖಾಂತವಾಗಿದೆ. ತಪ್ಪಾಗಿರುವುದನ್ನು ಸರಿಪಡಿಸುವ ಕಾಯಕ ಕೈಗೊಳ್ಳುತ್ತಾನೆ. ಆದರೆ ಹಾಗೆ ಮಾಡುವುದರ ಮೂಲಕ ಇತಿಹಾಸದಲ್ಲಿ ಎಲ್ಲೂ ದಾಖಲಾಗದಿರುವಂತಹ ಒಂದು ಅತಿ ಕೆಟ್ಟ ಅಪರಾಧವನ್ನೆಸಗುತ್ತಾನೆ. ಈ ಪ್ರಕರಣವು ಶೂದ್ರ ಶಂಬುಕನ ವಧೆ ಎಂದೇ ಪ್ರಸಿದ್ಧವಾಗಿದೆ. ರಾಮನ ಆಡಳಿತದಲ್ಲಿ ಆಕಾಲ ಮರಣವೆನ್ನುವುದು ರಾಜ್ಯದಲ್ಲಿ ಇರಲಿಲ್ಲ ಎಂದು ವಾಲ್ಮೀಕಿ ಹೇಳಿದ್ದಾನೆ. ಬ್ರಾಹ್ಮಣನೊಬ್ಬನ ಮಗ ಅಕಾಲ ಮರಣಕ್ಕೀಡಾಗುತ್ತಾನೆ. ಆ ಬ್ರಾಹ್ಮಣನು ಮಗನ ಹೆಣವನ್ನು ಹೊತ್ತುಕೊಂಡು ರಾಮನ ಅರಮನೆಗೆ ಬಂದು ಹೆಣವನ್ನಿಟ್ಟು ಆಕ್ರಂದಿಸುತ್ತಾ ಜೋರಾಗಿ ತನ್ನ ಮಗನ ಸಾವಿಗೆ ರಾಮನನ್ನು ನಿಂದಿಸುತ್ತಾನೆ. ರಾಮನ ರಾಜ್ಯದಲ್ಲಿ ನಡೆದಿರುವ ಯಾವುದೋ ಒಂದು ಪಾಪಕಾರ್ಯದ ಫಲವಾಗಿ ತನ್ನ ಮಗ ಅಕಾಲ ಮರಣಕ್ಕೀಡಾಗಿದ್ದಾನೆ; ಪಾಪಕಾರ್ಯವನ್ನು ಗುರುತಿಸಿ ಸಂಬಂಧಿಸಿದವರಿಗೆ ಶಿಕ್ಷೆ ನೀಡದಿದ್ದರೆ ಅದಕ್ಕೆ ರಾಮನೇ ಅಪರಾಧಿಯಾಗುತ್ತಾನೆ ಎಂದು

೧. ಉತ್ತರ ಕಾಂಡ, ಸರ್ಗ ೪೨, ಶ್ಲೋಕ ೨೭

೨. ಅದೇ, ಸರ್ಗ ೪೩, ಶ್ಲೋಕ ೧

೩. ಅದೇ, ಸರ್ಗ ೪೨, ಶ್ಲೋಕ ೮.

ಆಲಾಪಿಸಿ ತನ್ನ ಮಗನ ಜೀವವನ್ನು ಮರಳಿಕೊಡದಿದ್ದರೆ ತಾನು ಅನ್ನಾಹಾರವನ್ನು ತ್ಯಜಿಸಿ ಅಲ್ಲೇ ಧರಣಿ ಕುಳಿತು ಪ್ರಾಣ ಕಳೆದುಕೊಳ್ಳುವುದಾಗಿ ಬೆದರಿಕೆ ಹಾಕುತ್ತಾನೆ. ರಾಮನು ಅಷ್ಟ ಋಷಿಗಳೊಂದಿಗೆ ಸಮಾಲೋಚಿಸಿದಾಗ ನಾರದನು ರಾಮನ ಪ್ರಜೆಗಳಲ್ಲಿ ಯಾರೋ ಒಬ್ಬ ಶೂದ್ರ ತಪಸ್ಸು ಮಾಡುತ್ತಿರಬೇಕು. ಆ ಮೂಲಕ ಧರ್ಮಕ್ಕೆ ಅಪಚಾರ ಎಸಗಿರಬೇಕು, ಏಕೆಂದರೆ ತಪಸ್ಸು ಮಾಡುವುದು ಧರ್ಮದ ಪ್ರಕಾರ ದ್ವಿಜರ ಕೆಲಸ. ಶೂದ್ರರ ಕೆಲಸ ಎಂದರೆ ದ್ವಿಜರ ಸೇವೆ ಮಾಡುವುದು ಎಂದು ತಿಳಿಸುತ್ತಾನೆ. ರಾಮನಿಗೆ ಶೂದ್ರನೊಬ್ಬ ಹೀಗೆ ಧರ್ಮವನ್ನು ಮೀರುವ ಮೂಲಕ ಬ್ರಾಹ್ಮನ ಬಾಲಕನೊಬ್ಬನ ಆಕಾಲ ಸಾವಿಗೆ ಕಾರಣವಾಗುವ ಪಾಪ ಮಾಡಿದ್ದಾನೆಂಬುದು ಖಾತರಿಯಾಗುತ್ತದೆ. ರಾಮನು ತನ್ನ ಪುಷ್ಪಕ ವಿಮಾನವನ್ನೇರಿ ಅಪರಾಧಿಯನ್ನು ಹುಡುಕುತ್ತಾನೆ. ಕೊನೆಗೆ ದಕ್ಷಿಣಕ್ಕೂ ಮುಂದೆ ಮನುಷ್ಯನೊಬ್ಬ ಒಂದು ಬಗೆಯ ಕಠಿಣ ತಪಸ್ಸನ್ನಾಚರಿಸುತ್ತಿರುವುದನ್ನು ಕಾಣುತ್ತಾನೆ. ತಪಸ್ಸನ್ನಾಚರಿಸುತ್ತಿರುವವನು ಶಂಬುಕ ಎಂಬ ಶೂದ್ರ, ಸಶರೀರಿಯಾಗಿ ಸ್ವರ್ಗ ಸೇರಲು ತಪಸ್ಸು ಮಾಡುತ್ತಿದ್ದಾನೆಂದು ತಿಳಿದ ತಕ್ಷಣ ಬೇರಾವ ವಿಚಾರವನ್ನೂ ಮಾಡದೆ ಶಂಬುಕನಿಗೆ ಯಾವ ಮುನ್ಸೂಚನೆಯಾಗಲೀ, ಮುನ್ನೆಚ್ಚರಿಕೆಯಾಗಲೀ ನೀಡದೆ ಅವನ ಕತ್ತನ್ನು ಕತ್ತರಿಸಿಬಿಡುತ್ತಾನೆ. ಅದೋ ನೋಡಿ! ಆ ಕ್ಷಣದಲ್ಲೇ ಹೆಣವಾಗಿದ್ದ ಬ್ರಾಹ್ಮಣ ಬಾಲಕನು ದೂರದ ಅಯೋಧ್ಯೆಯಲ್ಲಿ ಪುನಃ ಉಸಿರಾಡುತ್ತಾನೆ. ಇಲ್ಲಿ ಕಾಡಿನಲ್ಲಿ ದೇವತೆಗಳು ಒಬ್ಬ ಶೂದ್ರ ಧರ್ಮ ಮೀರಿ ತಮ್ಮ ನಡುವೆ ಸಶರೀರಿಯಾಗಿ ತಪವನ್ನಾಚರಿಸುವುದರ ಮೂಲಕ ಧರ್ಮ ಅಪಚಾರ ಆಗುವುದನ್ನು ತಪ್ಪಿಸಿದ್ದಕ್ಕಾಗಿ ರಾಜನ ಮೇಲೆ ಪುಷ್ಪವೃಷ್ಟಿಯನ್ನು ಮಾಡುತ್ತಾರೆ. ರಾಮನ ಮುಂದೆ ಪ್ರತ್ಯಕ್ಷವಾಗಿ ಅವನ ಕೆಲಸಕ್ಕಾಗಿ ಅಭಿನಂದಿಸುತ್ತಾರೆ. ಅವನು ಅಲ್ಲಿ ಬ್ರಾಹ್ಮಣ ಬಾಲಕನನ್ನು ಪುನಃ ಬದುಕಿಸಿ ಎಂದು ಪ್ರಾರ್ಥಿಸಿದ್ದಕ್ಕೆ ದೇವತೆಗಳು ಅವನೀಗಾಗಲೇ ಬದುಕಿದ್ದಾನೆಂದು ತಿಳಿಸುತ್ತಾರೆ. ಅವರಿಂದ ಬೀಳ್ಕೊಂಡ ರಾಮನು ಹತ್ತಿರದಲ್ಲಿದ್ದ ಅಗಸ್ತ್ಯರ ಆಶ್ರಮ ತಲುಪುತ್ತಾನೆ. ಅಲ್ಲಿ ಅಗಸ್ತ್ಯನು ರಾಮನನ್ನು ಶಂಬುಕನ ಬಗ್ಗೆ ತೆಗೆದುಕೊಂಡ ಕ್ರಮಕ್ಕಾಗಿ ಕೊಂಡಾಡಿ ಒಂದು ದೈವೀ ಕಂಕಣವನ್ನು ಉಡುಗೊರೆಯಾಗಿ ನೀಡುತ್ತಾನೆ. ರಾಮ ರಾಜಧಾನಿಗೆ ಮರಳುತ್ತಾನೆ. ಇಂಥವನು ರಾಮ.

## II

ಇನ್ನು ಕೃಷ್ಣನ ವಿಚಾರ.

ಅವನು ಮಹಾಭಾರತದ ನಾಯಕ. ಅಂದರೆ ವಾಸ್ತವವಾಗಿ ಮಹಾಭಾರತ ಕೌರವ ಮತ್ತು ಪಾಂಡವರನ್ನು ಕುರಿತದ್ದು, ಇವರಿಬ್ಬರೂ ತಮ್ಮ ಪೂರ್ವಿಕರಿಗೆ ಸೇರಿದ ಸಾಮ್ರಾಜ್ಯವನ್ನು ಹಕ್ಕಿಗಾಗಿ ನಡೆಸಿದ ಹೋರಾಟ ಈ ಕತೆಯ ವಸ್ತು. ಈ ಕೃತಿಗೆ ಅವರೇ ಮುಖ್ಯ ಪಾತ್ರಗಳಾಗಬೇಕು. ಆದರೆ ಈ ಮಹಾಕಾವ್ಯದ ನಾಯಕರು ಅವರಲ್ಲ: ಕೃಷ್ಣ. ಇದು ವಿಚಿತ್ರವಾಗಿ ತೋರುತ್ತದೆ. ಆದರೆ ಇದಕ್ಕಿಂತ ವಿಚಿತ್ರವಾದದ್ದೆಂದರೆ, ಕೃಷ್ಣನು ಪಾಂಡವ ಮತ್ತು ಕೌರವರ ಸಮಕಾಲೀನ ಕೂಡ ಎಂಬ ಮಾತು. ಕೃಷ್ಣ ಪಾಂಡವರ ಸ್ನೇಹಿತ. ಈ ಪಾಂಡವರಿಗೆ ಒಂದು ಸಾಮ್ರಾಜ್ಯವಿತ್ತು. ಇದೇ ಈ ಕೃಷ್ಣ ಕಂಸನ ವೈರಿ. ಆ ಕಂಸನಿಗೂ ಒಂದು ಸಾಮ್ರಾಜ್ಯವಿತ್ತು. ಹೀಗೆ ಎರಡು ಸಾಮ್ರಾಜ್ಯಗಳು ಒಂದರ ಪಕ್ಕ ಒಂದು ಇದ್ದವು ಎಂದು ನಂಬುವುದು ಸಾಧ್ಯವಿಲ್ಲ. ಅಷ್ಟೇ ಅಲ್ಲ, ಈ ಕಂಸನ ಸಾಮ್ರಾಜ್ಯ ಹಾಗೂ

ಪಾಂಡವ ಸಾಮ್ರಾಜ್ಯದೊಂದಿಗೆ, ಎರಡೂ ಸಾಮ್ರಾಜ್ಯಗಳ ನಡುವೆ ಯಾವುದೇ ರೀತಿಯ ಸಂಬಂಧವಿತ್ತೆಂಬುದಕ್ಕೆ ಮಹಾಭಾರತದಲ್ಲಿ ಯಾವ ಪುರಾವೆಯೂ ಇಲ್ಲ. ಅಂದರೆ, ಈ ಕೃಷ್ಣ ಮತ್ತು ಪಾಂಡವರ ಕತೆ ಕಲೆಸಿಕೊಂಡಿದ್ದು ನಂತರದ ದಿನಗಳಲ್ಲಿ. ಇದರಿಂದ ಕೃಷ್ಣನ ಪಾತ್ರಕ್ಕೆ ವಿಶಾಲ ವೇದಿಕೆಯೊಂದನ್ನು ಸೃಷ್ಟಿ ಮಾಡಿಕೊಡಲು. ಈ ಎರಡು ಕತೆಗಳ ಮಿಶ್ರಣ ಕೃಷ್ಣನನ್ನು ಎಲ್ಲರಿಗಿಂತ ಉಚ್ಚ ಸ್ಥಾನಕ್ಕೇರಿಸಲು ವ್ಯಾಸರು ಮಾಡಿದ ಹುನ್ನಾರ.

ವ್ಯಾಸರ ಕೈಯಲ್ಲಿ ಕೃಷ್ಣನು ದೇವತಾ ಪುರುಷ. ಅದರಿಂದಾಗಿಯೇ ಅವನು ಮಹಾಭಾರತದ ನಾಯಕನಾದದ್ದು. ಆದರೆ ನಿಜಕ್ಕೂ ಕೃಷ್ಣನು ದೇವತಾ ಪುರುಷನೇ? ಅವನ ಜೀವನದ ಸಂಕ್ಷಿಪ್ತ ಚಿತ್ರಣದಿಂದ ಇದಕ್ಕೆ ಉತ್ತರ ಸಿಕ್ಕಿಬಿಡುತ್ತದೆ. ಕೃಷ್ಣ ಶ್ರಾವಣ ಶುಕ್ಲ ಅಷ್ಟಮಿಯಂದು ಮಧ್ಯರಾತ್ರಿ ಮಥುರೆಯಲ್ಲಿ ಹುಟ್ಟಿದ. ಇವನ ತಂದೆ ಯದುವಂಶದ ವಸುದೇವ. ತಾಯಿ ದೇವಕಿ. ಮಥುರೆಯ ಅರಸನಾದ ಉಗ್ರಸೇನನ ಸೋದರ ದೇವಕನ ಮಗಳು. ಉಗ್ರಸೇನನ ಪತ್ನಿಗೂ ಸೌಭದ ದಾನವ ರಾಜ ದ್ರುಮಿಳನಿಗೂ ಅನೈತಿಕ ಸಂಬಂಧವಿತ್ತು. ಈ ಅನೈತಿಕ ಸಂಬಂಧಕ್ಕೆ ಹುಟ್ಟಿದವ ದೇವಿಕಿಯ ಸೋದರ ಜ್ಞಾತಿಯಾದ ಕಂಸ. ಈ ಕಂಸನು ಉಗ್ರಸೇನನನ್ನು ಸೆರೆಯಲ್ಲಿಟ್ಟು ಮಥುರೆಯನ್ನು ಸ್ವಾಧೀನಪಡಿಸಿಕೊಂಡ. ದೇವಕಿಯ ಎಂಟನೇ ಗರ್ಭದಲ್ಲಿ ಹುಟ್ಟಿದ ಮಗು ತನ್ನನ್ನು ಕೊಲ್ಲುತ್ತದೆ ಎಂಬ ನಾರದರ ಮಾತನ್ನು, ದೈವವಾಣಿಯನ್ನು ಕೇಳಿದ ಕಂಸ ದೇವಕಿ ಮತ್ತು ಅವಳ ಪತಿಯನ್ನು ಸೆರೆಯಲ್ಲಿಟ್ಟ. ದೇವಕಿಯ ಆರು ಮಕ್ಕಳನ್ನು ಕೊಂದು ಹಾಕಿದ. ಏಳನೆಯ ಮಗುವಾದ ಬಲರಾಮನ ಭ್ರೂಣವನ್ನು ಆಶ್ಚರ್ಯಕರವಾಗಿ ದೇವಕಿಯ ಗರ್ಭದಿಂದ ರೋಹಿಣಿಯ ಗರ್ಭಕ್ಕೆ ಸ್ಥಳಾಂತರಿಸಲಾಯಿತು. ಎಂಟನೆಯ ಮಗುವಾದ ಕೃಷ್ಣ ಹುಟ್ಟಿದಾಗ ಅವನ ತಂದೆ ಅವನನ್ನು ವ್ರಜವಾಸಿಗಳಾದ ನಂದ ಮತ್ತವನ ಮಡದಿ ಯಶೋದೆಯರಿದ್ದ ಯಮುನೆಯ ಇನ್ನೊಂದು ದಡಕ್ಕೆ ಸಾಗಿಸಿದ. ಹಾಗೆ ಸಾಗಿಸುತ್ತಿರುವಾಗ ಈ ದೇವಶಿಶುವಿಗಾಗಿ ಯಮುನಾ ನದಿ ದಾರಿ ಬಿಟ್ಟಿತು. ಸರ್ವಾಧಿಪತಿಯಾದ ಅನಂತನು ತನ್ನ ವಿಶಾಲ ಹೆಡೆಯನ್ನು ತೆರೆದು ಬೀಳುತ್ತಿದ್ದ ಮಳೆ ಮಗುವಿಗೆ ಸೋಕದ ಹಾಗೆ ಕೊಡೆ ಹಿಡಿದನು. ಪೂರ್ವಯೋಜಿತ ರೀತಿಯಲ್ಲಿ ವಸುದೇವನು ತನ್ನ ಮಗುವನ್ನು ಅಲ್ಲಿ ಬಿಟ್ಟು ನಂದನ ಆಗ ತಾನೇ ಹುಟ್ಟಿದ ಯೋಗೀಂದ್ರ ಅಥವಾ ಮಹಾಮಾಯಿಯ ಅಂಶವಾದ ಹೆಣ್ಣು ಕೂಸನ್ನು ತೆಗೆದುಕೊಂಡು ಬಂದನು. ಆ ಹೆಣ್ಣು ಕೂಸನ್ನು ತನ್ನ ಎಂಟನೆಯ ಮಗುವೆಂದು ಕಂಸನಿಗೆ ಒಪ್ಪಿಸಿದನು. ಆದರೆ ಆ ಹೆಣ್ಣು ಕೂಸು ಯಶೋದಾ ನಂದರ ಬಳಿಯಿರುವ ಕೂಸು ಕಂಸನನ್ನು ಕೊಲ್ಲುವುದೆಂದು ಹೇಳುತ್ತಾ ಹಾರಿಹೋಯಿತು. ಈ ಹೇಳಿಕೆಯನ್ನು ಕೇಳಿದ ಕಂಸ ಕೃಷ್ಣನನ್ನು ಕೊಲ್ಲಲು ಅನೇಕ ಅಯಶಸ್ವೀ ಪ್ರಯತ್ನಗಳನ್ನು ಮಾಡಿದನು. ಈ ಉದ್ದೇಶಕ್ಕಾಗಿ ಅನೇಕ ಬೇರೆ ಬೇರೆ ರೂಪದ ಅನೇಕ ಅಸುರರನ್ನು ವ್ರಜಕ್ಕೆ ಕಳುಹಿಸಿಕೊಟ್ಟನು. ಕೃಷ್ಣನ ಈ ಅಸುರ ವಧೆ ಮತ್ತಿತರ ಸಾಮಾನ್ಯ ಶಿಶುಗಸಾಧ್ಯವಾದ ಪರಾಕ್ರಮಗಳ ಕಥೆ, ಕೃಷ್ಣನ ಬಾಲಲೀಲೆಯನ್ನು ಹೇಳುವ ಪುರಾಣಗಳಿಗೆ ಪ್ರಿಯವಾದ ಆಹಾರ. ಕೆಲವು ಈ ಲೀಲೆಗಳ ಉಲ್ಲೇಖ ಮಹಾಭಾರತದಲ್ಲೂ ಇದೆ. ಈ ಪೌರಾಣಿಕ ಉಲ್ಲೇಖಗಳಲ್ಲಿ ಕಥೆಯ ವಿವರಗಳಲ್ಲಿ ಪರಸ್ಪರ ಅಸಂಗತವಾಗಿದ್ದು ವ್ಯತ್ಯಸ್ತವಾದದ್ದು ಸಾಕಷ್ಟಿವೆ. ಅವುಗಳಲ್ಲಿ ಕೆಲವನ್ನು ಮಾತ್ರ ನೋಡೋಣ.

ಇದರಲ್ಲಿ ಮೊತ್ತಮೊದಲನೆಯದು ಪೂತನಿ ಸಂಹಾರ ಪ್ರಸಂಗ. ಕಂಸನ ದಾದಿಯಾಗಿದ್ದ ಪೂತನಿಯನ್ನು ಕೃಷ್ಣ ಸಂಹಾರಕ್ಕಾಗಿ ಕಂಸ ಕಳುಹಿಸಿದ. ಹರಿವಂಶದ ಪ್ರಕಾರ ಅವಳು ಗೃಧ್ರರೂಪದಲ್ಲಿ

ವ್ರಜಕ್ಕೆ ಬಂದಳು. ಆದರೆ ಭಾಗವತದ ಪ್ರಕಾರ ಸುಂದರಿಯ ವೇಷದಲ್ಲಿ ಬಂದು ಕೃಷ್ಣನಿಗೆ ಮೊಲೆಯೂಡಿಸುವ ನೆಪದಲ್ಲಿ ತನ್ನ ವಿಷಭರಿತ ಸ್ತನವನ್ನು ಅವನ ಬಾಯಿಗಿಟ್ಟಳು. ಕೃಷ್ಣನು ಆಕೆಯ ಮೊಲೆಯನ್ನು ಬಲವಾಗಿ ಚೀಪಿ ಅವಳ ಜೀವರಸವನ್ನೇ ಹೀರಿಬಿಟ್ಟನು. ಅದರಿಂದ ಅವಳು ಜೋರಾಗಿ ಅಳುತ್ತಾ ಬಿದ್ದು ಸತ್ತುಹೋದಳು.

ಕೃಷ್ಣ ಮೂರು ತಿಂಗಳ ಮಗುವಾಗಿರುವಾಗಲೇ ಇನ್ನೊಂದು ಸಾಹಸವನ್ನು ಮಾಡಿದನು. ಅದು ಶಕಟಾಸುರ ಸಂಹಾರ. ಅದು ಬೀರುವಿನ ಹಾಗೆ ಬಳಸಲಾಗುತ್ತಿದ್ದ ಒಂದು ಬಂಡಿ, ಅದರಲ್ಲಿ ಹಾಲು ಮೊಸರು ತುಂಬಿ ಗಡಿಗೆಗಳನ್ನು, ಪಾತ್ರೆಗಳನ್ನು ಇಟ್ಟಿದ್ದರು. ಹರಿವಂಶದ ಪ್ರಕಾರ ಕಂಸನು ಕಳುಹಿಸಿದ ಶಕಟನೆಂಬ ರಾಕ್ಷಸನು ಕೃಷ್ಣನನ್ನು ಕೊಲ್ಲುವ ಉದ್ದೇಶದಿಂದ ಆ ಬಂಡಿಯೊಳಗೆ ಪ್ರವೇಶ ಮಾಡಿದನು. ಕೃಷ್ಣನನ್ನು ಆ ಬಂಡಿಯಡಿಯಲ್ಲಿ ಮಲಗಿಸಿ ಯಶೋದೆಯು ಯಮುನೆಯಲ್ಲಿ ಮೀಯಲು ಹೋಗಿದ್ದಳು. ಅವಳು ಹಿಂದಿರುಗಿ ಬರುವಾಗ ಆ ಬಂಡಿಯನ್ನು ಕೃಷ್ಣನು ಅದರೊಳಗಿದ್ದ ಸಕಲ ಸಾಮಗ್ರಿಗಳ ಸಮೇತ ಒದ್ದು ಚೂರುಚೂರು ಮಾಡಿ ಭಗ್ನ ಶಕಟದ ಮೇಲೆ ಮಲಗಿದ್ದನು. ಈ ಪ್ರಸಂಗವು ಯಶೋದೆಯನ್ನು ವಿಸ್ಮಿತಳನ್ನಾಗಿ ಮಾಡಿತು. ಅವಳು ಅಮಂಗಳ ನಿವಾರಣೆಗಾಗಿ ಪೂಜೆಯನ್ನು ಕೈಗೊಂಡಳು.

ಪೂತನಿ ಹಾಗೂ ಶಕಟರ ಮುಖೇನ ಕೃಷ್ಣನನ್ನು ಕೊಲ್ಲುವ ಪ್ರಯತ್ನವು ಕೈಗೂಡದಿರಲು ಕಂಸನು ತೃಣಾವರ್ತನೆಂಬ ಮತ್ತೊಬ್ಬ ಅಸುರನನ್ನು ಈ ಕಾರ್ಯಕ್ಕೆಂದು ನೇಮಿಸಿ ಕಳುಹಿಸಿದನು. ಆ ತೃಣಾವರ್ತನಾದರೋ ಹಕ್ಕಿಯ ರೂಪದಲ್ಲಿ ಬಂದು ಆ ದೈವಶಿಶುವನ್ನು ಎತ್ತಿಕೊಂಡು ಮೇಲಕ್ಕೆ ಹಾರಿದನು. ಆಗ ಕೃಷ್ಣ ಕೇವಲ ಒಂದು ವರ್ಷದ ಕೂಸು. ಮೇಲಕ್ಕೇರಿದ ತೃಣಾವರ್ತ ಸತ್ತು ಕೆಳಗುರುಳಿದನು. ಅವನ ಕೊರಳನ್ನು ಬಿಗಿಯಾಗಿ ಹಿಡಿದುಕೊಂಡಿದ್ದ ಮಗು ಕ್ಷೇಮ ವಾಗಿತ್ತು.

ಪಕ್ಕಪಕ್ಕದಲ್ಲಿರುವ ಎರಡು ಮತ್ತಿ ಮರಗಳನ್ನು ಮುರಿದದ್ದು ಕೃಷ್ಣನ ಮುಂದಿನ ಸಾಹಸ. ಈ ಮತ್ತಿಮರಗಳು ಇಬ್ಬರು ಯಕ್ಷರ ಶರೀರಗಳಂತೆ. ಶಾಪದಿಂದಾಗಿ ಅವರು ಯಮಳಾರ್ಜುನ ವೃಕ್ಷಗಳಾಗಿ ಪರಿವರ್ತನೆಗೊಂಡಿದ್ದರಂತೆ. ಅವರಿಗೆ ಕೃಷ್ಣನ ಸಾಹಸದಿಂದಾಗಿ ಮುಕ್ತಿ ದೊರಕಿತು. ಕೃಷ್ಣ ಅಂಬೆಗಾಲು ಹಾಕುವುದಕ್ಕೆ ಕಲಿತಮೇಲೆ ಅವನ ತುಂಟತನವು ಅಸಾಧ್ಯವಾಯಿತು. ಹಾಗಾಗಿ ಯಶೋದೆಯು ಅವನನ್ನು ಒಂದು ಹಗ್ಗದಿಂದ ಒರಳಿಗೆ ಕಟ್ಟಿಹಾಕಿ ಗೃಹಕೃತ್ಯದಲ್ಲಿ ತೊಡಗಿದ್ದಳು. ಅವಳು ಕೃಷ್ಣನ ಕಣ್ಣಿಂದ ಮರೆಯಾದದ್ದೇ ತಡ, ಆ ಒರಳನ್ನು ಎಳೆದುಕೊಂಡು ಅಂಬೆಗಾಲಿಡುತ್ತಾ ಬಂದನು. ಆ ಒರಳು ಮತ್ತಿಮರಗಳ ನಡುವೆ ಸಿಕ್ಕಿಕೊಂಡಿತು. ಆ ಭಾರವಾದ ಒರಳನ್ನು ಎಳೆಯಲು ಆ ಮರಗಳು ಭಯಂಕರ ಶಬ್ದಮಾಡುತ್ತಾ ಕೆಳಕ್ಕುರುಳಿದವು. ಕೃಷ್ಣ ಮಾತ್ರ ಒಂದಿಷ್ಟೂ ಗಾಯಗೊಳ್ಳಲಿಲ್ಲ.

ಈ ಪ್ರಸಂಗಗಳಿಂದ ನಂದನು ಬಹುವಾಗಿ ಹೆದರಿದನು. ವ್ರಜನನ್ನು ಬಿಟ್ಟು ಬೇರಾವುದಾದರೂ ಸ್ಥಳಕ್ಕೆ ವಲಸೆಹೋಗಲು ಗಂಭೀರವಾಗಿ ಯೋಚಿಸಿದನು. ಆ ಕಾಲದಲ್ಲೇ ವ್ರಜಸ್ಥಾನದಲ್ಲಿ ತೋಳಗಳು ಹೆಚ್ಚಿ ಗೋವುಗಳ ರಕ್ಷಣೆ ಕಷ್ಟಸಾಧ್ಯವಾಗಿಬಿಟ್ಟಿತು. ಇದರಿಂದ ಈ ಅಲೆಮಾರಿಗಳಾದ ಗೋಪಾಲಕರು ಗಂಟುಮೂಟೆ ಕಟ್ಟಿಕೊಂಡು ಸುಂದರವಾದ ವೃಂದಾವನಕ್ಕೆ ಹೊರಟರು. ಆಗ ಕೃಷ್ಣನಿಗೆ ಕೇವಲ ಏಳು ವರ್ಷ ವಯಸ್ಸು.

ಈ ಹೊಸ ನೆಲೆಗೆ ಗೋಪಾಲಕರು ಬಂದ ಮೇಲೆ, ಕೃಷ್ಣನು ಲೆಕ್ಕವಿಲ್ಲದಷ್ಟು ಅಸುರರನ್ನು ಕೊಂದನು. ಅದರಲ್ಲಿ ಅರಿಷ್ಟನೆಂಬುವನು ವೃಷಭರೂಪದಲ್ಲಿ ಬಂದವನು. ಕೇಶಿಯೆಂಬುವನು ಕುದುರೆಯ ರೂಪದಲ್ಲಿ ಬಂದಿದ್ದನು. ಇವರಲ್ಲದೆ ವೃತ್ರಾಸುರ, ಬಕಾಸುರ, ಅಘಾಸುರ, ಭೂಮಾಸುರ ಮತ್ತು ಶಂಭಾಸುರರೆಂಬುವವರನ್ನು ಸಂಹರಿಸಿದನು. ಇವರಲ್ಲೆಲ್ಲಾ ಮುಖ್ಯನಾದವನು ಕಾಳಿಯನೆಂಬ ನಾಗಪ್ರಮುಖ. ಈ ಸರ್ಪನು ಯಮುನೆಯ ಮಡುವೊಂದರಲ್ಲಿ ವಾಸಮಾಡಿಕೊಂಡಿದ್ದನು. ಅದರಿಂದ ನೀರು ವಿಷವಾಗಿತ್ತು. ಒಮ್ಮೆ ಕೃಷ್ಣನು ಕಾಳಿಯನ ಹೆಡೆಯ ಮೇಲೆ ನಿಂತು ಕುಣಿಯಲು ತೊಡಗಿದನು. ಅವನ ಭೀಕರ ಕುಣಿತಕ್ಕೆ ಕಾಳಿಯ ರಕ್ತಕಾರಿಕೊಂಡನು. ಅವನನ್ನು ಕೃಷ್ಣನು ಕೊಂದೇ ಬಿಡಬಹುದಿತ್ತು. ಆದರೆ ಕಾಳಿಯನ ಕುಟುಂಬದ ಪ್ರಾರ್ಥನೆಯ ಮೇರೆಗೆ ಅವನನ್ನು ಜೀವಸಹಿತ ಬಿಟ್ಟು ಅವನು ಬೇರೊಂದು ನೆಲೆ ಹುಡುಕಿಕೊಳ್ಳಲು ಅವಕಾಶಕೊಟ್ಟನು.

ಕಾಳಿಯನ ಶರಣಾಗತಿಯ ನಂತರ ವಸ್ತ್ರಹರಣದ ಪ್ರಸಂಗ. ಬಟ್ಟೆ ಕದ್ದ ಈ ಪ್ರಸಂಗವು ಈ ಪುರಾಣದ ಕೃಷ್ಣಭಕ್ತರಿಗೆ ಅಭಿಮಾನಿಗಳಿಗೆ ಬಿಡಿಸಲಾಗದ ಗಂಟು. ಇಡಿ ಪ್ರಸಂಗದ ಕಥನ ಎಷ್ಟು ಅಶ್ಲೀಲವಾಗಿದೆಯೆಂದರೆ ಆ ಕತೆಯ ತೆಳು ನಕಾಶೆ ಕೂಡ ತೀರ ಅಸಭ್ಯ ಎನಿಸಬಹುದೇನೋ ಎಂಬ ಭಯ ನನಗೆ. ಆದರು ಆದಷ್ಟು ಸಭ್ಯ ಸ್ವರೂಪದಲ್ಲಿ ಈ ಪ್ರಸಂಗವನ್ನು ನಿಮ್ಮ ಮುಂದಿಡುತ್ತೇನೆ. ಕೃಷ್ಣನ ಲೀಲೆಗಳ ಸಂಪೂರ್ಣ ಚಿತ್ರಣಕ್ಕಾಗಿ ಇದು ಅಗತ್ಯ. ಕೆಲವು ಜನ ಗೋಪಿಯರು ಯಮುನೆಯಲ್ಲಿ ಮೀಯಲು ಇಳಿದಿದ್ದರು. ಆ ಕಡೆಯ ಜನರ ಪದ್ಧತಿಯಂತೆ ತಮ್ಮ ಬಟ್ಟೆಯನ್ನೆಲ್ಲಾ ಕಳಚಿ ದಡದಲ್ಲಿಟ್ಟಿದ್ದರು. ಕೃಷ್ಣನು ಆ ಬಟ್ಟೆಗಳನ್ನೆಲ್ಲಾ ಎತ್ತಿಕೊಂಡು ಬಟ್ಟೆಗಳ ಸಮೇತ ಮರವನ್ನು ಹತ್ತಿಬಿಟ್ಟನು. ಗೋಪಿಯರು ವಸ್ತ್ರವನ್ನು ಕೇಳಿದಾಗ ಪ್ರತಿಯೊಬ್ಬ ಗೋಪಿಯೂ ಪ್ರತ್ಯೇಕ ಪ್ರತ್ಯೇಕವಾಗಿ ಮರದ ಬಳಿ ಬಂದು ತನ್ನ ಬಟ್ಟೆಯನ್ನು ಕೇಳಿದರೆ ಮಾತ್ರ ಬಟ್ಟೆಯನ್ನು ಹಿಂತಿರುಗಿಸುವುದಾಗಿ ಹೇಳಿದನು. ಹೀಗೆ ಮಾಡಬೇಕಾದರೆ ಆ ಗೋಪಿಯರು ನದಿಯಿಂದ ಹೊರಬಂದು ಕೃಷ್ಣನ ಮುಂದೆ ನಗ್ನವಾಗಿ ನಿಲ್ಲಬೇಕು. ಅವರು ಹಾಗೆ ಮಾಡಲು ಕೃಷ್ಣನು ಸಂತೃಪ್ತನಾಗಿ ಅವರವರ ವಸ್ತ್ರಗಳನ್ನು ಹಿಂದಿರುಗಿಸಿದನು. ಈ ಕತೆ ಭಾಗವತದಲ್ಲಿ ಬರುತ್ತದೆ.

ಕೃಷ್ಣನು ಮುಂದಿನ ಲೀಲೆಗಳಲ್ಲಿ ಗೋವರ್ಧನೋದ್ಧರಣವೂ ಒಂದು. ಗೋಪಾಲರು ವರ್ಷವರ್ಷವೂ ಆಚರಿಸುವ ಇಂದ್ರಪರ್ವವನ್ನು ಆಚರಿಸಲು ಅಣಿಯಾಗುತ್ತಿದ್ದರು. ಕೃಷ್ಣನು ಅವರಿಗೆ ತಾವು ದನಗಾಹಿಗಳೆಂದೂ ಕೃಷಿಕರವಲ್ಲವೆಂದೂ ತಮ್ಮ ದೇವರು ಹಸು, ಬೆಟ್ಟ, ಕಾಡು ಇವೆ ಆಗಿದ್ದು ಅವನ್ನಷ್ಟೇ ತಾವು ಪೂಜಿಸಬೇಕೆಂದೂ ಮಳೆಕೊಡುವ ಇಂದ್ರನನ್ನಲ್ಲವೆಂದೂ ಹೇಳಿದನು. ಗೋಪರು ಇದನ್ನು ಅನುಮೋದಿಸಿ ಇಂದ್ರಪೂಜೆಯ ಕಾರ್ಯಕ್ರಮವನ್ನು ಬಿಟ್ಟು ಹಸುಗಳಿಗೆ ಮೇವಿತ್ತು ಸಾಕುತ್ತಿರುವ ಗೋವರ್ಧನಗಿರಿಯನ್ನೇ ಪೂಜಿಸಿ ಔತಣ ಕುಣಿತ ನಡೆಸಿದರು. ಇಂದ್ರ ಅವನ ಸ್ವಭಾವಕ್ಕೆ ಸಹಜವಾಗಿ ಇದರಿಂದ ಕುಪಿತನಾಗಿ ಗೋಪರಿಗೆ ತಕ್ಕ ಶಾಸ್ತಿ ಮಾಡಲೋಸುಗ ಗೋಪರ ನೆಲೆಯ ಮೇಲೆ ಏಳು ಹಗಲು, ಏಳು ರಾತ್ರಿ ಒಂದೇ ಸಮನೆ ಮಳೆ ಸುರಿಸಿದನು. ಕೃಷ್ಣನು ಇದರಿಂದ ವಿಚಲಿತನಾಗಲಿಲ್ಲ. ಗೋವರ್ಧಗಿರಿಯನ್ನು ಕಿತ್ತು ಅದನ್ನು ಇಡಿ ಗೊಲ್ಲಗೇರಿಯ ಮೇಲೆ ಕೊಡೆಯಂತೆ ಎತ್ತಿ ಹಿಡಿದನು. ಹಾಗೆ ಮಾಡಿ ಗೋಪರನ್ನೂ ಅವರ ಗೋವುಗಳನ್ನು ಇಂದ್ರನ ಕೋಪದಿಂದಾಗಬಹುದಾಗಿದ್ದ ಅನಾಹುತಗಳಿಂದ ಪಾರುಮಾಡಿದನು. ಋಗ್ವೇದದ ಇಂದ್ರ ಮತ್ತು ಕೃಷ್ಣರ ನಡುವಿನ, ಶತಪಥ ಬ್ರಾಹ್ಮಣದ ಇಂದ್ರ ಮತ್ತು ವಿಷ್ಣುವಿನ ನಡುವಿನ ಮಾತ್ಸರ್ಯದ ಬಗೆಗೆ ನನ್ನ ಮೊದಲ ಭಾಷಣದಲ್ಲೇ ಪ್ರಸ್ತಾಪಿಸಿದ್ದೇನೆ.

ಕೃಷ್ಣನ ಯೌವನದ ದಿನಗಳೆಲ್ಲಾ ಬೃಂದಾವನದ ಹೆಣ್ಣುಗಳ ಜೊತೆಗಿನ ಅನೈತಿಕ ಸಂಬಂಧದಲ್ಲೇ ರಾಸಲೀಲಾದಲ್ಲಿಯೇ ಕಳೆಯಿತು. ರಾಸ ಎನ್ನುವುದು ಒಂದು ತರದ ವೃತ್ತಾಕಾರದ ಕುಣಿತ. ಅದರಲ್ಲಿ ಹೆಣ್ಣುಗಂಡುಗಳು ಒಟ್ಟೊಟ್ಟಾಗಿ ಕೈಹಿಡಿದುಕೊಂಡು ಕುಣಿಯುತ್ತಾರೆ. ಇದು ಈ ದೇಶದ ಇನ್ನು ಕೆಲವು ಕಾಡು ಜನರಲ್ಲಿ ಪ್ರಚಾರದಲ್ಲಿದೆ. ಕೃಷ್ಣ ಈ ಕುಣಿತವನ್ನು ಇಷ್ಟಪಡುತ್ತಿದ್ದನಂತೆ. ಅದೂ ಬೃಂದಾವನದ ಗೋಪಿಯರೊಂದಿಗೆ. ಆ ಗೋಪಿಯರೂ ಇವನಲ್ಲಿ ತೀವ್ರವಾಗಿ ಅನುರಕ್ತರಾಗಿದ್ದರಂತೆ. ಹರಿವಂಶ, ವಿಷ್ಣುಪುರಾಣ ಮತ್ತು ಭಾಗವತದಲ್ಲಿ ಈ ರಾಸನೃತ್ಯದ ಪ್ರಸ್ತಾಪ ಬರುತ್ತದೆ. ಈ ಎಲ್ಲ ಪ್ರಮಾಣಗಳೂ ಕೃಷ್ಣನ ಮೇಲಿನ ಗೋಪಿಯರ ಪ್ರೇಮವನ್ನು ಭಕ್ತಿ ಎಂಬುದಾಗಿ ವ್ಯಾಖ್ಯಾನಿಸುತ್ತವೆ. ಅದು ದೈವಭಕ್ತಿ. ಅವರ ಶೃಂಗಾರ ಪ್ರಕರಣಗಳಲ್ಲಿ ಅಸಭ್ಯವಾದರೂ ಏನು ಇಲ್ಲ. ಈ ಪ್ರವೃತ್ತಿ ಉಳಿದವರಲ್ಲಿ ಕಂಡುಬಂದರೆ ಅದು ನಿಂದನಾರ್ಹವಾಗುತ್ತದೆ ಎಂದು ಈ ಗ್ರಂಥಗಳೇ ಒಪ್ಪಿಕೊಳ್ಳುತ್ತವೆ. ಈ ಪ್ರಕರಣದ ಸಾಮಾನ್ಯ ಲಕ್ಷಣಗಳು ಈ ಮೂರು ಗ್ರಂಥಗಳಲ್ಲೂ ಒಂದೇ ಬಗೆ. ಆ ದೃಶ್ಯಾವಳಿ, ಋತು, ಮಧುರ ಗಾನದಿಂದ ಹೆಂಗಳೆಯರನ್ನು ಸೆಳೆಯುವುದು, ನೃತ್ಯ, ಗೋಪಿಯರ ಶೃಂಗಾರಭಾವ, ಆ ಭಾವದ ಬಗೆಬಗೆಯ ಅಭಿವ್ಯಕ್ತಿ. ವಿಷ್ಣುಪುರಾಣವು ಈ ದೃಶ್ಯಗಳ ವರ್ಣನೆಯಲ್ಲಿ ಸಂಪೂರ್ಣವಾಗಲ್ಲದಿದ್ದರೂ ಸಾಧ್ಯವಾದಷ್ಟೂ ಮಟ್ಟಿಗೆ ಸಭ್ಯತೆಯ ಸೀಮೆಯಲ್ಲಿರಲು ಪ್ರಯತ್ನಿಸಿದೆ. ಹರಿವಂಶದಿಂದ ವರ್ಣನೆಯ ಅಶ್ಲೀಲತೆಯು ಪ್ರಾರಂಭವಾಗಿ ಭಾಗವತದಲ್ಲಿ ಅಶ್ಲೀಲತೆ ಎಗ್ಗು ಸಿಗ್ಗಿಲ್ಲದೆ ವರ್ಣಿತವಾಗಿದೆ.

ಈ ಎಲ್ಲ ಪ್ರಸಂಗಗಳಲ್ಲಿ ತೀರಾ ಅಶ್ಲೀಲವೆನಿಸುವಂಥದು ರಾಧೆ ಎಂಬ ಒಬ್ಬ ಗೋಪಿಯೊಂದಿಗಿನ ಕೃಷ್ಣ ಅನೈತಿಕ ಜೀವನ. ರಾಧಾಕೃಷ್ಣರ ಅನೈತಿಕ ಸಂಬಂಧಗಳು ಬ್ರಹ್ಮವೈವರ್ತ ಪುರಾಣದಲ್ಲಿ ಚಿತ್ರಿತವಾಗಿದೆ. ಕೃಷ್ಣನು ರುಕ್ಮಾಂಗದನೆಂಬ ರಾಜನ ಮಗಳು ರುಕ್ಮಿಣಿಯನ್ನು ಮದುವೆಯಾಗಿದ್ದಾನೆ. ರಾಧೆಯೂ ಮದುವೆಯಾದಳು. ಕೃಷ್ಣನು ತನ್ನನ್ನು ಶಾಸ್ತ್ರೋಕ್ತವಾಗಿ ಮದುವೆಯಾದ ರುಕ್ಮಿಣಿಯನ್ನು ತೊರೆದು ಇನ್ನೊಬ್ಬನ ಹೆಂಡತಿಯಾದ ರಾಧೆಯನ್ನು ಮರಳು ಮಾಡಿ ಅವಳೊಂದಿಗೆ ಪಾಪಜೀವನವನ್ನು ಎಗ್ಗಿಲ್ಲದೆ ನಡೆಸುತ್ತಾನೆ.

ಕೃಷ್ಣನು ಯೋಧನೂ ಹೌದು, ರಾಜಕಾರಣಿ ಕೂಡ. ಅದೂ ಅವನ ಹನ್ನೆರಡನೇ ವರ್ಷದಲ್ಲೇ ಅವನು ಕಲಿಯೂ ರಾಜಕಾರಣಿಯೂ ಆಗಿದ್ದನೆಂದು ಹೇಳಲಾಗಿದೆ. ಅವನು ರಾಜಕಾರಣಿಯಾಗಿ, ಯೋಧನಾಗಿ ನಡೆಸಿದ ಕೃತ್ಯಗಳಲ್ಲಿ ಪ್ರತಿಯೊಂದೂ ನೀತಿಬಾಹಿರವಾದವು. ಈ ಕೃತ್ಯಗಳ ಸಾಲಿನಲ್ಲಿ ಮೊದಲನೆಯದು ಅವರ ನಾಯಕನಾದ ಕಂಸನ ಕೊಲೆ. ಕೊಲೆಯೆಂಬುದು ಆ ಕೃತ್ಯವನ್ನು ವಿವರಿಸುವಷ್ಟು ಬಲಶಾಲಿ ಪದವಲ್ಲವೇನೋ. ಏಕೆಂದರೆ ಕೃಷ್ಣನನ್ನು ಕಂಸನು ಎಷ್ಟೇ ಪ್ರಚೋದಿಸಿದ್ದು ನಿಜವಾದರೂ, ಕಂಸ ಯುದ್ಧದಲ್ಲಾಗಲೀ ಮಲ್ಲಯುದ್ಧದಲ್ಲಾಗಲೀ ಅಸು ನೀಗಿದ್ದಲ್ಲ. ಅದರ ಕತೆ ಹೀಗಿದೆ; ಕೃಷ್ಣಭಗವಂತನ ಸಾಹಸಕೃತ್ಯಗಳನ್ನು ಕೇಳಿ ಭೀತನಾದ ಕಂಸನು ಧನುರ್ಯಜ್ಞದ ಸಮಯದಲ್ಲಿ ಅತಿ ಪರಾಕ್ರಮಿಯಾದ ಜಟ್ಟಿಯೊಬ್ಬನನ್ನು ಕೃಷ್ಣನ ಮೇಲೆ ಬಿಟ್ಟು ಅವನನ್ನು ಕೊಲ್ಲಿಸುವ ಹಂಚಿಕೆ ಹಾಕಿಕೊಂಡನು. ಅದಕ್ಕಾಗಿ ಧನುರ್ಯಜ್ಞಕ್ಕೆ ಕೃಷ್ಣ, ಬಲರಾಮ ಮತ್ತವರ ಗೋಪಾಲಕನ ಮಿತ್ರರಿಗೆಲ್ಲ ಆಹ್ವಾನವನ್ನು ಮನ್ನಿಸಿ ಕೃಷ್ಣಾದಿಗಳು ಹೊರಟರು. ಕಂಸ ಸಂಹಾರವೇ ಅವರ ನಿರ್ಧಾರ ಕೂಡ ಆಗಿತ್ತು. ಕಂಸನು ಕೃಷ್ಣ ಬಲರಾಮನಷ್ಟೇ ಅಲ್ಲ, ಉಳಿದ ಯಾದವರನ್ನೂ ಮಥುರೆಯಿಂದ ಓಡಿಸಿ ಕೆರಳಿಸಿದ್ದನು. ಹಾಗಾಗಿ ಕಂಸನ ವಿರುದ್ಧವಾಗಿ ಕೃಷ್ಣ ಬಲರಾಮರಿಗೆ ಉಳಿದ ಯಾದವರ ಬೆಂಬಲದ ಪಿತೂರಿಯೂ ಇತ್ತು.

ಮಥುರೆಗೆ ಬಂದವರೇ ತಮ್ಮ ಗೋಪಾಲಕ ವಸ್ತ್ರಗಳನ್ನು ಬಿಟ್ಟು ನಾಗರಿಕ ವಸ್ತ್ರಗಳನ್ನು ತೊಟ್ಟುಕೊಳ್ಳಲು ನಿರ್ಧರಿಸಿದನು. ಅದಕ್ಕೋಸ್ಕರವಾಗಿ, ದಾರಿಯಲ್ಲಿ ಕಂಡ ಅರಮನೆಯ ಅಗಸನನ್ನು ತಮಗೆ ಬಟ್ಟೆಗಳನ್ನು ಕೊಡಲು ಕೇಳಿದರು. ಆ ಅಗಸನಾದರೋ ಇವರೊಂದಿಗೆ ಒಡ್ಡಾಗಿ ವರ್ತಿಸಿದನು. ಆಗ ಆ ಆಗಸನನ್ನು ಕೊಂದು ಅವನ ವಶದಲ್ಲಿದ್ದ ಬಟ್ಟೆಗಳಲ್ಲಿ ತಮಗೆ ಬೇಕಾದದ್ದನ್ನು ಆರಿಸಿಕೊಂಡರು. ನಂತರ ಅವರು ಭೇಟಿಯಾದದ್ದು ಕುಬ್ಜೆಯನ್ನು. ಈ ಗೂನಿಯು ಕಂಸನ ಗಂಧೋಪಚಾರದ ಸೇವೆ ಮಾಡುತ್ತಿದ್ದಾಕೆ. ಕೃಷ್ಣಾದಿಗಳು ಅವಳನ್ನು ಕೇಳಿಕೊಂಡಾಗ ಅವಳು ಅಷ್ಟು ಮಂದಿಗೂ ಗಂಧ ಲೇಪವನ್ನು ಮಾಡಿದಳು. ಅದಕ್ಕೆ ಪ್ರತಿಯಾಗಿ ಕೃಷ್ಣನು ಅವಳ ಅಂಗವೈಕಲ್ಯವನ್ನು ಹೋಗಲಾಡಿಸಿದನು. ಭಾಗವತವು ಕೃಷ್ಣನನ್ನು ಈ ಕುಬ್ಜೆಯಲ್ಲಿ ಅನುರಕ್ತನಾಗಿದ್ದುದಾಗಿ ಚಿತ್ರಿಸಿ ಪದೇ ಪದೇ ಅವಳೊಂದಿಗೆ ಭೇಟಿ ಮಾಡಿಸಿ ಅವರಿಬ್ಬರ ಸಮಾಗಮವನ್ನು ಭಾಗವತದ ಲಕ್ಷಣವಾದ ಅಶ್ಲೀಲತೆಯಿಂದ ಚಿತ್ರಿಸುತ್ತದೆ. ಅದಿರಲಿ, ಕೃಷ್ಣ ರಾಮರು ಕುಬ್ಜೆಯಿಂದ ಗಂಧ ಲಿಪ್ತರಾಗಿ, ಸುಧಾಮನೆಂಬ ಹೂವಾಡಿಗನಿಂದ ಪುಷ್ಪಾಲಂಕೃತವಾಗಿ ಧನುರ್ಯಜ್ಞದ ಸ್ಥಳಕ್ಕೆ ಬಂದು ಪೂಜೆಗೊಳ್ಳಬೇಕಾದ ಧನುಸ್ಸನ್ನು ಮುರಿದುಹಾಕಿದರು. ಇದರಿಂದ ಭೀತನಾದ ಕಂಸನು ಕುವಲಯಾಪೀಡವೆಂಬ ಆನೆಯನ್ನು ಇವರ ವಧಾರ್ಥವಾಗಿ ಕಳುಹಿಸಿದನು. ಕೃಷ್ಣನು ಆ ಆನೆಯನ್ನು ಕೊಂದು ಅರಮನೆಯ ಅಂಗಳವನ್ನು ಪ್ರವೇಶಿಸಿದನು. ಅಲ್ಲಿ ಕಂಸನಿಂದ ನಿಯುಕ್ತರಾದ ಚಾಣೂರ, ಮುಷ್ಟಿಕ, ತೋಷಾಲಕ ಮತ್ತು ಆಂಧ್ರರೆಂಬ ಜಟ್ಟಿಗಳು ಈ ಸಹೋದರರನ್ನು ಸುತ್ತುವರೆದರು. ಕೃಷ್ಣನು ಚಾಣೂರ, ತೋಷಾಲಕರನ್ನೂ, ಬಲರಾಮನು ಉಳಿದಿಬ್ಬರನ್ನೂ ಸಂಹಾರ ಮಾಡಿದರು. ಕೃಷ್ಣನನ್ನು ಸಂಹರಿಸಲಾಗದೆ ಚಿಂತಾಗ್ರಸ್ತನಾದ ಕಂಸನು ಕೃಷ್ಣ ಬಲರಾಮರನ್ನು ಅವರ ಮಿತ್ರರಾದ ಗೋಪರನ್ನೂ ರಾಜ್ಯದಿಂದ ಹೊರಗಟ್ಟಬೇಕೆಂದೂ ಅವರ ಗೋವುಗಳನ್ನು ಮುಟ್ಟುಗೋಲು ಹಾಕಿಕೊಂಡು ವಸುದೇವ, ನಂದ ಮತ್ತು ಕಂಸನ ಸ್ವಂತ ತಂದೆಯಾದ ಉಗ್ರಸೇನನನ್ನು ವಧಿಸಬೇಕೆಂದೂ ಆಜ್ಞೆಮಾಡಿದನು. ಆಗ ಕೃಷ್ಣನು ಕಂಸನು ಕುಳಿತಿದ್ದ ವೇದಿಕೆಯನ್ನು ಏರಿದವನಾಗಿ ಅವನ ಮುಡಿಯನ್ನು ಹಿಡಿದೆಳೆದು ಅವನನ್ನು ನೆಲಕ್ಕೆ ತಳ್ಳಿ ಕೊಂದನು. ನಂತರ ಕಂಸನಿಗೆ ರಾಜಯೋಗ್ಯವಾದ ಸಂಸ್ಕಾರಗಳನ್ನು ನಡೆಸಿ, ದುಃಖಿತರಾದ ಕಂಸ ಪತ್ನಿಯರನ್ನು ಸಾಂತ್ವನಗೊಳಿಸಿ, ಉಗ್ರಸೇನನಿಂದ ತನಗೆ ಅರ್ಪಿತವಾದ ಸಿಂಹಾಸನವನ್ನು ಸ್ವೀಕರಿಸದೆ ಉಗ್ರಸೇನನನ್ನೇ ಪಟ್ಟದಲ್ಲಿ ಕುಳ್ಳಿರಿಸಿ, ಬಹಿಷ್ಕೃತರಾದ ತನ್ನೆಲ್ಲಾ ಬಂಧುಗಳನ್ನೂ ಮಥುರೆಗೆ ಹಿಂತಿರುಗುವಂತೆ ಆಹ್ವಾನಿಸಿದನು.

ಕೃಷ್ಣನ ಮುಂದಿನ ಕಾಳಗದ ಪ್ರಕರಣ ಜರಾಸಂಧನ ಪ್ರಕರಣ. ಜರಾಸಂಧನು ಮಗಧ ಮತ್ತು ಕಾಲಯವನ ರಾಷ್ಟ್ರಗಳ ಅಧಿಪತಿ. ಅವನು ಕಂಸನ ಅಳಿಯನೂ ಹೌದು. ಕೃಷ್ಣನು ಕಂಸನನ್ನು ಸಂಹರಿಸಿದ್ದರಿಂದ ಕುಪಿತನಾಗಿ ಜರಾಸಂಧನು ಹದಿನೇಳು ಬಾರಿ ಮಥುರೆಯ ಮೇಲೆ ಆಕ್ರಮಣ ನಡೆಸಿದನಂತೆ. ಹದಿನೆಂಟನೆಯ ಆಕ್ರಮಣದಿಂದ ಮಥುರಾ ನಗರವು ನಾಶವಾಗಿಬಿಡಬಹುದೆಂಬ ಅಂಜಿಕೆಯಿಂದ ಕೃಷ್ಣನು ಯಾದವರನ್ನು ಗುಜರಾತಿನ ಪಶ್ಚಿಮ ತುದಿಯಲ್ಲಿರುವ ದ್ವಾರಕೆಗೆ ಸ್ಥಳಾಂತರಿಸಿದನು. ಬರಿದಾದ ನಗರವನ್ನು ಜರಾಸಂಧನಿಂದ ಪ್ರೇರಿತನಾದ ಕಾಲಯವನನು ಆಕ್ರಮಿಸಿದನು. ನಿಶ್ಶಸ್ತ್ರನಾದ ಕೃಷ್ಣನನ್ನು ಕಾಲಯವನನು ನಗರದಿಂದಾಚೆ ಅಟ್ಟಿಸಿಕೊಂಡು ಹೋಗುತ್ತಿದ್ದಾಗ ಬೆಟ್ಟದ ಗವಿಯಲ್ಲಿ ನಿದ್ದೆಮಾಡುತ್ತಿದ್ದ ರಾಜ ಮುಚುಕುಂದನನ್ನು ಕೃಷ್ಣನೆಂದು ಭ್ರಮಿಸಿ ಜೋರಾಗಿ ಒದ್ದನು. ಎಚ್ಚರಗೊಂಡ ಮುಚುಕುಂದನ ನೇತ್ರಾಗ್ನಿಗೆ ಕಾಲಯವನನು ಭಸ್ಮೀಭೂತನಾದನು. ಕಾಲಯವನನ ಸೈನ್ಯವನ್ನು

ಕೃಷ್ಣನು ಸೋಲಿಸಿ ಕೊಳ್ಳೆಯನ್ನು ಹೊತ್ತುಕೊಂಡು ದ್ವಾರಕೆಯತ್ತ ನಡೆಯುತ್ತಿದ್ದಾಗ ಜರಾಸಂಧನ ಸೈನ್ಯವು ಎದುರಾಯಿತು. ಕೃಷ್ಣನಾದರೋ ಬೆಟ್ಟವನ್ನೇರಿ ಅದರಿಂದ ದ್ವಾರಕೆಗೆ ನೆಗೆದು ಶತ್ರುವಿನಿಂದ ತಪ್ಪಿಸಿಕೊಂಡನು.

ಈ ಹೊತ್ತಿಗೆ ಕೃಷ್ಣ ಮೊದಲಬಾರಿಗೆ ಮದುವೆಯಾಗಿದ್ದ. ಅವನ ಪತ್ನಿಯಾದ ರುಕ್ಮಿಣಿ ವಿದರ್ಭದ ರಾಜ ಭೀಷ್ಮಕನ ಮಗಳು. ಭೀಷ್ಮಕನು ಜರಾಸಂಧನ ಉಪದೇಶದ ಮೇರೆಗೆ ರುಕ್ಮಿಣಿಯನ್ನು ಚೇದಿಯ ರಾಜನೂ, ಕೃಷ್ಣನ ಸೋದರತ್ತೆಯ ಮಗನೂ ಆದ ಶಿಶುಪಾಲನಿಗೆ ಕೊಟ್ಟು ಮದುವೆಮಾಡುವ ತಯಾರಿಯಲ್ಲಿದ್ದನು. ಆದರೆ ಈ ಮದುವೆ ನಡೆಯುವುದಕ್ಕೆ ಮುನ್ನವೇ ಕೃಷ್ಣನು ರುಕ್ಮಿಣಿಯನ್ನು ಹಾರಿಸಿಕೊಂಡು ಹೋಗಿಬಿಟ್ಟನು. ಭಾಗವತ ಪುರಾಣದ ಪ್ರಕಾರ ರುಕ್ಮಿಣಿಯು ಕೃಷ್ಣನಲ್ಲಿ ಪ್ರೇಮವನ್ನಿರಿಸಿದವಳಾಗಿ ಅವನಿಗೊಂದು ಪ್ರೇಮ ಪತ್ರವನ್ನು ಕಳುಹಿಸಿದಳು. ಇದು ನಿಜವಾಗಿರಲಿಕ್ಕಿಲ್ಲ. ಏಕೆಂದರೆ, ಕೃಷ್ಣನು ರುಕ್ಮಿಣಿಗೆ ನಿಷ್ಠನಾದ ಪತಿಯಾಗಿ ಉಳಿಯಲಿಲ್ಲ. ನಿಧಾನವಾಗಿ ರುಕ್ಮಿಣಿಯ ಸುತ್ತಲೂ ಅವಳ ಸವತಿಯರ ಒಂದು ಪಡೆ ಬೆಳೆಯುತ್ತಾ ಹೋಗಿ ಕೃಷ್ಣ ಪತ್ನಿಯರ ಸಂಖ್ಯೆ ಹದಿನಾರು ಸಾವಿರದ ನೂರೆಂಟಾಯಿತು. ಕೃಷ್ಣನಿಗೆ ಒಂದು ಲಕ್ಷದ ಎಂಬತ್ತುಸಾವಿರ ಮಕ್ಕಳಾದರು. ಈ ಕೃಷ್ಣಪತ್ನಿಯರಲ್ಲಿ ಮುಖ್ಯರಾದವರು ಪ್ರಖ್ಯಾತರಾದ ರುಕ್ಮಿಣಿ, ಸತ್ಯಭಾಮೆ, ಜಾಂಬವತಿ, ಕಾಳಿಂದಿ, ಮಿತ್ರವಿಂದಾ, ಸತ್ಯ, ಭದ್ರ ಮತ್ತು ಲಕ್ಷ್ಮಣಾ ಎಂಬ ಎಂಟು ಮಂದಿ. ಉಳಿದ ಹದಿನಾರು ಸಾವಿರದ ನೂರು ಮಂದಿಯೂ ಪ್ರಾಗ್ಜ್ಯೋತಿಷ ನರಕನೆಂಬ ರಾಜನ ಅಂತಃಪುರಕ್ಕೆ ಸೇರಿದವರು. ಇಂದ್ರನ ತಾಯಿಯ ಕುಂಡಲಗಳನ್ನು ನರಕನು ಕದ್ದು ಒಯ್ದಿದ್ದನು. ಕೃಷ್ಣನು ನರಕನನ್ನು ಸೋಲಿಸಿದನು. ನರಕವಧೆಯ ನಂತರ ಕೃಷ್ಣನು ಇಂದ್ರನ ಅಮರಾವತಿಗೆ ಸತ್ಯಭಾಮೆಯೊಂದಿಗೆ ಹೋದಾಗ ಸತ್ಯಭಾಮೆಯು ಇಂದ್ರನ ಪಾರಿಜಾತ ವೃಕ್ಷದ ಮೇಲೆ ಮನಸ್ಸಿಟ್ಟಳು. ತನ್ನ ಪತ್ನಿಯ ಬಯಕೆಯ ಈಡೇರಿಕೆಗಾಗಿ ಈಗಷ್ಟೇ (ನರಕನನ್ನು ಕೊಂದು) ಉಪಕಾರ ಮಾಡಿದ್ದ ದೇವತೆಯೊಂದಿಗೆ ಹೋರಾಡಬೇಕಾಯಿತು. ಇಂದ್ರನು ವೈದಿಕ ದೇವತಾ ಪ್ರಮುಖನಾದರೂ, 'ಪರಮಾತ್ಮನ ಅವತಾರವಾದ' ಕೃಷ್ಣನಿಗೆ ಸಾಟಿಯಲ್ಲ. ಹಾಗಾಗಿ ಇಂದ್ರನು ತನಗೆ ಬಹುಪ್ರಿಯವಾದ ಆ ಪುಷ್ಪವೃಕ್ಷದಿಂದ ಅಗಲಬೇಕಾಯಿತು. ಈ ಪಾರಿಜಾತವು ದ್ವಾರಕೆಯಲ್ಲಿ ಪ್ರತಿಷ್ಠಿತವಾಯಿತು. ಕೃಷ್ಣನು ತನ್ನ ಎಂಟು ಪ್ರಮುಖ ಮಹಿಷಿಯರನ್ನು ಪಡೆದ ಕತೆ ಕುತೂಹಲಕಾರಿಯಾಗಿದೆ. ಅದರಲ್ಲಿ ರುಕ್ಮಿಣಿಯ ಕತೆಯನ್ನು ಈಗಾಗಲೇ ಹೇಳಿದ್ದಾಯಿತು. ಸತ್ಯಭಾಮೆಯು ಯಾದವ ಪ್ರಮುಖನಾದ ಸತ್ರಾಜಿತುವಿನ ಮಗಳು. ಕೃಷ್ಣನಿಂದ ಭೀತನಾದ ಅವನು ಕೃಷ್ಣನ ಮನವೊಲಿಸಲು ತನ್ನ ಮಗಳನ್ನು ಅವನಿಗೆ ಕೊಟ್ಟು ಮದುವೆಮಾಡಿದನು. ಜಾಂಬವತಿಯು ಜಾಂಬವಂತನೆಂಬ ಕರಡಿ ರಾಜನ ಮಗಳು. ಕೃಷ್ಣನು ಜಾಂಬುವಂತನೊಂದಿಗೆ, ಅವನು ತನ್ನಿಂದೊಯ್ದ ಮಣಿಯನ್ನು ಮರಳಿ ಪಡೆಯಲು ಸುದೀರ್ಘವಾದ ಕಾಳಗವನ್ನು ಮಾಡಬೇಕಾಯಿತು. ಕೊನೆಯಲ್ಲಿ ಸೋತ ಜಾಂಬುವಂತನು ಕೃಷ್ಣನನ್ನೇ ಮದುವೆಯಾಗಬೇಕೆಂದು ಅಸಾಧ್ಯವಾದ ತಪಸ್ಸು ಮಾಡಿದ್ದರಿಂದ ಕಾಳಿಂದಿಗೆ ಕೃಷ್ಣನು ಪತಿಯಾದನು. ಮಿತ್ರವೃಂದಾ ಎಂಬಾಕಿ ಕೃಷ್ಣನ ಸೋದರತ್ತೆಯ ಮಗಳು. ಅವಳನ್ನು ಅವಳ ಸ್ವಯಂವರದ ಕಣದಲ್ಲಿ ಕೃಷ್ಣನು ಹಾರಿಸಿಕೊಂಡು ಬಂದನು. ಅಯೋಧ್ಯೆಯ ರಾಜನಾದ ನಾಗಜಿತನ ಮಗಳಾದ ಸತ್ಯೆಯನ್ನು ಗೂಳಿಕಾಳಗದ ಪಣದಲ್ಲಿ ಕೃಷ್ಣನು ಗೆದ್ದನು. ಭದ್ರೆಯು ಕೃಷ್ಣನ ಅತ್ತೆಯ ಮಗಳು. ಲಕ್ಷ್ಮಣಾ ಎಂಬಾಕೆ ಮದ್ರರಾಜನಾದ ಬೃಹತ್‌ಸೇನನ ಮಗಳು. ಅವಳನ್ನೂ ಸ್ವಯಂವರದ ವೇದಿಕೆಯಿಂದ ಕೃಷ್ಣನು ಹೊತ್ತುಕೊಂಡು ಬಂದನು.

ಬಲರಾಮನ ಸ್ವಂತ ತಂಗಿಯೂ, ಕೃಷ್ಣನ ಚಿಕ್ಕಮ್ಮನ ಮಗಳೂ ಆದ ಸುಭದ್ರೆಯ ಮತ್ತು ಅರ್ಜುನನ ವಿವಾಹದ ಪ್ರಸಂಗದಲ್ಲಿ ಕೃಷ್ಣನ ಪಾತ್ರ ಗಮನಾರ್ಹವಾದದ್ದು. ಅರ್ಜುನನು ತೀರ್ಥಯಾತ್ರೆಯನ್ನು ಮಾಡುತ್ತಾ, ಪ್ರಭಾಸವೆಂಬ ತೀರ್ಥಕ್ಷೇತ್ರಕ್ಕೆ ಬಂದಾಗ ಕೃಷ್ಣನು ಅವನನ್ನು ರೈವತಕವೆಂಬ ಗಿರಿಯ ಮೇಲೆ ಭೇಟಿಯಾದನು. ಅಲ್ಲಿ ಅರ್ಜುನನು ಸುಭದ್ರೆಯನ್ನು ಕಂಡು ಮೋಹಿತನಾಗಿ ಅವಳನ್ನು ಪಡೆಯುವ ಬಗೆ ಹೇಗೆಂದು ಕೃಷ್ಣನನ್ನು ಕೇಳಿದನು. ಕೃಷ್ಣನು ಅರ್ಜುನನಿಗೆ ಸುಭದ್ರೆಯನ್ನು ಪರಾಕ್ರಮಿಯಾದ ಕ್ಷತ್ರಿಯನಿಗೆ ಸಹಜವಾದಂತೆ ಹೊತ್ತುಕೊಂಡು ಹೋಗಬೇಕೆಂದೂ, ಸ್ವಯಂವರದ ಅನಿಶ್ಚಿತ ಫಲಗಳಿಗೆ ಕಾಯಬಾರದೆಂದು ಉಪದೇಶ ಮಾಡಿದನು. ಸುಭದ್ರಾ ಪಹರಣದ ಸುದ್ದಿಯನ್ನು ಕೇಳಿ ಯಾದವರು ಮೊದಲು ಕ್ಷುದ್ಧರಾದರು. ಆದರೆ ಕೃಷ್ಣನು ಅವರಿಗೆ ಅರ್ಜುನನು ಸುಭದ್ರೆಗೆ ತಕ್ಕನಾದ ವರನೆಂದೂ, ಸುಭದ್ರೆಯನ್ನು ಹೊತ್ತೊಯ್ದಿರುವುದರಿಂದ ಅರ್ಜುನನ ಪರಾಕ್ರಮಕ್ಕೆ ಯಾವ ಕುಂದೂ ಬಂದಿಲ್ಲವೆಂದೂ ಹೇಳಿ ಅವರ ಮನವೊಲಿಸಿದನು. ಅವರೆಲ್ಲರೂ ಒಂದಾಗಿ ಸಮ್ಮತಿಸಿದರು. ಹಾಗಲ್ಲದೆ ಇನ್ನೇನು ತಾನೆ ಮಾಡಿಯಾರು! ಕೃಷ್ಣ ನಮ್ಮಂತೆ ಬರಿ ಬಾಯಿಮಾತಿನವನಲ್ಲ. ಇಂಥ ಕೆಲಸಗಳನ್ನು ತಾನೇ ಮಾಡಿ ಮಾದರಿಯಾದವನು.

ಯುಧಿಷ್ಠಿರನ ರಾಜಸೂಯದ ಸಂದರ್ಭದಲ್ಲಿ ಅಡಚಣೆಯಾಗಿದ್ದ ಜರಾಸಂಧ, ಶಿಶುಪಾಲರನ್ನು ಕೃಷ್ಣನು ಹೇಗೆ ನಿವಾರಿಸಿದನೆಂಬುದು ಕುತೂಹಲಕಾರಿಯಾಗಿದೆ. ಜರಾಸಂಧನು ಅಸಂಖ್ಯಾತ ರಾಜರನ್ನು ಸೋಲಿಸಿ ಸೆರೆಯಲ್ಲಿಟ್ಟದ್ದನು. ರುದ್ರನಿಗೆ ಅವರನ್ನು ಬಲಿಕೊಡುವುದು ಅವನ ಉದ್ದೇಶವಾಗಿತ್ತು. ಈ ಜರಾಸಂಧನನ್ನು ಸಂಹರಿಸಿ ಸೆರೆಯಾಗಿದ್ದ ರಾಜರನ್ನೆಲ್ಲ ಬಿಡುಗಡೆ ಮಾಡಿ ಅವರು ಯುಧಿಷ್ಠಿರನಿಗೆ ಕಪ್ಪಕಾಣಿಕೆಯೊಪ್ಪಿಸುವಂತಾಗದಿದ್ದರೆ ಯುಧಿಷ್ಠಿರನು ಸಾರ್ವಭೌಮನೆನಿಸಿಕೊಳ್ಳಲಾರ. ಈ ಕಾರಣಕ್ಕೇ ಕೃಷ್ಣನು ಅರ್ಜುನ ಮತ್ತು ಭೀಮರೊಂದಿಗೆ ಜರಾಸಂಧನ ರಾಜಧಾನಿಯಾದ ರಾಜಗೃಹಕ್ಕೆ ಹೊರಟನು. ಜರಾಸಂಧನನ್ನು ತಾವು ಮೂವರಲ್ಲಿ ಯಾರೊಬ್ಬರೊಂದಿಗಾದರೂ ಯುದ್ಧಕ್ಕೆ ಬರುವಂತೆ ಆಹ್ವಾನಿಸಿದನು. ಇಂಥ ಸವಾಲುಗಳನ್ನು ಕ್ಷತ್ರಿಯನಾಗಿ ತಿರಸ್ಕರಿಸಲಾರನಾದುದರಿಂದ ಜರಾಸಂಧನು ತನ್ನ ಸಾವನ್ನು ಮುಂಗಂಡು ತನ್ನ ಮಗನಾದ ಸಹದೇವನನ್ನು ತನ್ನ ಉತ್ತಾರಾಧಿಕಾರಿಯಾಗಿ ಘೋಷಿಸಿ, ಭೀಮನೊಂದಿಗೆ ಮಲ್ಲಯುದ್ಧಕ್ಕಿಳಿದನು. ಈ ಕಾಳಗವು ಹದಿಮೂರು ದಿನಗಳ ಕಾಲ ನಡೆಯಿತು. ಕೊನೆಗೆ ಜರಾಸಂಧನು ತನ್ನ ಎದುರಾಳಿಯ ಕೈಯಲ್ಲಿ ದಾರುಣವಾದ ಸಾವನ್ನಪ್ಪಿದನು. ಜರಾಸಂಧನ ಮಗನನ್ನು ಪಟ್ಟಕ್ಕೆ ಕೂರಿಸಿ, ಬಂಧವಿಮುಕ್ತರಾದ ಅರಸುಗಳನ್ನು ಯುಧಿಷ್ಠಿರನ ರಾಜಸೂಯಕ್ಕೆ ಆಹ್ವಾನಿಸಿ ಕೃಷ್ಣ ಮತ್ತವನ ಮಿತ್ರರು ಇಂದ್ರಪ್ರಸ್ಥಕ್ಕೆ ಮರಳಿದರು.

ರಾಜಸೂಯಕ್ಕೆ ನಿಶ್ಚಿತವಾದ ಕಾಲವು ಬಂತು. ರಾಜಸೂಯದ ಅಂಗವಾಗಿ ನಡೆಯುವ ಅನೇಕ ವಿಧಿಗಳಲ್ಲಿ ಬ್ರಾಹ್ಮಣರ ಪಾದ ತೊಳೆಯುವ ಕೆಲಸವನ್ನು ಕೃಷ್ಣನು ವಹಿಸಿಕೊಂಡನೆಂದು ಹೇಳಲಾಗಿದೆ. ಮಹಾಭಾರತ ಅಷ್ಟೇನೂ ಪ್ರಾಚೀನವಲ್ಲ. ಕೊನೆಯ ಪಕ್ಷ ಈ ಪ್ರಸಂಗವಾದರೂ ಎಂಬುದಕ್ಕೆ ಈ ಪ್ರಸಂಗ ಸ್ಪಷ್ಟ ನಿದರ್ಶನ. ಏಕೆಂದರೆ ಪುರಾತನ ಕಾಲದಲ್ಲಿ ಬ್ರಾಹ್ಮಣ ಪಾರಮ್ಯವು ಪ್ರತಿಷ್ಠಿತವಾದ ಕಾಲದಲ್ಲೂ ಕೂಡ ಕ್ಷತ್ರಿಯರು ತಮ್ಮ ಪ್ರತಿಷ್ಠೆಗೆ ಕುಂದಾಗುವಂತೆ ಬ್ರಾಹ್ಮಣರಿಗೆ ಗೌರವ ಸೂಚಿಸಿದ್ದಿಲ್ಲ. ಇರಲಿ, ಯಾಗವು ಅಂತ್ಯಗೊಂಡು ಯುಧಿಷ್ಠಿರನು ಯಾಗಕ್ಕೆ ಹಾಜರಾದ ರಾಜರು, ಋತ್ವಿಕರು ಮುಂತಾದವರಿಗೆ ಉಡುಗೊರೆಗಳನ್ನು ನೀಡುವ ಕಾಲವು ಬಂತು. ಈಗ ಮೊದಲ

ಗೌರವವು ಯಾರಿಗೆ ಸಲ್ಲಬೇಕು? ಯುಧಿಷ್ಠಿರನು ಈ ವಿಷಯಕ್ಕೆ ಭೀಷ್ಮನ ಸಲಹೆಯನ್ನು ಕೇಳಲಾಗಿ, ಭೀಷ್ಮನು ಕೃಷ್ಣನನ್ನು ಈ ಗೌರವಕ್ಕೆ ಬಾಧ್ಯನೆಂದು ಸೂಚಿಸಿದನು. ಆ ಸಲಹೆಯಂತೆ ಯುಧಿಷ್ಠಿರನಿಂದ ನಿಯುಕ್ತನಾದ ಸಹದೇವನು ಕೃಷ್ಣನಿಗೆ ಅರ್ಘ್ಯವಿತ್ತನು. ಕೃಷ್ಣನು ಅದನ್ನು ಸ್ವೀಕರಿಸಿದನು. ಇದರಿಂದ ಶಿಶುಪಾಲನು ಕೆರಳಿ ಕೃಷ್ಣನಿಗೆ ಈ ಗೌರವದ ಹಕ್ಕಿಲ್ಲವೆಂದು ದೊಡ್ಡದೊಂದು ಭಾಷಣ ಮಾಡಿ ಈ ಮನ್ನಣೆಯನ್ನು ಅವನಿಗೆ ಕೊಟ್ಟು ಪಾಂಡವರನ್ನೂ, ಅದನ್ನು ಸ್ವೀಕರಿಸಿದ ಕೃಷ್ಣನನ್ನೂ ತೆಗಳಿದರು. ಭೀಷ್ಮನು ಇನ್ನೊಂದು ಸುದೀರ್ಘ ಭಾಷಣವನ್ನು ಪ್ರಾರಂಭಿಸಿ ಕೃಷ್ಣನ ಸಾಹಸಗಳನ್ನೂ ಅವನ ಸಾಧನೆಯನ್ನೂ ಹೊಗಳಿ ಅವನ ದೇವತ್ವವನ್ನು ಘೋಷಿಸಿದನು. ಶಿಶುಪಾಲನು ಮತ್ತೆ ಎದ್ದು ನಿಂತು ಭೀಷ್ಮನ ಪ್ರತಿಯೊಂದು ಮಾತಿಗೂ ಪ್ರತಿಯುತ್ತರ ಕೊಟ್ಟು ಅವನನ್ನು ತೆಗಳಿದನು. ಅರ್ವಾಚೀನ ಕೃಷ್ಣ ಚರಿತ್ರೆಕಾರರು ಈ ಪ್ರಸಂಗವನ್ನು ನಿರ್ದೇಶಿಸುತ್ತಾ, ಶಿಶುಪಾಲನ ಕೃಷ್ಣ ನಿಂದೆಯಲ್ಲಿ ಬೃಂದಾವನದ ಗೋಪಿಯರನ್ನು ಕುರಿತ ಪ್ರಸ್ತಾಪವೇ ಇಲ್ಲದಿರುವುದರಿಂದ ಆ ಪ್ರಸಂಗವು ಮಹಾಭಾರತದ ನಂತರದ ಕಾಲದ ಪುರಾಣಕಾರರು, ಕವಿಗಳು ಕಲ್ಪಿಸಿಕೊಂಡ ಪ್ರಸಂಗವೆಂದು ಹೇಳುತ್ತಾರೆ. ಅದೇನೆ ಇರಲಿ, ಶಿಶುಪಾಲನ ಈ ಭಾಷಣ ಮುಗಿಯುವ ಹೊತ್ತಿಗೆ ಯುಧಿಷ್ಠಿರನಿಗೆ ಶಿಶುಪಾಲನು ಯಾಗಾಂತ್ಯಕ್ಕೆ ಎಲ್ಲಿ ತಡೆಯುಂಟುಮಾಡುವನೋ ಎಂಬ ಭೀತಿಯು ಆವರಿಸಿತು. ಏಕೆಂದರೆ ಶಿಶುಪಾಲನ ಅನೇಕ ಅಕೃತ್ಯಗಳನ್ನು ಹೇಳುತ್ತಾ "ನನ್ನ ಅತ್ತೆಯಾದ ಶಿಶುಪಾಲನ ತಾಯಿಯ ಪ್ರಾರ್ಥನೆಯಂತೆ ಶಿಶುಪಾಲನ ನೂರು ತಪ್ಪುಗಳನ್ನು ಮನ್ನಿಸಿದ್ದೇನೆ. ಆದರೆ ಈ ರಾಜಸಭೆಯಲ್ಲಿ ನನ್ನನ್ನು ಅವಮಾನಿಸಿದ ಅವನ ಮಾತುಗಳನ್ನು ಕ್ಷಮಿಸಲಾರೆ. ಅವನನ್ನು ನಿಮ್ಮ ಕಣ್ಣೆದುರೇ ಧ್ವಂಸಮಾಡಿ ಬಿಡುತ್ತೇನೆ" ಎಂದು ಕೃಷ್ಣನು ತನ್ನ ಚಕ್ರದಿಂದ ಶಿಶುಪಾಲನ ಶಿರಸ್ಸನ್ನು ಛೇದಿಸಿದನು.

ಮಹಾಭಾರತದ ಯುದ್ಧ ಪ್ರಸಂಗದಲ್ಲಿ ಕೃಷ್ಣನ ಕಾರ್ಯಗಳನ್ನು ಈಗ ಪರಿಶೀಲಿಸೋಣ. ಆ ಕಾರ್ಯಗಳಲ್ಲಿ ಕೆಲವು ಹೀಗಿದೆ:

೧. ಕೃಷ್ಣನ ಮಿತ್ರನಾದ ಸಾತ್ಯಕಿಯು ಸೋಮದತ್ತನ ಮಗನಾದ ಭೂರಿಶ್ರವನ ಬಾಹುಗಳಲ್ಲಿ ಸಿಕ್ಕಿಕೊಂಡಿದ್ದಾಗ ಕೃಷ್ಣನು ಭೂರಿಶ್ರವನ ತೋಳುಗಳನ್ನು ಕತ್ತರಿಸುವಂತೆ ಪ್ರೇರೇಪಿಸಿದನು. ಸಾತ್ಯಕಿಗೆ ಭೂರಿಶ್ರವನನ್ನು ಕೊಲ್ಲುವುದು ಸುಲಭವಾದದ್ದು ಹೀಗೆ.

೨. ಅಭಿಮನ್ಯುವನ್ನು ಏಳು ಕೌರವಯೋಧರು ಸುತ್ತುವರೆದು ಅನುಚಿತವಾಗಿ ಕೊಂದಾಗ, ಆ ಸಮಸಪ್ತಕರ ನಾಯಕನಾದ ಜಯದ್ರಥನನ್ನು ಮಾರನೆಯದಿನ ಸೂರ್ಯಾಸ್ತದ ಹೊತ್ತಿಗೆ ಕೊಲ್ಲುವುದಾಗಿಯೂ ಅದಾಗದಿದ್ದರೆ ಕೂಡಲೇ ಅಗ್ನಿಪ್ರವೇಶ ಮಾಡುವುದಾಗಿಯೂ ಅರ್ಜುನನು ಪ್ರತಿಜ್ಞೆ ಮಾಡಿದನು. ಸೂರ್ಯಸ್ತವೂ ಸಮೀಪಿಸಿ ಅರ್ಜುನನ ಪ್ರತಿಜ್ಞೆ ತೀರದೆ ಹೋಗಲು, ಕೃಷ್ಣನು ಸೂರ್ಯನನ್ನು ಮರೆ ಮಾಡಿದಾಗ ಜಯದ್ರಥನು ಅವಿತುಕೊಂಡ ಜಾಗದಿಂದ ಹೊರಬರಲು ಕೃಷ್ಣ ಮತ್ತೆ ಸೂರ್ಯನ ಮರೆ ತೆಗೆದು ಅರ್ಜುನನು ಜಯದ್ರಥನನ್ನು ಅವನಿಗೆ ಗೊತ್ತಾಗದಂತೆ ಕೊಲ್ಲುವ ಹಾಗೆ ಮಾಡಿದನು.

೩. ದ್ರೋಣನನ್ನು ಯಾವ ಉಚಿತ ಉಪಾಯಗಳಿಂದಲೂ ಕೊಲ್ಲಲಾರದೆ ಹೋದಾಗ ಪಾಂಡವರಿಗೆ ದ್ರೋಣ ವಧೆಗೆ ಒಂದು ಅನುಚಿತ ಮಾರ್ಗವನ್ನು ಸೂಚಿಸಿದ್ದು ಕೃಷ್ಣನೇ. ದ್ರೋಣನು ಶಸ್ತ್ರಸನ್ಯಾಸ ಮಾಡಿದರೆ ಮಾತ್ರ ಅವನನ್ನು ಕೊಲ್ಲಲು ಸಾಧ್ಯವಾಗುವುದೆಂದೂ ದ್ರೋಣನ ಮಗ ಸತ್ತನೆಂಬ

ಸುದ್ದಿಯಿಂದ ಮಾತ್ರ ಅವನಿಂದ ಶಸ್ತ್ರಸನ್ಯಾಸ ಸಾಧ್ಯವೆಂದೂ ಕೃಷ್ಣನೇ ಹೇಳಿದನು. ಭೀಮನು ಇದರಿಂದ ಪ್ರೇರಿತನಾಗಿ ಅಶ್ವತ್ಥಾಮ ಎಂಬ ಹೆಸರಿನ ಆನೆಯೊಂದನ್ನು ಕೊಂದು ಅಶ್ವತ್ಥಾಮನು ಸತ್ತುಹೋದನೆಂದು ದ್ರೋಣನಿಗೆ ಹೇಳಲು, ದ್ರೋಣನು ವಿಚಲಿತನಾದರೂ ಭೀಮನ ಮಾತನ್ನು ಸಂಪೂರ್ಣ ನಂಬಲಿಲ್ಲ. ಇದೇ ಸಮಯದಲ್ಲಿ ಅನೇಕ ಋಷಿಗಳು ಬಂದು ದ್ರೋಣನಿಗೆ ಯುದ್ಧವನ್ನು ತೊರೆಯಬೇಕೆಂದೂ, ಬ್ರಾಹ್ಮಣೋಚಿತವಾದ ಧ್ಯಾನದಿಂದ ಸ್ವರ್ಗವನ್ನು ಪಡೆಯಬೇಕೆಂದೂ ಒತ್ತಾಯಿಸಲು ಪ್ರಾರಂಭಿಸಿದರು. ಇದರಿಂದ ಮತ್ತಷ್ಟು ವಿಚಲಿತನಾಗಿ ತನ್ನ ಮಗನನ್ನು ಕುರಿತ ಸತ್ಯಸಂಗತಿಗಾಗಿ ಯುಧಿಷ್ಠಿರನನ್ನೇ ಕೇಳಲು, ಯುಧಿಷ್ಠಿರನು ಅಸತ್ಯವನ್ನು ಹೇಳಲು ಹಿಂಜರಿದಾಗಿ, ಕೃಷ್ಣನು ತನ್ನ ಅಸತ್ಯಧರ್ಮೋಪದೇಶದ ನಡುವೆ ವಾಸಿಷ್ಠ ಸ್ಮೃತಿಯ ಈ ಮಾತುಗಳನ್ನು ಉಪದೇಶಿಸಿದನು: "ಮದುವೆಯ ವಿಷಯದಲ್ಲಿ, ಪ್ರಣಯ ಪ್ರಸಂಗಗಳಲ್ಲಿ, ಆತ್ಮ ರಕ್ಷಣೆಗಾಗಿ ಸರ್ವಸಂಪತ್ತೂ ಹಾನಿಯಾಗುವಲ್ಲಿ, ಬ್ರಾಹ್ಮಣ ಹಿತಕ್ಕಾಗಿ ಅಸತ್ಯವನ್ನು ಹೇಳಬಹುದು. ಈ ಐದು ಪ್ರಸಂಗಗಳಲ್ಲಿ ಸುಳ್ಳುಹೇಳುವುದು ಪಾಪವಲ್ಲವೆಂದು ತಿಳಿದವರೇ ಹೇಳುತ್ತಾರೆ." ಯುಧಿಷ್ಠಿರನ ಸತ್ಯ, ನಿಷ್ಠೆ ಇದರಿಂದಾಗಿ ಸಡಿಲವಾಗಿ "ಹೌದು ಅಶ್ವತ್ಥಾಮ ಸತ್ತದ್ದು ನಿಜ, ಅದು ಆನೆ" ಎನ್ನುವಾಗ ಆನೆ ಎಂಬ ಮಾತನ್ನು ದ್ರೋಣನಿಗೆ ಕೇಳದಂತೆ ಮೆತ್ತಗೆ ಉಚ್ಚರಿಸಿದನು. ಈಗ ದ್ರೋಣನು ಸಂಪೂರ್ಣವಾಗಿ ಶೋಕಿತನಾಗಿ, ಭೀಮನ ಕಹಿಯಾದ ಮಾತುಗಳನ್ನು ತಡೆಯಲಾರದೆ ಶಸ್ತ್ರವನ್ನು ವಿಸರ್ಜಿಸಿ ಧ್ಯಾನಕ್ಕೆ ಕುಳಿತಿದ್ದಾಗ ಧೃಷ್ಟದ್ಯುಮ್ನನು ಅವನನ್ನು ಕೊಂದನು.

೪. ದ್ವೈಪಾಯನ ಸರೋವರದಲ್ಲಿ ದುರ್ಯೋಧನನೊಂದಿಗೆ ಹೋರಾಡುತ್ತಿದ್ದ ಭೀಮನು ಅಯಶಸ್ವಿಯಾಗಿದ್ದಾಗ ಅರ್ಜುನನ ಮುಖೇನ ದುರ್ಯೋಧನನ ಊರುಭಂಗದ ಪ್ರತಿಜ್ಞೆಯನ್ನು ಕೃಷ್ಣನು ಭೀಮನ ನೆನಪಿಗೆ ತಂದನು. ಎದುರಾಳಿಯನ್ನು ಹೊಕ್ಕಳಿಂದ ಕೆಳಕ್ಕೆ ಹೊಡೆಯುವುದು ಗದಾಯುದ್ಧದಲ್ಲಿ ಅಕ್ರಮವಾದರೂ, ದುರ್ಯೋಧನನನ್ನು ಅಕ್ರಮವಾಗಿಯಲ್ಲದೆ ಕೊಲ್ಲುವುದು ಸಾಧ್ಯವಲ್ಲವಾದ್ದರಿಂದ ಕೃಷ್ಣನು ಅಕ್ರಮವನ್ನೇ ಸೂಚಿಸಿ ಭೀಮನಿಂದ ಅಕ್ರಮವನ್ನೇ ಮಾಡಿಸಿದನು.

ಕೃಷ್ಣಾವಸಾನವೂ ಕೃಷ್ಣನ ನೈತಿಕತೆಯ ಮೇಲೆ ಬೆಳಕಿನ ಪ್ರವಾಹವನ್ನೇ ಬೀರುತ್ತದೆ. ಕೃಷ್ಣನು ದ್ವಾರಕೆಯ ರಾಜನಾಗಿ ಸತ್ತನು. ಆಗ ದ್ವಾರಕೆ ಹೇಗಿತ್ತು ಅವನ ಅವಸಾನ ಹೇಗಾಯಿತು ನೋಡೋಣ. ಹರಿವಂಶದ ರೀತ್ಯ "ಪರಾಕ್ರಮಿಗಳಾದ ಯದುಗಳ ಸಹಾಯದಿಂದ ದೈತ್ಯರನ್ನು ಸಂಹರಿಸಿದ ಭಗವಂತನು ದ್ವಾರಕೆಯಲ್ಲಿ ಸಾವಿರಾರು ವಾರಾಂಗನೆಯರು ನೆಲಸುವಂತೆ ಮಾಡಿದನು." ನೃತ್ಯ, ಗೀತ ಸುರಾಪಾನಗಳಲ್ಲಿ ಮುಳುಗಿದ ಸ್ತ್ರೀಪುರುಷರೂ ವೇಶ್ಯೆಯರೂ ದ್ವಾರಕೆಯ ತುಂಬಾ ಇದ್ದರು. ಈ ಸಂದರ್ಭದಲ್ಲೇ ಬರುವ ಸಮುದ್ರಯಾತ್ರೆಯ ವರ್ಣನೆಯಲ್ಲಿ ಈ ಹೆಂಗಸರೇ ವರ್ಣನೆಯ ಕೇಂದ್ರವಾಗಿದ್ದಾರೆ. ಅವರ ಗಾನ–ನೃತ್ಯಗಳಿಂದ ಉತ್ತೇಜಿತರಾಗಿ ಕೃಷ್ಣ ಬಲರಾಮರೂ ಅವರವರ ಮಡದಿಯರೊಂದಿಗೆ ಕುಣಿತದಲ್ಲಿ ಭಾಗವಹಿಸಿದರು. ಅವರೊಂದಿಗೆ ಉಳಿದ ಯಾದವರೂ ಅರ್ಜುನನೂ ನಾರದನೂ ಸೇರಿಕೊಂಡರು. ಹೆಣ್ಣು ಗಂಡುಗಳೆಲ್ಲ ಸಮುದ್ರಕ್ಕೆ ನುಗ್ಗಿದರು. ಕೃಷ್ಣನ ಸಲಹೆಯ ಮೇರೆಗೆ ಎಲ್ಲರೂ ಆ ಹೆಣ್ಣುಗಳ ಜೊತೆಯಲ್ಲಿ ಜಲಕ್ರೀಡೆಯಲ್ಲಿ ತೊಡಗಿದರು. ಒಂದು ಗುಂಪಿಗೆ ಕೃಷ್ಣನೂ ಇನ್ನೊಂದಕ್ಕೆ ಬಲರಾಮನೂ ನಾಯಕರಾದರು. ವಾರನಾರಿಯರು ತಮ್ಮ ಸಂಗೀತದಿಂದ ಈ ಲೀಲೆಗೆ ಮತ್ತಷ್ಟು ರಂಗು ತಂದರು. ಇದಾದ ಮೇಲೆ ಎಲ್ಲರೂ ತಿನ್ನುವುದರಲ್ಲೂ ಕುಡಿಯುವುದರಲ್ಲೂ ನಿರತರಾದರು.

ಕೃಷ್ಣ ಬಲರಾಮರು ಸಂಗೀತವಾದ್ಯಗಳ ನುಡಿಕೆಯಲ್ಲಿ ತಮ್ಮ ನೈಪುಣ್ಯವನ್ನು ತೋರುತ್ತಾ ಸಂಗೀತ ನುಡಿಸಿದರು. ಇದರಿಂದ ಯಾದವರು ಎಂಥ ರಸಿಕರು ಎಂಬುದೂ ಇವತ್ತಿನ ಬ್ರಾಹ್ಮಣರು ಮತ್ತಿತರ ಮಡಿವಂತರು ದೇಸೀ ನಾಟಕಗಳ ಬಗ್ಗೆ, ದೇಸೀನೃತ್ಯಗಳ ಬಗ್ಗೆ ತೋರುವ ಮಡಿವಂತಿಕೆಯನ್ನು ಗಮನಿಸಿದ್ದರೆ ಹೇಗೆ ಪ್ರತಿಕ್ರಿಯಿಸುತ್ತಿದ್ದರು ಎಂಬುದೂ ಗೊತ್ತಾಗುತ್ತದೆ. ಇಂಥ ಒಂದು ಅಮಲಿನಲ್ಲೇ ಕುಡಿತದ ಅಮಲಿನಲ್ಲಿ ಯಾದವರು ನಾಶವಾದದ್ದು. ಯಾದವರು ಅವರ ತುಂಟಾಟಗಳಿಂದ ಅನೇಕ ಋಷಿಗಳ ಅಪ್ರೀತಿಗೆ ಕಾರಣರಾದರಂತೆ. ಕೃಷ್ಣನ ಮಕ್ಕಳಲ್ಲಿ ಒಬ್ಬನಾದ ಸಾಂಬನ ಹೊಟ್ಟೆಗೆ ಒಂದು ಪುಟ್ಟ ಒನಕೆ ಕಟ್ಟಿ ಅವನಿಗೆ ಗರ್ಭಿಣಿಯ ವೇಷ ಹಾಕಿ ಋಷಿಗಳ ಮುಂದೆ ಅವನನ್ನು ನಿಲ್ಲಿಸಿ ಈ ಹೆಂಗಸಿಗೆ ಹುಟ್ಟುವ ಮಗು ಯಾವುದು ಎಂದು ಕೇಳಿದರಂತೆ, ಋಷಿಗಳು ಇದರಿಂದ ಕುಪಿತರಾಗಿ "ಅವಳು 'ಯಾದವ' ಕುಲವನ್ನೇ ನಾಶಮಾಡುವ ಒನಕೆಯನ್ನು ಹೆರುತ್ತಾಳೆ" ಎಂದರಂತೆ. ಈ ಶಾಪದ ಫಲಕ್ಕೆ ಹದರಿದವರಾಗಿ ಹುಡುಗರು ಆ ಒನಕೆಯನ್ನು ಪುಡಿ ಪುಡಿ ಮಾಡಿ ಸಮುದ್ರಕ್ಕೆ ಎಸೆದರು. ಆದರೆ ಆ ಒನಕೆಯ ಕೊನೆಯ ತುಂಡು ಒಂದು ಬಾಣದ ತುದಿಯಾಗಿ ಬೇಟೆಗಾರನೊಬ್ಬನಿಗೆ ಸಿಕ್ಕಿತು. ಈ ಜೊಂಡಿನಿಂದ ಬಡಿದಾಡಿಯೇ ಯಾದವರು ಸತ್ತದ್ದು. ಅವರು ಪ್ರಭಾಸಕ್ಕೆ ಯಾತ್ರೆ ಹೋಗಿದ್ದಾಗ ಪಾನಮತ್ತರಾಗಿ ಒಬ್ಬರೊಬ್ಬರೊಡನೆ ಬಡಿದಾಡಿದರು. ಕುಡಿತವೇ ಅವರ ವಿನಾಶಕ್ಕೆ ಕಾರಣವಾಯಿತು. ಕುಡಿತದ ಕೆಡುಕನ್ನು ಅರಿತ ಕೃಷ್ಣ ಮತ್ತಿತರ ಯಾದವ ನಾಯಕರು ಕುಡಿತವನ್ನು ಬಹಿಷ್ಕರಿಸಿ ಘೋಷಣೆ ಹೊರಡಿಸಿದರು. ಕುಡಿತಕ್ಕೆ ಮರಣದಂಡನೆ ಎಂದರು. ಆದರೆ ಈ ನಿಷೇಧ ಫಲಕಾರಿಯಾಗಲಿಲ್ಲ.

ಪಾನಮತ್ತರಾದ ಯಾದವರು ಮೊದಲು ಜಗಳವಾಡಿದರು. ನಂತರ ಯುದ್ಧ ಮಾಡುತ್ತಾ ಒಬ್ಬರನ್ನೊಬ್ಬರು ಕೊಲ್ಲಲು ತೊಡಗಿದರು. ಕೃಷ್ಣನ ಸ್ವಂತ ಮಕ್ಕಳೇ ಅಸುನೀಗಿದಾಗ ಕೃಷ್ಣನೂ ಕಾಳಗಕ್ಕಿಳಿದು ತನ್ನವರನ್ನೇ ಅಸಂಖ್ಯವಾಗಿ ಕೊಂದುಹಾಕಿದನು. ಇದಾದ ಮೇಲೆ ಕೃಷ್ಣನು ಬಲರಾಮನನ್ನು ಹುಡುಕಿಕೊಂಡು ಹೊರಟಾಗ ಬಲರಾಮನು ಧ್ಯಾನಮುದ್ರೆಯಲ್ಲಿ ಕುಳಿತದ್ದನ್ನೂ ಅವನ ಆತ್ಮವು ಆದಿಶೇಷನ ರೂಪದಲ್ಲಿ ಅವನ ಶರೀರದಿಂದ ಹೊರಕ್ಕೆ ಹೋಗುತ್ತಿರುವುದನ್ನೂ ಕಂಡನು. ಕೃಷ್ಣನಿಗೆ ತನ್ನ ಅವಸಾನದ ಕಾಲವೂ ಪ್ರಾಪ್ತವಾಯಿತೆನ್ನಿಸಿತು. ತನ್ನ ತಂದೆ ಮತ್ತು ಪತ್ನಿಯರಿಗೆ ವಿದಾಯ ಹೇಳಿ, ತನ್ನ ಪತ್ನಿಯರ ಹೊಣೆಯನ್ನು ಅರ್ಜುನನಿಗೆ ವಹಿಸಿರುವುದಾಗಿಯೂ ಅರ್ಜುನನು ಬಂದು ಅವರ ಹೊಣೆ ವಹಿಸಿಕೊಳ್ಳುತ್ತಾನೆಂದೂ ಸೂಚಿಸಿದನು.

ನಂತರ ಅವನು ಒತ್ತೊತ್ತಾಗಿ ಎಲೆಗಳಿಂದ ತುಂಬಿದ್ದ, ಬಹುಶಾಖೆಗಳಿಂದ ಕೂಡಿದ ಮರವೊಂದರ ಕೆಳಗೆ ಧ್ಯಾನಸ್ಥನಾದನು. ಹೀಗೆ ಧ್ಯಾನಕ್ಕೆ ಕುಳಿತವನನ್ನು ಒಂದು ಮೃಗವೆಂದು ತಪ್ಪಾಗಿ ಭಾವಿಸಿ ಜರನೆಂಬ ಬೇಡನು ಆ ಒನಕೆಯ ಕೊನೆಯ ಚೂರಿನಿಂದಾದ ಬಾಣದಿಂದ ಹೊಡೆದನು. ತನ್ನಿಂದಾದ ಪ್ರಮಾದವು ತಿಳಿದ ಮೇಲೆ ಆ ಬೇಡನು ಕೃಷ್ಣನ ಕಾಲಿಗೆ ಬೀಳಲು, ಕೃಷ್ಣನು ಅವನಿಗೆ ಅಭಯವನ್ನಿತ್ತು ಅಪರಿಮಿತವಾದ ತೇಜಸ್ಸನ್ನು ಹೊರಗೆಡಹುತ್ತಾ ಸ್ವರ್ಗಕ್ಕೆ ಹೊರಟುಹೋದನು. ಇತ್ತ ಅರ್ಜುನನು ಬಂದು ಉಳಿದ ಯಾದವ ಸ್ತ್ರೀಪುರುಷರನ್ನು ಕಟ್ಟಿಕೊಂಡು ಹಸ್ತಿನಾಪುರದತ್ತ ಹೊರಟನು. ಆದರೆ ಈಗ ಅವನ ಯೋಧ ಪ್ರತಿಭೆಯು ಅಸ್ತಂಗತವಾಗಿತ್ತು. ಅವನ ತೋಳುಗಳಲ್ಲಿ ಬಲವಿರಲಿಲ್ಲ. ಅವನ ಧನುರ್ವಿದ್ಯಾ ಪರಿಣತಿಯು ತೀರಿಹೋಗಿತ್ತು. ಕೇವಲ ಲಾಠಿಗಳನ್ನು ಹಿಡಿದು ಬಂದ ಅಹಿರರೆಂಬುವರು

ಅರ್ಜುನನ ಗುಂಪಿನ ಮೇಲೆ ಬಿದ್ದು ಅನೇಕ ಹೆಂಗಸರನ್ನು ಕೊಂಡೊಯ್ದರು. ಅರ್ಜುನನು ಅತ್ಯಲ್ಪ ಸಂಖ್ಯೆಯ ಯಾದವರೊಂದಿಗೆ ಹಸ್ತಿನಾಪುರವನ್ನು ತಲುಪಿದನು. ಅರ್ಜುನನು ದ್ವಾರಕೆಯನ್ನು ಬಿಟ್ಟೊಡನೆಯೇ ಸಮುದ್ರವು ದ್ವಾರಕೆಯನ್ನು ವ್ಯಾಪಿಸಿತು. ಯಾದವರ ವೈಭವ, ಅವರ ಕುಟುಂಬ ಕಲಹ ಮತ್ತು ಅವರ ಖುಷಿಗಾರಿಕೆ ಇವೆಲ್ಲಾ ಸಮುದ್ರದಲ್ಲಿ ಸಂಪೂರ್ಣ ಕೊಚ್ಚಿಹೋಯಿತು.

* * * *